ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಏಕ್ಯಭಕ್ತಿ, ಕಾರ್ಯನಿರ್ವಾಹಕಶಕ್ತಿ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿ, ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೨—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ	0—12—0
ಸಂತಾಪಕ-ಕಾದಂಬರಿ	0—6—0
ಚಂದ್ರಮುಖಿ ,,	0—8—0
ರಾಜಪುತ್ರರಮಣಿಯರು	0—8—0
ಕೆಲವು ಸಣ್ಣ ಕಥೆಗಳು	1—0—0
ರಾಜಯೋಗ	1—0—0
ಸಂಪರಾಮಾಯಣ ಹೊಸ ಮುದ್ರಣ	5—0—0
ಸಂಪರಾಮಾಯಣದ ಕಥೆ ವಚನ	0-12—0
S. S. L. C. Kannada Texts ಹರಿದಾಸಿ	0—5—0
ಸುಶೀಲೆ	0—6—0
ಅಡವಿಯ ಹುಡುಗಿ.	0-12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲಿ ಸುಣ್ಣ ಕಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು

ಸ್ವದೇಶ ಭಕ್ತರೇ ಶ್ರೀ ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿಟೋಪಿಗಳು, ಬಿಳಿ, ಹಸುರು, ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ, ನಯವಾದ ಶರ್ಟಿನ ವಸ್ತ್ರಗಳೂ ಮತ್ತು ವೇಷ್ಟಿ, ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು—ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ನಾಲ್ಕಾಣೆಯ ಸ್ಟಾಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:— ಮುಳಿಯ ತಿಮ್ಮಪ್ಪಯ್ಯ ಮತ್ತು ಸಹೋದರ
ರತ್ನ ಮತ್ತು ಜವಳಿ ವ್ಯಾಪಾರಿಗಳು,
ಬಾರಾದುಕಾನ (ಗೋಳಿಕಟ್ಟೆ ಬಜಾರು) ಮಂಗಳೂರು

ಚಂದಾದಾರರಿಗೆ ವಿನಂತಿ.

ಚಂದಾದಾರರು ಈ ಪತ್ರದ ಆಫೀಸಿಗೆ ಪತ್ರಗಳನ್ನು ಬರಿಯುವಾಗ ತಮ್ಮ ವಿಳಾಸದ ಪಕ್ಕದಲ್ಲಿರುವ ರಿಜಿಸ್ಟರ್ ನಂಬರನ್ನು ಕೊಡತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ
ಮಂಗಳೂರು

GUN RUST-PROOF OUR SPECIALITY

The Canara Arms & Ammunition Mart,

Hampankatta, MANGALORE S' K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರ್ರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಲ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ್ ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಪಿಡ್ಲಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು. ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ.

ಮಕ್ಕಳ ಆಟದ ಹಿತ್ತಾಳೆಯ 32 ಸಾಮಾನುಗಳ ಸಣ್ಣ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 5—0—0 ಪೋಸು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಮಡಿ, ಜರಿ, ಸಾದಾ, ಸೀರೆ, ಕಣ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಶ್ರೀಚಕ್ರ, ಸ್ಫಟಿಕಮಣಿ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಪಿ ಮೂಲಕ ಕಳುಹಿಸಲಾಗುವದು, ಕ್ಯಾಟಲಾಗ್ ಇನಾಂ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷಧ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ.1—4—0.

ಹುಳದ ಪೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೋಪಥಿಕ್ ಡಿಸ್ಪೆನ್ಸರಿ.
ಹಂಪನಕಟ್ಟೆ, ಮಂಗಳೂರು.



ಕ್ಷಾರಮಾಡಿದಮೇಲೆ ಶಾಂತಿಕೊಡುವದು

ಮುಖಕ್ಕೆ ಲೇಪಿಸಿ ಅದರ ಮೇಲೆ ಕ್ಷಾರಮಾಡಿದರೆ ಕೊಗಲು ಅಧಿಕ ನಯವಾಗಿಯೂ ಉರಿಯಿಲ್ಲದಿರುವದು ಇದು

"ಹಾಜಿಲೀನ್ 'ಸ್ನೋ'"

(ಟ್ರೇಡ್ ಮಾರ್ಕ)

"'HAZELINE' SNOW"

(Trade Mark)

ಮುಖವನ್ನು ತೊಳೆದು ಅಥವಾ ಕ್ಷಾರಮಾಡಿದ ಬಳಿಕ ಮುಖವು ಒಣಗುವ ಮುಂಚೆ "ಹಾಜಿಲೀನ್ 'ಸ್ನೋ'" ವನ್ನು ಲೇಪಿಸ ಬೇಕು "ಹಾಜಿಲೀನ್ 'ಸ್ನೋ'" ವಲ್ಲಿ ಯಾವ ಮಾಂಸ ಕೊಬ್ಬು ಪ್ರವೇಶಿಸ ಲಿಲ್ಲ ಅದಕಾರಣ ಯಲ್ಲಾ ಕಾಲು ಕ್ರಮ ಜನರಿಂದ ಉಪಯೋಗಿಸಲ್ಪಡಬಹುದು ಸ್ತ್ರೀಯರು ಕಪ್ಪು ಚರ್ಮವನ್ನು ಬಿಳುಪಾಗಿಯ ಸ್ವಚ್ಛವಾಗಿ ಮಾಡಲಿಕ್ಕೆ "ಹಾಜಿಲೀನ್ 'ಸ್ನೋ'" ವನ್ನು ಕ್ರಮವಾಗಿ ಉಪಯೋಗಿಸ ಬೇಕು.

ಇದು ಕೆಮಿಸ್ಟ ವಾಕ್ರಿಗಳಲ್ಲಿ ಕೆಮಿಸ್ಟ ಮತ್ತು ಉಗ್ರಾಣದ ಮನುಷ್ಯರಿಂದಲು ಮಾರಲ್ಪಡುವದು.

ಬರ್ರೊಸ ವೆಲಕಂ ಅಂಡ್ ಕೋ
ಲಂಡನ್ ಅಂಡ್ ಬಂಬಾಯಿ.

Burroughs Wellcome & Co.
London and Bombay

All Rights Reserved

THE MANGALORE TRADING ASSOCIATION

Car Street
Mangalore

beg to announce to the yublic that Fresh supply of goods Chemicals, Patent Medicines Oilmanstores have been received, and also supplies specially of

MYSORE SOAPS

Such as Sandal, Gulab, Brown Windsor etc., etc., Soaps Manufactured at the Kerala Institute availableboth Wholesale and Retail.

Alsoall sorts of Fountain pens

The Canara Banking Corporation, Udipi, (Limited).

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಆ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯತೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಯಾನೆ ಹೊರಗಿನಿಂದ ಬರತಕ್ಕದ್ದು	3,78,315	2	5
6. ರಿಜರ್ವ ಇತ್ಯಾದಿ ಫಂಡುಗಳು, (17—6—'22.)	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೭ರಿಂದ ೭½ ವರೆಗಿನ ಮುದತು ತಿಂಗಳಿಗೊಮ್ಮೆ ಬಡ್ಡಿ ಕೊಡುವ ಶರ್ತದ ಮೇಲೆ ನಿರಖು ಠೇವಣಾತಿಗಳು.

೨. ೧೫ ದಿನಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡಿಯದ ಶರ್ತದ ಮೇಲೆ ಸಾಲಿಯಾನ್ ಶೇಕಡಾ 6½ಲ್ಲಿ ನಡೆದ ದಿನಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಚಿಕ್ಕ ಮಾಯದೆ ಠೇವಣಾತಿಗಳು.

೩. ಏನೂ ಖರ್ಚಿಲ್ಲದೆ ಸಾಲಿಯನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಚಾಲ್ತಿ ಠೇವಣಾತಿಗಳು.

೪. ಸಾಲಿಯನ್ ಶೇಕಡಾ 4½ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.

೫. ಈ ಕೆಳಗಣ ಶರ್ತಗಳ ಮೇಲೆ ಕಂತು ಠೇವಣಾತಿಗಳು.

ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.

ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.

ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.

ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು,

ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.

೬. ಕಳೆದ ೨ ವರುಷಗಳಲ್ಲಿ ಪಾಲುವಂತಿಗರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.

೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.

೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಓಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬಾಯಲ್ಲಿರುವ ಮರ್ಕಂಟೈಲ್ ಬ್ಯಾಂಕ್ ಓಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ತಾಜಾ ಕಲಂ:—ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಗಳವರಿಗೆ ಬರದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡುಪಿ, ತಾ. 13—5—1922.

ನ. ಆನಂದರಾವ್,
ಕಾರ್ಯದರ್ಶಿ.

ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ.

೧. ಈ ಸಂಸ್ಥೆಯ ಹೆಸರು ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯು ೨. ಯೋಗ್ಯ ಕಂಡ ಕನ್ನಡ ಹೊಸ ಅಥವಾ ಹಳೇ ಪುಸ್ತಕಗಳನ್ನು ಮುದ್ರಿಸಿ ಪ್ರಸಿದ್ಧಮಾಡುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವು. ೩. ಅದಕ್ಕೆ ಬೇಕಾಗುವ ಭಂಡವಾಳವು ತೀರ ಕಡಿಮೆ ಎಂದರೆ ೨೫,೦೦೦ ರೂಪಾಯಿಗಳು. ೨೫೦ ರೂಪಾಯಿ ಬೆಲೆ ಬಾಳುವ ೧೦೦ ಪಾಲುಗಳಲ್ಲಿ ಈ ಭಂಡವಾಳವನ್ನು ವಿಭಾಗಿಸಿದೆ. ೫೦ ರೂಪಾಯಿಗಳದೊಂದು ಕಂತಿನಂತೆ ೫ ಕಂತುಗಳಿಂದ ಪಾಲಿನ ಹಣವನ್ನು ಕೊಡಬಹುದು. ೪. ಮನಃಪೂರ್ವಕವಾಗಿ ಕನ್ನಡ ನುಡಿಯನ್ನು ಸೇವಿಸಲಿಚ್ಛಿಸುವವರೆ ಈ ಸಂಸ್ಥೆಯ ಪಾಲುಗಾರರಾಗುವುದಕ್ಕೆ ತಕ್ಕವರು. ೫. ಕೆಳಗೆ ಸಹಿ ಮಾಡಿದವರು ೧೦ ಪಾಲುಗಳನ್ನು ತೆಗೆದುಕೊಂಡು ಕರ್ನಾಟಕ ಸಿಂಹಾಸನ ಸ್ಥಾಪನೆ ಎಂಬ ಐತಿಹಾಸಿಕ ಕಾದಂಬರಿಯನ್ನು ಅಚ್ಚು ಹಾಕಿಸಕೊಡಗಿದ್ದಾರೆ. ಕಾರ್ಯಕಾರಿ ಮಂಡಲಕ್ಕೆ ಸೇರಲಿಚ್ಛಿಸುವವರು ೪ ಅಥವಾ ಹೆಚ್ಚು ಪಾಲುಗಳನ್ನು ತೆಗೆದುಕೊಳ್ಳಬೇಕು. ೬. ಕನ್ನಡ ನುಡಿಯ ಏಳ್ಗೆಯನ್ನು ಬಯಸುವವರು ೪ ರೂಪಾಯಿಗಳೊಡನೆ ತಮ್ಮ ಪಾಲಿನ ಅರ್ಜಿಯನ್ನು ಕಳುಹಿಸಬಹುದು. ೭. ಈ ವಿಷಯವಾಗಿ ಪತ್ರವ್ಯವಹಾರ ಮಾಡಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳಬೇಕು.

ಮೂಳಮಟ್ಟಿ ಧಾರವಾಡ, ತಾ. 12—6—22.

ರಾಮಚಂದ್ರ ಹನುಮಂತ ದೇಶಪಾಂಡೆ,
ಎಸ್. ಎ.
ಶ್ರೀಪಾದ ರಾಮಚಂದ್ರ ದೇಶಪಾಂಡೆ.

ನೋಟೀಸು.

ಕಾಸರಗೋಡು ತಾಲೂಕು ಮಂಜೇಶ್ವರ ಕಸಬೆಯಲ್ಲಿರುವ ಪದ್ಮನಾಭ ಭಟ್ಟರ ಮಗ ವಾಸುದೇವ ಭಟ್ಟನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ:—

ನನ್ನ ಸಂರಕ್ಷಣೆ ಒಳಗೆ ನಮ್ಮ ಕುಟುಂಬದ ಮನೆಯಲ್ಲಿ ಇರುತ್ತಿದ್ದ ನನ್ನ ಮ್ಯಾನರ ಮಗ ಸುಮಾರು 15 ವರುಷ ಪ್ರಾಯದ ರಘುಪತಿಭಟ್ಟ ಎಂಬ ಹುಡುಗನು ಮತಿಭ್ರಷ್ಟನಾಗಿದ್ದು ದ್ವೇಷಿಕರ ದುರ್ಭೋಧನೆಯಿಂದ ಇತ್ತಲಾಗಿ ಕೆಲವು ದಿವಸಗಳಿಂದ ಮನೆಯಿಂದ ಪರಾರಿಯಾಗಿರುತ್ತಾನೆ. ಆತಗೆ ಬುದ್ಧಿ ಸ್ಥಿಮಿತೆ ಇಲ್ಲದ್ದರಿಂದ ಈಗಾಗಲೀ ಪ್ರಾಯ ಬಂದ ನಂತರವಾಗಲೀ, ನನ್ನ ಬರಹ ಮೂಲಕ ಒಪ್ಪಿಗೆ ಇಲ್ಲದೆ ಯಾರಾದರೂ ಯಾವ ತರದ ಸಾಲ ಮುಂತಾದ್ದು ಆತಗೆ ಕೊಟ್ಟಿದ್ದಾದರೆ ಸದರಿ ಸಾಲವು ನನಗಾಗಲೀ ಯಾ ನಮ್ಮ ಕುಟುಂಬದ ಸ್ಥಿರಚರ ಸೊತ್ತು ಮುಂತಾದ್ದರ ಮೇಲಾಗಲೀ ಯಾವ ವಿಧದಿಂದಲೂ, ಬಾಧಿಸತಕ್ಕದಲ್ಲ. ವ ಸಿಂಧೂ ಆಗತಕ್ಕದ್ದಲ್ಲ.

ಮಂಜೇಶ್ವರ, ತಾ. 9—6—'22 M. B. VASUDEVA BHATTA.

ಕಣ್ಣಿನ ರೋಗಗಳಿಗೆ ಖಾತ್ರಿಯಾದ ಔಷಧ.

Rao's Lily Eye Drops.

ಪ್ರತಿ ಮನೆಯಲ್ಲಿಯೂ ಒಂದು ಶೀಸೆ ಇರುವದು ಅಗತ್ಯ.

ಈ ಔಷಧವು ಕಣ್ಣಿನ ಸಕಲ ವಿಧವಾದ ಬೇನೆಗಳಿಗೆ ರಾಮಬಾಣದಂತಿರುವದು. ಕಣ್ಣು ಉರಿ, ಕಣ್ಣು ಕೆಂಪಾಗುವಿಕೆ, ಕಣ್ಣು ಹೂವು ಇನ್ನು ಎಲ್ಲಾ ತರದ ಕಣ್ಣು ಬೇನೆಗಳನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. ದಿನ ಒಂದಕ್ಕೆ ಅನೇಕ ಶೀಸೆಗಳು ಖರ್ಚಾಗುತ್ತ ಇವೆ.

ಕ್ರಯ ಒಂದು ಔನ್ಸು ಶೀಸೆಗೆ ರೂ. 1—2—0. ವಿ. ಪಿ. ಹಾಸಲು ಪ್ರತ್ಯೇಕ. ವ್ಯಾಪಾರಸ್ಥರಿಗೆ ಪ್ರತ್ಯೇಕ ದರ.

ನಾವು ನಮ್ಮ ಎಲ್ಲಾ ಗಿರಾಕಿಗಳಿಗೆ ಬೊಂಬಾಯಿ ಮಾರ್ಕೆಟ್ ಧಾರಣೆಗೆ ಖಾತ್ರಿಯಾದ ಮಾಲನ್ನು ಕಳುಹಿಸಿಕೊಡುವೆವು.

ನಮ್ಮ ವಿಳಾಸ:— B. GOVINDA RAO & CO,
Merchants & General Store Suppliers.
(Stationery Hardware & Medicines etc.)
23/24 Mervan Building,
GRANT ROAD, BOMBAY.

'ಕವಿ'ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದವರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯ ಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ, ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತು 1ರ ರೂ. 2—12—0.

ಸ್ಪೆಶೈಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿದ್ದಲ್ಲಿ ಸಂಪಲು ಕಳುಹಿಸಲ್ಪಡುವದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಆಷಾಢ ಶು೬ ಶನಿವಾರದಿಂದ ದುಂದುಭಿಸಂ। ಆಷಾಢ ಶು೧೨ ಶುಕ್ರವಾರದ ವರೆಗಿನ ಪಂಚಾಂಗ

(೧೯೨೨ನೆಯ ಮಿಥುನ ಕಾರ್ತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ	
							ಉ.	ಅಸ್ತ.
1	ಶನಿ	೬	೩೬.೪೬	ಉತ್ತರಾ	೩೬.೦	೧೭	6.9	6.59
2	ರವಿ	೮	೩೧.೨	ಹಸ್ತಾ	೩೩.೧	೧೮	6.10	6.59
3	ಸೋಮ	೯	೨೫.೧೬	ಚಿತ್ರಾ	೨೮.೩೨	೧೯	6.10	6.59
4	ಕುಜ	೧೦	೨೦.೧೪	ಸ್ವಾತೀ	೨೫.೩೦	೨೦	6.10	6.59
5	ಬುಧ	೧೧	೧೬.೨	ವಿಶಾಖಾ	೨೩.೧೬	೨೧	6.11	6.59
6	ಗುರು	೧೨	೧೨.೪೬	ಅನುರಾಧಾ	೨೨.೧	೨೨	6.11	6.59
7	ಶುಕ್ರ	೧೩	೧೦.೩೨	ಜ್ಯೇಷ್ಠಾ	೨೧.೪೬	೨೩	6.11	6.59

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ಜೂನ್)

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆ	ದಿವಸದ ಮಳೆ	ಏಪ್ರಿಲ್ ೧ರಿಂದ
22	88—8	73—7	0—63	—
23	81—4	72—2	3—28	—
24	85—2	74—5	2—89	—
25	82—5	73—8	1—08	—
26	84—0	73—2	2—80	—
27	88—8	76—1	0—54	—
28	89—6	73—2	1—16	40—44

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಸಿ ಅಕ್ಕಿಮುಡಿ ೧ಕ್ಕೆ ...	8— 0	8—10
ಸುಗ್ಗಿಗೆ ...	7— 6	7—14
ಗುಡ್ಡು, ...	7— 8	8—0
ರಾಶಿ	7— 4	7— 8
ಅವ್ವಲ್ ಬೆಳ್ತಿಗೆ ,, ...	8—4	8—12
ಗುಡ್ಡು ಬೆಳ್ತಿಗೆ ,, ...	7—14	8— 4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	14— 0	14— 8
ಗೋಧಿ ಗೋಣಿ ೧ಕ್ಕೆ ...	23— 8	25— 8
ಹುರುಳಿ ಗೋಣಿ ೧ಕ್ಕೆ ...	13—12	14— 0
ಕಡಲೆ ಗೋಣಿ ೧ಕ್ಕೆ ...	14— 0	15— 0
ತೊಗರಿ ಗೋಣಿ ೧ಕ್ಕೆ ...	16— 0	16— 4
ತೊಗರಿಬೇಳೆ ಗೋಣಿ ೧ಕ್ಕೆ ...	19— 8	24— 0
ಉದ್ದು ಗೋಣಿ ೧ಕ್ಕೆ ...	17— 0	—
ಹೆಸರು ಗೋಣಿ ೧ಕ್ಕೆ ...	16— 8	17— 0
ಊರು ಬೆಲ್ಲ ಖಂಡಿ ೧ಕ್ಕೆ ...	70— 0	72— 8
ಉಪ್ಪು ಗೋಣಿ ೧ಕ್ಕೆ ...	5— 2	5— 4
ಕೊಬ್ರಿ ಖಂಡಿ ೧ಕ್ಕೆ ...	85— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	33— 0	34— 0
ಎಳ್ಳಿಂಡಿ ಖಂಡಿ ೧ಕ್ಕೆ ...	50— 0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7— 2	8— 2
ಎಳ್ಳೆಣ್ಣೆ ಮುಡಿ ೧ಕ್ಕೆ ...	8—12	9— 0
[illegible] ಬೆಣ್ಣೆ ೧ಕ್ಕೆ ...	9— 0	—
[illegible] ಮುಡಿ ೧ಕ್ಕೆ ...	6— 4	6— 6
ಊರ [illegible] ಮುಡಿ ೧ಕ್ಕೆ ...	8— 6	8— 8
ಸಾಸಿವೆ ಮುಡಿ ೧ಕ್ಕೆ ...	8— 4	8— 8
ಕೊತ್ತಂಬರಿ ಮುಡಿ ೧ಕ್ಕೆ ...	5— 0	5—12
ಅಡಿಕೆ ಖಂಡಿ ೧ಕ್ಕೆ ...	350— 0	355— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳ್ಳು ...	160— 0	170— 0
ಬೆಳಗೋಟು New, ಹೊಸ್ತು ...	130— 0	135— 0
ಕಾಳುಮೆಣಸು ಖಂಡಿ ೧ಕ್ಕೆ ...	120— 0	125— 0
ಮೆಂತ್ಯ ಮುಡಿ ೧ಕ್ಕೆ ...	26— 0	28— 0
ಗೇರುಬೀಜ ಮುಡಿ ೧ಕ್ಕೆ ...	2— 6	2— 8
ಕಡ್ಲೆ ಖಂಡಿ ೧ಕ್ಕೆ ...	70— 0	80— 0
ಶಾಂಬ್ರಿ ಕಗನು ಮುಡಿ ೧ಕ್ಕೆ ...	23—12	24— 0
ಶಾಂಬ್ರಿ ಪಾತ್ರಗಳು ಮುಡಿ ೧ಕ್ಕೆ ...	36— 0	—
ಜೀರಿ ಬೆಳ್ಳಿ ಸೇರು ೧ಕ್ಕೆ ...	24— 0	—
[illegible] ೧ಕ್ಕೆ ...	23— 0	—

ಅಚ್ಚಿನಲ್ಲಿದೆ! ಎಂ. ಜಿ. ಐಗಳ್, ಇವರಿಂದ ರಚಿತವಾದ ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಯಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿಂತ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಆಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಾದ್ರಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ಸರ್ನಾಲ್ಲನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತನಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಬಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಜಿರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಿಡಿಬಸಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಶೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಜಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾನಿರ್ಮಾಣ—ಆಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ರಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೋ, ಮೊದಲನೇ ಕಲೆಕ್ಟರ—ಬುಚೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಕಂಚ—ಸೂಳ್ಯ—ಬೆಳ್ಳಾರೆ—ಅಮರಮಾಗಣೆಗಳು—ಬೆಳ್ಳಾರೆ, ಮುಟ್ಟಿ ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ-ಗುರುವಾಯನಕೆರೆ ಪಟ್ಟಣನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಟ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮಾರಿಗುಡಿ—ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜಿನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ಸಾರಾವಿ ಯುದ್ಧ—ಬಂಟವಾಳ ಮಹಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚನಿರ್ಮಾಣ—ಐಕುನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿರ್ಮಂಜೂರು—ಮೂಲಿಕೆ—ವಳಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ಸಿಸ್ಸಲ—ಸೋಮಲಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ಸೀತಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾಸೆಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ಬಿನ್ನಾಣಿರು—ಪಜಿಲ ಕೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮೆ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಟ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಆಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರರಸ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಪಡುಹಿಸೆದ 1.

ವಿಳಾಸ:— ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.
ಅಥವಾ
ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಸ್ವದೇಶಿ.

ಮಹಾತ್ಮಾ ಗಾಂಧಿಯವರು ಮದ್ರಾಸಿನಲ್ಲಿ ಕೊಟ್ಟ ಉಪನ್ಯಾಸ, ನವಜೀವನದಲ್ಲಿ ಅವರು ಬರೆದ 'ಸ್ವದೇಶಿಯೂ, ಖಾದಿಯೂ' ಎಂಬ ಲೇಖಗಳು ಮತ್ತು ಡಿ. ಬಿ. ಕಲೇಲ್ಕಾರರು ಬರೆದ 'ಸ್ವದೇಶಿ ತತ್ವ' ಇವನ್ನು ಒಳಕೊಂಡಿರುವ ಕನ್ನಡ ಪುಸ್ತಕ. ಇದರಿಂದ ಸ್ವದೇಶಿ ವಿಷಯದ ಉತ್ತಮ ತರದ ಸಂಪೂರ್ಣ ಅಭಿಪ್ರಾಯ ಸಿಕ್ಕುತ್ತದೆ. ಪ್ರತಿಯೊಬ್ಬ ಹಿಂದೀಯನೂ ಓದ ಬೇಕಾದ ವಿಷಯ. ಬೆಲೆ ೪ ಆಣೆ ಮಾತ್ರ. ನಾಲ್ಕೂವರೆ ಆಣೆಯ ಟಪ್ಪಾಲು ಚೀಟು ಕಳುಹಿಸಿದ್ದಲ್ಲಿ ಪುಸ್ತಕ ಕಳುಹಿಸಲಾದೀತು.

ದೊರೆಯುವ ಸ್ಥಳ:— ಉಡುಪಿ ಗೋವಿಂದ ರಾವ್,
ಕರ್ನಾಟಕ ತಿಲಕ ಮಹಾವಿದ್ಯಾಲಯ, ಮಂಗಳೂರು.
೨ ಕೆ. ಎಮ್. ದಾಸಪ್ರಭು ಅಂಡ್ ಸನ್ಸ್, ರಥಬೀದಿ, ಮಂಗಳೂರು. ೩. ಎಮ್. ಕೆ. ವೈದ್ಯ, ರಥಬೀದಿ, ಮಂಗಳೂರು. ೪. ರಾಷ್ಟ್ರೀಯ ವಿದ್ಯಾಮಂದಿರ, ಉಡುಪಿ. ೫. ಪಿ. ಎ. ಪೈ ಬ್ರದರ್ಸ್, ಉಡುಪಿ

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ಕ್ಕಿಂತ ಜಾಸ್ತಿ ಖರ್ಚು ತಗಲುವುದು, ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಷ್ಯನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,
ಮಂಗಳೂರು.

ಭೃಂಗರಾಜ ತೈಲ.

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ತಲೆ ಕೂದಲು ಕಪ್ಪಾಗುತ್ತದೆ. ಕೇಶ ದಾಮಗಳು ವೃದ್ಧಿಹೊಂದುತ್ತವೆ. ಕಂಠದ ಮೇಲೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ಪಿತ್ತನಾಶ ಮಾಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 0-12-0.

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆ ಹಚ್ಚಿಕೊಂಡರೆ ಪರಿಹಾರವಾಗುತ್ತದೆ. ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 1.

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳು ಪರಿಹಾರವಾಗುತ್ತವೆ. ಉಪಯೋಗಿಸುವ ಕ್ರಮ, ಮತ್ತು ಗುಣ ತರಿಸಿಕೊಂಡಲ್ಲಿ ಪ್ರಮಾಣಿಕ ಪಡಿಸುತ್ತದೆ. 25 ಮಾತ್ರೆಗಳುಳ್ಳ ಡಬ್ಬಿ 1ರ ರೂ. 1.

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯ ವಸ್ತು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಸೇರಿಗೆ ರೂ. 1-4-0.

ಮೇಲೆ ಬರೆದ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಶ್ರೀ ಆರ್ಯಮಹಾವಲಂಬಿಗಳಾದ ಶ್ರೀ ಪೂಜ್ಯಪಾದ ಮುನಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಆ ಪರಮ ಪೂಜ್ಯರ ಅನುಯಾಯಿಗಳಾದ ನಮ್ಮಿಂದ ತಯಾರಿಸಲ್ಪಟ್ಟವು. ಅನುಭವದಲ್ಲಿ ನಮಗೆ ಎಷ್ಟು ಸತ್ಯವಾಗಿ ತೋರುತ್ತದೋ ಅಷ್ಟೇ ಫಲ ವಸೆಯಿಂದ ಈ ಔಷಧಗಳು ರೋಗ ಪರಿಹಾರಕವಾಗಿರುತ್ತವೆ.

ಸೂಚನೆ—ಅಪೇಕ್ಷಿಸುವವರು ಕಟ್ಟಳೆಗೆ ಒಪ್ಪಿಕೊಳ್ಳುವವರು. ಉಚಿತವಾಗಿ ಕಳುಹಿಸಲಾಗುವುದು.

ಆಯುರ್ವೇದಿಕ್ ಮತ್ತು ಹೋಮಿಯೋಪೆತಿಕ್
ವಿಳಾಸ:— ಧರ್ಮ ವೈದ್ಯಶಾಲಾ,
ಧರ್ಮಸ್ಥಳ ದಕ್ಷಿಣ ಕನ್ನಡ.

"ಗೋವಾ ಸೋಡ್ತಿಗಳು"

ಪಣಜೀ ಮತ್ತು ಮಡಗಾಂವ ಸೋಡ್ತಿಗಳು ಕೆಳಗಿನ ಪತ್ತೇ ಮೇಲೆ ಸಿಗುವವು. (೫೦ ಟಿಕೇಟುಗಳಿಗಿಂತ ಹೆಚ್ಚಿಗೆ ತಕ್ಕೊಳ್ಳುವವರಿಗೆ ನೂರಕ್ಕೆ ೩॥ ರೂಪಾಯಿ ಕಮಿಷನ್ ಕೊಡಲಾದೀತು).

N. A. Sarmalkar & Brothers,
Chief Lottery Agents, PANJIM, Go

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ,

ಕ್ರಮ ನಂಬ್ರ $\frac{158}{1922}$ R. I. A. ನಂಬ್ರ $\frac{285}{1922}$

ಮಾದಪ್ಪ ಸೆರೆಗಾರ ಕೂಡಾ 4 ಜನರು—ವಾದಿರು.

ಮತ್ತು

ಕಾಂತು ಸೆರೆಗಾರ ಕೂಡಾ 2 ಜನರು—ಪ್ರತಿವಾದಿರು.

ಮಂಗಳೂರು ಶ್ಯಾಹಾರ ಮಂಗಳೂರು ತೋಟ ಗ್ರಾಮದ ಹಳೆ ಕೋಟೆ ಜುಮಾವತಿ ಭೂತಸ್ಥಾನದ ಭಂಡಾರದ ಬಾಬ್ತು ಪ್ರತಿವಾದಿರ ವಶ ಇರುವ ಚಿನ್ನಾಭರಣ ವಗೈರೆಯನ್ನು ಸ್ವಾಧೀನ ಮಾಡುವರೆ ಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ ಕೋಟೆ, ಮೊಗೇರ ಮತ್ತು ಬಿಲ್ಲವರ ಈ ಮೂರು ಮತಸ್ಥರ ಕಡೆಯಿಂದ ವಾದಿರಾಗಿ ವ್ಯವಹರಿಸುವರೆ ತಮಗೆ ಅಪ್ಪಣೆ ಕೊಡಬೇಕಾಗಿ ಸದರಿ ವಾದಿರಾದ 1ನೇ ಮಾದಪ್ಪ ಸೆರೆಗಾರ, 2ನೇ ವೆಂಕಪ್ಪ ಗುರಿಕಾರ, 3ನೇ ಗೋಪಾಲ ಗುರಿಕಾರ, 4ನೇ ರಾಮಪ್ಪ ಗುರಿಕಾರ ಕೂಡಾ 4 ಜನರು ಕೊಟ್ಟ ಸದರಿ R. I. A. ನಂಬ್ರ $\frac{285}{1922}$ನೆ ಅರ್ಜಿಯು ತಾ. 8—7—'22 ರಲ್ಲು ತನಿಖೆಗೆ ನಿಶ್ಚಯಿಸಿರುತ್ತದೆ. ಆಕ್ಷೇಪಣೆ ಇದ್ದವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನಲ್ಲಿ ಸದರಿ ಕೋರ್ಟಿನಲ್ಲಿ ಹಾಜರು ಮಾಡತಕ್ಕದ್ದು.

ಮಂಗಳೂರು,
ತಾ. 17—6—1922. } P. D. SOUZA, B. A. B. L.
Pleader for Plaintiff.

ವಿದೇಶ ವರ್ತಮಾನ.

ಮಿ|| ಪುಸ್ಸಿ ಫೂಟ ಜೋನ್‌ಸನ್:—ಸುಪ್ರಸಿದ್ಧ ಸುರಾಪಾನ ನಿಷೇಧಕರಾದ ಅಮೇರಿಕದ ಮಿ|| ಪುಸ್ಸಿಫೂಟ್ ಜೋನ್‌ಸನ್ನರು ನ್ಯೂಯೋರ್ಕಿನಿಂದ ಇಂಗ್ಲೆಂಡಿಗೆ ಹೊರಟಿದ್ದಾರೆ. ಗ್ರೇಟ್ ಬ್ರಿಟನ್ನಿನಲ್ಲಿ ಇನ್ನು ೧೫ ವರುಷದೊಳಗೆ ಮದ್ಯಪಾನದ ದುರಾಭ್ಯಾಸವು ಸಂಪೂರ್ಣವಾಗಿ ಮಾಯವಾಗುವುದೆಂತಲೂ, ಕೆನಡಾ, ನ್ಯೂಜಿಲೆಂಡ್, ಸ್ವಿಜರ್‌ಲೆಂಡ್ ಮತ್ತು ಹಂಗೇರಿ ಈ ದೇಶಗಳಲ್ಲಿನ ಜನರು ಇನ್ನು ಐದು ವರುಷದೊಳಗಾಗಿಯೆ ಈ ದುರಾಭ್ಯಾಸವನ್ನು ಸಂಪೂರ್ಣವಾಗಿ ಬಿಟ್ಟು ಬಿಡುವರಾಗಿಯೂ ಇವರು ಅಭಿಪ್ರಾಯಪಟ್ಟಿರುತ್ತಾರೆ.

ಇಟಲಿ:—ಈ ದೇಶದ ಪರರಾಷ್ಟ್ರಗಳ ಮಂತ್ರಿಯು ಲೋಯಿಡ್ ಜೋರ್ಜರ ಭೇಟಿಯನ್ನು ಪಡೆಯಲು ಇಂಗ್ಲೆಂಡಿಗೆ ಹೋಗಿರುತ್ತಾರೆ.

ಜರ್ಮನಿ—ಇಲ್ಲಿ ಪರರಾಷ್ಟ್ರಗಳ ಮಂತ್ರಿಯವರು ತಮ್ಮ ಗೃಹದಿಂದ ಹೊರಗೆ ಬರುವಾಗ ಅವರನ್ನು ಗುಂಡು ಹೊಡೆದು ಕೊಂದಿರುತ್ತಾರೆ. ಈ ಘಾತಕಕಾರ್ಯವನ್ನು ನಡಿಸಿದವರನ್ನು ಹಿಡಿದುಕೊಡುವವರಿಗೆ ಒಂದು ಮಿಲಿಯ ಮಾರ್ಕುಗಳನ್ನು ಬಹುಮಾನವಾಗಿ ಕೊಡಲಾಗುವುದೆಂದು ಅಲ್ಲಿಯ ಸರಕಾರದವರು ಪ್ರಕಟಿಸಿದ್ದಾರೆ.

ರೈಲ್ವೆ ದರ ಏರಿಸಿದುದರ ಪರಿಣಾಮ:—ವಿಲಾಯತಿಯಲ್ಲಿ ರೈಲ್ವೆ ದರಗಳನ್ನು ಕಡಿಮೆಮಾಡುದುದರಿಂದ ರೈಲಿನ ಉತ್ಪತ್ತಿಯು ಕಡಿಮೆಯಾದದಲ್ಲದೆ, ವ್ಯವಸಾಯ, ಮನೆಕಟ್ಟಡದ ಕೆಲಸ, ವ್ಯಾಪಾರ ಮತ್ತು ಕಬ್ಬಿಣ ಕೆಲಸ ಈ ಮುಂತಾದವುಗಳು ಸಹ ನಷ್ಟಪಟ್ಟವು. ಅದ್ದರಿಂದ ರೈಲ್ವೆ ದರಗಳನ್ನು ಈಚೆಗೆ ಕಡಿಮೆಮಾಡಿರುತ್ತಾರೆ

ಜರ್ಮನಿಯಲ್ಲಿ ನೇಯಿಗೆಯ ಕಸಬು:—ನೇಯಿಗೆಯ ಕಸಬು ಜರ್ಮನಿಯಲ್ಲಿ ಯುದ್ಧಕ್ಕೆ ಮುಂಚೆ ಇದ್ದುದಕ್ಕಿಂತ ಯುದ್ಧದ ತರುವಾಯ ಬಹಳ ಮಟ್ಟಿಗೆ ಅಭಿವೃದ್ಧಿಗೆ ಬಂದಿರುವುದು. ಈ ದೇಶವು ಅತ್ಯಂತ ಬಡತನದಲ್ಲಿದ್ದರೂ ಕಳೆದ ವರುಷ ಅರಳೆಯನ್ನು ಪೂರ್ವದಲ್ಲಿ ಕೊಂಡುಕೊಳ್ಳುತಿದ್ದುದಕ್ಕಿಂತಲೂ ಶೇಕಡಾ ೨೦ರಷ್ಟು ಹೆಚ್ಚು ಕೊಂಡುಕೊಂಡಿತು.

ಪ್ರಿನ್ಸ್ ಆಫ್ ವೇಲ್ಸರು:—ಯುವಸಾರ್ವಭೌಮರು ಎಂಟು ತಿಂಗಳ ಪರ್ಯಟನವನ್ನು ಮುಗಿಸಿ, ಕಳೆದ ತಾ ೨೦ನೆ ಬೆಳಿಗ್ಗೆ ಲಂಡನ್ ಪಟ್ಟಣವನ್ನು ಸೇರಿದರು. ಇವರನ್ನು ಬಹಳ ಸಂಭ್ರಮದಿಂದ ಲಂಡನ ಪಟ್ಟಣದಲ್ಲಿ ಸ್ವಾಗತ ಮಾಡಲಾಯಿತು.

ಜಾನ್‌ಟ್ಯಾನರ್—ಬ್ರೈಟನ್ ದೇಶದ ಜಾನ್‌ಟ್ಯಾನರ್ ಎಂಬಾತನು ಅತ್ಯಂತ ಉದ್ದವಾದ ಗಡ್ಡವನ್ನುಳ್ಳವನಾಗಿದ್ದಾನೆ. ಈ ಗಡ್ಡದ ಉದ್ದವು ಗಡ್ಡದಿಂದ ತುದಿಯ ವರೆಗೆ ೯ ಅಡಿಯದೆ. ೮೮ ವರ್ಷ ವಯಸ್ಸಿನಾದ ಈತನು ಕಳೆದ ೫೦ ವರ್ಷಗಳಿಂದಲೂ ಪ್ರಪಂಚದಲ್ಲಿ ಉದ್ದವಾಗಿ ಗಡ್ಡವನ್ನು ಬೆಳಸಿದವರೆಲ್ಲರಿಗಿಂತಲೂ ತಾನು ಉದ್ದವಾದ ಗಡ್ಡವನ್ನುಳ್ಳವನೆಂದೆನಿಸಿಕೊಳ್ಳಬೇಕೆಂಬ ಆಸೆಯುಳ್ಳವನಾಗಿದ್ದಾನೆ. ಎಷ್ಟೋ ಸರ್ಕಸ್ ಕಂಪೆನಿಯವರು ಅಭೂತಪೂರ್ವವಾದ ಗಡ್ಡವನ್ನು ಪ್ರದರ್ಶಿಸಲು ಬೇಕಾದಷ್ಟು ದ್ರವ್ಯವನ್ನು ಕೊಡುತ್ತೇವೆಂದರೂ ಒಪ್ಪದಿರುತ್ತಾನೆ. ತನ್ನ ಗಡ್ಡವನ್ನು ಪ್ರದರ್ಶಿಸಿ ದುಡ್ಡನ್ನು ಸಂಪಾದಿಸಬೇಕೆಂಬುದು ಇವನ ಇಷ್ಟವಾಗಿಲ್ಲವು. ಮತ್ತು ಮನೆಯೊಳಗಿರುವ ಬೆಂಕಿ ಮೊದಲಾದವುಗಳಿಂದ ಅಪಾಯ ಸಂಭವಿಸದಿರಲು ನೀಳವಾದ ಗಡ್ಡವನ್ನು ಯಾವಾಗಲೂ ತನ್ನ ಶರಾಯಿನೊಳಗಡೆ ಹುದುಗಿಸಿಕೊಂಡಿರುವನು. ಈತನು ತನ್ನ ೧೦೦ನೆಯ ವರ್ಷದ ವರ್ಧಂತಿಯ ಕಾಲದಲ್ಲಿ ಈ ಗಡ್ಡವನ್ನು ಬೆಳೆಸಿಬಿಡಬೇಕೆಂದೂ ಅಷ್ಟರೊಳಗೆ ಸಂಪೂರ್ಣವಾಗಿ ೧೨ ಅಡಿ ಉದ್ದ ಬೆಳೆಸಿರಬೇಕೆಂದೂ ಕುತೂಹಲವಿಷ್ಟನಾಗಿರುತ್ತಾನೆ. ಮೈಸೂರ ಸ್ಟಾರ್.

ಇಂಗ್ಲೆಂಡಿನಲ್ಲಿ ಮಸೀದಿ—ದಿ. ಅಹಮದೀಯ ಚಳವಳದವರು ಲಂಡನ್ ಪಟ್ಟಣದಲ್ಲಿ ೧೫,೦೦೦ ಪೌಂಡನ್ನು ಖರ್ಚು ಮಾಡಿ ಒಂದು ಮಸೀದಿಯನ್ನು ಕಟ್ಟಿಸಲು ನಿರ್ಧರಿಸಿರುವರು.

ಒಳದೇಶ ವರ್ತಮಾನ.

ಶಿರಹಟ್ಟಿ ನಾಟಕ ಕಂಪೆನಿ:—ಇವರು ಮೈಸೂರು ಅರಮನೆಯಲ್ಲಿ ಶ್ರೀಮನ್ ಮಹಾರಾಜರವರ ಸಮಕ್ಷಮ ಎರಡು ನಾಟಕಗಳನ್ನು ಆಡಿತೋರಿಸಿ, ೧೫೦೦ ರೂಪಾಯಿಯಷ್ಟು ಬಹುಮಾನವನ್ನು ಪಡೆದರು.

ಸ್ವದೇಶಿ ವ್ರತ:—ಲಾಹೋರಿನ ಮಿಶನರಿ ಶಾಲೆಯಲ್ಲಿ ಒಬ್ಬ ಹಿಂದೀ ಹುಡುಗಿಗೆ ಹೊಲಿಯುವ ಕಲೆಯನ್ನು ಕಲಿಯುವುದಕ್ಕೋಸ್ಕರ ಅರ್ಧವಾರು ಪರದೇಶಿ ಅರಿವೆಯನ್ನು ತರಹೇಳಲು, ಸ್ವದೇಶಿ ವ್ರತವನ್ನು ಸ್ವೀಕರಿಸಿದ ಆ ಹುಡುಗಿಯು ಇದಕ್ಕೆ ಒಪ್ಪಲಿಲ್ಲ. ಉಪಾಧ್ಯಾಯಿನಿಯು ಹುಡುಗಿಗೆ ಬೆದರಿಸಲು ಹುಡುಗಿಯು ಶಾಲೆಯನ್ನೆ ಬಿಟ್ಟಳು.

ಮುಂಬಯಿಯ ಜಾಡಮಲ್ಲಿಗಳು—ಕಳೆದ ತಾ. ೧೪ರಿಂದ ಮುಷ್ಕರ ಹಿಡಿದ ಜಾಡಮಲ್ಲಿಗಳಿಗೆ ಮುಷ್ಕರವನ್ನು ನಿಲ್ಲಿಸದಿದ್ದರೆ ಅವರನ್ನು ಕೆಲಸದಿಂದ ತೆಗೆದುಹಾಕಲಾಗುವುದು ಮತ್ತು ಅವರು ತಮ್ಮ ವಾಸಸ್ಥಳಗಳನ್ನು ಬಿಟ್ಟುಕೊಡಬೇಕಾಗುವುದು ಎಂದು ಗದರಿಸಿದ್ದರಿಂದ ಅವರು ಪುನಃ ಕೆಲಸಕ್ಕೆ ಸೇರಿದ್ದಾರಂತೆ.

ಮಳೆಯ ಹಾವಳಿ—ಬಂಗಾಲದ ದಾಮೋದರ ನದಿಯು ಉಕ್ಕಿ ಬರುವುದರಿಂದ ಆ ಪ್ರಾಂತದಲ್ಲಿ ರೈಲು ಚಲಾವಣೆಗೆ ಅಭ್ಯಂತರ ಉಂಟಾಗಿದೆ. ಬರ್ಮಾದ ಭಾಸು ಪಟ್ಟಣದ ಸಮೀಪದಿರುವ ನದಿಯಲ್ಲಿ ಮಳೆಯ ನೀರು ಹೆಚ್ಚಾಗಿ ನೆರೆ ಬಂದು ಒಂದು ಬೀದಿಯಲ್ಲಿರುವ ಮನೆಗಳೆಲ್ಲಾ ಕೆಡಬಿದ್ದಿವೆ.

ಡಿಸ್ ಒಬ್ಬಿಡಿಯನ್ಸ್—ಹಿಂದೂಸ್ಥಾನದ ಈಗಿನ ಪರಿಸ್ಥಿತಿಯ ಕುರಿತು ರಿಪೋರ್ಟನ್ನು ಮಾಡಲು ಕಾಂಗ್ರೆಸ್ಸಿನ ಕಳೆದ ಅಧಿವೇಶನದಲ್ಲಿ ನೇಮಕಿಪಟ್ಟ ಕಮ್ಮಿಟಿಯ ಮೆಂಬರರಲ್ಲೊಬ್ಬರಾದ ಶ್ರೀಯುತ ಜಮುನಾಲಾಲ ಬಾಜಜರಿಗೆ ಖಾದಿ ಪ್ರಸಾರಣೆಯ ವ್ಯವಸ್ಥೆಯ ಕಾರ್ಯದಲ್ಲಿ ಇನ್ನೆರಡು ತಿಂಗಳು ಇರಬೇಕಾದ್ದರಿಂದ ಮೇಲಿನ ಕಮ್ಮಿಟಿಯಲ್ಲಿ ಇದ್ದು ಈಗ ದೇಶವನ್ನು ಸಂಚರಿಸಲು ಅಸಾಧ್ಯವಾದುದರಿಂದ ಇವರ ಬದಲಿಗೆ ಶ್ರೀಮತಿ ಸರೋಜಿನಿನಾಯ್ಡೋರವರು ಈ ಕಮ್ಮಿಟಿಯ ಮೆಂಬರರಾಗುವರಂತೆ. ಈ ಕಮ್ಮಿಟಿಯು ಬರುವ ಕೆಲ ದಿನಗಳಲ್ಲಿ ಪಂಜಾಬ ಮತ್ತು ನೋರ್ತವೆಸ್ಟ ಫ್ರಾವಿನ್ಸ್ ಈ ಪ್ರಾಂತಗಳನ್ನು ಬಿಟ್ಟು ಬಾಕಿ ಎಲ್ಲಾ ಕಡೆಗಳಲ್ಲಿನ ಸಂಚಾರವನ್ನು ಮುಗಿಸುವರು. ಈ ಕಮ್ಮಿಟಿಯವರು ಬರುವ ತಾ. ೩೦ರಲ್ಲಿ ಮದರಾಸಿಗೆ ತಲ್ಪಲಿಕ್ಕಿದ್ದಾರೆ. ಮತ್ತು ನಂತರದ ಹತ್ತು ದಿನಗಳಲ್ಲಿ ಇರೋಡ್, ಕಲ್ಲಿಕೋಟೆ, ಗುಂಟೂರು ಬೆಜವಾಡ ಮುಂತಾದ ಮದರಾಸು ಸಂಸ್ಥಾನದ ಮುಖ್ಯ ಪಟ್ಟಣಗಳನ್ನು ಸಂಚರಿಸುವರು. ಕಾಂಗ್ರೆಸ್ ಕಮ್ಮಿಟಿಯ ಮುಂದೆ ತಮ್ಮ ವರದಿಯನ್ನಿಡುವ ಮೊದಲು ಇವರು ಪಂಜಾಬ ಮತ್ತು ನೋರ್ತವೆಸ್ಟ ಪ್ರಾವಿನ್ಸ್ ಈ ಪ್ರಾಂತಗಳನ್ನು ಸಹ ಸಂದರ್ಶಿಸುವರು.

ಹಿಮಾಲಯ ಪರ್ವತ—ಈ ಪರ್ವತವನ್ನು ಏರಲು ಇತ್ತಲಾಗಿ ಮಾಡಿದ ಪ್ರಯತ್ನವೂ ಸಫಲವಾಗಲಿಲ್ಲ.

ಮೈಸೂರು—ಮಂಗಳೂರಿನಲ್ಲಿ ಕರ್ನಾಟಕ ಪ್ರಾವಿನ್ಸಿಯಲ್ ಕೊನ್ಫರೆನ್ಸಿನ ಕಾರ್ಯವನ್ನು ಮುಗಿಸಿ ಶ್ರೀಯುತ ಕೌಜಲಗಿ ಮೊದಲಾದವರು ಮೈಸೂರು ಸಂಸ್ಥಾನಕ್ಕೆ ಹೋದಾಗ ಸೆಕ್ಷನ್ ೧೪೪ರ ಮೇರೆಗೆ ಭಾಷಣ ಪ್ರತಿಬಂಧದ ಹುಕುಂ ಹೊರಟ್ಟಿತ್ತಷ್ಟೆ. ಆ ಹುಕುಮಿನ ಕುರಿತು ಅಲ್ಲಿಯ ಡಿಸ್ಟ್ರಿಕ್ಟ ಕಾಂಗ್ರೆಸ ಕಮ್ಮಿಟಿಯ ಸೆಕ್ರೆಟರಿಗಳಾದ ಮಿ| ಯಸ್. ಯನ್. ಯಮ್ ರಜಬಿಯವರು 'ರಿವಿಜನ್ ಪಿಟಿಶನ್' ಮಾಡಿದ್ದರು. ಕಳೆದ ತಾ. ೨೪ರಲ್ಲಿ ಇದರ ತನಿಖೆ ನಡೆದು, ಸೆಕ್ಷನ್ ೧೪೪ರ ಮೇರೆಗೆ ಕೊಟ್ಟ ಮೇಲಿನ ಹುಕುಂ ಸರಿಯಾದ್ದಲ್ಲವೆಂದು ನ್ಯಾಯಾಧೀಶರು ನಿರ್ಧರಿಸಿದ್ದಾರೆ.

ಬೆಂಗಳೂರ ಸಿಟಿ—ಮೈಸೂರು ಡಿಸ್ಟ್ರಿಕ್ಟ ಕಾಂಗ್ರೆಸ ಕಮ್ಮಿಟಿಯ ಆಶ್ರಯದಲ್ಲಿ ಕಳೆದ ತಾರೀಕು ೨೩ನೇ ಶುಕ್ರವಾರ ಬೆಂಗಳೂರಿನ ನೇತ್ರ ಚಿಕಿತ್ಸೆಯ ಆಸ್ಪತ್ರೆಯ ಮುಂದುಗಡೆಯ ಮೈದಾನಿನಲ್ಲಿ ಶ್ರೀಯುತ ಯಸ್. ಶ್ರೀನಿವಾಸ ಅಯ್ಯಂಗಾರರು ಚರಕದ ಸಂದೇಶ ಎಂಬುದನ್ನು ಕುರಿತು ಭಾಷಣ ಮಾಡಿದರು.

ಹಿಂದೂ ಪತ್ರಿಕಾ ಕರ್ತರ ಸಂಘ—ಬಂಗಾಳ ಪ್ರಾಂತದಲ್ಲಿ ಸ್ಥಾಪನೆಯಾದ ಪತ್ರಿಕಾಕರ್ತರ ಸಂಘಕ್ಕೆ ಶ್ರೀಯುತ ಕೃಷ್ಣ ಕುಮಾರ ಮಿತ್ರರು ಅಧ್ಯಕ್ಷರಾಗಿರುವರು; ಮತ್ತು ಅಮೃತ ಬಜಾರ ಪತ್ರಿಕೆಯ ಸಂಪಾದಕರು ಕಾರ್ಯದರ್ಶಿಗಳಾಗಿರುವರು.

ಎನ್ನಿಬಿಸೆಂಟರು:—ಆಸ್ಟ್ರೇಲಿಯಾ ದೇಶವನ್ನು ಸಂಚರಿಸಿ ಇವರು ಕಳೆದ ತಾರೀಕು ೨೩ಕ್ಕೆ ಮದರಾಸಿಗೆ ಬಂದು ತಲ್ಪಿರುತ್ತಾರೆ.

ಬುಂದಿಸಂಸ್ಥಾನ:—ಈ ಸಂಸ್ಥಾನದಲ್ಲಿ ಒತ್ತಾಳಿಕೆಯು ಬಹಳ ಜೋರಾಗಿದೆ. ಕಳೆದ ತಾ. ೧೩ರಲ್ಲಿ ಸಂಸ್ಥಾನದ ಸೈನಿಕರು ಬೋಚರಾ ಹಳ್ಳಿಗೆ ಹೋಗಿ, ಅನೇಕ ಕಿಸನರನ್ನು ಕೈದುಮಾಡಿದರು. ಕೈದು ಮಾಡಿದ ಜನರನ್ನು ಕಾಣಲು ಬಂದ ಅನೇಕರನ್ನು ಬಹಳವಾಗಿ ಹೊಡಿಯಲಾಯಿತು; ಕೆಲವರು ಗಾಯಹೊಂದಿರುವರಂತೆ.

ಪಂಡಿತ ಮದನಮೋಹನ ಮಾಲವೀಯರು:—ಗೋರಕಪುರ ಜಿಲ್ಲೆಯಲ್ಲಿ ಭಾಷಣಮಾಡಕೂಡದೆಂದು ಪಂಡಿತ ಮದನಮೋಹನ ಮಾಲವೀಯರಿಗೆ ಸರಕಾರದ ಹುಕುಂ ಕೊಡಲಾಯಿತು. ಆದರೆ ಮಾಲವೀಯರು ಈ ಅಪ್ಪಣೆಯನ್ನು ಉಲ್ಲಂಘಿಸಿ ೫ ಭಾಷಣಗಳನ್ನು ಮಾಡಿದರು.

ತಿಲಕ ಸ್ವರಾಜ್ಯ ಫಂಡು:—ಲಾಹೋರಿನ 'ಬಂದೇ ಮಾತರಂ' ಪತ್ರಿಕೆಯ ಸಂಪಾದಕರಾದ ಶ್ರೀಯುತ ಕರಮಚಂದಜೀಯವರು ತಮ್ಮ ಸಂಬಳದ ಹಣವನ್ನೆಲ್ಲಾ ತಿಲಕ ಸ್ವರಾಜ್ಯ ಫಂಡಿಗೆ ಕೊಟ್ಟಿರುತ್ತಾರೆ.

ಪಂಡಿತ ಮಾಧವಶುಕ್ಲ:—ಜೈಲಿನಲ್ಲಿರುವ ಈ ದೇಶಾಭಿಮಾನಿಗಳು ತನ್ನ ಅಳಿಯನು ಅಕಸ್ಮಾತ್ತಾಗಿ ಬಿದ್ದು ದೈವಾಧೀನನಾದನೆಂಬ ದುಃಖ ವಾರ್ತೆಯನ್ನು ಕೇಳಿ, ತನ್ನ ಸಂತಾಪವನ್ನು ನೀಗಿಕೊಂಡು, ಕೆಳಗಿನಂತೆ ಕಾಗದ ಬರೆದರು, "ಕ್ಷಮಾಪಣೆಯನ್ನು ಬೇಡಿ ತುರಂಗದಿಂದ ಹೊರಗೆ ಬರುವುದು ಯೋಗ್ಯವಲ್ಲ. ಈ ರೀತಿ ವರ್ತಿಸಿ ಜಗತ್ತಿಗೆ ಮುಖತೋರಿಸಲು ನಾನು ಇಚ್ಛಿಸುವುದಿಲ್ಲ. ನಾನು ಹರಿಶ್ಚಂದ್ರ, ಪ್ರತಾಪ ಇವರ ಮಾರ್ಗವನ್ನು ಅನುಸರಿಸಿ, ದುಃಖ ಮೊದಲಾದ ಕಷ್ಟವನ್ನು ಸಹಿಸಿ, ಸತ್ಯಮಾರ್ಗವನ್ನೇ ಹಿಡಿದು ನಡೆಯುವೆನು".

ವಕೀಲರು—ಮಿ| ಯಮ್. ಆರ್. ಜಯಕರ್ ಬಾರಿಸ್ಟರ ಇವರು ಪುನಃ ವಕೀಲ ವೃತ್ತಿಯನ್ನು ನಡಿಸಲು ಪ್ರಾರಂಭಿಸಿದ್ದಾರೆ. ತಾನು ಕಾಂಗ್ರೆಸ್ಸಿಗೆ ಸಂಪೂರ್ಣ ವಿರೋಧಿಯಾಗಿದ್ದೇನೆಂದೂ ಸಹ ತಿಳಿಸುತ್ತಾರೆ. ಸಿ ಆರ್. ದಾಸರನ್ನು ಕೈದು ಮಾಡಿದ್ದನ್ನು ನಿಷೇಧಿಸಿ ವಕೀಲ ವೃತ್ತಿಯನ್ನು ಬಿಟ್ಟ ಹೌರದ ಶ್ರೀಯುತ ಬರೋದೆಪ್ರಸನ್ನ ಪಯಿನ್ ಇವರು ಪುನಃ ವಕಾಲತನ್ನು ನಡಿಸಲು ಪ್ರಾರಂಭಿಸಿರುವರು.

ಮುಂಬಯಿಯಲ್ಲಿ ಮಳೆ—ಈ ವಾರದಲ್ಲಿ ಮುಂಬಯಿಯಲ್ಲಿ ಎರಡು ದಿನ ಎಡೆಬಿಡದೆ ಮಳೆ ಸುರಿದು ಪಟ್ಟಣದ ಅನೇಕ ಕಡೆಗಳಲ್ಲಿ ನೆರೆ ಬಂದು ನೀರು ತುಂಬಿರುತ್ತದೆ.

ಲಾಹೋರ—ಅಸ್ಪೃಶ್ಯತಾ ದೋಷವನ್ನು ಸಂಪೂರ್ಣ ಕಿತ್ತುಹಾಕುವ ಉದ್ದೇಶದಿಂದ ಲಾಹೋರಿನ ಆರ್ಯಸಮಾಜದವರು ಒಂದು ದೊಡ್ಡ ಔತಣವನ್ನು ಮಾಡಿಸಿದರು. ಬ್ರಹ್ಮಸಮಾಜ ಆರ್ಯಸಮಾಜ, ಮೊದಲಾದ ವರ್ಗದ ಅನೇಕ ಗೃಹಸ್ಥರು ಬಂದಿದ್ದು ಅಸ್ಪೃಶ್ಯ ವರ್ಗದವರೊಡನೆ ಕೂತು ಭೋಜನಮಾಡಿದರು.

ಹೈದರಾಬಾದ (ಸಿಂಧ್)—ಕಳೆದ ಮೇ ತಾ. ೫ ಮತ್ತು ೧೧ರಲ್ಲಿ ಸರಕಾರಕ್ಕೆ ವಿರೋಧವಾದ ಲೇಖಗಳನ್ನು ಪ್ರಕಟಿಸಿದ ತಪ್ಪಿಗಾಗಿ ಸೆಕ್ಷನ್ ೧೨೪ ಎ. ಪ್ರಕಾರ ಹಿಂದೂ ಪತ್ರಿಕೆಯ ಸಂಪಾದಕರಾದ ಮಹಾರಾಜ ಲೋಕರಾಮ ಶರ್ಮಾ ಇವರನ್ನು ಕಳೆದ ತಾ. ೨೭ರಲ್ಲಿ ಕೈದು ಮಾಡಿ ಮೇಜಿಸ್ಟ್ರೇಟರ ಮುಂದೆ ವಿಚಾರಣೆಗೆ ತಂದರು. ಸರಕಾರದೊಡನೆ ಜನರಿಗೆ ಅಪ್ರೀತಿಯುಂಟಾಗುವಂತೆ ತಾನು ಪ್ರಯತ್ನಿಸುತ್ತಿರುವುದಾಗಿ ಇವರು ಒಪ್ಪಿದರು. ಮತ್ತು ತಾನು ಈ ಪ್ರಯತ್ನವನ್ನು ಕಳೆದ ೧೯೦೫ರಿಂದೆ ಪ್ರಾರಂಭಿಸಿದ್ದು, ಸರಕಾರವು ಸರಿಯಾದ ಮಾರ್ಗದಲ್ಲಿ ನಡಿಯುವ ವರೆಗೆ ಮಾತ್ರ ಈ ಪ್ರಯತ್ನ ನಡಿಸಲಾಗುವುದಾಗಿ ಹೇಳಿದರು. ಮತ್ತು ಸರಕಾರದವರು ಆಕ್ಷೇಪಕರವಾಗಿ ಕಂಡ ಲೇಖದಲ್ಲಿ ಒಂದು ಬೇರೆಯವರಿಂದ ಬರೆಯಲ್ಪಟ್ಟಿದೆಂದು ಸೂಚಿಸಿ, ಆ ಲೇಖ ಬರೆದ ವ್ಯಕ್ತಿಯ ಹೆಸರನ್ನು ತಾನು ಕೊಡುವುದಿಲ್ಲವೆಂದು ವಾಗ್ಮೂಲ ಕೊಟ್ಟರು. ಇವರಿಗೆ ೧೮ ತಿಂಗಳ ಕಠಿಣ ಶಿಕ್ಷೆಯು ವಿಧಿಸಲಾಗಿದೆ.

ಮಲಬಾರ ರಿಲೀಫ್ ಫಂಡ್—ಸರ್ವೆಂಟ್ ಒಫ್ ಇಂಡಿಯಾ ಸೊಸೈಟಿಯ ಕಡೆಯಿಂದ ಮಲಬಾರ ಸಂಕಷ್ಟ ನಿವಾರಣೆಯ ಕುರಿತು ಕೆಲಸ ಮಾಡುವ ಶ್ರೀಯುತ ಎನ್. ಎಸ್. ಮಾಧವರಾಯರು ಕಳೆದ ತಾ. ೨೭ರಲ್ಲಿ ತ್ರಿವೇಂಡ್ರಮ್‌ನಲ್ಲಿ ಒಂದು ಭಾಷಣ ಮಾಡಿದರು. ಅಲ್ಲಿಯ ಮಹಾರಾಜರು ಮೇಲಿನ ಫಂಡಿಗೆ ಪುನಃ ರೂ. ೧೦೦೦ ದಾನ ಮಾಡಿರುವರಂತೆ.

ರುಷ್ಯಾ—ಈ ದೇಶದಲ್ಲಿ ಪ್ರಾಪ್ತವಾಗಿರುವ ಭಯಂಕರ ಕ್ಷಾಮಕ್ಕೆ ಅಲ್ಲಿಯ ವಿದ್ವಾಂಸರು ಬಲಿ ಬೀಳದಂತೆ ಅವರಿಗೆ ಸಹಾಯಮಾಡಲು ಕವಿವರ್ಯರಾದ ರವೀಂದ್ರನಾಥ ಟಾಕೂರರು ವಂತಿಗೆಯನ್ನು ಕೂಡಿಸುತ್ತಿದ್ದಾರೆ. ಈ ವಂತಿಗೆಗೆ ಕಳೆದ ತಾ. ೨೭ರ ವರೆಗೆ ರೂ. ೨೫೦೦ ಕೂಡಿದೆ. ಇದಕ್ಕೆ ಹಿಂದುಸ್ಥಾನದ ವೈಸರಾಯರು ರೂ. ೩೦೦ ಕೊಟ್ಟಿರುವರು.

ಬಂದೇಮಾತರಂ ಪತ್ರಿಕೆಯ ಸಂಪಾದಕರು:—ಲಾಲಾ ಲಜಪತರಾಯರು ಸಂಪಾದಕರಾಗಿ ಪ್ರಕಟಿಸುತ್ತಿರುವ ಈ ಪತ್ರಿಕೆಯ ಇತ್ತಲಾಗಿನ ಸಂಪಾದಕರಾದ ಶ್ರೀಯುತ ಕರಮಚಂದರ್ ಶುಕ್ಲರು ತುರಂಗವಾಸಕ್ಕೆ ತೆರಳುವ ಮೊದಲು ಕೆಳಗಿನ ಸಂದೇಶವನ್ನು ಪ್ರಕಟಿಸಿದ್ದಾರೆ. "ಪ್ರಿಯ ವಾಚಕರೇ, ನಾನು ಜೈಲಿನ ಹೊರಗೆ ಇರುವ ವರೆಗೆ ನನ್ನ ಕೈಲಾದಷ್ಟು ದೇಶಸೇವೆಯನ್ನು ಮಾಡಿದೆನು. ಸ್ವಾಧೀನ ಭಾರತವನ್ನುಂಟುಮಾಡುವ ಕ್ಷೇತ್ರವಾದ ತುರಂಗದಲ್ಲಿರುವ ಕೂರರ ಪಾದದ ಬಳಿಯಲ್ಲಿ ಸೇವೆಯನ್ನು ಮಾಡುವುದಕ್ಕೆ, ಅಲ್ಲಿಗೆ ಬರಲು ನನಗೆ ಆಹ್ವಾನ ಬಂದಿದೆ. ಎಲ್ಲಿಯೂ ಇರಲಿ, ಸೇವೆಯನ್ನು ಮಾಡುವುದೆ ನನ್ನ ಕರ್ತವ್ಯವಾಗಿದೆ. ಆದುದರಿಂದ ನಾನು ತುರಂಗವಾಸಕ್ಕೆ ಗಣ್ಯ ಮಾಡುವುದಿಲ್ಲ. ಅಲ್ಲದೆ, ನನ್ನ ಗುರುಗಳಾದ ಶ್ರೀಯುತ ಲಾಲಾ ಲಜಪತರಾಯರ ಚರಣದ ಬಳಿಯಲ್ಲೆ ಇರಲು ನನಗೆ ಸಂದರ್ಭ ಒದಗಿದಕ್ಕಾಗಿ ಹೆಚ್ಚು ಆನಂದವೆ ಆಗುತ್ತದೆ. ಮಹಾತ್ಮಾ ಗಾಂಧಿಯವರನ್ನು ಯಾವ ಕಾನೂನನ್ನು ಅನುಸರಿಸಿ (ಕಾನೂನಿನಲ್ಲೆ ಶಿರೋಮಣಿ) ಶಿಕ್ಷೆ ವಿಧಿಸಲಾಯಿತೊ ಆ ಕಾನೂನನ್ನೆ ಅನುಸರಿಸಿ ನನ್ನನ್ನೂ ಶಿಕ್ಷಿಸಿದ ಬಗ್ಗೆ ನನಗೆ ಸಂತೋಷವೆ ಆಗಿದೆ. ನನ್ನ ಬಂಧನದಿಂದ ಪತ್ರಿಕೆಯು ಒಂದು ವಾರ ಪ್ರಕಟವಾಗದೆ ಇಲ್ಲಲಿಕ್ಕೆ ಸಾಕು. ಆದರೆ ಅನಂತರ ಅದು ಸರಿಯಾಗಿ ಪ್ರಕಟವಾಗುವುದು. ನನ್ನ ಗೋಚರಕ್ಕೆ ಸರಿಯಾದ ಸಂಗತಿಗಳು ಬಾರದೆ ನಾನು ಪ್ರಕಟಿಸಿದ ಲೇಖಗಳಿಂದ ಯಾರಿಗಾದರೂ ಮನೋವೇದನೆಯಾಗಿದ್ದರೆ, ನಾನು ಆ ಬಗ್ಗೆ ಕ್ಷಮಾಪಣೆಯನ್ನು ಬೇಡುತ್ತೇನೆ".

ಡಾಕ್ಟರ ವಿ. ವರ್ಗಿಸ್:—ಕಳೆದ ತಾರೀಕು ೨೧ರಲ್ಲು ಬ್ರಿಟಿಷ್ ಕೊಚ್ಚಿಯ ಮುನ್ಸಿಪಲ್ ಹಾಲಿನಲ್ಲಿ ಡೊಕ್ಟರ ವಿ. ವರ್ಗಿಸರಿಗೆ ದಿವಾನ ಬಹದೂರ್ ಎಂಬ ಬಿರುದಿನ ಸನದನ್ನು ಕೊಡುವ ದರ್ಬಾರ ಸಮಾರಂಭವು ನಡಿಯಿತು. ಈ ಸನದನ್ನು ಕೊಡುವ ಸಮಯದಲ್ಲಿ ಮಲಬಾರದ ಕಲೆಕ್ಟರರಾದ ಮಿ. ಎಲ್ಲಿಸರು ಮಂಗಳೂರಿನಲ್ಲಿ ಅಕ್ಕಿಯ ಕ್ರಯವು ಏರಿರುವ ಸಮಯದಲ್ಲಿ ಡಾಕ್ಟರ ವರ್ಗಿಸರು ಮುನ್ಸಿಪಲ್ ಚೆಯರ್ಮನರಾಗಿದ್ದು ಈ ಕಷ್ಟ ನಿವಾರಣೆ ಬಗ್ಗೆ ಮಾಡಿದ ಪ್ರಯತ್ನ ಮೊದಲಾದ ಅವರ ಕಾರ್ಯಗಳನ್ನು ಕೊಂಡಾಡಿದರು.

ತಮಿಳುನಾಡು ಕಾಂಗ್ರೆಸ್ ಕಮ್ಮಿಟಿ:—ಗಯಾ ಕೊನ್ಫರೆನ್ಸಿನ ಅಧ್ಯಕ್ಷ ಪದವಿಗೆ ತಮಿಳು ನಾಡು ಕಾಂಗ್ರೆಸ ಕಮ್ಮಿಟಿಯವರು ಶ್ರೀಯುತ ಸಿ. ಆರ್. ದಾಸ್ ಇವರ ಹೆಸರನ್ನು ಸೂಚಿಸಿದ್ದಾರೆ.

ಬೆಂಗಳೂರು—ಮದರಾಸ ಗವರ್ನರರೂ ಅವರ ಕುಟುಂಬವೂ ಬರುವ ತಾ. ೧೮ರಲ್ಲಿ ಬೆಂಗಳೂರ ದಂಡಿಗೆ ಬಂದು ಅಲ್ಲಿ ಒಂದು ದಿವಸವಿದ್ದು ತಾ. ೨೦ರಲ್ಲಿ ಮದರಾಸಿಗೆ ಹಿಂತೆರಳುವರು. ಬೆಂಗಳೂರ ಸಿಟಿಯಲ್ಲಿ ಮುಂದಿನ ತಿಂಗಳು ತಾ. ೧ರಿಂದ ೫ ವರುಷಗಳ ವರೆಗೆ ಸಿಡುಬು ಹಾಕುವುದು ಬಲಾತ್ಕರಿಸಲ್ಪಡುವುದು.

ಹಜರತ್ ಮಾಹಾನಿಯವರು—ಮುಂಬಯಿ ಹೈಕೋರ್ಟಿನಲ್ಲಿ ತನಿಖೆ ನಡಿಯಲಿಕ್ಕಿರುವ ಖಟ್ಲೆಯಲ್ಲಿ ಹಜರತ್ ಮಾಹಾನಿಯವರು ಖುದ್ದು ಹಾಜರಾಗಬಹುದೆಂದು ಕೋರ್ಟಿನವರು ಒಪ್ಪಿರುವರು.

ಕಲ್ಕತ್ತಾ ಯುನಿವರ್ಸಿಟಿ ಸಿನೇಟ್—ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಇಂಗ್ಲಿಷ್ ಹೊರತು ಇತರ ವಿಷಯಗಳಲ್ಲಿ ದೇಶ ಭಾಷೆಯಲ್ಲಿ ನಡಿಸತಕ್ಕದೆಂದು ಕಲ್ಕತ್ತಾ ಯುನಿವರ್ಸಿಟಿ ಸಿನೇಟಿನವರು ನಿಶ್ಚಯಿಸಿದ್ದಾರೆ.

ಕೊಯಮುತ್ತೂರು ಜೈಲ್—ಇಲ್ಲಿ ಕೈದಿಗಳಿಗೆ ಕೊಡುತ್ತಿರುವ ಆಹಾರವು ಯೋಗ್ಯವಾಗಿಲ್ಲದೆ ಇರುವುದರಿಂದ ವಾಂತಿಭೇದಿ ರೋಗವು ಪ್ರಾರಂಭವಾಗಿ ಕಳೆದ ಒಂದು ತಿಂಗಳಲ್ಲಿ ೫೦ ಮಂದಿ ಕೈದಿಗಳು ನಾಶವಾದರು. ಈಗ ದಿವಸಕ್ಕೆ ಸರಾಸರಿ ೩-೪ ಮಂದಿ ಸಾಯುತ್ತಿದ್ದಾರೆಂದು ಸ್ವರಾಜ್ಯ ಪತ್ರಿಕೆಯ ಬಾತಮಿದಾರರು ತಿಳಿಸುತ್ತಾರೆ.

ಮೊಗವೀರ ವ್ಯವಸ್ಥಾಪಕ ಮಂಡಳಿ ಮತ್ತು ಮೊಗವೀರ ಕ್ಲಾರ್ಕ್ಸ್ ಯೂನಿಯನ್ ಸಂಘದ ವಾರ್ಷಿಕ ಮಹಾಸಭೆ, ಮುಂಬಯಿ.

ಈ ಸಂಘದ ೧೯೨೨ನೆಯ ಇಸವಿಯ ವರ್ಷಾವಧಿ ಮಹಾಸಭೆಯು ಕಳೆದ ತಾ. ೪ರಲ್ಲಿ ಮುಂಬಯಿಯಲ್ಲಿ ಶ್ರೀಯುತ ವಾಮನ ಮಂಗೇಶ ದುಬಾಶಿಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಈ ಸಭೆಗೆ ೩೦೦ಕ್ಕಿಂತ ಹೆಚ್ಚು ಮಂದಿ ಗೃಹಸ್ಥರು ನೆರೆದು ಬಂದಿದ್ದರು. ಪ್ರಥಮತಃ ದೇವತಾಪ್ರಾರ್ಥನೆಯ ಗೀತವು ಸಂಘದ ಬಾಲಾಬಾಲಕರಿಂದ ಹಾಡಲ್ಪಟ್ಟು, ಅನಂತರ ಸಂಘದ ಕಾಯಂ ಅಧ್ಯಕ್ಷರು ಅಂದಿನ ಸಭೆಯ ಅಧ್ಯಕ್ಷಸ್ಥಾನವನ್ನಲಂಕರಿಸಲು ಶ್ರೀಯುತ ವಾಮನ ಮಂಗೇಶ ದುಬಾಶಿಯವರು ಪೂರ್ಣ ಯೋಗ್ಯರೆಂದು ಸೂಚಿಸಿದರು. ಈ ಸೂಚನೆಯು ಏಕಮತದಿಂದ ಅನುಮೋದಿಸಲ್ಪಟ್ಟು, ಶ್ರೀಯುತ ದುಬಾಶಿಯವರು ಸಭಿಕರ ಹಸ್ತತಾಡನದೊಡನೆ ಅಗ್ರಾಸನವನ್ನು ಸ್ವೀಕರಿಸಿದರು. ತರುವಾಯ ಬಾಲಾಮಣಿಗಳು ಅಧ್ಯಕ್ಷರ ಮತ್ತು ಸಭಿಕರ ಸ್ವಾಗತದ ಪದಗಳನ್ನು ಹಾಡಿ ಮನೋರಂಜನಗೊಳಿಸಿದರು. ಸಭೆಯ ಮುಂದಿಡಲ್ಪಟ್ಟ ೧೯೨೧ನೆಯ ಇಸವಿಯ ವಾರ್ಷಿಕ ವರದಿಯು ತೃಪ್ತಿಕರವಾದದ್ದು ಮಾತ್ರವಲ್ಲ, ಪ್ರತಿಯೊಬ್ಬನಲ್ಲಿಯೂ ಉತ್ಸಾಹವನ್ನು ಉಂಟುಮಾಡತಕ್ಕದಾಗಿದೆ ಎಂಬ ಸೂಚನೋಕ್ತಿಗಳಿಂದ ಅನುಮೋದಿಸಲ್ಪಟ್ಟಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸದರಿ ವರದಿಯನ್ನು ಕುರಿತು, ಅದು ಒಂದು ವರುಷದಲ್ಲಿ ನಡೆಸಿದ ಕಾರ್ಯದ ವರದಿ ಎಂದು ಎಣಿಸಲ್ಪಟ್ಟರೂ, ವಾಸ್ತವವಾಗಿ ಅಷ್ಟೆಲ್ಲಾ ಕಾರ್ಯವು ಬರೇ ಮೂರು ತಿಂಗಳುಗಳಲ್ಲಿ ಸಾಧಿಸಲ್ಪಟ್ಟದೆಂದೂ, ಕಾರ್ಯನಿರ್ವಾಹಕ ಸಭೆಯವರ ಈ ಕಾರ್ಯಧುರೀಣತೆಯು ಶ್ಲಾಘನೀಯವೂ ಆಶ್ಚರ್ಯಕರವೂ ಆಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದೆಂದೂ, ಇನ್ನೇ ಆಸಕ್ತಿಯಿಂದ ಕೆಲಸಮಾಡಿದರೆ ಇನ್ನೊಂದು ವರ್ಷದೊಳಗೆ ೩೦೦ಕ್ಕಿಂತ ಹೆಚ್ಚು ಮಂದಿ ಸದಸ್ಯರನ್ನು ಸೇರಿಸಿ ಸಂಘವನ್ನು ಇನ್ನೂ ವೃದ್ಧಿಯಾಗಿ ಮಾಡಲು ಕಾರ್ಯನಿರ್ವಾಹಕ ಸಭೆಯವರು ಪೂರ್ಣಶಕ್ತರೆಂಬುದಕ್ಕೆ ಸಂದೇಹವಿಲ್ಲವೆಂದೂ ನಿರೂಪಿಸಿದರು. ಅದಲ್ಲದೆ ಈ ವರ್ಷದಲ್ಲಿ ಸ್ವಯಂಸೇವಕರ ನಿರ್ವಹಿಸಿಕೊಂಡು ಬರತಕ್ಕ ಕೆಲಸಗಳಿಗೋಸ್ಕರ ಬೇರೆ ಬೇರೆ ೫ ಸಣ್ಣ ಸಣ್ಣ ಕಮ್ಮಿಟಿಗಳನ್ನು ಏರ್ಪಡಿಸಬೇಕೆಂಬುದನ್ನು ಸೂಚಿಸಿ, ಆಯಾಯ ಕಮ್ಮಿಟಿಯ ಕಾರ್ಯಕ್ರಮವನ್ನು ವಿವರಿಸಿ ಹೇಳಿದರಲ್ಲದೆ, ಅವರ ಪೈಕಿ ಅತ್ಯಂತ ಆಸಕ್ತಿಯಿಂದ ಕೆಲಸಮಾಡಿ ಸಂಘಕ್ಕೆ ಎಲ್ಲರಿಗಿಂತ ಹೆಚ್ಚಿನ ಪ್ರಯೋಜನವನ್ನು ತೋರಿಸಿದವನಿಗೆ ಮುಂದಿನ ಮಹಾಸಭೆಯಲ್ಲಿ ಬೆಳ್ಳಿಯ ಚಲೋ ಪದಕವನ್ನು ಬಹುಮಾನವಾಗಿ ಕೊಡುವೆನೆಂದು ವಾಗ್ದಾನವಿತ್ತರು. ಸಂಘದ ರಾತ್ರಿ ಶಾಲಾ ಸಂಬಂಧವಾಗಿಯೂ ಇತರ ಉಪಯುಕ್ತ ವಿಷಯಕವಾಗಿಯೂ ಅನೇಕ ಬೋಧಪ್ರದವಾದ ಉಪದೇಶಗಳನ್ನಿತ್ತು ತನ್ನ ಸರಸವಾದ ಭಾಷಣವನ್ನು ಮುಗಿಸಿದರು. ಆ ಮೇಲೆ ವಿಶೇಷವಾಗಿ ಆಮಂತ್ರಿಸಲ್ಪಟ್ಟಿದ್ದ ಕೆಲವು ಮಹನೀಯರ ಪೈಕಿ ಶ್ರೀಯುತ ಬಿ. ವಾಮನ ರಾಯರೂ ಸ್ವಾಮಿ ಶ್ರೀ ಮುಕ್ತಾನಂದ ತೀರ್ಥರೂ ಮೊದಲಾದ ಕೆಲವು ಗೃಹಸ್ಥರು ಕಾಲೋಚಿತ ಭಾಷಣಗಳನ್ನಿತ್ತು ಸಭೆಯನ್ನು ಸಂತೋಷಗೊಳಿಸಿದರು. ಸಭೆಯಲ್ಲಿ ವಿದ್ಯಾಫಂಡಿಗೆ ರೂ. ೧೫೭—೯—೩ ದಾನರೂಪವಾಗಿ ಕೂಡಿತು. ೩೦ ಮಂದಿ ಹೊಸ ಮೆಂಬರರಾಗಿಯೂ ಸೇರಿದರು. ಸಭಾಂತ್ಯದಲ್ಲಿ ಅಧ್ಯಕ್ಷರಿಗೆ ಧನ್ಯವಾದವನ್ನಿತ್ತು ಮಂಗಳಾರತಿಯನ್ನು ಬಾಲಾಬಾಲಕರಿಂದ ಹಾಡಿ, ಸಭೆಯು ಫಲಪುಷ್ಪ ಪಾನಸುಪಾರಿಗಳಿಂದ ಸತ್ಕರಿಸಲ್ಪಟ್ಟು ಕೊನೆಗೊಂಡಿತು.

ಅನುಕ್ರಮಣಿಕೆ

ಅಗ್ರಲೇಖ—
ಪಾಶ್ಚಾತ್ಯದೇಶದೊಳಗಿನ ರಾಜಕೀಯ ಖೂನಿಗಳು . . . ೨
ಸ್ಫುಟವಿಚಾರಗಳು—
೧. ಹಿಂದುಸ್ಥಾನದ ಜೈಲುಗಳ ಪರಿಸ್ಥಿತಿ. . . . ,,
೨-೩ ಲಂಡನ್ ಟೈಮ್ಸ್ ಪತ್ರಿಕೆ . . . ,,
೪. ನಾಮದಾರ ಶಾಸ್ತ್ರಿಯವರು . . . ,,
ಮಂಗಳೂರು— . . . ,,
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ . . . ೫
ರಾಷ್ಟ್ರೀಯ ವಿದ್ಯಾಮಂದಿರ, ಉಡುಪಿ . . . ,,
ಮೊಗವೀರ ವ್ಯವಸ್ಥಾಪಕ ಮಂಡಲಿ ಮತ್ತು ಮೊಗವೀರ ಕ್ಲಾರ್ಕ್ಸ್ ಯೂನಿಯನ್ ಸಂಘದ ವಾರ್ಷಿಕ ಮಹಾಸಭೆ, ಮುಂಬಯಿ . . . ,,
ವಾಸಿಮಹಾಶಯರು . . . ,,
"ಹಿಂದೀ ರಾಜಕಾರಣದ ಶ್ರೀಗಣೇಶವು" . . . ,,

ಸ್ವದೇಶಾಭಿಮಾನಿ

ಶಕ ೧೮೪೪ ಆಷಾಢ ಶು| ೭ಯು ಶುಕ್ರವಾರ.

ಪಾಶ್ಚಾತ್ಯದೇಶದೊಳಗಿನ ರಾಜಕೀಯ ಖೂನಿಗಳು.

ಪೂರ್ವ—ಪಶ್ಚಿಮಗಳಿಗೆ ಅನೇಕ ಸಂಗತಿಗಳಲ್ಲಿ ತುಂಬಾ ವೈಲಕ್ಷಣ್ಯವಿದೆ ಎಂದು ಈ ಹೊತ್ತು ಬರೆದು ತಿಳಿಸಬೇಕಾದ ಅಗತ್ಯವಿಲ್ಲ. ಅವರ ಧಾರ್ಮಿಕಕಲ್ಪನೆ, ಸಾಮಾಜಿಕ ಆಚಾರ, ನೀತಿನಿಯಮ ಇತ್ಯಾದಿ ವ್ಯವಹಾರಗಳು ಪೂರ್ವದೇಶದೊಳಗಿನ ವ್ಯವಹಾರಗಳಿಗೆ ಸರಿಹೋಲುವುದಿಲ್ಲ. ಅವುಗಳಲ್ಲಿ ಪರಸ್ಪರ ಅಜಗಜಾಂತರವಿರುತ್ತದೆ. ಆದ್ದರಿಂದಲೆ ಪೂರ್ವ ಪಶ್ಚಿಮಗಳು ಒಟ್ಟುಗೂಡುವುದಿಲ್ಲವೆಂಬ ಮಾತು ರೂಢವಾಗಿದೆ. ಪಾಶ್ಚಾತ್ಯದೇಶದೊಳಗಿನ ಜನಾಂಗಗಳು ತಾವು ಸುಧಾರಿಸಿದವುಗಳೆಂದು ತಿಳಕೊಳ್ಳುತ್ತವೆ. ವಿವೇಚಕ ಮತ್ತು ಸೂಕ್ಷ್ಮಬುದ್ಧಿ, ಆ ಬುದ್ಧಿಯ ಸಹಾಯದಿಂದ ಅನೇಕ ಸಂಶೋಧನಗಳು, ಆ ಸಂಶೋಧನಗಳಿಂದ ಯಂತ್ರಕಲೆಯಲ್ಲುಂಟಾಗುವ ಉತ್ಕ್ರಾಂತಿ, ಈ ಯಂತ್ರಗಳ ಸಹಾಯದಿಂದ ಪ್ರಚಂಡ ಸಂಪತ್ತು, ನಿರಂಕುಶ ರಾಜ್ಯಾಧಿಕಾರ, ವಿಪುಲ ಸುಖಭೋಗ ಈ ಎಲ್ಲ ಸಂಗತಿಗಳಿಂದ ಈ ಹೊತ್ತು ಪಾಶ್ಚಾತ್ಯರಾಷ್ಟ್ರಗಳು-ಅವುಗಳಲ್ಲಿ ಮುಖ್ಯವಾಗಿ ಇಂಗ್ಲಂಡು ಜರ್ಮನಿಗಳಂಥ ದೇಶಗಳು-ತಾವು ಅತ್ಯಂತ ಸುಧಾರಿಸಿದವೆಂದು ತಿಳಕೊಳ್ಳುತ್ತವೆ. ಆದರೆ ಅವುಗಳ ಸುಧಾರಣೆಯು ಕೇವಲ ಐಹಿಕಸುಖಭೋಗಗಳ ಪ್ರಾಪ್ತಿಯಲ್ಲೆ ಪರ್ಯವಸಾನವನ್ನು ಹೊಂದುತ್ತದಲ್ಲದೆ, ಮನುಷ್ಯನ ಜೀವಿತದ ಧ್ಯೇಯವಾಗಿರುವ ಪರಮ ಸುಖಪ್ರಾಪ್ತಿಗೆ ಇವರ ಸುಧಾರಣೆಗಳು ಎಷ್ಟು ಮಾತ್ರಕ್ಕೂ ಪೋಷಕವಾಗುವುದಿಲ್ಲ. ಸುಧಾರಣೆ ಎಂದು ಹೆಸರು ಕೊಟ್ಟರೂ ಪಾಶ್ಚಾತ್ಯ ದೇಶದ ಸಾಮಾಜಿಕ ಪರಿಸ್ಥಿತಿಯು ಮತ್ತು ರಾಜಕೀಯ ಸ್ಥಿತಿಯು ಅತ್ಯಂತ ನಿಕೃಷ್ಟವಾಗಿದೆ ಎಂದು ಅಲ್ಲಿಯ ಸಂಗತಿಗಳಿಂದ ಹೇಳಬೇಕಾಗುತ್ತದೆ. ಅಲ್ಪ ಕಾರಣಗಳಿಂದ ಮಹಾಯುದ್ಧಗಳು ಯುರೋಪದಲ್ಲಿ ಉಂಟಾಗುತ್ತಿರುತ್ತವೆ. ಬಾಹ್ಯ ಕಾರಣವು ಅಲ್ಪವಾಗಿ ತೋರಿದರೂ, ನಿಜವಾಗಿ ಹೇಳುವುದಾದರೆ, ದುಃಸ್ವಾರ್ಥದ ಬೆಂಕಿಯು ಒಳಗೆ ಕುದಿಯುತ್ತಿದ್ದು ಥಕ್ಕನೆ ಒಂದು ಸಣ್ಣ ಕಾರಣದಿಂದ ಜ್ವಾಲಾಮುಖಿ ಪರ್ವತವು ಹೇಗೆ ಸ್ಫೋಟವಾಗುವುದೊ ಹಾಗೆಯೆ ವಿಲಾಯತಿ ದೇಶದೊಳಗಿನ ರಾಜಕೀಯ ಯುದ್ಧಗಳು ಥಕ್ಕನೆ ಉದ್ಭವಿಸುವವು. ಹಾಗೆಯೆ ರಾಜಕೀಯ ಖೂನಿಗಳು ಕೂಡ ಸಂಭವಿಸುವವು. "ಹಿಂದುಸ್ಥಾನದಂಥ ಪೌರಸ್ತ್ಯ ದೇಶದಲ್ಲಿ ರಾಜರಿಗೂ, ಪ್ರಜೆಗಳಿಗೂ ವಿವಾದವು ಇದ್ದರೆ—ಚಳವಳವು ನಡೆಯುತ್ತಿದ್ದದ್ದಾದರೆ ಇಂಥ ಖೂನಿಗಳು ಥಕ್ಕನೆ ಆಗಲಿಕ್ಕಿಲ್ಲ. ಆದರೆ ಪಾಶ್ಚಾತ್ಯ ದೇಶದ ಸಂಸ್ಕಾರವು ಬೇರೆ ತರದ್ದಿರುವುದರಿಂದ ಯುದ್ಧ, ಖೂನಿ ಇವುಗಳಂಥ ನಿಂದ್ಯ ಉಪಾಯಗಳು ಆಶ್ರಯಿಸಲ್ಪಡುತ್ತವೆ. ಅವರು ತಾವು ಸುಧಾರಿಸಿದವರೆಂದು ಬೇಕಷ್ಟು ಗರ್ವವನ್ನು ತಾಳಿದರೂ ಚಂದ್ರನಲ್ಲಿ ಕಲಂಕವಿರುವಂತೆ, ಇನ್ನೂ ಸಮರ್ಪಕವಾದ ಉಪಮೆಯನ್ನು ಕೊಡುವುದಾದರೆ, ದೀಪದಡಿಯಲ್ಲಿ ಕತ್ತಲೆ ಇರುವಂತೆ ಅಲ್ಲಿಯ ಸಂಸ್ಕೃತಿಯ ಹೊಟ್ಟೆಯಲ್ಲಿ ನಾಸ್ತಿಕ್ಯದ ಪಿಶಾಚಿಕೆಯು ಅಡಗಿಕೊಂಡಿದೆ. ಈ ನಾಸ್ತಿಕ್ಯ ಮಾಹಾತ್ಮ್ಯದಿಂದ ಪಾಶ್ಚಾತ್ಯ ದೇಶಗಳಲ್ಲಿ ಖೂನಿ ಮೊದಲಾದ ಅನೇಕ ಅನನ್ವಿತ ಪ್ರಕಾರಗಳು ನಡೆಯುತ್ತಿರುತ್ತವೆ.

ನಮ್ಮ ಈ ವಿಧಾನಕ್ಕೆ ಇತ್ತಲಾಗೆ ಲಂಡನ್ ಮತ್ತು ಜರ್ಮನಿಯಲ್ಲಿ ಸಂಭವಿಸಿದ ರಾಜಕೀಯ ಖೂನಿಗಳು ಉತ್ತಮವಾದ ದೃಷ್ಟಾಂತಗಳೆನ್ನಬಹುದು. ಲಂಡನಿನಲ್ಲಿ ಸರ್ ಹೆನರಿ ವಿಲ್ಸನ್ ಎಂಬ ಅಧಿಕಾರಿಗಳ ಖೂನಿಯು ನಡೆಯಿತು. ಇವರು ಫೀಲ್ಡ ಮಾರ್ಶಲರಾಗಿದ್ದರು. ಇವರನ್ನು ಕೊಂದವರು ಐರ್ಲಂಡಿನೊಳಗಿನ ಡಿವೆಲರಾ ಎಂಬವರ ಪಕ್ಷದವರಾಗಿರಬಹುದೆಂದು ಹೇಳುತ್ತಾರೆ. ಸಂಶಯದ ಮೇಲೆ ಪೋಲೀಸರು ಇಬ್ಬರನ್ನು ಹಿಡಿದಿದ್ದಾರೆ. ಇದೆ ರೀತಿಯಿಂದ ಜರ್ಮನಿಯ ರಾಜಧಾನಿಯಾದ ಬರ್ಲಿನಿನಲ್ಲಿ ವೊಲ್ಟರ ರೊಥೆನ್ಯೂ ಎಂಬವರನ್ನು ಅಲ್ಲಿಯ ಸಾಮ್ರಾಜ್ಯ ಸತ್ತಾವಾದಿಗಳ ಕಡೆಯವರು ಗುಂಡುಹಾಕಿ ಕೊಂದ ವಾರ್ತೆಯು ಬಂದಿದೆ. ಜರ್ಮನಿಯಲ್ಲಿ ಈ ಒಂದು ತಿಂಗಳೊಳಗೆ ಎರಡು ಮೂರು ರಾಜಕೀಯ ಖೂನಿಗಳು ಸಂಭವಿಸಿದವು. ರಿಪಬ್ಲಿಕ್ ಪಕ್ಷದ ಪ್ರೆಸಿಡೆಂಟರನ್ನು ಪ್ರಥಮತಃ ಕೊಂದು ಹಾಕಲಾಯಿತು. ಆ ಮೇಲೆ ಈ ಸಂಕ್ರಾಂತಿಯು ಬೇರೆ ಬೇರೆ ರಾಜಕೀಯ ಪುರುಷರ ಮೇಲೆ ಕುಳಿತು ಕೊನೆಗೆ ಪರರಾಷ್ಟ್ರಮಂತ್ರಿಗಳಾದ ರೊಥೆನ್ಯೂ ಇವರ ಎದೆಯ ಮೇಲೆ ಕುಳಿತು ಅವರನ್ನು ಯಮಸದನಕ್ಕೆ ಕಳುಹಿಸಿತು. ಇವರು ಜಿನೊವಾ ಪರಿಷತ್ತಿನಲ್ಲಿ ಜರ್ಮನಿಯ ಪರವಾಗಿ ರಿಪಬ್ಲಿಕಿನ ಕಡೆಯಿಂದ ಪ್ರಾತಿನಿಧ್ಯವನ್ನು ಮಾಡಿದ್ದರು. ಯುದ್ಧದ ನಂತರ ಜರ್ಮನಿಯ ರಿಪಬ್ಲಿಕನ್ ಸರಕಾರವು ಸ್ಥಾಪಿತವಾಗಿ ಅದರ ಕೈಯಲ್ಲಿ ಅಧಿಕಾರ ಸೂತ್ರಗಳು ಬಂದಿವೆ. ಮತ್ತು ಇತರ ರಾಷ್ಟ್ರಗಳೊಡನೆ ಸಂಧಿನಿಗ್ರಹಾದಿ ವ್ಯವಹಾರವನ್ನು ಈ ರಿಪಬ್ಲಿಕ್ ಸರಕಾರವು ನಡಿಸುತ್ತದಾದರೂ ಜರ್ಮನಿಯಲ್ಲಿ ಸಾಮ್ರಾಜ್ಯ ಸತ್ತಾವಾದಿಗಳ ಇನ್ನೊಂದು ಪಕ್ಷವು ಇದೆ. ಈ ಪಕ್ಷವು ಅಧಿಕಾರಾರೂಢವಾಗಿಲ್ಲವಾದ್ದರಿಂದ ಮತ್ತು ರಿಪಬ್ಲಿಕ್ ಸರಕಾರವು ಜಿನೋವಾ ಮುಂತಾದ ಪರಿಷತ್ತುಗಳಲ್ಲಿ ಇತರ ಸರಕಾರಗಳೊಡನೆ ಯಾವ ಯಾವ ಕರಾರುಗಳನ್ನು ಮಾಡಿಕೊಳ್ಳುತ್ತಿದೆಯೊ ಅದು ಈ ಸಾಮ್ರಾಜ್ಯಸತ್ತಾವಾದಿಗಳ ಪಕ್ಷಕ್ಕೆ ಅಭಿಮತವಿಲ್ಲದಿರುವುದರಿಂದ ರಾತ್ರಿ ಸಮಯವು ಬಂದೊಡನೆ ಗೂಗೆಗಳು ಹೊರಗೆ ಬಂದು ಕಾಗೆಮರಿಗಳ ಕಣ್ಣನ್ನು ಹೇಗೆ ಕುಕ್ಕುತ್ತವೊ ಹಾಗೆ ಸಾಮ್ರಾಜ್ಯವಾದಿಗಳಲ್ಲಿಯ ಹಲವು ಘಾತಕರು ರಿಪಬ್ಲಿಕ್ ಸರಕಾರದ ಅಧಿಕಾರಿಗಳನ್ನು ಹಿಡಿದು, ಸಂಧಿಸಾಧಿಸಿ ಕೊಲ್ಲುತ್ತಾರೆ. ಈ ಒಂದು ತಿಂಗಳೊಳಗೆ ಜರ್ಮನಿಯಲ್ಲಿ ಮೂರು ಖೂನಿಗಳಾದವು.

ಲಂಡನಿನಲ್ಲೂ ಈ ಕ್ರಮವು ಪುನಃ ಪ್ರಾರಂಭವಾಗಿದೆಂದು ಹೆನ್ರಿ ವಿಲ್‌ಸನರ ಕೊಲೆಯಿಂದ ವ್ಯಕ್ತವಾಗುತ್ತದೆ. ಸ್ವಾತಂತ್ರ್ಯಾಪೇಕ್ಷಿಯಾದ ಐರ್ಲಂಡಿನ ಇಚ್ಛೆಯನ್ನು ಇಂಗ್ಲಂಡು ಪೂರಯಿಸುವುದರಲ್ಲಿ ಅನೇಕ ಕುಯುಕ್ತಿಗಳ, ಕುಟಿಲ ಉಪಾಯಗಳ ಮತ್ತು ವಾಮ ಮಾರ್ಗಗಳ ಆಶ್ರಯವನ್ನು ಮಾಡಿ, ಕೊನೆಗೆ ಹೆಸರಿಗೆ ತಕ್ಕ ಹೋಮ್‌ರೂಲನ್ನು ಕೊಟ್ಟು ಮತ್ತು "ಫ್ರೀಸ್ಟೇಟ್" ಎಂದರೆ "ಸ್ವತಂತ್ರ ರಾಜ್ಯ"ವೆಂಬ ಹೆಸರನ್ನು ಸಹ ದಯಪಾಲಿಸಿ ಕಾಲಕ್ರಮಣವನ್ನು ಮಾಡುತಿತ್ತು. ಐರ್ಲಂಡಿನಲ್ಲಿ ಹೋಮ್‌ರೂಲ್ ವಾದಿಗಳೂ ಅಲ್‌ಸ್ಟರಿನ ಎದುರುವಾದಿಗಳೂ ಎಂದು ಎರಡು ಪಕ್ಷಗಳು ಮೊದಲಿನಿಂದಲೆ ಇವೆ. ಹೋಮ್‌ರೂಲ್ ವಾದಿಗಳಲ್ಲಿ ರಾಷ್ಟ್ರೀಯರೂ, ಉಗ್ರರೂ ಎಂದು ಪುನಃ ಎರಡು ಭೇದಗಳಿದ್ದಾವೆ. "ಫ್ರೀ ಸ್ಟೇಟಿ"ನ ಸ್ವರೂಪದಲ್ಲಿ ಕೊಟ್ಟಿರುವ ಅಧಿಕಾರಗಳು ಉಗ್ರಪಕ್ಷದವರಿಗೆ ಸರ್ವಥಾ ಸಮ್ಮತವಿಲ್ಲ. ಅವರು ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುತಿದ್ದಾರೆ. ಐರಿಶ್.ರಾಷ್ಟ್ರೀಯ ಪಕ್ಷದೊಳಗಿನ ಈ ಒಳ ಭೇದಗಳು ಹೆಚ್ಚಿನ ಒಡಕಿಗೆ ಕಾರಣವಾದವುಗಳಲ್ಲ. ಅವು ಪ್ರಾಮಾಣಿಕ ಮತಭೇದಗಳಾಗಿರುವುದರಿಂದ ಐರಿಶಿನವರ ರಾಷ್ಟ್ರೀಯ ಪಕ್ಷವೆಂಬುದು ಒಂದೆ ಸರಿ. ಡಿವೆಲರಾ ಎಂಬವರು ಈ ಪಕ್ಷದ ಅಧ್ವರ್ಯುಗಳು. ಸರ ಕಾರ್ಸನರು ಅಲ್‌ಸ್ಟರ ಪಕ್ಷದ ಎಂದರೆ ಹೋಮ್‌ರೂಲ್ ವಿರೋಧಿ ಪಕ್ಷದ ಪಾಳೆಯಗಾರರು! ಮೊನ್ನೆ ಘಾತಕರ ಗುಂಡಿಗೆ ಗುರಿಯಾದ ಫೀಲ್ಡ ಮಾರ್ಶಲರಾದ ಹೆನ್ರಿ ವಿಲ್‌ಸನರು ಅಲ್ಸಟರ ಪಕ್ಷದ ಕಡೆಗೆ ವಿಶೇಷ ಸಹಾನುಭೂತಿಯುಳ್ಳವರಾಗಿದ್ದರಂತೆ. ಮತ್ತು ಈ ಕಾರಣದಿಂದ ಲಂಡನಿನಲ್ಲಿ ಐರ್ಲಂಡಿನ ರಿಪಬ್ಲಿಕ ಪಕ್ಷದವರು ಇವರನ್ನು ಗುಂಡು ಹಾಕಿ ಕೊಂದರು ಎಂದು ಇನ್ನೊಂದು ಕಡೆಯವರು ಹೇಳುತ್ತಾರೆ. ಡಿವೆಲರಾ ಇವರು ಹೆನರಿ ವಿಲ್ಸನರ ಕೊಲೆಯ ವಿಷಯವಾಗಿ ಸ್ವಾಭಿಪ್ರಾಯವನ್ನು ವ್ಯಕ್ತಗೊಳಿಸುವಾಗ ಈ ವಿಲ್‌ಸನರ ದೋಷಗಳನ್ನು ಸ್ಮರಣಕ್ಕೆ ತಂದುಕೊಟ್ಟಿದ್ದಾರೆ. ಬೆಲ್‌ಫಾಸ್ಟ ಮತ್ತು ಅದರ ಸಮೀಪದಲ್ಲಿ ಅತ್ಯಾಚಾರವನ್ನು ನಡಿಸಿ ಆ ಅತ್ಯಾಚಾರದಲ್ಲಿ ಸ್ತ್ರೀಯರ ಮಾನವನ್ನು ಭಂಗಪಡಿಸಿದ ಮತ್ತು ಸ್ತ್ರೀ ಪುರುಷರ ಕೊಲೆಗಳನ್ನು ಸಾಧಿಸಿ ರಾಷ್ಟ್ರೀಯ ಪಕ್ಷದವರನ್ನು ಪೀಡಿಸಿದ ಮತ್ತು ಅನೇಕ ತರದ ಅತ್ಯಾಚಾರದಿಂದ ಆ ಪ್ರಾಂತಕ್ಕೆ ನರಕದ ಸ್ವರೂಪವನ್ನು ಕೊಟ್ಟಿರುವ ಅಲ್‌ಸ್ಟರಿನವರಿಗೆ ಈ ವಿಲ್‌ಸನರ ಸಹಾಯ್ಯ ಮತ್ತು ಸಹಾನುಭೂತಿ ಇದ್ದವು. ಇದನ್ನು ಯಾರೂ ಮರೆಯಬಾರದೆಂದು ಡಿವೆಲರಾ ಇವರು ಒತ್ತಿ ಹೇಳಿದ್ದಾರೆ. ಆ ವಿಲ್‌ಸನರಲ್ಲಿ ಇಂಥ ಅನೇಕ ದೋಷಗಳಿದ್ದರೂ ಅವರನ್ನು ಕೊಂದದ್ದು ವ್ಯಸನಕರವಾದ್ದೆಂದು ಡಿವಲರಾ ಇವರು ಸ್ವಚ್ಛ ಮನಸ್ಸಿನಿಂದ ಪ್ರಕಟಿಸಿದ್ದಾರೆ. ಹೆನರಿ ವಿಲ್ಸನರ ಕೊಲೆಗೆ ಐರಿಷ್ ರಿಪಬ್ಲಿಕ ಸೇನೆಯ ಸಂಬಂಧವೇನೂ ಇಲ್ಲ ಎಂದರೆ ಅವರ ಪ್ರೇರಣೆಯಿಂದ ಅಥವಾ ಹೇಳಿಕೆಯಿಂದ ಈ ಕೃತ್ಯವು ಘಟಿಸಿದ್ದಲ್ಲವೆಂದು ಐರಿಷ್ ರಿಪಬ್ಲಿಕನ್ ಸೇನೆಯ ಮುಖ್ಯಸ್ಥರು ಪ್ರಸಿದ್ಧಗೊಳಿಸಿದ್ದಾರೆ. ಸಾರಾಂಶ, ಸರ್, ಹೆನರಿ ವಿಲ್ಸನರ ಕೊಲೆಗೆ ಯಾರೆ ಭಾಗಿಗಳಾಗಿರಲಿ, ಆದರೆ ಅವರ ಕೊಲೆಯು ಶೋಚನೀಯವೆಂಬುದಕ್ಕೆ ಸಂದೇಹವಿಲ್ಲ.

ಸೂರ್ಯನು ಎಂದೂ ಅಸ್ತಮಿಸದ ಎಂದರೆ ಯಾವಾಗಲೂ ಪ್ರಕಾಶಿಸುತ್ತಿರುವ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ರಾಜಧಾನಿಯಾದ ಲಂಡನಿನಲ್ಲಿ ಅಧಿಕಾರಿಗಳ ಕೊಲೆಯಂಥ ಈ ದುಷ್ಕೃತ್ಯವು ನಡೆಯುತ್ತಿರುತ್ತದೆ. ವಿಲಾಯತಿಯಲ್ಲಿ ಅಧಿಕಾರಿಗಳು ಈಗ ಯಾವಾಗಲೂ ಸಶಸ್ತ್ರಗಳಾಗಿರುವರು. ಈ ಬಗ್ಗೆಯನ್ನು ಕೇಳತಕ್ಕ ಇದ್ದರು ತುಬಾಕಿ ಗುಂಡನ್ನು ಸಿದ್ಧಪಡಿಸಿಕೊಂಡು ಅದನ್ನು ಹತ್ತರದಲ್ಲೆ ಇಟ್ಟುಕೊಂಡಿರುವರು. ಈ ಮೇರೆಗೆ ಅರಾಜಕರ-ಅಥವಾ ಖೂನಿ ಪಕ್ಷದವರ ಕೈಯಿಂದ ತಪ್ಪಿಸಿಕೊಳ್ಳಲು ವಿಲಾಯತಿಯ ಅಧಿಕಾರಿಗಳು ಆಯುಧ ಪಾಣಿಗಳಾಗಿ ನಿಂತಿರುವುದನ್ನು ನೋಡಿದರೆ ವಿಲಾಯತಿಯ ಸುಧಾರಣೆ, ನಾಗರಿಕತೆ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಪಶ್ಚಾತ್ತಾಪವಾಗದೆ ಇರುವುದಿಲ್ಲ. ವಿಲಾಯತಿ ಜನರು ತತ್ವಜ್ಞಾನ, ಸುಶಿಕ್ಷಣಗಳನ್ನು ಹೊಂದಿದವರಾಗಿದ್ದರೂ, ಬಹಳ ವಿವೇಕಿಗಳಾಗಿದ್ದರೂ, ಹಸಿವೆಯಾದಾಗ ಹುಲಿಯು ಹೇಗೆ ಬೇರೆ ಎಲ್ಲ ಬೋಧೆಯನ್ನು ಮರೆತು ಬಿಡುವುದೊ, ಹಾಗೆಯೆ ಇವರು ಕೂಡ ತಮ್ಮ ಕಾರ್ಯಕ್ಕೆ ವಿಘ್ನ ಬರುವಲ್ಲಿ ಖೂನಿಯಂಥ ನಿಂದ್ಯ ಕೆಲಸವನ್ನು ಮಾಡಬಾರದೆಂಬ ತತ್ವಜ್ಞಾನವನ್ನು ಕೂಡಲೆ ಮರೆತು ಬಿಡುವರು.

ಇಂಥ ಪರಿಸ್ಥಿತಿಯು ಹಿಂದೂಸ್ಥಾನದಲ್ಲಿ ಇಲ್ಲ. ಹಿಂದೂಸ್ಥಾನದಲ್ಲಿ ಅತ್ಯಾಚಾರದ ಹೆಸರನ್ನು ಕೂಡ ಎತ್ತದೆ ಜನತೆಯು ಕೇವಲ ಶಾಂತರೂಪದಿಂದ ಚಳವಳವನ್ನು ಮಾಡಹತ್ತಿದೆ. ಹಿಂದೂಸಾನದಲ್ಲಿ ಅಧಿಕಾರಿಗಳು ನಡಿಸುವ ಅತ್ಯಾಚಾರದ ಮಾನದಿಂದ ಮತ್ತು ಮಾಡುವ ವಚನಭಂಗದ ಮಾನದಿಂದ ಐರ್ಲಂಡಿನಲ್ಲಿ ಅಧಿಕಾರಿಗಳ ಅತ್ಯಾಚಾರವು ಏನೂ ಇಲ್ಲವೆನ್ನಬಹುದು. ಹೀಗಿರಲು ಅಲ್ಲಿ ಹೆನರಿವಿಲ್ಸನರಂಥ ದೊಡ್ಡ ಅಧಿಕಾರಿಗಳ ಭಯಂಕರ ಖೂನಿಯು ಆಗುತ್ತಿದೆ ಇದು ಪಾಶ್ಚಾತ್ಯ ಮನುಷ್ಯನ ಸ್ವಭಾವದ ನಿದರ್ಶನವೆ ಅಲ್ಲದೆ ಇದಕ್ಕೆ ಬೇರೆ ಏನು ಹೆಸರು ಕೊಡಬಹುದು? ಹಿಂದೂಸ್ಥಾನದವರು ಎಲ್ಲ ತರದ ಅಪಮಾನಗಳನ್ನೂ, ಎಲ್ಲ ತರದ ಕಷ್ಟಗಳನ್ನೂ, ಸೌಮ್ಯರೀತಿಯಿಂದ ಸಹಿಸುತ್ತಾರಲ್ಲದೆ ಈ ಪಾಶ್ಚಾತ್ಯ ಪದ್ಧತಿಯ ಖೂನಿಯನ್ನು ಮಾಡುವುದಿಲ್ಲ. ಆದರೂ ಅಧಿಕಾರಿಗಳಿಗೆ ಜನರನ್ನು ಜೈಲಿನಲ್ಲಿ ಕಳುಹಿಸಬೇಕೆಂದು ತೋರುತ್ತದೆ. ಮತ್ತು ಆ ಮೇರೆಗೆ ೨೦-೨೫ ಸಾವಿರ ಜನರು ಈ ಹೊತ್ತು ಹಿಂದೂಸ್ಥಾನದ ಜೈಲುಗಳಲ್ಲಿ ಇದ್ದಾರೆ. ಪಾಶ್ಚಾತ್ಯ ದೇಶದ ದೇಶಭಕ್ತಿಯು ತಾಮಸ ಸ್ವಭಾವದ್ದು. ಆದ್ದರಿಂದ ಅಲ್ಲಿ ಆಗಾಗ್ಗೆ ರಾಜಕೀಯ ಖೂನಿಗಳು ಆಗುತ್ತಿರುತ್ತವೆ. ಹಿಂದೂಸ್ಥಾನದೊಳಗಿನ ಜನರ ದೇಶಭಕ್ತಿಯು ಸಾತ್ವಿಕ ಸ್ವಭಾವದ್ದು; ಆದ್ದರಿಂದ ಜನರು ಸ್ವರಾಜ್ಯಪ್ರಾಪ್ತಿಗಾಗಿ ತಾವೆ ಜೈಲ್‌ವಾಸವನ್ನು ಅಂಗೀಕರಿಸುತ್ತಾರಲ್ಲದೆ ಪಾಶ್ಚಾತ್ಯರಂತೆ ರಾಜಕೀಯ ಖೂನಿಗಳನ್ನು ಮಾಡುವ ನಿಂದ್ಯ ಮತ್ತು ಹೀನಕೃತ್ಯವನ್ನು ಮಾಡಿ ತಮ್ಮನ್ನು ನೀಚರನ್ನಾಗಿ ಮಾಡಿಕೊಳ್ಳುವುದಿಲ್ಲ. ಇದೆ ಹಿಂದೂಸ್ಥಾನಕ್ಕೂ ವಿಲಾಯತಿಗೂ ಇರುವ ಭೇದವು.

ಸ್ಫುಟವಿಚಾರಗಳು.

೧. ಹಿಂದೂಸ್ಥಾನದೊಳಗಿನ ಜೈಲುಗಳ ವ್ಯವಸ್ಥೆಯು ಹೊರಗಿನ ರಾಜಕೀಯ ವ್ಯವಸ್ಥೆಯಂತೆಯೆ ಅಸಹಾನುಭೂತಿ, ಅಕ್ರಮ ಮತ್ತು ನಿಷ್ಠುರತೆ ಇವುಗಳಿಂದ ಕೂಡಿದ್ದಿರುತ್ತದೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಹಿಂದೂಸ್ಥಾನದೊಳಗಿನ ಜೈಲುಗಳು ಅನೇಕ ದೃಷ್ಟಿಯಿಂದ ಅತ್ಯಂತ ಹೀನ ಮತ್ತು ಅಸುಧಾರಿತ ಸ್ಥಿತಿಯಲ್ಲಿವೆ. ಕೈದಿಗಳ ಸಂಖ್ಯೆಗನುಸಾರವಾಗಿ ಜೈಲುಗಳಲ್ಲಿ ಸಾಕಷ್ಟು ಸ್ಥಳವಿರದು. ಈಗಲಂತೂ ರಾಜಕೀಯ ಕೈದಿಗಳ ಸಂಖ್ಯೆಯು ಹೆಚ್ಚಿರುವುದರಿಂದ ಜೈಲುಗಳು ಜಾತ್ರೆಯ ಸ್ಥಳಗಳಂತೆ ಕಾಣುತ್ತವೆ! ಜನರು ಆತ್ಮೋದ್ಧಾರಕ್ಕಾಗಿ ಯಾತ್ರಾ ಸ್ಥಳಗಳಿಗೆ ಹೋಗುವಂತೆ ಸ್ವದೇಶದ ಉದ್ಧಾರಕ್ಕಾಗಿ ಜೈಲಿಗೆ ಹೋಗುತ್ತಾರಾದ ಕಾರಣ ಜೈಲಿಗೆ ಯಾತ್ರಾ ಸ್ಥಳದ ಉಪಮೆಯು ಯುಕ್ತವಾಗಿ ತೋರುತ್ತದೆ. ಆದರೆ ನಾವು ಮೇಲೆ ಆ ದೃಷ್ಟಿಯಿಂದ ಉಪಮೆಯನ್ನು ಕೊಟ್ಟದ್ದಲ್ಲ. ಯಾತ್ರಾ ಸ್ಥಳಗಳು ಒಂದೊಂದು ಪರ್ವಕಾಲದಲ್ಲಿ ಹೇಗೆ ಜನಸಮೂಹದಿಂದ ತುಂಬಿ ಹೋಗುವುವೊ ಹಾಗೆಯೆ ಈಗಿನ ರಾಜಕೀಯ ಅಸಂತೋಷದ ಕಾಲದಲ್ಲಿ ದೇಶಭಕ್ತರಿಂದ ಜೈಲುಗಳು ತುಂಬಿ ಹೋಗಿ ಸ್ಥಳದ ನ್ಯೂನತೆಯು ಅಧಿಕಾರಿಗಳಿಗೆ ತೋರಹತ್ತಿದೆ! ಈ ಸಂಗತಿಯು ಪಂಜಾಬ ಸರಕಾರದ ಜೈಲ್ ರಿಪೋರ್ಟಿನ ಮೇಲಿಂದ ಗೊತ್ತಾಗುತ್ತಿದೆ. ರಾಜಕೀಯ ಕೈದಿಗಳ ಸಂಖ್ಯೆಯು ಅಧಿಕವಾಗಿ, ಸ್ಥಳವು ಸಾಕಾಗದೆ ಪಂಜಾಬ ಜೈಲಿನ ಅಧಿಕಾರಿಗಳು ಸೈನ್ಯದ ಬರಾಕಿಗಳನ್ನೂ, ಹೊಸ ಕಟ್ಟಡವನ್ನೂ, ತಂಬುಗಳನ್ನೂ, ಜೈಲಿನ ಬದಲಿಗೆ ಉಪಯೋಗಿಸಹತ್ತಿದರೂ ಸ್ಥಳದ ಕೊರತೆಯು ದೂರವಾಗಲಿಲ್ಲವೆಂದು ಪಂಜಾಬ ರಿಪೋರ್ಟು ಹೇಳುವುದು. ಇಂಥ ಪರಿಸ್ಥಿತಿಯಲ್ಲಿ ಒಳ್ಳೆ ನಡತೆಯ ಮತ್ತು ಸಾಮಾನ್ಯ ಅಪರಾಧವನ್ನು ಮಾಡಿದ ಮೇಲುತರಗತಿಯ ಜನರನ್ನು ಬಿಟ್ಟುಬಿಡುವುದು ಮುಖ್ಯ ಉಪಾಯವು. ಹಣದ ಬರಗಾಲವು ಬಿದ್ದಿರುವ ಈ ಕಠಿಣ ಸಮಯದಲ್ಲಿ ಜೈಲ್‌ಕಟ್ಟೋಣಗಳನ್ನು ಹೆಚ್ಚಿಸುವುದಕ್ಕೆ ಅನುಕೂಲತೆಯಿಲ್ಲ; ಅದರ ಬದಲು ಶಿಕ್ಷೆಯ ಹೆಚ್ಚಿನ ಸಮಯವನ್ನು ಕಳೆದ ಕೈದಿಗಳನ್ನು ಬಿಟ್ಟುಬಿಡುವುದೆ ಮುಖ್ಯ ಉಪಾಯವೆಂದು ರಿಪೋರ್ಟಿನ ಅಭಿಪ್ರಾಯವು. ಪಂಜಾಬ ಸರಕಾರವು ಈ ರೀತಿಯಿಂದ ಜಾಣತನವನ್ನು ಕಲಿಯುತ್ತಿರುವಲ್ಲಿ ಮುಂಬಯಿ ಸರಕಾರವು ಅದನ್ನೆ ಅನುಕರಿಸಿದೆ. ಇದು ಸಂತೋಷದ ಮಾತು. ಮುಂಬಯಿಯ ಜೈಲುಗಳಿಂದ ಬಹಳ ಕೈದಿಗಳ ಬಿಡುಗಡೆಯು ಆಗಿದೆ. ರಾಜಕೀಯ ಮತಭೇದದ ನೆವದಿಂದ ಜನಗಳನ್ನು ಜೈಲಿನಲ್ಲಿ ಹಾಕುವುದು ಮತ್ತು ಅನಂತರ ಸ್ಥಳಾಭಾವದ ಕಾರಣದಿಂದ ಬಿಡುಗಡೆಯನ್ನು ಮಾಡುವುದು ದುಷ್ಟತನದ ಲಕ್ಷಣವಲ್ಲವಾದರೂ ಅವಿವೇಕದ ಮತ್ತು ಬಾಲಿಶತೆಯ ಗುರುತಾಗಿದೆ ಎಂಬುದಕ್ಕೆ ಸಂದೇಹವಿಲ್ಲ. ದೇಶದ ಸ್ವರಾಜ್ಯಕ್ಕಾಗಿ ಜಗಳಮಾಡುವ ಜನರು, ಕಳ್ಳರಂತೆ, ಮೋಸಗಾರರಂತೆ ಅಥವಾ ಖೂನಿ ನಡಿಸಿದವರಂತೆ ಜೈಲಿನ ಅಸಹ್ಯದುಃಖವನ್ನೂ, ವಿಪತ್ತುಗಳನ್ನೂ ಅಧಿಕಾರಿಗಳ ಸ್ವಾರ್ಥಕಲುಷಿತವಾದ ಧೋರಣದಿಂದ ಅನುಭವಿಸಬೇಕಾಗುತ್ತದೆ. ಅವರ ದೃಷ್ಟಿಯು ದುರಹಂಕಾರದಿಂದ ಕುರುಡಾಗಿ ಹೋದಮೇಲೆ ಎಷ್ಟು ಜನರನ್ನು ಜೈಲಿಗೆ ಕಳುಹಿಸಬೇಕೆಂಬ ವಿಷಯದಲ್ಲಿ ಅವರಿಗೆ ಅದರ ಮಿತಿಯೆ ಇರದು. ಪಂಜಾಬ, ಮುಂಬಯಿ ಪ್ರಾಂತಗಳ ಜೈಲುಗಳಲ್ಲಿ ಸ್ಥಳದ ನ್ಯೂನತೆಯ ಪ್ರಸಂಗವು ಒದಗಿದ ಬಳಿಕ ಆ ಸರಕಾರಗಳಿಗೆ ಕೈದಿಗಳನ್ನು ಬಿಟ್ಟುಬಿಡಲು ಯೋಚನೆಯನ್ನು ಮಾಡಬೇಕಾಯಿತು. ಜೈಲಿಗೆ ಕಳುಹಿಸಿ ಆ ಮೂಲಕ ತೊಂದರೆಯುಂಟಾಗಿ ಅನಂತರ ಬಿಡುವುದಕ್ಕಿಂತ ಮೊದಲೆ ವಕ್ರಧೋರಣವನ್ನು ಅಂಗೀಕರಿಸದಿರುವುದು ಉತ್ತಮವೆಂಬುದು ನಿಜ. ಆದರೆ ಕೊನೆಗಾದರೂ ಅಧಿಕಾರಿಗಳು ಸರಿಯಾದ ದಾರಿಗೆ ಬರಹತ್ತಿದ್ದಾರೆಂದು ಪಂಜಾಬ ಮತ್ತು ಮುಂಬಯಿ ಸರಕಾರಗಳ ಜೈಲ್-ವೃತ್ತಾಂತದ ಮೇಲಿಂದ ಗೊತ್ತಾಗುತ್ತದೆ. ಆದರೆ ನಮ್ಮ ಮದ್ರಾಸು ಸರಕಾರವು ಇಂಥ ಔದಾರ್ಯವನ್ನು ತೋರಿಸಿ ಜನಗಳ ಧನ್ಯವಾದವನ್ನು ತೆಕ್ಕೊಳ್ಳುವುದು ಯೋಗ್ಯವೆಂದು ನೆನಸುವುದಿಲ್ಲ. ಮತ್ತು ಆದ್ದರಿಂದಲೆ ಈ ಸಂಸ್ಥಾನದೊಳಗಿನ ಜೈಲುಗಳು ಕೈದಿಗಳಿಂದ ತುಂಬಿಹೋದರೂ ಅವರನ್ನು ತಾರತಮ್ಯದಿಂದ ಬಿಡುವ ಆಲೋಚನೆಯು ಅದರ ತಲೆಯಲ್ಲಿ ಬರುವುದಿಲ್ಲ. ಇದು ಮಹಾದುರ್ದೈವವು!

೨. ಬ್ರಿಟಿಷ್ ಜನರು ತಾವು ಸುಧಾರಿಸಿದವರು, ಉದಾರಮತವಾದಿಗಳು, ಬುದ್ಧಿ ಸಂಕೋಚವಿಲ್ಲದವರು ಎಂಬುದಾಗಿ ಆತ್ಮಸ್ತುತಿಯನ್ನು ಬೇಕಷ್ಟು ಮಾಡಿಕೊಳ್ಳಲಿ! ಆದರೆ ಅವರಲ್ಲಿ ಅನೇಕರು ದುರಹಂಕಾರವುಳ್ಳವರೂ, ಆತ್ಮ ಪ್ರತಿಷ್ಠೆಯ ದುರಭಿಮಾನದಿಂದ ತುಂಬಿ ಹೋದವರೂ ಇದ್ದಾರೆಂದು ಎಷ್ಟೊ ಸಲ ವ್ಯಕ್ತವಾಗಿಹೋಗಿದೆ. ಇಂಥ ಅಹಂಮನ್ಯತೆಯ ಹೊಸ ಉದಾಹರಣೆಯು ಯಾವುದೆಂದರೆ, ವಿಲಾಯತಿಯೊಳಗಿನ ಲಂಡನ್ ಟೈಮ್ಸ್ ಪತ್ರಕ್ಕೆ ಇಲ್ಲಿಯ ಮೆಡಿಕಲ್ ಇಲಾಖೆಯಲ್ಲಿ ಹಿಂದಿಗಳ ಭರತಿಯನ್ನು ಮಾಡಿ ಅದನ್ನು ಹಿಂದಿಯನ್ನಾಗಿ ಮಾಡುವ ಆಲೋಚನೆಯು ನಡೆದಿದೆ ಎಂದು ಕೇಳಿದೊಡನೆ ಉನ್ಮಾದವಾಯುವು ಪ್ರಾರಂಭವಾಗಿದೆ. ಈ ವಾತಪ್ರಕೋಪದ ಅವಸ್ಥೆಯಲ್ಲಿ ಲಂಡನ್ ಟೈಮ್ಸ್ ಪತ್ರಿಕೆಯು ಹಿಂದುಸ್ಥಾನದೊಳಗಿನ ಮೆಡಿಕಲ್ ಸರ್ವಿಸನ್ನು ಯುರೋಪಿಯನರ ಕೈಯಿಂದ ತಪ್ಪಿಸಿ ಹಿಂದಿಗಳ ಕೈಯಲ್ಲಿ ಕೊಟ್ಟರೆ ಅನೇಕ ಅನರ್ಥಗಳು ಸಂಭವಿಸಿಯಾವೆಂದು ಸೂಚಿಸುತ್ತದೆ. ಕಪ್ಪು ಜನರ ಕೈಯಲ್ಲಿ ಔಷಧದ ಇಲಾಖೆಯು ಹೋದ ಮೇಲೆ ಯುರೋಪಿಯನರು ಹಿಂದುಸ್ಥಾನದ ನೌಕರಿಯನ್ನು ಅಂಗೀಕರಿಸುವ ಮತ್ತು ಆ ಮೂಲಕ ತಮ್ಮ ಮತ್ತು ಹೆಂಡತಿ ಮಕ್ಕಳ ಜೀವಿತವನ್ನು ಕಷ್ಟದಲ್ಲಿ ಹಾಕುವ ಅವಿವೇಕವನ್ನು ಎಂದೂ ಮಾಡಲಿಕ್ಕಿಲ್ಲವೆಂದು ಲಂಡನ ಟೈಮ್ಸು ಹೇಳುತ್ತಿದೆ. ಹಿಂದೀಜನರಿಂದ ಔಷಧೋಪಚಾರವನ್ನು ಪಡಕೊಳ್ಳುವುದು ತಮ್ಮ ತರಗತಿಗೆ ಹೀನ ಮತ್ತು ಲಜ್ಜಾಸ್ಪದವೆಂದು ಅದು ತಿಳಕೊಳ್ಳುತ್ತದೆ. ಈ ವಿಚಾರ ಸರಣಿಯು—ಅದು ದುರಭಿಮಾನದ ಪ್ರತಿನಿಧಿಯಾಗಿದ್ದರೂ—ನಿಜವಾಗಿ ಒಳ್ಳೆದು. ಹಿಂದುಸ್ಥಾನದೊಳಗಿನ ಮೆಡಿಕಲ್ ಸರ್ವಿಸಿಗೆ ಹಿಂದಿಗಳನ್ನು ತುಂಬಿಸಿದರಿಂದ ಯುರೋಪಿಯನ್ ಅಧಿಕಾರಿಗಳು ಹಿಂದೂಸ್ಥಾನವನ್ನು ಬಿಟ್ಟು ಹೋಗುತ್ತಾರಾದರೆ, ಯಾವ ಅಡಚಣೆಯೂ ಇರದು. ಹೊಸ ಸುಧಾರಣೆಯು ಅವತರಿಸುವ ಸಮಯದಲ್ಲಿ, ಹಿಂದಿ ಮಂತ್ರಿಗಳನ್ನು ನೇಮಿಸಿ ಅವರ ಕೈಯಲ್ಲಿ ಶಿಕ್ಷಣದಂಥ ಇಲಾಖೆಗಳನ್ನು ಒಪ್ಪಿಸಿ ಕೊಡುವಾಗ, "ಯುರೋಪಿಯನ್ ಅಧಿಕಾರಿಗಳು ರಾಜಿಕೊಟ್ಟು ಹೋದಾರೆಂ"ದು ಇದೆ ತರದ ಭೀತಿಯನ್ನು ಅವರು ಹುಟ್ಟಿಸಿದ್ದರು. ಆದರೆ ಅದಕ್ಕೆ ಬಿಕ್ಕೆಹಾಕದೆ ಹೊಸ ಸುಧಾರಣೆಗಳು ಬಂದು ಅವುಗಳ ಆಳಿಕೆಯಲ್ಲಿ ಹಿಂದಿ ಮಂತ್ರಿಗಳು ಅಧಿಕಾರ ಸೂತ್ರಗಳನ್ನು ನಡಿಸಹತ್ತಿ ಈ ಹೊತ್ತು ಎರಡು ವರುಷವಾಯಿತು; ಎಷ್ಟು ಯುರೋಪಿಯನ್ ಅಧಿಕಾರಿಗಳು ರಾಜಿಯನ್ನು ಕೊಟ್ಟು, ಹೋಗಿದ್ದಾರೆ! ಒಂದು ವೇಳೆ ಹಾಗೆ ಹೋಗಿದ್ದರೂ ಹಿಂದುಸ್ಥಾನದ ಮೇಲೆ ಸೂರ್ಯನ ಕಿರಣಗಳು ಬೀಳುತ್ತಿರಲಿಲ್ಲವೆ? ಜನಗಳು ಉಪವಾಸಬಿದ್ದು ಸಾಯುತ್ತಿದ್ದರೆ? ಆಕಾಶವು ಮುರಿದು ಬೀಳುತ್ತಿತ್ತೆ? ಒಂದೂ ಇಲ್ಲ. ಯುರೋಪಿಯನ್ ಅಧಿಕಾರಿಗಳು ಹೋದ್ದರಿಂದ ಸಂಬಳದ ದೊಡ್ಡ ರಕಮು ಖರ್ಚಾಗುತ್ತಿರಲಿಲ್ಲ; ಮತ್ತು ಈಗ ಖಜಾನೆಯು ಖಾಲಿಯಾಗುತ್ತ ಬಂದದ್ದರಿಂದ ಇಂಚಕೇಪರ ಕೈಯಲ್ಲಿ ಕೊಡಲಿಯನ್ನು ಕೊಡುವ ಯಾವ ಅನಿಷ್ಟಪ್ರಸಂಗವು ಬಂದಿದೆಯೊ ಅದು ಕೂಡ ಬರುತ್ತಿರಲಿಲ್ಲವೆಂದು ದಿಟವಾಗಿ ಹೇಳಬಹುದು. ಸಾರಾಂಶ, ಲಂಡನ್ ಟೈಮ್ಸು ಹಿಂದುಸ್ಥಾನದಿಂದ ಯುರೋಪಿಯನ್ ಅಧಿಕಾರಿವರ್ಗದ ನಿರ್ಗಮನದ ಬಗ್ಗೆ ಯಾವ ಭಯವನ್ನು ಉತ್ಪನ್ನಮಾಡುತ್ತಿದೆಯೊ ಅದು ಮೂಲತಃ ಅಸತ್ಯವೆ ಸರಿ. ಒಂದು ವೇಳೆ ಅದು ಸತ್ಯವಾದರೂ ಅದರಿಂದ ಹಿಂದುಸ್ಥಾನಕ್ಕೆ ಹೆಚ್ಚಿನ ನಷ್ಟವೇನೂ ಇಲ್ಲ. ಒಂದು ಕಡೆಯಲ್ಲಿ ಸ್ವರಾಜ್ಯದಾನದ ಪ್ರತಿಜ್ಞೆಯನ್ನು ಮಾಡೋಣ, ಅಥವಾ ಆಶ್ವಾಸನವನ್ನಿತ್ತೋಣ ಮತ್ತು ಇನ್ನೊಂದು ಕಡೆಯಲ್ಲಿ ಕೆಲವು ಇಲಾಖೆಗಳನ್ನು ಹಿಂದಿಮಯವನ್ನಾಗಿ ಮಾಡಿದೊಡನೆ ದೊಡ್ಡ ಬೊಬ್ಬೆಯಿಟ್ಟು ಆಕಾಶಪಾತಾಳವನ್ನು ಒಂದು ಮಾಡೋಣ, ಇದು ವಂಚನೆಯಲ್ಲವೆಂದಿದ್ದರೆ, ಕೇವಲ ಕ್ಷುದ್ರತ್ವವಾಗಿದೆ! ಆದರೆ ಹಿಂದಿಗಳು ವೃಥಾ ಭಯಕ್ಕೆ ಈಗ ಹೆದರುವುದಿಲ್ಲ.

೩. ಲಂಡನ್‌ಟೈಮ್ಸ ಪತ್ರಿಕೆಯು ಹಿಂದುಸ್ಥಾನದೊಳಗಿನ ಮೆಡಿಕಲ್ ಸರ್ವಿಸನ್ನು ಹಿಂದಿ ಮಯವನ್ನಾಗಿ ಮಾಡಕೂಡದೆಂಬುದಕ್ಕೆ ಬೇರೊಂದು ಕಾರಣವನ್ನು ಕೊಡುತ್ತಿದೆ. ಬ್ರಿಟಿಷರು ಹಿಂದುಸ್ಥಾನದಲ್ಲಿ ತಮ್ಮ ಉತ್ತಮವಾದ ರಾಜ್ಯ ಪದ್ಧತಿಯಿಂದ ಮತ್ತು ಔಷದೋಪಚಾರಗಳ ಪ್ರಸಾರಣೆಯಿಂದ ಆರೋಗ್ಯವನ್ನು ಸ್ಥಾಪಿಸಿದ್ದಾರೆ. ಮತ್ತು ಇದರ ಪ್ರತಿಫಲವೆಂಬಂತೆ ಇಲ್ಲಿಯ ಮೆಡಿಕಲ್ ಸರ್ವಿಸು ಯುರೋಪಿಯನರ ಕೈಯಲ್ಲೆ ಇರಬೇಕು. ಲಂಡನ್ ಟೈಮ್ಸಿನ ಈ ಯುಕ್ತಿವಾದವು ಕೇವಲ ಅಪ್ರಯೋಜಕವಾದ್ದು. ಹಿಂದುಸ್ಥಾನಕ್ಕೆ ಆರೋಗ್ಯವನ್ನು ತಂದುಕೊಟ್ಟದ್ದಕ್ಕಾಗಿ ಇಂಗ್ಲೆಂಡು ಅನೇಕ ರೂಪದಿಂದ ಪ್ರತಿಫಲವನ್ನು ತೆಕ್ಕೊಂಡಿದೆ! ಇಂಗ್ಲೆಂಡಿಗೆ ಈ ಹೊತ್ತಿನ ವೈಭವವು ಎಲ್ಲಿಂದ ಪ್ರಾಪ್ತವಾದದ್ದು! ಆಕಾಶದಿಂದ ಕೆಳಗೆ ಬಿತ್ತೆ! ವ್ಯಾಪಾರ, ನೌಕರಿ, ಪೆನ್‌ಶನು, ಕರಭಾರ ಇತ್ಯಾದಿ ಅನೇಕ ದ್ವಾರಗಳಿಂದ ಹಿಂದುಸ್ಥಾನದ ಸಂಪತ್ತು ವಿಲಾಯತಿಗೆ ಹೋಗುತ್ತಿದೆ. ಈ ಪ್ರತಿಫಲವು ಸಾಲದೆ? ಪ್ರತಿಫಲವು ಆಚಂದ್ರಾರ್ಕ ನಡೆಯಬೇಕೆಂದು ಲಂಡನ್ ಟೈಮ್ಸಿನ ಇಚ್ಛೆಯೆ? ಸರಿ! ಶುಭವಾದ ಇಚ್ಛೆ!! ಆದರೆ ಈ ಇಚ್ಛೆಯನ್ನು ನಡಿಯಲು ಬಿಟ್ಟರೆ ಹಿಂದುಸ್ಥಾನಕ್ಕೆ ಎಂದೂ ಉರ್ಜಿತದಶೆ ಬರಲಿಕ್ಕಿಲ್ಲ. ಆದ್ದರಿಂದ ಲಂಡನ್ ಟೈಮ್ಸಿನ ಈ ತಾಮಸ ಲೇಖನವನ್ನು ನಾವು ತೀವ್ರನಾಗಿ ನಿಷೇದಿಸುವೆವು.

೪. ನಾಮದಾರ ಶಾಸ್ತ್ರಿಗಳ ಕೊಲನಿಗಳ ಪ್ರಯಾಣವು ಅಷ್ಟೊಂದು ಫಲಕಾರಿಯಾಗಲಿಕ್ಕಿಲ್ಲವೆಂದು ನಾವು ಆಗಾಗ್ಗೆ ವಿವರಿಸುತ್ತಲೆ ಇದ್ದೇವೆ. ನಾವು ಮಾತ್ರ ಈ ರೀತಿಯಿಂದ ಅಭಿಪ್ರಾಯ ಪಡುತ್ತೇವೆಂದಲ್ಲ! ಫಿಜಿ ದ್ವೀಪದಿಂದ ಮುಂಬಯಿಗೆ ಬಂದಿರುವ ಬೆರಿಸ್ಟರ ಮಣಿಲಾಲರೆಂಬವರ ಅಭಿಪ್ರಾಯವು ಸಹ ಅಂತೆಯೆ ಇದೆ. ವಸ್ತುತಃ ಮಣಿಲಾಲಮಹಾಶಯರು ಶಾಂತಪಕ್ಷದವರೂ ಉಗ್ರಪಕ್ಷದವರೂ ಅಲ್ಲ, ಅಸಹಕಾರಿಗಳೂ, ಅಲ್ಲ. ಸಹಕಾರಿಗಳೂ ಅಲ್ಲ, 'ತೂಕಮಾಡಿ ನೋಡಿ ಯೋಗ್ಯ ಮತ್ತು ಹಿತಾವಹವೆಂದು ಕಂಡದ್ದನ್ನು ಪರಿಗ್ರಹಿಸಬೇಕೆಂದು ಅವರ ಅಂಬೋಣವು;' ಮತ್ತು ಅವರ ಪದ್ಧತಿಯೂ ಹಾಗೆಯೆ. ಇಂಥ ಸಮದೃಷ್ಟಿಯುವರು ಶಾಸ್ತ್ರಿಗಳು ಅವಲಂಬಿಸಿದ ಮಾರ್ಗವು ಯಶಸ್ಕರವಲ್ಲ, ಅವರ ಔಷಧ ಯೋಜನೆಯು ಫಲಕಾರಿಯಾಗಲಿಕ್ಕಿಲ್ಲವೆಂದು ಮುಂಬಯಿಯ ತಮ್ಮ ಭಾಷಣದಲ್ಲಿ ಆಡಿತೋರಿಸಿದರು. ಇವರ ಈ ಮಾತು ಪಕ್ಷಾಭಿಮಾನ ಪ್ರೇರಿತವಾದ್ದಲ್ಲ. ವಸಾಹತುಗಳ ಸ್ವಭಾವದ ಸಂಪೂರ್ಣ ಪರಿಚಯವಿದ್ದುದರಿಂದ ಮಣಿಲಾಲರು ಈ ರೀತಿಯಿಂದ ಹೇಳಿದ್ದಾರೆ.

ಮಂಗಳೂರು.

ಈ ಮುಂಚೆ ಕೆಲವು ಹುಲಿಗಳನ್ನು ಕೊಂದು ಬಹುಮಾನ ಹೊಂದಿದ ಮಿ. ಜಿ. ಯಂ. ಮೊರನ್ನ ಎಂಬವರು ಬೈಂದೂರಿನಲ್ಲಿ ಇತ್ತಲಾಗಿ ಒಂದು ಭಯಂಕರ ಹುಲಿಯನ್ನು ಕೊಂದ ಬಗ್ಗೆ ರೂ. ೧೦೦ನ್ನು ಅವರಿಗೆ ಬಹುಮಾನವಾಗಿ ಕೊಡಬಹುದೆಂದು ಶಿಫಾರಸು ಮಾಡಲಾಗಿದೆಯಂತೆ.

ಜಲತರಂಗ, ಕ್ಲೆರೋನೇಟ್ ಮೊದಲಾದ ಗಾಯನ ವಿದ್ಯೆಯಲ್ಲಿ ಹೆಸರುಗೊಂಡ ಉಡುಪಿಯ ಚಂದಯ್ಯ ಶೆರೆಗಾರರು ಇಲ್ಲಿಗೆ ಬಂದವರು ಅಕಸ್ಮಾತ್ತಾಗಿ ವಾಂತಿಭೇದಿಯಿಂದ ಕಳೆದ ತಾ. ೨೬ರಲ್ಲಿ ಕಾಲವಾದರು. ಇವರ ಮೃತದೇಹವನ್ನು ಪುಷ್ಪಗಳಿಂದ ಅಲಂಕರಿಸಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ ಅನೇಕರು ವಾದ್ಯ, ಭಜನೆ ಮೊದಲಾದ್ದರಿಂದ ಕೂಡಿ ಸ್ಮಶಾನದ ವರೆಗೆ ಹೋಗಿದ್ದರು.

ಮೊನ್ನೆ ನಡೆದ ಮಂಗಳೂರು ತಾಲೂಕುಬೋರ್ಡ ಮೀಟಿಂಗಿನಲ್ಲಿ ಕಾರ್ನಾಡು ಪಂಚಮ ಬೋರ್ಡು ಶಾಲೆಯನ್ನು ಬರುವ ತಾ ೧ರಿಂದ ಮುಚ್ಚಿ ಬಿಡಬೇಕಾಗಿ ನಿರ್ಧರಿಸಿದೆ. ಬಂಟವಾಳದಲ್ಲಿ ಆರೋಗ್ಯ ಸಂರಕ್ಷಣೆ ಬಗ್ಗೆ ೮ ಮಾರ್ಗಗಳನ್ನು ಮಾಡಬೇಕಾಗಿ ಈ ಮುಂಚೆ ನಿಶ್ಚಯಿಸಿ ೩ ಮಾರ್ಗಗಳು ತೆರಿಯಲಾಗಿತ್ತಷ್ಟೆ. ಈಗ ಉಳಿದ ೫ ಮಾರ್ಗಗಳನ್ನು ತೆರಿಯುವುದನ್ನು ನಿಲ್ಲಿಸಬೇಕಾಗಿ ನಿಶ್ಚಯಿಸಿದೆ. ಮಂಗಳೂರು ತಾಲೂಕಿನಲ್ಲಿ ಖಡ್ಡಾಯದ ಶಿಕ್ಷಣವನ್ನು ಜಾರಿಗೆ ತರಬೇಕು ಎಂಬ ಪ್ರಶ್ನೆಯ ಇತ್ಯರ್ಥವನ್ನು ಈಗ ಮಾಡುವುದು ಅಗತ್ಯವಿಲ್ಲ; ಈ ವಿಷಯದಲ್ಲಿ ಮಂಗಳೂರ ಮುನ್ಸಿಪಾಲಿಟಿಯವರು ಯಾವ ರೀತಿಯಲ್ಲಿ ಅನುಸರಿಸುವರು ಎಂಬ ಅನುಭವವನ್ನು ಪಡೆದ ನಂತರ ಆಲೋಚಿಸಬಹುದೆಂದು ನಿಶ್ಚಯಿಸಿದೆ.

ನಮ್ಮ ಜಿಲ್ಲೆಯ ಕುಂದಾಪುರ ತಾಲೂಕಿನ ಬೈಂದೂರು ಮೊದಲಾದ ಕಡೆಗಳಲ್ಲಿ ಮತ್ತು ಉಪ್ಪಿನಂಗಡಿ ತಾಲೂಕಿನಲ್ಲಿ ರಿಜರ್ವ ಫೋರೆಸ್ಟಿನ ಸಂಬಂಧ ಜಂಗ್ಲಿ ಕಾನೂನಿನ ಬಾಧೆಯು ಹೆಚ್ಚಾಗಿರುವುದರಿಂದ ಅದರ ಪರಿಹಾರದ ಬಗ್ಗೆ ಹೇಗೆ ನಡಕೊಳ್ಳಬೇಕೆಂದು ಕಳೆದ ವರುಷ ರಾ. ಕಾರ್ನಾಡ ಸದಾಶಿವರಾಯರು ಸೇಲಮಿಗೆ ಹೋಗಿ ಮಹಾತ್ಮರೊಡನೆ ಕೇಳಿದುದಕ್ಕೆ, ಕಳೆದ ದಶಂಬರದ ವರೆಗೆ ಕಷ್ಟಗಳನ್ನು ಸಹಿಸಬೇಕೆಂದು ಮಹಾತ್ಮರು ಸೂಚಿಸಿದ್ದರಷ್ಟೆ. ದೇಶದ ಈಗಿನ ಪರಿಸ್ಥಿತಿಯನ್ನು ತಿಳಕೊಳ್ಳಲು ನೇಮಕ ಪಟ್ಟ ಕಮ್ಮಿಟಿಯವರು ಬರುವ ತಾ. ೨೬ಕ್ಕೆ ಕಲ್ಲಿಕೋಟೆಗೆ ಬರಲಿಕ್ಕಿದ್ದಾರೆ. ಅವರು ಇಲ್ಲಿಗೂ ಚಿತ್ತೈಸಿ, ಫೋರೆಸ್ಟ ಕಾನೂನಿನ ಸಂಕಷ್ಟದಿಂದ ಜನರಿಗೆ ಉಂಟಾಗಿರುವ ತೊಂದರೆಯನ್ನು ಜನರು ಹೇಗೆ ನಿವಾರಿಸಿಕೊಳ್ಳಬಹುದೆಂದು ಸೂಚನೆ ಕೊಡಲು ಅವರನ್ನು ಇಲ್ಲಿಗೂ ಚಿತ್ತೈಸುವಂತೆ ಏರ್ಪಾಡನ್ನು ಮಾಡಬೇಕಾಗಿ ರಾ. ಕಾರ್ನಾಡ ಸದಾಶಿವರಾಯರು ಡಾಕ್ಟರ್ ಅನಸಾರಿಯವರಿಗೆ ಬರಕೊಂಡಿದ್ದಾರೆ. ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿಯವರು ಈ ಮುಂಚೆ ಯಾವ ಯಾವ ಪಟ್ಟಣಗಳನ್ನು ಸಂದರ್ಶಿಸಬೇಕೆಂದು ನಿರ್ಧರಿಸಿದ್ದರೋ ಅದಕ್ಕಿಂತ ಹೆಚ್ಚಿನ ಯಾವ ಯಾವ ಸ್ಥಳಗಳನ್ನು ಸಂದರ್ಶಿಸಬೇಕೆಂದು ಈ ದಿನ ನಿಶ್ಚಯಿಸಲಾಗುವುದು.

ಇಲ್ಲಿಯ ರಾಷ್ಟ್ರೀಯ ತಿಲಕ ವಿದ್ಯಾಲಯದಲ್ಲಿ ಈ ವರುಷ ಚಲೋ ರೀತಿಯಲ್ಲಿ ಪಾಠಗಳನ್ನು ಕಲಿಸಲು ಏರ್ಪಾಡುಗಳನ್ನು ಮಾಡಿರುತ್ತದೆ. ಪ್ರಥಮದ ಎರಡು ತರಗತಿಗಳಲ್ಲಿ ಕರ್ನಾಟಕ ಮಾತ್ರ ಕಲಿಸಲಾಗುವುದು. ೩ನೇ ಕ್ಲಾಸಿನಲ್ಲಿ ಇವುದರೊಡನೆ ಸಂಸ್ಕೃತ ಸಹ ಕಲಿಸಲಾಗುವುದು. ಮತ್ತು ಹಿಂದಿ ಭಾಷೆಯನ್ನು ೫ನೇ ಕ್ಲಾಸಿನಿಂದ ಕಲಿಸಲಾಗುವುದು. ಈ ಎಲ್ಲ ಭಾಷೆಗಳನ್ನು ಖಡ್ಡಾಯವಾಗಿ ಕಲಿಸುವುದಲ್ಲದೆ ಇತರ ಕೈಗಾರಿಕೆಯನ್ನೂ ಬೇರೆ ಪಾಠಗಳನ್ನು ಸಹ ಕಲಿಸುವರು. ಈ ಶಾಲೆಯಲ್ಲಿ ಶ್ರೀಯುತ ಪಾಂಡುರಂಗ ಶಾಸ್ತ್ರಿ ಒಡ್ಡಮನೆ ಇವರು ಸಂಸ್ಕೃತ ಪಂಡಿತರಾಗಿಯೂ ಶ್ರೀಯುತ ಶಿರೋಮಣಿ ಶಂಭು ಶಾಸ್ತ್ರಿಯವರು ಕರ್ನಾಟಕ ಅಧ್ಯಾಪಕರಾಗಿಯೂ ಪಂಜಾಬ ಗುರುಕುಲದ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರು ಹಿಂದೀ ಭಾಷೆಯನ್ನು ಕಲಿಸುವ ಉಪಾಧ್ಯಾಯರಾಗಿಯೂ, ಒಬ್ಬ ಮಹಮ್ಮದಿ ಪಂಡಿತರನ್ನು ಮಹಮ್ಮದಿ ವಿದ್ಯಾರ್ಥಿಗಳಿಗೆ ಉರ್ದು ಭಾಷೆಯನ್ನು ಕಲಿಸಲಿಕ್ಕೂ ನೇಮಕಮಾಡಿರುತ್ತದೆ.

ವಿಧಾಯಕ ಕಾರ್ಯವನ್ನು ಅನುಸರಿಸಿ ಕೋಂಗ್ರೆಸಿನ ಕಾರ್ಯವನ್ನು ಮುಂದರಿಸಲು ಇಲ್ಲಿಯ ಸ್ವಯಂಸೇವಕರು ಬರುವ ತಾ. ೧ರಿಂದ ಪ್ರಾರಂಭಿಸುವರು. ನಮ್ಮ ಮಂಗಳೂರ ಪಟ್ಟಣದಲ್ಲಿರುವ ಸೇಂದಿ ಶರಾಬು ಅಂಗಡಿಗಳನ್ನು ತೆಗೆದುಬಿಡಬೇಕೆಂದು ಸೂಚಿಸುವ ವಿನಂತಿಗೆ ಇಲ್ಲಿಯ ಮುನ್ಸಿಪಲ್ ತೆರಿಗೆ ಕೊಡುವವರ ದಸ್ಕತುಗಳನ್ನು ಹೊಂದಲು ಈ ಸ್ವಯಂಸೇವಕರು ನಾಳೆಯಿಂದ ಹೊರಡುವರಂತೆ.

ಮೈಸೂರ ದಿವಾನರಿಗೆ ಇಲ್ಲಿ ಚಿತ್ತೈಸಲು ಡಿಸ್ಟ್ರಿಕ್ಟ ಬೋರ್ಡಿನ ಆಮಂತ್ರಣವಿತ್ತಷ್ಟೆ. ಆದರೆ ಅವರಿಗೆ ಇಲ್ಲಿಗೆ ಬರಲು ಅನಾನುಕೂಲವಾಗಿದೆಯಾಗಿ ಅವರು ತಿಳಿಸಿರುವರಂತೆ.

ನಮ್ಮ ಮದ್ರಾಸ ವಿದ್ಯಾ ಇಲಾಖೆಯ ಮಂತ್ರಿಗಳಾದ ಮಿ| ಪತ್ರೋರವರು ಸದ್ಯಕ್ಕೆ ಇಲ್ಲಿಗೆ ಬರುವುದಿಲ್ಲವಂತೆ.

ತೆಂಗಿನ ಮರಗಳನ್ನು ಹಾಳುಮಾಡುವ ಒಂದು ರೋಗವು ಪಟ್ಟಣದ ಕೆಲವು ಕಡೆಗಳಲ್ಲಿ ಹಬ್ಬಲಿಕ್ಕೆ ಪ್ರಾರಂಭವಾಗಿದೆ.

ಕಲ್ಲಿಕೋಟೆಯಲ್ಲಿರುವ ಸಹಕಾರಿ ಸಂಘಗಳ ಅಸಿಸ್ಟಾಂಟ್ ರಿಜಿಸ್ಟ್ರಾರರು ೩ ತಿಂಗಳ ಪ್ರಿವಿಲೇಜ್ ರಜೆಯನ್ನು ಹೊಂದಿರುವುದರಿಂದ ನಮ್ಮ ಜಿಲ್ಲೆಯ ಅಸಿಸ್ಟಾಂಟ್ ರಿಜಿಸ್ಟ್ರಾರರೇ ಅವರ ಚಾರ್ಜನ್ನು ಸಹ ನೋಡುತ್ತಿದ್ದಾರೆ.

ಮ| ರಾ| ಹ್ಯೊಗೆ ಕೊರಗಪ್ಪನವರು ಪುನಃ ಒನರೆರಿ ಮೆಜಿಸ್ಟ್ರೇಟರಾಗಿ ನೇಮಕಪಟ್ಟು ಮತ್ತು ಡಿಸ್ಟ್ರಿಕ್ಟ ಬೋರ್ಡ ಮೆಂಬರಿಕೆಯ ಹುದ್ದೆಯನ್ನು ಬಿಟ್ಟುಕೊಟ್ಟು ಕೆಲವು ಸಮಯ ದಾಟಿತು. ಆದರೆ ಈ ವರೆಗೆ ಅವರ ಬದಲಿಗೆ ಡಿಸ್ಟ್ರಿಕ್ಟ ಬೋರ್ಡ ಮೆಂಬರರಾಗಿ ಬೇರೊಬ್ಬರು ನೇಮಕಪಡಲಿಲ್ಲ. ಸದರಿ ಸ್ಥಾನಕ್ಕೆ ರಾ| ನಾರಣಪ್ಪ ಸುವರ್ಣ ಬಿ. ಎ, ಬಿ. ಎಲ್., (ಈಗ ಮುನ್ಸಿಪಲ್ ಕೌನ್ಸಿಲರ) ಇವರನ್ನು ನೇಮಕ ಮಾಡಬೇಕೆಂದು ಬಿಲ್ಲವ ಜಾತಿಯ ಅನೇಕರು ಮನವಿ ಮಾಡಿಕೊಂಡಿರುವರು. ಆದರೆ ಈ ಮನವಿಯ ಇತ್ಯರ್ಥವು ಈ ವರೆಗೆ ಆಗದೆ ಇರುವ ಕಾರಣವು ತಿಳಿಯುವುದಿಲ್ಲವೆಂದು ಒಂದು ಬಾತಮಿಯು ಬಂದಿದೆ.

ಬಿಲ್ಲವರ ಮುಂಬಯಿ ವಿದ್ಯಾದಾಯಿನಿ ಸಂಘದವರು ಇಲ್ಲಿಯ ಸ್ವಜಾತಿಯ ವಿದ್ಯಾರ್ಥಿಗಳಿಗೆ ಈ ವರುಷ ವೇತನ ಕೊಡಲು ಸಹಾಯವಾಗಿ ರೂ. ೫೦ನ್ನು ಇಲ್ಲಿಯ ಬಿಲ್ಲವರ ಯೂನಿಯನ್ ಸಂಘದ ಕಾರ್ಯದರ್ಶಿಯವರಿಗೆ ಕಳುಹಿಸಿದ್ದಾರೆ.

ಕಳೆದ ಮೇ ೨೬ರಲ್ಲಿ ಬಾವಿಯಲ್ಲಿ ಬಿದ್ದು ಸಾಯುವ ಗಂಡಾಂತರದಲ್ಲಿದ್ದ ರುಜಾರಿಯೋ ಮೆರಿಯೋ ಲೋಬೋ ಎಂಬ ಹೆಂಗಸಿನ ಪ್ರಾಣರಕ್ಷಣೆಮಾಡಿದ ಬಗ್ಗೆ ಕೊಡಿಯಾಲಬೈಲಿನ ರುಜಾರಿಯೋ ಕುತಿನ್ಹ ಎಂಬವರಿಗೆ ರೂ. ೧೦ನ್ನು ಇನಾಮು ಕೊಡ[illegible] ಇಲ್ಲಿಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಸೆಂಕ್ಷನ್ ಮಾಡಿದ್ದಾರಂತೆ.

ಮೈಸೂರ ಬಾಯ ಸ್ಕೌಟ್ಸ್ ಡೈರೆಕ್ಟರರಾದ ಮ| ರಾ| ಕೆ. ಸಂಜೀವ ಕಾಮತರು ತಮ್ಮ ಈಗಿನ ಹುದ್ದೆಯ ಚಾರ್ಜನ್ನು ಕಳೆದ ತಿಂಗಳ ತಾ. ೨೬ರಲ್ಲಿ ಮ| ರಾ| ಸಿ. ಸುಬ್ಬರಾವ್, ಎಂ. ಎ.,ಯವರಿಗೆ ವಹಿಸಿಕೊಟ್ಟರು. ಈ ವರೆಗೆ ರಾ| ಕಾಮತರು ಬಹಳ ಪರಿಶ್ರಮದಿಂದ ಯಶಸ್ಕರವಾದ ರೀತಿಯಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸಿದ ಬಗ್ಗೆ ಮೈಸೂರು ಸರಕಾರದವರೂ ಬೊಯ ಸ್ಕೌಟ್ಸ್ ಎಕ್ಸಿಕ್ಯೂಟಿವ್ ಕಮ್ಮಿಟಿಯವರೂ, ಇತರರೂ ತಮ್ಮ ಆದರವನ್ನು ವ್ಯಕ್ತಪಡಿಸಿದ್ದಾರೆ. ಇವರಿಗೆ ಅನೇಕ ಕಡೆಗಳಲ್ಲಿ ಆದರ ಸತ್ಕಾರಗಳು ನಡೆಯುತ್ತಿವೆ. ನಾಳೆಯ ದಿನ ಸಾರ್ವಜನಿಕ ಸತ್ಕಾರ (Public entertainment)ವು ನಡಿಯುವುದು. ಮತ್ತು ಇವರ ಭಾವಚಿತ್ರವು ಪ್ರತಿಷ್ಠಿಸಲ್ಪಡುವುದು. ಬರೆ ೨೬ ವರುಷ ಪ್ರಾಯದ ಯುವಕರಾದ ರಾ| ಕಾಮತರು ಮದರಾಸ ಹೈಕೋರ್ಟು ವಕೀಲರಾಗಿ ವ್ಯವಹರಿಸಲು ಪ್ರಾರಂಭಿಸುವರಲ್ಲದೆ, ಬೆಂಗಳೂರಿನ ಚೀಫ್ ಕೋರ್ಟಿನ ಅಡ್ವೋಕೇಟರಾಗಿಯೂ ಕೆಲಸಮಾಡಲು ಪ್ರಾರಂಭಿಸಲಿಕ್ಕಿದ್ದಾರೆಂದು ಬೆಂಗಳೂರಿನ ಒಬ್ಬ ಬಾತಮಿದಾರರು ತಿಳಿಸುತ್ತಾರೆ.

ಎಜ್ಯುಕೇಶನ್ ಇಲಾಖೆಯಲ್ಲಿ ಖರ್ಚನ್ನು ಕಡಿಮೆಮಾಡುವುದಕ್ಕಾಗಿ ಸುಪರವೈಜರ, ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರ, ಅಸಿಸ್ಟಾಂಟ ಇನ್ಸ್‌ಪೆಕ್ಟರ ಈ ಇಸಮುಗಳನ್ನು ತೆಗೆದುಹಾಕುವರು. ಮತ್ತು ಹೊಸ ಏರ್ಪಾಡನ್ನು ಮಾಡುವರು. ಅದರಂತೆ ಪ್ರತಿ ಒಂದು ಜಿಲ್ಲೆಗೆ ಒಬ್ಬೊಬ್ಬ ಇನ್ಸ್‌ಪೆಕ್ಟರರೂ ಮತ್ತು ಕೆಲವು ಡಿಪ್ಯುಟಿ ಇನ್ಸ್‌ಪೆಕ್ಟರರೂ ಇರುವರು. ಕೆಲಸದಿಂದ ತೆಗೆದುಹಾಕುವ ಸುಪರವೈಜರರುಗಳಿಗೆ ಪೆನ್ಶನ್ನಿಗೆ ತಯಾರಾದವರಿಗೆ ಪೆನ್ಶನ್ ಕೊಡಲಾಗುವುದು. ಉಳಿದವರಿಗೆ ಟ್ರೈನಿಂಗ ಶಾಲೆಗಳಲ್ಲಿ ಉಪಾಧ್ಯಾಯ ವೃತ್ತಿ ಮೊದಲಾದ ಕೆಲಸಗಳು ಕೊಡಲಾಗುವುದಂತೆ. ಈ ಹೊಸ ಏರ್ಪಾಡಿನಿಂದ ಮದರಾಸ ಸಂಸ್ಥಾನದ ವಿದ್ಯಾ ಇಲಾಖೆಗೆ ಸುಮಾರು ರೂ. ೫೦,೦೦೦ ಉಳಿಯುವುದಂತೆ.

ನಾಳೆ ಬೆಳಿಗ್ಗೆ ಗಂಟೆ ೧೦ಕ್ಕೆ ಬೋಳೂರಿನಲ್ಲಿ ಮ| ರಾ| ರಾ| ಕಲ್ಲೆ ಸುಂದರರಾಯರ ಕಟ್ಟೋಣದಲ್ಲಿ ಒಂದು ರಾಷ್ಟ್ರೀಯ ಶಾಲೆಯು ತೆರೆಯಲಾಗುವುದು. ಅಲ್ಲಿ ಪಂಚಮ ವಿದ್ಯಾರ್ಥಿಗಳೂ ಬಂದು ಸೇರಲಿಕ್ಕಿದ್ದಾರಂತೆ.

ದಾನಿ ಮಹಾಶಯನು.

ಕೌರವ:—"ಕರ್ಣನು ದಾನಿ" ಎಂದು ಎಲ್ಲರೂ ಅವನನ್ನೇ ಹೊಗಳುತ್ತಾರೆ. ಕಾರಣವೇನಿರಬಹುದು? ದಾನದಲ್ಲಿ ನಾನೇನೂ ಕರ್ಣನಿಗಿಂತ ಕೀಳಲ್ಲ. ನನಗಿರುವಂಥ ಧನಧಾನ್ಯ ಸಂಪತ್ತುಗಳ ಅನುಕೂಲ್ಯವು ಅವನಿಗಿಲ್ಲ. ಏನನ್ನು ಕೇಳಿದರೂ ಕೊಡಲು ನಾನು ಸಮರ್ಥನಿರುತ್ತೇನೆ. ಸಾರ್ವಭೌಮನೆಂದು ನನ್ನನ್ನೇ ಕರೆಯುತ್ತಾರೆ. ಕರ್ಣನಾದರೊ ನನ್ನಿಂದಲೆ ಅರಸನೆಂದಾದನು. ನನಗೇಕೆ ಆ ಹೆಸರು ಬರಲಾರದು! ಒಳ್ಳೇದು, ನೋಡುವ. ನಾಳೆಯಿಂದ ಯಾರೇನು ಕೇಳಿದರೂ ಕೊಡುವೆನೆಂದು ಊರಲ್ಲೆಲ್ಲಾ ಡಂಗುರ ಹೊಯ್ಸುವೆನು. ಎಂದಮೇಲಾದರೂ ನನ್ನನ್ನು 'ದಾನಿ' ಎಂದು ಕರೆಯುತ್ತಾರೊ ನೋಡುವ,

(ಎಂದು ಯೋಚಿಸಿ, ಊರಲ್ಲಿ ಹಾಗೆಯೆ ಡಂಗುರ ಹೊಯ್ಸಿದನು.)

(ಪರಮಾತ್ಮ ಶ್ರೀಕೃಷ್ಣನು ಅದನ್ನು ಕೇಳಿ, ಓರ್ವ ವೃದ್ಧ ಬ್ರಾಹ್ಮಣನಾಗಿ ಕೌರವನಲ್ಲಿಗೆ ಬಂದು,)

ಕೃಷ್ಣ:—ಮಹಾರಾಜಾ, ನೀನು ಮಹಾ ಧರ್ಮಿಷ್ಠನೆಂದು ಕೇಳಿ ಇಲ್ಲಿಗೆ ಬಂದಿರುತ್ತೇನೆ.

ಕೌರವ:—ಪೂಜ್ಯರೆ, ತಮ್ಮ ಆಗಮನದಿಂದ ನಾನು ಕೃತಾರ್ಥನಾದೆ. ಅಪ್ಪಣೆಯಾಗಲಿ. ಬೇಕಾದ್ದನ್ನು ಕೊಡುವೆನು.

ಕೃಷ್ಣ:—ನನಗೆ ಬೇಕಾದ್ದನ್ನು ಕೊಡಲು ನೀನೆ ಸಾಮರ್ಥ್ಯವುಳ್ಳವನೆಂದು ನಿನ್ನಲ್ಲಿಗೆ ಬಂದಿರುವೆನು.

ಕೌರವ:—ಹಾಗೆಯೆ ಆಗಲಿ. ಅಪ್ಪಣೆಯಾದಂತೆ ನಡಕೊಳ್ಳುವೆನು.

ಕೃಷ್ಣ:—ಸವತ್ಸ ಗೋದಾನ ಒಂದನ್ನು ಬಯಸುವೆನು.

ಕೌರವ:—ಆಹಾ! ಇಷ್ಟು ಅಲ್ಪಕಾರ್ಯಕ್ಕೆ ವಿಳಂಬವೇಕೆ? ಒಂದಲ್ಲ ನೂರನ್ನಾದರೂ ಕೇಳಬಹುದಲ್ಲವೆ?

ಕೃಷ್ಣ:—ಒಂದನ್ನಾದರೂ ಸಾಕಲು ಶಕ್ತಿಯಿಲ್ಲದ ನಾನು ನೂರನ್ನು ಹೇಗೆ ಸಾಕಲಿ.

ಕೌರವ:—ಹಾಗಾದರೆ ನಮ್ಮ ಗೋಶಾಲೆಗೆ ದಯಮಾಡಿಸೋಣಾಗಲಿ. ಅಲ್ಲಿ ತಮಗೆ ಉತ್ತಮವೆಂದು ತೋರಿದ್ದನ್ನು ಸ್ವೀಕರಿಸಿರಿ.

(ಶ್ರೀಕೃಷ್ಣನು ಗೋಶಾಲೆಗೆ ಹೋಗಿ ಅಲ್ಲಿಂದ ಒಂದು ಮುದಿ ದನವನ್ನು ಹಿಡಿದು ತಂದನು. ಅದು ಹೊರಡುತ್ತಲೆ ಅದರ ಬೆನ್ನ ಹಿಂದೆಯೆ ಅಲ್ಲಿರುವ ಮಿಕ್ಕ ದನಗಳೂ ಹೊರಟವು. ಗೋಪಾಲಕರು ಈ ವಿಷಯವನ್ನು ಕೌರವನಿಗೆ ತಿಳಿಸಿದರು.)

ಕೌರವ:—ಸ್ವಾಮಿ, ಈ ದನವು ನಮ್ಮ ಎಲ್ಲಾ ದನಗಳ ಯಜಮಾನಿ. ಇದು ಹೋದಲ್ಲೆಲ್ಲಾ ಅವೂ ಹೋಗುವವು. ಮಾತ್ರವಲ್ಲ. ತಾವು ಸ್ವೀಕರಿಸಿಕೊಂಡ ದನವು ಬಹು ವೃದ್ಧ. ಅದರಿಂದ ಹೆಚ್ಚಿನ ಪ್ರಯೋಜನವನ್ನು ತಾವು ಹೊಂದಲಾರಿರಿ. ಕಾರಣ, ಅದೊಂದನ್ನು ಬಿಟ್ಟು ಬೇರಾವುದನ್ನಾದರೂ ಸ್ವೀಕರಿಸೋಣಾಗಲಿ.

ಕೃಷ್ಣ:—ರಾಜಾ, ನಮಗಿದೇ ಸಾಕು. ಬೇರೆ ಕೊಬ್ಬಿದ ದನವನ್ನು ಕೊಂಡು ಹೋದರೆ ನಾನದನ್ನು ಸಾಕಲಾರೆ. ಇದಾದರೂ ಅಷ್ಟೊಂದು ವಿಶೇಷ ಆಹಾರವನ್ನು ಬಯಸುವ ಹಾಗಿಲ್ಲ.

ಕೌರವ:—ಸ್ವಾಮಿ, ಇತರ ದನಗಳು ತಮ್ಮ ಮಾತೆಯಂತಿರುವ ಇದನ್ನು ಬಿಟ್ಟು ಎಂದೂ ಇಲ್ಲಿ ನಿಲ್ಲವು. ಕಾರಣ ಅವೆಲ್ಲವನ್ನೂ ಒಯ್ಯೋಣಾಗಲಿ.

ಕೃಷ್ಣ:—ಇವೆಲ್ಲವನ್ನೂ ಕೊಂಡುಹೋಗಿ ನಾನೇನು ಮಾಡಲಿ? ಅವನ್ನು ಹೇಗೆ ಸಾಕಲಿ?

ಕೌರವ:—ಸ್ವಾಮಿ, ಅದೊಂದನ್ನು ಬಿಟ್ಟು ಮಿಕ್ಕುಳಿದವುಗಳಲ್ಲಿ ಆವುದನ್ನಾದರೂ ಕೊಂಡುಹೋಗಿರಿ.

ಕೃಷ್ಣ:—ಮಹಾರಾಜನೆ, ಬೇಕಾದ್ದನ್ನು ಹೆಕ್ಕಿಕೊಳ್ಳಬಹುದೆಂದು ಮೊದಲೊಂದು ಬಾರಿ ಹೇಳಿದೆ. ಈಗ ಈ ರೀತಿ ಹೇಳುತ್ತಿ. ಮತ್ತೊಮ್ಮೆ ಇನ್ನೇನು ಹೇಳುವಿಯೋ. ಇಂಥವರಿಂದ ನಾನು ದಾನವನ್ನೊಲ್ಲೆ.

(ಎಂದು ಹೊರಟು ಅಲ್ಲಿಂದ ಅದೆ ವೃದ್ಧ ಬ್ರಾಹ್ಮಣ ವೇಷದಲ್ಲಿಯೆ ವಂಗದೇಶಾಧಿಪತಿಯಾದ ಕರ್ಣನಲ್ಲಿಗೆ ಬಂದು,)

ಕೃಷ್ಣ:—ಮಹಾರಾಜಾ, ನಿನಗೆ ಜಯವಾಗಲಿ. "ದಾನದಲ್ಲಿ ಕರ್ಣ" ಎಂಬ ಹೆಸರನ್ನು ಕೇಳಿ ಇಲ್ಲಿಗೆ ಬಂದಿರುವೆನು.

ಕರ್ಣ:—ಸ್ವಾಮಿ, ತಮ್ಮ ಪಾದಕಮಲ ದರ್ಶನವು ನನ್ನನ್ನು ಇಂದು ಕೃತಾರ್ಥನಾಗಿ ಮಾಡಿತು. ತಮ್ಮ ಆಜ್ಞೆಯನ್ನು ಶಿರಸಾವಹಿಸಿ ನಡಕೊಳ್ಳುವೆನು.

ಕೃಷ್ಣ:—ಅಯ್ಯಾ, ಮಹಾರಾಜನೆ, ಸವತ್ಸಗೋದಾನ ಒಂದನ್ನು ನಿನ್ನಿಂದ ಬಯಸಿರುವೆನು.

ಕರ್ಣ:—"ಕರ್ಣನು ಇಂದು ಒಂದು ಗೋದಾನ ಮಾಡಿದನು" ಎಂದು ಲೋಕವು ನನ್ನನ್ನು ನಿಂದಿಸತೊಡಗುವುದು. ಒಂದೆಡೆ ಒಂದು ನೂರನ್ನಾದರೂ ತಾವು ಸ್ವೀಕರಿಸುವಿರಾದರೆ ಕರ್ಣನು ಧನ್ಯನಾಗುವನು.

ಕೃಷ್ಣ:—ನಾನೊಂದನ್ನು ಮಾತ್ರ ಬಯಸಿರುವೆನು. ಒಂದರೊಡನೆ ಮತ್ತೊಂದನ್ನು ಕೊಡುವುದಾದರೆ ನಾನು ಸ್ವೀಕರಿಸಲಾರೆನು. ಒಂದನ್ನು ಮಾತ್ರ ಸಾಕುವಷ್ಟು ಶಕ್ತಿಯು ನನಗಿರುವುದು.

ಕರ್ಣ:—ಪೂಜ್ಯರೆ, ನಮ್ಮ ಗೋಶಾಲೆಗೆ ಹೋಗಿ ತಮ್ಮ ಇಚ್ಛೆ ಇದ್ದಂತೆ ನಡಕೊಳ್ಳೋಣಾಗಲಿ.

(ಬ್ರಾಹ್ಮಣ ಸ್ವರೂಪಿಯಾದ ಶ್ರೀಕೃಷ್ಣನು ಕರ್ಣನ ಗೋಶಾಲೆಗೆ ಹೋಗಿ ಅಲ್ಲಿಂದ ಒಂದು ವೃದ್ಧಗೋವನ್ನು ತಂದನು. ಅದರೊಡನೆ ಮಿಕ್ಕುಳಿದ ದನಗಳೂ ಬಂದುವು. ಗೋಪಾಲಕರು ಈ ವಿಷಯವನ್ನು ಕರ್ಣನಿಗೆ ತಿಳಿಸಲು, ಅವನು ಬ್ರಾಹ್ಮಣನ ಸಮೀಪಕ್ಕೆ ಬಂದು ನಮಸ್ಕರಿಸಿ,)

ಕರ್ಣ:—ಪೂಜ್ಯರೆ, ನಮ್ಮ ಗೋಶಾಲೆಯ ಮಾತೆಯಂತಿರುವ ಈ ವೃದ್ಧೆಯನ್ನು ತಾವು ಬಯಸಿದಿರಿ. ಅದನ್ನು ನೀವು ಕೊಂಡುಹೋಗಲು ಮಿಕ್ಕುಳಿದುವು ಇಲ್ಲಿನ್ನು ನಿಲ್ಲಲಾರವು. ಸ್ವಾಮಿ, ಇದೊ, ಆ ದನಗಳೆಲ್ಲಾ ಹಿಂದುಗೂಡಿ ಇದರೊಡನೆ ಬಂದಿರುತ್ತವೆ. ಈ ಸಾವಿರಾರು ದನಗಳನ್ನು ತಾವು ಅದರೊಡನೆ ಕೊಂಡುಹೋಗಲೆ ಬೇಕಾಗುವುದು.

ಕೃಷ್ಣ:—ಮಹಾರಾಜಾ, ಈ ಮಾತೂ ಸಾಕು. ಈ ದಾನವೂ ಸಾಕು. ಬಡ ಮುದಿ ಬ್ರಾಹ್ಮಣನು ಒಂದನ್ನೆ ಸಾಕಲಾರದವನು. ಎಂದಮೇಲೆ ಇಷ್ಟು ದನಗಳನ್ನು ಹೇಗೆ ಸಾಕುವನು? ದಾನಿಗಳಲ್ಲಿ ಶ್ರೇಷ್ಠನೆಂದು ನಿನ್ನೊಡನೆ ಬಂದು ಕೇಳಲು ಮೊದಲು ಮೊದಲು ಸ್ವಲ್ಪ ಆಸೆಯನ್ನು ತೋರಿಸಿ ಈಗ ತಾನೆ ಕೊಡಲೊಲ್ಲೆನೆಂದು ಪ್ರತ್ಯಕ್ಷವಾಗಿ ಹೇಳಲೊಲ್ಲದೆ ಬೇರೊಂದು ವಿಧವಾಗಿ ನಿರಾಕರಿಸುತ್ತೀಯೆ? ದೊಡ್ಡವರು, ಮಹಾತ್ಮರು, ಧರ್ಮಿಷ್ಠರು, ಮಹಾರಾಜರು ಕೊಟ್ಟ ಮಾತನ್ನು ಸಲಿಸುವರೆಂದು ಭಿಕ್ಷೆಯನ್ನು ಕೇಳಿದರೆ ಈ ರೀತಿ ನಡೆಯುವುದು ಧರ್ಮವಲ್ಲ. (ಎಂದು ನುಡಿಯಲುದ್ಯುಕ್ತನಾದನು.)

ಕರ್ಣ:—(ಬ್ರಾಹ್ಮಣನ ಪಾದಗಳ ಮೇಲೆ ಬಿದ್ದು) ಸ್ವಾಮಿ, ಪೂಜ್ಯರೆ; ಹಾಗೆ ಎಂದೂ ನೆನಸಬೇಡಿರಿ. ಆ ಗೋವುಗಳನ್ನು ಸಾಕಲು ತಾವು ಅಶಕ್ತರೆಂದೂ ಯೋಚಿಸಬೇಡಿರಿ. ತಮ್ಮನ್ನು ಶಕ್ತರನ್ನಾಗಿಯೇ ಮಾಡುವೆನು. (ಎಂದು ಬ್ರಾಹ್ಮಣನನ್ನು ಸಿಂಹಾಸನದ ಸಮೀಪಕ್ಕೆ ಕರತಂದು) ಸ್ವಾಮಿ, ಈ ಸಿಂಹಾಸನವನ್ನು ಅಲಂಕರಿಸಿರಿ. ಈ ರಾಜ್ಯವನ್ನು ಈಗಲೆ ತಮಗೆ ಧಾರೆಯೆರೆದು ಕೊಡುವೆನು. ಈ ರಾಜ್ಯಾಧಿಪತ್ಯವನ್ನು ಸ್ವೀಕರಿಸಿ, ಈ ರಾಜ್ಯವನ್ನೂ ಆ ಗೋವುಗಳನ್ನೂ ಸಾಕುತ್ತಾ ಸುಖವಾಗಿ ಇರಬಹುದಲ್ಲ!

ಕೃಷ್ಣ:—ಸಾಕು, ಸಾಕು. ಕೈಬೆರಳಿಗೆ ದರ್ಭೆಯನ್ನು ಕೋದು, ಮಟ್ಟಿಯನ್ನು ತೇದು ಹಣೆಗೆ ಬಡಿದು, 'ಸ್ವಸ್ತಿ' ಹಾಕುವ ಈ ಬ್ರಾಹ್ಮಣನಿಗೆ ಈ ರಾಜ್ಯವ್ಯವಹಾರ ಪ್ರಸಂಗವೇಕಪ್ಪಾ? ನಿನ್ನ ಧನವೂ ಬೇಡ, ದಾನವೂ ಬೇಡ.

ಕರ್ಣ:—(ಪುನಃ ಪಾದಗಳ ಮೇಲೆ ಬಿದ್ದು) ಸ್ವಾಮಿ, ನಾನು ನನ್ನ ಮಾತಿಗೆ ಕವಲೊಡೆಯಗೊಡಲಾರೆ. ನಿಜವಾಗಿಯೂ ಈ ರಾಜ್ಯವನ್ನು ನಿಮಗೊಪ್ಪಿಸುವೆನು. ಹೇಗಾದರೂ ಆ ನನ್ನ ವಾಗ್ದಾನವನ್ನು ಸಲ್ಲಿಸಿಯೆ ಸಲ್ಲಿಸುವೆನು. ನನ್ನ ಮೇಲೆ ಪ್ರೀತಿಯನ್ನಿಟ್ಟು ಈ ರಾಜ್ಯವನ್ನು ಪರಿಗ್ರಹಿಸಬೇಕಾಗಿ ಬೇಡುತ್ತೇನೆ.

ಕೃಷ್ಣ:—(ಕರ್ಣನ ಮಾತಿಗೆ ಮೆಚ್ಚಿ, ತನ್ನ ನಿಜಸ್ವರೂಪವನ್ನು ತೋರಿ,) ಕರ್ಣನೆ ನೀನು ಯಶೋವಂತನಾಗು. (ಎಂದು ಅಂತರ್ಧಾನನಾದನು.)

"ಹಿಂದೀ ರಾಜಕಾರಣದ ಶ್ರೀಗಣೇಶವು"

ಮಿ. ಅಮೃತರೊಯರು ಜೂನ್ ತಿಂಗಳ 'ಮಾಡರ್ನ ರಿವ್ಯೂ' ಎಂಬ ಪತ್ರಿಕೆಯಲ್ಲಿ ಮೇಲಿನ ಶಿರೋಲೇಖದಿಂದ ಕೆಳಗಿನ ವಿಷಯವನ್ನು ಬರೆಯುತ್ತಾರೆ:—

ವಂಗಭಂಗದ ಚಳವಳವು ನಡಿಯುತ್ತಿರುವಾಗ ಒಬ್ಬ ಬಂಗಾಲದ ವಕೀಲನು (ಈಗ 'ಸರ್' ಪದವಿಯನ್ನು ಹೊಂದಿ, ಕಲ್ಕತ್ತಾ ಹ್ಯಾಕೋರ್ಟಿನ ಜಡ್ಜನಾಗಿ ಪೆನ್ಶನ್ ಹೊಂದುತ್ತಿರುವ) ಪರಾಧೀನ ಇರುವ ರಾಷ್ಟ್ರಕ್ಕೆ ರಾಜಕಾರಣವೆ ಇಲ್ಲವೆಂದು ಹೇಳಿದನು. ಅವರ ಇವನ ಹೇಳಿಕೆಯು, ಏನೆಂದರೆ, ಸ್ವತಂತ್ರ ರಾಷ್ಟ್ರಗಳ ರಾಜಕಾರಣವು ಅಧೀನವಾಗಿರುವ ರಾಷ್ಟ್ರಗಳ ರಾಜಕಾರಣದಿಂದ ಭಿನ್ನವಾಗಿರುತ್ತದೆ. ಸ್ವತಂತ್ರವಾದ ರಾಷ್ಟ್ರದಲ್ಲಿ ಆ ಜನಾಂಗದ ಭಿನ್ನ ಭಿನ್ನ ಹೇಳಿಕೆಯನ್ನು ರಾಜಕಾರಣದಲ್ಲಿ ಸಂಪೂರ್ಣವಾಗಿ ಪ್ರಚುರಪಡಿಸಲಿಕ್ಕೂ, ಪ್ರಜಾಸತ್ತೆಯನ್ನು ಇನ್ನಷ್ಟು ಬಲವತ್ತರವನ್ನಾಗಿ ಮಾಡಲಿಕ್ಕೂ, ಸಂಪೂರ್ಣವಾಗಿ ರಾಜಕೀಯ ಸುಧಾರಣೆಯನ್ನು ಸ್ಥಾಪಿಸಲಿಕ್ಕೂ, ಅಲ್ಲಿಯ ರಾಜಕೀಯ ಮುಖಂಡರು ಜವಾಬದಾರ ಸರಕಾರವನ್ನು ಉಪಯೋಗಿಸುತ್ತಾರೆ. ಸ್ವತಂತ್ರ ರಾಷ್ಟ್ರದಲ್ಲಿ ರಾಜಕೀಯ ಸುಧಾರಣೆಯನ್ನು ತಡೆಗಟ್ಟುವವನ ಉಪಯೋಗ ಸಹ ಉಂಟು. ಯಾಕೆಂದರೆ, ಇವನು ಮೊಡರೇಟ (ಶಾಂತಪಕ್ಷ)ನಂತೆ ಅಥವಾ ವಿರೋಧಿಯಂತೆ ಇರುತ್ತಾನೆ. ಸ್ವತಂತ್ರ ರಾಷ್ಟ್ರದ ರಾಜಕೀಯ ಮುಖಂಡರನ್ನು ಮುಂದಿನಂತೆ ವಿಭಾಗಿಸಬಹುದು: ಉಗ್ರಪಕ್ಷದವರು, ಸ್ವತಂತ್ರತಾವಾದಿಗಳು, ಶಾಂತಪಕ್ಷದವರು ಮತ್ತು ರಾಜಸತ್ತಾವಾದಿಗಳು; ಅಥವಾ ಕ್ರಮೇಣ ಸುಧಾರಣೆಯನ್ನು ಇಚ್ಛಿಸುವವರೂ ಮತ್ತು ಕ್ರಾಂತಿಕರರೂ; ಅಥವಾ ಪ್ರಜಾಸತ್ತಾವಾದಿಗಳೂ ಮತ್ತು ಅವರ ವಿರೋಧಿಗಳು. ಅಥವಾ ರಾಜಸತ್ತಾವಾದಿಗಳು ಮತ್ತು ಪೂರ್ಣ ಸ್ವತಂತ್ರವಾದಿಗಳು; ಈ ಪ್ರಕಾರ ವಿಭಾಗಿಸಬಹುದು. ಸ್ವತಂತ್ರ ರಾಷ್ಟ್ರದ ರಾಜಕಾರಣವು ಪ್ರಾಮುಖ್ಯವನ್ನೂ, ಬೇರೆ ರಾಷ್ಟ್ರಗಳೊಡನೆ ಸಮದೃಷ್ಟಿಯಿಂದ ನೋಡಲಿಕ್ಕೂ ಮತ್ತು ಮಿತ್ರತ್ವದಿಂದ ಇರಲಿಕ್ಕೂ ಅಧಿಕಾರವನ್ನು ಕೊಡುತ್ತದೆ. ಆದರೆ ಪರಾಧೀನ ರಾಷ್ಟ್ರಗಳ ಸ್ಥಿತಿಯು ಹೀಗೆ ಎಂದೂ ಇರುವುದಿಲ್ಲ. ಪ್ರಥಮತಃ ಪರತಂತ್ರ ಜನಾಂಗದವರು 'ರಾಷ್ಟ್ರ'ವೆಂದು ಅದರ ನಿಜವಾದ ಅರ್ಥದಿಂದ ಕರೆಯಲ್ಪಡುವುದಿಲ್ಲ. ಎಷ್ಟರವರೆಗೆ ಒಂದು ಜನಾಂಗವು ಸ್ವತಂತ್ರವಿಲ್ಲವೋ, ಅಷ್ಟರ ವರೆಗೆ ಅದು ಇತರ ರಾಷ್ಟ್ರಗಳೊಡನೆ ಸಮಾನರೀತಿಯಿಂದ ನಡಿಯುವಂಥ ರಾಜಕಾರಣದ ಸಂಘವಾಗಿರುವುದಿಲ್ಲ. ಅವುಗಳಿಗೆ ಇಚ್ಛೆಯನ್ನು ಬಲಪಡಿಸಲಿಕ್ಕೂ ಸಿದ್ಧತೆಗೆ ತರಲಿಕ್ಕೂ ಸಾಧ್ಯವೆ ಇಲ್ಲ. ಇಂಥ ಜನಾಂಗವು ಭಿನ್ನ ಭಿನ್ನ ಮತಾಂತರಗಳಿಂದೊಳಕೊಂಡು ಒಂದು ಬರಿ ಸಮೂಹವಾಗಿರುತ್ತದೆ. ಮತ್ತು ಇಂಥ ಮತಾಂತರಗಳು ಅಧಿಕಾರಿಗಳಿಂದ ತಮ್ಮ ಕಾರ್ಯಕ್ಕೆ ಉಪಯೋಗಿಸಲ್ಪಡುತ್ತವೆ. ಮಾತ್ರವಲ್ಲ, ಉಪಯೋಗಿಸಲಿಕ್ಕೆ ಯೋಗ್ಯವಾಗಿರುತ್ತವೆ. ಈ ಅಧಿಕಾರಿಗಳು ಒಳ್ಳೆಯವರೂ ಅಥವಾ ದಯಾಶೀಲರೂ ಉಪಕಾರಿಗಳೂ ಅಥವಾ ಅಪ್ರಮತ್ತರೂ ಆಗಿದ್ದರೂ ಅವರು ಆ ಜನಾಂಗದ ಒಡೆಯರೆ ಸರಿ. ಈ ಅಧೀನವಾದ ಜನಾಂಗಕ್ಕೆ ಸ್ವಯಂ ಆಕಾಂಕ್ಷೆಯು ಇಲ್ಲ; ಯಾಕೆಂದರೆ ಆಕಾಂಕ್ಷೆ ಇದ್ದರೆ ಅದು ಬೇರೆಯವರ ಕೈಕೆಳಗೆ ಇರುತಿದ್ದಿಲ್ಲ. ಅಥವಾ ಆ ಜನಾಂಗದವರಿಗೆ ಸ್ವತಂತ್ರವಾದ ಅಭಿಲಾಷೆಯೂ ಇಲ್ಲ; ಇಂಥ ಸ್ವತಂತ್ರ ಅಭಿಲಾಷೆ ಇದ್ದರೆ ಅವರಿಗೆ ತಮ್ಮ ಹೇಳಿಕೆಯನ್ನು ದೃಢಮಾಡಲಿಕ್ಕೆ ಬಲವಿರುತಿತ್ತು.

ಸ್ವತಂತ್ರವಾದ ಜನಾಂಗಕ್ಕೆ, ರಾಷ್ಟ್ರಕ್ಕೆ ಕಾರಣವಾದಂಥ ಒಂದು ಸ್ಥಿತಿಯು ಇರುತ್ತದೆ. ಈ ಸ್ಥಿತಿಯನ್ನು ಆ ರಾಷ್ಟ್ರವು ತನ್ನ ಇಚ್ಛೆಗನುಸಾರವಾಗಿ ಬದಲಾಯಿಸಬಹುದು. ಅಥವಾ ತನ್ನ ಅಧಿಕಾರಗಳನ್ನು ಸಹ ನಿಯಮಿಸಬಹುದು. ಆದರೆ ಪರಾಧೀನ ರಾಷ್ಟ್ರಕ್ಕೆ ಈ ರೀತಿಗಳನ್ನು ಮಾಡಲಿಕ್ಕಾಗುವುದಿಲ್ಲ. ಬೇರೆಯವರ ಕೈಕೆಳಗಿರುವ ಸ್ಥಿತಿಯೆ ಅದರ ರಾಜಕಾರಣವನ್ನು ಸಮಾನವರ್ಗದಿಂದ ತೆಗಿಯುತ್ತದೆ. ಸರಕಾರವು ರಾಷ್ಟ್ರದ ಅಂಗವಾಗಿರುತ್ತದೆ. ಸ್ವತಂತ್ರವಾದ ರಾಷ್ಟ್ರವು ತನ್ನ ಅಧಿಕಾರವನ್ನು ತನ್ನ ಇಚ್ಛೆಗನುಸಾರವಾಗಿ ಬದಲಾಯಿಸಬಹುದು. ಇದೆ ಅದರ ಸ್ವಾತಂತ್ರ್ಯವು. ಸ್ವಾತಂತ್ರ್ಯವನ್ನು ಅನುಭವಿಸುವ ರಾಷ್ಟ್ರದ ಮುಖಂಡರು ತಮ್ಮ ಜನರ ಸ್ವಾತಂತ್ರ್ಯದ ಜಾಗ್ರತೆಯನ್ನು ತಕ್ಕೊಳ್ಳುತ್ತಾರೆ. ಆದರೆ ಪರಾಧೀನ ಜನಾಂಗಕ್ಕೆ ಸ್ವತಂತ್ರತೆಯೆ ಇಲ್ಲ, ಆದ್ದರಿಂದ ಅದನ್ನು ಆಳುವ ರಾಷ್ಟ್ರಕ್ಕೆ ಯಾವ ಭಾರವೂ ಇರುವುದಿಲ್ಲ. ' ಪರಾಧೀನವಾದ ರಾಷ್ಟ್ರವನ್ನು ಆಳುವಂಥ ಸರಕಾರದಲ್ಲಿ ಆ ರಾಷ್ಟ್ರದ ಜನರು ಇಲ್ಲದ್ದರಿಂದ ಆ ಜನಾಂಗವು ತನ್ನ ಸರಕಾರದಿಂದ ಯಾವ ಉಪಯೋಗವನ್ನೂ ಪಡೆಯುವುದಿಲ್ಲ. ಒಂದು ವೇಳೆ ಆ ಸರಕಾರದಿಂದ ಉಪಕಾರವಾದರೂ ಅದು ಒಂದು ದಾನದಂತಿರುತ್ತದೆ. ಹೊರತು ಜನಾಂಗದ ಯಾವ ಭಾರವನ್ನೂ ಸರಕಾರದ ಮೇಲೆ ಒಪ್ಪಿಸುವುದಿಲ್ಲ. ಆದ್ದರಿಂದ ಅಧಿಕಾರಿಗಳಿಗೂ ಜನಗಳಿಗೂ ಐಕ್ಯವಿರುವುದಿಲ್ಲ. ಸ್ವತಂತ್ರವಾದ ರಾಷ್ಟ್ರಗಳಲ್ಲೂ ಕೂಡ ರಿಸ್ಪೊನಸಿಬಲ್ ಗವರ್ನಮೆಂಟಿನ ಮಾಹಿತಿಯು ಬಹು ಕಡಿಮೆ. ಯಾಕೆಂದರೆ ಅದು ಎಲ್ಲಾ ಕಡೆಯಲ್ಲಿ ಪೂರ್ಣವಾಗಿ ಪ್ರಚಾರವಾಗಲಿಲ್ಲ. ಯುರೋಪ, ಅಮೇರಿಕ ಮುಂತಾದವುಗಳಲ್ಲಿ ಇದನ್ನು ವ್ಯವಹಾರದಲ್ಲಿ ತಂದರೂ ಕೆಲವು ರಾಷ್ಟ್ರಗಳು ತಾತ್ವಿಕವಾಗಿ ಇಲ್ಲವೆಂದು ಹೇಳುತ್ತವೆ. ಅಲ್ಲಿಯ ಜನರು ತಮ್ಮ ಪ್ರಮುಖವಾದ ಸ್ವಾತಂತ್ರ ಅಧಿಕಾರವನ್ನು ಕೇಳಬಹುದು. ಆದರೆ ಪರಾಧೀನವಾದ ಜನತೆಗೆ ಅದನ್ನು ಕೇಳಲಿಕ್ಕೆ ಅಧಿಕಾರವೂ ಸ್ವಾತಂತ್ರ್ಯವೂ ಇಲ್ಲ. ಬೇರೆ ಜನಾಂಗದ ಅಧಿಕಾರಿಗಳಿಂದ ಆ ಜನಾಂಗದ ಮೇಲೆ ಬಲಾತ್ಕಾರದಿಂದ ಹಾಕಲ್ಪಟ್ಟಂಥ ಕರ್ತವ್ಯಗಳು ಮಾತ್ರ ಇರುತ್ತವೆ. ಜನರಿಂದ ಪ್ರಕಾಶಮಾಡಲ್ಪಟ್ಟ ಆಜ್ಞೆಗಳೆ ಸ್ವತಂತ್ರವಾದ ರಾಷ್ಟ್ರದಲ್ಲಿ ಕಾಯಿದೆಕಾನೂನುಗಳಾಗಿರುತ್ತವೆ. ಆದರೆ ಪರಾಧೀನವಾದ ರಾಷ್ಟ್ರಗಳಲ್ಲಿಯ 'ಕಾನೂನು'ಗಳೆಂದು ಕರೆಯಲ್ಪಡುವವುಗಳು ಅಧಿಕಾರಿಗಳಿಂದಲೆ ತಮ್ಮ ಇಚ್ಛೆಗನುಸಾರವಾಗಿ ಪ್ರಕಾಶಿಸಲ್ಪಟ್ಟ ಆಜ್ಞೆಗಳಾಗಿರುತ್ತವೆ. ಈ ಆಜ್ಞೆಗಳಿಗೆ ಕಾಯಿದೆ ಎಂದು ಕರೆಯುವುದು ಬಹು ಅಸಂಗತ ಅಥವಾ ಸುಳ್ಳಾಗಿರುತ್ತದೆ, ಒಸ್ಟಿನ್ ಎಂಬವನ ಹೇಳಿಕೆಯಂತೆ ಅವು ಕಾಯಿದೆಗಳಾಗಿರಬಹುದು. ಆದರೆ ಒಸ್ಟಿನನ ತರುವಾಯ ಲೋಕದಲ್ಲಿ ಎಷ್ಟೊ ಅವಾಂತರಗಳಾಗಿ ಹೋಗಿವೆ. 'ಕಾನೂನು' ಶಬ್ದದ ಅರ್ಥವೂ ಸಹ ಈಗ ಬದಲಾಯಿಸಲ್ಪಟ್ಟಿದೆ. ಪ್ರಮುಖ ರಾಷ್ಟ್ರವು ತನ್ನ ಅನುಕೂಲತೆಗನುಸಾರವಾಗಿ ಪ್ರಕಟಮಾಡಲ್ಪಟ್ಟ ಇಚ್ಛೆಯೆ ಈಗ ಇಚ್ಛೆ ಎನ್ನಿಸಿಕೊಳ್ಳುತ್ತದೆ. ಸ್ವತಂತ್ರವಾದ ರಾಷ್ಟ್ರಕ್ಕೆ ಕೂಡ ಒಂದು ವ್ಯಕ್ತಿಯ ಪರವಾದ ನೈಸರ್ಗಿಕ ಸ್ವಾತಂತ್ರ್ಯವನ್ನು ನಾಶಮಾಡಲಿಕ್ಕೆ ಅಧಿಕಾರವಿಲ್ಲ. ಈ ರೀತಿಯಿಂದ ನೈಸರ್ಗಿಕ ಸ್ವಾತಂತ್ರ್ಯವನ್ನು ನಾಶಮಾಡಿದರೆ ಆ ವ್ಯಕ್ತಿಗೆ ಅವಿಚ್ಛೇದ್ಯವಾದ ಅಧಿಕಾರವನ್ನು ನಾಶಮಾಡುವಂಥ ಆ ರಾಷ್ಟ್ರದ ನಿಯಮವನ್ನು ಅಲಕ್ಷ್ಯಮಾಡಲು ಅಧಿಕಾರವಿದೆ. ಆದರೆ ಯಾವ ರಾಷ್ಟ್ರಕ್ಕೆ ಸ್ವಯಂ ನಿರ್ಣಯವಿಲ್ಲವೊ ಅಥವಾ ಯಾವ ರಾಷ್ಟ್ರಕ್ಕೆ ಪರಾಧೀನತ್ವದಿಂದ ತನ್ನ ಇಚ್ಛೆಗಳನ್ನೂ ಪ್ರಕಾಶಮಾಡಲಿಕ್ಕೆ ಆಗುವುದಿಲ್ಲವೊ ಅಥವಾ ಯಾವ ರಾಷ್ಟ್ರದ ರಾಜಕಾರಣವು ಬೇರೆ ಪರದೇಶಗಳಿಂದ ಯಾವತ್ತು ಆಳಲ್ಪಡುತ್ತದೊ, ಅಂಥ ರಾಷ್ಟ್ರಕ್ಕೆ 'ಕಾನೂನು' ಎಂಬುದು ನಿಜವಾದ ಅರ್ಥದಲ್ಲಿ ಇಲ್ಲ. ಪೂರ್ವಕಾಲದ ನಿರ್ಣಯದಂತೆ ಒಂದು ರಾಷ್ಟ್ರಕ್ಕೆ ಅದರ ಪ್ರತಿ ಒಬ್ಬ ವ್ಯಕ್ತಿಯು ಹೊರತು ಸ್ವತಃ ಬೇರೊಂದು ವಿಶೇಷ ನಿರ್ದೇಶವು ಇರುತ್ತದೆ.

"ಅದರ ವ್ಯಕ್ತಿಯ ಹೊರತು (ಒಂದು ರಾಷ್ಟ್ರಕ್ಕೆ) ಅದಕ್ಕೆ ಬೇರೊಂದು ಪ್ರಮುಖ ಅಧಿಕಾರವಿರುತ್ತದೆ. ಯಾಕೆಂದರೆ, ಒಂದು ವ್ಯಕ್ತಿಗಿಂತ ಎಲ್ಲ ವ್ಯಕ್ತಿಗಳು ಬಲವಾಗಿರುತ್ತಾರೆ. ಈ ಬಲವು ಪರಸ್ಪರ ಸಹಾಯದ ಮೇಲೆ ಅವಲಂಬಿಸಿರುತ್ತದೆ. ಒಂದು ರಾಷ್ಟ್ರವು ವ್ಯವಸ್ಥಿತವಿರುತ್ತದೆ. ತನ್ನ ಪ್ರತಿನಿಧಿಗೋಸ್ಕರ ಅದು ಸರಕಾರವನ್ನು ಸ್ಥಾಪಿಸುತ್ತದೆ. ಈ ಸರಕಾರವೆ ಆ ರಾಷ್ಟ್ರದ ನಿಶ್ಚಯವನ್ನು ವ್ಯಕ್ತಮಾಡುವ ಒಂದು ಸಂಘವಾಗಿರುತ್ತದೆ. ಈ ಮೇರೆಗೆ ಅದು ರಾಷ್ಟ್ರದ ಹೆಸರಿನಿಂದ ತನ್ನ ಕೈಯಿಂದ ಕಸಕೊಳ್ಳಲಿಕ್ಕಾಗದಂಥ ಅಧಿಕಾರವನ್ನು ನಡಿಸುತ್ತದೆ. ಸರಕಾರವೆಂದು ವ್ಯವಸ್ಥಿತಮಾಡಲ್ಪಟ್ಟ ಆ ಪ್ರಾಂತವು ಸ್ವತಂತ್ರವಾದ ರಾಷ್ಟ್ರವಾಗುತ್ತದೆ. ಆ ಸರಕಾರವು ಈ ಪ್ರಕಾರ ಪ್ರಭುತ್ವದ ಕೈಕೆಳಗಿರುತ್ತದೆ ಮತ್ತು ಸಾರ್ವಜನಿಕ ಅಧಿಕಾರವು ಅಧಿಕಾರನಿಷ್ಠ ಕಾಯಿದೆಗಳನ್ನೂ ನಡಿಸಲು ಕೊಡುತ್ತದೆ. ಅದರ ಆಜ್ಞೆಗಳು ಈ ಕಾಯಿದೆಯನ್ನು ನಡಿಸುವುದೆ ಇರುತ್ತದೆ.

"ಸರಕಾರದ ಕೈಕೆಳಗಿರುವ ಜನರೆಲ್ಲರೂ ಪ್ರಜೆಗಳ ಸ್ವಾತಂತ್ರ್ಯವಾದಿಗಳೂ (citizen) ಆಗುತ್ತಾರೆ. ಪ್ರಭುತ್ವವನ್ನು ನಡಿಸುವಂಥ ರಾಷ್ಟ್ರ ಸಂಘವಿರುವುದರಿಂದ ಅವರು ಸ್ವತಂತ್ರಾವಾದಿಗಳಿರುವರು. ಆದರೆ ರಾಷ್ಟ್ರದ ಹೆಸರಿನಿಂದ ಆಳುವ ಸರಕಾರದ ಕೈಕೆಳಗಿರುವುದರಿಂದ ಅವರು ಪ್ರಜೆಗಳಿರುವರು". (Law in Modern state by Leon Duguit).

ಉತ್ತಮ ತರದ ಜನರು ಪ್ರಾಂತಿಕರೆನಿಸಿಕೊಳ್ಳುವರು ಮತ್ತು ಇತರರು ಪ್ರಜೆ ಎಂದು ಕರೆಯಲ್ಪಡುವರು. ಒಂದು ವ್ಯಕ್ತಿಯ ಪ್ರಜಾತ್ವದ ಅಧಿಕಾರವು ಪ್ರಭುತ್ವಾಧಿಕಾರದ ವಿರೋಧವಾಗಿರುತ್ತದೆ. ಯಾಕೆಂದರೆ ಪ್ರಭುತ್ವಾಧಿಕಾರವು ನೈಸರ್ಗಿಕವಾಗಿದ್ದು ಅವಿಚ್ಛೇದ್ಯವೂ, ಅನಿರ್ದಿಷ್ಟವೂ ಇರುತ್ತದೆ.

"ಪ್ರಭುತ್ವಾಧಿಕಾರವು (Sovereign right) ತನ್ನ ದಯೆಗನುಸಾರವಾಗಿಯೆ ಅದು ಪ್ರತಿ ಒಬ್ಬನಲ್ಲಿರುವುದು. ಇದು ಪೂರ್ವದಿಂದಲೆ ಬಂದಂಥ ಅಧಿಕಾರ, ಸಾಮ್ರಾಜ್ಯಕ್ಕಿಂತಲು ಬಲವತ್ತರವಿರುತ್ತದೆ. ಆದ್ದರಿಂದ ಪ್ರತಿ ಒಂದು ವ್ಯಕ್ತಿಯ ಸ್ವಾತಂತ್ರ್ಯವನ್ನು ಕಾಪಾಡುವುದು, ವ್ಯವಸ್ಥಾನರೂಪದ ಕಾಯದೆಯು" ('Law in Modern State' by Leon Duguit)

ಇದು ೧೯ನೇ ಶತಮಾನದ ಹೇಳಿಕೆ ಇತ್ತು. ಈಗಲೂ ಸಿದ್ಧಾಂತದಲ್ಲಿ ಇದು ಇದ್ದರೂ ಈಗಿನ ಹೇಳಿಕೆಯನ್ನು ಮೇಲೆ ತೋರಿಸಿದ ಸುಪ್ರಸಿದ್ಧ ಗ್ರಂಥಕಾರನು ಬರಿಯುತ್ತಾನೆ.:—

"ಅಧಿಕಾರಿಗಳಿಗೆ ಅಧಿಕಾರನಿಷ್ಠ ಪ್ರಭುತ್ವವಿರುವುದಿಲ್ಲ. ಸಾರ್ವಜನಸಮುದಾಯದ ಆವಶ್ಯಕತೆಯನ್ನು ಯೋಗ್ಯರೀತಿಯಿಂದ ಪೂರೈಸುವ ಅಧಿಕಾರವು ಅದಕ್ಕಿರುತ್ತದೆ. ಈ ರೀತಿಯಿಂದ ಸಾರ್ವಜನಿಕ ಉಪಯೋಗಕ್ಕೆ ಆ ಸರಕಾರದ ಉಪಯೋಗವು ಬಾರದಿದ್ದರೆ ಅದರ ಕಾಯದೆ ಕಾನೂನುಗಳಿಗೆ ಯಾವ ಬೆಲೆಯೂ ಇರುವುದಿಲ್ಲ.

"ಆದ್ದರಿಂದ ಪ್ರಸ್ಥಾಪಿತ ಕಾಯದೆಗಳು ಪ್ರಜೆಗಳ ಮೇಲೆ ಬಲಾತ್ಕಾರದಿಂದ ಹಾಕಿ ಅವರಿಂದ ಅದನ್ನು ಮನ್ನಿಸುವಂತೆ ಮಾಡುವದಲ್ಲ. ಎಲ್ಲಾ ನಿಶ್ಚಯಗಳು ಪ್ರತಿಯೊಬ್ಬ ವ್ಯಕ್ತಿಯದ್ದಿರುತ್ತದೆ. . . . . . ಇಂಥ ಸಾಮ್ರಾಜ್ಯವು ಆಜ್ಞೆಗಳನ್ನು ಕೊಡುವ ಪ್ರಭುತ್ವವನ್ನು ಹೊಂದಿದ್ದಲ್ಲ. ಪರಸ್ಪರ ಸಾಹಾಯ್ಯವನ್ನು ಮಾಡುವುದೆ ಈಗಿನ ಸಾಮ್ರಾಜ್ಯದ ಮುಖ್ಯ ಉದ್ದೇಶವು."

'ಈಗಿನ ರೀತಿ ಏನೆಂದರೆ ಸಂಪೂರ್ಣ ಪ್ರಭುತ್ವದ ವಿಷಯ ವಿವಾದಮಾಡುವುದು, ಅದರ ಅಧಿಕಾರನಿಷ್ಠದ ಹಕ್ಕನ್ನೂ ಅಲ್ಲಗಳೆಯುವುದು, ಕಾಯದೆಯು ಸಾಮ್ರಾಜ್ಯದಿಂದ ಬೇರೆ ಇರುವುದು, ಮತ್ತು ಸಾಮ್ರಾಜ್ಯವು ಕಾಯದೆಯ ಕೈಕೆಳಗಿರುವುದು ಇವೆ ಮೊದಲಾದವು' (Ibid) ಪರಿಶುದ್ಧವಾದ ಮನಸ್ಸಿಗೆ ಹಿಂದುಸ್ಥಾನ ಸಾಮ್ರಾಜ್ಯ ಅಥವಾ ಹಿಂದುಸ್ಥಾನ ರಾಷ್ಟ್ರವೆಂಬುದು ಇಲ್ಲವೆಂದು ಗೊತ್ತಾದೀತು. ಅಲ್ಲಿಯ ಅಧಿಕಾರವು ಇಂಗ್ಲೀಷರದ್ದಾಗಿರುತ್ತದೆ. ಅಲ್ಲಿಯ ಸಾಮ್ರಾಜ್ಯವೂ ಸಹ ಇಂಗ್ಲೆಂಡಿನದು. ತನ್ನ ಕಾನೂನಿನಿಂದ ಸ್ಥಾಪಿಸಲ್ಪಟ್ಟಂಥಾ ಸರಕಾರವು ಹಿಂದುಸ್ಥಾನದಲ್ಲಿ ಇಲ್ಲನೆ ಇಲ್ಲವು. ಬ್ರಿಟಿಷ ಸರಕಾರದ ಹಿಂದುಸ್ಥಾನ ಸರಕಾರವು ಹೆಚ್ಚಾಗಿ ಒಂದು ಏಜಂಟಿನಂತಿರುವುದು. ಲಾರ್ಡ ಕರ್ಝನರ ಮಾತಿನಿಂದ ಹೇಳುವುದಾದರೆ ಹಿಂದುಸ್ಥಾನ ಸರಕಾರವು ಬ್ರಿಟಿಷ್ ಸರಕಾರದ ಬೇರೆ ಒಂದು ಕೈಕೆಳಗಿನ ಖಾತೆ (Department) ಯಾಗಿರುತ್ತದೆ. ೧೯೧೯ನೆ ಇಸವಿಯ ಸುಧಾರಣೆಗಳು ಹಿಂದುಸ್ಥಾನದ ಮರ್ಯಾದೆ (Status) ಯಲ್ಲಿ ಯಾವ ಭೇದವನ್ನೂ ಮಾಡಿಲ್ಲ. ನಿಜವಾಗಿ ನೋಡಿದರೆ ಆ ಸುಧಾರಣೆಗಳ ಉಪೋದ್ಘಾತದಿಂದಲೆ ಹಿಂದುಸ್ಥಾನದ ಉತ್ಪನ್ನಕ ಅಧಿಕಾರವೂ ಪರಾಧೀನತ್ವವೂ ನಿಶ್ಚಯಿಸಲ್ಪಟ್ಟಿವೆ. ಹಿಂದೀ ಜನಾಂಗವು ಬ್ರಿಟಿಷ ಜನಾಂಗದ ಒಂದು ಭಾಗವೆಂದು ಅಥವಾ ಹಿಂದೀ ಜನರು ಬ್ರಿಟಿಷ್ ಸಾಮ್ರಾಜ್ಯದ ಸಮಾನ ನಾಗರಿಕರೂ (citizens) ಎಂದು ಯಾವ ಉಪಕಥೆಗಳಿಂದಲೂ ತಕ್ಕೊಳ್ಳಲಿಕ್ಕಾಗಲಿಕ್ಕಿಲ್ಲ. ಫ್ರೆಂಚ ರಿಪಬ್ಲಿಕದ 'ಸೆನಿಂಗೆಂಬಿಯಾದ' ಕಾಡು ಜನರು ಯಾವ ಪ್ರಕಾರ 'ಸಿಟಿಜನ'ರಾಗಿರುವರೊ ಆ ಪ್ರಕಾರವೂ ಸಹ ಹಿಂದೀ ಜನರಾಗಿರುವುದಿಲ್ಲ. ಫ್ರೆಂಚ ವಸಾಹತುಗಳಲ್ಲಿಯ ಅಥವಾ ಅದರ ಕೈಕೆಳಗಿರುವ ರಾಷ್ಟ್ರದ ಜನರು ಪ್ರಾಯಶಃ ಫ್ರೆಂಚ ಜನಾಂಗದವರಾಗಿರುವರು. ಫ್ರೆಂಚ ಸರಕಾರದಲ್ಲಿ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲು ಅವರಿಗೆ ಹಕ್ಕು ಇರುವುದು. ಆದರೆ ಹಿಂದೀ ಜನರಿಗೆ ಇಂಥ ಅಧಿಕಾರವು ಇರುವುದಿಲ್ಲ.

ರಾಷ್ಟ್ರೀಯ ವಿದ್ಯಾಮಂದಿರ, ಉಡ್ಪಿ.

ಉಡ್ಪಿ ರಾಷ್ಟ್ರೀಯ ಶಿಕ್ಷಣ ಮಂಡಳದ ಸಾಮಾಜಿಕರೆಲ್ಲರಿಗೂ ಈ ಮೂಲಕ ಜಾಹೀರುಪಡಿಸುವುದೇನೆಂದರೆ:-ತಾ. ೯-೭-೨೨ನೆಯ ಆದಿತ್ಯವಾರ ಮಧ್ಯಾಹ್ನ ಗಂಟೆ ೩ಕ್ಕೆ ತೆಂಕುಪೇಟೆಯಲ್ಲಿ ಶ್ರೀಯುತ ಕಾಡಬೆಟ್ಟು ಸುಬ್ಬಣ್ಣನಾಯ್ಕರ ಅಂಗಡಿ ಎದುರಿಗಿರುವ ರಾಷ್ಟ್ರೀಯ ವಿದ್ಯಾಮಂದಿರದ ಪ್ರಾಥಮಿಕ ಶಾಖೆಯ ಉಪ್ಪರಿಗೆಯಲ್ಲಿ ಉಡ್ಪಿ ರಾಷ್ಟ್ರೀಯ ಶಿಕ್ಷಣ ಮಂಡಳದ ಸಾಮಾಜಿಕರ ಸಾಮಾನ್ಯ ವಾರ್ಷಿಕ ಸಮ್ಮೇಳನವು ಜರಗುವುದು. ಸದರಿ ಸಮ್ಮೇಳನಕ್ಕೆ ಸಾಮಾಜಿಕರೆಲ್ಲರೂ ಅಗತ್ಯವಾಗಿ ಹಾಜರಾಗಬೇಕಾಗಿ ವಿನಂತಿ. ಸಮ್ಮೇಳನದಲ್ಲಿ ಚರ್ಚಿಸುವ ವಿಷಯಗಳು:—(೧) ಗತವರ್ಷದ ಲೆಕ್ಕ ವರದಿ. (೨) ಹೊಸ ವರ್ಷಕ್ಕೆ ಕಾರ್ಯನಿರ್ವಾಹಕರ ಚುನಾವಣೆ. (೩) ಇತರ ಅಗತ್ಯದ ವಿಷಯಗಳು.

ಉಡ್ಪಿ,
ತಾ. 23-6-22.

ನಯಂಪಳ್ಳಿ ಆನಂದರಾವ್,
ಉಪೇಂದ್ರ ಅನಂತಪೈ,
ಜತೆ ಕಾರ್ಯದರ್ಶಿಯವರು.

Edited by V. S. KAMATH, Mangalore.

|| [illegible] ||

ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದ್ಧೌಷಧಿಗಳು

ತ್ರೈಲೋಕಾಮಯಹರ ಕಸ್ತೂರಿ ಮಾತ್ರೆ—ಈ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನೆಂದಿಗೂ ಅಪೇಕ್ಷಿಸಲಾರಿರಿ. ಬೇಕೆಂದರೆ ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಿಯಾಗಲೀ ಹಾಗೇ ಅಗಿದು ಉಪಯೋಗಿಸುತ್ತಾ ಬಂದಲ್ಲಿ ಯಾವಕಾಯಿಲೆಗೂ ಗುರಿಯಾಗದೆ ಆರೋಗ್ಯವಾಗಿರುವಿರಿ, ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನ ಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೇ ಆರೋಗ್ಯಶಾಲಿಗಳಾಗುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣೀಕರಿಸಿ ಪಚನ ಶಕ್ತಿಯನ್ನು ಸಮ ಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ. ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಹೊಟ್ಟೆ ಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು ಕರುಳಿನ ಮೊರೆತ, ಜ್ವರ, ಚಳಿಜ್ವರ, ಇವುಗಳನ್ನು ಗುಣಪಡಿಸುತ್ತವೆ. ಮಕ್ಕಳ ಎಳವು(ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು. ವ್ಯಾಯಾಮಕ್ಕೆ ಅವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ, ಈ ಮಾತ್ರೆಗಳು ಸಂಜೀವನ ಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವಿದ್ದೇ ಇರುತ್ತದೆ. ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೆ, ಕೊಂಡುಕೊಳ್ಳಿರಿ 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ. ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0 12 ಸೀಸೆಗಳಿಗೆ 2-7-0 25 ಸೀಸೆಗಳಿಗೆ 4-10-0. ಪೋಸ್ಟೇಜು ಬೇರೆ.

ಸಾರಸ್ವತಾಸವ:—ದೇಹಾರೋಗ್ಯ, ಜ್ಞಾಪಕಶಕ್ತಿಗಳನ್ನು ವೃದ್ಧಿಪಡಿಸಿ, ಮೂತ್ರಾಶಯದ ರೋಗಗಳನ್ನು (ಪ್ರಮೇಹವನ್ನು) ಹೋಗಲಾಡಿಸಿ, ಮಲಬದ್ಧವನ್ನು ತೊಲಗಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವರ್ತಿಸಿ, ಹೊಸ ರಕ್ತವನ್ನೂ ಶುಕ್ಲ ಧಾತುವನ್ನೂ ವೃದ್ಧಿಪಡಿಸುತ್ತದೆ. ಹೊಟ್ಟೆ ನೋವು, ಎದೆನೋವು, ಬೆನ್ನಿನನರಗಳ ಸೇದಲು, ಮೊಳಕಾಲು ಸೇದಲು, ತಲೆ ಸುತ್ತುವುದು, ಅಧೈರ್ಯ ತಲ್ಲಣ, ಅಶಕ್ತಿ, ಕಣ್ಣುಮಬ್ಬು, ಕಾಂತಿಹೀನತೆ ಇವೆಲ್ಲವೂ ಗುಣವಾಗುವುದು. ಸಂಗೀತಗಾರರ ಕಂಠಸ್ವರಕ್ಕೆ ಇಂಪನ್ನುಂಟುಮಾಡುತ್ತದೆ. ಸ್ತ್ರೀಯರ ಗರ್ಭಸ್ಥಾನದರೋಗಗಳನ್ನೂ ಕ್ರಿಮಿಗಳನ್ನೂ ಪರಿಹರಿಸಿ ಸಂತಾನವತಿಯರನ್ನಾಗಿಸುತ್ತದೆ. 6 ಔನ್ಸಿನ ಸೀಸಾ 1ಕ್ಕೆ 1—0—0.

ಬಾಲಸುಬೋಧಯ (ಬಾಲಾಮೃತ,—ಮಕ್ಕಳ ಕೈ ಕಾಲು ಸಣ್ಣವಾಗಿರುವುದು ಹೊಟ್ಟೆದಪ್ಪನಾಗಿರುವುದು ಗುಣವಾಗುತ್ತದೆ. ಜೀರ್ಣಿಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ವಾಸಿಯಾಗುತ್ತದೆ. ರಕ್ತವೃದ್ಧಿಯೂ ಶಕ್ತಿಯೂ ಉಂಟಾಗುತ್ತದೆ. ಸೀಸೆ ಒಂದಕ್ಕೆ 0—12—0.

ವಾತಗಜಕೇಸರ ಲೇಹ್ಯ—ಮೇಹವಾತ, ಸಂಧಿವಾತ, ಕೈಕಾಲುಗಳು ಹಿಡಿಸುವ ವಾತ ಊರುವಾಯು, ಧನುರ್ವಾಯು ಇವೆಲ್ಲವೂ ಸಂದೇಹವಿಲ್ಲದೆ ಗುಣವಾಗುತ್ತದೆ. ಪಥ್ಯವಿಲ್ಲದೆ ಸೇವಿಸತಕ್ಕ ಔಷಧಿ 24 ತೊಲಾ ಡಬ್ಬಿ 1ಕ್ಕೆ 2—0—0.

ಭಾವನಾಜೀರಕ ರಸಾಯನ.—ಪಿತ್ತಹರವಾದ ಔಷಧಿ, ಎದೆ ಉರಿ, ಹುಳಿತೇಗು, ಬಾಯಲ್ಲಿ ನೀರೂರುತ್ತಿರುವುದು ವಾಂತಿ, ಪಿತ್ತದ ಹೊತ್ತಿನ ತಲೆನೋವು, ತಲೆ ತಿರುಗಲು, ಬಾಯಿ ಕಹಿ, ತಲ್ಲಣ, ಸಂಕಟ, ಸುಸ್ತು, ಜೀರ್ಣಿಸದೆ ಭೇದಿಯಾಗುವುದು, ಎದ್ದರೆ ಕುಳಿತರೆ ಜೋಮುಹಿಡಿವುದು, ಇನ್ನು ಅನೇಕಪಿತ್ತವ್ಯಾಧಿಯನ್ನು ಗುಣಪಡಿಸುತ್ತದೆ. 24 ತೊಲಾ ಡಬ್ಬಿ 1ಕ್ಕೆ 1—0—0.

ಕಾಸಕೇಸರಿ.—ಮಕ್ಕಳ ಕೆಮ್ಮು ನಾಯಿಕೆಮ್ಮಲು; ದೊಡ್ಡವರ ಉಷ್ಣದ ಮತ್ತು ಶೀತದ ಕೆಮ್ಮಲು ಸಹಾ ಸಂದೇಹವಿಲ್ಲದೆ ಪರಿಹಾರವಾಗುತ್ತದೆ. 4 ಔನ್ಸ್ ಸೀಸೆ 1ಕ್ಕೆ 1—0—0.

ಭೂನಿಂಬಾರಿಷ್ಟವು ತಿಂಗಳು ಗಟ್ಟಲೆ ಬಿಡದೆ ಕಾಯುವ ಹಳೇಜ್ವರ, ಅಸ್ಥಿಗತಜ್ವರ (ಮಲೇರಿಯಾ) ಮೂರರ ಜ್ವರ, ನಾಲ್ಕರಜ್ವರ, ಕ್ವಿನೈನನ್ನು ತಿಂದು ಅದಕ್ಕೆ ವಿರೋಧವಾದ ವಸ್ತುಗಳನ್ನು ಸೇವಿಸುವುದರಿಂದ ಮರಳಿಸಿದ ಜ್ವರ, ಕ್ವಿನೈನಿನ ದೋಷ, ಇವೆಲ್ಲವೂ ನಂಬುಗೆಯಾಗಿ ಗುಣವಾಗಿ ರಕ್ತಶುದ್ಧಿಯೂ ವೃದ್ಧಿಯೂ ಆಗುತ್ತದೆ. 6 ಔನ್ಸ್ ಸೀಸಾ 1ಕ್ಕೆ 1-0-0.

ದದ್ರುಪರಿಹಾರಿಣಿ— (ಹುಳಕಡ್ಡಿ ಔಷಧಿ) ಗಜಚರ್ಮ ಹುಳಕಡ್ಡಿಗಳು ಗುಣವಾಗುತ್ತವೆ ಡಬ್ಬಿ ಬೆಲೆ 0-4-0.

ದೃಢದಂತ ಚೂರ್ಣ —(ಹಲ್ಲುಜ್ಜುವ ಪುಡಿ) ಈ ಪುಡಿಯಲ್ಲಿ ಬಿಳುಪು ವರ್ಣದ್ದೂ ಇದೆ. ಆದರೆ ಕಪ್ಪು ವರ್ಣದ ಪುಡಿಯು ಎಲ್ಲಾ ಬಗೆಯ ಹಲ್ಲುಗಳ ನೋವನ್ನೂ [illegible], ಹಲ್ಲುಗಳಲ್ಲಾಡುತ್ತಿರುವುದನ್ನೂ, ಗಾಳಿಗೆ ಜುಮ್ಮೆನ್ನುವುದನ್ನೂ ಗುಣಪಡಿಸಿ, ಹಲ್ಲುಗಳನ್ನುಗಟ್ಟಿಯಾಗಿಸುತ್ತದೆ. ಹಲ್ಲುಗಳು ಕಪ್ಪಾಗದೆ ಬೆಳ್ಳಗೆ ಮಿರುಗುತ್ತವೆ ಡಬ್ಬಿ 1 ಕ್ಕೆ 0-2-0.

ಲೋಲಾಮೃತ ಮಾತ್ರೆ—ಈ ಮಾತ್ರೆಗಳು ಮೂತ್ರದುರಿ, ಬಿಳುಪು, ಕೆಂಪು, ಹಳದಿ ವರ್ಣಗಳ ಬಿಂದುಸಹಿತ, ಮೂತ್ರವು ಹನಿಯಾಗಿ ಬೀಳುವುದು, ನೆನಸಿದೊಡನೆ ಮೂತ್ರಿಸಬೇಕಾಗಿರುವುದು, ಇವೆಲ್ಲವೂ ಗುಣವಾಗುತ್ತವೆ. ಸ್ವಪ್ನಸ್ಖಲನವು ಪರಿಹಾರವಾಗುತ್ತದೆ. 300 ಮಾತ್ರೆಗಳ ಸೀಸೆ 1ಕ್ಕೆ 0-12-0.

ಸೂರಣಾದಿವಟಕ—ಎಲ್ಲಾ ಬೊಳಿಯ (ಮೂಲ) ರೋಗಗಳಿಗೂ ಇದು ಉತ್ತಮ ಗುಣಕಾರಿಯಾದ ಔಷಧಿ, ಔಷಧಿಗಳನ್ನು ಸೇವಿಸಿ ಗುಣವಾಗದೆ ಬೇಜಾರು ಪಟ್ಟಿರುವವರು, ಈ ಸೂರಣಾದಿಯಿಂದ ಗುಣಹೊಂದಿರುತ್ತಾರೆ. ಮೂಲರೋಗಿಗಳಿಗೆ ಉಂಟಾಗುವ ಮಲಬದ್ಧ, ಅತಿಹೊಟ್ಟೆಭಾರ, ರಕ್ತಸ್ರಾವ, ಅಗ್ನಿಮಾಂದ್ಯ, ಗ್ರಹಣಿ, ಪಾಂಡುರೋಗ ಇವೆಲ್ಲವೂ ಗುಣವಾಗುತ್ತವೆ. ಡಬ್ಬಿಯ ಬೆಲೆ [illegible]

ವೃಷ್ಯರಾಜರಸಾಯನ.—ಮೇಹದ ದೆಸೆಯಿಂದಲಾಗಲೀ, ಗರ್ಭಕಾರಕದಿಂದಲಾಗಲೀ, ಆಗಿರುವ ಇಂದ್ರಿಯನಷ್ಟವನ್ನು, ಹೋಗಲಾಡಿಸಿ, ಪುರುಷ ಶಕ್ತಿಯನ್ನು ವೃದ್ಧಿಪಡಿಸುತ್ತದೆ, ಮೈ ಕೈ ಕಾಲುಗಳನೋವು, ನಿದ್ದೆ ಬಾರದಿರುವುದು, ಅಗ್ನಿಮಾಂದ್ಯ ನಾಭಿ ವ್ರಣಗಳನ್ನು ಹೋಗಲಾಡಿಸಿ, ಶುಕ್ಲಧಾತು ವೃದ್ಧಿಯನ್ನು ಕ್ರಮವಾಗಿ ಉಂಟುಮಾಡುತ್ತದೆ. 24 ತೊಲೆ ಡಬ್ಬಿ 2-0-0

ಕಾಮದೇವ ಘೃತ—ಈ ಕಾಮದೇವ ಘೃತವನ್ನು ಲೇಪಿಸುವುದರಿಂದ 1-2 ವಾರಗಳಲ್ಲಿ ಗುಪ್ತಸ್ಥಾನದನರಗಳು ಬಲವುಳ್ಳವಾಗುತ್ತವೆ, ಬಾಲ್ಯದಲ್ಲಿ ದುರಭ್ಯಾಸದಿಂದಲಾಗಲೀ, ಅತಿಸಂಭೋಗದಿಂದಲಾಗಲೀ, ನರಗಳೆಡಗಿಯು ಶಕ್ತಿಹೋಗಿರುವುದನ್ನು, [illegible]. ದೇಹದಲ್ಲಿ ಸ್ಥಾಯಿಯಾದ ಶಕ್ತಿಯಿದ್ದು ಗುಪ್ತಸ್ಥಾನವು ದುರ್ಬಲವಾಗಿದ್ದರೆ, ಇದನ್ನು ಲೇಪಿಸುವುದರಿಂದಲೇ ಆ ಪ್ರದೇಶವು ಬಲವುಳ್ಳದಾಗುತ್ತದೆ. ದೇಹದಲ್ಲೂ ಅಶಕ್ತಿಯಿರುವುದಾದರೆ ವೃಷ್ಯ ರಾಜರಸಾಯನವನ್ನು ಸೇವನೆಗೂ, ಕಾಮದೇವಘೃತವನ್ನು ಲೇಪನೆಗೂ, ಏಕಕಾಲದಲ್ಲಿ, ಉಪಯೋಗಿಸುವುದರಿಂದ, ಇಷ್ಟಾರ್ಥವು ಶೀಘ್ರದಲ್ಲಿ ಸಿದ್ಧಿಸುತ್ತದೆ. ಸೀಸೆಯ ಬೆಲೆ 1-0-0

ಬಾಧಾಪಹಾರಿಣಿ.—ಈ ಔಷಧಿಯನ್ನು ಉಜ್ಜಿದರೆ ಪಕ್ಕೆ ನೋವು, ಎರಡುಕಡೆತಲೆನೋವು, ಉಳುಕು, ಥಳುಕು, [illegible] ಗಾಯಗಳು, ಸುಟ್ಟಗಾಯ, ಉರಿವಾಯು, ಹಳೆಯನೋವು ಇವೆಲ್ಲವೂ ಗುಣವಾಗುತ್ತವೆ. ಸೀಸೆ 1ಕ್ಕೆ 0—8—0, ಟ. ಮ. ಬೇರೆ

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕೃಪೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇವರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇವರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಹೀರ ಕಡಿಮೆಮಾಡಿ ಇರುವದು. ೩-೮-೦ ಟಪ್ಪಾಲು ಖರ್ಚು ೬ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಹೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ತರಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧-೮-೦, ಟಪ್ಪಾಲು ಹಾಸಲು ೦-೪-೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ರಾಷ್ಟ್ರೀಯ ಹೊಸ ಪುಸ್ತಕಗಳು

ದೇಶೋನ್ನತಿ ಗ್ರಂಥಮಾಲಾ

ಸಂಖ್ಯೆ ೧ ಮಹಾತ್ಮಾ ಗಾಂಧಿಮತದ ಹಿಂದೀಸ್ವರಾಜ್ಯಕನ್ನಡ ೦-೮-೦ ೨ನೆ ಆವೃತ್ತಿ ಅಚ್ಚಿನಲ್ಲಿದೆ.
೨ ದೀನಬಂಧು ಸಿ. ಯಫ್. ಅಂಡ್ರ್ಯೂಸರವರ ಅಸಹಕಾರ ಪತ್ರಗಳು ೦-೬-೦
೩ ಹಿಂದೀ ಭಾಷಾಸಾರ. ಹಿಂದೀಭಾಷೆ ಕಲಿಯಲು ೧ನೇ ಪಾಠ ಪುಸ್ತಕ
೪ ರಾಷ್ಟ್ರೀಯಕರ್ಮ ಅಥವಾ ದೇಶಭಕ್ತರ ಸೂಕ್ತಿಮಾಲೆ ೦-೩-೦
ದೇಶಭಕ್ತ ಅಲೀಸಹೋದರರ ಚರಿತ್ರೆ ೦-೨-೦
ಮ ಗಾಂಧೀಚರಿತ್ರೆ ೦-೫-೦
ಡಿ ಚಿಕ್ಕದು ೦-೨-೦

ರಾಷ್ಟ್ರೀಯ ಪದ್ಯಪುಸ್ತಕಗಳು.

ತಿಲಕ ಕಾವ್ಯಾಂಜಲಿ	೦-೪-೦
ಗಾಂಧಿ ವಿಜಯ	೦-೨-೦
ರಾಷ್ಟ್ರೀಯ ಗೀತಾವಳಿ	೦-೦-೯
ಸ್ವರಾಜ್ಯಸಂಪತ್ತು	೦-೦-೩

ಇವುಗಳಲ್ಲದೆ ಇನ್ನೂ ಅನೇಕ ತರದ ಪುಸ್ತಕಗಳು ವಿಕ್ರಿಕ್ಕೆ ಸಿದ್ಧವಿರುವವು ವಿ. ಪಿ.ಯಿಂದ ಅಪೇಕ್ಷಿಸುವವರು ನಾಲ್ಕಾಣೆ ಸ್ಟಾಂಪು ಮುಂಗಡವಾಗಿ ಕಳುಹಿಸಿದ್ದಲ್ಲಿ ಉಳಿದ ಬಾಬಿಗೆ ವಿ. ಪಿ. ಮಾಡಲಾಗುವುದು. ಎಂಟಾಣೆಗಿಂತ ಕಡಿಮೆ ಕ್ರಯದ ಪುಸ್ತಕಗಳು ವಿ. ಪಿ.ಯಿಂದ ಕಳುಹಿಸಲಾರೆವು.

ವಿಳಾಸ:— ಕೆ. ಯಂ. ದಾಸಪ್ರಭು ಅಂಡ್ ಸನ್ಸ್,
ರಥಬೀದಿ, ಮಂಗಳೂರು.

Sri Lakshmi Mills, Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

ಕನ್ನಡಿಗರಲ್ಲಿ ಪ್ರಸಿದ್ಧವಾದ ಶ್ರೀಕೃಷ್ಣ ರಾಜ ವಾಣೀ ವಿಲಾಸವೆಂಬ ಮಹಾಭಾರತ ಭಾಗವತ ರಾಮಾಯಣ ಕನ್ನಡ ಟೀಕು.

ಮಹಾಭಾರತ—ಆದಿಪರ್ವ ರೂ. 4-0-0, ಸಭಾಪರ್ವ ರೂ. 1-12-0, ವಿರಾಟಪರ್ವ ರೂ. 1-8-0, ದ್ರೋಣಪರ್ವ ರೂ. 3-0-0, ಸ್ತ್ರೀಪರ್ವ ರೂ. 0-8-0, ಭಗವದ್ಗೀತೆ ರೂ. 0-8-0.

ರಾಮಾಯಣ—ಬಾಲಕಾಂಡ ರೂ. 1-8-0, ಅಯೋಧ್ಯಾಕಾಂಡ ರೂ. 2-8-0, ಅರಣ್ಯಕಾಂಡ ರೂ. 1-8-0, ಕಿಷ್ಕಿಂಧಾಕಾಂಡ ರೂ. 1-8-0, ಸುಂದರಕಾಂಡ ರೂ. 1-8-0, ಯುದ್ಧಕಾಂಡ ರೂ. 3-0-0, ಉತ್ತರಕಾಂಡ ರೂ. 2-0-0.

ಶ್ರೀಮದ್ಭಾಗವತ—ಪ್ರಥಮ ದ್ವಿತೀಯ ತೃತೀಯ ಸ್ಕಂಧಗಳು ರೂ. 2-8-0, ಚತುರ್ಥ ಪಂಚಮ ಸ್ಕಂಧಗಳು ರೂ. 2-4-0, ಷಷ್ಠ. ಸಪ್ತಮ ಅಷ್ಟಮ ನವಮ ಸ್ಕಂಧಗಳು 3-0-0, ಏಕಾದಶ ದ್ವಾದಶ ಸ್ಕಂಧಗಳು ರೂ. 2-4-0.

ದಶಮ ಸ್ಕಂಧ 2ನೇ ಛಾಪೆ ಪ್ರಿಂಟಿನಲ್ಲಿದೆ. ಈ ಮೇಲ್ಕಂಡ ಪುಸ್ತಕಗಳು ಕೆಲವು ಮಾತ್ರ ಉಳಿದಿರುವುದರಿಂದ ಜಾಗ್ರತೆ ತರಿಸಿಕೊಳ್ಳಿ. ಇದಲ್ಲದೆ ನಮ್ಮಲ್ಲಿ ಬಹಳ ಉತ್ತಮವಾದ ಕಸಿ ಮಾವಿನಗಿಡ ಮುಂತಾದ ಹಣ್ಣಿನ ಗಿಡಗಳೂ, ಗುಲಾಬಿ ಕ್ರೋಟನ್ ವಗೈರೆ ಗಿಡಗಳೂ, ತರಕಾರಿ ಬೀಜಗಳೂ ಸಹ ಸಿಕ್ಕುತ್ತವೆ. ಕ್ರಯದ ಪಟ್ಟಿಗೆ ಬರದಲ್ಲಿ ಕಳುಹಿಸುತ್ತೇವೆ.

ಯಂ. ರುದ್ರಪ್ಪ ಅಂಡ್ ಸನ್ಸ್,
ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.

FORDS.

The Cheapest and best Motor Vehicles in the World.

LATEST QUOTATIONS:

Touring ars	Rs. 3,300.
One Ton Chassis. . . .	„ 3,300.
Tyre & Tube for Spare rim . .	„ 100.

Immediate delivery F. O. R. Madras.

FORD SPARES and other MOTOR ACCESSORIES at MADRAS PRICES delivered at Mangalore

Apply to

PEIRCE, LESLIE & CO., LTD., MANGALORE,
South Kanara.

Also agents for MICHELIN TYRES. Prices on Application.

Printed & Published by V. S. Kamath at the Mangalore Trading Association's Sharada Press, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0.
ಟಪ್ಪಾಲ್ ಹಾಸಲು ಸೇರಿ „ 2-13-0.

SWADESHABHIMANI.
MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ವಾರಪತ್ರಿಕೆ

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೬. ಮಂಗಳೂರು, ತಾರೀಕು ೭ನೇ ಜುಲೈ ಶುಕ್ರವಾರ ೧೯೨೨. ಸಂಚಿಕೆ ೨೭

ಮಾಲು ಉತ್ತಮ! ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು.

ಮೇಲಾದ

ಜವುಳಿ ಸಂಗ್ರಹದ ಮಳಿಗೆ

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಶ್ಮೆ ಪಟ್ಟೆ, ಮತ್ತು ನೂಲಿನ ಬಟ್ಟೆಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಮ್ಮದಾಬಾದ, ಮಹೇಶ್ವರಿ, ಗುಜರಾಥ, ಬರೋಡಾ, ಕೊಯಮುತ್ತೂರು, ಗದಗ, ಹುಬ್ಬಳ್ಳಿ, ಧಾರವಾಡ, ಇಳಕಲ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಮ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಬರ್ಮಾ ಮೊದಲಾದ ಕಡೆಗಳಲ್ಲಿಯೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳು, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುಪು ತೊಡುಪುಗಳು ಈಗ ತಾನೇ ತರಿಸಿದ್ದು ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗಿರುವ ಬಿಳೇ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳೂ, ಬೇರೆ ವ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಶರ್ಟಿನ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ.

ನಗದಿ ಪಡೆಯುವವರಿಗೆ ಒಳ್ಳೇ ಕಮಿಷನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೆ,
ಕಸ್ತೂರಿ ನಾಗೇಶಪ್ಪೆ ಮತ್ತು ಕಂಪೆನಿ,
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಹಿಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ಏನುಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಡಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

– ಇದರಲ್ಲಿ ದೊರೆಯುವ –

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಳ್ಸರಾವು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತವಿವೇಕ ಕ್ರಯ	೦-೧೦-೦
ಕೇತುಭಂಗ	„ ೦-೧೨-೦
ಸಂಕ್ಷೇಪಗೀತೆ	„ ೦-೧೦-೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ
ಸ್ವರಾಜ್ಯ ಭಕ್ತಿವಿಲಾಸ ಕ್ರಯ ೦-೨-೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿ ವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅನೇಕ ತರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨-೧೩-೦ ಸ್ಥಳಿಕರಿಗೆ ರೂ ೨-೦-೦. ವಿ. ಪಿ. ಖರ್ಚು ಕೂಡಿ ರೂ. ೩-೦-೦. ಪ್ರಕಟಿತಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಡೈರಿಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಬ್ಲಾಟಿಂಗ್ ಪೇಪರುಗಳು, ಇತರ ಬಿಲಾಯಿತಿ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಭಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೇರೆ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ಬಿಕ್ಕು ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪೌಷ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ, ಇತ್ಯಾದಿ ರೈತರಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BALM
AMRUTANJAN
Best Indian Pain Balm
Amrutanjan
BOMBAY.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಚಕಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ಬೇರುಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ 'ಪಾಚಕಕಷಾಯ'ವು ಎಲ್ಲಾ ವಿಧದ ವಾತಗಳನ್ನು, ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂಧು, ಅವಯವ, ಅಂಗಕೋಶ ಬಾತವಾದುದು ಕೆಂಪಾಗಿ ನೋವುಂಟಾಗುವುದು. ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಧಾತುವಿನಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲಿ, ನಿಮ್ಮ ಸ್ನೇಹಿತರಲ್ಲಿಯಾಗಲಿ ಕಾಣಸಿಕೊಂಡರೆ, ಕೂಡಲೇ ನಮ್ಮ 'ಕಷಾಯ' ತೆಗೆದುಕೊಳ್ಳಲು ಪ್ರಾರಂಭಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ದೇಹವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕಾಲರಾ, ಕಾಮಾಲೆ, ಆಮ್ಲಪಿತ್ತ, ಕೆಮ್ಮು, ಜ್ವರ, [illegible] ಧಾತುಕ್ಷಯ, ಹಲ್ಲುನೋವು, ತಲೆನೋವು, ಆಮಶಂಕೆ, ಮೊದಲಾದವುಗಳಿಗೆ ದಿವ್ಯ ಔಷಧಗಳಿವೆ. 'ಕ್ಯಾಟಲಾಗ್'ನ್ನು ನೋಡಿ.

ಕ್ರಯ ರೂ. 4-4-0. ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ ಮಲಬಾರು.

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೆನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೆನ್ ಇವರ ಖುದ್ದು ನಿಗಾವನಿಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ವ್ಯಾಪಾರಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬಿಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ 25 ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರೆ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬರೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ½ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಟರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ¼ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೆನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಜನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 2. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಓರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,
Hampankatta, MANGALORE S' K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟಿಯು ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ್‌ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫ್ಲೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವುದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಶಾಲು ಕ್ರಯ ಸುಲಭ.

ಮಕ್ಕಳ ಆಟದ ಹಿತ್ತಾಳೆಯ 32 ಸಾಮಾನುಗಳ ಸಣ್ಣ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 6—0—0 ಪೋಸು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ, ಮಡಿ, ಜರಿ, ಸಾದಾ, ಸೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಶ್ರೀಚಕ್ರ, ಸ್ಫಟಿಕಮಣಿ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಕೋರುವವರಿಗೆ ವಿ. ಪಿ. ಪಿ ಮೂಲಕ ಕಳುಹಿಸಲಾದೀತು. ಕ್ಯಾಟಲಾಗ್ ಇನಾಂ.

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮ ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವ ಅಥವಾ ಹಸುರು ವರ್ಣದ ಕಾಣ ಉರಿಯುಳ್ಳ ಮೇಹವು ಹ ವುದಕ್ಕೆ ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮು ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶಿಲೆ ಒಂದರ ಕ್ರಯ:—ರೂ. 1—4—0.

ಹುಳದ ಪೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:—
ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪೆಥಿಕ್ ಡಿಸ್ಪೆನ್ಸರಿ,
ಹಂಪನಕಟ್ಟೆ, ಮಂಗಳೂರು.



ಸೌಂದರ್ಯದ ಉತ್ತಮ ಮಿತ್ರ

ಲೋಕದಲ್ಲಿ ಅತಿ ಸೌಂದರ್ಯಕ್ಕೆ ಯಶಸ್ಸು ಪಡೆದಂಥಾ ಸ್ತ್ರೀಯರು ಉಪಯೋಗಿಸುವದು

"ಹಾಜಿಲೀನ್ 'ಸ್ನೋ'"
(ಟ್ರೇಡ್ ಮಾರ್ಕ)

"'HAZELINE'
(Trade Mark)
SNOW"

ಚರ್ಮದ ಯುವ್ವನತ್ವವನ್ನು ಕಾಪಾಡಿ, ಕಲೆಗಳಿಂದಲು ಮುದುಡುಗಳಿಂದಲು ರಕ್ಷಿಸುವದು "ಹಾಜಿಲೀನ್ 'ಸ್ನೋ'" ಇದು ಮುಖಕಾಂತಿಗೆ ಬಿಳುಪುಕೊಟ್ಟು ಚರ್ಮವನ್ನು ಮೃದು ನಯವನ್ನು ಕೊಡುತ್ತದೆ

ಗಾಜು ಕಂಚಿನ ಪಾತ್ರೆಗಳಲ್ಲಿ ಕೆಮಿಸ್ಟ ಮತ್ತು ಉಗ್ರಾಣದವರಿಂದಲು ಮಾರಲ್ಪಡುವದು.

ಬರ್ರೋಸ್ ವೆಲ್ಕಂ ಅಂಡ್ ಕೋ.
ಲಂಡನ್ ಅಂಡ್ ಬಂಬಾಯಿ.

Can. 2

Burroughs Wellcome & Co.
London and Bombay
All Rights Reserved

ಸ್ವದೇಶಿ.

ಮಹಾತ್ಮಾ ಗಾಂಧಿಯವರು ಮದ್ರಾಸಿನಲ್ಲಿ ಕೊಟ್ಟ ಉಪನ್ಯಾಸ, ನವಜೀವನದಲ್ಲಿ ಅವರು ಬರೆದ 'ಸ್ವದೇಶಿಯೂ, ಖಾದಿಯೂ' ಎಂಬ ಲೇಖಗಳು ಮತ್ತು ಡಿ. ಬಿ. ಕಲೇಲ್ಕಾರರು ಬರೆದ 'ಸ್ವದೇಶಿ ತತ್ವ' ಇವನ್ನು ಒಳಕೊಂಡಿರುವ ಕನ್ನಡ ಪುಸ್ತಕ. ಇದರಿಂದ ಸ್ವದೇಶಿ ವಿಷಯ ಉತ್ತಮ ತರದ ಸಂಪೂರ್ಣ ಅಭಿಪ್ರಾಯ ಸಿಕ್ಕುತ್ತದೆ. ಪ್ರತಿಯೊಬ್ಬ ಹಿಂದೀಯನೂ ಓದ ಬೇಕಾದ ವಿಷಯ. ಬೆಲೆ ೪ ಆಣೆ ಮಾತ್ರ.

ನಾಲ್ಕೂವರೆ ಆಣೆಯ ಟಪ್ಪಾಲು ಚೀಟು ಕಳುಹಿಸಿದ್ದಲ್ಲಿ ಪುಸ್ತಕ ಕಳುಹಿಸಲಾದೀತು.

ದೊರೆಯುವ ಸ್ಥಳ:—

ಉಡುಪಿ ಗೋವಿಂದರಾವ್,
ಕರ್ನಾಟಕ ತಿಲಕ ಮಹಾವಿದ್ಯಾಲಯ,
ಮಂಗಳೂರು.

೨. ಕೆ. ಎಮ್. ದಾಸಪ್ರಭು,
ಅಂಡ್ ಸನ್ಸ್,
ರಥಬೀದಿ, ಮಂಗಳೂರು.

೩. ಎಮ್. ಕೆ. ವೈದ್ಯ,
ರಥಬೀದಿ, ಮಂಗಳೂರು.

೪. ರಾಷ್ಟ್ರೀಯ ವಿದ್ಯಾಮಂದಿರ,
ಉಡುಪಿ.

೫. ಪಿ. ಎ. ಪೈ ಬ್ರದರ್ಸ್,
ಉಡುಪಿ.

The Canara Banking Corporation, Udipi, (Limited).
ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಆ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯತೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಯಾನೆ ಹೊರಗಿನಿಂದ ಬರತಕ್ಕದ್ದು	3,78,315	2	5
6. ರಿಜರ್ವ ಇತ್ಯಾದಿ ಫಂಡುಗಳು. (17—6—'22.)	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೬ರಿಂದ ೭ರ ವರೆಗಿನ ಮೂರು ತಿಂಗಳಿಗೊಮ್ಮೆ ಬಡ್ಡಿ ಕೊಡುವ ಕರ್ತದ ಮೇಲೆ ನಿರಖು ಠೇವಣಾತಿಗಳು.
೨. ೧೫ ದಿನಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡಿಯುವ ಕರ್ತದ ಮೇಲೆ ಸಾಲಿಯಾನ್ ಶೇಕಡಾ 6½ಲ್ಲಿ ನಡೆದ ದಿನಗಳಿಗೆ ಬಡ್ಡಿ ಕೊಡುವ ಕರ್ತದ ಮೇಲೆ ಚಿಕ್ಕ ಮಾಯಿದ ಠೇವಣಾತಿಗಳು.
೩. ಏನೂ ಖರ್ಚಿಲ್ಲದೆ ಸಾಲಿಯನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಕರ್ತದ ಮೇಲೆ ಚಾಲ್ತಿ ಠೇವಣಾತಿಗಳು.
೪. ಸಾಲಿಯನ್ ಶೇಕಡಾ 4½ ದರದಲ್ಲಿ ಬಡ್ಡಿ ಕೊಡುವ ಕರ್ತದ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.
೫. ಈ ಕೆಳಗಣ ಕರ್ತಗಳ ಮೇಲೆ ಕಂತು ಠೇವಣಾತಿಗಳು.
    - ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.
    - ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.
    - ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.
    - ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು.
    - ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.
೬. ಕಳೆದ ೩ ವರುಷಗಳಲ್ಲಿ ಪಾಲುದಾರರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.
೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.
೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಖ್ಖಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಓಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬಾಯಿಯಲ್ಲಿರುವ ಮರ್ಕೆಂಟೈಲ್ ಬ್ಯಾಂಕ್ ಓಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ಖಾಜಾ ಕಲಂ:—ಹೆಚ್ಚಿನ ವಾಹಿತಿಗೆ ಸೆಕ್ರೆಟರಿಗಳವರಿಗೆ ಬರೆದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡುಪಿ.
ತಾ. 13—5—1922.

ನ. ಆನಂದರಾವ್,
ಕಾರ್ಯದರ್ಶಿ.

ನೋಟೀಸು.

ಕಾಸರಗೋಡು ತಾಲೂಕು ಮಂಜೇಶ್ವರ ಕಸಬೆಯಲ್ಲಿರುವ ಪಾರ್ಶ್ವನಾಥ ಭಟ್ಟರ ಮಗ ವಾಸುದೇವ ಭಟ್ಟನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ:—

ನನ್ನ ಸಂರಕ್ಷಣೆ ಒಳಗೆ ನಮ್ಮ ಕುಟುಂಬದ ಮನೆಯಲ್ಲಿ ಇರುತ್ತಿದ್ದ ನನ್ನ ಮ್ಯಾನರ ಮಗ ಸುಮಾರು 15 ವರುಷ ಪ್ರಾಯದ ರಘುಪತಿಭಟ್ಟ ಎಂಬ ಹುಡುಗನು ಮತಿಭ್ರಷ್ಟನಾಗಿದ್ದು ದ್ವೇಶಿಕರ ದುರ್ಭೋಧನೆಯಿಂದ ಇತ್ತಲಾಗೆ ಕೆಲವು ದಿವಸಗಳಿಂದ ಮನೆಯಿಂದ ಪರಾರಿಯಾಗಿರುತ್ತಾನೆ. ಆತಗೆ ಬುದ್ಧಿ ಸ್ವಸ್ಥತೆ ಇಲ್ಲದ್ದರಿಂದ ಈಗಾಗಲೀ ಪ್ರಾಯ ಬಂದ ನಂತರವಾಗಲೀ ನನ್ನ ಬರಹ ಮೂಲಕ ಒಪ್ಪಿಗೆ ಇಲ್ಲದೆ ಯಾರಾದರೂ ಯಾವ ತರದ ಸಾಲ ಮುಂತಾದ್ದು ಆತಗೆ ಕೊಟ್ಟದ್ದಾದರೆ ಸದರಿ ಸಾಲವು ನನಗಾಗಲೀ ಯಾ ನಮ್ಮ ಕುಟುಂಬದ ಸ್ಥಿರಚರ ಸೊತ್ತು ಮುಂತಾದ್ದರ ಮೇಲಾಗಲೀ ಯಾವ ವಿಧದಿಂದಲೂ, ಬಾಧಿಸತಕ್ಕದಲ್ಲ. ವ ಸಿಂಧೂ ಆಗತಕ್ಕದ್ದಲ್ಲ.

ಮಂಜೇಶ್ವರ.
ತಾ. 9—6—'22 } M. B. VASUDEVA BHATTA

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲಿ ಸುಣ್ಣ ಕಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ.

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲುಬೇಕೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

'ಕವಿ'ಯವರ
ತಾಜಾ
ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ. ನಶ್ಯ ಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ, ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ತು 1ರ ರೂ. 2—12—0.
ಸ್ಪೆಶ್ಯಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟ್ಯಾಂಪು ಕಳುಹಿಸಿದ್ದಲ್ಲಿ ಸೆಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಕೊಂಕಣಿ ಭಾಷೆಯಲ್ಲಿ
ಸಂಗೀತ
ಚಂದ್ರಹಾಸ ನಾಟಕ

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದದ ಬೈಂಡು ರೂ. 0—4—6.
ಸ್ಟಿಫ್ „ „ 0—5—~~0~~6

ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದುವರೆ ಆಣೆ ಅಥವಾ ಆರುವರೆ ಆಣೆಗಳ ಅಂಚೆ ಚೀಟನ್ನು ಕಳುಹಿಸುವುದು ಉತ್ತಮ,

ವಿಳಾಸ:—
ಬಿ. ಕೆ. ಪ್ರಭು,
ವಿಕ್ಟೋರಿಯಾ ಮುದ್ರಾಶಾಲೆ,
ಬಂಟ್ವಾಳ, ದಕ್ಷಿಣ ಕನ್ನಡ.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಆಷಾಢ ಶು|೧೪ ಶನಿವಾರದಿಂದ ದುಂದುಭಿಸಂ| ಆಷಾಢ ಬ|೫ ಶುಕ್ರವಾರದ ವರೆಗಿನ ಪಂಚಾಂಗ
(೧೯೨೨ನೆಯ ಮಿಥುನ ಕಾರ್ತೆಲ್)

ತಾರೀಕು	ವಾರ.	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]	ಸೂರ್ಯ	
							ಉ.	ಅಸ್ತ.
8	ಶನಿ	೧೪	೯. ೧೬	ಮೂಲಾ	೨೩.೩೨	೩೪	6.11	6.59
9	ರವಿ	○	೯. ೧೫	ಪೂ. ಷಾ.	೨೫. ೦	೩೫	6.12	7. 0
10	ಸೋಮ	೧	೧೦.೪೪	ಉ. ಷಾ.	೨೮.೩೦	೩೬	6.12	7. 0
11	ಕುಜ	೨	೧೩.೨೮	ಶ್ರವಣಾ	೩೩.೪೬	೩೭	6.12	7. 0
12	ಬುಧ	೩	೧೭. ೦	ಧನಿಷ್ಠಾ	೩೮.೩೨	೩೮	6.12	7. 0
13	ಗುರು	೪	೨೧.೩೧	ಶತಭಿಷಾ	೪೪.೩೨	೩೯	6.12	7. 0
14	ಶುಕ್ರ	೫	೨೬.೧೬	ಪೂ. ಭಾ.	೫೧. ೦	೪೦	6.12	7. 0

ಮಂಗಳೂರಿನ ವಾಯುಸ್ಥಿತಿ.
(೧೯೨೨ನೆಯ ಜೂನ್)

Date ತಾರೀಕು	Temperature. ಉಷ್ಣ (ಕಾವು)		Rainfall ಮಳೆ ಇಂಚ ಗಳಲ್ಲಿ	
	Maximum ಹೆಚ್ಚಾದ	Minimum ಕಡಿಮೆ	ದಿನದ ಮಳೆ	ಜೂನ್ ೧ರಿಂದ
29	85—8	75—5	0—64	—
30	86—2	72—5	3—07	—
1	88—4	72—1	4—48	—
2	80—4	69—5	3—97	—
3	84—5	72—8	1—79	—
4	79—4	70—3	3—32	—
5	83—6	71—5	0—92	55—63

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ	ವರೆಗೆ
		ರೂ. ಆ.	ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ	...	8—0	8—10
ಸುಗ್ಗಿಗೆ	...	7—6	7—14
ಗುಡ್ಡು,	...	7—8	8—0
ರಾಶಿ		7—4	7—8
ಅವ್ವಲ್ ಬೆಳ್ತಿಗೆ „	...	8—4	8—12
ಗುಡ್ಡು ಬೆಳ್ತಿಗೆ „	...	7—14	8—4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	14—0	14—8
ಗೋದಿ ಗೋಣಿ ೧ಕ್ಕೆ	...	23—8	25—8
ಹುರುಳಿ ಗೋಣಿ ೧ಕ್ಕೆ	...	13—12	14—0
ಕಡಲೆ ಗೋಣಿ ೧ಕ್ಕೆ	...	14—0	15—6
ತೊಗರಿ ಗೋಣಿ ೧ಕ್ಕೆ	...	16—0	16—4
ತೊಗರಿಬೇಳೆ ಗೋಣಿ ೧ಕ್ಕೆ	...	19—8	24—0
ಉದ್ದು ಗೋಣಿ ೧ಕ್ಕೆ	...	17—0	—
ಹೆಸರು ಗೋಣಿ ೧ಕ್ಕೆ	...	16—8	17—0
ಊರು ಬೆಲ್ಲ ಖಂಡಿ ೧ಕ್ಕೆ	...	70—0	72—8
ಉಪ್ಪು ಗೋಣಿ ೧ಕ್ಕೆ	...	5—2	5—4
ಕೊಬ್ರಿ ಖಂಡಿ ೧ಕ್ಕೆ	...	85—0	95—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	33—0	34—0
ಎಳ್ಳಿಂಡಿ ಖಂಡಿ ೧ಕ್ಕೆ	...	50—0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7—2	8—2
ಎಳ್ಳೆಣ್ಣೆ ಮುಡಿ ೧ಕ್ಕೆ	...	8—12	9—0
ಚಿಮಿಣೆಣ್ಣೆ ಪೆಟ್ಟಿಗೆ ೧ಕ್ಕೆ	...	9—0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	6—4	6—6
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	8—6	8—8
ಸಾಸಿವೆ ಮುಡಿ ೧ಕ್ಕೆ	...	8—4	8—8
ಕೊತ್ತಂಬರಿ ಮುಡಿ ೧ಕ್ಕೆ	...	5—0	5—12
ಕಾಫಿ ಖಂಡಿ ೧ಕ್ಕೆ	...	350—0	355—0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳ್ತು	...	160—0	170—0
ಬಿಳಿಗೋಟು New, ಹೊಸ್ತು	...	130—0	135—0
ಕಾ[illegible]ಮೆಣಸು ಖಂಡಿ ೧ಕ್ಕೆ	...	120—0	125—0
[illegible] ಮುಡಿ ೧ಕ್ಕೆ	...	26—0	28—0
[illegible] ಮುಡಿ ೧ಕ್ಕೆ	...	2—6	2—8
[illegible] ಖಂಡಿ ೧ಕ್ಕೆ	...	70—0	80—0
[illegible] ಮುಡಿ ೧ಕ್ಕೆ	...	23—12	24—0
[illegible] ಪಾತ್ರೆಗಳು ಮುಡಿ ೧ಕ್ಕೆ	...	36—0	—
[illegible] ಶೇರು ೧ಕ್ಕೆ	...	24—0	—
[illegible] ಮುಡಿ ೧ಕ್ಕೆ	...	23—0	—

ಅಚ್ಚಿನಲ್ಲಿದೆ! ಎಂ. ಜಿ. ಐಗಳ್, ಇವರಿಂದ ರಚಿತವಾದ ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಯಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿದ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಆಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟತಾದ್ರಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತನಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯಿಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಬಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವೆ ಗೌಡಸಾರಸ್ವತರು ಮಾಧ್ವರಾದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ, ಸಿಗು. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತ [illegible]—ಹಿಜರಿ—ಅಬ್ಬುಬಕರ—ಅಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಆಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚೆರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾರ್ಸೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಿದಿಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಶೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಾಣಿರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ರಾಯ—ಕುಂಬಳೆ ಸುಬ್ರಾಯನ ದಂಗೆ—ಕೆಡ್ಡೆಲ್ ಮನ್ರೊ, ಮೊದಲನೇ ಕಲೆಕ್ಟರ—ಬುಚೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಪಂಜ—ಸುಳ್ಯ—ಬೆಳ್ಳಾರೆ—ಅಮರಸುಳಿಗೆಗಳು—ಬೆಳ್ಳಾರೆ, ಮುಖ್ಯ ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ-ಗುರುವಾಯನಕೆರೆ ಪಟ್ಟಣನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಟ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ನಾರಾಗುಡಿ—ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಮಣೆಯುದ್ಧ—ದೇವಪೂಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ಐಲನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿರ್ಮುಂಜೂರು—ಮೂಲಿಕೆ—ವಳಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಿಸ್ಸಲ—ಸೋಮಲಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾರ್ಸೆಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ಬಿನ್ನಾಣಿರು—ಪಣಿಲ ಜೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮಯಿಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಟ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟುಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಆಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ವರ್ಮಹೆಗಡೆ 1.

ವಿಳಾಸಃ— ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ವಿದ್ಯಾವಾಚಸ್ಪತಿ ಆತ್ಮಾಶಾಮರಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸಃ—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ್ ಡಿಪೊಜಿಟರಿ,
ಮಂಗಳೂರು.

ಪ್ರಕಟಣೆ.

ಸನ್. 1922ನೇ ಇಸವಿ ಜುಲಾಯಿ ತಾ. 1ರಿಂದ ಪುತ್ತೂರು ತಾಲೂಕು ಬೋರ್ಡು ಆಫೀಸಿನಲ್ಲಿ ಸಾರ್ವಜನಿಕ ಉಪಯೋಗದ ಬಗ್ಗೆ ಧರ್ಮಾರ್ಥವಾಗಿ ಒಂದು ವಾಚಕ ಮಂದಿರವನ್ನು ಸ್ಥಾಪಿಸಿಯದೆ. ಅದರಲ್ಲಿರುವ ಸುಮಾರು 450 ಗ್ರಂಥಗಳ ಪುಸ್ತಕಾವಳಿಯ ಪ್ರಯೋಜನವನ್ನು ಎಲ್ಲರೂ ಪಡೆಯಬೇಕಾಗಿ ಅಪೇಕ್ಷಿಸಲಾಗುತ್ತದೆ. ಆ ವಿಷಯದ ಕ್ರಮಗಳನ್ನು ಸದರಿ ಆಫೀಸಿನಲ್ಲಿ ತಿಳಕೊಳ್ಳಬಹುದು.

ತಾಲೂಕು ಬೋರ್ಡ
ಆಫೀಸು ತಾ. 1-7-1922. } H. Ganapathi Rao,
ಪ್ರೆಸಿಡೆಂಟ್ ತಾಲೂಕು ಬೋರ್ಡ,
ಉಪ್ಪಿನಂಗಡಿ.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು—(೨೮—೬—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯು ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜಾಂಗಕ್ಕೂ ಇರತಕ್ಕುದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0-12-0
ಸಂತಾಪಕ-ಕಾದಂಬರಿ	0-6-0
ಚಂದ್ರಮುಖಿ ,,	0-8-0
ರಾಜಪುತ್ರರಮಣಿಯರು	0-8-0
ಕೆಲವು ಸಣ್ಣ ಕಥೆಗಳು	1-0-0
[illegible] . .	1-0-0

ಸಂಚರಾಮಾಯಣ ಹೊಸ	
ಮುದ್ರಣ .	5-0-0
ಸಂಚರಾಮಾಯಣದ	
ಕಥೆ ವಚನ .	0-12-0
S. S. L. C. Kannada Texts	
ಪಂಚವಟಿ . .	0-5-0
ಸುಶೀಲೆ . .	0-6-0
ಅದಮಿಯ ಮುದುಗಿ.	0-12-0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ,

ಕ್ರಮ ನಂಬ್ರ $\frac{158}{1922}$ R. I. A. ನಂಬ್ರ $\frac{285}{1922}$

ಮಾದಪ್ಪ ಸೆರಿಗಾರ ಕೂಡಾ 4 ಜನರು—ವಾದಿರು.

ಮತ್ತು

ಶಾಂತು ಸೆರಿಗಾರ ಕೂಡಾ 2 ಜನರು—ಪ್ರತಿವಾದಿರು.

ಮಂಗಳೂರು ತ್ಯಾಹಾರ ಮಂಗಳೂರು ತೋಟ ಗ್ರಾಮದ ಹಳೆಕೋಟೆ ಜುಮಾದಿ ಭೂತಸ್ಥಾನದ ಭಂಡಾರದ ಬಾಬ್ತು ಪ್ರತಿವಾದಿರ ವಶ ಇರುವ ಚಿನ್ನಾಭರಣ ವಗೈರೆಯನ್ನು ಸ್ವಾಧೀನ ಮಾಡುವರೆ ಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ ಕೋಟೆ, ನೊಗೇರ ಮತ್ತು ಬಿಲ್ಲವರ ಈ ಮೂರು ಮತಸ್ಥರ ಕಡೆಯಿಂದ ವಾದಿರಾಗಿ ವ್ಯವಹರಿಸುವರೆ ತಮಗೆ ಅಪ್ಪಣೆ ಕೊಡಬೇಕಾಗಿ ಸದರಿ ವಾದಿರಾದ 1ನೇ ಮಾದಪ್ಪ ಸೆರಿಗಾರ, 2ನೇ ವೆಂಕಪ್ಪ ಗುರಿಕ್ಕಾರ, 3ನೇ ಗಣೇಶ ಗುರಿಕಾರ, 4ನೇ ರಾಮಪ್ಪ ಗುರಿಕಾರ ಕೂಡಾ 4 ಜನರು ಕೊಟ್ಟ ಸದರಿ R. I. A. ನಂಬ್ರ $\frac{285}{1922}$ನೆ ಅರ್ಜಿಯು ತಾ. 8—7—'22 ರಲ್ಲು ತನಿಖೆಗೆ ನಿಶ್ಚಯಿಸಿರುತ್ತದೆ. ಆಕ್ಷೇಪಣೆ ಇದ್ದವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನಲ್ಲಿ ಸದರಿ ಕೋರ್ಟಿನಲ್ಲಿ ಜಾಹೀರು ಮಾಡತಕ್ಕದ್ದು.

ಮಂಗಳೂರು,
ತಾ. 17—6—1922. } P. D. SOUZA, B. A. B. L.
Pleader for Plaintiff.

ವಿದೇಶ ವರ್ತಮಾನ.

ಐರ್ಲೆಂಡ್:—ಅಮೇರಿಕಾ ಖಂಡದಿಂದ ಏಕಾಂತವಾಗಿ ಫಿರಂಗಿಗಳು ಐರ್ಲೆಂಡಿಗೆ ಕಳುಹಿಸಲ್ಪಟ್ಟಿವೆಯಂತೆ. ಇದು ಕಾಸ್ಟೂನಿಗೆ ವಿರೋಧವಾದ ಸಂಗತಿಯಾಗಿದೆಯಾಗಿ ಪ್ರಕಟವಾಗಿದೆ.

ರುಷ್ಯಾ:—ಬೊಲಷಾವಿಸ್ಟ ಪಂಗಡದ ಮುಖಂಡರಾದ ಲೆನಿನರಿಗೆ ಬಹಳವಾಗಿ ಕಾಯಿಲೆಯಾಗಿರುವುದೆಂದೂ ಇವರು ಬದುಕುವುದು ಕಷ್ಟವೆಂದೂ ತಿಳಿದುಬರುತ್ತದೆ.

ಜರ್ಮನಿ:—ಈ ದೇಶವು ತನಗೆ ಹೆಚ್ಚಿನ ಬಡತನವು ಬಂದಿರುವುದಾಗಿ ನಟಿಸುತ್ತಿರುವುದಲ್ಲದೆ ನಿಜವಾಗಿ ಇದಕ್ಕೆ ಇಂಥಾ ಸ್ಥಿತಿಯು ಒದಗಲಿಲ್ಲ. ಇದು ನೌಕಾ ಸಾಮರ್ಥ್ಯವನ್ನು ಇನ್ನೂ ಹೆಚ್ಚಿಸುತ್ತಿದೆ. ರೈಲ್ವೆಯನ್ನು ಅಭಿವೃದ್ಧಿಗೆ ತರುತ್ತದೆ. ಜರ್ಮನಿಯ ಆರ್ಥಿಕ ಸ್ಥಿತಿಯನ್ನು ತಕ್ಕ ಆಲೋಚನದಲ್ಲಿಡತಕ್ಕದೆಂದು ಪೆರಿಸ್ಸಿನಲ್ಲಿ ಪೊಯಿಂಕೆರರು ನುಡಿದಿದ್ದಾರೆ.

ಅಮೇರಿಕಾ:—ನ್ಯೂಯಾರ್ಕ ಮೊದಲಾದ ಕಡೆಗಳಲ್ಲಿ ಅನೇಕ ಮಂದಿ ರೈಲ್ವೆ ಕೆಲಸದವರು ಮುಷ್ಕರಹಿಡಿದಿರುವರು.

ಡಿವ್ಯಾಲೆರರು:—ಐರಿಶ್ ಪ್ರಜಾಧಿಪಕ್ಷದ ಮುಖಂಡರಾದ ಮಿ| ಡಿವ್ಯಾಲೆರ್ ಇವರು ಕೊಲೆಗಾರರಿಗೆ ತಮ್ಮ ಯಾವ ತರದ ಸಂಬಂಧವಿಲ್ಲವೆಂತಲೂ ಇಂಥ ಪಾಪಕೃತ್ಯಕ್ಕಾಗಿ ತಮಗೆ ಬಹಳ ವ್ಯಥೆಯಾಗುತ್ತದೆಂದೂ ಪ್ರಕಟಿಸಿರುವರು.

ಐರ್ಲೆಂಡ್:—ಅಂತಃಕಲಹದ ಕಾದಾಟವು ಇನ್ನೂ ನಡಿಯುತ್ತಿದೆ. ಡಿವ್ಯಲರರು ತಪ್ಪಿಸಿಕೊಂಡು ಹೋಗಿರುವರೆಂದೂ ವದಂತಿ ಇದೆ.

ಒಳದೇಶ ವರ್ತಮಾನ.

ಕರ್ನಾಟಕ ಭಾಷಾ ನಿಘಂಟು:—ಕರ್ನಾಟಕ ಭಾಷಾ ರತ್ನಾಕರವೆಂಬ ಹೆಸರಿನ ನಿಘಂಟನ್ನು ಮ. ರಾ. ರಘುಪತ್ಯಾಚಾರ್ಯರು ಮುದ್ರಿಸಲಾರಂಭಿಸಿದ್ದು ಅದು ೩೦೦೦ ಪುಟಗಳಲ್ಲಿ ಮುಗಿಯತಕ್ಕದಿದೆಯಂತೆ.

ಜಯರಾವ್ ದೇಶಪಾಂಡೆಯವರ ನಿಧನ:—ಕಳೆದ ತಾ. ೨೧ನೇ ಸಾಯಂಕಾಲ ೪ ಗಂಟೆಗೆ ಕರ್ನಾಟಕ ವೀರನೆಂದು ಹೆಸರುಗೊಂಡ ದೇಶಭಕ್ತ ಜಯರಾವ ದೇಶಪಾಂಡೆಯವರು ಬಾಗಲಕೋಟೆಯಲ್ಲಿ ಸ್ವರ್ಗವಾಸಿಗಳಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತಿದೆ. ಇವರ ನಿಧನದ ದುಃಖಸೂಚಕಾರ್ಥವಾಗಿ ಕಳೆದ ತಾ. ೨೭ರಲ್ಲಿ ಬಾಗಲಕೋಟೆಯಲ್ಲಿ ವೀರಶೈವ ಸುಪ್ರಸಿದ್ಧ ವ್ಯಾಪಾರಿಗಳಾದ ಶ್ರೀಯುತ ಅಯ್ಯಪ್ಪಣ್ಣಾ ಬ್ಯಾಳಿಯವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆ ಕೂಡಿ, ದೇಶಭಕ್ತ ಜಯರಾಯರ ವಯೋವೃದ್ಧ ಮಾತಾಪಿತೃಗಳಿಗೂ ಕುಟುಂಬದ ಉಳಿದ ಜನರಿಗೂ ಆದ ಅಪಾರ ದುಃಖದಲ್ಲಿ ಬಾಗಲಕೋಟೆಯ ನಿವಾಸಿಗಳೂ ಭಾಗೀದಾರರಿರುತ್ತಾರೆಂಬುದನ್ನು ತಿಳಿಸುತ್ತದೆ, ಎಂಬ ಠರಾವನ್ನು ಎಲ್ಲರೂ ಎದ್ದುನಿಂತು ಪಾಸುಮಾಡಿದರು. ಈ ತರದ ಠರಾವು ವಿಜಾಪುರದಲ್ಲೂ ಗದಗಿನಲ್ಲೂ ಪಾಸಾದುವು.

ಕ್ಷಾಮ:—೧೯೨೨ನೇ ಜುಲಾಯಿ ತಿಂಗಳಿಂದ ಶುರುವಾಗಿ ೧೯೨೩ನೇ ಜುಲಾಯಿ ತಿಂಗಳ ವರೆಗೆ ಭೂಲೋಕದಲ್ಲೆಲ್ಲಾ ದೊಡ್ಡ ಕ್ಷಾಮ ಉಂಟಾಗುವುದೆಂದೂ ಅದಕ್ಕಾಗಿ ಜನರು ಈಗಿನಿಂದಲೇ ದವಸಗಳನ್ನು ಅವಶ್ಯ ಮಟ್ಟಿಗೆ ಸಂಗ್ರಹಿಡಬೇಕೆಂತಲೂ ಆಳವಾದ ಬಾವಿಗಳನ್ನು ತೋಡಿಡಬೇಕೆಂತಲೂ ಗುಂಟೂರಿನ ಜೋಯಿಸರೊಬ್ಬರು ಸೂಚಿಸುವರು.

ಕೊಡಗು.

ಮದರಾಸ ನ್ಯಾಯವಿಧಾಯಕ ಸಭೆ:—ಬರುವ ಒಗಸ್ಟ ತಾರೀಕು ೧೫ರಲ್ಲಿ ಮದರಾಸ ನ್ಯಾಯವಿಧಾಯಕ ಸಭೆಯ ಮೂರನೇ ಅಧಿವೇಶನದ ಪ್ರಥಮ ಸಭೆಯು ಸೇರಲಿಕ್ಕಿದೆ.

ಕೊಂಗ್ರೆಸ ಅಧ್ಯಕ್ಷಪದವಿ:—ಗಯಾದಲ್ಲಿ ಸೇರುವ ಕೊಂಗ್ರೆಸ ಅಧ್ಯಕ್ಷಸ್ಥಾನಕ್ಕೆ ಶ್ರೀಯುತ ಸಿ. ಆರ್. ದಾಸರಿಗೇನೇ ಹೆಚ್ಚು ಓಟುಗಳು ಸಿಕ್ಕಿದಂತೆ ತೋರುತ್ತದೆ.

ಡಿಸ್ಸ ಒಬ್ಬಿಡಿಯನ್ಸ್ ಕಮ್ಮಿಟಿ:—ದೇಶದಲ್ಲೆಲ್ಲಾ ಸಂಚರಿಸಿ ದೇಶದ ಪರಿಸ್ಥಿತಿಯನ್ನು ತಿಳಕೊಳ್ಳಲು ನೇಮಕಪಟ್ಟ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿಗೆ ಶ್ರೀಯುತ ಜಮುನಾಲಾಲ ಬಾಜರರ ಬದಲಿಗೆ ಶ್ರೀಮತಿ ಸರೋಜಿನಿ ನ್ಯಾಡೋರವರು ನೇಮಕಪಟ್ಟಿದ್ದರಷ್ಟೆ. ಆದರೆ ಶ್ರೀಮತಿಯವರಿಗೆ ಅಕಸ್ಮಾತ್ತಾಗಿ ಅಸೌಖ್ಯವುಂಟಾಗಿ ಮುಂಬಯಿಯಲ್ಲಿ ಇನ್ನೂ ಸ್ವಲ್ಪ ಕಾಲ ವಿರಾಮವನ್ನು ಹೊಂದಬೇಕಾಗಿ ಬಂದಿರುವುದರಿಂದ ಅವರಿಗೆ ಈ ಕಮ್ಮಿಟಿಯಲ್ಲಿ ಸೇರಲು ಅನನುಕೂಲವಾಗಿದೆಯಂತೆ.

ಡಬ್ಲ್ಯು ಪಿ. ಇಗ್ನೆಸಿಯಸ್:—ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮಂಬರರಲ್ಲೊಬ್ಬರಾದ ಈ ದೇಶಾಭಿಮಾನಿಗಳನ್ನು ಕಳೆದ ತಾ. ೧ಕ್ಕೆ ಕಡಲೂರ ಜೈಲಿನಿಂದ ಬಿಡುಗಡೆ ಮಾಡಿರುವರು.

ಐ. ಸಿ. ಯಸ್. ಪರೀಕ್ಷೆ:—ಇಂಡಿಯನ್ ಸಿವಿಲ್‌ಸರ್ವಿಸ್ ಪರೀಕ್ಷೆಗೆ ದಾಖಲು ಮಾಡುವ ಬಗ್ಗೆ ನಡಿಸೋಣಾಗುವ ಪರೀಕ್ಷೆಯು ಅಲಹಾಬಾದಿನಲ್ಲಿ ಬರುವ ಜನವರಿ ತಾ. ೮ರಿಂದ ಪ್ರಾರಂಭಿಸಲಾಗುವುದು.

ಕೊಂಗ್ರೆಸ್ಸಿಗೆ ಅಧ್ಯಕ್ಷರು:—ಕರ್ನಾಟಕ ಪ್ರೊವಿನ್ಸಿಯಲ್ ಕೊಂಗ್ರೆಸ ಕಮ್ಮಿಟಿಯವರು ಮಹಾತ್ಮಾ ಗಾಂಧಿಯವರನ್ನು ಗಯಾದಲ್ಲಿ ಕೂಡುವ ಕೊಂಗ್ರೆಸ್ ಸೆಶನದ ಅಧ್ಯಕ್ಷರಾಗಿ ಚುನಾಯಿಸಿದ್ದಾರೆ. ಅವರು ಆ ಸಮಯದೊಳಗೆ ಬಿಡುಗಡೆಯಾಗದಿದ್ದರೆ ಅವರ ಪ್ರತಿಯಾಗಿ ಕಾರ್ಯವನ್ನು ನಡಿಸಲು ಶ್ರೀಯುತ ಸಿ. ಆರ್. ದಾಸ, ಶ್ರೀಯುತ ಪಂಡಿತ ಮೋತಿಲಾಲನೆಹರು ಶ್ರೀಯುತ ಪಂಡಿತ ಮದನಮೋಹನ ಮಾಲವೀಯ, ಶ್ರೀಯುತ ಸಿ. ರಾಜಗೋಪಾಲಾಚಾರ್ಯ ಡಾಕ್ಟರ ಅನಸಾರಿ, ಶ್ರೀಯುತ ಗಂಗಾಧರರಾವ್‌ದೇಶಪಾಂಡೆ ಇವರ ಹೆಸರನ್ನು ಸೂಚಿಸಿದ್ದಾರೆ.

ಕಲ್ಕತ್ತೆಯಲ್ಲಿ ಸುಲಿಗೆ:—ಮಾರವಾಡಿ ಬ್ರಾಹ್ಮಣನೊಬ್ಬನು ರೂಪಾಯಿ ೬೦೦೦ನ್ನು ತನ್ನ ಯಜಮಾನನಿದ್ದಲ್ಲಿಗೆ ತಗೆದುಕೊಂಡು ಹೋಗುವಾಗ ಒಬ್ಬ ಮಹಮ್ಮದೀಯನು ಹಿಂದಿನಿಂದ ಬಂದು ಆತನಿಗೆ ಹೊಡೆದು ಅವನನ್ನು ಅಲ್ಲಿ ಬೀಳುವಂತೆ ಮಾಡಿದನು. ಆಗ ಇತರ ಮೂರು ಮಂದಿಗಳು ನೋಟುಗಳನ್ನೆಲ್ಲಾ ಹೆಕ್ಕಿಕೊಂಡು ಓಡಲುದ್ಯುಕ್ತರಾದರು. ಒಬ್ಬ ಮಹಮ್ಮದೀಯನನ್ನು ಹಿಡಿದಾಗ ಅವನ ಕೂಡೆ ರೂ. ೩೦೦೦ರ ನೋಟುಗಳು ದೊರಕಿವೆಯಂತೆ. ಬಾಕಿ ಮೂವರನ್ನು ಹಿಡಿಯುವ ಪ್ರಯತ್ನಗಳು ನಡಿಯುತ್ತಿವೆ.

ಕೊಂಗ್ರೆಸ ವರ್ಕಿಂಗ ಕಮ್ಮಿಟಿ:—ಬರುವ ಜುಲ್ಯಾ ತಾರೀಕು ೧೮ರಲ್ಲಿ ಮುಂಬಯಿಯಲ್ಲಿ ಕೊಂಗ್ರೆಸ ವರ್ಕಿಂಗ ಕಮ್ಮಿಟಿಯು ಮೀಟಿಂಗು ಸೇರುವುದು.

ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿ:—ಶ್ರೀಯುತ ಯಸ್. ಕಸ್ತೂರಿ ರಂಗ ಅಯ್ಯಂಗಾರರು ಈ ಕಮ್ಮಿಟಿಯ ಒಬ್ಬ ಮೆಂಬರರಾಗಿ ನೇಮಕ ಪಟ್ಟಿರುತ್ತಾರೆ.

ದಾಮೋದರ ನದಿ:—ಈ ನದಿಯಲ್ಲಿ ಉಂಟಾದ ನೆರೆಯು ಶಾಂತವಾಗಿ ಈಗ ಎಂದಿನಂತೆ ಅಲ್ಲಿ ರೈಲು ಚಲಾವಣೆಗೆ ಪ್ರಾರಂಭವಾಗಿದೆ.

ಅಲಿಘರ ಮೊಸ್ಲೆಮ್ ಯುನಿವರ್ಸಿಟಿ:—ಈ ವಿಶ್ವವಿದ್ಯಾಲಯದಲ್ಲಿ ವಿದ್ಯೋಗಿಕ-ಶಿಕ್ಷಣವನ್ನು ಕೊಡುವ ಏರ್ಪಾಡುಗಳನ್ನು ಮಾಡಲು ನಾಮದಾರ ನವಾಬ ಮಹಮೂದಲ್ಲಾ ಇವರು ರೂಪಾಯಿ ಒಂದು ಲಕ್ಷವನ್ನು ದಾನವಾಗಿ ಕೊಟ್ಟಿರುವರು.

ಡೊಕ್ಟರ ಸಪ್ರೂ:—ಎಕ್ಸಿಕ್ಯೂಟಿವ್ ಕೌನ್ಸಿಲಿನ ಲೋ ಮೆಂಬರರಾದ ಡೊಕ್ಟರ ಸಪ್ರೂಗಳವರು ದೇಹಾಲಸ್ಯದ ಸಂಬಂಧ ತಮ್ಮ ಹುದ್ದೆಗೆ ರಾಜಿನಾಮೆಯನ್ನು ಕೊಟ್ಟಿದ್ದಾರೆ. ಇವರು ಅಲಹಾಬಾದಿನಲ್ಲಿ ಎಂದಿನಂತೆ ವಕೀಲ ವೃತ್ತಿಯನ್ನು ನಡಿಸುವರು.

ಕರ್ನಾಟಕ ಪ್ರೊವಿನ್ಸಿಯಲ್ ಕೊಂಗ್ರೆಸ ಕಮ್ಮಿಟಿ:—ಕರ್ನಾಟಕ ಪ್ರೊವಿನ್ಸಿಯಲ್ ಕೊಂಗ್ರೆಸ್ ಕಮ್ಮಿಟಿಯ ಅಧಿವೇಶನವು ವಿಜಾಪುರದಲ್ಲಿ ದೇಶಭಕ್ತ ಗಂಗಾಧರರಾವ್ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಸೇರಿತು. ಅಧ್ಯಕ್ಷರು ತಾ. ೨೧ನೇ ಸಾಯಂಕಾಲ ಇಲ್ಲಿಗೆ ಬಂದರು. ಮತ್ತು ಅಂದು ಅವರ ಒಂದು ಭಾಷಣವಾಯಿತು. ಶ್ರೀಯುತ ಜಯರಾವ್ ದೇಶಪಾಂಡೆಯವರ ಅಕಾಲ ಮರಣದಿಂದ ತಾ. ೨೨ರಲ್ಲಿ ಕೂಡತಕ್ಕ ಅಧಿವೇಶನವನ್ನು ಮರು ದಿನಕ್ಕೆ ಜರುಗಿಸಲಾಯಿತು. ವಿಧಾಯಕ ಕಾರ್ಯಕ್ರಮಗಳನ್ನು ನೆರವೇರಿಸಬೇಕು, ಮತ್ತು ಕರ್ನಾಟಕ ಪ್ರಾಂತ್ಯದ ಪರಿಸ್ಥಿತಿಯನ್ನು ತಿಳಕೊಳ್ಳಲು ಒಂದು ಕಮ್ಮಿಟಿಯನ್ನು ನೇಮಿಸತಕ್ಕದು ಎಂಬ ಠರಾವುಗಳು ಪಾಸಾದವು.

ಉದಾರದಾನ:—ಸುರತ್ತಿನಲ್ಲಿರುವ ಮಹಮ್ಮದೀಯ ಅನಾಥ ಸತ್ರಕ್ಕೆ ಮುಂಬಯಿಯ ಶೇಟ್‌ಹಾಜಿ ಸುಲೇಮ ಮಹಮ್ಮದ್‌ರವರು ೪೦ ಲಕ್ಷ ರೂಪಾಯಿಯನ್ನು ದಾನವಾಗಿ ಕೊಟ್ಟಿರುವರು.

ಬಿಜಾಪುರ:—ಜಯರಾವ್ ದೇಶಪಾಂಡೆಯವರು ಸ್ವರ್ಗಸ್ಥರಾದ ಸಹತಾಪವನ್ನು ಸೂಚಿಸುವುದಕ್ಕಾಗಿ ಇಲ್ಲಿಯ ಮಹಿಳೆಯರು ಒಂದು ಸಭೆಯನ್ನು ಕೂಡಿಸಿದರು. ಮತ್ತು ಪರದೇಶಿಯ ಬಟ್ಟೆಯನ್ನು-ಹೆಚ್ಚಾಗಿ ಈ ಚಾತುರ್ಮಾಸದಲ್ಲಿ-ಯಾರೂ ಧರಿಸಕೂಡದೆಂದು ನಿರ್ಧರಿಸಿದರು.

ಅಲ್ಲಹಾಬಾದ:—ಶ್ರೀಯುತ ಪಂಡಿತ ಕೃಷ್ಣಕಾಂತ ಮಾಲವೀಯ ಮತ್ತು ಶ್ರೀಯುತ ಗೋವಿಂದಕಾಂತ ಮಾಲವೀಯರು ಬಂಧನದಿಂದ ಬಿಡುಗಡೆಯಾಗಿ ಅಲಹಾಬಾದಿಗೆ ಬಂದಿರುವರು.

ಲೋರ್ಡ ಸಿಂಹರು:—ವಿಲಾಯತಿಯಲ್ಲಿ ಇವರ ಅಸೌಖ್ಯವು ಗುಣವಾಗದೆ ಇರುವುದರಿಂದ ಇವರು ಹಿಂದುಸ್ಥಾನಕ್ಕೆ ಹಿಂತಿರುಗಿ ಬರಲಿಕ್ಕಿದ್ದಾರೆ.

ಇಂಡಿಪೆಂಡೆಂಟ ಪತ್ರ:—ಬರುವ ತಾ. ೧ರಿಂದ ಇದು ಎಂದಿನಂತೆ ಮಿ. ಬಿ. ಜಿ. ಅರ್‌ಸನ್‌ರವರು ಸಂಪಾದಕರಾಗಿ ಪ್ರಕಟವಾಗುವುದು.

ಮಹಾತ್ಮರ ದರುಶನ:—ಮಿ. ಮಥುರಾದಾಸ ಇವರು ಮಹಾತ್ಮರ ಪತ್ನಿ ಹಾಗು ಅವರ ಇಬ್ಬರು ಮಕ್ಕಳಾದ ರಾಮದಾಸ ಗಾಂಧಿ ಮತ್ತು ಹಿರೇಲಾಲ ಗಾಂಧಿಯವರನ್ನು ಕೂಡಿಕೊಂಡು ಯರವಾಡ ಜೈಲಿನಲ್ಲಿ ಮಹಾತ್ಮರ ಭೇಟಿಯನ್ನು ಪಡೆದರು. ಮಹಾತ್ಮರ ಜೈಲುವಾಸದ ಈಗಿನ ಪರಿಸ್ಥಿತಿಯನ್ನು ಕುರಿತು ಮಥುರಾದಾಸರು ಕೆಳಗಿನ ಮಾಹಿತಿಯನ್ನು ಪ್ರಕಟಿಸಿದ್ದಾರೆ. 'ಮಹಾತ್ಮರ ಆರೋಗ್ಯವು ಉತ್ತಮ ಸ್ಥಿತಿಯಲ್ಲಿಲ್ಲವಾದರೂ ಅವರಿಗೆ ಯಾವ ತರದ ಚಾಡ್ಯವೂ ಇಲ್ಲ. ಅವರು ನಿಶ್ಚಿತ ಸ್ಥಳದಲ್ಲಿ ಇರಬೇಕಾಗಿದೆ. ವ್ಯಾಯಾಮವನ್ನು ಹೊಂದಲು ಸಹ ಇವರು ಈ ಸ್ಥಳವನ್ನು ಬಿಟ್ಟುಹೋಗಲು ನಿರ್ಬಂಧವಿದೆ. ಮಹಾತ್ಮರಿಗೆ ಬರವಣಿಗೆಯ ಸಾಮಗ್ರಿಗಳನ್ನು ಕೊಟ್ಟಿರುತ್ತಾರೆ. ಅವರು ಇಷ್ಟಮಿತ್ರರಿಗೆ ಬರೆಯುವ ಪತ್ರವನ್ನು ಸರಕಾರದವರು ನೋಡಿ ತಮಗೆ ಆಕ್ಷೇಪಕಂಡ ಭಾಗಗಳನ್ನು ತೆಗೆಯಲು ಹೇಳುವರು. ಆದರೆ ಮಹಾತ್ಮರಿಗೆ ಇದು ಒಪ್ಪದಿರುವುದರಿಂದ ಅವರು ಈಗ ಕಾಗದಪತ್ರಗಳನ್ನೆ ಬರೆಯುವುದಿಲ್ಲ. ಅವರಿಗೆ ಜೀರ್ಣಕರವಾದ ಆಹಾರವೇ ಕೊಡಲಾಗುತ್ತದೆ. ಅವರು ತಮ್ಮ ಸಮಯವನ್ನು ನೂಲುವ, ನೇಯುವ ಮತ್ತು ಅರಳೆ ಹಿಂಜುವದರಲ್ಲಿ ಕಳೆಯುತ್ತಿದ್ದಾರೆ.

ದಕ್ಷಿಣ ಕನ್ನಡ.

ಬಂಟವಾಳ:—ಇಲ್ಲಿಯ ಮಿಡ್‌ವ್ಯಾಫಿಗೆ ಮಂಜೇಶ್ವರಕ್ಕೆ ವರ್ಗವಾಯಿತು. ಹೊಸದುರ್ಗ ಮಿಡ್‌ವ್ಯಾಫಿಗೆ ಇಲ್ಲಿಗೆ ವರ್ಗವಾಗಿದೆ.

ಇಲ್ಲಿಯ ಸೆಂಟರಿ ಮಾರ್ಗಗಳನ್ನು ಈ ವರುಷ ಭಂಡಾರದಲ್ಲಿ ಹಣವಿಲ್ಲದ್ದರಿಂದ ತೆರಿಯುವ ಆಲೋಚನೆಯನ್ನು ಮುಂದರಿಸಿಡಲಾಯಿತು. ಇಲ್ಲಿಯ ಹೊಸ ಪೇಟೆಯ ಮಾರ್ಗವು ಮೊದಲೇ ಸಪೂರವಾಗಿದೆ. ಅದರಲ್ಲಿಯೂ ಅದರ ಎರಡೂ ಬದಿಗಳು ಕುಸಿಮಬಿದ್ದು ನಡಿಯುವ ಭಾಗವು ಮತ್ತೂ ಸಪೂರವಾಗಿದೆ. ಅದ್ದರಿಂದ ೧೦೦-೨೦೦ ರೂಪಾಯಿಯನ್ನಾದರೂ ಖರ್ಚುಮಾಡಿ ಆ ಮಾರ್ಗದ ಬದಿಗಳನ್ನು ಕಲ್ಲಿನಿಂದ ಕಟ್ಟಿಸಿಕೊಂಡರೆ ಬಹಳ ಉಪಕಾರವಿತ್ತು.

ಪುತ್ತೂರು:—ಕಡಬ ಕಸಬಾ ಗ್ರಾಮದ ಬೋದಿ ತಮ್ಮಯನ ಮಗಳು ಪಾರ್ವತಿ ಎಂಬವಳನ್ನು ಕಳವುಮಾಡಿಕೊಂಡು ಹೋದದ್ದಾಗಿ ಸದರಿ ಗ್ರಾಮದ ಪಂಡಿತ ಬಿಲ್ಲವರ ಸಾಂತಪ್ಪ ಯಾನೆ ಶಾಂತಪ್ಪ ಪೂಜಾರಿ ಮೇಲೆ ಇಲ್ಲಿಯ ಡಿವಿಜನಲ್ ಡಿಪ್ಯುಟಿ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಿಖೆ ನಡೆಯುತ್ತಿದ್ದ ಮೊಕದ್ದಮೆಯಲ್ಲಿ ಅಪರಾಧಿಗೆ ಕಳೆದ ತಾ. ೨೯ರಲ್ಲಿ ಒಂದು ವರ್ಷದ ಶಿಕ್ಷೆ ವಿಧಿಸಿರುವರು.

ಪಡ್ನೂರು ಗ್ರಾಮದ ನರಂಗೋಲು ಅಚ್ಚು ತಭಟ್ಟ ವಗೈರೆರ ಮೇಲೆ ಬೆಳೆ ಕಟಾವು ಮಾಡಿದ್ದಾಗಿ ಇಲ್ಲಿಯ ಸ್ಟೇಶನರಿ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಿಖೆ ನಡಿಯುತ್ತಿದ್ದ ನಂಬ್ರ $\frac{೫೩-೨೫೫ನೇ}{೨೧}$ ಈ ಎರಡು ಮೊಕದ್ದಮೆಗಳಲ್ಲಿ ಅಪರಾಧಿಗಳಾದ ಅಚ್ಚುತ ಭಟ್ಟರಿಗೆ, ಮಾಧವಭಟ್ಟರಿಗೆ ಪ್ರತಿಯೊಬ್ಬರಿಗೆ ಪ್ರತಿಯೊಂದು ಮೊಕದ್ದಮೆಯಲ್ಲಿ ರೂ. ೫೦ರಂತೆಯೂ, ೩ನೇ ಅಪರಾಧಿ ತ್ಯಾಂಪ ಗೌಡಗೆ ಪ್ರತಿ ಒಂದು ಮೊಕದ್ದಮೆಯಲ್ಲಿ ರೂ. ೨೫ರಂತೆ ಕಳೆದ ಜೂನ್ ತಾ. ೨೯ರಲ್ಲು ಜುರುಮಾನೆ ವಿಧಿಸಲ್ಪಟ್ಟಿರುವದು.

ಜುಲ್ಯಾ ತಾ. ೨ರ ಆರಭ್ಯಾತು ಶಂಕರ ವಿಟ್ಠಲ ಮೋಟರ್ ಬಸ್ಸ್ ಪುತ್ತೂರಿಂದ ಸುಬ್ರಹ್ಮಣ್ಯದ ವರೆಗ ಚಲಾವಣೆಗೆ ಆರಂಭಿಸಿಯದ್ದ, ಪ್ರಯಾಣಿಕರ ಪುಷ್ಪ-ಕೋರ್ಟು ಕಚೇರಿಗಳಿಗೆ ಬರಲು ಅನುಕೂಲ.

ಕುಂಬಳೆ:—ಈ ಕಡೆಗೆ ಬರುವ ಪೆರ್ಲಾಲ ರಸ್ತೆ ವ ಇತರ ಒಳದಾರಿಗಳಲ್ಲಿ ಕೆಲವರು ನಿಂತು ಜುಲುಂಪಡಿಸಿ ಸುಲುಕೊಳ್ಳುವರು ಪ್ರಾರಂಭಿಸಿದ್ದಾರೆ. ಅದರಿಂದ ವ್ಯಾಪಾರದ ಹಾಗು ರೈಲ್ವೆ ಪ್ರಯಾಣದ ಬಗ್ಗೆ ಈ ದಾರಿಯಲ್ಲಿ ನಡೆಯುವ ಜನರಿಗೆ ತುಂಬಾ ಹೆದರಿಕೆಯಾಗಿದೆ. ಈ ಮೊದಲು ಇದೆ ಪತ್ರಿಕೆಯ ಮುಖಾಂತರ ಸೂಚಿಸಿದ್ದೆ ಬಂದ ಕಾರಣ ಒಂದೆರಡು ವರ್ಷ ಮಾತ್ರ ಹಂಗಾಮಿ ಸ್ಟೇಶನ್ ಇಡಲ್ಪಟ್ಟು ನಿವೃತ್ತಿಯಾಗಿತ್ತು. ಆದರೆ ೨ ವರ್ಷಗಳ ಈಚೆಗೆ ಸ್ಟೇಶನು

ಇಲ್ಲದ್ದರಿಂದ ಪ್ರತ್ಯಕ್ಷ ಅನುಭವಿಸುವ ಸಂಕಷ್ಟಗಳನ್ನು ಪರಿಹರಿಸುವರೆ ಸ್ಥಿರವಾದ ಒಂದು ಔಟ ಪೋಸ್ಟಾದರೂ ಅಗತ್ಯವೆಂಬುದು ಪ್ರತ್ಯೇಕ ವಿವರಿಸಬೇಕೆಂದಿಲ್ಲಾ. ಸಂಬಂಧಪಟ್ಟ ಅಧಿಕಾರರು ಇನ್ನಾದರೂ ನಿಗಾ ಕೊಡಲಾರರೇ!

ಅಸ್ಪೃಶ್ಯರನ್ನು ಉದ್ಧರಿಸುವುದಕ್ಕೆ ನಾವು ಮಾಡಬೇಕಾದ ಕರ್ತವ್ಯವು.

(ಧರ್ಮದೇವ ಸಿದ್ಧಾಂತಾಲಂಕಾರ—ಆರ್ಯ ಸಮಾಜ ಇವರಿಂದ.)

ಅಸ್ಪೃಶ್ಯವರ್ಗದವರ ಪತಿತ ಪರಿಸ್ಥಿತಿಯನ್ನು ಆಲೋಚಿಸುವಾಗ, ನಾವು ಸ್ವರಾಜ್ಯಕ್ಕೆ ಅರ್ಹರಲ್ಲವೆಂದು ನಾನು ಭಾವಿಸುತ್ತೇನೆ. ಉಚ್ಚವರ್ಗದವರೆಂದು ಹೇಳಿಕೊಳ್ಳುವವರು ಪತಿತ ವರ್ಗದವರನ್ನು ಕಾಲಿನಿಂದೊದೆದು, ಸ್ವರಾಜ್ಯಕ್ಕೆ ಸೊಂಟ ಗಟ್ಟುವುದು ಹೇಗೆ ಸರಿಯಾಗುವುದು? ಆದುದರಿಂದ ಈ ವರ್ಗದವರನ್ನು ಅಸ್ಪೃಶ್ಯರೆಂದು ತಳ್ಳುವ ಭೇದಭಾವವನ್ನು ಬಿಡುವ ವರೆಗೆ ನಾವು ಸ್ವರಾಜ್ಯ ದುರಂಧರರಾಗಲಾರೆವೆಂದು ಮಹಾತ್ಮರು ದೇಶಬಂಧುಗಳಿಗೆ ಸಾರಿ ಹೇಳಿದುದು ಅಕ್ಷರಶಃ ಸತ್ಯವು. ಅಹಿಂಸಾತ್ಮಕ ನಿಸ್ಸಹಕಾರದಿಂದ ಸ್ವರಾಜ್ಯಭಾರವನ್ನು ಹೊಂದುವುದಕ್ಕೆ ನಾವೆಷ್ಟು ಕಕ್ಷರೆಂದು ನೋಡುವ ಸಮಯವಿದು. ವಿಧಾಯಕ ಕಾರ್ಯಕ್ರಮವೀಗ ನಮ್ಮ ಮುಂಮುಗದೆಯಲ್ಲಿದೆ. ಅಸ್ಪೃಶ್ಯತಾನಿವಾರಣೆ ಅಥವಾ ಪತಿತವರ್ಗದವರ ಉದ್ಧರಣೆಯು ಈಗಣ ಕಾರ್ಯಕ್ರಮದ ಮುಖ್ಯಾಂಶವು. ಶಾಸನಭಂಗ ನಿಯಾಮಕ ಸಭೆಯು, ನಾವು ನಮ್ಮ ಸಮಾಜದಿಂದ ಅಸ್ಪೃಶ್ಯತೆಯನ್ನು ಎಷ್ಟರ ಮಟ್ಟಿಗೆ ನಿವಾರಿಸಿದ್ದೇವೆಂದು ನಮ್ಮನ್ನು ಪ್ರಶ್ನಿಸಿದರೆ ನಮ್ಮ ಉತ್ತರವೇನು? ಹಿಂದೂಧರ್ಮದಲ್ಲಿರುವ ಈ ಕಲಂಕವನ್ನು ನಿವಾರಿಸುವುದಕ್ಕೆ ನಾವು ಸಾಧ್ಯವಿದ್ದಷ್ಟು ಯತ್ನಿಸಿದ್ದೇವೆಂದು ಹೇಳಬಲ್ಲೆವೆ? ಅಸ್ಪೃಶ್ಯತೆಯನ್ನು ಕಿತ್ತುಬಿಡಲು ನಾವು ಸೊಂಟ ಗಟ್ಟಿದ್ದೇವೆಂದು ಮನಃಪೂರ್ವಕವಾಗಿ ಹೇಳಬಲ್ಲೆವೆ? ಈ ಪ್ರಶ್ನೆಗಳಿಗೆ 'ಹೌದು' ಎಂಬ ಉತ್ತರವನ್ನು ನಾವು ಕೊಡಲಾರೆವೆಂದೆ ನನ್ನ ಭಾವನೆ. ನಾವು ಪತಿತ ವರ್ಗೋದ್ಧಾರಕ್ಕೆ ಪ್ರಯತ್ನಿಸಿದ್ದ ಈ ಪನಕ ತಿಲವಷ್ಟು. ನಮ್ಮ ಪತಿತಬಾಂಧವರಲ್ಲಿರುವ ವೈಷಮ್ಯವನ್ನು ನಿವಾರಿಸಲು ನಮ್ಮಲ್ಲಿ ಹಲಕೆಲವು ಜನರು ಸಿದ್ಧರಾಗಿದ್ದಾರೆಂಬುದೂ ನಿಶ್ಚಯವೆ. ಪತಿತವರ್ಗದವರ ಈ ಶೋಚನೀಯ ಸ್ಥಿತಿಯನ್ನು ಕಣ್ಣುತೆರೆದು ನೋಡಿ ನಮ್ಮ ಕರ್ತವ್ಯವನ್ನು ಮಾಡಲು ನಾವು ಯತ್ನಿಸುವ. ಪ್ರತಿಯೊಬ್ಬನೂ ತಾನು ಈ ವಿಷಯದಲ್ಲಿ ತನ್ನ ಕರ್ತವ್ಯವನ್ನು ಹೇಗೆ ಮಾಡಬೇಕೆಂದು ಆಲೋಚಿಸಲಿ.

ಪತಿತವರ್ಗೋದ್ಧರಣೆಗಾಗಿ ನಾವು ಒಂದು ಸಮಿತಿಯನ್ನು ಸ್ಥಾಪಿಸಬೇಕೆಂದು ನನ್ನ ಅಭಿಪ್ರಾಯವು. ಈ ಸಮಿತಿಗೆ ಸೇರುವವನು, ಯಾರನ್ನೂ ಅಸ್ಪೃಶ್ಯನೆಂದು ನಿರಾಕರಿಸುವುದು, ಮನುಷ್ಯ ವರ್ಗಕ್ಕೆ ಕಲಂಕವೆಂದು, ಬರಹಮೂಲಕವಾದ ಒಪ್ಪಿಗೆಯನ್ನು ಕೊಡಬೇಕು. ಈ ವಿಧವಾದ ಅಭಿಪ್ರಾಯವಿರುವವರೂ, ಈ ವಿಷಯದಲ್ಲಿ ಬದ್ಧಕಂಕಣರಾಗುವವರೂ ಈ ಸಮಿತಿಯ ಸಭಾಸದರಾಗಲಿ. ಈ ಉದ್ದೇಶವನ್ನು ನೆರವೇರಿಸುವುದಕ್ಕೆ ಈ ಸಮಿತಿಯು ಮಾಡಬೇಕಾದ ಪ್ರಯತ್ನಗಳು ಕೆಳಗೆ ಸೂಚಿಸಿದಂತಿರಬೇಕು.

(೧) ಸಮಿತಿಯ ಸಭಾಸದರನ್ನು ಅನೇಕ ಪಂಗಡಗಳಾಗಿ ವಿಭಾಗಿಸಿ, ಅವರನ್ನು ಪತಿತವರ್ಗದವರು ವಾಸಿಸುವ ಸ್ಥಳಗಳಿಗೆ ಹೋಗಿ, ಅವರ ನೈತಿಕ, ಸಾಮಾಜಿಕ, ಆರ್ಥಿಕ ವಿಷಯಗಳನ್ನು ತಿಳಕೊಳ್ಳುವಂತೆ ಮಾಡುವುದು. (೨) ಪತಿತವರ್ಗದವರಿಗೆ ಶುಚಿತ್ವವನ್ನು ಕಲಿಸುವುದು. (೩) ಮದ್ಯಪಾನಮಾಡುವುದು, ಮೊದಲಾದ ಕೆಟ್ಟ ಚಾಳಿಗಳನ್ನು ಬಿಟ್ಟುಬಿಡುವಂತೆ ಅವರನ್ನು ಬೋಧಿಸುವುದು. (೪) ಅವರ ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಟ್ಟು, ನೂಲುಮಾಡುವುದು, ಬಟ್ಟೆ ನೇಯುವುದು ಮೊದಲಾದ ಕೈಗಾರಿಕೆಗಳನ್ನು ಕಲಿಸುವುದು. (೫) ಸಾರ್ವಜನಿಕ ಪಾಠಶಾಲೆಗಳಲ್ಲಿ ಅವರನ್ನು ಸೇರಿಸಿಕೊಳ್ಳುವಂತೆ ಜನರನ್ನು ಕೇಳಿಕೊಳ್ಳುವುದು. ಯಾಕೆಂದರೆ, ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸುವುದು ನಮ್ಮ ಉದ್ದೇಶಕ್ಕೆ ಸರಿಯಾದುದಲ್ಲವೆಂದು ನನ್ನ ಭಾವನೆ. (೬) ಭಜನೆ, ಪ್ರಾರ್ಥನೆ, ನೀತಿಬೋಧಕವಾದ ಕಥೆ ಮೊದಲಾದುವುಗಳನ್ನು ಅವರಿಗೆ ಹೇಳಿಕೊಟ್ಟು ಅವರ ನೈತಿಕ ಜ್ಞಾನವನ್ನು ಹೆಚ್ಚಿಸುವುದು. (೭) ಸಾಧ್ಯವಾದಲ್ಲಿ, ಅವರಿಗೆ ಬೇಕಾದ ಸಹಾಯವನ್ನು ಮಾಡುವುದು. (೮) ಈ ವಿಷಯಗಳ ಪರಿಚಯವನ್ನು ಮಾಡುವಂತೆ ಪುಸ್ತಕಗಳನ್ನು ಬರೆಯುವುದು.

ಇಂತಹದೊಂದು ಸಮಿತಿಯನ್ನು ಸ್ಥಾಪಿಸಿ ನಮ್ಮ ಉದ್ದಿಷ್ಟ ಕೆಲಸವನ್ನು ಮಾಡಲಿಕ್ಕೆ ಇದು ಯೋಗ್ಯವಾದ ಕಾಲವೆಂದು ನಾನು ಯೋಚಿಸುತ್ತೇನೆ. ಈ ವಿಷಯದಲ್ಲಿ ಕೊಡುವ ಸೂಚನೆಗಳನ್ನು ಅತ್ಯಾದರದಿಂದ ಸ್ವೀಕರಿಸುವೆವು. ಈ ಸಮಿತಿಯು Depressed classes mission ನಂತಹ ಸಂಸ್ಥೆಗಳಿಗೆ ಸಹಾಯವಾಗುವುದೆಂದೂ, ಜನರು ತಿಳಿದಿರಬೇಕು. ಈ ಸಮಿತಿಗೆ ಸೇರಬೇಕೆಂದು ಇಚ್ಛಿಸುವವರು ಕೂಡಲೆ ತಮ್ಮ ಹೆಸರುಗಳನ್ನು ನನಗೆ ತಿಳಿಸಿ, ಈ ಸಂಸ್ಥೆಯು ಕಾರ್ಯಗಳು ಸಾಂಗವಾಗಿ ನೆರವೇರುವಂತೆ ಮಾಡಬೇಕಾಗಿ ಪ್ರಾರ್ಥನೆ.

ವಿಜ್ಞಾಪನೆ.

ದಕ್ಷಿಣ ಕನ್ನಡ ಮೂಡಬಿದರೆಯ ದಿಗಂಬರ ಜೈನ್ ಮಹಾಸಭೆಯ ಅಧಿವೇಶನವು ಇದೇ ಜುಲಾಯಿ 13ಕ್ಕೆ ನಡೆಯುವುದಿಲ್ಲ. ಕಾರಣಾಂತರಗಳಿಂದ ಅದನ್ನು ಜುಲ್ಯಾ 31 (ಶ್ರಾವಣ ಶು| ೮ನೆ ಸೋಮವಾರ)ಕ್ಕೆ ಮುಂದರಿಸಿಟ್ಟಿದೆ. ಸ್ಥಳವೂ ಸಮಯವೂ ಅದೆ. ವಿದ್ಯಾಭಿವೃದ್ಧಿ ಮೊದಲಾದ ವಿಚಾರಗಳು ಅದೆ ದಿನ ನಡೆವುವು. ಸಭಿಕರೂ ಅಭಿಮಾನಿಗಳೂ ಎಲ್ಲರೂ ಬೇಸರಿಸದೆ ದಯಮಾಡಿಸಬೇಕು.

ಮೂಡಬಿದರೆ,
ತಾ. 5—7—22. } ಕಟ್ಟೆಮಾರು ಚೆಲುವಯ್ಯ ಬಲ್ಲಾಳ,
ಕಾರ್ಯಾಧ್ಯಕ್ಷ.

ಕೆನರಾ ಕ್ಷತ್ರಿಯ ಸಂಘ, ಉಡುಪಿ.

ಈ ಸಂಘದ ಪ್ರಥಮ ಉದ್ದೇಶವನ್ನು ನೆರವೇರಿಸುವುದಕ್ಕಾಗಿ ಬೀರಂಚೈಲು ಭಜನ್ ಸಂಘದ ಹಣವನ್ನು ಮೂಲಧನವಾಗಿಟ್ಟು ಬೇಕಲದ ಶ್ರೀ ಶಾರದಾ ದೇವಸ್ಥಾನ ಫಂಡು ಎಂಬ ಒಂದು ನಿಧಿಯನ್ನು ಸ್ಥಾಪಿಸುವುದು ಅಗತ್ಯವೆಂತಲೂ, ಜಿಲ್ಲೆಯ ಇತರ ಕಡೆಗಳಲ್ಲಿಯೂ ಭಜನ್ ಕಾರ್ಯದಿಂದ ಕೂಡುವ ಹಣವನ್ನು ಸದರಿ ಫಂಡಿಗೆ ಕಳುಹಿಸಿ, ಶ್ರೀ ಶಾರದಾ ದೇವಸ್ಥಾನ ವೃದ್ಧಿಕಾರ್ಯವನ್ನು ಕೈಗೂಡಿಸಬೇಕಾಗಿ ಸಂಘದವರು ನಿಶ್ಚಯಿಸಿಕೊಂಡಿರುವರು. ಇದಕ್ಕೆ ಜಿಲ್ಲೆಯ ಜಾತಿಸ್ವಪಕ್ಷರೆಲ್ಲರ ಸಹಾನುಭೂತಿಯೂ ಸಹಾಯವೂ ದೊರೆಯಬೇಕಾಗಿ ಸಂಘದ ಸೆಕ್ರೆಟರಿಯವರ ವಿನಂತಿ ಇದೆ.

ಅನುಕ್ರಮಣಿಕೆ

ಅಗ್ರಲೇಖ—
ಕೊನೆಗೆ ಎಲ್ಲರ ಅನುಭವವೊಂದೆ! . . . ೬
ಸ್ಫುಟವಿಚಾರಗಳು—
೧. ೨. ನಾಮದಾರ ಶಾಸ್ತ್ರಿಯವರು . . . ೬-೭
೩. ಜೈಲಿನಲ್ಲಿ ರಾಜಕೀಯ ಕೈದಿಗಳ ಸ್ಥಿತಿ . . . ”
೪. ಜಯರಾವ್ ದೇಶಪಾಂಡೆಯವರು. . . . ”
ಮಂಗಳೂರು—,
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ . . . ೫
ದಕ್ಷಿಣ ಕನ್ನಡ—ಕುಂಬಳೆ, ಪುತ್ತೂರು, ಬಂಟವಾಳ . . . ೭
ಕೆನರಾ ಕ್ಷತ್ರಿಯ ಸಂಘ, ಉಡುಪಿ . . . ”
ಅಸ್ಪೃಶ್ಯರನ್ನು ಉದ್ಧರಿಸುವುದಕ್ಕೆ ನಾವು ಮಾಡಬೇಕಾದ ಕರ್ತವ್ಯವು ”
ಚೇಳಿನ ವಿಷ ಇಳಿಸುವ ಉತ್ತಮ ಉಪಾಯ . . . ೮
ವರದಕ್ಷಿಣೆ . . . ”
ಮೂಡಬಿದರೆ ಪ್ರಾಂತ್ಯ ಗ್ರಾಮ ದೇವಸ್ಥಾನ . . . ”
ಮುಂಬಯಿಯಲ್ಲಿರುವ ಮೊಗವೀರ ಕ್ಲಾರ್ಕ್ಸರ ವಿಸ್ಮಯಕರವಾದ ಸಾಹಸ ”
ಮೊಗವೀರ ವ್ಯವಸ್ಥಾಪಕ ಮಂಡಳಿ ಮತ್ತು ಕ್ಲಾರ್ಕ್ಸ ಯೂನಿಯನ್ ”
ಮುಂಬಯಿ

ಸ್ವದೇಶಾಭಿಮಾನಿ.

ಶಕ ೧೮೪೫ ಆಷಾಢ ಶು|| ೧೩ಯು ಶುಕ್ರವಾರ.

ಕೊನೆಗೆ ಎಲ್ಲರ ಅನುಭವವೊಂದೆ!

ಒಂದು ವರ್ತುಲಾಕಾರವಾದ ಚಕ್ರದ ಬೇರೆ ಬೇರೆ ಭಾಗಗಳಲ್ಲಿ ಹಲವು ಇರುವೆಗಳಿವೆ. ಮತ್ತು ಆ ಚಕ್ರವು ವೇಗದಿಂದ ತಿರುಗುತ್ತಿದೆ ಎಂದು ಕಲ್ಪನೆಮಾಡೋಣ. ಆ ಚಕ್ರವು ತಿರುಗುತ್ತಿರುವಾಗ ಅದರ ಇಂಥಾದೊಂದು ಭಾಗದ ಮೇಲೆ ಬಂದೊಡನೆ ಇರುವೆಗಳಿಗೆ ಅಲ್ಲಿ ಅರಿದಿಟ್ಟ ಮೆಣಸಿನ ಕಾರವು ಹತ್ತಿ ಅವುಗಳಲ್ಲಿ ಚಲನ ವಲನ ಉಂಟಾಗುತ್ತದೆಂದು ತಿಳಿಯೋಣ. ಮುಂದಿದ್ದ ಇರುವೆಗಳು ಬೇಗನೆ ಮೆಣಸಿನ ಮುದ್ದೆಯ ಕಾರವನ್ನು ಅನುಭವಿಸಿ ಗಲಾಟೆಯನ್ನು ಎಬ್ಬಿಸುವುವು. ಆಗ ಹಿಂದಿನ ಇರುವೆಗಳು "ಅಲ್ಲ, ಈ ವರ್ತುಲವು ಬಹಳ ಒಳ್ಳೆಯದು; ಇಂತಿಂಥ ಕಡೆಯಲ್ಲಿ ಜೇನು ಇದೆ" ಎಂದು ವಾದಿಸಹತ್ತುವುವು; ವರ್ತುಲದ ಗುಣಗಳನ್ನು ಕೊಂಡಾಡ ತೊಡಗುವವು; ಮತ್ತು ಮೆಣಸಿನ ಕಾರದಿಂದ ಚಳವಳಮಾಡಹತ್ತಿದ ಇರುವೆಗಳನ್ನು ಹೀಯಾಳಿಸಲು ಪ್ರಾರಂಭಿಸುವುವು. ಆದರೆ ವರ್ತುಲದ ಮೇಲೆ ಮಾಡತಕ್ಕ ತಿರುಗಾಟವು, ಒಂದಿಲ್ಲವಾದರೆ ಇನ್ನೊಂದು ದಿವಸ ತಮ್ಮನ್ನು ಮೆಣಸಿನ ಮುದ್ದೆಯ ಕಾರವನ್ನು ಅನುಭವಿಸುವಂತೆ ಮಾಡೀತೆಂಬ ಸತ್ಯಸಂಗತಿಯು ಆ ಹಿಂದೆ ಇದ್ದ ಇರುವೆಗಳಿಗೆ ಗೊತ್ತಿರಲಿಲ್ಲ. ಅದುಕಾರಣ, ಈ ವರ್ತುಲದ ಗುಣಗಳನ್ನು ಹೇಳಿ ಅವು ಮುಂದಿನ ಇರುವೆಗಳನ್ನು ಹೀಯಾಳಿಸಹತ್ತಿದವು. ಆದರೆ ಅದು ವರ್ತುಲದ ಮೇಲಿನ ತಿರುಗಾಟವಲ್ಲವೆ? ಮೆಲ್ಲಮೆಲ್ಲನೆ ಹೆಜ್ಜೆಗಳನ್ನಿಡುತ್ತಿದ್ದ ಈ ಹಿಂದಿನ ಇರುವೆಗಳು ಕೊನೆಗೆ ಆ ಮೆಣಸಿನ ಮುದ್ದೆಯ ಪ್ರಾಂತಕ್ಕೆ ಬಂದು ತಲಪಿದವು; ಮತ್ತು ಅವುಗಳಿಗೆ ಆ ಅತಿ ತೀವ್ರವಾದ ಜೇರಿಗೆ-ಮೆಣಸಿನ ರುಚಿಯ (!) ಅನುಭವವು ಯಾವಾಗ ಬರಹತ್ತಿತೊ ಆಗ ಅವು ಮುಂಚಿನ ಇರುವೆಗಳ ಮಾತು, ಅಭಿಪ್ರಾಯ ಮತ್ತು ಅನುಭವ ಇವು ಸತ್ಯವೆಂದು ತಿಳಿಯಹತ್ತಿದವು. ಈ ಎರಡು ವರ್ಗದ ಇರುವೆಗಳಲ್ಲಿ ಕೆಲವು ಸಮಯದ ವ್ಯತ್ಯಾಸವೆ ಇದ್ದಿತ್ತಲ್ಲದೆ ಕೊನೆಯ ಅನುಭವದಲ್ಲಿ ಅಷ್ಟೊಂದು ಹೆಚ್ಚು ಕಡಿಮೆಯು ಇದ್ದಿಲ್ಲ. ಸಾರಾಂಶ, ವರ್ತುಲದ ಮೇಲೆ ತಿರುಗಾಡುವವರ ಕೊನೆಯ ಅನುಭವವು ಒಂದೆ! ಇದೆ ಅಭಿಪ್ರಾಯವನ್ನು ಪೂರ್ವಿಕರು "ಸುಂಕದ ಕಟ್ಟೆಯ ಮುಂಜಾನೆ"ಯೆಂಬ ಚಿಕ್ಕ ಮಾತಿನಲ್ಲಿ ತೋರ್ಪಡಿಸಿರುವರು. ಒಬ್ಬನು, ಒಂದು ರಾತ್ರಿ, ಸುಂಕದ ಕಟ್ಟೆಯನ್ನು ತಪ್ಪಿಸಿಕೊಳ್ಳಲು ಬೇರೊಂದು ದಾರಿಹಿಡಿದು ನಡೆಯಹತ್ತಿದನು. ಇಡಿ ರಾತ್ರಿ ನಡೆದು ನಡೆದು, ಕೊನೆಗೆ ಮುಂಜಾನೆ ಸಮಯದಲ್ಲಿ ಆ ಸುಂಕದ ಕಟ್ಟೆಗೆನೆ ಬಂದು ತಲಪಿದನು. ಪಟ್ಟಣದ ಎಲ್ಲ ದಾರಿಗಳು ಸುಂಕದ ಕಟ್ಟೆಗೆನೆ ಬರುವವಾದ ಕಾರಣ, ಯಾವ ದಾರಿಯನ್ನು ಹಿಡಿದರೂ ಅದು ಕೊನೆಗೆ ಮಧ್ಯಸ್ಥಾನಕ್ಕೆನೆ ತಂದು ಬಿಟ್ಟೀತಲ್ಲವೆ?

ನಮ್ಮ ರಾಜಕೀಯ ತಂಡಗಳ ಅವಸ್ಥೆಯಾದರೂ ಇದೆ ಸರಿ. ಮುಂಚಿನ ಕಾಲದಲ್ಲಾಗಲಿ, ಈಹೊತ್ತಾಗಲಿ, ಸರಕಾರದ ಬಗ್ಗೆ ಎಲ್ಲರ ಅನುಭವವು ಒಂದೆಯಾಗಿರುತ್ತದೆ. ರಾಷ್ಟ್ರೀಯ ಸಭೆಯು ಪ್ರಾರಂಭವಾದಾಗ "ಕೆಲವು ಅಸಂತುಷ್ಟ ಜನರು ಚಳವಳವನ್ನು ಮಾಡುತ್ತಿರುತ್ತಾರೆ, ಬ್ರಿಟಿಷ್ ಸರಕಾರದ ಆಳಿಕೆಯು ಈ ಭೂಲೋಕದ ಸ್ವರ್ಗವು" ಎಂದು ಅನೇಕರು ನೆನಸುತ್ತಿದ್ದರು. ನಮ್ಮ ಮುಸಲ್ಮಾನ ಬಂಧುಗಳಂತೂ ಆ ಸಮಯದಲ್ಲಿ ರಾಷ್ಟ್ರೀಯ ಸಭೆಯನ್ನು ಹೀಯಾಳಿಸುತ್ತಿದ್ದರು. ಆದರೆ ಬರಬರುತ್ತ, ವರ್ತುಲದ ಮೇಲಿನ ಇರುವೆಗಳು ತಮ್ಮ ಪ್ರಯಾಣದಲ್ಲಿ ಹೇಗೆ ಜೇರಿಗೆ ಮೆಣಸಿನ ಮುದ್ದೆಯ ಪ್ರಾಂತಕ್ಕೆ ಹೇಗೆ ಒಂದು ದಿನ ಬಂದು ತಲಪುತ್ತವೊ ಹಾಗೆಯೆ ನಮ್ಮ ಮಹಮ್ಮದೀಯ ಬಂಧುಗಳು "ಬ್ರಿಟಿಷ್ ರಾಜ್ಯವೆಂಬುದು ಸ್ವರ್ಗವಲ್ಲ, ಅದರಲ್ಲಿ ಅನೇಕ ದೋಷಗಳಿವೆ, ಅವು ಹೋಗಬೇಕು, ಸುಧಾರಣೆಯಾಗಬೇಕು, ಸ್ವರಾಜ್ಯವು ಸಿಗಬೇಕು" ಎಂಬೀ ಅಭಿಪ್ರಾಯಕ್ಕೆ ಬಂದು ಮುಟ್ಟಿದರು. ಮಹಮ್ಮದೀಯರು ಈ ಅಭಿಪ್ರಾಯಕ್ಕೆ ಬಂದು ತಲಪಿದಂತೆ ಈ ಹೊತ್ತು ಬೇರೆ ಹಲವರು ಸಹ ಬಂದು ಮುಟ್ಟಿದ್ದಾರೆ. ಮೊಂಟೆಗ್ಯು-ಚೆಮ್ಸಫರ್ಡ್ ಸುಧಾರಣೆಗಳು ಅವತರಿಸಿದ ಸಮಯದಲ್ಲಿ ಹಿಂದೂಸ್ಥಾನದ ರಾಷ್ಟ್ರೀಯ ಸಭೆಯು ಈ ಸುಧಾರಣೆಗಳು ಅಪೂರ್ಣ, ಅಸಮಾಧಾನಕರ ಮತ್ತು ಅಯೋಗ್ಯವೆಂದು ತನ್ನ ಮತವನ್ನು ವ್ಯಕ್ತಗೊಳಿಸಿತ್ತು. 'ಇನ್ನೊಂದು ತಂಡದವರು 'ಲಿಬರಲ್ಸ್' ಎಂದು ಹೆಸರನ್ನಿಟ್ಟುಕೊಂಡು ಈ ಸುಧಾರಣೆಗಳನ್ನು ಎತ್ತಿ ಹಿಡಿದಿದ್ದರು. ರಾಷ್ಟ್ರೀಯ ಸಭೆಯು ಕಾಯಿದೆ ಕೌನ್ಸಿಲುಗಳ ಮೇಲೆ ಬಹಿಷ್ಕಾರವನ್ನು ಹಾಕಿದಾಗ ಈ ತಂಡದವರು ಕೌನ್ಸಿಲುಗಳನ್ನು ನುಗ್ಗಿ ಮೊಂಟೆಗ್ಯು-ಸುಧಾರಣೆಗಳನ್ನು ಯಶಸ್ವಿತೆಯ ಮಾರ್ಗಕ್ಕೆ ಕೊಂಡುಹೋಗಹತ್ತಿದರು. ವಿಶ್ವಾಮಿತ್ರ ಋಷಿಗಳು ತ್ರಿಶಂಕು ರಾಜನನ್ನು ತಮ್ಮ ತಪಃಸಾಮರ್ಥ್ಯದಿಂದ ಸ್ವರ್ಗಕ್ಕೆ ಏರಿಸಲು ಯತ್ನಿಸಿದಂತೆ, ಲಿಬರಲ್ ಪಕ್ಷದ ಈ ವಿಶ್ವಾಮಿತ್ರರೂ ಮೊಂಟೆಗ್ಯು ಸುಧಾರಣೆಗಳನ್ನು ಯಶಸ್ವಿತೆಯ ಸ್ವರ್ಗಕ್ಕೆ ಏರಿಸಹೊರಟಿದ್ದರು! ಮೊಂಟೆಗ್ಯುಗಳು ಕೊಟ್ಟಿರುವ ಕೌನ್ಸಿಲುಗಳ ಮೆಟ್ಟಲುಗಳನ್ನೇರಿ ಸ್ವರಾಜ್ಯದ ಸ್ವರ್ಗವನ್ನು ತಾವು ಬಹು ಬೇಗನೆ ಹೊಂದುವೆವೆಂದು ಈ ಪಕ್ಷದವರು ಸುಧಾರಣೆಯನ್ನು ಅಪ್ಪಿಕೊಂಡಿದ್ದರು. ವೈಗಳ್ಳನ ಅಂಗಳದಲ್ಲಿ ಗಂಗೆಯು ಬಂದಾಗ ಅವನು ತನ್ನ ವೈಗಳ್ಳತನದಿಂದ ಅಥವಾ ದುರಾಗ್ರಹದಿಂದ ಹೇಗೆ ಆ ಗಂಗೆಯ ಕಡೆಗೆ ಬೆನ್ನುಹಾಕಿ ಓಡಿಹೋಗುವನೊ ಹಾಗೆಯೆ ಈ ರಾಷ್ಟ್ರೀಯ ಪಕ್ಷದವರು ಸುಧಾರಣೆಗಳನ್ನು ಬಿಡಹತ್ತಿದ್ದಾರೆಂದು ರಾಷ್ಟ್ರೀಯರನ್ನು ಲಿಬರಲ್ಲರು ಹಾಸ್ಯಮಾಡುತ್ತಿದ್ದರು. ಮೊಂಟೆಗ್ಯುಗಳ ಸುಧಾರಣೆಯ ಆನೆಯು ಸ್ವರಾಜ್ಯದ ಮಾಲೆಯನ್ನು ತನ್ನ ಸೊಂಡಿಲಿನಲ್ಲಿ ಹಿಡಕೊಂಡು ಬರುವಾಗ ಶಾಸ್ತ್ರಿಗಳಂಥ ಮೊಡರೇಟ್ ಮುಖಂಡರು ತಮ್ಮ ಕುತ್ತಿಗೆಯನ್ನು ಕೊಟ್ಟು ಆ ಮಾಲೆಯನ್ನು ಹಾಕಿಕೊಂಡರು; ಮಾತ್ರವಲ್ಲ, ಸುಧಾರಣಾ "ಕರಿಯ ಕೈಯ"ಲ್ಲಿರುವ "ಕುಸುಮಮಾಲೆ"ಗೆ ತಮ್ಮ ಕುತ್ತಿಗೆಯನ್ನು ಕೊಡದ ರಾಷ್ಟ್ರೀಯರು ಕೇವಲ ಭಾಗ್ಯಹೀನರೆಂದು ಅವರನ್ನು ಅನುಕಂಪಿಸುತ್ತಿದ್ದರು. ಈ ಮೇರೆಗೆ ಸುಧಾರಣಾಭಕ್ತರು ಸುಧಾರಣೆಗಳ ಸ್ತೋತ್ರಗಳನ್ನು ಕೊಂಡಾಡಿ, ಅವುಗಳನ್ನು ತಲೆಯ ಮೇಲಿಟ್ಟುಕೊಂಡು ಕುಣಿಯುತ್ತಿದ್ದರು.

ಆದರೆ ಮೆಲ್ಲಮೆಲ್ಲನೆ ಈ ವರ್ಗದವರ ಕಣ್ಣು ತೆರೆಯಹತ್ತಿತು. ಅವರಿಗೆ ಸುಧಾರಣೆಯ ಈ ಗಂಗೆಯಲ್ಲಿ ಅನುಗ್ರಹಕ್ಕಿಂತ ಕೆಸರೆ ಹೆಚ್ಚಿನ ಮಟ್ಟಿಗೆ ಇದ್ದದ್ದು ಕಂಡುಬಂತು. ಸುಧಾರಣೆಯ ಈ ಕೌನ್ಸಿಲುಗಳು ನಿಜವಾಗಿ ತ್ರಿಶಂಕು ಸ್ವರ್ಗವೆಂಬುದು ಅವರಿಗೆ ಖಚಿತವಾಯಿತು. ಸುಧಾರಣೆಯ ಆನೆಯ ಸೊಂಡಿಲಿನಲ್ಲಿರುವುದು ಸ್ವರಾಜ್ಯದ ಹೂಮಾಲೆಯಲ್ಲ, ಖರ್ಚಿನ ದೆಸೆಯಿಂದ ದಿವಾಳಿಯ ಪ್ರಸಂಗವನ್ನು ತಂದುಕೊಡುವ ಪಗಡೆಗಳ ಸರವೆಂಬ ಯಥಾರ್ಥ ಕಲ್ಪನೆಯು ಇವರ ಮಿದುಳಿನಲ್ಲಿ ಪ್ರಕಾಶಿಸಹತ್ತಿತು. ಸುಧಾರಣೆಯ ಮೇಲೆ ಜನರು ಆರೂಢರಾಗುವುದು ಹಿತಾವಹವು. ಆದರೆ ಕುದುರೆಯ ಮೇಲೆ ಏರುವದರ ಬದಲಾಗಿ ಕುದುರೆಯೆ ಸವಾರನನ್ನು ಏರಿದರೆ ಯಾವ ಅವಸ್ಥೆಯೊ ಅದೆ ಅವಸ್ಥೆಯು ಸುಧಾರಣೆಯು ನಮ್ಮನ್ನು ಏರಿರುವುದರಿಂದ ಈ ದೇಶಕ್ಕೆ ಬಂದಿದೆ. ಎಂದರೆ, ಸುಧಾರಣೆಯೆ ಈ ಜನಾಂಗವನ್ನು ಏರಿದೆ ಎಂಬುದು ಲಿಬರಲ್ ಬಂಧುಗಳ ಲಕ್ಷ್ಯಕ್ಕೆ ಬರಹತ್ತಿತು. ಪ್ರಾಂತಿಕ ಸರಕಾರಗಳಿಗೆ ದ್ವಿದಳ ರಾಜ್ಯಪದ್ಧತಿಯು ಬಂದಿದೆ ಎಂದು ತಿಳಕೊಳ್ಳುವುದು ಬುದ್ಧಿಮಾಂದ್ಯದ ಲಕ್ಷಣವೆಂಬುದು ಇವರಿಗೆ ಸಂಪೂರ್ಣ ಗೊತ್ತಾಗಹತ್ತಿತು. ಸಾರಾಂಶ ಸುಧಾರಣೆಗಳ ನಿಜಸ್ವರೂಪವು ಮೊಡರೇಟರಿಗೆ ವಿದಿತವಾಯಿತೆಂಬುದಕ್ಕೆ ಸಂದೇಹವಿಲ್ಲ.

ನಮ್ಮ ಈ ಮಾತಿಗೆ ಮಿ. ಜಮನಾದಾಸರಲ್ಲುಂಟಾದ ಮತಾಂತರವು ಉತ್ತಮವಾದ ಸಾಕ್ಷಿಯಾಗಿದೆ. ಸುಧಾರಣಾ ಕೌನ್ಸಿಲುಗಳು ಹೊಸದಾಗಿ ತೆರೆದಿರುವ ಸಮಯದಲ್ಲಿ ಮಿ. ಜಮನಾದಾಸರು ಕೌನ್ಸಿಲಭಕ್ತರಾಗಿ ವರಿಷ್ಠ ಎಸೆಂಬ್ಲಿಯನ್ನು ನುಗ್ಗಿದರು. ಇವರು ಸ್ವಾಭಾವಿಕವಾಗಿ ಮಿಸೆಸ್ ಬಿಝಂಟ ಬಾಯಿಯವರ ಅನುಯಾಯಿಗಳಾಗಿದ್ದದರಿಂದ ಮೊಂಟೆಗ್ಯುಗಳ ಸುಧಾರಣಾ ಗಂಟನ್ನು ತಲೆಯ ಮೇಲಿಟ್ಟುಕೊಂಡು ಕುಣಿಯುತ್ತಿದ್ದರು. ಆದರೆ ಮೊನ್ನೆ ಪಾರ್ಲಿಮೆಂಟಿನಲ್ಲಿ ಅಂಡರ ಸೆಕ್ರೆಟರಿಗಳಾದ ಅರ್ಲ ವಿಂಟರ್‌ಟನರು ಒಂದು ಭಾಷಣವನ್ನು ಮಾಡಿ, ಆ ಭಾಷಣದಲ್ಲಿ ಅವರು ಹಿಂದುಸ್ಥಾನದೊಳಗಿನ ಪ್ರತಿಗಾಮಿಧೋರಣವನ್ನು ಯಾವಾಗ ಸಮರ್ಥಿಸತೊಡಗಿದರೊ, ಸೈನ್ಯದ ಖರ್ಚನ್ನು ಕಡಿಮೆ ಮಾಡಲು ಸಾಧ್ಯವಿಲ್ಲ ಮುಂತಾದ್ದನ್ನು ಯಾವಾಗ ಪ್ರತಿಪಾದಿಸತೊಡಗಿದರೊ ಮತ್ತು ವರಿಷ್ಠ ಕಾರಭಾರದಲ್ಲಿ ಹಿಂದಿಗಳ ಪ್ರವೇಶದಿಂದ ಆ ಇಲಾಖೆಗಳು ಹಿಂದಿಮಯವಾಗುವವಂತೆ ಮಾಡಬೇಕೆಂದು ವರಿಷ್ಠ ಕೌನ್ಸಿಲಿನಲ್ಲಿ ಬಂದಿರುವ ಠರಾವನ್ನು ಕುರಿತು ಈ ಅಂಡರ ಸೆಕ್ರೆಟರಿಗಳು ತಮ್ಮ ಅಸಮ್ಮತಿಯನ್ನು ಮಾತ್ರವಲ್ಲ, ಒಂದು ನಮೂನೆಯ ತುಚ್ಛೀಕಾರವನ್ನು ಸಹ ಯಾವಾಗ ತೋರ್ಪಡಿಸಿದರೊ ಆಗ ಜಮನಾದಾಸರ ಅಭಿಪ್ರಾಯವು ಬದಲಾಗಹತ್ತಿದೆ. ಈಗಿನ ಕೌನ್ಸಿಲುಗಳಲ್ಲಿ ಸಾರವಿಲ್ಲ. ಪ್ರಾಂತಿಕ ಸರಕಾರಗಳಿಗೆ ದ್ವಿದಳರಾಜ್ಯಪದ್ಧತಿಯನ್ನು ಕೊಟ್ಟದ್ದಾದರೂ ಅದರಿಂದ ಅಷ್ಟೊಂದು ಯಾವ ಪ್ರಯೋಜನವೂ ಆಗಿರಲಿಲ್ಲ. ದೇಶಹಿತದ ದೃಷ್ಟಿಯಿಂದ ಉಪಯುಕ್ತವಾದ ಮತ್ತು ಆವಶ್ಯಕವಾದ ಠರಾವುಗಳು ಕೌನ್ಸಿಲಿನಲ್ಲಿ ಲೋಕಪ್ರತಿನಿಧಿಗಳ ಏಕಮತದಿಂದ ಪಾಸಾದರೂ ಕೊನೆಗೆ ಲೊ. ಪೀಲ ಅಥವಾ ಅರ್ಲ ವಿಂಟರಟನರಂಥ ಪ್ರತಿಕೂಲ ಮತದ ಮತ್ತು ಅಸಹಾನುಭೂತಿಯ ಅಧಿಕಾರಿಗಳು ಠರಾವುಗಳನ್ನು 'ತಳ್ಳಿಹಾಕುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಆ ಸುಧಾರಣೆಗಳಾಗಲಿ, ಸುಧಾರಿಸಿದ ಕೌನ್ಸಿಲುಗಳಾಗಲಿ ಫಲಕಾರಿಗಳಲ್ಲವೆಂದು ಮಿ. ಜಮನಾದಾಸರು ತಮ್ಮ ಅಭಿಪ್ರಾಯವನ್ನು ಹೊರಪಡಿಸತೊಡಗಿದ್ದಾರೆ. ಮಿ. ಮೊಂಟೆಗ್ಯು ಸಾಹೇಬರು ಭಾರತಮಂತ್ರಿಗಳಾಗಿರುವ ವರೆಗೆ ಜಮನಾದಾಸರಿಗೆ ಮತ್ತು ಇತರ ಮೊಡರೇಟರಿಗೆ ಈ ಸುಧಾರಣೆಗಳ ನಿಜವಾದ ಸ್ವರೂಪವು ಗೊತ್ತಾಗಿದ್ದಿಲ್ಲ. ಮಿ. ಮೊಂಟೆಗ್ಯುಗಳ ಕಾಲದಲ್ಲಿ ಸುಧಾರಣೆಗಳಿಂದ ಫಲ ಪ್ರಾಪ್ತಿಯುಂಟಾಗುತ್ತೆಂದರ್ಥವಲ್ಲ; ಆದರೆ ಮೊಂಟೆಗ್ಯುಗಳು ಪಾರ್ಲಿಮೆಂಟಿನಲ್ಲಿ, ಸಂದರ್ಭ ಒದಗಿದಾಗ ಹಿಂದಿ ಸುಧಾರಣೆಗಳನ್ನು ಸಮರ್ಥಿಸಿ, ಇಲ್ಲಿಯ ತನ್ನ ಅನುಯಾಯಿ ಮತ್ತು ಭಕ್ತಸಮುದಾಯದ ಬೆನ್ನಿನ ಮೇಲೆ ಕೈಯಾಡಿಸುತ್ತಿದ್ದ ಕಾರಣ, ಪ್ರೀತಿ ಸೂಚಕವಾದ ಒಂದೆರಡು ಶಬ್ದಗಳಿಂದ ಮತ್ತು ಮುಖದ ಮೇಲೆ ಕೈಯಾಡಿಸುವುದರಿಂದ ಚಿಕ್ಕ ಮಕ್ಕಳಿಗೆ ಹೇಗೆ ಸಂತೋಷವಾಗುತ್ತದೊ ಹಾಗೆ ಇವರಿಗೆ ಕೂಡ ಆಗುತ್ತಿತ್ತು. ಆ ಸಂತೋಷಾತಿಶಯದಿಂದ ಎಲ್ಲ ಮೊಡರೇಟರು ಈ ಕೌನ್ಸಿಲುಗಳು ಸ್ವರಾಜ್ಯದ್ವಾರವೆಂದು ತಿಳಿಯುತ್ತಿದ್ದರು. ವಸ್ತುತಃ ಆ ಸುಧಾರಣೆಗಳಲ್ಲಿ ಯಾವ ಪ್ರಭಾವವೂ ಇದ್ದಿಲ್ಲ. ಆದರೂ ಮಿ. ಜಮನಾದಾಸರಾಗಲಿ, ಅಥವಾ ಮಿ. ಶೇಷಗಿರಿ ಐಯ್ಯರರಾಗಲಿ, ಈ ಸಂಗತಿಯನ್ನು ಪ್ರಥಮತಃ ತಿಳಿದಿರಲಿಲ್ಲ. ಪ್ರಾಂತಿಕ ಸರಕಾರಗಳಲ್ಲಿ ಕೆಲವು ಖಾತೆಗಳನ್ನು ಲೋಕಸಭೆಯ ಸ್ವಾಧೀನಕ್ಕೆ ಕೊಟ್ಟಿದ್ದಾರಾದರೂ ಅವುಗಳಿಂದ ಇಷ್ಟ ಫಲವೇನೂ ಇಲ್ಲವೆಂದು ರಾಷ್ಟ್ರೀಯ ಸಭೆಯು ತಿರುತಿರುಗಿ ಹೇಳುತ್ತಿತ್ತು; ಅದು ಮೊಡರೇಟ ಬಂಧುಗಳಿಗೆ ಮಾನ್ಯವಾಗಿರಲಿಲ್ಲ. ಕೊನೆಗೆ ಮೇಲೆ ಉದಹರಿಸಿದ ವರ್ತುಲದ ಮೇಲಿನ ಇರುವೆಯಂತೆ ಜಮನಾದಾಸರು ಸಹ ಈ ಹೊತ್ತು ಲೊರ್ಡ ಪೀಲರ ಮತ್ತು ಅರ್ಲವಿಂಟರಟನರ ಅಸಹಾನುಭೂತಿಯ ಕಾರಭಾರದ ಜೇರಿಗೆ ಮೆಣಸಿನ ಮುದ್ದೆ ಇದ್ದಲ್ಲಿಗೆ ಬಂದು ತಲಪಿರುವರು. ಶಾಂತಪಕ್ಷದವರು ಪ್ರಯಾಣ ಮಾಡುವದರಲ್ಲಿ ಕೂಡ ಶಾಂತರು—ಅವಸರಮಾಡುವವರಲ್ಲ—ಎಂಬುದು ಇದರಿಂದ ತಿಳಿದುಕೊಳ್ಳಬಹುದು. ಇದರಲ್ಲಿ ಸುದೈವದ ಇನ್ನೊಂದು ಸಂಗತಿಯು ಇದೆ. ಶಾಂತಪಕ್ಷದವರು, ಮೆಲ್ಲಗೆ ಯಾಕಾಗಲೊಲ್ಲದು, ಅಂತು ಪ್ರಯಾಣ ಮಾಡುತ್ತಿರುತ್ತಾರೆ; ಎಂದ ಮೇಲೆ ಅವರು ಒಂದಿಲ್ಲವಾದರೆ ಇನ್ನೊಂದು ದಿನ ಮೆಣಸಿನ ಮುದ್ದೆ ಇದ್ದಲ್ಲಿಗೆ ಬಂದು ತಲ್ಪಲೆಬೇಕು.

ಸಪ್ಪೆ ತಂಡದವರು—ವಿಚಾರವಂತರಾದ ಸಪ್ಪೆ ತಂಡದವರು ಹೆಚ್ಚಾಗಿ ಸರಕಾರದ ಕಡೆಯಲ್ಲಿ ನಿಂತುಕೊಳ್ಳುತ್ತಾರೆ; ಅಷ್ಟರ ಮೇಲಿಂದಲೆ ಅವರು ದೇಶದ್ರೋಹಿಗಳೆಂದು ಹೇಳಲಾಗುವುದಿಲ್ಲ. ಸರಕಾರದವರು ಇಂಥ ಕೆಲವರನ್ನು ಎತ್ತಿಹಿಡಿದು ತಮ್ಮ ಕೆಲವು ಅಂತರಂಗವನ್ನು ಇವರಿಗೆ ತಿಳಿಸುತ್ತಾರೆ; ಸಂದರ್ಭಾನುಸಾರವಾಗಿ ಇವರಿಗೆ ಕೆಲವು ಬಹುಮಾನದ ಜಾಗೆಗಳನ್ನೂ, ಪದವಿಗಳನ್ನೂ, ದೊಡ್ಡ ಹುದ್ದೆಗಳನ್ನೂ ಕೊಡುತ್ತಾರೆ; ಈ ಕಾರಣದಿಂದ ಅವರು ಸರಕಾರಿ ಅಧಿಕಾರಿಗಳ ಕಚ್ಚೆಯನ್ನೆ ಹೆಚ್ಚಾಗಿ ಹಿಡಕೊಂಡಿರುತ್ತಾರೆ. ಇದೆ ಸಪ್ಪೆ ತಂಡದವರ ಸರಕಾರಾನುಯಾಯಿತೆಯ ವಿಮಾಂಸೆಯಲ್ಲದೆ, ಅವರು ದೇಶ ದ್ರೋಹಿಗಳಲ್ಲ. ತಮ್ಮನ್ನು ಎತ್ತಿ ಹಿಡಿಯುವುದರ ಮೇಲಿಂದ ಸರಕಾರವು ಬಹು ಒಳ್ಳೆಯದು, ಅದರ ಕಾರಭಾರವು ನಿರ್ದೋಷವಾದ್ದು ಎಂದು ಈ ವರ್ಗದವರು ತಿಳಿಯಹತ್ತಿದ್ದರು. ಮತ್ತು ಕೌನ್ಸಿಲಿನಲ್ಲಿ ತಾವು ತಂದ ಠರಾವುಗಳು ಸರಕಾರ ಮಾನ್ಯವಾಗಿ ತಮ್ಮ ಮಾತಿಗೆ ಸರಕಾರವು ಬಗ್ಗೀತೆಂದು ಇವರು ನೆನಸಹತ್ತಿದ್ದರು. ಆದರೆ ಕಹಿಬೇವು, ಕತ್ತಿಯಿಂದ ಕಡಿಯುವವನಿಗೂ, ಗಂಧ ಹೂವುಗಳಿಂದ ಪೂಜಿಸುವವನಿಗೂ, ಹಾಲು ಮೊಸರಿನಿಂದ ಅಭಿಷೇಕಿಸುವವನಿಗೂ ಹೇಗೆ ಕಹಿಯಾಗಿರುವದೊ ಹಾಗೆಯೆ ಸರಕಾರದ ಧೋರಣವು ಎಲ್ಲರಿಗೂ ಒಂದೆ ಪ್ರಕಾರವಾಗಿ ಕಹಿಯಾಗುವುದು. ಮೇಲೆ ಹೇಳಿದಂತೆ ಕೆಲವು ಕಾಲದ ಹೆಚ್ಚು ಕಡಿಮೆಯಾದೀತಲ್ಲದೆ ಕೊನೆಯ ಅನುಭವದಲ್ಲಿ ಹೆಚ್ಚು ಕಡಿಮೆಯಾಗುವುದಿಲ್ಲ. ಸಾರಾಂಶ, ಕಲ್ಕತ್ತೆಯ ಭಾಷಣದ ಒಂದು ಸಂದರ್ಭದಲ್ಲಿ ಲೋಕಮಾನ್ಯ ಟಿಳಕರು ಹೇಳಿದಂತೆ ರಾಜಕೀಯ ಕ್ಷೇತ್ರದಲ್ಲಿ ಮನಃಪೂರ್ವಕವಾಗಿ ಕೆಲಸಮಾಡುವವರಿಗೆ ಒಂದೆ ಪ್ರಕಾರದ ಅನುಭವವು ಬರುತ್ತದೆ. ಬಟ್ಟಾರೆ ಕೊನೆಗೆ ಎಲ್ಲರ ಅನುಭವವು ಒಂದೆ!

ಸ್ಫುಟವಿಚಾರಗಳು.

೧. ಆಂಗ್ಲ ಮಹಾ ಕವಿಯಾದ ಸೆಕ್ಸಪಿಯರನು ಜ್ಯೂಲಿಯಸ್ ಸೀಝರನೆಂಬ ನಾಟಕದಲ್ಲಿ ಎಂಟೊನಿಯ ಪಾತ್ರವನ್ನು ಬಹು ಮಾರ್ಮಿಕ ರೀತಿಯಿಂದ ತಯಾರಿಸಿದ್ದಾನೆ. ಮೇಲೆ ಸ್ತುತಿಯೆಂದು ತೋರಿಸಿ ಒಳಗಿನಿಂದ ನಿಂದೆಯನ್ನು ತುಂಬಿಸಿ ಆ ಮಾತುಗಳನ್ನು ಕವಿಯು ಎಂಟೊನಿಯ ಬಾಯಿಂದ ಹೊರಡಿಸಿದ್ದಾನೆ. ನಾಮದಾರ ಶ್ರೀನಿವಾಸ ಶಾಸ್ತ್ರಿಗಳಾದರೂ ಎಂಟೊನಿಯ ಈ ಪಾತ್ರವನ್ನು ಬಹು ಉತ್ತಮವಾಗಿ ಮಾಡುತ್ತಾರೆಂದು ಹೇಳಬೇಕಾಗುತ್ತದೆ. ಮೆಲಬೋರ್ನಿನಲ್ಲಿದ್ದ ಹೈದರಾಬಾದ ಕ್ಲಬ್ಬಿನಲ್ಲಿ ವಾರ್ಷಿಕ ಔತಣದ ಉತ್ಸವವು ನಡೆದಿತ್ತು. ಆ ಪ್ರಸಂಗದಲ್ಲಿ ಶಾಸ್ತ್ರಿಗಳು ಒಂದು ಚಿಕ್ಕ ಭಾಷಣವನ್ನು ಕೊಟ್ಟರು. ಈ ಭಾಷಣದಲ್ಲಿ ಅವರು ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ವಿವರಿಸುವಾಗ ಮಹಾತ್ಮಾಗಾಂಧಿಗಳ ಸಾರ್ವಜನಿಕ ಕೃತ್ಯಗಳು ಅತ್ಯಂತ ಹಾನಿಯನ್ನೂ,ಉಪದ್ರವನ್ನೂ ಮಾಡುತ್ತವೆ ಎಂತ ಹೇಳಿದರು. ಆದರೆ ಈ ನಿಂದೆಯನ್ನು ಮುಚ್ಚಲು ಶಾಸ್ತ್ರಿಗಳು ಮಹಾತ್ಮಾರನ್ನು ತುಂಬಾ ಹೊಗಳಿದರು. ಗಾಂಧಿಗಳಷ್ಟು ಶುದ್ಧಾಚರಣೆಗಳು ಮತ್ತು ಉಚ್ಚಧ್ಯೇಯವುಳ್ಳವರು ಯಾರೂ ಇಲ್ಲ; ಅವರು ಕುಷ್ಠರೋಗಿಯನ್ನು ಎಳ್ಳಷ್ಟು ಸಹ ಹೇಸದೆ ಶುಶ್ರೂಷೆ ಮಾಡಿದರು. ಸಾಧುವೃತ್ತಿಯ ಋಷಿಗಳೆಂದರೆ, ಗಾಂಧಿಗಳೆ ಸರಿ ಎಂದು ಮುಂತಾಗಿ, ನಾಮದಾರ ಶಾಸ್ತ್ರಿಗಳು ಗಾಂಧಿ ಮಹಾರಾಜರನ್ನು ಹೊಗಳುತ್ತಿದ್ದರು. ಈ ರೀತಿಯಿಂದ ಹೊಗಳುತ್ತಿರುವಾಗಲೆ ಗಾಂಧಿಗಳು ತಾತ್ವಿಕದೃಷ್ಟ್ಯಾ ಅರಾಜಕರು, ಇವರು ರಾಜಕೀಯ ಚಳವಳದಲ್ಲಿ ಪ್ರವೇಶಮಾಡಿದ್ದು ಬಹು ಘಾತಕವು ಎಂಬುದಾಗಿ ಅವರನ್ನು ನಿಂದಿಸಲು ನಾ. ಶಾಸ್ತ್ರಿಗಳು ಎಂದೂ ಮರೆಯಲಿಲ್ಲ. ನಾಮದಾರ ಶಾಸ್ತ್ರಿಗಳ ಮತದಂತೆ ರಾಜಕೀಯ ಕಾರ್ಯವು ಶಾಸ್ತ್ರಿಗಳಂಥವರದೆ ಅಲ್ಲದೆ ಇತರರಲ್ಲವೆಂದು ತೋರುತ್ತದೆ. ರಾಜಕೀಯ ಚಳವಳದ

ಕ್ಷೇತ್ರದಲ್ಲಿ ಅವತರಿಸಿ ಈ ಶಾಸ್ತ್ರಿಗಳು ಇದುವರೆಗೆ ಹಿಂದೂಸ್ಥಾನಕ್ಕೆ ಯಾವ ಲಾಭವನ್ನು ಸಾಧಿಸಿಕೊಟ್ಟಿದ್ದಾರೆ? ಜನತೆಯಲ್ಲಿ ಎಷ್ಟರ ಮಟ್ಟಿನ ಸ್ವಾವಲಂಬನವನ್ನು ಕಲಿಸಿಕೊಟ್ಟಿದ್ದಾರೆ? ಜನಗಳ ಸ್ವಾವಲಂಬನದ ಮಟ್ಟಿಗೆ ಶಾಸ್ತ್ರಿಗಳ ಪ್ರಯತ್ನವಿದ್ದಿಲ್ಲವಾದರೆ ಸರಕಾರದಿಂದ ಯಾವ ಹಕ್ಕುಗಳನ್ನು ಸಂಪಾದಿಸಿಕೊಟ್ಟಿದ್ದಾರೆ? ಇಂಥ ಅನೇಕ ಸವಾಲುಗಳು ಶಾಸ್ತ್ರಿಗಳ ಭಾಷಣದ ಮೇಲೆ ಬರುತ್ತವೆ. ಅವುಗಳನ್ನು ಶ್ರೀನಿವಾಸ ಶಾಸ್ತ್ರಿಗಳು ಉತ್ತರಿಸಿಯಾರೆ? ರಾಜಕೀಯ ಚಳವಳವಾಗಲಿ ಅಥವಾ ಸಾಮಾಜಿಕ ಮೊದಲಾದ ಇತರ ಚಳವಳವಾಗಲಿ, ಯಾವ ಚಳವಳವಾದ್ದರೂ ಅದನ್ನು ಇಂಥವನೆ ಪ್ರಾರಂಭಿಸಬೇಕು, ಅದರ ಕ್ರಮವು ಇಂಥ ರೀತಿಯಲ್ಲೆ ಇರಬೇಕು, ಎಂಬಿತ್ಯಾದಿ ನಿಯಮಗಳನ್ನು ಹಾಕಲಿಕ್ಕೆ ರಾಷ್ಟ್ರವು ಯಾರಿಗೂ ಮಾರಿ ಹೋದದ್ದುಂಟೆ? ಇರಲಿ. ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಜನತೆಯ ಪ್ರತಿನಿಧಿಗಳಾಗಿ ತಿರುಗಾಡುವುದಲ್ಲ, ಸರಕಾರದ ಬಲದ ಮೇಲಿಂದ ಸಂಚರಿಸುವುದು ಎಂಬೀ ಅಂಶವು ಅವರ ಮೇಲಿನ ಭಾಷಣದಿಂದ ಇನ್ನೊಮ್ಮೆ ಸ್ಪಷ್ಟವಾಗುತ್ತದೆ.

೨. ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ವಸಾಹತುಗಳಲ್ಲಿ ವಾಸಿಸುವ ಹಿಂದಿಗಳಿಗೆ ಸಮಾನತೆಯ ಹಕ್ಕನ್ನು ತಂದುಕೊಡಲು ಯತ್ನಿಸುತ್ತಿರುವಾಗ ದಕ್ಷಿಣ ಆಫ್ರಿಕಾ, ಕೆನಿಯಾ, ಮತ್ತು ಫಿಜಿ ಮುಂತಾದ ಕಡೆಗಳಲ್ಲಿ ಹಿಂದಿಗಳ ಸ್ಥಿತಿಯು ಅತ್ಯಂತ ಶೋಚನಿಯವೂ, ಉದ್ವೇಗಕರವೂ ಆಗಿದೆ. ಆ ಸ್ಥಿತಿಯನ್ನು ಹಿಂದಿಗಳು ಪರಿಹರಿಸಲು ಚಳವಳವನ್ನು ಮಾಡಬೇಕೆಂದು ಮಿ. ಸಿ. ಎಫ್. ಎಂಡ್ರ್ಯೂಸರು ಮತ್ತು ಮಿ. ಎಚ್. ಎಲ್. ಪೊಲಾಕ ಇವರಿಬ್ಬರೂ ಸಂಯುಕ್ತ ವಿಜ್ಞಾಪನೆಯನ್ನು ಮಾಡಿಕೊಂಡಿದ್ದಾರೆ. ದಕ್ಷಿಣ ಆಫ್ರಿಕದ ನೇತಾಳಪ್ರಾಂತವು ಈ ಹೊತ್ತು ಯಾವ ಈ ಸಮೃದ್ಧಸ್ಥಿತಿಗೆ ಬಂದು ತಲಪಿದೆಯೊ ಅದಕ್ಕೆ ಹಿಂದಿಮಜೂರರೆ ಕಾರಣರು. ಹಿಂದಿ ಮಜೂರರು ಪರಿಶ್ರಮವನ್ನು ಪಡುತ್ತಿರಲಿಲ್ಲವಾದರೆ ಇಷ್ಟರೊಳಗೆ ನೇತಾಳಪ್ರಾಂತವು ದಿವಾಳಿಯಾಗುತ್ತಿತ್ತು. ಈಗ ಅಲ್ಲಿರುವ ಹಿಂದಿಗಳು ಮೂರು ಮುಕ್ಕಾಲು ವೀಸ ಅಲ್ಲೆ ಜನ್ಮವೆತ್ತಿದವರು. ಅದೆ ಅವರಿಗೆ ಈಗ ಸ್ವದೇಶವಾಗಿದೆ. ಯುರೋಪಿಯನರು ದಕ್ಷಿಣಆಫ್ರಿಕದಲ್ಲಿ ಮೇಲಿಂದ ಮೇಲೆ ಬಂದು ನುಗ್ಗುತಿದ್ದಾರೆ. ಹಿಂದಿಗಳನ್ನು ಹೊಸದಾಗಿ ಬರಲು ನಿಲ್ಲಿಸಿ ಮತ್ತು ಯುರೋಪಿಯನರನ್ನು ಬರಲು ಬಿಟ್ಟಿರುವುದರಿಂದ ಯುರೋಪಿಯನರ ಸಂಖ್ಯೆಯು ಹೆಚ್ಚಾಗಿದೆ. ಹಿಂದಿಗಳು ನೇತಾಳದ ಅಭಿವೃದ್ಧಿಗಾಗಿ ಮಾಡಿದ ಉಪಕಾರ, ಅವರು ಬಹು ಸಂಖ್ಯಾಕರಾಗಿ ಆಫ್ರಿಕದಲ್ಲಿ ಜನ್ಮವೆತ್ತಿರುವ ಈ ಸಂಗತಿಗಳನ್ನು ಮರೆತು,ಇನ್ನು ಮುಂದೆ ದಕ್ಷಿಣ ಆಫ್ರಿಕದಲ್ಲಿ ಯಾವ ಹಿಂದಿಯೂ ವಸಾಹತಿಗೆ ಬರಬಾರದು, ಇರುವ ಹಿಂದಿಗಳನ್ನು ಊರ ಹೊರಗೆ ಹಾಕಬೇಕು, ಈ ಶರ್ತಕ್ಕೆ ಒಳಪಡದಿದ್ದರೆ ಅವರನ್ನು ಶಿಕ್ಷಿಸಬೇಕು ಎಂಬಿತ್ಯಾದಿ ನಿಯಮಗಳನ್ನು ದಕ್ಷಿಣ ಆಫ್ರಿಕದೊಳಗಿನ ಯುರೋಪಿಯನ ಸಮಾಜಗಳು ತಯಾರಿಸಿಕೊಂಡಿವೆ. ಈ ತರದ ನಿಯಮಗಳು ಜಾರಿಯಲ್ಲಿ ಬರಹೊರಟರೆ ಅಲ್ಲಿರುವ ಹಿಂದಿಗಳಿಗೆ ಯಾವ ಅವಸ್ಥೆಯು ಬಂದೀತೊ ಅದನ್ನು ನಾಯಿಕೂಡ ಮೂಸಲಿಕ್ಕಿಲ್ಲ! ನೇತಾಳ ಪ್ರಾಂತ್ಯದಲ್ಲಿ ಕಠಿಣವಾದ ಕಾನೂನುಗಳನ್ನು ಮಾಡಿ ಹಿಂದಿಜನಗಳ ಹಕ್ಕುಗಳನ್ನು ಅಪಹಾರಮಾಡಲು ಅಲ್ಲಿಯ ಯುರೋಪಿಯನ್ ಸಮಾಜಗಳು ಕಾರಣಗಳಾಗಿವೆ. ಕೆನಿಯಾದಲ್ಲಿಯ ಅವಸ್ಥೆಯೆಂತು ಇದಕ್ಕಿಂತಲೂ ಭಯಂಕರವಾಗಿದೆ. ವಾಸ್ತವವಾಗಿ ನೋಡಿದರೆ ಕೆನಿಯಾ ಸಂಕಾರವು ಇತರ ಕೊಲನಿಗಳಂತೆ ಸ್ವತಂತ್ರವಲ್ಲ; ಅದು ಕ್ರೌನ್‌ಕೊಲನಿಯು, ಎಂದರೆ, ಕೆಬಿನೆಟಿನ ಅಧೀನದಲ್ಲಿರುವ ವಸಾಹತು. ಆದರೂ ಅಲ್ಲಿ ಕೂಡ ಹಿಂದಿಗಳಿಗೆ ಉಪದ್ರಕರವಾದ ಕಾನೂನುಗಳು ಒಳಗಿಂದೊಳಗೆ ತಯಾರಾಗುತ್ತಿವೆ ಎಂದು ಗೊತ್ತಾಗುತ್ತದೆ. ಹಿಂದಿಗಳಿಗೆ ಸಮಾನತೆಯ ಹಕ್ಕಿರಬೇಕೆಂದು ಇಂಪೀರಿಯಲ್ ಕೊನ್ಫರೆನ್ಸಿನಲ್ಲಿ ಪಾಸಾದ ಠರಾವನ್ನು ಬ್ರಿಟಿಷ್ ಸರಕಾರವು ಅಂಗೀಕರಿಸುತ್ತ ಒಳಗಿಂದೊಳಗೆ ಇಂಥ ಘಾತಕ ಮತ್ತು ಬಾಧಕ ಕಾನೂನುಗಳಿಗೆ ಉತ್ತೇಜನವನ್ನು ಕೊಡುವುದು ನಾಮದಾರ ಶ್ರೀನಿವಾಸ ಶಾಸ್ತ್ರಿಗಳಿಗೆ ಸಮ್ಮತವೊ? ಕೆನಿಯಾ ಪ್ರಾಂತ್ಯವನ್ನು ಸಂಪೂರ್ಣ ಬ್ರಿಟೀಷರದ್ದಾಗಿ ಮಾಡಬೇಕೆಂಬ "ಮಸಲತು" (ದುರಾಲೋಚನೆ) ನಡೆದಿದೆ. ಇದು ಶ್ಲಾಘ್ಯವೊ ಹೇಗೆ? ಫಿಜಿಯಲ್ಲಿ ಸಹ ಇಂಥ ಬಾಧಕ ಸಂಗತಿಗಳು ಆಗುತ್ತಿವೆ. ಈ ಎಲ್ಲ ವಿಷಯಗಳನ್ನು ಒಟ್ಟಿಗೆ ಸುರಿದು ಆ ಸರವನ್ನು ನಾಮದಾರ ಶಾಸ್ತ್ರಿಗಳಿಗೆ ಸಮರ್ಪಿಸುವುದು ಉಚಿತವಾಗಿದೆ!!

೩. ವಸಾಹತುಗಳಲ್ಲಿ ಹಿಂದಿಗಳನ್ನು ಕೆಟ್ಟ ರೀತಿಯಿಂದ ನಡಿಸುವಂತೆ ಹಿಂದುಸ್ಥಾನ ಸರಕಾರವು ಹಿಂದಿ ಕೈದಿಗಳನ್ನು ಹಿಂದುಸ್ಥಾನದ ಜೈಲುಗಳಲ್ಲಿ ಹೀನ ರೀತಿಯಿಂದ ನಡಿಸುತ್ತದೆ ಎಂದು ಪತ್ರಿಕೆಗಳಲ್ಲಿ ಆಗಾಗ್ಗೆ ವ್ಯಕ್ತವಾಗುತ್ತಿದೆ. ನೊನ್ ಕೊ ಒಪರೇಶನಿನ ಈ ಸಮಯದಲ್ಲಿ ಅನೇಕ ಸುಶಿಕ್ಷಿತರು ರಾಜಕೀಯ ಕೈದಿಗಳಾಗಿ ಜೈಲಿಗೆ ಹೋಗಿರುವರು. ಇಂಥವರನ್ನು ಒಳ್ಳೆಯ ರೀತಿಯಿಂದ ನಡಿಸುವುದು ಸರಕಾರದ ಕರ್ತವ್ಯವು. ಆದರೆ ಅಲ್ಲಿ ನಡಿಸುವ ಕ್ರಮವನ್ನು ಕೇಳುವಾಗ ಅಧಿಕಾರಿಗಳು ತಮ್ಮ ವಿವೇಕವನ್ನು ಹೇಗೆ ಮೂಲೆಗೊತ್ತಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಮುಳಸಿ ಪೇಟೆಯ ಸತ್ಯಾಗ್ರಹಿ ಕೈದಿಗಳನ್ನು ಏರವಡೆಯ ಜೈಲಿನಲ್ಲಿ ಅಮಾನುಷ ರೀತಿಯಿಂದ ನಡಿಸುತ್ತಿದ್ದಾರೆ ಎಂದು ಕೇಸರಿ ಪತ್ರದಿಂದ ತಿಳಿದು ಬರುತ್ತದೆ. ಅದೆ ಜೈಲಿನಲ್ಲಿರುವ ಮಹಾತ್ಮಾ ಗಾಂಧಿಗಳ ಭೇಟಿಯನ್ನು ತೆಕ್ಕೊಂಡ ಮಿ. ಮಥುರಾದಾಸರೆಂಬವರು ಗಾಂಧಿಗಳ ಜೈಲುವಾಸದ ಸಂಗತಿಯನ್ನು ಪ್ರಕಟಿಸಿದ್ದಾರೆ. ಅದರ ಮೇಲಿಂದ ಅವರಿಗೆ ಅನ್ನೊಂದು ಬೆಳಕಿಲ್ಲದ ಕೋಣೆಯನ್ನು ಕೊಟ್ಟಿದ್ದಾರೆಂದೂ, ಅವರಿಗೆ ತಿರುಗಾಟಕ್ಕೂ ಹೆಚ್ಚಿನ ಜಾಗೆಯು ಇಲ್ಲವೆಂದೂ, ಮನೆಯವರಿಗೆ ಮತ್ತು ಸ್ನೇಹಿತರಿಗೆ ಬರೆದ ಪತ್ರಗಳಲ್ಲಿ ಜೈಲ ಅಧಿಕಾರಿಗಳು ಆಕ್ಷೇಪವನ್ನು ಎತ್ತಿದ್ದರೆಂದೂ ತಿಳಿದುಬರುತ್ತದೆ. ಜೈಲಿನಲ್ಲಿ ಈ ರೀತಿಯಿಂದ ರಾಜಕೀಯ ಕೈದಿಗಳನ್ನು ನಿಷ್ಠೂರವಾಗಿ ನಡಿಸುವುದು ಸರಕಾರದ ಗೌರವಕ್ಕೆ ಮತ್ತು ಯೋಗ್ಯತೆಗೆ ಚಂದವಲ್ಲ ಮತ್ತು ಒಪ್ಪತಕ್ಕದ್ದಲ್ಲವೆಂದು ಡೆಕ್ಕನ ಸಭೆಯವರು ಕೂಡ ತಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಿದ್ದಾರೆ. ಇತರರ ಮಾತೂ ಹೇಗೂ ಇರಲಿ, ಡೆಕ್ಕನ್ ಸಭೆಯಂಥ ಶಾಂತಪಕ್ಷದ ಸಂಸ್ಥೆಯ ಬುದ್ಧಿವಾದವು ಸರಕಾರದ ಪ್ರಯೋಜನಕ್ಕೆ ಬಿದ್ದೀತೆಂದು ನೆನಸುತ್ತೇವೆ. ಅದು ಕೂಡ ಇತರ ಮಾತಿನಂತೆಯೆ ವ್ಯರ್ಥವಾಗುವ ಪಕ್ಷದಲ್ಲಿ ಸರಕಾರದ ಈ ದುರಭ್ಯಾಸಕ್ಕೆ ಬೇರೆ ಉಪಾಯವಿಲ್ಲ. ಜೈಲಿನಲ್ಲಿ ಹಾಕುವುದರ ಮುಖ್ಯ ಉದ್ದೇಶವು ದಂಡನೆ ಎಂಬುದು ಹೌದು. ಮತ್ತು ಅಲ್ಲಿ ಅವರನ್ನು ನೆಂಟರಂತೆ ನಡಿಸಬೇಕೆಂದು ಹೇಳುವದು ತೀರಾ ಅನುಚಿತವು. ಈ ಎರಡು ಮಾತುಗಳು ನಿಜವಾದರೂ ತಾರತಮ್ಯ ಬುದ್ಧಿಯನ್ನು ಬಿಟ್ಟು ಶತ್ರುಗಳನ್ನು ನಡಿಸುವಂತೆ ನಡಿಸುವುದು, ಯೋಗ್ಯವೆಂದು ನೆನಸುವುದು ತಪ್ಪಲ್ಲವೆ?

೪. ಕರ್ನಾಟಕದಲ್ಲಿ ಸುಪ್ರಸಿದ್ಧ ವಕ್ತೃಗಳೂ, ಲೇಖಕರೂ ಆದ ಮ. ರಾ. ಜಯರಾವ ದೇಶಪಾಂಡೆಯವರು ಕಳೆದ ವಾರ ಮರಣವನ್ನು ಹೊಂದಿದರೆಂದು ತಿಳಿಸಲು ನಾವು ತುಂಬಾ ವ್ಯಸನಪಡುತ್ತೇವೆ. ಕಳೆದ ಫೆಬ್ರವರಿಯಲ್ಲಿ ಇಲ್ಲಿ ಪ್ರಾಂತಿಕ ಪರಿಷತ್ತು ಜರುಗಿದಾಗ ಜಯರಾವ ದೇಶಪಾಂಡೆಯವರು ಬಂದಿದ್ದರು. ಆಗ ಅವರ ಭಾಷಣವನ್ನು ಕೇಳಿದವರನೇಕರು ಈ ಆಕಸ್ಮಿಕ ಮೃತ್ಯುವಾರ್ತೆಯನ್ನು ಕೇಳಿ, ವ್ಯಸನಾಕ್ರಾಂತರಾಗದೆ ಇರರು. ಅವರು ಇಲ್ಲಿ ಬಂದಾಗಲೆ ಅವರ ಶರೀರ ಪ್ರಕೃತಿಯು ಕುಗ್ಗಿಹೋಗಿತ್ತು. ಅನಂತರ ಅವರ ಮೇಲಿನ ರಾಜಕೀಯ ಖಟ್ಲೆಯಲ್ಲಿ ಶಿಕ್ಷೆಯಾಗಿ ಅವರಿಗೆ ಕಾರಾಗೃಹವಾಸವಾಯಿತು. ಅವರ ಪ್ರಕೃತಿಯು ಇನ್ನಷ್ಟು ಅಸ್ವಸ್ಥವಾಯಿತು. ಅವರು ಈ ಮೂಲಕ ಬಿಡುಗಡೆಹೊಂದಿ ಹೊರಗೆ ಬಂದರೂ ಕೊನೆಗೆ ಮೃತ್ಯುವಿಗೆ ತುತ್ತಾದರು. ವಿಜಾಪುರದ "ಕರ್ನಾಟಕವೈಭವ" ಪತ್ರಿಕೆಯ ಸಂಪಾದಕತ್ವವನ್ನು ವಹಿಸಿ ದೇಶಪಾಂಡೆಯವರು ತಮ್ಮ ಸ್ಫೂರ್ತಿದಾಯಕವಾದ ಮತ್ತು ದೇಶಭಕ್ತಿ ಪ್ರಚುರವಾದ ಲೇಖಗಳಿಂದ ಕನ್ನಡಿಗರ ಹೃದಯಗಳನ್ನು ತಮ್ಮ ಕಡೆಗೆ ಆಕರ್ಷಿಸಿಕೊಂಡಿದ್ದರು. ದೇಶಭಕ್ತಿಗೆ ಧ್ಯೇಯಭೂತವಾದ ಸ್ವರಾಜ್ಯವೆ ಜಯರಾಯರ ವ್ರತವಾಗಿತ್ತೆಂದು ಅವರ ಪ್ರತಿಯೊಂದು ಲೇಖದಿಂದ ಸ್ಪಷ್ಟವಾಗುತ್ತಿತ್ತು. ಇಂಥಾ ಉತ್ತಮ ಲೇಖಕರೂ ಸುಪ್ರಸಿದ್ಧ ವಕ್ತೃಗಳೂ, ಅತ್ಯಂತ ದೇಶವತ್ಸಲರೂ, ಪಾಶ್ಚಾತ್ಯ ಪೌರಸ್ತ್ಯ ವಿದ್ಯಾಭೂಷಿತರೂ ಆದ ಜಯರಾಯ ದೇಶಪಾಂಡೆಯವರು ಈಗಿನ ನಾಜೂಕು ಪರಿಸ್ಥಿತಿಯಲ್ಲಿ ಕಾಲಾಧೀನರಾದದ್ದು ಕರ್ನಾಟಕದ ದೊಡ್ಡ ದುರ್ದೈವವೆ ಸರಿ! ಇವರ ಮೃತ್ಯುವಿನಿಂದ ಬರಿದಾದ ದೇಶಭಕ್ತರ ಜಾಗೆಯು ಅಷ್ಟೆ ಯೋಗ್ಯತೆಯ ಮನುಷ್ಯನಿಂದ ಬಹು ಬೇಗನೆ ತುಂಬಿರಲಿಕ್ಕಿಲ್ಲವಲ್ಲ ಎಂಬೀ ಆಲೋಚನೆಯು ಮನಸ್ಸಿನಲ್ಲಿ ಬಂದು ತುಂಬಾ ಉದ್ವೇಗವುಂಟಾಗುತ್ತದೆ. ಜಯರಾಯ ದೇಶಪಾಂಡೆಯವರ ಸುಸಂಸ್ಕೃತವಾದ ಆತ್ಮವು ಮೋಕ್ಷದ ಸ್ವರಾಜ್ಯ ಸುಖವನ್ನು ಅನುಭವಿಸಲಿ ಇದೆ ನಮ್ಮ ಪ್ರಾರ್ಥನೆ. !!

ಮಂಗಳೂರು.

ಪಟ್ಟಣದಲ್ಲಿ ಹಲವು ಕಡೆಗಳಲ್ಲಿನ ತೆಂಗಿನ ಮರಗಳಿಗೆ ಒಂದು ವ್ಯಾಧಿಯು ತಗಲಿರುವುದಷ್ಟೆ. ಇದನ್ನು ಹೇಗೆ ನಿವಾರಣೆಮಾಡಬಹುದೆಂಬುದನ್ನು ಆಲೋಚಿಸುವರೆ ಬರುವ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಕೊಸ್ಮೋಪೊಲಿಟನ್ ಕ್ಲಬ್ಬಿನಲ್ಲಿ ಒಂದು ಸಭೆ ಜರಗುವುದು.

ಗೀತಾ ತತ್ವಜ್ಞಾನವನ್ನು ಕುರಿತು ಕೆಲವು ಕಾಲದ ವರೆಗೆ ಪ್ರತಿ ಶುಕ್ರವಾರ ಮತ್ತು ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಪಂಡಿತ ಭವಾನಿಶಂಕರ ರಾಯರು ಭಾಷಣಮಾಡುವರು.

ಮಂಗಳೂರು ತಾಲೂಕು ಬೋರ್ಡಿನ ಈ ತಿಂಗಳ ಅಧಿವೇಶನವು ಬರುವ ತಾ. ೧೪ನೇ ಶನಿವಾರ ಮಧ್ಯಾಹ್ನ ೩ ಗಂಟೆಗೆ ಸದರಿ ತಾಲೂಕು ಬೋರ್ಡು ಆಫೀಸಿನಲ್ಲಿ ಕೂಡುವುದು.

ಆನರರಿ ಬೆಂಚ್‌ಮೆಜಿಸ್ಟ್ರೇಟರ ಪದವಿಗೆ ಮ|| ರಾ|| ರಾ|| ಎಮ್. ಕೆ. ಬಸಪ್ಪನವರು ರಾಜಿನಾಮೆಯನ್ನು ಕೊಟ್ಟಿರುವುದರಿಂದ ಇತ್ತಲಾಗಿ ಕೆಲಸದಿಂದ ನಿವೃತ್ತರಾಗಿರುವ ಹಜೂರು ಶಿರಸ್ತೆದಾರ ಮ|ರಾ| ಯಂ. ಅಚ್ಚುತಯ್ಯನವರು ಈ ಹುದ್ದೆಗೆ ನೇಮಕಪಟ್ಟಿರುವರು.

ಮ|| ರಾ|| ನಾರಾಯಣ ಅಯ್ಯರರು ಹಂಗಾಮಿಯಾಗಿ ಇಲ್ಲಿಯ ಡಿಸ್ಟ್ರಿಕ್ಟ ಮತ್ತು ಸೆಶನ್ಸ್ ಜಡ್ಜರಾಗಿ ನೇಮಕಪಟ್ಟಿರುವರು.

ಇಲ್ಲಿಯ ಗವರ್ನಮೆಂಟ ಕೊಲೇಜಿನ ಸಂಸ್ಕೃತಉಪಾಧ್ಯಾಯರಾದ ಮ|| ರಾ|| ಕೆ. ಎಲ್. ವ್ಯಾಸರಾಯ ಶಾಸ್ತ್ರಿಗಳವರು ಈ ವರುಷ ಶಿರೋಮಣಿಪರೀಕ್ಷೆಯಲ್ಲಿ ಪಾಸಾಗಿರುವರು.

ಈ ಮಳೆಗಾಲದಲ್ಲಿ ಮಕ್ಕಳಿಗೆ ತೊಡಿಸಲು ಯೋಗ್ಯವಾದ [illegible] ಅಂಗಿಗಳನ್ನು ಅತೀ ಬಡವರಿಗೆ ಹಂಚಲು ದಿ. ಇಂಡಿಯನ್ ರೆಡ್ ಕ್ರೊಸ ಸೊಸ್ಯಾಟಿಯ ಮದರಾಸ ಶಾಖೆಯವರು ಇಲ್ಲಿಯ ಡಿಸ್ಟ್ರಿಕ್ಟ ಹೆಲ್ತ ಎಂಡ್ ವೆಲ್ಫೆರ್ ಎಸೋಸಿಯೇಶನಿನ ಬಳಿಗೆ ಕಳುಹಿಸಿರುವರಂತೆ. ಇವುಗಳನ್ನು ಅಪೇಕ್ಷಿಸುವವರು ಸುಪರವ್ಯಾಜರ ಒಫ್ ಮಿಡ್ ವ್ಯಾಪ್ಸ ಇವರಿಗೆ ಬರಕೊಳ್ಳುವುದು.

ಬೆಂದೂರಿನಲ್ಲಿ ಹೊಸತಾಗಿ ಕಟ್ಟಿರುವ ಸೆಂಟ್ ಎನ್ಸ್ ಕೊನ್ವೆಂಟಿನ ಚೇಪಲು ಮಳೆಯ ದೆಸೆಯಿಂದ ಕುಸಿದು ಬಿತ್ತು.

ಲೇಡಿ ಡೊಕ್ಟರ ಮಿಸ್. ದೋಲಾರ ತಂಗ ಎಡಿಂಬರ್ಗ ರೊಯಲ್ ಕೊಲೇಜ್ ಒಫ್ ಸರ್ಜನ್ಸ್ ಆಗಿ ಚುನಾಯಿಸಲ್ಪಟ್ಟಿರುವರು. ಇಂಡಿಯನ್ ಸ್ತ್ರೀ ಈ ಹುದ್ದೆಯನ್ನು ಪಡೆದವರು ಇವರೆ ಮೊದಲನೆಯರಂತೆ.

ಬಾಡಿಗೆಗೆ ಬಿಡುವ ಮೊಟಾರುಕಾರುಗಳಿಗೆ ಕೊಡುವುದು ಮೊದಲಾದ ನಿಬಂಧನೆಗಳನ್ನು ತಯಾರಿಸಲು ಬೋರ್ಡಿನವರಿಂದ ನೇಮಕಪಟ್ಟ ಕಮ್ಮಿಟಿಗೆ ಮಂಗಳೂರು ಪಾಲಿಟಿಯ ಕಡೆಯಿಂದ ಮ|| ರಾ|| ಎನ್. ಗಣಪತಿರಾವ್ ಮ್ಯುನ್ಸಿಪಲ್ ಚೆಯರ್ಮೆನ್ ಎನ್. ವೆಂಕಟರಾವ್ ಇವರನ್ನು ಸೂಚಿಸಲಾಗಿಯದೆ.

ಪೋಲಿಸ ಲೈನ್‌ಮೈದಾನಿನ ಹಿಂಬದಿಯಲ್ಲಿ ಪಾಳು ಸ್ಥಳದಲ್ಲಿ ಒಂದು ಧರ್ಮಶಾಲೆಯನ್ನು ಕಟ್ಟಿಸಲು ಮ|| ರಾ|| ಅತ್ತಾ ದೇವಪ್ಪ ಪೂಂಜರು ಆ ಸ್ಥಳವನ್ನು ದರಕಾಸ್ತಿಗೆ ಪಡಿಯುವರಂತೆ.

ಮ್ಯುನ್ಸಿಪಲ್ ಕೌನ್ಸಿಲರರಾಗಿ ನೇಮಕಪಟ್ಟ ರಾ| ಕರುಣಾಕರನ್ ವಕೀಲ, ಇವರು ಈ ವರೆಗೆ ಕೌನ್ಸಿಲಿಗೆ ಹಾಜರಾಗಿ ರಾಜನಿಷ್ಠೆಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಿಲ್ಲವಂತೆ. ಈಗ ಇವರ ಬದಲಿಗೆ ಅಸ್ಪೃಶ್ಯವರ್ಗದವರ ಪರವಾಗಿ ಡಿಸ್ಟ್ರಿಕ್ಟಬೋರ್ಡ ಮೆಂಬರರಾಗಿ ನೇಮಕಪಟ್ಟ ಅಂಗರರನ್ನು ಈ ಹುದ್ದೆಗೆ ನೇಮಕಮಾಡಲಾಗುವುದಾಗಿ ವದಂತಿ ಇದೆ.

ಈ ವರುಷ ಸುಬ್ರಾಯ ಪೈ ಮೆಮೋರಿಯಲ್ ಫಂಡಿನಿಂದ ಕೆಳಗಿನ ವಿದ್ಯಾರ್ಥಿಗಳಿಗೆ ಧನಸಹಾಯವಮಾಡಿದೆ. ವಿಕ್ಟೋರಿಯಾ ಟೆಕ್‌ನಿಕಲ್ ಇನ್ಸಟಿಟ್ಯೂಟನಲ್ಲಿ ಕಲಿಯುವ ಪಿ. ರಾಘವೇಂದ್ರ ಪೈ ತಿಂಗಳಿಗೆ ೨೦ ರೂ. ಎಮ್. ಬಿ. ಬಿ. ಎಸ್. ಕಲಿಯುವ ಕೆ. ವಿಟ್ಠಲದಾಸಪೈ ತಿಂಗಳಿಗೆ ರೂ. ೨೦. ಮುಲ್ಕಿ ನಾರಾಯಣ ಕಾಮತ್ ಇಂಜಿನಿಯರಿಂಗ್ ವಿದ್ಯಾರ್ಥಿ ತಿಂಗಳಿಗೆ ರೂ. ೧೫. ಎಲ್. ಎಮ್. ಪಿ. ಕಲಿಯುವ ಎಮ್. ವೆಂಕಟೇಶ ಹೆಗ್ಗಡೆ, ಬಿ. ಎಚ್. ಪದ್ಮನಾಭಪೈ, ಎಮ್. ವೆಂಕಟೇಶ ಮಲ್ಯ ಇವರಿಗೆ ಪ್ರತಿ ಒಬ್ಬರಿಗೆ ತಿಂಗಳಿಗೆ ರೂ. ೧೫. ಬಿ. ಎ. ಕಲಿಯುವ ಕೊಚ್ಚಿಕಾರ ರಾಘವ ಪೈ, ಎಲ್. ಎಮ್. ಪಿ. ಕಲಿಯುವ ಬಿ. ಮಾಧವ ಬಾಳಿಗ, ಒಬ್ಬರಿಗೆ ತಿಂಗಳಿಗೆ ರೂ. ೧೦. ಮತ್ತು ಬಿ. ಎ. ಕಲಿಯುವ ಯ ಲಕ್ಷ್ಮಣ ಶೆಣೈ ತಿಂಗಳಿಗೆ ರೂ. ೧೦ ಮತ್ತು ಪರೀಕ್ಷೆಗೆ ಕಟ್ಟು ಬಗ್ಗೆ ರೂ. ೩೬. ಈ ವಿದ್ಯಾರ್ಥಿಗಳ 'ಪ್ರೊಗ್ರೆಸ್ ಸರ್ಟಿಫಿಕೇಟು'ಗಳನ್ನು ನೋಡಿ ಈ ವೇತನಗಳನ್ನು ಕೊಡಲಾಗುವುದರಿಂದ ಈ ವರೆಗೆ ಸರ್ಟಿಫಿಕೇಟುಗಳನ್ನು ಕಳುಹಿಸದೆ ಇದ್ದವರು ಕೂಡಲೇ ಕಳುಹಿಸಬೇಕಾಗಿದೆ. ಇದಲ್ಲದೆ ಮುಂಬಯಿ ಕಲಾ ಶಾಲೆಯಲ್ಲಿ ಕಲಿಯುವ ಎಮ್. ವಿಟ್ಠಪ್ಪ ಶೆಣೈ ತಿಂಗಳಿಗೆ ರೂ. ೨೦. ಮುಂಬಯಿ ಕೊಮರ್ಸ ಕೋಲೇಜಿನಲ್ಲಿ ಕಲಿಯುವ ಟಿ. ನಾರಾಯಣ ಶೆಣೈ ತಿಂಗಳಿಗೆ ರೂ. ೨೦. ಎಲ್. ಎಮ್. ಪಿ. ಕಲಿಯುವ ಬಿ. ಎಚ್. ವಾಸುದೇವ ಪೈ ತಿಂಗಳಿಗೆ ರೂ. ೧೫.

ಇನ್ನೂ ಒಂದೆರಡು ಹಪ್ತೆಗಳಲ್ಲಿ ಹಳ್ಳಿಗಳಲ್ಲಿ ಸಾಗುವಳಿ ಕೆಲಸವು ಮುಗಿಯುವುದು. ಅನಂತರ ಬೇಸಾಯ ಕೆಲಸದವರಿಗೆ ಯಾವ ಕೆಲಸವೂ ಇರುವುದಿಲ್ಲ. ಆದುದರಿಂದ ಇವರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕೂ ಕೊಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮದಂತೆ ಖಾದಿಯ ಬೆಳವಣಿಗೆಯಾಗುವಂತೆಯೂ ಈ ಜನರಲ್ಲಿ ರಾಟೆಯ ಪ್ರಸಾರವಾಗುವಂತೆ ಪ್ರಯತ್ನಿಸಬೇಕು. ಇದಲ್ಲದೆ ವರ್ಷಾಕಾಲವು ಮುಗಿಯುವಾಗ, ಎಂದರೆ, ಆಗೋಸ್ತು ಆಖೈರಿಯೊಳಗೆ ಜಿಲ್ಲಾ ಕೊಂಗ್ರೆಸ ಕಮ್ಮಿಟಿಗಳು ಹತ್ತಿ ಬೀಜವನ್ನು ತರಿಸುವರು, ಮತ್ತು ಈ ಬೀಜವು ಜಿಲ್ಲೆಯಲ್ಲಿ ಬಿತ್ತಲು ಅನುಕೂಲವಿದ್ದ ಸ್ಥಳಗಳಲ್ಲಿ ಬಿತ್ತಲು ಒದಗಿಸುವ ವಿಲೆವಾರಿ ಮಾಡುವರು. ಇದನ್ನು ಜನರಿಗೆ ಹಂಚಿ ಹತ್ತಿಯ ಬೆಳೆಯು ವೃದ್ಧಿಯಾಗುವಂತೆ ಮಾಡಬೇಕು ಎಂದು ಮ. ರಾ. ಕಾರ್ನಾಡ ಸದಾಶಿವರಾಯರು ಜಿಲ್ಲೆಯ ಎಲ್ಲಾ ತಾಲೂಕು ಮತ್ತು ಇತರ ಕೊಂಗ್ರೆಸ್ ಕಮ್ಮಿಟಿಗಳಿಗೆ ಈ ಮೂಲಕ ವಿನಂತಿ ಮಾಡಿಕೊಳ್ಳುತ್ತಾರೆ.

ಮುನ್ಸಿಪಾಲಿಟಿಯ ಸರಹದ್ದಿನಲ್ಲಿರುವ ಶೇಂದಿ ಶರಾಬು ಗಡಂಗುಗಳನ್ನು ತೆಗೆದುಬಿಡಬೇಕೆಂಬ ಠರಾವು ಮುನ್ಸಿಪಲ್ ಕೌನ್ಸಿಲಿನ ಬರುವ ಮಿಟಿಂಗಿನ ಮುಂದೆ ಇಡಲಾಗುವುದೆಂದು ಕೇಳುತ್ತೇವೆ. ಈ ಠರಾವಿಗೆ ಜನರ ಬೆಂಬಲವು ಸಿಗುವಂತೆ ಶೇಂದಿ ಶರಾಬು ಅಂಗಡಿಗಳನ್ನು ಪಟ್ಟಣದಿಂದ ತೆಗೆಯಬೇಕೆಂಬ ವಿನಂತಿ ಪತ್ರಕ್ಕೆ ಮುನ್ಸಿಪಲ್ ತೆರಿಗೆ ಕೊಡುವವರ ಸಹಿಯನ್ನು ತೆಗದುಕೊಳ್ಳುತ್ತಿದ್ದಾರೆ.

ಗೌಡಸಾರಸ್ವತ ಬ್ರಾಹ್ಮಣರ ಗುರುಗಳಾದ ಕಾಶೀ ಮಠ ಸಂಸ್ಥಾನದ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು ಬಂಟವಾಳದಿಂದ ಕೊಚ್ಚಿಗೆ ತೆರಳಿರುವರು.

ಈ ಜಿಲ್ಲೆಯ ಒಳಗ್ರಾಮಗಳಲ್ಲಿ ಕೆಲವು ಭೂಮ್ಯಾಲಿಕರು ತಮ್ಮ ಮೂಲದ ಹೊಲೆಯರು ಭಟ್ಟಕ್ಕೆ ಯಾ ಬೇರೆ ಭೂಮ್ಯಾಲಿಕರ ಹತ್ತಿರ ಕೂಲಿ ಕೆಲಸದ ಬಗ್ಗೆ ಹೋಗುವಾಗ ೧೯೧೮ನೇ ಇಸವಿ ಜನವರಿ ತಿಂಗಳ ಜಿಲ್ಲಾಗಜೇಟಿನಲ್ಲಿ ತಾ. ೧೮—೧—೧೯೧೮ನೆ ನೋಟೀಸು ಪಾಸುಮಾಡಿದ್ದಾಗ್ಯೂ ಅವರಿಂದ ಬಾರಬಡ್ಡಿ ಎಂಬ ತೆರಿಗೆಯನ್ನು ವಸೂಲುಮಾಡುತ್ತಾರೆಂದೂ ಜಿಲ್ಲಾ ಮೇಜಿಸ್ಟ್ರೇಟರವರ ತಿಳುವಳಿಕೆಗೆ ಬಂದಿರುತ್ತದೆ. ಈ ತೆರಿಗೆಯನ್ನು ಹೊರಿಸುವದು ಕಾನೂನಿಗೆ ವಿರೋಧವಾದ್ದರಿಂದಲೂ ಹಾಗೆ ಮಾಡುವದು ಕ್ರಿಮಿನಲ್ ತಕ್ಸೀರು ಆಗುವದರಿಂದಲೂ ಅಂಥಾ ಭೂಮ್ಯಾಲಿಕರು ಈ ತೆರಿಗೆಯನ್ನು ವಸೂಲು ಮಾಡುವದರಿಂದ ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗುತ್ತಾರೆಂದು ಈ ಮೂಲಕ ಅವರನ್ನು ಎಚ್ಚರಿಸಲಾಗುತ್ತದೆ ಎಂದು ಜಿಲ್ಲಾ ಮೆಜಿಸ್ಟ್ರೇಟರ ಪ್ರಕಟಣೆ ಹೊರಟಿದೆ.

ಚೇಳಿನ ವಿಷ ಇಳಿಸುವ ಉತ್ತಮ ಉಪಾಯ.

(ಕೊಂಕಣ ಕೇಸರಿ ಸದಾಚಾರ ಎಂಬ ಮರಾಠಿ ಮಾಸಿಕ ಪುಸ್ತಕದಲ್ಲಿಯ ಮಾಹೆ ಸೆಂಬರ ೧೯೨೧ನೇ ಅಂಕದಲ್ಲಿಯ ಮಾಹಿತಿಯ ಮೇಲಿಂದ)

(ಲೇಖಕ:-ನಾರಾಯಣ ಜಗನ್ನಾಥ ಗೋಖಲೆ, ಕಾಮಗಾರ ಮುಂಡಗೋಡ ಫಾರ್ಮ)

ನಮ್ಮ ಈ ಕರ್ನಾಟಕ ಪ್ರಾಂತದಲ್ಲಿ ಚೇಳನ್ನು ನೋಡದವರು ಇರಲಿಕ್ಕಿಲ್ಲ. ಚೇಳು ಕಚ್ಚಿದ ಕೂಡಲೆ ಅದರ ವಿಷ ಏರಿ ಮನುಷ್ಯರಿಗೆ ಅತ್ಯಂತ ವೇದನೆಯಾಗುತ್ತಿರುವುದು, ಎಲ್ಲರಿಗೆ ಗೊತ್ತಿದ್ದ ಮಾತೇ ಸರಿ. ಒಮ್ಮೊಮ್ಮೆ ಚೇಳು ಕಚ್ಚಿ ವಿಷ ಇಳಿಯದೆ ಎರಡೆರಡು ದಿನಗಟ್ಲೆ ಮನುಷ್ಯನು ನರಳುತ್ತಿರುವುದೂ ಉಂಟು. ಚೇಳಿನ ವಿಷ ಇಳಿಸುವ ಔಷಧದ ಎಷ್ಟೋ ಜಾಹೀರಾತುಗಳು ವರ್ತಮಾನ ಪತ್ರಗಳಲ್ಲಿ ದಿನಾಲು ಬಂದೇ ಬರುತ್ತವೆ. ಮತ್ತು ಸರಕಾರ ದವಾಖಾನೆಗಳಲ್ಲಿಯೂ, ಖಾಸಗಿ ವೈದ್ಯರಲ್ಲಿಯೂ ಚೇಳಿನ ವಿಷ ಇಳಿಸುವ ಎಷ್ಟೋ ಔಷಧಗಳು ಇರಬಹುದು. ಆದರೆ ಚೇಳಿನ ವಿಷವನ್ನು ೩-೪ ಮಿನೂಟಿನ ಅವಧಿಯಲ್ಲಿ ಇಳಿಸುವ ಉಪಾಯವನ್ನು ಈ ವರೆಗೆ ಯಾರೂ ಗೊತ್ತುಹಚ್ಚಿದ್ದು ತೋರುವುದಿಲ್ಲ. ದವಾಖಾನೆಯಲ್ಲಿಯ ಔಷಧವು ಎಲ್ಲರಿಗೂ ಬೇಕಾದ ವೇಳೆಗೆ ಸಿಕ್ಕುವುದು ದುಸ್ತರವು. ಹಳ್ಳಿಹಳ್ಳಿಗಳಲ್ಲಿಯ ಜನರಿಗಂತೂ ಚೇಳು ಕಡಿದರೆ ಒಂದೊಂದು ದಿವಸ ಕೆಲಸ ಬಿಟ್ಟು ಮನೆಯಲ್ಲಿ ಕೂತುಕೊಳ್ಳಬೇಕಾಗುತ್ತದೆ. ಇತರ ವ್ಯವಸಾಯದಲ್ಲಿರುವ ಜನರಿಗಿಂತಲೂ ಹೊಲದಲ್ಲಿಯ ಕೂಲಿ ಕೆಲಸ ಮಾಡುವ ಜನರಿಗೂ, ಒಕ್ಕಲಿಗರಿಗೂ ಚೇಳುಗಳು ಹೊಲದಲ್ಲಿ, ಮನೆಯಲ್ಲಿ, ದನಗಳ ಕೊಟ್ಟಿಗೆಯಲ್ಲಿ, ಕುಳ್ಳಿನ ಕುಳಬಾನಗಳಲ್ಲಿ, ಮೇವು ಮಿಡಿಚಿ ತರುವಾಗ ಬಣವೆಗಳಲ್ಲಿ, ಗೊಬ್ಬರದಲ್ಲಿ ಕಡಿಯುವುದು ಹೆಚ್ಚು.

ಹಗಲಿರುಳು ಹೊಲಮನೆಗಳಲ್ಲಿ ಓಡ್ಯಾಡುವ ನಮ್ಮ ಒಕ್ಕಲಿಗ ಬಾಂಧವರಿಗೆ ಹಚ್ಚಿದ ಕೂಡಲೆ ವಿಷ ಇಳಿಯುವ ತತ್ಕಾಲಿಕ ಮತ್ತು ಎಲ್ಲರಿಗೂ ಸಾಧ್ಯವಾಗಿರುವ ಅತ್ಯಂತ ಸುಲಭ ಉಪಾಯವು ಗೊತ್ತಿರುವುದು ಅತ್ಯಾವಶ್ಯಕವು. ಆದುದರಿಂದ ನಾವು ಸ್ವತಃ ಅನುಭವ ತೆಗೆದುಕೊಂಡು ಖಾತ್ರಿಲಾಯಖ, ಉಪಾಯವೆಂದು ಕಂಡು ಬಂದಿರುವ ಚೇಳಿನ ವಿಷಇಳಿಸುವ ಸುಲಭೋಪಾಯವನ್ನು ಇದರಲ್ಲಿ ಕೊಟ್ಟಿದ್ದೇವೆ.

ಚೇಳಿನ ವಿಷವನ್ನು ಒಂದೇ ನಿಮಿಷದಲ್ಲಿ ಇಳಿಸುವ ಔಷಧ ತಯಾರಿಸುವ ಕೃತಿಯು.

ಒಂದು ಚಿಮಣಿ ಎಣ್ಣೆಯ ಬಾಟ್ಲಿ ಎಂದರೆ, ಅಜಮಾಸ ೩ ಸೇರು ನೀರು ಹಿಡಿಯುವಂಥಾ ಗಾಜಿನ ಸೀಸೆಯಲ್ಲಿ ಫಕ್ತ ೨೦ ತೊಲೆಯಷ್ಟು ಚಿಮಣಿ ಎಣ್ಣೆಯನ್ನು ಹಾಕಿ, ಆ ಚಿಮಣಿ ಎಣ್ಣೆ ಹಾಕಿದ ಬಾಟ್ಲಿಯೊಳಗೆ ೩೦-೪೦ ಜೀವಂತ ಚೇಳುಗಳನ್ನು ಸಿಕ್ಕಿದ ಹಾಗೆ ಹಿಡಿದುಹಾಕಬೇಕು. ಜೀವಂತಚೇಳು ಚಿಮಣಿ ಎಣ್ಣೆಯಲ್ಲಿ ಬಿದ್ದ ಕೂಡಲೆ ಸಾಯುತ್ತದೆ. ಇಂಥಾ ೩೦-೪೦ ಚೇಳುಗಳು, ಚೇಳುಗಳಿರುವ ಸೀಮೆಯಲ್ಲಿ ಸಿಕ್ಕುವುದು ದುಸ್ತರವಲ್ಲ. ಸದರಿ ಚೇಳುಗಳು ಚಿಮಣಿ ಎಣ್ಣೆಯಲ್ಲಿ ಬಿದ್ದು ಸತ್ತ ನಂತರ ಅದೇ ಬಾಟ್ಲಿಯಲ್ಲಿ ಹಾಗೆಯೆ ಇರಗೊಡಬೇಕು. ಹೀಗೆ ಹಿಡಿದು ಹಾಕಿದ ಚೇಳುಗಳು ಚಿಮಣಿ ಎಣ್ಣೆಯಲ್ಲಿ ೨ ತಿಂಗಳು ಕೊಳೆತು ಅವುಗಳ ಶರೀರದಲ್ಲಿಯ ವಿಷವೆಲ್ಲಾ ಎಣ್ಣೆಯಲ್ಲಿ ಬೆರೆತುಕೊಂಡ ನಂತರ ಈ ಔಷಧ ತಯಾರಾಗುತ್ತದೆ. ಎಂದರೆ ಒಂದು ಸೇರು ಚಿಮಣಿ ಎಣ್ಣೆಯಲ್ಲಿ ೩೦-೪೦ ಚೇಳುಗಳನ್ನು ಹಿಡಿದು ಹಾಕಿದ ಅಜಮಾಸ ೨ ತಿಂಗಳ ನಂತರ ಆ ಬಾಟ್ಲಿಯೊಳಗಿನ ಚಿಮಣಿ ಎಣ್ಣೆಯ ಒಂದೆರಡು ತಟಕು ಅರಳಿಯಲ್ಲಿ ಎದ್ದಿ, ಚೇಳು ಕಡಿದ ಜಾಗೆಗೆ ಒಂದೇ ಒಂದು ಸಾರಿ ಹಚ್ಚಿದರೆ ತೀರಿತು. ಅಳುತ್ತಾ ಬಂದವನು ನಗುತ್ತಾ ಹೋಗುತ್ತಾನೆ. ನಿಮಿಷಾರ್ಧದಲ್ಲಿ ಇಂದ್ರಜಾಲ ಮಂತ್ರ ಹಾಕಿದ ಹಾಗೆ ಚೇಳು ಇಳಿಯುತ್ತದೆ. ಇದನ್ನು ಓದುವ ವಾಚಕರು ಇದು ನಿಜವೆಂತ ನಂಬಲಿಕ್ಕಿಲ್ಲ. ಆದರೆ ಈ ಕೃತಿಯನ್ನು ನಾವು ಸ್ವತಹಾ ಮಾಡಿ ನೋಡಿ ಚೇಳು ಕಡಿಸಿಕೊಂಡು ಬಂದ ಎಷ್ಟೋ ಜನರಿಗೆ ಈ ಔಷಧ ಹಚ್ಚಿ ಪೂರಾ ಪರೀಕ್ಷೆಮಾಡಿ ಮನಗಂಡಿದ್ದೇವೆ ವಾಗಿಯೂ, ಫಾರ್ಮಿನಲ್ಲಿ ಕೆಲಸ ಮಾಡುವ ಎಷ್ಟೋ ಕೂಲಿ ಜನರು ಚೇಳು ಕಡಿಸಿಕೊಂಡಾಗ್ಗೆ ಇದೆ ಔಷಧ ಹಚ್ಚಿಕೊಂಡು ಚೇಳು ಕಡಿದಿತ್ತೆಂಬ ಗುರುತು ಸಹ ಇಲ್ಲದ ಹಾಗೆ ಆಗಿಂದಾಗ ತಂತಮ್ಮ ಕೆಲಸ ಮಾಡಿದ ಉದಾಹರಣೆಗಳೆಷ್ಟೊ ಉಂಟೆಂತಲೂ, ಮೊದಲು 'ಅಲಿಬಾಗ' ಫಾರ್ಮ ಸುಪರಿಂಟೆಂಡೆಂಟರಿದ್ದು ಈಗ ಮುಂಡಗೋಡಫಾರ್ಮ ಸುಪರಿಂಟೆಂಡೆಂಟರಾಗಿರುವ ಮ. ರಾ. 'ಜಿ. ಬಿ. ಪಂಡಿತ' ಇವರು ಹೇಳುತ್ತಾರೆ.

ಜೀವಂತ ಚೇಳುಗಳನ್ನು ಹಿಡಿಯುವುದು ಹೇಗೆ? ಮತ್ತು ಹಿಡಿದಾಗ್ಗೂ ಬಾಟ್ಲಿಯಲ್ಲಿ ಹಾಕುವಾಗ್ಗೆ ಕೈಗೆ ಕಚ್ಚೀತೆಂದು ಜನರು ಅಂಜುವುದು ಸ್ವಾಭಾವಿಕವಿರುತ್ತದೆ. ಆದರೆ ೫-೬ ಇಂಚು ಉದ್ದವಾದ ಒಂದು ಕಬ್ಬಿಣದ ತೆಳುವಾದ ಪಟ್ಟಿ ಇದ್ದರೆ ಸಾಕು. ಸದರಿ ಪಟ್ಟಿಯಿಂದ ಚೇಳಿನ ಬಾಯಿ ಕಡಿಯಭಾಗವನ್ನು ಒತ್ತಿ ಹಿಡಿದರೆ ಅದು ಕೊಂಡಿಯನ್ನು ಮೇಲಕ್ಕೆತ್ತುತ್ತದೆ. ಕೂಡಲೆ ಅದರ ಕೊಂಡಿಯನ್ನು ಅಂಜದೆ ಗಟ್ಟಿಯಾಗಿ ಹಿಡಿದು ಬಾಟ್ಲಿಯಲ್ಲಿ ಹಾಕಬೇಕು. ಇದಕ್ಕೂ ಸುಲಭೋಪಾಯವೆಂದರೆ, ಕಬ್ಬಿಣದ ತಂಡಾಸ ಇಕ್ಕಳದಿಂದ ಚೇಳು ಹಿಡಿದು ನಿರಾಯಾಸದಿಂದ ಚಿಮಣಿ ಎಣ್ಣೆಯ ಬಾಟ್ಲಿಯಲ್ಲಿ ಹಾಕಬಹುದು. ಚೇಳು ಎಣ್ಣೆಯಲ್ಲಿ ಬಿದ್ದ ಕೂಡಲೆ ಅದಕ್ಕೆ ಮೇಲೆ ಏಳಲಿಕ್ಕೆ ಆಗುವುದೆ ಇಲ್ಲ. ಆದರೂ ಬಾಟ್ಲಿಯಲ್ಲಿ ಚೇಳುಗಳನ್ನು ಹಿಡಿದು ಹಾಕಿದಾಗೆಲ್ಲಾ ಅದಕ್ಕೆ ಬಿಗಿಯಾದ ಬೂಚೂ ಹಾಕಿಡುವುದು ಒಳ್ಳೇದು. ಬಾಟ್ಲಿಯಲ್ಲಿ ೩೦-೪೦ ಚೇಳು ಹಾಕಿ ೨ ತಿಂಗಳ ವರೆಗೆ ಹಾಗೆ ಇಟ್ಟು ಬಿಡುವ ಅವಧಿಯು ಹೆಚ್ಚೆಂದು ತೋರುವ ಸಂಭವವಿರುತ್ತದೆ. ಆದರೆ ೨ ತಿಂಗಳುಗಳ ವರೆಗೆ ಸದರಿ ಎಣ್ಣೆಯ ಉಪಯೋಗ ಆಗುವುದಿಲ್ಲವಂತೆಲ್ಲ. ಚೇಳುಗಳನ್ನು ಹಿಡಿದು ಹಾಕಿದ ೪-೮ ದಿವಸಕ್ಕೆ ಚೇಳಿನ ವಿಷ ಇಳಿಸುವ ಗುಣವು ಎಣ್ಣೆಯಲ್ಲಿ ಬರುತ್ತದೆ. ಎಣ್ಣೆಯು ಹೊಸದು ಇದ್ದಾಗ್ಗೆ ಬೇಗ ಗುಣಬರುವುದಿಲ್ಲ. ಎಂದರೆ, ವಿಷ ಇಳಿಯುವುದಕ್ಕೆ ಒಂದೆರಡು ತಾಸು ಅವಧಿಬೇಕಾಗುತ್ತದೆ. ಆದ ೨ ತಿಂಗಳ ನಂತರ ಚೇಳು ಕಚ್ಚಿದ ಜಾಗೆಯ ಮೇಲೆ ಈ ಔಷಧ ಹಚ್ಚುವುದೆ ತಡ, ಚೇಳಿನ ವಿಷ ಇಳಿದು ಮನುಷ್ಯನೆ ಈ ಎಣ್ಣೆಯ ಪರಾಕ್ರಮವನ್ನು ಹೊಗಳಹತ್ತುತ್ತಾನೆ.

ಈ ಮಾಹಿತಿಯನ್ನು ಈ ಒಕ್ಕಲತನದ ಮಾಸಪತ್ರಿಕೆಯಲ್ಲಿ ಪ್ರಸಿದ್ಧಿಸುವ ಉದ್ದೇಶವಿಷ್ಟೆ ಇರುತ್ತದಲ್ಲ. ಮಲ್ನಾಡದಕಿಂತ ಬೈಲುಸೀಮೆಯಲ್ಲಿ ಚೇಳುಗಳು ಹೆಚ್ಚು. ಪ್ರತಿಯೊಂದು ಸಣ್ಣ ಪುಟ್ಟ ಊರಲ್ಲಿ ಸಹ ದಿನಾಲು ಯಾರಿಗಾದರೂ ಚೇಳು ಕಚ್ಚದೆ ಇರುವುದಿಲ್ಲ. ಎಂದಮೇಲೆ ರಾತ್ರಿಹಗಲು ಹೊಲಮನೆಗೆ ಓಡ್ಯಾಡುವ ಒಕ್ಕಲಿಗರಿಗೆ ಈ ತರದ ಸುಲಭೋಪಾಯವು ಗೊತ್ತಿರುವುದು ಅತ್ಯವಶ್ಯವು. ಆದುದರಿಂದ ಈ ಮಾಸಪತ್ರಿಕೆಯನ್ನು ಓದುವ ಸುಶಿಕ್ಷಿತ ವಾಚಕರು ಈ ಕೃತಿಯನ್ನು ತಾವು ಮಾಡಿ ನೋಡಿ ತಮ್ಮ ನೆರೆಹೊರೆಯ ಗುರ್ತು ಪರಿಚಯ ಅಶಿಕ್ಷಿತ ಬಾಂಧವರಿಗೆ ಈ ಔಷಧವನ್ನು ಮಾಡಿ ಅನುಭವ ತೆಗೆದುಕೊಳ್ಳುವ ಬಗ್ಗೆ ಪೂರ್ಣ ಮಾಹಿತಿ ಮಾಡಿಕೊಡಬೇಕಾಗಿ ಕೋರುತ್ತೇವೆ. ಅದರಂತೆ ಒಕ್ಕಲಿಗರ ಹಿತಕ್ಕಾಗಿ ಶ್ರಮಪಡುತ್ತಿರುವ ನಮ್ಮ ಒಕ್ಕಲತನದ ಖಾತೆಯ ಅಧಿಕಾರಿಗಳು ಇದರ ಮಾಹಿತಿಮಾಡಿಕೊಟ್ಟು ದಿನಾಲು ತೊಂದರೆಕೊಡುತ್ತಿರುವ ಚೇಳಿನ ವಿಷ ಇಳಿಸುವ ಈ ದಿವ್ಯ ಔಷಧವು ಯಾವತ್ತು ಜನರಲ್ಲಿಯೂ ದೊರಕುವಂತೆ ಮಾಡಬೇಕಾಗಿ ಈ ಲೇಖಕನು ಪ್ರಾರ್ಥಿಸುತ್ತಾನೆ. ಒಕ್ಕಲಿಗರೂ, ಒಕ್ಕಲತನವೂ.

ವರದಕ್ಷಿಣೆ.

ವಿವಾಹ ಸಂಬಂಧವನ್ನುಂಟುಮಾಡುವುದರಲ್ಲಿ ಹಿರಿಯರು ವಿವಿಧ ವಿಚಾರವನ್ನು ಮಾಡುತ್ತಿದ್ದರು. ಉಭಯತ್ರರ ಮನಸ್ಸಿಗೂ ಸಂತುಷ್ಟಿಯು ಸಾಧುವಾಗಿರಬೇಕೆಂಬುದೆ ಪ್ರಥಮ ಕರ್ತವ್ಯ. ಕುಲಧರ್ಮ ಆಚಾರಪದ್ಧತಿಗಳ ವಿಷಯ ಉಭಯತ್ರರೂ ಸಂಶಯಾಸ್ಪದವಾಗಿರಲಾರದು. ಧನಧಾನ್ಯಮಾನಾದಿಗಳಲ್ಲಿಯೂ ಸಮಬಲರಾಗಿರಬೇಕು. ಅಲ್ಲದೆ ಹೋದರೆ ಆ ಸಂತುಷ್ಟಿಯಿಂದ ವಿಪರೀತ ಪರಿಣಾಮಗಳುಂಟಾಗುವುದು ನಿದರ್ಶನರೂಪವಾಗಿ ಎಲ್ಲೆಲ್ಲಿಯೂ ಕಾಣಬರುತ್ತದೆ. ಇದಲ್ಲದೆ ಈ ವಿಷಯವನ್ನು ಕುರಿತು ಹಿರಿಯರ ಮಾತು ಇನ್ನೊಂದಿದೆ. ಕನ್ಯೆಯ ತಂದೆಯು ವರಾನ್ವೇಷಣ ಕಾರ್ಯದಲ್ಲಿ ವರನ ಕುಲಬುದ್ಧಿ ಗುಣಗಳನ್ನು ಕುರಿತು ಚಿಂತಿಸುತ್ತಾನೆ. ತಾಯಿಯು ಧನಧಾನ್ಯ ಸಂಪತ್ತುಗಳನ್ನು ಕುರಿತು ಯೋಚಿಸುತ್ತಾಳೆ. ಕನ್ಯೆಯು ರೂಪುಲಾವಣ್ಯ ಯೌವನವನ್ನೆ ಚಿಂತಿಸುತ್ತಾಳೆ. ಈ ರೀತಿಯಾಗಿ ವರಾನ್ವೇಷಣ ಕಾರ್ಯವು ಕನ್ಯೆಯ ಕಡೆಯವರಿಗೆ ಬಹಳ ಕಷ್ಟವನ್ನೀಯುತ್ತದೆ. ವರನ ಕಡೆಯವರಿಗೆ ಬಹಳ ಆನಂದ. ಕನ್ಯೆಯನ್ನು ಹುಡುಕಿಹೋಗುವುದು ಅವಶ್ಯವಿಲ್ಲ. ಪೂರ್ವದಲ್ಲೇನೊ ಅಪ್ರಾರ್ಥಿತ ಕನ್ಯಾದಾನವಿದ್ದಿಲ್ಲವಂತೆ. ಕನ್ಯಾರ್ಥಿಗಳಾಗಿ ಬರುವುದಿತ್ತಂತೆ. ಆಗ ಸಾಲಂಕೃತ ಕನ್ಯಾದಾನವೆಂದಿತ್ತು. ಮತ್ತು ಹಾಗೆ ದಾನಕೊಡುವ ಸಮಯ ಕಾಂಚನ ಸಮೇತ ಆ ದಾನವನ್ನು ಕೊಡುತ್ತಿದ್ದರು. ಈಗಲಾದರೋ ಆಚಾರಪೂರ್ತಿಯಾಗಿ ಮಾತ್ರ ಈ ಸಂಸ್ಕಾರಗಳು ನಡೆಯುತ್ತವಲ್ಲದೆ ನೈಜಸ್ಥಿತಿಯಲ್ಲಿಲ್ಲ.

ಇದಲ್ಲದೆ ಮತ್ತೊಂದು ಕಷ್ಟವಿದೆ. ಜಾತಕದ ಮೇಳಾಮೇಳಿ ಎಂದೆನ್ನುತ್ತಾರೆ. ಇದಕ್ಕಾಗಿ ಕನ್ಯಾಪಿತೃಮಾತೃಗಳು ತಮ್ಮ ಒಬ್ಬ ಕನ್ಯೆಗಾಗಿ ನೂರಾರು ವಟುಗಳ ಜಾತಕವನ್ನೊ ತರಿಸಿ ಜೋಯಿಸರನ್ನು ಹುಡುಕಿ ಅವರ ಕಾಲವರಿತು ತಾವು ಜಾತಕದ ಮೇಳಾಮೇಳಿಯನ್ನು ತಿಳಕೊಳ್ಳಬೇಕು. ಒಬ್ಬರಿಬ್ಬರ ಸಮಾಧಾನ ಸಾಲದು. ಹತ್ತಿಪ್ಪತ್ತು ಜೋಯಿಸರ ಸಮಾಧಾನವಿರಬೇಕು. ಅನಂತರ ವಟುವಿನ ಪಿತೃಮಾತೃಗಳ ಸಮಾಧಾನ, ಬಳಿಕ ಇವರ ಕಡೆಯವರೆಲ್ಲರ ಸಮಾಧಾನ ಕನ್ಯೆಯ ರೂಪು, ಲಾವಣ್ಯ, ನುಡಿನಡೆಗಳ ವಿಚಾರದ ಸಮಾಧಾನ ಇವೆಲ್ಲಾ ತೃಪ್ತಿಕರವಾಗಿಯೆ ತೀರಿದ ನಂತರ ಮಹತ್ತಾದ ಇನ್ನೊಂದು ಪ್ರಶ್ನೆಯು ಹುಟ್ಟುವುದು. 'ವರದಕ್ಷಿಣೆ'. ಕನ್ಯಾಪಿತೃಮಾತೃಗಳ ಸ್ಥಿತಿಗತಿಗಳನ್ನು ಕೇಳುವವರಾರು. ಇವರ ಮನಸ್ಸೊ ಕವಲೊಡೆದಿರುತ್ತದೆ. ಬಡವನಿಗೆ ಕನ್ಯೆಯನ್ನೀಯುವುದೆಂದರೆ, ಅವನ ಕುಟುಂಬವು ಎಂತಹ ಘನಸ್ಥಿಕೆಯನ್ನು ಪಡೆದದ್ದಾಗಿರಲಿ, ಬಡವಾಗಿದ್ದರೆ ಮನಸ್ಸಿಲ್ಲ. ಕನ್ಯೆಯ ಪಿತೃವಿನ ಮಾತೇನೆಂದರೆ, ಮರವನ್ನು ನೋಡಿ ಬಳ್ಳಿಯನ್ನು ಬಿಡಬೇಕು. ಮಾತೆಯ ಮಾತೇನೆಂದರೆ, "ಆಕೆಯ ಮಗಳಿಗೆ ಅಷ್ಟಾಭರಣ ಉಂಟು. ಈಕೆಯ ಮಗಳಿಗೆ ಅಂಥಿಂಥಾ ಶೀರೆಗಳಿವೆ. ನನ್ನ ಮಗಳೂ ಅಂತೆಯೇ ಆಗಬೇಕು" ಬಲ್ಲಿದವರೊಡನೆ ಮಾತನಾಡಿದರೆ ಸಾವಿರಕ್ಕಿಂತ ಕಡಿಮೆ ಸಂಖ್ಯೆ ಬಾಯಿಯಿಂದ ಹೊರಡದು. ಈ ರೀತಿಯಾಗಿ ಹತ್ತು ಹದಿನಾಲ್ಕು ವರುಷದ ಕನ್ಯೆಯು ಹತಾಶಳಾಗಿ ೪೦-೫೦ ವರುಷದವನ ಪಾಲಾಗುವುದೂ ಉಂಟು. ಐಶ್ವರ್ಯವಂತರಿಗಾದರೋ ಅದೊಂದು ಕಷ್ಟವಿಲ್ಲ. ವರಾನ್ವೇಷಣ ಮತ್ತು ಜಾತಕದ ಮೇಳಾಮೇಳಿ ಇಷ್ಟು ಮಾತ್ರ. ಕೇಳಿದಷ್ಟು ವರದಕ್ಷಿಣೆಕೊಡಲು ಸಾಮರ್ಥ್ಯವಿದೆ. ಐಶ್ವರ್ಯದಲ್ಲಿ ತನಗೆ ಸರಿಸಮಾನರನ್ನು ಹುಡುಕುವುದೊಂದು ಕಷ್ಟ. ಅದಾದರೂ ಬೇಕಾದಷ್ಟು ಮಂದಿ ದೊರಕುವರು. ಜಾತಕದ ಮೇಳಾಮೇಳಿ ಈ ಸಂಗತಿಯಲ್ಲೇನಾದರೂ ಕನ್ಯಾಪಿತೃಮಾತೃಗಳು ಕಷ್ಟಪಟ್ಟರೆಂದರೆ ಮತ್ತು ಕೇಳಬೇಕೆಂದಿಲ್ಲ. ಪೂರ್ವದಲ್ಲಿ ನಮ್ಮ ಅಜ್ಜಂದಿರ ಕಾಲದಲ್ಲಿ ಹತ್ತಿಪ್ಪತ್ತು ವರಹ ಅಥವಾ ನಂತರ ನೂರಿನ್ನೂರು ರೂಪಾಯಿ. ಈಗ ನಮ್ಮ ಕಾಲದಲ್ಲಿ ಸಾವಿರಕ್ಕಿಂತ ಕಡಿಮೆ ಸಂಖ್ಯೆ ಕೇಳುವುದಿಲ್ಲ. ಆದರೆ ಕೆಲವೆಡೆಗಳಲ್ಲಿ ಈ 'ಸಾವಿರ' ಸಂಖ್ಯೆಯನ್ನು ಉಚ್ಚರಿಸುವುದು ಪೂರ್ವ ಕ್ರಮಕ್ಕೆ ವಿರೋಧ. 'ರೂಪಾಯಿ' ಎಂದು ಹೇಳುವುದು ಐಶ್ವರ್ಯವಂತರ ಮರ್ಯಾದೆಗೆ ತಕ್ಕುದಲ್ಲವೆಂತಲೊ, ಏನೊ? ಪೂರ್ವದ ಸಂಖ್ಯೆಯನ್ನೆ ಅನುಸರಿಸಿ 'ನೂರಿನ್ನೂರು' ಮರ್ಯಾದಾರೂಪವಾದ 'ಪವನು'ಗಳನ್ನು ಕೇಳುವುದೊಂದು ಹೊಸ ಕ್ರಮವು ಇತ್ತಲಾಗಿ ಉಂಟಾಗಿಯದೆ. ಎಂತೂ ಬಡವರ ಮೇಲಿದೊಂದು ಪ್ರಹಾರ. ಲೋಕಕ್ಕೊಂದು ಶ್ರೀಕಾರ. ಇತರ ಚಳವಳದೊಂದಿಗೆ ಈ ವರದಕ್ಷಿಣೆಯನ್ನು ನಿಷೇಧಿಸುವ ಒಂದು ಚಳವಳವು ಪ್ರಾರಂಭವಾದರೆ ಬಡವರ ಈ ಕಷ್ಟಕ್ಕೊಂದು ಪರಿಹಾರವಾಗುತ್ತಿತ್ತು. ಬಡವ.

ಮೂಡಬಿದರೆ ಪ್ರಾಂತ್ಯ ಗೌರಿ ದೇವಸ್ಥಾನ.

ಮೂಡಬಿದರೆಯಲ್ಲಿ ಹೆಚ್ಚು ದೇವಸ್ಥಾನಗಳಿದ್ದಾಗ್ಯೂ ಗೌರಿ (ಪಾರ್ವತಿ) ದೇವಸ್ಥಾನದಷ್ಟು ಪುರಾತನ ಕಾಲದ ದೇವಸ್ಥಾನವು ಯಾವುದೂ ಮೂಡಬಿದರೆಯಲ್ಲಿ ಮಾತ್ರವಲ್ಲ. ಇದು ಪುರಾತನ ಕಾಲದ್ದೆಂದು ಅದರ ಬಾಗಿಲಲ್ಲಿರುವ ೪ ಶಿಲಾ ಶಾಸನಗಳೇ ಸಾಕ್ಷಿಯಾಗಿವೆ. ಇವುಗಳು ದೇವರ ಗರ್ಭಗೃಹಕ್ಕೆ ಹೋಗುವ ಮೆಟ್ಟಿನ ಬಲಗಡೆಯಲ್ಲಿವೆ. ಇವುಗಳಿಗೆ ವರ್ಷಕ್ಕೊಂದಾವರ್ತಿ ಜೇಡಿ ಹಚ್ಚುತ್ತಾರೆ. ಅವುಗಳಲ್ಲೊಂದರಲ್ಲಿ ಶಾಲಿವಾಹನ ಶಕ ವರುಷ ೧೧೨೬ (ಕ್ರಿ. ಶ. ೧೨೦೪) ರಕ್ತಾಕ್ಷಿ ಸಂವತ್ಸರದಲ್ಲಿ ತುಳು ರಾಜ್ಯವನ್ನು ಮಹಾ ಮಂಡಲೇಶ್ವರನಾಗಿ ಆಳುತ್ತಿದ್ದ ಅಲೂಪ ಅರಸನಾದ ಕುಲಶೇಖರ ಅಲುಪೇಂದ್ರನು ಈ ದೇವಸ್ಥಾನಕ್ಕೆ ಭೂದಾನ ಬಿಟ್ಟಿದ್ದಾನೆಂದೂ, ಇನ್ನೊಂದು ಶಿಲಾ ಶಾಸನದಲ್ಲಿ ಶಾಲಿವಾಹನ ಶಕ ವರುಷ ೧೧೨೭ (ಕ್ರಿ. ಶ. ೧೨೦೫)ನೇ ಕ್ರೋಧನ ಸಂವತ್ಸರದಲ್ಲಿ ಅದೇ ಅರಸನಾದ ಕುಲಶೇಖರ ಅಲುಪೇಂದ್ರನು ಭೂದಾನ ಬಿಟ್ಟಿದ್ದಾನೆಂದೂ, ಮೂರನೇ ಶಿಲಾ ಶಾಸನದಲ್ಲಿ ಶಾಲಿವಾಹನ ಶಕ ೧೧೩೭ (ಕ್ರಿ. ಶ. ೧೨೧೫)ನೆ ಯುವಸಂವತ್ಸರದಲ್ಲಿ ಅದೇ ಅರಸನು ಉಂಬಳಿ ಬಿಟ್ಟಿದ್ದಾನೆಂದೂ, ಅಲ್ಲಿಯೆ ಇರುವ ನಾಲ್ಕನೆಯ ಶಾಸನದಲ್ಲಿ ಶಾ. ಶಕ ೧೩೧೮ (ಕ್ರಿ. ಶ. ೧೩೯೬)ನೆ ಧಾತು ಸಂವತ್ಸರದಲ್ಲಿ ಕನ್ನಡ ಜಿಲ್ಲೆಯ ಉತ್ತರ ಭಾಗವನ್ನು ಮಹಾ ಮಂಡಲೇಶ್ವರನಾಗಿ ಕಾರ್ಕಳದಲ್ಲಿ ಆಳುತ್ತಿದ್ದ ಭೈರವ ಅರಸರ ಕುಟುಂಬದ ವೀರಪಾಂಡ್ಯ ದೇವರಸನು ಉಂಬಳಿ ಬಿಟ್ಟಿದ್ದಾನೆಂದೂ ಇದೆ. ಈ ಮೇಲಿನ ಸಂಗತಿಗಳಿಂದ ಈ ದೇವಸ್ಥಾನವು ಎಷ್ಟು ಪುರಾತನದ್ದೆಂಬುದನ್ನು ತಿಳಿಯಬಹುದು. ಈ ದೇವಸ್ಥಾನಕ್ಕೆ ಬಿಟ್ಟ ಉಂಬಳಿಯು ಯಾರಯಾರ ಸ್ವಾಧೀನವಾಗಿ ಮಾರಿಹೋಗಿರಬಹುದು. ಈ ದೇವಸ್ಥಾನವು ಈಗ ಮುಕ್ಕಾಲು ಪಾಲು ಕುಸಿದು ಬಿದ್ದಿದೆ. ಗರ್ಭಗೃಹದ ಮಾಡು ಮುರಿದು ಗೋಡೆಯ ಮೇಲೆ ಕುಳಿತಿದೆ. ಅಂತರಮಾಡು ಪೂರಾ ಹೋಗಿದೆ. ಅಂಗಳದ ಸುತ್ತಲೂ ಮುರಕಲ್ಲಿನಿಂದ ಕಟ್ಟಿದ ಗೋಡೆಯು ಅರ್ಧ ಉಳಿದಿದೆ. ಪೂರ್ವದಿಕ್ಕಿಗಿರುವ ಚಾವಡಿಯು ನೆಲಸಮವಾಗಿದೆ. ಮಧ್ವಾಚಾರ್ಯರ ಕಾಲದಲ್ಲಿ ಅಥವಾ ಅದರ ನಂತರ ಪ್ರತಿಷ್ಠೆಯಾದ ಶ್ರೀ ಗೋಪಾಲಕೃಷ್ಣ ದೇವಸ್ಥಾನವು ಕೆಲವು ವರುಷಗಳ ಹಿಂದೆ ಇದಕ್ಕಿಂತಲೂ ಹೀನಾವಸ್ಥೆಯಲ್ಲಿದ್ದುದನ್ನು ಇತ್ತಲಾಗಿ ಆ ದೇವಸ್ಥಾನದ ಕಮಿಟಿಯವರು ಜೀರ್ಣೋದ್ಧಾರ ಮಾಡಿಸಿ ಒಳ್ಳೇ ರೀತಿಗೆ ತಂದು ಅದಕ್ಕೋಸ್ಕರ ಹಣವನ್ನು ಸಹ ಶೇಖರಿಸುತ್ತಾರೆ. ಅದೇ ರೀತಿಯಲ್ಲಿ ಇದೇ ಕಮಿಟಿಯವರು ತಮ್ಮ ದೃಷ್ಟಿಯನ್ನು ಇತಿಹಾಸಪ್ರಸಿದ್ಧವಾದ ಈ ಗೌರಿ ದೇವಸ್ಥಾನದ ಕಡೆಗೆ ತಿರುಗಿಸಿ ಆ ದೇವಸ್ಥಾನವನ್ನು ಯಾವ ಉಪಾಯದಿಂದಲಾದರೂ ಜೀರ್ಣೋದ್ಧಾರ ಮಾಡಿಸಿದರೆ ಅವರ ಕೀರ್ತಿಯು ಆಚಂದ್ರಾರ್ಕವಾಗಿ ಉಳಿಯುತಿತ್ತು. ಇದರ ಕಟ್ಟಡದ ರೂಪವನ್ನು ಕೆಡಿಸದೆ ಅದೆ ಕ್ರಮದಲ್ಲಿಯೆ ಕಟ್ಟಿಸಿದರೆ ಉತ್ತಮವಾದೀತು. ಯಾಕೆಂದರೆ, ಈ ಆಕೃತಿಯ ದೇವಸ್ಥಾನವು ಮೂಡಬಿದರೆಯಲ್ಲಿ ಮತ್ತೊಂದಿಲ್ಲ. ಸರಕಾರದವರು ಐತಿಹಾಸಿಕ ಕಟ್ಟಡಗಳಿಗೆ ನಮ್ಮ ಜಿಲ್ಲೆಗೆ ಸುಮಾರು ೨,೫೦೦ ರೂಪಾಯಿ ಖರ್ಚುಮಾಡುತ್ತಾರೆ. ಯಾರಿಗೂ ಇದನ್ನು ಕಟ್ಟಿಸಲಿಕ್ಕೆ ಸಾಧ್ಯವಿಲ್ಲದಿದ್ದರೆ ಅವರಾದರೂ ಈ ಕಮಿಟಿಯವರಿಗೆ ಸ್ವಲ್ಪ ಧನ ಸಹಾಯಮಾಡಿ ಜೀರ್ಣೋದ್ಧಾರ ಮಾಡಿಸಿದರಾಗುತಿತ್ತು. ಹೀಗೆ ಮಾಡಿದರೆ ಪ್ರಸಿದ್ಧಿಪಡೆದ ಚೌಟರರಸರ ರಾಜಧಾನಿಯಾದ ಮೂಡಬಿದರೆಯ ಕೀರ್ತಿಯನ್ನು ಕಾಪಾಡಿದಂತಾಗುತ್ತದೆಂದು ಹೇಳಲು ಅಸ್ಪದವಾಗುತಿತ್ತು.

ಮುಂಬಯಿಯಲ್ಲಿರುವ ಮೊಗವೀರ ಕ್ಲಾರ್ಕ್ಸರ ವಿಸ್ಮಯಕರವಾದ ಸಾಹಸ.

ತಮ್ಮ ತಮ್ಮ ಉದರಪೋಷಣೆಗಾಗಿ ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಿಂದ ಅನೇಕ ಜನರು ಮುಂಬಯಿ ಪಟ್ಟಣವನ್ನು ಆಶ್ರಯಿಸಿರುವ ಸಂಗತಿಯು ಸಕಲರಿಗೂ ವೇದ್ಯವಾದದ್ದೆ. ಆದರೆ ಈ ಜನರಲ್ಲಿ ಮುಂಬಯಿ ಪಟ್ಟಣವನ್ನು ಪ್ರಥಮತಃ ಸೇರಿದವರು ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರರಾಗಿರುತ್ತಾರೆ. ಈ ಮೊಗವೀರವಂಶದ ಯುವಕರು ಪ್ರಾರಂಭದಲ್ಲಿ ಚಿಕ್ಕ ಚಿಕ್ಕ ಉದ್ಯೋಗಗಳಲ್ಲಿದ್ದು ಅನಂತರ ಅಧಿಕ ಪ್ರಯತ್ನದಿಂದ ಮುಂಬಯಿಯಲ್ಲಿರುವ ರಾತ್ರಿ ಶಾಲೆಯಲ್ಲಿ ಇಂಗ್ಲೀಷು ಅಭ್ಯಾಸವನ್ನು ಹೊಂದಿ, ಕ್ಲಾರ್ಕ್ಸರ ಪದವಿಗಳನ್ನು ಪಡೆಯುವರೆ ದೇವಾನುಗ್ರಹದಿಂದ ಜಯಶಾಲಿಗಳಾದರೆಂಬ ಸಂಗತಿಯನ್ನು ತಿಳಿಸುವರೆ ನಾನು ತುಂಬಾ ಸಂತೋಷಪಡುತ್ತೇನೆ.

ಕ್ಲಾರ್ಕ್ಸರ ಪದವಿಯಲ್ಲಿದ್ದ ಈ ಮೊಗವೀರ ಯುವಕರು ವಿದ್ಯೆಯೆ ಮನುಷ್ಯರಿಗೆ ಧೈರ್ಯ, ಸ್ಥೈರ್ಯ, ಸಾಮರ್ಥ್ಯ, ಆನಂದ, ಜ್ಞಾನ, ಮಾನ, ಧನ, ಕೀರ್ತಿ ಮೊದಲಾದವುಗಳ ಸಂಪಾದನೆಗೆ ಮೂಲಕಾರಣವಾದ್ದೆಂಬುದನ್ನು ಚೆನ್ನಾಗಿ ತಿಳಿದವರಾಗಿ ತಮ್ಮ ಸ್ವಜಾತಿಯವರಲ್ಲಿ ವಿದ್ಯೆಯನ್ನು ಕಲಿತವರು ಬಹಳ ವಿರಳರಾಗಿರುವುದರಿಂದ ತಮ್ಮ ಸಮಾಜದ ಹೆಚ್ಚಿನ ಜನರಲ್ಲಿ ವಿದ್ಯೆಯನ್ನು ಪಸರಿಸಬೇಕೆಂಬ ಉದ್ದೇಶದಿಂದ ೧೯೨೧ನೆಯ ಇಸವಿ ಜನವರಿ ತಿಂಗಳಲ್ಲಿ 'ಕ್ಲಾರ್ಕ್ಸ್ ಯೂನಿಯನ್' ಎಂಬ ತಮ್ಮ ಒಂದು ಸಂಘವನ್ನು ಸ್ಥಾಪಿಸಿ, ಅದರ ವರ್ಧಂತಿಯು ಅನೇಕ ಪತ್ರಗಳಲ್ಲಿ ಪ್ರಕಟಿಸಲ್ಪಟ್ಟಿದ್ದೂ ಈ ಸಂಘದ ವಿಶೇಷವಾದ ಸಾಹಸದ ಕುರಿತು ಅನೇಕ ಜನರು ತಿಳಿಯದವರಾಗಿರಬಹುದು. ಈ ಸಂಘದ ಮೆಂಬರರಾಗಿರುವ ಎಲ್ಲಾ ಕ್ಲಾರ್ಕರು ತಮ್ಮಲ್ಲಿರಬಹುದಾದ ಅಂಜಿಕೆ, ಅಭಿಮಾನ ಇತ್ಯಾದಿಗಳನ್ನು ದೂರಮಾಡಿ ತಮ್ಮ ಸ್ವಜಾತಿಯ ವಿದ್ಯಾಭಿವೃದ್ಧಿಗೋಸ್ಕರ ಸಂಘದ ಸ್ವಯಂಸೇವಕರಾಗಿ ಕಳೆದ ದೀಪಾವಳಿ ಹಬ್ಬದ ದಿವಸ ಮುಂಬಯಿಯಲ್ಲಿರುವ ತಮ್ಮ ಸ್ವಜಾತಿ ಬಾಂಧವರ ಬಳಿಗೆ ತೆರಳಿ, ನೂತನವಾದ ಗಾಯನಗಳ ಮೂಲಕ ತಮ್ಮ ಉದ್ದೇಶವನ್ನು ತಿಳಿಸಿ, ಅವರ ಮನಸ್ಸನ್ನು ಆಕರ್ಷಿಸಿ, ಸುಮಾರು ೪೦೦ ರೂಪಾಯಿಗಳಿಗೆ ಮಿಕ್ಕಿದ ದ್ರವ್ಯವನ್ನು ಶೇಖರಿಸಿದ ಸಾಹಸಕ್ಕೆ ಜಗದೀಶನು ಇವರಿಗೆ ದೀರ್ಘಾಯುವನ್ನೀಯಲೆಂಬದಾಗಿ ಆತನನ್ನು ನಿರಂತರವೂ ಪ್ರಾರ್ಥಿಸುತ್ತೇನೆ. ಕೆಲವು ಸಮಯದ ನಂತರ ಇವರ ಉದ್ದೇಶದಂತೆ ಮುಂಬಯಿಯಲ್ಲಿ ಮೊಗವೀರರಿಂದ ಮೊದಲೇ ಸ್ಥಾಪಿಸಲ್ಪಟ್ಟ 'ಮಂಗಳೂರು ಮೊಗವೀರ ವ್ಯವಸ್ಥಾಪಕ ಮಂಡಳಿ' ಎಂಬ ಸಂಸ್ಥೆಯೊಡನೆ ತಮ್ಮ ಈ ಸಂಸ್ಥೆಯನ್ನು ಸಂಯೋಜಿಸಿಕೊಂಡು ತಮ್ಮ ನಿರ್ಧಾರದಂತೆ ಸಂಘದ ಸಕಲ ಶುಭಕಾರ್ಯಗಳನ್ನು ನಿರಾತಂಕವಾಗಿ ನಡಿಸಿಕೊಂಡು ಬರುವ ಸಂಗತಿಯನ್ನು ತಿಳಿಸುವರೆ ಸಹ ನಾನು ತುಂಬಾ ಸಂತೋಷಪಡುತ್ತೇನೆ. ಈ ಎರಡು ಸಂಸ್ಥೆಗಳು ಒಂದಾದ ನಂತರ ವಿದ್ಯಾಪ್ರಸರಣೆಯೆ ತಮ್ಮ ಪ್ರಥಮ ಮತ್ತು ಮುಖ್ಯ ಕರ್ತವ್ಯವಾಗಿಟ್ಟುಕೊಂಡದ್ದರಿಂದ ಸ್ವಜಾತಿಯವರ ಪ್ರಯೋಜನಾರ್ಥವಾಗಿ ಒಂದು ಧರ್ಮಾರ್ಥ ರಾತ್ರಿ ಶಾಲೆಯನ್ನು ತೆರೆದು ಸ್ವಜಾತಿಯ ಬಾಲಕ ಬಾಲಕಿಯರಿಗೆ ತಕ್ಕುದಾದ ಶಿಕ್ಷಣವನ್ನು ಕೊಡುತ್ತಲಿದ್ದಾರೆ. ಈ ರಾತ್ರಿ ಶಾಲೆಯಲ್ಲಿ ಈಗ ಸುಮಾರು ೪೬ ವಿದ್ಯಾರ್ಥಿಗಳಿದ್ದಾರೆ. ಸದರಿ ಶಾಲೆಗೆ ಸ್ವಜಾತಿಯ ಕೆಲವು ಯುವಕರು ಧರ್ಮಾರ್ಥ ಉಪಾಧ್ಯಾಯರಾಗಿ ವಿದ್ಯಾರ್ಥಿಗಳಿಗೆ ತಕ್ಕುದಾದ ಶಿಕ್ಷಣವನ್ನು ಕೊಡುತ್ತಲಿದ್ದಾರೆ.

ಮೇಲೆ ಹೇಳಿದ ಎಲ್ಲಾ ಪ್ರಯತ್ನಗಳು ಮತ್ತು ಸಾಧನೆಗಳು ಮೊಗವೀರ ಜಾತಿಯ ಶ್ರೇಯಸ್ಸಾಭಿವೃದ್ಧಿಯ ಬಗ್ಗೆ ನಡಿಯುವುದು ಎಂತ ಸ್ವಜಾತಿಯ ಸಕಲ ಗೃಹಸ್ಥರಿಗೆ ಪರಿಪೂರ್ಣವಾಗಿ ಸಮಾಧಾನವಾಗದೆ ಇರದು. ಆದ್ದರಿಂದ ಈ ಸಂಘದ ಪರವಾಗಿ ಕ್ಲಾರ್ಕ್ಸ ವರ್ಗದವರು ಇಷ್ಟರತನಕ ತಾವು ಮಾಡಿದ ಸಾಧನೆ ಮತ್ತು ಸಾಹಸವು ಸಂತೋಷಕರವಾದ್ದೆಂತ ಮಾತ್ರ ತಮ್ಮೊಳಗೆ ತೃಪ್ತಿ ಹೊಂದುವದಲ್ಲದೆ ಇನ್ನೂ ತಮ್ಮಿಂದಾಗುವಷ್ಟು ಭಗೀರಥ ಪ್ರಯತ್ನವನ್ನು ಮಾಡುವರೆ ಹಿಂಜರಿಯಲಾರರೆಂಬದಾಗಿ ನಾವು ನಂಬಿದ್ದೇವಲ್ಲದೆ ಈ ಸಂಘಕ್ಕೆ ಮೆಂಬರರಾಗದೆ ಇದ್ದ ಸ್ವಜಾತಿಯವರು ಇನ್ನಾದರೂ ಮೆಂಬರರಾಗಿ ಸೇರಿ ತಮ್ಮ ಕೈಲಾದ ಸಹಾಯವನ್ನಿತ್ತು ಸಕಲ ಉದ್ದೇಶಗಳು ನಿರಾತಂಕವಾಗಿ ಕೊನೆಗಾಣಿಸುವಂತೆಯೂ ಹಿಂದುಳಿದ ಮೊಗವೀರ ವಂಶವು ಮುಂದರಿಸಿದ ಇತರ ಜಾತಿಯವರ ಸರಿಸಮಾನತ್ವವನ್ನು ಹೊಂದುವಂತೆ ಪ್ರಯತ್ನಮಾಡಬೇಕಾಗಿಯೂ ನಮ್ಮ ನಮ್ರಭಾವದ ಮತ್ತು ಮನಃಪೂರ್ವಕವಾದ ವಿನಂತಿಗಳು. ಇಂತಿ ತಮ್ಮಗಳ ವಿಧೇಯ,

ಮುಂಬಯಿ,
ತಾ. 27-6-'22. } ಯನ್. ಕೆ. ಬಂಗೇರ,

ಮೊಗವೀರ ವ್ಯವಸ್ಥಾಪಕ ಮಂಡಳಿ ಮತ್ತು ಕ್ಲಾರ್ಕ್ಸ ಯೂನಿಯನ್, ಮುಂಬಯಿ.

ತಾ. ೪-೬-'೨೨ರಲ್ಲು ಜರುಗಿದ ಈ ಸಂಘದ ವರ್ಷಾವಧಿ ಮಹಾಸಭೆಯಲ್ಲಿ "ವಿದ್ಯಾಫಂಡಿಗೆ" ಉದಾರಮನಸ್ಸಿನಿಂದ ಧನಸಹಾಯವಿತ್ತ ಗೃಹಸ್ಥರ ಹೆಸರುಗಳನ್ನು ಪ್ರಕಟಿಸುವರೆ ತುಂಬಾ ಸಂತೋಷಪಡುತ್ತೇವೆ.

ಮ|. ರಾ|ಗಳಾದ ಹೊಸಕೊಪ್ಲ ಐತಾರಾಮನವರು ರೂ. ೧೫. ಕದ್ರೆ ಮಹಾಲಿಂಗ ಶ್ರೀಯಾನರು, (ತನ್ನ ವಿವಾಹೋತ್ಸವದ ಸ್ಮರಣಾರ್ಥವಾಗಿ) ರೂ. ೧೧-೧೧-೧೧. ಸ್ವಾಮಿ ಶ್ರೀ ಮುಕ್ತಾನಂದ ತೀರ್ಥರು ರೂ. ೧೧. ಏಕನಾಥ ಟಿ. ದೇವುಜಯವರು, (ದಿವಂಗತ ತನ್ನ ತಂದೆಯವರ ಸ್ಮರಣಾರ್ಥವಾಗಿ) ರೂ. ೧೦. ಸುರತ್ಕಲ್ಲು ಸೋಮಪ್ಪನವರು ರೂ. ೧೦. ಕಣ್ಣಂಗಾರ ರಾಮ ಪಿ. ಪುತ್ರನ್ನಾಯರು ರೂ. ೧೦. ಬಪ್ಪನಾಡು ರಾಮಯ್ಯ ಮುಂಡನ್ನಾಯರು ರೂ. ೧೦. ಪೊಲಿಪು ವೆಂಕಪ್ಪ ಬಂಗೇರರು ರೂ. ೫. ಮೂಲ್ಕಿ ಗುರುವ ಕುಂದರರು ರೂ. ೫. ಮೂಲ್ಕಿ ಬಾಬು ಮುಂಡಪ್ಪನವರು ರೂ. ೫. ಮಿಜಾರು ಕೊರಗಪ್ಪನವರು ರೂ. ೫. ಟಿ. ಪಿ. ಕಡೂರುಕಾರರು ರೂ. ೫. ಫಲಿಮಾರು ಗುಡ್ಡನವರು ರೂ. ೫. ಮೂಲ್ಕಿ ಸುಬ್ಬಣ್ಣ ಕುಂದರರು ರೂ. ೫. ಹಾಜಿ ಸುಬ್ರಾಕಲ್ಲಿ ಕಸ್ತೂರಿ ಕಂಪೆನಿಯವರು ರೂ. ೩. ಎಕ್ಕಾರು ಜಾರಪ್ಪ ಶೇರಿಗಾರರು ರೂ. ೩. ಬೊಕ್ಕಪಟ್ಣ ದುಗ್ಗಪ್ಪನವರು ರೂ. ೩. ಬೈಕಂಪಾಡಿ ಐತಪ್ಪ ಅಮ್ಮಣ್ಣಾಯರು ರೂ. ೨-೧೪-೦. ಟ್ರಿವನ್ ಬ್ಯಾಂಕಿನವರು ರೂ. ೨. ಸುರತ್ಕಲ್ಲು ಗುರುವ ಗುರಿಕಾರರು ರೂ. ೨. ಬೋಳೂರು ಬಸಪ್ಪ ಪರಮೇಶ್ವರನವರು ರೂ. ೨. ಸುಬ್ಬ ಸಾಲಿಯಾನರು (ತನ್ನ ಸೊಸೆಯ ಲಗ್ನದ ಸ್ಮರಣಾರ್ಥವಾಗಿ) ರೂ. ೨. ಚರಂತಿಪೇಟೆ ಕೊರಗನವರು ರೂ. ೨. ಕೆ. ಟಿ. ಪುತ್ರನ್ನಾಯರು ರೂ. ೧-೧-೩. ದೊಡ್ಡಕೊಪ್ಲ ಐತು ಪುರುಷನವರು ರೂ. ೧. ಸುರತ್ಕಲ್ಲು ಶಂಕರ ಕೆ. ಬಂಗೇರರು ರೂ. ೧. ಐತ ಬಿ. ಸಾಲಿಯಾನರು ರೂ. ೧. ಹೊಸಕೊಪ್ಲ ಪೂವ ಕರ್ಕೇರರು ರೂ. ೧. ಕದ್ರೆ ವೆಂಕ ಪುತ್ರನ್ನಾಯರು ರೂ. ೧. ಕೈಪುಂಜಾಲು ಸಿಟ್ಟ ಕರ್ಕೇರರು ರೂ. ೧. ಪೊಲಿಪು ಚಂದು ಕುಂದರರು ರೂ. ೧. ಪೊಲಿಪು ದೂಜಪ್ಪ ತಿಂಗಳಾಯರು ರೂ. ೧. ಮಲ್ಪೆ ಪುದ್ಮನವರು ರೂ. ೧. ಸುರತ್ಕಲ್ಲು ವೀರಪ್ಪನವರು ರೂ. ೧. ಸುರತ್ಕಲ್ಲು ಮುತ್ತಯ್ಯನವರು ರೂ. ೧. ತಣ್ಣೀರುಬಾವಿ ದೋಗುನವರು ರೂ. ೧. ಉಳ್ಳಾಲ ಕೃಷ್ಣಪ್ಪ ಕಂಚಿಯದಣ್ಣನವರು ರೂ. ೧. (ಮುಂದರಿಯುವುದು)

ವಿ. ಎ. ಶ್ರೀಯಾನ್, ಜಿ. ಎ. ಪುತ್ರನ್, ಕಾರ್ಯದರ್ಶಿಗಳು.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.
ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0 | ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 181,250—0—0 | ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡೆಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.



ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು [illegible]ವಿರಿ. ಈ ಮಾತ್ರೆಗಳಲ್ಲಿ ಅಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಚಳಿ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, [illegible], ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರಿಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇಧ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು
ಶಿರೋಭಾಗದಲ್ಲಿ ಅವತರಿಸಿದ ಈ ಮಾತುಗಳು ಹಿಂದುಸ್ಥಾನದ ಹಿತೈಷಿಗಳಾದ ಮತ್ತು ಇಂಗ್ಲೆಂಡಿನೊಳಗಿನ ಲೇಬರ ಪಾರ್ಟಿಯ ಅಧ್ಯಕ್ಷರಾದ ಮಿ| ಬೆನ್‌ಸ್ಪೂರರವರ ಬಾಯಿಯಿಂದ ಹೊರಬಿದ್ದವುಗಳು. ಕಳೆದ ಜೂನ್ ತಾ. ೧೫ರಲ್ಲಿ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಜಮಾ-ಖರ್ಚಿನ ಕುರಿತು ವಾದವಿವಾದ ಮತ್ತು ಚರ್ಚೆ ನಡೆದಿದ್ದವು. ಆ ಸಂದರ್ಭದಲ್ಲಿ ಮಿ| ಬೆನ್ ಸ್ಪೂರರಿಗೆ ಮೇಲಿನಂತೆ ಉದ್ಗಾರಗಳನ್ನು ತೆಗೆಯಬೇಕಾಗಿ ಬಂತು. ರಕ್ತವನ್ನು ಸುರಿಸುವ ಮತ್ತು ಕಠಿಣವಾದ ರಾಜ್ಯಭಾರಕ್ರಮದಿಂದ ಐರ್ಲಂಡಿನಲ್ಲಿ ಎಷ್ಟು ಶಾಂತತೆಯುಂಟಾಯಿತೊ ಅದಕ್ಕಿಂತ ಹೆಚ್ಚಿನ ಶಾಂತತೆಯು ಹಿಂದುಸ್ಥಾನದಲ್ಲುಂಟಾಗಲಿಕ್ಕಿಲ್ಲ. ಐರ್ಲಂಡಿನಲ್ಲಿ ಶಾಂತತೆಯನ್ನು ಪ್ರಸ್ಥಾಪಿಸಲಿಕ್ಕೆ ಈ ಕ್ರಮವು ಎಳ್ಳಷ್ಟು ಕೂಡ ಫಲಕಾರಿಯಾಗಲಿಲ್ಲ. ಐರ್ಲಂಡಿನಲ್ಲೆ ಅಲ್ಲ, ಲೋಕದ ಯಾವ ಭಾಗದಲ್ಲೂ ನಿಷ್ಠುರವಾದ ರಾಜ್ಯಭಾರಕ್ರಮವು ಫಲವನ್ನುಂಟುಮಾಡಲಿಲ್ಲ. ಇದು ಬೆನ್‌ಸ್ಪೂರರ ಉದ್ಗಾರಗಳ ತಾತ್ಪರ್ಯವು. ಮಿ| ಬೆನ್ ಸ್ಪೂರರು ಈ ರೀತಿಯಿಂದ ಉದ್ಗಾರಗಳನ್ನು ಹೊರಡಿಸಬೇಕಾದರೆ ಅದಕ್ಕಿಂತ ಮುಂಚೆ ಪಾರ್ಲಿಮೆಂಟಿನಲ್ಲಿ ಯಾವ ಸಂಗತಿಯು ನಡೆದಿತ್ತು ಎಂಬುದರ ಮಾಹಿತಿಯನ್ನು ವಾಚಕರ ಮುಂದೆ ಇಡುವುದು ವಿಹಿತವು. ಹಿಂದುಸ್ಥಾನದ ಕಾರಭಾರಕ್ಕೆ ಜವಾಬದಾರವಾಗಿರುವ ವಿಲಾಯತಿಯೊಳಗಿನ ಇಂಡಿಯಾ ಆಫೀಸಿನ ಜಮಾ-ಖರ್ಚಿನ ವಿಷಯವು ಪಾರ್ಲಿಮೆಂಟಿನಲ್ಲಿ ಚರ್ಚಾಸ್ಪದವಾಗಿತ್ತು. ಈ ಸಂದರ್ಭದಲ್ಲಿ ಹಿಂದುಸ್ಥಾನದ ಅಂಡರ ಸೆಕ್ರೆಟರಿಗಳಾದ ವಿಂಟರಟನ್ ಸಾಹೇಬರು ಒಂದು ಉದ್ದವಾದ ಭಾಷಣವನ್ನು ಕೊಟ್ಟು ಆ ಭಾಷಣದಲ್ಲಿ ಅವರು ಹಿಂದುಸ್ಥಾನದಲ್ಲಿ ನಡೆಯುವ ಒತ್ತಾಳಿಕೆಯನ್ನು ಸಮರ್ಥಿಸಿದರು. ಹಿಂದುಸ್ಥಾನದ ರಾಜ್ಯ ಕಾರಭಾರದಲ್ಲಿ ವಿಶೇಷತಃ ಮಿಲಿಟರಿ ಖಾತೆಯಲ್ಲಿ ದುರ್ವ್ಯಯವಾಗುವ ರಕಮುಗಳು ಅಪ್ರಯೋಜಕವಲ್ಲವೆಂದು ನುಡಿದರು. ಖಿಲಾಫತ್ ವಿಷಯವನ್ನು ಕುರಿತು ಮಾತಾಡುವಾಗ ಈ ಅಂಡರ ಸೆಕ್ರೆಟರಿಗಳು ಯಾವುದಾದರೂ ನೂತನವಾದ ಆಶಾಜನಕ ವಚನವನ್ನು ಕೊಟ್ಟಿಲ್ಲ. ಅಷ್ಟೆ ಅಲ್ಲ. ಇವರ ಭಾಷಣದ ಈ ಭಾಗದಲ್ಲಿ ಕೊಂಚವೂ ಸಾರವಿದ್ದಿಲ್ಲ. ಬ್ರಿಟಿಷ ಸರಕಾರವು ಯಾವ ಮತಕ್ಕೂ ವಿರೋಧಿಯಲ್ಲ, ಅದಕ್ಕೆ ಮತದ್ವೇಷವಿಲ್ಲ, ಎಲ್ಲರ ಸಮಾಧಾನವಾಗಬೇಕೆಂಬುದೆ ಅದರ ತಾತ್ಪರ್ಯ ಇತ್ಯಾದಿ ಹೊರಗಿನಿಂದ ಬಹು ನುಣ್ಣಗಾಗಿ ತೋರುವ, ಆದರೆ ಒಳಗೆ ಸಂಪೂರ್ಣ ಟೊಳ್ಳಾದ ಮತ್ತು ಕೇಳುವಾಗ ಕಿವಿಗೆ ರಮ್ಯವಾದರೂ ಕಾರ್ಯದಲ್ಲಿ ನಿರರ್ಥಕವಾದ ಹಲವು ಮಾತುಗಳನ್ನು ವಿಂಟರಟನ್ ಸಾಹೇಬರು ಉಚ್ಚರಿಸಿದರು. ಖಿಲಾಫತ್ತಿಗೆ ಸಂಬಂಧಪಟ್ಟ ತುರ್ಕಿಯ ಪ್ರಶ್ನೆಯನ್ನು ಅವರು ಎತ್ತಿ ಸರಿಯಾಗಿ ಚರ್ಚೆಮಾಡ ಹೊರಟಿದ್ದಾದರೆ ಅವರಿಗೆ ಅನೇಕ ಕಡೆಗಳಲ್ಲಿ ಗಣೆಗಳು ಎನ್ನೆಗಳು ಸಿಕ್ಕಿ ಅವರ ಭಾಷಣವು ಕುಂಠಿತವಾಗಿ ಹೋಗುತಿತ್ತು. ಅವರು ಇಂಥ ಅನಿಷ್ಟ ಪ್ರಸಂಗವನ್ನು ತಂದುಕೊಳ್ಳುವುದಕ್ಕಿಂತ ಸಾಮಾನ್ಯ ಮಾತುಗಳಿಂದಲೆ ಸಭಾಸದರನ್ನು ಜಾರಿಸುವುದು ಒಳ್ಳೆದೆಂದು ಧೂರ್ತತನವನ್ನು ಮಾಡಿದರು. ವಿಂಟರಟನ್ ಸಾಹೇಬರ ಧೂರ್ತತನವು ಇದರಲ್ಲಿ ಮಾತ್ರ ಪ್ರತೀತಿಗೆ ಬಂದಿದೆ ಎಂದಲ್ಲ, ಹೊರದ್ವೀಪಗಳಲ್ಲಿ, ವಾಸಿಸುವ ಹಿಂದಿಗಳ—ಕೆನಿಯಾದಲ್ಲಿರುವ ಹಿಂದಿಗಳ ವಿಷಯವನ್ನು ಉಪಪಾದಿಸುವಾಗ ಕೂಡ ಆ ಧೂರ್ತತನವು ಸಾಹೇಬ ಮಹಾಶಯರ ಉಪಯೋಗಕ್ಕೆ ಬಿದ್ದಿದೆ ಎಂದು ಹೇಳಬೇಕಾಗುತ್ತದೆ. ಕೆನಿಯಾ ಪ್ರಾಂತವು ಶ್ವೇತಮಯವಾಗಿರಬೇಕೆಂದು ವಾದಿಸುವವರಲ್ಲಿ ಇವರೊಬ್ಬರಾದ ಕಾರಣ ತಮ್ಮ ಈ ಪೂರ್ವ ಪರಂಪರೆಗೆ ಅನುಗುಣವಾಗಿಯೆ ಇವರು ಧ್ವನಿಗಳನ್ನು ಹೊರಡಿಸಿದರೆ ಅದರಲ್ಲಿ ಆಶ್ಚರ್ಯವಿದೆಯೆ ?

ಈ ರೀತಿಯಿಂದ ಪ್ರಕೃತ ಕಾಲದ ರಾಜಕೀಯ ಚಳವಳದಲ್ಲಿ ಉಪಸ್ಥಿತವಾಗಿರುವ ಹಲವು ಪ್ರಶ್ನೆಗಳನ್ನು ಕುರಿತು ಅರ್ಲ ವಿಂಟರಟನರು ತಮ್ಮ ಭಾಷಣದ್ವಾರಾ ಶುಂಠತನವನ್ನು ತೋರಿಸಿ ಕೊನೆಗೆ ಹಿಂದುಸ್ಥಾನದೊಳಗಿನ ಮುಖ್ಯ ಚಳವಳದ ವಿಷಯವನ್ನು ಮಾತಾಡತೊಡಗಿದರು. ಈ ಸಾಹೇಬರು ಈ ಪ್ರಸಂಗದಲ್ಲಿ ಮಾಡಿದ ಭಾಷಣದ ಸಾರಾಂಶವು ಈ ಮೊದಲೆ ರೂಟರನ ಮುಖಾಂತರ ಪ್ರಕಟವಾಗಿತ್ತು. ಆದರೆ ಅದರ ಸಂಪೂರ್ಣ ಸ್ವರೂಪವು ಹಿಂದಿಗಳ ಮುಂದೆ ಬಂದಿರಲಿಲ್ಲ. ಈ ವಾರ ವಿಲಾಯತಿಯಿಂದ ಬಂದ ಪತ್ರಿಕೆಗಳಲ್ಲಿ ಪಾರ್ಲಿಮೆಂಟಿನೊಳಗಿನ ಈ ವಿಷಯದ ಸಮಗ್ರವಾದ ವಿವಾದವು ಹಿಂದಿಗಳಿಗೆ ಉಪಲಬ್ಧವಾಗಿದೆ. ಅದನ್ನು ವಿಮರ್ಶಿಸಿ ನೋಡುವಾಗ, ಹಿಂದುಸ್ಥಾನದ ಮುಖ್ಯ ಚಳವಳದ ಮೇಲೆ ಅಂಡರ ಸೆಕ್ರೆಟರಿಗಳು ತಮ್ಮ ಯಾವ ಮತವನ್ನು ವ್ಯಕ್ತಗೊಳಿಸಿದರೂ ಅದು ಕೇವಲ ಅಜ್ಞಾನ ಮೂಲಕವೆಂದು ಹೇಳಬೇಕಾಗುತ್ತದೆ. ಹಿಂದುಸ್ಥಾನದಲ್ಲಿ ಈಗ ರಾಜಕೀಯ ಕ್ಷೋಭವಾಗಲಿ, ಅಸಂತೋಷವಾಗಲಿ ಇಲ್ಲ, ಹಿಂದುಸ್ಥಾನದೊಳಗಿನ ಅಧಿಕಾರಿಗಳು ಗಟ್ಟಿಯಾಗಿ ನಿಂತು ರಾಜ್ಯಕಾರಭಾರವನ್ನು ನಡಿಸಿದ ಕಾರಣ ಹಿಂದುಸ್ಥಾನದಲ್ಲಿ ಶಾಂತತೆಯು ಪುನಃ ಪ್ರಸ್ಥಾಪಿತವಾಗಿದೆ. ಸರಕಾರಿ ಕಾನೂನುಗಳನ್ನು ಊರ್ಜಿತ ಪಡಿಸುವದಕ್ಕಾಗಿ ಮತ್ತು ಶಾಂತತೆಯನ್ನೂ, ಸುವ್ಯವಸ್ಥೆಯನ್ನೂ, ಕಾಪಾಡುವುದಕ್ಕಾಗಿ ಅಧಿಕಾರಿಗಳು ನಿರ್ದಾಕ್ಷಿಣ್ಯವಾದ ಧೋರಣದಿಂದ ರಾಜ್ಯಭಾರವನ್ನು ನಡಿಸಿದರು. ಗಾಂಧಿಗಳಂಥ ಮುಂಖಂಡರನ್ನು ಜೈಲಿಗೆ ಕಳುಹಿಸಿದರು. ಈ ಕಾರಣದಿಂದ ನೊನ್-ಕೊ-ಒಪರೇಶನು ಮೃತವಾಯಿತು. ಮತ್ತು ಈ ಎಲ್ಲ ಸಂಗತಿಗಳ ಫಲವೆಂಬಂತೆ ಹಿಂದುಸ್ಥಾನದಲ್ಲಿ ಶಾಂತತೆಯು ತಿರುಗಿ ನೆಲೆಗೊಂಡಿದೆ, ಬ್ರಿಟಿಷ್ ಅಧಿಕಾರಿಗಳ ಮೇಲೆ ತಿರುಗಿ ವಿಶ್ವಾಸವೂ, ಗೌರವವೂ, ಉತ್ಪನ್ನವಾಗಿವೆ ಮತ್ತು ಆದ್ದರಿಂದ ಹಿಂದುಸ್ಥಾನದೊಳಗಿನ ಬ್ರಿಟಿಷ್ ಅಧಿಕಾರಿಗಳು ಸ್ತುತಿಗೆ ಪಾತ್ರರಾಗಿದ್ದಾರೆ ಎಂದು ಹೇಳಿ ಅರ್ಲ ಸಾಹೇಬರು ಅಧಿಕಾರಿಗಳ ಬೆನ್ನು ತಟ್ಟಿದರು. ಇವರು ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯ ಮತ್ತು ಅವರ ಮತದಿಂದ ನೆಲೆಗೊಂಡಿರುವ ಶಾಂತತೆಯ ಮಿಮಾಂಸೆಯನ್ನು ಅವರು ಇಷ್ಟು ಉದ್ದವಾಗಿಯೂ ದ್ರಾವಿಡ ಪ್ರಾಣಾಯಾಮದಂತೆ ದೀರ್ಘವಾಗಿಯೂ ಮಾಡುವದರ ಬದಲಿಗೆ ಮಿ. ಮೊಂಟೆಗ್ಯುಗಳು ಭಾರತ ಮಂತ್ರಿತ್ವದಿಂದ ಪದಚ್ಯುತರಾದ ಬಳಿಕ "ಅಸ್ಮದೀಯ" ಕಾರಭಾರದಿಂದ ಇಷ್ಟೆಲ್ಲ ಉತ್ತಮ ಕಾರ್ಯಗಳು ಹಿಂದುಸ್ಥಾನದಲ್ಲಿ ಸಂಭವಿಸಿವೆ, ಹಿಂದುಸ್ಥಾನದಲ್ಲಿ ಸ್ಥಾಪಿತವಾದ ಶಾಂತತೆಯ ಸಾಮ್ರಾಜ್ಯವು ಅಥವಾ ಮೂಡಿದ ಸುವರ್ಣಯುಗವು "ಅಸ್ಮದೀಯ" ಕಾರಭಾರದ ಮಹಾತ್ಮ್ಯದಿಂದಲೆ ಎಂದು ಹೇಳಿದರೆ ಸಾಕಾಗುತ್ತಿತ್ತು ! ಈ ಸತ್ಯ ಸಂಗತಿಗಳನ್ನು ಬಹು ಚುಟುಕಿನಿಂದ ಹೇಳುವದರ ಬದಲು, ಅಜ್ಞಾನಿಲೇಖಕನು ಅಬದ್ಧಕಥೆಯಿಂದ ಮತ್ತು ಅನವಶ್ಯಕ ಹಾಗು ಅಲ್ಪ ವಿಷಯಗಳಿಂದ ಹೇಗೆ ಕಾಗದಗಳನ್ನು ತುಂಬಿತೆಗೆಯುವನೊ ಹಾಗೆಯೆ ಭಾಷಣಕರ್ತರಾದ ವಿಂಟರಟನರು ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯ ವಿಷಯವನ್ನು ಅಡ್ಡ ದಾರಿಗೆ ಇಳಿದು ವಿನಾಕಾರಣ ಉದ್ದವಾಗಿ ಚರ್ಚಿಸಿದ್ದಾರೆ.

ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯ ಅಜ್ಞಾನವು ವಿಂಟರಟನ್ ಸಾಹೇಬರಲ್ಲಿ ಮೇರು ಪರ್ವತಕ್ಕಿಂತಲೂ ಹೆಚ್ಚು ದೊಡ್ಡದಾಗಿ ನೆಲೆಗೊಂಡದೆ ಎಂದು ಅವರ ಭಾಷಣದಿಂದ ವ್ಯಕ್ತವಾಗುತ್ತದೆ. ಈ ರೀತಿಯಿಂದ ವ್ಯಕ್ತವಾಗುವ ಈ ಅಂಶವನ್ನು ಬೆನ್‌ಸ್ಪೂರ ಸಾಹೇಬರು ಅಂಡರಸೆಕ್ರೆಟರಿಗಳ ಮುಖದಮೇಲೆಯೆ ಸ್ವಚ್ಛವಾಗಿ ಅಡಿತೋರಿಸಿದರು. ಹಿಂದೂಸ್ಥಾನದಲ್ಲಿ ಪಸರಿಸಿಕೊಂಡಿರುವ ಅಸಂತೋಷವು ಮತ್ತು ಅದರಿಂದ ಪ್ರಾರಂಭವಾಗಿರುವ ಚಳವಳವು ಇವು ಅಧಿಕಾರಿವರ್ಗದ ಅತ್ಯಾಚಾರದ ಫಲಗಳಾಗಿವೆ. ಪರಂತು ಈ ಮರ್ಮವನ್ನರಿಯದೆ ಅಂಡರ ಸೆಕ್ರೆಟರಿಗಳು ಇಲ್ಲಿಯ ಚಳವಳದ ಕಾರಣದ ಮಿಮಾಂಸೆಯನ್ನು ಮಾಡಲು ಅಸತ್ಯಹೇತುಗಳ ಕೆಸರಿನಲ್ಲಿ ಬಿದ್ದು ಹೊರಳಾಡುತ್ತಿದ್ದಾರೆ; ಅಧಿಕಾರಿಗಳು ಪ್ರಾರಂಭಿಸಿದ ಒತ್ತಾಟಕ್ಕೆ ಹಿಂದಿನಿಂದ ಪುಷ್ಟಿಯನ್ನು ಕೊಡುತ್ತಿದ್ದಾರೆ. ಮಿ. ಬೆನ್‌ಸ್ಪೂರರು ಇವರ ಭ್ರಮವನ್ನು ಹೋಗಲಾಡಿಸಲು ಸರಿಯಾದ ಕಾರಣಗಳನ್ನು ಕೊಟ್ಟಿದ್ದಾರೆ. ಹಿಂದಿಗಳಿಗೆ ಬ್ರಿಟಿಷರ ದ್ವೇಷವಿಲ್ಲ; ಹಿಂದೂಸ್ಥಾನದ ಉನ್ನತಿಯಾಗಬೇಕೆಂಬುದೊಂದೆ ಅಭಿಪ್ರಾಯವುಂಟು. ಅವರ ಈ ಅಭಿಪ್ರಾಯವು ಹಿಂದುಸ್ಥಾನಕ್ಕೆ ಸ್ವರಾಜ್ಯ ಪ್ರಾಪ್ತಿಯಾದಲ್ಲಿ ಫಲಕಾರಿಯಾದೀತಲ್ಲದೆ ಒತ್ತಾಳಿಕೆಯ ಉಪಾಯಗಳಿಂದ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ. ಕೆಲವು ಸಮಯ ಚಳವಳವು ನಿಂತಂತೆ ತೋರಿದರೂ ಪುನಃ ಅದು ಇನ್ನಷ್ಟು ಪ್ರಬಲವಾದೀತು. ಆಗ ಅದನ್ನು ನಿಲ್ಲಿಸಲು ಅಸಾಧ್ಯವಾಗಿ ಹೋದೀತು. ಅದಕ್ಕಿಂತ ಲೋಕಪಕ್ಷದ ಅಂಬೋಣವನ್ನು ಶಾಂತ ರೀತಿಯಿಂದ ಕೇಳಿಕೊಂಡು ಅದರ ಆಕಾಂಕ್ಷೆಯನ್ನು ಪೂರೈಸುವುದು ಶ್ರೇಯಸ್ಕರವಲ್ಲವೆ ಎಂದು ಮಿ. ಬೆನ್‌ಸ್ಪೂರರು ಪಾರ್ಲಿಮೆಂಟಿಗೆ ಕೇಳಿರುವರು. ಮಿ ಬೆನ್‌ಸ್ಪೂರರ ಭಾಷಣದಿಂದ "ಒತ್ತಾಳಿಕೆಯು ಫಲಕಾರಿಯಲ್ಲ" ವೆಂಬುದನ್ನು ಯಾರೂ ತಿಳಕೊಳ್ಳುವಂತಿದೆ.

ಸ್ಫುಟವಿಚಾರಗಳು.

೧. ಅಧಿಕಾರಿವರ್ಗದ ದೃಷ್ಟಿಯಿಂದ ಇಡಿ ಹಿಂದುಸ್ಥಾನದ ಸ್ವರಾಜ್ಯವು ಇನ್ನೂ ದೂರದಲ್ಲಿದೆ. ಪ್ರಾಂತಿಕ ಸ್ವರಾಜ್ಯವು ಕೆಲವು ಮಟ್ಟಿಗೆ ಬಂದಿದೆ. ಆದರೆ ಮುನ್ಸಿಪಾಲಿಟಿಗಳಲ್ಲಿ ಮಾತ್ರ ಸ್ವರಾಜ್ಯವು ಸಿಕ್ಕಿದೆ. ಅದುಕಾರಣ ಮುನ್ಸಿಪಾಲಿಟಿಯು ಜವಾಬದಾರ ಸಂಸ್ಥೆಯೆಂದು ಹೇಳಲು ಅಡ್ಡಿ ಇಲ್ಲ. ಪರಂತು, ಸ್ಥಾನಿಕ ಸ್ವರಾಜ್ಯವೆಂದು ಕರೆಯಲ್ಪಡುವ ಈ ಸಂಸ್ಥೆಯಲ್ಲಿ ಮತದಾರರಿಗೆ ಎಂದರೆ ಜನಗಳಿಗೆ ಎಷ್ಟರಮಟ್ಟಿನ ಸ್ವಾತಂತ್ರ್ಯವಿದೆ ಎಂಬುದೊಂದು ಪ್ರಶ್ನೆಯೆಸರಿ. ಗುಜರಾತ ಮುನ್ಸಿಪಾಲಿಟಿಯಲ್ಲಿ ಶಾಲೆಗಳ ಸರಕಾರಿ ಗ್ರೇಂಟನ್ನು ನಿಲ್ಲಿಸಿದ ಬಳಿಕ ಅಲ್ಲಿಯ ಅಧಿಕಾರಿಗಳು ಹೇಗೆ ಅಕಾಂಡ ತಾಂಡವ ಮಾಡುತ್ತಿದ್ದರೆಂಬುದನ್ನು ಇನ್ನೂ ಯಾರೂ ಮರೆತಿರಲಿಕ್ಕಿಲ್ಲ. ಗುಜರಾತದೊಳಗಿನ ಈ ಸಂಗತಿ ಇರಲಿ. ಡೆರಾಡೂನ ಮುನ್ಸಿಪಾಲಿಟಿಯಲ್ಲಿ ಈಗ ಯಾವ ಒಂದು 'ದುರಾಗ್ರಹದ ಮತ್ತು ಧಾರ್ಮಿಕ ಮನೋವೃತ್ತಿಗಳನ್ನು ನೋಯಿಸುವ ಕೃತ್ಯವು ನಡೆದಿದೆಯೊ ಅದನ್ನು ಮನಸ್ಸಿಗೆ ತರುವಾಗ ಈ ಲೋಕಲ್ ಸೆಲ್ಫ ಗವರ್ನಮೆಂಟಿನ ಸಂಪೂರ್ಣ ತಿರಸ್ಕಾರವುಂಟಾಗದೆ ಇರುವುದಿಲ್ಲ. ಡೆರಾಡೂನಿನ ಕರಣಪುರದಲ್ಲಿ "ಕಸಾಯಿಖಾನೆ"ಯನ್ನು ಕಟ್ಟಲು ಮುನ್ಸಿಪಾಲಿಟಿಯು ಆಲೋಚನೆಯನ್ನು ಕೊಟ್ಟಿದೆ. ಆದರೆ ಡೆರಾಡೂನ ಮುನ್ಸಿಪಾಲಿಟಿಯು ಯಾವ ಪುಣ್ಯಕೃತ್ಯವನ್ನು ಮಾಡಲು ಉದ್ಯುಕ್ತವಾಗಿದೆಯೊ ಅದು ಅಲ್ಲಿಯ ಮತದಾರರಿಗೆ ಸಮ್ಮತವಿಲ್ಲ; ಅಲ್ಲಿಯ ಯಾವ ಸಾರ್ವಜನಿಕ ಸಂಸ್ಥೆಗಳಿಗೂ ಇಷ್ಟವಿಲ್ಲ. ಮತ್ತು ಮುಸಲ್ಮಾನ ಬಂಧುಗಳಿಗೂ ಕೂಡ ಅಭಿಮತವಿಲ್ಲ. ದನಗಳನ್ನು ಹಿಂಸಿಸುವ ಈ ಕೆಲಸವು ಯಾರಿಗೂ ಮಾನ್ಯವಿಲ್ಲದಿರುವಾಗ ಮುನ್ಸಿಪಾಲಿಟಿಯು ಯಾರಿಗಾಗಿ ಮತ್ತು ಯಾರ ಜವಾಬದಾರಿಯ ಮೇಲೆ ಗೋವಧ ಮಂದಿರದ ಈ ಪುಣ್ಯಕೃತ್ಯವನ್ನು ಮಾಡತೊಡಗಿದೆ? ಟೆಕ್ಸ್ ಕೊಡುವ ಮತದಾರರ ಮತಕ್ಕೆ ವಿರುದ್ಧವಾಗಿ, ಅವರ ತೀವ್ರ ನಿಷೇಧವಿರುತ್ತ ಮುನ್ಸಿಪಾಲಿಟಿಯು ಈ ಮಂದಿರವನ್ನು ಕಟ್ಟಲು ಪ್ರಾರಂಭಿಸಿದರೆ ಆ ಮುನ್ಸಿಪಾಲಿಟಿಗೆ ಜನಗಳು ಯಾಕೆ ಕರವನ್ನು ಕೊಡಬೇಕು ಎಂಬೀ ಪ್ರಶ್ನೆಯು ಇನ್ನು ಮುಂದೆ ಬರಲಿಕ್ಕಿಲ್ಲವೆ? ಡೆರಾಡೂನಿನೊಳಗಿನ ಈ ದುಷ್ಕೃತ್ಯವನ್ನು ನಿಷೇಧಿಸಲು ಅಲ್ಲಿಯ ಡಿ. ಕೊಂಗ್ರೆಸ್ ಕಮಿಟಿ, ಖಿಲಾಫತ್ ಕಮಿಟಿ, ಹಿಂದೂ ಸಭೆ, ಆರ್ಯಸಮಾಜ, ಸಾಧುಮಹಾಮಂಡಲ ಮತ್ತು ಚೇಂಬರ್ ಒಫ್ ಕೊಮರ್ಸ್ ಈ ಎಲ್ಲ ಸಂಸ್ಥೆಗಳು ತಮ್ಮ ತಮ್ಮ ಪ್ರತಿನಿಧಿಗಳನ್ನು ನೇಮಿಸಿ ಅವರ ಕಮಿಟಿಯ ಮುಖಾಂತರ ಈ ಪ್ರಕರಣವನ್ನು ಕೂಲಂಕಷವಾಗಿ ವಿಚಾರಿಸಿ ಅದರ ರಿಪೋರ್ಟನ್ನು ಪ್ರಕಟಿಸಬೇಕೆಂದು ನಿಶ್ಚಯಿಸಿವೆ. ಹಿಂದುಗಳು ಧಾರ್ಮಿಕದೃಷ್ಟಿಯಿಂದ ನಿಂದ್ಯವಾದ ಈ ಕೃತ್ಯವನ್ನು ನಿಲ್ಲಿಸುವ ಬಗ್ಗೆ ಯತ್ನಿಸುತ್ತಿದ್ದಾರೆ. ಮತ್ತು ಮುಸಲ್ಮಾನರು ಕೂಡ ತೀವ್ರನಿಷೇಧವನ್ನು ಮಾಡುತ್ತಿದ್ದಾರೆ. ಹಿಂದುಗಳ ಧಾರ್ಮಿಕ ಮನೋವೃತ್ತಿಗಳ ಕ್ಷೋಭ ಮತ್ತು ಮುಹಮ್ಮದೀಯರ ತೀವ್ರನಿಷೇಧ ಇವೆರಡನ್ನು ಲಕ್ಷಿಸದೆ ಡೆರಾಡೂನ ಮುನ್ಸಿಪಾಲಿಟಿಯು ಹಾಗೆಯೆ ಮುಂದರಿಸಿದ್ದಾದರೆ ಇಡೀ ಜಿಲ್ಲೆಯು ಸತ್ಯಾಗ್ರಹವನ್ನು ಮಾಡಲು ನಿಶ್ಚಯಿಸಿದೆ ಮತ್ತು ಅದರ ಸಿದ್ಧತೆಯನ್ನು ಮಾಡುತ್ತಿದೆ. ಡೆರಾಡೂನಿನ ಜನರು ಈ ರೀತಿಯಿಂದ ಸತ್ಯಾಗ್ರಹದ ನಿಶ್ಚಯವನ್ನೂ, ಸಿದ್ಧತೆಯನ್ನೂ ಮಾಡುತ್ತಿರುವಾಗ ಶಾರದಾಪೀಠದ ಶ್ರೀ ಶಂಕರಾಚಾರ್ಯರು ಗೋರಕ್ಷಣದ ವಿಷಯವಾಗಿ, ಉತ್ತೇಜನಪರವಾದ ಮತ್ತು ಹಿಂದು-ಮುಸಲ್ಮಾನರ ಐಕ್ಯಬೋಧಕವಾದ ಸಂದೇಶವನ್ನು ಕಳುಹಿಸಿಕೊಟ್ಟಿದ್ದಾರೆ. ಇದರಿಂದ ಅಲ್ಲಿಯವರ ಪ್ರಯತ್ನವು ದ್ವಿಗುಣಿತ ಉತ್ಸಾಹದಿಂದ ತುಂಬಿಹೋದೀತೆಂಬುದಕ್ಕೆ ಸಂಶಯವಿಲ್ಲ. ಜನರು ಈ ರೀತಿಯಿಂದ ತಮಗೆ ಸಮ್ಮತವಿಲ್ಲದ ಕೃತ್ಯವಾಗಬಾರದೆಂದು ಹೇಳುವಾಗ, ಮುನ್ಸಿಪಾಲಿಟಿಯಂಥ ಲೋಕಸಂಸ್ಥೆಯು ಹಟದಿಂದ ಅದನ್ನೆ ಮಾಡಲುದ್ಯುಕ್ತವಾದದ್ದಾದರೆ ಅಂಥ ಸಂಸ್ಥೆಯನ್ನು ಅಸ್ತಿತ್ವದಿಂದ ದೂರಪಡಿಸುವದೆ ಉತ್ತಮವು. ನಮ್ಮ ಮಂಗಳೂರ ಮುನ್ಸಿಪಾಲಿಟಿಯ ಸರಹದ್ದಿನೊಳಗೆ ಗೋವಧೆಯಾಗಬಾರದೆಂಬ ಒಂದು ಠರಾವು ಕೌನ್ಸಿಲಿನ ಮುಂದೆ ಬರುವದಿತ್ತೆಂದು ನಾವು ಈ ಮೊದಲೆ ಕೇಳಿದ್ದೆವು. ಆದರೆ ಸದರಿ ಠರಾವು ಗರ್ಭಾವಸ್ಥೆಯಲ್ಲಿ ಮೃತವಾಯಿತೊ ಏನೊ! ಅದರ ಯಾವ ವಿದ್ಯಮಾನವೂ ಜಗತ್ತಿಗೆ ಗೊತ್ತಿಲ್ಲ! ಮಂಗಳೂರಿನ ಗೋವಧೆಯ ವಿಷಯವು ಈ ರೀತಿಯಿಂದ ಅಂತಃಸೃಷ್ಟಿಯಲ್ಲಿ ಲುಪ್ತವಾಗಿ ಹೋದಾಗ್ಯೂ ಕೊಂಗ್ರೆಸ್ ಕಮಿಟಿಯ ಪ್ರಯತ್ನದಿಂದ ಮದ್ಯಪಾನ ನಿಷೇಧದ ಚಳವಳಕ್ಕೆ ಕೊಂಚಮಟ್ಟಿಗೆ ಪ್ರಯೋಜನವುಂಟಾದೀತೆಂದು ತೋರುತ್ತಿದೆ. ಮುನ್ಸಿಪಾಲಿಟಿಯ ಸರಹದ್ದಿನಲ್ಲಿ ಮದ್ಯ, ಶರಾಬು ಇತ್ಯಾದಿಗಳ ಮಾರಾಟದ ಕಟ್ಟೆಗಳಿರಬಾರದೆಂದು ಮನವಿಯನ್ನು ತಯಾರಿಸಿ ಅದರ ಮೇಲೆ ಎಲ್ಲ ಮುನ್ಸಿಪಲ್ ಮತದಾರರ ಸಹಿಗಳನ್ನು ತೆಕ್ಕೊಂಡು ಮುನ್ಸಿಪಾಲಿಟಿಗೆ ಅದನ್ನು ಸಾದರಪಡಿಸುವ ಉಪಕ್ರಮವು ನಮ್ಮ ಪಟ್ಟಣದಲ್ಲಿ ನಡೆದಿದೆ. ಈ ಉಪಕ್ರಮವು ಅತ್ಯಂತ ಸ್ತುತ್ಯವಾದದ್ದು. ಇದರಲ್ಲಿ ಚಳವಳಗಾರರಿಗೆ ಯಶಸ್ಸು ಬಂದೀತೆಂದು ನಾವು ನೆನಸುತ್ತೇವೆ. ಇರಲಿ. ಸಾರಾಂಶ, ಜನರ ಇಚ್ಛೆಯ ಮೇರೆಗೆ ಇಂಥ ಅನಿಷ್ಟ, ಅನ್ಯಾಯ್ಯ, ಮತ್ತು ಅಯೋಗ್ಯ ಸಂಗತಿಗಳನ್ನು ನಿರ್ಮೂಲಪಡಿಸಲು ಸಾಧ್ಯವಿಲ್ಲವಾದರೆ ಆ ಮುನ್ಸಿಪಾಲಿಟಿಗಳು ಯಾಕೆ? ಮತ್ತು ಅವುಗಳಿಗೆ ಸ್ಥಾನಿಕಸ್ವರಾಜ್ಯವೆಂಬ ಹೆಸರಾದರೂ ಯಾಕೆ?

೨. ಮುನ್ಸಿಪಾಲಿಟಿಗಳಲ್ಲಿಯ ಸ್ಥಾನಿಕ ಸ್ವರಾಜ್ಯದಂತೆ ಕಾಯಿದೆ ಕೌನ್ಸಿಲಿನ ಅಧಿಕಾರವು ಸಹ ನಿರುಪಯುಕ್ತವಾದದ್ದೆ ಎಂಬುದು ಹೆಚ್ಚಿ ಹೆಚ್ಚಿಗೆ ಗೊತ್ತಾಗುತ್ತಿದೆ. ಬಂಗಾಲದ ಸುಪ್ರಸಿದ್ಧ ದೇಶಭಕ್ತರಾದ ಚಿತ್ತರಂಜನದಾಸರು ತಮ್ಮ ವಾಜ್ಯೂಲದಲ್ಲಿ ತಮ್ಮ ಮೇಲಿನ ಖಟ್ಲೆಯು ಕಾನೂನುಬದ್ಧವಾಗಿಲ್ಲವೆಂದು ಹೇಳಿದ್ದರು. ಈ ವಿಷಯವನ್ನು ಕುರಿತು ಬಂಗಾಲ ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ಒಬ್ಬ ಸಭಾಸದರು "ಸರಕಾರವು ಸದರಿ ವಿಷಯದಲ್ಲಿ ತನಖಿಯನ್ನು ನಡಿಸಿತೊ ಹೇಗೆ" ಎಂದು ಒಂದು ಪ್ರಶ್ನೆಯನ್ನು ಮಾಡಿದರು. ಅದಕ್ಕೆ ನಾಮದಾರ ಸಭಾಸದರಾದ ಸರ್. ಅಬ್ದುಲ್ ರಹೀಮರು ಸರಕಾರದ ಕಡೆಯಿಂದ ಮುಂದಿನಂತೆ ಉತ್ತರವನ್ನು ಕೊಟ್ಟರು. "ದಾಸರ ಖಟ್ಲೆಯಲ್ಲಿ ಅವರ ವಾಜ್ಯೂಲದ ಮೇಲಿಂದ ಚರ್ಚಾಸ್ಪದವಾದ ಎಲ್ಲ ಸಂಗತಿಗಳನ್ನು ಸರಕಾರವು ತನಖಿಮಾಡಿದೆ. ಆದರೆ ಈ ವಿಷಯದಲ್ಲಿ ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನು ಸರಕಾರವು ಕೊಡಲು ಸಿದ್ಧವಿಲ್ಲ!" ಸರಕಾರದ ಈ ಉತ್ತರವನ್ನು ನೋಡುವಾಗ ಸರಕಾರವು ಮೊದಲು ಏನೊ ಕೆಲವು ಮಾಹಿತಿಯನ್ನು ಕೊಟ್ಟಿದೆ. ಅದಕ್ಕಿಂತ ಹೆಚ್ಚಿನ ಮಾಹಿತಿಯನ್ನು (ಫರ್ದರ್ ಇನ್‌ಫೊರ್ಮೇಶನನ್ನು) ಕೊಡಲು ಸಿದ್ಧವಿಲ್ಲವೆಂದು ತೋರುತ್ತದೆ. ಆದರೆ ಮೊದಲು ಕೊಟ್ಟ ಮಾಹಿತಿಯೆ ಸೊನ್ನೆ. ಎಂದ ಮೇಲೆ "ಹೆಚ್ಚಿನ ಮಾಹಿತಿ" ಎಂಬುದಕ್ಕೆ ಅರ್ಥವೇನು? ಅದೆ ಸಭಾಸದರು "ಈ ರೀತಿಯಿಂದ ಗವರ್ನರರು ಹೆಚ್ಚಿನ ಮಾಹಿತಿಯನ್ನು ಪೂರಯಿಸದೆ ಇರಲು ಕಾರಣವೇನು" ಎಂದು ಪುನಃ ಪುರವಣಿ ಪ್ರಶ್ನೆಯನ್ನು ಕೇಳಿದರು. ಸರ್. ಅಬ್ದುಲ್ ರಹೀಮರು ಯಾವ ಉತ್ತರವನ್ನೂ ಕೊಡರು. ಪ್ರಾಶ್ನಿಕ ಸಭಾಸದರಿಗೆ ಇದರಿಂದ ವ್ಯಸನವಾಗಿ "ಉತ್ತರವನ್ನು ಪಡೆಯಲು ನಾನು ಬಾಧ್ಯನಲ್ಲವೆ? ಸಾರ್ವಜನಿಕ ಹಿತದ ಬುದ್ಧಿಯಿಂದಲೊ, ಅಥವಾ ಸರಕಾರದ ಕಲ್ಯಾಣಕ್ಕೊ, ಯಾವ ಕಾರಣದಿಂದ ಸರಕಾರವು ಮಿಕ್ಕ ಮಾಹಿತಿಯನ್ನು ಪ್ರಕಟಗೊಳಿಸಲೊಲ್ಲದು?" ಎಂದು ಸವಾಲು ಕೇಳಿದರೂ ಒನರೇಬಲ್ ರಹೀಮರು ಈ ಪ್ರಾತಿನಿಧಿಕ ಸಮಾಜದಲ್ಲಿ "ಮೌನವೆಂಬ ಭೂಷಣವನ್ನೆ" ಕೊನೆತನಕ ಅಂಗೀಕರಿಸಿದರು!!

೩. ಹಿಂದಿ ಮುಖಂಡರು ಭಿಕ್ಷಾವೃತ್ತಿಯಿಂದ ಕೊಲನಿಗಳಲ್ಲಿಯ ಕಷ್ಟಕರ ಮತ್ತು ಅಪಮಾನಾಸ್ಪದ ಪರಿಸ್ಥಿತಿಯನ್ನು ಪರಿಹರಿಸಲು ಒದ್ದಾಡುತ್ತಿದ್ದರೂ ಆ ಪರಿಸ್ಥಿತಿಯು ಕೊಲನಿ ಸರಕಾರಗಳ ದುರಾಗ್ರಹ, ವರ್ಣವಿದ್ವೇಷ, ಅಧ್ಯತೆ, ಸ್ವಾರ್ಥಪರತೆ ಈ ಗುಣಗಳಿಂದಲೂ ಮತ್ತು ಆ ಗುಣಗಳಿಗೆ ಮಿ| ಚರ್ಚಹಿಲ್ಲರಂತಹ ಕೊಲೊನಿಯಲ್ ಸೆಕ್ರೆಟರಿಗಳ ಬೆಂಬಲವಿರುವುದರಿಂದಲೂ ದಿನೇ ದಿನೇ ಕಷ್ಟಮಯವೆ ಆಗುತ್ತದಲ್ಲದೆ ಹಗುರವಾಗುವುದಿಲ್ಲ. ದಕ್ಷಿಣ ಆಫ್ರಿಕದ ನಾತಾಳ ಪ್ರಾಂತದಲ್ಲಿ ಕೆಲವು ಅನ್ಯಾಯ್ಯ ಮತ್ತು ಅಮಾನುಷ ಕಾನೂನುಗಳನ್ನು ಮಾಡಿ ಅಲ್ಲಿಯ ಹಿಂದಿಗಳನ್ನು ಹೇಗೆ ಪೀಡಿಸಲಾರಂಭಿಸಿದ್ದಾರೆಂಬುದು ಮೊದಲೆ ಸ್ಪಷ್ಟವಾಗಿದೆ. ನಾತಾಳ ಪ್ರಾಂತಿಕ ಕೌನ್ಸಿಲಿನವರು ಇಂತಹ ನಿಷ್ಠುರ ಮತ್ತು ಸ್ವಾರ್ಥಪ್ರೇರಿತವಾದ ಕಾನೂನುಗಳನ್ನು ಮಾಡಿ ತಮ್ಮ ಅಧ್ಯತೆಯನ್ನೂ, ದುರಾಗ್ರಹವನ್ನೂ, ದುಃಸ್ವಾರ್ಥವನ್ನೂ ಪ್ರಕಟಿಸಿದ್ದಾದರೆ ಅದು ಕೆಲವು ಮಟ್ಟಿಗೆ ಕ್ಷಮ್ಯವಾಗುತಿತ್ತು. ಆದರೆ ಚರ್ಚಹಿಲ್ಲರು ಅದನ್ನು ಅನುಮೋದಿಸುವಾಗ ಅಥವಾ ಯುನಿಯನ್ ಸರಕಾರವು ಮಾಡುವ ಕರ್ತವ್ಯಗಳಲ್ಲಿ ಪ್ರವೇಶಿಸಲಾಗುವುದಿಲ್ಲವೆಂದು ಹೇಳುವಾಗ ಹಿಂದಿಗಳ ವಿಷಯದಲ್ಲಿ ಬ್ರಿಟಿಷ್ ಮುತ್ಸದಿಗಳಲ್ಲಿ ಎಷ್ಟರ ಮಟ್ಟಿನ ಸಹಾನುಭೂತಿಯುಂಟೆಂಬುದು ಅತ್ಯಂತ ಸ್ಪಷ್ಟವಾಗುತ್ತದೆ. ಪಾರ್ಲಿಮೆಂಟಿನ ಲೋಕಸಭೆಯಲ್ಲಿ ಕರ್ನಲ್ ವೆಜ್‌ವುಡರು ಈ ವಿಷಯವನ್ನು ಕುರಿತು ಪ್ರಶ್ನೆಯನ್ನು ಮಾಡಿದಾಗ ಚರ್ಚಹಿಲ್ ಸಾಹೇಬರು ಮೇಲೆ ಸೂಚಿಸಿದಂತೆ ಈ ಪ್ರಕರಣದಲ್ಲಿ ತಾನು ಸೇರಲು ನಿರಾಕರಿಸಿದರು. ಮಾತ್ರವಲ್ಲ, ದಕ್ಷಿಣ ಆಫ್ರಿಕದ ಸರಕಾರದೊಡನೆ ಕಲಹವನ್ನು ಎಬ್ಬಿಸುವುದರಲ್ಲಾಗಲಿ ಅಥವಾ ಅದರೊಡನೆ ದೂಡಾಟಮಾಡುವುದರಲ್ಲಾಗಲಿ ತನಗೆ ಇಷ್ಟವಿಲ್ಲೆಂದರು. ಇದರ ಮೇಲಿಂದ ಹಿಂದಿಗಳ ಅವಸ್ಥೆ ಏನಾದರೂ ಕೇಳುವವನು ಯಾರೂ ಇಲ್ಲವೆಂದಾಯಿತು! ನಾಮದಾರ ಶಾಸ್ತ್ರಿಗಳ ಕಿವಿಯ ಮೇಲೆ ಈ ಬಾತಮಿಗಳು ಹೋಗುತ್ತವೊ? ವಸಾಹತು ವಾಸಿಗಳಾದ ಹಿಂದಿಗಳಿಗೆ ವಸಾಹತವಾಲರೊಡನೆ ಸಮಾನತೆಯ ಹಕ್ಕನ್ನು ತರಲು ಅವರು ದ್ವೀಪದಿಂದ ದ್ವೀಪಕ್ಕೆ ತಿರುಗಾಡುತಿದ್ದಾರೆ!

೪ ಲೊರ್ಡ ರೊನಾಲ್ಡಶೆಯವರು ಬಂಗಾಲದ ಗವರ್ನರರಾಗಿರುವಾಗ್ಯೆ ಬಂಗಾಲದಲ್ಲಿ ದೇಶಭಕ್ತರನ್ನು ಕೈದುಮಾಡುವ ಪುಣ್ಯಕಾರ್ಯದ ಮತ್ತು ರಾಜಕೀಯ ಖಟ್ಲೆಗಳ ಸತ್ರಗಳನ್ನು ಪ್ರಾರಂಭಿಸಿದ್ದರು. ಇಲ್ಲಿಂದ ಹೋದ ಬಳಿಕ ಸ್ವದೇಶದ ಶಾಂತಹವೆಯು ಪರಿಣಾಮವು ಇವರ ಮಿದುಳಿನ ಮೇಲುಂಟಾಗಿ ಕ್ರೂರ ವಿಚಾರಗಳು ಇವರನ್ನು ಸ್ಪರ್ಶಿಸಲಿಕ್ಕಿಲ್ಲವೆಂದು ನೆನಸಿಕೊಂಡಿದ್ದೆವು. ಆದರೆ ಮೊನ್ನೆ ವಿಲಾಯತಿಯಲ್ಲಿಯ ಔತಣದ ಒಂದು ಸಂದರ್ಭದಲ್ಲಿ ಅವರು ತಮ್ಮ ಅಸಹಾನುಭೂತಿಯ ಕಾರಭಾರದ ಯಾವ ಸಮರ್ಥನವನ್ನು ಮಾಡಿದ್ದಾರೊ ಅದನ್ನು ನೋಡುವಾಗ ನಮ್ಮ ನೆನಸುವಿಕೆಯು ಭ್ರಮಾತ್ಮಕವಾಗಿತ್ತೆಂದು ಹೇಳಬೇಕಾಗುತ್ತದೆ. ರೊನಾಲ್ಡಶೆಯವರು ತಮ್ಮ ಉಗ್ರ ಧೋರಣದ ಸಮರ್ಥನವನ್ನು "ಕಾನೂನಿನ ಗೌರವವನ್ನು ಕಾಪಾಡುವುದು" ಎಂಬೀ ಒಂದೆ ಸೂತ್ರದಿಂದ ಮಾಡುತಿದ್ದಾರೆ. ಸರಕಾರದ ಕಾನೂನುಗಳಿಗೆ ಪ್ರಜೆಗಳು ತಲೆಬಗ್ಗಿಸಬೇಕೆಂಬ ಸೂತ್ರವನ್ನು ಹಿಂದೂಸ್ಥಾನದಲ್ಲಿ ಮಾತ್ರ ಹೇಳಬಹುದಲ್ಲದೆ, ವಿಲಾಯತಿಯಲ್ಲಿ ಈ ಮಾತಿಗೆ ಒಂದು ಚಿಕ್ಕಾಸು ಕೂಡಾ ಬೆಲೆ ಇಲ್ಲವೆಂಬುದು ರೊನಾಲ್ಡಶೆಯವರಿಗೆ ಗೊತ್ತಿಲ್ಲವೆ? ಪ್ರಜೆಗಳ ಸಮ್ಮತಿಯನ್ನು ಪಡೆಯದೆ ಮಾಡಿದ ಕಾನೂನುಗಳು ಇಂಗ್ಲೆಂಡದ ಸ್ವಾತಂತ್ರ್ಯ ಪ್ರಾಪ್ತಿಯ ಇತಿಹಾಸದಲ್ಲಿ ಅನೇಕ ಸಲ ನಿರ್ಮಾಲ್ಯದಂತೆ ತ್ಯಾಜ್ಯವಾಗಿ ಹೋಗಿದೆ ಎಂಬ ಸಂಗತಿಯು ಸ್ವತಃ ಇಂಗ್ಲಿಷ್ ಮೆನರಾದ ರೊನಾಲ್ಡಶೆಯವರಿಗೆ ಅಪರಿಚಿತವೆ? ಕಾಯಿದೆ, ಕಾನೂನು, ನಿಯಮ, ಸನದು, ಇತ್ಯಾದಿ ಶಬ್ದಗಳ ಆಡಂಬರವು ಈಗಿನ ಇಪ್ಪತ್ತನೆಯ ಲೋಕಸತ್ತವಾದದ ಶತಮಾನದಲ್ಲಿ ಎಲ್ಲಿಯೂ ನಡಿಯುವುದಿಲ್ಲ. ಇಂಗ್ಲಂಡಿನ ನೆರೆಯಲ್ಲಿರುವ ಐರ್ಲಂಡು ಇಂಗ್ಲಂಡಿಗೆ ಈ ವಿಷಯದ ಪ್ರತೀತಿಯನ್ನು ಪ್ರತಿದಿನ ತಂದುಕೊಡುತ್ತಿದೆ! ಅಲ್ಲಿ ಈ ರೊನಾಲ್ಡಶೆಯವರು ತಮ್ಮ ವಾಕ್‌ಪಾಂಡಿತ್ಯವನ್ನು ಪಸರಿಸಲಿ!

೫. ಮೌಲಾನಾ ಹಜರತ ಮೋಹನಿಗಳ ಮೇಲೆ ಬಾದಶಹರ ವಿರುದ್ಧ ಯುದ್ಧವನ್ನು ಪ್ರಾರಂಭಿಸುವ ಆರೋಪದಿಂದ ರಾಜದ್ರೋಹದ ಆರೋಪದಿಂದ ಖಟ್ಲೆ ನಡೆದು ಅಹಮ್ಮದಾಬಾದ ಜಡ್ಜರು ೨ ವರ್ಷದ ಶಿಕ್ಷೆಯನ್ನು ಕೊಟ್ಟಿದ್ದರು. ಆ ಖಟ್ಲೆಯಲ್ಲಿ ಜ್ಯೂರಿಗಳ ಮತ್ತು ಜಡ್ಜರ ಏಕವಾಕ್ಯತೆಯು ಆಗಿರಲಿಲ್ಲ. ಜ್ಯೂರಿಗಳು ಮೌಲಾನಾರನ್ನು ನಿರ್ದೋಷಿಗಳೆಂದು ಅಭಿಪ್ರಾಯಪಟ್ಟಿದ್ದರೂ ಜಡ್ಜರಿಗೆ ಇದು ಸಮ್ಮತವಿರಲಿಲ್ಲ. ಹೀಗಾಗಿ ಕೊನೆಯ ತೀರ್ಮಾನಕ್ಕೆ ಇದು ಮುಂಬಯಿ ಹ್ಯಾಕೋರ್ಟಿಗೆ ಬಂದಿತು. ಈ ಸಂಗತಿಯೆಲ್ಲಾ ವಾಚಕರಿಗೆ ಮರೆತಿರಲಿಕ್ಕಿಲ್ಲ. ಹ್ಯಾಕೋರ್ಟಿನಲ್ಲಿ ಸರ್ ಲಲ್ಲುಬಾಯಿಶಹಾ ಮತ್ತು ಕ್ರಂಪ ಈ ಇಬ್ಬರು ನ್ಯಾಯಮೂರ್ತಿಗಳ ಮುಂದೆ ಇದರ ವಿಚಾರವು ನಡೆದು ನ್ಯಾಯಮೂರ್ತಿಗಳು ಕೊನೆಗೆ ಮೌಲಾನಾ ಹಜರತ ಮೋಹನಿಗಳು ಸೆಕ್ಶನ್ 121A ಪ್ರಕಾರ ತಪ್ಪುಗಾರರಲ್ಲವೆಂಬ ತಮ್ಮ ನಿರ್ಣಯವನ್ನು ಕೊಟ್ಟಿರುವರು!! ಮೌಲಾನಾ ಹಜರತ ಮೊಹನಿಗಳ ಖಟ್ಲೆಯ ಆಪೀಲಿನಲ್ಲಿ ಇದೇ ಭವಿತವ್ಯತೆಯುಂಟಾದೀತೆಂಬುದು ಮೊದಲಿನಿಂದಲೆ ಎಲ್ಲರಿಗೆ ಗೊತ್ತಿರುವ ಸಂಗತಿಯಾದ್ದರಿಂದ, ಕೋರ್ಟಿನ ಈ ನಿರ್ಣಯದಿಂದ ಯಾರಿಗೂ ಆಶ್ಚರ್ಯ ಉಂಟಾಗಲಿಕ್ಕಿಲ್ಲ.

ಮಂಗಳೂರು.

ಅಂತ್ಯಜವರ್ಗದವರನ್ನು ಉದ್ಧರಿಸುವ ಉದ್ದೇಶವನ್ನಿಟ್ಟುಕೊಂಡು 'ಆರ್ಯನ್ ಸೋಸಿಯಲ್ ಸರ್ವಿಸ್ ಲೀಗಿ'ನವರು ತಮ್ಮ ಕಾರ್ಯದಲ್ಲಿ ಉದ್ಯುಕ್ತರಾಗಿದ್ದಾರೆ. ಕಳೆದ ಆದಿತ್ಯವಾರ ಲೀಗಿನ ಮೆಂಬರರು ದೇರೆಬೈಲಿನಲ್ಲಿರುವ ಅಸ್ಪೃಶ್ಯವರ್ಗದವರ ನಿವಾಸ ಸ್ಥಳಕ್ಕೆ ಹೋಗಿ ಅಲ್ಲಿನ ಪ್ರತಿಯೊಂದು ಮನೆಯನ್ನು ಸಂದರ್ಶಿಸಿ ಅವರಿಗೆ ಅಶುಚಿತ್ವವನ್ನು ಹೋಗಲಾಡಿಸುವ ಮಾರ್ಗವನ್ನೂ ಮದ್ಯಪಾನವನ್ನು ಬಿಟ್ಟು ಬಿಡಬೇಕಾಗಿಯೂ ಬೋಧಿಸಿದರು. ಮತ್ತು ಅಲ್ಲಿರುವ ಅಸ್ಪೃಶ್ಯ ವರ್ಗದ ಮಕ್ಕಳಿಗೆ ತಿಂಡಿಯನ್ನು ಹಂಚಿ ಪ್ರತಿಯೊಂದು ಮನೆಯವರಿಗೂ ಸಾಬೂನುಗಳನ್ನು ಕೊಟ್ಟರು. ನಾಳೆ ಬೆಳಿಗ್ಗೆ ೯-೩೦ ಘಂಟೆಗೆ ಈ ಲೀಗಿನ ಮೆಂಬರರು ಅಸ್ಪೃಶ್ಯವರ್ಗದವರ ಯಾವುದಾದರೊಂದು ನಿವಾಸಸ್ಥಾನವನ್ನು ಸಂದರ್ಶಿಸಲಿಕ್ಕಿದ್ದಾರೆ. ಅಂದು ರಾ. ಕಾರ್ನಾಡ ಸದಾಶಿವರಾಯರು ಸಹ ಇವರೊಡನೆ ಆ ಸ್ಥಳಗಳಿಗೆ ಬರಲು ಆದರ ಪೂರ್ವಕ ಸಮ್ಮತಿಸಿರುವರೆಂದು ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರು ತಿಳಿಸಿರುವರು. ಮತ್ತು ಬರುವ ತಾ. ೧೭ನೇ ಸೋಮವಾರ ಲೀಗಿನ ಕಾರ್ಯದ ವ್ಯವಸ್ಥೆಯನ್ನು ಮಾಡಲು ಮೆಂಬರರ ಸಭೆಯು ಸಾಯಂಕಾಲ ೫-೩೦ ಘಂಟೆಗೆ ತಿಲಕ ಮಹಾವಿದ್ಯಾಲಯದಲ್ಲಿ ಸೇರುವುದರಿಂದ ಎಲ್ಲ ಮೆಂಬರರೂ ದಯವಿಟ್ಟು ಈ ಮೀಟಿಂಗಿಗೆ ಬರಬೇಕಾಗಿ ಶ್ರೀಯುತ ಧರ್ಮದೇವರು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತಾರೆ.

ಈ ತಿಂಗಳ ಡಿಸ್ಟ್ರಿಕ್ಟ ಬೋರ್ಡ ಮೀಟಿಂಗು ಇದೇ ಬರುವ ತಾ. ೨೪ನೇ ಸೋಮವಾರ ಅಪರಾಹ್ನ ಗಂಟೆ ೨-೩೦ಕ್ಕೆ ಕಲೆಕ್ಟರರ ಆಫೀಸಿನಲ್ಲಿ ಕೂಡುವುದು.

ಕಾಸರಗೋಡು ತಾಲೂಕು ಬೋರ್ಡ ಮೆಂಬರರ ಸಭೆಯು ನಾಳೆ ಬೆಳಿಗ್ಗೆ ೯ ಗಂಟೆಗೆ ಸದರಿ ತಾಲೂಕು ಬೋರ್ಡ ಆಫೀಸಿನಲ್ಲಿ ಸೇರುವುದು.

ಮ. ರಾ. ಅರುಳಾನಂದ ಪಿಳ್ಳೆಯವರು ಇಲ್ಲಿಯ ಗವರ್ನಮೆಂಟ ಕೊಲೇಜಿನ ಪ್ರಿನ್ಸಿಪಾಲರಾಗಿ ಬಂದಿರುತ್ತಾರೆ.

ಹಿಂದುಳಿದ ವರ್ಗದವರ ಮತ್ತು ಪಂಚಮರ ಪೈಕಿ ೫ ಮಂದಿ ಉಮೇದ್ವಾರರನ್ನು ಸಬ್ ಅಸಿಸ್ಟಾಂಟ ಸರ್ಜನರುಗಳಾಗಿ ತರಬೇತಿ ಮಾಡಿ ಅವರನ್ನು ಸಿವಿಲ್ ಸಬೋರ್ಡಿನೇಟ ಮೆಡಿಕಲ್ ಡಿಪಾರ್ಟಮೆಂಟಿಗೆ ಸೇರಿಸುವರೆಂದು ಪಬ್ಲಿಸಿಟಿಬಿರೋ ತಿಳಿಸುತ್ತದೆ.

ಇಲ್ಲಿಯ ಟ್ರೆಜರಿ ಡಿಪ್ಯುಟಿ ಕಲೆಕ್ಟರರಾಗಿದ್ದ ದಿವಾನ ಬಹದೂರ ಸಿ. ಗೋಪಾಲನ್ ನಾಯರರು ಮಲಬಾರ ಮಾರ್ಶಲ್ ಲೋ ಸ್ಪೆಶಲ್ ಮೆಜಿಸ್ಟ್ರೇಟರಾಗಿ ನೇಮಕಪಟ್ಟಿರುವರಂತೆ.

ಇದೇ ತಿಂಗಳ ತಾ. ೨೦ಕ್ಕೆ ಸಿವಿಲ್ ಡಿಸ್‌ಒಬ್ಬಿಡಿಯನ್ಸ್ ಕಮ್ಮಿಟಿಯವರು ಕಲ್ಲಿಕೋಟೆಗೆ ಬರುವವರಿದ್ದಾರೆ. ಆ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಹೆಯಲ್ಲಿ ಕಾಯಿದೆಭಂಗಮಾಡುವ ಕುರಿತು ಜಿಲ್ಲೆಯವರು ಸಿದ್ಧರಾಗಿರುವರೊ ಇಲ್ಲವೊ ಎಂಬುದನ್ನು ಪರ್ಯಾಲೋಚಿಸುವರೆ ಜಿಲ್ಲೆಯ ಒಬ್ಬಿಬ್ಬರನ್ನು ಸದರಿ ಕಮ್ಮಿಟಿಯವರು ವಿಚಾರಿಸುವರೆಂದು ಕರ್ನಾಟಕ ಪ್ರಾಂತಿಕ ಕಮ್ಮಿಟಿಯ ಕಾರ್ಯದರ್ಶಿಯವರು ರಾ. ಕಾರ್ನಾಡ ಸದಾಶಿವರಾಯರಿಗೆ ತಿಳಿಸಿದ್ದಾರೆ. ಆದುದರಿಂದ ನಮ್ಮ ಜಿಲ್ಹೆಯ ಎಲ್ಲಾ ತಾಲೂಕಿನ ಕೊಂಗ್ರೆಸ ಕಮ್ಮಿಟಿಗಳ ಕಾರ್ಯದರ್ಶಿಯವರೂ ಮತ್ತು ಅಸಹಕಾರಿತೆಯ ಪರವಾಗಿ ಕೆಲಸ ಮಾಡುವ ಇತರ ದೇಶಬಾಂಧವರೂ ತಮ್ಮ ತಮ್ಮ ಸ್ಥಳಗಳಲ್ಲಿ ಕೊಂಗ್ರೆಸ ವಿಧಾಯಕ ಕಾರ್ಯಕ್ರಮವು ಎಷ್ಟರ ಮಟ್ಟಿಗೆ ಮುಂದರಿಸಿದೆ ಎಂಬುದನ್ನು ಚೆನ್ನಾಗಿ ಚೌಕಸಿ ಮಾಡಿ ಇದೇ ತಿಂಗಳ ತಾರೀಕು ೨೨ರ ಒಳಗೆ ಇವರ ಅನುಭವವನ್ನು ಕೂಲಂಕುಶವಾಗಿ ಬರಹ ಮೂಲಕ ತಿಳಿಸಬೇಕಾಗಿ ಶ್ರೀಯುತ ಕಾರ್ನಾಡ ಸದಾಶಿವರಾಯರು ವಿನಂತಿಮಾಡಿಕೊಳ್ಳುತ್ತಾರೆ. ಕುಂದಾಪುರ ಮತ್ತು ಉಪ್ಪಿನಂಗಡಿ ತಾಲೂಕಿನ ಮುಖಂಡರು ಫೊರೆಸ್ಟ ಇಲಾಖೆಯ ಕಾನೂನುಗಳಿಂದ ಬಡ ನಿವಾಸಿಗಳಿಗೆ ಯಾವ ಯಾವ ತರದ ಬಾಧೆಗಳು ತಗಲುತ್ತಿವೆ ಎಂಬ ವಿಷಯವನ್ನು ಸಹ ಅಗತ್ಯವಾಗಿ ಮೇಲಿನ ತಾರೀಕಿನ ಒಳಗೆ ಸಾಧ್ಯವಿದ್ದರೆ ಸ್ವತಃ ಮಂಗಳೂರಿಗೆ ಬಂದು ತಾ. ೨೩ರಲ್ಲಿ ನಡಿಯುವ ಜಿಲ್ಲಾ ಕೊಂಗ್ರೆಸ್ ಕಮ್ಮಿಟಿಯ ಅಧಿವೇಶನದ ಮುಂದೆ ವಿವರಿಸಿದರೆ ಉತ್ತಮವಾದೀತು. ಅದು ಸಾಧ್ಯವಿಲ್ಲವಾದರೆ ಸದರಿ ತಾರೀಕಿನೊಳಗೆ ಬರಹ ಮೂಲಕವಾದರೂ ತಮಗೆ ತಿಳಿಸಬೇಕಾಗಿ ಅವರು ಸೂಚಿಸುತ್ತಾರೆ.

ಬರುವ ತಾ. ೨೩ರಲ್ಲಿ ಖಾದಿಭಂಡಾರದಲ್ಲಿ ಬೆಳಿಗ್ಗೆ ೯ ಗಂಟೆಗೆ ಮಂಗಳೂರು ತಾಲೂಕು ಕೊಂಗ್ರೆಸ ಕಮ್ಮಿಟಿಯ ಕಾರ್ಯಕಾರಿ ಮಂಡಲದ ಸಭೆಯೂ, ಮಧ್ಯಾಹ್ನ ೩ ಗಂಟೆಗೆ ಖಾದಿಭಂಡಾರದ ಸಭೆಯೂ, ಸಾಯಂಕಾಲ ೫ ಗಂಟೆಗೆ ಜಿಲ್ಲಾ ಕೊಂಗ್ರೆಸು ಕಮ್ಮಿಟಿಯ ಕಾರ್ಯಕಾರಿ ಮಂಡಲದ ಸಭೆಯೂ ನೆರೆಯುವುದು.

ಸಿವಿಲ್ ಡಿಸ್‌ಒಬೀಡಿಯನ್ಸ್ ಕಮ್ಮಿಟಿಯವರು ಮದರಾಸನ್ನು ಸಂದರ್ಶಿಸಿ ಹೋಗುತ್ತಲೆ ಶ್ರೀಯುತ ಟಿ. ಪ್ರಕಾಶಂರವರು ಮಂಗಳೂರಿಗೆ ಬರುವರಾಗಿ ತಿಳಿಸಿರುವರಂತೆ.

ಬರುವ ತಾ. ೧೮ರಲ್ಲಿ ಮಂಗಳೂರಿನಲ್ಲೂ ಮಹಾತ್ಮರ ಬಂಧನ ದಿನವು ಆಚರಿಸಲಾಗುವುದು. ಈ ದಿನ ಪ್ರಾತಃಕಾಲ ೬ ಗಂಟೆಗೆ ದೇಶಾಭಿಮಾನಿಗಳೆಲ್ಲರೂ ತಿಲಕ ವಿದ್ಯಾಲಯದಲ್ಲಿ ಸೇರಿ ಅಲ್ಲಿಂದ ರಾಷ್ಟ್ರಗೀತವನ್ನು ಹಾಡುತ್ತ ಪಟ್ಟಣದ ಮುಖ್ಯ ಬೀದಿಗಳಲ್ಲಿ ತಿರುಗಿ, ಸಾಯಂಕಾಲ ೫ ಗಂಟೆಗೆ ತಿಲಕ ವಿದ್ಯಾಲಯದಲ್ಲಿ ಸಾರ್ವಜನಿಕ ಸಭೆ ಕೂಡುವುದು. ಈ ಕಾರ್ಯವನ್ನು ಸಾಂಗಗೊಳಿಸಲು ಎಲ್ಲರೂ ಅಂದು ಸಹಭಾಗಿಗಳಾಗಬೇಕಾಗಿ ಮಂಗಳೂರ ತಾಲೂಕು ಕೊಂಗ್ರೆಸ್ ಕಮ್ಮಿಟಿಯ ಪರವಾಗಿ ರಾ| ಕಾರ್ನಾಡ ಸದಾಶಿವರಾಯರೂ, ರಾ| ಮೂಡಬಿದ್ರೆ ಉಮೇಶರಾಯರೂ ವಿನಂತಿ ಮಾಡಿಕೊಳ್ಳುತ್ತಾರೆ.

ನಮ್ಮ ಜಿಲ್ಲೆಯಲ್ಲಿ ತಯಾರಾದ ನೂಲಿನಿಂದ ನೀಲೇಶ್ವರದಲ್ಲಿರುವ ಚಾಡರ ಮೂಲಕ ಹುರಿಮಗ್ಗಗಳ ಸಹಾಯದಿಂದ ಖದ್ದರ ತಯಾರಿಸುವ ಏರ್ಪಾಡನ್ನು ಮಾಡಲು ರಾ. ಕಾರ್ನಾಡ ಸದಾಶಿವರಾವ್, ರಾ. ರಾಮಕೃಷ್ಣ ಕಾರಂತ ಮತ್ತು ರಾ. ಯು. ಸಂಜೀವರಾವ ಇವರು ನಾಳೆ ದಿನ ಅಲ್ಲಿಗೆ ಹೋಗುವರು.

ವಿಧಾಯಕ ಕಾರ್ಯಕ್ರಮದಂತೆ ಖಾದಿಯ ಬೆಳವಣಿಗೆಯು ನಮ್ಮ ಜಿಲ್ಲೆಯಲ್ಲೂ ಸರಿಯಾಗಿ ಆಗುವಂತೆ ನೀಲೇಶ್ವರ ಸರಹದ್ದಿನಲ್ಲಿ ಹತ್ತಿಯನ್ನು ಬೆಳಸಿ, ಅದರಿಂದ ತಯಾರಾಗುವ ನೂಲಿನಿಂದ ಖದ್ದರನ್ನು ಇಡೀ ಜಿಲ್ಲೆಗೆ ಒದಗಿಸುವ ಏರ್ಪಾಡು ಮಾಡುವುದಕ್ಕಾಗಿ ಹಾಗು ಈ ಕುರಿತು ಇಲ್ಲಿಯ ಕೊಂಗ್ರೆಸ್ ಕಮ್ಮಿಟಿಯವರಿಗೆ ಕೊಂಗ್ರೆಸ್ಸಿನ ಸಹಾಯವನ್ನು ಮಾಡುವುದಕ್ಕೆ ತಕ್ಕ ವಿಲೆವಾರಿ ಮಾಡಲು ಶ್ರೀಯುತ ಜಮುನಾಲಾಲ ಬಾಜಜ ಮತ್ತು ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರು ಇನ್ನು ಒಂದು ತಿಂಗಳೊಳಗಾಗಿಯೆ ಇಲ್ಲಿಗೆ ಚಿತ್ತೈಸಲಿಕ್ಕಿದ್ದಾರೆ.

ಶೀರ್ಷಾಸನಿ ಜಯರಾಮಾಚಾರ್ಯರು ಬಳ್ಳಾರಿಯಲ್ಲಿ ಅಲ್ಲಿಯ ಸಂಸ್ಕೃತ ಪಂಡಿತರ ಇತ್ಯಾದಿ ಇತರ ವಿದ್ವಜ್ಜನರ ಸಹಾಯದಿಂದ ಒಂದು ಶೀರ್ಷಾಲಯವನ್ನು ಸ್ಥಾಪಿಸುವರು. ಶೀರ್ಷಾಸನಗಳನ್ನು ಮಾಡಲಿಕ್ಕೆ ಬೇಕಾದ ಶಿಕ್ಷಣವು ಈ ಆಲಯದಲ್ಲಿ ಕೊಡೋಣಾಗುವುದು. ಈ ವಿಷಯ ಮಾಹಿತಿ ಬೇಕಾದವರು ಬಳ್ಳಾರಿಯಲ್ಲಿ ಸ್ಥಾಪಿಸೋಣಾಗುವ ಈ ಆಲಯದ ಮನೇಜರರಿಗೆ ಬರೆಕೊಳ್ಳಬಹುದು.

ನಾನು ಯಾರು?

೧. ನಾನು ಲೋಕದಲ್ಲಿ "ಮಹಾ ಭಯಂಕರ ನೀಚ ಶಿರೋಮಣಿ" ಎಂಬ ಹೆಸರಿನಿಂದ ಇತಿಹಾಸ ಪ್ರಸಿದ್ಧನಾಗಿರುತ್ತೇನೆ.

೨. ಭೂಲೋಕದಲ್ಲಿ ಸೃಷ್ಟ್ಯಾದಿಯಿಂದ ಈ ವರೆಗೆ ನಡೆದ ಎಲ್ಲಾ ರಾಷ್ಟ್ರೀಯ ಯುದ್ಧಗಳಲ್ಲಿ ಎಷ್ಟು ಮನುಷ್ಯರು ಸತ್ತು ಹೋಗಿರುವರೊ, ಅದಕ್ಕಿಂತಲೂ ಶತಪಾಲಿನಷ್ಟು ಹೆಚ್ಚು ಜನರನ್ನು ನಾನು ಯಮಪುರಕ್ಕೆ ಅಟ್ಟಿಬಿಟ್ಟಿರುತ್ತೇನೆ.

೩. ನಾನು ಕೋಟಿಗಟ್ಟಲೆಯ ಕುಟುಂಬಗಳಲ್ಲಿ ಸರ್ವದಾ ಶೋಕ, ಭಯ, ದಾರಿದ್ರ್ಯ ಮೊದಲಾದ ಅಸಂತುಷ್ಟಿಯ ಬೀಜಗಳನ್ನು ಬಿತ್ತುತ್ತಾ ಇರುತ್ತೇನೆ.

೪. ಉತ್ಸಾಹಪೂರ್ಣವಾದ ಮಹತ್ವಾಕಾಂಕ್ಷೆಯುಳ್ಳ ಎಷ್ಟೊ ಯುವಕ ಯುವತಿಯರನ್ನು ನಾನು ಕೇವಲ ಬಾಯಿಬಡುಕ ಮತ್ತು ಡಾಂಭಿಕರನ್ನಾಗಿ ಮಾಡುತ್ತೇನೆ.

೫. ನಾನು ದಿವ್ಯ ಜ್ಞಾನಿಯನ್ನು ಮೂರ್ಖನನ್ನಾಗಿಯೂ, ಮೂರ್ಖನನ್ನು ಅತಿ ಮೂರ್ಖನನ್ನಾಗಿಯೂ ಮಾಡುವುದರಲ್ಲಿಯೆ ನನ್ನ ಆಯುಷ್ಯವನ್ನೆಲ್ಲಾ ಖರ್ಚುಮಾಡಿರುತ್ತೇನೆ.

೬. ಉನ್ನತಿಯ ಶಿಖರವನ್ನು ಏರಲು ಪ್ರಯತ್ನಿಸುವ ಲೆಕ್ಕವಿಲ್ಲದಷ್ಟು ಬುದ್ಧಿಯುಳ್ಳ ಮನುಷ್ಯರನ್ನು ನಾನು ಸುಲಭವಾಗಿ ನರಕದ ಹೊಂಡಕ್ಕೆ ದೂಡುತ್ತೇನೆ.

೭. ಕಪಟವನ್ನರಿಯದ ಸಾವಿರಾರು ಸಾಧು ಮನುಷ್ಯರನ್ನು ನನ್ನ ಮಾಯಾಜಾಲದಲ್ಲಿ ಬೀಳಿಸಿ ತಂಟೆಕೋರರಾಗುವಂತೆ ಮಾಡಿ ಊರಿನಲ್ಲೆಲ್ಲಾ ಖೂನಿ, ಕೊಲೆ, ದೊಂಬಿ, ಜುಗಾರು ಇತ್ಯಾದಿಗಳಿಗೆ ಉತ್ತೇಜನಕೊಟ್ಟು, ಪೋಲೀಸು, ಮೆಜಿಸ್ಟ್ರೇಟು, ಜೈಲು ಮೊದಲಾದ ಇಲಾಖೆಗಳು ತುಂಬಾ ಅಭಿವೃದ್ಧಿಗೆ ತರುವವನು ನಾನೇ.

೮. ನನ್ನ ಮಹಾ ಪರಾಕ್ರಮವನ್ನು ಗಂಡನಿಂದ ದಿಂಗಡಿಸಲ್ಪಟ್ಟ (ಹೆಂಡತಿ) ಸ್ತ್ರೀಯರಿಂದಲೂ ಆಹಾರವಿಲ್ಲದೆ ಹಸಿವೆಯಿಂದ ಬಳಲುತ್ತಿರುವ ಮಕ್ಕಳಿಂದಲೂ, ತಿಳಕೊಳ್ಳಬಹುದು. ನನ್ನ ಭಕ್ತಮಂಡಲಿಗೆ ಸೇರಿದ ಯುವಕರ ಮುದಿ ತಾಯಿ ತಂದೆಗಳಾದರೂ ನನ್ನ ಪರಾಕ್ರಮವನ್ನು ಚೆನ್ನಾಗಿ ಬಲ್ಲರು.

೯. ಕ್ರೈಸ್ತರ ಬೈಬಲಿನಲ್ಲಿ ವರ್ಣಿಸಿದ ಸೈತಾನನೆಂದರೆ ನಾನೇ. ನನ್ನನ್ನೂ, ನನ್ನ ಪ್ರಯತ್ನವನ್ನೂ ಮುರಿದುಬಿಡಲಿಕ್ಕೆ, ದೇವರಿಂದಲಾದರೂ ಸಾವಿರಾರು ವರುಷಗಳಿಂದ ಆಗದೆ ಹೋಯಿತು. ಕ್ರೈಸ್ತಭಕ್ತರಾದರೋ, ನನ್ನ ವಿನಾಶಕ್ಕಾಗಿ, ಕೋಟ್ಯಾನುಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಆದರೆ ಪ್ರಪಂಚದಲ್ಲಿ ಇರುವ ನನ್ನ ಮಹಾಭಕ್ತಸಮುದಾಯದಲ್ಲಿ ಕ್ರೈಸ್ತರೆ ಹೆಚ್ಚಿನವರು.

೧೦. ಕಳೆದ ವರುಷ ಅಸಹಕಾರಿಗಳು ನನ್ನನ್ನು ಭರತಖಂಡದಿಂದ ಗಡಿಪಾರು ಮಾಡುವುದಕ್ಕಾಗಿಯೂ, ನನ್ನ ಸೆರೆಯಲ್ಲಿ ಬಿದ್ದವರನ್ನು ಬಿಡುಗಡೆ ಮಾಡುವುದಕ್ಕಾಗಿಯೂ, ಶಾಂತಿಯುದ್ಧವನ್ನು ಹಿಡಿದು, ವಿಶ್ವಪ್ರಯತ್ನವನ್ನೆ ಮಾಡಿಬಿಟ್ಟರು. ಆಗ ನನ್ನ ಅವಸ್ಥೆ ಏನಾಗುವುದೊ ಎಂದು ನನ್ನ ಸೇನಾಪತಿಗಳೆಲ್ಲರೂ ಭಯಭೀತರಾದರು. ಎಲ್ಲೆಲ್ಲಿಯೂ ನನ್ನ ಜೈಲುಖಾನೆಗಳು ಬರಿದಾಗಿ ಹೋದವು. ನನ್ನ ಜೈಲರುಗಳೆಲ್ಲ ಕೆಟ್ಟೆವೆಂದು ಗೋಳಿಟ್ಟರು. ಆದರೆ ಒಂದೆರಡು ತಿಂಗಳುಗಳೊಳಗಾಗಿಯೆ ಅಸಹಕಾರಿಗಳು ಕಟ್ಟಿದ ಕೋಟೆಯನ್ನು ಪೂರಾ ನೆಲಸಮ ಮಾಡಿ ಬಿಟ್ಟೆನು. ಒಮ್ಮೆ ನನ್ನ ಜೈಲುಖಾನೆಯಿಂದ ತಪ್ಪಿಸಿ ಹೋದ ಸರ್ವ ಜನರನ್ನೂ ಪುನಹ ನನ್ನ ಗುಲಾಮರಾಗುವಂತೆ ಮಾಡಿದೆನು. ಈ ಕಾರ್ಯದಲ್ಲಿ ನನ್ನನ್ನು ನಂಬಿ ನನಗೆ ಸಹಾಯ ಮಾಡಿದ ನನ್ನ ಕೆಲವು ಜೈಲರುಗಳಿಗೆಲ್ಲಾ ಮೊದಲಿಗಿಂತಲೂ ಹೆಚ್ಚು, ಸಾವಿರಗಟ್ಟಲೆ ರೂಪಾಯಿಗಳ ಲಾಭ ಮಾಡಿ ಕೊಡಿಸಿದೆನು. ಪಾಪ! ಅಸಹಕಾರಿಗಳು ನನ್ನ ಸಾಮರ್ಥ್ಯಕ್ಕೆ ಹೆದರಿ ಎಲ್ಲಿಯೊ ಅಡಗಿಬಿಟ್ಟರು.

೧೧. ಶಹಭಾಸು! ನನ್ನನ್ನು ಎದುರಿಸುವವರು ಇನ್ನು ಈ ಭೂಲೋಕದಲ್ಲಿ ಯಾರೂ ಇಲ್ಲದೆ ಹೋದರು. ನಾನು ಮಿಲಿಯಗಟ್ಟಲೆಯ ಜನರ ತನು-ಮನ ಧನಗಳನ್ನು ಎಷ್ಟೊ ಹಾಳುಮಾಡಿರುತ್ತೇನೆ. ಇನ್ನು ನಿರಾಂತಕವಾಗಿ ಕೋಟಿಗಟ್ಟಲೆ ಜನರ ಸೌಭಾಗ್ಯದ ಬೇರನ್ನೇ ಕಡಿದುಬಿಡಲು ನಿತ್ಯವೂ ಪ್ರಯತ್ನಿಸಿರುತ್ತೇನೆ.

ಮೇಲೆ ಬರೆದ ಈ ಏಕಾದಶ ಮಹಾ ಪರಾಕ್ರಮಿಯಾಗಿ ಲೋಕ ಪ್ರಸಿದ್ಧನಾದವನು, ನಾನು ಯಾರು?

ನಾನೇ ಮದ್ಯಪಾನ ನಿಶಾರಾಕ್ಷಸ!

ಇದನ್ನೋದುವ ವಾಚಕ ಮಹಾಶಯರೆ! ಲೌಕಿಕ ಸುಖಭೋಗಗಳಲ್ಲಿ ಬಿದ್ದು ಕೇವಲ ಪಶು ಪ್ರಾಯರಾದ ಜನರು ಎಲ್ಲಿ ಇರುವರೋ ಅಲ್ಲಿಯೇ ಈ ಮದ್ಯ ನಿಶಾರಕ್ಷಸನ ಹಾವಳಿಯೂ, ಶೌರ್ಯವೂ ನಡಿಯಬಹುದು. ಆದರೆ ಎಲ್ಲಿ ಪಾರಮಾರ್ಥಿಕ ಚೈತನ್ಯವೂ, ಧಾರ್ಮಿಕ ಭಾವನೆಯೂ, ಜನರ ನಡೆ-ನುಡಿ ಆಚಾರ ವಿಚಾರಗಳಲ್ಲಿ ರೂಢಮೂಲವಾಗಿರುವುದೊ ಅಂತಹ ನಮ್ಮ ಪವಿತ್ರವಾದ ಭಾರತಭೂಮಿಯಲ್ಲಿಯೂ, ನಿಶಾರಕ್ಷಸನು ತನ್ನ ಮಾಯಾಜಾಲವನ್ನು ಪಸರಿಸಿ ಮೂರ್ಖರನ್ನೂ, ಪಂಡಿತರನ್ನೂ, ಬ್ರಾಹ್ಮಣರನ್ನೂ, ಅಬ್ರಾಹ್ಮಣರನ್ನೂ ಎಲ್ಲೆಲ್ಲಿಯೂ ಸೆರೆಹಿಡಿದು ವಿನಾಶಗೊಳಿಸುತ್ತಿರುವನಲ್ಲವೇ? ಮಹರ್ಷಿಗಳ ವಂಶಜರೆಂದು ಹೇಳಿಕೊಳ್ಳುವ ನಮಗೂ, ನಮ್ಮ ಆರ್ಯಧರ್ಮಕ್ಕೂ ಇದು ಮಹಾಕಳಂಕವೂ, ಹಾನಿಕರವೂ ಆಗಿರುವುದು.

ಮಠಾಧಿಪತಿಗಳೇ! ಕುಲಗುರುಗಳೇ! ಜಾತಿ ಮುಖಂಡರುಗಳೆ! ಮದ್ಯಪಾನ ವ್ಯಸನ ಪಿಶಾಚಿಯಿಂದ ನಮ್ಮ ಅನುಯಾಯಿಗಳು ಪಡುತ್ತಿರುವ ಭಂಗಭವಣೆಗಳನ್ನು ಲಕ್ಷ್ಯಕೊಟ್ಟು ನೋಡಿರಿ! ಆ ಪಿಶಾಚಿಯನ್ನು ಇನ್ನಾದರೂ ನಮ್ಮ ಪುಣ್ಯಭೂಮಿಯಿಂದ ಓಡಿಸಿಬಿಡಲು ಯಾವುದಾದರೊಂದು ಸಾಧನೆಯನ್ನು ಕೈಕೊಳ್ಳಿರಿ. ಇದು ನಿಮ್ಮಿಂದಾಗದಿದ್ದರೆ, ಅಂತಹ ಸಾಧನೆ ಮಾಡತಕ್ಕವರ ಪ್ರಯತ್ನಕ್ಕೆ ಉತ್ತೇಜನ ಕೊಡಿರಿ. ಅದೂ ಸಾಧ್ಯವಿಲ್ಲದಿದ್ದರೆ ವಿಘ್ನವನ್ನಾದರೂ ತಂದೊಡ್ಡದೇ ಇರಿ. ಜನ್ಮಭೂಮಿಯ ಮಾನವನ್ನು ಕಾಪಾಡಿರಿ.

ವಿಶ್ವಸ್ವಂ ಮಾತರಮೋಷಧೀನಾಂ ಧ್ರುವಾಂ ಭೂಮಿಂ ಪೃಥಿವೀಂ ಧರ್ಮಣಾ ಧೃತಾಂ ಶಿವಾಂ ಸ್ಯೋನಾಂ ಮನುಚರೇಮ ವಿಶ್ವಾ ॥

ಅರ್ಥ:—ಸಂಪೂರ್ಣ ಔಷಧಿಗಳನ್ನು ಕೊಡುವ ಮತ್ತು ಯಾರ ಸ್ವಾಸ್ಥ್ಯದಿಂದ ನಮ್ಮೆಲ್ಲರ ರಕ್ಷಣೆ ಆಗುವುದೋ, ಅಂತಹ ಕಲ್ಯಾಣ ಮತ್ತು ಸುಖದ ಸಂವರ್ಧನೆಮಾಡುವ ನಮ್ಮ ಮಾತೃಭೂಮಿಯನ್ನು ನಾವೆಲ್ಲರೂ ಒಟ್ಟುಗೂಡಿ ಸರ್ವದಾ ಸೇವೆಮಾಡುವ, ಅಥರ್ವವೇದ ೧೨. ೧. ೧೭.

ಮೋಹನಪ್ಪ ತಿಂಗಳಾಯ,
ಕಾರ್ಯದರ್ಶಿ,
ಶ್ರೀ ಜ್ಞಾನೋದಯ ಸಮಾಜ, ಮಂಗಳೂರು.

ಕೆಲವು ಅಮೌಲ್ಯ ಸೂಚನೆಗಳು.

ಅಯ್ಯಾ ಪತ್ರಾಧಿಪರೆ,

ಈ ಕೆಳಗಿನ ಲೇಖನದಲ್ಲಿ ಕೊಟ್ಟಿರುವ ಸೂಚನೆಗಳು ಎಲ್ಲರಿಗೂ ಪ್ರಯೋಜನಕರವಾಗಿರುವುದರಿಂದ ಅದಕ್ಕೆ ನಿಮ್ಮ ಪತ್ರದಲ್ಲಿ ಸ್ವಲ್ಪ ಎಡೆ ಕೊಡುವಿರೆಂತ ನಂಬುತ್ತೇನೆ. ಅನೇಕ ಜೀನಸುಗಳ ಕ್ರಯ ಏರಿ ಖರ್ಚು ದಿನೇ ದಿನೇ ಹೆಚ್ಚುತ್ತ ಬರುವುದರಿಂದಲೂ ಸಂಪಾದನೆ ಕಮ್ಮಿಯಾಗುತ್ತ ಬರುವುದರಿಂದಲೂ ಖರ್ಚು ಇತರ ವಿಧದಿಂದ ತಗ್ಗಿಸದಿದ್ದರೆ 'ಭಿಕ್ಷಾಂ ದೇಹಿ' ಎಂಬ ವಚನಗಳನ್ನು ಉಪನಯನದ ಕಾಲದಲ್ಲಿ ಮಾತ್ರವಲ್ಲ, ಸದಾಕಾಲ ಉಚ್ಚರಿಸುತ್ತ ಬರುವ ಸಂಭವ ಬರಬಹುದು. ಏಕೆಂದರೆ, 'ಆಮದ ಥೋಡಾ ಖರಚ್ ಬಡಾ ಭೀಕಮಾಂಗ್ನೇಕಾ ನಿಶಾನ್' ಎಂಬ ಹಿಂದುಸ್ಥಾನಿ ನಾಣ್ಣುಡಿಯು ಎಲ್ಲರಿಗೂ ಅನುಭವಸಿದ್ಧವು.

ಈಗ ಕೆಲಸಕ್ಕೆ ಜನರು ಸಿಗುವುದು ದುರ್ಲಭ. ಒಂದು ವೇಳೆ ಸಿಕ್ಕಿದರೂ ಅವರು ಕೇಳುವ ಸಂಬಳ ಅಥವಾ ಮಜೂರಿ ಕೊಡುವರೆ ಅನೇಕರಿಗೆ ಪ್ರಯಾಸ. ಪರರಿಂದ ಕೆಲಸಮಾಡಿಸಿಕೊಳ್ಳುವ ತೊಂದರೆಯನ್ನು ಬಿಟ್ಟು ಇಂತಹ ಸಂದರ್ಭದಲ್ಲಿ ಸ್ವಾವಲಂಬನ ತತ್ವವನ್ನನುಸರಿಸಿ ಸ್ವತಃ ಕೆಲಸಮಾಡಿ ಎಲ್ಲರೂ ಖರ್ಚು ಕಡಿಮೆ ಮಾಡಿಕೊಳ್ಳುವುದು ಉತ್ತಮವೆಂತ ನಾನು ತಿಳಕೊಳ್ಳುತ್ತೇನೆ. ಈಗ ಊಟದ ಅಥವಾ ಉಡುಪಿನ ಖರ್ಚು ಬಿಟ್ಟರೆ ಬಾಕಿ ಖರ್ಚು ಮುಖ್ಯವಾಗಿ ನಾಲ್ಕು. ವಸ್ತ್ರ ಮಡಿಮಾಡುವ ಖರ್ಚು, ಹೊಲಿಗೆ ಖರ್ಚು, ಕ್ಷೌರದ ಖರ್ಚು ಮತ್ತು ಅಡಿಗೆಯವರ ಸಂಬಳ.

ಇತರ ಪ್ರದೇಶಗಳಲ್ಲಿ ರೂಢಿ ಇರುವಂತೆ ನಾವು ಉಡುವ ಬಟ್ಟೆಗಳನ್ನು ನಾವೇ ಒಗೆದರೆ ಬಟ್ಟೆಗಳು ಅಧಿಕ ಶುಚಿಯಾಗಿ ಅವುಗಳು ಹೆಚ್ಚು ಕಾಲ ಬಾಳುವುವು. ಹಾಗು ಮಡಿವಾಳನ ಆವಶ್ಯಕವೂ ಕಮ್ಮಿಯಾದೀತು. ಇಸ್ತ್ರಿ ಹಾಕುವ ಕೆಲಸ ಮಾತ್ರ ಸ್ವಲ್ಪ ನಾಜೂಕಿನದು, ಇದನ್ನು ಸ್ವಲ್ಪ ದಿವಸಗಳಲ್ಲಿ ಅರಿತುಕೊಳ್ಳಬಹುದು. ಆದ್ದರಿಂದ ಅನೇಕ ಜನರು ಇದ್ದು ಬಟ್ಟೆ ಮಡಿಮಾಡುವ ಕೆಲಸ ಹೆಚ್ಚು ಇರುವ ಮನೆಯಲ್ಲಿ ಈ ಕೆಲಸವನ್ನು ಒಬ್ಬ ಮನೆ ಹೆಂಗಸಿಗೆ ಕೊಡಬಹುದು. ಇವಳು ವಾರಕೊಮ್ಮೆ ವಸ್ತ್ರವನ್ನು ಬೇಯಿಸಿ ತಾನೆ ಒಗೆದು ಅಥವಾ ಮನೆಯ ಇತರ ಜನರಿಂದ ಚೆನ್ನಾಗಿ ಒಗೆಸಿ ಒಣಗಿಸಿ ಇಸ್ತ್ರಿ ಹಾಕಿದರೆ ಮಡಿವಾಳನ ಖರ್ಚು ಪೂರಾ ಉಳಿಸಬಹುದು. ಇಸ್ತ್ರಿಗೆ ಕ್ರಯ ೩ ಅಥವಾ ೪ ರೂಪಾಯಿ; ಅದು ಎಷ್ಟೋ ವರ್ಷ ಬರುತ್ತದೆ.

ಹೊಲಿಗೆ ಕೆಲಸ ಎಲ್ಲಾ ಹುಡುಗಿಯರ ಶಾಲೆಯಲ್ಲಿ ಕಲಿಸುತ್ತಾರೆ. ಈ ಬಗ್ಗೆ ವಿಶೇಷ ಖರ್ಚು ಸಹಾ ಹುಡುಗಿಯರಿಂದ ಇಸಕೊಳ್ಳೋದಾಗುತ್ತದೆ. ಕೆಲವ ಮನೆಯಲ್ಲಿ ತಂದೆಯ ಹತ್ತಿರ ಹಟಮಾಡಿ ಹೊಲಿಗೆ ಯಂತ್ರವನ್ನು ಸಹ ಹುಡುಗಿಯರು ತರಿಸಿ ಇಟ್ಟುಕೊಂಡಿರುತ್ತಾರೆ. ಆದರೆ ಒಂದು ಬಟ್ಟೆ ಹರಿದು ಹೋದರೆ, ಅಂಗಿಗೆ ಒಂದು ಗುಂಡಿ ಹಾಕಬೇಕಾದರೆ ಅಥವಾ ವಸ್ತ್ರದ ಕೊಡೆಯ ಹೊಲಿಗೆ ಬಿಟ್ಟುಹೋದರೆ ದರ್ಜಿಯ ಕಾಲುಬುಡಕ್ಕೆ ಹೋಗುವುದು ತಪ್ಪುವುದಿಲ್ಲ. ಮೊದಲು ರವಕೆಯಾದರೂ ಕಷ್ಟದಿಂದ ತಮ್ಮಷ್ಟಕ್ಕೆ ಹುಡುಗಿಯರು ಮಾಡಿಕೊಳ್ಳುತ್ತಿದ್ದರು. ಈಗ ರವಕೆ ರೂಢಿಯಲ್ಲಿ ಇಲ್ಲ, ಇದರ ಬದಲಿಗೆ ಪೋಲ್ಕಾ ಬಂದಿದೆ. ಇದು ಒಳ್ಳೆ ದರ್ಜಿಯಿಂದಲೆ ಆಗಬೇಕು. ಒಟ್ಟಾರೆ ರಾಗಿ ಬೀಸೋದು ತಪ್ಪುವುದಿಲ್ಲ. ಗುಟ್ಟು ನೋಡಿದರೆ, ಹೆಚ್ಚು ಹುಡುಗಿಯರಿಗೆ ಹೊಲಿಯಲಿಕ್ಕೆ ತಿಳದರೂ ಬಟ್ಟೆ ಕೊಯ್ಯಲಿಕ್ಕೆ ತಿಳಿಯದಂತೆ. ಈ ವಿಷಯದಲ್ಲಿ ಉಪಾಧ್ಯಾಯಿನಿಯರು ವ ಹುಡುಗಿಯರ ತಂದೆ ತಾಯಿಗಳು ಮನಸ್ಸುಕೊಟ್ಟು ಇದನ್ನು ಸಹಾ ಕಲಿಸುವ ಜಾಗ್ರತೆ ತೆಗೆದುಕೊಂಡು ಹೆಚ್ಚಿನ ಖರ್ಚನ್ನು ಉಳಿಸುವಂತೆ ಮಾಡಿಸಬೇಕು. ಇದಲ್ಲದೆ ಈ ಹೊಲಿಗೆ ಕೆಲಸ ಹುಡುಗಿಯರೇ ಮಾಡಬೇಕೆಂತ ವಿಧಿ ಇಲ್ಲ. ಈ ಕೆಲಸದಲ್ಲಿ ಉತ್ಸಾಹವುಳ್ಳ ಹುಡುಗರು ಅದನ್ನು ಕಲಿತು ತಮ್ಮ ಅಥವಾ ತಮ್ಮ ಅಣ್ಣತಮ್ಮಂದಿರ ಶರ್ಟುಗಳು ವಗೈರೆ ಬಟ್ಟೆಗಳನ್ನು ಹೊಲಿದು ಈ ಖರ್ಚು ಉಳಿಸಬಹುದು. ದರ್ಜಿಗಳು ಈ ಊರಲ್ಲಿ ಹೆಚ್ಚಾಗಿ ಗಂಡಸರೇ ಅಲ್ಲವೋ?

ಕ್ಷೌರದ ಖರ್ಚು ದಿನೇ ದಿನೇ ಹೆಚ್ಚುತ್ತಾ ಬಂದದರಿಂದಲೂ ಕ್ಷೌರಿಕ ಮಹಾತ್ಮನ ಸಂದರ್ಶನ ಸಿಕ್ಕುವುದು ದುರ್ಲಭವಾದ್ದರಿಂದಲೂ ಜನರು ಕ್ಷೌರಕತ್ತಿ ಸಾಣೆಕಲ್ಲು ವ ಇತರ ಕ್ಷೌರದ ಸಾಮುಗ್ರಿ ಇಟ್ಟುಕೊಂಡು ತಮ್ಮ ಮುಖಕ್ಷೌರ ತಾವೇ ಮಾಡತೊಡಗಿದ್ದಾರೆ. ಆದರೆ ಚಿಕ್ಕ ಹುಡುಗರಿಗೂ ಮುದುಕರಿಗೂ ಕ್ಷೌರ ಮಾಡಲಿಕ್ಕೆ ಮತ್ತು ಕ್ರಾಪ್ ಮಾಡಲಿಕ್ಕೆ ಕ್ಷೌರಿಕ ಮಹಾರಾಯನೇ ಅಗತ್ಯವಂತೆ. ಇದು ಯಾಕೆ? ತಮ್ಮ ಕ್ಷೌರ ತಾವೇ ಮಾಡಿಕೊಳ್ಳುವುದಕ್ಕಿಂತ ಇತರರಿಗೆ ಕ್ಷೌರ ಮಾಡುವುದು ಸುಲಭವಂತೆ. ಸುಲಭವಲ್ಲದಿದ್ದರೂ ಇದನ್ನು ಕಲಿಯುವುದು ಅಷ್ಟು ಕಷ್ಟವಾಗಲಿಕ್ಕಿಲ್ಲ. ಈ ಕೆಲಸ ಮನೆಯಲ್ಲಿ ತಿಳದವರು ಒಬ್ಬಿಬ್ಬರಿದ್ದರೆ ಮನೆಯಲ್ಲಿ ಕ್ಷೌರಮಾಡಿಸಿಕೊಳ್ಳಲಿಕ್ಕಿರುವ ಜನರಿಗೆ ಹಪ್ತೆಗೆ ಒಂದು ದಿವಸ ಈ ಬಗ್ಗೆ ನಿರ್ಣಯಮಾಡಿ ಯಾಕೆ ಕ್ಷೌರ ವ ಕ್ರಾಪ್ ಮಾಡಿ ಹಣ ಉಳಿಸಿಕೊಳ್ಳಬಾರದು? ಸಾಮುಗ್ರಿ ಈಗ ಅನೇಕ ಮನೆಗಳಲ್ಲಿ ಉಂಟು.

ಅಡಿಗೆಯವರ ಪ್ರಸ್ತಾಪ ಕಡೆಗೆ ಮಾಡಿದರೂ ಇದು ಇತರ ಖರ್ಚಿಗಿಂತ ಕಮ್ಮಿಯಂತಲ್ಲ. ಈ ಅನ್ನದಾತನು ಎಲ್ಲರಿಗಿಂತ ಶ್ರೇಷ್ಠನು. ಊರುಗಳಲ್ಲಿ ಕ್ಲಾರ್ಕ ಕೆಲಸಕ್ಕಾದರೂ ಬಿ. ಎ. ವಗೈರೆ ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆಪಟ್ಟವರು ಸುಲಭವಾಗಿ ಸಿಕ್ಕುವುದಾದರೂ ಅಡಿಗೆ ಭಟ್ಟರು ದೊರಕುವುದು ಮಹಾಕಷ್ಟ. ಅವರಿಗೆ ಕ್ಲಾರ್ಕರಿಗಿಂತ ಅನೇಕ ಸಂಗತಿಗಳಲ್ಲಿ ಹೆಚ್ಚಿನ ಆದಾಯ ಉಂಟು. ನಮ್ಮ ಜೀವವೇ ಅವರಿಗೆ ಒಪ್ಪಿಸಿ, ಇಷ್ಟು ಪರಸ್ವಾಧೀನವಾಗಿರುವುದು ಉಚಿತವೋ? ಈಗ ಹುಡುಗಿಯರಿಗೆ ಮಾತ್ರ ಅಡಿಗೆ ಕೆಲಸ ಕಲಿಸುತ್ತಾರೆ. ಹುಡುಗರಿಗೂ ಯಾಕೆ ಈ ಕೆಲಸ ಕಲಿಸಬಾರದು? ಅವರು ಕಲಿತರೆ ಮನೆಯಲ್ಲಿ ಅಡಿಗೆ ಕೆಲಸ ಮಾಡುವ ಹೆಂಗಸರು ಮುಟ್ಟಾದರೆ ಅಥವಾ ಕಾಯಿಲೆಯಲ್ಲಿದ್ದರೆ ಅವರು ಈ ಕೆಲಸಮಾಡಿ ಮನೆಯಜನರು ಉಪವಾಸ ಬೀಳದ ಹಾಗೆ ಮಾಡಬಹುದು. ಈ ಕೆಲಸ ಹೀನಕರವಾದ್ದರಿಂದಲೊ ಗುಜರಾಥ ದೇಶದ ಭಟಿಯ ವ ಇತರ ವ್ಯಾಪಾರಿಗಳು ಎಲ್ಲಿ ಹೋದರೂ ಜಯ ಹೊಂದುತ್ತಾರೆ. ಪ್ರಸ್ತುತ ಕೆಲಸದ ಬಗ್ಗೆ ಪರಊರಿಗೆ ನಮ್ಮ ಊರಿನವನೊಬ್ಬನು ಹೋಗಬೇಕಾದರೆ ಒಬ್ಬ ಅಡಿಗೆಯವನಿಗೆ ತನ್ನ ಸಂಗಡ ಕಟ್ಟಿಕೊಂಡು ಹೋಗಲೇ ಬೇಕು. ಹಾಗೆ ಕೊಂಡುಹೋದರೆ ಅವನ ಸಂಬಳ ಕೊಟ್ಟು ಇವನಿಗೆ ಉಳಿಯುವುದೇನು! ಒಂದು ವೇಳೆ ಕೊಂಡುಹೋದರೆ ಆತನು ಅಸ್ವಸ್ಥವಾದರೆ ಇವನು ಉಪವಾಸ ಬೀಳಬೇಕು. ಆದ್ದರಿಂದ ಅಡಿಗೆ ಕೆಲಸ ಹೆಂಗಸರದೆಂತಲೇ ಭಾವಿಸಿ ಅದನ್ನು ಅವರಿಗೆ ಮಾತ್ರ ಕಲಿಸದೆ ಹುಡುಗರಿಗೆ ಸಹ ಕಲಿಸುವುದು ಉತ್ತಮ. ದೊಡ್ಡ ಅಡಿಗೆ ಕೆಲಸಕ್ಕೆ ಎಂದರೆ, ದೇವಸ್ಥಾನಗಳಲ್ಲಿ ಆಗುವ ಸಂತರ್ಪಣೆಗಳಿಗೆ ವ ಮದುವೆ ಮುಂಜಿ ವಗೈರೆ ಸಮಯ ಆಗುವ ಔತಣಗಳಿಗೆ ಅಡಿಗೆ ಮಾಡುವುದು ಗಂಡಸರೇ ಅಲ್ಲವೊ?

ಈಗಿನ ಕಾಲದಲ್ಲಿ ಸ್ತ್ರೀಯರು ತಾವು ಪುರುಷರಿಗೆ ಪರಸ್ವಾಧೀನವಾಗದಂತೆ ಗಂಡಸರು ಮಾಡುವ ವೃತ್ತಿ ತಾವು ಮಾಡಲಿಕ್ಕೆ ತೊಡಗಿ ಹೊಟ್ಟೆ ಹೊರಲಿಕ್ಕೆ ಪ್ರಯತ್ನ ಪಡುತ್ತಾರೆ. ಹುಡುಗರು ಸಹಾ ಅದೇ ರೀತಿ ಹೆಂಗಸರೇ ಹೆಚ್ಚಾಗಿ ಈ ವರೆಗೆ ನಡಿಸಿಕೊಂಡು ಬಂದ ಕೆಲಸ ಯಾಕೆ ಮಾಡಲಿಕ್ಕೆ ಕಲಿಯಬಾರದು.

ಒಟ್ಟಾರೆ ಸ್ವಾತಂತ್ರ್ಯ ಸ್ವಾವಲಂಬನ ಈಗಿನ ಕಾಲದಲ್ಲಿ ಯಾವ ವಿಧದಿಂದ ನೋಡಿದರೂ ಪ್ರಶಸ್ತವಾಗಿರುತ್ತದಲ್ಲದೆ ಅದರಿಂದ ಖರ್ಚು ಕಮ್ಮಿಯಾಗಿ ನಾಶವಾಗಲಿಕ್ಕೆ ಹೊರಟ ಅನೇಕ ಮನೆಗಳು ಉಳದಾವು.

ಮುದುಕ.

ರಾಷ್ಟ್ರೀಯ ಶಿಕ್ಷಣ ಮಂಡಲ, ಉಡುಪಿ.

ತಾ ೨೩-೬-'೨೨ಲ್ಲು ಜಾಹೀರುಮಾಡಿದ ಪ್ರಕಾರ ತಾ. ೯-೬-'೨೨ನೇ ಆದಿತ್ಯವಾರ ಮಧ್ಯಾಹ್ನ ಗಂಟೆ ೩ಕ್ಕೆ ಉಡುಪಿ ರಾಷ್ಟ್ರೀಯ ವಿದ್ಯಾ ಮಂದಿರದ ಪ್ರಾಥಮಿಕ ಶಾಲೆಯ ಉಪ್ಪರಿಗೆಯಲ್ಲಿ ಉಡುಪಿ ರಾಷ್ಟ್ರೀಯ ಶಿಕ್ಷಣ ಮಂಡಲದ ಸಾಮಾಜಿಕರ ಸಾಮಾನ್ಯ ವಾರ್ಷಿಕ ಸಮ್ಮೇಳನವು ಜರಗಿತು. ಸಾಮಾಜಿಕರಲ್ಲಿ ೩೫ ಮಂದಿ ಹಾಜರಿದ್ದರು. ರಾಷ್ಟ್ರೀಯ ವಿದ್ಯಾಮಂದಿರದ ತಾ. ೧೫-೪-'೨೨ನೆ ವರೆಗಿನ ವರದಿಯು ಈ ಮೊದಲೆ ಪ್ರಕಟಿಸಲ್ಪಟ್ಟಿದೆ. ಸಮ್ಮೇಳನದಲ್ಲಿ ಸದರಿ ವರದಿಯೊಳಗಿನ ಮಂಡಲದ ಲೆಕ್ಕದ ಪಟ್ಟಿಯನ್ನು ಓದಿದಲ್ಲದೆ, ನಂತರದ ಅಂದರೆ, ೧೫-೪-'೨೨ರಿಂದ ೮-೬-'೨೨ರ ವರೆಗಿನ ಜಮಾ ಖರ್ಚಿನ ಲೆಕ್ಕದ ಪಟ್ಟಿಯನ್ನು ಸಹಾ ಓದಲಾಯಿತು. ಈ ಕೆಳಗಿನ ಠರಾವುಗಳು ಮಂಜೂರಾದವು.

೧. ರಾಷ್ಟ್ರೀಯ ವಿದ್ಯಾ ಮಂದಿರವನ್ನು ನಡಿಸುವರೆ ಬೇಕಾಗುವ ಹಣವನ್ನು ಸಂಗ್ರಹಿಸುವರೆ ಈ ಕೆಳಗಿನ ನಾಲ್ಕು ವಿಧಾನಗಳಿಂದಲೂ ವ ಇತರ ಯೋಗ್ಯ ಉಪಾಯಗಳಿಂದಲೂ ಸಹಾ ಪ್ರಯತ್ನಿಸತಕ್ಕದ್ದು:—(೧) ಮೆಂಬರರ ಸಂಖ್ಯೆಯನ್ನು ಹೆಚ್ಚಿಸುವುದು. (೨) ಮಹಾತ್ಮಾ ಗಾಂಧಿಯವರ ಬಂಧನ ದಿನವಾದ ಪ್ರತಿ ತಿಂಗಳ ೧೦ನೇ ತಾರೀಕಿಗೆ ಎಲ್ಲಾ ಪಟ್ಟಣ ನಿವಾಸಿಕರಿಂದ ಅವರವರ ಶಕ್ತ್ಯಾನುಸಾರ ವಂತಿಗೆಯನ್ನು ವಸೂಲು ಮಾಡುವುದು. (೩) ವರ್ತಕರ ಸಂಘಕ್ಕೆ ಲಾಭಾದಾಯದಲ್ಲಿ ಅದಷ್ಟು ಹೆಚ್ಚಿನ ಅಂಶವನ್ನು ರಾಷ್ಟ್ರೀಯ ವಿದ್ಯಾ ಮಂದಿರಕ್ಕೆ ಸಹಾಯವಾಗಿ ಕೊಡುವಂತೆ ಬಿನ್ನೈಸಿಕೊಳ್ಳುವುದು. (೪) ಮದುವೆ, ಉಪನಯನ ಮೊದಲಾದ ಶುಭಕಾರ್ಯಗಳಲ್ಲಿ ದಕ್ಷಿಣೆ ರೂಪದಿಂದ ಸಹಾಯವನ್ನು ಪಡೆಯುವ ಏರ್ಪಾಡು ಮಾಡುವುದು ಇತ್ಯಾದಿ.

೨. ಈ ಕೆಳಗಿನ ಸಾಮಾಜಿಕರನ್ನು ಹೊಸವರ್ಷದ ಕಾರ್ಯನಿರ್ವಾಹಕರನ್ನಾಗಿ ಚುನಾಯಿಸಲಾಯಿತು:— ರಾ। ಕಾಸರಗೋಡು ಅನಂತಯ್ಯ ಕಮ್ತಿ (ಅಧ್ಯಕ್ಷ), ಕೊಚ್ಚಿಕಾರ ಪದ್ಮನಾಭ ಪೈ (ಉಪಾಧ್ಯಕ್ಷ), ಉಪೇಂದ್ರ ಅನಂತ ಪೈ (ಕಾರ್ಯದರ್ಶಿ), ನಯಂಪಳ್ಳಿ ಆನಂದರಾವ್ (ಕೋಶಾಧೀಶ), ವೇಲ್ಲಿ ಕಲ್ಯಾಣಜಿ ಸೇಟು, ಮ. ಶ್ರೀನಿವಾಸ ಪ್ರಭು, ಪಾವಂಜೆ ಗುರುರಾವ್, ಕುಬೇರ ಪಾಂಡುರಂಗ ರಾವ್, ಮತ್ತು ಕಾಣೂರು ಮಠದ ಅನಂತಕೃಷ್ಣ ಆಚಾರ್ಯ.

೩. ವಿದ್ಯಾಮಂದಿರದ ಅಭಿವೃದ್ಧಿಯ ಬಗ್ಗೆ ಒಂದು ಅನುಕೂಲವಾದ ಕಟ್ಟೋಣವನ್ನು ಕಟ್ಟಿಸುವುದು ಅತೀ ಅಗತ್ಯವಾಗಿರುವುದರಿಂದ, ಅದರ ಬಗ್ಗೆ ಹಣ ಸಂಗ್ರಹ ಮಾಡುವುದಕ್ಕೆ ಒಂದು ಮಂಡಳಿಯನ್ನು ನೇಮಿಸಬೇಕಾಗಿ ನಿರ್ಣಯಿಸಲಾಯಿತು. ಕಟ್ಟೋಣ ನಿಧಿಯ ಮಂಡಳಿ:—(೧) ಶ್ರೀಯುತರಾದ ಸಾಂತೇರು ಅನಂತ ಪದ್ಮನಾಭ ಭಟ್ಟ, (೨) ಕಾಣೂರು ಮಠದ ಅನಂತಕೃಷ್ಣ ಆಚಾರ್ಯ (೩) ಕೊಚ್ಚಿಕಾರ ಪದ್ಮನಾಭ ಪೈ, (೪) ಪುಂಡಲೀಕ ಕಮ್ತಿ (ಕುಂದಾಪುರ) (೫) ಬೈಲೂರು ನರಸಿಂಹ ಶೆಣೆ (೬) ಕಾರ್ನಾಡು ಸದಾಶಿವ ರಾವ್ (೭) ಮ. ವಿಠಲ ಕಮ್ತಿ ವಕೀಲ. ಆ ದಿನದ ಅಧ್ಯಕ್ಷರಾದ ಶ್ರೀಯುತ ಸಾಂತೇರು ಅನಂತ ಪದ್ಮನಾಭ ಭಟ್ಟರಿಗೆ ಧನ್ಯವಾದವನ್ನಿತ್ತು ಸಮ್ಮೇಳನವು ಮುಕ್ತಾಯವಾಯಿತು.

ಸಂಯುಕ್ತ ಗೌಡ ಸಾರಸ್ವತ ಸಭಾ ಮದರಾಸು.

ಈ ಸಂಸ್ಥೆಯ ಹತ್ತನೆಯ ವರುಷದ ವರ್ಧಂತಿ ಉತ್ಸವದ ಮಹಾ ಸಭೆಯು ಶ್ರೀಯುತ ಕೆ. ಆರ್. ಶೆಣೈ ಇವರ ಅಧ್ಯಕ್ಷತೆಯಲ್ಲಿ ಮದರಾಸಿನಲ್ಲಿ ಜರಗಿತು. ಈ ಸಭೆಗೆ ರಾವ ಬಹದೂರ ಡೊಕ್ಟರ ಯಂ. ಕೇಶವಪೈ, ರಾವ್ ಸಹೇಬ ಕೆ. ಜಿ. ಕುಡ್ವ ಮತ್ತು ಮ. ರಾ. ಗಳಾದ ಎ. ಉಪೇಂದ್ರ ಪೈ. ಡಿಸ್ಟ್ರಿಕ್ಟ ಕಲೆಕ್ಟರ, ಕೆ. ಆರ್. ಶೆಣೈ ಕೆ. ಸಂಜೀವ ಕಾಮತ್, ಕೆ. ಯನ್. ಕೊಟಾರಿಸ್ ಪಿ. ಡಬ್ಲ್ಯು ಕಾಮತ್, ಯು. ವಿಠಲರಾವ್ ವಿ. ದಯಾನಂದ ಕಾಮತ್, ಶಿವರಾವ್, ಡಾಕ್ಟರ್ ವಿ. ಪಿ. ಕಾಮತ್, ಯಂ. ಸುಬ್ಬರಾವ್, ಯಸ್. ಆರ್. ಪಂಡಿತ, ಕತ್ರಿ ರಾಮರಾವ್, ಅಡಿಗೆ ರಘುನಾಥರಾವ್, ಮೊದಲಾದ ಗೃಹಸ್ಥರು ಹಾಜರಿದ್ದರು ಈ ಸಭೆಯ ಕಾರ್ಯದರ್ಶಿಗಳಾದ ರಾವ್ ಬಹದೂರ್ ಡೊಕ್ಟರ್ ಯಂ. ಕೇಶವಪೈಗಳು ಹೆಚ್ಚಿನ ವೃದ್ಧಿಯನ್ನು ಸೂಚಿಸುವ ಸಭೆಯ ವರದಿಯನ್ನು ಓದಿದರು. ಈ ಸಭೆಯು ವೇತನ ಮತ್ತು ಇನಾಮುಗಳನ್ನು ಕೊಟ್ಟಿದ್ದಲ್ಲದೆ, ಈಗ ಇದಕ್ಕೆ ರೂ. ೪೦೦೦ಕ್ಕಿಂತ ಹೆಚ್ಚು ಧನವೂ, ಒಂದು ಚಿಕ್ಕ ಸ್ಥಳವೂ ಇದೆ ಎಂದು ವರದಿಯಿಂದ ತಿಳಿದುಬರುತ್ತದೆ. ಅನಂತರ ಸ್ವಜಾತಿಯ ಬಡ ವಿದ್ಯಾರ್ಥಿಗಳಿಗೆ ವೇತನಗಳನ್ನು ರೂ. ೫೦ರ ಒಂದು ಇನಾಮನ್ನೂ ಹಂಚಿದ ಬಳಿಕ ಕಾರ್ಯಕಾರಿ ಮಂಡಳಿಯವರು ದ್ರವ್ಯ ಸಹಾಯದ ಬಗ್ಗೆ ವಿನಂತಿಮಾಡಿಕೊಂಡರು. ಆ ಮೇಲೆ ಚಾಲತಿ ವರುಷದ ಬಗ್ಗೆ ಕಾರ್ಯಕಾರಿ ಮಂಡಳಿಯ ಚುನಾವಣೆಯು ನಡಿಯಿತು. ಕೆ. ಯನ್. ಕೊಟ್ನಿಸರನ್ನು ಪುನಃ ಅಧ್ಯಕ್ಷರಾಗಿಯೂ, ರಾವ ಬಹದೂರ ಡಾಕ್ಟರ ಯಂ. ಕೇಶವ ಪೈಗಳವರನ್ನು ಕಾರ್ಯದರ್ಶಿಗಳಾಗಿಯೂ ಆರಿಸಿ ಮ. ರಾ. ಕೆ. ಸಂಜೀವ ಕಾಮತ್, ಬಿ. ಎ. ಬಿ. ಎಲ್. ಇವರನ್ನು ಉಪಾಧ್ಯಕ್ಷರಾಗಿಯೂ, ಚುನಾಯಿಸಿ, ಮ, ರಾ. ಗಳಾದ ರಾವ್ ಸಾಹೇಬ, ಕೆ. ಜಿ. ಕುಡ್ವ, ಡಾಕ್ಟರ ವಿ. ಪಿ. ಕಾಮತ್, ಡಾಕ್ಟರ ಪಂಡಿತ, ಡಾಕ್ಟರ ಸುಬ್ಬರಾವ್ ಯಸ್. ಯು. ಶೆಣೈ, ಇವರನ್ನು ಕಾರ್ಯಕಾರಿ ಮೆಂಬರರಾಗಿ ಚುನಾಯಿಸಲಾಯಿತು. ಅಲ್ಲದೆ ಮ. ರಾ. ಪಿ. ಡಬ್ಲ್ಯು ಕಾಮತ್ ಮತ್ತು ಮ. ರಾ. ಯು. ವಿಠಲರಾವ್ ಇವರು 'ಎಕ್ಸ್ ಅಫೀಸೊ' ಟ್ರಸ್ಟಿಗಳಾಗಿದ್ದಾರೆ. ೭ ಮಂದಿ ಗೃಹಸ್ಥರು ರೂ. ೧೦೦ ರಂತೆ ವಂತಿಗೆ ಕೊಟ್ಟು ಆಜೀವಸಭಾಸದ (Life members) ರಾಗಿ ಸೇರಿದರು, ಮಂಜೇಶ್ವರದ ವರ್ಗದಾರರಾದ ರಾ। ನರಸಯ್ಯ ಶಾನಭಾಗರನ್ನೂ, ಮುಂಬಯಿಯ ಡಾಕ್ಟರ ಎ, ಸರ್ವೋತ್ತಮ ಪೈಗಳವರನ್ನೂ ಸೆಕ್ರೆಟರಿಯವರು ಆಶ್ರಯದಾತರಾಗಿ, ಸೇರಿಸಿಕೊಂಡರು. ಕೊನೆಗೆ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ, ಕೂಡಿದ ಸಭೆಯು ಅಂದಿನ ಕಾರ್ಯವು ಕೊನೆಗೊಂಡಿತು.

ಮಂಗಳೂರು ಡಿಸ್ಟ್ರಿಕ್ಟ ಬೋರ್ಡ ಮೀಟಿಂಗು.

ಕಳೆದ ಡಿಸ್ಟ್ರಿಕ್ಟ ಬೋರ್ಡ ಮೀಟಿಂಗಿನಲ್ಲಿ ಕೆಳಗಿನ ನಿರ್ಣಯಗಳು ಪಾಸಾದವು. ಕಾರ್ಕಳ ಬೋರ್ಡ ಹೈಸ್ಕೂಲಿಗೆ ಹಂಗಾಮಿಯಾಗಿ ಕಚ್ಚಿದವನ್ನು ಕಟ್ಟಲಿಕ್ಕೆ ರೂ. ೧೨೦೦, ಕಾರ್ಕಳ ತಾಲೂಕಿನಲ್ಲಿ ಮೂಲ್ಕಿ, ಮೂಡಬಿದ್ರೆ ರಸ್ತೆ ದುರುಸ್ತಿ ಬಗ್ಗೆ ರೂ. ೨೪೫೦, ಚಾರ್ಮಾಡಿ ರಸ್ತೆಯನ್ನು ವಿಶೇಷವಾಗಿ ಸರಿಮಾಡಲು ರೂ. ೩೦೦೦, ಮಂಗಳೂರ ಮಡಕೇರಿ ರಸ್ತೆಯಲ್ಲಿ ಹೆಚ್ಚಿನ ದುರುಸ್ತಿ ಬಗ್ಗೆ ರೂ. ೧೩೪೮೦ ಸುರತಕಲ್ಲು ಇನ್ಸ್‌ಪೆಕ್ಷನ್ ಶೆಡ್ಡಿನ ಸಮೀಪದ ಬಾವಿಯನ್ನು ತೋಡಲಿಕ್ಕೆ ರೂ. ೭೮೦, ಉಡ್ಪಿ-ಕಾರ್ಕಳ ರಸ್ತೆಯಲ್ಲಿ ಸೆರಿಯ ಸಮೀಪದ ಮಾರ್ಗವನ್ನು ಸರಿಪಡಿಸಲು ರೂ. ೮೦೦, ಕಾರ್ಕಳ ಸ್ಕೂಲಿನ ಸಾಯನ್ಸ್ ಸಾಮಾಗ್ರಿಗಳಿಗಾಗಿ ರೂ. ೨೫೧೭ ಇವೆಲ್ಲ ಸೆಂಕ್ಷನ್ ಮಾಡಲಾಯಿತು. ಮೂಡಬಿದರೆಯ ಮುಸಾಫರ ಬಂಗ್ಲೆಯನ್ನು ೩ನೇ ತರಗತಿ ಶೆಡ್ಡಾಗಿ ಮಾಡಿ ಉಳಕೊಳ್ಳುವ ಜನರಿಂದ ದಿನಕ್ಕೆ ಆಣೆ ೪ರಂತೆ ಬಾಡಿಗೆಯನ್ನು ವಸೂಲುಮಾಡಬೇಕು. ಬಡವ ಜಾನುವಾರುಸಂತೆಯು ಸಮಯ ಜಾನುವಾರುಗಳ ಬಗ್ಗೆ ಮೇಯುವ ಫೀಸನ್ನು ವಸೂಲು ಮಾಡಬೇಕಾಗಿ ನಿರ್ಧರಿಸಲಾಯಿತು. ಈ ವರೆಗೆ ಜಮೆಯಾದ ರೈಲ್ವೆ ಸೆಸ್ಸಿನಲ್ಲಿ ರೂ. ೩೬,೮೦೦ನ್ನು ೧೯೨೨ನೇ ವರುಷದ ಬೊಂಡಿನ ಮೇಲೆ ಠೇವಣಾತಿಯಾಗಿಡಬೇಕು. ಮತ್ತು ಬೋರ್ಡಿನ ಸ್ವಾಧೀನ ಇರುವ ರೂ. ೩೦,೦೦೦ವನ್ನು ಪುತ್ತೂರು ಸೆಂಟ್ರಲ್ ಕೋ-ಒಪರೇಟಿವ್ ಬೆಂಕಿನಲ್ಲೂ, ರೂ. ೧೦೦೦೦೦ವನ್ನು ೧೯೨೨ನೇ ವರುಷದ ಸರಕಾರಿ ಬೊಂಡುಗಳಲ್ಲೂ ಠೇವಣಾತಿಯಾಗಿ ಇಡಬೇಕಾಗಿ ನಿರ್ಣಯಿಸಲಾಯಿತು.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.
ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇಧ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು
ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.
ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೭, (ಬ್ರಾಡ್ವೇ, ಮದ್ರಾಸ್.
Local Agents: Raphael & Co,
Brito Buildings,
Hampankatta, MANGALORE.

POPULAR FLUTE.
HARMONIUM
Awarded Several Medals. Thousands of Popular Flutes are in daily use all over India, Burma and Ceylon. No more introduction required. Fitted up with first class picked materials. The tone is powerful and sweet and the construction ingenious. Single reeds 4 stop with Box. Rs. 23, 25, 30. Double reeds 5 stop with Box. Rs. 35, 40, 45. Send Rs. 5 with order to:—
POPULAR HARMONIUM & CO.
Post Box No. 12 (S) G. Po. *Calcutta.*

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0
Reserve and other sinking Funds „ 181,250—0—0
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,
ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.
ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೋರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.
ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರಿಯುತ್ತದೆ.
ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.
ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ಸರ ಲಪ್ತಾ ಎಣ್ಣೆ.
ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವದಲ್ಲದೆ, ಮುದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ ರೂ. 1-4-0.
ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.
ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜನಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.
60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.
ಆರ್ ಮಾರ್ಟಿನ್ಸರ ಗಿಟೋಡಯಿನ್.
ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉಪಯುಕ್ತವನ್ನು ಬಿಳ್ಳಿಸಿ, ಮುಖ್ಯವು ಹಿಗೆ ಹಾಗಿ ನಿರ್ಮೂಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.
ಬೆಲೆ ಸೀಸೆ 1ಕ್ಕೆ ರೂ. 2—0—0.
ವಿಳಾಸ—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು —
— ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.
ಇಲ್ಲಿ ಸುಪ್ರಸಿದ್ಧನಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇನೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.
ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.
ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.
☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ
ರಥಬೀದಿ ಮಂಗಳೂರು.
ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯುನಾಮಲ್ಲು ಬಟ್ಟಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಪಾಲಿ ಕವರು, ಪೌಂಟನ್‌ಪೆನ್, ತಾಯಿವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಅಂಗಿ ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತದೆ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

— ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಶ್ರೀಮದವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಜಪಿಸಿದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷರಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇವರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಛಾಪಾಖಾನೆಗಳ ಚುಟ್ಕಾ ಸಹ, ಇವರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇವರಲ್ಲಿ ತಿಳಿಸಿರುವರು. ಇವಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅಮೃತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೩—೮—೦ ಟಪ್ಪಾಲು ಖರ್ಚು ೬ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‍ಡಿಪೋ ಪ್ರೆಸ್, ಬಳ್ಳಾರಿ

ಹೊಸಗ್ರಂಥಗಳು !! ಬೇಗನೇ ತರಿಸಿಕೊಳ್ಳಿರಿ !!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲವದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ ದಂಪತಿಗಳು ಅವಿಚ್ಛಿನ್ನವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‍ಡಿಪೋ ಪ್ರೆಸ್, ಬಳ್ಳಾರಿ.

ರಾಷ್ಟ್ರೀಯ ಹೊಸ ಪುಸ್ತಕಗಳು

ದೇಶೋನ್ನತಿ ಗ್ರಂಥಮಾಲಾ

ಸಂಖ್ಯೆ ೧ ಮಹಾತ್ಮಾ ಗಾಂಧಿಯವರ ಹಿಂದಿಸ್ವರಾಜ್ಯ ಕನ್ನಡ ೦—೮—೦ ೨ನೆ ಆವೃತ್ತಿ ಅಚ್ಚಿನಲ್ಲಿದೆ.

೩ ದೀನಬಂಧು ಸಿ. ಯಫ್. ಅಂಡ್ರ್ಯೂಸರವರ ಅಸಹಕಾರ ಪತ್ರಗಳು ೦—೬—೦
೩ ಹಿಂದೀ ಭಾಷಾಸಾರ. ಹಿಂದೀಭಾಷೆ ಕಲಿಯಲು ೧ನೇ ಪಾಠ ಪುಸ್ತಕ
೪ ರಾಷ್ಟ್ರೀಯಕರ್ಮ ಅಥವಾ ದೇಶಭಕ್ತರ ಸೂಕ್ತಿಮಾಲೆ ೦—೩—೦
ದೇಶಭಕ್ತ ಅಲೀಸಹೋದರರ ಚರಿತ್ರ ೦—೨—೦
ಮ। ಗಾಂಧೀಚರಿತ್ರ ೦—೫—೦
ಡಿ ಚಿಕ್ಕದು ೦—೨—೦

ರಾಷ್ಟ್ರೀಯ ಪದ್ಯಪುಸ್ತಕಗಳು.

ತಿಲಕ ಕಾವ್ಯಾಂಜಲಿ	೦—೪—೦
ಗಾಂಧಿ ವಿಜಯ	೦—೨—೦
ರಾಷ್ಟ್ರೀಯ ಗೀತಾವಳಿ	೦—೦—೯
ಸ್ವರಾಜ್ಯಸಂಪತ್ತು	೦—೦—೩

ಇವುಗಳಲ್ಲದೆ ಇನ್ನೂ ಅನೇಕ ತರದ ಪುಸ್ತಕಗಳು ವಿಕ್ರಿಕಕ್ಕೆ ಸಿದ್ಧವಿರುವವು ವಿ. ಪಿ.ಯಿಂದ ಅಪೇಕ್ಷಿಸುವವರು ನಾಲ್ಕಾಣೆ ಸ್ಟಾಂಪು ಮುಂಗಡವಾಗಿ ಕಳುಹಿಸದ್ದಲ್ಲಿ ಉಳಿದ ವಿವಜಿಗೆ ವಿ. ಪಿ. ಮಾಡಲಾಗುವದು. ಎಂಟಾಣೆಗಿಂತ ಕಡಿಮೆ ಕ್ರಯದ ಪುಸ್ತಕಗಳು ವಿ. ಪಿ.ಯಿಂದ ಕಳುಹಿಸಲಾರೆವು.

ವಿಳಾಸ:— ಕೆ. ಯಂ. ದಾಸಪ್ರಭು ಅಂಡ್ ಸನ್ಸ್,
ರಥಬೀದಿ, ಮಂಗಳೂರು.

Sri Lakshmi Mills, Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಸೋಲು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

ಸ್ವದೇಶ ಭಕ್ತರೇ ಶ್ರೀ ಈ ಕಡೆ ನೋಡಿರಿ

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿಟೋಪಿಗಳು, ಬಿಳಿ, ಹಸುರು, ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ ನಾನಾ ನಮೂನೆ ಗೆರೆಗಳುಳ್ಳ ನಯವಾದ ಶರ್ಟಿನ ವಸ್ತ್ರಗಳೂ ಮತ್ತು ವೇಷ್ಟಿ, ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು—ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ನಾಲ್ಕಾಣೆಯ ಸ್ಟೇಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:— ಮುಳಿಯ ತಿಮ್ಮಪ್ಪಯ್ಯ ಮತ್ತು ಸಹೋದರ
ರತ್ನ ಮತ್ತು ಜವಳಿ ವ್ಯಾಪಾರಿಗಳು,
ಕಾರಾಡುಖಾನ (ಗೋಳಿಕಟ್ಟೆ ಬಜಾರು) ಮಂಗಳೂರು

FORDS.

The Cheapest and best Motor Vehicles in the World.

LATEST QUOTATIONS:

Touring ars	Rs. 3,300.
One Ton Chassis.	,, 3,300.
Tyre & Tube for Spare rim	,, 100.

Immediate delivery F. O R. Madras.

FORD SPARES and other MOTOR ACCESSORIES at MADRAS PRICES delivered at Mangalore

Apply to

PEIRCE, LESLIE & CO., LTD., MANGALORE,
South Kanara.

Also agents for MICHELIN TYRES. Prices on Application.

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered: No. M. 498.

...Vishnu Nam-
...ary Esq., Kuhin...
Near Ry. Statio...
Malabar

SWADESHI MANGALORE.

PAYYANNUR

ಸ್ವದೇಶಾಭಿಮಾನಿ.

ಸಣೆಯು:—ವರ್ಷ ಒಂದಕ್ಕೆ ರೂಪಾಯಿ 2-0-0.
ಟಪ್ಪಾಲ್ ಹಾಸಲು ಸೇರಿ ,, 2-13-0.

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರದರಿಂ ।
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಖೇಳಿದರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೬. ಮಂಗಳೂರು, ತಾರೀಖು ೨೧ನೇ ಜುಲೈ ಶುಕ್ರವಾರ ೧೯೨೨. ಸಂಚಿಕೆ ೨೯

ನ್ಯಾಲು ಉತ್ತಮ! ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು.

ಮೇಲಾದ

= ಜವಳಿ ಸಂಗ್ರಹದ ಮಳಿಗೆ =

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಷ್ಮೆ ಪಟ್ಟೆ, ಮತ್ತು ನೂಲಿನ ಬಟ್ಟೆಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಹ್ಮದಾಬಾದ, ಮಹೇಶ್ವರಿ, ಗುಜರಾಥ, ಬರೋಡಾ, ಕೊಯಮುತ್ತೂರು, ಗದಗ, ಹುಬ್ಬಳ್ಳಿ, ಧಾರವಾಡ, ಇಳಕಲ್ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಹ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಬರ್ಮಾ ಮೊದಲಾದ ಕಡೆಗಳಲ್ಲಿಯೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳು, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುಪು ತೊಡುಪುಗಳು ಈಗ ತಾನೇ ತರಿಸಿದ್ದು ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗುವ ಬಿಳೀ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳೂ, ಬಿಳಿ ವ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಶರ್ಟಿನ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ.

ನಗದಿ ಪಡೆಯುವವರಿಗೆ ಒಳ್ಳೇ ಕಮಿಷನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೆ,
ಕಸ್ತೂರಿ ನಾಗೇಶಪ್ಪೆ ಮತ್ತು ಕಂಪೆನಿ,
ಹೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಹಿಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ಏನುಗೊಬ್ಬರದಲ್ಲಿ ನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ದೊರೆಯುವದು. ಎಕ್ರೆಗೆ 100—300 ರಾತ್ತಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ, ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಷನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾರಣ್ಯತೀರ್ಥರ ಪೂರ್ವಜರ ಗ್ರಂಥಗಳಿಂದ ಆರಿಸಲ್ಪಟ್ಟ ಹಿಂದೂ ವೃತವಿವೇಕ ಕ್ರಯ ೦—೧೦—೦
ಕೇಶಭಂಗ ,, ೦—೧೩—೦
ಸಂಕ್ಷೇಪಗೀತೆ ,, ೦—೧೦—೦

ಲಕ್ಷ್ಮೀನಾರಾಯಣ ಪುರಾಣಿಕರಿಂದ ರಚಿತವಾದ ಸ್ವರಾಜ್ಯ ಛಕ್ಕೋಲ್ಲಾಸ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮರಾಠರ ಅವನತಿ, ಶ್ರೀ ದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿ ವಿಲಾಸ, ಸತ್ಯವ್ರತ, ಮತ್ತು ಇತರ ಹಳೇ ಕರಾರಿನ ಬಿಡಿ ಹಕಾರದ ಹೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಂಕಗಣಿತ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೩—೦ ಸ್ಥಳಿಕರಿಗೆ ರೂ. ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ವ್ಯವಸ್ಥಾಪಕರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‍ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಪೈಂಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫೂಟ್ ರೂಲುಗಳು, ಇತರ ಬರಹದ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಭಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೇರೆ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ಬಯೋ ಔಷಧಿಗಳು–ರೋಗಿಗಳಿಗೂ, ಬಾಲಕರಿಗೂ ಬೇಕಾಗುವ ಪೇಟೆಂಟ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ, ಇತ್ಯಾದಿ ರೀತಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಿಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTANJ
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಷಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ–ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ರಕೃತಿಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ಬೇರುಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ 'ವಾತಕಷಾಯವು' ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂದು, ಅವಯವ, ಅಂತಕೋಶ ಮೊದಲಾದುವು ಕೆಂಪಾಗಿ ನೋವುಂಟಾಗುವುದು. ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲಿ, ನಿಮ್ಮ ಸ್ನೇಹಿತರಲ್ಲಿಯಾಗಲಿ ಕಾಣಿಸಿಕೊಂಡರೆ, ಕೂಡಲೇ ನಮ್ಮ 'ಕಷಾಯ' ತೆಗೆದುಕೊಳ್ಳಲು ಪ್ರಾರಂಭಿಸಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, ಇದಲ್ಲದೆ ಪಿತ್ಥ, ವಾತ, ಕಫ, ಅಜೀರ್ಣ, ಕೊಲೆರಾ, ಕಾಮಿಲೆ, ಉಬ್ಬಸ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಅಮಶಂಕೆ, ಮೊದಲಾದವೆಲ್ಲಕ್ಕೂ ದಿವ್ಯ ಔಷಧಗಳಿವೆ, 'ಕ್ಯಾಟಲಾಗ್'ನ್ನು ನೋಡಿ.

ಕ್ರಯ ರೂ. 4—4—0. ಯು. ಬಿ. ದತ್ತ ಕಂಪೆನಿ, ಕಳ್ಳಿಕೋಟೆ ಮಲಬಾರ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

— ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಶ್ರೀಮದವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಜಪಿಸಿದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇವರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇವರಲ್ಲಿ ಉಂಟು, ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೩—೮—೦ ಟಪ್ಪಾಲು ಖರ್ಚು ಬೇರೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು !! ಬೇಗನೇ ತರಿಸಿಕೊಳ್ಳಿರಿ !!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ ದಂಪತಿಗಳು ಅವಿಚ್ಛಿನ್ನವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರೀಕಿಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಭೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ರಾಷ್ಟ್ರೀಯ ಹೊಸ ಪುಸ್ತಕಗಳು

ದೇಶೋನ್ನತಿ ಗ್ರಂಥಮಾಲಾ

ಸಂಖ್ಯೆ ೧ ಮಹಾತ್ಮಾ ಗಾಂಧಿಯವರ ಹಿಂದೀಸ್ವರಾಜ್ಯ ಕನ್ನಡ ೦-೮-೦ ೨ನೆ ಆವೃತ್ತಿ ಅಚ್ಚಿನಲ್ಲಿದೆ.
೨ ದೀನಬಂಧು ಸಿ. ಯಫ್. ಅಂಡ್ರ್ಯೂಸರವರ ಅಸಹಕಾರ ಪತ್ರಗಳು ೦-೬-೦
೩ ಹಿಂದೀ ಭಾಷಾಸಾರ. ಹಿಂದೀಭಾಷೆ ಕಲಿಯಲು ೧ನೇ ಪಾಠ ಪುಸ್ತಕ
೪ ರಾಷ್ಟ್ರೀಯಕರ್ಮ ಅಥವಾ ದೇಶಭಕ್ತರ ಸೂಕ್ತಿಮಾಲೆ ೦-೩-೦
ದೇಶಭಕ್ತ ಅಲೀಸಹೋದರರ ಚರಿತ್ರೆ ೦-೩-೦
ಮ॥ ಗಾಂಧೀಚರಿತ್ರೆ ೦-೫-೦
 ,, ಚಿಕ್ಕದು ೦-೩-೦

ರಾಷ್ಟ್ರೀಯ ಪದ್ಯಪುಸ್ತಕಗಳು.

ತಿಲಕ ಕಾವ್ಯಾಂಜಲಿ	೦-೪-೦
ಗಾಂಧಿ ವಿಜಯ	೦-೩-೦
ರಾಷ್ಟ್ರೀಯ ಗೀತಾವಳಿ	೦-೦-೯
ಸ್ವರಾಜ್ಯಸಂಪತ್ತು	೦-೦-೩

ಇವುಗಳಲ್ಲದೆ ಇನ್ನೂ ಅನೇಕ ತರದ ಪುಸ್ತಕಗಳು ವಿಕ್ರಿತಕ್ಕೆ ಸಿದ್ಧವಿರುವವು ವಿ. ಪಿ.ಯಿಂದ ಅಪೇಕ್ಷಿಸುವವರು ನಾಲ್ಕಾಣೆ ಸ್ಟಾಂಪು ಮುಂಗಡವಾಗಿ ಕಳುಹಿಸಿದ್ದಲ್ಲಿ ಉಳಿದೆ ವದಜಿಗೆ ವಿ. ಪಿ. ವನಡಲಾಗುವುದು. ಎಂಟಾಣೆಗಿಂತ ಕಡಿಮೆ ಕ್ರಯದ ಪುಸ್ತಕಗಳು ವಿ. ಪಿ.ಯಿಂದ ಕಳುಹಿಸಲಾರೆವು.

ವಿಳಾಸ:— ಕೆ. ಯಂ. ದಾಸಪ್ರಭು ಅಂಡ್ ಸನ್ಸ್,
ರಥಬೀದಿ, ಮಂಗಳೂರು.

Sri Lakshmi Mills, Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ನೇರ್ಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

ಸ್ವದೇಶ ಭಕ್ತರೇ ಶ್ರೀ ಈ ಕಡೆ ನೋಡಿರಿ

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿಟೋಪಿಗಳು, ಬಿಳಿ, ಹಸುರು, ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ ನಾನಾ ನಮೂನೆ ನೆರಿಗಳುಳ್ಳ, ನಯವಾದ ಶರ್ಟಿನ ವಸ್ತ್ರಗಳೂ ಮತ್ತು ವೇಷ್ಟಿ, ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು—ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ನಾಲ್ಕಾಣೆಯ ಸ್ಟೇಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:— ಮುಳಿಯ ತಿಮ್ಮಪ್ಪಯ್ಯ ಮತ್ತು ಸಹೋದರ
ರತ್ನ ಮತ್ತು ಜವಳಿ ವ್ಯಾಪಾರಿಗಳು,
ಬಾರಾದುಕಾನ (ಗೋಳಿಕಟ್ಟೆ ಬಜಾರು) ಮಂಗಳೂರು

FORDS.

The Cheapest and best Motor Vehicles in the World.

LATEST QUOTATIONS:

Touring ars	Rs.	3,300.
One Ton Chassis.	,,	3,300.
Tyre & Tube for Spare rim	,,	100.

Immediate delivery F. O. R. Madras.

FORD SPARES and other MOTOR ACCESSORIES at MADRAS PRICES delivered at Mangalore

Apply to

PEIRCE, LESLIE & CO., LTD., MANGALORE,
South Kanara.

Also agents for MICHELIN TYRES. Prices on Application.

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered: No. M. 498.

M. Vishnu Nam-
...ary Esq., Kuhin...
Near Ry. Stati...
Payyanur
Malabar

SWADESHABHIMANI MANGALORE.

PAYYANNUR

ಸ್ವದೇಶಾಭಿಮಾನಿ.

ಚಂದಾ ಕ್ರಮ:— ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ ,, 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ.

ಸ್ವಧರ್ಮಹಾರ್ಯಸ್ಯ ಸುಮುರ್ವ ದೇವಾ।
ನ ಭೇಷಿರೇ ಭೀಮವಿಷೇಣ ಭೀತಿಮ್॥
ಸುಧಾಂ ವಿನಾ ನ ಪ್ರಯುಃ ವಿರಾಮಂ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ॥ ೧॥

ದೊರೆಯಲನುಪಮರತ್ನಗಳು ತಾ- । ಗರವ ಮಥಿಸಲು ಸುರರಿಗೆದರಿಂ ।
ಹರುಷವಾಯಿತೆ । ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ । ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೬. ಮಂಗಳೂರು, ತಾರೀಕು ೨೧ನೇ ಜುಲ್ಯಾ ಶುಕ್ರವಾರ ೧೯೨೧. ಸಂಚಿಕೆ ೨೯

ವ್ಯಾಲ್ಯು ಉತ್ತಮ! ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು.

ಮೇಲಾದ

ಜವುಳಿ ಸಂಗ್ರಹದ ಮಳಿಗೆ

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಶ್ಮೆ ಪಟ್ಟೆ, ಮತ್ತು ನೂಲಿನ ಬಟ್ಟೆಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಮ್ಮದಾಬಾದ, ಮಹೇಶ್ವರಿ, ಗುಜರಾಥ, ಬರೋಡಾ, ಕೊಯಮುತ್ತೂರು, ಗದಗ, ಹುಬ್ಬಳ್ಳಿ, ಧಾರವಾಡ, ಇಳಕಲ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಮ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಬರ್ಮಾ ಮೊದಲಾದ ಕಡೆಗಳಲ್ಲಿ ಹಾಗೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳು, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುಪು ತೊಡುಪುಗಳು ಈಗ ತಾನೇ ತರಿಸಿದ್ದು ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗುವ ಬಿಳೀ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳೂ, ಬಿಳಿ ವ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಶರ್ಟಿನ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವುವು.

ನಗದಿ ಪಡೆಯುವವರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೆ,
ಕಸ್ತೂರಿ ನಾಗೇಶಪ್ಪೆ ಮತ್ತು ಕಂಪೆನಿ,
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ರಾಷ್ಟ್ರಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಆಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ಎಲುಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—300 ರಾತ್ತು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಪಂಡಿತರ ಶಾಸ್ತ್ರಿಗಳಿಂದ ಬರೆಯಲ್ಪಟ್ಟ
ಹಿಂದೂ ಧರ್ಮವೇಳ ಕ್ರಯ ೦—೧೦—೦
ಕೇಶವರಂಗ ,, ೦—೧೨—೦
ಸಂಕ್ಷೇಪಗೀತ ,, ೦—೧೦—೦

ಲಕ್ಷ್ಮೀನಾರಾಯಣ ಭಟ್ಟರಿಂದ ರಚಿತವಾದ
ಸ್ವರಾಜ್ಯ ಧರ್ಮೋಪನ್ಯಾಸ ಕ್ರಯ ೦—೩—೦

ಕರ್ನಾಟಕ ಕವಿ ಚರಿತೆ, ಮರಾಠರ ಅವನತಿ, ಶ್ರೀ ದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿವಿಲಾಸ, ಸಾವಿತ್ರೀ, ಮಹಾಭಾರತ ಕಥಾಸಾರ ಹಕಾರದ ಬೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಚಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨-೧೩-೦ ಸ್ಥಳಿಕರಿಗೆ ರೂ. ೨-೦-೦. ವಿ. ಪಿ. ಖರ್ಚು ಕೂಡಿ ರೂ. ೩-೦-೦. ಪ್ರಕಟಣೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆದುಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಶ್ಲೇಟುಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸು, ಫೂಟ್‌ರೂಲುಗಳು, ಇತರ ಬರಹವಿನ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಭಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೊಪೆಥಿಕ್, ಹೊಮಿಯೊಪೆಥಿಕ್ ಮತ್ತು ಟಿಪ್ಪು ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪಾಷ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ, ಇತ್ಯಾದಿ ರೈತರಿಗೆ ಬೇಕಾಗುವ ಗೊಬ್ಬರಗಳು.

ಖಾತ್ರಿಯಾದ ಯುಕಲಿಪ್ಟಿಸ್ ಒಯಿಲ್ ಅಥವಾ ನೀಲಗಿರಿ ತೈಲ. ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಸಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTANJ
Best Indian Pain Balm
Amrutanjan D
BOMBAY.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.
ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಕಠಿಣವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು.
ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ರತಿಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ಬೇರುಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ 'ಪ್ರತಿಕಷಾಯ' ಎಲ್ಲಾ ವಿಧದ ದಾಹಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂದು, ಅವಯವ, ಅಂಗಕೋಶ ಮೊದಲಾದುವು ಕೆಂಪಾಗಿ ನೋವುಂಟಾಗುವುದು. ನಡೆಯಬಾರದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲಿ, ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ 'ಕಷಾಯ' ತೆಗೆದುಕೊಳ್ಳಲು ಪ್ರಾರಂಭಿಸಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕೆಮ್ಮು, ಕಾಮಾಲೆ, ಉಬ್ಬಸ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಅಮಶಂಕೆ, ಮೊದಲಾದವುಗಳಿಗೆ ದಿವ್ಯ ಔಷಧಗಳಿವೆ. 'ಕ್ಯಾಟಲಾಗ್'ನ್ನು ನೋಡಿ.

ಕ್ರಯ ರೂ. 4—4—0. ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ ಮಲಬಾರ.

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ
ಸೇನ್ [illegible] ಕೋ.
[illegible]

ಇವರ ಔಷಧಾಲಯಕ್ಕೆ ದಕ್ಷಿಣ ಹಿಂ[illegible]ನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.,
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಖುದ್ದು ನಿಗಾವನಿಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ 25 ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರುಕಭಸ್ಮ:—ಕ್ಷಯ ಮುಂತಾದ ಫುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬರೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ½ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ ಗ್ರೈನಿನಿಂದ ¼ ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ, ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೇನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಚನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 2. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಓರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.
ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು, ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.
ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ.

ಮಕ್ಕಳ ಆಟದ ಚಿತ್ರಾಳಿಯು 32 ಸಾಮಾನುಗಳ ಸಹ್ಹ ಸೆಟ್ಟು 1ಕ್ಕೆ ರೂ. 1–14–0 ಮಧ್ಯಮ 3–0–0, ಉತ್ತಮ ರೂ 4–8–0, ದೊಡ್ಡದು 6–0–0 ಪೋಷು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ ಮಡಿ, ಜರಿ, ಸಾದಾ, ಶೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಶ್ರೀಚಕ್ರ, ಸ್ಫಟಿಕಮಣಿ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು. ಕ್ಯಾಟಲಾಗ್ ಇನಾಂ.

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಖುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶಿಶೆ ಒಂದರ ಕ್ರಯ:—ರೂ.1—4—0.

ಹುಳದ ಮೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿಕ್ ಡಿಸ್ಪೆನ್ಸರಿ,
ಹಂಪನಕಟ್ಟೆ, ಮಂಗಳೂರು.



ಸೌಂದರ್ಯದ ಉತ್ತಮ ಮಿತ್ರ

ಲೋಕದಲ್ಲಿ ಅತಿ ಸೌಂದರ್ಯಕ್ಕೆ ಯಶಸ್ಸು ಪಡೆದಂಥಾ ಸ್ತ್ರೀಯರು ಉಪಯೋಗಿಸುವದು

"ಹಾಜಿಲೀನ್ 'ಸ್ನೋ"
(ಟ್ರೇಡ ಮಾರ್ಕ)

"'HAZELINE'
(Trade Mark)
SNOW"

ಮೃದು ಚರ್ಮದ ಯೌವನತ್ವವನ್ನು ಕಾಪಾಡಿ, ಕೆಟ್ಟ ಹಗಲಿಂದಲು ಮಳೆಗಳಿಂದಲು ರಕ್ಷಿಸುವದು "ಹಾಜಿಲೀನ್ 'ಸ್ನೋ"
ಇದು ಮುಖಕಾಂತಿಗೆ ನಿಘಪುಕೊಟ್ಟು. ಚರ್ಮವನ್ನು ಮೃದು. ವಾಯುಪವನ್ನು ಕೊಡುತ್ತದೆ

ಇದು ಕಂಚೆನ ಪಾತ್ರೆಗಳಲ್ಲಿ ಕಟ್ಟಿ ಮತ್ತು ಉಗ್ರಾಣದವನಾಯವರಿಂದಲು ಮಾರಲ್ಪಡುವದು.

ಬರ್ರೋಸ್ ವೆಲ್‌ಕಂ ಅಂಡ್ ಕೋ.
ಲಂಡನ ಅಂಡ ಬಂಬಾಯಿ.

Burroughs Wellcome & Co.
London and Bombay
Can. 2
All Rights Reserved

ಸ್ವದೇಶಿ.

ಮಹಾತ್ಮಾ ಗಾಂಧಿಯವರು ಮದ್ರಾಸಿನಲ್ಲಿ ಕೊಟ್ಟ ಉಪನ್ಯಾಸ, ನವಜೀವನದಲ್ಲಿ ಅವರು ಬರೆದ 'ಸ್ವದೇಶಿಯೂ, ಖಾದಿಯೂ' ಎಂಬ ಲೇಖಗಳು ಮತ್ತು ಡಿ. ಬಿ. ಕಲೇಲ್ಕಾರರು ಬರೆದ 'ಸ್ವದೇಶಿ ತತ್ವ' ಇವನ್ನು ಒಳಕೊಂಡಿರುವ ಕನ್ನಡ ಪುಸ್ತಕ. ಇದರಿಂದ ಸ್ವದೇಶಿ ವಿಷಯ ಉತ್ತಮ ತರದ ಸಂಪೂರ್ಣ ಅಭಿಪ್ರಾಯ ಸಿಕ್ಕುತ್ತದೆ. ಪ್ರತಿಯೊಬ್ಬ ಹಿಂದೀಯನೂ ಓದ ಬೇಕಾದ ವಿಷಯ. ಬೆಲೆ ೪ ಆಣೆ ಮಾತ್ರ.

ನಾಲ್ಕೂವರೆ ಆಣೆಯ ಟಪ್ಪಾಲು ಚೀಟು ಕಳುಹಿಸಿದ್ದಲ್ಲಿ ಪುಸ್ತಕ ಕಳುಹಿಸಲಾದೀತು.

ದೊರೆಯುವ ಸ್ಥಳ:—

ಉಡುಪಿ ಗೋವಿಂದರಾವ್,
ಕರ್ನಾಟಕ ತಿಲಕ ಮಹಾವಿದ್ಯಾಲಯ,
ಮಂಗಳೂರು.

ಎ. ಕೆ. ಎಮ್. ದಾಸಪ್ರಭು
ಅಂಡ್ ಸನ್ಸ್,
ರಥಬೀದಿ, ಮಂಗಳೂರು.

ಡಿ. ಎಮ್. ಕೆ. ವೈದ್ಯ,
ರಥಬೀದಿ, ಮಂಗಳೂರು.

ಡಿ. ರಾಷ್ಟ್ರೀಯ ವಿದ್ಯಾಮಂದಿರ,
ಉಡುಪಿ.

ಡಿ. ಸಿ. ಎ. ಪೈ ಬ್ರದರ್ಸ್,
ಉಡುಪಿ.

The Canara Banking Corporation, Udipi, (Limited).
ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಆ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯತೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಯಾನೆ ಹೊರಗಿನಿಂದ ಬರತಕ್ಕದ್ದು	3,78,315	2	5
6. ರಿಜರ್ವ ಇತ್ಯಾದಿ ಫಂಡುಗಳು. (17—6—'22.)	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೭ರಿಂದ ೭½ ವರೇಗಿನ ಮೂರು ತಿಂಗಳಿಗೊಮ್ಮೆ ಬಡ್ಡಿ ಕೊಡುವ ಶರ್ತದ ಮೇಲೆ ಖಾಯಮ್ ಠೇವಣಾತಿಗಳು.
೨. ೧೫ ದಿನಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡಿಯದ ಶರ್ತದ ಮೇಲೆ ಸಾಲಿಯಾನ್ ಶೇಕಡಾ 6½ಲ್ಲಿ ಪಡೆದ ದಿನಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಚಿಕ್ಕ ವಾಯಿದೆ ಠೇವಣಾತಿಗಳು.
೩. ಏನೂ ಖರ್ಚಿಲ್ಲದೆ ಸಾಲಿಯನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಚಾಲ್ತಿ ಠೇವಣಾತಿಗಳು.
೪. ಸಾಲಿಯನ್ ಶೇಕಡಾ 4½ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.
೫. ಈ ಕೆಳಗಣ ಶರ್ತಗಳ ಮೇಲೆ ಕಂತು ಠೇವಣಾತಿಗಳು.
ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.
ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.
ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.
ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು.
ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.
೬. ಕಳೆದ ೨ ವರುಷಗಳಲ್ಲಿ ಪಾಲುವನ್ತಾಲಿಕರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.
೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.
೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಖ್ಖಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಓಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬೈಯಲ್ಲಿರುವ ಮರ್ಕೆಂಟೈಲ್ ಬ್ಯಾಂಕ್ ಓಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ತಾಜಾ ಕಲಂ:—ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಗಳವರಿಗೆ ಬರದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡ್ಪಿ.
ತಾ. 13–5–1922.

ನ. ಆನಂದರಾವ್,
ಕಾರ್ಯದರ್ಶಿ.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಆಷಾಢ ಬ|| ೧೩ ಶನಿವಾರದಿಂದ ದುಂದುಭಿಸಂ| ಶ್ರಾವಣ ಶು|| ೪ ಶುಕ್ರವಾರದ ವರೆಗಿನ ಪಂಚಾಂಗ
(೧೯೨೨ನೆಯ ಕರ್ಕಾಟಕ ಆಟಿ)

ತಾರೀಕು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
22	ಶನಿ	೧೩	೪೧.೪೬	ಮೃಗಶಿರಾ	೧೬.೪೬	೬	6.15	6.59
23	ರವಿ	೧೪	೩೮.೩೨	ಆರ್ದ್ರಾ	೧೬.[illegible]	೭	6.15	6.58
24	ಸೋಮ	●	೩೪.೩೦	ಪುನರ್ವಸು	೧೪.೧೬	೮	6.16	6.58
25	ಮಂಗಳ	೧	೩೫.೩೨	ಪುಷ್ಯ	೧೧.೩೨	೯	6.16	6.58
26	ಬುಧ	೨	೨೪.೧೬	ಆಶ್ಲೇಷಾ	೮.೧೪	೧೦	6.16	6.58
27	ಗುರು	೩	೧೮.೧೪	ಮಘಾ	೪.೩೨	೧೧	6.16	6.57
28	ಶುಕ್ರ	೪	೧೨.೧೬	ಹುಬ್ಬಾ	೦.೩೦	೧೨	6.17	6.57

ಮಂಗಳೂರಿನ ವಾಯುಸ್ಥಿತಿ.
(೧೯೨೨ನೆಯ ಜುಲಾಯಿ)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಿನದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜನವರಿ ೧ರಿಂದ
13	82—2	73—0	2—04	—
14	80—5	73—3	4—90	—
15	81—3	72—6	3—17	—
16	87—0	75—7	0—46	—
17	85—3	76—4	0—08	—
18	85—9	78—1	1—77	—
19	80—3	72—9	3—78	82—41

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಸೋರಡುವದೂ, ಹಲ್ಲಿನ ಬುಡದಲಿ ಸುಣ್ಣ ಕಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್ಸ:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು

ಕೊಂಕಣಿ ಭಾಷೆಯಲ್ಲಿ
ಸಂಗೀತ
✻ ಚಂದ್ರಹಾಸ ನಾಟಕ ✻

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದದ ಬೈಂಡು ರೂ. 0—4—6. ಸ್ತಿಫ್ ಬೈಂಡು ರೂ. 0—5—6.

ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದುವರೆ ಆಣೆ ಅಥವಾ ಆರುವರೆ ಆಣೆಗಳ ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ— ಬಿ. ಕೆ. ಪ್ರಭು,
ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ

'ಕವಿ'ಯವರ
ತಾಜಾ
ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ
— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ಲು 1ರ ರೂ. 2—12—0.
ಸ್ಪೆಶ್ಯಲ್ ರಾತ್ಲು 1ರ ರೂ. 3—0—0.
'2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾಸ್ ಮಿಶ್ಶನ್ ಬುಕ್ ಎಂಡ್ ಟ್ರಾಕ್ಟ್ ಡಿಪೊಜಿಟರಿ,
ಮಂಗಳೂರು.

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ	ವರೆಗೆ
		ರೂ. ಆ.	ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ	...	8— 0	8—14
ಸುಗ್ಗಿಗೆ	...	7— 6	8— 2
ಗುಡ್ಡು,	...	7—[illegible]	8— 4
ರಾಶಿ		7— 4	7— 8
ಅವ್ವಲ್ ಬೆಳ್ತಿಗೆ ,,	...	8—12	9— 0
ಗುಡ್ಡು ಬೆಳ್ತಿಗೆ ,,	...	7—14	8— 4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	14— 0	14— 8
ಗೋಧಿ ಗೋಣಿ ೧ಕ್ಕೆ	...	23— 8	25— 8
ಹುರುಳಿ ಗೋಣಿ ೧ಕ್ಕೆ	...	13—12	14— 0
ಕಡಲೆ ಗೋಣಿ ೧ಕ್ಕೆ	...	14— 0	15— 0
ತೊಗರಿ ಗೋಣಿ ೧ಕ್ಕೆ	...	16— 0	16— 4
ತೊಗರಿಬೇಳೆ ಗೋಣಿ ೧ಕ್ಕೆ	...	19— 8	29— 0
ಉದ್ದು ಗೋಣಿ ೧ಕ್ಕೆ	...	17— 0	—
ಹೆಸರು ಗೋಣಿ ೧ಕ್ಕೆ	...	16— 8	17— 0
ಊರು ಬೆಲ್ಲ ಖಂಡಿ ೧ಕ್ಕೆ	...	70— 0	72— 8
ಉಪ್ಪು ಗೋಣಿ ೧ಕ್ಕೆ	...	5— 2	5— 6
ಕೊಬ್ರಿ ಖಂಡಿ ೧ಕ್ಕೆ	...	85— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	33— 0	35— 0
ಎಳ್ಳಿಂಡಿ ಖಂಡಿ ೧ಕ್ಕೆ	...	50— 0	—
ಕೊಬ್ರಿ ಎಣ್ಣೆ ಮಣ ೧ಕ್ಕೆ	...	7— 2	8— 2
ಎಳ್ಳೆಣ್ಣೆ ಮಣ ೧ಕ್ಕೆ	...	8—12	9— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	9— 0	—
ಮೋರಿಸ ಸಕ್ಕರೆ ಮಣ ೧ಕ್ಕೆ	...	6— 4	6— 6
ಊರ ಮೆಣಸಿನ ಕಾಯಿ ಮಣ ೧ಕ್ಕೆ	...	8— 6	8— 8
ಸಾಸಿವೆ ಮುಡಿ ೧ಕ್ಕೆ	...	8— 4	8— 8
ಕೊತ್ತುಂಬರಿ ಮುಡಿ ೧ಕ್ಕೆ	...	5— 0	5—12
ಕಾಫಿ ಖಂಡಿ ೧ಕ್ಕೆ	...	350— 0	355— 0
ಚೀಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	160— 0	170— 0
ಚೀಗೋಟು New, ಹೊಸತು	...	130— 0	135— 0
ಕಾಳುಮೆಣಸು ಖಂಡಿ ೧ಕ್ಕೆ	...	120— 0	125— 0
ಯಾಲಕ್ಕಿ ಮಣ ೧ಕ್ಕೆ	...	26— 0	28— 0
ಗೇರುಬೀಜ ಮುಡಿ ೧ಕ್ಕೆ	...	2— 6	2— 8
[illegible] ಖಂಡಿ ೧ಕ್ಕೆ	...	70— 0	80— 0
ತಾಂಬ್ರ ತಗಡು ಮಣ ೧ಕ್ಕೆ	...	23—12	24— 0
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	...	36— 0	—
ಜೇನ ಬೆಳ್ಳಿ ಮೇಣ ೧ಕ್ಕೆ	...	24— 0	—
[illegible] ಜೇನುಮಣ 1ಕ್ಕೆ	...	23— 0	—

ಅಚ್ಚಿನಲ್ಲಿದೆ!   ಎಂ. ಜಿ. ಐಗಳ್, ಇವರಿಂದ ರಚಿತವಾದ   ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ. ಪುಸ್ತಕದ ಪುಟಗಳ ಸಂಖ್ಯೆಯು ಕ್ರಾನ್ ⅛ ಸ್ಯಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1–8–0 ಮಾತ್ರ. ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿಂತ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಶಾದ್ರಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ನರ್ಸಪ್ಪನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತನಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯಿಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಭಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರ ಮಾಧ್ವರಾದ್ದು—ಪದ್ಮತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲೀಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಆಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚೆರುಮಾನ ಪಳ್ಳಿ, ಬಾರ್ಕೂರು. 18. ಪೋರ್ಚುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸ್ಸೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬೂದಿಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಶೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಾಚಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾ ನಿರ್ಮಾಣ—ಆಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ರಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—ಬುಚೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ವಂಚ—ಸುಳ್ಯ—ಬೆಳ್ಳಾರೆ—ಅಮರಮಾಗಣೆಗಳು—ಬೆಳ್ಳಾರೆ, ಪುತ್ತೂರು ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ—ಗುರುವಾಯನಕೆರೆ ಪಟ್ಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜನ ಅಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮುಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಮಣೆಯುದ್ಧ—ದೇವಪೂಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ಏಳುನಾಡು ಹೆಗ್ಗಡೆ—ವೀರಪಾಂಡ್ಯ—ಗುಮುಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಸೀಮಂತೂರು—ಮೂಲಿಕೆ—ವಳಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಿಪ್ಪಲ—ಸೋಮನಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕ್ಕರ್ಣೆ—ನೀರಾವರ—ಶಂಕರನಾರಾಯಣ—ಪಡೂರು ದೇವಸ್ಥಾನಗಳು—ಪೋರ್ಚುಗೀಸರ ಸಂಗಡ ಬಾಸ್ಸೆಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ಬಿನ್ನಾಣಿರು—ಪಣಪಿಲ ಅರಸರು—ಕೊಣ್ಣಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಯೋಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡಗು ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಣ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟಪಾಡಿ ನಿದಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಆಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23—ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಪಮುಹೆಗಡೆ 1.

ವಿಳಾಸ:—
ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.
ಅಥವಾ
ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಹಾವು ಕಚ್ಚುವಿಕೆ.

ವಿಷವಿರುವ ಮತ್ತು ಇಲ್ಲದ ಹಾವುಗಳು ಕಚ್ಚಿದರೆ ಗಾಯದಲ್ಲಿ ವ್ಯತ್ಯಾಸವಿರುತ್ತೆ. ಗಾಯವನ್ನು ಪರೀಕ್ಷಿಸಿ ನೋಡುವುದರಲ್ಲಿ ಎರಡು ಹಲ್ಲುಗಳ ಗಾಯ ಮಾತ್ರ ಕಂಡರೆ ವಿಷವಂತಲೇ ನಿಶ್ಚಯಿಸಬೇಕು. ತುಂಬಾ ಹಲ್ಲುಗಳ ಗಾಯಗಳು ಕಂಡು ಬಂದರೆ ವಿಷವಿಲ್ಲದ ಹಾವೆಂತಲೇ ಖಂಡಿತಮಾಡಬಹುದು.

ವಿಷವಿರುವ ಹಾವು ಕಚ್ಚಿದ ಗಾಯದಲ್ಲಿ ಕೆಲವು ವಿಶೇಷ ಗುಣಗಳಿವೆ. ಕಚ್ಚಿದ ಕೂಡಲೆ ಕಠಿಣ ಉರಿಯಾಗಿ ಗಾಯವು ಕೆಂಪಾಗುತ್ತಾ ಬಂದು ರಕ್ತ ಸೋರುವುದಲ್ಲದೆ, ಆ ಭಾಗವೆಲ್ಲಾ ನೀಲವರ್ಣವಾಗಿ ಊದಿಕೊಳ್ಳುತ್ತೆ. ಮನುಷ್ಯನಿಗೆ ನಿಶಾ ಆದಂತಾಗಿ ನಿದ್ರೆ ಬಂದಂತಾಗುತ್ತದೆ. ಕಾಲಿನಲ್ಲಿ ಏನೋ ತರಹವಾಗಿ ಆದಂತೆ ತೋರುತ್ತೆ. ಕೆಲವು ವೇಳೆ ವಾಂತಿಯು ಬರುತ್ತೆ. ಮಾತು ನಿಂತುಹೋಗುತ್ತೆ. ನುಂಗಲಿಕ್ಕೆ ಆಗುವುದಿಲ್ಲ. ಕ್ರಮೇಣ ಉಸಿರೇ ನಿಂತು ಹೋಗುತ್ತೆ. ಕೆಲವು ಜಾತಿ ಹಾವು ಕಚ್ಚಿದೊಡನೇ ಜ್ಞಾನ ತಪ್ಪಿಹೋಗುತ್ತೆ. ಮೈಯೆಲ್ಲಾ ತಣ್ಣಗಾಗುತ್ತೆ. ತುಂಬಾ ಮೈ ಬೆವರುತ್ತೆ. ನಾಡಿ ನಿಧಾನವಾಗುತ್ತೆ. ಬಾಯಿಯಿಂದಲೂ ರಕ್ತ ಹೋಗುವುದೂ ಉಂಟು.

ಹಾವು ಕಚ್ಚಿದರೆ ಏನುಮಾಡಬೇಕು.

ದುರಾದೃಷ್ಟದಿಂದ ಯಾರಿಗಾದರೂ ಹಾವು ಕಚ್ಚಿದರೆ ಆ ಗಾಯದ ೩ ಇಂಚ್ ಮೇಲೆ ಹಗ್ಗ, ಕೈವಸ್ತ್ರ ಅಥವಾ ಇತರ ಗಟ್ಟಿಯಾದ ಬಟ್ಟೆಯನ್ನು ಕಟ್ಟಿ ಅದಕ್ಕಾಗಿ ಏನಾದರೂ ಒಂದು ಕಡ್ಡಿ ಹಾಕಿ ತಿರುಗಿಸಿ ರಕ್ತ ಚಲನೆ ಇಲ್ಲದಷ್ಟು ಗಟ್ಟಿಮಾಡಬೇಕು. ಲ್ಯಾನ್ಸೆಟ್ ಎಂಬ ಹರಿತವಾದ ಚೂರಿಯಿಂದ ಕೆಲವು ಉದ್ದವಾದ ಗಾಯಗಳನ್ನು (ಅಡ್ಡವಾಗಿ ಮಾಡಬಾರದು, ಯಾಕೆಂದರೆ ರಕ್ತನಾಳಗಳು ಕತ್ತರಿಸಿ ಹೋದಾವು) ಮಾಡಿ ಗಾಯಗಳಿಗೆ ಪೊಟಾಶಿಯಮ್ ಪರ್ಮಂಗನೇಟ್ ನೀರು ಶುದ್ಧವಾಗಿ ಬಾವಿಗಳಿಗೆ ಹಾಕುವ ಕೆಂಪು ಹುಡಿ ಎಂಬುದನ್ನು ಉಜ್ಜಬೇಕು. ಇದು ಸಾಧ್ಯವಾಗಬೇಕಾದರೆ ಲ್ಯಾನ್ಸೆಟ್ ಮತ್ತು ಪೊಟಾಶಿಯಮ್ ಪರ್ಮ್ಯಾಂಗನೇಟ್ ಸಹ ಇರುವ ಒಂದು ಪೆಟ್ಟಿಗೆಯನ್ನು ಇಟ್ಟುಕೊಂಡಿರಬೇಕು. ಯಾವ ಔಷಧ ಅಂಗಡಿಯಲ್ಲಾದರೂ ೪ ಅಥವಾ ೬ ಆಣೆಗೆ ಇದು ದೊರೆಯುತ್ತೆ. ಪೊಟಾಶಿಯಮ್ ಪರ್ಮ್ಯಾಂಗನೇಟ್ ಇಲ್ಲದಿದ್ದರೆ ಕಚ್ಚಿದ ಗಾಯದಿಂದ ಒಳ್ಳೇ ಹರಿತವಾದ ಚೂರಿಯಿಂದ ಮಾಂಸ ತೆಗೆದುಬಿಟ್ಟು, ಬೆಂಕಿ ಕೆಂಡದಿಂದಾಗಲೀ, ಕಾದ ಕಬ್ಬಿಣದಿಂದಾಗಲೀ, ಕುದಿಯುವ ಎಣ್ಣೆಯಿಂದಾಗಲೀ ಸುಡಬೇಕು.

ಅರ್ಧ ಗಂಟೆಯ ಒಳಗೆ ವಿಷದ ಚಿನ್ಹೆಗಳು ತೋರದಿದ್ದರೆ, ಕಟ್ಟನ್ನು ಸಡಿಲಿಸಬೇಕು. ಇಲ್ಲವಾದರೆ ಕಟ್ಟಿನ ಕೆಳಗಿನ ಭಾಗ ಸತ್ತುಹೋದೀತು.

ಕಚ್ಚಿಸಿಕೊಂಡ ಮನುಷ್ಯನ ಮೈ ತಣ್ಣಗಾಗುತ್ತಾ ಬಂದರೆ ಅವನ ತಲೆಯನ್ನು ತಗ್ಗಿನಲ್ಲಿಟ್ಟು ಕಾಲುಗಳನ್ನು ದೇಹದ ಮೂಲೆವುಟ್ಟಿಕ್ಕೆ ಬಗ್ಗಿಸಬೇಕು. ಕಾಲುಗಳೆರಡಕ್ಕೂ ಬಿಗಿಯಾಗಿ ಬ್ಯಾಂಡೇಜ್ ಕಟ್ಟಬೇಕು. ರಕ್ತಕೋಶದ ಮೇಲೆ ಸಾಸಿವೆ ಪಲಾಸ್ತ್ರಿ ಹಾಕಬೇಕು. ಬಿಸೀನೀರಿನ ಕುಪ್ಪಿಗಳನ್ನು ದೇಹಕ್ಕೆ ಕೊಡುವವರೆಗೆ ಒಳಕುಂಡಿ ಮತ್ತು ಸಾಸ್ವೆಯ ಹುಡಿಯನ್ನು ದೇಹಕ್ಕೆ ಹಚ್ಚುತ್ತಾ ಇರಬೇಕು. ಕಡಿಮೆ ಒಂದು ಪಕ್ಷ ಒಂದು ದಪ್ಪ ಬಿಸೀನೀರಿನ ಕುಪ್ಪಿಗಳನ್ನು ಮೈಗೆ ಇಟ್ಟು ಕಂಬಳಿಯಿಂದ ಮುಚ್ಚಬೇಕು.

ಮಾದಕ ಪದಾರ್ಥ ಕೊಡಬಾರದು. ಸುಣ್ಣ ಮತ್ತು ಅಮ್ಮೋನಿಯಂ ಕ್ಲೋರೈಡ್ ಎಂಬ ಉಪ್ಪನ್ನು ಮಿಶ್ರಮಾಡಿ ಮೂಸಲಿಕ್ಕೆ ಕೊಡಬಹುದು.

ಬಿಸೀಸುಲ್, ಬಿಸೀಹಾಲು ಅಥವಾ ಟೀಯನ್ನು ಕೊಡಬೇಕು. ಪ್ರತಿ ಕಾಲುಗಂಟೆಗೂ ೨ ಯಾ ೩ ಚಿಂಯಿಂತೆ ತುಂಬಾ ಕೊಡುತ್ತಾ ಇರುವುದು ಒಳ್ಳೇದು.

ಗಾಳಿಗೆ ತಡೆಮಾಡಬೇಡಿ. ಕಚ್ಚಿಸಿಕೊಂಡವನನ್ನು ತಿರುಗಾಡಲು ಬಿಡಬಾರದು. ಸಂಪೂರ್ಣ ವಿಶ್ರಾಂತಿ ಕೊಡಬೇಕು. ಉಸುರು ನಿಲ್ಲುತ್ತಾ ಬಂದರೆ ನೀರಿಗೆ ಬಿದ್ದವರಿಗೆ ಉಸಿರಾಡಲಿಕ್ಕೆ ಸಹಾಯ ಕೊಡುವಂತೆ ಇವರಿಗೂ ಮಾಡಬೇಕು.

ಪರಾ—ಯಾವಾಗಲೂ ಉತ್ತಮ ಡಾಕ್ಟರ ಸಹಾಯ ಪಡೆಕೊಳ್ಳಬೇಕು.

ಕೊಡಗು.

ಚಂದಾದಾರರಿಗೆ ವಿನಂತಿ.

ಚಂದಾದಾರರು ಈ ಪತ್ರದ ಆಫೀಸಿಗೆ ಪತ್ರಗಳನ್ನು ಬರೆಯುವಾಗ ತಮ್ಮ ವಿಳಾಸದ ಪಕ್ಕದಲ್ಲಿರುವ ರಿಜಿಸ್ಟರ್ ನಂಬರನ್ನು ಕೊಡತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ
ಮಂಗಳೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ.   ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು—(೨೮—೬—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯರು ಅರಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುಷ್ಕಿನ ಶರ	0—12—0	ಶಂಕರರಾಮಾಯಣ ಹೊಸ ಮುದ್ರಣ	5—0—0
ಸಂಸಾರಶಕ್ತಿ ಕಾದಂಬರಿ	0—6—0	ಶಂಕರರಾಮಾಯಣದ ಕಥೆ ವಚನ	0—12—0
ಚಂದ್ರಮತಿ ,,	0—8—0	S. S. L. C. Kannada Texts	
ರಾಜಪುತ್ರರಮಣಿಯರು	0—8—0	ಹರಿವಂಶ	0—5—0
ಕೆಲವು ಸಣ್ಣ ಕಥೆಗಳು	1—0—0	ಸುಶೀಲೆ	0—6—0
ರಾಜಯೋಗ	1—0—0	ಅಡವಿಯ ಹುಡುಗಿ	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದೇಶ ವರ್ತಮಾನ.

ಜಪಾನ್:— ಈ ದೇಶದಲ್ಲಿ ಸರಕಾರಿ ವೆಚ್ಚವನ್ನು ಕಡಿಮೆಮಾಡುವ ಉದ್ದೇಶದಿಂದ ಸೈನ್ಯದಲ್ಲಿ ೪೦ ಸಾವಿರ ಮಂದಿ ಸೈನಿಕರನ್ನು ತೆಗೆದುಬಿಡಬೇಕೆಂದು ಮಂತ್ರಿ ಮಂಡಲದವರು ನಿರ್ಣಯಿಸಿರುತ್ತಾರೆ.

ಜರ್ಮನ್ ಕೈಸರರು:—ಜರ್ಮನಿಯ ಮಾಜಿ ಚಕ್ರವರ್ತಿಗಳೊಡನೆ ಒಬ್ಬ ಪತ್ರಿಕಾಲೇಖಕನು ಮಾತನಾಡಿದಾಗ ಕೈಸರರು ಹೀಗೆ ಹೇಳಿದರಂತೆ "ಜರ್ಮನಿಯಲ್ಲಿ ಚಕ್ರವರ್ತಿ ಪ್ರಭುತ್ವವು ಆರಂಭವಾಗುವುದು. ಆದರೆ ನಾನು ಮಾತ್ರ ಆ ದೇಶಕ್ಕೆ ಹೋಗುವುದಿಲ್ಲ. ನಾನು ಇಲ್ಲೆ ಕಾಲಕಳೆಯುವೆನು".

ಬರ್ಲಿನ್:— ಗೋರ್ಡನ್ ಎಂಬಲ್ಲಿರುವ ಸಿಡಿಮದ್ದಿನ ಉಗ್ರಾಣದಲ್ಲಿ ಬೆಂಕಿಯುಂಟಾಗಿ ೧೧೫ ಮಂದಿಗಳಿಗೆ ಗಾಯವುಂಟಾಯಿತು.

ಬ್ರಿಟನ್ನಿನಲ್ಲಿ ರೈಲ್ವೆ ದರ:—ಬರುವ ಒಗಸ್ಟ ಶುರುವಿನಿಂದ ಇಂಗ್ಲೆಂಡಿನಲ್ಲಿ ರೈಲ್ವೆ ದರವು ಕಡಿಮೆಮಾಡಲಾಗುವುದು.

ಅಮೇರಿಕಾ:—ಈ ದೇಶದ ರೈಲ್ವೆ ಕೆಲಸದವರು ಮುಷ್ಕರ ಹಿಡಿದಿರುವರು.

ಪ್ರಿನ್ಸ್ ಆಫ್ ವೇಲ್ಸರು:—ಯುವರಾಜರು ಬಿಕಾನೀರ್ ಮಹಾರಾಜ, ಕಪುರತಲ ಮಹಾರಾಜ, ನವನಗರ ಮಹಾರಾಜ, ಮತ್ತು ಆಗಾಖಾನ್ ಇವರನ್ನು ಆದರಪೂರ್ವಕವಾಗಿ ಸ್ವಾಗತಮಾಡಿರುವರು.

ಬರ್ಮಾ:—ಬೌದ್ಧ ಸನ್ಯಾಸಿಯಾದ ಯು. ಒಟ್ಟಮ ಎಂಬಾತನು ರಾಜದ್ರೋಹಕ್ಕಾಗಿ ಕಾರಾಗೃಹವಾಸವನ್ನನುಭವಿಸಿ ಕೆಲವು ದಿವಸಗಳ ಹಿಂದೆ ಖುಲಾಸೆಮಾಡಲ್ಪಟ್ಟನು. ಬರ್ಮಾ ಜನಗಳು ಆತನನ್ನು ಎದುರುಗೊಳ್ಳುವುದರಲ್ಲಿ ತುಂಬಾ ಉತ್ಸಾಹಶಾಲಿಗಳಾಗಿದ್ದರು. ಮೋಲ್ಮಿನ್ ಎಂಬ ಪಟ್ಟಣದಲ್ಲಿ ಸ್ತ್ರೀಯರು ತಮ್ಮ ತಲೆಯ ಕೂದಲನ್ನು ನೆಲದ ಮೇಲೆ ಹಾಸಿ ಅದರ ಮೇಲೆ ಆತನು ನಡೆದು ಹೋಗುವಂತೆ ಮಾಡಿದರೆಂದು ತಿಳಿದುಬರುತ್ತದೆ.

ರಿಟ್ರೆಂಚ್‌ಮೆಂಟ್:—ಇಂಗ್ಲೆಂಡಿನ ಮಿಲಿಟರಿ ಖಾತೆಯಲ್ಲಿ ೨೫೦೦ ಮಂದಿ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಲಾಗುವುದೆಂದು ತಿಳಿದುಬರುತ್ತದೆ.

ಜಗಲೂಲಪಾಶಾ:— ಮಿ. ಆರ್ಥರ್ ಹೆಂಡರಸನ್ ಮೊದಲಾದ ಕೆಲವು ಸನ್ಮಾನ್ಯ ಗೃಹಸ್ಥರು ಜಗಲೂಲ ಪಾಶಾ ಮತ್ತು ಇತರ ಇಜಿಪ್ಟ ದೇಶದ ಕೈದಿಗಳನ್ನು ಬಿಡುಗಡೆಮಾಡಬೇಕೆಂದು ಇಜಿಪ್ಟದ ಪಾರ್ಲಿಮೆಂಟಿನ ಕಮ್ಮಿಟಿಯವರಿಗೂ ಮಿ। ಲೊಯಿಡ ಜೋರ್ಜರಿಗೂ ಬರಹಮೂಲಕ ತಿಳಿಸಿದ್ದಾರೆ.

ಲೋರ್ಡ ಕರ್ಝುನರು:—ಪರರಾಷ್ಟ್ರಗಳ ಮಂತ್ರಿಗಳಾದ ಲೋರ್ಡ ಕರ್ಝುನರು ಚಿಕಿತ್ಸೆಯನ್ನು ಹೊಂದಲು ಫ್ರಾನ್ಸಿಗೆ ಹೋಗಿ ಈ ತಿಂಗಳ ಅಂತ್ಯದೊಳಗೆ ಪುನಃ ತಮ್ಮ ಹುದ್ದೆಯ ಚಾರ್ಜನ್ನು ವಹಿಸಿಕೊಳ್ಳುವರು.

ಹೊಲ್ಲೆಂಡ:—ಈ ದೇಶದಲ್ಲಿ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕು ಹೆಂಗಸರಿಗೂ ಕೊಟ್ಟಿರುವರು.

ಲೆಲಿನರ ಮರಣ ವಾರ್ತೆ:—ಲೆಲಿನರನ್ನು ಕೊಂದುಹಾಕಿರುವರೆಂಬ ವಾರ್ತೆಯು ಬಂದಿದೆ. ಇದರ ನಿಜಾಂಶವು ಮುಂದಕ್ಕೆ ತಿಳಿಯಬೇಕಾಗಿದೆ.

ಒಳದೇಶ ವರ್ತಮಾನ.

ಓಲ್-ಇಂಡಿಯಾ ಕೊಂಗ್ರೆಸ್ ಕಮ್ಮಿಟಿ ಮೀಟಿಂಗು:— ತಾ. ೧೬ನೇ ಒಗಸ್ಟ ದಿವಸ ಶ್ರೀಕೃಷ್ಣ ಜನ್ಮಾಷ್ಟಮಿಯು ಇದ್ದ ಮೂಲಕ ಓಲ್-ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮೀಟಿಂಗನ್ನು ತಾ. ೧೪ಕ್ಕೆ ಕೂಡಿಸದೆ ೫ ದಿವಸ ಮುಂದೆ ಹಾಕಬೇಕೆಂದು ಜಬಲಪುರದ ಬಾಬೂ ಗೋವಿಂದ ದಾಸ ಇವರ ಸೂಚನೆಯಾಗಿದೆ.

ಮಲಬಾರಿ ಹಾವುಗಳ ಚಮತ್ಕಾರ:—ಪುದುಕೋಟೆಯಿಂದ ೧ ಮೈಲಿನ ಮೇಲಿರುವ ಮನಾಪದನ್ ಎಂಬಲ್ಲಿ ಒಂದು ಮನೆಯಲ್ಲಿ ನೂರಾರು ವರುಷಗಳಿಂದ ಒಂದು ಕೋಣೆಯೊಳಗೆ ಕೆಲವು ಹಾವುಗಳು ಮನೆಮಾಡಿಕೊಂಡಿದ್ದು ಅವು ದುಡ್ಡು ಕಾಯುತ್ತಿರುವುವೆಂದು ತಿಳುವಳಿಕೆ ಇದೆ. ಇದರೊಳಗೆ ರೂಪಾಯಿಗಳ ಹಾಗು ರತ್ನಗಳ ಸಪ್ಪಳವು ಕೇಳಬರುತ್ತದೆ. ಈ ಹಾವು ಮನೆಯಲ್ಲಿ ಅಡ್ಡಾಡಿದರೂ ಯಾರಿಗೂ ಅಪಾಯಮಾಡಿಲ್ಲ. ಒಮ್ಮೊಮ್ಮೆ ಎಲ್ಲಾ ಹಾವುಗಳು ಹೊರಗೆ ಬಂದಾಗ ಆ ಮನೆಯ ಯಜಮಾನನ ತಂಗಿಯು ಆಜ್ಞೆ ಕೊಡುತ್ತಲೇ ಅವು ಒಳಗೆ ಹೋಗುತ್ತವೆ. ಇವುಗಳಿಗೆ ದಿನಾಲೂ ದೀಪಹಚ್ಚಿ ಅನ್ನಕೊಡುತ್ತಾರೆ. ಒಬ್ಬ ಹಾವಾಡಿಗನು ಬಂದು ಪುಂಗಿಯನ್ನೂದಿ ಒಂದು ಹಾವನ್ನು ಮೋಹಿಸಿ ಒಯ್ದನು. ಮನೆಯವರು ಸುಮ್ಮನೆ ಒಯ್ಯಗೊಟ್ಟದ್ದರಿಂದ ಆ ಮನೆಯ ಯಜಮಾನನ ತಂಗಿಯ ಕಣ್ಣುಗಳು ಇಂಗಿದವು. ಇವಳ ಗಂಡನೂ ಆ ಮನೆಯ ಒಡೆಯನ ತಮ್ಮನೂ ರಾತ್ರಿ ಹಾವು ನೋಡಲಿಕ್ಕೆಂದು ದೀಪದೊಡನೆ ಕೋಣೆಯ ಬಾಗಿಲು ತೆರೆದು ನೋಡಲು, ಒಂದು ಹಾವು ಫುಸ್ ಎಂದು ಬಂತು. ಒಬ್ಬನು ದೀಪದೊಡನೆ ದೊಪ್ಪನೆ ಬಿದ್ದನು. ಮನೆಯನ್ನು ಹೊಸದಾಗಿ ಕಟ್ಟಬೇಕಾಗಿದೆ. ಆದರೆ ಹಾವು ಹೊರಗೆ ಹೋಗಲೊಲ್ಲವು. —ಕರ್ಮವೀರ.

ಆಯುರ್ವೇದಕ್ಕೆ ಪ್ರೋತ್ಸಾಹ:—ಮದರಾಸಿನ ಆಯುರ್ವೇದಿಕ ಕೋಲೇಜಿಗೆ ಮದರಾಸ ಕೊರಪೋರೇಶನಿನವರು ರೂ. ೧೦೦೦ವನ್ನು ಸಹಾಯ ಧನವಾಗಿ ಕೊಟ್ಟಿರುತ್ತಾರೆ. ನೆಲ್ಲೂರು ಡಿಸ್ಟ್ರಿಕ್ಟ ಬೋರ್ಡಿನವರು ತಿಂಗಳಿಗೆ ರೂ. ೧೫ರಂತೆ ಎರಡು ವಿದ್ಯಾರ್ಥಿವೇತನಗಳು, ಚಿತ್ತೂರಿನ ಮುನ್ಸಿಪಾಲಿಟಿಯವರು ತಿಂಗಳಿಗೆ ರೂ. ೨೦ರ ಒಂದು ವೇತನವನ್ನು ಕೊಡಲು ಒಪ್ಪಿದ್ದಾರೆ. ಅನಂತಪುರ ತಾಲೂಕು ಬೋರ್ಡಿನವರು ರೂ. ೫೦ ವಂತಿಗೆ ಹಾಕಿರುವರು. ಗುಂಟೂರು, ಸೇಲಂ, ರಾಜಮಹೇಂದ್ರಿ ಮುನ್ಸಿಪಾಲಿಟಿಗಳೂ ಮತ್ತು ಭೀಮಾವರಂ ತಾಲೂಕು ಬೋರ್ಡಿನವರೂ ಧರ್ಮಾರ್ಥವಾಗಿ ಔಷಧ ಕೊಡುವ ಆಯುರ್ವೇದಿಕ ಔಷಧಾಲಯಗಳನ್ನು ಸ್ಥಾಪಿಸಿರುವರು. ಮದರಾಸ ಆಯುರ್ವೇದಿಕ ಕೋಲೇಜಿನಲ್ಲಿ ತರಬೇತು ಹೊಂದಿದ ವಿದ್ಯಾರ್ಥಿಗಳಿಗೆ ಈ ಔಷಧಾಲಯಗಳಲ್ಲಿ ಉದ್ಯೋಗಗಳನ್ನು ಕೊಟ್ಟಿರುತ್ತದೆ. ಅನ್ಯ ಕೆಲವು ತಾಲೂಕು ಬೋರ್ಡುಗಳೂ, ಡಿಸ್ಟ್ರಿಕ್ಟ ಬೋರ್ಡುಗಳೂ, ಮುನ್ಸಿಪಾಲಿಟಿಗಳೂ ಆಯುರ್ವೇದ ಔಷಧಾಲಯಗಳನ್ನು ತೆರೆಯಲಿಕ್ಕಿದ್ದಾರೆ. ತಿರುಚಿನಾಪಳ್ಳಿಯಲ್ಲಿ ಧರ್ಮಾರ್ಥವಾಗಿ ಆಯುರ್ವೇದ ಔಷಧವನ್ನು ಕೊಡುವ ಔಷಧಾಲಯವನ್ನು ತೆರೆಯಲು ಇಲ್ಲಿಯ ಮುನ್ಸಿಪಾಲಿಟಿಯವರು ರೂ. ೩೦೦೦ವನ್ನು ಸೆಂಕ್ಷನ್ ಮಾಡಿರುತ್ತಾರೆ.

ಭೂಲೋಕದ ಪ್ರದಕ್ಷಿಣೆ:—ಪೋಲಾಂಡಿನಿಂದ ಮಿ. ಕಿಂಲ್ ಡಬ್ಲ್ಯು. ಜೆ. ಸುಕ್ಕೀ ಇವರು ೯೦೦೦ ಮೈಲುಗಳ ಪ್ರಯಾಣಮಾಡಿ ಕರಾಚಿಗೆ ಬಂದಿರುವರು.

ಸರ್ ಅಬ್ದುಲ್ ರಹಿಮಾನ:—ಜೈಲ ಡಿಪಾರ್ಟಮೆಂಟಿನ ಖಾತೆಗೆ ಇವರು ರಾಜೀನಾಮೆಯನ್ನು ಕೊಟ್ಟರೆಂಬ ವದಂತಿ ಇದೆ.

ಕಾಶೀ ವಿದ್ಯಾಪೀಠ:—ಈ ವಿದ್ಯಾಪೀಠದ ಗಣಿತಶಾಸ್ತ್ರವನ್ನು ಬೋಧಿಸುವ ಪಂಡಿತರಾದ ಶ್ರೀಯುತ ಧರ್ಮವೀರ ಸಿಂಗರನ್ನು ಕಳೆದ ತಾ. ೧೦ರಲ್ಲಿ ಕೈದುಮಾಡಲಾಗಿದೆ.

ಬಾಬು ಮೋತಿಲಾಲ ಘೋಷ:—ಅಮೃತಬಜಾರ ಪತ್ರಿಕೆಯ ಸುಪ್ರಸಿದ್ಧ ಸಂಪಾದಕರಾದ ಬಾಬು ಮೋತಿಲಾಲ ಘೋಷರು ಅಸ್ವಸ್ಥದಿಂದ ಪೀಡಿತರಾಗಿ ಹಾಸಿಗೆಯ ಮೇಲಿದ್ದರೂ ಕೆಲವು ಲೇಖನಗಳನ್ನು ಬರೆದಿರುವರು. ಕೆಲವು ದಿನಗಳ ಹಿಂದೆ ಇವರ ಅಸ್ವಸ್ಥವು ಕಠಿಣವಾಗುತ್ತ ಬಂದಿತ್ತು. ಈಗ ಸ್ವಲ್ಪ ಲಘುವಾಗಿದೆಯಾಗಿ ತಿಳಿದು ಬರುತ್ತದೆ.

ದರಗಳನ್ನು ಏರಿಸಿದುದರ ಪರಿಣಾಮ:—ಹೆಚ್ಚು ಉತ್ಪತ್ತಿಯಾಗುವುದೆಂಬ ಆಸೆಯಿಂದ ರೈಲ್ವೆಯ ದರವನ್ನೂ ಅಂಚೆಯ ದರಗಳನ್ನೂ ಹೆಚ್ಚಿಸಲಾಯಿತು. ಆದರೆ ಕಳೆದ ಮೂರು ತಿಂಗಳ ಲೆಕ್ಕವನ್ನು ನೋಡುವಲ್ಲಿ ರೈಲ್ವೆ ಮತ್ತು ಪೋಸ್ಟಲ್ ಇಲಾಖೆಗಳ ಉತ್ಪನ್ನವು ವಿಶೇಷ ಕಡಿಮೆಯಾಗಿದೆಯಾಗಿ ತಿಳಿದು ಬರುತ್ತದೆ.

ಮೆರವಣಿಗೆಗೆ ಪ್ರತಿಬಂಧ:—ಮಿ। ಲಾಲಾ ದುನಿಚಂದ ಮಿ। ಶಾಂತನಮ್ ಮತ್ತು ಇತರ ಮುಸಲ್ಮಾನ ಮುಖಂಡರು ಅಮೃತಸಾರಕ್ಕೆ ಬಂದಾಗ ಅವರನ್ನು ಪಟ್ಟಣದಲ್ಲಿ ಮೆರವಣಿಗೆ ಮೂಲಕ ಕರೆತರಲು ಪೋಲೀಸಿನವರು ಬಿಡಲಿಲ್ಲವಂತೆ.

ಜೈಲಿನ ಬಾಧೆ:—ಈಗ ಸೈನಿ ಜೈಲಿನಲ್ಲಿರುವ ಕೊಹ್‌ಪುರದ ಸ್ವಯಂಸೇವಕ ಶ್ರೀಯುತ ಕಲೇಶನಾಥ ಇವರನ್ನು ತಲೆಕೆಳಗೆ ಕಾಲುಮೇಲೆ ಮಾಡಿ ಬಾವಿಯಲ್ಲಿ ತೂಗಾಡಿಸಿದ್ದನ್ನು ತಾನು ಕಂಡಿದ್ದೇನಾಗಿ ಶ್ರೀಯುತ ಕೃಷ್ಣಕಾಂತ ಮಾಲವೀಯರು ತಿಳಿಸುತ್ತಾರಾಗಿ ವರ್ತಮಾನ್ ಎಂಬ ಪತ್ರಿಕೆಯಲ್ಲಿದೆ.

ಫ್ರಿ ಇಂಡಿಯಾ:—ಕಾನಪೂರದಲ್ಲಿ ಸದ್ಯದಲ್ಲೆ ಮಿ। ದುಲೇಲಕರರು ಸಂಪಾದಕರಾಗಿ 'ಫ್ರಿ ಇಂಡಿಯಾ' ಎಂಬ ಪತ್ರವು ಹೊರಡುವುದು.

ಸರ್. ಶಂಕರನ್ ನಾಯರರ ಮೇಲೆ ದಾವೆ:—'ಮಹಾತ್ಮಾ ಗಾಂಧಿಗಳೂ ಅರಾಜಕತ್ವವೂ' ಎಂಬ ಪುಸ್ತಕದಲ್ಲಿ ತನಗೆ ಅಪಮಾನಕರವಾದ ಸಂಗತಿ ಇರುವುದೆಂದು ಸರ್. ಮಿಕಾಯೇಲ್ ಒಡಿಯಾರರು ಸರ್. ಶಂಕರನ್ ನಾಯರರ ಮೇಲೆ ಮಾನನಷ್ಟದ ದಾವೆಯನ್ನು ಮಾಡಲಿಕ್ಕಿದ್ದಾರೆಂದು ಪ್ರಕಟವಾಗಿದೆ.

ಇಂದೂರು ಸಂಸ್ಥಾನದ ಮಂತ್ರಿಗಳು:—ಮೈಸೂರು ಸರಕಾರದ ಚೀಫ್ ಸೆಕ್ರೆಟರಿಗಳಾಗಿ ಕೆಲಸಮಾಡಿದ ಡಾಕ್ಟರ ಡಿ. ಯನ್. ನರಸಿಂಗರಾಯರು ಇಂದೂರು ಸಂಸ್ಥಾನದ ರೆವೆನ್ಯು ಮಿನಿಸ್ಟರರಾಗಿ ಬೇಗನೆ ಕೆಲಸ ನೋಡಲಿಕ್ಕಿದ್ದಾರಂತೆ.

ಮಲಬಾರದಲ್ಲಿ ನೆರೆ:—ಕಳೆದ ವಾರದಲ್ಲೆಲ್ಲಾ ಮಲಬಾರ ಜಿಲ್ಲೆಯಲ್ಲಿ ಕುಂಭವೃಷ್ಟಿಯಾಗಿ ಅನೇಕ ಕಡೆಗಳಲ್ಲಿ ನೆರೆ ಬಂದಿರುತ್ತದೆ. ಹಲವು ಕಡೆಗಳಲ್ಲಿನ ಮನೆಮಠಗಳು ಕೆಡವಿಬಿದ್ದು ಹೆಚ್ಚಿನ ನಷ್ಟಉಂಟಾಗಿದೆ. ಕಲ್ಲಿಕೋಟೆಯ ಆಸ್‌ಪಾಸಿನ ಹಳ್ಳಿಗಳಲ್ಲಿ ಕೆಲವು ಮಾರ್ಗಗಳನ್ನು ದೋಣಿಗಳ ಮೂಲಕ ದಾಟಬೇಕಾಗಿ ಬಂದಿದೆ. ನೆರೆಬಂದ ಕಡೆಗಳಲ್ಲಿನ ಬಡಜನರಿಗೆ ತುಂಬಾ ಕಷ್ಟಗಳು ಸಂಭವಿಸಿವೆ.

ಮುಂಬಯಿ ಟ್ರೇಮವೇ ಕಂಪೆನಿ ಯೂನಿಯನ್:—ಈ ಯೂನಿಯನ್ನಿನ ಅಧ್ಯಕ್ಷರಾದ ಮಿ. ಜೋಸೆಫ್ ಬೆಪ್ಟಿಸ್ಟರು ತಮ್ಮ ಅಧ್ಯಕ್ಷ ಪದವಿಗೆ ರಾಜಿನಾಮೆಯನ್ನು ಕೊಟ್ಟಿದ್ದರಿಂದ ಮಿ. ಯುಲ್. ಆರ್. ಟಿಯರ್‌ಸಿ ಇವರನ್ನು ಅಧ್ಯಕ್ಷರಾಗಿ ಚುನಾಯಿಸಲಾಗಿದೆ.

ಖಾದಿಯ ಪೋಶಾಕು:—ಕರಾಚಿಯ ಮುನ್ಸಿಪಾಲಿಟಿಯವರು ತಮ್ಮ ನೌಕರರಿಗೆ ಖಾದಿಯಿಂದ ಮಾಡಿದ ದುಸ್ತನ್ನೆ ಒದಗಿಸತಕ್ಕದೆಂದು ನಿರ್ಧರಿಸಿದ್ದಾರೆ. ಅಲ್ಲದೆ ಈ ಮುನ್ಸಿಪಾಲಿಟಿಯೊಳಗಿನ ವೇಶ್ಯಾಗೃಹಗಳನ್ನು ಪಟ್ಟಣದ ಹೊರಗೆ ಇರಗೊಡಿಸುವಂತೆ ಮಾಡಲು ಆಲೋಚಿಸುವುದಕ್ಕೆ ಒಂದು ಕಮ್ಮಿಟಿಯು ನೇಮಕವಾಗಿದೆ. ಲಾರ್‌ಖಾನ್ ಸುಕ್ಕೂರ್ ಮತ್ತು ಹೈದರಾಬಾದ ಮುನ್ಸಿಪಾಲಿಟಿಗಳು ಸಹ ತಮ್ಮ ನೌಕರರಿಗೆ ಖಾದಿ ಉಡುಪನ್ನೆ ಒದಗಿಸತಕ್ಕದೆಂದು ನಿಶ್ಚಯಿಸಿದ್ದಾರೆ.

ಕುಮಟಾ:—ಕಾನಡಾ ವೃತ್ತ ಪತ್ರಿಕೆಯು ಪೋಲೀಸ ಅಧಿಕಾರಿಗಳ ಮೇಲೆ ಲೇಖ ಬರೆದುದಕ್ಕಾಗಿ ಮೆಜಿಸ್ಟ್ರೇಟರು ರೂ. ೧೫೦ ದಂಡವನ್ನು ಮತ್ತು ಒಂದು ದಿನ ಸಾದಾ ಶಿಕ್ಷೆಯನ್ನು ವಿಧಿಸಿದ್ದರು. ಆದರೆ ಜಜ್ಜ ಸಾಹೇಬರು ಅಧಿಕಾರಿಗಳ ಅಪಮಾನವಾಗುವುದಿಲ್ಲವೆಂದು ಹೇಳಿ ಶಿಕ್ಷೆಯನ್ನು ರದ್ದುಪಡಿಸಿರುವರು.

ಧಾರವಾಡ:—ವಿಜಯದ ಸಂಪಾದಕರಾದ ಶ್ರೀಯುತ ಅದಬುದ್ಧಿಯವರಿಗೆ ಹೈಕೋರ್ಟಿನ ಅಪಮಾನಮಾಡಿದರೆಂಬ ಬಗ್ಗೆ ಒಂದು ತಿಂಗಳ ಶಿಕ್ಷೆ ಅಥವಾ ೨೦೦ ರೂಪಾಯಿ ದಂಡವಾಗಿರುತ್ತದೆ. ಆದರೆ ಅದಬುದ್ಧಿಯವರು ದಂಡ ಕೊಡಲು ಒಪ್ಪದೆ ತುರಂಗವಾಸವನ್ನು ಅಂಗೀಕರಿಸಿದರು.

ಖಾದಿಯ ಮೇಲೆ ಕರಭಾರ:—೧೮೯೬ನೇ ಇಸವಿಯ ಕೋಟನ್ ಡ್ಯೂಟಿ ರೆಗ್ಯುಲೇಶನಿನ ಸೆಕ್ಷನ್‌ನನ್ನು ಅನುಸರಿಸಿ ಮೈಸೂರು ಸರಕಾರದವರು ಕಳೆದ ಜನವರಿಯಿಂದ ಖಾದಿಯ ಮೇಲೆ ಕರವನ್ನು ಹೊರಿಸಿದ್ದಾರಂತೆ. ಆದರೆ ಚರಕದಲ್ಲಿ ನೂಲನ್ನು ಮಾಡಿ, ಕೈಮಗ್ಗಗಳಲ್ಲಿ ತಯಾರಿಸಲ್ಪಡುವ ಖಾದಿಗೆ ಕರವನ್ನು ಹೊರಿಸಲಾಗುವುದಿಲ್ಲವಂತೆ.

ಮೈಸೂರು:—ಅಗ್ನಿಸ್ತಂಭನ ವಿದ್ಯೆಯನ್ನರಿತ ಮಂತ್ರಗಾರನೊಬ್ಬನು ಕಳೆದ ಬುಧವಾರ ಪಾಸಬಂಗಲೆಯಲ್ಲಿ ೨ ಬಂಡಿ ಸೌದೆಯನ್ನೊಟ್ಟಿಸಿ, ಬೆಂಕಿ ಹೊತ್ತಿಸಿ ಮಹಾಜ್ವಾಲೆಯಿಂದ ಅದು ಉರಿಯುತ್ತಿರುವಾಗ್ಗೆ ಶ್ರೀಮನ್ಮಹಾರಾಜರವರ ಸವಾರಿಯು ಬಂದು ಪರಾಮರಿಸುತ್ತಿರಲು ಮಂತ್ರಿಸುತ್ತಲಿದ್ದು ಯಾರು ಬೇಕಿದ್ದರೂ ಅಗ್ನಿಯನ್ನು ಪ್ರವೇಶಮಾಡಬಹುದೆಂದು ಧೈರ್ಯಪಡಿಸಿ ಹೇಳಿದುದರ ಮೇಲೆ ಅಲ್ಲಿನ ನೌಕರ ಮನೆಯವರಲ್ಲಿ ಕೆಲವರು ತುಳಿದು ನಡೆದುಹೋದ ಹಾಗೂ ಯಾರ ಕಾಲು ಸುಡದೆ ತಣ್ಣಗಿದ್ದಂತೆಯೂ ಜ್ವಾಲೆಯು ಹೆಚ್ಚಾದಾಗ ಆತನು ನಿಂತು ಹೂತ್ಕರಿಸಿದರೆ ಅದು ಅಡಗುತ್ತಿದ್ದಿತೆಂತಲೂ, ಬಳಿಕ ಆತನು ಉರಿಯ ಮಧ್ಯದಲ್ಲಿ ಒಂದು ತೆಂಗಿನ ಮಟ್ಟೆಯನ್ನು ಹಾಸಿ ಅದರ ಮೇಲೆ ಮಲಗಿ ಸ್ವಲ್ಪ ಕಾಲವಿದ್ದು ಎದ್ದನೆಂತಲೂ ಇದನ್ನು ನೆರೆದಿದ್ದ ಜನರೆಲ್ಲರೂ ನೋಡಿ ವಿಸ್ಮಿತರಾದರೆಂತಲೂ ಕೇಳಿದೆವು. —ಮೈ. ಸ್ಟಾರ್.

ಹೊಸ ಕಾನೂನು:—ಸ್ವಾಸ್ಥ್ಯಭಂಗವನ್ನು ಉಂಟು ಮಾಡಿ, ಆಕ್ಷೇಪಕರವೆಂದು ಕಂಡ ಮೀಟಿಂಗುಗಳಿಗೆ ಹಾಜರಾದವರನ್ನು ಶಿಕ್ಷೆ ಮಾಡಲು ಅನುಕೂಲವಾಗುವ ಒಂದು ಕಾನೂನನ್ನು ಜಾರಿಗೆ ತರುವ ಪ್ರಯತ್ನವು ನಡೆಯುತ್ತದೆಂದು ದಿಲ್ಲಿಯಲ್ಲಿ ಸುದ್ದಿಯದೆಯಂತೆ. ಇದು ರೌಲೆಟ್ ಎಕ್ಟಿಗಿಂತ ಅನಿಷ್ಟ ಸ್ವರೂಪದ ಕಾನೂನಂತೆ.

ಮಹಾರಾಜ ಲೋಕರಾಮರು:—ಹೈದರಾಬಾದಿನ ಹಿಂದೂ ಪತ್ರದ ಸಂಪಾದಕರಾದ ಈ ಗೃಹಸ್ಥರು ಎರವಾಡ ಜೈಲಿನಲ್ಲಿ ಉಪವಾಸದಿಂದ ಕಾಲ ಕಳೆಯುತ್ತಿದ್ದಾರೆ. ತನಗೆ ಬ್ರಾಹ್ಮಣರಿಂದ ತಯಾರಿಸಿದ ಆಹಾರವನ್ನು ಮಾತ್ರ ಕೊಟ್ಟರೆ ತಾನು ಸ್ವೀಕರಿಸುವೆನೆಂದು ಇವರು ಸೂಚಿಸಿದ್ದಾರೆ.

ಹರಿದ್ವಾರ:—ಇಲ್ಲಿಯ ಸಾಧುಗಳು ಭಾಷಣಗಳನ್ನು ಮಾಡಬಾರದೆಂದು ಸರಕಾರದ ಅಪ್ಪಣೆಯಾಗಿದೆ. ಆದರೆ ಇವರು ಆಜ್ಞೆಯನ್ನು ಉಲ್ಲಂಘಿಸುತ್ತಿದ್ದಾರೆ.

ಹಿಂದುಸ್ಥಾನದ ಶೃಂಗಾರಿಕೆಯ ಪ್ರದರ್ಶನ:—ಹಿಂದೂಸ್ಥಾನದ ಕಲಾಕೌಶಲ್ಯಗಳಿಗೆ ಸಂಬಂಧಪಟ್ಟ ಪ್ರದರ್ಶನವು ಬರುವ ಒಕ್ಟೋಬರ ತಿಂಗಳ ಮಧ್ಯ ಭಾಗದಲ್ಲಿ ಕರಾಚಿಯಲ್ಲಿ ಜರಗುವುದು.

ಮಹಾತ್ಮರ ಬಂಧನ ದಿನಾಚರಣೆ:—ಕಳೆದ ತಾ. ೧೮ರಲ್ಲಿ ಈ ದಿನಾಚರಣೆಯನ್ನು ಮುಂಬಯಿ ಕಲ್ಕತ್ತಾ ಅಹಮ್ಮದಾಬಾದ ಪಟ್ಟಣಗಳಲ್ಲಿ ಯೋಗ್ಯ ರೀತಿಯಲ್ಲಿ ನಡಿಸಲಾಯಿತು.

ಪ್ರೊಫೆಸರ ರಾಮಮೂರ್ತಿಯವರು:— ಇವರು ಹಿಂದುಸ್ಥಾನದಲ್ಲೆಲ್ಲಾ ತಿರುಗಾಡಿ ಅಲ್ಲಲ್ಲಿಯ ಸ್ಥಳಗಳಲ್ಲಿ ಶಾರೀರಕ ಶಿಕ್ಷಣವನ್ನು ಕೊಡುವ ಗರಡಿ ಮನೆಗಳನ್ನು ಸ್ಥಾಪಿಸುವವರಿದ್ದಾರೆ.

ಅಖಿಲ ಭಾರತ ಆಯುರ್ವೇದ ಪರಿಷತ್ತು:—ಬರುವ ತಾ. ೫, ೬, ೭ನೇ ತಾರೀಕುಗಳಲ್ಲಿ ರಾಜಮಹೇಂದ್ರಿಯಲ್ಲಿ ಈ ಪರಿಷತ್ತು ಜರಗುವುದು. ಈ ಪರಿಷತ್ತಿನ ಸಮಯ ಗಿಡಮೂಲಿಕೆಗಳು ನಾನಾ ತರದ ಔಷಧಿಗಳು ಚಿಕಿತ್ಸೆಯ ಶಸ್ತ್ರಗಳು ಹಳೇ ಆಯುರ್ವೇದ ಗ್ರಂಥಗಳು ಇವುಗಳ ಪ್ರದರ್ಶನವೂ ನಡಿಯಲಿಕ್ಕಿದೆ.

ಪರಸ್ಪರ ಸಹಾಯಕ ಸಂಘಗಳು:—ಮೈಸೂರಿನಲ್ಲಿ ನಾನಾ ತರದ ಅವ್ಯವಸ್ಥೆಯ ಕಾರಣಗಳಿಂದ ೨೮ ಪರಸ್ಪರ ಸಹಾಯಕ ಸಂಘಗಳು ವಜಾಮಾಡಲ್ಪಟ್ಟವು.

ಮಳೆ:—ತಿರುವಾಂಕೂರಿನಲ್ಲಿ ವಿಶೇಷ ಮಳೆಯು ಸುರಿದು ಹೆಚ್ಚಿನ ನಷ್ಟ ಉಂಟಾಗಿದೆ.

ಅಹಮ್ಮದಾಬಾದ:—ಹಳೇ ಮುನ್ಸಿಪಾಲಿಟಿಯವರ ಮೇಲೆ ಮಾಡಿದ ಖಟ್ಲೆಯು ವಿಚಾರಕ್ಕೆ ಬಂದು ೧೯ ಮಂದಿ ಮೆಂಬರರೂ ಕೂಡಿ ಒಂದೇ ಜವಾಬಿಯನ್ನು ಕೊಟ್ಟಿರುವರು. ಅದರಲ್ಲಿ ಅವರು "ನಾವು ಮುನ್ಸಿಪಾಲಿಟಿಯ ಕಾಯದೆಯ ವಿರುದ್ಧವಾಗಿ ನಡೆದದ್ದೂ ಕಾಯದೆ ಬಿಟ್ಟು ಪ್ರಾಥಮಿಕ ಶಾಲೆಗಳ ವ್ಯವಸ್ಥೆ ಮಾಡಿದ್ದೂ ನಮಗೇನೂ ತೋರುವುದಿಲ್ಲ. ಇದರಿಂದ ಹಣವನ್ನು ದುರುಪಯೋಗ ಮಾಡಿದ್ದೇವೆಂಬ ಆರೋಪಕ್ಕೆ ನಾವು ಬಾಧ್ಯರಲ್ಲ. ಯಾಕಂದರೆ ಶಾಲೆಗಳ ಸಂಬಂಧವಾದ ಅಂದಾಜ ಪತ್ರಿಕೆಯನ್ನು ಸರಕಾರದವರು ನಾಮಂಜೂರ ಮಾಡಲಿಲ್ಲ" ಎಂದು ತಿಳಿಸಿರುವರು.

ಐರ್ಲೆಂಡಿನ ಪ್ರಜಾಪಕ್ಷದ ಮುಖಂಡರಾದ ಡಿವ್ಯಾಲರರು ಭರತಖಂಡದ ದೇಶಾಭಿಮಾನಿಗಳಿಗೆ ಕಳುಹಿಸಿದ

ಸಂದೇಶ

"ನಮ್ಮ ಸ್ವದೇಶವನ್ನು ಸ್ವತಂತ್ರವಾಗಿ ಮಾಡಿಕೊಳ್ಳಲು ನಮ್ಮಲ್ಲಿ ಅವತರಿಸಿದ ದೈವವಿಭೂತಿಯು ಪಾರತಂತ್ರ್ಯದಿಂದ ಬಿಡುಗಡೆಯಾಗಿ ಸ್ವತಂತ್ರವನ್ನು ಹೊಂದಲು ನಿಮ್ಮಲ್ಲೂ ಉಂಟಾಗಿದೆಂಬುದಾಗಿ ನಾನು ನಂಬುತ್ತೇನೆ. ಅಮೇರಿಕನ್ನರಂತೆಯೂ, ಐರಿಶರಂತೆಯೂ ನೀವೂ ಮುಂದಕ್ಕೆ ಬರಬೇಕಾಗಿದೆ. ನಿಮ್ಮ ಹೋರಾಟದ ಎಲ್ಲಾ ಸ್ಥಿತಿಯಲ್ಲೂ ನೀವು ದೃಢಮನಸ್ಕರಾಗಿ ಜಯದ ಹಾದಿಯನ್ನೆ ನೋಡುತ್ತ ಸ್ವತಂತ್ರವನ್ನು ಹೊಂದುವುದು ನಿಮ್ಮ ಕರ್ತವ್ಯವಾಗಿದೆ. ಒಬ್ಬ ಗ್ರಂಥಕಾರನು ಬ್ರಿಟನು ಐರ್ಲೆಂಡನ್ನು ಜಯಿಸಿರುವುದೆಂದು ಹೇಳುವನು. ಆದರೆ ಐರ್ಲೆಂಡನ್ನು ಎಂದೂ ಜಯಿಸಲಿಲ್ಲ. ಮತ್ತು ಇಂಗ್ಲೆಂಡು ಜಯವನ್ನು ಹೊಂದಿಲ್ಲವೆಂದು ನಾನು ಅನ್ನುತ್ತೇನೆ. ತಮ್ಮ ಧ್ಯೇಯವನ್ನು ಕೊನೆಗಾಣಿಸಲು ಅಮೇರಿಕನ್ನರಂತೆ ಯಾವ ಜನರು ತಮ್ಮ ಪ್ರಾಣಗಳನ್ನು ಕೂಡ ಅರ್ಪಿಸಲು ದೃಢಸಂಕಲ್ಪದಿಂದಿರುವರೊ, ಯಾವ ಜನರು ತಮ್ಮ ದೃಢನಿಶ್ಚಯವನ್ನು ಕಾರ್ಯದಲ್ಲಿ ವ್ಯಕ್ತಪಡಿಸುವರೊ, ಯಾವ ಜನರು ಉದಾತ್ತ ಧ್ಯೇಯಕ್ಕಾಗಿ ಹೋರಾಡಿ ಪ್ರಾಣವನ್ನು ಕೊಡಲು ಅನುವಾಗಿರುವರೊ ಅವರನ್ನು ಸೋಲಿಸಲು ಆಗದು. ಯಾವ ಜನರು ತಾವು ಉದ್ದೇಶಿಸಿದ ಧ್ಯೇಯಕ್ಕೆ ವ್ಯತಿಕ್ರಮವಾಗಿ ನಡೆದು ಆಶಾಭಂಗರಾಗಿ ಹೋಗುವರೊ ಅವರನ್ನು ಹಿಮ್ಮೆಟ್ಟಬಹುದು. ಐರ್ಲೆಂಡು ಎಂದೂ ಈ ಸ್ಥಿತಿಗೆ ಮುಟ್ಟಲಿಲ್ಲ. ಮತ್ತು ಈಗ ಅದು ಹೊಂದುವ ಪ್ರಗತಿಯನ್ನು ನೋಡಿದರೆ ಅದು ಎಂದಿಗೂ ನಿರಾಶೆಯನ್ನು ಹೊಂದುವ ಸ್ಥಿತಿಗೆ ಬರಲಿಕ್ಕಿಲ್ಲವೆಂದು ಒಡೆದು ಕಾಣಿಸುತ್ತದೆ. ಹಿಂದಿಯರೆ, ನಾವು ಐರಿಶ್ ಜನರು ಅಲ್ಪ ಸಂಖ್ಯಾಕರಾಗಿದ್ದೇವೆ, ಮತ್ತು ಬ್ರಿಟನಿಗೆ ತೀರ ಸಮೀಪದಲ್ಲಿದ್ದೇವೆ. ಆದರೂ ಅಧೀರರಾಗಿಲ್ಲ. ನೀವು ಕೋಟಿ ಸಂಖ್ಯೆಯಿಂದಿದ್ದೀರಿ, ನಿಮ್ಮ ದೇಶವು ಬ್ರಿಟನ್ನಿನಿಂದ ಸಾವಿರಾರು ಮೈಲು ದೂರವಿದೆ. ಈ ಪರಿಸ್ಥಿತಿಯಲ್ಲಿ ನೀವು ಎದೆಗುಂದಲು ಯಾವ ಕಾರಣವೂ ಇಲ್ಲ. ಹಿಂದೂಸ್ಥಾನದ ಸಂಪತ್ತನ್ನು ಸಂಪೂರ್ಣವಾಗಿ ಸೆಳಕೊಂಡು ಅಲ್ಲಿಯ ನಿವಾಸಿಗಳನ್ನು ರಕ್ತಹೀನರಾಗಿ ಮಾಡಬೇಕೆಂದು ಕೆಲವುವರುಷಗಳ ಹಿಂದೆ ಪಾರ್ಲಿಮೆಂಟಿನ ಸಭಾಸದನೊಬ್ಬನು ಸೂಚಿಸಿದ್ದನ್ನು ಸ್ಮರಣೆಯಲ್ಲಿಡಿರಿ. ವಿಲಿಯಮ್ ಡಿಗ್‌ಬಿಯವರು ಇದೇ ಸೂತ್ರಗಳನ್ನು ಸಾಂಗೋಪಾಂಗವಾಗಿ ತಮ್ಮದೊಂದು ಪುಸ್ತಕದಲ್ಲಿ ಬರೆದಿರುತ್ತಾರೆ. ಈ ಪುಸ್ತಕವು ಪ್ರಕಟವಾಗಿದೆ. ನೀವೆಲ್ಲರೂ ಇದನ್ನು ಓದಬೇಕಾಗಿ ನಾನು ಗ್ರಹಿಸುತ್ತೇನೆ. ಬ್ರಿಟಿಷರ ಅನ್ಯಾಯಕರವಾದ ರೀತಿಗಳನ್ನೆಲ್ಲಾ ಈ ಲೇಖಕನು ಪ್ರಕಾಶಮಾನವಾದ ತರದಲ್ಲಿ ಹೊರಗೆಡಹಿದ್ದಾನೆ. ಈ ಲೇಖಕನು ಹೇಳಿದ ಒಂದು ಸಂಗತಿಯಲ್ಲಿ ಮಾತ್ರ ನಾನು ಅವನ ಅಭಿಪ್ರಾಯವನ್ನು ಒಪ್ಪುವುದಿಲ್ಲ. 'ಹಿಂದುಸ್ಥಾನವನ್ನು ಹಿಂದುಸ್ಥಾನದ ಒಳ್ಳೇತಕ್ಕಾಗಿಯೆ ಬ್ರಿಟಿಷರು ಆಳುತ್ತಾರೆ'ಂದು ಈತನ ಹೇಳಿಕೆ. ಬ್ರಿಟನ್ ದೇಶವು ಹಿಂದಿಗಳ ಕಲ್ಯಾಣಕ್ಕಾಗಿ ಹಿಂದೂದೇಶದ ಕಾರಭಾರವನ್ನು ನಡಿಸುತ್ತದೆ. ಅಲ್ಲದೆ, ಹಿಂದಿಗಳ ಆಕಾಂಕ್ಷೆಗಳಿಗೆ ಸರಿಯಾಗಿ ಆಳುತ್ತದೆ ಎಂಬ ವಿಷಯವನ್ನು ಲೋಕದ ಯಾವ ಸ್ತ್ರೀಯಾಗಲಿ ಪುರುಷನಾಗಲಿ ನಿಜವೆಂದು ನಂಬಿಯುವಂತಿದೆಯೋ? ನೀವು ಸತ್ಯವಾಗಿ ಬ್ರಿಟಿಷರು ನಿಮ್ಮ ಲಾಭಕ್ಕಾಗಿ ಆಳುವರೆಂದು ಭ್ರಮೆಗೊಂಡಿದ್ದೀರೋ? ನೀವು ಹಿಂದೂಸ್ಥಾನದ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯನ್ನು ಉದ್ಧರಿಸುವಂತೆ ತಾವು ಆಳುತ್ತೇವೆಂದು ಬ್ರಿಟಿಷರು ಹೇಳುವ ಬರಿ ಮಾತುಗಳನ್ನು ನಂಬುವ ಸತ್ಯಂಬಟ್ಟೆರಾಗಿದ್ದೀರೋ? ಇಂಗ್ಲೆಂಡು ನಿಜವಾಗಿ ಹಿಂದೂಸ್ಥಾನದ ಅವನತಿಯನ್ನು ಕುರಿತು ಚಿಂತಿಸಿ, ನಿಮ್ಮ ದೇಶವನ್ನು ಉದ್ಧರಿಸಲು ಹೆಣಗುತ್ತದೆಂದು ನೆನಸುತ್ತೀರೋ? ಬ್ರಿಟಿಷರ ಉದಾತ್ತ ಮತ್ತು ಸುಬದ್ಧ ಉದ್ದೇಶವನ್ನು ನಂಬಿಕೊಂಡಿರುವವರು ನಿಮ್ಮಲ್ಲಿ ಕೆಲವರು ಇರುವರೆಂಬುದನ್ನು ಒಪ್ಪಿ ನಾನು ಅಂಥವರಿಗೆ ಒಂದು ಪ್ರಶ್ನೆಯನ್ನು ಕೇಳಲು ಇಚ್ಛಿಸುತ್ತೇನೆ. 'ತಮ್ಮ ಸ್ಥಿತಿಯನ್ನು ಉದ್ಧರಿಸಬೇಕೆಂದು ಯಾವುದಾದರೊಂದು ರಾಷ್ಟ್ರವು ಪರರಾಷ್ಟ್ರದ [illegible] ಶರಣಾಗತವಾದದ್ದು ಲೋಕದಲ್ಲಿ ಎಲ್ಲಿಯಾದರೂ ಇದೆಯೇ? ನಾನು ಬ್ರಿಟಿಷ ದೇಶಕ್ಕೆ ವಿಶೇಷವಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅದು ಯಾವುದೆಂದರೆ, ಈ ವರೆಗೆ ಬ್ರಿಟನು ಭೂಲೋಕದ ಯಾವಕಡೆಯಲ್ಲಿ ಈ ತರದ ಉದಾರತ್ವವನ್ನು, ಸ್ವಾತಂತ್ರ್ಯವನ್ನು ತೋರಿಸಿದೆ.

ಅನುಕ್ರಮಣಿಕೆ

ಅಗ್ರಲೇಖ—
ಹೊಸ ಭೂತ! ೬
ಸ್ಫುಟವಿಚಾರಗಳು—
೧, ೨, ೩, ಮುನ್ಸಿಪಾಲಿಟಿಗಳ ಚಟುವಟಿಕೆ. . . . . "
೪. ಖಾದಿಯ ಪ್ರಭಾವ . . . . . "
೫. ಯುವರಾಜರು . . . . . "
ಮಂಗಳೂರು—
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ . . . ೩
ದಕ್ಷಿಣ ಕನ್ನಡ—ಕುಂಬಳೆ, ಪೆರ್ಡಾಲು ಉಪ್ಪಿನಂಗಡಿ . . . ೪
ಹೊಲೆಯರು ಪಂಚಮರು ಅಥವಾ ಆದಿದ್ರಾವಿಡರು . . . "
ಅಸ್ಪೃಶ್ಯತೆಯ ನಿವಾರಣೆ . . . "
ಐರ್ಲೆಂಡಿನ ಪ್ರಜಾಪಕ್ಷದ ಮುಖಂಡರಾದ ಡಿವ್ಯಾಲರರು . . . "
ಭರತ ಖಂಡದ ದೇಶಾಭಿಮಾನಿಗಳಿಗೆ ಕಳುಹಿಸಿದ ಸಂದೇಶ . . . ೩
ಸ್ವರಾಜ್ಯ ಸಂಪಾದನೆಗೆ ಖಾದಿ ಪ್ರಚಾರ . . . ೪

ಸ್ವದೇಶಾಭಿಮಾನಿ.

ಶಕ ೧೮೪೪ ಆಷಾಢ ಬ ೧೨ ಯು ಶುಕ್ರವಾರ.

ಹೊಸ ಭೂತ!

ಹಿಂದುಸ್ಥಾನದಲ್ಲಿ ನೆಲೆಗೊಂಡಿರುವ ಬ್ರಿಟಿಷ್ ಸಾಮ್ರಾಜ್ಯದ ಸ್ತೋತ್ರಗಳನ್ನು ಹಾಡುವಾಗ ಭಕ್ತಮಂಡಲಿಯವರು ಇದರ ಅನೇಕ ಗುಣಗಳನ್ನು ಹೊಗಳುತ್ತಾರೆ. ಮೊದಲಿದ್ದ ಮಹಮ್ಮದೀಯ ರಾಜ್ಯಕ್ಕೂ, ಈಗಿನ ಬ್ರಿಟಿಷ್ ರಾಜ್ಯಕ್ಕೂ ತುಲನೆಮಾಡಿ ಬ್ರಿಟಿಷ್ ರಾಜ್ಯದ ಭಕ್ತಮಂಡಲಿಯವರು, ಈಗಿನ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಾಕ್ ಸ್ವಾತಂತ್ರ್ಯವಿದೆ, ಸಭಾಸ್ವಾತಂತ್ರ್ಯವಿದೆ, ಮತಸ್ವಾತಂತ್ರ್ಯವಿದೆ, ಮುದ್ರಣಸ್ವಾತಂತ್ರ್ಯವಿದೆ ಎಂಬುದಾಗಿ ಅನೇಕ ಸ್ವಾತಂತ್ರ್ಯಗಳ ಅಸ್ತಿತ್ವವನ್ನು ಪ್ರತಿಪಾದಿಸುತ್ತಾರೆ. ಈ ಭಕ್ತಮಂಡಲಿಯವರು ಬ್ರಿಟಿಷ್ ಸಾಮ್ರಾಜ್ಯದ ಸ್ತೋತ್ರಗಳನ್ನು, ಆ ಸಾಮ್ರಾಜ್ಯದ ಗುಣಾತಿಶಯದ ಪ್ರಕಾಶವು ಹೃದಯಾಕಾಶದಲ್ಲಿ ಬಿದ್ದದರಿಂದ ಉಲ್ಲಸಿತರಾಗಿ ತಾವಾಗಿಯೆ ಹಾಡಿದ್ದಿರಲಿ, ಅಥವಾ ಶಾಂತಸ್ವರೂಪಿಯಾದ ನಾರಾಯಣನು ಶಂಖ, ಚಕ್ರ, ಗದಾಂಕಿತನಾಗಿ ಮುಂದೆ ಪ್ರಕಟನಾದ ಕಾರಣ ಆನಂದಭರದಿಂದ ಬೆರಗಾಗಿ ವಾಙ್ಮೂಢನಾದ ಧ್ರುವನಲ್ಲಿ ಪರಮಾತ್ಮನ ಶಂಖ ಸ್ಪರ್ಶದಿಂದ ಹೇಗೆ ಸ್ತೋತ್ರ ಪ್ರವಾಹವು ಹೊರಟಿತೊ ಹಾಗೆಯೆ ಈ ಭಕ್ತರಲ್ಲಿ ನೋಕರಶಾಹಿಯ ಕೃಪಾಸ್ಪರ್ಶದಿಂದ ಬ್ರಿಟಿಷ್ ರಾಜ್ಯಪದ್ಧತಿಯ ಸ್ತುತಿಸಮುದ್ರವು ಉಕ್ಕುತ್ತಿದ್ದದ್ದಿರಲಿ, ಅಂತು ಬ್ರಿಟಿಷ್ ಸಾಮ್ರಾಜ್ಯದ ವಾಸ್ತವ-ಅವಾಸ್ತವ ಗುಣಗಳನ್ನು ಹೊಗಳುವ ದೀಕ್ಷೆಯನ್ನು ಹಲವರು ವಹಿಸಿರುತ್ತಾರೆ. ಮತ್ತು ಆ ದೀಕ್ಷೆಯ ಪ್ರಭಾವದಿಂದ ಹಿಂದುಸ್ಥಾನದ ವಾತಾವರಣವನ್ನು ಬ್ರಿಟಿಷ್ ಗುಣಾನುವಾದಗಳಿಂದ ತುಂಬಿಸುತ್ತಿದ್ದಾರೆಂಬುದಕ್ಕೆ ಸಂಶಯವಿಲ್ಲ. ಈ ರೀತಿಯಾಗಿ ಅಂಧಶ್ರದ್ಧೆಯಿಂದ ಸ್ತುತಿಮಾಡುವವರು ಹಿಂದುಸ್ಥಾನದಲ್ಲಿ ಬ್ರಿಟಿಷ್ ರಾಜ್ಯವು ಹಿಂದಿಗಳಿಗೆ ಮುದ್ರಣ ಸ್ವಾತಂತ್ರ್ಯವನ್ನು ಕೊಟ್ಟಿದೆ ಎಂಬುದಾಗಿ ಹೇಳುತ್ತಿರುತ್ತಾರೆ. ನಿಜವಾಗಿ ಹೇಳುವುದಾದರೆ, ಹಿಂದೂಸ್ಥಾನದಲ್ಲಿ ಮುದ್ರಣ ಸ್ವಾತಂತ್ರ್ಯವು ಇಲ್ಲ. ಒಬ್ಬ ಉತ್ತಮನಾದ ಗಾಯಕನನ್ನು ಪೆಟ್ಟಿಗೆಯಲ್ಲಿ ತುಂಬಿಸಿ ಅಥವಾ ಕುದುರೆಗೆ ಹಾಕುವಂತೆ ಅವನ ಬಾಯಿಗೆ ತೊಬರಿಯನ್ನು ಹಾಕಿ ಸಂಗೀತವನ್ನು ಹಾಡಲು ಹೇಳಿದರೆ ಅವನು ಏನು ಹಾಡಿಯಾನು! ಹಿಂದುಸ್ಥಾನದ ಮುದ್ರಣ ಸ್ವಾತಂತ್ರ್ಯದ ಹಾಡು ಕೂಡ ಹೀಗೆಯೆ ಸರಿ. ಹಿಂದುಸ್ಥಾನದಲ್ಲಿ ಮುದ್ರಣ ಸ್ವಾತಂತ್ರ್ಯವನ್ನು ತಡೆಗಟ್ಟುವ ಎಷ್ಟೊ ಪ್ರತಿಬಂಧಕಗಳನ್ನು ಕಾಯಿದೆ ಪಂಡಿತರು ತಯಾರಿಸಿಟ್ಟಿರುವರು. ಪ್ರೆಸ್ ಎಕ್ಟು ಜಾರಿಯಲ್ಲಿರುವಾಗ ಪತ್ರಗಳಿಗೆ ಮತ್ತು ಪ್ರಕಾಶಕರಿಗೆ ಎಷ್ಟು ತೊಂದರೆಗಳು ಬಂದೊದಗಿದವು. ಎಷ್ಟು ಸಂಕಷ್ಟಗಳನ್ನು ಅನುಭವಿಸಬೇಕಾಯಿತು ಮುಂತಾದ ವಿಷಯಗಳ ವಿಸ್ಮರಣವು ಯಾರಿಗೂ ಉಂಟಾಗಿಲ್ಲ. ವಂಗಭಂಗದ ಅನಂತರ ಪ್ರೆಸ್ ಎಕ್ಟಿನ ಈ ಪಿಶಾಚಿಕೆಯು ಜನ್ಮವೆತ್ತಿದ್ದಾದರೂ ಅದರ ಲೀಲೆಗಳಿಂದ ದೇಶದೊಳಗಿನ ಮುದ್ರಣದ ನರಗಳು ಹೇಗೆ ಒಟ್ಟಿಗೆ ಬಿಗಿಯಲ್ಪಡಹತ್ತಿದವೆಂಬುದರ ಚಿತ್ರವು ಮೊನ್ನೆ ಮೊನ್ನೆ ತನಕ ಎಲ್ಲ ಜಗತ್ತಿನ ದೃಷ್ಟಿಪಥದ ಮುಂದೆ ಕುಣಿಯುತ್ತಿದ್ದ ಕಾರಣ ಅದನ್ನು ಪುನಃ ವಿವರಿಸಬೇಕಾದ ಅಗತ್ಯವಿಲ್ಲ. ಪ್ರೆಸ್ ಎಕ್ಟಿನ ಈ ಪಿಶಾಚಿಕೆಯನ್ನು ಹೊಂಡದಲ್ಲಿ ಹಾಕಿ ಹೂಳಿದರೂ ಹಿಂದೀ ಮುದ್ರಣದ ಸಂಕಟವು ನಷ್ಟವಾಗಿದೆ ಎಂದು ಮಾತ್ರ ನೆನಸಕೂಡದು. ಈಗ ಎಷ್ಟೊ ವರುಷಗಳಿಂದ ಹಿಂದಿಗಳಿಗೆ ಸುಪರಿಚಿತವಾಗಿದ್ದ ರಾಜದ್ರೋಹದ ಕಲಮು, ವ ಜಾತಿದ್ವೇಷಗಳ ಕಲಮು, ಬಾದಶಹರ ವಿರುದ್ಧವಾಗಿ ಯುದ್ಧೋದ್ಯೋಗದ ಕಲಮು ಇತ್ಯಾದಿ ನೂರಾರು ಜಿಗಳಗಳು ಹಿಂದಿ ಮುದ್ರಣದ ರಕ್ತವನ್ನು ಹೀರುತ್ತಿದ್ದಾವೆ ಎಂಬುದು ಯಾರಿಗೆ ಗೊತ್ತಿಲ್ಲದ ಸಂಗತಿ? ಒಂದು ಕಡೆಯಲ್ಲಿ ಪಿನಲ್ ಕೋಡಿನೊಳಗಿನ ೧೨೪ ಕಲಮು ಹಿಂದಿ ಪತ್ರಕಾರರ ಲೇಖನ ಸ್ವಾತಂತ್ರ್ಯದ ಕುತ್ತಿಗೆಯನ್ನು ಹಿಸುಕುತ್ತಿದೆ ಮತ್ತು ಇನ್ನೊಂದು ಕಡೆಯಲ್ಲಿ ಮಾನನಷ್ಟದ ದಾವೆಗಳಿಂದ ಅಧಿಕಾರಿಗಳು ಪತ್ರಿಕೆಗಳ ಕುತ್ತಿಗೆಗೆ ಪಾಶ ಹಾಕುತ್ತಿದ್ದಾರೆ. ಪ್ರೆಸ್ ಎಕ್ಟಿಗೆ ಜಲಸಮಾಧಿಯು ಸಿಕ್ಕಿದೆಯಾದರೂ ಮಾನನಷ್ಟದ ಹೊಸ ಭೂತವು ಅವತಾರವನ್ನೆತ್ತಿ ಲೇಖನ ಸ್ವಾತಂತ್ರ್ಯದ ಕಾಲುಗಳನ್ನು ಮುರಿಯಹತ್ತಿದೆ. ಇತ್ತಲಾಗೆ ಹಿಂದುಸ್ಥಾನದೊಳಗಿನ ಅಧಿಕಾರಿಗಳು ಹಿಂದಿ ಪತ್ರಕಾರರ ಮೇಲೆ ಮಾನನಷ್ಟದ ದಾವೆಗಳನ್ನು ತರುವ ಸರಾಗವಾದ ಕ್ರಮಗಳನ್ನಿಟ್ಟಿದ್ದಾರೆ. ಅಸಾಮಿಯಾ ಪತ್ರದ ಮೇಲೆ ಖಟ್ಲೆಯು ನಡೆದು ಅದರಲ್ಲಿ ಪತ್ರಕಾರರಿಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ಕಲಕತ್ತೆಯ ಸರ್ವೆಂಟ್ ಎಂಬ ಪತ್ರದ ಮೇಲೆ ಡೆಪ್ಯುಟಿ ಪೋಲೀಸ ಕಮಿಶನರರಾದ ಮಿ. ಕಿಡ-ಇವರು ಖಟ್ಲೆಯನ್ನು ಮಾಡಿ, ಪತ್ರಿಕೆಯ ಸಂಪಾದಕರಿಗೂ, ಮುದ್ರಕರಿಗೂ ದಂಡವು ಮಾಡಲ್ಪಟ್ಟಿದೆ; ದಂಡವನ್ನು ಭರಾಯಿಸದೆ ಇದ್ದರೆ ಶಿಕ್ಷೆಯು ವಿಧಿಸಲ್ಪಟ್ಟಿದೆ. ಅಸಾಮ, ಕಲಕತ್ತಾ ಕಡೆಗಳಲ್ಲಿ ಈ ರೀತಿಯಿಂದ ಪತ್ರಿಕೆಗಳ ಸ್ವಾತಂತ್ರ್ಯವನ್ನಪಹರಿಸಿ ಅಧಿಕಾರಿ ವರ್ಗವು ಪಂಜಾಬದಲ್ಲಿ "ಜಮೀನದಾರ"ವೆಂಬ ಪತ್ರದ ಮೇಲೆ ಖಟ್ಲೆಯನ್ನು ಮಾಡಿದೆ. ಪಂದ್ಯಾಟದಲ್ಲಿ ಉಮೇದ್ವಾರರು ಹೇಗೆ ಅಹಮಹಮಿಕೆಯಿಂದ ಒಬ್ಬರ ಮೇಲೊಬ್ಬರು ಬಿದ್ದು ತಮ್ಮ ಕೌಶಲ್ಯವನ್ನು ತೋರಿಸಲು ಯತ್ನಿಸುವರೊ ಹಾಗೆಯೆ ಹಿಂದೂಸ್ಥಾನದ ಅಧಿಕಾರಿಗಳಲ್ಲಿ ಸ್ಪರ್ಧೆಯು ಪ್ರಾರಂಭವಾಗಿರುವುದೊ ಎಂಬಂತೆ ನಮ್ಮ ಮದ್ರಾಸ ಸಂಸ್ಥಾನದಲ್ಲಿ ಸಹ ಮಾನನಷ್ಟದಾವೆಯ ಪ್ರಕರಣವು ಪ್ರಾರಂಭವಾಗಿದೆ. ಒಟ್ಟಪಾಲಮ್‌ದಲ್ಲಿ ಸಲ್ಪ ಸಮಯದ ಹಿಂದೆ ಗುಂಡುಗಳನ್ನು ಹಾರಿಸಿದ ಬಗ್ಗೆ ಮದ್ರಾಸದ "ಹಿಂದು" ಪತ್ರಿಯಕೆಲ್ಲಿ ಟೀಕೆಯು ಬಂದಿತ್ತು. ಆ ಬಗ್ಗೆ ಹಿಂದುಪತ್ರದ ಮೇಲೆ ಹಿಚಕೊಕ, ಪೋಲೀಸ ಸುಪರಿಂಟೆಂಡೆಂಟ ಮಲಬಾರ ಇವರು ಹಿಂದು ಪತ್ರಿಕೆಯ ಸಂಪಾದಕರ ಮತ್ತು ಮುದ್ರಕರ ಮೇಲೂ ಟಿ. ಪ್ರಕಾಶಂ ಜೋಸೆಫ ಮುಂತಾದವರ ಮೇಲೂ ೩೦೦೦೦ ರೂಪಾಯಿಯ ಮಾನನಷ್ಟದ ದಾವೆಯನ್ನು ಮಾಡಿದ್ದಾರೆ. ಸಾರಾಂಶ, ಒಂದೆ ಮಾತಿನಿಂದ ಹಿಂದಿ ಪತ್ರಕಾರರ ಲೇಖನಕ್ಕೆ ಅಧಿಕಾರಿಗಳು ಮಾನನಷ್ಟದ ದಾವೆಯ ರೂಪದಿಂದ ಕಡಿವಾಣವನ್ನು ಹಾಕತೊಡಗಿದ್ದಾರೆ.

ಹಿಂದುಸ್ಥಾನದ ಅಧಿಕಾರಿಗಳು ಇಲ್ಲಿಯ ಲೇಖನ ಸ್ವಾತಂತ್ರ್ಯಕ್ಕೆ ಈ ರೀತಿಯ ಪೀಡನೆಯನ್ನು ಕೊಡುತ್ತಿದ್ದಾರಷ್ಟೆ! ಈ ಮಧ್ಯದಲ್ಲಿ ಸರ ಮಾಯ್‌ಕೆಲ ಒಡ್ವಾಯರರು, ಪಂಜಾಬದ ಮಾಜಿ ಅಧಿಪತಿಗಳು, ಸರ್ ಶಂಕರನ್ ನಾಯರರ ಮೇಲೆ ಮಾನನಷ್ಟದ ದಾವೆಯನ್ನು ಮಾಡುವ ಬಗ್ಗೆ ನೋಟಿಸಿನ ಮುಖಾಂತರ ಪೂರ್ವ ಸೂಚನೆಯನ್ನು ಕೊಟ್ಟಿದ್ದಾರೆ. ಸರ್ ಶಂಕರನ್‌ರು "ಗಾಂಧಿ ಎಂಡ್ ಅನಾರ್ಕಿ" (ಗಾಂಧಿಗಳೂ ಅರಾಜಕತೆಯೂ) ಎಂಬದೊಂದು ಪುಸ್ತಕವನ್ನು ಬರೆದಿದ್ದರು. ಅದರಲ್ಲಿ ಗಾಂಧಿಗಳು ಅರಾಜಕತೆಯನ್ನು ಉಂಟುಮಾಡಿದ್ದಾರೆ ಎಂಬಿತ್ಯಾದಿ ರೂಪದಿಂದ ಹಿಂದುಸ್ಥಾನದ ಅಸಹಕಾರಿ ಚಳವಳದ ಮೇಲೆ ಬೇಕಷ್ಟು ಕೆಸರನ್ನು ಎರಚಿದ್ದಲ್ಲದೆ, ಅಧಿಕಾರಿಗಳನ್ನು ಸಂತೋಷಪಡಿಸಲು ಅಥವಾ ತಾನು ರಾಜ್ಯಕರ್ತರ ಅಂತಃಪುರದಲ್ಲಿ ಸೇರಿದವನೆಂದು ತೋರಿಸಿಕೊಳ್ಳಲು ಈ ನಾಯರರು ಹಿಂದಿಗಳ ಸಾತ್ವಿಕವಾದ ಆಕಾಂಕ್ಷೆಯನ್ನು ಒತ್ತಿಬಿಡಲು ಒದ್ದಾಡಿದ್ದಾರೆ. ತಾನು ಅಧಿಕಾರಿ ಕೃಪಾಪಾತ್ರನೆಂದು ತೋರಿಸಿಕೊಳ್ಳಲು ಸರ್ ನಾಯರರು ಈ ಮೇರೆಗೆ ಸುಸಂಧಿಯನ್ನು ಸಾಧಿಸಿದ್ದಾರಾದರೂ "ಪ್ರಾಯೋಗಚ್ಛತಿಯತ್ರ ಭಾಗ್ಯರಹಿತಸ್ತತ್ರೈವ ಯಾಂತ್ಯಾಪದಃ" ಎಂದರೆ ಭಾಗ್ಯಹೀನನು ಹೋದಲ್ಲಿ ಆಪತ್ತುಗಳು ಬರುತ್ತವೆ ಎಂದು ಭರ್ತೃಹರಿಯು ಹೇಳಿದ್ದಂತೆ ಶಂಕರನಾಯರರ ಇದೆ ಗ್ರಂಥದ ಲೇಖನದ ಮೇಲೆ ಸರ್ ಒಡ್ವಾಯರರು ಮಾನನಷ್ಟದ ದಾವೆಯನ್ನು ಮಾಡಲು ಸೊಂಟಕಟ್ಟಿದ್ದಾರೆ! ಎಕ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಪಂಜಾಬಪ್ರಕರಣದಿಂದ ನಾಯರರಿಗೆ ರಾಜೀಕೊಡಬೇಕಾಗಿ ಬಂತು; ಆ ಮೇಲೆ ಇಂಡಿಯಾ ಕೌನ್ಸಿಲಿಗೆ ಸೇರಿದರು; ಅಲ್ಲಿಯೂ ಹೆಚ್ಚು ಸಮಯ ನಿಲ್ಲದೆ ಹಿಂತಿರುಗಿ ಬಂದರು; ಅಷ್ಟರಲ್ಲಿ ಗಾಂಧಿ ಎಂಡ್ ಅನಾರ್ಕಿ ಎಂಬ ಪುಸ್ತಕವನ್ನು ಬರೆಯುವ ಉತ್ತಮ ಸಂಧಿಯನ್ನು ಸಾಧಿಸಿದರು; ಅದು ಕೂಡ ಒಡ್ವಾಯರರ ಫಿರ್ಯಾದಿಯಿಂದ ನಿಷ್ಫಲವಾಗುವ ದಾರಿಗೆ ಬಂದಂತೆ ತೋರುತ್ತದೆ. ಸಾರಾಂಶ, ಸರ್ ಶಂಕರನ್ ನಾಯರರು ಹೋದಲ್ಲಿ ವೇತಾಳ ದರ್ಶನವುಂಟಾಗುತ್ತದೆ. ನಾಯರರ ಮೇಲೆ ಉಂಟಾಗಲಿಕ್ಕಿರುವ ಫಿರ್ಯಾದಿಗೂ, ಹಿಂದಿ ಪತ್ರಕಾರರ ಲೇಖನ ಸ್ವಾತಂತ್ರ್ಯಕ್ಕೂ ಅಷ್ಟೊಂದು ನಿಬಿಡ ಸಂಬಂಧವಿಲ್ಲ. ಆದರೂ ಮಾನನಷ್ಟದ ಪ್ರಕರಣವನ್ನು ಉಲ್ಲೇಖಿಸುವಾಗ ಸಾಜಾತ್ಯದಿಂದ ಅವನ್ನು ಕೂಡ ವಾಚಕರ ಮುಂದಿಡಬೇಕಾಯಿತು. ಇರಲಿ.

ಹಿಂದುಸ್ಥಾನದಲ್ಲಿ ಅಧಿಕಾರಿಗಳು ಪತ್ರಕಾರರ ಮೇಲೆ ಈ ಮೇರೆಗೆ ಸರಾಗವಾಗಿ ಖಟ್ಲೆಗಳನ್ನು ಮಾಡುವುದನ್ನು ನೋಡುವಾಗ ಇಲ್ಲಿ ಮುದ್ರಣಸ್ವಾತಂತ್ರ್ಯವುಂಟೆಂದು ಯಾರು ಹೇಳಿಯಾರು? ಲೇಖನ ಸ್ವಾತಂತ್ರ್ಯದ ಸುತ್ತಲೂ ಇಷ್ಟು ಪ್ರತಿಬಂಧಗಳನ್ನು ನಿಲ್ಲಿಸಿ, ಅದರ ವಿಟಂಬನೆಯನ್ನು ಇಷ್ಟು ವಿಧದಿಂದ ಮಾಡುವಾಗ, ಇಂಥ ಶೋಚನೀಯ ಸ್ಥಿತಿಯಲ್ಲೂ ಹಿಂದಿಗಳು ಲೇಖನ ಸ್ವಾತಂತ್ರ್ಯವನ್ನು ಉಪಭೋಗಿಸುತ್ತಿದ್ದಾರೆಂದು ವಿಧಿಸಬಹುದೆ? ರಾಜ್ಯಕಾರಭಾರದ ಮೇಲೆ, ಸಾಮಾನ್ಯ ರೂಪದಿಂದ ಟೀಕಿಸಿದರೆ ಅದು ರಾಜದ್ರೋಹದ ಕಕ್ಷೆಯಲ್ಲಿ ಸೇರುತ್ತದೆ; ವಿಶೇಷರೂಪದಿಂದ ಟೀಕಿಸಿದರೆ ಅಧಿಕಾರಿಗಳ ಮಾನವು ಹೋಗುತ್ತದಾದ್ದರಿಂದ ಅವರ ದ್ರೋಹಕ್ಕೆ ಒಳಗಾಗಬೇಕಾಗುತ್ತದೆ! ಎಂದ ಮೇಲೆ ಪತ್ರಕಾರರು ರಾಜಕೀಯ ವಿಷಯಗಳನ್ನು ಚರ್ಚಿಸುವುದು ಹೇಗೆ? ಇಂತಿಂಥ ಅಧಿಕಾರಿಗಳು ಇಂತಿಂಥ ಅನ್ಯಾಯಗಳನ್ನು ಮಾಡಿದರೆಂದು ಬಾತಮಿದಾರರಿಂದ ಬಂದ ಆಧಾರಗಳ ಮೇಲೆ ವಿಧಾನಗಳನ್ನು ಮಾಡಿದ್ದಲ್ಲಿ ಆ ವಿಧಾನಗಳು ಅಧಿಕಾರಿಗಳಿಗೆ ಸೇರುವುದಿಲ್ಲ. ಅವರು ಕೂಡಲೆ ಕೋರ್ಟುಗಳ ಬಾಗಿಲುಗಳನ್ನಾಶ್ರಯಿಸಿ ಬಡ ಪತ್ರಕಾರರನ್ನು ಅಲ್ಲಿ ಎಳೆಯುವರು ಮತ್ತು ದಂಡದ ರೂಪದಿಂದ ಅಥವಾ ಅನ್ಯ ರೂಪದಿಂದ ಪೀಡಿಸುವರು. ಈ ಕ್ರಮವು ಈಗ ಪ್ರಾರಂಭವಾಗಿದೆ. ಇದೆ ಹೊಸ ಭೂತವು (!)

ಸ್ಫುಟವಿಚಾರಗಳು.

೧. ಮುನ್ಸಿಪಾಲಿಟಿಗಳು ತಮ್ಮ ಗಡಿಯಲ್ಲಿ ಮದ್ಯ ಮಾರಾಟವನ್ನು ನಿಲ್ಲಿಸುವುದು, ಗೋವಧೆಯನ್ನು ಮನ್ನಾಪಡಿಸುವುದು, ಪ್ರಾಥಮಿಕ ಶಿಕ್ಷಣವನ್ನು ಖಡ್ಡಾಯಗೊಳಿಸುವುದು ಮೊದಲಾದ ಕಾರ್ಯಗಳನ್ನು ಸಾಧಿಸಿ ಸ್ವರಾಜ್ಯವನ್ನು ಬೇಗನೆ ಹತ್ತಿರ ತರಲು ಸ್ತುತ್ಯವಾದ ಉದ್ಯೋಗವನ್ನು ಮಾಡತಕ್ಕದ್ದು. ಸ್ವರಾಜ್ಯದ ಪ್ರಾಪ್ತಿಗೆ ಮೇಲಿನ ಉದ್ಯೋಗಗಳು ಹೇಗೆ ಅಪೇಕ್ಷಿತವಾದವುಗಳೊ ಹಾಗೆಯೆ ದೇಶಭಕ್ತ ಮುಖಂಡರನ್ನು ಸನ್ಮಾನಿಸುವುದು, ಜನಾಂಗಕ್ಕೆ ಅಪಮಾನಕರವಾದ ಮಾತನ್ನಾಗಲಿ, ಚಿಹ್ನೆಯನ್ನಾಗಲಿ, ತೆಗೆದುಹಾಕುವುದು ಈ ಕೃತ್ಯಗಳು ಸಹ ಬೇಕಾದವುಗಳೆ. ಲಾಹೋರ ಮುನ್ಸಿಪಾಲಿಟಿಯು ಇಂಥ ಒಂದು ಮಹತ್ವದ ಕಾರ್ಯವನ್ನು ಮಾಡತೊಡಗಿದೆ. ಲಾಹೋರ ಪಟ್ಟಣದಲ್ಲಿ ಲೊರ್ಡ ಲೋರೆನ್ಸರ ಮೂರ್ತಿಯನ್ನು ನಿಲ್ಲಿಸಿದ್ದುಂಟು. ಆ ಮೂರ್ತಿಯ ಕೆಳಗೆ "ಲೇಖನಿಗೆ ಒಳಗಾಗುತ್ತೀರೊ ಅಥವಾ ಕತ್ತಿಗೊ?" ಎಂಬೀ ಅರ್ಥದ ಮಾತು ಬರೆದಿತ್ತು. ಈ ಮಾತು ಕೆಲವು ಸಮಯದ ಹಿಂದೆ ಉದ್ವೇಗಕ್ಕೆ ಅಷ್ಟೊಂದು ಕಾರಣವಾಗಿರುತ್ತಿರಲಿಲ್ಲವೆನ್ನೋಣ. ಆದರೆ ಸ್ವದೇಶದ ಉಜ್ವಲ ಅಭಿಮಾನ ಮತ್ತು ಸ್ವರಾಜ್ಯದ ಉತ್ಕಟ ಆಕಾಂಕ್ಷೆ ಇವು ಉತ್ಪನ್ನವಾಗಿರುವ ಈ ಸಮಯದಲ್ಲಿ ಮೇಲಿನ ಅಪಮಾನಾಸ್ಪದವಾದ ಮಾತು—ಅದು ಕೂಡ ಪಟ್ಟಣದ ಮುಖ್ಯ ಸ್ಥಾನದಲ್ಲಿ ಎಲ್ಲರ ದೃಷ್ಟಿಗೆ ಬೀಳುವಂತಿರುವುದು ಯಾರಿಗೂ ಒಪ್ಪುವುದಿಲ್ಲ. ಇಂಥ ಮಾತು ಮೂರ್ತಿಯ ಯಾವ ಕಲ್ಲಿನ ಮೇಲೆ ಕೆತ್ತಿರುವದೊ ಅದನ್ನು ತೆಗೆದುಹಾಕಲು ನಾಗರಿಕರು ತಮ್ಮ ಇಚ್ಛೆಯನ್ನು ವ್ಯಕ್ತಗೊಳಿಸಿದ್ದಾದರೆ ಹಾಗು ಆ ಇಚ್ಛೆಯಂತೆ ಇದನ್ನು ತೆಗೆಯಲು ಅವರು ಉದ್ಯುಕ್ತರಾದದ್ದಾದರೆ ಅದರಲ್ಲಿ ಯಾವ ತಪ್ಪೂ ಇಲ್ಲ. ಅದುಕಾರಣ ಲಾಹೋರ ಪಟ್ಟಣಿಗರು ಮತ್ತು ಮುನ್ಸಿಪಾಲಿಟಿಯವರು ಈ ಲೊರೆನ್ಸ ಮೂರ್ತಿಯನ್ನು ತೆಗೆದುಹಾಕಲು ಉಪಕ್ರಮಿಸಿದರು. ಆದರೆ ವೃಥಾ ದುರಭಿಮಾನದ ಹುಲಿಚರ್ಮವನ್ನು ಹೊದ್ದುಕೊಂಡ ಅಧಿಕಾರಿವರ್ಗಕ್ಕೆ ಇದು ಸಹ್ಯವಾಗಲಿಲ್ಲ. ಅವರು ಈ ಲೊರೆನ್ಸ ಗೊಂಬೆಯನ್ನು ತೆಗೆಯಕೂಡದು ಎಂದು ತಿಳಿಸಿ, ಅದರ ಸುತ್ತಲೂ ಸಶಸ್ತ್ರ ಪೋಲೀಸರ ಕಾವಲನ್ನಿಡಹತ್ತಿದರು. ಈ ಗೊಂಬೆಯನ್ನು ಸಶಸ್ತ್ರ ಪೋಲೀಸರ ಸಹಾಯ್ಯದಿಂದ ಸಂರಕ್ಷಿಸುವ ಅವಶ್ಯಕತೆಯು ಸರಕಾರಕ್ಕೆ ನಿಜವಾಗಿ ಇರಲಿಲ್ಲ. ಕಾರಣ, ಲೊರೆನ್ಸ ಗೊಂಬೆಯು ಮುನ್ಸಿಪಾಲಿಟಿಯ ಆಸ್ತಿಯು.—ಮುನ್ಸಿಪಾಲಿಟಿಯ ಸಂಪೂರ್ಣ ವಶದಲ್ಲಿ ಬಿಟ್ಟುಕೊಟ್ಟ ಆಸ್ತಿಯು.—ಅದನ್ನು ಮುನ್ಸಿಪಾಲಿಟಿಯು ತೆಗೆದು ಒಂದು ಮೂಲೆಯಲ್ಲಿಟ್ಟರೇನು, ಅಥವಾ ಬೇರೆ ಯಾವುದಾದರೂ ವ್ಯವಸ್ಥೆ ಮಾಡಿದರೇನು, ಆ ವಿಷಯದಲ್ಲಿ ಅಧಿಕಾರಿಗಳಿಗೆ ಪ್ರವೇಶಿಸಲು ಕಾರಣವಿದ್ದಿಲ್ಲ. ಆದರೆ ಅಧಿಕಾರಿಗಳ ಅಹಂಭಾವಕ್ಕೆ ಇದು ಒಪ್ಪಬೇಕಾಯಿತಲ್ಲ! ಆದ್ದರಿಂದ ಅವರು ಮೇಲಿನಂತೆ ಸಶಸ್ತ್ರ ಪೋಲೀಸರ ಮುಖಾಂತರ ಈ ನಿರ್ಜೀವ ಚಿತ್ರವನ್ನು ಸಂರಕ್ಷಿಸಿಕೊಳ್ಳುತ್ತಿದ್ದರು! ಲಾಹೋರದ ಕಲೆಕ್ಟರರು ಈ ರೀತಿಯಿಂದ ವರ್ತಿಸಿದ್ದು ಅಯುಕ್ತವೆಂದು ಮುನ್ಸಿಪಾಲಿಟಿಯು ತಿಳಿಸಿತ್ತು. ಅದಕ್ಕೆ ಸರಕಾರದ ಕಡೆಯಿಂದ "ಲೊರೆನ್ಸ ಗೊಂಬೆಯನ್ನು ಕಿತ್ತುಹಾಕಲು ಮುನ್ಸಿಪಾಲಿಟಿಗೆ ಹಕ್ಕಿಲ್ಲವೆಂದು" ಉತ್ತರವು ಬಂದಿತ್ತು. ಈ ಉತ್ತರಕ್ಕೆ ಪ್ರತ್ಯುತ್ತರವನ್ನು ಕಳುಹಿಸಲು ಲಾಹೋರ ಮುನ್ಸಿಪಾಲಿಟಿಯು ತನ್ನ ಸ್ಪೆಶಲ್ ಕಮಿಟಿಯನ್ನು ನೇಮಿಸಿತು. ಆ ಕಮಿಟಿಯು ಯಾವ ಉತ್ತರವನ್ನು ತಯಾರಿಸಿದೆಯೊ ಅದು ಮುನ್ಸಿಪಲ್ ಕೌನ್ಸಿಲಿನ ಜನರಲ್ ಮೀಟಿಂಗಿನಲ್ಲಿ ಪಾಸಾಯಿತು. ಲೊರೆನ್ಸ ಪ್ರತಿಮೆಯು ಮುನ್ಸಿಪಾಲಿಟಿಯ ಆಸ್ತಿ; ಮುನ್ಸಿಪಾಲಿಟಿಗೆ ಉಚಿತವಾಗಿ ಕೊಟ್ಟ ಆಸ್ತಿ; ಮುನ್ಸಿಪಾಲಟಿಯುವರು ಆ ಪ್ರತಿಮೆ ಇರುವಲ್ಲಿ ಪ್ರವೇಶಿಸದಂತೆ ಅದರ ಸುತ್ತಲೂ ಸಶಸ್ತ್ರ ಪೋಲೀಸರ ಕಾವಲವನ್ನಿಡುವುದು ಅನ್ಯಾಯದ ಸಂಗತಿಯಾಗಿದೆ ಎಂದು ಸ್ಪೆಶಲ್ ಕಮಿಟಿಯ ನಿರ್ಣಯವು ಈ ಜನರಲ್ ಮೀಟಿಂಗಿನಲ್ಲಿ ಸಹ ಪಾಸಾಗಿದೆ. ಒಬ್ಬರು ರಾಯಬಹಾದ್ದೂರರು ಇದನ್ನು ಉಪರೋಧಿಸಿದ್ದರು. ಪರಂತು ಈ ಉಪರೋಧವು ನಿರರ್ಥಕವಾಯಿತು. ಲೋಕಮತದ ಸ್ಥಿತಿಯನ್ನು ಅಜಮಾಯಿಸದೆ ವ್ಯಕ್ತಪಡಿಸಲ್ಪಡುವ ಮತವು ಉಪಹಾಸಕ್ಕೆ ಈ ರೀತಿಯಿಂದ ಗುರಿಯಾಗುತ್ತದೆ (!)

೨. ಲಾಹೋರ ಮುನ್ಸಿಪಾಲಿಟಿಯು "ಲೇಖನಿ ಬೇಕೊ, ಕತ್ತಿ ಬೇಕೊ" ಎಂಬೀ ನಮ್ಮ ಜನಾಂಗದ ಸ್ವಾಭಿಮಾನಕ್ಕೆ ಕಲಂಕಾಸ್ಪದವಾದ ಮಾತನ್ನು ಜನರ ದೃಷ್ಟಿಪಥದಿಂದ ಮರೆಪಡಿಸಲು ಹೇಗೆ ಸ್ತುತ್ಯವಾದ ಉದ್ಯೋಗವನ್ನು ಮಾಡುತ್ತಿದೆಯೊ ಹಾಗೆಯೆ ಜಬಲಪುರ, ಪುನಾ ಮುಂತಾದ ಇತಿಹಾಸ ಪ್ರಸಿದ್ಧ ಪಟ್ಟಣಗಳ ಮುನ್ಸಿಪಾಲಿಟಿಗಳು ದೇಶಭಕ್ತರನ್ನು ಸತ್ಕರಿಸುವ ಮತ್ತು ಸನ್ಮಾನಿಸುವ ಶ್ಲಾಘ್ಯವಾದ ಸದುದ್ಯೋಗವನ್ನು ಮಾಡುತ್ತಿವೆ. ಇದು ಸಂತೋಷದ ಮಾತಾಗಿದೆ. ಹಿಂದುಸ್ಥಾನದಲ್ಲಿ ಕಾಯಿದೆ ಭಂಗದ ಚಳವಳವನ್ನು ಸಾಮುದಾಯಕ ರೂಪದಿಂದ ಪ್ರಾರಂಭಿಸಬಹುದೊ ಹೇಗೆ, ನೋನ್ ಕೊ-ಒಪರೇಶನಿನ ವಿಧಾಯಕ ಕಾರ್ಯಕ್ರಮವು ಹೇಗೆ ನಡೆಯುತ್ತಿದೆ, ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ, ಇನ್ನು ಮುಂದೆ ಯಾವ ಬದಲಾವಣೆಗಳನ್ನು ಮಾಡಬಹುದು, ಇತ್ಯಾದಿ ರಾಷ್ಟ್ರಹಿತದ ಪ್ರಶ್ನೆಗಳನ್ನು ಚರ್ಚಿಸಲು ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಒಂದು ಕಮಿಟಿಯನ್ನು ನೇಮಿಸಿತ್ತು. ಈ ಕಮಿಟಿಯು ಹಕೀಮ ಅಜಮಲ್‌ಖಾನ ಸಾಹೇಬರ ಅಧ್ಯಕ್ಷತೆಯಲ್ಲಿ ಹಿಂದುಸ್ಥಾನದ ಎಲ್ಲ ಪ್ರಾಂತಗಳ ಕೇಂದ್ರ ಸ್ಥಳಗಳಿಗೆ ಹೋಗಿ ಬೇರೆ ಬೇರೆ ಮತದವರ ಸಾಕ್ಷಿಗಳನ್ನು ಕೇಳಿ ಒಂದು ನಿಷ್ಕರ್ಷವನ್ನು ಮಾಡುವುದಿದೆ. ಅದು ಈ ಕೆಲಸದ ಮೇಲೆ ಉತ್ತರ ಹಿಂದುಸ್ಥಾನದ ಇತರ ಪ್ರಾಂತಗಳಲ್ಲಿ ಸಂಚರಿಸಿ ಕಳೆದ ವಾರ ಜಬಲಪುರಕ್ಕೆ ಬಂತು. ಆಗ ಜಬಲಪುರದ ಮುನ್ಸಿಪಾಲಟಿಯು ರಾಷ್ಟ್ರೀಯ ಪತಾಕೆಗಳಿಂದ ಮುನ್ಸಿಪಾಲಟಿಯ ಸಭಾಗೃಹವನ್ನು ಶೃಂಗರಿಸಿ ಹಕೀಮ ಸಾಹೇಬರಿಗೆ ಮತ್ತು ಮೋತಿಲಾಲನೆಹರುಗಳಿಗೆ ಹಾಗು ಕಮಿಟಿಯ ಇತರ ಸಭಾಸದರಿಗೆ ಮಾನ ಪತ್ರಗಳನ್ನು ಅರ್ಪಿಸಿ, ಆ ಮೂಲಕ ದೇಶಭಕ್ತರ ವಿಷಯದಲ್ಲಿ ವಾತ್ಸಲ್ಯವನ್ನೂ, ಅವರ ಕಾರ್ಯದ ವಿಷಯದಲ್ಲಿ ಅಭಿಮಾನವನ್ನೂ, ಸೂಚಿಸಿತು. ಪುಣೆಯ ಮುನ್ಸಿಪಾಲಟಿಯು ಕೂಡ ಶ್ರೀಯುತ ದೇಶಭಕ್ತ ಕೇಳಕರರ ಅಧ್ಯಕ್ಷತೆಯಿಂದ ಇದೆ ಕಾರ್ಯಕ್ರಮವನ್ನು ಸಾಂಗಗೊಳಿಸುವುದಿದೆ. ಸಾರಾಂಶ ಮುನ್ಸಿಪಾಲಿಟಿಗಳಂಥ ಲೋಕ ಸಂಸ್ಥೆಗಳು ಅಧಿಕಾರಿಗಳ ಅಧಿಕಾರ ಪ್ರಾಂತದಿಂದ ಹೊರಬಿದ್ದು ಈ ರೀತಿಯಿಂದ ದೇಶಸೇವೆಯಲ್ಲಿ ಅಭಿರುಚಿಯನ್ನು ವ್ಯಕ್ತಗೊಳಿಸುವುದು ಈಗಿನ ಕಾಲಕ್ಕೆ ಯೋಗ್ಯವೂ ದೇಶಹಿತದ ಪ್ರಗತಿಗೆ ಅವಶ್ಯಕವೂ ಆಗಿದೆ.

೩. ಮೇಲೆ ಹೇಳಿದ ಪ್ರಕಾರ ಕೆಟ್ಟ ಮಾತುಗಳನ್ನು ತೆಗೆಯುವುದರಿಂದಾಗಲಿ ರಾಷ್ಟ್ರೀಯ ಪತಾಕೆಯನ್ನು ಹಾಯಿಸುವುದರಿಂದಾಗಲಿ, ಮುನಸಿಪಾಲಟಿಗಳು ಸ್ತುತ್ಯ ಕೆಲಸಗಳನ್ನು ಮಾಡುತ್ತಿದ್ದಾವೆ ಮಾತ್ರವಲ್ಲ, ಯುಕ್ತ ಕಾರ್ಯಗಳಿಂದ ಖಾದಿಪ್ರಚಾರದಂಥ ಉಪಸ್ತುತ್ಯ ಕಾರ್ಯಗಳನ್ನು ಕರಾಚಿ ಮುಂತಾದ ಕಡೆಯ ಮುನ್ಸಿಪಾಲಟಿಗಳು ಕೈಕೊಂಡಿವೆ ಎಂದು ತಿಳಿಸಲು ನಮಗೆ ಬಹಳ ಸಂತೋಷವಾಗುತ್ತದೆ. ಕರಾಚಿ ಮುನ್ಸಿಪಾಲಿಟಿಯವರು ತಮ್ಮ ಎಲ್ಲ ಭೃತ್ಯರಿಗೆ ಸ್ವದೇಶಿ, ಹೆಚ್ಚಾಗಿ ಖಾದಿ ಉಡುಪನ್ನೆ ಇನ್ನು ಮುಂದೆ ಕೊಡಬೇಕೆಂದು ನಿಶ್ಚಯಿಸಿದ್ದಾರೆ. ಖಾದಿಯಂತಹ ಸ್ವದೇಶಿ ಚಳವಳಕ್ಕೆ ಎಲ್ಲ ತಂಡದವರು ತಮ್ಮಿಂದ ಆದಷ್ಟು ಸಹಾಯ ಮಾಡುವುದು ಉಚಿತವು. ಈ ಚಳವಳವು ಹಿಂದುಸ್ಥಾನದ ಕೈಗಾರಿಕೆಯಲ್ಲಿ ಪ್ರಮುಖವಾದ್ದರಿಂದ ಇದರ ಮೇಲೆ ರಾಜಕೀಯ ದೃಷ್ಟಿಯನ್ನು ಇಡುವುದು ಬಹು ತಪ್ಪಾಗಿರುತ್ತದೆ. ಆದ್ದರಿಂದ ಮುನ್ಸಿಪಾಲಿಟಿಯಂಥ ಸಂಸ್ಥೆಯು ಇದಕ್ಕೆ ಸಹಾಯ ಕೊಟ್ಟದ್ದು ಹಿಂದಿಗಳ ಭಾಗ್ಯವೆ ಎಂದು ತಿಳಿಯಬೇಕು. ಕರಾಚಿ ಮುನಸಿಪಾಲಿಟಿಯು ಮಾತ್ರ ಇದನ್ನು ಮಾಡಿದೆ ಮಾತ್ರವಲ್ಲ, ಹೈದರಾಬಾದ, ಲಾರ್ಕಾಣಾ ಮುಂತಾದ ಇತರ ಮುನ್ಸಿಪಾಲಿಟಿಯವರು ಸಹ ಖಾದಿಪ್ರಚಾರಕ್ಕೆ ತಮ್ಮ ಸಹಾಯವನ್ನು ಕೊಟ್ಟಿದ್ದಾರೆ. ಆದರೆ ಇದೆ ಸಮಯದಲ್ಲಿ ಇನ್ನೊಂದು ಸಮಾಧಾನಕರವಾದ ಮತ್ತು ಸಂತೋಷಕರವಾದ ಸಂಗತಿಯು ಕೇಳಬರುತ್ತದೇನೆಂದರೆ, ಬಂಗಾಲದೊಳಗಿನ ಕೆಲವು ಜಿಲ್ಲೆಯ ಕಲೆಕ್ಟರುಗಳು ತಮ್ಮ ಆಡಳಿತೆಯಲ್ಲಿ ಖಾದಿ ಪ್ರಚಾರವನ್ನು ಬಲಪಡಿಸುತ್ತಾರೆಂದು ತೋರುತ್ತದೆ. ಕಲಕತ್ತೆಯಲ್ಲಿ ಎಗ್ರಿಕಲ್ಚರ್, ಕೈಗಾರಿಕೆ ಮತ್ತು ಕೊಒಪರೇಟಿವ್ ಸಂಘಗಳ ಸಂಯುಕ್ತ ಪರಿಷತ್ತು, ಆ ಖಾತೆಗಳ ಮಂತ್ರಿಯ ಅಧ್ಯಕ್ಷತೆಯ ಕೈಕೆಳಗೆ ಸೇರಿದಾಗ ಬರದವಾನ ಮತ್ತು ದಾರ್ಜಲಿಂಗದ ಕಲೆಕ್ಟರರು ಖಾದಿಪ್ರಚಾರದ ವಿಷಯ ತಮ್ಮ ಪೂರ್ಣ ಅನುಮತಿಯನ್ನು ಕೊಟ್ಟಿದ್ದಾರೆ. ಮತ್ತು ಕೊಒಪರೇಟಿವ್ ಸಂಘಗಳಲ್ಲಿ ಚರಕ ಮತ್ತು ಕೈಮಗ್ಗಗಳನ್ನು ಹೆಚ್ಚಿಸಲು ಆ ಸಭೆಯಲ್ಲಿ ಠರಾವು ಪಾಸಾಯಿತು. ಅದೆ ಸಂದರ್ಭದಲ್ಲಿ ಬರದವಾನದ ಕಲೆಕ್ಟರರು ಕೈವಸ್ತ್ರಗಳನ್ನು ಮಾಡುವವರಿಗೆ ಯೋಗ್ಯ ಕ್ರಮವಿಡಬೇಕೆಂದು ಕೊಒಪರೇಟಿವ್ ಸೊಸೈಟಿಯವರು ಸೂಚಿಸಬೇಕೆಂದು ತಿಳಿಸಿದರು. ದಾರ್ಜಲಿಂಗದ ಕಲೆಕ್ಟರರೂ ಸಹ ತನ್ನ ಜಿಲ್ಲೆಯಲ್ಲಿ ಹೆಚ್ಚಾದ ಜನರು ಖಾದಿಯನ್ನೆ ಉಪಯೋಗಿಸುತ್ತಾರೆಂತಲೂ ತಾನು ಜೈಲಿನಲ್ಲೂ ಸಹ ಚರಕಗಳ ಪ್ರಚಾರ ಮಾಡಿದ್ದೇನೆಂತಲೂ ಮತ್ತು ತನ್ನ ಡಿ[illegible] ಹತ್ತಿಯ ಬೆಳವಣಿಗೆಯನ್ನು ಹೆಚ್ಚಿಸಲು [illegible] ಸಹ[illegible]ದರು. ಇರಲಿ. ಈ ಪ್ರಕಾರ ನೋಕರಶಾಹಿಯು ತೋರಿಸಿದ್ದು ಬಹು ಖಾದಿಪ್ರಚಾರಕ್ಕೆ ತಮ್ಮ ಸಹಾನುಭೂತಿಯ ಬೆಂಬಲವನ್ನು ಕೊಡ [illegible]ಶ್ಚರ್ಯವು! ಸರಕಾರವ [illegible]ಕೆಂದು ಠರಾವು ಅಲ್ಲಿ ಪಾಸಾಯಿತು. ಇವೆಲ್ಲವನ್ನು ನೋಡುವಾಗ ಖಾದಿಯು ಹಿಂದುಸ್ಥಾನವನ್ನು ಬಿಟ್ಟುಹೋಗಲಿಕ್ಕಿಲ್ಲವೆಂದು ತೋರುತ್ತದೆ. ಆದರೆ ನೋಕರಶಾಹಿಯುವರು ಯಾವ ಕಪಟವನ್ನೂ ಮಾಡದೆ ನ್ಯಾಯವನ್ನು ಕೊಟ್ಟರೆ ಅವರ ಮಾತಿನ ಪ್ರಯೋಜನವಾದೀತು.

೪. ಹಿಂದೂಸ್ಥಾನದಲ್ಲಿ ಪ್ರಾರಂಭವಾಗಿರುವ ಖಾದಿ ಚಳವಳದ ಉಪಹಾಸವನ್ನು ಎಂಗ್ಲೊ-ಇಂಡಿಯನರು ಬೇಕಷ್ಟು ಮಾಡಲಿ. ಆದರೆ ವಿಲಾಯತಿ ಬಟ್ಟೆಯ ವ್ಯಾಪಾರದ ಅಂಕೆಗಳನ್ನು ನೋಡಿದಲ್ಲಿ ಸ್ವದೇಶಿಯ ಪ್ರಭಾವವು ಗೊತ್ತಾಗುತ್ತದೆ. ಮುಂಬಯಿ ಇಲಾಖೆಯಲ್ಲಿ ಖಾದಿ ಚಳವಳವು ಹೆಚ್ಚು ಪ್ರಸಾರವನ್ನು ಹೊಂದಿದೆ. ಅಂಥ ಕಡೆಯಲ್ಲಿ ವಿಲಾಯತಿ ಬಟ್ಟೆಗಳ ವ್ಯಾಪಾರವು ಕೆಳಗೆ ಇಳಿದಿದ್ದಾದರೆ ಏನೂ ಆಶ್ಚರ್ಯವಿಲ್ಲ. ಬಂಗಾಲ ಪ್ರಾಂತ್ಯದಲ್ಲಿ ಈ ಚಳವಳದಿಂದ ಯಾವ ಪರಿಣಾಮ ವುಂಟಾಗಿದೆ ಎಂಬುದನ್ನು ಅಲ್ಲಿಯ ಕಸ್ಟಮ ಖಾತೆಯು ಪ್ರಕಟಿಸಿದ ಲೆಕ್ಕದ ಮೇಲಿಂದ ವ್ಯಕ್ತವಾಗುವುದು. ಕಳೆದ ವರುಷ ಬಂಗಾಲದಲ್ಲಿ ೧೦ ಕೋಟಿ ರೂಪಾಯಿಯ ವಿಲಾಯತಿ ಬಟ್ಟೆಯು ಕಡಿಮೆ ಬಂದಿದೆ. ಈ ರೀತಿಯಿಂದ ವಿಲಾಯತಿಯ ವ್ಯಾಪಾರವು ಸ್ವದೇಶಿ ಚಳವಳದಿಂದಲೆ ಬಿದ್ದುಹೋಗಿದೆ ಎಂದು ಕಸ್ಟಮಖಾತೆಯು ಸ್ಪಷ್ಟವಾಗಿ ಪ್ರಕಟಿಸಿದೆ. ಆದರೆ ಇದರ ಬದಲು ವಿಲಾಯತಿಯಿಂದ ನೂಲು ಮೊದಲಿಗಿಂತ ಹೆಚ್ಚು ಬಂದಿದೆ. ಇದು ಮಾತ್ರ ಶೋಚನೀಯವು. ವಿಲಾಯತಿಯಿಂದ ಬಂದ ಈ ನೂಲು ದೊರಗು ನಮೂನೆಯದಿರುವುದರಿಂದ ವಂಚಕ ವ್ಯಾಪಾರಿಗಳು "ಶುದ್ಧ ಖಾದಿ" ಎಂಬ ಹೆಸರಿನಿಂದ ವಿಲಾಯತಿ ನೂಲಿನ ಬಟ್ಟೆಯನ್ನು ಮಾರಿ ಖಾದಿಭಕ್ತರ ಶ್ರದ್ಧೆಯನ್ನು ದುರುಪಯೋಗಿಸಿ ಕೊಳ್ಳುತ್ತಿದ್ದಾರೆ. ಹಿಂದೂಸ್ಥಾನದೊಳಗಿನ ಈ ವಂಚಕ ವ್ಯಾಪಾರಿಗಳು ಲಂಕಾಶಾಯರದವರಿಗೆ ಅಲ್ಲಿಯ ಬಟ್ಟೆಯನ್ನು 'ಶುದ್ಧ ಖದರ" ಎಂಬ ಮುದ್ರೆಯನ್ನು ಒತ್ತಿ ಹಿಂದೂಸ್ಥಾನಕ್ಕೆ ಕಳುಹಿಸಿಕೊಡಲು ಅಂತರಂಗದ ಸೂಚನೆಗಳನ್ನು ಕೊಡುತ್ತಿದ್ದಾರೆಂದು ಅಮೃತಬಝಾರ ಪತ್ರಿಕೆಯ ಬಾತಮಿದಾರನು ಬರೆಯುತ್ತಿದ್ದಾನೆ. ಈ ಸಂಗತಿಯು ಸತ್ಯವೆಂದಾದರೆ, ಕೇಸರಿ ಪತ್ರವು ಹೇಳುವಂತೆ, ಈ ವ್ಯಾಪಾರಿಗಳೆ ಸ್ವದೇಶಿಯ ಕಡು ವೈರಿಗಳೆಂದು ತಿಳಿಯಬೇಕು. ಇಂಥ ಕೇವಲ ಸ್ವಾರ್ಥಕ್ಕೋಸ್ಕರ ದೇಶಹಿತವನ್ನು ಬಲಿಕೊಡುವ ಈ ರಾಷ್ಟ್ರಘಾತಕ ವ್ಯಾಪಾರಿಗಳು ಬರೆ ತಮ್ಮ ಚೀಲವನ್ನು ತುಂಬಿಸಲು ವಿಲಾಯತಿಯ ಬಟ್ಟೆಗಳನ್ನು ಸ್ವದೇಶಿಯ ಹೆಸರಿನಿಂದ ಗಿರಾಕಿಗಳ ಕುತ್ತಿಗೆಗೆ ಕಟ್ಟುವುದನ್ನು ಯಾವಾಗ ಬಿಡುವರೊ, ಅಲ್ಲ, ಇಂಥವರು ಈ ಆರ್ಯಭೂಮಿಯಿಂದ ಯಾವಾಗ ಇಲ್ಲಾಗುವರೊ ಆಗ ನಿಜವಾದ ಸ್ವದೇಶಿಗೆ ಪುರಸ್ಕಾರವು ಪ್ರಾಪ್ತವಾಗುವುದು. ಗಿರಾಕಿಗಳಲ್ಲಿ ಅನೇಕ ಕುಂದುಗಳು, ನ್ಯೂನತೆಗಳು ಇರಬಹುದು. ಆದರೆ ಸ್ವದೇಶಿ ಖಾದಿ. ಶುದ್ಧ ಖದರ ಇತ್ಯಾದಿ ಹೆಸರು ಕೇಳಿಕೊಂಡು ಬರುವ ಗಿರಾಕಿಗಳನ್ನು ಇಂಥ ಉಪಾಯದಿಂದ ವಂಚಿಸುವುದು ಬರೆ ಅಪ್ರಾಮಾಣಿಕತನ ಮಾತ್ರವಲ್ಲ, ದೇಶದ್ರೋಹವೂ ಆಗಿದೆ. ಗಿರಾಕಿಗಳು ಖಾದಿಯನ್ನು ಮತ್ತು ಸ್ವದೇಶಿಯನ್ನು (ಹಿಂದಿ ಗಿರಣಿಯ ಬಟ್ಟೆಯನ್ನು) ತೆಗೆದುಕೊಳ್ಳುವಾಗ ಬಹು ಜಾಗೃತೆಯಿಂದ ತೆಗೆದುಕೊಳ್ಳಬೇಕು. ಇವು ಸವಿನುಡಿಗಳಿಗೆ ಮರುಳಾಗುವ ದಿವಸಗಳು ಈಗಲ್ಲ.

೫. ಯುವರಾಜರು ಸಾಮ್ರಾಜ್ಯದ ಪೂರ್ವಭಾಗ ಮತ್ತು ಜಪಾನ ಇವುಗಳನ್ನು ಸಂಚರಿಸಿ, ಆ ಮೇಲೆ ವಿಲಾಯತಿಗೆ ತಲಪಿ ಎಷ್ಟೊ ಸಮಯವಾಯಿತು. ಅವರಿಗೆ ಮುಖ್ಯ ಮಂತ್ರಿಗಳಾದ ಲೊಯ್ಡ ಜೊರ್ಜ ಸಾಹೇಬರು ಮೊನ್ನೆ ಒಂದು ಊಟವನ್ನು ಕೊಟ್ಟರು. ಊಟದ ಈ ಸಮಾರಂಭ ಮತ್ತು ಬಾದಶಹರ ಪರವಾಗಿ ಆಗತಕ್ಕ ಇತರ ಸಮಾರಂಭ ಇವು ಯುವರಾಜರು ಇಂಗ್ಲೆಂಡಿಗೆ ತಲಪಿದ ಕೂಡಲೆ ಆಗತಕ್ಕವುಗಳಿದ್ದವು. ಆದರೆ ದುರ್ದೈವದಿಂದ ಯುವರಾಜರು ಲಂಡನಿಗೆ ತಲಪಿದ ಮರುದಿನವೆ ಫೀಲ್ಡಮಾರ್ಶಲರಾದ ಹೆನರಿ ವಿಲ್ಸನರ ಖೂನಿಯಾದುದರಿಂದ ಅಲ್ಲಿಯ ಸರಕಾರಿ ಜನರ ಉತ್ಸಾಹದ ಹಾಲಿನಲ್ಲಿ ಉಪ್ಪಿನಹರಳು ಬಿದ್ದಂತಾಗಿ ಯುವರಾಜರ ಅಭಿನಂದನದ ಎಲ್ಲ ಸಮಾರಂಭಗಳು ಹಿಂದೆ ಬಿದ್ದಿದ್ದವು. ಅವು ಪುನಃ ಈಗ ಪ್ರಾರಂಭವಾಗಿವೆ. ಲೊಯ್ಡ ಜೊರ್ಜ ಸಾಹೇಬರು ಯುವರಾಜರ ಹಿಂದುಸ್ಥಾನಸಂಚಾರವನ್ನು ಕುರಿತು ಪ್ರಶಂಸಾಪರ ಉದ್ಗಾರಗಳನ್ನು ಹೊರಡಿಸುವಾಗ ವಾಕ್‌ಚಾತುರ್ಯವನ್ನು ಬಹು ಚಂದಾಗಿ ಮೆರೆಯಿಸಿದ್ದಾರೆ. ಯುವರಾಜರು ಮುಂಬಯಿ ಬಂದರಿನಲ್ಲಿ ಕಾಲಿಟ್ಟಲ್ಲಿಂದ ಪುನಃ ಕರಾಚಿ ಬಂದರಿನಿಂದ ಹೊರಡುವವರೆಗೆ ಜನರು ಕಾರ್ಯನಿವೃತ್ತಿ, ಹರತಾಳ, ಬಹಿಷ್ಕಾರ, ಮುಂ[illegible]ರೂಪದಿಂದ ಅವರನ್ನು ಎಷ್ಟು ಗೌರವದಿಂದಲೂ [illegible]ದಿಂದಲೂ ಸತ್ಕರಿಸಿದ್ದಾರೆಂಬುದು ಇಲ್ಲಿಯ ಹಿಂದಿಗ[illegible] ಎಂಗ್ಲೊ ಇಂಡಿಯನರು, ಅಧಿಕಾರಿಗಳು ಇವ[illegible]ತ್ತಿದೆ ಎಂದಲ್ಲ; ಇಲ್ಲಿಯ ಸಾತ್ವಿಕ ನಿರ್ವೇದದ ಮತ್ತು ತಿರಸ್ಕಾರದ ಪ್ರತಿಧ್ವನಿಗಳಿಂದ ಲಂಡನ್ ಟೈಮ್ಸ್‌ನಂಥ ಪತ್ರಿಕೆಗಳು ಕೂಡ ವಿಲಾಯತಿಯವರನ್ನು ಎಚ್ಚರಿಸಿದ ಕಾರಣ ಅಲ್ಲಿಯವರಿಗೂ ಇಲ್ಲಿಯ ಪರಿಸ್ಥಿತಿಯ ಮಾಹಿತಿಯು ಉಂಟಾಗಿತ್ತು. ಆದರೂ ನಮ್ಮ ಮುಖ್ಯ ಮಂತ್ರಿಗಳ ಬಾಯಿಯಿಂದ ಈ ವಿಷಯವಾಗಿ ಮೊನ್ನೆಯ ಭಾಷಣದಲ್ಲಿ ಒಂದು ಸೊಲ್ಲಾದರೂ ಹೊರಬಿದ್ದಿದೆಯೆ! ಏನು ಮಂತ್ರಿಗಳ ಗಾಂಭೀರ್ಯ! ಎಷ್ಟು ಗೌರವ! ಮಾತ್ರವಲ್ಲ, ಅತ್ಯಂತ ಕುಶಲನಾದ ಕ್ಷೌರಿಕನು ತನ್ನ ಬಹು ಹರಿತವಾದ ಕತ್ತಿಯಿಂದ ಒಂದಿಷ್ಟು ನೋವು ಮಾಡದೆ ಕೂದಲನ್ನು ತೆಗೆದು ಮುಖವನ್ನು ಹೇಗೆ ಸುಂದರ ಮತ್ತು ನುಣ್ಣಗೆ ಮಾಡುತ್ತಾನೊ ಹಾಗೆಯೆ ಮುಖ್ಯಮಂತ್ರಿಗಳು ಯುವರಾಜರ ಪ್ರಯಾಣದ ವಿಷಯದಲ್ಲಿ ತುಂಬಾ ಹೊಗಳಿದರು. ಇಲ್ಲಿಯ ಜನರಿಗೆ ಯುವರಾಜರ ಆಗಮನದಿಂದ ತುಂಬಾ ಸಂತೋಷವು ಉಂಟಾದ ಬಗ್ಗೆ ವಾರ್ತೆಗಳು ಬಂದಿದ್ದಾವೆಂದು ಹೇಳಿದರು. ಮಂತ್ರಿಗಳ ಈ ಮಾತುಗಳು ಸತ್ಯವಾಗಿಯೆ ಇವೆಯಲ್ಲವೆ? ಮಂತ್ರಿಗಳು ಗಾಂಭೀರ್ಯದ ಹೊದ್ದಿಕೆಯನ್ನು ಎಷ್ಟು ದಪ್ಪವಾಗಿ ಹೊದ್ದುಕೊಂಡರೂ "ಅಸಂತೋಷವುಂಟಾದ ಸಮಯದಲ್ಲಿ ಹಿಂದುಸ್ಥಾನದ ಪ್ರಯಾಣವು ಚಂದವಲ್ಲ"ವೆಂದು ಹಲವರು ಹೇಳುತ್ತಿದ್ದರೆಂದು ಅವರು ಯಾವ ಮಾತನ್ನು ಆಡಿತೋರಿಸಿದರೊ ಈ ಮಾತಿನ ಪರದೆಯಿಂದ ಅವರ ಒಳಗಿನ ಸ್ವರೂಪವು ಗೊತ್ತಾಗುತ್ತದೆ. "ಎಲ್ಲ ಯುರೋಪಿಯನ್ ಪ್ರಜೆಗಳೂ, ಹಿಂದಿ ಸೈನಿಕರೂ ಮುಂದಿನ ನಮ್ಮ ಸಂಕಷ್ಟಗಳನ್ನೂ, ಆಪತ್ತುಗಳನ್ನೂ ಪರಿಹರಿಸುವುದರಲ್ಲಿ ಸಹಾಯಕರಾದಾರೆಂದು ನುಡಿದಿರುವ ಮಾತುಗಳು ಲೊಯ್ಡ ಜೊರ್ಜರ ಚಿತ್ರವನ್ನೂ ಸರಿಯಾಗಿ ನಿಲ್ಲಿಸುತ್ತದೆ. ಇರಲಿ. ಯುವರಾಜರು ಪ್ರತ್ಯುತ್ತರವನ್ನು ಕೊಡುವಾಗ ಏನು ಮಾತು ಆಡಿಯಾರು! ರಾಜರು, ರಾಜಕುಲದವರು ಇಂತಿಂಥ ಮಾತುಗಳನ್ನೆ ಆಡಬೇಕು, ಇಂತಿಂಥ ರೀತಿಯಲ್ಲೆ ನಡಕೊಳ್ಳಬೇಕೆಂಬ ಕಟ್ಟೊ, ಪದ್ಧತಿಯೊ ಅಥವಾ ಕ್ರಮವೊ, ಏನು ಬೇಕಾದುದಿರಲಿ; ಅಂತು ಒಂದು ನಿರ್ಬಂಧವಿರುವುದರಿಂದ ಯುವರಾಜರ ಬಾಯಿಯಿಂದ "ರಾಮಪ್ಪಾ ಮಾತಾಡು" ಇದಕ್ಕಿಂತ ಹೆಚ್ಚಿನ ಶಬ್ದಗಳನ್ನು ನಿರೀಕ್ಷಿಸುವುದು, ಬ್ರಿಟಿಷ್ ಕೊನ್ಸ್ಟಿಟ್ಯೂಶನಿನ ಇತಿಹಾಸಜ್ಞರಿಗೆ ಎಂದೂ ಉಚಿತವಲ್ಲ!

ಮಂಗಳೂರು.

ಬರುವ ಗುರುವಾರ ತಾ. ೨೭ನೆಯ ಸಾಯಂಕಾಲ ೫-೧೫ಕ್ಕೆ ಕರ್ನಾಟಕ ತಿಲಕ ಮಹಾ ವಿದ್ಯಾಲಯದಲ್ಲಿ 'ಆರ್ಯನ್ ಸೊಸಿಯಲ್ ಸರ್ವಿಸ್ ಲೀಗಿನ' ಸಭೆಯು ಜರಗುವುದು. ಎಲ್ಲಾ ಮೆಂಬರರೂ ಸಮಾಜಸೇವೆ ಮಾಡಲಿಚ್ಛಿಸುವ ಇತರ ಗೃಹಸ್ಥರೂ ಮಹಿಳೆಯರೂ ಬರಬೇಕಾಗಿ ವಿನಂತಿ ಮಾಡಿರುತ್ತದೆ.

ಸುರತ್ಕಲ್ ಪರಸ್ಪರ ಸಹಕಾರಿ ಸಂಘದ ಕಾರ್ಯದರ್ಶಿಯವರಾದ ಮ. ರಾ. ರಾ. ಮಂಗಳೂರು ರಾಮಕೃಷ್ಣನವರು ಮಂಗಳೂರು ತಾಲೂಕಿನ ಕೊ-ಒಪರೇಟಿವ್ ಸೊಸೈಟಿಗಳ ಒನರೆರೀ ಅಸಿಸ್ಟಾಂಟ ರಿಜಿಸ್ಟ್ರಾರರಾಗಿ ಸರಕಾರದಿಂದ ನೇಮಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಗವರ್ನಮೆಂಟ ಕೋಲೇಜಿನಲ್ಲಿ ಲೆಕ್ಚರರಾಗಿದ್ದ ಟಿ. ವಿ. ಸುಂದರಮ್, ಯಂ. ಎ. ಎಲ್. ಟಿ. ಇವರು ಒಕ್ಸ್‌ಫರ್ಡಿನಲ್ಲಿ ತತ್ವಜ್ಞಾನವನ್ನು ಕಲಿಯಲು ಹೊರಟು ಹೋಗಿರುವರಂತೆ.

ಆರ್ಯನ್ ಸೋಸಿಯಲ್ ಸರ್ವಿಸ್ ಲೀಗಿನವರು ಪಂಚಮರಲ್ಲಿ ಚರ್ಕ ಪ್ರಚಾರವನ್ನು ಮಾಡಿ ಅವರಿಗೆ ಮಗ್ಗಗಳಲ್ಲಿ ವಸ್ತ್ರವನ್ನು ತಯಾರಿಸುವ ಕೈಗಾರಿಕೆಯನ್ನು ಕಲಿಸಿ, ಅವರು ಈ ವೃತ್ತಿಯನ್ನು ಹಿಡಿಯುವಂತೆ ಪ್ರಯತ್ನಿಸುತ್ತಿದ್ದಾರೆ.

ಬರುವ ಆದಿತ್ಯವಾರದಿಂದ ಮೊದಲುಗೊಂಡು ಪ್ರತಿ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಇಲ್ಲಿಯ ತಿಲಕ ವಿದ್ಯಾಲಯದಲ್ಲಿ ರಾಷ್ಟ್ರೋದ್ಧಾರಕರ ಜೀವನ ಚರಿತ್ರೆಯನ್ನು ಕುರಿತು ಭಾಷಣಗಳಾಗುವುವು.

ರಜೆಯ ಮೇಲಿದ್ದ ಡಿಪ್ಯುಟಿ ಕಲೆಕ್ಟರರಾದ ಮೆ. ಮರಿಯನ್. ಯಸ್. ಪ್ಯಾಸರಿಗೆ ಸೇಲಮಿನ ಜನರಲ್ ಡ್ಯೂಟಿ ಡಿಪ್ಯುಟಿ ಕಲೆಕ್ಟರರಾಗಿ ವರ್ಗವಾಗಿದೆ.

೧೯೨೨—೨೩ನೇ ವರುಷದ ಬಗ್ಗೆ ಜಿಲ್ಲೆಯೊಳಗಿನ ಶೇಂದಿ ಗುತ್ತಿಗೆಗಳ ಏಲಮಿಗೆ ತಾ. ೨೪ರಿಂದ ಪ್ರಾರಂಭವಾಗುವುದು. ತಾ. ೨೪ರಲ್ಲು ಕುಂದಾಪುರ, ಆಗಸ್ಟ ತಾ. ೧ ಹೊಸದುರ್ಗ, ತಾ. ೩ ಕಾಸರಗೋಡು, ತಾ. [illegible] ಮಂಗಳೂರು, ತಾ. ೮ ಪುತ್ತೂರು ತಾ. ೧೦ ಬೆಳ್ತಂಗಡಿ, ತಾ. ೧೨ ಉಡುಪಿ, ತಾ. ೧೪ ಕಾರ್ಕಳ ಈ ಸ್ಥಳಗಳಲ್ಲಿ ಶೇಂದಿ ಗುತ್ತಿಗೆಗಳು ಏಲಂ ಆಗುವುವು. ಕಳೆದ ವರುಷ ಇಡೀ ಜಿಲ್ಲೆಯಲ್ಲಿ ದೇಶಾಭಿಮಾನಿಗಳೆಲ್ಲರೂ ಯಾವ ಪ್ರಕಾರ ಮದ್ಯಪಾನ ನಿಷೇಧದ ಕುರಿತು ತಮಗೆ ಸಾಧ್ಯವಿದ್ದಷ್ಟು ಸಹಾಯಮಾಡಿ ದೇಶಸೇವೆಯ ಕೆಲಸವು ಕೈಗೂಡುವಂತೆ ಮಾಡಿದರೋ ಅದೇ ರೀತಿಯಲ್ಲಿ ಈ ವರುಷವೂ ಕುಡಿಕುತನವನ್ನು ಕಡಿಮೆ ಮಾಡುವುದಕ್ಕಾಗಿ ಗುತ್ತೇದಾರರು ಗುತ್ತೆಗಳನ್ನು ವಹಿಸಿಕೊಳ್ಳದಂತೆಯೂ ಕುಡಿಕತನದ ಹಾನಿಯ ಕುರಿತು ಜನರಿಗೆ ಆಗಾಗ್ಗೆ ಬೋಧಿಸುತ್ತ ಕುಡಿಕರು ಶೇಂದಿ ಅಂಗಡಿಗಳಿಗೆ ಹೋಗದಂತೆಯೂ ಸಹಾಯಕರಾಗಬೇಕು, ಎಲ್ಲಾ ಕೊಂಗ್ರೆಸ್ ಕಮಿಟಿಗಳ ಮುಖ್ಯಾಧಿಕಾರಿಗಳೂ ಗುತ್ತೆಗಳು ಏಲಂ ಆಗುವ ಸ್ಥಳಗಳಲ್ಲಿರುವ ದೇಶಾಭಿಮಾನಿಗಳೂ ಇಂದಿನಿಂದ ಮದ್ಯಪಾನ ಬಹಿಷ್ಕಾರದ ಚಳವಳವು ಯಶಸ್ವಿಯಿಂದ ನಡೆಯುವಂತೆ ಮಾಡಬೇಕಾಗಿ ಡಾ. ಕಾರ್ನಾಡ ಸದಾಶಿವರಾಯರು ಈ ಮೂಲಕ ಸವಿನಯ ವಿನಂತಿ ಮಾಡಿಕೊಳ್ಳುವರು.

ಮಂಗಳೂರು ಮುನ್ಸಿಪಾಲಿಟಿಯ ಸರಹದ್ದಿನೊಳಗಿನಿಂದ ಶೇಂದಿ ಗುತ್ತೆಗಳನ್ನು ತೆಗೆದು ಬಿಡಬೇಕೆಂದು ಮಾಡಿದ ಮನವಿಗಳಿಗೆ ಮುನ್ಸಿಪಾಲ್ ತೆರಿಗೆದಾರರ ಸುಮಾರು ೫೦೦ ಸಹಿಗಳು ಈ ವರೆಗೆ ಆಗಿವೆ.

ದಕ್ಷಿಣ ಕನ್ನಡ.

ಪೆರ್ಡಾಲ:—ಇಲ್ಲಿ ಕುಂಬಳೆಯಿಂದ ಪೆರ್ಡಾಲಿಗೆ ಹೋಗುವ ಲೋಕಲ್‌ಫಂಡ್ ರಸ್ತೆಯ ಆನೆಯ ಮೈಲಿನ ಆರೆ ಫರ್ಲಾಂಗ್ ಕಲ್ಲಿನ ಬಳಿ ಇರುವ ಕಲ್ವರ್ಟ್ ಬಹಳ ಚಿಕ್ಕದಾಗಿ, ದೊಡ್ಡ ಮಳೆ ಬಂದಾಗ ನೀರು ಹೋಗಲು ಸ್ಥಳ ಸಾಲದೆ ರಸ್ತೆಯ ಮೇಲೆ ಹಾದುಹೋಗುತ್ತದೆ. ಈಗ ಒಂದೆರಡು ಹಪ್ತೆಗಳಿಂದ ಬಿಡದೆ ಸುರಿಯುತ್ತಿರುವ ಮಳೆಯ ನೀರೆಲ್ಲಾ ಸದರಿ ರಸ್ತೆಯ ಮೇಲೆ ಹೋಗುವುದರಿಂದ ರಸ್ತೆಯ ಜಲ್ಲಿಕಲ್ಲು ಮೊದಲಾದ ಮಣ್ಣೆಲ್ಲಾ ಕೊರೆದು ಹೋಗಿ ಗಾಡಿಗಳು ಹೋಗುವುದಕ್ಕೆ ಬಹಳ ಅಡ್ಡಿಯಾಗಿರುತ್ತದೆ. ಕೆಲವು ವೇಳೆ ಒಬ್ಬೊಬ್ಬನೆ ಗಾಡಿ ದಾಟಿಸಿದರೆ ಮುಗುಚಿಯೂ ಬೀಳುತ್ತದೆ. ಹೀಗಿರುವುದರಿಂದ ಸಂಬಂಧಪಟ್ಟ ಉದ್ಯೋಗಸ್ಥರು ಈ ಕಡೆಗೆ ಬೇಗನೆ ಗಮನಕೊಡಬೇಕಾಗಿದೆ.

ಉಪ್ಪಿನಂಗಡಿ:—ಈ ತಾಲೂಕು ಬೋರ್ಡಿನ ಈ ತಿಂಗಳ ಮೀಟಿಂಗು ಕಳೆದ ತಾರೀಕು ೧೪ರಲ್ಲು ಸೇರಿ ಕೆಳಗಿನ ನಿರ್ಣಯಗಳು ಪಾಸಾದವು. ಉಪ್ಪಿನಂಗಡಿ ತಾಲೂಕಿನಲ್ಲಿ ಖಡ್ಡಾಯದ ಶಿಕ್ಷಣವನ್ನು ಜಾರಿಗೆ ತರಲು ಡಿಸ್ಟ್ರಿಕ್ಟ ಎಡ್ಯುಕೇಶನಲ್ ಕೌನ್ಸಿಲು ಸದರಿ ಬೋರ್ಡಿನ ಅಭಿಪ್ರಾಯ ಹೇಗಿದೆ ಎಂದು ಪತ್ರವನ್ನು ಬರೆದಿತ್ತು. ಖಡ್ಡಾಯಶಿಕ್ಷಣವನ್ನು ಜಾರಿಗೆ ತರಲು ತಾಲೂಕು ಬೋರ್ಡಿನ ಕೈಯಿಂದ ಬೀಳುವ ಹಣವನ್ನು ಈ ವರುಷದ ಬಜೇಟಿನಲ್ಲಿ ಸೇರಿಸಲು ಅನುಕೂಲವಿಲ್ಲದ್ದರಿಂದ ಈ ವರುಷ ಈ ಕುರಿತು ಯಾವ ಪ್ರಯತ್ನವನ್ನೂ ಮಾಡಲು ಅಸಾಧ್ಯವಾಗಿದೆ; ಬರುವ ವರುಷದ ಬಜೇಟನ್ನು ತಯಾರಿಸುವಾಗ ಇದರ ಕಡೆಗೆ ಗಮನ ಕೊಡಲಾಗುವುದು ಎಂದು ನಿರ್ಧರಿಸಲಾಯಿತು. ಬರುವ ಒಕ್ಟೋಬರದಿಂದ ಎರಡು ಹಪ್ತೆಗಳಿಗೊಮ್ಮೆ ಉಪ್ಪಿನಂಗಡಿಯ ಮೆಡಿಕಲ್ ಅಫೀಸರರು ಕೊಕ್ಕಡ ಮತ್ತು ಕಡಬವನ್ನು ಸಂದರ್ಶಿಸಿ ಅಲ್ಲಿಯ ಜನರಿಗೆ ವೈದಕೀಯ ಸಹಾಯವನ್ನು ಕೊಡುವಂತೆ ಅವರಿಗೆ ಬರಕೊಳ್ಳಬೇಕು. ಬರುವ ಒಕ್ಟೋಬರ ತಿಂಗಳಿನಿಂದ ಪ್ರತಿ ತಿಂಗಳಲ್ಲಿ ಸುಳ್ಯದ ಮೆಡಿಕಲ್ ಅಫೀಸರರು ಹುಣ್ಣಿಮೆಯಿಂದ ಮೊದಲುಗೊಂಡು ಒಂದುವಾರ ಬೆಳ್ಳಾರೆಗೆ ಹೋಗಿ ಅಲ್ಲಿಯ ನಿವಾಸಿಗಳಿಗೆ ಔಷಧೋಪಚಾರದ ಸಹಾಯವನ್ನು ಮಾಡುವಂತೆ ಅವರಿಗೆ ತಿಳಿಸಬೇಕು. ಬರುವ ಸೆಪ್ಟಂಬರ ತಾ। ೩ಂಕ್ಕೆ ಮಂಗಳೂರಿನಲ್ಲಿ ಜರಗಲಿಕ್ಕಿರುವ ಲೋಕಲ್ ಮತ್ತು ಮುನ್ಸಿಪಲ್‌ಗ್ರೂಪ್ ಕೋನ್ಫರೆನ್ಸಿಗೆ ಈ ತಾಲೂಕು ಬೋರ್ಡಿನ ಪ್ರೆಸಿಡೆಂಟರಾದ ಮ।ರಾ। ಹೊಸದುರ್ಗ ಗಣಪತಿರಾಯರನ್ನು ಮತ್ತು ಮ।ರಾ। ಬಿ. ಮಂಗೇಶರಾಯರನ್ನು ಈ ಬೋರ್ಡಿನ ಪ್ರತಿನಿಧಿಗಳಾಗಿ ಆರಿಸಲಾಯಿತು.

ಅಸ್ಪೃಶ್ಯತೆಯ ನಿವಾರಣೆ.

ಅಸ್ಪೃಶ್ಯತೆಯು ಮನುಷ್ಯತ್ವವನ್ನೆ ಪಾಪಕರವಾಗಿಮಾಡುತ್ತದೆ. "ಇನ್ನು ಮುಂದೆ ಎಲ್ಲರೂ ಸ್ಪೃಶ್ಯರೆ ಆಗಲಿ. ಅಸ್ಪೃಶ್ಯತೆಯು ಪೂರ್ವಕಾಲದ ನಡವಳಿ. ಭವಿಷ್ಯದ್ದಿನಗಳ ಸ್ವರ್ಣಮಯಕವಾಟಕ್ಕೆ ಬೀಗದಕೈಯೆ ಇದರ ನಿವಾರಣೆ. ನಿಮ್ಮ ಪಂಚಮನು ಹಿಂದುಳಿಯುವಷ್ಟು ಕಾಲ ನಿಮ್ಮ ಜನಾಂಗವನ್ನು ಅನ್ಯರು ತಲೆಯೆತ್ತಗೊಡರು; ಇತರ ಜನಾಂಗಗಳ ತುಲನೆಯಲ್ಲಿ ನಿಮ್ಮದೊಂದು ಅಂತ್ಯಜ ಜನಾಂಗವಿರುವುದು."

ಹೀಗೆ ಕಳೆದ ತಿಂಗಳಲ್ಲಿ ಗುಜರಾಥ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ ಕೊಟ್ಟ ಭಾಷಣದಲ್ಲಿ ಎಮ್. ಪೌಲ ರಿಚ್ಛಾರ್ಡರವರು ಹೇಳಿರುತ್ತಾರೆ. ನಮ್ಮ ಜನಾಂಗದ ಐದರಲ್ಲೊಂದಂಶವು ಎಂದೆಂದೂ ಗುಲಾಮಗಿರಿಯಲ್ಲಿ ನರಳುತ್ತಿರುವಾಗ ನಮಗೆ ಸ್ವರಾಜ್ಯ ಪ್ರಾಪ್ತಿಯುಂಟಾಗದೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ಅತ್ಯಂತ ಕೀಳುತರಗತಿಯಲ್ಲಿರುವ ಅಂತ್ಯಜರನ್ನು ಕೈಗೊಟ್ಟು ಮುಂದೆ ತರುವುದೆ ನಮ್ಮೆಲ್ಲರ ಪ್ರಥಮ ಕರ್ತವ್ಯವಿರುವುದು. "ದೇವರು ನಮ್ಮ ತಂದೆಯಾಗಿರುತ್ತಾನೆ" ಎಂಬದೆ ಭೂಲೋಕದ ಪ್ರತಿಯೊಂದು ಮತದ ಮುಖ್ಯವಾದ ಬೋಧನೆಯಾಗಿದೆ. ಪ್ರತಿಯೊಬ್ಬನು ಯಾವ ಮತಾವಲಂಬಿಯೆ ಆಗಿರಲಿ, ಎಲ್ಲರೂ ಆತನ ಮಕ್ಕಳು; ಆದುಕಾರಣ, ಪ್ರತಿಯೊಬ್ಬನನ್ನೂ ನಮ್ಮ ಗೆಳೆಯನಂತೆಯೂ ಭ್ರಾತೃವಿನಂತೆಯೂ ಭಾವಿಸಬೇಕು. ಮತಸಂಬಂಧದ ದೃಷ್ಟಿಯಿಂದ ನಾವು ಈ ವಿಷಯವನ್ನು ಇಲ್ಲಿ ಚರ್ಚಿಸುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ—ನನ್ನ ತಿಳುವಳಿಕೆಯ ಮಟ್ಟಿಗೆ ಅಸ್ಪೃಶ್ಯತೆಯು ವೇದವಿರುದ್ಧವಾಗಿರುತ್ತದೆ. ಅಸ್ಪೃಶ್ಯತೆಗೆ ವೇದಗಳಿಂದ ಒಂದೇ ಒಂದು ಆಧಾರವನ್ನು ಕೊಡುವಂತೆ ಹಠವಾದಿಗಳಾದ ನನ್ನ ಸಹೋದರರನ್ನು ಕೇಳಿಕೊಳ್ಳುತ್ತೇನೆ. ಯಾರಾದರೂ ವಿರೋಧವಾದಿಗಳಿದ್ದರೆ ಅವರು ಈಗ ಮುಂದೆ ಬಂದು ಈ ಕುರಿತು ನನ್ನೊಡನೆ ವಾದನಡಿಸಲಿ.

ಲೋಕಸಂಸ್ಕಾರಕರ (Humanitarian) ದೃಷ್ಟಿಯಿಂದ ಹೇಳುವದಾದರೆ, ಬಡವರಿಗೆ ಸಹಾಯ ಮಾಡುವುದೂ ಕೀಳು ಜಾತಿಯವರನ್ನುದ್ಧರಿಸುವುದೂ ಮಾನವ ಪ್ರಕೃತಿಯಿಂದ ಮನುಷ್ಯನಿಗೆ ದೊರೆತ ಕರ್ತವ್ಯವೆನ್ನಬಹುದು. ಈ ಅಭಿಪ್ರಾಯಕ್ಕೆ ಯಾವನೂ ಎದುರಾಡನು. ಎಂದಮೇಲೆ ನಮ್ಮ ದೇಶೀಯರಾದ ಆರು ಕೋಟಿ ಜನರನ್ನು ಅಸ್ಪೃಶ್ಯರೆಂದು ದೂರಕ್ಕೋಡಿಸುತ್ತ ಅವರ ಏಳಿಗೆಗೆ ಯಾವ ಯತ್ನವನ್ನೂ ಮಾಡದಿರುವುದು ಎಷ್ಟೊಂದು ಅನ್ಯಾಯ! ನಮ್ಮಂತೆಯೆ ನರಜನ್ಮವೆತ್ತಿದ ಅವರ ಹಕ್ಕುಗಳನ್ನೆ ಅಪಹರಿಸುವುದು ಎಷ್ಟು ದುರ್ನೀತಿಕರ! ಅಸ್ಪೃಶ್ಯತೆಯನ್ನು ಬೇರುಸಹಿತ ಕಿತ್ತುಹಾಕುವುದೆ ನಮ್ಮ ಕರ್ತವ್ಯವಿದೆ. ಹೀಗೆನ್ನುವುದರ ಅರ್ಥವೇನು? ಅಸ್ಪೃಶ್ಯರೆನ್ನಿಸಿಕೊಳ್ಳುವವರಿಗೆ ಸಾರ್ವಜನಿಕ ಹಕ್ಕುಗಳನ್ನು ಎಂದರೆ, ಸಾರ್ವಜನಿಕ ಮಾರ್ಗಗಳು, ಬಾವಿಗಳು, ತೋಟಗಳು, ಸಂಘಗಳು, ಪಾಠಶಾಲೆಗಳು ಇವೆ ಮೊದಲಾದುವುಗಳನ್ನು ನಿರಾತಂಕವಾಗಿ ಉಪಯೋಗಿಸಿಕೊಳ್ಳುವ ಹಕ್ಕನ್ನು ಕೊಡುವುದೆ ಮೇಲೆ ಹೇಳಿದುದರ ಮೊದಲನೆಯ ಅರ್ಥ. ಯಾವ ಸಂಸ್ಥೆಯು ನಮ್ಮ ಜನಾಂಗದ ಆರು ಕೋಟಿಗೆ ಪ್ರವೇಶವನ್ನು ಕೊಡುವುದಿಲ್ಲವೊ ಅದನ್ನು ನಿಜವಾಗಿ ನೋಡಿದರೆ ಸಾರ್ವಜನಿಕಸಂಸ್ಥೆಯೆಂದು ಕರೆಯುವುದು ಸರಿಯಲ್ಲ. ನಮ್ಮ ಎಲ್ಲಾ ಸಂಸ್ಥೆಗಳ ಅಧಿಕಾರಿಗಳನ್ನೂ ನಮ್ಮಲ್ಲಿ ಅತ್ಯಂತಶ್ರೇಷ್ಠರಿಗೂ ಬಹಳ ಕೀಳು ತರಗತಿಯವರಿಗೂ ತಮ್ಮ ಸಂಸ್ಥೆಗಳ ಪ್ರಯೋಜನವು ದೊರೆಯುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜಾತಿ ಮತಗಳ ವಿಚಾರವಿಲ್ಲದೆ ಸರ್ವರಿಗೂ ಸಹಾಯಗೆಯ್ಯುವುದು ನಾವು ಮಾಡಬೇಕಾದುದೆ ಅಲ್ಲವೆ? ಅಸ್ಪೃಶ್ಯತಾ ವಿಚಾರವನ್ನಿಟ್ಟುಕೊಳ್ಳುವುದು ಪಾಪಕರವೆಂದು ತಿಳಿದು ನಮ್ಮಲ್ಲಿಯ ಎಲ್ಲಾ ಶಾಲೆಗಳ ಅಧಿಕಾರಿಗಳೂ ಗವರ್ನಮೆಂಟ್ ಕಾಲೇಜಿನವರು ಅನುಸರಿಸಿದಂತೆಯೆ ತಮ್ಮ ಶಾಲೆಗಳಿಗೆ ಅಂತ್ಯಜರ ಮಕ್ಕಳು ಬಂದಾಗ ಅವರಿಗೆ ಪ್ರವೇಶ ಕೊಡುವರೆಂದು ನಾನು ದೃಢವಾಗಿ ನಂಬಿರುತ್ತೇನೆ.

ಅಸ್ಪೃಶ್ಯತಾನಿವಾರಣೆ ಎಂಬುದರ ದ್ವಿತೀಯಾರ್ಥವೇನೆಂದರೆ, ಅಂತ್ಯಜರನ್ನು ಅಶುದ್ಧವಾಗುವ ಭಯವಿಲ್ಲದೆ ಮುಟ್ಟುವುದು ಮಾತ್ರವಲ್ಲ, ಅವರ ಸ್ಥಿತಿ ಸಾಮಾಜಿಕ ಆರ್ಥಿಕ ಸಂಸ್ಕಾರಗಳನ್ನು ಮಾಡಲಿಕ್ಕೆ ಬದ್ಧಕಂಕಣರಾಗಿರುವುದು. ಅವರನ್ನು ನಾವು ಪ್ರೀತಿಸುತ್ತೇವೆಂದು ಅವರ ಅನುಭವಕ್ಕೆ ತರುವುದರಿಂದಲೆ ಇದು ಸಾಧ್ಯವಾಗುವುದು. ಬರೀ ಮಾತಿನ ಸಹಾನುಭೂತಿಯಿಂದೇನೂ ಕಾರ್ಯವಿಲ್ಲ. ಅವರ ವಿಚಾರವನ್ನು ನಾವು ಕೈಕೊಳ್ಳುತ್ತೇವೆಂದು ನಮ್ಮ ಕಾರ್ಯಗಳಿಂದ ವ್ಯಕ್ತಪಡಿಸಬೇಕು.

ಧರ್ಮದೇವ ಸಿದ್ಧಾಂತಾಲಂಕಾರ,
ಆಧ್ಯಾತ್ಮಿಕ ಕಾರ್ಯದರ್ಶಿ, ಆರ್ಯನ್ ಸೋಶ್ಯಲ್ ಸರ್ವಿಸು, ಮಂಗಳೂರು.

ಹೊಲೆಯರು, ಪಂಚಮರು ಅಥವಾ ಆದಿದ್ರಾವಿಡರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಜನರಲ್ಲಿ ಸಾಮಾನ್ಯವಾಗಿ ಹೊಲೆಯರೆಂದು ಕರೆಯುವ ಕೆಲವು ಜಾತಿಗಳು ಇವೆ. ಇವರಲ್ಲಿ ಬಾಕುಡರು, ಮುಂಡಾಲರು, ಮುಗ್ಗೆರರು, ಮೇರರು, ಮಾರಿಹೊಲೆಯರು ಕೊರಗರು ಎಂಬ ಜಾತಿಭೇದದ ಹೆಸರಿರುವವರು ಇರುತ್ತಾರೆ. ಆದರೆ ಹೊಲೆಯ, ಮತ್ತು ಪಂಚಮ ಅಥವಾ ಆದಿದ್ರಾವಿಡ ಎಂಬ ಹೆಸರಿರುವ ಒಂದು ಜಾತಿಯವರು ಈ ಕನ್ನಡ ಜಿಲ್ಲೆಯಲ್ಲಿ ಇಲ್ಲ. ಈ ಜಿಲ್ಲೆಗೆ ಬೇರೆ ಬೇರೆ ದೇಶಗಳಿಂದ ಬಂದ ದ್ರಾವಿಡ ವಂಶದವರೂ ಇವರ ನಂತರ ಬಂದ ಆರ್ಯ ಬ್ರಾಹ್ಮಣರೂ ಇವರನ್ನು ಹೊಲೆಯರು, ಎಂದರೆ, ಮುಟ್ಟಲಿಕ್ಕೆ ಅಯೋಗ್ಯರಾದವರೆಂಬ ಹೆಸರಿನಿಂದ ಕರೆಯಲಾರಂಭಿಸಿದರು. ಹೊಲೆಯರು ಎಂಬುದು ಕನ್ನಡ ಶಬ್ದ. ಆರ್ಯರು ಆ ಜಾತಿಯವರಿಗೆ ಸಂಸ್ಕೃತ ಶಬ್ದವನ್ನು ಉಪಯೋಗಿಸಿ "ಮನುಷ್ಯರು" (ಮೃಗಗಳಲ್ಲ) ಎಂದು ಕರೆದರು. ತುಳುಭಾಷೆಯಲ್ಲಿ ಈ ಸಂಸ್ಕೃತ ಶಬ್ದವನ್ನು "ಮನ್ಸೆರ್" ಎಂಬದಾಗಿ ಉಪಯೋಗಿಸಿದರು. ಹೀಗೆ ಹೊರಗಿನಿಂದ ಬಂದ ಜನರು ಬೇರೆ ಬೇರೆ ಹೆಸರುಗಳಿಂದ ಅವರನ್ನು ಕರೆದರೂ ಅವರು ತಮ್ಮ ಜಾತಿಯ ಹೆಸರುಗಳನ್ನು ಬದಲಾಯಿಸಲಿಲ್ಲ. ತರುವಾಯ ಬಂದ ಪಾಶ್ಚಿಮಾತ್ಯರು ಅವರನ್ನು 'ಪಂಚಮರು' ಎಂದರೆ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ಜಾತಿಯವರಿಂದ ಹೊರಗಾದ ಐದನೆಯ ಜಾತಿಯವರೆಂದು ಕರೆಯಲಾರಂಭಿಸಿದರು. ಇತ್ತಲಾಗಿ ಕ್ರೈಸ್ತಮತಕ್ಕೆ ಸೇರಿದ ಮದರಾಸಿನಲ್ಲಿರುವ ಕೆಲವು ಹೊಲೆಯರು ಪಂಚಮರೆಂಬ ಈ ಶಬ್ದವು ತಮಗೆ ಅಯೋಗ್ಯವೆಂದು ತಿಳಿದು, ತಾವು ದ್ರಾವಿಡರಿಗಿಂತಲೂ ಮೊದಲು ಈ ದೇಶದಲ್ಲಿ ಇದ್ದುದರಿಂದ ತಮಗೆ 'ಆದಿದ್ರಾವಿಡ'ರೆಂಬ ಹೆಸರು ಕೊಡಬೇಕೆಂದು ಸರಕಾರದೊಡನೆ ಕೇಳಿಕೊಳ್ಳಲು, ಅವರು ಅದಕ್ಕೆ ಒಪ್ಪಿ, "ಪಂಚಮ" ಎಂಬ ಶಬ್ದವನ್ನು ರದ್ದುಪಡಿಸಿ, 'ಆದಿದ್ರಾವಿಡ'ರೆಂದು ಕರೆಯಬೇಕೆಂದು ಹುಕುಂ ಕೊಟ್ಟರು. ಈ ವಂಶದವರಲ್ಲಿ ಬಾಕುಡರು, ಮುಂಡಾಲರು, ಮುಗ್ಗೆರರು, ಮೇರರು, ಮಾರಿಹೊಲೆಯರು, ಕೊರಗರು ಮುಂತಾದ ಹೆಸರುತ್ತ ಆ ಜಾತಿಗಳಿಗೆ ಅವರವರ ಹೆಸರುಗಳಿಂದ ಕರೆಯದೆ ದೊಡ್ಡ ಪಟ್ಟಣಗಳಲ್ಲಿದ್ದು ಹೊಸ ಹೆಸರುಗಳನ್ನು ಉಂಟುಮಾಡುವುದರಿಂದ ಪ್ರಯೋಜನವೇನೆಂದು ತಿಳಿಯುವುದಿಲ್ಲ.

ಇವರ ಪದ್ಧತಿಗಳು.—ಈ ಐದು ವಿಭಾಗಗಳಲ್ಲಿ ಬಾಕುಡರು ಉತ್ತಮರು. ಇವರು ಪುರಾತನ ಕಾಲದಲ್ಲಿ ಈ ಜಿಲ್ಲೆಯ ಅನೇಕ ಭಾಗಗಳನ್ನು ಆಳಿಕೊಂಡಿದ್ದರು. ಇವರು ಮಕ್ಕಳಕಟ್ಟನ್ನು ಆಚರಿಸುತ್ತಾರೆ. ದಕ್ಷಿಣ ಭಾಗದಲ್ಲಿ ತುಳು ಭಾಷೆಯನ್ನೂ, ಉತ್ತರ ಭಾಗದಲ್ಲಿ ಕನ್ನಡ ಭಾಷೆಯನ್ನೂ ಆಡುತ್ತಾರೆ. ಬೇರೆ ತುಳು ಜನರಲ್ಲಿರುವ ಹಾಗೆಯೆ ಇವರಿಗೂ ಬಳಿಗಳು, (ಗೋತ್ರಗಳು) ಇವೆ. ಜಾತಿಯ ಎಲ್ಲಾ ನ್ಯಾಯಗಳನ್ನು ತೀರಿಸುವುದಕ್ಕಾಗಿ ಒಂದೊಂದು ಬಟ್ಟಿನಲ್ಲಿರುವವರಿಗೆ ಒಬ್ಬೊಬ್ಬ ಗುರಿಕಾರನೂ ಇದ್ದಾನೆ. ಜಾತಿಯ ದೊಡ್ಡ ನ್ಯಾಯಗಳನ್ನು ತೀರಿಸಲಿಕ್ಕೆ ಹೋಬಳಿಗಳನ್ನು ಮಾಡಿರುತ್ತಾರೆ. (೧) ಬಾರ್ಕೂರು ಹೋಬಳಿ. (೨) ಮಂಗಳೂರು ಹೋಬಳಿ. (೩) ಕಾರ್ಕಳ ಹೋಬಳಿ (೪) ವೇಣೂರು ಹೋಬಳಿ. ಆಯಾ ಹೋಬಳಿಗೆ ಸೇರಿದ ಎಲ್ಲಾ ಗುರಿಕಾರರು ಒಟ್ಟುಗೂಡಿ ಅಂಥಾ ನ್ಯಾಯಗಳನ್ನು ತೀರಿಸುತ್ತಾರೆ. ಜಾತಿ ಬಹಿಷ್ಕಾರ ಕೊಡುವ ಅಥವಾ ತಿರಿಗಿ ಜಾತಿಗೆ ಸೇರಿಸುವ ಅಧಿಕಾರವು ಈ ಹೋಬಳಿಗೆ ಸೇರಿದ ಗುರಿಕಾರರ ಸಭೆಗಿರುವುದಲ್ಲದೆ ಒಬ್ಬೊಬ್ಬ ಗುರಿಕಾರನಿಗಿಲ್ಲ. ಪತಿವ್ರತಾಧರ್ಮವು ಇವರಲ್ಲಿ ಒಳ್ಳೇ ರೀತಿಯಲ್ಲಿದೆ. ವ್ಯಭಿಚಾರ ಮಾಡಿದವರನ್ನು ನ್ಯಾಯವಾಗಿ ಶಿಕ್ಷಿಸುತ್ತಾರೆ. ಇವರು ಗೋಮಾಂಸವನ್ನು ತಿನ್ನುವುದಿಲ್ಲ: ಮೃಗಗಳ ಹೆಣಗಳನ್ನಾಗಲಿ ಗತಿಯಿಲ್ಲದೆ ದಾರಿಯಲ್ಲಿ ಬಿದ್ದು ಸತ್ತವರ ಹೆಣಗಳನ್ನಾಗಲಿ ಇವರು ಮುಟ್ಟಲಿಕ್ಕೂ ದಫನಮಾಡಲಿಕ್ಕೂ ಇಲ್ಲ.

ಮುಂಡಾಲರು.—ಇವರು ಬಾಕುಡರಿಗಿಂತ ಸ್ವಲ್ಪ ಕೀಳುಜಾತಿಯವರು. ಇವರಿಗೂ ಬಳಿಗಳು ಇವೆ. ಇವರು ಭೂತಾಳಪಾಂಡ್ಯನ ಅಳಿಯಕಟ್ಟನ್ನು ಅನುಸರಿಸುತ್ತಾರೆ. ಇವರಲ್ಲಿ ನಡಿಯುವ ಮದುವೆ ಶವಸಂಸ್ಕಾರ ಮೊದಲಾದ ಕಾರ್ಯಗಳು ತುಳುಜನರ ರೀತಿಯಲ್ಲಿಯೆ ಇವೆ. ಇವರೂ ಸಹ ಮೃಗಗಳ ಹೆಣಗಳನ್ನಾಗಲಿ ಗತಿಯಿಲ್ಲದವರ ಹೆಣಗಳನ್ನಾಗಲಿ ಮುಟ್ಟಲಿಕ್ಕಿಲ್ಲ. ಮೇರರು ಮುಗ್ಗೆರರೂ ಸಹ ಮುಂಡಾಲರ ರೀತಿಯಲ್ಲಿಯೆ ಇದ್ದಾರೆ.

ಮಾರಿ ಹೊಲೆಯರು.—ಇವರು ಮೇಲಿನ ನಾಲ್ಕು ಜಾತಿಯವರಿಗಿಂತ ಸ್ವಲ್ಪ ಕಡಿಮೆ ತರಗತಿಯವರು. ಆದರೆ ಇವರಿಗೂ ಬಳಿಗಳಿದ್ದು ಅಳಿಯ ಸಂತಾನಕಟ್ಟನ್ನು ಅನುಸರಿಸುವರು. ವಿವಾಹ, ಶವಸಂಸ್ಕಾರ ಮಾಡುವ ಕಟ್ಟುಕಟ್ಟಳೆಗಳು ಇವರಿಗೂ ಇವೆ. ಇವರು ದನಗಳ (ಹೆಣಗಳ) ಮಾಂಸವನ್ನು ತಿನ್ನುತ್ತಾರೆ. ದಾರಿಯಲ್ಲಿ ಬಿದ್ದವರ ಹೆಣಗಳನ್ನು ಹೊರುತ್ತಾರೆ. ಪಟ್ಟಣಗಳಲ್ಲಿ ಬಹಳ ಅಸಹ್ಯವಾದ ಎಲ್ಲಾ ಜಾತಿಯವರ ಮಲಮೂತ್ರಗಳನ್ನು ಹೊರುತ್ತಾರೆ. ಆದರೆ ಹಳ್ಳಿಗಳಲ್ಲಿರುವವರು ಈ ಕೆಲಸ ಮಾಡುವುದಿಲ್ಲ.

ಕೊರಗರು.—ಇವರು ಇನ್ನೂ ಕಾಡುಸ್ಥಿತಿಯಲ್ಲಿಯೆ ಇರುತ್ತಾರೆ. ಇವರು ಕುಕ್ಕೆ, ಮುಂತಾದ್ದನ್ನು ಹೆಣೆಯುವ ಕೆಲಸ ಮಾಡುತ್ತಾರೆ. ಇವರಲ್ಲಿಯೂ ಗುರಿಕಾರರು ಇದ್ದಾರೆ. ಜಾತಿಯ ನ್ಯಾಯಗಳನ್ನು ಇವರೆ ತೀರ್ಮಾನಿಸಿಕೊಳ್ಳುತ್ತಾರೆ. ಮದುವೆಯ ಕ್ರಮಗಳೂ ಒಳ್ಳೇ ರೀತಿಯಲ್ಲಿಯೆ ಇವೆ.

ಸ್ವರಾಜ್ಯಸಂಪಾದನೆಗೆ ಖಾದಿ ಪ್ರಚಾರ.

ಹಿಂದುಸ್ಥಾನದಲ್ಲಿ ತಯಾರಿಸಿದ ಹತ್ತಿ, ರೇಶ್ಮೆ, ಉಣ್ಣೆ ಮತ್ತು ನಾರುಗಳ ಕೈನೂಲಿನಿಂದ ಮಾಡಿದ ಬಟ್ಟೆಯೆ ಶುದ್ಧಖಾದಿಯಾಗಿದೆ. ಇಂತಹ ಖದ್ದರಿನ ಪ್ರಚಾರವೆ ದೇಶಕ್ಕೆ ಸಾಂಪತ್ತಿಕ ಸ್ವಾತಂತ್ರ್ಯವನ್ನು ಕೊಡುವುದಾಗಿದೆ; ಊಟವಿಲ್ಲದೆ ಖಿಲಿಯಗಟ್ಟಿಳಿ ಬಡವರಿಗೆ ಊಟಕ್ಕೂ ಉಡುವುದಕ್ಕೂ ಕೊಡುವುದಾಗಿದೆ; ದಾಸ್ಯದಿಂದ ಬಿಡುಗಡೆ ಹೊಂದಿಸುವುದಾಗಿದೆ. ಆದ್ದರಿಂದಲೆ ಮಹಾತ್ಮಾಜೀಯವರು 'ಶ್ರೀಮಂತರು ಬಡವರು ಎನ್ನದೆ ಪ್ರತಿಯೊಬ್ಬ ಹೆಂಗಸೂ ಗಂಡಸೂ ಪ್ರತಿದಿನ [illegible] ತಾಸುಗಳ ವರೆಗಾದರೂ ನೂಲುಮಾಡುವುದು ತನ್ನ ಧರ್ಮವೆಂದೂ ಕರ್ತವ್ಯವೆಂದೂ ತಿಳಿದುಕೊಂಡು ಸ್ವರಾಜ್ಯ ಸಾಧನೆಗೋಸ್ಕರ ಕೆಲಸಮಾಡಬೇಕೆಂದು' ಹೇಳಿರುವರು.

ಆದರೂ ಎಷ್ಟು ಜನ [illegible] ಈಗಿನ ಸ್ಥಿತಿಯನ್ನು ಸ್ವಲ್ಪವೂ ಪರ್ಯಾಲೋಚಿಸದೆ, ಅಲಕ್ಷ್ಯಭಾವವುಳ್ಳವರಾಗಿ [illegible] ದಾಸ್ಯದಲ್ಲಿಯೂ ಅಸಹಾಯ ಸ್ಥಿತಿಯಲ್ಲಿಯೂ ಸಂಪೂರ್ಣ ಮುಳುಗಿಕೊಂಡಿದ್ದರೂ, ಎಳ್ಳಷ್ಟಾದರೂ ತಿಳಿಯದೆ ಜೀವಿಸುವುದು ಕೇವಲ ದುಃಖಾಸ್ಪದ. ಸ್ಥಿತಿಯನ್ನು ಎಷ್ಟೋ [illegible]ರು, ಸಾಹುಕಾರರು, ವಕೀಲರು, 'ಸ್ವದೇಶಿ' ಪ್ರಚಾರ ಮತ್ತು [illegible] ಎಷ್ಟೋ ನಿಷೇಧಗಳ ವಿಷಯ ಸ್ವಲ್ಪ [illegible] ಕೆಲಸಮಾಡಿದರೆ, ಕೂಡಲೆ ಬಡವರನೇಕರು ಇವರನ್ನು ಹಿಂಬಾಲಿಸಿಕೊಂಡು ಏಳಿಗೆಯನ್ನು ಹೊಂದುತ್ತಿದ್ದರು. ಇವರ ಬದಲಿಗೆ ಸ್ವಾರ್ಥಪರರಾಗಿ ದಾಸ್ಯಸ್ಥಿತಿಯಲ್ಲಿದ್ದರೂ [illegible] ಕುಡುಕತನವು ಹೆಚ್ಚುವಂತೆ ಶ್ರೀಮಂತರಾದವರೆ ಗುತ್ತಿಗೆಗಳನ್ನು ತೆರೆಯಲು, ಅವುಗಳನ್ನು ವಹಿಸಿಕೊಂಡು, ಪ್ರಯತ್ನಿಸುವುದೆಂದರೆ, ಎಂಥಾ ದುರ್ದೈವ! ಇನ್ನು ಕೆಲವು ಕಡೆಗಳಲ್ಲಿ ತಮ್ಮ ಸಂಪೂರ್ಣ ಸಹಾಯವನ್ನು [illegible] ಮಾರುವವರಿಗೆ ಕೊಟ್ಟು ಮದ್ಯಪಾನನಿಷೇಧಮಾಡುವ ಕೆಲಸದಲ್ಲಿ ಪ್ರವರ್ತಿಸುವವರಿಗೆ ಎದುರಿಸಿ, ಕುಡುಕತನವನ್ನು ಹೆಚ್ಚಿಸಲು ಉತ್ತೇಜನ ಕೊಡುವುದೆಂದರೆ, ಇವರು ಸ್ವಲ್ಪವೂ ಭಾರತದ ಕಷ್ಟ ದೌರ್ಬಲ್ಯಗಳನ್ನು ಲಕ್ಷಿಸದವರಂತೆ ಇರುವರು.

ಇನ್ನು ಕೆಲವರು ಖಾದಿಪ್ರಚಾರ ಕೆಲಸವನ್ನು ಮಾಡುವ ನೆವದಿಂದ ಗಿರಣಿ ನೂಲನ್ನು ಉದ್ದಕ್ಕೆ ಉಪಯೋಗಿಸಿ ಅಡ್ಡಕ್ಕೆ ಮಾತ್ರ ಕೈನೂಲನ್ನು ಹಾಕಿ ತಯಾರಿಸಿದ ಬಟ್ಟೆಯನ್ನು ಖಾದಿ ಎಂದು ಅನೇಕ ಕಡೆಗಳಲ್ಲಿ ಮಾರುತ್ತಿರುವರು. ಇಂತಹ ಬಟ್ಟೆ ಖಾದಿಯೂ ಅಲ್ಲ; ಇದನ್ನು ಮಾರುವುದರಿಂದ ಖಾದಿಪ್ರಚಾರವು ಎಂದೂ ಆದಂತಾಗುವುದಿಲ್ಲ. ಇದರಿಂದ ಖಾದಿಪ್ರಚಾರಕ್ಕೆ ವಿಘ್ನವನ್ನು ಮಾಡಿದಂತೆಯೆ ಆಗುವುದು, ಹೇಗೆಂದರೆ, ಇಂತಹ ವಸ್ತ್ರವು ಹೆಚ್ಚು ಕಾಲ ಬಾಳುವುದಿಲ್ಲ. ಗಿರಣಿ ನೂಲು ಬಲಹೀನವಾಗಿದ್ದುದರಿಂದ ಕೈನೂಲಿನ ಭಾರವನ್ನು ಹೊರಲಾರದೆ ಒಂದೆರಡು ತಿಂಗಳಲ್ಲಿ ಉದ್ದದ ನೂಲು ತುಂಡಾಗಿ ಹೋಗುವುದು. ಇದರಿಂದ ಜನರಿಗೆ ಖಾದಿಯ ಮೇಲೆ ಅವಿಶ್ವಾಸ ಹುಟ್ಟುವುದು. ಇಂತಹ ಖಾದಿಯೆ ಪ್ರಚಾರಕ್ಕೆ ಬಂತೆಂದರೆ ಶುದ್ಧ ಖಾದಿಯು ತಯಾರಾಗುವುದು ಕಡಿಮೆಯಾಗಿ ಕೊನೆಗೆ ನೂಲುವ ಕಸಬು ಬಿದ್ದುಹೋಗಲು ಕಾರಣವಾಗುವುದು. ಸಾಂಪತ್ತಿಕ ಸ್ವಾತಂತ್ರ್ಯಕ್ಕಾಗಿ ೨೫ ಸಾವಿರಕ್ಕಿಂತ ಹೆಚ್ಚಿನ ದೇಶಭಕ್ತರು ಖಾದಿ ಪ್ರಚಾರವಾಗಬೇಕಾಗಿ ಸಾರಿ ಸಾರಿ ಹೇಳಿ ಜೈಲಿಗೆ ಹೋದರೂ ಕೇವಲ ಸ್ವಾರ್ಥಭಾವನೆಯಿಂದ ಕಪಟರೀತಿಯಲ್ಲಿ ತಯಾರಿಸಿದ ಖಾದಿಯನ್ನು ವಿಕ್ರಯಿಸಿ ಖಾದಿಯ ಪವಿತ್ರತೆಯನ್ನು ಹಾಳುಮಾಡುವುದು ದೇಶದ್ರೋಹತನವಲ್ಲದೆ ಬೇರೆ ಏನು? ಖಾದಿಪ್ರಚಾರ ಮಾಡಬೇಕೆಂತ ಹೃತ್ಪೂರ್ವಕ ಯೋಚಿಸುವವರೆಲ್ಲರೂ ಉದ್ದಕ್ಕೂ ಅಡ್ಡಕ್ಕೂ ಕೈನೂಲನ್ನೆ ಉಪಯೋಗಿಸಿ ಖದ್ದರ್ ತಯಾರುಮಾಡುವಂತೆಯೂ, ಕಪಟ ಖಾದಿಯು ಪೇಟೆಯಲ್ಲಿ ಮಾರಾಟಕ್ಕೆ ಸಿಗದಂತೆ ಮಾಡುವ ಪ್ರಯತ್ನದಲ್ಲಿ ಎಲ್ಲರೂ ಮೈಹಾಕಿ ಕೆಲಸಮಾಡಬೇಕೆಂತಲೂ ದೇಶಾಭಿಮಾನಿಗಳಾದವರೆಲ್ಲರನ್ನೂ ನಾವು ಅಂಗಲಾಚಿ ಬೇಡಿಕೊಳ್ಳುತ್ತೇವೆ. ಒಂದುವೇಳೆ ದೊರಗಾದ ಖಾದಿಯನ್ನು ಗಿರಾಕಿಗಳು ಕೊಂಡುಕೊಳ್ಳುವುದಿಲ್ಲವೆಂದು ಮುಂತಾದ ಆಕ್ಷೇಪಗಳನ್ನು ಹೇಳುವವರೆಲ್ಲರೂ ಹಿಂದುಸ್ಥಾನದ ಗಿರಣಿ ನೂಲಿನ ಬಟ್ಟೆಯನ್ನು ವಿಕ್ರಯಿಸಿಕೊಂಡು ಖಾದಿಯ ಪ್ರಸ್ತಾಪಕ್ಕೆನೆ ಬಾರದಿದ್ದರೂ ಚಿಂತೆಯಿಲ್ಲ. ಪರಂತು, ಧನಾಭಿಲಾಷೆಯಿಂದ ಇಂತಹ ಪವಿತ್ರಕಾರ್ಯಕ್ಕೆ ಅಡ್ಡ ಬರಬಾರದಾಗಿ ವಿನಂತಿಮಾಡಿಕೊಳ್ಳುತ್ತೇವೆ. ಹೀಗೆ ಮಾಡಿದರೆ ಖಾದಿಯನ್ನು ಪವಿತ್ರವಸ್ತುವೆಂದೂ, ದೇಶದೇಳಿಗೆಗೆ ಮುಖ್ಯ ಸಾಧಕವೆಂದೂ ನಂಬುವವರು ಮಾತ್ರ ಕೈರಾಟೆಗಳ ಮತ್ತು ಕೈನೂಲಿನ ಖಾದಿಯನ್ನು ಪ್ರಚಾರಪಡಿಸುವರು.

ಗಿರಾಕಿಗಳಿಗೂ ಒಂದೆರಡು ಮಾತು! ನೀವು ಖಾದಿಯನ್ನು ಧರಿಸಿಕೊಳ್ಳಬೇಕೆಂಬ ಆಸೆಯುಳ್ಳವರಾಗಿದ್ದರೂ ಅನೇಕ ವೇಳೆ ಮೋಸಹೋಗುತ್ತೀರಿ. ಮೋಸಕರವಾದ ರೀತಿಯಲ್ಲಿ ತಯಾರಿಸಿದ ಖಾದಿಯನ್ನು ಕೊಂಡುಕೊಂಡು ನಂತರ ವ್ಯಸನಪಡುತ್ತೀರಿ. ಹೀಗಾಗದಂತೆ ಒಂದೇ ಉಪಾಯವಿದೆ, ಮೊದಲು ನಯವಾದ ಖಾದಿಬೇಕೆಂದು ಅಪೇಕ್ಷೆ ಮಾಡದಿರಿ. ಎರಡನೆಯದಾಗಿ, ಅನ್ಯಕಡೆಗಳಿಂದ ಖಾದಿಯನ್ನು ತರಿಸಿಕೊಳ್ಳಬೇಡಿರಿ. ಪ್ರಯತ್ನಪಟ್ಟು ಸ್ಥಳೀಕ ಕಾಂಗ್ರೆಸ್ ಕಮಿಟಿಯವರಿಂದಲೆ ಖಾದಿಯನ್ನು ಕೊಂಡುಕೊಂಡು ಅಥವ ನೀವೆ ಸ್ಥಳೀಕ ಜಾಡರ ಮೂಲಕ ನೇಯಿಸಿದ ಖಾದಿಯನ್ನು ಉಪಯೋಗಿಸಿರಿ. ಒಂದುವೇಳೆ ಸ್ಥಳೀಕ ಕಾಂಗ್ರೆಸ್ ಕಮಿಟಿಯು ಚರ್ಕಪ್ರಚಾರವನ್ನೂ ಖಾದಿಪ್ರಚಾರ ಕೆಲಸವನ್ನೂ ಆರಂಭಿಸದಿದ್ದರೆ ನೀವು ಸದಸ್ಯರಾಗಿ ಕಮಿಟಿಯನ್ನು ಎಚ್ಚರಿಸಿ ಕೆಲಸಕ್ಕೆ ಬೇಗನೆ ಪ್ರವೃತ್ತಿಮಾಡುವಂತೆ, ಉತ್ತೇಜನಕೊಡಿರಿ. ಪೇಟೆಯಲ್ಲಿ ಕಪಟಖಾದಿಯು ಮಾರಲ್ಪಡುವುದಾದರೂ ನೀವು ಶುದ್ಧ ಖಾದಿಯನ್ನೆ ಧರಿಸಬೇಕೆಂಬ ದೃಢಪ್ರತಿಜ್ಞೆಯುಳ್ಳವರಾಗಿದ್ದರೆ ಆದರೆ ಕಪಟಖಾದಿಯನ್ನು ವಿಕ್ರಯಿಸುವವರನ್ನೆಲ್ಲಾ ನೀವು ಸರಿಪಡಿಸಬಹುದು. ಗಿರಾಕಿ ಇಲ್ಲದಿದ್ದರೆ ಅಂತಹ ವಸ್ತ್ರವನ್ನು ತಯಾರುಮಾಡುವುದನ್ನು ಅವರು ನಿಲ್ಲಿಸಲೆ ಬೇಕಾಗುವುದು.

ಹೆಚ್ಚಾಗಿ ಹಳ್ಳಿಗಳಲ್ಲಿ ಚರ್ಕಪ್ರಚಾರವು ಸಾಕಷ್ಟು ಆಗದಿರುವುದರಿಂದ ಹಳ್ಳಿಯ ಜನರೆಲ್ಲರೂ ಕಪಟಖಾದಿಯನ್ನು ಬಹಳವಾಗಿ ಕೊಂಡುಕೊಂಡು ಮೋಸಹೋಗುವರು. ಪ್ರತಿ ಹಳ್ಳಿಯ ಅಥವ ಗ್ರಾಮ ಕಮಿಟಿಯವರು ಜಾಗರೂಕರಾಗಿದ್ದು ಬಡಜನರಿಗೆ ಸಹಾಯಮಾಡಿದರೆ "ಗಾಂಧಿ ಸೀರೆ, ಗಾಂಧಿ ಧೋತ್ರ"ಗಳೆಂದು ಬಿಕರಿಮಾಡುವ ಕೆಲವು ಜವಳಿ ಸಾಹುಕಾರರ ಬಲೆಯಿಂದ ಬಡವರನ್ನು ತಪ್ಪಿಸಿದ ಪುಣ್ಯವು ಬಂದೀತು. ಅಲ್ಲದೆ ಚರ್ಕ ಖಾದಿ ಪ್ರಚಾರಮಾಡದೆ ಇದ್ದ ಕಾಂಗ್ರೆಸ್ ಸಂಸ್ಥೆಗಳೆ ಈ ಪಾಪಕ್ಕೆ ಭಾಗಿಯಾಗಿವೆ. ಬೇಕಷ್ಟು ಕೈನೂಲು ತಯಾರಾಗುವಂತೆ ಕಮಿಟಿಯವರು ಕೆಲಸಮಾಡಿದ್ದರೆ ಇಂಥಾ ಕಪಟಖಾದಿಯು ತಯಾರಾಗುತ್ತಲೇ ಇದ್ದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಶುದ್ಧ ಖಾದಿಯ ಪ್ರಚಾರವು ಅತಿ ಜೋರಿನಿಂದ ನಡೆಯಬೇಕಾದುದರಿಂದ ದೇಶಾಭಿಮಾನಿಗಳೆಲ್ಲರೂ ತ್ವರೆಯಾಗಿ ಈ ಕಾರ್ಯಭಾಗದಲ್ಲಿ ಕೆಲಸಮಾಡಬೇಕಾಗಿ ವಿನಂತಿಮಾಡಿಕೊಳ್ಳುತ್ತೇವೆ.

ಎಸ್. ನಾರಾಯಣರಾವ್,
ಜತೆ ಕಾರ್ಯದರ್ಶಿ, ಉಡುಪಿ ಕಾಂಗ್ರೆಸ್ ಕಮಿಟಿ.

ರಾಷ್ಟ್ರೀಯ ಶಿಕ್ಷಣ ಮಂಡಲ, ಉಡುಪಿ.

ಜಮಾ.	ರೂ.	ಆ.	ಪೈ.
ಸಾಮಾಜಿಕರ ವಂತಿಗೆ	58	0	0
ಗದಗ ನಾಟಕ ಕಂಪೆನಿಯವರ ನಾಟಕದ ಬಾಬತು	542	3	0
ಮದುವೆ ಒಪ್ಪಣಿ ಇತ್ಯಾದಿ	29	0	0
ಬಡ್ಡಿ	13	0	0
ಬರಬೇಕಾದ್ದು ವಸೂಲು ಬಂದದ್ದು	66	7	11
ಮುಂಚಿನ ಶಿಲ್ಕು	19	1	0
ರಾಷ್ಟ್ರೀಯ ವಿದ್ಯಾಮಂದಿರದಿಂದ ಹುಡುಗರ ಸಂಬಳ, ಚರಕಗಳ ಮಾರಾಟ ಇತ್ಯಾದಿಯಿಂದ ಬಂದದ್ದು	229	2	7
ಜುಮ್ಲಾ...	956	14	6
ಖರ್ಚು.	**ರೂ.**	**ಆ.**	**ಪೈ.**
ಚಿಲ್ಲರೆ ಖರ್ಚು	2	8	1
ರಾಷ್ಟ್ರೀಯ ಖಾದಿ ಭಂಡಾರಕ್ಕೆ ವಸ್ತ್ರ, ಚರಕ ವಗೈರೆ ಸಂದದ್ದು	136	9	3
ರಾಷ್ಟ್ರೀಯ ವಿದ್ಯಾಮಂದಿರಕ್ಕೆ ಸಂದದ್ದು;—			
1. ಕಟ್ಟೋಣದ ಬಾಡಿಗೆ (ಎಪ್ರಿಲ್, ಮೇ, ಜೂನ್)	30	2	0
2 ಶಾಲಾ ಪುಸ್ತಕಗಳು, ಛಾಪಾ ಖರ್ಚು, ಶಾಲಾ ವರ್ಧಂತಿಯ ದಿನದ ಖರ್ಚು ಇತ್ಯಾದಿ	86	4	4
3. ಪ್ರಾಥಮಿಕ ಶಾಲೆಯ ಬಗ್ಗೆ ಖರ್ಚು	30	15	0
4. ಮುಂಚಿನ ಬಾಕಿ ವ ಜೂನ್ ಬಾಬತು ಉಪಾಧ್ಯಾಯರ ಸಂಬಳ	643	3	0
ನಗದು ಶಿಲ್ಕು	27	4	10
ಜುಮ್ಲಾ....	956	14	6

ಠೇವಣೆಯಾಗಿ ಬೇಂಕಿಂಗ್ ಕೋರ್ಪೊರೇಶನಿನಲ್ಲಿ ರೂ. 1100—0—0 ಖಾಯಂ ಇದೆ. ಅದರ ಜವಾಬ್ದಾರಿಯ ಮೇಲೆ ರೂ. 300 ಸಾಲ ಇದೆ.

ತಾ. 11-7-೨೨.

ಕಾರ್ಯದರ್ಶಿ,
ರಾ. ಶಿ. ಮಂಡಲ, ಉಡುಪಿ.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇದ ಔಷಧಾಲಯವು
—(ಸ್ಥಾಪಿತವಾದ್ದು 1881)—
ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ,
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೬, (ಬ್ರಾಡ್ವೇ, ಮದ್ರಾಸ್).
Local Agents: Raphael & Co.
Brito Buildings,
Hampankatta, MANGALORE.

POPULAR FLUTE.
HARMONIUM

Awarded Several Medals. Thousands of Popular Flutes are in daily use all over India, Burma and Ceylon. No more introduction required. Fitted up with first class picked materials. The tone is powerful and sweet and the construction ingenious. Single reeds 4 stop with Box. Rs. 23, 25, 30. Double reeds 5 stop with Box. Rs. 35, 40, 45. Send Rs. 5 with order to:—

POPULAR HARMONIUM & CO.
Post Box No. 12 (S) G. Po. *Calcutta*.

The Canara Bank Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid
up Capital Rs. 300,000—0—0
Reserve and other sinking
Funds „ 181,250—0—0

ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
„ 181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಖಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.

Canara Bank Ltd.,
Mangalore, 21st Feb. 1922.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು [illegible] ಹಾಗೆಯೇ ಆಗಲಿ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೆಯುವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷಾವಧಿ ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಸ್ಥರಿಗೂ [illegible] ಈ ಮಾತ್ರೆಗಳು ಸಂಜೀವನಪ್ರಾಯವಾದವು.

ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ.

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ಶಾಶ್ವತವಾಗಿ [illegible] ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಕಫ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡಲಾರಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜನಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ, ಕೀವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಚಿಹ್ನೆಯನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬಿಡಿ ಸೀಸೆ 1ಕ್ಕೆ ರೂ. 2—0—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ, ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು —
— ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ್, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ
ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳು, ಲಾಟೀನುಗಳು, ಯುನಾಮಲ್ ಬಟ್ಲು ವಗೈರೆ ಸಾಮಾನುಗಳು, ಪ್ರಿಂಟಿಂಗ್ ಪೇಪರ್, ಬ್ರವುನ್ ಪೇಪರ್, ರದ್ದಿ, ಖಾಲಿ ಕವರು, ಫೌಂಟನ್ ಪೆನ್, [illegible] ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, [illegible] ಇತರ ಕಬ್ಬಿಣ ಸಾಮಾನುಗಳೂ, ಪುರುಷರಿಗೆ ಬೇಕಾಗುವ [illegible] ತೊಡುವುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಮಾನುಗಳೂ, [illegible] ವಗೈರೆ ಮಹಾಲು ಸುಲಭ ಕ್ರಯಕ್ಕೆ ದೊರೆಯುವುದು.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ.

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ರಾಷ್ಟ್ರೀಯ ಹೊಸ ಪುಸ್ತಕಗಳು

ದೇಶೋನ್ನತಿ ಗ್ರಂಥಮಾಲಾ

ಸಂಖ್ಯೆ ೧ ಮಹಾತ್ಮಾ ಗಾಂಧಿಯವರ ಹಿಂದ್‌ಸ್ವರಾಜ್ಯ ಕನ್ನಡ ೦—೮—೦ ೨ನೆ ಆವೃತ್ತಿ ಅಚ್ಚಿನಲ್ಲಿದೆ.

೩ ದೀನಬಂಧು ಸಿ. ಯಫ್. ಅಂಡ್ರ್ಯೂಸರವರ ಅಸಹಕಾರ ಪತ್ರಗಳು ೦—೬—೦
೪ ಹಿಂದೀ ಭಾಷಾಸಾರ. ಹಿಂದೀಭಾಷೆ ಕಲಿಯಲು ೧ನೇ ಪಾಠ ಪುಸ್ತಕ
೪ ರಾಷ್ಟ್ರೀಯಕರ್ಮ ಅಥವಾ ದೇಶಭಕ್ತರ ಸೂಕ್ತಿಮಾಲೆ ೦—೩—೦
ದೇಶಭಕ್ತ ಅಲೀಸಹೋದರರ ಚರಿತ್ರೆ ೦—೨—೦
ಮ ಗಾಂಧೀಚರಿತ್ರೆ ೦—೫—೦
" ಚಿಕ್ಕದು ೦—೨—೦

ರಾಷ್ಟ್ರೀಯ ಪದ್ಯಪುಸ್ತಕಗಳು.

ತಿಲಕ ಕಾವ್ಯಾಂಜಲಿ	೦—೪—೦
ಗಾಂಧಿ ವಿಜಯ	೦—೨—೦
ರಾಷ್ಟ್ರೀಯ ಗೀತಾವಳಿ	೦—೦—೯
ಸ್ವರಾಜ್ಯಸಂಪತ್ತು	೦—೦—೩

ಇವುಗಳಲ್ಲದೆ ಇನ್ನು ಅನೇಕ ತರದ ಪುಸ್ತಕಗಳು ವಿಕ್ರಿಕ್ಕೆ ಸಿದ್ಧವಿರುವವು ವಿ. ಪಿ.ಯಿಂದ ಅಪೇಕ್ಷಿಸುವವರು ನಾಲ್ಕಾಣೆ ಸ್ಟಾಂಪು ಮುಂಗಡವಾಗಿ ಕಳುಹಿಸಿದಲ್ಲಿ ಉಳಿದ ಐವಜಿಗೆ ವಿ. ಪಿ. ಮಾಡಲಾಗುವುದು. ಎಂಟಾಣೆಗಿಂತ ಕಡಿಮೆ ಕ್ರಯದ ಪುಸ್ತಕಗಳು ವಿ. ಪಿ.ಯಿಂದ ಕಳುಹಿಸಲಾರೆವು.

ವಿಳಾಸ:— ಕೆ. ಯಂ. ದಾಸಪ್ರಭು ಅಂಡ್ ಸನ್ಸ್,
ರಥಬೀದಿ, ಮಂಗಳೂರು.

Sri Lakshmi Mills, Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್—ಕಾಸರಗೋಡು, ದಕ್ಷಿಣ ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ನೆಲ್ಲಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ನೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

ಸ್ವದೇಶ ಭಕ್ತರೇ ಶ್ರೀ ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿಟೋಪಿಗಳು, ಬಿಳಿ, ಹಸುರು, ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ ನಯವಾದ ಶರ್ಟಿನ ವಸ್ತ್ರಗಳೂ ಮತ್ತು ನೇಷ್ಟಿ, ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು—ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ನಾಲ್ಕಾಣೆಯ ಸ್ಟಾಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:— ಮುಳಿಯ ತಿಮ್ಮಪ್ಪಯ್ಯ ಮತ್ತು ಸಹೋದರ
ರತ್ನ ಮತ್ತು ಜವಳಿ ವ್ಯಾಪಾರಿಗಳು,
ಬಾರಾಮಹಾಲ (ಗೋಲಿಕಟ್ಟೆ ಬಜಾರು) ಮಂಗಳೂರು

FORDS.

The Cheapest and Best Motor Vehicles in the World.

LATEST QUOTATIONS:

Touring ars	Rs. 3,300.
One Ton Chassis. . . .	„ 3,300.
Tyre & Tube for Spare rim . .	„ 100.

Immediate delivery F. O. R. Madras.

FORD SPARES and other MOTOR ACCESSORIES at MADRAS PRICES delivered at Mangalore

Apply to

PEIRCE, LESLIE & CO., LTD., MANGALORE,
South Kanara.

Also agents for MICHELIN TYRES. Prices on Application.

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered: No. M. 498.

SWADESHABHIMANI. MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ ‖
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖

ದೊರೆಯಲನುಪಮರತ್ನಗಳು ಸಾ- | ಗರವ ಮಥಿಸಲು ಸುರರಿಗದರಿಂ |
ಹರುಷವಾಯಿತೆ! ಮತ್ತೆ ವಿಷವ ಸುರುತ ಭರುತಿರುವ ‖
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೧೬. ಮಂಗಳೂರು, ತಾರೀಕು ೨೮ನೇ ಜುಲೈ ಶುಕ್ರವಾರ ೧೯೨೨. ಸಂಚಿಕೆ ೩೦

ಮ್ಹಾಲು ಉತ್ತಮ! ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು,

ಮೇಲಾದ

— ಜವುಳಿ ಸಂಗ್ರಹದ ಮಳಿಗೆ —

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಶ್ಮೆ ಪಟ್ಟೆ, ಮತ್ತು ನೂಲಿನ ಬಟ್ಟೆಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಮ್ಮದಾಬಾದ, ಮಹೇಶ್ವರಿ, ಗುಜರಾಥ, ಬಡೋದಾ, ಕೊಯಮುತ್ತೂರು, ಗದಗ, ಹುಬ್ಬಳ್ಳಿ, ಧಾರವಾಡ, ಇಳಕಲ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಮ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಬರ್ಮಾ ಮೊದಲಾದ ಕಡೆಗಳಲ್ಲಿಯೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳು, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುಪು ತೊಡುಪುಗಳು ಈಗ ತಾನೇ ತರಿಸಿದ್ದು ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗಿರುವ ಬಿಳೇ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳೂ, ಬೀ ವ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಶರ್ಟಿನ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವುವು.

ನಗದಿ ಪಡೆಯುವವರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೈ,
ಕಸ್ತೂರಿ ನಾಗೇಶಪ್ಪೈ ಮತ್ತು ಕಂಪೆನಿ,
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ಎಲುಗೊಬ್ಬರದಲ್ಲಿರುವುದಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತಲು ಸಾಲಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಕೊಳ್ಳುವವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಷನ್ ರೋ, ಕಲ್ಕತ್ತಾ.

THE DIRECTOR CHILEAN NITRATE COMMITTEE,
(INDIAN DELEGATION)
6, *Mission Row*, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಗ್ರಹಾರ ಕೃಷ್ಣಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತವಿವೇಕ	ಕ್ರಯ	೦—೧೦—೦
ಕೇತುಭಂಗ	"	೦—೧೨—೦
ಸಂಕ್ಷೇಪಗೀತೆ	"	೦—೧೦—೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತೋಲ್ಲಾಸ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಕೀರ್ತಿ, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅನೇಕ ತರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೩—೦ ಸ್ಥಳಿಕರಿಗೆ ರೂ. ೨—೦—೦. ವಿ. ಪಿ. ಖರ್ಚು ಆಣೆ ರೂ. ೩—೦—೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಡ್ರೈಂಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫ್ಲೂಟ್ ಸ್ಕೇಲುಗಳು, ಇತರ ವಿಲಾಯತಿ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಪಣಿಯ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋಂಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪಥಿಕ್, ಹೋಮಿಯೊಪಥಿಕ್ ಮತ್ತು ಬೈದ್ಯ ಔಷಧಿಗಳು—ರೋಗಿಗಳಿಗೂ, ಬಾಲಿಕೆಯರಿಗೂ ಬೇಕಾಗುವ ಪಾಶ್ಚಾತ್ಯ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ರೈತರಿಗೆ ಬೇಕಾಗುವ ಗೊಬ್ಬರಗಳು.

ಪ್ರಖ್ಯಾತಿಯಾದ ಯುಕಲಿಪ್ಟಿಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTANJAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಕೆಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿರಶೂಲೆಯನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೃತಸಂಜೀವನಿ

U. B. DUTT & Co. CALCUTTA.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ಕಾಡುಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕರು ಅದ್ಭುತ [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಬಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳು ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ 'ಮೃತಸಂಜೀವನಿ' ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. [illegible]

ಕ್ರಯ ರೂ. ೪—೪—0. ಯು. ಬಿ. ದತ್ತ, ಕಂಪೆನಿ, [illegible]

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರ ತರಣಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೆನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ,
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೆನ್ ಇವರ ಖುದ್ದು ನಿಗಾವಣೆಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಬಿಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯುಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ 25 ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರೆ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರುಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬರೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ½ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಟರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ¼ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕದ್ದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೆನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ 1 ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಜನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 2. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಓರ್ಡರುಗಳನ್ನು ಮದ್ರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರಕೊಳ್ಳಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು, ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು **ಕ್ರಯ ಸುಲಭ.**

ಮಕ್ಕಳ ಆಟದ ಟ್ರಾಯಿಯ 32 ಸಾಮಾನುಗಳ ಪಟ್ಟಿ ಸೆಟ್ಟು 1ಕ್ಕೆ ರೂ. 1-14-0 ಮಧ್ಯಮ 3-0-0, ಉತ್ತಮದು ರೂ 4-8-0, ದೊಡ್ಡದು 6-0-0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ, ಮಡಿ, ಜರಿ, ಸಾದಾ, ಸೀರೆ, ಕಣ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಶ್ರೀಚಕ್ರ, ಸ್ಫಟಿಕಮಣಿ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ಕಳುಹಿಸಲಾಗುತ್ತದೆ. ಕ್ಯಾಟಲಾಗ್ ಇನಾಂ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೋನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹ ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕೀಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ.1—4—0.

ಹುಳದ ಫೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೋಪೆತಿಕ್ ಡಿಸ್ಪೆನ್ಸರಿ,
ಹಂಪಣಕಟ್ಟೆ, ಮಂಗಳೂರು.



ನಿಮ್ಮ ಚರ್ಮವನ್ನು ಬಿಳುಪುಮಾಡುವದು

ಮತ್ತು ಚರ್ಮದ ನಾಜೂಕತನವನ್ನು ಮತ್ತು ನೋಟಕ್ಕೆ ಅಲಂಕಾರವನ್ನು ಕೊಡುವದಕ್ಕೆ

"ಹಾಜಿಲೀನ್ 'ಸ್ನೋ"

(ಟ್ರೇಡ್ ಮಾರ್ಕ್)

"'Hazeline' Snow"

(Trade Mark)

"ಹಾಜಿಲೀನ್ 'ಸ್ನೋ" ಚರ್ಮದ ಮೇಲಿರುವ ಮಿರುಗನ್ನು ಕ್ಷಾರಿಯಿಂದ ಬಿಡಿಸಿ ಉನ್ನತವಾದ ಸೌಂದರ್ಯವನ್ನು ಕೊಡುವದು ಅದರಲ್ಲಿ ಯಾವ ವಿಧವಾದ ಕೊಬ್ಬು ಇಲ್ಲ ಆದಕಾರಣ ಅದನ್ನು ಯಾವಕಾಲದಲ್ಲಿಯು ಪ್ರಶಸ್ತವಾಗಿ ಉಪಯೋಗಿಸಬಹುದು

ಇದು ಕಂಪೆನಿ ವಾಪ್ರಿಗಳಲ್ಲಿ, ಕೆಮಿಸ್ಟ ಮತ್ತು ಉಗ್ರಾಣದವರಿಂದ ಮಾರಲ್ಪಡುವದು.

ಬರ್ರೋಸ್ ವೆಲ್ಕಂ ಅಂಡ್ ಕೋ ಲಂಡನ್ ಅಂಡ್ ಬೊಂಬಾಯಿ.

Burroughs Wellcome & Co., London and Bombay

Can. 3

All Rights Reserved

ಶ್ರೀ

ಸ್ವದೇಶ ಭಕ್ತರೇ
ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳು, ಬಿಳಿ, ಹಸುರು ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ ನಯವಾದ ಶರ್ಟಿನ ವಸ್ತ್ರಗಳೂ ಮತ್ತು ನೇಸ್ಸಿ ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು, ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ನಾಲ್ಕಾಣೆಯ ಸ್ಟೇಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:—

ಮುಳಿಯ ತಿಮ್ಮಪ್ಪಯ್ಯ
ಮತ್ತು ಸಹೋದರ
ರತ್ನ ಮತ್ತು ಜವಳಿ
ವ್ಯಾಪಾರಿಗಳು,
ವ್ಯಾಪಾರಸ್ಥಾನ (ಗೋಳಿಕಟ್ಟೆ ಬಜಾರು)
ಮಂಗಳೂರು.

The Canara Banking Corporation, Udipi, (Limited).
ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಆ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ್ದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯತೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಯಾನೆ ಹೊರಗಿನಿಂದ ಬರತಕ್ಕದ್ದು	3,78,315	2	5
6. ರಿಜರ್ವ ಇತ್ಯಾದಿ ಫಂಡುಗಳು. (17—6—'22.)	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೬ರಿಂದ ೭½ ವರೆಗಿನ ಮೂರು ತಿಂಗಳಿಗೊಮ್ಮೆ ಬಡ್ಡಿ ಕೊಡುವ ಶರ್ತದ ಮೇಲೆ ನಿರಖು ಠೇವಣಾತಿಗಳು.
೨. ೧೫ ದಿನಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡಿಯುವ ಶರ್ತದ ಮೇಲೆ ಸಾಲಿಯಾನ್ ಶೇಕಡಾ 6½ಲ್ಲಿ ನಡೆದ ದಿನಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಚಿಕ್ಕ ವಾಯಿದೆ ಠೇವಣಾತಿಗಳು.
೩. ಏನೂ ಖರ್ಚಿಲ್ಲದೆ ಸಾಲಿಯನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಚಾಲ್ತಿ ಠೇವಣಾತಿಗಳು.
೪. ಸಾಲಿಯನ್ ಶೇಕಡಾ 4½ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.
೫. ಈ ಕೆಳಗಣ ಶರ್ತಗಳ ಮೇಲೆ ಕಂತು ಠೇವಣಾತಿಗಳು.
ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.
ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.
ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.
ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು.
ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.
೬. ಕಳೆದ ೩ ವರುಷಗಳಲ್ಲಿ ಪಾಲುವಸ್ತಾಲಿಕರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.
೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.
೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಖ್ಖಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಒಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬಾಯಲ್ಲಿರುವ ಮರ್ಕೆಂಟೈಲ್ ಬ್ಯಾಂಕ್ ಓಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ತಾಜಾ ಕಲಂ:—ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಗಳವರಿಗೆ ಬರೆದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡುಪಿ.
ತಾ. 13-5-1922.

ನ. ಆನಂದರಾವ್,
ಕಾರ್ಯದರ್ಶಿ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಚ್ಛಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲಿ ಸುಣ್ಣ ಕಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ.

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರ

ಕೊಂಕಣಿ ಭಾಷೆಯಲ್ಲಿ
ಸಂಗೀತ
❋ ಚಂದ್ರಹಾಸ ನಾಟಕ ❋

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದದ ಬೈಂಡು ರೂ. 0—4—6. ಸ್ಟಿಫ್ ಬೈಂಡು ರೂ. 0—5—6.

ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದುವರೆ ಆಣೆ ಅಥವಾ ಆರುವರೆ ಆಣೆಗಳ ಅಂಚೆ ಚೀಟನ್ನು ಕಳುಹಿಸುವದು ಉತ್ತಮ.

ವಿಳಾಸ— ಬಿ. ಕೆ. ಪ್ರಭು,
ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ

'ಕವಿ'ಯವರ
ತಾಜಾ
ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ತು 1ರ ರೂ. 2—12—0.
ಸ್ಪೆಶ್ಯಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರೀಸ್ ಮಿಶ್ಶನ್ ಬುಕ್ ಎಂಡ್ ಟ್ರೆಕ್ಟ್ ಡಿಪೋಜಿಟರಿ,
ಮಂಗಳೂರು.

ಶಾಲಿವಾಹನಶಕೆ ೧೮೪೪ನೆಯ ದುಂದುಭಿ ಸಂವತ್ಸರದ ಶ್ರಾವಣ ಶು|೫ ಶನಿವಾರದಿಂದ ದುಂದುಭಿಸಂ| ಶ್ರಾವಣ ಶು|೧೨ ಶುಕ್ರವಾರದ ವರೆಗಿನ ಪಂಚಾಂಗ
(೧೯೨೨ನೆಯ ಕರ್ಕಾಟಕ ಆಟಿ)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
29	ಶನಿ	೫	೬. ೧೪	ಹಸ್ತಾ	೫೨.೧೪	೧೩	6.17	6.57
30	ರವಿ	೬	೦. ೧೫	ಚಿತ್ರಾ	೪೮.೪೬	೧೪	6.17	6.56
31	ಸೋಮ	೮	೪೯.೨೮	ಸ್ವಾತಿ	೪೫.೪೪	೧೫	6.17	6.56
1	ಕುಜ	೯	೪೫.೧೬	ವಿಶಾಖಾ	೪೩.೧೬	೧೬	6.17	6.55
2	ಬುಧ	೧೦	೪೧.೪೬	ಅನುರಾಧಾ	೪೧.೪೬	೧೭	6.18	6.55
3	ಗುರು	೧೧	೩೯.೩೨	ಜ್ಯೇಷ್ಠಾ	೪೧.೧೬	೧೮	6.18	6.55
4	ಶುಕ್ರ	೧೨	೩೮.೧೪	ಮೂಲಾ	೪೧.೫೭	೧೯	6.18	6.54

ಮಂಗಳೂರಿನ ವಾಯುಸ್ಥಿತಿ.
(೧೯೨೨ನೆಯ ಜುಲಾಯಿ)

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಲಾಯಿ ೧ರಿಂದ
20	81—4	73—8	3—24	—
21	85—6	74—6	1—01	—
22	85—6	77—3	0—05	—
23	81—4	70—8	3—94	—
24	83—1	73—4	1—60	—
25	87—2	75—2	0—47	—
26	87—3	73—7	0—39	93—11

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ ...	8—6	9—0
ಸುಗ್ಗಿಗೆ ...	7—12	8—2
ಗುಡ್ಡು, ...	8—0	8—8
ರಾತಿ	7—4	7—10
ಅನ್ವರ್ ಬೆಳ್ತಿಗೆ ,, ...	8—12	9—0
ಗುಡ್ಡು ಬೆಳ್ತಿಗೆ ,, ...	7—14	8—4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	14—0	14—8
ಗೋಧಿ ಗೋಣಿ ೧ಕ್ಕೆ ...	23—8	25—8
ಹುರುಳಿ ಗೋಣಿ ೧ಕ್ಕೆ ...	13—12	14—0
ಕಡಲೆ ಗೋಣಿ ೧ಕ್ಕೆ ...	14—0	15—0
ತೊಗರಿ ಗೋಣಿ ೧ಕ್ಕೆ ...	16—0	16—4
ತೊಗರಿಬೇಳೆ ಗೋಣಿ ೧ಕ್ಕೆ ...	19—8	29—0
ಉದ್ದು ಗೋಣಿ ೧ಕ್ಕೆ ...	17—0	—
ಹೆಸರು ಗೋಣಿ ೧ಕ್ಕೆ ...	16—8	17—0
ಊರು ಬೆಲ್ಲ ಖಂಡಿ ೧ಕ್ಕೆ ...	70—0	72—8
ಉಪ್ಪು ಗೋಣಿ ೧ಕ್ಕೆ ...	5—2	5—6
ಕೊಬ್ರಿ ಖಂಡಿ ೧ಕ್ಕೆ ...	85—0	95—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	33—0	35—0
ಎಳ್ಳಿಂಡಿ ಖಂಡಿ ೧ಕ್ಕೆ ...	50—0	—
ಕೊಬ್ರಿ ಎಣ್ಣೆ ಮಣ ೧ಕ್ಕೆ ...	7—2	8—2
ಎಳ್ಳೆಣ್ಣೆ ಮಣ ೧ಕ್ಕೆ ...	8—12	9—0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	9—0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	6—4	6—6
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	8—6	8—8
ಸಾಸಿವೆ ಮುಡಿ ೧ಕ್ಕೆ ...	8—4	8—8
ಕೊತ್ತಂಬರಿ ಮುಡಿ ೧ಕ್ಕೆ ...	5—4	5—12
ಕಾಫಿ ಖಂಡಿ ೧ಕ್ಕೆ ...	340—0	345—0
ಕೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳ್ತು ...	160—0	170—0
ಕೆಳಗೋಟು New, ಹೊಸ್ತು ...	130—0	135—0
ಘಟ್ಟಮೆಣಸು ಖಂಡಿ ೧ಕ್ಕೆ ...	120—0	125—0
ಬೆಳ್ಳುಳ್ಳಿ ಮಣ ೧ಕ್ಕೆ ...	26—0	28—0
ಗೇರುಬೀಜ ಮುಡಿ ೧ಕ್ಕೆ ...	2—6	2—8
ಕಬ್ಬಿಣ ಖಂಡಿ ೧ಕ್ಕೆ ...	60—0	65—0
ಶುಂಠಿ ತಗಡು ಮಣ ೧ಕ್ಕೆ ...	23—12	24—0
ತಾಂಬ್ರ ಪಾತ್ರಗಳು ಮಣ ೧ಕ್ಕೆ ...	36—0	—
ಜೇನ ಮೇಣ ಸೇರು ೧ಕ್ಕೆ ...	24—0	—
ಹಿತ್ತಾಳೆ ತಗಡುಮಣ 1ಕ್ಕೆ ...	23—0	—

ರಾಷ್ಟ್ರೀಯ ಹೊಸ ಪುಸ್ತಕಗಳು

ದೇಶೋನ್ನತಿ ಗ್ರಂಥಮಾಲಾ

ಸಂಖ್ಯೆ ೧ ಮಹಾತ್ಮಾ ಗಾಂಧಿಯವರ ಹಿಂದೀಸ್ವರಾಜ್ಯ ಕನ್ನಡ ೦-೮-೦ ೨ನೆ ಆವೃತ್ತಿ ಅಚ್ಚಿನಲ್ಲಿದೆ. ೨ ದೀನಬಂಧು ಸಿ. ಯಫ್. ಅಂಡ್ರ್ಯೂಸರವರ ಅಸಹಕಾರ ಪತ್ರಗಳು ೦-೬-೦ ೩ ಹಿಂದೀ ಭಾಷಾಸಾರ. ಹಿಂದೀಭಾಷೆ ಕಲಿಯಲು ೧ನೇ ಪಾಠ ಪುಸ್ತಕ ೪ ರಾಷ್ಟ್ರೀಯಕರ್ಮ ಅಥವಾ ದೇಶಭಕ್ತರ ಸೂಕ್ತಿಮಾಲೆ ೦-೩-೦ ದೇಶಭಕ್ತ ಅಲೀಸಹೋದರರ ಚರಿತ್ರೆ ೦-೨-೦ ಮ। ಗಾಂಧೀಚರಿತ್ರೆ ೦-೫-೦ ೮ ಚಿಕ್ಕದು ೦-೨-೦

ರಾಷ್ಟ್ರೀಯ ಪದ್ಯ ಪುಸ್ತಕಗಳು—ತಿಲಕ ಕಾವ್ಯಾಂಜಲಿ ೦-೪-೦ ಗಾಂಧಿ ವಿಜಯ ೦-೨-೦ ರಾಷ್ಟ್ರೀಯ ಗೀತಾವಳಿ ೦-೦-೯ ಸ್ವರಾಜ್ಯಸಂಪತ್ತು ೦-೦-೩ ಇವುಗಳಲ್ಲದೆ ಇನ್ನೂ ಅನೇಕ ತರದ ಪುಸ್ತಕಗಳು ವಿಕ್ರಯಕ್ಕೆ ಸಿದ್ಧವಿರುವವು ವಿ. ಪಿ. ಯಿಂದ ಅಪೇಕ್ಷಿಸುವವರು ನಾಲ್ಕಾಣೆ ಸ್ಟಾಂಪು ಮುಂಗಡವಾಗಿ ಕಳುಹಿಸಿದ್ದಲ್ಲಿ ಉಳಿದ ಐವಜಿಗೆ ವಿ. ಪಿ. ಮಾಡಲಾಗುವುದು. ಎಂಟಾಣೆಗಿಂತ ಕಡಿಮೆ ಕ್ರಯದ ಪುಸ್ತಕಗಳು ವಿ. ಪಿ.ಯಿಂದ ಕಳುಹಿಸಲಾರೆವು.

ವಿಳಾಸ:— ಕೆ. ಯಂ. ದಾಸಪ್ರಭು ಆಂಡ್ ಸನ್ಸ್,
ರಥಬೀದಿ, ಮಂಗಳೂರು.

ಚಂದಾದಾರರಿಗೆ ವಿನಂತಿ.

ಚಂದಾದಾರರು ಈ ಪತ್ರದ ಆಫೀಸಿಗೆ ಪತ್ರಗಳನ್ನು ಬರಿಯುವಾಗ ತಮ್ಮ ವಿಳಾಸದ ಪಕ್ಕದಲ್ಲಿರುವ ರಿಜಿಸ್ಟರ್ ನಂಬರನ್ನು ಕೊಡತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ
ಮಂಗಳೂರು

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. ನಂಬ್ರ 68/1922.

ಸೀತಾರಾಮಭಟ್ಟ—ಅರ್ಜಿದಾರ.
ಮತ್ತು
ವೆಂಕಟೇಶ ಹೆಬ್ಬಾರ ಕೂಡ—ರೆಸ್ಪೊಂಡೆಂಟರು.

ಮೇಲಿನ ವ್ಯವಹರಣೆಯಲ್ಲಿ ಅರ್ಜಿದಾರನು ಮ್ಯಾನರರು ಚಂದ್ರಶೇಖರ, ಬಾಲಕೃಷ್ಣ, ಸುಂದರಿ ಇವರ ದೇಹದ ವ ಆಸ್ತಿಯ ಗಾರ್ಡಿಯನನಾಗಿ ತನ್ನನ್ನು ಮೊಕ್ರೂರು ಮಾಡಬೇಕಾಗಿ ಅಪೇಕ್ಷಿಸಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ಕೊಟ್ಟಿರುತ್ತಾನೆ. ಸದರಿ ಅರ್ಜಿಯು ತನಖಿ ಬಗ್ಗೆ ತಾರೀಕು. ೧೫—೮—೧೯೨೨ಕ್ಕೆ ಇಟ್ಟಿದೆ. ಇದಕ್ಕೆ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನ ಒಳಗೆ ಜಾಹೀರುಮಾಡಿಕೊಳ್ಳತಕ್ಕದ್ದು.

Mangalore
26-7-1922.

G. SOMASHEKARA RAO.
Vakil for Petitioner.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. No. 69/1922

ವೆಂಕಟೇಶ ಹೆಬ್ಬಾರ—ಅರ್ಜಿದಾರ.

ಮೃತ ವಿಶ್ವನಾಥ ಭಟ್ಟನ ಮೈನರ್ ಮಕ್ಕಳು ವ ವಿಧವೆ ಇವರ ದೇಹದ ಗಾರ್ಡಿಯನ್ ವ ಸದರಿಯವರ ಆಸ್ತಿ ಬಗ್ಗೆ ಗಾರ್ಡಿಯನ್ ಸಹ ನೇಮಿಸುವ ಬಗ್ಗೆ ಅರ್ಜಿದಾರನು ದಾಖ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 15—8—1922ಕ್ಕೆ ತನ್ನಿಗೆ ಇಟ್ಟರುತ್ತದೆಂತ ಇದರಿಂದ ತಿಳಿಸೋಣಾಗುತ್ತದೆ.

ಮಂಗಳೂರು,
ತಾ. 26-7-'22.

P. SANJIVA RAO,
pleader.

ರಾಷ್ಟ್ರೀಯ ಶಿಕ್ಷಣ ಮಂಡಲ, ಉಡ್ಪಿ.

ಉಡ್ಪಿ ರಾಷ್ಟ್ರೀಯ ವಿದ್ಯಾ ಮಂದಿರದ ವಿದ್ಯಾರ್ಥಿಗಳ ಸಲುವಾಗಿ ಪ್ರತಿ ಪಕ್ಷದ ಅಷ್ಟಮಿ ಮತ್ತು ಚತುರ್ದಶಿ, ಈ ಎರಡು ದಿನಗಳಲ್ಲಿ ತೆಂಕಪೇಟೆಯಲ್ಲಿರುವ ವಿದ್ಯಾಮಂದಿರದ ಪ್ರಾಥಮಿಕ ಶಾಲೆಯ ಉಪ್ಪರಿಗೆಯಲ್ಲಿ ಸಾಯಂಕಾಲ ೪ ಗಂಟೆಯಿಂದ ೬ ಗಂಟೆಯ ವರೆಗೆ ಪುರಾಣವನ್ನು ಓದುವರು. ಈಗ ಮಹಾಭಾರತವನ್ನು ಆರಂಭಿಸಲಾಗಿದೆ. ಇತರ ಶಾಲಾ ವಿದ್ಯಾರ್ಥಿಗಳಿಗೂ, ಉಡ್ಪಿಯ ಮಹಾಜನರಿಗೂ ಸ್ವಾಗತವಿದೆ.

ರಾಷ್ಟ್ರೀಯ ವಿದ್ಯಾಮಂದಿರದ ಸಲುವಾಗಿ ಪ್ರತಿ ತಿಂಗಳ ೧೮ನೇ ತಾರೀಕಿಗೆ ಉಡ್ಪಿ ಮಹಾಜನರಿಂದ ವಂತಿಗೆ ವಸೂಲುಮಾಡಬೇಕಾಗಿ ಕಳೆದ ಶಿಕ್ಷಣ ಮಂಡಲದ ಸಮ್ಮೇಳನದಲ್ಲಿ ನಿರ್ಣಯಿಸಿದಂತೆ ಇದೇ ೧೮ ಮತ್ತು ೧೯ನೇ ತಾರೀಕುಗಳಲ್ಲಿ ರೂ. ೩೦-೯-೯ನ್ನು ಸಂಗ್ರಹಿಸಿರುತ್ತೇವೆ. ಇನ್ನು ಅನೇಕ ಗೃಹಸ್ಥರೆಡೆಗೆ ಹೋಗಲಿಕ್ಕಿದೆ. ಎಲ್ಲರೂ ಹೀಗೆಯೇ ತಮ್ಮ ಶಕ್ತ್ಯಾನುಸಾರ, ಪ್ರತಿ ತಿಂಗಳಲ್ಲಿಯೂ ಸಹಾಯಮಾಡಿ, ರಾಷ್ಟ್ರೀಯ ವಿದ್ಯಾಮಂದಿರವನ್ನು ತುಂಬಾ ಪ್ರೋತ್ಸಾಹಿಸುವುದಾಗಿ ತೋರುವುದು ತುಂಬಾ ಸಂತೋಷಕರವಾದ ಮಾತಾಗಿದೆ. ಇದಕ್ಕಾಗಿ ನಾವು ಅವರಿಗೆ ಆಭಾರಿಗಳಾಗಿದ್ದೇವೆ.

ಇತಿ, ಕಾರ್ಯದರ್ಶಿ.
ರಾಷ್ಟ್ರೀಯ ಶಿಕ್ಷಣ ಮಂಡಲ, ಉಡ್ಪಿ.

ಅಸ್ಪೃಶ್ಯತೆ

ಧಾರ್ಮಿಕ ದೃಷ್ಟಿಯಿಂದ ನೋಡಿದರೆ ಅಸ್ಪೃಶ್ಯತೆ ಎಂಬುದು ಪಾಪವಾಗಿದೆ. ಅಸ್ಪೃಶ್ಯತೆಯು ಮಾನುಷತ್ವಕ್ಕೇನೇ ಒಂದು ಕಳಂಕ ಎಂಬುದನ್ನು ವಿಚಾರಿಸಿ ಕಳೆದ ಸಲ ತೋರಿಸುವರೆ ಯತ್ನಿಸಿದೆನು. ಈ ವಿಷಯದಲ್ಲಿ ಧರ್ಮವಿಚಾರವೇನಿದೆಂದು ಈ ಹೊತ್ತು ತೋರಿಸಿಕೊಡಬೇಕೆಂದಿದ್ದೇನೆ. ಕ್ರೈಸ್ತ, ಬೌದ್ಧ ಮತ್ತು ಮುಸಲ್ಮಾನ ಮತಗಳಲ್ಲಿ ಅಸ್ಪೃಶ್ಯತೆಗೆ ಎಡೆಯೇ ಇಲ್ಲವೆಂಬುದರಲ್ಲಿ ಆಕ್ಷೇಪವೇ ಇಲ್ಲ. ಕೃಪಾದೃಷ್ಟಿಯಿಂದಲೂ, ವಿಚಾರಶಕ್ತಿಯಿಂದಲೂ ನೋಡುವಾಗ ಭಯಂಕರವಾಗಿರುವ ಈ ಭಾವನೆಯು ಇತ್ತೀಚಿನ ಹಿಂದುಗಳಲ್ಲಿ ಮಾತ್ರವೇ ಪ್ರಬಲವಾಗಿದೆ. ಇದು ನಮ್ಮ ಧರ್ಮಶಾಸ್ತ್ರದ ಒಂದಂಶವಾಗಿದೆಯೋ ಇಲ್ಲವೋ ಎಂದು ನೋಡಬೇಕಾದರೆ ಆರ್ಯರಿಗೆಲ್ಲಾ ಮೂಲಾಧಾರವಾದ ವೇದಗಳನ್ನು ಪರೀಕ್ಷಿಸಬೇಕು. ಆದುದರಿಂದ ನಾನು ಈ ಕೆಳಗಿನ ವಿಷಯಗಳನ್ನು ಬರೆದು, ನಾನು ತಪ್ಪಿದ್ದಲ್ಲಿ, ನಿಜವಾಗಿಯೂ ಈ ವಿಚಾರದಲ್ಲಿ ಉತ್ಸಾಹವುಳ್ಳವರು ನನ್ನನ್ನು ತಿದ್ದಬೇಕಾಗಿ ವಿನಂತಿಮಾಡಿಕೊಳ್ಳುತ್ತೇನೆ.

(೧) ಪರಮಾತ್ಮನು ಎಲ್ಲಾ ಪ್ರಾಣಿಗಳಿಗೂ ತಂದೆಯಾಗಿದ್ದಾನೆಂದು ವೇದಗಳು ನಿರ್ವಿವಾದವಾಗಿ ಸಾರುತ್ತಲಿವೆ.

(೨) ಎಲ್ಲಾ ಪ್ರಾಣಿಗಳನ್ನೂ ನಾವು ನಮ್ಮ ಸ್ನೇಹಿತರೆಂದೂ, ಸೋದರರೆಂದೂ ಭಾವಿಸಿ, ದಯೆಯನ್ನು ತೋರಿಸಬೇಕೆಂದು ವೇದವಾಕ್ಯವಿದೆ.

(೩) ಆದುದರಿಂದ ಅಸ್ಪೃಶ್ಯತಾ ಭಾವನೆಗೆ ವೇದಗಳಲ್ಲಿ ಎಲ್ಲೂ ಎಡೆಯೇ ಇಲ್ಲ. ಮಾತ್ರವಲ್ಲ ಈ ಭಾವನೆಯು ಆ ಪವಿತ್ರ ಧರ್ಮಶಾಸ್ತ್ರದ ತತ್ವಕ್ಕೇನೇ ವಿರೋಧವಾಗಿದೆ. ಈ ವಿಷಯನ್ನು ಸಮರ್ಥಿಸುವರೆ ಆಧಾರಗಳು ಬೇಕೆಂದಿದ್ದರೆ ನೂರಾರು ಆಧಾರಗಳನ್ನು ವೇದಗಳಿಂದ ಎತ್ತಿಕೊಡಲು ನಾನು ಸಿದ್ಧನಾಗಿದ್ದೇನೆ. ಸ್ಥಳಸಂಕೋಚದಿಂದ ಕೆಳಗಿನ ಉದಾಹರಣೆಯನ್ನು ಮಾತ್ರವೇ ಕೊಡುತ್ತೇನೆ.

(೧) ಋಗ್ವೇದದ ೫—೫೯—೬ರಲ್ಲಿ,
ತೇ ಅಜ್ಯೇಷ್ಠಾ ಅಕನಿಷ್ಠಾಸ ಉದ್ಭಿದೋ
ಅಮಧ್ಯಮಾಸೋ ಮಹಸಾವಿವಾವೃಧುಃ।

ಎಂದರೆ, ಗ್ರಿಫಿತ್ತಿನ ಅರ್ಥಪ್ರಕಾರ ಅವರ ತಂಡದಲ್ಲಿ ದೊಡ್ಡವರು ಸಣ್ಣವರು ಎಂಬ ಭೇದವಿಲ್ಲದೆ ಅವರು ಮಧ್ಯವರ್ತಿಗಳಾಗಿದ್ದುದರಿಂದ ಅವರು ಬಲಶಾಲಿಗಳಾದರು. ಎಂದಿದೆ. ಈ ರೀತಿಯಾಗಿ ಮಾನವನ ಸೋದರತ್ವವನ್ನು ನಮ್ಮ ಶಾಸ್ತ್ರಗಳು ಸ್ಪಷ್ಟೀಕರಿಸಿದರೂ, ಕಡುಧರ್ಮನಿಷ್ಠರೆನ್ನಿಸಿಕೊಳ್ಳುವ ಕೆಲವರು ಅಸ್ಪೃಶ್ಯತೆಯು ಶಾಸ್ತ್ರ ಸಿದ್ಧವಾದುದೆನ್ನುವರು.

(೨) ಋಗ್ವೇದದ ೫—೬—೫ರಲ್ಲಿ,
ಅಜ್ಯೇಷ್ಠಾಸೋ ಅಕನಿಷ್ಠಾಸ ಏತೇ
ಸಂಭ್ರಾತರೋ ವಾವೃಧುಃ। ಸೌಭಗಾಯ.

ಎಂದರೆ, ಎಲ್ಲರೂ ಸೋದರರು, ಅವರಲ್ಲಿ ಜನ್ಮಸಿದ್ಧವಾಗಿ ಮೇಲು ಕೀಳೆಂಬುದೇ ಇಲ್ಲ ಎಂದು ಬರೆದಿದೆ. ಆದುದರಿಂದ ಅಸ್ಪೃಶ್ಯತೆ ಎಂಬುದು ವೇದೋಕ್ತವಾದುದೋ ವೇದಕ್ಕೆ ವಿರುದ್ಧವಾದುದೋ ಎಂಬುದನ್ನು ವಾಚಕರೇ ವಿಚಾರಿಸಿಕೊಳ್ಳಲಿ.

(೩) ಯಜುರ್ವೇದದ ೩೬—೧೮ರಲ್ಲಿ,
ಮಿತ್ರಸ್ಯಾಹಂ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷೇ

ಎಂದರೆ ಮನುಷ್ಯರನ್ನು ಮಾತ್ರವಲ್ಲದೆ ಎಲ್ಲಾ ಪ್ರಾಣಿಗಳನ್ನೂ ನಾನು ಸಮದೃಷ್ಟಿಯಿಂದ ನೋಡಲಿ. ಪ್ರಪಂಚದ ಎಲ್ಲ ಪ್ರಾಣಿಗಳನ್ನು ನಮ್ಮ ಸ್ನೇಹಿತರಂತೆ ನಾವು ನೋಡಬೇಕೆಂಬುದೇ ವೇದದ ಆಜ್ಞೆಯಾಗಿದೆ. ಈ ವೇದವಾಕ್ಯಗಳಿಗನುಸಾರವಾಗಿ ಅಸ್ಪೃಶ್ಯತೆಯ ದೆಸೆಯಿಂದ ಕೆಲವು ಜನರನ್ನು ಸದಾ ಗುಲಾಮರಾಗಿಡುವುದು ಯೋಗ್ಯವೋ ಎಂಬುದನ್ನು ವಾಚಕರೇ ಯೋಚಿಸಲಿ.

(೪) ಅಥರ್ವವೇದದ ೩-೩೦-೧ರಲ್ಲಿ
ಅನ್ಯೋ ಅನ್ಯಮಭಿಹರ್ಯತ ವತ್ಸಂ ಜಾತಮಿವಾಘ್ನ್ಯಾ

ಎಂದರೆ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಕರುವನ್ನು ದನವು ಹೇಗೆ ಪ್ರೀತಿಸುತ್ತದೋ ಹಾಗೆಯೇ ಒಬ್ಬನು ಮತ್ತೊಬ್ಬನನ್ನು ಪ್ರೀತಿಸಬೇಕು ಎಂದು ಹೇಳಿದೆ. ಇಂತಹ ವಿಶ್ವಪ್ರೇಮವನ್ನೆ ನಮ್ಮ ಶಾಸ್ತ್ರಗಳು ನಮಗೆ ಪದೇ ಪದೇ ಕಲಿಸುತ್ತಲಿವೆ.

ಆದುದರಿಂದ ಸೋದರಭಾವದ ಮತ್ತು ಸಮಾನತ್ವದ ಸುಂದರವಾದ ತತ್ವಗಳನ್ನು ಇಷ್ಟು ಉತ್ತಮ ರೀತಿಯಲ್ಲಿ ಬೋಧಿಸುವ ಈ ಧರ್ಮ ಶಾಸ್ತ್ರಗಳಲ್ಲಿ ಅಸ್ಪೃಶ್ಯತೆಗೆ ಎಡೆಯುದೆಯೇ ಎಂದು ನಾನು ತಿರುಗಿ ತಿರುಗಿ ಪ್ರಶ್ನೆಮಾಡುತ್ತೇನೆ. ಇಡೀ ಮಾನವಕುಟುಂಬದ ಒಂದು ಐದನೇ ಅಂಶವನ್ನು ಅಸ್ಪೃಶ್ಯರೆಂದು ಭಾವಿಸಿ? ಸಾಮಾನ್ಯ ಮನುಷ್ಯರ ಜನ್ಮಸಿದ್ಧವಾದ ಹಕ್ಕುಗಳನ್ನು ಕೂಡ ಅವರಿಗೆ ನಾವು ಕೊಡದಿರುವುದರಿಂದ ವೇದವಾಕ್ಯಗಳಿಗೆ ನಾವು ವಿರೋಧಮಾಡಿದಂತಾಗುವುದಿಲ್ಲವೇ, ಆದುದರಿಂದ ಬಡವರೂ ಅನಾಥರೂ ಆದ ತಮ್ಮ ಪಂಚಮಸೋದರರಿಗೆ ಹಿಂದುಗಳು ದಯೆಯನ್ನೂ ಪ್ರೀತಿಯನ್ನೂ ತೋರಿಸದಿರುವುದರಿಂದ ಧರ್ಮಕ್ಕೂ ಮಾನುಷ್ಯತ್ವಕ್ಕೂ ದೊಡ್ಡ ಕಳಂಕವನ್ನು ತಂದಿದೆ ಎಂಬುದಕ್ಕೆ ಏನೂ ಸಂದೇಹವಿಲ್ಲ. ಆದಕಾರಣ ಹೀಗೆ ಅಡಿಗೊತ್ತಲ್ಪಟ್ಟ ಜನರನ್ನು ಉದ್ಧಾರಮಾಡುವುದಕ್ಕಾಗಿ ನಾವು ಕಂಕಣಬದ್ಧರಾಗಿ ಸರ್ವ ಪ್ರಯತ್ನವನ್ನೂ ಮಾಡುವ. ನಾವು ಧರ್ಮದ ಹೆಸರನ್ನು ಹೇಳಿ ಇಡೀ ಮಾನವ ಕುಟುಂಬದ ಒಂದು ಐದನೇ ಅಂಶಕ್ಕೆ ಸಲ್ಲತಕ್ಕ ಹಕ್ಕನ್ನೂ ಸಂಪೂರ್ಣ ಸ್ವಾತಂತ್ರವನ್ನೂ ಕೊಡದೆ ದೇವರೆದುರಿಗೆ ಪಾಪಿಗಳಾಗದಂತೆ ಪ್ರಯತ್ನಿಸುವ.

ಧರ್ಮದೇವ ಸಿದ್ಧಾಂತಾಲಂಕಾರ,
ಆರ್ಯ ಸಮಾಜ, ಮಂಗಳೂರು.

ಕನ್ನಡ ಸಹಕಾರಕ್ಕೆ ಬರೆದ ಪತ್ರದ ನಕಲು.

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಬೇಕಾದ ಸಲಹೆಗಳನ್ನು ಏರ್ಪಡಿಸಿಕೊಳ್ಳುವುದಕ್ಕೆ ಎಷ್ಟೋ ಸಂಸ್ಥೆಗಳು ಸ್ಥಾಪಿಸಲ್ಪಟ್ಟರೂ ಮುಖ್ಯವಾದ ಒಂದಂಶವನ್ನು ಮಾತ್ರ ಮುಖಂಡರೆಲ್ಲರೂ ಸ್ವಲ್ಪ ಮಟ್ಟಿಗೆ ಮರೆತುಬಿಟ್ಟಿರುವುದು ಶೋಚನೀಯವಾಗಿದೆ. ನಮ್ಮ ಜಿಲ್ಲೆಯು ಗೋಸಂಪತ್ತಿನಲ್ಲಿ ಹಿಂದುಳಿದಿರುವುದೆಂದೂ ಜಾನುವಾರು ವೃದ್ಧಿಗೆ ಎಲ್ಲರೂ ಏಕಮನಸ್ಸಿನಿಂದ ಪ್ರಯತ್ನಿಸದೆ ಹೋದರೆ ನಾವು ಆರೋಗ್ಯದಲ್ಲಿಯೂ, ಸಂಪತ್ತಿನಲ್ಲಿಯೂ ವೃದ್ಧಿಹೊಂದಲಾರೆವೆಂಬುದನ್ನು ತಿಳಿದಿರುವುದು ಅಗತ್ಯವಾಗಿದೆ. ನಮ್ಮ ಜಿಲ್ಲೆಯ ದನಕರುಗಳು ಹೀನಸ್ಥಿತಿಯಲ್ಲಿ ಅವತಾರಪ್ರಾಯವಾಗಿವೆ. ಹಾಲಿನ ಸಂಸ್ಥೆಗಳೂ (Diary Farms) ಜಾನುವಾರು ಸಂಸ್ಥೆಗಳೂ (Breeding Farms) ನಮ್ಮಲ್ಲಿ ಉದ್ಭವಿಸಬೇಕು. ಅವನ್ನು ನಾವು ಬೆಳೆಸಬೇಕು.

ಇವೆಲ್ಲವೂ ಸರಿಯೇ, ಆದರೆ ಈ ಕಾರ್ಯಗಳನ್ನು ಯಾರು ಕೈಗೊಳ್ಳಬೇಕು. ಯಾರಿಂದ ಬೆಳೆಯಬೇಕು. ಈ ಪ್ರಶ್ನೆಯು ಎಲ್ಲರಲ್ಲಿಯೂ ಹುಟ್ಟುವುದು ಸಹಜವೇ. ಈ ಕಾಲದಲ್ಲಿ ಎಲ್ಲರಲ್ಲಿಯೂ ಅದ್ಭುತ ಆಲೋಚನೆಗಳು ಹುಟ್ಟುವುವು. ಅವುಗಳನ್ನು ಬೋಧಿಸುವವರು, ಕೈಗೂಡಿಸುವವರು ಮಾತ್ರ ಅಲ್ಪ ಮಂದಿ. ಆದರೂ ಸಂಘರಚನಾಶಕ್ತಿಯು ನಮ್ಮಲ್ಲಿ ಬೆಳೆಯುತ್ತಾ ಬರುವುದರಿಂದ ಯಾವ ಕೆಲಸವೂ 'ಅಸಾಧ್ಯವಾಗಿ ತೋರಲಾರದು.' ಈ ಕಾಲದಲ್ಲಿ ಎಲ್ಲವೂ ಸಂಘ ಮೂಲಕವೇ ನಡೆಯತಕ್ಕದಿದೆ.

ಹಾಗಿದ್ದರೆ ನಮ್ಮ ಜಾನುವಾರು ವೃದ್ಧಿ ಉದ್ದೇಶವನ್ನು ನೆರವೇರಿಸುವುದಕ್ಕೆ ಪ್ರಸ್ತುತದ ಯಾವ ಸಂಘಗಳು ಸಹಕಾರಿಗಳಾಗುವುವು. ಇಲ್ಲವೆ ಹೊಸ ಸಂಘ ಸ್ಥಾಪನೆಯು ಅವಶ್ಯಕವೇ ಎಂಬ ಪ್ರಶ್ನೆಯನ್ನು ನಾವು ಉತ್ತರಿಸಬೇಕಾಗುವುದು. ಆಲೋಚಿಸಿ ನೋಡುವುದಾದರೆ ಈಗ ಇವರು ಸಂಘಗಳಿಂದಲೇ ಈ ಕಾರ್ಯವು ಸಾಧಿಸಲ್ಪಡಬಹುದಾಗಿದೆ. ನಮ್ಮ ಡಿಸ್ಟ್ರಿಕ್ಟಬೋರ್ಡು, ತಾಲೂಕುಬೋರ್ಡು, ಮುನ್ಸಿಪಾಲಿಟಿ, ಯೂನಿಯನುಗಳು ಇವು ಕೂಡಾ ಜನರ ಸಂಘಗಳೇ ಆಗಿದ್ದರೂ ಅವು ಈ ಕೆಲಸವನ್ನು ಕೈಕೊಳ್ಳುವುದಕ್ಕೆ ತಕ್ಕ ಸ್ಥಿತಿಯಲ್ಲಿರುವಂತೆ ತೋರುವುದಿಲ್ಲ. ಆದರೆ ನಮ್ಮ ಜಿಲ್ಲೆಯಲ್ಲಿ ಈಗ ಡಿಸ್ಟ್ರಿಕ್ಟ ಎಡ್ವಾನ್ಸಮೆಂಟ ಎಸೋಸಿಯೇಶನ್ ಎಂಬ ಒಂದು ಸಂಸ್ಥೆ ಇದೆ. ಈ ಸಂಸ್ಥೆಯಿಂದ ಈಗ ಜಾನುವಾರು ವೃದ್ಧಿ ಕಾರ್ಯವು ಸಾಧಾರಣರೀತಿಯಲ್ಲಿ ನಡೆಯುತ್ತಿದೆ. ಈ ಸಂಘವು ಜಿಲ್ಲೆಯ ಮುಖ್ಯ ಪಟ್ಟಣದಲ್ಲಿ ಬೀಜದಹೋರಿಗಳನ್ನು ಇಟ್ಟಿರುವುದು. ಜಾನುವಾರು ಪ್ರದರ್ಶನವನ್ನು ಕೈಗೊಂಡಿರುವುದು. ಈ ಕಾರ್ಯರಚನೆಯು ತುಂಬಾ ಶ್ಲಾಘ್ಯನೀಯವಾಗಿದೆ. ಆದರೆ ಬೀಜದಹೋರಿಗಳ ಆವಶ್ಯಕತೆಯು ಮಂಗಳೂರಿನಲ್ಲಿ ಮಾತ್ರವಲ್ಲ; ಜಿಲ್ಲೆಯ ಎಲ್ಲಾ ಕಡೆಗಳಲ್ಲಿಯೂ ಇದೆ. ಆದುದರಿಂದ ಜಿಲ್ಲೆಯ ಮುಖ್ಯ ಮುಖ್ಯ ಸ್ಥಳಗಳಲ್ಲೆಲ್ಲ ಬೀಜದ ಹೋರಿಗಳನ್ನು ಇಡುವ ಕೆಲಸವನ್ನು ಸಾಧಿಸುವ ಒಂದು ಸಂಸ್ಥೆಯು ಅಗತ್ಯವಿದೆ. ಇದನ್ನು ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಮ. ರಾ. ರಾ. ಮೊಳಹಳ್ಳಿ ಶಿವರಾಯರ ಪ್ರಯತ್ನದಿಂದ ಎಲ್ಲೆಲ್ಲಿಯೂ ಹರಡಿಕೊಂಡಿರುವ ಪರಸ್ಪರ ಸಹಾಯಕ ಸಂಘ ಎಂಬ ಸಂಘಗಳೇ ಈ ಕೆಲಸವನ್ನು ಕೈಗೊಳ್ಳುವುದು ಉತ್ತಮವೆಂದು ಆಲೋಚಿಸಬೇಕಾಗಿದೆ. ಪರಸ್ಪರ ಸಹಾಯಕ ಸಂಘಗಳು ಸಾಮಾನ್ಯ ರೈತರಿಗೆ ಎಷ್ಟೋ ಉಪಕಾರಗಳನ್ನು ಮಾಡಿವೆ, ಇನ್ನು ಕೂಡಾ ಮಾಡಲಿಕ್ಕಿವೆ. ಈ ಸಂದರ್ಭದಲ್ಲಿ ರೈತರಿಗೆ ಹೆಚ್ಚಿನ ಸಹಾಯಕರವಾಗುವ ಜಾನುವಾರು ವೃದ್ಧಿಕಾರ್ಯವನ್ನು ಕೂಡಾ ಈ ಸಂಘಗಳೇ ವಹಿಸಿಕೊಳ್ಳುವುದು ವಿಹಿತವು. ಕೆಲವು ಸಂಘಗಳು ಕೂಡಿ ಒಂದು ಯೂನಿಯನ್ ಆಗಿ ಏರ್ಪಡಿಸಲ್ಪಟ್ಟಿವೆ. ಪ್ರತಿ ಒಂದು ಯೂನಿಯನ್ ಒಂದೊಂದು ಬೀಜದ ಹೋರಿಯನ್ನು ಇಡಲು ಸಾಧ್ಯವಿದೆ. ಈ ವಿಷಯ ಹೆಚ್ಚಿನ ಮಾಹಿತಿಯುಳ್ಳವರೇ ಸಂಘದ ಮುಖಂಡರಾಗಿರುವುದರಿಂದ ಇನ್ನಷ್ಟು ವಿಸ್ತಾರವಾಗಿ ಬರೆಯುವುದು ಅನಾವಶ್ಯಕವು. ಒಂದು ಸಣ್ಣ ಸೂಚನೆಯಾಗಿ ಮಾತ್ರ ಕೊಟ್ಟಿರುವೆನು. ಇದನ್ನು ಸಹಕಾರವು ಕೈಗೊಳ್ಳುವುದಕ್ಕೆ ಸಹಕಾರಿಯು ಒಂದು ಸಲ ಚರ್ಚಿಸಬೇಕಾಗಿ ಸವಿನಯ ವಿನಂತಿ.

B. SEETARAMA RAO.
Veterinary Surgeon. UDIPI.

ಮದ್ಯಪಾನ ಬಹಿಷ್ಕಾರದ ಆವಶ್ಯಕತೆ.

ದೇಶದ ಬಡತನಕ್ಕೂ ಅವನತಿಗೂ ಜನರಲ್ಲಿ ಮದ್ಯಪಾನದ ದುರಾಭ್ಯಾಸವು ಹಬ್ಬಿರುವುದು ಒಂದು ಕಾರಣವಾಗಿದೆ. ಇದರ ನಿವಾರಣೆಗೆ ಅನೇಕ ಪ್ರಯತ್ನಗಳು ನಡಿಯುತ್ತಿವೆ. ಒಂದು ಕಾಲದಲ್ಲಿ ಸಮುದ್ರ ಚೌರ್ಯವು (piracy) ರೂಢಿಯಲ್ಲಿತ್ತು. ಗುಲಾಮಗಿರಿಗೆ ಜನರನ್ನು ಮಾರುವ ದುಷ್ಟ ಪದ್ಧತಿಯನ್ನು ಧಾರ್ಮಿಕ ಆಧಾರಗಳನ್ನು ಸಹ ಕೊಟ್ಟು ನಡಿಯಲು ಬಿಟ್ಟಿದ್ದರು. ಜುಗಾರನ್ನು ಬಹಿರಂಗವಾಗಿ ಆಡುತ್ತಿದ್ದರು. ಇವೆಲ್ಲ ಕ್ರಮೇಣ ಮೂಲೆಪಾಲಾದಂತೆ ಮದ್ಯಪಾನದ ಅಭ್ಯಾಸವೂ ನಿರ್ನಾಮಹೊಂದುವುದು. ಈ ರೀತಿ ಮಿ। ಪುಸಿಫೂಟರು ಅಭಿಪ್ರಾಯಪಟ್ಟಿರುವರು. ತಮ್ಮ ಉತ್ಪನ್ನವು ಕಡಿಮೆಯಾಗುವುದು ಹಾಗು ಜನರ ಪಾನಸ್ವಾತಂತ್ರವನ್ನು ಅಪಹಂಸಲಾಗದು ಎಂಬ ನೆವವನ್ನು ಸೂಚಿಸಿ ಸರಕಾರವು ಮದ್ಯಪಾನ ನಿಷೇಧಕ್ಕೆ ಹೆಚ್ಚಿನ ಗಮನಕೊಡುವುದಿಲ್ಲ. ಜನರು ಸುರಾಪಾನವನ್ನು ಮಾಡುವುದರಿಂದ ಉಂಟಾಗುವ ದೇಶದ ಬಡತನಕ್ಕೆ ಮದರಾಸಿನ ಬಿಶೋಪರು ಕೊಟ್ಟ ಒಂದೆ ನಿದರ್ಶನವು ಸಾಕಾಗಿದೆ. ಸೆಂಟ್ರಲ್ ಪ್ರೊವಿನ್ಸಿನ ಒಂದು ಚಿಕ್ಕ ಹಳ್ಳಿಯಲ್ಲಿ ೫೬೮ ನಿವಾಸಿಗಳಿರುವರು. ಅಲ್ಲಿ ಒಂದು ಶೇಂದಿ ಗುತ್ತೆ ಇತ್ತು. ಇದಕ್ಕೆ ಲೈಸನ್ಸು ಫೀಸು ರೂ. ೩೦೦೦. ಈ ಹಳ್ಳಿಯಲ್ಲಿ ಕನಿಷ್ಠಪಕ್ಷ ೬೦೦೦ ರೂಪಾಯಿಗಳಾದರೂ ಈ ದುರಾಭ್ಯಾಸಕ್ಕಾಗಿ ಅಲ್ಲಿಯ ನಿವಾಸಿಗಳು ದುರ್ವ್ಯಯ ಮಾಡುತ್ತಿದ್ದರಂತೆ. ಇದೇ ಹಳ್ಳಿಯಲ್ಲಿ ವಿದ್ಯಾಪ್ರಚಾರ, ಮಾರ್ಗಗಳ ದುರುಸ್ತಿ, ಆರೋಗ್ಯವರ್ಧನೆ ಇವೇ ಮೊದಲಾದುವುಗಳಿಗೆ ವರುಷಕ್ಕೆ ಬರೆ ೭೦೦ ರೂಪಾಯಿ ಖರ್ಚಾಗುತ್ತಿತ್ತಂತೆ. ಹಾಗಾದರೆ ದೊಡ್ಡ ದೊಡ್ಡ ಶಹರುಗಳಲ್ಲಿ ಇದರ ಪರಿಣಾಮವು ಎಷ್ಟಾಗಬೇಕೆಂದು ವಾಚಕರೆ ಊಹಿಸಲಿ. ಯುದ್ಧ, ಸಾಂಕ್ರಾಮಿಕರೋಗ ಇವಕ್ಕಿಂತಲೂ ಹೆಚ್ಚಿನ ಹಾವಳಿಯು ಸುರಾಪಾನದಿಂದ ಉಂಟಾಗುವುದೆಂದು ಮಿ. ಗ್ಲೇಡ್‌ಸ್ಟನರ ಅಭಿಪ್ರಾಯ. ಸ್ವತಃ ಇಂಗ್ಲೆಂಡಿನ ಮುಖ್ಯ ಮಂತ್ರಿಗಳಾಗಿರುವ ಲೊಯಡ್ ಜೋರ್ಜರು ಯುದ್ಧಕಾಲದಲ್ಲಿ ಹೀಗೆಂದಿದ್ದಾರೆ: ಜನರ "ಮದ್ಯಪಾನದ ದುರಾಭ್ಯಾಸವು ಜರ್ಮನಿ ಅಥವಾ ಆಸ್ಟ್ರಿಯಾಗಿಂತ ಮಹತ್ತಾದ ಶತ್ರುವಾಗಿದೆ." ಈಜಿಪ್ಟ, ರೋಮ್ ಮೊದಲಾದ ದೇಶಗಳ ನಾಗರಿಕತೆಯು ಕುಂದಿಹೋಗಲು ಈ ಪಿಶಾಚವೇ ಕಾರಣವೆಂದು ಚರಿತ್ರೆಯು ಸಾರುತ್ತದೆ. ಆದುಕಾರಣ ದೇಶದ ಆರೋಗ್ಯವನ್ನೂ ಸಂಪತ್ತನ್ನೂ ಅಭಿವೃದ್ಧಿಸಲು ಈ ದುರಾಭ್ಯಾಸದ ಹಬ್ಬನ್ನಡಗಿಸುವುದೆ ಮುಖ್ಯ ಸಾಧನವಾಗಿದೆ. ಅನೇಕ ಸಂಸ್ಥೆಗಳು ಜನರಲ್ಲಿರುವ ಈ ದುರಾಭ್ಯಾಸವನ್ನು ಅಡಗಿಸಿಬಿಡಲು ಯತ್ನಿಸಿದವು. ಆದರೆ ಅವರಿಂದ ಹೆಚ್ಚಿನ ಪರಿಣಾಮವೇನೂ ಉಂಟಾಗಲಿಲ್ಲ. ಈಗ ಮುನ್ಸಿಪಾಲಿಟಿಗಳಂಥ ಸಂಸ್ಥೆಗಳ ಮತ್ತು ಸರಕಾರದ ಸಹಾಯವನ್ನು ಜನರು ಇದರ ಉಚ್ಚಾಟನ ಬಗ್ಗೆ ಪಡೆಯುತ್ತಿದ್ದಾರೆ. ಕಳೆದ ಮೇ ತಿಂಗಳಲ್ಲಿ ಮದರಾಸ ಕೊರ್ಪೊರೇಶನಿನ ಮೀಟಿಂಗಿನಲ್ಲಿ ಕೊರ್ಪೊರೇಶನಿನ ಸ್ವಾಧೀನವಿರುವ ಶೇಂದಿಯನ್ನು ಇಳಿಸಬಹುದಾದ ಮರಗಳನ್ನು ಮಾರ್ತೆಗೆ ಕೊಡಬಾರದೆಂಬ ಠರಾವು ಪಾಸಾಗಿದೆಯಂತೆ. ಇಂಡಿಯಾ ಸರಕಾರದ ಮಂಜೂರಾತಿಯು ಈ ವರೆಗೆ ದೊರಕದ್ದರಿಂದ ಮದರಾಸ ಟೆಂಪರೆನ್ಸ ಬಿಲ್ಲು ಜಾರಿಗೆ ತಾರದೆ ಪ್ರಕೃತಕೆ ಮನ್ನಾ ಇಟ್ಟಿದೆ

ಕಾಠೇವಾಡ ಸಂಸ್ಥಾನಿಕರಲ್ಲಿ ಭಾವನಗರದವರೂ ಉಳಿದ ಒಂದೆರಡು ಸಂಸ್ಥಾನದವರೂ ತಮ್ಮ ರಾಜ್ಯದಲ್ಲಿ ಹೆಂಡದ ಅಂಗಡಿಗಳು ಇರಲೇಕೂಡದೆಂದು ಠರಾವು ಮಾಡಿರುವುವು. ಕಳೆದ ವರುಷ ಅಸಹಕಾರ ಚಳವಳದಿಂದ ಸುರಾಪಾನ ನಿಷೇಧಕ್ಕೆ ಹೆಚ್ಚಿನ ಪ್ರಯತ್ನವು ನಡಿಯಿತು. ಮತ್ತು ಕಳೆದ ವರುಷ ಶೇಂದಿ ಶರಾಬಿನಿಂದ ಸಿಗುವ ಉತ್ಪನ್ನವು ಮದರಾಸ ಸರಕಾರಕ್ಕೆ ಸೇಕಡಾ ೧೧. ೧೮ರಷ್ಟು ಕಡಿಮೆ ದೊರಕಿತು. ನಮ್ಮ ಜಿಲ್ಲೆಯು ಸಹ ಕಳೆದ ವರುಷದ ಮೇಲಿನ ಪ್ರಯತ್ನದಲ್ಲಿ ಸಹಭಾಗಿಯಾಗಿದೆ.

ಕಳೆದ ತಾ. ೨೬ರಲ್ಲು ಜರುಗಿದ ಮಂಗಳೂರ ಮುನ್ಸಿಪಲ್ ಕೌನ್ಸಿಲಿನ ಮೀಟಿಂಗಿನಲ್ಲಿ ಪಟ್ಟಣದ ವೋಟರರ ಅಪೇಕ್ಷೆಯಂತೆ ಶೇಂದಿ ಶರಾಬುಗಳ ಗಡಂಗುಗಳನ್ನು ಪಟ್ಟಣದ ವಿಸ್ತೀರ್ಣದಿಂದ ತೆಗೆದು ಹಾಕಬೇಕಾಗಿ ಠರಾವು ಮಂಜೂರಾಗಿದೆ. ಬರುವ ವಾರದಲ್ಲಿ ಶೇಂದಿ ಶರಾಬುಗಳ ಗಡಂಗುಗಳ ಏಲಂ ಪ್ರಾರಂಭವಾಗುವುದು. ಗುತ್ತೆದಾರರು ಸ್ವದೇಶದ ಬಡತನದ ಕಡೆಗೆ ದೃಷ್ಟಿಯಿಟ್ಟು ಇವನ್ನು ವಹಿಸಿಕೊಳ್ಳದೆ ಜಿಲ್ಲೆಯ ಬಡತನವನ್ನು ನಿವಾರಿಸುವಂತೆ ಮಾಡಬೇಕು. ಜನರು ಮರಗಳನ್ನು ಮಾರ್ತೆಗೆ ಕೊಡಬಾರದು. ಮತ್ತು ಕುಡಿಕರು ಮದ್ಯಪಾನಕ್ಕೆ ಸಂಪೂರ್ಣ ಬಹಿಷ್ಕಾರವನ್ನು ಹಾಕಿ ಏಳಿಗೆಯನ್ನು ಹೊಂದಬೇಕು. ಸರಕಾರದವರು ಜನರ ಮನೋಭಿಲಾಷೆಯಂತೆ ಮದ್ಯಪಾನದ ದುರಾಭ್ಯಾಸವನ್ನು ಅಡಗಿಸುವ ಕಟ್ಟುಕಟ್ಟಳೆಗಳನ್ನು ಮಾಡಿದರೆ ಈ ದುರಭ್ಯಾಸವು ಬಹು ಬೇಗನೇ ಮಾಯವಾಗಿ ದೇಶದ ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ.

ವಿದೇಶ ವರ್ತಮಾನ.

ಅಮೇರಿಕ:— ಅಮೇರಿಕದಲ್ಲಿ ಒಬ್ಬ ಯುರೋಪಿಯನ್ನನನ್ನು ಕೊಂದ ಬಗ್ಗೆ ನಿಗ್ರೋ ಮನುಷ್ಯನ ಮೇಲೆ ಆರೋಪಹೊರಿಸಿ ಅವನನ್ನು ಜೀವಂತಸುಡುವ ಸಮಾರಂಭವನ್ನು ನಡೆಯಿಸಿದ್ದು, ಅವನು ಮತ್ತೆ ಇಬ್ಬರ ಹೆಸರುಗಳನ್ನು ಹೇಳಿದ ಕೂಡಲೆ ಅವರನ್ನು ಸಹ ಜೀವಂತ ಸುಟ್ಟುಬಿಟ್ಟರಂತೆ.

ಅಮೇರಿಕದಲ್ಲಿ ಕಬ್ಬಿನ ನಾರಿನ ಪ್ರಯೋಜನ:— ಕಬ್ಬನ್ನು ಗಾಣಕ್ಕೆ ಹಾಕಿದ ತರುವಾಯ ಉಳಿದ ನಾರನ್ನು ಯಾವ ಉಪಯೋಗಕ್ಕೂ ತೆಗಿಯದೆ ಉರಿಯಲಿಕ್ಕೆ ಮಾತ್ರ ಅನೇಕ ಕಡೆಗಳಲ್ಲಿ ಉಪಯೋಗಿಸಲಾಗುತ್ತದಷ್ಟೆ. ಆದರೆ ಇತ್ತಲಾಗಿ ವಾಷಿಂಗಟನ್ ಪಟ್ಟಣದ ಪ್ರೊಫೆಸ್ಸರ ಸಿ. ಇ. ಮನ್‌ರೋ ಎಂಬವರು ಈ ನಾರಿನಿಂದ ಉತ್ತಮತರದ 'ಸಿಲೊಟೆಕ್ಸ್' ಎಂಬ ಹಲಿಗೆಗಳನ್ನು ಮಾಡಬಹುದೆಂದು ಕಂಡುಹಿಡಿದಿರುವನು. ಈಗ ಇಂಥಾ ಹಲಿಗೆಗಳನ್ನು ತಯಾರಿಸುವ ಭಾರೀ ಕಾರ್ಖಾನೆಯು ಅಮೇರಿಕದಲ್ಲಿ ಸ್ಥಾಪಿಸಲಾಗಿದಂತೆ.

ಗ್ರೀಕ ದೇಶ:— ಗ್ರೀಕ ಪ್ರಭುತ್ವದವರು ಕಾನ್‌ಸ್ಟಂಟಿನೋಪಲ ಪಟ್ಟಣವನ್ನು ಮುತ್ತುವದಕ್ಕಾಗಿ ೧ ಲಕ್ಷ ಸೈನಿಕರನ್ನು ಕಳುಹಿಸುತ್ತಿದ್ದಾರಂತೆ. ಮತ್ತು ಗ್ರೀಸ್ ದೇಶದಲ್ಲಿ ಸೈನಿಕ ಶಾಸನವನ್ನು ಸಾರಿದ್ದಾರಂತೆ.

ಅಮೇರಿಕದಲ್ಲಿ ಮುಷ್ಕರ:— ಪೆನ್‌ಸಿಲ್‌ವಾನಿಯಾ ಮತ್ತು ಒಹಿಯೋ ಇಲ್ಲಿಯ ಗವರ್ನರರು ಮುಷ್ಕರಗಾರರನ್ನು ಹತೋಟಿಗೆ ತರಲು ಸೈನ್ಯವನ್ನು ಕರೆಸಿದ್ದಾರೆ.

ಹೊಲೆಂಡ್:—ಜರ್ಮನಿಗೂ ಹೊಲ್ಲೇಂಡಕ್ಕೂ ಮಧ್ಯದಲ್ಲಿರುವ ರೈನ್ ನದಿಗೆ ಕಾಲುವೆಯನ್ನು ತೋಡುವ ಕೆಲಸವು ಕಾಮಗಾರರು ಮುಷ್ಕರವನ್ನು ಹಿಡಿದಿರುವುದರಿಂದ ನಿಲ್ಲಿಸಿದೆ.

ವಿಲ್‌ಸನ್ ಸಾಹೇಬರ ಕೊಲೆ:—ವಿಲ್‌ಸನ್ ಸಾಹೇಬರನ್ನು ಕೊಂದು ಹಾಕಿದ ಬಗ್ಗೆ ಡೆನ್ ಮತ್ತು ಬಕುಲಿವೆನ್ ಇವರಿಗೆ ಫಾಶಿ ಶಿಕ್ಷೆವಿಧಿಸಲಾಗಿದೆ.

ರೊಥೆನ್ಯೂ ಸಾಹೇಬರ ಕೊಲೆ:—ಜರ್ಮನಿಯಲ್ಲಿ ರೊಥೆನ್ಯು ಎಂಬವರನ್ನು ಕೊಂದ ಸಂಶಯಕ್ಕೆ ಗುರಿಮಾಡಲ್ಪಟ್ಟ ಫಿಶರ್ ಮತ್ತು ಕಾರ ಇವರಿಬ್ಬರೂ ಆತ್ಮಹತ್ಯ ಮಾಡಿಕೊಂಡಿರುವರಂತೆ.

ಒಳದೇಶ ವರ್ತಮಾನ.

ಪ್ರಬಂಧದ ಬಹುಮಾನ:—ಹಿಂದೂಸ್ಥಾನದ ಜಾನುವಾರುಗಳ [illegible]ತಿಯನ್ನೂ ಅವುಗಳ ಸ್ಥಿತಿಯನ್ನೂ ಅಭಿವೃದ್ಧಿಪಡಿಸುವ ವಿಧಾನವನ್ನು ಕುರಿತು ಬರೆದ ಉಪನ್ಯಾಸದ ಬಗ್ಗೆ ಪಬ್ಲಿಸಿಟಿಬ್ಯುರೋದವರು ವಾಗ್ದತ್ತ ಮಾಡಿದ ಬಹುಮಾನವು ಮ। ರಾ। ಕಲ್ಯಾಣ್ ಸಿ. ಶ್ರೀನಿವಾಸನ್, ಅವರ್ಗಳ್ ಯಂ. ಎ. ಮದರಾಸ ಇವರಿಗೆ ಕೊಟ್ಟಿದೆ. (ಪಬ್ಲಿಸಿಟಿ ಬೀರೋ.)

ಮದರಾಸ ಹ್ಯಾಕೋರ್ಟ:—ಬರುವ ಸೆಪ್ಟಂಬರ ತಿಂಗಳಲ್ಲಿ ೧೦ ದಿನಗಳ ವರೆಗೆ ಮದರಾಸ ಹ್ಯಾಕೋರ್ಟನ್ನು ಮುಚ್ಚಲಾಗುವುದೆಂದು ಮದರಾಸ ಮೈಲು ಪ್ರಕಟಿಸಿದ ವಾರ್ತೆಯು ನಿರಾಧಾರವಾದದ್ದೆಂದು ಪಬ್ಲಿಸಿಟಿ ಬೀರೋ ತಿಳಿಸುತ್ತದೆ.

ಕಾಫಿಯ ಬೆಳೆ:—ಕಾಫಿ ಬೆಳೆಯುವ ಜಿಲ್ಲೆಗಳಲ್ಲಿ ಮಳೆಯು ಚೆನ್ನಾಗಿ ಸುರಿದುದರಿಂದ ಅಕಾಲದಲ್ಲಿ ಕಾಫಿ ಗಿಡಗಳು ಹೂಬಿಡುವಂತೆ ಮಾಡಿದ ಕಾರಣ ೧೯೨೨-೨೩ನೆಯ ಇಸವಿಗಳಲ್ಲಾಗುವ ಕಾಫಿಯ ಉತ್ಪನ್ನವು ಕೊಂಚ ಕಡಿಮೆಯಾಗಬಹುದೆಂದು ಮದರಾಸ ಕೃಷಿ ಇಲಾಖೆಯವರು ಜನವರಿ ತಿಂಗಳಲ್ಲಿ ಮಾಡಿದ ಕೆಲಸದ ವೃತ್ತಾಂತದ ವರದಿಯಿಂದ ತಿಳಿದುಬರುತ್ತದೆ.

ವಿದ್ಯಾಸಾಗರ ವಾಣೀಭವನ:— ಸರ್ ಜಗದೀಶಚಂದ್ರ ಬೋಸರ ಪತ್ನಿಯವರು ಹಿಂದೂ ವಿಧವೆಯರಿಗಾಗಿ ವಿದ್ಯಾಸಾಗರ ವಾಣೀಭವನವೆಂಬ ಆಶ್ರಮವನ್ನು ಸ್ಥಾಪಿಸತಕ್ಕವರಿದ್ದಾರೆ. ಈ ಆಶ್ರಮವು ಕಲ್ಕತ್ತೆಯ ಹತ್ತಿರವೇ ತೆರೆಯಲ್ಪಡುವುದು. ವಿಧವೆಯರು ಮರ್ಯಾದೆಯಿಂದ ಜೀವನಯಾತ್ರೆಯನ್ನು ಸಾಗಿಸುವರೆ ಈ ವ್ಯವಸ್ಥೆಯು ಮಾಡಿರುತ್ತದೆ. ನೂಲುವುದು, ನೇಯುವುದು, ಹೊಲಿಯುವುದು, ಗೃಹಕೃತ್ಯ ಮಕ್ಕಳ ಶುಶ್ರೂಷೆ ಇವೇ ಇಲ್ಲಿ ಕಲಿಸತಕ್ಕ ವಿಷಯಗಳು.

ಕಾಫಿಯ ಪೈದಾಸ್ತು:—ಇಂಡಿಯಾ ದೇಶದಲ್ಲಿರುವ ಕಾಫಿ ಎಸ್ಟೇಟುಗಳ ಪೈಕಿ ಅರ್ಧಭಾಗ ಮೈಸೂರು ಸಂಸ್ಥಾನದಲ್ಲಿರುವುದಾಗಿ ಗೊತ್ತುಮಾಡಿದೆ.

ಮೈಸೂರು:—ಇದುವರೆಗೆ ಬೆಂಗಳೂರ ಸೈನ್ಯದಲ್ಲಿ ತರಬೇತು ಹೊಂದುತ್ತಿದ್ದ ರಾಜಕುಮಾರ ದೇಶರಾಜ ಅರಸಿನವರನ್ನು ಹೈದರಾಬಾದು ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರ ಪರ್ಸನಲ್ ಅಸಿಸ್ಟಾಂಟರಾಗಿ ನೇಮಿಸಿರುವುದರಿಂದ ಅವರು ಇಷ್ಟರಲ್ಲಿಯೆ ಹೈದರಾಬಾದಿಗೆ ಪ್ರಯಾಣಮಾಡುವವರಾಗಿರುವರಂತೆ.

ಹತ್ತಿಯ ಬೆಳೆ:— ಕರ್ನಾಟಕದಲ್ಲಿ ಸುಮಾರು ೭೦,೪೪೭,೫ ಎಕ್ರೆ ಸ್ಥಳಗಳಲ್ಲಿ ಹತ್ತಿ ಬೆಳೆಯುವುದಾಗಿ ತಿಳಿದುಬರುತ್ತದೆ.

ಲೋಕಮಾನ್ಯರ ಜಯಂತ್ಯುತ್ಸವ:— ಧಾರವಾಡದಲ್ಲಿ ಕಳೆದ ತಾ. ೧೫ನೆ ದಿವಸ ಲೋಕಮಾನ್ಯರ ಜಯಂತ್ಯುತ್ಸವವು ಸಂಸ್ಕೃತ ಪಾಠಶಾಲೆಯಲ್ಲಿ ನಡೆಯಿತು. ಆ ದಿನ ಮುಂಜಾನೆ ಕುರುಡ ಕುಂಟ ಮುಂತಾದವರಿಗೆ ಅಕ್ಕಿಯ ದಾನವು ಮಾಡಲ್ಪಟ್ಟಿತು.

ಕರ್ನಾಟಕ ರಾಷ್ಟ್ರೀಯ ವೃತ್ತಪತ್ರಗಳ ಏಜಂಟರಿಗೆ ಶಿಕ್ಷೆ:— ಹುಬ್ಬಳ್ಳಿಯಲ್ಲಿ ರಾಷ್ಟ್ರೀಯ ವೃತ್ತಪತ್ರಗಳ ಏಜಂಟರಾದ ಮಿ। ಶ್ರೀನಿವಾಸ ಆಚಾರ್ಯ ಬುರ್ಲಿ ಎಂಬವರ ಮೇಲೆ ಕ್ರಿ. ಪ್ರೊ. ಆಕ್ಟಿನ ೬೦ನೇ ಕಲಮಿನ ಪ್ರಕಾರ ಸಮ್ಮನ್ಸು ಹೊರಟಿದೆಯಂತೆ. ಇವರು ಕರ್ಮವೀರ, ಕರ್ನಾಟಕ ವೈಭವ, ರಾಜಹಂಸ, ವಿಜಯ ಇವುಗಳನ್ನು ಮಾರಿ ಉಪಜೀವಿಸುವವರು.

ತಿಲಕ ಸ್ವರಾಜ್ಯಫಂಡಿಗೆ ದಾನ:— ಹುಬ್ಬಳ್ಳಿಯ ಶ್ರೀಮಾನ್ ಐ. ಸಂಚಿ ಶೇಟ್ ಎಂಬವರು ತಿಲಕ ಸ್ವರಾಜ್ಯ ಫಂಡಿಗೆ ರೂ. ೧೦೦೦ವನ್ನು ದಾನವಾಗಿ ಕೊಟ್ಟಿರುವರು.

ಮಹಾತ್ಮರ ಸ್ವೀಕೃತ ಪುತ್ರಿ:—ಮಹಾತ್ಮರ ದರುಶನವನ್ನು ಅವರ ಪತ್ನಿಯವರು ಪಡೆದಾಗ ಮಹಾತ್ಮರು ಪ್ರಥಮದಲ್ಲಿ ಲಕ್ಷ್ಮಿಯ ಯೋಗಕ್ಷೇಮವನ್ನು ಕೇಳಿದರಂತೆ. ಈ ಲಕ್ಷ್ಮಿ ಎಂದರೆ ಸತ್ಯಾಗ್ರಹ ಆಶ್ರಮದಲ್ಲಿರುವ ಒಬ್ಬ ಅಸ್ಪೃಶ್ಯನ ಮಗಳಾಗಿರುವಳು. ಮಹಾತ್ಮರಿಗೆ ಇವಳಲ್ಲಿ ಬಹಳ ಪ್ರೇಮ. ಮಹಾತ್ಮರು ತಮ್ಮ ಭಾಷಣದ ಕೆಲವು ಸಂದರ್ಭಗಳಲ್ಲಿ ಈ ಹುಡುಗಿಯು ತನ್ನ ಸ್ವೀಕೃತ ಪುತ್ರಿಯಾಗಿರುವಳೆಂದು ಹೇಳಿರುವರಂತೆ.

ಪಂಡಿತ ಮಾಲವೀಯ:—ಇವರನ್ನು ಕೈದುಮಾಡದೆ ಇದ್ದರೆ ತಾನು ತನ್ನ ಮೆಂಬರಿಕೆಗೆ ರಾಜಿನಾಮೆಯನ್ನು ಕೊಡುವುದಾಗಿ ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನ ಒಬ್ಬ ಮೆಂಬರರು ಹೇಳುತ್ತಿರುವರೆಂಬ ವರ್ತಮಾನವಿರುವುದು.

ಸಿಮ್ಲಾ:—ಕೌನ್ಸಿಲ್ ಒಫ್ ಸ್ಟೇಟ್ ಮತ್ತು ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧಿವೇಶನವು ಬರುವ ಸೆಪ್ಟಂಬರ ತಾ. ೫ರಿಂದ ಸಿಮ್ಲದಲ್ಲಿ ಪ್ರಾರಂಭವಾಗುವುದು.

ಉತ್ತರ ಮಲಬಾರು:—ತಲಚೇರಿಯ ಮುನ್ಸಿಪಲ್ ಕೌನ್ಸಿಲಿನ ಕಳೆದ ಮೀಟಿಂಗಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡಬೇಕೆಂಬ ಠರಾವು ಪಾಸಾಯಿತು. ಮತ್ತು ಇದಕ್ಕಾಗಿ ವೃತ್ತಿತೆರಿಗೆಯನ್ನು ಸೇಕಡಾ ೨೦ರಂತೆ ಹಾಗು ಭೂತೆರಿಗೆಯನ್ನು ಸೇಕಡಾ ೧೦ರಂತೆ ಹೆಚ್ಚಿಸಬೇಕಾಗಿ ನಿಶ್ಚಯಿಸಿ ಈ ಸಂಗತಿಯನ್ನು ಡಂಗುರ ಹೊಯಿಸಿ ಜನರಿಗೆ ತಿಳಿಸಲಾಯಿತು. ತೆರಿಗೆಯ ಭಾರವನ್ನು ಹೊತ್ತ ಜನರಿಗೆ ಈ ವರ್ತಮಾನವನ್ನು ಕೇಳುತ್ತಲೆ ದಿಗಿಲುಂಟಾಗಿ ಅವರು ತಾ. ೧೩ರಲ್ಲಿ ಹರತಾಳವನ್ನು ಆಚರಿಸಿದರು. ಅನಂತರ ಆ ದಿನ ಮಧ್ಯಾಹ್ನ ಒಂದು ಸಾರ್ವಜನಿಕ ಸಭೆ ಕೂಡಿ ಮುನ್ಸಿಪಾಲಿಟಿಯವರು ಪಾಸುಮಾಡಿದ ಈ ಠರಾವು ನಿಷೇಧಿಸಲಾಯಿತು. ಮತ್ತು ಈ ವಿಷಯವನ್ನು ಪುನರಾಲೋಚಿಸಬೇಕೆಂದು ಆರು ಮಂದಿ ಮುನ್ಸಿಪಲ್ ಕೌನ್ಸಿಲರರ ಸಹಿ ಇರುವ ಒಂದು ಮನವಿಯು ಮುನ್ಸಿಪಲ್ ಕೌನ್ಸಿಲಿನ ಅವಗಾಹನೆ ಬಗ್ಗೆ ಕಳುಹಿಸಲಾಯಿತು. ಕಳೆದ ೫೦ ವರುಷಗಳಿಂದ ಕಾಣದ ಮಹತ್ತಾದ ನೆರೆಯು ಗತ ವಾರದ ೫ ದಿನಗಳಲ್ಲಿ ಉತ್ತರ ಮಲಬಾರದಲ್ಲಿ ಬಂದು ಹೆಚ್ಚಿನ ನಷ್ಟವುಂಟಾಯಿತು. ಕುರುಂಬರನಾಡ ತಾಲೂಕು ಒಂದರಲ್ಲಿ ೪೦೦೦ಕ್ಕಿಂತ ಹೆಚ್ಚಿನ ಗುಡಿಸಲುಗಳು ನೆಲಸಮವಾದವು. ಅನೇಕ ಜನರಿಗೆ ಉಳುಕೊಳ್ಳಲು ಮನೆಗಳು ಇಲ್ಲ.

ಪಾಯೊನಿಯರ್ ಪತ್ರದ ಸೂಚನೆ:— ಕಾಯಿದೆಭಂಗವಿಚಾರಣಾ ಕಮ್ಮಿಟಿಗೆ ದೇಶದಲ್ಲೆಲ್ಲಾ ತಿರುಗಾಡಲಿಕ್ಕೆ ಬಿಡಬಾರದೆಂದು ಈ ಪತ್ರದ ಸೂಚನೆಯಾಗಿದೆ.

ಅಲ್ಲಿ ಸಹೋದರರು:—ಮೌಲಾನಾ ಶೌಕತಅಲ್ಲಿಯವರು ರಾಜಕೋಟೆಯ ಸೆರೆಮನೆಯಲ್ಲಿ ಕೆಲಸಮಾಡಲಿಕ್ಕೆ ಒಪ್ಪದ್ದರಿಂದ ನಾಲ್ಕು ತಿಂಗಳಿಗೊಮ್ಮೆ ಆಪ್ತರಿಗೆ ಭೆಟ್ಟಿಯಾಗಲಿಕ್ಕೆ ಇದ್ದ ಸವಲತ್ತು ಇವರಿಗೆ ಸಿಗಲಿಲ್ಲ. ಆದರಂತೆ ಮೌಲಾನಾ ಶೌಕತಾಲಿಯವರು ನಗ್ನಾವಸ್ಥೆಯಲ್ಲಿ ಧ್ಯಾನಮಾಡಿಕೊಳ್ಳುವುದನ್ನು ಅಲ್ಲಿಗೆ ಹೋದರೆಂದೂ ಸೆಂಟ್ರಲ್ ಖಿಲಾಫತ್ ಕಮ್ಮಿಟಿ ಸೆಕ್ರೆಟರಿಗಳು ತಿಳಿಸುತ್ತಾರೆ. (ಕರ್ಮವೀರ)

ಸುರೆಗೆ ಬಹಿಷ್ಕಾರ:— ಕಾಠೇವಾಡದ ಸಂಸ್ಥಾನಿಕರಲ್ಲಿ ಭಾವನಗರದವರೂ ಉಳಿದ ಒಂದೆರಡು ಸಂಸ್ಥಾನದವರೂ ತಮ್ಮ ರಾಜ್ಯದಲ್ಲಿ ಹೆಂಡದ ಅಂಗಡಿಗಳು ಇರಲೇ ಕೂಡದೆಂದು ಠರಾವು ಮಾಡಿರುವರು.

ಮಿ। ಹೊರ್ನಿಮೆನ್:—ಮುಂಬಯಿ ಕ್ರೊನಿಕಲ್ ಪತ್ರದ ಸಂಪಾದಕರಾದ ಮಿ। ಹೊರ್ನಿಮೆನ್ನರಿಗೆ ಗಡಿದಾಟಿಸಿ ಮೂರು ವರುಷವಾದರೂ ಮುಂಬಯಿ ಸರಕಾರದವರು ಇನ್ನೂ ಅವರಿಗೆ ಮರಳಿ ಬರಲು ಪರವಾನಗಿ ಕೊಡಲಿಲ್ಲರು.

ಕರಾಚಿ:— ಇಲ್ಲಿಯ ಮುನ್ಸಿಪಲ್ ಶಾಲೆಗಳಲ್ಲಿ 'ಸ್ಕೂಲ್ ಫೀ'ಯನ್ನು ಮಾಫಿಮಾಡಿದೆ.

ಮಹಾತ್ಮರ ದರುಶನಕ್ಕೆ ಅಡ್ಡಿ:— ಮಹಾತ್ಮಾ ಗಾಂಧಿಯವರನ್ನು ಕೆಲವು ದಿನಗಳ ಹಿಂದೆ ಶ್ರೀಯುತ ಮಗನಲಾಲ ಗಾಂಧಿ ಮೊದಲಾದವರು ಕಂಡು ಅವರೊಡನೆ ಸಂಭಾಷಿಸಿದರಷ್ಟೆ. ಈ ಸಂಭಾಷಣೆಯ ಸಂಗತಿಯನ್ನು ಪ್ರಕಟಿಸಬಾರದಾಗಿಯೂ, ಪ್ರಕಟಿಸಿದರೆ ಅವರ ಮುಂದಿನ ಭೇಟಿಗೆ ಬಿಡಲಾಗದೆಂದೂ ಜೈಲಿನ ಸುಪರಿಂಟೆಂಡೆಂಟರ ಸೂಚನೆಯಾದಾಗ ಮಹಾತ್ಮರು ತನ್ನ ಮುಂದಿನ ಸಂಭಾಷಣೆಯ ಹಕ್ಕನ್ನು ಇಟ್ಟುಕೊಳ್ಳುವುದು ಅಥವಾ ಕಳಕೊಳ್ಳುವುದು ಭೇಟಿ ಕೊಟ್ಟವರು ನಿರ್ಧರಿಸತಕ್ಕದ್ದಾಗಿದೆ ಎಂದು ತಿಳಿಸಿದರು. ಮಹಾತ್ಮರ ಭೇಟಿಯ ಕಾಲದ ಸಂಭಾಷಣೆಯ ವಿವರವನ್ನು ಪ್ರಕಟಿಸಿದುದರಿಂದ ಅವರ ಆಪ್ತೇಷ್ಟರ ಭೇಟಿಗೆ ಮುಂದಕ್ಕೆ ಬಿಡುವರೋ ಇಲ್ಲವೋ ಎಂಬುದೊಂದು ಶಂಕೆಯುಂಟಾಗಿದೆಂದು ಮಗನಲಾಲ ಗಾಂಧಿಯವರು ಯಂಗ್ ಇಂಡಿಯಾದಲ್ಲಿ ಪ್ರಕಟಿಸಿರುವರು. ಕಾಯಿದೆಭಂಗ ವಿಚಾರಣಾ ಕಮಿಟಿಯ ಅಧ್ಯಕ್ಷರಾದ ಹಕೀಮ ಅಜಮಲ್‌ಖಾನರು ಪೂನೆಗೆ ಬಂದಿರುವಾಗ ತಮಗೂ ಪಂಡಿತ ಮೋತಿಲಾಲ ನೇಹರು, ಡಾಕ್ಟರ ಅನಸಾರಿ ಇವರಿಗೂ ಮಹಾತ್ಮರೊಡನೆ ಸ್ನೇಹಾತ್ಮಕ (ಯಾವ ತರದ ರಾಜಕೀಯ ವಿಷಯಗಳು ವಿರಹಿತವಾದ) ಸಂಭಾಷಣೆಕ್ಕೆ ಪರವಾನಗಿಯನ್ನು ಕೊಡಬೇಕೆಂದು ಮಾಡಿದ ಮನವಿಗೆ ಈಗಾಗಲೇ ಮಹಾತ್ಮರ ದರುಶನಕ್ಕೆ ಇತರರನ್ನು ಬಿಟ್ಟಿದ್ದರಿಂದ ನಿಶ್ಚಿತ ಸಮಯದ ವರೆಗೆ ಯಾರನ್ನೂ ಬಿಡಲು ಆಗುವುದಿಲ್ಲವೆಂದು ಉತ್ತರ ದೊರಕಿತು.

ಛಾಯಾಸ್ಕೋಪ ಪ್ರದರ್ಶನ:—ಅಹಮ್ಮದಾಬಾದಿನಲ್ಲಿ ವಿದೇಶಿ ವಸ್ತ್ರದ ಹೋಮವನ್ನು ಮಾಡಿದ ದೇಖಾವೆಯನ್ನು ಹೈದರಾಬಾದಿನಲ್ಲಿ ಪ್ರದರ್ಶಿಸಬಾರದಾಗಿ ಅಪ್ಪಣೆಯಾಗಿದೆ.

ಮಜರುಲ್‌ಹಕ್:—ಮದರ್‌ಲೆಂಡ್ ಪತ್ರಿಕೆಯ ಸಂಪಾದಕರಾದ ಮಿ। ಮಜರಲ್‌ಹಕ್ಕರ ಮೇಲೆ ಇನ್ನೊಂದು ಮೊಕದ್ದಮೆಯು ದಾಖಲಾಗಿದೆ.

ಲೋರ್ಡ ಸಿಂಹರು:—ಇವರ ಅಸ್ವಸ್ಥತೆ ಗುಣವಾಗುತ್ತ ಬರುತ್ತಿರುವದು. ಇವರು ಬರುವ ಒಕ್ಟೋಬರ ತಿಂಗಳಲ್ಲಿ ಹಿಂದೂಸ್ಥಾನಕ್ಕೆ ಹಿಂತಿರುಗಿ ಬರಲಿಕ್ಕಿದ್ದಾರೆ.

ಮುಂಬಯಿ:—ರಸ್ತೆಗಳ ಕೆಲಸ ಮಾಡುವ ಸುಮಾರು ೭೦೦ ಮಂದಿ ಮಜೂರರು ಮುಷ್ಕರವನ್ನು ಹಿಡಿದು ಕೆಲಸವನ್ನು ನಿಲ್ಲಿಸಿಬಿಟ್ಟಿದ್ದಾರೆ.

ಕಡ್ಡಾಯದ ಶಿಕ್ಷಣ:—ಕಂಚೀ ಪಟ್ಟಣದಲ್ಲಿ ಮುನ್ಸಿಪಾಲಿಟಿಯ ವಿಸ್ತೀರ್ಣದಲ್ಲಿ ಕಡ್ಡಾಯದ ಶಿಕ್ಷಣವನ್ನು ಜಾರಿಗೆತರಬೇಕೆಂದು ಠರಾವು ಮಾಡಿ ಸರಕಾರಕ್ಕೆ ಕಳುಹಿಸಿತ್ತು. ಸರಕಾರದವರು ಇದಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟಿರುವರು.

ಅಮೃತ ಬಜಾರ ಪತ್ರಿಕೆ:—ಸರ್ ಸುರೇಂದ್ರನಾಥ ಬೆನರ್ಜಿಯವರು ಈ ಪತ್ರಿಕೆಯ ಮೇಲೆ ಮಾನನಷ್ಟದ ಬಗ್ಗೆ ನಡಿಸಿದ ವ್ಯಾಜ್ಯವು ಮುಖ್ಯ ಸಾಕ್ಷಿಗಾರರಾದ ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ಅಸ್ಟ್ರೇಲಿಯದಲ್ಲಿರುವುದರಿಂದ ಮುಂದೆರಿಸಿಡಲಾಗಿದೆ.

ಕಲ್ಕತ್ತಾ:—ನಾರಿನ ಕಾರ್ಖಾನೆಯ ಕೆಲಸದವರ ಮುಷ್ಕರವು ಇನ್ನೂ ಶಾಂತವಾಗಲಿಲ್ಲ.

ಜೈಲಿನ ಖರ್ಚನ್ನು ಕಡಿಮೆಮಾಡುವುದು:—ಯುನೈಟೆಡ್ ಪ್ರಾವಿನ್ಸಿನಲ್ಲಿ ಪ್ರೊವಿನ್ಶಿಯಲ್ ಜೈಲುಗಳ ಖರ್ಚನ್ನು ಕಡಿಮೆಮಾಡುವುದಕ್ಕಾಗಿ ರಾಜಕೀಯ ತಪ್ಪುಗಳಲ್ಲದೆ ಇತರ ತಪ್ಪಿಗಾಗಿ ಕಡಿಮೆ ಅವಧಿಯ ಶಿಕ್ಷೆಯನ್ನು ಅನುಭವಿಸುವವರಿಗೆ ಬಿಡುಗಡೆಮಾಡಲಾಗುವುದೆಂದು ವದಂತಿ ಇದೆ.

ಮೈಸೂರು:—ಈ ಸಂಸ್ಥಾನದಲ್ಲಿ ಪ್ರಜಾಕಮೂಹವಾದ ಬಲ್ಲಿಗಳ [illegible]ಗಳನ್ನೂ ಪಕ್ಷಿಗಳನ್ನೂ, ನವಿಲುಗಳನ್ನೂ, ಜಿಂಕೆಗಳನ್ನೂ ೧೯೨೨ನೆಯ ಜೂನ್ ತಾರೀಕು ೩೦ರ ಕಾಲಾವಧಿಯ ವರೆಗೂ ಹಿಡಿಯಲ್ಪಡಕೂಡದು ಅಥವಾ ಕೊಲ್ಲಲ್ಪಡಕೂಡದು ಎಂದು ಸಂಸ್ಥಾನದ ಸರಕಾರದವರಿಂದ ವಿಧಿಸಲಾಗಿದೆ.

ಮಜರುಲ್ ಹಕ್ಕರ ಸಂದೇಶ:—ಯಾವ ವಿಷಯಲ್ಲಾದರೂ ಸಾರ್ವಜನಿಕ ಸಭೆಯನ್ನು ನೆರೆಯಿಸುವುದು ಮುಂತಾದ ಕಾರ್ಯವನ್ನು ಕೈಕೊಳ್ಳದೆ ಚಕ್ರವನ್ನು ತಿರುಗಿಸಿ ಖಾದಿಯನ್ನು ತಯಾರಿಸಿ ಅದನ್ನು ಧರಿಸಿರಿ. ಮತ್ತು ಹಿಂದು ಮುಸಲ್ಮಾನರ ಐಕ್ಯವನ್ನು ಸ್ಥಿರಗೊಳಿಸಿರಿ. ನನ್ನ ಮುಸಲ್ಮಾನ ಬಂಧುಗಳಿಗೆ ನಾನು ಹೇಳುವುದೇನೆಂದರೆ:— ಬರುವ ಬಕ್ರೀದ್ ಹಬ್ಬದಲ್ಲಿ ಗೋವಧೆಯನ್ನು ನಿಲ್ಲಿಸಿರಿ. ಮತ್ತು ಹಿಂದುಗಳೊಡನೆ ಪರಸ್ಪರ ಪ್ರೇಮವನ್ನು ಬೆಳಸಿಕೊಳ್ಳಿರಿ, ಮತ್ತು ಅವರು ನಿಮ್ಮ ನೆರೆಯವರೆಂದು ತಿಳಿಯಿರಿ. ನನ್ನ ಸ್ವದೇಶ-ಬಾಂಧವರು ಈ ಕಾರ್ಯಗಳನ್ನು ಶ್ರದ್ಧೆಯಿಂದಲೂ, ಭರವಸೆಯಿಂದಲೂ ಧಾರ್ಮಿಕ ರೀತಿಯಿಂದಲೂ, ನೆರವೇರಿಸಿದರೆ ಆಗ ಸ್ವತಂತ್ರವು ಬಹಳ ಸಮೀಪಿಸುವುದು.''

ಡೆರಾಡೆನ್ನಿನ ಸಬ್ ಜಡ್ಜರು:—ಪಂಡಿತ ನಿತ್ಯಾನಂದಪಂಡಿ ಎಂಬ ಡೇರಾಡನ್ನಿನ ಸಬ್ ಜಡ್ಜರನ್ನು ಎರಡು ಮೊಕದ್ದಮೆಗಳಲ್ಲಿ ಒಟ್ಟು ೬೦೦೦ ರೂಪಾಯು ಲಂಚವನ್ನು ಪಡಕೊಂಡ ತಪ್ಪು ರುಜುವಾಗಿ ಕೆಲಸದಿಂದ ತೆಗೆದುಹಾಕಲಾಯಿತು.

ಕೊಂಗ್ರೆಸ್ ವರ್ಕಿಂಗ್ ಕಮ್ಮಿಟಿಯ ಮೀಟಿಂಗು:—ಬರುವ ಒಗಸ್ಟ ತಾ. ೧೪ಕ್ಕೆ ಕಲ್ಕತ್ತದಲ್ಲಿ ಕೊಂಗ್ರೆಸ್ ವರ್ಕಿಂಗ ಕಮ್ಮಿಟಿಯ ಮೀಟಿಂಗು ಶ್ರೀಯುತ ಸಿ. ಆರ್. ದಾಸರ ಗೃಹದಲ್ಲಿ ರಾತ್ರಿಕಾಲ ೮ ಗಂಟೆಗೆ ಸೇರುವುದು.

ಧರ್ಮವೀರರಿಗೆ ಶಿಕ್ಷೆ:—ಕಾಶೀ ವಿದ್ಯಾಪೀಠದ ಗಣಿತ ಶಾಸ್ತ್ರ ಬೋಧಕರಾದ ಶ್ರೀಯುತ ಧರ್ಮವೀರರಿಗೆ ಆರು ತಿಂಗಳ ಸಾದಾ ಶಿಕ್ಷೆಯು ವಿಧಿಸಲಾಯಿತು.

ಬೆರಿಸ್ಸಾಲ ಜೈಲ್:—ಸತ್ಯೇಂದ್ರನಾಥ ಸೆನ್ ಎಂಬವರು ಉಪವಾಸ ವ್ರತವನ್ನು ಹಿಡಿದಿರುವರು.

ರಾಜಕೀಯ ಕೈದಿಗಳ ಕುರಿತು ಠರಾವು:—ಮಹಾತ್ಮರನ್ನು ಶ್ರೇಷ್ಠ ವರ್ಗದ ರಾಜಕೀಯ ಕೈದಿಗಳಂತೆ ನಡಿಸಬೇಕು. ಮತ್ತು ಎಲ್ಲಾ ರಾಜಕೀಯ ಕೈದಿಗಳನ್ನೂ ಇಂಗ್ಲೆಂಡಿನಲ್ಲಿ ರಾಜಕೀಯ ಕೈದಿಗಳನ್ನು ನಡಿಸುವ ರೀತಿಯಲ್ಲಿ ನಡಿಸಬೇಕು. ಈ ಎರಡು ಠರಾವುಗಳು ಮುಂಬಯಿ ನ್ಯಾಯವಿಧಾಯಕ ಸಭೆಯ ಮುಂದೆ ಚರ್ಚೆಗೆ ಬರಲಿಕ್ಕಿವೆ.

ಉದಾರ ದಾನ:—ಮುಜಾಫರ ನಗರದ ಶ್ರೀಯುತ ಶೇಟ್ ಬಿಹಾರಿಲಾಲ್ ಎಂಬವರು ರಾಷ್ಟ್ರೀಯ ಶಿಕ್ಷಣ ಮತ್ತು ಕೈಗಾರಿಕೆಯ ಶಿಕ್ಷಣ ಕೊಡುವುದಕ್ಕಾಗಿ ೧ ಲಕ್ಷ ರೂಪಾಯಿ ಆದಾಯದ ತನ್ನ ಆಸ್ತಿಯನ್ನು ಬಿಟ್ಟಿರುವರಂತೆ.

ದಕ್ಷಿಣ ಕನ್ನಡ.

ಕುಂಭಾಶಿ:— ಇಲ್ಲಿ ಕುಂಭಾಶಿ ದೇವಸ್ಥಾನಕ್ಕೆ ಹೋಗುವ ಲೋಕಲ್ ಫಂಡ್ ರಸ್ತೆಯ ಉತ್ತರ ಬದಿಯಲ್ಲಿ ಗುಡ್ಡದ ನೀರು ಬಂದು ರಸ್ತೆಯಲ್ಲಿ ಸುಮಾರು ಒಂದು ಆಳು ಹೊಂಡ ಬಿದ್ದಿದೆ. ಇದರಿಂದ ಪ್ರಯಾಣ ಮಾಡುವ ಜನರಿಗೂ ಜಾನುವಾರುಗಳಿಗೂ, ಗಾಡಿ ವಗ್ಯೆರೆ ಹೋಗುವುದಕ್ಕೂ ಬಹಳ ಅಪಾಯಕರವಾಗಿದೆ. ಆದುದರಿಂದ ಸಂಬಂಧಪಟ್ಟ ತಾಲೂಕು ಬೋರ್ಡು ಪ್ರೆಸಿಡೆಂಟರು ಕೂಡಲೇ ತಕ್ಕ ವಿಲೇವಾರಿ ಮಾಡಿಸಬೇಕಾಗಿ ವಿನಂತಿ.

ಸಂಪಾಜೆ:— ಇಲ್ಲಿಯ ಬೋರ್ಡುಶಾಲೆಯಲ್ಲಿ ೫ ಕ್ಲಾಸುಗಳು ಇದ್ದು ೫೦ ಹುಡುಗರಿರುವುದರಿಂದ ಒಬ್ಬ ಮಾಸ್ತರರು ಪಾಠಕಲಿಸುವುದು ಕಷ್ಟ! ಇನ್ನೊಬ್ಬ ಮಾಸ್ತರರು ಇಲ್ಲಿ ಅಗತ್ಯ. ಇದಕ್ಕೆ ಇಲಾಖೆಯ ಉದ್ಯೋಗಸ್ಥರು ಏನಾ ಕೊಡುವರಾಗಿ ನಂಬಿದ್ದೇವೆ

ಉಡುಪಿ:— ಬರುವ ಒಗಸ್ಟ ೧ನೆ ಮಂಗಳವಾರ ಲೋಕಮಾನ್ಯ ತಿಲಕರ ಪುಣ್ಯತಿಥಿಯನ್ನು (೧) ಬೆಳಿಗ್ಗೆ ೯ ಗಂಟೆಯಿಂದ ೧೧ರ ವರೆಗೆ ನೂಲುವ ಪಂದ್ಯಾಟ. (೨) ಸಾಯಂಕಾಲ ೩ ಗಂಟೆಗೆ ತೆಂಕುಪೇಟೆಯಲ್ಲಿರುವ ರಾಷ್ಟ್ರೀಯ ವಿದ್ಯಾಮಂದಿರದ ಪ್ರಾಥಮಿಕ ಶಾಲೆಯ ಉಪ್ಪರಿಗೆಯಲ್ಲಿ ಮಹಾಜನರ ಸಭೆ. (೩) ಅನಂತರ ಪುರಾಣ ಭಜನೆ ಇತ್ಯಾದಿಗಳಿಂದ ಉಡುಪಿಯಲ್ಲಿ ಆಚರಿಸ[illegible]ಗಿ ನಿರ್ಣಯಿಸಲಾಗಿದೆ. ಪುರನಿವಾಸಿಗಳೆಲ್ಲರೂ ಸಹಾಯಮಾಡಿ ಸಾಂಗಗೊಳಿಸಬೇಕಾಗಿ ವಿನಂತಿ.

ಇಲ್ಲಿಯ ರಾಷ್ಟ್ರೀಯ ಶಿಕ್ಷಣಮಂಡಲದವರಿಂದ ಹೊಸದಾಗಿ ತೆರೆಯಲ್ಪಟ್ಟ ರಾಷ್ಟ್ರೀಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು ೫೦ ಮಂದಿ ಹುಡುಗರಿರುವರು. ಸ್ಥಳೀಕ ತಾಲೂಕು ಬೋರ್ಡಿನವರು ಬೋರ್ಡ ಶಾಲೆಗಳಲ್ಲಿ ಪಂಚಮರನ್ನು ಸೇರಿಸಿಕೊಳ್ಳಬೇಕಾಗಿ ಹುಕುಮುಕೊಟ್ಟು ಆರೀತಿ ಉಡ್ಪಿ ಬೋರ್ಡ ಹ್ಯಾಸ್ಕೂಲ್ ಮತ್ತು ಎಲಿಮೆಂಟರಿ ಶಾಲೆಗಳಲ್ಲಿ ಪಂಚಮರ ಪ್ರವೇಶವಾಗಿರುವುದರಿಂದ ಊರಲೆಲ್ಲಾ ವಿಶೇಷವಾಗಿ ಸ್ಪರ್ಶಾಸ್ಪರ್ಶದ ವಿಚಾರವಾಗಿ ಚರ್ಚೆನಡೆಯುತ್ತಿದೆ. ಹುಡುಗಿಯರ ಶಾಲೆಯಲ್ಲಿಯೂ ಪಂಚಮರ ಪ್ರವೇಶವಾಗುವುದಾಗಿ ವದಂತಿ ಇದೆ. ಬೋರ್ಡ ಹ್ಯಾಸ್ಕೂಲ್ ಮತ್ತು ಎಲಿಮೆಂಟರಿ ಶಾಲೆಯಲ್ಲಿ ಪಂಚಮರ ಪ್ರವೇಶವಾಗಿರುವುದಾದರೂ ಮಹಾತ್ಮಾ ಗಾಂಧಿಯವರ ಅಸಹಕಾರ ಚಳವಳವನ್ನು ದೂಷಿಸುತ್ತಿದ್ದ ಬ್ರಾಹ್ಮಣರ ಅಥವಾ ಬ್ರಾಹ್ಮಣೇತರರ ಮಕ್ಕಳಾಗಲಿ ಈ ಶಾಲೆಗಳಿಂದ ಹೊರಬಂದದ್ದು ನಮ್ಮ ತಿಳವಳಿಗೆ ಬಂದಿರುವುದಿಲ್ಲ. ಸರಕಾರವೆಂಬ ವೈದ್ಯನು ಕೊಡುವ ಔಷಧವು ಇವರಿಗೆ ಚೆನ್ನಾಗಿ ನಾಟುತ್ತದೆ.

ಕಳೆದ ತಾ. ೧೮ರಲ್ಲು ಗಾಂಧಿ ದಿನವಾದ್ದರಿಂದ ಆ ದಿವಸ ರಾಷ್ಟ್ರೀಯ ಶಾಲೆಗೋಸ್ಕರವಾಗಿ ಕಾಂಗ್ರೆಸ ಕಮ್ಮಿಟಿಯ ಸ್ವಯಂಸೇವಕರು ಮುಖ್ಯ ಪೇಟೆಗಳಲ್ಲಿ ತಿರುಗಿ ಸುಮಾರು ೩೦ ರೂಪಾಯಿಗೆ ಮೇಲ್ಪಟ್ಟು ಧನ ಸಂಗ್ರಹ ಮಾಡಿದರು. ಇನ್ನು ಪ್ರತಿ ತಿಂಗಳ ತಾ. ೧೮ಕ್ಕೆ ಇದೇ ರೀತಿಯಿಂದ ಗಾಂಧಿ ದಿನವನ್ನು ಆಚರಿಸಲು ನಿಶ್ಚಯಿಸಿರುವರು,

ಪುತ್ತೂರು:— ಇಲ್ಲಿಯ ಕೊಡಾಲು ಗ್ರಾಮದ ಬಿಲ್ಲ ಕರ್ತ ಪೂಜಾರಿ ಎಂಬವರಲ್ಲಿ ಕೆಲವು ತಕ್ಷೀರು ನಡಿಸುವಾಗ ಕಳ್ಳರು ಸಿಕ್ಕಿಬಿದ್ದು, ಕರ್ತ ಪೂಜಾರಿಗೆ ಹೊಡದು [illegible]ಕ್ಕಾಗಿ ೧ನೆ ಪಾಲ್ದ್ ಮೊಂತ್ರಿನ್, ೨ನೇ ಗಾಸ್ಪರ ಮೊಂತ್ರಿನ್ ೩ನೇ ಮನುವೇಲ್ ಮೊಂತ್ರಿನ್ ೪ನೇ ನರ್ಸಿಂಗ ಬಂಟ ಇವರ ಪೈಕಿ ೨ನೇ ಗಾಸ್ಪರ ಮೊಂತ್ರಿನನು ಪರಾರಿಯಾಗಿ ಬಾಕಿ ೩ ಜನರನ್ನು ಉಪ್ಪಿನಂಗಡಿ ಸ್ಟೇಶನಿನ ಸಬ್ ಇನ್ಸ್‌ಪೆಕ್ಟರ ಮ। ರಾ। ಪಿ. ರಾಮಕೃಷ್ಣರಾಯರು ಹಿಡಿದು ದಸ್ತಗಿರಿ ಮಾಡಿದವರ ಮೇಲೆ ಇಲ್ಲಿಯ ಡಿವಿಜನ್ ಡಿಪ್ಯುಟಿ ಮೆಜಿಸ್ಟ್ರೇಟ ಕೋರ್ಟಿನಲ್ಲಿ ತನಿಖಿ ನಡೆದು ೧ನೇ ಅಪರಾಧಿ ಪಾಲ್ದು ಮೊಂತ್ರಿನಿಗೆ ಒಂದು ವರ್ಷ ಸಜಾ ೩ನೆ ಮತ್ತು ೪ನೆಯವರಿಗೆ ಪ್ರತಿಯೊಬ್ಬರಿಗೆ ೬ ತಿಂಗಳ ಸಜಾ ವಿಧಿಸಲಾಗಿದೆ.

ಇಲ್ಲಿಯ ಪಂಚಾಯತ ಕೋರ್ಟಿನಲ್ಲಿ ಸಿವಿಲ್ ನಂಬ್ರಗಳು ದಿನೇದಿನೇ ಹೆಚ್ಚೆಚ್ಚಾಗಿ ದಾಖಲಾಗುತ್ತವೆ. ಹಾಗೆಯೇ ತೀರ್ಮಾನವೂ ಆಗುತ್ತವೆ. ಇನ್ನು [illegible] ಕೈದಪಾವತಿ ಹನಮಮಾಡುವುದಾಗಿ ನಿಶ್ಚಯಿಸಿದ್ದರೆ ಕಕ್ಷಿಗಾರರ ಮತ್ತು ಸಾಕ್ಷಿ[illegible]ದರ ಜನಸಂದಣಿಯಿಂದ ಈಗ ಕೋರ್ಟಾಗಿ ಉಪಯೋಗಿಸುವ ಪಡೆಸಾಲ ಗ್ರಾ[illegible] ವಠಿಯಲ್ಲಿ ಸಾಕ್ಷಿಗಾರರಿಗೆ ಕೂತುಕೊಳ್ಳಲು ಸ್ಥಳವಿಲ್ಲದೆ ತೊಂದರೆಯಾಗು[illegible] ಈ ಕೋರ್ಟನ್ನು ಡಿವಿಜನಲ್ ಆಫೀಸಿನಲ್ಲಿರುವ ಮೊದಲಿನ [illegible] ಬೋರ್ಡ ಆಫೀಸು ಕೋಣೆಗೆ ಬದಲಾಯಿಸಿದರೆ ಹೆಚ್ಚಿನ ತೊಂದರೆಯೇ [illegible].

ಅನುಕ್ರಮಣಿಕೆ

ಅಗ್ರಲೇಖ—
ದೇಶಭಕ್ತ ಮೆಝಿನಿ ೬
ಸ್ಫುಟವಿಚಾರಗಳು—
೧. ಯುರೋಪದ ಪರಿಸ್ಥಿತಿ, ೨. ಹಿಂದೂಸ್ಥಾನದ ವೈಸರಾಯರ ಪದವಿಯು ಯಾರಿಗೆ ದೊರಕಬೇಕು. ೩. ಮಹಾತ್ಮರ ದರುಶನಕ್ಕೆ ಪ್ರತಿಬಂಧ. ,,
೪. ಯುನಿವರ್ಸಿಟಿ ಸುಧಾರಣೆಯ ಬಿಲು ೫. ಮಂಗಳೂರು ಮುನ್ಸಿಪಾಲಿಟಿಯ ಠರಾವು. ,,
ಮಂಗಳೂರು— ,,
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಕುಂಭಾಶಿ, ಸಂಪಾಜೆ, ಉಡುಪಿ, ಪುತ್ತೂರು. . . ,,
ಕಾಯಿದೆಭಂಗ ವಿಚಾರಣಾ ಕಮ್ಮಿಟಿಯ ಪರ್ಯಟನ . . ೮
ಲೋಕಲ್ ಮತ್ತು ಮುನ್ಸಿಪಲ್ ಕೊನ್ಫರೆನ್ಸು. . . ,,
ಮುಲಟಾನಿನಲ್ಲಿ ಸ್ವಾಮಿ ಸತ್ಯದೇವರ ಭಾಷಣ . . ,,
ಅಸ್ಪೃಶ್ಯತೆ ೪
ಮದ್ಯಪಾನ ಬಹಿಷ್ಕಾರದ ಆವಶ್ಯಕತೆ . . . ,,
ಕನ್ನಡ ಸಹಕಾರಕ್ಕೆ ಬರೆದ ಪತ್ರದ ನಕಲು . . . ,,

ಸ್ವದೇಶಾಭಿಮಾನಿ.

ಶಕ ೧೮೪೪ ಶ್ರಾವಣ ಶು| ೪ಯು ಶುಕ್ರವಾರ.

ದೇಶಭಕ್ತ ಮೆಝಿನಿ.

ಸಾಧಾರಣ ೮೦ ವರ್ಷದ ಹಿಂದೆ ಇಟಲಿ ದೇಶದಲ್ಲಿ ಮೂರು ನಾಲ್ಕು ಜನ ದೇಶಭಕ್ತರಾಗಿ ಹೋದರು. ದೇಶಭಕ್ತರು ಜನ್ಮವೆತ್ತಬೇಕಾದರೆ, ದೇಶವು ಪರತಂತ್ರವಾಗಿರಬೇಕು; ಇಲ್ಲವೆ ದೇಶದ ಮೇಲೆ ಯಾವದಾದರೂ ಒಂದು ಆಪತ್ತು ಬಂದಿರಬೇಕು. ಈ ಕ್ರಮವು ಆದಿಯಿಂದಲೆ ಉಂಟು. ಇಟಲಿಯಾದರೂ ಆ ಸಮಯದಲ್ಲಿ ಆಸ್ಟ್ರಿಯದ ಪೀಡನೆಗೆ ಒಳಗಾಗಿತ್ತು. ಆಸ್ಟ್ರಿಯದ ತೋಳವು ಇಟಲಿಯನ್ನು ತನ್ನ ದಾಡೆಯಲ್ಲಿ ಸೇರಿಸಿಕೊಂಡಿತ್ತು. ಅದು ಇಟಲಿಯನ್ನು ತಲೆಮೇಲ ಕ್ಕೆತ್ತಲು ಬಿಡುತ್ತಿರಲಿಲ್ಲ. ಇಂಥ ಸಮಯದಲ್ಲಿ ಅಲ್ಲಿ ಯಾವ ದೇಶಭಕ್ತರು ಉದಯಿಸಿದರೂ ಅವರಲ್ಲಿ ಜೋಸೆಫ ಮೆಝಿನಿಯು ಪ್ರಮುಖನಾಗಿದ್ದನು. ಇವನು ತನ್ನ ಉಪದೇಶದ ಬಲದಿಂದ ಇಟಲಿಯನ್ನು ಮಾತ್ರ ಉದ್ಧರಿಸಿದ್ದಾನೆಂದಲ್ಲ, ಯುರೋಪದೊಳಗಿನ ಮಿಕ್ಕ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯದ ಸ್ಫೂರ್ತಿಯನ್ನೂ, ಪ್ರೀತಿಯನ್ನೂ, ಹುಟ್ಟಿಸಿ ಅವುಗಳ ಕಣ್ಣು ತೆರೆದಿದ್ದನು. ಈ ಕಾರಣದಿಂದ ಯುರೋಪದಲ್ಲಿ ಇವನನ್ನು ಮಹಾ ಪುರುಷನೆಂದು ತಿಳಿಯುವ ವಾಡಿಕೆಯು ಬಿದ್ದಿದೆ. ಇಟಲಿಯವರು ಸ್ವಾತಂತ್ರ್ಯದ ಆದ್ಯಪ್ರವರ್ತಕನಾದ ಈ ದೇಶಭಕ್ತನ ಉತ್ಸವವನ್ನು ಪ್ರತಿ ವರುಷ ಮಾಡುತ್ತಿರುತ್ತಾರೆ. ಇಂಗ್ಲಂಡಿನಲ್ಲಿಯೂ ಇವನ ಉತ್ಸವವು ಆಗಿತ್ತು. ಆ ಸಮಯದಲ್ಲಿ ನಮ್ಮ ಮುಖ್ಯ ಮಂತ್ರಿಗಳಾದ ಮಿ. ಲೊಯ್ಡ್ ಜೋರ್ಜರು ಮೆಝಿನಿಯ ಗುಣಾನುವಾದ ಪರವಾದ ಒಂದು ಉತ್ಕೃಷ್ಟ ಭಾಷಣವನ್ನು ಮಾಡಿದರು. ಅದರ ಸಾರಾಂಶವನ್ನು ನಾವು ಕೆಳಗೆ ಕೊಡುತ್ತೇವೆ.

"ಬರೆ ಇಟಲಿಯಲ್ಲೆ ಅಲ್ಲ, ಇಡೀ ಯುರೋಪದಲ್ಲಿ ಕಳೆದ ೮೦ ವರ್ಷಗಳಿಂದ ಸ್ವಾತಂತ್ರ್ಯದ ಯಾವ ಚಳವಳವು ಪ್ರಾರಂಭವಾಗಿದೆಯೊ ಅದು ಜೋಸೆಫ್ ಮೆಝಿನಿಯ ಶಿಕ್ಷಣದ ಫಲವು. ಯುರೋಪದಲ್ಲಿ ಚಿಕ್ಕ ಚಿಕ್ಕ ರಾಷ್ಟ್ರಗಳು ಬಲಿಷ್ಠ ದೇಶಗಳಿಂದ ಒತ್ತಲ್ಪಟ್ಟು ತಂತಮ್ಮ ರಾಷ್ಟ್ರೀಯತೆಯನ್ನು ಹೋಗಲಾಡಿಸಿಕೊಂಡಿದ್ದವು; ಅವುಗಳಿಗೆ ಆಯಾ ರಾಷ್ಟ್ರೀಯತೆಯನ್ನು ಸಂಪಾದಿಸಿಕೊಟ್ಟು ಪುನಃ ಪೂರ್ವ ವೈಭವದ ಮೇಲೆ ಅವುಗಳನ್ನು ಕುಳ್ಳಿರಿಸಲು ಯತ್ನಿಸುತ್ತಿದ್ದ ಜನಗಳಿಗೆ ಮೆಝಿನಿಯ ತತ್ವ ಮತ್ತು ಶಿಕ್ಷಣದಿಂದ, ಮೆಝಿನಿಯ ಮಾತುಗಳಿಂದ ಸಾಮರ್ಥ್ಯವೊ, ಧೈರ್ಯವೊ ಪ್ರಾಪ್ತವಾದವು. ಅವನು ಒಂದು ಕಡೆಯಲ್ಲಿ ಬರೆದಿರುವನೇನೆಂದರೆ "ನಾವು ಲೋಕಸತ್ತೆಯ ಯುಗದಲ್ಲಿ ಪ್ರವೇಶಿಸಲು ಅದರ ಬಾಗಿಲಿಗೆ ಬಂದು ತಲಪಿದ್ದೇವೆ." ಅವನ ತತ್ವಗಳೂ, ಅವನ ಧ್ಯೇಯಗಳೂ, ಮತ್ತು ಅವನ ಉದಾಹರಣೆಯೂ ಇವು ಜನರ ಹೃದಯದಲ್ಲಿ ಪ್ರವೇಶಿಸಿ ಅವರನ್ನು ಹೊಸ ಯುಗಕ್ಕೆ ತಂದು ಬಿಟ್ಟವು. ಇಟಲಿಯಂತೂ ಸ್ವಾತಂತ್ರ್ಯದ ಮತ್ತು ಲೋಕಸತ್ತೆಯ ನವಯುಗದಲ್ಲಿ ಪ್ರವೇಶಿಸಿದೆ; ಕುಂಠಿತವಾದ ತುರ್ಕಿಯ ಭಾಗಗಳು ಪ್ರವೇಶಿಸುತ್ತಿದ್ದಾವೆ; ಆಸ್ಟ್ರಿಯ ಮತ್ತು ರಶಿಯದೊಳಗಿನ ಪೀಡಿತ ಜನಾಂಗಗಳೂ ಸ್ಪಷ್ಟವಾಗಿ ಹೇಳುವುದಾದರೆ, ಐರ್ಲಂಡ ದೇಶವೂ ಕೂಡ ಜೋಸೆಫ್ ಮೆಝಿನಿಯ ಉಚ್ಚ ಮತ್ತು ಉದಾತ್ತ ತತ್ವಗಳ ಶಿಕ್ಷಣದಿಂದ ಸ್ವಾತಂತ್ರ್ಯವನ್ನು ಹೊಂದುತ್ತಿದ್ದಾವೆ. ಜರ್ಮನಿಯ ಬಿಸ್ಮಾರ್ಕನಿಂದ ಉದ್ಭವಿಸಿದ ಸಾಮ್ರಾಜ್ಯ ಸತ್ತಾವಾದವು ಮೆಝಿನಿಯ ತತ್ವಪ್ರಸಾರದಿಂದ ಮಣ್ಣುಮುಕ್ಕಿತು; ಆದರ ಸ್ವದೇಶ ಪರಿತ್ಯಾಗವನ್ನು ಮಾಡಿ, ಇಂಗ್ಲಂಡಿಗೆ ಓಡಿಬಂದು ಏಕಾಂತದಲ್ಲಿಯೂ, ಬಡಸ್ತಿಕೆಯಲ್ಲಿಯೂ ನಿಂತು ಮಿತ್ರರ ಸಹಾಯದಿಂದಲೂ, ಮತ್ತು ಲೇಖಣಿಯ ಬಲದಿಂದಲೂ ಕಾಲಕ್ರಮಣಮಾಡುತ್ತಿರುವ ಈ ತರುಣ ದೇಶಭಕ್ತನ ಆ ಕಾಲದ ಸುಸ್ವಪ್ನವು ಇಂದಿಗೆ ಫಲಿತವಾಗಿದೆ. ಮೆಝಿನಿಯು ಬರೆ ಇಟಲಿಯ ಸ್ವಾತಂತ್ರ್ಯವನ್ನೆ ಕಲಿಸಿದ್ದಲ್ಲ; ಎಲ್ಲ ದೇಶಗಳ ಸ್ವಾತಂತ್ರ್ಯವನ್ನು ಉಪದೇಶಿಸುತ್ತಿದ್ದನು. ಅವನು ಬರೆದಿಟ್ಟ ಸ್ವಾತಂತ್ರ್ಯಪಾಠದ ಅರ್ಧಾಂಶವನ್ನು ನಾವು ಈ ಹೊತ್ತು ಕಲಿತಂತಾಗಿದೆ. ಮತ್ತು ಮೆಝಿನಿಯ ಅಭಿಪ್ರಾಯದಂತೆ ಇದು "ಸುವರ್ಣಯುಗ"ವಾದದ್ದಾದರೆ, ಈ ಯುಗದಲ್ಲಿ ಅವನ ಪಾಠದ ಉಳಿದ ಅರ್ಧ ಭಾಗವನ್ನು ನಾವು ಕಲಿಯುವೆವು.

"ಮೆಝಿನಿಯು ಅವತರಿಸಿದ ಸಮಯವು ವರ್ಣವಿದ್ವೇಷದ ಕಾಲವಾಗಿತ್ತು. ಈಗಿನ ಕಾಲವು ಅಷ್ಟೊಂದು ವರ್ಣವಿದ್ವೇಷದ್ದಲ್ಲ! ದ್ವೇಷದಿಂದ ಯಾವ ಕಾರ್ಯವೂ ಸಿದ್ಧವಾಗುವುದಿಲ್ಲವೆಂದು ಮೆಝಿನಿಯು ಹೇಳುವನು. ದ್ವೇಷವು, ಅವನ ಮತದಂತೆ, ನಾವು ಪ್ರೀತಿಸುವುದನ್ನೆಲ್ಲ ನಾಶಮಾಡುವುದು. "ಜನಾಂಗವು ಸ್ವತಂತ್ರವಾಗಬೇಕೆಂದು ನನ್ನ ಅಭಿಪ್ರಾಯವು. ಯುರೋಪಖಂಡವು ಸ್ವತಂತ್ರವಾಗಬೇಕೆಂದು ನಾನು ಅಪೇಕ್ಷಿಸುವೆನು. ಆದರೆ ಯುರೋಪದೊಳಗಿನ ಜನಾಂಗಗಳು ಸ್ವತಂತ್ರವಾಗಿ ಪರಸ್ಪರ ಕಚ್ಚಿಕೊಳ್ಳುವುದು ಮಾತ್ರ ನನಗೆ ಇಷ್ಟವಿಲ್ಲ;" ಇದು ಮೆಝಿನಿಯ ಮಾತು. ಅವನೆ ಈ ಹೊತ್ತಿನ ರಾಷ್ಟ್ರಸಂಘದ ಕಲ್ಪನೆಯ ಜನಕನೆನ್ನಬಹುದು. ನಮ್ಮ ಯುರೋಪದಲ್ಲಿ ಈಗ ಎಲ್ಲ ಚಿಕ್ಕ ರಾಷ್ಟ್ರಗಳು ಸ್ವತಂತ್ರವಾಗಿವೆ. ಪೋಲಂಡ್, ಬಾಲ್ಕನ್ ರಾಷ್ಟ್ರಗಳು, ಯುಗೊಸ್ಲೆವಿಯಾ, ಝೆಕೋಸ್ಲೆವಿಯಾ, ಬಾಲ್ಟಿಕ್ ಸಂಸ್ಥಾನಗಳು ಈಗ ಸ್ವತಂತ್ರವಾಗಿವೆ; ಮಾತ್ರವಲ್ಲ, ಮನಸಿದ್ದರೆ, ಮತ್ತು ತಾನು ಅರ್ಹವೆಂದು ತೋರಿಸಿದರೆ ಐರ್ಲಂಡ ದೇಶವು ಸಹ ಸ್ವತಂತ್ರವಾಗಿದೆ. ಈ ಎಲ್ಲ ದೇಶಗಳು ಒಂದು ಕಾಲದಲ್ಲಿ ಪೀಡನೆಗೆ ಒಳಗಾಗಿದ್ದವು. ಈಗ ಅವು ಸ್ವತಂತ್ರವಾಗಿವೆ.

"ಆದರೆ ಮೆಝಿನಿಯ ತತ್ವ ಶಿಕ್ಷಣವು ಇಷ್ಟರಿಂದಲೆ ಪರಿಸಮಾಪ್ತವಾಗುವುದಿಲ್ಲ. ಯಾಕಂದರೆ, ಮೊದಲಿಗಿಂತ ಈಗ ಜನಾಂಗಗಳು ಸ್ವತಂತ್ರವಾಗಿದ್ದಾವಾದರೂ ಅವುಗಳಲ್ಲಿ ಪರಸ್ಪರ ದ್ವೇಷ, ಅಸೂಯೆ, ಸ್ವಾರ್ಥಪ್ರವೃತ್ತಿ, ಕ್ರೋಧ ಮುಂತಾದ ದೋಷಗಳು ಹೆಚ್ಚು ಉದ್ಭವಿಸಿವೆ; ಇದ ಕ್ರಮವು ಇನ್ನು ಕೆಲವು ಕಾಲ ನಡೆದುದಾದರೆ ಈ ಜನಾಂಗಗಳ ಸ್ವಾತಂತ್ರ್ಯಮಣಿಯು ಕಾಣೆಯಾಗಿ ಹೋಗದೆ ಇರಲಿಕ್ಕಿಲ್ಲ. ಮೆಝಿನಿಯು ಹೇಳಿದ ಇನ್ನೊಂದು ಮಾತು ಬಹು ಪಥ್ಯಕರವೂ ಈ ಹೊತ್ತಿನ ಅನುಭವಕ್ಕೆ ಸತ್ಯವೂ ಆಗಿದೆ. ಜಯಪ್ರಾಪ್ತಿಯ ಸಮಯದಲ್ಲಿ ಎಷ್ಟು ಸಂಕಷ್ಟಗಳು ಬರುವುವೊ, ಜಯವು ಬಂದ ಬಳಿಕ ಅದಕ್ಕಿಂತ ಹೆಚ್ಚು ಕಷ್ಟಗಳು ಬಂದೊದಗುತ್ತವೆ. ಮೆಝಿನಿಯ ಈ ಮಾತು ಇಡೀ ಲೋಕದ ಅನುಭವಕ್ಕೆ ಬಂದಿದೆ."

ಪ್ರಧಾನ ಮಂತ್ರಿಗಳಾದ ಮಿ. ಲೊಯ್ಡ್ ಜೋರ್ಜರು ಅನಂತರ ಮೆಝಿನಿಯ ಮೇಲೆ ದೋಷಾರೋಪಗಳನ್ನು ಚಲ್ಲುವವರ ಮತಗಳನ್ನು ಅನುವಾದಿಸಿ ಖಂಡಿಸಿದರು. ಆ ಭಾಗವು ನಮ್ಮ ವಾಚಕವರ್ಗಕ್ಕೆ ಅಷ್ಟೊಂದು ಉಪಯುಕ್ತವಲ್ಲ. ಆದ್ದರಿಂದ ಅದನ್ನು ಬಿಟ್ಟುಬಿಟ್ಟಿದ್ದೇವೆ. ಲೊಯ್ಡ್ ಜೋರ್ಜಸಾಹೇಬರು ಇಟಲಿ ದೇಶಭಕ್ತನಾದ ಮೆಝಿನಿಯ ಗುಣಾನುವಾದಗಳನ್ನು ಮಾಡುವಾಗ ದೃಷ್ಟಿಯ ಯಾವ ವ್ಯಾಪಕತೆಯನ್ನೂ, ಮನಸ್ಸಿನ ಯಾವ ಸಮತೆಯನ್ನೂ, ಮತ್ತು ಬುದ್ಧಿಯ ಯಾವ ನಿಷ್ಕಲಂಕತೆಯನ್ನೂ ತೋರಪಡಿಸಿದ್ದಾರೊ ಆ ಗುಣಗಳನ್ನು ಹಿಂದುಸ್ಥಾನದೊಳಗಿನ ದೇಶಭಕ್ತರ ವಿಷಯದಲ್ಲಿ ಪ್ರಕಟಿಸಿದ್ದಾದರೆ ಮೆಝಿನಿಯ ಆ ತತ್ವಕ್ಕೆ ನಿಜವಾಗಿ ಒಂದು ಭೂಷಣವನ್ನು ಹಾಕಿದ್ದಂತಾಗುತಿತ್ತಲ್ಲವೆ? ಮೆಝಿನಿಯು ಬರೆ ಯುರೋಪಿಯನ್ ರಾಷ್ಟ್ರಗಳಿಗೆ ಮಾತ್ರ ಸ್ವಾತಂತ್ರ್ಯವು ಬೇಕೆಂದು ಹೇಳಿರುವನೆ? ಜಗತ್ತಿನೊಳಗಿನ ಇತರ ರಾಷ್ಟ್ರಗಳಿಗೆ ಸ್ವಾತಂತ್ರ್ಯವಿರಬಾರದೆಂದು ಅವನ ಅಭಿಪ್ರಾಯವಿತ್ತೆ? ಇತರ ರಾಷ್ಟ್ರಗಳ ಬಾಯಿಯಿಂದ ಸ್ವಾತಂತ್ರ್ಯದ ತುತ್ತನ್ನು ಕಸಕೊಳ್ಳಬೇಕೆಂದು ಅವನು ಹೇಳಿರುವನೆ? ಸ್ತ್ರೀ ಪುರುಷ ವ್ಯಕ್ತಿಗಳಿಗೆ ಬಟ್ಟೆಯು ಎಷ್ಟು ಆವಶ್ಯಕವೂ ಮತ್ತು ಪರಿಶುದ್ಧವೂ ಆಗಿದೆಯೊ, ಸ್ವಾತಂತ್ರ್ಯವು ಕೂಡ ಜನಾಂಗಗಳಿಗೆ ಅಷ್ಟೆ ಆವಶ್ಯಕವೂ, ಪರಿಶುದ್ಧವೂ ಆಗಿದೆ. ಇನ್ನೂ ಸಮರ್ಪಕವಾದ ದೃಷ್ಟಾಂತವನ್ನು ಎತ್ತಿ ಹೇಳುವುದಾದರೆ, ಮೀನುಗಳಿಗೆ ನೀರು ಹೇಗೆ ಆವಶ್ಯಕವೊ ಅಥವಾ ಇತರ ಪ್ರಾಣಿಗಳಿಗೆ ಗಾಳಿಯು ಹೇಗೆ ಅಗತ್ಯವೊ ಹಾಗೆಯೆ ಜನಾಂಗಗಳಿಗೆ ಸ್ವಾತಂತ್ರ್ಯವು ಅಗತ್ಯವಾದ್ದು. ಇಷ್ಟು ಅಗತ್ಯ ಮತ್ತು ಅಪರಿಹಾರ್ಯವಾದ ಸ್ವಾತಂತ್ರ್ಯವನ್ನು ದೂರೀಕರಿಸಿ ಜನಾಂಗಗಳನ್ನು ನಗ್ನ ಮಾಡುವುದು ಆ ಮೆಝಿನಿಯ—ಆ ಮಹಾಪುರುಷ ಮೆಝಿನಿಯ—ಆ ದೇಶಭಕ್ತ ಮೆಝಿನಿಯ ಮತಕ್ಕೆ ಅನನುರೂಪವಲ್ಲವೆ? ಎಂಬತ್ತು ವರ್ಷಗಳ ಹಿಂದೆ ಇಟಲಿಯಲ್ಲಿ ಮೆಝಿನಿಯು ಯಾವ ಉಚ್ಚ ತತ್ವಗಳನ್ನು ಪ್ರತಿಪಾದಿಸುತ್ತಿದ್ದನೊ ಅವೆ ತತ್ವಗಳನ್ನು ಇತ್ತಲಾಗಿ ಲೋಕಮಾನ್ಯ ಟಿಳಕರು ಪ್ರತಿಪಾದಿಸುತ್ತಿದ್ದರು; ಅವೆ ತತ್ವಗಳನ್ನು ಈ ಹೊತ್ತು ಮಹಾತ್ಮಗಾಂಧಿಗಳು ಪ್ರತಿಪಾದಿಸುತ್ತಿದ್ದಾರೆ. ಆದರೆ ಇಲ್ಲಿಯ ಬ್ಯುರೊಕ್ರಸಿಯು ಆ ತತ್ವಗಳನ್ನು ಪ್ರತಿಪಾದಿಸಿದ ಲೋಕಮಾನ್ಯರನ್ನೂ, ಮಹಾತ್ಮರನ್ನೂ ತುರಂಗಕ್ಕೆ ಕಳುಹಿಸುತ್ತದೆ; ವಿಲಾಯತಿಯಲ್ಲಿ ಪ್ರಧಾನಮಂತ್ರಿಗಳು ಮೆಝಿನಿಯ ಉತ್ಸವವನ್ನು ಮಾಡುತ್ತಾರೆ, ಇದೀಗ ದೈವ ಚಮತ್ಕಾರವು

ಸ್ಫುಟವಿಚಾರಗಳು.

೧. ಯುರೋಪದ ಪರಿಸ್ಥಿತಿಯು ಬಹು ಭಯಂಕರವಾಗುತ್ತ ನಡೆದಿದೆ. ಅಡಿಯಲ್ಲಿ ಮೊಸಳೆಗಳೂ, ತಿಮಿಂಗಿಲಗಳೂ ಇರುವಾಗ ನೀರಿನ ಮೇಲಿನಿಂದ ಹಡಗದ ಪ್ರಯಾಣವು, ಚುಕ್ಕಾಣಿ, ಗಾಳಿ ಮುಂತಾದ ಇತರ ಅನುಕೂಲತೆ ಇದ್ದರೂ ಹೇಗೆ ಸುರಕ್ಷಿತವಲ್ಲವೊ ಹಾಗೆಯೆ ಯುರೋಪದಲ್ಲಿ ಆದಿಭೌತಿಕ ಸುಧಾರಣೆಗಳ ಮತ್ತು ಪರಿಶೋಧನಗಳ ಮೊಸಳೆಗಳೂ ತಿಮಿಂಗಿಲಗಳೂ ದಿನೇ ದಿನೇ ಹೆಚ್ಚುತ್ತಿರುವಾಗ ಶಾಂತತೆಯ ಹಡಗವು ಸುರಕ್ಷಿತವಾಗಿ ಉಳಿಯಲಿಕ್ಕಿಲ್ಲ! ಈ ಶಾಂತತೆಯ ಹಡಗವನ್ನು ಕಾಪಾಡಲು ಬೇಕಷ್ಟು ಅನುಕೂಲತೆಗಳಿರಲಿ—ಜಲಸೈನ್ಯ ಸ್ಥಲಸೈನ್ಯ ಮುಂತಾದ ಬೇಕಷ್ಟು ಅನುಕೂಲತೆಗಳಿರಲಿ, ಅವುಗಳಿಂದ ಯುರೋಪದಲ್ಲಿ ಮತ್ತು ಆ ಮೂಲಕ ಜಗತ್ತಿನ ಇತರ ಭಾಗದಲ್ಲಿ ಶಾಂತತೆಯು ಚಿರಸ್ಥಾಯಿಯಾಗಿ ನೆಲಗೊಳ್ಳಲಿಕ್ಕಿಲ್ಲ, ಭೂಮಿಯ ಒಳಗೆ ಸ್ಫೋಟಕ ದ್ರವ್ಯಗಳ ರಾಸಾಯನಿಕ ಕ್ರಿಯೆಯು ನಡೆಯುತ್ತಿರುವಾಗ ಹೇಗೆ ಅದು ಒಮ್ಮೆ ಒಡೆದು ಹೊರಬಂದು ಜ್ವಾಲಾಮುಖಿ ಪರ್ವತವೆಂಬ ಹೆಸರನ್ನು ಹೊಂದುವುದೊ ಹಾಗೆಯೆ ಯುರೋಪದಲ್ಲಿ ಅಲ್ಲಲ್ಲಿ ನವೀನ ಸಂಶೋಧನಗಳ ಮತ್ತು ಪ್ರಾಣಾಪಹಾರಕ ಸಾಧನೆಗಳ ವಿಪುಲತೆಯುಂಟಾಗಿ, ಕೊನೆಗೆ ಅದು ಸ್ಪರ್ಧೆಯಲ್ಲಿ ಪರಿಣಮಿಸಿ ಯುದ್ಧವೆಂಬ ಹೆಸರನ್ನು ತೆಕೊಳ್ಳುತ್ತದೆ. ರಾಜಕಾರಣದಲ್ಲಿ ನಿಪುಣರಾದ ಯುರೋಪಿಯನ್ ಮುತ್ಸದಿಗಳು ಜಿನೋವಾ, ಹೇಗ್ ಮುಂತಾದ ನೂರಾರು ಕಡೆಗಳಲ್ಲಿ "ಶಾಂತತಾ ಪರಿಷತ್ತು"ಗಳನ್ನು ಸೇರಿಸುವುದರಲ್ಲೂ ಹೊಸಹೊಸ ಠರಾವುಗಳನ್ನು ಪಾಸು ಮಾಡುವುದರಲ್ಲಿಯೂ ತಮ್ಮ ಬುದ್ಧಿಕೌಶಲ್ಯವನ್ನು ವೆಚ್ಚಮಾಡುತ್ತಿರುವಾಗ ಅಡೆ ಯುರೋಪದ ಇನ್ನೊಂದು ಕಡೆಯಲ್ಲಿ ಸಂಶೋಧಕರು ಪ್ರಾಣಘಾತಕವಾದ ಹೊಸ ಶಸ್ತ್ರಗಳನ್ನು ಉಂಟುಮಾಡುವುದರಲ್ಲಿ ತಮ್ಮ ಬುದ್ಧಿಸಾಮರ್ಥ್ಯವನ್ನು ವೆಚ್ಚಮಾಡುತ್ತಿದ್ದಾರೆ ಇದು ಬಹಳ ಶೋಚನೀಯವಲ್ಲವೆ? ಆಕಾಶದಲ್ಲಿ ಯುದ್ಧ ಮಾಡುವ ಸಾಧನಗಳನ್ನು ರಸಾಯನಶಾಸ್ತ್ರಜ್ಞರು ನಿರ್ಮಿಸುತ್ತಿದ್ದ ಕಾರಣ, ಯುದ್ಧನಾವೆಗಳ ಮಹತ್ವವು ಕಡಿಮೆಯಾಗುತ್ತ ಬಂದಿದೆ. ಈ ಸಾಧನಗಳು ಸರಿಯಾದ್ದಾದರೆ ಮನುಷ್ಯರಿಗೆ ಭೂಮಿಯ ಮೇಲೆ ನಿಲ್ಲಲು ಅಸಾಧ್ಯವಾದೀತೆಂದು ಹೇಳುತ್ತಾರೆ. ಯುರೋಪ ಮತ್ತು ಅಮೇರಿಕಾ ಈ ಖಂಡಗಳಲ್ಲಿ ಉರಿಯುವ ಎಣ್ಣೆಯ ಮಳೆಯನ್ನು ಸುರಿಸುವ ಕಲ್ಪನೆಯು ಹುಟ್ಟಿದೆ. ಒಂದು ದೊಡ್ಡ ನಳಿಗೆಯಲ್ಲಿ ರಸಾಯನ ಪದಾರ್ಥಗಳನ್ನು ತುಂಬಿಸಿದ ಬಳಿಕ ಸ್ಫೋಟಕ ದ್ರವ್ಯಗಳನ್ನೂ, ಎಣ್ಣೆಯನ್ನೂ ತುಂಬಿಸಬೇಕು. ಮೊದಲು ತುಂಬಿಸಿದ ರಸಾಯನಗಳು ಸ್ಫೋಟಕ ದ್ರವ್ಯಗಳನ್ನು ಸ್ಪರ್ಶಿಸಿದ ಕೂಡಲೆ, ಅವು ಎಣ್ಣೆಯನ್ನು ಸುಡುವಂತೆ ಮಾಡಿ ಎಲ್ಲ ಕಡೆಯಲ್ಲಿ ಪಸರಿಸುತ್ತವೆ. ಈ ರೀತಿಯಿಂದ ಪಸರಿಸುವಾಗ ಅಲ್ಲಿದ್ದ ರೆಜಿಮೆಂಟುಗಳು ಕ್ಷಣಾರ್ಧದಲ್ಲಿ ಈ ಎಣ್ಣೆಯ ಮಳೆಯಲ್ಲಿ ಮಾಯವಾಗಿ ಹೋಗುತ್ತವೆ! ಈ ಎಣ್ಣೆ ಮಳೆಯಿಂದ ರಕ್ಷಣವನ್ನು ಮಾಡಿಕೊಳ್ಳುವುದಿದ್ದರೆ, ನೆಲಮಾಳಿಗೆಯಲ್ಲಿ ಹೋಗಿ ಸೇರಬೇಕು. ಯುರೋಪದಲ್ಲಿ ೧೫೫ ಮೈಲು ಹೋಗುವ ತೋಫುಖಾನೆಯು ತಯಾರಿಸಲ್ಪಟ್ಟಿದೆ. ಅದರಲ್ಲಿ ಸ್ಫೋಟಕದ್ರವ್ಯಗಳಿಂದ ತಯಾರಿಸಲ್ಪಟ್ಟ ಸೆಲ್ಸಗಳನ್ನು ತುಂಬಿಸಿ ಅದನ್ನು ಹೊತ್ತಿಸಿದ್ದಲ್ಲಿ ಒಂದೆಸವನೆ ಅದು ಗುಂಡುಗಳನ್ನು ಅಖಂಡವಾಗಿ ಬಿಡುತ್ತಲಿರುತ್ತದೆ. ಲಂಡನ ಪಟ್ಟಣದಿಂದ ಬರ್ಲಿನಿನ ವರೆಗೆ ಹೋಗುವಷ್ಟು ವೇಗವು ಈ ಸೆಲ್ಸುಗಳಲ್ಲಿ ಇದೆ. ಇದಲ್ಲದೆ ವಿದ್ಯುಚ್ಛಕ್ತಿಯಿಂದ ಒಂದು ಉತ್‌ಸ್ಫೋಟವು ತಯಾರಿಸಲ್ಪಟ್ಟಿದೆ; ಅದರಿಂದ ನೆಲದಲ್ಲಿಟ್ಟಿರುವ ಗುಂಡುಮದ್ದು ಸುರಕ್ಷಿತವಾಗಿ ಇರುವುದಿಲ್ಲ. ಒಂದು ಮೊಳ ಉದ್ದವಾದ ತುಪಾಕಿಯು ತಯಾರಿಸಲ್ಪಟ್ಟಿದೆ. ಇದರಿಂದ ಶಬ್ದವಾಗಲಿ ಹೊಗೆಯಾಗಲಿ ಹೊರಡುವುದಿಲ್ಲ. ಈ ತುಪಾಕಿಯಿಂದ 2 ಇಂಚು ಉದ್ದ ಮತ್ತು ೧ ಇಂಚು ದಪ್ಪವಾದ ಗುಂಡುಗಳನ್ನು ಹಾರಿಸಬಹುದು. ಅವು ಒಂದು ಇಂಚಿನ ದಪ್ಪದ ಉಕ್ಕಿನ ಹಲಿಗೆಯನ್ನು ಕೂಡ ಭೇದಿಸುತ್ತವೆ. ಇದನ್ನೆ ಕೊಂಚ ದೊಡ್ಡದನ್ನಾಗಿ ಮಾಡಿದರೆ ಆ ತುಪಾಕಿಯಿಂದ ೫ ಟನ್ ಗುಂಡುಗಳನ್ನು ಹಾರಿಸಬಹುದಂತೆ. ಅಂಬಿಗನ ಸಹಾಯವಿಲ್ಲದೆ ನಡೆಯುವ ಹಡಗವು ತಯಾರಿಸಲ್ಪಟ್ಟಿದೆ. ಅದು ಕಲಾಸಿಗಳಿಲ್ಲದೆನೆ ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಯುತ್ತದೆ. ತಂತಿಗಳಿಲ್ಲದ ಟೆಲಿಗ್ರಾಫಿಗೆ ಹೇಗೊ ಹಾಗೆ ಇದಕ್ಕೆ ಸ್ಟೇಶನುಗಳಿದ್ದರೆ ಸರಿ. ಈ ನಮೂನೆಯ ಹಡಗವನ್ನು ಯುದ್ಧಾಂತ್ಯಸಮಯದಲ್ಲಿ ಜರ್ಮನಿಯು ಸಿದ್ಧಗೊಳಿಸಿತ್ತು. ಆಕಾಶಸಂಚಾರಿಯೂ, ಜಲಸಂಚಾರಿಯೂ ಆದ ಯುದ್ಧನಾವೆಯಿಂದ ಪೆಸಿಫಿಕ್ ಮಹಾಸಾಗರದಲ್ಲಿ ೫ ಸಾವಿರ ಫೀಟ ಎತ್ತರದಿಂದ ೨ ಸಾವಿರ ಪೌಂಡು ಭಾರದ ಬೋಂಬು ಎಸೆಯಲ್ಪಟ್ಟಿತು. ಈಗ ೪೦ ಸಾವಿರ ಪೌಂಡು ಭಾರದ ಬೋಂಬುಗಳು ತಯಾರಾಗುತ್ತಿದ್ದು, ಅದರಿಂದ ಬಹು ದೊಡ್ಡ ಯುದ್ಧಹಡಗವು ಸಹ ನಿಷ್ಪ್ರಯೋಜನವಾಗಿ ಹೋದೀತು. ಇತ್ತಲಾಗೆ ಒಂದು ಹೊಸ ನಮೂನೆಯ ಗೇಸ್ ತಯಾರಾಗಿದೆ. ಇದು ಬಹು ಘಾತಕವಾಗಿದೆ. ನೀರಿನಲ್ಲಿ ಇದನ್ನು ಕರಗಿಸಿ ಆ ನೀರಿನ ಒಂದೆರಡು ಹನಿಗಳನ್ನು ಮನುಷ್ಯನು ನೆಕ್ಕಿದ್ದಾದರೆ, ಅವನು ಕೂಡಲೆ ಬೋಧತಪ್ಪಿ ಬೀಳುವನು. ವಿಮಾನದಿಂದ ಇದನ್ನು ಬಿಟ್ಟರೆ ಕೆಳಗಿರುವವರು ಕೂಡಲೆ ಸಾಯುವರು. ಇಂಗ್ಲಂಡಿನಲ್ಲಿ ಒಂದು ಇಲೆಕ್ಟ್ರಿಕ್ ತುಪಾಕಿಯು ಜನ್ಮವೆತ್ತಿದೆ. ಇದರಿಂದ ವಿದ್ಯುತ್ತಿನ ತೆರೆಗಳು ಹೊರಡುತ್ತವೆ; ಮತ್ತು ಬಹು ದೂರದಲ್ಲಿದ್ದವರು ಕೂಡ ಸಾಯುತ್ತಾರೆ. ದೊಡ್ಡ ರಜಿಮೆಂಟು ಕೂಡ ಇದರಿಂದ ನಾಶವಾಗಿ ಹೋಗುತ್ತದೆ. ವಿಷಮಯ ಗೇಸುಗಳನ್ನು ತುಂಬಿಡುವ ಕೆರೆಗಳು ಕಟ್ಟಲ್ಪಟ್ಟಿವೆ. ಕೆಲವು ವಿಮಾನಗಳು ಗಿಡುಗಗಳಂತೆ ಮತ್ತು ಬೇಟೆಪಕ್ಷಿಗಳಂತೆ ಪಕ್ಕನೆ ಬಂದು ಮುತ್ತುತ್ತವೆ. ಅಮೇರಿಕದೊಳಗಿನ ವಾಲ್ಟಿಮೋರ ಎಂಬ ಕಡೆಯಲ್ಲಿ ಒಂದು ಕೋಟಿ ಪೌಂಡು ವಿಷದ ಗೆಸನ್ನು ಸಂಗ್ರಹಿಸಿಟ್ಟಿದ್ದಾರೆ. ಗ್ರೇಟ ಬ್ರಿಟನ್, ಜರ್ಮನಿ, ಫ್ರಾನ್ಸ್ ಈ ದೇಶಗಳಲ್ಲಿ ಇದೆ ಮೇರೆಗೆ ಗೆಸಿನ ಸಂಗ್ರಹವು ನಡೆದಿದೆ. ಇರಲಿ. ಯುರೋಪ, ಅಮೇರಿಕಾ ಈ ದೇಶಗಳಲ್ಲಿ ಉಂಟಾಗುವ ಈ ಪೂರ್ವಸಿದ್ಧತೆಯನ್ನು ನೋಡುವಾಗ ಇದು ಬರುವ ಇನ್ನೊಂದು ಬಹು ಭಯಂಕರ ಯುದ್ಧದ ಪ್ರಸ್ತಾವನೆಯೆಂದು ತೋರುವುದಿಲ್ಲವೆ? ಬಾಯಬಲಿನೊಳಗಿನ ಉತ್ತಮೋತ್ತಮ ನೀತಿತತ್ವಗಳನ್ನು ಇತರ ಕಡೆಗಳಲ್ಲಿ ಉಪದೇಶಿಸಿ ತಮ್ಮ ಗಂಟಲನ್ನು ಒಡೆದುಕೊಳ್ಳುವ ದೇವತಾಭಕ್ತರು, ಮಾನವಕುಲಗಳನ್ನೂ ಜನಾಂಗಗಳನ್ನೂ ಸಂಹರಿಸಲು ಹೊರಟ ಈ ಯುದ್ಧಪ್ರಿಯರಾದ ಸ್ವಾರ್ಥಸಾಧುಗಳಿಗೆ ಉಪದೇಶವನ್ನು ಮಾಡುತ್ತಿದ್ದದ್ದಾದರೆ ಲೋಕದ ಮೇಲೆ ಎಷ್ಟೊ ಉಪಕಾರವಾಗುತ್ತಿತ್ತು! ಆದರೆ ಪಾಪ! ಮಾಂಸ ಮತ್ತು ರಕ್ತ ಇವುಗಳಿಗೆ ಮೆಚ್ಚಿದ ಹುಲಿಗೆ ತತ್ವಜ್ಞಾನವಾಗಲಿ, ಅಥವಾ ವೇದಾಂತವಾಗಲಿ ಎಲ್ಲಿ ನಾಟುತ್ತದೆ? ಅಹಿಂಸೆಯ ತತ್ವಜ್ಞಾನವು ಹುಲಿಯ ಊರಲ್ಲೆ ಇಲ್ಲವೆನ್ನಬಹುದು! ಮತ್ತು ಈಗೆನ್ನುವುದು ಎಂದು[illegible] ಮುಕ್ತ[illegible] ಇಂಥ ಪರಿಸ್ಥಿತಿಯಲ್ಲಿ ಲೋಕಶಾಂತಿಯ[illegible] ಸರಿ.

೨. [illegible] ಒಬ್ಬ ದೊಡ್ಡ ಮನುಷ್ಯರು, 'ಹೀಜ್ ಹಾಯ್‌ನೆಸ್' [illegible] ದೊಡ್ಡಸ್ತಿಕೆಯ ಪದವಿಯನ್ನು ಪಡೆದವರು, ಎಷ್ಟೊ ಸಮಯದಿಂದ ಹಿಂದುಸ್ಥಾನದ ವೈಸರಾಯತನದ ವಿಷಯದಲ್ಲಿ ಒಂದು ಸೂಚನೆಯನ್ನು ಮಾಡುತ್ತಿದ್ದಾರೆ. ಹಿಂದುಸ್ಥಾನದ ವೈಸರಾಯ ಪಟ್ಟದ ಮೇಲೆ ೫-೫ ವರ್ಷದ ಅವಧಿಯಿಂದ ಯಾರನ್ನಾದರೂ ಕಳುಹಿಸಿ ಇಲ್ಲಿಯ ಕಾರಭಾರದಲ್ಲಿ ಬಹುವಿಧತ್ವವನ್ನುಂಟುಮಾಡುವುದಕ್ಕಿಂತ, ರಾಜಪುತ್ರರಲ್ಲಿ ಯಾರಾದರೂ ಒಬ್ಬನನ್ನು ಈ ಸ್ಥಾನದ ಮೇಲೆ ಕಾಯಮಾಗಿ ನೇಮಿಸಿ, ಆ ಮೂಲಕ ಏಕಸೂತ್ರತೆಯನ್ನಿಡುವುದು ಲೇಸು. ಆಗಾಖಾನ ಸಾಹೇಬರು ತಮ್ಮ ಈ ಸೂಚನೆಯನ್ನು ಪುಷ್ಟೀಕರಿಸುವಾಗ ಹಿಂದುಸ್ಥಾನದ ಜನರು "ರಾಜಾ ಪ್ರತ್ಯಕ್ಷ ದೇವತಾ" ವಾದಿಗಳಾದ್ದರಿಂದ ನೋಕರರ ಆಜ್ಞೆಗಿಂತ ರಾಜಮನೆತನದ ಪುರುಷರ ಶಾಸನಗಳನ್ನು ಬಹಳ ಭಕ್ತಿಯಿಂದ ಮತ್ತು ತತ್ಪರತೆಯಿಂದ ಶಿರಸಾಮನ್ನಿಸುವರೆಂದು ಹೇಳಿರುತ್ತಾರೆ. ಆಗಾಖಾನರು ಹೇಳುವಂತೆ, ಹಿಂದುಸ್ಥಾನವು ಮಾತ್ರವಲ್ಲ, ಸಾಧಾರಣವಾಗಿ ಎಲ್ಲ ಪೌರಸ್ತ್ಯದೇಶಗಳು ಅರಸರನ್ನೂ, ಬಾದಷಹರನ್ನೂ ಬಹು ಪೂಜ್ಯಭಾವದಿಂದ ಕಾಣುತ್ತವೆಂಬುದು ರೂಪಾಯಿಗೆ ೧೬ ಆಣೆ ಸತ್ಯವಾದ ಮಾತೆ ಸರಿ. ಯಾವ ಪಾಶ್ಚಾತ್ಯ ದೇಶದಲ್ಲಿ ಕಾಲ್ಪನಿಕ ಸ್ವಾರ್ಥದ ಮುಂದೆ ತಂದೆತಾಯಂದಿರ ಗುರುತೆ ಇರೋಣ ಎಲ್ಲವೊ ಅಲ್ಲಿ ಅರಸರ ಮರ್ಯಾದೆ ಎಲ್ಲಿಂದುಳಿದೀತು? ಸಂದರ್ಭಾನುಸಾರ ಬೋಂಬುಗಳನ್ನು ಅವರ ಮೈಮೇಲೆ ಚಲ್ಲಿ, ಅವರನ್ನು ಕೊಲ್ಲುವುದು ಆ ದೇಶದಲ್ಲಿ ಸುಪ್ರಸಿದ್ಧವಾದ ವಾಡಿಕೆಯೆ ಸರಿ. ಹಿಂದುಸ್ಥಾನದ ಸಂಗತಿಯು ಮೇಲೆ ಹೇಳಿದಂತೆ ರಾಜರನ್ನು "ವಿಷ್ಣು"ವೆಂದು ತಿಳಿಯುವುದಾಗಿದೆ. ಈ ಎಲ್ಲ ಮಾತುಗಳು ಸತ್ಯವಾದವುಗಳು. ಆದರೆ ಇಲ್ಲಿಯ ಮೊದಲಿನ ಅರಸರು ಪ್ರಜೆಗಳನ್ನು ಒಡಹುಟ್ಟಿದ ಮಕ್ಕಳಂತೆ ನಡಿಸುತ್ತಿದ್ದರು; "ಪ್ರಜಾರಂಜನ"ಕ್ಕಾಗಿ ತಮ್ಮ ಸರ್ವಸ್ವವನ್ನೂ ಕೂಡ ತ್ಯಜಿಸುತ್ತಿದ್ದರು; ಕರವನ್ನು ತೆಕ್ಕೊಳ್ಳುವುದು ಜನಗಳ ಹಿತಕ್ಕಾಗಿಯೆ ಇತ್ತು. ಈ ಎಲ್ಲ ವಿಷಯಗಳನ್ನು ಆಲೋಚಿಸುವಾಗ ಹಿಂದುಸ್ಥಾನದ ಜನರು ರಾಜರನ್ನು ಅಂತಃಕರಣಪೂರ್ವಕವಾಗಿಯೂ, ಭಕ್ತಿಪುರಸ್ಸರವಾಗಿಯೂ ಬಹುಮಾನಿಸುತ್ತಿದ್ದದ್ದಾದರೆ ಅದರಲ್ಲಿ ಆಶ್ಚರ್ಯವಿದೆಯೆ? ಇಂಗ್ಲಂಡಿನ ಬಾದಶಹರಾಗಲಿ, ಅವರ ಪುತ್ರರಾಗಲಿ ಸ್ವತಃ ಬೇಕಷ್ಟು ಸಮಬುದ್ಧಿಯವರು, ದಯಾಶಾಲಿಗಳು, ಉದಾರಚಿತ್ತವುಳ್ಳವರು ಮತ್ತು ಲೋಕಸತ್ತಾವಾದಿಗಳು ಇದ್ದದ್ದಾದರೂ ಅವರಲ್ಲಿರುವ ಈ ಗುಣಗಳು ಯಾವ ವರೆಗೆ ಬೇರೆಯವರ ಆತಂಕವಿಲ್ಲದೆ ಹೊರಗೆ ಪ್ರಕಟವಾಗಿ ಲೋಕಕ್ಕೆ ಉಪಯುಕ್ತವಾಗುವದಿಲ್ಲವೊ, ಮೇಲಾಗಿ ವಿಲಾಯತಿಯಲ್ಲಾಗಲಿ, ಹಿಂದುಸ್ಥಾನದಲ್ಲಾಗಲಿ, ರಾಜರು ಮತ್ತು ರಾಜರ ಮನೆತನದವರು ಸುತ್ತುಮುತ್ತಲಿನ ಅಧಿಕಾರಿಗಳ ಸೂತ್ರಗೊಂಬೆಗಳಾಗಿ ನಿಲ್ಲುವರೊ ಆ ವರೆಗೆ ವಿಲಾಯತಿಯ ಪಟ್ಟದ ಮೇಲೆ ಅಥವಾ ದಿಲ್ಲಿಯ ಸಿಂಹಾಸನದ ಮೇಲೆ—ಆ ಜಡವಾದ ಆಸನದ ಮೇಲೆ—ಯಾರು ಬಂದರೇನು?

೩. ಪೂನಾ ಪಟ್ಟಣಕ್ಕೆ ಹೊರುವ ಎರವಾಡ ಜೈಲಿನಲ್ಲಿರುವ ಮಹಾತ್ಮಾ ಗಾಂಧಿಗಳ ಭೇಟಿಯನ್ನು ಪಡಕೊಳ್ಳಲು ಹಕೀಮ ಅಜಮಲಖಾನರು ಜೈಲ ಸುಪರಿಂಟೆಂಡೆಂಟರಿಗೆ ಬರಕೊಂಡಿದ್ದರು. ಹಕೀಮ ಅಜಮಲಖಾನರ ಈ ವಿಜ್ಞಾಪನೆಯು ನಿರಾಕರಿಸಲ್ಪಟ್ಟಿತು. ಕೆಲವು ಸಮಯದ ಮುಂಚೆ ಎಂದರೆ ಈ ತಿಂಗಳ ಪ್ರಾರಂಭದಲ್ಲಿ ಮಹಾತ್ಮರ ಮನೆಯವರು ಅವರ ಭೇಟಿಯನ್ನು ಪಡೆದಿದ್ದರು. ಜೈಲ ರೂಲಿನ ಪ್ರಕಾರ ೨೦-೨೫ ನಿಮಿಷಗಳ[illegible] ಸಂಭಾಷಣೆಯು ನಡೆದಿತ್ತು. ಇಷ್ಟು ಅಲ್ಪ ಸಮಯದಲ್ಲಿ [illegible] ಸಂಭಾಷಣೆಯು ಎಷ್ಟು ಮಹತ್ವದಿದ್ದೀತು? ಏನಾದರೂ ಕ್ಷೇಮಸಮಾಚಾರದ ಅಥವಾ ನಿತ್ಯವ್ಯವಹಾರದ ಮಾತುಕತೆಗಳಲ್ಲದೆ ಬೇರೆ [illegible] ಸಂಗತಿಗಳಿದ್ದಾವು? ಆದರೂ ಭೇಟಿಗೆಹೋದ ಜನರು ಹಿಂತಿರುಗುವಾಗ ಜೈಲ್ ಯಜಮಾನರು "ಇಲ್ಲಿ ನಡೆದ ಸಂಗತಿಗಳನ್ನು ಪ್ರಕಟಿಸಬೇಡಿರಿ; ಪ್ರಕಟಿಸಿದ್ದಲ್ಲಿ ಇನ್ನು ಮುಂದ ಭೇಟಿಯು ಅಸಾಧ್ಯವಾದೀತು" ಎಂದು ಹೇಳಿದ್ದರು. ವಸ್ತುತಃ ಗಾಂಧಿಗಳ ಮತ್ತು ಆ ಮನೆಯವರ ಭೇಟಿಯಲ್ಲಿ ಉಂಟಾದ ಯಾವ ಸಂಗತಿಯೂ ಗುಪ್ತವಾಗಿಡತಕ್ಕ ಸ್ವಭಾವದ್ದಿರಲಿಲ್ಲ; ಆದ್ದರಿಂದ ಭೇಟಿಗೆಹೋದವರಲ್ಲಿ [illegible]ರಾದ ಶ್ರೀ ಮಗನಲಾಲ ಗಾಂಧಿಯವರು ಅಲ್ಲಿಯ ವೃತ್ತಾಂತವ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಈ "ಪೂರ್ವಕಥಾ ಸಂಬಂಧ"ವನ್ನು ಮನಸ್ಸಿಗೆ ತಂದರೆ, ಹಕೀಮ ಅಜಮಲಖಾನರ ಭೇಟಿಗೆ ಜೈಲ ಯಜಮಾನರು (ಸುಪರಿಂಟೆಂಡೆಂಟರು) ಆತಂಕವನ್ನೊಡ್ಡಿದ್ದು ಆಶ್ಚರ್ಯವಲ್ಲವೆಂದು ಹೇಳಬೇಕಾಗುತ್ತದೆ. ಜೈಲ ಯಜಮಾನರು, ಅವರ [illegible]ಗೆ ನಿರಂಕುಶ ಅಧಿಕಾರಿಗಳು. ಅವರ ಮೇಲೆ ಜನರ "ಹುಕುಮು" ನಡೆಯುವುದಿಲ್ಲವೆಂಬುದು ಸತ್ಯ! ಆದರೆ ಜೈಲಿನೊಳಗಿನ ಕೈದಿಗಳ ಸ್ಥಿತಿಗತಿಗಳನ್ನು ನಿರೀಕ್ಷಿಸಿ ಅಭಿಪ್ರಾಯವನ್ನು ಪ್ರಕಟಿಸಲು ಸರಕಾರದಲೆ ಅಧಿಕೃತವಾದ ಜೈಲ ಕಮಿಟಿಯು ಕ್ರಿಮಿನಲ್ ಅಪರಾಧಿಗಳ [illegible] ಭೇಟಿಗಳ ಮತ್ತು ಪತ್ರವ್ಯವಹಾರದ ವಿಷಯವಾಗಿ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಿಕೊಡಬೇಕು, ವಿನಾಕಾರಣ ವಿಘ್ನಗಳನ್ನು ತರಬಾರದು, ಅಂಥ ಪ್ರತಿಬಂಧಗಳನ್ನು ಹೇಳುವುದಿದ್ದರೆ ಜೈಲ್ ಯಜಮಾನನು ತನ್ನ ಅಭಿಪ್ರಾಯಕ್ಕೆ ಸಬಲ ಮತ್ತು ಸಕಾರಣವಾದ ಸಂಗತಿಗಳನ್ನು ಕೊಡಬೇಕು ಎಂದು ಬರೆದಿದೆ; ಸಾರ್ವಹಿಂದುಸ್ಥಾನದ ಜೈಲಕಮಿಟಿಯ ಈ ಅಭಿಪ್ರಾಯಕ್ಕೂ, ಎರವಾಡದ ಜೈಲ-ಯಜಮಾನರ ಮೇಲಿನ ಆಚರಣಕ್ಕೂ ಯಾವ ಸಾಂಗತ್ಯವೂ ಕೂಡುವುದಿಲ್ಲ. ಇದೊಂದೆ ದೃಷ್ಟಾಂತವಲ್ಲ, ಬಿಜಾಪುರದ ದೃಷ್ಟಾಂತವು ಸಹ ಇದೆ [illegible]ನೆಯದಾಗಿದೆ. ಅಲ್ಲಿಯ ಜೈಲಿನಲ್ಲಿರುವ ಮೌಲಾನಾ ಮಹಮ್ಮದಲಿಯವರ ಭೇಟಿಯನ್ನು ಪಡಕೊಳ್ಳುವುದಾದರೆ, ಅವರೊಳ ಭಾಷಣವನ್ನು ಇಂಗ್ಲಿಷಿನಿಂದ ಇರಬೇಕು ಎಂದು ಹೇಳೋಣವಾದ ಈ ಕಾರಣವು, ನಿಜವಾಗಿ ಎಷ್ಟು ನಿರರ್ಥಕ ಮತ್ತು ಕ್ಷುದ್ರವಾಗಿದೆ. ಇದನ್ನು ಇಲ್ಲಿ ವಿವೇಚಿಸಬೇಕಾದ ಅಗತ್ಯವಿಲ್ಲ. ಹಿಂದುಸ್ಥಾನವು ಇಂಗ್ಲಂಡವಲ್ಲ! ಇಲ್ಲಿಯ ಮಾತೃಭಾಷೆಯು ಇಂಗ್ಲಿಷೆ? ಪರಕೀಯ ಭಾಷೆಯನ್ನು ಎಲ್ಲ ಹೆಂಗಸರು ಮಕ್ಕಳಿಂದ ನಿರೀಕ್ಷಿಸುವುದು ಸಾಧ್ಯವೆ? ಆದರೂ ಜೈಲ-ಯಜಮಾನರು ಏನಾದರೂ ಕಾರಣಗಳನ್ನು ಕೊಡುತ್ತಾರೆ! ಈ ಎಲ್ಲ ಯಜಮಾನರು ತಂತಮ್ಮ ಇಚ್ಛೆಗೆ ಬಂದಂತೆ ನಡಕೊಳ್ಳಬಹುದೆಂದಾದರೆ, ಮತ್ತೆ ಜೈಲ್-ಕಮಿಟಿಯನ್ನು ನೇಮಿಸುವ ನಾಟಕವು ಯಾಕೆ?

೪. ನಮ್ಮ ಮದ್ರಾಸ ಇಲಾಖೆಯ ಶಿಕ್ಷಣ ಮಂತ್ರಿಗಳಾದ ನಾಮದಾರ ಪತ್ರೊಸಾಹೇಬರು ಯುನಿವರ್ಸಿಟಿಯ ಸುಧಾರಣೆಯ ವಿಷಯವಾಗಿ 'ಎಜ್ಯುಕೇಶನ್ ಬಿಲ್'ನ್ನು ತರುವವರಿದ್ದಾರೆ. ಈಗಿನ ಶಿಕ್ಷಣದಲ್ಲಿ ಅನೇಕ ದೋಷಗಳಿದ್ದಾವೆಂಬುದು ಜನಜನಿತವಾದ ವಿಷಯವೆ ಸರಿ. ಹಿಂದುಸ್ಥಾನದೊಳಗಿನ ಯುನಿವರ್ಸಿಟಿಗಳು ಪರೀಕ್ಷೆಯ ಚರಕಗಳಲ್ಲದೆ ನಿಜವಾದ ಶಿಕ್ಷಣವನ್ನು ಪ್ರಸಾರಗೊಳಿಸುವ ಸಾಧನಗಳಲ್ಲ. ಈ ಸಂಗತಿಯು ಮೊದಲಿನಿಂದಲೆ ಹಿಂದುಗಳ ಬಾಯಿಂದ ಹೊರಬೀಳುತ್ತಿತ್ತಾದರೂ ಕಲಕತ್ತಾ ಯುನಿವರ್ಸಿಟಿಯ ನಿರೀಕ್ಷಣೆಯ ಬಗ್ಗೆ ನೇಮಕಪಟ್ಟ ಸೆಡ್‌ಲರ ಕಮಿಶನಿನ ಅಧಿಕಾರ ಪರಿಪ್ಲುತವಾದ ಅಭಿಪ್ರಾಯವು ಹೊರಬೀಳುವ ತನಕ ಅಧಿಕಾರಿಗಳಿಗೆ ಎಂದರೆ ಪರ್ಯಾಯದಿಂದ ಸರಕಾರಕ್ಕೆ ಖಚಿತವಾಗಿದ್ದಿಲ್ಲ. ಸೆಡ್‌ಲರ ಕಮಿಶನಿನ ರಿಪೋರ್ಟೆಂದರೆ, ಒಂದೆ ಮಾತಿನಿಂದ, ಇಲ್ಲಿಯ ಯುನಿವರ್ಸಿಟಿಗಳ ಸ್ವರೂಪಸ್ಫೋಟವು! ವಿಧಾಯಕ ಟೀಕೆಯ ದೃಷ್ಟಿಯಿಂದ ಹೇಳುವದಾದರೆ, ಆ ರಿಪೋರ್ಟು ಮುಂದಿನ ಸುಧಾರಣೆಯ ಅಸ್ತಿಭಾರವೆನ್ನಬಹುದು. ಆದ್ದರಿಂದ ಈ ರಿಪೋರ್ಟಿನೊಳಗಿನ ಆದರಣೀಯವಾದ ಮತ್ತು ಹಿತಾವಹವಾದ ಸೂಚನೆಗಳ ಆಧಾರದಿಂದ ಶಿಕ್ಷಣ ಮಂತ್ರಿಗಳಾದ ಪತ್ರೊಸಾಹೇಬರು ಈ ಹೊಸ ಬಿಲಿನಲ್ಲಿ ಎಷ್ಟೊ ಚಲೊದಾದ ಮಾರ್ಪಾಟಗಳನ್ನು ಸೂಚಿಸಿದ್ದಾರೆ. ಇದು ಅಭಿನಂದನೀಯವಾಗಿದೆ. ಯುನಿವರ್ಸಿಟಿಯು ಕೇವಲ ಪರೀಕ್ಷಾಯಂತ್ರವಾಗಿಯೆ ನಿಲ್ಲದೆ, ಸೂರ್ಯನಿಂದ ಹೇಗೆ ಜೀವನದಾಯಕವಾದ ಕಿರಣಗಳು ಹೊರಬೀಳುತ್ತವೊ ಮತ್ತು ಲೋಕಕ್ಕೆ ಚೈತನ್ಯವನ್ನು ಕೊಡುತ್ತವೊ ಹಾಗೆಯೆ ಈ ವಿಶ್ವವಿದ್ಯಾಲಯಗಳಿಂದ ಜ್ಞಾನಕಿರಣಗಳು ಹೊರಬಂದು ತರುಣರಲ್ಲಿ ಯಥಾರ್ಥವಾದ ನಾಗರಿಕತೆಯನ್ನುಂಟುಮಾಡಬೇಕೆಂಬ ದೃಢಶ್ರದ್ಧೆಯಿಂದ ಶಿಕ್ಷಣ ಮಂತ್ರಿಗಳು ಅನೇಕ ಉಪಯುಕ್ತವಾದ ಸುಧಾರಣೆಗಳನ್ನು ತಮ್ಮ ಬಿಲಿನಲ್ಲಿ ನಮೂದಿಸಿದ್ದಾರೆ. ಒಂದೊಂದು ಕೊಲೇಜು ಯಾವದಾದರೂ ಒಂದೊಂದು ವಿವಕ್ಷಿತ ವಿಷಯವನ್ನು ಮುಖ್ಯವನ್ನಾಗಿಟ್ಟುಕೊಂಡು ಅದರಲ್ಲಿ ವೈಶಿಷ್ಟ್ಯವನ್ನು ಪಡೆಯಬೇಕು ಇತ್ಯಾದಿ ರೂಪದಿಂದ ಮಾಡಲಿರುವ ಸುಧಾರಣೆಗಳು ಶ್ಲಾಘ್ಯವಾಗಿವೆ. ಹಾಗು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಪಟ್ಟ ಸಂಶೋಧನಾಲಯವನ್ನು ತೆರೆಯುವ ಸೂಚನೆಯು ಸಹ ಯೋಗ್ಯವಾಗಿದೆ. ವಾಙ್ಮಯಾತ್ಮಕ ಶಿಕ್ಷಣದಂತೆಯೆ ಶಾಸ್ತ್ರೀಯ ಮತ್ತು ಔದ್ಯೋಗಿಕ ಶಿಕ್ಷಣವು ಸಪ್ರಯೋಗವಾಗಿ ಈ ವಿಶ್ವವಿದ್ಯಾಲಯದಿಂದ ದೊರಕಬೇಕೆಂಬ ಶಿಕ್ಷಣ ಮಂತ್ರಿಗಳ ಸದುದ್ಯೋಗವು ಸ್ತುತ್ಯವಾಗಿದೆ.

೫. ನಾವು ೧೫ ದಿವಸಗಳ ಹಿಂದೆ ಪ್ರಸ್ತಾಪಿಸಿದ ಮೇರೆಗೆ ಇಲ್ಲಿಯ ಮುನ್ಸಿಪಾಲಟಿಯ ಗಡಿಯಲ್ಲಿ ಗಡಂಗುಗಳನ್ನು ತೆಗೆದುಹಾಕುವ ಬಗ್ಗೆ ಮುನ್ಸಿಪಲ್ ಮತದಾರರ ಅರ್ಜಿಯು ಠರಾವಿನ ರೂಪದಿಂದ ಮೊನ್ನೆಯ ಮುನ್ಸಿಪಲ್ ಕೌನ್ಸಿಲ್ ಅಧಿವೇಶನದಲ್ಲಿ ಚರ್ಚೆಗೆ ಬಂದು, ಜನರ ಅಭಿಪ್ರಾಯದಂತೆ ಇಲ್ಲಿಯ ಗಡಂಗುಗಳನ್ನೆಲ್ಲ ತೆಗೆದುಹಾಕಬೇಕೆಂಬ ಸಂಗತಿಯು ಪಾಸಾಯಿತೆಂದು ತಿಳಿಸಲು ನಮಗೆ ತುಂಬಾ ಸಂತೋಷವಾಗುತ್ತದೆ. ಸುಮಾರು ೫ ಸಾವಿರ ಮತದಾರರಲ್ಲಿ ಮೂರುವರೆ ಸಾವಿರಕ್ಕಿಂತ ಹೆಚ್ಚಿನ ಮತದಾರರ ಸಹಿಯಿಂದ ಬಲಪಟ್ಟ ಈ ಅಂಬೋಣವು—ಈ ಕೇಳಿಕೆಯು ಒಂದೆರಡು ಕೌನ್ಸಿಲರುಗಳ ಅಭಿಪ್ರಾಯವೆಂದು ಹೇಳಲು ಈಗ ಯಾರಿಗೂ ಸಾಧ್ಯವಿಲ್ಲ. ಅದಲ್ಲದೆ, ಅಧಿವೇಶನಕ್ಕೆ ಹಾಜರಿದ್ದ ೨೧ ಜನ ಸಭಾಸದರ ಪೈಕಿ, ಇಬ್ಬರು ಸರಕಾರಿ ಸಭಾಸದರನ್ನು ಬಿಟ್ಟರೆ ಬಾಕಿ ಉಳಿದ ೧೯ ಜನರ ಬಹು ದೊಡ್ಡ ಬಹುಮತದಿಂದ ಸದರಿ ಠರಾವು ಪಾಸಾಯಿತು. ಈ ಸಂಗತಿಯು ಕೂಡ ವಿಶೇಷವಾದದ್ದು. ಸರಕಾರಿ ಸಭಾಸದರು ಸರಕಾರದ ಅನುಗ್ರಹದ ಕೃಪಾಛತ್ರವನ್ನು ಸರ್ವದಾ ಅಪೇಕ್ಷಿಸಿ ಆ ಕಡೆಗೆ ನಿಂತದ್ದು ಆಶ್ಚರ್ಯವಲ್ಲ. ಆದ್ದರಿಂದ ಆ ಬಗ್ಗೆ ವಿಶೇಷ ಸಂಗತಿಯನ್ನು ಬರೆಯಬೇಕಾದ ಅಗತ್ಯವಿಲ್ಲ. ಈ ರೀತಿಯಿಂದ ಪಾಸಾದ ಈ ಠರಾವಿನ ಚಲಾವಣೆಯು ಯಾವ ಪ್ರತಿಬಂಧವಿಲ್ಲದೆ ಉಂಟಾದೀತೆಂದು ನೆನಸಬಹುದು. ಆದರೆ ಸರಕಾರದ ಹಿತಸಂಬಂಧಕ್ಕೂ ಮುನ್ಸಿಪಾಲಿಟಿಯ ಹಿತಸಂಬಂಧಕ್ಕೂ ಕಡಿದಾಟವು ಬಂದಲ್ಲಿ ಸರಕಾರವು ತನ್ನ ಹಿತಸಂಬಂಧವನ್ನೆ ರಕ್ಷಿಸಲು ಹೊರಟು, ಮುನ್ಸಿಪಾಲಿಟಿಯ ಈ ಠರಾವನ್ನು ತನ್ನ ಕಸಡಬ್ಬಿಯಲ್ಲಿ ಹಾಕಹೋದರೆ ಆಗ ಮುನ್ಸಿಪಾಲಿಟಿಯ ಸಭಾಸದರು ತಮ್ಮ ನೀತಿಧೈರ್ಯವನ್ನು ವ್ಯಕ್ತಗೊಳಿಸಬೇಕಾದೀತು. ಅರ್ಧಕ್ಕಿಂತ ಎಷ್ಟೊ ಹೆಚ್ಚು ಮತದಾರರ ಅಭಿಪ್ರಾಯದ ಬೆಂಬಲವಿರುವ ಠರಾವನ್ನು ಕಲೆಕ್ಟರರ ಅಥವಾ ಬೇರೆ ಯಾರಾದರೂ ಅಧಿಕಾರಿಗಳ ಲೇಖಣಿಯ ಒಂದು ಹುಕುಮಿನಿಂದ ಮೂಲೆಗೆ ಹೋಗಗೊಡುವುದಾದರೆ, ಮತದಾರರ ಮತಗಳಿಗೂ ಮತ್ತು ಅವರ ಪ್ರತಿನಿಧಿಗಳಾದ ಸಭಾಸದರ ಸಭಾಸದತ್ವಕ್ಕೂ ಯಾವ ಬೆಲೆಯೂ ಇರಲಿಕ್ಕಿಲ್ಲ. ಆದರೆ ಸುದೈವದಿಂದ ಇಂಥ ಪ್ರಸಂಗವು ಬರಲಿಕ್ಕಿಲ್ಲವೆಂದು ನಾವು ನೆನಸುತ್ತೇವೆ. ಇರಲಿ. ಇಲ್ಲಿಯ ರಾಷ್ಟ್ರೀಯ ಸಭೆಯವರು ಈ ಸ್ತುತ್ಯ ಉದ್ಯೋಗವನ್ನು ಮಾಡಿ ಇಷ್ಟರಮಟ್ಟಿನ ಯಶಸ್ಸನ್ನು ಸಂಪಾದಿಸಿದ ಬಗ್ಗೆ ನಾವು ಅವರನ್ನು ಅಭಿನಂದಿಸುತ್ತೇವೆ.

ಮಂಗಳೂರು.

ಜಿಲ್ಲೆಯಲ್ಲಿರುವ ಬೋರ್ಡು ಶಾಲೆಗಳಲ್ಲೆಲ್ಲಾ ಒಟ್ಟಿಗೆ ಈಗ ಸುಮಾರು ೨೪ ಮಂದಿ ಪಂಚಮ ವಿದ್ಯಾರ್ಥಿಗಳು ಕಲಿಯುತ್ತಿರುವರಂತೆ.

ಬರುವ ದಶಂಬರ ತಿಂಗಳಲ್ಲಿ ಈ ಪಟ್ಟಣದಲ್ಲಿ ಜರಗಿಸಬೇಕೆಂದು ನಿರ್ಣಯಿಸಿದ ವ್ಯವಸಾಯ ಮತ್ತು ಕೈಗಾರಿಕೆಯ ಪ್ರದರ್ಶನವು ಮುಂದರಿಸಿಡಬೇಕಾಗಿ ನಿಶ್ಚಯಿಸಿದೆಯಾಗಿ ಕೇಳುತ್ತೇವೆ.

ಮಿ| ಮಹಮ್ಮದ ಸಾಹೇಬ ಬಹದ್ದೂರರು [illegible] ಮೆಜಿಸ್ಟ್ರೇಟ ಕೆಲಸಕ್ಕೆ ರಾಜೀಕೊಟ್ಟಿರುವುದರಿಂದ ಆ ಪದವಿಗೆ ರಿಟಾಯರ್ಡು ಸಬ್ ಮೆಜಿಸ್ಟ್ರೇಟರಾದ [illegible] ಸಾಹೇಬರನ್ನು ನೇಮಿಸಲಾಗಿದೆಯಂತೆ.

ಬರುವ ೩ನೇ ತಾರೀಕಿಗೆ ಮಂಗಳೂರ [illegible] ಶರಾಬುಗಳ ಗುತ್ತಿಗೆಗಳು ಏಲಂ ಆಗುವವು. ಮಂಗಳೂರು ತಾಲೂಕಿನ ಸ್ವಯಂಸೇವಕರು ಕಳ್ಳಿನ [illegible] ಗಡಂಗುಗಳನ್ನು ವಹಿಸಿಕೊಳ್ಳಕೂಡದು, [illegible] ವುದನ್ನು ಬಿಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತಾರೆಂದು ಕೇಳುತ್ತೇವೆ.

ಜನರಲ್ಲಿರುವ ಸುರಾಪಾನದ ದುರಾಭ್ಯಾಸವು ಸಂಪೂರ್ಣವಾಗಿ ನಿವಾರಿಸುವಂತೆ ಜಿಲ್ಲೆಯ ಎಲ್ಲಾ [illegible] ದೇಶಾಭಿಮಾನಿಗಳು ಕುಡಿಕರಿಗೆ ಆಗಾಗ್ಗೆ ಕುಡಿಯದ [illegible] ಬೋಧಿಸಬೇಕು. ಜನರು ತೆಂಗಿನ ಮರಗಳನ್ನು ಮೂರ್ತೆಗೆ [illegible] ಹಾಗು ಗಡಂಗುಗಳನ್ನು ವಹಿಸಿಕೊಳ್ಳುವವರು ದೇಶ[illegible] ಕಡೆಗೆ ದೃಷ್ಟಿ ಇಟ್ಟು ಅವುಗಳನ್ನು ವಹಿಸಕೂಡದಾಗಿಯೂ [illegible] ರಾ. ಕಾರ್ನಾಡ ಸದಾಶಿವರಾಯರು ಈ ಮೂಲಕ ಪ್ರಾರ್ಥಿಸುತ್ತಾರೆ.

ಮಂಗಳೂರಿನ ಕೆಲವು ಕಡೆಗಳಲ್ಲಿ [illegible] ತಿರುಗುವಲ್ಲಿ ಬಹಳ ಇಕ್ಕಟ್ಟಾಗಿರುವುದರಿಂದ ಈ ಸ್ಥಳ[illegible] ಗಾಡಿಗಳು ಮೋಟಾರ ಬಂಡಿಗಳೂ ತಿರುಗುವಾಗ ಹೆಚ್ಚಿನ [illegible] ಸಂಭವಿಸುವುದರಿಂದ ಇಂಥಾ ರಸ್ತೆಗಳು ಎಲ್ಲೆಲ್ಲಿ [illegible] ಅವುಗಳನ್ನು ಹೇಗೆ ಅಗಲಪಡಿಸಬಹುದು ಎಂಬದನ್ನು ಆಲೋಚಿಸಲು [illegible] ಮುನ್ಸಿಪಲ್ ಕೌನ್ಸಿಲಿನ ಮೀಟಿಂಗಿನಲ್ಲಿ ಒಂದು ಕಮಿಟಿ ನೇಮಕವಾಗಿದೆ.

ಮ. ರಾ. ರಾ. ಕೆ. ಪಿ. ರಾಮರಾ[illegible] ಮ. ರಾ. ರಾ. ಕೆ. ಪಿ. ಸರ್ವೋತ್ತಮರಾಯರನ್ನು [illegible] ಹೈಕೋರ್ಟು ವಕೀಲರಾಗಿ ಮದರಾಸ[illegible] ಮಾಡಿಕೊಳ್ಳಲಾಯಿತು.

ಕಳೆದ ತಾ. ೨೭ರಲ್ಲಿ ಇಲ್ಲಿಯ [illegible]ಸಪಲ್ ಕೌನ್ಸಿಲಿನ ಮೀಟಿಂಗು ಸೇರಿತು. ಮುನ್ಸಿಪಲಿಟಿ[illegible] ಪಟ್ಟಣದ ಸರಹದ್ದಿನೊಳಗಿರುವ ಶೇಂದಿಶರಾಬಿನ [illegible] ತೆಗೆದು ಹಾಕಬೇಕೆಂದು ಮಾಡಿದ ಮನವಿಯು [illegible] ಮುಂದೆ ಇಡಲಾಯಿತು. ಈ ಮನವಿಗೆ ಜುಮ್ಲಾ ೪೮೦೦ ತೆರಿಗೆ[illegible] ೩೫೦೦ ಮಂದಿಗಳು ತಮ್ಮ ಸಹಿಯನ್ನು ಹಾಕಿ[illegible] ಕೊಟ್ಟಿದ್ದರು. ಈ ಮನವಿಯ ಸಂಗಡಲೇ ಮ. [illegible] ಸದಾಶಿವರಾಯರು ಮುನ್ಸಿಪಾಲಿಟಿಯ ವಿಸ್ತೀರ್ಣ[illegible] ಗಡಂಗುಗಳನ್ನು ತೆಗೆದು ಹಾಕಬೇಕೆಂಬ ಠರಾವನ್ನು ಸಹ [illegible] ಮುಂದಿಟ್ಟರು. ಈ ಠರಾವನ್ನು ಮೆ. ರಾ. ನಾರ್ಣಪ್ಪಸವ[illegible] ಮಿ| ಮಹಮ್ಮದ ಪುತ್ತೂರ ಸಾಹೇಬರೂ ಅನುಮೋದಿಸಿದರು. [illegible] ಠರಾವಿನ ಕುರಿತು ಕೌನ್ಸಿಲಿನಲ್ಲಿ ಹೆಚ್ಚಿನ ಚರ್ಚೆ ನಡೆದು ಕೊನೆ[illegible] ೨೧ ಮಂದಿ ಕೌನ್ಸಿಲರಲ್ಲಿ ೧೯ ಮಂದಿ ಇದರ ಬೆಂಬಲಕ್ಕೆ [illegible] ಬಹುಮತದಿಂದ ಪಾಸುಮಾಡಲಾಯಿತು.

ಇದೇ ತಾ. ೩೦ನೇ [illegible]ವಾರ ಸಾಯಂಕಾಲ ೫ ಗಂಟೆಗೆ ತಿಲಕ ಮಹಾ ವಿದ್ಯಾಲಯ[illegible] ಯುತ ಧರ್ಮದೇವ ಸಿದ್ಧಾಂತಾಲಂಕಾರರು "ಸ್ವಾಮಿ [illegible]ನಂದ ಸರಸ್ವತಿಯವರ ಜೀವನ ಚರಿತ್ರೆಯ ವಿಷಯವಾಗಿ [illegible] ಮಾಡುವರು ಎಲ್ಲರೂ ಬರಬೇಕಾಗಿ ವಿನಂತಿ.

ಬರುವ ತಾ. ೧[illegible] ಮಂಗಳವಾರ ಲೋಕಮಾನ್ಯ ತಿಲಕರ ಜಯಂತ್ಯೋತ್ಸವವನ್ನು [illegible]ಬೇಕಾಗಿ ನಿಶ್ಚಯಿಸಿಯದ, ಬೆಳಗ್ಗೆ [illegible] ಗಂಟೆ ೭ಕ್ಕೆ ತಿಲಕ [illegible] ವಿದ್ಯಾಲಯದಲ್ಲಿ ಕೂಡಿ ಅಲ್ಲಿಂದ ಭಜನೆ ಸಮೇತ ಬೀದಿ[illegible] ತಿರುಗುವದು, ಮಧ್ಯಾಹ್ನ [illegible] ಗಂಟೆ [illegible]ಕ್ಕೆ ತಿಲಕವಿದ್ಯಾಲಯದಲ್ಲಿ [illegible] ಪಂದ್ಯಾಟವಿರುವುದು. [illegible] ಗಂಟೆ ೫ಕ್ಕೆ ಅಲ್ಲಿ [illegible]. ಎಲ್ಲರೂ ಬರಬೇಕಾಗಿ ಮಂಗಳೂರ ತಾಲೂಕು ಕೊಂಗ್ರೆಸ್ ಕಮ್ಮಿಟಿಯ ಸೆಕ್ರೆಟರಿಗಳು ಈ ಮೂಲಕ ವಿನಂತಿ ಮಾಡುತ್ತಾರೆ.

ಮಂಗಳೂರು ಮುನ್ಸಿಪಾಲಿಟಿಯೊಳಗಿರುವ ನಿವಾಸಿಕರಿಗಿರುವ ತೊಂದರೆಗಳನ್ನು [illegible] ಬಗ್ಗೆ ಏರ್ಪಾಡುಗಳನ್ನು ಮಾಡಲು [illegible] ಇಡುವುದಕ್ಕಾಗಿ ಮುನ್ಸಿಪಲ್ ತೆರಿಗೆ ಕೊಡುವವರ (Rate Payers) ಒಂದು ಸಂಘವನ್ನು ಸ್ಥಾಪಿಸುವುದಕ್ಕಾಗಿ [illegible] ಹಾಗು ಇತರರ ಸಹಾಯದಿಂದ [illegible] ತಿಂಗಳಲ್ಲಿ ಕೂಡಿಸೋಣವಾಗುವುದು. ಇದಕ್ಕೆ ಪಟ್ಟಣಗರು [illegible] ಪ್ರೋತ್ಸಾಹ ಕೊಡಬೇಕಾಗಿ [illegible] ಕಾರ್ನಾಡ [illegible] ವಿನಂತಿಯಾಗಿದೆ.

ಮಂಗಳೂರು ತಾಲೂಕು ಕಚೇರಿಯ ಹೆಡ್ ಎಕೌಂಟಾಂಟರಾದ ಮ. ರಾ. ರಾಮನಾಯ್ಯರು ರಜೆ ಮುಗಿದು ಪುನಃ ಕೆಲಸಕ್ಕೆ ಹಾಜರಾದ[illegible] ಮ. ರಾ. ಮುಲ್ಕಿ ಸುಬ್ಬರಾಯರು ಉಡುಪಿಯ ತಾಲೂಕು ಹೆಡ್ ಎಕೌಂಟಾಂಟರಾಗಿ ವರ್ಗಹೊಂದಿದ್ದಾರೆ.

[illegible] ಶಾಲೆಯ ಡಿರೆಕ್ಟರ್ ಸಾಹೇಬರು ಬರುವ ತಾ. [illegible] ಕ್ಕೆ ಮಂಗಳೂರಿಗೆ ಬರಲಿಕ್ಕಿದ್ದಾರೆ.

[illegible]ಲ್ಲಿರುವ ಪಂಚಮರ ನಿವಾಸಸ್ಥಳದಲ್ಲೂ ಬೋಳೂರ [illegible] ಶಾಲೆಯಲ್ಲೂ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಇತರ [illegible] ನೂಲುವುದನ್ನು ಕಲಿಸುವ ತರಗತಿಗಳನ್ನು ತೆರೆದಿದ್ದಾರೆಂದು ಕೇಳುತ್ತೇವೆ. ಬಿಜೈಯಲ್ಲಿ ೧೮ಮಂದಿ, ಬೋಳೂರಿನಲ್ಲಿ [illegible] ಮಂದಿ ನೂಲು ಮಾಡುವುದನ್ನು ಕಲಿಯುತ್ತಿದ್ದಾರೆ.

ಜಿಲ್ಲೆಯಲ್ಲಿದ್ದ ಎಲ್ಲಾ ಕೊಂಗ್ರೆಸ್ ಕಮ್ಮಿಟಿಗಳ ಪರವಾಗಿ ದೇಶಸೇವೆಯನ್ನು ಮಾಡುವ ದೇಶಬಾಂಧವರಿಗೆ ವಿನಂತಿ. ಹತ್ತಿ ಬೀಜವನ್ನು [illegible] ಬರುವ ಜಗನ್ನ ಮೊದಲನೆಯ ಅಥವಾ ಎರಡನೇ ಹತ್ತಿ[illegible]ವನ್ನಾದರೂ ಆಗಬೇಕೆಂತ ಅನೇಕರು ಅಭಿಪ್ರಾಯಪಡುತ್ತಾರೆ. [illegible] ದರಿಂದ ಆಗೋಸ್ಟು ೩, ೩ನೇ ತಾರೀಕಿನೊಳಗೆ ಹತ್ತಿ ಬೀಜವು [illegible] ಹಾಗೆ ಜಿಲ್ಲಾ ಕೊಂಗ್ರೆಸ್ ಕಮ್ಮಿಟಿಯವರು ಏರ್ಪಾಡು ಮಾಡಿದ್ದಾರೆ. ಆಯಾಯ ಕೊಂಗ್ರೆಸ್ ಕಮ್ಮಿಟಿಯವರು ಯಾ[illegible] ಅವರು ತಮಗೆ ಬೇಕಾದ ಹತ್ತಿ ಬೀಜವನ್ನು ಮಂಗಳೂರು ಜಿಲ್ಲಾ ಕೊಂಗ್ರೆಸ್ ಕಮ್ಮಿಟಿಯ ಆಫೀಸಿನಿಂದ ತೆಗೆದುಕೊಂಡು ಹೋಗುವ ಏರ್ಪಾಡು ಮಾಡುವುದಲ್ಲದೆ ಅದನ್ನು ಬಿತ್ತುವ ವಿಷಯದಲ್ಲಿ ಅನುಭವವನ್ನು ಕೂಡಾ ತೆಗೆದುಕೊಂಡು ಹೋಗಬೇಕಾಗಿ ವಿನಂತಿ.

[illegible]

ಕಾಯಿದೆಭಂಗ ವಿಚಾರಣಾ ಕಮ್ಮಿಟಿಯ ಪರ್ಯಟನ.

[illegible]ಸ್ಥಿತಿಯನ್ನು ಪರಿಶೀಲಿಸಿ ಕೊಂಗ್ರೆಸ ಕಮ್ಮಿಟಿಯ ಮುಂದೆ ವರದಿ[illegible] ನೇಮಕವಾದ ಕಾಯಿದೆಭಂಗವಿಚಾರಣಾ ಕಮ್ಮಿಟಿಯ ಮೆಂಬ[illegible] ಹಜಮಲ್ ಖಾನ್, ಪಂಡಿತ ಮೋತಿಲಾಲನೇಹರು, ಡೊಕ್ಟರ [illegible]ರಾದ ರಾಜಗೋಪಾಲಾಚಾರ್ಯ, ಕಸ್ತೂರಿ ರಂಗ ಅಯ್ಯಂಗಾರ [illegible]ಪಟೇಲ ಇವರು ತಾ. ೨೦ನೇ ಪ್ರಾತಃಕಾಲ ಪೂನೆಗೆ ತಲ್ಪಿದರು. [illegible]ಕಡೆಯಲ್ಲಿಯು ಅಧ್ಯಕ್ಷರಾದ ಶ್ರೀಯುತ ಕೇಳಕರರು ಮುನ್ಸಿಪಾಲಿಟಿಯ[illegible]ದಲ್ಲಿ ಪತ್ರವನ್ನು ಓದಿ ಅದನ್ನು ಒಪ್ಪಿಸಿದರು. ಈ ಸನ್ಮಾನಪತ್ರ[illegible]ಮಲ್ ಖಾನರ ಮತ್ತು ಮೋತಿಲಾಲರ ದೇಶಸೇವೆಯನ್ನು ಪ್ರಶಂಸಿ[illegible]ಮ ಹಜಮಲ್ ಖಾನರು ಈ ಪತ್ರವನ್ನು ಕೊಟ್ಟ ಬಗ್ಗೆ ಮುನ್ಸಿಪಾ[illegible]ಗಳನ್ನು ಅರ್ಪಿಸಿ, ರಾಷ್ಟ್ರಕಾರ್ಯದ ಉದ್ದೇಶವನ್ನು ನೆರವೇರಿಸ[illegible] ಸಹಾಯಕರಾಗಬೇಕಾಗಿಯೂ ಲೋಕಮಾನ್ಯ ತಿಲಕರ ಸ್ವರಾಜ್ಯದ [illegible]ಪನ್ನೆಂದೂ ನುಡಿದರು. ಮೋತಿಲಾಲನೇಹರುಗಳು ಸಹ [illegible]ತ್ಯದ ಉದ್ದೇಶಗಳನ್ನು ನೆರವೇರಿಸಲು ಎಲ್ಲರೂ ಬೆಂಬಲ[illegible]ಬೇಕೆಂದರು. ಸನ್ಮಾನಪತ್ರವನ್ನು ಹೊಂದಿದ ಬಳಿಕ ಈ ಕಮ್ಮಿಟಿ[illegible] ಆಫೀಸು, ರಾಷ್ಟ್ರೀಯ ವಿಶ್ವವಿದ್ಯಾಲಯ ಇವನ್ನೆಲ್ಲಾ ಸಂದರ್ಶಿಸಿದ[illegible]. ಮಧ್ಯಾಹ್ನ ೩ ಗಂಟೆಗೆ ಕಮ್ಮಿಟಿಯವರು ಅಲ್ಲಿಯ ಮುಖಂಡರ [illegible]ವನ್ನು ಪಡೆಯುವ ಕಾರ್ಯವನ್ನು ಪ್ರಾರಂಭಿಸಿದರು. ಸುಮಾರು ೬ [illegible] ಶ್ರೀಯುತ ಕೇಳಕರರ ಅಭಿಪ್ರಾಯ ಪಡೆಯುವ ಕೆಲಸವನ್ನು ನಡೆ[illegible]ಪಟಕರ, ಗೋಖಲೆ ಇವರ ಅಭಿಪ್ರಾಯವನ್ನು ಸಹ ಹೊಂದಿದರು. [illegible] ಮೋತಿಲಾಲನೇಹರುಗಳು ತಮ್ಮ ಮಕ್ಕಳಾದ ಜವ್ಹೇರಲಾಲರವರಿಗೆ [illegible]ಯಲ್ಲಿ ಶಸ್ತ್ರಪ್ರಯೋಗ ಚಿಕಿತ್ಸೆಯು ನಡೆಯಲಿಕ್ಕಿರುವುದರಿಂದ [illegible] ತೆರಳಿದರು. ಅನಂತರ ಇವರು ಕಮ್ಮಿಟಿಯವರು ನ.ತಾ.೨೭ಗೆ [illegible] ಅವರನ್ನು ಸೇರಿದರು. ತಾ. ೨೨ರಲ್ಲಿ ಪೂನೆಯ ಶಿವಾ[illegible]ಲ್ಲಿ ಹಕೀಮ ಹಜಮಲ್ ಖಾನ ಮತ್ತು ಶ್ರೀಯುತ ರಾಜಗೋ[illegible]ರ ಭಾಷಣಗಳಾದವು. ಹಕೀಮ ಸಾಹೇಬರು [illegible] ಭಾಷಣದಲ್ಲಿ [illegible]ಯ ಕ್ರಮಗಳನ್ನು ನಡಪೇರಿಸಬೇಕು, ಹಿಂದೂ ಮುಸಲ್ಮಾನರ ಐಕ್ಯ[illegible]ಬೇಕು ಎಂದು ವಿನಂತಿ ಮಾಡಿಕೊಂಡರು. ಶ್ರೀಯುತ ರಾಜಗೋ[illegible]ರು ಎಲ್ಲರೂ ಖಾದಿಯನ್ನು ಧರಿಸಬೇಕು, ಮತ್ತು ಶಾಂತತೆಯಿಂದ [illegible]ವನ್ನು ನಡಿಸಬೇಕಾಗಿ ಸೂಚಿಸಿದರು.

ಮಗ್ಗದಾರರಿಗೆ ಬೇಕಾಗಿರುವ ಬಿಳೇ ಮತ್ತು ಬಣ್ಣಗಳ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯು[illegible]

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಾದ ಗಾಂಧಿ ಟೋಪಿಗಳೂ, ಬಿಳಿ ವ ಇತರ ನಾನಾ ತರದ ಕೋಟಿನ ವಸ್ತ್ರಗಳುಳ್ಳವಾದ ಶರ್ಟಿನ ವಸ್ತ್ರಗಳೂ ಅಧಿಕ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು

ನಗದಿ ಪಡೆಯುವವರಿಗೆ ಒಳ್ಳೇ ಕಮಿಶನ್ ದೊರೆಯು[illegible].

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪ,
ಕಸ್ತೂರಿ ನಾಗೇಶಪ್ಪ ಮತ್ತು ಕಂಪೆನಿ
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, [illegible] ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು. ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ [illegible] ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರ 15—16% ಅಂದರೆ ಮೂಳೆಗೊಬ್ಬರದಲ್ಲಿರುವದಕ್ಕಿಂತ ಎರಡು ಪಾಲಷ್ಟು ಜಾಸ್ತಿ ಬೆರೆತಿರುವದು. ಎಕ್ರೆಗೆ 100—200 ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿ[illegible] ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಠವನ್ನು ಕನ್ನಡದಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ
6, ಮಿಶನ್ ರೌ, ಕಲ[illegible]

THE DIRECTOR CHILEAN NITRATE COMMITT[illegible]
(INDIAN DELEGAT[illegible]
6, Mission Row, CALCU[illegible]

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾತಾಪಸ್ಥಿ ಅಕ್ಕರಾಮು ಶಾಸ್ತ್ರಿಗಳಿಂದ ಬರೆಯಲ್ಪಟ್ಟಿ
ಹಿಂದೂ ವ್ರತಪವೇಶ ಕ್ರಯ ೦—೧೦—೦
ಶೇತುಭಂಗ " ೦—೧೨—೦
ಸಂಕ್ಷೇಪಗೀತೆ " ೦—೧೦—೦

ಅತ್ರೀ[illegible] ಪುರಂತಿತ್ಯಾಯರಿಂದ ರಚಿತವಾದ ಸ್ವರಾಜ್ಯ ಭಕ್ತಿ[illegible]ನ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಸ್ತ್ರೀ ದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ವಾಕ್ಯವಿವೇಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಪ್ರಿಯಾಡು, ಮನೋರಮಾ, ಭ್ರಾಂತಿ ವಿಲಾಸ, ಕ್ಷಾತ್ರತೇಜ, ಮಾಧವ ತರುಣಾವಿಲಾಸ, ಆನಕಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೩—೦ ಸ್ಥಳೀಕರಿಗೆ ರೂ. ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦. ಪ್ರಕಟಣೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಪುಸ್ತಕಗಳು, ಶಾಯಿಗಳು.

ಫೌಂಟೆನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫ್ರೂಟ್ ಸಾಲುಗಳು, ಇತರ ಪಠ್ಯನತಿಯ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಭಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕದ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ದೇಶೀ ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪೌಷ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ರೈತರಿಗೆ ಬೇಕಾಗುವ ಗೊಬ್ಬರಗಳು.

ಆಸ್ಟ್ರೇಲಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧ ಇಲಾಖೆಯ ಕಳೆದ ೨೫ ವರ್ಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

= ಅಮೃತಾಂಜನ =

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಶಿಥಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷ ಇದು ಯಾವ ತರದವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಚಕಪಾಯ

U. B. DUTT & Co. CALICUT

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ [illegible] ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳು" ಬರುತ್ತಿವೆ. ಈ ಭಾಗದಲ್ಲಿ [illegible] ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ 'ಪಾಚಕಪಾಯ' ಎಲ್ಲಾ ವಿಧ [illegible] ಅವಯವಗಳಲ್ಲಿ [illegible] [illegible]

ಕ್ರಯ [illegible]

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೇನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಖುದ್ದು ನಿಗಾವಣಿಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ವಿಕ್ರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ 25 ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸಲ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬರೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ½ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ¼ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಶಿಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೇನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಚನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 2. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಓರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,
Hampankatta, MANGALORE S' K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.
ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು, ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.
ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು
ಕ್ರಯ ಸುಲಭ.



ಮಕ್ಕಳ ಆಟದ ಚಿತ್ರಾಂಗಿಯ 32 ಸಾಮಾನುಗಳ ಸಣ್ಣ ಪೆಟ್ಟಿ 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 5—0—0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ, ಮಡಿ, ಜರಿ, ಸಾದಾ, ಸೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಫಟಿಕ, ಸ್ಫಟಿಕಮಣಿ, ಲಿಂಗ[illegible] ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ಕಳುಹಿಸ[illegible]ವು. ಕ್ಯಾಟಲಾಗ್ ಇನಾಂ.

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೇ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮುದಾಯವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷಧ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಬಾಟ್ಲಿ ಒಂದರ ಕ್ರಯ:—ರೂ.1—4—0.

ಹುಳದ ಪೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧ.

ಕ್ರಯ ಒಂದು ಟಿನ್ನಿಗೆ ರೂ. 0—2—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪೆತಿಕ್ ಡಿಸ್ಪೆನ್ಸರಿ,
ಹಂಪನಕಟ್ಟೆ, ಮಂಗಳೂರು.



ಯಾವಾಗಲು ನೋಟಕರಿಗೆ ಚೆಲುವಾಗಿ
ಕಾಣಿಸಿಕೊಳ್ಳಬೇಕು
ಮತ್ತು ಸುಂದರವಾದ ಚರ್ಮಕ
ಒಡೆಯನಾಗಲಿಕೆ

“ಹಾಜಿಲೀನ್ ಸ್ನೋ”
(ಟ್ರೇಡ್ ಮಾರ್ಕ್)

“HAZELINE
(Trade Mark)
SNOW”

ವನ್ನು ಉಪಯೋಗಿಸಬೇಕು

“ಹಾಜಿಲೀನ್ ಸ್ನೋ”ವನ್ನು ಉಪಯೋಗಿಸ ಕೊಡಕೆ ಅದರ [illegible]
[illegible]
“ಹಾಜಿಲೀನ್ ಸ್ನೋ”ವಲ್ಲಿ ಯಾವ [illegible]
ಆ ಕಾರಣ ಯಲ್ಲಾ ಜಾತಿಯ
ಜನರು ಅದನ್ನು ಪ್ರಯೋಗಿಸಬಹುದು

ಇದು ಕಂಜೀನ ಶಾಸ್ತ್ರಜ್ಞ [illegible]
ಮತ್ತು ಉಗ್ರಾಣದವರಿಂದಲು
ಮಾರಲ್ಪಡುವದು.

ಬರ್ರೋಸ್ ವೆಲ್‌ಕಮ್ ಕೋ
ಲಂಡನ್ ಅಂಡ್ ಬೊಂಬಾಯಿ.

Burroughs Wellcome & Co.
London & Bombay

Can. 4

All Rights Reserved

ಶ್ರೀ
ಸ್ವದೇಶ ಭಕ್ತರೇ
ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳು, ಬಿಳಿ, ಹಸುರು ಬ್ಲೂಡು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ, ನಯವಾದ ಶರ್ಟಿನ ವಸ್ತ್ರಗಳೂ ಮತ್ತು ವೇಷ್ಟಿ ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲುಗಳಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು.

ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲುಗಳನ್ನು ಅಪೇಕ್ಷಿಸುವವರು ಸಾಕಷ್ಟು ಸ್ಟ್ಯಾಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:—
ಮುಳಿಯ ತಿಮ್ಮಪ್ಪಯ್ಯ
ಮತ್ತು ಸಹೋದರ
ರತ್ನ ಮತ್ತು ಜವಳಿ
ವ್ಯಾಪಾರಿಗಳು,
[illegible] (ಗೋಳಿಕಟ್ಟೆ ಬಜಾರು)
ಮಂಗಳೂರು.

The Canara Banking Corporation, Udipi, (Limited).

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಆ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯತೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಯಾನೆ ಹೊರಗಿನಿಂದ ಬರತಕ್ಕದ್ದು	3,78,315	2	5
6. ರಿಜರ್ವ ಇತ್ಯಾದಿ ಫಂಡುಗಳು. (17—6—'22.)	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೬ರಿಂದ ೭½ ವರೇಗಿನ ಮೂರು ತಿಂಗಳಿಗೊತ್ತು ಬಡ್ಡಿ ಕೊಡುವ ಶರ್ತದ ಮೇಲೆ ನಿರಖು ಠೇವಣಾತಿಗಳು.
೨. ೧೫ ದಿನಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡಿಯುವ ಶರ್ತದ ಮೇಲೆ ಸಾಲಿಯಾನ್ ಶೇಕಡಾ 6½ಲ್ಲಿ ನಡೆದ ದಿನಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಚಿಕ್ಕ ವಾಯಿದೆ ಠೇವಣಾತಿಗಳು.
೩. ಏನೂ ಖರ್ಚಿಲ್ಲದೆ ಸಾಲಿಯಾನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಚಾಲ್ತಿ ಠೇವಣಾತಿಗಳು.
೪. ಸಾಲಿಯಾನ್ ಶೇಕಡಾ 4½ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.
೫. ಈ ಕೆಳಗಣ ಶರ್ತಗಳ ಮೇಲೆ ಕಂತು ಠೇವಣಾತಿಗಳು.
ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.
ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.
ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.
ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು.
ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.
೬. ಕಳೆದ ೨ ವರುಷಗಳಲ್ಲಿ ಪಾಲುದ್ದಾರರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.
೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.
೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಖ್ಖಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಒಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬ್ಯಾಯಲ್ಲಿರುವ ಮರ್ಕೆಂಟೈಲ್ ಬ್ಯಾಂಕ್ ಒಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ತಾಜಾ ಕಲಂ:—ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಗಳವರಿಗೆ ಬರೆದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡುಪಿ.
ತಾ 13—5—1922.

ಸ. ಆನಂದರಾವ್,
ಕಾರ್ಯದರ್ಶಿ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ “ವಿಲ್ಲಿಯಮ್ಸ್ ಡೆಂಟೋನ್” ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲಿ ಸುಣ್ಣ ಕಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ.

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಸ್ಥಳಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಕೊಂಕಣಿ ಭಾಷೆಯಲ್ಲಿ
ಸಂಗೀತ
❋ ಚಂದ್ರಹಾಸ ನಾಟಕ ❋

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದದ ಬೈಂಡು ರೂ. 0—4—6. ಸ್ಟಿಫ್ ಬೈಂಡು ರೂ. 0—5—6.
ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದುವರೆ ಆಣೆ ಅಥವಾ ಆರುವರೆ ಆಣೆಗಳ ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ— ಬಿ. ಕೆ. ಪ್ರಭು,
ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ

‘ಕವಿ’ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ
— ಈ ನಶ್ಯವು —
1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯ ಕಮ್ಮೀಶ್ನರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ಲು 1ರ ರೂ. 2—12—0.
ಸ್ಪೆಶ್ಯಲ್ ರಾತ್ಲು 1ರ ರೂ. 3—0—0.
2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

“ಸಂಕ್ಷೇಪಗೀತೆ”

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸು:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತು ಕೆನರೀಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ ಡಿಪೊಜಿಟರಿ,
ಮಂಗಳೂರು.

ಶಾಲಿವಾಹನಶಕೆ ೧೮೪೪ನೆಯ ದುಂದುಭಿ ಸಂವತ್ಸರದ ಶ್ರಾವಣ ಶು|| ೧೩ ಶನಿವಾರದಿಂದ ದುಂದುಭಿಸಂ|| ಶ್ರಾವಣ ಬ|| ೪ ಶುಕ್ರವಾರದ ವರೆಗಿನ ಪಂಚಾಂಗ
(೧೯೨೨ನೆಯ ಕರ್ನಾಟಕ [illegible])

ತಾರೀಖು	ವಾರ.	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]	ಸೂರ್ಯ	
							ಉ.	ಅಸ್ತ.
5	ಶನಿ	೧೩	೩೮.೧೬	ಪೂ. ಷ.	೪೩.೩೩	೨೦	6.18	6.54
6	ರವಿ	೧೪	೩೯.೪೪	ಉ. ಷ.	೪೬. ೨	೨೧	6.18	6.54
7	ಸೋಮ	⊙	೪೨. ೦	ಶ್ರವಣ	೫೧.೧೬	೨೨	6.18	6.53
8	ಕುಜ	೧	೪೫.೪೬	ಧನಿಷ್ಠಾ	೫೬.೨೮	೨೩	6.18	6.53
9	ಬುಧ	೨	೫೦.೧೪	ಶತಭಿಷ	೬೦. ೦	೨೪	6.19	6.53
10	ಗುರು	೩	೫೫. ೨	ಶತಭಿಷ	೨.೩೨	೨೫	6.19	6.52
11	ಶುಕ್ರ	೪	೫೯.೧೪	ಪೂ. ಭಾ.	೯. ೦	೨೬	6.19	6.52

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ಆಗೋಸ್ತು)

ತಾರೀಖು Date	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದ್ದು	Minimum ಕಡಿಮೆ	ದಿನದ ಮಳೆ	ಆಗೋಸ್ತು ೧ರಿಂದ
27	87—0	75—8	0—21	—
28	88—4	75—2	0—43	—
29	84—5	73—3	0—54	—
30	86—6	72—9	0—93	—
31	87—4	74—7	0—54	—
1	87—8	76—3	0—41	—
2	88—4	77—8	0—03	99—20

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ ...	8— 6	9— 0
ಸುಗ್ಗಿಗೆ ...	7—12	8— 2
ಗುಡ್ಡೆ, ...	8—4	7—12
ರಾಶಿ	7— 8	7—10
ಅವ್ವಲ್ ಬೆಳ್ತಿಗೆ „ ...	8—12	9— 0
ಗುಡ್ಡೆ ಬೆಳ್ತಿಗೆ „ ...	7—14	8— 4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	14— 0	14— 8
ಗೋಧಿ ಗೋಣಿ ೧ಕ್ಕೆ ...	22— 8	24— 8
ಹುರುಳಿ ಗೋಣಿ ೧ಕ್ಕೆ ...	13—12	14— 0
ಕಡಲೆ ಗೋಣಿ ೧ಕ್ಕೆ ...	14— 0	15— 0
ತೊಗರಿ ಗೋಣಿ ೧ಕ್ಕೆ ...	16— 0	16— 4
ತೊಗರಿಬೇಳೆ ಗೋಣಿ ೧ಕ್ಕೆ ...	19— 8	23— 0
ಉದ್ದು ಗೋಣಿ ೧ಕ್ಕೆ ...	17— 0	—
ಹೆಸರು ಗೋಣಿ ೧ಕ್ಕೆ ...	15— 8	16— 0
ಊರು ಬೆಲ್ಲ ಖಂಡಿ ೧ಕ್ಕೆ ...	70— 0	72— 8
ಉಪ್ಪು ಗೋಣಿ ೧ಕ್ಕೆ ...	5— 2	5— 6
ಕೊಬ್ರಿ ಖಂಡಿ ೧ಕ್ಕೆ ...	85— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	33— 0	35— 0
ಎಳ್ಳೆಂಡಿ ಖಂಡಿ ೧ಕ್ಕೆ ...	50— 0	—
ಕೊಬ್ರಿ ಎಣ್ಣೆ ಮಣ ೧ಕ್ಕೆ ...	7— 2	8— 2
ಎಳ್ಳೆಣ್ಣೆ ಮಣ ೧ಕ್ಕೆ ...	8—12	9— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	9— 0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	6— 4	6— 6
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	8— 6	8— 8
ಸಾಸಿವೆ ಮುಡಿ ೧ಕ್ಕೆ ...	8— 4	8— 8
ಕೊತ್ತಂಬರಿ ಮುಡಿ ೧ಕ್ಕೆ ...	5— 4	5—12
ಕಾಫಿ ಖಂಡಿ ೧ಕ್ಕೆ ...	340— 0	345— 0
ಬೀಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	160— 0	170— 0
ಬೀಗೋಟು New, ಹೊಸ್ತು ...	130— 0	135— 0
ಚಾಲುಮೆಣಸು ಖಂಡಿ ೧ಕ್ಕೆ ...	120— 0	125— 0
[illegible] ಮಣ ೧ಕ್ಕೆ ...	26— 0	28— 0
ಗೇರುಬೀಜ ಮುಡಿ ೧ಕ್ಕೆ ...	2— 6	2— 8
ಕಬ್ಬಿಣ ಖಂಡಿ ೧ಕ್ಕೆ ...	60— 0	65— 0
ತಾಂಬ್ರ ತಗಡು ಮಣ ೧ಕ್ಕೆ ...	23—12	24— 0
ತಾಂಬ್ರ ಪಾತ್ರಗಳು ಮಣ ೧ಕ್ಕೆ ...	36— 0	—
[illegible] ೧ಕ್ಕೆ ...	24— 0	—
ಹಿತ್ತಾಳೆ [illegible] 1ಕ್ಕೆ ...	23— 0	—

ರಾಷ್ಟ್ರೀಯ ಹೊಸ ಪುಸ್ತಕಗಳು

ದೇಶೋನ್ನತಿ ಗ್ರಂಥಮಾಲಾ

ಸಂಖ್ಯೆ ೧ ಮಹಾತ್ಮಾಗಾಂಧಿಯವರ ಹಿಂದೀಸ್ವರಾಜ್ಯ ಕನ್ನಡ ೦-೮-೦ ೨ನೆ ಆವೃತ್ತಿ ಅಚ್ಚಿನಲ್ಲಿದೆ. ೩ ದೀನಬಂಧು ಸಿ. ಯಫ್. ಆಂಡ್ರ್ಯೂಸರವರ ಅಸಹಕಾರ ಪತ್ರಗಳು ೦-೬-೦ ೪ ಹಿಂದೀ ಭಾಷಾಸಾರ. ಹಿಂದೀಭಾಷೆ ಕಲಿಯಲು ೧ನೇ ಪಾಠ ಪುಸ್ತಕ ೪ ರಾಷ್ಟ್ರೀಯಕರ್ಮ ಅಥವಾ ದೇಶಭಕ್ತರ ಸೂಕ್ತಿಮಾಲೆ ೦-೩-೦ ದೇಶಭಕ್ತ ಅಲೀಸಹೋದರರ ಚರಿತ್ರೆ ೦-೨-೦ ಮ| ಗಾಂಧೀಚರಿತ್ರೆ ೦-೫-೦ ೮ ಚಿಕ್ಕದು ೦-೨-೦

ರಾಷ್ಟ್ರೀಯ ಪದ್ಯ ಪುಸ್ತಕಗಳು — ತಿಲಕ ಕಾವ್ಯಾಂಜಲಿ ೦-೪-೦ ಗಾಂಧಿ ವಿಜಯ ೦-೨-೦ ರಾಷ್ಟ್ರೀಯ ಗೀತಾವಳಿ ೦-೦-೯ ಸ್ವರಾಜ್ಯಸಂಪತ್ತು ೦-೦-೩ ಇವುಗಳಲ್ಲದೆ ಇನ್ನೂ ಅನೇಕ ತರದ ಪುಸ್ತಕಗಳು ವಿಕ್ರಿಕ್ಕೆ ಸಿದ್ಧವಿರುವವು ವಿ. ಪಿ. ಯಿಂದ ಅಪೇಕ್ಷಿಸುವವರು ಸಾರ್ಧ್ಯಾಣೆ ಸ್ಟಾಂಪು ಮುಂಗಡವಾಗಿ ಕಳುಹಿಸಿದಲ್ಲಿ ಅಂಥವರಿಗೆ ವಿ. ಪಿ. ಮಾಡಲಾಗುವುದು. ಎಂಟಾಣೆಗಿಂತ ಕಡಿಮೆ ಕ್ರಯದ ಪುಸ್ತಕಗಳು ವಿ. ಪಿ.ಯಿಂದ ಕಳುಹಿಸಲಾರೆವು.

ವಿಳಾಸ:— ಕೆ. ಯಂ. ದಾಸಪ್ರಭು ಆಂಡ್ ಸನ್ಸ್,
ರಥಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಕ್ಷತ್ರಿಯ ಜಾತಿಯ ಸಮಸ್ತ ಜನರಿಗೆ ತಿಳಿಯ ಪಡಿಸುವುದೇನಂದರೆ:—

ಕಾಸರಗೋಡು ತಾಲೂಕು ತಳಂಗರೆ ಗ್ರಾಮದ ಕೊರಕೋಡಲ್ಲಿರುವ ಕುಂಬಳೆ ಪಕೀರಯ್ಯನವರ ಮಗ ಸುಬ್ರಾಯನ ಮೇಲೆ ಇರುತ್ತಿದ್ದ ಜಾತಿಸಂಬಂಧವಾದ ಅಪವಾದವನ್ನು ಕುರಿತು ಶ್ರಿಂಗೇರಿ ಶ್ರೀ ಜಗದ್ಗುರು ಸಂಸ್ಥಾನ ಆಚಾರವಿಚಾರಣಾಧಿಕಾರಸ್ಥಾನದಿಂದ್ದ ತನಖಿನಡದು ಆತಗೆ ತಕ್ಕ ಪ್ರಾಯಶ್ಚಿತದಿಂದ ಪುನೀತನನ್ನಾಗಿ ಮಾಡಬೇಕಾಗಿ ನಂಬ್ರ $\frac{20}{16\text{-}1\text{-}1922}$ನೇ ಅಪ್ಪರ ತೀರ್ಮಾನವಾದ ನಂತರ ಸದರಿ ಸುಬ್ರಾಯಗೆ ವಿಧಿಸೋಣಾದ ಪ್ರಾಯಶ್ಚಿತ್ತವನ್ನು ಶ್ರೀ ಜಗದ್ಗುರು ಸಂಸ್ಥಾನದವರಿಂದಲೇ ನಿರ್ವಹಿಸೋಣಾಗಬೇಕಾಗಿ ಆತನ ಕಟ್ಟಿನ ಮೊಕ್ತೇಸರರು ತಾ. ೩೧-೫-೧೯೨೨ರಲ್ಲು ವಿಜ್ಞಾಪಿಸಿಕೊಂಡ ಸಂಬಂಧ ಸದ್ರಿಯವಗೆ ಶಾಸ್ತ್ರೀಯವಾಗಿ ಪ್ರಾಯಶ್ಚಿತ್ತವನ್ನು ಮಾಡಿಸಿ ಶ್ರೀ ಜಗದ್ಗುರು ಮಹಾಸನ್ನಿಧಿಯಲ್ಲಿ ತೀರ್ಥಪ್ರಸಾದಕೊಡಿಸಿ ಆತನ ದೋಷ ವಿಮೋಚನೆಪಡಿಸಿ ಆತನನ್ನು ಪರಿಶುದ್ಧನನ್ನಾಗಿ ಮಾಡಿರುವುದರಿಂದ ಜಾತಿಗೃಹಸ್ಥರೆಲ್ಲರೂ ಆತನನ್ನು ಸವ್ಯವಹಾರದಲ್ಲಿ ಬಳಕೆ ಮಾಡತಕ್ಕದೆಂತ ತಲ್ಪಿದ ನಂಬ್ರ $\frac{68}{24\text{-}6\text{-}22}$ನೇ ಹುಕುಮನ್ನು ಜಾತಿಯಸ್ಥರ ತಿಳುವಳಿಕೆ ಬಗ್ಗೆ ಸಂಸ್ಥಾನದವರ ಅಪ್ಪಣೆ ಮೇರೆಗೆ ಈ ಮೂಲಕ ಪ್ರಕಟಿಸಿರುತ್ತದೆ.

ಕಾಸರಗೋಡು.
ತಾ. 30-7-'22. } B. Ramachanda Rao.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. N. $\frac{71}{1922}$

ಹಲಿಮಾಬಿಬಿ—ಅರ್ಜಿದಾರಳು.

ಮೇಲಿನ ವ್ಯವಹರಣೆಯಲ್ಲಿ ಅರ್ಜಿದಾರಳು ತನ್ನ ಮೃತಪಟ್ಟ ಗಂಡ ಉಡ್ಪಿ ಕಸಬೆಯಲ್ಲಿದ್ದ ಹಾಜಿಹಾಮದ ಸಾಹೇಬನ ಸಾಲಗಳನ್ನು ವಸೂಲುಮಾಡುವರೆ ವಾರ್ಸಿ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಕೊಟ್ಟ ಅರ್ಜಿಯು ತಾ. ೨೪-೮-೧೯೨೨ಕ್ಕೆ ಇಟ್ಟಿರುತ್ತದೆ. ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನ ಒಳಗೆ ಜಾಹೀರುಮಾಡಿಕೊಳ್ಳತಕ್ಕದ್ದು.

ಮಂಗಳೂರು.
ತಾ. 29-7-'22. } M. Shankeranarayan Rao.
Vakil for Petitioner.

ನೋಟೀಸು.

ಮಂಗಳೂರು ಶಹರಿನ ಪೈಕಿ ಕದ್ರಿಯಲ್ಲಿರುವ ಈ ಕೆಳಗೆ ದಸ್ಕತು ಮಾಡಿರುವ ಸುರತಕಲ್ ಪುಂಡಲೀಕ ವೆಂಕಟೇಶ ಕಮ್ತಿಯು ಸರ್ವಜನರಿಗೆ ತಿಳಿಯಪಡಿಸುವುದೇನಂದರೆ:—

1. ನಾನು ಇದೇ ಇಸವಿ ಮೇ ತಿಂಗಳಲ್ಲಿ ಮಂಗಳೂರು ಶಹರ್ ಪೈಕಿ ಜೋಡುಮಠದ ವಿಟ್ಠಲಭಟ್ಟರ ಮಗ ವ್ಯತಪಟ್ಟ ಜನಾರ್ದನ ಭಟ್ಟಗೆ ರೂ. 300ಕ್ಕೆ ಬರಕೊಟ್ಟ ಡಿಮಾಂಡ್‍ಪ್ರೊಮಿಸರಿ ನೋಟು 1.
2. ಮೇಲ್ಕಂಡ ಜನಾರ್ದನಭಟ್ಟರು ಸದರಿ ನೋಟಿನ ಪೂರ್ಣ ಪ್ರತಿಫಲ ನಾನು ಪಾವತಿ ಮಾಡಿದ್ದರಿಂದ, ನನಗೆ ತನ್ನ ಸ್ವಹಸ್ತ ಬರಹದಿಂದ ಬರಕೊಟ್ಟ ರಶೀದಿ 1
3. ನಾನು ಪಣಂಬೂರು ಮಂಜುನಾಥ ಶ್ಯಾನುಭಾಗರ ಮಗ ವಿಟ್ಠಪ್ಪ ಶ್ಯಾನುಭಾಗರಿಗೆ ರೂ. 45ಕ್ಕೆ ಬರಕೊಟ್ಟ ಕೈಕಾಗದ 1 (ನಾನು ಸದರಿಯವರಿಗೆ ಮೊಬಲಗು ಪಾವತಿಮಾಡಿ ವಾಪಾಸುಪಡದದ್ದು.)
4. ನನ್ನ ತಂದೆ ಸುರತಕಲ್ ವೆಂಕಟೇಶಕಮ್ತಿರು ಇದೇ ಇಸವಿಯ ಆರಂಭದಲ್ಲಿ ನಮ್ಮೊಳಗೆ ಚರಸೊತ್ತು ಚಿನ್ನಾಭರಣ ವಗೈರೆ ಸಂಬಂಧವಾಗಿ ಇರುತ್ತಿದ್ದ ವಿವಾದಗಳನ್ನು ತೀರ್ಮಾನಿಸಿ ನನಗೆ ಬರಕೊಟ್ಟ ರಶೀದಿ 1.

ಈ ೪ ಪತ್ರಗಳೂ ನನ್ನ ವ್ಯಾಪಾರ ಸಂಬಂಧದ ಲೆಕ್ಕ ಬರೆದಿರುವ ನೋಟು ಪುಸ್ತಕಗಳೂ ಸಹ ಇರುವ ನ್ಯೂಸ್‍ಪೇಪರಿನಲ್ಲಿ ಹೊದ್ದಿರುವ ದಪ್ತರು ಇಂದಿಗೆ ಒಂದು ತಿಂಗಳು 4ದಿವ್ಸದ ಹಿಂದೆ ನನ್ನ ವಶದಿಂದ ಕಳೆದುಹೋದ ಕಾರಣ ನನಗೆ ಸಂಶಯವಿದ್ದ ಕಡೆಯಲ್ಲೆಲ್ಲಾ ಶೋಧಿಸಿಮಾಡಿ ನೋಡಿದರೂ ನನಗೆ ಸಿಕ್ಕಲಿಲ್ಲ. ಆದುದರಿಂದ ನಾನು ಈ ಮೂಲಕ ತಿಳಿಸುವುದೇನೆಂದರೆ, ಈ ದಪ್ತರು ಯಾರಿಗಾದರೂ ಸಿಕ್ಕಿದ್ದರೆ ಅದನ್ನು ಮೇಲೆ ಹೇಳಿದ ಎಲ್ಲಾ ಪತ್ರಗಳು ನೋಟು ಪುಸ್ತಕಗಳು ಸಮೇತ ಯಥಾರೀತಿಯಾಗಿ ನನಗೆ ತಂದುಕೊಡುವವರಿಗೆ ೫ ರೂ. ಇನಾಮು ಕೊಡಲಿಕ್ಕೆ ನಾನು ಸಿದ್ಧನಿದ್ದೇನೆ. ಅದರಲ್ಲಿರುವ ಪತ್ರಗಳನ್ನು ಅಥವಾ ಲೆಕ್ಕ ಪುಸ್ತಕಗಳನ್ನು ಯಾವ ರೀತಿಯಿಂದಾದರೂ ಕೆಡಿಸಲಿಕ್ಕೆ, ಅಥವಾ ಉಪಯೋಗಮಾಡಲಿಕ್ಕೆ ಯಾರಿಗೂ ಹಕ್ಕು ಇರುವುದಿಲ್ಲವಾದ್ದರಿಂದ ಸರ್ವಥಾ ಅವನ್ನು ಉಪಯೋಗಿಸಕೂಡದಾಗಿರುತ್ತದೆ. ಇದಕ್ಕೆ ವಿರೋಧವಾಗಿ ಅವನ್ನು ಉಪಯೋಗಿಸಿದರೆ ಅಂಥವರನ್ನು ಅವಶ್ಯವಾಗಿ ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸಲಾದೀತು. ತಿಳಿದಿರುವುದು

ಮಂಗಳೂರು,
ತಾ. 20-7-'22. } ಸುರತಕಲ್ ಪುಂಡಲೀಕ ಕಮ್ತಿ ರುಜು.

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ಸಹಾಯಕ ಫಂಡ್.

ಸದರಿ ಸಂಸ್ಥೆಕ್ಕೆ ಕಳೆದ ಜೂನು ವ ಜುಲಾಯಿ ತಿಂಗಳಲ್ಲಿ ಸದಸ್ಯ ಮೆಂಬರರಾಗಿ ಧನ ವಾಗ್ದಾನ ಮಾಡಿ ದಯಾಕೊಟ್ಟು ಸೇರಿದ ಮಹಾಶಯರ ಹೆಸರುಗಳು.

ಮ. ರಾಗಳಾದ ತಲಿಕೊಳ್ಳ ವೆಂಕಪ್ಪಯ್ಯನವರು ರೂ. ೧೦೦-೦-೦ ಅಡೂರು ನರಸಿಂಹಯ್ಯನವರು, ರೂ. ೨೫-೦-೦ ಕೆ ವೆಂಕಟ್ರಮಣಾಚಾರ್ಯರು, ರೂ. ೧೦-೦-೦ ರಾಜಗೋಪಾಲಾಚಾರ್ಯರು, ರಘುಚಂದ್ರಬಲ್ಲಾಳರವರು, ದೋಟದ ಮಾದಪ್ಪಯ್ಯನವರು, ರಾಮಚಂದ್ರ ಉಡಿಪರು, ತುಂಬೆ ಸುಬ್ರಾಯರು, ರೂ. ೫-೦-೦ರಂತೆಯೂ ಕೂಡಾ ರೂ. ೧೬೦-೦-೦ ಆಗಿರುತ್ತದೆ. ಜೂನ್ ವ ಜುಲಾಯಿ ತಿಂಗಳಲ್ಲಿ ಸದಸ್ಯರಿಂದ ವಸೂಲು ರೂ. ೮೩-೦-೦ ಆಗಿರುತ್ತದೆ.

ಸಾಮೋಪಾಕರ್ಮ ಪ್ರಶಂಸಾ.

ಮಾನಾರ್ಹರೇ,

ಇತ್ತಲಾಗೆ ಅನೇಕ ವರ್ಷಗಳಿಂದೀಚೆಗೆ ಕೆಲವು ಕಡೆಗಳಲ್ಲಿ ಕೌಶಿಕ ಮತ್ತು ಭಾರದ್ವಾಜ ಗೋತ್ರಿಯರು ತಾವು ಋಕ್ ಶಾಖೆಯವರೆಂದು ಹೇಳಿ ಸಾಮೋಪಾಕರ್ಮವಾದ ಶ್ರಾವಣ ಶು| ೫ಕ್ಕೆ ತಮ್ಮ ಉಪಾಕರ್ಮವನ್ನು ಮಾಡುವರಾಗಿ ಎಲ್ಲರಿಗೂ ಗೊತ್ತಿರುವ ವಿಷಯವಷ್ಟೇ? ಹೀಗೆ ಆಚರಿಸಿಬರುವುದಕ್ಕೆ ಕಾರಣವನ್ನು ಕೇಳಿದರೆ ತಾವು ಪಂಚಮಶಾಖಿಗಳೆಂದು ಹೇಳುವುದೇ ಅಲ್ಲದೆ ಸಮರ್ಪಕವಾದ ಪ್ರತ್ಯುತ್ತರವು ಸಿಗಲಿಲ್ಲ. ಆದ್ದರಿಂದ ಇದು ಶಾಸ್ತ್ರೀಯ ಕ್ರಮವೋ ಅಶಾಸ್ತ್ರೀಯವೋ ಎನೆಂಬುದು ನಿಶ್ಚಯಿಸುವ ಬಗ್ಗೆ, ಧರ್ಮಶಾಸ್ತ್ರ ಗ್ರಂಥಗಳ ಪೈಕಿ ಶ್ರೇಷ್ಠವಾಗಿ ಎಲ್ಲರಿಂದಲೂ ಅಂಗೀಕರಿಸಲ್ಪಟ್ಟ 'ಹೇಮಾದ್ರಿ' ಎಂಬ ಗ್ರಂಥದಿಂದ ಸ್ಪಷ್ಟವಾಗಿ ತೋರಿಬರುವುದೇನೆಂದರೆ:—

೧. ಕೌಶಿಕ ಮತ್ತು ಭಾರದ್ವಾಜ ಗೋತ್ರಿಯರು ಸಾಮಶಾಖಿಯರೇ ಅಲ್ಲದೆ ಋಕ್‍ಶಾಖಿಯರಲ್ಲ. ಆದ್ದರಿಂದ ಸಾಮೋಪಾಕರ್ಮವನ್ನೇ ಮಾಡುವುದು ಶಾಸ್ತ್ರೀಯ ವಿಷಯವೆಂಬುದನ್ನು ಈ ಮೂಲಕ ಎಲ್ಲರಿಗೂ ಸ್ಪಷ್ಟಪಡಿಸುತ್ತೇನೆ. ಹಾಗೆಯೇ ಅತ್ರಿಗೋತ್ರಿಯರು ಯಜುಶ್ಶಾಖಿಯವರಾದ್ದರಿಂದ ಯಜುರುಪಾಕರ್ಮವನ್ನೇಮಾಡುವುದು ಉತ್ತಮ ಪಕ್ಷ.

೨. ಹಾಗೆಯೇ ಋಕ್ ಶಾಖಿಯವರು ಋಕ್ ಶಾಖೋಕ್ತ ಕರ್ಮಾಂಗಗಳನ್ನೇ ಮಾಡಬೇಕಾಗಿಯೂ ಅನ್ಯಶಾಖಿಗಳು ಋಕ್ ಶಾಖೋಕ್ತ ಕರ್ಮಾಂಗಗಳನ್ನೂ ಮಾಡಬಹುದಾಗಿ ವಿಧಿಸಿ ಇದ್ದರೂ ಸ್ವಶಾಖೋಕ್ತ ಕರ್ಮಾನುಷ್ಠಾನ ಮಾಡುವುದೇ ಶ್ರೇಯಸ್ಕರವಾಗಿದೆ.

ಈ ವಿಷಯದಲ್ಲಿ ಅನುಮಾನ ಆಕ್ಷೇಪಗಳಿದ್ದರೆ ಪರ್ಯಾಲೋಚನೆ ಬಗ್ಗೆ ಇದರ ಲೇಖಕನಾದ ನನಗೆ ತಿಳಿಸ ಬೇಕಾಗಿ ಅಪೇಕ್ಷಿಸುತ್ತೇನೆ. ಇತಿ,

366 Mint St.
Sowcarpet
Madras. } ಬಂಟ್ವಾಳ ರಘುನಾಥ ಭಟ್ಟನ ವಿನಂತಿ.

ನಮ್ಮ ಈಗಿನ ಸ್ಥಿತಿ.

ನಾಗಪುರದ ಕೊಂಗ್ರೆಸಿನ ನಂತರ ಅಸಹಕಾರ ಚಳವಳವು ಅತಿಜೋರಿನಿಂದ ನಡೆಯುದಾಯಿತು. ಕೇವಲ ಹಿಂದುಸ್ಥಾನಕ್ಕೆ ನ್ಯಾಯವನ್ನು ಕೊಡಬೇಕೆಂಬ ಆಶೆಯಿಂದಲೇ ತಾನು ಬರದಿರುತ್ತೇನೆಂದು ಹೇಳಿದ ರೀಡಿಂಗ್ ಪ್ರಭೃತಿಗಳ ಸರಕಾರವೆ ನಾವು ಮುಂಚೆಯೆ ನಿರೀಕ್ಷಿಸಿದಂತೆ ಹೆಚ್ಚಿನ ದಬ್ಬಾಳಿಕೆಯನ್ನಾರಂಭಿಸಿದಂತೂ ಆಯಿತು. ಕ್ರಿಮಿನಲ್ ಕೋಡಿನ ಪ್ರತಾಪವು ಬಹಳವಾಗಿ ನಡಿಯಲು ಪ್ರಾರಂಭವಾಯಿತು. ದೇಶಭಕ್ತ ಮಾಲವೀಯರೂ ಶಾಂತಶಾಭಂಗವನ್ನು ಮಾಡುವರೆಂಬ ನೆವದಿಂದ ೧೪೪ನೇ ಬಾಣವನ್ನು ಅವರ ಮೇಲೆಯೂ ಹೂಡಿದರು. ಆದರೆ ಧರ್ಮಮೂರ್ತಿಯಾದ ಅವರು ಈ ಕಾಯಿದೆಯನ್ನು ಲಕ್ಷ್ಯಿಸದೆ ಉಲ್ಲಂಘಿಸಿ ೫ ವ್ಯಾಖ್ಯಾನಗಳನ್ನು ಕೊಟ್ಟರು. ಅಂತೂ ಜೋರಿನಿಂದ ನಡಿಯುವ ಚಳವಳವನ್ನು ರೀಡಿಂಗರ ಸರಕಾರವು ನೋಡಿ ದಬ್ಬಾಳಿಕೆಯನ್ನು ಶಕ್ತಿಮೀರಿ ಉಪಯೋಗಿಸನೋಡಿತು. ೨೫ ಸಾವಿರಕ್ಕಿಂತ ಹೆಚ್ಚು ದೇಶಭಕ್ತರು ಕಾರಾಗೃಹಗಳಲ್ಲಿ ಸ್ವತಂತ್ರ ಜೀವನವನ್ನು ಮಾಡುತ್ತಿರುವರು. ಕಾಯಿದೆಗಳನ್ನು ಬೇಕಾದ ಹಾಗೆ ಉಪಯೋಗಿಸಲು ನೌಕರಶಾಯಿಗಳಿಗೆ ಸ್ವಾತಂತ್ರ್ಯವಿದೆ. ಮಹಾತ್ಮಾಜಿಯವರು ಜೈಲು ಗೋಡೆಗಳ ಹೊರಗಿರುವಾಗಲೇ ಬಾರ್ದೋಲಿಯಲ್ಲಿ ಅಖಿಲಭಾರತೀಯ ಸಭೆಯ ಕಾರ್ಯಕಾರಿ ಮಂಡಲಿಯ ಅಧಿವೇಶನದಲ್ಲಿ ವಿಧಾಯಕ ಕಾರ್ಯಕ್ರಮವನ್ನು ಚೆನ್ನಾಗಿ ಪ್ರಯತ್ನಿಸಿ ಕೆಲಸಮಾಡಬೇಕೆಂದು ನಿರ್ಣಯಿಸಿದರು. ಅದಕ್ಕನುಸರಿಸಿ ಈಗ ಎಲ್ಲ ಕೊಂಗ್ರೆಸ್ ಸಂಸ್ಥೆಗಳೂ ಕೊಂಗ್ರೆಸ್ ಮೆಂಬರರನ್ನು ಮಾಡುವುದು, ತಿಲಕ ಸ್ವರಾಜ್ಯನಿಧಿಯನ್ನು ಕೂಡಿಸುವುದು, ರಾಟೆ ಮತ್ತು ಖಾದಿ ಪ್ರಚಾರ ಮಾಡುವುದು, ಅಸ್ಪೃಶ್ಯತಾ ನಿವಾರಣೆ ಮಾಡುವುದು ಇವೇ ಮುಂತಾದ ಕೆಲಸಗಳನ್ನು ಕೈಕೊಂಡಿರುವುವು. ಈ ಕೆಲಸಗಳನ್ನು ಮಾಡುತ್ತಾ ಸವಿನಯ ಕಾಯಿದೆಭಂಗಕ್ಕೆ ತಯಾರು ಮಾಡಬೇಕೆಂದು ಮುಖಂಡರ ಉದ್ದೇಶ. ಅದಕ್ಕಾಗಿ ಕಾಯಿದೆಭಂಗದ ಮುಖಂಡರ ಕಮಿಟಿಯು ವಿಧಾಯಕಕಾರ್ಯಕ್ರಮವು ಕೆಲಸವೆಷ್ಟು ಮುಂದರಿದಿದೆ ಎಂದು ನೋಡಲು ಎಲ್ಲಾ ಕಡೆಗಳನ್ನೂ ಸಂದರ್ಶಿಸಿ ಸಾಕ್ಷಿಯನ್ನು ತೆಗೆದುಕೊಳ್ಳುತ್ತಿರುವರು.

ನಮ್ಮ ಕರ್ತವ್ಯ.

ಈ ಸಮಯದಲ್ಲಿ ಪ್ರತಿಯೊಬ್ಬನಿಗೂ ಒಂದು ಮಹತ್ವವಾದ ಕರ್ತವ್ಯ ಇರುವುದು. ಕೊಂಗ್ರೆಸ್ ಸಭೆಗೆ ವಿಧೇಯನಾಗಿದ್ದು ಕೊಂಗ್ರೆಸ್ ಕಾರ್ಯಕ್ರಮವನ್ನು ಅದನ್ನು ಸಂಪೂರ್ಣವಾಗುವಂತೆ ಪ್ರಯತ್ನಿಸುವುದೆ ಈ ಕರ್ತವ್ಯವಾಗಿದೆ. ಶ್ರೀಯುತ ಮಾಲವೀಯರು ಮೊನ್ನೆ ದಿನ ಮುತ್ರಾ ಎಂಬಲ್ಲಿ ದೊಡ್ಡ ಸಭೆಯ ಮುಂದೆ ವ್ಯಾಖ್ಯಾನಮಾಡುವಾಗ, ಕೊಂಗ್ರೆಸ್ ಸಭೆಯ ಪ್ರತಿಯೊಂದು ಅಜ್ಞೆಯನ್ನು ಪಾಲಿಸಲು, ನಿಮ್ಮಲ್ಲಿ ಎಷ್ಟು ಮಂದಿ ತಯಾರಿರುವಿರಿ ಎಂದು ಕೇಳಿದುದಕ್ಕೆ "ನಾವೆಲ್ಲರೂ ತಯಾರಿರುವೆವು" ಎಂಬ ಉತ್ತರವು ಸಿಕ್ಕಿತು, ಹೀಗೆಯೇ ಅಸಹಕಾರಿಗಳಾಗಲಿ, ಸಹಕಾರಿಗಳಾಗಲಿ, ಕೊಂಗ್ರೆಸ್ ಧ್ಯೇಯವನ್ನು ಗುರಿಯಾಗಿಟ್ಟುಕೊಂಡು ಕೆಲಸಮಾಡಬೇಕಾಗಿದೆ.

ವಿಜ್ಞಾಪನೆ.

(ವಕೀಲ ಬಂಧುಗಳಿಗೆ.)

ನೀವು ಜನರಿಗೆ ಮುಖಂಡರೆನ್ನಿಸಿಕೊಂಡಿದ್ದುದು ನಿಜವಲ್ಲವೋ? ಆಗ ಜನರು ನಿಮ್ಮನ್ನು ಹಿಂಬಾಲಿಸುತ್ತಿದ್ದಿಲ್ಲವೋ? ಸ್ವಾತಂತ್ರ್ಯರೀತಿಯಿಂದ ವರ್ತಿಸಲಿಕ್ಕೆ ನಿಮಗೆ ಯಾವ ಅಡ್ಡಂತರವೂ ಇಲ್ಲ. ನಿಮ್ಮಲ್ಲಿ ಅನೇಕರು ಅಸಹಕಾರಿತೆಗೆ ಒಪ್ಪದೆ ಇರಬಹುದು. ಯಥಾರ್ಥವಾಗಿ ಅದರಿಂದ ಪ್ರಯೋಜನವಿಲ್ಲವೆಂದು ನೀವು ನಂಬುವುದಾದರೆ ನಿಮ್ಮ ಮತಾನುಸಾರ, ದೇಶಸೇವೆಮಾಡಬಹುದು. ಅಹಿಂಸಾತ್ಮಕ ಅಸಹಕಾರಿತೆಯ ಕಾರ್ಯಕ್ರಮದಲ್ಲಿ ಭಿನ್ನಾಭಿಪ್ರಾಯವುಳ್ಳವರಿರಬಹುದು. ಅಂಥವರು ತಾವು ಒಪ್ಪುವ ವಿಷಯಗಳಲ್ಲಾದರೂ ಕೊಂಗ್ರೆಸ್ ಕೆಲಸಗಳನ್ನು ಯಾಕೆ ಮಾಡಬಾರದು? ಇನ್ನು ಕೆಲವರು ನಿಜವಾಗಿಯೂ ಅಹಿಂಸಾತ್ಮಕ ಅಸಹಕಾರಿತೆಯು ಅತಿ ಯೋಗ್ಯವಾದದ್ದು. ಆದರೆ ನಮಗೆ ಮಾತ್ರ ಅದನ್ನು ಅನುಸರಿಸಲು ಸಾಧ್ಯವಿಲ್ಲವೆನ್ನುವರು. ಇಂಥವರೂ ಕೂಡ ವಿಧಾಯಕ ಕಾರ್ಯಕ್ರಮದ ಎಲ್ಲಾ ಭಾಗಗಳಲ್ಲಿಯೂ ಕೆಲಸಮಾಡಬಹುದು. ತಾನು ಮಾಡದೆ ಜನರಿಗೆ ಹೇಗೆ ಬೋಧಿಸಲಿ ಎಂಬ ಸಂಶಯವು ಕೆಲವರಿಗಿದ್ದರೂ, ಸ್ವದೇಶಿ, ಮದ್ಯಪಾನ ನಿಷೇಧ, ಅಸ್ಪೃಶ್ಯತಾನಿವಾರಣೆ ಮುಂತಾದುವುಗಳನ್ನು ಸರ್ವರೂ ಒಪ್ಪತಕ್ಕದ್ದೇ. ಇವುಗಳನ್ನು ಮಾಡಬಾರದೆಂದು ಯಾರೂ ಅನ್ನಲಾರರು. ಕೊಂಗ್ರೆಸ್ ಸಭೆಗೆ ಸದಸ್ಯನಾಗುವುದು ತಕ್ಕುದಲ್ಲವೆಂದು ಯಾರಿಗೂ ಅನ್ನಿಸಿಕೊಳ್ಳಲಿಕ್ಕಿಲ್ಲ. ಎಂದ ಮೇಲೆ ಈ ಕೆಲಸಗಳನ್ನಾದರೂ ಎಲ್ಲರೂ ಕೂಡಿ ಯಾಕೆ ಮಾಡಲಾಗದು. ಹಿಂದೆ ದೇಶಸೇವೆಮಾಡುವುದು ವಿಹಿತವೆಂದು ಜನರಿಗೆ ಬೋಧಿಸುತ್ತಿದ್ದ ನೀವು, ೨೫ ಸಾವಿರ ದೇಶಭಕ್ತರಿಗಿಂತ ಹೆಚ್ಚಿನವರು ಜೈಲಿನಲ್ಲಿರುವ ಈ ವೇಳೆಯಲ್ಲಿ ತಟಸ್ಥರಾಗಿದ್ದು ಖಾದಿಯನ್ನು ಕೂಡ ಧರಿಸದೆ, ಅಲಕ್ಷ್ಯಭಾವದಿಂದ ಇರುವುದು ನಿಮ್ಮ ಆತ್ಮಕ್ಕಾದರೂ ಹೇಗೆ ತೃಪ್ತಿಯಾದೀತು. ನೀವೇನೂ ತಿಳಿಯದವರಲ್ಲ. ಸಮಾಜದ ಮುಂದಾಳುಗಳೆನಿಸಿಕೊಂಡ ನೀವು ಈ ಕಷ್ಟಕಾಲದಲ್ಲಿ ಮಾತ್ರ ಹಿಂಜರಿಯುವುದು ಯುಕ್ತವಲ್ಲವೆಂದು ತೋರುತ್ತದೆ.

ಹಿಂದೆ ಯುದ್ಧಕಾಲದಲ್ಲಿ ಸರಕಾರಕ್ಕೆ "ವಾರ್ ಫಂಡಿಗೆ" ಸಾವಿರಾರು ರೂಪಾಯಿಗಳನ್ನು ಕೂಡಿಸುವ ಅವಶ್ಯಕತೆಯುಂಟಾದಾಗ ಜನರಿಂದ ಹಣವನ್ನು ಬೇಕಾದ ರೀತಿಗಳಿಂದ ತೆಗೆದುಕೊಂಡು ಕೊಟ್ಟಿದ್ದೀರಿ. ಆದರೆ ಶಾಂತಮಯವಾದ ಈಗಿನ ಅಹಿಂಸಾತ್ಮಕ ಯುದ್ಧಕಾಲದಲ್ಲಿ ಸ್ವದೇಶದೇವಿಗೆಯ ಕೆಲಸಕ್ಕೆ ಬೇಕಾದ ತಿಲಕ ಸ್ವರಾಜ್ಯನಿಧಿಯನ್ನಾದರೂ ನಿಮ್ಮಲ್ಲಿ ಎಷ್ಟು ಮಂದಿ ಕೂಡಿಸಿರುವಿರಿ? ಅಥವಾ ಎಷ್ಟು ಮಂದಿ ಕುಡಿಕರಿಗೆ ಕುಡಿಯದಂತೆ ಬೋಧಿಸಿರುವಿರಿ? ಹಿಂದೆ ಕೆಲಸಮಾಡುತ್ತಿದ್ದ ನಿಮಗೆ ಈಗ ಇದು ಹೇಗೆ ಸಹನವಾಗುತ್ತದೆ? ನೀವೇ ಖಾದಿಯನ್ನು ಧರಿಸದೆ ಅನ್ಯರಿಗೆ ಬೋಧಿಸಲು ಸಾಧ್ಯವಿಲ್ಲ ನಿಜ. ಆದರೆ ನೀವೇ ಖಾದಿ ಧರಿಸುವುದಕ್ಕಾಗಲಿ ಬೋಧಿಸುವುದಕ್ಕಾಗಲಿ ನಿಮಗೆ ಆತಂಕವೇನು? ನಿಮ್ಮಲ್ಲಿ ಸಾಮಾನ್ಯ ಎಲ್ಲರೂ ಖಾದಿಯನ್ನು ಪ್ರೀತಿಸುವವರಿದ್ದೀರಿ ಎಂದು ಎಲ್ಲರಿಗೂ ಗೊತ್ತಿದೆ. ಆದರೆ ಧರಿಸಲು ಮಾತ್ರ ಕೆಲವರು ಭಯಪಡುವರು. ಇದು ನಮ್ಮ ನಾಚಿಕೆಯ ಸ್ಥಿತಿಯಲ್ಲವೆ? ಕೆಲವರು ಅಸಡ್ಡೆಯಿಂದ ಹಾಕದೆ ಇರಬಹುದು. ಹೀಗೆ ಭಯಪಡುವ ಅಥವಾ ಅಸಡ್ಡೆಯಿಂದಿರುವ ಸಮಯವು ಇದಲ್ಲವೆಂದು ನಿಮಗೆ ಬೇರೆ ಹೇಳಬೇಕಾಗಿಲ್ಲ. ಅಸಹಕಾರಿತೆಯು ಬಿದ್ದುಹೋಯಿತೆಂದು ನಿಮ್ಮಲ್ಲಿ ಕೆಲವರು ಅಭಿಪ್ರಾಯಪಡುವರು. ಅಹಿಂಸಾತ್ಮಕ ಅಸಹಕಾರಿತೆಯು ಎಂದೂ ಬಿದ್ದು ಹೋಗುವಂತಿಲ್ಲ. ನಮ್ಮ ಜಿಲ್ಲೆಯ ವಕೀಲ ಬಂಧುಗಳೆಲ್ಲರೂ ಇನ್ನೂ ಸರಕಾರವನ್ನು ಬಲಪಡಿಸುತ್ತಾ, ಸರಕಾರದ ಅನ್ಯಾಯಗಳನ್ನು ತಿಳಿದು ಸುಮ್ಮನಿರುವಾಗ ಇವರ ಮಟ್ಟಿಗೆ ಅಸಹಕಾರಿತೆಯು ಆರಂಭ ಕೂಡ ಆಗಿಲ್ಲ. ಹಾಗಿರುವಲ್ಲಿ ಅದು ಬಿದ್ದು ಹೋಯಿತೆಂಬುದರ ಅರ್ಥವೇನು? ಕಾರ್ಯ ಆರಂಭಮಾಡದೆ ಕಾರ್ಯಕೆಟ್ಟು ಹೋಯಿತೆಂದು ಬೇಕಾದರೂ ಹೇಳಬಹುದು. ಆರಂಭಿಸದೆ ಯಾವ ಕಾರ್ಯವಾದರೂ ಹೇಗೆ ತಾನೆ ಜಯಪ್ರದವಾದೀತು. ಇನ್ನಾದರೂ ಆರಂಭಿಸಬಾರದೆಂಬುವದಿಲ್ಲ. ನಿಮಗೆ ಒಪ್ಪುವ ಕೊಂಗ್ರೆಸ್ ಕೆಲಸದ ಭಾಗದಲ್ಲಿಯಾದರೂ ಕೆಲಸಮಾಡಬೇಕೆಂದು ಅಂಗಲಾಚಿ ಬೇಡಿಕೊಳ್ಳುತ್ತೇವೆ.

ರೈತ ಬಂಧುಗಳಿಗೆ.

ಜನಾಂಗ ದೇಹದ ಬೆನ್ನುಕೋಲಿನಂತಿರುವ ನೀವುಗಳು ದೇಶದ ಸ್ಥಿತಿಯನ್ನು ಮರೆತರೆ ಜನಾಂಗವು ಹಾಳಾಗಿ ಹೋದಿತು. ನಿಮ್ಮಿಂದಲೇ ಜನಾಂಗವು ಜೀವಿಸಿಕೊಂಡಿದೆ. ನೀವಿಲ್ಲದಿದ್ದರೆ, ವಕೀಲರೂ, ಸರಕಾರವೂ, ವ್ಯಾಪಾರಿಗಳೂ ಸುಮ್ಮನೆ ದಿಕ್ಕಿಲ್ಲದವರಾಗಿರಬೇಕಾಗಿತ್ತು. ನೀವು ಕಾಲಕಾಲಕ್ಕೆ ಕಷ್ಟಮಾಡಿ ಬೇಸಾಯ ಮಾಡುವುದರಿಂದ ಮಾತ್ರ ಶ್ರೀಮಂತರು ಮೋಟಾರುಗಾಡಿಗಳಲ್ಲಿ ಓಡ್ಯಾಡುತ್ತ ಸುಖಿಸುವರು. ನಿಮ್ಮಲ್ಲನೇಕರು ಬಲತ್ಕಾರದಿಂದಲೋ ಎಂಬಂತೆ ಕೋರ್ಟುಗಳಿಗೆ ಹೋಗಿ ವ್ಯವಹರಣೆಯಲ್ಲಿ ಬಿದ್ದುಕೊಂಡು ಮನೆ ಹಾಳುಮಾಡಿಕೊಂಡು ಕೊನೆಗೆ ವಕೀಲರ ಮತ್ತು ಸರಕಾರದ ದಾಸತ್ವದಲ್ಲಿ ಮುಳುಗಿ ನೈಸರ್ಗಿಕವಾದ ನಿಮ್ಮ ಸ್ವಾತಂತ್ರವನ್ನು ಕಳೆದುಕೊಳ್ಳುತ್ತೀರಿ. ಇದನ್ನು ನೋಡಿ ದಯಾಳುವಾದ ಮಹಾತ್ಮಾಜೀಯವರು ನಿಮ್ಮ ಬೇಸಾಯ ಕೆಲಸವನ್ನು ರಾಷ್ಟ್ರಸೇವೆಯೆಂದೂ, ನಿಮ್ಮ ಈ ದುಃಸ್ಥಿತಿಯನ್ನು ಹೋಗಲಾಡಿಸಿ ಕಳೆದುಕೊಂಡ ನಿಮ್ಮ ಸ್ವಾತಂತ್ರವನ್ನು ಪುನರುಜ್ಜೀವನ ಮಾಡಬೇಕೆಂದೂ ಅಹೋರಾತ್ರಿ ಕೆಲಸಮಾಡಿ ಕಾರಾಗೃಹದಲ್ಲಿರುವರು. ಅವರ ಕಡೆಗೆ ನಿಮ್ಮ ದೊಡ್ಡ ಕರ್ತವ್ಯವಿರುವುದು. ಕೊಂಗ್ರೆಸ್ ಆಜ್ಞೆಯನ್ನು ಪಾಲಿಸಿ, ಕುಡುಕತನವನ್ನು ನಿಷೇಧಿಸಿ, ನೀವೇ ತಯಾರಿಸಿದ ಖಾದಿಯನ್ನು ಧರಿಸಿ, ಜಾತಿ ಭೇದಗಳಿಂದುಂಟಾಗುವ ಕಲಹಗಳನ್ನು ಮಾಡದೆ, ಹಿಂದು ಮುಸಲ್ಮಾನರ ಐಕ್ಯವನ್ನು ಬೆಳಸಿ ಅಂತ್ಯಜರನ್ನು ಉದ್ಧರಿಸುವುದರಿಂದ ನಿಮ್ಮ ಕರ್ತವ್ಯಮಾಡಿದಂತಾಗುವುದೆಂದು ಮಹಾತ್ಮಾಜೀಯವರೇ ಹೇಳಿರುವರು. ಆದರೆ ನಿಮ್ಮಲ್ಲಿ ಕೆಲವರು ದೇಶದ ಸ್ಥಿತಿಯನ್ನು ಯೋಚಿಸದೆ ಜೈಲಿನಲ್ಲಿರುವ ನಮ್ಮ ೨೫ ಸಾವಿರ ಬಂಧುಗಳ ವಿಷಯ ಸ್ವಲ್ಪವೂ ಪರ್ಯಾಲೋಚಿಸದೆ ಗುತ್ತಿಗೆಗಳನ್ನು ವಹಿಸಿಕೊಂಡು, ಕೇವಲ ಸ್ವಾರ್ಥಕ್ಕೋಸ್ಕರ ಜನಾಂಗವನ್ನು ಹಾಳುಮಾಡುವ ಕುಡುಕತನಕ್ಕೆ ಉತ್ತೇಜನ ಕೊಟ್ಟು ಪಾಪವನ್ನು ಬೆಳಸುವುದಕ್ಕಿಂತ ಮದ್ಯಪಾನ ನಿಷೇಧಕ್ಕೋಸ್ಕರ ಪ್ರಯತ್ನ ಮಾಡಿದರೆ, ಪುಣ್ಯಬಂದೀತು. ಅದಲ್ಲದೆ ಬಡವರ ಕಷ್ಟ ನಿವಾರಣೆಮಾಡಿದಂತೆ ಯಾಗುವುದು.

ಬೇಸಾಯ ಕೆಲಸವು ಈಗ ಮುಗಿಯುತ್ತಾ ಬಂದಿರುವುದರಿಂದ ನಿಮಗಿರುವ ಹೆಚ್ಚು ಬಿಡುವುಮಯವನ್ನು ರಾಟೆಯಲ್ಲಿ ನೂಲುವುದರಲ್ಲಿ ಕಳೆಯಬಹುದು. ಮಹಾತ್ಮಾಜೀಯವರು ಜೈಲಿನಲ್ಲಿ ಕೂಡ ಮೊನ್ನೆ ೧೦ ರಾತ್ಲು ನೂಲು ಮಾಡಿ ಕಳುಹಿಸಿರುವರು. ಹಿಂದುಸ್ಥಾನದ ಏಳಿಗೆಯೇ ಇದರ ಮೇಲಿದೆ. ಆದ್ದರಿಂದ ನಿಮ್ಮ ಪ್ರತಿಯೊಂದು ಹಳ್ಳಿಯ ಚಿಕ್ಕ ಮನೆಗಳಲ್ಲಿಯೂ ಒಂದೊಂದು ಚಕ್ರವು ತಿರುಗುತ್ತಿರಬೇಕು. ಹೆಂಗಸರೂ ಹುಡುಗರೂ ನೂಲುತ್ತಿರುವುದನ್ನು ನೋಡಲು ನಿಜವಾಗಿಯೂ ಆನಂದ ಉಂಟಾಗುತ್ತಿದೆ. ನಿಮ್ಮಲ್ಲಿ ತಯಾರಾದ ನೂಲಿನ ಬಟ್ಟೆಯನ್ನು ನೀವು ಧರಿಸುವ ದಿನವೇ ಸ್ವರಾಜ್ಯ ಸ್ಥಾಪನೆಯ ದಿನ. ಗುಡಿಸಲು ಕೈಗಾರಿಕೆಯಲ್ಲಿ ಅತಿ ಶ್ರೇಷ್ಠವಾದ ನೂಲುವ ಮತ್ತು ನೇಯುವ ವಿದ್ಯೆಗಳು ಹಳ್ಳಿಯ ಮನೆಮನೆಗಳಲ್ಲಿ ತುಂಬುವ ದಿನವೇ ಪರದಾಸ್ಯದಿಂದ ನಾವು ಮುಕ್ತರಾದ ಸ್ವಾತಂತ್ರ್ಯ ದಿನ. ಅಂಥಾ ದಿನಗಳು ನಮ್ಮ ಜಿಲ್ಲೆಯಲ್ಲಿ ಬರಬೇಕಾದರೆ ನೀವು ಕೆಲಸಮಾಡಬೇಕು. ಬೇಗನೆ ಕೆಲಸಮಾಡಿದರೆ ಬೇಗನೆ ಅಂಥಾ ದಿನಗಳು ಬರುವವು. ಎಡಬಲ ಶ್ವಾಸಕೋಶಗಳಂತಿರುವ ಬೇಸಾಯ ಮತ್ತು ನೂಲುವ ವೃತ್ತಿಗಳನ್ನು ಹಳ್ಳಿಯಲ್ಲಿರುವ ರೈತರು ಎಂದೂ ಮರೆಯಬಾರದು. ಎಷ್ಟು ಕಷ್ಟ ಬಂದರೂ ಬಿಡಬಾರದು. ಹೀಗೆ ಮಾಡಿದರೆ ಮಾತ್ರ ದೇಶವು ಸ್ವರಾಜ್ಯದ ಹೊಸ ದಿನಗಳನ್ನು ಕಾಣುವುದು.

ವಿದೇಶ ವರ್ತಮಾನ.

ಲಂಡನ್ ಪಟ್ಟಣದೊಳಗಿನ ಮುನ್ಸಿಪಲ್ ಆಫೀಸ್:—ಬ್ರಿಟಿಷ ಮುಖ್ಯ ಪಟ್ಟಣವಾದ ಲಂಡನ ಪಟ್ಟಣದಲ್ಲಿ, ೫೦,೦೦,೦೦೦ ಪೌಂಡು ಖರ್ಚುಮಾಡಿ ಮುನ್ಸಿಪಲ್ ಆಫೀಸು ಕಟ್ಟಿಸಿ ಅದರ ಪ್ರತಿಷ್ಠೆ ಸಮಾರಂಭವು ಮುಗಿಯಿತು. ಈ ಕಟ್ಟಡವು ೭೫೦ ಅಡಿ ಉದ್ದವಾಗಿದೆ. ಮತ್ತು ಅದರಲ್ಲಿ ಒಂಬತ್ತು ಅಂತಸ್ತುಗಳೂ ೯೦೦ ಕೊಠಡಿಗಳೂ ಇವೆ.

ಸೂರ್ಯಗ್ರಹಣ:—ಬರುವ ಸೆಪ್ಟಂಬರ ತಿಂಗಳಲ್ಲಿ ಬರುವ ಸೂರ್ಯಗ್ರಹಣವನ್ನು ಪರೀಕ್ಷಿಸುವುದಕ್ಕಾಗಿ ಇಂಗ್ಲೆಂಡ, ಅಮೆರಿಕಾ, ಹೊಲ್ಲೆಂಡ ರಾಜ್ಯಗಳ ಜೋಯಿಸರು ಆಸ್ಟ್ರೇಲಿಯಕ್ಕೆ ಸಮೀಪವಿರುವ ಕ್ರಿಸ್ಮಸ್‍ಐಲ್ ಎಂಬ ದ್ವೀಪಕ್ಕೆ ಹೋಗಿ ಕಾದಿದ್ದಾರೆ.

ಲಂಡನ್:—ಹಿಂದೂಸ್ಥಾನದಿಂದ ವಿದ್ಯಾಭ್ಯಾಸಕ್ಕಾಗಿ ಲಂಡನಿಗೆ ಹೋಗಿರುವ ಕೆಲವು ಪ್ರಾಯಸಮರ್ಥರು ಕೂಡಿ ಹಿಂದೂ ನಾಟಕಗಳನ್ನು ಅಭಿನಯಿಸಲು ಒಂದು ನಾಟಕ ಶಾಲೆಯನ್ನು ಮಾಡುವುದಕ್ಕೆ ಪ್ರಯತ್ನಗಳನ್ನು ನಡಿಸುತ್ತಿದ್ದಾರೆ.

ಪಾಶ್ಚಾತ್ಯ ಸುಧಾರಣೆ:—ಆಸ್ಟ್ರೇಲಿಯಾದೊಳಗಿನ ವಿಯನ್ನಾ ಪಟ್ಟಣದಲ್ಲಿ ಪ್ರಸಿದ್ಧ ನಟಿಯಾದ ಲಿಯಾನ ಹೋಲ್ಬರ್ ಎಂಬವಳ ಚುಂಬನ ಲಿಲಾವಾಗಿ ಒಬ್ಬ ಮಹಾ ಪುರುಷನು ಆಕೆಯ ಚುಂಬನವನ್ನು ಹತ್ತುಲಕ್ಷ ಎಪ್ಪತ್ತು ಸಾವಿರ ಕ್ರೌನ್ ಎಂದರೆ ೬ ಲಕ್ಷ ೭೫ ಸಾವಿರ ರೂಪಾಯಿಗಳ ಹೆಚ್ಚಿನ ಸವಾಲುಮಾಡಿ ಪಡಕೊಂಡನು. ಅಬ್ಬಬ್ಬಾ! ಆದೆಂಥಾ ಚುಂಬನವಪ್ಪಾ! ಪಾಶ್ಚಾತ್ಯ ಸುಧಾರಣೆಯಲ್ಲಿ ಬಹಿರಂಗವಾದ ಚುಂಬನದ ಲಿಲಾವು ಆಗುವುದೇ? ಕಾನಡಾ ಲೀಡರ.

ಐರ್ಲೆಂಡಿನಲ್ಲಿರುವ ರಾಜಕೀಯ ಕೈದಿಗಳು:—ಡನ್‍ಡಕ್ ಜೈಲಿನಲ್ಲಿರುವ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದಕ್ಕಾಗಿ ಕೆಲವು ಮಂದಿಗಳು ವಿದ್ಯುಚ್ಛಕ್ತಿಯ ಸಹಾಯದಿಂದ ಆ ಬಂಧಿಖಾನೆಗೆ ದ್ವಾರವನ್ನು ಮಾಡಿಬಿಟ್ಟರು. ಈ ಜೈಲಿನಲ್ಲಿರುವ ೧೦೫ ಮಂದಿ ರಾಜಕೀಯ ಕೈದಿಗಳು ಈ ದ್ವಾರದಿಂದ ಹೊರಗೆ ಬಂದುಬಿಟ್ಟರು.

ಜರ್ಮನಿಯ ಬೆಳೆ:—ಕಳೆದ ಮೇ ತಿಂಗಳಿಂದ ಜುಲಾಯಿ ತಿಂಗಳ ವರೆಗೆ ಉಂಟಾದ ನೀರಿನ ಅಭಾವದಿಂದ ಜರ್ಮನಿ ದೇಶದ ಪೂರ್ವ ಭಾಗದ ಬೆಳೆಯು ವಿಶೇಷವಾಗಿ ಹಾಳಾಗಿದೆ.

ಹೆಮ್‍ಬರ್ಗಿನಲ್ಲಿ ಉಂಟಾದ ಬೆಂಕಿಯ ಹಾವಳಿ:—ಹೆಮ್‍ಬರ್ಗ ಬಂದರಿನಲ್ಲಿ ಉಂಟಾದ ಬೆಂಕಿಯು ಹೊಗೆಸೊಪ್ಪು, ಕಾಫಿ, ಕೋಕೊ ಇವುಗಳ ಉಗ್ರಾಣಗಳನ್ನು ಸುಟ್ಟುಬಿಟ್ಟು ಅಪಾರವಾದ ನಷ್ಟವನ್ನುಂಟುಮಾಡಿದೆ.

ಜರ್ಮನಿ:—ಇಲ್ಲಿಯ ಸರಕಾರಿ ನೌಕರರಿಗೆ ಕಳೆದ ಜುಲಾಯಿ ತಾ. ೧ರಿಂದ ಸೇಕಡಾ ೨೪ರಂತೆಯೂ ಒಗಸ್ಟ ತಾ. ೧ರಿಂದ ಸೇಕಡಾ ೩೪ರಂತೆಯೂ ಎಂದಿಗಿಂತ ಹೆಚ್ಚು ಸಂಬಳ ದೊರಕುವುದು.

ಒಳದೇಶ ವರ್ತಮಾನ.

ಮುಂಬಯಿ:—ಕಾನಡಾ ದೇಶದೊಳಗಿನ ಮಿಸ್ ಮೆಕ್ಮಾಲಂ ಎಂಬೊಬ್ಬ ಯುವತಿಯು ಮುಂಬಯಿಗೆ ಬಂದು ಹುಡುಗರಿಗೂ ಹುಡುಗಿಯರಿಗೂ ಚಿಕ್ಕಂದಿನಿಂದಲೂ ಕಸರತನ್ನು ಮಾಡಿಸಬೇಕೆಂದು ಉಪನ್ಯಾಸಗಳನ್ನು ಮಾಡುತ್ತಿದ್ದಾಳೆ.

ಮರಣಶಾಸನದ ಪರಿಣಾಮ:—ಲಾಹೋರದಲ್ಲಿ ದೀಸಾ ಎಂಬವನಿಗೆ ೮ ಮಂದಿ ಮಕ್ಕಳಿದ್ದು ಆತನು ತನ್ನ ಇಬ್ಬರು ಮಕ್ಕಳು ಹೊರತು ಉಳಿದವರಿಗೆ ತನ್ನ ಆಸ್ತಿಯಲ್ಲವು ಸಿಗಬೇಕೆಂದು ಮರಣಶಾಸನ ಮಾಡಿದ್ದನು. ಈ ವಿಷಯ ಆ ಇಬ್ಬರು ಮಕ್ಕಳು ಪ್ರಿವಿಕೌನ್ಸಿಲಿನ ವರೆಗೆ ವ್ಯವಹಾರ ನಡಿಸಲಾಗಿ ಮರಣಶಾಸನದಂತೆ ನಿಣಾಲಿಯಾಗಲು ಆ ಇಬ್ಬರು ಮಕ್ಕಳು ಕೆಲವು ಜನರೊಡನೆ ಉಳಿದರು. ಮಕ್ಕಳ ಮನೆಗೆ ಮುತ್ತಿಗೆಹಾಕಿ ಹೆಂಡಿರು ಮಕ್ಕಳೆಲ್ಲರನ್ನೂ ಕೊಂದು ಬೆಲ್ಲಿದ್ದರಿಂದ ಈ ಕೃತ್ಯವನ್ನು ಮಾಡಿದವರ ಮೇಲೆ ಆದ ಖಟ್ಲೆಯು ಮುಗಿದು ೧೩ ಜನರಿಗೆ ಫಾಶಿಕ್ಷೆ ವಿಧಿಸಲಾಯಿತು.

ಮಲಬಾರದಲ್ಲಿ ವಿಪರೀತ ಮಳೆ:—ಮಲಬಾರದಲ್ಲಿ ವಿಪರೀತವಾಗಿ ಸುರಿದ ಮಳೆಯ ದೆಸೆಯಿಂದ ಈಗ ಕಲ್ಲಿಕೋಟೆಯ ಹವೆಯು ಬಹಳ ಹಾಳಾಗಿದೆ. ಈ ಪಟ್ಟದಲ್ಲಿ ಇನ್‍ಫ್ಲುಯೆಂಜಾ, ವಿಷಮಜ್ವರ ರೋಗಗಳು ಪ್ರಬಲವಾಗಿವೆ. ಅಲ್ಲದೆ ನಿಮೋನಿಯಾ ಪ್ಲೇಗ್ ಸಹ ಈಗ ತಲೆಎತ್ತಿದೆ.

ಮುಂಬಯಿ:—ಇಲ್ಲಿಯ ಜಾಡಮಲ್ಲಿಗಳ ಮುಷ್ಕರವು ಶಾಂತವಾಗಿದೆ.

ವ್ಹಾಯಿಸರಾಯರ ಕೌನ್ಸಿಲು:—ಸರಕಾರದವರು ಖರ್ಚನ್ನು ಕಡಿಮೆ ಮಾಡುವ ಉದ್ದೇಶದಿಂದ ವೈಸರಾಯರ ಕೌನ್ಸಿಲಿನ ಮೆಂಬರರಿಗೆ ಡೊಕ್ಟರ ಸಪ್ರೂರವರ ಸ್ಥಾನದಲ್ಲಿ ಬೇರೊಬ್ಬರನ್ನು ನೇಮಿಸುವಂತೆ ಕಾಣುವುದಿಲ್ಲ. ಮತ್ತು ಎಜ್ಯುಕೇಶನ್ ಡಿಪಾರ್ಟುಮೆಂಟು ಈಗ ಇರುವ ಸ್ಥಿತಿಯಿಂದ ಬದಲಾವಣೆ ಹೊಂದಿ ಎಜ್ಯುಕೇಶನ್ ಡಿಪಾರ್ಟುಮೆಂಟಿನ ಮಂತ್ರಿಗಳಾದ ಸರ್. ಶಫಿಯವರು ಲೊ ಮೆಂಬರಿಕೆಯ ಸ್ಥಾನಕ್ಕೆ ಬರುವರೆಂಬ ವರ್ತಮಾನವನ್ನು ಸರ್ಚಲೈಟ್ ಪತ್ರದ ಸಿಮ್ಲದ ಬಾತಮಿದಾರನು ತಿಳಿಸುತ್ತಾನೆ.

ಕಲ್ಕತ್ತದಲ್ಲಿ ವಿದೇಶಿ ವಸ್ತ್ರ ಪಿಕೆಟಿಂಗ್ ಪ್ರಾರಂಭ:—ಕಲ್ಕತ್ತದಲ್ಲಿ ಕಳೆದ ಐದಾರು ತಿಂಗಳಲ್ಲಿ ವಿದೇಶಿ ವಸ್ತ್ರದ ಪಿಕೆಟಿಂಗ್‍ಕಾರ್ಯವು ಸುಸುಪ್ತಾವಸ್ಥೆಯಲ್ಲಿತ್ತು. ಈಗ ಅಸಹಕಾರಿಗಳು ಪುನಃ ಪಿಕೆಟಿಂಗ್ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಅನೇಕ ಸ್ತ್ರೀಪುರುಷರು ಸ್ವಯಂಸೇವಕರಾಗಿ ಈ ಕೆಲಸವನ್ನು ಪ್ರಾರಂಭಿಸಿದ್ದಾರೆ. ಕಳೆದ ತಾ. ೨೫ರಲ್ಲಿ ೩೦ ಮಂದಿ ಪುರುಷರನ್ನೂ ನಾಲ್ಕು ಮಂದಿಸ್ತ್ರೀಯರನ್ನೂ ಸೆರೆಹಿಡಿಯಲಾಯಿತು. ಆದರೆ ಹೆಂಗಸರನ್ನು ಬಂದಿಖಾನೆಯಲ್ಲಿ ಇಡಲು ತಕ್ಕುದಾದ ಸ್ಥಳವಿಲ್ಲದಿರುವುದರಿಂದ ಅವರನ್ನು ಬಿಟ್ಟು ಬಿಡಲಾಯಿತು.

ಪಂಡಿತ ಶ್ರೀವರ್ಮ ಶರ್ಮಾ:—ಕಳೆದ ಜೂನ್ ತಾ. ೨೦ರಲ್ಲಿ ಬಂಧನದಿಂದ ಹೊರಗೆಬಂದ ಪಂಡಿತ ಶ್ರೀವರ್ಮಶರ್ಮಗೆ ಪುನಃ ಒಂದು ವರುಷದ ಕಠಿಣ ಶಿಕ್ಷೆಯು ವಿಧಿಸಲಾಗಿದೆ.

ಅಸಹಕಾರವು ಸತ್ತಿದೆಯೇ:—ಕಳೆದ ತಾ. ೨೭ರಲ್ಲಿ ಮದರಾಸಿನಲ್ಲಿ ಭಾಷಣಮಾಡುವಾಗ ಪಂಡಿತ ಮೋತಿಲಾಲರು ಅಸಹಕಾರದ ಪರಿಸ್ಥಿತಿಯನ್ನು ಕುರಿತು ಹೀಗೆಂದಿದ್ದಾರೆ "ಅಸಹಕಾರವು ಈ ವರೆಗೆ ಸಾಯಲಿಲ್ಲ. ಪರಂತು ಅದು ತನ್ನ ನಿರ್ದಿಷ್ಟಕಾರ್ಯವನ್ನು ಸಾಧಿಸಿಕೊಂಡ ನಂತರ ಸ್ವರಾಜ್ಯ ಸರಕಾರದೊಡನೆ ಸಹಕಾರವನ್ನು ಬೆಳಸುವುದೆಂದು ನಂಬುವವರಲ್ಲಿ ನಾನೊಬ್ಬನಿದ್ದೇನೆ. ಆದರೆ ರಾಜಕಾರಣಪಟುಗಳಾದ ಕೆಲವುಮಂದಿ ಕುಶಾಗ್ರಬುದ್ಧಿಯವರು ಅಸಹಕಾರವು ನಿರ್ಜೀವವಾಯಿತೆಂದು ಹೇಳುವರು. ಇವರೆಲ್ಲ ಸನ್ಮಾನ್ಯರೇ. ಅಸಹಕಾರವು ಎಲ್ಲಿ ನಾಶವಾಗಿದೆ? ಆದು ಕೌನ್ಸಿಲು ಚೇಮ್ಬರುಗಳಲ್ಲಿ ಸತ್ತಿದ್ದು ನ್ಯಾಯಾಲಯ ಶಿಕ್ಷಣಸ್ಥಾನಗಳಲ್ಲೂ ಬಿರುದುಗಳನ್ನು ಕೊಡುವ ಇತರ ಸ್ಥಳಗಳಲ್ಲೂ ಸಮಾಧಿಯನ್ನು ಹೊಂದಿದೆ ಎಂದು ತಿಳಿದು ಅಸಹಕಾರವು ಸತ್ತಿದೆ ಎಂದು ಹೇಳುವವರ ವಾದವು ಸರಿ ಎಂದು ಹೇಳಬಹುದು. ಆದರೆ ಅಸಹಕಾರವು ಮಿಲಿಯ ಗಟ್ಟಳೆ ಹಿಂದು ನಿವಾಸಿಗಳ ಗೃಹದಲ್ಲೂ ಹೃದಯದಲ್ಲೂ ಜೀವಂತವಾಗಿಯೇ ಇದೆ. ಮತ್ತು ಅಸಹಕಾರವು ಸ್ವರಾಜ್ಯದೊಡನೆ ಐಕ್ಯವನ್ನು ಹೊಂದುವ ವರೆಗೆ ಎಂದೂ ನಿರ್ಜೀವವಾಗಲಿಕ್ಕಿಲ್ಲ.'

ಸ್ವಾಮಿ ಸಚ್ಚಿದಾನಂದ:—ಕಲ್ಕತ್ತದಲ್ಲಿ ಜವಳಿ ವ್ಯಾಪಾರಿಗಳು ವಿದೇಶಿ ವಸ್ತ್ರವನ್ನು ಮಾರಲುಪ್ರಾರಂಭಿಸಿದ ಪ್ರಾಯಶ್ಚಿತ್ತಕ್ಕಾಗಿ ಸ್ವಾಮಿ ಸಚ್ಚಿದಾನಂದರು ೯ ದಿನಗಳವರೆಗೆ ಉಪವಾಸಮಾಡಿದರು. ಕೊನೆಗೆ ಕೊಂಗ್ರೆಸ ಮತ್ತು ಖಿಲಾಫತ್ ಸ್ವಯಂಸೇವಕರು ಪಿಕೆಟಿಂಗ ಕಾರ್ಯವನ್ನು ಶುರುಮಾಡುವೆವಾಗಿ ಭರವಸೆಯನ್ನು ಕೊಟ್ಟ ಮೇಲೆ ಅವರು ಉಪವಾಸಮಾಡುವುದನ್ನು ನಿಲ್ಲಿಸಿದರು.

ಮುಂಬಯಿ:—ಮುಂಬಯಿ ಕೊರ್ಪೊರೇಶನಿನವರು ಈ ಕೊರ್ಪೊರೇಶನಿನ ವಿಸ್ತೀರ್ಣದಲ್ಲಿ ಗೋವಧೆಯನ್ನು ಮಾಡದಂತೆ ಒಂದು ತೀರ್ಮಾನವನ್ನು ಮಾಡಬೇಕೆಂದು ನಿರ್ಧರಿಸಿದ್ದರು. ಹೀಗೆ ಬಲಾತ್ಕಾರದಿಂದ ನಿರೋಧಿಸಲು ಹಿಂದುಗಳಿಗೆ ಹಕ್ಕಿಲ್ಲವೆಂತಲೂ ಹಾಗೆ ಮಾಡುವುದಾದರೆ ಮುಸಲ್ಮಾನರ ಮನಸ್ಸು ಕೆಟ್ಟು ಹೋಗಿ ಹಿಂದು-ಮುಸಲ್ಮಾನರ ಐಕ್ಯಕ್ಕೆ ಭಂಗಬರುವುದೆಂತಲೂ ಮೃದುವಚನಗಳಿಂದ ಅದನ್ನು ತಪ್ಪಿಸಬೇಕೆಂತಲೂ ಶ್ರೀಮತಿ ಸರೋಜಿನಿ ದೇವಿಯವರು ಬರೆದು ಪ್ರಕಟಿಸಿದ್ದಾರೆ.

ಮೌಲಾನಾ ಕುತುಬುದ್ದೀನ್ ಸಿದಕ್:—ಕೊಂಗ್ರೆಸ್ ಪತ್ರದ ಸಂಪಾದಕರಾದ ಮೌಲಾನಾ ಕುತುಬುದ್ದೀನ್ ಸಿದಕರಿಗೆ ಮೂರು ವರುಷಗಳ ಕಠಿಣ ಶಿಕ್ಷೆಯು ವಿಧಿಸಲಾಗಿದೆ.

ಕಾವಲುಗಾರರಿಗೆ ಶಿಕ್ಷೆ:—ಗಯಾ ಸೆಂಟ್ರಲ್ ಜೈಲಿನ ನಾಲ್ಕು ಮಂದಿ ಕಾವಲುಗಾರರಿಗೆ 'ಮಹಾತ್ಮಾಗಾಂಧಿಕೀ ಜೈ' ಎಂದು ಜಯಘೋಷ ಮಾಡಿದ ತಪ್ಪಿಗಾಗಿ ಕೆಲಸದಿಂದ ತೆಗೆದುಹಾಕಿದೆ.

ಸರ್. ವಿಠಲದಾಸ ಥಾಕರಸೇ:—ಮುಂಬಯಿ ಕಾರ್ಖಾನೆಗಳ ಪ್ರತಿನಿಧಿಗಳಾದ ಸರ್. ವಿಠಲದಾಸ್ ಥಾಕರಸೇಯವರು ಲೆಜಿಸ್ಲೇಟಿವ್ ಎಸೆಂಬ್ಲಿಯ ಸಭಾಸದತ್ವಕ್ಕೆ ರಾಜಿನಾಮೆಯನ್ನು ಕೊಟ್ಟಿದ್ದಾರೆ.

ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮಿಟಿಂಗು:—ಬರುವ ಜುಲಾಯಿ ತಾರೀಕು ೧೨ರ ಒಳಗೆ ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿಯವರಿಗೆ ದೇಶದ ಈಗಿನ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿಯನ್ನು ತಯಾರಿಸಲು ಅನಾನುಕೂಲವಾದುದರಿಂದ ಓಲ್-ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮಿಟಿಂಗನ್ನು ಈ ತಿಂಗಳ ತಾ. ೧೫ರಲ್ಲಿ ಸೇರಿಸದೆ ಬರುವ ತಿಂಗಳ ತಾ. ೧೫ಕ್ಕೆ ಮುಂದರಿಸಿಟ್ಟಿದೆ.

ಗುಂಟೂರು:—ಕಾಯಿದೆಭಂಗವಿಚಾರಣಾ ಕಮ್ಮಿಟಿಯವರಿಗೆ ಮಾನಪತ್ರವನ್ನು ಅರ್ಪಿಸಕೂಡದೆಂದು ಇಲ್ಲಿಯ ಕಲೆಕ್ಟರರ ಅಪ್ಪಣೆಯಾಗಿದೆ. ಇಲ್ಲಿ ಬೆರಿಸ್ಟರ ಲಕ್ಷ್ಮೀನಾರಾಯಣ, ಇವರ ೯ ವರುಷದ ಮಗ ಇವರನ್ನು ಕೂಡಿ ಒಟ್ಟು ೧೪೬ ಮಂದಿ ಸ್ವಯಂ ಸೇವಕರನ್ನು ಕೈದುಮಾಡಿದೆ.

ಸೆಂಟ್ರಲ್ ಖಿಲಾಫತ್ ಕಮ್ಮಿಟಿ:—ಈ ಕಮ್ಮಿಟಿಯ ಮಿಟಿಂಗು ಸೆಪ್ಟಂಬರ ತಾ. ೧೫ರಲ್ಲಿ ಕಲ್ಕತ್ತದಲ್ಲಿ ಸೇರುವುದು.

ಹೈದರಾಬಾದ್:—ಜಾಹಿರ ಮಹಮ್ಮದ ಎಂಬ ಹನ್ನೊಂದು ವರುಷದ ಹುಡುಗನನ್ನು ಭಾಷಣಮಾಡಿದ ತಪ್ಪಿಗಾಗಿ ಸೆರೆಹಿಡಿದು ಮೆಜಿಸ್ಟ್ರೇಟರ ಮುಂದೆ ವಿಚಾರಣೆಗೆ ತಂದಾಗ ಈ ಹುಡುಗನು ತನ್ನ ಹೆಸರು ಅಜದ್, ತಂದೆ ಹೆಸರು ಇಸ್ಲಾಮ್, ಜಾತಿಯಲ್ಲಿ ಅಸಹಕಾರಿ, ರಾಜದ್ರೋಹವನ್ನು ಬೋಧಿಸುವ ಕಾರ್ಯವನ್ನು ತಾನು ಮಾಡುತ್ತಿದ್ದೆನು ಎಂದು ಹೇಳಿ ಜಾಮೀನನ್ನು ಕೊಡಬಹುದೋ ಎಂದು ಕೇಳಿದುದಕ್ಕೆ ದೈವವೇ ತನಗೆ ಜಾಮೀನ ಎಂದನಂತೆ. ಕ್ಷಮಾಪಣೆಯನ್ನು ಕೇಳಲಿಕ್ಕೆ ಸಿದ್ಧನಾಗಿರುವೆಯೋ ಎಂದು ಕೇಳಿದ ಪ್ರಶ್ನೆಗೆ ತಾನು ದೇಶಕಾರ್ಯವನ್ನು ಮಾಡಿರುವನಲ್ಲದೆ ಯಾವ ಅಪರಾಧಕರವನ್ನೂ ಮಾಡದೆ ಇರುವುದರಿಂದ ಕ್ಷಮಾಪಣೆಯನ್ನು ಬೇಡಲು ಸಿದ್ಧನಾಗಿಲ್ಲ ಎಂದು ಉತ್ತರ ಕೊಟ್ಟನಂತೆ.

ದಕ್ಷಿಣ ಕನ್ನಡ.

ಕಾಸರಗೋಡು:—ಈ ತಾಲೂಕು ಬೋರ್ಡಿಗೆ ಹೊಸ ಮೆಂಬರರ ಚುನಾವಣೆಯು ಬರುವ ತಾ. ೧೯ರಲ್ಲಿ ಜರಗುವುದು. ಕೆಳಗೆ ಹೆಸರು ಕಾಣಿಸಿದ ಗೃಹಸ್ಥರು ಉಮೇದ್ವಾರರಾಗಿರುವರು. ಮಂಜೇಶ್ವರ ಸರ್ಕಲ್- ಮ. ರಾ. ಯಂ. ಭವಾನಿಶಂಕರ ರಾವ್, ಮ. ರಾ. ಮಂಜುನಾಥ ಕಮ್ತಿ, ಮ. ರಾ. ಯಂ. ವೈಕುಂಠ ಭಕ್ತ, ಆದೂರು ಸರ್ಕಲ್- ಮ. ರಾ. ಕೆ. ಗೋಪಾಲಕೃಷ್ಣಪ್ಪ, ಬಾಯಾರು ಸರ್ಕಲ್- ಮ ರಾ. ಮಾಣಿಪ್ಪಾಡಿ ಭೀಮ ಭಟ್ಟ, ಹೊಸದುರ್ಗ ಸರ್ಕಲ್- ಮ. ರಾ. ವಕೀಲ ಯಚ್. ವಿಠಲ ಕಮ್ತಿ, ಕಾಸರಗೋಡು ಸರ್ಕಲ್- ಕುಂಞ ಕಲಂದ ಬ್ಯಾರಿ ಸಾಹೇಬ ಬಹದ್ದೂರ್, ಮ. ರಾ. ಕೆ. ನರಸಿಂಹ ನಾಯ್ಕ, ಕುಂಬಳೆ ಸರ್ಕಲ್,-ಬಾರೆ ಪಟೇಲ ಮಹಮ್ಮದ್ ಬ್ಯಾರಿ ಸಾಹೇಬ ಬಹದ್ದೂರ್ ನೀಲೇಶ್ವರ ಸರ್ಕಲ್-ಮ. ರಾ. ವಿ. ಸಿ. ರವಿವರ್ಮರಾಜ, ಪಳ್ಳಿಕೆರೆ ಸರ್ಕಲ್-ಜೈನುದ್ದೀನ ಸಾಹೇಬ ಬಹದ್ದೂರ್, ಪೆರ್ಡಾಲ ಸರ್ಕಲ್- ಕುಂಞಾಮ್ಮದ್ ಹ್ಯಾಮೋಗ್ರಾಲ್ ಸಾಹೇಬ ಬಹದ್ದೂರ, ಬಡಗು ತ್ರಿಕರಪುರ ಸರ್ಕಲ್- ಮ. ರಾ. ಯಂ. ಸೀತಾರಾಮಯ್ಯ.

ಬಂಟವಾಳ:—ಬಂಗ್ಲೆ ಪೂಚೆರನ ಶರಾಬಿನ ನಂಬ್ರ ಕಂಪೌಂಡಾಯಿತು. ಇಲ್ಲಿಯ ಬೋರ್ಡು ಮಾಪಿಳ್ಳ ಶಾಲೆಯಲ್ಲಿ ಎಂಟು ಮಂದಿ ಮಾರಿ ಹೊಲೆಯರ ಮಕ್ಕಳನ್ನು ದಾಖಲು ಮಾಡಿದ್ದಾರೆ.

ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ಸೇಕಡಾ ೯೯ ಹಿಂದೂ ಹುಡುಗಿಯರು ಇದ್ದರೂ ಒಬ್ಬರೆ ಒಬ್ಬ ಹಿಂದೂ ಉಪಾಧ್ಯಾಯನಿಯು ಈ ಶಾಲೆಯಲ್ಲಿ ಇಲ್ಲದೆ ಇರುವುದು ಶೋಚನೀಯವಾದ ಸಂಗತಿಯಾಗಿದೆ. ಮುಸಲ್ಮಾನರ ಶಾಲೆಯಲ್ಲಿ ಮುಸಲ್ಮಾನ ಉಪಾಧ್ಯಾಯರೂ ಮಾಪಿಳ್ಳಾ ಶಾಲೆಯಲ್ಲಿ ಮಾಪಿಳ್ಳಾ ಉಪಾಧ್ಯಾಯರೂ ಇರಬೇಕಂತೆ. ಹಿಂದೂ ಮಕ್ಕಳ ಆಚಾರ, ವಿಚಾರ ಇವಲ್ಲವನ್ನು ನೋಡಲಿಕ್ಕೆ ಒಬ್ಬ ಹಿಂದೂ ಉಪಾಧ್ಯಾಯನಿಯಾದರೂ ಬೇಡವೇ? ಶಾಲಾ ಮಕ್ಕಳ ಮನಸ್ಸಿಗೂ ಮಕ್ಕಳ ಪಾಲಕರಿಗೂ ಬೇಸರವಾದರೂ ಚಿಂತಿಲ್ಲ, ಪಂಚಮರ ಹುಡುಗರನ್ನು ಬೋರ್ಡು ಶಾಲೆಗಳಿಗೆ ತೆಗೆದು ಕೊಳ್ಳಲೇ ಬೇಕೆಂಬ ಸರ್ಕಲಾರನ್ನು ಕೊಟ್ಟು ಪಂಚಮರನ್ನು ಉದ್ಧರಿಸಬೇಕೆಂಬ ಸದುದ್ದೇಶವನ್ನಿಟ್ಟುಕೊಂಡ ಬೋರ್ಡಿನವರಿಗೆ ಹಿಂದೂ ಮಕ್ಕಳ ಇದರಲ್ಲಿಯೂ ಹುಡುಗಿಯರ ಮೇಲ್ಮೆಯನ್ನು ನೋಡಲಿಕ್ಕೆ ಒಬ್ಬ ಹಿಂದೂ ಉಪಾಧ್ಯಾಯನಿಯಾದರೂ ಬೇಕೆಂಬ ಆಲೋಚನೆಯೂ ಬಾರದಿರುವಂತಾಯಿತಲ್ಲಾ.

ಈ ಊರಿನಲ್ಲಿ ತೆರೆಯಬೇಕೆಂದಿರುವ ನಂಬ್ರ ೪, ೫, ೬, ೭ ಮತ್ತು ೮ನೇ ಸೆನಿಟರಿ ಮಾರ್ಗಗಳನ್ನು ಮಾಡಿಸುವುದೇ ಬೇಡವೆಂಬ ಠರಾವು ತಾಲೂಕು ಬೋರ್ಡ ಮಿಟಿಂಗಿನಲ್ಲಿ ಪಾಸಾಯಿತು. ಕಾರಣವೇನೊ ತಿಳಿಯದು. ಇವುಗಳಿಗೆ ಸೆಂಕ್ಷನ್ ಮಾಡಿದ ಹಣದಲ್ಲಿ ಒಂದು ಅಂಶದಿಂದ ಅಯ್ಯನಾಯಕರ ಓಣಿಯ ಮಾರ್ಗವನ್ನು ಗುರುಪುರ ಮಾರ್ಗಕ್ಕೆ ಕೂಡಿಸಿದ್ದಾದರೆ ಬಂಟವಾಳದ ಆರೋಗ್ಯವು ಸ್ವಲ್ಪವಾದರೂ ಒಳ್ಳೇದಾಗುತಿತ್ತು. ಊರಿನ ಆರೋಗ್ಯವು ಕೆಡುತ್ತಾ ಬರುತ್ತದೆ. ಸಾಂಕ್ರಾಮಿಕ ರೋಗಗಳು ಬಂದ ಮೇಲೆ ಲಕ್ಷ ಗಟ್ಟಳೆಯಲ್ಲಿ ಹಣ ಖರ್ಚುಮಾಡುವುದರ ಬದಲಾಗಿ ಈಗಲೆ ಸಾವಿರ ಗಟ್ಟಳೆಯಿಂದ ಖರ್ಚುಮಾಡುವುದು ಉತ್ತಮವೆಂದು ತೋರುತ್ತದೆ.

ಸಂಪಾಜೆ:—ಇಲ್ಲಿಯ ಬೋರ್ಡ ಶಾಲೆಯಲ್ಲಿ ಹುಡುಗರ ಸಂಖ್ಯೆ ೫೦ ಇದೆ. ಐದು ಕ್ಲಾಸಿರುವ ಈ ಶಾಲೆಯಲ್ಲಿ ಒಬ್ಬ ಉಪಾಧ್ಯಾಯರೆ. ಕಲಿಸುವ ಬಗೆ ಹೇಗೆ? ಇದಕ್ಕೆ ಸಂಬಂಧಪಟ್ಟ ಆಫೀಸರರು ಈ ಕಡೆಗೆ ಲಕ್ಷ್ಯ ಕೊಡಲಿ.

ಲೋಕಮಾನ್ಯ ಟಿಳಕರು.

(ಲೇಖಕ:— ಕೇ. ಪಿ. ಶಾಸ್ತ್ರೀ)

ಒಗಸ್ಟಿನ ಮೊದಲನೆಯ ದಿವಸವು ಹಿಂದೀಜನರಿಗೆ ಪೂಜ್ಯವಾಗಿದೆ. ಮತ್ತು ವಾರ್ಷಿಕೋತ್ಸವ ದಿನಗಳಲ್ಲಿ, ಈ ದಿವಸವು ಗಣಿಸಲ್ಪಟ್ಟಿದೆ. ಈ ದಿವಸವನ್ನು ಉತ್ಸವ ದಿವಸಗಳಲ್ಲಿ ಸೇರಿಸಿ, ಇದಕ್ಕೆ ಪವಿತ್ರತೆ ಮತ್ತು ಸ್ಮಾರಕತೆಯನ್ನು ಕೊಡುವ ಕಾರಣವನ್ನು ವಿಚಾರಿಸುವುದು ಅವಶ್ಯವಿದೆ. ಈ ದಿವಸವು ಲೋಕಮಾನ್ಯರ ಪುಣ್ಯತಿಥಿ. ಈ ದಿವಸ ದಾನಶೂರರು ಯೋಗ್ಯರಿಗೆ ದಾನವನ್ನು ಇತ್ತು, ವಕ್ತರು ತಮ್ಮ ವಾಕ್ಪಟುತ್ವದಿಂದ, ಲೇಖಕರು ತಮ್ಮ ಲೇಖನಕಲಾಕೌಶಲ್ಯದಿಂದ, ಕವಿಗಳು ತಮ್ಮ ಕಾವ್ಯರಸ ಮಾಧುರ್ಯದಿಂದ, ಮತ್ತು ಕೆಲವರು ತಮ್ಮ ಸಪ್ರೇಮ ಭಕ್ತಿಯುಕ್ತ ಪೂಜನದಿಂದ ಲೋಕಮಾನ್ಯ ಟಿಳಕರನ್ನು ಅಭಿನಂದಿಸುತ್ತಾರೆ. ಈ ದಿವಸವು ಬರೇ ಒಂದು ಜಾತಿಯವರು ಭಾಗತಕ್ಕೊಳ್ಳುವಂಥ ಧಾರ್ಮಿಕೋತ್ಸವದ ದಿವಸವಲ್ಲ. ಇದು ಧಾರ್ಮಿಕೋತ್ಸವಕ್ಕಿಂತ ಮಹತ್ವವಾದ ಮತ್ತು ಎಲ್ಲ ಹಿಂದೀ ಜನರು ಭಾಗತಕ್ಕೊಳ್ಳುವಂಥ ಸಾಮಾಜಿಕ ಮತ್ತು ರಾಜಕೀಯೋತ್ಸವದ ದಿವಸ.

ರಾಜಕಾರಣದಲ್ಲಿ ಲೋಕಮಾನ್ಯ ಟಿಳಕರ ಪ್ರತಿಪಕ್ಷದವರು, ಇವರ ಅಪಾರ ವಿದ್ವತ್ತೆ ಮತ್ತು ಶುದ್ಧವಾದ ನೈತಿಕ ಆಚರಣೆ ಈ ಗುಣಗಳಿಗೆ ಚಕಿತರಾಗಿ ಇವರನ್ನು ಮನ್ನಿಸುತ್ತಾರೆ. ರಾಜಕಾರಣದಲ್ಲಿ ಇವರ ಪಕ್ಷಪಾತಿಗಳು ಇವರ ಅಪ್ರತಿಮ ಸ್ವದೇಶವಾತ್ಸಲ್ಯ ಮತ್ತು ಚಾಣಾಕ್ಷನಾಯಕತ್ವ ಇವುಗಳಿಗೆ ಒಲಿದು, ಇವರನ್ನು ಪೂಜಿಸುತ್ತಾರೆ. ಮಿ| ಮೊಂಟೆಗ್ಯೂರಂಥ—ಇವರ ಪ್ರತಿಪಕ್ಷದವರಾದರೂ—ಗುಣಗ್ರಾಹಿಗಳಾದ ಜನರು, ಸುಧಾರಣೆಯ ದಾನದಂಥ ಮಹತ್ವದ ಪ್ರಶ್ನೆಗಳಲ್ಲಿ ಇವರ ಅಭಿಪ್ರಾಯವನ್ನು ಅಂಗೀಕರಿಸಿ, ಇವರನ್ನು ಆದರಿಸುತ್ತಾರೆ. ವಿದ್ವಾಂಸರು, ಮೃಗಶಿರಾ, ವೇದಕಾಲ ನಿರ್ಣಯ ಮತ್ತು ಗೀತಾರಹಸ್ಯ ಇತ್ಯಾದಿ ಇವರ ಅಮೂಲ್ಯ, ಅಪ್ರತಿಮ, ಮತ್ತು ಗಹನಗ್ರಂಥಗಳನ್ನು ಓದಿ, ಮಧುರ ಮತ್ತು ಆಕರ್ಷಕ ವೀಣಾನಾದದಿಂದ ಮೋಹಿತವಾದ ಸರ್ಪಗಳಂತೆ ತಮ್ಮ ತಲೆಗಳನ್ನು ಆಂದೋಲಿಸಿ ಇವರನ್ನು ಬಹು ಕೊಂಡಾಡುತ್ತಾರೆ. ಪ್ಲೇಗಿನಿಂದ ಬಳಲುತ್ತಿದ್ದ ಜನರಿಗೆ ಕತ್ತಿರ ಕರ್ಝನಶಾಹಿಯ ಸರಕಾರದಿಂದ ಇನ್ನಷ್ಟು ಅಪಮಾನ ಮತ್ತು ದುಃಖವು ಆದ ಮೇಲೆ, ಲೋಕಮಾನ್ಯರು ದುಃಖಿತರಿಗೆ ಹಣ ಮತ್ತು ಔಷಧ ಇವುಗಳಿಂದ ಸಹಾಯ ಮಾಡಿ ಮತ್ತು ತಮ್ಮ ತೀವ್ರ ಲೇಖನಭಾಷಣಗಳಿಂದ ಅಧಿಕಾರಿಜನರ ಔದ್ಧತ್ಯವನ್ನು ಕಡಿಮೆಮಾಡಿ, ತಮ್ಮ ಔದಾರ್ಯ, ಅನಾಥಪಕ್ಷಪಾತಿತ್ವ ಮತ್ತು ನ್ಯಾಯಪ್ರಿಯತೆ, ಈ ಗುಣಗಳಿಂದ ಕೃತಜ್ಞಜನರ ಪೂಜ್ಯತೆಗೆ ಪಾತ್ರರಾದರು. ಈ ಪ್ರಕಾರ ಇವರು ಸ್ವಪಕ್ಷ ಪ್ರತಿಪಕ್ಷ, ಗುಣಗ್ರಾಹಿ, ವಿದ್ಯಾವಂತರು ಮತ್ತು ಬಡವರು ಇವರೆಲ್ಲರ ಯಾಕೆ, ಅಖಿಲ ಲೋಕದ ಪ್ರೀತಿಗೆ ಪಾತ್ರರಾಗಿ, ಲೋಕಮಾನ್ಯ ಬಿರುದಾಂಕಿತರಾದರು.

ಲೋಕಮಾನ್ಯರ ಭವ್ಯ ಮತ್ತು ಗಂಭೀರಾಕೃತಿಯು ಅವರ ಸತ್ಯ ಪೋಷಾಕುಗಳಿಂದ ಹೊಳೆಯುತ್ತಿತ್ತು. ಸಮುದ್ರದ ಗರ್ಜನೆಯಂತೆ ಘೋರವಾದ ಅವರ ಧ್ವನಿತರಂಗಗಳು, ಸಭಿಕರ ಹೃದಯಕಲ್ಮಷವನ್ನು ದೂರಮಾಡಿದ ನಂತರ, ಆದರ್ಶದಂತಿರುವ ಸಭಿಕರ ಶುದ್ಧ ಹೃದಯಗಳಲ್ಲಿ, ಲೋಕಮಾನ್ಯರ ಮನೋಗತವು ಬಿಂಬಿಸುತ್ತಿತ್ತು. ಇವರು ಕೇಸರಿಯ ನಿಸಿತನಖಾಗ್ರದಂತಿರುವ ತಮ್ಮ ಲೆಕ್ಕಣಿಕೆಯ ತೀವ್ರಾಗ್ರದಿಂದ ಪ್ರತಿಪಕ್ಷ ಕಾರಾಣಿಗಳ ಕುಂಭಸ್ಥಳಗಳನ್ನು ಸೀಳುತ್ತಿದ್ದರು. ಇದುವರೆಗೆ ಲೋಕದಲ್ಲಿ ಮನುಷ್ಯನಲ್ಲಿರತಕ್ಕ ಸುಗುಣಗಳು ಒಬ್ಬನಲ್ಲಿ ನೆಲೆಗೊಂಡಿದ್ದರೆ ಅದು ಲೋಕಮಾನ್ಯ ಟಿಳಕರಲ್ಲಿ.

ಲೋಕಮಾನ್ಯರ ಚರಿತ್ರೆಯಿಂದ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಅನುಕರಿಸುವ ಗುಣಗಳು ಯಾವವೆಂತ ಹೇಳಿ, ನಾನು ಈ ಚಿಕ್ಕ ಲೇಖನವನ್ನು ಮುಗಿಸುವೆನು. ಇವರು ವಿದ್ಯಾರ್ಥಿಗಳಾಗಿರುವಾಗ ಉಪಾಧ್ಯಾಯರು ಕೊಟ್ಟ ಪಾಠಗಳನ್ನು ಯೋಗ್ಯವೇಳೆಯಲ್ಲಿ ಯೋಗ್ಯರೀತಿಯಿಂದ ಕಲಿತು, ವಿಶೇಷತಃ ಸಂಸ್ಕೃತ ಮತ್ತು ಗಣಿತ ಇವುಗಳಲ್ಲಿ ಹೆಚ್ಚು ನೈಪುಣ್ಯವನ್ನು ಸಂಪಾದಿಸಿದರು. ಒಂದು ದಿವಸ ಇವರ ಹೊರತು ಬೇರೆ ವಿದ್ಯಾರ್ಥಿಗಳು ನೆಲಗಡಲೆಯನ್ನು ತಿಂದು, ಅದರ ಸಿಪ್ಪೆಯನ್ನು ಶಾಲೆಯಲ್ಲಿ ಚೆಲ್ಲಿದರು. ಉಪಾಧ್ಯಾಯರು ಬಂದು ಅದನ್ನು ನೋಡಿ ಕೋಪಗೊಂಡು, ಪ್ರತಿ ಒಬ್ಬ ವಿದ್ಯಾರ್ಥಿಗೆ ಪೆಟ್ಟುಕೊಡುವುದಾಗಿ ನಿಶ್ಚಯಿಸಿದರು. ಪೆಟ್ಟು ತಕ್ಕೊಳ್ಳುವ ಸರ್ತಿಯು ಟಿಳಕರ ಮೇಲ ಬಂದಾಗ ಟಿಳಕರು ಎದ್ದುನಿಂತು 'ನಾನು ತಪ್ಪುಗಾರನಲ್ಲ' ಆದ್ದರಿಂದ ಈ ಶಿಕ್ಷೆಗೆ ನಾನು ಗುರಿಯಾಗುವುದಿಲ್ಲವೆಂತ ಹೇಳಿದರು. ಎಲ್ಲ ವಿದ್ಯಾರ್ಥಿಗಳಲ್ಲಿ ಒಬ್ಬನೇ ತಿನ್ನದೆ ಇರುವುದು ಅಸಂಭವನೀಯವೆಂತ ಉಪಾಧ್ಯಾಯರು ತಿಳಕೊಂಡು, ಇವರನ್ನು ಶಿಕ್ಷಿಸಬೇಕೆಂತ ನಿಶ್ಚಯಿಸಿದರು. ಆದರೆ, ವೃಥಾ ಶಿಕ್ಷೆಯನ್ನು ಅನುಭವಿಸುವುದು ಇಷ್ಟವಿಲ್ಲದೆ ಇರುವುದರಿಂದ, ಟಿಳಕರು ಕ್ಲಾಸನ್ನು ಬಿಟ್ಟು ಹೊರಗೆ ಹೋದರು. ಈ ಪ್ರಕಾರ ಚಿಕ್ಕಂದಿನಲ್ಲಿ ಸಹ ಇವರಲ್ಲಿ ಕರ್ತವ್ಯದಕ್ಷತೆ, ಸತ್ಯಪ್ರೀತಿ ಮತ್ತು ಸ್ವಾಭಿಮಾನ ಇವುಗಳು ಕಂಡುಬಂದಿದ್ದವು.

ಲೋಕಮಾನ್ಯ ಟಿಳಕರ ವಿದ್ವತ್ತೆಯು ಅಗಾಧವಿತ್ತೆಂದು ನಿಸಂಶಯದಿಂದ ಹೇಳಬಹುದು. ಇವರು ಓದಿದ ಸಂಗತಿಗಳನ್ನು ಕೇವಲ ಲೇಖನದಿಂದ ಅಥವಾ ಮಾತುಗಳಿಂದ ಆಡಿ ತೋರಿಸಿ, ಅಲ್ಲಿಯೇ ಅವುಗಳ ಪರ್ಯವಸಾನಮಾಡದೆ, ಅವುಗಳನ್ನು ಆಚರಿಸಿ ಲೋಕಕ್ಕೆ ಉದಾಹರಣೆಯನ್ನು ಕೊಟ್ಟರು. ಅವರು ಈಗಿನ ಕೆಲವು ವಿದ್ವಾಂಸರಂತೆ ಕೇವಲ ಗಿಳಿಯಂತೆ ಪುಸ್ತಕಗಳನ್ನು ಓದಿ ವಿಷಯಗಳನ್ನು ಸ್ವಾಧೀನಮಾಡಿಕೊಳ್ಳದೆ, ಶೋಧಕಬುದ್ಧಿಯಿಂದ ಓದಿ ಅವುಗಳಲ್ಲಿ ಪ್ರತಿಪಾದಿಸಿರುವ ವಿಷಯಗಳ ಸತ್ಯಾಸತ್ಯವನ್ನು ಆಲೋಚಿಸಿ, ಗ್ರಂಥಕರ್ತರ ಉದ್ದೇಶವನ್ನು ತಿಳಿದುಕೊಳ್ಳುತ್ತಿದ್ದರು. ಉದ್ದೇಶವನ್ನು ತಿಳಕೊಂಡ ಮೇಲೆ ಅನಂತರ ಬೇರೆ ಬೇರೆ ವಿಷಯಗಳನ್ನು ಪ್ರಸ್ತಾಪಿಸಿದ್ದಲ್ಲಿ ಅವು ಅಸಂಗತವಾಗಲಿಕ್ಕಿಲ್ಲ ಎಂತ ಶೋಧಕಬುದ್ಧಿಯಿಂದ ವಿಚಾರಿಸಿ, ವೇದಕಾಲ ನಿರ್ಣಯದಂಥ ಮಹತ್ವದ ಗ್ರಂಥಗಳನ್ನು ಬರೆಯುತ್ತಿದ್ದರು. ಈ ಕ್ರಮದಿಂದ ಅವರು ತಮ್ಮ ಆಲೋಚನಾಶಕ್ತಿಯನ್ನು ಬೆಳಸಿ, ಜನರಿಗೆ ಬಹಳ ಉಪಕಾರವನ್ನಾಡಿದರು.

ಆದ್ದರಿಂದ ಇಲ್ಲಿಯ ವಿದ್ಯಾರ್ಥಿಗಳು ಮತ್ತು ವಿದ್ವಾಂಸರು, ಲೋಕಮಾನ್ಯರ ಅನುಪಮವಾದ ಮತ್ತು ಅನುಕರಣೀಯವಾದ ಚರಿತ್ರೆಯಿಂದ [illegible] ವಾದ ಸಂಗತಿಗಳನ್ನು ಅನುಕರಿಸಿ, ದೇಶೋದ್ಧಾರದ ಕೆಲಸವನ್ನು ಕೈಕೊಳ್ಳುವರೆಂದು ನಂಬುತ್ತೇನೆ.

ಅನುಕ್ರಮಣಿಕೆ

ಅಗ್ರಲೇಖ—
ಶಾಂತತೆಯ ಠರಾವು ೬
ಸ್ಫುಟವಿಚಾರಗಳು—
೧. ಕಲ್ಕತ್ತೆಯಲ್ಲಿನ ಪಿಕೆಟಿಂಗ್. ೨. ಮೊಂಟೆಗ್ಯು ಸಾಹೇಬರಿಗೆ ಸಂಸ್ಥಾನಿಕರ ಸತ್ಕಾರ. ೩. ಸರೋಜಿನಿ ದೇವಿಯವರ ಸೂಚನೆ. ೪. ಮುಂಬಯಿ ಕೌನ್ಸಿಲಿನೊಳಗಿನ ಠರಾವು. ೫. ಹೊಸ ಎಕ್ಟು . . . . ”
ಮಂಗಳೂರು—
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೭
ದಕ್ಷಿಣ ಕನ್ನಡ—ಕಾಸರಗೋಡು, ಬಂಟವಾಳ, ಸಂಪಾಜೆ . . ”
ಲೋಕಮಾನ್ಯ ತಿಲಕರು . . . . ”
ಅಸ್ಪೃಶ್ಯತಾ ನಿವಾರಣ ೮
ಮಂಗಳೂರು ವ್ಯವಸಾಯಿಕ ಮತ್ತು ಕೈಗಾರಿಕೆಯ ಪ್ರದರ್ಶನ . ”
ಪ್ರೊಟೆಸ್ಟಾಂಟ ಕ್ರೈಸ್ತ ಮಹಾ ಸಭಾಸದರಿಗೆ ಒಂದು ವಿಜ್ಞಾಪನೆ . ”

ಸ್ವದೇಶಾಭಿಮಾನಿ·

ಶಕ ೧೮೪೪ ಶ್ರಾವಣ ಶು ೧೨ಯು ಶುಕ್ರವಾರ.

ಶಾಂತತೆಯ ಠರಾವು.

ಯುರೋಪದ ಮಹಾಯುದ್ಧವು ಮುಗಿದು ೪-೫ ವರ್ಷಗಳಾದವು. ಅಂದಿನಿಂದ ಪ್ರತಿ ವರ್ಷ ಜುಲೈ ತಾ. ೨೯ರಲ್ಲಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಒಪ್ಪಂದದ ಸ್ಮಾರಕಾರ್ಥವಾಗಿ ಆ ದಿನವನ್ನಾಚರಿಸುವ ರೂಢಿಯು—ವಿಶೇಷವಾಗಿ ಮುಂಬಯಿ, ಪೂನಾ, ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಿದ್ದಿದೆ. ಸಂಧಿಮಹೋತ್ಸವದ ಸ್ಮಾರಕವನ್ನು ಆಚರಿಸುವ ಈ ದಿವಸದಲ್ಲಿ "No more war" ಎಂದರೆ ಇನ್ನು ಮುಂದೆ ಯುದ್ಧವುಂಟಾಗಬಾರದು ಎಂಬೀ ಅರ್ಥದ ಠರಾವುಗಳು ಪಾಸಾಗುತ್ತಿವೆ. ಈ ಠರಾವುಗಳು ಲಂಡನ್ ಪಟ್ಟಣದಂಥ ಮುಖ್ಯ ರಾಜಧಾನಿ ಹಿಡಿದು ಧನೂರಿನಂಥ ಒಂದು ಅಪ್ರಸಿದ್ಧ ಪಟ್ಟಣದ ವರೆಗೆ ಎಲ್ಲೆಲ್ಲಿ ಸಂಧಿಸ್ಮಾರಕ ಸಭೆಗಳಾಗಿದ್ದವೊ ಅಲ್ಲೆಲ್ಲ ಕಡೆಯಲ್ಲಿ ಪಾಸಾಗಿವೆ. ಈ ಸಭೆಗಳಲ್ಲಿ ಮತಭೇದವಿಲ್ಲದೆ ಸರಕಾರಿ ಉದ್ಯೋಗಸ್ಥರು ಇತರರು—ಶಾಂತಪಕ್ಷದವರು, ಉಗ್ರಪಕ್ಷದವರು, ವ್ಯಾಪಾರಿಗಳು, ವಕೀಲರು ಎಲ್ಲರು ಭಾಷಣಗಳನ್ನು ಮಾಡಿ ಇನ್ನು ಮುಂದೆ ಲೋಕದಲ್ಲಿ ಯುದ್ಧವಾಗಬಾರದೆಂಬ ಸದಿಚ್ಛೆಯನ್ನು ವ್ಯಕ್ತಗೊಳಿಸಿರುತ್ತಾರೆ. ಈ ಠರಾವಿಗೆ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಯುರೋಪಿಯನ್, ಮಹಮ್ಮದೀಯ, ಹಿಂದು ಇತ್ಯಾದಿ ಸಕಲ ವರ್ಗದ ಜನರ ಅನುಕೂಲತೆಯು ಉಂಟು. ಮತ್ತು ಆ ರೀತಿಯ ಅನುಕೂಲತೆ ಇರುವುದು ಆಶ್ಚರ್ಯವಲ್ಲ. ಯುದ್ಧವು ಬೇಕೆಂದು ಯಾರು ಹೇಳಿಯಾರು? ಅಲ್ಲ, ಯಾರು ಬಯಸಿಯಾರು? ಯಾರೂ ಬಯಸಲಿಕ್ಕಿಲ್ಲ. ಸಾರಾಂಶ, ಜುಲೈ ೨೯ನೆ ತಾರೀಕಿನ ದಿವಸವು ಶಾಂತತೆಯ ಠರಾವನ್ನು ಪಾಸುಮಾಡುವ ದಿವಸವು. ಈ ರೂಢಿಗನುಸಾರವಾಗಿ ಈ ವರ್ಷವು ಸಹ ಶಾಂತತೆಯ ಠರಾವು ಎಲ್ಲ ಕಡೆಯ ಸಭೆಗಳಲ್ಲಿ ಬಹು ಆಡಂಬರದಿಂದ ಮತ್ತು ಜನರ ಹೆಚ್ಚು ಉತ್ಸುಕತೆಯಿಂದ ಪಾಸಾಯಿತೆಂದು ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ.

ಸಭೆಗಳಲ್ಲಿ ಪಾಸಾದ ಶಾಂತತೆಯ ಠರಾವನ್ನೂ, ಸಾಮ್ರಾಜ್ಯದ ರಂಗಭೂಮಿಯಲ್ಲಿ ನಡೆಯುವ ಪ್ರತ್ಯಕ್ಷ ಸಂಗತಿಗಳನ್ನೂ ಏಕಕಾಲದಲ್ಲಿ ನೋಡುವಾಗ ತುಂಬಾ ವಿಸ್ಮಯವೂ, ಪೂರ್ಣವಿಷಾದವೂ ಉಂಟಾಗದೆ ಇರುವುದಿಲ್ಲ. ಶಾಂತತೆಯ ಠರಾವನ್ನು ಬರೆ ಸಭೆಯಲ್ಲಿ ಪಾಸುಮಾಡುವುದರಿಂದ ಫಲವೇನು? ಲೋಕದಲ್ಲಿ ಅದರಿಂದ ಶಾಂತತೆಯು ಬರುವುದೆ? ಲಂಡನ್, ಏಡನ್, ಮುಂಬಯಿ, ಮದ್ರಾಸ ಮುಂತಾದ ಕಡೆಗಳಲ್ಲಿಯ ಜನರು ಸಭೆಗೂಡಿಸಿ, ವಕ್ತೃತ್ವದ ಪಾಂಡಿತ್ಯವನ್ನು ಪ್ರದರ್ಶಿಸಿ ಶಾಂತತೆಯ ಠರಾವನ್ನು ಪಾಸುಮಾಡುವುದರಿಂದ ಶಾಂತತೆಯು ಲೋಕದಲ್ಲಿ ನೆಲೆಗೊಳ್ಳುವುದೆ? ಇವರ ಠರಾವಿನಿಂದ ಶಾಂತತೆಯು ಬರಬೇಕಿದ್ದರೆ, ಅಶಾಂತತೆಯ ಸಾಧನವಾದ ಯುದ್ಧವನ್ನು ಇವರೆ ಮಾಡುವವರಾಗಿರಬೇಕು. ಆದರೆ ಈ ಜನರ ಕೈಯಲ್ಲಿ ತೋಫಿ, ತುಪಾಕಿ, ಗುಂಡು, ವಿಮಾನ, ಹಡಗು, ತರವಾರ, ಕತ್ತಿ, ಮದ್ದು, ಗೆಸ್ ಮುಂತಾದ ಯಾವ ಸಾಧನವೂ ಇರದು. ಅಂಥ ಜನರು ಯುದ್ಧಮಾಡುವುದೆಂದರೇನು? ಅದು ಕೇವಲ ಅಸಾಧ್ಯವು. ಮೇಲೆ ಹೇಳಿದ ಯುದ್ಧಸಾಧನಗಳು ಯಾರಲ್ಲಿ ವಿಪುಲವಾಗಿ ಇದ್ದಾವೊ ಅಂಥವರಿಂದಲೆ ಲೋಕದ ಶಾಂತಿಯನ್ನು ಕೆಡಿಸುವ ಭಯಂಕರ ಯುದ್ಧವು ಆಗಾಗ್ಗೆ ಸಂಭವಿಸುತ್ತಿರುತ್ತವೆ. ಯುದ್ಧಸಾಧನಗಳಿಂದ ತುಂಬಿಹೋದ ಈ ರಾಜರುಗಳು, ಈ ಸರಕಾರಗಳು, ಜಿನೋವಾ, ಹೇಗ್ ಮುಂತಾದ ಬೇರೆಬೇರೆ ಕಡೆಗಳಲ್ಲಿ ನೆರೆದು ಶಾಂತತೆಯ ಠರಾವುಗಳನ್ನು ಪಾಸುಮಾಡುತ್ತಲೆ ಇರುತ್ತಾರೆ. ತಾವು ಮಾಡಿದ ಠರಾವಿನಿಂದ ತಾವೆ ಬದ್ಧೀಕೃತರಲ್ಲದ ಬಳಿಕ ಜನರ ಠರಾವಿನಿಂದ ಈ ರಾಜರುಗಳೂ, ಈ ಸರಕಾರಗಳೂ-ಬದ್ಧೀಕೃತವಾದಾವೆ? ಮಿ| ಲೊಯ್ಡ ಜೋರ್ಜರಂಥ ಮುತ್ಸದಿ ಶಿಖಾಮಣಿಗಳು ಮತ್ತು ಕರ್ಝನ ಸಾಹೇಬರಂಥ ಅಹಂಮನ್ಯ ವೀರವೃತ್ತಿಯವರು ಮಾಡುವ ಶಾಂತತೆಯ ಠರಾವುಗಳು ಅನೇಕ ಸಾರಿ ಕಾಗದದ ಮೇಲೆಯೆ ಉಳಿದು ಹೋಗುವಾಗ ಸಾಮಾನ್ಯ ಜನರು ತಮ್ಮ ಗಲಭೆಯ ಒಂದು ಸಭೆಯಲ್ಲಿ ಶಾಂತತೆಯ ಈ ಶುಷ್ಕ ಠರಾವುಗಳನ್ನು ಪಾಸುಮಾಡುವುದರಿಂದ ಯಾವ ಪಸೆಯು ಹೊರಗೆ ಬಿದ್ದೀತು? ಮತ್ತು ಯಾವ ಇಷ್ಟಾರ್ಥವು ಸಿದ್ಧವಾದೀತು?

ಅದಲ್ಲದೆ ರಾಜರಾಜರೊಡನೆ ಆಗತಕ್ಕ ಯುದ್ಧಕ್ಕೆ ಹೇಗೆ ಯಾರಾದರೂ ರಾಜರೆ ಕಾರಣರಾಗುವರೊ ಹಾಗೆಯೆ ಒಂದು ರಾಜ್ಯದೊಳಗಿನ ಅಸಂತೋಷಕ್ಕೆ ಅಶಾಂತತೆಗೆ ಅಧಿಕಾರಿಗಳೆ ಕಾರಣರಾಗುವರು. ಇಂಥ ಅಸಂತೋಷವು ರಾಶಿರಾಶಿಯಿಂದ ತುಂಬಿರುವಾಗ ಲೋಕದಲ್ಲಿ ಶಾಂತತೆ ಇರಬೇಕು ಎಂದು ಠರಾವನ್ನು ಮಾಡುವುದರಿಂದ ಆ ಅಸಂತೋಷದ ಪರಿಮಾರ್ಜನೆಗೆ ಕೊಂಚವಾದರೂ ಸಾಹಾಯ್ಯವಾದೀತೆ? ಆ ಅಸಂತೋಷವು ಹೋಗಿ ಶಾಂತತೆಯು ಬಂದೀತೆ? ಬರುವದು ತುಂಬಾ ಅಸಾಧ್ಯವೆಂದಾದ ಮೇಲೆ ಈ ಬಾಹ್ಯ ಆಡಂಬರವು ಯಾಕೆ? ಬ್ರಿಟಿಷ್ ಸಾಮ್ರಾಜ್ಯದ ಯಾವ ಭಾಗದಲ್ಲಿ ಸಂಪೂರ್ಣ ಸಂತೋಷವಿದೆ? ಕೊಲನಿಗಳು ಸ್ವಯಂಶಾಸಿತವಾದ್ದರಿಂದ ಸುಖದಲ್ಲೂ, ಸಮಾಧಾನದಲ್ಲೂ ಇದ್ದಾವೆಂದು ನಾವು ತಿಳಿಯಬಹುದು. ಅಂತರ್ಗತ ಕಾರಭಾರದ ಸಂಪೂರ್ಣ ಅಧಿಕಾರವನ್ನು ಪಡೆದಿರುವ ಈ ಕೊಲನಿಗಳಿಗೆ ಯಾವದರ ಕೊರತೆಯೂ ಇಲ್ಲವೆಂದು ನಮಗೆ ತೋರಬಹುದು. ಆದರೆ ಆಯಾ ಕೊಲನಿಗೆ ಏನೇನು ಹೊಟ್ಟೆ ತೊಳಸಿಬರುತ್ತದೆ, ಆಯಾ ಕೊಲನಿಯು ಮನಸ್ಸಿನಲ್ಲಿ ಏನೇನು ಕೊರೆಯುತ್ತಿರುತ್ತದೆ ಇದು ಇತರರಿಗೂ ಗೊತ್ತಾಗದು. ಬಹಿರಂಗದಲ್ಲಿ ಅವು ಸಾಮ್ರಾಜ್ಯ ಸರಕಾರದ ಸಾರ್ವಭೌಮಾಧಿಕಾರದಲ್ಲಿದ್ದಂತೆ ತೋರಿದರೂ ವ್ಯಾಪಾರ, ಸೈನ್ಯ, ಕರಭಾರ ಮುಂತಾದ ಪ್ರಶ್ನೆಗಳ ವಿಷಯದಲ್ಲಿ ಅವುಗಳ ಅಂತರಂಗವು ಹೊರಗಿನ ಜಗತ್ತಿಗೆ ಅಜ್ಞೇಯವಾಗಿದೆ! ಇಂಥ ಪರಿಸ್ಥಿತಿಯಲ್ಲಿ ಕಾಲಕ್ರಮಣವನ್ನು ಮಾಡುತ್ತಿರುವ ಕೊಲನಿಗಳಲ್ಲಿ ಶಾಂತತೆಯು ಎಷ್ಟು ಶುದ್ಧವಾಗಿ ಇದ್ದೀತು? ಇದು ಕೊಲನಿಗಳ ಸಂಗತಿಯು. ಇನ್ನು ಐರ್ಲಂಡಿನ ಸಂಗತಿಯನ್ನಂತೂ ಹೇಳಲಸದಳವು. ಐರ್ಲಂಡಿಗೆ ಫ್ರೀ ಸ್ಟೇಟಿನ ಹೆಸರು ಮತ್ತು ಆ ಹೆಸರಿಗೆ ತಕ್ಕ ಅಧಿಕಾರವು ಕೂಡ ಪ್ರಾಪ್ತವಾಗಿವೆ ಎಂಬುದು ನಿಜ. ಆದರೆ ಅಲ್ಲಿ ಈ ಕಾರಣದಿಂದ ಮತ್ತು ಇತರ ಕಾರಣದಿಂದ ಸಹ ಯಾವ ಯಾವ ಅನರ್ಥಗಳು ಕೇಳಿಬರುತ್ತವೊ, ಯಾವ ಯಾವ ಘಾತಪಾತಗಳು ಸಂಭವಿಸುತ್ತಿರುತ್ತವೊ ಮತ್ತು ಈ ಹೊತ್ತು ಇಂಥವನ ಖೂನಿಯಾಯಿತು, ನಿನ್ನೆ ಇಂಥವನು ಇಂಥವನನ್ನು ಗುಂಡು ಹಾಕಿದನು, ಕೊಂದನು ಇತ್ಯಾದಿ ಯಾವ ವರದಿಗಳು ದಿನಂಪ್ರತಿ ಪ್ರಕಟವಾಗುತ್ತಿರುತ್ತವೊ ಅವುಗಳನ್ನೆಲ್ಲ ಪರ್ಯಾಲೋಚಿಸಿ ನೋಡುವಾಗ ಐರ್ಲಂಡಿನಲ್ಲಿ ಯಥಾರ್ಥ ಶಾಂತತೆಯ ಅಭಾವ ಕಂಡುಬರುತ್ತದೆ. ನೋಡಲು ಹೋದರೆ ಐರ್ಲಂಡು ಸ್ವರಾಜ್ಯವನ್ನು ಬಹು ಬೇಗನೆ ಸಂಪಾದಿಸಬಹುದಿತ್ತು. ಇಂಗ್ಲಂಡಿನ ಧರ್ಮವೂ ಐರ್ಲೆಂಡಿನ ಧರ್ಮವೂ ಒಂದೆ. ಐರ್ಲೆಂಡಿನಲ್ಲಿ ಶಿಕ್ಷಣವು ವಿಪುಲವಾಗಿದೆ. ಸ್ತ್ರೀ ಶಿಕ್ಷಣವೂ ವಿಪುಲವಾಗಿದೆ. ಜಾತಿಭೇದದ ಪಿಶಾಚಿಯೂ ಇಲ್ಲ. ವೋಟಿಂಗಿನ ಸಾಕ್ಷಾತ್ ಅಧಿಕಾರವಿದೆ. ಮತ್ತು ಅದರ ಶಿಕ್ಷಣವೂ ಇದೆ. ಸಾರಾಂಶ, ಈ ಎಲ್ಲ ಅನುಕೂಲತೆಗಳು ಐರ್ಲಂಡಿನಲ್ಲಿರುವಾಗ ಅಲ್ಲಿ ಸ್ವರಾಜ್ಯವು ಇಲ್ಲ. ಮತ್ತು ಈ ಕಾರಣದಿಂದ ಶಾಂತತೆಯೂ ಸಹ ಇಲ್ಲ. ಆಗ ಬರೆ ಶಾಂತತೆಯ ಠರಾವುಗಳನ್ನು ಪಾಸುಮಾಡ್ಡಿ ಫಲವೇನು? ಆ ಠರಾವುಗಳನ್ನು ಯಾರು ಮನ್ನಿಸುವರು?

ಐರ್ಲಂಡಿನಲ್ಲಿ ಶಾಂತತೆಯು ಆಕಾಶಪುಷ್ಪದಂತೆ ಅಸಾಧ್ಯವಾಗಿದೆ ಎಂಬುದು ಮೇಲೆ ಗೊತ್ತಾಗಿದೆಯಷ್ಟೆ. ಹಿಂದುಸ್ಥಾನದಲ್ಲಿಯಾದರೂ ಅಧಿಕಾರಿಗಳ ಒತ್ತಾಟದಿಂದ ಅಸಂತೋಷವು ಎಷ್ಟರ ಮಟ್ಟಿಗಿದೆ ಎಂಬುದನ್ನು ವಿಸ್ತರಿಸಿ ಹೇಳಬೇಕಾದ ಅಗತ್ಯವಿಲ್ಲ. ಸ್ವರಾಜ್ಯದಾನದಲ್ಲಿ ಇಂಗ್ಲಂಡಿನ ಪಾರ್ಲಿಮೆಂಟು ಅನುದಾರತೆಯನ್ನು ತೋರಿಸಿದ ಕಾರಣ ಇಲ್ಲಿ ಒಂದು ಬಗೆಯ ಅಸಂತೋಷವು ಹಬ್ಬಿಕೊಂಡೆ ಇತ್ತು. ಅದರಲ್ಲಿ ಪುನಃ ಇಲ್ಲಿಯ ನೋಕರಶಾಹಿಯು ಒತ್ತಾಳಿಕೆಯ ಒಗ್ಗರಣೆಯನ್ನು ಆಗಾಗ್ಗೆ—ಪ್ರತಿ ದಿವಸವೆಂದರೂ ಅಡ್ಡಿ ಇಲ್ಲ—ಹಾಕುತ್ತಿದ್ದ ಕಾರಣ ಅದು ಹೆಚ್ಚಾಗುತಿದ್ದದ್ದು ಆಶ್ಚರ್ಯವಲ್ಲ. ಐಹಿಕಶಾಂತಿ, ಸುಖ, ಸಮಾಧಾನ ಮತ್ತು ಸಂತೋಷ ಇವುಗಳಿಗೆ ಸ್ವರಾಜ್ಯವು ಕಾರಣವು. ಅಂಥ ಸ್ವರಾಜ್ಯವನ್ನು ದೂರದಲ್ಲಿ ಹಾಕಿದ್ದರಿಂದ ಇವೆಲ್ಲ ದೂರದಲ್ಲಿ ಹೋದವು. ಪುನಃ ಒತ್ತಾಳಿಕೆಯ ಪರಮಾವಧಿಯಾದ್ದರಿಂದ ಅಸಂತೋಷವು ವಿಪರೀತ ಸ್ಥಿತಿಗೆ ಬಂದು ಬಿಟ್ಟಿದೆ. ಆಗ ಈ ಶಾಂತತೆಯ ಠರಾವನ್ನುಮಾಡಿ ಫಲವೇನು? ನ್ಯಾಯವಾಗಿ ಹೇಳುವುದಾದರೆ, ಹಿಂದುಸ್ಥಾನದಲ್ಲಿ ಸಂಪೂರ್ಣ ಶಾಂತತೆ ಇದೆ. ಅನತ್ಯಾಚಾರದ ಚಳವಳವು ಪ್ರಾರಂಭವಾದಂದಿನಿಂದ ಜನರು ಅದರ ಮಹತ್ವವನ್ನರಿದು ಅದನ್ನು ಆಚರಣೆಯಲ್ಲಿ ತಂದಿದ್ದಾರೆ. ಆದ್ದರಿಂದ ಶಾಂತತೆಯ ಠರಾವು ಜನರಿಗೆ ಅಗತ್ಯವಿಲ್ಲ. ಔಷಧವು ರೋಗಿಗೆ ಬೇಕಲ್ಲದೆ, ಆರೋಗ್ಯವಂತನಿಗೆ ಅಗತ್ಯವಿಲ್ಲ. ಹಾಗೆಯೆ ಅಶಾಂತಿಯನ್ನುಂಟುಮಾಡುವ, ಅಸಮಾಧಾನವನ್ನು ಹಬ್ಬಿಸುವ, ನಾನಾ ತರದ ಆಯುಧಗಳನ್ನು ಇಟ್ಟುಕೊಂಡು ಅವುಗಳ ಉಪಯೋಗದಿಂದ ಭಯಂಕರ ಅಸಂತೋಷವನ್ನು ಪಸರಿಸುವ ಯಾವ ರಾಜರು ಲೋಕದಲ್ಲಿದ್ದಾರೊ ಅಂಥ ರಾಜರಿಗೆ, ಅಂಥ ಸರಕಾರಗಳಿಗೆ ಮತ್ತು ಅವರ ಅಧಿಕಾರಿಗಳಿಗೆ ಶಾಂತತೆಯ ಠರಾವಿನ ಮಾತ್ರೆಗಳು ಮತ್ತು ಗುಳಿಗೆಗಳು ಬೇಕು. ಹೊರತು ಇತರರಿಗೆ ಅವು ಯಾಕೆ? ದುರ್ಬಲ ಜನರಿಂದ ಶಾಂತತಾಭಂಗವಾಗುವ ಸಂಭವವೆ ಇಲ್ಲ. ಆದ್ದರಿಂದ ಅವರ ಮಟ್ಟಿಗೆ ಇವು ನಿರರ್ಥಕವಾದವುಗಳು. ಸಬಲರ ದಪ್ಪ ಕಿವಿಗೆ ಇವು ಕೇಳಿಸುವುದಿಲ್ಲ. ಹೀಗಿರಲು ಈ ಠರಾವುಗಳನ್ನು ಪಾಸುಮಾಡುವ ಪರಿಶ್ರಮವು ನಿಷ್ಫಲವಾಗಿದೆ. ಆದರೂ ನೀರಿನ ಭ್ರಾಂತಿಯಿಂದ ಸಹರಾದೊಳಗಿನ ಮಳಲು ಮೈದಾನಿನಲ್ಲಿ ಮೃಗಗಳು ಓಡಿ ಸೋತುಹೋಗುವಂತೆ ಕೆಲವರು ಶಾಂತತೆಯ ಠರಾವಿನ ಆವೃತ್ತಿಗಳನ್ನು ವರ್ಷಕ್ಕೊಮ್ಮೆ ಹೊರಡಿಸಿ, ಕಂಠಶೋಷಣದಿಂದ ಸೋತುಹೋಗುತ್ತಿದ್ದಾರೆ! ಇದು ಶೋಚನೀಯವಲ್ಲವೆ? ಆದರೂ ಲೋಕದಲ್ಲಿ ಶಾಂತಿಯು ಬೇಕೆಂಬುದು ಮಾತ್ರ ನಿಶ್ಚಯವು. ಇದನ್ನು ಅಲ್ಲಗಳೆಯಲು ಯಾರಿಗೂ ಸಾಧ್ಯವಿಲ್ಲ.

ಸ್ಫುಟವಿಚಾರಗಳು.

೧. ರಾಜಕೀಯ ಕಾರಣದಿಂದ ಜನಗಳನ್ನು ಕೈದುಮಾಡುವುದು ಕಲಕತ್ತಾ ಪಟ್ಟಣದಲ್ಲಿ ಇನ್ನೂ ನಿಲ್ಲಲಿಲ್ಲ. ಯುವರಾಜರು ಬಂದ ಕಾಲದಲ್ಲಿ ಅಥವಾ ಕೊಂಗ್ರೆಸ್ ಸ್ವಯಂಸೇವಕರ ಭರತಿಯ ಕಾಲದಲ್ಲಿ ಜನಗಳನ್ನು ಕೈದುಮಾಡಲು ಅಧಿಕಾರಿಗಳಿಗೆ ಸಕಾರಣವಾದ್ದಾಗಲಿ, ನಿಷ್ಕಾರಣವಾದ್ದಾಗಲಿ ಒಂದು ನೆವವಿತ್ತು. ಸ್ವಯಂಸೇವಕರ ಭರತಿಯು ನಡೆದಾಗಂತೂ ಕ್ರಿಮಿನಲ್ ಲೊ ಎಮೆಂಡ್‌ಮೆಂಟ್ ಎಕ್ಟಿನ ಆಧಾರದಿಂದ ಪೋಲೀಸರು ಕೈದುಮಾಡುವ ಕೆಲಸವನ್ನು ನಡಿಸುತ್ತಿದ್ದರು. ಆದರೆ ಈಗ ಯುವರಾಜರ ಆಗಮನ ನಿರ್ಗಮನದ ಗಲಾಟೆ ಇಲ್ಲ; ಸ್ವಯಂಸೇವಕರ ಭರತಿಯ ಚಳವಳವಿಲ್ಲ; ಆದರೂ ಕಲಕತ್ತೆಯ ಪೋಲೀಸರು ಹೆಂಗಸರನ್ನೂ, ಯುವಕರನ್ನೂ ಕೈದುಮಾಡುತ್ತಿದ್ದಾರೆ. ನಿಜವಾದ ಅಸಂತೋಷಪ್ರಸಾರಕ್ಕಾಗಲಿ, ಗಲಾಟೆಯ ಉದ್ಭವಕ್ಕಾಗಲಿ, ಶಾಂತತಾಭಂಗಕ್ಕಾಗಲಿ ಅಥವಾ ಇತರ ಕ್ಷೋಭಕ್ಕಾಗಲಿ ಕಾರಣವಿಲ್ಲವಾದರೂ ಪೋಲೀಸರ ಮಟ್ಟಿಗೆ ಒಂದು ನೆವವು ಇದ್ದೆ ಇರಬಹುದು. ಕೆಲವು ತರುಣ ಹುಡುಗರು ಮತ್ತು ಪ್ರೌಢ ಹೆಂಸಗರು ಖಾದಿ ಪ್ರಸಾರಕ್ಕಾಗಿ ಉಪದೇಶವನ್ನು ಮಾಡುತ್ತಿದ್ದರು. ವಿದೇಶಿ ಜವಳಿ ಮಳಿಗೆಗೆ ಹೋಗಿ ಅಲ್ಲಿಯ ಅಂಗಡಿಗಾರನನ್ನು ಕಂಡು ಮತ್ತು ಗಿರಾಕಿಗಳನ್ನು ಭೇಟಿಯಾಗಿ "ಖಾದಿಯನ್ನೆ ಮಾರಿರಿ; ಖಾದಿಯನ್ನೆ ತೆಕ್ಕೊಳ್ಳಿರಿ' ಎಂದು ಬಹು ಶಾಂತರೀತಿಯಿಂದಲೂ, ಸೌಮ್ಯವಿಧದಿಂದಲೂ ಉಪದೇಶಕರು ಉಪದೇಶಿಸುತ್ತಿದ್ದರು. ನಿಜವಾಗಿ ಇದರಲ್ಲಿ ಯಾವ ತಪ್ಪು? ತಥಾಪಿ ಕಲಕತ್ತೆಯ ಪೋಲೀಸರಿಗೆ ಇದರಲ್ಲಿ ಮಹಾ ಅಪರಾಧವು ಕಂಡುಬಂತು; ಮತ್ತು ಅವರು ಹೆಂಗಸರನ್ನೂ, ತರುಣರನ್ನೂ ಪ್ರತಿಬಂಧಿಸಹತ್ತಿದರು! ಮೋಟರಕಾರಿನಿಂದ ಇಳಿದು, ಅಂಗಡಿಗೆ ಹೋಗುವಷ್ಟರಲ್ಲಿ ಪೋಲೀಸರು ಹೆಂಗಸರನ್ನು ಸುತ್ತುಹಾಕಿದರು. ಆಗ ಹೆಂಗಸರು ಒಂದೇ ದಾರಿಯನ್ನು ಬಿಡಿರಿ, ಇಲ್ಲವೆಂದರೆ ತಮ್ಮನ್ನು ಪ್ರತಿಬಂಧಿಸಿರಿ ಎಂದು ಹೇಳಿದರು. ಆಗ ಪೋಲೀಸರು ಸಹಜವಾಗಿ ಎರಡನೆಯ ಪಕ್ಷವನ್ನೆ ಅವಲಂಬಿಸಿ ಅವರನ್ನು ಕೈದುಮಾಡಿದರು! ಇದು ಪೋಲೀಸರ ಪೌರುಷ! ಇಷ್ಟರಿಂದಲೆ ಅವರ ಪೌರುಷವು ಮುಗಿಯಿತೆ? ಇಲ್ಲ. ಕಲಕತ್ತೆಯ ಪತ್ರಿಕೆಗಳ ಅಂಬೋಣದ ಪ್ರಕಾರ ಕೆಲವು ಹೆಂಗಸರನ್ನು ದಾರಿಯಲ್ಲಿ ಜೈಲಿಗೆ ಕೊಂಡುಹೋಗುವಾಗ ನೂಕಿದರೆಂದೂ, ಉಪದ್ರಪಡಿಸಿದರೆಂದೂ ಪ್ರಕಟವಾಗಿದೆ!! ಇದನ್ನು ನೋಡುವಾಗ, ಪೋಲೀಸರ ಪರಾಕ್ರಮವು ಎಷ್ಟು ದೊಡ್ಡದೆಂಬುದು ಗೊತ್ತಾಗುತ್ತದಲ್ಲವೆ? ಆದರೆ ಈ ಮಹಾ ಪರಾಕ್ರಮಿಗಳಾದ ಪೋಲೀಸರ ಬಹುದೊಡ್ಡ ದುರ್ದೈವವೇನೆಂದರೆ, ಜೈಲಿನಲ್ಲಿ ಜಾಗೆಯ ಅಭಾವದ ದೆಸೆಯಿಂದ ಇವರನ್ನು ಬಿಟ್ಟುಬಿಡಬೇಕಾಯಿತು. ಈ ರೀತಿಯಿಂದ ಪೋಲೀಸರು ಗಾಳಹಾಕಿ ತಂದ ಕೊಳ್ಳೆಯು ವ್ಯರ್ಥವಾಯಿತು! ಇರಲಿ. ಮದರಾಸದ ಹಿಂದೂ ಪತ್ರಿಕಾಕರ್ತರು ಟೀಕಿಸುವಂತೆ, ಇಲ್ಲಿ ಒಂದು ಪ್ರಶ್ನೆಯು ಬರುತ್ತದೆ. ಕೆಲವರನ್ನು ಜಾಗೆಯ ಅಭಾವದಿಂದ ಬಿಟ್ಟಿದ್ದರಾದರೂ ಕೆಲವರನ್ನು ಹಾಗೆಯೆ ಪ್ರತಿಬಂಧದಲ್ಲಿ ಇಡೋಣಾಗಿದೆ; ಆದರೆ ಇವರನ್ನು ಯಾವ ಕಲಮಿನ ಆಧಾರದಿಂದ ಹಿಡಿದದ್ದು? ಕಾನೂನು, ವಿಚಾರ ಮುಂತಾದ್ದೇನೂ ಇಲ್ಲದೆ, ಮನಸ್ಸು ಬಂದತೆ ರಾಜ್ಯಕಾರಭಾರವನ್ನು ನಡಿಸುವುದರಲ್ಲಿ ಮೊದಲು ಉತ್ತರ ಹಿಂದೂಸ್ಥಾನದಲ್ಲಿ ಮೊಗಲರ ಆಳಿಕೆಯೂ ನಮ್ಮ ದಕ್ಷಿಣ ಹಿಂದೂಸ್ಥಾನದಲ್ಲಿ ಹಾಗಲವಾಡಿ ಸಂಸ್ಥಾನದ ಆಳಿಕೆಯೂ ಸುಪ್ರಸಿದ್ಧವಾಗಿದ್ದವು. ಆದರೆ ಈಗ ಇಡೀ ಹಿಂದೂಸ್ಥಾನದಲ್ಲಿ ಈಗಿನ ಕಾರಭಾರದ ಅನೇಕ ಸಂಗತಿಗಳು ಆ ಮೊಗಲ ಕಾರಭಾರದ ಅಥವಾ ಈ ಹಾಗಲವಾಡಿ ಸಂಸ್ಥಾನದ ಸಾಕ್ಷಾತ್ ಚಿತ್ರಗಳೆ ಎಂದು ತೋರುತ್ತಿದೆ! ಕಾನೂನಿನ ಆಧಾರದ ಮೇಲೆ ಈ ರಾಜ್ಯವು ಸ್ಥಾಪಿತವಾದ್ದು. ಈಶ್ವರ ಸೃಷ್ಟಿಯಲ್ಲಿ ಹೇಗೆ ಒಂದು ಅಣುರೇಣುವು ಸಹ ಈಶ್ವರನ ಇಚ್ಛೆ ಇಲ್ಲದೆ ಚಲಿಸುವುದಿಲ್ಲವೊ ಹಾಗೆಯೆ ಬ್ರಿಟಿಷ ರಾಜ್ಯದಲ್ಲಿ ಕಾನೂನಿನ ಆಧಾರವಿಲ್ಲದೆ ಒಂದೆ ಒಂದು ಸಂಗತಿಯೂ ಸಂಭವಿಸುವುದಿಲ್ಲ. ಇದು ಆಬಾಲವೃದ್ಧರಿಗೆ ಗೊತ್ತಿದ್ದ ವಿಷಯವು. ಹೀಗಿರುವಾಗ ಕಲಕತ್ತೆಯ ಇತ್ತಲಾಗಿನ ಪ್ರತಿಬಂಧಗಳ ಕಾನೂನುಗಳನ್ನು ಪ್ರಕಟಿಸದೆ ಇದ್ದದ್ದು ಕಾಯದೆಯ ಅಖಂಡ ಕೀರ್ತಿಗೆ ಒಂದು ಕಲಂಕವೆ ಸರಿ!

೨. ಮಾಜಿ ಭಾರತಮಂತ್ರಿಗಳಾದ ಮಿ| ಮೊಂಟೆಗ್ಯು ಸಾಹೇಬರಿಗೆ, ವಿಲಾಯತಿಯಲ್ಲಿ, ಹಿಂದಿ ಸಂಸ್ಥಾನಿಕರು ಒಂದು ಔತನವನ್ನು ಕೊಟ್ಟರು. ಮಿ| ಮೊಂಟೆಗ್ಯುಗಳು ಹಿಂದುಸ್ಥಾನದ ಸೂತ್ರಗಳನ್ನು ನಡಿಸುತ್ತಿರುವಾಗ, ಅವರ ಪ್ರಯತ್ನದಿಂದಲೆ ಹಿಂದುಸ್ಥಾನಕ್ಕೆ ಸುಧಾರಣಾ ಕಾನೂನು ಪ್ರಾಪ್ತವಾದ್ದರಿಂದ ಮತ್ತು ಅದ ಕಾನೂನಿನಲ್ಲಿ ಸಂಸ್ಥಾನಿಕರ ಹಿತ ಸಂಬಂಧವು ಸಾಧ್ಯವಿದ್ದಷ್ಟು ಒಳ್ಳೇದಾದ್ದರಿಂದ ಹಿಂದಿ ಸಂಸ್ಥಾನಿಕರು, ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಲು ಮೊಂಟೆಗ್ಯು ಸಾಹೇಬರಿಗೆ ಔತನವನ್ನು ಕೊಟ್ಟದ್ದು ಸಹಜವೆನ್ನಬೇಕಾಗುತ್ತದೆ. ಬಿಕಾನೇರ, ಝಾಲವಾಲ, ಕಪೂರಥಳಾ, ಪುದುಕೋಟಾ ಮುಂತಾದ ಸಂಸ್ಥಾನಗಳ ಮಹರಾಜರು ಔತನದ ಸಮಾರಂಭದಲ್ಲಿ ಹಾಜರಿದ್ದರು. ಅದಲ್ಲದೆ, ಆ ಸಮಯದಲ್ಲಿ ಗೈರ್ ಹಾಜರಿದ್ದ ಬಡೋದಾ ಮಹಾರಾಜರಂಥವರ ಅನುಕೂಲಸಂದೇಶಗಳು ಸಮಾರಂಭದ ಕೃತಜ್ಞತೆಯಲ್ಲಿ ಒಂದಿಷ್ಟು ಭರತಿಯನ್ನೆ ಹಾಕುತಿದ್ದವು. ಬಿಕಾನೀರದ ಮಹಾರಾಜರು ಈ ಸಮಯದಲ್ಲಿ ಭಾಷಣ ಮಾಡುವಾಗ ಹಿಂದಿ ಸ್ವರಾಜ್ಯದ ವಿಷಯವಾಗಿ ಮೊಂಟೆಗ್ಯುಗಳು ಪಟ್ಟ ಪರಿಶ್ರಮವನ್ನೂ, ಆಸಕ್ತಿಯನ್ನೂ ಉಲ್ಲೇಖಿಸಿ ಮೊಂಟೆಗ್ಯುಗಳನ್ನು ಕೊಂಡಾಡಿದರು. ಪ್ರತ್ಯುತ್ತರದಲ್ಲಿ ಮೊಂಟೆಗ್ಯುಗಳು ಸಂಸ್ಥಾನಿಕರ ರಾಜಭಕ್ತಿ, ಯುದ್ಧದ ಸಮಯದಲ್ಲಿ ಮಾಡಿದ ಅಪೂರ್ವ ಸೇವೆ, ಮುಂತಾದನ್ನು ಅನುವಾದಿಸಿ ಇನ್ನು ಮುಂದೆಯೂ ಸಂಸ್ಥಾನಗಳಿಗೂ ಬ್ರಿಟಿಷ್ ಸಾಮ್ರಾಜ್ಯಕ್ಕೂ ನಿಬಿಡವಾದ ಸಂಬಂಧ ಉಳಿಯುವಂತೆ, ಅಭಿವೃದ್ಧಿಯುಂಟಾಗುವಂತೆ ನಡಕೊಳ್ಳಬೇಕೆಂದು ಸೂಚಿಸಿದರು. ಅಂತು ಔತನದ ಸಮಾರಂಭವು ಯಾವಾಗಲೂ ಸವಿನುಡಿಯಿಂದಲೂ ಪರಸ್ಪರ ಸ್ತುತಿಯಿಂದಲೂ ತುಂಬಿರುವ ಯಾವ ವಾಡಿಕೆಯುಂಟೊ ಆ ವಾಡಿಕೆಯಂತೆ ಮೊನ್ನೆ ಎಲ್ಲ ಪ್ರಕಾರಗಳು ಯಥಾ ಸಾಂಗವಾಗಿದ್ದವು. ಹಿಂದುಸ್ಥಾನದ ಸುಧಾರಣೆಯ ಬಗ್ಗೆ ಮಹಾರಾಜರಾಗಲಿ ಇತರರಾಗಲಿ ಮೊಂಟೆಗ್ಯುಗಳನ್ನು ಹೊಗಳುವುದೂ, ಮೊಂಟೆಗ್ಯುಗಳು ಪ್ರತಿಯಾಗಿ ಇವರನ್ನು ಬೆನ್ನುತಟ್ಟುವುದೂ ಒಳ್ಳೇಯದೆ ಎನ್ನೋಣ. ಆದರೆ ಯಾವ ಸುಧಾರಣೆಗಳ ದೆಸೆಯಿಂದ ಇಷ್ಟು "ಅಹೋರೂಪಮಹೋಧ್ವನಿ"ಯಾಗುತ್ತದೊ ಆ ಸುಧಾರಣೆಗಳಿಂದ ಹಿಂದೂಸ್ಥಾನಕ್ಕೆ ಸಂತೃಪ್ತಿ ಇಲ್ಲವೆಂಬುದು ಈಗ ಎಲ್ಲ ಜಗತ್ತಿಗೆ ಗೊತ್ತಿರುವಾಗ ಈ ಪರಸ್ಪರ ಪ್ರಶಂಸೆಯು ಯಾಕೆ ಎಂದು ಕೇಳದೆ ನಿವೃತ್ತಿ ಇಲ್ಲ

೩. ಶ್ರೀಮತಿ ಸರೋಜನಿನಾಯಡುಯವರು ರಾಷ್ಟ್ರೀಯ ಸಭೆಯ ಕಾರ್ಯಕ್ರಮದ ವಿಷಯದಲ್ಲಿ ತಮ್ಮ ಮತವನ್ನು ವ್ಯಕ್ತಗೊಳಿಸಿದ್ದಾರೆ. ಈ ಮತದ ಮುಖ್ಯ ಸಾರವೇನೆಂದರೆ, ರಾಷ್ಟ್ರೀಯ ಸಭೆಯವರು ಕೌನ್ಸಿಲ್ ಬಹಿಷ್ಕಾರವನ್ನು ಸಡಿಲುಪಡಿಸುವುದು ಚಂದವಲ್ಲ. ಅದನ್ನು ಸಡಿಲುಪಡಿಸಿದ್ದಾದರೆ ಸ್ವರಾಜ್ಯಪ್ರಾಪ್ತಿಯು ದೂರಕ್ಕೆ ಹೋದೀತು. ವಕೀಲರು ಕೋರ್ಟುಗಳಲ್ಲಿ ಪುನಃ ಪ್ರವೇಶಿಸಿದ ವಿಷಯವಾಗಿ ಶ್ರೀಮತಿ ನಾಯಡುಯವರು ತಮ್ಮ ಮತವನ್ನು ಕೊಡುವಾಗ ವಕಾಲತನ್ನು ಪುನಃ ಪ್ರಾರಂಭಿಸುವ ವಕೀಲರನ್ನು ರಾಷ್ಟ್ರೀಯ ಸಭೆಯಿಂದ ಹೊರಪಡಿಸುವ ಅಗತ್ಯವಿಲ್ಲ. ಅವರ ಬಗ್ಗೆ ಆದಷ್ಟು ಸಹಿಷ್ಣುತೆಯನ್ನು ತೋರಿಸಿ ರಾಷ್ಟ್ರೀಯ ಸಭೆಯು ಅವರಿಂದ ಉಪಯುಕ್ತವಾದ ಕಾರ್ಯವನ್ನು ತಕ್ಕೊಳ್ಳಬಹುದು. ಈ ಎರಡು ವಿಷಯಗಳನ್ನು ಕುರಿತು ಸರೋಜಿನಿಯವರು—ಕರ್ನಾಟಕ ಕೊನ್ಫರೆನ್ಸಿನ ಅಧ್ಯಕ್ಷರಾದ ಸರೋಜನಿಯವರು—ಈ ರೀತಿಯಿಂದ ನಿಶ್ಚಿತ ಅಭಿಪ್ರಾಯವನ್ನು ಕೊಟ್ಟು ಶಾಲಾ-ಕೋಲೇಜುಗಳ ಸಂಗತಿಯಲ್ಲಿ ಮಾತ್ರ ಅವುಗಳನ್ನು ಬಹಿಷ್ಕರಿಸುವುದು ದೂರದರ್ಶಿತೆಯ ಲಕ್ಷಣವಲ್ಲವೆಂದು ಹೇಳುತ್ತಾರೆ. ವಿಪುಲವಾದ ದ್ರವ್ಯಸಹಾಯದಿಂದ ಸರಿಯಾದ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ ಹೊರತು ವಿದ್ಯಾರ್ಥಿಗಳನ್ನು ಶಾಲೆಗಳಿಂದ ತಪ್ಪಿಸುವುದು ಹಿತಾವಹವಲ್ಲ, ಸರೋಜಿನಿ ದೇವಿಯುವರ ಈ ಮತವು ಇತ್ತಲಾಗಿನದೊ ಅಥವಾ ಮುಂಚಿನಿಂದಲೆ ಇದ್ದದ್ದೊ ಎಂಬುದನ್ನು ತಿಳಿಯಲು ಸಾಧನವಿಲ್ಲ. ಆದರೆ ಅವರು ಸಾಮುದಾಯಿಕ ಕಾಯಿದೆಭಂಗವನ್ನು ಪ್ರಾರಂಭಿಸಕೂಡದೆಂದು ಹೇಳಿದ ಮಾತು ಮಾನ್ಯವಾಗತಕ್ಕದ್ದೆ ಸರಿ. ಸರೋಜಿನಿದೇವಿಯುವರಂತೆಯೆ ಅನೇಕರು ಸಾಮುದಾಯಿಕ ಕಾಯಿದೆಭಂಗದ ವಿಷಯದಲ್ಲಿ ಪ್ರತಿಕೂಲರಿದ್ದಾರೆ. ಒಂದು ವೇಳೆ ವೈಯಕ್ತಿಕ ಕಾಯಿದೆಭಂಗವನ್ನು ಒಂದು ವಿವಕ್ಷಿತ ಪ್ರಮಾಣದಲ್ಲಿ ಮಾಡಬಹುದಾದರೂ ಸಾಮುದಾಯಿಕಕಾಯಿದೆಭಂಗದ ಚಳವಳವನ್ನು ಪ್ರಾರಂಭಿಸುವಷ್ಟು ಸಿದ್ಧತೆಯು ಈ ಜನಾಂಗದಲ್ಲಿ ಉಂಟಾಗಿಲ್ಲವಾದ ಕಾರಣ ಅದರ ಸುದ್ದಿಯನ್ನು ತತ್ಕಾಲಕ್ಕೆ ಬಿಟ್ಟುಬಿಡುವುದು ಶ್ರೇಯಸ್ಕರವೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಸರೋಜಿನಿ ದೇವಿಯವರು ಸಹ ಇದನ್ನೆ ಅನುವಾದಿಸುತ್ತಾರೆ.

೪. ಮಹಾತ್ಮಾ ಗಾಂಧಿಗಳ ಆರೋಗ್ಯದ ವಿಷಯದಲ್ಲಿ ಮೊನ್ನೆಯ ಮುಂಬಯಿ ಕೌನ್ಸಿಲಿನಲ್ಲಿ ಹಲವು ಪ್ರಶ್ನೆಗಳು ಕೇಳಲ್ಪಟ್ಟವು. ಜೈಲ್ ಅಧಿಕಾರದ ಚಾರ್ಜಿನಲ್ಲಿದ್ದ ನಾಮದಾರ ಹೇವರ್ಡರೆಂಬವರು ಸರಕಾರದ ಕಡೆಯಿಂದ ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವಾಗ ಗಾಂಧಿಗಳು ಆರೋಗ್ಯದಲ್ಲಿದ್ದಾರೆ. ಹಾಗು ಅವರ ಆರೋಗ್ಯದ ವಿಷಯವು ಖಾಸಗಿಯಾಗಿರುವುದರಿಂದ ಸಾರ್ವಜನಿಕರೂಪದಿಂದ ಅದರ ಚರ್ಚೆ ನಡೆಯುವುದು ಸ್ವತಃ ಗಾಂಧಿಗಳಿಗೆನೆ ಇಷ್ಟವಿಲ್ಲವೆಂದೂ ಹೇಳಿದರು, ಬೇರೆ ಕೆಲವು ಸವಾಲುಗಳಿಗೆ ಕೊಟ್ಟ ಉತ್ತರದ ಮೇಲಿಂದ ಅವರಿಗೆ ಇನ್ನೂ ವರ್ತಮಾನಪತ್ರಿಕೆಗಳನ್ನು ಪೂರಯಿಸುವುದಿಲ್ಲವೆಂಬ ಮಾಹಿತಿಯು ಹೊರಗೆಬಂದಿದೆ. ಕೌನ್ಸಿಲಿನ ಇದೆ ಅಧಿವೇಶನದಲ್ಲಿ ರಾಜಕೀಯಕೈದಿಗಳನ್ನು ಇಂಗ್ಲಂಡಿನಲ್ಲಿ ನಡಿಸುವ ರೀತಿಯಿಂದ ನಡಿಸಬೇಕೆಂದು ಮಿ. ಮುತಾಲಿಕರೆಂಬವರು ಒಂದು ಠರಾವನ್ನು ತಂದಿದ್ದರು. ಈ ಠರಾವನ್ನು ಪ್ರತಿರೋಧಿಸುವಾಗ ಅದೆ ಹೇವರ್ಡ ಸಾಹೇಬರು ಒಂದು ದೊಡ್ಡ ಭಾಷಣವನ್ನು ಮಾಡಿ ಕೊನೆಗೆ ರಾಜಕೀಯ ಕೈದಿ ಎಂಬೀ ಶಬ್ದದ ವ್ಯಾಖ್ಯೆಯನ್ನು ಹೇಳುವುದು ಕಷ್ಟವಾಗಿದೆ ಎಂದು ಹೇಳಿದರು! ಹೇವರ್ಡರು "ರಾಜಕೀಯ ಕೈದಿ" ಎಂಬ ಶಬ್ದದ ವ್ಯಾಖ್ಯೆಯನ್ನು ನಿಜವಾಗಿ ಅರಿಯದವರೆ? ಅಥವಾ ಮನಸ್ಸಿದ್ದರೆ, ಅದರ ಅರ್ಥವನ್ನು ಕಲ್ಪಿಸುವುದು ಅವರಿಗೆ ಕಷ್ಟವೆ? ಆದರೂ ತೊಂದರೆಯನ್ನು ತಂದುಹಾಕಿ ಪ್ರಕರಣವನ್ನು ಮುಗಿಸಬೇಕೆಂದು ಹೊರಟವರಿಗೆ ಯಾವುದಾದರೂ ಒಂದು ನೆವವು ಸಿಗುತ್ತದೆ! ಹೇವರ್ಡ ಸಾಹೇಬರಿಗೂ ರಾಜಕೀಯ ಕೈದಿ ಎಂಬೀ ಶಬ್ದದ ವ್ಯಾಖ್ಯೆಯು, ಆದ್ದರಿಂದಲೆ ಕಷ್ಟಸಾಧ್ಯವಾಗಿ ತೋರಿತು! ಆಗ ಅತ್ಯಾಚಾರದ ಗುನ್ಹೆಗಳನ್ನು ಮಾಡದವರು ರಾಜಕೀಯಕೈದಿಗಳೆಂದು ಅರ್ಥಮಾಡಿ ಒಂದು ಉಪಸೂಚನೆಯನ್ನು ಇನ್ನೊಬ್ಬ ಸಭಾಸದರು ತಂದರು. ಈ ಉಪಸೂಚನೆಯೊಟ್ಟಿಗೆ ಮೂಲ ಠರಾವು ಒಂದೆ ಒಂದು ಮತದ ಆಧಿಕ್ಯದಿಂದ ಪಾಸಾಗಿದೆ! ನಮ್ಮ ಕೌನ್ಸಿಲುಗಳ ಸ್ಥಿತಿಯನ್ನು ನೋಡಿರಿ!

೫. ಹಿಂದೂಸ್ಥಾನ ಸರಕಾರವು ರೌಲೆಟ ಎಕ್ಟ ಮುಂತಾದ ಒತ್ತಾಟದ ಕಾನೂನುಗಳನ್ನು ತೆಗೆದನಂತರ ಇನ್ನೊಂದು ಬಹು ಭಯಂಕರವಾದ ಕಾನೂನು ತರಲಿಕ್ಕೆ ಆಲೋಚಿಸುತ್ತದೆಂಬ ವಾರ್ತೆಯು ಹಬ್ಬಿದ್ದು ನಮ್ಮ ವಾಚಕರಿಗೆ ಗೊತ್ತಿರಬಹುದು. ಈ ಕಾನೂನು ರೌಲೆಟ ಕಾನೂನಿಗಿಂತಲೂ ಹೆಚ್ಚು ಅನಾಹುತ ಮಾಡಲಿಕ್ಕಿದೆ ಎಂತಲೂ ಯಾವ ಸಭೆಯನ್ನಾದರೂ ಸರಕಾರವು ನಿಲ್ಲಿಸ ಬಹುದೆಂತಲೂ ಅಥವಾ ಅಂಥ ಸಭೆಯಲ್ಲಿ ಇದ್ದ ಮುಖಂಡರನ್ನು ಕೈದುಮಾಡಬಹುದೆಂತಲೂ ಸೂಚಿಸಿದ್ದರು. ಆದರೆ ಈ ವರ್ತಮಾನವು ಸುಳ್ಳೆಂದು ಈಗ ಪ್ರಕಟವಾಗಿದೆ! ಅಲಹಾಬಾದದ ಲೀಡರ್ ಪತ್ರದ ಒಬ್ಬ ಪ್ರತಿನಿಧಿಯು ಎಕ್ಸಿಕ್ಯುಟಿವ್ ಕೌನ್ಸಿಲಿನ ಕಾಯದೆ ಮೆಂಬರರಾದ ಡೊ. ಸಪ್ರು ಇವರೊಡನೆ ಸಂಭಾಷಣೆ ಮಾಡಿದಾಗ ಸರಕಾರವು ಇಂಥ ಭಯಂಕರ ಕಾಯದೆಯನ್ನು ತರಲಿಕ್ಕಿದೆಯೊ ಎಂದು ಕೇಳಿದನು. ಅದಕ್ಕೆ ಸಪ್ರುರವರು "ಇಂಥ ಕಾಯದೆಯನ್ನು ಸರಕಾರವು ತರಲು ಎಂದೂ ಆಲೋಚಿಸಿದ್ದಿಲ್ಲ ಮತ್ತು ಈಗಲೂ ಆಲೋಚಿಸುವುದಿಲ್ಲ. ಮೊದಲು ಪ್ರಕಟಿಸಿದ ವರ್ತಮಾನವು ಸುಳ್ಳೆಂತಲೂ ಅದರಲ್ಲಿ ಲವಮಾತ್ರವೂ ಸತ್ಯಾಂಶವಿಲ್ಲವೆಂತಲೂ" ಹೇಳಿದರು. ಹಿಂದುಸ್ಥಾನದ ಜನರಲ್ಲಿ ಬೆದರಿಕೆಯನ್ನು ಹುಟ್ಟಿಸಬೇಕೆಂತಲೊ ಏನೊ, ಆ ಬಾತಮಿದಾರನು, ಸುಳ್ಳು ವರ್ತಮಾನವನ್ನು ಪ್ರಕಟಿಸಿ ಕೌತುಕಪಟ್ಟಿರಬಹುದು. ಇಲ್ಲವೆ ಸರಕಾರವು ಅಂಥ ಕಾಯಧೆಯನ್ನು ತರಲು ಉದ್ಯುಕ್ತವಾಗಿ ಹಿಂದಿಜನರ ನಿಷೇಧವನ್ನು ನೋಡಿ ಈಗ ನಿವೃತ್ತಿಯಾಗಿರಬಹುದು. ಈ ಎರಡರಲ್ಲಿ ಯಾವುದು ಸತ್ಯವೆಂದು ಹೇಳಲು ಸಾಧ್ಯವಿಲ್ಲ. ಆದರೆ ಡಾ. ಸಪ್ರು ಇವರು ಕಾಯದೆ ಮೆಂಬರರಾದ್ದರಿಂದ ಯಾವ ಕಾನೂನುತರಬೇಕಿದ್ದರೂ ಅದು ಇವರಿಗೆ ಗೊತ್ತಿರುತ್ತಿತ್ತು. ಒಂದು ವೇಳೆ ಸರಕಾರವು ಇಂಥ ಕಾಯದೆಯನ್ನು ತರುವ ಸಂಗತಿಯನ್ನು ತಿಳಿದು ಹಾಗೂ ಹಿಂದಿಜನರ ಹೇಳಿಕೆಯನ್ನು ಬಲ್ಲಾಗಿಯೊ ಏನೊ ಸಪ್ರುರವರು ತಮ್ಮ ಗೌರವವನ್ನು ಕಾದುಕೊಳ್ಳಲು ಅದನ್ನು ನಿಷೇಧಿಸಿರಬಹುದು. ಹೇಗೂ ಇರಲಿ. ಈಗ ಅಂಥ ಕಾಯದೆಯು ಬರಲಿಕ್ಕಿಲ್ಲವೆಂದು ತೋರುತ್ತದೆ. ಆದರೆ ಇಂಥ ಕಾನೂನು ಇದ್ದರೇನು! ಇಲ್ಲದಿದ್ದರೇನು! ಹಿಂದುಸ್ಥಾನದಲ್ಲಿ ಯಾವ ಕಾಯದೆಯೂ ನಡದೀತು! ಹಿಂದೆ ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ಮಿಲಿಟರಿ ಮೆಂಬರನು ಅಂದಂತೆ ಇಡಿ ಹಿಂದುಸ್ಥಾನದಲ್ಲಿ ಮಾರ್ಶಲ್ ಲೊ ಕಾಯದೆಯನ್ನು ಪುಕಾರಿಸಿದರೂ ಆದೀತು. ಆದರೆ ಇತರ ರಾಷ್ಟ್ರಗಳು ತಮಗೆ ಏನೆಂದಾವೆಂದು ಮಾತ್ರ ಬ್ರಿಟಿಷ್ ಸರಕಾರವು ತಿಳಕೊಳ್ಳಲಿ!

ಮಂಗಳೂರು.

ನಮ್ಮ ಪ್ರಾಂತಿಕ ಸರಕಾರವು ಇಂಡಿಯಾ ಸರಕಾರಕ್ಕೆ ವರುಷಕ್ಕೆ ರೂ. ೬೪ ಲಕ್ಷ ಕೊಡಬೇಕಾದುದು ಅತೀ ಹೆಚ್ಚಾಗಿರುವುದರಿಂದ ನಮ್ಮ ಡಿಸ್ಟ್ರಿಕ್ಟ ಬೋರ್ಡಿನ ಮೆಂಬರರು ಕಳೆದ ತಿಂಗಳ ಮೀಟಿಂಗಿನಲ್ಲಿ ಇದನ್ನು ನಿಷೇಧಿಸಿ ಇದನ್ನು ತೆಗೆದುಹಾಕಬೇಕು, ಇಲ್ಲವೆ ನ್ಯಾಯವಾದ ರೀತಿಯ ಮಿತಿಯಲ್ಲಿ ಇರಗೊಡಿಸಬೇಕೆಂದು ಮದರಾಸ ಸರಕಾರವು ಪಾರ್ಲಿಮೆಂಟನೊಡನೆ ಕೇಳಿಕೊಳ್ಳಬೇಕೆಂಬ ಒಂದು ಮುಖ್ಯ ಠರಾವನ್ನು ಪಾಸುಮಾಡಿದ್ದಾರೆ.

ಬರುವ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ತಿಲಕ ವಿದ್ಯಾಲಯದಲ್ಲಿ ಮ. ರಾ. ಪಡಮುನ್ನೂರು ರಾಮಚಂದ್ರರಾಯರು ರಾಜಮೋಹನರಾಯರ ಜೀವನ ಚರಿತ್ರೆಯನ್ನು ಕುರಿತು ಭಾಷಣ ಮಾಡಲಿಕ್ಕಿದ್ದಾರೆ.

ಜಿಲ್ಲಾ ಕಲೆಕ್ಟರರು ಬರುವ ತಾ. ೧೧ರಿಂದ ೧೭ರ ವರೆಗೆ ಮುಲ್ಕಿ, ತಾ. ೧೮ಕ್ಕೆ ಮಂಗಳೂರು, ತಾ. ೨೦ರಿಂದ ೨೫ರ ವರೆಗೆ ಕೋಟೆಕಾರ ಈ ರೀತಿ ಸರ್ಕೀಟು ಬೆಳಸುವರು.

ಬರುವ ತಾರೀಕು ೬ರಲ್ಲಿ ಬೆಳಿಗ್ಗೆ ೯ ಗಂಟೆಗೆ ಆರ್ಯ ಸಮಾಜದ ಮೆಂಬರರ ಒಂದು ಜನರಲ್ ಮೀಟಿಂಗು ಸದರಿ ಸಮಾಜದ ಮಂದಿರದಲ್ಲಿ ಕೂಡುವುದು. ಎಲ್ಲ ಮೆಂಬರರೂ ದಯವಿಟ್ಟು ಹಾಜರಿರಬೇಕಾಗಿ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತಾರೆ.

ಶ್ರೀಯುತ ಕೆ. ಸಂಜೀವ ಕಾಮತರನ್ನು ಮದರಾಸಿನ ಹೈಕೋರ್ಟ ವಕೀಲರಾಗಿ ಕಳೆದ ತಾ. ೨೦ರಲ್ಲಿ ದಾಖಲು ಮಾಡಿಕೊಳ್ಳಲಾಗಿದೆ.

ಮಂಗಳೂರಿನಲ್ಲಿರುವ ಬೋಳೂರ ರಾಷ್ಟ್ರೀಯ ಶಾಲೆಯಲ್ಲಿ ಒಟ್ಟು ೧೧ ಮಂದಿ ಪಂಚಮ ವಿದ್ಯಾರ್ಥಿಗಳಿರುವರು.

ಮುಸಲ್ಮಾನರಿಗೆ ಈಗ ಬಕ್ರೀದ್ ಹಬ್ಬವಾಗಿರುವುದರಿಂದ ಕೆಲವು ಸ್ವಯಂಸೇವಕರು ನಿನ್ನೆ ದಿನ ಖಾದಿಯನ್ನು ಅವರಿಗೆ ಮಾರಾಟ ಮಾಡಲು ಹೋಗಿ ಒಂದೆರಡು ತಾಸುಗಳಲ್ಲಿ ರೂ. ೫೧೮ ಖಾದಿಯನ್ನು ಮಾರಾಟಮಾಡಿದರೆಂದು ತಿಳಿದುಬರುತ್ತದೆ.

ಇಲ್ಲಿಯ ತಿಲಕವಿದ್ಯಾಲಯದಲ್ಲಿ ಈಗ ೧೦೦ ಮಂದಿ ವಿದ್ಯಾರ್ಥಿಗಳಿರುವರು. ಈ ಪೈಕಿ ಇಬ್ಬರು ಪಂಚಮರಾಗಿದ್ದಾರೆ.

ತಿಲಕ ವಿದ್ಯಾಲಯದ ಕಟ್ಟೋಣದಲ್ಲಿ ಈಗ ಒಟ್ಟು ೧೧ ಮಗ್ಗಗಳು ಕೆಲಸಮಾಡುತ್ತಿವೆ.

ಈ ತಾಲೂಕಿನಲ್ಲಿರುವ ರಾಷ್ಟ್ರೀಯ ಶಾಲೆಗಳ ಸಹಾಯಾರ್ಥವಾಗಿ ಇಲ್ಲಿಯ ಸ್ವಯಂಸೇವಕರು ಮುಷ್ಟಿಫಂಡನ್ನು ಪಟ್ಟಣದ ಪ್ರತಿ ವಾರ್ಡುಗಳಲ್ಲಿ ಸಂಚರಿಸಿ ಒಟ್ಟುಗೂಡಿಸಲು ನಿಶ್ಚಯಿಸಿದ್ದಾರೆ.

ಕಳೆದ ಮಂಗಳವಾರ ಲೋಕಮಾನ್ಯ ತಿಲಕರ ಪುಣ್ಯತಿಥಿಯನ್ನು ಇಲ್ಲೂ ಆಚರಿಸಲಾಯಿತು. ಬೆಳಿಗ್ಗೆ ೭ ಗಂಟೆಗೆ ಪಟ್ಟಣದಲ್ಲಿ ಮೆರವಣಿಗೆಯಾಯಿತು. ಮಧ್ಯಾಹ್ನ ೩ ಗಂಟೆಗೆ ತಿಲಕ ಮಹಾವಿದ್ಯಾಲಯದಲ್ಲಿ ಚರಕ ಪಂದ್ಯಾಟವು ನಡಿಯಿತು. ಮತ್ತು ಸಾಯಂಕಾಲ ಶ್ರೀಯುತ ಆತ್ಮರಾಮಶಾಸ್ತ್ರಿ ಒಡ್ಡಮನೆ ವಿದ್ಯಾವಾಚಸ್ಪತಿ ಇವರ ಅಧ್ಯಕ್ಷತೆಯಲ್ಲಿ ಸಭೆಕೂಡಿತು. ಸಭೆಯಲ್ಲಿ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರು ತಿಲಕರ ಮೇಲೆ ರಚಿಸಿದ ಸಂಸ್ಕೃತ ಪದ್ಯಗಳನ್ನು ಓದಿ ಹಿಂದಿಯಲ್ಲಿ ಭಾಷಣವನ್ನು ಕೊಟ್ಟರು. ಬಳಿಕ ಶ್ರೀಯುತ ಅ. ಭೋಜರಾಯರೂ ಮಿ| ಎಸ್. ಡಿ. ಕುಂಜಿರೂ ಶ್ರೀಯುತ ಶ್ರೀಪಾದ ಶರ್ಮರೂ ಶ್ರೀಯುತ ಉಡುಪಿ ಗೋವಿಂದರಾಯರೂ, ಶ್ರೀಯುತ ಉಮೇಶರಾಯರೂ ಶ್ರೀಯುತ ಕಾರ್ನಾಡ ಸದಾಶಿವರಾಯರೂ ಲೋಕಮಾನ್ಯರ ಅನೇಕ ಗುಣಗಳನ್ನು ಕೊಂಡಾಡಿ ಭಾಷಣ ಮಾಡಿದರು. ಕೊನೆಗೆ ಅಧ್ಯಕ್ಷರು ಲೋಕಮಾನ್ಯರ ಸಂಕ್ಷೇಪ ಚರಿತ್ರೆಯನ್ನು ವಿವರಿಸಿ ಹೇಳಿ, ಅವರೂ ಒಬ್ಬ ಮಹಾತ್ಮರೆಂದು ಪ್ರತಿಪಾದಿಸಿದರು. ಮತ್ತು ಈಗ ದೇಶದಲ್ಲಿ ಉಂಟಾದ ಪಕ್ಷಗಳ ಬಗ್ಗೆ ತಮ್ಮ ವಿಷಾಧವನ್ನು ವ್ಯಕ್ತಪಡಿಸಿ ಎಲ್ಲರೂ ಐಕ್ಯರಾಗಿ ದೇಶಸೇವೆಯನ್ನು ಮಾಡಬೇಕಾಗಿ ವಿನಂತಿಮಾಡಿಕೊಂಡು ತಮ್ಮ ಭಾಷಣವನ್ನು ಮುಗಿಸಿದರು.

ವಿದ್ಯಾಇಲಾಖೆಯ ಡೈರೆಕ್ಟರರಾದ ಮಿ| ಲಿಟ್ಲೆ ಹೇಲ್ಸ ದೊರೆಗಳು ಇಲ್ಲಿಗೆ ಬಂದು ಗವರ್ನಮೆಂಟು ಕೊಲೇಜು, ಗವರ್ನಮೆಂಟು ಟ್ರೈನಿಂಗ ಶಾಲೆ, ರಾಷ್ಟ್ರೀಯ ಬಾಲಿಕಾ ಪಾಠಶಾಲೆ ಮೊದಲಾದ ಶಾಲೆಗಳನ್ನು ಸಂದರ್ಶಿಸಿ ಹಿಂತೆರಳಿದರು.

ಗದ್ದೆಕೇರಿಯಲ್ಲಿರುವ ವಿಕ್ಟೋರಿಯಾ ಗರ್ಲ್ಸ ಸ್ಕೂಲನ್ನು ತೆಗಿಯುವರೆಂದು ವರ್ತಮಾನವಿದೆ.

ಇಲ್ಲಿಯ ಶೇಂದಿ ಶರಾಬುಗಳ ಗುತ್ತೆಗಳು ನಿನ್ನೆ ದಿನ ಏಲಂ ಆದವು. ಈ ಗುತ್ತೆಗಳನ್ನು ಕಳೆದ ವರುಷ ಪಡೆದುದಕ್ಕಿಂತಲೂ ಇಮ್ಮಡಿಗಿಂತ ಹೆಚ್ಚು ಹಣಕ್ಕೆ ಪಡಕೊಂಡಿರುವರಾಗಿ ತಿಳಿದು ಬರುತ್ತದೆ.

ಬರುವ ಸೆಪ್ಟಂಬರದಲ್ಲಿ ಜರಗಲಿಕ್ಕಿರುವ ಲೋಕಲ್ ಮತ್ತು ಮುನ್ಸಿಪಲ್ ಗ್ರೂಪ್ ಕೊನ್ಫರೆನ್ಸಿಗೆ ಡಿಸ್ಟ್ರಿಕ್ಟ ಬೋರ್ಡಿನವರು ರೂ. ೨೦ನ್ನು ಸಹಾಯವಾಗಿ ಕೊಡಬೇಕಾಗಿ ನಿರ್ಣಯಿಸಿದೆ. ಈ ಕೊನ್ಫರೆನ್ಸಿಗೆ ರಾವ್‌ಬಹದ್ದೂರ್ ಯನ್. ಸುಬ್ಬರಾವ್ ಮ. ರಾ. ಕೆ. ಯಸ್. ಭಟ್, ಡೊಕ್ಟರ ಯು. ರಾಮಚಂದ್ರರಾವ್ ಮತ್ತು ಮ. ರಾ. ರಘುಚಂದ್ರ ಬಲ್ಲಾಳ ಇವರನ್ನು ಡಿಸ್ಟ್ರಿಕ್ಟ ಬೋರ್ಡಿನಿಂದ ಪ್ರತಿನಿಧಿಗಳಾಗಿ ಆರಿಸಿದೆ.

ಕುಂದಾಪುರ ಬೋರ್ಡ ಶಾಲೆಯ ಮಾಜಿ ವಿದ್ಯಾರ್ಥಿಗಳಾದ ಮ. ರಾ. ಎ. ಪಿ. ರಾವ್ ಐ. ಸಿ. ಯಸ್ ರವರು ಸದರಿ ಬೋರ್ಡ ಹೈಸ್ಕೂಲಿಗೆ IVನೇ ಫೋರ್ಮಿಗೆ ರೂ. ೫೦ Vನೇ ಫೋರ್ಮಿಗೆ ರೂ. ೫೦ ಹೀಗೆ ಒಟ್ಟು ರೂ. ೧೦೦ರನ್ನು ವಿದ್ಯಾರ್ಥಿ ವೇತನದ ಬಗ್ಗೆ ಕೊಟ್ಟದನ್ನು ಡಿಸ್ಟ್ರಿಕ್ಟ ಬೋರ್ಡಿನವರು ವಂದನಾಪೂರ್ವಕವಾಗಿ ಸ್ವೀಕರಿಸಿರುವರು.

ತೆಂಗಿನ ಮರಗಳಿಗೆ ಹಿಡಿದ ಹುಳದ ರೋಗ ನಿವಾರಣೆ ಬಗ್ಗೆ ಮುಂದಿನ ಏರ್ಪಾಡಗಳನ್ನು ಮಾಡಲು ಕೊಕನಟ್ ಪೆಸ್ಟ್ ಕಮಿಟಿಯ ಮೆಂಬರರ ಹಾಗು ಮಂಗಳೂರು ನಿವಾಸಿಕರ ಒಂದು ಸಾರ್ವಜನಿಕ ಸಭೆಯು ನಾಳೆ ಸಾಯಂಕಾಲ ೫-೩೦ ಗಂಟೆಗೆ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಸೇರುವುದು.

ಅಸ್ಪೃಶ್ಯತಾ ನಿವಾರಣಾ.

(ರಾಷ್ಟ್ರೀಯ ದೃಷ್ಟಿಯಿಂದ)

ಆಕ್ಸ್‌ಫೋರ್ಡ್ ಮಿಶನಿನ ಸದಸ್ಯರಿಂದ ಪ್ರಕಟವಾಗುವ ಒಂದು ಕ್ರೈಸ್ತ ವಾರಪತ್ರಿಕೆಯನ್ನು ನಾನು ಈ ಹೊತ್ತು ಓದುತ್ತಲಿದ್ದೆನು. ಅದರಲ್ಲಿ ಈ ಕೆಳಗಿನ ವಿಷಯವನ್ನು ಕಂಡೊಡನೆಯೆ ನನಗೆ ಕಣ್ಣೀರು ತುಂಬಿ ದುಃಖಮಯವಾದ ಕೋಪದಿಂದ ಇಡಿ ಶರೀರವೆ ನಡುಗಲಾರಂಭಿಸಿತು.

"ಮುಸಲ್ಮಾನರು ಮತ್ತು ಕ್ರೈಸ್ತರಿಗಿಂತ ಎಷ್ಟೋ ಕಡಿಮೆದರದಲ್ಲಾದರೂ ೧೯೧೧ನೆಯ ಇಸವಿಯಲ್ಲಿ ಹಿಂದುಗಳ ಸಂಖ್ಯೆಯು ಹೆಚ್ಚುತ್ತಿತ್ತು. ಮುಸಲ್ಮಾನರು ಹಿಂದುಗಳಿಗಿಂತ ಎರಡರಷ್ಟು, ಕ್ರೈಸ್ತರು ಏಳು ಪಾಲಿಗಿಂತಲೂ ಹೆಚ್ಚಾಗಿ ಅಭಿವೃದ್ಧಿಯಾಗುತ್ತಿದ್ದರು. ಈ ಖಾನೇಷುಮಾರಿಯಂತೆ ಕಳೆದ ೧೦ ವರುಷಗಳಲ್ಲಿ ಹಿಂದುಗಳು ಏಳುವರೆ ಲಕ್ಷಕ್ಕಿಂತಲೂ ಮಿಗಿಲಾಗಿಯೆ ಕಡಿಮೆಯಾಗಿದ್ದಾರೆಂದೂ, ಕ್ರೈಸ್ತರು ಸುಮಾರು ಹತ್ತು ಲಕ್ಷ ಹೆಚ್ಚಿಗೆಯಾಗಿದ್ದಾರೆಂದೂ ತಿಳಿದುಬರುತ್ತದೆ."

ಮೇಲೆ ಕೊಟ್ಟ ವಿಷಯವನ್ನೂ ಸಂಖ್ಯೆಗಳನ್ನೂ ಕಂಡರೆ ಎದೆಯೊಡೆಯುತ್ತದೆ. ಹಿಂದುಗಳು ಅಭಿವೃದ್ಧಿಯನ್ನೈದದೆ ಕ್ಷೀಣವಾಗುತ್ತಲೇ ಬರುತ್ತಾರೆ. ಇದಕ್ಕೆ ಕಾರಣವೇನು? ಇಂತಹ ದುರವಸ್ಥೆಗೆ ಉತ್ತಮ ಜಾತೀಯವರೆಂದು ಹೇಳಿಸಿಕೊಳ್ಳುವ ಹಿಂದುಗಳು ಅಸ್ಪೃಶ್ಯರೆನ್ನಿಸಿಕೊಳ್ಳುವ ತಮ್ಮ ಸೋದರರನ್ನು ಸಂಪೂರ್ಣ ತಿರಸ್ಕರಿಸಿ, ಅವರನ್ನು ಅದಿಗೊತ್ತಿರುವುದೇ ಕಾರಣವಲ್ಲವೇ? ಇಂತಹ ಬಡಜನರ ಸಂಖ್ಯೆಯು ಏಳು ಕೋಟಿಯಾಗುತ್ತದೆಂದೂ, ಇಡಿ ಹಿಂದುಸ್ಥಾನದ ಜನಸಂಖ್ಯೆಯ ಐದನೆ ಒಂದಂಶವೆ ಆಗುತ್ತದೆಂದೂ ನಾವು ಆಲೋಚಿಸುವಾಗ, ಸದಾ ಅವರನ್ನು ಗುಲಾಮರನ್ನಾಗಿಟ್ಟು, ಜೀವಮಾನದ ಪ್ರತಿಯೊಂದು ವಿಭಾಗದಲ್ಲಿ ಅವರಿಗೆ ಎಡೆಗೊಡದಿದ್ದ ಜನಾಂಗದ ಮೇಲೆ ಯಾರಿಗೆ ತಾನೆ ಕ್ರೋಧ ಉಂಟಾಗದು. ಮೇಲೆ ಹೇಳಿದಂತೆ ನಮ್ಮ ಜನಸಂಖ್ಯೆಯ ಕ್ಷೀಣತೆಗೆ ಕಾರಣರಾದಂಥ ನಾವು ನಿಜವಾಗಿಯೂ ಉತ್ತಮ ತರಗತಿಗೆ ಸೇರಿದವರೋ ಎಂದು ನಾನು ಮನಃಪೂರ್ವಕವಾಗಿ ಪ್ರಶ್ನಿಸುತ್ತೇನೆ. ನಾವಲ್ಲವೆ ನಮ್ಮ ಸ್ವಧರ್ಮಿಗಳನ್ನು ಬಿಟ್ಟು ಮುಸಲ್ಮಾನರಿಗೂ ಕ್ರೈಸ್ತರಿಗೂ ಹೆಚ್ಚಿನ ಎಡೆಕೊಟ್ಟವರು. ಅವರು ರಾಮ ಮತ್ತು ಕೃಷ್ಣರಲ್ಲಿ ಸಂಪೂರ್ಣ ಭಕ್ತಿಯನ್ನಿಟ್ಟಿದ್ದಾಗ ಅವರನ್ನು ನೋಡುವುದು ಕೂಡ ಅಶುದ್ಧವೆಂದು ಎಣಿಸುತ್ತಿದ್ದು, ಅವರು ಕ್ರೈಸ್ತಮತವನ್ನವಲಂಬಿಸಿದೊಡನೆಯೆ ಆದೆ ಅಸ್ಪೃಶ್ಯರೊಡನೆ ಹಸ್ತಲಾಘವವನ್ನಿತ್ತು ನಾವು ನಡೆಯುವುದಿಲ್ಲವೆ? ಯಾವ ಆತಂಕವೂ ಇಲ್ಲದೆ ಕ್ರೈಸ್ತರನ್ನು ನಮ್ಮ ಮನೆಯೊಳಗೆ ಬರಗೊಡಿಸಿ, ಪರಾಮರ್ಶಿಸಿಯಂದ ನಮ್ಮ ಕಂಬಿಂಡಿಗೆ ಪಂಚಮನೊಬ್ಬನು ಬಂದನೆಂದರೆ ರೇಗುವವರು ನಾವಲ್ಲವೆ? ಸಾರ್ವಜನಿಕ ಬಾವಿಗಳನ್ನೂ, ಶಾಲೆಗಳನ್ನೂ, ಕೋಟೆಗಳನ್ನೂ, ಸಭೆಗಳನ್ನೂ ಕೆಲವು ಪಟ್ಟಿಗೆ ರಸ್ತೆಗಳನ್ನೂ ನಮ್ಮ ಧರ್ಮಾವಲಂಬಿಗಳಾದ ನಮ್ಮ ಜನಾಂಗದ ಐದನೆಯ ಒಂದಂಶಕ್ಕೆನೆ ಸಂಪೂರ್ಣ ಮುಚ್ಚಿಬಿಟ್ಟು, ಇವೆಲ್ಲವನ್ನೂ ಅನ್ಯ ಮತಸ್ಥರಾದ ಕ್ರೈಸ್ತರೆ ಮೊದಲಾದವರಿಗೆ ತೆರೆದಿಟ್ಟು, ನಮ್ಮ ದೇವಸ್ಥಾನಗಳಿಗೆ ಕೂಡ ಬರುವರೆ ಆತಂಕವಿಲ್ಲದಂತೆ ಮಾಡಿದವರು ನಾವಲ್ಲವೆ? ಎಂದು ನಾನು ತಿರುಗಿ ಕೇಳುತ್ತೇನೆ. ಸಾವಿರಾರು ಬಡ ಜನರನ್ನು ಅಸ್ಪೃಶ್ಯರೆಂದು ಭಾವಿಸಿ, ಅಮಾನುಷರೀತಿಯಿಂದ ಅವರನ್ನು ನೂಕಿಸಿದುದರಿಂದುಂಟಾದ ನಮ್ಮ ಜನಾಂಗದ ಕ್ಷೀಣತೆಗೆ ನಾವೆ ಕಾರಣವಲ್ಲವೇ? ಆದುದರಿಂದ ಮೋಪ್ಲೆಯವರು ಬಲಾತ್ಕಾರದಿಂದ ಮುಸಲ್ಮಾನಮತಕ್ಕೆ ಸೇರಿಸಿದ ಸಾವಿರಾರು ಹಿಂದುಗಳನ್ನು ಅವರ ಪೂರ್ವದ ಸ್ವಮತಕ್ಕೆ ಸೇರಿಸಿಕೊಳ್ಳುವುದಿಲ್ಲವೆಂದು ತಿರಸ್ಕರಿಸಿ, ಸಾಮಾನ್ಯ ಮೃಗಗಳಿಗೆ ಕೂಡ ಇರುವ ಹಕ್ಕನ್ನು ಅವರಿಗೆ ಕೊಡದಿದ್ದುದೇನೂ ಆಶ್ಚರ್ಯವೆಂದು ಕಾಣುವುದಿಲ್ಲ. ಮುಸಲ್ಮಾನ ಅಥವಾ ಕ್ರೈಸ್ತರಾದರೆ, ಸಮಾಜದಲ್ಲಿ ಅವರಿಗೆ ಎಷ್ಟೊ ತರದ ಉತ್ತಮ ಸ್ಥಾನವಿದೆ. ಅವರು ಎಲ್ಲಾ ಸಾರ್ವಜನಿಕ ವಿಷಯಗಳಲ್ಲಿ ಭಾಗಿಗಳಾಗಬಹುದು. ಅವರು ಶ್ರೇಷ್ಠ ಹಿಂದುವಿನ ಮನೆಗೆ ಹೋದರೂ ಅವನಿಗೆ ದೋಷವಾಗಲಾರದು. ಆದರೆ ಅವರು ಹಿಂದುಗಳಾಗಿದ್ದರೆ ಬ್ರಾಹ್ಮಣರಿಗಿಂತ ಕೆಲವು ಗಜಗಳ ದೂರದಲ್ಲೇ ನಿಲ್ಲಬೇಕು. ಬ್ರಾಹ್ಮಣ ಮೆಜಿಸ್ಟ್ರೇಟರಾಗಿದ್ದರೆ ಅವರು ಅವನ ಕೋರ್ಟಿಗೆ ಕೂಡ ಬರಕೂಡದು. ಯಾಕೆಂದರೆ ಅವರಿಂದ ಅವರಿಗೆ ಮಲಿನವಾಗಬಹುದು. ಮೇಲು ಜಾತಿಯ ಒಬ್ಬ ಹಿಂದುವು ಸಾರ್ವಜನಿಕ ರಸ್ತೆಯಲ್ಲಿ ನಡೆಯುತ್ತಿದ್ದರೆ ಅವರು ಆ ರಸ್ತೆಯನ್ನೇ ಬಿಟ್ಟು ಮಂಗಗಳಂತೆ ಮರವನ್ನೇರಬೇಕು. ಇಂತಹ ಸ್ಥಿತಿಯಲ್ಲಿರುವುದಕ್ಕಿಂತಲೂ ಅನ್ಯಮತವನ್ನವಲಂಬಿಸಿ, ಎಷ್ಟೋ ಉತ್ತಮ ಸ್ಥಾನವನ್ನು ಹೊಂದಬಹುದೆಂದು ಯಾರು ತಾನೇ ಭಾವಿಸಿಯಾರು! ಇತ್ತೀಚೆಗೆ ಹಿಂದೀಯ ಆಚಾರಗಳನ್ನೂ, ಪದ್ಧತಿಗಳನ್ನೂ ಅನುಸರಿಸುತ್ತಲಿರುವ ಮುಸಲ್ಮಾನ ಮತ್ತು ಕ್ರೈಸ್ತಮತಕ್ಕೆ ಸೇರುವಂತೆ ನಮ್ಮ ಬಡ ಅಸ್ಪೃಶ್ಯ ಸೋದರರಿಗೆ ಉತ್ತೇಜನವನ್ನು ಕೊಟ್ಟವರು ಉತ್ತಮ ತರಗತಿಯವರೆಂದು ಹೇಳಿಸಿಕೊಳ್ಳುವ ನಾವೇ ಎಂಬುದು ಮೇಲಿನ ವಿಷಯಗಳಿಂದ ವ್ಯಕ್ತವಾಗುತ್ತದೆ. ನಮ್ಮ ಜನಾಂಗದ ಐನೇ ಒಂದಂಶದ ಕಡೆಗೆ ನಾವು ತೋರಿಸುವ ತಿರಸ್ಕಾರದಿಂದ ಫಲವನ್ನು ಹೊಂದುವ ಕ್ರಿಶ್ಚಿಯನ್ ಮಿಶನರಿಗಳಿಗೆ ಅಪಮಾನವಮಾಡಬೇಕೆಂದು ಎಳ್ಳಷ್ಟೂ ನನ್ನ ಮನಸ್ಸಿನಲ್ಲಿಲ್ಲ. ಅಸ್ಪೃಶ್ಯರ ಸ್ಥಿತಿಯನ್ನು ಕೆಲವು ವಿಷಯಗಳಲ್ಲಾದರೂ ಒಳ್ಳೆಯದು ಮಾಡಲು ಯತ್ನಿಸುತ್ತಿರುವ ಅವರಲ್ಲಿ ತಪ್ಪು ಹುಡುಕಲಿಕ್ಕೆ ನಮಗೆ ಯಾವ ಅಧಿಕಾರವೂ ಇಲ್ಲ. 'ನಿಮ್ಮ ಕಾಲಿಗಿನ ಶಕ್ತಿಯನ್ನಿಟ್ಟುಕೊಂಡು ನೀವು ಎಷ್ಟು ಕಾಲ ಬಾಳಬಹುದು?' ಎಂದು ನನ್ನ ಹಿಂದು ಸೋದರರನ್ನು ನಾನು ಪ್ರಶ್ನಿಸುತ್ತೇನೆ. ಈ ಅಜಾಗ್ರತೆಯೇ ಮುಂದುವರಿದರೆ ನಮ್ಮ ಇಡೀ ಜನಾಂಗಕ್ಕೆನೆ ಮರಣ ಬರುವುದೆಂದು ನಮಗೆ ತಿಳಿಯುವುದಿಲ್ಲವೇ? ಎದ್ದೇಳಿ, ಸೋದರರೇ ಎದ್ದೇಳಿ! ಈ ಬಡಜನರನ್ನುದ್ಧರಿಸುವುದಕ್ಕಾಗಿ ನೀವು ಐಕ್ಯದಿಂದ ಕಾರ್ಯವನ್ನು ಸಾಧಿಸಿ, ಸ್ವರಾಜ್ಯಕ್ಕೆ ಯೋಗ್ಯರಾಗಿದ್ದೀರೆಂಬುದನ್ನು ತೋರಿಸಿರಿ. ನಿಮ್ಮ ಸಹೋದರರ ಕೈ ಕಾಲುಗಳನ್ನು ಕಟ್ಟಿದ್ದ ಸಂಕೋಲೆಯನ್ನು ನಿಮ್ಮ ಸ್ವಂತ ಕೈಯಿಂದ ಬಿಚ್ಚಿದರೆ ಇನ್ನಷ್ಟು ನಿಶ್ಚಯವಾಗಿಯೂ ನಿಮಗೆ ಸ್ವರಾಜ್ಯವು ದೊರೆಯುವುದೆಂಬುದನ್ನು ನೀವು ಸದಾ ಮನಸ್ಸಿನಲ್ಲಿಟ್ಟುಕೊಳ್ಳಿರಿ. ಅನೇಕ ಶತಮಾನಗಳಿಂದ ನೀವು ಮಾಡುತ್ತಲಿರುವ ಈ ಅಪರಾಧವನ್ನು ಪರಿಹರಿಸುವದೆ ಇನ್ನಾದರೂ ಯತ್ನಿಸಿರಿ. ಮಾನುಷತ್ವಕ್ಕೇನೇ ವಿರೋಧವಾಗಿರುವಂತಹ ಅಸ್ಪೃಶ್ಯತೆಯನ್ನು ದೇಶದಿಂದ ಕಿತ್ತು ಬಿಸುವದೆ ಸೊಂಟಕಟ್ಟಿರಿ.

ಧರ್ಮದೇವ ಸಿದ್ಧಾಂತಾಲಂಕಾರ.
ಆರ್ಯಸಮಾಜ, ಮಂಗಳೂರು.

ಮಂಗಳೂರು ವ್ಯವಸಾಯಿಕ ಮತ್ತು ಕೈಗಾರಿಕೆಯ ಪ್ರದರ್ಶನ.

ವ್ಯವಸಾಯಿಕ ಮತ್ತು ಕೈಗಾರಿಕೆಯ ಮಹಾಸಭೆಯ ಪ್ರದರ್ಶನವನ್ನು ಬರುವ ದಶಂಬರದಲ್ಲಿ ಇಲ್ಲಿ ಜರುಗಿಸುವ ವಿಷಯವನ್ನು ತಿರಿಗಿ ಆಲೋಚಿಸಬೇಕೆಂದು ಶ್ರೀಮತಿ ಎಲ್. ಶೆಟ್ಟಿ ಮತ್ತು ಇತರರು ಸೂಚಿಸಿದಂತೆ ಆ ವಿಷಯವನ್ನು ತಿರಿಗಿ ಆಲೋಚಿಸುವ ಬಗ್ಗೆ ಇದೇ ಜುಲಾಯಿ ತಾರೀಖು ೩೦ನೆಯ [illegible] ಸಂಜೆಗೆ [illegible] ಎಸ್ಟೇಟ್ ಎಸೋಸಿಯೇಶನಿನ ಆಫೀಸಿನಲ್ಲಿ ಪ್ರದರ್ಶನ ಕಮಿಟಿಯ ಒಂದು ಸಭೆ ಸೇರಿತು. ಸಾಮ್ರಾಜ್ಯಪ್ರದರ್ಶನದ ಬಗ್ಗೆ ಬರುವ ದಶಂಬರದಲ್ಲಿ ಮದ್ರಾಸಿನಲ್ಲಿ ಒಂದು ಪ್ರದರ್ಶನವು ಜರಗುವುದರಿಂದಲೂ, ಸೆಂಟ್ ಫ್ರಾನ್ಸಿಸ್ ಜೇವಿಯರ ಪವಿತ್ರ ಶರೀರ ಪ್ರದರ್ಶನವು ಬರುವ ದಶಂಬರದಲ್ಲಿ ಗೋವೆಯಲ್ಲಿ ನಡೆಯುವುದರಿಂದಲೂ ಈ ಪ್ರದರ್ಶನವನ್ನು ಅನಿಯಮಿತ ಸಮಯದವರೆಗೆ ಮುಂದರಿಸಿಡಬೇಕೆಂದು ಈ ಸಭೆಯಲ್ಲಿ ಬಹುಮತದಿಂದ ನಿರ್ಣಯಿಸಲ್ಪಟ್ಟಿತು. ಇಲ್ಲಿಗೆ ಪ್ರದರ್ಶನವಸ್ತುಗಳನ್ನು ತರುವವರು ಮದ್ರಾಸಿನ ಪ್ರದರ್ಶನಕ್ಕೂ ಹೋಗಲಿಕ್ಕೆ ಸಾಕೆಂದೂ, ಅನೇಕ ಕೆಥೋಲಿಕ ಪ್ರೇಕ್ಷಕರು ಗೋವೆಯ ಸಮಾರಂಭಕ್ಕೂ ಹೋಗಲಿಕ್ಕೆ ಸಾಕೆಂದೂ (ಈ ಕಮ್ಮಿಟಿಯಲ್ಲಿ ಹೆಚ್ಚಿಗೆ ಇರುವವರು ಕೆಥೋಲಿಕರಾದುದರಿಂದ) ಕಮ್ಮಿಟಿಯವರಿಗೆ ಆ ಅಭಿಪ್ರಾಯವಿತ್ತು. ಸಭೆಯಲ್ಲಿ ಈ ಕೆಳಗಿನ ಗೃಹಸ್ಥರು ಹಾಜರಿದ್ದರು.

ರಾ| ಎ. ಆರ್. ಸಿಡುಂಗಾಡಿ (ಅಧ್ಯಕ್ಷ) ರಾವ್ ಬಹದ್ದೂರ್, ಎನ್. ಸುಬ್ಬರಾವ್, ದ್ಯಾಸಾಹೇಬ್, ಇ. ಸಿ. ಎಮ್ ಮಸ್ಕರೇಞಸ್, ಶ್ರೀಮತಿ ಎಲ್. ಶೆಟ್ಟಿ, ರಾ| ಜೆ. ಎಚ್. ಎ. ಮಸ್ಕರೇಞಸ್, ರಾ| ಜೆ. ಟಿ. ಮಟ್ಟಾದೊ, ಡಾಕ್ಟರ್. ಬಿ. ಕುಲಾಸೊ, ರಾ. ಯಸ್. ಯಸ್. ಕೊಯಿಲೊ ರಾ. ಎಲ್. ಯಸ್. ಕೊಯಿಲೊ ರಾ. ಜೆ. ಬಿ ಲೋಬೊ, ರಾ. ಆರ್, ಎಫ್. ಕುಲಾಸೊ ರಾ| ವಿ. ಎಸ್. ಆಬ್ಬುಕರ್ಕ್, ರಾ| ಜೋಸೆಫ್. ಅಲ್ವರಿಸ್, ಮಿಸ್ಟರ್. ಎಚ್. ಟಿ. ಟೋರ್ಡ್ ರಾ| ಬಿ. ಶೀನಪ್ಪ ರಾವ್.ಬಹದೂರ್ ಎಸ್. ರಘುನಾಥಯ್ಯ, ರಾ| ಎ. ದೇವಪ್ಪಪೂಂಜ, ರಾ| ಎಮ್. ಮಂಗೇಶರಾವ್ ರಾ| ಪಿ. ರಘುನಾಥಪೂಂಜ, ರಾ| ಎಮ್. ಶಂಕರನಾರಾಯಣರಾವ್, ರಾ| ಎಮ್. ಅಚ್ಚುತಯ್ಯ.

ಒಂದನೆಯ ಪ್ರದರ್ಶನಕ್ಕಿಂತಲೂ ಎರಡನೆಯ ಪ್ರದರ್ಶನದಲ್ಲಿ ಜನರಿಂದ ಧನಸಹಾಯವು ಬಹಳ ಕಡಿಮೆ ಸಿಕ್ಕಿದ್ದರಿಂದಲೂ, ಈಗ ಮೇಲೆ ಸೂಚಿಸಿದ ಎರಡು ಮುಖ್ಯ ಕಾರಣಗಳಿಂದ ಜನರು ಇದಕ್ಕೆ ಬರುವುದು ಕಡಿಮೆಯಾಗಬಹುದಾದ್ದರಿಂದಲೂ ಧನಸಹಾಯದ ವಿಷಯದಲ್ಲಿ ಈ ಪ್ರದರ್ಶನವು ಸಂಪೂರ್ಣವಾಗಿ ನಷ್ಟಹೊಂದಬಹುದೆಂಬ ಬಹುಮತದ ಅಭಿಪ್ರಾಯವನ್ನು ಬಹುಮತದ ಪರವಾಗಿ ರಾ| ಎನ್. ಸುಬ್ಬರಾಯರು ಸೂಚಿಸಿದರು. ಆದರೆ ಪ್ರದರ್ಶನವನ್ನು ಮಾಡುವುದರಿಂದ ಜನರಿಗೆ ಜಾಗ್ರತೆಯುಂಟಾಗಿ ಒಂದು ತರದ ಉತ್ತಮ ವಿದ್ಯೆ ದೊರೆಯುತ್ತದೆಂಬುದನ್ನು ಮುಂದಿಟ್ಟುಕೊಂಡು ಹಣಕ್ಕೆ ಲಕ್ಷ್ಯಕೊಡಬಾರದೆಂದಿದ್ದರೂ ಸಹಾಯವು ಸಾಕಷ್ಟು ದೊರೆಯಲಿಕ್ಕಿಲ್ಲವೆಂಬ ಭಯದಿಂದ ಈ ಭಾವನೆಯನ್ನು ಕೂಡ ಬಿಡಬೇಕೆಂದು ನಿರ್ಣಯಿಸಲಾಯಿತು.

ಪ್ರದರ್ಶನಕಮ್ಮಿಟಿಯ ಸಭೆಯ ಈ ನಿರ್ಣಯಗಳನ್ನು ನೋಡಿದರೆ ಯಾರಿಗೆ ತಾನೆ ಆಶ್ಚರ್ಯವೂ, ಪಶ್ಚಾತ್ತಾಪವೂ ಉಂಟಾಗದು. ಮಂಗಳೂರಿನ ಪ್ರದರ್ಶನ ಉದ್ದೇಶವೇನು? ಮದರಾಸಿನ ಪ್ರದರ್ಶನದ ಉದ್ದೇಶವೇನು? ಮಂಗಳೂರಿನ ಪ್ರದರ್ಶನ ಜರುಗಿಸಲು ಸಾಧ್ಯವಿಲ್ಲವೆಂಬುವದಕ್ಕೆ ತಂದೊಡ್ಡಿದ ಕಾರಣಗಳು ನಿಜವಾದ ಅಡ್ಡಿಗಳೋ ಎಂಬೀ ವಿಷಯಗಳನ್ನು ಚೆನ್ನಾಗಿ ವಿಚಾರಿಸಿದರೆ ಈ ಸಭೆಯವರು ಮಾಡಿದ ನಿರ್ಣಯದ ಯೋಗ್ಯತೆಯು ಸ್ಪಷ್ಟವಾಗುವುದು.

ಒಂದು ದೇಶದಲ್ಲಿ ಯಾವ ಯಾವ ಉತ್ಪತ್ತಿಗಳಿವೆಯೆಂದೂ, ಅಂತಹ ಉತ್ಪತ್ತಿಗಳಿಂದ ಯಾವ ಯಾವ ಕೈಗಾರಿಕೆಗಳನ್ನಭಿವೃದ್ಧಿಮಾಡಬಹುದೆಂದೂ ಜನರಿಗೆ ತಿಳಿಸಿ ಅವರಲ್ಲಿ ವ್ಯವಸಾಯವನ್ನೂ ಕೈಗಾರಿಕೆಯನ್ನೂ ಅಭಿವೃದ್ಧಿಮಾಡುವುದೇ ಪ್ರದರ್ಶನದ ಮುಖ್ಯ ಉದ್ದೇಶವಾಗಿರುತ್ತದೆ. ಈಗ ನಮ್ಮ ದಕ್ಷಿಣ ಕನ್ನಡವು ಕೈಗಾರಿಕೆಯಲ್ಲಿ ಬಹಳ ಹಿಂದಿದೆಯೆಂದೂ, ವ್ಯವಸಾಯವು ದಿನೇ ದಿನೇ ಕ್ಷೀಣಸ್ಥಿತಿಗೆ ಬರುತ್ತಿದೆ ಎಂದೂ ಎಲ್ಲರೂ ಒಪ್ಪತಕ್ಕದಾಗಿದೆ. ಹೀಗಿರುತ್ತ ಇಲ್ಲಿಯ ಜನರಲ್ಲಿ ಜಾಗ್ರತೆಯನ್ನುಂಟುಮಾಡಿ ಅಂತಹ ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ಕೊಡುವುದಕ್ಕೆ ಪ್ರದರ್ಶನಗಳನ್ನು ಮಾಡುವುದು ಅಗತ್ಯ. ಇದೇ ಉದ್ದೇಶದಿಂದ ಬರುವ ದಶಂಬರದಲ್ಲಿ ಇಲ್ಲಿ ಪ್ರದರ್ಶನಮಾಡಬೇಕೆಂದು ಆರಂಭದಲ್ಲಿ ಆಲೋಚಿಸಿದ್ದಾಗಿರಬೇಕೆಂದು ನನ್ನ ಭಾವನೆ. ಆದರೆ ಮದರಾಸುಪ್ರದರ್ಶನದಿಂದ ಈ ಉದ್ದೇಶವು ನೆರವೇರುವ ಸಂಭವಗಳು ಅಸ್ತಿಲ್ಲ. ಇಂಗ್ಲೆಂಡು ಮುಂತಾದ ಪಾಶ್ಚಾತ್ಯ ಜನಾಂಗಗಳ ದೇಶಗಳಲ್ಲಿ ಅನೇಕ ಜನರಿಗೆ ಕೆಲಸವಿಲ್ಲದೆ ಒದ್ದಾಡುವಂತಾಗಿದೆ. ಹೀಗಿರುವಾಗ ಯಾವುದಾದರೊಂದು ವಿಧದಿಂದ ಅವರ ಹೊಟ್ಟೆತುಂಬಿಸಬೇಕಾಗಿ ಬಂದಿದೆ. ಇವರೆಲ್ಲಾ ಸ್ವತಂತ್ರ ಜನಾಂಗಗಳು. ಸಾಮ್ರಾಜ್ಯಪ್ರದರ್ಶನದಲ್ಲಿ ಹಿಂದೂಸ್ಥಾನದ ನಾನಾ ಕಡೆಗಳಲ್ಲಿ ಸಿಕ್ಕಬಹುದಾದ ಉತ್ಪತ್ತಿಗಳನ್ನು ಒಟ್ಟುಕೂಡಿಸಿ, ಪರೀಕ್ಷೆ ನಡಿಸಿ ಅವುಗಳಿಗೆ ಬೇಕಾದ ಕೈಗಾರಿಕೆಗಳನ್ನು ಬೇಕಾದರೆ ಈ ದೇಶದಲ್ಲಿ ಸ್ಥಾಪಿಸುವರೆ ಸ್ವತಂತ್ರದ ಕೈಗಳೇ ಮುಂದುಬರುವವು. ಎಂದರೆ ನಾವು ಕಣ್ತೆರೆಯುವುದಕ್ಕೆ ಮುಂಚಿತವಾಗಿ ಈ ಕೈಗಾರಿಕೆಗಳಿಗೆ ಬೇಕಾದ ಉತ್ಪತ್ತಿಗಳಾಗುವ ಸ್ಥಳಗಳ ಹಕ್ಕನ್ನು ಈ ಸ್ವತಂತ್ರ ಜನಾಂಗಗಳ ಧನಿಕರು ಹೇಗೂ ಪಡೆಕೊಳ್ಳುವರು. ಆದುದರಿಂದ ಮದರಾಸು ಪ್ರದರ್ಶನದಿಂದ ನಮ್ಮ ಕೈಗಾರಿಕೆಗಳಿಗೆ ಪ್ರೋತ್ಸಾಹದೊರೆಯುವ ಸಂಭವಗಳು ಕಡಿಮೆ.

ಸಭಿಕರ ಎಣಿಕೆಯಂತೆ ಇಲ್ಲಿಂದ ಮದರಾಸಿಗೆ ಹೆಚ್ಚು ಜನರು ಹೋಗುವರೆಂಬುದು ಅಸಂಭವ. ಈಗ ರೈಲ್ವೇ ಚಾರ್ಜು ಹೆಚ್ಚಿದೆ. ಅಲ್ಲದೆ ಇಲ್ಲಿಂದ ಅಲ್ಲಿಗೆ ದೂರವೆಷ್ಟು? ಅಲ್ಲಿಗೆ ಪ್ರದರ್ಶನ ವಸ್ತುಗಳನ್ನು ಕೊಂಡು ಹೋಗುವುದರಿಂದ ದೊರೆಯುವ ಪುರುಷಾರ್ಥವಾದರೂ ಏನು? ಇದಕ್ಕೆ ಮಂಗಳೂರಿನ ಮೊದಲನೆಯ ಪ್ರದರ್ಶನವೇ ಉತ್ತಮ ನಿದರ್ಶನವಾಗಿದೆ. ಅದು ಇಲ್ಲಿ ಜರಗಿದಾಗಲೇ ಮದ್ರಾಸಿನಲ್ಲೂ ಪ್ರದರ್ಶನವಿತ್ತು. ಆದರೂ ಆ ಪ್ರದರ್ಶನದಲ್ಲಿ ಕಲೆಕ್ಟರ್ ವಿ. ವ್ಯಾಟರ್ ದೊರೆಗಳವರೂ ಅವರ ಕೆಳಗಿನ ಅಧಿಕಾರಿಗಳೂ ತುಂಬಾ ಪ್ರಯತ್ನಪಟ್ಟಿದ್ದರು. ಉದ್ಯೋಗಸ್ಥರಲ್ಲದ ಮಹನೀಯರಿಂದೇನೂ ಹೆಚ್ಚಿನ ಸಹಾಯವು ದೊರೆಯದಿದ್ದರೂ ಒಂದೇ ಕಡೆಯವರ ಪ್ರಯತ್ನದಿಂದ ಅದು ಉತ್ತಮ ಫಲಕಾರಿಯಾಗಿ ಹಣ ತುಂಬಾ ಜಮೆಯಾಗಿತ್ತು. ಎರಡನೆಯ ಪ್ರದರ್ಶನವು ಹಣದ ಮಟ್ಟಿಗೆ ಮೊದಲನೆಯಷ್ಟು ಜಯಪ್ರದವಾಗದಿರುವುದಕ್ಕೆ ಸರಕಾರದವರಾಗಲೀ ಇತರ ಮಹನೀಯರಾಗಲೀ ಸಾಕಷ್ಟು ಪ್ರಯತ್ನಮಾಡದಿದ್ದುದೇ ಅಲ್ಲದೆ ಇನ್ನೇನೂ ಕಾಣುವದಿಲ್ಲ. ಆದುದರಿಂದ ಪ್ರಯತ್ನಿಸುವರೆ ಮನಸ್ಸಿಲ್ಲದಿದ್ದರೆ ಇಲ್ಲದ ಸಲ್ಲದ ಕಾರಣಗಳನ್ನೊಡ್ಡುವುದಲ್ಲದೆ ಇನ್ನೇನೂ ಇಲ್ಲ.

ಮತ್ತು ಗೋವೆಯ ಸಮಾರಂಭವು ಇಡೀ ಒಂದು ತಿಂಗಳು ನಡೆಯುತ್ತದೆಂದೂ, ಭಕ್ತರ ಪೂಜಾಕಾರ್ಯವು ಒಂದು ಗಂಟೆಗಿಂತ ಹೆಚ್ಚಿಗೆ ಇಲ್ಲವೆಂದೂ ಮುಖ್ಯಕಾರ್ಯವು ಆ ಪವಿತ್ರ ಶರೀರವನ್ನು ಪೆಟ್ಟಿಗೆಯ ತಿರಿಗಿ ಹಾಕುವಾಗ ಮಾತ್ರವೇ ಆದುದರಿಂದ ಈ ಕಾರ್ಯವು ಕ್ರಿಸ್‌ಮಸ್ ಸಮಯದಲ್ಲಿ ಬರುವುದಿಲ್ಲವೆಂದೂ ಕೇಳುತ್ತೇನೆ. ಆದುದರಿಂದ ಇದರಿಂದ ಇಲ್ಲಿಯ ಪ್ರದರ್ಶನಕ್ಕೇನೂ ತೊಂದರೆಯಾಗಲಿಕ್ಕಿಲ್ಲ.

ಅಲ್ಲದೆ [illegible] ಈ ಪ್ರದರ್ಶನದ [illegible] ಅವರಿಗೆ [illegible]. ಮುಖ್ಯವಾಗಿ ಜಿಲ್ಲೆಯ ವ್ಯವಸಾಯ ಮತ್ತು ಕೈಗಾರಿಕೆಗಳ ಪರಿಸ್ಥಿತಿಯನ್ನು ಜಿಲ್ಲೆಯ ಜನರಿಗೆ ತಿಳಿಸಿ, ಅವನ್ನು ಅಭಿವೃದ್ಧಿಮಾಡಿ, ಅನ್ನವಿಲ್ಲದೆ ಸಾಯುತ್ತಿರುವ ಬಡವರಿಗೆ ಒಂದು ತುತ್ತು ಅನ್ನಕೊಡಬೇಕೆಂದು [illegible] ಈ ಸಭೆಯವರು ಆಲೋಚಿಸದಿಲ್ಲವೆಂಬುದು ಬಹಳ ವಿಷಾದಕರವಾಗಿದೆ. ಇವರು [illegible] ಜಿಲ್ಲೆಯ ಮೇಲ್ಮೆಯನ್ನು ಹೊಂದುವವರೂ ಇವರ ಎಷ್ಟು ಕಷ್ಟಗಳಿದ್ದರೂ [illegible] ಈ ಪ್ರದರ್ಶನವನ್ನು ಮಾಡಬೇಕು. ಈ ವಿಷಯವನ್ನಾಲೋಚಿಸಿ [illegible] ದಿನಗಳಲ್ಲೇ [illegible] ಕಿತ್ತುಹಾಕುವುದೆಂದರೆ ಬಹಳ ಶೋಚನೀಯವಾಗಿದೆ.

ಜಿಲ್ಲಾ ಅಭಿವೃದ್ಧಿ ಸಂಘವು ಮಾಡುವ ಕೆಲಸವಿಷ್ಟೇಯೆಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಈ ಪ್ರದರ್ಶನವನ್ನಾದರೂ ಮಾಡಿದರೆ ಅದರ ಹೆಸರಾದರೂ ಉಳಿದೀತು. ಇಲ್ಲವಾದರೆ ಈ ಮೊದಲು ಇದ್ದ ವ್ಯವಸಾಯಿಕ ಸಂಘದ ಗತಿಯೇ ಬೇಗನೆ ಇದಕ್ಕೂ ಬರುತ್ತದೋ ಎಂಬ ಹೆದರಿಕೆಯಿದೆ. ಈ ಸಂಘದವರಿಗೆ ಮನಸ್ಸಿದ್ದರೆ ಇನ್ನಾದರೂ ಆಲೋಚಿಸಿ ಮಾಡಬಹುದು. ಇಲ್ಲವಾದರೆ ತಮಗಿಷ್ಟ ಪದವಿಗಳನ್ನಿಟ್ಟುಕೊಂಡು ಕ್ರಿಸ್‌ಮಸ್‌ವಾರವನ್ನು ಸುಖಸಂತೋಷದಲ್ಲಿ ಮದ್ರಾಸಿನಲ್ಲೊ ಗೋವೆಯಲ್ಲೊ ಕಳೆಯಬಹುದು.

ವಿ. ಸೂ. ಮದ್ರಾಸ್ ಪ್ರದರ್ಶನವನ್ನು ಮುಂದುವರಿಸಿದ್ದಾರೆಂದು ಕೇಳುವುದರಿಂದ ಮೇಲೆ ಸೂಚಿಸಿದ ಪ್ರದರ್ಶನ ಕಮ್ಮಿಟಿಯವರ ಆಕ್ಷೇಪಣೆಗೆ ಈಗ ಏನೂ ಬೆಲೆ ಕಾಣುವುದಿಲ್ಲ.

ಪಟ್ಟಣ ನಿವಾಸಿ

ಪ್ರೊಟೆಸ್ಟಾಂಟ ಕ್ರೈಸ್ತ ಮಹಾ ಸಭಾಸದರಿಗೆ ಒಂದು ವಿಜ್ಞಾಪನೆ.

ಪ್ರೊಟೆಸ್ಟಾಂಟ ಕ್ರೈಸ್ತಮತದವರು ಒಂದು ಶತಮಾನದಿಂದ ನಮ್ಮ ಜಿಲ್ಲೆಯಲ್ಲಿ ತಮ್ಮ ಮತಪ್ರಸಾರಣೆಯ ಉದ್ದೇಶವನ್ನು ಬೇರೆ ಬೇರೆ ವಿಧದಿಂದ ನೆರವೇರಿಸುತ್ತಿರುತ್ತಾರಷ್ಟೆ. ತನ್ಮಧ್ಯ ನಾಲ್ಕು ವರ್ಷಗಳ ಹಿಂದೆ ನಡೆದ ಘೋರ ಯುದ್ಧದ ದೆಸೆಯಿಂದ ಜರ್ಮನ್ ಕ್ರೈಸ್ತರು ನಮ್ಮ ಕಡೆಗೆ ಬಿಟ್ಟು ಹೋಗಿ ತೆರಳಿದಂದಿನಿಂದಲೊ, ಕಾಲಮಹಿಮೆಯಿಂದಾದ ಹಣದ ಅಭಾವದಿಂದಲೋ ತ್ವರಿತದಿಂದ ನಡಿಯುತ್ತಿದ್ದ ಮಿಶನ್ ಕೆಲಸದ ಚಕ್ರದ ತಿರುಗಾಟವು ನಿಧಾನವಾಗುತ್ತಾ ಬರಲಾರಂಭಿಸಿತು. ಬೇರೆ ಬೇರೆ ಕಡೆಗಳಲ್ಲಿ ಇದರ ಕಾರ್ಯಭಾರವು ಒಬ್ಬರಿಂದ ಇನ್ನೊಬ್ಬರಿಗೆ ಕೈಬದಲಾಯಿಸಲ್ಪಟ್ಟಿರುತ್ತದೆ. ಆದರೆ ನಮ್ಮ ಜಿಲ್ಲೆಯಲ್ಲಿ ಇಂದಿನವರೆಗೆ ಇದಕ್ಕೆ ಕುಂದುಬಾರದೆ ಇದ್ದರೂ, ಇಷ್ಟರ ವರೆಗೆ ಈ ಜೆನರಿಸ್ ಮಿಶ್ಯನಿಗೆ ಸಿಕ್ಕುತ್ತಿದ್ದ ದ್ರವ್ಯಸಹಾಯವು ಕಡಿಮೆಯಾದುದರಿಂದ ಈ ಮಿಶೂನಲ್ಲಿ ಸಹ ರಿಟ್ರೆಂಚ್‌ಮೆಂಟ್ ಕಮಿಟಿಮಾಡಿ ಖರ್ಚು ಕಡಿಮೆಮಾಡುವ ಇರಾದೆಯಲ್ಲಿದ್ದಾರೆಂಬ ವರ್ತಮಾನ ಕೇಳುತ್ತೇನೆ.

ಆದುದರಿಂದ ಅಂಥಾ ರಿಟ್ರೆಂಚ್‌ಮೆಂಟ್ ಕಮಿಟಿ ಮೆಂಬರರಿಗೆ ನನ್ನದೊಂದು ವಿನಂತಿ. ಬೇರೆ ಬೇರೆ ಕೈಗಾರಿಕೆ ಕಾರ್ಖಾನೆಗಳಲ್ಲಿಯೂ ಪಾಠಶಾಲೆಗಳಲ್ಲಿಯೂ ಪ್ರಸಂಗಿಗಳ ಮುಖಾಂತರವೂ ಸುವಾರ್ತೆಸಾರುವಿಕೆಯ ಕೆಲಸವು ಸಾಗುತ್ತಿರುವುದು. ಈ ಮೂರು ವಿಧಾನಗಳಲ್ಲಿ ಪಾಠಶಾಲೆಗಳಲ್ಲಿ ಸುವಾರ್ತೆಯನ್ನು ಸಾರುವ ಕೆಲಸವು ಮುಖ್ಯವಾಗಿದೆ. ಯಾಕೆಂದರೆ, ಬಿತ್ತುವವನ ಸಾಮ್ಯದಂತೆ ಹಸನು ಭೂಮಿಗೆ ಬೀಜ ಬೀಳುವಂತೆ ಚಿಕ್ಕ ಮಕ್ಕಳಿಗೆ ಚಿಕ್ಕ ಪ್ರಾಯದಲ್ಲಿ ಚಿಕ್ಕ ಬುದ್ಧಿಗೆ ವಿದ್ಯೆಯು ಬೇಗನೆ ನಾಟುವುದು. ಹೀಗಿರುತ್ತಾ ಇಂಥಾ ಎಳೆ ಕೂಸುಗಳಿಗೆ ಸುವಾರ್ತೆ ನೀತಿಶಾಸ್ತ್ರ ಇತ್ಯಾದಿ ಪಾಠವು ದಿನವಹಿ ನಡಿಯುತ್ತಿರುವುದರಿಂದ ಮಕ್ಕಳು ಪರ್ಬೋಧ ಆಗಲಿಕ್ಕೆ ಪಾಠಶಾಲೆಯೊಂದಲ್ಲದೆ ಬೇರೆ ದಾರಿ ಇದ್ದರೂ ಇದರಷ್ಟು ಪ್ರಯೋಜನಕರವಾದುದಲ್ಲ. ಸುವಾರ್ತೆಸಾರುವ ಕಾರ್ಯಕ್ಕಾಗಿ ಶಾಲೆಗಳಿಗೆ ಕಾರ್ಖಾನೆಗಳಿಗೂ ಊರು ಊರು ತಿರುಗಾಡುವ ಪ್ರಸಂಗಿಗಳಿಗೂ ಆಗುವ ಖರ್ಚಿಗಿಂತ ಕಡಿಮೆ ಖರ್ಚು ತಗಲುವುದು. ಇಂಥಾ ಸಾರ್ವಜನಿಕ ಪ್ರಯೋಜನವಾಗುವ ಮಿಶನ್ ಶಾಲೆಗಳನ್ನೂ ಅಂಥಾ ಮಿಶನ್ ಶಾಲೆಯಲ್ಲಿ ಕೆಲಸ ಮಾಡುವ ಉಪಾಧ್ಯಾಯರುಗಳನ್ನೂ ಅದರಲ್ಲಿಯೂ ಹಿಂದುಉಪಾಧ್ಯಾಯರನ್ನು ಕಡಿಮೆ ಮಾಡಬೇಕೆಂದು ಆಲೋಚನೆನಡಿಯುತ್ತಿದೆ ಎಂತ ದೂರದಿಂದ ವರ್ತಮಾನ ಕೇಳುತ್ತೇನೆ.

ಮಿಶನ್ ಶಾಲೆಗಳಲ್ಲಿ ಕಲಿಯುವ ಹುಡುಗರು ಹೆಚ್ಚಾಗಿ ಹಿಂದುಳಿದ ವರ್ಗದವರೂ ಗರೀಬರೂ ಆಗಿರುತ್ತಾರೆ. ಇಂಥವರಿಗೆ ವಿದ್ಯೆಕೊಡುವುದರಿಂದ ಮಿಶನಿನವರ ಕೀರ್ತಿ ಆಚಂದ್ರಾರ್ಕವಾಗಿ ಉಳಿಯುವುದು.

ಮಿಶನ್ ಶಾಲೆಗಳಲ್ಲಿ ಹಿಂದು ಉಪಾಧ್ಯಾಯರು ಯಾಕೆ ಇರಬೇಕು? ಈ ಪ್ರಶ್ನೆಯನ್ನು ಕೆಲವರು ಕೇಳಲಿಕ್ಕೆ ಸಾಕು. ಆದರೆ ಕ್ರೈಸ್ತ ಉಪಾಧ್ಯಾಯರು ಆಗಾಗ್ಗೆ ವರ್ಗವಾಟ್ಟು ಬರುವುದರಿಂದ ಊರಿನ ಮಕ್ಕಳ ಮತ್ತು ಹೆತ್ತವರ ಗುರ್ತುಪರಿಚಿತಿ ಇವರಿಗೆ ಇರುವುದಿಲ್ಲ. ಅವರಿಗೆ ಇತರರ ಪರಿಚಿತಿ ಇಲ್ಲ. ಗುರ್ತಿಲ್ಲದ ಉಪಾಧ್ಯಾಯರೊಡನೆ ಮಕ್ಕಳು ಸಂತೋಷದಿಂದ ಕೆಲಸಮಾಡಲೊಲ್ಲರು. ಮತ್ತು ಒಂದು ಊರಿನಲ್ಲಿ ಮಿಶನಿಗೆ ಎರಡು ಶಾಲೆ ಇರುವಲ್ಲಿ ಮಕ್ಕಳನ್ನು ಜಮಾಯಿಸಲಿಕ್ಕೆ ಹಿಂದು ಉಪಾಧ್ಯಾಯರೇ ಬೇಕು. ಅದಲ್ಲದೆ ಮಾತೃಭಾಷೆಯಿಂದ ಕಲಿಸಬೇಕಾದರೆ ಊರಿನ ಹಿಂದು ಉಪಾಧ್ಯಾಯರೇ ಅಗತ್ಯವಾಗಿದೆ. ಆದುದರಿಂದ ಒಂದೊಂದು ಶಾಲೆಯಲ್ಲಿ ಒಬ್ಬ ಇಬ್ಬರು ಹಿಂದು ಮಾಸ್ತರನ್ನು ಇರಗೊಡಿಸುವುದು ಅಗತ್ಯ.

ಈ ಮೊದಲು ಮಂಗಳೂರಿಗೆ ಬಂದಿದ್ದ ರೆವರೆಂಡ್ ಗ್ರೇಟರ್, ಲೊನರ್ ತೂಶ್ ದೊರೆಗಳು ದವರ್ ದೊರೆಗಳು ಈ ಸೂತ್ರವನ್ನು ಅನುಸರಿಸಿ ನಮ್ಮ ಜಿಲ್ಲೆಯ ಪ್ರತಿ ಮಿಶನ್ ಶಾಲೆಯಲ್ಲಿ ಒಬ್ಬೊಬ್ಬ ಹಿಂದು ಉಪಾಧ್ಯಾಯರನ್ನು ನೇಮಿಸುತ್ತಿದ್ದರು. ಆದುದರಿಂದ ಹೊಸ ವಿಲೆವಾರಿಯಲ್ಲಿ ಟ್ರೈಂಡ್ ಮತು, ಸರ್ವಿಸ್ ಉಪಾಧ್ಯಾಯರಲ್ಲಿ ದಯಾಭಾವವಿಟ್ಟು ಆಲೋಚಿಸಲಿ ಎಂಬುದೇ ನನ್ನ ವಿನಂತಿ.

ಒಬ್ಬ ಹಿತೈಷಿ.

WANTED.

Young Men to undergo a three months course of training under the direction of the Assistant Registrar of Co-operative Societies, Mangalore, and the authorities of this Bank, for serving as Supervisors of Co-operative Societies under the Supervising Unions in this district. Matriculates or Secondary School Leaving Certificate Holders will be preferred. The trained candidates will be appointed as Supervisors, only when there is a vacancy. No certainty of employment can be held out immediately after the close of the course of training. Candidates may if deemed fit, be required at any later stage to undergo any examination that may be prescribed for the purpose. Applications to contain information about age, caste, special or general qualifications and all such other particulars, and to reach the undersigned not later than 31. 8. 1922.

South Canara Central Co-operative Bank, Ltd, Puttur, South Kanara.
Dated 2-8-1922.

M. Ananta Rau,
Secretary.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಪಡಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ನಮಗೆ ಒಂದು ಬೇಕಾಗಿರುವಲ್ಲಿ

ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೬. (ಬ್ರಾಡ್ವೇ, ಮದ್ರಾಸ್.

Local Agents: Raphael & Co.,
Brito Buildings,
Hampankatta, MANGALORE.

Sri Lakshmi Mills, Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ

ಇತ್ತೀಚೆಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯಾರಿಸುವುದಲ್ಲದೆ ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ಇರಿಸಿ ನಾನಾ ವಿಧದ ಕೆಲಸ [illegible] ತಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ [illegible] ಬೇಕಾದ ಮರದ ಚೌಕಗಳನ್ನು, ವಿಶೇಷವಾಗಿ [illegible] ಶಾಲಾ ಕಾಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಸ್ಥರಿಗೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ [illegible]

Manager,
Sri Lakshmi Mills, KASARGOD, S. K.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0
Reserve and other sinking Funds ,, 181,250—0—0

ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತದೆ.

For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 21st Feb. 1922.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,

ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಜಾಡ್ಯಕ್ಕೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ಹೊಟ್ಟೆಯ ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೇಡೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, [illegible], ಆಹಾರವು ಜೀರ್ಣವಾಗದೆ ಬರುವ ತಲೆನೋವು, [illegible], ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಅಸಂಖ್ಯಾತ ಇನ್‌ಫ್ಲುಯೆನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷ್ಠಿಪ್ರಿಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು.

ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ಚಿತ್ರದಲ್ಲಿರುವ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ.

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಕೂದಲು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ದಿವಸ ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವಿಸಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡಲಾರಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಮಬಾಣವಾಗಿಯೂ, ಎದೆ [illegible] ರೋಗಗಳು [illegible] ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ [illegible].

[illegible]

[illegible] ಸೀಸೆ 1ಕ್ಕೆ ರೂ. 2—0—0.

ವಿಳಾಸ—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
[illegible]

R. D. Kately & Co.
No. 8. Frere Road,
Near Wright & Co. [illegible] Bombay.

ಮಂಗಳೂರು — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇನೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ [illegible]

ಅಚ್ಚಿನಲ್ಲಿದೆ!

ಎಂ. ಜಿ. ಐಗಳ್, ಇವರಿಂದ ರಚಿತವಾದ

ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ. ಪುಸ್ತಕದ ಪುಟಗಳ ಸಂಖ್ಯೆಯು ಕ್ರಾನ್ ೩ ಸ್ಯಾಜದ ೩೦೦ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ. ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲೆನಿಂತ ೬೪ ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜೈನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನು ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಆಲೂಪ ಅರಸರು—ಉದ್ಯಾವರ ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಿ—ಕಾದ್ರಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತನಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನ್ನಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಭಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರ ಮಧ್ವರಾದ್ದು—ಆನಂದತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹಂಪರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ದುಬಕರ—ಅಲಿ—ಖಲೀಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚೆರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ—ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸ್ರೂರು ಕೋಟೆ ಕಟ್ಟಿದ್ದು—ಕೋಂಡಮ್ಮ—ಬಾರ್ಕೂರು, ಮಂಗಳೂರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಮೃತಿ—ವಂಶಾವಳಿ. 20. ರೋಮನ ಕಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಿದಿರೆಸವಪ್ಪ—ನೀಲೇಶ್ವರ ಯುದ್ಧ—ವೀರವರಾಡಗಳು—ವಿಜಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೂನ್ನಚಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ರಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—ಬುಕಿನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತ. 23. ಕೊಡಗರು—ಪಂಜ—ಸೂಳ್ಯ—ಬೆಳ್ಳಾರೆ—ಅಮರಮಾಗಣೆಗಳು—ಬೆಳ್ಳಾರೆ—ಮುಚ್ಚೂರು ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ, ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳ-ಭಂಗ ರಾಜ—ಗುರುವಾಯನಕೆರೆ ಪಟ್ಟ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಟ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಧರ್ಮದ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮುಟನ ಪ್ರತಿಷ್ಠೆ—ಸಾರಾವಿ ಯುದ್ಧ—ಬಂಟವಾಳ ಮಹಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ವಿಳನಾಡು ಹೆಗ್ಗಡೆ—ವೀರಪಾಂಡ್ಯ ಗುಮುಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿಮಂತೂರು—ಮೂಲಿಕೆ—ವಳಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಿಡ್ಲೆ—ಸೋಮಲಾದೇವಿ—ಎಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾರ್ಸಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ಬನ್ನಾರರು—ಕುಂಬಳೆ ಅರಸರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಡಮ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೋಮಶೇಖರನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಟ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟುಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಆಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23—ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಪಡುಜೆಡೆ 1.

ವಿಳಾಸ:—

ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವು ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಷ್ಫಲವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಭಸ್ಮಾ ಸಹ, ಇದರಲ್ಲಿ ಉಂಟು, ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇದುತ್ಪತ್ತಿ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ಲಕ್ಷಣವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ತಾಳಿಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇಟ್ಟ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳು ವೈದ್ಯರು ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರು ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಕಡಿಮೆಮಾಡಿ ಇಟ್ಟಿರುವದು. ೨—೮—೦. ಟಪ್ಪಾಲು ಖರ್ಚು ಬೇರೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ, ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನು, ಜನನೇಂದ್ರಿಯಾದಿಗಳ ವರ್ಣನೆಯನ್ನು, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನು, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನು, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮೊದಲಾದ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಬಲು ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ತರಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಭೋಗಿಗಳಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

---

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ

ಶ್ರೀನಿವಾಸ ರಂಗಪ್ಪೆ

ರಥಬೀದಿ, ಮಂಗಳೂರು.

ಸನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೭—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ವೀರ ರಾಜಪುತ್ರಿಯ ನಡವಳಿಕೆಯು ವಿಷಯವಾದ ಈ ಕಥೆಯನ್ನು ಯಾರೇ ಆಗಲಿ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಸಾಗದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯಗಸಾಮರ್ಥ್ಯ, ರಾಜನೀತಿ, ಪ್ರಜೆಗಳ ರಾಜಭಕ್ತಿ ಇವುಗಳ ನ್ನು ಪ್ರತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲೆಯು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ.'

ಸಂಗೀತ ಸಮಯಸಾರ ಸಚಿತ್ರ ರೂ. ೧—೦—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೦—೦.

ಮುತ್ತಿನ ಸರ	0—12—0
ಸಂತಾಪಕ ಕಾದಂಬರಿ	0—6—0
ಚಂದ್ರಮುಖಿ ,,	0—8—0
ರಾಜಪುತ್ರರಮಣಿಯರು	0—8—0
ಕೆಲವು ಸಣ್ಣ ಕಥೆಗಳು	1—0—0
ರಾಜಯೋಗ	1—0—0
ಸಂಪರಾಮಾಯಣ ಹೊಸ ಮುದ್ರಣ	5—0—0
ಸಂಪರಾಮಾಯಣದ ಕಥೆ ವಚನ	0—12—0
S. S. L. C. Kannada Texts ಹರಿದಾಸ	0—5—0
ಸುಶೀಲೆ	0—6—0
ಅಧಮಯ ಹುಡುಗಿ	0—12—0

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published by V. S. Kamath at the Mangalore Trading Association's Sharada Press, Mangalore.

Registered No. M. 498.

SWADESHABHIMANI. MANGALORE.

ಸ್ವದೇಶಾಭಿಮಾನಿ

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ ,, 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ ||
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ || ೧ ||

ದೊರೆಯಲ್ಪನುಪಮರತ್ನಗಳು ಸಾ- | ಗರವ ಮಥಿಸಲು ಸುರರಿಗದರಿಂ |
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ||
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೧೬. ಮಂಗಳೂರು, ತಾರೀಕು ೧೧ನೇ ಶುಕ್ರವಾರ ಆಗೋಸ್ಟು ೧೯೨೨. ಸಂಚಿಕೆ ೩೨

ಮಾಲು ಉತ್ತಮ! ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು.

ಮೇಲಾದ

=ಜವುಳಿ ಸಂಗ್ರಹದ ಮಳಿಗೆ=

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಷ್ಮೆ ಪಟ್ಟೆ, ಮತ್ತು ನೂಲಿನ ಬಟ್ಟೆಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಮ್ಮದಾಬಾದ, ಮಹೇಶ್ವರಿ, ಗುಜರಾಥ, ಬಡೋದಾ, ಕೊಯಮುತ್ತೂರು, ಗದಗ, ಹುಬ್ಬಳ್ಳಿ, ಧಾರವಾಡ, ಇಳಕಲ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಮ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಬರ್ಮಾ ಮೊದಲಾದ ಕಡೆಗಳಲ್ಲಿಯೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳು, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುಪು ತೊಡುಪುಗಳು ಈಗ ತಾನೇ ತರಿಸಿದ್ದು ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗಿರುವ ಬಿಳೇ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯಿತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳೂ, ಬೇರೆ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಶರ್ಟಿನ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವುವು.

ನಗದಿ ಪಡೆಯುವವರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೆ,
ಕಸ್ತೂರಿ ನಾಗೇಶಪ್ಪೆ ಮತ್ತು ಕಂಪೆನಿ,
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ಎಲುಗೊಬ್ಬರದಲ್ಲಿನದಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ದೊರೆಯುವದು. ಎಕ್ರೆಗೆ 100—200 ರಾತ್ತಲ ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು, ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಡಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಷನ್ ರೋ, ಕಲ್ಕತ್ತ.
THE DIRECTOR CHILEAN NITRATE ... CUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾರ್ಥಿಪುಸ್ತಕ ಅಕ್ಷರಾಕು ಶಾಸ್ತ್ರಗಳಿಂದ ಬರೆಯಲ್ಪಟ್ಟ

ಹಿಂದೂ ವೃತಪರೀಕ್ಷೆ ಕ್ರಯ	೦—೧೦—೦
ಕೇಶುಭಂಗ	,,	೦—೧೨—೦
ಸಂಕ್ಷೇಪಗೀತೆ	,,	೦—೧೦—೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ಷ್ಯೋಪನ್ಯಾಸ ಕ್ರಯ ೦—೩—೦

ಕರ್ನಾಟಕ ಕವಿಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಶಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿ ವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅನೇಕ ತರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೩—೦ ಸ್ಥಳೀಕರಿಗೆ ರೂ ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ. ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಕ್ರೈಂಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಬು, ಪ್ಲಾಟ್ ನಲುಗಳು, ಇತರ ಬರೆಯುವಿಕೆಯ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕೀಲರು ಇತ್ಯಾದಿ ಕೋರ್ಟು ಫೋರ್ಮುಗಳು, ಮರ್ಯಾಟು ಫೋರ್ಮು, ಕುಂಬಳಿಂದ ರಚಿತ ವ ಇತರ ರಚಿತ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡು ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪತಿಕ್, ಹೋಮಿಯೋಪತಿಕ್ ಮತ್ತು ಟಿಬ್ಬು ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪೌಷ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೆಲಸಕ್ಕೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯೂಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN B
AMRUTANJAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇನ್ನು ಯಾವ ತರದ ಕಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಜೂಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಮೃತಕಷಾಯ

U. B. DUTT & Co. CALICUT.

ಮಲೆಯಾಳ ದೇಶದ ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶದ [illegible] ಕಾಡುಗಳಲ್ಲಿ [illegible] ಹಾವು ಅನೇಕ ಉತ್ಕೃಷ್ಟ ಔಷಧಗಳನ್ನು [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳು" [illegible] ಎಲ್ಲಾ ವಿಧದ ವಾತಗಳನ್ನು, ಗುಣಪಡಿಸುತ್ತದೆ. ಅಂಥಾ [illegible] ಅವಯವಗಳ [illegible] ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, [illegible] ಹಲ್ಲುನೋವು, ಕಿವಿನೋವು, ಅಮಶಂಕೆ, ತೊನೆರೋಗ [illegible] ದಿವ್ಯ ಔಷಧಗಳಿವೆ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ ಮಲಬಾರು.

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೆನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.

ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೆನ್ ಇವರ ಬುದ್ಧಿ ನಿಗಾವಣೆಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತದೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲಿ ಕೊಡಲಾಗುವುದು.

ಕಳೆದ ೨೬ ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬರೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಅಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ¼ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ ಗ್ರೈನಿನಿಂದ ¼ ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿ ಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ [illegible]— ಕವಿರಾಜ ಎನ್. ಎನ್. ಸೆನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ 1 ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಚನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 2. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಆರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯು ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರ್ಮ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ ಎಂಡ ಎಮ್ಯುನಿಶನ್ ಮಾರ್ಟ್,

ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ. ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲುಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,

ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ.

ಮಕ್ಕಳ ಆಟದ ಚಿತ್ರಾಳಿಯ 32 ಸಾಮಾನುಗಳ ಚಿಕ್ಕ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 5—0—0 ಪೋಷು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಮಡಿ, ಜರಿ, ಸಾದಾ, ಶೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಫಟಿಕ, ಸ್ಫಟಿಕಮಣಿ, ಲಿಂಗ, ಧಾತ್ರಿ ಜಾಗಂಟೆ ಇವುಗಳನ್ನು ಕೋರುವವರಿಗೆ ವಿ. ಪಿ. ಪಿ ಮೂಲಕ ಕಳುಹಿಸಲಾದೀತು. ಕ್ಯಾಟಲಾಗ್ ಇನಾಂ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,

ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹ ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ ೫ ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ.1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೋಮಿಯೋಪೆತಿಕ್ ಡಿಸ್ಪೆನ್ಸರಿ,

ಹಂಪನಕಟ್ಟೆ, ಮಂಗಳೂರು.



ಯವ್ವನದ ಶೃಂಗಾರವು

ನಿಮಗೆ ಅಷ್ಟಗಾಡೇ ನಿರ್ಮಲವಾದ ಬಣ್ಣವನ್ನು ಅದನ್ನು ಪ್ರಯೋಗಿಸಿದ ಕೂಡಲೆ ಕೊಡುವದು

"ಹಾಜಿಲೀನ್ ಸ್ನೋ"

(ಟ್ರೇಡ್ ಮಾರ್ಕ)

"'Hazeline' Snow"

(Trade Mark)

ಯಾವಾಗ ಮುಖವನ್ನು ತೊಳೆಯುತ್ತಾರೋ ಅವಾಗಲೆ ನೀರು ಒಣಗುವದರಲ್ಲಿ "ಹಾಜಿಲೀನ್ ಸ್ನೋ" ವನ್ನು ಲೇಪಿಸಬೇಕು. ಅದು ರೋಮದ ರಂಧ್ರಗಳನ್ನು ತೊಳೆದು, ಚರ್ಮವನ್ನು ಬಿಳುಪಾಗಿಯು, ಮೃದುವಾಗಿಯು, ಚಿತ್ತಾಕರ್ಷಕವಾಗಿ ಮಾಡುವದು.

"ಹಾಜಿಲೀನ್ ಸ್ನೋ"ವಲ್ಲಿ ಎಣ್ಣೆಯ ಕೊಬ್ಬು ಇಲ್ಲವು ಆದಕಾರಣ ಯಾವಕಾಲದಲ್ಲಿಯು ಅದನ್ನು ಪ್ರಯೋಗಿಸಬಹುದು.

ಇದು ಕಂಪನಿ ಶಾಸ್ತ್ರಿಗಳಲ್ಲಿ, ಕೆಮಿಸ್ಟ ಮತ್ತು ಉಗ್ರಾಣದವರಿಂದಲು ಮಾರಲ್ಪಡುವದು.

ಬರೋಸ್ ವೆಲ್‌ಕಂ ಅಂಡ್ ಕೋ

ಲಂಡನ್ ಅಂಡ್ ಬಂಬಾಯಿ.

Burroughs Wellcome & Co., London and Bombay

All Rights Reserved

ಶ್ರೀ

ಸ್ವದೇಶ ಭಕ್ತರೇ

ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳು, ಬಿಳಿ, ಹಸುರು ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ ನಯವಾದ ಶರ್ಟಿನ ವಸ್ತ್ರಗಳೂ ಮತ್ತು ವೇಷ್ಟಿ ಶಂಜೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈ ಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ದರಲೆಗೆ ನಮ್ಮಲ್ಲಿ ದೊರೆಯುವವು.

ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ಸ್ಟಾಂಪಿನ ಸ್ಟೇಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:—

ಮುಳಿಯ ತಿಮ್ಮಪ್ಪಯ್ಯ ಮತ್ತು ಸಹೋದರ

ರತ್ನ ಮತ್ತು ಜವಳಿ ವ್ಯಾಪಾರಿಗಳು,

ಬಾರಾಮುಖಾನ (ಗೋಕಟ್ಟೆ ಬಜಾರು)

ಮಂಗಳೂರು.

ವಿದೇಶ ವರ್ತಮಾನ.

ಜಾಪಾನ್ ದೇಶದ ಕ್ಷಾಮ:—ಜಾಪಾನ್ ರಾಜಕ್ಕೆ ಸೇರಿದ ದಕ್ಷಿಣ ಪಶ್ಚಿಮ ಪ್ರಾಂತ್ಯಗಳಲ್ಲಿ ಈ ಸಲ ಒಂದು ಮಳೆಯಾದರೂ ಆಗದೆ ಹೋಗಿರುವುದರಿಂದ, ಅಲ್ಲಿ ತೀರಕ್ಷಾಮವು ಪ್ರಾಪ್ತವಾದೀತೆಂಬ ಶಂಕೆಯುಂಟಾಗಿದೆ. ಇದು ವರೆಗೆ ಅಪಾರವಾಗಿ ಬೆಳೆಯಾಗುತ್ತಿದ್ದ ಬತ್ತದ ಗದ್ದೆಗಳೆಲ್ಲಾ ಬಂಜರು ಬಿದ್ದವೆಯಂತೆ.

ಜರ್ಮನ್ ಚಕ್ರಾಧಿಪತಿ:—ಮಾಜಿ ಕೈಸರ ವಿಲಿಯಮ್ ಇವರು ತಮ್ಮ ಜೀವಿತ ಚರಿತ್ರೆಯನ್ನು ತಾವೆ ಬರೆದು ಖಂಡಿತರಿಂದ ಚೆನ್ನಾಗಿ ತಿದ್ದಿಸಿ, ಅದನ್ನು ೧೦ ಲಕ್ಷ ಡಾಲರ್ (ಸುಮಾರು ೩೫ ಲಕ್ಷ ರೂಪಾಯಿ) ಗಳಿಗೆ ಅಮೇರಿಕಾ ಗ್ರಂಥ ಪ್ರಕಟನ ಕಂಪೆನಿಯೊಂದಕ್ಕೆ ಮಾರಲೆತ್ನಿಸಿದರು. ಆದರೆ ಜರ್ಮನ್ ರಾಜನೀತಿಯ ವಿಷಯವಾಗಿಯೂ ಕಳೆದ ಯುದ್ಧದೊಳಗೆ ಆ ಜನರ ನೀತಿಯು ಹೇಗೆ ಪರಿಣಮಿಸಿತೆಂಬ ವಿಷಯವಾಗಿಯೂ ವಿದ್ವಜ್ಜನರೊಳಗೆ ಬಹು ಮಂದಿ ಪುಸ್ತಕಗಳನ್ನು ಅನೇಕವಾಗಿ ಪ್ರಕಟಿಸಿರುವುದರಿಂದ ಮಾಜೀ ಕೈಸರರು ಬರೆದಿರುವ ವಿಷಯಗಳನ್ನು ತಿಳಿಯುವುದಕ್ಕೆ ಅಮೇರಿಕನರು ಅಷ್ಟು ಕುತೂಹಲ ಪಡೆಯಲಿಲ್ಲ. ಈ ಪುಸ್ತಕವನ್ನು ಮಾರಿ ೩೫ ಲಕ್ಷ ರೂಪಾಯಿಯಷ್ಟು ಹಣವನ್ನು ಸಂಗ್ರಹಿಸಿ ಇಟ್ಟುಕೊಂಡ ಹೊರತು ರಾಜ್ಯವನ್ನು ಕಳೆದುಕೊಂಡ ಈ ರಾಜನಿಗೆ ಜೀವನಕ್ಕೆ ಬೇಕಾದ ಅನುಕೂಲವು ದೊರೆಯುತ್ತದಿಲ್ಲವೆಂತಲೂ ಈಗಲೂ ಇವರು ಬಹು ದುಂದುಗಾರಿಕೆಯಿಂದ ಜೀವಿಸುತ್ತಿರುವರೆಂತಲೂ, ಇವರಿಗೆ ಒಂದು ವರ್ಷಕ್ಕೆ ೫೦,೦೦೦ ರೂಪಾಯಿಯಷ್ಟು ಖರ್ಚಿರುವುದೆಂತಲೂ, ೩೫ ಲಕ್ಷ ರೂಪಾಯಿಯ ಬಂಡವಾಳವಿದ್ದರೆ ವರ್ಷಕ್ಕೆ ಅರ್ಧ ಲಕ್ಷದಷ್ಟು ಉತ್ಪತ್ತಿಯಾದೀತೆಂತಲೂ ಅಂತೂ ಇವರ ಪುಸ್ತಕವು ಸುಮಾರು ೮೦,೦೦೦ ರೂಪಾಯಿಗೆ ಬಿಕರಿಯಾಗಿರುವುದೆಂತಲೂ ಪ್ರಕಟವಾಗಿರುವುದು.

ಐರ್ಲೆಂಡು:—ಇಲ್ಲಿಯ ಪ್ರಜಾಪಕ್ಷದ ಮುಖಂಡರಾದ ಮಿ। ಡಿವೆಲರರ ಬಲಗೈಯಂತಿದ್ದ ಹೆರಿಬೊಲೆಂಡರೆಂಬವರನ್ನು ಕೈದುಮಾಡುವ ಸಮಯದಲ್ಲಿ ಇವರಿಗೆ ಜಖಂ ಉಂಟಾಗಿ ಇವರು ಕಾಲವಾದರೆಂದು ತಿಳಿದುಬರುತ್ತದೆ. ಕೆಲವು ಸಮಯದ ವರೆಗೆ ಇವರು ಅಮೇರಿಕದಲ್ಲಿ ಸಿನ್‌ಫೇನ್ ಪಕ್ಷದ ರಾಯಭಾರಿಗಳಾಗಿದ್ದರು.

ಸರ್. ಹೆಮಿಲ್‌ಟನ್ ಗ್ರೇಂಟರು:—ಬ್ರಿಟನ ಮಾಜಿ ಪರರಾಷ್ಟ್ರಗಳ ಮಂತ್ರಿಗಳಾದ ಸರ್. ಹೆಮಿಲ್‌ಟನ್ ಗ್ರೇಂಟರು ಹಿಂದೂಸ್ಥಾನವನ್ನು ಶಕ್ತಿಯ ಸಾಮರ್ಥ್ಯದಿಂದಲೇ ಆಳತಕ್ಕದೆಂಬ ಮಾತನ್ನು ಬಿಟ್ಟುಬಿಡಬೇಕೆಂದು ಸೂಚಿಸಿದ್ದಾರೆ.

ಒಳದೇಶ ವರ್ತಮಾನ.

ಕನ್ನಡ ನವಜೀವನ:—ಈ ಪತ್ರದ ಪ್ರಕಾಶಕರಾದ ಶ್ರೀಯುತ ತಮ್ಮಣ್ಣಾಚಾರ್ಯ ಬಂಡಾಚಾರ್ಯ ಪುರೋಹಿತರವರ ಮೇಲೆ ಅಸಹಕಾರಿತೆಯಲ್ಲಿ ಸೇರಿಕೊಂಡದ್ದರಿಂದ ಜಾತಾ ಇನಾಮು ಜಾಮೀನುಗಳನ್ನು ಯಾಕೆ ಫಾರಫಿಟ ಮಾಡಬಾರದೆಂದು ನೋಟೀಸು ತೆಗೆದಿರುತ್ತಾರೆ. ಈ ನೋಟೀಸಿಗೆ ಉತ್ತರ ಕೊಡತಕ್ಕ ಕಾಲಕ್ಕೆ ಅಸಹಕಾರತತ್ವದಲ್ಲಿ ಸೇರಿದ ಮಾತ್ರಕ್ಕೆ ನಾವು ರಾಜದ್ರೋಹಿಗಳಲ್ಲವೆಂದು ಉತ್ತರ ಕೊಟ್ಟಿರುತ್ತಾರೆ. ಕರ್ಮವೀರ.

ಖಾದಿಯ ಭಂಡಾರ:—ಅಂಬಾ ಸಮುದ್ರವೆಂಬಲ್ಲಿ ಮಿ। ಪಿಯಾಲ ಎಂಬವರು ಖಾದೀ ಭಂಡಾರ ತೆಗೆಯುವುದಕ್ಕೆ ಜನರು ಸಹಾಯಮಾಡಿ ೧ ಸಾವಿರ ರೂಪಾಯಿ ಕೊಡಿಸದಿದ್ದರೆ ಉಪವಾಸ ಮಾಡುವೆನೆಂದು ಸಾರಿ, ೪ ದಿನ ಅನ್ನತ್ಯಾಗ ಮಾಡಿದರು. ೫ನೆಯ ದಿನ ಸಾವಿರ ರೂಪಾಯಿ ಜಮೆಯಾಯಿತು. ಖಾದಿ ಭಂಡಾರದ ಕಾರ್ಯವು ಪ್ರಾರಂಭವಾಯಿತು. ಇವರು ಕೆಲವು ರಾಜದ್ರೋಹಕರವಾದ ಭಾಷಣವನ್ನು ಮಾಡಿದರೆಂದು ಸರಕಾರದವರು ಇವರಿಗೆ ಒಂದು ವರುಷದ ಕಠಿಣ ಶಿಕ್ಷೆಯನ್ನು ಕೊಟ್ಟಿರುತ್ತಾರೆ.

ಪವನಂಜಯರ ಮೃತ್ಯು:—ಬೆಳಗಾಂವಿಯ ಪಡಿಯಪ್ಪ ಚೌಗಲೆ ಇವರು ಪ್ಲೇಗಿನಿಂದ ಮೃತರಾದರು. ಇವರು ಓಡುವ ಆಟದ ಸ್ಪರ್ಧೆಯಲ್ಲಿ ಇಡೀ ಹಿಂದೂಸ್ಥಾನದಲ್ಲಿ ಮೊದಲನೆಯ ಸ್ಥಾನವನ್ನು ಹೊಂದಿದ್ದರು. ಕರ್ನಾಟಕದ ಜೈನ ಸಮಾಜದವರು ಇವರಿಗೆ 'ಪವನಂಜಯ'ರೆಂಬ ಬಹುಮಾನವನ್ನು ಕೊಟ್ಟಿದ್ದಾರೆ.

ಬೀಡಾ ಮುನ್ಸಿಪಾಲಿಟಿ:—ಈ ಮುನ್ಸಿಪಾಲಿಟಿಯನ್ನು ಸರಕಾರದವರು ಸಸ್ಪೆಂಡ ಮಾಡಿರುವರು.

ಮೈಸೂರು:—ಮ. ರಾ. ವೆಂಕಟದಾಸಪ್ಪರೆಂಬ ಶ್ರೀಮಂತ ಗೃಹಸ್ಥರು ತಮ್ಮ ಅವಸಾನ ಕಾಲದಲ್ಲಿ ತಮ್ಮ ೧೫ ಸಾವಿರ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ದೇವಾಲಯಗಳಿಗೂ ಬ್ರಾಹ್ಮಣ ಅನ್ನ ಸಂತರ್ಪಣಾದಿಗಳಿಗೂ ದಾನ ಮಾಡಿರುವರು.

ಆಂಗ್ಲೋ ಇಂಡಿಯನರ ಸಂಖ್ಯೆ:—ಕಳೆದ ವರುಷ ಎತ್ತಿದ ಖಾನೆಸುಮಾರಿ ಲೆಕ್ಕದ ಮೇರೆಗೆ ಹಿಂದುಸ್ಥಾನದಲ್ಲಿ ಆಂಗ್ಲೋ ಇಂಡಿಯನರ ವರ್ಗಕ್ಕೆ ಸೇರಿದ ಜನ ಸಂಖ್ಯೆಯು ೧,೧೩,೦೯೬ ಎಂತಲೂ; ಹತ್ತು ವರುಷಗಳಿಂದ ಈಚೆಗೆ ಇವರ ಸಂಖ್ಯೆಯು ೩,೦೯೫೦ರಷ್ಟು ಹೆಚ್ಚಿರುವುದೆಂತಲೂ ಗೊತ್ತಾಗಿದೆ.

ಇಂಡಿಯಾದೇಶದಲ್ಲಿನ ಕಂಪೆನಿಗಳು:—ಕಳೆದ ಜೂನ್ ತಿಂಗಳಲ್ಲಿ ಇಂಡಿಯಾ ದೇಶದೊಳಗೆಲ್ಲಾ ೧೯೯ ಲಕ್ಷ ರೂಪಾಯಿಯಷ್ಟು ಬಂಡವಾಳವನ್ನು ಸಂಗ್ರಹಿಸುವುದಕ್ಕೆ ಅಪ್ಪಣೆಯನ್ನು ಪಡೆದಿದ್ದ ೩೩ ಕಂಪೆನಿಗಳು ರಿಜಿಸ್ತರಾದವು. ಆದರೆ ೧೮೪ ಲಕ್ಷ ರೂಪಾಯಿಯ ಭಂಡವಾಳ ಪಡೆದಿದ್ದ ೩೦ ಕಂಪೆನಿಗಳು ಲಿಕ್ವಿಡೇಶನಿಗೆ ಒಳಗಾದವು.

ಇಂಡಿಯಾದೇಶದ ರೈಲ್ವೆ:—ಇಂಡಿಯಾದೇಶದ ರೈಲ್ವೆಗಳ ಉಪಯೋಗಾರ್ಥವಾಗಿ ಬೇಕಾಗುವ ಸಾಮಾನುಗಳನ್ನು ಅಗ್ಗವಾಗಿ ದೊರಕುವ ದೇಶಗಳಿಂದ ತರಿಸಬಹುದೆಂದು ಇಂಡಿಯಾ ಸರಕಾರದವರು ಒಪ್ಪಿರುವರು. ಹೀಗಿರುತ್ತ ಜರ್ಮನಿ ದೇಶದ ಸಾಮಾನುಗಳು ಅಗ್ಗವಾಗಿ ದೊರಕುವುದರಿಂದ ಇವನ್ನೆ ಕೊಂಡುಕೊಳ್ಳುವುದು ಕೆಲವು ಆಂಗ್ಲೇಯರಿಗೆ ಅಸಹನೀಯವಾಗಿದೆ. ಮತ್ತು ಈ ವ್ಯವಸ್ಥೆಯಿಂದ ಬ್ರಿಟಿಷ್ ದೇಶದ ಕೈಗಾರಿಕೆಗೆ ಹಾನಿಬರುವುದೆಂಬ ಇರಾದೆಯಿಂದ ಮಿ। ಚಾರ್ಟರಲ್ ಎಂಬವರು ಬ್ರಿಟನಿನಿಂದಲೆ ಇಂಡಿಯವು ರೈಲ್ವೆಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳುವಂತೆ ಇಂಡಿಯಾ ದೇಶಕ್ಕೆ ಶಿಫಾರಸು ಮಾಡತಕ್ಕದೆಂಬ ಠರಾವನ್ನು ಪಾರ್ಲಿಮೆಂಟಿನ ಮುಂದೆ ಇಟ್ಟಿರುವರು.

ಕೈಗಾರಿಕೆಗೆ ಪ್ರೋತ್ಸಾಹ:—ವಿದೇಶಗಳಿಗೆ ಹೋಗಿ ಚರ್ಮ ಹದ ಮಾಡುವ ಕೈಗಾರಿಕೆಯನ್ನು ಕಲಿಯಲು ಮಿ। ವೈ. ಆರ್. ಗಾಯ ತೊಂಡೆಯವರು ಬಣ್ಣ ಮತ್ತು ಚಲುವೆ ಕೈಗಾರಿಕೆಯನ್ನು ಕಲಿಯಲು ಮಿ। ಯುಸ್. ಕೆ. ಭಾವನಗರ ಇವರಿಬ್ಬರನ್ನು ಮುಂಬಯಿ ಸರಕಾರದವರು ಚುನಾಯಿಸಿ, ಇವರಿಗೆ ವೇತನವನ್ನು ಕೊಡಲಿಕ್ಕಿದ್ದಾರೆ.

ಬಳ್ಳಾರಿ ಮುನ್ಸಿಪಾಲಿಟಿ:—ಇಲ್ಲಿಯ ಮುನ್ಸಿಪಲ್ ಕೌನ್ಸಿಲರರ ಪೈಕಿ ಜನರಿಂದ ಚುನಾಯಿಸಲ್ಪಟ್ಟ ಮೂರು ಮಂದಿ ವಕೀಲರೂ ಮೂರು ಮಂದಿ ವರ್ತಕರೂ ರಾಜನಿಷ್ಠೆಯ ಪ್ರತಿಜ್ಞೆಯನ್ನು ತೆಗೆದುಕೊಳ್ಳದೆ ಹೋದರು. ಸರಕಾರದವರು ಇವರ ಚುನಾವಣೆಯನ್ನು ರದ್ದುಪಡಿಸಿ ಇವರಿಗೆ ಪ್ರತಿಯಾಗಿ ಬೇರೆ ಆರು ಮಂದಿಯನ್ನು ಚುನಾಯಿಸತಕ್ಕದೆಂದು ಹುಕುಂ ಕೊಟ್ಟಿದ್ದಾರಂತೆ.

ಹೊಸ ಕೋಲೇಜು:—ನೋಕಲ್ಲಿ ಜಿಲ್ಲೆಯಲ್ಲಿ ಒಂದು ಹೊಸ ಕೋಲೇಜು ಸ್ಥಾಪನೆಯಾಗಲಿಕ್ಕಿದೆ. ಈ ಕೋಲೇಜಿನ ಸಹಾಯಾರ್ಥವಾಗಿ ಶ್ರೀಯುತ ಬಾಬು ಚಂಡಿಚರಣಲೋ ಹಾಗು ಮಿ। ರೋಯ್ ಶೇಟ್ ಬುಹ್‌ಲಾಲ್, ಕರನಿ ಬಹದೂರ್ ಈ ಇಬ್ಬರು ಜಮೀನುದಾರರು ಧನ ಸಹಾಯಮಾಡುವುದಾಗಿ ಮಾತು ಕೊಟ್ಟಿದ್ದರು. ಆದರೆ ಈ ಕೋಲೇಜು ಬ್ರಿಟಿಷ ಟೆರಿಟರಿಯಲ್ಲಿ ಕಟ್ಟಲ್ಪಡುವುದರಿಂದಲೂ ಮತ್ತು ಇದರ ಮೇಲ್ವಿಚಾರಣೆಯನ್ನು ಸರಕಾರದವರು ನೋಡಲಿಕ್ಕಿರುವುದರಿಂದಲೂ ಈ ಗೃಹಸ್ಥರು ಸಹಾಯಧನವನ್ನು ಕೊಡಲಿಕ್ಕೆ ಸಮ್ಮತಿಸಲಿಲ್ಲ.

ಮುಳಸಿ ಸತ್ಯಾಗ್ರಹ:—ಮುಳಸಿ ಸತ್ಯಾಗ್ರಹದ ಸಂಬಂಧ ಸೆರೆಯಲ್ಲಿ ಇಡಲ್ಪಟ್ಟ ಕೇಸರಿ ಪತ್ರದ ಸಹಾಯಕ ಸಂಪಾದಕರಾದ ಶ್ರೀಯುತ ಜೆ. ಯಸ್. ಕರಂದಿಕರ್ ಹಾಗು ಇತರ ನಾಲ್ಕು ಮಂದಿ ಸ್ವಯಂ ಸೇವಕರನ್ನು ಬಿಡುಗಡೆ ಮಾಡಲಾಯಿತು.

ನಾಟಕಗಳನ್ನು ಆಡಲು ಪ್ರತಿಬಂಧ:—ಲಕ್ನೋ ಜಿಲ್ಲೆಯಲ್ಲಿ ಕೆಲವು ಆಕ್ಷೇಪಕರ ನಾಟಕಗಳನ್ನು ಅಭಿನಯಿಸಿದ್ದರಿಂದ ಮುಂದಕ್ಕೆ ಅಲ್ಲಿ ಯಾವ ನಾಟಕವನ್ನಾಡಬೇಕಾದರೂ ಜಿಲ್ಲಾ ಮೇಜಿಸ್ಟ್ರೇಟರ ಅಪ್ಪಣೆಪಡೆಯಬೇಕೆಂದು ಹುಕುಂ ಆಗಿದೆ.

ವಿಪರೀತ ಮಳೆ:—ಬರ್ಮಾ ದೇಶದಲ್ಲಿ ಸುರಿದ ವಿಪರೀತ ಮಳೆಯಿಂದ ರಂಗೂನಿಗೂ ಮಂಡಲೆಗೂ ಮಧ್ಯದಲ್ಲಿರುವ ರೈಲ್ವೆ ಮಾರ್ಗವನ್ನು ಮುಚ್ಚಿಬಿಟ್ಟದೆ.

ಜಮೀನದಾರ ಪತ್ರಿಕೆ:—ಈ ಪತ್ರಿಕೆಯ ಸಂಪಾದಕರಿಗೂ ಪ್ರಕಾಶಕರಿಗೂ ಆಕ್ಷೇಪಕರವಾದ ಜಾಹೀರಾತನ್ನು ಪ್ರಕಟಿಸಿದ ಬಗ್ಗೆ ರೂ. ೮೦ ಜುರುಮಾನೆ ವಿಧಿಸಲಾಗಿದೆ.

ಗೋಪಾಲದಾಸ ಅಂಬಾಯಿದಾಸ:—ಮುಂಬಯಿಯ ಗವರ್ನರರಾದ ಸರ್. ಜೋರ್ಜ ಲೊಯಡರು ರಾಜಕೋಟನ್ನು ಸಂದರ್ಶಿಸಿದ ಸಮಾರಂಭದ ಸಂತೋಷ ಕಾಲದಲ್ಲಿ ಶ್ರೀಯುತ ಗೋಪಾಲದಾಸ ಅಂಬಾಯಿದಾಸರು ಹಾಜರಾಗದೆ ಇದ್ದ ಬಗ್ಗೆ ಸರಕಾರದವರು ಇವರ ಎರಡು ಆಸ್ತಿಗಳನ್ನು ತಮ್ಮ ಸ್ವಾಧೀನ ಪಡಿಸಿಕೊಂಡಿದ್ದಾರಂತೆ.

ಓಲ್ ಇಂಡಿಯಾ ಆಯುರ್ವೇದಿಕ್ ಕೋನ್ಫರೆನ್ಸ್:—ಈ ಕೋನ್ಫರೆನ್ಸಿಗೆ ಪಿಟ್ಟಾಪುರದ ಮಹಾರಾಜರು ರೂ. ೬೦೦ನ್ನು ಸಹಾಯಾರ್ಥವಾಗಿ ಕೊಟ್ಟಿರುವರು.

ಸುಳಿಗಾಳಿ:—ಕಳೆದ ತಾ. ೩ರಲ್ಲಿ ಪೇಗು ಎಂಬ ಪಟ್ಟಣಕ್ಕೆ ಹೋಗುತ್ತಿದ್ದ ೧೫೮ ಮಂದಿ ಪ್ರಯಾಣಿಕರಿಂದ ತುಂಬಿದ ೯ ಲೋಕಲ್ ಬಂಡಿಗಳು ಸುಳಿಗಾಳಿಯ ಹೊಡೆತದಿಂದ ಹೊಂಡಕ್ಕೆ ಬಿದ್ದವು. ಈ ಅಪಘಾತದಿಂದ ಮೂರು ಮಂದಿ ಮಡಿದರು. ೩೨ ಮಂದಿಗಳಿಗೆ ಜಖಂ ಆಗಿದೆ.

ಗಿರಣಿಗಳು:—ಭರತಖಂಡದಲ್ಲಿ ಹತ್ತಿಯ ಯಂತ್ರಗಾರಿಕೆಯು ದಿನದಿನಕ್ಕೆ ಬಹಳ ಅಭಿವೃದ್ಧಿಹೊಂದುತ್ತಿದೆ. ೧೮೮೦-೮೧ನೆ ವರ್ಷದಲ್ಲಿ ಈ ದೇಶದೊಳಗೆಲ್ಲಾ ೧೩ ಸಾವಿರ ಯಂತ್ರದ ಮಗ್ಗಗಳೂ, ೧೦ ಲಕ್ಷ ಕದರುಗಳೂ, ೪೩ ಸಾವಿರ ಮಂದಿ ಕೆಲಸಗಾರರೂ ಇದ್ದರು. ಕಳೆದ ೧೯೧೯-೨೦ನೆಯ ವರ್ಷದಲ್ಲಿ ಮಗ್ಗಗಳ ಸಂಖ್ಯೆಯು ೧ ಲಕ್ಷಕ್ಕೆ ಮಿಕ್ಕಿತು; ಕದರುಗಳು ೭೦ ಲಕ್ಷ ವಿರುವುವು; ಕೆಲಸಗಾರರ ಸಂಖ್ಯೆಯು ೩ ಲಕ್ಷಕ್ಕೆ ಮಿಕ್ಕಿತು.

ಶ್ರೀಯುತ ತಾತಾಚಾರ್ಯ:—ರಾಜಮಹೇಂದ್ರಿ ಟ್ರೈನಿಂಗ್ ಕೋಲೇಜಿನ ಅಧ್ಯಾಪಕರಾದ ಶ್ರೀಯುತ ಆರ್. ತಾತಾಚಾರ್ಯ ಯಮ್. ಎ. ಎಲ್. ಟಿ. ಯವರು ಉತ್ತರ ಆರ್ಕಾಡು ಮತ್ತು ಚಿತ್ತೂರು ಜಿಲ್ಲೆಗಳ ಆಕ್ಟಿಂಗ ಸ್ಕೂಲ್ ಇನ್ಸ್‌ಪೆಕ್ಟರರಾಗಿ ನೇಮಕಪಟ್ಟಿರುವರು.

ಕರ್ನಾಟಕದಲ್ಲಿ ತಿಲಕ ಸ್ವರಾಜ್ಯನಿಧಿ:—ಹುಬ್ಬಳ್ಳಿಯಲ್ಲಿ ಒಂದೇ ದಿನ ಸುಮಾರು ನಾಲ್ಕರಿಂದ ಆರು ಸಾವಿರದ ವರೆಗೆ ತಿಲಕ ಸ್ವರಾಜ್ಯನಿಧಿಗೆ ಹಣ ಜಮೆಯಾಗಿದೆಯಂತೆ.

ಸುರತ್ ಮುನ್ಸಿಪಾಲಿಟಿ:—ಈ ಮುನ್ಸಿಪಾಲಿಟಿಯು ಅಸಹಕಾರವನ್ನು ಅವಲಂಬಿಸದುದಕ್ಕಾಗಿ ಸರಕಾರದವರು ಇದನ್ನು ಮನ್ನಾ ಪಡಿಸಿದುದರಿಂದ ಪಟ್ಟಣ ನಿವಾಸಿಕರು ಮುನ್ಸಿಪಲ್ ತೆರಿಗೆಯನ್ನು ಕೊಡದಂತೆ ಪ್ರಯತ್ನಗಳು ನಡಿಯುತ್ತಿವೆ.

ಓಲ್ ಇಂಡಿಯಾ ರೈಲ್ವೆ ಕೆಲಸದವರ ಪರಿಷತ್ತು:—ಬರುವ ಸೆಪ್ಟಂಬರ ತಾ. ೧, ೨, ೩, ಮತ್ತು ೪ರಲ್ಲಿ ಲಕ್ನೋ ಪಟ್ಟಣದಲ್ಲಿ ಸೇರುವ ಓಲ್ ಇಂಡಿಯಾ ರೈಲ್ವೆ ಕೆಲಸದವರ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ದೀನ ಬಂಧು ಸಿ. ಎಫ್. ಎಂಡ್ರ್ಯೂಸರು ವಹಿಸಿಕೊಳ್ಳಲಿಕ್ಕಿದ್ದಾರೆ.

ಶ್ರೀಯುತ ಬೆಳವಿಯವರ ದಾನ:—ಕರ್ನಾಟಕದಲ್ಲಿ ಪ್ರಸಿದ್ಧ ವಕೀಲರಾದ ಬೆಳಗಾಂವಿಯ ಶ್ರೀಯುತ ಬೆಳವಿಯವರು ಟಿಳಕ ಮಹಾ ವಿದ್ಯಾಲಯಕ್ಕೆ ರೂ. ೫೦೦ ದಾನಮಾಡಿರುವರು.

ಕಡ್ಡಾಯದ ಶಿಕ್ಷಣ:—ಕೊನ್‌ಪುರ ಮುನ್ಸಿಪಾಲಿಟಿಯು ವ್ಹಾಲ್‌ಗಾನಿ ಮತ್ತು ಪಕಟಪುರ ವಾರ್ಡಿನಲ್ಲಿ ಬರುವ ಒಕ್ಟೋಬರ ತಾರೀಕು ೫ರಿಂದ ೬ ವರುಷದಿಂದ ೧೧ ವರುಷದ ವರೆಗಿನ ಹುಡುಗರಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕಲಿಸಲಾಗುವುದು.

ಮದರಾಸ ನ್ಯಾಯವಿಧಾಯಕ ಸಭೆಯ ಅಧಿವೇಶನ:—ಈ ಕೌನ್ಸಿಲಿನ ಅಧಿವೇಶನವು ಬರುವ ಸೆಪ್ಟಂಬರ ತಾರೀಕು ೧೨ರಲ್ಲಿ ಪ್ರಾತಃಕಾಲ ೧೧ ಗಂಟೆಗೆ ಸೇರುವುದು.

ಸ್ವಯಂ ಸೇವಕನಿಗೆ ಶಿಕ್ಷೆ:—ಆಕ್ಷೇಪಕರವಾದ ಪದ್ಯಗಳನ್ನು ಹಾಡಿದ ಬಗ್ಗೆ ಅಬ್ದುಲ್ ವಹೀನ್ ಎಂಬ ಖಿಲಾಫತ್ ಸ್ವಯಂ ಸೇವಕನಿಂದ ರೂ. ೫೦೦ ಮತ್ತು ರೂ. ೧೦೦೦ದ ಎರಡು ಜಾಮೀನುಗಳನ್ನು ಕೇಳಲಾಯಿತು. ಆದರೆ ಇವರು ಜಾಮೀನನ್ನು ಕೊಡಲು ಒಪ್ಪದೆ ೬ ತಿಂಗಳ ಕಾರಾಗೃಹವಾಸವನ್ನು ಅನುಭವಿಸಲು ಒಪ್ಪಿದರು.

ಶ್ರೀಯುತ ಕೇಳಕರರು:—ಇವರು ಮಹಾರಾಷ್ಟ್ರ ಪ್ರಾವಿನ್ಸಿಯಲ್ ಕೊಂಗ್ರೆಸ ಕಮ್ಮಿಟಿಯ ಅಧ್ಯಕ್ಷಪದವಿಗೆ ಪುನಃ ರಾಜಿನಾಮೆಯನ್ನು ಕೊಟ್ಟರಂತೆ.

ಮಲಬಾರದಂಗೆ:—ಮಲಬಾರ ದಂಗೆಯ ಒಬ್ಬ ಮುಖಂಡನಾದ ಅಬ್ದುವಕರ್ ಮುಸಲಿಯಾರ ಮತ್ತು ಇತರ ನಾಲ್ಕು ಮಂದಿಗಳಿಗೆ ಮರಣ ದಂಡನೆಯ ಶಿಕ್ಷೆ ವಿಧಿಸಲಾಗಿದೆ.

ಬೆಂಗಳೂರು:—ಈ ಪಟ್ಟಣವನ್ನು ದೊಡ್ಡದು ಮಾಡುವುದಕ್ಕಾಗಿ ಅಂದಾಜು ಮಾಡಿದ ರೂಪಾಯಿ ೫,೪೦,೩೦೦ನ್ನು ಮೈಸೂರು ಗವರ್ನಮೆಂಟಿನವರು ಸೆಂಕ್ಷನ್ ಮಾಡಿರುತ್ತಾರೆ.

ಮುಂಬಯಿ:—ಉತ್ತರ ದೇಶದಿಂದ ಅನೇಕ ಪಠಾಣ ಜನರು ಮುಂಬಯಿಗೆ ಬಂದು ಶ್ರೀಮಂತರ ಮನೆಗಳ ಕಾವಲುಗಾರರಾಗಿ ಕೆಲಸಮಾಡುತ್ತಿರುವರು. ಅವರಲ್ಲಿ ಕೆಲವರು ಒಟ್ಟುಗೂಡಿ ದರೋಡೆಗಳನ್ನು ಮಾಡುತ್ತಿರುವರೆಂದು ತಿಳಿದು ಬಂದದ್ದರಿಂದ, ಕೆಲವರನ್ನು ಹಿಡಿದಿದ್ದಾರೆ.

ದಕ್ಷಿಣ ಕನ್ನಡ.

ಉಡುಪಿ:—ತಾ. ೬-೮-೨೨ನೆ ಆದಿತ್ಯವಾರ ಸಾಯಂಕಾಲ ೪ ಗಂಟೆಗೆ ಉಡುಪಿಕಾಂಗ್ರೆಸ್ ಕಚೇರಿಯಲ್ಲಿ ಕೂಡಿದ ಉಡುಪಿ ತಾಲೂಕು ಕಾಂಗ್ರೆಸ್ ಕಾರ್ಯನಿರ್ವಾಹಕಮಂಡಳಿಯ ಸಭೆಯಲ್ಲಿ ಮಂಜೂರಾದ ಠರಾವುಗಳು:-(೧) ಉಡುಪಿ ತಾಲೂಕಿನ ಬಾಬ್ತು ಶೇಂದಿ ಗುತ್ತಿಗೆಗಳು ತಾ. ೧೨-೮-'೨೨ಲ್ಲು ಏಲಂ ಆಗಲಿಕ್ಕಿರುವುದರಿಂದ ಆ ದಿನದ ಮುಂಚೆಯೇ ಕುಡುಕುತನದ ಕೆಡುಕುಗಳನ್ನು ನಮೂದಿಸಿ ತಾಲೂಕು ಕಮಿಟಿಯ ಸದಸ್ಯರ ವ ಇದಕ್ಕೆ ಒಪ್ಪಬಹುದಾದ ಇತರ ಉಡುಪಿಯ ಮುಖಂಡರ ಹೆಸರಲ್ಲಿ ವಿನಂತಿ ಪತ್ರವನ್ನು ಛಾಪಿಸಿ, ಜನರಲ್ಲಿ ಹಂಚಬೇಕಾಗಿ ನಿರ್ಣಯಿಸಲಾಯಿತು.

(೨) ತಾ. ೧೫-೬-'೨೨ಲ್ಲು ಈ ನಮ್ಮ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರಲ್ಲೊಬ್ಬರಾದ ಶ್ರೀಯುತ ಬೈಲೂರು ಶಂಕರರಾಯರು ಸ್ವರ್ಗಸ್ಥರಾದ ವಿಷಯದಲ್ಲಿ ಈ ಕಮಿಟಿಯವರು ತಮ್ಮ ದುಃಖವನ್ನು ಸೂಚಿಸುತ್ತಾರೆ. ಮತ್ತು ಅವರ ಆತ್ಮಕ್ಕೆ ಚಿರಶಾಂತಿಯಾಗಲೆಂದು ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ.

(೩) ಶ್ರೀಯುತ ಬೈಲೂರು ಶಂಕರರಾಯರ ಮರಣದಿಂದ ಖಾಲಿಬಿದ್ದ ಸ್ಥಳದಲ್ಲಿ ಶ್ರೀಯುತ ಶೀನಾ ನಾಗಪ್ಪ ಇವರನ್ನು ಆರಿಸಲಾಯಿತು.

(೪) ಕರ್ನಾಟಕದ ಮುಖಂಡರಲ್ಲೊಬ್ಬರೂ, ಕರ್ನಾಟಕ ವೃತ್ತದ ಸಂಪಾದಕರೂ ಆಗಿದ್ದ, ದೇಶಭಕ್ತ ಜಯರಾವ್ ದೇಶಪಾಂಡೆ ಇವರ ಅಕಾಲ ಮರಣದಿಂದ ಇಡೀ ಕರ್ನಾಟಕ ಪ್ರಾಂತ್ಯಕ್ಕಾದ ನಷ್ಟ ಮತ್ತು ದುಃಖಗಳಲ್ಲಿ ನಾವು ಸಹಾ ಸಹಭಾಗಿಗಳಾಗಿರುತ್ತೇವೆ.

(೫) ಮಹಾತ್ಮಾ ಗಾಂಧಿಯವರ ಜನ್ಮದಿನವನ್ನು ತಾ. ೨-೧೦-'೨೨ನೆ ದಿನ (೧) ಮೆರವಣಿಗೆ (೨) ನೂಲುವ ಪಂದ್ಯಾಟ (೩) ಮತ್ತು ಮಹಾಸಭೆ ಇತ್ಯಾದಿಗಳಿಂದ ಆಚರಿಸಬೇಕಾಗಿ ನಿರ್ಣಯಿಸಲಾಯಿತು. ಈ ವಿಷಯದಲ್ಲಿ ಬೇಕಾದ ಏರ್ಪಾಡುಗಳನ್ನು ಮಾಡುವರೆ ಈ ಕೆಳಗಿನ ಉಪಸಭೆಯನ್ನು ಚುನಾಯಿಸಲಾಯಿತು. (೧) ಹಿ. ಮ. ರಾ. ಗಳಾದ ನಾರಾಯಣರಾವ್ (೨) ಕೊಪ್ಪ ಗೋವಿಂದಪ್ಪ. (೩) ಹಿ. ರಾಮರಾಯ ಮಲ್ಯ.

ಹಿರಿಯಡ್ಕ:—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಬಹಳ ಕಡಿಮೆ ಇರುವುದಾದರೂ ಉಪಾಧ್ಯಾಯರು ನಾಲ್ಕು ಮಂದಿ ಇನ್ನೂ ಇರುವರು. ಒಟ್ಟು ಸಿಕ್ಷಣ ಮಕ್ಕಳ ಹಾಜರಿ ಸುಮಾರು ೩೦ಕ್ಕೆ ಮಿಕ್ಕಿ ಇರುವುದಿಲ್ಲ. ಪ್ರತಿ ಶಾಲೆಗಳಲ್ಲಿಯೂ ಪಂಚಮರೇ ಮುಂತಾದ ಅಸ್ಪೃಶ್ಯವರ್ಗದ ಮಕ್ಕಳನ್ನು ದಾಖಲುಮಾಡಿಕೊಳ್ಳಬೇಕೆಂದು ಹುಕುಂ ಇದೆ. ಆದರೆ ಕೊಡೆಗಳನ್ನು ಕಟ್ಟುವ "ನಲ್ಕೆ" ಜಾತಿಯ 'ಚಾಂಪಿ' ಎಂಬ ಬಡ ಅಸ್ಪೃಶ್ಯವರ್ಗದವನು ಅನೇಕ ದಿನಗಳಿಂದ ತನ್ನ ಮಕ್ಕಳನ್ನು ಶಾಲೆಗೆ ಹಾಕಬೇಕೆಂದು ಉಪಾಧ್ಯಾಯರನ್ನು ಕೇಳಿದರೂ ಅವರು ಒಪ್ಪುವುದಿಲ್ಲ. ಮೊನ್ನೆ ದಿನ ಅವನು ಹೀಗೆಂದನಂತೆ.—"ಅಯ್ಯಾ, ನಾಲ್ಕು ಜನ ಉಪಾಧ್ಯಾಯರಿಗೆ ನಾಲ್ಕು ಕೊಡೆಗಳನ್ನು ಕಟ್ಟಿಕೊಡುತ್ತೇನೆ. ನನ್ನ ಮಕ್ಕಳನ್ನು ದೂರ ಬೆಂಚುಗಳನ್ನಾದರೂ ಬರಹವನ್ನು ಕಲಿಸಿರಿ" ಎಂದು ಹೇಳಿದರೂ ಅವರು ಒಪ್ಪಲಿಲ್ಲವಂತೆ. ಕೊನೆಗೆ ಅವನು ಭಗ್ನಮನೋರಥನಾಗಿ ಹಿಂತಿರುಗಿ ಮನೆಗೆ ಹೋದನಂತೆ. ಅಸ್ಪೃಶ್ಯವರ್ಗದವರ ದುರವಸ್ಥೆಯನ್ನು ನೋಡಿದರೆ ಯಾರಿಗೆ ತಾನೆ ಕನಿಕರ ಬಾರದು? ಊರ ಶಾಲೆಗಳು ಸಾರ್ವಜನೀಕವಾದರೂ 'ದೇವರು ಕೊಟ್ಟರೂ ಪೂಜಾರಿ ಬಿಡ' ಎಂಬಂತೆ ಮೇಲಾಧಿಕಾರಿಗಳ ಹುಕುಂ ಇದ್ದರೂ ಕನಿಕರಬಾರದ ಉಪಾಧ್ಯಾಯರು ಇನ್ನಾದರೂ ಆ ಬಡ ಅಸ್ಪೃಶ್ಯ ಮಕ್ಕಳನ್ನು ದಾಖಲುಮಾಡಿಕೊಳ್ಳುವಂತೆ ಅಧಿಕಾರಿಗಳಾದರೂ ಎಚ್ಚರಿಸಿದರೆ ಒಳ್ಳೇದಾದೀತೆಂದು ಅನೇಕರು ಅಭಿಪ್ರಾಯಪಡುತ್ತಾರೆ.

ಅಂಗಡಿಮೊಗರು:—ಇಲ್ಲಿ ಬಕರೀದ್ (ಹಜ್ಜ ಪೆರುನಾಳ್) ಸಂಬಂಧವಾಗಿ ಪ್ರತಿವರುಷ ಕೂಡುವಂತೆ ಈ ವರುಷವೂ ಒಂದು ದೊಡ್ಡ ಸಭೆ ಸೇರಿತ್ತು. ಖಾದಿ, ವಿದ್ಯಾಭ್ಯಾಸ, ಮದ್ಯವರ್ಜನೆ ಮೊದಲಾದ ಸಂಗತಿಗಳನ್ನು ಕುರಿತು ಉಪನ್ಯಾಸಗಳು ಆದವು.

ಮೊಗ್ರಾಲು:—ಕನ್ಸಿಲ್ ಸೊಸೈಟಿ ಎಂಬ ಹೆಸರಲ್ಲಿ ಇನ್ನೊಂದು ಸೊಸೈಟಿಯಾಗುವರೆ ಅಪೇಕ್ಷಿಸಿ ಅರ್ಜಿ ಕೊಟ್ಟಿರುವರು.

ವಿಟ್ಲ:—ಉಪ್ಪಿನಂಗಡಿ ತಾಲೂಕು ಬೋರ್ಡ ಮೆಂಬರರ ಈ ತಿಂಗಳ ಮೀಟಿಂಗು ವಿಟ್ಲ ಬೋರ್ಡು ಹುಡುಗರ ಶಾಲೆಯಲ್ಲಿ ಬರುವ ತಾರೀಕು [illegible]ರಲ್ಲಿ ಮಧ್ಯಾಹ್ನ ೧ ಗಂಟೆಗೆ ಸೇರುವುದು. ಉಪಾಧ್ಯಾಯರ ಎಲೆಕ್ಷನ್ನಿನ ಕುರಿತು ಆಲೋಚಿಸಲು ಅದೇ ದಿನ ಮೆಂಬರರ ಒಂದು ಜಾದಾ ಸಭೆಯು ಸಹ ಸೇರಲಿಕ್ಕಿದೆ.

ಪುತ್ತೂರು:—ಇದೇ ತಿಂಗಳ ತಾ ೮ರಲ್ಲು ಇಲ್ಲಿಯ ಶೇಂದಿಗುತ್ತಿಗೆಗಳು ಇಲ್ಲಿಯ ರವಿನ್ಯು ಡಿವಿಜನಲ ಆಫೀಸರರಿಂದ ಏಲಂ ಮಾಡಲ್ಪಟ್ಟವು. ಕಳೆದ ವರುಷಕ್ಕಿಂತಲೂ ಮೂರು ಪಾಲು ಹೆಚ್ಚಿಗೆ ಮೊಬಲಗು ಏರಿತ್ತು. ಗುತ್ತಿ ಏಲದಿಗೆ ನಿಲ್ಲುವರ ಸುಮಾರು ೧॥ ಸಾವಿರ ಜನರು ಕೂಡಿದ್ದರು. ಪಿಕೇಟಿಂಗೂ ಇಲ್ಲ, ಭಾಷಣಗಳೂ ಇಲ್ಲ. ಗಲಾಟೆಯೂ ಇಲ್ಲ. ರಸ್ತೆಯಲ್ಲಿ ಅಲ್ಲಲ್ಲಿ ಪೋಲೀಸಿನವರೂ ಸಬ್ ಇನ್ಸಪೆಕ್ಟರರು ಬಂದೋಬಸ್ತಿಗೆ ಇದ್ದರು.

ಸುಳ್ಯ ಪಂಚಾಯತ ಕೋರ್ಟಿಗೆ ಮ. ರಾ. ಸುಳ್ಯ ನಾವೂರು ನಾರ್ಣಪ್ಪಯ್ಯ ಯು. ಶಿವರಾವ್, ಯಂ. ಯಂ. ಮಿರಾ ಸಾಹೇಬ, ಚಾಲ್ಲೂರು ಕೊರಗಪ್ಪಕ್ಕಿ, ಚಾಲ್ಲೂರು ಪಟೇಲ ಜನಪ್ಪ, ಉಬರಡ್ಕ ಮಿತ್ತೂರ ತಿಮ್ಮಪ್ಪಗೌಡ, ಸುಬ್ಬಪ್ಪಗೌಡ, ಅಜ್ಜಾವರ ತುದಿಯಡ್ಕ ಲಕ್ಷ್ಮೀನಾರ್ಣಪ್ಪಯ್ಯ ಅಜ್ಜಾವರ ಲಕ್ಷ್ಮೀನಾರ್ಣಪ್ಪಯ್ಯ, ಇವರನ್ನು ಪಂಚಾಯತ ಮೆಂಬರರಾಗಿ ನೇಮಕಮಾಡಿದೆ.

ಅಲೆಟ್ಟಿ ಪಂಚಾಯತ ಕೋರ್ಟಿಗೆ ಮ. ರಾ.ಗಳಾದ ಅಲೆಟ್ಟಿ ಪಟೇಲ ಶ್ರೀನಿವಾಸ ಬೈಪಾಡಿತ್ತಾಯ, ಮಂಜಯ್ಯಕಮ್ತಿ, ರಾಮಣ್ಣಶಗ್ರಿತ್ತಾಯ, ಕೃಷ್ಣಪ್ಪಗೌಡ, ನಾರ್ಣಪ್ಪಗೌಡ ರಾಮಪ್ಪಗೌಡ, ಕೊಡೆಕಲ ದೇವಯ್ಯಗೌಡ ಇವರನ್ನು ಪಂಚಾಯತ ಮೆಂಬರರಾಗಿ ನೇಮಕ ಮಾಡಿಯದೆ.

ಕಾಸರಗೋಡು:—ಇಲ್ಲಿ ಈಗ ಸುಮಾರು ೧೦ ದಿವಸಗಳಿಂದೀಚೆಗೆ ಮಳೆ ಸ್ವಲ್ಪ ಕಡಿಮೆಯಾಗಿಯದೆ. ಹೊಳೆಗಳ ಕಿನಾರೆಯಲ್ಲಿರುವ ಕೆಲ ಗದ್ದೆಗಳ ಬೆಳೆ ಮಾತ್ರ ಈ ಮುಂಚೆ ಬಂದ ಕಠಿಣವಾದ ಮಳೆಯ ನೆರೆಯಿಂದ ಸ್ವಲ್ಪ ಕೊಳೆತು ಹೋಗಿರುತ್ತದೆ. ಅಲ್ಲದೆ ಬೆಟ್ಟುಗದ್ದೆ ವ ಗುಡ್ಡೆ ವಗೈರೆಗಳಲ್ಲಿಯ ಬೆಳೆಯು ಚೆನ್ನಾಗಿರುತ್ತದೆ. ಆದರೆ ನಮ್ಮೂರಲ್ಲಿ ಯಾವ ನಮೂನೆಯ ಬೆಳೆಯಾದರೂ ಅಕ್ಕಿಯ ಧಾರಣೆಯು ಕಡಿಮೆಯಾಗುವ ಸಂಭವ ಮಾತ್ರ ಇರುವುದಿಲ್ಲ.

ಇತ್ತೀಚೆಗೆ ಒಂದು ತಿಂಗಳ ಒಳಗೆ ಈ ತಾಲೂಕಿನಲ್ಲಿ ಸುಮಾರು ೧೫ರಷ್ಟು ಕೊಲೆ ಇತ್ಯಾದಿಗಳ ಅನೇಕ ಅಕಾಲ ಮರಣಗಳು ಸಂಭವಿಸಿದುವು. ಯಾವಾಗ ನೋಡಿದರೂ ಪ್ರತಿದಿನವೆಂಬಂತೆ ಕೊಲೆಗಳ ವರ್ತಮಾನವು ಕೇಳಬರುತ್ತದೆ. ಈ ವರೆಗೆ ಯಾವ ವರ್ಷದಲ್ಲಿಯಾದರೂ ಇಷ್ಟು ಸ್ವಲ್ಪ ಕಾಲದ ಒಳಗೆ ಇಷ್ಟು ಹೆಚ್ಚಿಗೆ ಕೊಲೆಗಳು ಆದಿಲ್ಲವೆಂತ ಕಂಡು ಬರುತ್ತದೆ. ಖೂನಿಮಕ್ಕೆದ್ದಮೆಗಳಿಂದ ಕೊಲೆಗಳಲ್ಲದೆ, ಇಲ್ಲಿ ಇತ್ತೀಚೆಗೆ ಅಂದರೆ ಸುಮಾರು ೮ ದಿವಸಗಳ ಮುಂಚೆ, ಇಲ್ಲಿಯ ಸೊಲ್ಟಆಬ್ಕಾರಿ ಆಫೀಸಿನ ಕ್ಲಾರ್ಕರಾಗಿರುತ್ತಿದ್ದ ಮ. ರಾ. ರಾ. ಸಂಜೀವರೆಂಬವರು ನೀರುಪಾಲಾಗಿ ಕಾಲವಾದರು. ೫ ದಿವಸಗಳ ಈಚೆಗೆ ಬೇಕಲದಲ್ಲಿ ಒಬ್ಬ ಬಿಲ್ಲವನು ರಾತ್ರಿಕಾಲದಲ್ಲಿ ಕಳ್ಳು ಕುಡಿದು ದಾರಿಯಲ್ಲಿ ಬಿದ್ದು ಸತ್ತನೆಂಬ ವರ್ತಮಾನ ಕೂಡ ಕೇಳುತ್ತೇವೆ.

ಈ ತಾಲೂಕಿನ ಶೇಂದಿ ಗುತ್ತಿಗೆಗಳು ಇದೇ ತಿಂಗಳ ತಾ. ೨ಕ್ಕೆ ಇಲ್ಲಿಯ ತಾಲೂಕು ಕಚೇರಿಯಲ್ಲಿ ಏಲಂ ಆದವು. ಆ ದಿನ ಇಲ್ಲಿಯ ರಾಷ್ಟ್ರೀಯ ವಿದ್ಯಾರ್ಥಿಗಳೂ ಸ್ವಯಂ ಸೇವಕರೂ ತಾಲೂಕು ಕಚೇರಿಯ ಗೇಟಿನ ಹೊರ ಪಾರ್ಶ್ವದಲ್ಲಿ ಎಷ್ಟೆಷ್ಟು ಪ್ರಯತ್ನಪಟ್ಟರೂ ಇವರ ಯತ್ನಗಳು ನಿಷ್ಫಲವಾಗಿ ಹೋಗಿ ಗುತ್ತಿಗಳಿಗೆ ಪ್ರತಿ ಒಂದಕ್ಕೆ ಎಂದಿಗಿಂತ ೩ರಷ್ಟು ದಾರು ಏರಿಯಲ್ಪಟ್ಟಿವೆ.

ಇಲ್ಲಿಯ ಲೋಕಲ್‌ಫಂಡ್ ದಾರಿಗಳು ಈಗ ಪುನಃ ಸರಿಯಾಗಿ ಉಂಟಾಗುವುದಿಲ್ಲ. ಮೊನ್ನೆ ತಾಲೂಕು ಬೋರ್ಡಿನವರು ಸ್ವಲ್ಪ ಹಣ ಕೆಲ್ಸೊಂದರ ಜನರಿಗೆ ದೊಡ್ಡ ಉಪಕಾರವಾಗುವುದು.

ಅನುಕ್ರಮಣಿಕೆ

ಅಗ್ರಲೇಖ—
  ಮಿ. ಲೊಯ್ಡ್ ಜೋರ್ಜರ ಭಾಷಣ ೬
ಸ್ಫುಟವಿಚಾರಗಳು—
  ೧. ರಾಷ್ಟ್ರೀಯ ಸಭೆಯ ಮೇಲೆ ಸರಕಾರದ ಒತ್ತಾಟ. ೨. ಅತಿಸರ್ವತ್ರ ವರ್ಜಯೇತ್. ೩. ಪಾರ್ಲಿಮೆಂಟಿನ ಈಗಿನ ಸ್ಥಿತಿ. ೪. ಮಲಬಾರ ದಂಗೆ. ೫. ಗ್ರೇಂಟ ಸಾಹೇಬರ ಮತ. ೬. ಸುರತ ಮುನ್ಸಿಪಾಲಿಟಿ. „
ಮಂಗಳೂರು—
ವರ್ತಮಾನ ಸಂಗ್ರಹಗಳು:—
  ವಿದೇಶ ವರ್ತಮಾನ, ಒಳದೇಶ ವರ್ತಮಾನ ೭
ದಕ್ಷಿಣ ಕನ್ನಡ— ಕಾಸರಗೋಡು, ಪುತ್ತೂರು, ಉಡುಪಿ, ಹಿರಿಯಡ್ಕ, ಅಂಗಡಿಮೊಗರು, ಮೊಗ್ರಾಲು, ವಿಟ್ಲ . . „
  ಅಸ್ಪೃಶ್ಯತಾ ನಿವಾರಣ ೮
  ದಕ್ಷಿಣ ಕನ್ನಡದ ಸ್ಥಿತಿ . . . . . „
  ಬ್ರಹ್ಮಕೂಟಲಿನ ಸಮೀಪವಿರುವ ಮಾರ್ಗ . . . „
  ಅಹಮ್ಮದಾಬಾದಿನ ರಾಷ್ಟ್ರೀಯ ಪ್ರಾಥಮಿಕ ವಿದ್ಯಾಭ್ಯಾಸ . „
  ಪತ್ರವ್ಯವಹಾರ . . . . . . „

ಸ್ವದೇಶಾಭಿಮಾನಿ.

ಶಕ ೧೮೪೪ ಶ್ರಾವಣ ಬ॥ ೪ಯು ಶುಕ್ರವಾರ.

ಮಿ. ಲೊಯ್ಡ್ ಜೋರ್ಜರ ಭಾಷಣ.

ಲೊಯ್ಡ್ ಜೋರ್ಜ ಸಾಹೇಬರು ಬ್ರಿಟಿಷ್‌ರಾಜ್ಯದ ಮುಖ್ಯ ಮಂತ್ರಿಗಳು. ಹೌಸ್ ಒಫ್ ಕೊಮನ್ಸಿನಲ್ಲಿ ಇಂಡಿಯನ್ ಸಿವಿಲ್ ಸರ್ವಿಸಿನ ವಿಷಯವು ಚರ್ಚೆಯಲ್ಲಿರುವಾಗ ಇವರು ಒಂದು ಭಾಷಣವನ್ನು ಕೊಟ್ಟರು. ಈ ಲೊಯ್ಡ್ ಜೋರ್ಜರು ಇಡಿ ಸಾಮ್ರಾಜ್ಯದ ಮುಖ್ಯ ಮಂತ್ರಿಗಳಾದ್ದರಿಂದ ಹಿಂದೂಸ್ಥಾನದ ವಿಷಯದಲ್ಲಿ ಲಕ್ಷ್ಯ ಕೊಡುವಷ್ಟು ಅವರಿಗೆ ಅವಕಾಶವಿರದು. ಇವರು ಈ ಪ್ರಧಾನಪದವನ್ನು ವಹಿಸಿ ೫—೬ ವರ್ಷಗಳಾದರೂ ಈ ದೊಡ್ಡ ಅವಧಿಯಲ್ಲಿ ಅವರು ಹಿಂದುಸ್ಥಾನವನ್ನು ಕುರಿತು ಮಾತನಾಡಿದ್ದು ಬಹಳ ಅಪರೂಪವು. ಯುದ್ಧದ ಮಧ್ಯ ಯೌವನದಲ್ಲಿ ಹಿಂದೂಸ್ಥಾನದಿಂದ ಜನಬಲ ಮತ್ತು ಧನಬಲವು ಬೇಕಾಗಿರುವಾಗ ಈ ಮಹಾಶಯರು ಹಿಂದೂಸ್ಥಾನದ ಗುಣಾನುವಾದದಲ್ಲಿ ಮತ್ತು ಖಿಲಾಫತ್ತಿನ ಹಕ್ಕುಗಳ ವಚನದಾನದಲ್ಲಿ ತಮ್ಮ ವಕ್ತೃತ್ವವನ್ನು ಉಪಯೋಗಿಸುತ್ತಿದ್ದರು. ಯುದ್ಧದ ಪ್ರಸಂಗವು ಮುಗಿದ ಮೇಲೆ ಎಲ್ಲಿಯ ಹಿಂದೂಸ್ಥಾನ ಮತ್ತು ಎಲ್ಲಿಯ ಖಿಲಾಪತ್ತು! ಪಂಜಾಬದಲ್ಲಿ ಇಷ್ಟು ದೊಡ್ಡ ಅನರ್ಥವುಂಟಾಯಿತು; ಆದರೆ ಈ ಮಹಾಶಯರ ಬಾಯಿಯಿಂದ ಅನುತಾಪಪರವಾದ "ಚ" ಎಂದು ಒಂದೆ ಅಕ್ಷರವಾದರೂ ಬಂದಿದೆಯೆ? ಇಲ್ಲ! ಅನಂತರ ಅಧಿಕಾರಿಗಳು ಎಷ್ಟೊ ನಮೂನೆಯ ಅತ್ಯಾಚಾರಗಳನ್ನು ನಡಿಸಿದರು; ಆದರೆ ಈ ಮಹಾ ಮಂತ್ರಿಗಳು ಆ ಬಗ್ಗೆ ಸುಷ್ಟವಾಗಲಿ, ದುಷ್ಟವಾಗಲಿ ಒಂದೆ ಉದ್ಗಾರವನ್ನಾದರೂ ಹೊರಡಿಸಿರಲಿಲ್ಲ. ಇಂಥ ಗುಣಗಳಿಂದ ಕೂಡಿದವರಾದ ಮಿ. ಲೊಯ್ಡ್‌ಜೋರ್ಜರು ಹಿಂದೂಸ್ಥಾನದ ವಿಷಯದಲ್ಲಿ ಯಾವ ಸಹಾನುಭೂತಿಯನ್ನು ವ್ಯಕ್ತಮಾಡಿಯಾರು? ಯಾರ ಪ್ರವೃತ್ತಿಯು ಕೇವಲ ಇಂಗ್ಲೆಂಡಿನ ಹಿತದಲ್ಲೆ ಉಂಟೊ ಅಂಥವರು ಯಾವ ಉದಾರದ ಮಾತುಗಳನ್ನಾಡಿಯಾರು? ಈ ಬಗ್ಗೆ ಯಾರಿಗಾದರೂ ಸಂಶಯವಿದ್ದರೆ, ಅವರು ಲೋರ್ಡ ಜೋರ್ಜ ಸಾಹೇಬರ ಹೌಸ್‌ಒಫ್ ಕೊಮನ್ಸಿನೊಳಗಿನ ಮೊನ್ನೆಯ ಭಾಷಣವನ್ನು ಲಕ್ಷವನ್ನಿಟ್ಟು ಓದಿನೋಡಬಹುದು.

ಹಿಂದೂಸ್ಥಾನದಲ್ಲಿ ೧೯೧೯ನೆಯ ಇಸವಿಯಲ್ಲಿ ಮೊಂಟೆಗ್ಯು ಸುಧಾರಣೆಗಳು ಬಂದಂದಿನಿಂದ ಇಲ್ಲಿಯ ಸಿವಿಲ್ ಸರ್ವೆಂಟರಲ್ಲಿ ಅಸಂತೋಷವು ಪ್ರಾರಂಭವಾಗಿದೆ. ಅಸಂತೋಷದಿಂದ ಅವರಲ್ಲನೇಕರು ಸರ್ವಿಸನ್ನು ಬಿಟ್ಟುಹೋಗಲು ಉದ್ಯುಕ್ತರಾಗಿದ್ದಾರೆ; ಕಡಿಮೆ ಪಕ್ಷದಲ್ಲಿ ಬಿಟ್ಟುಹೋಗುವ ಆವಿರ್ಭಾವವನ್ನು—ನಟನೆಯನ್ನು ತೋರಿಸುತಿದ್ದಾರೆ. ಹಿಂದೂಸ್ಥಾನದ ಕೆಲವು ಮೂಲೆಗಳಲ್ಲಿ ಉದ್ಭವಿಸಿದ ಈ ಅಸಂತೋಷದ ಮೂಟೆಯು ವಿಲಾತಿಯ ಪಾರ್ಲಿಮೆಂಟಿನಲ್ಲಿ ದೊಡ್ಡ ಚರ್ಚೆಯ ರೂಪದಿಂದ ಒಡೆಯಿತು! ಈ ಸುಪ್ರಸಂಗವನ್ನು ಸಾಧಿಸಿ, ಲೊಯ್ಡ್ ಜೋರ್ಜರು ಇಲ್ಲಿಯ ಸಿವಿಲ್ ಸರ್ವಿಸಿನ ಜನರನ್ನು ಬೆನ್ನು ತಟ್ಟುವ ನೆವದಿಂದ ಮತ್ತು ಅವರನ್ನು ಪ್ರಸನ್ನ ಪಡಿಸುವ ಮುಖ್ಯ ಉದ್ದೇಶದಿಂದ ಹಿಂದೂಸ್ಥಾನದ ಚಳವಳದ ಮೇಲೆ—ವಿಶೇಷತಃ ರಾಷ್ಟ್ರೀಯ ಸಭೆಯ ಅಸಹಕಾರದ ಚಳವಳದ ಮೇಲೆ—ಯಥೇಷ್ಟ ದೋಷಾರೋಪಣೆಗಳನ್ನು ಮಾಡಿದ್ದಾರೆ. ಹಿಂದೂಸ್ಥಾನದ ಗಂಟನ್ನು ದೇವರು ನಮ್ಮ—ಇಂಗ್ಲಿಷರ ಕೈಗೆ ಒಪಿಸಿದ್ದಾನೆ. ಆ ದೇಶಕ್ಕೆ ಶಿಕ್ಷಣವನ್ನು ಕೊಡುವ ಕರ್ತವ್ಯವು ನಮ್ಮದಾಗಿದೆ. ನಾವು ಈ ಕರ್ತವ್ಯವನ್ನು—ಎಂಥ ವಿರೋಧವು ಬಂದಾಗ್ಯೂ—ಮಾಡದೆ ಇರಲಿಕ್ಕಿಲ್ಲ. ಹಿಂದೂಸ್ಥಾನವನ್ನು ಆಳುವ ನಮ್ಮ ಕರ್ತವ್ಯಕ್ಕೆ ಪ್ರತಿಕೂಲವಾಗಿ ಚಳವಳಗಳುಂಟಾದರೆ, ಅವುಗಳನ್ನು ದೂರಪಡಿಸಲು ನಾವು ಎಂದೂ ಆಲಸ್ಯವುಳ್ಳವರಾಗಲಿಕ್ಕಿಲ್ಲ. ಹಿಂದುಸ್ಥಾನವನ್ನು ನಾವು ಎಂದೂ ಬಿಟ್ಟುಹೋಗಲಿಕ್ಕಿಲ್ಲ. ನಾವು ಹಿಂದುಸ್ಥಾನವನ್ನು ಬಿಟ್ಟುಹೋದದ್ದಾದರೆ ಹಿಂದೂಸ್ಥಾನದಲ್ಲಿ ಅನೇಕ ಜಾತಿಗಳ, ಮತಗಳ, ಜನಾಂಗಗಳ ಮತ್ತು ವಂಶಗಳ ಪರಸ್ಪರ ಕಾದಾಟವು ಪ್ರಾರಂಭವಾಗಿ ದೇಶದಲ್ಲಿ ಅಸಂತೋಷ, ಅಸ್ವಾಸ್ಥ್ಯ, ಅರಾಜಕತೆ ಇವುಗಳ ಸಾಮ್ರಾಜ್ಯವುಂಟಾಗುವುದಲ್ಲದೆ, ಲೋಕದೊಳಗಿನ ಜಯಶಾಲಿಗಳಾದ ಪ್ರಬಲ ರಾಷ್ಟ್ರಗಳ ಅಭಿಯೋಗದಿಂದ ಆ ಹಿಂದುಸ್ಥಾನವು ಅನರ್ಥದ ಕೆಸರಿನಲ್ಲಿ ಬಿದ್ದೀತು. ಪೂರ್ಣ ಹಳೆಯಾದ ಬಟ್ಟೆಯಲ್ಲಿ ಕಾಲುಬಿದ್ದರೆ ಅದು ಹೇಗೆ ತನ್ನಷ್ಟಕ್ಕೆ ಬರ್ರನೆ ಹರಿದುಹೋಗುವುದೊ ಹಾಗೆಯೆ ನಮ್ಮ ಪರಿತ್ಯಾಗದಿಂದ ಒಳಗಡೆಯಲ್ಲಿ ಅಸ್ವಾಸ್ಥ್ಯದಿಂದ ತುಂಬಿಹೋದ ಹಿಂದೂಸ್ಥಾನವು ಇತರ ರಾಷ್ಟ್ರಗಳ ಅಭಿಯೋಗದಿಂದ ಧಾವತಿಯನ್ನು ಹೊಂದೀತು. ಆದ್ದರಿಂದ ಹಿಂದೂಸ್ಥಾನವನ್ನು ಗಟ್ಟಿಯಾದ ಕೈಯಿಂದ ಆಳಲು ಬ್ರಿಟಿಷರೆ ಬೇಕು." ಇಷ್ಟು ಅಭಿಪ್ರಾಯವನ್ನು ಕಾರಿಬಿಟ್ಟು ಲೊಯ್ಡ್ ಜೋರ್ಜರು ಆ ಮೇಲೆ ಇಂಡಿಯನ್ ಸಿವಿಲ್ ಸರ್ವಂಟರ ಸ್ತೋತ್ರವನ್ನು ಹಾಡಿದ್ದಾರೆ! ಈ ಸ್ತೋತ್ರವೂ ಸಹ ಬಹು ಮನೋಹರವೂ ಮನನೀಯವೂ ಆಗಿದೆ. ಲೋಯ್ಡ್ ಜೋರ್ಜರು ಹೇಳುತ್ತಾರೆ: "ಇಂಡಿಯನ್ ಸಿವಿಲ್ ಸರ್ವಿಸಿನವರು ನೋಡುವಾಗ ಬಹು ಅಪ್ರಸಿದ್ಧರಂತೆ ತೋರುತ್ತಾರೆ. ಆದರೆ ಅವರಲ್ಲಿ ಒಬ್ಬೊಬ್ಬನು ಎಷ್ಟೊ ಲಕ್ಷ ಜನರನ್ನು ಆಳಿಬಂದವನು. ಇಲ್ಲಿ ಅವನನ್ನು ಜನರು ತಿಳಿಯುವುದಿಲ್ಲವಾದರೂ ಅವನ ಯೋಗ್ಯತೆಯು ಇಷ್ಟು ದೊಡ್ಡದಾಗಿದೆ. ಅವನು ಆಡಿದ್ದೆ ಕಾನೂನು ಮತ್ತು ಅವನು ಬರದದ್ದೆ ತೀರ್ಮಾನ; ಇಂಥ ಗೌರವವು ಹಿಂದಿಗಳಿಂದ ಅವನಿಗೆ ಕೊಡಲ್ಪಡುತ್ತದೆ. ಲಕ್ಷಗಟ್ಟಲೆ ಜನರು ಅವನ ಆಜ್ಞೆಯನ್ನು ಸಂತೋಷದಿಂದ ಅತ್ಯಂತ ಆನಂದದಿಂದ, ಶಿರಸಾಮಾನ್ಯವನ್ನಾಗಿ ಮಾಡುತ್ತಿದ್ದಾರೆ. ಇಂಥ ಸಿವಿಲ್ ಸರ್ವಂಟನೆ ಹಿಂದೂಸ್ಥಾನವನ್ನು ಗಳಿಸಿದ್ದು. ಮಾತ್ರವಲ್ಲ, ಈಗ ಅದನ್ನು ಕಾಪಾಡುವುದು ಕೂಡ ಅವನೆ ಸರಿ. ಅಂಥವನಿಗೆ ನಮ್ಮ ಬೆಂಬಲವಿರಬೇಕಲ್ಲವೆ? ಅಂಥವನನ್ನು ನಮ್ಮ ಜನಾಂಗವು ಎತ್ತಿ ಹಿಡಿಯಬೇಕಲ್ಲವೆ? ಅಂಥವನ ವಿಷಯದಲ್ಲಿ ನಮ್ಮ ಜನಾಂಗದ ಲೋಕಮತವು ಅನುಕೂಲವಾಗಿರಬೇಕಲ್ಲವೆ? ಇಂಥ ಸಿವಿಲ್ ಸರ್ವಂಟ ಮಹಾತ್ಮರು ತಮ್ಮ ಕರ್ತೃತ್ವದಿಂದ ಬ್ರಿಟಿಷ್ ಜನಾಂಗವನ್ನು ಭೂಷಿಸಿದ್ದಾರೆ. ಈ ಕಾರಣದಿಂದ ನಾವು—ಬ್ರಿಟಿಷರು ಅವರ ವಿಷಯವಾಗಿ ಬಹಳ ಅಭಿಮಾನವನ್ನು ತಾಳಬೇಕು. ಅವರ ಅಂಬೋಣವನ್ನು ಪೂರಯಿಸಬೇಕು."

ಇದು ಲೋಯ್ಡ್ ಜೋರ್ಜರು ಓದಿದ ಪುರಾಣವು. ಅವರ ಈ ಪುರಾಣದಲ್ಲಿ ಬೇರೆ ಬೇರೆ ನಾಲ್ಕೈದು ಅಧ್ಯಾಯಗಳಿದ್ದರೂ ಮೇಲಿನ ಎರಡು ಅಧ್ಯಾಯಗಳು-ವಿಶೇಷತಃ ಸಿವಿಲ್‌ಸರ್ವೆಂಟ್ ಅಧ್ಯಾಯವು ಬಹು ಮನೋರಂಜಕವಾಗಿದೆ ಎಂಬುದಕ್ಕೆ ಅಡ್ಡಿ ಇಲ್ಲ. ಆದರೆ ಯಾವದಾದರೂ ಒಂದು ಮಾತಿನ ಮನೋರಂಜಕತೆಯ ಗುಣದಿಂದ ಒಬ್ಬನು ಮೋಸಹೋಗಬಾರದು, ಆ ಮಾತಿನಲ್ಲಿ, ದುರಾಗ್ರಹ, ದುರಭಿಪ್ರಾಯ, ವಿಪರ್ಯಾಸ ಮುಂತಾದ ಯಾವ ದೋಷಗಳಿದ್ದಾವೊ ಅವುಗಳನ್ನು ತಿಳಿದು ಬಹಿರಂಗಪಡಿಸಬೇಕು. ಆಗ ಮಾತ್ರ ಭಾಷಣದ ನಿಜವಾದ ಯೋಗ್ಯತೆಯನ್ನು ತಿಳಿದುಕೊಂಡಂತಾಗುತ್ತದೆ. ಈ ದೃಷ್ಟಿಯಿಂದ ವಿಚಾರಮಾಡಿದ್ದಲ್ಲಿ ಲೊಯ್ಡ್‌ಜೋರ್ಜರ ಭಾಷಣದಲ್ಲಿ ಯಾವ ಅನೇಕ ದೋಷಗಳಿದ್ದಾವೊ ಅವುಗಳ ಕಡೆಗೆ ಅಲಕ್ಷ್ಯವನ್ನು ಮಾಡಲು ಉಪಾಯವಿಲ್ಲ. ಈ ರೀತಿಯಿಂದ ಇವರ ಭಾಷಣದ ಯೋಗ್ಯತೆಯ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುವುದರ ಮೊದಲು ಮುಂಬಯಿ ಟ್ಯಾಮ್ಸು ಪತ್ರಿಕೆಯು ಅದಕ್ಕೆ "ಮೂರ್ಖತನದ ಭಾಷಣ" ವೆಂದು ಯಾವ ಸರ್ಟಿಫಿಕೇಟನ್ನು ಕೊಟ್ಟಿದೆಯೊ ಅದನ್ನು ವಾಚಕರ ಮುಂದೆ ಇಡುವುದು ಯೋಗ್ಯವಾಗಿದೆ. "ಹಿಂದೂಸ್ಥಾನಕ್ಕೆ ಶಿಕ್ಷಣವನ್ನು ಕೊಡುವ ಜವಾಬದಾರಿ" ಎಂದು ಮಂತ್ರಿಗಳು ಉಚ್ಚರಿಸಿದ ಮಾತು ಹೊಸತಲ್ಲ. ಈ ಮಾತನ್ನು ಮೊದಲು ಅನೇಕರು ಆಡಿದ್ದಾರೆ. ಇಂಗ್ಲಂಡಿನ ಮೇಲೆ ಈ ಜವಾಬುದಾರಿಯನ್ನು ಪರಮೇಶ್ವರನು ಹೊರಿಸುವಾಗ ಆಚಂದ್ರಾರ್ಕದ ವಾಯಿದೆಯನ್ನು ಉಚ್ಚರಿಸಿರುವನೆ? ಹಾಗೆ ಉಚ್ಚರಿಸಿದ್ದಾದರೆ, ಅದರಲ್ಲಿ ಶಿಕ್ಷಣವೇನು ಬಂತು? ಮನುಷ್ಯನು ತನ್ನ ಸ್ವಾರ್ಥಕ್ಕೆ ಪೋಷಕವಾದ ಕಾರ್ಯವನ್ನು ಮಾಡಿ ಅದಕ್ಕೆ ಪರಮೇಶ್ವರನ ಇಚ್ಛೆ ಎಂಬ ಭವ್ಯವಾದ ಹೆಸರನ್ನು ಕೊಡುವ ಯುಕ್ತಿಯು ಈಗ ಎಲ್ಲರಿಗೆ ತಿಳಿದೆ ಹೋಗಿದೆ. ಲೊಯ್ಡ್‌ಜೋರ್ಜರಾದರೂ ಇದೆ ಉಪಾಯವನ್ನು ಮಾಡುತಿದ್ದಾರೆ. ಇಂಗ್ಲಿಷರು ಹಿಂದುಸ್ಥಾನವನ್ನು ಬಿಟ್ಟು ಹೋಗುವುದರಿಂದ ಹಿಂದೂಸ್ಥಾನದಲ್ಲಿ ಅಂತಃಕಲಹ ಮತ್ತು ಬಾಹ್ಯಸಂಕಟ ಇವು ಪ್ರಾಪ್ತವಾದಾವೆಂಬ ಭಯವು ಮಂತ್ರಿಗಳಲ್ಲಿ ಮೂಡಿದ್ದು ಕಂಡು ಬರುತ್ತದೆ. ಆದರೆ ಸ್ವರಾಜ್ಯವೆಂದರೆ ಸಂಪೂರ್ಣ ಸ್ವತಂತ್ರ ಸ್ವರಾಜ್ಯವೆಂದು ಯಾರು ಹೇಳುತ್ತಾರೆ? ಹೀಗಿರುವಾಗ ಮಂತ್ರಿಗಳಿಗೆ ಇಂಥ ದುಃಸ್ವಪ್ನವು ಯಾಕೆ ಬೀಳಬೇಕು? ಇಂಗ್ಲಂಡಿನ ಸಂಬಂಧವನ್ನು ಕಡಿಯಬೇಕೆಂದು ಈ ಹೊತ್ತು ಯಾರೂ ಹೇಳುವುದಿಲ್ಲ. ಆದ್ದರಿಂದ ಈ ಮಂತ್ರಿಗಳ ಈ ವಿಧಾನವು ಕೇವಲ ಕಾಲ್ಪನಿಕವಾಗಿದೆ. ಇಲ್ಲಿಯ ರಾಜ್ಯವನ್ನು ಬಿಟ್ಟುಹೋದರೆ ಇಲ್ಲಿ ಯಾವ ಯಾವ ಅನರ್ಥಗಳುಂಟಾಗುತ್ತವೆ ಎಂಬುದನ್ನು ನೋಡಬೇಕೆಂದಿದ್ದರೆ, ಅವರು ಸ್ವಲ್ಪ ಸಮಯ, ಪರೀಕ್ಷಾರ್ಥವಾಗಿ ಹಿಂದುಸ್ಥಾನವನ್ನು ತ್ಯಜಿಸಿ ಒಂದು ವೇಳೆ ನೋಡಬಹುದು; ಆಗ ಈ ಹಿಂದೀ ಜನರು ತಮ್ಮ ತಮ್ಮಲ್ಲಿ ಜಗಳವಾಡಿ ಆತ್ಮನಾಶವನ್ನು ಮಾಡತೊಡಗಿದರೆ, "ಅಯ್ಯೊ! ನಾವು ೧೫೦ ವರುಷ ರಾಜಕೀಯ ಶಿಕ್ಷಣವನ್ನು ಕೊಟ್ಟು, ಕಾಪಾಡಿ, ವ್ಯಾವಹಾರಿಕ ಮತ್ತು ಪಾಶ್ಚಾತ್ಯ ವಿದ್ಯೆಯ ಶಿಕ್ಷಣವನ್ನು ಕೊಟ್ಟು ಕೂಡ ಈ ದಡ್ಡರು ಸರಿಯಾದ ಪಾಠವನ್ನು ಕಲಿಯುವುದಿಲ್ಲವಲ್ಲ; ಅಥವಾ ಅವರು ಕಲಿತು ನಿಪುಣರಾಗುವಂತೆ ಶಿಕ್ಷಣವನ್ನು ಕೊಡಲು ನಮ್ಮಿಂದ ಅಸಾಧ್ಯವಾಯಿತಲ್ಲ' ಎಂದು ಮರುಗಿ, ಲೊಯ್ಡ್‌ಜೋರ್ಜರು ಮತ್ತು ಅವರ ಕಡೆಯವರು ಪುನಃ ಶಾಸನ ದಂಡವನ್ನು ಹಿಡಕೊಂಡು ಬರಬಹುದು! ಅದಕ್ಕೆ ಯಾವ ಅಭ್ಯಂತರವೂ ಇಲ್ಲ. ಆದರೆ ಹಿಂದೂಸ್ಥಾನದೇಶದ ಅಭ್ಯುದಯಕ್ಕಾಗಿ ಮತ್ತು ಹಿಂದೀ ಜನರ ಉನ್ನತಿಗೋಸ್ಕರ ೬೦೦೦ ಮೈಲು ದೂರದಿಂದ ಬಂದು ರಾಜ್ಯವನ್ನಾಳುವ ಪರಿಶ್ರಮವು ತೆಕ್ಕೊಳ್ಳಲ್ಪಡುತ್ತದೆಂದು ಯಾವುದು ಹೇಳೋಣಾಗಿದೆಯೊ ಅದು ಕೇವಲ ಅವಾಸ್ತವವೆಂಬುದು, ಅದೆ ಲೊಯ್ಡ್‌ಜೋರ್ಜರ ಸಿವಿಲ್ ಸರ್ವೆಂಟ ಅಧ್ಯಾಯ ನಿರೂಪಣದಿಂದ ಸ್ಪಷ್ಟವಾಗುತ್ತದೆ. ಹಿಂದೂಸ್ಥಾನದಲ್ಲಿ ಬಾದಶಾಹಿತನದ ಝೋಕನ್ನು ಮೆರೆಯಿಸಲಿಚ್ಛಿಸುವ ಮತ್ತು ನವಾಬ ಶಾಹಿಯನ್ನು ನಡಿಸಲಿಚ್ಛಿಸುವ ಸಿವಿಲ್ ಸರ್ವೆಂಟರ ಅಧಿಕಾರವು ಅಕುಂಠಿತವಾಗಿರಬೇಕು, ಅದಕ್ಕೆ ಲವದಷ್ಟು ಚ್ಯುತಿಯು ಬರಬಾರದು, ಎಂದು ಹೊರಬೀಳುವ ಲೊಯ್ಡ್‌ಜೋರ್ಜರ ಮಾತು ಯಾವ ಅಭಿಪ್ರಾಯವನ್ನು ಸೂಚಿಸುತ್ತದೆ? ಈ ಎಲ್ಲ ಮಾತುಗಳ ಮೇಲಿಂದ ಮಂತ್ರಿಗಳಾದ ಲೊಯ್ಡ್ ಜೋರ್ಜರಿಗೆ ಮೊಂಟೆಗ್ಯು ಸುಧಾರಣೆಗಳು ಕೂಡ ಮಾನ್ಯವಿರಲಿಕ್ಕಿಲ್ಲವೆಂದು ಊಹಿಸಬಹುದಾಗಿದೆ. ಇಂಥ ಪರಿಸ್ಥಿತಿಯಲ್ಲಿ ಹಿಂದಿ ಜನರು ತಮ್ಮ ಮುಂದಿನ ಭವಿತವ್ಯತೆಯನ್ನು ಚೆನ್ನಾಗಿ ಆಲೋಚಿಸಿ, ಸರಿಯಾದ ಮಾರ್ಗದಲ್ಲಿ ಹೆಜ್ಜೆಯನ್ನಿಡಬೇಕು. ಮತ್ತು ಸರಿಯಾದ ಕೃತಿಯ ರೂಪದಿಂದಲೆ ಮಿ| ಲೊಯ್ಡ್‌ಜೋರ್ಜರ ಮಾತಿಗೆ ಉತ್ತರ ಕೊಡಬೇಕಲ್ಲದೆ, ಭಾಷಣಗಳಿಂದ ಅಥವಾ ಲೇಖನಗಳಿಂದ ಅಲ್ಲ.

ಸ್ಫುಟವಿಚಾರಗಳು.

೧. ಒಂದು ಗುಣವು ಯಾವುದರಲ್ಲಿ ಹೆಚ್ಚಿರುತ್ತದೊ ಅದು ಅದರ ಲಕ್ಷಣವೆಂದು ಹೇಳುವ ವಾಡಿಕೆ ಇದೆ. ಮಳೆಯು ಹೆಚ್ಚು ಬರುವ ಸಮಯಕ್ಕೆ ಮಳೆಗಾಲವೆಂದು ಹೇಳುತ್ತಾರೆ. ಮಿಠಾಯಿಯಲ್ಲಿ ಏಲಕ್ಕಿ, ಕೇಶರ ಮುಂತಾದ ಇತರ ಸಾಮಾನುಗಳು ಬೀಳುತ್ತವಾದರೂ "ಮಿಠಾಯಿಯು ಸಕ್ಕರೆಯದು" ಎಂದು ಹೇಳುತ್ತಾರಲ್ಲದೆ ಏಲಕ್ಕಿಯ ಮಿಠಾಯಿಯೆಂದು ಹೇಳುವುದಿಲ್ಲ. ಹಾಗೆಯೆ ಈಗಿನ ಹಿಂದುಸ್ಥಾನ ಸರಕಾರದ ಲಕ್ಷಣವನ್ನು ಹೇಳುವುದಾದರೆ, ಒತ್ತಾಟವು ಸರಕಾರದ ಪ್ರಧಾನಗುಣವಾಗಿದೆ ಎಂದು ಹೇಳಬಹುದಾಗಿದೆ. ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ಸಾಮಾನ್ಯವಾಗಿ ಒತ್ತಾಟವು ಉಂಟೆ ಉಂಟು. ರಾಷ್ಟ್ರೀಯ ಸಭೆ, ಟಿಳಕ, ಗಾಂಧಿ ಮುಂತಾದವರ ವಿಷಯವಾಗಿ, ಆದರ, ಭಕ್ತಿ, ತತ್ಸಂತೆ ಇತ್ಯಾದಿ ಭಾವನೆಯನ್ನು ತೋರ್ಪಡಿಸುವವರಿಗೆ ಸರಕಾರಿ ಅಧಿಕಾರಿಗಳು ಬಹು ವಿಧದಿಂದ ಉಪದ್ರ ಕೊಡುತ್ತಿರುವರು. ಅಸ್ಸಾಮ ಪ್ರಾಂತದಲ್ಲಿ ಅಧಿಕಾರಿಗಳು ಪ್ರಜಾಪೀಡನೆಯನ್ನು ಕೊಡಲು ವೀಳ್ಯೆಯನ್ನೆ ಎತ್ತಿದ್ದಾರೊ ಎಂಬಂತೆ ತೋರುವುದು. ಅಲ್ಲಿಯ ಒತ್ತಾಟದ ವಿಚಾರಣೆಯನ್ನು ಮಾಡಲು ಪಂಡಿತ ಮದನಮೋಹನರು ಮತ್ತು ಬಾಬು ರಾಜೇಂದ್ರಲಾಲರು ಅಸ್ಸಾಮಕ್ಕೆ ಹೋಗಿ ತಿರುಗಿ ಬಂದಿರುವರು. ಇವರಿಬ್ಬರಿಗೆ ಅಲ್ಲಿ ಯಾವ ಅನುಭವವು ಬಂದಿದೆ ಎಂಬುದನ್ನು ಅವರು ತಮ್ಮ ರಿಪೋರ್ಟಿನ ಮುಖಾಂತರ ಬೇಗನೆ ಲೋಕಕ್ಕೆ ತಿಳಿಯಪಡಿಸುವವರಿದ್ದಾರೆ. ಈ ಸಂದರ್ಭದಲ್ಲಿ ಮದ್ರಾಸಿನ ಹಿಂದು ಪತ್ರದಲ್ಲಿ ಅದರ ಮುಂಬಯಿಯ ಬಾತಮಿದಾರನು ಅಸಾಮ ಪ್ರಾಂತದ ಒತ್ತಾಟದ ಕೆಲವು ಸಂಗತಿಯನ್ನು ಬಹಿರಂಗಪಡಿಸಿದ್ದಾನೆ. ಅಸಾಮದಲ್ಲಿ ಪೋಲೀಸರು ತಮ್ಮ ಇಚ್ಛೆಗನುಸಾರವಾಗಿ ಜನಗಳನ್ನು ಕೈದುಮಾಡುತಿದ್ದಾರೆ. ಮತ್ತು ಕೊಂಗ್ರೆಸಿನ ಕಮಿಟಿಗೆ ಅದರ ಆಫೀಸಿನ ಬಗ್ಗೆ ಯಾರು ಯಾರು ಜಾಗೆಯನ್ನು ಕೊಡುತಿದ್ದಾರೊ ಅವರೆಲ್ಲರನ್ನು ಕೈದುಮಾಡುವ ಕ್ರಮವನ್ನು ಪ್ರಾರಂಭಿಸಿದ್ದಾರಂತೆ. ಕೊಂಗ್ರೆಸಿನ ಚಳವಳವು ರಾಜದ್ರೋಹಕರವಾಗಿ ಪರಿಣಮಿಸಿದೆಯೆ? ಇಲ್ಲವಾದರೆ ಅದರ ಕಮಿಟಿಯ ಆಫೀಸುಗಳಿಗೆ ಜಾಗೆ ಕೊಡುವವರನ್ನು ಸರಾಗವಾಗಿ ಕೈದುಮಾಡುವ ಕಾರಣವೇನು? ಹಾಗಿದ್ದದ್ದಾದರೆ, ಈ ರೀತಿಯಿಂದ ಅಡ್ಡ ನಿಂತು, ರಾಷ್ಟ್ರೀಯ ಸಭೆಯ ಮೇಲೆ ಬಾಣಬಿಡುವುದಕ್ಕಿಂತ ಇಂಡಿಯನ್ ನೇಶನಲ್ ಕೊಂಗ್ರೆಸ್ಸನ್ನೆ ನಿಲ್ಲಿಸುವುದು ಒಳ್ಳೆಯದಲ್ಲವೆ? ಆ ಒತ್ತಾಟವು ಸರ್ವೋತ್ತಮವಾದದ್ದು.

೨. ಒತ್ತಾಟದ ಸಂಗತಿಯನ್ನು ಹೇಳಿದಷ್ಟಕ್ಕೂ ಅದು ಮುಗಿಯಲಿಕ್ಕಿಲ್ಲ. ಕರಾಚಿಯ 'ನ್ಯೂ ಟ್ಯಾಮ್ಸ್' ಪತ್ರಿಕೆಯಲ್ಲಿ ಇಬ್ಬರು ರಾಜಕೀಯ ಕೈದಿಗಳು ಬರೆದ ಪತ್ರದ ಮಜಕೂರನ್ನು ಹಿಂದು ಪತ್ರಕಾರರು ತಮ್ಮ ಒಗಸ್ಟ ತಾ. ೫ರ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಅದನ್ನು ನೋಡುವಾಗ ಸಹ ಕೊಂಚ ದಯೆಯುರುವವರಿಗಾದರೂ ರೋಮಾಂಚವಾಗದೆ ಇರಲಿಕ್ಕಿಲ್ಲವೆಂದು ನಾವು ನೆನಸುತ್ತೇವೆ. ಭೋಜರಾಜ ಮತ್ತು ಪೆಹ್ರುಮಲರೆಂಬಿಬ್ಬರು ತರುಣ ದೇಶಭಕ್ತರಿಗೆ ೬-೬ ತಿಂಗಳ ಶಿಕ್ಷೆಯಾಗಿತ್ತು. "ಈ ಅವಧಿಯಲ್ಲಿ ಅವರಿಬ್ಬರಿಗೆ "ಚಾಕಿ"ಯು ಕೊಡಲ್ಪಟ್ಟಿತ್ತು. ಭಾರದಲ್ಲಿ ಭೋಜರಾಯರು ೩೬

ಪೌಂಡು ತಗ್ಗಿಹೋಗಿದ್ದಾರೆ. ರಾತ್ರಿಸಮಯದಲ್ಲಿ ಇಬ್ಬರ ಕಾಲಿಗೂ ಕೋಳವು ಹಾಕಲ್ಪಡುತಿತ್ತು. ಮೊದಲಿನ ಎರಡು ತಿಂಗಳು ತನಕ ಅವರಿಬ್ಬರನ್ನು ದಪ್ಪ ಬೆತ್ತದಿಂದ ಹೆಚ್ಚಾಗಿ ತಪ್ಪದೆ ಹೊಡೆಯುವ ಕ್ರಮವಿತ್ತು. ಒಂದು ಸಂದರ್ಭದಲ್ಲಿ, ಏನೂ ತಪ್ಪಿಲ್ಲದೆ ಭೋಜರಾಜರಿಗೆ ೧೮ ಪೆಟ್ಟುಗಳು ಹೊಡೆಯಲ್ಪಟ್ಟವು. ಈ ಮೂಲಕ ಅವರು ಬೋಧತಪ್ಪಿ ಬಿದ್ದರು. ದಿವಸವೊಂದಕ್ಕೆ ಅವರನ್ನು ೫ ಸಾರೆ ಬತ್ತಲೆ ನಿಲ್ಲಿಸುತ್ತಿದ್ದರು!" ಈ ವಿವರಣೆಯನ್ನು ಕೊಟ್ಟು ಮುಂದಿನ ಮಾಹಿತಿಯು ಅನುಚ್ಚಾರ್ಯವೂ, ಅನುಲ್ಲೇಖ್ಯವೂ ಆಗಿರುವುದರಿಂದ ಅದನ್ನು ಕೊಡಲಿಲ್ಲವೆಂದು ಹಿಂದು ಪತ್ರಕಾರರು ಬರೆದಿರುವರು. ಇಷ್ಟೆ ಸಾಕು. ಇದೆಲ್ಲ ನಿಜವಾದದ್ದಾದರೆ ಜೈಲಿನೊಳಗಿನ ಅಮಾನುಷಶಿಕ್ಷೆಯ ನಮೂನೆಯನ್ನು ವಿವರಿಸಲು ಇದಕ್ಕಿಂತ ಹೆಚ್ಚಿನ ಬರವಣಿಗೆಯು ಬೇಕೆ? ಇಂಗ್ಲಿಷರು ಸುಧಾರಿಸಿದವರು, ಇಂಗ್ಲಿಷರ ಕಾರಭಾರವು ಸುಧಾರಿಸಿದ್ದು, ಅವರ ಕ್ರಮವು ಸುಧಾರಿಸಿದ್ದು, ಈಗಿನ ವೈಸರಾಯರು ನ್ಯಾಯಮೂರ್ತಿಗಳು, ಈ ಎಲ್ಲ ಭಾಗ್ಯಕ್ಕೆ ಮೇಲಿನ ಸಂಗತಿಯು ನಿಜವಾದದ್ದಾದರೆ ಅನುರೂಪವಾಗಿಯೆ ಇದೆಯಲ್ಲವೆ? ನ್ಯೂ ಟ್ಯಾಮ್ಸ್ ಪತ್ರಿಕೆಯಲ್ಲಿ / ಪ್ರಕಟವಾದ ಈ ಬಾತಮಿಯು ಸುಳ್ಳಾದ್ದಾದರೆ ಅಧಿಕಾರಿಗಳು ಹಾಗೆ ಪ್ರಕಟಿಸಬಹುದಲ್ಲವೆ? ಇಲ್ಲವಾದರೆ ಅವರಿಗೆ ಇದೊಂದು ನಾಚಿಕೆಯಲ್ಲವೆ? ಜೈಲುಗಳಲ್ಲಿ ರಾಜಕೀಯ ಕೈದಿಗಳನ್ನು ಈ ರೀತಿಯಿಂದ ನಡಿಸುವುದದನ್ನು ನೋಡಿ ಅವರು ಈ ಹೆದರಿಕೆಯಿಂದ ರಾಜಕೀಯ ಚಳವಳವನ್ನು ಬಿಟ್ಟುಬಿಡಬೇಕೆಂದು ಅಧಿಕಾರಿಗಳು ತಿಳಿಯುತ್ತಾರೊ ಏನೊ. ಆದರೆ ದೇಶದ ಕಲ್ಯಾಣಕ್ಕಾಗಿ ಯಾವ ಕಷ್ಟವನ್ನಾದರೂ ಸಂತೋಷದಿಂದ ಮತ್ತು ಸಮಾಧಾನದಿಂದ ಸಹಿಸಬಹುದು, ಮತ್ತು ಸಹಿಸಬೇಕು. ಈ ಉದಾತ್ತಭಾವನೆಯು ಜನಗಳಲ್ಲಿ ಮೂಡಹತ್ತಿದ್ದರಿಂದ ಈ ತರದ ಅಮಾನುಷ ಶಿಕ್ಷೆಗೆ ಅಂಜಿ ದೇಶಭಕ್ತರು ಅಂಗೀಕೃತ ಕಾರ್ಯವನ್ನು ಬಿಟ್ಟುಬಿಡಲಿಕ್ಕಿಲ್ಲವೆಂದು ಸದ್ಯ ಒಂದು ವರ್ಷದೊಳಗೆ ಹಿಂದುಸ್ಥಾನದ ಜೈಲಿನಲ್ಲಿ ಬಿದ್ದಿರುವ ೩೫ ಸಾವಿರ ದೇಶಭಕ್ತರ ಒಂದೆ ದೃಷ್ಟಾಂತದಿಂದ ವಾದಿಸಬಹುದಾಗಿದೆ. ಆಗ ಸರಕಾರಿ ಅಧಿಕಾರಿಗಳು ಇಂಥ ಭಯಂಕರ ಶಿಕ್ಷೆಯಿಂದ ಲೋಕಮತವನ್ನು ತಮ್ಮ ವಿಷಯದಲ್ಲಿ ಇನ್ನಷ್ಟು ದೂಷಿಸಿಕೊಳ್ಳುವುದೊಂದೆ ಇದರಿಂದ ಉಂಟಾಗತಕ್ಕ ಪರಿಣಾಮವಲ್ಲದೆ ಬೇರೆ ಯಾವ ಸಾಧ್ಯಾಂಶವೂ ಇಲ್ಲ. ಇರಲಿ. "ಅತಿ ಸರ್ವತ್ರ ವರ್ಜಯೇತ್" ಎಂಬ ಮಾತು ಒತ್ತಾಟಕ್ಕೂ ಕೂಡ ಹತ್ತುತ್ತದೆ. ಒತ್ತಾಟಕ್ಕು ಒಂದು ಮಿತಿ ಇದೆ. ಇದು ಮೇಲೆ ಕೊಟ್ಟ ಉದಾಹರಣೆಯು—ನಿಜವಾದ್ದಾದರೆ—ಮಿತಿಯನ್ನು ಅತಿಕ್ರಮಿಸಿದೆ ಎಂದು ಹೇಳಬೇಕಾಗುತ್ತದೆ. ಆದರೆ ಅದು ಯೋಗ್ಯವಲ್ಲ, ಚಂದವಲ್ಲ, ಶ್ಲಾಘ್ಯವಲ್ಲ ಎಂದು ಮಿತ್ರತ್ವದಿಂದ ನಾವು ಸರಕಾರದ ಕಿವಿಗೆ ಹಾಕುವೆವು. ಮತ್ತೆ ಅವರ ಇಷ್ಟ!

೩. ಬ್ರಿಟಿಷ್ ಪಾರ್ಲಿಮೆಂಟೆಂದರೆ ನ್ಯಾಯನಿರ್ಮಾಣದ ಮತ್ತು ನ್ಯಾಯರಕ್ಷಣದ ಅತ್ಯುತ್ತಮ ಸಂಸ್ಥೆಯೆಂದೂ, ಇದಕ್ಕೆ ಸಮಾನವಾದ ಇನ್ನೊಂದು ಸಂಸ್ಥೆಯು ಬಹಳ ಅಪರೂಪವೆಂದೂ ಎಲ್ಲ ಬ್ರಿಟಿಷರು ಬಹು ಅಭಿಮಾನದಿಂದ ಹೇಳುತ್ತಾರೆ. ಆದರೆ ಈ ಲೋಕಸಭೆಯ ಯೋಗ್ಯತೆಯನ್ನು ಕುರಿತು ಸ್ಟಿಫನ್‌ಲಿಕೊಕ್ ಎಂಬ ಒಬ್ಬ ಪ್ರೊಫೆಸರರು ಯಾವ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೊ ಅದರಲ್ಲಿ ಮುಂದಿನ ಮನೋರಂಜಕವಾದ ಸಂಗತಿಯು ಉಲ್ಲೇಖಿಸಲ್ಪಟ್ಟಿದೆ. "ತಮಸಾ" ನದಿಯ ತೀರದ ಒಂದು ಅನುಕೂಲವಾದ ಸ್ಥಳದಲ್ಲಿ ಹೌಸ್‌ಒಫ್ ಕೋಮನ್ಸು ಅಧಿಷ್ಠಿತವಾಗಿದೆ. ಈ ಸಭಾಗೃಹದ ಮುಖ್ಯ ಲಕ್ಷಣವೇನೆಂದರೆ, ಅದರ ಪಶ್ಚಿಮದಿಕ್ಕಿನಲ್ಲಿ ಫಲಾಹಾರದ ಕೋಣೆಯೂ, ಪೂರ್ವದಿಕ್ಕಿನಲ್ಲಿ ಚಾ ಕೋಣೆಯೂ ಇವೆ. ಇವುಗಳಿಗೆ ಹೊಂದಿಕೊಂಡು ಸುಂದರವಾದ ಒಂದು ನ್ಯಾಯನಿರ್ಮಾಣ ಮಂದಿರವಿದೆ. ಮತ್ತು ಈ ಕಾರಣದಿಂದ ಇದಕ್ಕೆ ಹೌಸ್‌ಒಫ್ ಕೋಮನ್ಸ್ ಎಂಬ ಹೆಸರು ಬಂದಿದೆ. ಆದರೆ ಈಗಿನ ಕಾಲದಲ್ಲಿ ಪ್ರತಿನಿಧಿಗಳಿಗೆ ಈ ನ್ಯಾಯಮಂದಿರದಲ್ಲಿ ಕುಳಿತುಕೊಳ್ಳುವ ಪ್ರಸಂಗವು ಬರುವುದಿಲ್ಲ. ಕಾರಣ, ಕಾನೂನುಗಳೆಲ್ಲವು ಇತ್ತಲಾಗಿ ಲೋಯ್ಡ್‌ಜೋರ್ಜರ ಮನೆಯಲ್ಲಾಗಲಿ, ನೆಶನಲ್ ಲಿಬರಲ್ ಕ್ಲಬ್ಬಿನಲ್ಲಾಗಲಿ ಅಥವಾ ಒಂದಾನೊಂದು ಪತ್ರಿಕೆಯ ಆಫೀಸಿನಲ್ಲಾಗಲಿ ತಯಾರಾಗುತ್ತವೆ. ಎಂದ ಮೇಲೆ ಪುನಃ ಆ ಕೋಣೆಯಲ್ಲಿ ಕಾದು ಕುಳಿತುಕೊಳ್ಳುವ ಅಗತ್ಯವೇನು? ಆದರೂ ಕಾನೂನಿನ ಕೊನೆಯ ಇತ್ಯರ್ಥವಾಗುವ ಸಂದರ್ಭದಲ್ಲಿ ಈ ಸಭೆಯು ಮೆಂಬರುಗಳಿಗೆ ಚಪ್ಪಾಳೆಗಳನ್ನು ಬಾರಿಸಲು, ಹುಶ್‌ಹುಶ್ ಮಾಡಲು ವೋಟುಗಳನ್ನು ಕೊಡಲು ಒಂದು ಸಂದರ್ಭವನ್ನು ತಂದುಕೊಡುತ್ತದೆ." ಪಾರ್ಲಿಮೆಂಟು ಇಷ್ಟು ಸಂಗತಿಗಳಿಗೆ ಎಡೆಕೊಡುವುದು ಕಡಿಮೆಯೆ? ಹೊರಗಿನ ತೋರಿಕೆ ಮತ್ತು ಒಳಗಿನ ಗುಟ್ಟು ಇವುಗಳಲ್ಲಿ ಎಷ್ಟು ಅಭ್ಯಂತರವಿದೆ ಎಂಬುದು ಈ ಬರವಣಿಗೆಯಿಂದ ಗೊತ್ತಾಗುತ್ತದೆ. ಒಂದು ಅಥವಾ ಎರಡು ವ್ಯಕ್ತಿಗಳು ತಮ್ಮ ಪ್ರಮುಖತೆಯಿಂದ ಕಾನೂನುಗಳನ್ನು ಮಾಡಿ, ಜನತೆಯ ಮೇಲೆ ಅವುಗಳನ್ನು ಹೊರಿಸುವಾಗ ಅದು ಏಕತಂತ್ರಿಕಾರಭಾರವೊ ಅಥವಾ ಲೋಕತಂತ್ರಿಯೊ?

೪. ಮಲಬಾರದಲ್ಲಿ ದಂಗೆ ಎದ್ದು ಒಂದು ವರ್ಷವಾಯಿತು. ಕೆಲವು ಅವಿವೇಕಿಗಳೂ, ಧರ್ಮಭ್ರಾಂತರೂ ಆದ ಮಹಮ್ಮದೀಯ ಬಂಧುಗಳು, ಪೂರ್ವಾಪರ ವಿಚಾರವಿಲ್ಲದೆ ಎಬ್ಬಿಸಿದ ಈ ದಂಗೆಯನ್ನು ಕೂಡಲೆ ನಿಲ್ಲಿಸುವುದು ಸಾರ್ವಭೌಮ ಸರಕಾರಕ್ಕೆ ಅಸಾಧ್ಯವಿರಲಿಲ್ಲ. ಆದರೆ ಯಾವಕಾರಣದಿಂದಲೊ ಏನೊ, ಅದನ್ನು ನಿಲ್ಲಿಸಲಿಲ್ಲ. ಸ್ವಲ್ಪ ಸಮಯ ಗಲಭೆಯಲ್ಲಿ ಹೋದರೂ ಈಗ ಮಲಬಾರದಲ್ಲಿ ದಂಗೆಯು ನಿಂತು, ಸಂಪೂರ್ಣ ಶಾಂತತೆಯು ಸ್ಥಾಪಿತವಾಗಿ ಸುಮಾರು ಸಮಯವಾಯಿತು. ಮಲಬಾರದ ಮುಂದೆ ಈಗ ದಂಗೆಯ ಶಾಂತಿಯ ಪ್ರಶ್ನೆ ಇಲ್ಲ; ಆದರೆ ಅದರ ಪುನರ್ಘಟನೆಯ ಪ್ರಶ್ನೆಯು ಇದೆ. ಸದ್ಯದ ದಂಗೆಯು ಶಾಂತವಾದರೂ ಇನ್ನು ಮುಂದೆ ಇಂಥ ಅನಾಹುತಕ್ಕೆ ಕಾರಣವಾಗುವ ದಂಗೆಗೆ ಅವಕಾಶವನ್ನುಂಟುಮಾಡದಂತೆ ಯಾವ ವಿಧದಿಂದ ಅದರ ಪುನಾರಚನೆಯನ್ನು ಮಾಡಬಹುದು ಎಂಬ ಪ್ರಶ್ನೆಯು ಮುಖ್ಯವಾದ್ದು. ಮತ್ತು ವೃತ್ತಿಹೀನತೆಯಿಂದ ಹಾಗು ದಂಗೆಯಲ್ಲಿ ಬದುಕು ನಾಶವಾಗಿ ಹೋದ್ದರಿಂದ ಯಾವ ಅನೇಕರು ಅಶನಾರ್ಥಿಗಳಾಗಿದ್ದಾರೊ ಅಂಥವರಿಗೆ ಅನ್ನದ ಮಾರ್ಗಕ್ಕೆ ಹಚ್ಚುವುದು ಹೇಗೆ ಎಂಬ ಸಂಗತಿಯು ಕೂಡ ವಿಚಾರಣೀಯವಾಗಿದೆ. ಅದಲ್ಲದೆ, ಸದ್‌ವೃತ್ತಿಹೀನತೆಯಿಂದ ಮನುಷ್ಯನ ಪ್ರವೃತ್ತಿಯು ಅಯೋಗ್ಯ ಕಡೆಯಲ್ಲುಂಟಾಗಿ ಆ ಮೂಲಕ ದಂಗೆಗಳಂಥ ಮತ್ತು ಧರ್ಮಾಂತರದ ಬಲಾತ್ಕಾರದಂಥ ಅನರ್ಥಗಳು ಸಂಭವಿಸುತ್ತವೆ. ಈ ಎಲ್ಲಾ ಸಂಗತಿಗಳನ್ನು ಪರ್ಯಾಲೋಚಿಸಿ, ಮಲಬಾರದ ಪುನರ್ಘಟನೆಯನ್ನು ಮಾಡುವುದಾದರೆ, ಹಿಂದು ಮಹಮ್ಮದೀಯ ಇವರ ಸಂಖ್ಯಾ ಪ್ರಮಾಣವನ್ನು ನೋಡಿ, ಸಮಸಮಾನವಾಗುವಂತೆ ಅವರ ವಸತಿಯನ್ನು ಕಲ್ಪಿಸಬೇಕು. ಮಹಮ್ಮದೀಯರ ಮತಭ್ರಾಂತಿಯ ತೆರೆಯು ಹೊಂಟು, ಆ ಭರದಲ್ಲಿ ಅವರ ಘೋರ ಶೌರ್ಯವು ಪ್ರಜ್ವಲಿಸುವಾಗ ಅದಕ್ಕೆ ಸರಿಯಾಗಿ ಪ್ರತ್ಯುತ್ತರವನ್ನು ಕೊಡಲು ರಜಪೂತ, ಮರಾಠಾ ಮುಂತಾದ ಕ್ಷಾತ್ರವೃತ್ತಿಯ ಜನರ ಸಾನ್ನಿಧ್ಯವಿರುವಂತೆ ಮಲಬಾರದಲ್ಲಿ ಈ ಜನರ ಹೊಸ ವಸಾಹತನ್ನು ಅಲ್ಲಲ್ಲಿ ಮಾಡಿಸುವ ಏರ್ಪಾಡಾಗಬೇಕು. ಇದಲ್ಲದೆ, ಚಿಕ್ಕ ಚಿಕ್ಕ ಕೈಗಾರಿಕೆಗಳು ಪ್ರಾರಂಭವಾಗಬೇಕು. ಈ ಎರಡು ಮುಖ್ಯ ಸುಧಾರಣೆಗಳು ಜಾರಿಯಲ್ಲಿ ಬಂದರೆ, ಮಲಬಾರವು ಇನ್ನು ಮುಂದೆ ಸುಖಿಯಾದೀತೆಂಬುದಕ್ಕೆ ಅಡ್ಡಿ ಇಲ್ಲ.

೫. ಹಿಂದುಸ್ಥಾನದಲ್ಲಿ ತತ್ಕಾಲಕ್ಕೆ ನಡೆಯುತ್ತಿರುವ ಒತ್ತಾಟದ ವಿಷಯದಲ್ಲಿ ಹಾಗು ಇಲ್ಲಿಯ ಸಾತ್ವಿಕ ಚಳವಳದ ವಿಷಯದಲ್ಲಿ ಅಧಿಕಾರಿಗಳು ಯಾವ ರೀತಿಯಿಂದ ಆಲೋಚಿಸುತ್ತಿದ್ದಾರೆ. ಯಾವ ತರದ ಭಾಷಾಶೈಲಿಯನ್ನು ಪ್ರಯೋಗಿಸುತ್ತಿದ್ದಾರೆ ಮತ್ತು ಯಾವ ತರದ ಉಪಾಯಗಳನ್ನು ಸೂಚಿಸುತಿದ್ದಾರೆ ಎಂಬುದಕ್ಕೆ ಈ ಹೊತ್ತಿನ ಅಗ್ರಲೇಖದಲ್ಲಿ ಪ್ರಧಾನಮಂತ್ರಿಗಳಾದ ಲೊಯ್ಡ್ ಜೋರ್ಜರ ಸಂಭಾಷಣೆಯ ನಮೂನೆಯಿಂದ ವಾಚಕರು ನಿರ್ಣಯಿಸದೆ ಇರಲಿಕ್ಕಿಲ್ಲ. ಆದರೂ ಬೆರಳುಗಳಲ್ಲಿ ಹೇಗೆ ಉದ್ದ, ಗಿಡ್ಡ ಎಂದು ವಿವಿಧ ನಮೂನೆಗಳಿರುವವೊ, ಹಾಗೆಯೆ ಜನಾಂಗಗಳಲ್ಲೂ ಹಲವು ವಿಧದ ಜನರಿರುತ್ತಾರೆ. ಇಂಗ್ಲಿಷರೆಂದರೆ ಎಲ್ಲರೂ ಲೊಯ್ಡ್ ಜೋರ್ಜರೆ. ಮತ್ತು ಅಧಿಕಾರಿಗಳೆಂದರೆ, ಎಲ್ಲರೂ ಓಡ್ವಾಯರುಗಳೆ ಎಂದು ಹೇಳಲಾಗುವುದಿಲ್ಲ. ಕೆಲವರು ಸಾರಾಸಾರ ವಿಚಾರವುಳ್ಳವರೂ, ಸ್ವಾತಂತ್ರ್ಯಪ್ರಿಯರೂ ಇರುತ್ತಾರೆ. ಇಂಥವರಲ್ಲಿ ಸರ್ ಹೆಮಿಲ್ಟನ್ ಗ್ರೆಂಟರೆಂಬವರು ಒಬ್ಬರಾಗಿರುತ್ತಾರೆ. ಇವರು ಒಕ್ಸಫರ್ಡಿನ ಒಂದು ಸಭೆಯಲ್ಲಿ ವ್ಯಾಖ್ಯಾನವನ್ನು ಕೊಡುವಾಗ ಹಿಂದುಸ್ಥಾನದ ರಾಜ್ಯಪರಿಸ್ಥಿತಿಯನ್ನು ಕುರಿತು ಕೆಲವು ಮಹತ್ವದ ಸಂಗತಿಗಳನ್ನು ಹೇಳಿದರು. "ನಾವು ಬ್ರಿಟಿಷರು ಹಿಂದೂಸ್ಥಾನವನ್ನು ನಿಷ್ಕಪಟತೆ, ನ್ಯಾಯ, ಸದಿಚ್ಛೆ ಮುಂತಾದ ಗುಣಗಳಿಂದ ಹಿಡಿದಿದ್ದೇವೆ. ಹಿಂದೂಸ್ಥಾನದೊಳಗಿನ ನಮ್ಮ ಹಿತಸಂಬಂಧಗಳಾಗಲಿ, ಅಥವಾ ಹಿಂದುಸ್ಥಾನಕ್ಕೆ ನಮ್ಮಿಂದುಂಟಾದ ಉಪಕಾರಗಳಾಗಲಿ ಹಿಂದೂಸ್ಥಾನವನ್ನು ಬಿಟ್ಟುಬಿಡಲು ಎಂದೂ ಸಿದ್ಧವಿಲ್ಲವೆಂಬುದು ಹೌದು. ಆದರೆ ಹಿಂದೂಸ್ಥಾನದಲ್ಲಿ ಒತ್ತಾಟವನ್ನು ಪ್ರಾರಂಭಿಸಿದ್ದು ಯುಕ್ತವಲ್ಲ. ಯುದ್ಧಸಮಯದಲ್ಲಿ ಹಿಂದೂಸ್ಥಾನವು ಸಾಮ್ರಾಜ್ಯ ಸರಕಾರಕ್ಕೆ ಜಯಪ್ರಾಪ್ತಿಗಾಗಿ ಅನೇಕ ವಿಶಿಷ್ಟ ಸಾಹಾಯ್ಯವನ್ನು ಮಾಡಿರುತ್ತೆ ಈ ಒತ್ತಾಟವನ್ನು ಮಾಡುವುದು ನ್ಯಾಯ್ಯವೆ? ಹೊಸ ಕೌನ್ಸಿಲಿನ ಮುಖಾಂತರ ಹಿಂದೂಸ್ಥಾನದಲ್ಲಿ ಔದ್ಯೋಗಿಕ ಅಭಿವೃದ್ಧಿಯನ್ನುಂಟು ಮಾಡದಿದ್ದರೆ ಹಿಂದೂಸ್ಥಾನದಲ್ಲಿ ಶಾಂತತೆಯುಂಟಾಗುವುದು ಅಶಕ್ಯವು." ಎಂಬಿತ್ಯಾದಿ ರೀತಿಯಿಂದ ಗ್ರೆಂಟ ಸಾಹೇಬರು ಸ್ಪಷ್ಟವಾಗಿ ಹೇಳಿದ್ದಾರೆ. ಹಿಂದೂಸ್ಥಾನದೊಳಗಿನ "ಉಗ್ರಪಕ್ಷದವರು ಕೌನ್ಸಿಲುಗಳನ್ನಾಕ್ರಮಿಸಿ ಅಲ್ಲಿ ಉಪಟಳವನ್ನು ಎಬ್ಬಿಸಿದರೂ ಸರ್‌ಗ್ರೆಂಟ ಸಾಹೇಬರಿಗೆ ಅನುಚಿತ ತೋರುವುದಿಲ್ಲ. ಗ್ರೆಂಟ ಸಾಹೇಬರ ಮತವು ಬಹಳ ಶ್ಲಾಘ್ಯವಾಗಿದೆ. ಆದರೆ ವ್ಯಸನದ ಸಂಗತಿಯು ಏನೆಂದರೆ, ಈ ರೀತಿಯಿಂದ ಉದಾರ ಮತವನ್ನು ಪ್ರತಿಪಾದಿಸುವವರ ಕೈಯಲ್ಲಿ ಕಾರಭಾರವಿರುವುದಿಲ್ಲ. ಮತ್ತು ಕಾರಭಾರ ನಡಿಸುವವರಾದ ಲೊಯ್ಡ್ ಜೋರ್ಜರಂಥವರಿಗೆ ಉದಾರಬುದ್ಧಿಯ ಸಂಪರ್ಕವು ಅಪರೂಪ. ಇಂಥ ಪರಿಸ್ಥಿತಿಯ ಪರಸ್ಪರ ಕಚ್ಚಾಟವು ನಡಕೊಂಡೆ ಇರುತ್ತದೆ.

೬. ಸುರತ ಮುನ್ಸಿಪಾಲಿಟಿಯು ಶಿಕ್ಷಣದ ವಿಷಯದಲ್ಲಿ ಅಸಹಕಾರತತ್ವವನ್ನು ಅಂಗೀಕರಿಸಿದ್ದರಿಂದ ಅಲ್ಲಿಯ ಮುನ್ಸಿಪಾಲಿಟಿಯನ್ನು ಸರಕಾರವು ರದ್ದುಪಡಿಸಿದ್ದು ವಾಚಕರು ಮರೆತಿರಲಿಕ್ಕಿಲ್ಲ. ಸರಕಾರವು ಅದನ್ನು ಪುನರುಜ್ಜೀವಿಸುವ ಹಾದಿಯಲ್ಲಿ ಬಂದಿದೆ. ಆದರೆ ಒಂದು ಸಾರಿ ಸಸ್‌ಪೆಂಡ ಮಾಡಿದ ಮೇಲೆ ಪುನಃ ಅದಕ್ಕೆ ಟೆಕ್ಸ ಕೊಡುವುದು ಸರಿಯಲ್ಲವೆಂದು ಸುರತದಲ್ಲಿ ಚಳವಳವು ಪ್ರಾರಂಭವಾಗಿದೆ. ಅದೆ ರೀತಿಯಿಂದ ನದಿಯಾಡದಲ್ಲೂ ಈ ಚಳವಳವು ಪ್ರಾರಂಭವಾಗಿದೆ. ಮುನ್ಸಿಪಾಲಿಟಿ ಮುಂತಾದ ಸಂಸ್ಥೆಗಳು ಲೋಕಲ್ ಸೆಲ್ಫ ಗವರ್ನಮೆಂಟ ಮುಂತಾದ ಭವ್ಯ ಹೆಸರುಗಳನ್ನು ಹೊಂದಿ ಕ್ರಿಯಾರೂಪದಲ್ಲಿ ಬರುವಾಗ ಅವು ತಮ್ಮ ಕಂಕುಳಲ್ಲಿ ಸೇರಿರಬೇಕೆಂದು ಅಧಿಕಾರಿಗಳು ನೆನಸುವುದು ಸಹಜವಾಗಿದ್ದರೂ ಸ್ವಯಂನಿರ್ಣಯದ ಈ ಯುಗದಲ್ಲಿ ಅದು ಅಶಕ್ಯಕೋಟಿಯಲ್ಲಿ ಒಳಪಡುವ ಮಾತೆಂದು ತಿಳಿಯಬೇಕು.

ಮಂಗಳೂರು.

ಮಂಗಳೂರು ತಾಲೂಕು ಬೋರ್ಡ ಮೆಂಬರರ ಈ ತಿಂಗಳ ಅಧಿವೇಶನವು ಬರುವ ತಾರೀಖು ೨೨ನೇ ಮಂಗಳವಾರ ಸದರಿ ತಾಲೂಕು ಬೋರ್ಡ ಆಫೀಸಿನಲ್ಲಿ ಜರಗುವುದು.

ಈ ತಿಂಗಳ ಶುರುವಿನಿಂದ ಮಿ| ಮಹಮ್ಮದ ಜಿಲುಮಿ ಬಿ. ಎ. ಬಿ. ಎಲ್.‌ರವರು ಹೈಕೋರ್ಟು ವಕಾಲತು ಸನದನ್ನು ಪಡೆದು ವಕೀಲ ವೃತ್ತಿಯನ್ನು ಪ್ರಾರಂಭಿಸಿರುವರು. ಮಹಮ್ಮದೀಯರಲ್ಲಿ ಲೋ ಗ್ರೆಜ್ಯುಯೇಟರಾದವರಲ್ಲಿ ಇವರು ಮೊದಲನೆಯವರಂತೆ.

ಮ. ರಾ. ಕೋಟೆ ರಾಮಕೃಷ್ಣ ಕಾರಂತರು ರಾಜೀನಾಮೆ ಕೊಟ್ಟದ್ದರಿಂದ ಜಿಲ್ಲಾ ಕಮಿಟಿಗೆ ಹೊಸ ಕಾರ್ಯದರ್ಶಿಯನ್ನು ಚುನಾಯಿಸುವುದಕ್ಕೂ ಜಿಲ್ಲಾ ಕಮಿಟಿಯ ಲೆಕ್ಕಗಳನ್ನು ಮಂಜೂರು ಮಾಡುವುದಕ್ಕೂ ಇತರ ವಿಷಯಗಳನ್ನಾಲೋಚಿಸುವುದಕ್ಕೂ ನಮ್ಮ ಜಿಲ್ಲಾ ಕೊಂಗ್ರೆಸ್ ಕಮಿಟಿಯ ಮಹಾ ಸಭೆಯು ಇದೇ ತಿಂಗಳ ತಾ. ೨೦ನೇ ಆದಿತ್ಯವಾರ ಅಪರಾಹ್ನ ಗಂಟೆ ೪ಕ್ಕೆ ಮಂಗಳೂರು ತಿಲಕ ಮಹಾ ವಿದ್ಯಾಲಯದಲ್ಲಿ ಜರಗುವುದು. ಎಲ್ಲಾ ಸದಸ್ಯರೂ ಅಗತ್ಯ ಬರಬೇಕಾಗಿ ಜಿಲ್ಲಾ ಕೊಂಗ್ರೆಸ್ ಕಮಿಟಿ ಕಾರ್ಯದರ್ಶಿಯ ವಿನಂತಿ.

ಡಾಕ್ಟರ ಸಿ. ರಾಮ ಕಮ್ತಿಯವರು ಕಡಪದ ಡಿಸ್ಟ್ರಿಕ್ಟ ಮತ್ತು ಸೆನಿಟರಿ ಆಫೀಸರರಾಗಿ ನೇಮಕಪಟ್ಟಿದ್ದಾರೆ.

ಬರುವ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರು ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಸಾಮಾಜಿಕ ಸುಧಾರಣೆಯೂ ಸ್ವರಾಜ್ಯವೂ ಎಂಬುದನ್ನು ಕುರಿತು ಭಾಷಣ ಮಾಡುವರು. ಎಲ್ಲರಿಗೂ ಸುಸ್ವಾಗತವಿದೆ.

ಕಾಸರಗೋಡು ತಾಲೂಕು ಬೋರ್ಡ ಮೆಂಬರರ ಈ ತಿಂಗಳ ಮೀಟಿಂಗು ಬರುವ ತಾ. ೧೯ನೇ ಶನಿವಾರ ಬೆಳಿಗ್ಗೆ ಗಂಟೆ ೮ಕ್ಕೆ ಕಾಸರಗೋಡು ತಾಲೂಕು ಬೋರ್ಡ ಆಫೀಸಿನಲ್ಲಿ ಸೇರುವುದು.

ಬರುವ ತಿಂಗಳಲ್ಲಿ ಓಲ್-ಇಂಡಿಯಾ ಕೊಂಗ್ರೆಸ ಕಮಿಟಿಯ ಕಡೆಯಿಂದ ಲೆಕ್ಕ ಪರಿಶೋಧಕರೂ ಶ್ರೀಯುತ ನಾರಾಯಣ ರಾವ್ ಡಂಬಳರೂ ಇಲ್ಲಿಗೆ ಬಂದು ನಮ್ಮ ಜಿಲ್ಲೆಯ ಕೊಂಗ್ರೆಸ್ ಕಮಿಟಿಗಳ ಲೆಕ್ಕ ಪರಿಶೋಧನೆಯನ್ನು ಮಾಡಲಿಕ್ಕಿರುವುದರಿಂದ ಜಿಲ್ಲೆಯ ಎಲ್ಲಾ ತಾಲೂಕುಗಳ ಕೊಂಗ್ರೆಸ ಕಮ್ಮಿಟಿಗಳು ತಮ್ಮ ತಮ್ಮ ತಾಲೂಕಿನ ಲೆಕ್ಕದ ತಖ್ತೆಯನ್ನು (Balance Sheet)ನ್ನು ಬರುವ ತಾ. ೨೫ರ ಒಳಗೆ ಡಿಸ್ಟ್ರಿಕ್ಟ ಕೊಂಗ್ರೆಸ್ ಕಮ್ಮಿಟಿಯವರಿಗೆ ಕಳುಹಿಸಬೇಕಾಗಿ ಮ. ರಾ. ಕಾರ್ನಾಡ ಸದಾಶಿವರಾಯರ ವಿನಂತಿ.

ಮಿಶ್ಶನ್ ಹೈಸ್ಕೂಲಿನ ಎದುರಿನ ಕಟ್ಟೋಣದಲ್ಲಿರುವ ಖಾದಿಯ ಭಂಡಾರವನ್ನು ಕಳೆದ ತಾ. ೧ರಿಂದ ಕೊಡಿಯಾಲಬೈಲಿನಲ್ಲಿ ಮ. ರಾ. ಕಾರ್ನಾಡ ಸದಾಶಿವರಾಯರ ಮನೆಗೆ ತಾಗಿರುವ ಕಟ್ಟೋಣಕ್ಕೆ ಒಯ್ಯೋಣಾಗಿದೆ.

ಸಹಕಾರಿ ಸಂಘಗಳ ಬಿಸ್‌ನೇಸ್ ಕೊನ್ಫರೆನ್ಸು ಬರುವ ಸೆಪ್ಟಂಬರ ತಾ. ೧೬ ಮತ್ತು ೧೭ರಲ್ಲಿ ನಡಿಯುವುದು.

ರಾಷ್ಟ್ರೀಯ ಶಾಲೆಗಳ ಸಹಾಯಾರ್ಥವಾಗಿ ಮುಷ್ಟಿಫಂಡನ್ನು ಕೂಡಿಸಲು ನೇಮಿಸಿದ ಸ್ವಯಂಸೇವಕರು ಕಳೆದ ಆದಿತ್ಯವಾರ ದಿನ ಪಟ್ಟಣದ ಕೆಲವು ಭಾಗಗಳಲ್ಲಿ ಅಕ್ಕಿ ಮತ್ತು ಹಣವನ್ನು ಒಟ್ಟು ಕೂಡಿಸುವರೆ ಹೋಗಿದ್ದರು. ಸೆಂಟ್ರಲ್ ವಾರ್ಡ ಅಕ್ಕಿ ಸೇರು ೧೫॥, ರೂ. ೧೦—೧೫—೮, ಮಾರ್ಕೆಟ್ ವಾರ್ಡು ಅಕ್ಕಿ ಸೇರು ೨೭॥, ರೂ. ೧೦—೫—೬, ಮತ್ತು ೨ ಟೋಪಿಗಳು. ಗೋಳಿಕಟ್ಟೆ ವಾರ್ಡು ಅಕ್ಕಿ ಸೇರು ೮॥, ರೂ. ೮—೮—೧೧. ಕೊಡಿಯಾಲಬೈಲು ಈಸ್ಟ ವಾರ್ಡಿನಲ್ಲಿ ಅಕ್ಕಿ ಸೇರು ೧೪॥, ರೂ. ೧೨—೩—೪. ಕೊಡಿಯಾಲಬೈಲ ವೆಸ್ಟ ವಾರ್ಡಿನಲ್ಲಿ ಅಕ್ಕಿ ಸೇರು ೧॥, ರೂ. ೩—೧೩—೬. ಕೋರ್ಟವಾರ್ಡಿನಲ್ಲಿ ಅಕ್ಕಿ ಸೇರು ೧।, ರೂ. ೩—೦—೬. ಒಟ್ಟು ಜುಮ್ಲಾ ಅಕ್ಕಿ ಸೇರು ೬೮॥, ರೂ. ೪೮—೧೫—೫ ಮತ್ತು ೨ ಟೋಪಿಗಳು ಈ ಪ್ರಕಾರ ಸಹಾಯಮಾಡಿದ ಗೃಹಸ್ಥರಿಗೆ ಕೊಂಗ್ರೆಸ ಕಮಿಟಿಯವರು ಆಭಾರಿಯಾಗಿರುತ್ತಾರೆ.

ಇದೇ ತಾ. ೧೩ನೇ ಆದಿತ್ಯವಾರ ಗಂಟೆ ೫ಕ್ಕೆ ತಿಲಕ ಮಹಾವಿದ್ಯಾಲಯದಲ್ಲಿ ರಾ| ಎಸ್. ಇ. ಡಿ. ಕುಂಜಾರು 'ಯೇಸುಕ್ರಿಸ್ತರ' ವಿಷಯ ಭಾಷಣವನ್ನು ಕೊಡುವರು. ಎಲ್ಲರಿಗೂ ಸುಸ್ವಾಗತವಿದೆ.

ಇದೇ ತಾ. ೧೮ನೇ ಗುರುವಾರ ಗಾಂಧಿ ದಿನವು ಕ್ರಮಪ್ರಕಾರ ಆಚರಿಸಲಾಗುವುದು.

ವಿನಂತಿ.

ಹಿಂದುಸ್ಥಾನದಲ್ಲೆಲ್ಲಾ ರಾಷ್ಟ್ರೀಯ ಶಾಲೆಗಳನ್ನು ತೆರೆಯಬೇಕಾಗಿ ಭಾರತ ರಾಷ್ಟ್ರೀಯ ಸಭೆಯು ಮಾಡಿದ ನಿರ್ಣಯಕ್ಕನುಸಾರವಾಗಿ ಈ ತಾಲೂಕಿನಲ್ಲೂ ಕಾಂಗ್ರೆಸು ಕಮಿಟಿಯವರು ಒಂದು ಮಹಾ ವಿದ್ಯಾಲಯವನ್ನೂ ಏಳು ಪ್ರಾಥಮಿಕ ಶಾಲೆಗಳನ್ನೂ ತೆರೆದ ಸಂಗತಿಯು ಎಲ್ಲರಿಗೂ ಗೊತ್ತಿದೆ. ಈ ಶಾಲೆಗಳಲ್ಲಿ ಸುಮಾರು ೬೬೬ ವಿದ್ಯಾರ್ಥಿಗಳು ಇರುತ್ತಾರೆ. ಈ ಪೈಕಿ ೩೪೦ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ವಿದ್ಯೆ ಕಲಿಸೋಣಾಗುತ್ತದೆ. ಇದಕ್ಕಾಗಿ ತಿಂಗಳಿಗೆ ರೂ. ೫೦೦ ಖರ್ಚು ತಗಲುತ್ತದೆ. ರಾಷ್ಟ್ರೀಯ ವಿದ್ಯಾಭಿಮಾನಿಗಳೆಲ್ಲರೂ ಧನಸಹಾಯವನ್ನೂ ಮುಷ್ಟಿಫಂಡಿಗೆ ಅಕ್ಕಿಯನ್ನೂ ಕೊಟ್ಟು ರಾಷ್ಟ್ರೀಯ ವಿದ್ಯೆಯನ್ನು ವೃದ್ಧಿಗೊಳಿಸಬೇಕಾಗಿ ವಿನಂತಿ.

ಮುಷ್ಟಿಫಂಡಿಗೆ ಅಕ್ಕಿಯನ್ನು ಒಟ್ಟುಕೂಡಿಸಲು ಬೇರೆ ಬೇರೆ ವಾರ್ಡುಗಳಿಗೆ ಇಲ್ಲಿಯ ಕೊಂಗ್ರೆಸ ಕಮಿಟಿಯ ಸ್ವಯಂಸೇವಕರು ರಾಷ್ಟ್ರೀಯ ಪತಾಕೆಯ ಬಣ್ಣಗಳುಳ್ಳ ಬ್ಯಾಜ್ಜುಗಳನ್ನು ಹಾಕಿಕೊಂಡು ಪ್ರತಿಆದಿತ್ಯವಾರವೂ ಬರುವರು. ಪ್ರತಿದಿನವೂ ಸ್ವಲ್ಪ ಅಕ್ಕಿಯನ್ನು ತೆಗದಿಟ್ಟು ಅವರಕೂಡೆ ಕೊಡಬೇಕಾಗಿ ವಿನಂತಿ. ವಂತಿಗೆಯನ್ನು ಈ ಕೆಳಗೆ ಸಹಿ ಮಾಡಿದವರ ಸಹಿ ಸಮೇತವಾದ ವಿನಂತಿ ಪತ್ರವಿರುವ ಪುಸ್ತಕವನ್ನು ತರುವವರ ಕೂಡೆ ಮಾತ್ರ ಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಕಾರ್ನಾಡ ಸದಾಶಿವರಾವ್. ಮು. ಉಮೇಶರಾವ್.

ಅಸ್ಪೃಶ್ಯತಾ ನಿವಾರಣೆ.

ಮಾನುಷತ್ವದ ದೃಷ್ಟಿಯಿಂದಲೂ, ಧಾರ್ಮಿಕ ದೃಷ್ಟಿಯಿಂದಲೂ, ರಾಷ್ಟ್ರೀಯ ದೃಷ್ಟಿಯಿಂದಲೂ ಅಸ್ಪೃಶ್ಯತೆಯ ವಿಷಯ ಚರ್ಚಿಸಿ ಈ ಮೊದಲೇ ನಾನು ಬರೆದುದಾಯಿತು. ಈ ಹೊತ್ತು ಅದೇ ವಿಷಯವನ್ನು ಐತಿಹಾಸಿಕ ದೃಷ್ಟಿಯಿಂದ ವಿಚಾರಿಸಬೇಕೆಂದಿದ್ದೇನೆ. ಹಿಂದುಸ್ಥಾನದ ಪ್ರಾಚೀನ ಇತಿಹಾಸವನ್ನು ಓದುವುದರಿಂದ ಈಗ ಕಂಡು ಬರುವ ಅಸ್ಪೃಶ್ಯತೆ ಎಂಬ ರೋಗದ ಕುರುಹುಗಳು ಪೂರ್ವ ಕಾಲದಲ್ಲಿ ಇರಲೇ ಇಲ್ಲವೆಂದು ನನಗೆ ಸಂಪೂರ್ಣ ಭರವಸೆಯಾಗಿದೆ. ಮನು ಧರ್ಮಶಾಸ್ತ್ರದ ಹತ್ತನೇ ಅಧ್ಯಾಯದ ಆರಂಭದಲ್ಲಿ ಮನುವು ನಾಲ್ಕೇ ವರ್ಣಗಳವೆ ಎಂದೂ ಪಂಚಮಜಾತಿಯೆ ಇಲ್ಲವೆಂದೂ ಬರೆದಿರುತ್ತಾನೆ.

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಸ್ತ್ರಯೋ ವರ್ಣಾದ್ವಿಜಾತಯಃ
ಚತುರ್ಥ ಏಕ ಜಾತಿಸ್ತು ಶೂದ್ರೋ ನಾಸ್ತಿತು ಪಂಚಮಃ

ಮನುಧರ್ಮಶಾಸ್ತ್ರ ಪ್ರಕಾರವೂ ಯಾರೊಬ್ಬನನ್ನೂ ಪಂಚಮನೆಂದೂ ಅಸ್ಪೃಶ್ಯನೆಂದೂ ಭಾವಿಸತಕ್ಕದ್ದೆಂಬುದು ಇದರಿಂದ ವ್ಯಕ್ತವಾಗುವುದಿಲ್ಲವೇ? ವೇದಗಳಲ್ಲಿ ಉಪಯೋಗಿಸಿದ 'ಪಂಚಜನ' ಮೊದಲಾದ ಪದಗಳನ್ನು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಉದ್ಯೋಗಿಗಳು ಮತ್ತು ಸೇವಕರು ಎಂಬುದರ ಬದಲಾಗಿ ಉಪಯೋಗಿಸಿದ್ದಾರೆ. ಶೂದ್ರರಲ್ಲಿದ್ದ 'ಸಚ್ಛೂದ್ರ, ಮತ್ತು 'ಅಸಚ್ಛೂದ್ರ' ಎಂಬ ಭೇದದಿಂದಲೇ ಐದೆಂಬುದು ಬಂತು. ನಿಷಧರೆಂದು ರಾಮಾಯಣದಲ್ಲಿ ಸೂಚಿಸಿದವರು ಈಗಿನ ಅರ್ಥದಂತೆ ಅಸ್ಪೃಶ್ಯರಾಗಿಯೇ ಇರುತ್ತಾರೆ. ಆದರೆ ನಿಷಧರ ಮುಖಂಡನಾದ ಗುಹನು ದಶರಥನ ಮಿತ್ರನಾಗಿದ್ದನೆಂದು ವಾಲ್ಮೀಕಿಯು ಹೇಳಿರುತ್ತಾನೆ. ಮತ್ತು ಗುಹನು ರಾಮನಿಗೆ ಮಾಡಿದ ಆತಿಥ್ಯದಿಂದ ಅವನ ಕುಲದವರನ್ನು ಆಗಿನ ಕಾಲದಲ್ಲಿ ಈಗಿನಂತೆ ತಿರಸ್ಕರಿಸಿ, ಅಡಿಗೊತ್ತಲಿಲ್ಲವೆಂದು ಸ್ಪಷ್ಟವಾಗುತ್ತದೆ. ಕೀಳು ಜಾತಿಗೆ ಸೇರಿದ ಶಬರಿಯು ಅರ್ಪಿಸಿದುದನ್ನು ರಾಮನು ಅಂಗೀಕರಿಸಿದನೆಂಬುದರಿಂದ ಮೇಲಿನ ವಿಷಯವನ್ನು ಸಮರ್ಥಿಸಿದಂತಾಗುತ್ತದೆ. ಜಾತಿ ಭೇದಗಳು ಜನ್ಮ ಸಿದ್ಧವಾಗಿಯೇ ಬರುತ್ತವೆಂಬ ಭಾವನೆಯು ಮಹಾ ಭಾರತ ಕಾಲದಲ್ಲೆ ತಲೆದೋರಲಾರಂಭಿಸಿದ್ದರೂ ಅಸ್ಪೃಶ್ಯತೆ ಎಂಬ ರೋಗವು ಆಗಿನವರಿಗೆ ಗೊತ್ತೆ ಇರಲಿಲ್ಲವೆಂದು ಕಾಣುತ್ತದೆ. ವ್ಯಾಸಮಹರ್ಷಿಯ ತಂದೆಯಾದ ಪರಾಶರನು ಒಬ್ಬ ಚಾಂಡಾಲ ಸ್ತ್ರೀಯ ಮಗನೆಂಬುದನ್ನೂ, ವ್ಯಾಸನೇ ಒಬ್ಬ ಬೇಡತಿಯ (ವ್ಯಾಧ ಹೆಂಗಸಿನ) ಪುತ್ರನೆಂಬುದನ್ನೂ ಕೇಳುವಾಗ ನಮಗೆ ಪರಮಾಶ್ಚರ್ಯವಾಗುತ್ತದೆ. ಅಂತೆಯೇ ತನ್ನ ಕಾಲದಲ್ಲಿ ಪ್ರಸಿದ್ಧನಾಗಿದ್ದ ಮಂಡಪಾಲ್ ಎಂಬ ಋಷಿಯೂ ಒಬ್ಬ ಬೇಡತಿಯಲ್ಲಿ ಜನಿಸಿದವನೆಂದು ತಿಳಿದುಬರುತ್ತದೆ. ಈ ವಿಷಯವನ್ನು ಸ್ಪಷ್ಟೀಕರಿಸುವುದಕ್ಕೆ ಇನ್ನೂ ಹೆಚ್ಚಿನ ಉದಾಹರಣೆಗಳನ್ನು ಕೊಡಬೇಕಿದ್ದರೆ ಭವಿಷ್ಯ ಪುರಾಣದ ಅಧ್ಯಾಯ ೪೨ನ್ನು ನೋಡಬಹುದು.

ಜಾತೋ ವ್ಯಾಸಸ್ತು ಕೈವರ್ತ್ಯಾಃ ಶ್ವಪಾಕಶ್ಚ ಪರಾಶರಃ
ಮಂಡಪಾಲೋ ಮುನಿ ಶ್ರೇಷ್ಠೋ ನಾವಿಕ ಏತ್ಯಮುಚ್ಯತೇ ।
ಬಹವೋನ್ಯೇಪಿ ವಿಪ್ರತ್ವಂ ಪ್ರಾಪ್ತಾಯೇ ಪೂರ್ವಮದ್ವಿಜಾಃ

ಈ ಶ್ಲೋಕಗಳ ಅರ್ಥವನ್ನು ಮೇಲೆಯೇ ಕೊಟ್ಟಿದೆ. ಇದೊಂದು ನಿಜವಾದ ವಿಷಯವಾದರೆ ಮಹಾ ಭಾರತದ ಕಾಲದಲ್ಲಿ ಕೂಡ ಈಗ ಅಡಿಗೊತ್ತಲ್ಪಟ್ಟ ಜಾತಿಯವರೆಂದು ಹೇಳಿಸಿ ಕೊಳ್ಳುವವರನ್ನು ಕಾಲಿನ ಕಸದಂತೆ ಕಾಣುತ್ತಿರಲಿಲ್ಲವೆಂದು ಅವರು ತಮ್ಮ ಸ್ಥಿತಿಯನ್ನುದ್ಧಾರಮಾಡಿಕೊಂಡು, ಅತಿ ದೊಡ್ಡ ಋಷಿಗಳು ಕೂಡ ಆಗಬಹುದಿತ್ತೆಂದೂ ನಾವು ಒಪ್ಪಬೇಕಾಗಿದೆ. ಬುದ್ಧನ ಕಾಲದಲ್ಲೂ ಸುನೀತ ಮತ್ತು ಅಪಾಲಿ ಎಂಬವರು ಗೌತಮಬುದ್ಧನ ಧರ್ಮಪ್ರಸಾರಕರಲ್ಲಿ ಬಹು ಪ್ರಖ್ಯಾತರಾಗಿದ್ದರು. ಅವರಲ್ಲಿ ಒಬ್ಬನು ಜಾಡಮಲ್ಲಿಯ ಜಾತಿಗೂ ಇನ್ನೊಬ್ಬನು ಕ್ಷೌರಿಕನ ಜಾತಿಗೂ ಸೇರಿದವರು. ಇಂತಹ ಅಡಿಗೊತ್ತಲ್ಪಟ್ಟ ಜನರನ್ನು ತನ್ನ ಸನ್ಯಾಸಿಗಳ ವರ್ಗಕ್ಕೆ ತೆಗೆದುಕೊಂಡು ಬುದ್ಧನು ಅಸ್ಪೃಶ್ಯತೆಯ ರೋಗವನ್ನು ಗುಣ ಮಾಡಲಿಲ್ಲವೇ!

ಭವಿಷ್ಯ ಪುರಾಣದಲ್ಲಿ ಆಶ್ಚರ್ಯಕರವಾದ ಒಂದು ಐತಿಹಾಸಿಕ ವಿಷಯವನ್ನು ಬರೆದಿದೆ. ತನ್ನ ಕಾಲದಲ್ಲಿ ಬಹಳ ಕೀರ್ತಿಯನ್ನು ಪಡೆದಿದ್ದ ಕಣ್ವ ಋಷಿಯು ಇಜಿಪ್ಟಕ್ಕೆ ಹೋಗಿ ಅಲ್ಲಿಯ ಮ್ಲೇಂಛರಿಗೆ ವೇದವಾಕ್ಯವನ್ನುಪದೇಶಿಸಿ ತನ್ನ ಮತಕ್ಕೆ ತೆಗೆದುಕೊಂಡನೆಂದು ಅದರಲ್ಲಿ ಕಂಡುಬರುತ್ತದೆ. ಒಂದು ಸಾವಿರ ಮ್ಲೇಂಛರನ್ನು ಬ್ರಾಹ್ಮಣರನ್ನಾಗಿ ಮಾಡಿದನು. ಶಿಖೆಯನ್ನಿಟ್ಟುಕೊಂಡು ಯಜ್ಞೋಪವೀತವನ್ನು ಧಾರಣೆಮಾಡಿ ಅವರು ವೇದವನ್ನು ಕಲಿಯುವುದಕ್ಕೂ, ಯಜ್ಞಗಳನ್ನು ಮಾಡುವುದಕ್ಕೂ ಆರಂಭಿಸಿದರು. ಹೀಗೆಯೇ ಕಣ್ವನೂ ಮಾಡಿದ್ದನೆಂದು ಅದೇ ಪುರಾಣದಲ್ಲಿ ಹೇಳಿದೆ. ಭವಿಷ್ಯ ಪುರಾಣದಿಂದ ತೆಗೆದ ಈ ಕೆಳಗಿನ ಶ್ಲೋಕದಿಂದ ಎಲ್ಲವೂ ವ್ಯಕ್ತವಾಗುವುದು.

ಮಿಶ್ರದೇಶೋದ್ಭವಾ ಮ್ಲೇಂಛಾಃ ಕಾಶ್ಯಪೇನೈವ ಶಾಸಿತಾಃ
ಸಂಸ್ಕೃತಾಃ ಶೂದ್ರವರ್ಣೇನ ಬ್ರಹ್ಮವರ್ಣ ಮುಪಾಗತಾಃ
ಶಿಖಾಸೂತ್ರಂಸ ಸಮಾಧಾಯ ಪಠಿತ್ವಾ ವೇದಮುತ್ತಮಂ ।
ಯಜ್ಞೈಶ್ಚ ಪೂಜಯಾ ವಾಸುದೇವದೇವಂ ಶಚೀಪತಿಂ.

ಪ್ರಿಯ ವಾಚಕರೇ! ಪುರಾಣಗಳಲ್ಲಿ ಕಾಣುವ ಈ ಐತಿಹಾಸಿಕ ವಿಷಯದಿಂದಲಾದರೂ ಅಸ್ಪೃಶ್ಯತೆಯನ್ನು ನಿವಾರಿಸಬೇಕೆಂದು ತಿಳಿಯುವುದಿಲ್ಲವೇ? ಪವಿತ್ರವಾದ ವೈದಿಕಧರ್ಮವನ್ನು ಎಲ್ಲಾ ಕಡೆಗಳಲ್ಲೂ ಪ್ರಸರಿಸಬೇಕೆಂದು ನಮ್ಮ ಪೂರ್ವಜರು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದರೆಂದು ಇದರಿಂದ ವ್ಯಕ್ತವಾಗುವುದಿಲ್ಲವೇ? ಪರದೇಶದ ಮ್ಲೇಂಛರನ್ನು ತಮ್ಮ ಸ್ವಂತ ಮತಕ್ಕೆ ಸೇರಿಸಿಕೊಳ್ಳಲು ಯತ್ನಿಸುತ್ತಿದ್ದ ನಮ್ಮ ಪೂರ್ವಜರು ತಮ್ಮ ಜನಾಂಗದ ಒಂದು ಐದನೇ ಅಂಶವನ್ನು ಅಸ್ಪೃಶ್ಯರೆಂದು ಭಾವಿಸುತ್ತಲಿದ್ದರೆಂದು ನಾವು ಸ್ವಪ್ನದಲ್ಲಿ ಕೂಡ ಯೋಚಿಸಲು ಸಾಧ್ಯವಿದೆಯೇ? ಇದು ಮನಸ್ಸಿನಲ್ಲಿ ಕೂಡ ಆಲೋಚಿಸಲು ಸಾಧ್ಯವಿಲ್ಲದ ಸಂಗತಿಯಾಗಿದೆ. ನಮ್ಮ ಪೂರ್ವಜರು ಮ್ಲೇಂಛರಿಗೆ ಕೂಡ ಯಜ್ಞೋಪವೀತವನ್ನಿತ್ತು ವೇದವನ್ನು ಕಲಿಸಲು ಹಿಂಜರಿಯದಿದ್ದಾಗ ಅವರ ವಂಶಜರೆಂದು ಹೇಳಿಸಿಕೊಳ್ಳುವ ನಾವು ನಮ್ಮ ಸೋದರರನ್ನೇ ಅತಿ ನೀಚರೀತಿಯಿಂದ ನಡೆಸುವುದರಿಂದ ಅವರ ಪವಿತ್ರವಾದ ಹೆಸರಿಗೆ ಕಳಂಕವನ್ನು ತರುತ್ತಲಿದ್ದೇವೆ. ಆದರೆ ಕಾಲವು ಮೀರಿಹೋಗಲಿಲ್ಲ. ಇನ್ನಾದರೂ ನಾವು ನಮ್ಮ ಮಾರ್ಗವನ್ನು ತಿದ್ದಿಕೊಳ್ಳಬಹುದು. ಈ ಬಡ ಸೋದರರನ್ನು ಉದ್ಧಾರಮಾಡುವುದಕ್ಕಾಗಿ ಸರ್ವ ಪ್ರಯತ್ನವನ್ನೂ ಮಾಡುವ. ಅಡಿಗೊತ್ತಲ್ಪಟ್ಟ ಅನೇಕ ಜನರನ್ನು ಬ್ರಾಹ್ಮಣರನ್ನಾಗಿ ಮಾಡಿದ ಶ್ರೀ ರಾಮಾನುಜಾಚಾರ್ಯರ ಉದಾಹರಣೆಯನ್ನು ನಾವು ಸದಾ ನೆನಪಿನಲ್ಲಿಡತಕ್ಕದ್ದು. ಆ ಮಹಾ ಸುಧಾರಕರ ಅನುಯಾಯಿಗಳೆನ್ನಿಸಿಕೊಳ್ಳುವ ಈಗಿನ ಜನರು ಅಸ್ಪೃಶ್ಯತೆಯ ವಿಷಯದಲ್ಲಿ ಬಹಳ ಸಂಕುಚಿತಭಾವನೆಗಳುಳ್ಳವರಾಗಿಲ್ಲವೇ! ಕ್ರಿಸ್ತ ಶಕಕ್ಕೆ ಕೆಲವು ಶತಮಾನಗಳ ಪೂರ್ವದಲ್ಲಿ ಅನೇಕ ಗ್ರೀಕರನ್ನೂ ಪರ್ಶಿಯನರನ್ನೂ ಹಿಂದೂ ಧರ್ಮಕ್ಕೆ ತೆಗೆದುಕೊಂಡಿದ್ದರೆಂದು ಪ್ರಾಚೀನ ಇತಿಹಾಸದಿಂದ ಕಂಡುಬರುತ್ತದೆ. ಬೇಗನೇ ನಿವಾರಣೆಮಾಡದಿದ್ದರೆ ನಮ್ಮ ಇಡೀ ಜನಾಂಗವನ್ನೇ ನಾಶಮಾಡಬಹುದಾದ ಈ ಅಸ್ಪೃಶ್ಯತೆಯೆಂಬ ಭಯಂಕರ ರೋಗವು ಸುವರ್ಣ ಯುಗದಲ್ಲಿ ಇದ್ದೇ ಇಲ್ಲವೆಂದೂ ಒಂದು ವೇಳೆ ಇದ್ದರೂ ಭಯಂಕರವಾಗಿರಲಿಲ್ಲವೆಂದೂ ತೋರಿಸುವರೆ ಮೇಲಿನ ಉದಾಹರಣೆಗಳು ಸಾಲದೇ. ಅಸ್ಪೃಶ್ಯತೆ ಎಂಬುದೇನೆಂದು ಗೊತ್ತೇ ಇಲ್ಲದೆ ಅತೀ ಕೆಳಗಿನ ತರಗತಿಯವರೂ ವೇದವನ್ನು ಓದಬಹುದೆಂದೂ ವೈದಿಕ-ಯಜ್ಞಗಳನ್ನು ಮಾಡಬಹುದೆಂದೂ ಇರುವ ಕಾಲವು ತಿರುಗೊಮ್ಮೆ ಬರುವಂತೆ ನಾವು ಪ್ರಯತ್ನಿಸುವ. ಕುಚೇಲನನ್ನು ಶ್ರೀಕೃಷ್ಣನು ಆಲಿಂಗಿಸಿಕೊಂಡಂತೆಯೇ ನಾವು ನಮ್ಮ ಪಂಚಮ ಸೋದರರನ್ನು ಎಂದು ಅಂಗೀಕರಿಸುತ್ತೇವೋ ಅಂದೇ ನಮಗೆ ಸ್ವರಾಜ್ಯವು ದೊರೆಯುವುದು. ಹಾಗೆ ಮಾಡಿದ್ದೇ ಆದರೆ ಸ್ವರಾಜ್ಯವು ನಮ್ಮ ಪಾದದ ಬಳಿಗೆ ತನ್ನಷ್ಟಕ್ಕೇನೇ ಬರುವುದು. ಆದುದರಿಂದ ನಾವು ನಮ್ಮ ಕರ್ತವ್ಯವನ್ನು ನಡೆಸುವ.

ಧರ್ಮದೇವ ಸಿದ್ಧಾಂತಾಲಂಕಾರ,
ಆರ್ಯಸಮಾಜ, ಮಂಗಳೂರು.

ದಕ್ಷಿಣ ಕನ್ನಡದ ಸ್ಥಿತಿ.

೧. ದಕ್ಷಿಣ ಕನ್ನಡ ಮತ್ತು ಮಲಬಾರಿನಲ್ಲಿ ಸಾಗುವಳಿಯಾಗುವ ಪ್ರತಿಯೊಂದು ಎಕ್ರೆಯಿಂದ ೨.೪ ಜನರು ಮಾತ್ರವೇ ಕಾಲಕ್ಷೇಪ ಮಾಡಬಹುದು. ಆದರೆ ಕೊಂಕಣದಲ್ಲಿ ಪ್ರತಿ ಎಕ್ರೆಗೆ ೨ ಜನರೂ ಅತಿ ನಿಬಿಡವಾದ ಜನ ಸಮುದಾಯವುಳ್ಳ ಹಿಂದುಸ್ಥಾನದ ಇತರ ಭಾಗಗಳಲ್ಲಿ ಎಕ್ರೆಗೆ ೧.೫ ಜನರು ಮಾತ್ರವೇ ಇರುತ್ತಾರೆ.

೨. ಸರಕಾರದವರ ಜಾನೇಸುಮಾರಿಯಂತೆಯೇ ದಕ್ಷಿಣ ಕನ್ನಡದ ಬೈಲು ಗದ್ದೆಗಳಲ್ಲಿ ಇಡೀ ಮದ್ರಾಸ್ ಸಂಸ್ಥಾನದ ಸರಾಸರಿ ಬೆಳೆಯ ಮುಕ್ಕಾಲು ಪಾಲು ಮಾತ್ರವೇ ಪ್ರತಿ ಎಕ್ರೆಯಲ್ಲಿ ಬೆಳೆಯುತ್ತದೆಂದೂ, ಭತ್ತದ ಬೆಳೆಯಲ್ಲಿ ಈ ಜಿಲ್ಲೆಯು ಅತೀ ದೀನಾವಸ್ಥೆಯಲ್ಲಿದೆ ಎಂದೂ, ಇಡೀ ಜಿಲ್ಲೆಯ ಶೇಕಡಾ ೮೦ರಷ್ಟು ವಿಸ್ತೀರ್ಣದಲ್ಲಿ ಮುಖ್ಯ ಧಾನ್ಯಗಳು ಬೆಳೆಯುತ್ತವೆಂದೂ, ಇವುಗಳಲ್ಲಾ ಶೇಕಡಾ ೮೦ರಷ್ಟು ಸ್ಥಳದಲ್ಲಿ ಭತ್ತವೇ ಬೆಳೆಯುತ್ತದೆಂದೂ ಕಂಡುಬರುತ್ತದೆ. ಈ ವಿಸ್ತೀರ್ಣವು ಬೇರೆ ಅನೇಕ ಜಿಲ್ಲೆಗಳಿಗಿಂತ ಹೆಚ್ಚಾಗಿದೆ.

೩. ಉಳುವ ಎತ್ತುಗಳೂ, ಕರೆಯುವ ದನಗಳೂ ಕಡಿಮೆಯಾದುದರಿಂದ ದನಕರುಗಳ ಗೊಬ್ಬರವು ಶೇಕಡಾ ೩೦ರಂತೆ ಕಡಿಮೆಯಾದುದರಿಂದಲೂ, ಎಲೆಯ ಗೊಬ್ಬರವೂ ಕಡಿಮೆಯಾಗುತ್ತಾ ಬಂದುದರಿಂದಲೂ, ಬೇಸಾಯದ ವಿಸ್ತೀರ್ಣವು ಶೇಕಡಾ ೬೦ರಷ್ಟು ಹೆಚ್ಚಾದುದರಿಂದಲೂ ಇಲ್ಲಿಯ ಮಣ್ಣು ಇಡೀ ಸಂಸ್ಥಾನಕ್ಕಿಂತಲೂ ಬೇಗನೇ ನಿಸ್ಸಾರವಾಗುತ್ತಾ ಬರುತ್ತಿದೆ.

೪. ಒಂದೇ ತಲಾಂತರದಲ್ಲಿ ಮರಣ ಸಂಖ್ಯೆಯು ಮುಂಚಿಗಿಂತ ಎರಡು ಪಾಲಾಗಿದೆ. ಆದರೆ ಜನಸಂಖ್ಯೆಯು ಮುಂಚಿಗಿಂತಲೂ ಹತ್ತಕ್ಕೆ ನಾಲ್ಕರಂತಿರುವುದರಿಂದ ಅರ್ಧಕ್ಕೂ ಕಡಿಮೆಯಾಗಿದೆ.

೫. ನಮ್ಮಲ್ಲಿ ಬೇಸಾಯಗಾರರ ಸಂಖ್ಯೆಯು ಒಂದೇ ತಲಾಂತರದಲ್ಲಿ ಶೇಕಡಾ ೮೦ರಷ್ಟು ಹೆಚ್ಚಾಗಿದೆ. ತಮ್ಮ ಕೈಗಾರಿಕೆಗಳನ್ನು ಬಿಟ್ಟು ಇಲ್ಲಿಯ ಜನರು ಬೇಸಾಯವನ್ನು ಕೈಕೊಂಡದ್ದೇ ಇದಕ್ಕೆ ಕಾರಣವಾಗಿದೆ. ಈ ದೆಸೆಯಿಂದ ನಮ್ಮ ಕೈಗಾರಿಕೆಗಳನ್ನೂ ಬೇಸಾಯವನ್ನೂ ನಡಿಸುವರೆ ನಾವು ಪರವೂರಿನಿಂದ ಅರೆವಾಸಿ ಜನರನ್ನು ಉಪಯೋಗಿಸುತ್ತೇವೆ. ಆದುದರಿಂದ ಕೈಗಾರಿಕೆಯಲ್ಲಿದ್ದ ಜನಸಂಖ್ಯೆಯು ಒಂದೇ ತಲಾಂತರದಲ್ಲಿ ಶೇಕಡಾ ೪೦ರಷ್ಟು ಕಡಿಮೆಯಾಗಿದೆ.

೬. ನಮ್ಮಲ್ಲಿ ಉದ್ಯೋಗವಿಲ್ಲದವರ ಸಂಖ್ಯೆಯು ದಿನೇದಿನೇ ಹೆಚ್ಚಾಗುತ್ತಾ ಬರುತ್ತದೆ. ಆದುದರಿಂದ ನಾವು ನಮ್ಮಲ್ಲಿಂದ ಪ್ರವೀಣರಲ್ಲದ ಜನರನ್ನು ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಪರವೂರಿಗೆ ಕಳುಹಿಸಿ ಬುದ್ಧಿವಂತರಾದ ಕೆಲಸಗಾರರನ್ನು ಇಲ್ಲಿಗೆ ಪರವೂರಿಂದ ತರಿಸಬೇಕಾಗಿದೆ.

(ಮಂಗಳೂರು ಮೈಲಿಂದ ಎತ್ತಿ ಬರೆದುದು.)

ಮೇಲಿನ ಆರು ವಿಷಯಗಳನ್ನು ನೋಡಿ ಯಾರಿಗೆ ತಾನೆ ಎದೆಯೊಡೆಯದಿದ್ದೀತು! ನಮ್ಮಲ್ಲಿಯ ಬೇಸಾಯ ಸ್ಥಿತಿಯೂ ಕೈಗಾರಿಕೆಗಳ ಅವಸ್ಥೆಯೂ ಇಷ್ಟು ದೀನಾವಸ್ಥೆಯಲ್ಲಿದ್ದರೂ ನಾವು ಇನ್ನೂ ಕಣ್ಣುಮುಚ್ಚಿಕೊಂಡಿರುವುದು ಯೋಗ್ಯವೇ? ಇಡೀ ಮದ್ರಾಸ್ ಸಂಸ್ಥಾನದಲ್ಲಿ ಹೆಚ್ಚು ಮಳೆ ಬೀಳುವ ಜಿಲ್ಲೆಗಳಲ್ಲಿ ನಮ್ಮದೊಂದಾಗಿರುತ್ತಾ ವ್ಯವಸಾಯದಲ್ಲಿ ನಾವು ಇಷ್ಟು ಹಿಂದಿರುವರೆ ಕಾರಣವೇನು? ಈ ದುಃಸ್ಥಿತಿಗೆ ನಮ್ಮ ಅಜಾಗ್ರತೆಯಲ್ಲದೆ ಬೇರೆ ಯಾವ ಕಾರಣವೂ ಇಲ್ಲ. ಬೇಸಾಯ ಮಾಡುವ ಗದ್ದೆಗಳ ವಿಸ್ತೀರ್ಣವನ್ನು ನಾವು ದಿನೇ ದಿನೇ ಹೆಚ್ಚಿಸುತ್ತೇವಲ್ಲದೆ ಇದ್ದ ಗದ್ದೆಗಳ ಸಾರವನ್ನು ಹೇಗೆ ಹೆಚ್ಚಿಸುವುದೆಂಬುದಕ್ಕೆ ನಾವು ಮನಸ್ಸುಕೊಡುವುದೇ ಇಲ್ಲ. ನಮ್ಮ ಜಿಲ್ಲೆಗೆ ಭತ್ತವೇ ಮುಖ್ಯ ಬೆಳೆಯಾಗಿರುವುದರಿಂದ ಅದಕ್ಕೆ ದನಕರುಗಳ ಗೊಬ್ಬರವು ಬಹಳ ಒಳ್ಳೇಯದಾಗಿದೆ. ಆದರೆ ಅಂತಹ ಗೊಬ್ಬರಕ್ಕೆಲ್ಲಿ ಹೋಗುವುದು? ನಮ್ಮಲ್ಲಿದ್ದ ದನಕರುಗಳ ಅಭಿವೃದ್ಧಿಯ ವಿಷಯದಲ್ಲಿ ನಾವು ಎಳ್ಳಷ್ಟೂ ಮನಸ್ಸುಗೊಡದ, ನಮ್ಮ ವ್ಯವಸಾಯದ, ಏಕ, ನಮ್ಮ ಇರುವಿಕೆಯ ಮೂಲವನ್ನೇ ನಾಶ ಮಾಡುತ್ತಲಿದ್ದೇವೆ. ಪ್ರತಿ ವರ್ಷವೂ ಇಲ್ಲಿಯ ಸಾವಿರಾರು ದನಕರುಗಳು ಕಸಾಯಿಗಳ ಪಾಲಾಗುತ್ತವೆಂಬುದನ್ನು ಕಣ್ಣಾರೆ ಕಂಡೂ ಗೋಮಾತೆಯೆಂದು ಬೊಬ್ಬಿಡುವ ನಮ್ಮ ಹೃದಯವು ಕರಗುವುದಿಲ್ಲವಲ್ಲ! ಕಸಾಯಿಗಳ ಬಾಯಿಂದ ತಪ್ಪಿ ಉಳಿದ ದನಕರುಗಳಾದರೂ ಕ್ಷೇಮವಾಗಿವೆಯೇ? ಎಂದೂ ಇಲ್ಲ. ಹೆಚ್ಚಿನವುಗಳು ಪುಷ್ಟಿಕರವಾದ ಆಹಾರವಿಲ್ಲದೆ ಎಲುಬು ಚರ್ಮಗಳಿಂದ ಮಾತ್ರವೇ ಕೂಡಿರುವುದಲ್ಲದೆ, ಕಟ್ಟಲು ಯೋಗ್ಯ ಸ್ಥಳವನ್ನು ಮಾಡದಿರುವುದರಿಂದಲೂ ಇತರ ಕಾರಣಗಳಿಂದಲೂ ನಾನಾ ತರದ ರೋಗ ಪೀಡಿತವಾಗಿರುತ್ತವೆ. ಗೋವುಗಳ ಸ್ಥಿತಿಯನ್ನು ಹೇಳಬೇಕಾಗಿಯೇ ಇಲ್ಲ. ಇಂತಹ ಪ್ರಾಣಿಗಳಿಂದ ಹುಟ್ಟಿದ ಕರುಗಳಾದರೂ ಎಷ್ಟು ಕಾಲ ಬದುಕಬಹುದು. ಆದುದರಿಂದ ದಿನೇ ದಿನೇ ನಮ್ಮ ದನಕರುಗಳ ಸಂಖ್ಯೆಯು ಕಡಿಮೆಯಾಗುತ್ತಾ ಬರುವುದರಿಂದ ಭತ್ತದ ಕೃಷಿಗೆ ಬೇಕಾದ ಗೊಬ್ಬರವು ಸಿಕ್ಕದಂತಾಗಿದೆ. ಅಲ್ಲದೆ ಗದ್ದೆಹೊಲಗಳನ್ನು ಸರಿಯಾಗಿ ಉಳುವುದಕ್ಕೆ ಬೇಕಾದ ಒಳ್ಳೆಯ ಎತ್ತುಗಳಾದರೂ ಬೇಕಷ್ಟಿಲ್ಲ. ಎಲೆಯ ಗೊಬ್ಬರವಾದರೂ ಹಾಕಬಹುದೆಂದರೆ ದಿನೇ ದಿನೇ ಕಾಡುಗಳು ನಾಶವಾಗುತ್ತಾ ಬರುತ್ತವಲ್ಲದೆ ಹೊಸ ಕಾಡುಗಳನ್ನು ಬೆಳೆಯಿಸುವ ಯತ್ನವೇ ನಡೆಯುವುದಿಲ್ಲ. ಈಗ ಒಕ್ಕಲಿಗರು ತಮ್ಮ ಹೊಲಗಳನ್ನುಳುವರೆ ಪ್ರತಿ ವರ್ಷವೂ ಘಟ್ಟದಿಂದಲೋ ಇತರ ಕಡೆಗಳಿಂದಲೋ ಎತ್ತುಗಳನ್ನು ತರಿಸಬೇಕಾಗುತ್ತದೆ. ಇಂತಹ ಸ್ಥಿತಿ ಇರುವಾಗ ಮಣ್ಣಿನ ಸಾರವು ಕಡಿಮೆಯಾಗುತ್ತಾ ಬಂದು ಬೆಳೆಯು ಕಡಿಮೆಯಾಗುವುದೇನೂ ಆಶ್ಚರ್ಯವಲ್ಲ. ಬೆಳೆಯು ಕಡಿಮೆಯಾಗುವುದರಿಂದ ಧನಿಗೆ ಗೇಣಿ ಕೊಟ್ಟು ಒಕ್ಕಲಿಗೆ ಸ್ವಲ್ಪವೇ ಉಳಿಯುವುದು. ಕಾಲಕ್ಷೇಪಕ್ಕೆ ಸಾಲದೆ, ಅನೇಕರು ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಕಾಫಿ ತೋಟದ ಗುಲಾಮಗಿರಿಯನ್ನು ಮಾಡುವುದಕ್ಕೆ ಘಟ್ಟಕ್ಕೂ, ಅಡಿಕೆ ತೋಟಗಳಿಗೂ ಹೋಗುವ ಆವಶ್ಯಕತೆಯುಂಟಾಗಿದೆ.

ನಮ್ಮಲ್ಲಿಯ ಕೈಗಾರಿಕೆಯ ವಿಷಯ ಹೇಳಬೇಕಾದುದೇ ಇಲ್ಲ. ನಮ್ಮಲ್ಲಿ ಯಾವ ಯಾವ ಉತ್ಪತ್ತಿಗಳಿವೆ, ಅವನ್ನು ಯಾವ ರೀತಿಯಿಂದ ಉಪಯೋಗಿಸಬಹುದು ಎಂಬ ವಿಷಯದಲ್ಲಿ ನಾವು ಒಂದಿಷ್ಟಾದರೂ ಯೋಚಿಸದಿರುವುದರಿಂದ, ಕೈಗಾರಿಕೆಗೆ ಹೆಚ್ಚಿನ ಅನುಕೂಲತೆಗಳಿದ್ದರೂ, ನಮ್ಮ ಸ್ಥಿತಿಯು ದಿನೇ ದಿನೇ ಶೋಚನೀಯವಾಗುತ್ತಲೇ ಬರುತ್ತಿದೆ. ಪೂರ್ವದಲ್ಲಿ ಕೈಗಾರಿಕೆಯಲ್ಲೇ ಇದ್ದವರು ಈಗ ಅದಕ್ಕೆ ಸಾಕಷ್ಟು ಪ್ರೋತ್ಸಾಹವಿಲ್ಲದಿರುವುದರಿಂದ ಅದನ್ನು ಬಿಟ್ಟು ಬೇಸಾಯಕ್ಕೇನೇ ತಿರುಗಿ; ಬೇಸಾಯಗಾರರ ಸಂಖ್ಯೆಯನ್ನು ಏರಿಸಿದ್ದಲ್ಲದೆ ಇವರ ಸ್ಪರ್ಧೆಯಿಂದ ಧನಿಗಳಿಗೆ ಹೆಚ್ಚಿನ ಗೇಣಿಯನ್ನು ತೆರಲಾರಂಭಿಸಿದರು. ಮುಂಚೆ ಇದ್ದ ಬೇಸಾಯಗಾರರಿಗೇ ಹೊಟ್ಟೆ ತುಂಬಾ ಅನ್ನವಿಲ್ಲದಿರಲು ಇವರ ಗತಿ ಏನಾದೀತೆಂದು ವಾಚಕರೇ ಊಹಿಸಬಹುದು. ಮತ್ತು ಇಂತಹ ಮನುಷ್ಯರಿಂದ ನೆಲವಾದರೂ ಎಷ್ಟು ಉತ್ತಮ ರೀತಿಯಲ್ಲಿ ಸಾಗುವಳಿಮಾಡಲ್ಪಟ್ಟೀತು?

ನಮ್ಮ ಜನರ ಸ್ಥಿತಿಯು ಹೀಗಿರುತ್ತಾ ನಮ್ಮ ಜನರು ಕೂಲಿಗಾಗಿ ಪರ ಊರಿಗೆ ಹೋಗುವುದೂ ಬುದ್ಧಿವಂತರಾದ ಪರ ಊರಿನವರು ಇಲ್ಲಿಗೆ ಬಂದು ತಮ್ಮ ಬುದ್ಧಿವಂತಿಗೆಯಿಂದ ಇಲ್ಲಿಯ ಉತ್ಪತ್ತಿಯನ್ನು ಕೈಗಾರಿಕೆಗೆ ಉಪಯೋಗಿಸುವುದೂ ಸಹಜವಾಗಿದೆ.

ಇಂತಹ ಸ್ಥಿತಿಯಲ್ಲಿ ನರಳುತ್ತ ದಿನ ದಿನಕ್ಕೂ ಅಧೋಗತಿಯನ್ನೈದುತ್ತಿರುವ ನಮ್ಮ ಬಡ ಜನರ ಸ್ಥಿತಿಯನ್ನುದ್ಧಾರಮಾಡಿ ನಮ್ಮ ವ್ಯವಸಾಯವನ್ನೂ ಕೈಗಾರಿಕೆಯನ್ನೂ ಅಭಿವೃದ್ಧಿ ಮಾಡುವರೆ ಪ್ರದರ್ಶನಗಳು ಅಗತ್ಯವಾಗಿವೆ. ಆದರೆ ಈ ಪ್ರದರ್ಶನಗಳನ್ನು ಮಾಡುವಾಗ ಸಾಮ್ರಾಜ್ಯಪ್ರದರ್ಶನದ ಉದ್ದೇಶಗಳನ್ನಿಟ್ಟುಕೊಂಡು ಪರದೇಶಿಗಳ ಹೊಟ್ಟೆ ತುಂಬುವ ಉದ್ದೇಶವನ್ನಿಡದೆ ನಮ್ಮ ಜನರ ಕಣ್ದೆರೆದು, ವ್ಯವಸಾಯದಲ್ಲೂ ಕೈಗಾರಿಕೆಯಲ್ಲೂ ನಮ್ಮ ಜನರಲ್ಲಿ ಅಭಿರುಚಿಯನ್ನುಂಟುಮಾಡಿ ಯೋಗ್ಯ ಶಿಕ್ಷಣವನ್ನು ಕೊಡುವ ಉದ್ದೇಶವನ್ನಿಟ್ಟುಕೊಳ್ಳಬೇಕು. ಈ ಎಲ್ಲಾ ವಿಷಯಗಳನ್ನಾಲೋಚಿಸುವಾಗ ಮಂಗಳೂರಿನ ಪ್ರದರ್ಶನದ ಕಮಿಟಿಯವರು ಕಳೆದ ೨೨ರ ತಮ್ಮ ಸಭೆಯಲ್ಲಿ ಮಾಡಿದ ನಿರ್ಣಯವು ಯೋಗ್ಯವೇ ಎಂದು ವಾಚಕರೇ ಊಹಿಸಬಹುದು.

ಉಡುಪಿ ಗೋವಿಂದರಾವ್.

ಅಹಮ್ಮದಾಬಾದಿನ ರಾಷ್ಟ್ರೀಯ ಪ್ರಾಥಮಿಕ ವಿದ್ಯಾಭ್ಯಾಸ.

ಅಹಮ್ಮದಾಬಾದಿನ ರಾಷ್ಟ್ರೀಯ ಪ್ರಾಥಮಿಕ ವಿದ್ಯಾಫಂಡಿಗೆ ವಂತಿಗೆ ಕೊಡುವವರ ಒಂದು ಸಭೆಯು ಕಳೆದ ತಾ. ೨೩ನೇ ದಿನ ಶ್ರೀಯುತ ವಲ್ಲಭಾಯಿ ಪಾಟೇಲರ ಅಧ್ಯಕ್ಷತೆಯಲ್ಲಿ ಹೊಸ ಆಡಳಿತ ಮಂಡಲಿಯನ್ನು ಚುನಾಯಿಸುವುದಕ್ಕೂ ಹೊಸ ನಿಯಮಗಳನ್ನು ಅಂಗೀಕರಿಸುವುದಕ್ಕೂ ಕೂಡಿತು. ಮಂಡಳದ ಕೆಲಸವು ಈ ಕೆಳಗಿನಂತಿದೆ.

ಮಂಡಳವು ಕೆಳಗೆ ಕಾಣಿಸಿದಂತೆ ೪೩ ಶಾಲೆಗಳನ್ನು ಸ್ಥಾಪಿಸಿ ನಡಯಿಸುತ್ತಿದೆ.

ಶಾಲೆಯ ಹೆಸರು.	ಶಾಲೆಗಳು.	ಮಕ್ಕಳ ಸಂಖ್ಯೆ.
ಗುಜರಾಥಿ ಹುಡುಗರ ಶಾಲೆಗಳು	೨೪	೫೯೫೫
,, ಹುಡುಗಿಯರ ,,	೧೧	೨೦೮೯
ಉರ್ದು ಹುಡುಗರ ,,	೬	೮೦೪
,, ಹುಡುಗಿಯರ ,,	೨	೧೪೭
ಜುಮ್ಲಾ—	೪೩	೮೯೯೪

ಈ ಎಲ್ಲಾ ಶಾಲೆಗಳು ಪಟ್ಟಣದಲ್ಲಿ ಅಲ್ಲಲ್ಲಿ ಹಬ್ಬಿವೆ. ಮಕ್ಕಳ ಸಂಖ್ಯೆಯು ಕೆಳಗಣ ಅಂಕೆಗಳಿಂದ ಕಂಡುಬರುವಂತೆ ದಿನೇ ದಿನೇ ಹೆಚ್ಚುತ್ತಿದೆ.

ತಿಂಗಳು.	ಮಕ್ಕಳ ಸಂಖ್ಯೆ.	ಅಧ್ಯಾಪಕರ ಸಂಖ್ಯೆ
ಫೆಬ್ರುವರಿ	೬೫೧೭	೧೫೫
ಮಾರ್ಚಿ	೭೫೧೪	೨೨೭
ಎಪ್ರಿಲ್	೮೧೪೭	೨೯೯
ಮೇ	ಬೇಸಿಗೆಯ ರಜೆ	—
ಜೂನ್	೮೩೫೨	೨೭೮
ಜುಲಾಯಿ	೮೯೯೪	೨೮೫

ಸರಕಾರದ ಅಧೀನತೆಯಲ್ಲಿರುವ ಮುನ್ಸಿಪಾಲಿಟಿಯ ಶಾಲೆಗಳಲ್ಲಿ ೩೯೦೦ ಮಕ್ಕಳಿರುವರೆಂದು ಸ್ಥಳೀಕ ಪತ್ರಿಕೆಯೊಂದರಲ್ಲಿ ಕಂಡುಬರುತ್ತದೆ. ಕಳೆದ ೩ ವರ್ಷಗಳಲ್ಲಿ ಮುನ್ಸಿಪಾಲಿಟಿ ಶಾಲೆಗಳಲ್ಲಿ ೧೦,೫೦೦ಕ್ಕಿಂತ ಹೆಚ್ಚು ಮಕ್ಕಳಿರಲಿಲ್ಲ. ಅದ್ದರಿಂದ ಈಗಿನ ಶಾಲಾ ಮಕ್ಕಳ ಸಂಖ್ಯೆಗೆ ಅರ್ಥವಿಲ್ಲ. ರಾಷ್ಟ್ರೀಯ ಶಾಲೆಗಳಲ್ಲಿ ೮೯೯೪ ಮಕ್ಕಳಿರುವಾಗ ಮುನ್ಸಿಪಾಲಿಟಿ ಶಾಲೆಗಳಲ್ಲಿ ಅಷ್ಟು ಮಕ್ಕಳು ಇರುವುದು ಸಾಧ್ಯವಿಲ್ಲವೆಂದು ಸ್ಪಷ್ಟವಾಗುವುದು.

ಪಟ್ಟಣದ ಬೇರೆ ಬೇರೆ ಭಾಗಗಳ ೧೯೨೨ನೇ ಜೂನ್ ೩ನೇ ತಾರೀಕಿನ ವರೆಗಿನ ವಂತಿಗೆಯಿಂದ ರೂ. ೫೧೪೮೨—೯—೦ ವಸೂಲಾಗಿದೆ. ಅದರಲ್ಲಿ ರೂ. ೩೩೫೫೨—೮—೧೧ ಖರ್ಚಾಗಿ ರೂ. ೧೭೯೩೦—೨—೦ ಉಳಿದಿರುತ್ತದೆ. ರೂ. ೧೦೦ಕ್ಕಿಂತ ಹೆಚ್ಚಿಗೆ ವಂತಿಗೆ ಕೊಡುವ ಸುಮಾರು ೬೮೫ ಸದಸ್ಯರಿರುತ್ತಾರೆ. ಬೇರೆ ಬೇರೆ ಮಹಾಜನ ಸಂಘಗಳ ತಿಂಗಳ ಕಂತಿನ ವಂತಿಗೆಯಿಂದ ಪ್ರತಿ ತಿಂಗಳಿಗೆ ರೂ. ೧೫೦೦ ಸಿಗುತ್ತದೆ. ಈ ಹೊತ್ತಿನವರೆಗಿನ ಒಟ್ಟು ವಂತಿಗೆರೂ. ೧೫೦,೦೦೦ ಸಿಕ್ಕಿದೆ. ಇನ್ನೂ ಹೆಚ್ಚಿಗೆ ಮೆಂಬರರನ್ನೂ ಸೇರಿಸುತ್ತಿದ್ದಾರೆ. ಜನರ ಉದಾರ ಸಹಾಯವು ಬಹಳ ಉತ್ತೇಜನ ಕೊಡುತ್ತಿದೆ. ಶ್ರೀಮಂತರನೇಕರು ಈ ನಿಧಿಗೆ ಸಹಾಯಮಾಡುವುದಲ್ಲದೆ, ಚಳವಳದಲ್ಲಿ ಹೆಚ್ಚಾದ ಉತ್ಸಾಹವನ್ನು ತಗೆದುಕೊಳ್ಳುವ ಮಧ್ಯ ತರಗತಿಯವರು ಬಹಳವಾಗಿ ಈ ನಿಧಿಗೆ ವಂತಿಗೆ ಕೊಟ್ಟು ಸಹಾಯಮಾಡುತ್ತಿದ್ದಾರೆ.

ಪತ್ರವ್ಯವಹಾರ.

ನಾನು ಇದೇ ಜುಲ್ಯಾಯ ತಾರೀಕು ೨೧ನೆ ಸ್ವದೇಶಾಭಿಮಾನಿಪತ್ರದಲ್ಲಿ ಉಪ್ಪಿನಂಗಡಿ ತಾಲೂಕು ಬೋರ್ಡ ಮೀಟಿಂಗಿನಲ್ಲಿ ಪಾಸಾದ ಅಭಿಪ್ರಾಯವನ್ನು ಓದಿನೋಡಿ ಆಶ್ಚರ್ಯಪಟ್ಟೆನು. ಮಲೇರಿಯವಲ್ಲದೆ ಬೆಳ್ಳಾರೆ ಪ್ರಾಂತ್ಯಕ್ಕೆ ಸುಳ್ಯ ವೈದ್ಯ ಉದ್ಯೋಗಸ್ಥರು ಪ್ರತಿ ತಿಂಗಳಲ್ಲಿ ಸರ್ಕೀಟು ಬೆಳಸಿ ರೋಗಿಗಳಿಗೆ ಔಷಧೋಪಚಾರ ಮಾಡುವುದಾಗಿ ಠರಾವು ಪಾಸಾದಂತೆ ತೋರುತ್ತದೆ. ಆದರೆ ಬೆಳ್ಳಾರೆಯ ಪ್ರಾಂತ್ಯವು ಮಲೇರಿಯಾ ಪ್ರದೇಶವಲ್ಲ. ಸಂಪಾಜೆ, ಕಡಮಕಲ್ಲು, ಸುಬ್ರಮಣ್ಯ ಈ ಪ್ರಾಂತವು ಕೇವಲ ಮಲೇರಿಯಾ ಪ್ರಾಂತ್ಯವಾಗಿಯೂ ಬಡನಿವಾಸಿಗಳಿಂದ ಕೂಡಿದ್ದಾಗಿಯೂ ಸುಳ್ಯ ಆಸ್ಪತ್ರೆಯಿಂದ ೧೫-೩೦ ಮೈಲುಗಳ ಫಾಸಲೆಯುಳ್ಳದಾಗಿಯೂ ಇದ್ದು ರೋಗದ ತವರುಮನೆಯಾಗಿರುತ್ತ. ಈ ಸಹಜವಾದ ಕಾರಣದಿಂದ ಇದಕ್ಕೆ ಸಂಬಂಧಪಟ್ಟ ಆಫೀಸರರು ತಕ್ಕ ನಿಗಾಇಟ್ಟು ಬೆಳ್ಳಾರೆಪ್ರಾಂತ್ಯಕ್ಕೆ ವೈದ್ಯ ಉದ್ಯೋಗಸ್ಥರ ಸರ್ಕೀಟು ಇಟ್ಟಿದ್ದನ್ನು ತಬ್ದೀಲು ಮಾಡಿ ಸಂಪಾಜೆ, ಸುಬ್ರಮಣ್ಯ ಈ ಕಡೆಗಳಿಗೆ ಈ ಸರ್ಕೀಯನ್ನೆ ಇಟ್ಟು ನಡಿಸುವರಾಗಿ ನಂಬುತ್ತೇನೆ. ಇದರಲ್ಲಿಯೂ ಕೊಲ್ಲಮೊಗ್ರು, ಸಂಪಾಜೆ ಎಂಬುದು ಮಲೇರಿಯಕ್ಕೆ ಒಂದನೇ ಸ್ಥಳವಾಗಿದ್ದು ಹಲವು ವಿದ್ಯಾರ್ಥಿಗಳೂ ಹಳ್ಳಿ ಹಳ್ಳಿಯ ಬಡ ನಿವಾಸಿಗಳೂ ಜ್ವರದಿಂದ ಹೊಟ್ಟೆ ಗಡ್ಡೆಬೆಳಸಿ (ಪುರುಷ ಗರ್ಭ) ಅಹೋರಾತ್ರಿ ಚಿಂತಾಸಮುದ್ರದಲ್ಲಿ ಮುಳುಗುತ್ತಿರುವರು. ಆದುದರಿಂದ ದಯಾಳು ಸರಕಾರದವರು ಈ ಮೊರೆಯನ್ನು ಲಾಲಿಸಿ ನ್ಯಾಯ ಕಂಡುಕೊಂಡು ವರ್ತಿಸುವರಾಗಿ ನಂಬುತ್ತೇನೆ. ಗ್ರಾಮನಿವಾಸಿ.

ಬ್ರಹ್ಮರ ಕೊಟಲಿನ ಸಮೀಪದ ಮಾರ್ಗ.

ಸ್ವಾಮಿ,

ನೇತ್ರಾವತಿ ನದಿಯು ಮಳೆಗಾಲದಲ್ಲಿ ತುಂಬಿತುಳುಕುವಾಗ ಅದರ ಎರಡು ದಡದಲ್ಲಿರುವ ಪ್ರದೇಶಗಳು ಮುಳುಗಿ ಹೋಗುತ್ತವೆ. ಮಂಗಳೂರಿನಿಂದ ಮಡಿಕೇರಿಗೆ ಹೋಗುವ ನಂಬ್ರ ೧ನೇ ಮಾರ್ಗವು ಕಣ್ಣೂರಿನಿಂದ ಬ್ರಹ್ಮರ ಕೊಟಲು ವರೆಗೆ ನದಿಗೆ ಬಹಳ ಹತ್ತಿರದಿಂದ ಬಂದಿದೆ. ನೆರೆಬಂದಾಗ ಅಡ್ಯಾರ ಮಾರ್ಗದಲ್ಲಿ ಒಂದೊಂದು ಸಾರಿ ನೀರು ನಿಲ್ಲುತ್ತದೆ. ಬ್ರಹ್ಮರ ಕೊಟಲಿನ ಹತ್ತಿರ ಸಣ್ಣ ನೆರೆಬಂದರೂ ನೀರು ನಿಲ್ಲುತ್ತದೆ. ಅಡ್ಯಾರದಲ್ಲಿ ಮಾರ್ಗದ ಮೇಲೆ ೨, ೩, ಅಡಿ ನೀರು ನಿಂತರೆ ಬ್ರಹ್ಮರ ಕೊಟಲಿನ ಹತ್ತಿರ ೬ ಅಡಿ ನೀರು ನಿಲ್ಲುತ್ತದೆ. ಅಡ್ಯಾರದಲ್ಲಿ ಮಾರ್ಗಕ್ಕಿಂತ ನೀರು ೧ ಅಡಿ ಕೆಳಗೆ ಇದ್ದರೆ ಬ್ರಹ್ಮರ ಕೊಟಲಿನ ಹತ್ತಿರ ೩ ಅಡಿ ನೀರು ಮಾರ್ಗದ ಮೇಲೆ ನಿಲ್ಲುತ್ತದೆ. ಬ್ರಹ್ಮರಕೊಟಲಿನಲ್ಲಿ ನೀರು ನಿಲ್ಲುವ ಮಾರ್ಗದ ಉದ್ದವು ಸುಮಾರು ೩೦೦ ಅಡಿಯಾಗಿದೆ. ಇಲ್ಲಿ ನೀರು ನಿಂತಾಗ ಆಚೆ ಈಚೆ ಹೋಗುವ ಜನರಿಗೂ ಜಾನುವಾರುಗಳಿಗೂ ಗಾಡಿಗಳಿಗೂ ಮೋಟರುಗಾಡಿಗಳಿಗೂ ಬಹಳ ಕಷ್ಟವಾಗುತ್ತದೆ. ಆದುದರಿಂದ ೩೦೦ ಅಡಿ ಉದ್ದವಾದ ಈ ಮಾರ್ಗದ ತುಂಡನ್ನು ಏರಿಸಿದರೆ ಬಹಳ ಉತ್ತಮವಿತ್ತು. ಕೆಲವು ವರ್ಷಗಳ ಹಿಂದೆ ಒಬ್ಬ ಕಲೆಕ್ಟರರು ಇದನ್ನು ಏರಿಸಬೇಕೆಂದು ಎಷ್ಟಿಮೇಟು ಮಾಡಿಸಿದರು. ಆದರೆ ಅದು ಅವರ ಹಿಂದೆಯೇ ಹೋಯಿತು. ಈಗಿನ ಕಲೆಕ್ಟರ್‌ದೊರೆಗಳು ಇದರ ವಿಷಯ ತಕ್ಕ ವಿಚಾರಮಾಡುವ ಹಾಗೆ ಮಾಡಿಸಿದರೆ ಆಗುತ್ತಿತ್ತು. ಟೋಲುಗೇಟುಗಳಿಗೆ ಗಾಡಿಗಳಿಂದ ವಸೂಲುಮಾಡುವ ಸುಂಕವನ್ನು ಏರಿಸಿದ್ದಾರೆ. ಮೋಟರುಕಾರುಗಳಿಗಂತೂ ಬಹಳ ಏರಿಸಿರುತ್ತಾರೆ. ಒಂದೊಂದು ಮೋಟರು ಕಂಪೆನಿಗೆ ಒಂದು ದಿನ ನೆರೆನಿಂತರೆ ಸುಮಾರು ೧೦೦ ರೂ. ನಷ್ಟವಿದೆ. ಆದುದರಿಂದ ಎಲ್ಲಾ ಮೋಟರು ಕಂಪೆನಿಯವರು ಡಿಸ್ಟ್ರಿಕ್ಟ ಬೋರ್ಡಿಗೂ, ಕಲೆಕ್ಟರ್‌ದೊರೆಗಳಿಗೂ ಮೆಮೋರಿಯಲ್ ಮಾಡಿ ಅವರನ್ನು ಆ ಸ್ಥಳಕ್ಕೆ ಕರತಂದು ಅವರಿಗೆ ಈ ಸಂಗತಿಯು ಮನದಟ್ಟಾಗುವಂತೆ ಮಾಡಿ ಇದನ್ನು ಈ ವರ್ಷವೇ ಆಗುವಹಾಗೆ ಮಾಡಿಸಬೇಕು. ಮಂಗಳೂರು ಮಡಿಕೇರಿ ಮಾರ್ಗಕ್ಕೆ ಈ ವರುಷ ರೂ. ೧,೩೯,೮೦೦, ಸೆಂಕ್ಷನ್ ಆಗಿಯದೆ. ಆದುದರಿಂದ ಇಲ್ಲಿ ಮಣ್ಣು ತುಂಬಿಸಲಿಕ್ಕೆ ಪ್ರತ್ಯೇಕ ಹಣ ಸೆಂಕ್ಷನ್ ಮಾಡುವುದು ಬೇಡ. ಈ ಮಾರ್ಗದ ಎರಡು ಬದಿಗಳಲ್ಲಿರುವ ನೆಲವು ಸರಕಾರಿ ಪರಂಬೋಕುಸ್ಥಳ. ಮಣ್ಣು ಸಹ, ಮಾರ್ಗಕ್ಕೆ ತಾಗಿರುವ ಗುಡ್ಡೆಯಲ್ಲಿಯೇ ಇದೆ. ಹೀಗಿರುತ್ತ ಈ ಮಾರ್ಗಕ್ಕೆ ಜಲ್ಲಿಹಾಕಿಸುವ ಮೊದಲೇ ಈ ಮಾರ್ಗವನ್ನು ಏರಿಸಿದರೆ ಹೊಸ ಜಲ್ಲಿಯು ಸಹ ಬೇಕಾಗಲಿಕ್ಕಿಲ್ಲ. ಆದುದರಿಂದ ಯಾವ ತರದಲ್ಲಿಯಾದರೂ ಇದನ್ನು ಈ ವರ್ಷದಲ್ಲೆ ಏರಿಸುವುದೇ ಒಳ್ಳೆಯದು.

[illegible]

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.
ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0
Reserve and other sinking Funds „ 181,250—0—0
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟೆರಿಗಳಿಗೆ ಬರಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ವ್ಯಾಧಿಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಬಹುಬೇಗ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ, ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ [illegible], ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅಮೃತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇದ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು
ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.
ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೬, (ಬ್ರಾಡ್ವೇ, ಮದ್ರಾಸ್.
Local Agents: Raphael & Co.
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ಸಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕಛೇರಿಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
Manager,
Sri Lakshmi Mills, KASARGOD, S. K.

ಆರ್. ಮಾರ್ಟಿನ್ನರ ಲಪ್ಟಾ ಎಣ್ಣೆ.
ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.
ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವಿಸಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡಲಾರಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಮಬಾಣವಾಗಿಯೂ, ಎದೆಗೆ ಬಲಕೊಟ್ಟು ಮುಂದೆ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.
60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿ ಟೋಡಯಿನ್.
ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. [illegible]
ಬೆಲೆ ಸೀಸೆ 1ಕ್ಕೆ ರೂ. 2—0—0.
ವಿಳಾಸ—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಪ್ರಿಯರ್ ರೋಡ್,
ರೈಟ್ ಎಂಡ್ ಕೋ. ಹತ್ತರ, ಫೋರ್ಟ್ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು —
— ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.
ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.
ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.
ಪಿ. ವೆಂಕಟೇಶ ರಾಮಚಂದ್ರ ಸರ್ಮಾ
ಪ್ರೊಪ್ರೈಟರ್.
☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ
ರಥಬೀದಿ ಮಂಗಳೂರು.
ಎಲ್ಲಾ ಜಗೆಯ ಜರ್ಮನ್ ಛಾಪುಗಳೂ, [illegible] ಬಟ್ಟೆ ವಗೈರೆ ಸಾಮಾನುಗಳೂ, ಪ್ರಿಂಟಿಂಗ್ [illegible] ಶಾಯಿ [illegible] ಸಾಹಿತ್ಯಗಳೂ, ಜರ್ಮನ್ [illegible] ಸಾಹಿತ್ಯಗಳೂ, [illegible] ಸಾಮಾನುಗಳೂ, [illegible] ಖಾದಿ [illegible] ಸ್ವದೇಶಿ, ವಸ್ತ್ರಗಳೂ, ಸಾಮಾನುಗಳೂ, [illegible] ವಗೈರೆ [illegible] ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುವವು.

ಅಚ್ಚಿನಲ್ಲಿದೆ!   ಎಂ. ಜಿ. ಐಗಳ್, ಇವರಿಂದ ರಚಿತವಾದ   ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯು ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಸಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.
ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿದ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜೈನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಆಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಿ ತಾದ್ರಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ನರಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತಶಾಸ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತ ಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಬಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹಂಪರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಖಲೀಫ—ಮಹಮ್ಮದೀಯರು—ಮಾಪಿಳ್ಳೆಯರು—ಬ್ಯಾರಿ—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚೇರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸ್ರೂರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ವೀರ ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಾಣಿ ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾ ನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ಬರಾಯ—ಕುಂಬಳೆ ಸುಬ್ಬರಾಯನ ದಂಗೆ—ಕ್ಯಾಪ್ಟನ್ ಮನ್ರೋ, ಮೊದಲನೇ ಕಲೆಕ್ಟರ—ಬುಕೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಪಂಜ—ಸುಳ್ಯ—ಬೆಳ್ಳಾರೆ—ಅಮರಸುಳ್ಯಗಳು—ಬೆಳ್ಳಾರೆ, ಪುತ್ತೂರು ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ—ಗುರುವಾಯನಕೆರೆ ಪಟ್ಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳ್ತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜನ ಅಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಮಣೆಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಜ ನಿರ್ಮಾಣ—ವಳನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿರ್ಮಂತೂರು—ಮೂಲಿಕೆ—ನಡಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಿಡ್ಲೆ—ಸೋಮನಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾಸ್ರೂರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ದಿನ್ನಾಣರು—ಪಡುಬಿಲ ಕೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮೆ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಣ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟುಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಆಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲೀಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಪಮಟೆಗಡ 1.

ವಿಳಾಸ:— ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.
ಅಥವಾ
ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ಧ್ಯಾಯಚೂರು ಛೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರಶ್ನೆಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಛಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇವರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಪತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷರು ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡುವದೆಳೆಂದು ಇದರ ಬೆಲೆ ಶೀರ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ಬೇರೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧನಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪ್ರಾಪ್ತಿ, ಚಿಕಿತ್ಸೆ, ಸ್ತ್ರೀಯರ ಇವರಿಂದ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯೊದರೂ ಶೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನು ಒಮ್ಮೆ ತರಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧—೪—೦. ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೈ
ರಥಬೀದಿ, ಮಂಗಳೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ.   ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೫—೬—೧೯೨೦)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪರಾಕ್ರಮಿ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಸ್ಸು ಬರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಶಿಕ್ಷಕರ್ತವ್ಯ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರತೀಕಾರ, ರಾಜರಿಗೂ ಇರತಕ್ಕದಾದ ಭಕ್ತಿ, ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. ... ಬಾಲಿಕೆಯು ತಿಳಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉಪಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುಕ್ತಿನ ಸರ . .	0—12—0
ಸಂಸಾರಸಾರ ಕಾದಂಬರಿ	0—6—0
ಚಂದ್ರಮುಖಿ „	0—8—0
ರಾಜಪುತ್ರರಮರೆಯರು	0—8—0
ಕೆಲವು ಸಣ್ಣ ಕಥೆಗಳು	1—0—0
ರಾಜಯೋಗ . .	1—0—0

ಸಂಪೂರ್ಣರಾಮಾಯಣ ಹೊಸ ಮುದ್ರಣ . .	5—0—0
ಸಂಪೂರ್ಣರಾಮಾಯಣ ಅಕ್ಷರ ವಚನ .	0—12—0
S. S. L. C. Kannada Texts ಪಂಚವಟಿ . . .	0—5—0
ಸುಶೀಲೆ , .	0—6—0
ಆಪಧಾನ ಹಿಮಗಿ .	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered No. M. 498.

...la Bai
...hau Esq.
...wamy Pill...
...tty Street,
...more, Madras

SWADESHABHIMANI.
MANGALORE.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ಮಂಗಳೂರು, ತಾರೀಕು ೧೮ನೇ ಶುಕ್ರವಾರ ಆಗಸ್ಟು ೧೯೨೨.   ಸಂಚಿಕೆ ೩೩

ಸಾಲು ಉತ್ತಮ!   ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು.

ಮೇಲಾದ

ಜವಳಿ ಸಂಗ್ರಹದ ಮಳಿಗೆ—

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಶ್ಮೆ ಪತ್ತೆ, ಮತ್ತು ನೂಲಿನ ಬಟ್ಟೆಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಮ್ಮದಾಬಾದ, ಮಹೇಶ್ವರಿ, ಗುಜರಾತ್ಥ, ಬಡೋದಾ, ಕೊಯಮುತ್ತೂರು, ಗದಗ, ಹುಬ್ಬಳ್ಳಿ, ಧಾರವಾಡ, ಇಳಕಲ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಮ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಜರ್ಮನಿ ಮೊದಲಾದ ಕಡೆಗಳಲ್ಲಿಯೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳು, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುಪು ತೊಡುಪುಗಳು ಈಗ ತಾನೇ ತರಿಸಿದ್ದು ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗಿರುವ ಬಿಳೀ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳೂ, ಬೇರೆ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಶರ್ಟಿನ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವುವು.

ನಗದಿ ಪಡೆಯುವವರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೈ,
ಕಸ್ತೂರಿ ನಾಗೇಶಪ್ಪೈ ಮತ್ತು ಕಂಪೆನಿ,
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಹಿಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ಎಮ್ಮೆಗೊಬ್ಬರದಲ್ಲಿರುವುದಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕರೆಗೆ 100—200 ರಾತ್ತಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ವಿಚಾರಣೆಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪುಸ್ತಿಕೆಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶ್ಯನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಕ್ಕರಾಯ ಶಾಸ್ತ್ರಿಗಳಿಂದ ಬರೆಯಲ್ಪಟ್ಟ
ಹಿಂದೂ ವ್ರತಪದ್ದೇಶ ಕ್ರಯ ೦—೧೦—೦
ಕೇಶವ ಪುಂಗ " ೦—೧೨—೦
ಸಂಕ್ಷೇಪಗೀತೆ " ೦—[illegible]—೦

ಲಕ್ಷ್ಮೀನಾರಾಯಣ ಪುರೋಹಿತ್ತಾಯರಿಂದ ರಚಿತವಾದ
ಸ್ವರಾಜ್ಯ ಭಕ್ತೋಪಾಖ್ಯಾನ ಕ್ರಯ ೦—೩—೦

ಕರ್ನಾಟಕ ಕವಿ ಚರಿತ್ರೆ, ಮರಾಟಿನ ಅದನ್ನು ಶ್ರೀದಾಸ ಬೋಧೆ, ಶಾಕ್ತಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿ ವಿಲಾಸ, ಕ್ಷಾತ್ರತೇಜ, ಮಾಧವ ತರುಣಿವಿಲಾಸ, ಅನಶಕಾರದ ಹೋಗುಲಿಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ... ರೂ. ೩—೧೪—೦ ಸ್ಥಳಿಕರಿಗೆ ... ರೂ. ೩—೦—೦ ... ಪತ್ರವ್ಯವಹಾರ ...

ಗ್ರಂಥಕರ್ತರಿಗೂ, ವ್ಯಾಪಾರಸ್ಥರು, ಸರಕಾರದ, ವಕೀಲರುಗಳು, ಶಾಲಾ ಸಂಸ್ಥೆಗಳು, ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಲೇಖನ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ದ್ರಾಯಿಂಗುಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫೋಟೋ ಗಳುಗಳು, ಇತರ ಖಚಿತವಾದ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕೀಲರು ... ಫೋರ್ಮುಗಳು, ಸರ್ಕಾರ ಫೋರ್ಮು, ಅಂಚೆಗಳ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೇರೆ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ಬಿಸ್ಕತ್ತು ಔಷಧಿಗಳು—ರೋಗಿಗಳಿಗೂ, ಬಾಲಕರಿಗೂ ಬೇಕಾಗುವ ಪಾಷ್ಟಿಕ ಔಷಧಿಗಳು.

ನೈಟ್ರೇಟ್ ಆಫ್ ಸೋಡಾ ಇತ್ಯಾದಿ ಬೇಸಾಯಕ್ಕೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಆಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧ ಇಲಾಖೆಯ ಕೆಳಗಿನ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTANJAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕ್ಷಣದಲ್ಲಿ ನಿಲ್ಲದು. ಇದು ಯಾವ ತರದ ಶಿರಶೂಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ—ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.
ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು.
ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಕಶಪಾಯು

U. L. DUTT & Co.   CALCUTTA.

ಮಲೆಯೊಳ ದೇಶವು ಔಷಧಗಳಿಗೆ ತೀರ್ಥ ಹೊಂದಿದ್ದ ಪ್ರದೇಶವು. ಅಲ್ಲಿನ ಔಷಧಿಗಳಲ್ಲಿ ಅತಿ ಪ್ರಯೋಜನದಿಂದ ಮುತ್ತಲೇ ನಿಶ್ಚಿತ ಹಾಯಿಗಳಿಂದ ಸಾಧು ಅನೇಕ ಅತ್ಯುತ್ತಮ ಔಷಧಗಳನ್ನು ನಿರ್ವಹಿಸಿ ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ... ಗುಣಹೊಂದಿರುವುದಲ್ಲದೆ, ನಮಗೆ ಪ್ರತಿಸ್ಥಳದಿಂದ "ಆರ್ಡರ್‌ಗಳೂ" ಬರುತ್ತಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ... ಯೋಗ್ಯತಾಪತ್ರಗಳೂ ಬೇರಲಾಗಿವೆ.

ಅಂಥಾ ಅತ್ಯುತ್ತಮ ಔಷಧಗಳಲ್ಲಿ ನಮ್ಮ 'ಪಾಕಶಪಾಯು'ವೆ ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ... ಅವಯವಗಳಲ್ಲಿ ಆಗಾಗ ಬರುವ ಸೆಳತ, ನರಗಳು, ಸಂಧಿ, ಅವಯವ, ಅಂಗಶೋಷ ಮೊದಲಾದವುಗಳು ಬೇಗನೆ ಗುಣಹೊಂದುತ್ತವೆ. ... [illegible]

ಕ್ರಯ ರೂ. 1—4—0.

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈಜ್ಞಾನಿಕ ಜ್ಞಾನದ ಬಗ್ಗೆ (ಡಿಪ್ಲೋಮಾ) ಅಧಿಕಾರದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೇನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜೆಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.

ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಬುದ್ಧಿ ನಿಗೂಢನಿಯಂತ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ವಿಕ್ರಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟು ರಿಯಾಯಿತಿ ದರದಲ್ಲಿ ಇಲ್ಲಿ ಕೊಡಲಾಗುವುದು.

ಕಳೆದ ೫೦ ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ಕ್ರಯವೂ ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬರೆ 100 ಸಲ ಪುಟಕ್ಕೆ ಇಟ್ಟುದುದಕ್ಕೆ ರೂ. 2.

ಅಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟುದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟುದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ¼ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿಸ್ತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ¼ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ. 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೇನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಚನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 2. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಆರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟಿಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ, ಸಾಬೂನು, ಶಿಕಾರಿಗಳ ಬಗ್ಗೆ ಕಟ್ಟೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲೋಗಿನ ಬಗ್ಗೆ ಈಗಲೇ ಬರೆಯಿರಿ.

ದಿ ಕೆನರಾ ಆರ್ಮ್ಸ ಎಂಡ ಎಮ್ಯುನಿಶನ್ ಮಾರ್ಟ್,

ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ್‌ಎಂಡ್ ವಾಚು, ಮೆರಿಡಿಯನ್ ಜರ್ಮನ್ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫ್ಲೂಟಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲಗಳೂ ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇವಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,

ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ.

ಮಕ್ಕಳ ಆಟದ ಬೊಂಬೆಯ 32 ಸಾಮಾನುಗಳ ಒಂದು ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 5—0—0 ಪೋಸು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ, ಜರಿ, ಸಾದಾ, ಶೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಶ್ರೀಚಕ್ರ, ಸ್ಫಟಿಕಮಣಿ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಬೇಕಾದವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವದು. ಕ್ಯಾಟಲಾಗ್ ಇದೆ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು [illegible]

ಚೌಕಂಬಾ, ಕಾಶೀ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೂ ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕೀವು ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಜುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ. 1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೋಮಿಯೋಪತಿಕ್ ಡಿಸ್ಪೆನ್ಸರಿ,

ಹಂಪನಕಟ್ಟೆ, ಮಂಗಳೂರು.

ನಿಮ್ಮ ಮುಖ ಬಣ್ಣವನ್ನು ರೂಪಾಗಲು ಅಲಂಕರಿಸೋಣವು
ನಿಮ್ಮಕೈಗಳು ರೂಪಾಗಲುವುದಕ್ಕಾಗಿಯು ಮೆತ್ತನೆಯದಾಗಿಯು ಇರುವದಕ್ಕಾಗಿಯು

ರೂಪಾಗಲು ಪ್ರಯೋಗಿಸ ಬೇಕಾ

“ಹಾಜಿಲೀನ್ ‘ಸ್ನೋ’”

(ಟ್ರೇಡ್ ಮಾರ್ಕ) ವಸ್ತು

“‘HAZELINE’ SNOW”

(Trade Mark)

“ಹಾಜಿಲೀನ್ ‘ಸ್ನೋ’ ಎಂಬುದು ಅಧಿಕ ಸುಖಂಕರ ಮತ್ತು ಶಣಿಸುವಂಥಾ ಶರ್ಮಕ್ಕೆ ಒಳ್ಳೆ ಸಾಮಗ್ರಿಯು. ಮತ್ತುಕೊಬ್ಬು ಶೇರದ ಪದಾರ್ಥವು. ಅದು ಬಹು ಶೀಘ್ರದಲ್ಲಿ ಸೊಗಸನ್ನು ಬಿಡುವನ್ನು ಕೊಡುವದು. ಯುವತಿಸ್ತ್ರೀ ಶ್ರೇಷ್ಠರು ಶರ್ಮ ಶರ್ಮವು ಮೃದುವಾದುವದಕ್ಕಾಗಿ, ಕ್ರಮವಾಗಿ ಉಪಯೋಗಿಸಬೇಕು.



ಇದು ಕಂಜೆಪ ವಾತ್ರಿಗಳಲ್ಲಿ ಕೆಡುಕು ಮತ್ತು ಉಗ್ರಾಣದ ಮರೆರೂಪರಿಂದಲು ಮಾರಲ್ಪಡುವದು.

ಬರ್ರೋಸ್ ವೆಲ್‌ಕಂ ಅಂಡ್ ಕೋ, ಲಂಡನ್ ಅಂಡ್ ಬಂಬಾಯಿ.

Burroughs Wellcome & Co. London and Bombay.

Can. 5

All Rights Reserved

ಶ್ರೀ

ಸ್ವದೇಶ ಭಕ್ತರೇ ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳು, ಬಿಳಿ, ಹಸುರು ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ ನಯವಾದ ಶರ್ಟಿನ ವಸ್ತ್ರಗಳೂ ಮತ್ತು ವೇಷ್ಟಿ ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸೋವಿ ಬೆಲೆಗೆ ನಮ್ಮಲ್ಲಿ ದೊರೆಯುವವು. ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ಪಾಲ್ಕಾನೆಯ ಸ್ಟಾಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:—

ಮುಳಿಯ ತಿಮ್ಮಪ್ಪಯ್ಯ ಮತ್ತು ಸಹೋದರ

ರಷ್ಮೆ ಮತ್ತು ಜವಳಿ ವ್ಯಾಪಾರಿಗಳು,

[illegible] (ಗೋಳಿಕಟ್ಟೆ ಬಜಾರು)

ಮಂಗಳೂರು.

The Canara Banking Corporation, Udipi, (Limited).

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಆ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯಕೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಯಾನೆ ಹೊರಗಿನಿಂದ ಬರತಕ್ಕದ್ದು	3,78,315	2	5
6. ರಿಜರ್ವ ಇತ್ಯಾದಿ ಫಂಡುಗಳು. (17—6—'22.)	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೭ರಿಂದ ೬½ ವರೆಗಿನ ಮೂರು ತಿಂಗಳಿಗೊಮ್ಮೆ ಬಡ್ಡಿ ಕೊಡುವ ಶರ್ತದ ಮೇಲೆ ಖಾಯಂ ಠೇವಣಾತಿಗಳು.

೨. ೧೫ ದಿವಸಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡೆಯುವ ಶರ್ತದ ಮೇಲೆ ಸಾಲಿಯಾನ್ ಶೇಕಡಾ 6½ರಲ್ಲಿ ಪಡೆದ ದಿವಸಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಚಲ್ತಾ ಖಾಯಂ ಠೇವಣಾತಿಗಳು.

೩. ಏನೂ ಖರ್ಚಿಲ್ಲದೆ ಸಾಲಿಯನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಚಾಲ್ತಿ ಠೇವಣಾತಿಗಳು.

೪. ಸಾಲಿಯನ್ ಶೇಕಡಾ 4¼ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.

೫. ಈ ಕೆಳಗಣ ಶರ್ತಗಳ ಮೇಲೆ ಕಂತು ಠೇವಣಾತಿಗಳು.

ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.

ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.

ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.

ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು.

ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.

೬. ಕಳೆದ ೨ ವರುಷಗಳಲ್ಲಿ ಪಾಲುದ್ಯಾರರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.

೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.

೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಖ್ಖಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಓಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬಾಯಿಯಲ್ಲಿರುವ ಮರ್ಕೆಂಟೈಲ್ ಬ್ಯಾಂಕ್ ಓಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ತಾಜಾ ಕಲಂ:—ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಯವರಿಗೆ ಬರೆದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡುಪಿ. ತಾ 13—5—1922.

ನ. ಆನಂದರಾವ್, ಕಾರ್ಯದರ್ಶಿ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ “ವಿಲ್ಲಿಯಮ್ಸ್ ಡೆಂಟೋನ್” ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಸೋರುವದೂ, ಹಲ್ಲಿನ ಬುಡದಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಪುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,

ಹಂಪನಕಟ್ಟೆ, ಮಂಗಳೂರು.

ಕೊಂಕಣಿ ಭಾಷೆಯಲ್ಲಿ

ಸಂಗೀತ

❋ ಚಂದ್ರಹಾಸ ನಾಟಕ ❋

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದದ ಬೈಂಡು ರೂ. 0—4—6. ಕ್ಲಾತ್ ಬೈಂಡು ರೂ. 0—5—6.

ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದುವರೆ ಆಣೆ ಅಥವಾ ಆರುವರೆ ಆಣೆಗಳ ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ— ದ. ಕೆ. ಪ್ರಭು,

ನಿತ್ಯೋದಯ ಮುದ್ರಾಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ.

‘ಕವಿ’ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿನಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತು 1ರ ರೂ. 2—12—0.

ಸ್ಪೆಶ್ಯಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಾಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,

ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

“ಸಂಕ್ಷೇಪಗೀತೆ”

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಷ್ಟು ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು ಕೆನರಾಸ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ್ ಡಿಪೋಜಿಟರಿ,

ಮಂಗಳೂರು.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಶ್ರಾವಣ ಬ ೯ ಶನಿವಾರದಿಂದ ದುಂದುಭಿಸಂ॥ ಶ್ರಾವಣ ಬ ೧೦ ಶುಕ್ರವಾರದ ವರೆಗಿನ ಪಂಚಾಂಗ

(೧೯೨೨ನೆಯ ಆಗೋಸ್ತು)

ತಾರೀಖು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ.	ಸೂರ್ಯ ಉ.	ಸೂರ್ಯ ಅ.
19	ಶನಿ	೧೧	೧೦.೧೬	ಆರ್ದ್ರಾ	೪೫.೨೦	೪	6.20	6.46
20	ರವಿ	೧೨	೮.೧೬	ಪುನರ್ವಸು	೪೪.೨	೫	6.20	6.45
21	ಸೋಮ	೧೪	೬.೧೮	ಪುಷ್ಯ	೪೧.೪೨	೬	6.20	6.44
22	ಮಂಗಳ	●	೫೮.೦	ಆಶ್ಲೇಷಾ	೩೮.೪೦	೭	6.20	6.43
23	ಬುಧ	೧	೫೮.೧೬	ಮಘಾ	೩೨.೫೫	೮	6.20	6.43
24	ಗುರು	೨	೫೨.೧೮	ಪುಬ್ಬಾ	೩೦.೫೬	೯	6.20	6.42
25	ಶುಕ್ರ	೩	೪೬.೦	ಉತ್ತರಾ	೧೬.೫೫	೧೦	6.20	6.41

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ಆಗೋಸ್ತು)

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಿಮೆಯದ್ದು	ದಿವಸದ ಮಳೆ	ಜನವರಿ 1ರಿಂದ
10	87—4	75—5	0—08	—
11	87—7	76—1	0—11	—
12	87—6	73—8	0—08	—
13	87—2	76—0	0—02	—
14	87—2	75—6	0—12	—
15	87—1	74—9	0—20	—
16	87—0	72—8	3—65	107-23

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ ...	8— 6	9—0
ಸುಗ್ಗಿಗೆ ...	7—12	8— 0
ಗುಡ್ಡು, ...	7— 8	8— 0
ರಾಶಿ	7— 4	7—10
ಅವ್ವಲ್ ಬೆಳ್ತಿಗೆ „ ...	9— 0	9— 8
ಗುಡ್ಡು ಬೆಳ್ತಿಗೆ „ ...	7—14	8— 4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	14— 0	14— 8
ಗೋಧಿ ಗೋಣಿ ೧ಕ್ಕೆ ...	22— 8	24— 8
ಹುರುಳಿ ಗೋಣಿ ೧ಕ್ಕೆ ...	13—12	14— 0
ಕಡಲೆ ಗೋಣಿ ೧ಕ್ಕೆ ...	14— 0	16— 0
ತೊಗರಿ ಗೋಣಿ ೧ಕ್ಕೆ ...	15— 8	16— 0
ತೊಗರಿಬೇಳೆ ಗೋಣಿ ೧ಕ್ಕೆ ...	19— 8	23— 0
ಉದ್ದು ಗೋಣಿ ೧ಕ್ಕೆ ...	17— 0	—
ಹೆಸರು ಗೋಣಿ ೧ಕ್ಕೆ ...	15— 8	16— 0
ಊರು ಬೆಲ್ಲ ಖಂಡಿ ೧ಕ್ಕೆ ...	70— 0	72— 8
ಉಪ್ಪು ಗೋಣಿ ೧ಕ್ಕೆ ...	5— 0	5— 8
ಕೊಬ್ಬರಿ ಖಂಡಿ ೧ಕ್ಕೆ ...	85— 0	95— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ ...	39— 0	40— 0
ಎಣ್ಣೆ ಖಂಡಿ ೧ಕ್ಕೆ ...	50— 0	52— 8
ಕೊಬ್ಬರಿ ಎಣ್ಣೆ ಮಣ ೧ಕ್ಕೆ ...	7— 2	8— 2
ಎಳ್ಳೆಣ್ಣೆ ಮಣ ೧ಕ್ಕೆ ...	8—12	9— 0
[illegible] ೧ಕ್ಕೆ ...	9— 0	—
[illegible] ಸಕ್ಕರೆ ಮಣ ೧ಕ್ಕೆ ...	6— 8	6—12
[illegible] ಮಣ ೧ಕ್ಕೆ ...	8— 6	8— 8
ಸಾಸಿವೆ ಮುಡಿ ೧ಕ್ಕೆ ...	8— 4	8— 8
ಕೊತ್ತಂಬರಿ ಮುಡಿ ೧ಕ್ಕೆ ...	5— 4	5—12
ಕಾಫಿ ಖಂಡಿ ೧ಕ್ಕೆ ...	340— 0	345— 0
ಅಡಿಕೆ [illegible] ಖಂಡಿ ೧ಕ್ಕೆ [illegible] ...	160— 0	170— 0
ಅಡಿಕೆ New, [illegible] ...	130— 0	135— 0
[illegible] ಖಂಡಿ ೧ಕ್ಕೆ ...	120— 0	125— 0
[illegible] ಮಣ ೧ಕ್ಕೆ ...	26— 0	28— 0
[illegible] ಮುಡಿ ೧ಕ್ಕೆ ...	2— 6	2— 8
[illegible] ಖಂಡಿ ೧ಕ್ಕೆ ...	60— 0	65— 0
[illegible] ಮಣ ೧ಕ್ಕೆ ...	23—12	24— 0
[illegible] ಮಣ ೧ಕ್ಕೆ ...	36— 0	—
[illegible] ೧ಕ್ಕೆ ...	24— 0	—
[illegible] 1ಕ್ಕೆ ...	23— 0	—

ರಾಷ್ಟ್ರೀಯ ಹೊಸ ಪುಸ್ತಕಗಳು

ದೇಶೋನ್ನತಿ ಗ್ರಂಥಮಾಲಾ

ಸಂಖ್ಯೆ ೧ ಮಹಾತ್ಮಾ ಗಾಂಧಿಯವರ ಹಿಂದೀಸ್ವರಾಜ್ಯ ಕನ್ನಡ ೦-೮-೦ ೨ನೇ ಆವೃತ್ತಿ ಅಚ್ಚಿನಲ್ಲಿದೆ. ೨ ದೀನಬಂಧು ಸಿ. ಯಫ್. ಅಂಡ್ರ್ಯೂಸರವರ ಆಸಹಕಾರ ಪತ್ರಗಳು ೦-೬-೦ ೩ ಹಿಂದೀ ಭಾಷಾಸಾರ. ಹಿಂದೀಭಾಷೆ ಕಲಿಯಲು ೧ನೇ ಪಾಠ ಪುಸ್ತಕ ೪ ರಾಷ್ಟ್ರೀಯಕರ್ಮ ಅಥವಾ ದೇಶಭಕ್ತರ ಸೂಕ್ತಿಮಾಲೆ ೦-೩-೦ ದೇಶಭಕ್ತ ಅಲೀಸಹೋದರರ ಚರಿತ್ರೆ ೦-೨-೦ ಮ ಗಾಂಧೀಚರಿತ್ರೆ ೦-೫-೦ ದಿ ಚಿಕ್ಕದು ೦-೨-೦

ರಾಷ್ಟ್ರೀಯ ಪದ್ಯ ಪುಸ್ತಕಗಳು — ತಿಲಕ ಕಾವ್ಯಾಂಜಲಿ ೦-೪-೦ ಗಾಂಧಿ ವಿಜಯ ೦-೨-೦ ರಾಷ್ಟ್ರೀಯ ಗೀತಾವಳಿ ೦-೮-೦ ಸ್ವರಾಜ್ಯಸಂಪತ್ತು ೦-೦-೩ ಇವುಗಳಲ್ಲದೆ ಇನ್ನೂ ಅನೇಕ ತರದ ಪುಸ್ತಕಗಳು ವಿಕ್ರಿತಕ್ಕೆ ಸಿದ್ಧವಿರುವವು ವಿ. ಪಿ. ಯಿಂದ ಅಪೇಕ್ಷಿಸುವವರು ನಾಲ್ಕಾಣೆ ಸ್ಟಾಂಪು ಮುಂಗಡವಾಗಿ ಕಳುಹಿಸಿದ್ದಲ್ಲಿ ಬಾಂದ ಐವಜಿಗೆ ವಿ. ಪಿ. ಮಾಡಲಾಗುವುದು. ಎಂಟಾಣೆಗಿಂತ ಕಡಿಮೆ ಕ್ರಯದ ಪುಸ್ತಕಗಳು ವಿ. ಪಿ.ಯಿಂದ ಕಳುಹಿಸಲಾರೆವು.

ವಿಳಾಸ— ಕೆ. ಯಸ್. ದಾಸಪ್ರಭು ಅಂಡ್ ಸನ್ಸ್,
ರಥಬೀದಿ, ಮಂಗಳೂರು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" ದೇವರಲ್ಲಿ" ಎಂಬ ಆಂಗ್ಲ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್–ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು.

ಬೆಲೆ: ೮ ಆಣೆ.

ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟು ಕೋರ್ಟಿನಲ್ಲಿ
O. P. ನಂಬ್ರ 79/1922.

1. ಸುಬ್ರಾಯ, 2. ಭಾಸ್ಕರ, ಮೈನರರು ಗಾರ್ಡಿಯನ ಲಕ್ಷ್ಮೀನಾರಾಯಣ ಭಟ್ಟಾ } ಅರ್ಜಿದಾರರು.
ಮತ್ತು
ಗೋವಿಂದ ಭಟ್ಟಾ ರಿಸ್ಪೊಂಡೆಂಟ್.

ಸದರಿ ಅರ್ಜಿದಾರರು ಮೃತಪಟ್ಟ ಮಹಾದೇವ ಭಟ್ಟನ ಸಾಲಗಳನ್ನು ವಸೂಲುಮಾಡುವ ಬಗ್ಗೆ ಸಕ್ಸೇಶನ ಸರ್ಟಿಫಿಕೇಟು ಕೊಡಿಸಬೇಕಾಗಿ ಅಪೇಕ್ಷಿಸಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿಕೊಟ್ಟಿರುತ್ತಾರೆ. ಸದರಿ ಅರ್ಜಿಯು ತನಿಖೆ ಬಗ್ಗೆ ತಾ. ೧—೯—೧೯೨೨ಕ್ಕೆ ಇಟ್ಟಿದೆ. ಈ ಕುರಿತು ಆಕ್ಷೇಪಣೆವುಳ್ಳವರು ಮೇಲಿನ ತಾರೀಕಿನ ಒಳಗೆ ಜಾಹೀರು ಮಾಡತಕ್ಕದ್ದು.

MANGALORE }
8—8—1922. }
G. Somasheker Rao,
Vakil for Petitioner.

ಪ್ರಕಟಣೆ.

ಉಡುಪಿ ಕಸಬಾ ತೆಂಕ ಪೇಟೆಯಲ್ಲಿರುತ್ತಿದ್ದ ಫಿಟೇಲ್ ಪರ್ವತಿ ಸೇರಿಗಾರನ ಮಗ ವಾಲಗದ ಚಂದಯ್ಯ ಸೇರಿಗಾರನು ತಾರೀಕು ೨೪—೬—೧೯೨೨ನೇ ದಿವಸ ರಾತ್ರಿ ಮಂಗಳೂರಲ್ಲಿ ಅಕಸ್ಮಾತ್ತಾಗಿ ಮೃತವಾಗಿರುತ್ತಾನೆ. ಆತನ ಬಾಬ್ತು ಪೂರಾ ಸ್ಥಿರಚರ ಸೊತ್ತುಗಳಿಗೆ ಆತನು ಮೃತವಾಗುವ ಮೊದಲು ಜ್ಯಾದರೆಯಿಂದ ಗೃಹಸ್ಥರ ಸಮಕ್ಷಮ ಹೇಳಿದ ವಾಗ್ದಾನ ಪ್ರಕಾರವೂ ವ ಕೂಡಲೆ ಬರಸಿಟ್ಟಿರುವ ಬಾಬ್ತು ಉಡುಪಿ ಡಿ. ಮುನ್ಸಿಫ ಕೋರ್ಟ ಸ್ಮಾಲ ನಂಬ್ರ $\frac{208}{1922}$ರಲ್ಲಿ ದಾಖಲುಮಾಡಿದ ವೀಲ್‌ನಾಮೆಯ ಪ್ರಕಾರವೂ ಆತನ ಹೆಂಡತಿ ಕಾವೇರಿ ಹೆಂಗಸು ವ ಅವಳ ಮಕ್ಕಳು ಸಂಪೂರ್ಣ ಹಕ್ಕುದಾರರಾಗಿರುತ್ತಾರೆ. ಈಗ ಸದರಿ ಚಂದಯ್ಯ ಸೇರಿಗಾರನ ಕುಟುಂಬದವರು ತಾವು ಹಕ್ಕುದಾರರೆಂತ ಸದರಿ ಸೊತ್ತುಗಳನ್ನು ಮಾರಾಟ ಮಾಡುವ ಇರಾದೆಯಲ್ಲಿರುತ್ತಾರೆ. ಅವರಿಗೆ ಸದರಿ ಚಂದಯ್ಯ ಸೇರಿಗಾರನ ಬಾಬ್ತು ಸ್ಥಿರಚರ ಸೊತ್ತುಗಳಲ್ಲಿ ಏನೂ ಹಕ್ಕಿರುವುದಿಲ್ಲ.

ಆದುದರಿಂದ ಚಂದಯ್ಯ ಶೇರಿಗಾರನ ಕುಟುಂಬದವರಿಂದ ಯಾರಾದರೂ ಚಂದಯ್ಯ ಶೇರಿಗಾರನ ಸ್ಥಿರಚರ ಸೊತ್ತುಗಳನ್ನು ತೆಗೆದುಕೊಂಡರೆ ಅದಕ್ಕೆ ಆತನ ಹೆಂಡತಿ ಕಾವೇರಿ ಹೆಂಗಸು ವ ಅವಳ ಮಕ್ಕಳು ಬದ್ಧರಲ್ಲ ಎಂಬ ಸಂಗತಿ ಸರ್ವಜನರಿಗೂ ತಿಳಿಸಿರುತ್ತೇನೆ.

ಸದರಿ ಚಂದಯ್ಯ ಶೇರಿಗಾರನ ಹೆಂಡತಿ,
ಕಾವೇರಿ ಹೆಂಗಸು — ಉಡುಪಿ.

ಈ ||| ಗೆರೆ ಸದರಿ ಕಾವೇರಿ ಹೆಂಗಸಿನ ರುಜು.

NOTICE.

Memo of numbers and Value of Currency Notes Stolen after 19th June & before 17th July '22.

ಕಳೆದ ಜೂನು ತಾ. 19ರ ನಂತರ ಮತ್ತು ಜುಲಾಯಿ 17ರ ಮೊದಲು ಕಳವಾದ ಕರೆನ್ಸಿ ನೋಟುಗಳ ಮೊಬಲಗು ಮತ್ತು ಮೆಮೊ ನಂಬರುಗಳು.

No.		Rs.	No.	B.over	Rs. 2100	No.	B.over	Rs. 4100
SD/20	58431	100	ZC/94	84953	100	ZC/80	79799	50
,, ,,	58432	100	CD/15	72644	100	,, /82	17680	50
,, ,,	58433	100	DO/69	78247	100	,, ,,	09585	50
,, ,,	58434	100	SD/12	99557	100	,, /86	59272	50
,, ,,	58435	100	../19	21846	100	,, /89	05865	50
,, ,,	58436	100	../22	29131	100	Small Notes	6 X 10	60
,, ,,	58437	100	../23	10982	100	,, ,,	14 X 5	70
,, ,,	58438	100	BE/35	79686	100	,, ,,	1	2/8
,, ,,	58439	100	CD/20	53027	100	,, ,,	1 X 4	4
,, ,,	58440	100	JD/50	51182	100	Total Rs.		4486/8
,, ,,	58441	100	../51	58129	100			
,, ,,	58442	100	../53	78295	100			
,, ,,	58443	100	FD/7	69738	100			
,, ,,	58444	100	BE/29	39728	100			
,, ,,	58445	100	DO/90	37135	100			
,, ,,	58446	100	,, ,,	37136	100			
,, ,,	58447	100	,, ,,	37138	100			
,, ,,	58448	100	,, ,,	95406	100			
,, ,,	58449	100	,, ,,	95407	100			
,, ,,	58450	100	JD/39	82074	100			
PO/1	76397	100						
C.Over		2100		C.over	4100			

ಈ ನೋಟುಗಳು ತಲಾಸಿಯಾಗುವಂತಹ ತಕ್ಕ ಸಮಾಚಾರ (Information) ಕೊಡುವವರಿಗೆ ಕೆಳಗೆ ದಸ್ಕತು ಹಾಕಿಸಿದವರು ಯೋಗ್ಯಬಹುಮಾನವನ್ನು ಕೊಡುವರು.

ಸಿ. ಹಂಗರ್ ಪೋರ್ಡ್ ಮೋರ್ಗನ್.

|| ಓಂ ||

(ಸೂಕ್ತಿಮಾಲೆ)

೧. ಪರಮಾರ್ಥಜ್ಞಾನ.

ಬರಿದೆ ಇಹಲೋಕವನೆ ನೆಚ್ಚಿ ಕೆಡಬೇಡಾ ।
ಪರಮ ಪರಮಾರ್ಥ ಸುಜ್ಞಾನವನು ಘಳಿಸೈ । || ಪಲ್ಲ ||

ಧರಿಸಿಕೊಳ್ಳುವ ಧೋತರವು ನಿನ್ನಾದರೇಂ!—।
ಅರಿಯೆ ನೀ ಧೋತರವದಲ್ಲವದರಂತೆ ||
ನರನೆ ನಿನ್ನಾ ದೇಹ ನಿನ್ನದಾದರು,—ನೀನೆ ।
ಮೆರೆವ ದೇಹವದಲ್ಲವೆಂಬುದನು ತಿಳಿಯೈ! || ೧ ||

ಜನನಮರಣಗಳು ಸಲೆ ರೋಗರುಜೆಗಳು ನಿನ್ನ ।
ತನುವಿಗಲ್ಲದೆ ನೋಡೆ ನಿನಗಲ್ಲ ದಿಟದಿ ||
ತನು ಬೇರೆ, ನೀ ಬೇರೆಯೆಂಬುವೀ ತತ್ವವನು ।
ಮನದೊಳಗೆ ತಿಳಿದು, ಸತ್ಯಾಂಶವನ್ನರಸೈ! || ೨ ||

ನಿನ್ನೊಳಿಹ ಆತ್ಮನೇ ನೀನು!—ಪರಮಾತ್ಮನಾ ।
ಭಿನ್ನರೂಪನು, ನಾಶರಹಿತ, ಬಲಯುತನು!! ||
ಮುನ್ನ ನೀನಿದನರಿತು, ಹುಲು ಸುಖವನಿಚ್ಛಿಸದೆ ।
ಚೆನ್ನ ಲಕ್ಷ್ಮಣವಿನುತ ಶ್ರೀ ಹರಿಯ ನುತಿಸೈ! || ೩ ||

ಲ. ಪೈ.

ಚಂದಾದಾರರಿಗೆ ವಿನಂತಿ.

ಚಂದಾದಾರರು ಈ ಪತ್ರದ ಆಫೀಸಿಗೆ ಪತ್ರಗಳನ್ನು ಬರಿಯುವಾಗ ತಮ್ಮ ವಿಳಾಸದ ಪಕ್ಕದಲ್ಲಿರುವ ರಿಜಿಸ್ಟರ್ ನಂಬರನ್ನು ಕೊಡತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ
ಮಂಗಳೂರು.

ಉಡುಪಿ ತಾಲೂಕಿನ ನೂಲುವ ಪಂದ್ಯಾಟ.

ತಾ. ೨—೧೦—'೨೨ನೇ ದಿನ ಮಹಾತ್ಮಾ ಗಾಂಧಿಯವರ ಜನ್ಮ ದಿನದ ಸ್ಮರಣಾರ್ಥವಾಗಿ ಉಡುಪಿ ತಾಲೂಕು ಕೊಂಗ್ರೆಸ್ ಕಮಿಟಿಯವರು ಉಡುಪಿ ರಾಷ್ಟ್ರೀಯ ವಿದ್ಯಾಮಂದಿರದಲ್ಲಿ ನಡಿಸುವ ನೂಲುವ ಪಂದ್ಯಾಟದ ಕ್ರಮಗಳು:—

೧. ಈ ಪಂದ್ಯಾಟಕ್ಕೆ ಉಡುಪಿ ತಾಲೂಕಿನವರು ಯಾರೂ ಉಮೇದ್ವಾರರಾಗಬಹುದು.

೨. ಈ ಪಂದ್ಯಾಟಕ್ಕೆ ಉಮೇದ್ವಾರರಾಗುವವರು ನಾಲ್ಕಾಣೆ ಪ್ರವೇಶ ಫೀಯೊಂದಿಗೆ ತಮ್ಮ ಅರ್ಜಿಯನ್ನು ತಾ. ೨೨—೯—'೨೨ರೊಳಗೆ ತಾಲೂಕು ಕೊಂಗ್ರೆಸ್ ಕಮಿಟಿಯವರಿಗೆ ತಲುಪುವಂತೆ ಕಳುಹಿಸತಕ್ಕದ್ದು.

೩. ಉಮೇದ್ವಾರರು ತಂತಮ್ಮ ಚರಕ, ಬಿಲ್ಲು, ಸ್ಪಿಂಡಲ್ ಮುಂತಾದ ಸಾಹಿತ್ಯಗಳನ್ನು ತರಬಹುದು. ಪಂದ್ಯಾಟ ಕಮಿಟಿಯವರು ಒದಗಿಸಿಕೊಡಬೇಕಿದ್ದರೆ ಅರ್ಜಿಗಳಲ್ಲಿ ಸೂಚಿಸತಕ್ಕದ್ದು.

೪. ಪಂದ್ಯಾಟವು ಬೆಳಿಗ್ಗೆ ೯ರಿಂದ ೧೨ರ ವರೆಗೂ, ವ ಧ್ಯಾಹ್ನ ೨ರಿಂದ ೪ರ ವರೆಗೂ ನಡೆಯುವುದು.

೫. ಬೀಜ ತೆಗೆದ ಹತ್ತಿಯನ್ನು ಕೊಡಲಾಗುವುದು. ಉಮೇದ್ವಾರರು ಅದನ್ನು ಹಿಂಜಿ ಬತ್ತಿಮಾಡಿ ನೂಲತಕ್ಕದ್ದು.

೬. ನೂಲಿನ ಉದ್ದ, ಸಮತೆ, ಹುರಿ, ನಂಬ್ರಗಳ ಮೇಲೆ ಯೋಗ್ಯತೆಯನ್ನು ನಿಶ್ಚಯಿಸಿ ಬಹುಮಾನಗಳನ್ನು ಕೊಡಲಾಗುವುದು.

೭. ಮೊದಲನೆಯ ಮತ್ತು ಎರಡನೆಯ ಸ್ಥಾನವನ್ನು ಹೊಂದುವವರಿಗೆ ಬಂಗಾರದ ಮತ್ತು ಬೆಳ್ಳಿಯ ಪದಕಗಳನ್ನು ಕೊಡಲಾಗುವುದು.

[ಹೆಚ್ಚಿಗೆ ಮಾಹಿತಿಗೆ ತಾಲೂಕು ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಿಗೆ ಬರೆಕೊಳ್ಳತಕ್ಕದ್ದು].

ಕೊ. ಗೋವಿಂದ ಪೈ,
ಕಾರ್ಯದರ್ಶಿ, ತಾಲೂಕು ಕಾಂಗ್ರೆಸ್ ಕಮಿಟಿ, ಉಡುಪಿ.

ದೇಶಬಂಧು ಚಿತ್ತರಂಜನ ದಾಸರು.

ದೇಶಬಂಧು ಚಿತ್ತರಂಜನದಾಸರು ಸ್ವಯಂಸೇವಕರ ದಳವನ್ನು ಕೂಡಿಸಿ, ಅದರ ನಾಯಕರಾಗಿ ಕೆಲಸಮಾಡುತ್ತಿರುವುದು ಸರಕಾರಕ್ಕೆ ವಿರೋಧವಾದ ಕಾರ್ಯವೆಂದು ಸೂಚಿಸಿ ಇವರನ್ನು ಕ್ರಿಮಿನಲ್ ಲೋ ಎಮೆಂಡಮೆಂಟ್ ಎಕ್ಟ ಸೆಕ್ಷನ್ ೧೭ ಬಿ. ಯನ್ನು ಅನುಸರಿಸಿ ಸರಕಾರದವರು ಕಳೆದ ಡಿಸೆಂಬರ ತಾ. ೧೦ರಲ್ಲಿ ಸೆರೆಹಿಡಿದರು. ಅನಂತರ ಫೆಬ್ರುವರಿ ತಾ. ೧೪ರಲ್ಲಿ ಇವರಿಗೆ ೬ ತಿಂಗಳ ಸಾದಾ ಶಿಕ್ಷೆಯು ವಿಧಿಸಲಾಗಿ, ಇವರು ಆ ಶಿಕ್ಷೆಯನ್ನು ಅನುಭವಿಸಿ ಕಳೆದ ತಾರೀಕು ೯ರಲ್ಲು ಬಂಧನದಿಂದ ಬಿಡುಗಡೆಹೊಂದಿದರು. ಇವರು ದೇಹದಲ್ಲಿ ಸ್ವಲ್ಪ ಕೃಶರಾಗಿದ್ದಾರೆ. ಮತ್ತು ಗಡ್ಡವನ್ನು ಬೆಳೆಸಿರುವರು. ಇವರು ಈಗ ಕಲ್ಕತ್ತೆಯಲ್ಲಿ ಇರುವರು. ಇವರನ್ನು ಕಾಣಲು ಜನರು ಗುಂಪುಗುಂಪಾಗಿ ಇವರ ಗೃಹಕ್ಕೆ ಬರುತ್ತಿದ್ದಾರೆ. ಜೈಲಿನಲ್ಲಿ ತನ್ನನ್ನು ಯೋಗ್ಯರೀತಿಯಲ್ಲಿ ನಡಿಸಿದ್ದಾರೆ ಎಂದು ಇವರು ತಿಳಿಸಿರುವರು. ಅಲ್ಲದೆ ಉದರನಿಮಿತ್ತವಾಗಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದವರನ್ನು ತಾನು ಯಾವ ರೀತಿಯಲ್ಲೂ ದೂಷಿಸುವುದಿಲ್ಲವೆಂದು ಇವರು ಹೇಳುವರು. ತಾನು ಇಷ್ಟರ ವರೆಗೆ ಜೈಲಿನಲ್ಲಿರುವುದರಿಂದ ದೇಶದ ಪರಿಸ್ಥಿತಿಯನ್ನು ಪ್ರತ್ಯಕ್ಷ ತಿಳಿಯುವ ವರೆಗೆ ಮುಂದಿನ ಕಾರ್ಯಕ್ರಮದ ಕುರಿತು ತನಗೆ ಸದ್ಯಕ್ಕೆ ಯಾವ ತರದ ಅಭಿಪ್ರಾಯವನ್ನೂ ಕೊಡಲು ಅನಾನುಕೂಲವಾಗಿದೆಯೆಂದು ತಿಳಿಸಿರುವರು. ತಾನು ಪುನಃ ವಕೀಲವೃತ್ತಿಯನ್ನು ಈಗ ಪ್ರಾರಂಭಿಸಲಿಕ್ಕಿದ್ದೇನೆಂಬುದು ಅಸತ್ಯವಾಗಿದೆಯೆಂದು ಸ್ಪಷ್ಟವಾಗಿ ಹೇಳಿರುವರು.

ದೇಶಬಂಧು ಚಿತ್ತರಂಜನ ದಾಸರಿಗೆ ಕಲ್ಕತ್ತಾ ನಗರದ ನಿವಾಸಿಗಳು ಸ್ವಾಗತ ಸನ್ಮಾನವನ್ನು ಮಾಡುವ ಸಮಾರಂಭವು ಕಳೆದ ತಾರೀಕು ೧೨ರಲ್ಲಿ ನಡೆಯಿತು. ಈ ಸಮಾರಂಭಕ್ಕಾಗಿ ಸಾರ್ವಜನಿಕ ಸಭೆಯು ಕೂಡಿತು. ಈ ಸಭೆಗೆ ಅನೇಕ ಮಂದಿ ಶಾಂತಪಕ್ಷದ ಗೃಹಸ್ಥರು ಸಹ ಸೇರಿದ್ದರು. ಚಿತ್ತರಂಜನರು ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿಯ ಮೆಂಬರರಾದ ಪಂಡಿತ ಮೋತಿಲಾಲನೇಹರು ಮೊದಲಾದವರೊಡನೆ ಸಭೆಗೆ ಬಂದ ನಂತರ ದೇಶ ಬಂಧುಗಳಿಗೆ ಸ್ವಾಗತ ಪತ್ರವನ್ನು ಕೊಡುವ ಕಾರ್ಯವು ನಡೆಯಿತು. ಕಲ್ಕತ್ತೆಯ ಕೊರಪೊರೇಶನಿನ ಹಂಗಾಮಿ ಪ್ರೆಸಿಡೆಂಟರಾದ ಮಿ| ಮಲ್ಲಿಕರು ಇವರಿಗೆ ಬಂಗಾಳಿ ಭಾಷೆಯಲ್ಲಿ ಖಾದಿ ಬಟ್ಟೆಯ ಮೇಲೆ ಛಾಪಿಸಿದ ಮಾನಪತ್ರವನ್ನು ಒಪ್ಪಿಸಿ ಅವರ ಗುಣಕಥನವನ್ನು ಮಾಡಿದರು. "ಚಿತ್ತರಂಜನರ ರಾಜಕೀಯ ಕಾರ್ಯದ ಕುರಿತು ನಾನು ಅವರನ್ನು ಹೆಚ್ಚಾಗಿ ತಿಳಕೊಳ್ಳಲಿಲ್ಲವಾದರೂ ಅವರು ಒಬ್ಬ ಅಸಾಧಾರಣ ಪುರುಷರೆನ್ನುವುದರಲ್ಲಿ ಅನುಮಾನವಿಲ್ಲವೆಂದು ನಾನು ಮನಗಂಡಿದ್ದೇನೆ. ಇವರು ಜೈಲಿಗೆ ಹೋಗಿ ಈಗ ಜೈಲುಗಳನ್ನು ದೇವಸ್ಥಾನಗಳಿಗಿಂತಲೂ ಹೆಚ್ಚಿನ ಪವಿತ್ರವಾಗಿ ಮಾಡಿದರು. ಇವರ ಮಾರ್ಗವನ್ನು ಅನುಸರಿಸಿ ಅನೇಕರು ತುರಂಗವಾಸಕ್ಕೆ ತೆರಳಿದರು" ಎಂದು ಇವರ ದೇಶಸೇವೆಯ ಪ್ರಶಂಸೆಯನ್ನು ಮಾಡಿದರು. ಅನಂತರ ಎರಡನೆಯವರ ದುಡ್ಡನ್ನು ಮುಳುಗಿಸಲು ಇವರಿಗೆ ಇಷ್ಟವಿಲ್ಲದೆ ಇವರು ತನ್ನ ತಂದೆಯು (ಇವರ ತಂದೆಯವರು ದಿವಾಳಿ ಅರ್ಜಿಯನ್ನು ಕೊಟ್ಟಿದ್ದರು) ಮಾಡಿದ ಸಾಲವನ್ನು ತೀರಿಸಲೇಬೇಕೆಂಬ ನಿರ್ಬಂಧವಿಲ್ಲದಿದ್ದರೂ ಇವರು ತನ್ನ ತಂದೆಯನ್ನು ಋಣದಿಂದ ಮುಕ್ತಮಾಡಲು ಸಾಲವನ್ನು ತೀರಿಸಿದ ದೃಷ್ಟಾಂತವನ್ನು ಹೇಳಿದರು. (ಚಿತ್ತರಂಜನರು ನಿರುಪಾಯರಾಗಿ ತಂದೆಯೊಡನೆ ದಿವಾಳಿ ಕೋರ್ಟಿನ ಆಶ್ರಯವನ್ನು ಹೊಂದಿದ್ದರು. ಆದರೆ ದಿವಾಳಿ ತೆಗೆದ ಮನುಷ್ಯನು ತನ್ನ ಯಾವತ್ತೂ ಸಾಲವನ್ನು ಒಪ್ಪಿಕೊಂಡು ಒಂದು ಪೈ ಸಹ ಬಿಡದೆ ತೀರಿಸಿದ ದೃಷ್ಟಾಂತವು ಜಗತ್ತಿನ ಇತಿಹಾಸದಲ್ಲಿ ಚಿತ್ತರಂಜನರದು ಮೊದಲನೆಯದು.) ಕೊನೆಗೆ ಮಿ. ಮಲ್ಲಿಕರು ಚಿತ್ತರಂಜನರ ದೃಢಸಂಕಲ್ಪದ ಕುರಿತು ಇವರು ತನ್ನ ಮಗನನ್ನೂ ಜೈಲಿಗೆ ತೆಗೆದುಕೊಂಡು ಹೋದರೂ ಸಹಧರ್ಮಿಣಿಯನ್ನು ಕೈದುಮಾಡಿದರೂ ಸ್ವತಃ ತನ್ನನ್ನು ಕೈದುಮಾಡುವರೆಂಬ ಸಂಗತಿಯನ್ನು ಮುಂದಾಗಿ ತಿಳಿದಿದ್ದರೂ ಸ್ವಲ್ಪವೂ ಎದೆಗುಂದದೆ ತುರಂಗವಾಸಕ್ಕೆ ತೆರಳಿ, ಇತರರು ತುರಂಗವಾಸಕ್ಕೆ ಅಸಂಖ್ಯಾಕರಾಗಿ ಹೆದರಿಕೆಯಿಲ್ಲದೆ ಹೋಗಲು ಆದರ್ಶ ಪ್ರಾಯರಾದ ಸಂಗತಿಯನ್ನು ವಿವರಿಸಿದರು. ಆ ಮೇಲೆ ಪಂಡಿತ ಮೋತಿಲಾಲನೇಹರು ಶ್ರೀಯುತ ಕಸ್ತೂರಿ ರಂಗ ಅಯ್ಯಂಗರ ಮತ್ತು ಶ್ರೀಯುತ ರಾಜಗೋಪಾಲಾಚಾರ್ಯ ಇವರು ಸಹ ಚಿತ್ತರಂಜನರ ದೇಶಸೇವೆಯನ್ನು ಕೊಂಡಾಡಿ ಭಾಷಣ ಮಾಡಿದರು. ಚಿತ್ತರಂಜನರು ಸ್ವಾಗತ ಪತ್ರಕ್ಕೆ ಉತ್ತರ ಕೊಡುವಾಗ "ನನಗೆ ಯುರೋಪಿಯನರಲ್ಲಿ ದ್ವೇಷವಿಲ್ಲ. ಇವರು ತಮ್ಮ ಸ್ವಕೀಯ ನಾಗರಿಕತೆಯನ್ನೂ ವಿದ್ಯೆಯನ್ನೂ ಅನುಸರಿಸಲಿ. ಪರಂತು ಅವರು ಹಿಂದೂದೇಶಕ್ಕೆ ತನ್ನ ಸ್ವಂತ ಮಾರ್ಗವನ್ನು ಅನುಸರಿಸಿ ತನ್ನ ನಾಗರಿಕತೆಯನ್ನೂ ವಿದ್ಯೆಯನ್ನೂ ಕಲಿಯಲು ಬಿಡಬೇಕು. ಹೀಗೆ ಮಾಡಲು ಬಿಡುವುದರಿಂದಲೇ ಹಿಂದುಸ್ಥಾನದ ಅಭಿವೃದ್ಧಿಗೆ ಸಹಾಯಕವಾಗುವುದೆಂದು ನುಡಿದರು.

ವಿದೇಶ ವರ್ತಮಾನ.

ನ್ಯೂಯಾರ್ಕ:—ಈ ಪಟ್ಟಣದಲ್ಲಿ ಮಾರ್ಗದಲ್ಲಿನ ದೂಳನ್ನು ತೆಗಿಯಲು ವೇಕುವಮ್ ಕ್ಲೀನರ್ ಎಂಬ ಯಂತ್ರಗಳು ತಯಾರಾಗುತ್ತವೆಯಂತೆ.

ಅಮೇರಿಕ:—ರೈಲ್ವೆಕಾಮಗಾರರ ಮುಷ್ಕರವು ಇನ್ನೂ ಶಾಂತವಾಗಲಿಲ್ಲ.

ಇಂಗ್ಲೆಂಡ್:—ಹೆಸರುಗೊಂಡ ಪತ್ರಕರ್ತರಾದ ಲೋರ್ಡ ನೋರ್ತಕ್ಲೀಪರೆಂಬವರು ಕಳೆದ ತಾ. ೧೪ಕ್ಕೆ ಕಾಲವಾದರು.

ಜರ್ಮನಿ:—ಈ ದೇಶದ ಅನೇಕ ಕಡೆಗಳಲ್ಲಿ ಬೇಸಾಯದ ಕೆಲಸದವರು ತಮ್ಮ ಕೂಲಿಯ ದರವನ್ನು ಹೆಚ್ಚಿಸಬೇಕಾಗಿ ಸೂಚಿಸಿ ಮುಷ್ಕರ ಹಿಡಿದಿರುವರು.

ನಾಮದಾರ ಶ್ರೀನಿವಾಸ ಶಾಸ್ತ್ರಿಯವರು:—ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ಆಸ್ಟ್ರೇಲಿಯಕ್ಕೆ ಹೋಗಿದ್ದಾಗ ಅಲ್ಲಿನ ಮೆಲ್‌ಬೋರನ್ ನಗರವಾಸಿಯಾದ ಮಿ| ರಹಿಂಬಕ್ಷರವರು ೧೧೦ ಪೌಂಡುಗಳನ್ನು ಧರ್ಮಕ್ಕಾಗಿ ಶಾಸ್ತ್ರಿಯವರ ಮುಂದಿಟ್ಟರು. ಶಾಸ್ತ್ರಿಯವರು ಈ ಹಣವನ್ನು ಮಲಬಾರ ದಂಗೆಯ ಸಂಕಷ್ಟದಿಂದ ಬಳಲುತ್ತಿರುವವರ ಸಹಾಯಕ್ಕಾಗಿ ಕಳುಹಿಸಿರುವರು.

ಎಕ್ಸ್‌ಚೆಂಜ್ ಪರಿಣಾಮ:—ಜರ್ಮನ್‌ಮಾರ್ಕ್ ನಾಣ್ಯವು ಶೋಚನೀಯಾವಸ್ಥೆಗೆ ಬಂದಿರುತ್ತದೆ. ಯುದ್ಧಕ್ಕೆ ಹಿಂದೆ ಇಂಗ್ಲೀಷ್ ನಾಣ್ಯವಾದ ಪೌಂಡು ೧ಕ್ಕೆ ೧೦ ಮಾರ್ಕುಗಳನ್ನು ಕೊಟ್ಟರೆ ಸಾಕಾಗಿದ್ದಿತು. ಜುಲೈ ೨೯ನೇ ತಾರೀಕಿಗೆ ಆಖೈರಾದ ವಾರದಲ್ಲಿ ಪೌಂಡು ೧ಕ್ಕೆ ೩೪೭೦ ಮಾರ್ಕುಗಳನ್ನು ಕೊಡಬೇಕಾಗಿದ್ದಿತು. ಅಗಸ್ಟ್ ೫ರಲ್ಲಿ ಪೌಂಡು ೧ಕ್ಕೆ ಬೆಲೆಯು ೩೭೬೦ ಮಾರ್ಕುಗಳಾಯಿತು. ಹೀಗೆ ಜರ್ಮನರು ಇಂಗ್ಲೆಂಡಿನಲ್ಲಿ ಸರಕುಗಳನ್ನು ತೆಕ್ಕೊಳ್ಳುವುದು ತೀರ ಕಷ್ಟವಾಗಿ, ವಿಲಾಯತಿಯ ವ್ಯಾಪಾರಿಗಳಲ್ಲಿ ಸರಕುಗಳು ತುಂಬಿಹೋಗಿರುತ್ತವೆ. ಮತ್ತು ಎಷ್ಟೋ ಮಂದಿ ಜರ್ಮನ್ ವ್ಯಾಪಾರಿಗಳು ತಾವು ಹಿಂದೆ ಕಳುಹಿಸಿದ ಆರ್ಡರುಗಳನ್ನು ರದ್ದುಮಾಡುತ್ತಾ ಇರುವರು.

ಮಿ| ಮೊಂಟೆಗ್ಯುರು:—ಭರತ ಖಂಡದ ಸೆಕ್ರೆಟರಿಗಳಾಗಿದ್ದ ಮಿ| ಮೊಂಟೆಗ್ಯು ದೊರೆಗಳವರು ಬರುವ ಒಕ್ಟೋಬರದಲ್ಲಿ ಇಂಗ್ಲೆಂಡಿನಿಂದ ಹಿಂದೂಸ್ಥಾನಕ್ಕೆ ಹೊರಟು ಬರಲಿಕ್ಕಿದ್ದಾರೆ.

ಸ್ವಾಟೋದಲ್ಲಿ ಎದ್ದ ತುಫಾನು:—ಇಲ್ಲಿ ಭಯಂಕರವಾದ ತುಫಾನು ಎದ್ದು ಬಹಳ ಅನಾಹುತ ಸಂಭವಿಸಿದೆ.

ರಸ್ಸಿಯಾ:—ಗ್ರೆಂಡ್‌ಡ್ಯೂಕ ಸಿರೆಯಲ್‌ರವರು ತಾನು ರಸ್ಸಿಯದ ಪಟ್ಟಕ್ಕೆ ಹಕ್ಕುದಾರನೆಂದೂ ತನ್ನ ಹಕ್ಕನ್ನು ರಸ್ಸಿಯದ ನೇಶನಲ್ ಕೌನ್ಸಿಲಿನವರು ಮನ್ನಿಸಬೇಕಾಗಿದೆಂದೂ ಜಾಹೀರಪಡಿಸಿದ್ದಾರೆ.

ಲೀಗ್ ಒಫ್ ನೇಶನ್ಸ್:— ಲೀಗ್ ಒಫ್ ನೇಶನ್ಸಿನಲ್ಲಿ ಸರ್ ಶಿವಸ್ವಾಮಿ ಅಯ್ಯರರೂ ಸರ್. ವಿಲಿಯಮ್ ಮೇಯರರೊಡನೆ ಹಿಂದುಸ್ಥಾನದ ಪ್ರತಿನಿಧಿಗಳಾಗಿ ಕೆಲಸಮಾಡಲಿಕ್ಕಿರುವರಂತೆ.

ಒಳದೇಶ ವರ್ತಮಾನ.

ಆಯುರ್ವೇದ:—ಆಯುರ್ವೇದ ಔಷಧಾಲಯವನ್ನು ತೆರಿಯಲು ವಿಶಾಖಪಟ್ಣ ಮುನ್ಸಿಪಾಲಿಟಿಯವರು ತಮ್ಮ ಸಮ್ಮತಿಯನ್ನು ಕೊಟ್ಟಿರುವರು.

ನದಿಯಾಡದ ಮುನ್ಸಿಪಲ್ ಶಾಲೆಗಳು:—ಬರುವ ಸೆಪ್ಟಂಬರ ತಾರೀಕು ೧ರಿಂದ ನದಿಯಾಡ ಮುನ್ಸಿಪಾಲಿಟಿಯೊಳಗಿನ ಪ್ರಾಥಮಿಕ ಶಾಲೆಗಳ ಆಡಳಿತೆಯನ್ನು ಮುನ್ಸಿಪಾಲಿಟಿಗೆ ಬಿಟ್ಟುಕೊಡಬೇಕೆಂದು ಮುಂಬಯಿ ಸರಕಾರದವರು ಠರಾವನ್ನು ಮಾಡಿರುವರು.

ಅಗಸರ ಮುಷ್ಕರ:—ಮದರಾಸ ಆದಿಪತ್ಯದ ಮಧುರಾ ನಗರಿಯ ಮುನ್ಸಿಪಾಲಿಟಿಯವರು ಅಗಸರ ಕತ್ತೆಗಳನ್ನು ಇಡುವುದರ ಲೈಸನ್ಸ ಫೀಸನ್ನು ಹೆಚ್ಚಿಸಿ ಪ್ರೊಫೆಶನ್ ಟೇಕ್ಸ ಎಂಬ ಅಗಸರ ಕಸಬುಗಾರಿಕೆ ತೆರಿಗೆಯನ್ನು ಹೆಚ್ಚಿಸಲಾಗಿ, ನಗರದೊಳಗಿರುವ ಅಗಸರೂ ಅಸ್‌ಪಾಸ್ ಗ್ರಾಮದ ಅಗಸರೂ ಒಂದಾಗಿ ತಮ್ಮ ಕೆಲಸವನ್ನು ಬಿಟ್ಟು ಮುಷ್ಕರ ಹಿಡಿದಿರುವರು.

ಮೈಸೂರು:—ಮಿ| ಬಾಲಪ್ಪನವರು ಯುರೋಪ್ ಖಂಡದ ನಾರ್ವೆ ಮತ್ತು ಸ್ವೀಡನ್ ದೇಶಗಳಲ್ಲಿ ಪಿಂಗಾಣಿಯ ಸಾಮಾನುಗಳನ್ನು ತಯಾರಿಸುವುದರಲ್ಲಿ ತರಬೇತಾಗಿ ಬರುವುದಕ್ಕೆ ವಿದ್ಯಾಇಲಾಖೆಯವರು ವರುಷಕ್ಕೆ ೪೦ ಪೌಂಡನಷ್ಟು ಸ್ಕಾಲರಷಿಪ್ಪನ್ನು ಕೊಡುವಂತೆ ಏರ್ಪಾಡಾಗಿದೆ.

ಕರ್ಣಾಟಕ ನ್ಯೂಸ್‌ಪೇಪರ್ ಸಿಂಡಿಕೇಟಿನ ಮ್ಯಾನೇಜಿಂಗ್ ಡೈರೆಕ್ಟರ್ ಮಿ| ಸಿ. ಪಿ. ಸುಂದರರಾವ್ ಇವರು ಕರ್ಣಾಟಕ ಡೇಲೀನ್ಯೂಸ್ ಎಂಬ ಇಂಗ್ಲಿಷ್ ದೈನಿಕ ಪತ್ರಿಕೆಯನ್ನೂ ಕರ್ಣಾಟಕ ವರ್ತಮಾನವೆಂಬ ಕನ್ನಡ ಪತ್ರಿಕೆಯನ್ನೂ ಬೆಂಗಳೂರಲ್ಲಿ ಪ್ರಕಟಿಸುವುದಕ್ಕೆ ಶ್ರೀಮನ್ಮಹಾರಾಜರವರ ಸರ್ಕಾರದಿಂದ ಅಪ್ಪಣೆಯನ್ನು ಪಡೆದಿರುತ್ತಾರೆ.

ಹಿರಾನಂದ ಕರಮಚಂದ್:—ಹೈದರಾಬಾದಿನ ಹಿಂದೂ ಪತ್ರದ ಏಳನೇ ಸಂಪಾದಕರಾದ ಶ್ರೀಯುತ ಹಿರಾನಂದ ಕರಮಚಂದ ಇವರನ್ನು ಹೈದರಾಬಾದಿನ ಮುನ್ಸಿಪಾಲಿಟಿಯ ಉಪಾಧ್ಯಕ್ಷರು ಮಾಡಿದ ಮಾನನಷ್ಟದ ವ್ಯಾಜ್ಯದ ಕುರಿತು ಕೈದುಮಾಡಲಾಗಿದೆ. ಜಾಮೀನನ್ನು ಕೊಡಲು ಒಪ್ಪದ್ದರಿಂದ ಇವರನ್ನು ಹೈದರಾಬಾದಿನ ಸೆಂಟ್ರಲ್ ಜೈಲಿನಲ್ಲಿಟ್ಟಿದ್ದಾರೆ. ಮೊಕದ್ದಮೆಯ ತನಿಖೆಯು ಇದೇ ತಾರೀಕು ೧೮ರಲ್ಲಿ ನಡಿಯುವುದು.

ಅಹಮ್ಮದಾಬಾದು:—ಕಳೆದ ಸೋಮವಾರ ಸಾಮಾನ್ಯ ರಜೆಯ ದಿನವಾಗಿತ್ತು. ಅಂದು ಗಿರಣಿಗಳಲ್ಲಿ ಕೆಲಸ ಮಾಡುವವರು ತಮ್ಮ ಕೆಲಸಕ್ಕೆ ಹೋಗಲಿಲ್ಲ. ಅದಕ್ಕೆ ಕೆಲಸಗಾರರೇ ರೂ ೨ರಂತೆ ದಂಡವನ್ನು ಕೊಟ್ಟು ಕೆಲಸವನ್ನು ಪ್ರಾರಂಭಿಸಿದರು. ಅಹಮ್ಮದಾಬಾದಿನ ಗಿರಣಿಯ ಕೆಲಸದವರು ತಮ್ಮ ಯಜಮಾನರಿಗೆ ತಲೆಯನ್ನು ಬಗ್ಗಿಸಿದುದು ಇದು ಮೊದಲನೆಯ ದೃಷ್ಟಾಂತವಾಗಿದೆ.

ದಿವಾನ ಬಹದೂರ ಸಿ. ಕರುಣಾಕರ ಮೇನನು:—ಕೆಲವು ವರುಷಗಳ ಹಿಂದೆ ಮದರಾಸಿನ ಇಂಡಿಯನ್ ಪೇಟ್ರಿಯಟ್ ಪತ್ರದ ಸಂಪಾದಕರಾಗಿದ್ದ ಶ್ರೀಯುತ ದಿವಾನ ಬಹದೂರ ಸಿ. ಕರುಣಾಕರ ಮೇನನರು ಕಳೆದ ತಾ. ೧೧ರಲ್ಲಿ ಪ್ರಾತಃಕಾಲ ೪ ಗಂಟೆಗೆ ಚರಪನಂಗಡಿಯಲ್ಲಿ ಕಾಲವಾದರು.

ಶ್ರೀಯುತ ಯನ್. ಸಿ. ಕೇಳಕರರು:—ಇವರು ಇಂಡಿಯನ್ ನೇಶನಲ್ ಕೊಂಗ್ರೆಸ್ಸಿನ ವರ್ಕಿಂಗ್ ಕಮ್ಮಿಟಿಯ ಮೆಂಬರಿಕೆಯ ಪದಕ್ಕೆ ರಾಜಿನಾಮೆಯನ್ನು ಕೊಟ್ಟಿರುವರು.

ಮೌಲಾನಾ ಹಮ್ಮದ್ ಮಕ್‌ತೀಯರ್ ಸಿದ್‌ಕ್:—ಮುಂಬಯಿ ಸಂಸ್ಥಾನದ ಜಮಾತ್‌ಉಲ್ ಉಲೇಮದ ಅಧ್ಯಕ್ಷರಾದ ಮೌಲಾನಾಸಿದಕರು ಧಾರವಾಡ ಜೈಲಿನಲ್ಲಿ ತನಗೆ ಒದಗಿಸುತ್ತಿದ್ದ ಆಹಾರವು ಅಯೋಗ್ಯಕರವಾದ್ದರಿಂದ ಅದನ್ನು ತೆಗೆದುಕೊಳ್ಳಲು ನಿರಾಕರಿಸಿ ಉಪವಾಸವನ್ನು ಹಿಡಿದಿರುವರು. ಕಳೆದ ೧೨ ವರುಷಗಳಿಂದ ಉಬ್ಬಸರೋಗದಿಂದ ಪೀಡಿತರಾದ ಈ ಗೃಹಸ್ಥರಿಗೆ ಜೈಲಿನ ಅಧಿಕಾರಿಗಳು ತಾವು ಕೊಟ್ಟ ಆಹಾರವನ್ನು ಇವರು ಸ್ವೀಕರಿಸದೆ ಇರುವುದಕ್ಕಾಗಿ ಇವರ ಕಾಲುಗಳಿಗೆ ೨೪ ತಾಸುಗಳವರೆಗೆ ಬೇಡಿಯನ್ನು ಹಾಕಿದರಂತೆ.

ಸರ್. ವಿಠಲದಾಸ ದಾಮೋದರ ಠಾಕರಸೀ:—ಮುಂಬಯಿ ಕಾರ್ಖಾನೆಗಳ ಪ್ರತಿನಿಧಿಗಳಾದ ಸರ್. ವಿಠಲದಾಸ ಠಾಕರಸೀಯವರು ಲೆಜಿಸ್ಲೇಟಿವ್ ಎಸೆಂಬ್ಲಿಯ ಸಭಾಸದತ್ವಕ್ಕೆ ರಾಜಿನಾಮೆಯನ್ನು ಕೊಟ್ಟಿರುವರೆಂದು ಕಳೆದಾಜೆಯ ಸಂಚಿಕೆಯಲ್ಲಿ ಪ್ರಕಟಿಸಿತ್ತಷ್ಟೆ. ಈ ಗೃಹಸ್ಥರು ಕೆಲವು ಕಾಲದಿಂದ ಅಸ್ವಸ್ಥರಾಗಿದ್ದರೂ ಇತ್ತಲಾಗಿ ಇವರು ಸ್ವಲ್ಪ ಆರೋಗ್ಯವನ್ನು ಹೊಂದಿದ್ದರು. ಕಳೆದ ತಾರೀಕು ೧೨ರಲ್ಲು ಮಧ್ಯಾಹ್ನ ೧೨ ಗಂಟೆಗೆ ಮುಂಬಯಿಯಲ್ಲಿ ಇವರು ಕಾಲವಾದರು. ಠಾಕರಸೀಯವರು ೧೮೭೩ನೇ ಇಸವಿಯ ದಶಂಬರ ತಾ. ೧ರಲ್ಲಿ ಹುಟ್ಟಿದರು. ಇವರು ಕೆಲವು ಕಾರ್ಖಾನೆಗಳ ಡೈರೆಕ್ಟರರಾಗಿದ್ದರು. ೧೮೯೩ರಿಂದ ೧೯೧೦ರವರೆಗೆ ಇವರ ಮುಂಬಯಿ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರಾಗಿದ್ದರು. ೧೯೦೭ರಲ್ಲಿ ಮುಂಬಯಿ ಕೊರೋಪೊರೇಶನಿನ ಪ್ರೆಸಿಡೆಂಟರೂ ಮಿಲ್ಲ ಓನರ್ಸ ಎಸೋಸಿಯೇಶನಿನ ಚೆಯರ್ಮೇನರೂ ಆಗಿದ್ದರು. ಇವರು ೧೯೦೬ರಲ್ಲಿ ಕಲ್ಕತ್ತದಲ್ಲಿ ಸೇರಿದ ಇಂಡಸ್ಟ್ರಿಯಲ್ ಕೊನ್ಪರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಇವರು ಇತ್ತಲಾಗಿ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರಾಗಿದ್ದರು. ಇವರು ಅನೇಕ ಧರ್ಮಕಾರ್ಯಗಳಿಗೆಸಹ ಇವರು ಉದಾರ ಧನಸಹಾಯವನ್ನು ಮಾಡಿರುವರು. ಪುಣೆಯ ಸ್ತ್ರೀಯರ ಕೊಲೇಜಿಗೆ ಇವರು ಇತ್ತಲಾಗಿ ಹದಿನೈದು ಲಕ್ಷ ರೂಪಾಯಿಯನ್ನು ಕೊಟ್ಟಿರುವರು.

ಸೇಲಮಿನಲ್ಲಿ ಪ್ಲೇಗು:—ಸೇಲಮಿನಲ್ಲಿ ಈಗ ತಲೆದೋರಿರುವ ಪ್ಲೇಗು ರೋಗವನ್ನು ಅಡಗಿಸಲು ಜನರ ಸಹಾಯವನ್ನು ಬಯಸಿ ಇಲ್ಲಿಯ ಕಲೆಕ್ಟರರಾದ ರಾಯಬಹದೂರ್. ಯು. ರಾಮರಾಯರು ಟೌನ್‌ಹೋಲಿನಲ್ಲಿ ಪಟ್ಟಣಿಗರ ಒಂದು ಸಭೆಯನ್ನು ನೆರೆಯಿಸಿದರು. ಈ ಸಭೆಗೆ ಅನೇಕರು ಕೂಡಿದ್ದರು. ಕಲೆಕ್ಟರರೇ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಜನರ ಸಹಾಯವಿಲ್ಲದೆ, ಪ್ಲೇಗನ್ನು ಅಡಗಿಸಲು ಪ್ಲೇಗು ಆಫೀಸರುಗಳ ಪ್ರಯತ್ನಗಳು ಏನೂ ಸಾಗಲಿಕ್ಕಿಲ್ಲವಾದ್ದರಿಂದ ಜನರೆಲ್ಲರೂ ಸಹಾಯಕರಾಗಬೇಕಾಗಿದೆ. ಮುಖ್ಯವಾಗಿ ಎಲ್ಲೆಲ್ಲಿ ಇಲಿಗಳು ಬೀಳುತ್ತವೆ ಎಂದು ಪ್ಲೇಗ್ ಆಫೀಸರುಗಳಿಗೆ ಜನರು ತಿಳಿಸಬೇಕು. ಹಾಗು ಜನರು ಪ್ಲೇಗು ದಾಕುಗಳನ್ನು ಹಾಕಿಸಿಕೊಳ್ಳತಕ್ಕದ್ದು ಎಂದು ಮುಂತಾಗಿ ಪ್ಲೇಗ ಮಾರಿಯನ್ನು ಓಡಿಸುವ ವಿಧಾನವನ್ನು ಕುರಿತು ಅಧ್ಯಕ್ಷರು ಭಾಷಣಮಾಡಿದರು. ಕೊನೆಗೆ ಪ್ಲೇಗುರೋಗವು ಪಟ್ಟಣದಲ್ಲಿ ಪಸರಿಸದಂತೆ ಜಾಗ್ರತೆಯನ್ನು ತೆಗೆದುಕೊಳ್ಳುವುದಕ್ಕಾಗಿ ಕಲೆಕ್ಟರರು, ತಹಸೀಲ್‌ದಾರರು ಮುನ್ಸಿಪಲ್ ಕೌನ್ಸಿಲರರು ಮೊದಲಾದವರಿಂದ ಕೂಡಿದ ಒಂದು ಕಮ್ಮಿಟಿಯು ನೇಮಕಮಾಡಲಾಯಿತು.

ಡೊಕ್ಟರ ತೇಜ ಬಹದೂರ್ ಸಪ್ರು:—ಇವರು ಸ್ವಲ್ಪ ಅಸ್ವಸ್ಥರಾಗಿರುವರು.

ಸಿಮ್ಲಾ:—ಹಿಂದೂಸ್ಥಾನದ ವೈಸರಾಯರಾದ ಲೋರ್ಡರೆಡಿಂಗರ ಪುತ್ರರು ಪತ್ನಿಸಮೇತ ಕಳೆದ ತಾ. ೧೫ರಲ್ಲಿ ಸಿಮ್ಲಕ್ಕೆ ಬಂದು ತಲ್ಪಿರುವರು.

ನವಯುಗ ಪತ್ರಿಕೆ:— ನವಯುಗವೆಂಬ ಇಂಗ್ಲಿಷ ಪಕ್ಷಪತ್ರಿಕೆಯು ಗುಂಟೂರಿನಲ್ಲಿ ಬರುವ ತಾ. ೧ರಿಂದ ಪ್ರಕಟವಾಗಲಿಕ್ಕಿದೆಯಂತೆ.

ಮದ್ಯಪಾನ ದುರಭ್ಯಾಸಕ್ಕೆ ಪ್ರತಿಬಂಧ:—ಕಾಠೇವಾಡದೊಳಗಿನ ಲಿಮಡಿ ಸಂಸ್ಥಾನದಲ್ಲಿ ಸರಾಯಿವ್ಯಾಪಾರವನ್ನೇ ನಿಲ್ಲಿಸಿ ಬಿಟ್ಟಿದ್ದು ಸರಾಯಿ ಕುಡಿದವರನ್ನು ಹಿಡಿದು ಕೊಟ್ಟವರಿಗೆ ಕುಡಿದವನ ಕಡೆಯಿಂದ ವಸೂಲು ಮಾಡಿದಷ್ಟು ದಂಡದ ನಾಲ್ಕನೇ ಅಂಶ ಇನಾಮಾಗಿ ಕೊಡಲಾಗುವುದೆಂದು ಜಾಹಿರಾಗಿದೆ.

ಧಾರವಾಡ:—ಇಲ್ಲಿಯ ಮುನ್ಸಿಪಾಲಿಟಿಯವರು ಇದೇ ತಾ. ೨೦ನೇ ಒಗಸ್ಟದ ಪೂರ್ವದಲ್ಲಿ ಯಾರು ಟೇಕ್ಸ್ ಕೊಟ್ಟು ಪಾವತಿ ತೆಗೆದುಕೊಳ್ಳುವುದಿಲ್ಲವೋ ಅವರನ್ನು ವೋಟರಲಿಸ್ಟಿನಲ್ಲಿ ಹಿಡಿಯುವುದಿಲ್ಲವೆಂದು ಪ್ರಸಿದ್ಧಿಸಿರುವರು.

ರಂಗೂನು:—ರಂಗೂನಿನಲ್ಲಿ ಪಬ್ಲಿಕ್‌ವರ್ಕ್ಸ ಶಾಖೆಯವರ ಅಣೆಕಟ್ಟು ಕಡಿದು ಪೇಗುವಿನ ೧ಲಕ್ಷ ೨೦ಸಾವಿರ ಎಕ್ರೆ ನೆಲ ನೆರೆಗೆ ಆಹುತಿಯಾಗಿದೆ.

ಉಪ್ಪು:—ಉಪ್ಪನ್ನು ಮಿತಿಮೀರಿ ಉಪಯೋಗಿಸಿದರೆ ಹೃದ್ರೋಗ ಮೂತ್ರರೋಗ ಶುರುವಾಗುವುದೆಂದು ಡಾಕ್ಟರ ಹೆರಿಸ್ ಎಂಬವರು ಸೂಚಿಸುತ್ತಾರೆ.

ಸ್ವಾಮಿ ಸತ್ಯದೇವರು:—ಸರಕಾರದವರನ್ನು ಎದುರಾಡುವುದಕ್ಕಾಗಿಯೇ ಕೌನ್ಸಿಲುಗಳನ್ನು ಸೇರತಕ್ಕದೆಂದು ಸ್ವಾಮಿ ಸತ್ಯದೇವರು ಅಜಮೀರಿನಲ್ಲಿ ಭಾಷಣ ಮಾಡಿದರು.

ಡೊಕ್ಟರ ವರದ ರಾಜಲುನ್ಯಾಡೋ:—ಇವರು ಸಹ ಬಂಧನದಿಂದ ಬಿಡುಗಡೆ ಹೊಂದಿರುವರು.

ಮಹಾತ್ಮಾ ಗಾಂಧಿಯವರ ಜನ್ಮದಿನಾಚರಣೆ:—ಗುಜರಾಥಿನಲ್ಲಿ ಈ ದಿನ ಅಂಗಡಿ ಮೊದಲಾದವುಗಳನ್ನು ಬಂದು ಮಾಡುವುದು, ಸಾರ್ವಜನಿಕ ಸಭೆಗಳನ್ನು ಕೂಡಿಸುವುದು, ಸ್ವರಾಜ್ಯ ಫಂಡಿಗೆ ವಂತಿಗೆಯನ್ನು ಕೂಡಿಸುವುದು ಮುಂತಾದ ಕಾರ್ಯಗಳನ್ನು ನಡಿಸಲಿಕ್ಕಿದ್ದಾರೆ.

ಮದರಾಸು:—ಹಿಜ್ ಕೋಕರು ಶ್ರೀಯುತ ಟಿ. ಪ್ರಕಾಶಂ ಮೊದಲಾದವರ ಮೇಲೂ ಹಿಂದೂ ಪತ್ರದ ಮೇಲೂ ಹೂಡಿದ ಮಾನನಷ್ಟದ ವ್ಯಾಜ್ಯದಲ್ಲಿ ಹಿಂದೂ ಪತ್ರವು ನಷ್ಟ ಪರಿಹಾರವಾಗಿ ರೂ. ೧೦೦೦ ಶ್ರೀಯುತ ಟಿ. ಪ್ರಕಾಶಂ ಮೊದಲಾದವರು ರೂ. ೬೦೦೦, ಕೊಡಬೇಕಾಗಿ ತೀರ್ಪು ಕೊಡಲಾಗಿದೆ.

ಗುಜರಾಥ್:—ಡಾಕ್ಟರ ಕಂಗುರವರ ಸ್ಥಾನದಲ್ಲಿ ಶ್ರೀಯುತ ಗೋವಿಲದಾಸ ಅಂಬಾಯಿದಾಸ ದೇಸಾಯಿಯವರನ್ನು ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮೆಂಬರರಾಗಿ ಗುಜರಾಥ ಪ್ರೊವಿನ್ಸಿಯಲ್ ಕೊಂಗ್ರೆಸ ಕಮ್ಮಿಟಿಯವರು ಚುನಾಯಿಸಿದ್ದಾರೆ.

ದಕ್ಷಿಣ ಕನ್ನಡ.

ಪುತ್ತೂರು:— ಇಲ್ಲಿಯ ಸಾಹುಕಾರ ಮ. ರಾ. ರಾ. ಬೆಳ್ಳಾರೆ ನರಸಿಂಹ ಮಲ್ಯರು ಖಾದಿ ಭಂಡಾರದ ಮಳಿಗೆಯನ್ನು ಇದೇ ಕಳೆದ ಜುಲಾಯಿ ತಾ. ೨೯ರಲ್ಲು ತೆರದಿರುವರು. ಇವರ ಕಡೆಯಿಂದ ೫ ದೇಶೀಯ ಕೈಗಾರಿಕೆಯ ಮಗ್ಗಗಳಲ್ಲಿ ಸ್ವದೇಶಿಯ ಖಾದಿ, ವಸ್ತ್ರ ಬೈರಾಸು ಸೀರೆಗಳು ಹೊದ್ದುಕೊಳ್ಳುವ ವಲ್ಲಿಗಳು ಸಿದ್ಧವಾಗಿ ವಿಕ್ರಿತಕ್ಕೆ ಸಿಕ್ಕುತ್ತವೆ. ಇವರ ಮಳಿಗೆಯಲ್ಲಿ ದಿನಂಪ್ರತಿ ||| ಮಣದಂತೆ ಹತ್ತಿ ವಿಕ್ರಿತವಾಗುತ್ತದೆ. ಹತ್ತಿಯು ಧಾರಾಳವಾಗಿದೆ. ಊರಲ್ಲೆಂತು ಚರಕಗಳ ಪ್ರಸಾರ ಹೆಚ್ಚುತ್ತಾ ಬಂದದರಿಂದ ದಿನಂಪ್ರತಿ ಮುಕ್ಕಾಲುಮಣ ನೂಲು ಪಡಕೊಳ್ಳುತ್ತಾರೆ. ಸ್ವದೇಶಿಯ ವಸ್ತ್ರದ ಬಡಾವಣೆ ಕುರಿತು ಪುತ್ತೂರಲ್ಲಿ ಇವರೊಬ್ಬರು ತೆಗೆದುಕೊಳ್ಳುವ ಪ್ರಯತ್ನ ಹೆಚ್ಚಿನದು.

ಇಲ್ಲಿಯ ಪಂಚಮರ ಸಂಘದಲ್ಲಿ ಸಹಾ ಚರಕ ಪ್ರಸಾರವನ್ನು ಆರಂಭಿಸಿದರು. ಇಲ್ಲಿಯ ವಕೀಲರಾದ ಮ. ರಾ. ರಾ. ಶಿವರಾಮಹೊಳ್ಳರವರು ಜಾತಿಭೇದ ಲಕ್ಷಿಸದೆ ಪಂಚಮರ ಸಂಘಕ್ಕೆ ಬಂದು ಚರಕದಿಂದ ನೂಲು ತೆಗೆಯುವ ವಿದ್ಯೆಯನ್ನು ಸ್ವಹಸ್ತ ಕಲಿಸುವರು.

ಕುಂಬಳೆ:— ಹೊಗೆಸೊಪ್ಪಿನ ಕೃಷಿಕರಾದ ವ ವ್ಯಾಪಾರಸ್ಥರಾದ ಸಾಲ್ಯದು ಗ್ರಾಮಸ್ಥರು ಮಧ್ಯಸ್ಥಳವಾದ ಮೊಗ್ರಾಲ್ ಕಸಬಾ ಗ್ರಾಮದಲ್ಲಿ ಒಂದು ಹೊಗೆಸೊಪ್ಪಿನ ವ್ಯಾಪಾರಿ ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸುವರೆ ಪ್ರಯತ್ನಿಸುತ್ತಾರಾಗಿ ವರ್ತಮಾನವಿದೆ. ಈ ಸಂಘವ ಮೊಗ್ರಾಲ್ ಗ್ರಾಮದಲ್ಲಿ ಅಗತ್ಯವಾದ್ದರಿಂದ ಸಂಬಂಧಪಟ್ಟ ಅಧಿಕಾರರು ಇದಕ್ಕೆ ನಿಗಾ ಇಡಬೇಕಾಗಿದೆ. ಈ ಪತ್ರಿಕೆಯ ಕಳದ ಸಂಚಿಕೆಯಲ್ಲಿ ಪ್ರಕಟಿಸಿದ ಮೊಗ್ರಾಲ ಕುಂಬಳೆ ಸೊಸ್ಯಾಟಿಯೆಂಬುದು ತಪ್ಪಾಗಿಯದೆ. ಸದರಿ ಹೆಸರನ್ನಿಡಬೇಕೆಂತ ಯಾರಾದರೂ ಅಪೇಕ್ಷಿಸಿದ್ದಿಲ್ಲ.

ಆಯುರ್ವೇದೀಯ ಕೊನ್ಫರೆನ್ಸ್.

ಆಯುರ್ವೇದೀಯ ಕೊನ್ಫರೆನ್ಸಿನ ಹದಿಮೂರನೆಯ ಅಧಿವೇಶನವು ರಾಜಮಹೇಂದ್ರಿಯಲ್ಲಿ ಜರಗಿತು. ಈ ಅಧಿವೇಶನದ ಅಧ್ಯಕ್ಷಸ್ಥಾನವನ್ನು ಪುಣೆಯ ಶ್ರೀಯುತ ಕೃಷ್ಣ ಶಾಸ್ತ್ರಿ ಕವಡೆ ಬಿ. ಎ. ಯವರು ವಹಿಸಿಕೊಂಡಿದ್ದರು. ಅಧ್ಯಕ್ಷರ ಭಾಷಣವು ೪೪ ಪುಟಗಳದ್ದವು. ಈ ಭಾಷಣದ ಸಾರಾಂಶವನ್ನು ಕೆಳಗೆ ಕೊಟ್ಟಿದೆ. ಅಧ್ಯಕ್ಷರು ತಮ್ಮ ಭಾಷಣವನ್ನು ಪ್ರಾರಂಭಿಸುವ ಪೂರ್ವದಲ್ಲಿ ಈ ಅಧ್ಯಕ್ಷಪದವಿಗೆ ಮೊದಲು ನಿಯೋಜಿಸಲ್ಪಟ್ಟ ಮುಂಬಯಿಯ ಶ್ರೀಯುತ ಯಾದವಜಿ ತ್ರಿಕಮ್‌ಜಿ ಆಚಾರ್ಯಜಿಯವರು ಅನಿವಾರ್ಯ ಕಾರಣಗಳಿಂದ ಬಾರದೆ ಇರುವುದರಿಂದಲೂ ತನಗೆ ಆಯುರ್ವೇದದ ಮೇಲಿರುವ ಪ್ರೇಮದಿಂದಲೂ ಶ್ರೀಯುತ ಲಕ್ಷ್ಮೀಪತಯ್ಯನವರೇ ಮೊದಲಾದವರ ಅಪೇಕ್ಷೆಯಂತೆಯೂ ಈ ಸ್ಥಾನಕ್ಕೆ ತಾನು ಅಸಮರ್ಥನಾದರೂ ಇದನ್ನು ವಹಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿ, ಎಲ್ಲರನ್ನೂ ವಂದಿಸಿ ಭಾಷಣವನ್ನು ಪ್ರಾರಂಭಿಸಿದರು.

"ಆಯುರ್ವೇದೀಯ ಕೊನ್ಫರೆನ್ಸಿನ ಈ ಹದಿಮೂರನೆಯ ಅಧಿವೇಶನದಲ್ಲಿ ಸ್ವಲ್ಪ ವಿಶೇಷವಿದೆ. ಈ ಕೊನ್ಫರೆನ್ಸಿನ ಮೊದಲಿನ ಅಧಿವೇಶನವು ಗೋದಾವರಿ ನದಿಯ ಉಗಮಸ್ಥಾನದಲ್ಲಿ ನಡಿಯಿತು. ಮತ್ತು ಹದಿಮೂರನೆಯ ಅಧಿವೇಶನವು ಗೋದಾವರಿ ನದಿಯ ಸಂಗಮಸ್ಥಾನದ ಸಮೀಪದ ದಡದಲ್ಲಿರುವ ರಾಜಮಹೇಂದ್ರಿಯಲ್ಲಿ ಕೂಡಿದೆ. ನಿಮ್ಮ ಪ್ರಾಂತಕ್ಕೆ ದೇಶದ ಇತರ ಪ್ರಾಂತಗಳಿಗೂ ಅನುಕೂಲತೆಗಳನ್ನು ಉಂಟುಮಾಡಲು ಸಾಧ್ಯವಿದೆ. ಇತರ ಪ್ರಾಂತಗಳಲ್ಲಿ ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಪೂರ್ವಕಾಲದ ಶಾಸ್ತ್ರಗ್ರಂಥಗಳು ಮೊಗಲರ ಕಾಲದಲ್ಲಿ ಸುಟ್ಟು ನಾಶಮಾಡಲ್ಪಟ್ಟಿವೆ. ಈ ರೀತಿ ನಿಮ್ಮ ಪ್ರಾಂತದಲ್ಲಿ ಇಂಥಾ ಉಪಯುಕ್ತ ಗ್ರಂಥಗಳು ನಾಶವಾಗದೆ ರಕ್ಷಿಸಲ್ಪಟ್ಟಿವೆ. ಮತ್ತು ಈಗ ದೇಶ ತುಂಬಾ ಉಂಟಾದ ಹೊಸ ಜಾಗ್ರತಿಯಿಂದ ನಿಮ್ಮಲ್ಲಿಯ ಚಿಕಿತ್ಸಕರು ಆಯುರ್ವೇದ ವಿಜ್ಞಾನಶಾಸ್ತ್ರದ ಕಡೆಗೆ ಹೆಚ್ಚಿನ ಲಕ್ಷ್ಯವನ್ನು ಕೊಟ್ಟು ಅದರ ಪ್ರಯೋಜನವು ಜನರಿಗೆ ಸದಾಕಾಲ ದೊರಕುವಂತೆ ಪ್ರಯತ್ನಿಸುತ್ತಿದ್ದಾರೆ. ಈ ವಿಜ್ಞಾನವನ್ನು ಉನ್ನತಿಗೆ ತರುವುದಕ್ಕಾಗಿ ತಮ್ಮ ಪ್ರಾಂತದಲ್ಲಿ ಅನೇಕ ಆಯುರ್ವೇದೀಯ ಔಷಧಾಲಯಗಳೂ ಸಂಘಗಳೂ ಕೆಲಸಮಾಡುತ್ತಿವೆ. ಆಯುರ್ವೇದ ಔಷಧಗಳ ಪ್ರಸಾರವು ಬಹಳ ಕಡೆಗಳಲ್ಲಿ ಆಗುತ್ತಿದೆ. ಅನೇಕ ಮ್ಯುನ್ಸಿಪಾಲಿಟಿಗಳಲ್ಲಿ, ಎಲೋಪೇಥಿಕ್ ಔಷಧಾಲಯಗಳ ಬದಲಾಗಿ ಆಯುರ್ವೇದೀಯ ಔಷಧಾಲಯಗಳು ತೆರಿಯೋಣಾಗುತ್ತವೆ ಎಂಬದನ್ನು ತಿಳಿಯಲು ನನಗೆ ತುಂಬಾ ಸಂತೋಷವಾಗುತ್ತಿದೆ. ಆಯುರ್ವೇದೀಯ ಕೊನ್ಫರೆನ್ಸಿನಿಂದ ಈ ವರೆಗೆ ಉಂಟಾದ ಪರಿಣಾಮವು ತೃಪ್ತಿಕರವೂ ಉತ್ಸಾಹಜನಕವೂ ಆಗಿದೆ. ಈ ದೇಶದ ಜನರು ಆಯುರ್ವೇದಕ್ಕೂ ಹೆಚ್ಚಿನ ಮಾನವನ್ನು ಕೊಡುವಂತೆ ಮಾಡಲು ನಮಗೆ ಸಾಧ್ಯವಾಯಿತು. ಕ್ರಮಕ್ರಮವಾಗಿ ನಾವು ಮ್ಯುನ್ಸಿಪಾಲಿಟಿಗಳ ಮತ್ತು ಲೋಕಲ್ ಬೋರ್ಡುಗಳ ಸಹಾನುಭೂತಿಯನ್ನು ಹೊಂದುತ್ತಿದ್ದೇವೆ. ಸರಕಾರಕ್ಕೂ ಕೂಡಾ ಆಯುರ್ವೇದದ ಕಡೆಗೆ ಗಮನಕೊಟ್ಟು ಅದಕ್ಕೆ ಪೂರ್ವದ ವೈಭವವನ್ನು ಹೊಂ[illegible]ಸಹಾಯಕವಾಗಲು ಒತ್ತಾಯಪಡಿಸಿದೆವು. ಮದರಾಸ ಹಾಗು ಬಂಗಾಲ ಸರಕಾರಗಳು ಈ ಮೊದಲೇ ಈ ಪ್ರಮೇಯವನ್ನು ಆಲೋಚಿಸಿ ತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಸಹಾಯಕವಾಗಲುವರದಿಯನ್ನು ತಯಾರಿಸಲುಒಂದು ಕಮ್ಮಿಟಿಯನ್ನುನೇಮಿಸಿದ್ದಾವೆ.

ಮದರಾಸ ಸರಕಾರವು ನೇಮಿಸಿದ ಕಮಿಟಿಗೆ ಕೆಲವು ಮಂದಿ ಆಯುರ್ವೇದೀಯ ವೈದ್ಯರು ಬಹಿಷ್ಕಾರವನ್ನು ಹಾಕಿರುವರಾಗಿ ತಿಳಿಯಲು ನನಗೆ ಖೇದವಾಗುತ್ತದೆ. ಆದರೆ ಈ ಸಂಧಿಯನ್ನು ಕಳಕೊಳ್ಳದೆ ನಾವು ಈ ಕಮ್ಮಿಟಿಯ ಸಹಾಯ್ಯವನ್ನು ಸಾಧ್ಯವಿದ್ದ ಮಟ್ಟಿಗೆ ಹೊಂದಬೇಕು. ಓಲ್ ಇಂಡಿಯಾ ಆಯುರ್ವೇದ ವಿದ್ಯಾಪೀಠವು ಮಾಡುತ್ತಿರುವ ಕಾರ್ಯಗಳಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ವರುಷಗಳು ಕಳೆಯುತ್ತಾ ಕಳೆಯುತ್ತಾ ಈ ವಿದ್ಯಾಪೀಠಕ್ಕೆ ಸೇರುವ ಉಮೇದ್ವಾರರ ಸಂಖ್ಯೆಯು ಏರುತ್ತಿದೆ. ಕಳೆದ ವರುಷ ೩೦೦ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಉಮೇದ್ವಾರರಾಗಿದ್ದರೆಂಬ ಸಂಗತಿಯು ಸಂತೋಷಪ್ರದವಾಗಿದೆ. ಈ ಪರೀಕ್ಷೆಯನ್ನು ನಡಿಸುವುದಕ್ಕಾಗಿ ಪ್ರತಿಯೊಂದು ಪ್ರಾಂತದ ಬಗ್ಗೆ ಬೇರೆಬೇರೆ ಮಂಡಲಗಳನ್ನು ನೇಮಿಸುವುದು ನನಗೆ ಯೋಗ್ಯವಾಗಿ ಕಾಣುವುದಿಲ್ಲ. ಪರಂತು ಇಡೀ ದೇಶದ ಬಗ್ಗೆ ಮುಖ್ಯವಾದ ಒಂದೇ ಕಮ್ಮಿಟಿಯು ಇದ್ದು ಅದು ಎಲ್ಲಾ ವಿದ್ಯಾರ್ಥಿಗಳ ಪರೀಕ್ಷೆಯ ಕಾರ್ಯವನ್ನು ಮಾಡಿ ಅವರಿಗೆ ಸನದುಗಳನ್ನೂ ಬಹುಮಾನಪತ್ರಗಳನ್ನೂ ಕೊಡುವುದು ಪ್ರಶಸ್ತವಾಗಿದೆ.

ಇನ್ನು ಆಯುರ್ವೇದದ ಪುಸ್ತಕಗಳನ್ನು ಬರೆಯಬೇಕಾದುದು ಒಂದು ಮುಖ್ಯ ಕಾರ್ಯವಾಗಿದೆ. ಆಯುರ್ವೇದ ಗ್ರಂಥಗಳನ್ನು ಬರೆಯಲು ಕಲ್ಕತ್ತೆಯ ಶ್ರೀಯುತ ಗನನಾಥಸೇನ್ ಎಂ. ಎ. ಎಲ್. ಯಂ. ಯಸ್. ಮತ್ತು ಮುಂಬಯಿಯ ಶ್ರೀಯುತ ಯಾದವಜಿ ತ್ರಿಕಮ್‌ಜಿಯವರು ಪಟ್ಟ ಪರಿಶ್ರಮ ಮನನೀಯವಾಗಿದೆ.

ಎಲೋಪೆಥಿಕ್ ಕ್ರಮಗಳಲ್ಲೂ, ಇತರ ಕ್ರಮಗಳಲ್ಲೂ ಯೋಗ್ಯ ಔಷಧಗಳನ್ನು ಕಂಡುಕೊಂಡರೆ ಮತ್ತು ಇವು ನಮ್ಮ ಆಯುರ್ವೇದದಲ್ಲಿ ಇಲ್ಲದಾದರೆ ನಾವು ಇವನ್ನು ಸಹ ಉಪಯೋಗಕ್ಕೆ ತರತಕ್ಕದ್ದು. ಆಯುರ್ವೇದೀಯ ಔಷಧಾಲಯಗಳನ್ನು ಮುಖ್ಯ ಮುಖ್ಯ ಸ್ಥಳಗಳಲ್ಲಿ ಸ್ಥಾಪಿಸಬೇಕು. ಮತ್ತು ಔಷಧಗಳನ್ನು ಬಲ್ಲವರಿಂದಲೇ ತಯಾರಿಸತಕ್ಕದ್ದು. ಹೀಗೆಲ್ಲಾ ಮಾಡಿ ನಾವು ಆಯುರ್ವೇದ ವಿಜ್ಞಾನಶಾಸ್ತ್ರವನ್ನು ಕಲಿಸುವ ಶಾಲೆಗಳನ್ನೂ, ಕೊಲೇಜುಗಳನ್ನೂ ಸ್ಥಾಪಿಸಿದರೆ ಅದರಿಂದ ನಮ್ಮ ಹಾಗು ಆಯುರ್ವೇದದ ಪ್ರೋತ್ಸಾಹವು ಬೇಗನೆ ಆಗುವುದೆಂದು ನಾನು ನಂಬಿದ್ದೇನೆ".

ಅಧ್ಯಕ್ಷರ ಭಾಷಣವಾದ ಮೇಲೆ ಸಬ್‌ಜೆಕ್ಟ ಕಮ್ಮಿಟಿ, ಬಹುಮಾನಗಳನ್ನು ಹೊಂದಲು ಯೋಗ್ಯರಾದವರನ್ನು ಆರಿಸುವ ಕಮ್ಮಿಟಿ, ಪ್ರದರ್ಶನಕ್ಕೆ ಇಟ್ಟ ಯೋಗ್ಯವಾದ ವಸ್ತುಗಳನ್ನು ಚುನಾಯಿಸುವ ಕಮ್ಮಿಟಿ ಹೀಗೆ ಮೂರು ಕಮ್ಮಿಟಿಗಳು ಆರಿಸಲ್ಪಟ್ಟವು. ಅಧಿವೇಶನವು ಪ್ರಾರಂಭವಾದ ಮರುದಿನ ಬೆಳಿಗ್ಗೆ ೮ ಗಂಟೆಗೆ ಹೆಸರುಗೊಂಡ ಹಕೀಮರ ಹಾಗು ಪಂಡಿತರ ಭಾಷಣಗಳಾದವು. ನಮ್ಮ ಮಂಗಳೂರ ಪಟ್ಟಣದಿಂದ ಈ ಅಧಿವೇಶನಕ್ಕೆ ಹೋದ ಶ್ರೀಯುತ ಪಂಡಿತ ಯಂ. ವಿ. ಶಾಸ್ತ್ರಿಯವರು ಆಯುರ್ವೇದದೊಳಗಿನ (Surgery) ಶಸ್ತ್ರಕ್ರಿಯೆಯ ಕುರಿತು ಸಂಸ್ಕೃತದಲ್ಲಿ ಭಾಷಣ ಮಾಡಿ ನಮ್ಮ ಪೂರ್ವಿಕರು ಸಹ ಶಸ್ತ್ರಗಳ ಮೂಲಕ ಶಸ್ತ್ರಕ್ರಿಯೆಯನ್ನು ನಡಿಸುತ್ತಿದ್ದರೆಂಬುದನ್ನು ಪೂರ್ವ ಗ್ರಂಥಗಳ ವಾಕ್ಯಗಳ ಆಧಾರಗಳನ್ನು [illegible] ಈ ವಿಷಯವನ್ನು ವಿಶದ ಪಡಿಸಿದರು.

ಅನುಕ್ರಮಣಿಕೆ

ಅಗ್ರಲೇಖ—
"ಅನುಭವದ ಬಗ್ಗೆ" ೬
ಸ್ಫುಟವಿಚಾರಗಳು—
೧. ಅಖಿಲ ಆಯುರ್ವೇದ ಪರಿಷತ್ತು . . . . ,,
೨. ಶ್ರೀಯುತ ದಾಸರ ಅಭಿಪ್ರಾಯ . . . . ,,
೩. ಗೋವಧೆಗೆ ಪ್ರತಿಬಂಧ . . . . ,,
೪. ಅಧಿಕಾರಿಗಳ ಒತ್ತಾಟ ೭
೫. ಸರ್ ಶಂಕರನ್ ನಾಯರರು . . . . ,,
೬. ಅಹಮ್ಮದಾಬಾದಿನಲ್ಲಿ ಅಸಹಕಾರದ ಚಳವಳ . . . . ,,
ಮಂಗಳೂರು—
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಪುತ್ತೂರು, ಕುಂಬಳೆ, ... ,,
ಆಯುರ್ವೇದಿಯ ಕೊನ್ಫರೆನ್ಸ್ . . . . ,,
ಅಸ್ಪೃಶ್ಯತಾ ನಿವಾರಣ ೪
೧೯ನೇ ತಾರೀಕು ತಿರಿಗಿ ಬರುತ್ತಲಿದೆ . . . . ,,
ಪತ್ರವ್ಯವಹಾರ . . . . ,,
ಮಂಗಳೂರು ಮುನ್ಸಿಪಾಲಿಟಿಯೂ ಶೇಂದಿ ಅಂಗಡಿಗಳೂ . . . . ,,
ಉಡುಪಿ ತಾಲೂಕಿನ ನೂಲುವ ಪಂದ್ಯಾಟ ೪
ದೇಶಬಂಧು ಚಿತ್ತರಂಜನ ದಾಸರು. . . . . ,,

ಸ್ವದೇಶಾಭಿಮಾನಿ.

ಶಕ ೧೮೪೩ ಶ್ರಾವಣ ಬ. ೧೦ಯು ಶುಕ್ರವಾರ.

“ಅನುಭವದ ಬಗ್ಗೆ ಮಾತ್ರ!”

ಮುಖ್ಯ ಮಂತ್ರಿಗಳಾದ ಮಿ. ಲೊಯ್ಡ್ ಜೋರ್ಜರ ಭಾಷಣದ ಮುಖ್ಯಾಂಶವನ್ನು ಕಳೆದ ಅಗ್ರಲೇಖದಲ್ಲಿ ಕೊಟ್ಟು ಟೀಕಿಸಿದ್ದೇವೆ. ಅವರ ಭಾಷಣದೊಳಗಿನ ಒಂದೆರಡು ಅಂಶಗಳು ಇನ್ನೂ ಹೆಚ್ಚಿನ ಟೀಕೆಗೆ ಪಾತ್ರವಾದವುಗಳಿದ್ದಾವೆ. ಅವುಗಳನ್ನು ಪ್ರಸ್ತಾಪಿಸುವ ಮೊದಲು ಈ ಮಂತ್ರಿಗಳ ಭಾಷಣದಿಂದ ಹಿಂದುಸ್ಥಾನದಲ್ಲಿ ಸದ್ಯ ಎಂಥ ವಿಚಾರಗಳು ಉದ್ಭವಿಸಿವೆ ಎಂಬುದನ್ನು ಕೊಂಚ ಮಟ್ಟಿಗೆ ವಾಚಕವರ್ಗದ ಮುಂದಿಡುವುದು ಅಪ್ರಾಸಂಗಿಕವಾಗಲಾರದು. ಲೊಯ್ಡ್ ಜೋರ್ಜರು ರಾಜಕೀಯ ಚಳವಳವನ್ನು ಜರ್ಜರ ಪಡಿಸಲು ಹವಣಿಸಿ ಆ ಭಯಂಕರ ಭಾಷಣದಲ್ಲಿ “ಸುಧಾರಣೆಗಳನ್ನು ಹಿಂದಕ್ಕೆ ತೆಗೆದುಕೊಂಡೇವು,” “ಅನುಭವದ ಬಗ್ಗೆ ಮಾತ್ರ ಈ ಸುಧಾರಣೆಗಳನ್ನು ಕೊಟ್ಟದ್ದಾಗಿದೆ” ಎಂದು ಮುಂತಾದ ಮುಕ್ತಾಫಲಗಳನ್ನು ಚೆಲ್ಲಿದರು; ಆದರೆ ದೈವವಶಾತ್ ಇದರ ಪರಿಣಾಮವು ಮಾತ್ರ ಅವರು ಯೋಜಿಸಿದ್ದಂತಾಗಲಿಲ್ಲವೆಂದು ಸದ್ಯದ ಮಟ್ಟಿಗಾದರೂ ಹೇಳಬಹುದು. “ಸದ್ಯದ ಮಟ್ಟಿಗಾದರೂ” ಎಂದು ಹೇಳಲು ಕಾರಣವೇನೆಂದರೆ, ಲೊಯ್ಡ್ ಜೋರ್ಜರ ಭಾಷಣದಿಂದ ಸುಧಾರಣೆಗಳ ಸ್ವರೂಪವೇನೆಂದು ತಿಳಿಯಹತ್ತಿ, ಶಾಂತ ಪಕ್ಷದವರನೇಕರು ವ್ಯಸನಪಡಹತ್ತಿದ್ದಾರೆ. ಕಣ್ಣುತೆರೆಯ ಹತ್ತಿದ್ದಾರೆ; ಮತ್ತು ಭಾಷಣವನ್ನು ಹಿಂದಕ್ಕೆ ತೆಕ್ಕೊಳ್ಳಲು ಅವರನ್ನು ಚುಚ್ಚುತ್ತಿದ್ದಾರೆ. ಸುಧಾರಣೆಗಳ ವಿಷಯವಾಗಿ ರಾಷ್ಟ್ರೀಯ ಸಭೆಯು ಯಾವ ಧೋರಣವನ್ನು ಸ್ವೀಕರಿಸಿರುವುದೊ ಅದು ಅಯೋಗ್ಯವಲ್ಲ ಅಥವಾ ನಿರರ್ಥಕವಲ್ಲವೆಂದು ಶಾಂತಪಕ್ಷದವರಿಗೆ ಈಗ ತೋರಹತ್ತಿದೆ. ಲೊಯ್ಡ್ ಜೋರ್ಜರ ಭಾಷಣದಿಂದ ಶಾಂತ ಪಕ್ಷದವರಲ್ಲಿ ಈ ರೀತಿಯಿಂದ ಯಾವ ಬದಲಾವಣೆಯುಂಟಾಗಿದೆಯೊ ಇದು ಎಷ್ಟು ಸಮಯದ ವರೆಗೆ ಹಾಗೆಯೆ ನಿಂತೀತು ಎಂಬುದನ್ನು ಖಂಡಿತವಾಗಿ ಹೇಳಲು ಅಸಾಧ್ಯವಾದರೂ ಕೊನೆತನಕ ಹಾಗೆಯೆ ನಿಂತೀತೆಂದು ಹೇಳಲು ಸಹ ಸಾಧ್ಯವಿಲ್ಲ. ಇದಕ್ಕಿಂತ ಭಯಂಕರವಾದ ಆಪತ್ತುಗಳು—ಪಂಜಾಬದ ಅತ್ಯಾಚಾರ ಮುಂತಾದವುಗಳು—ಸಂಭವಿಸಿದಾಗ್ಯೂ, ಆ ಸಮಯದಲ್ಲಿ ಮಾತ್ರ ಸ್ಮಶಾನವೈರಾಗ್ಯದಂತೆ ಇವರಲ್ಲಿ ವೈರಾಗ್ಯವುಂಟಾಗುತ್ತದೆ; ಆದರೆ ಕೊನೆಗೆ ಅದೆಲ್ಲ ಲುಪ್ತವಾಗಿ ಇವರು ಮೊದಲಿನಂತೆ ಸರಕಾರದ ಸ್ತುತಿಪಾಠಕರೂ, ಸಹಕಾರಿಗಳೂ ಆಗುತ್ತಾರೆ. ಈ ಅನುಭವವು ‘ಬಿಸಿಬಿಸಿ ಇರುವಾಗ ಲೊಯ್ಡ್ ಜೋರ್ಜರ ಭಾಷಣದಿಂದುಂಟಾದ ಶಾಂತಪಕ್ಷದವರ ಅಸಂತೋಷದ ಮೋಡವು ಕೆಲವು ದಿವಸಗಳೊಳಗಾಗಿಯೆ ಹಾರಿಹೋದೀತೆಂದು ಯಾವ ಸಂಕೋಚವಿಲ್ಲದೆ ಹೇಳಬಹುದು. ಈ ಕಾರಣದಿಂದಲೆ ನಾವು ಮೇಲೆ ಸದ್ಯದ ಮಟ್ಟಿಗಾದರೂ ಎಂದು ಹೇಳಿದ್ದೇವೆ.

ಲೊಯ್ಡ್ ಜೋರ್ಜರ ಭಾಷಣದಿಂದ ಅನೇಕರು ಕಣ್ಣುತೆರೆದಿರುವರು. ರಾಷ್ಟ್ರೀಯ ಪಕ್ಷದವರಲ್ಲಿ ಅನೇಕರು ಮಂತ್ರಿಗಳ ಭಾಷಣದ ಸ್ವರೂಪಾವಿಷ್ಕರಣವನ್ನು ಮಾಡಿದ್ದಾರೆ. ಪಂಡಿತ ನೆಹರು, ಹಕೀಮ ಅಜಮಲ್‌ಖಾನ ಮೊದಲಾದವರು ಅಸಹಕಾರಿಗಳಾಗಿದ್ದರಿಂದ ಈ ಭಾಷಣದ ಬಗ್ಗೆ ತಮ್ಮ ಅಭಿಪ್ರಾಯ ವ್ಯತ್ಯಾಸವನ್ನು ತೋರಿಸುವುದಾಗಲಿ ಅಥವಾ ಸಮರ್ಪಕ ಟೀಕೆಯನ್ನು ಮಾಡುವುದಾಗಲಿ ಸ್ವಾಭಾವಿಕವಾಗಿದೆ. ಮಿ| ಜಿನ್ನಾ ಮುಂತಾದ ರಾಷ್ಟ್ರೀಯರು ಅಸಹಕಾರಿಗಳಲ್ಲವಾದರೂ ಸರಕಾರದ ಸಹಕಾರಿಗಳಲ್ಲ. ಆದ್ದರಿಂದ ಅವರು ಮತ್ತು ಮಿ| ಭೋಕಾನಿಯವರು ಜೋರ್ಜರ ಭಾಷಣದ ಮರ್ಮವನ್ನು ಎತ್ತಿ ಹೇಳಿ ಎಲ್ಲರೂ ತಮ್ಮ ತಮ್ಮ ಮತಭೇದಗಳನ್ನು ಬದಿಗಿಟ್ಟು ಏಕತ್ರರಾಗಬೇಕೆಂದು ಉಪದೇಶಿಸಿದ್ದಾರೆ. ಈ ಎರಡು ವರ್ಗದವರು ಸರಕಾರದ ಕಂಕುಳಲ್ಲಿ ಸೇರಿದವರಲ್ಲ. ಆದ್ದರಿಂದ ಅವರು ಜೋರ್ಜರ ವಿಧಾನಗಳನ್ನು ಖಂಡಿಸುಲುದ್ಯುಕ್ತರಾದ್ದು ಸಹಜವಾಗಿದ್ದರೂ ಮೊಡರೇಟರು ಲೊಯ್ಡ್ ಜೋರ್ಜರ ಭಾಷಣದಿಂದ ಸಂತಪ್ತರೂ, ವಿಷಣ್ಣರೂ, ಪ್ರತಿಕಾರಪರರೂ ಆದದ್ದು ಮಾತ್ರ ಆಶ್ಚರ್ಯವು. ನಾಮದಾರ ಸೇಟನಾ, ಜಮುನಾದಾಸ ದ್ವಾರಕಾದಾಸರಂಥ ಶಾಂತಪಕ್ಷದವರು ಮಾತ್ರವಲ್ಲ, ಈ ದ್ವಾರಕಾದಾಸರ ಗುರುಗಳಾದ ಮಿಸೆಸ್ ಬಿಝುಂಟಮ್ಮನವರು ಸಹ ಲೊಯ್ಡ ಜೋರ್ಜರ ಭಾಷಣದಿಂದ ಮರುಗುತ್ತಿದ್ದಾರೆ. “ಪ್ರಯೋಗದ ಬಗ್ಗೆ—ಅನುಭವದ ಬಗ್ಗೆ ಸುಧಾರಣೆಗಳನ್ನು ಕೊಟ್ಟದ್ದೇವೆ. ಅವು ಯಶಸ್ವಿಯಾಗದೆ ಇದ್ದರೆ, ಅವುಗಳನ್ನು ಹಿಂದಕ್ಕೆ ತೆಕ್ಕೊಂಡೇವು” ಎಂದು ಮಂತ್ರಿಗಳು ಮಾತಾಡಿ ಈ ಸುಧಾರಣೆಗಳ ಹೃದ್ಗತವನ್ನು ವ್ಯಕ್ತಗೊಳಿಸಿದ್ದಾರೆ; ಈ ಮಾತಿನಂತೆ ಕೊಟ್ಟ ಸುಧಾರಣೆಗಳನ್ನು ಹಿಂದಕ್ಕೆ ತೆಕೊಳ್ಳುವ ಸಂಗತಿಯು ಮೊದಲೆ ಗೊತ್ತಿದ್ದದ್ದಾದರೆ “ತಾನು ಇಂಗ್ಲೆಂಡದೊಡನೆ ಎಂದೂ ಸಹಕಾರವನ್ನು ಮಾಡುತ್ತಿದ್ದಿಲ್ಲವೆಂದು, ಬಿಝುಂಟರು ಈ ಹೊತ್ತು ಹೇಳುತ್ತಾರೆ! ಪಂಚತಂತ್ರದಲ್ಲಿ ಒಂದು ಕಥೆಯು ಬರುತ್ತದೆ. ಅಗಸನ ನೀಲಿ ಬಣ್ಣದ ಮಡಿಕೆಯಲ್ಲಿ ಬಿದ್ದ ಒಂದು ನರಿಯು ಅರಣ್ಯಕ್ಕೆ ಹೋಗಿ, ವನದೇವತೆಯು ತನ್ನನ್ನು ಓಷಧಿಗಳಿಂದ ರಾಜ್ಯಾಭಿಷೇಕ ಮಾಡಿದೆ ಎಂದು ಹೇಳಿ ರಾಜ್ಯಾಧಿಕಾರಿಯಾಗಿ ಕುಳಿತುಕೊಂಡಿತು. ಸಿಂಹ, ತೋಳ, ಹುಲಿ, ಕರಡಿ ಮೊದಲಾದ ಮೃಗಗಳು ಸಹ ಅದರ ಆಜ್ಞೆಗೆ ಅಂಕಿತವಾದವು. ನರಿಯೆಂಬ ಸಂಗತಿಯು ಅವರಿಗೆ ಗೊತ್ತಿದ್ದಿಲ್ಲ. ಆದ್ದರಿಂದ ಅವೆಲ್ಲ ಅದನ್ನು ಅನುಸರಿಸಹತ್ತಿದವು. ಅರಸು ನರಿಯು ಮಿಕ್ಕನರಿಗಳನ್ನು ತುಚ್ಛೀಕರಿಸಿತು. ಆಗ ಇದರ ನಿಜಸ್ವರೂಪವು ಎಲ್ಲರಿಗೆ ಗೊತ್ತಾಗುವಂತೆ ಮಾಡಲು ಮಿಕ್ಕನರಿಗಳು ಒಟ್ಟಿಗೆ ಕೂಗಿದವು. ಜಾತಿ ಸ್ವಭಾವಕ್ಕನುಸಾರವಾಗಿ ಪಟ್ಟದ ಈ ನರಿಯು ಕೂಡ ತನ್ನ ಇತರ ಜಾತಿಗೃಹಸ್ಥರೊಡನೆ ಕೂಗಿತು. ಆಗ ಸಿಂಹ, ತೋಳ ಮೊದಲಾದವುಗಳಿಗೆ ಇದರ ನಿಜಸ್ವರೂಪವು ತಿಳಿಯಬಂತು! ಲೊಯ್ಡ್ ಜೋರ್ಜರು ತಮ್ಮ ಅಂತರಂಗವನ್ನು ಕೂಡಿದ್ದಷ್ಟು ಬಚ್ಚಿಡಲು ಯತ್ನಿಸಿ, ಶಾಂತಪಕ್ಷದವರಲ್ಲಿ ಭ್ರಮೆಯನ್ನು ಹುಟ್ಟಿಸಿದಾಗ್ಯೂ ಖಿಲಾಫತ್ ವಚನಭಂಗ, ಸುಧಾರಣೆಗಳ ಹಿಂದಕ್ಕೆ ಉಪಸಂಹಾರ ಇಂಥ ಸಂದರ್ಭಗಳು ಅವರ ಭಕ್ತರ ಕಣ್ಣುಗಳನ್ನು ಆಗಾಗ್ಗೆ ತೆರೆಯುತ್ತಿರುತ್ತವೆ.

ಮಂತ್ರಿಗಳ ಭಾಷಣದಿಂದ ಶಾಂತಪಕ್ಷದವರಲ್ಲಿ ಉಂಟಾದ ವಿಷಾದವು ಶತಾಯುಷಿಯಾಗಲಿ ಅಥವಾ ಅಲ್ಪಾಯುಷಿಯಾಗಲಿ ಅದನ್ನು ಬಿಟ್ಟು ಬಿಡೋಣ. ಎಕ್ಸಪೆರಿಮೆಂಟಿನ ಬಗ್ಗೆ ಎಂದರೆ ಅನುಭವದ ಬಗ್ಗೆ ಸುಧಾರಣೆಗಳು ಕೊಡಲ್ಪಟ್ಟದ್ದಾವೆ, ಎಂದು ಮುಖ್ಯ ಮಂತ್ರಿಗಳು ಯಾವ ಮಾತನ್ನು ಆಡಿದರೊ ಅದು ಇಂಗ್ಲಿಷ ಮುತ್ಸದಿಗಳ ಪೂರ್ವ ಪರಂಪರೆಗೆ ಬಿಟ್ಟಿಲ್ಲ. ವಿಕ್ಟೋರಿಯಾ ಮಹಾರಾಣಿಯವರ ಜಾಹೀರನಾಮೆಗೆ “ಅಶಕ್ಯರಾಯಸು” ಎಂದು ಮಾಜಿ ವ್ಯಾಸರಾಯರಾದ ಕರ್ಝುನರು ಹೇಳಿರಲಿಲ್ಲವೆ? ಆಗ ಈ ಹೊತ್ತು ಲೋಯ್ಡ ಜೋರ್ಜರು “ಅನುಭವದ ಬಗ್ಗೆ” ಎಂದು ಹೇಳುವುದೇನಾಶ್ಚರ್ಯ? ಇಂಥ ಸಂದರ್ಭದಲ್ಲಿ ಇಂಗ್ಲೆಂಡಿಗೆ ಒಂದು ಸವಾಲನ್ನು ಹಾಕುವುದು ಲೋಕದ ಕರ್ತವ್ಯವಾಗಿದೆ. ಚಿಕ್ಕ ಜನಾಂಗಗಳ ಸ್ವಾತಂತ್ರ್ಯಕ್ಕಾಗಿ ಎಂಬ ಉದಾತ್ತ ಹೇತುವಿನ ತುತೂರಿಯನ್ನು ಬಾರಿಸಿ, ಇಂಗ್ಲಂಡ ದೇಶವು ತನ್ನ ಸುತ್ತಲು ಜನರನ್ನು ಸೇರಿಸಿತು, ದ್ರವ್ಯವನ್ನು ಶೇಖರಿಸಿತು. ಸಹಾನುಭೂತಿಯನ್ನು ಆಕರ್ಷಿಸಿತು. ಅಂಥ ಇಂಗ್ಲಂಡು ಈಗ ಈ ಲೊಯ್ಡ ಜೋರ್ಜರ ತುಚ್ಛ ಭಾಷಣದಿಂದ ಲಜ್ಜಿಪಡುವುದಿಲ್ಲವೆ? ಅಮೇರಿಕಾ, ಫ್ರಾನ್ಸ್, ಇಟಲಿ ಇತ್ಯಾದಿ ಸ್ವಾತಂತ್ರ್ಯ ಪ್ರಿಯ ಜನಾಂಗಗಳಿಗೆ ಇಂಗ್ಲಂಡು ಇನ್ನು ಮುಂದೆ ಹೇಗೆ ಮುಖ ತೋರಿಸಬಹುದು? ಅಥವಾ ಈ ರೀತಿಯಿಂದ ನಟಿಸುವುದು ಸಹ ‘ಅನುಭವದ ಬಗ್ಗೆಯೆ’ ಇದ್ದೀತೆ? ಇಲ್ಲವೆ ಯುದ್ಧದ ಸಮಯದ ನಟನೆಯು ‘ಅನುಭವದ ಬಗ್ಗೆಯೆ ಇದ್ದೀತೆ? ಮತ್ತು ಇದೆ ಸಂಗತಿಯು ಸತ್ಯ!

ಸ್ಫುಟವಿಚಾರಗಳು.

೧. ಅಖಿಲಭಾರತ ಆಯುರ್ವೇದ ಪರಿಷತ್ತು ಈ ವರ್ಷ ರಾಜಮಹೇಂದ್ರಿಯಲ್ಲಿ ಸೇರಿತ್ತು. ಪುಣೆಯ ಶ್ರೀಯುತ ಕೃಷ್ಣಶಾಸ್ತ್ರಿ ಕವಡೆ ಇವರು ಅಧ್ಯಕ್ಷರಾಗಿದ್ದರು. ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಆಯುರ್ವೇದದ ಮಹತ್ವ, ಉಪಯುಕ್ತತೆ ಮುಂತಾದದ್ದನ್ನು ವಿವರಿಸಿ ಹೇಳಿದ್ದಲ್ಲದೆ, ಪರಿಷತ್ತನ್ನು ಎಡೆಬಿಡದೆ ಸೇರಿಸುತ್ತ ಬಂದ ಕಾರಣ ಇದರ ವಿಷಯದಲ್ಲುಂಟಾದ ತಪ್ಪು ತಿಳಿವುಗಳು ಹೇಗೆ ನಿವಾರಣವಾಗುತ್ತ ಬಂದಿವೆ ಎಂಬುದನ್ನು ಸಹ ಸ್ಪಷ್ಟಪಡಿಸಿದರು. ಪರಿಷತ್ತಿನ ಮುಂದೆ ಬಂದ ಠರಾವುಗಳಲ್ಲಿ ಅನೇಕ ಠರಾವುಗಳು ಆಯುರ್ವೇದದ ಸಂಸ್ಥೆಗಳನ್ನು ಬೇರೆ ಬೇರೆ ಕಡೆಯಲ್ಲಿ ತೆರೆದ ಬಗ್ಗೆ ಮತ್ತು ಸಂಸ್ಥೆಗಳನ್ನು ತೆರೆಯಲು ದ್ರವ್ಯದ್ವಾರಾ ಸಾಹಾಯ್ಯ ಮಾಡಿದವರಿಗೆ ಅಭಿನಂದನವನ್ನು ಮಾಡತಕ್ಕವಿದ್ದವು. ಮದ್ರಾಸಿನ ಆಯುರ್ವೇದ ಕೋಲೇಜಿನ ಹಳೆ ವಿದ್ಯಾರ್ಥಿಗಳ ಒಂದು ಮಂಡಲವು ಸ್ಥಾಪಿಸಲ್ಪಟ್ಟು ಅದರ ಕಾರ್ಯವು ಆಯುರ್ವೇದದ ಪ್ರಗತಿಯನ್ನು ಸಾಧಿಸುವಂತಿರಬೇಕಾಗಿ ನಿರ್ಣಯವಾಗಿದೆ. ಆಯುರ್ವೇದ ಪ್ರಚಾರದ ಬಗ್ಗೆ ಮುನ್ಸಿಪಾಲಿಟಿ ಮತ್ತು ಬೋರ್ಡುಗಳಲ್ಲಿ ಕೆಲವು ಮಟ್ಟಿಗೆ ಯಾವ ಪ್ರೋತ್ಸಾಹವು ಕೊಡಲ್ಪಟ್ಟಿದೆಯೊ ಆ ಸಂಬಂಧವಾಗಿ ಬೋರ್ಡು ಮುನ್ಸಿಪಾಲಿಟಿಗಳನ್ನು ಪರಿಷತ್ತು ಒಂದು ಠರಾವಿನ ಮೂಲಕ ಅಭಿನಂದಿಸಿದೆ. ಆಯುರ್ವೇದವೆಂದರೆ, ಕೆಲವು ಸಮಯದ ಹಿಂದೆ, ಸರಕಾರದ ದೃಷ್ಟಿಯಿಂದ ಅಶಿಕ್ಷಿತರ ಒಂದು ವ್ಯಾಪಾರವಾಗಿತ್ತು. ಆದರೆ ಪರಿಷತ್ತು ಈಗ ೧೦-೧೨ ವರುಷಗಳಿಂದ ಅವ್ಯಾಹತವಾಗಿ ಸೇರುತ್ತ ಬಂದದರಿಂದ ಮತ್ತು ಆಯುರ್ವೇದಾಭಿಮಾನಿಗಳ ಹೆಚ್ಚಿನ ಪ್ರಯತ್ನದಿಂದ ಆ ತಪ್ಪು ತಿಳಿವು ಹೋಗುತ್ತ ಬಂದಿದೆ. ಇಂಥ ಪರಿಸ್ಥಿತಿಯಲ್ಲಿ ಆಯುರ್ವೇದ ವ್ಯವಸಾಯಿಗಳು ತಮ್ಮಲ್ಲಿ ಪುನಃ ಪ್ರತ್ಯಪ್ರತ್ಯೇಕ ತಂಡಗಳನ್ನು ಮಾಡಿಕೊಳ್ಳುವುದು ಉಚಿತವಲ್ಲ; ಘಾತಕವಾಗಿದೆ ಎಂದು ಸೂಚನೆಯನ್ನು ಕೊಟ್ಟು ಅಧ್ಯಕ್ಷರು ಪರಿಷತ್ತನ್ನು ಮುಕ್ತಾಯಪಡಿಸಿದರು. ಸಾರಾಂಶ, ರಾಜಮಹೇಂದ್ರಿಯಲ್ಲಿ ನೆರೆದ ಆಯುರ್ವೇದ ಪರಿಷತ್ತು ಯಶಸ್ವಿಯಾಗಿ ಕೊನೆಗಂಡಿತೆಂದು ಪತ್ರಿಕೆಗಳಿಂದ ಮಾತ್ರವಲ್ಲ, ಇಲ್ಲಿಂದ ಪ್ರತಿನಿಧಿಗಳಾಗಿ ಹೋದ ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿಗಳ ಅನುಭವದಿಂದಲೂ ತಿಳಿದುಬರುತ್ತದೆ.

೨. ದೇಶಬಂಧುಗಳಾದ ಸಿ. ಆರ್. ದಾಸರು ಪ್ರತಿಬಂಧದಿಂದ ಬಿಡುಗಡೆ ಹೊಂದಿ ಬಂದಿದ್ದಾರೆ. ಅವರಿಗೆ ಕಲಕತ್ತೆಯಲ್ಲಿ ಮತ್ತು ಇತರ ಕಡೆಗಳಿಂದ ಸಹ ಅಭಿನಂದನವು ಮಾಡಲ್ಪಡುತ್ತಿದೆ. ಕಲಕತ್ತೆಯಲ್ಲಂತೂ ಕಲಕತ್ತಾ ಕೊರ್ಪೊರೇಶನಿನ ಕಡೆಯಿಂದಲೆ ದಾಸರವರಿಗೆ ಬಹುಮಾನ ಪತ್ರವು ಸಮರ್ಪಿಸಲ್ಪಟ್ಟಿದೆ. ದಾಸರು ಮಾಡಿರುವ ಸ್ವಾರ್ಥತ್ಯಾಗ, ಅನುಭವಿಸಿರುವ ಸಂಕಟ, ಪಟ್ಟಿರುವ ಪರಿಶ್ರಮ ಇವುಗಳನ್ನು ಉಲ್ಲೇಖಿಸಿ ಕೊರ್ಪೊರೇಶನಿನ ಅಧ್ಯಕ್ಷರು ದಾಸರನ್ನು ಮನಃಪೂರ್ವಕವಾಗಿ ಅಭಿನಂದಿಸಿದ್ದಾರೆ. ನಾಗಪುರ ಮುಂತಾದ ಬೇರೆ ಕಡೆಗಳಿಂದಲೂ ಅಭಿನಂದನಪರ ಠರಾವುಗಳು ಅವರಿಗೆ ಬರುತ್ತಿವೆ. ಈ ಮಧ್ಯದಲ್ಲಿ ಹಲವರು, ಅಸಹಕಾರ ಚಳವಳದ ಕಾರ್ಯಕ್ರಮದಲ್ಲಿ ಕೆಲವು ಬದಲಾವಣೆಗಳು ಆಗುವುದು ಅವಶ್ಯವೊ ಹೇಗೆ, ವಕೀಲರು ವಕಾಲತನ್ನು ಪುನಃ ಪ್ರಾರಂಭಿಸಬೇಕೊ ಹೇಗೆ ಇತ್ಯಾದಿ ಪ್ರಶ್ನೆಗಳನ್ನು ಶ್ರೀಯುತ ದಾಸರಿಗೆ ಕೇಳಿರುವರು. ಆದರೆ, ದಾಸರಾಗಲಿ, ಯಾರೆ ಆಗಲಿ, ದೇಶದ ಪರಿಸ್ಥಿತಿಯ ನಿರೀಕ್ಷಣೆಯನ್ನು ಮಾಡದೆ ಒಂದು ನಿಶ್ಚಿತ ಅಭಿಪ್ರಾಯವನ್ನು ಕೊಡುವುದೆಂದರೆ ಅದು ಹೇಗೆ? ಅವರೇನಾದರೂ ಅದೃಷ್ಟ ಸಿದ್ಧಿಯನ್ನು ಹೊಂದಿದವರಿರುತ್ತಾರೆಯೆ? ಆದ್ದರಿಂದ ಶ್ರೀಯುತ ದಾಸರು ಇಂಥ ಪ್ರಶ್ನೆಗಳಿಗೆ ಏನಾದರೂ ಉತ್ತರವನ್ನು ಕೊಟ್ಟು ಅನಂತರ ಆ ಮಾತಿನ ವೃಥಾ ಜವಾಬದಾರಿಯನ್ನು ತಂದುಕೊಳ್ಳುವುದರಲ್ಲಿ ಬೀಳಲಿಲ್ಲ. ಪರಿಸ್ಥಿತಿಯನ್ನು ಸರಿಯಾಗಿ ನಿರೀಕ್ಷಿಸಿ ತನ್ನ ಮತಗಳನ್ನು ಪ್ರಕಟಿಸುವೆನೆಂದು ಅವರು ಉತ್ತರವನ್ನು ಕೊಟ್ಟರು. ಶ್ರೀಯುತ ದಾಸರವರು ಈಗಿನ ಸುಪ್ರಸಿದ್ಧ ಮುಖಂಡರಲ್ಲಿ ಒಬ್ಬರಾದ ಕಾರಣ ಅವರು ದೇಶದ ಪರಿಸ್ಥಿತಿಯನ್ನು ನಿರೀಕ್ಷಿಸಿ, ಅದಕ್ಕೆ ಸರಿಯಾದ ಔಷಧ ಯೋಜನೆಯನ್ನು ಮಾಡಿ, ಈ ದೇಶದ ಚಳವಳವನ್ನು ಮುಂದರಿಸಿಯಾರೆಂದು ದೇಶವು ನಿರೀಕ್ಷಿಸಿಕೊಂಡಿದೆ.

೩. ಅಫಘಾನಿಸ್ಥಾನದ ಅಮೀರ ಸಾಹೇಬರು ತಮ್ಮ ರಾಜ್ಯದಲ್ಲಿ ಗೋವಧೆಯನ್ನು ನಿಲ್ಲಿಸುವ ವಿಷಯದಲ್ಲಿ ಒಂದು ಫರ್ಮಾನನ್ನು (ಹುಕುಮನ್ನು) ಪ್ರಕಟಿಸಿದ್ದಾರೆಂದು ಗೊತ್ತಾಗುತ್ತದೆ. ಈ ಫರ್ಮಾನನ್ನು ಪ್ರಕಟಿಸುವ ಮೊದಲು ಅಮೀರರು ತಮ್ಮ ರಾಜ್ಯದೊಳಗಿನ ಉಲೇಮಾಗಳ ಅಭಿಪ್ರಾಯವನ್ನು ಬೇಡಕೊಂಡರು. ಅಭಿಪ್ರಾಯವನ್ನು ಕೊಡುವಾಗ ಅವರು ಒಂದು ಘಟನಾದ (ರಾಯಸಿನ) ಆಧಾರದ ಮೇಲೆ “ಗೋವಧೆಕ್ಕಿಂತ ಅಜಾವಧವು ಆಗಬಹು”ದೆಂದು ಹೇಳಿದರು. ಈ ರೀತಿಯಿಂದ ೧೩೮ ಉಲೇಮಾ ಜನರ ಸದಭಿಪ್ರಾಯವನ್ನು ಪಡಕೊಂಡು ಅಮೀರ ಸಾಹೇಬರು ಮೇಲಿನಂತೆ ಗೋವಧೆ ಪ್ರತಿಬಂಧದ ಆಜ್ಞೆಯನ್ನು ಹೊರಪಡಿಸಿದ್ದಾರೆ. ಆ ಆಜ್ಞೆಯಲ್ಲಿ ಅಮೀರ ಸಾಹೇಬರು ಹಿಂದೂಸ್ಥಾನದೊಳಗಿನ ಹಿಂದುಗಳನ್ನು ಅಭಿನಂದಿಸಿದ್ದಾರೆ. ಖಿಲಾಫತ ಪ್ರಕರಣದಲ್ಲಿ ಹಿಂದುಗಳು ಮುಸಲ್ಮಾನರ ಸಹಾಯಕ್ಕೆ ನಿಂತು, ಅವರೊಡನೆ ಸಹಾನುಭಾವವನ್ನು ಪಟ್ಟಿದ್ದಾರೆ. ಆದ್ದರಿಂದ ಅವರ ಮನಸ್ಸಿಗೆ ನೋವುಂಟಾಗದಂತೆ ಜಾಗ್ರತೆಯನ್ನು ತೆಕ್ಕೊಳ್ಳುವುದೆಂದರೆ ಮುಸಲ್ಮಾನರು ಗೋವಧೆಯನ್ನು ನಿಲ್ಲಿಸಬೇಕು. ಅವಲ್ಲದೆ, ಬೇಸಾಯ ವೃತ್ತಿಗೆ ಗೋವಧೆಯಿಂದ ಧಾರಾಳ ಹಾನಿಯು ತಟ್ಟುತ್ತದೆ. ಒಟ್ಟಾರೆ ಖಿಲಾಫತ್ ಪ್ರಕರಣದಲ್ಲಿ ಹಿಂದಿಗಳ ಸಹಾಯ್ಯದ ಕೃತಜ್ಞತಾಪೂರ್ವಕ ಸ್ಮರಣೆಯನ್ನು ಮಾಡಿ ಮತ್ತು ಹಿಂದುಮುಸಲ್ಮಾನರ ಐಕ್ಯದ ರಕ್ಷಣವಾಗುವಂತೆ ಮತ್ತು ಗದ್ದೆ ವ್ಯವಸಾಯದ ಉನ್ನತಿಯಾಗುವಂತೆ ಗೋವಧೆಯನ್ನು ನಿಲ್ಲಿಸಬೇಕೆಂದು ಅಫಘಾನ ಅಮೀರ ಸಾಹೇಬರು ಫರ್ಮಾನನ್ನು ಹೊರಡಿಸಿದ್ದಾರೆ. ಅಫಘಾನಸ್ಥಾನದಂಥ ಕೇವಲ ಮುಸಲ್ಮಾನ ರಾಷ್ಟ್ರದಲ್ಲಿ ಹಿಂದುಗಳ ಧಾರ್ಮಿಕ ಮನೋವೃತ್ತಿಗಳನ್ನು ನೋಯಿಸಬಾರದೆಂದು ಯೋಗ್ಯ ಜಾಗ್ರತೆಯನ್ನು ತೆಕ್ಕೊಳ್ಳುತ್ತಾರೆಂದಾದ ಮೇಲೆ ಪ್ರತ್ಯಕ್ಷ ಹಿಂದುಸ್ಥಾನದಲ್ಲಿ ಇಲ್ಲಿಯ ಮಹಮ್ಮದೀಯರು ಮತ್ತು ರಾಜ್ಯಕರ್ತರು ಹೇಗೆ ವರ್ತಿಸಬೇಕೆಂದು ಹೇಳಬೇಕಾದ ಅಗತ್ಯವುಂಟೆ? ಗೋವಧೆಯು ಬರೆ ಧಾರ್ಮಿಕ ಪ್ರಶ್ನೆಯೆ ಅಲ್ಲ, ಕೃಷಿಯ ಮುಖ್ಯ ಪ್ರಶ್ನೆಯೂ ಆಗಿದೆ. ಈ ಮೇರೆಗೆ ಉಭಯ ವಿಧದಿಂದ ಪ್ರಾಮುಖ್ಯವನ್ನು ಹೊಂದಿರುವ ಈ ವಿಷಯವನ್ನು ಹಿಂದೂಸ್ಥಾನದಲ್ಲಿ ಸಹ ಮನ್ನಾಪಡಿಸಿ ಹಿಂದು ಮುಸಲ್ಮಾನರ ಸಖ್ಯವು ಸ್ಥಿರವಾಗಿ[illegible]ತು ಆ ಮೂಲಕ ಸ್ವರಾಜ್ಯವು ಬೇಗನೆ ಬರಲೆಂದು ಹಾರಯಿಸಬೇಕಾಗಿದೆ.

೪. ಕಳೆದ ಸಂಚಿಕೆಯಲ್ಲಿ ಶ್ರೀಯುತ ಭೋಜರಾಜ ಮತ್ತು ಅವರ ಸಹಕಾರಿ ಬೇರೊಬ್ಬ ಗೃಹಸ್ಥರು ಈ ಇಬ್ಬರು ರಾಜಕೀಯ ಕೈದಿಗಳನ್ನು ಜೈಲಿನಲ್ಲಿ ನಡಿಸುವ ವಿಷಯವನ್ನು ಪ್ರಕಟಿಸಿದ್ದೆವಷ್ಟೆ. ಈ ವಿಷಯವು ಪ್ರಥಮತಃ ನ್ಯೂ ಟಾಯಿಮ್ಸ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇದೆ ವಿಷಯವನ್ನು ಕುರಿತು ಮುಂಬಯಿಯ ಕ್ರೊನಿಕಲ್ ಪತ್ರಿಕೆಯು ಒಂದು ಸ್ಫುಟವಿಚಾರವನ್ನು ಬರೆದಿತ್ತು. ಈಗ ಮುಂಬಯಿಯ “ಇನ್‌ಫೊರ್ಮೇಶನ” ಖಾತೆಯ ಡಿರೆಕ್ಟರರು ಈ ವಿಷಯವು ಸತ್ಯವಲ್ಲವೆಂದು ತಿಳಿಸುತ್ತಾರೆ. ಮೇಲಿನ ಕೈದಿಗಳು ಬೇಕಾಯಿದೆಯ ಸಂಘದ ಮೆಂಬರರಾಗಿದ್ದು, ಮಾನ್ಯ ಹಿಂದು ಸದ್‌ಗೃಹಸ್ಥರ ಅಪರಾಧಕ್ಕೆ ಪಾತ್ರರಾಗಿದ್ದುದರಿಂದ ಅವರಿಗೆ ೬ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು. ತಮ್ಮನ್ನು ಜೈಲಿನಲ್ಲಿ ಕೆಟ್ಟ ರೀತಿಯಿಂದ ನಡಿಸಿದರೆಂದು ಈ ಕೈದಿಗಳು ಹೇಳುವ ಮಾತು ಅಸತ್ಯವಾಗಿದೆ ಎಂದು ಮುಂತಾದ ಕೆಲವು ಮಾಹಿತಿಯನ್ನು ಪ್ರಕಟಿಸಿ ಉಳಿದುದನ್ನು ಹಿಂದಿನಿಂದ ಜನತೆಯ ಮುಂದಿಡಲು ಸದರಿ ಡಿರೆಕ್ಟರರು ಆಶ್ವಾಸನೆಯನ್ನಿತ್ತಿದ್ದಾರೆ. ಈಗ ಈ ಡಿರೆಕ್ಟರರ ಮಾಹಿತಿಯು ಸತ್ಯವೊ ಮುಂಚಿನ ಸಂಗತಿಯು ನಿಜವೊ ಇವನ್ನು ಸರಿಯಾಗಿ ನಿರ್ಣಯಿಸುವುದು ಕಷ್ಟವಾದರೂ, ಡಿರೆಕ್ಟರರು ಸರಕಾರಿ ಅಧಿಕಾರಿಗಳಾದ್ದರಿಂದ ಅವರ ಹೇಳಿದ ಮಾಹಿತಿಯೆ ಪ್ರಮಾಣ ಮತ್ತು ಪ್ರಾಮಾಣಿಕವೆಂದು ನೆನಸುವುದು ಯೋಗ್ಯವಾಗಿದೆ. ಯಾಕೆಂದರೆ, ಅಧಿಕಾರಿಗಳ ಹತ್ತಿರ ಸಾಕ್ಷಿ ಪುರಾವೆಗಳು ಇರುವಂತೆ ಅನ್ಯರ ಬಳಿಯಲ್ಲಿರುವುದು ಅಸಾಧ್ಯ. ಈ ವಿಷಯದ ಸತ್ಯಾಸತ್ಯತೆಯು ಹೊರಗೆ ಬರಬೇಕೆಂದು ನಾವಂತುಮೊದಲೆ ಉಲ್ಲೇಖಿಸಿದ್ದೇವೆ. ಇರಲಿ ಈಗಿನಕಾಲದಲ್ಲಿ ಜೈಲಿನಲ್ಲಿ ನಡಿಸುವ ಕ್ರಮವು ಸುಧಾರಿಸಿದ ಜನಾಂಗಕ್ಕೆ ಅತ್ಯಂತ ಲಜ್ಜಾಸ್ಪದವೆಂದು ಶ್ರೀಯುತ ದೇಶಭಕ್ತ ಕರಂದೀಕರರು ಕೇಸರಿಯಲ್ಲಿ ಪ್ರಕಟಿಸಿದ ಮಾಹಿತಿಯ ಮೇಲಿಂದ ಕಂಡುಬರುತ್ತದೆ. ಪ್ರತಿ ದಿನ ಕೈದಿಗಳನ್ನು ಜಡತಿ ಮಾಡುವ ನೆವದಿಂದ ನಗ್ನ ನಿಲ್ಲಿಸುವ ಸಂಗತಿಯಂತೂ ಅತ್ಯಂತ ಉದ್ವೇಗದ್ದಾಗಿದೆ. ಈ ನಗ್ನತೆಯ ಪ್ರಕಾರವು ಸ್ವತಃ ಕೈದಿಗಳ ಅಪಮಾನಕ್ಕೆ ಎಷ್ಟು ಕಾರಣವಾಗಿರುತ್ತದೂ ಅಷ್ಟೆ—ಕೊಂಚ ಹೆಚ್ಚೆ ಎಂದರೂ ಬಾಧಕವಿಲ್ಲ, ಅಲ್ಲಿಯ ಅಧಿಕಾರಿಗಳ ಅಪಮಾನಕ್ಕೂ ಕಾರಣವಾದ್ದು. ಸುಧಾರಿಸಿದ ಇತರ ದೇಶಗಳಲ್ಲಿ ಇಂಥ ಲಜ್ಜಾಸ್ಪದ ಪ್ರಕಾರವು ಇರಲಿಕ್ಕಿಲ್ಲ. ಜೈಲ್ ಕಮಿಟಿಯು ಇತರ ಶಿಫಾರಸುಗಳನ್ನು ಮಾಡುವುದಕ್ಕಿಂತ ಈ ನರಕಪ್ರಕಾರದ ಕುತ್ತಿಗೆಯನ್ನು ಹಿಸುಕಲು ಸೂಚನೆಕೊಟ್ಟು [illegible]ವನ್ನು ಜೈಲುಗಳಲ್ಲಿ ಜಾರಿಗೆ ತರುವುದಾದರೆ, ಅದರಿಂದ ಕೊಂಚ ಮಟ್ಟಿ[illegible]ದರೂ ಜೈಲುಗಳ ಸುಧಾರಣೆ ಮಾಡಿದಂತಾಗುವುದು. ದಿಗಂಬರಸ್ಥಿತಿಯಲ್ಲಿ ನಿಲ್ಲಿಸಿ ಅವರಿಂದ ಆನಂದವನ್ನು ಪಡುವದೆಂದರೆ ಆ ಆನಂದವು ಪೈಶಾಚಿಕ ಆನಂದವೆ ಸರಿ. ದೊಡ್ಡ ಬರಗಾಲ ಬಂದಾಗ ಹೊಟ್ಟೆಗಿಲ್ಲವಾದರೂ ಆದನ್ನು ಲಕ್ಷಿಸುವುದು ಕಡಿಮೆ. ಆದರೆ ಒಂದು ಮೊಳ ಉದ್ದ ಬಟ್ಟೆಯು ಅಗತ್ಯವೆಂಬುವನ್ನು ಯಾರೂ ಅಲ್ಲಗಳೆಯುವುದಿಲ್ಲ. ಹೀಗಿರಲು, ಜೈಲಾಧಿಕಾರಿಗಳು ಇಂಥ ಕೆಟ್ಟ ಮತ್ತು ಕುತ್ಸಿತ ಪ್ರಕಾರವನ್ನು ಯಾಕೆ ಪ್ರಾರಂಭಿಸಿದ್ದಾರೆ? ಅಲ್ಲದೆ ಯುರೋಪಿಯನ್ ಕೈದಿಗಳನ್ನು ಬತ್ತಲೆ ನಿಲ್ಲಿಸಿ ಜಡತಿ ತೆಕ್ಕೊಳ್ಳುವುದಿಲ್ಲವೆಂದು ಗೊತ್ತಾಗುತ್ತದೆ. ಇಂಥ ಪಕ್ಷಪಾತವು ಯಾಕೆ? ಇತರ ಎಲ್ಲ ಸುಧಾರಣೆಗಳಿಗಿಂತ ಈ ಜೈಲ್ ಸುಧಾರಣೆಯು ಮುಖ್ಯವಾದ್ದು. ಆದ್ದರಿಂದ ಈ ಪ್ರಶ್ನೆಯ ಕಡೆಗೆ ಜನತೆಯ ಲಕ್ಷ್ಯವು ಹೋದೀತೆಂದು ಭರವಸೆ ಇದೆ.

೫. ಸರ ಶಂಕರನ್ ನಾಯರರು “ಗಾಂಧಿ ಎಂಡ್ ಎನಾರ್ಕಿ” ಎಂದು ಬರೆದಿರುವ ಪುಸ್ತಕದಲ್ಲಿ ತನ್ನ ಮಾನಹಾನಿಯ ಕೆಲವು ವಿಧಾನಗಳನ್ನು ಮಾಡಿದ್ದಕ್ಕೆ ಸರ್ ಒಡ್ವಾಯರ್ ಇವರು ನಾಯರರ ಮೇಲೆ ಮಾನನಷ್ಟದ ದಾವೆಯನ್ನು ಮಾಡಿದ್ದಾರೆ ಎಂದೀ ಸಂಗತಿಯನ್ನು ನಾವು ಒಂದೊಮ್ಮೆ ಪ್ರಾಸ್ತಾಪಿಸಿದ್ದೇವಷ್ಟೆ. ಈ ಶಂಕರನ್ ನಾಯರರು ಈ ವ್ಯಾಜ್ಯದಲ್ಲಿ ತನ್ನನ್ನು ಸಾಹಾಯಮಾಡಲು ರಾಷ್ಟ್ರೀಯ ಸಭೆಯ ಮುಖಂಡರಿಗೆ ವಿಜ್ಞಾಪನೆಯನ್ನು ಮಾಡಿಕೊಂಡಿದ್ದಾರೆ. ಈ ಬಗ್ಗೆ ಯಾರಾದರೂ ಏನು ಹೆಚ್ಚು ಹೇಳಿಯಾರು? ಶಂಕರನ್ ನಾಯರರು ಒಂದು ಕಾಲದಲ್ಲಿ ರಾಷ್ಟ್ರೀಯ ಸಭೆಯ ಅನುಯಾಯಿಗಳಾಗಿದ್ದು ೧೮೯೭ರಲ್ಲಿ ಅಮರಾವತಿಯಲ್ಲಿ ಜರಗಿದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ಅನಂತರ ಅವರು ಹೈಕೋರ್ಟ್, ವೈಸರಾಯ ಕೌನ್ಸಿಲು, ಇಂಡಿಯಾ ಒಫೀಸು ಇತ್ಯಾದಿ ಒಂದಕ್ಕಿಂತ ಒಂದು ಮೇಲು ತರಗತಿಯ ನೌಕರಿಯಲ್ಲಿ ಸೇರಿದ ಬಳಿಕ ಅವರ, ಹೃದಯದಲ್ಲಿದ್ದ ರಾಷ್ಟ್ರೀಯ ಸಭೆಯ ಮೇಲಿನ ಸಹಾನುಭೂತಿಯು ಬಣಗಿಹೋಯಿತು. ಸ್ವದೇಶ ವಾತ್ಸಲ್ಯ ರಾಷ್ಟ್ರೀಯ ಸಭೆಯ ಮೇಲಿನ ಪ್ರೇಮ ಮತ್ತು ಸ್ವಜನರ ಮೇಲಿನ ಸಹಾನುಭೂತಿ ಇವು ಒಂದು ವೇಳೆ ಲುಪ್ತವಾಗಿ ಹೋದರೂ ಅದು ಕ್ಷಮ್ಯ; ಆದರೆ ಇವುಗಳಿಗೆ ಎದುರಾಗಿ ಯಾವ ಮನುಷ್ಯನು ಯತ್ನಿಸುತ್ತಾನೊ ಅಂಥವನ ಮನೋರಚನೆಯು ನಿಜವಾಗಿ ಹೇಗಿರಬಹುದು? ಈ ದೃಷ್ಟಿಯಿಂದ ಹೇಳುವುದಾದರೆ, ನಾಯರರು ಮುಂಬಯಿಯ ಶಾಂತತಾ ಪರಿಷತ್ತಿನಲ್ಲಿ ಮತ್ತು ಅನಂತರ ಈ ಪುಸ್ತಕದಲ್ಲಿ ರಾಷ್ಟ್ರೀಯ ಸಭೆ, ಗಾಂಧಿ ಮುಂತಾದವರ ಬಗ್ಗೆ ಯಾವ ತಮ್ಮ ಉಜ್ವಲದ್ವೇಷವನ್ನು ಕಾರಿದ್ದಾರೊ ಅದರ ಮೇಲಿಂದ ಈ ಮನುಷ್ಯರಿಗೆ ಯಾರಾದರೂ ಹೇಗೆ ಸಹಾಯ ಮಾಡತಕ್ಕದ್ದು? ಅದಲ್ಲದೆ, ರಾಷ್ಟ್ರೀಯ ಸಭೆಯು ಕೋರ್ಟ್ ಬಹಿಷ್ಕಾರದ ಠರಾವನ್ನು ಇಟ್ಟುಕೊಂಡಿರುವಾಗ ಮತ್ತು ಕಸ್ತೂರಿ ರಂಗ ಐಯ್ಯಂಗಾರರು ಸಿವಿಲ್ ಡಿಸ್ ಒಬ್ಬೀಡಿಯನ್ಸ್ ಕಮಿಟಿಯ ಒಬ್ಬರು ಮೆಂಬರರಾಗಿರುವಾಗ ಅವರ ಪತ್ರಿಕೆಯಾದ “ಹಿಂದು”ವು ನಾಯರರನ್ನು ಸಾಹಾಯ ಮಾಡಲು ಹೇಳುತ್ತದೆ. ಇದು ವಿಚಿತ್ರವಲ್ಲವೆ? ರಾಷ್ಟ್ರೀಯ ಸಭೆಯು ಕೋರ್ಟ್ ಬಹಿಷ್ಕಾರವನ್ನು ಬಿಟ್ಟು ಬಿಡುವ ವರೆಗೆ, ಅಥವಾ ಕಡಿಮೆ ಪಕ್ಷದಲ್ಲಿ ಸಡಿಲು ಮಾಡುವ ವರೆಗೆ ಕೋರ್ಟಿನಲ್ಲಿ ವ್ಯಾಜ್ಯ ನಡಿಸುವವರಿಗೆ ರಾಷ್ಟ್ರೀಯ ಸಭೆಯಾಗಲಿ ಅಥವಾ ಅದರ ಕಡು ಅನುಯಾಯಿಗಳಾಗಲಿ ಸಹಾಯ್ಯಕ್ಕೆಳಿಯುವುದು ಸಮಂಜಸವಲ್ಲ. ಆದ್ದರಿಂದ ಹಿಂದು ಪತ್ರಿಕೆಯ ಸೂಚನೆಯು ರಾಷ್ಟ್ರೀಯ ಸಭಾನುಯಾಯಿಗಳ ದೃಷ್ಟಿಯಿಂದ ಅಯುಕ್ತವು. ಈಗ ರಾಷ್ಟ್ರೀಯ ಸಭೆಯು ಕಾರ್ಯಕ್ರಮದಲ್ಲಿ ಇತರ ಸಂಗತಿಗಳಂತೆ ಕೋರ್ಟ ಬಹಿಷ್ಕಾರದ ವಿಷಯವು ಸಡಿಲಾಗಬೇಕೆಂದು ವಿಹಿತವೆ ಸರಿ. ಮತ್ತು ಆ ದೃಷ್ಟಿಯಿಂದ ಈ ಸೂಚನೆಯು ಇದ್ದದ್ದಾದರೆ ನಾವು ಕೂಡ ಅದನ್ನು ಅನುಮೋದಿಸುವೆವು.

೬. ಅಹಮದಾಬಾದಿನಲ್ಲಿ ರಾಷ್ಟ್ರೀಯ ಚಳವಳವು ದಿನದಿನಕ್ಕೆ ಹೆಚ್ಚುತ್ತಲಿದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಮಹಾತ್ಮಜೀಯವರು ತಮ್ಮ ಅಸಹಕಾರಿತೆಯ ಯುದ್ಧದಲ್ಲಿ ಇದನ್ನು ಕೇಂದ್ರಸ್ಥಾನವನ್ನಾಗಿಟ್ಟು ಬಹು ಉತ್ಸಾಹದಿಂದ ಕೆಲಸ ಮಾಡಿ ಹಿಂದುಸ್ಥಾನದ ಇತರ ದೇಶಗಳಿಗೆ ಇದನ್ನು ಉದಾಹರಣೆಯಾಗಿ ಇಟ್ಟದ್ದರು. ಅದೇ ಪ್ರಕಾರ ಎಷ್ಟೋ ಕಾರ್ಯಗಳಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅಹಮದಾಬಾದಿನಲ್ಲಿ ರಾಷ್ಟ್ರೀಯ ಶಾಲೆಗಳು ಹಲವು ಇದ್ದು ಈಗ ಎಲ್ಲಾ ರಾಷ್ಟ್ರೀಯ ಶಾಲೆಗಳಲ್ಲಿ ಕೂಡಿ ೮೦೦೦ ವಿದ್ಯಾರ್ಥಿಗಳಿದ್ದಾರೆಂದು ಅಲ್ಲಿಯ ಬಾತಮಿದಾರರು ತಿಳಿಸುತ್ತಾರೆ! ಇದನ್ನು ಕೇಳಿ ಯಾರಿಗೂ ಸಂತೋಷವಾಗದೆ ಇರಲಿಕ್ಕಿಲ್ಲ. ಆದರೆ ಅಲ್ಲಿಯ ಮುನ್ಸಿಪಾಲಿಟಿಯು ಪ್ರಾಯಮರಿ ಎಜ್ಯುಕೇಶನ್‌ನ್ನು ಧರ್ಮಾರ್ಥವಾಗಿ ಕೊಡುವುದರಿಂದ ಮುನ್ಸಿಪಲ್ ಶಾಲೆಗಳಲ್ಲಿ ವಿದ್ಯಾರ್ಥಿಗಳು ಸ್ವಲ್ಪ ಮಟ್ಟಿಗೆ ಹೆಚ್ಚಿದ್ದಾರೆ. ಆದರೂ ಕೂಡ ರಾಷ್ಟ್ರೀಯ ಶಾಲೆಯ ಏಳಿಗೆಯು ಬಹು ತೃಪ್ತಿಕರವಾಗಿದೆ. ಅಲ್ಲಿಯ ರಾಷ್ಟ್ರೀಯ ಶಾಲಾ ಬೋರ್ಡಿನ ಕಾರ್ಯದರ್ಶಿಗಳು ಶಾಲೆಯ ಆಡಳಿತೆಯನ್ನು ಒಳ್ಳೇ ರೀತಿಯಿಂದ ಇಡಲು ಸ್ವಾರ್ಥ ರಹಿತವಾಗಿ ಕಷ್ಟಪಡುತ್ತಿದ್ದಾರೆ. ಅಲ್ಲದೆ ಇವರು ರಾತ್ರಿ ಹಗಲು ಹಣವನ್ನು ಕೂಡಿಸುತ್ತಾರೆ. ಇಷ್ಟರವರೆಗೆ ರಾಷ್ಟ್ರೀಯ ವಿದ್ಯಾಶಾಲೆಗಳಿಗೆಂದು ಕೂಡಿಸಿದ ಈ ಹಣವು ಈಗ ೧೬,೦೦೦೦ ರೂಪಾಯಿ ಆಗಿದೆಯಂತೆ. ಇರಲಿ, ರಾಷ್ಟ್ರೀಯ ಅಭಿವೃದ್ಧಿಗೋಸ್ಕರ ಎಲ್ಲ ಸದ್ಗೃಹಸ್ಥರು ಅಭಿಮಾನವನ್ನು ಬದಿಗಟ್ಟು ಕಾರ್ಯವನ್ನು ಮಾಡುವುದು ಉತ್ತಮವು. ಆದ್ದರಿಂದ ಮೇಲಿನ ಕಾರ್ಯದರ್ಶಿಗಳ ಸಾಹಸವನ್ನು ನೋಡಿ ಯಾರು ಅವರನ್ನು ಕೊಂಡಾಡದೆ ಇರಲಿಕ್ಕಿಲ್ಲ? ರಾಷ್ಟ್ರ ಹಿತಕ್ಕೋಸ್ಕರ ಕೆಲಸ ಮಾಡುವವರು ಪ್ರಥಮತಃ ಸ್ವಾರ್ಥವನ್ನು ಬಿಡಬೇಕು ಮತ್ತು ಏಕಾಗ್ರ ದೃಷ್ಟಿಯಿಂದ ತಾವು ಕೈಕೊಂಡ ವ್ರತದ ಏಳಿಗೆಯನ್ನು ಮಾಡುವುದರಲ್ಲಿ ತೊಡಗಬೇಕು. ಕೆಲವು ದಿವಸಗಳ ಹಿಂದೆ ಅಹಮದಾಬಾದಿನ ಕಲೆಕ್ಟರರು ರಾಷ್ಟ್ರೀಯ ಶಾಲೆಗಳು ದಿನದಿನೆ ಕಡಿಮೆಯಾಗುತ್ತ ಬರುತ್ತಿವೆ. ಮತ್ತು ಆ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿದೆ ಎಂದು ಮುಂತಾದ ಹಲವು ದೂಷಣೆಗಳನ್ನು ಬೀರಿ ಇತರ ಜನರ ಮತವನ್ನು ಕಲುಷಿತ ಮಾಡಿದರು. ಆದರೆ ಅನಂತರ ರಾಷ್ಟ್ರೀಯ ಶಾಲೆಗಳ ಕಾರ್ಯದರ್ಶಿಗಳು ಮುನ್ಸಿಪಾಲಿಟಿಯ ಅಧ್ಯಕ್ಷರಿಗೆ ಪತ್ರ ಮುಖಾಂತರ ತಿಳಿಸಿದರೇನೆಂದರೆ “ನಿಮ್ಮ ಒಬ್ಬ ಗೃಹಸ್ಥರು ನಮ್ಮ ಶಾಲೆಗಳಿಗೆ ಬಂದು ವಿದ್ಯಾರ್ಥಿಗಳ ಸಂಖ್ಯೆಯನ್ನು ಪರೀಕ್ಷಿಸಲಿ. ನಮ್ಮ ಒಬ್ಬ ಗೃಹಸ್ಥರು ನಿಮ್ಮ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಶೋಧಿಸಲಿ” ಅವರ ಈ ಪತ್ರಕ್ಕೆ ಯಾವ ಉತ್ತರವೂ ಇಲ್ಲವಂತೆ! ಇದರಿಂದೇನು ತಿಳಿಯಬೇಕು. ಮುನ್ಸಿಪಾಲಿಟಿಯು ಸತ್ಯಾಂಶವನ್ನು ಹೊರಪಡಿಸಲು ಸಿದ್ಧವಾಗಿಲ್ಲ. ಎಂದ ಮೇಲೆ ಕಲೆಕ್ಟರರ ವಾಕ್‌ಶಸ್ತ್ರಗಳು ನಿರರ್ಥಕವಾಗಿ ಹೋದವು ಎಂದು ಹೇಳಲು ಯಾವ ತೊಂದರೆಯೂ ಇಲ್ಲ. ಈಗಲೂ ಕೂಡ ಕಲುಷಿತವಾದ ಕೆಲವರ ಮನಸ್ಸು ಭ್ರಮನಿರಸನವನ್ನು ಹೊಂದೀತೆ?

ಮಂಗಳೂರು.

ಬರುವ ತಾರೀಕು ೨೧ನೇ ಆದಿತ್ಯವಾರ ಗಂಟೆ ೫ಕ್ಕೆ ಮಂಗಳೂರು ತಾಲೂಕು ಕಾಂಗ್ರೆಸು ಕಮ್ಮಿಟಿಯ ಮಹಾ ಸಭೆಯು ತಿಲಕ ಮಹಾ ವಿದ್ಯಾಲಯದಲ್ಲಿ ಜರಗುವುದು. ಇದನ್ನು ಇದೇ ತಾ. ೧೪ಕ್ಕೆ ಕೂಡಿಸಬೇಕೆಂದಿದ್ದರೂ ರಾ| ಕಾರ್ನಾಡು ಸದಾಶಿವ ರಾಯರು ಆ ಸಮಯ ಕಲ್ಕತ್ತೆಗೆ ಹೋಗುವರಾಗಿ ತಿಳಿದುದರಿಂದ ಈ ಪ್ರಕಾರ ಮುಂದರಿಸಿಡಬೇಕಾಯಿತು. ಎಲ್ಲಾ ಸದಸ್ಯರೂ ಈ ಸಭೆಗೆ ಬರಬೇಕಾಗಿ ರಾ. ಮೂಡಬಿದರೆ ಉಮೇಶರಾಯರು ಈ ಮೂಲಕ ವಿನಂತಿಮಾಡಿಕೊಳ್ಳುತ್ತಾರೆ.

ಕಳೆದ ಆದಿತ್ಯವಾರ ಸ್ವಯಂಸೇವಕರು ಪಟ್ಟಣದಲ್ಲಿ ತಿರುಗಿ ೫೮ ರೂಪಾಯಿ ೫ ಅಣೆ ೯೦| ಸೇರು ಅಕ್ಕಿ ೬|| ರೂಪಾಯಿ ಬೆಲೆಯ ಒಂದು ಹೊಸ ಪುಸ್ತಕ ಮತ್ತು ಎರಡು ಟೋಪಿಗಳನ್ನು ಪಡೆದರು. ಸ್ವಯಂಸೇವಕರು ಅಂಗಡಿಗಳಿಗೆ ಹೋದಾಗ ಬಾಗಿಲು ತೆರೆಯದೆ ಇದ್ದ ಕೆಲವು ವ್ಯಾಪಾರಸ್ಥರು ತಿಲಕ ವಿದ್ಯಾಲಯಕ್ಕೆ ಬಂದು ತಾವು ವಾಗ್ದಾನಮಾಡಿದ ಹಣವನ್ನು ಕೊಟ್ಟಿರುತ್ತಾರೆ.

ನಾಳೆ ಗಂಟೆ ೫||ಗೆ ತಿಲಕ ಮಹಾ ವಿದ್ಯಾಲಯದಲ್ಲಿ ರಾ| ಚಿಂತಾಮಣಿ ಭಟ್ಟರು ಅಸಹಕಾರದ ವಿಷಯವಾಗಿ ಕೀರ್ತನೆಯನ್ನು ಮಾಡುವರು. ಎಲ್ಲರಿಗೂ ಸುಸ್ವಾಗತವಿದೆ.

ಮದ್ರಾಸು ಸರಕಾರದ ಡೆವಲಪ್‌ಮೆಂಟ್ ಮಿನಿಸ್ಟರರು ಇದೇ ತಿಂಗಳ ಅಂತ್ಯದೊಳಗೆ ಮಂಗಳೂರಿಗೆ ಬರುವದರಿಂದ ಅವರ ಮುಂದೆ ನಮ್ಮ ಮಂಗಳೂರು ಅರ್ಸಿಕೆರೆ ರೈಲ್ವೆ ತೆರೆಯುವ ವಿಷಯವಾಗಿಯೂ ಮಂಗಳೂರು ಬಂದರವನ್ನು ಅಭಿವೃದ್ಧಿಗೊಳಿಸುವ ಏರ್ಪಾಡಿನ ವಿಷಯವಾಗಿ ಮನವಿಮಾಡಿಕೊಳ್ಳುವರೆ ಪಟ್ಟಣದ ಮುಂದಾಳುಗಳ ಒಂದು ಕಮ್ಮಿಟಿಯನ್ನು ರಚಿಸಲಿಕ್ಕೂ ಈ ಎರಡು ವಿಲೆವಾರಿಗಳಿಗೆ ಸಂಬಂಧಪಟ್ಟ ಬೇರೆ ಸಂಗತಿಗಳು ಚರ್ಚಿಸಲಿಕ್ಕೂ ಈ ಊರ ಪಟ್ಟಣಿಗರ ಒಂದು ಮಹಾ ಸಭೆಯು ನಾಳೆದಿನ ಸಾಯಂಕಾಲ ೫-೩೦ ಘಂಟೆಗೆ ಗವರ್ನಮೆಂಟ್ ಕೋಲೇಜಿನ ಹೋಲಿನಲ್ಲಿ ಜರಗುವುದು. ಸರ್ವರಿಗೂ ಸುಸ್ವಾಗತವಿದೆ.

ಕಳೆದ ಆದಿತ್ಯವಾರ ಸಂಜೆ ೬ ಗಂಟೆಗೆ [illegible]ದಾನಿನಲ್ಲಿ ಒಂದು ದೊಡ್ಡ ಮತ್ತು ಒಂದು ಸಣ್ಣ ಬೀಗದಕೈ ಇರುವಂಥಾ ಒಂದು ಬೀಗದ ಗೊಂಚಲು ತನಗೆ ಸಿಕ್ಕಿರುತ್ತದೆ. ಆದುದರಿಂದ ಅದರ ಯಜಮಾನರು ಬಂದು ಗುರುತನ್ನು ತೋರಿಸಿದರೆ, ಪಕ್ಕೀರ್ ಸ್ಟ್ರಾಟ್, ಸೈಕಲ್ ರಿಪೇರಂ ಮೈದಾನ್ ರೋಡ್, ಇವರಲ್ಲಿ ಇದು ದೊರೆಯುವುದೆಂದು ಮಿ| ಕೆ. ಎಸ್ ಅಬ್ದುಲ್‌ರಹಿಮಾನ್ ಇವರು ತಿಳಿಸುತ್ತಾರೆ.

ನಿರಾಶ್ರಿತ ಜನಸಹಾಯಕ ಸಂಘದ ಕಡೆಯಿಂದ ಸೆಕ್ರೆಟರಿ ರಾವ ಸಾಹೇಬ ಕುದ್ಮುಲ ರಂಗರಾಯರು ಮಂಗಳೂರು ಕೆನರಾ ಬ್ಯಾಂಕಿನ ಮೇಲೆ ರೂಪಾ ೫೦ಕ್ಕೆ ಉಡುಪಿಯಲ್ಲಿರುವ ಮ| ರಾ| ರಾ| ಸುಜೀರ ಸಂಜೀವರಾಯರಿಗೆ ಕೊಟ್ಟ ಚೆಕ್ಕು ಅವರಿಗೆ ತಲ್ಪದೆ ಕಾಣೆಯಾಗಿರುವದರಿಂದ ಅದನ್ನು ಯಾರೂ ಸ್ವೀಕರಿಸಬಾರದಾಗಿ ರಾ| ರಂಗರಾಯರು ಎಲ್ಲಾ ಬ್ಯಾಂಕುಗಳಿಗೆ ಬರೆದಿರುತ್ತಾರೆ.

ಬರುವ ತಾ. ೨೨ನೇ ಸೋಮವಾರ ಅಪರಾಹ್ನ ೩ ಘಂಟೆಗೆ ಕಲೆಕ್ಟರರ ಆಫೀಸಿನಲ್ಲಿ ಡಿಸ್ಟ್ರಿಕ್ಟ ಬೋರ್ಡಿನ ಮೀಟಿಂಗು ಸೇರುವುದು.

ರಾವ್ ಸಾಹೇಬ್ ಕುದ್ಮುಲ್ ರಂಗರಾಯರ ಕಿರಿ ಮಗಳು ಶ್ರೀಮತಿ ಶಾಂತಿಬಾಯಿ ಬಿ. ಎ. (ಓನರ್ಸ್) ಎಲ್. ಟಿ. ಯವರು ಮದ್ರಾಸಿನ ವಿಮೆನ್ಸ್ ಕೋಲೇಜಿನಲ್ಲಿ ಚರಿತ್ರೆ ಮತ್ತು ಅರ್ಥ ಶಾಸ್ತ್ರಗಳ ಅಧ್ಯಾಪಕಿಯಾಗಿ ನೇಮಕಪಟ್ಟಿರುವರಂತೆ.

ಕೋಕನಟ್ ಪೆಸ್ಟ್ ಹಾಗೂ ತೆಂಗಿನ ಮರಗಳ ವ್ಯಾಧಿಯನ್ನು ನಿವಾರಿಸುವ ಪ್ರಯತ್ನವು ಎಗ್ರಿಕಲ್ಚರಲ್ ಡಿಪ್ಯೂಟೀ ಡೈರೆಕ್ಟರರ ಮೇಲ್ವಿಚಾರದಿಂದ ನಡೆಯುತ್ತದೆ. ತೆಂಗಿನ ಮರಗಳ ಗರಿಗಳನ್ನು ಕತ್ತರಿಸುವ ಕೆಲಸವು ೮ ಜನ ಆಫೀಸರರ ಸಹಾಯದಿಂದ ಕ್ರಮವಾಗಿ ದಿನಂಪ್ರತಿ ನಡೆಯುತ್ತದೆ.

ಮಹಾತ್ಮಾ ಗಾಂಧಿಗಳ ಬಂಧನ ದಿನಾಚರಣೆಯ ಸಲುವಾಗಿ ಈ ದಿನ ಬೆಳಿಗ್ಗೆ ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ನಗರ ಸಂಕೀರ್ತನೆಯು ಮೆರವಣಿಗೆಯೂ ನಡೆಯಿತು. ಸಾಯಂಕಾಲ ಟೈನು ಮೈದಾನಿನಲ್ಲಿ ಒಂದು ಸಭೆ ಕೂಡಲಿಕ್ಕಿದೆ.

ಅಸ್ಪೃಶ್ಯತಾ ನಿವಾರಣ.

(ಹಿಂದೂ ಬಾಂಧವರಿಗೆ ವಿನಂತಿ).

ಪ್ರಿಯ ವಾಚಕರೇ! ಅಸ್ಪೃಶ್ಯತೆಯ ವಿಷಯವಾಗಿ ಈ ಪತ್ರದಲ್ಲಿ ನಾನು ಬರೆಯುತ್ತಿದ್ದ ಲೇಖನಗಳಲ್ಲಿ ಇದು ಕೊನೆಯದಾಗಿದೆ. ಯಾವ ದೃಷ್ಟಿಯಿಂದ ನೋಡಿದರೂ ಅಸ್ಪೃಶ್ಯತೆಯೆಂಬುದೊಂದು ಮಹಾ ಪಾಪವೆಂದು ನಾನು ನಿಮ್ಮ ಮನಸ್ಸಿಗೆ ಖಚಿತಮಾಡಿರುವೆನೆಂದು ಭಾವಿಸುತ್ತೇನೆ. ಅಸ್ಪೃಶ್ಯತೆಯೆಂಬುದು ಧಾರ್ಮಿಕ, ರಾಷ್ಟ್ರೀಯ ಐತಿಹಾಸಿಕ ಮತ್ತು ಮಾನುಷತ್ವದ ದೃಷ್ಟಿಯಿಂದೆಲ್ಲಾ ತಪ್ಪೆಂದು ತೋರಿಸುವರೆ ನನ್ನ ಅಭಿಪ್ರಾಯವನ್ನು ನಿಮ್ಮ ಮುಂದಿಟ್ಟಿರುತ್ತೇನೆ. ಈ ಮಹತ್ವಾದ ವಿಷಯದಲ್ಲಿ ನಮ್ಮೆಲ್ಲರ ಮುಖ್ಯ ಕರ್ತವ್ಯವೇನೆಂದು ಆಲೋಚಿಸಬೇಕೆಂದು ನಿಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಹಿಂದೂಸ್ಥಾನದ ಅವನತಿಗೆ ಕಾರಣವಾಗಿಯೂ, ಹಿಂದೂ ಧರ್ಮಕ್ಕೆ ಕಳಂಕವಾಗಿಯೂ ಇರುವ ಈ ಅಸ್ಪೃಶ್ಯತೆಯನ್ನು ನಿವಾರಿಸುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ಎಷ್ಟೆಷ್ಟು ಕೆಲಸ ಮಾಡಿದ್ದೀರೆಂದು ನೀವು ನೀವೇ ಪರೀಕ್ಷಿಸಿಕೊಳ್ಳಬೇಕಾಗಿ ನಿಮ್ಮೆಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಷಯದಲ್ಲಿ ಪ್ರತಿಯೊಬ್ಬನೂ ಮನಃಪೂರ್ವಕವಾಗಿ ಪರ್ಯಾಲೋಚಿಸಿ, ಅನಂತರ ಈ ಕಳಂಕವನ್ನು ಹೋಗಲಾಡಿಸುವರೆ ಯೋಗ್ಯವಾದ ಉಪಾಯಗಳನ್ನು ಮಾಡಬೇಕು. ನಿಮ್ಮ ಸೋದರರನ್ನೆ ಕಾಲಿಂದೊದೆದು ಅಮಾನುಷ ರೀತಿಯಿಂದ ನಡೆಯಿಸುವುದನ್ನು ಎಷ್ಟರ ವರೆಗೆ ನೀವು ಬಿಡುವುದಿಲ್ಲವೋ! ಎಂದಿನ ವರೆಗೆ ಈಗ ಅಡಿಗೊತ್ತಲ್ಪಟ್ಟವರ ಆರ್ಥಿಕ, ಮಾನಸಿಕ ಮತ್ತು ಧಾರ್ಮಿಕ ಸ್ಥಿತಿಯನ್ನು ಉದ್ಧಾರ ಮಾಡಲು ನೀವು ಯತ್ನಿಸುವುದಿಲ್ಲವೋ, ಅಂದಿನ ವರೆಗೆ ನಿಜವಾಗಿಯೂ ನಿಮಗೆ ಸ್ವರಾಜ್ಯವು ದೊರೆಯಲಾರದೆಂದು ನಾನು ತಿರಿಗೊಮ್ಮೆ ಹೇಳಬೇಕಾಗಿದೆ. ಬಿತ್ತಿದಂತೆ ಕೊಯ್ಯಬೇಕೆಂಬ ನ್ಯಾಯವನ್ನು ಕಲಿಸುವ ಕರ್ಮಶಾಸ್ತ್ರವನ್ನು ನೀವು ನಂಬುತ್ತೀರಿ. ನಾವು ನಮ್ಮ ಜನಾಂಗದ ಒಂದು ಐದನೇ ಅಂಶವನ್ನು ಅಸ್ಪೃಶ್ಯರೆಂದಿಟ್ಟಿರುವುದರಿಂದಲೇ ಇಡೀ ಪ್ರಪಂಚದ ದೊಡ್ಡ ದೊಡ್ಡ ಜನಾಂಗಗಳು ನಮ್ಮನ್ನು ಪಂಚಮರ ಜನಾಂಗದಂತೆ ನಡೆಯಿಸುತ್ತಾರೆಂಬುದು ನಿಮಗೆ ಗೊತ್ತಿಲ್ಲವೇ? ಮಹಾತ್ಮಾ ಗಾಂಧಿಯವರು, "ಅಸ್ಪೃಶ್ಯತೆಯ ಕಳಂಕವನ್ನಿಟ್ಟುಕೊಂಡು ಪವಿತ್ರವಾದ ಹಿಂದೂ ಧರ್ಮವನ್ನೇ ಅಪವಿತ್ರಮಾಡುವುದಾದರೆ ಅಂತಹ ಹಿಂದುಗಳು ಎಷ್ಟು ಮಾತ್ರಕ್ಕೂ ಸ್ವರಾಜ್ಯಕ್ಕೆ ಯೋಗ್ಯರಲ್ಲ. ಮಾತ್ರವಲ್ಲ, ಅವರಿಗೆಂದೂ ಸ್ವರಾಜ್ಯವು ದೊರೆಯಲಾರದು. ನಮ್ಮ ಜನಾಂಗದ ಒಂದು ಐದನೇ ಅಂಶದವರಿಗೆ ನಮ್ಮಂತೆಯೇ ಏಕರೀತಿಯಿಂದ ಸಂಘದ ಸ್ವಾತಂತ್ರ್ಯವನ್ನು ಕೊಡದಿರುವುದರಿಂದ ನಾವು ದೇವರನ್ನೇ ಅಲ್ಲಗಳೆದಂತಾಗುತ್ತದೆ. ನಾವು ಹಾಗೆ ಮಾಡಬಾರದು." ಎಂದು ಹೇಳಿದ ಮಾತಿನಲ್ಲಾದರೂ ನಿಮಗೆ ವಿಶ್ವಾಸವಿಲ್ಲವೇ? ಇದು ನ್ಯಾಯವೆಂದು ನಿಮಗೆ ಕಂಡದ್ದೇ ಆದರೆ ಈ ಬಡ ಜನರನ್ನು ಉದ್ಧಾರ ಮಾಡುವುದಕ್ಕಾಗಿ ಸ್ಥಾಪಿಸಿದ ಸಂಸ್ಥೆಗಳಿಗೆ ನೀವು ಸೇರಿಕೊಂಡು, ಈ ಪವಿತ್ರ ಕಾರ್ಯವನ್ನು ಕೈಕೊಳ್ಳುವರೆ ಸಿದ್ಧರಾಗಬೇಡವೇ? ಬಡ ಪಂಚಮ ಸೋದರರ ಮಧ್ಯ ಕೆಲಸಮಾಡುವುದಕ್ಕಾಗಿ ಆರ್ಯಸಮಾಜ ಸೇವಾ ಸಮಿತಿಯೊಂದನ್ನು ಇತ್ತೀಚೆಗೆ ಏರ್ಪಡಿಸಿಯದೆಂಬ ವಿಷಯವು ನಿಮಗೆಲ್ಲರಿಗೂ ಗೊತ್ತೇ ಇರಬಹುದು. ಈ ಸಮಿತಿಗೆ ಸೇರಿದವರು ಪಂಚಮರ ವಾಸಸ್ಥಾನಗಳಿಗೆ ಹೋಗಿ, ಅವರಿಗೆ ನೈರ್ಮಲ್ಯವನ್ನು ಕಲಿಸುತ್ತಲೂ, ಚರಕಗಳನ್ನು ಅವರಿಗೆ ಕೊಡುತ್ತಲೂ ಕುಡಕತನವೇ ಮೊದಲಾದ ದುರಭ್ಯಾಸಗಳನ್ನು ಬಿಡುವಂತೆ ಅವರಿಗೆ ಹೇಳಿಕೊಳ್ಳುತ್ತಲೂ, ಉತ್ತಮರೀತಿಯಿಂದ ತಮ್ಮ ಕರ್ತವ್ಯವನ್ನು ಮಾಡುತ್ತಲಿದ್ದಾರೆಂದು ಹೇಳುವರೆ ನಾನು ತುಂಬಾ ಸಂತೋಷಪಡುತ್ತೇನೆ. ಆದುದರಿಂದ ಈ ಕಾರ್ಯವು ಯಾರ ಮನಸ್ಸಿಗೆ ಹಿತವಾಗುತ್ತದೋ ಅಂಥವರು ಈ ಸಮಿತಿಗೆ ಸೇರಿ ತಮ್ಮ ಕೈಲಾದ ಮಟ್ಟಿಗೂ ಈ ಕಾರ್ಯವನ್ನು ನೆರವೇರಿಸಬೇಕಾಗಿ ವಿನಂತಿ.

ಸಾರ್ವಜನಿಕ ಶಾಲಾಧಿಕಾರಿಗಳಿಗೆ ನನ್ನ ಎರಡು ಮಾತುಗಳು. ಪಂಚಮರನ್ನುದ್ಧರಿಸುವುದು ನಿಮ್ಮ ಕರ್ತವ್ಯವೆಂದು ನೀವು ನಂಬುವುದಾದರೆ, ಸಾರ್ವಜನಿಕ ಶಾಲೆಗಳಲ್ಲಿ ಎಲ್ಲರಿಗೂ ಎಡೆಯಿರಬೇಕೆಂದು ನೀವು ಮನಃಪೂರ್ವಕವಾಗಿಯೂ ಎಣಿಸುವುದಾದರೆ, ಬರೇ ಒಂದು ಪಂಚಮ ಜಾತಿಯಲ್ಲಿ ಹುಟ್ಟಿದುದಕ್ಕಾಗಿ ನಮ್ಮ ದೇಶಬಾಂಧವರಲ್ಲಿ ಕೆಲವರನ್ನು ಈ ಸಂಸ್ಥೆಗಳಿಗೆ ಬರಗೊಡದಿರುವುದು ತಪ್ಪೆಂದು ನಿಮ್ಮ ಮನಸ್ಸಿಗೆ ಸಮಾಧಾನವಾದರೆ, ಶೌಚಾದಿ ಉತ್ತಮ ಅಭ್ಯಾಸಗಳನ್ನು ಕಲಿಸಿ ಉದ್ಧಾರಮಾಡುವುದಕ್ಕಾಗಿ, ಅತೀ ಕೀಳುಜಾತಿಯ ಹುಡುಗರನ್ನೂ ನಿಮ್ಮ ಶಾಲೆಗಳಿಗೆ ತೆಗೆದುಕೊಳ್ಳಲು ನೀವು ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ತಿರಿಗಿ ತಿರಿಗಿ ನಿಮ್ಮನ್ನು ಪ್ರಾರ್ಥಿಸುತ್ತೇನೆ. ಪಂಚಮ ವಿದ್ಯಾರ್ಥಿಗಳನ್ನು ಹೊಸದಾಗಿ ಸೇರಿಸಿಕೊಂಡ ಇಲ್ಲಿಯ ಗವರ್ನಮೆಂಟ್ ಕಾಲೇಜಿನ ಅಧಿಕಾರಿಗಳ ಮಾದರಿಯನ್ನಾದರೂ ತೆಗೆದುಕೊಳ್ಳಿರಿ. ನನ್ನ ವಿಜ್ಞಾಪನೆಯು ನಿರರ್ಥಕವಾಗಲಾರದೆಂದು ನಾನು ಎಣಿಸುತ್ತೇನೆ. ವಿದ್ಯೆಯಿಲ್ಲದ ಬೇರೆಯವರು ಹೇಳುವ ಮಾತಿಗೆ ಕಿವಿಗೊಡದೆ ನಮ್ಮಲ್ಲಿ ಪ್ರತಿಯೊಬ್ಬನೂ ಅವನವನ ಕರ್ತವ್ಯವನ್ನು ಮಾಡುವ.

ಧರ್ಮದೇವ ಸಿದ್ಧಾಂತಾಲಂಕಾರ.
ಆರ್ಯಸಮಾಜ, ಮಂಗಳೂರು.

ವಿ. ಸೂ. ಆರ್ಯಸಮಾಜ ಸೇವಾ ಸಮಿತಿಯ ವಿಷಯ ಹೆಚ್ಚಿನ ಮಾಹಿತಿಯನ್ನು ಅದರ ಕಾರ್ಯದರ್ಶಿಗಳಾದ ಧರ್ಮದೇವ ಸಿದ್ಧಾಂತಾಲಂಕಾರರಿಂದ ತಿಳಿದುಕೊಳ್ಳಬಹುದು.

೧೮ನೇ ತಾರೀಕು ತಿರಿಗಿ ಬರುತ್ತಲಿದೆ!

(ಬರೆದು ಬಂದದ್ದು)

ಯೇಸು ಕ್ರಿಸ್ತನು ಮಾನವ ಕುಲವನ್ನುದ್ಧಾರಮಾಡಬೇಕೆಂದು ಮನುಷ್ಯರೂಪವನ್ನು ಧರಿಸಿ ಬಂದನು. ಜನರ ಅಂಧಕಾರವನ್ನು ಹೋಗಲಾಡಿಸಿ ಅವರ ಮಾರ್ಗವನ್ನು ತಿದ್ದಿ ನಿಜವಾದ ಮನುಷ್ಯರನ್ನಾಗಿ ಮಾಡಬೇಕೆಂದು ಯತ್ನಿಸಿದನು. ಆದರೆ ಜನರು ಅವನನ್ನು ಹುಚ್ಚನೆಂದರು, ಕೆಲವರು ಕಲ್ಲೆಸೆದರು, ಕೆಲವರು ತುಚ್ಛೀಕರಿಸಿದರು. ಇನ್ನು ಕೆಲವರು ಮನ ಬಂದಂತೆ ಬೈದರು, ಮತ್ತು ಕೆಲವರು ಅವನ ಇರವನ್ನೇ ಸಹಿಸಲಾರದಾದರು. ಅವನ ಕಾಲದಲ್ಲಿ ಅವನಿಗೆ ಅನುಯಾಯಿಗಳಾಗಿ ದೊರೆತವರೇನೋ ಬಹು ವಿರಳ. ಅವನ ಶಿಷ್ಯರೆನ್ನಿಸಿಕೊಂಡವರಲ್ಲೇ ಅವನ ಪ್ರಾಣಘಾತುಕರಿದ್ದರು. ಪೀಟರನು ಕ್ರಿಸ್ತನ ಪರಮ ಪ್ರಿಯನಾಗಿದ್ದರೂ ಕ್ರಿಸ್ತನ ವಿರೋಧಿಗಳು ಅವನನ್ನು ಕೊಲ್ಲಬೇಕೆಂದು ಬಂದು ಕ್ರಿಸ್ತನ ಗುರುತನ್ನು ಕೇಳಿದಾಗ ಪೀಟರನು ಸಂಪೂರ್ಣವಾಗಿ ಅಲ್ಲಗಳೆದನು. ಜೂದನಂತೂ ಕ್ರಿಸ್ತನನ್ನು ಅವನ ಶತ್ರುಗಳ ಕೈಗೆ ಒಪ್ಪಿಸಿಯೇ ಕೊಟ್ಟನು. ಯಾವ ಪುರುಷನು ಪೂರ್ಣ ಪ್ರೇಮಮಯನಾಗಿದ್ದು ಮಾನವ ಕುಟುಂಬವನ್ನುದ್ಧಾರಮಾಡುವುದಕ್ಕೆ ತನ್ನ ಜೀವವನ್ನೇ ಸಂತೋಷದಿಂದ ಅರ್ಪಿಸಿ, ತನ್ನ ಮರಣಕಾಲದಲ್ಲಿ ಕೂಡ "ತನ್ನನ್ನು ಶಿಲುಬೆಗೆ ಹಾಕುತ್ತಿರುವವರು ತಾವೇನು ಮಾಡುತ್ತೇವೆಂದರಿಯದವರಾದುದರಿಂದ ದೇವರೇ ದಯವಿಟ್ಟು ಅವರನ್ನು ಕ್ಷಮಿಸು" ಎಂಬುದಾಗಿ ಪ್ರಾರ್ಥಿಸಿದನೋ ಅಂತಹ ದಯಾಮಯನ ನಿಜವಾದ ಬೆಲೆಯನ್ನು ಆ ಕಾಲದ ಜನರು ತಿಳಿದುಕೊಳ್ಳಲು ಅಸಮರ್ಥರಾಗಿದ್ದರು. ಈ ವಿಷಯವನ್ನು ಕೇಳಿದೊಡನೆಯೇ ಈಗಿನ ಕಾಲದ ಕ್ರೈಸ್ತರು ಆ ಕಾಲದ ಜನರನ್ನು ನಿಂದಿಸುವರು. ಲೋಕರಕ್ಷಕನನ್ನು ಕೂಡ ಅಂಗೀಕರಿಸಲಾಗದ ಮೂಢ ಜನರೆನ್ನುವರು.

ಇಸ್ಲಾಮ್ ಮತಸ್ಥಾಪಕನಾದ ಮುಹಮ್ಮದ್ ಪೈಗಂಬರನು ಕೂಡ ಅಧೋಗತಿಯಲ್ಲಿ ಬಿದ್ದಿದ್ದ ತನ್ನ ಲೋಕಬಾಂಧವರನ್ನು ಎತ್ತಿ ಹಿಡಿಯಬೇಕೆಂದು ಯತ್ನಿಸಿದಾಗ ಅವನನ್ನು ಮಕ್ಕದಿಂದ ಹೊಡೆದೋಡಿಸಿಬಿಟ್ಟರು. ಅವನಲ್ಲೇ ನಿಂತಿದ್ದರೆ ಅವನ ಪ್ರಾಣವನ್ನು ಕೂಡ ತೆಗೆಯುತ್ತಿದ್ದರು. ಆದರೂ ಅವನು ಮದಿನಕ್ಕೆ ಹೋಗಿ ತನ್ನ ಆತ್ಮಬಲವನ್ನು ಹೆಚ್ಚಿಸಿಕೊಂಡು ತಿರಿಗಿ ಮಕ್ಕಕ್ಕೆ ಬಂದು ತನ್ನನ್ನು ಕೊಲ್ಲಲು ಯತ್ನಿಸಿದವರನ್ನೆ ಪ್ರೀತಿಸುತ್ತಿದ್ದನು. ಇಂತಹ ಮಹಾ ಪುರುಷನಿಗಾದರೂ ಅವನ ಕಾಲದಲ್ಲಿ ಎಷ್ಟು ಹಿಂಬಾಲಕರಿದ್ದರು? ಇದನ್ನಾಲೋಚಿಸುವಾಗ ಈಗಿನವರಿಗೆ ಆಶ್ಚರ್ಯವಾಗುತ್ತದೆ.

ಲೋಕದ ದುಃಖವನ್ನೂ, ಸಂಕಷ್ಟಗಳನ್ನೂ ನಿವಾರಿಸುವುದಕ್ಕಾಗಿ ತನ್ನ ಅರಮನೆಯನ್ನೂ, ಕುಟುಂಬವನ್ನೂ ರಾಜ ಪದವಿಯನ್ನೂ ಸಕಲ ಸೌಭಾಗ್ಯಗಳನ್ನೂ ತೊರೆದು ವನವಾಸಕ್ಕೆ ಹೋಗಿ ತಪಶ್ಚರ್ಯದಿಂದ ಆತ್ಮಬಲವನ್ನು ಹೆಚ್ಚಿಸಿಕೊಂಡು ಅಹಿಂಸಾತತ್ವವನ್ನು ಬೋಧಿಸತೊಡಗಿದಾಗ ಆಗಿನ ಕಾಲದ ಬ್ರಾಹ್ಮಣರು ಎಷ್ಟರ ಮಟ್ಟಿಗೆ ಬುದ್ಧನಿಗೆ ಉಪದ್ರವನ್ನು ಕೊಡಲಿಲ್ಲ. ಅಂತಹ ಸೌಮ್ಯಸ್ವರೂಪಿಯನ್ನು ಕಂಡಾಗಲೂ ಬ್ರಾಹ್ಮಣರ ಕಣ್ಣಲ್ಲಿ ಕಿಡಿಗಳು ಹಾರುತ್ತಿದ್ದವು. ಇದು ಸಹ ಆಶ್ಚರ್ಯವೆಂದು ಈಗಿನವರಿಗೆ ಕಾಣಬಹುದು.

ಆದರೆ ಕ್ರಿಸ್ತ, ಮುಹಮ್ಮದ್, ಬುದ್ಧ ಮೊದಲಾದ ಯಾವ ಮಹಾಪುರುಷರನ್ನು ಈಗ ಯಾರು ಪೂಜಿಸುತ್ತಿದ್ದು ಅವರ ಕಾಲದ ಜನರು ಮೂಢರು, ದುಷ್ಟರು, ಪಾಪಿಗಳು ಎಂಬೀ ರೀತಿ ಬೈಯ್ಯುತ್ತಾರೋ ಅವರ ಸ್ಥಿತಿಯಾದರೂ ಹೇಗಿದೆಯೆಂದು ಸ್ವಲ್ಪ ಯೋಚಿಸುವ. ಕ್ರಿಸ್ತ, ಮುಹಮ್ಮದ್ ಮತ್ತು ಬುದ್ಧನ ಕಾಲದ ಜನರಾದರೂ ಅಷ್ಟು ನಾಗರಿಕರಾಗಿಲ್ಲವೆನ್ನುವ. ಈಗಿನ ಕಾಲದ ಜನರಾದರೂ ನಾಗರಿಕತೆಯ ತುದಿಯನ್ನೇರಿದ್ದಾರೆಂದು ಹೇಳಿಸಿಕೊಳ್ಳುವುದಿಲ್ಲವೇ? ಅಂತಹ ಸ್ಥಿತಿಯಲ್ಲಿ ಈಗಿನ ಜನರಾದರೂ ಏನು ಮಾಡುತ್ತಾರೆ? ಹಿಂದೆ ಹೇಳಿದ ತ್ರಿಮೂರ್ತಿಗಳಂತೆಯೇ ಇಡೀ ಲೋಕದಲ್ಲಿ ಧರ್ಮ ರಾಜ್ಯವನ್ನು ಸ್ಥಾಪಿಸಬೇಕೆಂದು ಸರ್ವವನ್ನು ತ್ಯಾಗಮಾಡಿ ತಪಸ್ಯದಿಂದಲೇ ಅಹಿಂಸೆ ಮತ್ತು ಸತ್ಯಾಗ್ರಹವೆಂಬ ಎರಡು ಶಕ್ತಿಗಳನ್ನು ಇಡೀ ಲೋಕದಲ್ಲೇ ಹರಡಿಸಲು ಯಾರು ಯತ್ನಿಸುತ್ತಿರುವನೋ ಅಂತಹ ಮಹಾತ್ಮನನ್ನು ಕಾರಾಗೃಹಕ್ಕೆ ಕಳುಹಿಸಿದವರ್ಯಾರು? ಇದಲ್ಲವೇ ಅವರು ಕೊಚ್ಚಿಕೊಳ್ಳುವ ನಾಗರೀಕತೆಯ ಫಲ! ನಿಜವಾಗಿಯೂ, ಕ್ರಿಸ್ತನ, ಅಥವಾ ಮುಹಮ್ಮದನ ಅಥವಾ ಬುದ್ಧನ ಅನುಯಾಯಿಗಳೆಂದು ಯಾರಾದರೂ ಹೇಳಿಸಿಕೊಳ್ಳಲು ಯೋಗ್ಯರಾಗಬೇಕಾದರೆ, ಯಾವ ಗುಣಗಳಿಗಾಗಿ ಅವರು ಅಂತಹ ಮಹಾ ಪುರುಷರನ್ನು ಹಿಂಬಾಲಿಸುತ್ತಾರೋ ಅಂತಹ ಗುಣಗಳು ಎಲ್ಲಿಯೇ ಇರಲಿ, ಅವನ್ನು ಅಂಗೀಕರಿಸಿ ಮಾನ್ಯ ಮಾಡುವುದು ಅವರ ಧರ್ಮವಲ್ಲವೇ?

ಈಗ ಅಹಿಂಸೆ ಮತ್ತು ಸತ್ಯದ ಮೂರ್ತಿಯೇ ಆಗಿರುವಂತಹ ಮಹಾತ್ಮಾ ಗಾಂಧಿಯವರನ್ನು ಪ್ರೇಮಮಯನಾದ ಕ್ರಿಸ್ತನ ಅನುಯಾಯಿಗಳೆಂದು ಹೇಳಿಕೊಳ್ಳುವವರು ಬಂಧನದಲ್ಲಿಟ್ಟಿರುವಾಗ, ನಿಜವಾಗಿಯೂ, ಅಹಿಂಸೆಯನ್ನೂ ಸತ್ಯವನ್ನೂ ಪ್ರೀತಿಸುವವರು ತಮ್ಮ ಸರ್ವಸ್ವವನ್ನು ಅರ್ಪಿಸಿ, ಬ್ಯುರೋಕ್ರಸಿಯವರ ಕಲ್ಲೆದೆಯನ್ನು ಕರಗಿಸಿ, ಅವರನ್ನು ಧರ್ಮಮಾರ್ಗಕ್ಕೆಳೆಯ ಬೇಡವೇ? ಹಾಗೆ ಮಾಡಲು ನಾವು ಕೂಡ ಯತ್ನಿಸದಿದ್ದರೆ ಯೂದನಂತೆ ನಾವು ಕೂಡ ಮಹಾತ್ಮಾ ಗಾಂಧಿಯವರಿಗೂ, ಅವರ ತತ್ವಗಳಿಗೂ ಸಂಪೂರ್ಣ ದ್ರೋಹಿಗಳಾಗಿ ನರಕಕ್ಕೆ ಇಳಿಯಲಿಕ್ಕಿಲ್ಲವೇ? ಪ್ರಿಯ ದೇಶಬಾಂಧವರೇ ಇದನ್ನು ಸ್ವಲ್ಪ ಮಟ್ಟಿಗಾಲೋಚಿಸಿರಿ! ಕರ್ತವ್ಯನಿರತರಾಗಿರಿ! ದೇಶಸೇವೆ ಮಾಡಿರಿ!! ಮಹಾತ್ಮರನ್ನು ಸೆರೆಯಿಂದ ಬಿಡಿಸಿರಿ!!! ೧೮ನೆಯ ತಾರೀಕು ತಿರಿಗಿ ಬರುತ್ತಲಿದೆ. ಇನ್ನು ಇಂತಹ ೧೮ನೇ ತಾರೀಕು ತಿರಿಗಿ ಬಾರದಂತೆ ಮಾಡಿರಿ. ಪರಮಾತ್ಮನು ಸರ್ವರಿಗೂ ಆತ್ಮಶಕ್ತಿಯನ್ನು ದಯಪಾಲಿಸಲಿ!

'ಕರ್ನಾಟಕ ವಾರ್ತಾ ಪ್ರಸಾರಕ ಸಂಘ', ಹುಬ್ಬಳ್ಳಿ.

"ತಿಲಕ ಗ್ರಂಥ ಸಂಗ್ರಹ"ವೆಂಬ ಹೆಸರಿನ ಒಂದು ಗ್ರಂಥಾಲಯವು ಲೋಕಮಾನ್ಯರ ದ್ವಿತೀಯ ಪುಣ್ಯ ತಿಥಿಯ ದಿವಸ ಇಲ್ಲಿ ಸ್ಥಾಪಿತವಾಗಿರುತ್ತದೆ. ಅದರ ಉದ್ದೇಶವೇನೆಂದರೆ "ಹಿಂದುಸ್ಥಾನದ ಸ್ವರಾಜ್ಯ ಚಳವಳಿಯ ಜನಕರಾದ ಸ್ವರ್ಗವಾಸಿ ಬಾಲಗಂಗಾಧರ ತಿಲಕರವರ ಪವಿತ್ರ ಸ್ಮರಣೆಯು ಕರ್ನಾಟಕದ ಮಧ್ಯವರ್ತಿಯಾದ ಈ ಹುಬ್ಬಳ್ಳಿಯಲ್ಲಿ ಸ್ಥಾಪಿಸಲ್ಪಡುವುದು.

ರಾಷ್ಟ್ರೀಯ ಶಾಲೆಯು ಉತ್ತಮ ರೀತಿಯಿಂದ ನಡೆದದೆ. ಚಿತ್ರದಿಂದ ಹೆಣಿಯುವ ಶಿಕ್ಷಣವೂ, ಒಕ್ಕಲತನದ ಶಿಕ್ಷಣವೂ ಪ್ರಾರಂಭವಾಗಿವೆ. ಇಚ್ಛಿಸಿದವರಿಗೆ ಟೈಪ್‌ರೈಟಿಂಗ್ ಸಹ ಕಲಿಸಲಿಕ್ಕೆ ಏರ್ಪಾಡು ಮಾಡಿರುತ್ತಾರೆ. ಅಮೇರಿಕೆಯಲ್ಲಿಯ ಪ್ರಸಿದ್ಧ ಸಿದ್ಧೀಪುಧಾರಿಯಾದ ಬುಕರ ಟಿ ವಾಶಿಂಗಟನ್ ಇವರು ತೆಗೆದ "ಟಸ್ಕೇಗಿ ಇನ್‌ಸ್ಟಿಟ್ಯೂಟ್" ಎಂಬ ಔದ್ಯೋಗಿಕ ಸಂಸ್ಥೆಯ ಪದ್ಧತಿಯ ಮೇರೆಗೆ ಇಲ್ಲಿಯ ವಿದ್ಯಾರ್ಥಿಗಳಾದರೂ ಶಾಲೆಯನ್ನು ಬಿಟ್ಟಮೇಲೆ ಕೇವಲ ಸ್ವಾವಲಂಬಿಗಳಾಗಬೇಕೆಂಬುದೇ ಈ ಶಾಲೆಯ ಮುಖ್ಯ ಧ್ಯೇಯವಾಗಿದೆ. ಶಾಲೆಯ ಉಪಯೋಗಕ್ಕೆಂದೇ ಇಲ್ಲಿಯ ವರೆಗೆ ಸುಮಾರು ೪೫೦೦ ರೂಪಾಯಿಗಳು ಕೂಡಿರುತ್ತವೆ. ಇನ್ನು ೫೦೦ ರೂಪಾಯಿ ಕೂಡಿದರೆ ಈ ಹಣ ಮತ್ತು ಈ ಶಾಲೆಯಿಂದ ಬರುವ ಆದಾಯ ಕೂಡಿ ಐದು ವರ್ಷಗಳ ವರೆಗೆ ಶಾಲೆಯು ಅಬಂಧಿತವಾಗಿ ನಡೆಯಲಿಕ್ಕೆ ಏನೂ ಬಾಧೆಯಿಲ್ಲ.

ಲೋಕಮಾನ್ಯರ ದ್ವಿತೀಯ ಪುಣ್ಯ ತಿಥಿಯ ದಿವಸ ಇಲ್ಲಿಯ ರಾಷ್ಟ್ರೀಯ ಕನ್ಯಾಶಾಲೆಗೆ "ತಿಲಕ ಕನ್ಯಾಶಾಲಾ" ಎಂಬ ಹೆಸರನ್ನು ಕೊಟ್ಟಿರುತ್ತಾರೆ.

ಭಗಿನೀ ಮಂಡಲದ ಚಾಲಕರು ಮನೆಮನೆಗೆ ಹೋಗಿ ಸ್ತ್ರೀಯರ ಕಡೆಯಿಂದ ಟಿ. ಸ್ವ. ಫಂಡಿಗಾಗಿ ಹಣ ಕೂಡಿಸಲಿಕ್ಕೆ ಹತ್ತಿರುವರು. ಜುಲೈ ತಿಂಗಳಲ್ಲಿ ಸುಮಾರು ೩೦೦ ರೂಪಾಯಿಗಳನ್ನು ಅವರು ಕೂಡಿಸಿದರು.

ಈ ಮೊದಲೆ ಹುಬ್ಬಳ್ಳಿಯಲ್ಲಿ ಹೊರಟಿರುವ "ವಾರ್ತಾ ಪ್ರಸಾರಕ ಸಂಘ"ದಿಂದ ಸ್ವಲ್ಪ ದಿವಸಗಳಲ್ಲಿಯೇ ಒಂದು ಕನ್ನಡ ದೈನಿಕ ಮತ್ತು ಒಂದು ಇಂಗ್ಲೀಷ ಸಾಪ್ತಾಹಿಕ ಹೀಗೆ ಎರಡು ವೃತ್ತ ಪತ್ರಗಳು ಹೊರಡತಕ್ಕಂಥವಿರುತ್ತವೆ.

ಅಖಿಲ ಭಾರತ ಕಾಯದೇಭಂಗ ವಿಚಾರಣಾ ಕಮಿಟಿಯ ಪುಢಾರಿಗಳು ವಿಜಾಪುರಕ್ಕೆ ಬಂದ ವೇಳೆಯಲ್ಲಿ ವ್ಯವಸ್ಥೆಯನ್ನಿಡುವದಕ್ಕೋಸ್ಕರ ಇಲ್ಲಿಂದ ಹೋದ ೧೪ ಸ್ವಯಂಸೇವಕರು, ಉತ್ತಮ ರೀತಿಯಿಂದ ಕೆಲಸವನ್ನು ಮಾಡಿದರೆಂದು ಅಧ್ಯಕ್ಷ ಹಕೀಮ ಅಜಮಲ್ ಖಾನರವರು ಅವರನ್ನು ಬಹಳವಾಗಿ ಪ್ರಶಂಸೆ ಮಾಡಿದರು.

ಹುಬ್ಬಳ್ಳೀ ಶಹರದಲ್ಲಿಯ ಜನರ ಆರೋಗ್ಯದ ಹಿತಚಿಂತನೆಗಾಗಿ ಇಲ್ಲಿಯ ಡಾಕ್ಟರರೆಲ್ಲರೂ ಕೂಡಿ "ಆರೋಗ್ಯ ಮಂಡಳ"ವೆಂಬ ಸಂಸ್ಥೆಯನ್ನು ತೆರೆದಿದ್ದಾರೆ.

ಇಂದಿನ ತನಕ ಸುಮಾರು ೭,೦೦೦ ರೂಪಾಯಿಗಳು ಟಿ. ಸ್ವ. ಫಂಡಿಗಾಗಿ ಕೂಡಿರುತ್ತವೆ. ನಮ್ಮ ಹುಬ್ಬಳ್ಳಿಯ ಕೆಲಸಕ್ಕಾಗಿ ಏನಿಲ್ಲೆಂದರೂ ವರ್ಷಕ್ಕೆ ೧೫೦೦೦ ರೂಪಾಯಿಗಳು ಬೇಕೇ ಬೇಕಾಗುವವು.

ಪತ್ರವ್ಯವಹಾರ.

ಮಂಗಳೂರು ಮುನ್ಸಿಪಾಲಿಟಿಯೂ ಶೇಂದಿ ಅಂಗಡಿಗಳೂ.

ಮದ್ಯಪಾನವು ಕೆಟ್ಟದೆಂದು ಇಡೀ ಪ್ರಪಂಚವೇ ಒಪ್ಪಿದೆ. ಮದ್ಯಪಾನದಿಂದ ಶರೀರಸುಖವು ನಾಶವಾಗುವುದಲ್ಲದೆ, ಮಾನಸಿಕ ಬಲವು ಕಡಿಮೆಯಾಗಿ ಬುದ್ಧಿ ಕೆಟ್ಟು ಅನೇಕ ವೇಳೆ ಹುಚ್ಚು ಕೂಡ ಹಿಡಿಯುತ್ತದೆಂದು ವೈದ್ಯ ಶಿರೋಮಣಿಗಳನೇಕರು ಹೇಳಿದ್ದುಂಟು. ಬರೇ ಮದ್ಯಪಾನದಿಂದಲೇ ಸಾವಿರಾರು ಕುಟುಂಬಗಳು ಅನ್ನವಿಲ್ಲದೆಯೂ, ರೋಗಪೀಡಿತರಾಗಿಯೂ ನರಳುತ್ತಿರುವರೆಂಬುದು ಸರ್ವರಿಗೂ ತಿಳಿದೇ ಇದೆ. ಮತ್ತು ಯಾವ ಜನಾಂಗದಲ್ಲಿ ಈ ರೋಗವು ಹೆಚ್ಚಾಗಿದೆಯೋ ಆ ಜನಾಂಗಕ್ಕೆ ಏಳಿಗೆಯೇ ಇಲ್ಲ. ಆದುದರಿಂದಲೇ ಅನೇಕ ಸ್ವತಂತ್ರ ರಾಜ್ಯಗಳು ಈ ಭಯಂಕರ ಮಾರಿಯನ್ನು ಓಡಿಸಲು ಶತಪ್ರಯತ್ನ ಮಾಡಿರುತ್ತಾರೆ. ಅಮೇರಿಕದ ಯೂನೈಟೆಡ್ ಸ್ಟೇಟ್ಸ್‌ದಲ್ಲಿ ಜನರಾರೂ ಮದ್ಯಪಾನ ಮಾಡಕೂಡದೆಂದೂ ಮಾಡಿದವರು ಶಿಕ್ಷೆಗೆ ಗುರಿಯಾಗಬೇಕೆಂದೂ' ಕಾನೂನನ್ನೇ ಮಾಡಿರುತ್ತಾರೆ. ಇಂಗ್ಲೆಂಡ ಮೊದಲಾದ ಪಾಶ್ಚಾತ್ಯ ದೇಶಗಳಲ್ಲೂ 'ಟೆಂಪರೆನ್ಸ್ ಎಸ್ಸೋಸಿಯೇಶನ್' (ಮದ್ಯಪಾನ ನಿವಾರಣಾ ಸಂಘ) ಮೊದಲಾದ ಸಂಸ್ಥೆಗಳನ್ನೇರ್ಪಡಿಸಿ, ಆ ಮೂಲಕ ಸ್ವಯಂಸೇವಕರು ಕುಡುಕರಿಗೆ ಬೋಧಿಸಿ ಕುಡುಕತನವನ್ನು ನಿಲ್ಲಿಸಲು ಪ್ರಯತ್ನಿಸುತ್ತಿದ್ದಾರೆ. ಅದೇ ರೀತಿಯಾಗಿ ಹಿಂದುಸ್ಥಾನದಲ್ಲೂ ಸರಕಾರದವರು ಮದ್ಯಪಾನವು ತಪ್ಪೆಂದು ಒಪ್ಪಿಕೊಳ್ಳುತ್ತಾರೆ. ಕಳೆದ ವರುಷ ಕಾರ್ಯವಿಧಾಯಕ ಸಭೆಯ ಮೆಂಬರರಾದ ಸರ್ ವಿಲ್ಲಿಯಮ್ ವಿನ್ಸೆಂಟರೇ ಮದ್ಯಪಾನವು ಕೆಟ್ಟದೆಂದು ಒಪ್ಪಿಕೊಂಡು, ಇದರ ನಿವಾರಣೆಗಾಗಿ ಕೆಲಸ ಮಾಡುವವರಿಗೆ ಸರಕಾರದವರು ಯಾವ ರೀತಿಯಿಂದಲೂ ಉಪದ್ರಕೊಡದಂತೆ ಜಾಗ್ರತೆ ತೆಗೆದುಕೊಳ್ಳಲಾಗುತ್ತದೆಂದು ಹೇಳಿದರು.

ಆದರೆ ನಿಜವಾಗಿಯೂ ಇಂಡಿಯಾ ಸರಕಾರದವರು ಹಿಂದೀಯರ ಸುಖಕ್ಕಾಗಿ ಕೆಲಸ ಮಾಡುತ್ತಾರೆಂಬುದೂ, ಇಲ್ಲಿ ಮದ್ಯಪಾನವನ್ನು ನಿಲ್ಲಿಸುವರೆ ಹೇಗೆ ಯತ್ನಿಸುತ್ತಾರೆಂಬುದೂ ಕಳೆದ ಸಲ ಇಲ್ಲಿಯಾದ ಶೇಂದೀ ಅಂಗಡಿಗಳ ಏಲಂನಿಂದ ಸ್ಪಷ್ಟವಾಗುತ್ತದೆ. ಇಡೀ ಮುನ್ಸಿಪಾಲಟಿಯಲ್ಲಿರುವ ೪೭೮೦ ತೆರಿಗೆ ಕೊಡುವವರಲ್ಲಿ ಊರು ಬಿಟ್ಟವರು, ಸತ್ತು ಹೋದವರು ಮೊದಲಾದವರ ಸಂಖ್ಯೆಗಳನ್ನು ಬಿಟ್ಟು ಉಳಿದವರಲ್ಲಿ ೩೩೧೩ ಜನರು ಬರಹ ಮೂಲಕ ಶೇಂದಿ ಶರಾಬುಗಳು ನಮ್ಮನ್ನು ಹಾಳು ಮಾಡುವವುಗಳಾದುದರಿಂದ ಅವುಗಳ ಅಂಗಡಿಗಳನ್ನು ಮುನ್ಸಿಪಾಲಟಿಯಿಂದ ಹೊರಗೆ ಹಾಕಿಸಬೇಕು' ಎಂದು ಅರ್ಜಿ ಮಾಡಿಕೊಂಡಂತೆ ನಿಜವಾಗಿಯೂ ಜನರ ಪ್ರತಿನಿಧಿಗಳಾದ ಮುನ್ಸಿಪಾಲಿಟಿಯವರು ಹೆಚ್ಚು ಕಡಿಮೆ ಒಮ್ಮತದಿಂದ ಜನರ ಅರ್ಜಿಯನ್ನು ಮಾನ್ಯಮಾಡಿದರು. ಶೇಂದಿ ಶರಾಬಿನ ಅಂಗಡಿಗಳನ್ನು ಹೊರಗೆ ಹಾಕಬೇಕೆಂಬ ನಿರ್ಣಯವೂ ಆಯಿತು. ಸಂಬಂಧಪಟ್ಟ ಅಧಿಕಾರಿಗಳಿಗೆ ಆ ನಿರ್ಣಯವನ್ನು ಕಳುಹಿಸಿಯೂ ಇರಬೇಕು. ಆದರೆ ಪರಿಣಾಮವೇನು? ಇಷ್ಟು ವರ್ಷಕ್ಕಿಂತಲೂ ಹೆಚ್ಚಿನ ಬಂದೋಬಸ್ತನ್ನಿಟ್ಟು ಸರಕಾರದವರು ಮುನ್ಸಿಪಾಲಿಟಿಯೊಳಗಿರುವ ಗುತ್ತೆಗಳ ಏಲಂ ಮಾಡಿರುವರು. ಇದರಿಂದ ಸರಕಾರದವರು ಈ ಗುತ್ತೆಗಳನ್ನು ಮುನ್ಸಿಪಾಲಿಟಿಯ ವಿಸ್ತೀರ್ಣದಲ್ಲಿ ಇರಗೊಡಿಸುವ ಹೆಚ್ಚಿನ ಸಂಭವಗಳು ತೋರುತ್ತಿವೆ.

ಈಗ ನಮಗೆ ಕೊಟ್ಟಿರುವ ಸುಧಾರಣೆಯು ಸ್ವರಾಜ್ಯದ ಪ್ರಥಮ ಸೋಪಾನವೆನ್ನುತ್ತಿದ್ದ ಸರಕಾರದವರೂ ಅದನ್ನು ವೇದವಾಕ್ಯದಂತೆ ಶಿರಸಾವಹಿಸಿದ್ದ ಶಾಂತಪಕ್ಷದವರೂ ಇದನ್ನು ಹೇಗೆ ಕಾಣುವರೊ ತಿಳಿಯದು. ಮದ್ಯಪಾನದ ಕೊರತೆಯನ್ನು ನಿವಾರಿಸುವರೆ ಸರಕಾರದವರು ಯತ್ನಿಸುವುದಿರಲಿ! ಮುನ್ಸಿಪಾಲಟಿಯ ನಿರ್ಧಾರಕ್ಕೆ ಎಷ್ಟರ ಮಟ್ಟಿನ ಮನ್ನಣೆಯು ಸಿಕ್ಕಿತು. ಸುಧಾರಣೆಯು ನಿಜವಾಗಿಯೂ ಸ್ವರಾಜ್ಯದ ಪ್ರಥಮ ಸೋಪಾನವಾದರೆ ಮುನ್ಸಿಪಾಲಟಿಯವರ ಇಚ್ಛೆಗೆ ಸರಕಾರವು ವಿರೋಧವಾಗಿ ವರ್ತಿಸಬಹುದೇ? ಇದೊಂದು ಸಾಮಾನ್ಯ ವಿಷಯದಲ್ಲಿ ಶಾಂತಪಕ್ಷದವರಾಗಲಿ, ಉಗ್ರಪಕ್ಷದವರಾಗಲಿ, ಸರಕಾರೀ ನೌಕರರೇ ಆಗಲಿ ಇದನ್ನು ಚೆನ್ನಾಗಿ ಪರಿಯಾಲೋಚಿಸಬೇಕಾಗಿದೆ. ಇದನ್ನು ಮುಖ್ಯವಾಗಿ ಮುನ್ಸಿಪಲ್ ಕೌನ್ಸಿಲರುಗಳು ಯೋಚಿಸಬೇಕು. ಇನ್ನಾದರೂ ಸರಕಾರದವರು ತಮ್ಮ ಇಚ್ಛೆಯಂತೆ ವರ್ತಿಸುವ ಹಾಗೆ ಮಾಡಿಸಬೇಕು. ಇದು ಎಷ್ಟಕ್ಕೂ ಫಲಕಾರಿಯಾಗದಿದ್ದರೆ ಒಂದೇ ದಾರಿಯುಳಿಯಿತು. ತಮ್ಮ ಸಂಪೂರ್ಣ ಮಾನವನ್ನು ಕಾಯದೆ ತಿರಸ್ಕರಿಸಿದ ಆ ಸರಕಾರದೊಂದಿಗೆ ಸಹಕರಿಸುವುದು ಯೋಗ್ಯವೋ ಎಂದಾಲೋಚಿಸಬೇಕು. ಅಂತು ಏನೂ ಮಾಡದೆ ಸರಕಾರದವರು ಹೊರಿಸಿದ ಗಂಟನ್ನು ಶಿರಸಾವಹಿಸಿಕೊಂಡರೆ ಮೊನ್ನೆ ತಾನೇ ವಿ. ಲೋಯ್ಡ್ ಜೋರ್ಜರು ಹೇಳಿದ ಮಾತು ನಿಜವಾಗುವುದು.

ಪಟ್ಟಣ ನಿವಾಸಿ.

ಸ್ವದೇಶಾಭಿಮಾನಿಯ ವಾಚಕರಲ್ಲಿ ಯಾರಾದರೂ ಈ ಕೆಳಗಿನ ನನ್ನ ಅರಿಕೆಯನ್ನು ಪರ್ಯಾಲೋಚಿಸಿ ಇದನ್ನು ನಿವಾರಿಸತಕ್ಕ ಉಪಾಯವನ್ನು ಕಂಡುಹಿಡಿದು ಈ ಪತ್ರಿಕೆಯ ಮೂಲಕ ತಿಳಿಸುತ್ತಿದ್ದರೆ ತುಂಬಾ ಉಪಕಾರವಿತ್ತು. ಅಯ್ಯಾ, ನಮ್ಮ ಈ ಮೂಡು ಪ್ರಾಂತ್ಯದ ಅನೇಕ ಸ್ಥಳಗಳಲ್ಲಿ (ಅದ್ಯದಲ್ಲಿ) ಬೆಳೆಯತಕ್ಕ ಹಸಿಹುಲ್ಲನ್ನು ಚಿಗುರುವಾಗ ಬುಡ ಬೇರು ಸಹಿತ ಒಂದು ಜಾತಿ ಕಂಬಳಿ ಹುಳವೆಂಬ ಒಂದು ಬಗೆಯ ಹುಳಗಳು ಕಳೆದ ವರುಷ ತಿಂದು ಪೂರ್ಣ ಮಣ್ಣೇ ಕಾಣುವಂತೆ ಮಾಡಿಬಿಟ್ಟಿದ್ದವು. ಆದುದರಿಂದ ಜಾನುವಾರುಗಳ ಮೇವಿಗೂ, ಹುಲ್ಲು ಮನೆಯ ಛಾವಣಿಗೂ ಪೂರ್ಣ ಕಷ್ಟವಾಗಿತ್ತು. ಈ ವರುಷ ಅದೇ ರೋಗತಗಲಿದೆ ಪಕ್ಷ ಜನಜಾನುವಾರುಗಳ ಕಷ್ಟವನ್ನು ಹೇಳಿತೀರದು. ಆದುದರಿಂದ ಮುಂದಾಗಿ ತಕ್ಕ ಈ ಕಷ್ಟಬಾರದ ಹಾಗೆ ತಕ್ಕ ಉಪಾಯ ಕಂಡುಹಿಡಿದು ತಿಳಿಸಬೇಕಾಗಿ ಕೋರುವ,

ಗ್ರಾಮವಾಸಿ.

ಅಯ್ಯಾ,

ನಮ್ಮ ಉಪ್ಪಿನಂಗಡಿ ತಾಲೂಕಿನಲ್ಲಿ ಒಂದು ಹೊಸ ಕಾಯಿದೆ. ದರ್ಖಾಸ್ತು ಬಗ್ಗೆ ಸ್ಥಳಗಳನ್ನು ಅಪೇಕ್ಷಿಸಿದವರು ಅದರಲ್ಲಿರುವ ಮರಮಟ್ಟುಗಳ ಕ್ರಯ ತೆರದಿದ್ದರೆ ದರಖಾಸ್ತು ತಿರಸ್ಕಾರವಂತೆ. ಈಗಿನ ಫಾರೆಸ್ಟ ರೂಲ್ಸ ಮೇರೆಗೆ ದರಖಾಸ್ತು ಸ್ಥಳದಲ್ಲಿ ಚಿಲ್ಲರೆ ವ ಮೋಪಿಗೆ ಯೋಗ್ಯವಲ್ಲದ ಮರಮಟ್ಟುಗಳಾಗಲೀ ಜಲಾವಣೆಗೆ ಯೋಗ್ಯವಾದ ಕಟ್ಟಿಗೆ ತರದ ಮರಮಟ್ಟುಗಳಾಗಲಿ ಇದ್ದರೆ ದರಖಾಸ್ತುದಾರ ಯಾ ಆ ಅಗಮೆದಾರನು ತೆರಕೂಡದಷ್ಟು ಕುತ್ತಿಕಾಣಿಕೆ ಕೊಡಬೇಕು. ಬಡ ಬಗ್ಗರಿಗೆ ಊಟಕ್ಕೆನೆ ಗತಿ ಇಲ್ಲ. ಹೀಗಿರುತ್ತ ಹೆಚ್ಚಾದ ಕುತ್ತಿಕಾಣಿಕೆ ಕೊಡುವುದೆಲ್ಲಿಂದ? ಕೆಯ್ಯೂರು ಗ್ರಾಮದಲ್ಲಿ ಪರವ ಜಾತಿಯ ಪುತ್ರ ಎಂಬವನು ೬೩ ಸೆಂಟ್ಸ್ ವಿಸ್ತೀರ್ಣದಲ್ಲಿ ವಾಸ್ತವ್ಯದ ಬಗ್ಗೆ ಮನೆ ಕಟ್ಟಿದ ಸ್ಥಳದಲ್ಲಿರುವ ಮರಗಳ ಕುತ್ತಿಕಾಣಿಕೆ ರೂಪಾಯಿ ೩೨—೦—೬ ಪೈ ತೆರಬೇಕೆಂತಲೂ ತಪ್ಪಿದರೆ ದರಖಾಸ್ತು ತಿರಸ್ಕಾರ ಎಂಬ ಹುಕುಂ ಆಗಿದೆ. ಆಗಮೆಗೆ ತರುವ ಸ್ಥಳಗಳಲ್ಲಿರುವ ಮರಗಳ ಕುತ್ತಿಕಾಣಿಕೆಯನ್ನು ಅತೀ ಬಡವರ ಸಂಗತಿಯಲ್ಲಿ ಮಾಫಿ ಮಾಡುವ ಹಾಗೆ ನ್ಯಾಯವಿಧಾಯಕ ಸಭೆ ಮೆಂಬರರು ಒಂದು ಠರಾವು ಮಾಡಬಾರದೇ? ಡಿಸ್ಟ್ರಿಕ್ಟ ಎಸೋಸಿಯೇಶನಿನ ಸಂಘದವರು ಈ ಕುರಿತು ಕಣ್ಣು ತೆರೆಯಬಾರದೆ?

ಪುತ್ತೂರು ನಿವಾಸಿ.

ಸಣ್ಣಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.
ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇದ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು
ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.
ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೬, ([illegible], ಮದ್ರಾಸ್.
Local Agents: Raphael & Co,
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ
ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಬಡಿಗಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
Manager,
Sri Lakshmi Mills, KASARGOD, S. K.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0
Reserve and other sinking Funds „ 181,250—0—0
ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡೆಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸಕ್ರೆಟರಿಗಳಿಗೆ ಬರಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,
ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು. ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ಕೇಡೂ ಉಂಟಾಗದಂತೆ ರಕ್ಷಿಸುತ್ತವೆ.
ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು ಕರುಳಿನ ನೋವು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ [illegible] ಇನ್‌ಫ್ಲ್ಯುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ನಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.
ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.
ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘುವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ.
ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ ರೂ. 1-4-0.
ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.
ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.
60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.
ಆರ್ ಮಾರ್ಟಿನ್ನರ ಗಿಟೋಡಯಿನ್.
ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.
ಬೆಲೆ ಸೀಸೆ 1ಕ್ಕೆ ರೂ. 2—0—0.
ವಿಳಾಸ—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು —
— ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.
ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.
ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.
ಪಿ. ವೆಂಕಟೇಶ ರಾಮಚಂದ್ರು ಶರ್ಮ
ಪ್ರೊಪ್ರೈಟರ್.
☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪ್ಪೈ
ರಥಬೀದಿ ಮಂಗಳೂರು.
ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯುನಾಮಲ್ಲು ಬಟ್ಟಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್, ಬ್ರವುನ್ ಪೇಪರ್, ರಟ್ಟು, ಖಾಲಿ ಕವರು, ಫೌಂಟನ್ ಪೆನ್, [illegible] ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, [illegible] ಇತರ ಕಟ್ಲೇರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ [illegible] ತೊಡುವುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ [illegible] ಮಾಡಿ ಯಾ ಸ್ವದೇಶೀ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟು [illegible] ವಗೈರೆ ಮಾಲುಗಳು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತವೆ.

ಅಚ್ಚಿನಲ್ಲಿದೆ!

ಎಂ. ಜಿ. ಐಗಳ್, ಇವರಿಂದ ರಚಿತವಾದ

ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಯಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲನಿಂತ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗರಕ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಅರಸು—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಿ ಕಾದ್ರಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತೇಶ್ವರ—ಕದ್ರಿ—ವಿಟ್ಲ—ಕುಟಿ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯಿಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತ ಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಬಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರ ಮಾಧ್ವರಾದ್ದು—ಅಚ್ಯುತತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ ಸ್ಥಾಪನೆ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತ ಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚಿರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸ್ರೂರು ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಕೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಬಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ರಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೋ, ಮೊದಲನೇ ಕಲೆಕ್ಟರ—ಬುಚೆನನ ಪ್ರಯಾಣ—ಉತ್ತರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಪಂಜ—ಸುಳ್ಯ—ಬೆಳ್ಳಾರೆ—ಅಮರಸುಳ್ಯಗಳು—ಬೆಳ್ಯಾರೆ, ಮುಖ್ಯ ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ-ಗುರುವಾಯನಕೆರೆ ಪಟ್ಟ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಟ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳ್ತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮಾರಿಗುಡಿ—ಕದಂವಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೊಂಜನ ಆಳಿಕೆ—ರಾಯಕುಮಾರ—ಆಲದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಮಣಿಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಜ ನಿರ್ಮಾಣ—ಐಲನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿಮಂತೂರು—ಮೂಲಿಕೆ—ವರಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ಪಿಲ್ಲ—ಸೋಮಲಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾಸ್ರೂರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ದಿನ್ನಾಣರು—ಕುಂಬಳೆ ಅರಸರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜು ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಪಮೆ ಅರಸರು—ಮಾಯಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಟ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ವೇಣೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟುಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಅಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ರಮಹೆಗೆಡೆ 1.

ವಿಳಾಸ:—

ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಐದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನುದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೆಲಸವಾಗುತ್ತದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಧ್ಬುತ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಪತ್ರದ ಇಚ್ಛೆ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳು ವೈದ್ಯರು ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇಟ್ಟುಕೊಳ್ಳ ಬೇಕಾಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಕಡಿಮೆ ಮಾಡಿ ಇರುವವು. ೩-೮-೦ ಟಪ್ಪಾಲು ಖರ್ಚು ಬೇರೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಂತ್ರ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬುದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಕಿರಿ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪಠಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪುಂತರಾಗಿರಿ.

ಇದರ ಬೆಲೆ ೧-೮-೦, ಟಪ್ಪಾಲು ಹಾಸಲು ೦-೪-೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ನೆಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮-೬-೧೯೨೨)

ಇದರ ಅಭಿಪ್ರಾಯ, ಅಂದವಾದ ಮುದ್ರಣ, ನೊಗಸಾದ ಕಾಗದ, ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಸಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ತಕ್ಕ ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳ ರಾಜನಿಷ್ಠೆ ಇವೆಲ್ಲವುಗಳ ಪ್ರತಿಬಿಂಬ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. ..... ಬಾಲಿಕೆಯು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಅಡಕವಾಗಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ.'

ಸಂಗೀತ ಸಮಯಸಾರ ಸಚಿತ್ರ ರೂ. ೧-೮-೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩-೧೨-೦.

ಮುಕ್ತಿಕ ಸರ	0-12-0	ಸಂಭಾಷಣಾಯುತ ಹೊಸ ಮುದ್ರಣ	5-0-0
ಸಂತಾಪಕ-ಕಾದಂಬರಿ	0-6-0	ಸಂಭಾಷಣಾಯುತದ	
ಚಂದ್ರಮುಖಿ ,,	0-8-0	ಕಥೆ ಪಠನ	0-12-0
ರಾಜಪುತ್ರರಮಣಿಯರು	0-8-0	S. S. L. C. Kannada Texts	
ಕೆಲವು ಸಣ್ಣ ಕಥೆಗಳು	1-0-0	ಪಂಚಾಕ್ಷರಿ	0-6-0
ಹಾಸ್ಯಯೋಗ	1-0-0	ಸುಚರಿತೆ	0-8-0
		ಅಧಿಕ್ಷಯ ಹುಡುಗಿ	0-12-0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Registered: No. M. 498.

SWADESHABHIMANI. MANGALORE.

ಸ್ವದೇಶಾಭಿಮಾನಿ

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0.
ಟಪ್ಪಾಲ್ ಹಾಸಲು ಸೇರಿ ,, 2-13-0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ!

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲ್ಸುರರುಗಡರಿಂ ।
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕೊಳಕರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೬. ಮಂಗಳೂರು, ತಾರೀಕು ೧ನೇ ಶುಕ್ರವಾರ ಸಪ್ಟಂಬರ ೧೯೨೨. ಸಂಚಿಕೆ ೩೫

ಮಾಲು ಉತ್ತಮ! ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು.

ಮೇಲಾದ

—ಜವುಳಿ ಸಂಗ್ರಹದ ಮಳಿಗೆ—

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಷ್ಮೆ ಪಟ್ಟೆ, ಮತ್ತು ನೂಲಿನ ಬಟ್ಟೆಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಮ್ಮದಾಬಾದ, ಮಹೇಶ್ವರಿ, ಗುಜರಾಥ, ಬಡೋದಾ, ಕೊಯಮುತ್ತೂರು, ಗದಗ, ಹುಬ್ಬಳ್ಳಿ, ಧಾರವಾಡ, ಇಳಕಲ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಮ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಬರ್ಮಾ ಮೊದಲಾದ ಕಡೆಗಳಲ್ಲಿಯೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳು, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುಪು ತೊಡುಪುಗಳು ಈಗ ತಾನೇ ತರಿಸಿದ್ದು ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗಿರುವ ಬಿಳೀ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳೂ, ಬಿಳಿ ವ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಶರ್ಟಿನ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವುವು.

ನಗದಿ ಪಡೆಯುವವರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೆ,
ಕಸ್ತೂರಿ ನಾಗೇಶಪ್ಪೆ ಮತ್ತು ಕಂಪೆನಿ,
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15-16% ಅಂದರೆ ಏನುಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100-200 ರಾತ್ತು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೋ, ಕಲ್ಕತ್ತಾ.

THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾರ್ಥಿಮಿತ್ರ ಅಕ್ಷರಾದ ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಶಿವದೂತ ವ್ಯವಹಾರ ಕ್ರಯ	೦-೧೦-೦
ಶೇಷರಂಗ ,,	೦-೧೨-೦
ಸಂಕ್ಷೇಪಗೀತ ,,	೦-೧೨-೦

ಲಕ್ಷ್ಮೀನಾರಾಯಣ ಪುರಂದರತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತೋನ್ಮಾಸ ಕ್ರಯ ೦-೨-೦

ಕರ್ನಾಟಕ ಕವಿ ಚರಿತೆ, ಮದನಮೋಹನ, ಶ್ರೀದಾಸ ಪದ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಭಿಯೋಗ, ಮನೋರಮಾ, ಭ್ರಾಂತಿ ವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅನೇಕ ಹರಿದಾಸರ ಹೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಮರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨-೧೩-೦ ಸ್ಥಳೀಕರಿಗೆ ರೂ. ೨-೦-೦. ಬಿ. ಪಿ. ಖರ್ಚು ಸಹಿತ ರೂ. ೩-೦-೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆದುಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಬೈಂಡ ಪುಸ್ತಕಗಳು, ನೋಟು ಬುಕ್ಕುಗಳು, ಡ್ರಾಯಿಂಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫ್ಲಾಟ್ ರೂಲುಗಳು, ಇತರ ಬರೆಯುವದರ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕೀಲರು ಇತ್ಯಾದಿ ಕೋರ್ಟು ಫೋರ್ಮುಗಳು, ಸರ್ಕಾರು ಫೋರ್ಮು, ಕುಂಭಂದಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಜೋಡಿ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ಔಷಧಿಗಳು—ರೋಗಿಗಳಿಗೂ, ಬಾಲರೋಗಿಗೂ ಬೇಕಾಗುವ ಪಾಕ್ಷಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಬೆಳೆಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯಲ್ಲಿ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BOMBAY
Best Indian Pain Balm

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

—ಅಮೃತಾಂಜನ—

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿತಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5-12-0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0-6-0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಕಕಷಾಯ

U. B. DUTT & Co.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ [illegible] ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಅರ್ಡರ್‌ಗಳೂ" ಬರುತ್ತವೆ. ಈ ಭಾಗದಲ್ಲಿ ಗುಣಹೊಂದಿದವರಿಂದ [illegible] ಯೋಗ್ಯತಾಪತ್ರಗಳೂ ಬೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ 'ಪಾಕಕಷಾಯ' ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. [illegible] ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂದು, ಅವಯವ, [illegible] ಕೈಕಾಲು [illegible] ಮೂತ್ರದಲ್ಲಿ [illegible] ಸ್ತ್ರೀಪುರುಷರಲ್ಲಿಯೂ [illegible] 'ಕಷಾಯ' ತೆಗೆದುಕೊಳ್ಳಲು ಪ್ರಾರಂಭಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ [illegible] ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, [illegible] ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಆಮಶಂಕೆ, [illegible] 'ಪಾಕಕಷಾಯ'ವು ಮದ್ದು.

ಕ್ರಯ ರೂ. 4-4-0.

ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ [illegible]

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೆನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.

ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೆನ್ ಇವರ ಖುದ್ದು ನಿಗಾವಣಿಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಎಲ್ಲೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ ೩೦ ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಫುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಂತ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬರೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ¼ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ¼ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಫುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ, ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೆನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಜನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 2. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಓರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,

Hampankatta, MANGALORE S' K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಟೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ ಎಂಡ ಎಮ್ಯುನಿಶನ್ ಮಾರ್ಟ್,

ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ವಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಪಿಡ್ಲಗಳು ಮತ್ತು ತಬ್ಲಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,

ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ

ಮುತ್ತಿನ ಆಟದ ಚಿತ್ರಾವಳಿಯ 32 ಸಾಮಾನುಗಳ ಸಣ್ಣ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 5—0—0 ಪೋಸು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ ಮಡಿ, ಜರಿ, ಸಾದಾ, ಶೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಪಟಿಕದ ಸ್ಫಟಿಕಮಣಿ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಕೋರುವವರಿಗೆ ವಿ. ಪಿ. ಪಿ ಮೂಲಕ ಕಳುಹಿಸಲಾದೀತು. ಕ್ಯಾಟಲಾಗ್ ಇನಾಂ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,

ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶಿಲೆ ಒಂದರ ಕ್ರಯ:—ರೂ.1—4—0.

ಹುಳದ ವ್ರೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೋಮಿಯೋಪೆತಿಕ್ ಡಿಸ್ಪೆನ್ಸರಿ,

ಹಂಪನಕಟ್ಟೆ, ಮಂಗಳೂರು.

ಐಸರಿಯಾದ ಅಸ್ಥಿಗಳುಳ್ಳ ಮತ್ತು ಬೆಳೆಯುವ ಮಕ್ಕಳಿಗೂ ಮತ್ತು ಅಸ್ವಸ್ಥರಾದ ಶೀಘ್ರಕಾಲಗಳಲ್ಲಿ ಪುಷ್ಟಿಯಾದ ಆಹಾರ ಅವಶ್ಯವಾದವರಿಗೆ

'ಕೆಪ್ಲರ್'

(ಟ್ರೇಡ್ ಮಾರ್ಕ)

'KEPLER'

(Trade Mark)

Cod Liver Oil with Malt Extract

ಕಾಡ್ ಲಿವರ್ ಆಯಿಲ್ ವಿತ್ ಮಾಲ್ಟ್ ಎಕ್ಸ್‌ಟ್ರಾಕ್ಟ್‌ನ್ನು ಉಪಯೋಗಿಸಬಹುದು.

ಈ ಆಹಾರ ದ್ರವ್ಯದ ಶೋಷಣೆ ಅಧಿಕವಾಗಿ ಜೀವಶಕ್ತಿಯನ್ನು ಕಾಯ್ದುಕೊಂಡು ಹೆಚ್ಚಿಸುತ್ತದೆ. ಇದು ಸ್ತ್ರೀಗಳಿಗೆ ಪ್ರಸವಕಾಲದಲ್ಲಿ ಅವಶ್ಯಕವಾದ ಬಲ ಸಹಾಯ ಶಕ್ತಿಕೊಟ್ಟು ಮತ್ತು ಅವರ ಸ್ತನಗಳಲ್ಲಿ ಉತ್ತಮವಾದ ಹಾಲನ್ನುಂಟು ಮಾಡುತ್ತದೆ.

ಬೆಳೆಯುವ ಮಕ್ಕಳಿಗೆ, ಎಲುಬು, ಹಲ್ಲು, ನರ, ಮತ್ತು ದಪ್ಪವಾದ ಮಾಂಸವನ್ನುಂಟುಮಾಡುವದು.

'ಕೆಪ್ಲರ್' ಕಾಡ್ ಲಿವರ್ ಆಯಿಲ್ ವಿತ್ ಮಾಲ್ಟ್ ಎಕ್ಸ್‌ಟ್ರಾಕ್ಟ್‌ನ್ನು ಎಲ್ಲಾ ಬಲಹೀನಸ್ಥರು, ಕರಗಿ ಹೋಗುವಂಥಾ ರೋಗದಿಂದ ಶಕ್ತಿಯು ಹಾಗೆ ದುರ್ಬಲ ಹೊಂದುವರು ಇದನ್ನು ಜಲ್ದಿಯಾಗಿ ಉಪಯೋಗಿಸಬೇಕು.

KEPLER
COD LIVER OIL
MALT EXTRACT

ಬರ್ರೋಸ ವೆಲ್ಕಂ ಅಂಡ್ ಕೋ
ಲಂಡನ್ ಅಂಡ್ ಬಂಬಾಯಿ.

Burroughs Wellcome & Co.
London and Bombay

CAN. 8

All Rights Reserved

ಶ್ರೀ

ಸ್ವದೇಶ ಭಕ್ತರೇ
ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳು, ಬಿಳಿ, ಹಸುರು ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ ನಯವಾದ ಶರ್ಟಿನ ವಸ್ತ್ರಗಳೂ ಮತ್ತು ವೇಷ್ಟಿ ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈ ಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವುವು. ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ನಾಲ್ಕಾಣೆಯ ಸ್ಟಾಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:—

ಮುಳಿಯ ತಿಮ್ಮಪ್ಪಯ್ಯ
ಮತ್ತು ಸಹೋದರ
ರತ್ನ ಮತ್ತು ಜವಳಿ
ವ್ಯಾಪಾರಿಗಳು,
ಬಾರಾಮುಖಾನ (ಗೋಳಿಕಟ್ಟೆ ಬಜಾರು)
ಮಂಗಳೂರು.

The Canara Banking Corporation, Udipi, (Limited).

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಅ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯತೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಯಾನೆ ಹೊರಗಿನಿಂದ ಬರತಕ್ಕದ್ದು	3,78,315	2	5
6. ರಿಜರ್ವ ಇತ್ಯಾದಿ ಫಂಡುಗಳು. (17—6—'22.)	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೭ರಿಂದ ೭½ ವರೆಗಿನ ಮೂರು ತಿಂಗಳಿಗೊಮ್ಮೆ ಬಡ್ಡಿ ಕೊಡುವ ಶರ್ತದ ಮೇಲೆ ಖಾಯಂ ಠೇವಣಾತಿಗಳು.

೨. ೧೫ ದಿನಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡಿಯುವ ಶರ್ತದ ಮೇಲೆ ಸಾಲಿಯಾನ್ ಶೇಕಡಾ 6½ಲ್ಲಿ ನಡೆದ ದಿನಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಚಿಕ್ಕ ವಾಯಿದೆ ಠೇವಣಾತಿಗಳು.

೩. ದಿನಾ ಖರ್ಚಿಲ್ಲದೆ ಸಾಲಿಯಾನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಚಾಲ್ತಿ ಠೇವಣಾತಿಗಳು.

೪. ಸಾಲಿಯಾನ್ ಶೇಕಡಾ 4½ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.

೫. ಈ ಕೆಳಗಣ ಶರ್ತಗಳ ಮೇಲೆ ಕಂತು ಠೇವಣಾತಿಗಳು.

ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.

ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.

ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.

ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು.

ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.

೬. ಕಳೆದ ೨ ವರುಷಗಳಲ್ಲಿ ಪಾಲುದಾರರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.

೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.

೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಖ್ಖಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಓಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬೈಯಲ್ಲಿರುವ ಮರ್ಕೆಂಟೈಲ್ ಬ್ಯಾಂಕ್ ಓಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ತಾಜಾ ಕಲಂ:—ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಗಳವರಿಗೆ ಬರದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡುಪಿ.
ತಾ. 13—5—1922.

ನ. ಆನಂದರಾವ್,
ಕಾರ್ಯದರ್ಶಿ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ.

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವದು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು

ಕೊಂಕಣಿ ಭಾಷೆಯಲ್ಲಿ
ಸಂಗೀತ

❊ ಚಂದ್ರಹಾಸ ನಾಟಕ ❊

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದದ ಬೈಂಡು ರೂ. 0—4—6. ಸ್ಪೆಶಲ್ ಬೈಂಡು ರೂ. 0—5—6.

ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದುವರೆ ಆಣೆ ಅಥವಾ ಆರುವರೆ ಆಣೆಗಳ ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ— ಪ. ಕೆ. ಪ್ರಭು,
ಬಿಕ್ಕೊಬರಿಯಾ ಮುದ್ರಾಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತಲ 1ರ ರೂ. 2—12—0.
ಸ್ಪೆಶಲ್ ರಾತ್ತಲ 1ರ ರೂ. 3—0—0.
2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾ[illegible] ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂ[illegible] ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕ್ಯಾಟ್ಲಾಗುಗಳನ್ನು ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪಾ. ಈ ರೀತಿಯು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ತೋರುತ್ತದೆ. ಸರ ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ [illegible] ಚಾಸಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವ[illegible] ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ್

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂ|ರದ ಭಾದ್ರಪದ ಶು| ೧೧ ಶನಿವಾರದಿಂದ ದುಂದುಭಿ ಸಂ| ಭಾದ್ರಪದ ಬ| ೨ ಶುಕ್ರವಾರದ ವರೆಗಿನ ಪಂಚಾಂಗ

(೧೯೨೨ನೆಯ ಸಿಂಹ ಸೌರ)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಚಾಂದ್ರದಿನ	ಸೂರ್ಯ ಉ.	ಸೂರ್ಯ ಅಸ್ತ.
2	ಶನಿ	೧೧	೮.೧೪	ಪೂ. ಆ.	೨.೧೬	೧೬	6.21	6.38
3	ರವಿ	೧೨	೯.೩೨	ಉ. ಆ.	೫.೧೬	೧೮	6.21	6.38
4	ಸೋಮ	೧೩	೧೨. ೧	ಶ್ರವಣಾ	೯.೧೪	೧೯	6.21	6.37
5	ಕುಜ	೧೪	೧೫.೪೪	ಧನಿಷ್ಠಾ	೧೪.೨೯	೨೦	6.21	6.37
6	ಬುಧ	⊙	೨೦.೧೬	ಶತಭಿಷಾ	೨೦.೧೫	೨೧	6.22	6.37
7	ಗುರು	೧	೨೪.೫೮	ಪೂ. ಭಾ.	೨೬.೪೪	೨೨	6.22	6.36
8	ಶುಕ್ರ	೨	೩೦. ೦	ಉ. ಭಾ.	೩೩. ೨	೨೩	6.22	6.36

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ಆಗೋಸ್ತು)

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆ	ದಿನದ ಮಳೆ	ಆಗೋಸ್ತು ೧ರಿಂದ
24	86—2	72—2	1—24	—
25	80—2	74—1	0—07	—
26	83—8	74—0	0—16	—
27	82—7	73—4	3—64	—
28	83—2	73—2	1—18	—
29	79—7	73—1	1—13	—
30	79—7	73—6	0—45	119.87

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಅ.	ವರೆಗೆ ರೂ. ಅ.
ಮಸ್ಕತಿ ಅಕ್ಕಿಮುಡಿ ೧ಕ್ಕೆ ...	8— 4	8—14
ಸುಗ್ಗಿಗೆ ...	7—12	8— 0
ಗುಡ್ಡು, ...	7— 8	8— 0
ರಾಶಿ	7— 4	7— 8
ಅನ್ವರ್ ಬೆಳ್ತಿಗೆ " ...	9— 0	9— 8
ಗುಡ್ಡು ಬೆಳ್ತಿಗೆ " ...	7—14	8— 4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	13— 8	14 [illegible]
ಗೋದಿ ಗೋಣಿ ೧ಕ್ಕೆ ...	21— 8	[illegible]
ಹುರುಳಿ ಗೋಣಿ ೧ಕ್ಕೆ ...	13— [illegible]	[illegible]
ಕಡಲೆ ಗೋಣಿ ೧ಕ್ಕೆ ...	14 [illegible]	[illegible]
ತೊಗರಿ ಗೋಣಿ ೧ಕ್ಕೆ ...	1[illegible]	[illegible]
ತೊಗರಿಬೇಳೆ ಗೋಣಿ ೧ಕ್ಕೆ ...	[illegible]	[illegible]
ಉದ್ದು ಗೋಣಿ ೧ಕ್ಕೆ	[illegible]	[illegible]
ಹೆಸರು ಗೋಣಿ ೧ಕ್ಕೆ	[illegible]	[illegible]
ಊರು ಬೆಲ್ಲ [illegible]	[illegible]	[illegible]

[illegible] ಅಲುಗುತ್ತಿದ್ದ [illegible] ತಾವನು "ತುರು [illegible] ಸಂಗಡ ಊಟಮಾಡಿ [illegible]" ಎಂದನು. ಮಾತ್ರ [illegible] ತೊರೆದುಬಿಟ್ಟನು. [illegible] ಚಕರನ್ನಿಸಿಕೊಳ್ಳುವವರೂ ಅನೇಕ [illegible] ಮಾಜಿಕ ಆರೋಪಗಳನ್ನು ತಂದಿ [illegible] ಸುಧಾರಣೆಯ ತಪ್ಪು" ಎಂದರು. [illegible] ನಯೂಗುವುದೆಂದೂ ಅನ್ನುತ್ತಿದ್ದರು. ಕಾರಣವೇನೆಂದರೆ, [illegible] ರಂತೆ ಇವರು ಉತಾವಳಿಯ ಸುಧಾರಕರಾಗಿದ್ದಿಲ್ಲ. ಬಹು ಉಪ್ಪು[illegible] ಜನರಲ್ಲಿ ಆರೂಢವಾಗಿದ್ದ ಆಚಾರಗಳನ್ನು ಒಮ್ಮೆಲೇ ಮುರಿಯಲಿಕ್ಕೆ ಇವರು ಸಿದ್ಧವಾಗಿದ್ದಿಲ್ಲ. ಅವರ ಮೇಲಿನ ಆರೋಪವು ಅಷ್ಟಕ್ಕೆ ತೀರಲಿಲ್ಲ. ಪುನರ್ವಿವಾಹಕ್ಕೆ ಅನುಕೂಲವಾಗಿ ಕೇಸರಿಯಲ್ಲಿ ಲೇಖವನ್ನು ಬರೆಯಬೇಕೆಂದು ಸುಧಾರಕರೆಲ್ಲರೂ ಕೂಗೆಬ್ಬಿಸಲು "ನೀವು ೩೦೦ ಜನ ಸಭ್ಯ ಹಾಗು ವಜನದಾರ ಜನಗಳ ಸಹಿ ಹಾಕಿ ಒಂದು ಕಾಗದವನ್ನು ನನ್ನ ಕಡೆಗೆ ಕಳಿಸಿರಿ. ಆ ಮೇಲೆ ನಾನು ಕೇಸರಿಯಲ್ಲಿ ನನ್ನ ಅಭಿಪ್ರಾಯವನ್ನು ಪ್ರಕಟಿಸುವೆನು" ಎಂದು ಲೋಕಮಾನ್ಯರು ಅಂದರು. ಇವರ ವಿಷಯ ಮತ್ತೂ ಹೇಳುವುದಾದರೆ, ೧೮೯೦ರಲ್ಲಿ ಪುಣೆಯಲ್ಲಿ ನಡೆದ ಒಂದು 'ಟಿ' ಪಾರ್ಟಿಯ ಪ್ರಕರಣವನ್ನು ಹೇಳಬಹುದು. ಇಲ್ಲಿ ಸುಮಾರು ೬೦-೭೦ ಜನ ಸಭ್ಯರು ಇದ್ದರು. ಇವರಲ್ಲಿ ೪೨ ಜನರ ಮೇಲೆ ಜಾತಿಯ ಸಿಟ್ಟು ಎದ್ದಿತು. ಶ್ರೀ ಶಂಕರಾಚಾರ್ಯ ಮಠದಿಂದ ಇವರ ಬಹಿಷ್ಕಾರವೂ ಆಯಿತು. ಈ ೪೨ ಮಂದಿಯಲ್ಲಿ ಲೋಕಮಾನ್ಯ ತಿಲಕರೂ, ನ್ಯಾ| ರಾನಡೆಯವರೂ ಇದ್ದರು. ನ್ಯಾ| ರಾನಡೆಯವರೂ ಇನ್ನೂ ಅನೇಕರು ಪುಣೆಗೆ ಹೋಗಿ ಪ್ರಾಯಶ್ಚಿತ್ತವನ್ನು ತಕ್ಕೊಂಡರು. ಲೊ| ತಿಲಕರು ಸಹ 'ಟಿ' ತಕ್ಕೊಂಡಿದ್ದಿಲ್ಲವಾದರೂ [illegible] ಹೋಗಿ ಪ್ರಾಯಶ್ಚಿತ್ತವನ್ನು ತಕ್ಕೊಂಡರು.

ಈಗ ಮಾತ್ರ ಕೆಲವು ಸುಧಾರಕರು ಅಸ್ಪೃಶ್ಯತೆಯನ್ನು ನಿವಾರಿಸಬೇಕೆಂದು [illegible] ರುತ್ತಾರೆ. ಸಮಾಜದ ಅಸ್ತಿತ್ವಕ್ಕೂ, ಉದ್ಧಾರಕ್ಕೂ ರಕ್ಷಣೆಗೂ ಅಸ್ಪೃಶ್ಯ[illegible] ಇರುವುದೇ ಆಧಾರಭೂತವು. ಇದರ ಮೂಲಕವೇ ರಾಷ್ಟ್ರೋದ್ಧಾರವೂ [illegible] ವುದು. ನಿಮಿಷದ್ದನ್ನು ತುಂಬಿಸಿರುವ ವಿಚಾರವನ್ನು ಪ್ರವೇಶಿಸಬಾರದೆಂದು [illegible] ಅಸ್ಪೃಶ್ಯರೊಡನೆ ಪ್ರತಿಯೊಬ್ಬರಿಗೂ, ರಾಜರಿಗೂ, ರಾಷ್ಟ್ರಕ್ಕೂ ಶುಭಪ್ರದವಾದುದ[illegible] ಇಲ್ಲದೂ ಇಲ್ಲದು. ಈ ರೀತಿಯಲ್ಲಿಯೇ ಈ ಅಸ್ಪೃಶ್ಯತೆಯನ್ನು [illegible] ನಮ್ಮ ಪೂರ್ವಜರು ವಿದ್ವಜ್ಜನರೂ ವ್ಯಾಸಿಗಳೂ ಆಗಿದ್ದರು. U. K. [illegible]

(ಮುಂದರಿಯುವುದು)

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾದೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ಯಾವಂತರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು. ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ

ಅಥವಾ

ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ-ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" ದೇವರಲ್ಲಿ" ಎಂಬ ಆಂಗ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಹಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ.

NOTICE.

Memo of numbers and Value of Currency Notes Stolen after 19th June & before 17th July '22.

ಕಳೆದ ಜೂನು ತಾ. 19ರ ನಂತರ ಮತ್ತು ಜುಲಾಯಿ 17ರ ಮೊದಲು ಕಳವಾದ ಕರೆನ್ಸಿ ನೋಟುಗಳ ಮೊಬಲಗು ಮತ್ತು ಮೆಮೊ ನಂಬರುಗಳು.

No.		Rs.	No.	B.over	Rs. 210	No.	B.over	Rs. 4100
SD/20	58431	100	ZC/94	84953	100	ZC/80	79799	50
" "	58432	100	CD/15	72644	100	" /82	17680	50
" "	58433	100	DC/69	78247	100	" "	09585	50
"	58434	100	SD/12	99557	100	" /86	59272	50
	58435	100	" / 19	21846	100	" /89	05865	50
	8436	100	" / 22	29131	100	Small Notes 6 X 10		60
	37	100	" / 23	10983	100	" " 14 X 5		70
		100	BE/35	79686	100	" " 1		2/8
		100	CD/20	53027	100	" " 1 X 4		4
		00	JD/50	51182	100	Total Rs.		4486/8
			" / 51	58129	100			
			/ 53	78295	100			
			7	69738	100			
			9	39728	100			
				37135	100			
					100			

ವರ್ಧಕ, ಉಷ್ಣಹ..., ಅಶಕ್ತಿ, ಜನನೇಂದ್ರಿಯ ... ಅಶಕ್ತಿ ಇವನ್ನು ಪರಿಹರಿಸ... 1 ಗ್ರೈನ್ ವರೆಗೆ ಜೇನು ಅಥ... ವುದು. ತೊಲೆಗೆ ರೂ. 50 ನಿಕ್ಕಿ...

ರೂಪ್ಯಾ (ಬೆಳ್ಳಿ) ಭಸ್ಮ:— ... ಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಹೋ... ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಟರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ¼ಗ್ರೈನಿನಿಂದ ½ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ, ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೆನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಜನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 2. ಪಚ್ಚ ಕರ್ಪೂರ ತೊಲೆಗೆ ರೂ 4.

ಎಲ್ಲಾ ಓರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

ಜಿಲ್ಲಾ ಕಾಂಗ್ರೆಸ್ ಕಮ್ಮಿಟಿಯ ಮೀಟಿಂಗು.

೧೯೨೨ನೇ ಇಸವಿ ಆಗೋಸ್ತು ತಾ. ೨೭ನೇ ಆದಿತ್ಯವಾರ ಗಂಟೆ ೩ಕ್ಕೆ ಮಂಗಳೂರು ತಿಲಕ ಮಹಾ ವಿದ್ಯಾಲಯದಲ್ಲಿ ದಕ್ಷಿಣ ಕನ್ನಡಾ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯಕಾರಿ ಮಂಡಳಿಯ ಸಭೆಯು ಜರಗಿತು:—ಹಾಜರು ರಾ| ಗಳಾದ ೧ ಕೆ. ಎಸ್. ದಾಸಪ್ರಭುಗಳು ೨ ಕಾರ್ಕಳ ಪದ್ಮನಾಭ ಕಮ್ತಿಯವರು, ೩ ಪಡಮುನ್ನೂರು ರಾಮಚಂದ್ರರಾಯರು, ೪ ಉಡ್ಪಿ ಗೋವಿಂದರಾಯರು, ೫ ಬಿ. ವೆಂಕಪ್ಪ ಶೈಗಳು, ೬ ಅರಿಬೈಲು ಭೋಜರಾಯರು, ೭ ಕಾರ್ನಾಡು ಸದಾಶಿವರಾಯರು, ೮ ಮಹಮ್ಮದ್ ಶರೀಫರು ೯ ಶ್ರೀಪಾದಶರ್ಮರು.

ರಾ. ಕೆ. ಎಸ್. ದಾಸಪ್ರಭುಗಳು ಈ ಕೆಳಗಿನ ನಿರ್ಣಯವನ್ನು ಸಭೆಯ ಮುಂದಿಟ್ಟರು.— ೧೯೨೧ನೇ ಇಸವಿ ದಶಂಬರ ೩೧ರ ವರೆಗಿನ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಲೆಕ್ಕಪತ್ರವನ್ನು ನೋಡಿ ರಾ| ಕೋಟಿ ರಾಮಕೃಷ್ಣ ಕಾರಂತರು ತಯಾರಿಸಿದ ಜಮಾ ಖರ್ಚಿನ ಪಟ್ಟಿಯನ್ನು ಮಂಜೂರುಮಾಡಿ ಪ್ರಕಟಿಸಬೇಕಾಗಿ ನಿಶ್ಚಯಿಸಲಾಯಿತು. ಈ ನಿರ್ಣಯವು ಬಹುಮತದಿಂದ ಮಂಜೂರಾಯಿತು. ರಾ. ಭೋಜರಾಯರು ಮೇಲಿನ ನಿರ್ಣಯವನ್ನು ಆಕ್ಷೇಪಿಸಿರುತ್ತಾರೆ.

ರಾ. ನಾರಾಯಣರಾವ್ ದಂಬಳರು ತಾರೀಕಿಲ್ಲದೆ ಬರೆದ ಕಾರ್ಡು ತಾ. ೧೮-೮-೨೨ರಲ್ಲು ಜಿಲ್ಲಾ ಕಾರ್ಯದರ್ಶಿಯರಿಗೆ ಬರೆದ ಕಾರ್ಡು ಓದಲಾಯಿತು.

ನಮ್ಮ ಜಿಲ್ಲೆಯಲ್ಲಿರುವ ತಾಲೂಕುಗಳಿಂದ ತಿಲಕ ಸ್ವರಾಜ್ಯ ನಿಧಿಗೆ ಕಳೆದ ವರ್ಷ ಜಿಲ್ಲಾ ಕಮಿಟಿಗೆ ಜಮೆಯಾದ ಹಣದಲ್ಲಿ ಕರ್ನಾಟಕ ಪ್ರಾಂತಿಕ ಕಮಿಟಿಗೆ ಸಲುತಕ್ಕ ರೂ. ೪೨೧೪—೨—೧ಯಲ್ಲಿ ಈ ಮೊದಲು ಕಮಿಟಿಯಿಂದ ಪ್ರಾಂತಿಕ ಕಮಿಟಿಗೆ ಸಂದ ರೂ. ೩೦೦೦-೦-೦. ಕಳೆದು ಬಾಕಿ ರೂಪಾಯಿ ೧೨೧೪-೨-೧ನ್ನು ಕೊಡುವರೆ ಕಮಿಟಿಯ ಫಂಡಿನಲ್ಲಿ ಏನೂ ಹಣವಿಲ್ಲದೆ ಇರುವುದರಿಂದಲೂ ಕಮ್ಮಿಟಿಯ ಖರ್ಚಿನ ಬಗ್ಗೆ ಸಾಲತೆಗೆದುಕೊಳ್ಳಬೇಕಾದ ಸ್ಥಿತಿ ಬಂದಿರುವುದರಿಂದಲೂ ಈ ಹಣವನ್ನು ಪ್ರಾಂತಿಕ ಕಮಿಟಿಯವರು ನಮ್ಮ ಕಮಿಟಿಗೆ ಮಾಫಿ ಮಾಡುವುದು ಅಗತ್ಯವೆಂದು ಈ ಕಮಿಟಿಯು ಬೇಡಿಕೊಳ್ಳುತ್ತದೆ. ಇದಕ್ಕೆ ರಾ. ಭೋಜರಾಯರು ಆಕ್ಷೇಪಿಸಿರುತ್ತಾರೆ.

ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ತಾ. ೨-೮-'೨೨, ಮತ್ತು ೮-೮-೨೨ ರಲ್ಲಿ ಬರೆದ ಕಾಗದಗಳನ್ನು ಓದಲಾಯಿತು. ಮತ್ತು ಅವುಗಳಿಗೆ ಜಿಲ್ಲಾ ಕಾರ್ಯದರ್ಶಿಯವರು ಬರೆದ ಉತ್ತರಗಳನ್ನು ಓದಿ ಮಂಜೂರುಮಾಡಲಾಯಿತು.

ಅಖಿಲ ಭಾರತೀಯ ಖಾದಿ ವಿಚಾರಸಂಘದ ಕಾರ್ಯದರ್ಶಿಯವರು ಬರೆದ ಪತ್ರವನ್ನೂ ಅದಕ್ಕೆ ಜಿಲ್ಲಾ ಕಾರ್ಯದರ್ಶಿಯವರು ಬರೆದ ಉತ್ತರವನ್ನೂ ಓದಲಾಯಿತು.

ರಾ. ಅ. ಭೋಜರಾಯರು ತಾ. ೪—೮—'೨೨ರಲ್ಲು ಬರೆದ ಕಾಗದ ಓದಲಾಯಿತು. ಕೋಶಾಧಿಕಾರಿಯು ರಾ| ಭೋಜರಾಯರಿಗೆ ಮೇಲೆ ನಮೂದಿಸಿದ ಕಾಗದದ ಮೇರೆಗೆ ಸಲ್ಲಬೇಕಾದ ಹಣವನ್ನು ನಾಳೆಯೇ ಕೊಡಬೇಕಾಗಿ ನಿಶ್ಚಯಲಾಯಿತು.

೧೯೨೨ನೇ ಇಸವಿ ಜನವರಿ ತಾ. ೧ರಿಂದ ಎಪ್ರೀಲ್ ೩೦ರ ವರೆಗಿನ ಲೆಕ್ಕ ಪರಿಶೋಧನೆ ಬಗ್ಗೆ ಈ ಮುಂಚೆಯೇ ನೇಮಕಮಾಡಲ್ಪಟ್ಟ ರಾ. ಕೊಚ್ಚಿಕಾರ ಪದ್ಮನಾಭ ಪೈಗಳಿಗೆ ಕೂಡಲೇ ಕಾರ್ಯದರ್ಶಿಯರು ಪತ್ರ ಬರೆದು ಮಂಗಳೂರಿಗೆ ಬಂದು ಲೆಕ್ಕ ಪರಿಶೋಧಿಸುವರೆ ವಿನಂತಿ ಮಾಡಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು. ಈ ಲೆಕ್ಕ ಪರಿಶೋಧನೆಯಾದ ಮೇಲೆ ರಾ| ಭೋಜರಾಯರು ತಾ. ೬—೮—'೨೨ಕ್ಕೆ ಬರೆದ ಪತ್ರದಲ್ಲಿ ಕಾಣುವ ಕಡೆಯ ನಗದಿ ಎಷ್ಟೆಂಬುದನ್ನು ಕಾರ್ಯದರ್ಶಿಯವರು ತಿಳಿಸತಕ್ಕದ್ದು.

ನಮ್ಮ ಸಭೆಗಳ ವರದಿಗಳನ್ನು ಆಗಿಂದಾಗ್ಗೆ ವರ್ತಮಾನ ಪತ್ರಗಳಲ್ಲಿ ಸಭೆಯಾದ ಆದಷ್ಟು ಬೇಗನೇ ಕಾರ್ಯದರ್ಶಿಯವರು ಪ್ರಕಟಿಸಬೇಕು.

ತಿಲಕ ಸ್ವರಾಜ್ಯ ನಿಧಿಗೆ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಹಣವನ್ನು ಕೂಡಿಸುವರೆ ಕೂಡಲೇ ವಿಲೇವಾರಿ ಮಾಡುವುದಲ್ಲದೆ ತಿಲಕ ಸ್ವರಾಜ್ಯ ನಿಧಿಯನ್ನು ಆಯಾಯ ಕಾರ್ಯದರ್ಶಿಯವರು ಅಥವಾ ಕಾರ್ಯಕಾರಿ-ಮಂಡಳಿಯಿಂದ ಅಧಿಕಾರ ಹೊಂದಿದ ಇತರರೂ ಕೂಡ ವಸೂಲು ಮಾಡಬಹುದಾಗಿ ನಿರ್ಣಯಿಸಲಾಯಿತು. ರಾ. ಭೋಜರಾಯರು ಸೂಚಿಸಿದ ಇತರ ಎಲ್ಲಾ ವಿಷಯಗಳಿಗೆ ಕಾರ್ಯದರ್ಶಿಯರು ಉತ್ತರ ಕೊಡಬೇಕಾಗಿ ನಿರ್ಣಯಿಸಲಾಯಿತು.

ಖಾದಿ ಭಂಡಾರದ ಕಮಿಟಿಯವರು ಈ ಸಭೆಯ ಆಲೋಚನೆ ಬಗ್ಗೆ ಇದರ ಮುಂದಿಟ್ಟ ನಿರ್ಣಯವನ್ನು ಓದಲಾಯಿತು. ರಾ. ಅ. ಭೋಜರಾಯರು ಸದರಿ ವಿಷಯವನ್ನು ಭಂಡಾರದವರು ಯುಕ್ತಕಂಡ ರೀತಿಯಲ್ಲಿ ನಿಶ್ಚಯಿಸಬಹುದೆಂದು ಸೂಚಿಸಿದರು. ಈ ಸೂಚನೆಯನ್ನು ರಾ. ಪ. ರಾಮಚಂದ್ರರಾಯರು ಅನುಮೋದಿಸಿದರು. ಅನಂತರ ರಾ| ಉಡ್ಪಿ ಗೋವಿಂದರಾಯರು, ರಾ. ಕಾರ್ನಾಡ ಸದಾಶಿವರಾಯರು ಇಡಿಸಿದ ಮಗ್ಗಗಳ ಮೇಲಾದ ಬಟ್ಟೆಗಳನ್ನು ಜಿಲ್ಲಾ ಖಾದಿ ಭಂಡಾರದವರು ಕ್ರಯಕ್ಕೆ ಪಡಕೊಂಡು ಮಾರಿ ಹೋದ ಖಾದಿಯ ಕ್ರಯವನ್ನು ಪ್ರತಿ ವಾರದಲ್ಲಿ ರಾ. ಸದಾಶಿವರಾಯರಿಗೆ ಕೊಡಬೇಕಾಗಿ ಸೂಚಿಸಿದರು. ಈ ಉಪ ಸೂಚನೆಯನ್ನು ರಾ. ಶ್ರೀಪಾದಶರ್ಮರು ಅನುಮೋದಿಸಿರು. ರಾ. ಗೋವಿಂದರಾಯರ ಈ ಸೂಚನೆಯು ಬಹುಮತದಿಂದ ಮಂಜೂರಾಯಿತು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ೧೯೨೧ನೇ ಇಸವಿಯ ಜಮಾ ಖರ್ಚಿನ ಲೆಕ್ಕದ ಪಟ್ಟಿ.

ಜಮಾ	ರೂ.
೧. ಮೆಂಬರರ ವಂತಿಗೆ ರೂ.	೯೦—೫—೦
೨. ತಿಲಕ ಸ್ವರಾಜ್ಯ ನಿಧಿ ರೂ. ೬೦೨೩—೮—೮ ಕುಂದಾಪುರ ತಾ. ಕಾ. ಕಮಿಟಿಯಿಂದ ರೂ. ೨೩೦—೦—೦ ಕಾಸರಗೋಡು ತಾ. ಕಾ. ಕಮಿಟಿಯಿಂದ ರೂ. ೨೫೦—೦—೦ ಉಡ್ಪಿ ತಾ. ಕಾ. ಕಮಿಟಿಯಿಂದ ರೂ. ೧೩೧೮—೮—೩ ಕುಂದಪ್ಪ ಕಮಿಟಿಯಿಂದ ರೂ. ೪ ಕಾರ್ಕಳ ತಾ. ಕಾ. ಕಮಿಟಿಯಿಂದ ರೂ. ೨೫೬—೪—೦ ಮಂಗಳೂರು ತಾ. ಕಾ. ಕಮಿಟಿಯಿಂದ	೪೯೬೩—೧೨—೫
೩ಕಾರ್ನಾಡು ಸದಾಶಿವರಾಯರಿಂದ ಸಾಲ ಪಡದದ್ದು.	೫೯೯—೧೫—೬
ಜುಮುಲಾ	೭೭೧೩—೧೩—೨
ಖರ್ಚು	ರೂ.
...ವೆ ಬಗ್ಗೆ (Printing)	೯೩೬—೧೫—೬
...ಪ್ಪಾಲು ವ ಟೆಲಿಗ್ರಾಮ್	೧೬—೪—೦
...ನಿ	೫—೦—೦
...ಾ. ಕಮಿಟಿಗೆ ತಿಲಕ ಸ್ವರಾಜ್ಯ ನಿಧಿಯ ಅಂಶಕಳುಹಿಸಿದ್ದು	೩೦೦೦—೦—೦
...ಬಗ್ಗೆ	೮೦೬—೧೨—೮
...ಬಗ್ಗೆ	೫—೦—೦
...ಖರ್ಚುಗಳು (Miscellaneous)	೨೧೨—೬—೫
...ಗಳೂರು ತಾ. ಕಾ. ಕಮಿಟಿಗೆ ಸಾಲವಾಗಿ ಕೊಟ್ಟದ್ದು	೯೦೧—೬—೬
...ಗಳ ಬಗ್ಗೆ	೩೪೯—೧೨—೦
"	೯೪೯—೧೨—೦
"	೫೦—೮—೦
	೦—೧೦—೦
ಜುಮುಲಾ	೭೭೧೩—೧೩—೨

KEP
COD LIV
MALT

೨೨. } ಉಡುಪಿ ಗೋವಿಂದರಾವ್,
ಕಾರ್ಯದರ್ಶಿ.

ಬೂತಾಯಿ ಮೀನು ಶಿಕಾರಿಯ ಕಾನೂನು

ಬೂತಾಯಿ ಅಥವಾ ಬೈಗೆ ಎಂಬ ಮೀನು ನಮ್ಮ ಪಶ್ಚಿಮ ಕರಾವಳಿಯಲ್ಲಿ ಹೆಚ್ಚಾಗಿ ಬಡಜನರ ಮುಖ್ಯ ಆಹಾರದಲ್ಲಿ ಒಂದಾಗಿದೆ. ಇತ್ತಲಾಗಿ ಇದರಿಂದ ಗೊಬ್ಬರವೂ ಎಣ್ಣೆಯೂ ತಯಾರಿಸುತ್ತಿರುವುದರಿಂದ ಅವುಗಳ ನಾಶವು ವಿಶೇಷವಾಗುತ್ತಿರುವುದೆಂಬೂ ಜುಲೈ ಮತ್ತು ಆಗೋಸ್ತು ತಿಂಗಳಲ್ಲಿ ಆ ಬೂತಾಯಿಯ ಹೊಟ್ಟೆಯಲ್ಲಿ ಮೊಟ್ಟೆಗಳಿರುವುದರಿಂದ ಆ ಸಮಯದಲ್ಲಿ ಯಾರೂ ಅವುಗಳನ್ನು ಹಿಡಿಯದಂತೆ ಕಾನೂನುಮಾಡಿ ಅವುಗಳ ಸಂತತಿ ಅಧಿಕವಾಗುವಂತೆ ಮಾಡಬಹುದೆಂದೂ ಮಂಗಳೂರಿನ ವೆಸ್ಟ್‌ಕೋಸ್ಟ್ ಫಿಶರೀಸ್ ಕಂಪೆನಿಯ ಮ್ಯಾನೇಜರಾದ ಮ. ರಾ. ಜೆ. ವಿ. ಅಲ್ಬುಕರ್ಕರು ಸರಕಾರದವರಿಗೆ ಒಂದು ಮನವಿಯನ್ನು ಮಾಡಿರುತ್ತಾರೆ. ಮೇಲಿಂದ ಮೇಲೆ ನೋಡುವವರಿಗೆ ಇದೊಂದು ಒಳ್ಳೇ ಸೂಚನೆಯಂತೆ ತೋರುವುದು. ನಾನೂ ಪ್ರಥಮತಃ ಹಾಗೆಯೇ ನೆನಸಿದೆನು. ಆದರೆ ಈ ವಿಷಯವನ್ನು ಪೂರ್ಣ ವಿಚಾರಮಾಡಿ ನೋಡಿದಲ್ಲಿ ತಿಳಿದುಬಂದದ್ದೇನೆಂದರೆ:—ಜುಲೈ ಮತ್ತು ಆಗೋಸ್ತು ತಿಂಗಳಲ್ಲಿ ಬೂತಾಯಿ ಮೀನುಗಳ ಹಿಂಡು ಬಹಳ ಸ್ವಲ್ಪ ಮಾತ್ರವೇ ಕರೆಗೆ ಬರುವುದು. ಈ ಸಮಯದಲ್ಲಿ ಇವುಗಳ ಹೊಟ್ಟೆಯಲ್ಲಿ ಕೆಂಪರಸಿನ ಬಣ್ಣದಂಥಾ ಚಪ್ಪಟೆಯಾದ ಒಂದು ಗೋಲಕವಿರುವುದು. ಇದಕ್ಕೇ ಜನರು ತತ್ತಿ ಎಂದು ಹೇಳುತ್ತಾರೆ. ಇದು ಎಲ್ಲಾ ಬೂತಾಯಿ ಮೀನುಗಳಲ್ಲಿಯೂ ಇರುವುದು, ಇದರಿಂದಲೇ ಬೂತಾಯಿ ಮರಿಗಳು ಉತ್ಪತ್ತಿಯಾಗುತ್ತವೆಂದು ಯಾರೂ ಈ ವರೆಗೆ ಪರೀಕ್ಷೆಮಾಡಿ ನೋಡಿದವರಲ್ಲ. ಆಗೋಸ್ತು ಮತ್ತು ಸಪ್ಟಂಬರ ತಿಂಗಳ ಮಧ್ಯಕಾಲದಲ್ಲಿ ಕೆಲವು ದಿನಗಳವರೆಗೆ ವಾಯುವ್ಯ ದಿಕ್ಕಿನಿಂದ ಗಾಳಿ ಬೀಸುತ್ತಾ ಇದ್ದು ಒಡನೆಯೇ ತೆಂಕಣ ಗಾಳಿಯು ಬೀಸಿದರೆ ಸಮುದ್ರದ ದಕ್ಷಿಣ ಪಶ್ಚಿಮ ದಿಕ್ಕಿನಿಂದ ಸಣ್ಣ ಬೂತಾಯಿ (young sardines) ಮೀನುಗಳು ಹಿಂಡು ಹಿಂಡಾಗಿ ಕರೆಗೆ ಬರುತ್ತಲಿರುವುದು, ಹೊರತು ಕರೆಯಲ್ಲಿ ಇದ್ದ ಬೂತಾಯಿ ಮೀನುಗಳಿಂದ ಎಳೇ ಮರಿಗಳು ಉತ್ಪತ್ತಿಯಾಗುವಂಥಾದ್ದು ಯಾರೂ ಈ ವರೆಗೆ ಕಂಡುಹಿಡಿಯಲಿಲ್ಲ. ಬೂತಾಯಿ ಮೀನಿನ ಜೀವನ ವೃತ್ತಾಂತವು ಕ್ರಮವಾದ ಪರಿಶೋಧನೆಯ ಮೂಲಕ ಸ್ವತಃ ತಿಳಕೊಳ್ಳುವವರೆಗೆ ಅವುಗಳ ಗರ್ಭಾವಸ್ಥೆಯ ಕುರಿತು ಖಂಡಿತವಾದ ಯಾವ ಅಭಿಪ್ರಾಯಕೊಡುವುದೂ ಸರಿಯಾಗಲಿಕ್ಕಿಲ್ಲ. ಜುಲಾಯಿ ಆಗೋಸ್ತು ತಿಂಗಳುಗಳಲ್ಲಿ ಸಮುದ್ರದ ಮೀನು ಬರುವುದು ಬಹಳ ಅಪೂರ್ವ. ಮೀನುಗಾರರು ಈ ಸಮಯದಲ್ಲಿ ಹೊಟ್ಟೆ ಹೊರಕೊಳ್ಳಲು ಬಹಳ ಪೇಚಾಟಪಡುತ್ತಾರೆ. ಮತ್ಸ್ಯಾಹಾರಿಗಳಾದ ಬಡ ಜನರಂತೂ ಆಗ ಮೀನಿನ ತುಟ್ಟಿಯಿಂದ ಬಹು ಸಂಕಷ್ಟಪಡುತ್ತಿರುವ ಸಮಯ. ಈ ಸಮಯದಲ್ಲಿ ಸ್ವಲ್ಪ ಸ್ವಲ್ಪವಾಗಿಯಾದರೂ ಬೂತಾಯಿ ಮೀನುಗಳು ಬರುವುದೆಂದರೆ ಎಲ್ಲಾ ಬಡವರಿಗೂ ಒಂದಿಷ್ಟು ಸುಲಭವಾಗಿ ಆಹಾರ ದೊರಕಲು ಅನುಕೂಲವಾಗಿ ಎಲ್ಲೆಲ್ಲಿಯೂ ಉಲ್ಲಾಸವು ತಲೆದೋರುವುದು. ಸಮುದ್ರದಲ್ಲಿ ಇರುವ ಎಲ್ಲಾ ತರದ ಮೀನುಗಳಿಗೂ ಕಡಲು ಕಾಗೆಗಳಿಗೂ, ಈ ಬೂತಾಯಿ ಮೀನೇ ಮುಖ್ಯ ಆಹಾರವಾಗಿದೆ. ತಿಮಿಂಗಿಲಗಳೆಂಬ ಮತ್ಸ್ಯರಾಜರುಗಳಾದರೋ ಬೂತಾಯಿ ಮೀನುಗಳ ಸಾವಿರಾರು ಹಿಂಡುಹಿಂಡುಗಳನ್ನೇ ನಿಮಿಷಾರ್ಧದಲ್ಲಿ ಭಕ್ಷಣಮಾಡಿಬಿಡುತ್ತವೆ. ಹೀಗೆ ಇವುಗಳು ತಿಂದು ನಾಶಪಡಿಸುವಷ್ಟು ಬೂತಾಯಿಯ ಒಂದು ಸಹಸ್ರಾಂಶದಷ್ಟಾದರೂ ನಮ್ಮ ಮೀನುಗಾರರು ಹಿಡಿಯಲಾರರು. ಈ ಎಲ್ಲಾ ಕಾರಣಗಳನ್ನು ಆಲೋಚಿಸಿದರೆ ಪಶ್ಚಿಮ ಕರಾವಳಿಯಲ್ಲಿ ಬಹು ಜನಸಮುದಾಯದ ಆಹಾರವಾದ ಈ ಬೂತಾಯಿ ಮೀನನ್ನು ಮಳೆಗಾಲದಲ್ಲಿ ಹಿಡಿಯದಂತೆ ನಿರ್ಬಂಧಪಡಿಸುವುದರಿಂದ ವ್ಯರ್ಥ ಬಡಪ್ರಜೆಗಳಿಗೆ ಒಂದು ತರದ ಸಂಕಷ್ಟಕ್ಕೆ ಕಾರಣವಾದೀತಲ್ಲದೆ ಯಾವ ಪ್ರಯೋಜನವೂ ಉಂಟಾಗಲಾರದು.

ಈಗ ಒಂದೆರಡು ವರುಷಗಳಿಂದ ಬೂತಾಯಿ ಮೀನಿನ ಬೆಳೆಯು ಬಹಳ ಕಡಿಮೆ ಆದದ್ದು ನೋಡಿ ಗೊಬ್ಬರ ಮತ್ತು ಎಣ್ಣೆ ಕಾರಖಾನೆಗಳ ದೆಸೆಯಿಂದ ಅದರ ನಾಶವು ಹೆಚ್ಚಾದದ್ದೇ ಕಾರಣವೆಂದು ಕೆಲವರು ನೆನಸುತ್ತಾರೆ. ಭೂಮಿಯಲ್ಲಿ ಬೆಳೆಯು ಕೆಲವು ವರುಷ ಸಮೃದ್ಧಿಯಾಗಿದ್ದು ಕೆಲವು ಸಮಯ ಹೇಗೆ ಕಡಿಮೆ ಆಗುತ್ತದೋ ಹಾಗೆಯೇ ಸಮುದ್ರದ ಬೆಳೆಯಲ್ಲೂ ಆಗಾಗ್ಗೆ ಮಾರ್ಪಾಟವಾಗುವುದುಂಟು. ಬೂತಾಯಿ ಮೀನು ಪ್ರತಿವರುಷವೂ ಹೆಚ್ಚಾಗಿ ಕರೆಗೆ ಬಂದರೆ ಅವುಗಳ ಸಂತಾನವೇ ನಾಶವಾಗಿ ಹೋದೀತೆಂದು ಪ್ರಕೃತಿದೇವಿಯು ಅವುಗಳನ್ನು ಒಂದೆರಡು ವರುಷ ಯಾರೂ ಕಾಣಲಾರದಷ್ಟು ದೂರ ಹೋಗುವಂತೆ ಮಾಡಿ ಅವುಗಳ ಸಂತಾನವನ್ನು ಅತ್ಯಧಿಕ (Multiply) ಸಂಖ್ಯೆಯಿಂದ ವೃದ್ಧಿಪಡಿಸಿದ ತರುವಾಯ ಪುನಃ ಜನರ ಉಪಯೋಗಕ್ಕಾಗಿ ಕರೆಗೆ ಬರುವಂತೆ ಮಾಡುವುದು. ಈ ಸ್ವಾಭಾವಿಕ ವಿಲೇವಾರಿಯು ಪೂರ್ವಕಾಲದಿಂದಲೂ ನಡೆದುಬಂದದೆ. ಇಂಥಾ ಉಪಯುಕ್ತವಾದ ಜಾಗ್ರತೆಯನ್ನು ನಿಸರ್ಗದೇವಿಯು (Nature) ತಾನೇ ಮಾಡುತ್ತಿರುವಾಗ ಸರಕಾರದ ಕಾನೂನಿನ ನಿರ್ಬಂಧವೇ ಅಗತ್ಯವಿಲ್ಲ.

ಮೋಹನಪ್ಪ ತಿಂಗಳಾಯ.

ಉಡುಪಿಯಲ್ಲಿ ಗಣೇಶ ಚತುರ್ಥಿ.

ಸ್ವಸ್ತಿ ಶ್ರೀ ಮದುಡುಪಿ ಅದಮಾರು ಮಠದ ವಿಬುಧಪ್ರಿಯತೀರ್ಥ ಶ್ರೀಪಾದಂಗಳವರು ಉಡುಪಿಯಲ್ಲಿ ನವೀನವಾಗಿ ಸ್ಥಾಪಿಸಲ್ಪಟ್ಟ ಪರಮಹಂಸ ಸುಂದರ ವಿದ್ಯಾಮಂದಿರ ಪಾಠಕ್ರಮಗಳು ಸರಿಯಾಗಿ ನಡಿಯಬೇಕೆಂಬ ಸದುದ್ದೇಶದಿಂದ ಚಾತುರ್ಮಾಸ್ಯ ಸಂಕಲ್ಪಕ್ಕೆ ಉಡುಪಿಯಲ್ಲಿ ಕೂತಿರುವ ಕಾರಣ ಶ್ರೀ ಅದಮಾರು ಮಠದಲ್ಲಿ, ೪ ದಿನಗಳಲ್ಲಿ ನಡೆದ ಗಣೇಶಚತುರ್ಥಿ ಮಹೋತ್ಸವವನ್ನು ಬಿಡದೆ ನೋಡಿದ ನನಗೆ ಭವಿಷ್ಯ ಪುರಾಣದಲ್ಲಿ ವರ್ಣಿಸಲ್ಪಟ್ಟ ಗಣನಾಥ ಸಭೆಯು ಸ್ಮೃತಿಪಥವನ್ನು ಪ್ರಾಪಿಸಿತು. ಭವಿಷ್ಯೆ ಅ ೮೩ ನಾರದೋಕ್ತಿಃ ಮುನಿರಾಡ್ದರ್ಶ ಮಹತೀಂ ಸಭಾಂ। ನೇತ್ರಯುಗ್ಮಂ ಭ್ರಮುಷ್ಣಂತೀಂ ಗಣನಾಥಾರ್ಕತೇಜಸಾ। ವಜ್ರಸ್ತಂಭ ಸಹಸ್ರಾಢ್ಯಾಂ ಮುಷ್ಣರೋಗಣ ಸೇವಿತಾಂ। ಗಂಧರ್ವ ಗಾನಸಂಘುಷ್ಟಾಂ ಮುನಿವೃಂದ ನಿಷೇವಿತಾಂ। ನಾನಾ ವೇಷ್ಟಸ್ತುರ ಗಣೈರಲಂಕೃತ। ಮಹಾಸನಾಂ। ವಿಭೂಷಣ ವಿಚಿತ್ರಾಂಗ ಕನ್ಯಾಮಂಡಲೋಜ್ವಲಾಂ। ನಾರ್ಯಃ ಪುಂವೇಷಧಾರಿಣ್ಯಃ ಯೋಷಿ ದ್ವೇಷಧರಾಸ್ಸುರಾಃ। ವಿಘ್ನರಾಜ ವಿನೋದಾಯ ಚರಂತ್ಯತ್ರವಿಹಾರದಾಃ। ಕ್ವಚಿದತ್ರ ಸುಖಾಸೀನ್ಪಾರ್ವತಿ ಪರಮೇಶ್ವರೌ-ವಿದಿಕ್ಷ್ವದಿಕ್ಷು [illegible]। ಸರ್ವತ್ರ ಗಜಾನನ ದೃಶ್ಯತೆ [illegible]। ತರುಣಾರ್ಕಸಮಾನನಃ ಇತ್ಯಾದಿ-ನಾನು ನೋಡಿದ ನಾಲ್ಕು ದಿನಗಳಲ್ಲಿ ಈ ಎಲ್ಲಾ ಲಕ್ಷಣಗಳು ಈ ಗಜಾನನ ಸಭೆಯಲ್ಲಿ ಕಂಡುಬಂತವು-ಅಲ್ಲಿ ತೋರಿಸಲ್ಪಟ್ಟ ಗಂಗಾವತಾರ ಕ್ರಮವನ್ನು ನೋಡಿ ನನ್ನ ಮನಸ್ಸು ನಿಜವಾಗಿ ಸೂರೆಗೊಂಡಿತು. ಬಾಯಿಯಿಂದ ಎಷ್ಟೊ ವರ್ಣನೆ ಮಾಡಬಹುದು. ನಡಿಸುವುದು ಕಷ್ಟ-ಈ ಶ್ರೀಪಾದಂಗಳವರಿಗೆ ಆಯುರಾರೋಗ್ಯಾದ್ಯಭಿವೃದ್ಧಿಯನ್ನು ಕೊಟ್ಟು, ಶ್ರೀಚರಣಾಶ್ರಯ ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಸಜ್ಜನ ವಿಧೇಯ,
ಉಡುಪಿ ಗೋಪಾಲಕೃಷ್ಣ

ವಿದೇಶ ವರ್ತಮಾನ.

ಐಯರ್ಲೆಂಡಿನ ಮುಖಂಡರಲ್ಲೊಬ್ಬನಾದ ಕೋಲಿನ್ಸನನ್ನು ಕೊಲೆ ಮಾಡಿದ ವಾರ್ತೆಯನ್ನು ಕೇಳಿ ರೋಮಿನ ಪೋಪರು ಬಹಳ ಪಶ್ಚಾತ್ತಾಪಪಟ್ಟು "ಯಾವದೊಂದು ಉದ್ದೇಶವೂ ಹಿಂಸೆಯಿಂದ ನೆರವೇರಲಾರದೆಂಬುದು ಈಗ ಹುಟ್ಟಿರುವ ರಾಜಕೀಯ ಚಳವಳಿಯ ಕೊಲೆಯೆಂಬ ಮಾರಿ ರೋಗದಿಂದ ವ್ಯಕ್ತವಾಗುತ್ತದೆ." ಎಂದು ಹೇಳಿರುವರು.

ಒಳದೇಶ ವರ್ತಮಾನ.

ಕುಮಟಾ:—ದಕ್ಷಿಣ ಕನ್ನಡಾ ಜಿಲ್ಲೆಯ ಪೆರಡೂರ ದಶಾವತಾರ ಆಟದ ಮಂಡಲಿಯವರು ಇಲ್ಲಿ ಮುಕ್ಕಾಮುಮಾಡಿ ಆಟಕ್ಕೆ ಪ್ರಾರಂಭಿಸಿರುವರು.

ಗೌಡ ಸಾರಸ್ವತ ಸ್ಕೊಲರ ಶಿಪ್ ಲೀಗ ಮುಂಬಯಿ:—ಚಾಲತಿ ವರುಷದ ಬಗ್ಗೆ ಈ ಲೀಗಿಗೆ ರಾವ ಬಹದ್ದೂರ ಅನಂತ ಕೃಷ್ಣ ಪೈ. ಬಿ. ಎ. ಯವರನ್ನು ಅಧ್ಯಕ್ಷರಾಗಿಯೂ, ಶ್ರೀಯುತ ಆರ್. ಕೆ. ಪ್ರಭು ಕ್ರೊನಿಕಲದ ಉಪಸಂಪಾದಕರು ಉಪಾಧ್ಯಕ್ಷರಾಗಿಯೂ, ಶ್ರೀಯುತ ಮಕೋಜಿಬಾ ದುರ್ಗಾಪ್ಪಾ ಗಾಯಕೊಂಡೇ ಮತ್ತು ಗೋವಿಂದ ಶ್ರೀನಿವಾಸ ಗುಡಾಳ ಇವರನ್ನು ಖಜಾನದಾರರಾಗಿಯೂ, ಶ್ರೀಯುತ ಕೇಶವ ಉಪೇಂದ್ರ ಭಟ್ಟ ಬಿ. ಎ. ಮತ್ತು ಶ್ರೀಯುತ ಕೃಷ್ಣ ಪದ್ಮನಾಭ ಪ್ರಭು ಬಿ. ಎ. ಇವರನ್ನು ಕಾರ್ಯದರ್ಶಿಗಳಾಗಿಯೂ ಆರಿಸೋಣಾಗಿದೆ.

ಲಾಲಾ ಹರಿಕಿಷನಲಾಲ:—ಪಂಜಾಬ ಅಧಿಪತ್ಯದ ನ್ಯಾಯವಿಧಾಯಕ ಸಭೆಯು ಮನೆ ಬಾಡಿಗೆಯನ್ನು ನಿಗದಿಮಾಡಬೇಕೆಂಬ ಮಸೂದಾ ಕಾನೂನಿಗೆ ಮಂಜೂರಾತಿಯನ್ನು ಕೊಡದೆ ಹೋದ ಕಾರಣದಿಂದ ಆ ಮಸೂದೆಯನ್ನು ತಯಾರಿಸಿದ ಕೃಷಿ ಕೈಗಾರಿಕೆ ವ್ಯಾಪಾರ ಇಲಾಖೆಗಳ ಮಂತ್ರಿಯಾದ ಲಾಲಾ ಹರಿಕಿಷನಲಾಲರು ತಮ್ಮ ಮಂತ್ರಿತ್ವಕ್ಕೆ ರಾಜಿನಾಮೆಯನ್ನು ಕೊಡುತ್ತಾರೆಂದು ವದಂತಿ ಇದೆ. (ಆ. ಸಾಥಿ.)

ಎಕ್ಸ್ಚೇಂಜ್ ಪರಿಣಾಮ:—ಕಳೆದ ಮಾರ್ಚ ತಿಂಗಳಿಗೆ ಅಂತ್ಯವಾಗುವ ವರುಷದಲ್ಲಿ ತಾತಾ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆಗಳಿಗೆ ೪೮೩೭೦೦೦ ರೂಪಾಯಿಗಳಷ್ಟು ಐನ್ ಮುನಾಫೆಯು ಸಿಕ್ಕಿದರೂ ಕಾರ್ಖಾನೆಯ ಬಢಾವಣೆಗೋಸ್ಕರ ಪರದೇಶಗಳಿಂದ ಯಂತ್ರೋಪಕರಣಗಳನ್ನು ಹೊಸದಾಗಿ ತರಿಸಲಿಕ್ಕೆ ಕೊಡೋಣಾಗಿದ್ದ ಒರ್ಡರುಗಳಲ್ಲಿ ಎಕ್ಸ್ಚೇಂಜ್ ಯಾನೆ ಹುಂಡಿ ಮಾರ್ಪಾಟಿನ ದೆಸೆಯಿಂದ ಬಹಳ ನಷ್ಟವುಂಟಾದ ಕಾರಣ ಸಾಧಾರಣ ಶೇರುದಾರರಿಗೆ ಈ ಸಲ ನಫೆಯನ್ನು ಹಂಚಲಿಕ್ಕಿಲ್ಲವಾಗಿ ಡೈರೆಕ್ಟರುಗಳು ತಿಳಿಸಿರುತ್ತಾರೆ.

ಮುಂಬಯಿ:—ದಾದಾ ಬಾಯಿ ನವರೋಜಿಯವರ ಸ್ಮಾರಕ ಫಂಡಿಗೆ ಈ ವರೆಗೆ ರೂ. ೮೫,೦೦೦ ಜಮೆಯಾಗಿದೆ. ಈ ಹಣದಿಂದ ಅವರ ಜ್ಞಾಪಕಾರ್ಥವಾಗಿ ಒಂದು ಪ್ರತಿಮೆಯನ್ನು ಸ್ಥಾಪಿಸುವುದೆಂದು ನಿರ್ಧಾರವಾಗಿದೆ.

ಗಯಾ ಕೊನ್ಫರೆನ್ಸ್:—ಈ ಕೊನ್ಫರೆನ್ಸಿನ ಸ್ವಾಗತ ಕಮಿಟಿಯ ಸಭೆಯು ಸೇರಿ ಎಲ್ಲಾ ಪ್ರಾಂತ್ಯಗಳ ಸೂಚನೆಗಳನ್ನು ಪರ್ಯಾಲೋಚಿಸಿ ಶ್ರೀಯುತ ಚಿತ್ತರಂಜನದಾಸರನ್ನೆ ಬರುವ ಕಾಂಗ್ರೆಸಿನ ಅಧ್ಯಕ್ಷಪದವಿಗೆ ಚುನಾಯಿಸಿರುತ್ತಾರೆ.

ಬೆಂಕಿಯ ಹಾವಳಿ:—ಮುಂಬಯಿಯ ಕೊಲೋಬಾ ಕೋಟನ್ ಡಿಪೋದಿನಲ್ಲಿ ಕಳೆದ ತಾ. ೨೭ರಲ್ಲಿ ಯಜ್ಞೇಶ್ವರನ ದಾಳಿನಡೆದು ಸುಮಾರು ೨೦೦೦, ಹತ್ತಿಯ ಮೂಟೆಗಳು ನಾಶವಾಗಿ ೨ಲಕ್ಷ ರೂಪಾಯಿಯಷ್ಟು ನಷ್ಟವಾಗಿದೆ.

ಶ್ರೀಯುತ ಸಿ. ರಾಜಗೋಪಾಲಾಚಾರ್ಯರು:—ಇವರಿಗೆ ಸೇಲಮಿನಲ್ಲಿ ಇನ್ಫ್ಲುಯೆಂಜಾ ಜ್ವರವು ಹಿಡಿಸಲು ಪ್ರಾರಂಭಿಸಿದುದರಿಂದ ತಾ. ೩೧ರಲ್ಲಿ ಕಲ್ಕತ್ತೆಯಲ್ಲಿ ನಡೆದ ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿಯ ಮೀಟಿಂಗಿಗೆ ಹಾಜರಾಗಲು ಆಗಲಿಲ್ಲ.

ಮಲಬಾರ:-ಮಲಬಾರ ದಂಗೆಯ ಒಬ್ಬ ಪ್ರಸಿದ್ಧ ಮುಖಂಡನಾದ ಕೊನ್ನಾರ ತಂಗಾಲನನ್ನು ಕುತ್ತುಪರಂಬದಲ್ಲಿ ಕಳೆದ ತಾರೀಕು ೨೫ರಲ್ಲಿ ಸೆರೆಹಿಡಿದಿರುತ್ತಾರೆ. ದಂಗೆಯ ಸಂಬಂಧವಾಗಿ ಜೈಲಿನಲ್ಲಿದ್ದ ೮೦೦ ಕೈದಿಗಳನ್ನು ಬಿಡಲು ಸರಕಾರದ ಹುಕುಂ ಆಗಿದೆಯಂತೆ.

ಭಾರತ ತಿಲಕ ಆಫೀಸು:—ಈ ಪತ್ರಿಕೆಯ ಆಫೀಸಿನಲ್ಲಿ, ಮಲಗುತ್ತಿ ಒಬ್ಬ ಕಂಪೋಜಿಟರನು ಸದರಿ ಪತ್ರಿಕೆಯಲ್ಲಿ, ಪ್ರಕಟಿಸುವ ಬಗ್ಗೆ ಬಂದ ಕೆಲವು ಕಾಗದ ಪತ್ರಗಳನ್ನೂ ಚಂದಾದಾರರ ರಿಜಿಸ್ಟ್ರಿಯನ್ನೂ ಕಳವು ಮಾಡಿದುದರಿಂದ ಭಾರತ ತಿಲಕ ಪತ್ರವನ್ನು ತತ್ಕಾಲಕ್ಕೆ ಪ್ರಕಟಿಸುವುದನ್ನು ನಿಲ್ಲಿಸಿದೆ.

ಪಂಜಾಬದ ಅಕಾಲಿಗಳ ಹೋರಾಟ:—ಈ ಹೋರಾಟದಲ್ಲಿ ಒಟ್ಟು ೨೦೦೦, ಸಿಕ್ಕರನ್ನು ಕೈದು ಮಾಡಿದೆ ಎಂದು ಪ್ರಕಟವಾಗಿದೆ. ಸಿಕ್ಕರ ಒಬ್ಬ ಪ್ರಸಿದ್ಧ ಮುಖಂಡನಾದ ಸರದಾರಬಹದೂರ ಮೇತಾಸಿಂಗರನ್ನು ತಾ. ೨೭ರಲ್ಲಿ ಕೈದುಮಾಡಿದ್ದಾರೆ.

ರೈಲ್ವೆ ಕೆಲಸದವರ ಕೊನ್ಫರೆನ್ಸ್—ಈ ತಿಂಗಳ ತಾ. ೧, ೨, ೩ ಮತ್ತು ೮ರಲ್ಲಿ ಲಕ್ನೌ ಪಟ್ಟಣದಲ್ಲಿ ರೈಲ್ವೆ ಕೆಲಸದವರ ಕೊನ್ಫರೆನ್ಸು ಸೇರಲಿಕ್ಕಿತ್ತು. ಆದರೆ ಈ ಕೊನ್ಫರೆನ್ಸಿಗೆ ಅಧ್ಯಕ್ಷರಾಗಿ ನಿಯೋಜಿಸಲ್ಪಟ್ಟ ಮಿ. ಸಿ. ಎಫ್. ಎಂಡ್ರೂಸರಿಗೆ ಈ ತಾರೀಕುಗಳಲ್ಲಿ ಹಾಜರಾಗಲು ಅನನುಕೂಲವಾದುದರಿಂದ ಕೊನ್ಫರೆನ್ಸಿನ ಅಧಿವೇಶನವನ್ನು ಮುಂದರಿಸಿಟ್ಟಿದೆ.

ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರು—ಮುಂಬಯಿ ಗಿರಣಿಗಳ ಪರವಾಗಿ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾಗಿದ್ದ ಸ್ವರ್ಗಸ್ಥ ಸರ್. ವಿಠಲದಾಸ ಠಾಕರಸೀಯವರ ಮೆಂಬರಿಕೆಗೆ ಮಿ| ಹಾರಜಿ ಸಕಲಟವಾಲರು ಆರಿಸಲ್ಪಟ್ಟಿದ್ದಾರೆ.

ಮಿ| ಮಿಲ್ಲರ—ನೋರ್ಥ ವೆಸ್ಟ ರೈಲ್ವೆ ಯೂನಿಯನ್ನಿನ ಮುಖಂಡರಾದ ಮಿ| ಮಿಲ್ಲರರು ಅವರ ಬಂಧನದ ಅವಧಿ ಮುಗಿದುದರಿಂದ ಬಿಡುಗಡೆ ಹೊಂದಿರುತ್ತಾರೆ.

ಕಾಯಿದೆಭಂಗ ಕಮಿಟಿಯ ಮುಂದೆ ಆದ ಸಾಕ್ಷಿಗಳು.

(ಮಿ. ವಿ. ಡಿ. ಬೆಳವಿ, ಬೆಳಗಾಂವ)

ಕಾಂಗ್ರೆಸ್ ಪಕ್ಷವು ಕೌನ್ಸಿಲಿನಲ್ಲಿ ಹೋದದ್ದಾದರೆ, ವಿಧಾಯಕ ಕಾರ್ಯಕ್ರಮದ ಸಂಪೂರ್ತಿಯು ಬಹಳ ಸುಲಭವಾದೀತು, ಮಾತ್ರವಲ್ಲ, ಸ್ವರಾಜ್ಯವು ಸಹ ದೃಷ್ಟಿಮಾರ್ಗದಲ್ಲಿ ಬಂದೀತು, ಎಂದಮೇಲೆ ಕೌನ್ಸಿಲಿನ ಹೊರಗಿನ ಚಳವಳಿ ಸಹ ಇದೇ ರೀತಿಯಿಂದ ನಡಿಯಬೇಕಾಗಿದೆ. ಕೌನ್ಸಿಲು ಹೊರಗಿನ ಚಳವಳದ ಮತ್ತು ಲೋಕಮತದ ಒಂದು ದ್ವಾರವಾಗಿದೆ. ಅಲ್ಲದೆ, ಕೌನ್ಸಿಲಿನಲ್ಲಿ ಹೋದ ಮಾತ್ರದಿಂದ ಎಲ್ಲ ಕೆಲಸವು ಮುಗಿಯಿತೆಂದು ಯಾರೂ ತಿಳಿಯಬಾರದು. ಕೌನ್ಸಿನಲ್ಲಿ ಸೇರಿದ ಬಳಿಕ, ಇತ್ತ ಕಾಯಿದೆಭಂಗ ಮತ್ತು ಕರಬಾಕಿಯನ್ನು ನಿಲ್ಲಿಸುವುದು ಈ ಚಳವಳಿಗಳನ್ನು ಪ್ರಾರಂಭಿಸಬಹುದು. ಆದರೆ, ಕಾಯಿದೆಭಂಗದ ಈ ಸ್ಥಿತಿಯು ಬರಬೇಕಾದರೆ, ಮೊದಲು ಕೌನ್ಸಿಲಿಗೆ ಸೇರಲಿಬೇಕೆಂದು ನನ್ನ ಅಭಿಪ್ರಾಯವು.

ಅಸಹಕಾರಿತೆಯು ಚಳವಳದಿಂದ ಜನತೆಯಲ್ಲಿ ಜಾಗ್ರತೆಯುಂಟಾಗಿದೆ ಎಂಬುದು ನಿಜವು. ಆದರೂ ಶಾಲಾ-ಕಾಲೇಜುಗಳ ಬಹಿಷ್ಕಾರವು ಮತ್ತು ಕೋರ್ಟು ಬಹಿಷ್ಕಾರವು ಅಯಶಸ್ವಿಯಾಗಿದೆ ಎಂಬುದರ ಕಡೆಗೆ ಕಣ್ಣು ಮರೆಮಾಡಲು ಉಪಾಯವಿಲ್ಲ. ಈ ಸರಕಾರಿ ಸಂಸ್ಥೆಗಳ ವರ್ಚಸ್ಸು ಕಡಿಮೆಯಾಗಿದೆಂದು ತಿಳಿದುಕೊಂಡು ಸುಮ್ಮನೆ ಸಮಾಧಾನಪಡುವುದರಲ್ಲಿ ಅರ್ಥವಿಲ್ಲ. ಬುದ್ಧಿವಂತರಿಂದ ಅಸ್ವಾಭಾವಿಕ ಮತ್ತು ಅಶಕ್ಯವಾದ ಸ್ವಾರ್ಥತ್ಯಾಗದ ಅಪೇಕ್ಷೆಯನ್ನು ಮಾಡಿ, ಅವರು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲವೆಂಬುದರಿಂದ ಅವರ ಮೇಲೆ ವಿಷಮಯ ಟೀಕೆಯ ಕುಂಚುರೆಗಳನ್ನು ಹಾರಿಸಿ ಅವರನ್ನು ಪದಚ್ಯುತ ಪಡಿಸೋಣಾಗಿದೆ. ಇದರಿಂದ ಪ್ರತ್ಯಕ್ಷ ಚಳವಳದ ಮೇಲೆ ತುಂಬಾ ಹಾನಿಯು ಒದಗಿದೆ. ಆದರೆ ಈಗ ಈ ಪರಿಸ್ಥಿತಿಯಲ್ಲಿ ಕೆಲವು ಬದಲಾವಣೆಯಾಗುತ್ತಬಂದಿದೆ.

ಕಾರ್ಯಕ್ರಮದಲ್ಲಿ ಬದಲಾವಣೆಯು ಬೇಕೆಂದು ನನ್ನ ಖಂಡಿತ ಅಂಬೋಣವಿದೆ: ಬದಲಾವಣೆಯಾಗದೆ ಇದ್ದರೆ ಚಳವಳವು ಹಿಂದಕ್ಕೆ ಬಿದ್ದೀತು. ನೋಕರಶಾಹಿಯನ್ನು ಅನುಕರಿಸಿ "ಪ್ರೆಸ್ಟಿಜ"ನ ಸ್ತೋಮವನ್ನು ಬೆಳಸುವುದರಲ್ಲಿ ಅರ್ಥವಿಲ್ಲ. ಬದಲಾವಣೆಯು ಸೃಷ್ಟಿಯ ನಿಯಮವಾಗಿದೆ. ಮಹಾರಾಷ್ಟ್ರವು ವಿಶ್ವಾಸಘಾತವನ್ನೂ, ಕೃತಘ್ನತೆಯನ್ನೂ ಮಾಡಿತೆಂದು ಅದರ ಮೇಲೆ ಎಷ್ಟೋ ಸಾರಿ ಆರೋಪಣೆಯು ಮಾಡಲ್ಪಡುತ್ತದೆ. ಆದರೆ ಲೋಕಮಾನ್ಯರು ಸ್ವರ್ಗಸ್ಥರಾದ ಬಳಿಕ, ಅವರ ಪ್ರತಿಯೋಗಿ ಸಹಕಾರಿತೆಯನ್ನು ಬಿಟ್ಟು ರಾಷ್ಟ್ರವು ಅಸಹಕಾರಿತೆಯನ್ನು ಏನು ಸ್ವೀಕರಿಸಿತೋ, ಅದು ಕೃತಘ್ನತೆಯಲ್ಲವಾದರೆ, ಅಸಹಕಾರಿತೆಯಲ್ಲಿ ಬದಲಾವಣೆಯನ್ನು ಮಾಡಿರಿ ಎಂದು ಹೇಳುವ ಮಾತುಮಾತ್ರ ಹೇಗೆ ಕೃತಘ್ನತೆಯದಾಗುತ್ತದೆ.

ಸದ್ಯ. ರಾಷ್ಟ್ರದ ನೈತಿಕ ಪ್ರಕೃತಿಗೆ ಒಂದು ದೊಡ್ಡ ರೋಗಉಂಟಾಗಿದೆ. ಆ ರೋಗವು ಪ್ರಾಮಾಣಿಕತೆಯ ಅಭಾವವೆ ಸರಿ. ಆಚಾರವಿಚಾರಗಳಲ್ಲಿ ಇಷ್ಟು ದೊಡ್ಡ ವ್ಯತ್ಯಾಸವು ಮೊದಲು ಇತ್ತೊ ಇಲ್ಲವೊ ಇದು ನನಗೆ ಗೊತ್ತಾಗದು. ನಾಗಪುರ ಮತ್ತು ಅಹಮ್ಮದಾಬಾದ ರಾಷ್ಟ್ರೀಯ ಸಭೆಗಳಲ್ಲಿ ಅಸಹಕಾರ ಚಳವಳದ ಠರಾವಿಗೆ ಅನೇಕರು ಕೈಗಳನ್ನು ಮೇಲಕ್ಕೆ ಎತ್ತಿದರು. ಆದರೆ ಆ ಠರಾವುಗಳನ್ನು ಆಚಾರದಲ್ಲಿ ತರುವ ಜವಾಬದಾರಿಯನ್ನು ಮಾತ್ರ ಅವರು ಮನಗಂಡದ್ದು ಕಂಡುಬರುವುದಿಲ್ಲ. ಕೋರ್ಟು ಬಹಿಷ್ಕಾರವನ್ನು ತೆಗೆದುಹಾಕಲು ಒಂದು ಅಕ್ಷರವನ್ನು ಉಚ್ಚರಿಸಿದರೆ ಸಾಕು, ವಕಾಲತನ್ನು ನಡಿಸುವ ಅನೇಕ ವಕೀಲರುಗಳ ಸಿಟ್ಟು ತಲೆಗೆ ಏರಿಹೋಗುತ್ತದೆ! ಸ್ವಸಂರಕ್ಷಣದ ಹಕ್ಕನ್ನು ಕಾಪಾಡುವ ವಿಷಯದಲ್ಲಿ ಒಂದೆಯೊಂದು ಮಾತು ಬಂದಕೂಡಲೆ ಯಾವಾಗಲೂ ಕೋರ್ಟುಗಳಲ್ಲಿ ಬಿದ್ದುಕೊಂಡಿರುವ ಜನಗಳಿಗೂ ಸಹ ಅನಿವಾರ್ಯವಾದ ಕ್ರೋಧವು ಬಂದುಬಿಡುವುದು! ಹೆಚ್ಚುಯಾಕೆ, ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಬದಲಾವಣೆಯನ್ನು ಮಾಡಬೇಕೆಂದು ಹೇಳಿದೊಡನೆ ಸ್ವತಃ ಸರಕಾರಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳು ಸಹ ಮುಣುಗುಮುರಿಯಲಾರಂಭಿಸುವರು! ಲೋಕಮತವು ಹೆಚ್ಚು ನೀತಿಭ್ರಷ್ಟವಾಗದಂತೆ, ಜಾಗ್ರತೆ ತೆಗೆಕೊಳ್ಳಬೇಕಾದರೆ ಇಂಥ ಎಲ್ಲ ಸಂಗತಿಗಳನ್ನು ಬಹಿರಂಗಪಡಿಸುವುದು ಅವಶ್ಯವು. ಇಲ್ಲವಾದರೆ ಮುಂಬಯಿ ಕ್ರೊನಿಕಲ್ ಪತ್ರಿಕೆಯು ಒಂದು ಕಡೆಯಲ್ಲಿ ಸರಕಾರಿ ಜಾಹೀರಾತುಗಳನ್ನು ಯಾವ ಅಡ್ಡಿಇಲ್ಲದೆ ಪ್ರಕಟಿಸುತ್ತಲೂ, ಹಜರತ ಮೋಹನಿಗಳನ್ನು ನಿರ್ದೋಷಪಡಿಸಿದ ಬಗ್ಗೆ ಹೈಕೋರ್ಟನ್ನು ಹೊಗಳುತ್ತಲೂ ಇದ್ದು, ಇನ್ನೊಂದು ಕಡೆಯಲ್ಲಿ ಮಹಾತ್ಮಾ ಗಾಂಧಿಗಳೊಡನೆ ವಿಶ್ವಾಸಘಾತವನ್ನು ಮಾಡಿದ ಆರೋಪಣೆಯನ್ನು ಮಾಡಿ ಹೊರಗೆ ಮಹಾರಾಷ್ಟ್ರದ ಮೇಲೆ—ಕೂಗುತ್ತಲೆ ಇದ್ದ ಯಾವ ಸಂಗತಿಯುಂಟೋ ಅಂಥ ಸಂಗತಿಯು ನಿಂತುಹೋಗಲಿಕ್ಕಿಲ್ಲ.

ಆಚಾರದಲ್ಲಿ ತರಲು ಸಾಧ್ಯವಿಲ್ಲವಾದರೂ, ಉಚ್ಚಧ್ಯೇಯವನ್ನಿಟ್ಟುಕೊಳ್ಳಲು ಅಡ್ಡಿ ಏನು? ಎಂದು ಅನೇಕರು ಕೇಳುವರು. ನಾನು ಈ ಮತವನ್ನು ಸಂಪೂರ್ಣ ಮತ್ತು ಸ್ಪಷ್ಟ ನಿಷೇಧಿಸುವೆನು. ರಾಷ್ಟ್ರೀಯ ಸಭೆಯು ಒಂದು ರಾಜಕೀಯ ಸಂಸ್ಥೆಯಾಗಿದೆ; ಹೊರತು ಸದ್ಗುಣ ಸಂವರ್ಧಕವಾದ ಆಶ್ರಮವಲ್ಲ; ರಾಜಕೀಯ ಸಾಧ್ಯ ಮತ್ತು ಧಾರ್ಮಿಕ ಸಾಧ್ಯ ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಇಡಬೇಕು. ಎಲ್ಲ ಶಾಂತಿಮಯ ಮತ್ತು ಯೋಗ್ಯ ಮಾರ್ಗಗಳಿಂದ ಸ್ವರಾಜ್ಯ ಸಂಪಾದನೆಯ ಧ್ಯೇಯವನ್ನೇ ಗುರಿಯಿಡಬೇಕು.

ಕೌನ್ಸಿಲುಗಳನ್ನು ಆಕ್ರಮಣಮಾಡುವ ಪ್ರಸ್ತಾಪವನ್ನು ಮಾಡಿದೊಡನೆಯೆ ಕೌನ್ಸಿಲವಾದಿಗಳು ಅಭಿಮಾನವನ್ನೂ ಉಚ್ಚಪದವಿಗಳನ್ನೂ ಪಡೆಯುವುದಕ್ಕೆ ಆಕಾಂಕ್ಷಿಸುತ್ತಾರೆಂದು ಅವರ ಮೇಲೆ ಆರೋಪಿಸುತ್ತಾರೆ. ಆದರೆ ಅವರು ಮಾಡುವ ಮುಂದಿನ ಕಾರ್ಯಗಳನ್ನು ನೋಡಿದರೆ ಅವರ ಮೇಲಿನ ಆರೋಪವು ನಿರಾಧಾರ ಮತ್ತು ನಿಂದಾತ್ಮಕವಾಗಿದೆಂದು ಗೊತ್ತಾಗುತ್ತದೆ. ಮತ್ತೊಂದು ಆಕ್ಷೇಪವೇನಂದರೆ ಕೌನ್ಸಿಲುಗಳು ವ್ಯರ್ಥ ಮತ್ತು ಬರೆ ಭ್ರಮೆಗಳಾಗಿರುತ್ತವೆ. ಇದನ್ನು ಸಿದ್ಧಮಾಡಲಿಕ್ಕೋಸ್ಕರವ ಮತ್ತು ಅವುಗಳ ಮಹತ್ವವನ್ನು ಕೆಗೆಯಲಿಕ್ಕೆ, ನಾವು ಅಲ್ಲಿ ಹೋಗಬೇಕಾದುದು. ಇದೇ ಮೇಲಿನ ಆಕ್ಷೇಪಕ್ಕೆ ನನ್ನ ಉತ್ತರವು. ಅಸಹಕಾರಿತಾ ವಿಮರ್ಶನವನ್ನು ಅತಿಸೂಕ್ಷ್ಮವಾಗಿ ವಿಚಾರಿಸಿದ್ದಲ್ಲಿ ಅಸಹಕಾರಿತೆಗೂ ಕೌನ್ಸಿಲುಗಳ ಆಕ್ರಮಣಕ್ಕೂ ಯಾವ ಭೇದವೂ ತೋರುವುದಿಲ್ಲ. ಸರಿಯಾಗಿ ಪರ್ಯಾಲೋಚಿಸಿದರೆ ಕೌನ್ಸಲುಗಳಲ್ಲಿ ಪ್ರವೇಶಿಸಿದ್ದಲ್ಲಿ ಅಸಹಕಾರಿತೆಯು ಮತ್ತಷ್ಟು ಜಾಜ್ವಲ್ಯವಾದೀತೆಂದು ಸ್ಪಷ್ಟವಾಗುತ್ತದೆ. ಕೌನ್ಸಿಲುಗಳಲ್ಲಿ ಪ್ರವೇಶಿಸಿದರೆ ಜಾತಿಮಾತ್ಸರ್ಯವು ಉಂಟಾಗಿ ಐಕ್ಯವು ನಾಶವಾದೀತೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಕೌನ್ಸಿಲುಗಳನ್ನು ಬಹಿಷ್ಕರಿಸಿದ್ದರಿಂದ ಈಗ ಯಾವ ದೊಡ್ಡ ಐಕ್ಯವನ್ನು ನೀವು ಗಳಿಸಿದ್ದೀರಿ? ಶಾಂತಪಕ್ಷದವರು, ಮತ್ತು ಇನ್ನೂ ಅನೇಕರು ಅಸಹಕಾರಿತೆಯನ್ನೂ ಈಗಲೂ ದ್ವೇಷಿಸುತ್ತಾರೆ. ಅಲ್ಲದೆ ಸರಕಾರದೊಡನೆ ಸಹಾಯ್ಯಕರಾಗಿ ದೇಶದಲ್ಲಿ ಒತ್ತಾಟವನ್ನೂ ನಡಿಸುತ್ತಿದ್ದಾರೆ.

ಕೌನ್ಸಿಲುಗಳಲ್ಲಿ ಸೇರಿದ ಮೇಲೆ ರಾಷ್ಟ್ರೀಯ ಪಕ್ಷದವರು ಏನು ಮಾಡಬೇಕೆಂಬುವದೊಂದು ಮಹತ್ವವಾದ ಪ್ರಶ್ನೆಯು ಮುಂದೆ ಬರುತ್ತದೆ. ಸ್ವಾಮಿ ಸತ್ಯದೇವರ ಹೇಳಿಕೆ ಏನಂದರೆ, ರಾಜನಿಷ್ಠೆಯ ಶಪಥವನ್ನು ನಾವು ತೆಕ್ಕೊಳ್ಳದೆ ಒಂದೆಸವನೆ ಗಲಿಬಿಲಿಯನ್ನು ಉಂಟುಮಾಡಬೇಕು. ಆದರೆ ಯಾವಾಗ ನಮ್ಮ ಚಳವಳವು ಸ್ವಾತಂತ್ರ್ಯಕ್ಕೋಸ್ಕರವಲ್ಲವೊ, ಆಗ ನಾವು ಶಪಥವನ್ನು ತೆಕ್ಕೊಂಡರೇನು ದೋಷವಾಗುವುದು? ಎರಡನೆಯದೇನೆಂದರೆ, ಶಪಥದ ಸಂಬಂಧ ಯಾವ ಜಗಳವು ಉಪಸ್ಥಿತವಾಗುವುದೊ ಅದು ಪ್ರಕೃತ ಜನರ ದೃಷ್ಟಿಯಿಂದ ಹೇಳಬೇಕಾದರೆ ಸೂಕ್ಷ್ಮವೂ ನಿಸ್ಸಾರವೂ ಆಗುವುದು. ಇದೆ ಸಂದರ್ಭದಲ್ಲಿ ಇನ್ನೊಂದು ಪಕ್ಷದವರು ಹೇಳುವುದೇನೆಂದರೆ, ನಾವು ಕೌನ್ಸಿಲುಗಳನ್ನು ಆಕ್ರಮಣಮಾಡಿ ಒಂದೆ ಸವನೆ ಸರಕಾರಕ್ಕೆ ವಿರೋಧಮಾಡಬೇಕು. ಈ ರೀತಿಯು ನನ್ನ ಮನಸ್ಸಿಗೆ ಅಪಾಯಕರವೂ ಮೂರ್ಖತನವೂ ಎಂದು ತೋರುತ್ತದೆ. ಸರಕಾರದ ಎಲ್ಲ ಕೃತ್ಯಗಳು ಕೆಟ್ಟ ಮತ್ತು ತ್ಯಾಜ್ಯವೆಂದು ಹೇಳುವುದಕ್ಕಾಗುವುದಿಲ್ಲ. ಪ್ರತಿ ಒಂದು ಠರಾವಿಗೆ ಅದು ಸರಕಾರದ್ದೆಂದು ನಾವು ವಿರೋಧಿಸುತ್ತ ಹೋದರೆ ಜನತೆಗೆ ನಮ್ಮ ಮೇಲಿರುವ ಸಹಾನುಭೂತಿಯು ನಷ್ಟವಾಗಿ ಸರಕಾರದ ಕಡೆಗೆ ತಿರುಗೀತು.

ಹೀಗಾದಮೇಲೆ ಕಟ್ಟಕಡೆಗೆ ನಾವು ಪ್ರತಿಯೋಗಿ ಸಹಕಾರಿತೆಯ ಕಡೆಗೆ ಬಂದು ತಲುಪುತ್ತೇವೆ. ಈ ಶಬ್ದದ ಅರ್ಥವೇನೆಂದರೆ, ಯಾವಾಗ ಸಹಕಾರಿತೆಯು ಅಗತ್ಯವೊ ಆಗ ಸಹಕಾರಿತೆಯನ್ನೂ, ಯಾವಾಗ ಅಸಹಕಾರಿತೆಯು ಯೋಗ್ಯವೊ ಆಗ ಅಸಹಕಾರಿತೆಯನ್ನೂ ಮಾಡಬೇಕಾದುದು. ಈ ರೀತಿಯಾಗಿ ಮಾಡಿದ ಪಕ್ಷದಲ್ಲಿ ನಮಗೆ ಹೆಚ್ಚು ರಾಜಕೀಯ ಲಾಭವಾದೀತು. ಇದರಿಂದ ಮುಖ್ಯವಾಗಿ ಸಾಧಿಸುವ ಕಾರ್ಯ ಯಾವುದೆಂದರೆ ಮತದಾರ ವರ್ಗದವರಿಗೆ ರಾಜಕೀಯ ಶಿಕ್ಷಣವು ದೊರಕೀತು. ಈ ಶಸ್ತ್ರವು ನಮ್ಮಲ್ಲಿ ಇದ್ದ ಪಕ್ಷದಲ್ಲಿ ಅದರ ಭಯಂಕರ ಪರಿಣಾಮವನ್ನು ನಾವು ಮಾಡಿ ತೋರಿಸಬಹುದು. ಎರಡನೆ ಲಾಭ ಯಾವುದೆಂದರೆ ಬಾರದೋಲಿಯ ಕಾರ್ಯಕ್ರಮಕ್ಕೆ ಚಿರಕಾಲ ಸ್ವರೂಪವನ್ನು ಕೊಡಲಿಕ್ಕೆ ನಮಗೆ ಸಾಧ್ಯವಾದೀತು. ರಾಷ್ಟ್ರೀಯ ಕೌನ್ಸಿಲುದಾರರ ಮುಂದೆ ಸರಕಾರಕ್ಕೆ ಖಾದಿಯಮೇಲೆ ಬಹಿಷ್ಕಾರವನ್ನೂ ಇಡಲಿಕ್ಕೆ ಧೈರ್ಯಬರಲಿಕ್ಕಿಲ್ಲ. ಅಲ್ಲದೆ ಮಂತ್ರಿಗಳ ಸಹಾಯ್ಯದಿಂದ ನಮ್ಮ ವಿದ್ಯಾಶಾಖೆಯಲ್ಲಿ ಯಾವ ದೋಷಗಳು ಕಂಡುಬರುತ್ತವೊ ಅವುಗಳನ್ನು ತೆಗೆದುಹಾಕಲು ಸಾಧ್ಯವಾದೀತು. ಸರಕಾರದ ಶಿಕ್ಷಣ ಸಂಸ್ಥೆಗಳಿಗೆ ಎದುರಾಗಿ ನಾವು ಸ್ವತಂತ್ರ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು ನಮ್ಮ ಉತ್ಸಾಹದ ಮತ್ತು ದ್ರವ್ಯದ ನಾಶಮಾಡಿಕೊಳ್ಳುವುದಾಗಿರುತ್ತದೆ. ಅದಲ್ಲದೆ ಪಿಕೆಟಿಂಗ ಮಾಡುವುದರಿಂದ ಹೆಂಡದ ಪೂರ್ಣನಾಶವಾಗುವುದಿಲ್ಲವೆಂದು ಅನುಭವವು ಹೇಳುತ್ತದೆ. ಕಾಯಿದೆಯು ಹೊರತು ಅದಕ್ಕೆ ಇನ್ನಾವ ಉಪಾಯವೂ ಇರುವುದಿಲ್ಲ. ಕೌನ್ಸಿಲಿಗೆ ಪ್ರವೇಶಿಸಿದ ಮೇಲೆ ಹೊರಗಿನ ಇತರ ಚಳವಳವು ಕಡಿಮೆಯಾದೀತೆಂದು ಕೆಲವರು ಹೆದರುತ್ತಾರೆ. ಆದರೆ ಇವರ ಈ ಅಂಬೋಣವು ಸತ್ಯವಲ್ಲವೆಂದು ನನಗೆ ತೋರುತ್ತದೆ. ಕೌನ್ಸಿಲಿನೊಳಗಿನ ಮತ್ತು ಬಾಹ್ಯಕೆಲಸಗಳನ್ನು ಮಾಡಲಿಕ್ಕೆ ನಮ್ಮಲ್ಲಿ ರಾಷ್ಟ್ರೀಯ ಮುಖಂಡರು ಕಡಿಮೆ ಇದ್ದಾರೆಂದು ನನಗೆ ತೋರುವುದಿಲ್ಲ; ಮತ್ತು ಇನ್ನೊಂದು ಸಂಗತಿ ಏನಂದರೆ ಕೌನ್ಸಿಲುಗಳು ೧೨ ತಿಂಗಳು ಒಂದೆಸವನೆ ನಡಿಯುವುದಿಲ್ಲ. ಆದ್ದರಿಂದ ಕೌನ್ಸಿಲುಗಳಲ್ಲಿ ಸೇರಲಿಕ್ಕೆ ರಾಷ್ಟ್ರೀಯ ಸಭೆಯು ಪೂರ್ಣಪ್ರಾಂತಿಕ-ಸ್ವಾತಂತ್ರ್ಯವನ್ನು ಕೊಡಲೇಬೇಕು.

ಆರ್ಯರ ವರ್ಣಾಶ್ರಮಧರ್ಮ

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಹೀಗೆ ವಿಜಿತರು ಸ್ವಧರ್ಮಗಳನ್ನು ಬಿಟ್ಟು ಬಿಟ್ಟು ವಿಜೇತರ ಧರ್ಮವೂ ಮತವೂ ಶ್ರೇಷ್ಠವೆಂದೂ ವಿಜೇತರೇ ತಮಗಿಂತಲೂ ಸರ್ವ ವಿಷಯದಲ್ಲಿಯೂ ಅಧಿಕರೆಂದೂ ಪರಿಗಣಿಸಲಾರಂಭಿಸಿ ತಮ್ಮ ಧರ್ಮ ಮತಾಚರಣೆಗಳು ಶಿಥಿಲವಾಗುವಂತೆ ನಡೆಯತೊಡಗಿದರು. ಯಾವಾಗ ಉಚ್ಚಸ್ಥಾನದಲ್ಲಿರುವವರು ಸ್ವಸ್ಥಾನವನ್ನು ಬಿಟ್ಟು ಅನ್ಯಸ್ಥಾನವನ್ನು ಬಯಸಿದರೊ ಆಗಲೆ ಅನ್ಯರು ಈ ಸಂದರ್ಭವನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿ ಆ ಉಚ್ಚಸ್ಥಾನವನ್ನು ತಾವು ಸೇರಲು ಪ್ರಯತ್ನಿಸುವರು. ಸಾಧ್ಯವಾಗದಿದ್ದರೆ ಉಪಾಯಾಂತರದಿಂದ ಆ ಉಚ್ಚಸ್ಥಾನದಿಂದ ಇಳಿದವರ ಆಶ್ರಯವನ್ನು ಅಪೇಕ್ಷಿಸಿ ಅವರನ್ನು ತಮ್ಮ ಮುಖಂಡರನ್ನಾಗಿ ಮಾಡುವರು. ಇಂಥವರೇ ಸಾಮಾಜಿಕ ಸುಧಾರಕರೆಂದು ಮೆರೆಯುವರು. ಇವರ ಸಹಾಯದಿಂದಲೇ ಅವರು ತಮ್ಮ ಇಷ್ಟಾರ್ಥವನ್ನು ಪಡೆಯಲು ಪ್ರಯತ್ನಿಸುವರು. ಅನ್ಯ ಮತಸ್ಥರು ನಮ್ಮಲ್ಲಿಗೆ ಬಂದು ನಮ್ಮನ್ನು ಗೆದ್ದು ಆಳಿ ನಮ್ಮನ್ನು ಅಧೀನತೆಯಲ್ಲಿ ಇರಿಸಿದ್ದೇ ಇದಕ್ಕೆಲ್ಲಾ ಕಾರಣವು ಹೊರತು, ನಾವು ಪೂರ್ವದಲ್ಲಿದ್ದಂತೆ ಸ್ವತಂತ್ರರಾಗಿರುತ್ತಿದ್ದರೆ, ಈ ಸುಧಾರಕನೆನ್ನುವವರೂ ಅಸ್ಪೃಶ್ಯತಾ ನಿವಾರಣೆಯ ಬೋಧಕರೂ ಹುಟ್ಟುತ್ತಿರಲಿಲ್ಲ. ಅಸ್ಪೃಶ್ಯರೂ ಸಮಾಜದ ಒಂದು ಅಂಗವೆಂತಲೂ ಆ ಅಂಗವು ಹಾಳಾದರೆ ಸಮಾಜೋದ್ಧಾರವು ಆಗಲಾರದೆಂತಲೂ ಸಮಾಜೋದ್ಧಾರವಾಗದೆ ಸ್ವರಾಜ್ಯಪ್ರಾಪ್ತಿಯು ಆಗದೆಂತಲೂ ಮುಂತಾದಾಗಿ ಈ ಸುಧಾರಕರು ಬೋಧಿಸುತ್ತಾರೆ. ಎಂದರೆ ಅವರ ನಿಜವಾದ ಧ್ಯೇಯವು ಸ್ವರಾಜ್ಯ ಪ್ರಾಪ್ತಿಯಲ್ಲದೆ ಪತಿತ ಜನೋದ್ಧಾರವೆಂದು ಹೇಳಲು ಅವಕಾಶವಿಲ್ಲ. ಈ ಅಸ್ಪೃಶ್ಯರನ್ನು, ಎಂದರೆ, ಸಮಾಜದ ಒಂದು ಅಂಗವನ್ನು ಸಂಗೊಳಿಸದಿದ್ದರೆ, ಮನುಷ್ಯನ ದೇಹದಲ್ಲಿ ಹಾಳಾದ ಯಾವುದಾದರೊಂದು ಅಂಗವನ್ನು ಸರಿಗೊಳಿಸದಿದ್ದರೆ ಬರಬರುತ್ತ ಇಡೀ ದೇಹವೇ ಹಾಳಾಗುವಂತೆ ಸಮಾಜವು ಹಾಳಾಗುವದೆಂಬ ಅಭಿಪ್ರಾಯವನ್ನು ಸೂಚಿಸುತ್ತಾರೆ. ಆದರೆ ದೇಹದಲ್ಲಿ ರೋಗಪೀಡಿತವಾದ ಒಂದು ಅಂಗವು ಬಗೆಬಗೆಯ ಚಿಕಿತ್ಸೆಗಳಿಂದ ಗುಣಾತೀತವೆಂದು ತಿಳಿದುಬಂದೊಡನೆ ಆ ಭಾಗವನ್ನೇ ಕತ್ತರಿಸಿ ಬಿಡಬೇಕೆಂದು ವೈದ್ಯರ ಅನುಭವಸಿದ್ಧವಾದಮಾತು. ಅಂತೆಯೇ ನಮ್ಮ ಪೂರ್ವಜರು ಈ ಅಸ್ಪೃಶ್ಯರ ವಿಷಯ ಹಲವು ವಿಧವಾಗಿ ಪ್ರಯತ್ನಿಸಿದರೂ ಅವರನ್ನು ಕೊನೆತನಕವೂ ಸರಿಗೊಳಿಸಲಾರದೆ ಹೋದುದರಿಂದ ಅವರನ್ನು ತ್ಯಜಿಸಿಯೇ ಬಿಟ್ಟರು.

ಪರಂತು ಈ ಸುಧಾರಕರೆಂಬವರ ಮಹತ್ಪ್ರಯತ್ನದಿಂದಲೂ ಮಹಮ್ಮದಿ, ಕ್ರೈಸ್ತ ಮುಂತಾದ ಮತಾವಲಂಬಿಗಳ ಒಡೆತನದಿಂದಲೂ ಪೂರ್ವದಲ್ಲಿ ಅಸ್ಪೃಶ್ಯರೆಂದು ಪ್ರತ್ಯೇಕಿಸಲ್ಪಟ್ಟವರಲ್ಲಿ ಕೆಲವರೊಡನೆ ಸ್ಪೃಶ್ಯಾನುಸಂಪರ್ಕವು ಪ್ರಕೃತ ನಡೆಯುತ್ತಿರುವುದೂ ಆ ಸ್ಪೃಶ್ಯಾನುಸಂಪರ್ಕದ ಪರಿಣಾಮವೂ ಕಾಣಬರುತ್ತವೆ. [illegible]ದಂದರೆ ಉಚ್ಚತರಗತಿಯವರಲ್ಲಿಯೂ ಅಪೇಯಪಾನ ಅಭೋಜ್ಯ ಭಕ್ಷ್ಯ ಇವೇ ಮೊದಲಾದವುಗಳ ವಿಷಯ ಉಂಟಾದ ಅಧಃಪತನ. ಕಾರಣ ಇನ್ನು ಉಳಿದ ಅಸ್ಪೃಶ್ಯರೊಡನೆಯೂ ಕಲೆತುಕೊಳ್ಳಬೇಕೆಂದಾದರೆ "ನಿಷಿದ್ಧ" ಎಂಬ ಶಬ್ದವನ್ನು ತೆಗೆದು ಹಾಕಲೇ ಬೇಕು.

ರಾಜಪುತ್ರರ ಅಧಿಕಾರದ ಕಾಲದಲ್ಲಿಯೂ ಅಕ್ಬರನಿಂದ ವಿಜಿತರಾಗಲು ಆ ರಾಜಪುತ್ರರ ಜಾತಿಯ ಬಲವೂ ದರ್ಪವೂ ಕುಂದಿಹೋದುವು. ಕೆಲವರು ಅವನಿಗೆ ದಾಸರೂ ಆದರು. ಕೆಲವರು ಕನ್ಯಾ ದಾನಮಾಡಿ ಬಂಧುತ್ವವನ್ನು ಬೆಳೆಸಿದರು. ಕೊನೆಗೆ ಇವರಲ್ಲೊಬ್ಬನು ಅಂಬರ್ ಸಂಸ್ಥಾನದ ಅರಸನು ಚಿತ್ತೂರಿನ ಅರಸನಾಗಿದ್ದು ಅದೇ ಅಕ್ಬರನಿಂದ ಪರಾಜಿತನಾಗಿ ಗುಡ್ಡ ಬೆಟ್ಟಗಳಲ್ಲಿ ತಿರುಗುತ್ತಿದ್ದ ಪ್ರತಾಪ ಸಿಂಹನೆಂಬವನ ಸಹಪಂಗ್ತಿಯನ್ನು ಬಯಸಿ ಬರಲು ಪ್ರತಾಪನು "ತುರುಕನಿಗೆ ತನ್ನ ತಂಗಿಯನ್ನು ಕೊಟ್ಟು ಸಂಭವತಃ ತುರುಕನ ಸಂಗಡ ಊಟಮಾಡಿದವನ ಸಹ ಪಂಗ್ತಿಯಲ್ಲಿ ನಾನು ಊಟ ಮಾಡುವವನಲ್ಲ" ಎಂದನು. ಮಾತ್ರವಲ್ಲ, ಮಾನಸಿಂಹನೊಡನೆ ಸಾಮಾಜಿಕ ಸಂಬಂಧಗಳನ್ನೆಲ್ಲಾ ತೊರೆದುಬಿಟ್ಟನು.

ಅಷ್ಟು ದೂರ ಹೋಗುವುದೇಕೆ? ಸುಧಾರಕರನ್ನಿಸಿಕೊಳ್ಳುವವರೂ ಅನೇಕ ಸಾರಿ ಲೋಕಮಾನ್ಯ ತಿಲಕರ ಮೇಲೆಯೂ ಸಾಮಾಜಿಕ ಆರೋಪಗಳನ್ನು ತಂದಿದ್ದರು. ಲೋಕಮಾನ್ಯರು "ಸಾಮಾಜಿಕ ಸುಧಾರಣೆಯ ಶತ್ರು" ಎಂದರು. ಅವರಿಂದ ಸಮಾಜದ ಹಾನಿಯಾಗುವುದೆಂದೂ ಅನ್ನುತ್ತಿದ್ದರು. ಕಾರಣವೇನೆಂದರೆ, ಇತರ ಸುಧಾರಕರಂತೆ ಇವರು ಉತಾವಳಿಯ ಸುಧಾರಕರಾಗಿದ್ದಿಲ್ಲ. ಬಹುಕಾಲದಿಂದ ಜನರಲ್ಲಿ ಆರೂಢವಾಗಿದ್ದ ಆಚಾರಗಳನ್ನು ಒಮ್ಮೆಲೇ ಮುರಿಯಲಿಕ್ಕೆ ಅವರು ಸಿದ್ಧವಾಗಿದ್ದಿಲ್ಲ. ಅವರ ಮೇಲಿನ ಆರೋಪವು ಅಷ್ಟಕ್ಕೆ ತೀರಲಿಲ್ಲ. ಪುನರ್ವಿವಾಹಕ್ಕೆ ಅನುಕೂಲವಾಗಿ ಕೇಸರಿಯಲ್ಲಿ ಲೇಖನವನ್ನು ಬರೆಯಬೇಕೆಂದು ಸುಧಾರಕರೆಲ್ಲರೂ ಕೂಗೆಬ್ಬಿಸಲು "ನೀವು ೩೦೦ ಜನ ಸಭ್ಯ ಹಾಗು ವಜನದಾರ ಜನಗಳ ಸಹಿ ಹಾಕಿ ಒಂದು ಕಾಗದವನ್ನು ನನ್ನ ಕಡೆಗೆ ತನ್ನಿರಿ. ಆ ಮೇಲೆ ನಾನು ಕೇಸರಿಯಲ್ಲಿ ನನ್ನ ಅಭಿಪ್ರಾಯವನ್ನು ಪ್ರಕಟಿಸುವೆನು" ಎಂದು ಲೋಕಮಾನ್ಯರು ಅಂದರು. ಇವರ ವಿಷಯ ಮತ್ತೂ ಹೇಳುವುದಾದರೆ, ೧೮೯೦ರಲ್ಲಿ ಪುಣೆಯಲ್ಲಿ ನಡೆದ ಒಂದು 'ಟೀ' ಪಾರ್ಟಿಯ ಪ್ರಕರಣವನ್ನು ಹೇಳಬಹುದು. ಇಲ್ಲಿ ಸುಮಾರು ೬೦-೭೦ ಜನ ಸಭ್ಯರು ಇದ್ದರು. ಇವರಲ್ಲಿ ೪೨ ಜನರ ಮೇಲೆ ಜಾತಿಯ ಖಟ್ಲೆಯು ಎದ್ದಿತು. ಶ್ರೀ ಶಂಕರಾಚಾರ್ಯ ಮಠದಿಂದ ಇವರ ಬಹಿಷ್ಕಾರವೂ ಆಯಿತು. ಈ ೪೨ ಮಂದಿಯಲ್ಲಿ ಲೋಕಮಾನ್ಯ ತಿಲಕರೂ, ನ್ಯಾ| ರಾನಡೆಯವರೂ ಇದ್ದರು. ನ್ಯಾ| ರಾನಡೆಯವರೂ ಇನ್ನೂ ಅನೇಕರು ಪುಣೆಗೆ ಹೋಗಿ ಪ್ರಾಯಶ್ಚಿತ್ತವನ್ನು ತಕ್ಕೊಂಡರು. ಲೊ| ತಿಲಕರು ಸಹ 'ಟೀ' ತಕ್ಕೊಂಡಿದ್ದಿಲ್ಲವಾದರೂ ಕಾಶಿಗೆ ಹೋಗಿ ಪ್ರಾಯಶ್ಚಿತ್ತವನ್ನು ತಕ್ಕೊಂಡರು.

ಈಗ ಮಾತ್ರ ಕೆಲವು ಸುಧಾರಕರು ಅಸ್ಪೃಶ್ಯತೆಯನ್ನು ನಿವಾರಿಸಬೇಕೆಂದಿರುತ್ತಾರೆ. ಸಮಾಜದ ಅಸ್ತಿತ್ವಕ್ಕೂ, ಉದ್ಧಾರಕ್ಕೂ ರಕ್ಷಣೆಗೂ ಅಸ್ಪೃಶ್ಯತೆಯು ಇರುವುದೇ ಆಧಾರಭೂತವು. ಇದರ ಮೂಲಕವೇ ರಾಷ್ಟ್ರೋದ್ಧಾರವೂ ಆಗುವುದು. ನಿಷಿದ್ಧವನ್ನು ತುಂಬಿರುವ ಪಥಾರವನ್ನು ಪ್ರವೇಶಿಸಬಾರದೆಂಬ ರಾಜಾಜ್ಞೆಯು ಪ್ರಜೆಗಳಿಗೂ, ರಾಜರಿಗೂ, ರಾಜ್ಯಕ್ಕೂ ಶುಭಪ್ರದವಾದುದೆಂದು ಎಲ್ಲರೂ ಬಲ್ಲರು. ಈ ರೀತಿಯಲ್ಲಿಯೇ ಈ ಅಸ್ಪೃಶ್ಯತೆಯನ್ನುಂಟು ಮಾಡಿದ ನಮ್ಮ ಪೂರ್ವಜರು ವಿದ್ವಜ್ಜನರೂ ಜ್ಞಾನಿಗಳೂ ಆಗಿದ್ದರು.

U. K. N.

(ಮುಂದರಿಯುವುದು.)

ಅನುಕ್ರಮಣಿಕೆ

ಅಗ್ರಲೇಖ—
ಇಂಪೀರಿಯಲ್ ಪ್ರೆಫರನ್ಸು ೬
ಸ್ಫುಟವಿಚಾರಗಳು—
೧, ೨, ೩, ೪, ೫ ನೋಕರ ಶಾಹಿಯ ಪ್ರತಾಪ . . . . ,,
೬. ನಾಮದಾರ ಶಾಸ್ತ್ರಿಯವರು . . . . ,,
೭. ಗಯಾ ಕೊಂಗ್ರೆಸ್ಸಿನ ಅಧ್ಯಕ್ಷರು . . . . ,,
ಮಂಗಳೂರು—
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ಕಾಯುದೆಭಂಗ ಕಮಿಟಿಯ ಮುಂದೆ ಆದ ಸಾಕ್ಷಿಗಳು . . . ,,
ಆರ್ಯರ ವರ್ಣಾಶ್ರಮಧರ್ಮ . . . . ,,
ಕೊಲ್ಲೂರು ಗೋಘೂನಂದನದ ಆಮೂಲಾಗ್ರ ಚರಿತ್ರೆ . . . ೭
ಶಾಂತಿಯ ಧ್ವಜ . . . . ,,
ರಥಗಳನ್ನು ಯಜ್ಞೇಶ್ವರನಿಗೆ ಆಹುತಿ ಕೊಟ್ಟ ತರುಣ . . . ,,
ಜಿಲ್ಲಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು ೮
ಬೂತಾಯಿ ಮೀನು ಶಿಕಾರಿಯ ಕಾನೂನು . . . . ,,
ಉಡುಪಿಯಲ್ಲಿ ಗಣೇಶ ಚತುರ್ಥಿ . . . . ,,

ಸ್ವದೇಶಾಭಿಮಾನಿ.

ಶಕ ೧೮೪೫ಳ ಬಾದ್ರಪದ ಶು| ೧೦ಯು ಶುಕ್ರವಾರ.

ಇಂಪೀರಿಯಲ್ ಪ್ರೆಫರೆನ್ಸು.

ಇಂಪೀರಿಯಲ್ ಪ್ರೆಫರೆನ್ಸು ಎಂಬೀ ಮಾತಿನ ಅರ್ಥವನ್ನು ವಾಚಕರು ಮುಂದಾಗಿ ತಿಳಕೊಳ್ಳುವುದು ಯೋಗ್ಯವು. ಬ್ರಿಟಿಷ್ ಸಾಮ್ರಾಜ್ಯನೊಳಗಿನ ಎಲ್ಲ ರಾಷ್ಟ್ರಗಳು ಪರದೇಶಗಳಿಂದ ಬರುವ ಮ್ಹಾಲಿನ ಮೇಲೆ ತುಂಬಾ ಸುಂಕವನ್ನು ಹೊರಿಸುವುದು ಮತ್ತು ಸಾಮ್ರಾಜ್ಯದಲ್ಲಿ ಉತ್ಪನ್ನವಾಗುವ ಜೀನಸುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೆಚ್ಚಿನ ಸುಂಕವಿಲ್ಲದೆ ಹೋಗಗೊಡುವುದು ಇದೇ ಇಂಪಿರಿಯಲ್ ಪ್ರೆಫರೆನ್ಸು. ಅನ್ಯದೇಶಗಳಿಂದ ಬರುವ ಮ್ಹಾಲುಗಳ ಮೇಲೆ ಸುಂಕವನ್ನು ಹೆಚ್ಚಿಸಿರುವುದರಿಂದ ಮತ್ತು ಸಾಮ್ರಾಜ್ಯದ ಮ್ಹಾಲುಗಳ ಸುಂಕವನ್ನು ತಗ್ಗಿಸುವುದರಿಂದ ಸ್ವಸಂರಕ್ಷಣದ ತತ್ವಕ್ಕನುಸಾರವಾಗಿ ಸಾಮ್ರಾಜ್ಯದ ವ್ಯಾಪಾರವು ಅಭಿವೃದ್ಧಿಯನ್ನು ಹೊಂದುತ್ತದೆ. ಈ ಯುಕ್ತಿವಾದವನ್ನು ಬ್ರಿಟಿಷ್ ಮುತ್ಸದಿಗಳು ಪ್ರತಿಪಾದಿಸಿ ಇಂಪೀರಿಯಲ್ ಪ್ರೆಫರನ್ಸಿನ ಒಂಟಿಮರಿಯನ್ನು ಬಿಟ್ಟಿರುತ್ತಾರೆ. ಬ್ರಿಟಿಷ ಸರಕಾರಕ್ಕೆ ಇಂಪೀರಿಯಲ್ ಪ್ರೆಫರೆನ್ಸಿನ ಯಾಕೆ ಆವಶ್ಯಕತೆಯು ಬಂತು? ಈ ಪ್ರಶ್ನೆಯನ್ನು ಉತ್ತರಿಸಬೇಕಾದರೆ ಯುದ್ಧದ ಪೂರ್ವಕಾಲದಲ್ಲಿ ಮತ್ತು ಅನಂತರ ಇಂಗ್ಲೆಂಡಿನ ಮತ್ತು ವಸಾಹತುಗಳ ವ್ಯಾಪಾರದ ಪರಿಸ್ಥಿತಿಯು ಹೇಗಿತ್ತು ಎಂಬದನ್ನು ನೋಡಬೇಕು.

ಜರ್ಮನ್ ಯುದ್ಧವು ಪ್ರಾರಂಭವಾಗುವುದಕ್ಕಿಂತ ಮುಂಚೆ ಇಂಗ್ಲೆಂಡಿನ ಹೆಚ್ಚಿನ ವ್ಯಾಪಾರವು ಜರ್ಮನಿ, ಆಸ್ಟ್ರಿಯಾ ರುಶ್ಯಾ ಮುಂತಾದ ದೇಶಗಳೊಡನೆ ನಡೆಯುತಿತ್ತು. ರುಶ್ಯದಿಂದ ಗೋದಿ ಮತ್ತು ಜರ್ಮನಿಯಿಂದ ಬಣ್ಣ ಹಾಗು ರಾಸಾಯನಿಕ ದ್ರವ್ಯ ಇವು ಇಂಗ್ಲೆಂಡಿಗೆ ಬರುತಿದ್ದವು. ಅವು ನೆವಕ್ಕೆ ತಕ್ಕ ಬರುತಿದ್ದವೆಂದಲ್ಲ. ಧಾರಾಳವಾಗಿ ಬರುತ್ತಿದ್ದವು. ಆದರೆ ಯಾವಾಗ ಯುದ್ಧವು ಪ್ರಾರಂಭವಾಯಿತೊ ಆಗ ಈ ವ್ಯಾಪಾರವು ನಿಂತಿತು. ಯುದ್ಧದ ಸಾಹಿತ್ಯಗಳಿಗಾಗಿ ಬಣ್ಣ ಮತ್ತು ರಾಸಾಯನಿಕ ದ್ರವ್ಯಗಳ ಆವಶ್ಯಕತೆಯು ತೋರಿಬಂತು. ಗೋದಿ, ಸಕ್ಕರೆ ಮುಂತಾದವುಗಳು ಹಿಂದೂಸ್ಥಾನ, ಆಸ್ಟ್ರೇಲಿಯಾ ಮತ್ತು ಅಮೇರಿಕಾ ಈ ದೇಶಗಳಿಂದ ವಿಲಾಯತಿಗೆ ಬರಹತ್ತಿದವು. ಗೋದಿಯಂಥ ಅವಶ್ಯಕ ಪದಾರ್ಥವನ್ನು ಬೇರೆ ದೇಶದಿಂದ ತರುವ ಪ್ರಸಂಗವು ಬರುತ್ತಲೆ—ಈ ಪ್ರಸಂಗವು ಮೊದಲೂ ಇತ್ತು, ಆದರೆ ಆಗ ಅದು ಅಷ್ಟೊಂದು ಮನಸ್ಸಿಗೆ ಹತ್ತಿರಲಿಲ್ಲ.—ಇಂಗ್ಲೆಂಡಿಗೆ ಕೇವಲ ಹಣದ ಹಿಂದಕ್ಕೆ ಬಿಡಹತ್ತಿ ಆವಶ್ಯಕ ಜೀನಸುಗಳ ಉತ್ಪತ್ತಿಯ ಬಗ್ಗೆ ತಾನು ಹೇಗೆ ಮೋಸದಲ್ಲಿ ಬಿದ್ದೇನು ಎಂದು ತೋರಹತ್ತಿತು. ಇದರ ಪರಿಣಾಮವೇನಾಯಿತೆಂದರೆ, ಇನ್ನು ಮುಂದೆ ಈ ಪರಾವಲಂಬಿತ್ವವನ್ನು ಬಿಟ್ಟುಬಿಡಬೇಕು. ತನಗೆ ಬೇಕಾದ ಮತ್ತು ಜೀವನಕ್ಕೆ ಆವಶ್ಯಕವಾದ ಸಾಹಿತ್ಯವನ್ನು ತಾನೇ ಹುಟ್ಟಿಸಬೇಕು ಎಂದು ಇಂಗ್ಲೆಂಡು ತಿಳಿಯಹತ್ತಿತು. ಇಂಗ್ಲೆಂಡಿನೊಳಗಿನ ಮುತ್ಸದಿಗಳ ತಲೆಯಲ್ಲಿ ಹುಟ್ಟಿದ ಈ ಕಲ್ಪನೆಗೆ ಮೂರ್ತಸ್ವರೂಪವನ್ನು ಕೊಡಲು ಪ್ರಯತ್ನಗಳು ಉಂಟಾಗಹತ್ತಿದವು. ರಾಜಕೀಯ ಮತ್ತು ಮಿಲಿಟರಿ ಬಾಬಿನಲ್ಲಿ ಇಂಗ್ಲಂಡು ಲೋಕದಲ್ಲಿ ತನ್ನ ವರ್ಚಸ್ಸನ್ನು ಹೇಗೆ ಸ್ಥಾಪಿಸಿದೆಯೊ ಹಾಗೆಯೆ ವ್ಯಾಪಾರ ವಿಷಯದಲ್ಲೂ ಅದರ ಪ್ರಾಬಲ್ಯ ಉಳಿಯಬೇಕೆಂದು ಬ್ರಿಟಿಷ್ ಸಾಮ್ರಾಜ್ಯ ಸತ್ತಾವಾದಿಗಳು ಹವಣಿಸಹತ್ತಿದರು. ವಸಾಹತಿನೊಳಗಿನ ಇತರ ಮುತ್ಸದಿಗಳು ಸಹ ಈ ಮತಕ್ಕೆ ತಲೆದೂಗಿಸಿದರು. ಮತ್ತು ಪ್ರಾರಂಭವಾಗಿರುವ ಈ ಯುದ್ಧವನ್ನು ಹೇಗಾದರೂ ಜಯಿಸಲೆ ಬೇಕೆಂದು ಚಿಂತಿಸಹತ್ತಿದರು. ಅವರು ತಂತಮ್ಮ ಪ್ರದೇಶಗಳಲ್ಲಿ ಉತ್ಪನ್ನವಾಗುವ ಮತ್ತು ಬೆಳೆಯುವ ಮ್ಹಾಲುಗಳನ್ನು ಸಾಮ್ರಾಜ್ಯ ಸರಕಾರಕ್ಕೆ ಕಳುಹಿಸಹತ್ತಿದರು. ಇತರ ವಸಾಹತುಗಳು ಈ ಮೇರೆಗೆ ತಮ್ಮ ಮ್ಹಾಲುಗಳನ್ನು ಕಳುಹಿಸಿಕೊಡುವ ಆವಿರ್ಭಾವವನ್ನು ಮಾಡುವಾಗ ಹಿಂದುಸ್ಥಾನವಂತೂ ಸಾಮ್ರಾಜ್ಯದ ಕಂಕುಳೊಳಗಿನದಾದ್ದರಿಂದ ತನ್ನಲ್ಲಿ ಉತ್ಪನ್ನವಾಗುವ ಸಾಹಿತ್ಯಗಳನ್ನೆಲ್ಲ ಕೊಡಲೇಬೇಕು! ಮತ್ತು ರಾಜನಿಷ್ಠೆ, ಇಂಗ್ಲಂಡನಿಷ್ಠೆ ಸಾಮ್ರಾಜ್ಯ ನಿಷ್ಠೆ, ಈ ಮೂರು ನಿಷ್ಠೆಗಳನ್ನು ಪ್ರದರ್ಶಿಸಿ ತ್ರಿಕರಣ ಶುದ್ಧವಾಗಬೇಕು! ಆದ್ದರಿಂದ ಇಲ್ಲಿಂದ ಧಾನ್ಯ, ಕಟ್ಟಿಗೆ, ಚರ್ಮ ಮುಂತಾದ ಸಾಹಿತ್ಯಗಳು ವಿಲಾಯತಿಗೆ ಪ್ರಯಾಣವನ್ನು ಮಾಡತೊಡಗಿದವು. ಬಣ್ಣ ಮತ್ತು ರಾಸಾಯನಿಕ ದ್ರವ್ಯಗಳು ವಿಲಾಯತಿಯಲ್ಲಿ ತಯಾರಾಗ ಹತ್ತಿದವು. ಈ ಮೇರೆಗೆ ಇಂಗ್ಲಂಡಿಗೆ ಬೇಕಾಗಿರುವ ಎಲ್ಲ ಸಾಹಿತ್ಯವು ಸಾಮ್ರಾಜ್ಯದಲ್ಲಿ ಉಪಲಬ್ಧವಾಗಹತ್ತಿತು.

ಯುದ್ಧದಲ್ಲಿ ಜರ್ಮನಿಗೆ ಪರಾಜಯವು ಪ್ರಾಪ್ತವಾಯಿತು. ಆದರೆ ಯುದ್ಧಾಂತ್ಯದಲ್ಲಿ ಇಂಗ್ಲೆಂಡಿನ ವ್ಯಾಪಾರಸ್ಥಿತಿಯು ಅಷ್ಟೊಂದು ಆಶಾಜನಕವಿರಲಿಲ್ಲ. ಅಮೇರಿಕಾ, ಜರ್ಮನಿಯೊಳಗಿನ ಮ್ಹಾಲುಗಳಿಗಿಂತ ಹೆಚ್ಚು ಕ್ರಯಬೀಳುವ ಇಂಗ್ಲಂಡಿನ ಮ್ಹಾಲನ್ನು ಎಲ್ಲಿ ಮಾರಾಟ ಮಾಡಬೇಕಾಯಿತು, ಮತ್ತು ಇಂಗ್ಲಂಡಿನ ಔದ್ಯೋಗಿಕ ಅಭಿವೃದ್ಧಿಗೆ ಬೇಕಾಗಿರುವ ದೊರಗು ಮ್ಹಾಲನ್ನು ಎಲ್ಲಿಂದ ಸಂಪಾದಿಸಬೇಕಾಯಿತು ಎಂಬೀ ಯೋಚನೆಯು ಇಂಗ್ಲಂಡಿಗೆ ಹಿಡಿಯಿತು. ಈ ಸಂದರ್ಭದಲ್ಲಿ "ಸಾಮ್ರಾಜ್ಯದ ಆರ್ಥಿಕ ಸ್ವಯಂಪೂರ್ಣತೆ" ಎಂಬದೊಂದು ಹೊಸ ತತ್ವವನ್ನು ಹೊರಡಿಸಿ, ಪರಕೀಯ ರಾಷ್ಟ್ರಗಳ ಮ್ಹಾಲುಗಳ ಮೇಲೆ ಹೆಚ್ಚು ಪ್ರಮಾಣದಿಂದ ಸುಂಕವನ್ನು ಹೊರಿಸುವ ಯುಕ್ತಿಯನ್ನು ಕಲ್ಪಿಸಲಾಯಿತು. ಇಂಗ್ಲಂಡಿನ ಕಾರಖಾನೆಯಲ್ಲಿ ತಯಾರಾಗುವ ಮ್ಹಾಲಿನ ಮೇಲೆ ಹೆಚ್ಚಿಗೆ ಸುಂಕವನ್ನು ಹೊರಿಸದೆ ಇದ್ದು ಅಮೇರಿಕಾ ಮುಂತಾದ ಇತರ ಕಡೆಗಳಲ್ಲಿಯ ಮ್ಹಾಲಿನ ಮೇಲೆ ಹೆಚ್ಚು ಸುಂಕವನ್ನು ಹಾಕುವುದರಿಂದ ವಸಾಹತುಗಳ ಮತ್ತು ಮುಖ್ಯವಾಗಿ ಹಿಂದುಸ್ಥಾನದ ಪೇಟೆಯಲ್ಲಿ ಇತರ ದೇಶದ ಮ್ಹಾಲುಗಳಿಗೆ ಎಡೆಯು ಸಿಗದೆ ವಿಲಾಯತಿಯ ಮ್ಹಾಲೆ ಪೇಟೆಗಳನ್ನಾಕ್ರಮಿಸಿತು. ಇದು ಮುಖ್ಯ ಉದ್ದೇಶವು. ಈ ಸ್ಪರ್ಧೆಯಲ್ಲಿ ಇತರ ದೇಶಗಳಿಗಿಂತಲೂ ವಿಲಾಯತಿಯ ವ್ಯಾಪಾರಕ್ಕೆ ಹೆಚ್ಚಿನ ಆಶ್ರಯವು ಪ್ರಾಪ್ತವಾಗುವ ಕಾರಣ ಇಂಗ್ಲಂಡಿನ ವ್ಯಾಪಾರ ವಿಷಯಕ ವರ್ಚಸ್ಸು ಅಬಾಧಿತವಾಗಿ ಉಳಿಯುವುದೆ ಮುಖ್ಯ ಫಲವು.

ಈ ಎಲ್ಲ ಸಂಗತಿಗಳನ್ನಾಲೋಚಿಸಿಕೊಂಡು ಇಂಪೀರಿಯಲ್ ಪ್ರೆಫರೆನ್ಸು ಎಂಬ ಹೆಸರನ್ನು ಕೊಟ್ಟು ಇಂಗ್ಲಂಡಿನ ಮುತ್ಸದಿಗಳೂ ಮತ್ತು ಸಾಮ್ರಾಜ್ಯ ಸತ್ತಾವಾದಿಗಳೂ ಇಂಗ್ಲಂಡಿನ ಹಿತವನ್ನು ಸಾಧಿಸಲು ಯತ್ನಿಸುತ್ತಿದ್ದಾರೆ. ಆದರೆ ಮೊಂಟೆಗ್ಯು ಸುಧಾರಣೆಗಳಿಂದ ಈಗಿನ ಹಿಂದಿ ಕಾಯಿದೆ ಕೌನ್ಸಿಲುಗಳಿಗೆ ಯಾವ ಸ್ವರೂಪವು ಪ್ರಾಪ್ತವಾಗಿದೆಯೊ ಅದರ ಸಂಪೂರ್ಣ ಉಪಯೋಗವನ್ನು ಪಡಕೊಳ್ಳಲು ಕೌನ್ಸಿಲುಗಳ ಹಿಂದಿ ಸಭಾಸದರು ಯತ್ನಿಸಿದ್ದಾದರೆ ಸುಂಕದ ವಿಷಯದಲ್ಲಿ ಹಿಂದುಸ್ಥಾನದ ಹಿತಸಂಬಂಧವನ್ನು ತಕ್ಕಮಟ್ಟಿಗಾದರೂ ಕಾಪಾಡಬಹುದು. ಆದರೆ ಕೌನ್ಸಿಲುಗಳಲ್ಲಿ ಹಿಂದಿ ಸಭಾಸದರ ಸರ್ವಥಾ ಐಕ್ಯಮತ್ಯವು ಬೇಕು.

ಸ್ಫುಟವಿಚಾರಗಳು.

೧. ಪೂನೆಯ ಸ್ವರಾಜ್ಯ ಪತ್ರಿಕೆಯಲ್ಲಿ ಮುಂದಿನ ಮನೋರಂಜಕ ಮಾಹಿತಿಯು ಮುದ್ರಿತವಾಗಿದೆ. ವಹ್ರಾಡದೊಳಗಿನ ಕೊಂಗ್ರೆಸ ಪ್ರಚಾರಕರಾದ ದೇ. ಭಿಕಮಸಿಂಗ ಇವರ ಮೇಲೆ ೧೦೮ನೆಯ ಕಲಮಿನ ಆಧಾರದಿಂದ ಖಟ್ಲೆಯು ಮಾಡಲ್ಪಟ್ಟಿತು. ಆದರೆ ಮೆಜಿಸ್ಟ್ರೇಟರು ಅವರನ್ನು ಈ ಆರೋಪಣೆಯಿಂದ ಬಿಡುಗಡೆ ಪಡಿಸಿದರು. ಈ ಖಟ್ಲೆಯನ್ನು ನಡಿಸುವ ಮೆಜಿಸ್ಟ್ರೇಟರು ಹಿಂದಿಗಳಾಗಿದ್ದಾರೆ. ಅವರು ತಮ್ಮ ತೀರ್ಮಾನದಲ್ಲಿ ಬಿರೊಕ್ರಸಿಯ ಮೇಲೆ ಸರಿಯಾದ ಟೀಕೆಯನ್ನು ಮಾಡಿದ್ದಾರೆ. ಮತ್ತು ಬಿರೊಕ್ರಸಿಯ ಒಂದು ರಹಸ್ಯವನ್ನು ಬೈಲಿಗೆ ತಂದಿದ್ದಾರೆ. ಈ ಖಟ್ಲೆಯು ನಡಿಯುತಿದ್ದಾಗ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಒಂದು ಕೈಕಾಗದವು ಮೆಜಿಸ್ಟ್ರೇಟರಿಗೆ ಕೊಡಲ್ಪಟ್ಟಿತು. ಈ ಮೆಜಿಸ್ಟ್ರೇಟರು ಆ ಕಾಗದವನ್ನು ಕಸದ ಡಬ್ಬಿಯಲ್ಲಿ ಹಾಕಿದರು. ಈ ಕಾರಣದಿಂದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಸಿಟ್ಟುಗೊಂಡು. ಅವರು ಮೆಜಿಸ್ಟ್ರೇಟರ ಆಫೀಸನ್ನು ಇನ್ಸ್‌ಪೆಕ್ಷನು ಮಾಡುವ ನಾಟಕವನ್ನು ನಟಿಸಿ ಮೆಜಿಸ್ಟ್ರೇಟರಿಗೆ ತುಂಬಾ ದೂಷಣೆಗಳನ್ನು ಕೊಟ್ಟರು. ಈ ಎಲ್ಲಾ ಸಂಗತಿಯನ್ನು ಮೆಜಿಸ್ಟ್ರೇಟರು ತಮ್ಮ ನಿರ್ಣಯದಲ್ಲಿ ಬರೆದಿರುತ್ತಾರೆ. ಮೆಜಿಸ್ಟ್ರೇಟರ ಈ ನಿರ್ಣಯದ ಮೇಲೆ ಸರಕಾರ ತರ್ಫೆನಿಂದ ಅಪೀಲು ಮಾಡಲ್ಪಟ್ಟಿದೆ. ಈ ಸಂಗತಿಯನ್ನೆಲ್ಲಾ ನೋಡುವಾಗ ಸರಕಾರಿ ನೋಕರರು ತಮ್ಮ ಮನೋಭಿಪ್ರಾಯವನ್ನು ಸಾಧಿಸಲು ಯಾವ ಯಾವ ತಂತ್ರಗಳನ್ನು ಹೇಗೆ ಹೇಗೆ ಹೂಡುತ್ತಾರೆಂಬುದು ಗೊತ್ತಾಗುವುದು. ನ್ಯಾಯದೇವತೆಯನ್ನು ಆದಷ್ಟು ಪರಿಶುದ್ಧವನ್ನಾಗಿಡಲು ಅಲಿಪ್ತ ಜನರು ಹೇಳುತ್ತಾರೆ. ಆದರೆ ಅಧಿಕಾರದ ಮತ್ತು ಬಾಧಾಬಾಧದ ಸಂಪರ್ಕ ಮತ್ತು ಲೇಪವುಳ್ಳವರು ಆ ಮಾತನ್ನು ಬರೆ ಗಾಳಿಪಟವನ್ನಾಗಿ ಮಾಡಿ ರಾಜಕೀಯ ವರ್ಚಸ್ಸವನ್ನು ಅಕುಂಠಿತವಾಗಿ ಸ್ಥಾಪಿಸಲು ಯತ್ನಿಸಿರುತ್ತಾರೆ ಎಂಬೀ ಸಂಗತಿಯು ಇದರಿಂದ ನಿಷ್ಪನ್ನವಾಗುತ್ತದೆ.

೨. ಈಗಿನ ಕಾಲದಲ್ಲಿ ಹಿಂದುಸ್ಥಾನದೊಳಗೆ ಶುದ್ಧನ್ಯಾಯವು ದುರ್ಲಭವಾಗುತ್ತ ಬಂದಿದೆ ಎಂದು ಮೇಲಿನ ಸಂಗತಿಯಿಂದ ವಾಚಕರು ತಿಳಿಯದೆ ಇರಲಿಕ್ಕಿಲ್ಲ. ನಿರಪರಾಧಿಗಳನ್ನು ದಂಡಿಸುವುದು ಎಷ್ಟು ಅಯೋಗ್ಯವೊ ಅಷ್ಟೆ ಅಪರಾಧಿಗಳನ್ನು ಬಿಟ್ಟು ಬಿಡುವುದು ಅಯೋಗ್ಯವು. ರಾಜಕೀಯ ಚಳವಳಗಾರರನ್ನು—ಅವರು ಬರೆ ಚಳವಳಗಾರರೆಂಬ ಒಂದೆ ಅಪರಾಧದಿಂದ—ಅಧಿಕಾರಿಗಳು ಜೈಲಿಗೆ ಕಳುಹಿಸುತಿದ್ದಾರಷ್ಟೆ. ಇಂಥವರು ನೈತಿಕ ಅಪರಾಧಕ್ಕೆ ಲವಮಾತ್ರವೂ ಕಾರಣರಾಗುವುದಿಲ್ಲ. ಆದರೂ ಈ ನಿರಪರಾಧಿಗಳನ್ನು ದಂಡಿಸಿ ಅಧಿಕಾರಿಗಳು ನ್ಯಾಯದ ನಾಟಕವನ್ನು ಹೇಗೆ ಆಡುತ್ತಿದ್ದಾರೊ ಹಾಗೆಯೆ ಅಪರಾಧಿಗಳನ್ನು ತಕ್ಕ ರೀತಿಯಿಂದ ಶಿಕ್ಷಿಸದೆ ಅದರ ನಟನೆಯನ್ನು ಮಾಡುತ್ತಿದ್ದಾರೆ. ಈ ಹೊತ್ತು ಈ ಆಲೋಚನೆಗಳು ಬರಲು ಕಾರಣವೇನೆಂದರೆ, ಅಲಹಾಬಾದ ಹ್ಯಾಕೋರ್ಟಿನ ಮುಂದೆ ಕೆಲವು ಸಮಯದ ಹಿಂದೆ ಈಟನ್ ಎಂಬವನ ಖಟ್ಲೆಯು ನಡೆದು, ಅವನು ಒಬ್ಬ ಚೌಕಿದಾರನನ್ನು ಕೊಂದು ಖೂನಿ ಮಾಡಿದ ಕಾರಣ ಹ್ಯಾಕೋರ್ಟು ಅವನಿಗೆ ಫಾಸಿಯ ಶಿಕ್ಷೆಯನ್ನು ವಿಧಿಸಿತ್ತು. ಬಳಿಕ ಈಟನನು ಆ ಪ್ರಾಂತದ ಗವರ್ನರರಾದ ಸರ್. ಹಾರಕೋರ್ಟ ಬಟಲರರಿಗೆ ಒಂದು ವಿಜ್ಞಾಪನೆಯನ್ನು ಕಳುಹಿಸಿಕೊಟ್ಟನು. ಗವರ್ನರರು ಅವನನ್ನು ಫಾಸಿ ಶಿಕ್ಷೆಯಿಂದ ವಿಮೋಚನೆಮಾಡಿ, ಗಡಿಪಾರನ್ನು ವಿಧಿಸಿದ್ದಾರೆ. ಖೂನಿಗಾರನಿಗೆ ಫಾಸಿಯ ಶಿಕ್ಷೆಯನ್ನು ವಿಧಿಸುವುದು ಯೋಗ್ಯವಾದ್ದು. ಮತ್ತು ಆದ್ದರಿಂದಲೆ ಹ್ಯಾಕೋರ್ಟು ಅದನ್ನು ಕೊಟ್ಟಿತು. ಆದರೆ ಗವರ್ನರರು ದಯೆಯಿಂದ ಈ ಶಿಕ್ಷೆಯಲ್ಲಿ ಸೌಮ್ಯತೆಯನ್ನು ತಂದಿದ್ದಾರೆ. ಇದು ಯಾಕಾಗಿರಬಹುದು? ಆರೋಪಿತನು ಯುರೋಪಿಯನನಾದ್ದರಿಂದಲೊ ಹೇಗೆ? ಹಿಂದಿಗಳ ಪ್ರಾಣವನ್ನು ಅಪಹರಿಸಿದ ಗೌರವರ್ಣಿಯರನ್ನು ಈ ರೀತಿಯಿಂದ ಬಿಡಹತ್ತಿದರೆ ಇದರ ಪರಿಣಾಮವೇನಾದೀತು? ಈಗ ದಯತೋರಿಸುವುದು ತಪ್ಪೆಂದು ಅಥವಾ ಅಯೋಗ್ಯವೆಂದು ಯಾರೂ ಹೇಳುವುದಿಲ್ಲ. ಆದರೆ ಅಧಿಕಾರಿಗಳ ದಯೆಗೆ ಯುರೋಪಿಯನ್ ಅಪರಾಧಿಗಳು ಮಾತ್ರ ಪಾತ್ರರೊ ಅಥವಾ ಇತರರು ಸಹ ಪಾತ್ರರಾಗಬಹುದೊ? ಮುಂಬಯಿಯ ಸಾವರಕರ ಬಂಧುದ್ವಯದ ಸಂಗತಿಯನ್ನು ಮನಸ್ಸಿಗೆ ತಂದು ಹೇಳುವುದಾದರೆ, ಹಿಂದಿಗಳು ಅಧಿಕಾರಿಗಳ ಕಲ್ಲೆದೆಯಲ್ಲಿ ದಯೆಯನ್ನು ಹುಟ್ಟಿಸುವುದಿಲ್ಲವೆಂದು ಹೇಳಬೇಕಾಗುತ್ತದೆ. ಸಾವರಕರರಿಗೆ ಜನ್ಮಟಾಪುವು' ಆಗಿತ್ತು. ಅದರ ಕ್ಲುಪ್ತ ಅವಧಿಯನ್ನು ಅನುಭವಿಸಿದ ಬಳಿಕ ನ್ಯಾಯವಾಗಿ ಅವರಿಗೆ ಬಿಡುಗಡೆಯು ಉಂಟಾಗಬೇಕು, ಅಲ್ಲದೆ ಅವರಿಗೆ ಕಫಕ್ಷಯದ ವಿಕಾರವು ಪ್ರಾಪ್ತವಾಗಿದೆ ಎಂದು ತಿಳಿದುಬರುತ್ತದೆ. ಇಂಥ ಪರಿಸ್ಥಿತಿಯಲ್ಲಿ ದಯೆಗೆ ಪಾತ್ರರಾದವರು ಯಾರಾದರೂ ಇದ್ದಾರೆಂದರೆ ಅವರು ಸಾವರಕರ ಬಂಧುಗಳೆ ಸರಿ. ಆದರೂ ಮುಂಬಯಿಯ ಅಧಿಕಾರಿಗಳು ಕಲ್ಲೆದೆಯಿಂದ ಕಠೋರವೃತ್ತಿಯವರಾಗಿ ಅವರನ್ನು ಆಮರಣ ದಂಡಿಸುವ ವ್ರತವನ್ನು ನಿಶ್ಚಯಿಸಿದ್ದಾರೆಂದು ಕಂಡುಬರುತ್ತದೆ. ಆದರೆ ಇದು ನ್ಯಾಯದ ಫಾರ್ಸ ಸರಿ!

೩. ಒಂದು ವರ್ಷದ ಹಿಂದೆ ರಾಜಕೀಯ ಕೈದಿಗಳನ್ನು ತುರಂಗದಲ್ಲಿ ಬಿಹಾರ ಪ್ರಾಂತದ ಸರಕಾರವು ತಕ್ಕಮಟ್ಟಿಗೆ ಒಳ್ಳೆಯ ರೀತಿಯಿಂದ ನಡಿಸುವ ಖ್ಯಾತಿಯನ್ನು ಪಡೆದಿತ್ತು. ಪರಂತು ಕಳೆದ ವಾರ ಬಿಹಾರ ಕೌನ್ಸಿಲಿನಲ್ಲಿ ಈ ವಿಷಯವಾಗಿ ನಡೆದ ಚರ್ಚೆಯನ್ನು ಓದಿನೋಡುವಾಗ ಅಲ್ಲಿಯೂ ರಾಜಕೀಯ ಕೈದಿಗಳನ್ನು ಒಳ್ಳೆಯ ರೀತಿಯಿಂದ ನಡಿಸುವುದಿಲ್ಲವೆಂದು ಗೊತ್ತಾಗುತ್ತದೆ. ರಾಜಕೀಯ ಕೈದಿಗಳನ್ನು ಒಳ್ಳೆಯ ರೀತಿಯಿಂದ ನಡಿಸಬೇಕೆಂದು ಒಬ್ಬರು ಸಭಾಸದರು ಒಂದು ಠರಾವನ್ನು ತಂದರು. ಬಿಹಾರ ಪ್ರಾಂತದಲ್ಲಿ ಮೊದಲು ಕೈದಿಗಳನ್ನು ಅಷ್ಟೊಂದು ಕೆಟ್ಟ ರೀತಿಯಿಂದ ನಡಿಸುತ್ತಿರಲಿಲ್ಲ. ಇತರ ಪ್ರಾಂತಗಳಿಗೂ ಇದೊಂದು ಈ ವಿಷಯದಲ್ಲಿ ಆದರ್ಶವಾಗಿತ್ತು. ಹೀಗಿರುವಾಗ ಮೊದಲಿನ ಆ ಪದ್ಧತಿಯನ್ನು ಪ್ರಾಂತಿಕ ಸರಕಾರವು ಯಾಕೆ ತೆಗೆದುಹಾಕಿತು? ಇದರಿಂದ ಸರಕಾರಕ್ಕೆ ಯಾವ ಲಾಭವು? ರಾಜಕೀಯ ಕೈದಿಗಳನ್ನು ಅಧಿಕಾರಿಗಳು ಎಷ್ಟೆಷ್ಟು ಕೆಟ್ಟ ರೀತಿಯಿಂದ ನಡಿಸಹತ್ತುವರೊ ಅಷ್ಟಷ್ಟು ಸರಕಾರಕ್ಕೂ ಜನಗಳಿಗೂ ಇನ್ನಷ್ಟು ವಿರೋಧವೆ ಬೆಳೆದೀತಲ್ಲದೆ ಅದರಿಂದ ಬೇರೆ ಯಾವ ಪ್ರಯೋಜನವೂ ಉಂಟಾಗಲಿಕ್ಕಿಲ್ಲ ಎಂದು ಠರಾವನ್ನು ತಂದವರು ಭಾಷಣ ಮಾಡಿದರು. ಈ ಠರಾವಿನ ಮೇಲೆ ಒಂದು ಉಪಸೂಚನೆಯು ಬಂತು. ಕೈದಿಗಳನ್ನು ಯಾವ ರೀತಿಯಿಂದ ನಡಿಸುತ್ತಾರೆಂಬುದನ್ನು ಪರೀಕ್ಷಿಸಲು ಒಂದು ಕಮಿಟಿಯನ್ನು ನೇಮಿಸಬೇಕೆಂದು ಉಪಸೂಚನೆಯ ಆಶಯವಿತ್ತು. ಸರಕಾರದ ಕಡೆಯಿಂದ ಈ ಠರಾವನ್ನು ಉಪರೋಧಿಸುವಾಗ ಸರ್ ಮೆಕ್‌ಫರ್ಸನರು ಕೇವಲ ಬಾಲಿಶ ವಿಧಾನಗಳನ್ನು ಮಾಡಿದರು. "ರಾಜಕೀಯ ಕೈದಿಗಳನ್ನು ಸರಕಾರವು ಕೂಡಿದಷ್ಟು ಒಳ್ಳೆಯ ರೀತಿಯಿಂದ ನಡಿಸುತ್ತದೆ. ನಾವು ಕುಲೀನರಾದವರನ್ನೂ, ಸುಶಿಕ್ಷಿತರನ್ನೂ ಅವರ ತರಗತಿಗನುಸಾರವಾಗಿಯೆ ಚಲೋ ರೀತಿಯಿಂದ ನಡಿಸುತ್ತೇವೆ. ಆದರೆ ನೊನ್-ಕೋಒಪರೇಶನಿನ ಚಳವಳದಲ್ಲಿ ಹೆಚ್ಚಾಗಿ ಅಲ್ಪ ಜನರು ಸೇರಿಕೊಂಡಿರುವುದರಿಂದ ಅವರಿಗೂ ಒಳ್ಳೆಯ ನಡತೆಯೆ ಸಿಗಬೇಕೆಂದರೆ ಅದು ಹೇಗೆ ತಾನೆ ಸಾಧ್ಯವು". ಮೆಕ್‌ಫರ್ಸನ್ ಸಾಹೇಬರ ಈ ಕೋಟಿಕ್ರಮವು ಕೇವಲ ಆಭಾಸಮಯವಾಗಿದೆ. ನೊನ್-ಕೊಒಪರೇಶನಿನ ಚಳವಳದಲ್ಲಿ ಸೇರಿದವರು ಯಾರೆ ಇರಲಿ; ಅನೀತಿಯ ಅಪರಾಧದಿಂದ ಜೈಲಿಗೆಬಾರದೆ, ಕೇವಲ ರಾಜಕೀಯ ಮತಕ್ಕಾಗಿ ಜೈಲನ್ನು ಅನುಭವಿಸುವವರೆಲ್ಲರು ರಾಜಕೀಯ ಕೈದಿಗಳೆ ಸರಿ. ಅವರನ್ನು ಏಕಪ್ರಕಾರವಾಗಿ ಒಳ್ಳೆಯ ರೀತಿಯಿಂದ ನಡಿಸಬೇಕು. ಐ. ಸಿ. ಎಸ್. ಸರ್ವಿಸಿನಲ್ಲಿ ಇದ್ದವರು ಎಲ್ಲರೂ ಸುಭಗರು, ಕುಲೀನರು ಎಂದು ಹೇಳಲಾಗುವುದಿಲ್ಲ. ಆದರೂ ಅವರೆಲ್ಲರನ್ನು ಹೇಗೆ ಒಂದೆ ದೃಷ್ಟಿಯಿಂದ ನೋಡಲಾಗುತ್ತದೊ ಹಾಗೆಯೆ ಈ ವಿಷಯದಲ್ಲೂ ಇದೆ ಕ್ರಮವನ್ನು ಅನುಸರಿಸುವುದು ಉಚಿತವು. ಈ ದೃಷ್ಟಿಯಿಂದ ನೋಡಿದ್ದಲ್ಲಿ ಮೆಕಫರ್ಸನರು ಬರೆ ಧೂಲಿಪ್ರಕ್ಷೇಪಕ್ಕಾಗಿ ಮಾತ್ರ ಮೇಲಿನ ದುರ್ಬಲ ಯುಕ್ತಿವಾದವನ್ನು ಕಟ್ಟಿಕೊಂಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಇರಲಿ. ಕೊನೆಗೆ ಮೇಲಿನ ಠರಾವು ಎದುರುಕಡೆಯ ಬಹುಮತದಿಂದ ಬಿದ್ದುಹೋಯಿತು. ಇದು ತುಂಬಾ ಶೋಚನೀಯವು.

೪. ಬಂಗಾಲ ಪ್ರಾಂತದ ರಾಜಕೀಯ ಕೈದಿಗಳ ಸಂಗತಿಯನ್ನು ಹೇಳಿ ಜೈಲಿನ ಪ್ರಸ್ತಾಪವನ್ನು ಮುಗಿಸುವೆವು. ಬಂಗಾಲದ ಬಾರಿಸಾಲ ಜೈಲಿನಲ್ಲಿ ಕೈದಿಗಳನ್ನು ಕೊರಡೆಯಿಂದ ಹೊಡೆಯುತ್ತಿದ್ದ ಬಗ್ಗೆ ಅದರ ತೀವ್ರ ನಿಷೇಧವನ್ನು ಮಾಡುವುದಕ್ಕಾಗಿ ಬಂಗಾಲ ಕೌನ್ಸಿಲಿನಲ್ಲಿ ಒಂದು ಚರ್ಚೆಯು ಬಂತು. ನೊನ್‌ಕೊ-ಒಪರೇಟರರನ್ನು ಬಾರಿಸಾಲ ಜೈಲಿನ ಸುಪರಿಂಟೆಂಡೆಂಟನು ನಿರ್ದಾಕ್ಷಿಣ್ಯವಾಗಿ ಕೊರಡೆಯ ಪೆಟ್ಟುಗಳನ್ನು ಕೊಡುತ್ತಿದ್ದ ಬಗ್ಗೆ ೧೦-೧೨ ಸಭಾಸದರು ತಮ್ಮ ಭಾಷಣದ್ವಾರಾ ಸರಿಯಾದ ನಿಷೇಧವನ್ನು ವ್ಯಕ್ತಗೊಳಿಸಿದರು. ಆದರೆ ಕರ್ತೃತ್ವ ಶೂನ್ಯವಾದ ಕೇವಲ ವಾಚನಿಕ ನಿಷೇಧಕ್ಕೆ ಸರಕಾರಿ ಅಧಿಕಾರಿಗಳು ಬೆಲೆಕೊಡುವುದು ಬಹು ಅಪರೂಪ! ಈ ಜೈಲ್ ಸುಪರಿಂಟೆಂಡೆಂಟನ ಈ ಘೋರ ಮತ್ತು ನಿರ್ದಯ ಕೃತ್ಯದ ಸಮರ್ಥನವನ್ನು ಮಾಡುವಾಗ ನಾಮದಾರ ಸ್ಟೀವಿನ್‌ಸನರು ಒಂದು ಉದ್ದವಾದ ಭಾಷಣವನ್ನು ಮಾಡಿದರು. ಅವರ ಭಾಷಣದಲ್ಲಿ ಜೈಲ್-ಡಿಸಿಪ್ಲಿನಿನ ವಿಷಯವೆ ಮುಖ್ಯವಾಗಿತ್ತು. ಇತ್ತಲಾಗಿ ಎಲ್ಲ ಅಧಿಕಾರಿಗಳು ಡಿಸಿಪ್ಲಿನಿನ ವಿಷಯದಲ್ಲಿ ಬಹಳ ತತ್ಪರರಾದದ್ದು ಕಂಡುಬರುತ್ತದೆ. ಗವರ್ನರ ಜನರಲ್ ಮೊದಲು ಮಾಡಿಕೊಂಡು ಜೈಲ್ ಸುಪರಿಂಟೆಂಡೆಂಟನವರೆಗೆ ಎಲ್ಲ ಅಧಿಕಾರಿಗಳು ಹಿಂದುಸ್ಥಾನದಲ್ಲಿ ಮುಖ್ಯವಾಗಿ ಒಂದು ಡಿಸಿಪ್ಲಿನನ್ನಿಟ್ಟರೆ ತಮ್ಮ ಕರ್ತವ್ಯವಾಯಿತೆಂದು ತಿಳಕೊಳ್ಳುತ್ತಿದ್ದಾರೆ! ಇಂಥ ಶೋಚನೀಯ ಪರಿಸ್ಥಿತಿಯು ಬಂದೊದಗಿದೆ. ಮತ್ತು ಇದೆ ಸಂಗತಿಯ ಪ್ರದರ್ಶನವನ್ನು ಬಂಗಾಲದ ಕೌನ್ಸಿಲಿನಲ್ಲಿ ಸ್ಟೀವಿನಸನ್ ಸಾಹೇಬರು ಮಾಡಿರುವರು. "ನೊನ್ ಕೊ-ಒಪರೇಟರ ಕೈದಿಗಳು ನೇಮಿಸಿದ ಕೆಲಸವನ್ನು ಮಾಡಲು ಅಲ್ಲಗಳೆದು ಸರಕಾರಿ ಹುಕುಮನ್ನು ಕಸಕಡ್ಡಿಯ ತರಗತಿಗೆ ತಂದು ಕೂಡ್ರಿಸುತ್ತಿದ್ದಾರೆ. ಜೈಲಿನಲ್ಲಿ ಬಿದ್ದಿರುವ ಯುವಕರು ಆಜ್ಞಾಭಂಗವನ್ನು ಮಾಡುವುದೆ ಶ್ರೇಷ್ಠ ಕರ್ತವ್ಯವೆಂದು ತಿಳಿಯುತ್ತಾರೆ. ಇಂಥವರನ್ನು ಸರಿದಾರಿಗೆ ತರಲು ಕೆಲವು ಸಾರಿ ಕೊರಡೆಯಿಂದ ಹೊಡೆಯಬೇಕಾಗುತ್ತದೆ." ಸ್ಟೀವಿನಸನ್ ದೊರೆಗಳ ಈ ಪ್ರತಿಪಾದನಕ್ಕೆ ಪ್ರತ್ಯೇಕವಾದ ಉತ್ತರವು ಅಗತ್ಯವಿಲ್ಲ. ಅವರ ಒಣಜಂಬವೆ ಅವರ ವಿಧಾನಗಳನ್ನು ಖಂಡಿಸುತ್ತದೆ!

೫. ಪಂಜಾಬದಲ್ಲಿ ಅಕಾಲಿ ಚಳವಳವು ದಿನೆ ದಿನೆ ಹೆಚ್ಚುತ್ತಲಿಗಿದೆ. ಸರಕಾರವು ಸೀಖ್‌ಮತದಲ್ಲಿ ಕೈಹಾಕಿದೊಡನೆ ಆ ಮತದವರು ಒಂದು ತರದ ಸತ್ಯಾಗ್ರಹವನ್ನೆ ನಡಿಸಿದ್ದಾರೆಂದು ತೋರುತ್ತದೆ. ಅಮೃತಸರದೊಳಗಿನ ಒಂದು ಹಳ್ಳಿಯಲ್ಲಿ ಸರಕಾರವು ಕೆಲವು ಮರಗಳನ್ನು ಪಡಕೊಂಡು ಯಾರೂ ಅವನ್ನು ಉಪಯೋಗಿಸಬಾರದೆಂದು ಹೇಳಿತು. ಆ ಮರಗಳಿದ್ದ ಜಾಗೆಯು ಸೀಖ್‌ಮತದ ಗುರುಗಳವರದಾಗಿದ್ದು ಅವು ಅವರ ಮತದ ಎಸ್ಟೇಟಿಗೆ ಸಂಬಂಧಿಸಿದುವುಗಳಾಗಿದ್ದವು. ಆದ್ದರಿಂದ ಆ ಗುರುಗಳು ತಮ್ಮ ಅಧಿಕಾರವನ್ನು ಅಲ್ಲಿಯ ಕಮಿಶನರಿಗೆ ತಿಳಿಸಿದರು. ಯಾವ ಉತ್ತರವಿರಲಿಲ್ಲ. ಆ ಬಳಿಕ ಸರಕಾರವು ಸ್ಪಷ್ಟವಾಗಿ ತಿಳಿಸುವುದೇನೆಂದರೆ ಆ ಮರಗಳನ್ನು ಯಾರೂ ಕಡಿಯಬಾರದು. ಇದನ್ನು ನೋಡಿ ಅಲ್ಲಿಯ ಅಕಾಲಿಚಳವಳದವರು ತಮ್ಮ ಗುರುಗಳಿಗೆ ಈ ತರದ ಅನ್ಯಾಯವಾದದ್ದರಿಂದ ಸತ್ಯಾಗ್ರಹವನ್ನು ಆಚರಿಸಿದರು. ಪ್ರತಿ ದಿವಸವು ಕೆಲವು ಸೀಖ್‌ಮತದವರು ಹೋಗಿ ಆ ಮರಗಳನ್ನು ಗುರುಗಳಿಗೋಸ್ಕರ ಕಡಿಯಲಾರಂಭಿಸಿದರು. ಕೂಡಲೆ ಪೋಲೀಸಿನವರು ಬಂದು ಆ ಸತ್ಯಾಗ್ರಹಿಗಳನ್ನು ೧೦೩ ಕ್ರಿ. ಪ್ರೊ. ಕೊ. ಕಲಮಿನ ಮೇರೆಗೆ ಕೈದು ಮಾಡಲಾರಂಭಿಸಿದರು. ಆ ಜನರನ್ನು ಕೈದುಮಾಡಿದೊಡನೆಯೆ ಇನ್ನೊಂದು ಅಕಾಲಿ ತಂಡವು ಬಂದು ಸತ್ಯಾಗ್ರಹವನ್ನು ಪ್ರಾರಂಭಿಸುವುದು. ಈ ಪ್ರಕಾರ ಇಷ್ಟರ ವರೆಗೆ ಕೈದು ಆದ ಜನರು ಸಾಧಾರಣ ಎರಡು ಸಾವಿರವಾದಾರೆಂದು ಅಲ್ಲಿಯ ಒಬ್ಬ ಗ್ರಹಸ್ಥರು ಪ್ರಕಟಮಾಡುತ್ತಾರೆ. ಇದರಲ್ಲಿ ಮುಖ್ಯಾಂಶವೇನೆಂದರೆ ಹೆಂಗಸರೂ ಸಹ ಈ ಸತ್ಯಾಗ್ರಹದಲ್ಲಿ ಸೇರಬೇಕೆಂದು ಇಚ್ಛಿಸುತ್ತಾರಂತೆ! ಅಲ್ಲದೆ ಅವರಲ್ಲಿ ಸತ್ಯಾಗ್ರಹ ಪಂಗಡದಲ್ಲಿ ಕೂಡ ಕೈದುಮಾಡಿಸಿಕೊಳ್ಳಲು ಬಹು ಆತುರತೆಯೂ ಉತ್ಸಾಹವು ತುಂಬಿದೆ. ಇದು ಸಹಜವು. ಮನುಷ್ಯನು ತನ್ನ ಧರ್ಮಕ್ಕೋಸ್ಕರವಾಗಲಿ, ದೇಶಕ್ಕೋಸ್ಕರವಾಗಲಿ ಹೋರಾಡದಿದ್ದರೆ ವೃಥಾ ಅವನಿಂದ ಏನು ಪ್ರಯೋಜನವು. ಸರಕಾರದವರು ಈ ರೀತಿ ಮತಸಂಬಂಧವಾಗಿ ಅವರ ಮನಸ್ಸನ್ನು ನೋಯಿಸುವುದು ಉಚಿತವಲ್ಲ. ಅಧಿಕಾರಿಗಳ ಈ ಕೃತ್ಯವು ನ್ಯಾಯ ಮೂರ್ತಿಗಳಾದ ಲೋ. ರಿಡಿಂಗರಿಗಾದರೂ ಸಮಂಜಸ ತೋರುವುದೊ?

೬. ನಾಮದಾರ ಶ್ರೀನಿವಾಸ ಶಾಸ್ತ್ರಿಗಳಲ್ಲಿ ಮೆಲ್ಲಮೆಲ್ಲನೆ ನಿರಾಶೆಯು ಮೂಡಹತ್ತಿದೆ. ಅನುಭವಕ್ಕೆ ಬರಹತ್ತಿದೆ, ಪ್ರತ್ಯಕ್ಷವಾಗಹತ್ತಿದೆ ಎಂದು ರೂಟರನು ಕೊಡುವ ಬಾತಮಿಗಳಿಂದ ತಿಳಿದುಬರುತ್ತದೆ. ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಇತರ ವಸಾಹತುಗಳ ಯಾತ್ರೆಯನ್ನು ಮುಗಿಸಿ, ಕೆನಡಾದಲ್ಲಿ ಬಂದು ಸೇರಿದ್ದಾರೆ. ಅಲ್ಲಿ ಅವರು ಯಥಾಪ್ರಕಾರ ಹಿಂದಿಗಳನ್ನು ಒಳ್ಳೆಯ ರೀತಿಯಿಂದ ನಡಿಸಬೇಕೆಂದು ಸೂಚಿಸುವ ಪಲ್ಲವಿಯನ್ನು ಎಂದಿನಂತೆ ಹಾಡಿದರು. ಆದರೆ ಅಲ್ಲಿಯು, ಎಂದರೆ, ಕೆನಡದ ಮಂತ್ರಿಗಳು ತನ್ನ ಅಭಿಪ್ರಾಯವನ್ನು ಹಿಂದಿನಿಂದ ಕೊಟ್ಟೇನೆಂದು ಶಾಸ್ತ್ರಿಗಳನ್ನು ಜಾರಿಸಿದರು. ಅಲ್ಲಿಯ ಲೋಕಮತವನ್ನು ನೋಡುವಾಗ, ಅದು ಶಾಸ್ತ್ರಿಗಳ ಅಭಿಪ್ರಾಯಕ್ಕೆ ಅನುಕೂಲವಿಲ್ಲವೆಂದು ರೂಟರನು ಬರೆದಿರುವನು. ಬ್ರಿಟಿಷ್ ಕೊಲಂಬದ ಸರಕಾರವಂತು ಹಿಂದಿಗಳಿಗೆ ಮತದಾನ ಮುಂತಾದ ಯಾವ ಹಕ್ಕನ್ನೂ ಕೊಡಲು ಸಿದ್ಧವಿಲ್ಲವೆಂದು ಶಾಸ್ತ್ರಿಗಳಿಗೆ ತಿಳಿದು ಬಂದಿದೆ. ಮತ್ತು ಈ ಕಾರಣದಿಂದ ಅವರಲ್ಲಿ ನಿರಾಶೆಯು ಪ್ರಾದುರ್ಭವಿಸಿದೆ. ವಸಾಹತಿನವರ ವಿಷಯದಲ್ಲಿ ಈ ರೀತಿಯಿಂದ ಪ್ರಯೋಗ ಮಾಡಿಯೆ ಅವರ ಅಭಿಪ್ರಾಯವನ್ನು ತಿಳಕೊಳ್ಳಬೇಕಾದ ಅಗತ್ಯವಿದ್ದಿಲ್ಲ. ಆದರೆ ಆಗಾಗ್ಗೆ ಮರುವು ಬರುವವರಿಗೆ ಬೆರಳನ್ನು ಹಾಕಿಯೆ ಬೆಂಕಿಯ ಅನುಭವವನ್ನು ಹೇಗೆ ಪಡಕೊಳ್ಳಬೇಕಾಗುವುದೆ ಹಾಗೆಯೆ ಶಾಂತಪಕ್ಷದವರಿಗಾದರೂ ಪ್ರತ್ಯಕ್ಷ ಅನುಭವವೆ ಬೇಕಾಗಿರುವುದು. ಮತ್ತು ಶ್ರೀನಿವಾಸ ಶಾಸ್ತ್ರಿಗಳಂತೂ ಈ ತಂಡದ ಅಧ್ವರ್ಯುಗಳು, ಎಂದ ಮೇಲೆ ಪ್ರತ್ಯಕ್ಷ ಪ್ರಯೋಗವು ಅವರಿಗೆ ಅಗತ್ಯವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದ ಕಾರಣವಿಲ್ಲ. ಆದರೆ ಸುದೈವದಿಂದ ನಾಮದಾರ ಶ್ರೀನಿವಾಸ ಶಾಸ್ತ್ರಿಗಳಿಗೆ ವಸಾಹತಿನವರ ಹೃದಯದ ಕಹಿ ಅನುಭವವು ಮೆಲ್ಲ ಮೆಲ್ಲನೆ ಬಂಹತ್ತಿದೆ ಮತ್ತು ಅದರಿಂದ ಅವರು ನಿರಾಶೆಯ ಗಣಿಯಲ್ಲಿ ಬೀಳಹತ್ತಿದ್ದಾರೆ ಇದು ಸಂತೋಷದ ಮಾತು. ಅವರ ಈ ಪ್ರಯಾಣದಿಂದ ಹಿಂದುಸ್ಥಾನಕ್ಕೆ ೬೦ ಸಾವಿರ ರೂಪಾಯಿಯು ಮತ್ತು ಸತಃ ಶಾಸ್ತ್ರಿಗಳ ಬುದ್ಧಿಮತ್ತೆಯು ಇವು ನಿರರ್ಥಕವಾಗಿ ನಾಶವಾಗಿ ಹೋದಂತಾಗಿವೆಯಲ್ಲದೆ ಇದರಿಂದ ಬೇರೆ ಯಾವ ಪ್ರಯೋಜನವೂ ಸಾಧ್ಯವಾಗಲಿಲ್ಲ.

೭. ಶ್ರೀ ಕ್ಷೇತ್ರಗಯಾದಲ್ಲಿ ನೆರೆಯತಕ್ಕ ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನಕ್ಕೆ ದೇಶಬಂಧು ಚಿತ್ತರಂಜನದಾಸ, ಮಹಾತ್ಮ ಗಾಂಧಿ, ಸಿ. ರಾಜಗೋಪಾಲಾಚಾರ್ಯ, ಕಸ್ತೂರಿ ರಂಗ ಐಯಂಗಾರ ಕೇಳಕರ ಮುಂತಾದ ಗೃಹಸ್ಥರ ಹೆಸರುಗಳು ಸೂಚಿಸಲ್ಪಟ್ಟಿದ್ದವು. ಅಲ್ಲದೆ, ಮದನ ಮೋಹನ ಮಾಲವೀಯರ ಹೆಸರು ಕೂಡ ಈ ಪಟ್ಟಿಯಲ್ಲಿ ಒಂದು ಕೊಂಗ್ರೆಸ ಕಮಿಟಿಯು (ಬಹುಶಃ ಕರ್ನಾಟಕ ಕೊಂಗ್ರೆಸ ಕಮಿಟಿಯು!) ಸೂಚಿಸಿತ್ತು. ಪರಂತು ದಾಸ ಮಹಾಶಯರಿಗೆನೆ ಹೆಚ್ಚು ಮತಗಳು ಸಿಕ್ಕಿದ್ದರಿಂದ ಗಯಾದ ರಿಸೆಪ್‌ಶನ್ ಕಮಿಟಿಯು ಕೊನೆಗೆ ಅವರನ್ನೆ ಚುನಾಯಿಸಿದೆ. ಇದನ್ನು ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ. ಕಳೆದ ವರ್ಷವೆ ರಾಷ್ಟ್ರವು ಅವರನ್ನು ಅಧ್ಯಕ್ಷರನ್ನಾಗಿ ಅಂಗೀಕರಿಸಿತ್ತು. ಆದರೆ ವಿಘ್ನಸಂತೋಷಿಯಾದ ನೋಕರಶಾಹಿಯು, ಯುವರಾಜರ ಆಗಮನದ ಪರ್ವಣಿಯಲ್ಲಿ ದೇಶಭಕ್ತ ದಾಸರನ್ನು ತುರಂಗಕ್ಕೆ ಕಳುಹಿಸಿತು. ಈ ಕಾರಣದಿಂದ ನಿಜವಾಗಿ ಹೇಳುವುದಾದರೆ, ಬೆಂಕಿಯಲ್ಲಿ ಬಿದ್ದ ಚಿನ್ನವು ಇನ್ನಷ್ಟು ಶುದ್ಧವಾಗುವಂತೆ ತುರಂಗವಾಸದ ಅಗ್ನಿ ಪ್ರವೇಶದಿಂದ ದೇಶಭಕ್ತಿಯನ್ನು ಉಜ್ವಲಪಡಿಸಿಕೊಂಡು ಹೊರಗೆ ಬಂದಿರುವ ದೇಶಭಕ್ತ ದಾಸರವರು ಈ ವರ್ಷ ರಾಷ್ಟ್ರ ಸಭಾಧ್ಯಕ್ಷ ಸ್ಥಾನಕ್ಕೆ ಇನ್ನಷ್ಟು ಅರ್ಹರಾಗಿದ್ದಾರೆಂಬುದಕ್ಕೆ ಯಾವ ಸಂದೇಹವೂ ಇಲ್ಲ. ಇವರ ವೈಯಕ್ತಿಕ ಮತಗಳು, ಸಧ್ಯಃ ಹೇಗೂ ಇರಲಿ, ಅವರು ಮಾಡಿರುವ ಸ್ವಾರ್ಥತ್ಯಾಗ ಮತ್ತು ಪಟ್ಟಿರುವ ಕ್ಲೇಶ ಇವುಗಳನ್ನು ಆಲೋಚಿಸಿ ನೋಡುವಾಗ ಅವರೆ ಈ ಮಾನ್ಯಸ್ಥಾನಕ್ಕೆ ಸರಿಯಾದ ಬಾಧ್ಯಸ್ಥರೆಂದು ಯಾರೂ ಹೇಳಬಹುದು. ಇವರು ತಮ್ಮ ದೂರದೃಷ್ಟಿ, ಮುತ್ಸದಿತನ ಮತ್ತು ರಾಷ್ಟ್ರ ಹಿತದೃಷ್ಟಿ ಇವುಗಳ ಬಲದಿಂದ ಸರಿಯಾದ ಉಪದೇಶವನ್ನು ಮಾಡಿ, ಆ ಮೂಲಕ ರಾಷ್ಟ್ರದ ಐಕ್ಯವನ್ನು ಅಭಂಗಪಡಿಸಿ ತಮ್ಮ ನಾಯಕತ್ವದಿಂದ ಏಕವಾಕ್ಯತೆಯನ್ನು ಮಾಡಿಯಾರೆಂದು ನಾವು ಭರವಸೆಪಡುತ್ತೇವೆ.

ಮಂಗಳೂರು.

ಬರುವ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಇಲ್ಲಿಯ ತಿಲಕವಿದ್ಯಾಲಯದಲ್ಲಿ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರು 'ವೈದಿಕಧರ್ಮವೂ ರಾಜಕೀಯವೂ' ಎಂಬುದನ್ನು ಕುರಿತು ಭಾಷಣ ಮಾಡಲಿಕ್ಕಿದ್ದಾರೆ.

ಸ್ವಾಮಿ ಶ್ರದ್ಧಾನಂದಜೀಯವರು ಒಕ್ಟೋಬರ ತಿಂಗಳಅಂತ್ಯದಲ್ಲಿ ಬೆಂಗಳೂರನ್ನು ಸಂದರ್ಶಿಸಿ ಅನಂತರ ಮಂಗಳೂರಿಗೆ ಚಿತ್ತೈಸಲಿಕ್ಕಿದ್ದಾರೆ.

ಇಲ್ಲಿಯ ಟ್ರೆಜರಿ ಡಿಪ್ಯುಟಿ ಕಲೆಕ್ಟರ ಮ. ರಾ. ಪಿ. ಕೆ. ನಂಬಿಯಾರರು ಒಂದು ತಿಂಗಳ ರಜೆ ಅಪೇಕ್ಷಿಸಿರುವುದರಿಂದ ಮ. ರಾ. ಎ. ಕೆ. ಗೋವಿಂದನ್‌ರವರು ಅವರ ಚಾರ್ಜನ್ನು ನೋಡುವರು.

ಸಹಕಾರಿ ಸಂಘಗಳ ರಿಜಿಸ್ಟ್ರಾರರು ಬರುವ ತಾ. ೮ರಲ್ಲಿ ಮಂಗಳೂರಿಗೆ ಬರುವರು. ಇವರು ತಾ. ೯ರಲ್ಲಿ ಪುತ್ತೂರಿಗೆ ತೆರಳಿ ತಾ. ೧೦ಕ್ಕೆ ಪುತ್ತೂರಿನಿಂದ ವಿಟ್ಲಕ್ಕೆ ಹೋಗಿ ತಾ. ೧೧ಕ್ಕೆ ಮಂಗಳೂರಿಗೆ ಬಂದು ಉಡುಪಿಗೆ ತೆರಳಿ ತಾ. ೧೨ರಲ್ಲು ಉಡುಪಿಯಿಂದ ಕಾರ್ಕಳಕ್ಕೆ ಪ್ರಯಾಣ ಬೆಳಸಿ ತಾ. ೧೪ಕ್ಕೆ ಮೂಡಬಿದರೆ ಮಾರ್ಗವಾಗಿ ಮಂಗಳೂರಿಗೆ ಬಂದು ತಾ. ೧೫ರಲ್ಲಿ ಕಾಸರಗೋಡನ್ನು ಸಂದರ್ಶಿಸಿ ತಾ. ೧೬ಕ್ಕೆ ಮಂಗಳೂರಿಗೆ ಹಿಂತಿರುಗಿ ತಾ. ೧೭ ಮತ್ತು ೧೮ರಲ್ಲಿ ಮಂಗಳೂರಿನಲ್ಲಿರುವರು.

ಹೆಂಪನಕಟ್ಟೆಯಲ್ಲಿರುತ್ತಿದ್ದ ಭಿಡೆ ಕಂಪೆನಿಯವರ ಅಂಗಡಿಯನ್ನು ಈಗ ರಾ. ವಕೀಲ ಭಿಡೆ ಶೇಷಭಟ್ಟರು ವಾಸಿಸಿಕೊಂಡಿರುವ ಡೊಂಗರಕೇರಿ ಮನೆಗೆ ಒಯ್ಯಲಾಗಿದೆ.

ಮುಂಬಯಿ ಸ್ಟೀಮ ನೇವಿಗೇಶನ ಕಂಪೆನಿಯ ಸ್ಟೀಮರು ಇದೇ ತಾ. ೧೮ಕ್ಕೆ ಮುಂಬಯಿಯಿಂದ ಬಿಡಲ್ಪಟ್ಟು ತಾ. ೨೧ನೇ ಗುರುವಾರ ಇಲ್ಲಿಗೆ ತಲ್ಪಿ ಅದೇ ದಿನ ಇಲ್ಲಿಂದ ಹಿಂತಿರುಗುವುದು.

ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ ಎಸೋಸಿಯೇಶನಿನ ಕಾರ್ಯಕಾರಿ ಮಂಡಳಿಯ ಸಭೆಯು ಬರುವ ತಾರೀಕು ೮ರಲ್ಲಿ ಸೇರುವುದು. ಮತ್ತು ವರುಷಾವಧಿ ಸೇರಲಿಕ್ಕಿದ್ದ ಮಹಾ ಸಭೆಯು ಬರುವ ತಾರೀಕು ೧೭ರಲ್ಲಿ ಕೂಡುವುದಾಗಿ ಕೇಳುತ್ತೇವೆ.

ಉಡುಪಿಯಲ್ಲಿ ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರನ್ನು ಅಧ್ಯಕ್ಷರನ್ನಾಗಿ ಮಾಡಿ ಜಿಲ್ಲಾ ಕೊನ್ಫರೆನ್ಸನ್ನು ಅಲ್ಲಿ ಜರುಗಿಸಬೇಕಾಗಿ ಆಲೋಚನೆಯು ನಡಿಯುತ್ತಿದೆ.

ಈ ತಿಂಗಳಲ್ಲಿ ಮುಷ್ಟಿಫಂಡಿನ ಬಾಬತು ಒಟ್ಟು ೩೦೭|| ಸೇರು ಅಕ್ಕಿ ರೂ. ೨೩—೮—೧೦, ೮ ಟೋಪಿಗಳು ೧೨ ಪುಸ್ತಕಗಳು ಇಷ್ಟು ದೊರಕಿದೆ. ಇತರ ವಂತಿಗೆ ರೂ. ೧೪೩.

ದಿ. ಯುನಿವರ್ಸಲ್ ಸ್ಟೀಮ ನೇವಿಗೇಶನ ಕಂಪೆನಿ ಲಿಮಿಟೆಡ್ ಈ ಸಂಸ್ಥೆಯವರು ಈಗ ೪೦೦ ಟನ್ ಭಾರದ ೮೫೦ ಮಂದಿ ಪ್ರಯಾಣಿಕರನ್ನು ಒಯ್ಯಲು ಅನುಕೂಲವುಳ್ಳದ್ದಾಗಿ ವಿದ್ಯುಚ್ಛಕ್ತಿಯ ದೀಪಗಳು ಮೊದಲಾದ ಉಪಕರಣಗಳುಳ್ಳ ಒಂದು ಸ್ಟೀಮರನ್ನು ಕೊಂಡುಕೊಂಡಿರುವರೆಂದೂ ಈ ಸ್ಟೀಮರಿನ ಚಲಾವಣೆಯು ಪಶ್ಚಿಮ ಕರಾವಳಿಯಲ್ಲಿ ಬರುವ ಒಕ್ಟೋಬರದಿಂದ ಪ್ರಾರಂಭಿಸಲಿಕ್ಕಿದೆ ಎಂದೂ, ಈ ಕಂಪೆನಿಯು ಇನ್ನೂ ಎರಡು ಸ್ಟೀಮರುಗಳನ್ನು ಕೊಂಡುಕೊಳ್ಳಲಿಕ್ಕಿದೆ ಎಂದೂ, ಕಂಪೆನಿಯ ಮುಂಬಯಿಯ ಹೆಡ್ ಆಫೀಸಿನವರು ಬರೆದಿರುವರಾಗಿ ಸದರಿ ಕಂಪೆನಿಯ ಇಲ್ಲಿಯ ಏಜಂಟರಾದ ಮ. ರಾ. ಪಿ. ಯಂ. ಕಾಮತರು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಸೆಂಟ್ರಲ್ ಕೊ-ಒಪರೇಟಿವ್ ಬೇಂಕಿನ ಮೀಟಿಂಗು ಇದೇ ಬರುವ ತಿಂಗಳ ತಾರೀಕು ೧೭ನೇ ಆದಿತ್ಯವಾರ ಇಲ್ಲಿಯ ಕೊ-ಒಪರೇಟಿವ್ ಸೊಸೈಟಿಗಳ ಅಸಿಸ್ಟಾಂಟ್ ರಿಜಿಸ್ಟ್ರಾರರ ಆಫೀಸಿನಲ್ಲಿ ಕೂಡುವುದು.

ಬಿಲ್ಲವರ ಗುರುಗಳಾದ ಬ್ರಹ್ಮ ಶ್ರೀ ನಾರಾಯಣನವರ ಜನ್ಮ ದಿವಸವನ್ನು ತಾ. ೬—೯—'೨೩ರಲ್ಲು ಬುಧವಾರ ಸಂಜೆ ೬ ಗಂಟೆಗೆ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಆಚರಿಸಲ್ಪಡುವುದು. ಸ್ವಜಾತಿ ಬಾಂಧವರೆಲ್ಲರಿಗೂ ಸ್ವಾಗತವಿರುತ್ತದೆ ಎಂದು ಬಿಲ್ಲವರ ಯೂನಿಯನ್ ಸೆಕ್ರೆಟರಿಗಳು ತಿಳಿಸುತ್ತಾರೆ.

ಪಟೇಲ ವೆಂಕಪ್ಪಸೆಟ್ಟಿ ಎಂಬವರು ಖೂನಿಯನ್ನು ನಡಿಸಿದರು ಎಂಬ ಆರೋಪಣೆಯು ಇವರ ಮೇಲಿದ್ದು ಇವರನ್ನು ನಿನ್ನೆ ದಿನ ಕೈದು ಮಾಡಿರುತ್ತಾರೆ. ಇವರನ್ನು ಜಾಮೀನಿನ ಮೇಲೆ ಬಿಡಬೇಕಾಗಿ ಕೊಟ್ಟ ಮನವಿಯು ತಿರಸ್ಕರಿಸಿದೆಯಾಗಿ ಕೇಳುತ್ತೇವೆ.

ಸ್ವೀಕಾರ.

ಜಾತಿಭೇದ ವಿಚಾರ—ಗುರುಕುಲದ ಪಂಡಿತ ಧರ್ಮದೇವ ಸಿದ್ಧಾಂತಾಲಂಕಾರ ಇವರಿಂದ ಹಿಂದೀ ಭಾಷೆಯಲ್ಲಿ ರಚಿಸಲ್ಪಟ್ಟು ಸೆಂಟ್ ಎಲ್ಲೊಸಿಯಸ್ ಕೊಲೇಜಿನ ಸಂಸ್ಕೃತ ಪಂಡಿತ ಬ್ರಹ್ಮಶ್ರೀ ನಿಡ್ಲೋಡಿ ಅನಂತ ಉಪಾಧ್ಯಾಯರಿಂದ ಕನ್ನಡದಲ್ಲಿ ಭಾಷಾಂತರಿಸಲ್ಪಟ್ಟದ್ದು. ಕ್ರಯ ೨ ಆಣೆ. ಹಿಂದೂದೇಶದ ವಿದ್ಯಾಭ್ಯಾಸ—ಪ್ರಾಚೀನ ಮತ್ತು ಅರ್ವಾಚೀನ—ಲೇಖಕ ಕಾವೇರಿಕಾನ ವಿ. ಕೃಷ್ಣಭಟ್ಟ. ಈ ಎರಡು ಪುಸ್ತಕಗಳು ನಮ್ಮ ಕೈಸೇರುವುದನ್ನು ಆದರದಿಂದ ಸ್ವೀಕರಿಸಿದ್ದೇವೆ.

ಕೊಲ್ಲೂರು ಗೋಭೋಸಂದನದ ಆಮೂಲಾಗ್ರ ಚರಿತ್ರೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದನಕರುಗಳು ಬಹಳ ಹೀನಸ್ಥಿತಿಯಲ್ಲಿರುವುದು ನಿರ್ವಿವಾದ. ಹವ, ಭೂಗುಣ, ಅತಿವೃಷ್ಟಿ ಮುಂತಾದ ಸ್ಥಳೀಯ ಪ್ರತಿಬಂಧಕಗಳಿಂದ ಅವುಗಳನ್ನು ಧಾರಾಳವಾಗಿ ಸಾಕಿ ಸಂಗ್ರಹಿಸುವುದು ಶ್ರಮಸಾಧ್ಯ. ಆದರೂ ಹೊಟ್ಟೆಹೈನ ಮೊದಲಾದ ನಿತ್ಯೋಪಯೋಗಕ್ಕೆ ಅವುಗಳು ಅತ್ಯಗತ್ಯ. ಇಂತಹ ನಿವೃತ್ತಿಯಿಲ್ಲದ ಉಪಯೋಗದ ಮಟ್ಟಿಗಾದರೂ ಇಲ್ಲಿನ ಜಾನುವಾರುಗಳನ್ನು ಸಾಧ್ಯ ರೀತಿಯಲ್ಲಿ ವೃದ್ಧಿಗೊಳಿಸಬೇಕೆಂಬುದು ವಿಹಿತ. ಇದು ನಮ್ಮ ನಾಡಿನ ಗೋಸಂಕುಲದ ಸ್ಥಿತಿಗತಿಯ ಪ್ರಸಕ್ತಿ.

ಇನ್ನು ನಾನೊಬ್ಬ ಹುಟ್ಟುಹಳ್ಳಿಗಾಡಿನ ಕೃಷಿಕ. ಮೈಸೂರು ಸಂಸ್ಥಾನದ ಮಲೆನಾಡಿನ ಕೃಷಿಕ್ರಮದ ಅನುಭವ, ಕನ್ನಡ ಜಿಲ್ಲೆಯಲ್ಲಿ ತಲೆಗೊಂಡ ಮೇಲೆ ಅದ್ಯಾಪಿ ಅದೇ ವೃತ್ತಿಯ ೨೫ ವರ್ಷಗಳ ಸ್ವಾನುಭವ, ಸ್ವಾಭಾವಿಕವಾಗಿ ವ್ಯವಸಾಯ ಪಶುಪಾಲನೆಗಳಲ್ಲಿ ನನಗಿರುವ ಅತ್ಯಂತ ಪ್ರೀತಿ, ಆಂಗ್ಲ ವಿದ್ಯೆಯಿಂದ ಈ ಸಂಬಂಧದಲ್ಲಿ ಹೊಂದಬಹುದಾದ ಸೌಕರ್ಯ, ದೈವವಶಾತ್ತು ನನ್ನ ಅಧೀನಕ್ಕೊಳಪಟ್ಟ ಪ್ರೀತ್ಯಾಸ್ಪದವಾದ ಒಂದು ಮನೆಮಾರು, ಅಸ್ತಿಸ್ವಾಸ್ತಿಯ ಸೌಲಭ್ಯ, ಕಾರ್ಯಗೌರವ (dignity of labour)ದ ಮೇಲೆ ದೃಷ್ಟಿಯಿಟ್ಟು ಗೃಹಾರಾಮ (Home farm)ದಲ್ಲಿ ಸ್ವತಃ ಕೆಲಸಮಾಡುವ ನನ್ನ ನಿತ್ಯಾಚರಣೆ, ಇತರರಿಗೆ ಆದರ್ಶಪ್ರಾಯವಾಗಿರುವಂತೆ ನಾನು ಏರ್ಪಡಿಸಿರುವ ಮನೆಸಾಗುಭೂಮಿಯ ರಚನಾಕ್ರಮ, ಇವೆಲ್ಲವೂ ಕೃಷಿ ಗೋರಕ್ಷಣೆ ಕಾರ್ಯದಲ್ಲಿ ನನಗಿರುವ ಯೋಗ್ಯತಾ ವಿಶೇಷದ ಪ್ರಸಕ್ತಿ.

ಇಂತಹ ವಿಷಯವ್ಯಕ್ತಿಗಳ ಅಪೂರ್ವ ಸಂಸರ್ಗದಿಂದ ನಮ್ಮ ಪ್ರಾಂತ್ಯದ ಕೃಷಿ ಗೋರಕ್ಷಣ ಸ್ಥಿತಿಗತಿಗಳನ್ನು ಪುನಃಭಿವೃದ್ಧಿಗೆ ತರಬೇಕೆಂದು ಬಹುಕಾಲದಿಂದಲೂ ಹಂಬಲಿಸುತ್ತಿದ್ದೆನು. ಸಾಂಸಾರಿಕ ತಾಪತ್ರಯಾದಿ ಕಾರಣಾಂತರಗಳಿಂದ ಕಾಲಕರ್ಮವು ಕೂಡಿಬರಲಿಲ್ಲ. ಪರಂತು "ಅನಾರಂಭಕ್ಕಿಂತಲೂ ಆಲಸ್ಯವೆ ಮೇಲು" (better late than never) ಎಂಬಂತೆ ಈಗ ಸುಮಾರು ೪ ವರ್ಷಗಳ ಹಿಂದೆ ಕುಂದಾಪುರ ತಾಲೂಕು ಕೊಡಚಾದ್ರಿಯ ಬುಡದಲ್ಲಿರುವ ಕೊಲ್ಲೂರು ದಳ ಅಸ್ತಿಯು ನನ್ನ ಸಮುದ್ದೇಶಕ್ಕೆ ಸುಕ್ಷೇತ್ರವೆಂದು ತೋರಿಬಂದಿತು. ಕೊಲ್ಲೂರಿಂದ ಮೇಲೆ ಮೈಸೂರು ಸೀಮೆಗೆ ಹೋಗುವ ರಾಜಮಾರ್ಗಕ್ಕೆ ತಾಗಿ ಒಂದೆಡೆಯಲ್ಲಿ ಅಸ್ತಿಯನ್ನನುಸರಿಸಿ ಹರಿದು ಧಾರಳನೀರಾಶ್ರಯವಾದ ಗಿರಿನದಿಯಿಂದ ಕೂಡಿ, ಸುಮಾರು ೧೦೦ ಎಕ್ರೆ ಸಾಗುಭೂಮಿ ೪೦೦ ಎಕ್ರೆ ಕುಮ್ಮಿ ಭೂಮಿ ಸಮೃದ್ಧಿಯಾದ ಕಟ್ಟಿಗೆ, ಸೊಪ್ಪು, ಹುಲ್ಲು, ನೀರು ಮುಂತಾದ ಸರ್ವಾನುಕೂಲವುಳ್ಳ ಇಂತಹ ಅಸ್ತಿಯು ಮೇಲ್ಕಂಡ ಉಭಯೋದ್ದೇಶಕ್ಕೆ ಅತ್ಯುತ್ತಮವಾದುದೆಂದು ಯಾರು ತಾನೇ ಅಭಿಪ್ರಾಯಪಡರು?

ಐವಂಚೆ ಈ ಸುಕ್ಷೇತ್ರವನ್ನು ಒಂದೆರಡಾವರ್ತಿ ಯುಕ್ತವಿದ್ದವರೊಡನೆ ಸಂಪೂರ್ಣವಾಗಿ ಸಂದರ್ಶಿಸಿ, ಅದರ ಮಾಲಕರಿಂದ ಹೆಚ್ಚು ಗೇಣಿಯ ಮೇಲೆ ಮೂಲಗೇಣಿಗೆ ಪಡೆದು, ಒಬ್ಬ ಅಡಿಗೆಯಹುಡುಗ, ೧೦-೮ ಆಳುಗಳು, ಒಂದು ಮುದಿ ದನಕರು, ಈ ನೂತನ ಕಾರ್ಯಕ್ಕೆ ಬೇಕಾಗುವ ಪಾತ್ರೆಪದಾರ್ಥ, ಕುರ್ಚಿಮಂಚ, ಹಾಸುಗೆಹೊದ್ದಿಕೆ, ಹಾರೆಪಿಕ್ಕಾಸು, ಕತ್ತಿಕೊಡಲಿ, ಬುಟ್ಟಿತಟ್ಟೆ, ಮೊರಸಾರಣೆ ಮುಂತಾದ ಸಕಲ ಸಲಕರಣಗಳನ್ನು ಸಂಗ್ರಹಿಸಿಕೊಂಡು, ಮಧ್ಯ ಪ್ರಾಂತ್ಯದಲ್ಲಿ ವಾಸಕ್ಕೆ ಮನೆ, ಹಟ್ಟಿಕೊಟ್ಟಿಗೆ, ಬಾವಿಬಚ್ಚಲುಗಳನ್ನು ಕಟ್ಟಿಸಿ, ವಕ್ಕಲಾಗುವ ಪರಿಯಂತರ ಸೊಪ್ಪಿನ ಚಪ್ಪರದ ಪರ್ಣಶಾಲೆಯಲ್ಲಿ ಮನೆಮಂದಿಯನ್ನೆಲ್ಲಾ ಬಿಟ್ಟು ಹುಲಿಹಂದಿಯ ಸಮೀಪ ಏಕಾಂಗಿಯಾಗಿ ವಾಸವಿದ್ದು, ಗದ್ದೆಹೊಲಗಳ ಹಳುಮಳೆಗಳನ್ನು ಕಡಿಸಿ, ಹೂಟೆಯ ಎತ್ತುಕೋಣಗಳನ್ನು ಸಂಗ್ರಹಿಸಿ ಒಂದೆರಡುಕಾಲ ಕಠಿಣ ಕೈದಿಗಿಂತಲೂ ಮಿಗಿಲಾಗಿ ಆ ನಿರ್ಜನಪ್ರದೇಶದಲ್ಲಿ ನಾನು ಪಟ್ಟ ಕಷ್ಟವನ್ನು ವರ್ಣಿಸಿತೀರದು. ಅಥವ ವಿಸ್ತರಿಸಿ ಪ್ರಸ್ತಾಪಿಸಿದರೂ ಪಟ್ಟಣವಾಸದಲ್ಲಿಯೇ ಹುಟ್ಟಿಬೆಳೆದ ಅಗರ್ಭ ಶ್ರೀಮಂತರಿಗೆ ಅರ್ಥವಾಗದು.

ಇಷ್ಟೆಲ್ಲಾ ಹೊಸ ಸೃಷ್ಟಿ ಕ್ರಮವನ್ನು ಸಂಚಾರಸಂದರ್ಶನ ಕಂತು ಕರಾರುಗಳಿಗೂ ೨-೩ ವರ್ಷಗಳ ಕೂಲಿಕಾಲಿ ಕೆಲಸಕ್ಕೂ, ಬಿಡಾರದ ಸಿಬ್ಬಂದಿಗೂ ಸುಮಾರು ೩೦೦೦ ರೂಪಾಯಿ ಮೇಲೆ ಮುಟ್ಟಿಹೋಯಿತು. ಕಬ್ಬು, ಕಾಯಿಪಲ್ಲೆ, ಧಾನ್ಯವವಸ, ಬತ್ತದ ಪೈರುಗಳನ್ನೆಲ್ಲಾ ಸ್ವಂತವಾಗಿ ಬೆಳಸಿ ಪರೀಕ್ಷಿಸಿದಂತಾಯಿತು. ಭೂಗುಣದ ಉತ್ಕೃಷ್ಟತೆಯಿಂದ ಉತ್ತಮ ರೀತಿಯ ಪೈರಾಗುತ್ತೆಂಬುದು ನಿದರ್ಶನಕ್ಕೆ ಬಂತು. ಸಾಕಲಿಕ್ಕೆ ಬಂದ ಕೆಲವು ಜಾನುವಾರುಗಳನ್ನೂ ಅಭಿಮಾನಿಗಳು ಉಚಿತವಾಗಿ ಕೊಟ್ಟ ಕಾಲುನಡಗೆಗಳನ್ನೂ ಹೊಟೆಹೈನಕ್ಕಾಗಿ ಕೊಂಡ ಎತ್ತುಕೋಣ ಎಮ್ಮೆದನಗಳನ್ನೂ ಸಂಗ್ರಹಿಸಿ ಸಂರಕ್ಷಿಸಿ ನೋಡಿದುದರಲ್ಲಿ ಮೂಡಪ್ರಾಂತ್ಯದ ಹುಲಸಾದ ಭೂಮಿಯು ಗೋರಕ್ಷಣೆಗೆ ಸುಕ್ಷೇತ್ರವೆಂಬುದು ಮನವರಿಕೆಯಾಯಿತು. ಇವೆಲ್ಲವೂ ಸ್ವಾನುಭವ ಸಿದ್ಧವಾದ ಜ್ಞಾನಾರ್ಜನೆ.

ಅವರೇನುಮಾಡುವುದು? ಕಾಡುಹಂದಿ, ಕೋತಿ, ಇಲಿ, ಹೆಗ್ಗಣ, ಹಕ್ಕಿಪಕ್ಷಿ ಮುಂತಾದ ಕಾಡು ಜಂತುಗಳ ಹಾವಳಿ, ಪೈರುಕಟಾವು ಸಮಯಕ್ಕೆ ಎಡೆಬಿಡದೆ ಹಿಡಿಯುವ ಜಡಿಮಳೆಯ ಜೊತೆ, ಸಕಾಲದಲ್ಲಿ ಹೆಣ್ಣುಗಂಡು ಕೂಲಿಕೆಲಸಗಾರರ ಅಭಾವ, ಹಳು ಮಳೆಗಳಲ್ಲಿ ಅಡಗಿದ್ದು ಅಕಸ್ಮಾತ್ತಾಗಿ ಹಸುಗಳನ್ನು ಹಿಡಿದು ಕೊಲ್ಲುವ ಹುಲಿಯ ಕಾಟ, ಮುಖ್ಯವಾಗಿ ಮಳೆಗಾಲದಲ್ಲಿ ಮಲೇರಿಯಾ ಜ್ವರದ ಪ್ರಾಬಲ್ಯ, ಮುಂತಾದ ಕಾರಣಾಂತರಗಳಿಂದ ಧಾರಾಳವಾಗಿ ಪೈರು ಬೆಳೆಸುವುದೂ ಬೆಳಸಿದ ಬೆಳೆಯು ಕೈಸೇರುವುದೂ ಕಡು ಕಷ್ಟಸಾಧ್ಯವಾಗಿ ಪರಿಣಮಿಸಿತು. ಹೀಗಾಗಿ ಕಾಲಂಪ್ರತಿಯ ಉತ್ಪತ್ತಿಯಿಂದ ಖರ್ಚನ್ನು ಸಹಿಸಿ ಕಂದಾಯವನ್ನು ಕೊಟ್ಟು ಮೂಲಗೇಣಿಯನ್ನು ಪಾವತಿಮಾಡುವುದೂ ಹೇಗೂ ಸಾಧ್ಯವಾಗಲಿಲ್ಲ. ನಿರ್ದಾಕ್ಷಿಣ್ಯವಂತರಾದ ಧನಿಗಳು ಒಂದು ವರುಷದ ಬಾಕಿಗೂ ಎತ್ತು ಬೀಜ ಮುಂತಾದ ಕಡ ಮೊದಲ ಕೈಗಡಕ್ಕೂ ಕುಂದಾಪುರದ ಕೋರ್ಟಿನಲ್ಲಿ ದಾವೆಯನ್ನೂ ದಾಖಲುಮಾಡಿದರು.

ಇನ್ನು ಮುಂದೆ ನನ್ನ ಹಂಗಿನ ಮನೆಯಿಂದ ಹಣಕಾಸು ತರಿಸುವುದು ಭೂಷಣವಲ್ಲ. ಸದ್ಯಸ್ಥಿತಿಯಲ್ಲಿ ಭೂಮಿಯಿಂದಲೇ ಹುಟ್ಟಿಸಿಕೊಡುವುದು ಸಾಧ್ಯವಿಲ್ಲ. ಕಾಡು ಮೃಗಗಳ ಕಾಟ ತಪ್ಪುವಂತೆ ಅಗಳುಪ್ರಾಕಾರ ಅಥವಾ ಮುಳ್ಳಿನ ಬೇಲಿಯ ಅವರಣ ಹಾಕುವ ನಿವೃತ್ತಿ ಇಲ್ಲ. ಹುಲಿಯ ಕಾಟ ಬಾರದಂತೆ ಕಾಡು ಕಡಿದು ಬೈಲುಮಾಡದೆ ಮಾರ್ಗವಿಲ್ಲ. ಒಟ್ಟಿನಲ್ಲಿ ಇವೆಲ್ಲಾ ಹೇಗೂ ಕೊನೆ ಮುಟ್ಟುವದಿಲ್ಲ. ಇಲ್ಲಿ ನಿಂತು ಆಡಳಿತ ನಡಿಸುವ ಮುಖಾಳ್ಯರು ಮುಂದೆ ಬರುವದಿಲ್ಲ. ಇಡೀ ಜಿಲ್ಲೆಗೊಪ್ಪುವ ದೊಡ್ಡ ಸಂಸ್ಥೆಯನ್ನೇರ್ಪಡಿಸಿ ಅಲ್ಲಲ್ಲ ಇಂತಹ ಗೋಪೋಷಣಗಳನ್ನು ನಿರ್ಮಿಸಿ ತತ್ಸಂಬಂಧಿಯನ್ನು ವಿಷಯದ ಪ್ರಚಾರ ಕಾರ್ಯವನ್ನೂ ದ್ರವ್ಯಾರ್ಜನೆಯ ಕ್ರಮವನ್ನೂ ಸ್ವತಃ ವಹಿಸಿ ಈ ತರುಣ ಸಂಸ್ಥೆಯನ್ನು ಪುನರಭಿವೃದ್ಧಿಗೆ ತರುವ ಎಂದರೆ ಇಲ್ಲಿ ಬೇರೆ ದಿಕ್ಕಿಲ್ಲ. ಇಂತಹ ಅರ್ಥಾಯ ಸಂಕಟಕ್ಕೆ ಸಿಲುಕಿದ್ದ ನನ್ನ ಆರ್ತ್ಯಾರೋದನವನ್ನು ಕೇಳುವವರೇ ಇಲ್ಲ. ಹುಟ್ಟು ಕೃಷಿಯೂದುದರಿಂದ ಇಷ್ಟೆಲ್ಲಾ ಸಹಿಸಲು ನನ್ನಿಂದ ಸಾಧ್ಯವಾಯಿತಲ್ಲದೆ ಮತ್ತೊಂದಿಲ್ಲ.

ಸಶೇಷ.

ಶಾಂತಿಯ ಧ್ವಜ.

(ಬರೆದು ಬಂದುದು.)

ಬೇರೆ ಹುಡುಗಿಯರು ಅತ್ತಿತ್ತ ಓಡ್ಯಾಡಿಕೊಂಡು ಆಟದಲ್ಲೇ ಇದ್ದಾಗ ಶಾಂತಿಯು ಬಿಡದೆ ಪ್ರತಿ ಮುಂಜಾನೆಯೂ ನೂಲುತ್ತಿದ್ದಳು. ಕಳೆದ ವರುಷ ಮಹಾತ್ಮಾಜೀಯವರು ಈ ಪಟ್ಟಣಕ್ಕೆ ಬಂದಿದ್ದಾಗ ಶಾಂತಿಯು ಅವರನ್ನು ನೋಡಿದ್ದಳು. ಅವರು ಪ್ರೇಮಪೂರ್ವಕವಾಗಿ ಅವಳ ತಲೆಯ ಮೇಲೆ ಕೈಯಾಡಿಸಿ ನೂಲುವುದಕ್ಕೆ ಅವಳಕೂಡೆ ಹೇಳಿದ್ದರು. ಹಾಗೆಯೇ ಮಾಡುವೆನೆಂದು ಅವಳು ವಾಗ್ದಾನಮಾಡಿದ್ದಳು. ಆರಂಭದಲ್ಲಿ ಹತ್ತಿಯನ್ನೊದಗಿಸಿಕೊಳ್ಳುವ ಕಷ್ಟವಿತ್ತು, ಮತ್ತು ಹತ್ತಿಯು ದೊರೆತಾಗ ಚರ್ಕವು ತೊಂದರೆಕೊಡಲಾರಂಭಿಸಿತು. ಶಾಂತಿಯು ಈ ಚರಕವನ್ನು ಸ್ಥಳೀಕ ಕಾಂಗ್ರೆಸ್ ಕಮಿಟಿಗೆ ಚರಕಗಳನ್ನು ಒದಗಿಸಿಕೊಡುತ್ತಿದ್ದ ಕಂಟ್ರಾಕ್ಟರನಿಂದ ಕೊಂಡುಕೊಂಡಿದ್ದಳು. ಮಹಾತ್ಮಾಜೀಯವರ ಸಂದರ್ಶನದ ನಂತರ ಅವನು ನೂರಾರು ಚರಕಗಳನ್ನು ಮಾಡಿ ಮಾರಾಟಮಾಡಿದನು. ಆದರೆ ಅವೆಲ್ಲವೂ ಕೆಲಸಕ್ಕೆ ಬಾರದವುಗಳಾಗಿದ್ದವು. ಚರಕಗಳನ್ನು ಜೋಡಿಸಿದ್ದು ಸರಿಯಿರಲಿಲ್ಲ. ಕದಿರೂ ಸರಿಯಾಗಿ ತಿರುಗುತ್ತಿದ್ದಿಲ್ಲ. ಶಾಂತಿಯ ತಂದೆಗೆ ಬೇರೆ ತುಂಬಾ ಕೆಲಸವಿದ್ದುದರಿಂದ ಇದನ್ನು ಸರಿಪಡಿಸುವ ಕಾರ್ಯಕ್ಕೆ ಗಮನ ಕೊಡಲಾಗಲಿಲ್ಲ. ಆದಕಾರಣ ಶಾಂತಿಯು ಅದೇ ಅಲುಗಾಡುವ ಚರಕದಲ್ಲಿ ಕೆಲಸ ಮಾಡುತ್ತಿದ್ದಳು. ಆಗ ಒಂದು ದಿನ ಯಾವುದೋ ಒಂದು ಕೆಲಸದ ಮೇಲೆ ಅವರ ಮನೆಗೆ ಬಂದಿದ್ದ ಒಬ್ಬ ಬಡಗಿಯು ಶಾಂತಿಯು ಚರಕದಲ್ಲಿ ನೂಲುವುದನ್ನು ನೋಡಿದನು. ಅವನು ಪರಮಾನಂದಭರಿತನಾಗಿ, ಶಾಂತಿಯು ಇಷ್ಟು ಚಮತ್ಕಾರವಾಗಿ ನೂಲುವುದನ್ನು ನೋಡುವುದಕ್ಕಾಗಿ ತನ್ನ ಚಿಕ್ಕ ಮಗಳನ್ನು ಅಲ್ಲಿಗೆ ಕರಕೊಂಡು ಬರುವೆನೆಂದು ಹೇಳಿದನು. ಅಲ್ಲದೆ ಶಾಂತಿಗೆ ಚೆಲೋದಾದ ಒಂದು ಹೊಸ ಚರಕವನ್ನು ಮಾಡಿಕೊಡುವುದಾಗಿಯೂ ಅವನು ವಾಗ್ದಾನಮಾಡಿದನು. ಮರುವಾರದಲ್ಲಿ ಅವನು ಒಂದು ಸುಂದರವಾದ ಚರಕವನ್ನು ಹಿಡಿದುಕೊಂಡು, ತನ್ನ ಮಗಳನ್ನೂ ಕರೆದುಕೊಂಡು ಬಂದನು. ಹೊಸ ಚರಕವು ಬಹು ಸುಲಭವಾಗಿ ತಿರುಗುತ್ತಿತ್ತು. ಶಾಂತಿಯ ಕೈಯಿಂದ ತಿರುಗಿಸಲ್ಪಡಬೇಕೆಂಬ ಸಂತೋಷದಿಂದಲೋ ಎಂಬಂತೆ ಅದು ಮಧುರಗಾನ ಮಾಡುತ್ತಿತ್ತು.

ಮೂರುತಿಂಗಳು ಕಳೆದುಹೋದವು. ಸರಕಾರದವರು ಶಾಂತಿಯ ತಂದೆಯನ್ನು ತುರಂಗಕ್ಕೆ ಅಟ್ಟಿದ್ದರು. ತನ್ನ ತಂದೆಯ ತನಿಖೆಯನ್ನು ನಡೆಯಿಸಿದ ನ್ಯಾಯಾಧೀಶನ ಮೇಲೆ ಶಾಂತಿಗೆ ಆರಂಭದಲ್ಲಿ ತುಂಬಾಸಿಟ್ಟಿತ್ತು. ದೂರದ ತನ್ನ ಗ್ರಾಮದಿಂದ ಬಂದಿದ್ದ ಶಾಂತಿಯ ಮಾವನು ಅವಳ ತಂದೆಯ ತನಿಖೆಯು ನಡೆಯುವಾಗ ಅವಳ ಬಳಿಯಲ್ಲೇ ಕುಳಿತಿದ್ದನು. ಶಾಂತಿಗೆ ತಾಯಿಯಿರಲಿಲ್ಲ. ಆಕೆಯು ಶಾಂತಿಗೆ ಮೂರು ವರ್ಷವಾದಾಗಲೇ ತೀರಿಕೊಂಡಿದ್ದಳು.

"ಮಾವ, ಆ ಮನುಷ್ಯನನ್ನು ನಾನು ದ್ವೇಷಿಸುತ್ತೇನೆ. ಅವನೇಕೆ ನಮ್ಮೊಟ್ಟಿಗೆ ಸೇರುವುದಿಲ್ಲ? ಅವನೇಕೆ ಈ ದುಷ್ಟ ಸರಕಾರಕ್ಕೆ ಸಹಾಯಮಾಡುತ್ತಿದ್ದಾನೆ?" ಶಾಂತಿ, ಹಾಗಲ್ಲ, ಗಾಂಧಿಯವರು ನಿನ್ನೊಡನೆ ಏನು ಹೇಳಿದ್ದರು? ನೀನು ಸಿಟ್ಟುಗೊಳ್ಳಬಾರದು.

ಬಹುಶಃ ಶಾಂತಿಯ ತಂದೆಗೆ ಈ ಸಂಭಾಷಣದಲ್ಲಿ ಸ್ವಲ್ಪ ಕೇಳಿತು, ಏಕೆಂದರೆ ಅವನು ಮುಖತಿರುಗಿಸಿ ಮುಗುಳು ನಗೆಯನ್ನು ತೋರಿಸಿದನು. ತಂದೆಯು ಸೆರೆಮನೆಯನ್ನು ಪ್ರವೇಶಿಸಿದ ನಂತರ ಪ್ರತಿ ತಿಂಗಳೂ ಸದಾ ಅವಳು ನೂಲುತ್ತಿದ್ದಳು. ಆ ಕೊನೆಯ ಮುಗುಳು ನಗೆಯು ಯಾವಾಗಲೂ ಅವಳ ಮುಂದಿದ್ದು ಅವಳ ಏಕಾಂತದಲ್ಲಿ ಅವಳಿಗೆ ಆನಂದವನ್ನುಂಟು ಮಾಡುತ್ತಿತ್ತು.

ಜಾಮೀನನ್ನು ಕೊಡದಿದ್ದರೆ ಒಂದು ವರ್ಷದ ಕಠಿಣ ಸಜೆಯೆಂದು ತೀರ್ಪು ಓದಿಹೇಳಲಾಯಿತು. ಶಾಂತಿಯ ತಂದೆಯು ಜಾಮೀನನ್ನು ಕೊಡದೆ ಜೈಲಿಗೆ ಹೋದನು. ಶಾಂತಿಯನ್ನೂ ಅವಳ ಮಾವನನ್ನೂ ನೋಡುವರೆ ಅನೇಕ ಜನರು ಅವರ ಮನೆಗೆ ಬಂದರು. ಕೆಲವರು ನಕ್ಕು, ಆ ತೀರ್ಪಿನಿಂದ ಸಂತೋಷವಾಯಿತೆಂದು ನಟಿಸಿದರು. ಇನ್ನು ಕೆಲವರು ವ್ಯಾಕುಲಚಿತ್ತರಾಗಿ ಶಾಂತಿಯನ್ನು ಸಮಾಧಾನಪಡಿಸುವುದಕ್ಕಾಗಿ ಬಂದು ಅವಳ ಸುಂದರವದನವನ್ನು ನೋಡಿ ಅತ್ತರು. ಆದರೆ ಇದನ್ನೆಲ್ಲಾ ನೋಡಿ ಶಾಂತಿಯು ನಕ್ಕಳು. ಅಯ್ಯೋ ಪಾಪ, ಈ ಗಂಡಾಂತರವೇ ಶಾಂತಿಗೆ ತಿಳಿಯಲಿಲ್ಲ' ಎಂದು ಹೇಳುತ್ತಾ ಅವರು ತಂತಮ್ಮ ಉದ್ಯೋಗಗಳ ಕಡೆಗೆ ತೆರಳಿದರು.

ಈ ಗೊಂದಲವು ಕೆಲವು ದಿವಸ ನಡೆದು ಅನಂತರ ಮನೆಯಲ್ಲಿ ನಿಶ್ಶಬ್ದವಾಯಿತು. ಆಗಿಂದಾಗ್ಗೆ ಬರುತ್ತಿದ್ದ ಕಾಂಗ್ರೆಸ್ ಕಮಿಟಿಯ ಸಹಾಯಕ ಕಾರ್ಯದರ್ಶಿಯಾದ ರಾಮಚಂದ್ರನಲ್ಲದೆ ಇನ್ನಾರೂ ಮನೆಗೆ ಬರುತ್ತಿರಲಿಲ್ಲ.

"ರಾಮಚಂದ್ರಾ, ನಾನು ನಿಮಗೆ ನೂಲುಕೊಡುತ್ತೇನೆ. ಅದರಿಂದೊಂದು ಧ್ವಜವನ್ನು ಮಾಡಿಸುವಿರಾ? ನಿಮ್ಮ ಕಚೇರಿಗೆ ಒಂದು ದೊಡ್ಡ ಧ್ವಜವನ್ನು ತಯಾರಿಸುವುದಕ್ಕೆ ಬೇಕಷ್ಟು ನೂಲನ್ನು ನಾನು ಕೊಡುತ್ತೇನೆ." ಎಂದು ಹೇಳಿದ ಶಾಂತಿಯ ಮಾತಿಗೆ ರಾಮಚಂದ್ರನು, "ಒಳ್ಳೆಯದು, ನಾನು ಅದಕ್ಕೆ ಹಸುರು ಮತ್ತು ಕೆಂಪು ಬಣ್ಣವನ್ನು ಕೊಡಿಸಿ, ಸುಂದರವಾಗಿ ನೇಯಿಸಿ, ಕಚೇರಿಯ ಮೇಲೆ ಅದನ್ನೇರಿಸುತ್ತೇನೆ! ಎಂದನು.

ಶಾಂತಿಯು ನೂಲುತ್ತಿದ್ದಳು. ಅವಳು ಚರಕವನ್ನು ತಿರುಗಿಸುತ್ತಿದ್ದಾಗ ಅವಳ ತಂದೆಯ ಮುಗುಳುನಗೆಯು ಸ್ಮರಣೆಯಾಗಿ ಅವಳಿಗೆ ಆನಂದವಾಗುತ್ತಿತ್ತು. ಮತ್ತು ಶಾಂತವಾದ ಆ ಮನೆಯಲ್ಲಿ ಚರಕದ ತಿರುಗುವಿಕೆಯ ಸಪ್ಪಳವು ತುಂಬಿಹೋಗಿತ್ತು. "ನನ್ನ ಪಾರ್ಸಿ ಸೋದರಿಯರಿಗಾಗಿ ನಾನು ಈ ಬಿಳೀ ನೂಲನ್ನುಮಾಡುತ್ತೇನೆ. ನಾನು ಸಿಖ್ಖರಿಗೂ, ಕ್ರೈಸ್ತರಿಗೂ ನೂಲುತ್ತೇನೆ. ನಮ್ಮ ಮಧ್ಯದಲ್ಲಿ ತಾವು ಬಹು ಸ್ವಲ್ಪ ಮಂದಿಯಾಗಿದ್ದೇವೆಂದೂ, ಸ್ವರಾಜ್ಯವು ದೊರೆತನಂತರ ತಮಗೆ ನಮ್ಮಿಂದ ಹಾನಿಯಾದೀತೆಂದೂ ಭಯಪಡುವ ಎಲ್ಲಾ ಚಿಕ್ಕ ಪಂಗಡಗಳಿಗಾಗಿಯೇ ಬಿಳಿದನ್ನಿಟ್ಟಿದೆ. ಲಕ್ಷ್ಮೀ ನಾವು ಅವರಿಗೆ ಹಾನಿಯನ್ನು ಮಾಡಿಯೇವೋ? ನಾವೇಕೆ ಹಾಗೆಮಾಡುತ್ತೇವೆ? ಅವರು ನಮ್ಮ ಸೋದರಿಯರಲ್ಲವೇ".

ಲಕ್ಷ್ಮಿಯ ತಂದೆಯು ಕೋರ್ಟಿಗೆ ಹೋಗುತ್ತಿದ್ದ ಒಬ್ಬ ವಕೀಲನಾಗಿದ್ದನು. ಅವನೂ ಶಾಂತಿಯ ತಂದೆಯೂ ಪರಮಮಿತ್ರರಾಗಿದ್ದರು. ಅಸಹಕಾರ ಚಳವಳವು ಆರಂಭವಾದೊಡನೆಯೇ ಶಾಂತಿಯ ತಂದೆಯು ವಕೀಲವೃತ್ತಿಗೆ ತಿಲಾಂಜಲಿಯನ್ನಿತ್ತನು. ತಾನು ಬಹಳ ಬಡವನಾದುದರಿಂದ ವಕೀಲಿಯನ್ನು ಬಿಡಲಾರೆನೆಂದು ಲಕ್ಷ್ಮಿಯ ತಂದೆಯು ಹೇಳಿದನು. ಅವನಿಗೆ ದೊಡ್ಡ ಕುಟುಂಬವಿದ್ದುದರಿಂದ ಅದರ ಪೋಷಣೆಗಾಗಿ ಸಾರ್ವಜನಿಕ ನಿಧಿಯ ಮೇಲೆ ಹೊಂದಿರಲು ಅವನಿಗೆ ಇಷ್ಟ ಇರಲಿಲ್ಲ. ಶಾಂತಿಯ ತಂದೆಯು ಧನಿಕನಾಗಿದ್ದನೆಂದು ಹೇಳುತ್ತಿದ್ದರು. ಆದರೆ ಶಾಂತಿಗೆ ತಿಳಿಯಬಾರದೆಂದು ತಂದೆಯು ಎಷ್ಟು ಜಾಗ್ರತೆ ತೆಗೆದುಕೊಂಡರೂ ಮನೆಯಲ್ಲಿಯ ಆಡಂಬರಗಳೆಲ್ಲವೂ ಹೋಗುತ್ತಲಿವೆಯೆಂದೂ ತಾನು ಲಕ್ಷ್ಮಿಗಿಂತಲೂ ಬಡವಳೆಂದೂ ಶಾಂತಿಗೆ ಗೊತ್ತಿತ್ತು. ಆದರೆ ಶಾಂತಿಯು ಧೈರ್ಯಶಾಲಿಯಾದ ಹುಡುಗಿಯು. 'ಧ್ವಜದ ಬಿಳೀ ಭಾಗಕ್ಕಾಗಿ ನಾನು ನೂಲುತ್ತಲಿದ್ದೇನೆ. ಬಿಳಿಯ ದೆಸೆಯಿಂದ ಪ್ರತಿಯೊಬ್ಬನೂ ಸುರಕ್ಷಿತವಾಗಿರುವನು. ಅಲ್ಲವೇ ಲಕ್ಷ್ಮೀ? ಮನುಷ್ಯರು ಏಕೆ ಒಬ್ಬರನ್ನೊಬ್ಬರು ಹಗೆಮಾಡುತ್ತಲೂ ಒಬ್ಬರಿಗೊಬ್ಬರು ಹೆದರುತ್ತಲೂ ಇರುವರು? ಪರಸ್ಪರ ಪ್ರೇಮವನ್ನೇ ಅವರೇಕೆ ತೋರಿಸಬಾರದು?'

ಅದುದರಿಂದ ಶಾಂತಿಯು ಬಿಳೀ, ಹಸುರು ಮತ್ತು ಕೆಂಪಿಗಾಗಿ ನೂಲುಮಾಡಿ ರಾಮಚಂದ್ರನಿಗೆ ಕೊಟ್ಟಳು. ಅವಳು ಬಹು ಆತುರದಿಂದ ಕಾದುಕೊಂಡಿದ್ದು ನಿಯಮಿತ ದಿವಸದಲ್ಲಿ ಧ್ವಜವು ಸಿದ್ಧವಾಗದಿದ್ದುದನ್ನು ಕಂಡು ಅವಳಿಗೆ ನಿರಾಶೆಯಾಯಿತು. ಆದರೂ ಸ್ವಲ್ಪಕಾಲದ ನಂತರ ಅದು ತಯಾರಾಯಿತು. ಶಾಂತಿಯು ಅದನ್ನು ರಾಮಚಂದ್ರನ ಕೈಯಿಂದ ಎಳೆದುಕೊಳ್ಳುವುದಕ್ಕಾಗಿ ಬಾಗಿಲಿಗೆ ಓಡಿದಳು. ಅವಳು ಅದನ್ನು ನೆಲದ ಮೇಲೆ ಹರಡಿಸಿ ಸಂತೋಷದಿಂದ ಅದಕ್ಕೆ ಪ್ರದಕ್ಷಿಣೆ ಮಾಡಿದಳು.

"ಇದೆಲ್ಲ ನನ್ನ ನೂಲು" ಎಂದು ಹೇಳಿ ಅವಳು ತನ್ನ ಮಾವನ ಕೊರಳನ್ನು ಅಪ್ಪಿಕೊಂಡಳು.

ಮರುದಿವಸ ಮುಂಜಾನೆ ಕಾಂಗ್ರೆಸ್ ಕಚೇರಿಯ ಮೇಲೆ ಶಾಂತಿಯ ಧ್ವಜವನ್ನೇರಿಸುವ ಸಮಾರಂಭಕ್ಕೆ ಮಕ್ಕಳು ಗುಂಪು ಗುಂಪಾಗಿ ರಸ್ತೆಯಲ್ಲಿ ಸೇರಿದ್ದರು. ಕೆಲವರು ದೊಡ್ಡವರೂ ಬಂದಿದ್ದರು. ಈ ಜನಸಮೂಹಕ್ಕೆ ಸ್ವಲ್ಪ ದೂರದಲ್ಲಿ ಒಬ್ಬ ಪೋಲೀಸಿನವನೂ ನಿಂತುಕೊಂಡು ಆಗುವುದನ್ನೆಲ್ಲಾ ನೋಡುತ್ತಿದ್ದನು. ಮಹಾತ್ಮಾ ಗಾಂಧೀಕಿ ಜೈ' ಎಂಬ ಜಯ ಘೋಷವನ್ನು ಕೇಳಿದೊಡನೆಯೇ ಅವನ ಮುಖದಲ್ಲಿ ಕಾಣುತ್ತಿದ್ದ ಕುಟಿಲತ್ವವೆಲ್ಲಾ ನಾಶವಾಯಿತು. ಗಾಳಿಯಿಂದ ಆ ಧ್ವಜವು ಅಲುಗಾಡಿದುದನ್ನು ನೋಡಿ ಅವನಿಗೂ ಸಂತೋಷವೇ ಆಯಿತು.

ಅದೇ ದಿವಸ ಸಂಜೆಗೆ ಮಹಾತ್ಮಾಜೀಯವರನ್ನು ಕೈದು ಮಾಡಿದರೆಂಬ ವಾರ್ತೆಯು ಬಂತು. "ಶಾಂತಿ, ಶಾಂತಿ," ಎಂದು ಕೂಗುತ್ತಾ, ಲಕ್ಷ್ಮಿಯು ಓಡಿ ಬಂದಳು "ಗಾಂಧಿಯನ್ನು ಜೈಲಿಗೆ ಹಾಕಿದ್ದಾರೆಂಬುದನ್ನು ನೀನು ಬಲ್ಲೆಯಾ." "ಅವರು ಏನೂ ಮಾಡಲಿ." ಎಂದು ಹೇಳಿ ಶಾಂತಿಯು, ತನ್ನ ತಂದೆಯನ್ನು ಕೊಂಡು ಹೋದಾಗ ಅಳದಿದ್ದರೂ ಈಗ ಬಡ ಮುದುಕನಾದ ಗಾಂಧಿಗಾಗಿ ಅತ್ತುಬಿಟ್ಟಳು.

"ಶಾಂತಿ ನಿನ್ನ ತಂದೆಗೆ ಕೋಳಹಾಕಿ, ಇಡೀ ದಿವಸ ರಾಗಿಬೀಸುವಂತೆ ಮಾಡಿರುತ್ತಾರೆಂದು ಹೇಳುತ್ತಾರೆ." "ಇರಬಹುದು" ಎಂದು ಹೇಳಿ ಶಾಂತಿಯು ಅಳಲಾರಂಭಿಸಿದಳು. ಈ ಸಂಗತಿಯನ್ನು ಹೇಳಿದುದಕ್ಕಾಗಿ ಲಕ್ಷ್ಮಿಯು ಪಶ್ಚಾತ್ತಾಪಪಟ್ಟು ತನ್ನ ಸೆರಗಿನಿಂದ ಶಾಂತಿಯ ಕಣ್ಣೀರನ್ನು ಒರಸಿದಳು. "ಶಾಂತಿ ಬಿಳೀ ಜನರು ಹೀಗೇಕೆ ಮಾಡುತ್ತಾರೆ?" ಗಾಂಧಿಗೆ ಸ್ವರಾಜ್ಯವು ದೊರೆತಾಗ ನಾವು ಪ್ರತೀಕಾರ ಮಾಡಲಿಕ್ಕಿಲ್ಲವೇ?" "ಇಲ್ಲ. ನಾವೆಂದೂ ಹಾಗೆ ಮಾಡಕೂಡದು. ಗಾಂಧೀಜೀಯವರು ನಮಗೇನು ಹೇಳಿದ್ದಾರೆಂಬುದನ್ನು ನೆನಪಿಗೆ ತಂದುಕೋ. ಸರ್ವರಿಗೂ ಸುಖವೂ ಶಾಂತಿಯೂ ಆಗಬೇಕು. ಅವರು ಈಗ ಮೂಢರೂ ಲೋಭಿಗಳೂ ಆಗಿರುವುದರಿಂದ ಹೀಗೆ ಮಾಡುತ್ತಲಿದ್ದಾರೆ. ನಾವು ಅವರಿಗೆ ಕೇಡು ಮಾಡಿಯೇವೆಂಬ ಭಯವೂ ಅವರಿಗಿದೆ. ಅವರಂತೆಯೇ ನಾವೂ ಕೆಟ್ಟವರಾಗಬಾರದು. ಅವರನ್ನು ಕೂಡ ದೇವರು ಒಳ್ಳೆಯವರನ್ನಾಗಿ ಮಾಡುವನು."

ಅನೇಕ ದಿನಗಳು ಕಳೆದು ಹೋದುವು. ಹೆಚ್ಚು ಕಡಿಮೆ ಎಲ್ಲಾ ಸ್ಥಳೀಕ ಕಾಂಗ್ರೆಸ್ ಪ್ರಚಾರಕರು ಸರಕಾರಕ್ಕೆ ತುತ್ತಾಗಿದ್ದರು. ರಾಮಚಂದ್ರನಿಗೂ ಒಂದು ವರ್ಷದ ಕಠಿಣ ಸಜೆಯಾಗಿತ್ತು. ಬಡ ಶಾಂತಿಯು ಮಾತ್ರ ನೂಲುತ್ತಲೇ ಇದ್ದಳು. ಒಂದು ದಿವಸ ತನ್ನ ಧ್ವಜವೇನಾಯಿತೆಂದು ನೋಡಬೇಕೆಂದು ಅವಳಿಗೆ ಆಸೆಯಾಯಿತು. ಸಂಜೆಯ ಹೊತ್ತಿನಲ್ಲಿ ಅವಳು ತನ್ನ ಮಾವನೊಡನೆ ಪಟ್ಟಣಕ್ಕೆ ಹೋಗಿ ನೋಡಲು ಧ್ವಜವು ಎಂದಿನಂತೆಯೇ ಗಾಳಿಯಲ್ಲಿ ಅಲುಗಾಡುತ್ತಲಿತ್ತು. ಕಾಂಗ್ರೆಸ್ ಕಚೇರಿಯಲ್ಲಿ ಮಾತ್ರ ಅನೇಕ ಅಪರಿಚಿತ ಯುವಕರಿದ್ದರು. ಅನೇಕ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜನ್ನು ಬಿಟ್ಟು ಕಾಂಗ್ರೆಸ್ ಕೆಲಸವನ್ನು ಕೈಕೊಂಡಿದ್ದರು. ಸ್ವಲ್ಪ ಗಾಳಿಬಂದುದರಿಂದ ಶಾಂತಿಯ ಧ್ವಜವು ಹರಡಿಕೊಂಡು ಅದರ ಬಿಳಿ ಹಸುರು ಕೆಂಪು ಮೂರೂ ಸುಂದರವಾಗಿ ಕಂಡುದರಿಂದ ಶಾಂತಿಯ ಹೃದಯವು ಆನಂದಭರಿತವಾಯಿತು. ಮಹಾತ್ಮಾಜೀಯವರು ಜೈಲಿನಲ್ಲಿದ್ದರು, ಆದರೆ ಧ್ವಜವು ಮಾತ್ರ ಸದಾ ಹಾರುತ್ತಲಿತ್ತು.

ಬಂದ ಎಲ್ಲಾ ಭಯಂಕರ ಗಂಡಾಂತರಗಳನ್ನೂ ಸಹಿಸಿಕೊಂಡು ಅಸ್ಸಾಮಿನಲ್ಲಿ ಹುಡುಗರು ಶಾಂತಿಯ ಧ್ವಜವನ್ನು ಬೀಳಬಿಡಲಿಲ್ಲ. ಸಿಂಧದ ಹುಡುಗರೂ ಶಾಂತಿಯ ಧ್ವಜವನ್ನು ಕಾಪಾಡುತ್ತಲಿದ್ದಾರೆ. ಒಂಸ್ಸದ ಹುಡುಗರಾದರೂ ಶಾಂತಿಯ ಧ್ವಜವನ್ನು ರಕ್ಷಿಸುವುದರಲ್ಲಿ ನಿರುತ್ಸಾಹರಾಗಲಿಲ್ಲ. ಸರಕಾರದವರು ಏನೇನು ಮಾಡಿದರೂ ಎಲ್ಲೆಲ್ಲಿಯೂ ಹುಡುಗರೂ ಹುಡುಗಿಯರೂ ಈ ಶಾಂತಿಯ ಧ್ವಜವನ್ನು ಹಾರಿಸುತ್ತಲಿದ್ದಾರೆ. ಗಾಂಧೀಜೀಯವರ ಶರೀರವನ್ನು ಜೈಲಿನಲ್ಲಿಟ್ಟರೇನು? ಶಾಂತಿಯ ಧ್ವಜವು ಇನ್ನೂ ಹಾರುತ್ತಲಿದೆ. ಪ್ರಿಯ ವಾಚಕರೇ, ಶಾಂತಿಯ ಧ್ವಜವನ್ನು ಹಾರಗೊಳಿಸುವರೆ ನೀವೇನು ಮಾಡಿದ್ದೀರಿ? ಪ್ರಪಂಚದ ಯಾವ ಜನಾಂಗದವರೂ ಹಿಂದುಸ್ಥಾನದ ಜನ್ಮಸಿದ್ಧಹಕ್ಕಾಗಿರುವ ಸ್ವರಾಜ್ಯವನ್ನು ಇನ್ನು ಮುಂದೆ ಕೊಡದಿರಲು ಸಾಧ್ಯವಿಲ್ಲವೆಂಬುದು ನಿಮಗೆ ಗೊತ್ತಿಲ್ಲವೇ? (ಯಂಗ್ ಇಂಡಿಯ)

ತಾ. ೨೩—೮—'೨೨.

ರಥಗಳನ್ನು ಯಜ್ಞೇಶ್ವರನಿಗೆ ಆಹುತಿಕೊಟ್ಟ ತರುಣ.

ನಮ್ಮ ಮದರಾಸ ಸಂಸ್ಥಾನದ ದಕ್ಷಿಣ ಭಾಗದಲ್ಲಿ ಕಳೆದ ೧೯೨೦-'೨೧ರಲ್ಲಿ ಅನೇಕ ರಥಗಳನ್ನು ಸುಟ್ಟು ನಾಶಮಾಡಲಾಯಿತು. ಈ ನೀಚಕಾರ್ಯವನ್ನು ಮಾಡಿದ ವ್ಯಕ್ತಿಯು ಈಗ ಸಿಕ್ಕಿದ್ದಾನೆ. ಹಿಂದೂದೇವತೆಗಳ ಶಕ್ತಿಯನ್ನು ಪರೀಕ್ಷಿಸುವುದಕ್ಕಾಗಿಯೇ ಈತನು ಈ ಭಯಂಕರವಾದ ಕಾರ್ಯವನ್ನು ಮಾಡಿರುವದಾಗಿ ಹೇಳುವನು. ಈ ವ್ಯಕ್ತಿಯ ಜನ್ಮಸ್ಥಾನವು ಸೇಲಂ ಜಿಲ್ಲೆಯ ಧರ್ಮಪುರಿಯಾಗಿದೆ. ಇವನ ಹೆಸರು ಸದಾಶಿವ ಚೆಟ್ಟಿ, ಯಾನೆ ವೀರಪ್ಪ ಚೆಟ್ಟಿ ಯಾನೆ ಚಿನ್ನಸ್ವಾಮಿ ಚೆಟ್ಟಿ. ಪ್ರಾಯ ೨೯ ವರುಷ ಇವನು ೫ ಫೀಟು ೪ ಇಂಚ್ ಉದ್ದ. ಇವನಿಗೆ ಎಡಗೈ ಇಲ್ಲ. ಕಳೆದ ೧೯೨೧ನೇ ಇಸವಿಯಲ್ಲಿ ಜೈಲಿನಿಂದ ಹೊರಬಂದ ನಂತರ ಇವನು ಒಂದು ರೈಲ್ವೆ ಅನಾಹುತದ ಗಡಿಬಿಡಿಯಲ್ಲಿ ಎಡಗೈಯನ್ನು ಕಳಕೊಂಡಿರುವನು. ಈ ಚೆಟ್ಟಿಯು ಚಿಕ್ಕ ಪ್ರಾಯದಲ್ಲೇ ತನ್ನ ಹೆತ್ತವರನ್ನು ಕಳಕೊಂಡಿದ್ದು ಕುಟುಂಬದ ಇತರ ಜನರ ಸಂರಕ್ಷಣೆಯಲ್ಲಿದ್ದನು. ಇವನು ನಿರುದ್ಯೋಗಿಯೂ ವ್ಯಸನಿಯೂ ಆದುದರಿಂದ ತನ್ನ ಕುಟುಂಬದವರನ್ನು ಬಿಟ್ಟು ಊರು ಊರುಗಳನ್ನು ತಿರುಗುತ್ತಾ ಕಾಲಕಳೆಯುತ್ತಿದ್ದನು. ಹೀಗೆ ಏಳು ವರ್ಷಗಳನ್ನು ಕಳೆದ ನಂತರ ಇವನು ತನ್ನ ಸ್ವಂತ ಊರಿಗೆ ಬಂದಾಗ ಇವನ ಸ್ವಜಾತಿಯವರು ಇವನನ್ನು ತಮ್ಮ ಸಮಾಜದಲ್ಲಿ ತೆಗೆದುಕೊಳ್ಳದೆ ಹೋದರು. ಈ ಸೇಡನ್ನು ತೀರಿಸಿಕೊಳ್ಳುವದಕ್ಕಾಗಿ ಇವನು ಆ ಹಳ್ಳಿಯ ದೇವಸ್ಥಾನದ ಚಿಕ್ಕ ರಥವನ್ನು ತನ್ನ ಭಾವನೆಂಟನ ದಿನಗಳ ಹಿಡೆಯನ್ನು ಸುಟ್ಟುಬಿಟ್ಟನು. ಅನಂತರ ಇವನು ಕಳೆದ ೧೯೨೦ರಿಂದ ೧೯೨೨ನೇ ಇಸವಿಯ ಜನವರಿವರೆಗೆ ಕಂಚೀವರಮ್, ಮಾಯಾವರಮ್ ಮೊದಲಾದ ಕಡೆಗಳಲ್ಲಿ ಸುಮಾರು ೧೨ ರಥಗಳನ್ನು ಸುಟ್ಟುಬಿಟ್ಟನು. ಇವನು ಎರಡು ಮೂರು ದಿಗ್ಗಜನಗಳನ್ನು ಸಹ ಧ್ವಂಸಪಡಿಸಿರುತ್ತಾನೆ.

ಪತ್ರಿಕೆಯಿಂದ.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟಿನ್, ಮಾಧವ ಬಿಲ್ಡಿಂಗ್ಸ್.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0
Reserve and other sinking Funds „ 181,250—0—0

ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 21st Feb. 1922.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,

ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ!! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಪ್ಪೀಪಲೇಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈನೋವು, ಆಹಾರವು ಜೀರ್ಣವಾಗದ ಬರುವ ತಲೆನೋವು, ಕರುಳಿನ ನೋವು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳೆತ, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷ್ಠಾಶ್ರಯಿಗಳಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೩, ಬ್ರಾಡ್ವೇ, ಮದ್ರಾಸ್.

Local Agents: Raphael & Co.
Brito Buildings,
Hampankatta, MANGALORE.

Sri Lakshmi Mills, Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕೆ ಮಾರಲ್ಪಡುತ್ತದೆ. ವ್ಯಾಪಾರಸ್ತರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕಾಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

ಆರ್. ಮಾರ್ಟಿನ್ನರ ಲಪ್ಪಾ ಎಣ್ಣೆ.

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜನಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿಟೋಪಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ಇಳಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ವಿಳಾಸ:—ಆರ್. ಡಿ. ಕೆಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೇಯರ್ ರೋಡ್,
ವೈಟ್ ಎಂಡ್ ಕೋ ಹತ್ತಿರ, ಫೋರ್ಟ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು — — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಓ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯುನಾಮಲ್ಲ ಬಟ್ಟಲ ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಶಾಲಿ ಕವರು, ಬೌಂಟೆನ್‌ಪೆನ್, ಕಾಯಿವಗೈರೆ ಸ್ಟೇಶನರಿ ಸಾಮಾನುಗಳೂ, ಜರ್ಮನ್ ಕ್ಷೌರದ ಸಾಮಾನುಗಳೂ, ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳು ವಗೈರೆ ಮಾಲುಗಳು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತವೆ.

ಅಚ್ಚಿನಲ್ಲಿದೆ! ಎಂ. ಜಿ. ಐಗಳ್, ಇವರಿಂದ ರಚಿತವಾದ ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ. ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಯಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ. ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿಂತ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಾಳ್ತಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತಶಾಸ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟಿದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಭಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಧ್ವರಾದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹಂಪರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ ಮಂಗಳೂರು—ಚೆರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸ್ರೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಶೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಜಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ಬಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—ಬುಚೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಪಂಜ—ಸುಳ್ಯ—ಬೆಳ್ಳಾರೆ—ಅಮರಮಾಗಣೆಗಳು—ಬೆಳ್ಳಾರೆ, ಮುಖ್ಯಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ, ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ—ಭಂಗ ರಾಜ—ಗುರುವಾಯನಕೆರೆ ಪಟ್ಟ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಟ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗೆ ಶಿಲಾಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮಾರಗುಡಿ ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಹೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪುಂಜನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ವಾರಾವಿ ಯುದ್ಧ—ಬಂಟವಾಳ ಮನೆಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ಏಳುನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಚಿರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಡಬಿದರೆ ಸಾವಂತರು—ರಾಜಧಾನಿಗಳು—ಶಿಮಂತೂರು—ಮೂಲಿಕೆ—ವಳಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ವೈಲಂಗಡಿ ಮೂಲರು—ರಾಜಧಾನಿಗಳು ವೈಲಂಗಡಿ—ನಲ್ಲೂರು—ಸೋಮನಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾಸ್ರೆಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ದಿನ್ನಾರರು—ಕೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ತುಳಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ—ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಡಮ ಅರಸರು—ಮಾಯಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೋಮಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಟ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚೌಟುಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಅಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23—ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಪಡುಹೆಗ್ಡೆ 1.

ವಿಳಾಸ:—

ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಛೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿನಂಮ ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನುದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ [illegible] ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು, ಇದು ಪ್ರತಿನಂಮ ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವಶ್ಯರೂ [illegible] ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ, [illegible] ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೊಂಡು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨-೮-೦ ಟಪ್ಪಾಲು ಖರ್ಚು ೦-೬-೦ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಆಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ. ಇದರ ಬೆಲೆ ೧-೮-೦, ಟಪ್ಪಾಲು ಹಾಸಲು ೦-೩-೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಆಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದವರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೈ
ರಥಬೀದಿ, ಮಂಗಳೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೭—೧೯೨೧)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ನಯವಾದ ಕಾಗದ. ಒಬ್ಬ ರಜಪೂತ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕಶಕ್ತಿ, ರಾಜಶಕ್ತಿ, ಪ್ರತಿಗಳಿಗೆ ರಾಜಾಗನ್ಯ [illegible] ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... [illegible] ಕೆಯು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0—12—0	ಸಂಪರಾಮಾಯಣ ಹೊಸ ಮುದ್ರಣ .	5—0—0
ಸಂಪಾದಕ-ಕಾದಂಬರಿ	0—6—0	ಸಂಪರಾಮಾಯಣದ ಕಥೆ ವಚನ	0-12—0
ಚಂದ್ರಮತಿ ,,	0—8—0	S. S. L. C. Kannada Texts	
ರಾಜಪುತ್ರರಮಣಿಯರು	0—8—0	ಹರಿದಾಸಿ . . .	0—5—0
ಕೆಲವು ಸಣ್ಣ ಕಥೆಗಳು	1—0—0	ಸುಶೀಲೆ . . .	0—6—0
ರಾಜಯೋಗ	1—0—0	ಅವಳಿಯ ಮದುವೆ.	0-12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered: No. M. 498.

ಸ್ವದೇಶಾಭಿಮಾನಿ

SWADESHABHIMANI. MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ ,, 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥

ದೊರೆಯಲನುಪಮರತ್ನಗಳು ಸಾ-। ಗರವ ಮಥಿಸಲು ಸುರರಿಗದರಾ।
ಹೆರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು। ಮರೆತು ಕ್ಷುದ್ರರ ತೆರದಿ ಕುಳಿತರೆ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥೧॥

ಪುಸ್ತಕ ೧೬. ಮಂಗಳೂರು, ತಾರೀಕು ೮ನೇ ಶುಕ್ರವಾರ ಸಪ್ಟಂಬರ ೧೯೨೨. ಸಂಚಿಕೆ ೩೬

ಮಾಲು ಉತ್ತಮ! ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು.

ಮೇಲಾದ

=ಜವುಳಿ ಸಂಗ್ರಹದ ಮಳಿಗೆ=

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಷ್ಮೆ ಪಟ್ಟೆ, ಮತ್ತು ನೂಲಿನ ಚಿಟ್ಟಿಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಮ್ಮದಾಬಾದ, ಮಹೇಶ್ವರಿ, ಗುಜರಾಥ, ಬಡೋದಾ, ಕೊಯಮುತ್ತೂರು, ಗದಗ ಹುಬ್ಬಳ್ಳಿ, ಧಾರವಾಡ, ಇಳಕಲ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಮ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಬರ್ಮಾ ಮೊದಲಾದ ದೇಶಗಳಲ್ಲಿಯೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳು, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುಪು ತೊಡುಪುಗಳು ಈಗ ತಾನೇ ತರಿಸಿದ್ದು ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗಿರುವ ಬಿಳೀ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳೂ, ಚೀಲ ವ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಖರ್ದಿನ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ.

ನಗದಿ ಪಡೆಯುವವರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೈ,
ಕಸ್ತೂರಿ ನಾಗೇಶಪ್ಪೈ ಮತ್ತು ಕಂಪೆನಿ,
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ಎಲುಗೊಬ್ಬರದಲ್ಲಿ ನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶ್ಯನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾರ್ಥಿಕಪ್ರಶ್ನೆ ಅಕ್ಕರಾಜು ಪಾರ್ಸ್ಗಳಿಂದ ಆರಿಯುಳ್ಳಪ್ಪಿ ಹಿಂದೂ ವೃತ್ತವಿವೇಕ ಕ್ರಯ ೦—೧೦—೦
ಕೇತುಭಂಗ ,, ೦—೧೨—೦
ಸಂಕ್ಷೇಪಗೀತ ,, ೦—೧೦—೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತೋಲ್ಲಾಸ ಕ್ರಯ ೦—೩—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀ ದಾಸ ಬೋಧೆ, ವಾಕ್‌ಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಛಿಯಾಳು, ಮನೋರಮಾ, ಭ್ರಾಂತಿ ವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಪಹಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಚ್ಚ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨-೧೩-೦ ಸ್ಥಳಿಕರಿಗೆ ರೂ ೨-೦-೦, ವಿ. ಪಿ. ಖರ್ಚು ಕೂಡಿ ರೂ. ೩-೦-೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ಗದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಡೈರಿಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫೋಟೋ ಫ್ರೇಮುಗಳು, ಇತರ ಬರೆವಣಿಗೆಯ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಭಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋಂಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ಟಿಪ್ಪು ಔಷಧಿಗಳು—ರೋಗಿಗಳಿಗೂ, ವೈದ್ಯರಿಗೂ ಬೇಕಾಗುವ ಪಾಶ್ಚಾತ್ಯ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ರೈತರಿಗೆ ಬೇಕಾಗುವ ಗೊಬ್ಬರಗಳು.

ಪ್ರಖ್ಯಾತವಾದ ಯುಕಲಿಪ್ಟಸ್ ಓಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

—ಅಮೃತಾಂಜನ—

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಇಂತೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಶಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ಕೃಷ್ಟವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ ಇವರಲ್ಲಿಯೂ ದೊರಕುವುದು.

ಪ್ರಾಣಕಷಾಯ

U. B. DUTT & Co. CALCUTT.

ಮಲೆಯೊಳ ದೇಶವು ಔಷಧಗಳಿಗೆ ತೀರ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ದೊರಕುವ [illegible] ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಮಾಡಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರಶಂಸಾಪೂರ್ವಕ "ಅರ್ಟ[illegible]" ಬರುತ್ತಲಿವೆ. [illegible] ಯೋಗ್ಯತಾಪತ್ರಗಳೂ ದೊರಕಿವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ 'ಪ್ರಾಣಕಷಾಯವು' ಎಲ್ಲಾ [illegible] ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂಧು, ಆವಯವ, [illegible] ಕೈಕಾಲು [illegible] ನೋವಾಗುವುದು, ಮೂತ್ರದಲ್ಲಿ [illegible] [illegible]

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೇನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಖುದ್ದು ನಿಗಾವನೆಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಬಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತದೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟು ರಿಯಾತಿ ದರದಲ್ಲಿ ಇಲ್ಲಿ ಕೊಡಲಾಗುವುದು.

ಕಳೆದ ೩೦ ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ [illegible] ಸಹ ಬೇರೆ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬರೆ 100 ಸಲ ಪುಟಕ್ಕೆ ಇಟ್ಟುದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅಶಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮಿದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟುದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟುದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮಿದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ¼ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿಸ್ತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ ಗ್ರೈನಿನಿಂದ ¼ ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ, ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ. 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೇನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಜನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 2. ಪಚ್ಚಕರ್ಪೂರ ತೊಲೆಗೆ ರೂ 4.

[illegible]ಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚಂಡು, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಟೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.
ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟ್‌ವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫ್ಲೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲುಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು. ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವುದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಹಿತ್ತಾಳೆಯ 32 ಸಾಮಾನುಗಳ ಸಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 6—0—0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಮಡಿ, ಜರಿ, ಸಾದಾ, ಸೀರೆ, ಶಲ, ಕಾಶ್ಮೀರ ಶಾಲು, ರುದ್ರಾಕ್ಷಿ, ಸ್ಫಟಿಕಮಣಿ, ಲಿಂಗ, ಧಾವಳಿ, ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಪಿ ಮೂಲಕ ಕಳುಹಿಸಲಾದೀತು. ಕೆಟಲಾಗ್ ಇನಾಂ.

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯು ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶಿಶೆ ಒಂದರ ಕ್ರಯ:—ರೂ. 1—4—0.

ಹುಳದ ಪೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪೆತಿಕ್ ಡಿಸ್ಪೆನ್ಸರಿ,
ಹಂಪನಕಟ್ಟೆ, ಮಂಗಳೂರು.

ಕ್ಷೌರಮಾಡಿದಮೇಲೆ ಶಾಂತಿಕೊಡುವದು

ಮುಖಕ್ಕೆ ಲೇಪಿಸಿ ಅದರ ಮೇಲೆ ಕ್ಷೌರಮಾಡಿದರೆ ಕೊಯ್ಯಲು ಅಧಿಕ ಸಹಾಯವಾಗಿಯೂ ಉರಿಯಿಲ್ಲದಿರುವದು

"ಹಾಜಿಲೀನ್' ಸ್ನೋ"

(ಟ್ರೇಡ್ ಮಾರ್ಕ್)

"'HAZELINE' SNOW"

(Trade Mark)

ಮುಖವನ್ನು ತೊಳೆದು ಅಥವಾ ಕ್ಷೌರಮಾಡಿದ ಬಳಿಕ ಮುಖವು ಒಣಗುವಮುಂಚೆ "ಹಾಜಿಲೀನ್' ಸ್ನೋ"ವನ್ನು ಲೇಪಿಸಬೇಕು "ಹಾಜಿಲೀನ್' ಸ್ನೋ"ವಲ್ಲಿ ಯಾವ ಮಾಂಸ ಕೊಬ್ಬು ಪ್ರವೇಶಿಸಿಲ್ಲ ಅದಕಾರಣ ಎಲ್ಲಾ ಕಾಲವು ಪ್ರಮಾಣದಿಂದ ಉಪಯೋಗಿಸಲ್ಪಡಬಹುದು ಸ್ತ್ರೀಯರು ಚರ್ಮ ಕೋಮಲವನ್ನು ಬಿಳುಪಾಗಿಯೂ ಮೃದುವಾಗಿ ಮಾಡಲಿಕ್ಕೆ "ಹಾಜಿಲೀನ್' ಸ್ನೋ"ವನ್ನು ಪ್ರಮಾಣವಾಗಿ ಉಪಯೋಗಿಸಬೇಕು.

ಇದು ಕಂಪೆನಿಯ ಶಾಖೆಗಳಲ್ಲಿ ಕೆಮಿಸ್ಟ ಮತ್ತು ಉಗ್ರಾಣದವರಿಂದಲು ಮಾರಲ್ಪಡುವದು.

ಬರ್ರೋಸ್ ವೆಲ್‌ಕಂ ಅಂಡ್ ಕೋ
ಲಂಡನ್ ಅಂಡ್ ಬಂಬಾಯಿ.

Burroughs Wellcome & Co.
London and Bombay.
Can. 1 *All Rights Reserved*

HAZELINE SNOW

ಶ್ರೀ

ಸ್ವದೇಶ ಭಕ್ತರೇ ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳು, ಬಿಳಿ, ಹಸುರು ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ, ನಯವಾದ ಶರ್ಟಿನ ವಸ್ತ್ರಗಳೂ ಮತ್ತು ವೇಷ್ಟಿ ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮಗ್ಗದ ವಸ್ತ್ರಗಳೂ ಸ್ವದೇಶಿ [illegible]ವಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು, ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ನಾಲ್ಕಾಣೆಯ ಸ್ಟೇಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:—
ಮುಳಿಯ ತಿಮ್ಮಪ್ಪಯ್ಯ
ಮತ್ತು ಸಹೋದರ
ರತ್ನ ಮತ್ತು ಜವಳಿ
ವ್ಯಾಪಾರಿಗಳು,
ಕಾರಾಮುಖಾನ (ಗೋಳಿಕಟ್ಟೆ ಬಜಾರು)
ಮಂಗಳೂರು.

[illegible]ssociati

The Canara Banking Corporation, Udipi, (Limited).

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಆ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯತೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಯಾನೆ ಹೊರಗಿನಿಂದ ಬರತಕ್ಕದ್ದು . .	3,78,315	2	5
6. ರಿಜರ್ವ ಇತ್ಯಾದಿ ಫಂಡುಗಳು. (17—6—'22.) . .	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೭ರಿಂದ ೭½ ವರೆಗಿನ ಮೂರು ತಿಂಗಳಿಗೊಮ್ಮೆ ಬಡ್ಡಿ ಕೊಡುವ ಶರ್ತದ ಮೇಲೆ ಖಾಯಂ ಠೇವಣಾತಿಗಳು.
೨. ೧೫ ದಿನಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡೆಯುವ ಶರ್ತದ ಮೇಲೆ ಸಾಲಿಯಾನ್ ಶೇಕಡಾ ೬½ ನಡೆದ ದಿನಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಚಿಕ್ಕ ವಾಯಿದೆ ಠೇವಣಾತಿಗಳು.
೩. ಏನೂ ಖರ್ಚಿಲ್ಲದೆ ಸಾಲಿಯಾನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಚಾಲ್ತಿ ಠೇವಣಾತಿಗಳು.
೪. ಸಾಲಿಯಾನ್ ಶೇಕಡಾ 4½ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.
೫. ಈ ಕೆಳಗಿನ ಶರ್ತಗಳ ಮೇಲೆ ಕಂತು ಠೇವಣಾತಿಗಳು.
ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.
ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.
ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.
ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು.
ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.
೬. ಕಳೆದ ೩ ವರುಷಗಳಲ್ಲಿ ಪಾಲುದಾರರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.
೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.
೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಓಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬಾಯಿಯಲ್ಲಿರುವ ಮರ್ಕೆಂಟೈಲ್ ಬ್ಯಾಂಕ್ ಓಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ತಾಜಾ ಕಲಂ:—ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಯವರಿಗೆ ಬರೆದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡುಪಿ.
ತಾ 13—5—1922.

ನ. ಆನಂದರಾವ್,
ಕಾರ್ಯದರ್ಶಿ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುದಿನವೂ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವದು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟ, ಮಂಗಳೂರು.

ಕೊಂಕಣಿ ಭಾಷೆಯಲ್ಲಿ

ಸಂಗೀತ

❋ ಚಂದ್ರಹಾಸ ನಾಟಕ ❋

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದದ ಬೈಂಡು ರೂ. 0—4—6. ಸ್ಟಿಫ್ ಬೈಂಡು ರೂ. 0—5—6.

ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದುವರೆ ಆಣೆ ಅಥವಾ ಆರುವರೆ ಆಣೆಗಳ ಅಂಚೆ ಚೀಟನ್ನು ಕಳುಹಿಸುವುದು ಉತ್ತಮ,

ವಿಳಾಸ— ಬಿ. ಕೆ. ಪ್ರಭು,
ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ

'ಕವಿ'ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1918ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ಲು 1ರ ರೂ. 2—12—0.
ಸ್ಪೆಶ್ಯಲ್ ರಾತ್ಲು 1ರ ರೂ. 3—0—0.
2 ಆಣೆ ಸ್ಟಾಂಪು ಕಳುಹಿದಲ್ಲಿ ಸಾಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಾಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,
ಮಂಗಳೂರು.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಭಾದ್ರಪದ ಬ ೩ ಶನಿವಾರದಿಂದ ದುಂದುಭಿ ಸಂ॥ ಭಾದ್ರಪದದ ಬ ೯ ಶುಕ್ರವಾರದ ವರೆಗಿನ ಪಂಚಾಂಗ
(೧೯೨೨ನೆಯ ಸಿಂಹ ಸೌರ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನಾಂಕ	ಸೂರ್ಯ	
							ಉ.	ಅ.
9	ಶನಿ	೩	೩೪.೩೧	ರೇವತಿ	೩೯.೧	೨೪	6.22	6.36
10	ರವಿ	೪	೩೮.೪೬	ಅಶ್ವಿನಿ	೪೪.೩೨	೨೫	6.22	6.35
11	ಸೋಮ	೫	೪೧.೪೪	ಭರಣಿ	೪೮.೫೮	೨೬	6.22	6.35
12	ಕುಜ	೬	೪೩.೪೬	ಕೃತ್ತಿಕಾ	೫೨.೩೧	೨೭	6.22	6.34
13	ಬುಧ	೭	೪೪.೩೨	ರೋಹಿಣಿ	೫೪.೨೮	೨೮	6.22	6.33
14	ಗುರು	೮	೪೩.೪೮	ಮೃಗಶಿರಾ	೫೫.೧೬	೨೯	6.22	6.33
15	ಶುಕ್ರ	೯	೪೨.೨	ಆರ್ದ್ರಾ	೫೪.೫೫	೩೦	6.22	[illegible]

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ಅಗೋಸ್ತು ಮತ್ತು ಸಪ್ಟಂಬರ)

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆಯದು	ದಿನದ ಮಳೆ	ಅಗೋಸ್ತು ೧ರಿಂದ
31	80—8	72—8	0—33	—
1	85—2	74—3	0—21	—
2	86—2	71—2	1—61	—
3	84—0	72—5	1—00	—
4	81—9	73—2	0—74	—
5	86—8	75—2	0—09	—
6	86—6	72—9	0—77	124·67

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ ...	8—4	8—14
ಸುಗ್ಗಿಗೆ ...	7—10	8—0
ಗುಡ್ಡ, ...	7—8	8—0
ರಾಶಿ	7—2	7—6
ಅವ್ವಲ್ ಬೆಳ್ತಿಗೆ „ ...	9—0	9—8
ಗುಡ್ಡ ಬೆಳ್ತಿಗೆ „ ...	7—10	8—4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	13—4	14—0
ಗೋಧಿ ಗೋಣಿ ೧ಕ್ಕೆ ...	22—0	23—8
ಹುರುಳಿ ಗೋಣಿ ೧ಕ್ಕೆ ...	13—8	13—10
[illegible] ಗೋಣಿ ೧ಕ್ಕೆ ...	14—0	15—0
ತೊಗರಿ ಗೋಣಿ ೧ಕ್ಕೆ ...	15—0	16—0
ತೊಗರಿಬೇಳೆ ಗೋಣಿ ೧ಕ್ಕೆ ...	19—8	22—8
ಉದ್ದು ಗೋಣಿ ೧ಕ್ಕೆ ...	17—0	—
ಹೆಸರು ಗೋಣಿ ೧ಕ್ಕೆ ...	14—8	16—0
ಊರು ಬೆಲ್ಲ ಖಂಡಿ ೧ಕ್ಕೆ ...	70—0	72—8
ಉಪ್ಪು ಗೋಣಿ ೧ಕ್ಕೆ ...	5—0	5—12
ಕೊಬ್ಬರಿ ಖಂಡಿ ೧ಕ್ಕೆ ...	85—0	96—[illegible]
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ ...	42—8	43—6
ಎಳ್ಳಿಂಡಿ ಖಂಡಿ ೧ಕ್ಕೆ ...	50—0	52—8
ಕೊಬ್ಬರಿ ಎಣ್ಣೆ ಮಣ ೧ಕ್ಕೆ ...	7—4	8—2
ಎಳ್ಳೆಣ್ಣೆ ಮಣ ೧ಕ್ಕೆ ...	8—12	9—0
[illegible] ೧ಕ್ಕೆ ...	9—0	—
[illegible] ಸಕ್ಕರೆ ಮಣ ೧ಕ್ಕೆ ...	6—8	6—8
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	8—0	8—4
ಸಾಸಿವೆ ಮುಡಿ ೧ಕ್ಕೆ ...	8—4	8—8
ಕೊತ್ತಂಬರಿ ಮುಡಿ ೧ಕ್ಕೆ ...	5—0	5—8
ಕಾಫಿ ಖಂಡಿ ೧ಕ್ಕೆ ...	340—0	345—0
[illegible] ಖಂಡಿ ೧ಕ್ಕೆ ...	[illegible]	170—[illegible]
[illegible] New, [illegible]	[illegible]	135—[illegible]
[illegible] ಖಂಡಿ ೧ಕ್ಕೆ	[illegible]	125—[illegible]
[illegible] ಮಣ ೧ಕ್ಕೆ	[illegible]	[illegible]
ಗೇರುಬೀಜ ಮುಡಿ ೧ಕ್ಕೆ	[illegible]	[illegible]

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ನಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ.

ಇವರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ಪ್ರಶಂಸೆಗೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಅಶ್ರುಗೀತೆ" "ದೇವರೆಲ್ಲಿ" ಎಂಬ ಅಂಗ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನಮಾಡಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳುಹಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ವಟ್ಟಾ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

NOTICE.

IN THE SUB COURT OF SOUTH CANARA.

O. S. NO. 55/1922.

BETWEEN

Mahammad Haji — *Plaintiff*,

AND

1. Abdulla
2. Kunbi Kutti Ali
3. Kunhamad Elaya

} DEFENDANTS.

The Plaintiff named above has filed the aforesaid suit on behalf of himself and his entire tarwad known as the "Kotapura Edakavil Tarwad" for a declaration that the patadharam executed by the 1st defendant in favour of defendants 2 and 3 on 18—7—1922 is not valid and binding on the Plaintiff or his Tarwad on the plaint properties etc. and permission has been given to the Plaintiff to sue also on behalf of the Tarwad as per order on I. A. No. 356/22 dated 5-9-1922. The members of the Tarwad are hereby informed of the same and that the suit is posted for first hearing on 27-9-'22.

MANGALORE
6—9—1922. } **K. P. Gopalkrishna Rao,**
Vakil for Plaintiff.

ನೋಟೀಸು

ಕಾಸರಗೋಡು ತಾಲೂಕು ಕಾಸರಗೋಡು ಮಾಗಣೆ ಕೂಡ್ಲು ಗ್ರಾಮದಲ್ಲಿ ಇರುವ ಪರಮೇಶ್ವರಯ್ಯನವರ ಮಗ ಕಾಳೆಯಂಗಾಡು ಮಲ್ಲಿಕಾರ್ಜುನಯ್ಯನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ:—

ನನಗೆ ಸದರಿ ಕೂಡ್ಲು ಗ್ರಾಮದಲ್ಲಿ ಇರುವ [illegible] ಕುಟ್ಟಿಬ್ಯಾರಿ ಮಗ ಹಸೈನಾರೆ ಬ್ಯಾರಿಯು ತಾ. ೨೦-೨-೧೯೨೨ರಲ್ಲು ನನಗೆ ರೂ. ೧೫೦ಕ್ಕೆ ಬರಕೊಟ್ಟ ರಶೀದಿ ಒಂದು ಮತ್ತು ಸದರಿಯವನು ತಾ. ೨೫-೩-೧೯೨೨ರಲ್ಲು ನನಗೆ ರೂ. ೮೦ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟು ಒಂದು ಕೂಡಾ ಎರಡು ದಾಖ್ಲೆಗಳು ಜೋಬಿಯಲ್ಲಿದ್ದದ್ದು ಕಾಣೆಯಾಗಿ ಹೋಗಿರುವುದನ್ನು ಸಿಕ್ಕಿದವರು ನನಗೆ ತಂದುಕೊಟ್ಟರೆ ಅವರಿಗೆ ರೂ. ೫ನ್ನು ಇನಾಮಾಗಿ ಕೊಡುವರೆ ಸಿದ್ಧನಿರುತ್ತೇನೆಂತ ಈ ಕೆಳ್ಗೆ ಸರ್ವಜನರಿಗೆ ತಿಳಿಯಪಡಿಸುತ್ತೇನೆ.

ಗೊಡೆಂ
ರೂ. ೨. [illegible] — K. MALLIKARJUNA.
[illegible]

ನೋಟೀಸು.

ದಿ ಯುನಿವರ್ಸಲ್ ಸ್ಟೀಮ್ ನೇವಿಗೇಶನ್ ಕಂಪೆನಿ ಲಿಮಿಟೆಡ್
ಮಂಗಳೂರು

ಈ ಕಂಪೆನಿಯು ಅದರ ಪಾಲುಪಾಲಿಕರಿಗೆ ಈ ಕೆಳಗಿನ ಸಂಗತಿಯನ್ನು ತಿಳಿಸಲು ಬಹಳ ಆನಂದಪಡುತ್ತದೆ. ಕಂಪೆನಿಯು ಬಹಳ ವೇಗದಿಂದ ಓಡುವ (೮೦೧ ಗ್ರೋಸ್‌ಟೋನ್, [illegible]) ಇಲೆಕ್ಟ್ರಿಕ್ ದೀಪಗಳಿಂದ ಕೂಡಿದ ೭೫೦ ಮಂದಿ ಪ್ರಯಾಣಿಕರನ್ನು ಒಯ್ಯಲು ಅನುಕೂಲವುಳ್ಳ (೧೬.೫ knots)ರಷ್ಟು ವೇಗವುಳ್ಳ ಕಳೆದ ೧೯೧೯-೨೦ರಲ್ಲಿ ಹೊಸತಾಗಿ ಕಟ್ಟಲ್ಪಟ್ಟ ಎರಡು ಸ್ಟೀಮರುಗಳನ್ನು ಜರ್ಮನಿಯಲ್ಲಿ ಕೊಂಡುಕೊಂಡಿದೆ.

ಸಾಮಾನನ್ನು ಪ್ರಯಾಣಿಕರನ್ನು ಒಯ್ಯಲು ಸಹಾಯಕವಾಗುವ ಇನ್ನೊಂದು ಸ್ಟೀಮರನ್ನು ಒಂದು ಸ್ಟೀಮು ಲೋಂಚನ್ನು ಕೊಂಡುಕೊಳ್ಳುವ ಪ್ರಯತ್ನವು ನಡೆಯುತ್ತಿದೆ. ಮತ್ತು ಈ ಪ್ರಯತ್ನವು ಸಫಲವಾದರೆ ಅವುಗಳನ್ನು ಬೇಗನೇ ಕೊಂಡುಕೊಳ್ಳುವರು. ಈ ವಿಷಯದಲ್ಲಿ ಮುಂಬಯಿ ಹೆಡ್ ಆಫೀಸಿಗೆ ತಂತಿ ಬರುತ್ತಲೇ ಪಾಲುಪಾಲಿಕರಿಗೆ ಆ ಸಂಗತಿ ಸಹ ತಿಳಿಸಲಾಗುವುದು.

ಲಂಡನಿನಿಂದ ಹಡಗುಗಳನ್ನು ಓಡಿಸಿ ಕೊಡುತ್ತಿದ್ದ ಒಂದು ಕಂಪೆನಿಯವರು ಮಾರಲು ಸಿದ್ಧವಿದ್ದ ಹಡಗುಗಳಿಂದ ಮೂರು ಪ್ರಯಾಣಿಕರ ಸ್ಟೀಮರುಗಳನ್ನು ಸಾಮಾನನ್ನು ಒಯ್ಯಲು ಅನುಕೂಲವಿದ್ದ ಒಂದು ಕಾರಗೋಸ್ಟೀಮರನ್ನು ಕೊಂಡುಕೊಳ್ಳಲು ಕಳೆದ ಮೇ ತಿಂಗಳಲ್ಲಿ ಕಂಪೆನಿಯ ಇಂಜಿನಿಯರರನ್ನು ಲಂಡನಿಗೆ ಕಳುಹಿಸಲಾಗಿತ್ತು. ಆದರೆ ಆ ಹಡಗುಗಳಲ್ಲಿ ಹೆಚ್ಚಾಗಿ ಎಲ್ಲವೂ ಉಪಯೋಗಕ್ಕೆ ಬಾರದವುಗಳೆಂದು ಕಂಡು ಬಂದುದರಿಂದ ಜರ್ಮನಿಯಿಂದ ಒಳ್ಳೇ ಸ್ಟೀಮರುಗಳನ್ನು ಆರಿಸಿ ಪಡಕೊಳ್ಳಬೇಕಾಯಿತು. ಆದುದರಿಂದ ಈಗ ಬಹಳ ವೇಗದಿಂದ ಓಡುವ ಮತ್ತು ಹೆಚ್ಚಾಗಿ ಹೊಸತಾಗಿಯೇ ಇರುವ ಹಾಗು ಪ್ರಯಾಣಿಕರಿಗೆ ಕೂತುಕೊಳ್ಳಲು ವಿಶಾಲವಾಗಿಯೂ ಹೆಚ್ಚಿನ ಸೌಕರ್ಯಗಳುಳ್ಳದ್ದಾಗಿಯೂ ಇರುವ ಎರಡು ಸ್ಟೀಮರುಗಳನ್ನು ಕೊಂಡುಕೊಂಡಿದೆ. ಹಿಂದೂಸ್ಥಾನದಲ್ಲಿ ಚಲಾವಣೆಗೆ ತರುವುದಕ್ಕಾಗಿ ಹೆಚ್ಚಿನ ಸಹಾಯಕವಾಗುವಂತೆ ಈಗ ಈ ಹಡಗುಗಳಲ್ಲಿ ಕೆಲವು ರೂಪಭೇದಗಳನ್ನು ಮಾಡುವುದು ಮತ್ತು ಈ ಹಡಗುಗಳನ್ನು ದ್ರವ ಪದಾರ್ಥಗಳಿಂದಲೂ ಕಲ್ಲಿದ್ದಲಿನಿಂದಲೂ ನಡಿಯುವಂತೆ ಮಾಡುವುದು ಈ ಕಾರ್ಯಗಳು ಈಗ ನಡಿಯುವವು. ಈ ಕೆಲಸವನ್ನೂ ಇತರ ಕೆಲವು ಬದಲಾವಣೆಗಳನ್ನೂ ಮಾಡಿಮುಗಿಸಲು ನಾಲ್ಕಾರು ವಾರಗಳ ಕಾಲವು ಹಿಡಿಯುವುದು.

ಪಶ್ಚಿಮ ಕರಾವಳಿಯಲ್ಲಿ ಚಲಾವಣೆಗೆ ಕೂಡಲೇ ಪ್ರಾರಂಭಿಸಲು ಅನುಕೂಲವಾಗುವಂತೆ ನಮ್ಮ ಇಂಜಿನಿಯರರು ಈ ಸ್ಟೀಮರುಗಳನ್ನು ಬರುವ ಒಕ್ಟೋಬರ ತಿಂಗಳ ಪ್ರಾರಂಭದಲ್ಲಿಯೇ ತರಲಿಕ್ಕಿದ್ದಾರೆಂದು ತಿಳಿಯುತ್ತೇವೆ. ಆದುದರಿಂದ ಹಡಗು ಚಲಾವಣೆಯನ್ನು ಬರುವ ಒಕ್ಟೋಬರದಿಂದ ಮಾಡಬಹುದೆಂದು ಕಂಪೆನಿಯು ನಂಬಿದೆ.

ಪಾಲುಗಳ ಪ್ರಥಮ ಕಂತಿನ ಹಣವನ್ನೂ ಎಲೋಟ್‌ಮಂಟಿನ ಹಣವನ್ನೂ ಈ ವರೆಗೆ ಕೊಡದೆ ಇದ್ದ ಕಂಪೆನಿಯ ಪಾಲುಗಾರರು ಬೇಗನೆ ದಯವಿಟ್ಟು ಪಾವತಿ ಮಾಡಬೇಕಾಗಿದೆ.

ಹಂಪನಕಟ್ಟೆ ಆಫೀಸು.
ಮಂಗಳೂರು
ತಾ. 5-9-1922 } ಪಿ. ಯಂ. ಕಾಮತ್,
ಏಜಂಟ್, ದಿ ಯುನಿವರ್ಸಲ್ ಸ್ಟೀಮ
ನೇವಿಗೇಶನ್ ಕಂಪೆನಿ ಲಿಮಿಟೆಡ್.

ಸರಕಾರಿ ಆನೆಗಳ ಏಲಂ.

1922ನೇ ಇಸವಿ ಸಪ್ಟಂಬರ ತಾರೀಕು 16 ರಲ್ಲು ಒಲವಕೋಡ್ ರೈಲ್ವೆ ಸ್ಟೇಶನಿನಲ್ಲಿ ಸುಮಾರು 15 ಆನೆಗಳನ್ನು ಬಹಿರಂಗವಾಗಿ ಏಲಂ ಮಾಡೋಣಾಗುವವು.

ಹೆಚ್ಚಿನ ಮಾಹಿತಿ ಬಗ್ಗೆ
ಕನ್ಸರ್‌ವೇಟರ್ ಆಫ್ ಫೋರೆಸ್ಟ್, 6ನೇ ಸರ್ಕಲ್ ಉಟಕಮಂಡ್.
ಇವರಿಗೆ ಬರೆಯತಕ್ಕದ್ದು.

Mangalore,
29—8—1922. } (Sd) F. R. MADAN,
District Forest Officer, South Mangalore.

ಏಲಂ ಮೂಲಕ ಮಾರಾಟ.

ಯಂ. ಸುಬ್ರಾಯ ಕಮ್ತಿಯವರ 74/1922ನೇ ದಿವಾಳಿ ಅರ್ಜಿ ಸಂಬಂಧ ಮಾರಾಟ:—

ಒಫಿಸಿಯಲ್ ಎಸ್ಸೈನಿಯವರ ಸೂಚನೆಯಂತೆ ಮತ್ತು 1, 2 ಮತ್ತು 3ನೆ ಲೋಟುಗಳನ್ನು ಅವರಿಗೆ ವಹಿಸಿಕೊಂಡ ರಾ. ಯಂ. ರಾಮಚಂದ್ರ ಪೈಗಳವರ ಅನುಮತಿಯಿಂದ ಮೆಸ್ಸರ್ಸ್ ಡೌರ್ಸ್ ಎಂಡ್ ಕೋ ಇವರು ಇದೇ ಸಪ್ಟಂಬರ ತಾರೀಕು 16ನೇ ಶನಿವಾರ ಪ್ರಾತಃಕಾಲ 8 ಗಂಟೆಗೆ ಕಾಸರಗೋಡು ಅಸಿಸ್ಟಾಂಟ್ ಇಂಜಿನಿಯರ ಆಫೀಸಿನ ಸಮೀಪವಿರುವ ಟ್ರಿವಲರ್ಸ್ ಬಂಗಲೆಯಲ್ಲಿ ಕೆಳಗೆ ಕಾಣಿಸಿದ ಆಸ್ತಿಗಳ ಮತ್ತು ಮನೆಯ ಕುರಿತು ದಿವಾಳಿದಾರರಿಗೂ ಈ ಲೋಟುಗಳನ್ನು ಅವರಿಗೆ ವಹಕೊಂಡವರಿಗೂ ಇರುವ ಹಿತ್ತ ಹಕ್ಕು ಬಾಧ್ಯತೆಗಳನ್ನು ಬಹಿರಂಗವಾದ ಏಲಂ ಮೂಲಕ ಮಾರಾಟಮಾಡುವರು.

1. ಕಾಸರಗೋಡು ತಾಲೂಕು ನಂಬ್ರ 16ನೇ ಬದಾಜೆ ಗ್ರಾಮದಲ್ಲಿರುವ ಸರ್ವೆ ನಂಬ್ರ 53 (1, 8, 9 ಮತ್ತು 11) ವಿಸ್ತೀರ್ಣ 2 ಎಕ್ರೆ 35 ಸೆಂಟ್ಸ್ ಪಟ್ಟಾ ನಂಬ್ರ 84ಕ್ಕೆ ಸೇರಿದ ಸ್ಥಳ.

2. ನಂಬ್ರ 24ನೇ [illegible] ಗ್ರಾಮದಲ್ಲಿರುವ ಸರ್ವೆ ನಂಬ್ರ 20ಕ್ಕೆ ಒಳಪಟ್ಟದ್ದು. (2 ಮತ್ತು 11), 22 (1), 23(2) ಮತ್ತು 26. (2). ವಿಸ್ತೀರ್ಣ 1 ಎಕ್ರೆ 49 ಸೆಂಟ್ಸ್ ಪಟ್ಟಾ ನಂಬ್ರ11ರಲ್ಲಿ ಸೇರಿದ.

3. ಕಾಸರಗೋಡು ತಾಲೂಕು ಕೂಡ್ಲು ಗ್ರಾಮ ಸರ್ವೆ ನಂಬ್ರ 58 (1, 2, 3, 4 ಮತ್ತು 5) 7 ಎಕ್ರೆ 46 ಸೆಂಟ್ಸ್ ವಿಸ್ತೀರ್ಣ. ಪಟ್ಟಾ ನಂಬ್ರ 54ಕ್ಕೆ ಒಳಪಟ್ಟದ್ದು.

4. ಕಾಸರಗೋಡು ತಾಲೂಕಿನ ನಂಬ್ರ 24ನೇ [illegible] ಗ್ರಾಮದ ಸರ್ವೆ ನಂಬ್ರ 7 (1) ಮತ್ತು 7 (2)ಕ್ಕೆ ಒಳಪಟ್ಟ 3 ಎಕ್ರೆ 94 ಸೆಂಟ್ಸ್ ವಿಸ್ತೀರ್ಣದ 6000 [illegible] ಮನೆ ಮೊದಲಾದವುಗಳಿಂದ ಕೂಡಿದ ಆಸ್ತಿ.

5. ಮೇಲಿನ ಗ್ರಾಮದಲ್ಲಿ ಇರುವ ಸರ್ವೆ ನಂಬ್ರ 10 (1), 8 (2), 8 (3B) 5 ಎಕ್ರೆ 85 ಸೆಂಟ್ಸ್ ವಿಸ್ತೀರ್ಣ 14,000 [illegible] ಮರಗಳೂ 40 ತೆಂಗಿನ ಮರಗಳೂ ಇರುವಂಥಾ ಆಸ್ತಿ.

6. ಕಾಸರಗೋಡು ತಾಲೂಕಿನ [illegible] ಗ್ರಾಮದಲ್ಲಿರುವ ಪಟ್ಟಾ ನಂಬ್ರ 140ರ ಒಂದು [illegible].

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ.

ಕಳೆದ ತಾ. ೨೮ ಮತ್ತು ೨೯ ಗಳಲ್ಲಿ ಜರುಗಿದ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲಿ ಮಾಡಿದ ಕೆಲವು ಠರಾವುಗಳು.

೧. ಬರುವ ವರ್ಷದ ಚುನಾವಣೆಯಾಗುವ ವರೆಗೆ ರಾ. ಉಡುಪಿ ಗೋವಿಂದರಾಯರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರನ್ನಾಗಿ ಚುನಾಯಿಸಲಾಯಿತು. ರಾ. ಕಾರಂತರು ರಾಜೀನಾಮೆ ಕೊಟ್ಟಿದೆಯಿಂದ ಅವರ ಸ್ಥಳದಲ್ಲಿ ರಾ. ಬಡಕಬೈಲ್ ಪರಮೇಶ್ವರಯ್ಯನವರನ್ನು ಕಾರ್ಯಕಾರಿಮಂಡಳಿಯ ಸದಸ್ಯರನ್ನಾಗಿ ಚುನಾಯಿಸಲಾಯಿತು. ರಾ. ಉಜ್ಜಿಲ ರಾಮರಾಯರನ್ನು ಖಾಲಿ ಇದ್ದ ಸ್ಥಳಗಳ ಪೈಕಿ ಒಂದು ಸ್ಥಳದಲ್ಲಿ ಜಿ. ಕಾ. ಕ. ಕಾರ್ಯಕಾರಿಮಂಡಳಿಯ ಸದಸ್ಯರನ್ನಾಗಿ ಆರಿಸಬೇಕಾಗಿ ನಿರ್ಣಯಿಸಲಾಯಿತು.

೭. ರಾ. ರಾಮಕೃಷ್ಣ ಕಾರಂತರು ತನ್ನ ಪರಿಶೋಧನೆಯ ವರದಿಯಲ್ಲಿ ಮಹಾಸಭೆಗೆ ಕೇಳಿದ ಪ್ರಶ್ನೆಯ ಪ್ರಕಾರ ಇನ್ನು ಮುಂದೆ ಪ್ರಾ. ಕಾ. ಕ. ಗೆ ಪ್ರತಿನಿಧಿಗಳಾಗಿ ಹೋಗುವವರ ಪ್ರಯಾಣದ ಖರ್ಚನ್ನಾಗಲೀ ಅವರ ಪ್ರತಿನಿಧಿ ವರ್ಗಣೆಯನ್ನಾಗಲೀ ಈ ಕಮಿಟಿಗೆ ಆ ಬಗ್ಗೆ ನೋಟೀಸುಕೊಟ್ಟು ಮಂಜೂರಾತಿಪಡೆದ ವಿನಾ ಕೊಡದಕಾರದಾಗಿ ಬಹುಮತದಿಂದ ನಿರ್ಣಯಿಸಲಾಯಿತು.

೮. ಹೊಸ ವರುಷದ ಕೋಶಾಧಿಕಾರಿಯ ಚುನಾವಣೆಯ ಕಾಲದಲ್ಲಿ ಮಂಗಳೂರು ತಾ. ಕಾ. ಕ. ಕೋಶಾಧಿಕಾರಿಗಳೂ ಈ ಕಮಿಟಿಯ ಕೋಶಾಧಿಕಾರಿಗಳೂ ಒಬ್ಬರೇ ಆಗದಂತೆ ಯತ್ನಮಾಡಬೇಕಾಗಿ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು.

೯. ೧೯೨೨ನೇ ಇಸವಿ ಎಪ್ರಿಲ್ ಆಖೈರುವರೆಗಿನ ಮತ್ತು ಜೂನು ಆಖೈರು ವರೆಗಿನ ಈ ಕಮಿಟಿಯ ಮತ್ತು ಇದರ ಕೈಕೆಳಗಿನ ಎಲ್ಲಾ ಸಂಸ್ಥೆಗಳ ಜಮಾ ಖರ್ಚಿನ ಪಟ್ಟಿಗಳನ್ನು ಪರಿಶೋಧಕರ ವರದಿ ಸಮೇತ ಕಾರ್ಯದರ್ಶಿಯವರು ಮುಂದಿನ ಕಾರ್ಯಕಾರಿ ಮಂಡಳಿಯ ಸಭೆಯಮುಂದಿಡಬೇಕು.

೧೦. ಜಿಲ್ಲೆಯಲ್ಲಿದ್ದ ಎಲ್ಲಾ ಕಾಂಗ್ರೆಸ್‌ಸಂಸ್ಥೆಗಳು ಆರಂಭವಾದಂದಿನಿಂದ ಇದೇ ವರುಷದ ಜೂನ್ ಆಖೈರಿ ವರೆಗಿನ ವರದಿ ಮತ್ತು ಜಮಾ ಖರ್ಚಿನ ಪಟ್ಟಿಗಳನ್ನು ಪುಸ್ತಕ ರೂಪದಲ್ಲಿ ಕಾರ್ಯಕಾರಿ ಮಂಡಳಿಯವರು ಛಾಪಿಸಿ ಅಕ್ಟೋಬರ ೧೫ರ ಒಳಗೆ ಪ್ರಕಟಿಸಬೇಕಾಗಿ ನಿರ್ಣಯಿಸಲಾಯಿತು. ೧೨. ಜಿಲ್ಲಾ ಕಾ. ಕಮಿಟಿಯ ಮಹಾಸಭೆಯ ವರದಿಗಳನ್ನು ಪ್ರಕಟಿಸಬೇಕೆಂಬ ರಾ. ಭೋಜರಾಯರ ಸೂಚನೆಯನ್ನು ಸರ್ವಸಮ್ಮತದಿಂದ ಮಂಜೂರುಮಾಡಲಾಯಿತು.

೧೩. ಮಂಗಳೂರು ತಾ. ಕಾ. ಕಮಿಟಿಪರವಾಗಿ ನಡೆಯಿಸಿದ ಖಾದಿಭಂಡಾರದ ಲೆಕ್ಕದಲ್ಲಿ ಬೆಳಗಾಂವಿನ ಸುದರ್ಶನಚರಕಾಲಯಕ್ಕೆ ಸದರಿ ಕಮಿಟಿಯಿಂದ ಸಲಬೇಕಾದ ಹಣವನ್ನ ಕೂಡಲೇ ಸಲಾಯಿಸುವ ಅಗತ್ಯವಿರುವುದರಿಂದಲೂ ಸದರಿ ಕಮಿಟಿಯವರಿಗೆ ಖಾದಿ ಭಂಡಾರದಿಂದ ಸಲತಕ್ಕ ಹಣವನ್ನು ಹಣದ ರೂಪದಲ್ಲಾಗಲೀ ನೂಲಿನ ರೂಪದಲ್ಲಾಗಲೀ ತಾ. ಕಾ. ಕ. ಕಾರ್ಯದರ್ಶಿಯರಿಗೆ ಕೂಡಲೇ ಕೊಡಿಸಬೇಕಾಗಿ ಸದರಿ ಭಂಡಾರದ ಮೆನೇಜರರಿಗೆ ಬರೆಯಬೇಕಾಗಿ ನಿರ್ಣಯಿಸಲಾಯಿತು. ಈ ನಿರ್ಣಯದ ಪ್ರಕಾರ ಬೆಳಗಾಂವಿಗೆ ಸಲತಕ್ಕ ರೂ. ೧೦೦—೦—೦ನ್ನು ಅಥವಾ ಅಷ್ಟು ಬೆಲೆಯ ನೂಲನ್ನು ಕಳುಹಿಸಬೇಕೆಂಬ ಅರಿಕೆ ಸಮೇತ ಈ ನಿರ್ಣಯದ ಪ್ರತಿಯನ್ನು ತಾ. ಕಾರ್ಯದರ್ಶಿಯರಿಗೆ ಕಳುಹಿಸಬೇಕಾಗಿ ನಿಶ್ಚಯಿಸಲಾಯಿತು.

೧೪. ಕಳೆದ ತಿಂಗಳ ತಾ. ೨೭ನೇ ಆದಿತ್ಯವಾರ ಜರುಗಿದ ಇದೇ ಕಮಿಟಿಯ ಕಾರ್ಯಕಾರಿಮಂಡಳಿಯ ಸಭೆಯಲ್ಲಿ ನಮ್ಮ ಕಮಿಟಿಯಿಂದ ಪ್ರಾಂತಿಕ ಕಮಿಟಿಗೆ ಇನ್ನು ಸಲಬೇಕಾಗಿದ್ದ ಹಣವನ್ನು ಮಾಫಿಮಾಡಬೇಕೆಂದು ಬೇಡಿಕೊಂಡ ನಿರ್ಣಯವನ್ನು ಪ್ರಾ. ಕಾ. ಕ. ಕಾರ್ಯದರ್ಶಿಯರಿಗೆ ಈ ಮೊದಲೇ ತಿಳಿಸಿರುವ ಮೇರೆಗೆ ಪ್ರಾ. ಕಾ. ಕ. ಕಾರ್ಯದರ್ಶಿಯರ ತಾ. ೨೮—೮—'೨೨ರ ಕಾಗದದಲ್ಲಿ ಸೂಚಿಸಿದಂತೆ ರಾ. ಶೆಡ್ಡೆ ಲಕ್ಷ್ಮಣರಾಯರಿಗೆ ಹಣವನ್ನು ಕೊಡುವರೆ ಅನುಕೂಲವಿಲ್ಲವೆಂದು ಪ್ರಾ. ಕಮಿಟಿಯರಿಗೆ ತಿಳಿಸಬೇಕಾಗಿ ಬಹುಮತದಿಂದ ನಿರ್ಣಯಿಸಲಾಯಿತು.

೧೫. ಕೂಡಲೇ ಚಾಲ್ತಿವರುಷದ ಅಂದಾಜು ಜಮಾಖರ್ಚಿನ ಪಟ್ಟಿಯನ್ನು ತಯಾರಿಸುವರೆ ಈ ಕೆಳಗೆ ಕಾಣಿಸಿದ ಗೃಹಸ್ಥರ ಉಪಕಮಿಟಿಯನ್ನು ನಿಯಮಿಸಬೇಕಾಗಿಯೂ, ಸದರಿ ಉಪಕಮಿಟಿಯವರು ಇದೇ ತಿಂಗಳ ಆಖೈರಿ ಒಳಗೆ ಜರಗಿಸಲಿಕ್ಕಿರುವ ಕಾರ್ಯಕಾರಿಮಂಡಳಿಯ ಸಭೆಯ ಮುಂದೆ ಈ ಕುರಿತ ತಮ್ಮ ವರದಿಯನ್ನು ಇಡಬೇಕಾಗಿಯೂ ನಿಶ್ಚಯಿಸಲಾಯಿತು. ರಾ. ರಾ. ಕಾ. ಸದಾಶಿವರಾವ್ ರಾ. ರಾಮಕೃಷ್ಣ ಕಾರಂತರು ರಾ. ಉಡುಪಿ ಗೋವಿಂದರಾಯರು ರಾ. ಉಳ್ಳಾಲ ಸಂಜೀವರಾವ್ ರಾ. ಅ. ಭೋಜರಾವ್ ರಾ. ಉಜ್ಜಿಲ ರಾಮರಾವ್ ರಾ. ಕೆ. ಎಸ್. ದಾಸಪ್ರಭು.

೧೬. ಈ ಮೊದಲು ಜಿ. ಕಮಿಟಿಯವರು ನಮ್ಮ ಜಿಲ್ಲೆಯ ಮಟ್ಟಿಗೆ ರಾಷ್ಟ್ರೀಯ ಸ್ವಯಂಸೇವಕರಿಗೆ ರಾ. ಕಾ. ಸದಾಶಿವರಾಯರನ್ನು ಜಿಲ್ಲಾಧಿಕಾರಿಯನ್ನಾಗಿ ಮಾಡಬೇಕೆಂದು ಪ್ರಾ. ಕ. ಗೆ. ಶಿಫಾರಸುಮಾಡಿದ ಮೇಲೆ ಸದರಿ ಕಮಿಟಿಯಿಂದ ಈ ವರೆಗೆ ಏನೂ ಉತ್ತರಬಾರದ್ದರಿಂದ ರಾ. ಸದಾಶಿವರಾಯರನ್ನು ನಮ್ಮ ಜಿಲ್ಲಾ ಸ್ವಯಂಸೇವಕರ ಮಂಡಳಿಗೆ ಜಿಲ್ಲಾಧಿಕಾರಿಯನ್ನಾಗಿ ನೇಮಿಸಬೇಕೆಂತಲೂ ಅವರು ಬರುವ ಅಕ್ಟೋಬರ ೧೫ರ ಒಳಗೆ ಜಿಲ್ಲೆಯ ಪ್ರತಿಯೊಂದು ತಾಲೂಕಿನಲ್ಲಿಯೂ ಸ್ವಯಂಸೇವಕ ದಳಗಳನ್ನು ಏರ್ಪಡಿಸುವ ವ್ಯವಸ್ಥೆಯನ್ನು ಮಾಡಿ ಅದರ ವರದಿಯನ್ನು ಪ್ರಕಟಿಸುವುದಲ್ಲದೆ ಈ ಸಭೆಯಮುಂದೆ ಇಡಬೇಕಾಗಿಯೂ ನಿಶ್ಚಯಿಸಲಾಯಿತು. ಜಿಲ್ಲಾಧಿಕಾರಿಗಳು ಪ್ರತಿ ತಾಲೂಕಿನಲ್ಲಿ ಸ್ವಯಂಸೇವಕ ಮಂಡಳಿಯು ಯಾವ ಯಾವ ರೀತಿಯಿಂದ ಕೆಲಸಮಾಡುವುದು ಯೋಗ್ಯವೆಂಬ ಸೂಚನೆಗಳನ್ನು ಈ ಕಮಿಟಿಯ ಕಾರ್ಯಕಾರಿಮಂಡಳಿಯ ಸಭೆಯ ಮುಂದೆ ಆಲೋಚನೆ ಬಗ್ಗೆ ಇಡತಕ್ಕದ್ದು. ಸದರಿ ನಿರ್ಣಯವು ಬಹುಮತದಿಂದ ಮಂಜೂರಾಯಿತು.

೧೯. ನಮ್ಮ ಜಿಲ್ಲೆಯಲ್ಲಿ ಅಸ್ಪೃಶ್ಯತಾನಿವಾರಣೆಯನ್ನು ಮಾಡಿ ಅದಿಗೊತ್ತಲ್ಪಟ್ಟ ಜನರನ್ನು ಉದ್ಧಾರಮಾಡುವುದಕ್ಕೆ ಕಾಂಗ್ರೆಸ್ಸಿನವರೂ ಮಹಾತ್ಮಾಗಾಂಧಿಯವರೂ ಸೂಚಿಸುವ ವಿಷಯಗಳು ಸ್ಪಷ್ಟವಾಗಿ ಜನರಲ್ಲಿ ಪ್ರಚಾರವಾಗುವಂತೆ ಒಂದು ಚಿಕ್ಕ ಪುಸ್ತಕವನ್ನು ಈ ಕೆಳಗೆ ಸೂಚಿಸಿದ ಉಪಕಮಿಟಿಯವರು ತಯಾರಿಸಿ ಪ್ರಕಟಿಸುವ ಮಂಜೂರಾತಿ ಬಗ್ಗೆ ಬರುವ ಕಾರ್ಯಕಾರಿಮಂಡಳಿಯ ಸಭೆಯ ಮುಂದೆ ಇಡತಕ್ಕದ್ದು. ಮ. ರಾ.ಗಳಾದ ಉಡುಪಿ ಗೋವಿಂದರಾವ್ [illegible], ಕಾ. ಸದಾಶಿವರಾವ್, ವಿ. ರಾಮಚಂದ್ರರಾವ್ [illegible].

೨೦. ಪ್ರತಿ ತಾಲೂಕಿನಲ್ಲಿ ಆಯಾಯ ತಾಲೂಕಿನ ಎದುರು ಹೆಸರು ಕಾಣಿಸಿದ ಗೃಹಸ್ಥರು ಈ ತಿಂಗಳ ಆಖೈರಿ ಒಳಗೆ ಸೇರಲಿಕ್ಕಿರುವ ಕಾರ್ಯಕಾರಿ ಮಂಡಳಿಯ ಸಭೆಯ ಮುಂದಾಗಿ ಆಯಾಯ ತಾಲೂಕುಗಳ ಮುಖ್ಯ ಪಟ್ಟಣಕ್ಕೆ ಹೋಗಿ ಅಲ್ಲಿಯ ಕಾಂಗ್ರೆಸ್ ಉದ್ಯೋಗಸ್ಥರ ಮತ್ತು ಸ್ವಯಂಸೇವಕರ ಸಹಾಯದಿಂದ ತಾಲೂಕು ಮಹಾಸಭೆಯನ್ನು ಜರಗಿಸಿ, ಆಯಾಯ ತಾಲೂಕಿನ ಗ್ರಾಮಕಮಿಟಿಗಳಲ್ಲಿ ಜಾಗ್ರತೆಯನ್ನುಂಟುಮಾಡುವರೆ ವ್ಯವಸ್ಥೆಮಾಡುವುದಲ್ಲದೆ, ಪ್ರಥಮ ಕಳೆದ ವರುಷದ ಮತ್ತು ಈ ವರುಷ ಜೂನ್ ಆಖೈರಿವರೆಗಿನ ಲೆಕ್ಕಪತ್ರವನ್ನು [illegible] (A form) [illegible] ಮುಂದಿನ ಜಿಲ್ಲಾ ಕಾಂಗ್ರೆಸ್ ಕಮ್ಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯ ಮುಂದೆ [illegible] ಇಡತಕ್ಕದ್ದು. ೧. ಮಂಗಳೂರು ತಾ. ಉಜ್ಜಿಲ ರಾಮರಾಯರು ೨. ಕಾಸರಗೋಡು ರಾ. ಅ. ಭೋಜರಾವ್, ೩. [illegible], ೪. [illegible] ರಾ. ಕೆ. ಎಸ್. ದಾಸಪ್ರಭುಗಳು, ೫. ಉಡುಪಿ, ರಾ. ಉಡುಪಿ ಗೋವಿಂದರಾಯರು, ೬. [illegible] ರಾ. [illegible].

ವಿದೇಶ ವರ್ತಮಾನ

ಮಹಾ ಯುದ್ಧಕ್ಕೆ ಕಾರಣರು ಯಾರು:—ಜರ್ಮನಿಯ ಚಕ್ರವರ್ತಿಯಾಗಿದ್ದ ಕೈಸರು ತಮ್ಮ ಚರಿತ್ರೆಯನ್ನು ಬರೆದು ಪ್ರಕಟಿಸಿದ್ದಾರೆ. ಅದರಲ್ಲಿ ಕಳೆದ ಮಹಾಯುದ್ಧಕ್ಕೆ ತಾನಾಗಲಿ ಜರ್ಮನಿದೇಶವಾಗಲಿ ಎಷ್ಟು ಮಾತ್ರಕ್ಕೂ ಬಾಧ್ಯರಲ್ಲವೆಂದೂ ಇಂಗ್ಲೆಂಡೇ ಅದಕ್ಕೆ ಬಾಧ್ಯವೆಂದೂ ಬರೆದಿದ್ದಾರೆ.

ಸರ್ಪದ ವಿಷಕ್ಕೆ ಮದ್ದು:—ವಿಷಸರ್ಪದಿಂದ ಕಚ್ಚಲ್ಪಟ್ಟವರಿಗೆ ಜಕೋಟೆ ಹೊಗೆಸೊಪ್ಪನ್ನು ೧೦ ತೊಲೆ ನೀರಿನಲ್ಲಿ ಕಲಸಿ, ನೀರಿನಲ್ಲಿ ಹೊಗೆಸೊಪ್ಪು ಚೆನ್ನಾಗಿ ಬೆರೆತ ತರುವಾಯ ಸೊಪ್ಪನ್ನು ಹಿಂಡಿ ಹೊರಕ್ಕೆ ತೆಗೆದುಹಾಕಿ ಬಟ್ಟಿ ಕೊಳಿಸಿಕೊಂಡ ನೀರನ್ನೆಲ್ಲಾ ಕುಡಿಸಬೇಕು. ಸ್ಮೃತಿತಪ್ಪಿ ಬಾಯಿಬಿಡದಂತೆ ಇದ್ದರೆ ಮೂಗಿನ ದ್ವಾರದಿಂದ ಹೊಯ್ಯಬೇಕು. ನೀರು ಒಳಕ್ಕೆಸೇರಿದ ೫ ನಿಮಿಷಗಳಲ್ಲಿ ವಾಂತಿಗೆ ಆರಂಭವಾಗುವುದು. ಆ ವಾಂತಿಯಲ್ಲಿ ವಿಷವು ಕಳೆದುಹೋಗುವುದು. ಒಂದು ಗಂಟೆ ಹೊತ್ತಿನಲ್ಲಿ ಆರೋಗ್ಯವಾಗುವುದು. ಹೊಗೆಸೊಪ್ಪಿನ ತೋಟಕ್ಕೆ ನಾಗರ ಹಾವು ನುಗ್ಗುವುದೇ ಇಲ್ಲ. ಹಾವಿನವಿಷಕ್ಕೆ ಹೊಗೆಸೊಪ್ಪು ಅತ್ಯುತ್ತಮ ಪರಿಹಾರಕ ಮೂಲಿಕೆಯೆಂದು ಹೈದರಾಬಾದಿನ ಹಕೀಂ ಮುಹಮ್ಮದ್ ಯೂಸುಫ್‌ರವರು "ಪ್ರಾಕ್ಟಿಕಲ್ ಮೆಡಿಸನ್" ಎಂಬ ಪತ್ರಿಕೆಗೆ ಬರೆದಿರುತ್ತಾರೆ. ಮೈಸೂರು ಸ್ಟಾರ.

ಬಾಬು ಸೋಮೇಶಚಂದ್ರ ಬೋಸ್:—ಮದ್ರಾಸಿನ ಸುಪ್ರಸಿದ್ಧ ಗಣಿತಜ್ಞಾನಿಯೆನಿಸಿಕೊಂಡಿದ್ದ ಸುಬ್ರಹ್ಮಣ್ಯನ ಅವತಾರವು ಸಮಾಪ್ತಿಯಾಯಿತಷ್ಟೆ! ಈಗ ಬಾಬು ಸೋಮೇಶಚಂದ್ರಬೋಸ್ ಎಂಬ ಅದ್ಭುತಗಣಿತಜ್ಞನು ಪ್ರಖ್ಯಾತನಾಗಿ ಈಗ ತಾನೆ ಲಂಡನ್ ಪಟ್ಟಣಕ್ಕೆ ಹೋಗಿರುತ್ತಾನೆ. ಆತನ ಅದ್ಭುತಗಣಿತಶಾಸ್ತ್ರಜ್ಞತೆಯನ್ನು ಅಲ್ಲಿಯ ಈವಿನಿಂಗ್ ನ್ಯೂಸ್ ಪತ್ರಿಕಾಪ್ರತಿನಿಧಿಯು ಪ್ರತ್ಯಕ್ಷವಾಗಿ ಪರೀಕ್ಷಿಸಿ, ಇಂಥ ಅದ್ಭುತಸಾಮರ್ಥ್ಯವಂತರು ಲಂಡನ್ ಪಟ್ಟಣಕ್ಕೆ ಇದುವರೆಗೆ ಯಾರೂ ಬಂದಿರಲಿಲ್ಲವೆಂದು ಹೇಳಿ ಹೊಗಳಿರುತ್ತಾರೆ. ೮-೧೦ ಸಂಖ್ಯೆಗಳ ಉದ್ದವಾದ ಗುಣಾಕಾರ ಭಾಗಾಕಾರಗಳನ್ನು ಈತನು ಬಾಯಲ್ಲೇ ಲೆಕ್ಕಮಾಡಿ ಚಾಚೂತಪ್ಪದಂತೆ ಸ್ವಲ್ಪಕಾಲದಲ್ಲೆ ಹೇಳಿಬಿಡುತ್ತಿರುವನು. ಅಷ್ಟೇ ಅಲ್ಲದೆ ಎಷ್ಟೊ ಹಿಂದಣ ವರ್ಷಗಳಲ್ಲಿ ಯಾವ ತಾರೀಕಿಗೆ ಯಾವ ವಾರವು ಬಂದಿತ್ತೆಂಬುದನ್ನು ಸಹ ನಿರ್ಣಯವಾಗಿ ಹೇಳುತ್ತಿರುವನು. ಈತನು ಕೇವಲ ಶಾಕಾಹಾರಿಯೂ ಸ್ವಯಂಪಾಕಿಯೂ ಯೋಗಮಾರ್ಗಸಂಪನ್ನನೂ ಆಗಿರುವನು. ಮೈ. ಸ್ಟಾರ.

ಜಗಲುಲಪಾಶರು:— ಅಸ್ವಸ್ಥದಲ್ಲಿರುವ ಜಗಲುಲಪಾಶರನ್ನು ಈಗ ಜಿಬ್ರಾಲ್ಟರಿಗೆ ಹವೆಯನ್ನು ಬದಲಾಯಿಸುವುದಕ್ಕಾಗಿ ಕರಕೊಂಡುಬಂದಿದ್ದಾರೆ.

ಲೀಗ್ ಒಫ್ ನೇಶನ್ಸ್:—ಇದರ ಮೂರನೆಯ ಅಧಿವೇಶನವು ಜಿನೋವಾದಲ್ಲಿ ಕಳೆದ ತಾ. ೪ರಿಂದ ಪ್ರಾರಂಭವಾಗಿದೆ. ಮಿ ಆಗೋಸ್ಟಿನ್ ಎಡ್ವರ್ಡ್ಸ್ ಚಿಲಿಯನ್ ಲಂಡನ್ ಮಿನಿಸ್ಟರ, ಇವರು ಅಧ್ಯಕ್ಷ ಪದವಿಯನ್ನು ವಹಿಸಿಕೊಂಡಿರುವರು. ಒಟ್ಟು ೪೪ ರಾಷ್ಟ್ರಗಳ ಪ್ರತಿನಿಧಿಗಳು ಸೇರಿದ್ದಾರೆ.

ಮುದಿ ಪ್ರಾಯದ ವಿದ್ಯಾಭ್ಯಾಸ:—ನ್ಯೂಯಾರ್ಕಿನ ಕೊಲಂಬಿಯಾ ವಿಶ್ವ ವಿದ್ಯಾಲಯದಲ್ಲಿ ೭೧ವರುಷ ಪ್ರಾಯದ ಮುದುಕಿಯೊಬ್ಬಳು ಪುನಃ ವಿದ್ಯಾಭ್ಯಾಸವನ್ನು ಹೊಂದಲು ಪ್ರಾರಂಭಿಸಿರುವಳು.

ಡಿವೆಲರರು:—ಇವರ ಅಸ್ವಸ್ಥವು ಕಠಿಣವಾಗಿದೆ ಎಂದು ತಿಳಿದು ಬರುತ್ತದೆ

ಒಳದೇಶ ವರ್ತಮಾನ.

ಡಾಕ್ಟರ ವರದರಾಜುಲು ನ್ಯಾಡೋ:—ಮಹಾತ್ಮರನ್ನು ಬಿಡುಗಡೆ ಮಾಡುವ ವರೆಗೆ ಇವರು ಸರಕಾರಕ್ಕೆ ಕಂದಾಯವನ್ನು ಕೊಡಲಿಕ್ಕಿಲ್ಲವೆಂದು ನಿರ್ಧರಿಸಿರುವರು.

ಶ್ರೀಯುತ ಜಯರಾಮಾಚಾರ್ಯರು:—ಕೀರ್ತನಕೇಸರಿ ಜಯರಾಮಾಚಾರ್ಯರು ಅನಂತಪುರದಲ್ಲಿ ಕೀರ್ತನೆಗೆ ಹೋದಾಗ ಕಳೆದ ತಾರೀಕು ೨೩ನೇ ದಿನ ಅಲ್ಲಿಯ ಸ್ಪೇಶಲ್ ಸಬ್ ಮೆಜಿಸ್ಟ್ರೇಟರು ೧೪೪ನೇ ಕಲಮಿನನ್ವಯ ೨ ತಿಂಗಳ ವರೆಗೆ ತಮ್ಮ ಹದ್ದಿನಲ್ಲಿ ಭಾಷಣಬಂದಿಹುಕುಂ ಜಾರಿಮಾಡಿರುವರು. ಆಂಧ್ರ ಮುಂದಾಳುಗಳು ಸಭೆಸೇರಿ ನಿಷೇಧಮಾಡಿರುವರು. ಶ್ರೀಯುತ ಜಯರಾಮಾಚಾರ್ಯರು ಇನ್ನೊಮ್ಮೆ ಅನಂತಪುರದಲ್ಲಿ ಹೋಗಿ ಪುನಃ ವ್ಯಾಖ್ಯಾನವನ್ನು ಕೊಟ್ಟು ಸರಕಾರದವರು ನಡಿಸಿದ ದಬ್ಬಾಳಿಕೆಯ ನಿಷೇಧವ್ಯಕ್ತಪಡಿಸಿ ಕಾಂಗ್ರೆಸ ಕೆಲಸ ಮುಂದೆ ನಡಿಸಬೇಕೆಂದು ನಿರ್ಣಯಿಸಿದ್ದಾರೆ.

ಬರ್ಮಾದಲ್ಲಿ ಕುಷ್ಠರೋಗ:—ಬರ್ಮಾದಲ್ಲಿ ಕುಷ್ಠರೋಗವು ಎಂದಿಗಿಂತ ಪ್ರಬಲವಾಗುತ್ತಿರುವುದು ಕಂಡುಬಂದುದರಿಂದ ಈಗ ಅಲ್ಲಿಯ ಸರಕಾರದವರು ಕುಷ್ಠರೋಗದ ಹಬ್ಬುವಿಕೆಯನ್ನು ಕಡಿಮೆಮಾಡಲು ಪ್ರಯತ್ನವನ್ನು ಮಾಡುತ್ತಿದ್ದಾರೆ. ಕುಷ್ಠರೋಗಪೀಡಿತರಾಗಿಯೂ ಬಡವರಾಗಿಯೂ ಊರುಊರುಗಳಲ್ಲಿ ಅಲೆಯುತ್ತಿರುವ ಕುಷ್ಠರೋಗಿಗಳನ್ನು ಗ್ರಾಮಾಧಿಕಾರಿಗಳು ಕಂಡರೆ ಅವರನ್ನು ಕುಷ್ಠರೋಗಿಗಳ ಆಸ್ಪತ್ರೆಗೆ ಕಳುಹಿಸಬೇಕು ಎಂದು ಅಲ್ಲಿಯ ಸರಕಾರದವರು ಪ್ರಕಟಿಸಿದ್ದಾರೆ. ಅಲ್ಲದೆ ಕುಷ್ಠರೋಗಿಗಳು ಚುರುಟು ಮೊದಲಾದುವನ್ನು ಮಾಡುವುದು ಮತ್ತು ಕೆಲವು ತರದ ವ್ಯಾಪಾರಗಳನ್ನು ನಡಿಸುವುದು ಸಹ ನಿಲ್ಲಿಸಬೇಕಾಗಿ ಹುಕುಂ ಆಗಿದೆ. ಕುಷ್ಠರೋಗಿಗಳು ರೈಲ್ವೆ ಗಾಡಿಗಳಲ್ಲಿ ಹೊರತು ಇತರ ಸಾರ್ವಜನಿಕ ಉಪಯೋಗದ ಬಂಡಿ ಮೊದಲಾದುವುಗಳಲ್ಲಿ ಪ್ರಯಾಣಮಾಡದಂತೆ ನಿರ್ಬಂಧವಿಟ್ಟಿದೆ.

ಗಣೇಶ ಸಾವರಕರ:—ಇವರನ್ನು ಮುಂಬಯಿಸರಕಾರದ ಅಪ್ಪಣೆ ಮೇರೆಗೆ ಸಬರಮತಿ ಜೈಲಿನಿಂದ ಕಳೆದ ತಾರೀಕು ೧ರಲ್ಲಿ ಬಿಡುಗಡೆಮಾಡಿದೆ. ಇವರಿಗೆ ಕೂತುಕೊಳ್ಳುವಷ್ಟು ಸಹ ತ್ರಾಣವಿಲ್ಲವಂತೆ. ಇವರ ಸಹೋದರರು ಇವರನ್ನು ಮುಂಬಯಿಗೆ ಕರಕೊಂಡುಹೋಗಿದ್ದಾರೆ.

ಟ್ರೂತ್ ಪತ್ರಿಕೆ:—ಈ ಪತ್ರಿಕೆಯ ಸಂಪಾದಕರ ಅಸ್ವಸ್ಥವು ಇನ್ನೂ ಕಮ್ಮಿ ಆಗದೆ ಇರುವುದರಿಂದ ಮುಂದಿನ ತಾ. ೨೫ ವರೆಗೆ ಸದರಿ ಪತ್ರಿಕೆಯು ಪ್ರಕಟಿಸಲಾಗಲು ಅನಾನುಕೂಲವಾಗಿದೆ. ಪತ್ರಿಕೆಯು ಆಫೀಸು ಪಟ್ಟಣದ ಮಧ್ಯಸ್ಥಳಕ್ಕೆ ಒಯ್ಯುವ ವಿಚಾರಕ್ಕೆಬೇಕಾದ [illegible] ಮಾಡಲು ಪ್ರಯತ್ನಗಳು ನಡಿಯುವುದರಿಂದ ಸದರಿ ಪತ್ರಿಕೆಯ ಆಫೀಸಿಗೆ ಪತ್ರಗಳನ್ನು ಬರಿಯುವವರು ಹೊಸ ವಿಳಾಸವನ್ನು ಕೊಡುವ ವರೆಗೆ ಕೇರ್ ಒಫ್ [illegible] ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರಿಯತಕ್ಕದ್ದು ಎಂದು ಅದರ ಮೆನೇಜರು ತಿಳಿಸಿದ್ದಾರೆ.

ಅಕಾಲಿ ಚಳವಳಿ:—ಅಕಾಲಿಚಳವಳಿಯು ಇನ್ನೂ ಜೋರಾಗಿನಡಿಯುತ್ತದೆ. ಅಕಾಲಿಪಂಗಡದವರು ಗುರುಕಾಬಾಗಕ್ಕೆ ಹೋಗದಂತೆ ಪೋಲೀಸರು ತಡೆಯುತ್ತಿದ್ದಾರೆ. ಅನೇಕರು ಗಾಯಹೊಂದಿದ್ದಾರೆ. ಆದರೆ ಈವರೆಗೆ ಯಾರೂ ಸಾಯಲಿಲ್ಲ. ಅಕಾಲಿಗಳ ಈ ಸತ್ಯಾಗ್ರಹವು ನಡಿಯುವ ಸ್ಥಳಕ್ಕೆ ಪಂಡಿತ ಮಾಲವೀಯರೂ ಪಂಜಾಬ ನ್ಯಾಯವಿಧಾಯಕ ಸಭೆಯ ಮೆಂಬರರೂ ಬಂದು ತನಿಖೆಯನ್ನು ನಡಿಸುತ್ತಿದ್ದಾರೆ. ಅಕಾಲಿಗಳ ಚಳವಳಿಯನ್ನು ಅಧಿಕಾರಿಗಳು [illegible] [illegible].

ಯಥ್ ಡಬ್ಲ್ಯು ಡಿಕ್ಸನ್ ಸನ್:—ವಿಶ್ವ ವಿಶ್ವಾಸಿ ವರ್ತಮಾನವನ್ನು ಪ್ರಕಟಿಸುವ ರೂಟರ ಮುಖ್ಯ ಸಂಪಾದಕರಾದ ಯಥ್ ಡಬ್ಲ್ಯು ಡಿಕ್ಸನ್ ರವರು ಕಳೆದ ಶನಿವಾರ ಕಾಲವಾದರು.

ಬೆಂಗಳೂರು:—ಇಲ್ಲಿಯ ಮುನ್ಸಿಪಾಲಿಟಿಯು ಎಲ್ಲಾ ಓಟದ ಕುದುರೆಗಳ ಮೇಲೆ ತೆರಿಗೆಯನ್ನು ಹಾಕಲು ನಿಶ್ಚಯಿಸಿದೆ. ಇದರಿಂದ ಉತ್ಪನ್ನವಾದ ಹಣವು ಪಶುಗಳ ಔಷಧಾಲಯಕ್ಕೆ ಕೊಡಲಾಗುವುದು.

ಯಾತ್ರಸ್ಥರ ಮೇಲೆ ತೆರಿಗೆ:—ಬರುವ ತಾ. ೨೨ರ ವರೆಗೆ ಬೆಜವಾಡಕ್ಕೆ ಯಾತ್ರಸ್ಥರಾಗಿ ಹೋಗುವವರ ಮೇಲೆ ತೆರಿಗೆಯನ್ನು ವಸೂಲುಮಾಡಲು ನಿರ್ಧರಿಸಿದೆ.

ಗಂಗಾನದಿ:—ಗಂಗಾನದಿಯು ಉಕ್ಕಿ ಬಂದುದರಿಂದ ಕಾನ್‌ಪುರದ ಉಪ್ಪೆಎಂಬಲ್ಲಿನ ರೈಲ್ವೆಮಾರ್ಗವು ನೀರಿನಿಂದ ತುಂಬಿದೆ. ನೆರೆಕರೆಯ ಅನೇಕ ಮನೆಮಠಗಳು ನೀರಿನ ಪಾಲಾದವು. ಸುಮಾರು ೩೦ ವರುಷಗಳಿಂದ ಇಂಥಾ ನೆರೆಯು ಬರಲಿಲ್ಲವಂತೆ.

ಮುಲಟಾನ್:—ಮೊಹರಮಿನ ಸಂಬಂಧ ಇಲ್ಲಿ ಹಿಂದೂ ಮುಸಲ್ಮಾನರೊಳಗೆ ಗಲಾಟೆಯು ನಡೆದು ಕೆಲವು ಪ್ರಾಣಗಳು ನಾಶವಾದವು.

ಮುಂಬಯಿ:—ಶ್ರೀ ಮುಕ್ತಾನಂದ ತೀರ್ಥರವರು ಧ. ಕ. ಜಿಲ್ಲೆಯ ಪಡುಬಿದ್ರಿಯಲ್ಲಿ ಸ್ಥಾಪಿಸಲಿಕ್ಕಿರುವ ಶ್ರೀ ಮಹಾಕಾಳಿಕಾಂಬಿಕೆಯ ಗರ್ಭಗೃಹ ನಿರ್ಮಾಣದ ಸಉದ್ದೇಶದಿಂದ ತಾ. ೩೧-೮-'೨೨ರಲ್ಲು ಇಲ್ಲಿಂದ ಹೊರಟಿರುತ್ತಾರೆ ಎಂದು ಮುಂಬಯಿಯಿಂದ ಒಬ್ಬ ಬಾತಮಿದಾರರು ಬರೆಯುತ್ತಾರೆ.

ಮುಳಸಿಪೇಟಾ ಸತ್ಯಾಗ್ರಹ:—ಈ ಸತ್ಯಾಗ್ರಹದ ನಾಯಕರಾದ ಮಿ. ಬಾಪಟ ಮೊದಲಾದವರನ್ನು ಸೆರೆಹಿಡಿದಿರುವರಾಗಿ ಪ್ರಕಟವಾಗಿದೆ.

ಮೋತಿಲಾಲ ಘೋಷರು:—ಅಮೃತಬಜಾರ ಪತ್ರಿಕೆಯ ಸಂಪಾದಕರಾದ ಶ್ರೀಯುತ ಬಾಬು ಮೋತಿಲಾಲ ಘೋಷರು ತಮ್ಮ ೭೬ನೇ ವರುಷ ಪ್ರಾಯದಲ್ಲಿ ಕಳೆದ ತಾ. ೫ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲುತುಂಬಾ ವ್ಯಸನಪಡುತ್ತೇವೆ.

ಹಿಂದೂ ಮುಸಲ್ಮಾನರ ಜಗಳ:—ಹಿಂದುಗಳು ದೇವತೆಗಳ ಹೆಸರಲ್ಲಿ ಬಿಟ್ಟ ಒಂದು ಎತ್ತನ್ನು ಕಳೆದ ಬಕ್ರಿದ್ ಹಬ್ಬದ ಸಮಯ ಮುಸಲ್ಮಾನರು ಸಂಹರಿಸಿದ ಕಾರಣದಿಂದ ಕಳೆದ ತಾ. ೩ರಲ್ಲಿ ಕಲ್ಕತ್ತೆಯಿಂದ ೩೦ ಮೈಲು ದೂರವಿರುವ ಕಲಿನಿಪಾರಯೆಂಬಲ್ಲಿ ಹಿಂದೂಮುಸಲ್ಮಾನರಿಗೆ ಜಗಳವಾಗಿ ಹಲವರಿಗೆ ಜಖಂ ಆಗಿದೆಯೆಂದೂ ಒಬ್ಬ ಹಿಂದೂ ಕಿರಾಣಿ ಜೀನಸುವ್ಯಾಪಾರಸ್ಥನು ಮಡಿದಿರುವನೆಂದೂ ವರ್ತಮಾನಬಂದಿದೆ.

ಕರ್ನಾಟಕ ವೈಭವ:—ಈ ಪತ್ರಿಕೆಯ ಸಂಪಾದಕರಾದ ಶ್ರೀಯುತ ವ್ಯಾ. ಯಸ್. ತಿಲ್ಲುಗ್ಗೆ ಬಿ. ಎ. ಬಿ. ಎಲ್. ಇವರನ್ನು ವೈಭವದಲ್ಲಿ ರಾಜದ್ರೋಹಕರವಾದ ಒಂದು ಲೇಖವನ್ನು ಪ್ರಕಟಿಸಿದ ಬಗ್ಗೆ ಕೈದು ಮಾಡಿದ್ದಾರಂತೆ.

ಹಿಂದೂ ಪತ್ರಿಕೆ:—ಹೈದರಾಬಾದಿನ ಸಿಂಧಪ್ರಾಂತ್ಯದಲ್ಲಿ ಪ್ರಕಟವಾಗುವ ಹಿಂದೂ ಪತ್ರಿಯ ಎಂಟನೆಯ ಸಂಪಾದಕರಾದ ರಾ. ಪರಮಾನಂದ ಮೆವಾರಮ್ ಎಂಬವರನ್ನು ಸಹ ಕೈದುಮಾಡಲಾಗಿದೆ.

ಓಲ್-ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು:—ಕಲ್ಕತ್ತೆಯಲ್ಲಿ ಕೂಡಿದ ಸಿವಿಲ್ ಡಿಸ್ ಒಬೀಡಿಯನ್ಸ್ ಕಮ್ಮಿಟಿ ಮೀಟಿಂಗು ತಾ. ೧೪ರಲ್ಲಿ ಮುಗಿದು ಹೆಚ್ಚಿನ ವಿಷಯಗಳನ್ನು ಬರುವ ತಾ. ೧೫ರಲ್ಲಿ ಮುಂಬಯಿಯಲ್ಲಿ ಕೂಡುವ ಓಲ್-ಇಂಡಿಯಾ ಕೊಂಗ್ರೆಸ್ಸಿನ ವರ್ಕಿಂಗ್ ಕಮ್ಮಿಟಿಯ ಮೀಟಿಂಗಿನಲ್ಲಿ ಚರ್ಚಿಸತಕ್ಕದೆಂದೂ, ಸಿವಿಲ್ ಡಿಸ್ ಒಬೀಡಿಯನ್ಸ್ ಕಮ್ಮಿಟಿಯ ವರದಿಯು ಇನ್ನೂ ಪೂರ್ಣ ತಯಾರಾಗದೆ ಇದ್ದುದರಿಂದ ಬರುವ ತಾ. ೧೫ರಲ್ಲಿ ಸೇರಲಿಕ್ಕಿದ್ದ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗನ್ನು ಒಂದು ತಿಂಗಳು ಮುಂದರಿಸಿದುವಂತೆ ಮುಂದಿನ ಕೊಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಶ್ರೀಯುತ ಸಿ. ಆರ್. ದಾಸರಿಗೆ ವಿನಂತಿಮಾಡಿಕೊಳ್ಳಬೇಕಾಗಿಯೂ ನಿಶ್ಚಯಿಸಲಾಯಿತು.

ದಕ್ಷಿಣ ಕನ್ನಡ.

ಪಾದೆಬೆಟ್ಟು:—ಉಡುಪಿತಾಲೂಕು ಪಾದೆಬೆಟ್ಟು ಗ್ರಾಮದಲ್ಲಿರುವ ಶಿವಬ್ರಾಹ್ಮಣರ ಮಠಸ್ಥರ ಮಹಾವಿಷ್ಣುಮೂರ್ತಿದೇವಸ್ಥಾನದಲ್ಲಿ ಇದೇ ತಿಂಗಳ ತಾರೀಕು ೪—೯—೧೯೨೨ನೇ ಸೋಮವಾರ ದಿವಸ ಮಧ್ಯಾಹ್ನ ಹನ್ನೊಂದು ಗಂಟೆಗೆ ವಯಸ್ಕರಿಗೆ ಜರಗುವ ಉಪಾಕರ್ಮಮಹೋತ್ಸವವೂ, ರಾತ್ರೆ ಮುಲ್ಕಿ ಬೋರ್ಡ ಹಾಯರ್‌ಎಲಿಮೆಂಟರಿ ಶಾಲೆಯ ಉಪಾಧ್ಯಾಯರಾದ ರಾ. ಇನ್ನಾ ಪದವು ಕೇಶವಪ್ಪಯ್ಯನವರ ಹೂವಿನ ಪೂಜೆಯೂ ಬಹು ವಿಜೃಂಭಣೆಯಿಂದ ನಡೆದವು.

ಬಂಟವಾಳ—ಇದೇ ತಿಂಗಳ ಆರಂಭದಲ್ಲಿ ಇಲ್ಲಿ ಒಂದು ಪ್ಲೇಗು ಮರಣವು ಸಂಭವಿಸಿದ್ದರಿಂದ ಇಲ್ಲಿಯ ಮಿಶನ್ ಹಾಗು ದೇವಳ ಶಾಲೆಗಳನ್ನು ಹತ್ತು ದಿನಗಳ ವರೆಗೆ ಮುಚ್ಚಿದ್ದಾರೆ.

ಇಲ್ಲಿಯ ಮಾಪಿಳ್ಳಾ ಬೋರ್ಡುಶಾಲೆಯಲ್ಲಿ ಕೆಲವು ಹೊಲೆಯರ ಹುಡುಗರನ್ನು ಸೇರಿಸಿಕೊಂಡದ್ದರಿಂದ ಮಾಪಿಳ್ಳಾ ಹುಡುಗರು ಶಾಲೆಗೆಬರುವುದನ್ನು ಬಿಟ್ಟುಬಿಟ್ಟಿದ್ದಾರಂತೆ. ಮೊಹರಂ ರಜಾ ನಂತರ ಕೆಲವು ಪಂಚಮರ ಹುಡುಗರೂ ಹುಡುಗಿಯರೂ ಮೂವರು ಮಾಪಿಳ್ಳಾ ಹುಡುಗರೂ ಶಾಲೆಯ ಜಗಲಿಯಲ್ಲಿ ಬೇಗ್ಗೆ ಇದ್ದರು. ವಿದ್ಯಾರ್ಜನೆಯಲ್ಲಿಯಾದರೂ ಜಾತಿ ಮತಭೇದಗಳು ತಲೆದೋರದೆ ಎಲ್ಲಾ ಮಕ್ಕಳು ಕಲಿಯುವ ಸುಕಾಲವು ಎಂದು ಕೂಡುವುದೋ!

ಇಲ್ಲಿಂದ ಬ್ರಹ್ಮರಕೂಟ್ಲು ಸಂಕದ ವರೆಗೆ ಮಾರ್ಗವು ಅಲ್ಲಲ್ಲಿ ಜರ್ಝರಿತವಾಗಿಹೋಗಿದೆ. ಇದನ್ನು ಬೇಗನೆ ಸರಿಪಡಿಸದಿದ್ದರೆ ಪ್ರಯಾಣಿಕರಿಗೆ ತುಂಬಾ ಅನಾನುಕೂಲ. ಆದುದರಿಂದ ಬೋರ್ಡು ಅಧಿಕಾರಿಗಳು ಯಾರಾದರೂ ಇದರ ವಿಷಯ ಲಕ್ಷ್ಯವಿಟ್ಟು ಕೊಡುವರೆಂದು ಭರವಸವಿಡಬೇಕಾಗಿದೆ.

ಇಲ್ಲಿಂದ ಸುಮಾರು ಎರಡು ಮೈಲಿನೊಳಗೆ ಇರುವ ಮಣಿಹಳ್ಳದ ಬೋರ್ಡು ಶಾಲೆಯನ್ನು ಮುಚ್ಚಿದ್ದಾರೆ. ಮಾತ್ರವಲ್ಲ. ಎಷ್ಟೋ ಖರ್ಚುಗಳಿಂದ ಯಾರೋ ಕಟ್ಟಿಸಿಕೊಟ್ಟ ಕಟ್ಟೋಣವು ಸಹ ಬಿದ್ದುಹೋಗಿದೆ. ಒಂದು ಕಡೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡುವಂಥ ಪ್ರಯತ್ನನಡಿಸುವಾಗ ನಮ್ಮಕಡೆ ಇದ್ದ ಶಾಲೆಗಳನ್ನೇ ಮುಚ್ಚುವಂಥಾ ಕಾಲ ಬಂದಿದೆ. ಇದು ಅಲ್ಲಿನ ಮಕ್ಕಳ ದುರ್ದೆಸೆಯೇ ಸರಿ.

ಕಾಸರಗೋಡು:—೧೯೨೨ನೇ ಇಸವಿ ಸಪ್ಟಂಬರ ತಿಂಗಳ ತಾ. ೧೫ ನೇ ಶುಕ್ರವಾರ ಗಂಟೆ ೨-೩೦ಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಸ್ಥಾಪಿಸಿದ ಕಾಸರಗೋಡು ತಾಲೂಕು ಬೋರ್ಡ ಮೆಂಬರರ ಪ್ರಥಮ ಸಭೆಯು ಕಾಸರಗೋಡಿನಲ್ಲಿ ತಾಲೂಕು ಬೋರ್ಡ ಆಫೀಸಿನಲ್ಲಿ ಕೂಡುವದು. ಎಲ್ಲಾ ಮೆಂಬರರು ಈ ಸಭೆಗೆ ಬರಬೇಕಾಗಿ ಅಪೇಕ್ಷೆಸಲಾಗುತ್ತದೆ. ಈ ತಾಲೂಕು ಬೋರ್ಡಿನ ಬಗ್ಗೆ ಒಬ್ಬ ಪ್ರೆಸಿಡೆಂಟನ ಮತ್ತು ಒಬ್ಬ ವೈಸ ಪ್ರೆಸಿಡೆಂಟನ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಬಗ್ಗೆ ೯ ಮೆಂಬರರ ಚುನಾವಣೆ ಸಹ ಮಾಡಲ್ಪಡುವುದು ಎಂದು ಕಾಸರಗೋಡು ತಾಲೂಕು ಬೋರ್ಡ ಪ್ರೆಸಿಡೆಂಟರು ಪ್ರಕಟಿಸಿದ್ದಾರೆ.

ಸುಳ್ಯ:—ಉಪ್ಪಿನಂಗಡಿ ತಾಲೂಕುಬೋರ್ಡ ಮೆಂಬರರ ಈ ಸಾಲಿನ ಅಧಿವೇಶನವು ಬರುವ ತಾ. ೨೫ನೇ ಸೋಮವಾರ ಮಧ್ಯಾಹ್ನ ೧ ಗಂಟೆಗೆ ಇಲ್ಲಿಯ ಬೋರ್ಡುಶಾಲೆಯ ಕಟ್ಟೋಣದಲ್ಲಿ ಸೇರುವುದು. ಈ ಅಧಿವೇಶನದಲ್ಲಿ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲಿಗೆ ಒಬ್ಬ ಮೆಂಬರರನ್ನು ಚುನಾಯಿಸಲಾಗುವುದು.

ಮಂಜೇಶ್ವರ:—ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನದ ಆಡಳಿತ ವ್ಯವಸ್ಥೆ ಕುರಿತು ಮಂಗಳೂರು ಸಬ್ ಕೋರ್ಟಿನಲ್ಲಿ ದಾಖಲಾದ ಸ್ಕೀಮ್ ಮೇರೆಗೆ ಮಂಗಳೂರು ಪೇಟೆಯಿಂದ ರಾ. ವಕೀಲ್ ಅಮ್ಮೆಂಬಳ ಶ್ರೀನಿವಾಸಪೈ, ರಾ. ನರಸಿಂಹಮೂರ್ತಿಭಂಡಾರಿ, ರಾ. ವಕೀಲ್ ಉಳ್ಳಾಲ ಅನಂತಪದ್ಮನಾಭನವರೂ ಮಂಜೇಶ್ವರ ಪೇಟೆಯಿಂದ ರಾ. ರಾಮಮುಕುಂದಪ್ಪ, ರಾ. ಅನಂತಪದ್ಮನಾಭ ಕಿಣಿ, ಬಂಗ್ರಮಂಜೇಶ್ವರ ಅನಂತರಂಗಕಮ್ತಿಗಳೂ, ಕುಂಬಳೆ ಪೇಟೆಯಿಂದ ರಾ. ನರಸಿಂಹ ರಾಯಪ್ರಭುಗಳೂ ಕೂಡಾ ಏಳುಜನ ಮೆಂಬರರು ನೇಮಿಸಲ್ಪಟ್ಟು, ಸದರಿ ದೇವಸ್ಥಾನದ ಆದಾಯ ಸೊತ್ತು ಇತ್ಯಾದಿ ಸದರಿ ಮೆಂಬರರ ವಶಕೊಡಿಸುವರೆ ರಾ. ವಕೀಲ್ ಮಂಜೇಶ್ವರ ಜನಾರ್ದನ ಮಲ್ಯರು ಕಮಿಷನರಾಗಿ ನೇಮಿಸಲ್ಪಟ್ಟು ಪ್ರಸ್ತುತ ಕ್ರಿಯೆಯವರಿಂದ ಚರಿತರ ಕೊಡಿಸುವರೆ ಇದೇ ಸಪ್ಟಂಬರ ತಾರೀಕು ೬ರಿಂದ ಪ್ರಾರಂಭವಾಗಿದೆ.

ಸ್ವರಾಜ್ಯವೂ ಸಮಾಜಸುಧಾರಣೆಯೂ.

(ತಾ. ೨೫—೮—'೨೨ರ ಸಂಚಿಕೆಯಿಂದ ಮುಂದರಿಸಿದ್ದು)

ಕಳೆದವಾರ ಸ್ವರಾಜ್ಯವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಕೊಟ್ಟು, ಅಂತಹ ಸ್ವರಾಜ್ಯವನ್ನು ಪಡೆಯಬೇಕೆಂಬ ಸದುದ್ದೇಶದಿಂದ ಕೆಲಸಮಾಡುವವರಲ್ಲಿ, ತಪ್ಪನ್ನು ಹುಡುಕಲಿಕ್ಕೆ ವೈದಿಕಧರ್ಮಾನುಯಾಯಿಯೂ ಹಿಂದೀಯನೂ ಆದ ನಾನು ಎಂದೂ ಸಮರ್ಥನಲ್ಲವೆಂಬುದನ್ನು ಸ್ಪಷ್ಟಪಡಿಸುವರೆ ಯತ್ನಿಸಿದೆನು. ನಮ್ಮಲ್ಲಿ ಅನೇಕ ಸಾಮಾಜಿಕ ಕೊರತೆಗಳಿವೆ ಎಂದೂ, ಅವುಗಳನ್ನು ಸಮೂಲ ಕಿತ್ತು ಹಾಕದಿದ್ದರೆ ಸ್ವರಾಜ್ಯಸಂಪಾದನೆಯ ಕಾರ್ಯವು ಅಸಾಧ್ಯವೆಂದೂ ನಾನು ಸೂಚಿಸಿದ್ದೆನು. ಈ ಹೊತ್ತು ಅವುಗಳಲ್ಲಿ ಕೆಲವನ್ನು ನಾನು ಸೂಚಿಸಿದ್ದೇನೆ. ನಿಜವಾದ ದೇಶವಾತ್ಸಲ್ಯವುಳ್ಳವರು ಅವನ್ನು ಲಕ್ಷ್ಯಕ್ಕೆತಾರದಿರಲಾರರೆಂದು ನಂಬುತ್ತೇನೆ.

ಇಂತಹ ಸಾಮಾಜಿಕ ಕೊರತೆಗಳಲ್ಲಿ ಬಾಲ್ಯವಿವಾಹವು ಮೊದಲನೆಯದಾಗಿದೆ. ಈ ನೀಚಪದ್ಧತಿಯೇ ನಮ್ಮ ಜನರ ಶಾರೀರಿಕ ಮತ್ತು ಮಾನಸಿಕ ದೌರ್ಬಲ್ಯಕ್ಕೆ ಮುಖ್ಯ ಕಾರಣವಾಗಿದೆಯೆಂಬುದನ್ನು ಹೇಳಬೇಕಾಗಿಲ್ಲ. ನಮ್ಮ ಪವಿತ್ರವಾದ ದೇಶದಲ್ಲಿ ದಿನೇದಿನೇ ಹೆಚ್ಚಾಗುತ್ತಲಿರುವ ಮಕ್ಕಳ ಮರಣದ ಸಂಖ್ಯೆಗೆ ಈ ಪದ್ಧತಿಯೇ ಕಾರಣವಾಗಿದೆ. ಐದುಸಾವಿರ ವರ್ಷಗಳ ಹಿಂದೆ ಆರೋಗ್ಯಶಾಸ್ತ್ರದಲ್ಲಿ ಪಾರಂಗತನಾದ ಚಾರಕಮುನಿಯು "ಇಪ್ಪತ್ತೈದು ವರ್ಷವಾಗದ ಮನುಷ್ಯನು ಹದಿನಾರು ವರ್ಷವಾಗದ ಹುಡುಗಿಯೊಡನೆ ಕೂಡಿದರೆ, ಅದರ ಫಲವು ಯಾವಾಗಲೂ ಕೆಟ್ಟದ್ದು, ಒಂದೋ ಗರ್ಭಕೋಶವು ಬೀಳುತ್ತದೆ, ಇಲ್ಲವೇ ಮಗುವು ಬಹುಕಾಲ ಬದುಕುವುದಿಲ್ಲ, ಅಥವಾ ಬದುಕಿದರೂ ಬಹಳ ಬಲಹೀನವಾಗಿರುತ್ತದೆ. ಆದುದರಿಂದ ಗಂಡಸಿಗೆ ೨೫ ವರ್ಷವೂ ಹೆಂಗಸಿಗೆ ೧೬ ವರ್ಷವೂ ಆಗದ ಮದುವೆಯಾಗಕೂಡದು." ಎಂದು ಘಂಟಾಘೋಷವಾಗಿ ಸಾರಿದ್ದಾನೆ. ಈ ದುಷ್ಟಪದ್ಧತಿಯಿಂದ ಈಗ ನಮ್ಮ ದೇಶದ ಸ್ಥಿತಿಯು ಎಷ್ಟು ಶೋಚನೀಯವಾಗಿದೆ? ಒಂದಾನೊಂದುಕಾಲದಲ್ಲಿ ಮಹಾ ಋಷಿಗಳೂ ಪಂಡಿತರೂ ವಾಸಿಸುತಿದ್ದ ನಮ್ಮೀ ಪವಿತ್ರ ಭೂಮಿಯಲ್ಲಿ ಐದು ವರ್ಷಕ್ಕಿಂತಲೂ ಕಡಿಮೆಪ್ರಾಯದ ೧೭ ಸಾವಿರಕ್ಕೂ ಹೆಚ್ಚು ವಿಧವೆಯರಿದ್ದಾರೆಂಬುದು ನಿಜವಾಗಿಯೂ ದುಃಖಕರವಾದ ಸಂಗತಿಯಲ್ಲವೇ? ಒಂದು ವರ್ಷ ಕೂಡ ಪ್ರಾಯವಾಗದ ವಿಧವೆಯರ ಸಂಖ್ಯೆಯೇ ಒಂದು ಸಾವಿರಕ್ಕೆ ಕಡಿಮೆಯಿಲ್ಲವೆಂಬುದಕ್ಕಿಂತಲೂ ವಿಶೇಷ ದುಃಖವಿದೆಯೇ! ಈಗಿನ ಸ್ಥಿತಿಯನ್ನೇ ಮುಂದುವರಿಯಬಿಟ್ಟು, ಈ ದುಷ್ಟಪದ್ಧತಿಯನ್ನು ಸಮೂಲನಾಶವಮಾಡದಿದ್ದರೆ ನಮ್ಮ ಜನಾಂಗದಲ್ಲಿ ಅನೇಕರು ದುರ್ಬಲರಾಗಿ ಆಲೋಚನಾಶಕ್ತಿಯ ಕೆಲಸಮಾಡುವ ಸಾಮರ್ಥ್ಯವೂ ಇಲ್ಲದವರಾಗುತ್ತಾರೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅಂತಹ ಸ್ಥಿತಿಯು ಬರುವುದು ಹಿತಕರವೇ? ಹಾಗಲ್ಲವಾದರೆ ಸ್ವರಾಜ್ಯಯುದ್ಧದಲ್ಲಿ ಕಂಕಣಬದ್ಧರಾದ ನಾವು ಇಂತಹ ಸಾಮಾಜಿಕಕೊರತೆಗಳನ್ನು ಕಿತ್ತುಹಾಕುವುದು ನಮ್ಮ ಕರ್ತವ್ಯವಲ್ಲವೇ? ಇದು ನಮ್ಮ ಕರ್ತವ್ಯವೆಂದು ನಾನು ನಿಜವಾಗಿಯೂ ನಂಬುತ್ತೇನೆ.

ಅಸ್ಪೃಶ್ಯತೆಯಿಂದ ಮೇಲುಕೀಳು ಎಂಬ ಭಾವನೆಗಳಿಂದಲೇ ಉಂಟಾದ ಪಾರಂಪರ್ಯ ಜಾತಿಭೇದವೇ ಈ ಸಂದರ್ಭದಲ್ಲಿ ನಾನು ವಿಚಾರಿಸಬೇಕೆಂದಿರುವ ಪ್ರಶ್ನೆಯಾಗಿದೆ. ಈ ವಿಚಾರವಾಗಿ ನಾನು ಅನೇಕ ವೇಳೆ ನನ್ನ ಅಭಿಪ್ರಾಯವನ್ನು ಕೊಟ್ಟಿರುವುದರಿಂದ ಇಲ್ಲಿ ಇದರ ಕುರಿತು ಹೆಚ್ಚು ಚರ್ಚಿಸುವುದಿಲ್ಲ. ಈಗಿನ ಪಾರಂಪರ್ಯ ಜಾತಿಭೇದದ ಪದ್ಧತಿಯು ವೇದಗಳ ಉಪದೇಶಕ್ಕೆ ತೀರಾ ವಿರೋಧವಾಗಿದೆಯೆಂದು ನಾನು ನಂಬುತ್ತೇನೆ. ವಿಜ್ಞಾನಶಾಸ್ತ್ರದ 'ಕಾರ್ಯ ವಿಭಜನಾ' ತತ್ವಕ್ಕನುಸಾರವಾದ ವರ್ಣವ್ಯವಸ್ಥೆಯೆಂಬುದು ನಮ್ಮ ಶಾಸ್ತ್ರಗಳಲ್ಲಿ ಇದ್ದರೂ, ಈಗಿನ ಜಾತಿಭೇದಗಳಿಗೆ ಶಾಸ್ತ್ರಗಳಲ್ಲಿ ಎಡೆಯೇ ಇಲ್ಲ. ವರ್ಣ ವ್ಯವಸ್ಥೆಗನುಸಾರವಾಗಿ ಪ್ರತಿಯೊಬ್ಬ ಮನುಷ್ಯನೂ ಸಮಾಜದ ಒಂದಂಶವಾಗಿದ್ದು ತನ್ನ ಶಕ್ತಿಯ ಮಟ್ಟಿಗೂ ಮಾನವಕುಟುಂಬಕ್ಕೆ ಸಹಾಯಮಾಡುತ್ತಿದ್ದನು. ಮನು, ಶಂಕರಾಚಾರ್ಯ, ವೇದವ್ಯಾಸ ಮೊದಲಾದ ಸ್ಮೃತಿಕರ್ತರು ಬರೇ ಯೋಗ್ಯತೆಯ ಮೇಲೆ ಮಾತ್ರವೇ ಹೊಂದಿರುವ ವರ್ಣವ್ಯವಸ್ಥೆಗೆ ಸಮ್ಮತಿಕೊಡುತ್ತಾರೆ. ಈ ವಿಷಯದಲ್ಲಿ ಹೆಚ್ಚಿನ ಅನುಭವವನ್ನು ಪಡೆಯಬೇಕೆಂದಿಚ್ಛಿಸುವವರು ಮಂಗಳೂರು ಆರ್ಯಸಮಾಜದಿಂದ ಪ್ರಕಟಿಸಲ್ಪಟ್ಟ "ಜಾತಿ ಭೇದ ವಿಚಾರ" ಎಂಬ ಚಿಕ್ಕ ಪುಸ್ತಕವನ್ನು ಓದಬೇಕಾಗಿ ವಿನಂತಿ. ಇಲ್ಲಿ ಸ್ವರಾಜ್ಯಕ್ಕೂ ಈ ಪಾರಂಪರ್ಯ ಜಾತಿಭೇದದ ಪದ್ಧತಿಯನ್ನು ನಿವಾರಿಸುವುದಕ್ಕೂ ಇರುವ ಸಂಬಂಧವನ್ನು ಮಾತ್ರವೇ ವಿಚಾರಿಸುವುದು ನನ್ನ ಉದ್ದೇಶವಾಗಿದೆ. ಹಿಂದೂಸಮಾಜವನ್ನು ಅಸಂಖ್ಯ ಜಾತಿಗಳಾಗಿಯೂ ಉಪಜಾತಿಗಳಾಗಿಯೂ ವಿಂಗಡಿಸಿದ ಈ ಪದ್ಧತಿಯು ನಮ್ಮ ಏಳಿಗೆಗೆ ಎಷ್ಟು ಹಾನಿಕರವಾಗಿದೆ ಎಂಬುದನ್ನು ನಾನು ಹೇಳಬೇಕಾಗಿಲ್ಲ. ಮದ್ರಾಸ್ ಸಂಸ್ಥಾನದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರ ಕಲಹಗಳು ಎಲ್ಲರಿಗೂ ಗೊತ್ತೇ ಇದೆ. ಬ್ರಾಹ್ಮಣೇತರರಲ್ಲಿ ಹೆಚ್ಚಿನವರು ಸ್ವರಾಜ್ಯಸಾಧನೆಯ ಎಲ್ಲಾ ರಾಜಕೀಯ ಚಳವಳಿಗೂ ವಿರೋಧವಾಗಿದ್ದಾರೆಂಬುದನ್ನು, ಅವರೆಲ್ಲ ಬ್ರಾಹ್ಮಣರ ಅಧಿಕಾರಕ್ಕೆ ಹೆದರುತ್ತಾರೆಂಬುದನ್ನು ಸುಮ್ಮನೆ ಮೂಲೆಗೊತ್ತಲು ಸಾಧ್ಯವಿಲ್ಲ. [illegible] ಎಂಬ ಭಾವನೆಯನ್ನು ನಾವು [illegible] ಪ್ರತಿಭಟಿಸುವುದನ್ನು ವಿಚಾರಿಸುವ [illegible] ಸಮಯದಲ್ಲಾದರೂ [illegible] ನಮ್ಮ ದೇಶದಲ್ಲಿ ಬ್ರಾಹ್ಮಣರೂ, [illegible] ದ್ವೇಷಭಾವದಿಂದ [illegible] ವರಿಂದ ಎಲ್ಲರೂ ಬ್ರಾಹ್ಮಣರು [illegible] ವಿರೋಧವಾಗಿರುವ [illegible] ನಮ್ಮ ಕರ್ತವ್ಯವಾಗಿ [illegible]

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" ದೇವರಲ್ಲಿ" ಎಂಬ ಅಂಗ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

NOTICE.

IN THE SUB COURT OF SOUTH CANARA.

O. S. NO. 55/1922.

BETWEEN

Mahammad Haji — *Plaintiff*,

AND

1. Abdulla
2. Kunhi Kutti Ali
3. Kunhamad Elaya

} DEFENDANTS.

The Plaintiff named above has filed the aforesaid suit on behalf of himself and his entire tarwad known as the "Kotapura Edakavil Tarwad" for a declaration that the patadharam executed by the 1st defendant in favour of defendants 2 and 3 on 18—7—1922 is not valid and binding on the Plaintiff or his Tarwad on the plaint properties etc. and permission has been given to the Plaintiff to sue also on behalf of the Tarwad as per order on I. A. No. 356/22 dated 5-9-1922. The members of the Tarwad are hereby informed of the same and that the suit is posted for first hearing on 27-9-'22.

MANGALORE
6—9—1922.
K. P. Gopalkrishna Rao,
Vakil for Plaintiff.

ನೋಟೀಸು

ಕಾಸರಗೋಡು ತಾಲೂಕು ಕಾಸರಗೋಡು ಮಾಗಣೆ ಕೂಡ್ಲು ಗ್ರಾಮದಲ್ಲು ಇರುವ ಪರಮೇಶ್ವರಯ್ಯನವರ ಮಗ ಕಾಳಿಯಂಗಾಡು ಮಲ್ಲಿಕಾರ್ಜುನಯ್ಯನು ಈ ಮೂಲಕ ಸರ್ವೇಜನರಿಗೆ ತಿಳಿಯಪಡಿಸುವುದೇನೆಂದರೆ:—

ನನಗೆ ಸದರಿ ಕೂಡ್ಲು ಗ್ರಾಮದಲ್ಲಿ ಇರುವ ಪೈಕದ ಮೊಯಿದಿಂಕುಟ್ಟಿಬ್ಯಾರಿ ಮಗ ಹಸಿನಾರ ಬ್ಯಾರಿಯು ತಾ. ೨೦-೨-೧೯೨೨ರಲ್ಲು ನನಗೆ ರೂ. ೧೨೫ಕ್ಕೆ ಬರಕೊಟ್ಟ ರಶೀದಿ ಒಂದು ಮತ್ತು ಸದರಿಯವನು ತಾ. [illegible]ರಲ್ಲು ನನಗೆ ರೂ. [illegible]ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟು ಒಂದು ಕೂಡಾ ಎರಡು ದಾಖ್ಲೆಗಳು ಜೋತೆಯಲ್ಲಿದ್ದದ್ದು ಕಾಣೆಯಾಗಿ ಹೋಗಿರುವುದನ್ನು ಸಿಕ್ಕಿದವರು ನನಗೆ ತಂದುಕೊಟ್ಟರೆ ಅವರಿಗೆ ರೂ. ೫ನ್ನು ಇನಾಮಾಗಿ ಕೊಡುವರೆ ಸಿದ್ಧನಿರುತ್ತೇನೆಂತ ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುತ್ತೇನೆ.

ಗೊಡು.
ರೂ 2. ಪತ್ರ [illegible] K. MALLIKARJUNA.
[illegible]

ನೋಟೀಸು.

ದಿ ಯುನಿವರ್ಸಲ್ ಸ್ಟೀಮನೇವಿಗೇಶನ್ ಕಂಪೆನಿ ಲಿಮಿಟೆಡ್ ಮಂಗಳೂರು

ಈ ಕಂಪೆನಿಯು ಅವರ ಪಾಲುದಾರರಿಗೆ ಈ ಕೆಳಗಿನ ಸಂಗತಿಯನ್ನು ತಿಳಿಸಲು ಬಹಳ ಆನಂದಪಡುತ್ತದೆ. ಕಂಪೆನಿಯು ಬಹಳ ವೇಗದಿಂದ ಓಡುವ (೧೦೧ ಗ್ರೋಸ್‌ಟನೇಜ್, ಪೈಪ್ಪ ೮೫) ಇಲೆಕ್ಟ್ರಿಕ್ ದೀಪಗಳಿಂದ ಕೂಡಿದ ೮೫೦ ಮಂದಿ ಪ್ರಯಾಣಿಕರನ್ನು ಒಯ್ಯಲು ಅನುಕೂಲವುಳ್ಳ ೧೩ knotರಷ್ಟು ವೇಗವುಳ್ಳ ಕಳೆದ ೧೯೧೯-೨೦ರಲ್ಲಿ ಹೊಸತಾಗಿ ಕಟ್ಟಲ್ಪಟ್ಟ ಎರಡು ಸ್ಟೀಮರುಗಳನ್ನು ಜರ್ಮನಿಯಲ್ಲಿ ಕೊಂಡುಕೊಂಡಿದೆ.

ಸಾಮಾನನ್ನು ಪ್ರಯಾಣಿಕರನ್ನು ಒಯ್ಯಲು ಸಹಾಯಕವಾಗುವ ಇನ್ನೊಂದು ಸ್ಟೀಮರನ್ನು ಒಂದು ಸ್ಟೀಮ ಲೋಂಚನ್ನು ಕೊಂಡುಕೊಳ್ಳುವ ಪ್ರಯತ್ನವು ನಡೆಯುತ್ತಿದೆ. ಮತ್ತು ಈ ಪ್ರಯತ್ನವು ಸಫಲವಾದರೆ ಅವುಗಳನ್ನು ಬೇಗನೇ ಕೊಂಡುಕೊಳ್ಳುವರು. ಈ ವಿಷಯದಲ್ಲಿ ಮುಂಬಯಿ ಹೆಡ್ ಆಫೀಸಿಗೆ ತಂತಿ ಬರುತ್ತಲೇ ಪಾಲುದಾರರಿಗೆ ಆ ಸಂಗತಿ ಸಹ ತಿಳಿಸಲಾಗುವುದು.

ಲಂಡನಿನಿಂದ ಹಡಗುಗಳನ್ನು ಒದಗಿಸಿ ಕೊಡುತ್ತಿದ್ದ ಒಂದು ಕಂಪೆನಿಯವರು ಮಾರಲು ಸಿದ್ಧವಿದ್ದ ಹಡಗುಗಳಿಂದ ಮೂರು ಪ್ರಯಾಣಿಕರ ಸ್ಟೀಮರುಗಳನ್ನೂ ಸಾಮಾನನ್ನು ಒಯ್ಯಲು ಅನುಕೂಲವಿದ್ದ ಒಂದು ಕಾರಗೋಸ್ಟೀಮರನ್ನೂ ಕೊಂಡುಕೊಳ್ಳಲು ಕಳೆದ ಮೇ ತಿಂಗಳಲ್ಲಿ ಕಂಪೆನಿಯ ಇಂಜಿನಿಯರರನ್ನು ಲಂಡನಿಗೆ ಕಳುಹಿಸೋಣಾಗಿತ್ತು. ಆದರೆ ಆ ಹಡಗುಗಳಲ್ಲಿ ಹೆಚ್ಚಾಗಿ ಎಲ್ಲವೂ ಉಪಯೋಗಕ್ಕೆ ಬಾರದವುಗಳೆಂದು ಕಂಡು ಬಂದುದರಿಂದ ಜರ್ಮನಿಯಿಂದ ಒಳ್ಳೇ ಸ್ಟೀಮರುಗಳನ್ನು ಆರಿಸಿ ಪಡಕೊಳ್ಳಬೇಕಾಯಿತು. ಆದುದರಿಂದ ಈಗ ಬಹಳ ವೇಗದಿಂದ ಓಡುವ ಮತ್ತು ಹೆಚ್ಚಾಗಿ ಹೊಸತಾಗಿಯೇ ಇರುವ ಹಾಗು ಪ್ರಯಾಣಿಕರಿಗೆ ಕೂತುಕೊಳ್ಳಲು ವಿಶಾಲವಾಗಿಯೂ ಹೆಚ್ಚಿನ ಸೌಕರ್ಯಗಳುಳ್ಳದ್ದಾಗಿಯೂ ಇರುವ ಎರಡು ಸ್ಟೀಮರುಗಳನ್ನು ಕೊಂಡುಕೊಂಡಿದೆ. ಹಿಂದೂಸ್ಥಾನದಲ್ಲಿ ಚಲಾವಣೆಗೆ ತರುವುದಕ್ಕಾಗಿ ಹೆಚ್ಚಿನ ಸಹಾಯಕವಾಗುವಂತೆ ಈಗ ಈ ಹಡಗುಗಳಲ್ಲಿ ಕೆಲವು ರೂಪಭೇದಗಳನ್ನು ಮಾಡುವುದು ಮತ್ತು ಈ ಹಡಗುಗಳನ್ನು ದ್ರವ ಪದಾರ್ಥಗಳಿಂದಲೂ ಕಲ್ಲಿದ್ದಲ್ಲಿನಿಂದಲೂ ನಡಿಯುವಂತೆ ಮಾಡುವುದು ಈ ಕಾರ್ಯಗಳು ಈಗ ನಡಿಯುವುವು. ಈ ಕೆಲಸವನ್ನೂ ಇತರ ಕೆಲವು ಬದಲಾವಣೆಗಳನ್ನೂ ಮಾಡಿಮುಗಿಸಲು ನಾಲ್ಕಾರು ವಾರಗಳ ಕಾಲವು ಹಿಡಿಯುವುದು.

ಪಶ್ಚಿಮ ಕರಾವಳಿಯಲ್ಲಿ ಚಲಾವಣೆಗೆ ಕೂಡಲೇ ಪ್ರಾರಂಭಿಸಲು ಅನುಕೂಲವಾಗುವಂತೆ ನಮ್ಮ ಇಂಜಿನಿಯರರು ಈ ಸ್ಟೀಮರುಗಳನ್ನು ಬರುವ ಒಕ್ಟೋಬರ ತಿಂಗಳ ಪ್ರಾರಂಭದಲ್ಲಿಯೇ ತರಲಿಕ್ಕಿದ್ದಾರೆಂದು ತಿಳಿಯುತ್ತೇವೆ. ಆದುದರಿಂದ ಹಡಗು ಚಲಾವಣೆಯನ್ನು ಬರುವ ಒಕ್ಟೋಬರದಿಂದ ಮಾಡಬಹುದೆಂದು ಕಂಪೆನಿಯು ನಂಬಿದೆ.

ಪಾಲುಗಳ ಪ್ರಥಮ ಕಂತಿನ ಹಣವನ್ನೂ ಎಲೋಟ್‌ಮೆಂಟಿನ ಹಣವನ್ನೂ ಈ ವರೆಗೆ ಕೊಡದೆ ಇದ್ದ ಕಂಪೆನಿಯ ಪಾಲುಗಾರರು ಬೇಗನೆ ದಯವಿಟ್ಟು ಪಾವತಿ ಮಾಡಬೇಕಾಗಿದೆ.

ಹಂಪನಕಟ್ಟೆ ಆಫೀಸು,
ಮಂಗಳೂರು
ತಾ. 5-9-1922
ಪಿ. ಯಂ. ಕಾಮತ್,
ಎಜಂಟ್, ದಿ ಯುನಿವರ್ಸಲ್ ಸ್ಟೀಮ
ನೇವಿಗೇಶನ್ ಕಂಪೆನಿ ಲಿಮಿಟೆಡ್.

ಸರಕಾರಿ ಆನೆಗಳ ಏಲಂ.

1922ನೇ ಇಸವಿ ಸಪ್ಟಂಬರ ತಾರೀಕು 16 ರಲ್ಲು ಒಲವಕೋಡ್ ರೈಲ್ವೆ ಸ್ಟೇಶನಿನಲ್ಲಿ ಸುಮಾರು 15 ಆನೆಗಳನ್ನು ಬಹಿರಂಗವಾಗಿ ಏಲಂ ಮಾಡೋಣಾಗುವುವು.

ಹೆಚ್ಚಿನ ಮಾಹಿತಿ ಬಗ್ಗೆ
ಕನ್ಸರ್ವೇಟರ್ ಆಫ್ ಫೋರೆಸ್ಟ್ಸ್, 6ನೇ ಸರ್ಕಲ್ ಉಟಾಕಮಂಡ್.
ಇವರಿಗೆ ಬರೆಯತಕ್ಕದ್ದು.

Mangalore,
29—8—1922.
(Sd) F. R. MADAN,
District Forest Officer, South Mangalore.

ಏಲಂ ಮೂಲಕ ಮಾರಾಟ.

ಯಂ. ಸುಬ್ರಾಯ ಕಮ್ತಿಯವರ $\frac{74}{1922}$ನೇ ದಿವಾಳಿ ಅರ್ಜಿ ಸಂಬಂಧ ಮಾರಾಟ.—

ಒಫಿಸಿಯಲ್ ಎಸ್ಸೈನಿಯವರ ಸೂಚನೆಯಂತೆ ಮತ್ತು 1, 2 ಮತ್ತು 3ನೆ ಲೋಟುಗಳನ್ನು ಅಡವಿಗೆ ವಹಿಸಿಕೊಂಡ ರಾ. ಯಂ. ರಾಮಚಂದ್ರ ಪೈಗಳವರ ಅನುಮತಿಯಿಂದ ಮುಸ್ಸರ್ಸ್ ಡ್ರೌಡ್ ಎಂಡ್ ಕೋ ಇವರು ಇದೇ ಸಪ್ಟಂಬರ ತಾರೀಕು 16ನೇ ಶನಿವಾರ ಪ್ರಾತಃಕಾಲ 8 ಗಂಟೆಗೆ ಕಾಸರಗೋಡು ಅಸಿಸ್ಟಾಂಟ ಇಂಜಿನಿಯರ ಆಫೀಸಿನ ಸಮೀಪವಿರುವ ಟ್ರಾವಲರ್ಸ್ ಬಂಗಲೆಯಲ್ಲಿ ಕೆಳಗೆ ಕಾಣಿಸಿದ ಆಸ್ತಿಗಳ ಮತ್ತು ಮನೆಯ ಕುಂತು ದಿವಾಳಿದಾರರಿಗೂ ಈ ಲೋಟುಗಳನ್ನು ಅಡವಿಗೆ ಪಡೆಕೊಂಡವರಿಗೂ ಇರುವ ವಿಶಿಷ್ಟ ಹಕ್ಕು ಬಾಧ್ಯತೆಗಳನ್ನು ಬಹಿರಂಗವಾದ ಏಲಂ ಮೂಲಕ ಮಾರಾಟಮಾಡುವರು.

1. ಕಾಸರಗೋಡು ತಾಲೂಕು ನಂಬ್ರ 16ನೇ ಬಡಾಜೆ ಗ್ರಾಮದಲ್ಲಿರುವ ಸರ್ವೆ ನಂಬ್ರ 53 (1, 8, 9 ಮತ್ತು 11) ವಿಸ್ತೀರ್ಣ 2 ಎಕ್ರೆ 35 ಸೆಂಟ್ಸ್ ಪಟ್ಟಾ ನಂಬ್ರ 84ಕ್ಕೆ ಸೇರಿದ ಸ್ಥಳ.

2. ನಂಬ್ರ 24ನೇ ಶಿರಿ ಗ್ರಾಮದಲ್ಲಿರುವ ಸರ್ವೆ ನಂಬ್ರ 20ಕ್ಕೆ ಒಳಪಟ್ಟದ್ದು (2 ಮತ್ತು 11), 22 (1), 23(2) ಮತ್ತು 26. (2) ವಿಸ್ತೀರ್ಣ 1 ಎಕ್ರೆ 49 ಸೆಂಟ್ಸ್ ಪಟ್ಟಾ ನಂಬ್ರ 11ರಲ್ಲಿ ಸೇರಿದ.

3. ಕಾಸರಗೋಡು ತಾಲೂಕು ಕೂಡ್ಲು ಗ್ರಾಮ ಸರ್ವೆ ನಂಬ್ರ 58 (1, 2, 3, 4 ಮತ್ತು 5) 7 ಎಕ್ರೆ 46 ಸೆಂಟ್ಸ್ ವಿಸ್ತೀರ್ಣ. ಪಟ್ಟಾ ನಂಬ್ರ 54ಕ್ಕೆ ಒಳಪಟ್ಟದ್ದು.

4. ಕಾಸರಗೋಡು ತಾಲೂಕಿನ ನಂಬ್ರ 24ನೇ ಶಿರಿ ಗ್ರಾಮದ ಸರ್ವೆ ನಂಬ್ರ 7 (1) ಮತ್ತು 7 (2)ಕ್ಕೆ ಒಳಪಟ್ಟ 3 ಎಕ್ರೆ 24 ಸೆಂಟ್ಸ್ ವಿಸ್ತೀರ್ಣದ 6000 ಬುಡಕಿನ ಮರ ಮೊದಲಾದವುಗಳಿಂದ ಕೂಡಿದ ಆಸ್ತಿ.

5. ಮೇಲಿನ ಗ್ರಾಮದಲ್ಲಿ ಇರುವ ಸರ್ವೆ ನಂಬ್ರ 10 (1), 6 (2), 6 (3B) 5 ಎಕ್ರೆ 85 ಸೆಂಟ್ಸ್ ವಿಸ್ತೀರ್ಣ 14,000 ಬುಡಕಿನ ಮರಗಳೂ 40 ತೆಂಗಿನ ಮರಗಳೂ ಇರುವಂಥಾ ಆಸ್ತಿ.

6. ಕಾಸರಗೋಡು ತಾಲೂಕಿನ [illegible] ಗ್ರಾಮದಲ್ಲಿರುವ ಪಟ್ಟಾ ನಂಬ್ರ 140ರ ಒಂದು ಮನೆ ಕಡ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ,

ಕಳೆದ ತಾ. ೨೭ ಮತ್ತು ತಾ. ೨೮ರಲ್ಲಿ ಜರುಗಿದ ಜಿಲ್ಲಾ ಕಾಂಗ್ರೆಸ ಕಮಿಟಿಯ ಮೀಟಿಂಗಿನಲ್ಲಿ ಪಾಸಾದ ಕೆಲವು ಠರಾವುಗಳು.

ಬರುವ ವರ್ಷದ ಚುನಾವಣೆಯಾಗುವ ವರೆಗೆ ರಾ. ಉಡುಪಿ ಗೋವಿಂದರಾಯರನ್ನು ಜಿಲ್ಲಾ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಯರನ್ನಾಗಿ ಚುನಾಯಿಸಲಾಯಿತು. ರಾ. ಕಾರಂತರು ರಾಜಿನಾಮೆ ಕೊಟ್ಟದೆಸೆಯಿಂದ ಅವರ ಸ್ಥಳದಲ್ಲಿ ರಾ. ಬಡಕಬೈಲ್ ಪರಮೇಶ್ವರಯ್ಯನವರನ್ನು ಕಾರ್ಯಕಾರಿಮಂಡಳಿಯ ಸದಸ್ಯರನ್ನಾಗಿ ಚುನಾಯಿಸಲಾಯಿತು. ರಾ. ಉಚ್ಚಿಲ ರಾಮರಾಯರನ್ನು ಖಾಲಿ ಇದ್ದ ಸ್ಥಳದ ಪೈಕಿ ಒಂದು ಸ್ಥಳದಲ್ಲಿ ಜಿ. ಕಾ. ಕ. ಕಾರ್ಯಕಾರಿಮಂಡಳಿಯ ಸದಸ್ಯರನ್ನಾಗಿ ಆರಿಸಬೇಕಾಗಿ ನಿರ್ಣಯಿಸಲಾಯಿತು.

೭. ರಾ. ರಾಮಕೃಷ್ಣ ಕಾರಂತರು ತನ್ನ ಪರಿಶೋಧನೆಯ ವರದಿಯಲ್ಲಿ ಮಹಾಸಭೆಗೆ ಕೇಳಿದ ಪ್ರಶ್ನೆಯ ಪ್ರಕಾರ ಇನ್ನು ಮುಂದೆ ಪ್ರಾ. ಕಾ. ಕ. ಗೆ ಪ್ರತಿನಿಧಿಗಳಾಗಿ ಹೋಗುವವರ ಪ್ರಯಾಣದ ಖರ್ಚನ್ನಾಗಲೀ ಅವರ ಪ್ರತಿನಿಧಿ ವರ್ಗಣೆಯನ್ನಾಗಲೀ ಈ ಕಮಿಟಿಗೆ ಆ ಬಗ್ಗೆ ನೋಟೀಸುಕೊಟ್ಟು ಮಂಜೂರಾತಿಪಡೆದ ವಿನಹಾ ಕೊಡಬಾರದಾಗಿ ಬಹುಮತದಿಂದ ನಿರ್ಣಯಿಸಲಾಯಿತು.

೮. ಹೊಸ ವರುಷದ ಕೋಶಾಧಿಕಾರಿಯ ಚುನಾವಣೆಯ ಕಾಲದಲ್ಲಿ ಮಂಗಳೂರು ತಾ. ಕಾ. ಕ. ಕೋಶಾಧಿಕಾರಿಗಳೂ ಈ ಕಮಿಟಿಯ ಕೋಶಾಧಿಕಾರಿಗಳೂ ಒಬ್ಬರೇ ಆಗದಂತೆ ಯತ್ನಮಾಡಬೇಕಾಗಿ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು.

೯. ೧೯೨೨ನೇ ಇಸವಿ ಎಪ್ರಿಲ್ ಆಖೈರುವರೆಗಿನ ಮತ್ತು ಜೂನು ಆಖೈರುವರೆಗಿನ ಈ ಕಮಿಟಿಯ ಮತ್ತು ಇದರ ಕೈಕೆಳಗಿನ ಎಲ್ಲಾ ಸಂಸ್ಥೆಗಳ ಜಮಾ ಖರ್ಚಿನ ಪಟ್ಟಿಗಳನ್ನು ಪರಿಶೋಧಕರ ವರದಿ ಸಮೇತ ಕಾರ್ಯದರ್ಶಿಯವರು ಮುಂದಿನ ಕಾರ್ಯಕಾರಿ ಮಂಡಳಿಯ ಸಭೆಯಮುಂದಿಡಬೇಕು.

೧೦. ಜಿಲ್ಲೆಯಲ್ಲಿದ್ದ ಎಲ್ಲಾ ಕಾಂಗ್ರೆಸ್‌ಸಂಸ್ಥೆಗಳು ಆರಂಭವಾದಂದಿನಿಂದ ಇದೇ ವರುಷದ ಜೂನ್ ಆಖೈರ ವರೆಗಿನ ವರದಿ ಮತ್ತು ಜಮಾ ಖರ್ಚಿನ ಪಟ್ಟಿಗಳನ್ನು ಪುಸ್ತಕ ರೂಪದಲ್ಲಿ ಕಾರ್ಯಕಾರಿ ಮಂಡಳಿಯವರು ಛಾಪಿಸಿ ಅಕ್ಟೋಬರ ೧೫ರ ಒಳಗೆ ಪ್ರಕಟಿಸಬೇಕಾಗಿ ನಿರ್ಣಯಿಸಲಾಯಿತು. ೧೧. ಜಿಲ್ಲಾ ಕಾ. ಕಮಿಟಿಯ ಮಹಾಸಭೆಯ ವರದಿಗಳನ್ನು ಪ್ರಕಟಿಸಬೇಕೆಂಬ ರಾ. ಭೋಜರಾಯರ ಸೂಚನೆಯನ್ನು ಸರ್ವಸಮ್ಮತದಿಂದ ಮಂಜೂರುಮಾಡಲಾಯಿತು.

೧೨. ಮಂಗಳೂರು ತಾ. ಕಾ. ಕಮಿಟಿಪರವಾಗಿ ನಡೆಯಿಸಿದ ಖಾದಿಭಂಡಾರದ ಲೆಕ್ಕದಲ್ಲಿ ಬೆಳಗಾಂವಿನ ಸುದರ್ಶನಚರಕಾಲಯಕ್ಕೆ ಸದರಿ ಕಮಿಟಿಯಿಂದ ಸಲಬೇಕಾದ ಹಣವನ್ನು ಕೂಡಲೇ ಸಲಾಯಿಸುವ ಅಗತ್ಯವಿರುವುದರಿಂದಲೂ ಸದರಿ ಕಮಿಟಿಯವರಿಗೆ ಖಾದಿ ಭಂಡಾರದಿಂದ ಸಲತಕ್ಕ ಹಣವನ್ನು ಹಣದ ರೂಪದಲ್ಲಾಗಲೀ ನೂಲಿನ ರೂಪದಲ್ಲಾಗಲೀ ತಾ. ಕಾ. ಕ. ಕಾರ್ಯದರ್ಶಿಯರಿಗೆ ಕೂಡಲೇ ಕೊಡಿಸಬೇಕಾಗಿ ಸದರಿ ಭಂಡಾರದ ಮೆನೇಜರರಿಗೆ ಬರೆಯಬೇಕಾಗಿ ನಿರ್ಣಯಿಸಲಾಯಿತು. ಈ ನಿರ್ಣಯದ ಪ್ರಕಾರ ಬೆಳಗಾಂವಿಗೆ ಸಲತಕ್ಕ ರೂ. ೯೦೦-೦-೦ನ್ನು ಅಥವಾ ಅಷ್ಟು ಬೆಲೆಯ ನೂಲನ್ನು ಕಳುಹಿಸಬೇಕೆಂಬ ಅರಿಕೆ ಸಮೇತ ಈ ನಿರ್ಣಯದ ಪ್ರತಿಯನ್ನು ತಾ. ಕಾರ್ಯದರ್ಶಿಯರಿಗೆ ಕಳುಹಿಸಬೇಕಾಗಿ ನಿಶ್ಚಯಿಸಲಾಯಿತು.

೧೩. ಕಳೆದ ತಿಂಗಳ ತಾ. ೨೭ನೇ ಆದಿತ್ಯವಾರ ಜರುಗಿದ ಇದೇ ಕಮಿಟಿಯ ಕಾರ್ಯಕಾರಿಮಂಡಳಿಯ ಸಭೆಯಲ್ಲಿ ನಮ್ಮ ಕಮಿಟಿಯಿಂದ ಪ್ರಾಂತಿಕ ಕಮಿಟಿಗೆ ಇನ್ನು ಸಲಬೇಕಾಗಿದ್ದ ಹಣವನ್ನು ಮಾಫಿಮಾಡಬೇಕೆಂದು ಬೇಡಿಕೊಂಡ ನಿರ್ಣಯವನ್ನು ಪ್ರಾ. ಕಾ. ಕ. ಕಾರ್ಯದರ್ಶಿಯರಿಗೆ ಈ ಮೊದಲೇ ತಿಳಿಸಿರುವ ಮೇರೆಗೆ ಪ್ರಾ. ಕಾ. ಕ. ಕಾರ್ಯದರ್ಶಿಯರ ತಾ. ೨೮-೮-'೨೨ರ ಕಾಗದದಲ್ಲಿ ಸೂಚಿಸಿದಂತೆ ರಾ. ಶೆಟ್ಟಿ ಲಕ್ಷ್ಮಣರಾಯರಿಗೆ ಹಣವನ್ನು ಕೊಡುವರೆ ಅನುಕೂಲವಿಲ್ಲವೆಂದು ಪ್ರಾ. ಕಮಿಟಿಯರಿಗೆ ತಿಳಿಸಬೇಕಾಗಿ ಬಹುಮತದಿಂದ ನಿರ್ಣಯಿಸಲಾಯಿತು.

೧೪. ಕೂಡಲೇ ಬಾಕಿವರುಷದ ಅಂದಾಜು ಜಮಾಖರ್ಚಿನ ಪಟ್ಟಿಯನ್ನು ತಯಾರಿಸುವರೆ ಈ ಕೆಳಗೆ ಕಾಣಿಸಿದ ಗೃಹಸ್ಥರ ಉಪಕಮಿಟಿಯನ್ನು ನಿಯಮಿಸಬೇಕಾಗಿಯೂ, ಸದರಿ ಉಪಕಮಿಟಿಯವರು ಇದೇ ತಿಂಗಳ ಆಖೈರ ಒಳಗೆ ಜರಗಿಸಲಿಕ್ಕಿರುವ ಕಾರ್ಯಕಾರಿಮಂಡಳಿಯ ಸಭೆಯ ಮುಂದೆ ಈ ಕುರಿತ ತಮ್ಮ ವರದಿಯನ್ನು ಇಡಬೇಕಾಗಿಯೂ ನಿಶ್ಚಯಿಸಲಾಯಿತು. ರಾ. ರಾ. ಕಾ. ಸದಾಶಿವರಾವ್ ರಾ. ರಾಮಕೃಷ್ಣ ಕಾರಂತರು ರಾ. ಉಡುಪಿ ಗೋವಿಂದರಾಯರು ರಾ. ಉಳ್ಳಾಲ ಸಂಜೀವರಾವ್ ರಾ. ಅ. ಭೋಜರಾವ್ ರಾ. ಉಚ್ಚಿಲ ರಾಮರಾವ್ ರಾ. ಕೆ. ಎಸ್. ದಾಸಪ್ರಭು.

೧೫. ಈ ಮೊದಲು ಜಿ. ಕಮಿಟಿಯವರು ನಮ್ಮ ಜಿಲ್ಲೆಯ ಮಟ್ಟಿಗೆ ರಾಷ್ಟ್ರೀಯ ಸ್ವಯಂಸೇವಕರಿಗೆ ರಾ. ಕಾ. ಸದಾಶಿವರಾಯರನ್ನು ಜಿಲ್ಲಾಧಿಕಾರಿಯನ್ನಾಗಿ ಮಾಡಬೇಕೆಂದು ಪ್ರಾ. ಕ. ಗೆ ಶಿಫಾರಸುಮಾಡಿದ ಮೇಲೆ ಸದರಿ ಕಮಿಟಿಯಿಂದ ಈ ವರೆಗೆ ಏನೂ ಉತ್ತರಬಾರದ್ದರಿಂದ ರಾ. ಸದಾಶಿವರಾಯರನ್ನು ನಮ್ಮ ಜಿಲ್ಲಾ ಸ್ವಯಂಸೇವಕರ ಮಂಡಳಿಗೆ ಜಿಲ್ಲಾಧಿಕಾರಿಯನ್ನಾಗಿ ನೇಮಿಸಬೇಕೆಂತಲೂ ಅವರು ಬರುವ ಅಕ್ಟೋಬರ ೧೫ರ ಒಳಗೆ ಜಿಲ್ಲೆಯ ಪ್ರತಿಯೊಂದು ತಾಲೂಕಿನಲ್ಲಿಯೂ ಸ್ವಯಂಸೇವಕ ದಳಗಳನ್ನು ಏರ್ಪಡಿಸುವ ವ್ಯವಸ್ಥೆಯನ್ನು ಮಾಡಿ ಅದರ ವರದಿಯನ್ನು ಪ್ರಕಟಿಸುವುದಲ್ಲದೆ ಈ ಸಭೆಯಮುಂದೆ ಇಡಬೇಕಾಗಿಯೂ ನಿಶ್ಚಯಿಸಲಾಯಿತು. ಜಿಲ್ಲಾಧಿಕಾರಿಗಳು ಪ್ರತಿ ತಾಲೂಕಿನಲ್ಲಿ ಸ್ವಯಂಸೇವಕ ಮಂಡಳಿಯು ಯಾವ ಯಾವ ರೀತಿಯಿಂದ ಕೆಲಸಮಾಡುವುದು ಯೋಗ್ಯವೆಂಬ ಸೂಚನೆಗಳನ್ನು ಈ ಕಮಿಟಿಯ ಕಾರ್ಯಕಾರಿಮಂಡಳಿಯ ಸಭೆಯ ಮುಂದೆ ಆಲೋಚನೆ ಬಗ್ಗೆ ಇಡತಕ್ಕದ್ದು. ಸದರಿ ನಿರ್ಣಯವು ಬಹುಮತದಿಂದ ಮಂಜೂರಾಯಿತು.

೧೯. ನಮ್ಮ ಜಿಲ್ಲೆಯಲ್ಲಿ ಅಸ್ಪೃಶ್ಯತಾನಿವಾರಣೆಯನ್ನು ಮಾಡಿ ಅಡಿಗೊತ್ತಲ್ಪಟ್ಟ ಜನರನ್ನು ಉದ್ಧಾರಮಾಡುವುದಕ್ಕೆ ಕಾಂಗ್ರೆಸ್ಸಿನವರೂ ಮಹಾತ್ಮಾಗಾಂಧಿಯವರೂ ಸೂಚಿಸುವ ವಿಷಯಗಳು ಸ್ಪಷ್ಟವಾಗಿ ಜನರಲ್ಲಿ ಪ್ರಚಾರವಾಗುವಂತೆ ಒಂದು ಚಿಕ್ಕ ಪುಸ್ತಕವನ್ನು ಈ ಕೆಳಗೆ ಸೂಚಿಸಿದ ಉಪಕಮಿಟಿಯವರು ತಯಾರಿಸಿ ಪ್ರಕಟಿಸುವ ಮಂಜೂರಾತಿ ಬಗ್ಗೆ ಬರುವ ಕಾರ್ಯಕಾರಿಮಂಡಳಿಯ ಸಭೆಯ ಮುಂದೆ ಇಡತಕ್ಕದ್ದು. ಮ. ರಾ. ಗಳಾದ ಉಡುಪಿ ಗೋವಿಂದರಾವ್ ಧರ್ಮದೇವವಿದ್ಯಾಲಂಕಾರ, ಕಾ. ಸದಾಶಿವರಾವ್, ಪ. ರಾಮಚಂದ್ರರಾವ್ ಶ್ರೀಪಾದಶರ್ಮ.

೨೦. ಪ್ರತಿ ತಾಲೂಕಿನಲ್ಲಿ ಆಯಾಯ ತಾಲೂಕಿನ ಎದುರು ಹೆಸರು ಕಾಣಿಸಿದ ಗೃಹಸ್ಥರು ಈ ತಿಂಗಳ ಆಖೈರ ಒಳಗೆ ಸೇರಲಿಕ್ಕಿರುವ ಕಾರ್ಯಕಾರಿ ಮಂಡಳಿಯ ಸಭೆಯ ಮುಂದಾಗಿ ಆಯಾಯ ತಾಲೂಕುಗಳ ಮುಖ್ಯ ಪಟ್ಟಣಕ್ಕೆ ಹೋಗಿ ಅಲ್ಲಿಯ ಕಾಂಗ್ರೆಸ್ ಉದ್ಯೋಗಸ್ಥರ ಮತ್ತು ಸ್ವಯಂಸೇವಕರ ಸಹಾಯದಿಂದ ತಾಲೂಕು ಮಹಾಸಭೆಯನ್ನು ಜರಗಿಸಿ, ಆಯಾಯ ತಾಲೂಕಿನ ಗ್ರಾಮಕಮಿಟಿಗಳಲ್ಲಿ ಜಾಗ್ರತೆಯನ್ನುಂಟುಮಾಡುವರೆ ವ್ಯವಸ್ಥೆಮಾಡುವುದಲ್ಲದೆ ಅವರ ಕಳೆದ ವರುಷದ ಮತ್ತು ಈ ವರುಷ ಜೂನ್ ಆಖೈರವರೆಗಿನ ಲೆಕ್ಕಪತ್ರವನ್ನು ಕೂಡ ತರಿಸಿಕೊಳ್ಳುವರೆ ಕಾಂಗ್ರೆಸ್ ವರ್ಕಿಂಗ್ ಕಮ್ಮಿಟಿಯ ಎ ಫೋರ್ಮಿನಲ್ಲಿ (A form) ಆಯಾಯ ಕಾರ್ಯದರ್ಶಿಯವರ ಮತ್ತು ಸಾಧ್ಯವಿದ್ದಲ್ಲಿ, ಅಧ್ಯಕ್ಷರ ಮತ್ತು ಅಧ್ಯಕ್ಷರ ಸಹಿಗಳನ್ನು ತಕ್ಕೊಂಡು ಲೆಕ್ಕಪತ್ರ ಸಮೇತ ಮುಂದಿನ ಜಿಲ್ಲಾ ಕಾಂಗ್ರೆಸ್ ಕಮ್ಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯ ಮುಂದೆ ವರದಿಯನ್ನಿಡತಕ್ಕದ್ದು. ೧. ಮಂಗಳೂರು ರಾ. ಉಚ್ಚಿಲ ರಾಮರಾಯರು ೨. ಕಾಸರಗೋಡು ರಾ. ಅ. ಭೋಜರಾವ್, ೩. ಪುತ್ತೂರು ಶ್ರೀಪಾದ ಶರ್ಮನವರು, ೪. ಕಾರ್ಕಳ ರಾ. ಕೆ. ಎಸ್. ದಾಸಪ್ರಭುಗಳು, ೫. ಉಡುಪಿ, ರಾ. ಉಡುಪಿ ಗೋವಿಂದರಾಯರು, ೬. ಕುಂದಾಪುರ, ರಾ. ಪದಮುನ್ನೂರು ರಾಮಚಂದ್ರರಾಯರು.

ವಿದೇಶ ವರ್ತಮಾನ

ಮಹಾ ಯುದ್ಧಕ್ಕೆ ಕಾರಣರು ಯಾರು:—ಜರ್ಮನಿಯ ಚಕ್ರವರ್ತಿಯಾಗಿದ್ದ ಕೈಸರರು ತಮ್ಮ ಚರಿತ್ರೆಯನ್ನು ಬರೆದು ಪ್ರಕಟಿಸಿದ್ದಾರೆ. ಅದರಲ್ಲಿ ಕಳೆದ ಮಹಾಯುದ್ಧಕ್ಕೆ ತಾನಾಗಲಿ ಜರ್ಮನಿದೇಶವಾಗಲಿ ಎಷ್ಟು ಮಾತ್ರಕ್ಕೂ ಬಾಧ್ಯರಲ್ಲವೆಂದೂ ಇಂಗ್ಲಂಡೇ ಅದಕ್ಕೆ ಬಾಧ್ಯವೆಂದೂ ಬರೆದಿದ್ದಾರೆ.

ಸರ್ಪದ ವಿಷಕ್ಕೆ ಮದ್ದು:—ವಿಷಸರ್ಪದಿಂದ ಕಚ್ಚಲ್ಪಟ್ಟವರಿಗೆ ಐತೊಲೆ ಹೊಗೆಸೊಪ್ಪನ್ನು ೧೦ ತೊಲೆ ನೀರಿನಲ್ಲಿ ಕಲಸಿ, ನೀರಿನಲ್ಲಿ ಹೊಗೆಸೊಪ್ಪು ಚೆನ್ನಾಗಿ ನೆನೆದ ತರುವಾಯ ಸೊಪ್ಪನ್ನು ಕಿವಿಚಿ ಹೊರಕ್ಕೆ ತೆಗೆದುಹಾಕಿ ಬಿಟ್ಟು ಕೊಂಡಿಸಿಕೊಂಡ ನೀರನ್ನೆಲ್ಲಾ ಕುಡಿಸಬೇಕು. ಸ್ಮೃತಿತಪ್ಪಿ ಬಾಯಿಬಿಡದಂತೆ ಇದ್ದರೆ ಮೂಗಿನ ದ್ವಾರದಿಂದ ಹೊಯ್ಯಬೇಕು. ನೀರು ಒಳಕ್ಕೆಸೇರಿದ ೫ ನಿಮಿಷಗಳಲ್ಲಿ ವಾಂತಿಗೆ ಆರಂಭವಾಗುವುದು. ಆ ವಾಂತಿಯಲ್ಲಿ ವಿಷವು ಕಳೆದುಹೋಗುವುದು. ಒಂದು ಗಂಟೆ ಹೊತ್ತಿನಲ್ಲಿ ಆರೋಗ್ಯವಾಗುವುದು. ಹೊಗೆಸೊಪ್ಪಿನ ಹೊಟ್ಟೆಗೆ ನಾಗರ ಹಾವು ನುಗ್ಗುವುದೇ ಇಲ್ಲ. ಹಾವಿನವಿಷಕ್ಕೆ ಹೊಗೆಸೊಪ್ಪು ಅತ್ಯುತ್ತಮ ಪಂಚಾರಕ ಮೂಲಿಕೆಯೆಂದು ಹೈದರಾಬಾದಿನ ಹಕೀಂ ಮಹಮ್ಮದ್ ಯೂಸಿಫ್‌ರವರು "ಪ್ರಾಕ್ಟಿಕಲ್ ಮೆಡಿಸನ್" ಎಂಬ ಪತ್ರಿಕೆಗೆ ಬರೆದಿರುತ್ತಾರೆ. ಮೈಸೂರು ಸ್ಟಾರ.

ಬಾಬು ಸೋಮೇಶಚಂದ್ರ ಬೋಸ್:—ಮದ್ರಾಸಿನ ಸುಪ್ರಸಿದ್ಧ ಗಣಿತಜ್ಞಾನಿಯೆನಿಸಿಕೊಂಡಿದ್ದ ಸುಬ್ರಹ್ಮಣ್ಯನ ಅವತಾರವು ಸಮಾಪ್ತಿಯಾಯಿತಷ್ಟೆ! ಈಗ ಬಾಬು ಸೋಮೇಶಚಂದ್ರಬೋಸ್ ಎಂಬ ಅದ್ಭುತಗಣಿತಜ್ಞನು ಪ್ರಖ್ಯಾತನಾಗಿ ಈಗ ತಾನೆ ಲಂಡನ್ ಪಟ್ಟಣಕ್ಕೆ ಹೋಗಿರುತ್ತಾನೆ. ಆತನ ಅದ್ಭುತಗಣಿತಶಾಸ್ತ್ರಜ್ಞತೆಯನ್ನು ಅಲ್ಲಿಯ ಈವಿನಿಂಗ್ ನ್ಯೂಸ್ ಪತ್ರಿಕಾಪ್ರತಿನಿಧಿಯು ಪ್ರತ್ಯಕ್ಷವಾಗಿ ಪರೀಕ್ಷಿಸಿ, ಇಂಥ ಅದ್ಭುತಸಾಮರ್ಥ್ಯವಂತರು ಲಂಡನ್ ಪಟ್ಟಣಕ್ಕೆ ಇದುವರೆಗೆ ಯಾರೂ ಬಂದಿರಲಿಲ್ಲವೆಂದು ಹೇಳಿ ಹೊಗಳಿರುತ್ತಾರೆ. ೮-೧೦ ಸಂಖ್ಯೆಗಳ ಉದ್ದವಾದ ಗುಣಾಕಾರ ಭಾಗಾಕಾರಗಳನ್ನು ಈತನು ಬಾಯಲ್ಲೇ ಲೆಕ್ಕಮಾಡಿ ಚಾಚು ತಪ್ಪದಂತೆ ಸ್ವಲ್ಪಕಾಲದಲ್ಲಿ ಹೇಳಿಬಿಡುತ್ತಿರುವನು. ಅಷ್ಟೇ ಅಲ್ಲದೆ ಎಷ್ಟೋ ಹಿಂದಣ ವರ್ಷಗಳಲ್ಲಿ ಯಾವ ತಾರೀಕಿಗೆ ಯಾವ ವಾರವು ಬಂದಿದ್ದಿತೆಂಬುದನ್ನು ಸಹ ನಿರ್ಣಯವಾಗಿ ಹೇಳುತ್ತಿರುವನು. ಈತನು ಕೇವಲ ಶಾಕಾಹಾರಿಯೂ ಸ್ವಯಂಪಾಕಿಯೂ ಯೋಗಮಾರ್ಗಸಂಪನ್ನನೂ ಆಗಿರುವನು. ಮೈ. ಸ್ಟಾರ.

ಜಗಲುಲಪಾಶರು:—ಅಸ್ವಸ್ಥದಲ್ಲಿರುವ ಜಗಲುಲಪಾಶರನ್ನು ಈಗ ಜಿಬ್ರಾಲ್ಟರಿಗೆ ಹವೆಯನ್ನು ಬದಲಾಯಿಸುವುದಕ್ಕಾಗಿ ಕರಕೊಂಡುಬಂದಿದ್ದಾರೆ.

ಲೀಗ್ ಒಫ್ ನೇಶನ್ಸ್:—ಇದರ ಮೂರನೆಯ ಅಧಿವೇಶನವು ಜಿನೀವಾದಲ್ಲಿ ಕಳೆದ ತಾ. ೪ರಿಂದ ಪ್ರಾರಂಭವಾಗಿದೆ. ಮಿ ಅಗೊಸ್ಟಿನ್ ಎಡ್ವರ್ಡ್ಸ್ ಚಿಲಿಯನ್ ಲಂಡನ್ ಮಿನಿಸ್ಟರ, ಇವರು ಅಧ್ಯಕ್ಷ ಪದವಿಯನ್ನು ವಹಿಸಿಕೊಂಡಿರುವರು. ಒಟ್ಟು ೪೪ ರಾಷ್ಟ್ರಗಳ ಪ್ರತಿನಿಧಿಗಳು ಸೇರಿದ್ದಾರೆ.

ಮುದಿ-ಪ್ರಾಯದ ವಿದ್ಯಾಭ್ಯಾಸ:—ನ್ಯೂಯಾರ್ಕಿನ ಕೊಲಂಬಿಯಾ ವಿಶ್ವ ವಿದ್ಯಾಲಯದಲ್ಲಿ ೭೦ ವರುಷ ಪ್ರಾಯದ ಮುದುಕಿಯೊಬ್ಬಳು ಪುನಃ ವಿದ್ಯಾಭ್ಯಾಸವನ್ನು ಹೊಂದಲು ಪ್ರಾರಂಭಿಸಿರುವಳು.

ಡಿವೆಲರರು:—ಇವರ ಅಸ್ವಸ್ಥವು ಕಠಿಣವಾಗಿದೆ ಎಂದು ತಿಳಿದು ಬರುತ್ತದೆ.

ಯಫ್ ಡಬ್ಲ್ಯು ಡಿಕ್ಸನ್ ಸನ್:—ದಿಕ್ಕು ದಿಕ್ಕುಗಳ ವರ್ತಮಾನವನ್ನು ಪ್ರಕಟಿಸುವ ರೂಟರದ ಮುಖ್ಯ ಸಂಪಾದಕರಾದ ಯಫ್ ಡಬ್ಲ್ಯು ಡಿಕ್ಸನ್ ಸನ್ ರವರು ಕಳೆದ ಶನಿವಾರ ಕಾಲವಾದರು.

ಬೆಂಗಳೂರು:—ಇಲ್ಲಿಯ ಮುನ್ಸಿಪಾಲಿಟಿಯು ಎಲ್ಲಾ ಓಟದ ಕುದುರೆಗಳ ಮೇಲೆ ತೆರಿಗೆಯನ್ನು ಹಾಕಲು ನಿಶ್ಚಯಿಸಿದೆ. ಇದರಿಂದ ಉತ್ಪನ್ನವಾದ ಹಣವು ಪಶುಗಳ ಔಷಧಾಲಯಕ್ಕೆ ಕೊಡಲಾಗುವುದು.

ಯಾತ್ರಸ್ಥರ ಮೇಲೆ ತೆರಿಗೆ:—ಬರುವ ತಾ. ೨೨ರ ವರೆಗೆ ಬೆಜವಾಡಕ್ಕೆ ಯಾತ್ರಸ್ಥರಾಗಿ ಹೋಗುವವರ ಮೇಲೆ ತೆರಿಗೆಯನ್ನು ವಸೂಲುಮಾಡಲು ನಿರ್ಧರಿಸಿದೆ.

ಗಂಗಾನದಿ:—ಗಂಗಾನದಿಯು ಉಕ್ಕಿ ಬಂದುದರಿಂದ ಕಾನ್‌ಪುರದ ಉನ್ನೋ ಎಂಬಲ್ಲಿನ ರೈಲ್ವೆಮಾರ್ಗವು ನೀರಿನಿಂದ ತುಂಬಿದೆ. ನೆರೆಕರೆಯ ಅನೇಕ ಮನೆಮಠಗಳು ನೀರಿನ ಪಾಲಾದವು. ಸುಮಾರು ೪೦ ವರುಷಗಳಿಂದ ಇಂಥಾ ನೆರೆಯು ಬರಲಿಲ್ಲವಂತೆ.

ಮುಲಟಾನ್:—ಮೊಹರಮಿನ ಸಂಬಂಧ ಇಲ್ಲಿ ಹಿಂದೂ ಮುಸಲ್ಮಾನರೊಳಗೆ ಗಲಾಟೆಯು ನಡೆದು ಕೆಲವು ಪ್ರಾಣಗಳು ನಾಶವಾದವು.

ಮುಂಬಯಿ:—ಶ್ರೀ ಮುಕ್ತಾನಂದ ತೀರ್ಥರವರು ದ. ಕ. ಜಿಲ್ಲೆಯ ಪಡುಬಿದ್ರಿಯಲ್ಲಿ ಸ್ಥಾಪಿಸಲಿಕ್ಕಿರುವ ಶ್ರೀ ಮಹಾಕಾಳಿಕಾಂಬಿಕೆಯ ಗರ್ಭಗೃಹ ನಿರ್ಮಾಣದ ಸದುದ್ದೇಶದಿಂದ ತಾ. ೩೧-೮-'೨೨ರಲ್ಲು ಇಲ್ಲಿಂದ ಹೊರಟಿರುತ್ತಾರೆ ಎಂದು ಮುಂಬಯಿಯಿಂದ ಒಬ್ಬ ಬಾತಮಿದಾರರು ಬರೆಯುತ್ತಾರೆ.

ಮುಳಸಿಪೇಟಾ ಸತ್ಯಾಗ್ರಹ:—ಈ ಸತ್ಯಾಗ್ರಹದ ನಾಯಕರಾದ ಮಿ ಬಾಪಟ ಮೊದಲಾದವರನ್ನು ಸೆರೆಹಿಡಿದಿರುವರಾಗಿ ಪ್ರಕಟವಾಗಿದೆ.

ಮೋತಿಲಾಲ ಘೋಷರು:—ಅಮೃತಬಜಾರ ಪತ್ರಿಕೆಯ ಸಂಪಾದಕರಾದ ಶ್ರೀಯುತ ಬಾಬು ಮೋತಿಲಾಲ ಘೋಷರು ತಮ್ಮ ೭೭ನೇ ವರುಷ ಪ್ರಾಯದಲ್ಲಿ ಕಳೆದ ತಾ. ೫ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವ್ಯಸನಪಡುತ್ತೇವೆ.

ಹಿಂದೂ ಮುಸಲ್ಮಾನರ ಜಗಳ:—ಹಿಂದುಗಳು ದೇವತೆಗಳ ಹೆಸರಲ್ಲಿ ಬಿಟ್ಟ ಒಂದು ಎತ್ತನ್ನು ಕಳೆದ ಬಕ್ರೀದ್ ಹಬ್ಬದ ಸಮಯ ಮುಸಲ್ಮಾನರು ಸಂಹರಿಸಿದ ಕಾರಣದಿಂದ ಕಳೆದ ತಾ. ೩ರಲ್ಲಿ ಕಲ್ಕತ್ತೆಯಿಂದ ೩೦ ಮೈಲು ದೂರವಿರುವ ತಲಿನಿಪಾರಯೆಂಬಲ್ಲಿ ಹಿಂದೂಮುಸಲ್ಮಾನರಿಗೆ ಜಗಳವಾಗಿ ಹಲವರಿಗೆ ಜಖಂ ಆಗಿದೆಯೆಂದೂ ಒಬ್ಬ ಹಿಂದೂ ಕಿರಾಣಿ ಜೀನಸುವ್ಯಾಪಾರಸ್ಥನು ಮಡಿದಿರುವನೆಂದೂ ವರ್ತಮಾನಬಂದಿದೆ.

ಕರ್ನಾಟಕ ವೈಭವ:—ಈ ಪತ್ರಿಕೆಯ ಸಂಪಾದಕರಾದ ಶ್ರೀಯುತ ಡಾ. ಯುಸ್. ತಿಲ್ಲುರ್ ಬಿ. ಎ. ಬಿ. ಎಲ್. ಇವರನ್ನು ವೈಭವದಲ್ಲಿ ರಾಜದ್ರೋಹಕರವಾದ ಒಂದು ಲೇಖನವನ್ನು ಪ್ರಕಟಿಸಿದ ಬಗ್ಗೆ ಕೈದು ಮಾಡಿದ್ದಾರಂತೆ.

ಹಿಂದೂ ಪತ್ರಿಕೆ:—ಹೈದರಾಬಾದಿನ ಸಿಂಧಪ್ರಾಂತ್ಯದಲ್ಲಿ ಪ್ರಕಟವಾಗುವ ಹಿಂದೂ ಪತ್ರಿಯ ಎಂಟನೆಯ ಸಂಪಾದಕರಾದ ರಾ. ಪರಮಾನಂದ ಮೆವಾರಮ್ ಎಂಬವರನ್ನು ಸಹ ಕೈದುಮಾಡಲಾಗಿದೆ.

ಓಲ್-ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು:—ಕಲ್ಕತ್ತೆಯಲ್ಲಿ ಕೂಡಿದ ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿ ಮೀಟಿಂಗು ತಾ. ೧೯ರಲ್ಲಿ ಮುಗಿದು ಹೆಚ್ಚಿನ ವಿಷಯಗಳನ್ನು ಬರುವ ತಾ. ೧೫ರಲ್ಲಿ ಮುಂಬಯಿಯಲ್ಲಿ ಕೂಡುವ ಓಲ್-ಇಂಡಿಯಾ ಕೊಂಗ್ರೆಸ್ಸಿನ ವರ್ಕಿಂಗ್ ಕಮ್ಮಿಟಿಯ ಮೀಟಿಂಗಿನಲ್ಲಿ ಚರ್ಚಿಸತಕ್ಕದೆಂದೂ, ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿಯ ವರದಿಯು ಇನ್ನೂ ಪೂರ್ಣ ತಯಾರಾಗದೆ ಇದ್ದುದರಿಂದ ಬರುವ ತಾ. ೧೫ರಲ್ಲಿ ಸೇರಲಿಕ್ಕಿದ್ದ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗನ್ನು ಒಂದು ತಿಂಗಳು ಮುಂದರಿಸಿದುದಂತೆ ಮುಂದಿನ ಕೊಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಶ್ರೀಯುತ ಸಿ. ಆರ್. ದಾಸರಿಗೆ ವಿನಂತಿಮಾಡಿಕೊಳ್ಳಬೇಕಾಗಿಯೂ ನಿಶ್ಚಯಿಸಲಾಯಿತು.

ಒಳದೇಶ ವರ್ತಮಾನ.

ಡಾಕ್ಟರ ವರದರಾಜುಲು ನ್ಯಾಡೋ:—ಮಹಾತ್ಮರನ್ನು ಬಿಡುಗಡೆ ಮಾಡುವ ವರೆಗೆ ಇವರು ಸರಕಾರಕ್ಕೆ ಕಂದಾಯವನ್ನು ಕೊಡಲಿಕ್ಕಿಲ್ಲವೆಂದು ನಿರ್ಧರಿಸಿರುವರು.

ಶ್ರೀಯುತ ಜಯರಾಮಾಚಾರ್ಯ:—ಕೀರ್ತನಕೇಸರಿ ಜಯರಾಮಾಚಾರ್ಯರು ಅನಂತಪುರದಲ್ಲಿ ಕೀರ್ತನೆಗೆ ಹೋದಾಗ ಕಳೆದ ತಾರೀಕು ೨೬ನೇ ದಿನ ಅಲ್ಲಿಯ ಸ್ಪೇಶಲ ಸಬ್ ಮೆಜಿಸ್ಟ್ರೇಟರು ೧೪೪ನೇ ಕಲಮಿನನ್ವಯ ೨ ತಿಂಗಳ ವರೆಗೆ ತಮ್ಮ ಜಿಲ್ಲೆಯಲ್ಲಿ ಭಾಷಣಬಂದಿಹುಕುಂ ಜಾರಿಮಾಡಿರುವರು. ಆಂಧ್ರ ಮುಂದಾಳುಗಳು ಸಭೆಸೇರಿ ನಿಷೇಧಮಾಡಿರುವರು. ಶ್ರೀಯುತ ಜಯರಾಮಾಚಾರ್ಯರು ಇನ್ನೊಮ್ಮೆ ಅನಂತಪುರದಲ್ಲಿ ಹೋಗಿ ಪುನಃ ವ್ಯಾಖ್ಯಾನವನ್ನು ಕೊಟ್ಟು ಸರಕಾರದವರು ನಡಿಸಿದ ದಬ್ಬಾಳಿಕೆಯ ನಿಷೇಧವನ್ನುಪಡಿಸಿ ಕೊಂಗ್ರೆಸ ಕೆಲಸ ಮುಂದೆ ನಡಿಸಬೇಕೆಂದು ನಿರ್ಣಯಿಸಿದ್ದಾರೆ.

ಬರ್ಮಾದಲ್ಲಿ ಕುಷ್ಠರೋಗ:—ಬರ್ಮಾದಲ್ಲಿ ಕುಷ್ಠರೋಗವು ಎಂದಿಗಿಂತ ಪ್ರಬಲವಾಗುತ್ತಿರುವುದು ಕಂಡುಬಂದುದರಿಂದ ಈಗ ಅಲ್ಲಿಯ ಸರಕಾರದವರು ಕುಷ್ಠರೋಗದ ಹಬ್ಬುವಿಕೆಯನ್ನು ಕಡಿಮೆಮಾಡಲು ಪ್ರಯತ್ನವನ್ನು ಮಾಡುತ್ತಿದ್ದಾರೆ. ಕುಷ್ಠರೋಗಪೀಡಿತರಾಗಿಯೂ ಬಡವರಾಗಿಯೂ ಊರುಊರುಗಳಲ್ಲಿ ಅಲೆಯುತ್ತಿರುವ ಕುಷ್ಠರೋಗಿಗಳನ್ನು ಗ್ರಾಮಾಧಿಕಾರಿಗಳು ಕಂಡರೆ ಅವರನ್ನು ಕುಷ್ಠರೋಗಿಗಳ ಆಸ್ಪತ್ರೆಗೆ ಕಳುಹಿಸಬೇಕು ಎಂದು ಅಲ್ಲಿಯ ಸರಕಾರದವರು ಪ್ರಕಟಿಸಿದ್ದಾರೆ. ಅಲ್ಲದೆ ಕುಷ್ಠರೋಗಿಗಳು, ಚುರುಟು ಮೊದಲಾದುವನ್ನು ಮಾಡುವುದು ಮತ್ತು ಕೆಲವು ತರದ ವ್ಯಾಪಾರಗಳನ್ನು ನಡಿಸುವುದು ಸಹ ನಿಲ್ಲಿಸಬೇಕಾಗಿ ಹುಕುಂ ಆಗಿದೆ. ಕುಷ್ಠರೋಗಿಗಳು ರೈಲ್ವೆ ಗಾಡಿಗಳಲ್ಲಿ ಹೊರತು ಇತರ ಸಾರ್ವಜನಿಕ ಉಪಯೋಗದ ಬಂಡಿ ಮೊದಲಾದುವುಗಳಲ್ಲಿ ಪ್ರಯಾಣಮಾಡದಂತೆ ನಿರ್ಬಂಧಪಟ್ಟಿದೆ.

ಗಣೇಶ ಸಾವರಕರ:—ಇವರನ್ನು ಮುಂಬಯಿಸರಕಾರದ ಅಪ್ಪಣೆ ಮೇರೆಗೆ ಸಬರಮತಿ ಜೈಲಿನಿಂದ ಕಳೆದ ತಾರೀಕು ೧೯ರಲ್ಲಿ ಬಿಡುಗಡೆಮಾಡಿದೆ. ಇವರಿಗೆ ಕೂತುಕೊಳ್ಳುವಷ್ಟು ಸಹ ತ್ರಾಣವಿಲ್ಲವಂತೆ. ಇತರ ಸಹೋದರರು ಇವರನ್ನು ಮುಂಬಯಿಗೆ ಕರಕೊಂಡುಹೋಗಿದ್ದಾರೆ.

ಟ್ರೂತ್ ಪತ್ರಿಕೆ:—ಈ ಪತ್ರಿಕೆಯ ಸಂಪಾದಕರ ಅಸ್ವಸ್ಥವು ಇನ್ನೂ ಗುಣವಾಗದೆ ಇರುವುದರಿಂದ ಮುಂದಿನ ತಾ. ೨೦ ವರೆಗೆ ಸದರಿ ಪತ್ರಿಕೆಯು ಪ್ರಕಟಿಸಲಾಗಲು ಅನಾನುಕೂಲವಾಗಿದೆ. ಪತ್ರಿಕೆಯ ಆಫೀಸು ಪಟ್ಟಣದ ಮಧ್ಯಸ್ಥಳಕ್ಕೆ ಒಯ್ಯುವ ಏರ್ಪಾಡುಗಳನ್ನು ಮಾಡಲು ಪ್ರಯತ್ನಗಳು ನಡಿಯುತ್ತಿರುವುದರಿಂದ ಸದರಿ ಪತ್ರಿಕೆಯ ಆಫೀಸಿಗೆ ಪತ್ರಗಳನ್ನು ಬರಿಯುವವರು ಹೊಸ ವಿಳಾಸವನ್ನು ಕೊಡುವ ವರೆಗೆ ಕೇರ್ ಒಫ್ ಪೋಸ್ಟಮಾಸ್ಟರ ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರಿಯತಕ್ಕದ್ದು ಎಂದು ಅವರ ಮೆನೇಜರರು ತಿಳಿಸುತ್ತಾರೆ.

ಅಕಾಲಿ ಚಳವಳ:—ಅಕಾಲಿಚಳವಳವು ಇನ್ನೂ ಜೋರಾಗಿನಡಿಯುತ್ತದೆ. ಅಕಾಲಿಪಂಗಡದವರು ಗುರುಕಾಭಾಗಕ್ಕೆ ಹೋಗದಂತೆ ಪೋಲೀಸರು ತಡಿಯುತ್ತಿದ್ದಾರೆ. ಅನೇಕರು ಗಾಯಹೊಂದಿದ್ದಾರೆ. ಆದರೆ ಈವರೆಗೆ ಯಾರೂ ಸಾಯಲಿಲ್ಲ. ಅಕಾಲಿಗಳ ಈ ಸತ್ಯಾಗ್ರಹವು ನಡೆಯುವ ಸ್ಥಳಕ್ಕೆ ಪಂಜಾಬ ಮಾಜಿ ಮಿನಿಸ್ಟರರು ಪಂಜಾಬ ನ್ಯಾಯವಿಧಾಯಕ ಸಭೆಯ ಮೆಂಬರರೂ ಬಂದು ಪರಿಶೀಲನೆಯನ್ನು ನಡಿಸುತ್ತಿದ್ದಾರೆ. ಅಕಾಲಿಗಳ ಮೇಲೆ [illegible] ಪ್ರಯೋಗಿಸಬಾರದಾಗಿ ಧಣಿಯವರು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ದಕ್ಷಿಣ ಕನ್ನಡ.

ಪಾದೆಬೆಟ್ಟು:—ಉಡುಪಿ ತಾಲೂಕು ಪಾದೆಬೆಟ್ಟು ಗ್ರಾಮದಲ್ಲಿರುವ ಶಿವಬ್ರಾಹ್ಮಣರ ಮಠಸ್ಥರ ಮಹಾವಿಷ್ಣುಮೂರ್ತಿದೇವಸ್ಥಾನದಲ್ಲಿ ಇದೇ ತಿಂಗಳ ತಾರೀಕು ೪-೯-೧೯೨೨ನೇ ಸೋಮವಾರ ದಿವಸ ಮಧ್ಯಾಹ್ನ ಹನ್ನೊಂದು ಗಂಟೆಗೆ ವರುಷಂಪ್ರತಿ ಜರಗುವ ಉಪಾಕರ್ಮಮಹೋತ್ಸವವೂ, ರಾತ್ರೆ ಮುಖ್ಯ ಜೋರ್ಡ ಹಾಯರ್ ಎಲಿಮೆಂಟರಿ ಶಾಲೆಯ ಉಪಾಧ್ಯಾಯರಾದ ರಾ. ಇನ್ನಾ ಸದಾಶಿವಪ್ಪಯ್ಯನವರ ಹೂವಿನ ಪೂಜೆಯೂ ಬಹು ವಿಜೃಂಭಣೆಯಿಂದ ನಡೆದವು.

ಬಂಟವಾಳ:—ಇದೇ ತಿಂಗಳ ಆರಂಭದಲ್ಲಿ ಇಲ್ಲಿ ಒಂದು ಪ್ಲೇಗು ಮರಣವು ಸಂಭವಿಸಿದ್ದರಿಂದ ಇಲ್ಲಿಯ ಮಿಶನ್ ಹಾಗು ದೇವಳ ಶಾಲೆಗಳನ್ನು ಹತ್ತು ದಿನಗಳ ವರೆಗೆ ಮುಚ್ಚಿದ್ದಾರೆ.

ಇಲ್ಲಿಯ ಮಾಪಿಳ್ಳಾ ಬೋರ್ಡು ಶಾಲೆಯಲ್ಲಿ ಕೆಲವು ಹೊಲೆಯರ ಹುಡುಗರನ್ನು ಸೇರಿಸಿಕೊಂಡದ್ದರಿಂದ ಮಾಪಿಳ್ಳಾ ಹುಡುಗರು ಶಾಲೆಗೆಬರುವುದನ್ನು ಬಿಟ್ಟುಬಿಟ್ಟಿದ್ದಾರಂತೆ. ಮೊಹರಂ ರಜಾ ನಂತರ ಕೆಲವು ಪಂಚಮರ ಹುಡುಗರೂ ಹುಡುಗಿಯರೂ ಮೂವರು ಮಾಪಿಳ್ಳಾ ಹುಡುಗರೂ ಶಾಲೆಯ ಜಗಲಿಯಲ್ಲಿ ಬೇಗ್ಗೆ ಇದ್ದರು. ವಿದ್ಯಾರ್ಜನೆಯಲ್ಲಿಯಾದರೂ ಜಾತಿ ವ ಮತಭೇದಗಳು ತಲೆದೋರದೆ ಎಲ್ಲಾ ಮಕ್ಕಳು ಕಲಿಯುವ ಸುಕಾಲವು ಎಂದು ಮೂಡುವುದೋ!

ಇಲ್ಲಿಂದ ಬ್ರಹ್ಮರಕೂಟ್ಲು ಸಂಕದ ವರೆಗೆ ಮಾರ್ಗವು ಅಲ್ಲಲ್ಲಿ ಜರ್ಝರವಾಗಿಹೋಗಿದೆ. ಇದನ್ನು ಬೇಗನೆ ಸರಿಮಾಡಿಸದಿದ್ದರೆ ಪ್ರಯಾಣಿಕರಿಗೆ ತುಂಬಾ ಅನಾನುಕೂಲ. ಆದುದರಿಂದ ಬೋರ್ಡು ಅಧಿಕಾರಿಗಳು ಇನ್ನಾದರೂ ಇದರ ವಿಷಯ ಲಕ್ಷ್ಯವಿಟ್ಟು ಕೊಡುವರೆಂದು ಭರವಸೆಪಡಬೇಕಾಗಿದೆ.

ಇಲ್ಲಿಂದ ಸುಮಾರು ಎರಡು ಮೈಲಿನೊಳಗೆ ಇರುವ ಮಣಿಹಳ್ಳದ ಬೋರ್ಡು ಶಾಲೆಯನ್ನು ಮುಚ್ಚಿದ್ದಾರೆ. ಮಾತ್ರವಲ್ಲ. ಎಷ್ಟೋ ಖರ್ಚುಗಳಿಂದ ಯಾರೋ ಕಟ್ಟಿಸಿಕೊಟ್ಟ ಕಟ್ಟೋಣವು ಸಹ ಬಿದ್ದುಹೋಗಿದೆ. ಒಂದು ಕಡೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡುವಂಥ ಪ್ರಯತ್ನನಡಿಸುವಾಗ ನಮ್ಮ ಕಡೆ ಇದ್ದ ಶಾಲೆಗಳನ್ನೇ ಮುಚ್ಚುವಂಥಾ ಕಾಲ ಬಂದಿದೆ. ಇದು ಅಲ್ಲಿನ ಮಕ್ಕಳ ದುರ್ದೆಶೆಯೇ ಸರಿ!

ಕಾಸರಗೋಡು:—೧೯೨೨ನೇ ಇಸವಿ ಸಪ್ಟಂಬರ ತಿಂಗಳ ತಾ. ೧೫ನೇ ಶುಕ್ರವಾರ ಗಂಟೆ ೨-೩೦ಕ್ಕೆ ಪತ್ನಿ ಕನ್ನಡ ಜಿಲ್ಲಾ ಪುನಃ ಸ್ಥಾಪಿಸಿದ ಕಾಸರಗೋಡು ತಾಲೂಕು ಬೋರ್ಡು ಮೆಂಬರರ ಪ್ರಥಮ ಸಭೆಯು ಕಾಸರಗೋಡಿನಲ್ಲಿ ತಾಲೂಕು ಬೋರ್ಡು ಆಫೀಸಿನಲ್ಲಿ ಕೂಡುವದು. ಎಲ್ಲಾ ಮೆಂಬರರು ಈ ಸಭೆಗೆ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಈ ತಾಲೂಕು ಬೋರ್ಡಿನ ಬಗ್ಗೆ ಒಬ್ಬ ಪ್ರೆಸಿಡೆಂಟನ ಮತ್ತು ಒಬ್ಬ ವ್ಯಾಸ ಪ್ರೆಸಿಡೆಂಟನ ಮತ್ತು ಡಿಸ್ಟ್ರಿಕ್ಟ ಬೋರ್ಡಿನ ಬಗ್ಗೆ ೪ ಮೆಂಬರರ ಚುನಾವಣೆ ಸಹ ನಡಿಸಲ್ಪಡುವುದು ಎಂದು ಕಾಸರಗೋಡು ತಾಲೂಕು ಬೋರ್ಡ ಪ್ರೆಸಿಡೆಂಟರು ಪ್ರಕಟಿಸಿದ್ದಾರೆ.

ಸುಳ್ಯ:—ಉಪ್ಪಿನಂಗಡಿ ತಾಲೂಕುಬೋರ್ಡ ಮೆಂಬರರ ಈ ತಿಂಗಳ ಅಧಿವೇಶನವು ಬರುವ ತಾ. ೨೫ನೇ ಸೋಮವಾರ ಮಧ್ಯಾಹ್ನ ೧ ಗಂಟೆಗೆ ಇಲ್ಲಿಯ ಬೋರ್ಡುಶಾಲೆಯ ಆಟ್ಟೋಣದಲ್ಲಿ ಸೇರುವುದು. ಈ ಅಧಿವೇಶನದಲ್ಲಿ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲಿಗೆ ಒಬ್ಬ ಮೆಂಬರರನ್ನು ಚುನಾಯಿಸಲಾಗುವುದು.

ಮಂಜೇಶ್ವರ:—ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನದ ಆಡಳಿತ ವ್ಯವಸ್ಥೆಕುರಿತು ಮಂಗಳೂರು ಸಬ್ ಕೋರ್ಟಿನಲ್ಲಿ ಪಾಸಾದ ಸ್ಕೀಮ್ ಮೇರೆಗೆ ಮಂಗಳೂರು ಪೇಟೆಯಿಂದ ರಾ. ವಕೀಲ್ ಅಮ್ಮೆಂಬಳ ಶ್ರೀನಿವಾಸಪೈ, ರಾ. ನರಸಿಂಹಮೂರ್ತಿಭಂಡಾರಿ. ರಾ. ವಕೀಲ್ ಉಳ್ಳಾಲ ಅನಂತಪದ್ಮನಾಭಮಲ್ಯರವರುಗಳೂ ಮಂಜೇಶ್ವರ ಪೇಟೆಯಿಂದ್ದ ರಾ. ರಾಮಪ್ಪಕುಂದಪಾಯ್ಯ, ರಾ. ಅನಂತನರಸಯ್ಯಕಿಣಿ, ಬಂಗ್ರಮಂಜೇಶ್ವರ ಅನಂತರಂಗಕಮ್ತಿಗಳೂ, ಕುಂಬಳೆ ಪೇಟೆಯಿಂದ ರಾ. ನರಸಿಂಹ ರಾಯಪ್ರಭುಗಳೂ ಕೂಡಾ ಐವರು ಮೆಂಬರರು ನೇಮಿಸಲ್ಪಟ್ಟು, ಸದರಿ ದೇವಸ್ಥಾನದ ಆವರ ಸೊತ್ತು ಇತ್ಯಾದಿ ಸದಾ ಸದರಿ ಮೆಂಬರರ ವಶಕೊಡಿಸುವರೆ ರಾ. ವಕೀಲ್ ಮಂಜೇಶ್ವರ ಜನಾರ್ಧನ ಮಲ್ಯರು ಕಮಿಷನರಾಗಿ ನೇಮಿಸಲ್ಪಟ್ಟು ಪ್ರಕೃತ ಟ್ರಸ್ಟಿಯವರಿಂದ ಚಲಿವರ ಕೊಡಿಸುವರ ಇದೇ ಸೆಪ್ಟಂಬರ ತಾರೀಕು ೬ರಿಂದ ಪ್ರಾರಂಭವಾಗಿದೆ.

ಸ್ವರಾಜ್ಯವೂ ಸಮಾಜಸುಧಾರಣೆಯೂ.

(ತಾ. ೨೫—೮—'೨೨ರ ಸಂಚಿಕೆಯಿಂದ ಮುಂದರಿಸಿದ್ದು)

ಕಳೆದವಾರ ಸ್ವರಾಜ್ಯವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಕೊಟ್ಟು, ಅಂತಹ ಸ್ವರಾಜ್ಯವನ್ನು ಪಡೆಯಬೇಕೆಂಬ ಸದುದ್ದೇಶದಿಂದ ಕೆಲಸಮಾಡುವವರಲ್ಲಿ, ತಪ್ಪನ್ನು ಹುಡುಕಲಿಕ್ಕೆ ವೈದಿಕಧರ್ಮಾನುಯಾಯಿಯೂ ಹಿಂದೀಯನೂ ಆದ ನಾನು ಎಂದೂ ಸಮರ್ಥನಲ್ಲವೆಂಬುದನ್ನು ಸ್ಪಷ್ಟಪಡಿಸುವರೆ ಯತ್ನಿಸಿದೆನು. ನಮ್ಮಲ್ಲಿ ಅನೇಕ ಸಾಮಾಜಿಕ ಕೊರತೆಗಳಿವೆ ಎಂದೂ, ಅವುಗಳನ್ನು ಸಮೂಲ ಕಿತ್ತು ಹಾಕದಿದ್ದರೆ ಸ್ವರಾಜ್ಯಸಂಪಾದನೆಯು ಕಾರ್ಯವು ಅಸಾಧ್ಯವೆಂದೂ ನಾನು ಸೂಚಿಸಿದ್ದೆನು. ಈ ಹೊತ್ತು ಅವುಗಳಲ್ಲಿ ಕೆಲವನ್ನು ನಾನು ಸೂಚಿಸಿದ್ದೇನೆ. ನಿಜವಾದ ದೇಶವಾತ್ಸಲ್ಯವುಳ್ಳವರು ಅವನ್ನು ಲಕ್ಷ್ಯಕ್ಕೆತಾರದಿರಲಾರರೆಂದು ನಂಬುತ್ತೇನೆ.

ಇಂತಹ ಸಾಮಾಜಿಕ ಕೊರತೆಗಳಲ್ಲಿ ಬಾಲ್ಯವಿವಾಹವು ಮೊದಲನೆಯದಾಗಿದೆ. ಈ ನೀಚಪದ್ಧತಿಯೇ ನಮ್ಮ ಜನರ ಶಾರೀರಿಕ ಮತ್ತು ಮಾನಸಿಕ ದೌರ್ಬಲ್ಯಕ್ಕೆ ಮುಖ್ಯ ಕಾರಣವಾಗಿದೆಯೆಂಬುದನ್ನು ಹೇಳಬೇಕಾಗಿಲ್ಲ. ನಮ್ಮ ಪವಿತ್ರವಾದ ದೇಶದಲ್ಲಿ ದಿನೇದಿನೇ ಹೆಚ್ಚಾಗುತ್ತಲಿರುವ ಮಕ್ಕಳ ಮರಣದ ಸಂಖ್ಯೆಗೆ ಈ ಪದ್ಧತಿಯೇ ಕಾರಣವಾಗಿದೆ. ಐದುಸಾವಿರ ವರ್ಷಗಳ ಹಿಂದೆ ಆರೋಗ್ಯಶಾಸ್ತ್ರದಲ್ಲಿ ಪಾರಂಗತನಾದ ಚರಕಮುನಿಯು "ಇಪ್ಪತ್ತೈದು ವರ್ಷವಾಗದ ಮನುಷ್ಯನು ಹದಿನಾರು ವರ್ಷವಾಗದ ಹುಡುಗಿಯೊಡನೆ ಕೂಡಿದರೆ, ಅದರ ಫಲವು ಯಾವಾಗಲೂ ಕೆಟ್ಟದ್ದು, ಒಂದೋ ಗರ್ಭಕೋಶವು ಬೀಳುತ್ತದೆ, ಇಲ್ಲವೇ ಮಗುವು ಬಹುಕಾಲ ಬದುಕುವುದಿಲ್ಲ, ಅಥವಾ ಬದುಕಿದರೂ ಬಹಳ ಬಲಹೀನವಾಗಿರುತ್ತದೆ. ಆದುದರಿಂದ ಗಂಡಸಿಗೆ ೨೫ ವರ್ಷವೂ ಹೆಂಗಸಿಗೆ ೧೬ ವರ್ಷವೂ ಆಗದೆ ಮದುವೆಯಾಗಕೂಡದು." ಎಂದು ಘಂಟಾಘೋಷವಾಗಿ ಸಾರಿದ್ದಾನೆ. ಈ ದುಷ್ಟಪದ್ಧತಿಯಿಂದ ಈಗ ನಮ್ಮ ದೇಶದ ಸ್ಥಿತಿಯು ಎಷ್ಟು ಶೋಚನೀಯವಾಗಿದೆ? ಒಂದಾನೊಂದುಕಾಲದಲ್ಲಿ ಮಹಾ ಋಷಿಗಳೂ ಪಂಡಿತರೂ ವಾಸಿಸುತ್ತಿದ್ದ ನಮ್ಮೀ ಪವಿತ್ರ ಭೂಮಿಯಲ್ಲಿ ಐದು ವರ್ಷಕ್ಕಿಂತಲೂ ಕಡಿಮೆಪ್ರಾಯದ ೧೭ ಸಾವಿರಕ್ಕೂ ಹೆಚ್ಚು ವಿಧವೆಯರಿದ್ದಾರೆಂಬುದು ನಿಜವಾಗಿಯೂ ದುಃಖಕರವಾದ ಸಂಗತಿಯಲ್ಲವೇ? ಒಂದು ವರ್ಷ ಕೂಡ ಪ್ರಾಯವಾಗದ ವಿಧವೆಯರ ಸಂಖ್ಯೆಯೇ ಒಂದು ಸಾವಿರಕ್ಕೆ ಕಡಿಮೆಯಲ್ಲವೆಂಬುದಕ್ಕಿಂತಲೂ ವಿಶೇಷ ದುಃಖವಿದೆಯೇ! ಈಗಿನ ಸ್ಥಿತಿಯನ್ನೇ ಮುಂದುವರಿಯಬಿಟ್ಟು, ಈ ದುಷ್ಟಪದ್ಧತಿಯನ್ನು ಸಮೂಲನಾಶಮಾಡದಿದ್ದರೆ ನಮ್ಮ ಜನಾಂಗದಲ್ಲಿ ಅನೇಕರು ದುರ್ಬಲರಾಗಿ ಆಲೋಚನಾಶಕ್ತಿಯ ಕೆಲಸಮಾಡುವ ಸಾಮರ್ಥ್ಯವು ಇಲ್ಲದವರಾಗುತ್ತಾರೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅಂತಹ ಸ್ಥಿತಿಯು ಬರುವುದು ಹಿತಕರವೇ? ಹಾಗಲ್ಲವಾದರೆ ಸ್ವರಾಜ್ಯಯುದ್ಧದಲ್ಲಿ ಕಂಕಣಬದ್ಧರಾದ ನಾವು ಇಂತಹ ಸಾಮಾಜಿಕಕೊರತೆಗಳನ್ನು ಕಿತ್ತುಹಾಕುವುದು ನಮ್ಮ ಕರ್ತವ್ಯವಲ್ಲವೇ? ಇದು ನಮ್ಮ ಕರ್ತವ್ಯವೆಂದು ನಾನು ನಿಜವಾಗಿಯೂ ನಂಬುತ್ತೇನೆ.

ಜನ್ಮದಿಂದ ಮೇಲುಕೀಳು ಎಂಬ ಭಾವನೆಗಳಿಂದಲೇ ಉಂಟಾದ ಪಾರಂಪರ್ಯ ಜಾತಿಭೇದವೇ ಈ ಸಂದರ್ಭದಲ್ಲಿ ನಾನು ವಿಚಾರಿಸಬೇಕೆಂದಿರುವ ಪ್ರಶ್ನೆಯಾಗಿದೆ. ಈ ವಿಚಾರವಾಗಿ ನಾನು ಅನೇಕ ಸಲ ನನ್ನ ಅಭಿಪ್ರಾಯವನ್ನು ಕೊಟ್ಟಿರುವುದರಿಂದ ಇಲ್ಲಿ ಅದರ ಕುರಿತು ಹೆಚ್ಚು ಚರ್ಚಿಸುವುದಿಲ್ಲ. ಈಗಿನ ಪಾರಂಪರ್ಯ ಜಾತಿಭೇದದ ಪದ್ಧತಿಯು ವೇದಗಳ ಉಪದೇಶಕ್ಕೆ ತೀರಾ ವಿರೋಧವಾಗಿದೆಯೆಂದು ನಾನು ನಂಬುತ್ತೇನೆ. ಏಕೆಂದರೆ ಗುಣಕರ್ಮಾನುಸಾರವಾದ ವರ್ಣವ್ಯವಸ್ಥೆಯೆಂಬುದು ನಮ್ಮ ಶಾಸ್ತ್ರಗಳಲ್ಲಿ ಇದ್ದರೂ, ಈಗಿನ ಜಾತಿಭೇದಗಳಿಗೆ ಶಾಸ್ತ್ರಗಳಲ್ಲಿ ಎಡೆಯೇ ಇಲ್ಲ. ವರ್ಣ ವ್ಯವಸ್ಥೆಗನುಸಾರವಾಗಿ ಪ್ರತಿಯೊಬ್ಬ ಮನುಷ್ಯನೂ ಸಮಾಜದ ಒಂದಂಶವಾಗಿದ್ದು ತನ್ನ ಕೈಲಾದ ಮಟ್ಟಿಗೂ ಮಾನವಕುಟುಂಬಕ್ಕೆ ಸಹಾಯಮಾಡುತ್ತಿದ್ದನು. ಮನು, ಶಂಕರಾಚಾರ್ಯ, ವೇದವ್ಯಾಸ ಮೊದಲಾದ ಪ್ರಸಿದ್ಧಪುರುಷರು ಆರ್ಹ ಯೋಗ್ಯತೆಯ ಮೇಲೆ ಮಾತ್ರವೇ ಹೊಂದಿರುವ ವರ್ಣವ್ಯವಸ್ಥೆಗೆ ಸಮ್ಮತಿಕೊಡುತ್ತಾರೆ. ಈ ವಿಷಯದಲ್ಲಿ ಹೆಚ್ಚಿನ ಅನುಭವವನ್ನು ಪಡೆಯಬೇಕೆಂದಿಚ್ಛಿಸುವವರು ಮಂಗಳೂರು ಆರ್ಯಸಮಾಜದಿಂದ ಪ್ರಕಟಿಸಲ್ಪಟ್ಟ "ಜಾತಿ ಭೇದ ವಿಚಾರ" ಎಂಬ ಚಿಕ್ಕ ಪುಸ್ತಕವನ್ನು ಓದಬೇಕಾಗಿ ವಿನಂತಿ. ಇಲ್ಲಿ ಸ್ವರಾಜ್ಯಕ್ಕೂ ಈ ಪಾರಂಪರ್ಯ ಜಾತಿಭೇದದ ಪದ್ಧತಿಯನ್ನು ನಿವಾರಿಸುವುದಕ್ಕೂ ಇರುವ ಸಂಬಂಧವನ್ನು ಮಾತ್ರವೇ ಏಕಾಗಿಸುವುದು ನನ್ನ ಉದ್ದೇಶವಾಗಿದೆ. ಹಿಂದೂಸಮಾಜವನ್ನು ಅನೇಕ್ಯ ಜಾತಿಗಳಾಗಿಯೂ ಉಪಜಾತಿಗಳಾಗಿಯೂ ವಿಂಗಡಿಸಿದ ಈ ಪದ್ಧತಿಯು ನಮ್ಮ ಏಳಿಗೆಗೆ ತೊಡಕಾಗಿದೆ ಎಂಬುದನ್ನು ನಾನು ಹೇಳಬೇಕಾಗಿಲ್ಲ. ಮದ್ರಾಸ್ ಸಂಸ್ಥಾನದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರ ಜಗಳಗಳು ಎಲ್ಲರಿಗೂ ಗೊತ್ತೇ ಇವೆ. ಬ್ರಾಹ್ಮಣೇತರರಲ್ಲಿ ಹೆಚ್ಚಿನವರು ಸ್ವರಾಜ್ಯಸಾಧನೆಯ ಎಲ್ಲಾ ರಾಜಕೀಯ ಚಳವಳಿಗಳಿಗೆ ವಿರೋಧವಾಗಿದ್ದಾರೆಂಬುದನ್ನು, ಅವರಲ್ಲಿ ಬ್ರಾಹ್ಮಣರ ಅಧಿಕಾರಕ್ಕೆ ಹೆದರುತ್ತಾರೆಂಬುದನ್ನು ಸುಮ್ಮನೆ ಮುಚ್ಚಿಡುತ್ತೇವು ಸಾಧ್ಯವಿಲ್ಲ. ಬರೇ ಜನ್ಮದಿಂದಲೇ ಮೇಲು ಕೀಳುಂಟಾಗುತ್ತದೆಂಬ ಭಾವನೆಯನ್ನು ನಾವು ಬೇಗನೆ ಕಿತ್ತುಹಾಕಿ ಒಬ್ಬರನ್ನೊಬ್ಬರು ಪ್ರೀತಿಸುವುದನ್ನು ಕಲಿಯದಿದ್ದರೆ ನಾವು ಪಡೆಯುವ ಸ್ವರಾಜ್ಯವು ಸ್ವಲ್ಪಕಾಲದವರೆಗೆ ಮಾತ್ರ [illegible]. ಸ್ವರಾಜ್ಯವು ಪಡೆಯಬೇಕಾದರೆ ಎಲ್ಲಾ ಜಾತಿಗಳಲ್ಲಿರುವ ಕಲಹಗಳು ನಿಂತುಹೋದರೆ ಮಾತ್ರವೇ ಸಾಧ್ಯ. ನಮ್ಮ ದೇಶದಲ್ಲಿ ಬ್ರಾಹ್ಮಣರೂ, ಬ್ರಾಹ್ಮಣೇತರರೂ, ಇತರ ಎಲ್ಲಾ ಜಾತಿಗಳವರೂ ಪರಸ್ಪರ ಸ್ನೇಹಭಾವದಿಂದ ಇರದಿದ್ದರೆ ನಿಜವಾದ ಸ್ವರಾಜ್ಯವು ಸಿಗಲಾರದು. ಆದುದರಿಂದ ಎಲ್ಲರೂ ಭ್ರಾತೃಗಳು, ಎಲ್ಲರೂ ಸಮಾನರು ಎಂಬ ಉತ್ತಮ ತತ್ವಗಳಿಗೆ ವಿರೋಧವಾಗಿರುವ ಎಲ್ಲಾ ಪದ್ಧತಿಗಳನ್ನು ಕಿತ್ತುಹಾಕುವುದೇ ಪ್ರಕೃತದಲ್ಲಿ ನಮ್ಮ ಕರ್ತವ್ಯವಾಗಿದೆ.

(ಇನ್ನೂ ಇದೆ)

ಧರ್ಮದೇವ ವಿದ್ಯಾಲಂಕಾರ,
[illegible], ಮಂಗಳೂರು.

ಅನುಕ್ರಮಣಿಕೆ

ಲೇಖ—
ಸ್ವರಾಜ್ಯಕ್ಕಾಗಿ ಜನರು ಏನು ಮಾಡತಕ್ಕದ್ದು? ೬
ಮೋತಿಲಾಲ ಘೋಷರ ಶೋಚನೀಯ ಮೃತ್ಯು ,,
ಸ್ಫುಟವಿಚಾರಗಳು—
೧. ಹಿಂದೀರಾಜಕಾರಣದಲ್ಲಿ ಮತಭೇದಗಳು. ೨. ಗಣೇಶ ದಾಮೋದರ ಸಾವರಕರರ ಬಿಡುಗಡೆ. ೩. ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ನಡಿಯಲಿಕ್ಕಿರುವ ಚರ್ಚೆಗಳು. ೪. ಮಾಪಿಳ್ಳೆಕೈದಿಗಳ ಆಕಸ್ಮಿಕ ಮರಣ. ೫. ಅಕಾಲಿ ಚಳವಳ. ೬. ಮುಳಸೀ ಪೇಟೆಯ ಸತ್ಯಾಗ್ರಹ. ೭
ಮಂಗಳೂರು— ,,
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ, ಪಾಡೆಬಿಟ್ಟು,ಬಂಟವಾಳ ಸುಳ್ಯ ಮಂಜೇಶ್ವರ ,,
ಸ್ವರಾಜ್ಯವೂ ಸಮಾಜಸುಧಾರಣೆಯೂ ,,
ಕೊಲ್ಲೂರು ಗೋಭೂನಂದನದ ಆಮೂಲಾಗ್ರ ಚರಿತ್ರೆ ೮
ಪತ್ರವ್ಯವಹಾರ ೧, ೨, ೩, ,,
ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು ೪

ಸ್ವದೇಶಾಭಿಮಾನಿ.

ಶಕ ೧೮೪೪ ಬಾದ್ರುಪದ ಬ|| ೨ಯು ಶುಕ್ರವಾರ.

ಸ್ವರಾಜ್ಯಕ್ಕಾಗಿ ಜನರು ಏನು ಮಾಡತಕ್ಕದ್ದು?

ಸ್ವರಾಜ್ಯವು ಹಿಂದೀ ರಾಜಕಾರಣದ ಅಂತಿಮಧ್ಯೇಯವು. ಹಿಂದುಸ್ಥಾನವು ಈಗ ರಾಜಕೀಯ ಕ್ಷೇತ್ರದಲ್ಲಿ ರಾಷ್ಟ್ರೀಯ ಸಭೆಯ ಮುಖಾಂತರ ಅಥವಾ ಮುಸಲ್ಮಾನ್ ಲೀಗಿನ ದ್ವಾರಾ ಇಲ್ಲವೆ ಇನ್ನಾವುದಾದರೂ ಒಂದು ಸಂಸ್ಥೆಯ ಪರಿಮುಖವಾಗಿ ಯಾವ ವ್ಯವಸಾಯವನ್ನೆ ಮಾಡಲಿ, ಅದು ಸ್ವರಾಜ್ಯಪ್ರಾಪ್ತಿಗಾಗಿಯೆ ಇರಬೇಕು. ಮತ್ತು ಅದು ಹಾಗಿದೆ ಎಂಬುದು ಎಲ್ಲರೂ ಒಪ್ಪತಕ್ಕ ಮಾತು. ಹಿಂದುಸ್ಥಾನದ ಜನರಲ್ಲಿ ಎಷ್ಟು ಮತಭೇದಗಳಿದ್ದರೂ ಬೇರೆ ವಿಷಯಗಳಲ್ಲಿ ಒಬ್ಬರಿಗೊಬ್ಬರು ಕಡು ವೈರಿಗಳಾಗಿದ್ದರೂ, ಶಿವಾಲಯದಲ್ಲಿ ರಾಮ—ರಾವಣರು ಏಕತ್ರಸೇರುವಂತೆ ಸ್ವರಾಜ್ಯಸಂಪಾದನೆಯ ಕಾರ್ಯದಲ್ಲಿ ಎಲ್ಲರೂ—ಹಿಂದು, ಮುಸಲ್ಮಾನ, ಕ್ರಿಶ್ಚನ, ಪಾರ್ಸಿ, ಬ್ರಾಹ್ಮಣ, ಬ್ರಾಹ್ಮಣೇತರ ಇತ್ಯಾದಿ ಸಮಸ್ತ ವರ್ಗದವರು—ಒಟ್ಟಿಗೆ ಸೇರಬೇಕು. ಒಂದುಕಾಲದಲ್ಲಿ ಸ್ವರಾಜ್ಯಪ್ರಯತ್ನವು, ಹಿಂದುಸ್ಥಾನದೊಳಗಿನ ಸ್ವಾರ್ಥಪರರಾದ ಅಧಿಕಾರಿಗಳ ದೃಷ್ಟಿಯಿಂದ ದೊಡ್ಡದೊಂದು ಅಪರಾಧವಾಗಿತ್ತು. ಮತ್ತು ಈ ಅಪರಾಧಕ್ಕೆ ಗುರಿಗಳಾದವರನ್ನು ಜೈಲಿಗೆ ಕಳುಹಿಸಲು ಅಧಿಕಾರಿಗಳಿಗೆ ಯಾವ ಸಂಕೋಚವೂ ತೋರುತ್ತಿರಲಿಲ್ಲ. ಆದರೆ ಈ ಯುಗವು ಪಲ್ಲಟಿಸಿ ಈಗ ಸ್ವರಾಜ್ಯಧ್ಯೇಯವು ರಾಜಮಾನ್ಯವಾಗಿದೆ. ಅದು ಎಷ್ಟರಮಟ್ಟಿಗೆ ಮಾನ್ಯವಾಗಿದೆ ಎಂದರೆ, ಮೊಂಟೆಗ್ಯು ಸುಧಾರಣೆಗಳು "ಜವಾಬುದಾರ ರಾಜ್ಯಪದ್ಧತಿ"ಯ ಮೊದಲನೆಯ ಕಂತೆಂಬುದಾಗಿ ಕೊಡಲ್ಪಟ್ಟವೆ. ಮತ್ತು ಈ ಸುಧಾರಣೆಗಳ ಕೌನ್ಸಿಲುಗಳನ್ನು ತೆರೆಯಲು ಬಂದ ತಮ್ಮ ಕಕ್ಕನವರೊಡನೆ ಬಾದಶಹರು ತಮ್ಮ ಇಂಗ್ಲಿಷ್ ಬಾಯಿಯಿಂದ "ಸ್ವರಾಜ್ಯ"ವೆಂಬ ಶುದ್ಧ ಸಂಸ್ಕೃತ ಶಬ್ದವನ್ನು ಉಚ್ಚರಿಸಿ ಅದರ ನಿರಪರಾಧತೆ, ಪವಿತ್ರತೆ ಮತ್ತು [illegible] ಇವುಗಳನ್ನು ಸ್ಥಾಪಿಸಿದ್ದಾರೆ. ಈ ಮೇರೆಗೆ ಸರ್ವ ಭಾಗಗಳಿಂದ ಸ್ವರಾಜ್ಯವು ದೃಷ್ಟಿಮಾರ್ಗದಲ್ಲಿ ಬರುತ್ತಿರುವಾಗ, ಹಲ್ಲು ಕಿರಿದು ಅಪಶಕುನ ಮಾಡಲೊ ಎಂಬಂತೆ ಮುಖ್ಯಮಂತ್ರಿಗಳು "ಸುಧಾರಣೆಗಳು ಪ್ರಯೋಗಕ್ಕಾಗಿ" ಎಂದು ಹೇಳಿ ಹಿಂದಿನ ಎಲ್ಲ ಘಟನೆಯ ಮೇಲೆ ನೀರುಚೆಲ್ಲಿದ್ದಂತೆ ಮಾಡಿದ್ದಾರಾದರೂ, ಇವರ ಅದೂರದರ್ಶಿತೆಯ ಮತ್ತು ಅಪ್ರಬುದ್ಧತೆಯ ನಿಷೇಧವನ್ನು ಎಲ್ಲರೂ ಮಾಡತೊಡಗಿದ್ದಾರೆ. ಮತ್ತು ಈ ಕಾರಣದಿಂದ ಮಂತ್ರಿಗಳ ವಿಧಾನವು, ಹಣ್ಣಾದ ಎಲೆಯಂತೆ ತನ್ನಷ್ಟಕ್ಕೆ ಉದರಿಬಿದ್ದೀತು; ಅಥವಾ ಮಣ್ಣಿನ ಮುದ್ದೆಯು ನೀರಿನಲ್ಲಿ ಕರಗಿಹೋಗುವಂತೆ ಜನತೆಯ ಶಾಂತ ಚಳವಳದಿಂದ ಬದಿಗೆ ಬಿದ್ದುಹೋದೀತೆಂಬುದಕ್ಕೆ ಸಂಶಯವಿಲ್ಲ. ಅಥವಾ ಮಂತ್ರಿಗಳ ಮಾತು ಒಂದು ವೇಳೆ ಹಾಗೆಯೆ ವಜ್ರಲೇಪವಾಗಿ ನಿಂತೀತು ಎಂದು ನೆನಸಿದರೂ, ಇಲ್ಲವೆ ನಿಜವಾಗಿ ಅಂಥ ಪ್ರಸಂಗವು ಬಂದರೂ ಬಾಧಕವಿಲ್ಲ. ಯಾವ ಸುಧಾರಣೆಗಳು ರೂಪಾಯಿಯಲ್ಲಿ ೨ ಆಣೆಯಷ್ಟು ಸಹ ಯೋಗ್ಯತೆಯವಿಲ್ಲವೊ ಅವುಗಳನ್ನು ಲೊಯ್ಡ ಜೋರ್ಜರಾಗಲಿ, ಕರ್ಝನರಾಗಲಿ ಹಿಂದಕ್ಕೆ ತೆಕ್ಕೊಳ್ಳುವುದರಿಂದ ಯಾವ ಹಾನಿಯು? ಚಿಕ್ಕ ಮಗುವಿನ ಕೈಯಲ್ಲಿದ್ದ ಆಟದ ಮಣ್ಣಿನ ಗೊಂಬೆಯು ಒಡೆದುಹೋದರೆ ಅಥವಾ ಕಾಗದದ ಅರಮನೆಯು ಹರಿದುಹೋದರೆ ಅದರಿಂದ ಹೇಗೆ ವಿಶೇಷ ನಷ್ಟವಿಲ್ಲವೊ ಹಾಗೆಯೆ ಈ ಅಲ್ಪ ಸುಧಾರಣೆಗಳು ಮುಖ್ಯಮಂತ್ರಿಗಳ ಅಥವಾ ಪಾರ್ಲಿಮೆಂಟಿನ ವಕ್ರದೃಷ್ಟಿಗೆ ಪಾತ್ರವಾಗಿ ಸಂಪುಷ್ಟದಲ್ಲಿ ಬಂದುಹೋದರೂ ಅದರಿಂದ ಯಾರಿಗೂ ವ್ಯಸನವಾಗಲಿಕ್ಕಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳ ಈ ಮಾತಿಗೆ ಹೆದರಿ ಯಾರೂ ಚಿಂತಾಗ್ರಸ್ತರಾಗಬೇಕಾದ್ದಿಲ್ಲ. ಸ್ವರಾಜ್ಯವು ಹಿಂದುಸ್ಥಾನದ ಧರ್ಮವು. ಇದನ್ನು ಜನರು ಸ್ವಾವಲಂಬನದಿಂದ ಸಂಪಾದಿಸಬೇಕು. ಬೇರೆಯವರ ಮೇಲೆ ಅವಲಂಬಿಸಿ ಇದ್ದು ಪ್ರಯೋಜನವಿಲ್ಲ.

ಇಷ್ಟು ಸಂಗತಿಯನ್ನು ಒಪ್ಪಿಕೊಂಡ ಮೇಲೆ ಆ ಸ್ವರಾಜ್ಯಕ್ಕಾಗಿ ಜನರು ಏನು ಮಾಡತಕ್ಕದ್ದು ಎಂಬುದೊಂದು ಪ್ರಶ್ನೆಯು ಬರುವುದು. ಮತ್ತು ಇದನ್ನೆ ಈ ಹೊತ್ತು ಕೊಂಚಮಟ್ಟಿಗೆ ವಿಮರ್ಶಿಸುವವರಿದ್ದೇವೆ. ಸ್ವರಾಜ್ಯಕ್ಕಾಗಿ ಜನರು ಏನು ಮಾಡತಕ್ಕದ್ದು ಎಂದು ಕೇಳಿದೊಡನೆ "ಸ್ವಾರ್ಥತ್ಯಾಗವನ್ನು" ಮಾಡತಕ್ಕದ್ದು ಎಂದು ಥಕ್ಕನೆ ಯಾರೂ ಉತ್ತರಕೊಟ್ಟಾರು; ಆದರೆ ಸ್ವಾರ್ಥತ್ಯಾಗವೆಂದರೇನು, ಇದ್ದ ಸರ್ವಸ್ವವನ್ನು ಬಿಟ್ಟುಬಿಡುವುದು ಅಥವಾ ಬಾವಿಗೆ ಹಾರುವುದು ಇದೆ ಸ್ವಾರ್ಥತ್ಯಾಗವೂ ಯಾವದು ಎಂದು ಪುನಃ ಪ್ರಶ್ನೆ ಬರುವದು. ಆಗ ಅದನ್ನು ಹೇಳತೊಡಗಿ ಮುಂದರಿಸುವಾಗ ಸ್ವರಾಜ್ಯವು ಒಂದು ಕಡೆಯಲ್ಲಿ ಪ್ರತಿಪಾದನವು, ಇನ್ನೊಂದು ಕಡೆಯಲ್ಲಿ ಇಂಥ ಸ್ಥಿತಿಯು ಬರುವುದು! ಆದ್ದರಿಂದ ಕೇವಲ ಭಾವನಾಪ್ರಧಾನವಾದ ಪ್ರತಿಪಾದನವನ್ನು ಮಾಡುವುದಕ್ಕಿಂತ ಸ್ವರಾಜ್ಯವು ಯಾವದರಿಂದ ಬೇಗನೆ ಮತ್ತು ನಿಜವಾಗಿ ಸಮೀಪಿಸುವದೊ ಮತ್ತು ಬಂದಮೇಲೆ ಅದು ಯಾವುದರಿಂದ ಚಿರಸ್ಥಾಯಿಯಾಗಿ ನಿಲ್ಲುವುದೊ ಅಂಥ ಉಪಾಯವನ್ನು ಆಶ್ರಯಿಸುವುದು ಜಾಣತನದ ಮಾರ್ಗವು. ಈ ದೃಷ್ಟಿಯಿಂದ ವಿಚಾರಮಾಡಹೊಂಟರೆ, ಐಕ್ಯ ಮತ್ತು ಪಕ್ಷಪಾತರಹಿತತ್ವ ಇವೆರಡು ಗುಣಗಳು ಸ್ವರಾಜ್ಯದ ಸಂಪಾದನಕ್ಕೂ ಚಿರರಕ್ಷಣಕ್ಕೂ ಅತ್ಯಾವಶ್ಯಕ ಗುಣಗಳು. ಜನಾಂಗದಲ್ಲಿ ಮನಸ್ವಿಯಾಗಿ ಭೇದವುಂಟಾದರೆ ಅಲ್ಲಿ ಸ್ವರಾಜ್ಯವು ಬರಲಿಕ್ಕಿಲ್ಲ. ಉದಾಹರಣಾರ್ಥವಾಗಿ ಹಿಂದುಗಳು ಮುಸಲ್ಮಾನರೊಡನೆ, ಮುಸಲ್ಮಾನರು ಹಿಂದುಗಳೊಡನೆ ಏಕತ್ವದಿಂದ ಇರಬೇಕು. ಅದರ ಬದಲು ಹಿಂದುಗಳು ಮಹಮ್ಮದೀಯರ ಮಸೀದಿಗಳ ಮುಂದೆ ವಾದ್ಯವನ್ನು ಬಾರಿಸತೊಡಗಿದರೆ ಅಥವಾ ಮಹಮ್ಮದೀಯರು ಬಕ್ರೀದ್ ಸಂದರ್ಭದಲ್ಲಿ ಗೋವಧೆಯನ್ನು ಮಾಡತೊಡಗಿದರೆ ಈ ಎರಡು ಬಹು ದೊಡ್ಡ ಸಮಾಜಗಳ ಐಕ್ಯವು ಎಲ್ಲಿ ನಿಲ್ಲುವುದು? ಒಂದು ವರ್ಷದ ಹಿಂದೆ ಖಿಲಾಫತಿನ ಚಳವಳವು ಬಹು ಭರದಲ್ಲಿರುವಾಗ ಎಂದರೆ, ಕಳೆದ ವರ್ಷದ ಬಕ್ರೀದಿನಲ್ಲಿ ಗೋವಧೆಯು ಕಡಿಮೆ ಇತ್ತು. ಆದರೆ ಈವರ್ಷದ ಪರಿಸ್ಥಿತಿಯನ್ನು ಹೇಳುವುದಾದರೆ, ನಮ್ಮ ಮಂಗಳೂರು ಪಟ್ಟಣದಲ್ಲಿ ಮತ್ತು ಜಿಲ್ಲೆಯಲ್ಲಿ ಮದ್ಯಪಾನನಿಷೇಧದ ಚಳವಳವು ಪ್ರಚಲಿತವಿರುವಾಗ ಗುತ್ತೆಗಳ ವಾರು ಬಹು ಕಡಿಮೆ ಸಂಖ್ಯೆಗೆ ಹೋಗಿತ್ತಾದರೂ ಈ ವರ್ಷ ಹೇಗೆ ಕಳೆದ ವರ್ಷದ ರಕಮು ಮಾತ್ರವಲ್ಲ ಅದರ ಇಮ್ಮಡಿ ಬದ್ದಿಯು ಕೂಡ ಬಂದುಹೋಗುವಂತೆ ವಿಪರೀತ ಏರಿನಿಂದ ಗುತ್ತೆಗಳ ವಿಲಮು ಆಗಿರುವುದೊ ಹಾಗೆಯೆ ಹಿಂದುಸ್ಥಾನದೊಳಗಿನ ಈ ವರ್ಷದ ಬಕ್ರೀದಿನಲ್ಲಿ ಮೊದಲಿಗಿಂತ ಹೆಚ್ಚು ಗೋವುಗಳು ಕೊಲ್ಲಲ್ಪಟ್ಟಿದ್ದಾವೆ! ಈ ಪ್ರಕಾರವು ಐಕ್ಯ ವಿಘಾತಕವೂ, ಸ್ವರಾಜ್ಯಪ್ರತಿಬಂಧಕವೂ ಮತ್ತು ಶೋಚನೀಯವೂ ಅಲ್ಲವೆಂದು ಯಾರು ಹೇಳಿಯಾರು? ಹಿಂದು—ಮುಸಲ್ಮಾನರ ಐಕ್ಯವನು ಹಾಳುಮಾಡಿ ಸ್ವರಾಜ್ಯದ ಆಸೆಯು ದ್ರವರೂಪವಾಗಿ ಹಾರಿಹೋಗುವಂತೆ ಮಾಡಿದ ಇನ್ನೊಂದು ಉದಾಹರಣೆಯನ್ನು ಕೊಡುವುದಿದ್ದರೆ, ಪಂಜಾಬ ಪ್ರಾಂತದ ಶಿಕ್ಷಣಮಂತ್ರಿಗಳ ಅದೂರದರ್ಶಿತೆಯ ಕೃತ್ಯವನ್ನು ನೆನಪಿಗೆ ತಂದುಕೊಡಬಹುದು. ಅಲ್ಲಿಯ ಶಿಕ್ಷಣಮಂತ್ರಿಮಂತ್ರಿಗಳು ಮಹಮ್ಮದೀಯರು. ಇವರು ಕೊಲಜುಗಳಲ್ಲಿ ಇಂತಿಷ್ಟು ಹೆಚ್ಚು ಮಹಮ್ಮದೀಯರು ಕೆಲಸಕ್ಕೆ ಬರಬೇಕು ಇತ್ಯಾದಿ ಹುಕುಮುಗಳನ್ನು ಹೊರಡಿಸಿ, ಈ ಪಕ್ಷಪಾತದ ಹುಕುಮಿನಿಂದ ಹಿಂದುಮಹಮ್ಮದೀಯರಲ್ಲಿಯ, ದಿನೇದಿನೇ ಹತ್ತರ ಬರುತ್ತಿದ್ದ ಬಂಧುಪ್ರೇಮವನ್ನು ಪುನಃ ದೂರಕ್ಕೆ ಮಾಡಹತ್ತಿದ್ದಾರೆ. ೭೦ ಜನ ಮಹಮ್ಮದೀಯರು, ಉಳಿದವರು ಹಿಂದುಗಳು; ಇಂಥ ಪ್ರಮಾಣವನ್ನು ನಿರ್ಧರಿಸುವುದರಿಂದ ಜನಗಳಲ್ಲಿ ವೈಮನಸ್ಯವು ಪ್ರಾರಂಭವಾಗಿ ಅದರ ಪರಿಣಾಮವೆಂಬಂತೆ ಪಂಜಾಬದ ಹಿಂದುಗಳು ಈ ಮಂತ್ರಿಗಳ ಪಕ್ಷಪಾತವನ್ನು ನಿಷೇಧಿಸುತ್ತಾರೆ. ಅದಕ್ಕೆ ಪ್ರತಿಕ್ರಿಯೆ ಎಂಬಹಾಗೆ ಕೆಲವು ಮಹಮ್ಮದೀಯರು ಮಂತ್ರಿಗಳ ಕಡೆನಿಂತು ಈ ಹಿಂದುಗಳನ್ನು ಪ್ರತಿಷೇಧಿಸುತ್ತಾರೆ. ಸಾರಾಂಶ, ಮಂತ್ರಿಗಳ ಕೃತ್ಯವು ನಿಜವಾಗಿ ಹೇಗೂ ಇರಲಿ, ಪರಂತು ತತ್ಕಾಲಕ್ಕೆ ಅದು ಐಕ್ಯಭಂಗಕ್ಕೆ ಕಾರಣವಾಗಿದೆ ಎಂಬುದು ಪಂಜಾಬ ವೃತ್ತಾಂತದಿಂದ ತಿಳಿದುಬರುತ್ತದೆ. ಈ ವರ್ಷದ ಗೋವಧೆಯ ವೃದ್ಧಿಯು ಇನ್ನಷ್ಟು ಉದ್ವೇಗವನ್ನುಂಟುಮಾಡುತ್ತದೆ. ಅಲ್ಲದೆ ಮೊನ್ನೆಯ ಮೊಹರಮಿನಲ್ಲಿ ದಂಗೆಗಳುಂಟಾಗಿ ಕೆಲವು ಕಡೆಯಲ್ಲಿ ಶಾಂತತಾಭಂಗವುಂಟಾಗಿದೆ.

ಈ ರೀತಿಯಿಂದ ಹಿಂದುಮುಸಲ್ಮಾನರ ಐಕ್ಯವು ಹೇಗೆ ಅದೂರದರ್ಶಿಗಳ ಕೃತ್ಯದಿಂದ ಒಡೆದುಹೋಗುವ ಹಾಗಾಗಿದೆಯೊ ಹಾಗೆಯೆ ಮದರಾಸ ಸರಕಾರದ ಅವಿವೇಕದ ಕೃತ್ಯದಿಂದ ಹಿಂದಿಗಳಲ್ಲಿಯೆ ಪರಸ್ಪರ ವೈಮನಸ್ಯವುಂಟಾಗಲು ಕೆಲವು ಎಡೆಸಿಕ್ಕಿದಂತಾಗಿದೆ. ಸರಕಾರಿ ನೋಕರಿಯಲ್ಲಿ ಸೇಕಡಾ ೪೮ ಬ್ರಾಹ್ಮಣೇತರರು, ೧೬ ಬ್ರಾಹ್ಮಣರು, ೧೦ ಕ್ರಿಶ್ಚನರು ಇತ್ಯಾದಿ ಈ ರೀತಿಯಿಂದ ಇಸಮುಗಳನ್ನು ನೇಮಿಸಬೇಕೆಂದು, ಸರಕಾರದ ಅಭಿಪ್ರಾಯವಿರುವುದು. ಇದು ಸರಕಾರದ್ದೆ ಅಭಿಪ್ರಾಯವು ಎಂದು ತಿಳಿದು, ಅದನ್ನು ದೂರಲು ಉಪಾಯವಿಲ್ಲ. ಈ ಕಲ್ಪನೆಯು ಪ್ರಥಮತಃ ಬ್ರಾಹ್ಮಣೇತರರಲ್ಲಿ ಉದ್ಭವಿಸಿತು. ಅದು ಸರಕಾರಿ ಅಧಿಕಾರಿಗಳ ಅಥವಾ ಮಿ|| ಪತ್ರೋಗಳಂಥವರ ಪ್ರೋತ್ಸಾಹದಿಂದ ಈ ಹೊತ್ತಿಗೆ ವಿಶಾಲವಾಗಿದೆ. ಈಗ ಇದರ ಮೇಲಿಂದ ಸರಕಾರಿ ನೋಕರಿಯಲ್ಲಿ ಇತರರು ಸೇರಿದ್ದು ನಮಗೆ ಸಹನವಾಗಲಿಲ್ಲವೆಂದು ಯಾರೂ ತಿಳಿಯಬಾರದು. ಇಂಥ ಪ್ರಕಾರದಿಂದ ಭೇದಭಾವನೆಯು ಇನ್ನಷ್ಟು ದೃಢವಾಗಿ ಐಕ್ಯವು ದೂರವಾಗುವುದು. ಇದೆ ನಮ್ಮ ಅಭಿಪ್ರಾಯವು. ಸರಕಾರಿ ಕೆಲಸದಲ್ಲಿ ಯಾರೆಬರಲಿ; ಆದರೆ ಯೋಗ್ಯರಾದವರು ಬರಲಿ. ಅಥವಾ ಈ ಮಾತಿನಲ್ಲೂ ಪುನಃ ಗೂಢಾರ್ಥವಿದೆ ಎಂದು ಯಾರಾದರೂ ತಿಳಿಯುವದಾದರೆ, ಅವರ ಸಂತೋಷದ ಬಗ್ಗೆ ಬ್ರಾಹ್ಮಣೇತರರೆ ಬರಲಿ ಎಂದು ನಾವು ಸ್ಪಷ್ಟವಾಗಿ ಮತ್ತು ನಿಸ್ಸಂಕಟವಾಗಿ ಹೇಳುತ್ತೇವೆ. ಆದರೆ ಅದು ಹುಕುಮಿನ ರೂಪದಿಂದ ಈ ದ್ವೇಷವನ್ನು ಬೆಳಿಸುವುದು ಬೇಡ, ಇಷ್ಟೆ ನಮ್ಮ ಹೇಳಿಕೆಯು. ಈರೀತಿಯಿಂದ ಜನರು ಆದಷ್ಟು ಹತ್ತರಬಂದು ಪರಸ್ಪರ ಪ್ರೀತಿಯನ್ನು ಮಾಡತೊಡಗಿದರೆ, ಭೇದಕಾರಣಗಳನ್ನು ಮುರಿದುಕೊಳ್ಳಹತ್ತಿದರೆ ಸ್ವರಾಜ್ಯವು ಸಮೀಪಿಸಲು ಒಂದು ದೊಡ್ಡ ಕಾರಣವುಂಟಾದಂತಾದೀತು.

ಮಹರ್ಷಿ ಬಾಬು ಮೋತಿಲಾಲ ಘೋಷರವರ ಶೋಚನೀಯ ಮೃತ್ಯು.

ಈ ತಿಂಗಳ ತಾ|| ೫ ಮಂಗಳವಾರ ಮಧ್ಯಾಹ್ನ ೧೧ ಗಂಟೆಯ ಸಮಯಕ್ಕೆ ದೇಶಭಕ್ತ ಶಿಖಾಮಣಿಗಳೂ 'ಅಮೃತಬಝಾರ ಪತ್ರಿಕೆ'ಯ ಸಂಪಾದಕರೂ ಆದ ಬಾಬು ಮೋತಿಲಾಲ ಘೋಷರು ತಮ್ಮ ೭೭ನೆಯ ಪ್ರಾಯದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ನಾವು ತುಂಬಾ ವ್ಯಸನಪಡುತ್ತೇವೆ. ಕಲ್ಕತ್ತೆಯ "ಅಮೃತಬಝಾರ ಪತ್ರಿಕೆ"ಯು ದೇಶೀಯಜನರು ನಡಿಸಿರುವ ಇಂಗ್ಲಿಷ್ ಪತ್ರಿಕೆಗಳಲ್ಲಿ ಅಗ್ರಗಣ್ಯವಾದದ್ದು. ಉದ್ದಳತೆ, ಕಾಗದ, ಚಂದಾದಾರರ ಸಂಖ್ಯೆ ಇವುಗಳಿಂದ ಎಷ್ಟೊ ಮೇಲಕ್ಕಿರುವ ಪತ್ರಗಳು ಹಿಂದೂಸ್ಥಾನದಲ್ಲಿ ಇದ್ದಾವೆ. ಆದರೆ ಪತ್ರಿಕೆಯ ಧೋರಣವು ಒಮ್ಮೆ ನಿಶ್ಚಿತವಾದ ಬಳಿಕ ಆ ಧ್ರುವಧೋರಣವನ್ನು ಕೊನೆತನಕ ನಡಿಸುವ ಪತ್ರಿಕೆಗಳು ಬಹು ಕಡಿಮೆ. ಅಮೃತಬಝಾರ ಪತ್ರಿಕೆಯಮಟ್ಟಿಗೆ ಈ ನಿಯಮವು ಅಪವಾದಾತ್ಮಕವೆನ್ನಬಹುದು. ಅಮೃತಬಝಾರ ಪತ್ರಿಕೆಯ ಜನಕರಾದ ಶಶಿರಕುಮಾರ ಘೋಷರು ತನ್ನ ಪತ್ರಿಕೆಗೆ ಯಾವ ಧೋರಣವನ್ನು ರೂಪಿಸಿ ಕೊಟ್ಟಿದ್ದರೊ ಅದನ್ನೆ ಕೊನೆತನಕ ಅವರ ತಮ್ಮನಾದ ಬಾಬು ಮೋತಿಲಾಲರು ನಡಿಸಿದ್ದರು.

ಬಾಬು ಮೋತಿಲಾಲರು ರಾಷ್ಟ್ರೀಯಪಕ್ಷದ ಕಡು ಪುರಸ್ಕರ್ತರಾಗಿದ್ದರು. ಇವರ ಲೇಖನವು ಯಾವಾಗಲೂ ಸ್ವರಾಜ್ಯಚಳವಳಕ್ಕೆ ಪೋಷಕವಾಗಿತ್ತು. ವಂಗವಿಭಾಗದ ಸಮಯದಲ್ಲಿ, ಕರ್ಝನರ ಕಾರಭಾರದ ಸಮಯದಲ್ಲಿ, ಹೋಮರೂಲ್‌ಚಳವಳ ಮತ್ತು ಸ್ವರಾಜ್ಯಚಳವಳದ ಸಮಯದಲ್ಲಿ ಘೋಷರ ಲೇಖಗಳು ಸುವಿಚಾರಪರಿಪೂರ್ಣತವಾಗಿ ಬರುತಿದ್ದವು. ಕರ್ಝನರ ಹಿತ್ತಾಳಿಯನ್ನು ಇವರೆ ಮುಂಚಿತವಾಗಿ ಹೊರಗೆಹಾಕಿದರು. ಸರಕಾರಿ ಅಧಿಕಾರಿಗಳ ದುಷ್ಕೃತ್ಯಗಳನ್ನು ಟೀಕಿಸುವಾಗ ಇವರು ಎಂದೂ ದಾಕ್ಷಿಣ್ಯವನ್ನು ಹಿಡಿಯುತ್ತಿರಲಿಲ್ಲ. ಇವರ ಜ್ಞಾನಸಂಪತ್ತನ್ನು ನೋಡುವಾಗ ಇವರು ಮಹರ್ಷಿಗಳಂತೆ ತೋರುತಿದ್ದರು. ಇವರು ತಮ್ಮ ಸಂಪೂರ್ಣ ಆಯುಷ್ಯವನ್ನು ವಿದ್ಯಾಸೇವೆಯಲ್ಲಿ ಮತು ದೇಶಹಿತಚಿಂತನೆಯ ಕಳೆದರು. ಇಂಥ ದೇಶಭಕ್ತರು ಈಗಿನ ಮತಭೇದದ ಸಮಯದಲ್ಲಿ ಮತ್ತು ಹೊಸಹೊಸ ರಾಷ್ಟ್ರಪ್ರಶ್ನೆಗಳ ಚರ್ಚೆಯ ಸಮಯದಲ್ಲಿ ಇರಬೇಕಿತ್ತು. ಆದರೆ ದೇಶದ ದುರ್ದೈವದಿಂದ ಸನ್ಮಾನ್ಯ ಮಹರ್ಷಿ ಮೋತಿಲಾಲ ಘೋಷ ಇವರಿಗೆ ಈ ನಾಜೂಕಸಮಯದಲ್ಲೆ ಮೃತ್ಯುವು ಬಂತು! ಇದು ತುಂಬಾ ವ್ಯಸನಾಸ್ಪದವು. ಆದರೆ ಅವರ ಇದುವರೆಗಿನ ವಿಚಾರಪದ್ಧತಿಯನ್ನೆ ಮಾರ್ಗದರ್ಶಕವನ್ನಾಗಿಟ್ಟುಕೊಂಡು ರಾಷ್ಟ್ರೀಯಪಕ್ಷವು ಮುಂದರಿಸೀತೆಂದು ಭರವಸೆಪಡುತ್ತೇವೆ.

ಸ್ಫುಟವಿಚಾರಗಳು.

೧. ಸದ್ಯಕ್ಕೆ ಹಿಂದಿರಾಜಕಾರಣದಲ್ಲಿ ಅನೇಕ ಪಕ್ಷಗಳು ಉಂಟಾಗಿವೆ. ರಾಷ್ಟ್ರೀಯಸಭೆಯ ಅನುಯಾಯಿಗಳಲ್ಲೂ ಮತಭೇದಗಳು ಉಂಟಾಗಿವೆ. ಈ ಮತಭೇದಗಳು ನೂತನವಾದವುಗಳಲ್ಲ. ಈಗಿನ ಸ್ವರೂಪದ ಚಳವಳವು ಕಲಕತ್ತೆಯ ಸ್ಪೆಶಲ್ ಕೊಂಗ್ರೆಸಿನ ಸಮಯದಲ್ಲಿ ಅಸ್ತಿತ್ವವನ್ನು ಪಡೆಯಿತು. ಎಂದರೆ ಈಗ ಈ ಮಾತಿಗೆ ೨ ವರ್ಷಗಳಾದವು. ಅಂದಿನಿಂದ ಈ ಮತಭೇದವು ಉಂಟೆ ಉಂಟು. ಆದರೆ ಈ ಮತಭೇದದಜನರಕಡೆಗೆ ಕೊಂಗ್ರೆಸಿನಲ್ಲಿ ಬಹುಮತವಿದ್ದಿಲ್ಲವಾದ್ದರಿಂದ ಮತ್ತು ಕೊಂಗ್ರೆಸನ್ನು ಬಿಡುವುದು ಇವರಿಗೆ ಇಷ್ಟವಿದ್ದಿಲ್ಲವಾದ್ದರಿಂದ ಈ ಮತಭೇದದವರು ಬಹುಮತಕ್ಕೆ ತಲೆಬಗ್ಗಿಸಿ ನಡಕೊಳ್ಳುತ್ತಿದ್ದರು. ಪರಂತು ಇಷ್ಟರ ಮೇಲಿಂದ ಈ ವರ್ಗಕ್ಕೆ ಕೊಂಗ್ರೆಸಿನ ಎಲ್ಲ ಕಾರ್ಯಕ್ರಮವು—ವಿಶೇಷತಃ, ಅಸಹಕಾರದ ಕಾರ್ಯಕ್ರಮವು ಅಕ್ಷರಶಃಮಾನ್ಯವಿತ್ತೆಂದು ಮಾತ್ರ ಯಾರೂ ತಿಳಿಯಬಾರದು. ಈ ಅಲ್ಪ ಸಂಖ್ಯಾಕಮತದವರು ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಯೋಗ್ಯವಾದ ವ್ಯತ್ಯಾಸವಾಗಬೇಕೆಂದು ಆಗಾಗ್ಗೆ ಯಾಕೆ, ಪ್ರತಿಯೊಂದು ಸಲ ಹೇಳುತಿದ್ದರು. ತಥಾಪಿ ಇವರ ಕಡೆಗೆ ಕೊಂಗ್ರೆಸಿನಲ್ಲಿ ಬಹುಮತವಿರಲಿಲ್ಲವೆಂಬುದು ನಿಜ. ಈಗಲಾದರೊ ಈ ಮತಭೇದದವರ ಅಭಿಪ್ರಾಯವು ಹೆಚ್ಚು ಹೆಚ್ಚು ಪಸರಿಸುತ್ತಬಂದಿದೆ. ಕಳೆದ ಮತ್ತು ಅದರ ಮುಂಚಿನ ಸಂಚಿಕೆಯಲ್ಲಿ ನಾವು ಸಿವಿಲ್‌ಡಿಸ್‌ಒಬ್ಬೀಡಿಯನ್ಸ್ ಎನ್‌ಕ್ವಾಯರಿ ಕಮಿಟಿಯ ಮುಂದೆ ಆದ ಸಾಕ್ಷಿಗಳಲ್ಲಿ ಯಾವ ಎರಡು ಸಾಕ್ಷಿಗಳನ್ನು ಪ್ರಕಟಿಸಿದ್ದೇವೊ ಅವುಗಳ ಮೇಲಿಂದ ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಯಾವಯಾವ ಬದಲಾವಣೆಗಳಾಗಬೇಕಾಗಿವೆ ಎಂಬುದನ್ನು ವಾಚಕರು ತಿಳಿದಿರಬಹುದು. ಆ ಎರಡು ಸಾಕ್ಷಿಗಳೆ ಅಲ್ಲ, ಪ್ರತಿಯೊಂದು ಪ್ರಾಂತದಲ್ಲಿ ಕಾರ್ಯಕ್ರಮದ ಬದಲಾವಣೆಯನ್ನು ಕೇಳುವವರು ಅನೇಕರಿದ್ದಾರೆ. ಉದಾಹರಣಾರ್ಥವಾಗಿ, ಮುಂಬಯಿಯಲ್ಲಿ ಮಿ. ನಟರಾಜನ್, ಇಂಡಿಯನ್ ಸೋಶಲ್ ರಿಫೋರ್ಮರಿನ ಸಂಪಾದಕರು, ಒಬ್ಬ ಬಾತಮಿದಾರನಿಗೆ ತನ್ನ ಭೇಟಿಯನ್ನುಕೊಟ್ಟು ಅವನೊಡನೆ ಈಗಿನ ರಾಜಕಾರಣದ ಪ್ರಸ್ತಾಪಗಳನ್ನೆತ್ತಿ ಮಾತಾಡುವ ಸಮಯದಲ್ಲಿ ರಾಷ್ಟ್ರೀಯ

ಸಭೆಯು ಕೌನ್ಸಿಲ್ ಬಹಿಷ್ಕಾರವನ್ನು ತೆಗೆಯಬೇಕೆಂದು ಪ್ರತಿಪಾದಿಸಿದ್ದಾರೆ. ಅಸಹಕಾರದಿಂದ ಸ್ವರಾಜ್ಯಪ್ರಾಪ್ತಿಯಾಗಬೇಕಾದರೆ ಕೌನ್ಸಿಲಿನ ಹೊರಗೆ ಹೇಗೆ ಚಳವಳವಾಗಬೇಕಾದ್ದು ಆವಶ್ಯಕವೂ ಹಾಗೆ ಕೌನ್ಸಿಲಿನಲ್ಲೂ ಸರಕಾರವನ್ನೂ ಅಡ್ಡಗಟ್ಟುವುದು ಹಿತಾವಹವು; ಮತ್ತು ಈ ಮೇರೆಗೆ ಉಭಯವಿಧದಿಂದ ಈ ಚಳವಳವು ನಡೆದರೆನೆ ಅದು ಯಶಸ್ವಿಯಾಗಿ ಅದರಿಂದ ಸ್ವರಾಜ್ಯಲಾಭವಾದೀತೆಂದು ಅವರು ಒತ್ತಿಹೇಳಿದ್ದಾರೆ. ಮಿ. ನಟರಾಜನ್‌ರು ಪಕ್ಷಾಭಿಮಾನದಿಂದ ಕಣೆಯುವವರಲ್ಲ, ನಿರ್ವಿಕಾರಮನಸ್ಕರು ಎಂದು ಖ್ಯಾತಿಗೊಂಡಿದ್ದಾರೆ. ಅಂಥವರು ಯಾವ ಅಭಿಪ್ರಾಯವನ್ನು ಪಡುತ್ತಾರೆಂಬುದು ಈಗ ಜನತೆಯ ಮುಂದೆ ಬಂದಿದೆ. ನಿಜವಾಗಿ ಹೇಳುವುದಾದರೆ ರಾಷ್ಟ್ರಕಾರ್ಯದಲ್ಲಿ ದುರಾಗ್ರಹವು ಅಷ್ಟೊಂದು ಫಲಕಾರಿಯಲ್ಲ. ಪೂರ್ವಾಪರವಿಚಾರಮಾಡಿ ಮುಂದಿನ ಧೋರಣವನ್ನು ಅಂಗೀಕರಿಸಬೇಕಾಗುತ್ತದೆ; ಇರಲಿ. ಮಿಸೆಸ್ ಎನಿಬಿಝಂಟಬಾಯಿಗಳು ಸಹ ಮುಂಬಯಿಗೆ ಹೋಗಿ ಇದೆ ಅರ್ಥದ ಒಂದು ಉಪನ್ಯಾಸವನ್ನು ಕೊಟ್ಟಿದ್ದಾರೆ. ಉತ್ತರ ಹಿಂದುಸ್ಥಾನದಲ್ಲಿ ಸ್ವಾಮಿ ಶ್ರದ್ಧಾನಂದಜಿಯವರು ರಾಷ್ಟ್ರೀಯ ಸಭೆಯ ಕಾರ್ಯಕ್ರಮದಿಂದ ಕೌನ್ಸಿಲ್‌ಬಹಿಷ್ಕಾರವನ್ನು ತೆಗೆದುಹಾಕಬೇಕೆಂದು ತಮ್ಮ ಸಾಕ್ಷಿಯಲ್ಲಿ ಹೇಳಿದ್ದಾರೆ. ಸಾರಾಂಶ, ದೇಶದ ಅನೇಕ ಭಾಗಗಳಲ್ಲಿ ರಾಷ್ಟ್ರೀಯಸಭೆಯು ವ್ಯವಹಾರ್ಯವಾದ ಕಾರ್ಯಕ್ರಮವನ್ನು ಹಾಕಿಕೊಟ್ಟು ಆ ಮೂಲಕ ಸ್ವರಾಜ್ಯವನ್ನು ಸಮೀಪಿಸಬೇಕೆಂದು ಅಪೇಕ್ಷೆಯುಂಟಾದ್ದು ಕಂಡುಬರುತ್ತದೆ.

೨. ಕಳೆದ ಸಂಚಿಕೆಯಲ್ಲಿ ಅಲಹಾಬಾದಿನ ಈಟನ್ ಎಂಬ ಅಪರಾಧಿಗೆ ಸರ್ ಹಾರಕೋರ್ಟ ಬಟ್ಲರರು ದಯೆತೋರಿಸಿದ ಸಂಗತಿಯನ್ನು ಬರೆಯುವಾಗ ಮುಂಬಯಿಯ ಸಾವರಕರಬಂಧುಗಳ ನೆನಪು ಕೊಟ್ಟು ಮುಂಬಯಿ ಸರಕಾರಕ್ಕೆ ಈ ಬಂಧುಗಳ ವಿಷಯದಲ್ಲಿ ಮಾತ್ರ ದಯೆಯುಂಟಾಗುವುದಿಲ್ಲವಲ್ಲವೆಂದು ನಾವು ಬರೆದಿದ್ದೆವು. ನಾವು ಈ ರೀತಿಯಿಂದ ಬರೆಯಲಿಕ್ಕೂ ಮುಂಬಯಿ ಸರಕಾರವು ದೇ. ಗಣೇಶ ದಾಮೋದರ ಸಾವರಕರರನ್ನು ಬಿಡುಗಡೆಪಡಿಸಲು ಹುಕುಮನ್ನು ಕೊಡಲಿಕ್ಕೂ ಗಂಟಾಗಿದೆ! ಮುಂಬಯಿ ಸರಕಾರವು ಸಾವರಕರರ ವಿಷಯದಲ್ಲಿ ದಯೆಯನ್ನು ತೋರಿಸಿ, ನಮ್ಮದೆ ಅಲ್ಲ, ನಮ್ಮಂಥ ಅನೇಕ ಪತ್ರಕಾರರ ವಿಧಾನವನ್ನು ನಿರರ್ಥಕ ಪಡಿಸಿದ ಬಗ್ಗೆ ನಾವು ಆನಂದದಿಂದ ಮುಂಬಯಿ ಸರಕಾರವನ್ನು ಅಭಿನಂದಿಸುತ್ತೇವೆ. ದೇಶಭಕ್ತ ಗಣೇಶಪಂತಸಾವರಕರರ ಪ್ರಕೃತಿಮಾನವು, ಕಥಕ್ಷಯದ ವಿಕೃತಿಯನ್ನು ಹೊಂದಿಲ್ಲವಾದರೂ ಒಂದು ನಮೂನೆಯ ಅಸ್ವಸ್ಥಸ್ಥಿತಿಯಲ್ಲಿದೆ ಎಂದು ಸರ್ಜನರ ಅಭಿಪ್ರಾಯವು ಹೊರಬಿದ್ದಕಾರಣ ಅವರಿಗೆ ಒಳ್ಳೆಯ ಆರೋಗ್ಯದ ಹವೆಗಾಗಿ ಮತ್ತು ಸರಿಯಾದ ಔಷಧೋಪಚಾರಕ್ಕೋಸ್ಕರ ಸರಕಾರವು ಅವರನ್ನು ಬಂಧಮುಕ್ತಮಾಡಿದೆ. ಲೊರ್ಡ ಸಿಡೆನ್‌ಹೆಮರ ಕಾಲದಲ್ಲಿ ದೇಶಭಕ್ತಿಯು ದೊಡ್ಡದೊಂದು ಅಪರಾಧವಾಗಿ ಎಣಿಸಲ್ಪಡುತ್ತಿದ್ದ ಕಾರಣ ದೇಶಭಕ್ತ ಸಾವರಕರರಿಗೆ ನ್ಯಾಯವಾದ ಬಿಡುಗಡೆಯಾಗಲಿ, ದಯೆಯಿಂದ ಬಿಡುಗಡೆಯಾಗಲಿ ದೊರಕಿರಲಿಲ್ಲ. ಇದು ಶೋಚನೀಯವು. ಪರಂತು ಲೊರ್ಡ ಸಿಡೆನ್‌ಹೆಮರ ಆಳಿಕೆಯ ದಿವಸಗಳು ಮುಗಿದ ಮೇಲೂ, ವಿಷಮಜ್ವರವು ಬಿಟ್ಟ ಮೇಲೂ, ಕೆಲವು ಸಮಯ ಅದರ ಪರಿಣಾಮವು ನಿಲ್ಲುವಂತೆ, ಈ ಸಾವರಕರರ ವಿಷಯದಲ್ಲಿ ಮುಂಬಯಿ ಸರಕಾರದ ದೃಷ್ಟಿಯು ನಿರ್ಮಲವಾಗಿರಲಿಲ್ಲ. ಯುದ್ಧವು ಮುಗಿದು ಒಪ್ಪಂದವಾದ ಆನಂದ ಸಂದರ್ಭದಲ್ಲಿ ಬಿಟ್ಟ ರಾಜಕೀಯ ಕೈದಿಗಳ ಪಟ್ಟಿಯಲ್ಲಿ ಸಾವರಕರರ ಹೆಸರು ಬರಲಿಲ್ಲ! ಆದರೂ ಕೊನೆಗೆ ಮುಂಬಯಿಯ ಈಗಿನ ಗವರ್ನರರಾದ ಸರ್ ಜೋರ್ಜ ಲೊಯ್ಡರು ಸಾವರಕರ ಬಂಧುದ್ವಯದಲ್ಲಿ ಒಬ್ಬರನ್ನು ಬಿಟ್ಟುಕೊಡುವ ಔದಾರ್ಯವನ್ನು ಪ್ರಕಟಿಸಿ ಜನರ ಅಭಿನಂದನಕ್ಕೆ ಪಾತ್ರರಾಗಿದ್ದಾರೆ. ಇನ್ನೊಬ್ಬ ಬಂಧುಗಳ ವಿಷಯದಲ್ಲೂ ಅವರು ಇದನ್ನೆ ಅನುಕರಿಸಬಹುದಿತ್ತು; ಇನ್ನಾದರೂ ಅನುಕರಿಸಬಹುದು.

೩. ಸಿಮ್ಲಾದ ಕೌನ್ಸಿಲ್ ಒಫ್ ಸ್ಟೇಟಿನ ಬರುವ ಅಧಿವೇಶನದಲ್ಲಿ ಹಲವು ಉಪಯುಕ್ತಸವಾಲುಗಳು ಮತ್ತು ಚರ್ಚೆಗಳು ಬರುವವಿದ್ದಾವೆಂದು ಪ್ರಕಟವಾಗಿದೆ. ತಂತ್ರ ಮತ್ತು ಸ್ವಕಾರ್ಯ ಇವುಗಳನ್ನು ಸಾಧಿಸುವುದರಲ್ಲಿ ಬಹು ನಿಪುಣರಾದ ಮುಖ್ಯ ಮಂತ್ರಿಗಳ ಅವಿವೇಕದ ಭಾಷಣವನ್ನು ಕುರಿತು ಅನೇಕ ಮಂದಿ ಸಭಾಸದರು ಅನೇಕ ಪ್ರಶ್ನೆಗಳನ್ನು ಕೇಳುವವರಿದ್ದಾರೆ; ಅದಲ್ಲದೆ ಕಾಸೀಮಬಝಾರದ ಮಹಾರಾಜರು ನಾಮದಾರ ಶ್ರೀನಿವಾಸ ಶಾಸ್ತ್ರಿಗಳ ಒಸ್ಟ್ರೇಲಿಯಾ, ನ್ಯೂಝಿಲಂಡಗಳಲ್ಲಿ ಯಾವ ಪ್ರಯಾಣವುಂಟಾಗಿದೆಯೊ ಅದಕ್ಕೆ ಎಷ್ಟು ಖರ್ಚು ತಗಲಿದೆ, ಅವರ ಪ್ರಯಾಣದ ಕೊನೆಯ ಪರಿಣಾಮವೇನಾಗಿದೆ ಎಂಬುದನ್ನು ತಿಳಕೊಳ್ಳುವವರಿದ್ದಾರೆ. ಕಾಸೀಮಬಝಾರದ ಮಹಾರಾಜರಿಗೆ ಉಂಟಾದ ಜಿಜ್ಞಾಸೆಯಲ್ಲಿ ಕಲಕತ್ತಾ ಹೈಕೋರ್ಟಿನ ವಿಷಯವೂ ಬಂದಿದೆ. ಕಲಕತ್ತಾ ಹೈಕೋರ್ಟ ಬಂಗಾಲ ಸರಕಾರದ ಕೈಗೆ ಒಪ್ಪಿಸುವ ಆಲೋಚನೆಯಲ್ಲಿ ಸರಕಾರವು ಇದೆ ಎಂಬುದು ಹೌದೊ? ಈ ವಿಷಯದ ಕೊನೆಯ ನಿರ್ಣಯವಾಗುವುದಕ್ಕಿಂತ ಮುಂಚೆ ಸರಕಾರವು ಬಂಗಾಲದ ಲೋಕಮತವನ್ನು ಕೇಳುವುದು ಆವಶ್ಯಕವೆಂದು ಮಹಾರಾಜರು ಸೂಚಿಸಿರುತ್ತಾರೆ. ಮಹಾರಾಜರ ಸವಾಲುಗಳಲ್ಲಿ ಉಪಯುಕ್ತತೆಯ ದೃಷ್ಟಿಯಿಂದ ಇನ್ನೊಂದು ಮಹತ್ವದ ಪ್ರಶ್ನೆಯು ಯಾವುದೆಂದರೆ, ಹಿಂದೂಸ್ಥಾನದೊಳಗಿನ ರಾಜಕೀಯ ಕೈದಿಗಳನ್ನು ಸರಕಾರವು ಒಳ್ಳೆಯ ರೀತಿಯಿಂದ ಯಾಕೆ ನಡಿಸಬಾರದು? ರಾಜಕೀಯ ಕೈದಿಗಳನ್ನು ಒಂದೊಂದು ಪ್ರಾಂತದಲ್ಲಿ ಒಂದೊಂದು ವಿಧದಿಂದ ನಡಿಸುವುದರ ಬದಲು ಎಲ್ಲಾ ಕಡೆಯಲ್ಲಿ ಒಂದೆ ರೀತಿಯಿಂದ ಮತ್ತು ಒಳ್ಳೆಯ ರೀತಿಯಿಂದ ನಡಿಸಬೇಕು. 'ಇಂಗ್ಲೆಂಡಿನಲ್ಲಿ ಹೇಗೆ ಅವರನ್ನು ಜೈಲುಗಳಲ್ಲಿ ನಡಿಸುತ್ತಾರೊ ಹಾಗೆಯೆ ಹಿಂದೂಸ್ಥಾನದಲ್ಲೂ ನಡಿಸಬೇಕೆಂದು ಮಹಾರಾಜರ ಸೂಚನೆಯಾಗಿದೆ. ಈ ಸೂಚನೆಯಾಗಲಿ ಅಥವಾ ಇಂಥಾ ಬೇರೆ ಸೂಚನೆಗಳಾಗಲಿ ಈಗಿನ ನಿರರ್ಥಕ ಕೌನ್ಸಿಲುಗಳಲ್ಲಿ ಫಲವನ್ನು ಪಡೆಯುವುದಿಲ್ಲವೆಂಬುದು ನಿಜ. ಆದರೂ ಸರಕಾರದ ಮತ್ತು ಅಧಿಕಾರಿಗಳ ಲಕ್ಷ್ಯಕ್ಕೆ ಇಲ್ಲಿಯ ಲೋಕಮತವು ಮತ್ತು ತಮ್ಮ ವಿಷಮನಡತೆ ಹಾಗು ಅಸಹಾನುಭೂತಿಯ ಕಾರಭಾರ ಇವು ಇಂಥ ಕೌನ್ಸಿಲುಗಳಲ್ಲಿಯ ಠರಾವುಗಳಿಂದಲೂ ಚರ್ಚೆಯಿಂದಲೂ ತಂದುಕೊಡಬೇಕಾದ್ದರಿಂದ ಪ್ರತಿನಿಧಿಗಳು ಕೌನ್ಸಿಲುಗಳ ಟೊಳ್ಳುತನದ ತತ್ವಜ್ಞಾನದಿಂದ ಕಾರ್ಯಶೂನ್ಯರಾಗಿರುವುದು ಹಿತಾವಹವಲ್ಲ. ಈ ದೃಷ್ಟಿಯಿಂದ ವಿಚಾರಮಾಡುವಾಗ ಕಾಸೀಮಬಝಾರದ ಮಹಾರಾಜರ ಪ್ರಯತ್ನವು ಸ್ತುತ್ಯವಾದದ್ದೆಂದು ಯಾರು ತಾನೆ ಹೇಳದೆ ಇದ್ದಾರು?

೪. ಕಳೆದ ವರ್ಷ ಮಲಬಾರದ ದಂಗೆಯ ಅವಸಾನದಲ್ಲಿ ಅಲ್ಲಿಯ ಕೈದಿಗಳನ್ನು ಒಂದು ಮುಚ್ಚಿದ ಪೆಟ್ಟಿಗೆಯಲ್ಲಿ ಹಾಕಿದಂತೆ ಗಾಳಿಗೆ ದಾರಿಯಿಲ್ಲದ ರೈಲುಬಂಡಿಯ ಕೋಣೆಯಲ್ಲಿ ಹಾಕಿ ಕೊಯಮುತ್ತೂರಿಗೆ ಒಯ್ಯುವಾಗ ೭೦-೮೦ ಜನರು ಶ್ವಾಸೋಚ್ಛ್ವಾಸವನ್ನಾಡಿಸಲು ಅವಕಾಶವಿಲ್ಲದೆ ಹೇಗೆ ಸತ್ತುಹೋದರು ಎಂದೀ ಸಂಗತಿಯು ವಾಚಕರಿಗೆ ಚೆನ್ನಾಗಿ ನೆನಪಿನಲ್ಲಿರಬಹುದು. ಆ ಮೇಲೆ ಸರಕಾರವು ಇದರ ವಿಚಾರಣೆಯನ್ನು ಮಾಡಿ ತಿಳಿಸುವುದಕ್ಕಾಗಿ ಒಂದು ಕಮ್ಮಿಟಿಯನ್ನು ನೇಮಿಸಿತು. ಈ ಕಮ್ಮಿಟಿಯ ರಿಪೋರ್ಟ ತಯಾರಾಗಿ, ಹಿಂದೂಸ್ಥಾನ ಸರಕಾರದ ಅಭಿಪ್ರಾಯದೊಡನೆ ಅದು ಈಗ—ಇಷ್ಟು ದೀರ್ಘ ಅವಧಿಯ ಅನಂತರ ಪ್ರಕಟವಾಗಿದೆ! ಹಿಂದೂಸ್ಥಾನ ಸರಕಾರವು ಈ ರಿಪೋರ್ಟಿನಲ್ಲಿ ಮಲಬಾರ ದಂಗೆಯ ಕಾಲದ ಸ್ವಲ್ಪ ಚರಿತ್ರೆಯನ್ನು ಕೊಟ್ಟು ಈ ವಿಷಾದನೀಯ ಸಂಗತಿಯು ಹೇಗೆ ಸಂಭವಿಸಿತು ಎಂಬುದನ್ನು ವಿವರಿಸಿದೆ. ಸರಕಾರದ ಅಭಿಪ್ರಾಯದ ಪ್ರಕಾರ ರೈಲ್‌ಗಾಡಿಯ ಒಂದು ಚಿಕ್ಕ ಕೋಣೆಯಲ್ಲಿ ೧೦೦ ಜನರನ್ನು ತುರುಕಿಸಿದ್ದು ಅವಿವೇಕದ ಕಾರ್ಯವೆಂಬುದನ್ನು ಸರಕಾರವು ಒಪ್ಪಿಕೊಂಡಿದೆ. ಆದ ತಪ್ಪು ತಪ್ಪೆಂದು ಪ್ರಾಂಜಲತನದಿಂದ ಒಪ್ಪಿಕೊಳ್ಳುವುದು ಪ್ರಾಮಾಣಿಕತನದ ಕಾರ್ಯವು. ಹಿಂದೂಸ್ಥಾನ ಸರಕಾರವು ಈ ತಪ್ಪನ್ನು ಒಪ್ಪಿಕೊಂಡರೂ ಇದರ ಭಾಗಿಗಳು ಯಾರು ಎಂಬುದನ್ನು ನಿರ್ಣಯಿಸುವಾಗ ಮತ್ತು ಆ ನಿರ್ಣಯದಂತೆ ಅಪರಾಧಿಗಳನ್ನು ದಂಡಿಸುವಾಗ ಸಮ ಮತ್ತು ನ್ಯಾಯದೃಷ್ಟಿಯನ್ನು ಅಷ್ಟೊಂದು ಅಕೃಪಣತೆಯಿಂದ ಉಪಯೋಗಿಸಿದೆ ಎಂದು ಹೇಳಲಾಗುವುದಿಲ್ಲ. ಯಾಕೆಂದರೆ, ವರಿಷ್ಠ ಸರಕಾರವು ಈ ಅಪಘಾತಕ್ಕೆ ಸಾರ್ಜಂಟ್ ಎಂಡ್ರ್ಯೂಸನೆಂಬ ಪೋಲಿಸ ಅಧಿಕಾರಿಯು ಕಾರಣನೆಂದು ಹೇಳಿ, ಅವನ ಮೇಲೆ ಖಟ್ಲೆಯನ್ನು ಪ್ರಾರಂಭಿಸಬೇಕೆಂದು ಹೇಳಿದೆ. ಈ ಚಿಕ್ಕ ನಿರ್ಣಯದ ಇಲಿಮರಿಯನ್ನು ಹೊರಗೆ ಹಾಕಲು ಹಿಂದೂಸ್ಥಾನ ಸರಕಾರಕ್ಕೆ ಕಮ್ಮಿಟಿಯನ್ನು ನೇಮಿಸುವ ಪರಿಶ್ರಮವಾಗಲಿ, ಖಾಸಾಗಲಿ ಬೇಕಿತ್ತೆ? ಒಂದು ವೇಳೆ ವಿಚಾರಣೆಯು ಕಮ್ಮಿಟಿಯು ಅವಶ್ಯವೆನ್ನೋಣ, ಆಗ ಅದರ ನಿರ್ಣಯವೆ ಸಾಕಲ್ಲವೆ? ಹೀಗಿರುತ್ತ ಪೋಲಿಸ ಸಾರ್ಜಂಟನ ಮೇಲೆ ನ್ಯಾಯಾಸನದಲ್ಲಿ ಖಟ್ಲೆಯನ್ನು ನಡಿಸಲು ಹೇಳುವ ಅಗತ್ಯವೇನು? ಖಟ್ಲೆಯನ್ನು ನಡಿಸುವ ಸಂಗತಿಯನ್ನು ಹೇಳುವುದಿದ್ದರೆ ಕಮ್ಮಿಟಿ ಇಲ್ಲದೆನೆ ಆಗಬಹುದಿತ್ತು! ಆದರೆ ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಸರಕಾರಕ್ಕೆ ಯಾರು ಹೇಳಿಯಾರು? ಸರಕಾರವು ಯಾರಿಗಾದರೂ ಕಟ್ಟುಹೋಗಿದೆಯೆ? ಇಲ್ಲ. ಎಂದ ಮೇಲೆ ಅದು ಈ ರೈಲ್ ಅಪಘಾತದ ಪ್ರಕರಣದಲ್ಲಿ ಇಷ್ಟರ ಮಟ್ಟಿಗೆ ಮಾಡಿತಲ್ಲ, ಇದೇ ಮಹೋಪಕಾರವೆಂದು ಎಣಿಸಬೇಕು.

೫. ಪಂಜಾಬದ ಅಕಾಲಿಜನರಲ್ಲಿ ಉಂಟಾದ ಕ್ಷೋಭದ ಕಾರಣವನ್ನು ನಾವು ಕಳೆದ ಸಂಚಿಕೆಯಲ್ಲಿ ಕೊಟ್ಟಿದ್ದೇವಷ್ಟೆ. ಅಕಾಲಿಜನರ ಚಳವಳವು ಒಂದಿಷ್ಟು ಕೂಡ ಶಾಂತವಾಗಲಿಲ್ಲ. ಅದು ದಿನೇ ದಿನೇ ಅಭಿವೃದ್ಧಿಹೊಂದುತ್ತದೆ. ಅಕಾಲಿಜನರಲ್ಲಿ ಇರುವ ಎರಡು ಸಂಪ್ರದಾಯದ ಜನರು "ಗುರುಕಾ ಬಾಗ"ವೆಂಬ ವಿವಾದಸ್ಥಳಕ್ಕೆ ಗುಂಪುಗುಂಪಾಗಿ ಬಂದು ಸತ್ಯಾಗ್ರಹವನ್ನು ಭಕ್ತಿಯಿಂದ ಮತ್ತು ತತ್ಪರತೆಯಿಂದ ಪ್ರಾರಂಭಿಸುತ್ತಿದ್ದಾರೆ. ಸರಕಾರದ ಪೋಲೀಸರು ಈ ಗುಂಪುಗಳನ್ನು ಚದರಿಸಲು ಯತ್ನಿಸಿದರು. ಈ ಸಂದರ್ಭದಲ್ಲಿ ಕೆಲವರಿಗೆ ಚಬುಕದ ಪೆಟ್ಟುಗಳು ಬಿದ್ದಿದ್ದಾವೆ; ಕೆಲವರಿಗೆ ಗಾಯವಾಗಿದೆ. ಆದರೂ ಅಕಾಲಿಜನರು ತಮ್ಮ ಉದ್ದೇಶವನ್ನು ಬಿಟ್ಟುಕೊಡುವುದಿಲ್ಲ. ಈ ಕ್ಷೋಭಕ್ಕೆ ಎರಡು ಮೂರು ಕಾರಣಗಳನ್ನು ತೋರಿಸುವರು. "ಗುರುಕಾಬಾಗ"ದಲ್ಲಿ "ದಿವಾಣ"ವನ್ನು (ಸಮ್ಮೇಲನವನ್ನು) ಕೂಡಿಸಲು ಅಧಿಕಾರಿಗಳು ಅಪ್ಪಣೆಕೊಡಲಿಲ್ಲ. ಇದೊಂದು ಸಂಗತಿ. ಇನ್ನೊಂದು ಸಿಕ್ಖರ ಪವಿತ್ರ ಧರ್ಮಗ್ರಂಥವಾದ "ಗ್ರಂಥಸಾಹೇಬ"ವನ್ನು ಬಲಾತ್ಕಾರದಿಂದ ಗುರುಬಾಗದಿಂದ ಹೊರಗೆಹಾಕಿದರು. ಈ ಎರಡು ಆರೋಪಗಳು ಸುಳ್ಳೆಂದು ಸರಕಾರವು ಪ್ರಕಟಿಸಿದೆ. "ಅಕಾಲಿಯ ಜನರೆ ಭಯವನ್ನು ಹಾಕಿ, ಹಟಹಿಡಿದು ಈ ಪ್ರಕರಣವನ್ನು ಪ್ರಾರಂಭಿಸಿದ್ದಾರೆ ಎಂದು ಸರಕಾರದ ಅಭಿಪ್ರಾಯವು. ಇದರ ನಿಜಸ್ಥಿತಿಯು ಇನ್ನು ಗೊತ್ತಾಗಬೇಕು. ಪಂಡಿತ ಮದನಮೋಹನ ಮಾಲವೀಯರು ಈ ವಿವಾದದ ಸ್ಥಳಕ್ಕೆ ಹೋಗಿ ಮಧ್ಯಸ್ಥಿಕೆಯನ್ನು ಮಾಡುತ್ತಿದ್ದಾರೆ. ಅದು ಎಷ್ಟರಮಟ್ಟಿಗೆ ಉಪಯೋಗಕ್ಕೆ ಬೀಳುತ್ತದೆ ಎಂಬ ಈ ಸಂಗತಿಯು ಕೂಡ ಇನ್ನು ಮುಂದೆ ಗೊತ್ತಾಗಬೇಕು. ಆದರೆ ಒಂದು ಮಾತನ್ನು ಮಾತ್ರ ಅಡ್ಡಿಯಿಲ್ಲದೆ ಹೇಳಬಹುದು; ಪಂಜಾಬ ಪ್ರಾಂತವು ಇತ್ತಲಾಗಿ ಹಲವು ವಿಪತ್ತುಗಳಿಗೆ ತುತ್ತಾಗುತ್ತದೆ! ಇಂಥ ಆಪತ್ತುಗಳನ್ನು ಸಹಿಸಿದ ಬಳಿಕಾದರೂ ಅದು ದುಃಖಮುಕ್ತವಾಗಿ ಸುಖವನ್ನು ಅನುಭವಿಸಲೆಂದು ಬಯಸದೆ ಯಾರೂ ಇರಲಿಕ್ಕಿಲ್ಲ.

೬. ಇದು ಸತ್ಯಾಗ್ರಹದ ಯುಗವು. ಪಂಜಾಬದಲ್ಲಿ ಆಗುತ್ತಿರುವಂತೆ ಮಹಾರಾಷ್ಟ್ರದಲ್ಲೂ ಮುಳಸಿಯ ಧರಣದ ಬಗ್ಗೆ ಸತ್ಯಾಗ್ರಹವು ಈಗ ಎರಡು ವರ್ಷಗಳಿಂದ ನಡಕೊಂಡುಂಟು. ಮುಳಸಿ ಧರಣದ ವಿಚಾರವನ್ನು ನಾವು ಕಳೆದ ವರ್ಷ ಒಂದೆರಡು ವಿಸ್ತೃತಲೇಖಗಳ ಮುಖಾಂತರ ವಾಚಕರ ಮುಂದಿಟ್ಟಿದ್ದೆವು. ಪುನಃ ಈ ವಿಷಯದ ಸ್ಮೃತಿಯನ್ನು ಜಾಗ್ರತೆಮಾಡುವದಿದ್ದರೆ ಮುಂದಿನಂತೆ ಒಂದೆ ಮಾತಿನಿಂದ ವಿವರಿಸಬಹುದು. ಮುಳಸಿಪೇಟೆಯಲ್ಲಿ ಟಾಟಾ ಕಂಪೆನಿಯು ಒಂದು ದೊಡ್ಡ ಕೃತ್ರಿಮಕೆರೆಯನ್ನು ತಯಾರಿಸಿ ಅಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪನ್ನಮಾಡಿ ಅದರಿಂದ ಮುಂಬಯಿ ಪಟ್ಟಣದಲ್ಲಿ ದೀಪ ಗಿರಣಿ ಮುಂತಾದ ಸುಖಸಾಧನಗಳನ್ನು ಸಮೃದ್ಧಿಗೊಳಿಸಬೇಕೆಂದಿದೆ. ಆದರೆ ಮುಳಸಿಯ ಉತ್ತಮ ಮತ್ತು ಅತ್ಯುತ್ತಮವಾದ ಜಮೀನುಗಳು ಈ ಕೃತ್ರಿಮ ಕೆರೆಯಲ್ಲಿ ಮುಳುಗಿಹೋಗುತ್ತಿವೆ. ಶಿವಾಜಿಕಾಲದ ಐತಿಹಾಸಿಕ ಜನರಾದ ಮಾವಳೆಬಂಧುಗಳು ದೇಶಭ್ರಷ್ಟರಾಗಿ ಹೋದಾರು. ಈ ಕಾರಣದಿಂದ ಮೊದಲು ಎಷ್ಟು ಹೇಳಿದರೂ ಟಾಟಾ ಕಂಪೆನಿ ಮತ್ತು ಮುಂಬಯಿ ಸರಕಾರ ಕೇಳಲಿಲ್ಲವಾದಕಾರಣ ಜನರು ಈಗ ಎರಡು ವರುಷಗಳಿಂದ ಸತ್ಯಾಗ್ರಹವನ್ನು ಮಾಡುತಿದ್ದಾರೆ. ಮಳೆಯ ಸಮಯದಲ್ಲಿ ಕಂಪೆನಿಯ ಕೆಲಸವು ನಿಂತಿರುತ್ತದೆ; ಆಗ ಸತ್ಯಾಗ್ರಹವು ಸಹ ನಿಂತಿರುತ್ತದೆ. ಈಗ ಕೆಲಸವು ಪ್ರಾರಂಭವಾಗಿದೆ. ಸತ್ಯಾಗ್ರಹವು ಸಹ ಉಪಕ್ರಮಿಸಿದೆ. ಮಹಾರಾಷ್ಟ್ರ, ಮುಂಬಯಿ, ನಾಗಪುರ, ಕರ್ನಾಟಕ ಈ ಪ್ರಾಂತಗಳು ಮುಳಸಿಯ ಮಾವಳೆಜನರ ಸತ್ಯಾಗ್ರಹಕಾರ್ಯದಲ್ಲಿ ಸಹಾಯಮಾಡಬೇಕೆಂದು ಸತ್ಯಾಗ್ರಹಮಂಡಲದ ಅಧ್ಯಕ್ಷರಾದ ಸೇನಾಪತಿ ಬಾಪಟ ಇವರು ವಿಜ್ಞಾಪಿಸಿಕೊಂಡಿದ್ದಾರೆ. ತಿಂಗಳು ಒಂದಕ್ಕೆ ೧೦,೦೦೦ ರೂಪಾಯಿ ಖರ್ಚಾಗಬೇಕು. ಈ ದ್ರವ್ಯನಿಧಿಯ ಮತ್ತು ಸತ್ಯಾಗ್ರಹದಲ್ಲಿ ಭಾಗವನ್ನೆತ್ತುವವರ ಬಹು ಅಗತ್ಯವಿರುವುದರಿಂದ ಸ್ವದೇಶವತ್ಸಲರು ಎರಡೂ ವಿಧದಿಂದ ತಮ್ಮ ಔದಾರ್ಯವನ್ನು ಪ್ರಕಟಿಸಬೇಕೆಂದು ಬಾಪಟರ ವಿಜ್ಞಾಪನೆ ಇದೆ. ಸತ್ಯಾಗ್ರಹಮಂಡಲದವರು ಈ ರೀತಿಯಿಂದ ಸಿದ್ಧತೆಯನ್ನು ಮಾಡುತ್ತಿದ್ದಾಗ ದುರಾಗ್ರಹಿ ಕಂಪೆನಿಯ ಮತ್ತು ಸರಕಾರಿ ಅಧಿಕಾರಿಗಳು ದೇಶಭಕ್ತ ಬಾಪಟರನ್ನೂ, ಇತರ ಸ್ವಯಂಸೇವಕರನ್ನೂ ಕೈದುಮಾಡಿದ್ದಾರೆಂಬ ವಾರ್ತೆಯು ಬಂದಿದೆ!

ಮಂಗಳೂರು.

ವಿಟ್ಲದಲ್ಲಿ ಬಡ್ಡಾಯಶಿಕ್ಷಣವನ್ನು ಜಾರಿಗೆತರುವವಿಷಯವನ್ನು ಆಲೋಚಿಸುವುದಕ್ಕಾಗಿ ಉಪ್ಪಿನಂಗಡಿತಾಲೂಕು ಬೋರ್ಡು ಮೆಂಬರರ ಒಂದು ಜಾದಸಭೆಯು ಬರುವ ತಾ. ೨೫ನೇ ಸೋಮವಾರ ಮಧ್ಯಾಹ್ನ ೧೨ ಗಂಟೆಗೆ ಸುಳ್ಯ ಬೋರ್ಡುಶಾಲೆಯಲ್ಲಿ ಜರಗುವುದು.

ಅತ್ತಾವರದಲ್ಲಿ 'ರೋಜ್‌ವಿಲ್ಲಾ' ರಸ್ತೆಯ ಸಮೀಪದ ಮೈದಾನಿನಲ್ಲಿ ವರುಷಂಪ್ರತಿ ನಡಿಯುವ ಶ್ರೀಕೃಷ್ಣಜಯಂತಿ ಉತ್ಸವವು ಬರುವ ತಾರೀಕು ೧೪ನೇ ಗುರುವಾರ ಸಾಯಂಕಾಲ ಗಂಟೆ ೫ರಿಂದ ೭ರವರೆಗೆ ವಿವಿಧ ಆಟಗಳು ಮೊದಲಾದ ವಿನೋದಗಳಿಂದ ಜರಗುವುದು.

ಮಂಗಳೂರು ಮುನ್ಸಿಪಲ್ ಕೌನ್ಸಿಲಿಗೆ ಗೋಳಿಕಟ್ಟೆ ವಾರ್ಡಿನಿಂದ ೩ ಮಂದಿ ಮೆಂಬರರನ್ನೂ, ಕೊಡಿಯಾಲಬೈಲುವೆಸ್ಟವಾರ್ಡು, ಮಾರ್ಕೆಟು ವಾರ್ಡು, ಬಪ್ಪುವಾರ್ಡು, ಕೋರ್ಟುವಾರ್ಡು ಈ ನಾಲ್ಕು ವಾರ್ಡುಗಳಿಂದ ಪ್ರತಿಯೊಂದು ವಾರ್ಡಿನಿಂದ ಒಬ್ಬರು ಮೆಂಬರರಂತೆ ನಾಲ್ಕು ಮಂದಿ ಮೆಂಬರರನ್ನೂ ಚುನಾಯಿಸಲಾಗುವುದು. ಕೊಡಿಯಾಲಬೈಲುವೆಸ್ಟವಾರ್ಡಿನ ಚುನಾವಣೆಯು ತಾ. ೨೭ರಲ್ಲೂ ಮಾರ್ಕೆಟು ಮತ್ತು ಬಪ್ಪುವಾರ್ಡಿನ ಚುನಾವಣೆಯು ತಾ. ೨೮ರಲ್ಲಿ ಕೋರ್ಟ ಮತ್ತು ಗೋಳಿಕಟ್ಟೆವಾರ್ಡಿನ ಚುನಾವಣೆಯು ತಾ. ೨೯ರಲ್ಲಿ ನಡಿಯುವುದು. ಈ ಮೆಂಬರಿಕೆಯ ಸ್ಥಾನಗಳಿಗೆ ಉಮೇದ್ವಾರರಾಗುವವರು ತಮ್ಮ ನೊಮಿನೇಶನ್‌ಗಳನ್ನು ಬರುವ ತಾ. ೧೫ನೇ ಅಪರಾಹ್ನ ೪ ಗಂಟೆ ಒಳಗೆ ಮುನ್ಸಿಪಲ್ ಚೆಯರ್ಮೇನರಿಗೆ ತಲ್ಪಿಸತಕ್ಕದ್ದು.

ಇಲ್ಲಿಯ ಕಲೆಕ್ಟರ ಆಫೀಸಿನ ಇಂಗ್ಲಿಷ್ ಹೆಡ್‌ಕ್ಲಾರ್ಕರಾದ ರಾ|| ಅತ್ತಾವರ ತಿಮ್ಮಪ್ಪಪೂಂಜರು ಕಾಸರಗೋಡಿನ ಬದಲಿ ತಹಸೀಲ್‌ದಾರರಾಗಿ ನೇಮಕಪಟ್ಟಿರುವರು. ಇವರ ಬದಲಿಯಾಗಿ ರಾ|| ಬಿ. ಸೋಮಪ್ಪನವರು ಇಂಗ್ಲಿಷ್ ಹೆಡ್‌ಕ್ಲಾರ್ಕರ ಚಾರ್ಜನ್ನು ನೋಡುವರು.

ರಾವ್‌ಸಾಹೇಬ ಇ. ಸಿ. ಮಸ್ಕರೇಂಞಸರೂ ರಾ|| ಕಲ್ಲೆ ದುಗ್ಗಣ್ಣ ಬಂಟರೂ ಡಿ. ಬೋರ್ಡು ಮೆಂಬರುಗಳಾಗಿ ನೇಮಕಪಟ್ಟಿರುವರು.

ಮಹಮ್ಮದ್ ಸುಲ್ತಾನಮೊಹಿದಿನ್ ಸಾಹೇಬ್‌ಬಹದ್ದೂರರು ಕುಂದಾಪುರ ಡಿವಿಜನಿನ ಡಿಪ್ಯುಟಿ ಕಲೆಕ್ಟರರಾಗಿ ನೇಮಕಪಟ್ಟಿರುವರು.

ಮಂಗಳೂರ ಅರಸಿಕೆರೆ ರೈಲ್ವೆಯನ್ನು ತೆರೆಯುವ ವಿಷಯ ಮತ್ತು ಇಲ್ಲಿಯ ಬಂದರನ್ನು ಹೆಚ್ಚಿನ ಅಭಿವೃದ್ಧಿಸ್ಥಿತಿಗೆ ತರುವ ಯೋಜನೆಯನ್ನು ಕುರಿತು ಆಲೋಚಿಸಲು ಪಟ್ಟಣಿಗರ ಸಭೆಯೊಂದು ಬರುವ ತಾ. ೧೭ರಲ್ಲಿ ಸೇರಲಿಕ್ಕಿದೆ.

ತಾ. ೩—೯—೧೯೨೨ರ ಮುಷ್ಟಿಫಂಡಿನ ಜಮಾ ೭೦ ರೂ. ೧೧೧ ಸೇರು ಅಕ್ಕಿ, ಎರಡು ಟೊಪ್ಪಿಗಳು, ಎರಡು ತೆಂಗಿನಕಾಯಿಗಳು.

"ಬರುವ ತಾ. ೨ರಲ್ಲು ಮಹಾತ್ಮಾ ಗಾಂಧಿಯವರ ಜನ್ಮದಿನವನ್ನು ಆಚರಿಸುವುದಕ್ಕಾಗಿ ಎಲ್ಲಾ ರಾಷ್ಟ್ರೀಯ ಶಾಲೆಗಳಿಗೆ ರ[illegible] ಇರುವುದು. ಪ್ರತಿ ದೇವಸ್ಥಾನ, ಮಜೀದಿ, ಇಗರ್ಜಿ ಮತ್ತು ಜನರ[illegible] ಆರಾಧಿಸುವ ಇತರ ಸ್ಥಳಗಳಲ್ಲಿ ಮಹಾತ್ಮರಿಗೆ ಆಯುರಾರೋಗ್ಯ[illegible]ವನ್ನು ಬಯಸಿ ಪ್ರಾರ್ಥಿಸುವ ಬಗ್ಗೆ ಏರ್ಪಾಡು ಮಾಡಲಾಗುವು[illegible] ಮಧ್ಯಾಹ್ನ ೩ ಗಂಟೆಗೆ ತಿಲಕ ವಿದ್ಯಾಲಯದಲ್ಲಿ ನೂಲುವ ಪಂದ್ಯ[illegible] ಇರುವುದು. ಸಾಯಂಕಾಲ ಅದೇ ಸ್ಥಳದಲ್ಲಿ ಕೀರ್ತನೆ [illegible]ವುದು. ಬೆಳಿಗ್ಗೆ ೭ ಗಂಟೆಗೆ ಭಜನೆಮಾಡಿ ರಾಷ್ಟ್ರಗೀತೆಗಳ[illegible] ಹಾಡಿ ಮೆರವಣಿಗೆಯನ್ನು ಮಾಡಲಾಗುವುದು. ಮಂಗ[illegible] ಪಟ್ಟಣದ ನಿವಾಸಿಗಳು ಈ ಕಾರ್ಯದಲ್ಲಿ ಸಹಭಾಗಿಗಳಾಗ[illegible]ಗಿಯೂ ಇತರ ಹಳ್ಳಿ ಮತ್ತು ಪಟ್ಟಣಗಳಲ್ಲಿ ಮೇಲೆ ಹೇಳಿದ ವಿ[illegible] ಈ ದಿನವನ್ನು ಯೋಗ್ಯರೀತಿಯಿಂದ ಆಚರಿಸಬೇಕಾಗಿ [illegible] ಕೊಂಗ್ರೆಸ್ ಕಮ್ಮಿಟಿಯು ಈ ಮೂಲಕ ವಿನಂತಿಮಾಡಿಕೊಳ್ಳು[illegible] ಇದೇ ತಾ. ೧೨ಕ್ಕೆ ಎಂದಿನಂತೆಯೇ ಗಾಂಧಿ ದಿನವನ್ನು ಆ[illegible]ಗುವುದು.

ಕೊಲ್ಲೂರು ಗೋಭೂನಂದನದ ಆಮೂಲಾಗ್ರ ಚರಿತ್ರೆ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು).

ಹಾಗಾದರೆ ಅಂತಹ ಸಮಯಗಳ ಸಮರ್ಪಣದಲ್ಲಿ ಆನಂದವಿಲ್ಲವೋ ಎಂಬ ಪ್ರಶ್ನೆಯು ಬರಬಹುದು. ಬೇಸಿಗೆಯ ಸಮಯದಲ್ಲಿ ಕೊಡಚಾದ್ರಿ ಶಿಖರದಿಂದ ಪ್ರಾತಃಕಾಲ ದೇದೀಪ್ಯಮಾನವಾಗಿ ಸೂರ್ಯನು ಉದಯಿಸುವ ವೈಭವ, ಸಾಯಂಸಂಧ್ಯಾಸಮಯ, ಚಂದ್ರಕಾಂತಿಯು ಆನಂದಪ್ರದವಾಗಿ ಗಿರಿಗಹ್ವರ ಗದ್ದೆ ಹೊಲ ಮನೆಮಾರುಗಳನ್ನು ಆವರಿಸಿ ಬೆಳಗುವ ಸಂಭ್ರಮ, ವೃಷ್ಟಿಯಾಗಿ ಬೆಳೆದು ಹಸುರಾಗಿ ನಲಿದು ಕಣ್ಮನಗಳಿಗೆ ಅತ್ಯಾನಂದವನ್ನೀಯುವ ಫಲವೃಕ್ಷಗಳ ಸೊಬಗು, ಹಳುವಳೆಗಳನ್ನು ಸವರಿ ಹಚ್ಚಗೊಳಿಸಿದ ಹೊಸಹೊಲಗಳ ಸಂದರ್ಶನಸಂತೋಷ, ಹೊತ್ತಾರೆಯೆದ್ದು ಹೊಸಕೃಷಿಗಳನ್ನು ಮಾಡಿಸಿ ನೋಡಿ ನಲಿಯಬೇಕೆಂಬ ಕುತೂಹಲ, ಎದ್ದ ಕೂಡಲೆ ಹತ್ತಿರದ ಹಟ್ಟಿಯಲ್ಲಿ ಸಾಲುಸಾಲಾಗಿ ಕಟ್ಟಿದ ಗೋಸಂಘಗಳಿಗೆ ಗೋಗ್ರಾಸ(grass)ವನ್ನಿತ್ತು ಅವುಗಳು ಮೆಲ್ಲುವುದನ್ನು ನೋಡುವ ಉಲ್ಲಾಸ, ಹೊರಗೆ ತಿರುಗಿ ದಣಿದುಬಂದು ಬಿಡಾರದಲ್ಲಿ ವಿಶ್ರಮಿಸಿ ಅಡಿಗೆಯನ್ನೋ ತಿಂಡಿತೀರ್ಥವನ್ನೋ ಹಂಬಲಿಸಿ ಸೇವಿಸುವ ಸೌಖ್ಯ, ಸಂಜೆಯಸಮಯ ಹುಲುಸಾದ ಹುಲ್ಲುಸೊಪ್ಪನ್ನು ಮೇಯಿದು ಎಳೆಬಿಸಿಲಲ್ಲಿ ನಲಿದಾಡುತ್ತ ಮರಳಿ ಮನೆಗೆಬರುವ ಗೋಸಂಕುಲಸಂದರ್ಶನದ ವಾತ್ಸಲ್ಯ, ಇವೆಲ್ಲಾ ಕೆಲಸಕಾರ್ಯಗಳನ್ನು ಮಾಡಿಮುಗಿಸಿ ಉಂಡುತಿಂದು ಮಲಗಿ ಸುಖನಿದ್ರೆಮಾಡುವ ಸೌಲಭ್ಯ, ಇತ್ಯಾದಿ ಸುಖಸಾರಗಳು ಈ ಸಂಸ್ಥೆಗೆ ಸ್ವಾಭಾವಿಕವಾಗಿರುವುದರಿಂದ ಕೃಷಿಗೋರಕ್ಷಣೆಯ ಪೂಜ್ಯಕಾರ್ಯವು ಕೇವಲ ಕಷ್ಟಸಾಧ್ಯವೆಂದು ಅಂಗೆಡಬಾರದಿಲ್ಲ. ಬೇಸಾಯಕ್ಕೆ ಬೇಕಾಗುವ ಸೌಕರ್ಯಗಳನ್ನೆಲ್ಲಾ ಸಂಗ್ರಹಿಸಿಕೊಂಡು, ಸುಕ್ಷೇತ್ರಗಳಲ್ಲಿ ಗೋಭೂನಂದನಗಳನ್ನು ನಿರ್ಮಿಸಿ, ದೇಶಾಭಿಮಾನಬುದ್ಧಿಯಿಂದ ನಡಿಸಿಬಂದರೆ, ವ್ಯವಸಾಯವೃದ್ಧಿಯೂ ನಮ್ಮ ನಾಡಿನ ಪುರೋಭಿವೃದ್ಧಿಯೂ ತನ್ನಂತೆಯೇ ಕೈಸೇರುತ್ತದೆಂಬ ತತ್ವಸಾರವನ್ನು ಯಾರೂ ಮರೆಯಬಾರದು.

ಏವಂಚ ಹಿಂದೆಹೇಳಿದ ಗಂಡಾಂತರಸಂದರ್ಭದಲ್ಲಿ ಸದ್ಯಕ್ಕಿದ್ದ ಪಾಚಕನನ್ನೂ ಆಳುಕಾಳುಗಳನ್ನೂ ಅಲ್ಲಿಯ ನಂದನದಲ್ಲಿ ಬಿಟ್ಟು ಮೈಸೂರು ಮಹಾರಾಜರ ಭೇಟಿಮಾಡಿ ಅಂತಹ ಪ್ರಭುವನ್ನು ನಾವು ಸ್ಥಾಪಿಸಲುಳ್ಳ ಈ ಜಿಲ್ಲೆಯ ಸಂಸ್ಥೆಗೆ ಪೋಷಕರನ್ನಾಗಿಮಾಡಬೇಕೆಂಬ ಪೂಜ್ಯಬುದ್ಧಿಯಿಂದ ರಾಜಧಾನಿಪರ್ಯಂತರ ಪ್ರಯಾಣಬೆಳಸಿದುದಾಯಿತು. ಆದರೆ ಕಾಲಗತಿಯನ್ನು ಮೀರುವವರಾರು? ಇಂತಹ ಕಾಲಮಹಿಮೆಯಿಂದ ಪ್ರಭುವಿನ ಭೇಟಿಯೇ ಲಭಿಸದುದು ನನ್ನ ಲೋಪದೋಷವಲ್ಲ. ಇರಲಿ! ಅಷ್ಟರಲ್ಲಿಯೇ ಈ ಆಡುಸಂಸ್ಥೆಯ ಭಾವಿಭಾಗ್ಯೋದಯವನ್ನು ಕುರಿತು ಭೇಟಿಚೀಟಿ (Visiting Card) ಪತ್ರಶಿರನಾಮ (letter head) ಪತ್ರಾವರಣನಾಮಾಂಕಿತ (envelope address) ನಿಯಮ, ನಿರ್ದೇಶನಕ್ಷೆ, ನಿರೂಪ (prospectus, aim, plan, appeal) ಗೋಮಾತೆಯ ಪ್ರಾಮುಖ್ಯತೆಯನ್ನು ಕುರಿತು ನಾನು ರಚಿಸಿದ ಗೋಕೀರ್ತನೆ, ಅಲ್ಲಲ್ಲಿ ಕೊಡಲುಳ್ಳ ಉಪಯುಕ್ತ ಉಪನ್ಯಾಸಸೂಚಕ ಪ್ರಕಟನೆ ಮುಂತಾದ ಮಾಹಿತಿಪತ್ರಗಳ ಮುದ್ರಣಕ್ಕೂ, ಬೆಂಗಳೂರು, ಮೈಸೂರು, ಹಾಸನ ಪ್ರಾಂತ್ಯಗಳ ಪ್ರಚಾರಸಂಚಾರ (propaganda tour)ಕ್ಕೂ, ಸುಮಾರು ೩೦೦ ರೂಪಾಯಿ ಖರ್ಚು ಮುಟ್ಟಿತು. ಈ ಪ್ರಚಾರಕಾರ್ಯಕ್ಕಾಗಿ ಅಲ್ಲಲ್ಲಿನ ಅಭಿಮಾನಶಾಲಿಗಳಿಂದ ನ್ಯಾಯರೀತಿಯ ಕಿಂಚಿತ್ಸಂಪತ್ಸಹಾಯವನ್ನೂ ಪಡೆದುದಾಯಿತು. ಮೈಸೂರು ಮಹಾರಾಣಿ ಬಾಲಿಕಾಪಾಠಶಾಲೆಯ ಉಪನ್ಯಾಸ ಗೋಕೀರ್ತನೆಯ ಗಾನನಾಳಿಕಾವಾದ್ಯಪ್ರದರ್ಶನದಿಂದಲೂ ಜೈನ ಬೋರ್ಡುಶಾಲೆಯ ಉಪನ್ಯಾಸದಿಂದಲೂ ಒಟ್ಟು ಅಲ್ಪಮೌಲ್ಯವಾದ ೧೫ ರೂಪಾಯಿ ಮಾತ್ರ ಹುಟ್ಟಿಬಂದಿತು. ಹಾಸನದಲ್ಲಿಯೂ ಎರಡು ಉಪನ್ಯಾಸಗಳು ನಡೆದ ನಂತರ ಅಲ್ಲಿನ ಕಲ್ಲೇಶ್ವರವರ ಅಧ್ಯಕ್ಷತೆಯ ಗೌರವದಿಂದ ೧೩ ರೂಪಾಯಿ ಪ್ರಾಪ್ತಿಯಾಯಿತು. ಬೆಂಗಳೂರಿಗೆ ಮರಳಿ ಬಂದಮೇಲೆ ಸರಸ್ವತೀಸ್ತ್ರೀಸಮಾಜದ- ಮಹಿಳಾಸೇವಾಸಮಾಜ ಮಂದಿರಗಳಲ್ಲಿ ಗೋರಕ್ಷಣೆಯಉಪನ್ಯಾಸ, ಗೋಕೀರ್ತನೆಯ ಗಾನಕ್ಕೆ ಅತ್ಯಂತ ಪ್ರೋತ್ಸಾಹದೊರತುದು ಚಿರಸ್ಮರಣೀಯವಾಗಿದೆ. ಇವಕ್ಕೆಲ್ಲಾ ಸಂಪೂರ್ಣ ಸಹಾಯಕರಾದ ವೃದ್ಧಪಿತಾಮಹ ಶ್ರೀಯುತ ಮೈಸೂರು ವೆಂಕಟಕೃಷ್ಣಯ್ಯ, ಶ್ರೀಮತಿ ಸುಬ್ಬಮ್ಮ, ಪೂಜ್ಯ ನೇಮಿಸಾಗರಸ್ವಾಮೀಜಿ, ಡೆಪ್ಯುಟಿಕಮಿಷನರ್ ಶ್ರೀಯುತ ವೆಂಕೋಬರಾಯರವರು, ಚೀಫ್ ಕೋರ್ಟು ಜಡ್ಜ ಶ್ರೀಯುತ ಚಂದ್ರಶೇಖರಯ್ಯನವರು, ಇವರ ಧರ್ಮಪತ್ನಿ ಪಾರ್ವತಿಯಮ್ಮ, ಶ್ರೀಮತಿ ಹಳಗೆಂ ರುಗ್ಮಿಣಿಯಮ್ಮ ಮುಂತಾದ ಪ್ರಿಯ ಭ್ರಾತೃಭಗಿನಿಯವರಿಗೆ ನನ್ನ ಕೃತಜ್ಞತಾಸ್ಮರಣೆಯು ಅಪಾರವಾಗಿದೆ.

ಆ ಮೇಲೆ ಅಲ್ಲಿ ಕೀರ್ತಿಗೊಂಡಿದ್ದ ಶಿರಹಟ್ಟಿನಾಟಕಮಂಡಲಿಯ ಮಾಲಕ ನನ್ನ ಪ್ರಿಯಮಿತ್ರ ಶ್ರೀಯುತ ವೆಂಕೋಬರಾಯರ ಅಭಿಮಾನದಿಂದ ಕೃಷ್ಣಲೀಲಾ ಮೇಟನಿ ನಾಟಕಾಭಿನಯದ ಮೂಲಕ ಖರ್ಚುಕಳೆದು ದೊರೆತ ೭೫ ರೂಪಾಯಿಯನ್ನು ಸಾದರದಿಂದ ಸ್ವೀಕರಿಸಿದುದಾಯಿತು. ಈ ಮೇಟನಿಯ ಪೋಷಕರಾಗಿದ್ದು ಪ್ರೋತ್ಸಾಹಿಸಿದ ಮಹನೀಯ ಚಂದ್ರಶೇಖರಯ್ಯನವರಿಗೂ ಶ್ರೀಯುತ ಶಿರಹಟ್ಟಿ ವೆಂಕೋಬರಾಯರಿಗೂ ಕೃತಜ್ಞತಾಸ್ಮರಣಪೂರ್ವಕವಾಗಿ ನಿತ್ಯಾನಂದವನ್ನೀಯಲೆಂದು ಗೋಮಾತೆಯನ್ನು ಸಂಪ್ರಾರ್ಥಿಸುತ್ತಿರುವೆನು. ಇದಲ್ಲದೆ ಕೇವಲ ದೇಶಾಭಿಮಾನಶಾಲಿಗಳಾದ ನಮ್ಮ ಪುರಮುಖಂಡ ಪರಮಮಿತ್ರ ಖಾನ್ ಬಹದ್ದೂರ್ ಹಾಜಿಅಬ್ದುಲ್ಲಾಹಾಜಿಕಾಸಿಂಸಾಹೇಬಬಹದ್ದೂರವರು ಮುಂತಾಗಿ ಮಂಗಳೂರು, ಉಡುಪಿ, ಪುತ್ತೂರು, ಕುಂದಾಪುರ ಮಹನೀಯರು ಅಭಿಮಾನಪೂರ್ವಕವಾಗಿ ಕೊಟ್ಟ ಯಥೋಚಿತಮೌಲ್ಯ, ೩ ಮಂದಿ ಸ್ಥಳೀಯ ಶ್ರೀಪಾದಂಗಳವರು ಪಶುಸಂಕುಲದ ಪೂಜ್ಯಬುದ್ಧಿಯಿಂದ ಆಶೀರ್ವಾದಪೂರ್ವಕವಾಗಿ ಫಲಮಂತ್ರಾಕ್ಷತೆಯೊಡನೆ ಕರುಣಿಸಿದ ಬಿಚೆಷ್ಟು ಇತ್ಯಾದಿ ರೀತಿಗಳಿಂದ ಒಟ್ಟು ೩೭೦ ರೂಪಾಯಿ ಮಟ್ಟಿಗೆ ಹುಟ್ಟಿಬಂದ ಪುಟ್ಟಿಗಂಟು ಮೇಲ್ಕಂಡಂತೆ ಮುದ್ರಣ ಪರಿಯಟಣಕಾರ್ಯಕ್ಕೆ ಸದ್ವಿನಿಯೊಗವಾಗಿದೆ.

ಹಾಗೂ ನಾನು ಈ ಮೊದಲು ಸ್ವಂತಖರ್ಚುಮಾಡಿದ ೩೦೬೦ ರೂಪಾಯಿ ಅಲ್ಲದೆ ನಮ್ಮ ಧಣಿಗಳಿಗೆ ಮೂರುವರ್ಷಗಳ ಬಾಬತು ಸಲ್ಲುವ ಗೇಣಿಲೆಕ್ಕಬಾಕಿಗೂ ಆ ಸಂಬಂಧದ ಇತರ ಬಾಬಿಗೂ ಒಟ್ಟು ೧೦೦೦ ರೂಪಾಯಿ ಹಿಡಿದು, ನಮ್ಮೊಳಗಿನ ಲೆಕ್ಕಾಚಾರವು ಕುಂದಾಪುರಕೋರ್ಟಿನಲ್ಲಿಯೇ ವಿವೇಕದಿಂದ ತೀರಿ, ಅವರ ಭೂಮಿಯನ್ನೂ ಅಲ್ಲಿನ ಸ್ವಂತ ಜಾನುವಾರು, ಫಲವೃಕ್ಷ, ವಸ್ತುಗಳು ಬಾಕಿಕೃತದ ಮೌಲ್ಯ ಸಮೇತ ಅವರಿಗೆ ನ್ಯಾಯರೀತಿಯಿಂದ ಒಪ್ಪಿಸಿಕೊಟ್ಟು ತತ್ಕಾಲಕ್ಕೆ ಈ ಗೋಭೂನಂದನದ ಕಾರ್ಯಕ್ರಮವನ್ನು ಮೇಲ್ಕಂಡ ಕಾರಣಾಂತರಗಳಿಂದ ನಿವೃತ್ತಿಯಲ್ಲದೆ ಅತ್ಯಂತ ಚಿಂತಾಕ್ರಾಂತನಾಗಿ ಈ ಮುಂಬೆಯೇ ಅಂತ್ಯಪಡಿಸಿರುವೆನು. ಈ ಸಂದರ್ಭದಲ್ಲಿ ಸಾಕಲಿಕ್ಕೆಬಿಟ್ಟ ಜಾನುವಾರನ್ನು ವಾಪಸುಮಾಡಿದೆ. ವಾರ್ಧಿಕ್ಯದಿಂದಲೂ ಆಕಸ್ಮಿಕದಿಂದಲೂ ಕಳೆದುಳಿದ ಕಾಲುನಡೆಗಳನ್ನು ಭೂಮಿಯೊಡನೆ ವಹಿಸಿಕೊಟ್ಟಿದೆ.

ಇನ್ನು ಏತತ್ಕಾರ್ಯದಲ್ಲಿ ಯಥೋಚಿತವಾದ ಯತ್ಕಿಂಚಿತ್ಸಹಾಯ ಮಾಡಿದ ನನ್ನ ಇಷ್ಟಮಿತ್ರವರ್ಗಕ್ಕೆಲ್ಲಾ ನಿರಂತರ ಕೃತಜ್ಞನಾಗಿದ್ದೇನೆ. ಸ್ವಾನುಭವಸಿದ್ಧವಾದ ನನ್ನೀಸುಖದುಃಖಗಳಿಂದ ಇಂತಹ ಕಾರ್ಯತತ್ಪರರಾಗುವ ಅಭಿಮಾನಶಾಲಿಗಳು ಆಚರಿಸಬೇಕಾದ ಕ್ರಮರೀತಿಗಳನ್ನು ಗೋಚರಕ್ಕೆತಂದುಕೊಳ್ಳಬಹುದೆಂಬುದು ನನ್ನ ಭಾವನೆ. ಈ ಸಂಬಂಧವಾಗಿ ಮುದ್ರಿಸಿದ ಮಾಹಿತಿಪತ್ರಗಳನ್ನು ಅಭಿಮಾನದಿಂದ ಅಪೇಕ್ಷಿಸುವವರಿಗೆ ಅಗತ್ಯವಾಗಿಕೊಡಬಹುದು. ಅಲ್ಲದೆ ಇದಕ್ಕೆ ಕಾರಣವಾದ ಲೆಕ್ಕಪತ್ರಗಳನ್ನು ಅಭಿಮಾನಿಗಳು ಅವಲೋಕಿಸಿ ಅನುಭವಮಾಡಿಕೊಳ್ಳಲುಬಹುದು. ಏನೆಂದರೆ ಈ ನನ್ನ ಉತ್ತರವಯಸ್ಸಿನಲ್ಲಿಯೂ ಇಂತಹ ಕಷ್ಟನಷ್ಟಗಳನ್ನು ಸಹಿಸಿ, ದೇಶಸೇವಾಕಾರ್ಯದಲ್ಲಿ ಕೈಯಿಕ್ಕಿ ನಿವೃತ್ತಿಯಿಲ್ಲದೆ ಒಮ್ಮೆಗೆ ಈ ಸಂಸ್ಥೆಯನ್ನು ಅಂತ್ಯಪಡಿಸಿದ ನನ್ನ ಘನಸ್ಥಿತಿಯನ್ನು ಕಂಡಲ್ಲಿ ಅಭಿಮಾನಿಗಳೆಲ್ಲರೂ ಸಹಾನುಭೂತಿಯನ್ನು ತೋರಿದರೆ ಅದೇ ನನ್ನ ಭಾಗ್ಯೋದಯವೆಂದು ಭಾವಿಸಿ ಸ್ವದೇಶಬಂಧುಮಿತ್ರರ ಉದಾರಬುದ್ಧಿಯನ್ನು ಸದಾ ಹಾರೈಸುತ್ತಿರುವ ದೇಶಭಕ್ತರ ದಾಸಾನುದಾಸ.

ತಾ. ೫-೯-'೨೨. }
ಉಪ್ಪಾಡಿ ಉಡುಪಿ, } ಗವಾನಂದ ಶ್ರೀಯುತ ಕೆರೋಡಿ ಸುಬ್ಬರಾಯ.

ಪತ್ರವ್ಯವಹಾರ.

ನ್ಯಾಯವಿದ್ದಂತೆ ವರ್ತಿಸಬೇಕಾಗಿ ವಿನಂತಿ.

ಹಿರಿಯಡಕದಲ್ಲಿರುವ ಬೋರ್ಡು ಎಲಿಮೆಂಟರಿ ಶಾಲೆಯ ಬಗ್ಗೆ ಕೆಲವರು ರಾಷ್ಟ್ರೀಯಶಾಲೆಯವರು ಇದಿರಾಗಿ ಜನರಿಗೆ ಬೋಧಿಸುತ್ತಿರುವರೆಂದೂ, ಮ. ಗಾಂಧಿಯವರನ್ನು ಸೆರೆಮಾಡಿದ ನಂತರ ಅಸಹಕಾರ ಚಳವಳವು ಬಿದ್ದುಹೋಯಿತೆಂದೂ ರಾಷ್ಟ್ರೀಯಶಾಲೆಯು ಮುಚ್ಚಲ್ಪಟ್ಟಿತೆಂದೂ, ಅಲ್ಲಿಗೆ ಹೋಗುವ ಮಕ್ಕಳನ್ನು ಬೋರ್ಡುಶಾಲೆಗೆ ಕಳುಹಿಸಬೇಕೆಂದೂ ಜನರಿಗೆ ಅಲ್ಲದ ಸಲ್ಲದ ವರ್ತಮಾನಗಳನ್ನು ತಿಳಿಸುತ್ತಿದ್ದಾರೆಂದೂ ಇಲ್ಲಿ ಎಲ್ಲಿ ಹೋದರೂ ಸುದ್ದಿ ಇದೆ. ಇಷ್ಟಲ್ಲದೆ ಹಾಗೆ ಮಕ್ಕಳನ್ನು ಕಳುಹಿಸದವರಿಗೆ ಪೋಲೀಸರು ಬಂದು ಮಕ್ಕಳನ್ನು ಬಲಾತ್ಕಾರದಿಂದ ಶಾಲೆಗೆ ಕರೆದುಕೊಂಡು ಹೋಗುವರೆಂದೂ ಹೆದರಿಸುವುದು ಕೂಡ ಇದೆಯಂತೆ.

ಇದರ ದೆಸೆಯಿಂದ ಮಕ್ಕಳನ್ನು ಸ್ವತಂತ್ರವಾಗಿ ರಕ್ಷಕರು ಯೋಗ್ಯ ವಿದ್ಯಾಶಿಕ್ಷೆಯಲ್ಲಿಗೆ ಕಳುಹಿಸಲು ಅವಕಾಶವಿಲ್ಲ. ಬಡಬಗ್ಗರ ಧಣಿಗಳದ್ದಲ್ಲಿಗೆ ಇವರು ಹೋಗಿ ಮನಸಿಲ್ಲದಿದ್ದರೂ ದಾಕ್ಷಿಣ್ಯದ ಬಲಾತ್ಕಾರದಿಂದ ಅವರ ಮಕ್ಕಳನ್ನು ಬೋರ್ಡುಶಾಲೆಗೆ ಕಳುಹಿಸುವಹಾಗೆ ಮಾಡುತ್ತಾರೆ. ಒಕ್ಕಲಿಗರು ಮಕ್ಕಳನ್ನು ಕಳುಹಿಸದಿದ್ದಾಗ ಅವರ ಧನಿಗಳ ಕಾಗದತಂದು ಅನ್ಯಾಯದಿಂದ ಮಕ್ಕಳನ್ನು ಕಳುಹಿಸುವಂತೆ ಮಾಡಿದುದೂ ಇದೆ.

ಪರೀಕ್ಷೆಯ ವರೆಗಾದರೂ ನಿಮ್ಮ ಮಕ್ಕಳನ್ನು ಕಳುಹಿಸಿಕೊಡಿ ಎಂದು ಇವರು ಕೇಳುವಾಗ ನಮಗೆ ಕನಿಕರವಾಗುತ್ತದೆಂದು ಹಳ್ಳಿಗಳ ರಕ್ಷಕರನೇಕರು ಹೇಳುವರು. ಅಲ್ಲದೆ ದಾಕ್ಷಿಣ್ಯಕ್ಕೆ ನಾವು ಮಕ್ಕಳನ್ನು ಕಳುಹಿಸುವುದಲ್ಲದೆ ಮನಸಿದ್ದು ಕಳುಹಿಸುವುದಲ್ಲವೆಂದೂ ರಾಷ್ಟ್ರೀಯಶಿಕ್ಷಣವೇ ತಮ್ಮ ಮಕ್ಕಳಿಗೆ ಯೋಗ್ಯವಾದುದೆಂದೂ ಅನೇಕರು ಅನ್ನುವರು.

"ಪರೀಕ್ಷೆಯ ವರೆಗಾದರೂ ಮಕ್ಕಳನ್ನು ಕಳುಹಿಸಿರಿ" ಎಂಬ ಮಾತಿನ ಅರ್ಥವನ್ನು ಗ್ರಾಮಸ್ಥರು ಮಾಡಿಕೊಳ್ಳಬೇಕು. ಬೋರ್ಡುಶಾಲೆಯ (ಇನ್ಸ್ಪೆಕ್ಷನ್) ಪರೀಕ್ಷೆಯು ಸಪ್ಟಂಬರದ ಪ್ರಥಮ ಪಕ್ಷದಲ್ಲಿ ನಡೆಯುತ್ತದೆ. ಅಷ್ಟರೊಳಗೆ ಮಕ್ಕಳು ಹೊಸತಾಗಿಸೇರಿಕೊಂಡು ಯಾವುದರಲ್ಲಿ ಪರೀಕ್ಷೆಯನ್ನು ಕೊಡಬಲ್ಲರೆಂದು ಉಪಾಧ್ಯಾಯರೇ ಬಲ್ಲರು. ಏನೂ ಕಲಿಯದೆ ಪರೀಕ್ಷೆಗೆ ನಿಲ್ಲುವುದರಲ್ಲಿ ಏನೂ ಅರ್ಥವಿಲ್ಲ. ಹೆಚ್ಚಾಗಿ ಇನ್ಸ್ಪೆಕ್ಟರರು ಬರುವ ಕಾಲದಲ್ಲಿ ಶಾಲೆತುಂಬಾ ಮಕ್ಕಳಿದ್ದರೆ ಸಾಕೆಂದು ಇಂಥವರ ಅಭಿಪ್ರಾಯವಿರಬಹುದೆಂದು ತೋರುತ್ತದೆ. ಪರೀಕ್ಷೆಯವರೆಗೆ ಮಾತ್ರ ಮಕ್ಕಳು ಬಂದರೆ ಸಾಕು ಎಂದು ಹೇಳುವಾಗ ಇವರು ಏನುಮಾಡಬೇಕೆಂದಿರುವರೊ ತಿಳಿಯದು. ಒಂದು ವೇಳೆ ಬೋರ್ಡುಶಾಲೆಗೆ ಮಕ್ಕಳನ್ನು ಕಳುಹಿಸುವಂತೆ ರಕ್ಷಕರನ್ನು ಕೇಳಿಕೊಳ್ಳುವಾಗಲೂ ಚಳವಳವನ್ನು ದೂರುವ ಅಗತ್ಯವು ಇವರಿಗಿರುವುದಿಲ್ಲ. ಚಳವಳವನ್ನು ದೂಷಿಸಿ ಹಳ್ಳಿಯಲ್ಲಿ ಅಲ್ಲಸಲ್ಲದ ವರ್ತಮಾನಗಳನ್ನು ಹಬ್ಬಿಸುವ ಪ್ರಚಾರಕೆಲಸಮಾಡಿದರೆ ಇವರಿಗೆ ಸರಕಾರದಿಂದ ಬಹುಮಾನಸಿಗಬಹುದೆಂದು ಎಲ್ಲರಿಗೂ ಗೊತ್ತಿದೆ. ಆದರೆ ಇವರು ಪ್ರಚಾರಕೆಲಸಮಾಡುವುದಾದರೂ ನಿಜವಾದ ಸಂಗತಿಗಳನ್ನು ಹೇಳಿದರೆ ಚಿಂತಿಲ್ಲ. ಅಸತ್ಯವರ್ತಮಾನಗಳನ್ನು ಪಸರಿಸಿ ಜನರಲ್ಲಿ ಭಯ ಹುಟ್ಟಿಸುವುದು ಕೇವಲ ಅಯೋಗ್ಯಕೆಲಸವಾಗಿದೆ.

ಇವರು ಏನೆಂದರೂ, ಏನುಮಾಡಿದರೂ ಜನರು ಜಾಗರೂಕರಾಗಿರಬೇಕು. ವಿಚಾರಮಾಡಿ ಇವರೊಂದಿಗೆ ವರ್ತಿಸುವುದು ಉತ್ತಮ. ಎಲಿಮೆಂಟರಿಶಾಲೆಯು ಒಬ್ಬನ ಸಂಸ್ಥೆಯಲ್ಲ. ಇದೀ ಗ್ರಾಮಸ್ಥರ ಅಧಿಕಾರಕ್ಕೆ ಒಳಪಟ್ಟದಾಗಿದೆ. ಇದರಲ್ಲಿ ಯಾವ ಸುಧಾರಣೆ ಬೇಕಾದರೂ ಗ್ರಾಮಸ್ಥರೇ ಸ್ವತಂತ್ರರಾಗಿ ಮಾಡಿಕೊಳ್ಳಲು ಅನುಕೂಲವಿದೆ. ಗ್ರಾಮದಲ್ಲಿ ಯೋಗ್ಯರೀತಿಯಿಂದ ಎಲ್ಲರಿಗೂ ವಿದ್ಯೆ ಸಿಗುವಂತೆ ಮಾಡಬೇಕೆಂಬುದೇ ಈ ಶಾಲೆಯ ಉದ್ದೇಶ. ಆದ್ದರಿಂದ ಇದಕ್ಕೆ ಗ್ರಾಮಸ್ಥರೆಲ್ಲರೂ ಪ್ರೀತಿಯಿಂದ ತಮ್ಮ ಮಕ್ಕಳನ್ನು ಕಳುಹಿಸುವುದು ಸಹಜವಾಗಿದೆ. ಇತರರು ಹೇಳುತ್ತಾರೆಂಬ ಮಾತ್ರದಿಂದ ಗ್ರಾಮಸ್ಥರು ನ್ಯಾಯವನ್ನು ಮರೆಯಬಾರದು. ಅವರು ಹೇಳುವುದು ನ್ಯಾಯವಿದ್ದರೆ ಅಗತ್ಯವಾಗಿ ಅವರಿಗೆ ನಾವೆಲ್ಲರೂ ಸಹಾಯಮಾಡುವುದು ಸಹಜ. ಮಾತ್ರ ವಿಚಾರಮಾಡುವುದು ಅಗತ್ಯ. ವಿಚಾರಮಾಡದೆ ಮುಂದರಿಸಿದ್ದಲ್ಲಿ ಹಲವು ಸಾರಿ ನಾವು ಅನ್ಯಾಯಕೃತ್ಯಗಳಲ್ಲಿ ಸಿಕ್ಕಿಬೀಳುತ್ತೇವೆ. ರಾಷ್ಟ್ರೀಯ ಶಾಲೆಯಲ್ಲಿ ಕೆಲಸಮಾಡುವವರು, ಪರಿಶುದ್ಧಭಾವನೆಯಿಂದ ಸ್ವಾರ್ಥತ್ಯಾಗಮಾಡಿ ಗ್ರಾಮಾಭಿವೃದ್ಧಿಯ ಕೆಲಸಮಾಡುವಾಗ ಎಲ್ಲರೂ ಅವರಿಗೆ ಸಹಾಯಮಾಡುವುದೇನೂ ಆಶ್ಚರ್ಯವಲ್ಲ.

ಶ್ರೀಮಂತರಿಗೆ ಎರಡು ಮಾತು:— ನೀವು ಬಲ್ಲವರಾಗಿರುವಿರಿ. ಚಳವಳವು ನ್ಯಾಯವಾದುದೆಂದೂ ಧಾರ್ಮಿಕವಾದುದೆಂದೂ ಅನ್ನುವಿರಿ. ಮಹಾತ್ಮ ಗಾಂಧಿಜಿಯವರು ಅತಿದೊಡ್ಡವರೆಂದು ಹೊಗಳುವಿರಿ. ಇಷ್ಟೆಲ್ಲಾ ತಿಳಿದು ನೀವು ರಕ್ಷಕರಿಗೆ ತಮ್ಮ ಮಕ್ಕಳನ್ನು ಯೋಗ್ಯಶಿಕ್ಷಣಸಿಗುವಲ್ಲಿಗೆ ಕಳುಹಿಸಲು ಸಂಪೂರ್ಣ ಸ್ವತಂತ್ರವಿದೆ ಎಂಬದನ್ನು ಸಹ ತಿಳಿದಿರಬಹುದೆಂದು ಭಾವಿಸುತ್ತೇನೆ.

ಮಕ್ಕಳನ್ನು ಬೋರ್ಡುಶಾಲೆಗೆ ಕಳುಹಿಸಬೇಕೆಂದು ನೀವು ನಿಮ್ಮ ಒಕ್ಕಲುಗಳಿಗಾಗಲಿ ಹಂಗಿಗರಿಗಾಗಲಿ ಹೇಳುವುದರಲ್ಲಿ ಯಾವ ನ್ಯಾಯವೂ ಇಲ್ಲ. ನಿಮ್ಮ ಮಕ್ಕಳನ್ನು ಇಂಥಾ ಶಾಲೆಗೆ ಕಳುಹಿಸಬೇಕೆಂದು ಇತರರು ಒತ್ತಾಯಪಡಿಸಿದರೆ ಅದಕ್ಕೆ ನಿಮಗೆ ಮನಸ್ಸಿಲ್ಲದಿದ್ದರೆ ನೀವು ಎಂದೂ ಅಂಥವರ ಮಾತುಗಳನ್ನು ಮನ್ನಿಸಲಾರಿರಿ. ನೀವು ಇಂಥಾ ವಿಷಯಗಳಲ್ಲಿ ಪ್ರವೇಶಮಾಡಿದರೆ ನ್ಯಾಯಕ್ಕೆಸರಿಯಾಗಿ ವರ್ತಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ತಂದೆತಾಯಿಗಳಿಗೆ ತಮ್ಮ ಮಕ್ಕಳುಗಳ ಮೇಲೆ ಸಂಪೂರ್ಣ ಸ್ವಾತಂತ್ರ್ಯವಿರುವುದರಿಂದ ನೀವು ಇಂಥಾ ಪ್ರಶ್ನೆಗಳಲ್ಲಿ ತಟಸ್ಥರಾಗಿದ್ದರೆ ನಿಮ್ಮ ಗೌರವಕ್ಕೆ ಎಷ್ಟೊ ಮೇಲು. ಅಲ್ಲದೆ ಅವರು ವಿದ್ಯಮಾನಗಳಲ್ಲಿ ನಿಮಗೆ ಅಭಿರುಚಿಯು ಇದ್ದರೆ ಎಲ್ಲಿ ಯೋಗ್ಯಶಿಕ್ಷಣ ಸಿಗುವದೆಂದು ವಿಚಾರಿಸಿ ರಕ್ಷಕರ ಮನಸ್ಸು ಒಪ್ಪುವಂತೆ ಮಾಡಬೇಕಲ್ಲದೆ ಅವರ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅಡ್ಡಬರುವುದಲ್ಲ.

ರಾಷ್ಟ್ರೀಯಶಾಲೆಗೆ ಸಹಾಯಮಾಡಲು ನಿಮಗೆ ಸಾಧ್ಯವಿಲ್ಲದಿದ್ದರೂ ಚಿಂತಿಲ್ಲ, ಎದುರಾಗಿ ಕೆಲಸಮಾಡುವುದು ಪಾಪಕರ. ಶ್ರೀಮಂತರು ಅನ್ಯಾಯಮಾಡಿದರೆ ಇಡೀ ಗ್ರಾಮವೇ ಹಾಳಾಗುವುದು. ದೇವರು ಇವರಿಗೆ ಹೆಚ್ಚು ಜವಾಬುದಾರಿಯನ್ನು ಕೊಟ್ಟಿರುವನು. ಇದನ್ನು ಇವರು ಮರೆತರೆ ಸಮಾಜವು ಸ್ವಾಭಾವಿಕವಾಗಿ ಕೆಟ್ಟುಹೋಗಿ ಬಡವರು ಬಹಳ ಸಂಕಷ್ಟಕ್ಕೆ ಗುರಿಯಾಗುವರು. ಬಡವರಿಗೆ ರಾಷ್ಟ್ರೀಯಶಾಲೆಯಲ್ಲಿ ಧರ್ಮಾರ್ಥವಾಗಿ ಸಿಗುವ ವಿದ್ಯೆಯಿಂದ ಅವರು ಏಳಿಗೆಯನ್ನು ಹೊಂದುವರು. ಅದಕ್ಕೆ ಅಡ್ಡಿಉಂಟುಮಾಡಿದರೆ ಅವರು ಹಾಳಾಗುವರು. ಆದ್ದರಿಂದ ಇಲ್ಲಿಯ ರಾಷ್ಟ್ರೀಯಶಾಲೆಗೆ ಮಕ್ಕಳನ್ನು ಕಳುಹಿಸುವವರಿಗೆ ಶಾಸ್ತ್ರಾನುಸಾರ ಏನಾದರೂ ಹೇಳಬೇಕಾದ ಸಂದರ್ಭದಲ್ಲಿ ಜ್ಞಾನವೃದ್ಧರೂ ವಯೋವೃದ್ಧರೂ ಆದ ನೀವು ದೇವರಿಗೆ ಸರಿಯಾಗಿ ವರ್ತಿಸುವಿರೆಂದು ನಾನು ನಂಬುತ್ತೇನೆ.

ಎಚ್. ನಾರಾಯಣರಾವ್,
ವಿದ್ಯಾಮಂದಿರ, ಉಡುಪಿ.

ಸ್ವಾಮಿ, ಈ ಪತ್ರದ ಕಳೆದ ಸಂಚಿಕೆಯೊಂದರಲ್ಲಿ ಮೊಗ್ರಾಲಿನಲ್ಲಿ Tobacco growers Cooperative Society ಅನಾವಶ್ಯಕವೆಂತಲೂ ಪುತ್ತೂರು ಮತ್ತು ಕುಂಬಳೆಯ ಸೊಸೈಟಿಯವರು ಅದು ಬೇಡವೆಂದು ಹೇಳಿರುವರೆಂತಲೂ ಕಂಡುಬರುತ್ತದೆ. ಇದು ಸಂಪೂರ್ಣವಾಗಿ ಸುಳ್ಳಾಗಿರುವುದು. ಮೇಲೆಹೇಳಿದ ಗ್ರಾಮಗಳ ಸೊಸೈಟಿಗಳು unlimited Societyಗಳಾದುದರಿಂದ ಅವುಗಳು ಹೊಗೆಸೊಪ್ಪಿನ ಕೃಷಿಕರಿಗೆ ಪ್ರಯೋಜನಕ್ಕೆ ಬೀಳುವುದಿಲ್ಲ. ಕಜ್ಜಾರಿನಲ್ಲಿ ಸೊಸೈಟಿ ಇರುವುದೇ ಇಲ್ಲ. ಈ ಕಾರಣಗಳಿಂದ ಕುಂಬಳೆ, ಮೊಗ್ರಾಲ್, ಪುತ್ತೂರು ಮತ್ತು ಕಜ್ಜಾರಿನ ಗ್ರಾಮಸ್ಥರು ತಮಗೊಂದು Limited Society ಬೇಕೆಂದು ಅರ್ಜಿಮಾಡಿರುವರು.

ಕುಂಬಳೆ ಮತ್ತು ಪುತ್ತೂರಿನ Unlimited Society ಯವರು ತಮಗೊಂದು Limited Society ಹೇಳಿದ್ದು ಮಾತ್ರವೇ ಅಲ್ಲದೆ, ಮೇಲೆ ಹೇಳಿದ ನಾಲ್ಕು ಗ್ರಾಮಗಳ ಮಧ್ಯವಾದ ಮೊಗ್ರಾಲಿನಲ್ಲಿ ಅದನ್ನು ತೆರೆಯಬೇಕೆಂದು ಮ. ರಾ. ರಾ. ಅಸಿಸ್ಟಾಂಟ್ ರಿಜಿಸ್ಟ್ರಾರರವರಿಗೆ ಅರ್ಜಿ ಮಾಡಿರುವರು.

ಸದರಿ ಸಂಚಿಕೆಯಲ್ಲಿ ಮೊಗ್ರಾಲಿನ ಹಣವಂತರು Co-operative Societyಯನ್ನು ಮುರಿಯಲು ನೋಡುತ್ತಾರೆ ಎಂದೂ ಕಂಡು ಬರುತ್ತದೆ. ಇದು ಸಹಾ ಸುಳ್ಳಾಗಿರುವುದು. ಆದುದರಿಂದ ಸಹಕಾರಿ ಸಂಘಗಳ ಉದ್ಯೋಗಸ್ಥರು ಬಡ ಮೆಂಬರರಿಗೆ ಇದನ್ನು ಏರ್ಪಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ಮೊಗ್ರಾಲ್ ಗ್ರಾಮಸ್ಥ.

ಅಯ್ಯಾ,

ನಮ್ಮ ಈ ಪೆರಡೂರು ಎಂಬುದು ಒಂದು ಮಧ್ಯಸ್ಥಳವಾದ ಕಸಬಾ ಗ್ರಾಮವಾಗಿರುತ್ತದೆ. ಮತ್ತು ಇಲ್ಲಿ ತಿಂಗಳಿಗೊಮ್ಮೆ ಬಹಳ ಜನಸ್ತೋಮಕೂಡುವ ದೊಡ್ಡ ಸಂತೆಯೂ ವರುಷಕ್ಕೆ ಒಂದಾವರ್ತಿ ಸಾವಿರಾರು ಜನರು ಕೂಡುವ ಸಾಧಾರಣ ೧ ತಿಂಗಳ ಪರ್ಯಂತ ನಡಿಯುವ ದೊಡ್ಡ ಜಾತ್ರೆಯೂ ಇರುವ ಸ್ಥಳವಾಗಿದೆ. ಇಲ್ಲಿ ಕೆಲವು ವರುಷಗಳಿಂದಲೂ, ಒಂದು ಪೋಲೀಸು ಸ್ಟೇಶನು ಇರುತ್ತದೆ. ಸದರಿ ಪೋಲೀಸು ಸ್ಟೇಶನನ್ನು ಇಲ್ಲಿಂದ ತೆಗೆಯುವುದಾಗಿ ವರ್ತಮಾನವು ಕೇಳಿ ತುಂಬಾ ವ್ಯಸನಪಡಬೇಕಾಗುತ್ತದೆ. ಯಾಕೆಂದರೆ, ಇಲ್ಲಿಗೆ ಈ ಸ್ಟೇಶನು ಬರುವ ಮುಂಚೆ ಕಳ್ಳ ಕಾಕಪೋಕರ ಉಪದ್ರವ ತಪ್ಪದೆ ನಡಿಯುತ್ತಿತ್ತು. ಅದಲ್ಲದೆ, ಅಲ್ಲಲ್ಲಿ ಜುಗಾರಾಟ ಮುಂತಾದ ಜೂಜುಗಳು ಯಾವಾಗಲೂ ನಡಿಯುತ್ತಲೇ ಇತ್ತು. ಸರಕಾರದವರು ಈ ಪೋಲೀಸು ಸ್ಟೇಶನನ್ನು ಇಲ್ಲಿ ಇಟ್ಟಲಾಗಾಯಿತು ಅಂಥ ಯಾವ ತೊಂದರೆಯೂ ಇಲ್ಲದೆ ಸುಖವಾಗಿರುತ್ತದೆ. ಆದುದರಿಂದ ಇಂಥಾ ಸ್ಥಳವಾದ ಪೆರಡೂರಿನಲ್ಲಿ ಇರುವ ಪೋಲೀಸು ಸ್ಟೇಶನನ್ನು ಒಮ್ಮೆಯೇ ತೆಗೆದಪಕ್ಷಕ್ಕೆ ಈ ಊರ ಬಡನಿವಾಸಿಕರ ಗೋಳಿಗೆ ನೆಲೆಯಿಲ್ಲದಂತಾಗುತ್ತದೆ. ಆದುದರಿಂದ ಪೂಜ್ಯವಳ್ಳ ಸರಕಾರದವರು ಈ ಸ್ಟೇಶನಿನ ಬದಲಾಗಿ, ನಿವಾಸಿಕರ ಸಂಖ್ಯೆಯು ಕಮ್ಮಿಯಿರುವ ಬೇರೆ ಪ್ರಾಂತ್ಯದ ಸ್ಟೇಶನುಗಳನ್ನಾದರೂ ತೆಗೆದು ಈ ಪೋಲೀಸು ಸ್ಟೇಶನನ್ನು ಇಲ್ಲಿಯೇ ಇರಗೊಡಿಸುವಂತೆ ನಿಗಾಕೊಡುವರಾಗಿ ನಂಬಿರುತ್ತೇವೆ. ಮತ್ತು ಇಲ್ಲಿ ಕಳೆದ ವರುಷದಿಂದ ಸ್ಥಾಪಿತವಾದ ಪಂಚಾಯತ ಕೋರ್ಟಿನಲ್ಲಿ ಅನೇಕ ತರದ ಸಣ್ಣ ದೊಡ್ಡ ನಂಬ್ರಗಳು ರಾಜಿಪಂಚಾಯತಿಯಿಂದಲೇ ತೀರ್ಮಾನವಾಗುವಂತಾದ್ದು ನೋಡಿದರೆ, ಇನ್ನು ಮುಂದೆ ಇಂಥ ಸಣ್ಣ ವ್ಯವಹಾರಗಳು ಮುಂದೆ ಹೋಗಲಿಕ್ಕಿಲ್ಲವಾಗಿ ನಂಬಿಕೆಯೂ ಸಂತೋಷವೂ ಪಡಬೇಕಾಗುತ್ತದೆ.

ಪೆರಡೂರು ನಿವಾಸಿಕರಲ್ಲೊಬ್ಬ.

ಮಂಗಳೂರು ಕೋಒಪರೇಟಿವ್ ಟೌನ್ ಬೇಂಕು, ಲಿಮಿಟೆಡ್

ಮಹಾಸಭೆ

ಈ ಬೇಂಕಿನ ವರ್ಷಾವಧಿ ಮಹಾಸಭೆಯು ಇದೇ ಬರುವ ಒಕ್ಟೋಬರ ತಾ. ೧ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ಸೋಮಯ್ಯ ಕರ್ಣಿಕ ರಸ್ತೆಯಲ್ಲಿರುವ ಬೇಂಕಿನ ಆಫೀಸಿನಲ್ಲಿ ಜರಗುವುದು. ಎಲ್ಲಾ ಮೆಂಬರುಗಳು ದಯಮಾಡಿ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಮಹಾಸಭೆಯಲ್ಲಿ ಯಾವುದಾದರೂ ಪ್ರಶ್ನೆಗಳನ್ನು ಕೇಳಬೇಕೆಂದಾಗಲಿ ಸೂಚನೆಗಳನ್ನು ಕೊಡಬೇಕೆಂದಾಗಲಿ ಅಪೇಕ್ಷೆಯುಳ್ಳ ಮೆಂಬರರು ಅಂಥವುಗಳನ್ನು ಬೇಂಕಿನ ಪ್ರೆಸಿಡೆಂಟರಿಗೆ ಈ ತಿಂಗಳ ತಾ. ೨೫ರ ಒಳಗೆ ಬರಹಮೂಲಕವಾಗಿ ತಿಳಿಸಬೇಕಾಗಿ ನಮ್ಮ ವಿನಂತಿ. ಈ ರೀತಿ ಮುಂದಾಗಿ ತಿಳಿಸಿದರೆ ಆಯಾ ಪ್ರಶ್ನೆಗಳಿಗೆ ಸಮರ್ಪಕವಾದ ಜವಾಬು ಕೊಡಲಿಕ್ಕೂ ಸೂಚನೆಗಳನ್ನು ಸರಿಯಾಗಿ ಪರಾಮರ್ಶಿಸಲಿಕ್ಕೂ ಸಾಧ್ಯವಾದೀತು.

ಪ್ರಾಸಂಗಿಕ ವಿಷಯಗಳು:—(೧) ಒಡಿಟ ಆರ್ಡರ್ ಮತ್ತು ಆಡಳಿತ ರಿಪೋರ್ಟನ್ನು ಓದುವುದು. (೨) ಡಿವಿಡೆಂಡನ್ನು ನಿರ್ಧರಿಸುವುದು. (೩) ಪ್ರಶ್ನೆಗಳು ಮತ್ತು ಸೂಚನೆಗಳು. (೪) ಡೈರೆಕ್ಟರರ ಚುನಾವಣೆ.

ಮಂಗಳೂರು, }
ತಾ. ೪-೯-೧೯೨೨. } ಬೈಂದೂರು ಆನಂದರಾವ್,
ಪ್ರೆಸಿಡೆಂಟ್.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ,

ಕ್ರಮ ನಂಬ್ರ $\frac{558}{1922}$ R. I. A No. $\frac{1136}{1922}$

ಮೊಗದುಮ್ ಸಾಹೇಬ ವಗೈರೆ ೬ ಜನರು......ವಾದೀರು.

ಮೈದಿನ್ ಸಾಹೇಬ......ಪ್ರತಿವಾದಿ.

ಕುಂದಾಪುರಕಸಬಾ ಕೋಡಿಯಲ್ಲಿರುವ ಜುಮ್ಮಾಮಸೀದಿಯ ಭಜಕರಿಗೆ ತಿಳಿಯಪಡಿಸುವುದೇನೆಂದರೆ:—

ಸದರಿ ಜುಮ್ಮಾಮಸೀದಿಯು ವ ಅದರಲ್ಲಿರುವ ಸೊತ್ತುಗಳು ಕೋಡಿಗ್ರಾಮದಲ್ಲಿರುವ ವಾದೀರು ವಗೈರೆ ಹತ್ತುಹಮುಸ್ತರ ಹಕ್ಕಿನದ್ದೆಂತ ಸ್ಥಾಪಿಸಿಕೊಳ್ಳುವ ಬಗ್ಗೆ ಸದರಿ ಮಸೀದಿಯ ಆಡಳ್ತೆ ಮಿಶ್ತೋಸರರು ವ ಭಜಕರಾದ ವಾದೀರು ಇತರ ಭಜಕರು ವ ಜಮ್ಮಾತರ ಕಡೆಯಿಂದ ಸಹ ಪ್ರತಿವಾದಿಯ ಮೇಲೆ ದಾವಾನಡಿಸುವರೆ ಕೋರ್ಟಿನವರ ಅನುಮತಿಯನ್ನು ಅಪೇಕ್ಷಿಸಿ ಸದರಿ ಅರ್ಜಿಯನ್ನು ಕೊಟ್ಟಿರುತ್ತಾರೆ. ಸದರಿ ದಾವೆಯಲ್ಲಿ ಹಾಜೀರಾಗಿ ಸೇರುವರೆ ಅಪೇಕ್ಷೆಯುಳ್ಳವರು ವ ಆಕುರಿತು ಆಕ್ಷೇಪಹೇಳುವವರು ಸದರಿ ದಾವಾ ಮತ್ತು ಅರ್ಜಿ ಕೊಡಾ ತನಖೆಗೆ ಇಟ್ಟ ತಾರೀಕು 11—10—1922ರ ವಳಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು.

ಕುಂದಾಪುರ, }
6—9—1922. } ಎಸ್. ಎ. ಉಡುಪ,
ವಾದೀರ ವಕೀಲ್.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇಧ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೬, (ಬತ್ರಿಸ್ಟೇ), ಮದ್ರಾಸ್.
Local Agents: Raphael & Co,
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹೆಂಚಿನ ಕಾರ್ಖಾನೆಗಳಲ್ಲಿ ಹೆಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು, ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

The Canara Bank Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 181,250—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.

For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ವ್ಯಾಧಿಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪನೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಚಳಿ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.



ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಬೇನೆ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ.

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳಿಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಿರಿ. — ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುವಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟೆಗೇ ಅಡಗಿಸುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಚಿಕೆ ಸೀಸೆ 1ಕ್ಕೆ ರೂ. 2—0—0.

ವಿಳಾಸ—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು —
— ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪ್ಪೈ
ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಕಾಟಿನುಗಳೂ, ಯಾನಾಮಲ್ಲ ಬಟ್ಟು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್, ಬ್ರವುನ್ ಪೇಪರ್, ರದ್ದಿ, ಖಾಲಿ ಕವರು, ಫೌಂಟನ್‌ಪೆನ್, ಕಾಯಿತ್ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಆಟದ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ನೆಯ್ದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಮಾನುಗಳೂ, ಸಿಗರೇಟುಗಳು ವಗೈರೆ ಮಾಲುಗಳು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತವೆ.

ಅಚ್ಚಿನಲ್ಲಿದೆ! ಎಂ. ಜಿ. ಐಗಳ್, ಇವರಿಂದ ರಚಿತವಾದ ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ. ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸೈಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ. ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿದ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ತಾರಕರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಿತಾದ್ರಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತನಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯಿಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಬಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ವೈಷ್ಣವರಾದದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತ ಸ್ಥಾಪನೆ—ಹಿಜರಿ—ಅಬ್ದುಬಕರ—ಅಲಿ—ಖಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚೆರುಮೂನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾರ್ಸಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ವಿಶೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಚಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾ ನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ಬಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—ಬುಕೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಪಂಜ—ಸೂಳ್ಯ—ಬೆಳ್ಳಾರೆ—ಅಮರಮಾಗಣೆಗಳು—ಬೆಳ್ಳಾರೆ, ಪುತ್ತೂರು ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಚೋಳರ ಮಂಗಳಾದೇವಿ ದೇವಸ್ಥಾನದ ಕೋಟೆ ಮುಚ್ಚು ಕಟ್ಟಿದ್ದು—ಹಾವಳಿ—ಭಂಗ ರಾಜ—ಗುರುವಾಯನಕೆರೆ ಪಟ್ಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮಾರಿಗುಡಿ ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಮಣಿಯುದ್ಧ—ದೇವಪೂಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ಕಳಸನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶೀಮಂತೂರು—ಮೂಲಿಕೆ—ವಳಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಲ್ಲೂರು—ಸೋಮನಾಥೇಶ್ವರ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಬೆದ್ರೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾರ್ಸಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ಬಿನ್ನಾಣರು—[illegible] ಕೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮೆ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೋಮಶೇಖರಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಣ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಮೂಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟುಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಅಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಮಾಗಣೆ 1.

ವಿಳಾಸ:—

ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಛಿನ್ನಾವಧೂತರು

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ಅನೇಕ ಮಂತ್ರ ಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ಅನೇಕ ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಅಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ಅನೇಕ ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ಅನೇಕ ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾರ್ಥಗಳ ಟಿಪ್ಪಣಿ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ಅನೇಕ ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಬಳಿಯ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ಸ್ಥೈರ್ಯಗಳೂ [illegible] ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಇನ್ನೊಂದ ನೋಡಿರಲಿಕ್ಕಿಲ್ಲ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ಬೇರೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಅಕ್ಷರಗಳು, ಯಕ್ಷ, [illegible], ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ !!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರ್ಣರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಬಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ.

ಶ್ರೀನಿವಾಸ ರಂಗಪ್ಪೈ
ರಥಬೀದಿ, ಮಂಗಳೂರು.

ಸನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೨೨)

ಇದರ ಅಭಿಪ್ರಾಯ. ಅಂದವಾದ ಮುದ್ರಣ. ನೊಗಸಾದ ಕಾಗದ. ಒಬ್ಬ ರಜಪೂತರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಸಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕಂಥಾದ ಭಕ್ತಿ ಪ್ರೀತಿ ಮುಂತಾದವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕಂಥಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0—12—0
ಸಂತಾಪಕ-ಕಾದಂಬರಿ	0—6—0
ಚಂದ್ರಮುಖಿ ,,	0—8—0
ರಾಜಪುತ್ರರಮಣಿಯರು	0—8—0
ಕೆಲವು ಸಣ್ಣ ಕಥೆಗಳು	1—0—0
ರಾಜಯೋಗ . .	1—0—0

ಸಂಪರರಾಮಾಯಣ ಹೊಸ ಮುದ್ರಣ .	5—0—0
ಸಂಪರರಾಮಾಯಣದ ಕಥೆ ವಚನ .	0—12—0
S. S. L. C. Kannada Texts	
ಹರಿದಾಸಿ . . .	0—5—0
ಸುಶೀಲೆ . . .	0—6—0
ಅದಲಿಯ ಹುಡುಗಿ.	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered: No. M. 498

SWADESHABHIMANI. MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ ,, 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ವಾರಪತ್ರಿಕೆ

ದೊರೆಯಲುಸಮರತ್ನಗಳು ಸಾ- । ಗರವ ಮಥಿಸಲು ಸುರಗಣದರಂ ।
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಳಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೬. ಮಂಗಳೂರು, ತಾರೀಕು ೧೫ನೇ ಶುಕ್ರವಾರ ಸಪ್ಪಂಬರ ೧೯೨೨. ಸಂಚಿಕೆ ೩೭

ಮ್ಯಾಲು ಉತ್ತಮ! ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು.

ಮೇಲಾದ

= ಜವುಳಿ ಸಂಗ್ರಹದ ಮಳಿಗೆ =

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಶ್ಮೆ ಪಟ್ಟೆ, ಮತ್ತು ನೂಲಿನ ಬಟ್ಟೆಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಮ್ಮದಾಬಾದ, ಮಹೇಶ್ವರಿ, ಗುಜರಾತು, ಬಡೋದಾ, ಕೊಯಮುತ್ತೂರು, ಗದಗ, ಹುಬ್ಬಳ್ಳಿ, ಧಾರವಾಡ, ಇಳಕಲ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಮ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಬರ್ಮಾ ನೊದಲಾದ ಕಡೆಗಳಲ್ಲಿಯೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳೂ, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುಪು ತೊಡುಪುಗಳೂ ಈಗ ತಾನೇ ತರಿಸಿದ್ದು ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗಿರುವ ಬಿಳೇ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳನ್ನು, ಬಿಳಿ ವ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಶರ್ಟಿನ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವುವು.

ನಗದಿ ಪಡೆಯುವವರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೈ,
ಕಸ್ತೂರಿ ನಾಗೇಶಪ್ಪೈ ಮತ್ತು ಕಂಪೆನಿ,
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ಎಳ್ಳುಬಿಳೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ನೀಸುಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತಲ್ ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಟಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ಡಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಷನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
INDIAN DELEGATION

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಕ್ಕರಾಜು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ಯವಹಾರ ಕ್ರಯ	೦—೧೦—೦
ಶೇಷುಸ್ತಂಭ	,, ೦—೧೨—೦
ಸಂಕ್ಷೇಪಗೀತೆ	,, ೦—೧೦—೦

ಅಕ್ಕೀರಾಜಯಣ ಪುಣಿಂತಾಯರಿಂದ ರಚಿತವಾದ ಸ್ವರಾಜ್ಯ ಭಕ್ತೋಪದೇಶ ಕ್ರಯ ೦—೨—೦

ಕರ್ನಾಟಕ ಕವಿ ಚರಿತ್ರೆ, ಮರಾಠರ ಅವನತಿ, ಸ್ತ್ರೀ ದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಸ್ತುತಿ ಅಥವಾ ಬಾಲ್ಯವಿವಾಹ, ಸ್ತ್ರೀ ಆಧ್ಯಾತ್ಮ ರಾಮಾಯಣ, ಸ್ತ್ರೀ ಹನುಮಂತ ವಿಜಯ, ಸತೀ ಸಾಹಸ, ಅಂಗವನ ಫಿರ್ಯಾದು, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅನಸಕಾರದ ತೋಂದರೆಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರಕಥೆಗಳು, ಹೊಸ ಕನ್ನಡ ವಾಚನ ಪುಸ್ತಕ, ಮಗ್ಗಿ ಪುಸ್ತಕಗಳು, ಅಂಕಗಣಿತ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೩—೦ ಸ್ಥಳೀಕರಿಗೆ ರೂ ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦. ಪ್ರಕಟಣೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ಗದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ಮಾಡಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ರೂಲ್ಡ ಪುಸ್ತಕಗಳು, ನೋಟು ಬುಕ್ಕುಗಳು, ದ್ವಂಗಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಬು, ಫೂಟ್ ರೂಲುಗಳು, ಇತರ ಬರವಣಿಗೆಯ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪಟ್ಟಾಗು ಫೋರ್ಮು, ಕುಂಭಕೂಣ ರಶೀದ ವ ಇತರ ರಶೀದ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೊಪೆಥಿಕ್ ಮತ್ತು ಬಿಸ್ಕ ಔಷಧಗಳು—ರೋಗಿಗಳಿಗೂ, ಬಾಲೀಣರಿಗೂ ಬೇಕಾಗುವ ಪೌಷ್ಟಿಕ ಔಷಧಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಬೆಳೆಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಆಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧ ಇಲಾಖೆಯು ಕಳೆದ ೨೫ ವರ್ಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTAN
Best Indian
Pain Balm
Amrutanjan
BOMBAY

ಬೇನೆಯುಂಟಾದಾಗ ಜೀವನವು ಕಷ್ಟಮಯವಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣಾಪ್ತ ಬೇನೆಗಳ್ಳದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕ್ಷಣದಲ್ಲಿ ನಿಲ್ಲುವುದು. ಇದು ಯಾವ ತರದ ಶಿರಶೂಲೆಯನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಂಟುಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 6—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—8—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ರಾತಃಕಾಲ

D. B. DUTT & Co. CALCUTTA.

ಮಲಿಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. [illegible]

[illegible]

ಧಗಳು! ಪ್ರಖ್ಯಾತಿಪಟ್ಟ ಔಷಧಗಳು!
ನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರ
ಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ
ದಾಯಕ ಪತ್ರವನ್ನು ಹೊಂದಿರುವ

ರಾಜ ನಾಗೇಂದ್ರನಾಥ ಸೆನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು-

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೆನ್ ಇವರ ಖುದ್ದು ನಿಗಾವಣೆಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಬಳ್ಳೀ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟು ರಿಯಾತಿ ದರದಲ್ಲಿ ಇಲ್ಲಿ ಕೊಡಲಾಗುವುದು.

ಕಳೆದ ೩೦ ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪನಿಯ ಔಷಧಿಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ಪ್ರಮಾಣವು ಸಹ ಬೇರೆ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ದಷ್ಟೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬಗೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ ೨ ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು ೧ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ¼ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ¼ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ. 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೆನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ 1 ಕ್ಯಾನ್ ಕಸ್ತೂರಿಗೆ ತೊಲೆಗೆ ರೂ. 40.

ಗೋರೋಚನಕ್ಕೆ ತೊಲೆಗೆ ರೂ. 16. ಕುಂಕುಮಕೇಸರ ತೊಲೆಗೆ ರೂ. ೩. ಪಚ್ಚಕರ್ಪೂರ ತೊಲೆಗೆ ರೂ. 4.

ಎಲ್ಲಾ ಆರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರಕೊಳ್ಳಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ್ ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫ್ಲೋರಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲುಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು — ಕ್ರಯ ಸುಲಭ

ಮಕ್ಕಳ ಆಟದ ಪೆಟ್ಟಿಗೆಯ 32 ಸಾಮಾನುಗಳ ಸಹ ಸೆಟ್ಟು 1ಕ್ಕೆ ರೂ. 1–14–0 ಮಧ್ಯಮ 3–0–0, ಉತ್ತಮ ರೂ 4–8–0, ದೊಡ್ಡದು 6–0–0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ ಮಡಿ, ಜರಿ, ಸಾಡಿ, ಶೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಫಟಿಕಮಣಿ, ಲಿಂಗ, ಧಾವಳ್ಳಿ ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು. ಕ್ಯಾಟಲಾಗ್ ಇನಾಂ.

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೇ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕೀಲು ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಜುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷಧ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ. 1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪೆಥಿಕ್ ಡಿಸ್ಪೆನ್ಸರಿ,
ಹಂಪನಕಟ್ಟೆ, ಮಂಗಳೂರು.

ಸೌಂದರ್ಯದ ಉತ್ತಮ ಮಿತ್ರ

ಲೋಕದಲ್ಲಿ ಅತಿ ಸೌಂದರ್ಯಕ್ಕೆ ಯಶಸ್ಸು ಪಡೆದಂಥಾ ಸ್ತ್ರೀಯರು ಉಪಯೋಗಿಸುವದು

"ಹಾಜಿಲೀನ್ ಸ್ನೋ"
(ಟ್ರೇಡ್ ಮಾರ್ಕ)

"HAZELINE'
(Trade Mark)
SNOW"

ಮೃದುವಾದ ಯವ್ವನಕಾಂತಿಯನ್ನು ಕಾಪಾಡಿ, ಬಿಸಿಲಿನಿಂದಲೂ ಮಳೆಗಳಿಂದಲೂ ರಕ್ಷಿಸುವದು "ಹಾಜಿಲೀನ್ ಸ್ನೋ". ಇದು ಮುಖಕಾಂತಿಗೆ ಸಿಹಿ ತಂಪುಕೊಟ್ಟು ಚರ್ಮವನ್ನು ಮೃದು ಪಾಡಿಸುವದು.

ಇದು ಕಂಪೆನಿ ಪತ್ರಿಕೆಗಳಲ್ಲಿ ಕೆಮಿಸ್ಟ ಮತ್ತು ಉಗ್ರಾಣದವರಿಂದಲೂ ಮಾರಲ್ಪಡುವದು.

ಬರ್ರೋಸ್ ವೆಲ್ಕಂ ಅಂಡ್ ಕೋ
ಲಂಡನ್ ಅಂಡ್ ಬೊಂಬಾಯಿ.

Burroughs Wellcome & Co.
London and Bombay
CAN. 2
All Rights Reserved

ಶ್ರೀ
ಸ್ವದೇಶ ಭಕ್ತರೇ
ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳು, ಬಿಳಿ, ಹಸುರು ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ ನಯವಾದ ಶರ್ಟಿನ ವಸ್ತ್ರಗಳೂ ಮತ್ತು ವೇಷ್ಟಿ ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು.

ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ನಾಲ್ಕಾಣೆಯ ಸ್ಟಾಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:—
ಮುಳಿಯ ತಿಮ್ಮಪ್ಪಯ್ಯ
ಮತ್ತು ಸಹೋದರ
ರೇಷ್ಮೆ ಮತ್ತು ಜವಳಿ
ವ್ಯಾಪಾರಿಗಳು,
ಫಂಡುಮಠ (ಗೋಳಿಕಟ್ಟೆ ಬಜಾರು)
ಮಂಗಳೂರು.

The Canara Banking Corporation, Udipi, (Limited).

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಆ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	8,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯತೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಯಾನೆ ಹೊರಗಿನಿಂದ ಬರತಕ್ಕದ್ದು	3,78,315	2	5
6. ರಿಜರ್ವ್ ಇತ್ಯಾದಿ ಫಂಡುಗಳು. (17—6—'22.)	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೭ರಿಂದ ೭½ ವರೆಗಿನ ಮೂರು ತಿಂಗಳಿಗೊಮ್ಮೆ ಬಡ್ಡಿ ಕೊಡುವ ಕರಾರ ಮೇಲೆ ನಿರಖು ಠೇವಣಾತಿಗಳು.
೨. ೧೫ ದಿನಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡಿಯುವ ಕರಾರ ಮೇಲೆ ಸಾಲಿಯಾನ್ ಶೇಕಡಾ 6½ಲ್ಲಿ ನಡೆದ ದಿನಗಳಿಗೆ ಬಡ್ಡಿ ಕೊಡುವ ಕರಾರ ಮೇಲೆ ಚಿಕ್ಕ ವಾಯಿದೆ ಠೇವಣಾತಿಗಳು.
೩. ಏನೂ ಖರ್ಚಿಲ್ಲದೆ ಸಾಲಿಯನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಕರಾರ ಮೇಲೆ ಚಾಲ್ತಿ ಠೇವಣಾತಿಗಳು.
೪. ಸಾಲಿಯನ್ ಶೇಕಡಾ 4½ ದರದಲ್ಲಿ ಬಡ್ಡಿ ಕೊಡುವ ಕರಾರ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.
೫. ಈ ಕೆಳಗಣ ಕರಾರಗಳ ಮೇಲೆ ಕಂತು ಠೇವಣಾತಿಗಳು:
ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.
ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.
ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.
ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು.
ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.
೬. ಕಳೆದ ೩ ವರುಷಗಳಲ್ಲಿ ಪಾಲುದಾರರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.
೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.
೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಖ್ಖಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಒಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬಾಯಿಯಲ್ಲಿರುವ ಮರ್ಕೆಂಟೈಲ್ ಬ್ಯಾಂಕ್ ಒಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ಶಾಖಾ ಕಲಂ:—ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಯವರಿಗೆ ಬರೆದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡುಪಿ.
ತಾ. 13–5–1922.

ನ. ಆನಂದರಾವ್,
ಕಾರ್ಯದರ್ಶಿ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಅಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಕೊಂಕಣಿ ಭಾಷೆಯಲ್ಲಿ
ಸಂಗೀತ

❋ ಚಂದ್ರಹಾಸ ನಾಟಕ ❋

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದದ ಬೈಂಡು ರೂ. 0—4—6. ಸ್ಟಿಫ್ ಬೈಂಡು ರೂ. 0—5—6.

ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದರ ಆಣೆ ಅಥವಾ ಆರರ ಆಣೆಗಳ ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ—
ಬಿ. ಕೆ. ಪ್ರಭು,
ವಿಕ್ಟೋರಿಯಾ ಮುದ್ರಣಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ.

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯ ಕ್ಕೋಸ್ಕರ ಇಟ್ಟದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ತು 1ರ ರೂ. 2—12—0.
ಸ್ಪೆಶ್ಯಲ್ ರಾತ್ತು 1ರ ರೂ. 3—0—0.
2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಾ ಮಿಷನ್ ಬುಕ್ ಎಂಡ್ ಟ್ರ್ಯಾಕ್ಟ್ ಡಿಪೋಜಿಟರಿ,
ಮಂಗಳೂರು.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಭಾದ್ರಪದ ಬ॥ ೧೦ ಶನಿವಾರದಿಂದ ದುಂದುಭಿ ಸಂ॥ ಆಶ್ವೀಜ ಶು॥ ೧ ಶುಕ್ರವಾರದ ವರೆಗಿನ ಪಂಚಾಂಗ
(೧೯೨೨ನೆಯ ಕನ್ಯಾ ನಿರ್ಣಯ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ.	ಅ.
16	ಶನಿ	೧೦	೩೯.೨	ಪುನರ್ವಸೂ	೫೩.೪೨	೨೦	6.22	6.3
17	ರವಿ	೧೧	೩೫.೧೬	ಪುಷ್ಯಾ	೫೧.೧೪	೧	6.22	6.3
18	ಸೋಮ	೧೨	೩೦.೨೯	ಆಶ್ಲೇಷಾ	೪೮.೧೬	೨	6.22	6.30
19	ಕುಜ	೧೩	೨೫.೧೪	ಮಘಾ.	೪೪.೪೬	೩	6.22	6.2
20	ಬುಧ	೧೪	೧೯.೨೮	ಪುಬ್ಬಾ	೪೦.೪೪	೪	6.22	6.28
21	ಗುರು	●	೧೩.೨೦	ಉತ್ತರಾ	೩೬.೪೫	೫	6.22	6.27
22	ಶುಕ್ರ	೧	೭.೩೨	ಹಸ್ತಾ	೩೨.೪೪	೬	6.22	6.27

ಮಂಗಳೂರಿನ ವಾಯುಸ್ಥಿತಿ.
(೧೯೨೨ನೆಯ ಸಪ್ಟಂಬರ)

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆ	ದಿನದ ಮಳೆ	ಜಮಲಾ ಮಳೆ.
7	84—8	73—5	0—36	—
8	83—8	74—4	0—26	—
9	84—3	74—7	0—08	—
10	85—0	75—2	0—02	—
11	85—8	74—2	0—57	—
12	85—8	75—3	0—03	—
13	87—6	75—5	—	126.29

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ	ವರೆಗೆ
		ರೂ. ಆ.	ರೂ. ಆ.
ಮಸ್ಸೂರಿ ಅಕ್ಕಿಮುಡಿ ೧ಕ್ಕೆ	...	8— 4	8—14
ಸುಗ್ಗಿಗೆ	...	7—10	8— 0
ಗುಡ್ಡು,	...	7— 8	8— 0
ರಾಶಿ		7— 2	7— 6
ಅಪ್ಪಲ್ ಬೆಳ್ತಿಗೆ ,,	...	9— 0	9—12
ಗುಡ್ಡು ಬೆಳ್ತಿಗೆ ,,	...	7—10	8— 4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	13— 4	14— 0
ಗೋದಿ ಗೋಣಿ ೧ಕ್ಕೆ	...	22— 0	23— 8
ಹುರುಳಿ ಗೋಣಿ ೧ಕ್ಕೆ	...	13— 8	13—10
ಕಡಲೆ ಗೋಣಿ ೧ಕ್ಕೆ	...	14— 0	15— 0
ತೊಗರಿ ಗೋಣಿ ೧ಕ್ಕೆ	...	15— 0	16— 0
ತೊಗರಿಬೇಳೆ ಗೋಣಿ ೧ಕ್ಕೆ	...	19— 8	22— 8
ಉದ್ದು ಗೋಣಿ ೧ಕ್ಕೆ	...	17— 0	—
ಹೆಸರು ಗೋಣಿ ೧ಕ್ಕೆ	...	14— 8	15— 0
ಊರು ಬೆಲ್ಲ ಖಂಡಿ ೧ಕ್ಕೆ	...	70— 0	72— 8
ಉಪ್ಪು ಗೋಣಿ ೧ಕ್ಕೆ	...	5— 0	5—12
ಕೊಬ್ರಿ ಖಂಡಿ ೧ಕ್ಕೆ	...	85— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	42— 8	43— 0
ಎಳ್ಳಿಂಡಿ ಖಂಡಿ ೧ಕ್ಕೆ	...	50— 0	52— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7— 4	8— 2
ಎಳ್ಳೆಣ್ಣೆ ಮುಡಿ ೧ಕ್ಕೆ	...	8—12	9— 0
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ	...	9— 0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	6— 8	6— 8
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	8— 0	8— 4
ಸಾಸಿವೆ ಮುಡಿ ೧ಕ್ಕೆ	...	8— 4	8— 8
ಕೊತ್ತಂಬರಿ ಮುಡಿ ೧ಕ್ಕೆ	...	5— 0	5— 8
ಕಾಫಿ ಖಂಡಿ ೧ಕ್ಕೆ	...	350— 0	355— 0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	160— 0	170— 0
ಬಿಳಿಗೋಟು New, ಹೊಸ್ತು	...	130— 0	135— 0
ಕಾಳುಮೆಣಸು ಖಂಡಿ ೧ಕ್ಕೆ	...	120— 0	125— 0
ಮೂಲಂಗಿ ಮುಡಿ ೧ಕ್ಕೆ	...	26— 0	28— 0
ಗೇರುಬೀಜ ಮುಡಿ ೧ಕ್ಕೆ	...	2— 2	2— 4
ಹಪ್ಪಳ ಖಂಡಿ ೧ಕ್ಕೆ	...	55— 0	65— 0
ಶುಂಠಿ ಕಡಲೆ ಮುಡಿ ೧ಕ್ಕೆ	...	23— 0	24— 0
ಕಾಂಚಿ ಹಾಸ್ತಗಳು ಮುಡಿ ೧ಕ್ಕೆ	...	36— 0	—
ಬೇರ ಬೆಲ್ಲ ಸೇರು ೧ಕ್ಕೆ	...	24— 0	—
ಹಣ್ಣಾಳ ಮಾವಿನಮಿಡಿ 1ಕ್ಕೆ	...	21— 0	—

ಬೇಕಾದ ಕನ್ನಡ ಪುಸ್ತಕಗಳು.

ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧಿಪತಿಗಳೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಯೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" ದೇವರಲ್ಲಿ" ಎಂಬ ಆಂಗ್ಲ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳುಹಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,

ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

NOTICE.

IN THE SUB COURT OF SOUTH CANARA.

O. S. NO. 55/1922.

BETWEEN

Mahammad Haji — *Plaintiff.*

AND

1. Abdulla
2. Kunbi Kutti Ali
3. Kunhamad Elaya

} DEFENDANTS.

The Plaintiff named above has filed the aforesaid suit on behalf of himself and his entire tarwad known as the "Kotapura Edakavil Tarwad" for a declaration that the patadharam executed by the 1st defendant in favour of defendants 2 and 3 on 18-7-1922 is not valid and binding on the Plaintiff or his Tarwad on the plaint properties etc. and permission has been given to the Plaintiff to sue also on behalf of the Tarwad as per order on I. A. No. 356/22 dated 5-9-1922. The members of the Tarwad are hereby informed of the same and that the suit is posted for first hearing on 27-9-'22.

MANGALORE }
6-9-1922. }

K P. Gopalkrishna Rao,
Vakil for Plaintiff.

ನೋಟೀಸು.

ಸಂ 1922ನೇ ಇಸವಿ ಸಪ್ಟಂಬರ ತಾರೀಕು 11ರಲ್ಲು ಉಳ್ಳಾಲ ಗ್ರಾಮದಲ್ಲಿರುವ ಚಂದಪ್ಪಬೆಳಚಾಡನ ಅಳಿಯ ಕೋಟಿ ಬೆಳಚಾಡ 1, ಈತನ ತಮ್ಮ ಕಣ್ಣಬೆಳ್ಚಾಡ 1, ಈತನ ತಮ್ಮ ಅಪ್ಪಯ್ಯ ಬೆಳಚಾಡ 1, ಕೂಡಾ 3 ಜನರು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ, ನಮಗೆ ತಾ. 9—9—1919ರಲ್ಲು ತುಂಬೆ ಹೆಂಗಸಿನ ಮಗ ಮಂಜಪ್ಪಬೆಳಚಾಡನು ಬರಕೊಟ್ಟ ಮಂಗಳೂರು ರಿಜಿಸ್ಟ್ರಿ ಆಫೀಸ 1ನೇ ಪುಸ್ತಕದ 396ನೇ ಸಂಚಿಕೆಯ 98—99ನೇ ಪುಟಗಳಲ್ಲಿ 3313/1919ನೇ ನಂಬ್ರದ ಅಡವು ದಸ್ತಾವೇಜು ಇತ್ತಲಾಗೆ ಗೈರವಿಲೆಯಾಗಿರುವುದರಿಂದ ಸದರಿ ದಸ್ತಾವೇಜು ಯಾರಿಗಾದರೂ ಸಿಕ್ಕಿದ ಪಕ್ಷದಲ್ಲಿ ಅದನ್ನು ನಮಗೆ ತಂದುಕೊಟ್ಟಲ್ಲಿ ರೂಪಾಯಿ 10ನ್ನು ಇನಾಮವಾಗಿ ಕೊಡುತ್ತೇವೆ.

ಕೋಟಿಬೆಳಚಾಡನ ರುಜು.
III ಗೆರೆ ಕಣ್ಣಬೆಳಚಾಡನ ರುಜು.
ಅಪ್ಪಯ್ಯಬೆಳಚಾಡನ ರುಜು.

ನೋಟೀಸು.

ದಿ ಯುನಿವರ್ಸಲ್ ಸ್ಟೀಮನೇವಿಗೇಶನ್ ಕಂಪೆನಿ ಲಿಮಿಟೆಡ್
ಮುಂಬಯಿ.

ಈ ಕಂಪೆನಿಯು ಅದರ ಪಾಲುಮಾಲಿಕರಿಗೆ ಈ ಕೆಳಗಿನ ಸಂಗತಿಯನ್ನು ತಿಳಿಸಲು ತುಂಬಾ ಆನಂದಪಡುತ್ತದೆ. ಕಂಪೆನಿಯು ಬಹಳ ವೇಗದಿಂದ ಓಡುವ (೪೦೧ ಗ್ರೋಸ್‌ಟನೇಜ್, ಡ್ರಪ್ಟ ೮-೫) ಇಲೆಕ್ಟ್ರಿಕ್ ದೀಪಗಳಿಂದ ಕೂಡಿದ ೮೫೦ ಮಂದಿ ಪ್ರಯಾಣಿಕರನ್ನು ಒಯ್ಯಲು ಅನುಕೂಲವುಳ್ಳ ೧೬.೫ knotsರಷ್ಟು ವೇಗವುಳ್ಳ ಕಳೆದ ೧೯೧೯-೨೦ರಲ್ಲಿ ಹೊಸದಾಗಿ ಕಟ್ಟಲ್ಪಟ್ಟ ಎರಡು ಸ್ಟೀಮರುಗಳನ್ನು ಜರ್ಮನಿಯಲ್ಲಿ ಕೊಂಡುಕೊಂಡಿದೆ.

ಸಾಮಾನನ್ನೂ ಪ್ರಯಾಣಿಕರನ್ನೂ ಒಯ್ಯಲು ಸಹಾಯಕವಾಗುವ ಇನ್ನೊಂದು ಸ್ಟೀಮರನ್ನೂ ಒಂದು ಸ್ಟೀಮ ಲೋಂಚನ್ನೂ ಕೊಂಡುಕೊಳ್ಳುವ ಪ್ರಯತ್ನವು ನಡೆಯುತ್ತಿದೆ. ಮತ್ತು ಈ ಪ್ರಯತ್ನವು ಸಫಲವಾದರೆ ಅವುಗಳನ್ನು ಬೇಗನೇ ಕೊಂಡುಕೊಳ್ಳುವರು. ಈ ವಿಷಯದಲ್ಲಿ ಮುಂಬಯಿ ಹೆಡ್ ಆಫೀಸಿಗೆ ತಂತಿ ಬರುತ್ತಲೇ ಪಾಲುಮಾಲಿಕರಿಗೆ ಆ ಸಂಗತಿ ಸಹ ತಿಳಿಸಲಾಗುವುದು.

ಲಂಡನಿನಿಂದ ಹಡಗುಗಳನ್ನು ಒದಗಿಸಿ ಕೊಡುತ್ತಿದ್ದ ಒಂದು ಕಂಪೆನಿಯವರು ಮಾರಲು ಸಿದ್ಧವಿದ್ದ ಹಡಗುಗಳಿಂದ ಮೂರು ಪ್ರಯಾಣಿಕರ ಸ್ಟೀಮರುಗಳನ್ನೂ ಸಾಮಾನನ್ನು ಒಯ್ಯಲು ಅನುಕೂಲವಿದ್ದ ಒಂದು ಕಾರಗೋಲೈನರನ್ನೂ ಕೊಂಡುಕೊಳ್ಳಲು ಕಳೆದ ಮೇ ತಿಂಗಳಲ್ಲಿ ಕಂಪೆನಿಯ ಇಂಜಿನಿಯರರನ್ನು ಲಂಡನಿಗೆ ಕಳುಹಿಸೋಣಾಗಿತ್ತು. ಆದರೆ ಆ ಹಡಗುಗಳಲ್ಲಿ ಹೆಚ್ಚಾಗಿ ಎಲ್ಲವೂ ಉಪಯೋಗಕ್ಕೆ ಬಾರದವುಗಳೆಂದು ಕಂಡು ಬಂದುದರಿಂದ ಜರ್ಮನಿಯಿಂದ ಒಳ್ಳೇ ಸ್ಟೀಮರುಗಳನ್ನು ಆರಿಸಿ ಪಡಕೊಳ್ಳಬೇಕಾಯಿತು. ಆದುದರಿಂದ ಈಗ ಬಹಳ ವೇಗದಿಂದ ಓಡುವ ಮತ್ತು ಹೆಚ್ಚಾಗಿ ಹೊಸತಾಗಿಯೇ ಇರುವ ಹಾಗು ಪ್ರಯಾಣಿಕರಿಗೆ ಕೂತುಕೊಳ್ಳಲು ವಿಶಾಲವಾಗಿಯೂ ಹೆಚ್ಚಿನ ಸೌಕರ್ಯಗಳುಳ್ಳದ್ದಾಗಿಯೂ ಇರುವ ಎರಡು ಸ್ಟೀಮರುಗಳನ್ನು ಕೊಂಡುಕೊಂಡಿದೆ. ಹಿಂದೂಸ್ಥಾನದಲ್ಲಿ ಚಲಾವಣೆಗೆ ತರುವುದಕ್ಕಾಗಿ ಹೆಚ್ಚಿನ ಸಹಾಯಕವಾಗುವಂತೆ ಈಗ ಈ ಹಡಗುಗಳಲ್ಲಿ ಕೆಲವು ರೂಪಭೇದಗಳನ್ನು ಮಾಡುವುದು ಮತ್ತು ಈ ಹಡಗುಗಳನ್ನು ದ್ರವ ಪದಾರ್ಥಗಳಿಂದಲೂ ಕಲ್ಲಿದ್ದಲ್ಲಿನಿಂದಲೂ ನಡೆಯುವಂತೆ ಮಾಡುವುದು ಈ ಕಾರ್ಯಗಳು ಈಗ ನಡೆಯುವುವು. ಈ ಕೆಲಸವನ್ನೂ ಇತರ ಕೆಲವು ಬದಲಾವಣೆಗಳನ್ನೂ ಮಾಡಿಮುಗಿಸಲು ನಾಲ್ಕಾರು ವಾರಗಳ ಕಾಲವು ಹಿಡಿಯುವುದು.

ಪಶ್ಚಿಮ ಕರಾವಳಿಯಲ್ಲಿ ಚಲಾವಣೆಗೆ ಕೂಡಲೇ ಪ್ರಾರಂಭಿಸಲು ಅನುಕೂಲವಾಗುವಂತೆ ನಮ್ಮ ಇಂಜಿನಿಯರರು ಈ ಸ್ಟೀಮರುಗಳನ್ನು ಬರುವ ಒಕ್ಟೋಬರ ತಿಂಗಳ ಪ್ರಾರಂಭದಲ್ಲಿಯೇ ತರಲಿಕ್ಕಿದ್ದಾರೆಂದು ತಿಳಿಯುತ್ತೇವೆ. ಆದುದರಿಂದ ಹಡಗು ಚಲಾವಣೆಯನ್ನು ಬರುವ ಒಕ್ಟೋಬರದಿಂದ ಮಾಡಬಹುದೆಂದು ಕಂಪೆನಿಯು ನಂಬಿದೆ.

ಪಾಲುಗಳ ಪ್ರಥಮ ಕಂತಿನ ಹಣವನ್ನೂ, ಎಲೋಟ್‌ಮೆಂಟಿನ ಹಣವನ್ನೂ ಈ ವರೆಗೆ ಕೊಡದೆ ಇದ್ದ ಕಂಪೆನಿಯ ಪಾಲುಗಾರರು ಬೇಗನೆ ದಯವಿಟ್ಟು ಪಾವತಿ ಮಾಡಬೇಕಾಗಿದೆ.

ಹಂಪನಕಟ್ಟೆ ಆಫೀಸು. }
ಮಂಗಳೂರು }
ತಾ. 5-9-1922 }

ಪಿ. ಯಂ. ಕಾಮತ್,
ಎಜಂಟ್, ದಿ ಯುನಿವರ್ಸಲ್ ಸ್ಟೀಮ
ನೇವಿಗೇಶನ್ ಕಂಪೆನಿ ಲಿಮಿಟೆಡ್.

ಸರಕಾರಿ ಆನೆಗಳ ಏಲಂ.

1922ನೇ ಇಸವಿ ಸಪ್ಟಂಬರ ತಾರೀಕು 16ರಲ್ಲು ಒಲವಕೋಡ್ ರೈಲ್ವೆ ಸ್ಟೇಶನಿನಲ್ಲಿ ಸುಮಾರು 15 ಆನೆಗಳನ್ನು ಬಹಿರಂಗವಾಗಿ ಏಲಂ ಮಾಡೋಣಾಗುವುವು.

ಹೆಚ್ಚಿನ ಮಾಹಿತಿ ಬಗ್ಗೆ
ಕನ್ಸರ್‌ವೇಟರ್ ಆಫ್ ಫೋರೆಸ್ಟ್, 6ನೇ ಸರ್ಕಲ್ ಉಟಕಮಂಡ್.
ಇವರಿಗೆ ಬರೆಯತಕ್ಕದ್ದು.

Mangalore, }
29-8-1922. }

(*Sd*) F. R. MADAN,
District Forest Officer, South Mangalore

ಪುಸ್ತಕ ವಿಮರ್ಶೆಯು.

'ಹಿಂದೂದೇಶದ ವಿದ್ಯಾಭ್ಯಾಸ (ಪ್ರಾಚೀನ ಮತ್ತು ಅರ್ವಾಚೀನ) ಎಂಬೀ ಪುಸ್ತಕವನ್ನು ಮ| ರಾ| ಕಾವೇರಿಕಾನ್-ವಿ-ಕೃಷ್ಣಭಟ್ಟರು ಕನ್ನಡದಲ್ಲಿ ಬರೆದಿದ್ದಾರೆ. ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳು ಮಾಡಲ್ಪಟ್ಟಿವೆ. ಮೊದಲನೇ ಪ್ರಕರಣದಲ್ಲಿ ಅತ್ಯಂತ ಪ್ರಾಚೀನಕಾಲದ ಹಿಂದೂ ಆರ್ಯರ ವಿದ್ಯಾಭ್ಯಾಸಕ್ರಮವನ್ನು ಕುರಿತು ಬರೆಯಲ್ಪಟ್ಟಿದೆ. ಪ್ರಾಚೀನಶಿಕ್ಷಣಕ್ರಮದಿಂದ ವಿದ್ಯಾರ್ಥಿಗಳ ನೈತಿಕ ವರ್ತನವು ನಿರ್ಮಲವಾಗುತ್ತದೆಂಬ ಮಾತಿನಲ್ಲಿ ಸಂಶಯವಿಲ್ಲ. ನೈತಿಕ ಗುಣಗಳು ಸಹ ಪ್ರಾಚೀನಕ್ರಮದಿಂದ ಉಪಲಬ್ಧವಾಗುವ ಚತುರ್ದಶ ವಿದ್ಯೆಗಳ ಆಧಾರಸ್ಥಂಭಗಳೆಂತ, ಲೇಖಕರು ತಮ್ಮ ಲೇಖದಲ್ಲಿ ವಿಶದಪಡಿಸಲಿಲ್ಲ. ಮತ್ತೇನೆಂದರೆ, ಪ್ರಾಚೀನಕಾಲದ ಋಷಿಗಳ ಅದ್ವಿತೀಯ ಪಾಂಡಿತ್ಯವನ್ನು ಸ್ಥಿರಪಡಿಸುವಾಗ, ಆಂಗ್ಲ ಭಾಷೆಯಲ್ಲಿ ಬರೆದಿರುವ ಒಂದು ಪುಸ್ತಕದಿಂದ ಕೆಲವು ವಾಕ್ಯಗಳನ್ನು ಕೊಟ್ಟಿರುತ್ತಾರೆ. ಆದರೆ ಅದರ ಕನ್ನಡ ಅರ್ಥವು ಕೊಡದೇ ಇರುವುದರಿಂದ ಎಂದರೆ ಕನ್ನಡ ವಾಚಕರಿಗೆ ಅದರ ಉಪಯೋಗವಾಗದೇ ಇರುವುದರಿಂದ-,ಅದನ್ನು ಇಲ್ಲಿ ಕೊಡುವಂಥ ಅವರ ಉದ್ದೇಶವು ನಿರರ್ಥಕವಾಗಿದೆ. ಇದಲ್ಲದೆ ಕೆಲವು ಕಡೆಯಲ್ಲಿ ಆಧಾರಕ್ಕಾಗಿ ಕೊಟ್ಟಂಥ 'ಸಂಸ್ಕೃತ' ವಾಕ್ಯಗಳು, ಸಂದರ್ಭಾನುರೂಪಗಳಾಗಿದ್ದರೂ, ಸರಿಯಾಗಿ ಕನ್ನಡದಲ್ಲಿ ಭಾಷಾಂತರಿಸಲ್ಪಡಲಿಲ್ಲ. ಈ ಎಲ್ಲ ತಪ್ಪುಗಳು ದ್ವಿತೀಯಾವೃತ್ತಿಯಲ್ಲಿ ತಿದ್ದುವುದು ಯೋಗ್ಯವಿದೆ. ಎರಡನೇ ಪ್ರಕರಣದಲ್ಲಿ, ಬೌದ್ಧಕಾಲದಲ್ಲಿ ಪ್ರಸಿದ್ಧವಾದ ನಾಲಂದಾ ವಿಶ್ವವಿದ್ಯಾಲಯದ ಇತಿಹಾಸವನ್ನು ಕೊಟ್ಟಿದ್ದಾರೆ. ಮೂರನೇ ಪ್ರಕರಣದಲ್ಲಿ, ಮುಸಲ್ಮಾನರು ಹಿಂದೂಸ್ಥಾನದಲ್ಲಿ ಬಾಧಕಪರರಾದ ಮೇಲೆ ಗುರುಕುಲಗಳು ನಷ್ಟಪ್ರಾಯವಾಗುವುದಕ್ಕೆ ಮತ್ತು ಪ್ರಾಚೀನ ವಿದ್ಯಾಭ್ಯಾಸವು ಅಳಿಗುಂದುವುದಕ್ಕೆ ಕಾರಣಗಳನ್ನು ಕೊಟ್ಟಿರುತ್ತಾರೆ. ನಾಲ್ಕನೇ ಪ್ರಕರಣದಲ್ಲಿ, ಅರ್ವಾಚೀನಇಂಗ್ಲೀಷವಿದ್ಯಾಭ್ಯಾಸ ಕ್ರಮದಿಂದ ಉಂಟಾದ ಕೆಲವು ದೋಷಗಳನ್ನು ತೋರಿಸಿದ್ದಾರೆ.

ಇದರಿಂದ, ಸ್ವಾವಲಂಬನ, ವಿನಯ ಇತ್ಯಾದಿ ಉತ್ತಮ ನೈತಿಕಗುಣಗಳನ್ನು ಕಲಿಸುವಂಥ ಪ್ರಾಚೀನ ಶಿಕ್ಷಣಕ್ರಮವು, ಬೌದ್ಧರ ಕಾಲದಲ್ಲಿ ಕಡಿಮೆಯಾಗುತ್ತ ಬಂದು, ಮುಸಲ್ಮಾನರ ಕಾಲದಲ್ಲಿ ಬರೀ ನಷ್ಟಪ್ರಾಯವಾಗಿ, ಕಟ್ಟಕಡೆಗೆ, ಈಗಿನ ಕಾಲದಲ್ಲಿ ಅದು ನಾಮಶೇಷವಷ್ಟೇ ಅಲ್ಲ, ಸದೋಷವೆಂದೂ ಅವ್ಯವಹಾರ್ಯವೆಂದೂ ತಿಳಿದು ತಾಗಿ, ಪರಾವಲಂಬನೆಯನ್ನು ಕಲಿಸುವ ಶಿಕ್ಷಣವು ಈಗ ಬಂದಿದೆ ಎಂದೂ ಈ ಪುಸ್ತಕದಲ್ಲಿ ಕಂಡುಬರುತ್ತದೆ.

ಆರ್ಯರ ವರ್ಣಾಶ್ರಮ ಧರ್ಮ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

ಹೀಗೆ ಸುಜ್ಞಾನಿಗಳೂ, ದೂರದರ್ಶಿಗಳೂ, ವಿದ್ವಾಂಸರೂ ಆದ ನಮ್ಮ ಪೂರ್ವಜರು ನಿಯಮಿಸಿರುವ ಸ್ಪೃಶ್ಯಾಸ್ಪೃಶ್ಯತೆಗಳ ನಿರ್ಬಂಧವನ್ನು ತೊಲಗಿಸಲು ಪ್ರಯತ್ನಿಸಿದರೆ ಸಮಾಜದ ಅಧಃಪತನವನ್ನು ಬಯಸಿದಂತೆಯೂ ತನ್ಮೂಲಕ ರಾಷ್ಟ್ರಾಭಿವೃದ್ಧಿಯನ್ನು ಕೆಡಿಸಿದಂತೆಯೂ ಆಗುವುದು.

ಹಿಂದೂ ಮತಾಚರಣೆಗಳನ್ನೂ, ದೇವತೆಗಳನ್ನೂ, ಹೀಯಾಳಿಸುತ್ತಿರುವ ಆ ಮುಸಲ್ಮಾನರನ್ನು ಕ್ರೈಸ್ತರನ್ನೂ ಸ್ಪರ್ಶಿಸಲು ಮುಂದರಿಯುವವರು ಹಿಂದೂಮತಾವಲಂಬಿಗಳೂ, ಹಿಂದೂದೇವತಾರಾಧಕರೂ ಆಗಿರುವವರನ್ನು ಅಸ್ಪೃಶ್ಯರನ್ನಾಗಿಯೂ ಮಾಡಿ ದೂರವಿರಿಸುವುದು ತಪ್ಪೆಂದೂ ಅದೇ ಅಸ್ಪೃಶ್ಯರು ಈ ಮುಸಲ್ಮಾನ ಕ್ರೈಸ್ತ ಮತದೊಳಗೆ ಸೇರಲು ಅವರನ್ನು ಸ್ಪರ್ಶಿಸಲು ಯಾರೂ ಹೇಸರೆಂದೂ ಅಂದ ಮೇಲೆ ಹಾಗೆ ಸೇರುವ ಮುಂಚೆಯೇ ಅವರನ್ನು ಸ್ಪೃಶ್ಯರನ್ನಾಗಿ ಮಾಡಬೇಕೆಂದೂ ಮುಂತಾಗಿ ಸುಧಾರಕರು ಈಗ ಬೋಧಿಸುತ್ತಾರೆ. ಮುಸಲ್ಮಾನರನ್ನೂ ಕ್ರೈಸ್ತರನ್ನೂ ಸ್ಪೃಶ್ಯರನ್ನಾಗಿ ಮಾಡಲು ಹಲವು ಕಾರಣಗಳಿರುತ್ತವೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ಸೂಚಿಸುತ್ತೇನೆ.

ಪೂರ್ವದಲ್ಲಿ ಮುಸಲ್ಮಾನರೂ ಕ್ರೈಸ್ತರೂ ಇಲ್ಲಿಗೆ ಬಂದು ಈ ದೇಶದ ಅಲ್ಲಲ್ಲಿನ ಕೆಲವು ಭಾಗಗಳನ್ನು ಜಯಿಸಿ ತಮ್ಮ ಪ್ರಾಬಲ್ಯವನ್ನು ಮೆರೆಯಿಸುತ್ತಿರಲು ನಮ್ಮಲ್ಲಿನ ಅನೇಕ ಮಂದಿಯನ್ನು ಬಲಾತ್ಕಾರದಿಂದಲೂ, ಬೇರೆ ವಿಧವಾಗಿಯೂ ಜಾತಿಭ್ರಷ್ಟರನ್ನಾಗಿ ಮಾಡಿ ತಮ್ಮ ಮತಕ್ಕೆ ಸೇರಿಸಿಕೊಂಡರು. ಅಥವಾ ನಾನು ಈ ಮುಂಚೆ ಸೂಚಿಸಿದಂತೆ ನಮ್ಮವರು ಆ ಮುಸಲ್ಮಾನ ಕ್ರೈಸ್ತ ಅಳ್ವರ ಶ್ರೇಷ್ಠ ಪ್ರಾಬಲ್ಯವನ್ನು ನೋಡಿ ಅವರೊಳಗೆ ಸೇರಲೂ ಇದ್ದಿರಬಹುದು. ಹೀಗೆ ಜಾತಿ ವಿಚ್ಛಿನ್ನರಾದವರೊಳಗೆ ನಮ್ಮ ಪುತ್ರರೂ ಮಿತ್ರರೂ ಆಪ್ತರೂ ಬಂಧುಗಳೂ ಬಾಂಧವರೂ ಇದ್ದಿರಲಿಕ್ಕೆ ಸಾಕು. ಅಂಥವರನ್ನು ಸಮಾಜಸಂಬಂಧಗಳಲ್ಲಿ ತ್ಯಜಿಸಿದ್ದರೂ ಒಂದೊಂದು ವೇಳೆ ಸ್ಪರ್ಶಿಸದಿರಲು ಕೂಡಲಿಲ್ಲ. ಈ ರೀತಿಯಾಗಿ ಅವರ ಅಸ್ಪೃಶ್ಯತೆಯು ಸ್ವಲ್ಪ ಮಟ್ಟಿಗೆ ತೊಲಗಿತು. ಕೆಲವು ಸಂದರ್ಭಗಳಲ್ಲಿ ಅವರ ಬಲಾತ್ಕಾರದಿಂದಲೂ ಅವರನ್ನು ಸ್ಪರ್ಶಿಸಬೇಕಾಯಿತು. ಈ ರೀತಿ ಸ್ಪೃಶ್ಯತೆಯು ಉಂಟಾದರೂ ನಿರಾತಂಕವಾದ ಸ್ಪೃಶ್ಯತೆಯುಂಟಾಗಲಿಲ್ಲ. ಏಕೆಂದರೆ ಆ ಮುಸಲ್ಮಾನರೂ, ಕ್ರೈಸ್ತರೂ ಎಷ್ಟು ಶುದ್ಧ ಸ್ವರೂಪ, ವಸ್ತ್ರಾಲಂಕಾರಗಳಿಂದ ಶೋಭಿಸಿದರೂ ಸ್ಪೃಶ್ಯತೆಯ ವಿಷಯ ಆತಂಕವೂ, ಅಂಜಿಕೆಯೂ ಇಲ್ಲದಂತೆ ನಾವು ನಮ್ಮಲ್ಲಿ ಸಂಪರ್ಕವಾಗುವಷ್ಟು ಅವರಲ್ಲಿ ಸಂಪರ್ಕವಾಗಲು ಹಿಂಜರಿಯುತ್ತೇವೆಂದು ಪ್ರತ್ಯೇಕಹೇಳಬೇಕಾಗಿಲ್ಲ. ಅನುಭವಸಿದ್ಧವೇ ಸರಿ. ಮಾತಿನಿಂದಲೂ ಲೇಖನದಿಂದಲೂ ಅಸ್ಪೃಶ್ಯತೆಯ ನಿವಾರಣೆಯನ್ನು ಬೋಧಿಸಬಹುದು. ಪರಂತು ಕಾರ್ಯತಃ ನಡೆಯಲು ಮನವು ಒಡಂಬಡದು. ಇಷ್ಟು ಮಾತ್ರವಲ್ಲ. ಆ ಪಂಚಮಜನಗಳಲ್ಲೂ ಅನ್ಯ ಮತಾವಲಂಬಿಯೊಬ್ಬನು ಸೇರಿದನೆಂದರೆ ಈತನನ್ನು ಅವರು ಭೋಜನ ವಿವಾಹಾದಿ ಸಂಬಂಧವಾದ ಸಂಪರ್ಕಗಳ ವಿಷಯ ಹೇಗೆ ವರ್ತಿಸುತ್ತಾರೆಂದು ಈ ಅಸ್ಪೃಶ್ಯತಾನಿವಾರಣ ಬೋಧಕರು ಪ್ರಥಮತಃ ತಿಳಕೊಳ್ಳಲಿ.

ಇದರಿಂದ ಇಲ್ಲಿ ಮತ್ತೊಂದು ಪ್ರಶ್ನೆಯು ಹುಟ್ಟಬಹುದು. ಏನೆಂದರೆ, ಈಗ ಅಸ್ಪೃಶ್ಯರೆಂದು ನಾವು ಪ್ರತ್ಯೇಕಿಸಿಟ್ಟವರೂ ಆ ಮುಸಲ್ಮಾನ ಕ್ರೈಸ್ತರಂತೆ ಪ್ರಬಲರಾಗಿ ರಾಜ್ಯಾಧಿಕಾರಿಗಳಾಗಿ ಬಲಾತ್ಕಾರವನ್ನು ಉಪಯೋಗಿಸಲು ಅವರು ಸ್ಪೃಶ್ಯರೇ ಆಗುವರಲ್ಲವೇ? ಇದಕ್ಕೆ ಉತ್ತರವಾಗಿ 'ಇಲ್ಲ' ಎಂದು ಹೇಳಬೇಕು. ಇವರೇನೂ ನಮಗೆ ಅಪರಿಚಿತರಲ್ಲ. ಇಂಥವರಲ್ಲಿ ಕೆಲವರು ರಾಜ್ಯಾಧಿಕಾರವನ್ನು ನೋಡಿದ್ದರು. ಆಗ ಬ್ರಾಹ್ಮಣರನ್ನು ದ್ವೇಷಿಸಿದ್ದರು. ಬಲಾತ್ಕಾರವನ್ನು ಉಪಯೋಗಿಸಿದ್ದರು. ಇವರೊಡನೆ ಕಲೆತು ಇರುವುದಕ್ಕಿಂತ ಓಡಿಹೋಗುವುದೇ ಲೇಸೆಂದು ಬ್ರಾಹ್ಮಣರು ದೇಶ, ಮನೆಮಾರುಗಳನ್ನು ಬಿಟ್ಟು ಓಡಿಹೋದರಲ್ಲದೆ ಆಗಲೂ ಈ ಅಸ್ಪೃಶ್ಯರೊಡನೆ ಕಲೆತು, ಸ್ಪರ್ಶಿಸಿರಲು ಮನಸ್ಸು ಮಾಡಲಿಲ್ಲ. ಇದರಿಂದ ಸಮಾಜವಾಗಲಿ, ಧರ್ಮವಾಗಲಿ, ರಾಜ್ಯವೇ ಆಗಲಿ ಅಧಃಪತನಕ್ಕೆ ಗುರಿಯಾಗಲಿಲ್ಲ. ಪರಂತು ಈಗ ಮಾತ್ರ ನಮಗಿರುವ ಈ ಪರಾಧೀನತೆಯನ್ನು ನಿವಾರಿಸಲೋಸುಗ ಅಸ್ಪೃಶ್ಯತೆಯನ್ನು ತೊಲಗಿಸಿ ಐಕ್ಯರಾಗಬೇಕೆಂದು ಈ ಸುಧಾರಕರು ಹೇಳುತ್ತಾರೆ.

"ವೇದಗಳಲ್ಲಿ ಉಪಯೋಗಿಸಿದ ಪಂಚಜನ ಮೊದಲಾದ ಪದಗಳನ್ನು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಉದ್ಯೋಗಿಗಳು ಮತ್ತು ಸೇವಕರು ಎಂಬುದರ ಬದಲಾಗಿ ಉಪಯೋಗಿಸಿದ್ದಾರೆ" ಎಂದು ಹೇಳುತ್ತಾರೆ. ಇವರ ಮಾತಿನ ಪ್ರಕಾರ ಸೇವಾವೃತ್ತಿಯನ್ನು ನಿಯಮಿಸಲ್ಪಟ್ಟವರು (ವೇದಸ್ಮೃತಿಗಳ ಪ್ರಕಾರ) ಇದಿಲ್ಲವೆಂದಾದರು. ಆದರೆ ಮನುಸ್ಮೃತಿಯಲ್ಲಿ; "ಏಕಮೇವತು ಶೂದ್ರಸ್ಯ ಪ್ರಭುಃ ಕರ್ಮ ಸಮಾದಿಶತ್। ಏತೇಷಾಮೇವ ವರ್ಣಾನಾಂ ಶುಶ್ರೂಷಾಮನಸೂಯಯಾ॥" ಎಂದಿರುತ್ತದೆ. ಎಂದರೆ ಪುರಾತನದಿಂದಲೂ, ಸೇವಾವೃತ್ತಿ ನಿಯಮಿಸಲ್ಪಟ್ಟವರದೊಂದು ಸಮಾಜ ಅಥವಾ ವರ್ಣವಿತ್ತೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು "ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಂ", ಎಂದು ಅರ್ಜುನನಿಗೆ ಹೇಳಿರುವಂತೆ ತೋರುತ್ತದೆ.

"ಶ್ರೀ ರಾಮನಿಗೆ ಗುಹನು ಮಾಡಿದ ಆತಿಥ್ಯದಿಂದ ಅವನ (ಗುಹನು ನಿಷೇಧ ಅಲ್ಲ, ನಿಷಾಧರೆಂಬ ಅಸ್ಪೃಶ್ಯರಜಾತಿಗೆ ಸೇರಿದವನಂತೆ) ಕುಲದವರನ್ನು ಆಗಿನ ಕಾಲದಲ್ಲಿ ಈಗಿನಂತೆ ತಿರಸ್ಕರಿಸಿ ಅಡಿಗೊತ್ತಿಲ್ಲವೆಂದು ಸ್ಪಷ್ಟವಾಗುತ್ತದೆಂದು" ಬರೆಯುತ್ತಾರೆ. ಆದರೆ ಆ ಕಾಲದಲ್ಲಿ ಚಾತುರ್ವರ್ಣದವರೂ ತಮ್ಮ ಸ್ವಕರ್ಮದಲ್ಲಿಯೇ ನಿರತರಾಗಿದ್ದರು. ವಿರುದ್ಧಕರ್ಮವನ್ನಾಚರಿಸುವವರನ್ನು ಅರಸನು ದಂಡಿಸುತ್ತಿದ್ದನೆಂದೂ ಅದೇ ರಾಮಾಯಣದಲ್ಲಿ ತೋರುತ್ತದೆ. ಎಲ್ಲರೂ ಸ್ವಕರ್ಮದಲ್ಲಿ ನಿರತರಾಗಿದ್ದು ವಿಕರ್ಮಸ್ಥನೆಂಬವನೊಬ್ಬನೂ ಇದ್ದಿಲ್ಲ. ಹೀಗಿರುವುದರಿಂದ ಯಾವುದೊಂದು ಸಮಾಜವೂ ಇನ್ನೊಂದನ್ನು ಅಡಿಗೊತ್ತುವುದೆಂಬ ಮಾತು ಆಗಿನ ಕಾಲದಲ್ಲಿ ಉಂಟಾಗುವುದು ಹೇಗೆ?

ಇದಲ್ಲದೆ ನಾಮಕರಣಗಳ ವಿಷಯವಾಗಿಯೂ "ಮಂಗಲ್ಯಂ ಬ್ರಾಹ್ಮಣಸ್ಯ ಸ್ಯಾತ್ ಕ್ಷತ್ರಿಯಸ್ಯ ಬಲಾನ್ವಿತಂ। ವೈಶ್ಯಸ್ಯ ಧನಸಂಯುಕ್ತಂ ಶೂದ್ರಸ್ಯತು ಜುಗುಪ್ಸಿತಮ್॥ ಶರ್ಮವದ್ ಬ್ರಾಹ್ಮಣಸ್ಯ ಸ್ಯಾದ್ರಾಜ್ಞೋ ರಕ್ಷಾಸಮನ್ವಿತಮ್। ವೈಶ್ಯಸ್ಯ ಪುಷ್ಟಿಸಂಯುಕ್ತಂ ಶೂದ್ರಸ್ಯ ಪ್ರೇಷ್ಯ ಸಂಯುತಮ್॥" ಹೇಳಿರುವುದರಿಂದ ಬ್ರಾಹ್ಮಣ 'ಸೇವಕರೆಂಬ ಶಬ್ದವನ್ನು ಉಪಯೋಗಿಸುತ್ತಾರೆಂದು ಹೇಳುವುದು ಹೇಗೆ?

ನಮ್ಮ ಭರತಖಂಡದಲ್ಲಿ ವಿವಿಧ ಮತಾವಲಂಬಿಗಳಾದ ಅನೇಕದೇಶಗಳ ಜನರು ಪ್ರವೇಶಿಸಿ, ನಮ್ಮನ್ನು ಜಯಿಸಿ ಅವರ ಸ್ವಾಧೀನವಾಗಿರಿಸಿ, ಬಲಾತ್ಕಾರದಿಂದಲೂ, ಇನ್ನು ಇತರ ತರದ ಪ್ರೋತ್ಸಾಹಗಳಿಂದ ತಮ್ಮ ಮತಾಚರಣೆಗಳನ್ನು ನಮ್ಮಲ್ಲಿ ಸೇರಿಸಿ ಪೂರ್ವಜರು ರಚಿಸಿಟ್ಟ ವೇದಶಾಸ್ತ್ರಗಳಿಗೆ ತಮ್ಮ ಮನಸೋಇಚ್ಛೆಯಾಗಿ ಅರ್ಥವನ್ನು ಕಲ್ಪಿಸಿ ನಮಗೆ ಹೇಳಕೊಟ್ಟೊಡನೆ ನಾವು ಅದೇ ವೇದಶಾಸ್ತ್ರಗಳನ್ನು ಇದ್ದಂತೆ ಕಲಿಯಲೂ ತಿಳಕೊಳ್ಳಲೂ ಆಗದೆಯೂ ಒಲ್ಲದೆಯೂ ಅವರ ಬೋಧನೆಗೆ ಮರುಳಾಗಿ ಅದನ್ನೇ ಹಿಡಿದು ನಂಬಿ ತನ್ನಂತೆಯೇ ಪರರನ್ನು ಮಾಡುವ ಎಂಬ ಮನಸ್ಸಿನಿಂದ ಮುಂದೆ ಬಂದು ಸುಧಾರಕರೆಂಬದಾಗಿ ಮೆರೆಯುತ್ತಾರೆ. ಆದರೆ ಈ ಸುಧಾರಕರು ಪ್ರಯತ್ನಪಟ್ಟು ಅದೇ ವೇದಶಾಸ್ತ್ರಗಳಿಗೆ ಅನ್ಯರು ಮಾಡಿಟ್ಟ ಅರ್ಥವನ್ನು ಮೂಲೆಗೊತ್ತಿ, ಮರೆತು, ನಿಷ್ಪಕ್ಷಪಾತವೃತ್ತಿಯಿಂದ ತಾವೇ ಅರ್ಥವನ್ನು ಮಾಡಿಕೊಳ್ಳಲಿ. ಅದೇ ಲೋಕವನ್ನು ಹಿರಿಯರು ಏನನ್ನುತ್ತಾರೆಂದು ಅವರು ಸ್ವತಃ ಸಂಗ್ರಹಿಸಿಯೂ, ವಿಮರ್ಶಿಸಿಯೂ, ಬರೆದಿಟ್ಟಿದ್ದನ್ನು ಅವರೂ ನೋಡಲಿ. ಅನಂತರ ಅಂತಿಂಥ ಅಂಗಗಳಿರಲು ನಾವು ನಮ್ಮ ವೈರಿಗಳನ್ನು ಸುಲಭವಾಗಿ ಗೆಲ್ಲಲಾರೆವೆಂದೂ ಆ ಅಂಗಗಳನ್ನು ಕಳಚಿಬಿಟ್ಟರೆ ಸುಖವಾಗಿರಬಹುದೆಂದೂ ಬೋಧಿಸಲಿ. ರಾಮ, ಕೃಷ್ಣ, ಪರಾಶರ, ಮುಂತಾದವರ ವಿಷಯವಾಗಿ ಮುಂದೆ ನೋಡುವ.

ನಡೆಯಲಿ,
U. K. N.

ವಿದೇಶ ವರ್ತಮಾನ

ಲಂಡನ್—ಇಂಗ್ಲೆಂಡ ಇಂಡಿಯಾ ಆಸ್ಟ್ರೇಲಿಯಾ ಮೊದಲಾದ ಕಡೆಗಳಲ್ಲಿ ವಿಮಾನ ಯಂತ್ರಗಳ ಮೂಲಕ ಟಪ್ಪಾಲನ್ನೂ ಪ್ರಯಾಣಿಕರನ್ನೂ ಕೊಂಡೊಯ್ಯಲು ಏರ್ಪಾಡು ನಡೆಯುತ್ತಿದೆ. ಆರುಕೋಟಿ ರೂಪಾಯಿಯ ಮೂಲಧನದ ಇಂಗ್ಲೆಂಡಿನ ಒಂದು ಕಂಪೆನಿಯು ಈ ಕಾರ್ಯವನ್ನು ಮಾಡುವುದು. ಈ ಕಂಪೆನಿಯವರು ತಯಾರಿಸುವ ಪ್ರತಿಯೊಂದು ವಿಮಾನದಲ್ಲಿ ೨೦ ಪ್ರಯಾಣಿಕರನ್ನೂ ೧೦ ಟನ್ ಭಾರದ ಅಂಚೆ ವಸ್ತುಗಳನ್ನೂ ಸಾಗಿಸಲು ಅನುಕೂಲತೆಗಳನ್ನು ಮಾಡಲಾಗುವುದು. ಈ ವಿಮಾನಗಳಲ್ಲಿ ಪ್ರಯಾಣಮಾಡಿ ಇಂಗ್ಲೆಂಡಿನಿಂದ ಹಿಂದೂಸ್ಥಾನಕ್ಕೆ ಬರತಕ್ಕ Iನೇ ತರಗತಿಯ ಪ್ರಯಾಣಿಕರು ೬೨ ಪೌಂಡು ಕೊಡಬೇಕಾಗುವುದು. IIನೇ ತರಗತಿಯ ಪ್ರಯಾಣಿಕರು ೪೫ ಪೌಂಡು ಕೊಡಬೇಕಾಗುವುದು. ಇಂಗ್ಲೆಂಡಿನಿಂದ ಹೊರಟ ೬೨ ತಾಸುಗಳಲ್ಲಿ ಹಿಂದೂಸ್ಥಾನಕ್ಕೆ ತಲ್ಪಬಹುದು. ಈ ವಿಮಾನಗಳ ಮೂಲಕ ಕಳುಹಿಸುವ ಟಪ್ಪಾಲ ಹಾಗು ಭಾಂಗಿಗಳಿಗೆ ಈಗಿನ ದರಕ್ಕಿಂತ ಇಮ್ಮಡಿ ದರ ಕೊಡಬೇಕಾಗುವುದು.

ತುರ್ಕರಿಗೆ ಉಂಟಾದ ಮಹಾತ್ತಾದ ವಿಜಯ:—ಮುಸ್ತಾಫಾ ಕೇಮಾಲ ಪಾಶಾರವರ ಕೈಕೆಳಗೆ ತುರ್ಕರು ಪುನಃ ಗ್ರೀಕರೊಡನೆ ಯುದ್ಧವನ್ನು ಪ್ರಾರಂಭಿಸಿ ತುರ್ಕರನ್ನು ಅಪೂರ್ವ ರೀತಿಯಲ್ಲಿ ಓಡಿಸಿರುವರು. ಏಶಿಯಾಮಾಯ್ನರದೊಳಗಿನ ಕಾರಾಹಿಸ್ಸಾರಾ ಎಂಬ ಮಹತ್ವದ ರೈಲ್ವೆ ಜಂಕ್ಷನನ್ನು ತುರ್ಕರು ತಮ್ಮ ಕೈವಶಮಾಡಿಕೊಂಡು ಮುಂದರಿಯುತ್ತ ಈಗ ಸ್ಮಿರ್ನಾವನ್ನು ಹಿಡಿದಿರುವರೆಂಬ ವರ್ತಮಾನವು ಬಂದಿದೆ. ತುರ್ಕರ ವಿಜಯದ ಸಂತೋಷಾರ್ಥವಾಗಿ ಈಗ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿ ಜಗನ್ನಿಯಾಮಕನ ಉಪಕಾರವನ್ನು ಸ್ಮರಿಸಿ ಮುಸ್ತಾಫಾ ಕೇಮಲ್ ಪಾಶಾರವರಿಗೆ ಇನ್ನೂ ಹೆಚ್ಚಿನ ವಿಜಯ ಪ್ರಾಪ್ತವಾಗಲೆಂದು ಪ್ರಾರ್ಥನೆಗಳು ನಡೆಯುತ್ತಿವೆ. ಕೇಮಾಲ್ ಪಾಶಾರವರ ಜಯಕ್ಕೆ ಸಹಾಯಕರಾದ ಹಿಂದೂ ಮುಸಲ್ಮಾನರನ್ನು ವಂದಿಸಿ ಮತ್ತು ಮುಂದಕ್ಕೂ ಹಿಂದೂ ಮುಸಲ್ಮಾನರು ಒಗ್ಗಟ್ಟಾಗಿಯೇ ಇದ್ದು ತಮ್ಮ ಸ್ವಾತಂತ್ರ್ಯವನ್ನು ಹೊಂದುವುದರಲ್ಲಿ ಸಹಾಯಕರಾಗಲೆಂದು ಪ್ರಾರ್ಥಿಸಿ ಡೆಜಲ್‌ಉದ್ದಿನ್ ಆರಿಫ್ ಬೇಯವರು ರೋಮಿನಿಂದ ಮುಂಬಯಿಯಲ್ಲಿರುವ ಸೆಂಟ್ರಲ್ ಖಿಲಾಫತ್ ಕಮಿಟಿಯ ಸೆಕ್ರೆಟರಿಗೆ ತಂತಿಯನ್ನು ಬಿಟ್ಟಿದ್ದಾರೆ. ಈಗ ಸಂಧಾನವನ್ನು ಮಾಡುವುದಾದರೆ, ಗ್ರೀಕರು ಏಶಿಯಾಮಾಯ್ನರನ್ನೂ ಥ್ರೇಸನ್ನೂ ಬಿಟ್ಟುಹೋಗತಕ್ಕದ್ದು ಮತ್ತು ಯುದ್ಧದಿಂದ ಉಂಟಾದ ನಷ್ಟಪರಿಹಾರವನ್ನು ಅವರು ಸಹಿಸಿಕೊಳ್ಳತಕ್ಕದ್ದು ಎಂದು ಕೆಮಲಿಸ್ಟರ ಅಭಿಪ್ರಾಯವಿರಬೇಕೆಂದು ಅಂಗೋರಾದಿಂದ ಬಂದ ತಂತಿಯು ತಿಳಿಸುತ್ತದೆ. ಸ್ಮಿರ್ನಾದಲ್ಲಿರುವ ಜನರು ಬಹಳ ದೀನಸ್ಥಿತಿಯಲ್ಲಿರುವರು. ಗ್ರೀಕರ ಸೇನಾಧಿಪತಿಗಳು ಸೆರೆಬಿದ್ದಿದ್ದಾರಂತೆ. ಅಲ್ಲದೆ ಗ್ರೀಕರ ೪೦೦ ಅಧಿಕಾರಿಗಳೂ ೧೦,೦೦೦ ಸೈನಿಕರೂ, ೬೦೦ ಫಿರಂಗಿಗಳೂ ೧೧ ವಿಮಾನಗಳೂ ತುರ್ಕರ ವಶವಾದವು.

ಹುಡುಗಿಯು ಹೆತ್ತು ವರ್ಷದಲ್ಲಿ ಹಡದದ್ದು:—ಅಮೇರಿಕದಲ್ಲಿ ಒಂದು ಹತ್ತು ವರ್ಷದ ಹುಡುಗಿಯು ಹಡೆದಿದ್ದು ಕೂಸು ಏಳು ಪೌಂಡು ಇದೆ. ಈ ತಾಯಿ ಮಕ್ಕಳು ಸುರಕ್ಷಿತ ಇದ್ದಾರೆ. ಇದರಲ್ಲಿ ಆಶ್ಚರ್ಯದ ಸಂಗತಿ ಏನೆಂದರೆ ತಾಯಿಗೆ ಕೂಸಿನ ಉತ್ಪತ್ತಿಯ ಕಾರಣವು ಹೇಗಾಯಿತೆಂಬದೆ ಗೊತ್ತಿಲ್ಲ. ಈ ಬಗ್ಗೆ ಅಮೇರಿಕನ್ ಡಾಕ್ಟರರು ಆಶ್ಚರ್ಯಚಕಿತರಾಗಿರುವರು.

ಒಳದೇಶ ವರ್ತಮಾನ.

ದಂಗೆಯ ಕಾಲದಲ್ಲಿ ಮತಾಂತರಗೊಳಿಸಲ್ಪಟ್ಟವರಿಗೆ ಪ್ರಾಯಶ್ಚಿತ್ತ:—

ಮಲೆಯಾಳದಲ್ಲಿ ನಡೆದ ವಿಪ್ಲವದಲ್ಲಿ ಜಾತಿಭ್ರಷ್ಟರಾಗಿ ಹೋಗಿರುವ ಹಿಂದುಗಳನ್ನು ಪ್ರಾಯಶ್ಚಿತ್ತದ ಮೂಲಕ ಮರಳಿ ಸ್ವಮತಕ್ಕೆ ಸೇರಿಸಿಕೊಳ್ಳುವ ವಿಷಯವನ್ನು ಪರ್ಯಾಲೋಚಿಸುವುದಕ್ಕಾಗಿ ಕಳೆದ ತಿಂಗಳು ತಾ. ೨೦ರಲ್ಲಿ ಕಲ್ಲಿಕೋಟೆಯ ಜಾಮೊರಿನ್‌ರವರ ಏರ್ಪಾಟಿನ ಪ್ರಕಾರ ಒಂದು ವೈದಿಕ ಲೌಕಿಕ ಜನರ ಸಭೆಯು ಸೇರಿದ್ದಿತು. ಜಾಮೊರಿನ್ ರಾಜರೂ ಜಿಲ್ಲಾ ಕಲೆಕ್ಟರರೂ ಇತರ ಅಧಿಕಾರಿಗಳೂ ಸಭೆಗೆ ಬಂದಿದ್ದರು. ಚರ್ಚೆ ನಡೆದುದರಲ್ಲಿ ಬ್ರಾಹ್ಮಣರ ಹೊರತು ಇತರ ಹಿಂದುಗಳನ್ನೆಲ್ಲಾ ಪ್ರಾಯಶ್ಚಿತ್ತದ ಮೂಲಕ ಸೇರಿಸಿಕೊಳ್ಳಬಹುದೆಂದೂ, ಜಾತಿಭ್ರಷ್ಟರಾಗಿರುವ ಬ್ರಾಹ್ಮಣರ ವಿಷಯವನ್ನು ಮಾತ್ರ ಇನ್ನೂ ಸ್ವಲ್ಪ ಪರ್ಯಾಲೋಚಿಸಬೇಕೆಂದೂ, ಕೊಚ್ಚಿ ತಿರುವಾಂಕೂರು ಸಂಸ್ಥಾನಗಳವರೂ ಮತ್ತು ಬ್ರಿಟಿಷ್ ಮಲಬಾರ ಪ್ರಜೆಗಳೂ ಇವರ ವಿಷಯದಲ್ಲಿ ನಿರ್ಣಯಮಾಡಬೇಕೆಂದೂ ತೀರ್ಮಾನಿಸಲ್ಪಟ್ಟಿತು. ಇತರ ಹಿಂದುಗಳಿಗೆಲ್ಲಾ ವಿಧಿಸಲ್ಪಟ್ಟ ಪ್ರಾಯಶ್ಚಿತ್ತದ ಕ್ರಮವೇನೆಂದರೆ;— ೧ ಜುಟ್ಟನ್ನು ಬೋಳಿಸಿ, ಮಹಮ್ಮದೀಯ ಮಂತ್ರವನ್ನುಪದೇಶಿಸಿರುವುದು. ಹೆಂಗಸರಿಗೆ ಕಿವಿ ಚುಚ್ಚಿ ಮಾಪಿಳ್ಳಾ ರವಕೆಗಳನ್ನು ತೊಡಿಸಿರುವುದು, ಇಷ್ಟು ನಡೆದಿದ್ದರೆ ಅಂಥವರಿಗೆ ದೇವಾಲಯಗಳಲ್ಲಿ ೩ ದಿನಗಳು ಪಂಚಗವ್ಯಪ್ರಾಶನ ಮಾಡಿಸಿ ಶಿವಮಂತ್ರವನ್ನೋ ನಾರಾಯಣಮಂತ್ರವನ್ನೋ ದಿನಕ್ಕೆ ೩೦೦೦ ಜಪ ಮಾಡಿಸಬೇಕು. ೨. ಸುನ್ನತಿಯೂ ಅನ್ಯಜಾತಿ ಸ್ತ್ರೀ ಪುರುಷರ ಸಂಗವೂ ನಡೆದು ಹೋಗಿದ್ದರೆ ಅಂಥವರಿಗೆ ೧೨ ದಿನಗಳಕಾಲ ದೇವಾಲಯಗಳಲ್ಲಿ ಪಂಚಗವ್ಯವನ್ನು ಕುಡಿಸಿ, ದಿನಕ್ಕೆ ೧೨ ಸಾವಿರ ಜಪವನ್ನು ಮಾಡಿಸಬೇಕು. ೩. ಮಾಪಿಳ್ಳೆಗಳು ಬೇಯಿಸಿದ ಅನ್ನವನ್ನು ತಿಂದಿದ್ದರೆ ಪವಿತ್ರವಾದ ತೀರ್ಥದಲ್ಲಿ ಸ್ನಾನಮಾಡಿಸಿ ೪೧ ದಿನಗಳ ಕಾಲ ಪಂಚಗವ್ಯ ಪ್ರಾಶನಮಾಡಿಸಿ ಪ್ರತಿ ದಿನಕ್ಕೆ ೧೨ ಸಾವಿರದಂತೆ ಅಷ್ಟು ದಿನವೂ ಮಂತ್ರ ಜಪವನ್ನು ಮಾಡಿಸಬೇಕು. ೪. ಇತರ ವಿಧದ ಯಾವ ಭ್ರಷ್ಟತನವು ನಡೆದಿದ್ದರೂ ಮೇಲೆ ಹೇಳಿದಂತೆ ೨೧ ದಿನಗಳ ಕಾಲ ಪ್ರಾಯಶ್ಚಿತ್ತ ವಿಧಿಯನ್ನು ನೆರವೇರಿಸಬೇಕು.

ಮೈಸೂರ್ ಸ್ಟಾರ್.

ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿ ಮೀಟಿಂಗು—ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಬರುವ ಅಧಿವೇಶನವು ನವಂಬರ ತಿಂಗಳ ತಾರೀಕು ೧೦ರಲ್ಲಿ ಕಲ್ಕತ್ತೆಯಲ್ಲಿ ಸೇರುವುದು. ಸಿವಿಲ್ ಡಿಸ್‌ಒಬ್ಬಿಡಿಯನ್ಸ ಕಮ್ಮಿಟಿಯವರು ತಯಾರಿಸುವ ವರದಿಯನ್ನು ಕುರಿತು ಆಲೋಚಿಸುವ ಕಾರ್ಯವು ಈ ಅಧಿವೇಶನದಲ್ಲಿ ನಡೆಯುವುದು.

ಸರ್. ಅಲಿ ಇಮಾಮು—ಹೈದರಾಬಾದಿನ ನವಾಬರ ಕಾರ್ಯಕಾರಿ ಮಂಡಲದ ಅಧ್ಯಕ್ಷರಾದ ಸರ್. ಅಲಿ ಇಮಾಮರು ತಮ್ಮ ಅಧ್ಯಕ್ಷಪದವಿಗೆ ರಾಜಿನಾಮೆಯನ್ನು ಕೊಟ್ಟರು.

ಕುಮಟಾ:—ಕಳೆದ ತಾ. ೬ರಲ್ಲು ಶ್ರೀ ಗೋಕರ್ಣಮಠಾಧೀಶ್ವರರು ಚಾತುರ್ಮಾಸ ಮುಗಿಸಿ ಎದ್ದರು. ಸಾಯಂಕಾಲಕ್ಕೆ ಸಿಮೋಲ್ಲಂಘನದ ಮೆರವಣಿಗೆಯು ಮಠದಿಂದ ವಿಷ್ಣುತೀರ್ಥಕ್ಕೆ ಹೋಗಿ, ಅಲ್ಲಿಂದ ಮೂರುಕಟ್ಟೆ, ಬಸ್ತೀಪೇಟೆ, ಕಾಮಟಗಾರಪೇಟೆ, ಮೇಲುಪೇಟೆ ಮಾರ್ಗವಾಗಿ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಬಂದು ತಲ್ಪಿತು. ಮಾರ್ಗಗಳೆಲ್ಲ ತೋರಣಗಳಿಂದ ಶೃಂಗರಿಸಲ್ಪಟ್ಟಿದ್ದವು.

ಅಮೃತಸರ:—ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಕಾರ್ಯಕಾರಿ ಮಂಡಲದ ಒಂದು ತುರಾತುರಿಯ ಮೀಟಿಂಗು ಬರುವ ತಾ. ೧೭ರಲ್ಲಿ ಅಮೃತಸರದಲ್ಲಿ ಸೇರಲಿಕ್ಕಿದೆ.

ಶ್ರೀಮತಿ ಸರೋಜಿನಿ ನಾಯ್ಡೂ:—ಇವರು ಮದರಾಸಿನ ಅಡ್ಯಾರಲ್ಲಿ ಬಂದು ಡಾಕ್ಟರ ಎನ್ನಿಬಿಸೆಂಟರ ಅತಿಥಿಗಳಾಗಿದ್ದಾರೆ. ಇವರ ಆರೋಗ್ಯವು ಸಂಪೂರ್ಣ ಗುಣವಾಗದೇ ಇರುವುದರಿಂದ ಇವರು ಕೆಲವು ವಾರ ಅಲ್ಲೇ ಉಳಕೊಳ್ಳುವರು.

ಬಿ. ಪಿ. ವಾಡಿಯಾ:—ಇವರು ಥಿಯೋಸಿಫಿಕಲ್ ಸೊಸೈಟಿಯ ಮೆಂಬರಿಕೆಯನ್ನು ಬಿಟ್ಟುಬಿಟ್ಟಿರುವರು.

ಡಾಕ್ಟರ ಎನ್ನಿಬಿಸೆಂಟರ ಚಳವಳ:—ಸಮಾಧಾನ ಚಳವಳದಿಂದ ಹಿಂದೂಸ್ಥಾನವು ಸ್ವರಾಜ್ಯವನ್ನು ಹೇಗೆ ಗಳಿಸತಕ್ಕದೆಂದು ಆಲೋಚಿಸುವುದಕ್ಕಾಗಿ ಡಾಕ್ಟರ ಎನ್ನಿಬಿಸೆಂಟರು ರಾಜಕೀಯ ಚಳವಳವನ್ನು ಉಂಟುಮಾಡುವ ಎಲ್ಲಾ ಪಂಗಡದ ಮುಖಂಡರ ಒಂದು ಪರಿಷತ್ತನ್ನು ಡಿಲ್ಲಿಯಲ್ಲಿ ಬರುವ ನವಂಬರ ತಿಂಗಳಲ್ಲಿ ಸೇರಿಸಲು ಪ್ರಯತ್ನಿಸುತ್ತಿದ್ದಾರೆ.

ನವರಾತ್ರಿ ಮತ್ತು ದಸರಾ:—ನವರಾತ್ರಿ ಮತ್ತು ದಸರಾ ಸಂಬಂಧ ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧಿವೇಶನವನ್ನು ತಾ. ೨೩ ಅಥವಾ ತಾ. ೨೮ರ ಒಳಗೆ ಮುಗಿಯುವಂತೆ ಮಾಡಬೇಕೆಂದು ಎಸೆಂಬ್ಲಿಯ ಹಿಂದೂ ಮೆಂಬರರು ಸೂಚಿಸಿದ್ದಾರೆ.

ಮುಳಸಿ ಸತ್ಯಾಗ್ರಹ:—ಮೂರನೆಯ ಸಲ ಪ್ರಾರಂಭವಾದ ಮುಳಸಿ ಸತ್ಯಾಗ್ರಹದ ಸಂಬಂಧ ಕೈದು ಮಾಡಲ್ಪಟ್ಟ ಶ್ರೀಯುತರಾದ ಬಾಪಟ, ದನಲಿ ಮತ್ತು ಆತ್ಮಾರಾಮದೇವ ಇವರಿಗೆ ಪ್ರತಿಯೊಬ್ಬರಿಗೆ ಆರು ತಿಂಗಳುಗಳ ಕಠಿಣ ಶಿಕ್ಷೆಯನ್ನೂ ಮಲೆಯಾಳಿ ಹೆಂಗಸರಿಗೆ ರೂಪಾಯಿ ೨೫ರಂತೆ ಜುರುಮಾನೆ, ಈ ಜುರುಮಾನೆ ಕೊಡದಿದ್ದರೆ ಇವರಿಗೆ ತಿಂಗಳೊಂದರ ಸಾದಾ ಶಿಕ್ಷೆ ವಿಧಿಸಲಾಗಿದೆ.

೩೦ ಕೋಟಿ ಹಿಂದೀ ಜನರು ಮರಣ ಹೊಂದಿದರು:—೧೮೭೭ರಿಂದ ೧೯೨೦ರ ವರೆಗೆ ಒಟ್ಟು ೩೦ ಕೋಟಿ ಜನರು ಹಿಂದೂಸ್ಥಾನದಲ್ಲಿ ನಾಶವಾದರು. ೧೮೭೭-೮೦ ೨½ ಕೋಟಿ, ೮೦-೮೫ ೨¾ ಕೋಟಿ, ೮೫-೯೦ ೨$\frac{1}{10}$ ಕೋಟಿ, ೯೦-೯೫ ೩$\frac{1}{10}$ ಕೋಟಿ, ೯೫-೧೯೦೦ ೩½ ಕೋಟಿ, ೧೯೦೦-೧೯೦೫ ೩$\frac{7}{10}$ ಕೋಟಿ, ೧೯೦೫-೧೦ ೩$\frac{8}{10}$ ಕೋಟಿ, ೧೯೧೦-೧೫ ೩$\frac{1}{10}$ ಕೋಟಿ, ೧೯೧೫-೨೦ ೪½ ಕೋಟಿ. ಜಗತ್ತಿನ ಮಿಕ್ಕ ದೇಶಗಳಲ್ಲಿ ಮೃತ್ಯು ಸಂಖ್ಯೆಯು ದಿನೇ ದಿನೆ ಕಡಿಮೆಯಾಗುತ್ತಿರುವಾಗ ನಮ್ಮ ದೇಶದಲ್ಲಿ ಮರಣವು ಹೆಚ್ಚುತ್ತಲೇ ಇರುವುದು ನಮ್ಮ ದುರ್ದೈವವೇ ಸರಿ.

ಇಂಚ್‌ಕೇಪ್ ಕಮ್ಮಿಟಿ:—ಹಿಂದುಸ್ಥಾನ ಸರಕಾರದ ಖರ್ಚನ್ನು ಹೇಗೆ ಕಡಿಮೆಮಾಡಬಹುದೆಂದು ಆಲೋಚಿಸಲು ನೇಮಕಪಟ್ಟ ಕಮ್ಮಿಟಿಯ ಮುಖ್ಯಸ್ಥರಾದ ಲೋರ್ಡ ಇಂಚಕೇಪರು ಬರುವ ನವಂಬರ ತಾ. ೪ರಲ್ಲಿ ಮುಂಬಯಿಗೆ ತಲ್ಪುವರೆಂದು ತಿಳಿದುಬರುತ್ತದೆ. ಮತ್ತು ನವಂಬರ ತಾ. ೧೨ರಲ್ಲಿ ಇಂಚ್‌ಕೇಪ್ ಕಮ್ಮಿಟಿಯು ಡಿಲ್ಲಿಯಲ್ಲಿ ಸೇರುವುದೆಂದು ಪ್ರಕಟವಾಗಿದೆ.

ಮುಲಟಾನ್ ದಂಗೆ:—ಇಲ್ಲಿ ಹಿಂದೂ-ಮುಸಲ್ಮಾನರಿಗೆ ನಡೆದ ಕಾದಾಟದಲ್ಲಿ ೮ ಮಂದಿಗಳು ಹತರಾದರು. ೬೪ ಮಂದಿಗಳಿಗೆ ಕಠಿಣ ಜಖಂ ಆಗಿದೆ ಎಂದು ತಿಳಿದುಬರುತ್ತದೆ. ಹಿಂದೂಗಳ ೯ ಪವಿತ್ರ ಸ್ಥಳಗಳು ಹಾಳುಮಾಡಲ್ಪಟ್ಟಿವೆಯಂತೆ. ನಾಶಮಾಡಲ್ಪಟ್ಟ ಕಟ್ಟಡಗಳ ನಷ್ಟವೆ ರೂ. ೧೧೫೦೦೦ ಎಂದು ಅಂದಾಜು ಹಿಡಿದಿದೆ. ಲೂಟಿ, ಬೆಂಕಿ, ಮೊದಲಾದವುಗಳಿಂದ ಸಂಭವಿಸಿದ ಒಟ್ಟು ನಷ್ಟ ಮೂರು ಲಕ್ಷವಾಗಬಹುದಂತೆ.

ರೈಲ್ವೆ ಬೋರ್ಡ:—ಮೂರನೆಯ ತರಗತಿಯ ಪ್ರಯಾಣಿಕರಿಗೆ ಇರುವ ತೊಂದರೆಗಳನ್ನು ರೈಲ್ವೆ ಬೋರ್ಡಿನ ಪ್ರೆಸಿಡೆಂಟರ ಮುಂದೆ ಡಾಕ್ಟರ ಎನ್ನಿಬಿಸೆಂಟ, ಮಿ| ಜಮುನಾದಾಸ, ಮಿ| ದ್ವಾರಕಾದಾಸ ಮಿ| ಶೇಷಗಿರಿ ಅಯ್ಯರ ಮಿ| ಕಬಿರುದ್ದಿನ್ ಅಹ್ಮದ್, ಮಿ| ಟಿ. ಯಸ್. ರಾಮಸ್ವಾಮಿ ಅಯ್ಯಂಗರ ಇವರಿಂದ ಕೂಡಿದ ಮಂಡಲವು ಇಡುವುದು.

ಧಾರವಾಡ ದಂಗೆ:—ಧಾರವಾಡ ದಂಗೆಯ ಸಂಬಂಧ ಸೆರೆಯಲ್ಲಿಡಲ್ಪಟ್ಟ ರಾಜಹಂಸ ಪತ್ರಿಕೆಯ ಸಂಪಾದಕರಾದ ಶ್ರೀಯುತ ಗೋವಿಂದ ಆಚಾರ್ಯ ಗುತ್ತಲ್, ವಿಜಯ ಪತ್ರದ ಸಂಪಾದಕರಾದ ಶ್ರೀಯುತ ಅಣ್ಣಾಚಾರ್ಯ ಹೊಸಕೇರಿ ಇವರನ್ನು ಬಂಧನದ ವಾಯಿದೆಯು ಮುಗಿದುದರಿಂದ ಕಾರವಾರ ಜೈಲಿನಿಂದಲೂ ಇಮಾಮ ಮಣಿಯಾರರನ್ನು ಧೂಲಿಯಾ ಜೈಲಿನಿಂದಲೂ ಬಿಡುಗಡೆ ಮಾಡಿರುವರಂತೆ. ಇವರೆಲ್ಲರನ್ನೂ ಧಾರವಾಡದಲ್ಲಿ ಮೆರವಣಿಗೆಯಿಂದ ಕರೆತಂದರಂತೆ. ಇವರು ಜೈಲಿನ ಅನುಭವದ ಕುರಿತು ಭಾಷಣವನ್ನು ಮಾಡಿದರೆಂದು ಪ್ರಕಟವಾಗಿದೆ.

ಧಾರವಾಡ:—ಕರ್ನಾಟಕ ವೈಭವದ ಸಂಪಾದಕರಾದ ಶ್ರೀಯುತ ತಿಲ್‌ಗುಲ್‌ರನ್ನು ಕೈದುಮಾಡುದರಿಂದ ಈಗ ವೈಭವವನ್ನು ಅದರ ಉಪ ಸಂಪಾದಕರಾದ ಶ್ರೀಯುತ ಆರ್. ಯಚ್. ಮೋಹನರವರು ಪ್ರಕಟಿಸುತ್ತಿದ್ದಾರೆ. ಕರ್ನಾಟಕ ಪ್ರೋವಿನ್ಸಿಯಲ್ ಕೊಂಗ್ರೆಸ್ ಕಮ್ಮಿಟಿಯ ಉಪಾಧ್ಯಕ್ಷರಾದ ಶ್ರೀಯುತ ಯಸ್. ವಿ. ಕೌಜಲಗಿಯವರಿಗೆ ಸೆಕ್ಶನ್ ೧೦೮ರ ಮೇರೆಗೆ ನೋಟೀಸು ಕೊಡೋಣಾಗಿದೆ.

ಸ್ವಾಮಿ ಶ್ರದ್ಧಾನಂದರು:—ಇವರನ್ನು ಅಮೃತಸರದ ಗುರುಬಾಗಿನ ಸಮೀಪ ಕಳೆದ ತಾ. ೧೦ರಲ್ಲಿ ಕೈದು ಮಾಡಿರುವರು.

ಡಿಲ್ಲಿಯಲ್ಲಿ ಸೇರಿದ ಮಹಾಸಭೆ:—ಇಲ್ಲಿ ನಗರದಲ್ಲಿ ಅಲ್ಲಿಯ ಜನರ ಸಭೆಯು ಕೂಡಿ ಅಕಾಲಿ ಜನರು ಎಲ್ಲಾ ಕಷ್ಟಗಳನ್ನು ಸಹಿಸಿ ಅಹಿಂಸಾತ್ಮಕ ಅಸಹಕಾರದ ಸತ್ಯಾಗ್ರಹವನ್ನು ನಡಿಸುವ ಬಗ್ಗೆ ಅವರನ್ನು ವಂದಿಸಿ ಎಲ್ಲ ಹಿಂದಿಗಳು ಈ ಚಳವಳದಲ್ಲಿ ಸೇರಬೇಕೆಂಬ ಠರಾವನ್ನು ಪಾಸುಮಾಡಲಾಯಿತು. ಈಗಿನ ರಾಜಕೀಯ ಕೈದಿಗಳನ್ನು ಬಿಟ್ಟುಬಿಡುವಂತ ತಕ್ಕುದಾದ ಉಪಾಯಗಳನ್ನು ಕೈಕೊಳ್ಳಬೇಕೆಂದು ಓಲ್ ಇಂಡಿಯಾ ಕೊಂಗ್ರೆಸಕಮ್ಮಿಟಿಗೆ ತಿಳಿಸಬೇಕಾಗಿ ಸೂಚಿಸುವ ಎರಡನೆಯ ಠರಾವು ಪಾಸುಮಾಡಲಾಯಿತು. ಈ ಎರಡನೆಯ ಠರಾವನ್ನು ಪಾಸುಮಾಡುವಾಗ ಅಧ್ಯಕ್ಷರು ಕೆಳಗಿನ ಸೂಚನೆಯನ್ನು ಮಾಡಿದರು. "ಜನರೆಲ್ಲರೂ ಕರೆನ್ಸಿ ನೋಟುಗಳಿಗೆ ಬಹಿಷ್ಕಾರ ಹಾಕಿ ೨ ಹಪ್ತೆಗಳ ವರೆಗೆ ಇಡೀ ಹಿಂದೂಸ್ಥಾನದಲ್ಲಿ ಹರತಾಳವನ್ನು ಕೈಕೊಳ್ಳಬೇಕು. ಇದರಿಂದ ಸರಕಾರವು ದಿವಾಳಿಯಾಗಿ ಧಾನ್ಯದವಸಗಳ ಬೆಲೆಯು ಕಡಿಮೆಯಾಗುವುದು."

ದಕ್ಷಿಣ ಕನ್ನಡ.

ಸುಳ್ಯ:—ಖಡ್ಡಾಯ ಶಿಕ್ಷಣವನ್ನು ಪಟ್ಟಣದಲ್ಲಿ ಜಾರಿಗೆ ತರುವ ವಿಷಯವನ್ನು ಆಲೋಚಿಸುವುದಕ್ಕಾಗಿ ಉಪ್ಪಿನಂಗಡಿ ತಾಲೂಕುಬೋರ್ಡ ಮೆಂಬರರ ಒಂದು ಸಭೆಯು ಬರುವ ತಾ. ೨೫ಕ್ಕೆ ಸುಳ್ಯದಲ್ಲಿ ಕೂಡುವ ದಿವಸವೇ ತಾಲೂಕಿನ ಮುಖ್ಯ ಪಟ್ಟಣವಾದ ಪುತ್ತೂರು, ಸುಳ್ಯ ಮತ್ತು ಬೆಳತಂಗಡಿಯಲ್ಲಿ ಕೂಡಾ ಖಡ್ಡಾಯ ಶಿಕ್ಷಣವನ್ನು ಜಾರಿಗೆ ತರುವ ವಿಷಯ ಆಲೋಚಿಸುವುದು ಉತ್ತಮ ಅಲ್ಲವೆ?

ಇಲ್ಲಿಯ ಬಾಯರ ಎಲಿಮೆಂಟರಿ ಶಾಲೆಯು ಅನೇಕ ಕ್ಲಾಸು ಕಡಿಯುದೆ ಇರುವುದು ಇಲ್ಲಿಯ ಬೇಕ್‌ವಾರ್ಡ ಜಾತಿಯ ವಿದ್ಯಾರ್ಥಿಗಳ ದುರದೃಷ್ಟವೇ ಸರಿ.

ಬಂಟವಾಳ:—ಇಲ್ಲಿಯ ನಂಬ್ರ ೧೧೧೨ನೇ ಪರಸ್ಪರ ಸಹಾಯ ಸಂಘದ ಜನರಲ್ ಮೀಟಿಂಗು ೩ ವರುಷದಿಂದ ಜರಗದೆ ಇದ್ದರೂ ಈ ವರುಷ ಜರಗಿತು. ಲೆಕ್ಕ ಪತ್ರಗಳೆಲ್ಲಾ ಓದಿ ಆದ ಮೇಲೆ ಹೊಸ ಪಂಚಾಯತರನ್ನು ಓಟುಗಳ ಮೂಲಕ ಚುನಾಯಿಸುವುದು ಅಷ್ಟೊಂದು ಉಚಿತವೆಂತ ಕಾಣಲಿಲ್ಲ. ಮೊದಲಿನ ಪಂಚಾಯತರೂ ಅಧ್ಯಕ್ಷರೂ ಅನೇಕ ವರುಷಗಳಿಂದ ಜನ ಪ್ರೀತಿಪಾತ್ರರಿಂದ ಅವರೆ ಪಂಚಾಯತರಾಗಿ ಇರುವುದು ಉಚಿತವೆಂದು ರಾ. ಶ್ರೀನಿವಾಸ ಶ್ಯಾನುಭಾಗರು ತಂದ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು. ಅನಂತರ ಉಳಿದ ಮುನಾಫೆಯಲ್ಲಿ, ಈ ವರುಷ ಬಂಟವಾಳ ಆಸ್ಪತ್ರೆಗೆ ಬೇಕಾದಷ್ಟು ಮದ್ದನ್ನು ಒದಗಿಸಲಿಕ್ಕೆ ಸಾಕಷ್ಟು ಹಣ ತಾಲೂಕು ಬೋರ್ಡಿನಲ್ಲಿ ಇಲ್ಲದ್ದರಿಂದ, ೬೦ ರೂಪಾಯಿಗಳ ಮದ್ದನ್ನು ತರಿಸಿ ಆಸ್ಪತ್ರೆಗೆ ಧರ್ಮಾರ್ಥವಾಗಿ ಕೊಡುವುದೆಂತ ನಿಶ್ಚಯಿಸಲಾಯಿತು. ಇನ್ನು ಉಳಿದ ಹಣದಲ್ಲಿ ಶವ ದಹನಮಾಡುವ ಸ್ಥಳದಲ್ಲಿ ಮಾರ್ಗದಿಂದ ಕೆಳಗೆ ಇಳಿಯುವಲ್ಲಿ ಮೆಟ್ಟಿಗಳನ್ನು ಕಟ್ಟಿಸಬೇಕೆಂಬ ಠರಾವು ಮುಂದೆ ಬರುವಷ್ಟರಲ್ಲಿ ಅದು ತಾಲೂಕು ಬೋರ್ಡಿನ ಸ್ಥಳ, ಹೊಸ ಆಕ್ಟಿನ ಪ್ರಕಾರ ಅದಕ್ಕೆ ಇನ್ನು ಮುಂದೆ ಲೈಸನ್ಸ ಬೇಕು ಎಂದು ಒಬ್ಬ ಮೆಂಬರರು ಹೇಳಿದ್ದರಿಂದ ಅದು ಅಲ್ಲಿಯೇ ಬಿದ್ದುಹೋಯಿತು. ವ್ಯಾಪಾರಸ್ಥರ ಸೊಸ್ಸಾಟಿಯ ಲಾಟನ್ನು ಒಂದು ವರ್ಷದ ರಾಗಾಯಿತು ಉಳಿಸದೆ ಲಾಟನು ಸುಮ್ಮನೆ ನಿಂತುಕೊಂಡದ್ದರಿಂದ ವ್ಯಾಪಾರಸ್ಥರ ಸೊಸ್ಸಾಟಿಯಲ್ಲಿ ಹಣವಿಲ್ಲದಿದ್ದರೆ ಅದನ್ನು ಈ ಸೊಸ್ಸಾಟಿಯ ಖರ್ಚಿನಿಂದ ಉರಿಸಬೇಕೆಂಬ ಠರಾವು ಸಭೆಯ ಮುಂದೆಬಂದು ಮತ್ತೊಂದು ಸೊಸ್ಸಾಟಿಯ ಉತ್ತರ ಬರುವ ವರೆಗೆ ಬಾಕಿ ಇಡಲಾಯಿತು.

ಇಲ್ಲಿಯ ಹುಡುಗಿಯರ ಶಾಲೆಗೆ ದಾಖಲಾಗಲು ಬಂದಿದ್ದ ಮೂವರು ಆದಿದ್ರಾವಿಡರ ಹುಡುಗಿಯರನ್ನು ಎಲ್ಲಾ ಬೋರ್ಡು ಶಾಲೆಗಳಲ್ಲಿ ಆದಿದ್ರಾವಿಡರ ಮಕ್ಕಳನ್ನು ಸೇರಿಸಿಕೊಳ್ಳಲೇ ಬೇಕೆಂದೂ ಬೇರೆ ಮಕ್ಕಳಿಗೆ ಆಕ್ಷೇಪವಿದ್ದರೆ ಉಪಾಧ್ಯಾಯಿನಿಯು ತನ್ನ ಹತ್ತರವೇ ಕೂತುಕೊಳ್ಳಿಸಿ ಕಲಿಸಬೇಕೆಂದೂ ಸರ್ಕಿಲಾರನ್ನು ಪ್ರೆಸಿಡೆಂಟರು ಕೊಟ್ಟಿರುವಾಗ ಈ ಮೂವರು ಹೆಮ್ಮಕ್ಕಳಿಗೆ ಪ್ರವೇಶ ದೊರಕದಿರುವ ಕಾರಣವೇನೋ ತಿಳಿಯದು. ಹೀಗಾದರೆ ಸರ್ಕಿಲಾರಿಗೆ ಬೆಲೆ ಎಲ್ಲಿದೆ?

ಖಾದಿಯೇ ಕರ್ನಾಟಕದ ವಿಶಿಷ್ಟತೆಯು.

(ವಾರ್ತಾ ಪ್ರಸಾರಕ ಸಂಘ ಹುಬ್ಬಳ್ಳಿ)

ಮಹಾತ್ಮರು ಒಂದೂವರೆ ವರ್ಷಗಳ ವರೆಗೆ ಖಾದೀಪ್ರಸಾರದ ಮೇಲೆಯೇ ಹೆಚ್ಚು ಭಾರವನ್ನು ಹಾಕಿದ್ದರು. ಅಹಮ್ಮದಾಬಾದದ ರಾಷ್ಟ್ರೀಯ ಅಧಿವೇಶನದಲ್ಲಿ ಕರ್ನಾಟಕಸ್ಥರ ಬಿಡಾರಕ್ಕೆ ಬಂದು, ಮಹಾತ್ಮರು ಕರ್ನಾಟಕಸ್ಥರಿಗೆ ಉಪದೇಶಮಾಡಿದ ವಿಷಯವು ಖಾದಿಯು. ಸಬರಮತಿಯ ಆಶ್ರಮದಲ್ಲಿ ಪೋಲೀಸ ಅಧಿಕಾರಸ್ಥರು ತಮ್ಮನ್ನು ಕೈದುಮಾಡಲಿಕ್ಕೆ ಬಂದ ವೇಳೆಯಲ್ಲಿ ಶಿಷ್ಯವೃಂದದ ಕಿವಿಯಲ್ಲಿ ಊದಿದ ಬೀಜಮಂತ್ರವೂ, ಶಿಕ್ಷೆಯ ಠರಾವಿನ ಮೇಲೆ ಕೋರ್ಟಿನಲ್ಲಿ ನಿಂತು ಸುತ್ತಲೂ ನೆರೆದ ತಮ್ಮ ಅನುಯಾಯಿಗಳ ಮುಖಾಂತರವಾಗಿ ಅಖಿಲ ಹಿಂದುಸ್ಥಾನಕ್ಕೆ ಕಳುಹಿಸಿದ ಸಂದೇಶವೂ ಖಾದಿಯದೇ. ರಾಷ್ಟ್ರೀಯಸಭೆಯ ಎಲ್ಲ ಕಾರ್ಯಕ್ರಮಗಳಲ್ಲಿ, ಎಲ್ಲಕ್ಕೂ ಸುಲಭವಾದ ಕಾರ್ಯಕ್ರಮವು ಖಾದಿಯದು. ಇತರ ಪ್ರಾಂತಗಳಿಗಿಂತ ಕರ್ನಾಟಕದಲ್ಲಿ ನೈಸರ್ಗಿಕ ರೀತಿಯಿಂದ ಸಾರ್ವಜನಿಕವಾಗಿ ಸುಲಭಸಾಧ್ಯವಾದ ಕಾರ್ಯಕ್ರಮವು ಖಾದಿಯದೇ. ಕರ್ನಾಟಕದಲ್ಲಿ ಹತ್ತಿಯು ವಿಪುಲವಾಗಿ ಬೆಳೆಯುತ್ತದೆ. ರಾಟೆಗಳನ್ನು ನಡಿಸುವ ಕೆಲಸವು ಸುಲಭರೀತಿಯಿಂದ ಮಾಡಲಿಕ್ಕೆ ಬರುವಹಾಗಿದೆ. ನೇಕಾರರೂ ಸಿಗಬಲ್ಲರು. ಜನಸಂಖ್ಯೆಯ ಮೇಲಿಂದ ಬಹು ಸಂಖ್ಯಾಕರು ಖಾದಿಯ ಹುಟ್ಟುವಳಿಗಾಗಿ ಒಂದಿಲ್ಲೊಂದು ರೀತಿಯಿಂದ ಸಹಾಯವನ್ನು ಮಾಡುವವರೇ ಇದ್ದಾರೆ. ಮುಂಬಯಿ ಮದ್ರಾಸಗಳಂಥ ಸೊಬಗಿನ ಪಟ್ಟಣಗಳೂ ಸಮೀಪವಿಲ್ಲದ್ದರಿಂದ ಡೌಲಿಗೆ ಬಲಿಯಾದವರೂ ಬಹಳ ಜನರಿರುವುದಿಲ್ಲ.

ಈ ಪ್ರಕಾರವಾಗಿ ಖಾದಿಯ ಬಗ್ಗೆ ಎಲ್ಲ ರೀತಿಯಿಂದಲೂ ಅನುಕೂಲತೆಯಿದ್ದುದರಿಂದ, ಮಹಾರಾಷ್ಟ್ರಕ್ಕೆ ಮುಳಶೀ ಸತ್ಯಾಗ್ರಹವೂ, ಬಂಗಾಲಕ್ಕೆ ಬಹಿಷ್ಕಾರ ಚಳವಳಿಯೂ, ಗುಜರಾಥಕ್ಕೆ ಕಾಯದೇಭಂಗ ಯುದ್ಧವೂ ಹೇಗೆ ಪ್ರಾಂತಿಕ ವಿಶಿಷ್ಟತೆಗಳಾಗಿರುವವೋ, ಅದೇ ಪ್ರಕಾರ ಖಾದಿಯೇ ಕರ್ನಾಟಕದ ವಿಶಿಷ್ಟತೆ ಆಗಬೇಕೆಂದು ನಮ್ಮ ಇಚ್ಛೆ ಇದೆ. ಇಷ್ಟಾಗಬೇಕಾದರೆ ಈ ವಿಷಯದಲ್ಲಿ ಇತರ ಪ್ರಾಂತಗಳಿಗಿಂತ ಕರ್ನಾಟಕವು ಮುಂದುವರಿಯಲಿಕ್ಕೆಬೇಕು. ನಮ್ಮ ಪ್ರಾಂತದ ರಾಜಕೀಯ ಪ್ರಗತಿಯು ಎಷ್ಟರ ಮಟ್ಟಿಗೆ ಆಗಿರುವದೆಂಬುದನ್ನು ತೋರಿಸುವುದಕ್ಕಾಗಿ "ಮೂರನಗುಡ್ಡ ಕಣ್ಣಿಗ ಸುಣ್ಣಗ" ಎಂಬ ಲೇಖವನ್ನು ಬಹುತರ ಎಲ್ಲ ಕನ್ನಡ ಪತ್ರಗಳಲ್ಲಿ ಈ ಮೊದಲೇ ನಾವು ಪ್ರಸಿದ್ಧಮಾಡಿರುತ್ತೇವೆ. (ಧಾರವಾಡ, ಬೆಳಗಾಂ, ವಿಜಾಪುರ, ಬಳ್ಳಾರಿ, ಉ. ಕಾನಡಾ. ದ. ಕನ್ನಡ, ಮೈಸೂರು, ಕೊಡಗು ಈ ಪ್ರಾಂತಗಳಲ್ಲಿ ಬಿಟ್ಟು ಸುಮಾರು ೨೩,೪೦೦ ಮಗ್ಗಗಳಿದ್ದು ಪ್ರತಿ ತಿಂಗಳಲ್ಲಿ ಈ ಮಗ್ಗಗಳಲ್ಲಿ ೪೪೦೦೦ ರಾತಲು ನೂಲೂ ೧೦,೬೨೫, ವಾರು ವಸ್ತ್ರವಾಗುವುದು ಎಂದು ಖಾದಿಯ ನಮೂನಾಪತ್ರಿಕೆಯು ಪ್ರಕಟಿಸುತ್ತದೆ.)

ಖಾದಿಯ ನಮೂನಾಪತ್ರಿಕೆಯಲ್ಲಿಯ ಅಂಕೆಗಳು ತೀರಾ ನಿಜವಾದವುಗಳೆಂದು ನಾವೇನು ಅನ್ನುವುದಿಲ್ಲ. ಯಾಕಂದರೆ, ರಾಟಿ, ಮಗ್ಗಗಳ ಖಾನೇಸುಮಾರಿಯನ್ನು ಯಾರಾದರೂ ತಕ್ಕೊಂಡಿರುವರೋ ಇಲ್ಲವೋ ಇದರ ಸಲುವಾಗಿ ಸಂಶಯವೇ ಬರುತ್ತದೆ. ಬೇರೆ ಬೇರೆ ಜಿಲ್ಲೆಗಳಿಂದ ಬಂದ ಅನುಮಾನಿಕ ಅಂಕಿಗಳಿಂದಲೇ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಲೆಕ್ಕವನ್ನು ಮಾಡಿದ್ದಾರೆ. ಖಾದೀ ಉಡುಪಿನ ಜನರ ಪ್ರಮಾಣವೂ ಮಗ್ಗಗಳೂ ಇದಕ್ಕಿಂತ ಕಡಿಮೆ ಇರಬಹುದೆಂದು ನಮಗೆ ತೋರುತ್ತದೆ. ಖಾದಿಯೇ ಕರ್ನಾಟಕದ ವಿಶಿಷ್ಟತ್ವವಾಗಬೇಕಾದರೆ ಪ್ರಾಂತಿಕ ಕಾಂಗ್ರೆಸ್‌ಕಮಿಟಿಯವರಿಗೆ ಎಲ್ಲಕಡೆಯಿಂದಲೂ ಸರಿಯಾದ ಅಂಕೆಗಳು ಬರಬೇಕಾಗುತ್ತವ. ಈ ವಿಚಾರದಿಂದಲೇ ಇನ್ನು ಮುಂದೆ ನಾವು ಈ ಪ್ರಾಂತದ ಯಾವ ಯಾವ ಭಾಗಗಳಲ್ಲಿ ಯಾವಯಾವ ತರದ ಎಷ್ಟೆಷ್ಟು ಹತ್ತಿಯು ಬೆಳೆಯುತ್ತದೆ, ಅವುಗಳಿಂದ ಹೊರಡುವ ನೂಲಿನ ನಂಬರುಗಳು ಯಾವವು ಶುದ್ಧ ಖಾದಿಯ ಹುಟ್ಟುವಳಿ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಆಗುತ್ತದೆ ಮತ್ತು ಅದರ ಬೆಲೆ ಮುಂತಾದ ಸಂಗತಿಗಳನ್ನು ನಮೂನಾ ಪತ್ರಿಕೆಗಳಿಂದಲೂ ಆಕೃತಿ ನಕಾಶೆ ಮುಂತಾದವುಗಳಿಂದಲೂ ತೋರಿಸುವ ಪ್ರಯತ್ನವನ್ನು ಮಾಡಲಿಕ್ಕೆಸಿದ್ದೇವೆ. ಈ ಕೆಲಸದ ಸಲುವಾಗಿ ನಮಗೆ ಬೇಕಾದ ಎಲ್ಲ ಸಹಾಯವು ನಮ್ಮ ಬಂಧು ಭಗಿನಿಯರು ಹಿಂಜರಿಯದೆ ಮಾಡುವರೆಂದು ನಾವು ತುಂಬಾ ನಂಬಿದ್ದೇವೆ.

ಲೆಜಿಸ್ಲೇಟಿವ್ ಎಸೆಂಬ್ಲಿ.

ರೈಲ್ವೆಯ ಉತ್ಪನ್ನದಲ್ಲಿ ಸೇಕಡಾ ೮೩ರಂತೆ ೩ನೇ ಕ್ಲಾಸಿನ ತರಗತಿಯ ಪ್ರಯಾಣಿಕರಿಂದ ದೊರಕುವುದರಿಂದ ಈ ತರಗತಿಯ ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯಗಳು ಉಂಟಾಗುವಂತೆ ಮೂರನೇ ತರಗತಿಯ ವಿಶಾಲವಾದ ಬಂಡಿಗಳನ್ನು ಏರ್ಪಡಿಸಿ, ಈ ಬಂಡಿಗಳಲ್ಲಿ ಬೇಕಾದಷ್ಟು ಆಸನಗಳನ್ನು ಇಡಿಸಬೇಕು. ಅವುಗಳಲ್ಲಿ ಪಾಯಿಖಾನೆಯು ಹಾಗು ಊಟ ಮತ್ತು ಫಲಾಹಾರವನ್ನು ತಕ್ಕೊಳ್ಳುವ ಸ್ಥಳದ ಅನುಕೂಲತೆ ಮಾಡಬೇಕು. ಪ್ರಯಾಣಿಕರಿಗೆ ಸ್ಟೇಶನುಗಳಲ್ಲಿ ನಿಲ್ಲಲು ಯೋಗ್ಯ ಸ್ಥಳಗಳ ಏರ್ಪಾಡು, ಟಿಕೇಟುಗಳನ್ನು ತೊಂದರೆಗಳಿಲ್ಲದೆ ಕೊಡುವ ಏರ್ಪಾಡು ಮತ್ತು ಈ ತರಗತಿಯ ಪ್ರಯಾಣಿಕರ ತೊಂದರೆಗಳನ್ನು ನಿವಾರಿಸಲು ಸುಪರಿಂಟೆಂಡೆಂಟರನ್ನು ನೇಮಿಸುವುದು ಮೊದಲಾದ ಸೌಕರ್ಯಗಳನ್ನು ಮಾಡತಕ್ಕದೆಂದು ಮದ್ರಾಸಪಕ್ಷದ ಮೆಂಬರರಾದ ಮಿ. ಎಸ್. ಜೋಶಿಯವರು ತಂದ ಠರಾವು ಸರಕಾರದ ಪಕ್ಷದ ಸಭಾಸದರು ಎದುರಿಸಿದರೂ ಬಹುಮತದ ಬೆಂಬಲದಿಂದ ಮಂಜೂರಾಯಿತು.

ಅನುಕ್ರಮಣಿಕೆ

ಅಗ್ರಲೇಖ—
ಸಿಮ್ಲದಲ್ಲಿ
ಸ್ಫುಟವಿಚಾರಗಳು— ೬
೧. ಲೊಯ್ಡ ಜೋರ್ಜರ ಭಾಷಣ. ೨. ತುರ್ಕಿಯ ವಿಜಯ ೬
ಮಂಗಳೂರು—
ವರ್ತಮಾನ ಸಂಗ್ರಹಗಳು—
ವಿದೇಶ ವರ್ತಮಾನ, ಒಳದೇಶ ವರ್ತಮಾನ
ದಕ್ಷಿಣ ಕನ್ನಡ, ಸುಳ್ಯ, ಬಂಟವಾಳ . . . ೮
ಖಾದಿಯೇ ಕರ್ನಾಟಕದ ವಿಶಿಷ್ಟತೆಯು. ಲೆಜಿಸ್ಲೇಟಿವ್ ಎಸೆಂಬ್ಲಿ ,,
ನೋಟಿಶಾಲ ಘೋಷ . . . ,,
ಅಕಾಲಿ ಚಳವಳ . . . ೯
ಉಪಕಾರಸ್ಮರಣೆ. ಸ್ವರಾಜ್ಯಕಾರ್ಯಕ್ಕೆ ವಂತಿಗೆ. . ,,
ತಾ. ೧೩ರಲ್ಲಿ ಕೂಡಿದ ಮಿಟಿಂಗಿನಲ್ಲಿ ಪಾಸಾದ ಠರಾವುಗಳು . ೬
ಆರ್ಯರ ವರ್ಣಾಶ್ರಮ ಧರ್ಮ . . . ೪

ಸ್ವದೇಶಾಭಿಮಾನಿ.

ಶಕ ೧೮೪೪ ಭಾದ್ರಪದ ಬ|| ೯ಯು ಶುಕ್ರವಾರ.

ಸಿಮ್ಲದಲ್ಲಿ.

ಬ್ರಿಟಿಷ್ ಪಾರ್ಲಿಮೆಂಟಿನ ಪ್ರಧಾನಜಿಯವರಾದ ಮಿ|| ಲೊಯ್ಡ ಜೋರ್ಜರ ಅವಿವೇಕದ ಭಾಷಣದಿಂದ ಉಂಟಾದ ಅಸಂತೋಷವು ಕೇಂದ್ರೀಭೂತವಾಗಿ ಕಟ್ಟಕಡೆಗೆ ಸಿಮ್ಲದಲ್ಲಿ ಅದು ಕೌನ್ಸಿಲುಗಳ ಠರಾವು ರೂಪದಿಂದ ಪ್ರಕಾಶಿತವಾಯಿತು. ಪ್ರಧಾನಜಿಯವರ ಭಾಷಣದಿಂದ ಪ್ರಕಟವಾದ ಅಸಂತೋಷದ ಪ್ರವಾಹವು ಕೌನ್ಸಿಲುಗಳಲ್ಲಿ ಪ್ರವೇಶಿಸೀತೆಂಬುದು ಜನತೆಗೆ ಹೇಗೊ ಹಾಗೆಯೆ ಅಧಿಕಾರಿಗಳಿಗೂ ಗೊತ್ತಿದ್ದಿತು. ಕಾರಣ ಕೌನ್ಸಿಲುಗಳ ನಿಯಮದಂತೆ ಕೌನ್ಸಿಲರುಗಳು ಕೇಳಬೇಕಾದ ಪ್ರಶ್ನೆ, ತರಬೇಕಾದ ಠರಾವು ಮತ್ತು ಪಾಸು ಮಾಡಿಸಿಕೊಳ್ಳಬೇಕಾದ ಬೀಲು ಇವುಗಳ ಬಗ್ಗೆ ಕೌನ್ಸಿಲುಗಳಿಗೆ ಪೂರ್ವಸೂಚನೆಯನ್ನು ಕೊಡಬೇಕಾಗುತ್ತದೆ. ಈ ನಿಯಮಕ್ಕನುಸಾರವಾಗಿ ಈ ವಿಷಯವು ಮೊದಲೆ ಅಧಿಕಾರಿಗಳಿಗೆ ತಿಳಿದುಹೋದ ಕಾರಣ ಅವರು ಕೌನ್ಸಿಲುಗಳಲ್ಲಿ ನಿಂದಾವ್ಯಂಜಕ ಠರಾವುಗಳು ಬರಬಾರದೆಂಬುದಕ್ಕೆ ಸಾಧ್ಯವಿದ್ದಷ್ಟು ಯತ್ನಿಸಿದ್ದರು. ಪ್ರಧಾನಜಿಯವರ ಭಾಷಣದಿಂದ ದೇಶದಲ್ಲಿ ಹುಟ್ಟಿರುವ ಪ್ರವಾಹವನ್ನು ಪ್ರತಿಬಂಧಿಸಿ ಕೌನ್ಸಿಲುಗಳನ್ನು ನಿರ್ಲೇಪವಾಗಿಡಲು ಅಧಿಕಾರಿಗಳ ಮನಸ್ಸಿತ್ತು. ಅವರು ತಮ್ಮ ಈ ಮನೋರಥವನ್ನು ಸಾಧಿಸಲು ಹಲವು ದಾರಿಗಳಿಂದ ಯತ್ನಿಸಿದರು. ಒಂದುವೇಳೆ ಅಪರಿಹಾರ್ಯವಾಗಿ ನಿಂದ್ಯಾವ್ಯಂಜಕ ಠರಾವು ಬಂದರೂ ಔಷಧದ ತೀವ್ರತೆ ಅಥವಾ ಕಹಿತನವನ್ನು ಕಡಿಮೆಮಾಡಲು ವೈದ್ಯರು ಹೇಗೆ ಶುದ್ಧೀಕರಣದ ಪ್ರಯತ್ನವನ್ನು ಮಾಡುವರೊ ಹಾಗೆಯೆ ನೋಕರಶಾಹಿಯ ಶಿಖಾಮಣಿಗಳಾದ ಲೊರ್ಡ ರೆಡಿಂಗರು ಠರಾವಿನ ಭಾಷೆ ಮತ್ತು ಚರ್ಚೆಯ ಸ್ವರೂಪ ಇವುಗಳ ತೀವ್ರತೆಯನ್ನು ತಗ್ಗಿಸಲು ಒಂದೆರಡು ಪ್ರಯತ್ನಗಳನ್ನು ಮಾಡಿದರು. ರೆಡಿಂಗ ಸಾಹೇಬರ ಪ್ರಯತ್ನಗಳಲ್ಲಿ ಶಾಂತಪಕ್ಷದ ಡೆಪ್ಯುಟೇಶನಿಗೆ ಉತ್ತರಕೊಟ್ಟದ್ದು ಒಂದನೆಯ ಪ್ರಯತ್ನವು. ಅದರ ಸಂಗತಿಯನ್ನು ನಾವು ಹಿಂದೆಯೆ ನಿರೂಪಿಸಿದ್ದೇವೆ.

ರೆಡಿಂಗಸಾಹೇಬರ ಎರಡನೆಯ ಮತ್ತು ಮುಖ್ಯವಾದ ಪ್ರಯತ್ನವು ಕೌನ್ಸಿಲ್-ಅಧಿವೇಶನವನ್ನು ತೆರೆಯುವಾಗ ಕೊಟ್ಟ ಭಾಷಣವಾಗಿದೆ. ರೆಡಿಂಗ ಸಾಹೇಬರು ಈ ಭಾಷಣದಲ್ಲಿ ತಮಗೆ ಹೇಳಬೇಕಾಗಿದ್ದ ಯಾವ ಅಪ್ರಿಯ ಅಂಶವುಂಟೊ ಅದನ್ನು ಥಕ್ಕನೆ ಮತ್ತು ಪರದೆ ಇಲ್ಲದೆ ಹೇಳಿಬಿಟ್ಟರೆ ಯಾರಿಗೂ ಒಪ್ಪಲಿಕ್ಕಿಲ್ಲವೆಂದು ತಿಳಿದು ಈ ಮಾತ್ರೆಯನ್ನು ಸಕ್ಕರೆಯಲ್ಲಿ ಅದ್ದಿ ಕೊಡಬೇಕೆಂದು ಯೋಚಿಸಿ, ಪ್ರಾರಂಭದಲ್ಲಿ ತುರ್ಕಿಪ್ರಶ್ನೆ, ವಾಯುವ್ಯಸರಹದ್ದಿನ ಸ್ಥಿತಿ, ವಸಾಹತುಗಳಲ್ಲಿಯ ಹಿಂದಿಗಳು ಇತ್ಯಾದಿ ಔಪಚಾರಿಕ ವಿಷಯಗಳನ್ನು ಎತ್ತಿದ್ದಲ್ಲದೆ, ಪ್ರೆಸ್ ಎಕ್ಟ, ಡಿಫೆನ್ಸ ಒಫ್ ಇಂಡಿಯಾ ಎಕ್ಟ ಮುಂತಾದ ೨೩ ಎಕ್ಟುಗಳನ್ನು ರದ್ದುಮಾಡುವುದಕ್ಕಾಗಿ ವಿಚಾರಕ ಕಮಿಟಿಯು ಶಿಫಾರಸುಮಾಡಿದ ಪ್ರಕಾರ ಅವು ರದ್ದುಮಾಡಲ್ಪಟ್ಟವು ಎಂಬೀ ಸಂಗತಿಯನ್ನು ಸಹ ಗವರ್ನರ ಜನರಲ್ಲರು ಆಡಿತೋರಿಸಿದರು. ಹಿಂದುಸ್ಥಾನದ ಆಚಾರವಿಚಾರಗಳ ಸ್ವಾತಂತ್ರ್ಯಕ್ಕೆ ಪ್ರತಿಬಂಧಕವಾದ ಹಲವು ಕಾನೂನುಗಳನ್ನು ನಾವು ರದ್ದುಪಡಿಸಿದ್ದೇವೆ ಎಂದು ಹೇಳಿ ರೆಡಿಂಗ ಸಾಹೇಬರು ತಮ್ಮ ಭಾಷಣದ ಕಡೆಗೆ ಶ್ರೋತೃಗಳ ಮನಸ್ಸನ್ನು ಆಕರ್ಷಿಸುತ್ತಿದ್ದರು. ಮತ್ತು ಇದೇ ಉದ್ದೇಶದಿಂದ ವೈಸರಾಯರು ತಮ್ಮನ್ನು ವೈಸರಾಯತನದ ಪಟ್ಟವನ್ನು ಕಟ್ಟುವಾಗ ಬಾದಶಹರು ಕಳುಹಿಸಿ ಎಕ್ಟ ಬರವಣಿಗೆಯ ಮಾತನ್ನು ಎತ್ತಿ ಹೇಳಿದರು. "ನಮ್ಮ ಪಾರ್ಲಿಮೆಂಟು ಹಿಂದೂಸ್ಥಾನಕ್ಕೆ ಸಾಮ್ರಾಜ್ಯದೊಳಗಿನ ಇತರ ಭಾಗಗಳಂತೆ ಉಚ್ಚಸ್ಥಿತಿಯನ್ನು ತಂದುಕೊಡುವುದಕ್ಕಾಗಿಯೂ, ವಸಾಹತುಗಳ ತರಗತಿಗೆ ಹಿಂದೂಸ್ಥಾನವನ್ನು ತಂದುಕೊಡಿಸಬೇಕಾಗಿಯೂ ಕಾನೂನನ್ನು ಪಾಸುಮಾಡಿದೆಯಷ್ಟೆ. ಆ ಮೇರೆಗೆ ನೀವು (ರೆಡಿಂಗಸಾಹೇಬರು) ಹಿಂದೂಸ್ಥಾನದ ಸೂತ್ರಗಳನ್ನು ಕೈಕೊಂಡು ನಾವು ದಿಗ್ದರ್ಶಿಸಿದ ಮೇರೆಗೂ ಅಥವಾ ನಿಮ್ಮ ಅಭಿಪ್ರಾಯದ ಮೇರೆಗೂ—ಆದರೂ ಪಾರ್ಲಿಮೆಂಟಿನ ಆಜ್ಞೆಯನ್ನು ಉಲ್ಲಂಘಿಸದೆ—ಸುಧಾರಣೆಗಳನ್ನು ಯಶಸ್ವಿತೆಗೆ ಕೊಂಡುಹೋಗಬೇಕು. ಪಾರ್ಲಿಮೆಂಟಿನ ಇಚ್ಛೆಯ ಪ್ರಕಾರ ಅಥವಾ ಹೊಸ ಸುಧಾರಣೆಗಳನ್ನು ಅಂಗೀಕರಿಸಿದವರ ಸಹಕಾರದ ಪ್ರಕಾರ ದೇಶದ ಪ್ರಗತಿಯನ್ನು ಸಾಧಿಸಬೇಕು". ಎಂಬ ಅರ್ಥದ ಬಾದಶಹರ ಮಾತನ್ನು ವೈಸರಾಯರು ಆಡಿತೋರಿಸಿದರು. ಮಂತ್ರಿಗಳ ಮಹತ್ವವನ್ನು ಸಹ ವರ್ಣಿಸಿದರು. ಅವರ ಮಾತು ಸಾಮಾನ್ಯವೆಂದು ತಿಳಿಯಬಾರದು. ಅವರು ಬ್ರಿಟಿಷ್ ಸಾಮ್ರಾಜ್ಯದ ಮಂತ್ರಿಗಳಾಗಿದ್ದಾರೆಂಬುದು ಹೌದಾದರೂ ಹಿಂದುಸ್ಥಾನದ ಸುಧಾರಣೆಗಳ ವಿಷಯವಾಗಿ ಅವರ ಬೆಲೆಯನ್ನು ತಿಳಿಸಿ ಹೇಳುವುದಾದರೆ ಅವರೆ ಪಾರ್ಲಿಮೆಂಟಿನಲ್ಲಿ ಅಗ್ರಾಸನವನ್ನು ವಹಿಸಿ ಈ ಸುಧಾರಣೆಗಳ ಬೀಲನ್ನು ಉತ್ತೀರ್ಣಮಾಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಅವರು ತಮ್ಮ ಮತ್ತು ಪಾರ್ಲಿಮೆಂಟಿನ ಧೋರಣವನ್ನು ಎಂದೂ ಮುರಿಯಲಿಕ್ಕಿಲ್ಲ. ಸುಧಾರಣೆಗಳು ಪರೀಕ್ಷಾರ್ಥವಾಗಿವೆ ಎಂಬ ಮಾತನ್ನು ಜನರು ನಂಬಬಾರದೆಂಬುದಾಗಿ ಜಾಹೀರಪಡಿಸಲು ಮಂತ್ರಿಗಳು ತಿಳಿಸಿರುತ್ತಾರೆ.

ಸಿಮ್ಲದಲ್ಲಿ ವೈಸರಾಯರು ಈ ರೀತಿಯಿಂದ ಪಾರ್ಲಿಮೆಂಟಿನ ಮಹತ್ವ ಮತ್ತು ಪ್ರಧಾನಜಿಯವರ ಗೌರವ ಇವುಗಳನ್ನು ಸ್ಥಾಪಿಸಲು ಯಾಕೆ ಯತ್ನಿಸಿದರೆಂಬುದನ್ನು ಚಾಣಾಕ್ಷವಾಚಕರು ಕಂಡುಹಿಡಿಯದೆ ಇರಲಿಕ್ಕಿಲ್ಲ. ವೈಸರಾಯರು ಪಾರ್ಲಿಮೆಂಟಿನ ದಯೆಯಿಂದಲೆ ಹಿಂದುಸ್ಥಾನಕ್ಕೆ ಸ್ವರಾಜ್ಯ ಲಾಭವಾಗಬೇಕೆಂದು ಇಷ್ಟೆ ಹೇಳಿ ಸುಮ್ಮಗಾಗುತ್ತಿದ್ದಾದರೆ ಅದು ಕ್ಷಮ್ಯವಾಗುತ್ತಿತ್ತು. ಆದರೆ ಅವರು ತಮ್ಮ ಭಾಷಣದ ಕೊನೆಗೆ ಅಸಹಕಾರದ ರಾಷ್ಟ್ರೀಯ ಚಳವಳದ ಮೇಲೆ ಆರೋಪಣೆಗಳನ್ನು ಹೊರಿಸಿ, "ಇಂಥವರು ಸರಕಾರದ ಹಿತೈಷಿಗಳಲ್ಲ, ಅವರು ಕೌನ್ಸಿಲುಗಳಲ್ಲಿ ಬರುವುದು ಹಿತಾವಹವಲ್ಲ, ಅಸಹಕಾರಕ್ಕೆ ವಿರುದ್ಧವಾಗಿ ಚಳವಳವನ್ನು ಪ್ರಾರಂಭಿಸಿ ಅದನ್ನು ನಿಲ್ಲಿಸಬೇಕು" ಎಂಬಿತ್ಯಾದಿ ಅಭಿಪ್ರಾಯವನ್ನು ಧ್ವನಿಸಿದರು. ಈ ಅಸಹಕಾರವು ಬೆಳೆದುಹೋದರೆ ದೇಶದಲ್ಲಿ ಅರಾಜಕತೆಯುಂಟಾದೀತು. ಅರ್ಥಾತ್ ಈ ಎಲ್ಲ ದುರವಸ್ಥೆಗಳನ್ನು ನಿಲ್ಲಿಸಲು ಮಂತ್ರಿಗಳು ಹೇಳಿದ ಮೇರೆಗೆ ಸುಧಾರಣೆಗಳನ್ನು ಹಿಂದೆಳೆಯುವುದಲ್ಲದೆ ಗತ್ಯಂತರವಿದೆಯೆ ಎಂಬ ಸವಾಲು ಕೂಡ ವೈಸರಾಯರ ಭಾಷಣದಲ್ಲಿ ಗುಪ್ತಗಾಮಿಯಾಗಿ ಹರಿಯುತ್ತಿತ್ತು! ಮಾತ್ರವಲ್ಲ ಬರುವ ಇಲೆಕ್ಶನಿನಲ್ಲಿ ಉಗ್ರಪಕ್ಷದವರನ್ನು ಚುನಾಯಿಸದಂತೆ ದಕ್ಷತೆಯನ್ನು ತೆಕ್ಕೊಳ್ಳಲು ಮೆಂಬರರಿಗೆ ಉಪದೇಶಿಸಲು ವೈಸರಾಯರಿಗೆ ಎಳ್ಳಷ್ಟೂ ಸಂಕೋಚತೋರಲಿಲ್ಲ!

ಈ ಎಲ್ಲ ಮಾತಿನ ತಾತ್ಪರ್ಯಾರ್ಥವು ಒಂದೆ. ಅದಾವುದಂದರೆ, ಕೌನ್ಸಿಲುಗಳಲ್ಲಿ ಮೆಂಬರರು ಪ್ರಧಾನಜಿಯವರ ಮೇಲೆ ನಿಂದಾತ್ಮಕವಾದ ಠರಾವನ್ನು ತರಬಾರದು. ವೈಸರಾಯರು ಈ ಮೇರೆಗೆ ತಮ್ಮ ಭಾಷಣದ ಭದ್ರವಾದ ಕೋಟೆಯನ್ನು ಕಟ್ಟಿದ್ದರೂ, ಕೌನ್ಸಿಲ್ ಒಫ್ ಸ್ಟೇಟ್ಸಿನಲ್ಲಿ ಪ್ರೊಫೆಸರ ಕಾಳೆ ಮತ್ತು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಶ್ರೀಯುತ ಅಗ್ನಿಹೋತ್ರಿ ಇವರು ಮೊದಲು ಸಂಕಲ್ಪಿಸಿದ ಮೇರೆಗೆ ಪ್ರಧಾನಜಿಯವರಾದ ಲೊಯ್ಡ ಜೋರ್ಜರ ಭಾಷಣದ ವಿಷಯವಾಗಿ ನಿಂದಾವ್ಯಂಜಕ ಠರಾವನ್ನು ತಂದರೆ ತಂದರು. ಕೌನ್ಸಿಲ್ ಒಫ್ ಸ್ಟೇಟ್ಸಿನ ರಚನೆಯು ಸದೋಷವಾಗಿರುವುದರಿಂದ ಇಂಥ ಠರಾವುಗಳು ಸಜೀವವಾಗಿ ಉತ್ತೀರ್ಣವಾಗುವುದು ಕಡಿಮೆ. ಸರಕಾರಿ ಪಕ್ಷವಲ್ಲವಾದರೂ ಅಧಿಕಾರಿಗಳ ಕೃಪಾಛತ್ರದಲ್ಲಿ ದಿವಸಗಳನ್ನು ದೂಡುವ ಜನರೆ ಇದರಲ್ಲಿ ಅಧಿಕ ಸಂಖ್ಯಾಕರಾಗಿರುವುದರಿಂದ ಅವರ ಬಹುಮತದಿಂದ ಇಂಥ ಠರಾವಿನ ಗೋಣು ಮುರಿಯಲ್ಪಡುತ್ತದೆ ಎಂಬುದು ಜನಜನಿತವಾದ ಮಾತು. ಅದ್ದರಿಂದ ಪ್ರೊಫೆಸರ ಕಾಳೆಯವರು ಕೌನ್ಸಿಲ್ ಒಫ್ ಸ್ಟೇಟ್ಸನಲ್ಲಿ ತಂದ ಈ ಠರಾವು ಮತಬಾಹುಳ್ಯದ ಅಭಾವದಿಂದ ಬಿದ್ದುಹೋದ್ದಾದರೆ ಅದರಲ್ಲಿ ಹೆಚ್ಚಿನ ವ್ಯಸನವಿಲ್ಲ. ಪರಂತು ಈ ಸಂದರ್ಭದಲ್ಲಿ ವ್ಯಸನದ ಮಾತೇನಂದರೆ, ಸರ್. ವಿಲ್ಯಮರು ಸರಕಾರಪಕ್ಷದ ಹೃದಯವನ್ನು ಬಿಚ್ಚಿ ಹೇಳುವಾಗ ಮತ್ತು ಒಂದು ರೀತಿಯಿಂದ ಪ್ರಧಾನಜಿಯವರ ಕೃತಿಯನ್ನು ಸಮರ್ಥಿಸುವಾಗ ಹಿಂದೀರಾಜಕೀಯ ಚಳವಳಗಾರರ ಮೇಲೆ ಅನೇಕ ಅಲ್ಲದಸಲ್ಲದ ಆರೋಪಣೆಗಳನ್ನು ಮಾಡಿದ್ದಾರೆ. ಮಹಾತ್ಮಾ ಗಾಂಧಿಗಳು ಹಿಂದೂಸ್ಥಾನದ ರಾಜಕೀಯ ಪ್ರಗತಿಗೆ ದೊಡ್ಡ ಶತ್ರುಗಳು ಎಂಬುದಾಗಿ ಈ ವಿಲ್ಯಮರು ಅಪ್ಪಣೆ ಕೊಡಿಸಿದ್ದಾರೆ! ಗಣದೇವತೆಯ ಅಥವಾ ಗಣನಾಯಕರ ಆವಿರ್ಭಾವವುಂಟಾಗಿ ಕೆಲವು ಶ್ರದ್ಧಾಳುಗಳು ಎಷ್ಟೊ ಸಂಗತಿಗಳನ್ನು ಅಪ್ಪಣೆ ಕೊಡಿಸುವುದಿರುತ್ತದೆ. ಸುಶಿಕ್ಷಿತರಲ್ಲಿ—ಪುನಃ ಯುರೋಪಿಯನರಲ್ಲಿ—ಇಂಥ ಆವಿರ್ಭಾವವು ಅಸಂಭವನೀಯವೆಂದು ನಾವು ತಿಳಿದಿದ್ದೆವು. ಪರಂತು ಸರ್. ವಿಲ್ಯಮರ ಮೇಲಿನ ಮಾತನ್ನು ಕೇಳುವಾಗ ಇವರಲ್ಲಿ ಯಾವ ಗಣದೇವತೆಯು ಪ್ರವೇಶಿಸಿ ಈ ರೀತಿಯಿಂದ ಅಪ್ಪಣೆಕೊಡಿಸುತ್ತಾಳೆಂಬುದು ತಿಳಿಯದು. ಹಿಂದಿಗಳನ್ನು ವಿಶೇಷತಃ ಮುಖಂಡರನ್ನು ಬೈಯುವುದರಲ್ಲಿ ಮಾಜಿ ವೈಸರಾಯ, ಕರ್ಝನಸಾಹೇಬರು, ಮತ್ತು ಮಾಜಿ ಮುಂಬಯಿ ಗವರ್ನರ, ಸಿಡನ್‌ಹೆಮ ದೊರೆಗಳು ಪಟುಗಳಾಗಿದ್ದರು. ವಿಲಾಯತಿಯಲ್ಲಿರುವ ಅವರ ಆತ್ಮಗಳು ವಿಲ್ಯಮರಲ್ಲಿ ಪ್ರವೇಶಿಸಿ ಗಾಂಧಿಗಳ ಶತ್ರುತ್ವವನ್ನು ಬೈಲಿಗೆ ತಂದವೊ? ಗಾಂಧಿಗಳನ್ನು, ತೆರೆದಬಾಯಿಗೆ, ಈ ಹೊಸ ಮಹಾತ್ಮರು ಹಿಂದೂಸ್ಥಾನದ ರಾಜಕೀಯ ಪ್ರಗತಿಗೆ ದೊಡ್ಡ ಶತ್ರುಗಳೆಂದು ಹೇಳಿದರಷ್ಟೆ. ಆದರೆ ಗಾಂಧಿಗಳು ಹಿಂದೂಸ್ಥಾನದ ಅಧಿಕಾರವನ್ನೆಲ್ಲ ನುಂಗಿದರೆ? ಹಿಂದೂಸ್ಥಾನದ ದುಡ್ಡನ್ನು ನಾಶಮಾಡಿದರೆ? ಹಿಂದೂಸ್ಥಾನದ ಉದ್ಯೋಗಗಳನ್ನೂ, ಕಲಾಕೌಶಲ್ಯವನ್ನೂ ಹಾಳುಮಾಡಿದರೆ? ಒಬ್ಬರ ಮೇಲೆ ಇನ್ನೊಬ್ಬರನ್ನು ಎಬ್ಬಿಸಿಹಾಕಿ ಇಲ್ಲಿಯ ಐಕ್ಯವನ್ನು ಮುರಿದರೆ? ಗಾಂಧಿಗಳು, ಇಲ್ಲಿಯ ರಾಜಕೀಯ ಪ್ರಗತಿಯ ಶತ್ರುಗಳೆಂದು ತೋರಲಿಕ್ಕೆ ಮೇಲೆ ಹೇಳಿದವುಗಳಲ್ಲಿ ಯಾವ ಅಪರಾಧವನ್ನು ಮಾಡಿದರು? ಈ ಸವಾಲುಗಳಿಗೆ ವಿಲ್ಯಮರು ಸಮರ್ಪಕವಾದ ಉತ್ತರವನ್ನು ಕೊಡಬಲ್ಲರೆ? ಸಾರಾಂಶ, ಬೈಯಬೇಕೆಂಬ ಒಂದೆ ಆಲೋಚನೆಯು ಯಾವಾಗ ಮನಸ್ಸಿನ ಮುಂದೆ ಸುಳಿಯುವುದೊ ಆಗ ವಿವೇಕವು ಭ್ರಷ್ಟವಾಗಿ ಮನುಷ್ಯನು ಯದ್ವಾತದ್ವಾ ಮಾತಾಡುವನು. ಇದೆ ಅವಸ್ಥೆಯು ನಮ್ಮ ವಿಲ್ಯಮ್ ಸಾಹೇಬರದಾಗಿದೆ. ಇದು ಮಾತ್ರ ವಿಷಾದಕರವಾದ ಸಂಗತಿಯು. ಇರಲಿ.

ಸಿಮ್ಲದಲ್ಲಿ ಸೇರಿದ ಕೌನ್ಸಿಲ್ ಒಫ್ ಸ್ಟೇಟ್ಸಿನ ಅಧಿವೇಶನದಲ್ಲಿ ಪ್ರಧಾನಜಿಯವರ ಭಾಷಣದ ನಿಂದಾವ್ಯಂಜಕ ಠರಾವನ್ನು ಈ ಮೇರೆಗೆ ಸರಕಾರ ಕಡೆಯವರು ಉಪರೋಧಿಸಿ ಬೀಳಿಸಿದರೂ, ಮುಲಾಮು ಪಟ್ಟಿಯಿಂದ ನಿಲ್ಲಿಸಿದ ಹುಣ್ಣು ಇನ್ನೊಂದು ಕಡೆಯಲ್ಲಿ ಏಳುವಂತೆ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಪ್ರಾದುರ್ಭೂತವಾಗಿ ಇದೆ ನಿಂದಾವ್ಯಂಜಕ ಠರಾವು ಕೊನೆಗೆ ಪಾಸಾಯಿತು. ಅಲ್ಲಿ ಕೂಡ ಅನೇಕ ತರ್ಕವಿತರ್ಕಗಳು, ಉಪರೋಧ-ಪ್ರತಿರೋಧಗಳು ಮತ್ತು ಧವತಿ-ನ-ಧವತಿಗಳು ನಡೆದವು. ಆದರೆ ಪ್ರಧಾನಜಿಯವರು ತಮ್ಮ ವಾಗ್‌ಬಾಣದಿಂದ ಜನರ ಅಂತಃಕರಣಕ್ಕೆ ಯಾವ ನೋವನ್ನು ಮಾಡಿರುವರೊ ಮತ್ತು ಸುಧಾರಣೆಗಳನ್ನು ಪ್ರಯೋಗಕೋಟಿಯಲ್ಲಿ ಸೇರಿಸಿ, ಸನದುಶೀರ ಚಳವಳದ ಮೇಲಿನ ನಂಬಿಕೆಯನ್ನು ಸಹ ಅದರ ಭಕ್ತರು ಬಿಟ್ಟುಬಿಡುವಂತೆ ಏನು ಮಾಡಿದ್ದಾರೊ ಇವೆರಡು ಸಂಗತಿಗಳ ಪರಿಣಾಮವು ಎಸೆಂಬ್ಲಿಯ ಮೆಂಬರುಗಳಲ್ಲುಂಟಾದ ಕಾರಣ ನಿಂದಾವ್ಯಂಜಕದ ಠರಾವಿನ ಕಡೆಗೆನೆ ಬಹುಮತವು ನಿಂತು, ಅದು ಪಾಸಾಯಿತು. "ಬಾದಶಹರ ಪ್ರಧಾನಜಿಯವರು ಪಾರ್ಲಿಮೆಂಟಿನಲ್ಲಿ ಹಿಂದಿ ಸಿವಿಲ್ ಸರ್ವಿಸನ್ನು ಕುರಿತು ಮಾಡಿದ ಭಾಷಣದ ಬಗ್ಗೆ ಈ ಎಸೆಂಬ್ಲಿಯು ವ್ಯಸನಪಡುತ್ತದೆ. ಮಂತ್ರಿಗಳು ತಮ್ಮ ಭಾಷಣದಲ್ಲಿ ವ್ಯಕ್ತಗೊಳಿಸಿದ ವಿಚಾರಗಳು ಮತ್ತು ಭಾವನೆಗಳು ಬಾದಶಹರು ಹಿಂದೆ ಪ್ರಕಟಿಸಿದ ರಾಜಕೀಯ ಧೋರಣಕ್ಕೆ "ಮೂಲೇಕುಠಾರ"ವಾಗಿದ್ದು, ಹಿಂದಿದೇಶವು ಸ್ವರಾಜ್ಯಸಂಪಾದನೆ ಮಾಡಬೇಕೆಂದೂ, ಅದಕ್ಕಾಗಿ ವರಿಷ್ಠ ತರಗತಿಯ ನೋಕರಿಯಲ್ಲಿ ಹಿಂದಿಗಳ ಪ್ರವೇಶವು ಅಧಿಕಪ್ರಮಾಣದಿಂದ ಉಂಟಾಗಬೇಕೆಂದೂ ಇಲ್ಲಿಯ ಜನರು ಏನು ನೆನಸಿಕೊಂಡಿದ್ದಾರೊ ಅವರ ತಿಳುವಳಿಕೆಗೆ ಅವು ಭಯೋತ್ಪಾದಕವಾಗಿವೆ." "ಎಸೆಂಬ್ಲಿಯಲ್ಲಿ ಠರಾವು ಈ ರೂಪದಿಂದ ಕೊನೆಗೆ ನಿಲ್ಲಬೇಕಾದರೆ ಮೊದಲು ಹಲವು ಉಪಸೂಚನೆಗಳು ಬಂದವು. ಆದರೂ ಅವುಗಳ ಸಾರಾಸಾರವನ್ನು ಗ್ರಹಿಸಿ ಎಸೆಂಬ್ಲಿಯು ಮೇಲಿನಂತೆ ನಿಷ್ಕರ್ಷಿಸಿತು. ಈ ಠರಾವು ಸಭೆಯಲ್ಲಿ ಪ್ರಸ್ತಾಪಿಸಲ್ಪಡುತ್ತಿರುವಾಗ ಮಿ|| ಕಾಮತ, ಮಿ|| ಜಮುನಾದಾಸ ಮುಂತಾದ ಶಾಂತಪಕ್ಷದ ಅಗ್ರೇಸರರು ಸಹ ಪ್ರಧಾನಜಿಯವರ ಅಪ್ರಬುದ್ಧ ಭಾಷಣವನ್ನು ತೀವ್ರ ಶಬ್ದಗಳಿಂದ ನಿಷೇಧಿಸಿದ್ದಾರೆ. ಈ ಸಂದರ್ಭದಲ್ಲಿ ಸಹ ವಿನ್‌ಸೆಂಟಸಾಹೇಬರು ಕೂಡದಷ್ಟು ಹೆದರಿಸಿದರು; ಅಕಾಂಡತಾಂಡವ ಮಾಡಿದರು; ಪ್ರಧಾನಜಿಯವರ ಮಹತ್ವವನ್ನು ಅತ್ಯಂತ ವರ್ಣಿಸಿದರು ಮಾತ್ರವಲ್ಲ, ಪ್ರಧಾನಜಿಯವರನ್ನು ಸಮರ್ಥಿಸುವ ಭರದಲ್ಲಿ, ಕಿಂಬಹುನಾ ಎಸೆಂಬ್ಲಿಯ ಮುಂದೆ ಬಂದಿರುವ ಠರಾವಿನ ಕುತ್ತಿಗೆಯನ್ನು ಹಿಸುಕುವ ಊರ್ಮಿಯಲ್ಲಿ ಅವರು "ಸಾಕಿದ ಕೈಯನ್ನೆ ಕಚ್ಚಲು ಹೊರಟಿದ್ದೀರಿ" ಎಂದು ಹೇಳಲು ತಪ್ಪಲಿಲ್ಲ. ವಿಲಿಯಮ್‌ವಿನ್‌ಸೆಂಟರು ಇಷ್ಟು ಒದ್ದಾಡಿದರೂ ಪಾಸಾಯಿತು.

ಸಿಮ್ಲದ ಸುದ್ದಿಯನ್ನು ಇಲ್ಲಿ ಬಿಟ್ಟುಬಿಡಬಹುದು. ಮತ್ತು ಇದರಿಂದ ಯಾವ ಒಂದೆರಡು ಮಾತುಗಳು ನಿಷ್ಪನ್ನವಾಗುತ್ತವೆ ಎಂಬುದನ್ನು ನೋಡಬಹುದು. ಈಗಿನ ಕೌನ್ಸಿಲುಗಳಲ್ಲಿ ಸರಕಾರದ ದೃಷ್ಟಿಯಿಂದ ತುಂಟರಾದ ಉಗ್ರಪಕ್ಷದವರೂ, ಅಸಹಕಾರಿಗಳೂ ಯಾರೂ ಇಲ್ಲ. ಸರಕಾರಕ್ಕೆ ಬೇಕಾದ ಶಾಂತಪಕ್ಷದವರೆ ಕೌನ್ಸಿಲುಗಳನ್ನು ಆಕ್ರಮಿಸಿರುವರು. ಯಾವ ಶಾಂತಪಕ್ಷದವರು ಮೆಂಬರಿಕೆಯ ಮೂಲಗೇಣಿಹಕ್ಕನ್ನು ಪಡಕೊಂಡು ಕೊನೆತನಕ ಕೌನ್ಸಿಲುಗಳಲ್ಲಿ ಬರುತ್ತಿರಬೇಕೆಂದು ವಿಲಾಯತಿಯಲ್ಲಿ ಲೊಯಡ ಜೋರ್ಜರು ಮೊದಲುಮಾಡಿಕೊಂಡು ಹಿಂದೂಸ್ಥಾನದಲ್ಲಿ ವಿಲ್ಯಮ್‌ಸಾಹೇಬರು ತನಕ ಎಲ್ಲರು ಅಭಿಪ್ರಾಯಪಡುವರೊ ಅಂಥ ಶಾಂತಪಕ್ಷದವರೆ ಕೌನ್ಸಿಲುಗಳಲ್ಲಿ ತಂದ ನಿಂದಾವ್ಯಂಜಕ ಠರಾವು ಮತ್ತು ಪ್ರದರ್ಶಿಸಿದ ವಿಚಾರಗಳು ಈಗ ಅಧಿಕಾರಿಗಳ ಮುಂದೆಯೂ ಜನತೆಯ ಮುಂದೆಯೂ ಇವೆ. ಶಾಂತಪಕ್ಷದವರಿಗೆ ಇಷ್ಟು ವ್ಯಸನ, ಉದ್ವೇಗ, ಮತ್ತು ಸಂತಾಪವುಂಟಾಗಬೇಕಾದರೆ, ಪ್ರಧಾನಜಿಯವರ ಭಾಷಣವು ಎಷ್ಟು ಅಸಮಂಜಸ ಮತ್ತು ಅಪ್ರಬುದ್ಧ ಹಾಗು ತ್ಯಾಜ್ಯವಾಗಿರಬೇಕೆಂಬುದು ಸರಕಾರಕ್ಕೆ ಈಗ ಸಹ ನಿಜವಾಗಿಯೆ ತಿಳಿದುಬಂದೀತು. ಮತ್ತು ಮೇಲಿನ ಠರಾವಿನಲ್ಲಿ ವಿಧಿಸಿದ ವಿಧಾನಗಳನ್ನು, ಆ ಠರಾವಿನಲ್ಲೆ ಸೂಚಿಸಿದ ಮೇರೆಗೆ ಭಾರತಮಂತ್ರಿಗಳ ಮುಖಾಂತರ ಬಾದಶಹರ ಸನ್ನಿಧಿಗೆ ಹಿಂದುಸ್ಥಾನ ಸರಕಾರವು ತಲಪಿಸೀತೆಂಬುದಕ್ಕೆ ಸಂದೇಹವಿಲ್ಲ. ಮತ್ತು ಅದನ್ನು ನೋಡಿ ವಸ್ತುತಃ ಜಾಣರಾದ ಪ್ರಧಾನಜಿಯವರು ಇಂಥ ಕ್ಷೋಭಕರ ಭಾಷಣವನ್ನೂ, ಘಾತಕ ವಿಚಾರಗಳನ್ನೂ ಇನ್ನು ಮುಂದೆ ಹೊರಗೆಡಹುವ ಅವಿಚಾರವನ್ನು ಮಾಡದಿರುವ ಪಾಠವನ್ನು ಕಲಿತಾರು ಎಂದು ತೋರುತ್ತದೆ.

ಕೊನೆಗೆ ಕೌನ್ಸಿಲ್ ಬಹಿಷ್ಕಾರವಾದಿಗಳು ಸಹ ಇದರಿಂದ ಒಂದು ಪಾಠವನ್ನು ಕಲಿಯಬಹುದು. ರಾಷ್ಟ್ರೀಯ ಸಭೆಯ ಪಕ್ಷವು ಬರುವ ಚುನಾವಣೆಯಲ್ಲಿ ಕೌನ್ಸಿಲುಗಳನ್ನು ಆಕ್ರಮಿಸಿ ತಮ್ಮ ಬಹುಮತದ ಬಲದಿಂದ ಕೌನ್ಸಿಲುಗಳಲ್ಲಿ ನಿಜವಾದ ಲೋಕಮತವನ್ನು ಪ್ರದರ್ಶಿಸಬೇಕು. ಕೌನ್ಸಿಲೆನ್ನುವುದೆ ಸ್ವರಾಜ್ಯಕ್ಕೆ ಸಾಧನಬ್ರಹ್ಮವೆಂದು ನಾವಾದರೂ ತಿಳಕೊಳ್ಳುವುದಿಲ್ಲ. ಹಾಗೆಯೆ ಕೌನ್ಸಿಲ್ ಬಹಿಷ್ಕಾರವೆಂಬುದೇ ಅಸಹಕಾರಬ್ರಹ್ಮವೆಂದು ಅಸಹಕಾರಿಗಳು ತಿಳಕೊಳ್ಳುವುದೂ ಉಚಿತವಲ್ಲ. ಸ್ವರಾಜ್ಯ ಸಂಪಾದನೆಯ ಕಾರ್ಯದಲ್ಲಿ ಕೌನ್ಸಿಲುಗಳಿಂದಲೂ ಕೆಲವು ಕಾರ್ಯಗಳಾಗತಕ್ಕವಿವೆ. ಅದನ್ನು ಸಂಪೂರ್ಣ ಅಲ್ಲಗಳೆಯಲು ಸಾಧ್ಯವಿಲ್ಲ. ಅದ್ದರಿಂದ ರಾಷ್ಟ್ರೀಯ ಸಭೆಯ ಅಸಹಕಾರ ಕಾರ್ಯಕ್ರಮದಲ್ಲಿ ಉಂಟಾಗಲಿಕ್ಕಿದ್ದ ತಿದ್ದುಪಾಟಗಳಲ್ಲಿ ಕೌನ್ಸಿಲ್ ಬಹಿಷ್ಕಾರವನ್ನು ತೆಗೆದುಹಾಕುವ ಯಾವ ಪ್ರಸ್ತಾಪವು ನಡಕೊಂಡುಂಟೊ ಅದಕ್ಕೆ ಸಿಮ್ಲದ ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ಲೋಕಪಕ್ಷಕ್ಕೆ ಬಂದ ಜಯವು ಉತ್ತೇಜಕವಾದೀತೆಂಬುದಕ್ಕೆ ಸಂದೇಹವಿಲ್ಲ.

ಸ್ಫುಟವಿಚಾರಗಳು.

೧. ಲೊರ್ಡ ಸಿಡನ್‌ಹೇಮರು ಹಿಂದೂಸ್ಥಾನಕ್ಕೆ ಅಪರಿಚಿತರಲ್ಲ. ಇವರು ಪೂರ್ವದಿಂದಲೂ ಈ ದೇಶವನ್ನು ಪ್ರೀತಿಸುತ್ತಿದ್ದರು. ಮತ್ತು ತಮ್ಮ ಎಷ್ಟೊ ಆಯುಷ್ಯಕಾಲವನ್ನು ಸಹ ಇಲ್ಲಿ ಕಳೆದಿದ್ದರು. ಅದ್ದರಿಂದ ಹಿಂದೂಸ್ಥಾನದ ವಿಷಯವಾಗಿ ಹೊಸ ಸಂಗತಿಯು ತಲೆ ಎತ್ತಿದರೆ ಈ ಮಹಾಶಯರು ತಮ್ಮ ಮತವನ್ನು ಸಹ ಹೊರಪಡಿಸದೆ ಇರುವವರಲ್ಲ. ಮುಖ್ಯ ಮಂತ್ರಿಗಳು ಇತ್ತ ಹಿಂದುಸ್ಥಾನದ ವಿಷಯವಾಗಿ ಪ್ರಸ್ತಾಪವನ್ನು ಮಾಡಿದೊಡನೆ ಲೊರ್ಡ ಸಿಡನಹೇಮರು ಸಹ ತಮ್ಮ ವಾಕ್‌ಪಟುತ್ವವನ್ನು ತೋರಿಸಿದ್ದಾರೆ. ಮುಖ್ಯ ಮಂತ್ರಿಗಳು ಈಗ ಕಣ್ಣು ತೆರೆದದ್ದನ್ನು ನೋಡಿ ಈ ಮಹಾಶಯರು ಸಂತೋಷಪಟ್ಟಿದ್ದಾರೆ. ಹಿಂದೂಸ್ಥಾನಕ್ಕೆ ಸುಧಾರಣೆಯನ್ನು ಕೊಡುವಾಗ ಎತ್ತಿದ ಆಕ್ಷೇಪವನ್ನು ಮೊಂಟೆಗ್ಯು ಮುಂತಾದವರು ಗಣ್ಯಮಾಡದೆ ಇದ್ದುದನ್ನು ನೋಡಿ ಸಿಡನ್ ಹೆಮರು ಬಹು ಪಶ್ಚಾತ್ತಾಪ ಪಟ್ಟಿದ್ದರು. ಆದರೆ ಈಗ ತನ್ನ ಹೇಳಿಕೆಯ ನಿಜತ್ವವು ಬ್ರಿಟಿಷ ಮುತ್ಸದಿಗಳಿಗೆ ಗೊತ್ತಾಗ ಹತ್ತಿದೆಂದು ಅವರ ಮನಸ್ಸು ಸಂತೋಷದಿಂದ ಉಬ್ಬಿದೆ. ಇಂಗ್ಲಂಡದ ಸುಪ್ರಸಿದ್ಧ ಮೋರ್ನಿಂಗ ಪೋಷ್ಟು ಎಂಬ ಪತ್ರಿಕೆಯಲ್ಲಿ ಅವರು ಬರೆಯುವದೇನೆಂದರೆ—ಹಿಂದೂಸ್ಥಾನಕ್ಕೆ ಸುಧಾರಣೆಯನ್ನು ಕೊಡ ಕೊಡದಿತ್ತು. ಆದರೆ ಲೊಯ್ಡ ಜೋರ್ಜರು ಹೇಳಿದಂತೆ ಈಗ ಪ್ರಯೋಗಕ್ಕೋಸ್ಕರ ಕೊಟ್ಟ ಸುಧಾರಣೆಯನ್ನು ಹಿಂದಕ್ಕೆ ತೆಕ್ಕೊಳ್ಳಬಹುದು. ಹಿಂದೂಸ್ಥಾನದಲ್ಲಿಯ ಚಳವಳಗಾರರು ತಮ್ಮ ದೇಶವನ್ನು ಈಗ ಹಾಳುಮಾಡಿಬಿಟ್ಟಿದ್ದಾರೆ. ಪಂಜಾಬ ಮತ್ತು ಬಂಗಾಲದಲ್ಲಿ ಅವರು ಮಾಡಿದ ಅನಾಹುತ ಕೃತ್ಯಗಳು ಅವರಲ್ಲಿರುವ ಅರಾಜಕತ್ವವನ್ನು ಸೂಚಿಸುತ್ತವೆ. ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟರೆ ಅವರು ತಮ್ಮ ಆಯುರ್ವೇದ, ಯುನಾನಿ ಮುಂತಾದ ದೇಶಿ ಔಷಧಗಳನ್ನು ಎಲ್ಲ ಕಡೆಯಲ್ಲಿ ಉಪಯೋಗಿಸಿಯಾರು. ಈ ಔಷಧಿಗಳಿಂದ ಸಾವಿರಾರು ಮರಣಗಳು ಹಿಂದುಸ್ಥಾನದಲ್ಲಿ ಸಂಭವಿಸುತ್ತಿವೆ.–ಇದರ ಮೇಲಿಂದ ಹಿಂದೂಸ್ಥಾನದ ಮೇಲಿರುವ ಸಿಡನ್‌ಹೇಮರ ಅತುಲಪ್ರೀತಿಯು ನಮ್ಮ ವಾಚಕರಿಗೆ ವ್ಯಕ್ತವಾಗದೆ ಇರಲಿಕ್ಕಿಲ್ಲ. ಆದರೆ ಈ ಮಹಾಶಯರ ಅಂಬೋಣಕ್ಕೆ ಟೀಕೆಯು ಅಗತ್ಯವೆ ಇಲ್ಲ. ಸಾಹೇಬರೇನೊ ಪಾಪ! ಹಿಂದೂಸ್ಥಾನದ ಮೇಲಿರುವ ತಮ್ಮ ವೈಷಮ್ಯವನ್ನು ಈ ರೀತಿಯಿಂದ ಚೆಲ್ಲಿ ತಮ್ಮ ಮನಸ್ಸನ್ನು ಶಾಂತಮಾಡಿಕೊಳ್ಳುತ್ತಿದ್ದಾರೆ. ಅಂಥ ಸಂದರ್ಭದಲ್ಲಿ ನಾವು ಅವರ ಸಮಾಧಾನದ ಉಡುಪನ್ನು ತೆಗೆದು ಹಾಕುವುದು ಯೋಗ್ಯವಲ್ಲ. ಆದರೂ ಇಲ್ಲಿಯ ಔಷಧಗಳ ವಿಷಯವಾಗಿ ಅವರ ಮನಸ್ಸಿನಲ್ಲಿರುವ ದುರಭಿಪ್ರಾಯವನ್ನು ನೋಡಿ [illegible] ಎರಡು ಮಾತುಗಳನ್ನು ಇಲ್ಲಿ ಪ್ರಸ್ತಾಪಿಸದೆ ಇರಲಿಕ್ಕಾಗುವುದಿಲ್ಲ. ಇವರು ಆಯುರ್ವೇದ ಅಥವಾ ಯುನಾನಿ ವೈದ್ಯದ ವಿಷಯಗಳಲ್ಲಿ ಎಷ್ಟು ಪರಿಶ್ರಮಪಟ್ಟಿದ್ದಾರೆ? ಅಥವಾ ಇವುಗಳಿಂದ ಉಂಟಾಗುವ ಅನರ್ಥಗಳನ್ನಾದರೂ ಸಪ್ರಮಾಣವಾಗಿ ಕಂಡಿದ್ದಾರೇನು? ಈ ಎರಡು ಸಂಗತಿಗಳೂ ಇಲ್ಲದ ಮೇಲೆ ಸಾಹೇಬರ ಮೇಲೆ ಬರದಂಥ ಮಾತುಗಳಿಗೆ ಬೆಲೆ ಇದೆಯೆ? ಇದು ಮುತ್ಸದಿಗಳ ಕರ್ತವ್ಯವಲ್ಲ. ಬರೆ ಮಾತ್ಸರ್ಯದ ಪರಿಣಾಮವು!

೨. ಯುರೋಪದ ಮಹಾಯುದ್ಧವು ಅಂತ್ಯವಾದರೂ ಗ್ರೀಕ ಮತ್ತು ತುರ್ಕಿಸ್ಥಾನಕ್ಕೆ ಈಗಲೂ ಯುದ್ಧವು ನಡೆಯುತ್ತಿದೆ. ಆದರೆ ಇಷ್ಟರ ವರೆಗೆ ನಡಿಯುತ್ತಿರುವ ಯುದ್ಧವು ಅತಿ ಮಹತ್ವದ್ದಲ್ಲವಾದರೂ ಸದ್ಯದಲ್ಲಿ ನಡೆದ ಯುದ್ಧವು ಬಹು ಪ್ರಮುಖವಾದ್ದೆಂದು ಹೇಳಬಹುದು. ಈ ಯುದ್ಧದ ವೃತ್ತಾಂತವನ್ನು ನಾವು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ. ಈ ಯುದ್ಧದಲ್ಲಿ ಮುಖ್ಯವಾಗಿ ತರ್ಕಿಗೆ ಜಯ ಸಿಕ್ಕಿ ಸ್ಮಿರ್ನಾ ಪಟ್ಟಣವು ಮುಸಲ್ಮಾನರ ಕೈವಶವಾಯಿತು. ಇದು ಮೊದಲು ಗ್ರೀಕ ದೇಶಕ್ಕೆ ಸೇರಿದ್ದರೂ ಈಗ ಮುಸಲ್ಮಾನರ ವಶದಲ್ಲಿ ಬಂತು. ಈ ಜಯಕ್ಕೆ ಮುಖ್ಯವಾಗಿ ಅಲ್ಲಿಯ ರಾಷ್ಟ್ರೀಯ ಪಕ್ಷದವರಾದ ಕೇಮಲಿಷ್ಟ ತಂಡದವರೆ ಕಾರಣರು. ಜಯದ ವರ್ತಮಾನವನ್ನು ಕೇಳಿ ಮುಸಲ್ಮಾನರಿಗೆ ಮಾತ್ರವಲ್ಲ ಸತ್ಯಪ್ರಿಯರಿಗೂ ಕೂಡ ಸಂತೋಷವಾಗುವುದು. ಕೆಲವು ಅಂಶಗಳಲ್ಲಿ ಜಯವು ಸಿಕ್ಕಿದೆಂದು ತೋರುತ್ತದೆ. ಅದ್ದರಿಂದ ಇವರು ತಮ್ಮ ಜಯದ ಈ ಸಂದರ್ಭವನ್ನು ವೃಥಾ ಹಾಳುಮಾಡಿಕೊಳ್ಳದೆ ಒಳ್ಳೇ ರೀತಿ ಸಾಧನೆ ನಡಿಸಿದರೆ ಅವರ ಮುಂದಿನ ಇಚ್ಛೆಯು ಕೂಡ ಸಾಧ್ಯವಾದೀತೆಂದು ಹೇಳಬಹುದು.

ಮಂಗಳೂರು.

ದ. ಕನ್ನಡಾ, ಸೇಲಂ, ಕೊಯಮುತ್ತೂರು, ನೀಲಗಿರಿ, ಮಲಬಾರ ಜಿಲ್ಲೆಗಳ ಲೋಕಲ್ ಮತ್ತು ಮುನ್ಸಿಪಲ್ ಗ್ರೂಪ್ ಕೊನ್ಫರೆನ್ಸು ಬರುವ ಒಕ್ಟೋಬರ ತಾರೀಕು ೨ನೇ ಸೋಮವಾರ ಮಧ್ಯಾಹ್ನ ೧೨ ಗಂಟೆಗೆ ಮಂಗಳೂರು ಹ್ಯಾಯರ್ ಎಲಿಮೆಂಟರಿ ಟ್ರೈನಿಂಗ ಶಾಲೆಯಲ್ಲಿ ಕೊಯಮುತ್ತೂರು ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರಾದ ರಾವ್ ಬಹದ್ದೂರ್ ಟಿ. ಎ. ರಾಮಲಿಂಗ ಚೆಟ್ಟಿಯಾರ್ ಬಿ. ಎ. ಬಿ. ಎಲ್. ಯಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಮುನ್ಸಿಪಾಲಿಟಿಗಳ ಮತ್ತು ಸ್ಥಳಿಕ ಬೋರ್ಡುಗಳ ಇನ್ಸ್‌ಪೆಕ್ಟರುಗಳು ಮತ್ತು ಸಂಬಂಧಪಟ್ಟ ಇತರ ಅಧಿಕಾರಿಗಳು ಈ ಅಧಿವೇಶನಕ್ಕೆ ಚಿತ್ತೈಸಲಿಕ್ಕಿದ್ದಾರೆ. ಈ ಗ್ರೂಪಿನಲ್ಲಿ ಸೇರಿದ ಎಲ್ಲಾ ಸ್ಥಳೀಯ ಸಂಸ್ಥೆಗಳು ಈ ಕಾರ್ಯದಲ್ಲಿ ಸಹಕರಿಸಿ ಅಧಿವೇಶನವು ಯೋಗ್ಯವಾಗಿ ನಡೆಯುವಂತೆ ಮಾಡಬೇಕಾಗಿ ಕೊನ್ಫರೆನ್ಸಿನ ಇಲ್ಲಿಯ ಸೆಕ್ರೆಟರಿಗಳಾದ ಮ. ರಾ. ಯನ್. ವೆಂಕಟರಾವ್ ಮತ್ತು ಮ. ರಾ. ಯಂ. ಶಿವರಾವ್ ಇವರು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತಾರೆ.

ಕಳೆದ ತಾ. ೨೮ರಿಂದ ಟ್ರೆಜರಿ ಡಿಪ್ಯುಟಿ ಕಲೆಕ್ಟರ್ ರಾವ್ ಸಾಹೇಬ ಪಿ. ಕೆ. ನಂಬಿಯಾರರಿಗೆ ಮೂರು ತಿಂಗಳುಗಳ ಪ್ರಿವಿಲೇಜ್ ರಜೆಯು ಕೊಡೋಣಾಗಿದೆ. ಹೆಡ್ ಕ್ವಾಟರ್ಸ್ ಡಿಪ್ಯುಟಿ ಕಲೆಕ್ಟರ ಮ. ರಾ. ಎ. ಕೆ. ಗೋವಿಂದನ್‌ರವರು ಇವರ ಚಾರ್ಜನ್ನು ನೋಡುತ್ತಿರುವರು. ಹಜೂರ ಟ್ರೆಜರರ ಮಿ|| ವಿಕ್ಟರ ಸಾಲ್ಡಾಣಾರು ತಾಲೂಕು ಹೆಡ್ ಎಕೌಂಟಾಂಟ ಕೆಲಸದ ತರಬೇತಿಯನ್ನು ಹೊಂದಲಿಕ್ಕಿರುವುದರಿಂದ ಮ. ರಾ. ಯಸ್. ರಾಮಕೃಷ್ಣ ಕಾಮತರವರು ಹಜೂರು ಟ್ರೆಜರರಾಗಿ ನೇಮಕಪಟ್ಟಿರುವರು.

ರೋಮನ ಕೆಥೋಲಿಕರ ಬಿಶೋಪರ 'ಸಿಲ್ವರ್ ಜುಬ್ಲಿ'ಯ ಉತ್ಸವವು ಬರುವ ತಾ. ೧೮ರಲ್ಲಿ ಜರಗುವುದು.

ಡಿಸ್ಟ್ರಿಕ್ಟ ಬೋರ್ಡಿನ ಈ ತಿಂಗಳ ಅಧಿವೇಶನವು ಬರುವ ತಾ. ೩೦ನೇ ಶನಿವಾರ ಮಧ್ಯಾಹ್ನ ೨-೩೦ ಗಂಟೆಗೆ ಜರಗುವುದು.

ಮಂಗಳೂರು ತಾಲೂಕುಬೋರ್ಡಿನ ಈ ತಿಂಗಳ ಅಧಿವೇಶನವು ಬರುವ ತಾ. ೨೬ನೇ ಮಧ್ಯಾಹ್ನ ೩ ಗಂಟೆಗೆ ಬೋರ್ಡಿನ ಆಫೀಸಿನಲ್ಲಿ ಸೇರುವುದು.

ಬರುವ ತಾ. ೨೫ರಿಂದ ಕ್ರಿಕೇಟ್ ಪಂದ್ಯಾಟಕ್ಕೆ ಪ್ರಾರಂಭವಾಗುವುದು.

ಮುಂಬಯಿಯಲ್ಲಿ ಸ್ಥಾಪಿತವಾದ 'ಮರ್ಚೆಂಟ್ಸ್ ಸ್ಟೀಮ್ ನೇವಿಗೇಶನ್ ಕಂಪೆನಿ'ಯ 'ನೂರೆಲ್ ಬಹಾರ'ವೆಂಬ ಸ್ಟೀಮರು ನಿನ್ನೆ ದಿನ ಇಲ್ಲಿಗೆ ತಲ್ಪಿ ಪ್ರಯಾಣಿಕರನ್ನು ಬಿಟ್ಟು ಕೂಡಲೇ ಹಿಂತಿರುಗಿತು. ಈ ಸ್ಟೀಮರು ಕಣ್ಣಾನೂರಿನಿಂದ ಅಲಬೆಗೆ ಹೋಗಿ ಬರುವ ತಾ. ೨೧ಕ್ಕೆ ಮಂಗಳೂರಿಗೆ ಪುನಃ ಬಂದು ಪ್ರಯಾಣಿಕರನ್ನು ತೆಗೆದುಕೊಂಡು ಮುಂಬಯಿಗೆ ಹೋಗುವುದು. ಮೆಸ್ಸರ್ಸ್ ಜೆ. ಡಿ. ವ್ಯಾಡಿಯಾ ಎಂಡ್ ಸನ್ ಇವರು ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವರು. ಇವರ ಆಫೀಸು ಮೆಸ್ಸರ್ಸ್ ಪಿಯರ್ಸ್‌ಲೆಸ್ಲಿ ಕಂಪೆನಿಯ ಆಫೀಸಿನ ಸಮೀಪವಿರುವುದು.

ಬಿಲ್ಲವರ ಕೊಡಿಯಾಲಬೈಲು ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಬರುವ ತಾ. ೨೧ರಿಂದ ನವರಾತ್ರಿ ಉತ್ಸವವು ಪ್ರಾರಂಭವಾಗಿ ತಾ. ೨೮ರಲ್ಲಿ ಚಂಡಿಕಾಹೋಮ, ತಾ. ೨೯ರಲ್ಲಿ ಮಹಾನವಮಿ ಪೂಜೆ ಮತ್ತು ಶೀಯಲಾಭಿಷೇಕ ತಾ. ೩೦ರಲ್ಲಿ ವಿಸರ್ಜನೆ ಎಂತ ನಿಶ್ಚಯಿಸಿದೆ. ಭಜಕಮಂಡಳಿಯವರೆಲ್ಲರೂ ಈ ಸಮಾರಂಭಗಳಿಗೆ ಬರಬೇಕಾಗಿ ಬಿಲ್ಲವರ ಯೂನಿಯನ್ ಅಧ್ಯಕ್ಷರಾದ ಎಚ್. ಕೊರಗಪ್ಪನವರ ಆಮಂತ್ರಣವಿದೆ.

ಕಳೆದ ತಿಂಗಳ ಡಿಸ್ಟ್ರಿಕ್ಟ ಬೋರ್ಡಿನ ಅಧಿವೇಶನವು ತಾ ೨೮—೮—'೨೨ರಲ್ಲಿ ಜರಗಿತು. ಉಡುಪಿ ಕಾರ್ಕಳ ಮಾರ್ಗವನ್ನು ಇನ್ನಷ್ಟು ಬಲಪಡಿಸಿ ದುರುಸ್ತಿ ಮಾಡಬೇಕಾದ ಅವಶ್ಯಕತೆ ಇದ್ದುದರಿಂದ ಈ ಮಾರ್ಗವನ್ನು ಸರಿಗೊಳಿಸಲು ಈಗ ಮಂಜೂರುಮಾಡಿದ ಹಣವು ಸಾಕಾಗದೇ ಇರುವುದರಿಂದ ಇನ್ನೂ ಹೆಚ್ಚಿನ ಹಣವನ್ನು ಸಂಕ್ಶನ್‌ಮಾಡಬೇಕಾಗಿ ಸೂಚಿಸಿದುದಕ್ಕೆ ಬೋರ್ಡಿನಲ್ಲಿ ಹಣದ ಅಭಾವವುಂಟಾದುದರಿಂದ ಇದು ಅಸಾಧ್ಯವೆಂದು ನಿರ್ಣಯಿಸಲಾಯಿತು. ಬಂಟವಾಳ ಚಾರ್ಮಾಡಿ ರಸ್ತೆಯ ಸ್ಥಿತಿಯನ್ನು ಮೋಟರ ಕಾರುಗಳು ಮೊದಲಾದ ವಾಹನಗಳ ಚಲಾವಣೆಗೆ ಅನುಕೂಲವಾಗುವ ಸುಧಾರಣೆಗೆ ತರುವುದಕ್ಕೆ ಬೋರ್ಡು ಈಗ ಖರ್ಚು ಮಾಡಲು ನಿಯಮಿತ ಪಡಿಸಿದ ಹಣಕ್ಕಿಂತ ಹೆಚ್ಚು ಹಣವನ್ನು ವಿನಿಯೋಗಿಸಬೇಕಾಗಿದೆ ಎಂದು ಕೇಳಿದುದಕ್ಕೆ ಬೋರ್ಡಿಗೆ ದುಡ್ಡಿನ ಅನುಕೂಲತೆ ಇರುವುದರಿಂದ ಹೆಚ್ಚಿಗೆ ಬೇಕಾದ ಹಣವನ್ನು ಸರಕಾರದವರು ಕೊಡುವುದಾದರೆ ಬೋರ್ಡು ಈ ಮಾರ್ಗಗಳ ಯೋಗ್ಯ ಸುಧಾರಣೆ ಮಾಡುವುದೆಂದು ಉತ್ತರ ದೊರಕಿತು. ಬೈಂದೂರು ಮಿಡ್ಲಸ್ಕೂಲಿನ ಬಗ್ಗೆ ಹಂಗಾಮಿ ಕಟ್ಟಡವನ್ನು ಕಟ್ಟಿಸಲು ರೂ. ೬೫೦ ಮಂಜೂರು ಮಾಡಲಾಯಿತು. ಮಂಗಳೂರ ಸೋಮೇಶ್ವರ ರಸ್ತೆಯ ಬಗ್ಗೆ ರೂ. ೫೫೦ ಮತ್ತು ರೂ. ೯೫೦ ಸಂಕ್ಶನ್ ಮಾಡಿದ್ದಲ್ಲದೆ ಕೆಳಗಿನ ರಸ್ತೆಗಳ ದುರುಸ್ತಿ ಬಗ್ಗೆ ಒಟ್ಟು ರೂ. ೯೫೦೦ ಖರ್ಚು ಮಾಡಲು ಬೋರ್ಡಿನ ಸಮ್ಮತಿ ಕೊಡೋಣಾಯಿತು. ಬಂಟವಾಳ ಚಾರ್ಮಾಡಿ ಘಾಟಿ ನಂಬ್ರ ೧ನೇ ರಸ್ತೆಗೆ ರೂ. ೩೦೦೦, ಮಂಗಳೂರ ಸೋಮೇಶ್ವರ ನಂಬ್ರ ೫ನೇ ರಸ್ತೆಗೆ ರೂ. ೧೫೦೦. ಅನ್ಯಾರಿನಿಂದ ಕಾಫಿಯ ವರೆಗಿನ ನಂಬ್ರ ೨೫ನೇ ಕರಾವಳಿ ರಸ್ತೆಗೆ ರೂ. ೧೫೦೦, ಉಡುಪಿ ಹಿರಿಯಡಕ ನಂಬ್ರ ೧೫ನೇ ರಸ್ತೆಗೆ ಮೈಲು ೧೫ರಿಂದ ೧೭ರ ವರೆಗೆ ರೂ. ೧೫೦೦, ಉಡುಪಿ ಹಿರಿಯಡಕ ನಂಬ್ರ ೧೫ನೇ ರಸ್ತೆಗೆ (೫ ಮತ್ತು ೬ ಮೈಲುಗಳು) ರೂ. ೧೫೦೦, ಟ್ರೆವಲರ್ಸ್ ಬಂಗ್ಲೆಗಳಲ್ಲಿ ಉಳಕೊಳ್ಳುವವರಿಂದ ಈಗ ಕಾಲತಿಯಲ್ಲಿರುವ ದರಗಳನ್ನೆ ವಸೂಲುಮಾಡಬೇಕು, ಎಲ್ಲಾ ಬೋರ್ಡುಗಳಿಗೆ ಒಳಪಟ್ಟ ಟ್ರೆವಲರ್ಸ್ ಬಂಗ್ಲೆಗಳಲ್ಲಿ ಒಂದೇ ರೀತಿಯ ದರಗಳನ್ನು ವಸೂಲುಮಾಡುವಂತೆ ಆಲೋಚಿಸಲು ಎಲ್ಲಾ ಬೋರ್ಡುಗಳ ಪ್ರೆಸಿಡೆಂಟರುಗಳಿಗೆ ಬರಕೊಳ್ಳಬೇಕಾಗಿ ಠರಾವು ಮಾಡಲಾಯಿತು. ಮಂಗಳೂರು ತಾಲೂಕು ಬೋರ್ಡಿನವರು ತಮ್ಮ ತಾಲೂಕು ಬೋರ್ಡುಗಳ ವಿಸ್ತೀರ್ಣವನ್ನು ಏಳು ಸರ್ಕಲುಗಳಾಗಿ ವಿಭಾಗಿಸಿ ಅವುಗಳಿಗೆ ೧೨ ಮಂದಿ ಮೆಂಬರರನ್ನು ಚುನಾಯಿಸುವ ಹಕ್ಕಿರತಕ್ಕದೆಂದು ಪಾಸುಮಾಡಿದ ಠರಾವಿಗೆ ಡಿಸ್ಟ್ರಿಕ್ಟಬೋರ್ಡಿನ ಸಮ್ಮತಿಯು ಕೊಡಲಾಯಿತು.

ಕೆನರಾ ಹ್ಯಾಸ್ಕೂಲಿನ ಆಡಳಿತೆಯ ಮೆಂಬರರು, ಶಾಲೆಯ ಬಗ್ಗೆ ಇತ್ತಲಾಗಿ ಪಡೆದ ಬ್ರಹ್ಮಸಮಾಜ ಮಂದಿರದ ಎದುರಿನಲ್ಲಿರುವ ಸ್ಥಳದಲ್ಲಿ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗಾಗಿ 'ಅರ್ಕುಳ ವಾಸುದೇವ ರಾವ್ ಹೋಮ್' ಎಂಬ ಹೆಸರಿನ ವಿದ್ಯಾರ್ಥಿ ನಿಲಯವನ್ನು ಬರುವ ತಾ. ೨೫ನೇ ಸಾಯಂಕಾಲ ೫ ಗಂಟೆಗೆ ಸ್ಥಾಪಿಸಲಿಕ್ಕಿದ್ದಾರೆ. ಈ ಸಮಾರಂಭಕ್ಕೆ ಶಾಲೆಯ ಮುಂಚಿನ ವಿದ್ಯಾರ್ಥಿಗಳೂ ಹಿತಚಿಂತಕರೂ ಬರಬೇಕಾಗಿ ಸ್ಕೂಲಿನ ಆಡಳಿತೆ ಮೆಂಬರರ ಆಮಂತ್ರಣವಿದೆ.

ಅರಸಿಕೆರೆ ರೈಲ್ವೆ ಮತ್ತು ಇಲ್ಲಿಯ ಬಂದರಿನ ಸ್ಕೀಮನ್ನು ಕುರಿತು ಆಲೋಚಿಸಲು ನಾಳೆ ದಿನ ಗವರ್ನಮೆಂಟ ಕೋಲೇಜಿನಲ್ಲಿ ಜರಗಿಸಬೇಕೆಂದು ನಿಶ್ಚಯಿಸಿದ ಮಿಟಿಂಗನ್ನು ಈಗ ಕೋಲೇಜಿನಲ್ಲಿ ಸರಕಾರಿ ಪರೀಕ್ಷೆಗಳು ನಡಿಯುತ್ತಿರುವುದರಿಂದ ಮುಂದರಿಸಿಡಲಾಗಿದೆ. ಮಿಟಿಂಗು ಕೂಡುವ ತಾರೀಕು ಮುಂದಕ್ಕೆ ಪ್ರಕಟಿಸಲಾಗುವುದು.

ತಾ. ೧೩ರಲ್ಲಿ ಮೈದಾನಿನಲ್ಲಿ ಕೂಡಿದ ಸಭೆಯ ಠರಾವುಗಳು.

ತಾ. ೧೩ನೇ ಬುಧವಾರ ಸಾಯಂಕಾಲ ಗಂಟೆ ೫ಕ್ಕೆ ಲೈಟ್ ಮೈದಾನಿನಲ್ಲಿ ಮಿ. ಮಹಮ್ಮದ ಫುಕ್ರುರು ಸಾಹೇಬರ ಅಧ್ಯಕ್ಷತೆಯಲ್ಲಿ ಮಹಾ ಸಭೆಯು ಕೂಡಿ ಈ ಕೆಳಗಿನ ಠರಾವುಗಳು ಮಂಜೂರುಮಾಡಲಾದವು.

೧. ಇಸ್ಲಾಮ್ ಧರ್ಮವನ್ನುಳಿಗೊತ್ತ ತುರ್ಕಿಯರ ಸ್ವಾತಂತ್ರ್ಯವನ್ನು ಭಂಗಮಾಡಲೆತ್ನಿಸಿದ ವೈರಿಗಳನ್ನು ಪರಾಜಿತರನ್ನಾಗಿಮಾಡುವಂತೆ ಕೇಮಲಿಷ್ಟರಿಗೆ ಶಕ್ತಿಯನ್ನು ಕೊಟ್ಟ ಪರಮಾತ್ಮನನ್ನು ನಾವು ಕೊಂಡಾಡಿ ಆತನು ಅವರಿಗೆ ಇನ್ನಷ್ಟು ಸಹಾಯವನ್ನು ಮಾಡಿ ಅವರ ಮಾತೃಭೂಮಿಯ ಉಳಿದ ಅಂಶವನ್ನೂ ಅವರು ಪಡೆಯುವಂತೆ ಕೃಪೆಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

೨. ತಮ್ಮ ಧರ್ಮವನ್ನು ಕಾಪಾಡುವುದಕ್ಕಾಗಿ ಸರ್ವ ವಿಧದಿಂದಲೂ ಸಾಹಸ ಪಟ್ಟು ಆತ್ಮಯಜ್ಞವನ್ನು ಮಾಡಿದ ಕೇಮಲಿಷ್ಟ ವೀರರನ್ನು ನಾವು ಅಭಿನಂದಿಸುತ್ತೇವೆ. ಮೇಲಿನ ಎರಡೂ ನಿರ್ಣಯಗಳನ್ನು ಅಖಿಲ ಭಾರತೀಯ ಖಿಲಾಫತ್ತು ಕಮಿಟಿಯ ಅಧ್ಯಕ್ಷರಾದ ಸೇಟ್ ಛೋಟಾನಿಯವರ ಮೂಲಕ ಮುಸ್ತಾಫಾ ಕೆಮಾಲ್ ಪಾಷಾಗೆ ಕಳುಹಿಸತಕ್ಕದ್ದು.

೩. ಅಖಿಲ ಭಾರತೀಯ ರಾಷ್ಟ್ರೀಯ ಸಭೆಯವರೂ ಮಹಾತ್ಮಾ ಗಾಂಧಿಯವರೂ ಇಡೀ ಹಿಂದುಸ್ಥಾನದಲ್ಲಿ ನಡಿಸುವ ಅಹಿಂಸಾತ್ಮಕ ಚಳವಳದ ಪರವಾಗಿ ಈಗ ಶಾನೇ ಪಂಜಾಬದ ಅಕಾಲಿ ಸಿಖ್ಖರು ತೋರಿಸುವ ತಮ್ಮ ಅಹಿಂಸಾತ್ಮಕ ಶಕ್ತಿಯ ಪ್ರಭಾವವನ್ನು ನೋಡುವಾಗ ನಮ್ಮ ಈ ರಾಷ್ಟ್ರೀಯ ಚಳವಳಕ್ಕೆ ಬೇಗನೇ ಸಂಪೂರ್ಣ ಜಯಪ್ರದವು ಸಿಕ್ಕೀತೆಂಬ ಚಿಹ್ನೆಗಳು ಕಾಣಬರುತ್ತವೆ. ಈ ಸಂಧಿಕಾಲದಲ್ಲಿ ಅಕಾಲಿಯವರು ತೋರಿಸಿದ ಸಾಹಸಕ್ಕೋಸ್ಕರ ನಾವು ಅವರನ್ನು ಅಭಿನಂದಿಸುತ್ತೇವೆ.

೪. ಲೋಕ ಪ್ರಸಿದ್ಧರಾದ ಪತ್ರಿಕಾಕರ್ತರಾಗಿದ್ದು ತನ್ನ ಇಡೀ ಜೀವನವನ್ನೇ ಪರರ ಸಂಕಷ್ಟಗಳನ್ನು ನಿವಾರಿಸುವುದರಲ್ಲಿ ಕಳೆದು ಅಮೃತ ಬಜಾರ ಪತ್ರಿಕೆಯನ್ನು ಪವಿತ್ರ ಪತ್ರಿಕೆಯನ್ನಾಗಿ ಮಾಡಿ ಮರಣ ಹೊಂದಿದ ಬಾಬು ಮೋತಿಲಾಲ ಘೋಷರ ನಿಧನದಿಂದ ಇಡೀ ಹಿಂದುಸ್ಥಾನಕ್ಕೆ ಒಂದು ಮಹತ್ವಾದ ನಷ್ಟವಾಯಿತೆಂದು ನಾವು ಬಹಳ ಚಿಂತಿಸುವುದಲ್ಲದೆ ಅವರ ಪವಿತ್ರಾತ್ಮಕ್ಕೆ ಸದಾ ಶಾಂತಿಯನ್ನು ದಯಪಾಲಿಸಲೆಂದು ಪರಮಾತ್ಮನನ್ನು ನಾವು ಪ್ರಾರ್ಥಿಸುತ್ತೇವೆ. ಈ ಠರಾವನ್ನು ತಂತಿ ಮೂಲಕವಾಗಿ ತಾ. ಕಾ. ಕಮಿಟಿ ಅಧ್ಯಕ್ಷರು ಅವರ ಕುಟುಂಬಕ್ಕೆ ಕಳುಹಿಸತಕ್ಕದ್ದು.

ಪ್ರಕಟಣೆ.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಸಂಬಂಧಪಟ್ಟ ಎಲ್ಲಾ ವೋಟರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ— ಸದರಿ ದೇವಸ್ಥಾನಕ್ಕೆ ಸಂಬಂಧಪಟ್ಟ ವೋಟರರ ಪೈಕಿ 31 ಜನ ವೋಟರರು ಸದರಿ ದೇವಸ್ಥಾನದ ಕೆಲವು ಕಾಮಗಾರಿಗಳನ್ನು ಮಾಡುವ ಬಗ್ಗೆ ಆಲೋಚಿಸುವ ಬಗ್ಗೆ ಜನರಲ್ ಮಿಟಿಂಗು ಕರೆಯಬೇಕಾಗಿ ಮೊಕ್ತೇಸರರ ಕೌನ್ಸಿಲಿಗೆ ತಾ. 8—9—1922ಲ್ಲು ರಿಕ್ವಿಜಿಶನ್ ಅರ್ಜಿಮಾಡಿರುವುದರಿಂದ ಸದರಿ ಸಂಗತಿಗಳನ್ನು ಆಲೋಚಿಸಿ ಇತ್ಯರ್ಥ ಪಡಿಸುವ ಬಗ್ಗೆ ತಾ. 1—10—1922ನೇ ಆದಿತ್ಯವಾರ ಶ್ಯಾಮ ಗಂಟೆ 3-30ಕ್ಕೆ ಸದರಿ ದೇವಸ್ಥಾನದ ವಸಂತಮಂಟಪದ ಅಧೀನದಲ್ಲಿ ವೋಟರರ ಜನರಲ್ ಮಿಟಿಂಗು ಕೂಡಿಸಬೇಕಾಗಿ ಕೌನ್ಸಿಲರು ಪ್ರೊಸಿಡಿಂಗ್ಸಿನ ಮೂಲಕ ನಿರ್ಣಯಿಸಿರುತ್ತಾರೆ. ಅದ್ದರಿಂದ ಆ ಸಮಯಕ್ಕೆ ಸಮಸ್ತ ವೋಟರರು ಸಭೆಕೂಡಬೇಕಾಗಿ [illegible]

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನ, } K. KODANDA RAMA JOISY
ತಾ. 10—9—1922. } Manager.

ಮೋತಿಲಾಲ ಘೋಷ.

ಅಮೃತಬಜಾರ ಪತ್ರಿಕೆಯ ಸಂಪಾದಕರಾದ ಬಾಬು ಮೋತಿಲಾಲ ಘೋಷರು ೧೮೪೭ರಲ್ಲಿ ಅಮೃತಬಜಾರಿನಲ್ಲಿ ಜನಿಸಿದರು. ಇವರ ತಾಯಿಯ ಹೆಸರು ಅಮೃತ. ಇವರಿಂದಲೇ ಈ ಊರಿಗೆ ಅಮೃತಬಜಾರವೆಂದು ಹೆಸರು ಬರಲು ಕಾರಣವಾಗಿದೆ. ಈ ಅಮೃತಬಜಾರ ಪತ್ರಿಕೆಯನ್ನು ಮೋತಿಲಾಲ ಘೋಷರೂ ಅವರ ಅಣ್ಣ ಬಾಬು ಶಿಶಿರಕುಮಾರ ಘೋಷರೂ ೫೪ ವರುಷಗಳ ಹಿಂದೆ ತಮ್ಮ ಹುಟ್ಟೂರಿನಲ್ಲಿ ಪ್ರಾರಂಭಿಸಿದರು. ಪ್ರಥಮದಲ್ಲಿ ಇವರು ಮರದ ಛಾಪಖಾನೆಯಲ್ಲಿ ಕೆಲವು ಟೈಪುಗಳನ್ನಿಟ್ಟುಕೊಂಡು ಎಲ್ಲಾ ಕೆಲಸಗಳನ್ನೂ ತಾವಿಬ್ಬರೇ ಸ್ವತಃ ಮಾಡುತ್ತ ಇದನ್ನು ವಾರಪತ್ರಿಕೆಯಾಗಿ ಬಂಗಾಳೀಭಾಷೆಯಲ್ಲಿ ಪ್ರಕಟಿಸುತ್ತಿದ್ದರು. ಆಗ ಇದಕ್ಕೆ ೫೦೦ ಚಂದಾದಾರರಿದ್ದರು. ಶುರುವಿನಿಂದಲೇ ನಿರ್ದಾಕ್ಷಿಣ್ಯದಿಂದ ಅಧಿಕಾರಿಗಳ ನೀಚಕೃತ್ಯಗಳನ್ನು ಖಂಡಿಸುತ್ತ ಬರೆಯಲು ಪ್ರಾರಂಭಿಸಿದುದರಿಂದ ಪತ್ರಿಕೆಯು ಹುಟ್ಟಿದ ೪ ತಿಂಗಳುಗಳಲ್ಲಿ ಸ್ಥಳೀಕ ಅಧಿಕಾರಿಗಳ ವಕ್ರದೃಷ್ಟಿಗೆ ಬಿದ್ದು ಕೋರ್ಟಿಗೆ ಎಳೆಯಲ್ಪಟ್ಟಿತು. ಎಂಟು ತಿಂಗಳ ಪರ್ಯಂತರ ಖಟ್ಲೆಯು ನಡೆದು ಅದರಲ್ಲಿ ಪತ್ರಿಕೆಗೆ ಜಯವು ದೊರಕಿತು.

ಅನಂತರ ಈ ಸಹೋದರರಿಬ್ಬರೂ ಕಲ್ಕತ್ತೆಗೆ ತೆರಳಿ, ೧೮೭೨ನೇ ಇಸವಿಯ ಫೆಬ್ರವರಿ ತಿಂಗಳಲ್ಲಿ ಅಮೃತಬಜಾರ ಪತ್ರಿಕೆಯನ್ನು 'ಎಂಗ್ಲೋ ವರನೆಕ್ಯೂಲರ್' ಪತ್ರಿಕೆಯಾಗಿ ಕಲ್ಕತ್ತೆಯಲ್ಲಿ ಪ್ರಕಟಿಸಲು ಮೊದಲುಮಾಡಿದರು. ಅಂದಿನಿಂದ ಈ ಪತ್ರಿಕೆಯು ಹಿಂದೂಸ್ಥಾನದ ಜನರಲ್ಲಿ ರಾಷ್ಟ್ರೀಯ ಪ್ರೇಮ, ಸ್ವದೇಶ ಪ್ರೇಮ ಮೊದಲಾದುವನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಸ್ಫೂರ್ತಿದಾಯಕ ಲೇಖನಗಳನ್ನು ಪ್ರಕಟಿಸುತ್ತ ಸ್ವದೇಶದ ಪತ್ರಿಕೆಗಳಲ್ಲಿ ಅಗ್ರಗಣ್ಯಸ್ಥಾನವನ್ನು ಹೊಂದಿತು. ಅಮೃತಬಜಾರ ಪತ್ರಿಕೆಯೂ ದೇಶೀಯ ಭಾಷೆಗಳಿಂದ ಪ್ರಕಟವಾಗುವ ಇತರ ಕೆಲವು ಪತ್ರಿಕೆಗಳೂ ಸರಕಾರದ ಆಡಳಿತೆಯನ್ನು ಬಹಳವಾಗಿ ಟೀಕಿಸಲು ಪ್ರಾರಂಭಿಸಿದುದರಿಂದ ಇವುಗಳನ್ನು ಅಂಕೆಯಲ್ಲಿಡಲು ಅಧಿಕಾರಿಗಳು ಒಂದು ಕಾನೂನನ್ನು ಜಾರಿಗೆ ತರಲು ಹವಣಿಸಿದರು.

ಅಮೃತಬಜಾರ ಪತ್ರಿಕೆಯು ನಿರ್ದಾಕ್ಷಿಣ್ಯದಿಂದ ಅಧಿಕಾರಿಗಳ ಅಕೃತ್ಯಗಳ ಗುಟ್ಟನ್ನು ಬಯಲಿಗೆ ತರುವುದರಿಂದ ಇದು ಅಧಿಕಾರಿಗಳಿಗೆ ಕಂಟಕಪ್ರಾಯವಾಗಿ ಕಂಡುಬಂದು ಬಂಗಾಳದ ಲೆಫ್ಟಿನೆಂಟ ಗವರ್ನರರಾದ ಸರ್. ಎಶಲೆಡಿನರು ೧೮೭೭ರಲ್ಲಿ ಬಾಬು ಶಿಶಿರಕುಮಾರರನ್ನು ಉಪಾಯಾಂತರದಿಂದ ತಮ್ಮ ಕಡೆಗೆ ಎಳೆಯಲು ಪ್ರಯತ್ನಿಸಿದರು. ಈ ಗವರ್ನರರು 'ಹಿಂದೂ ಪೆಟ್ರಿಯಟ್' ಪತ್ರಿಕೆಯ ಸಂಪಾದಕರನ್ನು ವಶಮಾಡಿಕೊಂಡ ನಂತರ ಬಾಬು ಶಿಶಿರಕುಮಾರರನ್ನು ಕರತರಿಸಿ ಆಡಳಿತೆಯಲ್ಲಿ ಸಹಭಾಗಿಗಳಾಗಬೇಕಾಗಿ ಹೇಳಿದರು. ಅಲ್ಲದೆ, ತಾನು ಕಳುಹಿಸಿದ ಲೇಖನಗಳನ್ನು ಅಮೃತಬಜಾರ ಪತ್ರಿಕೆಯಲ್ಲಿ ಪ್ರಕಟಿಸಬೇಕು, ಮತ್ತು ಬಾಬುಗಳು ಸರಕಾರದ ಕೃತ್ಯಗಳನ್ನು ಟೀಕಿಸಿ ಬರೆದ ಲೇಖನಗಳನ್ನು ಪ್ರಕಟಿಸುವ ಮೊದಲು ತನಗೆ ತೋರಿಸತಕ್ಕದ್ದು, ಹೀಗೆ ಮಾಡಿದರೆ ಸರಕಾರವು ಪತ್ರಿಕೆಗೆ ಸಹಾಯಮಾಡುವುದು ಮತ್ತು ತಾನು ಆಡಳಿತೆಯಲ್ಲಿ ಹಿಂದೂ ಪೆಟ್ರಿಯಟ್ ಪತ್ರಿಕೆಯ ಸಂಪಾದಕರ ಅಭಿಪ್ರಾಯವನ್ನು ಸ್ವೀಕರಿಸುವಂತೆ ಬಾಬುಗಳ ಬೆಂಬಲವನ್ನೂ ಪಡೆಯಲು ಸಿದ್ಧರಾಗಿರುವರಾಗಿ ತಿಳಿಸಿದರು. ಬಾಬುಗಳು ಬಡವರಾಗಿದ್ದರೂ ತಮ್ಮ ಪತ್ರಿಕೆಯ ಸ್ವಾತಂತ್ರ್ಯವನ್ನು ಬಿಟ್ಟುಬಿಡಲು ಮನಸ್ಸಿಲ್ಲದೆ ಗವರ್ನರರು ತನಗೆ ಕೊಟ್ಟ ಮಾನಕ್ಕಾಗಿ ಅವರನ್ನು ವಂದಿಸಿ, ದೇಶದಲ್ಲಿ ಒಂದಾದರೂ ಸತ್ಯ ಮತ್ತು ಸ್ವತಂತ್ರ ಅಭಿಪ್ರಾಯವನ್ನು ಪ್ರಕಟಿಸುವ ಪತ್ರಿಕೆಯು ಅಗತ್ಯವಾಗಿ ಬೇಕಾದುದರಿಂದ ತನಗೆ ಗವರ್ನರರ ಸೂಚನೆಯಂತೆ ಪತ್ರಿಕೆಯನ್ನು ನಡಿಸಲು ಸಾಧ್ಯವಿಲ್ಲವೆಂದು ಖಂಡಿತವಾಗಿ ಹೇಳಿದರು.

ಇದನ್ನು ಕೇಳಿ ಗವರ್ನರರು ರೇಗಿಕೊಂಡು ವೈರಸಾಧನೆಮಾಡಿ ಇವರನ್ನು ಶಿಕ್ಷಿಸುವುದಕ್ಕಾಗಿ 'ವರನ್ಯಾಕ್ಯೂಲರ್ ಪ್ರೆಸ್ ಎಕ್ಟ'ನ್ನು ಪಾಸುಮಾಡುವಂತೆ ಮಾಡಿದರು. ಆದರೆ ಚಾಣಾಕ್ಷರಾದ ಬಾಬು ಶಿಶಿರಕುಮಾರರು ಈ ಎಕ್ಟು ಜಾರಿಗೆ ಬರುವ ಮೊದಲೇ ತಮ್ಮ ಪತ್ರಿಕೆಯನ್ನು ಸಂಪೂರ್ಣ ಇಂಗ್ಲಿಷ ಪತ್ರಿಕೆಯಾಗಿ ಮಾರ್ಪಡಿಸಿ ಈ ಹೊಸ ಎಕ್ಟಿನ ಬಾಧೆಯು ತಮ್ಮ ಪತ್ರಿಕೆಗೆ ತಟ್ಟದಂತೆ ಮಾಡಿಬಿಟ್ಟರು.

ಬಾಬು ಮೋತಿಲಾಲರು ಪತ್ರಿಕೆಯನ್ನು ನಡಿಸುವ ವ್ಯವಸಾಯವನ್ನು ತಮ್ಮ ಅಣ್ಣನ ನೇತೃತ್ವದಲ್ಲಿ ಕಲಿತರು. ಬಾಬು ಮೋತಿಲಾಲರು ತಮ್ಮ ಅಣ್ಣನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದರು.

ಶಿಶಿರಕುಮಾರರು ಕೆಲವು ನೇಮಗಳನ್ನು ಅನುಸರಿಸಿಕೊಂಡಿದ್ದರು. ಸಾರ್ವಜನಿಕ ಸೇವೆಯಲ್ಲಿ ಮುಂದೆಬಂದು ಕೆಲಸಮಾಡದಿದ್ದರೂ ಇವರು ತಮ್ಮ ಪತ್ರಿಕೆಯ ಮೂಲಕ ಮತಸೇವೆಯನ್ನೂ ದೇಶಸೇವೆಯನ್ನೂ ತುಂಬಾ ಮಾಡಿರುವರು. ಇವರು ಏಕಾಂತವಾಸವನ್ನು ಯಾವಾಗಲೂ ಇಚ್ಛಿಸುತ್ತಿದ್ದರು. ರಾಷ್ಟ್ರೀಯ ಜಾಗ್ರತಿಯನ್ನು ಉಂಟುಮಾಡಿ ರಾಷ್ಟ್ರೀಯಸಭೆಯ ಸ್ಥಾಪನೆಯ ದಾರಿಯನ್ನು ಮಾಡಿಕೊಟ್ಟ ಹಾಗು ಸ್ಥಾನಿಕ ಸ್ವರಾಜ್ಯದ ಬೀಜವನ್ನು ನೆಟ್ಟ ಕೀರ್ತಿಯು ಇವರಿಗೂ ಸಲ್ಲತಕ್ಕದ್ದು.

ಮೋತಿಲಾಲ ಘೋಷರು ತಮ್ಮ ಅಣ್ಣನೊಡನೆ ಕೂಡಿ ಮಾಡಿದ ಇನ್ನೊಂದು ಸಾಹಸಕಾರ್ಯವು ವಿಶೇಷಕರದ್ದಾಗಿದೆ. ಸರ್. ಲಿಪೆಲ್ ಗ್ರಿಫಿನ್‌ರವರು ಸೆಂಟ್ರಲ್ ಇಂಡಿಯದ ಗವರ್ನರ ಜನರಲರ ಏಜಂಟರಾಗಿ ಆಶ್ರಿತ ಸಂಸ್ಥಾನದ ರಾಜರುಗಳಿಗೆ ಬಹಳವಾಗಿ ಪೀಡಿಸುತ್ತಿದ್ದರು. ಇವರಿಗೆ ರಾಜಕರ್ತರು (King-maker) ಎಂಬ ಬಿರುದು ಸಹ ಬಂದಿತ್ತು. ವೈಸರಾಯರು ಕೂಡ ಇವರಿಗೆ ಹೆದರಿಕೊಂಡೆ ಇದ್ದರು. ಭೋಪಾಲದ ಬೇಗಮ್ಮರು ಮಾತ್ರ ಅವರಿಗೆ ಮಣಿಯಲಿಲ್ಲ. ಆದ್ದರಿಂದ ಭೋಪಾಲ ಸಂಸ್ಥಾನದ ಮೇಲೆ ಹೆಚ್ಚಿನ ದಂಡವು ಹೊರಿಸಿತ್ತು. ಈ ಏಜಂಟರು ಬೇಗಮ್ಮರನ್ನು ಅವರ ಗಂಡನಿಂದ ಆರು ತಿಂಗಳುಗಳ ವರೆಗೆ ಪ್ರತ್ಯೇಕವಿಟ್ಟರು; ಅನೇಕ ರೀತಿಯಲ್ಲಿ ಅಪಮಾನಗೊಳಿಸಿದರು. ಬೇಗಮ್ಮರು ಇವರ ಕಾಟವನ್ನು ಸಹಿಸಲಾರದೆ ಇವರ ಉಪಟಳವನ್ನು ಸಮಾಪ್ತಿಗೊಳಿಸಲು ಬಾಬು ಸಹೋದರರ ಸಹಾಯವನ್ನು ಬಯಸಿದರು. ಈ ಕೆಲಸದಲ್ಲಿ ಇವರಿಗೆ ಅಪಾರವಾದ ಧನಸಹಾಯ ಸಿಗುವ ಸಂಭವವಿದ್ದರೂ ಇವರು ಧನವನ್ನು ಬಯಸದೆ ಈ ಏಜಂಟರ ಕಾರಭಾರದ ಸತ್ಯತ್ವವನ್ನು ಸೂಚಿಸುವ ಸಾಧನಗಳನ್ನು Documents ಮಾತ್ರ ಸ್ವಾಧೀನಮಾಡಿಕೊಂಡರು. ಅನಂತರ ಇವರು ಸರ್. ಲಿಪೆಲರ ಅಕೃತ್ಯಗಳನ್ನು ವ್ಯಕ್ತಪಡಿಸುವ ಲೇಖನಗಳನ್ನು ಪ್ರತಿ ವಾರದಲ್ಲೂ ಅಮೃತಬಜಾರ ಪತ್ರಿಕೆಯಲ್ಲಿ ಪ್ರಕಟಿಸಲು ಮೊದಲುಮಾಡಿದರು. ಏಜಂಟರ ಅಕೃತ್ಯಗಳನ್ನು ಖಂಡಿಸುವ ಈ ಪತ್ರಿಕೆಗೆ ಇತರ ಪತ್ರಿಕೆಗಳ ಬೆಂಬಲವೂ ದೊರಕಿತು. ಈ ಕುರಿತು ದೇಶತುಂಬಾ ಚಳವಳವುಂಟಾಗಿ ಕೊನೆಗೆ ಸರಕಾರದವರು ತಪ್ಪುಗಳನ್ನು ಸರಿಪಡಿಸಿ ತಪ್ಪುಗಾರರನ್ನು ಶಿಕ್ಷಿಸಿದರು.

ಸರ್. ಲೀಪೆಲರು ಸೇಡನ್ನು ತೀರಿಸುವುದಕ್ಕಾಗಿ ಪತ್ರಿಕೆಯ ಮೇಲೆ ದಾವೆ ನಡಿಸುವುದಾಗಿ ಗದರಿಸಿದಲ್ಲದೆ, ಸರಕಾರಕ್ಕೆ ಪತ್ರಿಕೆಯ ಮೇಲೆ 'ಪ್ರಾಸಿಕ್ಯೂಶನ' ನಡಿಸಬೇಕಾಗಿ ಸೂಚಿಸಿದರು. ಆದರೆ ಸರಕಾರದವರು ಇದಕ್ಕೆ ಸಮ್ಮತಿಸಲಿಲ್ಲ. ಪತ್ರಿಕೆಯು ಪ್ರಕಟಿಸಿದ ಎಲ್ಲ ಸಂಗತಿಗಳೂ ಸತ್ಯವಾಗಿರುವುದರಿಂದ ಲೀಪೆಲರಿಗೆ ಸ್ವತಃ ದಾವೆಮಾಡಲು ಧೈರ್ಯಬರಲಿಲ್ಲ. ಕೊನೆಗೆ ಸರಕಾರದವರು ಪತ್ರಿಕೆಯ ಮೇಲೆ ಪ್ರಾಸಿಕ್ಯೂಶನ ನಡಿಸದಿದ್ದರೆ, ತಾನು ಕೆಲಸಕ್ಕೆ ರಾಜಿನಾಮೆಯನ್ನು ಕೊಡುವುದಾಗಿ ತಿಳಿಸಿದರು. ಆದರೆ ಸರಕಾರದವರು ಇವರ ಗದರಿಕೆಯನ್ನು ಲಕ್ಷ್ಯಿಸದೇ ಹೋದುದರಿಂದ ಇವರು ತಮ್ಮ ಕೆಲಸಕ್ಕೆ ಶರಖುಹೊಡೆದು ಹಿಂದೂಸ್ಥಾನವನ್ನು ಬಿಟ್ಟುಹೋಗಬೇಕಾಯಿತು.

ಲಿಪೆಲರು ಹಿಂದೂಸ್ಥಾನವನ್ನು ಬಿಟ್ಟದ್ದರಿಂದ ಭೋಪಾಲದ ಬೇಗಮ್ಮರು ಮಾತ್ರ ಇವರ ಬಾಧೆಯಿಂದ ಬಿಡುಗಡೆಯಾದದ್ದಲ್ಲದೆ ಇತರ ಆಶ್ರಿತ ಸಂಸ್ಥಾನಗಳೂ ಸುಖದಿಂದ ಕಾಲಕಳೆಯಲು ಸಹಾಯವಾಯಿತು. ಬೇಗಮ್ಮರಿಗೆ ಸಂಪೂರ್ಣ ಸ್ವಾತಂತ್ರ್ಯವು ದೊರಕಿ ಇವರು ಲಿಪೆಲರು ಇಟ್ಟ ಯುರೋಪಿಯನ ಮಂತ್ರಿ ಮೊದಲಾದ ಕೆಲಸದವರನ್ನು ತೆಗೆದು ಹಾಕಿದರು.

೧೯೦೫ರಲ್ಲಿ ಏಳನೇ ಎಡ್ವಾರ್ಡರು ಹಿಂದೂಸ್ಥಾನಕ್ಕೆ ಬಂದಾಗ ಅವರ ಮುಂದೆ ಘೋಷರು ಬಂಗಾಳಿಗಳ ಪರಿಯಿಂದ ವಂಗಭಂಗವನ್ನು ಮಾಡಬಾರದೆಂದೂ ಮಾಡಿದರೆ ಅನರ್ಥಗಳುಂಟಾಗುವುದೆಂದೂ ಸ್ಪಷ್ಟವಾಗಿ ಹೇಳಿದ್ದರು.

ಮೋತಿಲಾಲರನ್ನು ಅನೇಕ ದೊಡ್ಡ ಹುದ್ದೆದಾರರು ಬಹಳವಾಗಿ ಗೌರವಿಸುತ್ತಿದ್ದರು. ಮತ್ತು ಇವರು ಪ್ರಾಮಾಣಿಕ ಹಾಗು ಶುದ್ಧ ಅಂತಃಕರಣವುಳ್ಳ ಮನುಷ್ಯರೆಂದು ನಂಬಿ ಇವರ ಆಲೋಚನೆಯನ್ನು ಯಾವಾಗಲೂ ಹೊಂದುತ್ತಿದ್ದರು. ಮೋತಿಲಾಲರು ಸರಕಾರದ ಗುಣದೋಷಗಳನ್ನು ಸರಿಯಾಗಿ ಟೀಕಿಸುತ್ತಿದ್ದರಿಂದ ಹಲವು ಅಧಿಕಾರಿಗಳು ಇವರನ್ನು ವಕ್ರದೃಷ್ಟಿಯಿಂದ ಕಂಡು ದೂಷಿಸುತ್ತಿದ್ದರು. ಇವರು ಸಹ ಹಿಂದೂಸ್ಥಾನದ ಶ್ರೇಷ್ಠ ಪುರುಷರಲ್ಲಿ ಒಬ್ಬರಾಗಿದ್ದರೆಂಬುದರಲ್ಲಿ ಸಂಶಯವಿಲ್ಲ. ತಮ್ಮ ಅಣ್ಣನಂತೆ ಮೋತಿಲಾಲರು ಯಾವ ಕಾರ್ಯದಲ್ಲೂ ಮುಂದುಬಾರದೆ ಹಿಂದಿನಿಂದಲೇ ತಮ್ಮ ಸಾಹಸವನ್ನು ಪಡಿಸುತ್ತಿದ್ದರು. ಇವರು ಎದುರು ಬರುವುದು ಬಹಳ ಅಪರೂಪವಾಗಿದ್ದರೂ ಇವರಿಂದ ನಡಿಸಲ್ಪಡುವ ಪತ್ರಿಕೆಯು ಜನಸಾಮಾನ್ಯರ ಅಭಿಪ್ರಾಯಕ್ಕೆ ಪಾತ್ರವಾಗಿತ್ತು. ಕಳೆದ ೫೫ ವರ್ಷಕ್ಕಿಂತ ಹೆಚ್ಚು ಕಾಲ ಇವರ ಪತ್ರಿಕೆಯು ರಾಜಕೀಯ ಹಾಗೂ ಸಾಮಾಜಿಕ ಚಳವಳವನ್ನು ಬಹಳವಾಗಿ ನಡಿಸಿದೆ. ನವೀನ ಭಾರತರಾಷ್ಟ್ರವನ್ನು ಉಂಟುಮಾಡುವುದರಲ್ಲಿ ಸಹಾಯಕರಾದ ಉಜ್ವಲ ಸ್ವದೇಶಾಭಿಮಾನಿಗಳಲ್ಲಿ ಬಾಬುಗಳು ಸಹ ಒಬ್ಬರು. ಸ್ವದೇಶಿ ಚಳವಳದ ಕಾಲದಲ್ಲಿ ಸಹ ಇವರು ಅನೇಕ ಸ್ಫೂರ್ತಿದಾಯಕ ಲೇಖನಗಳನ್ನು ಬರೆದಿರುವರು. ಮೋತಿಲಾಲರು ದಾಂಭಿಕ ಮಾರ್ಗವನ್ನು ಅನುಸರಿಸದೆ ತಮ್ಮ ಅಣ್ಣನಂತೆ ಸರಳಮಾರ್ಗವನ್ನೆ ಅನುಸರಿಸಿ ನಡಿಯುತ್ತಿದ್ದರು. ಇಷ್ಟವಿದ್ದರೆ ಇವರು ಲೆಜಿಸ್ಲೇಟಿವ್ ಕೌನ್ಸಿಲನ್ನು ಸೇರುವುದು ಮುಂತಾದ ಗೌರವವನ್ನು ಪಡೆಯಬಹುದಿತ್ತು. ಆದರೆ ಈ ಗೌರವವನ್ನು ಪಡೆಯಲು ಇವರಿಗೆ ಇಚ್ಛೆಯಿರಲಿಲ್ಲ. ಮೋತಿಲಾಲರು ವೈಷ್ಣವ ಮಾರ್ಗವನ್ನು ಅವಲಂಬಿಸುವವರಾಗಿದ್ದು ಶ್ರೀ ಚೈತನ್ಯರ ಹಿಂಬಾಲಿಕರಾಗಿದ್ದರು. ಇವರು ವೃತ್ತಪತ್ರಿಕೆಗಳಿಗೂ ರಾಜಕೀಯ ಚಳವಳಗಳಿಗೂ ಮಾರ್ಗದರ್ಶಕರಾಗಿದ್ದರು. ಇವರು ಕಳೆದ ಅನಂತಚತುರ್ದಶಿಯ ದಿನ ತನ್ನ ೭೬ನೇ ವರುಷದಲ್ಲಿ ಸ್ವರ್ಗಸ್ಥರಾದರು. ಇವರ ಕೊನೆಯ ಸಂದೇಶವು ಕೆಳಗೆ ಕೊಟ್ಟಿದೆ. "ನನ್ನ ಮಾತೃಭೂಮಿಯ ಸೇವೆಯನ್ನು ಸ್ವಲ್ಪವಾದರೂ ಅಲ್ಲ, ಏನೂ ಮಾಡಲು ನನಗೆ ಸಾಧ್ಯವಾಗದೇ ಇರುವುದಕ್ಕೆ ನನಗೆ ತುಂಬಾ ಖೇದವಾಗುತ್ತದೆ. ನನ್ನಂಥ ಪ್ರಾಯಸಂದ ಜನರಿಂದ ಮಾಡಲಾಗದ ಕಾರ್ಯವನ್ನು ನನ್ನ ದೇಶದ ಯೋಗ್ಯ ಬಂಧುಭಗಿನಿಯರು ಮಾಡುವರೆಂಬ ಭರವಸೆಯಿಂದ ನಾನು ಇಹಲೋಕದ ಯಾತ್ರೆಯನ್ನು ಮುಗಿಸುತ್ತೇನೆ. ನಾನು ಈ ಜಡದೇಹವನ್ನು ಬಿಟ್ಟ ನಂತರ ನನ್ನ ಆತ್ಮವು ಈ ದೇಶದ ಅಭಿವೃದ್ಧಿಯನ್ನು ಸರಿಯಾಗಿ ನೋಡುವುದು. ನಾನು ಈಗ ಮೃತ್ಯುವನ್ನು ಎದುರು ನೋಡುವುದರಿಂದ ಸ್ವದೇಶಸೇವಾನಿರತನಾದ ಪ್ರತಿಯೊಬ್ಬನಿಗೂ ನಾನು ನನ್ನ ಆಶೀರ್ವಾದವನ್ನು ಕೊಡುವುದಲ್ಲದೆ ಅಂಥಾ ಸ್ವದೇಶಾಭಿಮಾನಿಗಳಿಗೆ ಸ್ವರಾಜ್ಯಯುದ್ಧವನ್ನು ಸರಿಯಾಗಿ ನಡಿಸುವಂತೆ ಸಾಮರ್ಥ್ಯವನ್ನು ಕೊಡಬೇಕಾಗಿ ಭಗವಂತನನ್ನು ಪ್ರಾರ್ಥಿಸುತ್ತೇನೆ, ಶಾಂತಿ. ಶಾಂತಿ. ಶಾಂತಿ.

ಅಕಾಲಿ ಚಳವಳ.

ಅಕಾಲಿ ಚಳವಳವನ್ನು ನಡಿಸಲು ಅಕಾಲಿ ಜನರು ಗುಂಪುಗುಂಪಾಗಿ ಮುಂದೆ ಬರುತ್ತಿದ್ದಾರೆ. ಅಕಾಲಿ ಹೆಂಗಸರು ಕೂಡ ಗುರುಕಾಭಾಗಕ್ಕೆ ಹೋಗಲು ಸಿದ್ಧರಾಗಿಯೇ ನಿಂತಿರುವರು. ಇತರ ಕಡೆಗಳ ಜನರು ಸಹ ಇವರಿಗೆ ಸಹಾಯಕರಾಗಿಯೆ ನಿಲ್ಲುವರೆಂದು ತಿಳಿದುಬರುತ್ತದೆ. ಅಮೃತಸರದ ಅನೇಕ ಶ್ರೀಮಂತರು ತಮ್ಮ ಮನೆಯ ಹೊರಭಾಗಗಳನ್ನು ಗಾಯಹೊಂದಿದ ಅಕಾಲಿಗಳ ಬಗ್ಗೆ ಬಿಟ್ಟುಕೊಡುತ್ತಿದ್ದಾರೆ. ಅಕಾಲಿ ಜನರು ಸತ್ಯಾಗ್ರಹದ ಸಂಗಡವನ್ನು ಸೇರುವ ಮೊದಲು ಅತ್ಯಾಚಾರಕ್ಕೆ ಕೈಹಾಕಲಿಕ್ಕಿಲ್ಲವೆಂಬ ಪ್ರತಿಜ್ಞೆಯನ್ನು ಮಾಡಿಕೊಳ್ಳುವರು. ಈ ಚಳವಳದಲ್ಲಿ ಸೇರಿದ ಮನುಷ್ಯರಲ್ಲಿ ೧೯ ವರುಷದ ಯುವಕರಿಂದ ೭೦ ವರುಷದ ಮುದುಕರ ವರೆಗೆ ಇರುವರು. ಇವರು ಎಷ್ಟು ಯಾತನೆಗಳನ್ನು ಕೊಟ್ಟರೂ ಶಾಂತಚಿತ್ತದಿಂದ ಸಹಿಸುವುದು ವಿಚಿತ್ರಕರವಾಗಿದೆ.

ಪ್ರಜಾಮುಖಂಡರಾದ ಪಂಡಿತ ಮಾಲವೀಯರು ಈ ಗಲಾಟೆಯ ಚೌಕಶಿ ಮಾಡಲು ಅಮೃತಸರಕ್ಕೆ ಹೊರಟು ಬಂದು ಸ್ವರ್ಗಸ್ಥ ಲಾಲಾಗಾಗರಮಾಲರ ಧರ್ಮಸಾಲೆಯಲ್ಲಿ ಉಳಕೊಳ್ಳಲಿಕ್ಕಿದ್ದರು. ಆದರೆ ಮಾಲವೀಯರಿಗೆ ಇಲ್ಲಿ ತಂಗಲು ಆಸ್ಪದಕೊಡಲಿಲ್ಲ. ಈಗ ಇವರು ಶ್ರೀಯುತ ಲಾಲಾರೂಪಿಲಾಲರ ಇವರ ಮನೆಯಲ್ಲಿದ್ದಾರೆ. ಮಾಲವೀಯರು ಗುರುಕಾಭಾಗಕ್ಕೆ ಮೋಟಾರಕಾರಿನಲ್ಲಿ ಕೂತು ಹೋಗುವಾಗ ಛೀನಾ ಬ್ರಿಜ್ಜಿನ ಸಮೀಪ ಇವರ ಮೋಟಾರಕಾರನ್ನು ತಡಿಸಲಾಯಿತು. ತನ್ನನ್ನು ಮುಂದಕ್ಕೆ ಹೋಗದಂತೆ ತಡಿಸಲು ಯಾವ ಹುಕುಂ ಇದೆಯಾಗಿ ಕೇಳಿ ಆ ಹುಕುಮನ್ನು ತೋರಿಸಲು ಪಂಡಿತರು ಹೇಳಿದರು. ಅಲ್ಲದೆ ಈ ಮಾರ್ಗದಲ್ಲಿ ಸಾರ್ವಜನಿಕ ಚಲಾವಣೆಗೆ ಯಾವ ಪ್ರತಿಬಂಧವೂ ಇಡದೇ ಇರುವುದರಿಂದ ಮುಂದೆಹೋಗಲು ಯಾವ ಅಪ್ಪಣೆಯೂ ಅಗತ್ಯವಿಲ್ಲವೆಂದು ತಿಳಿಸಿದರು. ತನಗೆ ಮುಂದೆ ನಡಿಯದಂತೆ ಇಟ್ಟ ಪ್ರತಿಬಂಧದ ಹುಕುಂ ತೋರಿಸಬೇಕು ಇಲ್ಲವಾದರೆ ತನನ್ನು ಕೈದು ಮಾಡಬೇಕು ಎಂದು ಮಾಲವೀಯರು ಸರದಾರ ಶರ್ ಸಿಂಗರಿಗೆ ಹೇಳಿದರು. ಸರದಾರ ಸಿಂಗರು ತನಗೆ ಬಾಯಿ ಹುಕುಂ ಮಾತ್ರ ದೊರಕಿದೆ ಎಂದರು. ಮತ್ತು ಪಂಡಿತರನ್ನು ಕೈದುಮಾಡಲಿಕ್ಕೂ ಇಲ್ಲ ಮುಂದಕ್ಕೆ ಹೋಗಲು ಬಿಡಲಿಕ್ಕೂ ಇಲ್ಲವೆಂದರು. ಪಂಡಿತ ಮಾಲವೀಯರು ನಯಬಾ ತಹಸೀಲದಾರರೊಡನೆ ಮಾತನಾಡುವಾಗ ಒಬ್ಬ ಪೋಲೀಸಿನವನು ತನ್ನ ಲತ್ತೆಯನ್ನು ಇವರ ಕಡೆಗೆ ಬೀಸಿ, ಹೀನ ಮಾತುಗಳನ್ನಾಡಿ ಅವರನ್ನು ಅಲ್ಲಿಂದ ಚದರ ಹೇಳಿದನಂತೆ.

ಗುರುಕಾಭಾಗದ ಹತ್ತಿರ ಸುಮಾರು ೧೦೦ ಮಂದಿ ಘೂರ್ಖಾ ಮತ್ತು ಪಠಾನ ಸೈನಿಕರ ದಂಡು ಬಂದು ಇಳಿದಿದೆ. ಈ ಸ್ಥಳದ ಸುತ್ತಲೂ ಬೇಲಿಯು ಹಾಕಲಾಗಿದೆ. ಗಾಯಪಟ್ಟವರಿಗೆ ಕೊಡುವುದಕ್ಕಾಗಿ ೩ [illegible] ಮತ್ತು ಒಂದು ಟಾಂಗಾದ ಮೇಲೆ ಹೇರಿಕೊಂಡು ಬಂದ ಸಾಮಾನುಗಳನ್ನು ತಡಿಸಿ ನಿಲ್ಲಿಸಲಾಯಿತಂತೆ. ಅಕಾಲಿಗಳ ಸತ್ಯಾಗ್ರಹವನ್ನು ತಡಿಸಲು ಪೋಲೀಸರು ತಮ್ಮ ಬಲ ಪ್ರಯೋಗವನ್ನು ನಡಿಸಿದರೂ ಅಕಾಲಿಗಳು ಸ್ಮೃತಿತಪ್ಪಿ ಬೀಳುವ ವರೆಗೆ ತಮ್ಮ ಕಾರ್ಯವನ್ನು ನಡಿಸುವರು. ಏ. ಐ. ಬೆಟ್ಟಿಯೆಂಬವರು ಹೊಡೆದ ಲತ್ತೆ ಪೆಟ್ಟಿನಿಂದ ತ್ರಿಲೋಕಸಿಂಗ್ ಎಂಬವರ ಕಣ್ಣು ಗುಡ್ಡೆಯು ಹೊರಗೆ ಬಂದು ಮುಖವೆಲ್ಲಾ ರಕ್ತವು ಸುರಿಯಲು ಪ್ರಾರಂಭವಾಯಿತಂತೆ. ಆದರೂ ತ್ರಿಲೋಕಸಿಂಗರು ಎಂಟು ಸಲ ಎದ್ದು ಹೋರಾಡಿ ಕೊನೆಗೆ ೨೦ ಮಿನುಟುಗಳ ನಂತರ ಬೋಧತಪ್ಪಿ ಬಿದ್ದರಂತೆ. ಅನಂತರ ಬಂದ ಒಂದು ಗುಂಪಿನವರಿಗೂ ರಕ್ತಸೋರುವ ವರೆಗೆ ಹೊಡೆದುದನ್ನು ಹಕೀಮ್ ಸಾಹೇಬ, ಕುಮಾರಿ, ಸ್ವಾಮಿ ಶ್ರದ್ಧಾನಂದರೇ ಮೊದಲಾದವರು ಕಂಡು ಕನಿಕರದಿಂದ ಕಂಬನಿಗಳನ್ನು ಸುರಿಸಿದರಂತೆ.

ಗುರುಕಾಭಾಗಕ್ಕೆ ಹೋಗುವ ಅಕಾಲಿ ಜನರ ಗುಂಪನ್ನು ಅಂಜಾಲಾ ಮಾರ್ಗದಲ್ಲಿ ಬಲಾತ್ಕಾರದಿಂದ ತಡಿಸಿ ಚದರಿಸುವುದನ್ನು ಮುಂದಕ್ಕೆ ಮಾಡಲಾಗದೆಂದು ಸರಕಾರದ ಹುಕುಂ ಹೊರಟಿದೆ. ಆದರೆ ಮಹಂತರ ಸ್ಥಳಕ್ಕೆ ನ್ಯಾಯಕ್ಕೆ ವಿರುದ್ಧವಾಗಿ ಪ್ರವೇಶಿಸುವವರನ್ನು ಸರಕಾರದವರು ತಡಿಸಲಿಕ್ಕಿದ್ದಾರೆಂದು ಅಕಾಲಿತಂಡಗಳಿಗೂ, ಶಿರೋಮಣಿ ಗುರುದ್ವಾರ ಕಮ್ಮಿಟಿಗಳಿಗೂ, ತಿಳಿಸಿದ್ದಾರಂತೆ. ಮತ್ತು ಈ ಕಾರ್ಯವನ್ನು ನಡಿಸುವುದಕ್ಕಾಗಿ ಸರಕಾರದವರು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಸಹಾಯಕ್ಕೆ ಸಾಕಷ್ಟು ಸೈನ್ಯವನ್ನು ಇಟ್ಟಿರುವರಾಗಿ ತಿಳಿದುಬರುತ್ತದೆ.

ಉಪಕಾರಸ್ಮರಣೆ.

ಗುವಾನೋ ಕಾರಖಾನೆಗಳು ಕೆಲಸನಡಿಸಬೇಕಾದರೆ ಪ್ರತಿ ವರುಷ ಹತ್ತು ರೂಪಾಯಿ ಫೀಸು ಕೊಟ್ಟು ಲೈಸನ್ಸು ಪಡಕೊಳ್ಳಬೇಕು. ಒಂದು ಬೈಲರು ಮಾತ್ರ ಇರುವ ಸಣ್ಣ ಕಾರಖಾನೆಗೂ ಆರೇಳು ಬೈಲರು ಪ್ರೆಸ್ಸುಗಳಿರುವ ದೊಡ್ಡ ಕಾರಖಾನೆಗಳಿಗೂ ತಾರತಮ್ಯವಿಲ್ಲದೆ ಸರಾಸರಿ ಹತ್ತು ಹತ್ತು ರೂಪಾಯಿಯೇ ಫೀಸು ವಸೂಲುಮಾಡುವ ಅನ್ಯಾಯವು ಕೆಲವು ವರುಷಗಳಿಂದ ನಡಕೊಂಡು ಬಂದಿತ್ತು. ಈ ವಿಷಯ ಮಂಗಳೂರು ತಾಲೂಕು ಬೋರ್ಡಿನವರಿಗೆ ಗುವಾನೋ ಕಾರಖಾನೆಯವರು ಒಂದು ಮನವಿಮಾಡಿಕೊಂಡಿದ್ದರು. ಇದು ಕಳೆದ ಆಗೋಸ್ತು ತಾ. ೨೨ರಲ್ಲಿ ಜರಗಿದ ಸಭೆಯಲ್ಲಿ ಚರ್ಚಿಸೋಣಾಗಿ—"ಒಂದು ಬೈಲರು ಮಾತ್ರ ಇರುವಲ್ಲಿ ಲೈಸನ್ಸು ಫೀಸು ರೂಪಾ ೨ರಂತೆಯೂ ಒಂದಕ್ಕಿಂತ ಹೆಚ್ಚು ಇದ್ದಲ್ಲಿ ಪ್ರತೀ ಬೈಲರುಗಳಿಗೆ ರೂಪಾ ಒಂದರ ಪ್ರಕಾರವೂ ಒಟ್ಟು ಅತ್ಯಧಿಕ ದರವು ಹತ್ತು ರೂಪಾಯಿಗಳಿಗೆ ಮೀರಕೂಡದೆಂದೂ" ಬಹುಮತದಿಂದ ನಿರ್ಣಯ ಮಾಡಿರುತ್ತಾರೆ. ಕೇವಲ ಲಾಭದ ಮೇಲೆ ಮಾತ್ರವೇ ದೃಷ್ಟಿಯಿಡದೆ ನ್ಯಾಯನೀತಿಗೆ ಸರಿಯಾಗಿ ಈ ತೀರ್ಮಾನಮಾಡಿದ ನಮ್ಮ ಮಂಗಳೂರು ತಾಲೂಕುಬೋರ್ಡಿನ ಮಾನ್ಯ ಮೆಂಬರರಿಗೂ ಅಧ್ಯಕ್ಷರಿಗೂ ಎಲ್ಲಾ ಗುವಾನೋ ಕಾರಖಾನೆಗಳ ಕಡೆಯಿಂದ ಈ ಮೂಲಕ ಧನ್ಯವಾದ ಕೊಟ್ಟು ಉಪಕಾರ ಸ್ಮರಿಸುತ್ತೇನೆ.

ಮೋಹನಪ್ಪ ತಿಂಗಳಾಯ,
ಕಾರ್ಯದರ್ಶಿ, ಮ. ತಾ. ಗುವಾನೊ ಕಾರಖಾನೆಗಾರರ ಸಂಘ;

ಸ್ವರಾಜ್ಯಕಾರ್ಯಕ್ಕೆ ವಂತಿಗೆ.

ತಾ. ೧೦—೯—'೨೩ರ ಮುಷ್ಟಿಫಂಡಿನ ಜಮಾ ೧೨೧ ಸೇರು ಅಕ್ಕಿ, ರೂ. ೭೭—೧—೨, ಮತ್ತು ಪುಸ್ತಕಗಳು.

ಶಾಲೆಗೆ ವಂತಿಗೆ ಕೊಟ್ಟವರು. ರಾ. ಮ. ಅನಂತಕೃಷ್ಣರಾವ್, ರೂ. ೪೨, ರಾ. ಗಂಗೊಳ್ಳಿ ಕೃಷ್ಣರಾವ್ ರೂ. ೧೦, ರಾ. ಹ. ನರಸಿಂಗರಾವ್ ರೂ. ೨೦, ರಘುನಾಥಶೆಣೈ ರೂ. ೨ ತಿಂಗಳುವಾರು ಕೊಡುವವರು. ರಾ. ಅನಂತಕೃಷ್ಣರಾವ್ ರೂ. ೭, ರಾ. ಜಿ. ಕೃಷ್ಣರಾವ್ ರೂ. ೫, ರಾ. ಟಿ. ಭವಾನಿರಾವ್ ರೂ. ೫, ಶ್ರೀಮತಿ ಶಾಂತಾಬಾಯಿ ರೂ. ೪, ರಾ. ಮ. ಪುತ್ತೂರು ಸಾಹೇಬ ರೂ. ೧, ರಾ. ಕೆ. ಚರ್ಡಪ್ಪ ಬಟ್ಟಿಳನ್ಯಾಕರು, ರೂ. ೨, ರಾ. ಲಕ್ಷ್ಮಣಕಿಣಿ ರೂ. ೧, ರಾ. ಯನ್. ವೆಂಕಟಕೃಷ್ಣರಾವ್ ರೂ. ೪, ರಾ. ಯಂ. ಕೆ. ವೈದ್ಯರ ಪತ್ನಿ ರೂ. ೧, ರಾ. ಗಂಗಾವಿಷ್ಣು ಭಟ್ ರೂ. ೧, ರಾ. ಕಾರ್ಕಳ ಸದಾಶಿವರಾವ್ ರೂ. ೧, ರಾ. ಕೃಷ್ಣಪ್ಪಮೇಸ್ತ್ರಿ ರೂ. ೧, ರಾ. ಕೆ. ಆರ್. ಕಿಣಿಯವರು, ರೂ. ೫, ರಾ. ರಾಮಚಂದ್ರಾಚಾರ್ ರೂ. ೧, ಅ. ಶಿವರಾವ್ ರೂ. ೨. ತಿಲಕ ಸ್ವರಾಜ್ಯ ಫಂಡಿಗೆ ವಂತಿಗೆ ಕೊಟ್ಟವರು. ಶ್ರೀಮತಿ ಅಮ್ಮಣಮ್ಮನವರಿಂದ ರೂ. ೧೦೦, ರಾ. ಶೇಷಭಟ್ಟ ಭೀಡೆಯವರ ತಾಯಮ್ಮನವರು ರೂ. ೫. ಶಾಲೆಗಳಿಗಾಗಿ ವಂತಿಗೆಯ ವಾಗ್ದಾನಗಳನ್ನು ಪಡೆಯಲು ಕೆಲವು ಸ್ವಯಂಸೇವಕರು ಹೊರಡುವರು. ಶಕ್ತಿಮೀರಿ ಸಹಾಯಮಾಡಿ ರಾಷ್ಟ್ರಕಾರ್ಯವನ್ನು ಮುಂದರಿಸಬೇಕಾಗಿ ವಿನಂತಿ.

ತಾ. ೧೨—೯—'೨೩. } ಮ. ಉಮೇಶರಾವ್ ಕಾರ್ಯದರ್ಶಿ,
ಮಂಗಳೂರು ತಾಲೂಕು ಕಾಂಗ್ರೆಸ್ ಕಮ್ಮಿಟಿ.

ರಾಷ್ಟ್ರೀಯ ಶಿಕ್ಷಣ ಮಂಡಳ, ಉಡುಪಿ.

ತಾ. ೬—೭—'೨೩ರಿಂದ ೩೧—೮—'೨೩ರ ವರೆಗಿನ ಜಮಾ ಖರ್ಚಿನ ವಿವರ

ಜಮಾ.	ರೂ. ಅ. ಪೈ.
ವರ್ಷಾಶನ ವಂತಿಗೆ	೧೩೬—೮—೦.
ಚರಕಗಳ ಖಾತೆಯಿಂದ	೨—೪—೦.
ಶಾಲಾ ಹುಡುಗರ ಸಂಬಳ	೨೩೧—೮—೦.
ಇತರ ಸಹಾಯ	೮—೦—೦.
ವಸ್ತ್ರದ ಖಾತೆಯಿಂದ	೩೭—೬—೯.
ಬಡ್ಡಿ	೨೦—೯—೦.
ಉಡುಪಿ ರಾಷ್ಟ್ರೀಯ ಖಾದಿ ಭಂಡಾರದಿಂದ	೩—೧೨—೦.
ಪ್ರಾಥಮಿಕ ಖಾತೆಯಿಂದ	೪—೮—೦.
ಗಾಂಧಿ ದಿನದ ನಿಧಿ (ಜುಲೈ ಆಗೋಸ್ತು ಕೂಡ)	೧೦೩—೧೫—೯.
ಶಾಲಾ ಕಟ್ಟೋಣದ ಖಾತೆಯಿಂದ	೭೪—೬—೦.
	೬೧೨—೧೦—೬.
ಮುಂಚಿನ ಶಿಲ್ಕು	೨೭—೪—೧೦.
ಜುಮ್ಲಾ	೬೩೯—೧೫—

ಖರ್ಚು.	ರೂ.
ಚರಕಗಳ ಖಾತೆಗೆ	೦—೬—೯
ಚಿಲ್ಲರೆ ಖರ್ಚು	೪—೧೦—೦
ಶಾಲಾ ಉಪಕರಣ, ಪುಸ್ತಕ ವಗೈರೆ	೧೪—೧೧—೬
ಕಟ್ಟೋಣದ ಬಾಡಿಗೆ	೨೦—೦—೦
ಕೆನರಾ ಬೇಂಕಿಂಗ್ ಕಾರ್ಪೊರೇಶನಿಗೆ ಸಾಲ ತೀರಿಸುವರೆ ತುಂಬಿದ್ದು	೨೨೭—೫—೦.
ವಸ್ತ್ರದ ಖಾತೆಗೆ ಸಂದದ್ದು	೭೧—೯—೨
ರಾಷ್ಟ್ರೀಯ ಖಾದಿ ಭಂಡಾರಕ್ಕೆ ಸಂದದ್ದು	೧೫—೨—೦
ಉಪಾಧ್ಯಾಯರ ಜುಲೈ ತಿಂಗಳ ಸಂಬಳ	೨೩೭—೦—೦
ಶಾಲಾ ಕಟ್ಟೋಣ ಖಾತೆಗೆ ಸಂದದ್ದು	೮—೪—೦
	೫೯೮—೧೫—೮
ಸಪ್ಟಂಬರ ೧ನೆ ತಾರೀಕಿಗೆ ಶಿಲ್ಕು	೪೦—೧೫—೪
ಜುಮ್ಲಾ	೬೩೯—೧೫—೪

ಶಾಲಾ ಉಪಾಧ್ಯಾಯರ ಆಗೋಸ್ತು ತಿಂಗಳ ಸಂಬಳ ರೂ. ೨೩೭/- ಸಲುಬೇಕಾಗಿರುತ್ತದೆ. ಗಾಂಧಿ ದಿನದ ನಿಧಿಗೆ ಜುಲೈ ತಿಂಗಳಲ್ಲಿ ತಾರೀಖು ೧೮ಕ್ಕೆ ರೂ. ೩೧—೪—೯, ನಂತರ ರೂ. ೧೮—೧೨—೦ ಮತ್ತು ಆಗೋಸ್ತು ತಿಂಗಳಲ್ಲಿ ರೂ. ೫೩—೧೫—೦, ಹೀಗೆ ಎರಡು ತಿಂಗಳಲ್ಲಿ ಒಟ್ಟು ರೂ. ೧೦೩—೧೫—೯ ವಸೂಲಾಗಿರುತ್ತದೆ.

ಉಡುಪಿ, } ಕಾರ್ಯದರ್ಶಿ.
೨—೯—'೨೩ } ರಾ. ಶಿ. ಮ. ಉಡುಪಿ.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.
ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇದ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು
ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.
ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೬, ([illegible]), ಮದ್ರಾಸ್.
Local Agents: Raphael & Co,
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್—ಕಾಸರಗೋಡು, ದಕ್ಷಿಣ ಕನ್ನಡ
ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯಾರಾಗುತ್ತಿರುವುದು. ಹೆಂಚಿನ ಕಾರ್ಖಾನೆಗಳಲ್ಲಿ ಹಂಚು ಒಜಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕಾಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಸ್ಥರಿಗೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್ಸ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
Manager,
Sri Lakshmi Mills, KASARGOD, S. K.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0 | ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 181,250—0—0 | ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,
ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮೃದ್ಧಿಯಲ್ಲಿರಿಸುತ್ತವೆ.

ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.
ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳ ಮುರಿತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅಮೃತಶಕ್ತಿಯುಳ್ಳವು.
ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.
ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.
ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ಸರ ಲಪ್ತಾ ಎಣ್ಣೆ.
ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ ರೂ. 1-4-0.
ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.
ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡಲಾರಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಗಂಡ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.
60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.
ಆರ್ ಮಾರ್ಟಿನ್ಸರ ಗಿಟೋಡಯಿನ್.
ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೂತ್ರರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ. ಕೀವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಸುಲಭವಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.
ಆರ ಸೀಸೆ 1ಕ್ಕೆ ರೂ. 2—0—0.
ವಿಳಾಸ—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ವೈಟ್ ಎಂಡ್ ಕೋ ಹತ್ತಿರ, ಫೋರ್ಟ್ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು —
— ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.
ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.
ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.
ಪಿ. ವೆಂಕಟೇಶ ರಾಮಚಂದ್ರ ಕಮತ್
ಪ್ರೊಪ್ರೈಟರ್.
☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ
ರಥಬೀದಿ ಮಂಗಳೂರು.
ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯೂನಾಮಲ್ಲ ಬಟ್ಟಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಖಾಲಿ ಕವರು, ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಸಿಲ್ವರದ ಸಾಹಿತ್ಯಗಳೂ, ಅದಲ್ಲದೆ ಇತರ ಚಿಲ್ಲರೆ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಮಾನುಗಳೂ, [illegible] ವಗೈರೆ [illegible] ಸುಲಭ ಕ್ರಯಕ್ಕೆ ಮಾರಾಟಕ್ಕೂ ದೊರೆಯುತ್ತವೆ.

ಅಚ್ಚಿನಲ್ಲಿದೆ! ಎಂ. ಜಿ. ಐಗಳ್, ಇವರಿಂದ ರಚಿತವಾದ ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಹದಿನಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರಾನ್ ⅛ ಸ್ಸಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿಂತ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜೈನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯ ಉತ್ತ್ರ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಾದ್ರಿ—ಸೂಡ ಮಠಗಳು—ಜೋಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತಪಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತ ಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವನದುರ್ಗೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದ್ದು—ಅಕ್ಷ್ಯತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹಂಪರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತ ಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲೀಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚಿರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸ್ರೂರು ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಶೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೂನ್ನಾಚಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾ ನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ಬಾಯ—ಕುಂಬಳೆ ಸುಬ್ರಾಯನ ದಂಗೆ—ಕರ್ನಲ್ ಮನ್ರೊ, ಮೊದಲನೇ ಕಲೆಕ್ಟರ—ಬುಕನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ವಂಶ—ಸುಳ್ಯ—ಬೆಳ್ಳಾರೆ—ಅಮರಸುಳ್ಯಗಳು—ಬೆಳ್ಳಾರೆ, ಪುತ್ತೂರು ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ-ಗುರುವಾಯನಕೆರೆ ಪಟ್ಟ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಟ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮೂಡಬಿದ್ರೆ ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಮಣೆಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ಕೆನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾಮಂತರು—ರಾಜಧಾನಿಗಳು—ಶಿರ್ಮಂತೂರು—ಮೂಲಿಕೆ—ವರಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಿಡ್ಲೆ—ಸೋಮಲಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾಸ್ರೂರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ಬಿನ್ನಾಣಿರು—ಪಡುಬಿಲ ಕೊಪ್ಪರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಡಮೆ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಟ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಸುಬ್ರಹ್ಮಣ್ಯ—ಬಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಪ್ಪುವಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಅಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಪಮಹೆಗಡೆ 1.

ವಿಳಾಸ:—

ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠಿಸದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ [illegible] ಕಡಿಮೆಮಾಡಿ ಇಟ್ಟಿರುವವು. ೨—೮—೦ ಟಪ್ಪಾಲು ಖರ್ಚು ಬೇರೆ. [illegible] ನಮ್ಮಲ್ಲಿ ವೇದಾಂತ, ಜೋತಿಷ್ಯ, ನಾಟಕ, ಕಾವ್ಯ, ಕಥೆಗಳು, ಯಕ್ಷಗಾನ [illegible] ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬುದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಶೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ತರಿಸಿರಿ. ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦. ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ

ಶ್ರೀನಿವಾಸ ರಂಗಪ್ಪೆ

ರಥಬೀದಿ, ಮಂಗಳೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೭—೧೯೨೨.)

"ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಸಜ್ಜನ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕ್ಷತ್ರಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುಕ್ತಿಯ ಸರ . .	0—12—0
ಸಂತಾಪಕ ಕಾದಂಬರಿ	0—6—0
ಚಂದ್ರಮುಖಿ ,,	0—8—0
ರಾಜಪುತ್ರರಮಣಿಯರು	0—8—0
ಕೆಲವು ಸಣ್ಣ ಕಥೆಗಳು	1—0—0
ರಾಜಯೋಗ . .	1—0—0

ಸಂಪದಾಭ್ಯುದಯದ ಹೊಸ ಮುದ್ರಣ .	5—0—0
ಸಂಪದಾಭ್ಯುದಯದ ಕಥೆ ವಚನ .	0—12—0
S. S. L. C. Kannada Texts	
ಹರಿವಾಸ . . .	0—5—0
ಸುಬೇಲೆ . . .	0—8—0
ಅರವಿಯ ಹುಡುಗಿ.	0—12—0

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Printed & Published by V. S. Kamath at the Mangalore Trading Association's Sharada Press, MANGALORE.

Registered: No. M. 498.

ಸ್ವದೇಶಾಭಿಮಾನಿ

SWADESHABHIMANI. MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ ,, 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ |
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ || ೧ ||

ದೊರೆಯಲನುಪಮರತ್ನಗಳು ಸಾ- | ಗರವ ಮಥಿಸಲು ಸುರರುಗಳದಂ |
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ||
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೧೬. ಮಂಗಳೂರು, ತಾರೀಕು ೨೨ನೇ ಶುಕ್ರವಾರ ಸಪ್ಟಂಬರ ೧೯೨೨. ಸಂಚಿಕೆ ೩೮

ಮ್ಯಾಲು ಉತ್ತಮ! ದರ ಸುಲಭ!!

ಒಮ್ಮೆ ಪರೀಕ್ಷಿಸಿದರೆ ಖಚಿತವಾಗುವುದು.

ಮೇಲಾದ

=ಜವುಳಿ ಸಂಗ್ರಹದ ಮಳಿಗೆ=

ಶ್ರೀಮಂತರಿಗೂ, ಬಡವರಿಗೂ, ಅಗತ್ಯವಿರುವ ದೇಶ ವಿದೇಶಗಳಲ್ಲಿ ತಯಾರಾದ ವಿವಿಧ ನಮೂನೆಯ ರೇಷ್ಮೆ ಪಟ್ಟೆ, ಮತ್ತು ನೂಲಿನ ಬಟ್ಟೆಗಳು ಸರ್ವರಿಗೆ ಅನುಕೂಲವಾಗುವಂತೆ ಸುಲಭ ದರಗಳಲ್ಲಿ ಮಾರೋಣಾಗುತ್ತವೆ.

ಸ್ತ್ರೀಯರಿಗೆ ಉಪಯುಕ್ತವಾದ ಬನಾರಸ್, ಪೂನಾ, ಅಮ್ಮದಾಬಾದ, ಮಹೇಶ್ವರ, ಗುಜರಾತ, ಬಡೋದಾ, ಕೊಯಮುತ್ತೂರು, ಗದಗ, ಹುಬ್ಬಳ್ಳಿ, ಧಾರವಾಡ, ಇಳಕಲ ಕಡೆಯ ಚಲೋ ಸೀರೆಗಳೂ, ಪುರುಷರಿಗೆ ಬೇಕಾಗಿರುವ ಕಂಚಿ, ಸೇಲಂ, ಮಧುರೆ, ಮುಂಬಯಿ, ಅಮ್ಮದಾಬಾದ ಮುಂತಾದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಿಗೊಂಡ ಊರಿನ ಧೋತರಗಳೂ, ಮತ್ತು ಜಪಾನ, ಚೈನಾ, ಬರ್ಮಾ ನೊದಲಾದ ಕಡೆಗಳಲ್ಲಿಯೂ, ಸ್ವದೇಶದ ಅನೇಕ ಭಾಗಗಳಲ್ಲಿಯೂ ತಯಾರಾದ ಅಂಗೀವಸ್ತ್ರಗಳು, ಶಾಲುಗಳು, ಟೋಪಿಗಳು, ಕೊಡೆಗಳು ಇವೇ ಮೊದಲಾದ ಎಲ್ಲಾ ತರದ ಉಡುವು ತೊಡುವುಗಳು ಈಗ ತಾನೇ ತರಿಸಿದ್ದು, ಮಳಿಗೆಯು ಸಂಪೂರ್ಣ ಸಂಗ್ರಹದಿಂದ ಕೂಡಿರುತ್ತದೆ.

ಮಗ್ಗಗಾರರಿಗೆ ಬೇಕಾಗಿರುವ ಬಿಳೀ ಮತ್ತು ಎಲ್ಲಾ ರಂಗಿನ ನೂಲು ಸಹ ಹೆಚ್ಚಿನ ರಿಯಾಯತಿ ದರದಲ್ಲಿ ದೊರೆಯುವುದು.

ವಿಶೇಷ ಸೂಚನೆ:—ಕೈಮಗ್ಗದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳೂ, ಬಿಳಿ ವ ಇತರ ನಾನಾ ತರದ ಕೋಟಿನ ವಸ್ತ್ರಗಳೂ, ನಯವಾದ ಖಾದಿ ವಸ್ತ್ರಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು.

ನಗದಿ ಪಡೆಯುವವರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಸಂದರ್ಶಿಸಿ ನೋಡಿರಿ!

ಕಾಗಲ ವಾಮನ ವೆಂಕಟೇಶಪ್ಪೆ,
ಕಸ್ತೂರಿ ನಾಗೇಶಪ್ಪೆ ಮತ್ತು ಕಂಪೆನಿ,
ಪೈ ಬಿಲ್ಡಿಂಗ್ಸ್, ರಥಬೀದಿ,
ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ಏನುಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೋ, ಕಲ್ಕತ್ತಾ.

THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

– ಇದರಲ್ಲಿ ದೊರೆಯುವ –

ಪುಸ್ತಕಗಳು.

ವಿದ್ಯಾರ್ಥಿಪದ್ಧತಿ ಅಕ್ಷರಾದು ಶಾಸ್ತ್ರಗಳಿಂದ ಆರಿಸಲ್ಪಟ್ಟ

ಹಿಂದೂ ವ್ರತವಿವೇಕ	ಕ್ರಯ	೦—೧೦—೦
ಕೇಶಮುಂಡ	,,	೦—೧೨—೦
ಸಂಕ್ಷೇಪಗೀತೆ	,,	೦—೧೦—೦

ಲಕ್ಷ್ಮೀನಾರಾಯಣ ಪುರಂತಿಕ್ಕಾಯರಿಂದ ರಚಿತವಾದ ಸ್ವರಾಜ್ಯ ಭಕ್ತಿಸಂಕೀರ್ತನ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀನಿವಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿ ವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಕ ಹರಾದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೩—೦ ಸ್ಥಳೀಕರಿಗೆ ರೂ. ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಪೈಂಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಬ್ಲಾಟಿಂಗ್ ಪೇಪರುಗಳು, ಇತರ ಬರಹದ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕೀಲರು ಇತ್ಯಾದಿ ಕೋರ್ಟು ಫೋರ್ಮುಗಳು, ಪಟ್ವಾರಿ ಫೋರ್ಮು, ಕುಂಭಕೋಣ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಜೋಡಿದ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪಥಿಕ್, ಹೋಮಿಯೋಪಥಿಕ್ ಮತ್ತು ಮದ್ದು ಔಷಧಗಳು—ರೋಗಿಗಳಿಗೂ, ಬಾಲಕರಿಗೂ ಬೇಕಾಗುವ ಪಾತ್ರಿಕ ಔಷಧಗಳು.

ನೈಟ್ರೇಟ್ ಒಫ್ ಸೋಡಾ, ಇತ್ಯಾದಿ ಕೃಷಿಗೆ ಬೇಕಾಗುವ ಗೊಬ್ಬರಗಳು.

ಶ್ರೇಷ್ಠವಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಗಳು.

ವಿಳಾಸ:— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

—ಅಮೃತಾಂಜನ—

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಅನುಸರಿಸುವ ವಿಧವಿಧವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಠಕಕಷಾಯ

U. B. DUTT & Co. CALCUTTA.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಆಯುರ್ವೇದ ಅತಿ ಪ್ರಯಾಸದಿಂದ ಮುಕ್ತಮೇ ಸತ್ಯದ [illegible] ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳು" ಬರುತ್ತಲಿವೆ. ಈ ಭಾಗದಲ್ಲಿ [illegible] ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ 'ಪಾಠಕಕಷಾಯ' ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. [illegible] ಅವಯವಗಳಲ್ಲಿ ಊರಿಯುವ ಸ್ವಭಾವ, ಗಂಟು, ಸಂಧು, ಅವಯವ, [illegible] ಕೈಕಾಲು [illegible] ಇಳಿಯುವಾಗ [illegible] [illegible]. ಅದನ್ನು ಕ್ರಮವಾಗಿ [illegible] ನಮ್ಮ 'ಕಷಾಯ' ತೆಗೆದುಕೊಳ್ಳಲು ಪ್ರಾರಂಭಮಾಡಿರಿ. [illegible]

ಕ್ರಯ ರೂ. 1—4—0.

[illegible]

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರೂ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೇನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಖುದ್ದು ನಿಗಾವಣೆಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲಿ ಕೊಡಲಾಗುವುದು.

ಕಳೆದ ೩೦ ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿವೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬಗೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಅಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ⅛ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ½ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೇನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ 1 ಗ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಚನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ರೂ 3. ಪಚ್ಚ ಕರ್ಪೂರ ತೊಲೆಗೆ ರೂ 4.

ಎಲ್ಲಾ ಆರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಪಿಯು ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರ್ರಾ, ಸೆಂಟ್ಸ, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ವಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫ್ಲೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲಗಳು ಮತ್ತು ತಬ್ಲಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು — ಕ್ರಯ ಸುಲಭ

ಮಕ್ಕಳ ಆಟದ ಹಿತ್ತಾಳೆಯ 32 ಸಾಮಾನುಗಳ ಸಹ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 6—0—0 ಪೋಸು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಮುಗ, ಜರಿ, ಸಾದಾ, ಸೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಪಟಿಕಮಣಿ, ಲಿಂಗ, ಧಾವಳ್ಳಿ ಜಾಗಂಟೆ ಇವುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು. ಕ್ಯಾಟಲಾಗ್ ಇನಾಂ.

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹ ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣ ಅಥವಾ ಹಸುರು ವರ್ಣದ ಕಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ. 1—4—0.

ಹುಳದ ಪೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪೆತಿಕ್ ಡಿಸ್ಪೆನ್ಸರಿ,
ಹಂಪನಕಟ್ಟೆ, ಮಂಗಳೂರು.



ನಿಷ್ಪ ಕರ್ಮವನ್ನು
ಬಿಳುಪುಮಾಡಿಸುವದು

ಹಸ್ತಚರ್ಮದ ಸಾನ್ಯಕಸವನ್ನು
ಹಸ್ತಸೋಟಕ್ಕೆ ಅಲಂಕಾರವನ್ನು
ಕೊಡುವದಕ್ಕೆ

"ಹಾಜಿಲೀನ್' ಸ್ನೋ"
(ಟ್ರೇಡ್ ಮಾರ್ಕ)

"'Hazeline' Snow"
(Trade Mark)

"ಹಾಜಿಲೀನ್' ಸ್ನೋ" ಚರ್ಮದಮೇಲಿರುವ ಮಿರುಗನ್ನು ಸ್ವರಿಯಿಂದ ಬಿಡಿಸಿ ಉನ್ನತವಾದ ಸೌಂದರ್ಯವನ್ನು ಕೊಡುವದು ಅದರಲ್ಲಿ ಯಾವವಿಧವಾದ ಕೊಬ್ಬು ಇಲ್ಲ ಆದಕಾರಣ ಅದನ್ನು ಯಾವಕಾಲದಲ್ಲಿಯು ಪ್ರಕಾಶವಾಗಿ ಉಪಯೋಗಿಸಬಹುದು

ಇದು ಕಂಚಿನ ಪಾತ್ರೆಗಳಲ್ಲಿ ಕೆಮಿಸ್ಟ ಮತ್ತು ಉಗ್ರಾಣದ ಮಾಲೀಕರಿಂದಲು ಮಾರಲ್ಪಡುವದು.

ಬರ್ರೋಸ ವೆಲ್‌ಕಂ ಅಂಡ್ ಕೋ ಲಂಡನ್ ಅಂಡ ಬಂಬಾಯಿ.

Burroughs Wellcome & Co., London and Bombay

CAN. 3   All Rights Reserved

ಶ್ರೀ

ಸ್ವದೇಶ ಭಕ್ತರೇ
ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳು, ಬಿಳಿ, ಹಸುರು ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ ನಯವಾದ ಶರ್ಟಿನ ವಸ್ತ್ರಗಳೂ ಮತ್ತು ನೇಷ್ಟಿ ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿಗಳಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು. ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ಪಾರ್ಸೆಲಿನ ಸ್ಟೇಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:—
ಮುಳಿಯ ತಿಮ್ಮಪ್ಪಯ್ಯ
ಮತ್ತು ಸಹೋದರರು
ರತ್ನ ಮತ್ತು ಜವಳಿ
ವ್ಯಾಪಾರಿಗಳು,
ಬಾರಾಮಜಾನ (ಗೋಳಿಕಟ್ಟೆ ಬಜಾರು)
ಮಂಗಳೂರು.

The Canara Banking Corporation, Udipi, (Limited).

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ.	ಆ.	ಪೈ.
1. ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
2. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಚಂದಾ ಹಾಕಿ ಎತ್ತಿದ ಮೂಲಧನ.	1,00,000		
3. ಮೌಲ್ಯತೆತ್ತ ಮೂಲಧನ	87,347	9	11
4. ಠೇವಣಾತಿಗಳು	2,68,390	14	5
5. ಇನ್ವೆಸ್ಟ್‌ಮೆಂಟು ಋಣ ಹೊರಗಿನಿಂದ ಬರತಕ್ಕದ್ದು	3,78,315	2	5
6. ರಿಜರ್ವ ಇತ್ಯಾದಿ ಫಂಡುಗಳು. (17—6—'22.)	23,709	4	2

ಈ ಕೆಳಗಣ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ:—

೧. ಸಾಲಿಯಾನ್ ಶೇಕಡಾ ೭ರಿಂದ ೭½ ವರೆಗಿನ ಮೂರು ತಿಂಗಳಿಗೊಮ್ಮೆ ಬಡ್ಡಿ ಕೊಡುವ ಕರಾರ ಮೇಲೆ ಖಾಯಮ್ ಠೇವಣಾತಿಗಳು.
೨. ೧೫ ದಿನಗಳ ನೋಟೀಸ್ ಕೊಟ್ಟು ೧ ತಿಂಗಳಿಗಿಂತ ಮುಂಚೆ ವಾಪಾಸು ಪಡಿಯುವ ಕರಾರ ಮೇಲೆ ಸಾಲಿಯಾನ್ ಶೇಕಡಾ 6½ರಲ್ಲಿ ನಡೆದ ದಿನಗಳಿಗೆ ಬಡ್ಡಿ ಕೊಡುವ ಕರಾರ ಮೇಲೆ ಚಿಕ್ಕ ವಾಯಿದೆ ಠೇವಣಾತಿಗಳು.
೩. ಏನೂ ಖರ್ಚಿಲ್ಲದೆ ಸಾಲಿಯನ್ ಶೇಕಡಾ 3½ರ ದರದಲ್ಲಿ ಬಡ್ಡಿ ಕೊಡುವ ಕರಾರ ಮೇಲೆ ಚಾಲ್ತಿ ಠೇವಣಾತಿಗಳು.
೪. ಸಾಲಿಯನ್ ಶೇಕಡಾ 4½ ದರದಲ್ಲಿ ಬಡ್ಡಿ ಕೊಡುವ ಕರಾರ ಮೇಲೆ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು.
೫. ಈ ಕೆಳಗಣ ಕರಾರಗಳ ಮೇಲೆ ಕಂತು ಠೇವಣಾತಿಗಳು.
ತಿಂಗಳೊಂದರ ರೂ. 2ರ ಮೇರೆಗೆ 13 ತಿಂಗಳು ಕೊಟ್ಟಲ್ಲಿ 14ನೇ ತಿಂಗಳಾಂತ್ಯಕ್ಕೆ ರೂ. 27ರಂತೆಯು.
ತಿಂಗಳೊಂದರ ರೂ. 1ರಂತೆ 24 ತಿಂಗಳು ಕೊಟ್ಟಲ್ಲಿ 25ನೇ ತಿಂಗಳಾಂತ್ಯಕ್ಕೆ ರೂ. 25-8-0ರಂತೆಯು.
ತಿಂಗಳೊಂದರ ರೂ. 1ರಂತೆ 45 ತಿಂಗಳು ಕೊಟ್ಟಲ್ಲಿ 46ನೇ ತಿಂಗಳಾಂತ್ಯಕ್ಕೆ ರೂ. 50/-ರಂತೆಯು.
ತಿಂಗಳೊಂದರ ರೂ. 1ರಂತೆ 84 ತಿಂಗಳು ಕೊಟ್ಟಲ್ಲಿ 85ನೇ ತಿಂಗಳಾಂತ್ಯಕ್ಕೆ ರೂ. 102-8-0ರಂತೆಯು.
ತಿಂಗಳೊಂದರ ರೂ. 1ರಂತೆ 132ತಿಂಗಳು ಕೊಟ್ಟಲ್ಲಿ 133ನೇ ತಿಂಗಳಾಂತ್ಯಕ್ಕೆ ರೂ. 182-8-0ರಂತೆಯು.
೬. ಕಳೆದ ೩ ವರುಷಗಳಲ್ಲಿ ಪಾಲುದಾರರಿಗೆ ಶೇಕಡಾ 9ರಂತೆ ಲಾಭಾಂಶ ಹಂಚಿಯದೆ.
೭. ಯೋಗ್ಯ ಜವಾಬ್ದಾರಿಯ ಮೇಲೂ, ಒಡವೆಗಳ ಈಡಿನ ಮೇಲೂ ಸಾಲ ಕೊಡುವರು.
೮. ಈ ಬ್ಯಾಂಕಿಗೆ ಸಲ್ಲತಕ್ಕ ಹಣಗಳನ್ನು ಸದರಿ ಬ್ಯಾಂಕಿನ ಲೆಖ್ಖಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಓಫ್ ಇಂಡಿಯಾ ಲಿಮಿಟೆಡ್ ಮತ್ತು ಕೆನರಾ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಬೊಂಬೈಯಲ್ಲಿರುವ ಮರ್ಕೆಂಟೈಲ್ ಬ್ಯಾಂಕ್ ಓಫ್ ಇಂಡಿಯಾ ಬ್ಯಾಂಕಿನಲ್ಲಿಯೂ ಕೊಡಬಹುದು.

ಶಾಖಾ ಕಲಂ:—ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಯವರಿಗೆ ಬರದು ತಿಳಕೊಳ್ಳಬಹುದು.

ಬ್ಯಾಂಕಿನ ಆಫೀಸು, ಉಡುಪಿ.
ತಾ 13—5—1922.

ನ. ಆನಂದರಾವ್,
ಕಾರ್ಯದರ್ಶಿ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲಿ ಸುಣ್ಣ ಕಟ್ಟುವದೂ, ವಸಡು ದೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯುವದು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಕೊಂಕಣಿ ಭಾಷೆಯಲ್ಲಿ
ಸಂಗೀತ

❀ ಚಂದ್ರಹಾಸ ನಾಟಕ ❀

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದದ ಬೈಂಡು ರೂ. 0—4—6. ಸ್ಟಿಫ್ ಬೈಂಡು ರೂ. 0—5—6.

ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದುವರೆ ಆಣೆ ಅಥವಾ ಆರುವರೆ ಆಣೆಗಳ ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ—
ಬಿ. ಕೆ. ಪ್ರಭು,
ವಿಶ್ವೇಶ್ವರಿಯಾ ಮುದ್ರಾಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯ ಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತು 1ರ ರೂ. 2—12—0.
ಸ್ಪೆಶ್ಯಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿದ್ದಲ್ಲಿ ಸೆಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೧. ಟಪ್ಪಾಲು ಖರ್ಚು ಕೂಡಿ ಆಣೆ ೧೫ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರೀಸ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ ಡಿಪೋಜಿಟರಿ,
ಮಂಗಳೂರು.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂ॥ರದ ಅಶ್ವೀಜ ಶು॥ ೨ ಶನಿವಾರದಿಂದ ದುಂದುಭಿ ಸಂ॥ ಅಶ್ವೀಜ ಶು॥ ೮ ಶುಕ್ರವಾರದ ವರೆಗಿನ ಪಂಚಾಂಗ
(೧೯೨೨ನೆಯ ಕನ್ಯಾ ನಿರ್ಣಾಲ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಸೂರ್ಯ ಅಸ್ತ.
23	ಶನಿ	೨	೧,೪೬	ಚಿತ್ರಾ	೨೯.೧೬	೭	6.22	6.26
24	ರವಿ	೩	೫೦.೫೮	ಸ್ವಾತಿ	೨೫.೩೨	೮	6.22	6.25
25	ಸೋಮ	೪	೪೬.೪೬	ವಿಶಾಖಾ	೨೨.೪೦	೯	6.22	6.24
26	ಕುಜ	೫	೪೩.೩೨	ಅನುರಾಧಾ	೨೦.೪೬	೧೦	6.22	6.24
27	ಬುಧ	೬	೪೧.೧೬	ಜ್ಯೇಷ್ಠಾ	೧೯.೪೫	೧೧	6.22	6.23
28	ಗುರು	೭	೪೦. ೦	ಮೂಲಾ	೧೯.೪೬	೧೨	6.22	6.22
29	ಶುಕ್ರ	೮	೪೦. ೨	ಪೂ. ಷ.	೨೦.೫೮	೧೩	6.22	6.22

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ಸಪ್ಟಂಬರ)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
14	86—0	74—3	0—85	—
15	85—7	74—0	1—11	—
16	87—8	73—1	0—40	—
17	86—0	74—1	0—67	—
18	84—8	74—2	0—25	—
19	86—2	74—1	0—29	—
20	84—5	75—3	0—42	130.24

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಸೂರಿ ಅಕ್ಕಿಮುಡಿ ೧ಕ್ಕೆ	8— 4	8—10
ಸುಗ್ಗಿಗೆ	7—10	7—14
ಗುಡ್ಡ,	7— 8	8— 0
ರಾಶಿ	7— 2	7—
ಅವ್ವಲ್ ಬೆಳ್ತಿಗೆ "	9— 0	[illegible]
ಗುಡ್ಡ ಬೆಳ್ತಿಗೆ "	7—10	[illegible]
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	13	[illegible]
ಗೋದಿ ಗೋಣಿ ೧ಕ್ಕೆ	[illegible]	[illegible]
ಹುರುಳಿ ಗೋಣಿ ೧ಕ್ಕೆ	[illegible]	[illegible]
ಕಡಲೆ ಗೋಣಿ ೧ಕ್ಕೆ	[illegible]	[illegible]
ತೊಗರಿ ಗೋಣಿ ೧ಕ್ಕೆ	[illegible]	[illegible]
ತೊಗರಿಬೇಳೆ ಗೋಣಿ ೧ಕ್ಕೆ	[illegible]	[illegible]
ಉದ್ದು ಗೋಣಿ ೧ಕ್ಕೆ	[illegible]	[illegible]
ಹೆಸರು ಗೋಣಿ ೧ಕ್ಕೆ	[illegible]	[illegible]
ಊರು ಬೆಲ್ಲ ಖಂಡಿ ೧ಕ್ಕೆ	[illegible]	[illegible]
ಉಪ್ಪು ಗೋಣಿ ೧ಕ್ಕೆ	[illegible]	[illegible]
ಕೊಬ್ರಿ ಖಂಡಿ ೧ಕ್ಕೆ	[illegible]	[illegible]
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	[illegible]	[illegible]
ಎಳ್ಳಿಂಡಿ ಖಂಡಿ ೧ಕ್ಕೆ	[illegible]	[illegible]
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	[illegible]	[illegible]
ಎಳ್ಳೆಣ್ಣೆ ಮುಡಿ ೧ಕ್ಕೆ	[illegible]	[illegible]
ಚಿಮಿಣೆಣ್ಣೆ ಪೆಟ್ಟಿಗೆ ೧ಕ್ಕೆ	[illegible]	[illegible]
ಮೋರಿಸ ಸಕ್ಕರೆ ಮುಡಿ ೧ಕ್ಕೆ	[illegible]	[illegible]
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	[illegible]	[illegible]
ಸಾಸಿವೆ ಮುಡಿ ೧ಕ್ಕೆ	[illegible]	[illegible]
ಕೊತ್ತುಂಬರಿ ಮುಡಿ ೧ಕ್ಕೆ	[illegible]	[illegible]
ಕಾಫಿ ಖಂಡಿ ೧ಕ್ಕೆ	[illegible]	[illegible]
ಬೀಗೆಯೆಟು ಅಡಿಕೆ ಖಂಡಿ ೧ಕ್ಕೆ ಹಳ್ತು	[illegible]	[illegible]
ಬೀಗೆಯೆಟು New, ಹೊಸ್ತು	[illegible]	[illegible]
ಕಾಳುಮೆಣಸು ಖಂಡಿ ೧ಕ್ಕೆ	[illegible]	[illegible]
ಚೂಲಿಕ್ಕೆ ಮುಡಿ ೧ಕ್ಕೆ	[illegible]	[illegible]
ಗೇರುಬೀಜ ಮುಡಿ ೧ಕ್ಕೆ	[illegible]	[illegible]
ಶುಂಠಿ ಖಂಡಿ ೧ಕ್ಕೆ	55	[illegible]
ತೆಂಗು ಸಗಣು ಮುಡಿ ೧ಕ್ಕೆ	23	[illegible]
ತೆಂಗು ಪಾತ್ರೆಗಳು ಮುಡಿ ೧ಕ್ಕೆ	36—	[illegible]
ಜೇನ ಬೆಳ್ಳಿ ಸೇರು ೧ಕ್ಕೆ	24—	[illegible]
ಹಿತ್ತಾಳೆ ಪಾತ್ರೆ 1ಕ್ಕೆ	21— 0	[illegible]

ೞೆಂಗಿ ಸಾಹುಕಾರ ... ವಕೀಲ ನರಸಿಂಹ ... ಲಾಗಿದೆ. ಕಳೆದ ಎರಡು ... ಎಲ್ಲಾ ಜನರ ಹಿತಕ್ಕಾಗಿ ಬಹು ... ಸ್ಥಾರೇ ಈ ಸಲವೂ ಪ್ರಸಿಡೆಂಟರ ಪದವಿಗೆ ... ಏನೇ ಸರಿ.

"ಲೈಬ್ರೇರಿಯು ಇತ್ತೀಚೆಗೆ ಪಟ್ಟಣದ ನಡು ... ಮಂಜುನಾಥಯ್ಯನವರ ಜವಳಿ ಅಂಗಡಿಗೆ ... ಮವಾಗಿರುತ್ತದೆ. ಊರಿನ ಸಭ್ಯ ಗೃಹಸ್ಥ ... ಕೊಟ್ಟಲ್ಲಿ ತಮಗೆ ಇಷ್ಟ ಬಂದ ಸಮಯದಲ್ಲಿ ... ಬಂದು ಓದಿ ಆನಂದಪಡಬಹುದಾಗಿದೆ.

... ಗುವ ಮರಣಗಳು ಇನ್ನೂ ಕಡಿಮೆಯಾಗಲಿಲ್ಲ. ... ಸಾಹುಕಾರರಾದ ವೈಕುಂಠ ಕಮ್ತಿಯವರ ವಿಧವೆ ... ಬಾಧಿಗೆ ಹಾರಿ ಪ್ರಾಣಕಳಕೊಂಡರು. ಎರಡು ... ಇಲ್ಲಿಯ ವಕೀಲ ಮ. ರಾ. ಬೆಂದಾವರ ರಾಮ ... ಗಲು ಸುಮಾರು ೧೨ ಗಂಟೆ ಸಮಯಕ್ಕೆ ಆತ್ಮಗೆಗೆ ... ಾದರು.

... ಕಲಿಗೂ ಅಪಾರ, ಸ್ಕೂಲ್ಸ, ಪಂಚ ಮಾಗಣೆಗಳಿಗೂ ಶಿರಸಿ ... ನವರು ತಮ್ಮ ೭೦ನೆಯ ವಯಸ್ಸಿನಲ್ಲಿ ತಾ॥ ... ತ ತಿಳಿಸಲು ವ್ಯಸನಪಡುತ್ತೇವೆ. ಇವರು ತಮ್ಮ ಜಾ ... ಬೊಕ್ಕಾಡಿಯ ಪ್ರಮುಖ ಮುಖಂಡರಾಗಿ ನಿಂತು ... ಹಗಳನ್ನು ಉಭಯ ಶಕ್ತಿಸಾರದೂ ಸಂತೋಷ ... ಇತ್ಯರ್ಥಿಸುತ್ತಾ ಅನೇಕ ಕುಟುಂಬಗಳನ್ನು ... ಸ್ವಧರ್ಮದಲ್ಲಿ ಪ್ರೀತಿ, ದೇಶವಾತ್ಸಲ್ಯ ... ಕುಟುಂಬದಲ್ಲಿ ಸಮೃದ್ಧಿ, ನಿರಹಂಕಾರ ... ಇವರು ... ಪ್ರಾಯದಲ್ಲಿ ಒಂದೆ ... ವ ಸಂಸ್ಕೃತ ... ಕೆಳೆಂದು

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವನಗೀತೆ" "ಆತ್ಮಗೀತೆ" ದೇವರಲ್ಲಿ" ಎಂಬ ಆಂಗ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಹಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

NOTICE.

IN THE SUB COURT OF SOUTH CANARA.

O. S. NO. 55/1922.

BETWEEN

Mahammad Haji — *Plaintiff,*

AND

1. Abdulla
2. Kunbi Kutti Ali
… unhamad Elaya } DEFENDANTS.

…laintiff named above has filed the afore-…lf of himself and his entire tarwad …tapura Edakavil Tarwad" for a … patadharam executed by the …ur of defendants 2 and 3 on …alid and binding on the Plain-…the plaint properties etc. and …n to the Plaintiff to sue … Tarwad as per order … 5-9-1922. The members …nformed of the same and …st hearing on 27-9-'22.

…palkrishna Rao,
Vakil for Plaintiff.

ಸೇವಿಸುವು…
ಬಂಗಭಸ್ಮ…
ಅಶಕ್ತಿ ಮುಂತಾದವುಗ…
1ರಿಂದ 2 ಗ್ರೈನು ವರೆಗೆ …
ಅಥವಾ ಬೆಣ್ಣೆಯೊಡನೆ ಮಿಶ್ರಮಾ…
ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ …
ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧ…
ವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ …
ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರ…
ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ…
1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ …
ವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮ…
ಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋ…
ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ…

ತಾಮ್ರ ಭಸ್ಮ:—ಕುಷ್ಠರೋಗ, ಮಹ…
ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ…
ತೊಲೆಗೆ ಆಣೆ 8. ½ಗ್ರೈನಿನಿಂದ ½ಗ್ರೈನು …
ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕ್ಷ…
ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, …
ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ …

ಶುದ್ಧ ಮಾಡಲ್ಪಟ್ಟ ಸಲ್ಫ…
ಎಲ್ಲಾ ರೋಗಗಳಿಗೂ ಮೇಹ, ಬಹುಸಂಬ್ರದ …
ನಾಮರ್ದ್ಯ ಅಶಕ್ತಿ ಮೊದಲಾದ್ದರಿಂದ …
ದಾಮುದು. 2 ಗ್ರೈನನ್ನು ಗ…
ಬೆರಸಿ ಸೇವಿಸತಕ್ಕದ್ದು. …

ಶುದವಾದ …

…ಟೀಸು.

… ವಸಪ್ಟಂಬರ ತಾರೀಕು 11ರಲ್ಲು …ಂದಪ್ಪದೇಳಾಡನ ಅಳಿಯ ಕೋಟಿ …ಬೆಳ್ಳಡ 1, ಈತನ ತಮ್ಮ ಅಪ್ಪಯ್ಯ … ಈ ಮೂಲಕ ಸರ್ವಜನರಿಗೆ ತಿಳಿಯ… ತಾ. 9—9—1919ರಲ್ಲು ತುಂಬೆ … ಬೆಳಚಾಡನು ಬರಕೊಟ್ಟ ಮಂಗಳೂರು … 396ನೇ ಸಂಚಿಕೆಯ 98—99ನೇ … ಅದವು ದಸ್ತಾವೇಜು ಇತ್ತಲಾಗೆ … ಸದರಿ ದಸ್ತಾವೇಜು ಯಾರಿಗಾದರೂ … ಅದನ್ನು ನಮಗೆ ತಂದುಕೊಟ್ಟಲ್ಲಿ ರೂಪಾಯಿ … ಕೊಡುತ್ತೇವೆ.

ಕೋಟಿಬೆಳಚಾಡನ ರುಜು.
III ಗೆರೆ ಕಣ್ಣಬೆಳಚಾಡನ ರುಜು.
ಅಪ್ಪಯ್ಯಬೆಳಚಾಡನ ರುಜು.

ನೋಟೀಸು.

ದಿ-ಯುನಿವರ್ಸಲ್ ಸ್ಟೀಮನೇವಿಗೇಶನ್ ಕಂಪೆನಿ ಲಿಮಿಟೆಡ್
ಮುಂಬಯಿ.

ಈ ಕಂಪೆನಿಯು ಅದರ ಪಾಲುಮಾಲಿಕರಿಗೆ ಈ ಕೆಳಗಿನ ಸಂಗತಿಯನ್ನು ತಿಳಿಸಲು ತುಂಬಾ ಆನಂದಪಡುತ್ತದೆ. ಕಂಪೆನಿಯು ಬಹಳ ವೇಗದಿಂದ ಓಡುವ (೪೦೧ ಗ್ರೋಸ್‌ಟನ್ನೇಜ್, ದ್ರೆಷ್ಟ ೮'-೫) ಇಲೆಕ್ಟ್ರಿಕ್ ದೀಪಗಳಿಂದ ಕೂಡಿದ ೮೫೦ ಮಂದಿ ಪ್ರಯಾಣಿಕರನ್ನು ಒಯ್ಯಲು ಅನುಕೂಲವುಳ್ಳ ೧೬.೫ knotsರಷ್ಟು ವೇಗವುಳ್ಳ ಕಳೆದ ೧೯೧೯–೨೦ರಲ್ಲಿ ಹೊಸತಾಗಿ ಕಟ್ಟಲ್ಪಟ್ಟ ಎರಡು ಸ್ಟೀಮರುಗಳನ್ನು ಜರ್ಮನಿಯಲ್ಲಿ ಕೊಂಡುಕೊಂಡಿದೆ.

ಸಾಮಾನನ್ನೂ ಪ್ರಯಾಣಿಕರನ್ನೂ ಒಯ್ಯಲು ಸಹಾಯಕವಾಗುವ ಇನ್ನೊಂದು ಸ್ಟೀಮರನ್ನೂ ಒಂದು ಸ್ಟೀಮ ಲೋಂಚನ್ನೂ ಕೊಂಡುಕೊಳ್ಳುವ ಪ್ರಯತ್ನವು ನಡಿಯುತ್ತಿದೆ. ಮತ್ತು ಈ ಪ್ರಯತ್ನವು ಸಫಲವಾದರೆ ಅವುಗಳನ್ನು ಬೇಗನೇ ಕೊಂಡುಕೊಳ್ಳುವರು. ಈ ವಿಷಯದಲ್ಲಿ ಮುಂಬಯಿ ಹೆಡ್ ಆಫೀಸಿಗೆ ತಂತಿ ಬರುತ್ತಲೇ ಪಾಲುಮಾಲಿಕರಿಗೆ ಆ ಸಂಗತಿ ಸಹ ತಿಳಿಸಲಾಗುವುದು.

ಲಂಡನಿನಿಂದ ಹಡಗುಗಳನ್ನು ಒದಗಿಸಿ ಕೊಡುತ್ತಿದ್ದ ಒಂದು ಕಂಪೆನಿಯವರು ಮಾರಲು ಸಿದ್ಧವಿದ್ದ ಹಡಗುಗಳಿಂದ ಮೂರು ಪ್ರಯಾಣಿಕರ ಸ್ಟೀಮರುಗಳನ್ನೂ ಸಾಮಾನನ್ನು ಒಯ್ಯಲು ಅನುಕೂಲವಿದ್ದ ಒಂದು ಕಾರಗೋಸ್ಟೀಮರನ್ನೂ ಕೊಂಡುಕೊಳ್ಳಲು ಕಳೆದ ಮೇ ತಿಂಗಳಲ್ಲಿ ಕಂಪೆನಿಯ ಇಂಜಿನಿಯರರನ್ನು ಲಂಡನಿಗೆ ಕಳುಹಿಸೋಣಾಗಿತ್ತು. ಆದರೆ ಆ ಹಡಗುಗಳಲ್ಲಿ ಹೆಚ್ಚಾಗಿ ಎಲ್ಲವೂ ಉಪಯೋಗಕ್ಕೆ ಬಾರದವುಗಳೆಂದು ಕಂಡು ಬಂದುದರಿಂದ ಜರ್ಮನಿಯಿಂದ ಒಳ್ಳೇ ಸ್ಟೀಮರುಗಳನ್ನು ಆರಿಸಿ ಪಡಕೊಳ್ಳಬೇಕಾಯಿತು. ಆದುದರಿಂದ ಈಗ ಬಹಳ ವೇಗದಿಂದ ಓಡುವ ಮತ್ತು ಹೆಚ್ಚಾಗಿ ಹೊಸತಾಗಿಯೇ ಇರುವ ಹಾಗು ಪ್ರಯಾಣಿಕರಿಗೆ ಕೂತುಕೊಳ್ಳಲು ವಿಶಾಲವಾಗಿಯೂ ಹೆಚ್ಚಿನ ಸೌಕರ್ಯಗಳುಳ್ಳದ್ದಾಗಿಯೂ ಇರುವ ಎರಡು ಸ್ಟೀಮರುಗಳನ್ನು ಕೊಂಡುಕೊಂಡಿದೆ. ಹಿಂದೂಸ್ಥಾನದಲ್ಲಿ ಚಲಾವಣೆಗೆ ತರುವುದಕ್ಕಾಗಿ ಹೆಚ್ಚಿನ ಸಹಾಯಕವಾಗುವಂತೆ ಈಗ ಈ ಹಡಗುಗಳಲ್ಲಿ ಕೆಲವು ರೂಪಭೇದಗಳನ್ನು ಮಾಡುವುದು ಮತ್ತು ಈ ಹಡಗುಗಳನ್ನು ದ್ರವ ಪದಾರ್ಥಗಳಿಂದಲೂ ಕಲ್ಲಿದ್ದಲ್ಲಿನಿಂದಲೂ ನಡಿಯುವಂತೆ ಮಾಡುವುದು ಈ ಕಾರ್ಯಗಳು ಈಗ ನಡಿಯುವುವು. ಈ ಕೆಲಸವನ್ನೂ ಇತರ ಕೆಲವು ಬದಲಾವಣೆಗಳನ್ನೂ ಮಾಡಿಮುಗಿಸಲು ನಾಲ್ಕಾರು ವಾರಗಳ ಕಾಲವು ಹಿಡಿಯುವುದು.

ಪಶ್ಚಿಮ ಕರಾವಳಿಯಲ್ಲಿ ಚಲಾವಣೆಗೆ ಕೂಡಲೇ ಪ್ರಾರಂಭಿಸಲು ಅನುಕೂಲವಾಗುವಂತೆ ನಮ್ಮ ಇಂಜಿನಿಯರರು ಈ ಸ್ಟೀಮರುಗಳನ್ನು ಬರುವ ಒಕ್ಟೋಬರ ತಿಂಗಳ ಪ್ರಾರಂಭದಲ್ಲಿಯೇ ತರಲಿಕ್ಕಿದ್ದಾರೆಂದು ತಿಳಿಯುತ್ತೇವೆ. ಆದುದರಿಂದ ಹಡಗು ಚಲಾವಣೆಯನ್ನು ಬರುವ ಒಕ್ಟೋಬರದಿಂದ ಮಾಡಬಹುದೆಂದು ಕಂಪೆನಿಯು ನಂಬಿದೆ.

ಪಾಲುಗಳ ಪ್ರಥಮ ಕಂತಿನ ಹಣವನ್ನೂ ಎಲೋಟ್‌ಮೆಂಟಿನ ಹಣವನ್ನೂ ಈ ವರೆಗೆ ಕೊಡದೆ ಇದ್ದ ಕಂಪೆನಿಯ ಪಾಲುಗಾರರು ಬೇಗನೆ ದಯವಿಟ್ಟು ಪಾವತಿ ಮಾಡಬೇಕಾಗಿದೆ.

ಹಂಪನಕಟ್ಟೆ ಆಫೀಸು.
ಮಂಗಳೂರು
ತಾ. 5-9-1922 } ಪಿ. ಯಂ. ಕಾಮತ್,
ಎಜಂಟ್, ದಿ ಯುನಿವರ್ಸಲ್ ಸ್ಟೀಮ
ನೇವಿಗೇಶನ್ ಕಂಪೆನಿ ಲಿಮಿಟೆಡ್.

ಪ್ರಕಟಣೆ.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಸಂಬಂಧಪಟ್ಟ ಎಲ್ಲಾ ವೋಟರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದರಿ ದೇವಸ್ಥಾನಕ್ಕೆ ಸಂಬಂಧಪಟ್ಟ ವೋಟರರ ಪೈಕಿ 31 ಜನ ವೋಟರರು ಸದರಿ ದೇವಸ್ಥಾನದ ಕೆಲವು ಕಾಮಗಾರಿಗಳನ್ನು ಮಾಡಿಸುವರೆ ಆಲೋಚಿಸುವ ಬಗ್ಗೆ ಜನರಲ್ ಮೀಟಿಂಗು ಕರೆಯಬೇಕಾಗಿ ಮೊಕ್ತೇಸರರ ಕೌನ್ಸಿಲಿಗೆ ತಾ. 8—9—1922ರಲ್ಲು ರಿಕ್ವಿಜಿಶನ್ ಅರ್ಜಿಮಾಡಿರುವುದರಿಂದ ಸದರಿ ಸಂಗತಿಗಳನ್ನು ಆಲೋಚಿಸಿ ಇತ್ಯರ್ಥ ಪಡಿಸುವ ಬಗ್ಗೆ ತಾ. 1—10—1922ನೇ ಆದಿತ್ಯವಾರ ಶ್ಯಾಮ ಗಂಟೆ 3-30ಕ್ಕೆ ಸದರಿ ದೇವಸ್ಥಾನದ ವಸಂತಮಂಟಪದ ಆಫೀಸಿನಲ್ಲಿ ವೋಟರರ ಜನರಲ್ ಮೀಟಿಂಗು ಕೂಡಿಸಬೇಕಾಗಿ ಕೌನ್ಸಲರರು ಪ್ರೋಸಿಡಿಂಗ್ಸಿನ ಮೂಲಕ ನಿರ್ಣಯಿಸಿರುತ್ತಾರೆ. ಆದ್ದರಿಂದ ಆ ಸಮಯಕ್ಕೆ ಸಮಸ್ತ ವೋಟರರು ಸಭೆಕೂಡಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನ,
ತಾ. 10—9—1922. } K. KODANDA RAMA JOISY
Manager.

ನೋಟೀಸು.

ಮಂಗಳೂರು ತಾಲೂಕು ಪಜೀರಪಡುಗ್ರಾಮದಲ್ಲಿರುವ ದೇರಜೆ ಶಂಕರನಾರ್ಣಪ್ಪಯ್ಯನವರ ಮಗ ಮಂಗಳೂರು ತಾಲೂಕು ಮಳಲಿಮಾಗಣೆ ಕರಿಯಂಗಳ ಗ್ರಾಮದಲ್ಲಿರುವ ಪುಂಚಮೆ ಕೃಷ್ಣಪ್ಪಯ್ಯನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ ನನ್ನ ಸೋದರಳಿಯನಾದ ತಾಲೂಕು ಮಜ್ಜೂರು, ಸಜಿಪ ನಡು ಗ್ರಾಮದಲ್ಲಿರುವ ದೇರಜೆ ಶಂಕರನಾರ್ಣಪ್ಪಯ್ಯನವರ ಮಗ ನಾರಾಯಣ ಎಂಬಾತನು ಸುಮಾರು 3 ವರ್ಷ ಲಾಗಾಯ್ತು ಬುದ್ಧಿ ಸ್ವಾಸ್ಥ್ಯವಿಲ್ಲದೆ ಊರಲ್ಲಿ ತಿರುಗಾಡುತ್ತಾ ಇರುತ್ತಾನೆ. ಈತನು ಮಾಡಿದ ಯಾವದಾದರು ಸಾಲಮೂಲಗಳು ಇದ್ದ ಪಕ್ಷಕ್ಕೂ ಮತ್ತು ಇನ್ನು ಮುಂದೆ ಸಾಲಮಾಡುವುದಾದಪಕ್ಷಕ್ಕೂ ಆತನ ಆಸ್ತಿ ಪಾಸ್ತಿಗಳಿಗೆ ಅಂಥಾ ಸಾಲಮೂಲಗಳು ಬಾಧ್ಯವಾಗತಕ್ಕದ್ದಲ್ಲ.

ಮಂಗಳೂರು ತಾಲೂಕು ಮಳಲಿ ಮಾಗಣೆ ಕರಿ
ಯಂಗಳ ಗ್ರಾಮದಲ್ಲಿರುವ ಪುಂಚಮೆ ಸುಬ್ರಾಯರ ಮಗ,
ಕೃಷ್ಣಯ್ಯನ ರುಜು.

ಸಹಕಾರಿ ಸಂಘಗಳ ಕಾರ್ಯಕಾರಿ ಪರಿಷತ್ತು

ದಕ್ಷಿಣ ಕನ್ನಡ ಸಹಕಾರ ಸಂಘಗಳ ಕಾರ್ಯಕಾರಿ ಪರಿಷತ್ತು, ಮ. ರಾ. ಅಸಿಸ್ಟಾಂಟ ರಿಜಿಸ್ಟ್ರಾರರ ಆಫೀಸಿನಲ್ಲಿ ಕಳೆದ ತಾ. ೧೬-೧೭ರಲ್ಲಿ ಜರಗಿತು. ಪರಿಷತ್ತಿಗೆ ಜಿಲ್ಲಾ ಕಲೆಕ್ಟರ್ ಮ. ರಾ. ರಾ. ಎ. ರಾಮಚಂದ್ರ ನೆಡುಂಗಾಡಿಯವರು, ಸಹಕಾರಿ ಇಲಾಖೆಯ ರಿಜಿಸ್ಟ್ರಾರರೂ, ಅಸಿಸ್ಟಾಂಟ ರಿಜಿಸ್ಟ್ರಾರರೂ, ೩ ಮ… ಒಸರೆರಿ ರಿಜಿಸ್ಟ್ರಾರರೂ, ಇನ್ಸ್‌ಪೆಕ್ಟರುಗಳೂ, ಬೇರೆ ಬೇರೆ ಯೂನಿಯನು ಪ್ರತಿನಿಧಿಗಳೂ ಹಾಜರಿದ್ದರು. ಈ ಸಭೆಯಲ್ಲಿ ಪಾಸಾದ ಕೆಲವು ಠರಾವು ಕೆಳಗೆ ಕೊಟ್ಟಿವೆ.

ಮೂಲಸಂಘಗಳು ಸಾಲಕೊಡುವ ಹಣದ ಬಡ್ಡಿಯ ದರಗಳನ್ನು ಸೆಂಟ್ರಲ್ ಬೇಂಕಿನಿಂದ ಮೂಲಸಂಘಗಳು ಪಡಕೊಳ್ಳುವ ಹಣದ ಬಡ್ಡಿಯ ದರಗಳ… ಈ ಜಿಲ್ಲೆಯಲ್ಲಿ ತತ್ಕಾಲಕ್ಕೆ ತಗ್ಗಿಸಲು ಸಾಧ್ಯವಿಲ್ಲವೆಂದು ನಿರ್ಣಯಿಸಲಾಯಿತು.

ಸಂಘಗಳಿಂದ ಸೆಂಟ್ರಲ್ ಬೇಂಕಿನ ಬಗ್ಗೆ ಹಣವನ್ನು ಪಡಕೊಳ್ಳುವ ಅಧಿಕಾರವನ್ನು ಹೊಂದಿದ ಸಂಘಗಳು ಈ ಅಧಿಕಾರದ ಮಂಜೂರಾತಿಯನ್ನು ತಮ್ಮ ಮಹಾಸಭೆಗಳಲ್ಲಿ ಮಾಡಿಕೊಳ್ಳುವುದು ಯೋಗ್ಯವೆಂದು ಪರಿಷತ್ತು ಅಭಿಪ್ರಾಯವನ್ನು ಸೂಚಿಸಿತು. ಸಹಕಾರಿ ಸಂಘಗಳಿಗೆ ಆಯಾ ಗ್ರಾಮ ಸರಕಾರಿ ಸ್ಥಳವನ್ನು ಕಂದಾಯಮಾಫಿಯಿಂದ ಕೊಡುವ ವಿಷಯವನ್ನು ಚ…ಲಾಯಿತು. ಈ ಮೊದಲು ಹಾಗೆ ಕಂದಾಯಮಾಫಿಯಿಂದ ಸ್ಥಳ ಸಿ… ಸಂಗತಿಗಳನ್ನು ಮುಂದಿಡಲಾಯಿತು. ಈಗ ಒಂದೆರಡು ಸಂಗತಿಗಳಲ್ಲಿ … ಸಿಗಲಾರದೆಂದು ರೆವಿನ್ಯೂ ಇಲಾಖೆಯವರು ಕೊಟ್ಟ ಹುಕುಂಗಳನ್ನು ಪರಿಷ… ಮುಂದಿಡಲಾಯಿತು. ಈ ವಿಷಯದಲ್ಲಿ ಸಹಕಾರಿ ಇಲಾಖೆಯ ಮತ್ತು ರೆವಿ… ಇಲಾಖೆಯೊಡನೆ ಸೆಂಟ್ರಲ್ ಬೇಂಕಿನ ಅಧಿಕಾರಿಗಳು ಪತ್ರವ್ಯವಹಾ… ಬೇಕಾಗಿ ಸೂಚಿಸಲಾಯಿತು.

ಯೂನಿಯನ್ ಮಹಾಸಭೆಗಳನ್ನು ಜರಗಿಸುವ ತಾರೀಕುಗಳನ್ನು ಈ ಕೆ…ನಂತೆ ತಾತ್ಕಾಲಿಕವಾಗಿ ನಿರ್ಣಯಿಸಲಾಯಿತು. ಉಡುಪಿ ಕಳೆದ ತಾ. … ಕಾರ್ಕಳ ಕಳೆದ ತಾ. ೧೯, ಹೊಸದುರ್ಗ ಬರುವ ತಾ. ೧, ಕುಂದಾಪುರ ತಾ. … ಮುಲ್ಕಿ ತಾ. ೬, ಮಂಗಳೂರು ತಾ. ೭, ಪುತ್ತೂರು ತಾ. ೨೨, ಸುಳ್ಯ ತಾ. … ಬಂಟ್ವಾಳ ತಾ. ೨೮, ಗುರುವಾಯನಕೆರೆ ತಾ. ೨೯, ಕಾಸರಗೋಡು ನವಂ… ತಾ. ೫.

ಸಂಘಗಳಿಂದ ಸೆಂಟ್ರಲ್ ಬೇಂಕಿಗೆ ಬರತಕ್ಕ ಅಸಲು ಬಡ್ಡಿಯನ್ನು … ತಗಾದಾ ಪತ್ರಗಳನ್ನು ಈ ವರೆಗಿನ ಕ್ರಮದಂತೆ ಸೆಂಟ್ರಲ್ ಬೇಂಕಿನಿಂದಲೇ …ಹಿಸುವುದು ಯುಕ್ತವೆಂದು ಸೂಚಿಸಲಾಯಿತು. ಆದರೆ ಆಯಾ ಯೂನಿಯ… ಮೇಲ್ವಿಚಾರಕ್ಕೆ ಒಳಪಟ್ಟ ಸಂಘಗಳಿಂದ ಬರತಕ್ಕ ಸಾಲಗಳ ಕಂತುಗಳ…ಯನ್ನು ಆಯಾ ಯೂನಿಯನ್ನಿಗೆ ಪ್ರತಿ ತಿಂಗಳಲ್ಲಿ ಸೆಂಟ್ರಲ್ ಬೇಂಕಿನವರು …ಹಿಸುವ ಕ್ರಮವನ್ನು ಜಾರಿಯಲ್ಲಿ ಇಡಬೇಕೆಂದು ಸೂಚಿಸಲಾಯಿತು.

ಜಿಲ್ಲೆಯ ಹೊರಗೆ ಒಳ್ಳೇ ರೀತಿಯಿಂದ ಕೆಲಸನಡಸುವ ಯೂನಿಯ…ಗಳನ್ನು ಸಂದರ್ಶಿಸುವ ಬಗ್ಗೆ ಮೂವರು ಓ. ಎ. ರಿಜಿಸ್ಟ್ರಾರರನ್ನು ಸರಕಾ… ಖರ್ಚಿನಿಂದ ಕಳುಹಿಸುವುದು ಯುಕ್ತವೆಂದು ಸರಕಾರದವರಿಗೆ ಸೂಚಿಸುತ್ತದೆ.

ಎಲ್ಲಾ ಸಂಘಗಳು ತಮ್ಮ ಕ್ಷೇಮನಿಧಿಯನ್ನು ಸೆಂಟ್ರಲ್ ಬೇಂಕಿಗೆ ಠ…ಸುವುದು ಅತ್ಯಗತ್ಯವೆಂಬುದನ್ನು ಕುರಿತು ಈ ಪರಿಷತ್ತು ಸಂಘಗಳಿಗೆ ಸೂಚಿಸುತ್ತ…

ಸುಪರವೈಜರರು ತಮ್ಮ ಸರಹದ್ದನ್ನು ದಾಟಿ ಸಹಕಾರಿ ಇಲಾಖೆಗೆ ಸಂಬಂಧವ… ಕೆಲಸವನ್ನು ಮಾಡುತ್ತಿರುವಾಗ ಅವರಿಗೆ ದಿನಕ್ಕೆ ೮ ಆಣೆ ಏರಿಗೆ ದಿನದ ಬತ್ತ ಕೆ…ಬೇಕಾಗಿ ಪರಿಷತ್ತಿನ ಅಭಿಪ್ರಾಯವಿದೆ.

ಈ ಕೆಳಗಿನ ಸ್ಥಳಗಳಲ್ಲಿ ಹೊಸ ಸಂಘಗಳನ್ನು ಸ್ಥಾಪಿಸಬಹುದಾಗಿ ಪತ್ರಿನವರು ಅಭಿಪ್ರಾಯಪಟ್ಟರು. ಮಂಗಳೂರಿನಲ್ಲಿ ಲೋಕಲ್ ಮತ್ತು ಮು…ಪಲ್ ನೌಕರರ ಸಂಘ, ಈರ ಮತ್ತು ಬಾಳೆಪುಣಿ, ಕೈರಂಗಳ ಮತ್ತು ಮಂಜನ… ಸಹಿತ್ತು, ಕುಂಜತ್ತೂರು, ನೆಲ್ಯಾಡಿ, ಕುಂಬಡಾಜೆ, ಬೇಡಡ್ಕ, ಮಂಗಳ… ಬತ್ತದ ಬೇಂಕು, ಪಟ್ಲ ಮತ್ತು ಶಿರಿಬಾಗಿಲು ಗ್ರಾಮಗಳಿಗೆ ಬತ್ತದ ಬೇ… ಕಿನಾನೂರು, ಪಡ್ರೆ, ಕುರಿಯಾ, ಗುತ್ತಿಗಾರು, ಕಾಣಿಯೂರು, ಎಡಮಂ… ಕೊಲ್ಲಮೊಗರು, ಮುಡಪಾಡಿ, ಎಣ್ಮೂರು, ಕರಂಬಾರ, ಬಡಗ ಕಾರಂದೂ… ತೆಂಕ ಕಾರಂದೂರು, ಪಟ್ರಮೆ, ಬಂಗಾಡಿ ಭತ್ತದ ಬೇಂಕು, ಕಡಬ ಭ… ಬೇಂಕು, ಬಿಂಭದಕೋಣೆ ಬತ್ತದ ಬೇಂಕು.

ಜಿಲ್ಲೆಯ ಎಲ್ಲಾ ಸಹಕಾರಿ ಸಂಘಗಳ ಸರ್ವಜನೋಪಕಾರನಿಧಿಯ… ಶೇಖರಿಸಿ ಒಂದೇ ಸಂಸ್ಥೆಯ ಕೈಕೆಳಗಿಟ್ಟು ಅದನ್ನು ಆದಷ್ಟು ಮಹ… ಸಾರ್ವಜನಿಕ ಸೌಕರ್ಯಕ್ಕೆ ಉಪಯೋಗಿಸುವುದು ಯೋಗ್ಯ, ಅಲ್ಲಲ್ಲಿ ಚಿ… ಚಿಲ್ಲರೆಯಾಗಿ ವೆಚ್ಚಮಾಡಿ ಯಾರಿಗೂ ಪ್ರಯೋಜನವಾಗದಂತೆ ಮಾಡುವ… ಸರಿಯಲ್ಲವೆಂದು ಎಲ್ಲಾ ಸಂಘಗಳಿಗೆ ಈ ಪರಿಷತ್ತು ಸೂಚಿಸುತ್ತದೆ.

ಕೃಷಿ ಇಲಾಖೆಯ ಅ. ಡೈರೆಕ್ಟರರಾದ ಮ. ರಾ. ಕೆ. ಟಿ. ಅಳ್ವರು ಪಟ್ಟಣದಲ್ಲಿ ತೆಂಗಿನಮರಗಳಿಗೆ ಹಬ್ಬಿದ ಸಾಂಕ್ರಾಮಿಕ ರೋಗವನ್ನು ಕು… ಸವಿಸ್ತಾರವಾಗಿ ವಿವರಿಸಿ ಭಾಷಣಮಾಡಿದರು. ಮತ್ತು ಇಂಥಾ ಸಾಂಕ್ರಾಮಿಕ ರೋ… ಹಬ್ಬದಂತೆಯೂ ಹಬ್ಬಿದಲ್ಲಿ ಅದರ ಉಪಶಮನಮಾಡುವುದಕ್ಕೆ ಸಹಕಾರಸಂಘ… ಕೃಷಿ ಇಲಾಖೆಯ ಸಹಾಯವನ್ನು ಹೇಗೆ ಪಡಿಯಬಹುದೆಂಬುದನ್ನೂ ಸೂಚಿಸಿ…

ಈಗ ಸೆಂಟ್ರಲ್ ಬೇಂಕಿನಿಂದ ತರಿಸತಕ್ಕ ಹಣವನ್ನು ಅದರ ಏಜಂಟ… ವರ್ತಿಸುವ ಸಂಘಗಳ ಮೂಲಕ ಒದಗಿಸಿಕೊಳ್ಳುವ ರೀತಿಯಲ್ಲಿಯೇ … ಜನರಿಗೂ ಕೆಲವು ಬಲವಾದ ಸಂಘಗಳಿಗೂ ಹುಂಡಿಚಲಾವಣೆಯ ವಹಿವಾ… ನಡಿಸುವುದಕ್ಕೆ ಅಗತ್ಯವಿರಬಹುದಾದ ನಿಬಂಧನೆ ಕ್ರಮಗಳನ್ನು ತಯಾ… ಸೆಂಟ್ರಲ್ ಬೇಂಕಿನವರಿಗೆ ಕೇಳಿಕೊಳ್ಳಬೇಕೆಂದು ಪರಿಷತ್ತಿನ ಅಭಿಪ್ರಾಯ.

ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರ ಸೌಕರ್ಯಕ್ಕಾಗಿ ಬೀಜದ ಹ…ಗಳನ್ನು ಒದಗಿಸಿಕೊಳ್ಳುವುದು ಅಗತ್ಯವೆಂದು ಕಂಡರೂ ಸಂಘಗಳ ಉಪನಿಬ…ಗಳಲ್ಲಿ ಅಗತ್ಯ ತೋರುವ ಬದಲಾವಣೆಗಳನ್ನು ಮಾಡದೆ ವಿನಹಾ ಅಂಥಾ ಹ…ಗಳನ್ನು ಸಂಘಗಳು ಒದಗಿಸಿಕೊಳ್ಳುವ ಏರ್ಪಾಡುಗಳನ್ನು ಮಾಡಲು ಸ…ವಿಲ್ಲವೆಂದು ಪರಿಷತ್ತಿನ ಅಭಿಪ್ರಾಯವಿದೆ.

ನೇಯಿಗೆ ವೃತ್ತಿಯನ್ನು ಉತ್ತೇಜಿಸಲಿಕ್ಕೆ ಈಗಿನ ಸಹಕಾರಿ ಸಂಘಗಳ ಉಪನಿಬಂಧನೆಗಳೇ ಸಾಕಷ್ಟು ಸೌಕರ್ಯವನ್ನು ಕೊಡುತ್ತಿರುವುದರಿಂದ ನೇ…ಗೆಯ ಬಗ್ಗೆನೇ ಪ್ರತ್ಯೇಕ ಸಂಘಗಳನ್ನು ಏರ್ಪಡಿಸುವುದು ಅವಶ್ಯವಿಲ್ಲ. … ಸಂಘಗಳಲ್ಲಿ ಜಂಟಿ ಕ್ರಯವಿಕ್ರಯದ ಮೂಲಕ ನೂಲನ್ನು ತರಿಸುವುದನ್ನೂ … ಮಾರಾಟ ಮಾಡುವುದನ್ನೂ ಕೈಕೊಳ್ಳಬಹುದಾಗಿ ಪರಿಷತ್ತಿನ ಅಭಿಪ್ರಾಯವಾ…

[illegible] ಸಂಘಗಳನ್ನು ದುರುಸ್ತಿಗೆ ತರುವ ಉದ್ದೇಶದಿಂದ ಪರೀಕ್ಷ…ವಾಗಿ ಇನ್ಸ್‌ಪೆಕ್ಟರುಗಳ ಪೈಕಿ ಒಬ್ಬರ ಕೈಕೆಳಗೆ ಆ ಎಲ್ಲಾ ಸಂಘಗ… ಇರಗೊಡಿಸುವುದು ಯುಕ್ತವೆಂದು ಪರಿಷತ್ತು ಅಭಿಪ್ರಾಯಪಡುತ್ತದೆ.

ಪ್ರತಿ ಯೂನಿಯನ್ನಿನವರು ತಮ್ಮ ಕೈಕೆಳಗಿನ ಸಂಘದ ಆಡಳಿತ ಸ… ಮೆಂಬರುಗಳಲ್ಲಿ ಆದ ತಪ್ಪುಗಳನ್ನು ಆಗಾಗಲೇ ಗೊತ್ತುಮಾಡುವುದ… ಅಂಥಾ ಹೊಸ [illegible] ಸೆಂಟ್ರಲ್ ಬೇ… [illegible]

ವಿದೇಶ ವರ್ತಮಾನ

೨೦ನೇ ಶತಮಾನದ ಕುಂಭಕರ್ಣ.

ರಷ್ಯಾದೇಶಕ್ಕೆ ಸೇರಿದ ಸೈಬೇರಿಯಾದಲ್ಲಿ ಕಜಸಲಫ್ ಎಂಬಾತನಿರುವನು. ಅವನಿಗೆ ಈಗ ೩೪ ವರುಷ ವಯಸ್ಸು. ಅವನ ದೇಹದ ಎತ್ತರವು ೯ ಅಡಿಯೂ ೩ ಅಂಗುಲ. ಆ ಎತ್ತರಕ್ಕೆ ತಕ್ಕಂತೆ ಉಳಿದ ಅಂಗಭಾಗಗಳೆಲ್ಲಾ ಪರಿಪುಷ್ಟವಾಗಿಯೇ ಇರುವುವು. ಹೇಗೆಂದರೆ, ಕರತಳದ ಉದ್ದವು ೧೩ ಅಂಗುಲ, ಕಾಲಹೆಜ್ಜೆಯು ೨೧ ಅಂಗುಲ ಉದ್ದ, ಎದೆಯಗಲವು ೫೬ ಅಂಗುಲ, ತಲೆಯ ಸುತ್ತಳತೆ ೨೫ ಅಂಗುಲ, ಅವನ ದೇಹದ ಒಟ್ಟು ತೂಕವು ೪೫೮ ಪೌಂಡು. ಈ ಆಕೃತಿಗೆ ತಕ್ಕಂತೆ ಅವನಿಗೆ ಜೀರ್ಣಶಕ್ತಿಯು ಮಿಗಿಲಾಗಿಯೇ ಇರುವುದು. ದಿನಕ್ಕೆ ೪ ವೇಳೆ ಭುಂಜಿಸುವನು. ಒಟ್ಟು ಒಂದು ದಿನದ ಅವನ ಆಹಾರವೆಷ್ಟೆಂದರೆ ೨-೨½ ಸೇರು ಹಾಲು, ೧೫–೨೦ ಕೋಳಿಮೊಟ್ಟೆ, ೩–೪ ಪೌಂಡು ತೂಕದ ಮಾಂಸ, ೫-೬ ದೊಡ್ಡ ರೊಟ್ಟಿಗಳು, ಆಲೂಗಡ್ಡೆ ಮೊದಲಾದ ಕಾಯಿಪಲ್ಯಗಳು ಯಥೇಚ್ಛ, ೨ ಅಥವಾ ೩ ಸೇರು ವೈನು ಸಾರಾಯಿಗಳು, ಇವಿಷ್ಟನ್ನು ಸರ್ವಸಾಧಾರಣವಾಗಿ ಪ್ರತಿದಿನವೂ ತಿಂದು ಅರಗಿಸಿಕೊಳ್ಳುವನು. ಅವನು ಮಾಡುವ ಕೆಲಸವೆಂದರೆ ಹಗಲೂ ರಾತ್ರಿಯೂ ಮಲಗಿ ನಿದ್ರಿಸುತ್ತಿರುವುದೇ. ಯಾರಾದರೂ ಬಂದು ಎಬ್ಬಿಸಿದರೆ ಮುಂಚಾಗಿ ಬೇಜಾರಿನಿಂದ ಕುಳಿತಿದ್ದು ಅವರು ಹೋದ ಕೂಡಲೇ ಮತ್ತೆ ಮಲಗಿಬಿಡುವನು. ಊಟದ ಹೊತ್ತಿಗೆ ಮಾತ್ರ ಸರಿಯಾಗಿ ತಾನೇ ಎಚ್ಚರಗೊಳ್ಳುವನು. ಈಗ ಅವನು ಮಾಸ್ಕೊ ಕಡೆಯಿಂದ ತನ್ನ ಸ್ವಸ್ಥಲವಾದ ಸೈಬೇರಿಯಾಕ್ಕೆ ಹೊರಬರುವನು. ಅಲ್ಲಿ ತನ್ನ ತಾಯಿತಂದೆಗಳಿಗೆ ಬೇಸಾಯದ ಕೆಲಸದಲ್ಲಿ ಸಹಾಯಮಾಡುವುದಾಗಿ ಹೇಳಿಕೊಂಡು ಹೋಗಿದ್ದಾನೆ. ಹೊಟ್ಟೆಗಿಲ್ಲದೆ ಮನುಷ್ಯರನ್ನು ಮನುಷ್ಯರು ಕಡಿದು ತಿನ್ನುವಂಥ ದುರ್ಭಿಕ್ಷ ಹೊಂದಿದ್ದ ರಷ್ಯಾದೇಶದಲ್ಲಿ ಈ ಮಹಾರಾಕ್ಷಸನು ಏನನ್ನು ತಿಂದು ಬದುಕಿದನೋ ತಿಳಿಯಲಿಲ್ಲ. ಈ ಹೊಟ್ಟೆಬಾಕ ರಕ್ಕಸನನ್ನು ಮರಿಸುವುದಕ್ಕೆ ಯಾವ ಮಹಾತಾಯಿಯು ಭೂಮಿಯಲ್ಲಿ ಅವತರಿಸುವಳೋ ನೋಡಬೇಕು. (ಸ್ವಾರ.)

ಹುಳಗಳ ಹಾವಳಿ:—ಅಮೇರಿಕಾ ದೇಶದಲ್ಲಿ ಹತ್ತಿಗೆ ಹುಳಗಳ ಬಾಧೆಯು ತಗಲಿ ೬೭,೦೦೦ ಬೈಲುಗಳ ಹತ್ತಿಯು ನಾಶವಾಯಿತೆಂದೂ ಇದರಿಂದ ೬ ಕೋಟಿ ಡಾಲರುಗಳು ಎಂದರೆ ಸುಮಾರು ೧೮೮ ಕೋಟಿ ರೂಪಾಯಿ ನಷ್ಟವಾಗಿರುವುದೆಂದೂ ತಿಳಿದುಬರುತ್ತದೆ.

ರಾಟೆಯ ಪ್ರಸಾರಕ್ಕೆ ಜರ್ಮನಿಯ ಸಹಾಯ:—ಜರ್ಮನಿಯಲ್ಲಿ ಈಗ ಕೈಯಿಂದ ನೂಲುತೆಗಿಯುವ ರಾಟೆಗಳು ತಯಾರಾಗಿದ್ದು ಅವುಗಳನ್ನು ಹಿಂದೂಸ್ಥಾನಕ್ಕೆ ಕಳುಹಿಸಿ ಹಣ ಗಳಿಸುವ ವಿಚಾರವು ನಡಿಯುತ್ತಿದೆ. ಅವು ಹೋಲಿಯುವ ಕೈರಾಟೆಗಳಂತೆ ಇರುವವು ಎಂದು ತಿಳಿದುಬರುತ್ತದೆ.

ಜರ್ಮನ ಕೈಸರರು:—ಜರ್ಮನಿಯ ಕೈಜರರು ಈಗ ಒಬ್ಬ ೩೫ ವರುಷದ ವಿಧವೆಯನ್ನು ಮದುವೆಮಾಡಿಕೊಳ್ಳಲು ನಿಶ್ಚಯಿಸಿರುವರಂತೆ.

ತುರ್ಕರ ವಿಜಯ.

ತುರ್ಕರು ಸ್ಮಿರ್ನಾ ಪಟ್ಟಣವನ್ನು ಹಿಡಿದು ನುರೇದಿನ್ ಪಾಷಾ ಎಂಬವರನ್ನು ಅಲ್ಲಿಯ ಗವರ್ನರರಾಗಿ ನೇಮಿಸಿರುವರಷ್ಟೆ! ಗ್ರೀಕರು ತುರ್ಕರನ್ನು ಎದುರಿಸಲಾರದೆ ಓಡಿಹೋಗುತ್ತಿರುವಾಗ ಅನೇಕ ದೊಡ್ಡದೊಡ್ಡ ಕಟ್ಟೋಣ ಮೊದಲಾದುವನ್ನು ಸುಟ್ಟುಬಿಟ್ಟಿದ್ದಾರಂತೆ. ಸ್ಮಿರ್ನಾದಲ್ಲಿ ಯಜ್ಞೇಶ್ವರನ ದಾಳಿಯಿಂದ ಅನೇಕರು ಮನೆಯಿಲ್ಲದೆ ಅಲೆಯುತ್ತಿದ್ದಾರೆ; ಹಲವು ಮಂದಿಗಳು ಮಡಿದಿದ್ದಾರಂತೆ. ಹೆಚ್ಚಿನ ವಿತ್ತನಾಶವೂ ಆಗಿದೆ. ಸ್ಮಿರ್ನಾದಿಂದ ಹೊರಕ್ಕೆ ಕಳುಹಿಸಲು ಸಿದ್ಧಪಡಿಸಿಟ್ಟ ೧೦೦,೦೦೦ ಟನ್ ಅಂಜೂರ ಮೊದಲಾದ ಒಣಗಿಸಿದ ಫಲಗಳು ಯಜ್ಞೇಶ್ವರನ ಪಾಲಾಯಿತು. ಯುದ್ಧವನ್ನು ನಿಲ್ಲಿಸಬೇಕಾದರೆ ಗ್ರೀಕರು ಯಾವ ಶರ್ತವನ್ನೂ ಕಾಣಿಸದೆ ಈಗ ಸ್ವಾಧೀನದಲ್ಲಿರುವ ಪೂರ್ಣ ಸ್ಥಳವನ್ನು ಸೈನ್ಯಸರಂಜಾಮು ಸಹಿತ ತಮಗೆ ಬಿಟ್ಟುಕೊಡಬೇಕು; ಏಸಿಯಾ ಮೈನರಿಗೂ ಥ್ರೇಸಿಗೂ ತುರ್ಕರೆ ಸಂಪೂರ್ಣ ಅಧಿಕಾರಿಗಳೆಂದು ಗ್ರೀಕರು ಒಪ್ಪಬೇಕು; ವಿರೂಪಪಡಿಸಿದ ಎಲ್ಲಾ ಕಟ್ಟೋಣ ಮೊದಲಾದವನ್ನು ಗ್ರೀಕರು ಸರಿಪಡಿಸಿಕೊಡಬೇಕು; ಮತ್ತು ತುರ್ಕಿಯ ಎಲ್ಲ ನಷ್ಟವನ್ನು ಗ್ರೀಕರು ಸಹಿಸಿಕೊಳ್ಳಬೇಕು; ಸೆರೆಹಿಡಿಯಲ್ಪಟ್ಟ ಎಲ್ಲ ಜನರನ್ನೂ ಗ್ರೀಕರು ಬಿಟ್ಟುಬಿಡಬೇಕು ಎಂಬ ಇವೆಲ್ಲಾ ಶರ್ತಗಳನ್ನು ಒಪ್ಪಿಕೊಳ್ಳಬೇಕೆಂದು ತುರ್ಕರು ಸೂಚಿಸಿದ್ದಾರೆ. ತುರ್ಕರ ಜಯವನ್ನು ಕಂಡು ಈಗ ಇಂಗ್ಲೀಷ ಮೊದಲಾದ ಇತರ ರಾಷ್ಟ್ರಗಳಿಗೆ ಡಾರ್ಡನಲಿಸ್ ಮತ್ತು ಬಾಸ್ಪರಸ್ ಸಮುದ್ರಧುನಿಯನ್ನೂ ಕೊನ್ಸ್‌ಟೆಂಟಿನೋಪಲನ್ನೂ ಭದ್ರಪಡಿಸಿಕೊಂಡಿರಬೇಕೆಂಬ ಚಿಂತೆಯು ಹುಟ್ಟಿದೆ. ಇನ್ನೂ ಹೆಚ್ಚಿನ ಅವಾಂತರಗಳು ಸಂಭವಿಸದಂತೆ ಈ ಯುದ್ಧವನ್ನು ನಿಲ್ಲಿಸುವುದು ಸಖರಾಷ್ಟ್ರಗಳ ಕೆಲಸವಾಗಿದೆ, ಜಲಧಾರಿಗಳ ಸ್ವಾತಂತ್ರ್ಯವನ್ನು ಭದ್ರಪಡಿಸಲು ಇಂಗ್ಲೀಷರು ಸಿದ್ಧರಾಗಿದ್ದಾರೆ, ಇಟಲಿ ಮತ್ತು ಪ್ರಾನ್ಸು ಈ ಕಾರ್ಯದಲ್ಲಿ ಸಹಭಾಗಿಗಳಾಗಬೇಕೆಂದು ಬ್ರಿಟಿಷ್‌ಸರಕಾರದವರು ಸೂಚಿಸುತ್ತಿದ್ದಾರೆ. ಫ್ರಾನ್ಸದ ಸೈನ್ಯವು ತುರ್ಕರ ವಿರುದ್ಧ ಯುದ್ಧಮಾಡಲಿಕ್ಕಿಲ್ಲವೆಂದು ಫ್ರೆಂಚ್ ಪತ್ರಗಳ ಅಭಿಪ್ರಾಯವಿದೆಯಂತೆ.

ಬ್ರಿಟಿಷರು ಕೊನ್ಸ್‌ಟೆಂಟಿನೋಪಲನ್ನು ಕಾಯಲು ಸೈನ್ಯವನ್ನು ಕಳುಹಿಸಿದ್ದಾರೆ. ಮತ್ತು ತಟಸ್ಥ ಭಾಗಗಳನ್ನು ಕಾಯಲು ರೂಮೇನಿಯಾ, ಜುಗ್ಸ್ಲೇವಿಯಾ ಗ್ರೀಸ್ ಮೊದಲಾದ ದೇಶದ ಜನರಿಗೂ ತಿಳಿಸಿದ್ದಾರೆ. ಕೊನ್ಸ್‌ಟೆಂಟಿನೋಪಲ್ ಸ್ಟ್ರೈಟ್ ಒಫ್ ಡಾರ್ಡನೆಲಿಸ್ ಮೊದಲಾದುವನ್ನು ಕಾಯಲು ಬ್ರಿಟಿಷರು ನ್ಯೂಜಿಲೆಂಡ ಮೊದಲಾದ ತಮ್ಮ ವಸಾಹತುಗಳಿಂದ ಸೈನ್ಯವನ್ನು ತರುವ ಪ್ರಯತ್ನದಲ್ಲಿದ್ದಾರೆ.

ಕೆಲವು ಕಾಲದ ಹಿಂದೆ ಕೊನ್ಸ್‌ಟೆಂಟಿನೋಪಲದಲ್ಲಿ ಅಮೇರಿಕದ ವಕೀಲರಾಗಿದ್ದ [illegible] ಮಿ. ಮಾರ್ಗನರು ತುರ್ಕಿಯ ವಿಲಕ್ಷಣ ಜಯವನ್ನು ತಿಳಿದು ತುರ್ಕರು ಡಾರ್ಡನೆಲಿಸ್ ಹಾಗು ಬಾಸ್ಪರಸ್ ಸಮುದ್ರ ಧುನಿಯನ್ನು ದಾಟಿಬಂದರೆ ಇಡೀ ಯುರೋಪಕ್ಕೆ ಮಹಾ ಯುದ್ಧದಂಥ ಮತ್ತೊಂದು ಪ್ರಸಂಗ ಬರುವುದೆಂದು ಅಭಿಪ್ರಾಯಪಟ್ಟಿದ್ದಾರೆ. ಇವರು ಇಂಗ್ಲಿಷರಿಗೆ ಮುಂದಾಗಿಯೇ ಸೂಚಿಸುವುದೇನೆಂದರೆ:—ಕೆಮಾಲ ಪಾಷಾರನ್ನು ಕಾನ್ಸ್‌ಟೆಂಟಿನೋಪಲಕ್ಕೆ ಅಥವಾ ಥ್ರೇಸ್ ಪ್ರಾಂತಕ್ಕೆ ಕಾಲಿಡಲು ಬಿಟ್ಟರೆ ಮುಂಚೆ ಆಸ್ಟ್ರಿಯಾ ರಾಜಪುತ್ರನ ಕೊಲೆಯಿಂದ ಮಹಾ ಯುದ್ಧವು ಹುಟ್ಟಿದಂತೆ ಬಾಲ್ಕನ್ ಪ್ರದೇಶದಲ್ಲಿ ಯುದ್ಧದ ಕಿಡಿ ಬಿದ್ದು ಅದರಿಂದ ಯುರೋಪದಲ್ಲಿ ಪುನಃ ಯುದ್ಧದ ಬೆಂಕಿಯು ಹತ್ತದ ಇರದು. ಮತ್ತು ಆಗ ಸಿರಿಯಾ ಪೆಲೆಸ್ಟಾಯಿನ್, ಮೆಸೋಪೊಟೇಮಿಯಾ, ಇಜಿಪ್ಟ, ಅರಾಬಿ, ಅಫಘಾನಿಸ್ಥಾನಗಳ ಮುಸಲ್ಮಾನರಲ್ಲಿ ಹೊಸ ಚೈತನ್ಯವು ಹುಟ್ಟುವುದು. ಹಿಂದೂಸ್ಥಾನದಲ್ಲಿ ಶಾಂತಪಕ್ಷದ ಮುಸಲ್ಮಾನರು ಕೂಡ ತುರ್ಕರಿಗೆ ಡಾರ್ಡನೆಲಿಸ್ ಮತ್ತು ಬಾಸ್ಪರಸ್ ಕೊಡಲು ಇಂಗ್ಲಿಷರು ಅಡ್ಡಿಮಾಡಬಾರದೆಂದು ಕೌನ್ಸಿಲ್ ಒಫ್‌ಸ್ಟೇಟ್ ಮತ್ತು ಎಸೆಂಬ್ಲಿಯಲ್ಲಿ [illegible] ಮಾಡಿದ್ದಾರೆ.

ಕೆಮಾಲ ಪಾಷಾರವರು ಕೊನ್ಸ್‌ಟೆಂಟಿನೋಪಲನ್ನು ಸೇರಿದರೆ ಬಲ್ಗೇರಿಯವು ಸುಮ್ಮನಿರದು [illegible] ಯುದ್ಧಕ್ಕೆ ಇಳಿಯುತ್ತಲೇ [illegible] ಸಹ ಯುದ್ಧರಂಗಕ್ಕೆ ಕಾಲಿಡುವುದು. ಈ ಪ್ರಕಾರ ಬಾಲ್ಕನ್ ಸಂಸ್ಥಾನಗಳು ರಣಭೂಮಿಗೆ ಬಂದರೆ ಆಗ ಜರ್ಮನಿಯಲ್ಲಿಯೂ ಆಸ್ಟ್ರಿಯಾದಲ್ಲಿಯೂ ಹೊಟ್ಟೆಗಿಲ್ಲದೆ ಬಳಲುತ್ತಿರುವ ಯೋಧರು ಸುಮ್ಮನಿರರು. ಒಟ್ಟಾರೆ ಕೆಮಾಲಪಾಷಾ ಇವರಿಗೆ ಧಾರ್ಮಿಕ ಅಭಿಮಾನದಿಂದ [illegible] ಎಲ್ಲಾ ಮಹಮ್ಮದೀಯರ ಸಹಾಯವೂ ಯುರೋಪದಲ್ಲಿ ಹೊಟ್ಟೆಗಿಲ್ಲದೆ ಕುಳಿತ ಶಾಸ್ತ್ರೀಯ ಶೋಧಕರ ಹಾಗು ಸೈನಿಕರ ಸಹಾಯವೂ ದೊರೆತರೆ ಆಗ ತುರ್ಕರ ಬಲವು ವಿಶೇಷವಾಗುವುದು.

ಕೆಮಾಲಪಾಷಾ ಇವರಿಗೆ ಬೇಕಾದಷ್ಟು ತೋಪುಗಳೂ ವಿಮಾನಗಳೂ ರಷ್ಯಿಯಾ ಮೊದಲಾದ ದೇಶಗಳಿಂದ ದೊರಕಿದೆ. ಅಲ್ಲದೆ ಇವರು ತಮ್ಮ ಸೈನ್ಯಕ್ಕೆ ಬೇಕಾಗುವ ಯಂತ್ರ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಈ ಮುಂಚೆಯೇ ಸ್ಥಾಪಿಸಿದ್ದಾರೆ. ಪರಿಸ್ಥಿತಿಯು ಹೀಗಿರುತ್ತ ತುರ್ಕರನ್ನು ಬೆಳೆಯಲು ಬಿಡಬಾರದೆಂದು ತಿಳಿಸಿದ್ದಾರೆ. ತುರ್ಕರು ಕೊನ್ಸ್‌ಟೆಂಟಿನೋಪಲದ ಮೇಲೆ ದಂಡಯಾತ್ರೆಯನ್ನು ಮಾಡುವರೋ ಇಲ್ಲವೋ ಎಂಬುದು ತಿಳಿಯುವುದಿಲ್ಲ.

ಒಳದೇಶ ವರ್ತಮಾನ.

ಮೋಟಾರಕಾರ್:—ಮೈಸೂರು ಸೀಮೆಯ ಪುತ್ತೂರು ಗ್ರಾಮದಲ್ಲಿ ಒಬ್ಬನು ಒಂದು ಮೋಟಾರನ್ನು ತಯಾರಿಸಿದ್ದಾನಂತೆ. ಮತ್ತು ಅದರ ಸಾಮಾನುಗಳನ್ನೆಲ್ಲಾ ಆತನೇ ತಯಾರಿಸಿದ್ದಾನಂತೆ.

ಖಾದಿ:—ದೇಶಬಂಧು ದಾಸರು ಬರುವ ಆಲ್-ಇಂಡಿಯಾ ಕೋಂಗ್ರೆಸ ಕಮ್ಮಿಟಿಯ ಮುಂದೆ ಇಡೀ ಹಿಂದೂಸ್ಥಾನದಲ್ಲೆಲ್ಲಾ ನಾಲ್ಕು ಆಣೆಗೆ ಒಂದು ವಾರು ಖಾದಿಯು ದೊರಕುವಂತೆ ಒಂದು ಯೋಜನೆಯನ್ನು ತರಬೇಕೆಂದು ನಿಶ್ಚಯಿಸಿದ್ದಾರಂತೆ.

ಸರಾಯಿ ಅಂಗಡಿಗಳು:—ಹಿಂದೂಸ್ಥಾನದಲ್ಲಿ ಒಟ್ಟಿಗೆ ೬೦ ಸಾವಿರ ಸರಾಯಿ ಅಂಗಡಿಗಳಿದ್ದು ಇವುಗಳ ತೆರಿಗೆಯು ಒಟ್ಟು ೧೭ ಕೋಟಿ ದೊರಕುತ್ತದಂತೆ.

ಅಸಹಕಾರ:—ಎನ್ನಿಬಿಸೆಂಟರು ಮುಂಬಯಿಯಲ್ಲಿ ಅಸಹಕಾರವು ಅವ್ಯವಹಾರ್ಯವೆಂದು ಮುಂಚಾಗಿ ಭಾಷಣಮಾಡಿದರು. ಜನರೆಲ್ಲರೂ ಅಸಹಕಾರಿಗಳ ಮಾರ್ಗಕ್ಕೆ ಅನುಸಾರವಾಗಿ ಶಾಂತತೆಯಿಂದ ಭಾಷಣವನ್ನು ಕೇಳಿಕೊಂಡು ನೀವು ಯಾವ ಮಾರ್ಗವನ್ನು ಹಿಡಿಯುವಿರೆಂದು ಅಧ್ಯಕ್ಷರು ಕೇಳಿದಾಗ ಅಸಹಕಾರಿತಾ ಮಾರ್ಗವೆಂದು ಏಕಕಂಠದಿಂದ ಹೇಳಿಬಿಟ್ಟರು.

ಬೆಳಗಾಂ:—ಇಲ್ಲಿ ಪ್ಲೇಗಿನ ಉಪಟಳವು ಬಹಳವಾಗಿದೆಯಂತೆ.

ಧಾರವಾಡ:—ರಜಪೂತ ವೀರವನಿತೆ ತಾರಾಬಾಯಿಯವರ ಸರ್ಕಸು ಇಲ್ಲಿಗೆ ಬಂದಿದೆ.

ಸಾಹಿತ್ಯ ಪರಿಷತ್ತಿಗೆ ಸಹಾಯ:—ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ತಿಂಗಳಿಗೆ ರೂ. ೧೦೦ರನ್ನು ಮೈಸೂರು ಸರಕಾರದವರು ಸೆಂಕ್ಷನ್ ಮಾಡಿರುವರು.

ಮೈಸೂರು:—ಮಹಾನವಮಿಯ ಉತ್ಸವಕ್ಕಾಗಿ ಮೈಸೂರಿಗೆ ಬಂದು ಹೋಗುವವರಿಗೆ ಸಂಸ್ಥಾನಕ್ಕೆ ಸೇರಿದ ಹೊಗೆಬಂಡಿಗಳ ಎಲ್ಲ ತರಗತಿಯ ಬಾಡಿಗೆಯೂ ಅರ್ಧಮಾಡಲ್ಪಟ್ಟಿದೆ. ಈ ತಿಂಗಳ ತಾ. ೨೦ರಿಂದ ೩೦ ವರೆಗೆ ಸಂಸ್ಥಾನದ ಎಲ್ಲಾ ರೈಲ್ವೆ ಸ್ಟೇಶನುಗಳಲ್ಲಿ ಈ ಟಿಕೇಟುಗಳು ಮಾರಲಾಗುವುದು, ಮತ್ತು ಈ ಟಿಕೇಟುಗಳ ಉಪಯೋಗವು ಬರುವ ಒಕ್ಟೋಬರ ತಾ. ೭ರ ವರೆಗೆ ಮಾತ್ರ ನಡಿಯುವುದು. ನವರಾತ್ರಿಯ ಕಾಲದಲ್ಲಿ ರಾಜಧಾನಿಯಲ್ಲಿ ಕೂಡಲಿಕ್ಕಿರುವ ಪಂಚಮರ ಸಮ್ಮೇಳನದ ಸಭೆಗೆ ಸಹಾಯಧನವಾಗಿ ಮೈಸೂರು ಮಹಾರಾಜರು ರೂ. ೧೦೦, ಬೆಂಗಳೂರ ಮುನ್ಸಿಪಾಲಿಟಿಯವರು ರೂ. ೧೦೦ ಕೊಟ್ಟಿರುವರು.

ಪ್ರಯಾಣದ ಭತ್ತೆ:—ಕಳೆದ ೧೯೨೧ನೇ ಇಸವಿಯ ಜನವರಿಯಿಂದ ೧೯೨೨ನೇ ಮಾರ್ಚ ವರೆಗೆ ಮದರಾಸ ಸಂಸ್ಥಾನದ ಗವರ್ನರರ ಮತ್ತು ನ್ಯಾಯವಿಧಾಯಕ ಸಭೆಯ ಕೆಲವು ಮೆಂಬರರ ಪ್ರಯಾಣದ ಭತ್ತೆ, ಗವರ್ನರರ ಭತ್ತೆ ೧೩೩೩೨೦, ಗವರ್ನಮೆಂಟಮೆಂಬರರ ಭತ್ತೆ ೭೦೩೮೧, ಮಿ| ಯಸ್. ಬಿ. ರೆತ್‌ತರ ಭತ್ತೆ ೪೭೩೪, ಮಿ| ಯಂ. ಕೃಷ್ಣನ್‌ನಾಯರ್‌ರ ಭತ್ತೆ ೪೫೮೪, ಮಿ| ಯಸ್. ಬಿ. ದಾಸರ ಭತ್ತೆ ೭೩೩೪, ಮಿ| ಟಿ. ಸಿ. ಶ್ರೀನಿವಾಸ ಅಯ್ಯಂಗಾರ ಭತ್ತೆ ೩೯೫೪, ಮಿ| ಆರ್. ವೆಂಕಟರಮಣ ನ್ಯಾಡೋರ ಭತ್ತೆ ೩೧೦೮, ಮಿ| ಎ. ರಂಗನಾಥ ಮುದಲಿಯರ್‌ರ ಭತ್ತೆ ೨೧೦೩.

ರೆಡಿಂಗರ ಮಾತೃಶ್ರೀಯವರ ಮರಣ:—ಹಿಂದೂಸ್ಥಾನದ ವೈಸರಾಯರಾದ ಲೋರ್ಡ ರೆಡಿಂಗರ ತಾಯಿಯವರು ಕಾಲವಾದರು.

ಅರ್ಲ ವಿಂಟರಟನ್ನರು:—ಇಂಡಿಯದ ಅಂಡರ ಸೆಕ್ರೇಟರಿ ಒಫ್ ಸ್ಟೇಟ ಅರ್ಲ ವಿಂಟರಟನ್ನರು ಕಳೆದ ತಾ. ೧೫ನೆಯ ಬೆಳ್ಗೆ ೮ ಗಂಟೆಗೆ ಮುಂಬಯಿಗೆ ಬಂದು ತಲ್ಪಿರುತ್ತಾರೆ.

ಗುಜರಾಥ ವಿದ್ಯಾಪೀಠ:—ಈ ವಿದ್ಯಾಪೀಠಕ್ಕೆ ರಂಗೂನಿನ ಡಾಕ್ಟರ ಮೇಥಾ ಯಂ. ಡಿ. ಬಾರಟಲೋ ಇವರು ೨½ ಲಕ್ಷ ರೂಪಾಯಿಯನ್ನು ಸಹಾಯಧನವಾಗಿ ಕೊಡಲು ಒಪ್ಪಿರುವರಂತೆ, ಬರುವ ತಾ. ೧೯ರೊಳಗೆ ೧೦ ಲಕ್ಷ ರೂಪಾಯಿಯನ್ನು ಕೂಡಿಸಲಿಕ್ಕಿದ್ದಾರೆ.

ಸಾಮ್ರಾಜ್ಯ ಪ್ರದರ್ಶನ:—ಈ ಪ್ರದರ್ಶನದಲ್ಲಿ ತಾನು ಭಾಗತೆಗೆದುಕೊಳ್ಳಲಿಕ್ಕಿಲ್ಲವೆಂದು ಸಿಂಹಳ ದ್ವೀಪದ ಸರಕಾರವು ಜಾಹೀರಮಾಡಿದೆ.

ರಾಮಾಶ್ರಮ:—ಕಾರ್ಕಳದಲ್ಲಿ ರಾಮಾಶ್ರಮವೆಂಬ ಗುರುಕುಲವನ್ನು ಶ್ರೀಯುತ ಜಯರಾಮಾಚಾರ್ಯರು ಸ್ಥಾಪಿಸಿದ್ದರಷ್ಟೆ. ಅಖಿಲ ಕರ್ನಾಟಕ ವಿದ್ಯಾರ್ಥಿಗಳು ಇಲ್ಲಿಗೆ ಬರಲು ಬಹಳ ದೂರವಾಗುವುದರಿಂದ ಮತ್ತು ಈ ಗುರುಕುಲದ ಲಾಭವು ಸರ್ವರಿಗೂ ಸಿಗಬೇಕೆಂಬ ಉತ್ಕಟ ಹಂಬಲದಿಂದ ಈ ಗುರುಕುಲವನ್ನು ಧಾರವಾಡ ಜಿಲ್ಲಾ ರಾಣಿಬೆನ್ನೂರು ತಾಲೂಕು ಪೈಕಿ 'ಐರಣಿ' (ಐರಾವತಕ್ಷೇತ್ರ) ಎಂಬುವ ತುಂಗಭದ್ರಾ ನದಿಯ ತೀರದ ಗ್ರಾಮದಲ್ಲಿ ಸ್ಥಾಪಿಸಿದೆ ಮತ್ತು ಈ ಆಶ್ರಮದಲ್ಲಿ ಇದೇ ಆಶ್ವೀಜ ಶುದ್ಧ ವಿಜಯ ದಶಮಿಯ ದಿನದಿಂದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದೆಂದು ಒಂದು ಪ್ರಕಟನೆಯು ಧಾರವಾಡದ ಲೋಕಬಂಧು ಪತ್ರದಲ್ಲಿ ಪ್ರಕಟವಾಗಿದೆ.

ರಾಮೇಶ್ವರ:—ರಾಮೇಶ್ವರಕ್ಕೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲ್ವೆ ಬಂಡಿಯು [illegible] ದಾಟಿ 'ಗೊಲ್ಡನ್ ರೋಕ್' ಸ್ಟೇಶನನ್ನು ಸಮೀಪಿಸುತ್ತಿರುವಾಗ ಎಂದಿನಂತೆ ರಭಸದಿಂದ ಓಡುತ್ತಿತ್ತು. ಅವರೆ ಸ್ಟೇಶನಿನ ಸಮೀಪ ಮಾರ್ಗದರ್ಶಕನ (points man) ಸರಿಯಾದ ಮಾರ್ಗವನ್ನು ತೋರಿಸದ ಇದ್ದುದರಿಂದ ಎರಡು ಮೂರು ರೈಲ್ವೆ ಗಾಡಿಗಳು ಉರುಳಿಬಿದ್ದು ತಪ್ಪಿದವು. [illegible] ಒಬ್ಬ ಬ್ರಾಹ್ಮಣನು ಗಾಡಿಯಿಂದ ಕೆಳಕ್ಕೆ ಹಾರಲು ಯತ್ನಿಸಿದ [illegible] ಕೂಡಲೇ ಮೃತನಾದನು. [illegible]

ಕೊಡಗು:—ಭಾಗಮಂಡಲ ಗ್ರಾಮದಲ್ಲಿ ಬರುವ ತುಲಾಸಂಕ್ರಮಣ…ಯದಲ್ಲಿ ನಡಿಯುವ ತಲಕಾವೇರಿ ಜಾತ್ರೆಗೆ ಮೈಸೂರು ಮತ್ತು ಪ್ಲೇಗ್‌ರೋ…ಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಸೇರಲು ಬಿ… ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಚೀಫ್ ಕಮಿಷ…ರ್ ಸಾಹೇಬರವರು ತಿಳಿಯುವುದರಿಂದ ಸಾಂಕ್ರಾಮಿಕ ರೋಗಗಳ ಆಕ್ಟನ್ನು ಅನುಸ… ಬರುವ ಒಕ್ಟೋಬರ ತಾರೀಕು ೭ರಿಂದ ನವಂಬರ ೩೦ರ ವರೆಗೆ ಸದರೀ ಜಾತ್ರೆ… ಮೈಸೂರು ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವುದನ್ನು ಈ ಮೂಲಕ ನಿರೋಧಪಡಿಸಿದೆ. ಈ ಇಸ್ತಿಹಾರನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥವರನ್ನು ಹಿಂದಕ್ಕೆ ಕಳುಹಿಸಲಾದೀತು ಎಂದು ಚೀಫ್ ಕಮ್ಮಿಶನರು ಇಸ್ತಿಹಾರುನಾಮೆಯನ್ನು ಪ್ರಕಟಿಸಿದ್ದಾರೆ.

ದಕ್ಷಿಣ ಕನ್ನಡ

ಉಡುಪಿ:—ಮಳೆಯು ಜಾಸ್ತಿಯಾಗಿ ಕಾರ್ತಿ ಬೆಳೆಗೆ ಬಹಳವಾಗಿ ಹಾನಿಯೇ ಆಗುತ್ತಿದೆ. ಅನೇಕ ಗುಡಿಸಲುಗಳು ಬಿದ್ದುಹೋದವು. ಅಕ್ಕಿಗೆ ಇನ್ನೂ ಕ್ಷಾಮಧಾರಣೆಯೇ ನಡಿಯುತ್ತಿದೆ. ಬೈಹುಲ್ಲಿನ ಬೆಲೆಯು ವಿಪರೀತವಾಗಿ ಹೆಚ್ಚಿ ದನಕರುಗಳನ್ನು ಸಾಕಲಾರದೆ ಅನೇಕರು ಮಾರಿಬಿಡುತ್ತಿರುವರು. ಪೇಟೆಯಲ್ಲಿ ಕ್ಷಾಮಕ್ಕೆ ಆರಂಭವಾಗಿದೆ. ಒಂದು ಕಡೆಯಲ್ಲಿ ವೃತ್ತಿಕರಿಗೆಯ ಒತ್ತಾಟ, ಅಂತು ಇಂತು ಬಡವರ ಗೋಳಾಟವು ಹೆಚ್ಚುತ್ತಲೆ ಹೋಗುತ್ತದೆ. ಅಲ್ಲಲ್ಲಿ ಅತಿಸಾರ ಜ್ವರ ಮೊದಲಾದ ರೋಗಗಳು ತಲೆಯೆತ್ತಿವೆ.

ಆಸೇತುಹಿಮಾಚಲ ಪರ್ಯಂತ ಅನೇಕ ವರ್ಷಗಳಲ್ಲಿ ಸಂಚಾರಮಾಡಿ ಪ್ರಾಯಶಃ ಎಲ್ಲಾ ತೀರ್ಥಕ್ಷೇತ್ರಗಳ ಸಂದರ್ಶನಾದಿಗಳನ್ನು ಮಾಡಿಕೊಂಡು ಅನೇಕ ಸಂಸ್ಥಾನಗಳಲ್ಲಿ ಮರ್ಯಾದೆಗಳನ್ನು ಪಡೆದ, ಮಹಾ ತಪಸ್ವಿಗಳೂ ಶಾಪಾನುಗ್ರಹ ಶಕ್ತರೂ ಆದ ಶ್ರೀ ಸುಬ್ರಹ್ಮಣ್ಯ ಸ್ವಾಮಿಗಳವರು ಇಲ್ಲಿಗೆ ಚಿತ್ತೈಸಿ ಇಲ್ಲಿ ಎಲ್ಲಾ ಮಠಗಳಿಂದಲೂ ಇತರ ಬಹುಮಂದಿ ಗೃಹಸ್ಥರಿಂದಲೂ ಸತ್ಕಾರವನ್ನು ಪಡೆಯುತ್ತಲಿರುವರು.

ಇಲ್ಲಿಯ ಫಲಿಮಾರು ಮಠದ ಏಜಂಟರಾಗಿರುವ ಮ. ರಾ. ಕುಂಜೂರು ವ್ಯಾಸರಾಯರಿಗೆ ವಂದರೆ ಕ್ರಿಮಿನಲ್ ಮೊಕದ್ದಮೆಯಲ್ಲಿ ಆಗಿದ್ದ ಜುರುಮಾನೆ ಮತ್ತು ಕೋರ್ಟು ಬರ್ಖಾಸ್ತ ತನಕ ಸಜೆಯು ಅಪೀಲಿನಲ್ಲಿ ರದ್ದಾಗಿ ಜುರುಮಾನೆ ಹಣವು ವಾಪಾಸು ಸಿಕ್ಕಿರುವುದು.

ನಮ್ಮ ಕಾಂಗ್ರೆಸ್ ಕಮಿಟಿಯವರಿಗೆ ತಕ್ಕ ಮಟ್ಟಿಗೆ ವೈರಾಗ್ಯ ಬಂದಂತೆ ತೋರುತ್ತದೆ. ತಿಲಕ ಸ್ವರಾಜ್ಯ ಫಂಡಿಗೆ ಹಣ ಸಂಗ್ರಹಿಸುವ ಕೆಲಸವಾಗಲೀ ಕಾಂಗ್ರೆಸ್ ಕಮಿಟಿಗೆ ಮೆಂಬರುಗಳನ್ನು ಸೇರಿಸುವದಾಗಲೀ ತೋರುವುದಿಲ್ಲ, ಎಲ್ಲರೂ ಆರಂಭಶೂರರೇ.

ಬಂಟವಾಳ:—ಇಲ್ಲಿಯ ಬೋರ್ಡು ಮಾಪಿಳ್ಳಾ ಶಾಲೆಯಲ್ಲಿ ದಾಖಲಾದ ಆದಿದ್ರಾವಿಡರ ಮಕ್ಕಳೆಲ್ಲರೂ ಶಾಲೆಗೆ ಬರುವುದನ್ನು ಬಿಟ್ಟುಬಿಟ್ಟರು. ಈಗ ಮಾಪಿಳ್ಳೆಯವರ ಮಕ್ಕಳೆಲ್ಲರೂ ಮುಂಚಿನ ಹಾಗೆಯೇ ಶಾಲೆಗೆ ಬರುತ್ತಾರೆ. ಈಗ ಶಾಲೆಯಲ್ಲಿ ಪಾಠಗಳು ಸರಿಯಾಗಿ ನಡಿಯುತ್ತವೆ.

ಇಲ್ಲಿಯ ದೇವಳ ಸೆಕೆಂಡರಿ ಶಾಲೆಯ ವರ್ಷಾವಧಿ ಪರೀಕ್ಷೆಯು ತಾ. ೧೯ನೇ ಮಂಗಳವಾರ ಜಿಲ್ಲಾ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ರಾ| ಶಂಕರ ಮೇನನರವರಿಂದ ಮಾಡಲ್ಪಟ್ಟಿತು. ಶಾಲೆಯ ಕೆಲಸವು ಒಳ್ಳೇ ತೃಪ್ತಿಕರವಾಗಿಯದೆಂದು ಸಂತೋಷಪಟ್ಟು ತೆರಳಿದರು.

ಕಾಸರಗೋಡು—ಇಲ್ಲಿಯ ಕಳೆದ ತಾಲೂಕು ಬೋರ್ಡು ಮೀಟಿಂಗಿನಲ್ಲಿ ಹಾಜರಿದ್ದ ಎಲ್ಲಾ ಮೆಂಬರರಿಂದ ಮ. ರಾ. ರಾ. ಮಂಜೇಶ್ವರ ಸಾಹುಕಾರ ವೈಕುಂಠ ಭಕ್ತರನ್ನು ಪ್ರೆಸಿಡೆಂಟರಾಗಿಯೂ, ಮ. ರಾ. ರಾ. ವಕೀಲ ನರಸಿಂಹ ನ್ಯಾಕರನ್ನು ವೈಸ್ ಪ್ರೆಸಿಡೆಂಟರಾಗಿಯೂ ಚುನಾಯಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಹೆಚ್ಚಿನ ಶ್ರಮಪಟ್ಟು ತಾಲೂಕಿನ ಎಲ್ಲಾ ಜನರ ಹಿತಕ್ಕಾಗಿ ಬಹು ಶ್ರದ್ಧೆಯಿಂದ ಕೆಲಸವನ್ನು ನಿರ್ವಹಿಸಿದ ಈ ಗೃಹಸ್ಥರೇ ಈ ಸಲವೂ ಪ್ರೆಸಿಡೆಂಟರ ಪದವಿಗೆ ಚುನಾಯಿಸಿದ್ದು ಎಲ್ಲಾ ಜನರ ಭಾಗ್ಯೋದಯವೇ ಸರಿ.

ಕಾಸರಗೋಡು ಬೀರಂತಬೈಲು ಲೈಬ್ರೇರಿಯು ಇತ್ತೀಚೆಗೆ ಪಟ್ಟಣದ ನಡುಮಧ್ಯ ಸ್ಥಳವಾದ ರಾ| ಬೀರಂತಬೈಲು ಮಂಜುನಾಥಯ್ಯನವರ ಜವಳಿ ಅಂಗಡಿಗೆ ಒಯ್ಯೋಣಾದದ್ದು ಬಹು ಶ್ಲಾಘನೀಯವಾಗಿರುತ್ತದೆ. ಊರಿನ ಸಕಲ ಗೃಹಸ್ಥರಿಲ್ಲಾ ತಿಂಗಳಿಗೆ ೪ ಆಣೆ ಫೀಸು ಕೊಟ್ಟಲ್ಲಿ ತಮಗೆ ಇಷ್ಟ ಬಂದ ಸಮಯದಲ್ಲಿ ಯಾವ ಪುಸ್ತಕವನ್ನಾದರೂ ತಕ್ಕೊಂಡು ಓದಿ ಆನಂದಪಡಬಹುದಾಗಿದೆ.

ಅಪಮೃತ್ಯುಗಳಿಂದುಂಟಾಗುವ ಮರಣಗಳು ಇನ್ನೂ ಕಡಿಮೆಯಾಗಲಿಲ್ಲ. ಕಳೆದ ವಾರದಲ್ಲಿ ಇಲ್ಲಿಯ ಸಾಹುಕಾರರಾದ ವೈಕುಂಠ ಕಾಮ್ತಿಯವರ ವಿಧವೆಯೊಬ್ಬರು ರಾತ್ರಿಕಾಲದಲ್ಲಿ ಬಾವಿಗೆ ಹಾರಿ ಪ್ರಾಣಕಳಕೊಂಡರು. ಎರಡು ಮೂರು ದಿವಸಗಳ ಹಿಂದೆ ಇಲ್ಲಿಯ ವಕೀಲ ಮ. ರಾ. ಚೆಂದಾವರ ರಾಮರಾಯರ ತಮ್ಮರೊಬ್ಬರು ಹಗಲು ಸುಮಾರು ೧೨ ಗಂಟೆ ಸಮಯಕ್ಕೆ ಉತ್ತರಿಗೆ ನೇಣುಹಾಕಿಕೊಂಡು ಕಾಲವಾದರು.

ಸುಳ್ಯ:—ಹವೀಕ ಮಂಡಲಿಗೂ ಅವರ, ಸುಳ್ಯ, ಪಂಜ ಮಾಗಣೆಗಳಿಗೂ ಶಿರಸಿ… ನಂತಿದ್ದ ಅಜ್ಜನಗದ್ದೆ ಗಣಪಯ್ಯನವರು ತಮ್ಮ ೭೫ನೆಯ ವಯಸ್ಸಿನಲ್ಲಿ ತಾ. ೧೯-೨೨ನೇ ದಿವಸ ಸ್ವರ್ಗಸ್ಥರಾದರು ಎಂತ ತಿಳಿಸಲು ವ್ಯಸನಪಡುತ್ತೇವೆ. ಇವರು ತನ್ನ ಇಪ್ಪತ್ತೆಂಟನೆಯ ವಯಸ್ಸಿನಲ್ಲಿಯೇ ಚೊಕ್ಕಾಡಿಯ ಪ್ರಮುಖ ಮುಖಂಡರಾಗಿ [illegible] ಊರೊಳಗಿನ ಸಕಲ ವಿಧದ ಕಲಹಗಳನ್ನು ಉಭಯ ಪಕ್ಷಗಾರರೂ ಸಂತೋಷಪಡುವ ರೀತಿಯಲ್ಲಿ ನ್ಯಾಯದಿಂದ ಇತ್ಯರ್ಥಿಸುತ್ತಾ ಅನೇಕ ಕುಟುಂಬಗಳನ್ನು ಕಾಪಾಡಿದ ಪುಣ್ಯಶಾಲಿಗಳಾಗಿದ್ದರು. ಸ್ವಧರ್ಮದಲ್ಲಿ ಪ್ರೀತಿ, ದೇಶಾಭಿಮಾನ, ಎಲ್ಲರಲ್ಲಿಯೂ ಸಮಭಾವನೆ, ಉದಾರತೆ, [illegible] ನಿರಹಂಕಾರ ಮುಂತಾದ ಸದ್ಗುಣಗಳು ಇವರಲ್ಲಿ ತುಂಬಿತ್ತು. ಇವರು ಬಾಲ್ಯಪ್ರಾಯದಲ್ಲಿ [illegible] ಕಲಿತ ಪಾಂಡಿತ್ಯವನ್ನು [illegible] ಆಯುರ್ವೇದ [illegible] ರೋಗಿಗಳಿಗೆ ಧರ್ಮಾರ್ಥವಾಗಿ ಅನ್ನ ಮತ್ತು ಔಷಧವನ್ನು ಕೊಟ್ಟು [illegible]

ಅನುಕ್ರಮಣಿಕೆ

...ಕ್ಕೆ ಮದ್ರಾಸ ಸರಕಾರದ ಕಪ್ಪ ಅಥವಾ ಖಂಡಣಿ . . ೬
...ಗಳು—
...ದಾರ ಶ್ರೀನಿವಾಸ ಶಾಸ್ತ್ರೀಯವರು ೨. ಲೋಯ್ಡ ಜೋರ್ಜರ ಭಾಷಣ. ,,
...ಯತಿಯ ಟೆಲಿಗ್ರಾಫ್ . . . . ,,
...ಊರು—
...ಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ . . . ೫
ದಕ್ಷಿಣ ಕನ್ನಡ, ಉಡುಪಿ, ಬಂಟವಾಳ, ಕಾಸರಗೋಡು ಸುಳ್ಯ . . ,,
ಮದರಾಸ ನ್ಯಾಯವಿಧಾಯಕ ಸಭೆಯ ಅಧಿವೇಶನ . . . ೮
ಅಕಾಲಿಗಳ ಸತ್ಯಾಗ್ರಹ ಯುದ್ಧ . . . . ,,
ಆರ್ಯರ ವರ್ಣಾಶ್ರಮ ಧರ್ಮ . . . . ,,
ಸಹಕಾರಿ ಸಂಘಗಳ ಕಾರ್ಯಕಾರಿ ಪರಿಷತ್ತು . . . ೯

ಸ್ವದೇಶಾಭಿಮಾನಿ.

ಶಕ ೧೮೪೪ ಆಶ್ವೀಜ ಶು| ೨ಯು ಶುಕ್ರವಾರ.

ವರಿಷ್ಠ ಸರಕಾರಕ್ಕೆ ಮದ್ರಾಸ ಸರಕಾರದ ಕಪ್ಪ ಅಥವಾ ಖಂಡಣಿ.

ಈ ಶಿರೋಲೇಖವನ್ನು ನೋಡಿ ನಮ್ಮ ವಾಚಕವರ್ಗದಲ್ಲಿ ಕೆಲವರಿಗಾದರೂ ಆಶ್ಚರ್ಯವಾಗದೆ ಇರಲಿಕ್ಕಿಲ್ಲ. ವರಿಷ್ಠ ಸರಕಾರ ಮತ್ತು ಮದ್ರಾಸ ಸರಕಾರವೆಂದು ಬರೆ ಶಬ್ದ ಭೇದವೆ ಅಲ್ಲದೆ ದಾತೃ-ಪತಿಗ್ರಹೀತೃ ಭಾವವು ಕೂಡಿಬರುವಂತೆ ನಿಜವಾಗಿ ಅವುಗಳಲ್ಲಿ ಎಲ್ಲಿ ಭೇದವಿದೆ ಎಂದು ಹಲವರಾದರೂ ತಮ್ಮತಮ್ಮೊಳಗೆನೆ ಆಕ್ಷೇಪಿಸಿಕೊಂಡಾರು. ಪರಂತು ವ್ಯವಹಾರದ ಸೌಕರ್ಯಕ್ಕೋಸ್ಕರ ವರಿಷ್ಠ ಮತ್ತು ಪ್ರಾಂತಿಕ ಸರಕಾರಗಳ ಖರ್ಚಿನ ವಿಭಾಗವು ಆಗಬೇಕಾದ್ದು ವಿಹಿತವಾಗಿರುವುದರಿಂದ ವರಿಷ್ಠ ಸರಕಾರಕ್ಕೆ ಪ್ರಾಂತಿಕ ಸರಕಾರಗಳು ತಮ್ಮ ಉತ್ಪನ್ನದೊಳಗಿನ ಇಂತಿಷ್ಟಿಂತಿಷ್ಟು ಅಂಶವನ್ನು ಕೊಡಬೇಕೆಂದೂ ನಿರ್ಣಯಿಸೋಣಾಗಿದೆ. ೧೯೧೯ನೆಯ ಇಸವಿಯ ಪಾರ್ಲಿಮೆಂಟಿನಲ್ಲಿ ಕಾನೂನು ಪಾಸಾಗಿ ಆ ಮೇರೆಗೆ ಹಿಂದುಸ್ಥಾನಕ್ಕೆ ಸ್ವರಾಜ್ಯದ ಹಕ್ಕುಗಳೆಂದು ಕೆಲವು ಸುಧಾರಣೆಗಳು ಕೊಡಲ್ಪಟ್ಟಿದ್ದಾವಷ್ಟೆ. ಈ ಸುಧಾರಣೆಗಳ ಕಾಲುಸೆರಗಿನಿಂದ ಪ್ರಾಂತಗಳಿಗೆ ಒಂದೆರಡು ಗುಣಗಳು ಉಂಟಾಗಿದ್ದಾವಾದರೆ—ವಿದ್ಯಾ ಇಲಾಖೆ, ಲೋಕಲ್ ಬೋರ್ಡು ಇತ್ಯಾದಿ ಸ್ಥಾನಿಕ ಸ್ವರಾಜ್ಯದ ಇಲಾಖೆ, ಉದ್ಯೋಗ ಇಲಾಖೆ ಮುಂತಾದ ಹಲವು ಇಲಾಖೆಗಳನ್ನು ಜನತೆಯ ಕೌನ್ಸಿಲಿನ ಸಭೆಗೆ ಒಪ್ಪಿಸಿ, ಆ ಮೂಲಕ ರಾಜ್ಯಕಾರಭಾರದಲ್ಲಿ ಜನತೆಗೆ ಪ್ರವೇಶವನ್ನು ಕೊಟ್ಟಂತೆ ತೋರಿಬಂದಿದೆಯಾದರೂ—ಇತರ ಅನೇಕ ಅವಗುಣಗಳು ಸಂಭವಿಸಿವೆ ಎಂಬುದಕ್ಕೆ ಸಂದೇಹವಿಲ್ಲ. ಆ ಅವಗುಣಗಳಲ್ಲಿ ಪ್ರಾಂತಿಕ ಸರಕಾರದ ಭಾಗಕ್ಕೆ ಬಂದಿರುವ ವಿಷಮ ದಾನಾಂಶವು. ಈ ವಿಷಯದಲ್ಲಿ ಮುಂಬಯಿ, ಬಂಗಾಲ ಮೊದಲಾದ ಮಿಕ್ಕ ಪ್ರಾಂತಗಳಿಗೆ ಅವವುಗಳ ಯೋಗ್ಯತೆಗನುರೂಪವಾಗಿ ಕೊಡತಕ್ಕ ಅಂಶವು ಬಂದಿದೆಯಾದರೂ, ನಮ್ಮ ಮದ್ರಾಸ ಪ್ರಾಂತದ ಮಟ್ಟಿಗೆ ಈ ವಿಷಯದಲ್ಲಿ ತುಂಬಾ ಅನ್ಯಾಯವುಂಟಾಗಿದೆ ಎಂದು ಹೇಳಿದರೆ ಅದು ಸರ್ವಥಾ ಪಕ್ಷಾಭಿಮಾನದ ಮಾತಾಗಲಿಕ್ಕಿಲ್ಲ. ಪ್ರಾಂತಿಕ ಸರಕಾರದ ಕಪ್ಪ ಅಥವಾ ಖಂಡಣಿ ಇದರ ಪೂರ್ವೇತಿಹಾಸವನ್ನು ಬರೇ ಒಂದೆರಡು ಮಾತಿನಿಂದ ಕೊಡುವುದಿದ್ದರೆ, ಮೆಸ್ಟನ್ ಕಮಿಟಿಯ ನೆನಪನ್ನು ಹುಟ್ಟಿಸಿಕೊಡಬಹುದು. ಮೆಸ್ಟನ್ ಸಾಹೇಬರು ಪಾರ್ಲಿಮೆಂಟಿನಿಂದಲೆ ಅಧಿಕೃತರಾಗಿ ಬಂದು ಹಿಂದುಸ್ಥಾನದಲ್ಲಿ ಪ್ರಾಂತಿಕ ಸರಕಾರಗಳಿಗೆ ಯಾವ ಗುಣಗಳನ್ನು ಅಥವಾ ಉಪಕಾರವನ್ನು ಮಾಡಿಕೊಟ್ಟಿದ್ದಾರೆಂಬುದನ್ನು ನಾವು ಅಂದೆ ವಿಸ್ತಾರವಾಗಿ ವಿಶದಪಡಿಸಿದ್ದೇವೆ. ಆದರೂ ಮೆಸ್ಟನ್ ಸಾಹೇಬರು ಖಂಡಣಿಯ ವ್ಯವಸ್ಥೆಗಾಗಿ ಇಲ್ಲಿ ಬಂದು ಪ್ರತಿಯೊಂದು ಪ್ರಾಂತದಲ್ಲಿ ತನ್ನ ಕಮಿಟಿಯ ಅಧಿವೇಶನವನ್ನು ಮಾಡಿ, ಅಲ್ಲಿ ಸಾಕ್ಷಿಗಳನ್ನು ಕೇಳಿ ಕೊನೆಗೆ ತನ್ನ ವರದಿಯಲ್ಲಿ ಇಂತಿಂಥ ಸರಕಾರವು ವರಿಷ್ಠ ಸರಕಾರಕ್ಕೆ ಖಂಡಣಿಯ ರೂಪದಿಂದ ಇಂತಿಂತಿಷ್ಟು ಕೊಡಬೇಕೆಂದು ಹೇಳಿದ್ದರು. ಆ ಪ್ರಕಾರ ನಮ್ಮ ಮದ್ರಾಸ ಸರಕಾರದ ಪಾಲಿಗೆ ಸೇಕಡಾ ೩೫ ಅಂಶವು ಹಿಂದುಸ್ಥಾನ ಸರಕಾರಕ್ಕೆ ಕೊಡುವುದು ಬಂದಿದೆ.

ಮದರಾಸ ಸರಕಾರದ ಪಾಲಿಗೆ ಬಂದ ಮೇಲಿನ ರಕಮು ಒಂದು ದೊಡ್ಡ ಭೂರ್ದಂಡವು. ಧರ್ಮಶಾಸ್ತ್ರದ ಭಾಷೆಯಿಂದ ಹೇಳುವುದಾದರೆ ಇದು ವಾರ್ಷಿಕ ಪ್ರಾಯಶ್ಚಿತ್ತದ ಕೃಚ್ಛ್ರವು! ಇದನ್ನು ಕಡಿಮೆಮಾಡಿ ಮದರಾಸ ಸರಕಾರದ ಯೋಗ್ಯತೆಗೆ ಒಪ್ಪುವಂತೆ ಮತ್ತು ಇತರ ಪ್ರಾಂತಗಳ ಕ್ರಮಕ್ಕೆ ಅನುರೂಪವಾಗುವಂತೆ ಕೊಡತಕ್ಕ ಅಂಶವನ್ನು ನಿರ್ಣಯಿಸಬೇಕೆಂದು ಮದರಾಸಿನ ಅಂಬೋಣವಿದೆ. ಈ ಅಂಬೋಣವನ್ನು ಕೆಲವು ಮೆಂಬರುಗಳು ಮೊನ್ನೆಯ ವರಿಷ್ಠ ಕೌನ್ಸಿಲಿನಲ್ಲಿ—ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ—ಒಂದು ಠರಾವಿನ ರೂಪದಿಂದ ತಂದರು. ಮದರಾಸಿನ ಪರವಾಗಿ ಮಿ. ರಂಗಾಚಾರ್'' ಮಿ. ಮೊಯರ್ ಇವರು ಸ್ವಪಕ್ಷವನ್ನು ಬಹು ಉತ್ತಮ ರೀತಿಯಿಂದಲೂ, ಸಮರ್ಪಕವಾಗಿಯೂ ಸಮರ್ಥಿಸಿದರು. ಈ ಹೊತ್ತಿನ ಅಗ್ರಲೇಖದಲ್ಲಿ ಅವರ ಭಾಷಣದೊಳಗಿನ ಮುಖ್ಯಾಭಿಪ್ರಾಯಗಳನ್ನು ಕೊಟ್ಟು ಸರಕಾರದ ಕಡೆಯುವರು ಯಾವ ಕಾರಣದ ಮೇಲೆ ಮೇಲಿನ ಠರಾವನ್ನು ಉಪರೋಧಿಸಿದರೂ ಅದನ್ನು ಸ್ವಲ್ಪದರಲ್ಲಿ ಪ್ರಸ್ತಾಪಿಸೋಣ.

ಮದರಾಸ ಸರಕಾರದ ತಲೆಗೆಹೊರಿಸಲ್ಪಟ್ಟ ಕಪ್ಪದಲ್ಲಿ ೪—೫ ತರದ ಮಹತ್ವದ ಸ್ಥಿತ್ಯಂತರಗಳುಂಟಾದವು. ಈ ಸಂಸ್ಥಾನದ ಎಲ್ಲ ಕರಭಾರವು (ಉತ್ಪನ್ನವು) ಮತ್ತು ಖರ್ಚು ಇವು ಮಧ್ಯವರ್ತಿಯಾದ ಹಿಂದುಸ್ಥಾನ ಸರಕಾರದ ಕೈಯಲ್ಲಿ ಇದ್ದವು. ಎರಡನೆಯ ಸ್ಥಿತ್ಯಂತರದಲ್ಲಿ ಉತ್ಪನ್ನದ ಮತ್ತು ಖರ್ಚಿನ ಬಾಬಿನಲ್ಲಿ ಮದರಾಸ ಸರಕಾರಕ್ಕೆ ಕೆಲವು ಮಟ್ಟಿನ ಹಕ್ಕು ಸಿಕ್ಕಿತೆಂದು ಹೇಳುವುದಕ್ಕಿಂತ ಸ್ಥಾನವು ದೊರಕಿತೆಂದು ಹೇಳುವುದು ಸಮರ್ಪಕವಾಗಿದೆ. ಅನಂತರ ರೆವಿನ್ಯೂ ಮಟ್ಟಿಗೆ ಮದರಾಸಿಗೆ ಕೊಂಚ ಹೆಚ್ಚು ಆಡಳಿತೆಯ ಹಕ್ಕು ಪ್ರಾಪ್ತವಾಯಿತು. ಈ ಮೇರೆಗೆ ಎರಡು ಮೂರು ಸ್ಥಿತ್ಯಂತರಗಳು ಸಂಭವಿಸಿದ ಬಳಿಕ ರಯತವಾರಿ ಪದ್ಧತಿಯು ಬಂತು. ಮೂವತ್ತು ವರ್ಷಕ್ಕೆ ಒಮ್ಮೆ ಕಂದಾಯವನ್ನು ಏರಿಸುವ ಯಾವ ಕ್ರಮವೊ ಅದೆ ರಯತವಾರ ಪದ್ಧತಿಯು. ಈ ಪದ್ಧತಿಯು ಎಷ್ಟರ ಮಟ್ಟಿಗೆ ಘಾತಕವಾದ್ದು ಎಂಬುದನ್ನು ವಿವರಿಸಿ ಹೇಳಬೇಕಾದ ಅಗತ್ಯವಿಲ್ಲ. ಲೋಕ ವಿಲಕ್ಷಣವಾದ ಎಣಿಕೆಯ ಕ್ರಮವನ್ನು ಹಾಕಿಕೊಂಡು ಪ್ರತಿಯೊಂದು ಮೂವತ್ತು ವರ್ಷದ ಬಾರಿಗೆ ಜಮೀನುಗಳ ಕಂದಾಯವನ್ನು ಹೆಚ್ಚಿಸುವ ವಾಡಿಕೆಯೆ ರಯತವಾರಿ ಎಂಬ ಹೆಸರಿನಿಂದ ಅಸ್ತಿತ್ವದಲ್ಲಿ ಬಂತು. ಇದರ ಪರಮಾವಧಿಯು ಎಷ್ಟರ ಮಟ್ಟಿಗೆ ಉಂಟಾಯಿತೆಂದರೆ ಸರಕಾರವು ಜಮೀನಿನ ಲಾಭದ(ಉತ್ಪನ್ನದ್ದಲ್ಲಿ) ಅರ್ಧಾಂಶವನ್ನು ತೆಕ್ಕೊಳ್ಳಹತ್ತಿತು. ಇದರಲ್ಲಿ ಕೆಲವು ವ್ಯವಸಾಯದ ವ್ಯವಸ್ಥೆಗೆ ಇಡಲ್ಪಡುತ್ತಿತ್ತು. ಪರಂತು ಆ ಕ್ರಮವು ಯಾವ ಕೃಷಿಕರ ಆದರಕ್ಕೂ ಅಥವಾ ಪ್ರಯೋಜನಕ್ಕೂ ಬೀಳದೆಹೋಯಿತು. ಆದರೂ ಕಂದಾಯವನ್ನು ಬೇಕಷ್ಟು ಬೆಳೆಸಲು ಕಲೆಕ್ಟರುಗಳಿಗೆ ಸಂದರ್ಭವನ್ನು ತಂದು ಕೊಟ್ಟದ್ದರಿಂದ ಸರಕಾರಿ ಖಜಾನೆಯಲ್ಲಿ ಹಣವು ದಾಸ್ತಾನವಾಗುತ್ತ ಬಂತು. ಅನಂತರ ಒಂದು ನಮೂನೆಯ ಕಾಯಂ ಕಂದಾಯದ ಪದ್ಧತಿಯು ಬಂತೆಂದು ಹೇಳಬಹುದು. ಈ ಸಮಯದಲ್ಲಿ ಮದ್ರಾಸ ಪ್ರಾಂತಕ್ಕೆ ಉಂಟಾದ ಅನ್ಯಾಯಗಳನ್ನು ವಿವರಿಸಹೊರಟರೆ ಅದೊಂದು ಗ್ರಂಥವೆ ಆಗಬಹುದು. ಮದ್ರಾಸ ಪ್ರಾಂತದ ಜನಸಂಖ್ಯೆ ಮತ್ತು ಉತ್ಪನ್ನ ಇವುಗಳಿಗೆ ಅನುರೂಪವಾಗಿ ಶಿಕ್ಷಣ, ಆರೋಗ್ಯ ಮೊದಲಾದವುಗಳ ಅಭಿವೃದ್ಧಿಗೆ ವರಿಷ್ಠ ಸರಕಾರವು ಬಹು ಕಡಿಮೆ ಹಣವನ್ನು ಕೊಡುತಿತ್ತು. ಆ ಸಮಯದ ಮುಂಬಯಿ ಬಂಗಾಲ ಇತ್ಯಾದಿ ಪ್ರಾಂತಗಳಲ್ಲಿ ಮೇಲಿನ ಇಲಾಖೆಗಳ ಸಂಬಂಧವಾಗಿ ಎಷ್ಟು ವಿನಿಯೋಗಿಸಲ್ಪಡುತ್ತಿತ್ತೊ ಆ ಪ್ರಮಾಣದಂತೆ ಮದರಾಸಿಗೆ ಕೊಡುತ್ತಿರಲಿಲ್ಲ. ಇದು ಕೆಳಗಿನ ಪಟ್ಟಿಯಿಂದ ಗೋಚರಕ್ಕೆ ಬರಬಹುದು.

೧೯೧೧ರಿಂದ ೧೯೨೦ನೆ ಇಸವಿಯ ವರೆಗೆ.

ಪ್ರಾಂತಗಳು	ಜನಸಂಖ್ಯೆ (ಮಿಲಿಯ)	ಗ್ರೇಂಟು (ಲಕ್ಷ)
ಮದ್ರಾಸು	೪೧ ೧/೩	೨೮ ೧/೩
ಬಂಗಾಲ	೪೬ ೧/೩	೪೧ ೪/೫
ಮುಂಬಯಿ	೧೯ ೧/೩	೨೧ ೨/೫

ಈ ಪಟ್ಟಿಯು ಮದರಾಸಿಗುಂಟಾಗುವ ಅನ್ಯಾಯವನ್ನು ಸಹಜವಾಗಿ ತೋರಿಸುತ್ತದಾದ ಕಾರಣ ವಿಶೇಷ ಟೀಕೆಯು ಅಥವಾ ವರ್ಣನೆಯು ಅಗತ್ಯವಿಲ್ಲ. ಈ ಎಲ್ಲ ಸ್ಥಿತ್ಯಂತರಗಳು ದಾಟಿಹೋದ ತರುವಾಯ ಈಗಿನ ಎಂದರೆ ಮೆಸ್ಟನ್ ಕಮಿಟಿಯ ಕಾರಭಾರದ ಸಮಯವು ಬಂದೊದಗಿತು. ಈ ಕಾರಭಾರದಿಂದ ಮದ್ರಾಸು ಮಿಕ್ಕ ಎಲ್ಲ ಪ್ರಾಂತಗಳಿಗಿಂತ ವರಿಷ್ಠ ಸರಕಾರಕ್ಕೆ ಎಷ್ಟೊ ಅಧಿಕವಾದ ಅಂಶವನ್ನು ತೆರಬೇಕಾಗಿ ಬಂದಿದೆ. ಬೇರೆ ಪ್ರಾಂತಗಳು ಕಡಿಮೆ ಕೊಡುತ್ತವೆ ಎಂಬೀ ವಿಷಯದಲ್ಲಿ ಯಾರಿಗೂ ಅಸೂಯೆ ಇಲ್ಲ. ಆದರೆ ಮದ್ರಾಸಿನ ತಲೆಗೆ ಮಾತ್ರ ದೊಡ್ಡ ಹೊರೆಯು ಕಟ್ಟಲ್ಪಟ್ಟದೆ ಇದೆ ವಿಷಾದದ ಸಂಗತಿಯು. ಮೆಸ್ಟನ್ ಕಮಿಟಿಯ ರಿಪೋರ್ಟಿನಲ್ಲಿ ಮದರಾಸಿನ ದೇಯಾಂಶ ವಿಷಯವಾಗಿ ಇರುವ ಶಿಫಾರಸ್ಸನ್ನು ಕುರಿತು ಸ್ವತಃ ಹಿಂದುಸ್ಥಾನದ ಸರಕಾರವೆ ತನ್ನ ಅಭಿಪ್ರಾಯದ ಪತ್ರಕದಲ್ಲಿ "ಮುಂಬಯಿಗಿಂತ ಮದ್ರಾಸು ಐದು ಪಾಲು ಹೆಚ್ಚು ಕೊಡಬೇಕಾಗಿ ಬರುತ್ತದೆ". ಎಂದು ಉಲ್ಲೇಖಿಸಿ ಈ ವಿಷಮ ವಿಭಾಗದ ಪರಿಣಾಮವನ್ನು ಸ್ಪಷ್ಟ ಶಬ್ದಗಳಿಂದ ಒಪ್ಪಿಕೊಂಡಿದೆ. ಈಗ ಮದ್ರಾಸ ಸರಕಾರದಿಂದ ಇಷ್ಟು ಅಧಿಕ ದಂಡವು ತೆಕ್ಕೊಳ್ಳಲ್ಪಡುತ್ತದೆಂದು ಪ್ರತಿಫಲದಲ್ಲಾದರೂ ಆ ಮಾನದಿಂದ ಹಿಂತಿರುಗಿ ಕೊಡೋಣಾಗುತ್ತದೊ? ಅದೂ ಇಲ್ಲ. ಎಂದ ಮೇಲೆ ಮದ್ರಾಸ್ ಪ್ರಾಂತಿಕ ಸರಕಾರದ ಖಜಾನೆಗೆ ಇದೊಂದು ದೊಡ್ಡ ಪೆಟ್ಟೆ ಸರಿ. ಹಿಂದುಸ್ಥಾನ ಸರಕಾರಕ್ಕೆ ಕೊಡತಕ್ಕ ಕಪ್ಪ—ಬೇರೆ ಪ್ರಾಂತಗಳ ಮಟ್ಟಿಗೆ ಹೇಗೆ ಇದ್ದರೂ—ಮದ್ರಾಸ ಪ್ರಾಂತಕ್ಕೆ "ವಿಶ್ವಾಮಿತ್ರ ಮಹರ್ಷಿಯ ಸಾಲವೆ" ಸರಿ! ಈ ಸಾಲವು ಎಂದೂ ತೀರಲಿಕ್ಕಿಲ್ಲ. ಮತ್ತು ಮದ್ರಾಸ ಸರಕಾರಕ್ಕೆ ಸುಖಸ್ವಾಸ್ಥ್ಯವೂ ಆಗಲಿಕ್ಕಿಲ್ಲ. ವಿಶ್ವಾಮಿತ್ರನ ಸಾಲ ಪರಿಹರಿಸಲು ಹರಿಶ್ಚಂದ್ರನಿಗೆ ಹೆಂಡತಿ ಮಕ್ಕಳನ್ನು ಮಾರಬೇಕಾಗಿ ಬಂದ ಸಂಗತಿಯು ಪೌರಾಣಿಕ ಜಗತ್ತಿನಲ್ಲಿ ಮಾತ್ರ ಶ್ರುತವಾಗಿತ್ತು. ಆದರೆ ಹಿಂದುಸ್ಥಾನ ಸರಕಾರದ ಈ ಅನ್ಯಾಯದ "ಖಂಡಣಿ"ಯನ್ನು ತೀರಿಸಲು ನಮ್ಮ ಪ್ರಾಂತಿಕ ಸರಕಾರಕ್ಕೆ ಬೇರೆ ಎಷ್ಟೊ ತೆರಿಗೆಗಳನ್ನು ಹಾಕಬೇಕಾಗುತ್ತದೆ. ತೆರಿಗೆ ಹಾಕುವುದರ ಪರಮಾವಧಿಯು ಎಷ್ಟರ ಮಟ್ಟಿಗೆ ಉಂಟಾಯಿತೆಂದರೆ, ಮಿ. ರಂಗಾಚಾರಿಯವರು ಹೇಳುತ್ತಾರೆ, ವೀಳ್ಯದ ಎಲೆಯ ಮೇಲೆ ಸಹ ತೆರಿಗೆಯನ್ನು ಹೊರಿಸುವ ಸೂಚನೆಯು ಹೊರಟಿತಂತೆ! ಈ ರೀತಿಯ ಶೋಚನೀಯ ಪ್ರಕಾರಗಳ ಮೂಲವು ಮದ್ರಾಸ ಸರಕಾರದ ಖಜಾನೆಯು ಬಡಸ್ತಿಕೆಯಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ. ಮದ್ರಾಸ ಪ್ರಾಂತವು ಮೂಲತಃ ಬಹು ಬಡವಾಗಿದೆ. ಅದಕ್ಕೆ ಅನುಗುಣವಾಗಿ ಅಲ್ಲಿಯ ಸರಕಾರವು ಸಹ ಶ್ರೀಮಂತವಲ್ಲ. ಹಳ್ಳಿಯ ಪಟೇಲರ, ಶಾನಭೋಗರ ಹಾಗು ಪ್ರಾರಂಭ ತರಗತಿಯ ಇತರ ನೋಕರರ ಸಂಬಳದ ಸಂಖ್ಯೆಯನ್ನು ನೋಡುವಾಗ ಈ ಸಂಸ್ಥಾನದ ಜನರು ಎಷ್ಟು ಕಷ್ಟದಿಂದ ಜೀವನವನ್ನು ಸಾಗಿಸುತ್ತಾರೆಂಬುದು ಸಹಜವಾಗಿಯೆ ತಿಳಿದು ಬರುವ ಸಂಗತಿಯಾಗಿದೆ. ಇಂಥ ಬಡಪ್ರಾಂತದ ಮೇಲೆ ವರಿಷ್ಠ ಸರಕಾರವು ಕೇವಲ ನಿಷ್ಕರುಣೆಯಿಂದ ಒಂದಕ್ಕೆ ಎರಡಷ್ಟು ಕಪ್ಪವನ್ನು ತೆಕ್ಕೊಳ್ಳುವುದು ಕೇವಲ ಸುಲಿಗೆಯಲ್ಲವೆ? ಮಿಕ್ಕ ಪ್ರಾಂತಗಳಿಗೆ ಇದರಿಂದ ಒಂದು ವೇಳೆ ಕೆಲವು ಅಡಚಣೆಗಳು ಬರಬಹುದು. ಆದರೆ ಮದ್ರಾಸಿನ ಪರಿಸ್ಥಿತಿಯನ್ನು ಮಾನವ ಬುದ್ಧಿಯಿಂದ ಮತ್ತು ಸಾರಾಸಾರ ವಿಚಾರದಿಂದ ನೋಡಿ ಈ ದಂಡದ ರಕಮನ್ನು ಖಂಡಿತವಾಗಿ ಕಡಿಮೆಮಾಡಬೇಕೆಂದು ಮಿ. ರಂಗಾಚಾರಿ ಮುಂತಾದ ಸಭಾಸದರು ಸಮರ್ಪಕವಾಗಿ ಸಮರ್ಥಿಸಿದರು. ಪರಂತು ಮುಂಬಯಿ, ಬಂಗಾಳ ಇತ್ಯಾದಿ ಬೇರೆ ಪ್ರಾಂತದ ಕೆಲವು ಸಭಾಸದರು ಈ ಠರಾವನ್ನು ಉಪರೋಧಿಸಿದರು. ಮತ್ತು ಎಲ್ಲಕ್ಕೂ ಹೆಚ್ಚು ಹಿಂದುಸ್ಥಾನ ಸರಕಾರದ ಕಡೆಯಿಂದ ಪ್ರತಿರೋಧವು ತೀವ್ರವಾಗಿ ನಿಂತು ಈ ಠರಾವು ಬಿದ್ದು ಹೋಯಿತು.

ಹಿಂದೂಸ್ಥಾನ ಸರಕಾರವು ತನ್ನ ಖಜಾನೆಯಲ್ಲಿ ನ್ಯೂನತೆಯುಂಟಾಗಿದೆ, ತನಗೆನೆ ಸಾಲತೆಗೆಯುವ ಪ್ರಸಂಗಗಳು ಒದಗುತ್ತವೆ. ಸಾಲ ಸಾಲವೆಂದು ಹಿಂದೂಸ್ಥಾನ ಸರಕಾರದ ಅವಸ್ಥೆಯು ಒಬ್ಬ ಜುಗಾರಿಯ ಹೀನಸ್ಥಿತಿಯಂತೆ ಶೋಚನೀಯವಾಗಿದೆಯಂತೆ! ಆದ್ದರಿಂದ ಮದರಾಸ ಸರಕಾದಿಂದ ಬರತಕ್ಕ ಕಪ್ಪವನ್ನು ತಗ್ಗಿಸಲು ಸಾಧ್ಯವಿಲ್ಲವೆಂದು ಹಿಂದೂಸ್ಥಾನ ಸರಕಾರದ ಕಡೆಯಿಂದ ಪ್ರತಿಪಾದಿಸೋಣಾಗಿದೆ. ಪರಂತು ಈ ಯುಕ್ತಿವಾದವು ಎಷ್ಟು ನಿರರ್ಥಕ, ಅಪ್ರಯೋಜಕ ಮತ್ತು ಘಾತಕವಾಗಿದೆ ಎಂಬುದನ್ನು ವಾಚಕರೆ ತಿಳಿಯಬಹುದು. ಹಿಂದೂಸ್ಥಾನ ಸರಕಾರಕ್ಕೆ ಸಾಲವೆತ್ತುವ ಪ್ರಸಂಗವು ಒದಗುವದಾದರೆ ಅದಕ್ಕೆ ಬಡ ಮದ್ರಾಸು ದಂಡತೀರಬೇಕೆಂದು ಹೇಳುವುದು ಯಾವ ನ್ಯಾಯವು? ನಿಮಗೆ ಖರ್ಚು ಹೆಚ್ಚಾದರೆ, ನಿಮ್ಮ ಖರ್ಚನ್ನು ಕಡಿಮೆಮಾಡಿಕೊಳ್ಳಿರಿ. ನಮ್ಮ ಮನೆಯ ಖರ್ಚಿಗೆ ಇಷ್ಟು ಹಣ ಬೇಕೆ ಬೇಕಾಗುತ್ತದೆ ಎಂದು ಹೇಳಿ, ಯಾರಾದರೂ ಒಬ್ಬ ಪ್ರತಿಷ್ಠಿತ ಗೃಹಸ್ಥನು (!) ತನ್ನ ನೆರೆಯವರ ಅಥವಾ ಒಕ್ಕಲಿನ ಮನೆಯಿಂದ ದಿನಾಲು ಹಣವನ್ನು ತರಲು ಉಪಕ್ರಮಿಸಿದರೆ ಅವನ ಕೃತ್ಯವು ಎಂದಾದರೂ ಕ್ಷಮ್ಯವಾದೀತೆ? ಇಲ್ಲ. ಹಾಗೆಯೆ ಹಿಂದೂಸ್ಥಾನ ಸರಕಾರದ ಈ ನಿಷ್ಕರುಣೆಯ ವಿಧಾನವು ನಿಂದ್ಯವಾಗಿದೆ. ಸರಳವಾದ ಉಪಾಯದಿಂದ ಅದು ಕೇಳುವುದಿಲ್ಲವಾದರೆ ಮೊನ್ನೆ ಪ್ರಾಂತಿಕ ಕೌನ್ಸಿಲಿನಲ್ಲಿ ಪ್ರಸ್ತಾಪವು ಬಂದ ಮೇರೆಗೆ ಮುಷ್ಕರದ ಉಪಾಯವನ್ನಾದರೂ ಅವಲಂಬಿಸಿ ಹಿಂದೂಸ್ಥಾನ ಸರಕಾರದ ದಿವಾಳಿ ಚೋರತನಕ್ಕೆ ಲಗಾಮನ್ನು ಹಾಕದೆ ಕೊನೆಗೆ ನಿವೃತ್ತಿಯಾಗಲಿಕ್ಕಿಲ್ಲವೆಂದು ತೋರುತ್ತದೆ.

ಸ್ಫುಟವಿಚಾರಗಳು.

೧. ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಸದ್ಯಃ ಕೆನಡದಲ್ಲಿದ್ದು ತಮ್ಮ ಮಿಶನಿನ ಕಾರ್ಯವನ್ನು ಬಹು ಶಾಂತ ರೀತಿಯಿಂದಲೂ ಧೈರ್ಯದಿಂದಲೂ ಮುಂದೊತ್ತುತಿದ್ದಾರೆ! ಒಟ್ಟಾವದಲ್ಲಿ ಕೊಟ್ಟ ಒಂದು ಭಾಷಣದಲ್ಲಿ ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಮಾತಾಡುವಾಗ, ತುರ್ಕಿಗೆ ಗ್ರೀಸರ ಮೇಲೆ ಪ್ರಾಪ್ತವಾದ ಜಯದಿಂದ ಹೇಗೆ ಉತ್ಸೇಕವಾಗಿದೆ, ಆದರೆ ಸೇವರ್ಸ್ಸಿನ ಒಪ್ಪಂದದಿಂದ ಹಿಂದಿ ಮುಸಲ್ಮಾನರ ಮನಸ್ಸು ನಿರಾಶೆಯಿಂದ ಹೇಗೆ ತುಂಬಿಹೋಗಿದೆ, ಹಿಂದಿ ಮುಹಮ್ಮದೀಯರ ಮನೋವೃತ್ತಿಗಳನ್ನು ವಾದಿಸುವ ಹಿಂದುಸ್ಥಾನ ಸರಕಾರದ ಅಂಬೋಣವು ಫಲಿಸದೆ ಹೋದದ್ದು ಹಿಂದಿ ಮುಸಲ್ಮಾನರಿಗೆ ಎಷ್ಟು ವ್ಯಸನಕರವಾಗಿದೆ ಮುಂತಾದ ಸಂಗತಿಗಳನ್ನು ಪ್ರಸ್ತಾಪಿಸಿದರು. ಇದೆ ಸಂದರ್ಭದಲ್ಲಿ ಶ್ರೀಯುತ ಶ್ರೀನಿವಾಸ ಶಾಸ್ತ್ರಿಗಳು ಅಸಹಕಾರದ ಚಳವಳದ ಸುದ್ದಿಯನ್ನು ಸಹ ಎತ್ತಿದರು. ಅಸಹಕಾರವು ಈಗ ಅರ್ಧಜೀವವಾಗುತ್ತ ಬಂದಿದೆಯಾದರೂ ರಾಜ್ಯಕಾರಭಾರದ ಮೇಲೆ ಜನರ ಯಾವ ಸಂಪೂರ್ಣ ಅಪನಂಬಿಕೆ (Profound distrust) ಉಂಟಾಗಿದೆಯೊ ಅದನ್ನು ಮಾತ್ರ ಸಾಮ್ರಾಜ್ಯದ ಯಾವ ಭಾಗವೂ ಅವಮಾನಿಸಲು ಸಾಧ್ಯವಿಲ್ಲ. ಆದ್ದರಿಂದ ಹಿಂದಿಗಳಿಗೆ ಮತದಾನದಲ್ಲಿ ಸಮಾನತೆಯನ್ನು ಕೊಡುವಂತೆ ಕಾನೂನುಗಳನ್ನು ಮಾಡಲು ಅಲ್ಲಿಯ ಸರಕಾರಕ್ಕೆ ಶಾಸ್ತ್ರಿಗಳು ವಿಜ್ಞಾಪಿಸಿಕೊಂಡರು. ಶಾಸ್ತ್ರಿಗಳ ಕೊನೆಯ ಈ ಉಪಸಂಹಾರವು ಕ್ಷಮ್ಯವಾದರೂ, ಇಲ್ಲಿಯ ಅಸಹಕಾರದ ಅವರ ಮೀಮಾಂಸೆಯು ಮಾತ್ರ ಅಸಮಂಜಸವಾಗಿದೆ. ಅಸಹಕಾರವು ಲೋಪವಾಗುವ ದಾರಿಗೆ ಬಂದಿದೆ ಎಂದು ಶಾಸ್ತ್ರಿಗಳು ತಿಳಿದುಕೊಳ್ಳುವುದೆ ಮೊದಲು ವಸ್ತುಸ್ಥಿತಿಗೆ ಬಿಟ್ಟಿರುವ ಮಾತಾಗಿದೆ. ಅವರು ಹಿಂದುಸ್ಥಾನದಿಂದ ದೂರದಲ್ಲಿರುವ ಕಾರಣ ಇಲ್ಲಿಯ ನಿಜ ಸ್ಥಿತಿಯು ಅವರಿಗೆ ತಿಳಿಯುವುದಿಲ್ಲವೆಂದು ತೋರುತ್ತದೆ. ಈಗ ಇಲ್ಲಿ ಕೆಲವು ಮತಭೇದಗಳುಂಟಾದ್ದರ ಮೇಲಿಂದ ಅವರು ಮೇಲಿನಂತೆ ಅನುಮಾನವನ್ನು ಕಲ್ಪಿಸಿದ್ದಾದರೆ, ಅದು ಕೂಡ ಅಪ್ರಯೋಜಕವೆ ಸರಿ. ಕಾರಣ, ಕಾರ್ಯಕ್ರಮದಲ್ಲಿ ಕೆಲವು ಆವಶ್ಯಕ ಮತ್ತು ಹಿತಾವಹ ಬದಲಾವಣೆಗಳಾಗಬೇಕೆಂದು ಕೇಳುವುದು ಅಸಹಕಾರವನ್ನು, ಎಂದರೆ ಪರ್ಯಾಯದಿಂದ ಸ್ವರಾಜ್ಯ-ಚಳವಳವನ್ನು ದೃಢಪಡಿಸುವುದಲ್ಲದೆ ಅದನ್ನು ಲೋಪಿಸಲು ಅಲ್ಲ. ಈ ಮರ್ಮವನ್ನು ಶಾಸ್ತ್ರಿಗಳು ತಿಳಕೊಂಡಿದ್ದರೆ, ಇಂಥ ಅಪ್ರಯೋಜಕ ಅನುಮಾನವನ್ನು ಪರಕೀಯರ ಮುಂದೆ ಕಲ್ಪಿಸುವ ಬುದ್ಧಿಮಾಂದ್ಯವನ್ನು ಅಂಗೀಕರಿಸುತ್ತಿರಲಿಲ್ಲ. ಅದಲ್ಲದೆ, ಇವರ ಉಪಸಂಹಾರದಲ್ಲಿ ಇನ್ನೊಂದು ಆಶ್ಚರ್ಯವು ಕಂಡು ಬರುವುದೇನೆಂದರೆ, ಹಿಂದುಸ್ಥಾನದಲ್ಲಿ ಪಸರಿಸಿಕೊಂಡಿರುವ

ಸಂಪೂರ್ಣ ಅಪನಂಬಿಕೆ''ಯನ್ನು ಹೋಗಲಾಡಿಸಲು ವಸಾಹತುಗಳು ಹಿಂದಿಗಳಿಗೆ ಸಮಾನತೆಯ ಹಕ್ಕನ್ನು ಕೊಡಬೇಕೆಂದು ಶಾಸ್ತ್ರಿಗಳು ಪ್ರತಿಪಾದಿಸುತ್ತಾರೆ. ಹಿಂದುಸ್ಥಾನದ ಸ್ವರಾಜ್ಯ ಚಳವಳಕ್ಕೂ, ಅಥವಾ ಖಿಲಾಫತ್ ಚಳವಳಕ್ಕೂ ಮತ್ತು ವಸಾಹತುಗಳ ಸಮಾನತೆಯ ಹಕ್ಕಿಗೂ ಯಾವ ಸಂಬಂಧವೂ ಇಲ್ಲ. ಆದರೂ ಶಾಸ್ತ್ರಿ ಮಹಾಶಯರು ತಾವು ಕೈಕೊಂಡ ಮಿಶನಿನ ಕಾರ್ಯವನ್ನು ಮಾಡುವಾಗ ಸಮರ್ಪಕವಾಗಲಿ, ಅಸಮರ್ಪಕವಾಗಲಿ ಯಾವುದಾದರೂ ಒಂದು ಕಾರಣವನ್ನು ಕೊಡಬೇಕೆಂಬುದೊಂದೆ ಅಂಶವನ್ನಿಟ್ಟುಕೊಂಡಿದ್ದಾರೆಂಬುದು ಇದರಿಂದ ನಿಷ್ಪನ್ನವಾಗುತ್ತದೆ.

೨. ಪ್ರಧಾನಜಿಯವರ ಭಾಷಣದ ವಿಷಯವನ್ನು ಮೂಲೆಗೆ ಒತ್ತಿಬಿಡೋಣ, ಅದನ್ನು ವಿವಿಧರೂಪದಿಂದ ಚರ್ಚಿಸಿ, ಚರ್ಚಿಸಿ ಸಾಕಾಯಿತು, ಈ ಚರ್ವಿತಚರ್ವಣದಿಂದ ಏನು ಫಲವೆಂದು ನೆನಸಿಕೊಂಡು, ನಾವು ಪತ್ರಿಕಾಕರ್ತರು, ಆ ವಿಷಯದಿಂದ ಬೇಸರಪಟ್ಟವರು, ಅದನ್ನು ಮೂಲೆಗೊತ್ತಲು ಯತ್ನಿಸಿದ್ದಾಗ್ಯೂ ಒಂದಿಲ್ಲವಾದರೆ ಇನ್ನೊಂದು ವಾರದಲ್ಲಿ ಈ ವಿಷಯದ ಮೇಲೆ ಒಂದೆರಡು ಮಾತುಗಳನ್ನಾದರೂ ಬರೆಯುವ ಪ್ರಸಂಗವನ್ನು ಹಿಂದಿ ಪತ್ರಕಾರರ ಮೇಲೆ ವಿಲಾಯತಿಯವರು ತಂದುಕೊಡುತ್ತಾರೆ! "ಮೊರ್ನಿಂಗ್ ಪೋಸ್ಟ್" ಎಂಬ ಪತ್ರಿಕೆಯು ತನ್ನ ಅಪ್ರಬುದ್ಧ ಮತ್ತು ಕ್ಷುದ್ರತೆಯ ಟೀಕೆಯಿಂದ ನಮ್ಮ ಮೇಲೆ ಈ ಹೊತ್ತಿನ ಹೊಸ ಸಂದರ್ಭವನ್ನು ತಂದುಕೊಟ್ಟಿದೆ. ಆ ಪತ್ರಿಕೆಯು ಬರೆಯುತ್ತದೆ:—"ಹಿಂದೂಸ್ಥಾನದಂಥ ಅಧೀನಜನಾಂಗದ ಒಂದು ಎಸೆಂಬ್ಲಿಯು—ಅದಾದದರೂ ವೃದ್ಧವೆ, ಬರೆ ೧೮ ತಿಂಗಳ ಪ್ರಾಯದ ಲೆಜಿಸ್ಲೇಟಿವ್ ಎಸೆಂಬ್ಲಿಯು ಲೊಯ್ಡ ಜೋರ್ಜರಂಥ ಸಾಮ್ರಾಜ್ಯದ ಮುಖ್ಯ ಮಂತ್ರಿಗಳ ಮೇಲೆ ನಿಂದಾವ್ಯಂಜಕ ಠರಾವನ್ನು ಪಾಸುಮಾಡುವುದು ಸಾಹಸದ ಕಾರ್ಯವಾಗಿದೆ. ಮಾತ್ರವಲ್ಲ, ಅಧಿಕಾರದ ಹೊರಗಿನ ಕೆಲಸವಾಗಿದೆ. ಮಂತ್ರಿಗಳಿಗೆ ಕೊಮನ್ಸ್ ಸಭೆಯಲ್ಲಿ ಯಾವದಾದರೂ ಒಂದು ವಿಷಯವನ್ನು ಹೇಳಬೇಕೆಂದಿದ್ದರೆ, ಅದನ್ನು ಹೇಳುವುದು ಅವರ ಕರ್ತವ್ಯವೆಂದೆ ಅಲ್ಲ, ಅದನ್ನು ಹೇಳದೆ ಇದ್ದರೆ ಅದು ಅವರ ಪ್ರಮಾದವೆನಿಸುವುದು". ಮೊರ್ನಿಂಗ್ ಪೋಸ್ಟಿನ ಈ ಮಾತಿನ ಅರ್ಥವನ್ನು ಚಾಣಾಕ್ಷವಾಚಕರು ತಿಳಿಯದೆ ಇರಲಿಕ್ಕಿಲ್ಲ. ಹಿಂದೂಸ್ಥಾನಕ್ಕೆ ಕೊಟ್ಟ ಸುಧಾರಣೆಗಳು ಶಾಶ್ವತವಾದವುಗಳಲ್ಲ, ಪರೀಕ್ಷಾರ್ಥವಾದವುಗಳು ಎಂದು ಲೊಯ್ಡ ಜೋರ್ಜರು ಯಾವುದನ್ನು ಉಚ್ಚರಿಸಿದರೊ ಅದನ್ನು ಹೇಳದೆ ಇದ್ದರೆ ಅದೆ ಒಂದು ಪ್ರಮಾದವಾಗುತ್ತಿತ್ತು. ಎಂದು ಈಪತ್ರಿಕೆಯ ಅಭಿಪ್ರಾಯವು ಎಂದ ಮೇಲೆ ಈ ಎಲ್ಲರ ಅಂತಃಕರಣದ ಅಭಿಪ್ರಾಯವು ಒಂದೇ ಎಂದು ಇದರಿಂದ ಕಂಡುಬರುತ್ತದೆ. ಮೊರ್ನಿಂಗ್‌ಪೋಸ್ಟು ಮುಂದೆ ಹೀಗೆ ಬರೆಯುತ್ತದೆ. "ಬ್ರಿಟಿಷ್‌ಮುತ್ಸದಿಯು ಮಾತಾಡುವ ಅಂಶವು ಅವನೊಬ್ಬನದೆ ಎಂದು ತಿಳಿಯಬಾರದು. ತಾನು ಮಾತಾಡುವ ಅಂಶದಲ್ಲಿ ಹಿಂದೂಸ್ಥಾನ, ಐರ್ಲೆಂಡ, ಇಜಿಪ್ತ ಮುಂತಾದ ಕಡೆಗಳಲ್ಲಿಯ ಜನರ ಮನೋವ್ಯಥೆಗೆ ಕಾರಣವಾದ ಸಂಗತಿಗಳಿದ್ದಾವೊ ಎಂದು ನೋಡಿ ಬ್ರಿಟಿಷ್ ಮುತ್ಸದಿಯು ತನ್ನ ಜನರ ಮುಂದೆ ಸ್ವಾಭಿಪ್ರಾಯವನ್ನು ಇಡುತ್ತಾನೆ. ಯಾಕೆಂದರೆ, ಹಿಂದೂಸ್ಥಾನ, ಐರ್ಲೆಂಡ, ಮತ್ತು ಇಜಿಪ್ತ ಇಲ್ಲಿಯ ಜನರು ಬ್ರಿಟಿಷರ ಮನೋವೃತ್ತಿಗಳಲ್ಲಿ ಕೊಂಚ ನ್ಯೂನತೆಯು ಬಂದುದ್ದಾದರೆ ಅದನ್ನು ಸಹಿಸುವ ಅಭ್ಯಾಸವನ್ನಿಟ್ಟುಕೊಂಡಿರುವುದಿಲ್ಲ. ಈ ರೀತಿಯಿಂದ ಕೆಲವು ಅಪ್ರಾಸಂಗಿಕ ಮತ್ತು ಅಸಂಬದ್ಧ ವಿಧಾನಗಳನ್ನು ಮಾಡಿ ಆ ಪತ್ರಿಕೆಯು ಕೊನೆಗೆ ಹಿಂದೂಸ್ಥಾನದ ಜನರಿಗೆ ರಾಜ್ಯಕಾರಣದ ಜ್ಞಾನವಿಲ್ಲ, ಅವರು ತಾವು ಬುದ್ಧಿಶಾಲಿಗಳೆಂದೂ ನಿಪುಣರೆಂದೂ ತಿಳಿಯುವುದು ಅಯುಕ್ತವೆಂಬಿತ್ಯಾದಿ ಅಪ್ರಾಮಾಣಿಕ ವಿಷಯದಿಂದ ತನ್ನ ಲೇಖವನ್ನು ಮುಕ್ತಾಯಪಡಿಸಿಕೊಂಡಿದೆ! ಇಂಥ ಅಸಂಗತ ಲೇಖನಕ್ಕೆ ಉದಾಸೀನತೆಯೆ ಉತ್ತರವು!

೩. ನುಸಿಗೆ ಹೇಗೆ ಯಾವಾಗಲೂ ವ್ರಣದ ಮೇಲೆ ದೃಷ್ಟಿಯೊ ಹಾಗೆಯೆ ಕಾಗೆಗೆ ಸವತೆಕಾಯಿಯ ಮೇಲೆಯೆ ದೃಷ್ಟಿ ಇರುವುದು. ಈ ಎರಡು ಗಾದೆಗಳು ಸಂಪೂರ್ಣ ಸ್ವಭಾವೋಕ್ತಿಯ ನಿದರ್ಶಕವಾಗಿರುವುದರಿಂದ ಸಾಮಾನ್ಯವಾಗಿ ಎಲ್ಲ ಭಾಷೆಗಳಲ್ಲಿ ಸುಪ್ರಸಿದ್ಧವಾಗಿವೆ. ಇದೆ ಅರ್ಥದಲ್ಲಿ ಮೂರನೆಯದಿನ್ನೊಂದು ಸಂಗತಿಯು ಹೊಸ ಗಾದೆಯಾಗಹತ್ತಿದೆ. ಎಂದು ಹೇಳಬೇಕಾಗುತ್ತದೆ. ಹಿಂದು ಮುಸಲ್ಮಾನ ಮುಂತಾದ ವಿಚ್ಛಿನ್ನ ಮತಗಳಲ್ಲಿ ಎಲ್ಲಾದರೂ ಜಗಳ, ಹೊಡೆದಾಟ ದೊಡಾಟ, ದಂಗೆ ಇತ್ಯಾದಿ ಉದ್ಭವಿಸಿದೊಡನೆ ಇಲ್ಲಿ ಎಂಗ್ಲೋ ಇಂಡಿಯನರಿಗಾಗುವಂತೆ, ವಿಲಾಯತಿಯಲ್ಲಿ ಡೆಲಿಟೆಲಿಗ್ರಾಫ ಮುಂತಾದ ಪತ್ರಿಕೆಗಳಿಗೆ ತುಂಬಾ ಸಂತೋಷವಾಗುತ್ತದೆ. ಅವುಗಳ ಕಣ್ಣು ಯಾವಾಗಲೂ ನಮ್ಮ ನಮ್ಮೊಳಗಿನ ಒಡಕಿನ ಮೇಲೆಯೆ ಇರುವುದು. ನಾವು ಹಿಂದೊಮ್ಮೆ ತಿಳಿಸಿದ್ದಂತೆ ಮೊಹರಮ್ಮಿನ ಸಮಯದಲ್ಲಿ ಮುಲ್ತಾನಿನಲ್ಲಿ ಮುಸಲ್ಮಾನರು ಕೆಲವು ಅವಿವೇಕ ಪ್ರಕಾರಗಳನ್ನು ಮತ್ತು ಅಮಾನುಷ. ಅನಾಹೂತಗಳನ್ನು ಮಾಡಿದ್ದರು. ಈ ವಿಷಯನ್ನು ಆಧಾರವಾಗಿಟ್ಟುಕೊಂಡು ಮದ್ರಾಸಿನ "ಮೈಲ" ಪತ್ರಿಕೆಯಂತೆ ವಿಲಾಯತಿಯ "ಟೆಲಿಗ್ರಾಫ" ಎಂಬೀ ದೈನಿಕ ಪತ್ರಿಕೆಯು ಇಂಥ ದಂಗೆಯಲ್ಲಿ ಶಾಂತಿಯನ್ನುಂಟುಮಾಡಲು ಮತ್ತು ನ್ಯಾಯವನ್ನು ಕೊಡಲು ಬ್ರಿಟಿಷ್ ಸರಕಾರವೆ ಬೇಕಲ್ಲದೆ ಗತ್ಯಂತರವಿದೆಯೆ ಎಂದು, ತನ್ನ ದೃಷ್ಟಿಯಿಂದ ಬಹು ಮಾರ್ಮಿಕ ಸವಾಲನ್ನು ಕೇಳುವುದು! ಆದರೆ ಎಂಗ್ಲೊ-ಇಂಡಿಯನರ ಇಂಥ ಪ್ರಶ್ನೆಗಳು ನಿರುತ್ತರ ಮಾತ್ರವಲ್ಲ, ಮುಸಲ್ಮಾನರ ಉಪಟಳದಿಂದ ಸಂರಕ್ಷಿಸಲು ಬ್ರಿಟಿಷ್ ಸರಕಾರವು ಬೇಕೆಂದಿದ್ದರೆ, ಡಾಯರನಂಥ ಮತ್ತು ಒಡ್ವಾಯರನಂಥವರ ಅನಾಹುತದಿಂದ ಸಂರಕ್ಷಿಸಲು ಯಾರುಬೇಕು? ಈ ಪ್ರಶ್ನೆಗೆ ಅವರ ಹತ್ತರ ಉತ್ತರವಿಲ್ಲವಾದರೂ "ನೋಕರಶಾಹಿಯ ಅನಾಹುತದಿಂದ ಸಂರಕ್ಷಿಸಲು ಅಸಹಕಾರವೆ, ಬೇಕಾಗುವುದು. ಎಂಬೀ ಉತ್ತರವನ್ನು ಹಿಂದೀದೇಶವು ಕೊಟ್ಟದೆ. ಎಂದ ಮೇಲೆ ಟೆಲಿಗ್ರಾಫು ಮೇಲಿನಂತೆ ಆತ್ಮಪ್ರಸಿದ್ಧಿಯನ್ನು ಕೊಚ್ಚಿಕೊಳ್ಳುವುದು ಶ್ಲಾಘ್ಯವಲ್ಲ. ವಸ್ತುತಃ ಹೇಳುವುದಾದರೆ, ನಮ್ಮ ನಮ್ಮಲ್ಲಿಯ ಕಲಹವನ್ನುತೀರಿಸಲಿಕ್ಕೆ ಮಾತ್ರ ಬ್ರಿಟಿಷ್ ಸರಕಾರವು ಬೇಕೆಂದಲ್ಲ ಅದು, ಮನಸ್ಸುಮಾಡಿದರೆ ಬೇರೆ ಅನೇಕ ಉಪಯುಕ್ತ ಕೃತ್ಯಗಳಿಗಾಗಿ ಬರೆ ಹಿಂದೂಸ್ಥಾನಕ್ಕೆ ಬೇಕು. ಹೀಗಿರುವಾಗ ಮೇಲಿನಂಥ ಅಲ್ಪ ಸಂಗತಿಗಳಿಂದ ಬ್ರಿಟಿಷ್ ರಾಜ್ಯದ ಆವಶ್ಯಕತೆಯನ್ನು ಪ್ರತಿಪಾದಿಸುವುದು ಶೋಚನೀಯವಾಗಿದೆ!

ಮಂಗಳೂರು.

ವಾಡಿಕೆಯಂತೆ ನವರಾತ್ರಿ ಸಂಬಂಧ ಸ್ವದೇಶಾಭಿಮಾನಿಯು ಬರುವ ತಾ. ೨೯ರ ಸಂಚಿಕೆಯು ಪ್ರಕಟವಾಗುವುದಿಲ್ಲ.

ದಕ್ಷಿಣ ಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲೂಕು ಸುಬ್ರಮಣ್ಯಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರುಷ ೧೯೨೨ನೇ ಇಸವಿ ನವಂಬರ ತಿಂಗಳ ೧೮ನೇ ತಾರೀಕಿನಿಂದ ೨೭ನೇ ತಾರೀಕು ವರೆಗೆ ಜರಗುವುದು. ಅಂದರೆ ಸಂತೆಯು ಸುಬ್ರಮಣ್ಯ ದೀಪೋತ್ಸವದ ದಿವಸ ಪ್ರಾರಂಭವಾಗಿ ೧೦ ದಿವಸಗಳ ಪರಿಯಂತ ಜರಗುವುದು.

ಮಂಗಳೂರು ಬ್ರಹ್ಮಸಮಾಜದ ಐವತ್ತೆರಡನೇ ವರ್ಷೋತ್ಸವದ ಕಾರ್ಯಾನುಕ್ರಮಣಿಕೆ:— ೨೪ನೇ ಸಪ್ಟಂಬರ ಆದಿತ್ಯವಾರ ಪ್ರಾತಃಕಾಲ ೬-೩೦ ಗಂಟೆಗೆ ನಗರ ಸಂಕೀರ್ತನೆಯು, ೭-೩೦ ಗಂಟೆಗೆ ದೇವಾರಾಧನೆ ಮತ್ತು ಸಾಂವತ್ಸರಿಕ ಉಪನ್ಯಾಸವು, ಸಾಯಂಕಾಲ ೪ ಗಂಟೆಗೆ ಬಾಲಕರ ಪರಿತೋಷಣವು; ೨೭ನೇ ಸಪ್ಟಂಬರ ಬುಧವಾರ ಪ್ರಾತಃಕಾಲ ೭-೩೦ ಗಂಟೆಗೆ ದೇವಾರಾಧನೆ ರಾಜಾರಾಮಮೋಹನ್‌ರಾಯರ ಮೃತತಿಥಿ, ಸಾಯಂಕಾಲ ೬-೩೦ ಗಂಟೆಗೆ ಸಂಗತ್ ಸಭೆಯ ವರ್ಧಂತಿ ಮತ್ತು ಧರ್ಮವಿಷಯ ಸಂಭಾಷಣೆಯು; ೨೮ನೇ ಸಪ್ಟಂಬರ ಗುರುವಾರ ಸಾಯಂಕಾಲ ೪ ಗಂಟೆಗೆ ಕುಲಸ್ತ್ರೀಯರ ಸಭೆಯು ಮತ್ತು ಬ್ರಾಹ್ಮಿಕಾ ಸಭೆಯ ವರ್ಧಂತಿ; ೨೯ನೇ ಸಪ್ಟಂಬರ ಶುಕ್ರವಾರ ಪ್ರಾತಃಕಾಲ ೭ ಗಂಟೆಗೆ ಉಷಸ್ಸಂಕೀರ್ತನೆಯು ಮತ್ತು ವ್ಯಕ್ತಿ ವಿಶೇಷ ಪ್ರಾರ್ಥನೆ, ಸಾಯಂಕಾಲ ೫ ಗಂಟೆಗೆ ಸಮಾಜದ ಸದಸ್ಯರ ಭಾಷಣೆಯು; ಸಪ್ಟಂಬರ ೩೦ನೇ ಶನಿವಾರ ಸಾಯಂಕಾಲ ೬-೩೦ ಗಂಟೆಗೆ ಇಂಗ್ಲೀಷಿನಲ್ಲಿ ಭಾಷಣ; ೧ನೇ ಒಕ್ಟೋಬರ ಆದಿತ್ಯವಾರ ಪ್ರಾತಃಕಾಲ ೭-೩೦ ಗಂಟೆಗೆ ದೇವಾರಾಧನೆ, ಉಪನ್ಯಾಸ ಮತ್ತು ಹೊಸ ಸ್ಥೈರಿನ ಸಂಬಂಧ ಕೃತಜ್ಞತಾ ಸಮರ್ಪಣೆ, ಸಾಯಂಕಾಲ ೪ ಗಂಟೆಗೆ ಆನಂದ ಬಜಾರ್, ಸಾಯಂಕಾಲ, ೬-೩೦ ಗಂಟೆಗೆ ಭಜನೆ ಮತ್ತು ಶಾಂತಿವಚನವು. ಎಲ್ಲರಿಗೂ ಸುಸ್ವಾಗತವಿದೆ.

ಮಹಾತ್ಮಾ ಗಾಂಧಿಯವರ ಬಂಧನ ದಿನವಾದ ತಾರೀಕು ೧೮ನೆಯ ದಿನವನ್ನು ಇಲ್ಲಿ ಬಹಳ ಯೋಗ್ಯ ರೀತಿಯಲ್ಲಿ ಜರುಗಿಸಲಾಯಿತು. ಅಂದು ಸ್ವಯಂಸೇವಕರು ಒಟ್ಟು ರೂಪಾಯಿ ೨೫೦ರ ಖಾದಿಯನ್ನು ಮಾರಿರುವರು.

ರೆವಿನ್ಯೂ ಬೋರ್ಡಿನ ಮೆಂಬರರಾದ ಮೆ| ಕಾಚ್‌ಮೇನ್ ದೊರೆಗಳವರೂ ಫೊರೆಸ್ಟ ಕನ್ಸರ್‌ವೇಟರರೂ ಬರುವ ತಾರೀಕು ೨೮ಕ್ಕೆ ಕಾಸರಗೋಡಿಗೆ ಬಂದು ಅಲ್ಲಿಂದ ಪುತ್ತೂರಿಗೆ ತೆರಳಲಿಕ್ಕಿದ್ದಾರೆ.

ಕಳೆದ ತಿಂಗಳಲ್ಲಿ ಮಂಗಳೂರ ಪಟ್ಟಣದಲ್ಲಿ ೬೩ ಗಂಡು ಮತ್ತು ೬೩ ಹೆಣ್ಣು ಜನನಗಳೂ ೪೬ ಗಂಡು ಮತ್ತು ೫೦ ಹೆಣ್ಣು ಮರಣಗಳೂ ಉಂಟಾದವು.

ಪಟ್ಟಣದಲ್ಲಿ ಅಲ್ಲಲ್ಲಿ ಪ್ಲೇಗಿನ ಇಲಿಗಳು ಸಾಯುತ್ತಿವೆ. ಒಂದು ಪ್ಲೇಗು ಮರಣವಿತ್ತೆಂದು ತಿಳಿದುಬರುತ್ತದೆ.

ಮದರಾಸ ಪ್ರೋವಿನ್ಸಿಯಲ್ ಎಗ್ಜಿಬಿಶನು ೧೯೨೩ನೇ ಇಸವಿಯ ಒಗಸ್ಟ ಅಥವಾ ಸೆಪ್ಟಂಬರ ತಿಂಗಳಲ್ಲಿ ಜರಗುವುದು.

ಕಳೆದ ತಾ. ೩ರಲ್ಲಿ ಕೂಡಿದ ಮಂಗಳೂರು ತಾಲೂಕು ಕೊಂಗ್ರೆಸ್ ಕಮ್ಮಿಟಿಯಲ್ಲಿ ಕೆಳಗಿನ ಠರಾವುಗಳು ಪಾಸಾದವು.

ರಾಷ್ಟ್ರೀಯ ವಿದ್ಯಾಪ್ರಸಾರಕ್ಕಾಗಿ ಮುಷ್ಟಿಫಂಡಿಗೆ ಅಕ್ಕಿ ಅಥವಾ ಹಣ ಅಥವಾ ಇತರ ರೂಪದಿಂದ ಸಹಾಯಮಾಡಿದ ಎಲ್ಲಾ ಮಹನೀಯರಿಗೂ ಈ ಮಹಾಸಭೆಯು ಅಭಿನಂದಿಸುವುದಲ್ಲದೆ ಇದೇ ಮೇರೆಗೆ ಸರ್ವರೂ ತಮ್ಮಿಂದ ಕೈಲಾದಷ್ಟು ಸಹಾಯಮಾಡಿ ಇನ್ನು ಮುಂದಕ್ಕೂ ರಾಷ್ಟ್ರಕಾರ್ಯಕ್ಕೆ ಬರುವ ಸ್ವಯಂಸೇವಕರಿಗೆ ಪ್ರೋತ್ಸಾಹಕೊಡಬೇಕಾಗಿ ವಿನಂತಿಮಾಡಿಕೊಳ್ಳುತ್ತದೆ.

ನಮ್ಮ ತಾಲೂಕಿನಲ್ಲಿ ಖಾದಿಪ್ರಚಾರವು ಸಾಕಷ್ಟು ಆಗಲಿಲ್ಲವಾದುದರಿಂದ ಖಾದಿಯನ್ನೇ ಉಡಬೇಕೆಂಬ ಉತ್ಸಾಹವನ್ನು ಜನರಲ್ಲಿ ಹುಟ್ಟಿಸುವುದಕ್ಕೂ ಜವುಳಿ ವ್ಯಾಪಾರಸ್ಥರು ಇನ್ನು ಮುಂದೆ ಪರದೇಶಿ ಬಟ್ಟೆಯನ್ನು ತರಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಮುಂದೆ ಸ್ವದೇಶೀ ಖಾದೀ ಬಟ್ಟೆಯನ್ನೇ ಕೊಂಡು ಕೊಂಡು ವ್ಯಾಪಾರಮಾಡುವುದಕ್ಕೂ ಬೇಕಾದ ಯೋಗ್ಯ ವ್ಯವಸ್ಥೆಯನ್ನು ಇದೇ ಕಮಿಟಿಯ ಕಾರ್ಯಕಾರಿ ಮಂಡಲಿಯವರು ಆದಷ್ಟು ಬೇಗ ಮಾಡತಕ್ಕದ್ದು.

ನಮ್ಮ ಮುನ್ಸಿಪಾಲಿಟಿಯ ವೋಟರರು ಬಹುಮತದಿಂದ ಸೂಚಿಸಿದ ಇಚ್ಛೆಗೆ ಅನುಸಾರವಾಗಿ ಮುನ್ಸಿಪಲ್ ಕೌನ್ಸಿಲ್‌ನವರು ಮಾಡಿದ ನಿರ್ಣಯವನ್ನು ಮಾನ್ಯಮಾಡದೆ ಸರಕಾರದವರು ಮುನ್ಸಿಪಾಲಿ

ನಿಶ್ಚಯಿಸಿರುವ

ಎಲ್ಲಾ ಓಟರರಿಗು

ವೋಟರರಾದ ನಮ್ಮ

ನವರು ಸೇಂದಿ ಗಡಂಗ ಕೆಂದು

ಕೊಡದಂತೆ ಮಾಡಬೇಕಾಕಿದ

ಪ್ರಾರ್ಥಿಸಿಕೊಳ್ಳುತ್ತದೆ.

ಬರುವ ಒಕ್ಟೋಬರ ತಾ

ಜನ್ಮದಿನವಾದ್ದರಿಂದ ಆ ದಿನವನ್ನು

ಕ್ರಿಕೆಟ್ ಪಂದ್ಯಾಟವು ಬರುವ

ವುದು. ಶುರುವಿನ ಆಟವು ಕೆನರಾ

ಸೆಂಟ ಎಲ್ಲೋಸಿಯಸ್ ಕೊಲೇಜಿನ ಜೂನಿ

ತಾ. ೨೯ರಲ್ಲಿ ರುಜಾರಿಯೋ ಶಾಲೆಯು ಜೂ

ಶಾಲೆಯ ಜೂನಿಯರಿಗೂ ನಡಿಯುವುದು. ಮತ್ತು

ಜೂನಿಯರ ಆಟ ಜರಗುವುದು. ಒಕ್ಟೋಬರ ತಾ. ೭ರಲ್ಲಿ

ಸಿಯಸ್ ಕೊಲೇಜಿನ ಮತ್ತು ಗವರ್ನಮೆಂಟ ಕೊಲೇಜಿನ ಸೀ

ಆಟವು ಪ್ರಾರಂಭವಾಗುವುದು. ಕೊರನೇಶನ್ ಪದ್ಯಾಂಟವು ಒಕ್ಟೋಬರ ತಾ. ೧೬, ೧೯, ೨೪ ಮತ್ತು ೩೦ರಲ್ಲಿ ನಡಿಯುವುದು. ಶುರುವಿಗೆ ತಾ. ೧೬ರಲ್ಲಿ ಹಿಂದೂ ಟೀಮಿಗೂ ಎಕ್ಸಲ್ಸಿಯರ್ ಟೀಮಿಗೂ, ಅನಂತರ ತಾ. ೧೯ರಲ್ಲಿ ಮಂಗಳೂರ ಕ್ರಿಕೆಟ್ ಟೀಮಿಗೂ ಕೊಸ್ಮೋಪೊಲಿಟನ್ ಟೀಮಿಗೂ ತಾ. ೨೪ರಲ್ಲಿ ಮೇಲಿನ ಎರಡು ಆಟಗಳಲ್ಲಿ ಗೆದ್ದವರೊಳಗೂ ನಡಿಯುವುದು. ಕೊನೆಗೆ ತಾ. ೩೦ರಲ್ಲಿ ಎರಡು ಕೊಲೇಜುಗಳಲ್ಲಿ ಯಾವದು ಗೆಲ್ಲುವುದೋ ಆ ಕೊಲೇಜಿಗೂ ತಾ. ೨೪ರಲ್ಲಿ ನಡಿಯುವ ಮೇಚಿನಲ್ಲಿ ಗೆಲ್ಲುವ ಟೀಮಿಗೂ ಮೇಚು ನಡಿಯುವುದು. ಜೂನಿಯರ್ ಜಿಮ್‌ನಾಸ್ಟಿಕ್ಸ್ ಆಟವು ನವಂಬರ ತಾ. ೧೬ರಲ್ಲೂ ಸೀನಿಯರ್ ಆಟವು ನವಂಬರ ೧೭ರಲ್ಲೂ ಆಗುವುದು. ಎಥ್‌ಲೇಟಿಕ್ಸ್ ಸ್ಪೋರ್ಟ್ಸ್ ನವಂಬರ ತಾ. ೨೩ ಮತ್ತು ೨೪ರಲ್ಲೂ ಜರಗುವುದು.

ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ ಎಸೋಸಿಯೇಶನಿನ ವರುಷಾವಧಿ ಮಹಾ ಸಭೆಯು ನಾಳೆ ಸಾಯಂಕಾಲ ೪ ಗಂಟೆಗೆ ಕಲೆಕ್ಟರರ ಆಫೀಸಿನಲ್ಲಿ ಸೇರುವುದು.

ಮಂಗಳೂರು ಮುನ್ಸಿಪಾಲಿಟಿಗೆ ಗೋಳಿಕಟ್ಟೆ ವಾರ್ಡಿನಿಂದ ಮೂರು ಮಂದಿ ಮೆಂಬರರ ಚುನಾವಣೆಯಾಗುವುದು. ಈ ವಾರ್ಡಿಗೆ ಮ. ರಾ. ಕಾರ್ನಾಡ ಸದಾಶಿವರಾವ್, ಮಿ| ಮಹಮ್ಮದ್ ಪುತ್ತೂರು ಸಾಹೇಬ್, ರಾ. ಬಿ. ವಿಠಲರಾವ್ ಮತ್ತು ಮಿ| ಯಂ. ಮಹಮ್ಮದ್ ಇವರು ಉಮೇದ್ವಾರರಾಗಿರುವರು. ಬಾಕಿ ನಾಲ್ಕು ವಾರ್ಡುಗಳಿಗೆ ಪ್ರತಿಯೊಂದು ವಾರ್ಡಿನಿಂದ ಒಬ್ಬರು ಮೆಂಬರರಂತೆ ಚುನಾವಣೆ ಯಾಗತಕ್ಕದ್ದಿದೆ. ಮಿ| ಬಿ. ಯಂ. ಡಿ. ಸೋಜರು ಜಪ್ಪು ವಾರ್ಡಿಗೂ, ರಾ. ಮಹೇಲ ಅಣ್ಣಪ್ಪ ನಾಯ್ಕರು ಮಾರ್ಕೆಟು ವಾರ್ಡಿಗೂ, ಮಿ| ಇಮಾಮುದ್ದಿನ ಸಾಹೇಬರು ಕೊಡಿಯಾಲಬೈಲು ವೆಸ್ಟ ವಾರ್ಡಿಗೂ ಮಿ| ಬಿ. ಕುಲಾಸೋ ಮತ್ತು ಮಿ| ಪಿ. ಡಿ. ಸೋಜ ಇವರು ಕೋರ್ಟುವಾರ್ಡಿಗೂ ಉಮೇದ್ವಾರರಾಗಿದ್ದಾರೆ.

ಲಂಡನಿನಲ್ಲಿ ಬರುವ ೧೯೨೪ನೆಯ ಇಸವಿಯಲ್ಲಿ ಜರಗುವ ಬ್ರಿಟಿಷ್ ಎಂಪಾಯರ್ ಎಗ್ಜಿಬಿಶನಿಗೆ ಹಾಗು ೧೯೨೩ರಲ್ಲಿ ಮದರಾಸಿನಲ್ಲಿ ಜರಗುವ ಪ್ರಾಂತಿಕ ಪ್ರದರ್ಶನಕ್ಕೆ ಸಹಾಯಮಾಡುವುದಕ್ಕಾಗಿ ಒಂದು ಡಿಸ್ಟ್ರಿಕ್ಟ ಕಮ್ಮಿಟಿಯನ್ನು ಸ್ಥಾಪಿಸಲು ಬರುವ ತಾ. ೨೫ರಲ್ಲಿ ಕಲೆಕ್ಟರರ ಆಫೀಸಿನಲ್ಲಿ ಒಂದು ಸಭೆಕೂಡುವುದು.

ಇಲ್ಲಿಯ ಗಣಪತಿ ಶಾಲೆಯ ದಸರಾ ಮಹೋತ್ಸವವು ಎಂದಿನಂತೆಯೇ ಇದೇ ತಿಂಗಳ ತಾ. ೨೭ರಿಂದ ೩೦ರ ವರೆಗೆ ನಡಿಯುವುದು. ತಾರೀಕು ೨೮ನೇ ಗುರುವಾರ ಹಗಲು ೯ ಗಂಟೆಗೆ ಶಾಲೆಯ ಹಳೇ ವಿದ್ಯಾರ್ಥಿಗಳೆಲ್ಲರಿಗೂ ೨೯ನೇ ಶುಕ್ರವಾರ ಸಂಜೆ ೩-೩೦ಕ್ಕೆ ಮಹಿಳೆಯರಿಗೂ ಮರುದಿವಸ ೫-೧೫ಕ್ಕೆ ಮಹನೀಯರಿಗೂ ಶಾಲಾವರ್ಧಂತಿ ಉತ್ಸವದ ಸಲುವಾಗಿ ಆಮಂತ್ರಣವಿದೆ.

ತಾ. ೧೬—೯—'೨೨ರ ಮುಷ್ಟಿ ಫಂಡಿನ ಜಮಾ ೧೧೬ ಸೇರು ಅಕ್ಕಿ ರೂ. ೪೩-೧೩-೬ ಲ ಪುಸ್ತಕಗಳು. ಇತರ ವಂತಿಗೆ. ರಾ. ಹ. ನರಸಿಂಗರಾವ್ ರೂ. ೫, ಒಬ್ಬ ರಾಷ್ಟ್ರಭಕ್ತರು ರೂ. ೫, ರಾ. ಮ. ಅನಂತಕೃಷ್ಣರಾಯರ ತಿಂಗಳು ವಾರು ವಂತಿಗೆ ರೂ. ೭. ತಾ. ೨೧ರ ನಂತರ ಕೆಳಗಿನ ಗೃಹಸ್ಥರು ಅವರ ಹೆಸರುಗಳ ಎದುರು ಕಾಣಿಸಿದ ಹಳ್ಳಿಗಳಿಗೆ ಕಮಿಟಿಗಳನ್ನು ಪುನರುಜ್ಜೀವನಮಾಡುವ ಬಗ್ಗೆ ಹೋಗುವರು. ಸಂಬಂಧಪಟ್ಟ ಕಾರ್ಯದರ್ಶಿಯವರು ಸ್ವಯಂಸೇವಕರಿಗೆ ಸಹಾಯಮಾಡಬೇಕಾಗಿ ವಿನಂತಿ. ರಾ. ಅರೆಬೈಲು ಭೋಜರಾವ್ ಮುಲ್ಕಿ, ಸುರತ್ಕಲ್, ಬಾಳ, ಕಳವಾರ, ಕುತ್ತೆತ್ತೂರು ರಾ. ಉಮೇಶರಾಯರೂ, ನಾರಾಯಣ ನಾಯ್ಕರೂ, ಬಂಟ್ವಾಳ, ಪಾಣೆಮಂಗಳೂರು, ಕಳ್ಳಿಗೆ, ಕರ್ಪಾಡಿ, ಸಿದ್ಧಕಟ್ಟೆ, ಪುಂಜಾಲಕಟ್ಟೆ, ಕುರ್ನಾಡು; ರಾ. ಪಾ. ಕೃಷ್ಣರಾಯರೂ, ಶ್ರೀನಿವಾಸನವರೂ ಪಣಂಬೂರು ಕುಳಾಯಿ, ಕೆಂಜಾರು, ಕಟೀಲು, ಐಕಳ, ತೋಕೂರು; ರಾ. ಕು. ರಾಮರಾಯರೂ, ರಾ. ಗಂಗಯ್ಯನವರೂ ಗುರುಪುರ, ಗುರುಕಂಬಳ, ಪೊಳಲಿ, ಕುಡುಪು, ಪದವು, ವಾಮಂಜೂರು; ರಾ. ರಾಮಣ್ಣ ಶೆಟ್ರು ಮತ್ತು ಕೆ. ಭೋಜರಾಯರು ಅಡ್ಯಾರು, ಕಂಕನಾಡಿ, ಮರೋಳಿ,

ಸತ್ಯಾಗ್ರಹಯುದ್ಧ.

ಮದ್ರಾಸ ... ರು—

...ಮಾರ ಶ್ರೀನಿವಾಸ... ...ವರು ತಮ್ಮ ಪವಿತ್ರಸ್ಥಾನವಾದ ಗುರುಕಾಬಾಗಿನ ...ಯತಿಯ ಟಿಲಗ ...ದ್ಧವನ್ನು ಸ್ವಲ್ಪವೂ ಎದೆಗುಂದದೆ ಮುಂದರಿಸುವುದ ...ರಕುವ ಚಿಹ್ನೆಗಳು ಕಾಣುತ್ತಿವೆ. ಹಕೀಮ್ ಅಜಮಲ್ ...ರು— ...ಲೋಚನ ಮಾಲವೀಯ, ದ. ಬ. ಅಂಡ್ರ್ಯೂಜ ಮೊದಲಾದ ...ಮಾನ ಸಂಗ್ರಕರಾಟ ನಡಿಯುವ ಸ್ಥಳಕ್ಕೆ ಹೋಗಿ ಪ್ರತ್ಯಕ್ಷ ಅನುಭವವನ್ನು ವಿದೇಶ ವರ್ತಮಾ... ಗುರುಕಾಬಾಗಿನಲ್ಲಿ ಶಾಂತಿಯು ನೆಲೆಗೊಳ್ಳಬೇಕಾದರೆ ದಕ್ಷಿಣ ಕನ್ನಡ, ...ಕಾಲಿಗಳ ಧರ್ಮಕಾರ್ಯದಲ್ಲಿ ಕೈಹಾಕುವುದನ್ನು ಬಿಟ್ಟು ಮದರಾಸ ನ್ಯಾ... ...ವ ದಂಡನ್ನು ತೆಗೆದುಬಿಡಬೇಕು ಎಂದು ಹಕೀಮ ಅಜ... ಅಕಾಲಿಗಳ ... ಅಭಿಪ್ರಾಯಪಟ್ಟಿದ್ದಾರೆ. ಇತರ ಸಮಾಜದವರು ಅಕಾಲಿ ಜನ ಆರ್ಯರ ...ಕರಾಗಲು ಸಿದ್ಧರಿರುವರಾದರೂ ಇವರು ತತ್ಕಾಲಕ್ಕೆ ಯಾರ ಸಹಾಯ ...ಯಸುವುದಿಲ್ಲ. ಹೋರಾಟದಲ್ಲಿ ಗಾಯಹೊಂದಿದವರು ಸರಕಾರಿ ಔಷ ಸಹಕಾ...ಳಿಗೆ ಹೋಗಲು ಒಡಂಬಡುವುದಿಲ್ಲವೆಂದು ಸರಕಾರದವರು ಪ್ರಕಟಿಸುತ್ತಿ... ಗಾಯಹೊಂದಿದವರ ಶೈತೋಪಚಾರವನ್ನು ನೋಡುವ ಕಾರ್ಯವನ್ನು ...ವಿ ಮಹಿಳೆಯರು ಬಹಳ ಚಲೋರೀತಿಯಿಂದ ತಮ್ಮ ಔಷಧಾಲಯಗಳಲ್ಲಿ ...ಸುತ್ತಿರುವರಂತೆ. ಸೇವಾಸಮಿತಿಯ ಸ್ಕಾಟರು ಗಾಯ ಹೊಂದಿದವರ ...ರೈಕೆಯನ್ನು ಬಹಳ ಉತ್ತಮ ರೀತಿಯಲ್ಲಿ ನೋಡುತ್ತಿರುವರು. ಅನೇಕ ಡಾಕ್ಟ ರರೂ ಸಹಾಯ ಮಾಡುತ್ತಿರುವರೆಂದು ತಿಳಿದುಬರುತ್ತದೆ. ಸರಕಾರವು ಅಕಾಲಿಗಳ ಸತ್ಯಾಗ್ರಹವನ್ನು ಕೊನೆಗಾಣಿಸಲು ಅನೇಕರನ್ನು ಹಿಡಿಸಿತು. ಗಾಯ ಹೊಂದಿದವರ ಆರೈಕೆಯನ್ನು ನೋಡಲು ಹೋದವರಿಗೆ ಕೂಡ ಜಕಂ ಪಡಿಸಿದೆಯಂತೆ. ಅಹಿಂಸಾತ್ಮಕ ಸತ್ಯಾಗ್ರಹವನ್ನು ಹಿಂಸೆಯಿಂದ ಹತೋಟಿಗೆ ತರಬೇಕೆಂದು ಅಧಿಕಾರಿಗಳು ಯೋಚಿಸಿದರೂ ಸತ್ಯಾಗ್ರಹವು ವಿಜಯವನ್ನು ಹೊಂದುವ ಚಿಹ್ನೆಗಳು ತೋರುತ್ತಿವೆ. ಸರಕಾರದ ಮೇಲಿನ ಯತ್ನವು ಸಾಗದ್ದರಿಂದ ಗುರುಕಾಬಾಗಕ್ಕೆ ಬರುವ ಅಕಾಲಿ ತಂಡದವರನ್ನು ದಾರಿಯಲ್ಲಿ ತಡಿಸಿ ಹಿಡಿಸಬಾರದೆಂದು ಪ್ರಥಮದಲ್ಲಿ ಸರಕಾರವು ಪ್ರಕಟಿಸಿತು. ಅನಂತರ ಬಂಗಾಳದ ಗವರ್ನರರು ಸತ್ಯಾಗ್ರಹ ನಡಿಯುವ ಸ್ಥಳವನ್ನು ಸಂದರ್ಶಿಸಿಹೋದ ನಂತರ ಈಗ ಸತ್ಯಾಗ್ರಹಿಗಳಾದ ಅಕಾಲಿಗಳನ್ನು ಹೊಡೆದು ಹಿಡಿಸುವುದನ್ನು ನಿಲ್ಲಿಸಿದೆ. ಮತ್ತು ಅಕಾಲಿಗಳನ್ನು ಕೈದು ಮಾಡುವ ಕಾರ್ಯವು ನಡಿಯುತ್ತಿದೆ. ಈ ಕಾರ್ಯವು ಎಷ್ಟರ ವರೆಗೆ ನಡೆದು ಮುಂದಿನ ಪರಿಣಾಮವು ಹೇಗಾಗುವುದೆಂದು ಮುಂದಕ್ಕೆ ತಿಳಿಯಬೇಕಾಗಿದೆ.

ಕಳೆದ ತಾರೀಕು ೧೭ರಲ್ಲಿ ಅಮೃತಸರದಲ್ಲಿ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಅಧಿವೇಶನವು ಶ್ರೀಯುತ ಸಿ. ಆರ್. ದಾಸರ ಅಧ್ಯಕ್ಷತೆಯಲ್ಲಿ ಸೇರಿತು. ಶಿರೋಮಣಿ ಗುರುದ್ವಾರ ಕಮ್ಮಿಟಿಯವರು ಈ ಮಿಟಿಂಗಿನಲ್ಲಿ ಹಾಜರಿದ್ದರು. ಗುರುಕಾಬಾಗದಲ್ಲಿ ನಡೆದ ವಿದ್ಯಮಾನಗಳನ್ನು ಕುರಿತು ಮಾಲವೀಯರು ಕಮ್ಮಿಟಿಯ ಮುಂದೆ ಹೇಳಿದರು. ಬಳಿಕ ಕೆಳಗಿನ ಎರಡು ಮುಖ್ಯ ಠರಾವುಗಳು ಪಾಸಾದವು.

೧. ಅಹಿಂಸಾತ್ಮಕ ಸತ್ಯಾಗ್ರಹವನ್ನು ಅವಲಂಬಿಸಿ ಹೋರಾಡುತ್ತಿರುವ ಅಕಾಲಿಗಳನ್ನು ಸೋಲಿಸಲು ಪೋಲೀಸರು ನಡಿಸಿದ ಅತ್ಯಾಚಾರವನ್ನು ಈ ಕಮ್ಮಿಟಿಯು ನಿಷೇಧಿಸುತ್ತದೆ. ಮತ್ತು ಎಲ್ಲ ಪೀಡನೆಗಳನ್ನೂ ಸಮಾಧಾನದಿಂದ ಸಹಿಸಿದ ಅಕಾಲಿಗಳನ್ನು ಅಭಿನಂದಿಸುತ್ತದೆ.

೨. ಈ ಸತ್ಯಾಗ್ರಹದ ಎಲ್ಲ ವಿಷಯಗಳನ್ನು ಚೌಕಶಿ ಮಾಡಿ ಒಂದು ವರದಿಯನ್ನು ತಯಾರಿಸಿ ಈ ತಿಂಗಳ ಅಂತ್ಯದೊಳಗೆ ಓಲ್-ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮುಂದಿಡಲು ಕೆಳಗೆ ಹೆಸರು ಕಾಣಿಸಿದ ಗ್ರಹಸ್ಥರ ಒಂದು ಸಬ್ ಕಮ್ಮಿಟಿಯನ್ನು ನೇಮಿಸುತ್ತದೆ. ಮ. ರಾ. ಗಳಾದ ಯಸ್. ಶ್ರೀನಿವಾಸ ಅಯ್ಯಂಗಾರ ಅಧ್ಯಕ್ಷರು, ಮುಂಬಯಿಯ ಬ್ಯಾರಿಸ್ಟರ್ ಆರ್. ಜಾಯಕರ್, ದಿಲ್ಲಿಯ ಮೌಲಾನಾ ಮಹಮ್ಮದ್ ಅಲಿ, ಬಂಗಾಳದ ಜೆ. ಯಂ. ಸೇನ್‌ಗುಪ್ತ, ಮತ್ತು ಮಿ| ಸ್ಟೋಕ್ಸ್. ಪ್ರೊಫೆಸರ್ ರುಂಚಿರಾಮ್ ಕಾರ್ಯದರ್ಶಿಯರು. ಶ್ರೀಯುತ ಸಿ. ಆರ್. ದಾಸರು ಕುಟುಂಬಸಹಿತ ಅಮೃತಸರದಿಂದ ಕಾಶಮೀರಕ್ಕೆ ತೆರಳಿರುವರು.

ಮದರಾಸ ನ್ಯಾಯವಿಧಾಯಕ ಸಭೆಯ ಅಧಿವೇಶನ.

ಮದರಾಸ ನ್ಯಾಯವಿಧಾಯಕ ಸಭೆಯ ಅಧಿವೇಶನವು ಕಳೆದ ತಾರೀಕು ೧೨ರಲ್ಲಿ ಪ್ರಾರಂಭವಾಯಿತು. ಈ ಅಧಿವೇಶನದಲ್ಲಿ ಚರ್ಚೆಗೆ ಬಂದ ಮತ್ತು ಪಾಸಾದ ಕೆಲವು ಠರಾವುಗಳು ಕೆಳಗೆ ಕೊಟ್ಟಿವೆ.

ಸೆಕೆಂಡ್ರಿ ಸ್ಕೂಲ್ ಲೀವಿಂಗ ಸರ್ಟಿಫಿಕೇಟ್ ಬೋರ್ಡಿನಲ್ಲಿ ಕೆಥೋಲಿಕ ಸಮಾಜದ ಒಬ್ಬನೇ ಒಬ್ಬ ಮೆಂಬರನನ್ನು ಕೂಡ ಯಾಕೆ ಚುನಾಯಿಸಲಿಲ್ಲವೆಂದು ಮಿ| ರತ್ನಸ್ವಾಮಿಯವರು ವಿದ್ಯಾ ಇಲಾಖೆಯ ಮಂತ್ರಿಗಳನ್ನು ಕೇಳಿದರು. ಜಾತಿವಾರ ಕ್ರಮವನ್ನು ಅನುಸರಿಸಿ ಬೋರ್ಡು ಸ್ಥಾಪನೆಯಾದದ್ದಲ್ಲ ವೆಂದು ವಿದ್ಯಾ ಇಲಾಖೆಯ ಮಂತ್ರಿಗಳ ಉತ್ತರವು ದೊರಕಿತು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಸರಕಾರಿ ಕೆಲಸದಾತನಾದ ಶ್ರೀಯುತ ಕೀರ್ತಿಶೇಷ [illegible] ಆಚಾರ್ಯರನ್ನು ಬ್ರಾಂತಿಕ ಕಮಿಟಿಯ ಕಾರ್ಯಕಾರಿ ಮಂಡಳಿಯವರು ಸಭ್ಯತ್ವ ಕಾರ್ಯದಿಂದ ನಿವೃತ್ತರನ್ನಾಗಿ (Suspended) ಮಾಡಿದ್ದಾರೆಂದೂ ಅವರು ತಿ. ಸ್ವ. ಸಿಥಿಗೆ ಹಣ [illegible] ಜಾಗ್ರತೆ ತೆಗೆದುಕೊಳ್ಳಬೇಕೆಂದೂ ಸದರಿ ಆಚಾರ್ಯರಿಗೆ ಈಗ ಪ್ರಾಂತಿಕ ಕಮಿಟಿಯವರು ಕೈಕೊಂಡಿರುವ ಯಾವ ಚಳವಳಿಯಲ್ಲಿಯೂ ಯಾವ ಸಂಬಂಧವಿಲ್ಲದಿರುವದೆಂದು ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಕಮಿಟಿಗಳೂ, ಅವರಿಗೆ ಯಾವ ಹಣವನ್ನು ಕೊಡಬಾರದಾಗಿ ಆ ಕಮಿಟಿಗಳಿಗೆ ತಿಳಿಸಬೇಕೆಂದೂ ಈ ವಿಷಯವನ್ನು ಪತ್ರಗಳಲ್ಲಿ ಪ್ರಕಟಿಸಬೇಕೆಂದೂ ಗದಗಿನಿಂದ ಅಧ್ಯ. ಆ. ಕ. ಅಹಮದ್ [illegible] ಶ್ರೀಯುತ [illegible] ಬರೆದಿದ್ದಾರೆ.

ಉಡುಪಿ ಗೋವಿಂದರಾವ್,
ಅಧ್ಯಕ್ಷ, ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.

ತಾ. ೩೦-೯-೨೨ರಲ್ಲು ಉಡುಪಿ ರಥಬೀದಿಯಲ್ಲಿ ಶ್ರೀಯುತ ಪ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರಗಿದ ಮಹಾ ಜನರ ಸಭೆಯಲ್ಲಿ ಮಂಜೂರಾದ ಠರಾವುಗಳು.

೧. ಅಕಾಲಿ ಸತ್ಯಾಗ್ರಹ—ಧರ್ಮವಿಚಾರದಲ್ಲಿ ತಮ್ಮ ಹಕ್ಕನ್ನು ಸಿದ್ಧಿಸುವುದಕ್ಕಾಗಿ ಪ್ರಾಣದಾಶೆಯನ್ನು ಕೂಡ ಬಿಟ್ಟು ಅತ್ಯುತ್ತಮ ರೀತಿಯಲ್ಲಿ ಅಹಿಂಸಾತ್ಮಕ ಸತ್ಯಾಗ್ರಹವನ್ನು ಕೈಕೊಂಡು ಗುರುಕಾಬಾಗಿನಲ್ಲಿ ತಮ್ಮ ದೇವಸ್ಥಾನದೆಡೆಗೆ ಮುಂದೊತ್ತುತ್ತಾ ಪೋಲೀಸರ ಹೊಡೆತಗಳಿಗೆ ತುತ್ತಾದರೂ ಅಹಿಂಸಾತ್ಮಕ ಸತ್ಯಾಗ್ರಹವನ್ನು ಬಿಡದೆ ಇಡೀ ಪ್ರಪಂಚಕ್ಕೆ ಆತ್ಮ ಬಲದ ಮಹಿಮೆಯನ್ನು ತೋರಿಸಿಕೊಟ್ಟು ವಾದಂಥಾ [illegible] ಅಕಾಲಿಗಳ ಕಾರ್ಯಕ್ಕಾಗಿ ನಾವು ಅವರನ್ನು ಅಭಿನಂದಿಸುವುದಲ್ಲದೆ ತಮ್ಮ ಧರ್ಮ ಯುದ್ಧವನ್ನು ಇದೇ ರೀತಿಯಲ್ಲಿ ಇನ್ನು ಮುಂದೆಯೂ ಸಾಗಿಸಿ ಜಯಶಾಲಿಗಳಾಗುವರೆ ಪರಮಾತ್ಮನು ಅವರಿಗೆ ಸಾಮರ್ಥ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

೨. ತುರ್ಕಿಯ ವಿಜಯ—ಒಂದೊವರೆ ವರ್ಷದಿಂದ ಹಿಂದೂಸ್ಥಾನದಲ್ಲಿ ಮುಸಲ್ಮಾನರೂ ಹಿಂದುಗಳೂ ಐಕ್ಯಮತ್ಯದಿಂದ ಹೋರಾಡುತ್ತಲಿದ್ದ ಖಿಲಾಫತ್ ಚಾರದಲ್ಲಿ ಮುಸ್ತಾಫಾ ಕೆಮಲ್ ಪಾಷರು ಮುಸಲ್ಮಾನ್ ಧರ್ಮಪರಿಪಾಲನಾ ಕಾರ್ಯಕ್ಕಾಗಿ ಸೊಂಟಕಟ್ಟಿ ಸರ್ವವಿಧದಿಂದಲೂ ಸಾಹಸಪಟ್ಟು ಅಪಹರಿಸಲ್ಪಟ್ಟ ತಮ್ಮ ಪುಣ್ಯ ಸ್ಥಳಗಳನ್ನು ಕೈವಶಮಾಡಿಕೊಂಡು ಮುಸಲ್ಮಾನ್ ಧರ್ಮವನ್ನು ಪುನರುದ್ಧಾರ ಮಾಡಿದುದಕ್ಕಾಗಿ ಗಾಜಿ ಮುಸ್ತಾಫಾ ಕೆಮಲ್ ಪಾಷರನ್ನೂ ಅವರ ಅನುಯಾಯಿಗಳನ್ನೂ ನಾವು ಅಭಿನಂದಿಸಿ ಅವರು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವರೆ ಪರಮಾತ್ಮನು ಅವರಿಗೆ ಆತ್ಮಬಲವನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

೩. ಮೋತಿಲಾಲ ಘೋಷರು—ಹಿಂದುಸ್ಥಾನದ ಮಹಾ ಪುರುಷರಲ್ಲಿ ಅಗ್ರಗಣ್ಯರಾಗಿದ್ದು ತನ್ನ ಸರ್ವಸ್ವವನ್ನೂ ದೇಶದ ಮತ್ತು ಬಡಜನರ ಉದ್ಧಾರಕ್ಕಾಗಿ ಅರ್ಪಿಸಿ, ಬಂದ ಗಂಡಾಂತರಗಳನ್ನೆಲ್ಲಾ ಗಣಿಸದೆ ನಿರ್ದಾಕ್ಷಿಣ್ಯವಾಗಿ ಸರಕಾರದ ಕುಂದುಕೊರತೆಗಳನ್ನು ತನ್ನ ಅಮೃತ ಬಜಾರ ಪತ್ರಿಕೆಯಲ್ಲಿ ತೋರಿಸಿಕೊಟ್ಟು ಪತ್ರಿಕಾಕರ್ತರಲ್ಲಿ ಉಚ್ಚಸ್ಥಾನವನ್ನು ಪಡೆದು ಲೋಕಪ್ರಸಿದ್ಧರಾಗಿದ್ದು ಮೊನ್ನೆ ತಾನೆ ತನ್ನ ೭೭ನೆಯ ವಯಸ್ಸಿನಲ್ಲಿ ದಿವಂಗತರಾದ ದೇಶಭಕ್ತ ಶ್ರೀಯುತ ಮೋತಿಲಾಲ ಘೋಷರ ಆತ್ಮಕ್ಕೆ ಶಾಂತಿಯಾಗಲಿ.

೪. ಕರ್ನಾಟಕ ಪ್ರಾ. ಕಾ. ಕ. ಉಪಾಧ್ಯಕ್ಷರಾಗಿದ್ದು ದೇಶಸೇವೆಗಾಗಿ ತನ್ನ ವಕೀಲಿಗೆ ತಿಲಾಂಜಲಿಯನ್ನಿತ್ತು ತನುಮನಧನಗಳಿಂದ ಕೆಲಸಮಾಡಿ ಕರ್ನಾಟಕದಲ್ಲಿ ರಾಷ್ಟ್ರ ಜಾಗ್ರತೆಯನ್ನು ಮಾಡಿದ್ದಕ್ಕೆ ಪಾರಿತೋಷಕವಾಗಿ ಸರಕಾರದಿಂದ ಒಂದು ವರ್ಷದ ಕಠಿಣ ಸಜೆಯನ್ನು ಪಡೆದ ಶ್ರೀಯುತ ಬಿಜಾಪುರ ಶ್ರೀನಿವಾಸರಾವ್ ಕೌಜಲಗಿಯವರನ್ನು ನಾವು ಅಭಿನಂದಿಸುತ್ತೇವೆ.

ದೇಶಭಕ್ತ ಶ್ರೀನಿವಾಸರಾವ ಕೌಜಲಗಿಯವರ ಮೇಲಿನ ಖಟ್ಲೆ.

ದೇಶಭಕ್ತ ಶ್ರೀನಿವಾಸರಾಯರು ಕರ್ನಾಟಕ ಹಾಗು ಮರಾಠ ಪ್ರಾಂತ್ಯದಲ್ಲಿ ತುಂಬಾ ಪರಿಚಿತರಾಗಿರುವರು. ಇವರು ಲೋಕಮಾನ್ಯರ ಶಿಷ್ಯರಲ್ಲೊಬ್ಬರಾಗಿರುವರು. ಬೆಳಗಾಂ, ಪುಣೆ, ಮತ್ತು ರತ್ನಾಗಿರಿ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷಸ್ಥಾನದ ಮಾನವು ಇವರಿಗೆ ಕೊಡಲ್ಪಟ್ಟಿತ್ತು. ಇದರಿಂದ ಮಹಾರಾಷ್ಟ್ರದಲ್ಲಿ ಇವರ ವರ್ಚಸ್ಸು ಎಷ್ಟಿರುವುದೆಂದು ವ್ಯಕ್ತವಾಗುವುದು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕೆಲಕಾಲ ಅಧ್ಯಕ್ಷರೂ ಸಧ್ಯ ಉಪಾಧ್ಯಕ್ಷರೂ ಆಗಿದ್ದರು. ಕಳೆದ 1921 ನೇ ಇಸವಿಯಿಂದ ಇವರು ವಕೀಲ ವೃತ್ತಿಯನ್ನು ನಿಲ್ಲಿಸಿ ಅಸಹಕಾರ ಚಳವಳವನ್ನು ಕರ್ನಾಟಕದಲ್ಲಿ ಪ್ರಚಾರಮಾಡುತ್ತಿದ್ದರು. ಇವರು ಧಾರವಾಡದಲ್ಲಿ ಬ್ರಾಹ್ಮಣ ಅಬ್ರಾಹ್ಮಣರೊಳಗೆ ಐಕ್ಯವನ್ನು ಉಂಟುಮಾಡಲು ಬಹಳವಾಗಿ ಪ್ರಯತ್ನಿಸಿರುವರು. ಮತ್ತು ಅವರ ಈ ಪ್ರಯತ್ನಗಳು ಕೆಲವು ಮಟ್ಟಿಗೆ ಕೈಗೂಡಿವೆಯಾಗಿ ತಿಳಿಯುತ್ತೇವೆ. ರಾಜದ್ರೋಹಾತ್ಮಕ ಭಾಷಣವನ್ನು ಮಾಡಿದರೆಂದು ಅವರ ಮೇಲೆ ಸರಕಾರದವರು ಹೂಡಿದ್ದ ಖಟ್ಲೆಯ ತನಿಖೆಯು ಕಳೆದ ತಾ. ೨೧ನೇ ಅಮಾವಾಸ್ಯೆ ಸೂರ್ಯಗ್ರಹಣ ದಿನ ಪ್ರಾರಂಭವಾಯಿತು. ಕಲೆಕ್ಟರ ಸಾಹೇಬರ ಬಂಗ್ಲೆಯಲ್ಲಿ ವಿಚಾರಣೆಯು ನಡೆಯಿತು. ಬಂಗ್ಲೆಯ ಕಂಪೌಂಡಿನಲ್ಲಿ ಸುಮಾರು ೩-೪ ಸಾವಿರ ಜನರು ನೆರೆದಿದ್ದರು. ಅಂದು ೧೦ ಸಾಕ್ಷಿಗಳ ವಿಚಾರಣೆಯಾಗಿ ಖಟ್ಲೆಯನ್ನು ತಾ. ೨೫ಕ್ಕೆ ಮುಂದರಿಸಿ ಇಡಲಾಯಿತು. ಮತ್ತು ತಾ. ೨೫ರಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡಿನ ಮೇರೆಗೆ ಇವರಿಗೆ ಒಂದು ವರುಷದ ಶಿಕ್ಷೆಯು ವಿಧಿಸಲಾಗಿದೆ. ಇವರನ್ನು ಪುಣೆಯ ಮಾರ್ಗವಾಗಿ ಎರವಾಡಾ ಜೈಲಿಗೆ ತೆಗೆದುಕೊಂಡು ಹೋಗಿರುವರು.

ಧಾರವಾಡದಲ್ಲಿ ತಾರಾಬಾಯಿಯವರ ಭಾಷಣ.

ಇವರು ಬ್ರಹ್ಮಚರ್ಯ ಮತ್ತು ಆರೋಗ್ಯಗಳ ಬಗ್ಗೆ ಬಹಳವಾಗಿ ಹೇಳಿದರು. ತನ್ನ ತಂದೆಯು ಚಿಕ್ಕಂದಿನಲ್ಲಿಯೇ ತೀರಿಕೊಂಡರು. ತಾಯಿಯು ತನ್ನ ೧೩ನೇ ವರ್ಷಕ್ಕೆ ಮಡಿದಳು. ತನಗೆ ಚಿಕ್ಕಂದಿನಿಂದಲೇ ವ್ಯಾಯಾಮ ಮಾಡುವುದು ಬಹಳವಾಗಿ ಸೇರುತ್ತಿತ್ತು. ೨೦ನೇಯ ವ್ಯಾಯಾಮ ಕಾಲೇಯಲ್ಲಿ ನಾನು ಕಾಲಿಟ್ಟು ಮಾಡಿದೆನು. ಮೊನ್ನೆವರೆಗೆ ಬ್ರಹ್ಮಚರ್ಯದಿಂದಲೇ ಇದ್ದೆನು. ನಿಮ್ಮನ್ನೆಲ್ಲ ಯಾಗಿರುವುದು ಅಶ್ವತ್ಥ. ನನಗೆ ಒಂದೂ ವ್ಯಸನವಿಲ್ಲ. ಈಗ ಮದುವೆಯಾಗಿದೆ. ನಾನು ನಾಳಿನ ಚಿಂತೆಯನ್ನೇ ಮಾಡುವುದಿಲ್ಲ. ಆರಂಭಕ್ಕೆ ಸರ್ಕಾರು ತೆಗೆದಾಗ ಉತ್ಸಾಹವಿದ್ದಿಲ್ಲ. ಈಗ ತಿಂಗಳಿಗೆ ೧೩ ಸಾವಿರ ವೆಚ್ಚವಿದೆ. ದೇವರಮೇಲಿನ ಅತ್ಯಂತ ವಿಶ್ವಾಸದಿಂದ ಕೆಲಸ ನಡೆಸಿದ್ದೇನೆ. ಮನುಷ್ಯನು ಸಾಕೆ ಯಾದಿಯಿಂದ ಒಚಿತೆಂಕೆಯಿಂದ ಬಳಲದೆ ದೇವರವರೆಗೆ ನಿಶ್ಚಯದಿಂದ ಸತ್ಯಮಾರ್ಗವನ್ನು ಅನುಸರಿಸಬೇಕು. ಮುಸಲ್ಮಾನ ಧರ್ಮದಲ್ಲಿ ಸರಾಯಿ ಕುಡಿಯಬಾರದೆಂದು ಕಟ್ಟಪ್ಪಣೆಯಿದೆ. ನನ್ನ ಸರ್ಕಸಿನಲ್ಲಿ ಚಹಾ ಕುಡಿಯುವುದಿಲ್ಲ. ಜನರು ವ್ಯಸನಗಳಿಗೆ ಒಳಗಾಗಿ ರೋಗಗಳ ಮನೆಗಳಾಗುತ್ತಾರೆ. ಆದರೆ ಬ್ರಹ್ಮಚರ್ಯ ವ್ಯಾಯಾಮಗಳಿಂದ ನಿರೋಗಿಗಳಾಗಿ ಸುಖದಿಂದ ಜೀವಿಸಬೇಕು. ಪರಮೇಶ್ವರನಲ್ಲಿ ಪೂರ್ಣ ವಿಶ್ವಾಸವಿಡಬೇಕು. (ಕರ್ನಾಟಕ ಬಂಧು)

WANTED.

An expert spinning & weaving master for a national school on Rs. 35-45 P. M. Apply at once with the copies of the testimonials to:—

Kanjarpane Gopalkrishnaya,
(Son of Venkatramanaiah)
Land Holder, Sullia Post, S. Kanara.

ವಿದೇಶ ವರ್ತಮಾನ

ಪೋಪರಿಗೆ ವಿಮಾನ:—ಪೋಪಸಾಹೇಬರಿಗೆ ಆಕಾಶಮಾರ್ಗವಾಗಿ ಸಂಚಾರಮಾಡುವುದಕ್ಕೆ ಅನುಕೂಲವಾಗುವಂತೆ ಒಂದು ವಿಮಾನವನ್ನು ಕೊಡಬೇಕಾಗಿ ಮಿಲಾನಿನಲ್ಲಿ ಕೆಲವರು ಪ್ರಯತ್ನ ಪಡುತ್ತಿದ್ದಾರಂತೆ.

ಒಡೆಯದ ಗಾಜು:—ಬೊಹಿಮಿಯಾದೇಶದ ಶಾಸ್ತ್ರಜ್ಞನೊಬ್ಬನು ಕಳೆದ ಹದಿಮೂರು ವರ್ಷಗಳಿಂದಲೂ ಪರಿಶೋಧನೆಮಾಡಿ ಏನುಮಾಡಿದರೂ ಹೇಗೆ ಉಪಯೋಗಿಸಿದರೂ ಒಡೆಯದ ಗಾಜನ್ನು ಕಂಡುಹಿಡಿದಿರುತ್ತಾನೆ. ಈ ಗಾಜಿನ ತಟ್ಟೆ ಮತ್ತು ಪಾತ್ರೆಗಳನ್ನು ಸುಮಾರು ಹನ್ನೆರಡು ಅಡಿ ಎತ್ತರದಿಂದ ಭೂಮಿಗೆ ಹಾಕಿದರೂ ಒಡೆಯಲಿಲ್ಲ. ಒಂದು ತೆಳುವಾದ ಗಾಜಿನ ತಟ್ಟೆಯಲ್ಲಿ ಮಾಂಸವು ಸುಡಲ್ಪಟ್ಟಿತು. ಮತ್ತೊಂದು ಪಾತ್ರೆಯಲ್ಲಿ ಟಿನ್‌ಲೋಹವು ಕರಗಿಸಲ್ಪಟ್ಟಿತು. ಇಷ್ಟು ಅಗಾಧವಾದ ಕಾವನ್ನು ತಡೆಯುವುದೊಂದೇ ಅಲ್ಲದೆ, ಆ ಕಾವಿನ ಪಾತ್ರೆಯನ್ನು ಕೂಡಲೆ ತಣ್ಣೀರಿನಲ್ಲಿ ಅದ್ದಿದರೂ ಕೂಡ ಆ ಪಾತ್ರೆಯು ಒಡೆಯುವ ಹಾಗಿಲ್ಲ. ಆ ಗಾಜಿನ ಪಾತ್ರೆಯನ್ನು ಬೆಂಕಿಯಲ್ಲಿಟ್ಟು ಕಾಯಿಸಿ, ಅದರಲ್ಲಿ ಮಂಜಿನ ತುಂಡುಗಳನ್ನು ಹಾಕಿದರೆ ಅವೇ ಭಸ್ಮವಾಗಿ ಹೋಗುವುದಲ್ಲದೆ ಪಾತ್ರೆಗೆ ಏನೂ ಅಪಾಯವಾಗಲಾರದು. ಸಾಮಾನ್ಯ ಗಾಜನ್ನು ಕತ್ತರಿಸಲು ಉಪಯೋಗಿಸುವ ಕಲ್ಲುಗಳಿಂದಾಗಲಿ ಇಲ್ಲವೆ ಅತ್ಯುತ್ತಮವಾದ ವಜ್ರದಿಂದಾಗಲಿ ಆ ಗಾಜನ್ನು ಕತ್ತರಿಸುವುದು ಸುಲಭಸಾಧ್ಯವಲ್ಲ.

ಒಳದೇಶ ವರ್ತಮಾನ.

ಶ್ರೀಯುತ ಸಿ. ಆರ್. ದಾಸ:—ದೇಹಪ್ರಕೃತಿಯು ನೆಟ್ಟಗಿಲ್ಲದ ಇದ್ದುದರಿಂದ ಇವರು ಹವೆಯನ್ನು ಬದಲಾಯಿಸಿಕೊಳ್ಳುವುದಕ್ಕೆ ಕಾಶ್ಮೀರಕ್ಕೆ ಹೋಗಿದ್ದರಷ್ಟೆ. ಶ್ರೀಯುತ ದಾಸರು ಆರೋಗ್ಯವನ್ನು ಹೊಂದುವ ಉದ್ದೇಶದಿಂದಲೇ ಕಾಶ್ಮೀರಕ್ಕೆ ಬಂದದ್ದು ಮತ್ತು ಯಾವ ತರದಲ್ಲೂ ರಾಜಕೀಯ ಚಳವಳದಲ್ಲಿ ಕೈಹಾಕಲಿಕ್ಕಿಲ್ಲವೆಂದು ಬರಹ ಮೂಲಕ ತಿಳಿಸಬೇಕೆಂದು ಕಾಶ್ಮೀರ ಸರಕಾರದ ಅಪ್ಪಣೆಯಾಯಿತು. ಆದರೆ ಶ್ರೀಯುತ ದಾಸರು ಈ ರೀತಿಯಲ್ಲಿ ಒಪ್ಪಲು ಸಮ್ಮತಿಸದೆ ಅಲ್ಲಿಂದ ಹಿಂತಿರುಗಿದರು.

ಕಲ್ಕತ್ತ:—ಕಳೆದ ತಾರೀಕು ೨೫ರಲ್ಲಿ ಕಲ್ಕತ್ತೆಯಲ್ಲಿ ೧೦ ಇಂಚು ಮಳೆಯು ಬಿದ್ದು ಬೀದಿಗಳಲ್ಲೆಲ್ಲಾ ತುಂಬಾ ನೀರು ತುಂಬಿತ್ತು.

ಮಝುರುಲ್ ಹಕ್:—ಮದರಲ್ಯಾಂಡ ಪತ್ರದ ಸಂಪಾದಕರಾದ ಇವರು ದಂಡವನ್ನು ಕೊಡಲಿಕ್ಕೆ ಒಪ್ಪದ್ದರಿಂದ ಇವರನ್ನು ತುರಂಗವಾಸಕ್ಕೆ ಕಳುಹಿಸಿದರಷ್ಟೆ! ಈಗ ಇವರ ಆಸ್ತಿಯನ್ನು ಏಲಂಮಾಡಿ ದಂಡವನ್ನು ವಸೂಲುಮಾಡಿ ಇವರನ್ನು ಸರಕಾರವು ಬಂಧಮುಕ್ತಮಾಡಿದೆ.

ಸೂರತ್ ಮುನ್ಸಿಪಾಲಿಟಿ:—ಸುರತ ನಗರದ ಮಾರ್ಗಗಳೂ ಗಟ್ಟರುಗಳೂ ಸ್ವಚ್ಛಮಾಡಲಿಲ್ಲವಾದ್ದರಿಂದ ಅಲ್ಲಿಯ ನಿವಾಸಿಗಳು ಬಾರದೋಲಿಯ ಸ್ವಯಂಸೇವಕರನ್ನು ಕರೆದುಕೊಂಡು ಪಟ್ಟಣವನ್ನು ಉಡುಗಿದರು. ಸರಕಾರದವರು ನೇಮಿಸಿದ ಮುನ್ಸಿಪಾಲಿಟಿಗೆ ಕರಕೊಡದಂತೆ ಚಳವಳ ಜೋರಾಗಿ ನಡಿಯುತ್ತಿದೆ.

ಕರ್ನಾಟಕ ಪ್ರಾಂತ್ಯದಲ್ಲಿ ಡಾಕ್ಟರ ರವೀಂದ್ರನಾಥ ಠಾಗೋರರ ಆಗಮನ:—ಇವರು ತಾ. ೨೫ನೆಯ ದಿನ ಪೂಣೆಯಿಂದ ಧಾರವಾಡದ ಮೇಲೆ ಹಾಯ್ದು ಮೈಸೂರಿಗೆ ಹೋದರು. ಠಾಗೋರರು ಮೈಸೂರಿನ ದಸರಾ ಮಹೋತ್ಸವದ ಸಂದರ್ಭದಲ್ಲಿ ಅಲ್ಲಿ ಹಾಜರಿದ್ದರು.

ಹೊಸ ಟೆಕ್ಸ್:—ಮುಂಬಯಿ ಪ್ರಾಂತ್ಯದಲ್ಲಿ ಪ್ರಜೆಗಳು ನಾಟಕವೇ ಮುಂತಾದ ಸಂತೋಷ ಕೂಟಗಳಿಗೆ ಹೋಗಬೇಕಾದರೆ ಸರಕಾರಕ್ಕೆ ತೆರಿಗೆಯನ್ನು ಕೊಡಬೇಕೆಂದು ಒಂದು ಕಾನೂನನ್ನು ಪ್ರಕಟಿಸಿರುವರು. ಹಾಗೆ ಕೊಡಬೇಕಾದ ಮೊಬಲಗು ಅರ್ಧಾಣೆಯಿಂದ ಒಂದು ರೂಪಾಯಿಯ ವರೆಗೂ ಇರುವುದು.

ಸೂರ್ಯಗ್ರಹಣ:—ಕಳೆದ ಸೂರ್ಯಗ್ರಹಣದ ದಿನ ಕುರುಕ್ಷೇತ್ರದಲ್ಲಿರುವ ಪುರಾಣಪ್ರಸಿದ್ಧವಾದ ಕೆರೆಯಲ್ಲಿ ಸ್ನಾನಮಾಡಲು ೧೪ ಸ್ಪೆಶ್ಯಲ್ ರೈಲು ಗಾಡಿಗಳು ಬಿಡಲ್ಪಟ್ಟು ಸುಮಾರು ೮ ಲಕ್ಷ ಜನ ಯಾತ್ರಿಕರು ಅಲ್ಲಿ ಸೇರಿದ್ದರು.

ಹಿಂದೂಸ್ಥಾನದ ವೈಸರಾಯರು:—ಈಗಣ ಲೋರ್ಡ ರೆಡಿಂಗರವರಿಗೆ ಪ್ರತಿಯಾಗಿ ಆಸ್ಟಿನ್ ಚೇಂಬರಲೇನರವರು ವೈಸರಾಯರಾಗಿ ಬರುವರೆಂದು ಜಾನ್‌ಬುಲ್ ಎಂಬ ಆಂಗ್ಲ ಪತ್ರಿಕೆಯು ಪ್ರಕಟಿಸಿರುವುದಂತೆ.

ಎಂ. ಪಿ. ನಾರಾಯಣ ಮೇನನ್:—ಆಂಗ್ಲ ಸಾರ್ವಭೌಮರ ಮೇಲೆ ಯುದ್ಧಕ್ಕೆ ಪ್ರವೃತ್ತರಾದರೆಂಬ ಕಾರಣಕ್ಕಾಗಿ ಮಲಬಾರಿನ ವಕೀಲ ಎಂ. ಪಿ. ನಾರಾಯಣ ಮೇನನರಿಗೆ ದ್ವೀಪಾಂತರವಾಸ ಶಿಕ್ಷೆಯು ವಿಧಿಸಲಾಗಿದೆ.

ಸರ್. ವಿಠಲದಾಸ ಥಾಕರ್ಸೆ:—ಕೀರ್ತಿಶೇಷರಾದ ಸರ್. ವಿಠಲದಾಸ ಥಾಕರ್ಸೆ ಇವರ ಸ್ಮರಣಾರ್ಥವಾಗಿ ಮುಂಬಯಿಯ ಮುಖ್ಯ ಸಹಕಾರ ಸಂಘಕ್ಕೆ ಒಂದು ಕಟ್ಟೋಣವನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ಮುಂಬಯಿಯಲ್ಲಿ ಒಂದು ಸಭೆಕೂಡಿ ಆಗಲೇ ೨೫ ಸಾವಿರ ರೂಪಾಯಿ ವರೆಗೆ ವಾಗ್ದಾನವಾಗಿರುವುದು.

ಆದಿದ್ರಾವಿಡರ ಮೊದಲನೆಯ ಪರಿಷತ್ತು:—ಆದಿದ್ರಾವಿಡರ ಮೊದಲನೆಯ ಪರಿಷತ್ತು ಕಳೆದ ತಾರೀಕು ೨೪ರಲ್ಲಿ ಚಿದಂಬರದಲ್ಲಿ ರಾವ್ ಬಹದ್ದೂರ್ ಒಕಂಡಸ್ವಾಮಿ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ನಡೆದು ಮುಂದಿನ ಪರಿಷತ್ತನ್ನು ಮದರಾಸಿನಲ್ಲಿ ಸೇರಿಸಬೇಕಾಗಿ ನಿಶ್ಚಯಿಸಲಾಯಿತು.

ಸುರತ್ ಮುನ್ಸಿಪಲ್ ಶಾಲೆಗಳು:—ಸರಕಾರದವರು ನೇಮಿಸಿದ ಕಮ್ಮಿಟಿಯವರಿಂದ ನಡಿಸಬರುತ್ತಿರುವ ಶಾಲೆಗಳಲ್ಲಿ ವಿದ್ಯಾರ್ಥಿಗಳ ಅಭಾವವುಂಟಾಗಿ ಎಂಟು ಹುಡುಗರ ಪ್ರಾಯಮರಿ ಶಾಲೆಗಳನ್ನೂ ಒಂದು ಹುಡುಗಿಯರ ಪ್ರಾಯಮರಿ ಶಾಲೆಯನ್ನೂ ಬರುವ ನವಂಬರ ತಾರೀಕು ೧ರಿಂದ ಮುಚ್ಚಲಿಕ್ಕಿದ್ದಾರೆ.

ಗುರುಕಾಬಾಗ—ಪೋಲೀಸಿನವರು ಹೊಡೆದ ಪೆಟ್ಟಿನಿಂದ ತ್ರಿಲೋಕಸಿಂಗ ಎಂಬ ಅಕಾಲಿ ಸತ್ಯಾಗ್ರಹಿಯ ಕಣ್ಣು ಗುಡ್ಡೆಯು ಹೊರಗೆ ಬಂತು ಎಂಬ ವಾರ್ತೆಯು ನಿರಾಧಾರವಿಲ್ಲದೆಂದು ಪ್ರಕಟವಾಗಿದೆ.

ನೆರೆ:—ಡಾರ್ಜಲಿಂಗಿಗೆ ಹೋಗುವ ಮುಖ್ಯ ರೈಲ್ವೆ ಮಾರ್ಗವು ನೆರೆಯ ದೆಸೆಯಿಂದ ರೈಲ್ವೆ ಗಾಡಿಗಳ ಚಲಾವಣೆಗೆ ಆತಂಕವನ್ನು ಉಂಟುಮಾಡಿದೆ.

ರವೀಂದ್ರನಾಥ ಠಾಗೋರರು:—ಕಳೆದ ತಾರೀಕು ೨೯ರಲ್ಲಿ ರವೀಂದ್ರನಾಥ ಠಾಗೋರರು ದೀನಬಂಧು ಸಿ. ಎಫ್. ಎಂಡ್ರೂಜರೊಡನೆ ಬೆಂಗಳೂರಿನಿಂದ ಮದರಾಸಿಗೆ ಬಂದು ತಲ್ಪಿದರು. ಶ್ರೀಯುತ ಟಿ. ಯಸ್. ರಾಮಸ್ವಾಮಿ ಅಯ್ಯರ್ ಮೊದಲಾದ ಗೃಹಸ್ಥರು ಇವರನ್ನು ಸ್ವಾಗತಮಾಡಿದರು. ಗೋಖಲೆ ಹೋಲಿನಲ್ಲಿ ಅಂದು ಅವರ ಒಂದು ಭಾಷಣವಾಯಿತು.

ಧರ್ಮಾರ್ಥವಾಗಿ ಖಡ್ಡಾಯದ ಶಿಕ್ಷಣ:—ಅಹಮ್ಮದಾಬಾದಿನ ಮುನ್ಸಿಪಾಲಿಟಿಯೊಳಗಿನ ಎಲ್ಲಾ ಶಾಲೆಗಳಲ್ಲೂ ಪ್ರಾಥಮಿಕ ಶಿಕ್ಷಣವನ್ನು ಖಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕೊಡಬೇಕೆಂದು ನಿರ್ಣಯಿಸಿದ ಸದರಿ ಮುನ್ಸಿಪಾಲಿಟಿಯ ಠರಾವಿಗೆ ಮುಂಬಯಿ ಸರಕಾರದ ಸಮ್ಮತಿಯು ದೊರಕಿದೆ.

ಮುಳಸಿ ಸತ್ಯಾಗ್ರಹ:—ಮುಳಸಿ ಸತ್ಯಾಗ್ರಹವನ್ನು ಪ್ರಥಮದಲ್ಲಿ ಆರಂಭಿಸಲು ತೊಡಗಿದ ದೇಶಭಕ್ತ ವಿನಾಯಕರಾವ್ ಭಾಸ್‌ಕಟ್ಟಿ ಮತ್ತು ಇತರ ಮೂರು ಮಂದಿ ಸತ್ಯಾಗ್ರಹಿಗಳನ್ನು ಜೈಲಿನಿಂದ ಬಿಟ್ಟಿದೆ. ಕಳೆದಾಟೆಯ ಬುಧವಾರ ಸತ್ಯಾಗ್ರಹವನ್ನು ನಡಿಸಲು ಮುಂದೆ ಬಂದ ೯ ಮಂದಿಗಳನ್ನು ಸೆರೆಹಿಡಿದು ೫ ಮಂದಿಗಳಿಗೆ ಪ್ರತಿಯೊಬ್ಬನಿಗೆ ೩ ತಿಂಗಳ ಕಠಿಣ ಶಿಕ್ಷೆಯೂ ನಾಲ್ಕು ಮಂದಿಗಳಿಗೆ ಪ್ರತಿಯೊಬ್ಬನಿಗೆ ೧ ತಿಂಗಳ ಸಾದಾ ಶಿಕ್ಷೆಯೂ ವಿಧಿಸಲಾಗಿದೆ. ಮುಳಸಿ ಪೇಟೆಯಲ್ಲಿ ಇನ್ನೂ ಮಳೆಯು ಸುರಿಯುವುದರಿಂದ ಅಣೆಕಟ್ಟಿನ ಕೆಲಸವು ಬರುವ ನವಂಬರ ತಿಂಗಳ ವರೆಗೆ ಬಾಕಿಇಡಲಾಗುವುದಂತೆ.

ಲಾಹೋರ್:—ಜಮೀನ್‌ದಾರ ಪತ್ರದ ೭ನೇ ಸಂಪಾದಕರಾದ ಖಾಜಿ ಮಹಮ್ಮದ್‌ಅಲಿ ಇವರನ್ನು ಕೈದುಮಾಡಲಾಗಿದೆ.

ಅಕಾಲಿ ಸತ್ಯಾಗ್ರಹ:—ಅಕಾಲಿ ಸತ್ಯಾಗ್ರಹವು ನಡಿಯುತ್ತಿದೆ. ದಿನಂಪ್ರತಿ ಸತ್ಯಾಗ್ರಹಿಗಳನ್ನು ಸೆರೆಹಿಡಿಯುವ ಕಾರ್ಯವು ನಡಿಯುತ್ತಿದೆ. ಈ ವರೆಗೆ ಸುಮಾರು ೯೦೦ ಮಂದಿಗಳನ್ನು ಸೆರೆಹಿಡಿದಿರುತ್ತಾರೆ.

ಶ್ರೀಮತಿ ಸರೋಜಿನಿನಾಯ್ಡೋ:—ಇವರು ಮದರಾಸಿನಿಂದ ಕಳೆದ ತಾ. ೧೮ರಲ್ಲಿ ಸಿಲೋನಿಗೆ ಹೊರಟುಹೋಗಿರುವರು.

ಅಖಿಲ ಕರ್ನಾಟಕ ಸಂಘ ಮುಂಬಯಿ:—ಕಳೆದ ತಾ. ೧೭ ಮತ್ತು ೧೮ನೇ ದಿನಗಳಲ್ಲಿ ಈ ಸಂಘದವರು ಅತ್ಯಂತ ಉತ್ಸಾಹದಿಂದ ಕಾರ್ಯ ನಡಿಸಿದರು. ಸ್ವಯಂಸೇವಕರು ಬೀದಿಗಳಲ್ಲಿ ತಿರುಗಿ ರೂ. ೩೩೫ರ ಖಾದಿಯನ್ನು ಮಾರಿದರು. ತಾ. ೧೭ರಲ್ಲಿ ಏಕಾದಶಿಯಾದ್ದರಿಂದ ಕರ್ನಾಟಕ ಸಾರಸ್ವತ ಭಜನಮಂಡಲಿಯವರು ಗ್ರಾಮದೇವಿಯ ತಮ್ಮ ಮಂದಿರದಲ್ಲಿ ಭಜನೆನಡಿಸಿದರು. ಅನೇಕ ದೇಶಭಕ್ತರ ಚಿತ್ರಗಳೊಡನೆ ಮಹಾತ್ಮರ ಚಿತ್ರದ ಅನಾವರಣ ಸಮಾರಂಭವೂ ನಡಿಯಿತು. ತುರ್ಕರಿಗೆ ಉಂಟಾದ ಜಯದ ಬಗ್ಗೆ ದೀಪೋತ್ಸವ ನಡಿದು ದೇವರ ಪ್ರಾರ್ಥನೆ ಮಾಡಲಾಯಿತು. ತಾ. ೧೮ನೇ ದಿನ (ಮಹಾತ್ಮರ ಬಂಧನದಿನ) ವಾಡಿಕೆಯಂತೆ ೨೪ ತಾಸುಗಳ ವರೆಗೆ ಸ್ವಯಂಸೇವಕರು ರಾಟೆಗಳಲ್ಲಿ ನೂಲು ತಯಾರಿಸಿದರು. ಸಂಘದ ಮಂದಿರದಲ್ಲಿ ಖಾದಿಯು ಮಾರಲಿಕ್ಕೆ ಇಟ್ಟಿತ್ತು. ೨ನೇ ದಿನ ಸ್ವಯಂಸೇವಕರು ರೂ. ೧೫೫ ಖಾದಿಯನ್ನು ಮಾರಿದರು.

ದಕ್ಷಿಣ ಕನ್ನಡ

ಸುಳ್ಯ:—ಕಳೆದ ತಾರೀಕು ೨೫ರಲ್ಲಿ ಸೇರಿದ ಉಪ್ಪಿನಂಗಡಿ ತಾಲೂಕು ಬೋರ್ಡ ಮೆಂಬರರ ಸಭೆಯಲ್ಲಿ ಏಟ್ಲಿ ಕಸಬೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು (ಆದಿದ್ರಾವಿಡರ ಮಕ್ಕಳಿಗೆ ಹೊರತು) ಎಲ್ಲ ಮಕ್ಕಳಿಗೂ ಖಡ್ಡಾಯವಾಗಿ ಕೊಡುವ ಬಗ್ಗೆ ಮ. ರಾ. ಮೊಳಹಳ್ಳಿ ಶಿವರಾಯರು ತಯಾರಿಸಿದ ಯೋಜನೆಯು ಪಾಸಾಗಿ ಬರುವ ವರುಷದ ಎಪ್ರಿಲ್ ತಿಂಗಳಿನಿಂದ ಏಟ್ಲದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತರಬೇಕೆಂದು ನಿರ್ಧರಿಸಿದೆ. ಹೊಸತಾಗಿ ತೆರದ ಕಮಲಬೆಟ್ಟು ಮತ್ತು ಕನಕಡ್ಕ ಶಾಲೆಗಳಲ್ಲಿ ಈ ತಿಂಗಳ ಶುರುವಿನಿಂದ ಧರ್ಮಾರ್ಥವಾಗಿ ಶಿಕ್ಷಣ ಕೊಡಬೇಕೆಂದು ಸಹ ನಿಶ್ಚಯಿಸಲಾಗಿದೆ. ಮ. ರಾ. ಯು ರಾಮಣ್ಣ ಗೌಡರನ್ನು ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲಿನ ಮೆಂಬರರಾಗಿ ಚುನಾಯಿಸಲಾಗಿದೆ. ಪುತ್ತೂರು ಬೋರ್ಡ ವಾಪಿಲ್ಯಾ ಶಾಲೆಯಲ್ಲಿ ೫ನೇ ಕ್ಲಾಸನ್ನು ತೆರಿಯಬೇಕಾಗಿ ನಿರ್ಧರಿಸಿದೆ.

ಫರಂಗಿಪೇಟೆ:—ವರ್ಷಂಪ್ರತಿಯಂತೆ ಶಾರದಾ ಪೂಜೆಯು ಇಲ್ಲಿಯ ಶ್ರೀರಾಮ ಹ್ಯಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಕಳೆದ ತಾರೀಕು ೧೯ ೨೫ರಿಂದ ಈ ಶಾಲೆಯ ಆಡಳಿತೆಯು ರಿಜಿಸ್ಟ್ರಿಯಾದ ಫರಂಗಿಪೇಟೆ ವಿದ್ಯಾವರ್ಧಕ ಸಂಘದವರಿಂದ ನಡಿಸಲ್ಪಡುವ ಕಾರಣ ಹೆಚ್ಚಿನ ವಿಜೃಂಭಣೆಯಿಂದ ನಡೆಯಲು ಅನುಕೂಲವಾಯಿತು. "ತಾಳಮದ್ದಳೆ" ಹಳೇ ವಿದ್ಯಾರ್ಥಿಗಳ ಸಂಘದ ಸಭೆ, ವಿದ್ಯಾರ್ಥಿಗಳ ಸ್ಟೋರ್ಸ ಕೊ-ಒಪರೇಟಿವ್ ಸೊಸೈಟಿಯ ಸಭೆ ಸ್ಕೂಲ್‌ಡೇ ಕಮಿಟಿಯವರ ಸಭೆ ಇತ್ಯಾದಿಗಳಿಂದ ಸೂಚೀಪತ್ರವು ತಯಾರಿಸಲ್ಪಟ್ಟಿತು. ವಿಜಯ ದಶಮಿ ದಿವಸ ವಿದ್ಯಾವರ್ಧಕ ಸಂಘದ ಮಹಾ ಸಭೆಯು ನಡೆಯಿತು. ಅಕಾಲಮರಣ ಹೊಂದಿದ ಈ ಶಾಲೆಯ ಉಪಾಧ್ಯಾಯರಾಗಿದ್ದ ಎ. ಕೋಟಿಯಪ್ಪನವರ ಸ್ಮರಣಾರ್ಥವಾಗಿ ವರ್ಷಂಪ್ರತಿ ಅವರ ಹೆಸರಿನಲ್ಲಿ ಇನಾಮು ಹಂಚುವ ಬಗ್ಗೆ ವಿದ್ಯಾರ್ಥಿಗಳು ಸ್ವಲ್ಪ ಹಣವನ್ನು ಶೇವಣಾತಿಯಾಗಿ ಕೊಟ್ಟಿದ್ದನ್ನು ಅಂಗೀಕರಿಸಲಾಯಿತು. ಸಂಘದವರು, ಸದರಿಯವರ ಹೆಸರಿನಲ್ಲಿ ಮೂರನೇ ತರಗತಿಯ ಒಬ್ಬ ಬಿಲ್ಲವ ಹುಡುಗನಿಗೆ ವರ್ಷಂಪ್ರತಿ ವೇತನವನ್ನು ಕೊಡುವುದಾಗಿ ನಿರ್ಣಯಿಸಿದರು. ಗತಿಸಿದ ಎ. ಕೋಟ್ಯಪ್ಪ ಉಪಾಧ್ಯಾಯರ ಮೇಲೆ ತನಗಿರುವ ಪ್ರೀತಿಯನ್ನು ಪ್ರದರ್ಶಿಸುವ ಬಗ್ಗೆ ಮಿ ವದೆಯರ್ ಹುಸೇನಬ್ಬನವರು ಒಂದು ಭಾವಚಿತ್ರವನ್ನು ಕೊಟ್ಟಿದ್ದನ್ನು ಅಂಗೀಕರಿಸಿ ಶಾಲಾ ಹೋಲಿನಲ್ಲಿ ಇಡುವುದಾಗಿ ನಿರ್ಣಯಿಸಿದರು.

ಚಮನಾಡು:—ಈ ಗ್ರಾಮದಲ್ಲಿ ಮ. ರಾ. ಗಳಾದ ಹಸನ್ ಚಮನಾಡ ಸಾಹೇಬ ಇ. ಅಬ್ದುಲ್‌ಖಾದರ್ ಸಾಹೇಬ ಪಿ. ಅಹಮ್ಮದ ಸಾಹೇಬ ಸಿ. ಯಚ್. ಅಬ್ದುಲ್ಲ ಸಾಹೇಬ ಮೊದಲಾದ ಮಹನೀಯರು ಕೂಡಿ ಸಪ್ಟಂಬರ ತಾರೀಕು ೨೪ನೇ ಆದಿತ್ಯವಾರ ದಿವಸ ಒಂದು ಎಸ್ಸೋಸಿಯೇಶನನ್ನು ಸ್ಥಾಪಿಸಿದರು. ಇದಕ್ಕೆ ಸತ್ತಾಲಕ್ಕೆ ಹಸನ್ ಚಮನಾಡ್ ಸಾಹೇಬರನ್ನು ಅಧ್ಯಕ್ಷರನ್ನಾಗಿ ನೇಮಿಸಿದರು. ಮತ್ತು ಇದಕ್ಕೆ ಯಂಗ್‌ಮೆನ್ಸ್ ಮುಸ್ಲಿಮ್ ಎಸ್ಸೋಸಿಯೇಷನ್ ಎಂಬ ಹೆಸರನ್ನು ಕೊಟ್ಟಿರು. ತರುಣ ಮುಸಲ್ಮಾನ ಯುವಕರ ನವಚಳಿಕೆಯನ್ನು ಅಭಿವೃದ್ಧಿಪಡಿಸುವುದು ಇದರ ಉದ್ದೇಶವಾಗಿದೆ.

ತುರ್ಕರ ವಿಜಯ.

ತುರ್ಕರು ಸ್ಮಿರ್ನಾ ಪಟ್ಟಣವನ್ನು ಹಿಡಿದು ಗ್ರೀಕರನ್ನು ಓಡಿಸಿ ತಾವು ಕಳಕೊಂಡ ಮುಂಚಿನ ಪ್ರದೇಶಗಳನ್ನು ಪುನಃ ಹೊಂದಲು ಯುದ್ಧಕ್ಕೆ ಸಿದ್ಧರಾದುದನ್ನು ಕಂಡು ಮಿತ್ರ ಮಂಡಲದವರು ಮತ್ತೊಂದು ಮಹಾ ಯುದ್ಧವಾಗುವದನ್ನು ತಪ್ಪಿಸಲು ಪೆರಿಸ್ ಕೊನ್ಪರನ್ಸಿನಲ್ಲಿ ಆಲೋಚನೆ ಮಾಡತೊಡಗಿದರು. ಈ ಮುಂಚೆ ನಡೆದ ಸೆವರಸ್ ಒಪ್ಪಂದದಲ್ಲಿ ಬದಲಾವಣೆಗಳನ್ನು ಮಾಡಿ ತುರ್ಕರಿಗೆ ಅಡ್ರಿ ಯಾನೋಪಲ್, ಕಾನ್‌ಸ್ಟಾಂಟಿನೋಪಲ್, ಥ್ರೇಸ್ ಇವನ್ನು ಕೊಟ್ಟ ವಿಜಯವನ್ನು ಆಲೋಚಿಸಲು ಬೇಗನೆ ಒಂದು ಪಂಚಾಯತ್ತನ್ನು ಸೇರಿಸಬೇಕೆಂದು ಪೆರಿಸ್ ಕೊನ್ಪರನ್ಸನ್ನು [illegible] ಬರಲು ಆಮಂತ್ರಣವನ್ನು [illegible] ಲಾರ್ಡ ಕರ್ಝನರು ಕಳುಹಿ[illegible] ರೀತಿಯಲ್ಲಿ ಯುದ್ಧ ಮಾ[illegible] ಮಿತ್ರ ಮಂಡಲಿಯವರು [illegible] ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆ[illegible] ಎಲ್ಲರಿಗೂ ಇರಬೇಕೆಂದು ಮೇಲಿನ [illegible]

ಆದರೆ ಬ್ರಿಟಿಷರು ಮಾತ್ರ [illegible] ಗಳನ್ನು ಕಳಿಸುವುದು ಕಂದಕಗಳನ್ನು [illegible] ಯನ್ನು ಮಾಡುತ್ತಿದ್ದಾರೆ. ಇಂಗ್ಲೆಂಡಿನ [illegible] ಯುದ್ಧಮಾಡುವ ವಿಷಯದಲ್ಲಿ ವಿರುದ್ಧ [illegible] ಅವರು ಜನ ಸಹಾಯವನ್ನೂ ಯುದ್ಧ [illegible] ತಿಳಿಸಿದ್ದಾರೆ. ತುರ್ಕಿಯ ಸೈನ್ಯವು ತಟಸ್ಥ [illegible] ನಿಂತು ಕಾನ್‌ಸ್ಟಂಟಿನೋಪಲನ್ನು ನುಗ್ಗಲು ಸಿದ್ಧ[illegible] ಬರುತ್ತಿದೆ. ತುರ್ಕಿಯ ಸೈನ್ಯವು ತಟಸ್ಥ ಪ್ರದೇಶದ[illegible] ರಿಂದಲೂ ಅನಂತರ ಬ್ರಿಟಿಷ ಅಧಿಕಾರಿಗಳು ಎಚ್ಚರಿಕೆಯ[illegible] ಹೋಯಿತೆಂದೂ ವರ್ತಮಾನವು ಬಂದಿದೆ. ಶಾಂತತಾ [illegible] ಸಂಧಿಯನ್ನು ಮಾಡಿಕೊಳ್ಳಲು ಕೆಮಾಲ್ ಪಾಷಾರವರು [illegible] ಇನ್ನೂ ಕಾಲಹರಣ ಮಾಡಲು ಬಿಡಲಿಕ್ಕೆ ತನಗೆ ಸಮ್ಮ[illegible] ಎಲ್ಲ ಇತ್ಯರ್ಥಗಳನ್ನು ಬೇಗನೇ ಮಾಡಬೇಕಾಗಿಯೂ ತಿಳಿಸಿಬಿಟ್ಟಿದ್ದಾ[illegible]

ಓಲ್ ಇಂಡಿಯಾ ಮೊಸ್ಲೆಮ್ ಲೀಗಿನ ಸಭೆಯು ಲಕ್ನೌದಲ್ಲಿ [illegible] ಸ್ಥಾನದಲ್ಲಿರುವ ಮುಸಲ್ಮಾನರೆಲ್ಲರೂ ಅಂಗೋರಾ ಸರಕಾರಕ್ಕೆ ಜನ [illegible] ಧನ ಸಹಾಯಮಾಡಬೇಕಾಗಿಯೂ ಮತ್ತು ತಾವು ಈ ರೀತಿ ಸಹಾಯ ಮಾಡ[illegible] ರುವುದು ಒಂದು ಧರ್ಮ ಕಾರ್ಯವೆಂದು ತಿಳಿಯಕೊಳ್ಳಬೇಕಾಗಿಯೂ ಠರಾವು ಪಾಸುಮಾಡಿದೆ. ಅಂಗೋರಾ ಪ್ರಾಂತ್ಯಕ್ಕೆ ಸ್ವಯಂ ಸೇವಕರಾಗಿ ಹೋಗಲು ಹಿಂದೂಸ್ಥಾನದಿಂದ ಅನೇಕ ಮುಸಲ್ಮಾನರು ಸಿದ್ಧರಾಗಿರುವರಂತೆ.

ಅಲಹಾಬಾದಿನಲ್ಲಿ ಅಲ್ಲಿಯ ನಿವಾಸಿಗಳ ಒಂದು ಪ್ರಚಂಡ ಸಭೆಯನ್ನು ಕೂಡಿಸಿ ಬ್ರಿಟಿಷರು ಕೊನ್‌ಸ್ಟಂಟಿನೋಪಲಿಗೆ ಸೈನ್ಯವನ್ನು ಕಳುಹಿಸಬಾರದಾಗಿಯೂ ಬ್ರಿಟಿಷರು ತುರ್ಕರೊಡನೆ ಯುದ್ಧಮಾಡುವುದಾದರೆ ಬ್ರಿಟಿಷರ ವಿರೋಧವಾಗಿ ತಾವು ತುರ್ಕಿಗೆ ಸಹಾಯಮಾಡುವುದಾಗಿಯೂ ಠರಾವನ್ನು ಮಂಜೂರು ಮಾಡಿದ್ದಾರೆ.

ಮರ್ ಮೊರ್ ಸಮುದ್ರದ ಮೂಲಕ ಕೊನ್‌ಸ್ಟಂಟಿನೋಪಲಿನ ಭದ್ರತೆಯನ್ನು ಕಾಯಲು ಭರವಸೆಯನ್ನು ಕೊಟ್ಟರೆ ಜಲಸಂಧಿಗಳಲ್ಲಿ ಎಲ್ಲರಿಗೂ ಸರಿಸಮ ಹಕ್ಕಿರಲು ಬಿಡಲಿಕ್ಕೂ ಅಲ್ಲಿರುವ ತುರ್ಕಿಯ ಕೋಟೆಗಳನ್ನು ತೆಗೆಯಬಿಡಲಿಕ್ಕೂ ತನ್ನ ಆಕ್ಷೇಪವಿಲ್ಲವೆಂದು ಕೆಮಾಲ್‌ಪಾಷಾ ಇವರು ಅಮೇರಿಕದ ಒಬ್ಬ ಬಾತಮಿದಾರರೊಡನೆ ಹೇಳಿರುವರಂತೆ.

ಕಲ್ಕತ್ತಾ ಖಿಲಾಫತ್ ಕಮ್ಮಿಟಿಯ ಕಾರ್ಯಕಾರಿ ಮಂಡಳಿಯವರು ಸಭೆಸೇರಿ ಈಗ ಜಯವನ್ನು ಸಂಪಾದಿಸಿರುವ ಕೆಮಲ್‌ಪಾಷಾರವರ ಸೈನ್ಯಕ್ಕೆ ಒಂದು ವಿಮಾನವನ್ನು ಕೊಡಬೇಕಾಗಿ ನಿಶ್ಚಯಿಸಿ ಈಗ ಕಲ್ಕತ್ತಾ ಪಟ್ಟಣದಿಂದಲೂ ಪಟ್ಟದ ಆಸ್‌ಪಾಸಿನಿಂದಲೂ ಈ ಬಗ್ಗೆ ಹಣ ಸಂಗ್ರಹ ಮಾಡುವ ಏರ್ಪಾಡು ನಡಿಯುತ್ತಿದೆ.

ಜಾತಿಭೇದ ವಿಚಾರ ವಿಮರ್ಶೆ.

(ಲೇಖಕರು: ಪಾಂಡುರಂಗ ಶಾಸ್ತ್ರೀ ಓಕ್ಷಮನೆ)

"ಜಾತಿಭೇದ ವಿಚಾರ"ವೆಂಬ ಚಿಕ್ಕ ಪುಸ್ತಕವು, (ಪುಟ ೨೭) ಪರೀಕ್ಷಾರ್ಥವಾಗಿ ನಮ್ಮ ಬಳಿಗೆ ಬಂದಿರುವುದು. ಈ ಪುಸ್ತಕವು ಆರ್ಯ ಸಮಾಜ ಮಹಾನುಯಾಯಿಗಳಾದ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರ ಇವರಿಂದ ಹಿಂದಿ ಭಾಷೆಯಲ್ಲಿ ರಚಿಸಲ್ಪಟ್ಟು ಸೆಂಟ್ ಎಲೋಸಿಯಸ್ ಕೋಲೇಜಿನ ಸಂಸ್ಕೃತ ಪಂಡಿತ ಬ್ರಹ್ಮಶ್ರೀ ವಿಟ್ಲ ಅನಂತ ಉಪಾಧ್ಯಾಯರಿಂದ ಕನ್ನಡದಲ್ಲಿ ಭಾಷಾಂತರಿಸಲ್ಪಟ್ಟಿದೆ. ಮೂಲಗ್ರಂಥಕಾರರಾದ ಧರ್ಮದೇವರಾಗಲಿ ಭಾಷಾಂತರಕಾರರಾದ ಅನಂತೋಪಾಧ್ಯಾಯರಾಗಲಿ ಇವರಿಬ್ಬರು ವೇದ, ಶಾಸ್ತ್ರ, ಸಾಹಿತ್ಯ ಇಂಗ್ಲೀಷಭಾಷೆ ಮುಂತಾದವುಗಳಲ್ಲಿ ಬಹು ನಿಷ್ಣಾತರಾಗಿದ್ದು, ಸೂರ್ಯ ಚಂದ್ರರಂತೆ ಪ್ರಕಾಶಶಾಲಿಗಳಾಗಿದ್ದಾರೆಂದು ಹೇಳಿದರೆ ಅದು ಅತ್ಯುಕ್ತಿಯಾಗಲಾರದು.

ಈ ಪುಸ್ತಕಕ್ಕೆ ಶ್ರೀಯುತ ಯಮ್. ಮಾಧವರಾವ್ ಬಿ. ಎ. ಬಿ. ಎಲ್. ಎಂಬವರು ಪೀಠಿಕೆಯನ್ನು ಬರೆದಿರುವರು. ಅದರಲ್ಲಿ ವೇದಶಾಸ್ತ್ರಗಳ ವಿಚಾರವಿಲ್ಲ. ಅವರ ಅನುಭವದ ಮಾತುಗಳು ಮಾತ್ರ ಇವೆ, ಅವುಗಳನ್ನು ವಿಮರ್ಶಿಸಲು ನಾವು ಹೋಗಕುವದಿಲ್ಲ. ಅಲ್ಲದೆ ಮುಂದೆ ಪುಸ್ತಕಕಾರರಾದರೂ ಧರ್ಮಶಾಸ್ತ್ರದ ವಿಷಯವನ್ನು ಬಿಟ್ಟು ಬೇರೆ ಬರೆದುದಕ್ಕೆ, ಉದಾಹರಣಾರ್ಥವಾಗಿ—ಸಾಮಾಜಿಕ ದೃಷ್ಟಿ ಮುಂತಾದಕ್ಕೆ ನಮ್ಮ ವಿಮರ್ಶೆಯಲ್ಲಿ ಅಷ್ಟೊಂದು ಪ್ರಾಮುಖ್ಯವನ್ನು ಕೊಡೋಣಾಗುವದಿಲ್ಲ. ಧರ್ಮಶಾಸ್ತ್ರಕ್ಕೆ ಸಂಬಂಧಪಟ್ಟ ಎಷ್ಟು ವಿಷಯವಿದೆಯೋ ಅಷ್ಟನ್ನು ಮಾತ್ರ ಮುಂದಿನ ಲೇಖಗಳಲ್ಲಿ ವಿಮರ್ಶಿಸಬೇಕೆಂದಿದ್ದೇವೆ.

(ಮುಂದರಿಯುವುದು)

ರವೀಂದ್ರ ವಿಜಯ

(ಚಂದ್ರನು ಮೂಡುವನಿದಿಗೋ) ಎಂಬಂತೆ.

ವಂಗರವೀಂದ್ರ ಜಯತು ! ಕಾವ್ಯಾಬ್ಜ ॥ ಪ ॥
ಮಂಗಳಕಮ್ರಗಳ ! ರಂಗಿನಗೆಳೆ ! ಕಂಗೊಳಿಪ ॥ ಅ. ಪ. ॥
ಶಾಂತಿನಿಕೇತನದ ! ಶಾಂತಮುಖಿಯಂತಿರುತ !
ಸಂತತ ವ ! ಸಂತವಿಳೆ ! ಯಂತಿರುವ ಸಂತ—ಜಯ ॥ ೧ ॥
ದೇಶದೇಶದೆ ಯಶೋ ! ರಾಶಿಯಲಿ ಪಾರಾಡುವ !
ಭಾಸುರ ! ವಂಶದೊಳು ಹಂಸ ಶವ ! ಹಂಸ—ಜಯ ॥ ೨ ॥
ವ್ಯಾಸನೋಲ್ ವಾಲ್ಮೀಕಿಯೋಲ್ ! ಭಾಸಕಾಳಿದಾಸರೋಲ್ !
ದೇಶದೊಳು ! ರಾಜಿಸಿ ! ಕಾವ್ಯಗಂಗಾ ! ಯಶರೀಯೆ ॥ ೩ ॥
'ಸಾಧನಾ' 'ಚಿತ್ರಾ'ದ ! 'ಗೀತಾಂಜಲಿ' ಸುಮಂಗಳ !
ಮಾಧುರ್ಯದ ! ನಾದದೀ ! ಮೋಧಿನಿಗೆ ! ಭೋಧಿಸಿದ ॥ ೪ ॥

P. L. Puninchattaya.

ನೋಟೀಸು.

ತಾ. ೩೦—೯—೨೨ಕ್ಕೆ ತೆಗೆಯಲು ನಿಶ್ಚಯಿಸಿದ ಬ್ರಹ್ಮಾವರ ಸಾರ್ವಜನಿಕ ವಿದ್ಯಾಮಂದಿರ [illegible] ಮತ್ತು ಸೆಂಟ್ ಗ್ರೆಗೋರಿಯಸ್ ಪುವರ್ ಬೋಯ್ಸ್ [illegible] ಗಳು ಸಾಕಾದಷ್ಟು ವಿಚಾರಕ್ಕೆ ಬಾಗದ್ದರಿಂ[illegible] ಪುಸ್ತಕಗಳು ಕೆಲವು ವಾಸನು [illegible] ತೆಗೆಯುವುದನ್ನು ೧೯೨೩ನೇ [illegible] ಮುಂದರಿಸಿಟ್ಟಿದೆ

ದೆ! [illegible] ಕ್ರಮಣಿಕೆ
[illegible] ಗೆ ಕಾಶ್ಮೀರದಲ್ಲಿರಲು ಪ್ರತಿಬಂಧ. ೨. ಪ್ರೆಸ್ ಎಕ್ಟಿನ [illegible] ನ್‌ಸೆಂಟರು. ೪ ಸರ್ ಜೋರ್ಜ ಲೊಯುಡರು. ೫ [illegible] ರ್. ೬. ಅರ್ಲ ವಿಂಟರಟನ್. ೭. ಆಂಗ್ಲೊ ಇಂಡಿಯನರ
[illegible] ಗ್ರಹಗಳು:—
[illegible] ಗುತ್ತದೆ. [illegible] ಸ, ಒಳದೇಶ ವರ್ತಮಾನ ೮. ಕನ್ನಡ,ತುರ್ಕರ ವಿಜಯ.ವಿಮರ್ಶೆ
[illegible] ಯ. ಲೋಕಲ್ ಮತ್ತು ಮುನ್ಸಿಪಲ್ ಗ್ರೂಪ್ ಕೋನ್ಫರೆನ್ಸ ೫-೮

ಸ್ವದೇಶಾಭಿಮಾನಿ·

ಶಕ ೧೮೪೪ ಆಶ್ವೀಜ ಶು| ೧೫ಯು ಶುಕ್ರವಾರ.

ಸ್ಫುಟವಿಚಾರಗಳು.

೧. ದೇಶಬಂಧುಗಳಾದ ಚಿತ್ತರಂಜನ ದಾಸರು ಜೈಲಿನಿಂದ ಬಿಡುಗಡೆಹೊಂದಿದವರು ಕಲ್ಕತ್ತೆಯಲ್ಲಿ ಕೆಲವು ದಿವಸ ವಿಶ್ರಾಂತಿಯನ್ನು ತೆಕ್ಕೊಳ್ಳುತ್ತಿದ್ದರು. ಆದರೂ ಜೈಲಿನಲ್ಲಿ ಅವರ ದೇಹದ ಆರೋಗ್ಯವು ಯಾವದು ಕೆಟ್ಟು ಹೋಗಿತ್ತೊ ಅದು ಅಲ್ಲಿ ಸರಿಯಾಗಲಿಲ್ಲ; ಆಗ ಅವರು ಡಾಕ್ಟರುಗಳ ಅಭಿಪ್ರಾಯದ ಪ್ರಕಾರ ಹವಾ ಬದಲಾಯಿಸಲು ಅವರು ಕಾಶ್ಮೀರಕ್ಕೆ ಹೋಗಲು ನಿಶ್ಚಯಿಸಿ ಅಲ್ಲಿಗೆ ಹೊರಟರು. ಅವರನ್ನು ಕಾಶ್ಮೀರದ ಗಡಿಯಲ್ಲಿ ತಡಿಸಿ, ಆ ಸಂಸ್ಥಾನಿಕರ ಪೋಲಿಸ ಅಧಿಕಾರಿಗಳು ಶ್ರೀಯುತ ದಾಸರನ್ನು „ರಾಜಕೀಯ ಚಳವಳದಲ್ಲಿ ತಾನು ಸೇರಲಿಕ್ಕಿಲ್ಲ. ಆರೋಗ್ಯದ ದೆಸೆಯಿಂದ ಮಾತ್ರ ಇಲ್ಲಿ ಬಂದಿದ್ದೇನೆ'' ಎಂದು ಬರೆದು ಕೊಡಲು ತಿಳಿಸಿದರು. ಪರಂತು ಸಿ. ಆರ್. ದಾಸರು ಈ ರೀತಿಯಿಂದ ಬರೆದು ಕೊಡಲು ಅಲ್ಲಗಳೆದರು. ಬಳಿಕ ಅವರು ಮತ್ತು ಅವರ ಜನರು ಮುಂದರಿಸಿದರು. ಆದರೆ ಪುನಃ ಅವರನ್ನು ನಿಲ್ಲಿಸಿ, ಪೋಲೀಸ್ ಅಧಿಕಾರಿಗಳು ಅದೆ ಅರ್ಥದ ಹುಕುಮನ್ನು ಅವರ ಮೇಲೆ ಜಾರಿಮಾಡಿದರು. ಮೇಲಿನಂತೆ ಬರೆದು ಕೊಡುವುದು ಸ್ವಾಭಿಮಾನಿ ಗೃಹಸ್ಥರಿಗೆ ಅನುಚಿತವಾಗಿದೆಂದು ನಿರ್ಧರಿಸಿ ದಾಸರು ಆ ರೀತಿಯಿಂದ ಬರೆದು ಕೊಡಲು ಒಪ್ಪಿಕೊಳ್ಳಲಿಲ್ಲ. ಮತ್ತು ಈ ಕಾರಣದಿಂದ ಅವರಿಗೆ ಸ್ವಂತ ಆರೋಗ್ಯ ರಕ್ಷಣಕ್ಕಾಗಿ ಯಾವ ಸ್ಥಳಕ್ಕೆ ಹೋಗಬೇಕೆಂದಿತ್ತೊ ಅದನ್ನು ಬಿಟ್ಟು ಹಿಂದಕ್ಕೆ ಬರಬೇಕಾಯಿತು! ದೇಶಭಕ್ತ ದಾಸರು ಈ ಮೇರೆಗೆ ಹಿಂತಿರುಗಿದ ಮೇಲೆ ಅವರೊಟ್ಟಿಗೆ ಇದ್ದ ಪಾಟಣಾ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಪಿ. ಆರ್. ದಾಸ ಹಾಗು ಇತರರು ಸಹ ಹಿಂತಿರುಗಿದರು! ಈ ವೃತ್ತಾಂತವನ್ನು ಕೇಳಿ ವಾಚಕರ ಮನಸ್ಸಿನಲ್ಲಿ ಅನೇಕ ಆಲೋಚನೆಗಳು ಹುಟ್ಟದೆ ಇರಲಿಕ್ಕಿಲ್ಲ. ದಾಸರು ಆರೋಗ್ಯಕ್ಕೋಸ್ಕರ ಕಾಶ್ಮೀರಕ್ಕೆ ಹೋಗುತ್ತಿದ್ದಾರೆಂಬುದು ಅವರನ್ನು ನೋಡುವಾಗಲೆ ಅವರ ಮೈಮೇಲೆ ಜ್ವರವಿದ್ದದರಿಂದ ಯಾರಿಗೂ ತಿಳಿಯುವ ಹಾಗಿದೆ. ಅಲ್ಲದೆ ದಾಸರಂಥ ಸತ್ಯಾಗ್ರಹಿಗಳು, ಮೇಲೆ ಒಂದು, ಒಳಗೆ ಒಂದು, ಇಂಥ ವರ್ತನವನ್ನು ಸರ್ವಥಾ ಮಾಡುವವರಲ್ಲ. ಈ ಸಂಗತಿಯು ಕೂಡ ಲೋಕಕ್ಕೆ ತಿಳಿದ ವಿಷಯವೆ ಸರಿ. ಹೀಗಿರಲು ಕಾಶ್ಮೀರ ಸಂಸ್ಥಾನಾಧಿಪತಿಗಳಿಗೆ ಮಾತ್ರ ಈ ಎರಡೂ ಸುವಿಚಾರಗಳ ಸಂಪರ್ಕವಾಗದೆ ಇರೋಣ ಇದು ತುಂಬಾ ಶೋಚನೀಯವಾಗಿದೆ ಸಂಶಯಚಿತ್ತನಾದ ಗಂಡನು ಹೆಂಡತಿಯನ್ನು ಪೆಟ್ಟಿಗೆಯಲ್ಲಿಟ್ಟು ಕಾಯುವಂತೆ ಇತ್ತಲಾಗಿ ಅನೇಕ ಸಂಸ್ಥಾನಿಕರು ತಮ್ಮ ಪ್ರಜೆಗಳ ರಾಜನಿಷ್ಠೆಯನ್ನು ಕಾಯುತ್ತಿದ್ದಾರೆ. ಆದರೆ ಕಾಶ್ಮೀರದ ಮಹಾರಾಜರಾದರೂ ಕಡಿಮೆ ಪಕ್ಷದಲ್ಲಿ ಈ ವರ್ಗಕ್ಕೆ ಸೇರಿದವರಾಗಲಿಕ್ಕಿಲ್ಲವೆಂದು ನಾವು ತಿಳುಕೊಂಡಿದ್ದೆವು. ಪರಂತು ಈ ಸಂಗತಿಯನ್ನು ನೋಡುವಾಗ ನಮ್ಮ ತಿಳುವಳಿಕೆಯು ತಪ್ಪೆಂದು ಈಗ ಮರೆಮಾಚದೆ ನಾವು ಒಪ್ಪಿಕೊಳ್ಳಬೇಕಾಗಿದೆ. ಯಾವ ಗೃಹಸ್ಥರಿಗೆ ಬ್ರಿಟಿಷ್ ರಾಜ್ಯದಲ್ಲಿ ನಿಲ್ಲಲು ಮುಚ್ಚಳಿಕೆಯ ಅಗತ್ಯವಿಲ್ಲವೊ ಮತ್ತು ಯಾರಿಂದ ಶಾಂತತಾಭಂಗವಾಗುವುದಿಲ್ಲವೊ ಅಂಥವರ ಆಗಮನದಿಂದ ಸಂಸ್ಥಾನದ ಸೀಮೆಯಲ್ಲಿ ಮಾತ್ರ ಅಸ್ವಾಸ್ಥ್ಯವು ಹೇಗೆ ಉಂಟಾದೀತು? ಎಂದರೆ ಬ್ರಿಟಿಷ್ ರಾಜ್ಯದ ಕಾರಭಾರಕ್ಕಿಂತ ಸಂಸ್ಥಾನಿಕರ ಕಾರಭಾರವು ಹೆಚ್ಚು ಒತ್ತಾಳಿಕೆಯದು, ಉಪದ್ರವಕಾರಕವಾದ್ದು ಎಂದು ಇದರ ಅರ್ಥವೆ? ಮತ್ತು ಈ ಅರ್ಥವು ನಿಜವೆಂದಿದ್ದರೆ ಅದು ಇಂಥ ಉಪಾಯದಿಂದ ಸಿದ್ಧವಾಗಲಿಕ್ಕಿಲ್ಲ. ಕಾರಣ, ಈಗ ನವಜಾಗೃತಿಯ ಸೂರ್ಯೋದಯವುಂಟಾಗಿ ಅದರ ಕಿರಣಗಳು ಎಲ್ಲ ಕಡೆಯಲ್ಲಿ ಹಬ್ಬಿವೆ. ಇದನ್ನು ಯಾರೂ ಮರೆಯಕೂಡದು. ಇಂಥ ಪರಿಸ್ಥಿತಿಯಲ್ಲಿ ದಾಸರಂಥ ದೇಶಭಕ್ತರನ್ನು ತಮ್ಮ ಗಡಿಯಲ್ಲಿ ಪ್ರವೇಶಗೊಡದೆ ಇದ್ದು ನವಜಾಗೃತಿಯನ್ನು ನಿಲ್ಲಿಸಿದ್ದೇನೆಂದು ತಿಳಿದುಕೊಳ್ಳುವದು, ನೆರೆಮನೆಯ ಮುದುಕಿಯು ಸೂರ್ಯೋದಯವನ್ನು ನಿಲ್ಲಿಸಲು ತನ್ನ ಕೋಳಿಯನ್ನು ಕೂಗಗೊಡದೆ ಅದರ ಬಾಯನ್ನು ಬಿಗಿಯುವಂತೆ ಉಪಹಾಸಾಸ್ಪದವಾಗಿದೆ! ಇಲ್ಲವೆ, ಸಂಸ್ಥಾನಿಕರು ಆತ್ಮ ಸಂತೋಷದಿಂದ ಇದನ್ನು ಮಾಡದೆ ಬೇರೆಯವರ ಪ್ರೇರಣೆಯಿಂದ ಮಾಡಿದ್ದಾದರೆ, ಮನೆಗೆ ಬಂದ ಅತಿಥಿಯ ಕೈಯಿಂದ ಸರ್ಪವನ್ನು ಪರಸ್ಪರ ಕೊಲ್ಲಿಸುವಂತೆ ಇದು ನಮ್ಮ ನೋಕರಶಾಹಿಯ ಚಮತ್ಕಾರವೆಂದೆ ಹೇಳಬೇಕು. ಹೇಗೂ ಇರಲಿ, ತತ್ಕಾಲಕ್ಕೆ ಹಿಂದೂಸ್ಥಾನದೊಳಗಿನ ದೇಶೀಯ ಅರಸರು ಬಹು ನಾಜೂಕ ಪ್ರಕೃತಿಯವರಾಗುತ್ತಾ ಬಂದಿದ್ದಾರೆಂಬುದು ಮಾತ್ರ ಸತ್ಯವು.

೨. ಮತ್ತು ಈ ಸಂಗತಿಯು ಇನ್ನೊಂದು ದೃಷ್ಟಾಂತದಿಂದ ಕೂಡ ಸ್ಪಷ್ಟವಾಗುತ್ತದೆ. ಹಿಂದುಸ್ಥಾನ ಸರಕಾರವು ಪ್ರೆಸ್ ಎಕ್ಟನ್ನು ರದ್ದು ಮಾಡಿದ ಸಂಗತಿಯು ವಾಚಕರ ನೆನಪಿನಲ್ಲಿರಬಹುದು. ಈ ಎಕ್ಟು ರದ್ದಾದ ಕಾರಣ ಸಂಸ್ಥಾನಿಕರ ಸಂರಕ್ಷಣಕ್ಕಾಗಿ ಒಂದು ಸಾಧನದ ಕೊರತೆಯುಂಟಾಗಿತ್ತು. ಈ ಕೊರತೆಯನ್ನು ಹೋಗಲಾಡಿಸಲು ಸಂಸ್ಥಾನಿಕರ ಮಟ್ಟಿಗೆ ಒಂದು, ಇದೆ ನಮೂನೆಯ ಬೀಲು ಅಗತ್ಯವೆಂದು ವೈಸರಾಯರು ಸಿಮ್ಲಾದ ಕೌನ್ಸಿಲುಗಳ ಈ ಅಧಿವೇಶನದ ಆದಿಯಲ್ಲಿ ಮೊನ್ನೆ ಮಾತಾಡಿದ್ದರು. ಇದರ ಮೇಲಿಂದ ಇಂಥದೊಂದು ಹೊಸ ಏರ್ಪಾಡಾಗಲಿಕ್ಕಿದೆ ಎಂದು ಮೊದಲೆ ಗೊತ್ತಾಗಿತ್ತು. ಆ ಪ್ರಕಾರ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಸರಕಾರದ ಕಡೆಯಿಂದ ಹೊಸ ಪ್ರೆಸ್ ಎಕ್ಟಿನ ಬೀಲು ಇಡೋಣಾಯಿತು. ಸಂಸ್ಥಾನಿಕರ ಕಾರಭಾರದ ಮೇಲೆ ಪತ್ರಿಕಾಕರ್ತರು ಟೀಕೆಯನ್ನು ಮಾಡುತ್ತಾರೆಂಬ ನೆವವನ್ನಿಟ್ಟುಕೊಂಡು ಈ ಬೀಲು ಮುಂದಕ್ಕೆ ತರೋಣಾಗಿದೆ. ಬ್ರಿಟಿಷ್ ಹಿಂದುಸ್ಥಾನದೊಳಗಿನ ಪತ್ರಕಾರರು ದೇಶೀಯ ರಾಜರ ವಿಷಯದಲ್ಲಿ ರಾಜನಿಷ್ಠೆಯನ್ನು ವ್ಯಕ್ತಗೊಳಿಸಬೇಕು, ಎಂಬದೆ ಇದರ ಇತ್ಯರ್ಥವು. ಆದರೆ ದೇಶೀಯ ಅರಸರು ಬ್ರಿಟಿಷ್ ಪ್ರಜೆಗಳನ್ನು ಆಳುವವರಾದರೆ ಅವರ ವಿಷಯವಾಗಿ ರಾಜನಿಷ್ಠೆಯನ್ನು ವ್ಯಕ್ತಗೊಳಿಸುವುದು ಸಮರ್ಪಕವು. ಪರಂತು ಆಳುವವರಲ್ಲದವರ ಬಗ್ಗೆ ರಾಜನಿಷ್ಠೆಯನ್ನು ತೋರಿಸಬೇಕೆಂದು ಅಪೇಕ್ಷೆಪಡುವುದು ಅಸಮಂಜಸ ಮಾತ್ರವಲ್ಲ, ಕೇವಲ ಮೂಢತನದ ಲಕ್ಷಣವಾಗಿದೆ! ಆದ್ದರಿಂದ ಇಂಥ ಮೂರ್ಖತನದ ಕಾನೂನಿನ ಒಂಟೆಯ ಮರಿಗೆ ಎಡೆಕೊಡಬಾರದೆಂದು ಎಸೆಂಬ್ಲಿಯಲ್ಲಿ ಲೋಕಪಕ್ಷದವರು ಇದರ ಪ್ರಾಥಮಿಕ ವಾಚನದ ಸಮಯದಲ್ಲೆ ಇದನ್ನು ತಳ್ಳಿಹಾಕಿದರು. ಆದರೆ ಮರುದಿನ ವೈಸರಾಯರು, ಹೊಸ ಸುಧಾರಣೆಯ ಕಾನೂನಿನಲ್ಲಿ ಇಟ್ಟ ಸಂದರ್ಭವನ್ನು ಉಪಯೋಗಿಸಿಕೊಂಡು ತನ್ನ ಸರ್ಟಿಫಿಕೇಟು ಕೊಟ್ಟು ಪಾಸುಮಾಡಿಸಿಕೊಂಡರು! ವೈಸರಾಯರಿಗೆ ಸ್ವಂತ ಮತವನ್ನು ಎಸೆಂಬ್ಲಿಗೆ ವಿರುದ್ಧವಾಗಿ ನಡಿಸುವ ಅಧಿಕಾರವುಂಟೆಂಬುದು ನಿಜ. ಆದರೆ ಇಂಥ ಸಾಮಾನ್ಯ ಸಂಗತಿಗಳಲ್ಲಿ ಸಹ ಆ ಅಧಿಕಾರವನ್ನು ಉಪಯೋಗಿಸುವುದೆಂದರೆ ಅದು ಅದರ ದುರುಪಯೋಗವೆ ಸರಿ. ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಅನೇಕ ನಾಮದಾರರು ಬೇರೆ ಬೇರೆ ಉಪಸೂಚನೆಗಳನ್ನು ತಂದರು. ಮತ್ತು ಈ ಬೀಲನ್ನು ಇಷ್ಟು ಬೇಗನೆ ಪಾಸುಮಾಡುವುದು ಬೇಡ, ಅದರಲ್ಲಿ ಅನೇಕ ಆಕ್ಷೇಪಕರವಾದ ಶಬ್ದಗಳಿವೆ, ಅವುಗಳನ್ನು ಆಲೋಚಿಸಲು ಸಮಯವು ಬೇಕು ಎಂದು ಸಭಾಸದರು ಹೇಳಿದಾಗ್ಲೂ ಹಟಹಿಡಿದು ಸರಕಾರದ ಕಡೆಯವರು ಸದರಿ ಬೀಲನ್ನು ಪಾಸುಮಾಡಿಕೊಂಡಿದ್ದಾರೆ. ಇಂಥ ಒಂದು ಬೀಲನ್ನು ಪಾಸುಮಾಡಿಸಿಕೊಡುವ ಬಗ್ಗೆ ವೈಸರಾಯರು ಸಂಸ್ಥಾನಿಕರಿಗೆ ವಾಗ್ದಾನ ಮಾಡಿರುವರಂತೆ. ಅದು ಕಾರಣ ಇಷ್ಟು ಅವಸರವು ಮಾಡಲ್ಪಟ್ಟದೆ. ಪರಂತು ಎಪ್ಪತ್ತು ವರ್ಷದ ಮುದುಕನು ಎರಡನೆಯ ಅಥವಾ ಮೂರನೆಯ ಮದುವೆ ಮಾಡಿಕೊಳ್ಳುವಾಗ್ಗ ಎಲ್ಲಾದರೂ ವಿಘ್ನಬಂದೀತೆಂದು, ಅವಸರ ಮಾಡಿ ಹೇಗೆ ಒಮ್ಮೆ ಮಾಲೆಯನ್ನು ಹಾಕಿಸಿಕೊಳ್ಳುವನೊ, ಹಾಗೆ ವೈಸರಾಯರಾಗಲಿ ಅಥವಾ ಎಕ್ಸಿಕ್ಯುಟಿವ್ ಕೌನ್ಸಿಲಾಗಲಿ, ಸಂಸ್ಥಾನಿಕರ ವಿಷಯವಾಗಿದ್ದ ಈ ಪ್ರೆಸ್ ಬೀಲನ್ನು ಬಹು ಅವಸರಪಟ್ಟು ಪಾಸುಮಾಡಿಸಿಕೊಳ್ಳುವುದನ್ನು ನೋಡುವಾಗ ಒಂದು ಕಡೆಯಲ್ಲಿ ನಗು ಬಂದರೂ ಇನ್ನೊಂದು ಕಡೆಯಲ್ಲಿ ವಿಷಾದವುಂಟಾಗದೆ ಇರದು. ಸಂಸ್ಥಾನಿಕರು ಜನತೆಯ ಹಿತದ ಮಟ್ಟಿಗೆ ನಿರಂಕುಶರಾಗಿರಬೇಕೆಂದು ಆ ಸಂಸ್ಥಾನಿಕರಂತೆ, ನಮ್ಮ ಸರಕಾರವೂ ಕೂಡ ನೆನಸುವುದೊ ಹೇಗೆ? ನಮ್ಮ ಸರಕಾರವು ಹೀಗೆ ನೆನಸುವುದರಲ್ಲಿ ಯಾವ ಉದ್ದೇಶವಿರಬಹುದು? ದೇಶೀಯ ಸಂಸ್ಥಾನಿಕರ ಅಪಾತ್ರತೆಯನ್ನೆ ಸಿದ್ಧಮಾಡಿ ತೋರಿಸುವ ಉದ್ದೇಶವಿರಬಹುದೊ! ಮತ್ತು ಅದು ಹಾಗೆ ಇದ್ದದ್ದಾದರೆ ಸಂಸ್ಥಾನಿಕರಿಗೆ ಇದರಿಂದ ನಿಜವಾದ ಯಾವ ಸಹಾಯವೂ ಉಂಟಾಗಲಿಕ್ಕಿಲ್ಲ. ಲೋಕಪಕ್ಷದ ಅಪೇಕ್ಷೆಯನ್ನು ಪೂರಯಿಸುವುದೆ ಈಗಿನ ಸಮಯದಲ್ಲಿ ನಿಜವಾದ ಜಾಣತನವು.

೩. ಲೆಜಿಸ್ಲೇಟಿವ್ ಎಸೆಂಬ್ಲಿಯ ಸದ್ಯದ ಅಧಿವೇಶನವು ಮುಗಿಯಿತು. ಇದೆ ಸಂದರ್ಭದಲ್ಲಿ ಇಲ್ಲಿಯ ಹೋಮ್ ಮೆಂಬರರಾದ ಸರ್. ವಿಲಿಯಮ್ ವಿನ್ಸೆಂಟರು ಕಾರ್ಯನಿವೃತ್ತರಾಗಿ ನಿಜದಾಮಕ್ಕೆ ತೆರಳುತ್ತಿದ್ದಾರೆ. ವಿನ್ಸೆಂಟರು ಹಿಂದೂದೇಶದ ರಾಜಕೀಯ ವಿಷಯದಲ್ಲಿ ಎಷ್ಟು ಅನವರತ ಕಾರ್ಯವನ್ನು ಮಾಡುತ್ತಿದ್ದರೆಂಬುದಕ್ಕೆ ಪ್ರತ್ಯಕ್ಷ ಅವರ ಹುದ್ದೆಯೆ ಸಾಕ್ಷಿಯಾಗಿದೆ. ಇವರು ಈಗಿನ ಸುಧಾರಣೆಯ ಪೂರ್ವದಲ್ಲಿ ಲೊರ್ಡ ಚೆಮ್ಸಫರ್ಡರ ಆಳಿಕೆಯಲ್ಲಿ ಸರಕಾರಿ ಮೆಂಬರರಿದ್ದರು. ಆ ಸಮಯದಲ್ಲಿ ಇವರು ಯಾವ ರೀತಿಯಿಂದ ಆಳುತ್ತಿದ್ದರೆಂಬುದು ಸರ್ವವಿದಿತವೆ ಸರಿ. ಆಗ ಇವರು ಬಿನ್‌ಸರಕಾರಿ ಮೆಂಬರರನ್ನು ತನ್ನ ಕಂಕುಳದಲ್ಲಿ ಇಟ್ಟು ಎಲ್ಲವನ್ನೂ ಏಕತಂತ್ರೀ ಕಾರಭಾರ (autocratic)ದಿಂದ ಆಳುತ್ತಿದ್ದರು. ಸುಧಾರಣೆಯು ಬಂದರೂ ಅವರ ಅವಿರತ ಪ್ರಯತ್ನವನ್ನು ನೋಡಿ ಸರಕಾರವು ಪುನಃ ಅದೆ ಸ್ಥಾನವನ್ನು ಇವರಿಗೆ ಕೊಟ್ಟಿತು. ಈ ಹೊಸ ಕೌನ್ಸಿಲು ಮೊದಲಿನದಲ್ಲದಿದ್ದರೂ ವಿನ್ಸೆಂಟರ ಕೈಕೆಳಗಿನದ್ದೆ ಎಂದು ಹೇಳಬಹುದು. ಯಾವ ಸಮಯದಲ್ಲಿ ಬಿರುಗಾಳಿ ಏಳುವಸಂದರ್ಭವು ತೋರುವುದೊ ಆಗ ಇವರು ಬಹು ಜಾಗರೂಕತೆಯಿಂದ ಚುಕ್ಕಾಣಿಯನ್ನು ತಿರುಗಿಸಿ ತಮ್ಮ ನೌಕೆಯನ್ನು ತೆಕ್ಕೊಂಡು ಹೋಗುತ್ತಿದ್ದರು. ಇವರು ಮೂರ್ತಿಮಂತ ಬಿರೊಕ್ರಸಿಯಾಗಿದ್ದರು. ಹಿಂದು ಪತ್ರಿಕೆಯು ಹೇಳುವಂತೆ ಬಿರೊಕ್ರಸಿಯು ಇವರ ಪ್ರತಿಯೊಂದು ಅವಯವದಲ್ಲಿ ತೋರುತ್ತಿತ್ತು. ಹಿಂದಿಗಳಿಗೆ ಬಹುಮಾನವನ್ನು ಕೊಡುವುದಾಗಲಿ ಹೊಸ ತೆರಿಗೆಯನ್ನು ಹೊರಿಸುವುದಾಗಲಿ ಇವೆಲ್ಲವು ವಿನ್ಸೆಂಟರ ತಲೆಯ ಮೇಲೆ ಇತ್ತು. ಇಂಥ ಹಲವು ಕೃತ್ಯಗಳಿದ್ದರೂ ಈ ಮಹಾಶಯರು ಇಂಪಾದ ನುಡಿಗಳಿಂದ ಮೆಂಬರರನ್ನು ಮೋಹಿಸಿ ತಮ್ಮ ಕಾರ್ಯವನ್ನು ಸಾಧಿಸುತ್ತಿದ್ದರು. ಇವರ ಈ ಗುಣವನ್ನು ನೋಡಿಯೆ ಇವರ ಕೆಲಸದ ಮುದತು ಹೆಚ್ಚಿಸಲ್ಪಟ್ಟಿತು. ಆದರೆ ಇವರ ಇಷ್ಟು ದೊಡ್ಡ ಆಳಿಕೆಯಲ್ಲಿ ಎಷ್ಟು ಮಹತ್ವ ಸಂಗತಿಗಳು ನಡೆದರೂ ಅದರಿಂದ ಹಿಂದಿಗಳಿಗೆ ಏನೂ ಲಾಭವಾಗಿದ್ದಿಲ್ಲ. ಹಿಂದಿಗಳ ದೀನಸ್ಥಿತಿಯು ಇವರ ಕಠೋರ ಹೃದಯದಲ್ಲಿ ಎಂದೂ ಪ್ರವೇಶಿಸುತ್ತಿದ್ದಿಲ್ಲ. ಇವರ ಚರಿತ್ರೆಯಲ್ಲಿ ಒಂದು ಆಶ್ಚರ್ಯ ಸಂಗತಿಯು ಕಂಡುಬಂದೀತು. ಇವರು ಇಷ್ಟು ದೊಡ್ಡ ಬ್ಯುರೊಕ್ರಸಿಯ ಮೂರ್ತಿಗಳಾದರೂ ಗವರ್ನರರ ಸ್ಥಾನವನ್ನು ಏಕೆ ಹೊಂದಲಿಲ್ಲ! ಇದೊಂದು ನಿಜವಾದ ಚೋದ್ಯವಾಗಿದ್ದರೂ ವಿನ್ಸೆಂಟರ ಸ್ಥಾನವು ಗವರ್ನರ ಹುದ್ದೆಗಿಂತಲೂ ಮಹತ್ವದ್ದಾಗಿತ್ತು. ಎಲ್ಲ ಗವರ್ನರರ ಬೆನ್ನನ್ನು ಇವರು ತಟ್ಟುತ್ತಿದ್ದರಿಂದ. ಇವರ ಭಕ್ತವರ್ಗದವರು ಇವರ ಪ್ರೀತಿಗೆಪಾತ್ರರಾಗಲು ಇಚ್ಛಿಸುತ್ತಿದ್ದರು. ಇರಲಿ. ಇವರ ಆಳಿಕೆಯಲ್ಲಿ ಎರಡು ಮಹತ್ವದ ಸಂಗತಿಗಳು ಆಗಿಹೋದವು. ರಾಲೆಟ ಎಕ್ಟು ಪಾಸು ಮಾಡಿಸಲ್ಪಟ್ಟಿತು. ಪಂಜಾಬದಲ್ಲಿ ಮಾರ್ಶಲ್ ಲೋ ಇಡಲ್ಪಟ್ಟಿತು. ಇಂಥ ಭಯಂಕರ ಸ್ಥಿತಿಯು ಇವರ ಆಳಿಕೆಯಲ್ಲಿ ಉತ್ಪನ್ನವಾದರೂ ಇವರು ತಿಲಮಾತ್ರವೂ ಕನಿಕರಪಡಲಿಲ್ಲ. ಎಂದ ಮೇಲೆ ಸರ್. ವಿನ್ಸೆಂಟರು ಒಂದುವೇಳೆ ಗವರ್ನರ ಪದವಿಗೆ ಏರಿಸಲ್ಪಟ್ಟರೆ ಯಾವ ರೀತಿಯಿಂದ ಆಳುತಿದ್ದರೆಂಬುದನ್ನು ವಾಚಕರೆ ಊಹಿಸಲಿ. ಈಗ ಈ ಮಹಾ ಪುರುಷರು ಸ್ವದೇಶಕ್ಕೆ ತೆರಳುತ್ತಿದ್ದಾರೆ. ಇವರನ್ನು ಒಳ್ಳೆ ರೀತಿಯಿಂದ ಆಶೀರ್ವದಿಸಿ ಕಳುಹಿಸುವುದು ನಮ್ಮ ಕರ್ತವ್ಯವು. ಒಂದು ವೇಳೆ ಇವರನ್ನು ನಾವು ಕಠೋರವಾಗಿ ಟೀಕಿಸಿದರೂ ಇವರ ವ್ಯಕ್ತಿ ವಿಷಯಕವಾಗಿಲ್ಲವೆಂಬುದು ನಾವು ತಿರುಗಿ ಸೂಚಿಸಬೇಕಾದ್ದಿಲ್ಲ. ಇವರು ತಮ್ಮ ದೇಶದಲ್ಲಿ ಹೋದ ಮೇಲೆ ಹಿಂದೂಸ್ಥಾನಕ್ಕೆ ಇನ್ನೂ ಯಾವ ಹಿತವನ್ನು ಮಾಡುವವರಿದ್ದಾರೆಂಬುದನ್ನು ನೋಡೋಣ.

೪. ಮುಂಬಯಿ ಕೌನ್ಸಿಲಿನ ಅಧಿವೇಶನದ ಪ್ರಥಮ ದಿವಸ ಅಲ್ಲಿಯ ಗವರ್ನರರಾದ ಸರ್. ಜಿಓರ್ಜ ಲೊಯ್ಡರು ಒಂದು ಭಾಷಣವನ್ನು ಮಾಡಿದರು. ಇದರಲ್ಲಿ ಇವರು ಎಂದಿನಂತೆ ಹಿಂದುಸ್ಥಾನದ ಹೋದ ವರುಷದ ಇತಿಹಾಸವನ್ನು ಪಾರಾಯಣ ಮಾಡಿ ಅಸಹಕಾರಿತೆಯನ್ನು ಯಥಾರೀತಿಯಾಗಿ ವಿರೋಧಿಸಿದರು. ಹಿಂದೂಸ್ಥಾನದ ಸ್ವರಾಜ್ಯ ಚಳವಳವು ಹೇಗೆ ಅಸಹಕಾರಿತೆಯಿಂದ ಹಾಳುಮಾಡಲ್ಪಟ್ಟಿತ್ತೆಂಬುದನ್ನು ಬಹಳ ವಿಸ್ತಾರವಾಗಿ ವಿಶದಪಡಿಸಿ ತಾವು ನಡಿಸಿದ ಹಲವು ಸಾಹಸಗಳನ್ನು ಹೇಳತೊಡಗಿದರು. ‘ನಿಜವಾಗಿಯೂ ಸರಕಾರವು ಅಸಹಕಾರಿಗಳನ್ನು ಆದಷ್ಟು ದಯೆಯಿಂದ ಶಿಕ್ಷಿಸಿದೆ ಎಂದು ಅವರು ಹೇಳಿದರು. ಇವರ ಭಾಷಣದಲ್ಲಿ ಇದಕ್ಕಿಂತಲೂ ಮುಖ್ಯವಾದ ಮಾತು ಯಾವುದೆಂದರೆ „ಈಗ ಕೆಲವು ಅಸಹಕಾರಿಗಳು ಸತ್ಯವನ್ನು ಕಂಡಿದ್ದಾರೆಂದು ತಿಳಿಯುತ್ತದೆ. ಯಾಕಂದರೆ ಅವರು ಕೌನ್ಸಿಲುಗಳ ನಿಜವಾದ ಮಹತ್ವವನ್ನು ತಿಳಿದು ಕೌನ್ಸಿಲುಗಳಿಗೆ ಹೋಗಬೇಕೆಂದು ಇಚ್ಛಿಸುತ್ತಾರೆ. ಇದು ಬಹು ಉತ್ತಮವು. ನನ್ನ ಹೇಳಿಕೆಯೇನೆಂದರೆ, ಎಲ್ಲ ಮುಖಂಡರು ಒಟ್ಟಿಗೆ ಸೇರಿ ಕೌನ್ಸಿಲುಗಳ ಮುಖಾಂತರ ತಮ್ಮ ಹೇಳಿಕೆಯನ್ನು ಪಡಕೊಳ್ಳಬಹುದು'' ಮುಂತಾದ ಹಲವು ಇಂಪಾದ ಮತ್ತು ರುಚಿಕರವಾದ ವಾಗ್ಜಾಲವನ್ನು ಹರಡಿಬಿಟ್ಟರು. ಇವರ ಭಾಷಣ ಕಾಲದಲ್ಲಿ ಇವರ ಮಿತ್ರರಾದ ಹಾಗು ಆಮಂತ್ರಿತರಾದ ವಿಂಟರಟನ್ ಸಾಹೇಬರು ಹಾಜರಿದ್ದರು. ಹಿಂದೂಸ್ಥಾನದ ಅಂಡರ ಸೆಕ್ರೆಟರಿಗಳ ಮನಸ್ಸಿನ ಮೇಲೆ ಹಿಂದಿಗಳ ಮೇಲಿನ ತನ್ನ ಪ್ರೀತಿಯನ್ನು ವ್ಯಕ್ತಮಾಡಲು ಈ ಕುಟಿಲನೀತಿಯನ್ನು ಹಾಡಿರಬಹುದು! ಅಥವಾ ಇಂಗ್ಲೆಂಡಿನಿಂದ ಮುಖ್ಯ ಮಂತ್ರಿಯ ಬಾಯಿಯಿಂದ ಯಾವ ವಾಗ್ಬಾಣಗಳು ಹೊರಟವೆಯೊ ಮತ್ತು ವೈಸರಾಯರಿಂದ ಯಾವ ಟೀಕೆಯು ಮುಖ್ಯ ಮಂತ್ರಿಗಳ ಭಾಷಣದ ಮೇಲೆ ಮಾಡಲ್ಪಟ್ಟದೆಯೊ ಇವೆಲ್ಲವನ್ನೂ ಮರೆತು ಬಿಡಲು ಹಿಂದಿಗಳಿಗೆ ಈ ರೀತಿಯಿಂದ ಗಾಯನಮಾಡಿ ತೋರಿಸುತ್ತಾರೆ.- ಜನರು ನಿಜವಾದ ಸ್ವರಾಜ್ಯಲಾಭವನ್ನು ಪಡೆಯಬೇಕೆಂದೂ ಕಂಪಲ್‌ಸರಿ ಎಜ್ಯುಕೇಶನ್ನೂ ಕೊಡಬೇಕೆಂದೂ ತನ್ನ ಸರಕಾರವು ಇಚ್ಛಿಸುತ್ತದೆ ಎಂದು ಜೋರ್ಜ ಲೊಯ್ಡರು ನೆರೆದ ಜನರ ಮುಂದೆ ಹೇಳಿದರು. ನಮಗೆ ಆಶ್ಚರ್ಯಕರವಾದ ಸಂಗತಿಯು ಇದರಲ್ಲಿ ಇಷ್ಟೆ. ಅಸಹಕಾರಿಗಳು ಕೌನ್ಸಿಲುಗಳ ಮುಂದೆ ಬರಕೂಡದೆಂದು ಮಂತ್ರಿಗಳು ಆಗ್ರಹ ಹಿಡಿದಾಗ ಇವರು ಕುಟಿಲತನದಿಂದ ಕಣ್ಣು ಮುರಿದು ಅಸಹಕಾರಿಗಳು ಕೌನ್ಸಿಲುಗಳಲ್ಲಿ ಪ್ರವೇಶಿಸಿದರೆ ಅಡ್ಡಿ ಇಲ್ಲವೆಂದು ಹೇಳುವುದು ಆಶ್ಚರ್ಯವಲ್ಲವೆ? ಇರಲಿ. ಇದೊಂದು ಬ್ಯುರೊಕ್ರಸಿಯ ಹೊಸ ಬಲೆ! ಇದರಿಂದ ಯಾವ ಲಾಭ ಪಡೆಯಲು ಸರಕಾರವು ಇಚಿಸುತ್ತದೆ ಎಂಬುದನ್ನು ಇನ್ನು ನೋಡಬೇಕಾಗಿದೆ. ಕೆಲವು ಸಮಯವು ಕಳೆದ ನಂತರ ಎಲ್ಲವೂ ವಿಶದವಾಗುವುದು.

೫. ಸರಕಾರದ ದುರಾಗ್ರಹವು ಪ್ರತಿ ದಿವಸ ಒಂದೊಂದು ಪ್ರಾಂತದಲ್ಲಿ ವ್ಯಕ್ತವಾಗುತ್ತಿದೆ. ಸಿಲೋನ ಸರಕಾರದವರು ಇತ್ತೀಚೆಗೆ ಒಂದು ಹೊಸ ಠರಾವನ್ನು ಅಲ್ಲಿಯ ಕೌನ್ಸಿಲಿನ ಮುಂದೆ ತಂದಿದ್ದರು. ಈ ಠರಾವಿನಲ್ಲಿ ಅಧಿಕಾರಿಗಳ ಸಂಬಳದಲ್ಲಿ ಹೊಸ ಸುಧಾರಣೆಯು ಮಾಡಲ್ಪಟ್ಟಿತು. ಅದಲ್ಲದೆ ಜನರ ಮೇಲೆ ಹೊಸ ತೆರಿಗೆಯನ್ನು ಹೊರಿಸುವುದೂ ಕೂಡ ಸೂಚಿಸಿತ್ತು. ಈ ಠರಾವನ್ನು ಅಲ್ಲಿ ಎರಡು ದಿವಸಗಳ ತನಕ ಚರ್ಚಿಸಲ್ಪಟ್ಟ ಬಳಿಕ ಜನರ ಪ್ರತಿನಿಧಿಗಳು ಏಕಮತವಾಗಿ ನಿರೋಧಿಸಿದರು. ಆದರೂ ಕೂಡ ಗವರ್ನರ ದೊರೆಗಳಾದ ಸರ್. ವಿಲಿಯಮ್ ಮೇನಿಂಗರು ತನ್ನ ಸರಕಾರೀ ಮೆಂಬರರ ಬಲದಿಂದ ಅದನ್ನು ಪಾಸುಮಾಡಿಸಿಯೆ ಬಿಟ್ಟರು! ಈ ಠರಾವನ್ನು ತಂದಾಗ ಎಲ್ಲ ಮತದವರು ನಿಷೇಧಿಸಿದರು. ಪೂರ್ವದಲ್ಲಿ ಸರಕಾರಿ ಕೆಲಸದಲ್ಲಿದ್ದ ಮಿ. ಟಿಲೆಕರತ್ನ ಇವರು ಸರಕಾರವು ಈ ತರದ ಹಟ ಹಿಡಿಯಬಾರದೆಂದು ಬಹು ನಮ್ರ ರೀತಿಯಿಂದ ಪ್ರಾರ್ಥಿಸಿದರು! ಕೊಂಗ್ರೆಸ ತಂಡದವರಾದ ಮಿ. ಪಿಯುರಿಸರವರು ಸರಕಾರವು ಬಲಾತ್ಕಾರದಿಂದ ಪ್ರಜೆಗಳಿಗೆ ವಿರುದ್ಧವಾಗಿ ಠರಾವನ್ನು ಪಾಸುಮಾಡಿದ್ದರೆ ನಾವು ನಿಜವಾಗಿಯೂ ಅಸಹಕಾರವನ್ನು ಮಾಡುವೆವು. ಸರಕಾರದೊಡನೆ ಸಹಕಾರ ಮಾಡುವುದು ನಮ್ಮ ಇಷ್ಟವಿದ್ದರೂ ಈ ಸಂದರ್ಭದಲ್ಲಿ ನಮ್ಮಿಂದ ಸಹಾಯ್ಯಮಾಡಲಿಕ್ಕಾಗಲಿಕ್ಕಿಲ್ಲವೆಂದು ಸೂಚಿಸಿದರು. ಆದರೂ ಗವರ್ನರ ದೊರೆಗಳು ಈ ಮಾತುಗಳಿಗೆ ಕಿವಿಗೊಡಲಿಲ್ಲ! ಇದಲ್ಲವೆ ದುರಾಗ್ರಹ! ತನ್ನ ಭಕ್ತರನ್ನೂ ಹೆದರಿಸಿ ಅವರ ಸಹಾಯದಿಂದ ಪ್ರಜೆಗಳ ಸಮ್ಮತವಿಲ್ಲದ್ದನ್ನು ಪಾಸುಮಾಡುವುದರಲ್ಲಿ ಯಾವ ಭೂಷಣವು, ಅಥವಾ ಶೌರ್ಯವು ವ್ಯಕ್ತವಾಗುತ್ತದೆ! ಇರಲಿ. ಹೇಗಾದರೂ

ಗವರ್ನರರು ತೃಪ್ತಿ ಹೊಂದಿದರಲ್ಲವೆ! ಶಾಭಾಸ್, ಗವರ್ನರರೆ! ಇದೆ ನಿಮ್ಮ ಶೌರ್ಯವು, ಠರಾವು ಪಾಸಾದ ನಂತರ ಪ್ರಜೆಗಳ ಪ್ರಮುಖ ಪ್ರತಿನಿಧಿಗಳು ಸಭೆಯಿಂದ—ಕೌನ್ಸಿಲಿನಿಂದ ಹೊರಟುಹೋದರು! ಇವರ ಈ ಧೈರ್ಯವನ್ನು ನೋಡಿ ನೆರೆದ ಪ್ರೇಕ್ಷಕರು ಕೈಚಪ್ಪಾಳೆಯಿಂದಲೂ ಬಾಯಿಂದಲೂ ಪ್ರತಿನಿಧಿಗಳ ಸಾಹಸವನ್ನು ಕೊಂಡಾಡಿದರು. ಆದ್ದರಿಂದ ಸಭೆಯಲ್ಲಿ ದೊಡ್ಡ ಗದ್ದಲವಾಗಿ ಮುಂದಿನ ಕೆಲಸಮಾಡಲೂ ಕೂಡ ಸಾಧ್ಯವಾಗಲಿಲ್ಲ. ಸಾಕ್ಷಾತ ಗವರ್ನರ ದೊರೆಗಳ ಮುಂದೆ ಗದ್ದಲ ಎಬ್ಬಿಸುವುದು ಎಷ್ಟು ಸಾಹಸವು! ಇದು ತಮ್ಮ ದುರಾಗ್ರಹದ ಫಲವು. ಸಾಹೇಬರೇನೊ ಪೋಲೀಸರ ಸಹಾಯದಿಂದ ಜನರನ್ನು ಹೊರದೂಡಿ ಪುನಃ ಕೆಲಸಮಾಡಲು ತೊಡಗಿದರು! ಆದರೆ ಅಲ್ಲಿಯ ಖುರ್ಚಿಗಳು ಸ್ವಾಮಿಹೀನವಾಗಿ ಅಸ್ತಾವ್ಯಸ್ತವಾಗಿ ಬಿದ್ದದ್ದರಿಂದ ಸಾಹೇಬರ ಉದ್ದೇಶವು ಪೂರ್ಣವಾಗಲಿಲ್ಲ. ಒಬ್ಬ ಪ್ರತಿನಿಧಿಯಂತೂ ಸ್ಟೇಟ ಸೆಕ್ರೆಟರಿಯವರಿಗೆ ತನ್ನ ನಿಷೇಧವನ್ನು ತಂತಿ ಮೂಲಕ ತಿಳಿಸಿದ್ದಾನೆ. ಇಂಥ ಎಷ್ಟು ನಿಷೇಧವನ್ನು ವ್ಯಕ್ತಮಾಡಿದಾಗ್ಲೂ ಸರಕಾರವು ತನ್ನ ದುರಾಗ್ರಹವನ್ನು ಬಿಟ್ಟೀತೆ? ಈ ಹೊಸ ಸಂಗತಿಯಿಂದ ಹಿಂದೂಸ್ಥಾನವು ಒಂದು ಹೊಸ ಸಂಗತಿಯನ್ನು ಕಲಿಯಬೇಕು. ಸರಕಾರವು ದುರಾಗ್ರಹವನ್ನು ಹಿಡಿದಾಗ ಕೌನ್ಸಿಲಿನಿಂದ ಎದ್ದು ಹೋಗುವಷ್ಟು ಸಾಮರ್ಥ್ಯವು ಸಿಲೋನದವರಿಗೆ ಉಂಟಾಯಿತು. ನಮ್ಮ ಕೌನ್ಸಿಲುಗಳಲ್ಲಿ ಇದರಿಂದಲೂ ಭಯಂಕರ ಸ್ಥಿತಿಯು ಉತ್ಪನ್ನವಾದರೂ ಮೆಂಬರರು ಕುರ್ಚಿಯನ್ನು ಬಿಡರು.

೬. ಮದ್ರಾಸ ಸರಕಾರದ ಮೇಲೆ, ಸೆಂಟ್ರಲ್ ಸರಕಾರವು ಹೊರಿಸಿದ ದೊಡ್ಡ ಕಪ್ಪವು ಎಷ್ಟು ಅನ್ಯಾಯದ್ದೆಂಬುದು ನಾವು ಹೋದ ಸಂಚಿಕೆಯ ಅಗ್ರಲೇಖದಲ್ಲಿ ಸೂಚಿಸಿದೆವಷ್ಟೆ! ಇಷ್ಟಾದ ಮೇಲೆ ಮದ್ರಾಸದ ಪ್ರತಿನಿಧಿಗಳು ಇಂಗ್ಲೆಂಡದಿಂದ ಇಲ್ಲಿಗೆ ಚಿತ್ತೈಸಿದ ಹಿಂದೂಸ್ಥಾನದ ಅಂಡರ ಸೆಕ್ರೆಟರಿಗಳಾದ ಲೊ. ವಿಂಟರಟನ್‌ರವರ ಬಳಿಗೆ ಒಂದು ಡೆಪುಟೇಶನನ್ನು ಕಳುಹಿಸಿದ್ದರು. ಇವರಲ್ಲಿ ಮುಖ್ಯರಾದ ಮಿ| ಶ್ರೀನಿವಾಸರಾಯರು ಮೊಂಟಿಗ್ಯೂ ಸುಧಾರಣೆಯಿಂದ ಮದ್ರಾಸ ಪ್ರಾಂತಕ್ಕೆ ಲಾಭವು ಯಾವುದೆಂದರೆ ಹೊಸ ತೆರಿಗೆಯನ್ನು ಹೊರಿಸುವುದೆ! ಈ ದುರ್ದೈವವನ್ನು ನೋಡಿ ವಿಂಟರಟನ್ ಸಾಹೇಬರು ಮದ್ರಾಸಿನ ಮೇಲಿನ ತಮ್ಮ ಪೂರ್ಣ ಸಹಾನುಭೂತಿಯನ್ನು ತೋರಿಸಿ ರಿಟ್ರೆಂಚಮೆಂಟ ಕಮ್ಮಿಟಿಯು ಹಿಂದೂಸ್ಥಾನದ ಆಡಳಿತೆಕ್ರಮದ ಖರ್ಚನ್ನು ಕಡಿಮೆಮಾಡುವುದನ್ನು ಸೂಚಿಸಿದೊಡನೆ ಮದ್ರಾಸ ಪ್ರಾಂತದ ಮೇಲಿನ ಖರ್ಚು ಕಡಿಮೆಯಾದೀತೆಂದು ಸೂಚಿಸಿದರು. ಇವರ ಹೇಳಿಕೆಯ ಪ್ರಕಾರ ನಮ್ಮ ಅನ್ಯಾಯದ ಖರ್ಚಿನಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾದೀತಲ್ಲದೆ ಅದನ್ನು ಪೂರ್ಣವಾಗಿ ತೆಗೆಯಲು ಸರಕಾರವು ಇಚ್ಛಿಸುವುದಿಲ್ಲವೆಂದು ತೋರುತ್ತದೆ! ಈ ರೀತಿಯಿಂದ ಇತರ ಪ್ರಾಂತಗಳಿಗಿಂತ ಹೆಚ್ಚು ಹಣವನ್ನು ಸೆಂಟ್ರಲ್ ಸರಕಾರಕ್ಕೆ ಕೊಡಲು ಮದ್ರಾಸು ಯಾವ ತಪ್ಪನ್ನು ಮಾಡಿದೆ ಎಂದು ನಮಗೆ ಗೊತ್ತಾಗುವುದಿಲ್ಲ. ವಿಂಟರಟನ್ ಸಾಹೇಬರು ಈ ಸಂದರ್ಭದಲ್ಲಿ ತನಗೆ ಯಾವುದನ್ನು ಹೇಳಲು ಸಾಧ್ಯವಿಲ್ಲ, ರಿಟ್ರೆಂಚಮೆಂಟ ಕಮ್ಮಿಟಿಯ ರಿಪೋರ್ಟು ಪ್ರಸಿದ್ಧವಾದ ಮೇಲೆ ತಾನು ಆಲೋಚಿಸುವೆನೆಂದು ಉದ್ಗರಿಸಿದರು! ಹೇಗಿದ್ದರೂ ಮಿ. ಶ್ರೀನಿವಾಸರಾಯರ ಹೇಳಿಕೆಯಂತೆ ನವಸುಧಾರಣೆಯಿಂದ ಮದ್ರಾಸ ಸರಕಾರಕ್ಕೆ ಲಾಭವೆಂದರೆ ಪ್ರಜೆಗಳ ಮೇಲೆ ಹೊಸ ಕಂದಾಯವನ್ನು ಹೊರಿಸುವುದೆ ಸರಿ. ಇರಲಿ. ಈ ಹೊಸ ಗ್ರಹಣವು ಮದ್ರಾಸನ್ನು ಯಾವಾಗ ಬಿಟ್ಟೀತೆಂದು ನೋಡೋಣ.

೭. ಹಿಂದೂಸ್ಥಾನದ ರಾಜಕಾರಣದಲ್ಲಿ ಕೆಲವು—ಕ್ಷುಲ್ಲಕ ಖಾತೆಗಳು ಹಿಂದಿಗಳ ವಶಕ್ಕೆ ಕೊಟ್ಟದ್ದನ್ನು ನೋಡಿ ಇಲ್ಲಿಯ ಎಂಗ್ಲೊ ಇಂಡಿಯನರಿಗೆ ಸ್ವಲ್ಪ ಹೆದರಿಕೆಯಾಗ ಹತ್ತಿದೆ. ಫೊರೆಸ್ಟ ಖಾತೆಯು ಹಿಂದಿಗಳ ಕೈಯಲ್ಲಿ ಬಂದದ್ದನ್ನು ನೋಡಿ ಇತರ ಖಾತೆಗಳೂ ತಮ್ಮ ಮುಷ್ಟಿಯಿಂದ ಬಿದ್ದುಹೋಗ ಕೂಡದೆಂಬ ಇಚ್ಛೆಯಿಂದ ಇವರು ಹಿಂದೂಸ್ಥಾನ ಸರಕಾರದ ಸೆಕ್ರೆಟರಿಗಳಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಆದರೆ ಕರ್‌ನಲ್ ವೆಜಹೊನ್ನರು ಈ ಸಂದರ್ಭದಲ್ಲಿ ಹೇಳಿದ್ದೇನೆಂದರೆ, ಹಿಂದೂಸ್ಥಾನದಲ್ಲಿ ಇತರ ಜನರಿಗೆ ದುಃಖ ಸಂಬಂಧಿಸಿದರೂ ಎಂಗ್ಲೊ ಇಂಡಿಯನರಿಗೆ ಯಾವ ತರದ ಕೊರತೆಯೂ ಇರಲಿಕ್ಕಿಲ್ಲ. ಆಗ ಡೊ. ಗೌರರವರು ಹಿಂದೂಸ್ಥಾನದ ಅಧಿಕಾರವನ್ನು ತಡೆಯುವಾಗ ಮಾತ್ರ ಸರಕಾರವು ಹಿಂದಿಗಳಂತೆ ಇವರಿಗೆ ಹಕ್ಕನು ಕೊಟ್ಟದೆ. ಆದರೆ ಸಂಬಳವನ್ನು ಕೊಡುವಾಗ ಮಾತ್ರ ಇವರನು ಹಿಂದಿಗಳಿಗಿಂತಲೂ ಉಚ್ಚಸ್ಥಾನವನ್ನು ಕೊಡುತ್ತದೆ. ಇಂಥ ಅನ್ಯಾಯವನ್ನು ಸರಕಾರವು ಯಾಕೆ ಮಾಡುತ್ತದೆ ಎಂದು ಪ್ರಶ್ನೆಮಾಡಿದರು. ಆದರೆ ಇದಕ್ಕೆ ಸರಕಾರದ ಪಕ್ಷದಿಂದ ತೃಪ್ತಿಕರವಾದ ಉತ್ತರವು ಸಿಗಲಿಲ್ಲ. ಮತ್ತು ಸಂಬಳ ಕೊಡುವುದರಲ್ಲಿ ಯಾವ ಭೇದವು ಮಾಡಿಲ್ಲವೆಂದು ಅವರು ಹೇಳಿದರು! ಇದರಲ್ಲಿ ಎಷ್ಟು ಸತ್ಯಾಂಶವಿದೆಯೆಂದು ವಾಚಕರೆ ಊಹಿಸಲಿ. ಸಂಬಳ ವಿಷಯದಲ್ಲಿ ನಡಿಯುವ ಅನ್ಯಾಯ ಭೇದವು ಹೊಸ ಸಂಗತಿಯಲ್ಲ. ಪೂರ್ವದಿಂದಲೂ ಪ್ರಸಿದ್ಧವಾದದ್ದೆ ಆದರೆ ಒಂದೆರಡು ಕ್ಷುಲ್ಲಕ ಖಾತೆಗಳನ್ನು ಹಿಂದಿಗಳ ವಶಕ್ಕೆ ಕೊಟ್ಟಾಗ ಎಂಗ್ಲೊ ಇಂಡಿಯನರು ಈ ರೀತಿಯಿಂದ ಪ್ರಮತ್ತರಾಗುವುದು ಸ್ವಾಭಾವಿಕವಾಗಿರುತ್ತದೆ.

* * *

ಜಗದ್ವಿಖ್ಯಾತ ಕವಿಗಳಾದ

ಡಾಕ್ಟರ ರವೀಂದ್ರನಾಥ ಠಾಕುರ.

ಮಂಗಳೂರು.

ಜಗದ್ವಿಖ್ಯಾತ ಕವಿವರ್ಯ ಡಾಕ್ಟರ ರವೀಂದ್ರನಾಥ ಠಾಕುರರೂ ದೀನಬಂಧು ಸಿ. ಎಫ್. ಅಂಡ್ರೂಜರೂ ಬುಧವಾರ ಸಾಯಂಕಾಲ ಮೈಲುಭಂಡಿಯಲ್ಲಿ ಇಲ್ಲಿಗೆ ಬಂದು ತಲ್ಪಿ ರಾವ್ ಬಹದೂರು ಯನ್. ಸುಬ್ಬರಾಯರ ಅತಿಥಿಗಳಾಗಿದ್ದಾರೆ. ನಿನ್ನೆ ಬೆಳಿಗ್ಯೆ ಇವರು ಕಂಕನಾಡಿ ಆಸ್ಪತ್ರೆಯನ್ನು ಸಂದರ್ಶಿಸಿದರು. ಇವರು ಪಟ್ಟಣದ ಅನೇಕ ಗೃಹಸ್ಥರಿಗೆ ಭೇಟಿಯನ್ನು ಕೊಟ್ಟಿರುವರು. ಈ ದಿನ ಪ್ರಾತಃಕಾಲ ಇವರು ತಿಲಕ ವಿದ್ಯಾಲಯವನ್ನು ಸಂದರ್ಶಿಸಿದಾಗ ಅಲ್ಲಿ ಇವರಿಗೆ ಮಾನಪತ್ರವು ಒಪ್ಪಿಸಲಾಯಿತು. ಅನಂತರ ಇವರು ರಾಷ್ಟ್ರೀಯ ಬಾಲಿಕಾ ಪಾಠಶಾಲೆಯನ್ನೂ ನಿರಾಶ್ರಿತ ಜನ ಸಹಾಯಕ ಸಂಘವನ್ನೂ ಸಂದರ್ಶಿಸಿದರು. ಸಾಯಂಕಾಲ ಗವರ್ನಮೆಂಟ ಕೊಲೇಜಿನಲ್ಲಿ ಇವರಿಗೆ ಪಟ್ಟಣಿಗರ ಪರವಾಗಿ ಮ. ರಾ. ಅಮ್ಮೆಂಬಳ ಶ್ರೀನಿವಾಸಪೈ ಬಿ. ಎ. ಬಿ. ಎಲ್. ಇವರಿಂದ ಸ್ವಾಗತ ಪತ್ರವು ಒಪ್ಪಿಸಲಾಯಿತು. ಸ್ವಾಗತ ಪತ್ರಕ್ಕೆ ಉತ್ತರವನ್ನು ಕೊಡುವಾಗ ಇವರು ಈಗಿನ ಶಿಕ್ಷಣ ಕ್ರಮದಲ್ಲಿರುವ ಕುಂದುಕೊರತೆಗಳನ್ನು ಸೂಚಿಸಿ, ತಾವು ಸ್ಥಾಪಿಸಲಿಕ್ಕಿರುವ ವಿಶ್ವಭಾರತಿಯ ಕುರಿತು ವಿವರಿಸಿ, ಈ ವಿದ್ಯಾಲಯದಲ್ಲಿ ಕೊಡಲಿಕ್ಕಿರುವ ಶಿಕ್ಷಣ ಮೊದಲಾದ ವಿಷಯನ್ನು ಎತ್ತಿ ಭಾಷಣ ಮಾಡಿದರು. ಇವರ ಭಾಷಣವನ್ನು ಕೇಳಲಿಕ್ಕೆ ಟಿಕೇಟು ಇಟ್ಟಿತ್ತು. ಟಿಕೇಟು ಮಾರಾಟದಿಂದಲೂ ಇತರ ವಾಗ್ದಾನದಿಂದಲೂ ಸುಮಾರು ರೂ. ೨೦೦೦ ವರೆಗೆಯಾಗಬಹುದಂತೆ. ಉಡುಪಿಯ ಖಾನ್ ಸಾಹೇಬ ಹಾಜಿ ಅಬ್ದುಲ್ ಹಾಜಿ ಖಾಸಿಂ ಸಾಹೇಬರು ರೂ. ೨೫೦ನ್ನು ವಾಗ್ದಾನಮಾಡಿ ವಿಶ್ವಭಾರತಿಯ ಲೈಫ ಮೆಂಬರಾಗಿರುವರಂತೆ. ಠಾಕೂರರೂ ಸಿ ಎಫ್. ಎಂಡ್ರೂಸರೂ ನಾಳೆ ಬೆಳಿಗ್ಗಿನ ಮೈಲಿನಲ್ಲಿ ಇಲ್ಲಿಂದ ತೆರಳಲಿಕ್ಕಿದ್ದಾರೆ.

ಪಶ್ಚಿಮ ಜಿಲ್ಲೆಗಳ ಲೋಕಲ್ ಮತ್ತು ಮುನ್ಸಿಪಲ್ ಗ್ರೂಪ್ ಕೊನ್ಫರೆನ್ಸು ಕಳೆದ ಸೋಮವಾರ ಇಲ್ಲಿಯ ಎಲಿಮೆಂಟರಿ ಟ್ರೈನಿಂಗ ಶಾಲೆಯಲ್ಲಿ ಮಧ್ಯಾಹ್ನ ೧೨ ಗಂಟೆಗೆ ಪ್ರಾರಂಭವಾಯಿತು. ಈ ಪರಿಷತ್ತಿಗೆ ನಮ್ಮ ಜಿಲ್ಲೆಯಿಂದ ೨೧, ಮಲಬಾರಿನಿಂದ ೨೫ ಕೊಯಮುತ್ತೂರಿನಿಂದ ೨೯ ಸೇಲಮಿನಿಂದ ೧೨, ನೀಲಗಿರಿಯಿಂದ ೩ ಪ್ರತಿನಿಧಿಗಳು ಪ್ರಥಮದಿನ ಹಾಜರಿದ್ದರು. ಧರ್ಮಾವರ ತಾಲೂಕು ಹಣದ ಅಭಾವದಿಂದ ಪ್ರತಿನಿಧಿಗಳನ್ನು ಕಳುಹಿಸಲಿಲ್ಲವಂತೆ. ಸರಕಾರಿ ಹುದ್ದೆದಾರರಾದ ಮ. ರಾ. ಕೆ. ಆರ್. ಸದಾಶಿವರಾವ್ ಲೋಕಲ್ ಮತ್ತು ಮುನ್ಸಿಪಲ್ ಇಲಾಖೆಯ ಲೆಕ್ಕಪರಿಶೋಧಕರು, ಮೆಜರ್ ರಸೆಲ್ ಡ್ಯಾರೆಕ್ಟರ ಒಫ್ ಪಬ್ಲಿಕ್ ಹೆಲ್ತ, ಜೆ. ಯನ್. ವೆಸ್ಟರಿ ಗವರ್ನಮೆಂಟ ಸೆನಿಟರಿ ಇಂಜೀನಿಯರ್, ಮತ್ತು ಇಲ್ಲಿಯ ಡಿಸ್ಟ್ರಿಕ್ಟ ಸೆನಿಟರಿ ಆಫೀಸರರೂ, ಶಾಲಾ ಅಸಿಸ್ಟಾಂಟ ಇನ್ಸಪೆಕ್ಟರೂ ಹುಡುಗಿಯರ ಶಾಲೆಯ ಇನ್ಸ್‌ಪೆಕ್ಟ್ರೆಸ್‌ರೂ, ಡಿಸ್ಟ್ರಿಕ್ಟ ಬೋರ್ಡ ಇಂಜೀನೀಯರರೂ ಹಾಜರಿದ್ದರು. ಡಿಸ್ಟ್ರಿಕ್ಟ ಎಡ್ಯುಕೇಶನಲ್ ಕೌನ್ಸಿಲಿನ ಪ್ರತಿನಿಧಿಯಾಗಿ ಮನೋರಮಾ ಬಾಯಿಯವರೂ ಬಂದಿದ್ದರು. ಪ್ರಥಮದಲ್ಲಿ ಸ್ವಾಗತ ಕಮ್ಮಿಟಿಯ ಅಧ್ಯಕ್ಷರಾದ ರಾವ್ ಬಹದ್ದೂರ್ ಯನ್. ಸುಬ್ಬರಾಯರು ಸ್ವಾಗತಪರಭಾಷಣವನ್ನು ಓದಿಹೇಳಿದ ಬಳಿಕ ಈ ಪರಿಷತ್ತಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ರಾವ್ ಬಹದ್ದೂರು ಟಿ. ಎ. ರಾಮಲಿಂಗ ಚೆಟ್ಟಿಯಾರ ಇವರು ತಮ್ಮ ಭಾಷಣವನ್ನು ಓದಿದರು. ಅನಂತರ ದಕ್ಷಿಣ ಕನ್ನಡ ಜಿಲ್ಲೆಯಿಂದ ೬, ಮಲಬಾರಿಂದ ೧೨, ಕೊಯಮುತ್ತೂರಿನಿಂದ ೧೨, ಸೇಲಮಿನಿಂದ ೬, ನೀಲಗಿರಿ ಜಿಲ್ಲೆಯಿಂದ೩, ಹೀಗೆ ೩೯ ಮಂದಿ ಪ್ರತಿನಿಧಿಗಳ ಒಂದು ಸಬ್ಜಕ್ಟ ಕಮ್ಮಿಟಿಯು ಆರಿಸಲ್ಪಟ್ಟು ಈ ಕಮ್ಮಿಟಿಗೆ ಇನ್ನು ೪ ಮಂದಿ ಮೆಂಬರರನ್ನು ಅಧ್ಯಕ್ಷರು ಚುನಾಯಿಸಬೇಕಾಗಿ ನಿಶ್ಚಯಿಸಲಾಯಿತು. ಅದರಂತೆ ಅಧ್ಯಕ್ಷರು ೪ ಮಂದಿ ಮೆಂಬರರನ್ನು ಚುನಾಯಿಸಿದರು. ಬಳಿಕ ಸಬ್ಜಕ್ಟ ಕಮ್ಮಿಟಿಯವರು ಮರುದಿನದ ಪರಿಷತ್ತಿನ ಮುಂದೆ ತರುವ ಠರಾವುಗಳನ್ನು ತಯಾರಿಸತೊಡಗಿದರು.

ಮರುದಿನ ಪರಿಷತ್ತು ೧೧-೩೦ ಗಂಟೆಯಿಂದ ಪ್ರಾರಂಭವಾಯಿತು. ಈ ದಿನ ಒಟ್ಟು ೬೫ ಮಂದಿ ಪ್ರತಿನಿಧಿಗಳು ಹಾಜರಿದ್ದರು. ಒಟ್ಟು ೧೫ ಠರಾವುಗಳು ಮಂಜೂರಾದವು. ಇವುಗಳಲ್ಲಿ ಹೆಚ್ಚಿನವು ಮುನ್ಸಿಪಲ್ ಮತ್ತು ಲೋಕಲ್ ಬೋರ್ಡು ಎಕ್ಟುಗಳಲ್ಲಿ ಮಾಡಬೇಕಾದ ತಿದ್ದುಪಡಿಗಳನ್ನು ಸೂಚಿಸುವಂಥವುಗಳಾಗಿದ್ದವು. ಲೋಕಲ್ ಬೋರ್ಡುಗಳು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಖರ್ಚುಮಾಡುವ ವನ್ ಖರ್ಚಿನಲ್ಲಿ ಸರಕಾರವು ಅರ್ಧಾಂಶಕ್ಕೆ ಮಿಕ್ಕಿ ಸಹಾಯ ಮಾಡಬೇಕೆಂದೂ, ಸ್ಥಳಿಕ ಸಂಸ್ಥೆಗಳು ನಡಿಸುವ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಇಂಗ್ಲಿಷ್‌ಭಾಷೆಯನ್ನು ಖಡ್ಡಾಯವಾಗಿ ಕಲಿಸಬೇಕೆಂದೂ. ಸರಕಾರದವರು ಸೆಕೆಂಡರಿ ಶಾಲೆಗಳಲ್ಲಿ ವೃತ್ತಿ ಶಿಕ್ಷಣ ಕೊಡುವ ಏರ್ಪಾಡು ಮಾಡಬೇಕೆಂದೂ, ರೆಲ್ವೆಗಳನ್ನು ತೆರೆಯುವುದಕ್ಕಾಗಿ ಬೋರ್ಡುಗಳು ಒಟ್ಟುಸೇರಿ ಅಗತ್ಯವುಳ್ಳ ಹಣವನ್ನು ಸಾಲವಾಗಿ ಪಡಿಯಬೇಕೆಂದೂ, ಶರಾಬು ಅಂಗಡಿಗಳ ಸಂಖ್ಯೆ ಮತ್ತು ಅವುಗಳು ಇರುವ ಸ್ಥಳಗಳನ್ನು ನಿಶ್ಚಯಿಸಲಿಕ್ಕೆ ಈಗಿನ ಎಡ್ವಾಯಿಜರಿ ಕಮ್ಮಿಟಿಯ ಬದಲಾಗಿ ಬಿನ್ ಸರಕಾರಿ ಮೆಂಬರರು ಅಧಿಕವಾಗಿರುವ ಒಂದು ಲೈಸನಿಂಗ್ ಬೋರ್ಡನ್ನು ಸ್ಥಾಪಿಸಬೇಕೆಂದೂ ಜಿಲ್ಲಾ ಮುನ್ಸಿಪಾಲಿಟಿಗಳ ಎಕ್ಟಿನಲ್ಲಿ ಸ್ತ್ರೀಯರು ಮುನ್ಸಿಪಲ್ ಕೌನ್ಸಿಲರರಾಗಲಿಕ್ಕೆ ಇರುವ ಅಡ್ಡಿಯನ್ನು ತೆಗೆದುಹಾಕಬೇಕೆಂದೂ ಮುಂತಾದ ಠರಾವುಗಳು ಪಾಸಾದವು. ಮೇಲಿನಕಡೇ ಠರಾವನ್ನು ಮನೋರಮಾ ಬಾಯಿಯವರು ಚರ್ಚೆಗೆ ತಂದಿದ್ದರು. ಒಬ್ಬರು ಮಾತ್ರ ಇದನ್ನು ನಿರೋಧಿಸಿದ್ದರು. ಬರುವ ವರುಷದ ಕೊನ್ಫರೆನ್ಸನ್ನು ಮಲಬಾರಿನಲ್ಲಿ ನೆರೆಯಿಸಬೇಕಾಗಿ ನಿಶ್ಚಯಿಸಲಾಯಿತು. ಯಾವ ಪಟ್ಣದಲ್ಲಿ ಎಂಬುದು ಮುಂದಕ್ಕೆ ಪ್ರಕಟಿಸಲಾಗುವುದು. ಮುಂದಿನ ಪರಿಷತ್ತಿನ ಕಾರ್ಯಗಳನ್ನು ನಡಿಸುವುದಕ್ಕೆ ಕಲ್ಲಿಕೋಟೆ ಮುನ್ಸಿಪಾಲಿಟಿಯ ಚೆಯರ್ಮನರನ್ನು ಕಾರ್ಯದರ್ಶಿಯಾಗಿ ಚುನಾಯಿಸಲಾಗಿದೆ. ಈ ಪರಿಷತ್ತಿಗೆ ಬಂದ ಹಲವು ಪ್ರತಿನಿಧಿಗಳು ಉಡುಪಿಯನ್ನು ಸಂದರ್ಶಿಸಿ ಈ ದಿನ ಇಲ್ಲಿಂದ ತೆರಳಿದರು.

ಮ. ರಾ. ರಾ. ಮೇಲೋತ್ ರಾಮನ್‌ನಂಬಿಯಾರ್ ಇವರು ಪ್ರೊಟೆಸ್ಟಾಂಟ ಕ್ರೈಸ್ತಮತವನ್ನು ಅವಲಂಬಿಸಿ ೨೬ ವರುಷಗಳಿಗಿಂತ ಹೆಚ್ಚು ಸಮಯವಾಗಿ ಇವರು ಆ ಮತದ ಒಬ್ಬ ಉಪದೇಶಕರಾಗಿದ್ದು ಆ ಮತದ ತತ್ವಗಳಲ್ಲಿ ಸಮಾಧಾನಪಡದೆ, ಇದೇ ಕಳೆದ ತಾ. ೧ನೇ ಆದಿತ್ಯವಾರ ದಿವಸ ಮಂಗಳೂರು ಆರ್ಯಸಮಾಜದ ಮಂದಿರದಲ್ಲಿ ವೈದಿಕ ಧರ್ಮವನ್ನು ಸ್ವೀಕರಿಸಿ, ಶ್ರೀಯುತ ಪಂಡಿತ ಧರ್ಮದೇವ ಸಿದ್ಧಾಂತಾಲಂಕಾರರಿಂದ ಶುದ್ಧಿ ಸಂಸ್ಕಾರವನ್ನು ಮಾಡಿಸಿಕೊಂಡು ಗಾಯತ್ರಿ ಉಪದೇಶದಿಂದ ಯಜ್ಞೋಪವೀತವನ್ನು ಪಡಕೊಂಡರು. ಬಳಿಕ ಮ. ರಾ. ರಾ. ಮೇಲೋತ್ ರಾಮನಂಬಿಯಾರರು ತಾನು ವೈದಿಕ ಧರ್ಮದ ಮುಖ್ಯ ತತ್ವಗಳನ್ನು ತಿಳಿಯದೆ ಅಜ್ಞಾನದಿಂದ ಕ್ರೈಸ್ತ ಮತವನ್ನು ಅವಲಂಬಿಸಿದೆನು, ತರುವಾಯ ವೈದಿಕ ಧರ್ಮದ ಭೂತದಯೆ ಮುಂತಾದ ಉತ್ಕೃಷ್ಟ ತತ್ವಗಳನ್ನು ಕಂಡು ತನ್ನ ಮನಸ್ಸು ಪೂರ್ಣ ಮಾರ್ಪಾಟವಾಯಿತು ಎಂದು ಹೇಳಿ ತಾನು ಕ್ರೈಸ್ತ ಮತವನ್ನು ಅವಲಂಬಿಸಿದಕ್ಕೆ ತನ್ನ ವಿಷಾಧವನ್ನು ತೋರ್ಪಡಿಸಿದರು. ಮೇಲಿನ ರೀತಿಯಲ್ಲಿ ಕೊಟ್ಟ ಸಂಸ್ಕಾರವನ್ನು ಪಡೆದು ಹಿಂದೂ ಮತಕ್ಕೆ ಬರಲಿಕ್ಕೆ ಅಪೇಕ್ಷಿಸುವವರು ಮಂಗಳೂರು ಆರ್ಯ ಸಮಾಜದ ಶ್ರೀಯುತ ಪಂಡಿತ ಧರ್ಮದೇವ ಸಿದ್ಧಾಂತಾಲಂಕಾರರಿಗೆ ಬರೆದುಕೊಳ್ಳಬೇಕಾಗಿರುತ್ತದೆ.

ನಮ್ಮ ಮಂಗಳೂರ ಮುನ್ಸಿಪಲ್ ಕೌನ್ಸಿಲಿಗೆ ಗೋಳಿಕಟ್ಟೆ ವಾರ್ಡಿನಿಂದ ಮೆ| ಯಚ್. ಯಂ. ಪುತ್ತೂರ ಸಾಹೇಬ, ಮೆ. ಮಹಮ್ಮದ ಸಾಹೇಬ,- ಮ. ರಾ. ಕಾನಾ[illegible] ಸದಾಶಿವರಾವ್, ಕೋರ್ಟುವಾರ್ಡಿನಿಂದ ಮೆ| ಪಿ. ಡಿ. ಸೋಜರು ಚುನಾಯಿಸಲ್ಪಟ್ಟಿದ್ದಾರೆ. ಜಪ್ಪು, ಕೊಡಿಯಾಲಬೈಲು ಮತ್ತು ಮಾರ್ಕೇಟು ವಾರ್ಡುಗಳಿಗೆ ಒಬ್ಬೊಬ್ಬ ಉಮೇದ್ವಾರರಾದ್ದರಿಂದ ವೋಟುಗಳನ್ನು ತೆಗಿಯುವ ಅವಶ್ಯ ಬೀಳಲಿಲ್ಲ. ಆದ್ದರಿಂದ ಈ ವಾರ್ಡುಗಳಿಗೆ ಮೇಲಿನ ಉಮೇದ್ವಾರರೇ ಕೌನ್ಸಿಲರರಾಗುವರು.

ಇಲ್ಲಿಯ ಆಯುರ್ವೇದ ವೈದ್ಯ ಬಿ. ಆರ್. ಹರಿದಾಸರ ಸಹೋದರರೂ ಇಲ್ಲಿಯ ನಿವಾಸಿಗಳಿಗೆ ಹೆಚ್ಚಿನ ಪರಿಚಿತರೂ ಆದ ಬಾಲ ಹರಿದಾಸರು ಕಳೆದ ಮಂಗಳವಾರ ದಿನ ಇಲ್ಲಿಗೆ ಬಂದಿರುತ್ತಾರೆ.

ಸರಕಾರಿ ನೌಕರರ ಬಗ್ಗೆ ನಡಿಸೋಣಾಗುವ ಸ್ಪೆಶ್ಯಲ್ ಟೆಸ್ಟ ಪರೀಕ್ಷೆಯು ತಾರೀಕು ೧೭ರಿಂದ ೨೧ರ ವರೆಗೆ ನಡಿಯಲಿಕ್ಕಿದೆ.

ಮಹಾತ್ಮಾ ಗಾಂಧಿಯವರ ೫೪ನೇ ಜನ್ಮದಿನದ ಮಹೋತ್ಸವವು ಇಲ್ಲಿಯೂ ಬಹಳ ಉತ್ಸಾಹದಿಂದ ಜರಗಿತು. ಅಂದು ಸಾಯಂಕಾಲ ವೇದಮೂರ್ತಿ ಚಿಂತಾಮಣಿ ಭಟ್ಟರ ಹರಿಕಥೆ ನಡಿಯಿತು.

ಜೂನಿಯರ್ ಕ್ರಿಕೆಟ್ ಪಂದ್ಯಾಟದಲ್ಲಿ ಈ ವರುಷ ಸೆಂಟ ಎಲ್ಲೋಸಿಯಸ್ ಕೋಲೇಜು ಗೆದ್ದಿರುವುದು.

ಇಲ್ಲಿಯ ಕೆಥೋಲಿಕರ ಬಿಶೋಪರಾದ ಡಾಕ್ಟರ ಪೌಲ್ ಪೆರಿನಿಯವರು ಗುರುಗಳಾಗಿ ೨೫ ವರುಷಗಳಾದ್ದರಿಂದ ಅವರ ಸಿಲ್ವರ್ ಜುಬಿಲಿ ಸಮಾರಂಭವು ಕಳೆದ ತಾ. ೩ರ ವರೆಗೆ ಬಹಳ ಸಂಭ್ರಮದಿಂದ ನಡಿಯಿತು. ತಾ. ೧ನೆಯ ದಿನ ಬಿಶೋಪರಿಗೆ ಒಂದು ಮೊಟಾರಕಾರೂ ಒಂದು ಹಣದ ಗಂಟೂ ಕೊಡಲಾಯಿತು.

ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ಸು ಇಲ್ಲಿ ನಡೆದಾಗ ಇಲ್ಲಿಗೆ ಬಂದಿದ್ದ ಬಿಜಾಪುರದ ರಾಘವೇಂದ್ರರಾವ್ ಕೆಂಭಾವಿ ಇವರ ರೂ. ೪೫೦ರ ಕರೆನ್ಸಿ ನೋಟುಗಳೂ ಇತರ ಸೊತ್ತುಗಳೂ ಕಳವಾಗಿ ಹೋದುದನ್ನು ಗದ್ದೆಕೇರಿಯಲ್ಲಿರುವ ಮ. ರಾ. ಕುಡುಪಿ ನಾರಾಯಣ ಶಾನುಭಾಗರು ತಲಾಸಿ ಮಾಡಿಕೊಟ್ಟ ಬಗ್ಗೆ ಅವರಿಗೆ ಗವರ್ನಮೆಂಟಿನಿಂದ ರೂ. ೨೦ ಕೊಡುವಂತೆ ಶಿಫಾರಸು ಮಾಡಲಾಗಿದೆ.

ಇಲ್ಲಿಯ ಇಂಪೀರಿಯಲ್ ಬೇಂಕಿನ ಏಜಂಟರಾದ ಮ. ರಾ. ವೆಂಕಟರಮಣಯ್ಯರಿಗೆ ಸೇಲಮಿಗೆ ವರ್ಗವಾಗಿ ಮ.ರಾ. ಉದಿಯಾವರ ಆನಂದರಾಯರು ಇಲ್ಲಿಯ ಏಜಂಟರಾಗಿ ಬಂದಿರುವರು.

ಈ ವರುಷ ನಮ್ಮ ಪಟ್ಟಣದಲ್ಲಿ ನವರಾತ್ರಿಯ ಮಹೋತ್ಸವವು ಎಂದಿಗಿಂತ ಹೆಚ್ಚಿನ ಉತ್ಸಾಹದಿಂದಲೂ ಸಂಭ್ರಮದಿಂದಲೂ ನಡೆಯಿತು. ಹುಲಿವೇಶ ಮೊದಲಾದ ವೇಶಗಳು ಮೊಹರಮಿಗಿಂತಲೂ ಹೆಚ್ಚಿದ್ದವು. ಮಂಗಳಾದೇವಿಯ ರಥೋ[illegible] ಮೊದಲಾದ ಆನಂದ ಸಂಭ್ರಮಗಳು ಯೋಗ್ಯವಾಗಿ ಜರ[illegible] ಇತರ ಊರುಗಳಲ್ಲೂ ಈ ನವರಾತ್ರಿ [illegible] ನಡೆದಿದಾಗಿ ತಿಳಿದುಬರುತ್ತದೆ.

ಮದರಾಸಿನ ಎಡ್ವೋಕೇಟ್ [illegible] ಶೆಟ್ಟಾ ಇವರ ಸಹೋದರರಾ[illegible] ಆಫೀಸರ ಮ. ರಾ. ಯ[illegible] ಬಿ. ಎಸ್. ಇವರು ಹೆಚ್ಚಿ[illegible] ವಿಲಾಯತಿಗೆ ತೆರಳು[illegible] ತಿಳಿಸುತ್ತಾರೆ.

ಲೋಕಲ್ ಮತ್ತು ಮುನ್ಸಿಪಲ್ ಗ್ರೂಪ್ ಕೊನ್ಫರೆನ್ಸ್.

ಸ್ವಾಗತ ಕಮಿಟಿಯ ಅಧ್ಯಕ್ಷರ ಭಾಷಣ.

ಮಹತ್ವಾದ ಈ ಅಧಿವೇಶನದಲ್ಲಿ ಪ್ರತಿಯೊಬ್ಬನಿಗೂ ಮುಖ್ಯವಾದ ಕರ್ತವ್ಯವಾವುದೆಂದರೆ,—ವರಿಷ್ಠ ಸರಕಾರವು ನ್ಯಾಯಕ್ಕೆ ವಿರುದ್ಧವಾಗಿ ಮದರಾಸ ಸರಕಾರದ ಮೇಲೆ ಹೊರಿಸಿದ ರೂ. ೩೪೮ ಲಕ್ಷದ ವಿಷಯು ನಮ್ಮ ನಿಷೇಧವನ್ನು ವ್ಯಕ್ತಪಡಿಸುವುದಾಗಿದೆ. ಈ ವಿಷಯದಲ್ಲಿ ನಮ್ಮ ಮದ್ರಾಸ ಸಂಸ್ಥಾನದಲ್ಲಿ ಹೆಚ್ಚಿನ ಚಳವಳ ನಡೆದು ಲೆಜಿಸ್ಲೇಟಿವ ಎಸೆಂಬ್ಲಿಯಲ್ಲಿ ಮದರಾಸಿನ ಮೆಂಬರರು ಒಗ್ಗಟ್ಟಾಗಿ ಕಾದಾಡಿದರೂ ಯಾವ ಯೋಗ್ಯ ಪರಿಣಾಮವೂ ಉಂಟಾಗಲಿಲ್ಲ. ಈ ವಿಷಯದಲ್ಲಿ ಮದರಾಸ ಪ್ರಾಂತಿಕ ಸರಕಾರಕ್ಕೆ ವರಿಷ್ಠ ಸರಕಾರವು ಅನ್ಯಾಯ ಮಾಡಿದ್ದರಿಂದ ಈಗ ಈ ಪ್ರಾಂತ್ಯದ ಎಲ್ಲ ರಾಜಕೀಯ ಪಂಗಡಗಳ ಜನರ ಮನಸ್ಸಿನಲ್ಲೂ ಅಸಮಾಧಾನ ಉಂಟಾಗಿದೆ. ಮದರಾಸ ಮೈಲು ಹೇಳುವಂತೆ ಇದಕ್ಕೆ ಒಂದೇ ಉತ್ತರವು ಯೋಗ್ಯವಾಗಿದೆ. "ವರಿಷ್ಠ ಸರಕಾರದ ಹಾಗು ಪ್ರಾಂತಿಕ ಸರಕಾರದ ಉತ್ಪತ್ತಿಯೂ ಬೇರೆ ಬೇರೆಯಾಗಿರಬೇಕು. ಆಯಾ ಪ್ರಾಂತ್ಯಗಳ ಆರ್ಥಿಕ ಸ್ವಾತಂತ್ರ್ಯವು ಅವುಗಳಲ್ಲಿಯೇ ಇರಬೇಕೆಂಬ ಪ್ರತಿಯೊಬ್ಬ ನಾಗರಿಕನು ಸೂಚಿಸಬೇಕು. ಇದರ ಮೇಲೆಯೇ ಸುಧಾರಣೆಯ ಜಯ ಅಥವಾ ಅಪಜಯವು ಹೊಂದಿಕೊಂಡಿದೆ". ನಾವು ಧೈರ್ಯಗುಂದಿ ಈ ಕಾರ್ಯವನ್ನು ಅಷ್ಟಕ್ಕೆ ನಿಲ್ಲಿಸದೆ ವರಿಷ್ಠ ಸರಕಾರದಿಂದ ನಮಗೆ ಉಂಟಾದ ಅನ್ಯಾಯವನ್ನು ವ್ಹಾಯಿಸರಾಯರಿಗೂ ಸ್ಟೇಟ್ ಸೆಕ್ರೆಟರಿಯವರಿಗೂ ಜೋಯಿಂಟ್ ಪಾರ್ಲಿಮೆಂಟಿನ ಕಮಿಟಿಯವರಿಗೂ ಅಗತ್ಯವಿದ್ದರೆ ಚಕ್ರವರ್ತಿಯವರಿಗೂ ನಿವೇದಿಸಿ ಈ ಅನ್ಯಾಯವು ಹೋಗಲಾಡಿಸಿ ನ್ಯಾಯವು ದೊರಕುವಂತೆ ಪ್ರಯತ್ನಿಸಬೇಕು. ನಮ್ಮ ಈ ಪ್ರಯತ್ನವನ್ನು ಶಾಂತರೀತಿಯಿಂದಲೂ ದೃಢಸಂಕಲ್ಪದಿಂದಲೂ ಎಡೆಬಿಡದೆ ಸಾಗಿಸಬೇಕು.

ನಮ್ಮ ಸಂಸ್ಥಾನವು ವರಿಷ್ಠ ಸರಕಾರಕ್ಕೆ ಕೊಡುವ ಹಣದ ಋಣವನ್ನು ಕಡಿಮೆ ಮಾಡಿದರೆ ಪ್ರಾಂತಿಕ ಸರಕಾರಕ್ಕೆ ಜನರಿಂದ ನಡಿಸಿ ಬರುತ್ತಿರುವ ಖಾತೆಗಳಿಗೂ ಲೋಕಲ್ ಬೋರ್ಡುಗಳಿಗೂ ಹಣಸಹಾಯ ಮಾಡಲು ಅನುಕೂಲವಾಗುವುದು. ಸಾಕಷ್ಟು ಹಣ ಸಹಾಯವು ದೊರಕದೆ ಬೋರ್ಡುಗಳು ತಮ್ಮ ಕರ್ತವ್ಯಗಳನ್ನು ಹೇಗೆ ಪೂರೈಸಬಹುದು?

ಕಳೆದ ಕೊನ್ಫರೆನ್ಸು ನಡೆದಂದಿನಿಂದ ಈ ವರೆಗೆ ಎಷ್ಟು ಕಾರ್ಯ ನಡೆಯಿತೆಂದು ನೋಡುವುದು ಅಗತ್ಯ. ಇತರ ಕೊನ್ಫರೆನ್ಸುಗಳಂತೆ ಕಳೆದ ವರುಷ ನಡೆದ ಕೊಯಮುತ್ತೂರು ಕೊನ್ಫರೆನ್ಸು ಸಹ ಕೆಲವು ಠರಾವನ್ನು ಪಾಸುಮಾಡಿ ಸರಕಾರಕ್ಕೆ ಕಳುಹಿಸಿದೆ. ಹಲವು ಕೊನ್ಫರೆನ್ಸುಗಳು ಕಳುಹಿಸಿದ ೬೪ ಠರಾವುಗಳಲ್ಲಿ ಸರಕಾರವು ೧ನ್ನು ಮಾತ್ರ ಪೂರ್ಣವಾಗಿಯೂ, ೩ನ್ನು ಅರ್ಧವಾಗಿಯೂ ಅಂಗೀಕರಿಸಿದೆ; ೨೬ನ್ನು ನಿರಾಕರಿಸಿದೆ; ೨೬ನ್ನು ಕುರಿತು ಆಲೋಚಿಸುತ್ತಾ ಇದೆ; ಉಳಿದ ೮ ಠರಾವುಗಳನ್ನು ಸ್ಥಳೀಕ ಸಂಸ್ಥೆಗಳು ತಾವೇ ಪರ್ಯಾಲೋಚಿಸಿ ಉಪಯುಕ್ತ ಉಪಾಯಗಳನ್ನು ಅವುಗಳೇ ಮಾಡಬೇಕಾಗಿ ಸರಕಾರವು ಸೂಚಿಸಿದೆಯಾಗಿ ತಿಳಿದುಬರುತ್ತದೆ. ಮುನ್ಸಿಪಲ್ ಚೆಯರ್ಮೇನರ ಅಧಿಕಾರ ಕಾಲವನ್ನು ನಿರ್ಣಯಿಸುವ ಠರಾವೇ ಸರಕಾರದವರು ಅಂಗೀಕರಿಸಿದ ಆ ಒಂದು ಠರಾವಾಗಿದೆ. ಮತ್ತು ಅದು ಈಗ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಕಾಯಿದೆಯಾಗಿ ಮಾರ್ಪಟ್ಟಿದೆ.

ಸರಕಾರವು ಕೆಲವು ಮಟ್ಟಿಗೆ ಸ್ವೀಕರಿಸಿದ ೩ ಠರಾವುಗಳು ಔಷಧ ಸಹಾಯಕ್ಕೆ ಸಂಬಂಧ ಪಟ್ಟವುಗಳು. ಇವನ್ನು ಕೆಲವು ಮಟ್ಟಿಗೆ ಮಾತ್ರ ಅಂಗೀಕರಿಸಲಾಗಿದೆ. ಆಲೋಚನೆಗೆ ಒಳಪಟ್ಟ ಅಥವಾ ನಿರಾಕರಿಸಲ್ಪಟ್ಟ ೨೬ ಠರಾವುಗಳು ಹೆಚ್ಚಿನ ಧನ ಸಹಾಯವನ್ನು ಪಡೆದು ಯೋಗ್ಯ ತರದ ಆಡಳಿತೆಯನ್ನು ನಡಿಸಬೇಕೆಂಬ ಉದ್ದೇಶದಿಂದ ಗ್ರೂಫ್ ಕೊನ್ಫರೆನ್ಸುಗಳು ಮಂಜೂರು ಮಾಡಿದ್ದವುಗಳಾಗಿವೆ. ಸರಕಾರಕ್ಕೆ ದುಡ್ಡಿನ ಅಭಾವ ಉಂಟಾಗಿದೆ ಎಂಬ ಕಾರಣದಿಂದ ಸರಕಾರವು ಅವನ್ನು ಸ್ವೀಕರಿಸಲು ನಿರಾಕರಿಸಿದೆ. ಅಥವಾ ಮುಂದಕ್ಕೆ ಆಲೋಚಿಸಲಾಗುವುದೆಂದು ಉತ್ತರ ಕೊಟ್ಟಿದೆ. ಸರಕಾರವು ತನ್ನ ಖರ್ಚನ್ನು ಕಡಿಮೆಮಾಡದೆ ಇದ್ದರೆ, ಮತ್ತು ವರ್ಷಾವಧಿಯ ಕಪ್ಪದಲ್ಲಿ ೩೦೦ ಲಕ್ಷ ಮಾಫಿಯನ್ನು ಹೊಂದದೆ ಇದ್ದರೆ ಸ್ಥಳೀಕ ಸಂಸ್ಥೆಗಳು ಹಣದ ತುಟ್ಟಿಯ ಕಷ್ಟಕ್ಕೆ ಬಹಳವಾಗಿ ಈಡಾಗಬೇಕಾಗುವುದು. ಸ್ಥಳೀಕ ಸಂಸ್ಥೆಗಳು ತಮಗೆ ಬೇಕಾದ ಆದಾಯವನ್ನು ತೆರಿಗೆಗಳನ್ನು ಹೆಚ್ಚಿಸಿ ಅಥವಾ ಲಾಭದಾಯಕವಾದ ಕಾರ್ಯಗಳನ್ನು ಮಾಡಿ ಹೊಂದಬಹುದೆಂದು ಕೆಲವರು ಹೇಳಬಹುದು. ಪರಂತು ಲಾಭದಾಯಕವಾದ ಕಾರ್ಯಗಳನ್ನು ಕೈಕೊಳ್ಳಲೂ ಪ್ರಥಮದಲ್ಲಿ ಹಣ ಬೇಕಲ್ಲವೆ? ಈ ವಿಷಯದಲ್ಲಿ ನಮ್ಮ ಮಂತ್ರಿಗಳು ಹಣದ ಹಾಗು ಆಲೋಚನೆಯ ಸಹಾಯವನ್ನು ಮಾಡುವರೆಂದು ನಾನು ಭರವಸೆ ಪಡುತ್ತೇನೆ. ಹೊಸ ತೆರಿಗೆಗಳನ್ನು ಅಲ್ಪ ಸ್ವಲ್ಪ ಹೆಚ್ಚಿಸಬಹುದಲ್ಲದೇ ಭಾರವಾದ ತೆರಿಗೆಯನ್ನು ಹೊರಿಸಲು ಸರಕಾರಕ್ಕೂ ಸ್ಥಳೀಕ ಸಂಸ್ಥೆಗಳಿಗೂ ಇದು ಸುಸಮಯವಲ್ಲ. ಆದರೂ ಸ್ಥಳೀಕ ಸಂಸ್ಥೆಗಳು ಈಗ ಕೆಲವು ತೆರಿಗೆಗಳನ್ನು ಬಹಳ ಜಾಗರೂಕತೆಯಿಂದ ಹೊರಿಸಲು ಪ್ರಾರಂಭಿಸಿವೆ.

ಕೊಯಮುತ್ತೂರಿನಲ್ಲಿ ನಾನು ಅಧ್ಯಕ್ಷನಾಗಿ ಸ್ಥಳೀಕ ಸಂಸ್ಥೆಗಳ ಕಾರ್ಯಗಳನ್ನು ಕುರಿತು ಸವಿಸ್ತಾರವಾಗಿ ಮಾತಾಡಿದಂತೆ ಇಂದು ವಿವರಿಸುವುದಿಲ್ಲ. ಹಣದ ಕೊರತೆಯಿಂದಲೇ ಸ್ಥಳೀಕ ಸಂಸ್ಥೆಗಳು ಹೆಚ್ಚಿನ ಅಭಿವೃದ್ಧಿಯನ್ನು ತೋರಿಸಲಿಲ್ಲವೆಂದು ಮಾತ್ರ ವ್ಯಕ್ತಪಡಿಸುತ್ತೇನೆ.

ಆಮದುರಫ್ತಿನ ಚಲಾವಣೆಯು ಹೆಚ್ಚಿದ್ದರಿಂದ ರಸ್ತೆಗಳ ದುರುಸ್ತಿಯನ್ನು ಮುಂಚಿಗಿಂತ ಬಲವಾಗಿ ಮಾಡಬೇಕಾಗಿದೆ. ಕಳೆದ ಎರಡು ಮೂರು ವರುಷಗಳಿಂದ ಸ್ಥಳೀಕ ಸಂಸ್ಥೆಗಳಿಗೆ ಗ್ರಾಮಾಂತರಗಳಲ್ಲಿ ಮಾರ್ಗಗಳನ್ನು ಸರಿಪಡಿಸಲು ಆಗಲೇ ಇಲ್ಲ. ಹಳ್ಳಿಗಳ ರಸ್ತೆಗಳ ದುರುಸ್ತಿಗೂ ಆರೋಗ್ಯರಕ್ಷಣೆಯ ಕಾರ್ಯಕ್ಕೂ ಸರಕಾರವು ಮಾಡುವ ಹಣ ಸಹಾಯವು ಏನೂ ಸಾಕಾಗುವುದಿಲ್ಲ.

ಮುಖ್ಯ ಮಾರ್ಗಗಳ ಮತ್ತು ೨ನೇ ತರಗತಿಯ ರಸ್ತೆಗಳ ಬಗ್ಗೆ ಸ್ಥಳೀಕ ಸಂಸ್ಥೆಗಳು ಹಣವನ್ನು ಖರ್ಚು ಮಾಡುವಾಗ ಅವು ಬಹು ಜಾಗರೂಕತೆಯಿಂದ ಮಾಡುತ್ತಿವೆ. ಈ ವಿಷಯದಲ್ಲಿ ಅವುಗಳಿಗೆ ಮಿತಿಯನ್ನು ನಿರ್ಧರಿಸಿ ಶರ್ತಗಳನ್ನು ಕೊಡಬೇಕಾಗಿಲ್ಲ. ಹಣವು ಉತ್ತಮ ರೀತಿಯಲ್ಲೇ ಮಾರ್ಗಗಳ ಕೆಲಸಕ್ಕಾಗಿಯೆ ವಿನಿಯೋಗಿಸಲಾಗುತ್ತದೋ ಎಂದು ಮಾತ್ರ ನೋಡಿದರೆ ಸಾಕು. ಹೆದ್ದಾರಿಗಳ ದುರುಸ್ತಿ ಬಗ್ಗೆ ಮೈಲಿಗೆ ರೂ. ೫೦೦ ಆದರೂ ಬೇಕೆಂದು ಚೀಫ್ ಇಂಜೀನಿಯರರ ಅಂದಾಜು. ಅದರಂತೆ ಸರಕಾರವು ಹೆದ್ದಾರಿಗಳ ಬಗ್ಗೆ ಸಹಾಯಮಾಡಬೇಕಾಗಿದೆ. ಹಳ್ಳಿಗಳಲ್ಲಿ ಎರಡನೆ ತರಗತಿಯ ಮಾರ್ಗಗಳ ದುರುಸ್ತಿಯನ್ನು ಸ್ಥಳೀಕ ಸಂಸ್ಥೆಗಳೇ ಸರಕಾರದವರಿಂದ ಸಹಾಯ ಪಡೆದು ಮಾಡಬೇಕು, ಅಲ್ಲದೆ ಹೊಸ ರಸ್ತೆಗಳನ್ನು ಹಾಕಿಸುವ ಮತ್ತು ಅವುಗಳನ್ನು ದುರುಸ್ತಿ ಪಡಿಸುವ ಕಾರ್ಯಗಳನ್ನು ಇವುಗಳೇ ನೋಡಬೇಕು.

ವಿದ್ಯಾಭಿವೃದ್ಧಿಗೂ ಸಹಾಯ ಮಾಡಲು ಮಂತ್ರಿಗಳ ಕೈಯಲ್ಲಿ ಹಣವಿಲ್ಲವೆಂಬುದು ನಿಜ. ಪರಮಾವಧಿ ವಿದ್ಯಾಂಗ ತೆರಿಗೆಕ್ಕಿಂತ ಹೆಚ್ಚಾಗಿ ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ತಾಲೂಕು ಬೋರ್ಡುಗಳಿಂದ ಹಣ ವಸೂಲಾಗಬಾರದೆಂದು ನನ್ನ ಅಭಿಪ್ರಾಯ. ಸೆಕೆಂಡರಿ ವಿದ್ಯಾಭ್ಯಾಸದ ಸಂಗತಿಯಲ್ಲಿ ಆಯಾ ಸ್ಥಳೀಕ ಸಂಸ್ಥೆಗಳ ಯೋಗ್ಯತೆಯನ್ನೂ ಅಲ್ಲಿನ ಶಾಲೆಗಳ ವಿದ್ಯಮಾನವನ್ನೂ ನೋಡಿ ಗ್ರಾಂಟನ್ನು ಹೆಚ್ಚಿಸಿ ಬಿನ್ ಖರ್ಚಿನ ಅರ್ಧ ಭಾಗವನ್ನು ಸರಕಾರವು ವಹಿಸಿಕೊಳ್ಳಬೇಕು.

ಸ್ಥಳೀಕ ಸಂಸ್ಥೆಗಳಿಂದ ಸ್ಥಾಪಿಸಲ್ಪಟ್ಟ ಉದ್ಯೋಗಿಕ ಮತ್ತು ಕೈಗಾರಿಕೆಯ ಶಾಲೆಗಳಿಗೆ ಸರಕಾರದಿಂದ ಸಾಕಷ್ಟು ಸಹಾಯವು ದೊರಕುವುದಿಲ್ಲ. ಸ್ಥಳೀಕ ಸಂಸ್ಥೆಗಳು ಕೊಡುವ ಕೃಷಿ, ಕೈಗಾರಿಕೆ, ಉದ್ಯೋಗಿಕ ಶಿಕ್ಷಣಗಳಲ್ಲಿ ಸರಕಾರಿ ಕೃಷಿ ಮತ್ತು ಕೈಗಾರಿಕೆಯ ಖಾತೆಗಳು ತಮ್ಮ ಸಹಕಾರವನ್ನು ತೋರಿಸಬೇಕು. ವಿದ್ಯಾ ಇಲಾಖೆಯು ಮಂತ್ರಿಗಳ ಸಹಾಯದಿಂದ ಬೇಗನೆ ಈಗಿನ ಶಿಕ್ಷಣ ಕ್ರಮದಲ್ಲಿ ಉದ್ಯೋಗಿಕ ಶಿಕ್ಷಣವನ್ನು ಕೊಡುವ ಕ್ರಮವೂ ಜಾರಿಗೆ ಬರಬಹುದೆಂದೂ ಉದಾರ ಗ್ರೇಂಟಿನ ಮೂಲಕ ಉದ್ಯೋಗದ ಶಿಕ್ಷಣವು ಬೇಗನೇ ಜಾರಿಗೆ ಬರುವದೆಂದೂ ನಾವು ಬಲ್ಲೆವು.

ಆರೋಗ್ಯ ರಕ್ಷಣೆ, ಔಷಧಗಳ ಸಹಾಯ ಮೊದಲಾದ ಈ ಕಾರ್ಯಗಳಿಗೂ ಸರಕಾರವು ತನ್ನಲ್ಲಿ ಹಣವಿಲ್ಲವೆಂಬ ಕಾರಣವನ್ನು ಸೂಚಿಸಿ ದ್ರವ್ಯಸಹಾಯ ಮಾಡುವುದಿಲ್ಲ. ಇದರಿಂದ ಅದು ಈ ಕಾರ್ಯಗಳಲ್ಲಿ ತಕ್ಕಷ್ಟು ಸಹಾನುಭೂತಿಯನ್ನು ತೋರಿಸುವುದಿಲ್ಲವೆಂದಾಗುತ್ತದೆ

ಹಿಂದೂವೈದ್ಯ ಕ್ರಮವನ್ನು ಪರಿಶೋಧಿಸಲು ನೇಮಕಪಟ್ಟ ಕಮಿಟಿಯ ಠರಾವುಗಳಲ್ಲಿ ಸರಕಾರಕ್ಕೆ ಒಪ್ಪಿಗೆಯಾದಂಥ ಸೂಚನೆ ಮೊದಲಾದ ಉಪಯುಕ್ತ ಯೋಜನೆಗಳನ್ನು ಜಾರಿಗೆ ತರಲು ಸರಕಾರದಿಂದ ಹಣ ಸಹಾಯದನ್ನು ಪಡಿಯುವ ಎಲ್ಲ ಸಂಸ್ಥೆಗಳು ಯಾವ ಆಕ್ಷೇಪವನ್ನು ಎತ್ತದೆ, ಅವು ಇಂಥ ಕಾರ್ಯಗಳಲ್ಲಿ ಸರಕಾರದೊಡನೆ ಕೂಡಿಯೇ ನಡಿಯುವುವು ಎಂಬುದರಲ್ಲಿ ಸಂಶಯ ಇಲ್ಲ. ದೇಶದಲ್ಲಿ ಆಸ್ಪತ್ರೆಗಳನ್ನು ಇನ್ನೂ ಹೆಚ್ಚಿಸಬೇಕಾಗಿದೆ. ಯೋಗ್ಯರಾದ ಆಯುರ್ವೇದ ಮತ್ತು ಯುನಾನಿ ವೈದ್ಯರನ್ನು ಪ್ರೋತ್ಸಾಹಿಸುವುದು ಅಗತ್ಯವಿದೆ.

ಅನಂತರ ಎಜ್ಯುಕೇಶನಲ್ ಕೌನ್ಸಿಲಿನ ಪ್ರತಿನಿಧಿಗಳನ್ನು ಬರಗೊಂಡ ಲೋಕಲ್ ಮತ್ತು ಮುನ್ಸಿಪಲ್ ಗ್ರೂಫ್ ಕೊನ್ಫರೆನ್ಸು ಇದು ಮೊದಲನೆಯದೆಂದೂ ಏಯಿಡೆಡ್ ಶಾಲೆಗಳ ಗ್ರಾಂಟನ್ನೂ ಉಪಾಧ್ಯಾಯರ ಸಂಬಳವನ್ನೂ ಹೆಚ್ಚಿಸಬೇಕೆಂದೂ ಹೇಳಿ ಈ ಅಧಿವೇಶನಕ್ಕೆ ಬಂದ ಪ್ರತಿನಿಧಿಗಳನ್ನು ವಂದಿಸಿ ಅಧ್ಯಕ್ಷರ ಪರಿಚಯವನ್ನು ನೆರೆದವರಿಗೆ ಮಾಡಿಕೊಟ್ಟು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಒಪ್ಪಿದ ಬಗ್ಗೆ ಅವರ ಆಭಾರವನ್ನು ಮನ್ನಿಸಿ ತಮ್ಮ ಭಾಷಣವನ್ನು ಮುಗಿಸಿದರು.

ಅಧ್ಯಕ್ಷರ ಭಾಷಣ.

ಈ ಕೊನ್ಫರೆನ್ಸಿನ ಅಧ್ಯಕ್ಷರು ಪ್ರಥಮದಲ್ಲಿ ತನ್ನನ್ನು ಅಧ್ಯಕ್ಷನಾಗಿ ಚುನಾಯಿಸಿದ ಬಗ್ಗೆ ಸ್ವಾಗತಕಮಿಟಿಯವರನ್ನು ವಂದಿಸಿ ಭಾಷಣವನ್ನು ಪ್ರಾರಂಭಿಸಿದರು.

ಮೊದಲಿನ ನ್ಯಾಯವಿಧಾಯಕ ಸಭೆಯು ತನ್ನ ಕಾರ್ಯಭಾಗದ ಕೊನೆಯ ಅಧಿವೇಶನದಲ್ಲಿ ಎಂದರೆ, ೧೯೨೦ರಲ್ಲಿ ಸ್ಥಳೀಕ ರಾಜ್ಯಭಾರ ಸಂಸ್ಥೆಗಳ ಆಡಳಿತ ಮತ್ತು ಕಾನೂನುಗಳ ಕುರಿತು ಹೊಸ ಎಕ್ಟುಗಳನ್ನು ಪಾಸು ಮಾಡಿತು. ಈ ಹೊಸ ಎಕ್ಟುಗಳನ್ನು ಅನುಸರಿಸಿ ಎಲ್ಲಾ ಸ್ಥಳೀಕ ರಾಜ್ಯಭಾರ ಸಂಸ್ಥೆಗಳು ಪುನಃ ಸ್ಥಾಪನೆಯಾಗಿ ಅವು ತಮ್ಮ ತಮ್ಮ ಕಾರ್ಯಭಾರವನ್ನು ನಡಿಸಲು ಪ್ರಾರಂಭಿಸಿವೆ. ಸಂಪೂರ್ಣವಾಗಿ ನಡಿಸಲು ಅಸಾಧ್ಯವಾದ ಈ ಹೊಸತಾಗಿ ಉಂಟುಮಾಡಿದ ಎಕ್ಟುಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದು ಅಗತ್ಯವಾಗಿ ಕಂಡುಬಂದುದರಿಂದ ಈ ಎಕ್ಟುಗಳಲ್ಲಿ ತಿದ್ದುಪಾಟುಗಳನ್ನು ಮಾಡುವ ಮಸೂದೆಗಳು ತಯಾರಾಗುತ್ತಿವೆ ಎಂದು ತಿಳಿದು ಬರುತ್ತದೆ. ತಿದ್ದುಪಡಿಮಾಡಲ್ಪಟ್ಟ ಮಸೂದೆಗಳು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬಂದು ಮಂಜೂರಾಗುವುದಕ್ಕಿಂತ ಮುಂಚೆ ಅವುಗಳನ್ನು ಕುರಿತು ಈ ಕೊನ್ಫರೆನ್ಸು ಆಲೋಚಿಸುವುದು ಅಗತ್ಯವಿದೆ.

ಡಿಸ್ಟ್ರಿಕ್ಟ ಬೋರ್ಡುಗಳಿಗೆ ಮೆಂಬರರಾಗಿ ತಾಲೂಕು ಬೋರ್ಡುಗಳು ತಮ್ಮ ಬೋರ್ಡಿನ ಮೆಂಬರರನ್ನೆ ಚುನಾಯಿಸುವ ಕ್ರಮವು ಹೊಸತಾಗಿ ಮಾಡಿದ ಎಕ್ಟುಗಳಲ್ಲೂ ಮುಂಚಿನ ಎಕ್ಟುಗಳಲ್ಲೂ ಇದೆ. ಆದರೆ ಹೊಸ ಎಕ್ಟು ಜಾರಿಗೆ ಬಂದುದರಿಂದ ಈಗ ಡಿಸ್ಟ್ರಿಕ್ಟ ಬೋರ್ಡಿಗೆ ಮೆಂಬರರಾಗಿ ಆರಿಸಲ್ಪಟ್ಟವರೂ ತಾಲೂಕು ಬೋರ್ಡ ಪ್ರೆಸಿಡೆಂಟರೂ ಕೂಡಿ ಡಿಸ್ಟ್ರಿಕ್ಟ ಬೋರ್ಡ ಮೆಂಬರರ ಸಂಖ್ಯೆಯು ಬಹು ಸಂಖ್ಯಾಕವಾಗಿ ಇರುತ್ತದೆ. ತಮ್ಮ ತಮ್ಮ ಸ್ವಪ್ರಯೋಜನದ ವಿಷಯದಲ್ಲಿ ತಾಲೂಕು ಬೋರ್ಡುಗಳಿಗೂ ಡಿಸ್ಟ್ರಿಕ್ಟ ಬೋರ್ಡಿಗೂ ವಿವಾದವುಂಟಾದರೆ ಈಗಿನ ಕ್ರಮದ ಮೇರೆಗೆ ಡಿಸ್ಟ್ರಿಕ್ಟ ಬೋರ್ಡಿನ ಒಳ್ಳೆತಗೆ ಹಾನಿ ಬರುವದೆಂದು ಕಾಣುತ್ತದೆ. ಹಣವನ್ನು ಹೇಗೆ ಹಂಚಬೇಕೆಂಬವನ್ನೂ, ಸಿಬ್ಬಂದಿಯ ಮೇಲ್ವಿಚಾರಣೆಯನ್ನು ಹೇಗೆ ಮಾಡಬೇಕೆಂಬವನ್ನೂ ಎಕ್ಟಿನಲ್ಲಿ ಕಾಣಿಸಿದೆ. ತಾಲೂಕು ಬೋರ್ಡುಗಳಿಗೂ ಡಿಸ್ಟ್ರಿಕ್ಟ ಬೋರ್ಡುಗಳಿಗೂ ಏನಾದರೂ ವಿವಾದ ಬರುವುದಾದರೆ ಇವೇ ಎರಡು ವಿಷಯಗಳಲ್ಲಾಗಿದೆ. ಇವನ್ನು ತಪ್ಪಿಸುವುದಕ್ಕಾಗಿ ಪ್ರತಿ ತಾಲೂಕು ಬೋರ್ಡನ್ನು ಒಂದು ಯೂನಿಟಾಗಿ ನೆನಸಿ ಪ್ರತಿಯೊಂದು ತಾಲೂಕಿನಿಂದ ಡಿಸ್ಟ್ರಿಕ್ಟ ಬೋರ್ಡ ಮೆಂಬರರನ್ನು ಸೀದಾ (ವೋಟರರೇ) ಚುನಾಯಿಸಬೇಕು. ಈ ಬದಲಾವಣೆಯನ್ನು ಮಾಡುವುದಾದರೆ ಈಗ ಚುನಾವಣೆಯಾದ ಸ್ಥಾನಗಳು ಖಾಲಿಯಾದ ಹಾಗೆಲ್ಲಾ ಹೊಸ ವಿಧಾನದಲ್ಲಿ ಮೆಂಬರರನ್ನು ಚುನಾಯಿಸುವುದು ಯುಕ್ತವಲ್ಲವೇ? ಇದನ್ನು ಆಲೋಚಿಸಿರಿ.

ಸ್ಥಳೀಕ ಸ್ವರಾಜ್ಯ ಸಂಬಂಧವನ್ನು ಕುರಿತು ಹೇಳುವುದಾದರೆ, ಜಿಲ್ಲೆಯು ತನ್ನ ಮಟ್ಟಿಗೆ ಸ್ವತಂತ್ರವಾಗಿರಬೇಕು. ಮುಖ್ಯ ಮುಖ್ಯ ಸ್ಥಳಗಳ ಮುನ್ಸಿಪಾಲಿಟಿಗಳಲ್ಲದೆ ಇತರ ಮುನ್ಸಿಪಾಲಿಟಿಗಳು ತಮ್ಮ ಖರ್ಚನ್ನು ತಾವೇ ವಹಿಸಿಕೊಳ್ಳಲು ಶಕ್ತವಾಗಿಲ್ಲ. ತಾಲೂಕು ಬೋರ್ಡುಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡಬೇಕಾದ್ದು ಅಗತ್ಯವಿದೆ. ತಾಲೂಕು ಬೋರ್ಡುಗಳೂ ಚಿಕ್ಕ ಮುನ್ಸಿಪಾಲಿಟಿಗಳೂ ವಹಿಸಿಕೊಳ್ಳಲಾಗದ ಪ್ರಮುಖವಾದ ಅಧಿಕಾರಗಳನ್ನು ಮಾತ್ರ ಡಿಸ್ಟ್ರಿಕ್ಟ ಬೋರ್ಡುಗಳು ತಮ್ಮ ಸ್ವಾಧೀನ ಇಟ್ಟುಕೊಳ್ಳಬೇಕು. ಡಿಸ್ಟ್ರಿಕ್ಟ ಬೋರ್ಡು ತಾಲೂಕು ಬೋರ್ಡುಗಳ ಒಂದು ಜೋಯಿಂಟ ಕಮಿಟಿಯಾಗಿ ಕೆಲಸಮಾಡಬೇಕು. ಜಿಲ್ಲಾ ಬೋರ್ಡುಗಳು ಮುಖ್ಯ ಹೆದ್ದಾರಿಗಳ ಮತ್ತು ಸೆಕೆಂಡರಿ ಶಾಲೆಯ ಆಡಳಿತೆಯನ್ನು ಮಾತ್ರ ನೋಡಬೇಕು. ರೈಲ್ವೆ ಯೋಜನೆ ಮುಂತಾದ ಇತರ ಎಲ್ಲಾ ಕಾರ್ಯಗಳನ್ನು ತಾಲೂಕು ಬೋರ್ಡುಗಳಿಗೂ ಮುನ್ಸಿಪಾಲಿಟಿಗಳಿಗೂ ಬಿಟ್ಟುಕೊಡಬೇಕು. ಡಿಸ್ಟ್ರಿಕ್ಟ ಬೋರ್ಡ ಶಾಲೆಗಳಿಗೆ ಧನಸಹಾಯಮಾಡುವ ಮತ್ತು ಆಗಾಗ್ಗೆ ಆ ಶಾಲೆಗಳ ಮೇಲ್ವಿಚಾರಣೆಯನ್ನು ನಡಿಸುವ ಅಧಿಕಾರವನ್ನು ಸಹ ಡಿಸ್ಟ್ರಿಕ್ಟ ಬೋರ್ಡುಗಳಿಗೆನೆ ಕೊಡತಕ್ಕದ್ದು.

ಈ ಸಂದರ್ಭದಲ್ಲಿ ಆರ್ಥಿಕ ಪ್ರಶ್ನೆಯು ಮಹತ್ವವಾಗಿದೆ. ಮಾರ್ಗಗಳನ್ನು ಸರಿಪಡಿಸುವ ಬಗ್ಗೆ ಮಾತ್ರ ಪ್ರಥಮದಲ್ಲಿ ಲೋಕಲ್‌ಬೋರ್ಡುಗಳು ಸ್ಥಾಪನೆಯಾದವು. ಕ್ರಮೇಣ ಲೋಕಲ್ ಬೋರ್ಡುಗಳಿಗೆ ಒಂದೊಂದೇ ಕಾರ್ಯವನ್ನು ವಹಿಸಿಕೊಡಲಾಯಿತು. ಮತ್ತು ಮುಂಚೆ ಮಾರ್ಗಗಳ ಬಗ್ಗೆ ಖರ್ಚುಮಾಡುತ್ತಿದ್ದ ಹಣವು ಈ ನೂತನ ಕಾರ್ಯಗಳಿಗೂ ವಿನಿಯೋಗಿಸಲು ಪ್ರಾರಂಭವಾಯಿತು. ಸರಕಾರವು ಈ ಕಾರ್ಯಗಳ ಬಗ್ಗೆ ಖರ್ಚುಮಾಡುವ ಹಣವನ್ನು ಉಳಿಸಿಕೊಂಡಿತು. ಲೋಕಲ್ ಬೋರ್ಡುಗಳಿಂದ ನಡಿಸಿಬರುತ್ತಿರುವ ಔಷಧಾಲಯಗಳೂ ಶಾಲೆಗಳೂ ಪ್ರಥಮದಲ್ಲಿ ಸರಕಾರದ ಹಣಸಹಾಯವಿಲ್ಲದೆ ನಡಿಸಲ್ಪಡುತ್ತಿದ್ದವು. ಬಳಿಕ ಲೋಕಲ್ ಬೋರ್ಡುಗಳಿಗೆ ತಮ್ಮ ಜವಾಬದಾರಿ ಹೆಚ್ಚಾದಾಗ ತಮ್ಮ ಸಂಸ್ಥೆಗಳನ್ನು ನಡಿಸಲು ಹಣದ ಕೊರತೆ ಉಂಟಾಯಿತು. ಆಗ ಸರಕಾರವು ಹಣ ಸಹಾಯಮಾಡಿತು. ಇಂಡಿಯಾ ಸರಕಾರದ ಕೈಯಲ್ಲಿ ಸಾಕಷ್ಟು ಹಣವಿದ್ದುದರಿಂದ ಆ ಕಾಲದಲ್ಲಿ ಹಿಂದೊಸ್ಥಾನ ಸರಕಾರವು ಔದಾರ್ಯದಿಂದ ಮದರಾಸ ಸರಕಾರಕ್ಕೆ ಹಣಸಹಾಯವನ್ನು ಒದಗಿಸಿ ಕೊಟ್ಟದ್ದರಿಂದ ಮದರಾಸ ಸರಕಾರವು ಲೋಕಲ್ ಬೋರ್ಡು ಮೊದಲಾದ ಸ್ಥಳೀಕ ಕಾರಭಾರವನ್ನು ನಡಿಸುವ ಸಂಸ್ಥೆಗಳಿಗೆ ಸಹಾಯಮಾಡುತ್ತಿತ್ತು. ಸುಧಾರಣೆಯು ಜನ್ಮವೆತ್ತಿದಂದಿನಿಂದ ವರಿಷ್ಠ ಸರಕಾರವು ಹಣಸಹಾಯ ಮಾಡುವುದಿಲ್ಲ. ಸರಕಾರದವರು ಕೊಡುತ್ತಿದ್ದ ಹಣಸಹಾಯವು ಯಾವದಾದರೂ ಒಂದು ಕ್ರಮವನ್ನು ಅನುಸರಿಸಿ ಇಲ್ಲದ್ದರಿಂದಲೂ ಎಲ್ಲಾ ಕಡೆಗಳಿಂದಲೂ ಈ ಕುರಿತು ದೂರುಗಳು ಬಂದದ್ದರಿಂದಲೂ ಸ್ಥಳೀಕ ಕಾರಭಾರವನ್ನು ನಡಿಸುಲು ಸಂಸ್ಥೆಗಳಿಗೆ ಸರಕಾರವು ಹಣಸಹಾಯವನ್ನು ಮಾಡುವ ಬಗ್ಗೆ ಕೆಲವು ಕ್ರಮಗಳನ್ನು ಏರ್ಪಡಿಸಲು ದಿ ಫಯಿನಾನ್ಸಿಯಲ್ ರಿಲೇಷನ್ ಕಮಿಟಿ ಎಂಬ ಒಂದು ಕಮಿಟಿಯು ನೇಮಕವಾಯಿತು. ಜನಾಂಗಿಕ ಕಾರ್ಯಗಳ ಬಗ್ಗೆ ಖರ್ಚುಮಾಡುವ [illegible] ಹಣದ ಭಾರವನ್ನು ಸರಕಾರವು ವಹಿಸಿಕೊಳ್ಳತಕ್ಕದ್ದು. ಸ್ಥಳೀಕ ಕಾರ್ಯಗಳ ಬಗ್ಗೆ ವೆಚ್ಚಮಾಡುವ ಹಣವನ್ನು ಬೋರ್ಡುಗಳು ವಹಿಸಿಕೊಳ್ಳತಕ್ಕದ್ದು. ಬಡ ಬೋರ್ಡುಶಾಲೆಗಳಿಗೆ ಸರಕಾರವು ಸಹಾಯ ಮಾಡಬೇಕು. ಇವೇ ಮೊದಲಾದ ಸೂಚನೆಗಳನ್ನು ಈ ಕಮಿಟಿಯು ಸೂಚಿಸಿತು.

ಗವರ್ನಮೆಂಟಿಗೆ ಸಂಬಂಧಿಸಿದ ಕಾರ್ಯಗಳನ್ನು ಬೋರ್ಡುಗಳು ಮಾಡುತ್ತಿವೆ ಎಂದು ಸರಕಾರವು ಮನಗಂಡಿದೆ. ಮತ್ತು ಕಮಿಟಿಯವರು ಸೂಚಿಸಿದ ಸೂಚನೆಗಳನ್ನು ಸರಕಾರವು ಸಂಬುವುದಾದರೂ ತನ್ನ ಬಗ್ಗೆ ಬೋರ್ಡುಗಳು ಮಾಡುವ ಕೆಲಸದ ಜವಾಬದಾರಿಯನ್ನು ಮಾತ್ರ ತಿಳಕೊಳ್ಳುವುದಿಲ್ಲ. ಮುಖ್ಯ ಮಾರ್ಗಗಳನ್ನು ದುರುಸ್ತಿಪಡಿಸುವುದು ತನ್ನ ಕಾರ್ಯವೆಂದು ಸರಕಾರವು ಒಪ್ಪುವುದಾದರೂ ಅವುಗಳ ದುರುಸ್ತಿ ಬಗ್ಗೆ ಅದು ಸಾಕಷ್ಟು ಸಹಾಯ ಮಾಡುವುದಿಲ್ಲ. ಬೋರ್ಡುಗಳು ನಡಿಸುವ ಔಷಧಾಲಯಗಳ ಬಗ್ಗೆ ಅದು ಕಳೆದ ವರುಷ ಬರೇ ಸೇಕಡಾ ೨೫ರಂತೆ ಕೊಟ್ಟಿದೆ, ಆದರೆ ವೈದ್ಯರಿಗೆ ಹೆಚ್ಚಿಸಿದ ಸಂಬಳದಲ್ಲಿ ಸೇಕಡೆ ೫೦ರಂತೆ ಕೊಟ್ಟಿದೆ. ಶಾಲೆಗಳ ಮತ್ತು ಆಸ್ಪತ್ರೆಗಳ ಬಗ್ಗೆ ಸರಕಾರವು ಖರ್ಚಿನ ಅರ್ಧಪಾಲಿಯನ್ನು ಕೊಡಲು ಒಪ್ಪಿರುವುದಾದರೂ ಯಾವುದೊಂದು ವರುಷವೂ ಅದು ಬೇಕಾದಷ್ಟು ಹಣವನ್ನು ಕೊಡುವುದಾಗಿ ಭರವಸೆ ಕೊಟ್ಟಿಲ್ಲ. ಸಂಕ ಮೊದಲಾದ ವಿಷಯಗಳಲ್ಲೂ ಸರಕಾರವು ಇದೇ ರೀತಿಯಲ್ಲಿ ವರ್ತಿಸುತ್ತಿದೆ.

ಈಗ ಎಲ್ಲಾ ಇಲಾಖೆಗಳ ಖರ್ಚು ವಿಪರೀತ ಏರಿದೆ. ವೈದ್ಯ ಉದ್ಯೋಗಸ್ಥರ ಸಂಬಳವು ಮೂರು ಪಾಲು ಏರಿದೆ. ಇದರಿಂದ ಆಸಿಸ್ಟಾಂಟ ಸರ್ಜನರುಗಳ ಬದಲಾಗಿ ಸಬ್ ಆಸಿಸ್ಟಾಂಟರನ್ನು ನೇಮಿಸಬೇಕಾಗಿ ಬಂದಿದೆ. ಬೋರ್ಡುಗಳು ತಮಗೆ ಅಧಿಕಾರವಿರುವಷ್ಟು ಮತ್ತು ಸಾಧ್ಯವಿದ್ದಷ್ಟು ಹೆಚ್ಚಿನ ತೆರಿಗೆಯನ್ನು ಹೊರಿಸಿ ಉತ್ಪನ್ನವನ್ನು ಉಂಟುಮಾಡಿದರೂ ಅವರಿಗೆ ತಮ್ಮ ಕೈಕೆಳಗಿನ ಸಂಸ್ಥೆಗಳನ್ನು ನಡಿಸಲು ಆಗುವುದಿಲ್ಲ. ಕೆಲವು ಬೋರ್ಡುಗಳು ದ್ರವ್ಯದ ಅಭಾವದಿಂದ ತಮ್ಮ ಕೈಕೆಳಗಿನ ಶಾಲೆಗಳನ್ನೂ ಔಷಧಾಲಯಗಳನ್ನೂ ಮುಚ್ಚಿಬಿಡುವುದರಲ್ಲಿದ್ದಾವೆ. ವಿದ್ಯಾಭ್ಯಾಸ, ವೈದ್ಯಕೀಯ ಸಹಾಯ, ಆರೋಗ್ಯ ರಕ್ಷಣೆ ಇವುಗಳ ಬಗ್ಗೆ ಸಹಾಯಮಾಡುವುದು ಅತೀ ಅಗತ್ಯ. ಆದುದರಿಂದ ಸರಕಾರವು ಬೋರ್ಡುಗಳಿಗೆ ತೃಪ್ತಿಕರವಾದ ಪರಿಮಾಣದಲ್ಲಿ ಹಣ ಸಹಾಯ ಮಾಡುವುದನ್ನು ನಿರ್ಧರಿಸಬೇಕಾಗಿದೆ.

ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ತಗಲುವ ಅರ್ಧ ಖರ್ಚನ್ನು ಸರಕಾರವು ವಹಿಸಿಕೊಳ್ಳಬೇಕಾಗಿ ನೇಮವಿದೆ. ಬೋರ್ಡುಗಳು ತೆರಿಗೆಯನ್ನು ಹೆಚ್ಚಿಸಿ ಈಗ ಎಷ್ಟು ಹಣವನ್ನು ದೊರಕಿಸಿಕೊಳ್ಳುವವೋ ಅಷ್ಟೆ ಹಣವನ್ನು ತಾನು ಮೊದಲು ಕೊಡುತ್ತಿದ್ದ ಹಣಕ್ಕೆ ಸೇರಿಸಿ ಕೊಡುವುದಾಗಿ ಸರಕಾರವು ಅಭಿಪ್ರಾಯಪಟ್ಟಿದೆ. ಎಲಿಮೆಂಟರಿ ವಿದ್ಯಾಭ್ಯಾಸದ ಬಗ್ಗೆ ಬೋರ್ಡುಗಳು ಖರ್ಚು ಮಾಡಿದ ಅರ್ಧದಷ್ಟು ಹಣ ಕೂಡ ಅನೇಕ ಬೋರ್ಡುಗಳಿಗೆ ಈಗ ದೊರಕುವುದಿಲ್ಲ. ಇಲಾಖೆಗಳ ಬೇರೆ ಖರ್ಚನ್ನು ತಗ್ಗಿಸಿ ಈ ಏರ್ಪಾಡಿನಿಂದ ದೊರಕುವ ಹಣದಿಂದ ವಿದ್ಯಾ ಇಲಾಖೆಯನ್ನು ಬೋರ್ಡುಗಳು ನಡಿಸಿದರೆ ಸರಕಾರವು ಯಾವ ಧನ ಸಹಾಯವನ್ನೂ ಮಾಡಲಿಕ್ಕಿಲ್ಲವಂತೆ. ಆದುದರಿಂದಲೇ ಈ ವಿಷಯದಲ್ಲಿ ವಿದ್ಯಾ ಇಲಾಖೆಯ ಕಾನೂನಿನಲ್ಲಿ ತಿದ್ದುಪಡಿಗಳನ್ನು ಮಾಡುವ ಅವಶ್ಯವಿದೆ.

ಇಡೀ ದಿವಸ ಕೆಲಸಮಾಡುವ ವೈದ್ಯ ಉದ್ಯೋಗಸ್ಥರ ಬದಲಾಗಿ ವೈದ್ಯಕೀಯ ವೃತ್ತಿಯನ್ನು ಖಾಸಗಿಯಾಗಿ ನಡಿಸುವ ವೈದ್ಯರನ್ನು ಬೋರ್ಡುಗಳ ಔಷಧಾಲಯಗಳಲ್ಲಿ ನಿಶ್ಚಿತ ಸಮಯದಲ್ಲಿ ಬಂದು ಕೆಲಸ ಮಾಡುವ ಏರ್ಪಾಡು ಮಾಡಿ ಖರ್ಚನ್ನು ತಗ್ಗಿಸಬಾರದೇ? ಜನರ ಆಡಳಿತೆಗೆ ಒಳಪಟ್ಟ ಔಷಧಾಲಯಗಳಲ್ಲಿ ಆಯುರ್ವೇದ ವೈದ್ಯರನ್ನು ನೇಮಿಸಿ, ಎಲ್ಲೋಪತಿಕ್ ಔಷಧಾಲಯಗಳನ್ನು ಇಡುವುದಕ್ಕಿಂತ ಆಯುರ್ವೇದ ಅಥವಾ ಯುನಾನಿ ಔಷಧಾಲಯಗಳನ್ನು ಸ್ಥಾಪಿಸಬಾರದೇ? ಈಗ ಆಯುರ್ವೇದ ಕೊಲೇಜುಗಳಲ್ಲಿ ಸರಿಯಾಗಿ ತರಬೇತಾದ ಅನೇಕ ವೈದ್ಯರುಗಳು ದೊರಕುವರು. ಆದುದರಿಂದ ಲೋಕಲ್ ಬೋರ್ಡುಗಳು ಸಾಕಷ್ಟು ಆಯುರ್ವೇದ ಅಥವಾ ಯುನಾನಿ ಔಷಧಾಲಯಗಳನ್ನು ತೆರೆಯಬಾರದೇ? ಈ ಎಲ್ಲ ವಿಷಯಗಳನ್ನು ನಾವು ಆಲೋಚಿಸಬೇಕಾಗಿದೆ.

ಡಿಸ್ಟ್ರಿಕ್ಟಬೋರ್ಡುಗಳು ರೈಲ್ವೆ ಮಾರ್ಗಗಳನ್ನು ಹಾಕಿಸಬಹುದೆಂದು ಸರಕಾರದ ಕಾನೂನು ಇದ್ದರೂ ಕೆಲವು ಡಿಸ್ಟ್ರಿಕ್ಟ ಬೋರ್ಡುಗಳು ಮಾತ್ರ ಈ ಕಾರ್ಯವನ್ನು ಕೈಕೊಂಡಿರುವವಲ್ಲದೆ ಹೆಚ್ಚಿನವು ಈ ಕಾರ್ಯದಲ್ಲಿ ಕೈಹಚ್ಚಲಿಲ್ಲ. ಕೆಲವು ಬೋರ್ಡುಗಳಿಗೆ ರೈಲ್ವೆ ಮಾರ್ಗಗಳನ್ನು ತೆರೆಯುವ ಕಾರ್ಯವನ್ನು ಮಾಡುವ ಮನಸ್ಸಿದ್ದರೂ ಹಣದ ಅಭಾವದಿಂದ ಈ ಕಾರ್ಯವನ್ನು ತಡಿಸಬೇಕಾಗಿ ಬಂದಿದೆ. ಪ್ರಥಮದಲ್ಲಿ ಸರಕಾರವು ಈ ವಿಷಯದಲ್ಲಿ ಸಹಾಯಮಾಡಲು ಮುಂದು ಬಂದುದರಿಂದ ಕೆಲವು ಜಿಲ್ಲೆಗಳು ಈ ಕಾರ್ಯವನ್ನು ಕೈಕೊಂಡವು. ಅನಂತರ ಹಣದ ಅಭಾವದಿಂದ ತನಗೆ ಸಹಾಯಮಾಡಲು ಉಪಾಯವಿಲ್ಲವೆಂದು ಸರಕಾರವು ತಿಳಿಸಿತು. ಬೇಂಕಿನಿಂದ ಬೋರ್ಡುಗಳಿಗೆ ಸಾಲ ಸಿಗುವಂತಿಲ್ಲ. ಈಗ ಸರಕಾರವು ಸಾಲವನ್ನು ಎತ್ತಿ ಬೋರ್ಡುಗಳಿಗೆ ಸಹಾಯಮಾಡಬೇಕಾಗಿದೆ. ಅಥವಾ ಬೋರ್ಡುಗಳು ಒಟ್ಟುಕೂಡಿ ಲಂಡನಿನಲ್ಲಿ ಅಥವಾ ಹಿಂದೊಸ್ಥಾನದಲ್ಲಿ ಸಾಲ ಎತ್ತಬೇಕಾಗಿದೆ. ಈ ಎರಡೇ ಉಪಾಯಗಳು ಕಾಣುತ್ತಿವೆ. ಈ ಎರಡು ಉಪಾಯಗಳನ್ನು ಬೋರ್ಡುಗಳೂ ಸರಕಾರವೂ ಚೆನ್ನಾಗಿ ಆಲೋಚಿಸಿ ಮೇಲಿನ ಎರಡು ಉಪಾಯಗಳಲ್ಲಿ ಒಂದನ್ನು ಕೈಕೊಳ್ಳಬೇಕು. ಮತ್ತು ಹೀಗೆ ಮಾಡುವುದರಲ್ಲಿ ಕಾಲವಿಳಂಬಮಾಡಲು ಅವಕಾಶವಿಲ್ಲವೆಂದು ನನ್ನ ಅಭಿಪ್ರಾಯ. ಬಹಳ ಕಾಲದಿಂದ ರೈಲ್ವೆ ತೆರಿಗೆಯನ್ನು ಅನೇಕ ಜಿಲ್ಲೆಗಳು ಕೊಡಿಸುತ್ತಿದ್ದಾವೆ. ಆದರೆ ರೈಲ್ವೆ ಮಾರ್ಗಗಳೇ ತೆರಿಯಲ್ಪಡುವುದಿಲ್ಲವೆಂಬ ದೂರು ಬರುವುದು ಸ್ವಾಭಾವಿಕವಾದ ಸಂಗತಿ. ಲ್ಯಾಟ್ ರೈಲ್ವೆಗಳನ್ನು ಮಾಡುವುದರಿಂದ ದೇಶಕ್ಕೆ ಹಿತವೂ ಬೋರ್ಡಿಗೆ ಆದಾಯವೂ ಆಗುವುದು. ಹೇಗೂ ಕಾಲವಿಳಂಬ ಮಾಡದೆ ಡಿಸ್ಟ್ರಿಕ್ಟಬೋರ್ಡ ರೈಲ್ವೆ ಸ್ಕೀಮಿನ ಬಗ್ಗೆ ಹಣಸಂಗ್ರಹಮಾಡುವ ಉಪಾಯವನ್ನು ಮಾಡಬೇಕು.

ಕಳೆದ ವರುಷ ಕೂಡಿದ ಕೊನ್ಫರೆನ್ಸಿನಲ್ಲಿ ಪಾಸಾದ ಠರಾವುಗಳೆಲ್ಲಾ ಉಪಯುಕ್ತವಾಗಿವೆ ಎಂದು ಸರಕಾರವು ಮನಗಂಡಿದೆ. ಮತ್ತು ಈ ಠರಾವುಗಳ ಕುರಿತು ಅದು ಯೋಗ್ಯ ರೀತಿಯಲ್ಲಿ ವರ್ತಿಸಲಿಕ್ಕಿದೆ. ಆದರೆ ಆರ್ಥಿಕ ವಿಷಯದ ಠರಾವುಗಳು ಸರಕಾರದ ಮುಂದೆ ಬಂದಾಗ ಮಾತ್ರ ಅದು ತಕ್ಕ ಆಶ್ವಾಸನವನ್ನು ಕೊಡುವುದಿಲ್ಲ. ಈ ಠರಾವುಗಳ ಕುರಿತು ಸರಕಾರವು ಆಲೋಚನೆ ಮಾಡಲಾಗುವುದು ಅಥವಾ ಹಣದ ತುಟ್ಟಿಯಾದುದರಿಂದ ಇದನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ಉತ್ತರ ಕೊಡುವುದು. ಮದರಾಸ ಸರಕಾರದ ಉತ್ಪನ್ನದಲ್ಲಿ 1/5 ಅಂಶವನ್ನು ಇಂಡಿಯಾ ಸರಕಾರವು ತೆಗೆದುಕೊಳ್ಳುವುದರಿಂದ ಅದು ಬಹಳ ಕಷ್ಟದಲ್ಲಿದೆ. ಇಂಡಿಯಾ ಸರಕಾರವು ಈ ಋಣವನ್ನು ಮಾಫಿಮಾಡುವ ವರೆಗೆ ಮದರಾಸ ಸರಕಾರಕ್ಕೆ ಸ್ಥಾನಿಕ ರಾಜ್ಯಭಾರದ ಸಂಸ್ಥೆಗಳಿಗೆ ಉದಾರತನದಿಂದ ಸಹಾಯ ಮಾಡಲು ಅನನುಕೂಲವಾಗಿದೆ. ಮದರಾಸ ಸರಕಾರವು ಬಡಸ್ಥಿತಿಯಲ್ಲಿರುವ ಸ್ಥಳೀಕ ರಾಜ್ಯಭಾರದ ಸಂಸ್ಥೆಗಳ ಆರ್ಥಿಕ ಸ್ಥಿತಿಯ ಕಡೆಗೆ ಗಮನಕೊಡುವುದಿಲ್ಲ. ಬರುವ ವರುಷದ ಅಂದಾಜು ಪಟ್ಟಿ ಮಾಡುವಾಗಲಾದರೂ ಅದು ಈ ಧೋರಣವನ್ನು ಬಿಟ್ಟು ಸರಿಯಾಗಿ ವರ್ತಿಸೀತೆಂದು ನಂಬುತ್ತೇನೆ.

ಶಾಸ್ತ್ರಜ್ಞರ ಅದ್ಭುತ ಕರ್ಮಗಳು— ಪಾಶ್ಚಾತ್ಯ ಶಾಸ್ತ್ರಜ್ಞರು ಆಶ್ಚರ್ಯಕರವಾದ ಕೆಲಸಗಳನ್ನು ಮಾಡುತ್ತಲಿದ್ದಾರೆ. ಎರಡು ಪ್ರಾಣಿಗಳ ತಲೆಯನ್ನು ಕತ್ತರಿಸಿ ಒಂದು ಮುಂಡದ ತಲೆಯನ್ನು ಇನ್ನೊಂದು ಮುಂಡಕ್ಕೆ ಜೋಡಿಸುವರು. ಇದರಿಂದ ಪ್ರಾಣವು ಹೋಗುವುದಿಲ್ಲ. ಕಸಿಗಿಡಗಳು ಹೇಗೆ ಬೆಳೆಯುತ್ತವೆಯೋ ಹಾಗೆಯೇ ಕಸಿಪ್ರಾಣಿಗಳು ಆಗುವುವು. ಹೆಣ್ಣುಪ್ರಾಣಿಯ ತಲೆಯನ್ನು ಗಂಡು ಪ್ರಾಣಿಯ ಮುಂಡಕ್ಕೆ ಜೋಡಿಸುವರು ಗಂಡಿನ ತಲೆಯನ್ನು ಹೆಣ್ಣಿನ ಮುಂಡಕ್ಕೆ ಸೇರಿಸುವರು. ಮತ್ತು ಅದರಿಂದಾಗುವ ವ್ಯತ್ಯಾಸಗಳನ್ನು ಪರೀಕ್ಷಿಸುವರು. ಹೀಗೆಯೇ ಸರ್ವಾಂಗಗಳನ್ನು ಕಸಿಮಾಡುವ ಏರ್ಪಾಡುಗಳು ಮಾಡಲ್ಪಡುತ್ತಲಿವೆ. ಇದರ ಪರಿಣಾಮವು ಕೇವಲ ಮಂಗಳಕರವಾಗಿಯೂ ಆಗಬಹುದು. ಪಶುಪಕ್ಷಿಗಳ ಅಂಗಗಳನ್ನು ಮನುಷ್ಯರ ದೇಹಕ್ಕೆ ಸೇರಿಸಬಹುದು. ಮನುಷ್ಯರ ಅಂಗಗಳನ್ನು ಪಶುಪಕ್ಷಿಗಳಿಗೆ ಸೇರಿಸಬಹುದು. ಈ ಪರೀಕ್ಷೆಗಳೆಲ್ಲಾ ಯೂರೋಪ, ಅಮೇರಿಕಾ, ಮೊದಲಾದ ಖಂಡಗಳಲ್ಲಿ ನಡಿಯುತ್ತಲಿರುವುವು. ಈ ಕ್ರಮವು ಕ್ರಮೇಣ ನಮ್ಮ ದೇಶದಲ್ಲೂ ಬರಬಹುದೆಂದು ತೋರುತ್ತದೆ. ಸಾಧ್ವೀ.

ಹಾಸನ ಮಂಗಳೂರು ರೈಲ್ವೆಯ ಏರ್ಪಾಡು—ಮೈಸೂರಿನ ಪ್ರಜಾಪ್ರತಿನಿಧಿ ಸಭೆಯು ಉಪಕ್ರಮವಾಗುವುದಕ್ಕೆ ಮುಂಚೆ ಒಪ್ಪಿಸಲ್ಪಟ್ಟ ಅಭಿನಂದನ ಪತ್ರಿಕೆಗಳಿಗೆ ದಿವಾನ ಸಾಹೇಬರು ಉತ್ತರಕೊಡುವಾಗ ಹಾಸನ ಮಂಗಳೂರು ರೈಲ್ವೆ ಲೈನಿನ ಕುರಿತು ಹೀಗೆಂದರು—ಹಾಸನ ಮಂಗಳೂರು ರೈಲ್ವೆಯ ಏರ್ಪಾಡನ್ನು ಶೀಘ್ರದಲ್ಲಿ ಉಪಕ್ರಮಿಸಲು ಸಾಧ್ಯವಿಲ್ಲವೆಂಬ ಅಂಶವನ್ನು ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘದವರಿಗೆ ತಿಳಿಯಪಡಿಸಲು ವಿಷಾದಿಸುತ್ತೇನೆ. ಮತ್ತು ಮುಂದೆ ಕೆಲವು ವರುಷಗಳ ವರೆಗೆ ಸರಕಾರಿ ಹಣದಿಂದ ಹೊಸ ಲೈನುಗಳನ್ನು ಹಾಕುವುದಕ್ಕಾಗಿ ಬಂಡವಾಳವನ್ನು ಒದಗಿಸಲಾಗುವುದಿಲ್ಲ. ನಾವು ಸೂಚನೆಮಾಡಿದಂತೆ ಈ ವಿಷಯವನ್ನು ಡಿಸ್ತ್ರಿಕ್ಟ ಬೋರ್ಡಿನವರು ಪರ್ಯಾಲೋಚಿಸಬೇಕು. ಸ್ಟಾರ್.

ಗುಜರಾಥ ವಿದ್ಯಾಪೀಠ—ಗಾಂಧಿ ವಾರದಲ್ಲಿ ಗುಜರಾಥ ವಿದ್ಯಾಪೀಠಕ್ಕೆ ೧೦ ಲಕ್ಷ ರೂಪಾಯಿ ಜಮೆಯಾಗಿದೆ.

ಕರ್ನಾಟಕ ಮಹಿಳಾ ವಿದ್ಯಾಲಯ—ಕರ್ನಾಟಕ ಮಹಿಳಾ ವಿದ್ಯಾಲಯದ ವರ್ಧಂತಿ ಉತ್ಸವವು ಧಾರವಾಡದಲ್ಲಿ ಬಹಳ ಉತ್ಸಾಹದಿಂದ ಶ್ರೀಮತಿ ರುಕ್ಮಿಣಿ ಅಮ್ಮ, ಬಿ. ಎ. ಸುಪರಿಂಟೆಂಡೆಂಟ ಮೈಸೂರ ಮಹಾರಾಣಿ ಕಾಲೇಜ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಅನ್ನಾಹಾರವನ್ನು ತೆಗೆದುಕೊಳ್ಳದ ಸ್ತ್ರೀಯರು—ಅಹಮ್ಮದಾಬಾದಿಗೆ ಒಬ್ಬ ಹೆಂಗಸು ಬಂದಿರುವಳು. ಇವಳನ್ನು ಕಾಣಲು ದಿನಾಲೂ ನೂರಾರು ಜನರು ಬರುತ್ತಿರುವರು. ಸುಮಾರು ೫ ವರುಷಗಳಿಂದ ಈ ಹೆಂಗಸು ತೀಕ್ಷ್ಣ ಉನ್ಮಾದಾವಸ್ಥೆಯನ್ನು ಹೊಂದಿ ಅಂದಿನಿಂದ ಈ ವರೆಗೆ ದಿನಂಪ್ರತಿ ಬರೆ ಎರಡು ಅಥವಾ ಮೂರು ಟಿನ್ಸ್ ನೀರನ್ನು ಮಾತ್ರವಲ್ಲದೆ ಬೇರೆ ಯಾವ ಆಹಾರವನ್ನೂ ತೆಗೆದುಕೊಳ್ಳುವುದಿಲ್ಲವಂತೆ. ಈ ಹೆಂಗಸು ಮಲವಿಸರ್ಜನೆ ಮಾಡುವುದೂ ಮುಟ್ಟಾಗುವುದೂ ಇಲ್ಲ. ಈಗ ಇವಳು ಸ್ವಸ್ಥವಾಗಿದ್ದು ತನ್ನ ಸ್ವಂತ ಕೆಲಸಗಳನ್ನೆಲ್ಲಾ ಮಾಡುತ್ತಿದ್ದಾಳೆ. ಈ ಸ್ತ್ರೀಯು ನಾಡಿಚಲನೆಯು ಮನ್ನಮತರದಲ್ಲಿದೆ. ಇವಳು ೩೬ ವರುಷದ ಒಬ್ಬ ವಿಧವೆಯಾಗಿರುವಳು.

ಹತ್ತು ವರುಷಗಳಿಂದ ಆಹಾರವನ್ನು ತೆಗೆದುಕೊಳ್ಳದ ಒಬ್ಬ ಸ್ತ್ರೀಯನ್ನು ತಾನು ಕಂಡಿದ್ದೇನೆಂದು ಶ್ರೀಯುತ ಆರ್. ಬಿ. ಪರಗೋವಿಂದ ಎಂಬುವರು ಬರೋಡದಿಂದ ಬರೆದಿರುವರು. ಈ ಹತ್ತು ವರುಷಗಳಲ್ಲಿ ಈ ಹೆಂಗಸಿಗೆ ೩ ಮಕ್ಕಳು ಹುಟ್ಟಿವೆ. ಅವಳ ಪ್ರಥಮ ಸಲದ ಬಾಣಂತಿತನದಲ್ಲಿ ಬೋಳಪ್ಪ ಬಿದ್ದಾಗ ಅವಳು ಆಕಾಶದಿಂದ ಕೆಳಗೆ ಬಿದ್ದ ಒಂದು ಹರಿವಾಣವನ್ನು ಕಂಡು ಅದರಲ್ಲಿರುವ ಆಹಾರವನ್ನು ತಿಂದಂತೆ ಅವಳ ಮನಸ್ಸಿನಲ್ಲಿ ಒಂದು ಭಾವನೆಯುಂಟಾಯಿತೆಂದು ಅವಳು ಆಗಾಗ್ಗೆ ಹೇಳುತ್ತಿದ್ದಳಂತೆ. ಮತ್ತು ಅಂದಿನಿಂದ ಅವಳು ಯಾವ ತರದ ಆಹಾರವನ್ನೂ ತೆಗೆದುಕೊಳ್ಳುವುದಿಲ್ಲವಂತೆ. (ದಿ ಟ್ರೈಬ್ಯೂನ್.)

ಅಕಾಲಿ ಸತ್ಯಾಗ್ರಹ—ಗುರುದ್ವಾರ ಪ್ರಬಂಧಕ ಕಮ್ಮಿಟಿಯವರಂತೂ ಎಲ್ಲ ಅಕಾಲಿ ಸೆರೆಯಾಳುಗಳನ್ನು ಬಿಡದೆ ತಮಗೆ ಯಾವ ಮಾತನ್ನು ಕೇಳಲಿಕ್ಕೆ ಸಮ್ಮತವಿಲ್ಲವೆಂದು ತಿಳಿಸಿರುವರಂತೆ. ಈ ಕಮ್ಮಿಟಿಯವರು ಹಳ್ಳಿಗಳಿಗೆ ತಮ್ಮ ಪ್ರಚಾರಕರನ್ನು ಕಳುಹಿಸಿದ್ದಲ್ಲದೆ ಈ ಗದ್ದಲವು ಸಿಖ್ ಸೈನ್ಯದೊಳಗೆ ಹರಡುವ ಪ್ರಯತ್ನದಲ್ಲಿರುವರಂತೆ. ಸುಮಾರು ಹದಿನಾಲ್ಕು ವರುಷದ ಒಬ್ಬ ಹುಡುಗನು ಅಕಾಲಿಗಳ ಸತ್ಯಾಗ್ರಹದ ಸಹಾಯಕ್ಕಾಗಿ ತನ್ನ ಕಡೆ ಇರುವ ರೂ. ೧೦೦ನ್ನು ಗುಪ್ತದಾನವಾಗಿ ಕಳುಹಿಸಿದ್ದಾನೆ. ಸರಕಾರದವರು ಒಟ್ಟು ೧೩೬೭ ಮಂದಿ ಅಕಾಲಿ ಸತ್ಯಾಗ್ರಹಿಗಳನ್ನು ಸೆರೆಹಿಡಿದಿದ್ದಾರೆ

ಮುಲತಾನ್ ದಂಗೆ—ಈ ದಂಗೆಯ ಸಂಬಂಧ ಹಿಂದೂ ಮುಸಲ್ಮಾನರಲ್ಲಿರುವ ವೈಮನಸ್ಸನ್ನು ಕಿತ್ತುಬಿಡುವುದಕ್ಕಾಗಿ ಪಂಡಿತ ಮದನಮೋಹನ ಮಾಲವೀಯರೂ ಹಕೀಮ ಹಜಮಲ್‌ಖಾನರೂ ಮುಲ್ತಾನಿನಲ್ಲಿ ಒಂದು ಸಭೆಯನ್ನು ಕೂಡಿಸಲಿಕ್ಕಿದ್ದರು. ಆದರೆ ಸರಕಾರದವರು ಈ ಸಭೆಗೆ ಪ್ರತಿಬಂಧವನ್ನು ಹಾಕಿರುವರು.

ಮೈಸೂರು— ಈ ಸಂಸ್ಥಾನದ ಈಗಿನ ದಿವಾನರಾಗಿರುವ ಶ್ರೀಯುತ ಎ. ಆರ್. ಬ್ಯಾನರಜಿಯವರು ದಿವಾನ ಪದವಿಗೆ ರಾಜಿನಾಮೆಯನ್ನು ಕೊಡುವರೆಂದೂ ರಾಜಧರ್ಮಪ್ರವೀಣ ಚಂದ್ರಶೇಖರ ಅಯ್ಯರ್ ಚೀಫ್ ಜಡ್ಜ ಇವರು ದಿವಾನರಾಗಿ ಬರುವರಾಗಿಯೂ ದಟ್ಟವದಂತಿ ಇರುವುದಾಗಿ ಸತ್ಯವಾದಿ ಪತ್ರವು ಪ್ರಕಟಿಸಿದೆಯೆಂದು ಮದರಾಸ ಸ್ವರಾಜ್ಯ ಪತ್ರಿಕೆಯಲ್ಲಿದೆ.

ಶ್ರೀಯುತ ದತ್ತೋಪಂತ ಮಜಲಿಯವರು ಕಳೆದಾಜೆಯ ಮಂಗಳವಾರ ಬಂಧನದಿಂದ ಬಿಡುಗಡೆ ಹೊಂದಿದರು. ಇವರನ್ನು ಬೆಳಗಾಂವಿನ ಜನರು ಬಹಳವಾಗಿ ಸನ್ಮಾನಿಸಿದರು. ಮತ್ತು ಇವರಿಗೆ ಒಂದು ಹಣದ ಚೀಲವನ್ನು ಸಮರ್ಪಿಸಿದರು.

ಮದರಾಸ—ಡಾಕ್ಟರ ರವೀಂದ್ರನಾಥ ಠಾಕೂರರೂ ದೀನಬಂಧು ಸಿ. ಎಫ್. ಆಂಡ್ರೂಜರೂ ಪುನಃ ಮದರಾಸಿಗೆ ತಲ್ಪಿರುವರು

ಶ್ರೀಯುತ ಸಿ. ಆರ್. ದಾಸ:—ಇವರು ಮೂರಿ ಎಂಬಲ್ಲಿದ್ದಾರೆ. ಇವರ ಅಸ್ವಸ್ಥವು ಗುಣವಾಗುತ್ತ ಬರುತ್ತಿದೆ. ಬರುವ ನವಂಬರ ತಿಂಗಳ ಪ್ರಾರಂಭದ ವರೆಗೆ ಇವರು ಅಲ್ಲಿರುವರು.

ಕಾಶಿಯ ಹಿಂದೂ ವಿಶ್ವ ವಿದ್ಯಾಲಯ:—ಈ ವಿಶ್ವವಿದ್ಯಾಲಯದ ಚೆನ್ಸಲರ್ ಮತ್ತು ಪ್ರೋಚೆನ್ಸ್‌ಲರ ಪದವಿಯನ್ನು ಮೈಸೂರು ಮಹಾರಾಜರೂ ಗ್ವಾಲಿಯರ್ ಮಹಾರಾಜರೂ ಬಿಟ್ಟಿರುವುದರಿಂದ ಶ್ರೀಯುತ ಪಂಡಿತ ಮದನಮೋಹನ ಮಾಲವೀಯರ ಅರಿಕೆಯಂತೆ ಈ ಪದವಿಗಳನ್ನು ಬರೋಡಾ ಮತ್ತು ಬಿಕಾನೀರ ಮಹಾರಾಜರುಗಳು ಅಂಗೀಕರಿಸಲು ಒಪ್ಪಿರುವರಂತೆ.

ಮಹಾತ್ಮಾ ಗಾಂಧಿಯವರು— ಮಹಾತ್ಮರ ದರುಶನವನ್ನು ಪಡೆದ ಶೇಟ್ ಜಮುನಾಲಾಲ ಬಾಜಜರು ಮಹಾತ್ಮರ ಕ್ಷೇಮವನ್ನು ಕುರಿತು ಹೀಗೆಂದಿರುವರು.—ನಾವು ಇಂದು ಮಹಾತ್ಮರ ದರುಶನಕ್ಕೆ ಹೋಗಿದ್ದೆವು. ಕಳೆದ ಸಲ ನಾವು ಅವರನ್ನು ಕಂಡಾಗ ಅವರು ೧೦೮ ರಾತಲು ಭಾರವಿದ್ದರು. ಈ ಸಲ ೧೧೨ ರಾತಲು ಭಾರವಿರುವರು. ಅವರ ಮುಖಕಮಲವು ಸಂತೋಷದಿಂದಲೂ ಆನಂದದಿಂದಲೂ ಕೂಡಿದೆ. ನಗುಮೊಗದಿಂದ ಅವರು ನಮ್ಮನ್ನು ಸ್ವಾಗತಮಾಡಿ ಆನಂದದಿಂದ ಮಾತನಾಡಿದರು."

ಖಾದಿ—ಈ ದೀಪಾವಳಿ ಹಬ್ಬದ ಸಮಯ ಎಲ್ಲರೂ ಖಾದಿಯನ್ನು ಕೊಂಡುಕೊಳ್ಳಬೇಕಾಗಿ ಶ್ರೀಯುತ ರಾಜಗೋಪಾಲಾಚಾರ್ಯರು ಜನರಿಗೆ ವಿನಂತಿ ಮಾಡಿಕೊಂಡಿದ್ದಾರೆ.

ಸ್ವಾಮಿ ಶ್ರದ್ಧಾನಂದಜೀ:—ಸ್ವಾಮಿ ಶ್ರದ್ಧಾನಂದಜೀಯವರಿಗೆ ಐ. ಪಿ. ಸಿ. ಸೆಕ್‌ಶನ್ ೧೧೭ ಮತ್ತು ೧೮೩ರ ಮೇರೆಗೆ ಒಂದು ವರುಷ ಮತ್ತು ೪ ತಿಂಗಳ ಶಿಕ್ಷೆ ವಿಧಿಸಿದೆ. ಜನರು ಕಾನೂನನ್ನು ಉಲ್ಲಂಘಿಸಿ ನಡಿಯಬೇಕೆಂದು ಬೋಧಿಸುವುದು ಮನುಸ್ಮೃತಿಯ ಮೇರೆಗೆ ಸನ್ಯಾಸಿಯ ಕರ್ತವ್ಯವಲ್ಲವೆಂದು ಮಜಿಸ್ಟ್ರೇಟರು ಹೇಳಿದರು. ಎರಡು ಶಿಕ್ಷೆಗಳನ್ನು ಒಂದೇ ಕಾಲದಲ್ಲಿ ಅನುಭವಿಸಬೇಕಾದ್ದರಿಂದ ಶ್ರದ್ಧಾನಂದಜೀಯವರು ಒಂದೇ ವರುಷದ ಶಿಕ್ಷೆಯನ್ನು ಅನುಭವಿಸಬೇಕಾಗಿದೆ.

ಕರ್ನಾಟಕ ವೈಭವ:—ಕರ್ನಾಟಕ ವೈಭವದ ಈಗಿನ ಸಂಪಾದಕರಾದ ಶ್ರೀಯುತ ತಿಳಗೂಳ ಇವರಿಗೆ ರೂ. ೩೦೦ ಜುರುಮಾನೆ, ಜುರುಮಾನೆಯನ್ನು ತೆರದಿದ್ದರೆ ೪ ತಿಂಗಳ ಸಾದಾ ಶಿಕ್ಷೆ ವಿಧಿಸಲಾಯಿತು. ಆದರೆ ತಿಳಗೂಳರವರು ಜುರುಮಾನೆಯನ್ನು ಕೊಡದೆ ತುರಂಗವಾಸವನ್ನೆ ಸೇರುವರು.

ಕರ್ನಾಟಕ ಮಹಿಳಾ ವಿದ್ಯಾಲಯ:—ಈ ವಿದ್ಯಾಲಯದ ಕಾರ್ಯಗಳು ಬಹಳ ಉತ್ಸಾಹದಿಂದ ನಡಿಯುತ್ತಿರುವುದರಿಂದ ಇದನ್ನು ಕೊಲೇಜ್ ಆಗಿ ಮಾಡುವ ಪ್ರಯತ್ನ ನಡಿಯುತ್ತಿದೆ.

ತಮಿಳುನಾಡು ಕೊನ್ಫರೆನ್ಸ್:—ಈ ಕೊನ್ಫರೆನ್ಸಿಗೆ ಸೇಲಮಿನ ಶ್ರೀಯುತ ವಾಸುದೇವಯ್ಯ ಇವರನ್ನು ಅಧ್ಯಕ್ಷರಾಗಿ ಚುನಾಯಿಸಿದೆ. ಈ ಪ್ರೊವಿನ್ಸಿಯಲ್ ಕೊನ್ಫರನ್ಸಿನ ಒಟ್ಟಿಗೆ ಇಲ್ಲಿ ಸಾಧುಗಳ ಒಂದು ಪ್ರೊವಿನ್ಸಿಯಲ್ ಕೊನ್ಫರನ್ಸು ಸಹ ಸೇರಲಿಕ್ಕಿದೆ.

ಖಿಲಾಫತ್ ಕೊನ್ಫರೆನ್ಸ:—ಈ ಸಲ ದಶಂಬರ ತಿಂಗಳಲ್ಲಿ ಗಯಾದಲ್ಲಿ ಸೇರಲಿಕ್ಕಿರುವ ಖಿಲಾಫತ್ ಕೊನ್ಫರನ್ಸಿಗೆ ಅಂಗೋರಾ, ಕೊನ್ಸಟಂಟಿನೋಪಲು, ಮೆಸೊಪೊಟೇಮಿಯಾ, ಇಜಿಪ್ಟ, ಪರ್ಶಿಯಾ, ಅಫಘಾನಿಸ್ಥಾನ, ಪ್ರತಿನಿಧಿಗಳನ್ನು ಕರೆಸುವ ಆಲೋಚನೆ ಮಾಡಲಾಗಿದೆ.

ಡಾಕ್ಟರ ವರದ ರಾಜುಲು ನ್ಯಾಡೋ ಇವರ ಪ್ರತಿಜ್ಞೆ:—೧೯೨೨-೨೩ನೇ ವರುಷದ ಬಗ್ಗೆ ಇನ್‌ಕಮ್‌ಟೆಕ್ಸ್ ನೋಟೀಸು ಇವರಿಗೆ ಬಂದಿದೆ. ಶ್ರೇಷ್ಠಪುರುಷರಾದ ಮಹಾತ್ಮರನ್ನು ಬಂಧನದಲ್ಲಿಟ್ಟ ಸರಕಾರಕ್ಕೆ ತಾನು ಎಂದೂ ಇನ್‌ಕಮ್‌ಟೆಕ್ಸ್ ತೆರಿಗೆಯನ್ನು ಕೊಡಲಿಕ್ಕಿಲ್ಲವೆಂದು ಇವರು ಉತ್ತರ ಬರೆದಿರುತ್ತಾರೆ.

ಗುರುಕಾಬಾಗ ಚೌಕಸಿ ಕಮ್ಮಿಟಿ:—ಕೊಂಗ್ರೆಸ ಕಮಿಟಿಯವರಿಂದ ನೇಮಿಸಲ್ಪಟ್ಟ ಗುರುಕಾಬಾಗ ಎನ್‌ಕ್ವಾಯರಿ ಕಮಿಟಿಯವರು ತಮ್ಮ ಕಾರ್ಯವನ್ನು ಪ್ರಾರಂಭಿಸಿದ್ದಾರೆ.

ತು ಕ

ಪುನಃ ಯುದ್ಧವಾಗದಂತೆ ಪ್ರಸ್ತಾಪವು ನಡಿಯುತ್ತಿದೆ. ಈ ಬಗ್ಗೆ ಮತ್ತು ಈ ಕೆಳಗಿನ ಶರ್ತಗಳನ್ನು ಮೇರೆಗೆ ಗ್ರೀಕರು ಥ್ರೇಸ ಪ್ರದೇಶದಲ್ಲಿರುವ ಬೇಕು. ಒಂದು ತಿಂಗಳೊಳಗಾಗಿಯೇ ಈ ವಹಿಸಿಕೊಂಡು ಅಲ್ಲಿ ಅದು ತನ್ನ ಸೈನ್ಯ ಒಪ್ಪಂದವಾದ ಕೂಡಲೆ ಒಟಮಾನ ಸೈನ್ಯವು ಸೇರತಕ್ಕದ್ದು. ಅನಂತರ ಥ್ರೇಸ್ಸಿನಲ್ಲಿ ತುರ್ಕಿಯ ಗ್ರೀಕರು ಥ್ರೇಸನ್ನು ಬಿಟ್ಟುಹೋದ ಒಂದು ತಿಂಗಳನಂತರ ತಮ್ಮ ಸ್ವಾಧೀನಮಾಡಿಕೊಳ್ಳತಕ್ಕದ್ದು.

ಗ್ರೀಕರ ಸೈನ್ಯವು ಆದಷ್ಟು ತ್ವರಿತದಲ್ಲಿ ಮಾರಿಟ್ಸ ಬೇಕೆಂದು ಇಂಗ್ಲೆಂಡ, ಫ್ರಾನ್ಸ್, ಇಟಲಿ ಈ ಮೂರು ರಾಷ್ಟ್ರಗಳ ಬೇಕಾಗಿ ನಿಶ್ಚಯಿಸಿವೆ. ಅಲ್ಲದೆ ಪೂರ್ವ ಥ್ರೇಸಿನಲ್ಲಿ ಭಾರ ಕ್ರಮವು ಪ್ರಾರಂಭಿಸುವ ವರೆಗೆ ಗ್ರೀಕರು ಬಿಟ್ಟು ಹೋಗುವ ಸಖ ರಾಷ್ಟ್ರಗಳು ಶಾಂತಿಯನ್ನು ಕಾಪಾಡುವರಂತೆ. ಗ್ರೀಕರು ದಿಂದ ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಸಿದ ಒಂದು ತಿಂಗಳಲ್ಲಿ ಅಲ್ಲಿ ಆಡಳಿತೆಯು ಆರಂಭವಾಗತಕ್ಕದೆಂದು ಸಖ ರಾಷ್ಟ್ರಗಳು ನಿಶ್ಚಯಿಸಿವೆ. ರಾಷ್ಟ್ರಗಳು ಹೇಳಿದ ಶರ್ತಗಳ ಮೇರೆಗೆ ಗ್ರೀಕರು ಥ್ರೇಸನ್ನು ಬಿಟ್ಟು ಹೋಗ ಒಪ್ಪಿರುವರು. ತುರ್ಕಿಯೊಡನೆ ನಡಿಸುವ ಒಪ್ಪಂದದ ಕುರಿತು ಒಂದು ಶಾಂತಿ ಪರಿಷತ್ತನ್ನು ಬರುವ ನವಂಬರ ತಿಂಗಳ ಮೊದಲನೆಯ ದಿನ ಸ್ಕ್ಯುಟಾರಿಯಲ್ಲಿ ಅಥವಾ ಪ್ರಿಂಕಿಪೋ ಎಂಬಲ್ಲಿ ಸೇರಿಸಬೇಕೆಂಬ ಚರ್ಚೆಯು ನಡಿಯುತ್ತಿದೆ.

ಈ ಪರಿಷತ್ತಿನಲ್ಲಿ ಸಮುದ್ರ ಮುನಿಗಳನ್ನು ಸಖ ಮಂಡಲದವರಿಗೆ ಬಿಟ್ಟು ಕೊಡುವ ವಿಷಯವನ್ನು ಸಹ ಆಲೋಚಿಸಲಾಗುವುದು. ಈ ವರೆಗೆ ಬ್ರಿಟಿಷ ಸರಕಾರದ ಸಹಾಯಕರಾದ ಮಿ| ಗ್ರೆವಿನಲ್ ಎಂಬವರು 'ಒಬ್‌ಜರ್‌ವರ್' ಪ್ರತಿಕೆಯಲ್ಲಿ ಒಂದು ಲೇಖವನ್ನು ಬರೆದು ತುರ್ಕಿಯ ಸಮಸ್ಯೆಯ ಕುರಿತು ಮುಖ್ಯ ಮಂತ್ರಿಗಳಾದ ಲೊಯಡ್ ಜೋರ್ಜರ ಧೋರಣವು ಅಸಮರ್ಥನೀಯವಾದ್ದರಿಂದ ಲೊಯ್ಡ ಜೋರ್ಜರು ತಮ್ಮ ಪದವಿಗೆ ರಾಜಿನಾಮೆಯನ್ನು ಕೊಡುವುದು ಅಗತ್ಯವೆಂದು ಸ್ಪಷ್ಟವಾಗಿ ಬರೆದಿದ್ದಾರೆ. ತುರ್ಕಿಯು ಕೂಡೆ ಪುನಃ ಯುದ್ಧ ಮಾಡುವುದೆಂದರೆ ಮಿಲಿಯ ಗಟ್ಟಲೆ ಹಣವನ್ನು ಖರ್ಚುಮಾಡಿ ಅನೇಕರ ಪ್ರಾಣಗಳನ್ನು ಬಲಿಕೊಡಬೇಕಾದುದರಿಂದ ಯುದ್ಧವನ್ನು ಮಾಡುವುದು ಪ್ರಶಸ್ತವಲ್ಲವೆಂದೂ ಯುದ್ಧದಂಥ ಪ್ರಸಂಗವು ಉಂಟಾಗದಂತೆ ಬ್ರಿಟಿಷರು ಜಾಗ್ರತೆಯಿಂದ ಇರಬೇಕಾಗಿಯೂ ಇವರು ತಿಳಿಸಿದ್ದಾರೆ. ಲೊಯ್ಡ ಜೋರ್ಜರು ತಮ್ಮ ಪದವಿಯನ್ನು ಬಿಟ್ಟುಬಿಡುವುದಾದರೆ ಮಿ| ಬೊನರಲೋ ಇವರು ಈ ಪದವಿಗೆ ಒಬ್ಬ ಉಮೇದ್ವಾರರಾಗಿರುವರೆಂದು ತಿಳಿದುಬರುತ್ತದೆ. ಲೊಯ್ಡ ಜೋರ್ಜರು ತಮ್ಮ ಅಮಾತ್ಯ ಪದವಿಗೆ ರಾಜಿನಾಮೆಯನ್ನು ಕೊಡಬೇಕಾಗಿ ಅಲ್ಲಲ್ಲಿ ಗಲಾಟೆಯದ್ದಿರುವುದಾದರೂ ಇವರು ತಮ್ಮ ಪದವಿಯನ್ನು ಬಿಟ್ಟು ಕೊಡುವ ಇರಾದೆಯಲ್ಲಿಲ್ಲ. ಇಂಗ್ಲೆಂಡಿನ ನೇಶನಲ್ ಜೋಯಿಂಟ ಲೇಬರ ಕೌನ್ಸಿಲಿನವರು ಒಂದು ಸಭೆಯನ್ನು ಕೂಡಿಸಿ ಹೊಸ ಪಾರ್ಲಿಮೆಂಟನ್ನು ಬೇಗನೆ ಸ್ಥಾಪಿಸಬೇಕಾಗಿ ಒಂದು ಠರಾವನ್ನು ಪಾಸುಮಾಡಿದ್ದಾರೆ.

ದಕ್ಷಿಣ ಕನ್ನಡ

ಬಂಟವಾಳ:— ಉಳ್ಳಾಲದ ಬೋರ್ಡು ಹುಡುಗಿಯರ ಶಾಲೆಯ ಹುಡುಗಿಯರು ಸಂಬಳಕೊಡದೆ ಇದ್ದುದರಿಂದ ಕಳೆದ ಒಗಸ್ಟ ತಿಂಗಳ ತಾ. ೨೨ರಲ್ಲು ಜರಗಿದ ಮಂಗಳೂರು ತಾಲೂಕು ಬೋರ್ಡು ಮೀಟಿಂಗಿನಲ್ಲಿ ಉಳ್ಳಾಲ, ಪಣಂಬೂರು, ಸುರತಕಲ್ಲು, ಹಳೆಯಂಗಡಿ ಹುಡುಗಿಯರ ಶಾಲೆಗಳ ಶಾಲಾಫೀಸನ್ನು ಸೆಪ್ಟಂಬರ ೧ನೇ ತಾರೀಕಿನಿಂದ ಮಾಫಿಮಾಡುವರೆ ಸೆಂಕ್ಷನ್ ಆಯಿತು. ಬಂಟವಾಳ, ಪಾಣೆಮಂಗಳೂರು ಸರ್ಕಲಿನ ಇಬ್ಬರು ತಾಲೂಕು ಬೋರ್ಡು ಮೆಂಬರರು ಮೀಟಿಂಗಿನಲ್ಲಿ ಹಾಜರಿದ್ದರೂ ಬಂಟವಾಳ ಪಾಣೆಮಂಗಳೂರು ಹುಡುಗಿಯರ ಶಾಲೆಗಳಲ್ಲಿ ಫೀಸುಮಾಫಿಮಾಡದೆ ಇದ್ದ ಸಂಗತಿಯು ವಿಷಾದಕರವಾಗಿದೆ.

ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆಯ ನವರಾತ್ರಿಯ ಶಾರದಾ ಪೂಜೆಯು ಬಹಳ ಸಂಭ್ರಮದಿಂದ ನಡಿಯಿತು. ರಾ| ವೆಂಕಟರಾಯ ನ್ಯಾಕರ ಹರಿಕಥೆಯೂ, ರಾ| ಆತ್ಮಾರಾಮ ಶಾಸ್ತ್ರಿಗಳ ಅರ್ಥಗರ್ಭಿತವಾದ ಭಾಷಣವೂ, ರಾ| ಪುಂಡಲೀಕ ಬಾಳಿಗರ ಸಮಯೋಚಿತ ಭಾಷಣವೂ ಜನರ ಮನಸ್ಸನ್ನು ಸಂತೋಷಪಡಿಸಿದವು.

ಅಸಹಕಾರಿತೆಯ ಸೂತ್ರವನ್ನು ಅನುಸರಿಸಿ ಕಳೆದ ವರುಷದಿಂದ ವೃತ್ತಿತೆರಿಗೆಯನ್ನು ಕೊಡದ ಇದ್ದ ಅನೇಕ ದೊಡ್ಡ ಸಾಹುಕಾರರ ಅಂಗಡಿಗಳಿಂದಲೂ ಭಂಡಸಾಲೆಗಳಿಂದಲೂ ವಸ್ತ್ರವನ್ನೂ, ಕಬ್ಬಿಣ ಸಾಮಾನುಗಳನ್ನೂ, ಅಕ್ಕಿ ಮುಡಿಗಳನ್ನೂ ಇತರ ಸಾಮಾನುಗಳನ್ನೂ ಇಲ್ಲಿಯ ಪಟೇಲ ರಾ| ವೆಂಕಪ್ಪಯ್ಯ ಪ್ರಭುಗಳು ಜಪ್ತಿ ಮಾಡಿಸಿದರು. ಸಾಹುಕಾರರು ಮಂಡದ ಮೇಲೆ ಕೂತು ಸಂತೋಷದಿಂದ ನೋಡುತ್ತಾ ಕುಳಿತಿದ್ದರು.

ಡೊಕ್ಟರ ರವೀಂದ್ರನಾಥ ಠಾಕೂರರನ್ನು ನೋಡುವುದಕ್ಕಾಗಿ ಇಲ್ಲಿಂದ ಅನೇಕ ಗೃಹಸ್ಥರು ಮಂಗಳೂರಿಗೆ ತೆರಳಿದ್ದರು. ಇಲ್ಲಿಂದಲೂ ಠಾಕೂರರು ಸ್ಥಾಪಿಸಲಿಕ್ಕಿದ್ದ ವಿಶ್ವಭಾರತಿಗೆ ಸುಮಾರು ರೂ. ೩೦ ಸಿಕ್ಕಿರಬಹುದು. ಆದರೆ ಲೋಕಪ್ರಸಿದ್ಧರಾದ ಈ ಮಹನೀಯರು ಖಾದಿವಸ್ತ್ರ ಹಾಕಿಕೊಳ್ಳದೆ ಇದ್ದುದನ್ನು ನೋಡಿ ಅನೇಕರ ಮನಸ್ಸನ್ನು ಬೇಸರಗೊಳಿಸಿತು.

ಮಹಾತ್ಮಾ ಗಾಂಧಿಯವರ ಜನ್ಮ ದಿನವನ್ನು ಈ ಪೇಟೆಯವರು ಆಚರಿಸಿದರು. ಬೆಳಗ್ಗೆ ನಗರಭಜನ ಸಾಯಂಕಾಲ ಭಾಷಣಗಳು ಇದ್ದವು.

ವಿಶೇಷ ತರದ ವಿಷಮ ಜ್ವರವು ಊರಿನಲ್ಲಿಯೂ ಸುತ್ತಮುತ್ತಲಿನ ಹಳ್ಳಿಗಳಲ್ಲಿಯೂ ಪ್ರಬಲವಾಗಿದೆ.

ವರ್ತಕರ ಸಂಘದ ಲಾಟೂನನ್ನು ಈಗ ಉರಿಸಲು ಆರಂಭಿಸಿರುತ್ತಾರೆ. ಈ ವರುಷ ಉಳಿದ ಹಣದಿಂದ ಇನ್ನೊಂದು ಲಾಟೂನು ನಾಡಿಗ ಕಮ್ಮಿಯವರ ಓಣಿಯಲ್ಲಿ ಉರಿಸಿದರೆ ಬಹಳ ಉತ್ತಮವಿತ್ತು.

ಸುರತ್ಕಲ್:—"ಇಲ್ಲಿಯ ವಿದ್ಯಾದಾಯಿನೀ" ಸೊಸೈಟಿಯಲ್ಲಿ ೧೫ನೇ ಇನಾಮು ೨೦೦೦ ರೂಪಾಯಿ ಪಡೆದ ಉಡ್ಪಿ ಕಸಬೆಯಲ್ಲಿರುವ ಮ. ರಾ. ರಾ. ಶ್ರೀಯುತ ಸಿದ್ಧಾಪುರ ಅನಂತಯ್ಯ ಪ್ರಭುಗಳವರು "ಇದ್ಯ ವಿದ್ಯಾದಾಯಿನೀ" ಶಾಲಾ ಕಟ್ಟೋಣದ ಬಗ್ಗೆ ೧೦೦೦ ರೂಪಾಯಿಯನ್ನು ಉದಾರತೆಯಿಂದ ದಾನ ಮಾಡಿರುತ್ತಾರೆ. ಇವರ ಔದಾರ್ಯವು ಅತ್ಯಂತ ಶ್ಲಾಘನೀಯವಾಗಿರುತ್ತದೆ. ಇವರಿಗೆ ಪರಮಾತ್ಮನು ಆಯುರಾರೋಗ್ಯಾದಿ ಸಕಲೈಶ್ವರ್ಯಗಳನ್ನು ಕೊಡಲೆಂದು ಶಾಲೆಯ ಆಡಳಿತ ಸಭೆಯವರು ಶ್ರೀ ದೇವರನ್ನು ಪ್ರಾರ್ಥಿಸಿ, ಇವರ ಉಪಕಾರಕ್ಕೆ ಬಹಳ ಕೃತಜ್ಞರಾಗಿರುತ್ತಾರೆ.

ಲೋಕಲ್ ಮತ್ತು
ಸ್ವಾಗತ ನುಕ್ರಮಣಿಕೆ

ಮಹಾತ್ಮರ ಈ ಅ[illegible]ರಾವಣೆಗೆ ಸೂಚನೆಗಳು
ದೆಂದರೆ,—ವಂಶ ಸರ[illegible] ,,
ಹೊರಡಿಸಿದ ರೂ. ೩೪೮[illegible]—
ಈ ವಿಷಯದಲ್ಲಿ ಸ[illegible]ನದ ಸುಧಾರಣೆ ೨. ನೋಕರ ಶಾಹಿಯ ಪ್ರತಾಪ ೩. ಅಕಾಲಿ
ಟಿವ ಎಸೆಂಬ್ಲಿಯ[illegible]ಕಿ, ೪. ಅರ್ಲವಿಂಟರಟನ್ನರು ಬಂದ ಕಾರಣವೇನು? ,,
ಯೋಗ್ಯ ಪರಿಣಾ[illegible]ಗೋರರೂ ರೆವರೆಂಡ ಎಂಡ್ರೂಸರೂ ೬-೭
ಸರಕಾರಕ್ಕೆ ವರಿ[illegible]
ರಾಜಕೀಯ ಪ್ರ[illegible]—
ರಾಜ ಮ್ಯಾಲ[illegible] ಸಂಗ್ರಹಗಳು:—
ಸರಕಾರದ [illegible]ರ್ತಮಾನ, ಒಳದೇಶ ವರ್ತಮಾನ ತುರ್ಕರ ವಿಜಯ. ೭-೮
ಆಯಾ [illegible]ದ ೧. ಬಂಟವಾಳ ೨. ಸುರತ್ಕಲ್ ೩. ಅಡ್ಯಾರ ,,
ಯೊಬ್ಬ [illegible]ಯುತ ರಾಜಗೋಪಾಲಾಚಾರ್ಯರ ಸಂದೇಶ ,,
ಅಥವಾ [illegible]ರ್ಯರ ವರ್ಣಾಶ್ರಮ ಧರ್ಮ ,,
ವ್ಯಾ[illegible]ಶಿಭೇದ ವಿಚಾರ ವಿಮರ್ಶೆ ,,
ಕವಿ ನೆರೆಯ ಹಾವಳಿ. ೮

ಸ್ವದೇಶಾಭಿಮಾನಿ

ಶಕ ೧೮೪೪ ಆಶ್ವೀಜ ಬ| ೭ಯು ಶುಕ್ರವಾರ.

ಕಾರ್ಯಕ್ರಮದ ಬದಲಾವಣೆಗೆ ಸೂಚನೆಗಳು.

ಅಸಹಕಾರಿತೆಯು ಬಂದಂದಿನಿಂದ ರಾಷ್ಟ್ರೀಯ ಸಭೆಯ ಕಾರ್ಯಕ್ರಮವು ಮೊದಲಿಗಿಂತ ಪ್ರತ್ಯೇಕವಾಗಿದೆ. ರಾಷ್ಟ್ರೀಯ ಸಭೆಯು ಪ್ರಕೃತ ಅಂಗೀಕರಿಸಿರುವ ಕಾರ್ಯಕ್ರಮವು ಎಷ್ಟರ ಮಟ್ಟಿಗೆ ಪರಿಣಾಮಕರವಾದ್ದೆಂಬುದನ್ನು ಅನುಭವದಿಂದ ತಿಳಕೊಳ್ಳಲು ರಾಷ್ಟ್ರವು ಈಗ ಎರಡು ವರ್ಷಗಳಿಂದ ಪೇಚಾಡುತ್ತಿದೆ. ಆದರೆ ಅದರಂತೆ ಯಶಸ್ಸು ಬಂದದ್ದು ಕಂಡುಬರುವುದಿಲ್ಲ. ರಾಷ್ಟ್ರೀಯ ಸಭೆಯ ಮಹಾ ಅಧಿವೇಶನಗಳಲ್ಲಿ ಮತ್ತು ಅದರ ಕಾರ್ಯಕಾರಿ ಕಮಿಟಿಗಳ ಅಧಿವೇಶನಗಳಲ್ಲಿ ಅಸಹಕಾರಿತೆಯ ವಿವಿಧ ಕಾರ್ಯಗಳು ಠರಾವು ರೂಪದಿಂದ ಪಾಸಾಗುತ್ತವೆ. ಆದರೆ ಕಾರ್ಯರೂಪದಲ್ಲಿ ಮಾತ್ರ ಅವು ಬಂದದ್ದು ತೋರುವುದಿಲ್ಲ. ಶಾಲಾ ಕೋಲೇಜುಗಳನ್ನು ಬಹಿಷ್ಕರಿಸಬೇಕು, ಕೋರ್ಟುಗಳನ್ನು ಬಹಿಷ್ಕರಿಸಬೇಕು ಎಂದು ಮೊದಲು ಠರಾವುಗಳಾಗುತ್ತಿದ್ದವು; ಚಳವಳವೂ ನಡೆಯುತ್ತಿತ್ತು. ಆದರೆ ಜನರು ಮಾತ್ರ ಇವುಗಳನ್ನು ಬಿಡುತ್ತಿರಲಿಲ್ಲ. ಕೌನ್ಸಿಲ್ ಬಹಿಷ್ಕಾರದ ಸಂಗತಿಯು ಮಾತ್ರ ಪ್ರತ್ಯೇಕವು. ರಾಷ್ಟ್ರೀಯ ಸಭೆಯ ಅಜ್ಞೆಯು ಹೊರಟ ಕೂಡಲೆ ರಾಷ್ಟ್ರೀಯ ಪಕ್ಷದ ಉಮೇದವಾರರೆಲ್ಲರೂ ಸಭಾಸದತ್ವಕ್ಕೆ ನಿಲ್ಲದೆ ಹಿಂತಿರುಗಿದರು. ಆ ಜಾಗೆಗೆ ನಿಂತ ಇತರರಿಗೆ ಅರ್ಧಕ್ಕಿಂತ ಹೆಚ್ಚು ಮತದಾರರು ಮತಗಳನ್ನು ಸಹ ಕೊಡಲಿಲ್ಲ. ಈ ಮೇರೆಗೆ ಕೌನ್ಸಿಲ್ ಬಹಿಷ್ಕಾರವು ಒಂದು ದೃಷ್ಟಿಯಿಂದ ಯಶಸ್ವಿಯಾಯಿತು. ಇಲ್ಲಿ "ಒಂದು ದೃಷ್ಟಿಯಿಂದ" ಎಂದು ಹೇಳುವ ಕಾರಣವೇನೆಂದರೆ, ರಾಷ್ಟ್ರೀಯ ಸಭೆಯ ಪಕ್ಷದವರು ಕೌನ್ಸಿಲುಗಳನ್ನು ಬಹಿಷ್ಕರಿಸಿದರೂ, ಇತರರ ಭರತಿಯಿಂದ ಕೌನ್ಸಿಲುಗಳು ನಡೆಯಹತ್ತಿದ್ದಾವೆ. ಮತ್ತು ಈ ರೀತಿಯಿಂದ ತಾವು ಬಹಿಷ್ಕರಿಸಿದ ಕೌನ್ಸಿಲುಗಳನ್ನು ರಾಷ್ಟ್ರೀಯರು ಮನ್ನಿಸಲಿಕ್ಕಿಲ್ಲವೆಂದೆನ್ನುವ ಒಂದು ಕಾಲವು ಬಂದೀತು: ಆ ಕಾಲದಲ್ಲಿ ಕಾನೂನು ಭಂಗವನ್ನು ಪ್ರಾರಂಭಿಸಿ ಈ ಕೌನ್ಸಿಲುಗಳನ್ನು ಸಹಜವಾಗಿಯೆ ದೇಶವು ಬಹಿಷ್ಕರಿಸೀತು ಎಂದು ಅನೇಕರು ತಿಳಿದುಕೊಂಡಿದ್ದರು. ಆದರೆ ಬಾರಡೋಲಿಯಲ್ಲಿ ಮಹಾತ್ಮಾಜಿಯವರು ಕಾಯಿದೆಭಂಗದ ಚಳವಳವನ್ನು ಥಕ್ಕನೆ ನಿಲ್ಲಿಸಿ ದೇಶದಲ್ಲಿ ಸಾರ್ವತ್ರಿಕವಾಗಿ ಸಂಪೂರ್ಣ ಅನತ್ಯಾಚಾರವು ನೆಲಗೊಳ್ಳುವ ತನಕ ಕಾಯಿದೆಭಂಗವನ್ನು ಕೈಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿ ರಾಷ್ಟ್ರೀಯ ಸಭೆಯು ಬಹಿಷ್ಕರಿಸಿದ ಹೊಸ ಕೌನ್ಸಿಲುಗಳ ಕಾರಭಾರವನ್ನು ರಾಷ್ಟ್ರೀಯ ಸಭೆಯ ತಲೆಗೆ ಕಟ್ಟಿದರು. ಎಂದರೆ ಇದರಿಂದ ಬಹಿಷ್ಕರಿಸಿದ ಕೌನ್ಸಿಲುಗಳನ್ನು ತಾವಾಗಿಯೇ ಅಂಗೀಕರಿಸಿದ್ದಂತಾಯಿತು. ಪಿಕೆಟಿಂಗಿನ ಉಪಕ್ರಮ, ಸರಕಾರಿ ನೌಕರಿಯಲ್ಲಿದ್ದವರ ಮನಸ್ಸನ್ನು ತಿರಿಗಿಸುವುದು ಮುಂತಾದ ಇತರ ಕಾರ್ಯಗಳು ಸಹ ಸ್ಮೃತಿಶೇಷವಾಗಿಹೋದವು. ಸ್ವಯಂಸೇವಕರ ಭರತಿಯ ಪ್ರಮಾಣವು ಇಳಿಯಹತ್ತಿತು. ಈ ಮೇರೆಗೆ ರಾಷ್ಟ್ರೀಯ ಸಭೆಯ ಎಲ್ಲ ಕಾರ್ಯಕ್ರಮಗಳು ಮಹಾತ್ಮಜಿಯವರು ಹೊರಗಿರುವಾಗಲೆ ಅವರ ಅಪ್ಪಣೆಯ ಮೇರೆಗೆ ಕಡಿಮೆಯಾದವು. ಕೆಲವು (ಕಾರ್ಯಕ್ರಮಗಳು) ಅವ್ಯವಹಾರ್ಯವಾದ್ದರಿಂದ ಪ್ರಸಾರಹೊಂದಲಿಲ್ಲ; ಕೆಲವನ್ನು ಅತ್ಯಾಚಾರದ ಸಂಶಯದಿಂದ ಮಹಾತ್ಮಾಗಾಂಧಿಗಳೆ ನಿಲ್ಲಿಸಲು ಹುಕುಮನ್ನು ಕೊಟ್ಟರು. ಅಂತು ರಾಷ್ಟ್ರೀಯ ಸಭೆಯು, ಹಲಗೆಯ ಮೇಲೆ ಚಿಕ್ಕ ಮಕ್ಕಳು ಬರೆದು ಬರೆದು ಉಜ್ಜುವಂತೆ ತನ್ನ ಕಾರ್ಯಕ್ರಮವನ್ನು ತಾನೆ ನಿಲ್ಲಿಸಿತು. ಬಳಿಕ ಅದು ವಿಧಾಯಕ ಕಾರ್ಯಕ್ರಮವೆಂದು ಖಾದಿ ಮುಂತಾದ ಬೇರೊಂದು ಉಪಾಯವನ್ನು ಕೈಕೊಂಡಿತು. ಈ ಸಂಗತಿ ಇರಲಿ.

ಎರಡು ವರ್ಷದ ಅವಧಿಯಲ್ಲಿ ಯಾವುದನ್ನು ಅನುಸರಿಸುವುದು ರಾಷ್ಟ್ರಕ್ಕೆ ಸಾಧ್ಯವಾಗಲಿಲ್ಲವೊ ಅದು ಬಹುಜನಸಮಾಜಕ್ಕೆ ಅಶಕ್ಯವಾದ್ದರಿಂದಲೆ ಅಲ್ಲದೆ, ಸ್ವರಾಜ್ಯವು ಬೇಡವೆಂಬುದರಿಂದ ಅಲ್ಲ. ಯಾವುದೊಂದು ಕಾರ್ಯಕ್ರಮವನ್ನು ದೇಶದೊಳಗಿನ ನೇಕಡಾ ೯೦ ಜನರಾದರೂ ಮಾಡುತ್ತಾರೊ ಅದೆ ಯಶಸ್ವಿಯಾಗುತ್ತದೆ. ಸಭೆಗಳಲ್ಲಿ ತಾತ್ವಿಕ ಭಾಷಣ ಮಾಡಿ ಸುಂದರ ಠರಾವುಗಳನ್ನು ಮಾಡುವುದರಿಂದ ಮಾತ್ರ ಧ್ಯೇಯವು ಕೈಗೂಡುವುದಿಲ್ಲ. ಈ ಎಲ್ಲ ಅನುಪಪತ್ತಿಗಳನ್ನು ಮನಗಂಡು ರಾಷ್ಟ್ರೀಯಸಭೆಯ ಕಾರ್ಯಕ್ರಮದಲ್ಲಿ ಯೋಗ್ಯವಾದ ಬದಲಾವಣೆಗಳಾಗಬೇಕೆಂದು ಜನರು ಕೇಳುತ್ತಿದ್ದಾರೆ. ಈ ಅಭಿಪ್ರಾಯವು ಒ. ಇಂ. ಕೊಂ. ಕಮಿಟಿಯು ತನಕ ಹೋಗಿ ಆ ಕಮಿಟಿಯಿಂದ ದೇಶದ ಲೋಕಮತವನ್ನು ಒಟ್ಟು ಸಂಗ್ರಹಿಸಿ ಒಂದು ನಿರ್ಣಯವನ್ನು ಹೊರಡಿಸಬೇಕೆಂದು ಕಮಿಟಿಯು ನೇಮಕಪಟ್ಟಿತು. ಈ ಕಮಿಟಿಯು ಎಲ್ಲ ಮುಖ್ಯ ಪಟ್ಟಣಗಳಲ್ಲಿ ಸಂಚರಿಸಿ ಸಾಕ್ಷಿಗಳನ್ನು ಒಟ್ಟುಗೂಡಿಸಿದ್ದ ಸಂಗತಿಯು ವಾಚಕರಿಗೆ ಗೊತ್ತಿದೆ. ಬರುವ ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಮುಂದೆ ಈ ರಿಪೋರ್ಟು, ಅಭಿಪ್ರಾಯವೂ ಚರ್ಚೆಗೆ ಬರತಕ್ಕದಿವೆ. ಆ ಕಾಲದಲ್ಲಿ ಹಾಗು ಬರುವ ಗಯಾ ರಾಷ್ಟ್ರೀಯ ಸಭೆಯಲ್ಲಿ ಈ ಪ್ರಶ್ನೆಯ ಸಂಪೂರ್ಣ ಚರ್ಚೆಯಾಗಿ ಒಂದು ನಿಷ್ಕರ್ಷವಾದೀತು. ಮತ್ತು ಆ ನಿಷ್ಕರ್ಷದ ಮೇರೆಗೆ ರಾಷ್ಟ್ರವು ಕಾರ್ಯೋದ್ಯುಕ್ತವಾದೀತೆಂಬುದಕ್ಕೆ ಸಂದೇಹವಿಲ್ಲ.

ರಾಷ್ಟ್ರೀಯಸಭೆಯ ನಿರ್ಣಯವು ಮುಂದೆ ಹೇಗೂ ಆಗಲಿ. ತತ್ಕಾಲಕ್ಕೆ ನಾಮದಾರ ಕೆ. ವಿ. ರಂಗಸ್ವಾಮಿ ಐಯಂಗಾರರೆಂಬವರು ಮನನೀಯವಾದ ಕೆಲವು ಆಲೋಚನೆಗಳನ್ನು ಜನತೆಯ ಮುಂದಿಟ್ಟಿದ್ದಾರೆ. ಅವರು ಕೌನ್ಸಿಲ್ ಒಫ್ ಸ್ಟೇಟ್ಸಿನ ಸಭಾಸದರು. ಸಿಮ್ಲದ ಅಧಿವೇಶನವು ಮುಗಿದಮೇಲೆ ಇತ್ತಕಡೆಗೆ ಬರುವಾಗ ಅವರು ಅಲಹಾಬಾದಿಗೆ ಹೋಗಿದ್ದರು. ಅಲ್ಲಿ ಅವರು ಪಂಡಿತ ಮೋತಿಲಾಲಜಿಯವರನ್ನು ಕಂಡು ಮುಂದಿನ ಅಭಿಪ್ರಾಯವನ್ನು ತಿಳಿಸಿದ್ದಾರೆಂದು ಪ್ರಕಟವಾಗಿದೆ. ಕೌನ್ಸಿಲುಗಳ ಬರುವ ಸರ್ತಿಯನ್ನು ಅಸಹಕಾರವಾದಿಗಳು ಸಂಪೂರ್ಣವಾಗಿ ಆಕ್ರಮಿಸಬೇಕೆಂದು ಅವರು ಹೇಳುತ್ತಾರೆ. ಸ್ವರಾಜ್ಯ ಬೇಕಾದವರು ಕೌನ್ಸಿಲುಗಳನ್ನು ಬಿಟ್ಟು ದೂರವಿರುವುದು ಯೋಗ್ಯವಲ್ಲ. ಬ್ಯುರೊಕ್ರಸಿಯಿಂದ ದೂರಕ್ಕೆ ಓಡಿಹೋಗಿ, ಅದರೊಡನೆ ಯುದ್ಧಮಾಡುವುದು ಸಾಧ್ಯವಿಲ್ಲ. ರಂಗಸ್ವಾಮಿ ಐಯಂಗಾರರ ಈ ಮತವು ಯುಕ್ತಿಯುಕ್ತವಾಗಿ ತೋರುವುದು. ಆತ್ಮಿಕ ಬಲವುಳ್ಳ ಅಸಹಕಾರವಾದಿಗಳು ತಮ್ಮ ಆ ಆತ್ಮಿಕ ಬಲದ ಪ್ರಭಾವದಿಂದ ನೋಕರಶಾಹಿಯನ್ನು ಸ್ವಮತಕ್ಕೆ ತರಬೇಕಲ್ಲದೆ ಅನ್ಯಉಪಾಯವು ತೋರುವುದಿಲ್ಲ. ಐಯಂಗಾರರು ತಮ್ಮ ಈ ಸೂಚನೆಗಳನ್ನು ಇನ್‌ಕ್ವಾಯರಿ ಕಮಿಟಿಯು ಸಮ್ಮತಿಸೀತು; ಮತ್ತು ಅವುಗಳನ್ನು ಶಿಫಾರಸು ಮಾಡೀತು, ಕೊಂಗ್ರೆಸು ಕೂಡ ಒಪ್ಪಿಕೊಂಡೀತು ಎಂದು ಆಸೆಪಟ್ಟಿರುವರು. ನಾಮದಾರ ಐಯಂಗಾರರ ಈ ಅಭಿಪ್ರಾಯವು ನಿಜವಾಗಿ ಮನನೀಯವಾಗಿದೆ. ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಬದಲಾವಣೆಯಾಗಬೇಕೆಂದು ಹೇಳುವವರು ಅದರ ಹಿತಶತ್ರುಗಳೆಂದು ಕೆಲವರು ಕೇವಲ ದುರಭಿಮಾನದಿಂದ ತಿಳಕೊಂಡಿರುವರು. ಆದರೆ ಕೇವಲ ರಾಷ್ಟ್ರೀಯ ಸಭೆಯ ಟೊಳ್ಳು ಪ್ರೆಸ್ಟಿಜನ್ನು ರಕ್ಷಿಸುವ ಮೋಹಕ್ಕೆ ಒಳಗಾಗಿ ಅಂಥವರು ಈ ರೀತಿಯಿಂದ ತಿಳಿದಿರುವರಲ್ಲದೆ ಅದರಲ್ಲಿ ಬೇರೆ ಯಾವ ಸ್ವಾರಸ್ಯವೂ ಇಲ್ಲ. ಕಾಲಕ್ಕೆ ಉಚಿತವಾಗಿರುವ ಮತ್ತು ಸರ್ವರ ಆಚರಣಕ್ಕೆ ಯೋಗ್ಯವಾಗಿರುವ ಹಾಗು ಸ್ವರಾಜ್ಯಸಂಪಾದನಕ್ಕೆ ಸಾಧಕವಾಗಿರುವ ಯಾವ ಬದಲಾವಣೆಗಳಿರುವವೊ ಅವುಗಳನ್ನು ಮಾಡುವದು ರಾಷ್ಟ್ರೀಯ ಸಭೆಯ ಪರಮ ಕರ್ತವ್ಯವು.

ಸ್ಫುಟವಿಚಾರಗಳು.

೧. ಹಿಂದುಸ್ಥಾನದ ವಾಯುವ್ಯ ದಿಕ್ಕಿಗೆ ನೆರೆಯಲ್ಲೆ ಇರುವ ಅಫಘಾನಸ್ಥಾನದ ಆಡಳಿತೆಯ ಕ್ರಮವು ಇತ್ತಿತ್ತಲಾಗಿ ಬಹು ಉದಾರ ತತ್ವದ ಮೇಲೆ ನಡಕೊಂಡುಂಬೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಈ ರಾಜ್ಯದ ಯಜಮಾನರಾದ ಅಮೀರ ಸಾಹೇಬರು ಹಿಂದುಬಾಂಧವರ ಮನಸ್ಸನ್ನು ನೋಯಿಸಬಾರದೆಂಬುದಕ್ಕೂ, ಅವರ ಧರ್ಮಭಾವನೆಯನ್ನು ಕ್ಷೋಭಿಸಬಾರದೆಂಬುದಕ್ಕೂ ತಮ್ಮ ರಾಜ್ಯದಲ್ಲಿ ಗೋವಧೆಯನ್ನು ನಿಲ್ಲಿಸಿದ ಸಂಗತಿಯನ್ನು ನಾವು ಮೊದಲೊಮ್ಮೆ ವಾಚಕರ ಕಿವಿಗೆ ಹಾಕಿದ್ದೇವೆ. ಇಂಥದೊಂದು ಸುಯೋಗವು ಪುನಃ ಪ್ರಾಪ್ತವಾಗಿದೆ. ಅಫಘಾನಸ್ಥಾನವು ಮುಸಲ್ಮಾನ ಮಯವು. ಅಪವಾದಕ್ಕೆ ತಕ್ಕುದಾಗಿ, ಜಲಾಲಬಾದ, ಗಿಝ್ನೀ ಕಂಧಹಾರಜಿಲ್ಲೆಗಳಲ್ಲಿ ಮಾತ್ರಹಲವು ಹಿಂದುಕುಟುಂಬಗಳು ಇದ್ದಾವೆ. ಇಂಥ ಅಲ್ಪ ಸಂಖ್ಯಾಕರ ದೆಸೆಯಿಂದ ಅಮೀರರು ಕಾನೂನುಗಳಲ್ಲಿ ಸುಧಾರಣೆಯನ್ನು ಮಾಡುವದಾಗಲಿ, ಅಥವಾ ರಾಜ್ಯಕ್ರಮದಲ್ಲಿ ಔದಾರ್ಯವನ್ನು ಪ್ರಕಟಿಸುವುದಾಗಲಿ ಅವಶ್ಯವಿದ್ದಿಲ್ಲ. ಆದರೂ ಅಫಘಾನಸ್ಥಾನದಲ್ಲಿ ಗೋವಧೆಯನ್ನು ನಿಲ್ಲಿಸಬೇಕೆಂದು ಹೇಗೆ ಸರಕ್ಯುಲರು ಹೊರಟಿರುವುದೊ ಹಾಗೆಯೆ ಹಿಂದುಗಳ ಇತರ ಹಕ್ಕುಗಳನ್ನು ಸಂರಕ್ಷಿಸಲು ಕಾನೂನುಗಳು ಪಾಸಾಗಿವೆ. ಅಲ್ಲಿಯ ಪ್ರಾತಿನಿಧಿಕ ಸಭೆಯಲ್ಲಿ ಜಲಾಲಾಬಾದ ಮುಂತಾದ ಕಡೆಯಲ್ಲಿ ಪ್ರತಿನಿಧಿತ್ವದ ಜಾಗೆಗಳು ಹಿಂದುಗಳಿಗೆ ಇಡಲ್ಪಟ್ಟಿವೆ. ಅಮೀರ ಸಾಹೇಬರು ತಮ್ಮ ರಾಜ್ಯದಲ್ಲಿ ಹಿಂದುಗಳ ಬಗ್ಗೆ ತುಂಬಾ ಸಹಾನುಭೂತಿಯನ್ನು ವ್ಯಕ್ತಮಾಡಿದ್ದಾರೆ. ಯಾರೂ ಹಿಂದುಗಳನ್ನು ಮುಸಲ್ಮಾನರನ್ನಾಗಿ ಮಾಡಬಾರದು. ಹಿಂದುಗಳಿಗೆ ತಮ್ಮ ಧರ್ಮದಂತೆ ನಡಕೊಳ್ಳಲು ಸಂಪೂರ್ಣ ಸಂದರ್ಭವಿರಬೇಕು. ಹಿಂದು ಸ್ತ್ರೀಯರನ್ನು ಸನ್ಮಾನದಿಂದ ನಡಿಸಬೇಕು. ಹಿಂದೂ ಜನರ ಧರ್ಮಶಾಲೆಗಳನ್ನು ಅವರ ಪ್ರಯಾಣಿಕರಿಗೆ ವಸತಿಮಾಡಲು ಯೋಗ್ಯವಾಗುವಂತೆ ದುರುಸ್ತಿ ಮಾಡಬೇಕು. ಗೋವಧವು ನಿಲ್ಲಿಸಲ್ಪಟ್ಟದೆಯಾದರೂ ಮೃತ ಗೋವುಗಳ ಮಾಂಸವನ್ನು ಸಹ ಯಾರೂ ತಿನ್ನಬಾರದು. ಹಿಂದುಗಳು ಅಫಘಾನಸ್ಥಾನದಲ್ಲಿ, ಬೇಕಾದ ಕಡೆಯಲ್ಲಿ ಜಮೀನುಗಳನ್ನು ಕೊಂಡುಕೊಳ್ಳಬಹುದು. ಅವರಿಗೆ ಪ್ರತ್ಯೇಕವಾದ ಕರವಿಲ್ಲ. ಹಿಂದು ಹುಡುಗನು ತಂದೆಯ ಅಪ್ಪಣೆ ಇಲ್ಲದೆ ಮುಸಲ್ಮಾನನಾದ್ದಾದರೆ ಅವನಿಗೆ ತನ್ನ ಆಸ್ತಿಯ ಹಕ್ಕು ಇರದು. ಸರಕಾರಿ ಚಾಕರಿಗಳು ಎಲ್ಲರಿಗೆ ಸರಿಯಾಗಿ ಕೊಡಲ್ಪಡುವುದು. ಸಾರಾಂಶ ಒತ್ತಾಯದಿಂದ ಮತಾಂತರಗೊಳಿಸುವುದು ಶ್ರೇಯಸ್ಕರವಲ್ಲವೆಂಬ ಮುಂತಾದ ಅಭಿಪ್ರಾಯವು ಸೂಚಿತವಾಗಿದೆ. ಹಿಂದೂ ಜನರೊಡನೆ ಯಾವ ರೀತಿಯಿಂದಲೂ ದ್ವೇಷವನ್ನು ಕಟ್ಟಕೊಳ್ಳದೆ ಪರಸ್ಪರ ಪ್ರೇಮದಿಂದ ರಾಜ್ಯಭಾರವನ್ನು ಮುಂದರಿಸುವುದೆ ರಾಜ್ಯ ಸ್ಥಿರತೆಯ ಲಕ್ಷಣವೆಂದು ಅಮೀರರು ತಮ್ಮ ಈ ಕೃತಿಯಿಂದ ಲೋಕಕ್ಕೆ ತೋರಿಸಿಕೊಟ್ಟಿದ್ದಾರೆ. ಅಮೀರರ ಧೋರಣದಲ್ಲಿ ಉಂಟಾಗಿರುವ ಯಾವ ಇತರ ಬದಲಾವಣೆಗಳಿವೆಯೊ ಅವುಗಳಲಿ ಅವರು ಸ್ವತಃ ಮತ್ತು ಅವರ ಮುಖ್ಯ ಸೇನಾಪತಿಗಳು ತೊಟ್ಟಿರುವ ಖಾದಿ ಉಡುಪಿನ ವಿಷಯವನ್ನು ನಿರ್ದೇಶಿಸುವುದು ಅವಶ್ಯಕವಾಗಿದೆ. ವಿಲಾಯತಿಯಿಂದ ಉಚ್ಚ ತರಗತಿಯ ಮಲ್ಲುಗಳನ್ನು ತರಿಸಿ, ಆ ಮೂಲಕ ದೇಹವನ್ನು ಅಲಂಕರಿಸಿಕೊಳ್ಳುವುದಕ್ಕಿಂತ, ಸ್ವದೇಶದಲ್ಲುಂಟಾಗುವ—ದೊರಗಾದರೂ ಚಿಂತೆಯಿಲ್ಲ.—ಖಾದಿಯನ್ನು ಧರಿಸುವುದೆ ಹಿತವೆಂದು ಅಭಿಪ್ರಾಯಪಟ್ಟು ಅಮೀರ ಸಾಹೇಬರು ಈ ರೀತಿಯಿಂದ ಉಪಕ್ರಮಿಸಿದ್ದಾರೆ. ಇದರಿಂದ ಅವರಿಗೆ ಸಾವಿರಾರು ರೂಪಾಯಿಗಳು ಉಳಿದಿದೆ. ಅಮೀರ ಸಾಹೇಬರ ಈ ಎರಡೂ ದೃಷ್ಟಾಂತಗಳು ಹಿಂದುಸ್ಥಾನಕ್ಕೆ ನಿಜವಾಗಿ ಆದರ್ಶಪ್ರಾಯವಾಗಿವೆ. ಹಿಂದು ಮುಸಲ್ಮಾನರ ಐಕ್ಯವು ಅಫಘಾನಸ್ಥಾನಕ್ಕೆ ಎಷ್ಟು ಅಗತ್ಯವಿರಬಹುದೊ ಅದಕ್ಕಿಂತಲೂ ಸಾವಿರ ಪಾಲು, ಹಿಂದುಸ್ಥಾನದ ಸ್ವರಾಜ್ಯ ಪ್ರಾಪ್ತಿಗೆ ಅಗತ್ಯವು. ಆದ್ದರಿಂದ ಈ ವಿಷಯದಲ್ಲಿ ಅಮೀರ ಸಾಹೇಬರು ಹಾಕಿಕೊಟ್ಟ ಮೇಲ್‌ಪಂಕ್ತಿಯನ್ನು ಇಲ್ಲಿಯ ಮಹಮ್ಮದೀಯ ಬಂಧುಗಳು ತಿದ್ದಿ ಐಕ್ಯವನ್ನು ದೃಢಪಡಿಸಬೇಕು. ಅಮೀರ ಸಾಹೇಬರ ಖಾದಿಯ ವಿಷಯವನ್ನಂತೂ ಪುನಃ ಪ್ರಸ್ತಾಪಿಸಬೇಕಾದ ಅಗತ್ಯವಿಲ್ಲ. ಅಫಘಾನಸ್ಥಾನದಂಥ ಸ್ವತಂತ್ರ ರಾಷ್ಟ್ರಕ್ಕೆ ಸ್ವದೇಶಿಯು ಆವಶ್ಯಕವೆಂದು ತೋರುವಾಗ ನಮ್ಮ ಪರತಂತ್ರ ರಾಷ್ಟ್ರಕ್ಕೆ ಅದು ಎಷ್ಟು ಆವಶ್ಯಕವೂ ಹಿತಕರವೂ ಆಗಿದ್ದೀತು? ಸಾರಾಂಶ ಇಲ್ಲಿಯ ರಾಜಕಾರಣದಲ್ಲಿ ಅವಶ್ಯಕವಾಗಿರುವ ಈ ಎರಡೂ ಮಹತ್ವದ ಸುಧಾರಣೆಗಳು ಹಿಂದುಸ್ಥಾನದ ಹೊರಗೂ ಸಹ ಬಹು ವೇಗದಿಂದ ಮುಂದರಿಸುತ್ತಿದ್ದಾವೆ. ಇದು ತುಂಬಾ ಸಂತೋಷದ ಮಾತಾಗಿದೆ.

೨. ಹಿಂದುಸ್ಥಾನದೊಳಗಿನ ನೋಕರಶಾಹಿಯು ಈಗ ತನ್ನ ಯಾವ ಕೃತ್ಯಕ್ಕೂ ಹೇಸುವುದಿಲ್ಲ, ಅಥವಾ ಪಶ್ಚಾತ್ತಾಪ ಪಡುವುದಿಲ್ಲ, ಇದು ತುಂಬಾ ಶೋಚನೀಯವು. ಇದಕ್ಕೆ ಸಾವಿರಾರು ದೃಷ್ಟಾಂತಗಳನ್ನು ತೋರಿಸಬಹುದು. ಸ್ವಾಮಿ ಶ್ರದ್ಧಾನಂದಜಿಯವರ ಖಟ್ಲೆಯ ತೀರ್ಮಾನವು ಮೇಲಿನ ಮಾತಿಗೆ ಇತ್ತಲಾಗಿನ ಉದಾಹರಣವಾಗಿದೆ. ಸ್ವಾಮಿಜಿಯವರು ವಸ್ತುತಃ ಆರ್ಯಸಮಾಜದವರು. ಪಂಜಾಬದಲ್ಲಿ ನಡೆದಿರುವ 'ಗುರುಕಾಬಾಗ'ದ ಅಕಾಲಿಜನರ ಸತ್ಯಾಗ್ರಹಕ್ಕೂ ಆರ್ಯಸಮಾಜಕ್ಕೂ ಸಂಬಂಧವಿಲ್ಲ. ಆದರೂ ಸ್ವಾಮಿಜಿಯವರು ಅಕಾಲಿ ಜನರ ಪಕ್ಷವು ಸತ್ಯಪೂರ್ಣವಾದ್ದು, ಧರ್ಮಸ್ವಾತಂತ್ರ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ್ದು ಎಂದು ನಂಬಿ, ಅಲ್ಲಿಗೆ ಬಂದು ಅಕಾಲಿ ಜನರ ಸತ್ಯಾಗ್ರಹವನ್ನು ಅಭಿನಂದಿಸಿದರು. ಮತ್ತು ಅವಶ್ಯವಿದ್ದರೆ "ನಿಮ್ಮ ಚಳವಳದ ಪುಷ್ಟೀಕರಣಾರ್ಥವಾಗಿ ಇತರ ಹಿಂದೂಬಾಂಧವರನ್ನು ಕಳುಹಿಸಿಕೊಡಬಹುದೆಂ"ದು ಹೇಳಿದ್ದರು. ಸ್ವಾಮಿಜಿಯವರ ಈ ಭಾಷಣದ ಮೇಲೆ ಸರಕಾರವು ಖಟ್ಲೆಯನ್ನು ಹೇಗೆ ಉಪಕ್ರಮಿಸಿತು ಎಂಬೀ ಸಂಗತಿಯನ್ನು ನಾವು ಮೊದಲೆ ವಾಚಕರಿಗೆ ತಿಳಿಸಿದ್ದೇವೆ. ಈ ಖಟ್ಲೆಯಲ್ಲಿ ಸ್ವಾಮಿಜಿಯವರು ಸ್ವಾಭಿಮಾನಕ್ಕೆ ಉಚಿತವಾಗಿ ತಮ್ಮ ವಾಜ್ಮೂಲವನ್ನು ಕೊಟ್ಟು ಅದರಲ್ಲಿ ಸತ್ಯಕ್ಕೋಸ್ಕರ ಹೋರಾಡುವುದು ತನ್ನದು ಹೇಗೆ ಕರ್ತವ್ಯವಾಗಿದೆ ಎಂಬುದನ್ನು ಪ್ರತಿಪಾದಿಸಿ "ಇಂಥ ಕೋರ್ಟುಗಳಲ್ಲಿ ವಕಾಲತಿಯನ್ನು ಕೊಟ್ಟು ಖಟ್ಲೆಯನ್ನು ವ್ಯವಹರಿಸುವುದು ತನಗೆ ಅವಶ್ಯವಿಲ್ಲ"ವೆಂದು ತಿಳಿಸಿದರು. ಅವರ ಖಟ್ಲೆಯು ಕಳೆದವಾರ ತೀರ್ಮಾನಿಸಲ್ಪಟ್ಟು ಶ್ರದ್ಧಾನಂದ ಸ್ವಾಮಿಜಿಯವರಿಗೆ ಒಂದು ವರುಷದ ಶಿಕ್ಷೆಯು ವಿಧಿಸಲ್ಪಟ್ಟಿದೆ. ಅವರ ಮೇಲೆ ಎರಡು ಆರೋಪಣೆಗಳಿದ್ದವು. ಒಂದಕ್ಕೆ ಒಂದು ವರ್ಷ ಮತ್ತು ಇನ್ನೊಂದಕ್ಕೆ ನಾಲ್ಕು ತಿಂಗಳು ಶಿಕ್ಷೆಯಾದರೂ ಇದು ಒಂದೆ ಕಾಲದಲ್ಲಿ ಅನುಭವಿಸಬೇಕಾದ್ದರಿಂದ ಅದು ಒಂದು ವರುಷದಲ್ಲಿ ಪರ್ಯವಸಿತವಾಗುತ್ತದೆ. ಒಂದು ವರುಷದ ಶಿಕ್ಷೆಯು ಸ್ವಾಮಿಜಿಯವರ ಯೋಗ್ಯತೆ, ವಯಸ್ಸು ಸಾತ್ವಿಕತೆ ಮತ್ತು ಆರೋಪಿತ ಅಪರಾಧದಸ್ವರೂಪ ಇವುಗಳನ್ನು ನೋಡುವಾಗ ಬಹು ಕಠಿನವೆ ಸರಿ. ಸನ್ಯಾಸಿಗಳನ್ನು ಸಹ ಜೈಲಿಗೆ ಕಳುಹಿಸುವ ಉಪಕ್ರಮವು ನೋಕರಶಾಹಿಯ ಕರಾಳ ಮನಸ್ಸನ್ನು ತೋರಿಸುತ್ತದೆ.

---

೩. ಅಕಾಲಿಪ್ರಕರಣದಲ್ಲಿ ಪಂಜಾಬ ಸರಕಾರವು ತನ್ನ ಸಾರಾಸಾರ ವಿಚಾರಶಕ್ತಿಯನ್ನು ಮೂಲೆಗೊತ್ತಿ, ಅವಿವೇಕಿಗಳಾದ ಸಿಪಾಯಿಗಳ ಮುಖಾಂತರ ಹೇಗೆ ಕಠೋರ ಕೃತ್ಯಗಳನ್ನು ಮಾಡಿಸುತ್ತಿದೆ, ಎಂಬೀ ಸಂಗತಿಯು ಪತ್ರಿಕಾ ವಾಚಕರಿಗೆ ನವೀನವಾದ್ದಲ್ಲ. ನ್ಯಾಯವಾಗಿ ನೋಡಲು ಹೋದರೆ, ಶೂರರಾದ ಸಿಕ್ಕ ಜನರೆ ಕಳೆದ ಮಹಾಯುದ್ಧದಲ್ಲಿ ಇಂಗ್ಲೀಷ್ ಸರಕಾರದ ಕಡೆಯಿಂದ ತಮ್ಮ ರಕ್ತವನ್ನು ಚೆಲ್ಲಿದ್ದರು. ಇವರು ಜಾತ್ಯಾ ಶೂರರಾಗಿರುವುದರಿಂದಲೂ, ಧರ್ಮಾಭಿಮಾನವು ಇವರಲ್ಲಿ ಮೂರ್ತಿಮತ್ತಾಗಿರುವುದರಿಂದಲೂ ಇವರು ರಣಭೂಮಿಯಿಂದ ಹಿಂತಿರುಗುವುದು ಅಪವಾದವೆ ಸರಿ. ಇಂಥ ಸಿಕ್ಕಜನರ ಗುಣದ ಪ್ರಯೋಜನವನ್ನು ಮಹಾ ಯುದ್ಧದಲ್ಲಿ ಸರಕಾರವು ತೆಕ್ಕೊಂಡಿತೆಂಬುದು ಇತರರಿಗಿರಲಿ, ಸ್ವತಃ ಸರಕಾರಕ್ಕಾದರೂ ಇಷ್ಟು ಬೇಗನೆ ಮರೆತುಹೋಗಿರಲಿಕ್ಕಿಲ್ಲ. ಈ ಪೂರ್ವಪೀಠಿಕೆಯನ್ನು ಆಲೋಚಿಸಿ ನೋಡಿದರೆ, ಗುರುಕಾ ಬಾಗದ ಪ್ರಕರಣದಿಂದ ಇಂಥ ಸಿಕ್ಕರ ಮನಸ್ಸನ್ನು ನೋಯಿಸುವ ಪಾಪವನ್ನು ಪಂಜಾಬ ಸರಕಾರವು ಯಾಕೆ ಕಟ್ಟಿಕೊಳ್ಳುತ್ತದೊ ಗೊತ್ತಾಗದು! ಸತ್ಯಾಗ್ರಹಿಗಳಾದ ಅಕಾಲಿ ಜನರನ್ನು ವಿವಿಧರೂಪದಿಂದ ಉಪದ್ರವಿಸುತ್ತಿದ್ದ ಕಾರಣ ಸಿಕ್ಕಜನರ ಮನೋವೃತ್ತಿಗಳು ಹೇಗೆ ಕ್ಷುಬ್ಧವಾಗಿವೆ ಎಂಬುದಕ್ಕೆ ಸರದಾರ ಅನುಪಸಿಂಗರಿಂದ ಅಲ್ಲಿಯ ಗವರ್ನರರಿಗೆ ಬರೆಯಲ್ಪಟ್ಟಿರುವ ಅನಾವೃತ ಪತ್ರವು ಸಾಕ್ಷಿಯಾಗಿದೆ. ಸರದಾರ ಅನುಪಸಿಂಗರು ಪೆನ್‌ಶನರ್ ರಿಸಾಲ್‌ದಾರರೂ ಮತ್ತು ಸೊಲ್ಜರ್ಸ ಎಸೋಸಿಏಶನನ ಅಧ್ಯಕ್ಷರೂ ಆಗಿದ್ದಾರೆ. ಇವರು ಗುರುಕಾಬಾಗದಲ್ಲಿ ನಡಿಯುವ ಭಯಂಕರ ಪ್ರಕಾರವನ್ನು ಒಂದು ದಿವಸ ಕಣ್ಣಾರೆ ನೋಡಿ ಬಂದಿರುವರು. ಡೆಪ್ಯುಟಿ ಕಮಿಶನರ ಅಪ್ಪಣೆಯನ್ನು ಪಡಕೊಂಡು ಇವರು ಗುರುಕಾಬಾಗದ ಹತ್ತಿರ ಸೈನ್ಯದ "ಯುನಿಫೋರ್ಮ"ನ್ನು ಧರಿಸಿನಿಂತಿದ್ದರು. ಹೀಗೆ ಅವರು ನಿಂತಿರುವಾಗ ಪೋಲೀಸರು ಸತ್ಯಾಗ್ರಹಿಗಳಿಗೆ ಸರಿಯಾಗಿ ಏಟುಗಳನ್ನು ಕೊಡುತ್ತಿದ್ದರು. ಎಷ್ಟರ ಮಟ್ಟಿಗೆ ಎಂದರೆ, ಆ ಏಟುಗಳಿಂದ ಸತ್ಯಾಗ್ರಹಿಗಳು ಬೋಧತಪ್ಪಿ ಬಿದ್ದರು. ಆಗ ಸರದಾರ ಅನುಪಸಿಂಗರು ಸ್ಮೃತಿತಪ್ಪಿ ಬಿದ್ದಿರುವವರ ಬಾಯಿಗೆ ಒಂದಿಷ್ಟು ನೀರುಹಾಕಲು ಅಪ್ಪಣೆಯನ್ನು ಕೇಳಿದರು. ಅದಕ್ಕೆ ಪ್ರಖ್ಯಾತ ಪೋಲೀಸ ಅಮ್ಮಲದಾರರಾದ ಬೇಟಿಸಾಹೇಬರು, ಸರದಾರ ಅನುಪಸಿಂಗರನ್ನು ಬೈದು "ನಿಕಾಲೋ ಯಹಾಂಸೇ" ಎಂದು ಗದರಿಸಿದರು! ಈ ರೀತಿಯಿಂದ ಬೇಟಿಯ ಬಾಯಿಯಿಂದ ಹೊರಬಿದ್ದ ದುರುತ್ತರದಿಂದ ಸರದಾರ ಅನುಪಸಿಂಗರು ಕ್ಷುಬ್ಧರಾಗಿದ್ದು ತನ್ನಂತೆಯೆ ಇತರ ಎಲ್ಲಾ ಸಿಕ್ಕ ಪೆನ್‌ಶನರು ಅಸಂತೋಷವನ್ನು ಹೊಂದಿ ಈ ಸತ್ಯಾಗ್ರಹದ ರಣಕುಂಡದಲ್ಲಿ ಧುಮುಕಿ, ಸರಕಾರದ ಮೇಲೆ ಕಠಿನ ಪ್ರಸಂಗವನ್ನು ತರಬೇಕೆಂದಿದ್ದಾರೆ. ಅವರು ತನ್ನ ಈ ಎಲ್ಲ ಅನುಭವವನ್ನೂ, ಅಭಿಪ್ರಾಯವನ್ನೂ ಪಂಜಾಬದ ಗವರ್ನರರಿಗೆ ತಿಳಿಸಿದ್ದಾರೆ. ಅನುಪಸಿಂಗರು ಮತ್ತು ಅವರ ಕುಟುಂಬದವರು ನಾಲ್ಕು ತಲೆಯಿಂದ ಸರಕಾರದ ನೋಕರರಾಗಿದ್ದಾರೆ. ಅಂಥ ರಾಜನಿಷ್ಠ ಮತ್ತು ನಂಬಿಕೆಯ ಜನರ ಮನಸ್ಸನ್ನು ನೋಯಿಸಲು ನೋಕರಶಾಹಿಯು ಉದ್ಯುಕ್ತವಾದ್ದನ್ನು ನೋಡುವಾಗ ಅದರ ಅದೂರದರ್ಶಿತೆಯು ವಿವೇಕ ಭ್ರಷ್ಟತೆಯು, ಮತ್ತು ದುರಹಂಕಾರದ ಬಗ್ಗೆ ಯಾರಿಗೂ ವ್ಯಸನವಾಗದೆ ಇರದು.

೪. ಹಿಂದೂಸ್ಥಾನದ ಅಂಡರ ಸೆಕ್ರೆಟರಿಗಳಾದ ಅರ್ಲವಿಂಟರಟನ್ ಇವರು ಹಿಂದೂಸ್ಥಾನಕ್ಕೆ ಬಂದ ಸಂಗತಿಯು ನಮ್ಮ ವಾಚಕರಿಗೆ ಗೊತ್ತಿದೆ. ಇವರು ಯಾವುದಾದರೂ ಒಂದು ರಾಜಕಾರಣದ ಉದ್ದೇಶದಿಂದ ಇಲ್ಲಿಗೆ ಬಂದವರಲ್ಲ, ಅವರ ಆಗಮನವು ಖಾಸಗಿಯಾಗಿರುವುದು, ಎಂದು ಎಲ್ಲ ದೊಡ್ಡ ದೊಡ್ಡ ಅಧಿಕಾರಿಗಳು ಹೇಳುತ್ತಿದ್ದರು. ಆದರೆ ಒಬ್ಬ ಬಾತಮಿದಾರನು ಮೊನ್ನೆ ಒಂದು ಪತ್ರದಲ್ಲಿ ಇವರ ಆಗಮನದ ಗುಟ್ಟನ್ನು ಹೊರಪಡಿಸಿರುವನು. ಅರ್ಲವಿಂಟರಟನ್ ಸಾಹೇಬರು ಮುಂಬಯಿಯ ಬಂದರದ ಮೇಲೆ ಕಾಲಿಟ್ಟ ಕೂಡಲೆ ನಮ್ಮೊಳಗಿನ ಕೆಲವು ಪಾರ್ಟಿಗಳು ಹೋಗಿ ಸಾಹೇಬ ಮಹಾಶಯರ ಸತ್ಕಾರವನ್ನು ಮಾಡಿದ್ದವು. ಆದರೆ ಸಾಹೇಬ ಬಹುದ್ದೂರರು "ಖಾಸಗಿ"ಯಾಗಿ ಬಂದಿರುವುದರಿಂದ ಈ ಪಾರ್ಟಿಗಳ ಈ ಸತ್ಕಾರಗಳನ್ನೂ, ಆತಿಥ್ಯಗಳನ್ನೂ ಮೌನವಾಗಿಯೆ ಅಂಗೀಕರಿಸಿದರು. ಅನಂತರ ಅವರು ಸಿಮ್ಲಕ್ಕೆ ಚಿತ್ತಯಿಸಿದರು. ಅಲ್ಲಿ ಅವರ ಚಲನವಲನವನ್ನು ನೋಡುವಾಗ ಅವರು ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯ ಸಾಕ್ಷಾತ್ ಎಂದರೆ ಪ್ರತ್ಯಕ್ಷ ಮಾಹಿತಿಯನ್ನು ಪಡಕೊಳ್ಳಲು ಬಂದಿದ್ದಾರೆ. ಮತ್ತು ಆ ಮಾಹಿತಿಯನ್ನು ಅವರು ಸರಕಾರಿ ಅಧಿಕಾರಿಗಳ ಮುಖಾಂತರವೆ ಪಡಕೊಳ್ಳುತ್ತಿದ್ದಾರಂತೆ! ಅಯ್ಯೋ! ಮಹಾ ಪ್ರಯಾಸವೇ! ಅಧಿಕಾರಿ ವರ್ಗವು ತಿಳಿಸಿಕೊಡುವ ನಮೂನೆಯ ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯ ಮಾಹಿತಿಯು ಅಂಡರ್ ಸೆಕ್ರೆಟರಿಗಳಿಗೆ ಬೇಕೆಂದಿದ್ದರೆ, ಅವರಿಗೆ ಅಲ್ಲೆ—ವಿಲಾಯತಿಯಲ್ಲಿರುವಾಗಲೆ—ಅದೆ ಅಧಿಕಾರಿಗಳ ಕಾಗದ ಪತ್ರಗಳ ಸಹಾಯದಿಂದ ಅದನ್ನು ತಿಳಕೊಳ್ಳುವುದು ಅಶಕ್ಯವಾಗಿತ್ತೆ? ಇಲ್ಲ. ಹೀಗಿರಲು ಅವರು ಇಂಥ ಅಲ್ಪ ಕಾರ್ಯಕ್ಕೆ ಇಷ್ಟು ಮಹಾ ಪ್ರಯಾಸವನ್ನು ಯಾಕೆ ಪಟ್ಟಿದ್ದಾರೆಂದು ಗೊತ್ತಾಗುವುದಿಲ್ಲ. ಅಂಡರ ಸೆಕ್ರೆಟರಿಗಳು ಇಲ್ಲಿಯ ನೋಕರ ಶಾಹಿಯ ತಂತಿಗಳಿಂದ "ಕಡಕಟ್ಟ ಕಡಕಟ್ಟ" ಮಾಡಿ ಯಾವ ಮಾಹಿತಿಯನ್ನು ಸಂಗ್ರಹಿಸುವರೊ ಅದು ಎಷ್ಟರ ಮಟ್ಟಿಗೆ ವಿಶ್ವಾಸನೀಯವೂ, ಸತ್ಯವೂ ಆಗಿದ್ದೀತೆಂಬುದನ್ನು ಹೇಳುವುದು ಅಗತ್ಯವಿಲ್ಲ. ಇವರೆ ಎಂದಲ್ಲ, ಮಿ| ಮೊಂಟೆಗ್ಯುಗಳು ಸಹ ಹಿಂದೆ ಬಂದವರು ಹಿಂದೂಸ್ಥಾನದ ಅನುಭವವನ್ನು ಸಂಗ್ರಹಿಸಿದ್ದಾರೆ. ಆದರೆ ಅವರು ಎಲ್ಲ ರಾಜಕೀಯ ಪಕ್ಷಗಳ ಅನುಭವವನ್ನು ಪಡಕೊಂಡಿದ್ದರು. ಇವರಾದರೊ, ತಮ್ಮ ಸ್ವಾತಂತ್ರ್ಯವನ್ನು ತಾವೆ ಕಡಿಮೆ ಮಾಡಿಕೊಂಡು, ಆ ಮೂಲಕ ಇಲ್ಲಿಯ ಸದ್ಯ ಪರಿಸ್ಥಿತಿಯ ನಿಜವಾದ ಅಜ್ಞಾನದ ಮತ್ತು ವಿಪರ್ಯಸ್ತ ಅನುಭವದ ದೊಡ್ಡ ಹೊರೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುವರು, ಎಂಬುದಕ್ಕೆ ಸಂಶಯವಿಲ್ಲ!

ಮಹಾಕವಿ ಠಾಗೋರರೂ ರೆವರೆಂಡ ಎಂಡ್ರೂಸರೂ.

(ಬರೆದು ಬಂದದ್ದು)

ರೈಲು ಬರುವುದಕ್ಕಿಂತ ಮುಂಚೆ ದಕ್ಷಿಣಕನ್ನಡ ಜಿಲ್ಲೆಯು ಅಪ್ರಸಿದ್ಧವಾಗಿತ್ತು. ಹೆಚ್ಚಾಗಿ ಇಲ್ಲಿಗೆ ಯಾರೂ ಬರುತ್ತಿರಲಿಲ್ಲ. ರೈಲು ಬಂದ ಬಳಿಕ ವ್ಯಾಪಾರದ ದೃಷ್ಟಿಯಿಂದ ಹೇಗೊ ಹಾಗೆಯೆ ಜನರ ಆಮದ ರಫ್ತಿನ ದೃಷ್ಟಿಯಿಂದಲೂ ಈ ಜಿಲ್ಲೆಗೂ, ಇತರ ಪ್ರಾಂತಗಳಿಗೂ ಹೆಚ್ಚಿನ ಸಂಬಂಧವು ಬೆಳಯಿತು. ಇತ್ತಲಾಗಿ ಹಿಂದುಸ್ಥಾನದಲ್ಲಿ ರಾಜಕೀಯ ಪ್ರಗತಿಯು ಬಹುವೇಗದಿಂದ ಆಗುತ್ತ ಬಂದಿದೆ. ಇದರಿಂದ ಹಿಂದುಸ್ಥಾನದ ಇತರ ಭಾಗಗಳಲ್ಲಿ ಜಾಗೃತಿಯುಂಟಾಗುವ ಮಾನದಿಂದ ನಮ್ಮ ಜಿಲ್ಲೆಯಲ್ಲೂ ಉಂಟಾಗುತ್ತಿದೆ. ಈ ಹೊಸ ಜಾಗೃತಿಯಿಂದ ನಮ್ಮ ಜಿಲ್ಲೆಯ ಮೇಲೆ ಎಷ್ಟೊ ಸುಪರಿಣಾಮವುಂಟಾಗಿದೆ. ಅದರ ಒಂದೆರಡು ದೃಷ್ಟಾಂತಗಳನ್ನು ಕೊಡುವುದಾದರೆ ಪ್ರಥಮತಃ ಮಹಾತ್ಮಜೀಯವರ ಅಪೂರ್ವ ಆಗಮನದ ಸುವಿಷಯವನ್ನು ಎತ್ತಿ ಹೇಳಿ, ಬಳಿಕ ಕರ್ನಾಟಕ ಪ್ರಾಂತಿಕ ಪರಿಷತ್ತು ಮತ್ತು ಮೊನ್ನೆಯ ಮಹಾಕವಿ ಠಾಗೋರರ ಆಗಮನ ಈ ಮುಖ್ಯ ಮತ್ತು ಮಹತ್ವದ ಸಂಗತಿಗಳನ್ನು ಉಲ್ಲೇಖಿಸಬಹುದು. ಇದರ ಮಧ್ಯದಲ್ಲಿ ರೈಲಿನ ಮತ್ತು ಹೊಸ ಜಾಗೃತಿಯಿಂದ ನಮ್ಮ ಜಿಲ್ಲೆಗುಂಟಾದ ಫಲಗಳನ್ನು ಹೇಳುವಾಗ ಎನಿಬಿಸೆಂಟ, ಅರುಂಡೇಲ, ಶ್ರೀನಿವಾಸ ಶಾಸ್ತ್ರಿ ಮುಂತಾದವರು ಈ ಪಟ್ಟಣವನ್ನು ಹಿಂದೊಮ್ಮೆ ಸಂದರ್ಶಿಸಿ ಹೋದ ವಿಷಯವನ್ನು ಸಹ ನೆನಪಿಗೆ ತಂದು ಕೊಡಬಹುದು. ತಾಸು ತಾಸುಗಳಲ್ಲಿ, ದಿನ ದಿನಗಳಲ್ಲಿ ಅಥವಾ ಮಾಸ ಇಲ್ಲವೆ ವರ್ಷ ವರ್ಷಗಳಲ್ಲಿ ಹೊಸ ಹೊಸ ಪ್ರಕಾರಗಳು ನಡಿಯುತ್ತಲೆ ಇರುತ್ತವೆ. ಆದರೆ ಇತಿಹಾಸ ಕರ್ತನು ತನ್ನ ಪುಸ್ತಕದಲ್ಲಿ ಉಪಯುಕ್ತ ಮತ್ತು ಪರಿಣಾಮಕಾರಕ ಸಂಗತಿಗಳನ್ನು ಮಾತ್ರ ನಿರ್ದೇಶಿಸಿಕೊಳ್ಳುತ್ತಾನೆ. ಒಂದು ಶತಮಾನದಲ್ಲಿ ಆದ ಮುಖ್ಯ ಸಂಗತಿಗಳನ್ನು ಒಟ್ಟುಗೂಡಿಸೋಣವೆಂದರೆ, ಅದನ್ನು ಗ್ರಂಥರೂಪದಿಂದ ಕಲ್ಪಿಸುವುದೆ ಅಸಾಧ್ಯವು. ಈ ದೃಷ್ಟಿಯಿಂದ ನಡುವೆ ಹೇಳಿದ ಚಿಲ್ಲರೆ ವಿಷಯಗಳನ್ನು ಬಿಟ್ಟುಬಿಟ್ಟದ್ದು ಪ್ರಾಮಾದಿಕವಾಗಲಿಕ್ಕಿಲ್ಲ. ಇರಲಿ. ಹಿಂದುಸ್ಥಾನ ಮತ್ತು ಏಸಿಯಾ ಮಾತ್ರವಲ್ಲ, ಯುರೋಪ, ಅಮೇರಿಕಾ ಮುಂತಾದ ಜಗತ್ತಿನ ಎಲ್ಲ ಭಾಗಗಳನ್ನು ತನ್ನ ಕಾವ್ಯರಸದಕೀರ್ತಿಯ ನಿರ್ಮಲ ಪ್ರವಾಹದಿಂದ ಪವಿತ್ರಗೊಳಿಸಿದ ಮಹಾಕವಿಯಾದ ಠಾಗೋರರು ನಮ್ಮ ಮಂಗಳೂರು ಪಟ್ಟಣಕ್ಕೆ ಚಿತ್ತೈಸಿ, ಇಲ್ಲಿಯ ಜನರ ಕುತೂಹಲವನ್ನು ಶಾಂತಪಡಿಸಿದ್ದಕ್ಕೆ ಯಾವ ಪಟ್ಟಣಿಗನು ಕವಿ ಮಹಾಶಯರ ಋಣಿಯಾಗಲಾರನು?

ಕವಿಗಳು ವಿದ್ಯಾಪೀಠದಿಂದ ಉತ್ತಮರಾದ ವಿದ್ಯಾರ್ಥಿಗಳು ತಯಾರಾಗಿ ಹೊರಗೆ ಬರಬೇಕೆಂಬುದ್ದೇಶದಿಂದ ಬೋಲ್‌ಪುರದಲ್ಲಿ ಶಾಂತಿನಿಕೇತನವನ್ನು ಸ್ಥಾಪಿಸಿದ್ದಾರೆ. ಅವರ ಕಾವ್ಯ ಲಹರಿಯು ಬೆಳೆಯುವಂತೆ ಕಾಲಕ್ರಮೇಣ ಈ ವಿದ್ಯಾಪೀಠದ ವಿಷಯವಾಗಿ ಅವರ ಕಲ್ಪನೆಯು ಸಹ ಬೆಳೆಯಹತ್ತಿ ಈಗ ಅದು "ವಿಶ್ವಭಾರತಿ"ಯ ಸಂಸ್ಥಾಪನದಲ್ಲಿ ಪರಿಣಮಿಸಿದೆ ಎಂಬುದು ಎಲ್ಲರಿಗೆ ಗೊತ್ತಿದ್ದ ವಿಷಯವಾಗಿದೆ. "ಪೂರ್ವ ಪಶ್ಚಿಮ" ಇವುಗಳನ್ನು ಒಟ್ಟು ಗೂಡಿಸಲು ವಿಶ್ವಭಾರತಿಯು ಅವತರಿಸಿದೆ. ಭೂವಲಯದ ಮೇಲಿನ ಪೂರ್ವ ಪಶ್ಚಿಮಗಳು ಇದು ವರೆಗೆ ಒಟ್ಟುಗೂಡಲಿಲ್ಲ. ಇನ್ನು ಮುಂದೆ ಒಟ್ಟುಗೂಡುವುದೂ ಅಸಾಧ್ಯವೆಂದು ಪಾ.ಜ.ಗು ಹೇಳುವರು. ಈ ಮೇರೆಗೆ ಒಟ್ಟುಗೂಡಲು ಅಸಾಧ್ಯವಾಗಿರುವ ಪೂರ್ವ ಪಶ್ಚಿಮಗಳನ್ನು ಮಹಾ ಕವಿಗಳು ತಮ್ಮ "ವಿಶ್ವಭಾರತಿ"ಯ ಸಂಸ್ಥಾಪನೆಯ ಮೂಲಕ ಒಟ್ಟುಗೂಡಿಸುವ ಮಹಾ ಕಾರ್ಯವನ್ನು ಮಾಡುತ್ತಿದ್ದಾರೆ. ಪೌರಸ್ತ್ಯ ಜನಾಂಗಗಳ (ಉದಾಹರಣಾರ್ಥವಾಗಿ, ಹಿಂದೂಸ್ಥಾನದೊಳಗಿನ ಎಲ್ಲ ಧರ್ಮಗಳ, ಬೌದ್ಧಧರ್ಮಗಳ, ಚೀನದ, ಜಪಾನಿನ ಧರ್ಮಗಳ ಮತ್ತು ಸಂಸ್ಕೃತಿಗಳ) ಹಾಗು ಪಾಶ್ಚಾತ್ಯ ಮತ್ತು ಅಮೇರಿಕಾ ದೇಶದೊಳಗಿನ ಎಲ್ಲ ವಿದ್ಯಾ, ಕಲಾ, ತತ್ವಜ್ಞಾನ ಇವುಗಳ ಅಧ್ಯಯನಾಧ್ಯಾಪನಕ್ಕೆ "ವಿಶ್ವಭಾರತಿ"ಯು ಕೇಂದ್ರಸ್ಥಾನವಾಗಿರಬೇಕೆಂದು ಮಹಾ ಕವಿಗಳ ಮಹತ್ವಾಕಾಂಕ್ಷೆಯು. ಈ ಸಂಕಲ್ಪಿತ ಸಂಸ್ಥೆಗೆ ಮೂರ್ತಸ್ವರೂಪವನ್ನು ಕೊಡಲು ಮಹಾ ಕವಿಗಳು ಎಲ್ಲ ಜಗತ್ತಿನಿಂದ ಸಹಾಯವನ್ನು ಅಪೇಕ್ಷಿಸುತ್ತಿದ್ದಾರೆ. ಆ ಮೇರೆಗೆ ಇತರ ದೇಶಗಳಿಂದ ಠಾಗೋರರಿಗೆ ಸಹಾಯವು ಬರುತ್ತಿದೆ. ಹಿಂದೂಸ್ಥಾನದ ಇತರ ಭಾಗಗಳಲ್ಲಿ ಸಂಚರಿಸಿ ಸಹಾಯವನ್ನು ಒಟ್ಟುಗೂಡಿಸಿದಂತೆ ಕವಿ ಮಹಾಶಯರು ನಮ್ಮ ಪಟ್ಟಣಕ್ಕೂ ಚಿತ್ತೈಸಿ, ತಮ್ಮ ದರ್ಶನದಿಂದ ಮತ್ತು ಮೃದು ಮಧುರವಾದ ಸೂಕ್ತಿಗಳಿಂದ ಇಲ್ಲಿಯ ನಾಗರೀಕರ ಮನಸ್ಸನ್ನು ಸಂತೋಷಪಡಿಸಿ ಇಲ್ಲಿಯವರು ಭಕ್ತಿಪೂರ್ವಕವಾಗಿ ಕೊಟ್ಟ ಹೂವು, ಹೂವಿನ ಎಸಳನ್ನು ಅತಿಪ್ರೇಮದಿಂದ ತಕ್ಕೊಂಡು ಹೋಗಿರುವರು.

ಮಹಾ ಕವಿಗಳಾದ ರವೀಂದ್ರನಾಥ ಠಾಗೋರರ ಈ ಮಹತ್ವಾಕಾಂಕ್ಷೆಯೂ, ಅದನ್ನು ಸಾಧಿಸಲು ಕೈಕೊಂಡ ಸದುದ್ಯೋಗವೂ ಶ್ಲಾಘ್ಯವಲ್ಲವೆಂದು ಯಾರು ಹೇಳಬಹುದು? ನಮ್ಮಲ್ಲಿಯ ವೇದಉಪನಿಷತ್ತು, ತತ್ವಜ್ಞಾನ, ಅಪೂರ್ವಕಲಾವಿಜ್ಞಾನ ಇತ್ಯಾದಿ ಇಡಿ ಲೋಕಕ್ಕೆ ತಿಳಿದಿರಬೇಕೆಂಬುದು ಒಪ್ಪತಕ್ಕ ಮಾತೆ ಸರಿ. ಆದರೆ ಹಿಂದೂಸ್ಥಾನದ ಪ್ರಕೃತದ ಪಾರತಂತ್ರ್ಯದ ಸ್ಥಿತಿಯಲ್ಲಿ ಹಿಂದೂಸ್ಥಾನವು, ಈ ಅಂತರರಾಷ್ಟ್ರೀಯ ಧ್ಯೇಯವನ್ನು ಮುಂದಿಟ್ಟುಕೊಂಡು ಮುಂದರಿಸಿದರೆ ಅದರ ಪ್ರಯತ್ನಕ್ಕೆ ಎಷ್ಟರಮಟ್ಟಿನ ಯಶಸ್ಸು ಬಂದೀತೆಂಬುದು ಒಂದು ಪ್ರಶ್ನೆಯೆ ಸರಿ. ಎಂದರೆ ಇಲ್ಲಿಯ ಪ್ರಾಚೀನ ಸಂಸ್ಕೃತಿಯನ್ನು ಕಲಿಯಲು ಇತರರು ಬರಲಿಕ್ಕಿಲ್ಲ ಎಂದು ಇದರ ಅರ್ಥವಲ್ಲ, ಪತಿತ ಜನಾಂಗದ ಸಂಸ್ಕೃತಿಯು ಕಡೆಗೆ ಸ್ವತಂತ್ರರು ಯಾವ ದೃಷ್ಟಿಯಿಂದ ನೋಡ್ಯಾರು, ಅವರ ದೃಷ್ಟಿಯು ಯಥಾಪ್ರಕಾರ ಕುತ್ಸಿತಾ ಪೂರ್ಣವಾಗಿರುವ ಪಕ್ಷದಲ್ಲಿ ಅಥವಾ ಪ್ರಚ್ಛನ್ನನಾಸ್ತಿಕವಾಗಿರುವ ಪಕ್ಷದಲ್ಲಿ ಈ [illegible] ಎಂಬ ಪ್ರಶ್ನೆಯು ಬರುತ್ತದೆ. [illegible] ದಿಸುವುದೆ ಹಿಂದುಸ್ಥಾನದ ಮೊದ[illegible]ಯಾದಿ[illegible] ವ್ಯಕ್ಕೆ ಈ ಪ್ರಯತ್ನವು ಸಾಕ್ಷ[illegible] ಅಲ್ಲ—ಸಾಧಕವಾಗುವ ಪಕ್ಷದಲ್ಲಿ [illegible] ಆ ಕರ್ತ[illegible]ನಾಗಿ ಅದನ್ನು ಸಾಧಿಸುವುದು ಅತ್ಯಂತ [illegible]

ಮಹಾಕವಿಗಳು ಇಲ್ಲಿಗೆ [illegible]ತ್ತೈಸಿದಾಗ [illegible]ಪೂರ್ವಕ [illegible] ಎಂಡ್ರೂಸರವರ ಸವಾರಿಯು ಕೂಡ ಬಂ[illegible] ತಿಂಗಳ ಮುಂಚೆ ಒಮ್ಮೆ ಇಲ್ಲಿಗೆ ಚಿತ್ತೈಸಿದಾ[illegible] ರೆವರೆಂಡ್ [illegible] ಫಿನಿಕ್ಸ ಆಶ್ರಮ ಮತ್ತು ಸತ್ಯಾಗ್ರಹಾಶ್ರಮ ಇ[illegible]ವರ ಒಂದು ರಸಭರಿತವಾದ ಉಪನ್ಯಾಸವನ್ನು ಕೊಟ್ಟಿದ್ದರು. [illegible] ಶಾಂತಿನಿಕೇತನ ಇವುಗಳ ನಿರ್ದೇಶವು ಅವರ ಆಗಿನ [illegible] ಇತ್ತಾದರೂ ಮಹಾತ್ಮಜಿಯವರ ಸಂದೇಶವನ್ನು ಅವರು [illegible]ವಾಗಿ ಸಾರಿದ್ದರು. ಮಹಾತ್ಮಾಜಿಯವರ ಸತ್ಯಾಗ್ರ[illegible] ಮಾಹಿತಿಯನ್ನು ಕೊಡಲು ಬಂದ ಆಗಿನ ಮುನಿವರ್ಯ [illegible]ರವರು ೬-೭ ಮೊಳದ ಒಂದು ಖಾದರ ತುಂಡನ್ನು ಹಿಂದಿ[illegible] ಉಟ್ಟುಕೊಂಡು, ಅಂಥದ್ದೆ ಒಂದು ಉದ್ದ ಒಳ ಅಂಗಿಯನ್ನು [illegible] ಹಾಕಿಕೊಂಡು ಬಂದಿದ್ದರು. ಪಾದಗಳಿಗೆ ಚೀಲ, ಬೂಟ್ಸು ಮುಂತಾದ್ದೇನೂ ಇರಲಿಲ್ಲ. ಅವು ರಿಕ್ತವಾಗಿದ್ದವು. ಆದರೆ ಈಗ ಬಂದು ಹೋದ ಎಂಡ್ರೂಸ ಸಾಹೇಬ ಬಹದ್ದೂರರು ಇಜಾರು, ಬೂಟ್ಸು, ಕೋಟ್, ವೆಸ್ಟಕೋಟು ಮುಂತಾದ ಉತ್ತಮ ಪಾಶ್ಚಾತ್ಯ ಪೋಶಾಕಿನಿಂದ ಒಪ್ಪುತ್ತಿದ್ದರು. ಮಹಾಕವಿಗಳ ಸಂಗಡ ಬಂದವರಾದ ಕಾರಣ ಮತ್ತು ಪೂರ್ವಪಶ್ಚಿಮಗಳನ್ನು ಒಟ್ಟುಕೂಡಿಸುವ ಸತ್ಪ್ರಯತ್ನಕ್ಕಾಗಿ ಬಂದಿರುವುದರಿಂದ ಅವರು ಸ್ವಾಭಾವಿಕವಾದ ಉಡುಪನ್ನು ಧರಿಸಿದ್ದು ಅನುಚಿತವೆಂದು ಯಾರು ಹೇಳ್ಯಾರು? "ರೋಮಪಟ್ಟಣಕ್ಕೆ ಹೋದಾಗ ರೋಮಿಯರಂತೆ ನಡೆಯಬೇಕೆ"ಂಬ ವ್ಯಾವಹಾರಿಕೋಕ್ತಿಯಂತೆ ಎಂಡ್ರೂಸರವರ ವರ್ತನವು ನಿರಪವಾದವಾಗಿದೆ! ಈ ರೀತಿಯಿಂದ ಮುನಿವರ್ಯ ಎಂಡ್ರೂಸರ ಮತ್ತು ಸಾಹೇಬ ಬಹದ್ದೂರ ಎಂಡ್ರೂಸರ ಉಡುಪಿನಲ್ಲಿ ವ್ಯತ್ಯಾಸವು ತೋರಿದಾಗ್ಯೂ ದೀನ ಜನರ ವಿಷಯದಲ್ಲಿ ಅವರ ಹೃದಯು ಏಕ ಪ್ರಕಾರವಾಗಿಯೆ ಕರಗುತ್ತದೆ ಎಂಬುದಕ್ಕೆ ಸಂದೇಹವಿಲ್ಲ. ಇದಕ್ಕೆ ಅವರು ಅಕಾಲಿ ಜನರ ದುಃಖ ಸಂದರ್ಶನವನ್ನು ಮಾಡಿದ್ದೆ ಇತ್ತೀಚೆಯ ಉದಾಹರಣೆಯಾಗಿದೆ. ಇಂಥ ಸಾಧು ಹೃದಯದ ಪುರುಷರು ಎಲ್ಲರಿಗೆ ವಂದ್ಯರಾಗಿರುವರು.

ಮಂಗಳೂರು.

ಇದೇ ಬರುವ ತಾ. ೨೧ನೇ ಶನಿವಾರ ಬೆಳಿಗ್ಗೆ ೯ಗಂಟೆಗೆ ಕಾಸರಗೋಡು ತಾಲೂಕು ಬೋರ್ಡ ಮೆಂಬರರ ಸಭೆಯು ಕಾಸರಗೋಡು ತಾಲೂಕು ಬೋರ್ಡ ಆಫೀಸಿನಲ್ಲಿ ಸೇರುವುದು.

ಇಲ್ಲಿಯ ಸೀನಿಯರ್ ಕ್ರಿಕೆಟ್ ಪಂದ್ಯಾಟದಲ್ಲಿ ಸೆಂಟ್ ಅಲ್ಲೋಸಿಯಸ್ ಕೋಲೇಜಿನವರು ಗೆದ್ದಿರುವರು.

ಖಜಾನಾ ಡಿಪ್ಯುಟಿ ಕಲೆಕ್ಟರರಾಗಿದ್ದ ರಾ| ಪಿ. ಕೆ. ನಂಬಿಯಾರರಿಗೆ ಎರಡು ತಿಂಗಳ ರಜೆ ಹೆಚ್ಚು ಕೊಡಲ್ಪಟ್ಟದರಿಂದ, ಅವರ ಕೆಲಸಕ್ಕೆ ರಾ. ಎ. ಕೆ. ಗೋವಿಂದನ್‌ರವರನ್ನು ಮೊಕ್ರೂರು ಮಾಡಿ ಮಲಬಾರಿನ ತಹಸಿಲ್ದಾರರಾಗಿದ್ದ ರಾ| ಪಿ. ಸಿ. ಕುಂಞಿರಾಮನ್‌ರವರನ್ನು ಡಿಪ್ಯುಟಿ ಕಲೆಕ್ಟರ್ ಕೆಲಸ ಬದಲಿ ನೋಡಲು ಮಂಗಳೂರು ಹೆಡ್ ಕ್ವಾರ್ಟರ್ಸಿಗೆ ವರ್ಗಾಯಿಸಲ್ಪಟ್ಟಿದೆ.

ಪುತ್ತೂರಿನ ಸ್ಟೇಶನರಿ ಸಬ್ ಮೆಜಿಸ್ಟ್ರೇಟ್ ರಾ. ಜಿ. ದತ್ತಾತ್ರಿಯರಾಯರು ಉಡುಪಿಗೆ ವರ್ಗಾಯಿಸಲ್ಪಟ್ಟಿರುವರು.

ಕಳೆದ ಮೂರು ವಾರಗಳ ಮುಷ್ಟಿಫಂಡಿನ ಜಮೆ ರೂಪಾಯಿ ೧೫೩—೨—೮; ಅಕ್ಕಿ ಸೇರು ೨೪೮|, ೪ ಪುಸ್ತಕಗಳು, ೩೩ ಚರಕಗಳು. ಈ ವರುಷ ಮಂಗಳೂರ ತಾಲೂಕಿನಲ್ಲಿ ಈ ವರೆಗೆ ೧೫೦೦ ಕೊಂಗ್ರೆಸ ಸದಸ್ಯರನ್ನು ಮಾಡಿರುತ್ತದೆ. ಅನೇಕ ಹಳ್ಳಿಗಳ ಕಮ್ಮಿಟಿಗಳನ್ನು ಪುನರುಜ್ಜೀವನ ಮಾಡಿದೆ. ಈ ಕಮ್ಮಿಟಿಗಳನ್ನು ಇನ್ನೂ ವೃದ್ಧಿಗೊಳಿಸಬೇಕಾಗಿ ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ ವಿನಂತಿ. ಮಂಗಳೂರ ತಾಲೂಕಿನಲ್ಲಿ ತಿಲಕ ಮಹಾ ವಿದ್ಯಾಲಯದಲ್ಲಿ ೯೫, ಬೋಳಾರ ರಾಷ್ಟ್ರೀಯ ಶಾಲೆಯಲ್ಲಿ ೪೭, ಕದ್ರಿ ರಾಷ್ಟ್ರೀಯ ಶಾಲೆಯಲ್ಲಿ ೩೩, ಕೊಂಚಾಡಿ ರಾಷ್ಟ್ರೀಯ ಶಾಲೆಯಲ್ಲಿ ೪೩, ಬೋಳೂರು ರಾಷ್ಟ್ರೀಯ ಶಾಲೆಯಲ್ಲಿ ೩೯, ಗುರುಕಂಬಳ ರಾಷ್ಟ್ರೀಯ ಶಾಲೆಯಲ್ಲಿ ೬೫, ಶರ್ಪಾಡಿ ರಾಷ್ಟ್ರೀಯ ಶಾಲೆಯಲ್ಲಿ ೨೩, ಕಳ್ಳಿಗೆ ರಾಷ್ಟ್ರೀಯ ಶಾಲೆಯಲ್ಲಿ ೩೦. ಹೀಗೆ ಒಟ್ಟು ೩೭೫ ವಿದ್ಯಾರ್ಥಿಗಳಿದ್ದಾರೆ. ಈ ಪೈಕಿ ೪೮ ವಿದ್ಯಾರ್ಥಿಗಳು ಪಂಚಮರೂ ಕೊರಗರೂ ಆಗಿರುತ್ತಾರೆ.

ಮು. ಉಮೇಶರಾವ್.

ನೋಟೀಸು.

ಶ್ರೀ ಮದನಂತೇಶ್ವರ ದೇವಸ್ಥಾನ, ಮಂಜೇಶ್ವರ.

ಶ್ರೀ ಮದನಂತೇಶ್ವರ ದೇವಸ್ಥಾನದ ಆಡಳಿತೆ ನೋಡುವ ಬಗ್ಗೆ ಗೌಡಸಾರಸ್ವತ ವೃಂದಕ್ಕೆ ಸೇರಿದ ಸುಮಾರು 30 ವರುಷಕ್ಕೆ ಮಿಕ್ಕಿದ ಒಬ್ಬ ಮೆನೇಜರನು ಬೇಕಾಗಿರುವನು. [illegible] ರೂಪಾಯಿ 3000 ತೆರಬೇಕು. ತಲಬು ತಿಂಗಳಿಗೆ [illegible] ಅರ್ಜಿಗಳು ಈ ತಿಳಿಗೆ [illegible] ಒಳಗೆ ತಲುಪಬೇಕು.

ಮಂಜೇಶ್ವರ,
ತಾ. 12-10-'22

ಎಂ. ಜಿ. ಐಗಳ್, ಇವರಿಂದ ರಚಿತವಾದ ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ. ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಸಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ. ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿಂತ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—[illegible]ಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟ್ಟಾಡಿ—ಸೂಡ ಮಠಗಳು—ಕೇಚಿಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತಶಾಯಿ ಬಸದಿ, ಅನಂ[illegible] ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನ್ನಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಭಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಜಿರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ವೀರ ನರಾದಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಾಣಿರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾ ನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ಬಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—ಬುಕನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತಿ. 23. ಕೊಡಗರು—ಪಂಜ—ಸುಳ್ಯ—ಬೆಳ್ಳಾರೆ—ಅಮರನಾಗಣೆಗಳು—ಬೆಳ್ಳಾರೆ, ಮುಖ್ಯ ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ-ಗುರುವಾಯನಕೆರೆ ಪಟ್ಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮೂಡಬಿದ್ರೆ ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪುಂಜನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಮನೆಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ಏಳುನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿವಂತೂರು—ಮೂಲಿಕೆ—ವಳಲಂಕೆ—ಬಸ್ರನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ಸಿದ್ಧಲ—ಸೋಮಳಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಳಚೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾಸೆಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ದಿನ್ನಾಣರು—ಕೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೋಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮೆ ಅರಸರು—ಮಾಯಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೋಮಶೇಖರನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಣ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟುಪಾಡಿ ಶಿವಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಅಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ವಮಹೆಗಡೆ 1.

ವಿಳಾಸ:— ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ಐನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ತನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಮಾಡಿಕೊಳ್ಳುವ ವಿವರವೂ ಇದೆ. ಕನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ಐನೇದು ವೈದ್ಯ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾವಾಜಗಳ ಮುದ್ದಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವೂ ಅವರ ವಿಚಾರವೂ ತಿಳಿಸಿರುವರು. ಐನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇವಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ [illegible] ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರೂ ಮಾಂತ್ರಿಕರು ಶಾಸ್ತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಕಿರಿ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ಬೇರೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು, ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇವರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋದರ್ಶನ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅವಶ್ಯವಾಗಿ ಪ್ರೀತಿಯಿಂದ ಇರುವದಕ್ಕೆ ನಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯೂದರೂ ಕಿರಿ ಕಡಿದು. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪಠಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ವಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೆ

ರಥಬೀದಿ, ಮಂಗಳೂರು.

ಸನ್ಮಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೨೭)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪತಿವ್ರತೆಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಸಾಗದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕಂಥ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. ..... ಬಾಲಿಕೆಯು ಕಲಿಯತಕ್ಕಂಥಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ	0—12—0
ಸಂಕಾವಳಿ,ಕಾದಂಬರಿ	0—6—0
ಚಂದ್ರಮುಖಿ	0—8—0
ರಾಜಪುತ್ರರಮಣಿಯರು	0—8—0
ಕೆಲವು ಸಣ್ಣ ಕಥೆಗಳು	1—0—0
ರಾಜಯೋಗ	1—0—0

ಶಂಕರರಾಮಾಯಣ ಹೊಸ ಮುದ್ರಣ	5—0—0
ಶಂಕರರಾಮಾಯಣದ ಕಥೆ ವಚನ	0—12—0
S. S. L. C. Kannada Texts	
ಜಂಭ[illegible]	0—5—0
ಸುಕೀರ್ತಿ	0—6—0
ಆದಿಪಾಯ ಮುಕುಟ.	0—12—0

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered No. M. 498.

ಸ್ವದೇಶಾಭಿಮಾನಿ

SWADESHABHIMANI. MANGALORE.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ!

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0

ಟಪ್ಪಾಲ್ ಹಾಸಲು ಸೇರಿ

[illegible] ಉತ್ತ[illegible]ಸ್ತುತುಷು[illegible] ದೇವಾ |
[illegible] ಭೀಮವಿಷೇಣ ಭೀತಿಮ್ |
ಸುಧಾಂ[illegible] ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥

ದೊರೆಯಲನುಪಮರತ್ನಗಳು ಸಾ- | ಗರವನ್ನಮಥಿಸಲು ಸುರರಿಗದಂ |
ತಿರುಪವಾಯಿತೆ! ಮತ್ತೆ ವಿಷವ ಸುಡುತ ಬರುತಿಭುವ ||
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಈಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥೧॥

ಪುಸ್ತಕ ೧೩. ಮಂಗಳೂರು, ತಾರೀಕು ೨೧ನೇ ಶುಕ್ರವಾರ ಒಕ್ಟೋಬರ ೧೯೨೭. ಸಂಚಿಕೆ ೪೧

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್

-ಉಡುಪಿ ಲಿಮಿಟೆಡ್.-

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾಹಾಕಿದ ಮೂಲಧನ	" 1,00,000—0—0
ವಸೂಲಾದ ಮೂಲಧನ (ತಾ. 31-3-27ರ ವರೆಗೆ)	89,161—4—11
ಕ್ಷೇಮನಿಧಿ ವ ಇತರ ಫಂಡುಗಳು	23,700—4—2
ಠೇವಣಾತಿಗಳು	3,47,315—15—2
ಇಷ್ಟರವರೆಗೆ (1927ನೇ ಇಸವಿಯ) ಠೇವಣಾತಿ ಗವರ್ನಮೆಂಟು ಪೇಪರು ಮೇಲೆ ಹಾಕಿದ ರೂ. 25,700 ಠೇವಣಾತಿ	4 02,737—13—6

ಕಳೆದ 2 ವರುಷಗಳಲ್ಲಿ ಪಾಲುದಾರರಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ.

೩ ತಿಂಗಳಿಗೂ ಮೇಲ್ಪಟ್ಟು ತರದ ಕರಾರಿನ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ನಿಮ್ಮ ಠೇವಣಾತಿಗಳನ್ನು 15 ದಿವಸಗಳ ನೋಟೀಸು ಮೂಲಕ ಶೇಕಡಾ [illegible] ಬಡ್ಡಿ ಸಹಿತ ವಾಪಾಸು ಪಡೆಯುವ [illegible] ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕತಕ್ಕ ಶೇಕಡಾ [illegible] ಬಡ್ಡಿ ನಡೆಯುವ ಚಾಲ್ತಿ ಠೇವಣಾತಿಗಳನ್ನೂ ಶೇಕಡಾ 4½ ಬಡ್ಡಿ ನಡೆಯುವ ಸೇವಿಂಗ್ಸು ಬ್ಯಾಂಕು ಠೇವಣಾತಿಗಳನ್ನೂ ತಿಂಗಳುಗಟ್ಟಲೆಯಿಂದ ತರುವ ಚಂತು ಠೇವಣಾತಿಗಳನ್ನೂ ಡಿಪೋಜಿಟಾಗಿ ಪಡೆಯುವದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವದು.

ಈ ಬ್ಯಾಂಕಿಗೆ ತರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ನಲ್ಲಿಯೂ ತರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದರೆ ತಿಳಿವದು.

ನಯಂಪಳ್ಳಿ ಆನಂದರಾವ್,

ಸೆಕ್ರೆಟರಿ.

ನೈಟ್ರೇಟ್ ಒಫ್ ಸೋಡಾ

ಭತ್ತ, ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ಎರೆಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಡಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,

6, ಮಿಷನ್ ರೋ, ಕಲ್ಕತ್ತಾ.

THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನ, ರಥಬೀದಿ, ಮಂಗಳೂರು.

- ಇದರಲ್ಲಿ ದೊರೆಯುವ -

ಪುಸ್ತಕಗಳು.

ವಿದ್ಯಾವಾಚಸ್ಪತಿ ಅನ್ನರಾಮ ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ಸ್ತ್ರೀಧನವಿವೇಕ ಕ್ರಯ	೦—೧೦—೦
ಕೇತುಭಂಗ	೦—೧೨—೦
ಸಂಕ್ಷೇಪಗೀತೆ	೦—೧೦—೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತೋಲ್ಲಾಸ ಕ್ರಯ ೦—೩—೦

ಕರ್ನಾಟಕ ಕವಿ ಚರಿತೆ, ಮರಾಠರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಯೋಗುಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಚ್ಚ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೪—೦ ಸ್ಥಳೀಕರಿಗೆ ರೂ. ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ವ್ಯಾನೇಜರಿಗೆ ಬರಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಡ್ರಾಯಿಂಗ್‌ಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಬು, ಬ್ರಷ್ ನಾಲುಗಳು, ಇತರ ವಿಲಾಯತಿ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ತಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಸರ್ವೆ ಫೋರ್ಮು, ಕುಂಭಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋಂಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪತಿಕ್, ಹೋಮಿಯೋಪತಿಕ್ ಮತ್ತು ಟಿಟ್ಟು ಔಷಧಿಗಳು—ರೋಗಿಗಳಿಗೂ, ಬಾಲೀಣಿಯರಿಗೂ ಬೇಕಾಗುವ ಪೇಟೆಂಟ್ ಔಷಧಿಗಳು.

ನೈಟ್ರೇಟ್ ಆಫ್ ಸೋಡಾ, ಇತ್ಯಾದಿ ರೀತಿಗೆ ಬೇಕಾಗುವ ಗೊಬ್ಬರಗಳು.

ಆತ್ರೇಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿ. ೨.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನ, ರಥಬೀದಿ, ಮಂಗಳೂರು.



ಬೇನೆಯುಂಟಾದಾಗ ಚೇತನವು ಕಡಿಮೆಯಾಗುವದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಖತನನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ಲೇಗ್ ಕಷಾಯ

U. B. DUTT & Co. CALCUTTA

ಮಲೇರಿಯಾ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ದೊರಕುವ [illegible] ನಾವು ಅನೇಕ ಅತ್ಯುತ್ತಮ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇವೆಲ್ಲಾ ಪ್ರತಿಫಲದಾಯಕ, [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ [illegible] ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಅತ್ಯುತ್ತಮ ಔಷಧಗಳಲ್ಲಿ ನಮ್ಮ 'ಪ್ಲೇಗ್‌ಕಷಾಯ'ವು ಎಲ್ಲಾ ವಿಧದ [illegible] ಅವಯವಗಳಲ್ಲಿ ಉಂಟಾಗುವ ಸೈಭಾವ, ಗಂಟು, ಸಂಧು, ಅವಯವ, [illegible] [illegible]

ಕ್ರಯ ರೂ. ೩—೪—೦.

ಯು. ಬಿ. ದತ್ತ ಕಂಪೆನಿ, [illegible]

ಗಳು! ಪ್ರಖ್ಯಾತಿಪಟ್ಟ ಔಷಧಗಳು!

ಪ್ರಖ್ಯಾತಿ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರ ಹಿಂದ [illegible] ವ್ಯವಸಾಯದ ಬಗ್ಗೆ (ಶಿಫೀನವಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಜ ನಾಗೇಂದ್ರನಾಥ ಸೇನ್ ಎಂಡ್ ಕೋ.

ಶಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಎಸ್. ಸುಬ್ರಹ್ಮಣ್ಯ ಎಂಡ್ ಕೋ.
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಖುದ್ದು ಗಾವನಿಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲಿ ಕೊಡಲಾಗುವುದು.

ಕಳೆದ ೫೦ ವರುಷಗಳಿಂದ ನಾನಾ ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯು ಔಷಧಗಳನ್ನು ಒದಗಿಸುತ್ತಿದ್ದೇವೆ.

[illegible] ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೀವಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಂತ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬಗೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧವೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟುದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ¼ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗ ಮತ್ತು ನರಗಳ ನಿಃಶಕ್ತಿಯಿಂದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ, ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ¼ಗ್ರೈನು ವರೆಗೆ ಜೇನು ಅಥವಾ ಕಷಾಯದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧವೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೇನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ 1 ಕಸ್ತೂರಿಗೆ ತೊಲೆಗೆ ರೂ 40.

ಗೋರೋಜನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ೨ರೂ. ಪಚ್ಚ ಕರ್ಪೂರ ತೊಲೆಗೆ ರೂ ೩.

ಆರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,

Hampankatta, MANGALORE S' K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯು ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರ್ರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕತ್ತೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,

ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದಿ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟು ಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಪ್ಲೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲ ಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,

ರಥಬೀದಿ, ಮಂಗಳೂರು



ನಿಮ್ಮ ಮುಖಬಣ್ಣವನ್ನು ಯಾವಾಗಲು ಅಲಂಕರಿಸೋಣವು

ನಿಮ್ಮಕ್ಕೆ [illegible] ಗಲುಪ್ಪುದುವಾಗಿಯು ಮಸ್ತಾನಯವಾಗಿಯು ಇರುವದಕ್ಕಾಗಿಯು

ಯಾವಾಗಲು ಪ್ರಯೋಗಿಸಬೇಕು

"ಹಾಜೆಲೀನ್ 'ಸ್ನೋ"

(ಟ್ರೇಡ ಮಾರ್ಕ)ವಸ್ತು

"'HAZELINE' SNOW"

(Trade Mark)

"ಹಾಜೆಲೀನ್ 'ಸ್ನೋ" ಎಂಬುದು ಅಧಿಕ ಸುಗಂಧ ಮಹದನಿಸುವಂಥ ಕರ್ಪೂರಕ್ಕೆ ಒಳ್ಳೆ ಸಾಮಗ್ರಿಯು. ಮತ್ತುಕೊಬ್ಬು ಶೇರದ ಪದಾರ್ಥವು. ಅದು ಬಹು ಶೀಘ್ರದಲ್ಲಿ ಸೊಗಸನ್ನು ಬಿಳುಪನ್ನು ಕೊಡುವದು. ಯಲ್ಲಾ ಸ್ತ್ರೀ ಪುರುಷರ ಕಪ್ಪು ಕರ್ವು ಪ್ರದುಮಾ ದುವದಕ್ಕಾಗಿ, ಕ್ರಮವಾಗಿ ಉಪಯೋಗಿಸತಕ್ಕದ್ದು.

ಇದು ಕಂಜಿನ ವಾಸ್ತ್ರಿಗಳಲ್ಲಿ ಕೆ ಬಿಟ್ಟ ಮತ್ತು ಉಗ್ರಾಣದವನ್ನಯವರಿಂದಲು ಮಾರಲ್ಪಡುವದು.

ಬರ್ರೋಸ ವೆಲ್‌ಕಂ ಅಣ್ಡ ಕೋ ಲಂಡನ್ ಅಣ್ಡ ಬಂಬಾಯಿ

Burroughs Wellcome & Co.
London and Bombay

CAN. 6

All Rights Reserved

ಉತ್ತಮ ತರದ ಮಾಲು — ಕ್ರಯ ಸುಲಭ

ಮಕ್ಕಳ ಆಟದ ಬಿಟ್ಟಾಳಿಯ 32 ಸಾಮಾನುಗಳ ಸಹ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 6—0—0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಮಡಿ, ಜರಿ, ಸಾದಾ, ಸೀರೆ, ಶಲ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಪಟಿಕಮಣಿ, ಲಿಂಗ, ಧಾತಳ್ಳಿ ಜಾಗಂಟೆ ಇವುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವದು. ಕ್ಯಾಟಲಾಗ್ ಇನಾಂ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,

ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದುಷ್ಟವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೇ ಉರಿ [illegible] ಅಥವಾ ಹಸುರು ವರ್ಣದ ಕಣ ಉರಿಯುಳ್ಳ [illegible] ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ [illegible] ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಿಗೆ [illegible] ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲ [illegible] ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶಿಲೆ ಒಂದರ ಕ್ರಯ:—ರೂ. 1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:—

ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೋಮಿಯೋಪೆತಿಕ್ ಡಿಸ್ಪೆನ್ಸರಿ,

ಹಂಪನಕಟ್ಟೆ, ಮಂಗಳೂರು.

ಶ್ರೀ

ಸ್ವದೇಶ ಭಕ್ತರೇ

ಈ ಕಡೆ ನೋಡಿರಿ!!

ಮಹಾತ್ಮಾ ಗಾಂಧಿಯವರು

ಸೂಚಿಸಿದಂತೆ ಚರಕದ ನೂಲಿನಿಂದಲೇ ತಯಾರಿಸಿದ ಗಾಂಧಿ ಟೋಪಿಗಳು, ಬಿಳಿ, ಹಸುರು ಬೂದು ಮೊದಲಾದ ಬಣ್ಣಗಳ ಕೋಟಿನ ವಸ್ತ್ರಗಳೂ, ನಾನಾ ನಮೂನೆ ಗೆರೆಗಳುಳ್ಳ ನಯವಾದ ಶರ್ಟಿನ ವಸ್ತ್ರಗಳೂ ಮತ್ತು ನೇಷ್ಟಿ ಪಂಚೆ, ಟುವಾಲು ಮೊದಲಾದ ಹಲವು ನಮೂನೆಯ ಸ್ವದೇಶಿ ಕೈಮುಗ್ಗದ ವಸ್ತ್ರಗಳೂ ಸ್ವದೇಶಿ ಮಿಲ್ಲಿನಲ್ಲಿ ತಯಾರಾದ ಎಲ್ಲಾ ನಮೂನೆಯ ಬಟ್ಟೆಗಳೂ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು.

ಒಮ್ಮೆ ಪರೀಕ್ಷಿಸಿ ನೋಡಿರಿ.

ಸ್ಯಾಂಪಲನ್ನು ಅಪೇಕ್ಷಿಸುವವರು ಹಾಲ್ಕಾಣೆಯ ಸ್ಟೇಂಪನ್ನು ಮುಂದಾಗಿ ಕಳುಹಿಸತಕ್ಕದ್ದು.

ವಿಳಾಸ:—

ಮುಳಿಯ ತಿಮ್ಮಪ್ಪಯ್ಯ ಮತ್ತು ಸಹೋದರರು

ರತ್ನ ಮತ್ತು ಜವಳಿ ವ್ಯಾಪಾರಿಗಳು,

ಬಾರಾಮುಖಾನ (ಗೋಳಿಕಟ್ಟೆ ಬಜಾರು)

ಮಂಗಳೂರು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ಣಾಟಕ ಪ್ರಕಟನಾಲಯ, ಬಸವನಗುಡಿ ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠದೀಕ್ಷಿತರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ

ಅಥವಾ

ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸವಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತ" "ಆತ್ಮಗೀತ" ದೇವರಲ್ಲಿ" ಎಂಬ ಆಂಗ್ಲ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,

ಕರ್ಣಾಟಕ ಪ್ರಕಟನಾಲಯ

ಶಂಕರಪುರ, ಬಸವನಗುಡಿ ಪೋಸ್ಟು,

ಬೆಂಗಳೂರು ಸಿಟಿ

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಶ್ಯಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಸೋರದುವದೂ, ಹಲ್ಲಿನ ಬುಡದಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರುಗಳು ಬೇಕೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯುವದು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,

ಹಂಪನಕಟ್ಟಾ, ಮಂಗಳೂರು.

ನೋಟೀಸು.

ಸಂ 1922ನೇ ಇಸವಿ ಸಪ್ಟಂಬರ ತಾರೀಕು 11ರಲ್ಲು ಉಳ್ಳಾಲ ಗ್ರಾಮದಲ್ಲಿರುವ ಚಂದಪ್ಪಬೆಳಚಾಡನ ಅಳಿಯ ಕೋಟಿ ಬೆಳಚಾಡ 1, ಈತನ ತಮ್ಮ ಕಣ್ಣಬೆಳ್ಚಡ 1, ಈತನ ತಮ್ಮ ಅಪ್ಪಯ್ಯ ಬೆಳಚಾಡ 1, ಕೂಡಾ 3 ಜನರು ಈ ಮೂಲಕ ಸರ್ವೇಜನರಿಗೆ ತಿಳಿಯಪಡಿಸುವದೇನೆಂದರೆ, ನಮಗೆ ತಾ. 9—9—1919ರಲ್ಲು ತುಂಬೆ ಹೆಂಗಸಿನ ಮಗ ಮಂಜಪ್ಪಬೆಳಚಾಡನು ಬರಕೊಟ್ಟ ಮಂಗಳೂರು ರಿಜಿಸ್ಟ್ರಿ ಆಫೀಸ 1ನೇ ಪುಸ್ತಕದ 396ನೇ ಸಂಚಿಕೆಯ 98—99ನೇ ಪುಟಗಳಲ್ಲಿ [illegible]ನೇ ನಂಬ್ರದ ಆದವು ದಸ್ತಾವೇಜು ಇತ್ತಲಾಗೆ ಗೈರವಿಲೆಯಾಗಿರುವುದರಿಂದ ಸದರಿ ದಸ್ತಾವೇಜು ಯಾರಿಗಾದರೂ ಸಿಕ್ಕಿದ ಪಕ್ಷದಲ್ಲಿ ಅದನ್ನು ನಮಗೆ ತಂದುಕೊಟ್ಟಲ್ಲಿ ರೂಪಾಯಿ 10ನ್ನು ಇನಾಮಾಗಿ ಕೊಡುತ್ತೇವೆ.

ಕೋಟಿಬೆಳಚಾಡನ ರುಜು.

ಗೆರೆ ಕಣ್ಣಬೆಳಚಾಡನ ರುಜು.

ಅಪ್ಪಯ್ಯಬೆಳಚಾಡನ ರುಜು.

ಸುಸಂದರ್ಭ — ತ್ವರೆ

ದರ ಸುಲಭ — ಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗದಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಂದಿರುವ ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ಶೀರೆಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ., ಬಿ. ಎಲ್.

ಕೊಂಕಣಿ ಭಾಷೆಯಲ್ಲಿ

ಸಂಗೀತ

ಪ್ರಹ್ಲಾದ ಚರಿತ್ರೆ

ತಿದ್ದಿದ ಮೂರನೇ ಮುದ್ರಣ.

ಬೆಲೆ: ಕಾಗದ ಬೈಂಡು ರೂ. 0—4—6. ಸ್ಟಿಫ್ ಬೈಂಡು ರೂ. 0—[illegible]—6.

ಒಂದೇ ಪ್ರತಿಯನ್ನು ಅಪೇಕ್ಷಿಸುವವರು ಐದುವರೆ ಆಣೆ ಅಥವಾ ಆರುವರೆ ಆಣೆಗಳ ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ—

ಬಿ. ಕೆ. ಪ್ರಭು,

ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ

'ಕವಿ'ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯ ಕೈಸ್ಸರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ಲು 1ರ ರೂ. 2—12—0.

ಸ್ಪೆಶ್ಯಲ್ ರಾತ್ಲು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸೆಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,

ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಷ್ಟು ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸು—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು

ಕೆನರಾಸ್ ಮಿಷನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,

ಮಂಗಳೂರು.

ಶಾಲಿವಾಹನಶಕ ೧೮೪೪ನೆಯ ದುಂದುಭಿ [illegible] ಶು ೧ ಶನಿವಾರದಿಂದ ದುಂದುಭಿ [illegible]ರದ ಕಾರ್ತಿಕ [illegible] ಶು ೭ ಶುಕ್ರವಾರದ ವರೆಗಿನ ಪಂ[illegible]

(೧೯೨೨ನೆಯ ಕನ್ಯಾ [illegible])

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉದಯ	ಅಸ್ತ.
21	ಶನಿ	೧	೩೦. ೦	ಸ್ವಾತಿ	೪೫.೧೦	೪	6.	
22	ರವಿ	೨	[illegible]	ವಿಶಾಖಾ	೪೨.೧೪	೫	6.24	
23	ಸೋಮ	೩	[illegible]	ಅನುರಾಧಾ	೪೦.೧೬	೬	6.24	
24	ಕುಜ	೪	೧೭.೪೬	ಜ್ಯೇಷ್ಠಾ	೩೯. ೦	೭	6.24	6
25	ಬುಧ	೫	೧೫.೩೬	ಮೂಲಾ	೩೯.೪೬	೮	6.24	6.
26	ಗುರು	೬	೧೪.೧೬	ಪೂ. ಅ.	೩೯.೪೪	೯	6.24	6. 6
27	ಶುಕ್ರ	೭	೧೪.೩೮	ಉ. ಅ.	೪೨. ೦	೧೦	6.25	6. 6

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ಒಕ್ಟೋಬರ್)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದ್ದು	Minimum ಕಡಿಮೆದ್ದು	Rainfall. ಮಳೆ ದಿವಸ ಮಳೆ	ಜುಮಲಾ ಮಳೆ.
12	89—8	77—2	0—08	—
13	90—2	77—1	—	—
14	89—9	71—0	1—25	—
15	88—2	73—1	—	—
16	89—3	69—2	—	—
17	90—6	70—0	—	—
18	90—5	73—6	—	13—10

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಮಸ್ಕತಿ ಸುಗ್ಗಿಗೆ [illegible] ಗಳ್ಳೆ	8— 4	8— 8
[illegible]	7—10	7—12
ಗುಡ್ಡು,	7— 8	8— 0
ರಾಶಿ	7— 2	7— 6
ಅನ್ನಲ್ ಬೆಳ್ತಿಗೆ	9— 0	9—12
ಗುಡ್ಡು ಬೆಳ್ತಿಗೆ ,,	7—10	8— 4
ರಂಗೂನ ಬೆಳ್ತಿಗೆ ಗೋಣಿ	13— 4	14— 0
ಗೋಧಿ ಗೋಣಿ ಗಳ್ಳೆ	20— 0	22— 0
ಹುರುಳಿ ಗೋಣಿ ಗಳ್ಳೆ	12— 4	12—12
ಕಡಲೆ ಗೋಣಿ ಗಳ್ಳೆ	13— 8	15— 0
ತೊಗರಿ ಗೋಣಿ ಗಳ್ಳೆ	13— 8	—
ತೊಗರಿಬೇಳೆ ಗೋಣಿ ಗಳ್ಳೆ	15— 0	20— 0
ಉದ್ದು ಗೋಣಿ ಗಳ್ಳೆ	16— 8	[illegible]
ಹೆಸರು ಗೋಣಿ ಗಳ್ಳೆ	13— 8	—
ಊರು ಬೆಲ್ಲ ಖಂಡಿ ಗಳ್ಳೆ	65— 0	67— 8
ಉಪ್ಪು ಗೋಣಿ ಗಳ್ಳೆ	4—12	5— 8
ಕೊಬ್ಬರಿ ಖಂಡಿ ಗಳ್ಳೆ	85— 0	95— 0
ಕೊಬ್ಬರಿ ಹಿಂಡಿ ಖಂಡಿ ಗಳ್ಳೆ	46— 0	48— 0
ಎಳ್ಳೆಂಡಿ ಖಂಡಿ ಗಳ್ಳೆ	45— 0	50— 0
ಕೊಬ್ಬರಿ ಎಣ್ಣೆ ಮುಡಿ ಗಳ್ಳೆ	[illegible]— 2	[illegible]— 2
ಎಳ್ಳೆಣ್ಣೆ ಮುಡಿ ಗಳ್ಳೆ	[illegible]—12	[illegible]— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳೆ	9— 0	[illegible]
ಮೊರಿಸ ಸಕ್ಕರೆ ಮುಡಿ ಗಳ್ಳೆ	6— 0	[illegible]
ಊರ ಮೆಣಸಿನ ಕಾಯಿ ಮುಡಿ ಗಳ್ಳೆ	8— [illegible]	[illegible] 4
ಸಾಸಿವೆ ಮುಡಿ ಗಳ್ಳೆ	8— 4	8— 8
ಕೊತ್ತಂಬರಿ ಮುಡಿ ಗಳ್ಳೆ	5— 0	5— 4
ಕಾಫಿ ಖಂಡಿ ಗಳ್ಳೆ	330— 0	335— 0
ಘಟ್ಟಗೋಟು ಅಡಕೆ ಖಂಡಿ ಗಳ್ಳೆ ಹಳ್ಳು	160— 0	170— 0
ಘಟ್ಟಗೋಟು New, ಹೊಸ್ಸು	130— 0	135— 0
ಕಾಳುಮೆಣಸು ಖಂಡಿ ಗಳ್ಳೆ	120— 0	125— 0
ಮೂಲ್ಕಿ ಮುಡಿ ಗಳ್ಳೆ	26— 0	28— 0
ಗೇರುಬೀಜ ಮುಡಿ ಗಳ್ಳೆ	2— 2	2— 4
ಕಚ್ಚಿಣ ಖಂಡಿ ಗಳ್ಳೆ	55— 0	65— 0
ಅಂಬ್ಲ ಹಣ್ಣು ಮುಡಿ ಗಳ್ಳೆ	23— 0	24— 0
ಅಂಬ್ಲ ಹುಣ್ಣಗಳು ಮುಡಿ ಗಳ್ಳೆ	36— 0	—
ಜೀರಿಗೆ ಹೇರು ಗಳ್ಳೆ	34— 0	—
ಒಣ್ಣಳೆ ಮಣಮುಡಿ 1ಕ್ಕೆ	21— 0	—

ನೋಟೀಸು.

ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ,
O. P. No. 74/1922

1. ರಾಧಾಬಾಯಿ
ಅರ್ಜಿ 2. ಮೋಹನರಾವ, } ಮೈನರರು
3. ಸುಮಿತ್ರರಾವ, } ಕ್ಷೇಮಚಿಂತಕಳು 1ನೇ ಅರ್ಜಿದಾರಳು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:—

1ನೇ ಅರ್ಜಿದಾರಳ ಗಂಡ, 2-3ನೇ ಅರ್ಜಿದಾರರ ತಂದೆ ಇತ್ತ ಮೃತರಾದ ನಯಂಪಳ್ಳಿ ಭವಾನಿಶಂಕರರಾಯರಿಗೆ ಸ್ಟೆಂಡಾರ್ಡ ಲೈಫ ಇನ್ಸೂರೆನ್ಸ ಕಂಪೆನಿಯವರಿಂದ ಬರತಕ್ಕ ಇನ್ಸುರು ಹಣಗಳ ವಸೂಲಿ ಕುರಿತು ತಮ್ಮ ಹೆಸರಲ್ಲಿ ವಾರೀಸ ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಅರ್ಜಿದಾರರು ಅರ್ಜಿಕೊಟ್ಟಿರುವುದರಿಂದ ಸದ್ರಿ ಅರ್ಜಿ ತನಖಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 3—11—'22ಕ್ಕೆ ಇಟ್ಟಿರುವುದರಿಂದ ಆಕ್ಷೇಪವಿದ್ದವರು ಸದರಿ ತಾರೀಕಿನ ಹಗಲು 10ಗಂಟೆಗೆ ಸದರಿ ಕೋರ್ಟ ಮುಂದೆ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು.

ಕುಂದಾಪುರ, } K. Venkat Rao,
ತಾ. 18—10—'22 } ಅರ್ಜಿದಾರರ ವಕೀಲ.

ಸುಲಭ ಪ್ರಯಾಣ! ಸುಲಭ ದರಗಳು!

ಎರಡೇ ದಿನಗಳೊಳಗೆ ಮುಂಬಯಿ

ದಿ ಮರ್ಚಂಟ ಸ್ಟೀಮ್ ನೇವಿಗೇಶನ್ ಕಂಪೆನಿ.

ಈ ಕಂಪೆನಿಯ ಸ್ಟೀಮರು ಮುಂಬಯಿಯಿಂದ ನೆಟ್ಟಗೆ ಮಂಗಳೂರು, ಕಣ್ಣಾನೂರು ಮತ್ತು ಕಲ್ಲಿಕೋಟೆ ಬಂದರುಗಳಿಗೆ ಕ್ರಮಪ್ರಕಾರ ಬರುವವು.

ಮಂಗಳೂರಿನಿಂದ ಮುಂಬಯಿಗೂ ಮುಂಬಯಿಯಿಂದ ಮಂಗಳೂರಿಗೂ ಎರಡೇ ಎರಡು ದಿನಗಳೊಳಗೆ ಹಡಗುಗಳು ತಲಪುವವು.

ಪ್ರಯಾಣಿಕರನ್ನೂ ಪಾರ್ಸೆಲುಗಳನ್ನೂ ಒಯ್ಯಲಾಗುವುದು. ದರಗಳು ಅತೀ ಸುಲಭವಾಗಿವೆ.

ಸ್ಟೀಮರು ಹೋಗುವ ಮತ್ತು ಬರುವ ಸಮಯ ಇತ್ಯಾದಿ ಎಲ್ಲಾ ಮಾಹಿತಿಯನ್ನು ಕೆಳಗಿನ ವಿಳಾಸದಾರರಿಂದ ತಿಳಿದುಕೊಳ್ಳುವುದು.

ಬಂದರ ಮಂಗಳೂರು. } ಜೆ. ಡಿ. ವಾಯಡಾ ಎಂಡ್ ಕೋ,
ತಾ. 19—10—22. } ಏಜಂಟ್ಸ್, ಮಂಗಳೂರು.

ಮೂಲ್ಕಿ ಗೌಡಸಾರಸ್ವತ ಬ್ರಾಹ್ಮಣ ಬಡವಿದ್ಯಾರ್ಥಿ ಸಹಾಯಕ ಫಂಡ್.

ಈ ಸಂಸ್ಥೆಗೆ ಕಳೆದ ವರುಷದ ದೀಪಾವಳಿ ಸಮಯದಲ್ಲಿ ಮುಂಬಯಿಯಲ್ಲಿ ಧನಸಹಾಯಮಾಡಿದ ಮಹನೀಯರ ಹೆಸರುಗಳು.

ರೂಪಾಯಿ ೨೫ರಂತೆ—ಮ। ರಾ। ಗಳಾದ [illegible] ಸಿಂಹ ಮರ್ತು ಭಂಡಾರಿ ಮತ್ತು ಕಂಪೆನಿ, ಜ್ಯೋತಿ ಮಗನ್‌ಲಾಲ್ [illegible], ಜೀವನದಾಸ ಭಗನ್‌ಲಾಲ ಕಂಪೆನಿ. ರೂಪ್ಯಾ ೧೧ರಂತೆ—ವಿಠಲ ನಾರಾಯಣ ಕಾಮತ್, ವನಮಾಲಿ ಜಸ್ರಾಜ್. ರೂಪ್ಯಾ ೧೦ರಂತೆ—ವೀರಜಿ [illegible] ಮತ್ತು ಕಂಪೆನಿ, ವರ್ಕೇರ ಹೋ[illegible] ನರಸಿಂಹ ಕಾರಂತ, ಇಬ್ರಾಹಿಮ ಹಾಜ ಶೇರಿಫ್, ಆಲಿಭಾಯಿ ಅಕ್ಬರಾಲಿ, ಡೊಂಗರಸಿ ಪ್ರಾಗ್ಜಿ ಮತ್ತು ಕಂಪೆನಿ, ನಾನಾ ಹರಿಶರಬ್ ಕಾಂದೆವಾಲಾ, ಸಾಣೆಕಲ್ಲು ಲಕ್ಷ್ಮಣ ರಾಮಚಂದ್ರ ನಾಯಕ್, ಹರಿಶ್ಚಂದ್ರ ದೀಕ್ಷಾ, ಫಲ್ಗಾರ ಪುರುಷೋತ್ತಮ ವೆಂಕಟರಮಣ ಪ್ರಭು. ರೂಪ್ಯಾ ೮ರಂತೆ—ವಾಸನಜಿ ಲೀಲಾಧರ. ರೂಪ್ಯಾ ೭ರಂತೆ—ಎನ್. ಜಿ. ಕಂಡಸ್ವಾಮಿ ಚೆಟ್ಟಿ, ಅಲಿ ಮಹಮ್ಮದ ನಾತಾಲಾಲ ಕಂಪೆನಿ. ರೂಪ್ಯಾ ೬-೪-೦ರಂತೆ—[illegible] ಭಯ್ಯಾ. ರೂಪ್ಯಾ ೭ರಂತೆ—ಆರ್. ಕೆ. ಪ್ರಭು. ರೂಪ್ಯಾ ೫-[illegible]ರಂತೆ—ಶಿವರಾಮ ರಾಘೋಜಿ, ಫಲ್ಗಾರ ಲಕ್ಷ್ಮಣ ರಾಮಚಂದ್ರ ಶೆಣ್ಯೆ. ರೂಪ್ಯಾ ೫ರಂತೆ—ಶಾಂತಾರಾಮ ಮಂಗೇಶ ಮತ್ತು ಕಂಪೆನಿ, ಕಾಗಲ್ [illegible] ವೆಂಕಟೇಶ ಪೈ ಮತ್ತು ಕಂಪೆನಿ, ಜಿ. ಭಗನಲಾಲ ಕಂಪೆನಿ, ಹಾಜಿ ಇಬ್ರಾಹಿಮ್ ಫಜಲ್ ಕಂಪೆನಿ, ವಿಶ್ರಾಮ್ ಭಗವಾನದಾಸ ಮೇಗಿ[illegible], ಹರಿ ಅನಂತ ಕಾಮತ್, ವಿಠಾಮ ರ್‍ಯಾಶಿ, ಸೂಡಾ ಸಂಜೀವ ಪಿ. ನಾಯಕ್, ಶಿಂಧೆ ಬ್ರದರ್ಸ್, ಹೆಜ್ಮಾಡಿ ಪುರುಷೋತ್ತಮ ವಿಟ್ಠಪ್ಪ ಶೆಣ್ಯೆ, ಮಾಳ್ವ [illegible] ಮಾಧವ, ಕುಂಜಿ ಭಯ್ಯಾ, ರಾಮಚಂದ್ರ ವೆಂಕಟೇಶ ಪೈ, ಹೊನ್ನಾವರ ಮಾಧವ ವಾಸುದೇವ ಭಟ್ಟ, ಪುತ್ತೂರು ವೆಂಕಟರಾಯ ಲಕ್ಷ್ಮಣ ಕಾಮತ್, [illegible] ಮುಕುಂದ ಶ್ರೀನಿವಾಸ ಹೆಗಡೆ, ಲಕ್ಷ್ಮಣ ತಿಮ್ಮಪ್ಪ ಪ್ರಭು, ಪಳ್ಳಿ [illegible] ಮಂಜುನಾಥ ನಾಯಕ್, ಕಟ್ಟಪಾಡಿ ಕೃಷ್ಣ ಅಣ್ಣಪ್ಪ ಕಾಮತ್, ಬಾಳಾಜಿ [illegible] ಶಿಂದೆ, ಗಣಪತಿ ವೈಕುಂಠ ಕಾಮತ್, ಪಳದೀಪುರ ಗೋಪಾಲ ಪಾಂಡುರಂಗ ಪೈ, ನಂದಳ್ಕೆ ಕೃಷ್ಣ ಮೋಗಪ್ಪ ಕುಡ್ವ, ಕೃಷ್ಣರಾಯ ಅನಂತ ಪ್ರಭು, ಕಕ್ಕೆ ರಾಮಚಂದ್ರ ಕಾಮತ್, ಗೋವರ್ಧನದಾಸ ಲಾಲ್ಜಿ ಮತ್ತು ಜಾಧವಬಾಲಜಿ, ಹಾಜಿ ಅಬ್ದುಲ ಮಹಮ್ಮದ್, ನಾರಾಯಣರಾವ್ ಗಂಗಾಧರ್. ರೂಪ್ಯಾ ೪ರಂತೆ—ಬಾಬುಲ್ ಕೃಷ್ಣಾಜಿ, ಕೂಳೂರು ವೆಂಕಪ್ಪಾ, ಸೇಸು ನಾಯಕ್, ಮಲ್ಪೆ ಗುಂಡಾ ಮಂಜುನಾಥ ಶೆಣ್ಯೆ. ರೂಪ್ಯಾ ೩ರಂತೆ—ಕಾಗಲ್ ಲಕ್ಷ್ಮಣ ಅನಂತ ಪೈ, ಹರಿ ಗಣೇಶ ಪ್ರಭು, ರಂಗಪ್ಪಾ ರಾಮಕೃಷ್ಣ ಕವಿ, ಬಾಲಕೃಷ್ಣ ಪಾಂಡುರಂಗ ಸಾವಂತ, ಓಧಾರಾಮ್ ಮಗನ್‌ಲಾಲ್, ತಾಯಬ್ಜಿ ಮೋಕಾಭಾಯ್, ಅಬ್ದುಲಾಲಿ ಶೇಕ್ ಆದಮ್, ರಾಳೆ ಪ್ರಭು ಎಂಡ್ ಸನ್ಸ್, ಜನಾರ್ದನ ವೆಂಕಟ್ರಯ್ಯ [illegible]. ರೂಪ್ಯಾ ೨-೪-೦ರಂತೆ—ಮೂಲ್ಕಿ ರಾಮರಾವ್ ದೇವಪ್ಪ ಪ್ರಭು. ರೂಪಾಯಿ ೨-೦-೦ರಂತೆ—ಶಂಕರ ಬಾಪೂಜಿ ಮತ್ತು ಕಂಪೆನಿ, ಎಮ್. ಅಬ್ದುಲ್ ಹುಸೇನ್, ಅಲಿಭಾಯಿ ಹೈದರಾಲಿ, ಶಿವರಾಮ [illegible], ಕಟ್ಟಪಾಡಿ ಗೋಪಾಲ [illegible] ಕಾಮತ್, ಸುಬ್ರಾಯ ಸದಾಶಿವ [illegible]ಯಕ್, [illegible] ಕವಿ, ಮಜಾರ ಗುಂಡಾ ಕಾಮತ್, ಹೆಜ್ಮಾಡಿ ವೆಂಕಟೇಶ ರಾಮಚಂದ್ರ ಪ್ರಭು, ಹೊನ್ನಾವರ ಕೃಷ್ಣಾ ಶ್ರೀನಿವಾಸ ಪ್ರಭು, ಕುಲ್ಯಾಡಿ ರಂಗಪ್ಪ ಶ್ರೀನಿವಾಸ [illegible] ಮರ್ಕಪ್ಪಾ ಮಾಧವ ಪ್ರಭು, ಮೂಲ್ಕಿ ದಾಮೋದರ ದಾಸಪ್ಪ [illegible] ಲಕ್ಷ್ಮಣ ವೆಂಕಟೇಶ ಪೈ, ಮಲ್ಪೆ ಪುರುಷೋತ್ತಮ ನಾರಾಯಣ ಶೆಣ್ಯೆ, ಹೆಜ್ಮಾಡಿ ದಯಾನಂದ ಶೆಣ್ಯೆ, ಉಡುಪಿ ನಾರಾಯಣ ಅನಂತ ಭಂಡಾರಿ, [illegible] ಶೇಷಪ್ಪ ಶೆಣ್ಯೆ, ಕಾಮತ್ ಎಂಡ್ ಕೊ., ಮೂಡಬಿದ್ರಿ ಸುಬ್ಬಣ್ಣ ಭಟ್ಟ, [illegible] ನರಸಿಂಹ ಬಾಪ್ಪಯ್ಯ ಕಾಮತ್, ಫಲ್ಗಾರು ವೈಕುಂಠ ರಾಮಚಂದ್ರ, ಅಬ್ದುಲ್ ಕರೀಮ್ ಶೇರಿಫ್, ರಾಮಣ್ಣ ಅನಂತ ಪ್ರಭು, ಕೆ. ಪದ್ಮನಾಭ [illegible]ಯಕ್, ಗೋವಿಂದ ಭಿಕಾಜಿ, ನೀಲಕಂಠ ಪ್ರಭು, ವಿನಾಯಕ ನರಸಿಂಹ [illegible], ಮೂಲ್ಕಿ ನರಸಿಂಹ ಅನಂತಭಟ್ಟ, ಹೆಜ್ಮಾಡಿ ರಾಮಣ್ಣ ಶೆಣ್ಯೆ, ನರಸಿಂಹ [illegible] ಅನಂತ [illegible]ಯಾರ, ಕೇಶವ ನಾರಾಯಣ ಕಾಮತ್, ಕೊಲೆಕಾಡಿ ಕೇಶವ [illegible] ದೇವಸಿ ಬಾರದುಲ್, ರಾಮದೇವ ಬುದ್ಧ, ಹೆಜ್ಮಾಡಿ ನರಸಿಂಹ ಪ್ರಭು, [illegible] ವಾಸುದೇವ ಮಂಜುನಾಥ ಶೆಣ್ಯೆ. ರೂಪ್ಯಾ ೧-೪-೦ರಂತೆ—[illegible] ತ್ರಿಭುವನದಾಸ ಕಟ್ಕಾಡಿ ದಾಮೋದರ ಕಾಮತ್. ಇದಲ್ಲದೆ ಇನ್ನು [illegible] ಮಂದಿ ಗೃಹಸ್ಥರು ರೂ ೧ರಂತೆಯೂ ೯ ಮಂದಿ ಗೃಹಸ್ಥರು ರೂ ೦-೮-೦ರಂತೆಯೂ ೪ ಮಂದಿ ಗೃಹಸ್ಥರು ಆಣೆ ೪ರಂತೆಯೂ ಕೊಟ್ಟಿರುವರು. ಸ್ಥಳ ಸಂಕೋಚದಿಂದ ಇವರ ಹೆಸರನ್ನು ಪ್ರಕಟಿಸಲಿಲ್ಲ.

ಮುಂಬಾಯಿಯಲ್ಲಿ [illegible] ವರುಷ ದೀಪಾವಳಿ ಸಮಯ ಮೇಲೆ ತೋರುವಂತೆ ಧನಸಂಗ್ರಹ [illegible] ಸಹಾಯಮಾಡಿದ ಸನ್ಮಾನ್ಯ [illegible] ಮ। ರಾ। ರಾ। ರಾಮಚಂದ್ರ ವೆಂಕಟೇಶ ಪೈ, ಗುಂಡಾ ವೈಕುಂಠ ಕಾಮತ್, ಹೆಜ್ಮಾಡಿ ಪುರುಷೋತ್ತಮ [illegible], ಲಕ್ಷ್ಮಣ ತಿಮ್ಮಪ್ಪ ಪ್ರಭು, ಬೋಳ ರಘುರಾಮ ಶೆಣ್ಯೆ ಮತ್ತು [illegible] ಕೃಷ್ಣ ಕವಿ ಕೂಡಾ ಇವರನ್ನೂ ಧನಸಹಾಯ ಮಾಡಿದ ಸದ್ಗೃಹಸ್ಥರನ್ನೂ [illegible]ಯವರು ಅಭಿನಂದಿಸುತ್ತಾರೆ.

ಮ[illegible] } ಮೂಲ್ಕಿ ರಾಮರಾಯ ಕಾಮತ್,
27—[illegible] } ಕಾರ್ಯದರ್ಶಿ.

ಜಯರಾವಮಾಚಾರ್ಯರ ಪ್ರಕರಣದ ಮುಕ್ತಾಯವು.

(ಕರ್ಮವೀರ.)

ಜಯರಾವಮಾಚಾರ್ಯರು ಕ. ಪ್ರಾ. ಕಾ. ಕ. ಯ ಪ್ರಚಾರಕರಾಗಿ [illegible]ವರು ವಸೂಲುಮಾಡಿದ ಫಂಡಿನ ವಿಷಯವಾಗಿ ಉಪಮಂಡಲದ ಲೆಕ್ಕ [illegible]ಡಿ ವರದಿಯನ್ನು ಕೊಡುವುದಕ್ಕೆ ಏರ್ಪಾಡು ಆಗಿತ್ತು. ಅವರು ವಸೂಲು [illegible] ಫಂಡಿನೊಳಗೆ ಇವತ್ತಿನ ಮಿತಿಗೆ ೧೨೫೪ ರೂ. ಕೊಡುವುದು ಅವರ [illegible] ಬಾಕಿ ಹೊರಟಿತು. ಸದರಿ ಬಾಕಿ ಈ ವರೆಗೂ ಬರಲಿಲ್ಲ. ಇವೆ ಮೊದಲಾದ ಕಾರಣಗಳ ಮೂಲಕ ಅವರನ್ನು ಪ್ರಚಾರಕ ಕೆಲಸದಿಂದ ದೂರಮಾಡುವ [illegible] ಬಂತು. ಅಷ್ಟರಲ್ಲಿಯೇ ಅವರು ತಾ. ೪—೧೦—'೨೨ನೇ ದಿವಸದ ಒಂದು ಪ್ರಕಟನೆಯನ್ನು ತೆಗೆದಿದ್ದರು. ಉಪಮಂಡಲದವರ ವರದಿಯು ಜಯರಾವಮಾಚಾರ್ಯರ ಪ್ರಕಟನೆಯು ಮತ್ತು ಅವರ ವಿಷಯಕ್ಕೆ ಮುಂದೆ ಏನು ಠರಾವು ಮಾಡಬೇಕೆಂಬ ವಿಷಯಕ್ಕೆ ಕೂಡಾ ಮೊನ್ನೆ ರಾಣೆಬೆನ್ನೂರಿನಲ್ಲಿ ಕೂಡಿದ ಕ. ಪ್ರಾ. ಕಾ. ಕ. ಯ ಮತ್ತು ಅದರ ಕೌನ್ಸಿಲಿನ ಅಧಿವೇಶನದ ಮುಂದೆ ಬರಲಾಗಿ ವೇ. ಜಯರಾವಮಾಚಾರ್ಯರು ತಮ್ಮ ಪ್ರಕಟನೆಯನ್ನು ತಿರುಗಿ ತೆಗೆದುಕೊಳ್ಳುವುದಲ್ಲದೆ ಯಾರ ಮೇಲೆಯೂ ಏನೂ ಆರೋಪವಿಲ್ಲೆಂದು ಬರೆದು ಕೊಡುವುದಲ್ಲದೆ ಆ ಪ್ರಕಟನೆಯನ್ನು ತೆಗೆದದ್ದಕ್ಕೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ತಮ್ಮ ರಾಜೀನಾಮೆಯನ್ನು ಕೊಟ್ಟು ಮಂಜೂರು ಪಡೆಯಲಿಕ್ಕೆ ಕೇಳಿಕೊಂಡಿದ್ದಾರೆ. ಆದರೆ ಅವರ ಕಡೆಯಿಂದ ಬರತಕ್ಕ ೧೨೫೪ ರೂಪಾಯಿಗಳ ಬಗ್ಗೆ ಏನೂ ತಜವೀಜು ಆಗದೆ ಅವರ ರಾಜೀನಾಮೆಯ ವಿಚಾರವನ್ನು ಮಾಡಲಿಕ್ಕೆ ಬರುವುದಿಲ್ಲವೆಂದು ಕಮ್ಮಿಟಿಯ ಸಭಾಸದರ ವಿಚಾರಕ್ಕೆಬಂದುದರಿಂದ ಆ ವಿಷಯವು ಮುಂದಿನ ಕೌನ್ಸಿಲಿನ ಸಭೆಯವರೆಗೆ ಮುಂದೆ ಬಿದ್ದದೆ. ಆಚಾರ್ಯರವರು ತಾವು ಇನ್ನೂ ಕೊಡತಕ್ಕ ೧೨೫೪ ರೂಪಾಯಿಗಳಿಗೆ ತಿಂಗಳಿಗೊದಕ್ಕೆ ೧೦೦ ರೂ. ಕೊಡುವಂತೆ ಕಂತು ಮಾಡಿಕೊಂಡು ಈಗ ಲೆಖ್ಖವನ್ನು ಕೊಟ್ಟಿದ್ದಾರೆ.

ಧಾರವಾಡ, } ನಾರಾಯಣರಾವ್ ಡಂಬಳ,
ತಾ. 11-10-'22. } ಕ. ಪ್ರಾ. ಕಾ. ಕ.

ಪ್ರಕಟಣೆ.

ಸರ್ವ ಜನರಿಗೆ ತಿಳಿಸುವದೇನೆಂದರೆ ಕರ್ನಾಟಕ ಪ್ರಾ. ಕಾ ಕ. ಕೌನ್ಸಿಲಿನವರು ಮಾಡಿದ ನಿರ್ಣಯಕ್ಕೆ ವಿರುದ್ಧವಾಗಿ ನನ್ನ ಪ್ರಕಟನೆಯಲ್ಲಿ ಅನೇಕ ತಪ್ಪು ವಿಧಾನಗಳು ಇರುತ್ತವಾದ್ದರಿಂದ ಅದನ್ನು ತೆಗೆದ ಬಗ್ಗೆ ನನಗೆ ಈಗ ವಿಷಾದವೆನ್ನಿಸುತ್ತದೆ. ಆದಕಾರಣ ನಾನು ಅದನ್ನು ಸಂಪೂರ್ಣವಾಗಿ ರದ್ದುಪಡಿಸಿದ್ದೇನೆ. ಪ್ರಾ. ಕಾ. ಕ. ಮೇಲಾಗಲಿ, ಅದರ ಅಧಿಕಾರಿಗಳ ಮೇಲಾಗಲೀ ಇತರ ಸಭಾಸದರ ಮೇಲಾಗಲಿ, ಅಥವಾ ಜಿಲ್ಲೆ ಕೊಂಗ್ರೆಸು ಕಮ್ಮಿಟಿಗಳ ಮೇಲಾಗಲಿ ನನ್ನದು ಯಾವ ಆರೋಪವಿಲ್ಲ.

ತಾ. 9-10-'22 ಜಯರಾವಮಾಚಾರ್ಯ,

ಕರ್ನಲ್ ದೇಶರಾಜ ಅರಸಿನವರ ಮೃತಿ.

ಇವರು ಸ್ವಲ್ಪ ಕಾಲದಿಂದ ಮಾತ್ರ ಅಸ್ವಸ್ಥರಾಗಿದ್ದು ಕಳೆದ ೮ನೇ ತಾರೀಕು ಭಾನುವಾರ ರಾತ್ರಿ ೭॥ ಗಂಟೆಗೆ ರಾಜಧಾನಿಯಲ್ಲಿರುವ ತಮ್ಮ ಭವನದಲ್ಲಿ ವಿಧಿವಶರಾದರೆಂದು ತಿಳಿಸುವುದಕ್ಕೆ ವಿಷಾದಿಸುತ್ತೇವೆ. ಈ ಶತಮಾನದಲ್ಲಿ ಮೈಸೂರು ರಾಜಬಂಧುವರ್ಗದೊಳಗೆ ಕ್ಷತ್ರಿಯ ಕುಲೋಚಿತವಾದ ಸೇನಾನಿ ವಿದ್ಯೆಯಲ್ಲಿ ಪ್ರವೀಣರಾಗಿ, ಮೈಸೂರು ಸೈನ್ಯಕ್ಕೆ ಮುಖ್ಯ ಸೇನಾಧಿಪತಿಗಳಾಗಿದ್ದು, ಸೇನಾ ಸಮೇತರಾಗಿ ಸಮುದ್ರವನ್ನು ದಾಟಿ ಬರ್ಮಾ ಯುದ್ಧದಲ್ಲಿ ಸಾಮ್ರಾಜ್ಯ ಪ್ರಭುತ್ವಕ್ಕೆ ಸಹಾಯಕರಾಗಿ ಕೆಲಸಮಾಡಿ ಮೈಸೂರು ಸೈನ್ಯಕ್ಕೆ ಕೀರ್ತಿಯನ್ನು ತಂದರು. ಕಳೆದ ಯುರೋಪ ಮಹಾ ಯುದ್ಧದಲ್ಲೂ ಅಶ್ವಸೈನ್ಯದೊಡನೆ ಈಜಿಪ್ಟ್ ಮತ್ತು ಫ್ರಾನ್ಸ್ ರಣರಂಗಳಿಗೆ ಹೋಗಿ ಯುದ್ಧ ಮಾಡಿ ಕೀರ್ತಿ ಪ್ರತಿಷ್ಠೆಗಳನ್ನು ಸಂಪಾದಿಸಿದರು. ಸಾಮ್ರಾಜ್ಯಪ್ರಭುತ್ವದಿಂದ ಇವರಿಗೆ ಕರ್ನಲ್ ಸಿ. ಐ. ಇ., ಎಂ. ವಿ. ಓ. ಎಂಬ ಬಿರುದುಗಳು ಅನುಗ್ರಹಿಸಲ್ಪಟ್ಟಿದ್ದುವು. ಔದ್ಯೋಗಿಕವಾದ [illegible] ಗಳಲ್ಲಿ [illegible] ಯಲ್ಲಿ ಪ್ರಮುಖ [illegible]. ನಮ್ಮ ಶ್ರೀಮನ್ಮಹಾರಾಜರ ಸ್ವಂತ ಅಕ್ಕಯ್ಯ [illegible] ರಾಜಕುಮಾರಿ [illegible] ಇವರು [illegible]ದ್ದರು. ಇವರು ೧೮೬೨ನೇ ವರ್ಷದಲ್ಲಿ ಜನಿಸಿದವರಾದುದರಿಂದ ಅಂತ್ಯಕಾಲಕ್ಕೆ ೬೦ ವರ್ಷ ತುಂಬಿದ್ದಿತು. ಕಳೆದ ನವರಾತ್ರಿಯುತ್ಸವದ ಪ್ರಥಮ ದಿನ ದರ್ಬಾರಿಗೆ ಇವರು ದಯಮಾಡಿಸಿದ್ದರು. ಆಗಲೇ ಶರೀರದ ಅಸ್ವಸ್ಥತೆಯು ವ್ಯಕ್ತವಾಗಿತ್ತು. ಅಲ್ಲಿಂದಿನಲ್ಲೇ ಮಹತ್ವವಿಯೋಗವನ್ನು ಹೊಂದಿ, ಈಗ ವಿಶ್ವವಿಯೋಗವನ್ನೂ ಹೊಂದಿದ ಮ। ರಾಜಕುಮಾರ ದೇಶರಾಜ ಅರಸಿನವರಿಗೂ, ಶ್ರೀ ಮನ್ಮಹಾರಾಜರೇ ಮೊದಲಾದ ಬಂಧುವರ್ಗಕ್ಕೂ ದುಃಖ ಶಾಂತಿಯನ್ನು ಜಗದೀಶ್ವರನು ಉಂಟುಮಾಡಲೆಂದು ಕೋರಿ ಈ ಮೂಲಕ ನಮ್ಮ ಸಾನುತಾಪವನ್ನು ನಿವೇದಿಸುತ್ತೇವೆ. ಮರುದಿನ ಸೋಮವಾರ ಬೆಳಗ್ಗೆ ರಾಜಬಂಧು ವರ್ಗದ ರುದ್ರಭೂಮಿಯಾದ ಮಧುವನದಲ್ಲಿ ಉತ್ತರಕ್ರಿಯೆಯು ನಡೆಯಿತು. ಎಲ್ಲಾ ಅರಸು ಮಂಡಲಿಯೂ, ದಿವಾನರೂ ಕೌನ್ಸಿಲರೂ ಕಾರ್ಯಾಧಿಕಾರಿಗಳೂ ಮೊದಲಾದ ಉದ್ಯೋಗಿಗಳೂ, ರಾಜಧಾನಿಯ ಅನೇಕ ದೊಡ್ಡ ಮನುಷ್ಯರೂ ಜತೆಯಲ್ಲಿ ಹೋಗಿದ್ದರು. ಉಚಿತ ರಾಜಮರ್ಯಾದೆಗಳೊಡನೆ ಶವವು ಪಲ್ಲಕ್ಕಿಯಲ್ಲಿಡಲ್ಪಟ್ಟು ರುದ್ರಭೂಮಿಗೆ ಸಾಗಿಸಲ್ಪಟ್ಟು ದಹನಕ್ರಿಯೆಯು ನಡೆಯಿತು. ಮೃತರ ಗೌರವಾರ್ಥವಾಗಿ ಆ ದಿನದ ಪ್ರಜಾಪ್ರತಿನಿಧಿ ಸಭೆಯ ಕಾರ್ಯಗಳು ನಿಲ್ಲಿಸಲ್ಪಟ್ಟು ಸಾನುತಾಪವನ್ನು ಸೂಚಿಸಲಾಯಿತು.

ಮೈ. ಸ್ಟಾರ್.

ಆರ್ಯರ ವರ್ಣಾಶ್ರಮ ಧರ್ಮ.

U. K. N. ರಿಗೆ ಪ್ರಶ್ನೆ.

ಕಳೆದ ನಾಲ್ಕೈದು ಸಂಚಿಕೆಗಳಲ್ಲಿ U. K. N. ಎಂಬ ಸಂಕೇತಾಕ್ಷರಧಾರಿಗಳು ವರ್ಣಾಶ್ರಮ ಮತ್ತು ಅಸ್ಪೃಶ್ಯತೆಯ ವಿಚಾರವಾಗಿ ಬರೆದ ಲೇಖನವನ್ನು ಓದಿ ನೋಡಿದೆನು. ಇವರ ಅಭಿಪ್ರಾಯದ ಪ್ರಕಾರ ಜಾತಿಭೇದವು ದೇಶಾಭಿವೃದ್ಧಿಗೆ ಅತ್ಯಗತ್ಯವೆಂದೂ ಮೇಲು ಜಾತಿಯವರು ಕೀಳು ಜಾತಿಯವರನ್ನು ಮುಟ್ಟಬಾರದೆಂಬ ಈಗಿನ ಪದ್ಧತಿಯು ಉತ್ತಮ ಕುಲದವರ ಲೌಕಿಕ ಪಾರಮಾರ್ಥಿಕ ಸುಖಸಾಧನೆಗಳಿಗೆ ಪ್ರಯೋಜಕಾರಿ ಎಂದೂ ತಿಳಿಸುತ್ತಾರೆ. ಈ ವಾದವನ್ನು ವಿಮರ್ಶಿಸುವ ಮೊದಲು U. K. N. ರಿಂದ ಈ ಕೆಳಗಿನ ನನ್ನ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಅಪೇಕ್ಷಿಸುತ್ತೇನೆ.

೧. ನಮ್ಮ ಭರತ ಖಂಡದಲ್ಲಿ ಇರುವ ವರ್ಣ ಅಥವಾ ಜಾತಿ ಪ್ರತಿಯೊಬ್ಬನ ಜನ್ಮದ ಮೇಲಿಂದ ನಿಶ್ಚಯಿಸಲ್ಪಡತಕ್ಕದ್ದೋ? ಅಥವಾ ಆತನ ಯೋಗ್ಯತೆಯ (Merit) ಮೇಲಿಂದ ನಿಶ್ಚಯಿಸಲ್ಪಡುವಂಥಾದ್ದೋ? ಈ ವಿಷಯವು ನಿಮ್ಮ ಲೇಖನದಲ್ಲಿ ನೀವು ಎಲ್ಲಿಯೂ ಸ್ಪಷ್ಟಪಡಿಸಲಿಲ್ಲ. ಅದನ್ನು ದಯಮಾಡಿ ಸ್ಪಷ್ಟಪಡಿಸಿರಿ.

೨. ಮನಸ್ಸಿನಲ್ಲಿ ಇದ್ದಂತೆ ಬಾಯಿಯಲ್ಲಿಯೂ ಹೇಳುವ ನೀತಿ ಧೈರ್ಯವು (Moral courage) ನಿಮ್ಮಲ್ಲಿ ಇರುವಾಗ ನಿಮ್ಮ ಹೆಸರನ್ನು ಯಾಕೆ ಬರೇ ಸಂಕೇತಾಕ್ಷರಗಳಿಂದ ಪ್ರಕಟಿಸುತ್ತೀರಿ? ದಯಮಾಡಿ ನಿಮ್ಮ ಪೂರ್ಣ ಹೆಸರನ್ನು ತಿಳಿಸಿರಿ.

ಮೋಹನಪ್ಪ ತಿಂಗಳಾಯ,
ಕಾರ್ಯದರ್ಶಿ.
ತಾ. 16-10-'22, ಶ್ರೀ ಜ್ಞಾನೋದಯ ಸಮಾಜ, ಮಂಗಳೂರು.

ಅಕಾಲಿಗಳ ಸತ್ಯಾಗ್ರಹ ಯುದ್ಧ.

ಅಕಾಲಿಗಳ ಹೋರಾಟವು ಇನ್ನೂ ನಡೆಯುತ್ತಲೇ ಇದೆ. ಈ ಸತ್ಯಾಗ್ರಹ ಯುದ್ಧದಲ್ಲಿ ಬಲಿಷ್ಠರಾದ ಅಕಾಲಿ ಶೂರರು ಮಾತ್ರ ಕೂಡುವುದಲ್ಲದೆ ಕುಂಟರೂ ಕುರುಡರೂ ಸೇರುತ್ತಿದ್ದಾರೆ. ದಿನೇ ದಿನೇ ಸತ್ಯಾಗ್ರಹ ಕೈದಿಗಳ ಸಂಖ್ಯೆಯು ಏರುತ್ತಿರುವುದರಿಂದ ಅಮೃತಸರ ಜೈಲಿನಲ್ಲಿ ಸ್ಥಳ ಸಾಕಾಗದೆ ಕೆಲವರನ್ನು ನೋರ್ಥ ವೆಸ್ಟ ಪ್ರೋವಿನ್ಸಿನ ಎಟೋಕ ಜೈಲಿಗೆ ಒಯ್ದಿರುವರು. ಈ ಕೈದಿಗಳನ್ನು ಇತರ ಕಡೆಗಳಲ್ಲೂ ಸೆರೆಯಲ್ಲಿಡಲು ಪ್ರಯತ್ನ ನಡೆಯುತ್ತಿದೆ. ಅಕಾಲಿಗಳು ಇನ್ನೂ ಮಣಿಯುವುದಿಲ್ಲವಾದ್ದರಿಂದ ಸೆರೆಹಿಡಿಯಲ್ಪಟ್ಟು ತುರಂಗದಲ್ಲಿರುವವರಿಗೆ ಸರಿಯಾದ ಆಹಾರವು ಕೊಡೋಣವಾಗುವುದಿಲ್ಲ, ತುರಂಗದಲ್ಲಿರುವ ಕೈದಿಗಳು ಉತ್ತಮ ಆಹಾರವನ್ನು ನಿರೀಕ್ಷಿಸುವುದು ವ್ಯರ್ಥ, ತುರಂಗದ ಯಾತನೆಗಳನ್ನು ಸಹಿಸಲು ಅಸಮರ್ಥರಾದರೆ ಜಾಮೀನನ್ನು ಕೊಟ್ಟು ಅಂಥವರು ಹೊರಗೆ ಹೋಗಬಹುದು ಎಂದು ಜೈಲ ಸುಪರಿಂಟೆಂಡೆಂಟರ ಸೂಚನೆಯಂತೆ. ಅಕಾಲಿ ಚಳವಳದ ಕುರಿತು ಸರಕಾರವು ಇಟ್ಟುಕೊಂಡಿರುವ ಧೋರಣವನ್ನು ಅನೇಕ ಕಡೆಗಳಲ್ಲಿ ಖಂಡಿಸಿದೆ. ಈ ಸತ್ಯಾಗ್ರಹ ಯುದ್ಧವನ್ನು ನಿಲ್ಲಿಸಬೇಕಾದರೆ ಸರಕಾರದವರು ಈ ಸತ್ಯಾಗ್ರಹದ ಸಂಬಂಧ ಕೈದುಮಾಡಿದ ಎಲ್ಲ ಸಿಕ್ಕರನ್ನು ಬಿಡಬೇಕಾಗಿ ಮುಖ್ಯ ಶರ್ತವನು ಸಿಕ್ಕರು ಸೂಚಿಸಿದ್ದಾರೆ. ಗುರುಕಾಬಾಗ್ ಕೊಂಗ್ರೆಸ, ಎನ್ಕ್ವಾಯರಿ ಕಮ್ಮಿಟಿಯವರು ಮುಂದಿನ ಚೌಕಶಿಯನ್ನು ಇನ್ನೂ ಎರಡು ಹಪ್ತೆಗಳ ನಂತರ ಮಾಡುವರು. ಎನ್ಕ್ವಾಯರಿ ಕಮ್ಮಿಟಿಯವರು ಈಗಿನ ತಮ್ಮ ಚೌಕಸಿಯಲ್ಲಿ ಲಾಹೋರಿನಲ್ಲೂ ಅಮೃತಸರದಲ್ಲೂ ಕೂಡಿ ಒಟ್ಟು ೧೦೦ ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದಾರೆ. ಪೋಲೀಸಿನವರು ನಡಿಸಿದ ಅತ್ಯಾಚಾರದ ಕುರಿತು ಗುರುಕಾಬಾಗದಲ್ಲಿ ಗಾಯಹೊಂದಿದವರಿಗೆ ಶೈತ್ಯೋಪಚಾರ ನಡೆಸಿದ ಡಾಕ್ಟರರೇ ಮೊದಲಾದವರ ಹಾಗು ಗುರುಕಾಬಾಗದಲ್ಲಿದ್ದು ಆಗಾಗ್ಗೆ ನಕ್ಷೆಗಳನ್ನು ತೆಗೆದವರ ವಿಚಾರಣೆಯಿಂದ ಹೆಚ್ಚಿನ ಸಂಗತಿಗಳು ತಿಳಿಯಬಂದಿವೆ. ಈ ವರೆಗೆ ಒಟ್ಟು ೨೦೫೦ ಅಕಾಲಿಗಳನ್ನು ಸೆರೆಹಿಡಿದಿದೆ.

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಾಹಾಯಕ ಫಂಡ್.

ಇದೇ ಕಳೆದ ಸೆಪ್ಟಂಬರ ತಿಂಗಳಲ್ಲಿ ಈ ಸಂಘದಲ್ಲಿ ಸದಸ್ಯರಾಗಿ ಸೇರಿ ಧನಸಹಾಯಮಾಡಿದ ಯಾ ಕೊಟ್ಟು ಸೇರಿದ ಮಹನೀಯರ ಹೆಸರುಗಳು.

ಮ। ರಾ। ಶಾಂತಿನಿಬೆಟ್ಟು [illegible] ಹೆಗ್ಗಡೆಯವರು ರೂ. ೨೫, [illegible] ರೂ. ೨೦, ಶಿರಸ್ತೇದಾರ ಎಚ್. ಅನಂತಯ್ಯನವರು, [illegible] ಸಂಕರನಾರಾಯಣರಾವ್, [illegible] ರೂ. ೧೦ರಂತೆಯೂ [illegible] ರೂ. ೫ರಂತೆಯೂ [illegible] ರೂ. ೧೧೦ [illegible] ರೂ. ೧೧೦-೮-೦ ಸದಸ್ಯರಿಂದ ಚಂದಾ ವಸೂಲಾಗಿಯದೆ.

ತಾ. 1-11-'22 ವೇಣೂರು ಕೃಷ್ಣಯ್ಯ.

ವಿದೇಶ ವರ್ತಮಾನ.

ತಾಯಿಗೆ ಮೃತ್ಯುವಾದ ಮಗು:—ನ್ಯೂ ಫೋರ್ಟ ಎಂಬ ಪಟ್ಟಣದಲ್ಲಿ ಮೇರಿಡೇವಿಸ ಎಂಬವಳು ತನ್ನ ಮಗುವು ಪರಚಿದ ಕಾರಣ ಸತ್ತುಹೋದಳೆಂದು ತಿಳಿಸಲ್ಪಟ್ಟಿತು. ಆಕೆಯು ಮಗುವನ್ನು ಎತ್ತಿಕೊಂಡಿದ್ದಾಗ ಮಗುವು ಆಕೆಯ ತುಟಿಯನ್ನು ಪರಚಿತೆಂದೂ ಸ್ವಲ್ಪಕಾಲದಲ್ಲಿ ಆಕೆಯ ತುಟಿಗಳೂ ಅನಂತರ ಆವಳ ಕುತ್ತಿಗೆಯೂ ಬಾತುಕೊಂಡು ದೇಹದ ರಕ್ತದಲ್ಲಿ ವಿಷವೇರಿ ಸತ್ತುಹೋದಳೆಂದು ಆಕೆಯ ಶವವನ್ನು ಪರೀಕ್ಷಿಸಿದ ಡಾಕ್ಟರುಗಳು ತಿಳಿಸಿರುವರು.

ಭೂಗೋಳ:—ಭೂಗೋಳವು ಸೂರ್ಯಪ್ರದಕ್ಷಿಣೆ ಮಾಡುವ ಕಾಲವು ಒಂದು ಶತಮಾನದಲ್ಲಿ ಅರ್ಧ ಸೆಕೆಂಡಿನಂತೆ ಕಮ್ಮಿಯಾಗುತ್ತಿರುವುದರಿಂದ ಇನ್ನು ಒಂದು ಕೋಟಿ ವರುಷಗಳಲ್ಲಿ ನಮ್ಮ ಸೌರಮಾನವು ೩೯೮ ದಿನಗಳಿಗೆ ಇಳಿಯುವುದೆಂದೂ ಹೀಗೆಯೇ ಕಮ್ಮಿಯಾಗುತ್ತಾ ಕಡೆಗೆ ಭೂಪಥವು ಕಿರಿದಾಗಿ ಸೂರ್ಯನ ಆಕರ್ಷಣ ಶಕ್ತಿಯು ಜಾಸ್ತಿಯಾಗಿ ಭೂಗೋಳವು ಸೂರ್ಯಮಂಡಲದಲ್ಲಿ ಬಿದ್ದುಹೋಗುವುದೆಂದೂ ಕೆಲವರು ಫ್ರೆಂಚ್ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವರು.

ಜರ್ಮನಿ:—ರಾಷ್ಟ್ರೀಯ ಪಕ್ಷದ ಪಂಗಡದವರ ಆರಿಕೆಯಂತೆ ವಾನ್ ಹಿಂಡನ್‌ಬರ್ಗರವರು ಜರ್ಮನಿಯ ಅಧ್ಯಕ್ಷ ಪದವಿಯ ಸ್ಥಾನವನ್ನು ಸ್ವೀಕರಿಸಲು ಒಪ್ಪಿರುವರು.

ಉಸುಬಿನ ಪ್ರದೇಶವಾದ ಸಾಹಾರದಲ್ಲಿ ರೈಲ್ವೆ ಮಾರ್ಗ:—ಅಲ್‌ಜೀರಿಯಾದಿಂದ ಸಾರಾ ಉಸುಬಿನ ಪ್ರದೇಶದ ಮಾರ್ಗವಾಗಿ ನಾಯಿಗಾರ್ ವರೆಗೆ ರೈಲ್ವೆ ಮಾರ್ಗವನ್ನು ಹಾಕಿಸುವ ಪ್ರಯತ್ನವನ್ನು ಫ್ರೆಂಚ್ ವಸಾಹತಿನವರು ಮಾಡಲಿಕ್ಕಿದ್ದಾರೆ.

ನಾಮದಾರ ಶ್ರೀನಿವಾಸ ಶಾಸ್ತ್ರಿಯವರು:—ಇವರು ಲಂಡನಿನಲ್ಲಿ ಲೋರ್ಡ ಪೀಲರ ಭೇಟಿಯನ್ನು ಪಡೆದರು. ತಾ. ೨೩ರಲ್ಲಿ ಇವರು ಲಂಡನಿನಿಂದ ಹೊರಟು ಇಟಲಿಗೆ ಹೋಗುವರು.

ಒಳದೇಶ ವರ್ತಮಾನ.

ಕಲ್ಕತ್ತದಲ್ಲಿ ಸ್ತ್ರೀಯರ ಸಂಖ್ಯೆ ಕಡಿಮೆಯಾಗುವಿಕೆ:—ಕಳೆದ ೧೯೧೧ನೇ ಇಸವಿಯ ಖಾನೆಸುಮಾರಿ ಲೆಕ್ಕದ ಮೇರೆಗೆ ಕಲ್ಕತ್ತದಲ್ಲಿ ಸಾವಿರ ಪುರುಷರಿಗೆ ೪೭೫ ಸ್ತ್ರೀಯರಂತೆ ಇತ್ತು. ಈಗ ೧೦೦೦ಕ್ಕೆ ೪೬೦ ರಂತೆ ಇದೆ.

ಹುಡುಗಿಯರ ಎಲಿಮೆಂಟರಿ ಶಾಲೆಗಳು:—೧೯೨೦ನೇ ಇಸವಿಯ ಎಲಿಮೆಂಟರಿ ಎಜ್ಯುಕೇಶನ್ ಏಕ್ಟು ಜಾರಿಗೆ ಬಂದುದರಿಂದ ಹಾಗು ಎಜ್ಯುಕೇಶನಲ್ ಕೌನ್ಸಿಲುಗಳು ಸ್ಥಾಪನೆಯಾದುದರಿಂದ ಸರಕಾರದವರಿಂದ ನಡಿಸಲ್ಪಡುತ್ತಿರುವ ಅನೇಕ ಎಲಿಮೆಂಟರಿ ಶಾಲೆಗಳು ಕಳೆದ ಸೆಪ್ಟಂಬರ ತಾ. ೧ರಿಂದ ಸ್ಥಳಿಕ ರಾಜ್ಯಭಾರವನ್ನು ನಡಿಸುವ ಬೋರ್ಡುಗಳಿಗೆ ಬಿಟ್ಟು ಕೊಡಲಾಗಿದೆ.

ಸುರತ ಮುನ್ಸಿಪಾಲಿಟಿ:—ಮುನ್ಸಿಪಲ್ ತೆರಿಗೆಯನ್ನು ಕೊಡಕೂಡದೆಂಬ ಚಳವಳವು ಜೋರಾಗಿ ನಡೆಯುತ್ತಿದೆ. ಸುಮಾರು ೫೦೦ ತೆರಿಗೆಯ ಬಿಲ್ಲುಗಳು ಜನರಿಂದ ಹಿಂದಕ್ಕೆ ಕಳುಹಿಸಲ್ಪಟ್ಟಿವೆಯಂತೆ.

ಓಲ್ ಇಂಡಿಯಾ ಕೆಥೋಲಿಕ ಕೊನ್ಫರೆನ್ಸ್:—ಬರುವ ದಶಂಬರ ತಿಂಗಳಲ್ಲಿ ಗೋವೆಯಲ್ಲಿ ಓಲ್ ಇಂಡಿಯಾ ಕೆಥೋಲಿಕ ಕೊನ್ಫರೆನ್ಸು ಸೇರುವುದು.

ಪ್ರಿನ್ಸಿಪಾಲ್ ಗಿಡ್‌ವಾನಿ:—ಇವರನ್ನು ಸೆರೆ ಹಿಡಿಯಲು ವಾರಂಟು ಹೋಗಿದೆಯಂತೆ.

ನೆಲ್ಲೂರು:—ತಾ ೧೮-೮-೨೨ರಲ್ಲು ನೆಲ್ಲೂರಿನ ಸಬ್ ಮೆಜಿಸ್ಟ್ರೇಟರು ಕೆಲವು ವ್ಯಕ್ತಿಗಳು ಈ ಜಿಲ್ಲೆಯಲ್ಲಿ ಸಾರ್ವಜನಿಕ ಸಭೆಗಳಲ್ಲಿ ಹಾಜರಿದ್ದು ಭಾಷಣ ಮಾಡಕೂಡದೆಂದು ಮುಂಚಾಗಿ ಹುಕುಂ ಕೊಟ್ಟಿದ್ದರು. ಈ ಎರಡು ತಿಂಗಳ ಅವಧಿಯು ಮುಗಿಯುವ ಮೊದಲೇ ಕಳೆದ ತಾ. ೭ರಲ್ಲಿ ೬೫ ವರುಷ ಪ್ರಾಯದ ಲಕ್ಷ್ಮೀ ನರಸಮ್ಮ ಎಂಬ ಹೆಂಗಸಿನ ಮೇಲೂ ಭಾಷಣ ಪ್ರತಿಬಂಧದ ಹುಕುಮನ್ನು ಜಾರಿ ಮಾಡಿದರು. ಆದರೆ ಈ ಸಲ ಜಾರಿಮಾಡಿದ ಹುಕುಂ ಎಲ್ಲ ಪಂಗಡದ ಜನರಿಗೂ ಭಾಷಣಪ್ರತಿಬಂಧವನ್ನು ಉಂಟುಮಾಡುವ ನಮೂನೆಯದ್ದಾಗಿತ್ತು. ಅದ್ದರಿಂದ ಈ ಹುಕುಮನ್ನು ನಿಷೇಧಿಸುವುದಕ್ಕಾಗಿ ನೆಲ್ಲೂರಿನಲ್ಲಿ ಎಲ್ಲಾ ಪಂಗಡದವರ ಒಂದು ಸಭೆ ಕೂಡಿತು. ಈ ಸಭೆಯಲ್ಲಿ ಶ್ರೀಯುತ ಟಿ. ಪ್ರಕಾಶಂರವರು ಪ್ರಚಲಿತ ಪರಿಸ್ಥಿತಿಯನ್ನು ಕುರಿತು ಭಾಷಣಮಾಡಿದರು.

ಧಾರವಾಡ:—ಪ್ಲೇಗರೋಗವು ಹೆಚ್ಚುತ್ತಿರುವುದರಿಂದ ಜನರು ಸ್ಥಳಾಂತರ ಮಾಡುತ್ತಲಿದ್ದಾರೆ.

ಕರ್ನಾಟಕದಲ್ಲಿ ಖಾದಿ ಪ್ರಸಾರಕ್ಕೆ ಸಹಾಯ:—ಅಖಿಲ ಭರತಖಂಡದ ಖಾದೀ ಪ್ರಸಾರಕ್ಕಾಗಿ ಒಟ್ಟು ಕೊಡಿದ ೧೭ ಲಕ್ಷ ರೂಪಾಯಿಯಲ್ಲಿ ಕರ್ನಾಟಕ ಪ್ರಾಂತಕ್ಕೆ ೧ ಲಕ್ಷ ರೂಪಾಯಿಯನ್ನು ಅಖಿಲ ಭಾರತೀಯ ರಾಷ್ಟ್ರೀಯ ಮಂಡಳಿಯವರು ಕೊಟ್ಟಿದ್ದಾರೆ. ಈ ೧ ಲಕ್ಷ ರೂಪಾಯಿಗಳ ಸಹಾಯದಿಂದ ಖಾದಿಪ್ರಸಾರದ ಕಾರ್ಯವನ್ನು ಮಾಡಲಿಕ್ಕೆ ನೇಮಕಪಟ್ಟ ಕಮಿಟಿಯ ಸೆಕ್ರೆಟರಿಯವರು ಮ. ರಾ. ಕೆರಗುಪ್ಪಿಕರರಾಗಿರುವರು.

ಒಬ್ಬ ಶಿಖ್ ಮಹಿಳೆಯು ತನ್ನ ೧೨ ವರುಷ ಪ್ರಾಯದ ಮಗನಿಗೆ ಕೊಟ್ಟ ಸಂದೇಶ:—"ನನ್ನ ಪ್ರಿಯ ಪುತ್ರನೇ, ನಿನಗೆ ನನ್ನ ಒಂದೇ ಒಂದು ಉಪದೇಶವೇನೆಂದರೆ, ನೀನು ನನ್ನ ಸ್ತನಗಳಿಂದ ಹಾಲನ್ನುಂಡ ಮೂಲಕವಾಗಿ ಧರ್ಮದ ಪವಿತ್ರವಾದ ಧ್ಯೇಯಕ್ಕಾಗಿ ನಿನ್ನ ಜೀವವನ್ನು ಧಾರೆಯೆರದು ನಮ್ಮ ಕುಲವನ್ನುದ್ಧರಿಸತಕ್ಕದ್ದು. ನೀನು ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಸನ್ಮಾರ್ಗವನ್ನು ಅನುಸರಿಸುವುದರಲ್ಲಿ ಎಳ್ಳಷ್ಟಾದರೂ ಹಿಂದೆ ಮುಂದೆ ನೋಡತಕ್ಕ ಕಾರಣವಿಲ್ಲ. ದೇವರು ಕಷ್ಟವನ್ನು ಸೈರಿಸಲಿಕ್ಕೆ ನಿನಗೆ ಧೈರ್ಯವನ್ನು ಕೊಡಲಿ."

ಗಯಾ ಕೊಂಗ್ರೆಸ್ ಮಂಟಪ:—ಕಳೆದ ತಾರೀಕು ೧೪ನೇ ದಿನ ಗಯಾ ರೈಲ್ವೆ ಸ್ಟೇಶನಿನಿಂದ ಮೂರು ಮೈಲು ದೂರವಿರುವ ವಿಶಾಲವಾದ ಪ್ರದೇಶದಲ್ಲಿ ಕೊಂಗ್ರೆಸ ಮಂಟಪ ಹಾಗು ಸ್ವರಾಜ್ಯಪುರಿಯನ್ನು ನಿರ್ಮಿಸುವ ಬುನಾದಿ ಕಲ್ಲನ್ನು ಹೆಚ್ಚಿನ ವಿಜೃಂಭಣೆಯಿಂದ ಹಾಕಲಾಯಿತು.

ಬಂಗಾಳದ ನೆರೆ:—ಈ ನೆರೆಯ ಅಪಾಯವು ೧೫ ಲಕ್ಷದ ಜನ ಸಂಖ್ಯೆ ಇರುವ ೫೦೦೦ ಹಳ್ಳಿಗಳಿಗೆ ಉಂಟಾಗಿದೆ ಎಂದು ತಿಳಿದು ಬರುತ್ತದೆ.

ಶ್ರೀಮತಿ ಸರೋಜಿನಿ ನಾಯಡೂ:—ಕಳೆದ ತಾ. ೧೪ರಲ್ಲಿ ಮಧುರೆಯಲ್ಲಿ ಶ್ರೀಮತಿ ಸರೋಜಿನಿದೇವಿಯವರಿಗೆ ಒಂದು ಸನ್ಮಾನ ಪತ್ರವು ಒಪ್ಪಿಸಲಾಯಿತು. ಅಂದು ಇವರು ಒಂದು ಭಾಷಣವನ್ನು ಮಾಡಿದರು. ಕಳೆದ ತಾರೀಕು ೧೫ನೇ ಪ್ರಾತಃಕಾಲ ಇವರು ತ್ರಿವೆಂಡ್ರಮ್ಮಿಗೆ ತಲ್ಪಿದರು. ಮಧ್ಯಾಹ್ನ ಲೋ ಕಾಲೇಜಿನಲ್ಲಿ ಒಂದು ಭಾಷಣವನ್ನು ಮಾಡಿದರು, ಅನಂತರ ಆರ್ಯಸಮಾಜ ಹಾಲಿನಲ್ಲಿ ಮಹಾತ್ಮರ ಸಂದೇಶವನ್ನು ಕುರಿತು ಒಂದು ಭಾಷಣವನ್ನು ಮಾಡಿದರು. ಕೊನೆಗೆ ಸಾಯಂಕಾಲ ೪ ಗಂಟೆಗೆ ಮಹಾರಾಜರ ಭೇಟಿಯನ್ನು ಹೊಂದಿದರು. ತಾ. ೧೭ರಲ್ಲಿ ಟ್ರಾವಂಕೋರನ್ನು ಸಂದರ್ಶಿಸಿ ಅಲ್ಲಿ ಒಂದು ಭಾಷಣವನ್ನು ಮಾಡಿ ತಿರುಚಿನಾಪಳ್ಳಿಗೆ ತೆರಳಿದರು.

ಸಿವಿಲ್ ಡಿಸ್ ಒಬ್ಬೀಡಿಯನ್ಸ್ ಕಮ್ಮಿಟಿ:—ಸಿವಿಲ್ ಡಿಸ್ ಒಬ್ಬೀಡಿಯನ್ಸ್ ಕಮ್ಮಿಟಿಯ ವರದಿಯು ತಯಾರಾಗಿದೆ. ಇದು ಇನ್ನು ಒಂದುವಾರದೊಳಗಾಗಿಯೇ ಪ್ರಕಟವಾಗುವುದು.

ಹಣ್ಣಿಗೆ ಹೆದರುವ ಅಧಿಕಾರಿಗಳು:—ಕ್ಯಾಪಟನ್ ಬ್ಯಾನನ್ನ ಎಂಬವರು ತಮ್ಮ ತೋಟದಿಂದ ಮಹಾತ್ಮಾ ಗಾಂಧಿಯವರಿಗೊಂದು ಹಣ್ಣಿನ ಬುಟ್ಟಿಯನ್ನು ಕಳುಹಿಸಿದರು. ಆದರೆ ಸೆರೆಮನೆಯ ಅಧಿಕಾರಿಯು ಇದನ್ನು ತೆಗೆದು ಕೊಳ್ಳದೆ ಹಿಂದಕ್ಕೆ ಕಳುಹಿಸಿದರಂತೆ.

ಶ್ರೀಯುತ ವೀರೇಂದ್ರ ಕುಮಾರ:—ನಾಲ್ಕು ತಾಸಿನಲ್ಲಿ ೩೨ ಮೈಲುಗಳನ್ನು ಈಸುವ ಕಲ್ಕತ್ತದಲ್ಲಿರುವ ವೀರೇಂದ್ರ ಕುಮಾರರೆಂಬವರನ್ನು ಮುಂದಿನ ವರುಷ ಫ್ರಾನ್ಸ್ ಮತ್ತು ಇಂಗ್ಲೆಂಡದ ನಡುವೆ ಇರುವ ಖಾತವನ್ನು ಈಸಿದಾಟುವ ಮೇಲಾಟಕ್ಕೆ ವಿಲಾಯತಿಗೆ ಕಳುಹಿಸಲು ನಿಶ್ಚಯಿಸಲಾಗಿದೆ.

ಸಾಮ್ರಾಜ್ಯ ಪರಿಷತ್ತು:—ಹಿಂದುಸ್ಥಾನವು ಈ ಪ್ರದರ್ಶನಕ್ಕೆ ೧೬೭,೦೦೦ ಪೌಂಡನ್ನು ಖರ್ಚುಮಾಡುವುದಂತೆ. ಈ ಪ್ರದರ್ಶನದ ಫಂಡು ವಿಶೇಷ ದೊಡ್ಡದಾಗುತ್ತ ಬರುತ್ತಿದೆ.

ಹಿಂದೂ ವಿಶ್ವವಿದ್ಯಾಲಯ:—ಈ ವಿಶ್ವವಿದ್ಯಾಲಯದ ಚೆನ್ಸಲರ ಪದವಿಯನ್ನು ವಹಿಸಿಕೊಳ್ಳಲು ಬರ್ಡೋಡದ ಗಾಯಕವಾಡರೂ ಪ್ರೋಚಾನ್ಸಲರ ಪದವಿಯನ್ನು ವಹಿಸಿಕೊಳ್ಳಲು ಬಿಕಾನೀರ ಮಹಾರಾಜರೂ ಸಮ್ಮತಿಸಿರುವರು.

ಮಲ್ಲಿಕ ಲಾಲ್‌ಖಾನ್:—ಪಂಜಾಬ ಕೊಂಗ್ರೆಸ ಕಮ್ಮಿಟಿಯ ಉಪಾಧ್ಯಕ್ಷರೂ ಪಂಜಾಬ ಖಿಲಾಫತ್ ಕಮ್ಮಿಟಿಯ ಸೆಕ್ರೆಟರಿಗಳೂ ಆದ ಇವರಿಗೆ ಒಂದು ವರುಷದ ಶಿಕ್ಷೆಯು ವಿಧಿಸಲಾಗಿದೆ.

ಸ್ವಾಮಿ ಕೃಷ್ಣಾನಂದ:—ರಾಜದ್ರೋಹಕರವಾದ ಎರಡು ಭಾಷಣಗಳನ್ನು ಮಾಡಿದ ಬಗ್ಗೆ ಇವರಿಗೆ ರೂ. ೧೦೦೦, ಮತ್ತು ರೂ. ೫೦೦ರ ಎರಡು ಜಾಮೀನನ್ನು ಕೊಡಬೇಕಾಗಿ ತೀರ್ಪುಕೊಡಲಾಯಿತು. ಆದರೆ ಆರೋಪಿಗಳು ತಾನು ಕಳವು ಅಥವಾ ಇತರ 'ಬದಮಾಶ್' ಕಾರ್ಯವನ್ನು ಮಾಡಲಿಲ್ಲ. ತಾನು ಸತ್ಯವನ್ನೇ ಮಾತನಾಡಿದ್ದೇನೆ. ರಾಜದ್ರೋಹವನ್ನು ಮಾತನಾಡುವುದು ತನ್ನ ಧರ್ಮವಲ್ಲವೆಂದು ಹೇಳಿದರು. ಮತ್ತು ಜಾಮೀನನ್ನು ಕೊಡಲು ಒಪ್ಪಲಿಲ್ಲ. ಇವರಿಗೂ ಒಂದು ವರುಷದ ಕಠಿಣ ಶಿಕ್ಷೆಯು ವಿಧಿಸಲಾಗಿದೆ.

ಮಹಾತ್ಮಾ ಗಾಂಧಿ:—ಇವರು ತುರಂಗದಲ್ಲಿ ಹತ್ತಿಯನ್ನು ಹಿಂಜುವುದು ನೂಲನ್ನು ಮಾಡುವುದು ಈ ಕಾರ್ಯವನ್ನು ದಿನಂಪ್ರತಿ ಮಾಡುತ್ತಿದ್ದಾರೆ. ಇವರು ಪೂರ್ಣ ಕ್ಷೇಮದಲ್ಲಿದ್ದಾರೆ, ಹೆಚ್ಚು ಓದುತ್ತಿದ್ದಾರೆ ಮತ್ತು ಆಲೋಚಿಸುತ್ತಿದ್ದಾರೆ, ಪರಂತು ಬರಿಯುವುದಿಲ್ಲ, ಪೂರ್ಣ ಸಂತೋಷದಲ್ಲಿದ್ದಾರೆ. ಇವರು ರಾತ್ರಿಕಾಲದಲ್ಲಿ ದೀಪವನ್ನಿಟ್ಟುಕೊಳ್ಳುವುದಿಲ್ಲವಂತೆ.

ಬಹುಮಾನ:—ಹಿಂದೀ ಭಾಷೆಯಲ್ಲಿ ೧೨ ಸಾಲಿನೊಳಗೆ ರಾಷ್ಟ್ರೀಯ ಗೀತವನ್ನು ರಚಿಸಿದವರಿಗೆ ರೂ. ೩೦೦೦ವನ್ನು ಬಹುಮಾನವಾಗಿ ಕೊಡಲು ಒಬ್ಬ ಗೃಹಸ್ಥರು ಒಪ್ಪಿದ್ದಾರೆ.

ಓಲ್-ಇಂಡಿಯಾ ಹಿಂದೀ ಸಮ್ಮೇಲನ:—ಓಲ್ ಇಂಡಿಯಾ ಹಿಂದೀ ಸಾಹಿತ್ಯ ಸಮ್ಮೇಲನದ ಅಧಿವೇಶನವು ಈ ವರುಷ ಕೋನ್‌ಪುರದಲ್ಲಿ ಜರಗುವುದು.

ಭೋಪಾಲ:—ಈ ಸಂಸ್ಥಾನದ ನವಾಬರು ತಮ್ಮ ಪ್ರಜೆಗಳ ವಿದ್ಯಾಭಿವೃದ್ಧಿಗೆ ರೂ. ೪ ಲಕ್ಷವನ್ನು ಪ್ರತ್ಯೇಕಿಸಿಡಲಿಕ್ಕಿದ್ದಾರೆ. ಮತ್ತು ಈ ರೂಪಾಯಿಯಿಂದ ದೊರಕುವ ಬಡ್ಡಿ ರೂ. ೨೮,೫೦೦ನ್ನು ವಿದ್ಯಾರ್ಥಿಗಳಿಗೆ ವೇತನವಾಗಿ ಕೊಡಲಾಗುವುದಂತೆ.

ಶಕ್ತಿ ಎಂಬ ಪತ್ರಿಕೆ:—ಈ ಪತ್ರಿಕೆಯ ಮೂರನೆಯ ಸಂಪಾದಕರಾದ ಬರೇ ೧೮ ವರುಷ ಪ್ರಾಯದ ಶ್ರೀಯುತ ಹೇಮನ್‌ದಾಸ ಶಿವಕ್‌ರಾಮ್ ಇವರಿಗೆ ೯ ತಿಂಗಳ ಶಿಕ್ಷೆ ಮತ್ತು ರೂ. ೨೦೦ ಜುರುಮಾನೆ, ಜುರುಮಾನೆ ತೆರದಿದ್ದರೆ ಆ ಬಗ್ಗೆ ೨ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ.

ದಕ್ಷಿಣ ಕನ್ನಡ

ಬಿಜೂರು:—ಬಿಜೂರು ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿ ಮ. ರಾ. ಬಿ. ಸೂರಪ್ಪಯ್ಯನವರಲ್ಲಿ ಅಮಾವಾಸ್ಯೆ ದಿವಸ ದನವು ಒಂದು ಕರುಹಾಕಿತು. ಅಮಾವಾಸ್ಯೆ ದಿನ ಕರುಹಾಕಿದ ದನವನ್ನು ದಾನ ಮಾಡಿಬಿಡುವ ರೂಢಿಯನ್ನು ಅನುಸರಿಸಿ ಇವರು ಆ ದನವನ್ನು ರಾಷ್ಟ್ರೀಯ ವಿದ್ಯಾನಿಧಿಗೆ ದಾನ ಮಾಡಿರುವರಂತೆ.

ಬಂಟವಾಳ:—ಬಂಟವಾಳ ಡಿವಿಜನಲ್ ಸರ್ಕಲಿನೊಳಗೆ ಒಂದು ವರುಷದಲ್ಲಿ (೧) ಉಕ್ಕ್ರಿಯಲ್ಲಿ ಕಂಟ್ರಾಕ್ಟರ್ ಉಂಞನನ್ನು ತಿವಿದು ಕೊಂದದ್ದು (೨) ಬೆಳ್ಳೂರಲ್ಲಿ ಲಕ್ಷ್ಮಣ ಆಚಾರಿಯನ್ನು ಕಡಿದು ಕೊಂದದ್ದು. (೩) ಕಳ್ಳಿಗೆಯಲ್ಲಿ ಒಬ್ಬ ಬಿಲ್ಲವನನ್ನು ಕಡಿದು ಕೊಂದದ್ದು. (೪) ಕೈರಂಗಳದಲ್ಲಿ ಒಬ್ಬ ಕ್ರೈಸ್ತನು ತನ್ನ ಅಂಣನನ್ನು ಕಡಿದು ಕೊಂದು, ತಾನು ತನ್ನ ಕುತ್ತಿಗೆ ಕಡಿದು ಕೊಂಡು ಸತ್ತದ್ದು. (೫) ಕಿಳ್ಳವಾಜಲ ಮುದುಕಿ ಬಂಟ ಜಮೀನುದಾರ್ತಿಯನ್ನು ಕಡಿದು ಕೊಂದದ್ದು. (೬) ವಿಟ್ಲರು ಇರ್ವತ್ತೂರಿನಲ್ಲಿ ಹೆಂಗುಸರನ್ನು ಬಾಧಿಸುತ್ತಿದ್ದ ಮೂಸೆಬ್ಯಾರಿಯನ್ನು ಕೊಂದದ್ದು. (೭) ಸಿದ್ಧಕಟ್ಟೆ ಪಕೀರಸಾಹೇಬ್ ಎಂಬ ಮಾಪಿಳ್ಳೆಯನ್ನು ಗುರುವಾಯನ ಕೆರೆಯ ಹತ್ತರ ಕೊಂದದ್ದು. ಇಷ್ಟು ಖೂನಿ ನಮೂನೆಗಳು ಪೋಲಿಸ ಡ್ಯಾರಿಗೆ ದಾಖಲಾಗಿವೆ.

ಇಲ್ಲಿ ಚರಕಗಳಲ್ಲಿ ನೂಲು ಮಾಡುವುದೂ ಕೈ ಮಗ್ಗಗಳಲ್ಲಿ ವಸ್ತ್ರಮಾಡುವುದೂ ಸಂಪೂರ್ಣವಾಗಿ ನಿಂತಿತು. ಖಾದಿ ಪ್ರಚಾರವು ಮಾತ್ರ ಹೆಚ್ಚಾಗುತ್ತಾ ಬಂದಿದೆ.

ಈ ಊರಿನಲ್ಲಿ ಪ್ರಖ್ಯಾತವಂತರಾದ ಮಲ್ಯಾರ ಶ್ರೀನಿವಾಸ ನ್ಯಾಕರು ವಿಷಮ ಜ್ವರದಿಂದ ಮೃತಪಟ್ಟರು.

ಇಲ್ಲಿಂದ ಗುರ್ಪುರಕ್ಕೆ ಹೋಗುವ ಬಂಟವಾಳ ಗುರ್ಪುರ ಮಾರ್ಗದ ಉಳಿದ ಭಾಗದ ಪೆಲ್ಲ್ಯಯಸಾಗಿ ಗವರ್ನಮೆಂಟಿಗೆ ಹೋಗಿಯದೆಂದು ಬೋರ್ಡ ರಿಪೋರ್ಟಿನಿಂದ ಕಾಣುತ್ತದೆ ರಾ। ಬ। ಪರಮೇಶ್ವರಯ್ಯನವರ ಸಾಹಸವು ಸಾರ್ಥಕವಾಯಿತು.

ಮಾರ್ಗಕ್ಕೆ ಹಾಕಲು ತಯಾರಿಸಿದ [illegible] ಹಾಸಕ್ಕೆ [illegible]ದ್ದಿಂದ ಮಾರ್ಗದ ಬದಿಗಳಲ್ಲಿ ರಾಶಿಮಾಡಿದ್ದು [illegible]ಗಳನ್ನು ಕೆಡಿಸದೆ ಇದ್ದರೆ ಗಾಡಿ ಮೋಟರುಗಳು ಓಡುವಾಗ [illegible] ಅಪಾಯಕರವಾದ್ದರಿಂದ ಆ ರಾಶಿಗಳನ್ನು [illegible] ಬಾಗಿಲಲ್ಲಿ [illegible] ಹುಡುಗಿಯರ ಶಾಲೆಯ [illegible] ಉಪಕಾರವಾಗುತಿತ್ತು.

ಮಂಗಳೂರು ಮುನ್ಸಿಪಾಲಿಟಿಯ ಆಡಳಿತೆಯು

ಮಂಗಳೂರ ಮುನ್ಸಿಪಾಲಿಟಿಯ ೧೯೨೧-೨೨ನೇ ವರುಷದ ಆಡಳಿತೆಯ ವರದಿಯು ಪ್ರಕಟವಾಗಿದೆ. ವರದಿಯ ವರುಷದಲ್ಲಿ ಮುನ್ಸಿಪಾಲಿಟಿಯ ವಾರ್ಡುಗಳ ವಿಭಜನೆ ಮುಂತಾದ ತಿದ್ದುಪಾಟುಗಳು ಆಗಲಿಲ್ಲ. ಈ ವರುಷ ಕೌನ್ಸಿಲಿನಲ್ಲಿ ಒಟ್ಟು ೨೮ ಮಂದಿ ಮೆಂಬರರು ಇದ್ದರು. ಇವರಲ್ಲಿ ೨೧ ಮಂದಿಗಳು ವೋಟುದಾರರಿಂದ ಆರಿಸಲ್ಪಟ್ಟವರೂ ೭ ಮಂದಿ ಸರಕಾರದವರಿಂದ ನೇಮಕಪಟ್ಟವರೂ ಆಗಿದ್ದರು. ೧೯೨೧ನೇ ವರುಷದ ಜೂನ್ ೧೧ರ ವರೆಗೆ ಮ. ರಾ. ಬಿ. ಮಹಾಬಲ ಹೆಗ್ಗಡೆಯವರೂ ಅನಂತರ ಮ. ರಾ. ಪೆಲ್ಲಿಕಾಯಿ ವೆಂಕಟರಾವ್ ಇವರೂ ಚೆಯರ್ಮನರಾಗಿದ್ದರು. ಈ ವರುಷ ವೈಸ ಚೆಯರ್ಮನರನ್ನು ಚುನಾಯಿಸಲಿಲ್ಲ. ಮೇಲಿನ ವರುಷದಲ್ಲಿ ಕೌನ್ಸಿಲಿನ ಮೆಂಬರರ ಹೊಸ ಚುನಾವಣೆ ನಡೆಯಲಿಲ್ಲ. ಒಟ್ಟು ವರದಿಯ ವರುಷದಲ್ಲಿ ೧೪ ಮೀಟಿಂಗುಗಳು ಜರಗಿದವು. ಈ ಪೈಕಿ ೨ ಮೀಟಿಂಗುಗಳನ್ನು ಮಾತ್ರ ಸಾಕಷ್ಟು ಮೆಂಬರರು ಹಾಜರಾಗದೆ ಇದ್ದದರಿಂದ ಮುಂದರಿಸಿ ಇಡಲಾಯಿತು. ಪ್ರತಿ ಮೀಟಿಂಗಿಗೂ ಸೇಕಡಾ ೬೬ರಂತೆ ಮೆಂಬರರು ಹಾಜರಿದ್ದರು. ವಿದ್ಯಾಭಿವೃದ್ಧಿಯ ಕಾರ್ಯ, ಆರೋಗ್ಯವರ್ಧನೆಯ ಕಾರ್ಯ, ಮೊದಲಾದ ಬಗ್ಗೆ ನೇಮಕಪಟ್ಟ ೪ ಸ್ಟೇಂಡಿಂಗ ಕಮ್ಮಿಟಿಗಳಲ್ಲಿ ಒಂದು ಕಮ್ಮಿಟಿಯು ಹೆಸರಿಗೆ ಮಾತ್ರ ಸ್ಥಾಪಿಸಲ್ಪಟ್ಟಿತ್ತಲ್ಲದೆ, ಅದು ಒಂದು ಸಲ ಕೂಡ ತನ್ನ ಮೀಟಿಂಗನ್ನು ಜರಗಿಸಿ ಕಾರ್ಯವನ್ನು ನಡಿಸಿದ್ದಿಲ್ಲ. ಮುನ್ಸಿಪಾಲಿಟಿಯ ಮೆನೇಜ್ಮೆಂಟಿನ ಬಗ್ಗೆ ರೂ. ೧೦,೧೬೪ ಖರ್ಚಾಗಿದೆ. ಕಳೆದ ವರುಷ ಈ ಬಗ್ಗೆ ರೂಪಾಯಿ ೭೫೪೦ ಆಗಿತ್ತು. ಸಿಬ್ಬಂದಿಯ ಸಂಬಳವನ್ನು ಏರಿಸಿದುದರಿಂದಲೂ ರಜೆಯ ಮೇಲಿದ್ದ ಮುನ್ಸಿಪಾಲಿಟಿಯ ಕಾಯಂ ಸೆಕ್ರೆಟರಿಯವರಿಗೆ ರಜೆಯ ಕಾಲದ ಎಲೋವೆನ್ಸ್ ಕೊಟ್ಟದ್ದರಿಂದಲೂ ಈ ಖರ್ಚು ಏರಲು ಸ್ವಲ್ಪ ಮಟ್ಟಿಗೆ ಕಾರಣವಾಯಿತು. ವಾಹನಗಳ ಮತ್ತು ಜಾನುವಾರುಗಳ ಮೇಲೆ ಹೊರಿಸಿದ ತೆರಿಗೆಯಿಂದ ವರದಿಯ ಮುಂಚಿನ ವರುಷ ರೂ. ೪೭೨೫ ದೊರಕಿತ್ತು; ವರದಿಯ ವರುಷ ರೂ. ೬೯೭೪ ಸಿಕ್ಕಿದೆ. ಗಾಡಿಗಳ ಮೇಲೆ ಹೊರಿಸಿದ ತೆರಿಗೆಯಿಂದ ಕಳೆದ ವರುಷಕ್ಕಿಂತ ಈ ವರುಷ ರೂ. ೫೬೮ ಜಾಸ್ತಿ ಸಿಕ್ಕಿದೆ ಎಂದರೆ, ರೂ. ೩೬೪೦ ದೊರಕಿದೆ.

ಕೌನ್ಸಿಲು ಒಟ್ಟು ೫೦ ಮೈಲು ಮಾರ್ಗಗಳನ್ನು ಸಂಪಾದಿಸಿದೆ. ಪಟ್ಟಣದಿಂದ ಹಾದು ಹೋಗುವ ಮಂಗಳೂರ-ಮಡಕೇರಿ ರಸ್ತೆ ದುರುಸ್ತಿ ಬಗ್ಗೆ ರೂ. ೨೩೦೦ ಖರ್ಚುಮಾಡಿದೆ. ಈ ಪೈಕಿ ರೂ. ೨೦೬೫ ಸರಕಾರದಿಂದ ದೊರಕಿದೆ. ಬಾಕಿ ರಸ್ತೆಗಳ ದುರುಸ್ತಿ ಬಗ್ಗೆ ಒಟ್ಟು ರೂ. ೧೫೬೧೫ ಖರ್ಚಾಗಿದೆ. ಪಟ್ಟಣದೊಳಗಿನ ಮಾರ್ಗಗಳ ಸ್ಥಿತಿಯು ತೃಪ್ತಿಕರವಾಗಿದೆ ಎಂದು ಡೈರೆಕ್ಟರ ಒಫ್ ಪಬ್ಲಿಕ್ ಹೆಲ್ತ ಇವರೂ ಸೆನಿಟರಿ ಇಂಜಿನಿಯರರೂ ಅಭಿಪ್ರಾಯಪಟ್ಟಿದ್ದಾರೆ.

ಈ ವರೆಗೆ ಬೀದಿಗಳಲ್ಲಿರುವ ಮುನ್ಸಿಪಲ್ ಲಾಂದರುಗಳನ್ನು ಕಂಟ್ರಾಕ್ಟಿನ ಮೂಲಕ ಉರಿಸುವ ಏರ್ಪಾಡು ಮಾಡಿತ್ತು. ಆದರೆ ಈ ಏರ್ಪಾಡು ಉಚಿತವಾಗಿ ಕಾಣಲಿಲ್ಲವಾದ್ದರಿಂದ ಇದಕ್ಕಾಗಿಯೇ ಪ್ರತ್ಯೇಕ ಸಿಬ್ಬಂದಿಯು ಇಡಲಾಯಿತು. ವರದಿಯ ವರುಷದಲ್ಲಿ ೫೩ ಹೆಚ್ಚು ಲಾಂದರುಗಳನ್ನು ಉರಿಸುವ ಏಲಿವಾರಿ ಮಾಡಲಾಯಿತು. ವರುಷಾಂತ್ಯದಲ್ಲಿ ಒಟ್ಟು ೩೯೮ ಲಾಂದರುಗಳು ಇದ್ದವು. ಲಾಂದರುಗಳನ್ನು ಉರಿಸುವ ಬಗ್ಗೆ ವರದಿಯ ಮುಂಚಿನ ವರುಷ ರೂ. ೫೯೧೧ ತಗಲಿತ್ತು; ವರದಿಯ ವರುಷ ರೂ. ೬೨೯೯ ತಗಲಿದೆ. ಎಲ್ಲಾ ಲಾಂದರುಗಳೂ ಸಾಧಾರಣ ತರದವುಗಳಾಗಿದ್ದವು. ಇಲೆಕ್ಟ್ರಿಕ್ ದೀಪಗಳನ್ನಿಡುವ ಮೊದಲಾದ ವ್ಯವಸ್ಥೆಗಳ ಕುರಿತು ಈ ವರೆಗೆ ಆಲೋಚಿಸಲಿಲ್ಲ. ಪಟ್ಟಣದಲ್ಲಿ ರಾತ್ರಿಕಾಲದಲ್ಲಿ ದೀಪವನ್ನು ಉರಿಸುವ ಬಗ್ಗೆ ಜನರ ಮೇಲೆ ತೆರಿಗೆಯನ್ನು ಹೊರಿಸಲಿಲ್ಲ.

ವಿದ್ಯಾಭ್ಯಾಸ:—ಶಾಲೆಗಳಲ್ಲಿ ದಾಖಲುಮಾಡುವ ಪ್ರಾಯಕ್ಕೆ ಬಂದ ಪಟ್ಟಣದಲ್ಲಿರುವ ೩೨೭೦ ಹುಡುಗರಲ್ಲಿ ಮತ್ತು ೩೧೯೮ ಹುಡುಗಿಯರಲ್ಲಿ ೨೪೯೮ ಹುಡುಗರೂ ೧೬೮೫ ಹುಡುಗಿಯರೂ ವರುಷಾಂತ್ಯದಲ್ಲಿ ಪಟ್ಟಣದಲ್ಲಿರುವ ಎಲಿಮೆಂಟರಿ ಶಾಲೆಗಳಲ್ಲಿ ಕಲಿಯುತ್ತಿದ್ದರು. ವಿದ್ಯಾಭ್ಯಾಸವನ್ನು ಹೊಂದದೆ ಇರುವ ಮಕ್ಕಳ ಸಂಖ್ಯೆಯು ಒಟ್ಟು ೭೭೨ ಹುಡುಗರೂ ೧೪೩೪ ಹುಡುಗಿಯರೂ (ಸೇಕಡಾ ೨೩.೬ ಹುಡುಗರು ೪೫.೮ ಹುಡುಗಿಯರೂ) ಆಗಿತ್ತು. ವರುಷಾಂತ್ಯದಲ್ಲಿ ಪಟ್ಟಣದಲ್ಲಿ ೪೪ ಎಲಿಮೆಂಟರಿ ಶಾಲೆಗಳಿದ್ದವು. ಈ ಪೈಕಿ ೩೩ ಹುಡುಗರ ಶಾಲೆಗಳೂ ೧೧ ಹುಡುಗಿಯರ ಶಾಲೆಗಳೂ ಆಗಿದ್ದವು. ಎಲ್ಲಾ ಶಾಲೆಗಳ ಸರಾಸರಿ ಹಾಜರಿಯು ೨೫೪೪ ಹುಡುಗರೂ ೧೭೬೮ ಹುಡುಗಿಯರೂ ಆಗಿತ್ತು. ಈ ಪೈಕಿ ೭೮೨ ಹುಡುಗರೂ ೩೦೫ ಹುಡುಗಿಯರೂ ಮುನ್ಸಿಪಲ್ ಶಾಲೆಗಳಲ್ಲಿ ಕಲಿಯುತ್ತಿದ್ದರು. ಹೊಸತಾಗಿ ತೆರೆಯಲಾದ ಒಂದು ರಾತ್ರಿ ಶಾಲೆ ಮತ್ತು ೨ ಹುಡುಗಿಯರ ಶಾಲೆ ಕೂಡಿ ಒಟ್ಟು ೭ ಶಾಲೆಗಳು ಮುನ್ಸಿಪಾಲಿಟಿಯ ಆಡಳಿತೆಗೆ ಒಳಪಟ್ಟಿದ್ದವು. ಈ ಪೈಕಿ ೯ ಹುಡುಗರ ಶಾಲೆಗಳೂ ೫ ಹುಡುಗಿಯರ ಶಾಲೆಗಳೂ ೨ ರಾತ್ರಿ ಶಾಲೆಗಳೂ ಆಗಿದ್ದವು. ಈ ೧೬ ಶಾಲೆಗಳಲ್ಲಿ ೨ ಶಾಲೆಗಳು ೫ನೆ ದರ್ಜೆಯ ವರೆಗೂ ೭ ಶಾಲೆಗಳು ನಾಲ್ಕನೆ ಕ್ಲಾಸಿನ ವರೆಗೂ, ೫ ಶಾಲೆಗಳು ಲೋವರ ಸ್ಟೆಂಡಾರ್ಡ ವರೆಗೂ ೨ ಶಾಲೆಗಳು ಆರನೇ ದರ್ಜೆಯ ವರೆಗೂ ಕಲಿಸುವವು. ಆದಿದ್ರಾವಿಡರನ್ನು ಹೊರತು ಎಲ್ಲಾ ಜಾತಿಯ ವಿದ್ಯಾರ್ಥಿಗಳನ್ನು ಈ ಶಾಲೆಗಳಲ್ಲಿ ದಾಖಲು ಮಾಡಿಕೊಳ್ಳುವರು. ಈ ಮುನ್ಸಿಪಾಲಿಟಿಯಲ್ಲಿ ಖಡ್ಡಾಯದ ಶಿಕ್ಷಣವನ್ನು ಜಾರಿಗೆ ತರುವ ಕುರಿತು ಮುನ್ಸಿಪಲ್ ಕೌನ್ಸಿಲುಗಳ ಇನ್ಸ್‌ಪೆಕ್ಟರರು ತಯಾರಿಸಿದ ಯೋಜನೆಯು ಆಲೋಚನೆಯಲ್ಲಿದೆ. ಎಲಿಮೆಂಟರಿ ವಿದ್ಯಾಭ್ಯಾಸದ ಖರ್ಚು ರೂ. ೧೩,೪೭೬ ತಗಲಿತ್ತು. ಈ ಪೈಕಿ ರೂ. ೯೦೯೦ ಅಥವಾ ಸೇಕಡಾ ೭೨-೯ ಸರಕಾರಿ ಗ್ರೇಂಟಿನಿಂದ ದೊರಕಿದೆ. ಬಾಕಿ ಹಣವು ಮುನ್ಸಿಪಾಲಿಟಿಯ ಆದಾಯದಿಂದ ವೆಚ್ಚಮಾಡಿದೆ. ವಿದ್ಯಾ ತೆರಿಗೆಯನ್ನು ಈ ವರೆಗೆ ಹೊರಿಸಲಿಲ್ಲ. ಪ್ರತಿ ವಿದ್ಯಾರ್ಥಿಗೆ ವರುಷಕ್ಕೆ ಸರಾಸರಿ ವೆಚ್ಚ ರೂ. ೧೧-೯-೦. ಮುನ್ಸಿಪಾಲಿಟಿಯು ಯಾವದೊಂದು ಸೆಕೆಂಡರಿ ಶಾಲೆಯನ್ನು ನಡಿಸಲಿಲ್ಲ. ಜನರ ಅನುಕೂಲತೆಯ ಬಗ್ಗೆ ೬ ಹುಡುಗರ ೫ ಹುಡುಗಿಯರ ಖಾಸಗಿ ಸೆಕೆಂಡರಿ ಶಾಲೆಗಳು ಪಟ್ಟಣದಲ್ಲಿವೆ. ಸೆಕೆಂಡರಿ ಶಾಲೆಗಳಲ್ಲಿ ಒಟ್ಟು ೨೦೬೫ ಹುಡುಗರೂ ೪೩೦ ಹುಡುಗಿಯರೂ ಕಲಿಯುತ್ತಿದ್ದರು. ಗತವರುಷ ೧೯೩೮ ಹುಡುಗರೂ ೨೯೪ ಹುಡುಗಿಯರೂ ಕಲಿಯುತ್ತಿದ್ದರು. ಕೌನ್ಸಿಲಿನ ಆಡಳಿತೆಗೆ ಒಳಪಟ್ಟ ಸ್ಪೆಶಲ್ ಶಾಲೆಗಳೂ ಸಾರ್ವಜನಿಕ ಪುಸ್ತಕ ಭಂಡಾರಗಳೂ ಇಲ್ಲ. ಸರಕಾರದಿಂದ ದೊರೆತ ರೂ. ೯೦೦ನ್ನು ಮಹಿಳಾ ಸಭೆಯ ಲ್ಯಾಬ್ರರಿಗೆ ಕೊಟ್ಟಿದೆ.

ಮುಂದರಿಯುವುದು.

ನೋಟೀಸು.

ಶ್ರೀ ಮದನಂತೇಶ್ವರ ದೇವಸ್ಥಾನ, ಮಂಜೇಶ್ವರ.

ಶ್ರೀ ಮದನಂತೇಶ್ವರ ದೇವಸ್ಥಾನದ ಆಡಳಿತೆ ನೋಡುವ ಬಗ್ಗೆ ಗೌಡಸಾರಸ್ವತ ವೃಂದಕ್ಕೆ ಸೇರಿದ 30 ವರ್ಷಕ್ಕೆ ಮಿಕ್ಕಿದ ಒಬ್ಬ ಮೆನೇಜರನು ಬೇಕಾಗಿರುವನು. ಸೆಕ್ಯೂರಿಟಿ ರೂಪಾಯಿ 3000 ತೆರಬೇಕು. ತಲಬು ತಿಂಗಳಿಗೆ ರೂಪ್ಯಾ 100ರತನಕ. ಅರ್ಜಿಗಳು ಈ ಕೆಳಗೆ ದಸ್ಕತು ಮಾಡಿದವರಿಗೆ ಇದೇ ಒಕ್ಟೋಬರ 27ರ ಒಳಗೆ ತಲಪಬೇಕು.

ಮಂಜೇಶ್ವರ. } ಯಂ. ಅನಂತ ಶೆಣೈ,
ತಾ. 12-10-'22 } ಟ್ರಸ್ಟೀ.

ಅನುಕ್ರಮಣಿಕೆ

ಅಗ್ರಲೇಖ:—
ಅಸಹಕಾರವೂ ಕೌನ್ಸಿಲ್ ಬಹಿಷ್ಕಾರವೂ
ಸ್ಫುಟವಿಚಾರಗಳು:— „
೧. ಕರ್ನಾಟಕದಲ್ಲಿ ಖಾದಿಯ ಪ್ರಸಾರ „
೨. ೩. ಹಿಂದುಗಳಿಗೆ ಹುದ್ದೆಗಳನ್ನು ಕೊಡಲು ಆಕ್ಷೇಪ ೪. ಕಾಯಿದೆ ಕೌನ್ಸಿಲುಗಳ ಬಹಿಷ್ಕಾರ ೫. ಬ್ರಹ್ಮದೇಶದ ಸುಧಾರಣೆ „
ಮಂಗಳೂರು:— „
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನದ ಕನ್ನಡ, ೫
೧. ಬಂಟವಾಳ ೨. ಬಜೂರು „
ಮಂಗಳೂರು ಮುನ್ಸಿಪಾಲಿಟಿಯ ಆಡಳಿತೆಯ ವರದಿ, ತುರ್ಕರ ವಿಜಯ „ ೬
ಮೂಲ್ಕಿ ಗೌಡಸಾರಸ್ವತ ಬ್ರಾಹ್ಮಣ ಬಡ ವಿದ್ಯಾರ್ಥಿ ಸಹಾಯಕ ಫಂಡ್ ೭
ವೇ. ಜಯರಾಮಾಚಾರ್ಯರ ಪ್ರಕರಣದ ಮುಕ್ತಾಯವು. „
ಕರ್ನಲ್ ದೇಶರಾಜ ಅರಸಿನವರ ಮೃತಿ „
ಆರ್ಯರ ವರ್ಣಾಶ್ರಮ ಧರ್ಮ „
ಅಕಾಲಿಗಳ ಸತ್ಯಾಗ್ರಹ ಯುದ್ಧ „
ಜಾತಿಭೇದ ವಿಚಾರ ವಿಮರ್ಶೆ „
ತುರ್ಕರ ವಿಜಯ ೮
ಕಾರ್ಯಕ್ರಮಗಳಲ್ಲಿ ಬದಲಾವಣೆ „ ೮

ಸ್ವದೇಶಾಭಿಮಾನಿ.

ಶಕ ೧೮೪೪ ಆಶ್ವೀಜ ಬ। ೩೦ಯು ಶುಕ್ರವಾರ.

ಅಸಹಕಾರವೂ ಕೌನ್ಸಿಲ್ ಬಹಿಷ್ಕಾರವೂ.

ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಯೋಗ್ಯವಾದ ಬದಲಾವಣೆಗಳುಂಟಾಗಬೇಕೆಂದು ಸ್ವರಾಜ್ಯವಾದಿಗಳು ಹೇಗೆ ಕೇಳುತ್ತಿದ್ದಾರೆ ಮತ್ತು ಅವರ ಅಂಬೋಣದಂತೆ ದಿನೇ ದಿನೇ ಲೋಕಮತವು ಹೇಗೆ ಪಕ್ವವಾಗುತ್ತ ಬಂದಿದೆ ಎಂಬುದು ಹಿಂದಿನ ಅಗ್ರಲೇಖದ ಮೇಲಿಂದಲೂ ಈಹೊತ್ತಿನ ಮುಂಬಯಿ ಖಿಲಾಫತ್‌ಸಕ್ರೆಟರಿಗಳ ಕೌನ್ಸಿಲ್ ಉಮೇದುವಾರಿಕೆಯ ಸ್ಫುಟಸೂಚನೆಯ ಮೇಲಿಂದಲೂ ವ್ಯಕ್ತವಾಗುವ ಹಾಗಿದೆ. ಕಾರ್ಯಕ್ರಮದ ಬದಲಾವಣೆಯ ಪ್ರಸ್ತಾಪವನ್ನೆತ್ತಿದೊಡನೆ ಅನೇಕ ಅಸಹಕಾರಿಗಳಿಗೆ ಒಳ್ಳೆಯದು ತೋರುವುದಿಲ್ಲವಾದರೂ ಶಾಲಾಕೊಲೇಜುಗಳ ಮತ್ತು ಕೋರ್ಟುಗಳ ಬಹಿಷ್ಕಾರಗಳನ್ನು ನಿಲ್ಲಿಸಬಹುದೆಂದು ಹೇಳಿದಾಗ ಅವರಿಗೆ ಎಷ್ಟು ಉದ್ವೇಗವುಂಟಾಗುವುದೊ ಅದಕ್ಕಿಂತ ಕೌನ್ಸಿಲ್ ಬಹಿಷ್ಕಾರದ ಪ್ರಸ್ತಾಪವನ್ನೆತ್ತಿದೊಡನೆ "ಅಬ್ರಹ್ಮಣಂ ಅಬ್ರಹ್ಮಣ್ಯಂ"ಎಂದು ತೋರಿಹೋಗುವುದು! ಯಾಕೆಂದರೆ ಶಾಲೆಗಳಲ್ಲಿ ಕಲಿಯತಕ್ಕ ಹುಡುಗರನ್ನು ಬಿಡಿಸಿ ಅವರಿಗೆ ಸರಿಯಾದ ಶಿಕ್ಷಣವನ್ನು ಕೊಡಲು ತಕ್ಕ ಏರ್ಪಾಡನ್ನು ಮಾಡಲು ಸಾಧ್ಯವಾಗಲಿಲ್ಲ. "ಸರಕಾರಿ ಶಾಲೆಗಳನ್ನು ಬಿಡಿರಿ" ಎಂದು ಉಪದೇಶವನ್ನು ಮಾಡಿದ ಬಳಿಕ ಬಿಟ್ಟ ವಿದ್ಯಾರ್ಥಿಗಳಿಗೆ ಶಿಕ್ಷಣದ ಯೋಗ್ಯ ಮತ್ತು ಸಮರ್ಪಕವಾದ ವ್ಯವಸ್ಥೆಯನ್ನು ಮಾಡಿಕೊಡುವ ನೈತಿಕ ಜವಾಬ್ದಾರಿಯು ಬಿಡಿಸುವವರ ಮೇಲೆ ಬರುವುದು. ಆದರೆ ಇಂಥಾ ನೈತಿಕ ಜವಾಬ್ದಾರಿಯನ್ನು ಮುಖಂಡರು ವಹಿಸಿದ್ದು ಕಂಡುಬರಲಿಲ್ಲ. ಉದಾಹರಣಾರ್ಥವಾಗಿ ಶಾಲಾಬಹಿಷ್ಕಾರದ ತತ್ವವು ಆಳಿಕೆಯಲ್ಲಿರುವಾಗ ಕಲ್ಕತ್ತೆಯಲ್ಲಿ ಎಷ್ಟೊ ಸಾವಿರ ವಿದ್ಯಾರ್ಥಿಗಳು ತಮ್ಮ ತಮ್ಮ ಶಾಲಾಕೊಲೆಜುಗಳ ಹಾಜರಿಯನ್ನು ನಿಲ್ಲಿಸಿ, ಮುಷ್ಕರವನ್ನು ಹಾಕಿದರು; ಮತ್ತು ಶ್ರೀಯುತ ಚಿತ್ತರಂಜನದಾಸರಿಗೆ ಸಮರ್ಪಕವಾದ ಶಿಕ್ಷಣಸಂಸ್ಥೆಯನ್ನು ತೆರೆಯಲು ಕೇಳಿಕೊಂಡರು. ಆದರೆ ದಾಸರವರಿಗೆ ಈ ಸಂಗತಿಯು ಅಸಾಧ್ಯವಾಯಿತು. ಇದೆ ಹಾಡು ಎಲ್ಲ ಕಡೆಯಲ್ಲಿ ಎಂದು ತಿಳಿಯಬೇಕು. ಎಲ್ಲ ವಿದ್ಯಾರ್ಥಿಗಳಲ್ಲಿ, ಸೇಕಡಾ ೫೦ ವಿದ್ಯಾರ್ಥಿಗಳು ಸರಕಾರಿ ಶಿಕ್ಷಣಾಲಯಗಳನ್ನು ಬಹಿಷ್ಕರಿಸಿದ್ದಲ್ಲಿ ಅವರ ವ್ಯವಸ್ಥೆಯನ್ನು ಮಾಡಿಕೊಡುವುದು ಹಿಂದೀರಾಷ್ಟ್ರಕ್ಕೆ ಈ ಹೊತ್ತಿನ ಪರಿಸ್ಥಿತಿಯಲ್ಲಿ ಅಶಕ್ಯವಾದ ಸಂಗತಿಯು. ಸರಕಾರವು ಕರವನ್ನು ವಸೂಲುಮಾಡುವಾಗ ಜನತೆಯು, ಆ ಕರದ ಸಹಾಯ್ಯವಿಲ್ಲದೆ ದೇಶಕ್ಕೆ ಬೇಕಾದ ಎಲ್ಲಾ ನಮೂನೆಯ ಶಿಕ್ಷಣವನ್ನು ಸ್ಥಾಪಿಸುವದೆಂದರೆ, ಅದೇನಾದರೂ ಆಟವೆ? ಶಾಲಾಬಹಿಷ್ಕಾರವೆಂದರೆ ಶಿಕ್ಷಣಬಹಿಷ್ಕಾರವೆಂದಲ್ಲ; ಕೆಲವು ಸಮಯ ಮುಷ್ಕರವನ್ನು ಹಾಕುವ ಸಂಗತಿಯು ಬೇರೆ, ಸರ್ವಕಾಲ ಬಹಿಷ್ಕಾರವನ್ನು ಹಾಕುವ ಮಾತು ಬೇರೆ, ಒಂದು ವರ್ಷದ ಮುದತಿನ ಮೇಲೆ ದೃಷ್ಟಿ ಇಟ್ಟು "ಮುಷ್ಕರವನ್ನು" (ಬಹಿಷ್ಕಾರವನ್ನಲ್ಲ) ಹಾಕಿದವರು ಪುನಃ ಶಿಕ್ಷಣಾಲಯಗಳನ್ನು ಸೇರುವದು ಸಹಜವೆ. ಹಾಗೆಯೆ ವಕೀಲ ವರ್ಗದವರು ಸಹ ವೃತ್ತಿಚ್ಛೇದದ ಪ್ರಸಂಗವನ್ನು ಒಂದೆರಡು ವರ್ಷದ ಕೆಲವು ಸಮಯದ ತನಕ ಮಾತ್ರ ಸಹಿಸಬಹುದಲ್ಲದೆ ದೀರ್ಘಕಾಲದ ಅವಧಿಯನ್ನು ಅದಕ್ಕಿಟ್ಟುಕೊಳ್ಳುವುದು ಅಯೋಗ್ಯವು. ಈ ಕಾರಣಗಳನ್ನು ವಿಮರ್ಶಿಸಿ ಮೇಲಿನ ಬಹಿಷ್ಕಾರದ ಠರಾವುಗಳು ಬಂಧಕವೆಂದು ಆಯಾ ವರ್ಗದವರು ತಿಳಕೊಳ್ಳಬಾರದೆಂದು ಸೂಚಿಸೋಣಾಗಿದೆ. ಮತ್ತು ಇದು ನಿಜವಾಗಿ ಶ್ಲಾಘನೀಯವಾದ್ದು. ಕೋರ್ಟುಗಳನ್ನು ಬಹಿಷ್ಕರಿಸದ ವಕೀಲರು ಮತ್ತು ಕೊಲೇಜುಗಳನ್ನು ಬಿಡದ ವಿದ್ಯಾರ್ಥಿಗಳು ರಾಷ್ಟ್ರೀಯ ಸಭೆಯ ಕಾರ್ಯವನ್ನು ಮಾಡಲು ಅರ್ಹಿ ಇಲ್ಲ. ಎಂಬುದರ ಅರ್ಥವೇನೆಂದರೆ, ರಾಷ್ಟ್ರೀಯ ಸಭೆಯು ಶಾಲಾ ಕೊಲೇಜು ಬಹಿಷ್ಕಾರದ ಮತ್ತು ಕೋರ್ಟು ಬಹಿಷ್ಕಾರದ ಯಾವ ಠರಾವನ್ನು ಮಾಡಿತೊ ಅದಕ್ಕೆ ಸರಿಯಾದ ಮತ್ತು ಅಪೇಕ್ಷಿತ ಉತ್ತರವು ಬರಲಿಲ್ಲವಾದ ಕಾರಣ, ಅಂಥ ಜನರನ್ನು ಬಿಡುವದರಿಂದ ರಾಷ್ಟ್ರೀಯ ಸಭೆಗೆನೆ ಹಾನಿಬಂದೀತೆಂದು ತಿಳಿದು ಅವರನ್ನು ಸಂಗ್ರಹಿಸಲು ಮೇಲಿನ ಬಹಿಷ್ಕಾರದ್ವಯದ ಠರಾವು ಬಂಧಕವಲ್ಲವೆಂದು ಸೂಚಿಸೋಣಾಗಿದೆ. ಈ ದೂರದರ್ಶಿತೆಯ ಕ್ರಮವನ್ನೆ ಮುಂದರಿಸಿಕೊಂಡು, ಕಾರ್ಯಕ್ರಮದ ಬದಲಾವಣೆಯನ್ನು ಕೇಳುವವರು ಆ ಠರಾವುಗಳನ್ನು—ಯಾವ ಠರಾವುಗಳು ಜನರ ಆಚರಣದಲ್ಲಿ ಬರುವದಿಲ್ಲವೊ ಅವುಗಳನ್ನು—ನಿಲ್ಲಿಸಿ ಬಿಡುವದು ಒಳ್ಳೆಯದು. ಕಾಗದದ ಮೇಲೆ ಠರಾವುಗಳನ್ನು ಬರೆದು ಬರೆ ಪಾಸುಮಾಡುವದರಿಂದ ಫಲವೇನು! ಅಶೋಕನು ಅಲ್ಲಲ್ಲಿ ಬರೆದಿಟ್ಟದ್ದು ಈಗ ಹೇಗೆ ಮೃತ ಶಾಸನವೊ ಹಾಗೆಯೆ ಜನರ ಆಚರಣದಲ್ಲಿ ಬಾರದ ಸಂಗತಿಗಳನ್ನು ಬರೆ ಪಾಸುಮಾಡುವುದರಿಂದ ಪುರುಷಾರ್ಥವು ಯಾವುದು? ಆದ್ದರಿಂದ ಶಾಲಾಬಹಿಷ್ಕಾರದ ಮತ್ತು ಕೊಲೇಜು ಬಹಿಷ್ಕಾರದ ಠರಾವುಗಳು ಈಗ ನಿರ್ಮಾಲ್ಯವಾಗಿ ಹೋದ್ದರಿಂದ ಅವುಗಳನ್ನು ಬಿಟ್ಟುಬಿಡುವದೆ ಒಳ್ಳೆಯದು.

ಮತ್ತು ಈ ರೀತಿಯಿಂದ ಅವುಗಳನ್ನು ಬಿಟ್ಟುಬಿಡುವುದರಿಂದ ರಾಷ್ಟ್ರೀಯ ಸಭೆಯನ್ನು ಅಪಹಾಸ್ಯದಿಂದ ಕಾಪಾಡಿದ ಹಾಗಾದೀತು. ರಾಷ್ಟ್ರೀಯ ಸಭೆಯು ಪ್ರತಿವರ್ಷ "ಶಾಲೆಗಳನ್ನು ಬಿಡಿರಿ, ವಕಾಲತನ್ನು ಬಿಡಿರಿ" ಎಂದು ಎದೆ ಬಡಕೊಂಡು ಹೇಳುತ್ತಿರೋಣ, ಆದರೆ ಜನತೆಯು ಆ ಕಡೆಗೆ ಗಮನಕೊಡದೆ ಇರೋಣ ಎಂದಮೇಲೆ ಇದು ಜನತೆಯ ಸಭೆಯೆಂದಾಗುವುದೆ? ಜನತೆಗೆ ರಾಷ್ಟ್ರೀಯ ಸಭೆಯು ಮಾನ್ಯವೆಂದಾದಮೇಲೆ ಅದರ ಆಜ್ಞೆಯನ್ನು ಜನತೆಯು ಮನ್ನಿಸಬೇಕು. ಹೋಗಲಿ, ಸೇಕಡಾ ೫೦ರಂತೆ ಯಾದರೂ ಅದರ ಆಜ್ಞೆಗೆ ಮಾನ್ಯತೆ ಇರಬೇಕು. ಅದಿಲ್ಲದಮೇಲೆ ಅದು ಜನತೆಯ ಸಭೆಯೆಂಬುದು ಹೇಗೆ? ಇದೊಂದು ಸಂಗತಿ. ಇನ್ನೊಂದು ಯಾವುದೆಂದರೆ, ಕೆಲವು ವರ್ಷದ ಹಿಂದೆ ರಾಷ್ಟ್ರೀಯ ಸಭೆಯೆಂದರೆ ಸರಕಾರವು ಇಂತಿಂಥ ಸಂಗತಿಗಳನ್ನು ಹೀಗೆ ಹೀಗೆ ಮಾಡಬೇಕೆಂದು ಠರಾವುಗಳನ್ನು ಪಾಸು ಮಾಡುವ ಒಂದು ಯಂತ್ರವಾಗಿತ್ತು. ಆದರ ಠರಾವುಗಳಿಗೆ ಸರಕಾರವು ಗಮನಕೊಡುತ್ತಿರಲಿಲ್ಲ. ಈಗಲಾದರೂ ರಾಷ್ಟ್ರೀಯ ಸಭೆಯು ಪಾಸುಮಾಡುವ ಠರಾವುಗಳನ್ನು ಜನರು ಅಂಗೀಕರಿಸುವುದಿಲ್ಲ. ಮೊದಲಿನ ಪರಾವಲಂಬನೆಯು ಹೋಗಿ ಈಗ ಸ್ವಾವಲಂಬನೆಯ ಯುಗವು ಪ್ರಾರಂಭವಾಗಿದೆ. ಸರಕಾರದೊಡನೆ ಕೇಳುವುದನ್ನು ಬಿಟ್ಟು ಜನತೆಯ ಪ್ರಾತಿನಿಧಿಕ ಸಭೆಯಾದ ರಾಷ್ಟ್ರೀಯ ಸಭೆಯು ಸ್ವತಂತ್ರ ಠರಾವುಗಳನ್ನು ಪಾಸುಮಾಡುತ್ತದೆ; ಆದರೆ ಜನತೆಯು ಸಹ ಇವುಗಳನ್ನು ಗಮನಿಸುವದಿಲ್ಲ. ಎಂದಮೇಲೆ ಈಗ ಸರಕಾರವಾಗಲಿ, ಆದರ ಕಡೆಯವರಾಗಲಿ, ಇಂಥ ಶೋಚನೀಯ ಸ್ಥಿತಿಯನ್ನು ಕಂಡು ಅಪಹಾಸವನ್ನು ಮಾಡುವ ಪ್ರಸಂಗವು ಬಂದಂತಾಯಿತು. ಆದ್ದರಿಂದ ಅವ್ಯವಹಾರ್ಯ ಠರಾವುಗಳನ್ನು ಮಾಡಿ ಜನತೆಯ ಆಚರಣದಲ್ಲಿ ಅವು ಬಾರದಹಾಗಾದಮೇಲೆ ಆ ರಾಷ್ಟ್ರೀಯ ಸಭೆಯ ಗೌರವವು ಗಾಳಿಗೆ ತೆರದಿಟ್ಟ ಕರ್ಪೂರದಂತೆ ತನ್ನಷ್ಟಕ್ಕೆ ಕಡಿಮೆಯಾಗುತ್ತದೆ. ಈ ಕಾರಣದಿಂದ ಶಾಲಾಕೊಲೇಜುಗಳ ಮತ್ತು ಕೋರ್ಟಿನ ಬಹಿಷ್ಕಾರದ ಠರಾವುಗಳನ್ನು ಬಿಟ್ಟುಬಿಡುವದೆ ಒಳ್ಳೆಯದು

ಈ ಎರಡು ಠರಾವುಗಳನ್ನು ಬಿಟ್ಟುಬಿಡಬೇಕೆಂದು ಹೇಳುವುದರಿಂದ ಕೆಲವು ಅಸಹಕಾರವಾದಿಗಳಿಗೆ ಅಷ್ಟೊಂದು ವ್ಯಸನವಾಗುವುದಿಲ್ಲ, ಆದರೆ ಕೌನ್ಸಿಲ್ ಬಹಿಷ್ಕಾರದ ಸುದ್ದಿಯನ್ನು ಎತ್ತಿದೊಡನೆ ಅದು ಅವರಿಗೆ ಮಹಾಪಾತಕವೆಂದೆ ತೋರುವುದು. ಕೌನ್ಸಿಲಿನಲ್ಲಿ ಸೇರುವುದು ಸರಕಾರದೊಡನೆ ಸಹಕಾರಮಾಡುವುದೆಂದು ಕೌನ್ಸಿಲ್ ಬಹಿಷ್ಕಾರವಾದಿಗಳು ವಾದಿಸುವರು. ಕೌನ್ಸಿಲುಗಳನ್ನು ಆಕ್ರಮಿಸಬೇಕೆಂದು ಹೇಳುವ ರಾಷ್ಟ್ರೀಯ ಸಭೆಯ ಅನುಯಾಯಿಗಳು ಸರಕಾರದ ಸಹಕಾರಕ್ಕೆ ಹೋಗುವದಲ್ಲ, ಸರಕಾರದ ಚಲನವಲನಗಳನ್ನು ನಿಲ್ಲಿಸಬೇಕೆಂದು ಅಸಹಕಾರದ ಯಾವ ಮೂಲ ತತ್ವವಿದೆಯೊ ಅದನ್ನು ಸಾಧಿಸುವುದಕ್ಕಾಗಿಯೆ ಕೌನ್ಸಿಲಿಗೆ ಹೋಗುವರು. "ಸೆಟನಿಕ್" ಸರಕಾರದೊಡನೆ "ಸಹಕಾರ"ವನ್ನು ಮಾಡಕೂಡದೆಂದು ಹೇಳಿ, ಅದೆ ಸರಕಾರದ ಪೋಸ್ಟು, ಟೆಲಿಗ್ರಾಫ್, ಈ ಇಲಾಖೆಗಳ ರೈಲು, ಬೇಂಕು ಮುಂತಾದ ಸಾಧನಗಳ ಪ್ರಯೋಜನವನ್ನು ಮಹಾ ಅಸಹಕಾರಿ ಮೊದಲು ಮಾಡಿಕೊಂಡು ಚಿಲ್ಲರೆ ಅಸಹಕಾರಿ ವರೆಗೆ ಪಡಕೊಳ್ಳುವದು ತಪ್ಪಲ್ಲವಾದರೂ ವಿಸಂಗತವಾಗಿದೆ ಎಂಬುದಕ್ಕೆ ಸಂದೇಹವಿಲ್ಲ. ಈಗ ತೋರಿಸಿದ ಸಾಧನಗಳಿಂದ ಸರಕಾರದ ಪ್ರಯೋಜನವನ್ನು ಪಡಕೊಳ್ಳಲು ಯಾವ ಸಂಕೋಚವೂ ಇಲ್ಲವಾದರೆ, ಸರಕಾರ ಪಕ್ಷವನ್ನು ಸರಿಯಾಗಿ ಪ್ರತಿರೋಧಿಸಲು ಕೌನ್ಸಿಲಿಗೆ ಹೋಗುವುದು ಮಾತ್ರ ಯಾಕೆ "ಪಾಪಕರ"ವಾಗಿ ತೋರಬೇಕು? "ರಾಜನಿಷ್ಠೆಯ ಆಣೆ"ಯನ್ನು ತೆಕ್ಕೊಳ್ಳಬೇಕಾಗುತ್ತದೆ ಎಂಬುದೊಂದು ಪಂಗುವಾದ ಕಾರಣವು ತೋರಿಸಲ್ಪಡುತ್ತದೆ. ಆದರೆ ಮೇಲಿನಂತೆ ಆಣೆಯನ್ನು ತೆಕ್ಕೊಂಡು ತನ್ನ ಆತ್ಮ ಸಾಕ್ಷಿಯ ಬಲದ ಮೇಲೆ ಸರಕಾರವನ್ನು ಉಪರೋಧಿಸುವ ವಿಷಯ ಮತ್ತು ಅಸಹಕಾರಿಗಳೆಂದು ಹೇಳಿಸಿಕೊಂಡು ಹಲವು ಸಂಗತಿಗಳಲ್ಲಿ ಸರಕಾರಿ ಖಾತೆಗಳ ಪ್ರಯೋಜನವನ್ನು ಪಡಕೊಳ್ಳುವ ವಿಷಯ ಇವೆರಡನ್ನು ನಿರ್ವಿಕಾರ ಮನಸ್ಸಿನಿಂದ ತುಲನೆಮಾಡಿ ಯಾವದು ನಿಜವಾದ ಅಸಹಕಾರವೆಂಬುದನ್ನು ವಾಚಕರೆ ನಿರ್ಣಯಿಸುವುದು ಒಳ್ಳೆಯದು. ಕೌನ್ಸಿಲುಗಳ ಹೊರಗೆ ಹೇಗೊ ಹಾಗೆ ಕೌನ್ಸಿಲುಗಳಲ್ಲಿ ಸಹ ಸರಿಯಾದ ವಿರೋಧವುಂಟಾದರೆ ಆದರಿಂದ ಸರಕಾರಕ್ಕೆ ಬಹಳ ಸಹಾಯವು ದೊರಕದಂತಾಗುವದು. ಇದೆ ಕೇವಲ ಆಗ್ರಹವು.

ಒಂದು ವೇಳೆ ಕೌನ್ಸಿಲಿಗೆ ಹೋಗುವುದರಿಂದ ಅಸಹಕಾರದ ತತ್ವಕ್ಕೆ ಬಾಧೆ ಬರುತ್ತದೆಂದು ತಿಳಿದರೂ ಸ್ವರಾಜ್ಯದ ಧ್ಯೇಯಕ್ಕೆ ಸರ್ವಥಾ ಬಾಧೆ ಬರುವುದಿಲ್ಲ. ಹಿಂದೀ ದೇಶದ್ದಾಗಲಿ, ರಾಷ್ಟ್ರೀಯ ಸಭೆಯದಾಗಲಿ, ಕೊನೆಯ ಸಾಧ್ಯವು ಸ್ವರಾಜ್ಯವಲ್ಲದೆ, ಅಸಹಕಾರವಲ್ಲ. ಈ ಮುಖ್ಯ ಸಂಗತಿಯನ್ನು ಯಾರೂ ಮರೆಯಕೂಡದು. ಸ್ವರಾಜ್ಯವೆಂಬುದು ಸಾಧ್ಯವು ಮತ್ತು ಅಸಹಕಾರವು ಸಾಧನವು. ಸಾಧನಗಳು ಕಾಲ ದೇಶಗಳ ಪರಿಸ್ಥಿತಿಗನುರೂಪವಾಗಿ ಬೇರೆ ಬೇರೆಯಾಗಿರುವುವು. ಮನೆಯ ಮಾಡಿಗೆ ಹಂಚು, ಹುಲ್ಲು, ಕಪ್ಪುರಹುತ್ತಿನ ಅಥವಾ ತಾಮ್ರದ ಪಟ್ಟೆ ಅಥವಾ ಬೇರೆ ಯಾವದನ್ನಾದರೂ ಹಾಕಿ ನೆರಳನ್ನು ತಂದುಕೊಳ್ಳಬಹುದು. ಇಂಥಹದೆ ಇರಬೇಕೆಂದು ಆಗ್ರಹವು ಯಾಕೆ? "ಸರ್ವೈರುಪಾಯೈಃ ಫಲಮೇವ ಸಾಧ್ಯಮ್" ಎಂದು ಹಿಂದಿನ ಮಹಾತ್ಮರು ಹೇಳಿದ ಮಾತು ಎಷ್ಟು ಸತ್ಯಪೂರ್ಣವಾಗಿದೆ ಎಂಬುದು ಲೋಕದೊಳಗಿನ ಅನೇಕ ಸಂಗತಿಗಳಿಂದ ತಿಳಿದು ಬರುತ್ತದೆ. ಹೀಗಿರುವಲ್ಲಿ ಸಾಧನಕ್ಕೆ ಎಷ್ಟು ಮಹತ್ವ ಕೊಡಬೇಕೊ ಅಷ್ಟೆ ಕೊಡಬೇಕಲ್ಲದೆ ಹೆಚ್ಚು ಕೊಡಹೋಗಿ ಪ್ರಾರಂಭಿಸಿದ ಚಳವಳವನ್ನು ಹೇಗೆ ನಿಲ್ಲಿಸಬಹುದು, ಅಥವಾ ಅದರಲ್ಲಿ ರೂಪಾಂತರವನ್ನು ಹೇಗೆ ಮಾಡಲಾಗುತ್ತದೆ ಎಂದು ಹೇಳ ಹೊಂಟರೆ ಸಮುದ್ರದಲ್ಲಿಯು ಹಡಗದ ಬಿಚ್ಚಿದ ಹಾಯಿಯನ್ನು, ಅದು ಒಂದು ಬಂಡೆಕಲ್ಲಿನ ಮೇಲೆ ಅಪ್ಪಳಿಸುವ ಲಕ್ಷಣವು ಕಂಡಾಗ್ಯೂ, ಮಡಚದೆ ಇರುವುದು ನಾವಿಕನ ದುರಾಗ್ರಹಕ್ಕೆ ಬಲಿಬಿದ್ದಂತಾಗುವದು.

ಎಂದರೆ ಇದರ ಮೇಲಿಂದ ಬದಲಾವಣೆಯನ್ನು ಸೂಚಿಸುವವರು ಅಸಹಕಾರಿಗಳಲ್ಲವೆಂದು ಮಾತ್ರ ಯಾರೂ ತಿಳಿಯಬಾರದು. ಒಂದು ವೇಳೆ ಹಾಗೆ ತಿಳಿಯುವುದಾದರೂ ಅವರು ಕಡು ಸ್ವರಾಜ್ಯವಾದಿಗಳೆಂಬುದು ಮಾತ್ರ ಖಂಡಿತ. ಈ ಸಾಧ್ಯವು, ಆದಷ್ಟು ಬೇಗನೆ, ಹಿಂದಿಜನರ ಕೈಗೆ ಹೇಗೆ ಬಂದೀತೊ ಅಂಥ ಉಪಾಯವನ್ನು ಮಾಡಬೇಕು ಮತ್ತು ಈ ದೃಷ್ಟಿಯನ್ನಿಟ್ಟುಕೊಂಡು ಹೇಳುವದಾದರೆ ಕೌನ್ಸಿಲ್ ಬಹಿಷ್ಕಾರವು ಸ್ವರಾಜ್ಯಕ್ಕೆ ಅಷ್ಟೊಂದು ಬಾಧಕವಲ್ಲ.

ಸ್ಫುಟವಿಚಾರಗಳು.

೧. ದಕ್ಷಿಣಕನ್ನಡವು ಮದ್ರಾಸಪ್ರಾಂತಕ್ಕೆ ಸೇರಿಸಲ್ಪಟ್ಟರೂ ರಾಷ್ಟ್ರೀಯ ಸಭೆಯಿಂದ ಈ ನಮ್ಮ ಜಿಲ್ಲೆಯನ್ನು ಕರ್ನಾಟಕ ಪ್ರಾಂತಕ್ಕೆ ಸೇರಿಸಿಯದೆ. ಕರ್ನಾಟಕ ಪ್ರಾಂತದಲ್ಲಿ ಮುಖ್ಯವಾಗಿರುವ ಜಿಲ್ಲೆಗಳ್ಯಾವುವೆಂದರೆ, ಧಾರವಾಡ, ಬೆಳಗಾಂವ, ಬಳ್ಳಾರಿ, ಉತ್ತರ ಮತ್ತು ದಕ್ಷಿಣ ಕನ್ನಡ ಈ ಮುಖ್ಯ ಪ್ರಾಂತಗಳಲ್ಲಿ ಖಾದರ ಕೆಲಸವು ಯಾವ ರೀತಿಯಿಂದ ನಡಿಯುತ್ತಿದೆ ಎಂಬುದನ್ನು ಖಾದರ್ ಬ್ಯುರೋದವರು ಪ್ರಕಟಿಸಿದ್ದಾರೆ. ಆ ರಿಪೋರ್ಟನ್ನು ನೋಡಿದರೆ ನಮ್ಮ ದಕ್ಷಿಣಕನ್ನಡವು ಅಷ್ಟೊಂದು ಹಿಂದುಳಿಯದಿದ್ದರೂ ಇತರ ಜಿಲ್ಲೆಯ ದೃಷ್ಟಿಯಿಂದ ನಮ್ಮ ಜಿಲ್ಲೆಯು ಹಿಂದೆಯೆ ಇದೆ ಎಂದು ಹೇಳಬಹುದು. ಆ ರಿಪೋರ್ಟಿನಲ್ಲಿ ತಿಳಿಸಿದ ಪ್ರಕಾರ ಕರ್ನಾಟಕವು ಹತ್ತಿಯ ಪುಂವಣಿಯಲ್ಲಿ ಅಷ್ಟೊಂದು ಹಿಂದುಳಿದ ಪ್ರಾಂತವಲ್ಲ. ಇಷ್ಟು ವಿಪುಲವಾಗಿ ಬೆಳೆಯುವಂಥ ಹತ್ತಿಯನ್ನು ನಾವು ನಮ್ಮ ದೇಶದಲ್ಲಿಯೆ ಉಪಯೋಗಿಸದಿದ್ದರೆ ನಮಗೆ ಎಷ್ಟೊಂದು ಹಾನಿಕರವೆಂದು ನಾವು ತಿರುಗಿ ಸೂಚಿಸಬೇಕಾದ ಅವಶ್ಯಕವಿಲ್ಲ. ಆದರೆ ಮುಖ್ಯವಾಗಿ ನಮ್ಮ ಮುಂದಿರುವ ರಿಪೋರ್ಟಿನ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲಿ ಚರಕಗಳ ಸಂಖ್ಯೆಯು ಹೆಚ್ಚಿದೆ. ಆದರೆ ಕೈನೂಲನ್ನೆ ಉಪಯೋಗಿಸುವ ಕೈಮಗ್ಗಗಳು ಬಹು ಕಡಿಮೆ. ನಮ್ಮ ಈ ದಕ್ಷಿಣ ಕನ್ನಡದಲ್ಲಿ" ಉಪಯೋಗದಲ್ಲಿರುವ ಚರಕದ ಸಂಖ್ಯೆಯು ೩೦೦೦ ವಾಗಿದೆ. ಮತ್ತು ಖಾದಿ ನೂಲನ್ನೆ ಉಪಯೋಗಿಸುವ ಮಗ್ಗಗಳು ಬರೆ ೫೦ ಮಾತ್ರವಿದ್ದೆ. ಇದರಿಂದ ನಮ್ಮಲ್ಲಿಯ ಖಾದಿ ಬೆಳವಣಿಗೆಯ ಪ್ರಮಾಣವು ನಮ್ಮ ವಾಚಕರಿಗೆ ಗೊತ್ತಾದೀತು. ನಮ್ಮ ಜಿಲ್ಲೆಯಲ್ಲಿ—ಹೆಚ್ಚಾಗಿ ಮಂಗಳೂರಿನಲ್ಲಿ—ಕೈಮಗ್ಗಗಳು ಬಹಳವಿವೆ. ಆದರೆ ಇವು ನಮ್ಮಲ್ಲಿಯೆ ತಯಾರಾದ ಕೈನೂಲನ್ನು ಉಪಯೋಗಿಸದೆ ಮಿಲ್ಲಿನ ನೂಲನ್ನೂ ಪರದೇಶಿ ನೂಲನ್ನೂ ಉಪಯೋಗಿಸುತ್ತವೆ! ಪರದೇಶಿ ನೂಲನ್ನು ಉಪಯೋಗಿಸುವುದು ಎಷ್ಟು ಲಜ್ಜಾಸ್ಪದವೆಂಬುದು ಪ್ರತಿ ಒಬ್ಬನಿಗೆ ಗೊತ್ತಿರುವ ಸಂಗತಿಯೆ. ನಮ್ಮಲ್ಲಿ ಇಷ್ಟು ಕಡಿಮೆ ಕೈಮಗ್ಗಗಳಿರುವುದರಿಂದಲೆ ತಿಂಗಳಿಗೆ ೨ ಸಾವಿರ ಗಜಗಳ ಖಾದಿಯು ಮಾತ್ರ ಇಲ್ಲಿ ತಯಾರಾಗುತ್ತದೆ! ಬಿಜಾಪುರದ ಪ್ರಾಂತವು ನಮ್ಮ ಕರ್ನಾಟಕ ಪ್ರಾಂತದಲ್ಲಿ ಖಾದಿ ವಿಷಯವಾಗಿ ಉಚ್ಚಸ್ಥಾನವನ್ನು ಹೊಂದಿದೆಂದು ಹೇಳಬಹುದು. ಯಾಕಂದರೆ ಆ ಜಿಲ್ಲೆಯಲ್ಲಿ ೫೮೦೦ ಚರಕಗಳು, ೩೦೦ ಖಾದಿ ನೂಲನ್ನು ಉಪಯೋಗಿಸುವ ಕೈ ಮಗ್ಗಗಳೂ ಇವೆ. ಅಲ್ಲದೆ ಪ್ರತಿ ತಿಂಗಳಲ್ಲಿ ಈ ಕೈ ಮಗ್ಗಗಳಿಂದ ೫೦ ಸಾವಿರ ಗಜ ಖಾದಿಯು ಆಗುತ್ತದಂತೆ. ಈ ದೃಷ್ಟಿಯಿಂದ ನಮ್ಮ ದಕ್ಷಿಣ ಕನ್ನಡವು ಎಷ್ಟು ಹಿಂದಿದೆಂಬುದು ಗೊತ್ತಾದೀತು. ಆದ್ದರಿಂದ ನಮ್ಮಲ್ಲಿಯ ಕೈಮಗ್ಗದವರು ನಮ್ಮಲ್ಲಿಯೆ ತಯಾರಾದ ಖಾದಿನೂಲನ್ನು ಉಪಯೋಗಿಸಿದರೆ ಬೇರೆ ದೇಶದ ಮೇಲೆ ವಸ್ತ್ರದ ಸಂಬಂಧ ಅವಲಂಬಿಸುವ ಪ್ರಸಂಗವು ನಮಗೆ ಬರಲಿಕ್ಕಿಲ್ಲ. ಈ ಸಂದರ್ಭದಲ್ಲಿ ನಮ್ಮ ನೆರೆಯಲ್ಲಿರುವ ಉತ್ತರ ಕನ್ನಡ ಜಿಲ್ಲೆಯು ಎಷ್ಟರ ಮಟ್ಟಿಗೆ ಸುಧಾರಿಸಿದೆ ಎಂದು ವಿಚಾರಮಾಡುವುದು ಅಗತ್ಯವು. ರಿಪೋರ್ಟಿನ ಪ್ರಕಾರ ಅಲ್ಲಿ ಖಾದಿ ಪ್ರಚಾರವು ಬಹು ಕಡಿಮೆ ಎಂದು ತೋರುತ್ತದೆ. ಯಾಕಂದರೆ ಇಲ್ಲಿ ೬೦೦ ಚರಕಗಳು ಮಾತ್ರವಿದ್ದು ಬರೆ ೧೦ ಕೈಮಗ್ಗಗಳು ಮಾತ್ರ ಖಾದಿಯನ್ನು ತಯಾರಿಸುತ್ತವಂತೆ! ಮುಖ್ಯವಾಗಿ ಹೇಳುವುದಾದರೆ ಕರ್ನಾಟಕ-ಪ್ರಾಂತದ ಪ್ರಮುಖ ಜಿಲ್ಲೆಯು ಪ್ರಮಾಣದಲ್ಲಿ ಇದು ಖಾದಿ ವಿಷಯವಾಗಿ ಇನ್ನೂ ಹಿಂದುಳಿದಿದೆ, ಇದು ಬಹು ವಿಷಾದಕರವು. ಇನ್ನು ಮುಂದಾದರೂ ನಮ್ಮ ನೆರೆಯ ಈ ಜಿಲ್ಲೆಯು ಆದಷ್ಟು ಹೆಚ್ಚು ಖಾದಿಯನ್ನು ಬೆಳಸೀತೆಂದು ನಾವು ನಂಬಿದ್ದೇವೆ.

೨. ಹಿಂದುಸ್ಥಾನದಲ್ಲಿ ಮೇಲಿನ ಹುದ್ದೆಗಳ ಮೇಲೆ ನೇಮಿಸಬೇಕಾಗಿರುವ ಜನರು ಹಿಂದಿಗಳಾಗಿಯೆ ಇರಬೇಕೆಂದು ಹಿಂದಿಗಳು ಅಭಿಪ್ರಾಯಪಡುತ್ತಿರುತ್ತಾರೆ. ವರಿಷ್ಠ ಕೌನ್ಸಿಲುಗಳಲ್ಲಿ ಸಹ ಈ ಅರ್ಥದ ಠರಾವು ಪಾಸಾಗಿದೆ, ಮಾತ್ರವಲ್ಲ, ಈ ಅರ್ಥದ ಠರಾವು ಕೌನ್ಸಿಲುಗಳ ಮುಂದೆ ಬರಲು ಕಾರಣವಾದರೂ, ೧೯೧೯ನೆಯ ಸುಧಾರಣಾ ಎಕ್ಟಿನಲ್ಲಿ ಈ ತತ್ವವೆ ಮಾನ್ಯವಾದ್ದು ಕಂಡುಬರುತ್ತದೆ. ಎಂದಮೇಲೆ ರಾಜ್ಯವಾಡಳಿತೆಯ ಮೇಲುತರಗತಿಯ ಉದ್ಯೋಗಗಳಲ್ಲಿ ಹಿಂದಿಗಳನ್ನು ಹೆಚ್ಚಿನ ಪ್ರಮಾಣದಿಂದ ತೆಕ್ಕೊಳ್ಳಬೇಕೆಂಬುದು ಸರಕಾರಕ್ಕೆ ಅಮಾನ್ಯವಲ್ಲವೆಂಬುದು ಈ ಪೂರ್ವಪೀಠಿಕೆಯಿಂದ ಸ್ಪಷ್ಟವಾಗುತ್ತದೆ. ಕಾಗದಗಳಲ್ಲಿ ಅಥವಾ ಕೌನ್ಸಿಲುಗಳ ಠರಾವುಗಳಲ್ಲಿ ಸರಕಾರವು ಇಂಥ ಉದಾರತತ್ವವನ್ನು ಮಾನ್ಯಮಾಡಿದ್ದು ಕಂಡುಬಂದರೂ ನೇಮಕಮಾಡುವ ಸಂದರ್ಭದಲ್ಲಿ ಈ ತತ್ವದ ಸ್ಮರಣೆಯು ಅಧಿಕಾರಿಗಳಿಗೆ ಸರ್ವಥಾ ಇರುವುದಿಲ್ಲ. ಇದಕ್ಕೆ ಈಗಿನ ಭಾರತ ಮಂತ್ರಿಗಳು ಮಾಡಿರುವ ಹೊಸ ನೇಮಕಗಳೆ ಸಾಕ್ಷಿಗಳಾಗಿವೆ. ಹಿಂದೂಸ್ಥಾನದ 'ಜಿಯೋಲೋಜಿಕಲ್ ಸರ್ವೇ' ಇಲಾಖೆಯಲ್ಲಿ ೪ ಜನ ಯುರೋಪಿಯನ್ ಗೃಹಸ್ಥರನ್ನು ಭಾರತಮಂತ್ರಿಗಳು ನೇಮಿಸಿದ್ದಾರೆ. ಹಿಂದೂಸ್ಥಾನದಲ್ಲಿ ಭೂಗರ್ಭಶಾಸ್ತ್ರಜ್ಞರು ಹಿಂದಿಗಳಲ್ಲಿ ಇಲ್ಲದ ಪ್ರಯುಕ್ತ ಯುರೋಪಿನಿಂದ ಈ ನೇಮಕಗಳನ್ನು ಮಾಡಬೇಕಾಯಿತೆಂದು ಹೇಳೋಣಾಗುತ್ತದೆ. ಪರಂತು ಈ ಕಾರಣವು ಕೇವಲ ಅಸಮರ್ಥನೀಯವಾಗಿದೆ. ಯಾಕೆಂದರೆ, ಹಿಂದುಸ್ಥಾನದ ಕೊಲೇಜುಗಳಲ್ಲಿ ಭೂಗರ್ಭಶಾಸ್ತ್ರದ ಪಾಠಪ್ರವಚನವನ್ನು ಪ್ರಾರಂಭಿಸುವುದು ಯುನಿವರ್ಸಿಟಿಗಳಿಗೆ ಅರ್ಥಾತ್, ವಿವಕ್ಷಿತ ಕೊಲೇಜುಗಳಿಗೆ ಅಸಾಧ್ಯವಲ್ಲ. ಇದರಲ್ಲಿ ನಿಜವಾಗಿ ಅಸಾಧ್ಯವಾದ ಸಂಗತಿಯು ಅಧಿಕಾರಿಗಳ ಮನಸ್ಸು ಹಿಂದಿಗಳ ವಿಷಯವಾಗಿ ಸಮಭಾವನೆಯುಳ್ಳದ್ದಾಗಬೇಕಾದ್ದು; ಅದೆ ಅಸಾಧ್ಯವಾದ ಸಂಗತಿಯು. ಹೀಗಿರುವಲ್ಲಿ ಸಮತ್ವದ ಬಾಹ್ಯ ಆಡಂಬರವನ್ನು ತೋರಿಸುವುದರಿಂದ ಫಲವೇನು? ಹಿಂದೂಸ್ಥಾನವು ಈಗ ಬರೆ ಠರಾವುಗಳಿಗೆ ಮರುಳಾಗುವ ದಿವಸಗಳು ಹೋದವು. ಕಾರ್ಯರೂಪದಿಂದ ಸಹಾನುಭೂತಿಯು ಅಗತ್ಯವೆಂದು ಹಿಂದುಸ್ಥಾನವು ತಿಳಕೊಂಡಿದೆ.

೩. ನಮ್ಮಲ್ಲಿಯ ಮುಖ್ಯ ಮುಖ್ಯ ಖಾತೆಗಳು ಹಿಂದಿಗಳ ವಶದಲ್ಲಿಯೆ ಕೊಟ್ಟು ಮುಖ್ಯ ಸ್ಥಾನಗಳಲ್ಲಿ ಹಿಂದಿಗಳನ್ನೆ ನೇಮಿಸಬೇಕೆಂದು ಸುಧಾರಣೆಯ ಕಾನೂನುಗಳಲ್ಲಿದ್ದರೂ ಅದು ಬರೆ ಜಲಲಿಪಿಯಾಗಿದೆಂಬುದನ್ನು ನಾವು ಮೇಲೆ ಸೂಚಿಸಿದ್ದೇವಷ್ಟೆ. ಇನ್ನೊಂದು ದೃಷ್ಟಾಂತವನ್ನು ಸಹ ಕೊಡಬಹುದು. ಲೊ. ರೆಡಿಂಗರು ಹಿಂದಿಗಳಲ್ಲಿ ಸಹಾನುಭೂತಿಯನ್ನು ತೋರಿಸಿದ್ದು ಇಂಗ್ಲಂಡಿನ ಕೆಬಿನೆಟದವರಿಗ ಸಹನವಾಗಲಿಲ್ಲ. ಲೊಯ್ಡ ಜೊರ್ಜರು ಕಳೆದ ತಿಂಗಳಲ್ಲಿ ಯಾವ ತಮ್ಮ ಮತವನ್ನು ವ್ಯಕ್ತಮಾಡಿದ್ದರೊ ಅದನ್ನೆ ಇವರು ವ್ಯಕ್ತಮಾಡಿ ನಮ್ಮ ವೈಸರಾಯರು ಇನ್ನು ಮುಂದೆ ದೊಡ್ಡ ಅಧಿಕಾರಗಳನ್ನು ನಮ್ಮ ಕಡೆಗೆ ಕೊಡದಂತೆ ಸೂಚಿಸಿದ್ದಾರೆ. ಹಿಂದುಸ್ಥಾನದ ಸಿವಿಲ್ ಸರ್ವಿಸದಲ್ಲಿರುವ ಬ್ರಿಟಿಷ್ ಜನಾಂಗದವರಿಗೆ ಯಾವ ತೊಂದರೆಯೂ ಬಾರದಂತೆ ರೆಡಿಂಗ ದೊರೆಗಳು ಜಾಗ್ರತೆ ತೆಗೆದುಕೊಳ್ಳಬೇಕೆಂತ ಸೂಚಿಸಿದ್ದಾರೆ. ರೆಡಿಂಗ ದೊರೆಗಳು ಇನ್ನು ಮುಂದಾದರೂ ಸಿವಿಲ್ ಸರ್ವಿಸದಲ್ಲಿ ಹಿಂದುಸ್ಥಾನದಲ್ಲೆ ತಯಾರಾದ ಹಿಂದಿಗಳನ್ನೆ ನೇಮಿಸಬೇಕೆಂದಿದ್ದರು. ಈ ಎಲ್ಲ ಕಲ್ಪನೆಗಳು ಈಗ ವ್ಯರ್ಥವಾಗಿವೆ. ಕಾನೂನಿನಲ್ಲಿರುವುದು ಒಂದು ಪ್ರಕಾರ ಮತ್ತು ಅಧಿಕಾರಿಗಳು ಮಾಡುವುದು ಇನ್ನೊಂದು ತರ. ಇದೆ ಬ್ರಿಟಿಷರ ಮುತ್ಸದಿತನವು! ಕಾಯದೆಪ್ರಕಾರವಿರುವ ನಮ್ಮ ಹಕ್ಕುಗಳನ್ನು ನಮಗೆ ಕೊಡದೆ ಇದ್ದರೆ ನಿಮ್ಮ ಆ ಸುಧಾರಣೆಯು ಎಷ್ಟು ಪ್ರಯೋಜನಕರವು. ರೆಡಿಂಗ ಸಾಹೇಬರು ಮೇಲಿನ ಕೆಬಿನೆಟಿನ ಈ ಸೂಚನೆಯನ್ನು ಸ್ವೀಕರಿಸಿದಂದಿನಿಂದ ತನ್ನ ಎಲ್ಲ ಮನೋರಥಗಳಿಗೆ ರಜೆ ಕೊಟ್ಟಿದ್ದಾರೆ. ಮತ್ತು ಪಾರ್ಲಿಮೆಂಟಿನ ಹೊಸ ಚುನಾವಣೆಯಾದೊಡನೆ ಹೊಸ ಕೆಬಿನೆಟ ಕೂಡ ನಿರ್ಮಿಸಲಾದೀತು. ಅದಾದರೂ ಒಂದು ವೇಳೆ ತನ್ನ ಈ ಇಚ್ಛೆಯನ್ನು ಪೂರೈಸೀತೆಂದು ಅವರು ನಂಬಿದ್ದಾರಂತೆ. ಇರಲಿ. ಹ್ಯಾಗಾದರೂ ಸದ್ಯದಲ್ಲಾದರೂ ಮುಖ್ಯ ಸ್ಥಾನಗಳು ಹಿಂದಿಗಳ ವಶಬರಲಿಕ್ಕಿಲ್ಲವೆಂಬುದು ನಿಜವು. ಇಲ್ಲಿಯ ಸಿವಿಲ್ ಸರ್ವೆಂಟ್ಸರಲ್ಲಿ ಇಂಗ್ಲೀಷರನ್ನು ನಾವು ಈ ತರದ ಗೌರವದಿಂದ ನೋಡಿಕೊಳ್ಳಬೇಕೆಂಬುದು ಆಶ್ಚರ್ಯವು! ಕಾಯಿದೆಯಲ್ಲಿ ಮಾತ್ರ ಅಷ್ಟೊಂದು ಸುಧಾರಣೆಯನ್ನಾದರೂ ಯಾಕೆ ತೋರಿಸಬೇಕು?

೪. ಪುಣೆಯ ಕೇಸರಿಯು ಬರೆಯುತ್ತದೆ: ಕಾಯಿದೆ ಕೌನ್ಸಿಲಿನ ಬಹಿಷ್ಕಾರವನ್ನು ತೆಗೆಯಬಾರದೆಂದು ಹೇಳುವವರು ಸ್ವಮತ ಸಮರ್ಥಮಾಡಲು ಅನೇಕ ಕಲ್ಪಿತ ಕಾರಣಗಳನ್ನು ತೋರಿಸುತ್ತಾರೆ. ಕೌನ್ಸಿಲಿಗೆ ಹೋಗುವದು ಮುಸಲ್ಮಾನ ಧರ್ಮಕ್ಕೆ ವಿರುದ್ಧವಾಗಿದ್ದು ಒಂದುವೇಳೆ ಹಿಂದುಗಳು ಕೌನ್ಸಿಲುಗಳಲ್ಲಿ ಹೋದರೆ ಮುಸಲ್ಮಾನರ ಮನಸ್ಸು ನೊಂದಿ ಅವರು ನಮ್ಮಿಂದ ಭಿನ್ನರಾಗಿ ಹೋದಾರು ಎಂಬೀ ಕಲ್ಪಿತ ಕಾರಣವನ್ನು ಕೆಲವರು ಮುಂದೆ ತರುತ್ತಾರೆ. ಹಿಂದೂ ಮುಸಲ್ಮಾನರ ಐಕ್ಯವನ್ನು ದೃಢಮಾಡಲಿಕ್ಕಾದರೂ ಕೌನ್ಸಿಲಿನ ಮಾತನ್ನು ಎತ್ತಬಾರದು ಎಂದು ಕಾರ್ಯಕ್ರಮಗಳಲ್ಲಿ ಬದಲಾವಣೆ ಬೇಡವೆನ್ನುವ ಕೆಲವು ಅಸಹಕಾರಿಗಳು ಆಕ್ರೋಶಮಾಡುತ್ತಾರೆ. ಆದರೆ ಈ ಸಂದರ್ಭದಲ್ಲಿ ಮುಸಲ್ಮಾನರಾದರೂ ಕೌನ್ಸಿಲ ಬಹಿಷ್ಕಾರವನ್ನು ಈ ಎರಡು ವರ್ಷಗಳಲ್ಲಿ ಎಷ್ಟರಮಟ್ಟಿಗೆ ಯಶಸ್ವಿ ಮಾಡಿದ್ದಾರೆಬುಂದು ಗೊತ್ತಿದ್ದ ಸಂಗತಿಯೆ ಸರಿ. ಕೌನ್ಸಿಲ ಬಹಿಷ್ಕಾರವು ಜಾರಿಗೆ ಬಂದಂದಿನಿಂದ ಹಿಂದು ಉಮೇದ್ವಾರರ ಜಾಗೆಯು ಹಿಂದು ಜನರು ಇಲ್ಲದೆ ಇದ್ದುದರಿಂದ ಖಾಲಿಯಾಗಿ ಬಿತ್ತು. ಮತ್ತು ಕೆಲವು ಕಡೆಗಳಲ್ಲಿ ಖಾಲಿಬಿದ್ದ ಜಾಗೆಯನ್ನು ಇತರರು ಆಕ್ರಮಿಸಿದರು. ಆದರೆ ಮುಸಲ್ಮಾನರಿಗೆಂತ ನಿಯೋಜಿಸಿದ ಜಾಗೆಯು ಒಂದೂ ಖಾಲಿ ಬೀಳಲಿಲ್ಲ. ಕಿಂಬಹುನಾ ಸ್ಪರ್ಧೆಮಾಡಲೂ ಕೂಡ ಇವರಲ್ಲಿ ಕಡಿಮೆ ಇದ್ದಂತೆ ತೋರುವುದಿಲ್ಲ. ಇದು ಎರಡು ವರ್ಷದ ಹಿಂದಿನ ಸಂಗತಿಯಾಯಿತು. ಅಂದಿನಿಂದ ಈಹೊತ್ತಿನ ವರೆಗೆ ಮುಸಲ್ಮಾನರಿಂದ ಬಹಿಷ್ಕಾರವು ಎಷ್ಟುಮಟ್ಟಿಗೆ ಮಾಡಲ್ಪಡುತ್ತೆಂಬುದರ ಕಲ್ಪನೆಯು ಜನರಿಗೆ ಬಂದಿತು. ಪ್ರತಿನಿತ್ಯವು ಜನರಿಗೆ ಅನುಭವ ಸಿಗುವಂಥ ವಿಷಯದಲ್ಲಿ ಕಲ್ಪನೆಮಾಡುತ್ತಿರುವದಾದರೂ ಏನು ಪ್ರಯೋಜನ? ಕಾಯದೆಭಂಗ ಕಮಿಟಿಯೊಡನೆ ಇಡಿ ಹಿಂದುದೇಶವನ್ನು ತಿರುಗುತ್ತಿದ್ದ ಖಿಲಾಫತ್ ಕಮಿಟಿಯೂ ಸಹ ಕೌನ್ಸಿಲ ಬಹಿಷ್ಕಾರವನ್ನು ತೆಗೆಯಬೇಕೆಂದು ತಮ್ಮ ರಿಪೋರ್ಟಿನಲ್ಲಿ ಶಿಫಾರಸು ಮಾಡೀತೆಂದು ಹೇಳುತ್ತಾರೆ. ಖಿಲಾಫತ್ ಕಮಿಟಿಯ ರಿಪೋರ್ಟು ಇನ್ನೂ ಹೊರಬೀಳಲಿಲ್ಲ ಆದ್ದರಿಂದ ಅದರ ವಿಷಯ ಹೆಚ್ಚು ಹೇಳಲು ಸಾಧ್ಯವಿಲ್ಲ. ಆದರೂ ಕೂಡ ಮುಂಬಯಿ ಖಿಲಾಫತ್ ಕಮಿಟಿಯ ಸೆಕ್ರೆಟರಿಗಳಲ್ಲೊಬ್ಬರಾದ ಮಿ. ರಫೀಉದ್ದೀನ ಅಹಮ್ಮದ ಸಾಹೇಬರು ಮುಂಬಯಿ ಕೌನ್ಸಿಲಿನಲ್ಲಿ ಖಾಲಿಯಾಗಿದ್ದ ಒಂದು ಜಾಗೆಗೋಸ್ಕರ ಉಮೇದ್ವಾರರಾಗಿ ನಿಂತಿದ್ದರು. ಇದರಿಂದ ಮುಸಲ್ಮಾನರ ಮತವು ಹೇಗೆ ಬದಲಾಗುತ್ತ ಹೋಗಿದೆಂಬುದು ಸ್ಪಷ್ಟವಾಗುತ್ತದೆ. ಖಿಲಾಪತ್ತ ಸಂಬಂಧ ಹಿಂದುಗಳು ಕೌನ್ಸಿಲ ಮೇಲೆ ಬಹಿಷ್ಕಾರಹಾಕೋಣ ಮತ್ತು ಅದೆ ಖಿಲಾಪತ್ತ ಕಮಿಟಿಯ ಸೆಕ್ರೆಟರಿಗಳು ಕೌನ್ಸಿಲಿಗೆ ಉಮೇದ್ವಾರರಾಗಿ ನಿಲ್ಲೋಣ, ಇದು ಏನನ್ನು ತೋರಿಸುತ್ತದೆ ಎಂಬುದನ್ನು ಎಲ್ಲರೂ ನಿರ್ವಿಕಾರ ರೀತಿಯಿಂದ ಅವಶ್ಯ ಆಲೋಚಿಸತಕ್ಕದ್ದು. ಬಹಿಷ್ಕಾರವು ವಸ್ತುತಃ ಯೋಗ್ಯವಿರಲಿ, ಅಥವಾ ಅಯೋಗ್ಯವಿರಲಿ, ಎಲ್ಲರಿಗೆ ಸಮ್ಮತವಿರಲಿ, ಸಮ್ಮತವಿಲ್ಲದಿರಲಿ ಬಹಿಷ್ಕಾರದ ಢೊಲನ್ನು ಬಾರಿಸುತ್ತಿರಬೇಕೆಂದಿದ್ದಕ್ಕೆ, ಕೆಲವು ದುರಾಗ್ರಹೀಅಸಹಕಾರಿಗಳಿಗೆ ನಮ್ಮ ಯಾವ ಹೇಳಿಕೆಯೂ ಇಲ್ಲ. ಆದರೆ ಇತರ ಎಲ್ಲ ಸಮಂಜಸ ಜನರಿಂದ ಈ ಪ್ರಶ್ನೆಯನ್ನು—ಕೌನ್ಸಿಲ ಬಹಿಷ್ಕಾರದ್ದುಪ್ರಶ್ನೆಯನ್ನು ನಿರ್ವಿಕಾರದೃಷ್ಟಿಯಿಂದ ಆಲೋಚನೆ ಮಾಡುವ ಸಮಯವು ಬಂದದೆ.

೫. ಹಿಂದುಸ್ಥಾನಕ್ಕೆ ಸುಧಾರಣೆ ಕೊಟ್ಟರೂ ಬ್ರಹ್ಮದೇಶಕ್ಕೆ ಮಾತ್ರ ಕೊಟ್ಟದ್ದಿಲ್ಲ. ಈ ಎರಡೂ ದೇಶಗಳು ಬಹಳ ಸಮೀಪದಲ್ಲಿದ್ದು ಎರಡೂ ಪ್ರಾಂತಗಳು ಒಂದೆ ರಾಜ್ಯಕ್ಕೆ ಒಳಪಟ್ಟಿದೆ. ಅಲ್ಲದೆ ಬ್ರಹ್ಮದೇಶದ ಜನರೂ, ಹಿಂದುದೇಶದ ಜನರೂ ಇತರ ದೃಷ್ಟಿಯಿಂದ ಒಂದೆ ಎಂದು ಹೇಳಬಹುದು. ಸಾರಾಂಶ ಬ್ರಹ್ಮದೇಶವು ಹಿಂದುಸ್ಥಾನದ ಒಂದು ಭಾಗವೆ ಆಗಿದೆ. ಇಂಥ ಸಂಗತಿ ಇರುವಾಗ ತಾವು ಹೀಗೆ ಪಕ್ಷಪಾತ ಮಾಡಬಾರದೆಂಬ ಮನಸ್ಸಿನಿಂದಲೊ ಬ್ರಹ್ಮದೇಶಕ್ಕೆ ನಮ್ಮ ದೇಶದ ಸುಧಾರಣೆ ಲಾಗೂ ಮಾಡಲ್ಪಟ್ಟಿದೆ. ಆದ್ದರಿಂದ ಅಲ್ಲಿಯ ಕೌನ್ಸಿಲಗಳಲ್ಲೂ ಕೂಡ ಬೇಗನೆ ಇಲೆಕ್ಶನ್ ಆಗುವದಿದೆ. ಇಂಥ ಪ್ರಸಂಗದಲ್ಲಿ ಕೊಂಗ್ರೆಸ ಪಕ್ಷದವರು ಕೌನ್ಸಿಲನ್ನು ಬಹಿಷ್ಕರಿಸಬೇಕೊ ಬೇಡವೊ ಎಂಬದನ್ನು ಕುರಿತು ಆಲೋಚಿಸಲು ರಂಗೂನಿನಲ್ಲಿ ಒಂದು ಪರಿಷದ ಸೇರಿತ್ತು. ಆ ಸಂದರ್ಭದಲ್ಲಿ ಮೇಲಿನ ಪ್ರಶ್ನೆಯು ಚರ್ಚೆಗೆ ಬಂದು ರಾಷ್ಟ್ರೀಯಪಕ್ಷದ ಪುಢಾರಿಗಳು ಕೌನ್ಸಿಲಿಗೆ ಅವಶ್ಯವಾಗಿ ಹೋಗಿ ಬ್ಯುರೋಕ್ರಸಿಯೊಡನೆ ಯುದ್ಧ ಮಾಡಬೇಕು ಎಂಬೀ ಅರ್ಥದ ಠರಾವು ಪಾಸಾಯಿತು. ಈ ವರ್ತಮಾನವನ್ನು ಕೇಳಿ ನಮ್ಮಲ್ಲಿಯ ಅಸಹಕಾರಿಗಳು ಸ್ವಲ್ಪಮಟ್ಟಿಗೆ ವಿಷಾದಪಟ್ಟಾರು. ಆದರೆ ಬ್ರಹ್ಮದೇಶದ ಜನರಿಗೆ ಸ್ವರಾಜ್ಯವು ಬೇಡವೆಂತಿಲ್ಲ. ನಮಗೆ ಎಷ್ಟು ಸ್ವರಾಜ್ಯವು ಅಗತ್ಯವಿದೆಯೋ, ಅಷ್ಟೆ ಅವರಿಗೂ ಅವಶ್ಯಕವಿದೆ. ಸ್ವರಾಜ್ಯಸಂಪಾದನೆಗೆ ಕೌನ್ಸಿಲ ಹೊರಗಿನಿಂದ ಚಳವಳವೂ ಹೇಗೆ ಅವಶ್ಯಕವಿದೆಯೋ, ಹಾಗೆಯೆ ಕೌನ್ಸಿಲ ಮುಖಾಂತರ ಅತಿ ಬಲವತ್ತರವಾದ ಚಳವಳವೂ ಅಗತ್ಯವಿದೆ. ಇದೆ ಬ್ರಹ್ಮೀಜನರಿಗೆ ಯೋಗ್ಯ ಮತ್ತು ಶ್ರೇಯಸ್ಕರ ಕಂಡಿದೆ. ಇತ್ತಕಡೆಗೆ ನಮ್ಮ ಅಸಹಕಾರಿಗಳು ಕೂಡ ಲಕ್ಷ್ಯಕೊಟ್ಟಾರೆಂದು ನಾವು ನಂಬಿದ್ದೇವೆ. ಆದರೆ ಕೌನ್ಸಿಲಿಗೆ ಹೋಗುವ ಪ್ರಸ್ತಾಪವು ಬಂದೊಡನೆ ಕೆಲವು ದುರಾಗ್ರಹಿಗಳು ಅವರನ್ನು ದೇಶದ್ರೋಹಿ, ಸ್ವಾರ್ಥಿ ಎಂದು ಕರೆಯುತ್ತಾರೆ. ಆದರೆ ಇವರ ಈ ಮಾತಿನಲ್ಲಿ ಎಳ್ಳಷ್ಟು ಸತ್ಯವಿಲ್ಲ. ಯಾಕಂದರೆ ಕೌನ್ಸಿಲಿಗೆ ರಾಷ್ಟ್ರೀಯ ಪಕ್ಷದವರು ಹೋಗುವದು ಸ್ವಾರ್ಥದೃಷ್ಟಿಯಿಂದಲ್ಲ. ಅಥವಾ ತಮಗೆ ಜನರು 'ನಾಮದಾರ' ಎಂಬ ಪದವಿಯನ್ನು ಕೊಡಬೇಕೆಂದಲ್ಲ. ಇತರರು ಹೇಗೆ ಬ್ಯುರೋಕ್ರಸಿಯೊಡನೆ ಹೋರಾಡುತ್ತಾರೊ ಹಾಗೆಯೆ ತಾವೂ ಕೂಡ ಕೌನ್ಸಿಲಿನಲ್ಲಿ ಹೋರಾಡುವೆವು ಎಂಬೀ ಉದ್ದೇಶದಿಂದಲೆ ಅವರು ಕೌನ್ಸಿಲುಗಳಿಗೆ ಹೋಗಬಿಚ್ಛಿಸುತ್ತಾರೆ. ಇರಲಿ. ಬ್ರಹ್ಮದೇಶದಲ್ಲೂ ಕೂಡ ಕೆಲವರು ಇಲ್ಲಿಯ ದುರಾಗ್ರಹಿಗಳಂತೆ ಕೌನ್ಸಿಲಿಗೆ ಹೋಗಕೂಡದೆಂಬ ಹಟವನ್ನು ಹಿಡಿದಿದ್ದಾರೆ. ಇವರು ಸತ್ಯಾಂಶವನ್ನು ಲಕ್ಷಕ್ಕೆ ತರುವದಿಲ್ಲವೆಂದು ತೋರುತ್ತದೆ. ಅಸಹಕಾರಿತೆಯ ಮುಖ್ಯಾಂಶವು ಕಾಯಿದೆ ಭಂಗದಲ್ಲಿಯೆ ಇದೆ. ಯಾವಾಗ ಅದು ಬೇಡವೆಂದು ಹೇಳತೊಡಗಿದ್ದಾರೊ ಆಗ ಅಸಹಕಾರಿತೆಯ ಸ್ವಾರಸ್ಯವು ಹೋಯಿತು. ರಾಷ್ಟ್ರೀಯ ಪಕ್ಷದವರು ಕೌನ್ಸಿಲಿಗೆ ಇಷ್ಟರ ವರೆಗೆ ಹೋಗದಿದ್ದರೂ ಅವರ ಸ್ಥಾನವನ್ನು ಆಕ್ರಮಿಸಿದಂಥ ಶಾಂತಪಕ್ಷದವರಿಂದ ಮಾಡಲ್ಪಟ್ಟ ಕಾಯದೆಗಳನ್ನು ನೀವು-ಕೌನ್ಸಿಲ ಬಹಿಷ್ಕಾರವನ್ನಿಚ್ಛಿಸುವವರು-ಮಾನ್ಯಮಾಡುತ್ತೀರಲ್ಲವೆ? ಮಾನ್ಯಮಾಡದೆ ಇರಲು ನಿಮ್ಮಿಂದ ಸಾಧ್ಯವಿಲ್ಲ. ಯಾಕಂದರೆ ಹಿಂದುಸ್ಥಾನದಲ್ಲಿ ಆಸೇತುಹಿಮಾಚಲ ಪರ್ಯಂತ ಶಾಂತತೆಯು ಯಾವಾಗ ನೆಲೆಗೊಂಡಿತೋ ಆಗಲೆ ಕಾಯಿದೆಭಂಗವನ್ನು ಮಾಡಬೇಕೆಂದು ಮಹಾತ್ಮಾ ಗಾಂಧಿಗಳು ಆಗಾಗ್ಗೆ ಹೇಳುತ್ತಿದ್ದರು. ಸಾರಾಂಶ, ಕಾಯದೆಭಂಗದ ಯುಗವು ಬರಲಿಕ್ಕೆ ಎಷ್ಟೋ ಸಮಯವಿದೆ. ಆದ್ದರಿಂದ ಕೌನ್ಸಿಲಿನ ಉಪಯೋಗವನ್ನು ಇನ್ನಾದರೂ ಹಿಂದಿಗಳು ತೆಕ್ಕೊಂಡಾರೆಂದು ನಾವು ನಂಬಿದ್ದೇವೆ.

ಮಂಗಳೂರು.

"ನಾನು ವೈದಿಕ ಧರ್ಮದ ಅನುಯಾಯಿಯಾದ್ದರಿಂದ ಶ್ರಮವಿಭಾಗದ ತತ್ವದ ಮೇಲಿಂದ ವರ್ಣವ್ಯವಸ್ಥೆಯನ್ನು ನಂಬುವವನಾಗಿದ್ದೇನೆ. ಅನುವಂಶಿಕ ಜಾತಿಭೇದವು (Hereditary caste system) ವೇದಾದಿ ಸ್ವಶಾಸ್ತ್ರ ವಿರುದ್ಧವಾಗಿದೆ. ಕೆಲವು ದಿವಸಗಳ ಹಿಂದೆ ಈ ವಿಷಯವನ್ನು ಚರ್ಚಿಸಲಿಕ್ಕೆ ನಾನು ಇಲ್ಲಿನ ಪಂಡಿತರಿಗೆ ಆಮಂತ್ರಣ ಪತ್ರಗಳನ್ನು ಕಳುಹಿಸಿಕೊಟ್ಟಿದ್ದೆನು. ಕಳೆದ ತಾ. ೧೭ಕ್ಕೆ ನಾವೆಲ್ಲರೂ ಗವರ್ನಮೆಂಟ್ ಕೊಲೇಜಿನ ಉಪಾಧ್ಯಾಯರ ಕೋಣೆಯಲ್ಲಿ ಸಂಜೆಗೆ ೫ ಗಂಟೆಗೆ ಮುಂದೆ ಆಗಲಿಕ್ಕಿದ್ದ ಶಾಸ್ತ್ರದ ಚರ್ಚೆಯ ರೀತಿ ಮುಂತಾದ್ದನ್ನೂ ನಿರ್ಣಯಿಸಲಿಕ್ಕೆ ಕೂಡಿದ್ದೆವು. ಮೊದಲು ಅಧ್ಯಕ್ಷರ ನೇಮಕದ ವಿಷಯವು ಚರ್ಚೆಗೆಬಂತು. ಇಂಥ ಸಭೆಗಳಲ್ಲಿ ಸಭೆಯನ್ನು ವ್ಯವಸ್ಥೆಗೊಳಿಸುವುದು ಮಾತ್ರ ಅಧ್ಯಕ್ಷನ ಕರ್ತವ್ಯವಾಗಿರಬೇಕು, ಹೊರತು ನಿರ್ಣಯ ಕೊಡುವುದಲ್ಲ, ಯಾಕೆಂದರೆ ಸರ್ವಥಾ ನಿಷ್ಪಕ್ಷಪಾತಿಯಾದ ಅಧ್ಯಕ್ಷನು ಸಿಗುವುದು ಬಹಳ ಅಸಾಧ್ಯವು. ಶ್ರೋತೃಗಳು ಈ ನಿರ್ಣಯವನ್ನು ನಿರ್ಣಯಿಸಬಹುದು. ಎಂದು ನಾನು ಅಭಿಪ್ರಾಯಪಟ್ಟೆನು. ಆದರೆ ಅಧ್ಯಕ್ಷನು ನಿರ್ಣಯವನ್ನು ಕೊಡಬೇಕು, ಮತ್ತು ಅಂಥ ಯೋಗ್ಯತೆಯವನೆ ಅಧ್ಯಕ್ಷನಾಗಬೇಕು, ಶ್ರೋತೃಗಳು ಸಂಸ್ಕೃತವನ್ನರಿಯದವರಾದರೆ ಮತ್ತು ವೇದಾರ್ಥವನ್ನು ತಿಳಿಯದವರಾದರೆ ಅವರ ನಿರ್ಣಯವು ಪ್ರಯೋಜನವಿಲ್ಲ ಎಂದು ಪಂಡಿತರು ದೃಢವಾಗಿ ಹೇಳಿದರು. ಈಗಿನ ಲೋಕಸತ್ತಾವಾದದ ದಿವಸಗಳಲ್ಲಿ ಒಬ್ಬನ ಕೈಗೆ ನಿರ್ಣಯಿಸುವ ಅಧಿಕಾರವನ್ನು ಕೊಡುವುದು ಚಂದವಲ್ಲ ಎಂದು ಹೇಳಿದ ಬಳಿಕ ನಿರ್ಣಾಯಕ ಮಂಡಲಿಯ ಪ್ರಸ್ತಾಪವು ಬಂತು. ಈ ನಿರ್ಣಾಯಕ ಮಂಡಲಿಯ ಹೆಸರುಗಳ ಚರ್ಚೆಯಲ್ಲಿ ಕೂಡ ನಿಶ್ಚಯವಾಗದೆ ಕತ್ತಲೆಯಾಯಿತು. ಆಗ ಈ ಪ್ರಸ್ತುತ ಚರ್ಚೆಯು ಇದರ ನಿರ್ಣಯವಾಗುವ ವರೆಗೆ ಮುಂದರಿಸಲಾಯಿತು," ಎಂದು ಪ್ರಕಟಿಸಲು ಧರ್ಮದೇವ ಸಿದ್ಧಾಂತಲಂಕಾರ ಇವರು ತಿಳಿಸುತ್ತಾರೆ.

ಜಿಲ್ಲಾಭಿವೃದ್ಧಿ ಸಂಘದವರು ಇಟ್ಟ ಬೀಜದ ಹೋರಿಗಳಿಂದ ಜೋಡಿ ಆದ ದನಗಳ ಮ್ಹಾಲಿಕರು ಸದರಿ ದನವು ಕರು ಹಾಕಿದ ಕೂಡಲೇ ತಮ್ಮ ಆಫೀಸಿಗೆ ತಿಳಿಸಬೇಕಾಗಿ ಸದರಿ ಆಫೀಸಿನವರು ಈ ಮೂಲಕ ತಿಳಿಸುತ್ತಾರೆ.

ಮಂಗಳೂರ ತಾಲೂಕು ಬೋರ್ಡಿನ ಈ ತಿಂಗಳ ಅಧಿವೇಶನವು ಕಾರ್ನಾಡಿನಲ್ಲಿರುವ ಮುಲ್ಕಿ ಹಳೇ ಡಿಪ್ಯುಟಿ ತಹಸಿಲ್‌ದಾರರ ಆಫೀಸಿನಲ್ಲಿ ಬರುವ ತಾರೀಕು ೨೫ರಲ್ಲಿ ಸೇರುವುದು.

ಆರ್ಯಸಮಾಜದ ಸ್ಥಾಪಕರಾದ ಮಹರುಷಿ ಸ್ವಾಮಿ ದಯಾನಂದ ಸರಸ್ವತಿಯವರ ೩೯ನೆಯ ಪುಣ್ಯತಿಥಿಯನ್ನು ಇಲ್ಲಿಯ ಆರ್ಯಸಮಾಜದವರು ತಮ್ಮ ಮಂದಿರದಲ್ಲಿ ನಾಳೆ ಬೆಳಿಗ್ಗೆ ಆಚರಿಸುವರು. ಸಾಯಂಕಾಲ ೫ ಗಂಟೆಗೆ ಲೈನ್ ಮೈದಾನಿನಲ್ಲಿ ಸ್ವಾಮಿ ದಯಾನಂದರ ಜೀವನ ಚರಿತ್ರೆ ಮತ್ತು ಅವರು ಮಾಡಿದ ಮಹತ್ಕಾರ್ಯಗಳ ಕುರಿತು ಭಾಷಣಗಳಾಗುವುವು.

ಇಲ್ಲಿಯ ಗವರ್ನಮೆಂಟ ಕೊಲೇಜಿನ ಪ್ರಿನ್ಸಿಪಾಲರಾದ ಮಿ. ಅರುಳಾನಂದಮ್ ಪಿಳ್ಳೆಯವರಿಗೆ ವರ್ಗವಾದುದರಿಂದ ಈಗ ಮಿ. ಜಿ. ಕೆ. ಚೆಟೂರವರು ಪ್ರಿನ್ಸಿಪಾಲರಾಗಿ ಬಂದಿರುವರು. ಇವರು ಸರ್. ಶಂಕರನ್ ನಾಯರರ ಸೋದರಳಿಯರಾಗಿರುವರಂತೆ.

ಎಕ್ಸಲೂಜನ್ಸ ಟೀಮಿಗೂ ಹಿಂದೂ ಟೀಮಿಗೂ ನಡೆದ ಕೊರನೇಶನ್ ಪಂದ್ಯಾಟದಲ್ಲಿ ಹಿಂದೂ ಟೀಮು ಗೆದ್ದಿತು.

ಇಲ್ಲಿಯ ತಿಲಕ ವಿದ್ಯಾಲಯದಲ್ಲಿ ಈಗ ೫ ಮುಂಡಾಳ, ೧ ಮುಗೆರ, ೧ ಮಾದಿಗ ೫ ಕೊರಗ ಹೀಗೆ ೧೨ ಮಂದಿ ಅಸ್ಪೃಶ್ಯ ವರ್ಗದ ವಿದ್ಯಾರ್ಥಿಗಳಿರುವದಾಗಿ ತಿಳಿದುಬರುತ್ತದೆ. ಈ ವಿದ್ಯಾರ್ಥಿಗಳಿಗೆ ಪ್ರತಿ ಬೆಳಿಗ್ಗೆ ಸ್ನಾನಮಾಡಿಸುವ ಪಿಲೆವಾರಿಮಾಡಿದೆ ಮತ್ತು ಸ್ವಚ್ಛವಾದ ಉಡುಪುಕೊಟ್ಟಿವೆ. ಮಧ್ಯಾಹ್ನ ಈ ಹುಡುಗರಿಗೆ ತಿಲಕ ವಿದ್ಯಾಲಯದಲ್ಲಿ ಊಟಕೊಡಲಾಗುತ್ತದೆ. ಇವರಲ್ಲಿ ಇಬ್ಬರು ನೇಯುವುದನ್ನು ಕಲಿಯುತ್ತಿದ್ದಾರೆ.

ಇದೇ ತಿಂಗಳ ತಾ. ೨೯ನೆ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ಇಲ್ಲಿ ತಿಲಕ ಮಹಾ ವಿದ್ಯಾಲಯದಲ್ಲಿ ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯ ಮಹಾಸಭೆಯು ಜರಗುವುದು. ಎಲ್ಲಾ ಸದಸ್ಯರು ಬರಬೇಕಾಗಿ ವಿನಂತಿ.

ಸಭೆಯ ಮುಂದಿಡತಕ್ಕ ವಿಷಯಗಳು—೧. ಕಳೆದ ವರ್ಷದ ಜನವರಿ ತಿಂಗಳಿನಿಂದ ಈ ವರ್ಷದ ಜೂನ್ ಆಖೈರಿ ವರೆಗಿನ ಲೆಖ್ಖದ ವಿಷಯದಲ್ಲಿ ಪರಿಶೋಧಕರ ಅಭಿಪ್ರಾಯವನ್ನು ಆಲೋಚಿಸುವುದು. ೨. ಡಿಸೆಂಬರ ತಿಂಗಳಲ್ಲಿ ಗಯಾಗಲ್ಲಿ ಕೂಡಲಿಕ್ಕಿರುವ ಕಾಂಗ್ರೆಸಿಗೆ ನಮ್ಮ ಪ್ರತಿನಿಧಿಗಳನ್ನು ಚುನಾಯಿಸುವುದು. ೩. ಕರ್ನಾಟಕ ಪ್ರಾಂತಿಕ ಕಮಿಟಿಗೆ ಪ್ರತಿನಿಧಿಗಳನ್ನು ಆರಿಸುವುದು. ೪. ಸಭೆಯ ಮುಂದೆ ಬರಬಹುದಾದ ಇತರ ವಿಷಯಗಳು.

ಪಿ. ಸೊ. ಚುನಾವಣೆಗೆ ನಿಲ್ಲುವವರು ೨೮—೧೦—೧೯೨೨ ಮಧ್ಯಾಹ್ನ ೩ ಗಂಟೆಯ ಮೊದಲೆ ಹೆಸರುಗಳನ್ನು ಕಾರ್ಯದರ್ಶಿಯರಿಗೆ ಕೊಡತಕ್ಕದ್ದು.

ಮಂ.ತಾ. ಕೊ.ಕ. ಕಮಿಟಿ
೧೯–೧೦–೧೯೨೨.
ಮು. ಉಮೇಶರಾವ್,
ಕಾರ್ಯದರ್ಶಿ.

ನೋಟೀಸು.

Deepavali Reduction sales—ದೀಪಾವಳಿ ಹಬ್ಬದ ಸಮಾರಂಭಕ್ಕಾಗಿ ಮಂಗಳೂರು ಶಹರು ರಥಬೀದಿ, ಜವುಳಿ ಸಾಹುಕಾರ ಸುಜೀರ ನಾಗಪ್ಪನಾಯ್ಕ, ಕೆ. ಅಪ್ಪಯ ಶ್ಯಾನಭಾಗ ಕಂಪೆನಿಯವರು ತಮ್ಮ ಮಳಿಗೆಯ ಮಹಾಲನ್ನು ಅಂದರೆ ವಿಲಾಯತಿ ಕೋಟಿಂಗು, ಶರ್ಟಿಂಗು ವಸ್ತ್ರ, ಟೋಪಿಗಳು, ಶಿಲ್ಕು ವಸ್ತ್ರಗಳು, ಜರಿಧೋತ್ರಗಳು, ರುಮಾಲುಗಳು, ಧೋತಿಗಳು, ವಿವಿಧ ರೇಷ್ಮೆ ಅಂಚಿನ ಶ್ಯಾಲುಗಳು, ಸಾದಾ ಪಾಟ್ಟಾಟ ಸೇಲಂ ಶೀರೆಗಳು ವಗೈರೆಯನ್ನು (೫ ಹಪ್ತೆಗಳ ವರೆಗೆ) ಇವರ ಚಾಲ್ತಿ ಮಾರಾಟದ ದರಕ್ಕಿಂತ ರುಪಾಯಿಗೆ ೩ ಆಣೆಯಂತೆ ಡಿಸ್ಕೌಂಟು ಕೊಟ್ಟು ನಗದಿಗೆ ವಿಕ್ರಯಮಾಡುವದಾಗಿ ಈ ಮೂಲಕ ಸರ್ವಜನರಿಗೆ ತಿಳಿಸುತ್ತಾರೆ.

ತುರ್ಕಿಯ ವಿಜಯ.

ತುರ್ಕಿಯ ಪ್ರಶ್ನೆಯ ಕುರಿತು ಸರಕಾರವು ಯೋಗ್ಯವಾಗಿ ವರ್ತಿಸುವುದಿಲ್ಲವೆಂದು ಇಂಗ್ಲಂಡಿನ ಸರಕಾರದವರ ಮೇಲೆ ತಂದ ಆರೋಪವನ್ನು ಖಂಡಿಸುವುದಕ್ಕಾಗಿ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಅಮಾತ್ಯರಾದ ಲೊಯ್ಡ ಜೋರ್ಜರು ಮೆಂಚೆಸ್ಟರ ಪಟ್ಟಣದಲ್ಲಿ ತುರ್ಕಿಯ ಸಮಸ್ಯೆಯನ್ನು ಕುರಿತು ಭಾಷಣಮಾಡಿದರು. ಅವರು ತಮ್ಮ ಭಾಷಣದಲ್ಲಿ ಸ್ಮಿರ್ನಾದಲ್ಲಿ ಉಂಟಾದ ಘಾತಪಾತಗಳಿಗೆ ಯಾರು ಕಾರಣರೆಂಬ ವಿಷಯವನ್ನೂ ಗ್ರೀಕರು ತುರ್ಕರನ್ನು ರೇಗಿಸಿದರೋ ಅಥವಾ ತುರ್ಕರು ಗ್ರೀಕರನ್ನು ಸಿಟ್ಟಿಗೆಬ್ಬಿಸಿದರೋ ಎಂಬ ವಿಷಯವನ್ನು ತಾನು ಈಗ ಚರ್ಚಿಸುವುದಿಲ್ಲವೆಂದು ಹೇಳಿ, ತುರ್ಕರು ೧೯೧೪ನೇ ಇಸವಿಯಿಂದ ಮಿಲಿಯ ಗಟ್ಟಲೆ ಜನರನ್ನು ಕ್ರೂರವಾಗಿ ಕೊಂದರೆಂದು ಒಫಿಸಿಯಲ್ ವರದಿಯಿಂದ ತಿಳಿದು ಬರುವ ಪ್ರಕಾರ ಅವರ ದುಷ್ಟತನಕ್ಕೆ ಇದೇ ಸಾಕ್ಷಿಯಾಗಿದೆ ಎಂದು ನುಡಿದರು. ಮತ್ತು ಈಗ ಜಲಸಂಧುಗಳನ್ನು ಹೇಗೆ ಭದ್ರಪಡಿಸಿಕೊಂಡಿರಬೇಕು ಎಂಬದಾಗಿ ಮಾತನಾಡಿದರು. ಬಳಿಕ ಜಲಸಂಧುಗಳಲ್ಲಿರುವ ಬ್ರಿಟಿಷರ ಸೈನ್ಯವನ್ನು ಹಿಂದಕ್ಕೆ ತರಿಸಬೇಕೆಂದು ಇಂಗ್ಲಂಡಿನಲ್ಲಿ ಎದ್ದಿರುವ ಗದ್ದಲವನ್ನು ಕುರಿತು ಲೊಯಿಡ ಜೋರ್ಜರು ಮಾತನಾಡುವಾಗ, ಈ ಮೊದಲು ಥಕ್ಕನೆ ಅಲ್ಲಿರುವ ಸೈನ್ಯವನ್ನು ಹಿಂದಕ್ಕೆ ತರಿಸುತ್ತಿದ್ದರೆ ಎಂಥಾ ಅಶಾಂತತೆ ಉಂಟಾಗುತ್ತಿತ್ತೆಂಬ ವಿಷಯವನ್ನು ಬಿಡಿಸಿ ಹೇಳಿ, ತನ್ನ ಅಭಿಪ್ರಾಯದಂತೆ ಜಲಸಂಧುಗಳಲ್ಲಿ ಸೈನ್ಯವನ್ನಿಟ್ಟಿದ್ದರಿಂದ ಕಳೆದ ಯುದ್ಧದಂಥ ಭಯಂಕರ ಪ್ರಸಂಗವು ತಪ್ಪಿತು ಎಂದು ಮುಂತಾಗಿ ಭಾಷಣವನ್ನು ಮಾಡಿದರು.

ಫ್ರಾನ್ಸಿನಲ್ಲಿ ಅನೇಕರು ಲೊಯಿಡ ಜೋರ್ಜರ ಭಾಷಣವನ್ನು ಖಂಡಿಸುತ್ತಿದ್ದಾರೆ. ಲೀಟೆಮ್ಸ ಎಂಬ ಪತ್ರವು ಹೇಳುವುದೇನೆಂದರೆ, "ಲೊಯಿಡ ಜೋರ್ಜರೇ ಈಗ ಬ್ರಿಟನಿನ ಏಕಾಧಿಪತಿಗಳಂತಿದ್ದಾರೆ. ಹೊಸದಾಗಿ ನಡೆಯಲಿಕ್ಕಿರುವ ಚುನಾವಣೆ ಸಮಯದಲ್ಲೂ ತಾನೆ ಪುನಃ ಆರಿಸಲ್ಪಡಬೇಕೆಂದು ಇವರ ಪ್ರಯತ್ನವು ನಡೆಯುವುದು. ಮತ್ತು ಜನರು ತುರ್ಕಿಯ ಮೇಲೆ ಹಗೆಯನ್ನು ಕಟ್ಟಿಕೊಳ್ಳುವಂತೆ ಇವರು ಪ್ರಯತ್ನಿಸುವರು. ಅಲ್ಲದೆ ಜನರು ಫ್ರಾನ್ಸ್ ಮತ್ತು ಇಟೆಲಿ ರಾಷ್ಟ್ರಗಳ ಮೇಲೆಯೂ ದ್ವೇಷವನ್ನು ಬೆಳೆಸುವಂತೆ ಸಾಧಿಸುತ್ತಿದ್ದಾರೆ. ಜಿಬ್ರಾಲ್ಟರ್ ಮತ್ತು ಸುಯೇಜ್ ಕೆನಲುಗಳ ಸರ್ವ ಸ್ವತಂತ್ರವನ್ನು ಬ್ರಿಟಿಷರು ಹೊಂದಿಕೊಂಡಿರುವ ಹಾಗೆ ಡಾರ್ಡನೆಲಿಸ್‌ನ ಸ್ವತಂತ್ರವನ್ನೂ ಬರುವ ಸಂಧಿ ಪರಿಷತ್ತಿನಲ್ಲಿ ಪಡೆಯಬೇಕೆಂದು ಲೊಯ್ಡ ಜೋರ್ಜರು ಅಪೇಕ್ಷಿಸಿ ಕೊಂಡಿರುವಂತೆ ತೋರುತ್ತದೆ.

ಬರುವ ದಶಂಬರ ತಿಂಗಳೊಳಗಾಗಿಯೇ ಹೊಸ ಪಾರ್ಲಿಮೆಂಟನ್ನು ಸ್ಥಾಪಿಸುವ ಚಳವಳವು ನಡಿಯುತ್ತಿದೆ. ಇಂಗ್ಲೆಂಡಿನ ಆಯಾಯ ಕಡೆಗಳಲ್ಲಿ ರಾಜಕಾರಣ ಧುರಂಧರರ ಭಾಷಣಗಳಾಗುತ್ತಿವೆ.

ಏಸಿಯಾಮೈನರಿನಿಂದ ಆಶ್ರಯವನ್ನು ಹುಡುಕಿಕೊಂಡು ಗ್ರೀಸ್ ದೇಶ ಮೊದಲಾದ ಪ್ರಾಂತ್ಯಗಳನ್ನು ಸೇರಿದವರ ಸಂಖ್ಯೆಯು ಸುಮಾರು ೭೫೦ ಸಾವಿರವಿರಬಹುದಂತೆ. ಇವರು ಬಹಳ ದೀನ ಸ್ಥಿತಿಯಲ್ಲಿರುವುದರಿಂದ ಇವರಿಗೆ ಸಹಾಯಮಾಡುವ ಪ್ರಯತ್ನಗಳು ನಡಿಯುತ್ತಿವೆ. ಕ್ರೈಸ್ತರು ಥ್ರೆಸನ್ನು ಬಿಟ್ಟು ಬೇರೆಕಡೆಗೆ ಹೋಗದಂತೆ ಫ್ರೆಂಚರು ಪ್ರಯತ್ನಿಸುತ್ತಿದ್ದಾರಂತೆ. ಆದರೆ ಇವರ ಪ್ರಯತ್ನದಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ. ಮುಡಿಯನಾ ಪರಿಷತ್ತಿನ ಶರ್ತಗಳ ಮೇರೆಗೆ ಇನ್ನು ೪೫ ದಿನಗಳ ವರೆಗೆ ತುರ್ಕರು ಥ್ರೆಸನ್ನು ಪ್ರವೇಶಿಸಲಿಕ್ಕಿಲ್ಲವೆಂದು ಗ್ರೀಕರು ಪ್ರಕಟಿಸಿದ್ದಾರೆ.

ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ಮೀಟಿಂಗು ಡಿಲ್ಲಿಯಲ್ಲಿ ಸೇರಿ ಮುಸ್ತಾಫಾ ಕೆಮಾಲ್ ಪಾಶಾ ಇವರಿಗೆ ಒಂದು ಖಡ್ಗವನ್ನೂ, ಅಂಗೋರಾ ಸರಕಾರಕ್ಕೆ ಎರಡು ವಿಮಾನಗಳನ್ನೂ ವಿಜಯದ ಸಂತೋಷದ ಬಹುಮಾನವಾಗಿ ಕೊಡಬೇಕಾಗಿ ನಿಶ್ಚಯಿಸಲಾಗಿದೆ. ಮತ್ತು ಈ ಬಹುಮಾನಗಳನ್ನು ಕೊಡುವುದಕ್ಕೆ ಅಂಗೋರಕ್ಕೆ ಒಂದು ಡೆಪ್ಯುಟೇಶನನ್ನು ಕಳುಹಿಸಬೇಕಾಗಿ ಸಹ ನಿರ್ಧರಿಸಲಾಗಿದೆ.

ಕಾರ್ಯಕ್ರಮದಲ್ಲಿ ಬದಲಾವಣೆ.

ಅಯ್ಯಾ ಸ್ವದೇಶಾಭಿಮಾನಿ ಪತ್ರಕರ್ತರೇ,

ಅನೇಕ ವರ್ಷಗಳಿಂದ ಪತ್ರವನ್ನು ನಡೆಸಿ ನಮ್ಮ ಜಿಲ್ಲೆಯಲ್ಲಿ ಎಲ್ಲರ ಆದರಕ್ಕೆ ಪಾತ್ರರಾಗಿದ್ದ ನೀವು ಕಳೆದ ಸಾರಿ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಬದಲಾವಣೆಗಳನ್ನು ಸೂಚಿಸಿ ಬರೆದ ಅಗ್ರಲೇಖವನ್ನು ಓದಿ ವಿಷಾದವಾಗುತ್ತಿದೆ. ನಿಮ್ಮ ಪತ್ರದ ವಾಚಕರ ಮುಂದೆ ನನ್ನ ಕೆಲವು ಅಭಿಪ್ರಾಯಗಳನ್ನಿಡುವುದು ಅಗತ್ಯವೆಂದು ತೋರುತ್ತದೆ. ಆದುದರಿಂದ ಉದಾರಬುದ್ಧಿಯಿಂದ ಈ ಪತ್ರವನ್ನು ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಆ ಅಗ್ರಲೇಖದಲ್ಲಿ ನೀವು ಒಟ್ಟಾರೆ ಹೇಳುವುದೇನೆಂದರೆ ಶಾಲಾ ಕಾಲೇಜುಗಳಿಗೆ ಹೆಚ್ಚಿನ ವಿದ್ಯಾರ್ಥಿಗಳು ಬಹಿಷ್ಕಾರವಿಡಲಿಲ್ಲ. ವಕೀಲರು ವಕೀಲಿಯನ್ನು ಬಿಡಲಿಲ್ಲ. ಈ ಎರಡು ಸಂಗತಿಗಳಲ್ಲಿ ಕಾಂಗ್ರೆಸ್ಸಿನವರ ಕಾರ್ಯಕ್ರಮಕ್ಕೆ ಸಂಪೂರ್ಣ ಅಪಜಯವಾಯಿತು. ಒಂದು ದೃಷ್ಟಿಯಿಂದ ಕೌನ್ಸಿಲುಗಳ ಬಹಿಷ್ಕಾರದ ಮಟ್ಟಿಗೆ ಜಯವಾಯಿತೆನ್ನಬಹುದಾದರೂ ಆ ಕೌನ್ಸಿಲುಗಳು ಈಗ ನಡೆಯುತ್ತ ಇವೆ ಎಂಬುದರಿಂದ ಕಾಂಗ್ರೆಸ್ಸಿಗೆ ಸಂಪೂರ್ಣ ಜಯವಾಯಿತೆನ್ನಲು ಸಾಧ್ಯವಿಲ್ಲ. ಆಜ್ಞಾಭಂಗದ ಚಳವಳವನ್ನು ಮಹಾತ್ಮಾ ಗಾಂಧಿಯವರು ಅಶಾಂತತೆಯ ಭಯದಿಂದ ಆರಂಭಿಸುವಷ್ಟರಲ್ಲಿ ನಿಲ್ಲಿಸಿಬಿಟ್ಟರು. ಈಗ ಕೆಲವರು ಕೌನ್ಸಿಲುಗಳಿಗೆ ಹೋಗಬೇಕೆನ್ನುತ್ತಾರೆ. ಅದೇ ಸಯುಕ್ತಿಕವಾಗಿ ಕಾಣುತ್ತದೆ. ಆದುದರಿಂದ ಕಾರ್ಯಕ್ರಮದಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದು ಅಗತ್ಯ. ಇಷ್ಟೆ ನಿಮ್ಮ ಅಗ್ರಲೇಖವು.

ನಮ್ಮ ಜಿಲ್ಲೆಯ ಹೆಚ್ಚಿನ ವಿದ್ಯಾರ್ಥಿಗಳು ಶಾಲಾಕಾಲೇಜುಗಳಿಗೆ ಬಹಿಷ್ಕಾರವಿಡಲಿಲ್ಲ ಎಂಬ ಸಂಗತಿಯು ನಮಗೆಲ್ಲರಿಗೆ ಗೊತ್ತಿದೆ. ಹೆಚ್ಚಿನವರು ಕಾಲೇಜುಗಳನ್ನು ಬಿಡಲಿಲ್ಲವೆಂಬುದು ಕಾಲೇಜುಗಳ ಬಹಿಷ್ಕಾರವನ್ನು ತೆಗೆದುಹಾಕಲು ಕಾರಣವಾಗಲಾರದು. ಈಗ ನಾವು ಎಷ್ಟು ಹೇಳಿಕೊಂಡರೂ ಹೆಚ್ಚಿನವರು ಚರ್ಕಗಳಲ್ಲಿ ನೂಲುತೆಗೆಯುವುದಿಲ್ಲ. ಹೆಚ್ಚಿನವರು ಖಾದಿಯನ್ನು ಧರಿಸುವುದಿಲ್ಲ. ಅದಕ್ಕಿಂತಲೂ ಹೆಚ್ಚಿನವರು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಒಪ್ಪುವುದಿಲ್ಲ. ಕಾಂಗ್ರೆಸ್ಸಿನವರು ಈ ವಿಷಯಗಳನ್ನು ಬೋಧಿಸುವುದನ್ನು ನಿಲ್ಲಿಸಬೇಕೆನ್ನುವಿರಾ? ಈಗಿನ ದಿವಸಗಳಲ್ಲಿ ಹೆಚ್ಚಿನವರಿಗೆ ಸತ್ಯ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಇಟ್ಟುಕೊಳ್ಳಿ. ಆಗ ಸತ್ಯಹೇಳಬೇಕೆಂಬ ಧರ್ಮಶಾಸ್ತ್ರದ ವಚನವನ್ನೆ ಬದಲಾಯಿಸಬೇಕೆನ್ನುವಿರಾ? ಈ ಬಹಿಷ್ಕಾರದ ಮಟ್ಟಿಗೆ ನೀವು ಸೂಚಿಸುವ ಬದಲಾವಣೆಯಾದರೂ ಏನು? ಶಾಲಾಕಾಲೇಜುಗಳಿಗೆ ಬಹಿಷ್ಕಾರವಿಟ್ಟ ನಾವು ಕೆಲವು ಮಂದಿ ವಿದ್ಯಾರ್ಥಿಗಳು ಪುನಃ ಶಾಲೆಗೆ ಸೇರಬೇಕೆಂದು ನಮಗೆ ಸೂಚಿಸುವಿರಾ? ಈ ಬಹಿಷ್ಕಾರವನ್ನು ತೆಗೆದುಹಾಕುವುದರಿಂದ ನಮಗೆ ಸಿಕ್ಕುವ ಪ್ರಯೋಜನವಾದರೂ ಏನು? ಆ ಬಹಿಷ್ಕಾರವನ್ನು ತೆಗೆದರೆ ಈಗ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳು ನಮ್ಮೊಂದಿಗೆ ಸೇರಿ ಇತರ ಕಾರ್ಯಕ್ರಮಗಳ ಮಟ್ಟಿಗೆ ಸಹಾಯಮಾಡಲಿಕ್ಕೆ ಸಾಕೆಂಬುದು ನಿಮ್ಮ ಅಭಿಪ್ರಾಯವೋ? ಬಹಿಷ್ಕಾರವು ಇದ್ದಂತೆ ಇದ್ದು ಅವರು ಈ ಕೆಲಸಗಳನ್ನೇಕೆ ಮಾಡಬಾರದು? ವಿದ್ಯಾರ್ಥಿಗಳಲ್ಲಿ ಅನೇಕರಿಗೆ ಬಹಿಷ್ಕಾರವು ನ್ಯಾಯವಾದ್ದೆಂತ ಗೊತ್ತಿದೆ. ಆದರೆ ಅವರಿಗೆ ಶಾಲೆಗಳನ್ನು ಬಿಡಲು ಸಾಧ್ಯವಾಗುವುದಿಲ್ಲ. ಅವರ ಕಷ್ಟಗಳು ನಮಗೆ ಗೊತ್ತಾಗುತ್ತವೆ. ಅವರನ್ನು ನಾವು ನಿಂದಿಸುವುದಿಲ್ಲ. ಅವರಿಗೆ ಸಾಧ್ಯವಿರುವ ಕೆಲಸಗಳ ಮಟ್ಟಿಗಾದರೂ ಅವರು ನಮಗೆ ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇವೆ. ಬಹಿಷ್ಕಾರವು ನ್ಯಾಯವಾದ್ದಲ್ಲವೆಂಬ ಅಭಿಪ್ರಾಯವಿದ್ದ ಕೆಲವು ವಿದ್ಯಾರ್ಥಿಗಳು ಇರಬಹುದು. ಅವರನ್ನು ನಾವು ತಿರಸ್ಕರಿಸುವುದಿಲ್ಲ. ಬಿನ್ನಾಭಿಪ್ರಾಯ ಕೊಡುವವರಿಗೆ ಮರ್ಯಾದೆಯಿಂದ ನಡೆಸಲು ಮಹಾತ್ಮಾಜಿಯವರು ನಮಗೆ ಕಲಿಸಿದ್ದಾರೆ. ಬಿನ್ನಾಭಿಪ್ರಾಯಗಳಿಲ್ಲದ್ದ ವಿಷಯಗಳಲ್ಲಿ ಅವರು ನಮಗೆ ಸಹಾಯಮಾಡಬೇಕಾಗಿ ನಾವು ಪ್ರಾರ್ಥಿಸುತ್ತೇವೆ. ಹೀಗಾದರೂ ಈ ವಿದ್ಯಾರ್ಥಿಗಳಿಗೆ ಹೇಳುವುದೇನು? ಯಾವ ವಿಷಯಗಳನ್ನೂ ಯೋಚಿಸದೆ ಮದ್ರಾಸ ಯೂನಿವರ್ಸಿಟಿ ಪರೀಕ್ಷೆಯ ಪಾಠ್ಯ ಪುಸ್ತಕಗಳನ್ನು ಓದುತ್ತಾ ಇರಿ ಎನ್ನುವಿರಾ?

ವಕೀಲರ ಮಟ್ಟಿಗೆ ನಾನು ಇನ್ನು ಹೆಚ್ಚು ಹೇಳಬೇಕಾಗಿಲ್ಲ. ವಕೀಲಿಯನ್ನು ಹೆಚ್ಚಿನವರು ಬಿಡಲಿಲ್ಲ. ಬಿಟ್ಟವರಲ್ಲಿ ಕೆಲವರು ಪುನಃ ಸೇರಿದರು. ಅಷ್ಟು ಮಾತ್ರಕ್ಕೆ ಬಹಿಷ್ಕಾರವನ್ನು ತೆಗೆದುಹಾಕಬೇಕೆಂದು ಹೇಳಲಿಕ್ಕೆ ಬರುವುದಿಲ್ಲ. ನಾವು ಅವರಲ್ಲಿ ಯಾರನ್ನೂ ತಿರಸ್ಕರಿಸುವುದಿಲ್ಲ. ಅವರಿಗೆ ಸಾಧ್ಯವಿದ್ದ ಅಥವಾ ಒಪ್ಪಿಗೆ ಇರುವ ಕಾರ್ಯಕ್ರಮದ ಭಾಗಗಳಲ್ಲಿ ಅವರು ನಮಗೆ ಸಹಾಯಮಾಡಬೇಕಾಗಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

ನಿಮ್ಮ ಅಗ್ರಲೇಖದ ಮುಖ್ಯಭಾಗವು ಕೌನ್ಸಿಲುಗಳ ಬಹಿಷ್ಕಾರದ ವಿಚಾರ. ಕೌನ್ಸಿಲುಗಳು ಈಗ ನಡೆಯುತ್ತ ಇವೆ ಎಂಬ ಮಾತ್ರದಿಂದ ನಮ್ಮ ಬಹಿಷ್ಕಾರವು ಪೂರ್ಣ ಯಶಸ್ವಿಯಾಗಿಲ್ಲವೆಂದು ಹೇಳುತ್ತೀರಿ. ರಾಜಕುಮಾರರು ಮೊನ್ನೆ ಮದ್ರಾಸಿನಲ್ಲಿ ಇಳಿದು ಬಂದಾಗ ಇಟ್ಟ ಬೆಂಚುಗಳಲ್ಲಿ ಜನರಿಲ್ಲದೆ ಇರುವುದರಿಂದ ಹುಚ್ಚರ ಆಸ್ಪತ್ರೆಯಲ್ಲಿದ್ದವರನ್ನು ತಂದು ಕುಳ್ಳಿಸಿದರಂತೆ. ಅಲ್ಲಿ ಜನರು ಕುಳಿತರೆಂದಾಯಿತು. ಅದರಿಂದ ರಾಜಕುಮಾರರಿಗಿಟ್ಟ ಬಹಿಷ್ಕಾರಕ್ಕೆ ಜಯವಾಗಲಿಲ್ಲವೆನ್ನಬಹುದೇ? ಕೌನ್ಸಿಲುಗಳಿಗೆ ಹೋದವರಲ್ಲಿ ಕೆಲವು ಮಂದಿ ನಿಜವಾದ ದೇಶಭಕ್ತರಿರುವರೆಂದು ನಮಗೆ ಗೊತ್ತಿದೆ. ಅವರು ಸುಧಾರಣೆಗಳನ್ನು ನಂಬುವವರು. ಅವರು ಕೌನ್ಸಿಲುಗಳಿಗೆ ಹೋಗುವುದು ನ್ಯಾಯವೇ ಇದೆ. ನಮ್ಮಿಂದ ಭಿನ್ನವಾದ ಅಭಿಪ್ರಾಯವಿದ್ದವರು ಲೋಕದಲ್ಲಿ ಇರಲಿಕ್ಕೆ ಕೂಡದೆಂದು ನಿಮ್ಮ ಅಭಿಪ್ರಾಯವೆ?

ಕೌನ್ಸಿಲುಗಳ ಬಹಿಷ್ಕಾರವನ್ನು ತೆಗೆದುಹಾಕಿ ಅಸಹಕಾರಿಗಳು ಕೌನ್ಸಿಲುಗಳನ್ನು ಪ್ರವೇಶಿಸಬೇಕೆನ್ನುವವರಲ್ಲಿ ಎರಡು ತರದವರಿದ್ದಾರೆ. ಸುಧಾರಣೆಗಳಲ್ಲಿ ನಂಬುವವರು ಒಂದು ತರ. ಯೋಗ್ಯವಾದ ದೇಶದ ಮುಖಂಡರು ಕೌನ್ಸಿಲುಗಳನ್ನು ಹೊಕ್ಕು ಸರಕಾರದೊಡನೆ ಸಹಕರಿಸಿ ದೇಶದ ಉದ್ಧರಣೆಗಾಗಿ ಕೆಲಸ ಮಾಡಲು ಯತ್ನಿಸಿದರೆ ಶ್ರೇಯಸ್ಸುಂಟಾಗುವುದೆಂದು ಇವರ ಮತ. ನಿಮ್ಮ ಅಭಿಪ್ರಾಯವು ಹೇಗಿದೆಯೋ? ದೇಶಭಕ್ತ ನರಸೋಪಂತ ಕೇಳಕರರೇ ಮೊದಲಾದವರು ಸುಧಾರಣೆಗಳನ್ನು ನಂಬುವುದಿಲ್ಲ. ನಾವು ಕೌನ್ಸಿಲುಗಳನ್ನು ಹೊಕ್ಕು ಸರಕಾರದವರೊಡನೆ ಅಸಹಕಾರವನ್ನು ಬೆಳಿಸಿ ಕೌನ್ಸಿಲುಗಳನ್ನು ನಿಲ್ಲಿಸಬಿಡಬೇಕೆಂಬುದೇ ಇವರ ಅಭಿಪ್ರಾಯ. ನೀವು ಈ ಪಕ್ಷಕ್ಕೆ ಸೇರಿದವರೋ?

ಅಸಹಕಾರಿಗಳು ಕೌನ್ಸಿಲಿನೊಳಹೊಕ್ಕು ಕೌನ್ಸಿಲುಗಳನ್ನು ನಿಲ್ಲಿಸಿಬಿಡಬಹುದೆಂಬದಕ್ಕೆ ನಾನು ಸಂಪೂರ್ಣ ಒಪ್ಪಿಗೆಕೊಡುತ್ತೇನೆ. ಅಸಹಕಾರಿಗಳು ಕೌನ್ಸಿಲಿನೊಳಗೆ ಬಂದರೆ ಸುಧಾರಣೆಗಳನ್ನು ಹಿಂತೆಗೆದುಬಿಡುವುದಾಗಿ ಮುಖ್ಯ ಮಂತ್ರಿಗಳು ಮೊನ್ನೆ ತಾನೆ ಹೇಳಿರುವರು ಮಾತ್ರ. ಹೀಗೆ ಸುಧಾರಣೆಗಳನ್ನು ನಿಲ್ಲಿಸುವುದರಿಂದ ನಮಗೆ ಸಿಕ್ಕುವ ಪುರುಷಾರ್ಥವಾದರೂ ಏನು? ಹಾಗೆ ನಿಲ್ಲಿಸಿದರೆ ಮತ್ತೇನು ಮಾಡಬೇಕೆಂದು ನಿಮ್ಮ ಸೂಚನೆ? ಹೀಗೆ ಸುಧಾರಣೆಗಳನ್ನೆ ಹಾಳುಮಾಡುವುದರಿಂದ ಸುಧಾರಣೆಗಳನ್ನು ನಂಬುವವರು ನಮ್ಮನ್ನು ದೂರುವಂತಾಗುವುದೇ ವಿನಾ ಮತ್ತಾವ ಪ್ರಯೋಜನವೂ ಇಲ್ಲ. ಅದರ ಬದಲು ಸುಧಾರಣೆಗಳನ್ನು ನಂಬುವವರು ಕೌನ್ಸಿಲುಗಳಿಗೆ ಹೋಗಿ ಅಲ್ಲಿ ಕೆಲಸಮಾಡಲಿಕ್ಕೆ ಆಗದಿರಲು ತಾವಾಗಿ ತಮ್ಮ ನಂಬುಗೆಯನ್ನು ಹಿಂತೆಗೆಯುವಂತೆ ಅವರನ್ನು ಬಿಡುವುದೆ ಉತ್ತಮವಲ್ಲವೆ? ನಾವು ಸುಧಾರಣೆಗಳನ್ನ ಹಾಳುಮಾಡುವುದರಿಂದ ಸುಧಾರಣೆಗಳಿಂದ ಪ್ರಯೋಜನವಿಲ್ಲವೆಂಬುದನ್ನು ತೋರಿಸಿದಂತಾಗುವುದಿಲ್ಲ. ಅದನ್ನು ನಂಬುವವರು ಅಲ್ಲಿಗೆ ಹೋಗಿ ಅದನ್ನು ನಿಷ್ಪ್ರಯೋಜನವೆಂದು ಆಗಮಾತ್ರ ಬಿಟ್ಟರೆ ಸುಧಾರಣೆಯ ಸಂಪೂರ್ಣ ಪರೀಕ್ಷೆಯಾಗುವುದು.

ನೀವು ಸುಧಾರಣೆಗಳಲ್ಲಿ ನಂಬುವವರಾದರೆ ಕೌನ್ಸಿಲುಗಳೊಳಗೆ ಹೋಗಿ ಸರಕಾರದೊಡನೆ ಸಹಕರಿಸಬೇಕೆಂದು ಹೇಳಬಹುದು. ಹಾಗಾದರೆ ಕಾಂಗ್ರೆಸ್ಸಿನವರು ಅಸಹಕಾರ ತತ್ವವನ್ನೆ ಬಿಡಬೇಕೆಂದು ಹೇಳಿರಿ. ಕಾಂಗ್ರೆಸ್ಸಿನವರು ಅಸಹಕಾರ ತತ್ವವನ್ನಿಟ್ಟುಕೊಂಡು ಕೌನ್ಸಿಲು ಬಹಿಷ್ಕಾರವನ್ನು ತೆಗೆದುಹಾಕುವುದು ಯಾವ ದೃಷ್ಟಿಯಿಂದಲೂ ಸಯುಕ್ತಿಕವಲ್ಲ.

ಇನ್ನು ಕಾಯಿದೆಭಂಗದ ವಿಚಾರ. ಅಶಾಂತತೆಯುಂಟಾದೀತೆಂಬ ಸಂಶಯವಿರುತ್ತ ಮಹಾತ್ಮಜಿಯವರು ಕಾಯಿದೆಭಂಗವನ್ನು ಆರಂಭಿಸಬೇಕಿತ್ತೆಂದು ನಿಮ್ಮ ಅಭಿಪ್ರಾಯವೇ? ಈಗ ಕಾಯಿದೆಭಂಗವನ್ನು ಕೈಕೊಂಡರೆ ಶಾಂತಿಭಂಗವಾಗಲಿಕ್ಕಿಲ್ಲವೆಂಬುದಕ್ಕೆ ಕಾರಣಕೊಟ್ಟು ತೋರಿಸಿದರೆ ಕಾಯಿದೆಭಂಗವನ್ನು ಕೈಕೊಳ್ಳುವವರಲ್ಲಿ ನಮ್ಮ ಆಕ್ಷೇಪಣೆ ಎಲ್ಲಿದೆ?

ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಯಾವ ಬದಲಾವಣೆಗಳಾಗಬೇಕೆಂಬುದನ್ನು ಸರಿಯಾಗಿ ಹೇಳಿರಿ. ಅವು ನ್ಯಾಯವೆಂದೂ ಅಗತ್ಯವೆಂದೂ ನಮಗೆ ಸಮಾಧಾನವಾದರೆ ಬದಲಾವಣೆಗಳನ್ನು ಮಾಡಲು ನಮಗೆ ಯಾವ ಆಕ್ಷೇಪವೂ ಇಲ್ಲ. ಕಾಂಗ್ರೆಸ್ಸಿನ ಟೊಳ್ಳು "ಪ್ರೆಸ್ಟೀಜ"ನ್ನು ಇಟ್ಟುಕೊಳ್ಳಲು ಯತ್ನಿಸುತ್ತಿದ್ದೇವೆಂದು ನೀವು ಹೇಳುವುದರಿಂದಾಗುವ ಸಾರ್ಥಕವೇನು? ಅಂಥವರು ಮಹಾತ್ಮಜಿಯವರ ಅನುಯಾಯಿಗಳಲ್ಲಿ ಯಾರೂ ಇಲ್ಲವೆಂದು ನಿಮಗೆ ನಾನು ಖಂಡಿತ ಹೇಳಬಲ್ಲೆ.

ರಾಮರಾಯ ಮಲ್ಯ,
ರಾಷ್ಟ್ರೀಯ ವಿದ್ಯಾಕುಮಾರ ಉಡ್ಪಿ.

∴ ಮೇಲಿನ ಪತ್ರದಲ್ಲಿ ಉತ್ತರಾರ್ಹವಾದ ಅಂಶಗಳು ಹೆಚ್ಚಿಲ್ಲ. ಪತ್ರವು ಎಷ್ಟು ಉದ್ದವಿದೆಯೋ ಅಷ್ಟೆ ಅದರ ಆಕ್ಷೇಪಗಳು ಟೊಳ್ಳಿವೆ. "ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಶಾಲೆಯನ್ನು ಬಿಡಲಿಲ್ಲ"ವೆಂದು ಲೇಖಕರು ಸ್ವಯಂ ಒಪ್ಪುತ್ತಾರೆ. ವಕೀಲರು ಸಹ ಕೋರ್ಟುಗಳನ್ನು ಬಹಿಷ್ಕರಿಸಲಿಲ್ಲ; ಬಹಿಷ್ಕರಿಸಿದವರು ಪುನಃ ಸೇರಿದರು ಎಂಬೀ ಸಂಗತಿಯನ್ನು ಕೂಡ ಅವರು ಒಪ್ಪಿಕೊಂಡಿರುವರು. ಈ ರೀತಿಯಿಂದ ವ್ಯವಹಾರದಲ್ಲಿ ಬರಲು ಅಸಾಧ್ಯವಾದ ಸಂಗತಿಯನ್ನು ಸಭೆಯಲ್ಲಿ ಠರಾವಿನ ರೂಪದಿಂದ ಪಾಸುಮಾಡುವುದೇನು? ದೇವರಿಗೆ ಹರಕೆ ಹೇಳಿಕೊಂಡದ್ದುಂಟೆ? ಈಗಿನ ದಿನಗಳಲ್ಲಿ ಹೆಚ್ಚಿನವರಿಗೆ ಸತ್ಯಹೇಳುವದಕ್ಕೆ ಸಾಧ್ಯವಾಗುವುದಿಲ್ಲ, ಎಂದು ಹೇಳಿ, ಸತ್ಯವನ್ನಾಡಬೇಕೆಂಬ ಧರ್ಮಶಾಸ್ತ್ರವಚನವನ್ನೆ ಬದಲಾಯಿಸಬೇಕೆ? ಎಂಬುದೊಂದು ಯುಕ್ತಿವಾದವನ್ನು ಸದರಿ ಲೇಖಕರು ಮಾಡಿರುವರು. ಆದರೆ ಅವರ ಮಾರ್ಗವನ್ನೆ ಆಶ್ರಯಿಸಿ ಹೇಳುವುದಾದರೆ ಕೊಂಗ್ರೆಸ್ಸು ಸತ್ಯವನ್ನಾಡಬೇಕೆಂದು ಕೂಡ ಒಂದು ಠರಾವನ್ನು ಯಾಕೆ ಮಾಡುತ್ತಾ ಕೂಡದು? ರಾಜಕಾರಣಕ್ಕೂ, ಧರ್ಮ ಶಾಸ್ತ್ರಕ್ಕೂ ಎಷ್ಟೋ ಅಭ್ಯಂತರವಿದೆ. ಒಂದೆ ಎಂದು ಹೇಳುವ ಪಕ್ಷದಲ್ಲಿ ಎಲ್ಲರೂ ತಪಸ್ಸಿಗೆ ಹೊರಟು ಆತ್ಮಪ್ರಾಪ್ತಿಯನ್ನು ಮಾಡಿಕೊಳ್ಳುವಂತೆ ಸ್ವರಾಜ್ಯ ಪ್ರಾಪ್ತಿಯನ್ನು ಮಾಡಿಕೊಳ್ಳಬಹುದಲ್ಲವೆ? ವಸ್ತುತಃ ಠರಾವುಗಳನ್ನು ಮಾಡುವುದು ಕೇವಲ ಆಚಾರಕ್ಕಾಗಿ ಅದೆ ಅಸಾಧ್ಯವೆಂದಾದ ಮೇಲೆ ಠರಾವುಗಳನ್ನು ಮಾಡುವುದು ವ್ಯರ್ಥ. ಆದರೂ ಚಿಂತೆಯಿಲ್ಲ, ಅಂಥ ಠರಾವುಗಳನ್ನು ಮಾಡಲೆ ಬೇಕು ಎಂದು ಹಟವನ್ನೆ ಹಿಡಿಯುವದಿದ್ದರೆ, ಹಿಂದೂಸ್ಥಾನದೊಳಗಿನ ಎಲ್ಲ ಜನರು ಚಾಂದ್ರಾಯಣ ವ್ರತವನ್ನು ಆಚರಿಸಿದರೆ "ಸ್ವರಾಜ್ಯವು ಬೇಗನೇ ಸಿಕ್ಕೀತು ಎಂಬುದರಿಂದ ಅದನ್ನು ಮಾಡಬೇಕೆಂದು ಸಹಾ ರಾಷ್ಟ್ರೀಯ ಸಭೆಯು ಠರಾವನ್ನು ಮಾಡಲಿ!! ವಿದ್ಯಾರ್ಥಿಗಳು ಯುನಿವರ್ಸಿಟಿಯ ಪಠ್ಯ ಪುಸ್ತಕಗಳನ್ನು ಓದುತ್ತಾ ಇರುವುದು ಚಂದವಲ್ಲವೆಂದಿದ್ದರೆ ಅವರು ಬೇಕಾದರೆ "ಚಾಲ" ತಿರುಗಾಡಿಸಲಿ. ಕೌನ್ಸಿಲು—ಬಹಿಷ್ಕಾರದ ಮತ್ತು ಇತರ ಕಾರ್ಯಕ್ರಮದ ಬದಲಾವಣೆಯನ್ನು ದೇಶಭಕ್ತ ಕೇಳಕರರು ಮಾತ್ರ ಕೇಳುವರೆಂದಲ್ಲ. ಸಿವಿಲ್ ಡಿಸ್ ಒಬೀಡಿಯನ್ಸ್ ಕಮಿಟಿಯ ಮುಂದೆ ಆದ ಅನೇಕ ಸಾಕ್ಷಿಗಳಲ್ಲಿ ಎಷ್ಟೋ ಬದಲಾವಣೆಗಳು ಸೂಚಿಸಲ್ಪಟ್ಟಿವೆ. ನಾವು ಕೂಡ ಅಂಥ ಎಷ್ಟೊ ಸಾಕ್ಷಿಗಳನ್ನು ಈ ಮುಂಚೆ ಪ್ರಕಟಿಸಿದ್ದೇವೆ ಆದ್ದರಿಂದ ಒಬ್ಬ ಕೇಳಕರರ ಹೆಸರನ್ನೆ ಮುಂದೊತ್ತುವದರಲ್ಲಿ ಪ್ರಯೋಜನವಿಲ್ಲ. ಕೌನ್ಸಿಲುಗಳಿಗೆ ಪ್ರಕೃತ ಹೋದ ಸಭಾಸದರು "ಹುಚ್ಚರ ಆಸ್ಪತ್ರೆಯಲ್ಲಿದ್ದವರ" ಯೋಗ್ಯತೆಯವರು ಎಂದು ಈ ಲೇಖಕರು ಹೇಳುವ ಮಾತು ನಿಜವಾಗಿ ಬಹು ಅಪೂರ್ವವಾಗಿದೆ! ಪರಂತು ಶೋಚನೀಯವಾದುದೇನೆಂದರೆ ಅಂಥ "ಹುಚ್ಚರಿಂದ" ತುಂಬಿರುವ ಕೌನ್ಸಿಲುಗಳ ಅರ್ಜಿಗಳನ್ನು ಮುರಿಯಲು ಈ ಅಸಹಕಾರಿಗಳಿಗೆ ಆಗ ಧೈರ್ಯವಿಲ್ಲ! ಆಗ "ಅಶಾಂತತೆಯ ಡಾಲನ್ನು ಮುಂದೆ ಮಾಡಿಕೊಂಡು ತಮ್ಮ ಅಪ್ರಯೋಜಕ ಕಾರ್ಯಕ್ರಮದ ಸಂರಕ್ಷಣವನ್ನು ಮಾಡಿಕೊಳ್ಳುವರು. "ಅಶಾಂತತೆ"ಯ (ಅತ್ಯಾಚಾರದ) ಸೋಂಕು ಮೊದಲು ಎಷ್ಟೋ ಸಾರೆ ಬಂದಿರುವುದರಿಂದ ಬಾರದೋಲಿಯ ಕಾನೂನು ಭಂಗವನ್ನು ಅಷ್ಟು ಮುಂಚಿತವಾಗಿಯೆ ನಿರ್ಧರಿಸಲು ತಲೆಯ ಮೇಲೆ ಯಾರು ಹೊರೆಯನ್ನು ಹೊರಿಸಿದ್ದರು? ಸಾರಾಂಶ ಮೇಲಿನ ಆಕ್ಷೇಪಕ ಪತ್ರದಲ್ಲಿ ಲೇಖಕರು ನಿರರ್ಥಕವಾದ ಅನೇಕ ಸಂಗತಿಗಳನ್ನು ಬರೆದಿರುವರು. ಯಾವ ಲೇಖಕರೆ ಆದರೂ ಅವರು ಮನಸ್ಸನ್ನು ಸಮತೂಕವಾಗಿಟ್ಟುಕೊಂಡು ಲೇಖನಗಳನ್ನು ಬರೆಯುವದು ಉತ್ತಮ. ಬರವಣಿಗೆಯ ಮೇರೆಯನ್ನು ದಾಟಿ ಬರೆಯುವದು ಈಗಿನ ದಿವಸಗಳಲ್ಲಿ ಶ್ರೇಯಸ್ಕರವಲ್ಲ.

ಸಂಪಾದಕ, ಸ್ವದೇಶಾಭಿಮಾನಿ.

ಜಾತಿಭೇದವಿಚಾರ ವಿಮರ್ಶೆ.

(ಲೇಖಕ— ಪಾಂಡುರಂಗಶಾಸ್ತ್ರೀ, ಒಡ್ಡಮನೆ)

"ಜಾತಿಭೇದ ವಿಚಾರ" ಪುಸ್ತಕಕರ್ತರು ನಾಲ್ಕು ವೇದಸಮುದ್ರಗಳನ್ನು ಮಥಿಸಿ "ಅಜ್ಯೇಷ್ಠಾಸೋ ಅಕನಿಷ್ಠಾಸ" ಇತ್ಯಾದಿ, "ಪ್ರಿಯಂ ಮಾ ಕೃಣು" ಇತ್ಯಾದಿ. "ಬ್ರಾಹ್ಮಣೋಸ್ಯ ಮುಖಮ್" ಇತ್ಯಾದಿ ಈ ಮೂರು ರತ್ನಗಳನ್ನು ಹೊರಡಿಸಿದ್ದಾರೆ. ವರ್ಣಗಳು ಗುಣಕರ್ಮಗಳ ಮೇಲೆಯೆ ಅವಲಂಬಿಸಿರುತ್ತವೆ, ಹೊರತು ಉತ್ಪತ್ತಿಸಿದ್ಧವಲ್ಲವೆಂಬೀ ಅವರ ಅಭಿಮತಾರ್ಥದ ಬಾಜಾರದಲ್ಲಿ ಮೇಲಿನ ನಾಣ್ಯಗಳು ಎಷ್ಟರಮಟ್ಟಿಗೆ ನಡೆಯುತ್ತವೆ (ಚಲಾವಣೆ ಹೊಂದುತ್ತವೆ) ಎಂಬುದನ್ನು ನೋಡೋಣ. ಅವುಗಳಲ್ಲಿ ೧ನೆಯ ಪ್ರಮಾಣವನ್ನು ವಿಮರ್ಶಿಸೋಣ. "ಅಜ್ಯೇಷ್ಠಾಸೋ ಅಕನಿಷ್ಠಾಸ ಏತೇ ಸಂಭ್ರಾತರೋ ವಾವೃಧುಃ ಸೌಭಗಾಯ" ಈ ಶ್ರುತಿಗೆ "ಎಲ್ಲ ಮನುಷ್ಯರು ತಮ್ಮೊಳಗೆ ಭ್ರಾತೃಗಳು. (ಭ್ರಾತರಃ) ಇವರಲ್ಲಿ ಯಾರೊಬ್ಬನೂ ದೊಡ್ಡವ ಅಥವಾ ಸಣ್ಣವನಿಲ್ಲ. ಇಂತಹ ಜ್ಞಾನದಿಂದಲೆ ಇವರನ್ನು ಕೂಡಿಕೊಂಡು ಕೆಲಸಮಾಡಿ ಉನ್ನತಿಯನ್ನು ಹೊಂದಬಹುದು." ಎಂದು ಪುಸ್ತಕಕಾರರು ಅರ್ಥವನ್ನು ಬರೆದಿರುತ್ತಾರೆ.

ಈ ಮಂತ್ರವು ಋಗ್ವೇದ ಅ. [illegible] ಅ. ೩ ವ. ೨೫ ಮಂ. ೫ ಅ. ೫ ಸೂ. ೬೦ನೆಯದಾಗಿದೆ. ಈ ಸೂಕ್ತದ "ಈಳೇ ಅಗ್ನಿಂ ಸ್ವವಸಮ್ಯುಕ್ತ್ಯರ್ಚಂ ಸೂಕ್ತಂ | ಶ್ಯಾವಾಶ್ವಸ್ಯಾರ್ಷಂ | ಸಪ್ತವ್ಯಕ್ಷ್ಯಮ್ಯಾ ಜಗತ್ಯಾ | ಶಿಷ್ಟಾಸ್ತ್ರಿಷ್ಟುಭಃ | ಮರುದ್ದೇವತಾಕಮಗ್ನಿ ಮರುದ್ದೇವತಾಕಂ ವಾ | ಈಳೆ ದ್ವಿಜಗತ್ಯಂತ ವಾಗ್ನೇಯಂತೆ ವೇತಿ | ಸೂಕ್ತ ವಿನಿಯೋಗೋಲ್ಲಿಂಗಿಕಃ | ಅದ್ಯಾಕಾರೀಯಾರ್ಣಂ ಸಾಮಿಧೇನೀಷು ಯಾಜ್ಯಾ |" ಈ ಪ್ರಕಾರವಾಗಿ ಋಷಿಪ್ರಮಾಣ ಛಂದಸ್ಸು, ದೇವತಾ, ವಿನಿಯೋಗ ಮುಂತಾದವಿರುತ್ತವೆಂದು ೨-೧೩ ಈ ಆಶ್ವಲಾಯನ ಸೂತ್ರದಲ್ಲಿ ಹೇಳಿರುವದು. ಈ ಋಕ್ಕನ್ನು ಧರ್ಮದೇವಜಿಯವರು ಸಂಪೂರ್ಣವಾಗಿ ಬರೆಯಲಿಲ್ಲ. "ವಾವೃಧುಃ ಸೌಭಗಾಯ" ಎಂದು ಅವರು ಎಲ್ಲಿ ನಿಲ್ಲಿಸಿರುವರೊ ಅದರ ಮುಂದೆ ಅದೆ ಋಕ್ಕು ಮುಂದಿನಂತೆ ಮುಂದರಿಸುತ್ತದೆ. "ಯುವಾಪಿತಾಸ್ವಪಾ ರುದ್ರ ಏಷಾಂ ಸುದುಘಾ ಪೃಶ್ನಿಃ ! ಸುದಿನಾ ಮರುದ್ಭ್ಯಃ" ಈ ಋಕ್ಕಿನ ಪೂರ್ವಾರ್ಧವು ವಿವಾದ್ಯವಾದದ್ದು. ಅದರ ಅರ್ಥವೇನೆಂದು ನೋಡೋಣ. ಅದರಲ್ಲಿದ್ದ ಏತತ್ಪದವು ಸನ್ನಿಹಿತತರ ಪೂರ್ವಪರಾಮರ್ಶಕತ್ವ ಸ್ವಭಾವವುಳ್ಳದ್ದು. ಆದ್ದರಿಂದ ಅದು ಹಿಂದಿನ ಋಕ್ಕಿನಲ್ಲಿರುವ "ಮರುತಃ" ಎಂಬುದನ್ನು ಪರಾಮರ್ಶಿಸುತ್ತದೆ. "ಏತೇ" "ಭ್ರಾತರಃ" ಎಂಬೀ ಪದಗಳಿಗೆ ಸಾಮಾನಾಧಿಕರಣ್ಯವಿದೆ ಎಂಬದು ಸ್ಪಷ್ಟವು. "ಅಜ್ಯೇಷ್ಠಾಸೋ ಅಕನಿಷ್ಠಾಸಃ" ಎಂದರೆ ಜ್ಯೇಷ್ಠ ಕನಿಷ್ಠ ಭಾವರಹಿತರಾದ "ಏತೇ" ಎಂದರೆ "ಇವರ." ಎಂದರೆ ಮರುತ್ತರು. 'ಭ್ರಾತರಃ' ಎಂದರೆ 'ಸಹೋದರರಾದವರಾಗಿ' 'ಸೌಭಗಾಯ' ಸುಭಗತ್ವಕ್ಕೋಸ್ಕರ 'ಸಂವಾವೃಧುಃ' ವೃದ್ಧಿಹೊಂದುವರು.

ಅದಿತಿಯ ಗರ್ಭದಲ್ಲಿದ್ದ ವಾಯುವನ್ನು ಇಂದ್ರನು ಪ್ರವೇಶಿಸಿ, ಸಪ್ತಧಾ ಖಂಡಿಸಿ, ಪುನಃ ಅವುಗಳಲ್ಲಿಯ ಪ್ರತಿಯೊಂದನ್ನು ಸಪ್ತಧಾ ಖಂಡಿಸಿದನು. ಹೀಗಿರುವ ಕಾರಣ ಉತ್ಪತ್ತಿಯ ಪೌರ್ವಾಪರ್ಯ ಪ್ರಯುಕ್ತವಾದ ಜ್ಯೇಷ್ಠತ್ವ ಕನಿಷ್ಠತ್ವ ರೂಪಧರ್ಮಗಳು ಆ ಸಹೋತ್ಪನ್ನರಾದ ಮರುದ್ ಗಣಗಳಲ್ಲಿಲ್ಲವಾದ ಕಾರಣ ಆ ಮರುದ್‌ಗಣಗಳಿಗೆ 'ಅಜ್ಯೇಷ್ಠಾಸೋ ಅಕನಿಷ್ಠಾಸಃ' ಈ ವಿಶೇಷಣಗಳು ಕೊಡಲ್ಪಟ್ಟಿವೆ. ಜಾತಿಭೇದ ವಿಚಾರ ಪುಸ್ತಕಕಾರರಿಗೆ ಅಭಿಪ್ರೇತವಾದ 'ವರ್ಣವು ಗುಣಕರ್ಮಗಳ ಮೇಲೆ ಅವಲಂಬಿಸಿಯುಂಟಲ್ಲದೆ ಉತ್ಪತ್ತಿಸಿದ್ಧವಲ್ಲ'ವೆಂಬೀ ಅರ್ಥವನ್ನು ಉಕ್ತಮಂತ್ರವು ಸರ್ವಥಾ ಪ್ರತಿಪಾದಿಸುವದಿಲ್ಲ. ಕಾರಣ ವರ್ಣ, ಜಾತಿ, ಗುಣ, ಕರ್ಮ ಮೊದಲಾದವುಗಳ ವಾಚಕಪದಗಳು ಆ ಮಂತ್ರದಲ್ಲಿ ಇಲ್ಲ. ಸಹೋತ್ಪನ್ನರಾದ ಮರುತ್ತರ ವಿಷಯವಾಗಿ ಉತ್ಪತ್ತಿಯ ಪೌರ್ವಾಪರ್ಯ ಪ್ರಯುಕ್ತವಾದ ಜ್ಯೇಷ್ಠತ್ವ ಕನಿಷ್ಠತ್ವರಾಹಿತ್ಯವನ್ನು ಬೋಧಿಸುವ ವಾಕ್ಯದಲ್ಲಿ ವರ್ಣಭೇದ—ವಿಚಾರಕ್ಕೆ ಅವಕಾಶವೆಲ್ಲಿ? ಚೈತ್ರ, ಮೈತ್ರ, ದೇವದತ್ತ, ಮತ್ತು ಯಜ್ಞದತ್ತ ಈ ಸಹೋದರರು ವೈಷಮ್ಯವಿಲ್ಲದೆ ಸುಖದಿಂದ ಇದ್ದಾರೆಂದು ಹೇಳಿದರೆ ಆ ಮಾತಿನಿಂದ ವರ್ಣವ್ಯವಸ್ಥೆಯು ಗುಣಕರ್ಮಗಳ ಮೇಲೆ ಹೊಂದಿರುವದಲ್ಲದೆ ಉತ್ಪತ್ತಿಯ ಮೇಲಲ್ಲ ಎಂಬೀ ಜಾತಿಭೇದ ವಿಚಾರ ಪುಸ್ತಕಕಾರರಿಗೆ ಇಷ್ಟವಾದ ಅರ್ಥವು ಹೇಗೆ ತಾನೆ ಹೊರಡುತ್ತದೆ? ಸಹೋತ್ಪನ್ನರಲ್ಲಿ ಜ್ಯೇಷ್ಠತ್ವ ಕನಿಷ್ಠತ್ವವನ್ನು ನಿರಾಕರಿಸುವ ಈ ಶ್ರುತಿಯು ವರ್ಣವ್ಯವಸ್ಥೆಯು ಉತ್ಪತ್ತಿಸಿದ್ಧವೆಂದು ಹೇಳುವವರಿಗೆ ಬಾಧಕವಲ್ಲ.

ಈಗ ಆ ಪುಸ್ತಕಕಾರರು ಮೇಲಿನ ಶ್ರುತಿಗೆ ಕೊಟ್ಟಿರುವ ಅರ್ಥವನ್ನು ವಿಚಾರಿಸೋಣ. ಅವರು ತಮ್ಮ ಅರ್ಥದಲ್ಲಿ 'ಎಲ್ಲ ಮನುಷ್ಯರು ತಮ್ಮೊಳಗೆ ಭ್ರಾತೃಗಳು.' ಎಂದು ಬರೆದಿರುತ್ತಾರೆ. ಅವರು ಇದರಲ್ಲಿ ಮನುಷ್ಯತ್ವಾವಚ್ಛೇದಕಾವಚ್ಛೇದೇನ ಭ್ರಾತೃತ್ವವನ್ನು ವಿಧಿಸಿರುತ್ತಾರೆ. 'ಎಲ್ಲ ಮನುಷ್ಯರು' ಎಂಬ ಉದ್ದೇಶ್ಯ ವಾಚಕ ಪದಗಳು ಉಕ್ತ ಋಕ್ಕಿನಲ್ಲಿ ಮಾತ್ರವಲ್ಲ, ಇಡಿ ಸೂಕ್ತದಲ್ಲಿ ಸಹ ಇಲ್ಲ. ಈಗ 'ಮರುತಃ' ಪದವು ಮನುಷ್ಯವಾಚಕವೆಂದು ಹೇಳಿದರೆ ಆ ಬಗ್ಗೆ ಶಕ್ತಿಗ್ರಾಹಕ ಪ್ರಮಾಣವಿಲ್ಲ. ಹಾಗು ವಿಧೇಯತಾವಚ್ಛೇದಕ ಕೋಟಿಯಲ್ಲಿ ಸೇರಿಸಿಕೊಂಡ 'ತಮ್ಮೊಳಗೆ' ಎಂಬೀ ಪದದ್ವಯ ವಾಚಕಶಬ್ದಗಳು ಮೇಲಿನ ಮಂತ್ರದಲ್ಲಿ ಇಲ್ಲ. ಇರಲಿ. ಮನುಷ್ಯಪದವು ಮನುಷ್ಯತ್ವಾವಚ್ಛಿನ್ನದಲ್ಲಿ ಶಕ್ತವಾಗಿರುವದರಿಂದ ಯಾವತ್ ಸ್ತ್ರೀಪುರುಷ ವ್ಯಕ್ತಿವಿಷಯಕ ಬೋಧವನ್ನುಂಟುಮಾಡುತ್ತದೆ. ಈ ಅರ್ಥವನ್ನೆ ಅವರು ಎಲ್ಲ ಮನುಷ್ಯರು ಎಂಬ ಮಾತಿನಿಂದ ಹೇಳಿರುತ್ತಾರೆ. ಆದರೆ ಮನುಷ್ಯತ್ವಾವಚ್ಛೇದೇನ ಭ್ರಾತೃತ್ವವನ್ನು ವಿಧಿಸಿದ್ದರಿಂದ ಪಿತಾ ಪುತ್ರ, ಜಾಯಾಪತಿ, ಭ್ರಾತೃ ಭಗಿನಿ, ಇತ್ಯಾದಿ ಅನೇಕ ವಿಧವಾದ ಸಂಬಂಧದಿಂದ ಯುಕ್ತರಾದ 'ಎಲ್ಲ ಮನುಷ್ಯರು' 'ತಮ್ಮೊಳಗೆ ಭ್ರಾತೃಗಳು' ಎಂದು ಹೇಳಬೇಕಾಗುತ್ತದೆ. ಆದರಿಂದ ಧರ್ಮದೇವಜಿಯವರು ಭಗಿನೀವಿವಾಹವನ್ನು ಅಂಗೀಕರಿಸಿದ್ದಂತೆ ಆಗುತ್ತದೆ.

(ಮುಂದರಿಯುವುದು).

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

The Canara Bank,

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 181,250—0—0	ರಿಜರ್ವ್ ಫಂಡು ಮತ್ತು ಇತರ ಫಂಡುಗಳು „ 181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.

Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ, ಒಂದು ಸೀಸೆಯು ನಿಮ್ಮ ಕುಟುಂಬದ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಕೆಗಡಿ, ಕೆಮ್ಮು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆಶೂಲೆ, ಕರುಳಿನ ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು. ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

☞ ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಅಂಚೆಕೂಲಿ ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇದ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ.

ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೩, (ಚತ್ರಿಸ್ಟ್ರೀ), ಮದ್ರಾಸ್.
Local Agents: Raphael & Co.
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನೀಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

ಆರ್. ಮಾರ್ಟಿನ್ಸರ ಲಪ್ತಾ ಎಣ್ಣೆ.

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ, ಬಾಟ್ಲ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು; ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂಡ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ಸರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಶಕ್ತಿನ್ನೇ ಅಡಗಿಸುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಚಿಕ್ಕ ಸೀಸೆ 1ಕ್ಕೆ ರೂ. 2—0—0.

ವಿಳಾಸ—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ವೈಟ್ ಎಂಡ್ ಕೋ ಹತ್ತರ, ಫೋರ್ಟ್ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು — — ಟ್ರೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಓ. ವೆಂಕಟೇಶ ರಾಮಚಂದ್ರ ಶೆಣೈ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪ್ಪೈ
ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯುನಾಮಲ್ಲ ಬಟ್ಟಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ [illegible] ರೈಟಿಂಗ್ ಪೇಪರ್, ರಟ್ಟು, ಪಾಲಿ ಕವರು, ಪೆಂಟ್ [illegible], ಫ್ಯಾನ್ಸಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ [illegible] ಸಾಹಿತ್ಯಗಳೂ, ಅಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ [illegible] [illegible] [illegible] [illegible] [illegible] ಸ್ವದೇಶಿ, ವಸ್ತ್ರಗಳೂ, ಸಾಮಾನುಗಳೂ, [illegible] ವಗೈರೆ ಮಾಲುಗಳು [illegible] [illegible] [illegible]

ಅಚ್ಚಿನಲ್ಲಿದೆ! ಅಚ್ಚಿನಲ್ಲಿದೆ!

ಎಂ. ಜಿ. ಐಗಳ್, ಇವರಿಂದ ರಚಿತವಾದ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳೆಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸೈಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿದ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನ 32 ಗ್ರಾಮಗಳ ಬ್ರಾಹ್ಮಣರು—ಸಂಗಳದ [illegible]—[illegible]—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಿ ಕಾದ್ರಿ—ಸೂಡ ಮಠಗಳು—ಕೇಜಗಾರರು—ಕಾಲುವಕ್ಕೆ ನರ್ಸಿಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತನಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 14. ದ್ವಾರಸಮುದ್ರದ ಯಾದವ ಪ್ರತ್ಯಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಭಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದ್ದು—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಷ್ಟ ಮ[illegible] 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹಂಪೆರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತ ಸ್ಥಾಪನೆ—ಹಿಜರಿ—ಅಬ್ಬುಬಕರ—ಆಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಆಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚಿರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳ ಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಸವಪ್ಪ—ನೀಲೇಶ್ವರ ಯುದ್ಧ—ವೀರ ಮೃತಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ವಿಕೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಾಚಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ವಾಕ ನಿರ್ಮಾಣ—ಆಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ರಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—ಬುಚೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಪಂಜ—ಸುಳ್ಯ—ಬೆಳ್ಳಾರೆ—ಅಮರಮಾಗಣೆಗಳು—ಬೆಳ್ಳಾರೆ, ಮುಖ್ಯ ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಪಾವಳಿ-ಭಂಗ ರಾಜ—ಗುರುಪಾಯನಕೆರೆ ಪಟ್ಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮೂಡಿಗುಡಿ ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಹುರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪುಂಜಾಲ ಅಳಿಕೆ—ರಾಯಕುದುರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಮಣೆಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ಬಳನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿವಮಂತೊರು—ಮೂಲಿಕೆ—ವಠಲಂಕೆ—ಬಸ್ಸನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ಶಿಸ್ತಿಲ—ಸೋಮನಾಥೇದಿ—ಬ್ರಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣಿ—ನೀರಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾಸೆಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ದಿನ್ನಾಣರು—ಜಿಂಪಿಲ ಹೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ತೋಗರಾಖ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮ ಅರಸರು—ಮಾಯಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೊರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಣ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳಾರು—ಬ್ರಾಹ್ಮಣ ಬಲ್ಲಾಳರು—ಚಿಟ್ಟಪಾಡಿ ಸಿದಂಬೂರು.

ಪುರವಣಿ—1. ಪ್ರಸಿದ್ಧಪಟ್ಟೆ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಅಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲೀಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಪಮಹೆಗಡೆ 1.

ವಿಳಾಸ:— ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಜೀವನಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ಇನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ಎರಡನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಅಸನದಡಿಯಲ್ಲಿ ರೂಪಾಯಿಗಳು ದೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವು ಇದೆ. ಮೂರನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ಶಿಕ್ಷೆಯಾಗಿರುವದೋ ಮತ್ತು ಅಲ್ಲದ ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದು ಕೊಂಡು ತಿಳಿಸಿರುವರು. ನಾಲ್ಕನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಔಷಧವಾಗುವದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಚಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಅದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ಐದನೇದು ಯಂತ್ರ ಪ್ರಕರಣದಲ್ಲಿ, ವಶೀಕರಣ, ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಪತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷರೂ ಭೂತಪ್ರೇತಾದಿಗಳು ವಶರೂ ಆಗುವರು [illegible] ಗ್ರಂಥವು [illegible] ಪ್ರತಿಯೊಬ್ಬರು [illegible] ಇರುವವು. ೨—೮—೦. ಟಪ್ಪಾಲು ಖರ್ಚು ಬೇರೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು, ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧನಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇವರಂತೆ ಪುರುಷರಲ್ಲಿಯ ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗುಪ್ತ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ನಾನಾ ಉಪಾಯಗಳನ್ನು, ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಅತಿ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ತರಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದವರಿಗೆ ಬೇಕಾಗುವ ತರೇವಾರು ನೂಲುಗಳೂ, ವಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ.

ಶ್ರೀನಿವಾಸ ರಂಗಪ್ಪ
ರಥಬೀದಿ, ಮಂಗಳೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೩೩)

ಇದರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಸಾಗದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳೂ ರಾಜರಿಗೂ ಇರತಕ್ಕಂಥ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ವರ್ಣಿಸಲ್ಪಟ್ಟಿರುತ್ತವೆ. ...... ಬಾಲಿಕೆಯು ಕಲಿಯತಕ್ಕಂಥಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಅಡಕವಾಗಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೦—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುಕ್ತಿಯ ಸರ .	0—12—0	ಪಂಚರಾತ್ರಾಯಣ ಹೊಸ ಮುದ್ರಣ .	6—0—0
ಸಂತಾಪಕ-ಕಾದಂಬರಿ	0—6—0	ಪಂಚರಾತ್ರಾಯಣದ ಕಥೆ ಪಠಣ .	0—12—0
ಚಂದ್ರಮುಖಿ „	0—8—0	S. S. L. C. Kannada Texts	
ರಾಜಪುತ್ರರಮಣಿಯರು	0—8—0	ಜಗದಾಲಿ .	0—6—0
ಹಲವು ಸಣ್ಣ ಕಥೆಗಳು	1—0—0	ಸುಶೀಲೆ .	0—6—0
ರಾಜಯೋಗ	1—0—0	ಅದರಯ ಹುಡುಗಿ .	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered: No. M. 498.

SWADESHABHIMANI MANGALORE.

ಸ್ವದೇಶಾಭಿಮಾನಿ.

ಚಂದಾನಿರ್ಣಯ:—ವರ್ಷ ಒಂದಕ್ಕೆ
ಟಪ್ಪಾಲ್ ಹಾಸಲು ಸೇರಿ „ 2—18—

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ!

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥

ದೊರೆಯಲನುಪಮರತ್ನಗಳು ಸಾ-। ಗರವ ಮಥಿಸಲು ಸುರರಿಗದರಿಂ।
ತರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಳಕವರಂಜಿದರೆ! ಸುಧೆಯನು। ಮರೆತು ಕ್ಷುದ್ರರ ತೆರದಿ ಕುಳಿತರೆ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥೧॥

ಪುಸ್ತಕ ೧೬. ಮಂಗಳೂರು, ತಾರೀಕು ೨೭ನೇ ಶುಕ್ರವಾರ ಒಕ್ಟೋಬರ ೧೯೩೩. ಸಂಚಿಕೆ ೪೨

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್

—ಉಡುಪಿ ಲಿಮಿಟೆಡ್.—

ಅಧಿಕಾರಿಗೊಳಿಸಲ್ಪಟ್ಟ ಮೂಲಧನ	ರೂ.	3,50,000— 0— 0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ		2,00,000— 0— 0
ಚಂದಾ ಹಾಕಿ ಎತ್ತಿದ ಮೂಲಧನ		1,00,000— 0— 0
ಮೌಲ್ಯ ತೆತ್ತ ಮೂಲಧನ		90,365— 7—11
ಠೇವಣಾತಿಗಳು		3,33,3[illegible]—0— 0
ಇನ್ವೆಸ್ಟ್‌ಮೆಂಟು (1927ನೇ ಇಸವಿಯ) ಕೇಳಿದಾ ಕರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ		4 54,332—11— 0

ಕಳೆದ 2 ವರುಷಗಳಲ್ಲಿ ಪಾಲುವಂತರಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರುಗಳು ಮಾರಾಟಕ್ಕೆ ಇವೆ.

ಕ್ಕ ತಿಂಗಳಿಗೊಮ್ಮೆ ಬಡ್ಡಿ ಕೊಡುವ ಕರಾರು ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ನಿರಖು ಠೇವಣಾತಿಗಳನ್ನೂ, 15 ದಿವಸದ ನೋಟೀಸು ಮೂಲಕ ಶೇಕಡಾ 6½ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾದೆ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ ಶೇಕಡಾ 4½ ಬಡ್ಡಿ ಏರಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ ತಿಂಗಳುಗಟ್ಟಲೆಯಿಂದ ಕಟ್ಟುವ ಕಂತು ಠೇವಣಾತಿಗಳನ್ನೂ ಡಿಪೋಜಿಟಾಗಿ ಪಡೆಯುವದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವದು.

ಈ ಬ್ಯಾಂಕಿಗೆ ಕೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದಲ್ಲಿ ತಿಳ್ಯುವದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ದನಗೊಬ್ಬರದಲ್ಲಿ ಇದಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಟ್ಟಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅತ್ತೂರಾರು ಶಾಸ್ತ್ರಿಗಳಿಂದ ಬರೆಯಲ್ಪಟ್ಟ
- ಹಿಂದೂ ವ್ರತವಿವೇಕ ಕ್ರಯ ೦—೧೦—
- ಶಿವಾಷ್ಟಕ „ ೦—೧೩—೦
- ಸಂಕ್ಷೇಪಗೀತ „ ೦—೧೦—೦

ಅಕ್ಷ್ವೇನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತೋಪದೇಶ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ವಾಕ್ಯಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಜಿವಂಧರ ವಿಜಯ, ಸತೀ ಸಾಹಸ, ಜಾಗದಾ ಥಿಯರಿತ್ಯ, ಮನೋರಮಾ, ಭ್ರಾಂತಿ ವಿಲಾಸ, ಕ್ಷತ್ರತೇಜ, ಮಾಧವ ಕರುಣಾವಿಲಾಸ, ಅನೆ ಹಕಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರಪತ್ರಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨-೧೩-೦ ಸ್ಥಳಿಕರಿಗೆ ರೂ. ೨-೦-೦. ವಿ. ಪಿ. ಖರ್ಚು ಕೂಡಿ ರೂ. ೩-೦-೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ವ್ಯವಸ್ಥಾಪಕರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ದ್ರಂಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ಪಿನ್ನು, ಫ್ಲಾಟ್ ಪಾಲುಗಳು, ಇತರ ವಿಧವಾದ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕೀಲರು ಇತ್ಯಾದಿ ಕೋರ್ಟು ಫೋರ್ಮುಗಳು, ಪಂಚಾಯತು ಫೋರ್ಮು, ಕುಂಭಂತಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಜೋಡಿಸಿ ಫೋರ್ಮುಗಳು ವ ಇತರ ಲೆಕ್ಕ ಬರಿಯುವ ಪುಸ್ತಕಗಳು.

ಎಲೋಪೆತಿಕ್, ಹೋಮಿಯೋಪೆತಿಕ್ ಮತ್ತು ಆಯುರ್ವೇದ ಔಷಧಿಗಳು—ಅಂಗಿಗಳಿಗೆ, ಬಾಟಲಿಗಳಿಗೆ ಬೇಕಾಗುವ ಛಾಪೈತ ಚೀಟಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ರೈತರಿಗೆ ಬೇಕಾಗುವ ಗೊಬ್ಬರಗಳು.

ಪ್ರಖ್ಯಾತವಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇರಾಪೆಯ ಕಳೆದ ೩೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTAN
Best Indian Pain Balm
Amrutanjan D
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ದಿಸುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿ[illegible] ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ ವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ದ್ರಾಕ್ಷಕಷಾಯ

U. B. DUTT & Co. CALCUTTA.

ಮಳೆಯೊಳ ದೇಶದ ಔಷಧಗಳಿಗೆ ಕೀರ್ತಿ ಹೊಂದಿದ ದ್ರಾಕ್ಷೆಯು. ಅಧಿಕ ಕಾಲಗಳಲ್ಲಿ [illegible] ಪ್ರಯೋಜನದಿಂದ ಮಾತ್ರವೇ ಸಿಕ್ಕುವ [illegible] ನಾವು ಅನೇಕ ಅತ್ಯುತ್ತಮ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕರು [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳು" ಬರುತ್ತಲಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ [illegible] ಯೋಗ್ಯತಾಪತ್ರಗಳೂ ಸೇರಿಕೊಂಡಿವೆ.

ಅಂಥಾ ಅತ್ಯುತ್ತಮ ಔಷಧಗಳಲ್ಲಿ ನಮ್ಮ 'ದ್ರಾಕ್ಷಕಷಾಯ' ಎಲ್ಲಾ ವಿಧದ [illegible] ಗುಣಪಡಿಸುತ್ತದೆ. [illegible] ಅವಯವಗಳಲ್ಲಿ [illegible] ಸ್ವಭಾವ, ಗಂಟು, ಸಂದು, ಅವಯವ, [illegible] ನೋವುಂಟಾಗುವುದು. [illegible] [illegible] ಇತ್ಯಾದಿಗಳಲ್ಲಿ [illegible] ನಮ್ಮ 'ಕಷಾಯ' ತೆಗೆದುಕೊಳ್ಳಲು [illegible] ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. [illegible] ಕುಷ್ಠ, ದಾಹ, [illegible] ಖಜ್ಜಿ, [illegible] ಪಿತ್ಥವಾಯು, ತುರಿಕೆ, ಮೈಯುರಿ, ಶಿರೋರೋಗ, ಅರುಚಿ, ಮೊದಲಾದವುಗಳಿಗೆ ದಿವ್ಯ ಔಷಧಿ. [illegible]

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗೆ ಶ್ರೇಷ್ಠ ಆಯುರ್ವೇದ ವೈದ್ಯರಾಗಿ ಹಾಗು ಸರಕಾರ ದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ತಿಜಾರತಿ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೇನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.

ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಖುದ್ದು ನಿಗಾವನಿಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತದೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ 25 ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿವೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬಗೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಅಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ ಅಶಕ್ತಿ, ಸ್ತ್ರೀಪುರುಷಂ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ½ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ ಗ್ರೈನಿನಿಂದ ¼ ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ. 2.

[illegible] ಮತ್ತು ನಿರ್ಮಲವಾದ ಕಸ್ತೂರಿ:— [illegible]

GUN RUST-PROOF OUR SPECIALITY

The Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯು ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರ್ರ, ಸೆಲ್ಸ್, ಸೆಕ್ಸೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಚ್ಚೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕಿಟರಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,

ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ನಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫ್ಲೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಖರೀದಿಸಿದ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,

ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಪಾತ್ರೆಯ 3½ ಸಾಮಾನುಗಳ ಒಂದು ಸೆಟ್ಟು ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 6—0—0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾದ [illegible] ಪಾಠಿ, ಜರಿ, ಸಾದಾ, ಶೀರೆ, [illegible] ಶಾಲು, ರುದ್ರಾಕ್ಷಿ, ಸ್ಫಟಿಕ ಸ್ಫಟಿಕಮಣಿ, ಲಿಂಗ, ಘಂಟೆ, ಜಾಗಂಟೆ. ಇವುಗಳನ್ನು ಕೋರುವವರಿಗೆ ವಿ. ಪಿ. ಪಿ ಮೂಲಕ ಕಳುಹಿಸಲಾಗುವುದು. ಕ್ಯಾಟಲಾಗ್ [illegible]

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,

ಚೌಕಂಬಾ, ಕಾಶಿ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಿಣಿ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಬಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಹಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ. 1—4—0.

ಹುಳದ ಪೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೋಮಿಯೋಪತಿಕ್ ಡಿಸ್ಪೆನ್ಸರಿ,

ಹಂಪನಕಟ್ಟೆ, ಮಂಗಳೂರು.

ನಿಮ್ಮ ಮುಖ ಬಣ್ಣವನ್ನು ಯಾವಾಗಲು ಅಲಂಕರಿಸೋಣವು

ನಿಮ್ಮ ಕೈಗಳು ಯಾವಾಗಲು ಮೃದುವಾಗಿಯು ಮತ್ತು ನಯವಾಗಿಯು ಇರುವದಕ್ಕಾಗಿಯು

ಯಾವಾಗಲು ಪ್ರಯೋಗಿಸ ಬೇಕು

“ಹಾಜಲೀನ್ ‘ಸ್ನೋ’”

(ಟ್ರೇಡ್ ಮಾರ್ಕ) ವಸ್ತು

“‘HAZELINE’ SNOW”

(Trade Mark)

“ಹಾಜಲೀನ್ ‘ಸ್ನೋ’” ವೆಂಬುದು ಅಧಿಕ ಸುಘಂಧ ಮತ್ತು ದಣಿಸುವಂಥಾ ಚರ್ಮಕ್ಕೆ ಒಳ್ಳೆ ಸಾಮಗ್ರಿಯು ಮತ್ತು ಕೊಬ್ಬು ಕ್ಷೀರದ ಪದಾರ್ಥವು. ಅದು ಬಹು ಶೀಘ್ರದಲ್ಲಿ ಸೊಗಸನ್ನು ವಿಭವನ್ನು ಕೊಡುವದು. ಎಲ್ಲಾ ಸ್ತ್ರೀ ಶ್ರೇಷ್ಠರು ಕಮ್ಮ ಚರ್ಮವು ಮೃದು ಮಾಡುವದಕ್ಕಾಗಿ ಕ್ರಮವಾಗಿ ಉಪಯೋಗಿಸುತ್ತಾರೆ.

ಇದು ಕಂಚಿನ ಪಾತ್ರೆಗಳಲ್ಲಿ ಕೆಮಿಸ್ಟ ಮತ್ತು ಉಗ್ರಾಣದವರಯವರಿಂದಲು ಮಾರಲ್ಪಡುವದು.

ಬರ್ರೋಸ ವೆಲ್‌ಕಂ ಅಣ್ಡ ಕೋ, ಲಂಡನ್ ಅಣ್ಡ ಬಂಬಾಯಿ. Burroughs Wellcome & Co. London and Bombay

All Rights Reserved

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ “ವಿಲ್ಲಿಯಮ್ಸ್ ಡೆಂಟೋನ್” ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ [illegible] ವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಅತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಕೆಲವೇ ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವಕ್ಕೆ ಮುಖ್ಯ ಗುಣ ವಿಶೇಷ! ಮಾಡಿ ಪರೀಕ್ಷೆ!!

ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಸಗಟಪೂರು [illegible] ವ್ಯಾಪಾರಿಗಳು [illegible] ಕೊಳ್ಳುವದು.

[illegible]

ಜೆ. ಎಸ್. [illegible] ಮತ್ತು ಕಂಪೆನಿ,

ಹಂಪನಕಟ್ಟೆ, ಮಂಗಳೂರು

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ನಾಟಕ ಪ್ರಕಟನಾಲಯ, ಬಸವನಗುಡಿ ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವನಚರಿತ್ರೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ

ಅಥವಾ

ಕರ್ನಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ “ಜೀವಗೀತೆ” “ಆತ್ಮಗೀತೆ” ದೇವರೆಲ್ಲಿ” ಎಂಬ ಆಂಗ್ಲ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು “ವಂದೇ ಮಾತರಂ”, ದೇಶಭಕ್ತ ಪ್ರತಿಜ್ಞಾಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಹಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,

ಕರ್ಣಾಟಕ ಪ್ರಕಟನಾಲಯ

ಶಂಕರಪುರ, ಬಸವನಗುಡಿ ಪೋಸ್ಟು,

ಬೆಂಗಳೂರು ಸಿಟಿ

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ $\frac{123}{1922}$

ಸರ್ವೋತ್ತಮರಾವ್, ಕೊಡಿಯಾಲಬೈಲಿನಲ್ಲಿರುವ ಪೇಜಾವರ ನಾರ್ಣಪ್ಪಯ್ಯನವರ ಮಗ. } ಅರ್ಜಿದಾರ.

ಮಂಗಳೂರು ತಾಲೂಕು ಶಿವಳ್ಳಿ ಮತಸ್ಥಾಪನೆಯ ಕಮಿಟಿ ಮೆಂಬರರ ಪೈಕಿ ಉಡುಪಿ ಉದ್ಯಾವರ ವೆಂಕಟಿ ವರಹಾಚಾರ್ಯರು ತನ್ನ ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವುದರಿಂದ ಆ ಉದ್ಯೋಗಯಾನೆ ಮೆಂಬರಿಕೆಯು ನನಗೆ ಆಗಬೇಕೆಂತ ನಾನು ಕೊಟ್ಟ ಅರ್ಜಿಯು ಬರುವ ನವಂಬರ ತಿಂಗಳ ತಾ. 20ಕ್ಕೆ ತನಖಿಗೆ ಇಟ್ಟಿರುತ್ತದೆ.

23—10—1922. P. Survothama Rao.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{399}{22}$

1. ಕೊಡಂಗೆ ಶ್ರೀನಿವಾಸ ನ್ಯಾಕ
2. ಪೊದ್ದು ಉಪೇಂದ್ರ ಶ್ಯಾನುಭಾಗ
3. ಕೊರಗ ಶ್ಯಾನುಭಾಗ
4. ನರಸಪ್ಪ ಕಮ್ತಿ

} ವಾದಿರು.

ಮತ್ತು

1. ಅದಾಂ ಸೋಜಾ
2. ಲುಕಸ್ ಮೊಂತೇರಾ

} ಪ್ರತಿವಾದಿರು.

ಮೇಲೆ ಕಾಣಿಸಿದ ವಾದಿರು ಮಂಗಳೂರು ತಾಲೂಕು ಪದವು ಗ್ರಾಮದ ಸರ್ವೆ ನಂಬ್ರ 59—3Aನೇ ಪ್ರತಿವಾದಿರ ಬಾಬ್ತು ವಳ ಮೂಲಗೇಣಿ ಸ್ಥಳದ ನಡುವಿನಿಂದ ಹೋಗುವ ಮಾಮೂಲ ದಾರಿಯ ಆತಂಕದ ಬಾಬಿನಲ್ಲಿ ಪ್ರತಿವಾದಿರ ಮೇಲೆ ದಾಖಲುಮಾಡಿದ ವ್ಯಾಜ್ಯವನ್ನು ತಮ್ಮ ವ ಪದವು ಗ್ರಾಮದ ಕಲ್ಯಾ ನಾಂತೂರು, ಕೊಡಂಗೆ, ಗುಂಡಿಗೆ, ಕುಂಟಲ್ಪಾಡಿ, ಕೊಟ್ಟಾರು, ಬಾಂದೊಟ್ಟು, ಮಗ್ರುಕೋಡಿ, ಬನದಳೆ ಎಂಬಲ್ಲಿರುವ ಸಮಸ್ತ ವಾಸಿಕರ ಬಗ್ಗೂ ಮುಂದರಿಸುವರೆ ಹುಕುಂ ಕೊಡಬೇಕಾಗಿ ಅರ್ಜಿ ಹಾಕಿ ಅದೇ ಮೇರೆಗೆ ವಾದಿರಿಗೆ ಕೋರ್ಟಿನವರಿಂದ ತಾ. 17-10-1922ರಲ್ಲು ಹುಕುಂ ಕೊಡೋಣಾಗಿಯದೆ. ಈ ವಿಷಯದಲ್ಲಿ ಆಕ್ಷೇಪಗಳು ಇದ್ದರೆ ವ್ಯಾಜ್ಯದ ತನಖಿ ತಾರೀಕಾದ 13—11—1922ನೇ ದಿವಸ ಕೋರ್ಟಿನವರಿಗೆ ಹ್ಯಾಜೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 23-10-1922. } ಕುಂಡಾಜೆ ರಾಮಮೋಹನರಾವ್, ವಾದಿ ಕಡೆ ವಕೀಲ.

ಸುಸಂಧಿ ದರ ಸುಲಭ! ತ್ವರೆ ಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ “ಸ್ವದೇಶಿ ಎಲ್ ನೂಲಿನ” ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟಿಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ., ಬಿ. ಎಲ್.

ಕೊಂಕಣಿ ಭಾಷೆಯಲ್ಲಿ ಸಂಗೀತ

ಪ್ರಹ್ಲಾದ ಚರಿತ್ರ ನಾಟಕ.

ಬೆಲೆ: 0—8—0 ಪೋಸ್ಟ್ ಖರ್ಚು 0—4—0.

ಚಂದ್ರಹಾಸ ನಾಟಕ.

ತಿದ್ದಿದ ಮೂರನೇ ಮುದ್ರಣ ಬೆಲೆ: 0—4—6. ಪೊ. ಖ. 0-1-0

ಒಂದೊಂದು ಪುಸ್ತಕ ಬೇಕಾದವರು ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ:—ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದ. ಕನ್ನಡ.

‘ಕವಿ’ಯವರ

ತಾಜಾ.

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯ ಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ತು 1ರ ರೂ. 2—12—0.

ಸ್ಪೆಶ್ಯಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,

ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

“ಸಂಕ್ಷೇಪಗೀತೆ”

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಸಹ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು

ಕೆನರಾ ಮಿತ್ರಸ್ ಬುಕ್ ಎಂಡ್ ಪ್ರೆಸ್ಸ ಡಿಪೋಜಿಟರಿ,

ಮಂಗಳೂರು.

ಶಾಲಿವಾಹನಶಕೆ ೧೮೪೪ನೆಯ ದುಂ

ತು ೮ ಶನಿವಾರದಿಂದ ದುಂದುಭಿ

ಶುಕ್ರವಾರದ ವರೆಗಿನ

(೧೯೨೨ನೆಯ ಅಕ್ಟೋ

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ			
28	ಶ	೮	೧೫.೫೮	ಶ್ರವಣ	೪೫.೩೨	೧೧		
29	ರವಿ	೯	೧೮.೪೪	ಧನಿಷ್ಠ	೫೦. ೧	೧೨		
30	ಸೋಮ	೧೦	೨೨.೨೮	ಶತಭಿಷ	೫೫.೧೬	೧೪	6.	
31	ಕುಜ	೧೧	೨೭. ೦	ಪೂ. ಭಾ.	೬೦. ೦	೧೪	6.2	
1	ಬುಧ	೧೨	೩೨.೧೦	ಪೂ. ಭಾ.	೧.೧೪	೧೫	6.26	
2	ಗುರು	೧೩	೩೬.೩೨	ಉ. ಭಾ.	೮. ೨	೧೬	6.26	6.
3	ಶುಕ್ರ	೧೪	೪೨.೧೫	ರೇವತಿ	೧೪.೧೬	೧೭	6.27	6.

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ಅಕ್ಟೋಬರ್)

ತಾರೀಖು Date	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಿಮೆಯದ್ದು	ದಿವಸದ ಮಳೆ	ಜುಮಲಾ ಮಳೆ.
19	88—3	74—6	—	—
20	88—2	75—6	—	—
21	89—3	75—3	—	—
22	89—8	75—1	0—12	—
23	88—3	76—0	0—10	—
24	89—1	74—1	0—18	—
25	88—5	75—8	—	134.50

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ	ವರೆಗೆ
		ರೂ. ಅ.	ರೂ. ಅ.
ಮಸ್ಕತಿ ಅಕ್ಕಿಮುಡಿ ೧ಕ್ಕೆ	...	8—4	8—8
ಸುಗ್ಗಿಗೆ	...	7—10	7—12
ಗುಡ್ಡು,	...	7—8	8—0
ರಾಶಿ		7—2	7—6
ಅಮ್ಮಲ್ ಬೆಳ್ತಿಗೆ „	...	9—0	9—12
ಗುಡ್ಡು ಬೆಳ್ತಿಗೆ „	...	7—10	8—4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	12—8	12—10
ಗೋಧಿ ಗೋಣಿ ೧ಕ್ಕೆ	...	17—0	21—0
ಹುರುಳಿ ಗೋಣಿ ೧ಕ್ಕೆ	...	12—4	12—12
ಕಡಲೆ ಗೋಣಿ ೧ಕ್ಕೆ	...	13—0	16—0
ತೊಗರಿ ಗೋಣಿ ೧ಕ್ಕೆ	...	13—8	—
ತೊಗರಿಬೇಳೆ ಗೋಣಿ ೧ಕ್ಕೆ	...	15—0	20—0
ಉದ್ದು ಗೋಣಿ ೧ಕ್ಕೆ	...	17—0	17—4
ಹೆಸರು ಗೋಣಿ ೧ಕ್ಕೆ	...	13—0	—
ಊರು ಬೆಲ್ಲ ಖಂಡಿ ೧ಕ್ಕೆ	...	45—0	47—8
ಉಪ್ಪು ಗೋಣಿ ೧ಕ್ಕೆ	...	4—12	5—4
ಕೊಬ್ರಿ ಖಂಡಿ ೧ಕ್ಕೆ	...	85—0	95—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	50—0	50—8
ಎಳ್ಳೆಂಡಿ ಖಂಡಿ ೧ಕ್ಕೆ	...	45—0	50—0
ಕೊಬ್ರಿ ಎಣ್ಣೆ ಮಣ ೧ಕ್ಕೆ	...	7—3	8—2
ಎಳ್ಳೆಣ್ಣೆ ಮಣ ೧ಕ್ಕೆ	...	7—8	9—0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	9—0	—
ಮಾರಿಶಸ ಸಕ್ಕರೆ ಮಣ ೧ಕ್ಕೆ	...	6—0	6—0
[illegible] ಮಣ ೧ಕ್ಕೆ	...	8—0	8—4
ಸಾಸಿವೆ ಮುಡಿ ೧ಕ್ಕೆ	...	9—0	9—8
ಕೊತ್ತಂಬರಿ ಮುಡಿ ೧ಕ್ಕೆ	...	5—0	5—4
ಕಾಫಿ ಖಂಡಿ ೧ಕ್ಕೆ	...	330—0	335—0
ಚಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	175—0	—
ಚಿಗೋಟು New, ಹೊಸತು	...	130—0	135—0
[illegible] ಖಂಡಿ ೧ಕ್ಕೆ	...	120—0	125—0
[illegible] ಮಣ ೧ಕ್ಕೆ	...	28—0	28—0
ಗೇರುಬೀಜ ಮುಡಿ ೧ಕ್ಕೆ	...	2—2	2—4
[illegible] ಖಂಡಿ ೧ಕ್ಕೆ	...	55—0	65—0
[illegible] ಮಣ ೧ಕ್ಕೆ	...	23—0	24—0
[illegible] ಮಣ ೧ಕ್ಕೆ	...	30—0	—
[illegible] ೧ಕ್ಕೆ	...	24—0	—
[illegible] 1ಕ್ಕೆ	...	21—0	—

Printed & Published, by V. S. Kamath at the Mangalore Trading Association's Sharada Press, Man

ನೋಟೀಸು.

ಪ್ರಖ್ಯಾತಿತ ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ,
O. P. No. [illegible]

[illegible]-1. ರಾಧಾಬಾಯಿ,
2. ಮೋಹನರಾವ, | ಮೈನರರು
3. ಸುಮಿತ್ರರಾವ, | ಕ್ಷೇಮಚಿಂತಕಳು 1ನೇ ಅರ್ಜಿದಾರಳು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:— 1ನೇ ಅರ್ಜಿದಾರಳ ಗಂಡ, 2-3ನೇ ಅರ್ಜಿದಾರರ ತಂದೆ ಇತ್ತಲಾಗಿ ಮೃತರಾದ ನಯಂಪಳ್ಳಿ ಭವಾನಿಶಂಕರರಾಯರಿಗೆ ಸ್ಟೇಂಡಾರ್ಡ ಲೈಫ ಇನ್ಸುರೆನ್ಸ ಕಂಪೆನಿಯವರಿಂದ ಬರತಕ್ಕ ಇನ್ಸುರು ಹಣಗಳ ಇವರ ವಸೂಲಿ ಕುರಿತು ತಮ್ಮ ಹೆಸರಲ್ಲಿ ವಾರೀಸ ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಅರ್ಜಿದಾರರು ಅರ್ಜಿಕೊಟ್ಟಿರುವುದರಿಂದ ಸದ್ರಿ ಅರ್ಜಿ ತನಖಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 3—11—'22ಕ್ಕೆ ಇಟ್ಟಿರುವುದರಿಂದ ಆಕ್ಷೇಪವಿದ್ದವರು ಸದರಿ ತಾರೀಕಿನ ಹಗಲು 10ಗಂಟೆಗೆ ಸದರಿ ಕೋರ್ಟ ಮುಂದೆ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು.

ಕುಂದಾಪುರ,
ತಾ. 18—10—'22 } K. Venkat Rao,
ಅರ್ಜಿದಾರರ ವಕೀಲ.

ಸುಲಭ ಪ್ರಯಾಣ! ಸುಲಭ ದರಗಳು!

ಎರಡೇ ದಿನಗಳೊಳಗೆ ಮುಂಬಯಿ

ದಿ ಮರ್ಚಂಟ ಸ್ಟೀಮ್‌ನೇವಿಗೇಶನ್ ಕಂಪೆನಿ.

ಈ ಕಂಪೆನಿಯ ಸ್ಟೀಮರು ಮುಂಬಯಿಯಿಂದ ನೆಟ್ಟಗೆ ಮಂಗಳೂರು, ಕಣ್ಣಾನೂರು ಮತ್ತು ಕಲ್ಲಿಕೋಟೆ ಬಂದರುಗಳಿಗೆ ಕ್ರಮಪ್ರಕಾರ ಬರುವುದು.

ಮಂಗಳೂರಿನಿಂದ ಮುಂಬಯಿಗೂ ಮುಂಬಯಿಯಿಂದ ಮಂಗಳೂರಿಗೂ ಎರಡೇ ಎರಡು ದಿನಗಳೊಳಗೆ ಹಡಗುಗಳು ತಲ್ಪುವವು.

ಪ್ರಯಾಣಿಕರನ್ನೂ ಪಾರ್ಸೆಲುಗಳನ್ನೂ ಒಯ್ಯಲಾಗುವುದು. ದರಗಳು ಅತೀ ಸುಲಭವಾಗಿವೆ!

ಸ್ಟೀಮರು ಹೋಗುವ ಮತ್ತು ಬರುವ ಸಮಯ ಇತ್ಯಾದಿ ಎಲ್ಲಾ ಮಾಹಿತಿಯನ್ನು ಕೆಳಗಿನ ವಿಳಾಸದಾರರಿಂದ ತಿಳಿದುಕೊಳ್ಳುವುದು.

ಬಂದರ ಮಂಗಳೂರು.
ತಾ. 19—10—22. } ಜೆ. ಡಿ. ವಾಯಡಾ ಎಂಡ್ ಸನ್
ಏಜಂಟ್ಸ್ ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಉಪ್ಪಿನಂಗಡಿ ತಾಲೂಕು ಸುಬ್ರಮಣ್ಯ ಗ್ರಾಮದ ಕುಲುಗುಂಡದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರುಷ ೧೯೨೨ನೆ ಇಸವಿ ನವಂಬರ ತಿಂಗಳ ೧೮ನೇ ತಾರೀಕಿನಿಂದ ೨೭ನೇ ತಾರೀಕು ವರೆಗೆ ಜರಗುವದು. ಅಂದರೆ ಸಂತೆಯು ಸುಬ್ರಮಣ್ಯ ದೀಪೋತ್ಸವದ ದಿವಸ ಪ್ರಾರಂಭವಾಗಿ ೧೦ ದಿನಗಳ ಪರಿಯಂತರ ಜರಗುವದು. ಸಂತೆಗೆ ತಂದ ಪ್ರತಿಯೊಂದು ಜಾನುವಾರಿನ ಮೇಲೆ ಎರಡಾಣೆ ಫೀಸು ವಸೂಲು ಮಾಡಲಾದೀತು.

ಜೆ. ದತ್ತಾತ್ರಿಯ ರಾವ್,
ರೆವಿನ್ಯೂ ಡಿವಿಜನಲ್ ಆಫೀಸರರ ಬಗ್ಗೆ.
ಪುತ್ತೂರು, ೧೯೨೨ನೇ ಇಸವಿ ಅಕ್ಟೋಬರ ೨೦ನೇ.

ಪ್ರಕಟಣೆ.

ಫರಂಗಿಪೇಟೆ ಶ್ರೀ ರಾಮಾ ಹ್ಯಾಯರ್ ಎಲಿಮೆಂಟರಿ ಶಾಲೆಯ ಕಟ್ಟೋಣವನ್ನು ವಿಸ್ತರಿಸುವ ಬಗ್ಗೆ ವಂತಿಗೆ ರೂಪದಿಂದ ಹಣವನ್ನು ಎತ್ತುವದಕ್ಕೆ ಬದಲಾಗಿ ಸದರಿ ಶಾಲೆಯ ಆಡಳ್ತೆಯನ್ನು ನೋಡುತ್ತಿರುವ ಫರಂಗಿಪೇಟೆ ವಿದ್ಯಾವರ್ಧಕ ಸಂಘದವರು ರೂಪಾಯಿ ೨೦೦೦ದ ಲೋಟ್ರಿಯನ್ನು ಏರ್ಪಡಿಸಿ ಒಂದೊಂದು ರೂಪಾಯಿಯ ೨೦೦೦ ಟಿಕೇಟುಗಳನ್ನು ಮಾರಿ ಬಂದ ಮೊಬಲಗಿನಿಂದ ಅರೆವಾಸಿ ಹಣವನ್ನು ಕಟ್ಟೋಣದ ಫಂಡಿಗೆ ಜಮಾತೆಗೆದುಕೊಂಡು ಬಾಕಿ ಹಣವನ್ನು ಲೋಟ್ರಿಯಲ್ಲಿ ಗೆದ್ದವರಿಗೆ ಇನಾಮುಗಳ ಮುಖಾಂತರ ಕೊಡುವದಾಗಿ ನಿರ್ಣಯಿಸಿದ್ದಾರೆ.

ಸದ್ಯ ಮೊಬಲಗಿನ ಲೋಟ್ರಿಯಾದ್ದರಿಂದ ವಿದ್ಯಾದಾನಿಗಳೂ ಪ್ರಾಥಮಿಕ ಶಿಕ್ಷಣ ಪೋಷಕರೂ ಆದ ಗೃಹಸ್ಥರು ಉದಾರಹಸ್ತದಿಂದ ಸಹಾಯಮಾಡುವರಾಗಿ ನಂಬುತ್ತೇನೆ.

ಎ. ರಾಮಚಂದ್ರ ಹೆಗ್ಡೆ.
ತಾ. ೧೮—೧೦—'೨೨ ಸೆಕ್ರೆಟರಿ, ವಿದ್ಯಾವರ್ಧಕ ಸಂಘ,
ಫರಂಗಿಪೇಟೆ.

ಕರ್ನಾಟಕ ರಾಷ್ಟ್ರೀಯ ಶಿಕ್ಷಣ.

ಪ್ರಥಮ ಸಮ್ಮೇಲನ.

ಬರುವ ಡಿಸೆಂಬರ ತಿಂಗಳಲ್ಲಿ ಕೂಡುವ ಅಖಿಲ ಭಾರತ ಮಹಾಸಭೆಯ ಪೂರ್ವದಲ್ಲಿ ರಾಷ್ಟ್ರೀಯ ಶಿಕ್ಷಣದ ವಿಚಾರಕ್ಕಾಗಿ, ಒಂದು ಸಮ್ಮೇಲನವು ಗಯೆಯಲ್ಲಿ ಕೂಡತಕ್ಕದ್ದಾಗಿ ಗೊತ್ತಾಗಿದೆ. ಆ ಸಮ್ಮೇಲನಕ್ಕೆ ಸಹಾಯವಾಗಬೇಕೆಂದು ರಾಷ್ಟ್ರೀಯ ಶಿಕ್ಷಣದ ವಿಷಯಕ್ಕೆ ನಮ್ಮ ಕರ್ನಾಟಕಸ್ಥರ ನಿಶ್ಚಿತ ಧೋರಣವನ್ನು ಅದಕ್ಕೆ ತಿಳಿಸುವುದು ಅವಶ್ಯವದೆ. ಇದನ್ನು ತಿಳಿದುಕೊಳ್ಳುವದಕ್ಕಾಗಿಯೆ ನಾವು ಬರುವ ನವಂಬರ ೨ನೇ ತಾರೀಕಿನ ದಿವಸ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಮ್ಮೇಲನವನ್ನು ಹುಬ್ಬಳ್ಳಿಯಲ್ಲಿ ಕೂಡಿಸಬೇಕೆಂದು ಗೊತ್ತುಮಾಡಿದ್ದೇವೆ. ಈ ನಮ್ಮ ಪ್ರಯತ್ನಕ್ಕೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರಾದರೂ ಒಂದು ಠರಾವಿನ ರೂಪದಿಂದ ಸಮ್ಮತಿಯನ್ನು ಕೊಟ್ಟಿರುತ್ತಾರೆ. ರಾಷ್ಟ್ರೀಯ ಶಿಕ್ಷಣಾಭಿರುಚಿಯುಳ್ಳ ಎಲ್ಲಾ ಸದ್ಗೃಹಸ್ಥರೂ, ಎಲ್ಲ ಅಧ್ಯಾಪಕರೂ ಅಗತ್ಯವಾಗಿ ಬಂದು ಈ ನಮ್ಮ ಕಾರ್ಯಕ್ಕೆ ಸಹಾಯಮಾಡಬೇಕೆಂದು ಸವಿನಯ ಪ್ರಾರ್ಥನೆ ಅದೆ.

ಅ. ವಾ. ನಾಬಡೆ,
ಮುಖ್ಯಾಧ್ಯಾಪಕ, ರಾ. ಶಾಲಾ, ಹುಬ್ಬಳ್ಳಿ.

ಮಂಗಳೂರು ಮುನ್ಸಿಪಾಲಿಟಿಯ ಆಡಳಿತೆಯ ವರದಿ.

[ಕಳೆದ ಸಂಚಿಕೆಯಿಂದ ಮುಂದರಿಸಿದುದು]

ಈ ವರೆಗೆ ಮುನ್ಸಿಪಾಲಿಟಿಯು ಯಾವ ವೈದ್ಯಕೀಯ ಸಂಸ್ಥೆಯನ್ನೂ ನಡಿಸುವದಿಲ್ಲ. ಪಟ್ಟಣದಲ್ಲಿ ಆರು ವೈದ್ಯಕೀಯ ಸಂಸ್ಥೆಗಳಿವೆ. ಗವರ್ನಮೆಂಟ ಹೆಡ್ ಕ್ವಾರ್ಟರ್ಸ್ ಹೊಸ್ಪಿಟಲ್, ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ, ಪೋಲೀಸ ಆಸ್ಪತ್ರೆ, ಫಾದರಮುಲ್ಲರರ ಧರ್ಮಾಸ್ಪತ್ರೆ, ಸೆಂಟ್ ಜೋಸೆಫರ ಕುಷ್ಠರೋಗಿಗಳ ಆಸ್ಪತ್ರೆ, ಮತ್ತು ರೈಲ್ವೆ ಡಿಸ್ಪೆನ್ಸರಿ. ಕುರುವದ ಮೂರು ಆಸ್ಪತ್ರೆಗಳನ್ನು ಗವರ್ನಮೆಂಟಿನವರು ನಡಿಸುವರು; ಅನಂತರದ ಎರಡು ಆಸ್ಪತ್ರೆಗಳು ಜೆಜ್ಸುಯಿಟ್ಸರಿಂದ ನಡಿಸಲ್ಪಡುತ್ತವೆ. ಕೊನೆಯದು ರೈಲ್ವೆ ಇಲಾಖೆಯ ಆಡಳಿತೆಗೆ ಒಳಪಟ್ಟಿದೆ. ಮುನ್ಸಿಪಾಲಿಟಿಯಿಂದ ಇಲ್ಲಿಯ ಕುಷ್ಠರೋಗಿಗಳ ಆಸ್ಪತ್ರೆಗೆ ರೂ. ೨೦೦, ಮತ್ತು ಕೂನೂರ್ ಪೆಶ್ಚರ್ (ಹುಚ್ಚರ ಆಸ್ಪತ್ರೆ) ಇನ್ಸಿಟ್ಯೂಟಿಗೆ ರೂ, ೧೨೦ ಸಹಾಯಧನವಾಗಿ ಕೊಟ್ಟಿದೆ. ಹೆಲ್ತ ಆಫೀಸರರ ಹುದ್ದೆಯನ್ನು ಮುನ್ಸಿಪಾಲಿಟಿಯು ಇಡಲಿಲ್ಲ. ೫ ಮಂದಿ ಸೆನಿಟರಿ ಇನ್ಸ್ಪೆಕ್ಟರರು ಕೆಲಸದಲ್ಲಿದ್ದರು. ಇವರ ಇಡೀ ವರುಷದ ಸಂಬಳ ರೂ. ೩೧೨೦. ವರದಿಯ ವರುಷದಲ್ಲಿ ಪಟ್ಟಣದಲ್ಲಿ ಜನನದ ಪರಿಮಾಣವು ಕಡಿಮೆಯಾಗಿದೆ. (ಪಟ್ಟಣದ ಜನಸಂಖ್ಯೆಯು ೫೩೮೭೭) ಕಳೆದ ವರುಷ ಜನನದ ಸಂಖ್ಯೆಯು ೧೬೩೪, ವರದಿಯ ವರುಷದಲ್ಲಿ ಜನನದ ಸಂಖ್ಯೆಯು ೧೩೯೯. ಪಟ್ಟಣದಲ್ಲಿ ಒಟ್ಟು ೨೧ ಸೂಲಗಿತ್ತಿಯರು ಕೆಲಸಮಾಡಿಕೊಂಡಿದ್ದರು. ಈ ಪೈಕಿ ೯ ಸೂಲಗಿತ್ತಿಯರನ್ನು ಮುನ್ಸಿಪಾಲಿಟಿಯವರು ಇಟ್ಟಿದ್ದರು. ಪಟ್ಟಣದ ಆರೋಗ್ಯವು ತೃಪ್ತಿಕರವಾಗಿತ್ತು. ಮೈಲಿಗೆ ೨೦-೬೩ರಂತೆ ಮರಣವಿತ್ತು. ಗತ ವರುಷ ಮೈಲಿಗೆ ೧೯-೧೪ರಂತೆ ಇತ್ತು. ಈ ವರುಷ ವಾಂತಿಭೇದಿಯ ಮರಣ, ೧; ಸಿಡುಬುರೋಗದ ಮರಣಗಳು ೨; ಪ್ಲೇಗಿನ ಮರಣಗಳು ೨೨; ಇನ್‌ಫ್ಲೂಯಂಜಾ ಮರಣಗಳು ೨೩. ಇಲಿಗಳನ್ನು ಹಿಡಿದುಕೊಲ್ಲುವ ಕಾರ್ಯವು ಎಂದಿನಂತೆ ನಡಕೊಂಡಿತ್ತು. ಈ ಕೆಲಸದ ಬಗ್ಗೆ ೨೨ ಕೂಲಿಗಳನ್ನು ಇಟ್ಟಿತ್ತು. ಒಟ್ಟು ೪೩,೭೬೪ ಇಲಿಗಳು ಕೊಲ್ಲಲ್ಪಟ್ಟವು. ಈ ಬಗ್ಗೆ ರೂ. ೩೩೦೦ ವೆಚ್ಚವಾಗಿದೆ. ಆರೋಗ್ಯರಕ್ಷಣೆಯ ಖರ್ಚು ರೂ. ೧೯,೪೭೨ ಆಗಿದೆ. ಪಟ್ಟಣದಲ್ಲಿ ಮುನ್ಸಿಪಾಲಿಟಿಯ ೧೭ ಪಾಯಖಾನೆಗಳಿವೆ. 'ಮಾರ್ಗಗಳಲ್ಲಿ ನೀರು ಚಿಮುಕಿಸುವುದಕ್ಕಾಗಿ ೨೫೦ ಗೆಲನ್ ನೀರು ಹಿಡಿಯುವ ಟಾಂಕಿಯ ಸಹಿತ ಒಂದು ಮೋಟರ ಲೋರಿಯು ತರಿಸಿದೆ. ಇದರ ಕ್ರಯ ರೂ. ೩೩೯೭. ಮಾರ್ಗಗಳಲ್ಲಿ ನೀರುಚಿಮುಕಿಸುವ ಏಲೆವಾರಿ ಮಾಡುವ ಮೊದಲೇ ಮಳೆಯು ಪ್ರಾರಂಭವಾದ್ದರಿಂದ ನೀರುಚಿಮುಕಿಸಲಾಗಲಿಲ್ಲ. ಈ ಮೋಟರ ಲೋರಿಯು ಈಗ ತಕ್ಕಾಲಕ್ಕೆ ಮಾರ್ಗಗಳ ದುರುಸ್ತಿಯ ಸಾಮಾನುಗಳನ್ನು ಆಚೆಈಚೆ ಒಯ್ಯಲಿಕ್ಕೆ ಉಪಯೋಗಿಸಲಾಗಿದೆ. ಈ ಮುನ್ಸಿಪಾಲಿಟಿಯಿಂದ ತಾಲೂಕು ಬೋರ್ಡಿನ ವೆಟರನರಿ ಆಸ್ಪತ್ರೆಗೆ ರೂ. ೧೫೦ ಸಹಾಯಧನವಾಗಿ ಕೊಟ್ಟಿದೆ. ಬೀದಿಗಳಲ್ಲಿ ಅಲೆಯುವ ೯೪೦ ನಾಯಿಗಳನ್ನು ರೂ. ೨೩೨ ಖರ್ಚುಮಾಡಿ ಕೊಲ್ಲಲಾಯಿತು. ಮಲಬಾರನ್ನು ಬಿಟ್ಟು ಇಲ್ಲಿ ವಾಸಿಸಲು ಬರುವ ಕುಷ್ಠ ರೋಗಿಗಳಿಂದ ಪಟ್ಟಣದ ಆರೋಗ್ಯಕ್ಕೆ ಉಂಟಾಗುವ ಹಾನಿಯನ್ನು ತಡಿಸತಕ್ಕದ್ದೆಂಬ ವಿಷಯವು ಕೌನ್ಸಿಲಿನ ಅವಗಾಹನೆಗೆ ಬಂದಿದೆ. ಕೌನ್ಸಿಲು ಈ ಕುರಿತು ಸರಕಾರವು ಪ್ರಕಟಿಸಲಿಕ್ಕಿರುವ 'ಮೋಡೆಲ್ ಸೆನಿಟರಿ ಬೈಲೋ'ಗಳನ್ನು ನಿರೀಕ್ಷಿಸಿಕೊಂಡಿದೆ. ಮಾರ್ಕೇಟುಗಳು, ಗಾಡಿಯ ಚೌಕಗಳು, ಕಸಾಯಿಖಾನೆಗಳು ಇವುಗಳಿಂದ ದೊರಕಿದ ರೂಪಾಯಿ ೯೯೮೭ರಲ್ಲಿ ರೂ. ೨೮೯೦ ಖರ್ಚು ಕಳೆದು ರೂ. ೭೦೪೧ ಐನ್ ಉತ್ಪತ್ತಿಯಾಗಿ ಸಿಕ್ಕಿದೆ.

ಗೋವುಗಳನ್ನು ಕಡಿಯುವ ಕಟ್ಟಡವು ಅದಕ್ಕೆ ಅಯೋಗ್ಯವಾದ ಸ್ಥಳದಲ್ಲಿ ಈಗ ಇರುವುದರಿಂದ ಅದನ್ನು ಬೇರೆ ಸ್ಥಳಕ್ಕೆ ಒಯ್ಯಲು ಡ್ಯಾರೆಕ್ಟರ್ ಒಫ್ ಪಬ್ಲಿಕ್ ಹೆಲ್ತ್ ಇವರ ಆಲೋಚನೆಯನ್ನು ಪಡೆದು ಒಂದು ಸ್ಥಳವನ್ನು ಆರಿಸಿದೆ. ಮತ್ತು ಈ ಬಗ್ಗೆ ಆ ಸ್ಥಳವನ್ನು ಹೊಂದಲು ಏಲೆವಾರಿ ಮಾಡಿದೆ.

ಮುನ್ಸಿಪಾಲಿಟಿಯ ಸಾಮಾನ್ಯ ಉತ್ಪನ್ನ:—ಪ್ರೊಪರಟಿಗಳ ಬಾಡಿಗೆ 1/10ನೇ ಅಂಶದಷ್ಟು ಟೇಕ್ಸು ವಿಧಿಸಲಾಯಿತು. ಇದರಿಂದ ರೂ. ೬೩,೪೮೦ ಪ್ರೊಪರಟಿ ಟೇಕ್ಸಾಗಿ ಉತ್ಪನ್ನವಾಯಿತು. ವೃತ್ತಿತೆರಿಗೆಯಿಂದ ರೂ. ೧೧,೯೯೮ ಮತ್ತು ಕಂಪೆನಿಗಳ ಮೇಲಿನ ತೆರಿಗೆಯಿಂದ ರೂ. ೫೪೬೫ ದೊರಕಿತು. ಇತರ ಚಿಲ್ಲರೆ ತೆರಿಗೆ ವಗೈರೆ ಕೂಡಿ ಒಟ್ಟು ಉತ್ಪನ್ನ ರೂ. ೮೧,೪೩೧. (ರೂ. ೩೮೮೮ ಖರ್ಚು) ಮುನ್ಸಿಪಲ್ ಕೌನ್ಸಿಲಿನ ಲೆಕ್ಕಕ್ಕೆ ಜಮೆ ಇರುವ ರೂ. ೮೮೦೦೦ರಲ್ಲಿ ರೂ. ೫೭೬೫ನ್ನು ಮುನ್ಸಿಪಲ್ ಆಫೀಸು ಕಟ್ಟೋಣವನ್ನು ದುರುಸ್ತಿಪಡಿಸುವ ಅಥವಾ ಹೊಸದಾಗಿ ಕಟ್ಟಿಸುವ ಬಗ್ಗೆ ವಿಂಗಡಿಸಿಟ್ಟಿದೆ. ಮುನ್ಸಿಪಲ್ ತೋಟಿಗಳ ಬಗ್ಗೆ ಒಂದು, ಮತ್ತು ಜಾಡಮಾಲಿಗಳ ಬಗ್ಗೆ ಒಂದು, ಹೀಗೆ ಎರಡು ಸಹಕಾರ ಸಂಘಗಳು ಸ್ಥಾಪಿಸಲ್ಪಟ್ಟಿದ್ದು ಈಗ ಅವು ಉತ್ತಮ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿರುವವು.

ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ್ ಕಮಿಟಿ.

ದಕ್ಷಿಣ ಕನ್ನಡ ಜಿ॥ ಕೊಂಗ್ರೆಸ್ ಕಮಿಟಿಯ ಮಹಾ ಸಭೆಯು ಬರುವ ನವಂಬರ ತಿಂಗಳ ತಾ. ೪ಕ್ಕೆ ಮಧ್ಯಾಹ್ನ ೪॥ ಗಂಟೆಗೆ ಮಂಗಳೂರು ಕರ್ನಾಟಕ ತಿಲಕ ಮಹಾ ವಿದ್ಯಾಲಯದಲ್ಲಿ ಜರಗುವುದು. ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ.

ಚರ್ಚಿಸತಕ್ಕ ವಿಷಯಗಳು:—೧. ಪ್ರಾಂತಿಕ ಕಮಿಟಿಗೂ ಗಯಾ ಕೊಂಗ್ರೆಸ್ಸಿಗೂ ಪ್ರತಿನಿಧಿಗಳನ್ನು ಚುನಾಯಿಸುವುದು. ೨. ಜಿಲ್ಲಾ ಖಾದಿ ಭಂಡಾರವನ್ನು ಮಂಗಳೂರು ತಾಲೂಕು ಕಮಿಟಿಗೆ ವಹಿಸುವ ವಿಷಯ. ೩. ಖಾದಿ ಪ್ರಚಾರಕ್ಕಾಗಿ ಅಖಿಲ ಭಾರತ ಕೊಂಗ್ರೆಸ್ ಕಮಿಟಿಯಿಂದ ಹಣ ಕೇಳುವುದು. ೪. ಮುಂದಿನ ವರ್ಷದ ಜಮಾ ಖರ್ಚಿನ ಅಂದಾಜುಪಟ್ಟಿ ವಿಷಯ ಮತ್ತು ಅಗತ್ಯವುಳ್ಳ ಇತರ ವಿಷಯಗಳು.

ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯು ನವಂಬರ ತಾ. ೩ಕ್ಕೆ ಬೆಳಿಗ್ಗೆ ೮॥ ಗಂಟೆಗೆ ಮಂಗಳೂರು ಕರ್ನಾಟಕ ತಿಲಕ ಮಹಾ ವಿದ್ಯಾಲಯದಲ್ಲಿ ಜರಗುವದು. ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ.

ಚರ್ಚಿಸತಕ್ಕ ವಿಷಯಗಳು:—೧. ಜಿಲ್ಲಾ ಪರಿಷತ್ತಿನ ವಿಷಯ, ೨. ಕನ್ನಡ ರಾಷ್ಟ್ರೀಯ ಶಿಕ್ಷಣ ಸಮಿತಿ ಮುಂಬಯಿ ಇವರ ಪತ್ರ, ೩. ರಾ. ಕೆ. ಪಿ. ಕಮ್ಮತ್ತರು ರಾಜಿನಾಮೆ ಕೊಟ್ಟದ್ದರಿಂದ ಉಪಾಧ್ಯಕ್ಷರ ಚುನಾವಣೆ, ೪. ಜಿ. ಕಾ. ಕ. ಸಭೆಗಳನ್ನು ಆಮಂತ್ರಿಸುವ ತಾಲೂಕು ಮುಖ್ಯ ಪಟ್ಟಣಗಳಲ್ಲಿ ಜರಗಿಸುವುದು. ಮತ್ತು ಅಗತ್ಯವುಳ್ಳ ಇತರ ವಿಷಯಗಳು.

ಜಿಲ್ಲಾ ಖಾದಿ ಭಂಡಾರ ಕಮಿಟಿಯ ಸಭೆಯು ನವಂಬರ ತಾ. ೩ಕ್ಕೆ ಸಂಜೆ ೫ ಗಂಟೆಗೆ ಮಂಗಳೂರು ಕರ್ನಾಟಕ ತಿಲಕ ಮಹಾ ವಿದ್ಯಾಲಯದಲ್ಲಿ ಜರಗುವುದು. ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ. ಚರ್ಚಿಸತಕ್ಕ ವಿಷಯಗಳು:—೧. ಅಕ್ಟೋಬರ ೩೧ರ ವರೆಗಿನ ಲೆಕ್ಕ ಮಂಜೂರಾತಿ, ೨. ರಾ. ಸದಾಶಿವರಾಯರ ಸ್ವಾಧೀನದಲ್ಲಿ ಅವಂಡಿಸಿದ ಮಗ್ಗಗಳ ನಿಗಾವಣೆ ನೋಡುವ ವ್ಯವಸ್ಥೆ, ಖಾದಿಭಂಡಾರದವರು [illegible] ಕುರಿತು, ೩. [illegible] ಭಂಡಾರದವರ [illegible] ಕೊಳ್ಳುವ ವಿಷಯ.

ಉಡುಪಿ ಗೋವಿಂದರಾವ್,
ಕಾರ್ಯದರ್ಶಿ.

ಉಡುಪಿ ರಾಷ್ಟ್ರೀಯ ವಿದ್ಯಾಮಂದಿರ.

ತಾರೀಕು ೨೪—೧೦—'೨೨ನೇ ಮಂಗಳವಾರ ಬೆಳಿಗ್ಗೆ ೯॥ ಗಂಟೆಗೆ ಉಡುಪಿ ರಾಷ್ಟ್ರೀಯ ವಿದ್ಯಾಮಂದಿರದಲ್ಲಿ ಅಧ್ಯಾಪಕರೂ ವಿದ್ಯಾರ್ಥಿಗಳೂ ಸಭೆಸೇರಿ ಶ್ರೀ [illegible] ಪದ್ಮನಾಭ ಪೈಗಳೂ ಕುಬೇರ ಪಾಂಡುರಂಗರಾಯರೂ ಹೋಸ್ಟೆ [illegible] ಪ್ರಭುಗಳೂ ಭಾಷಣಮಾಡಿದ ಬಳಿಕ ಈ ಕೆಳಗಿನ ನಿರ್ಣಯವನ್ನು ಎಲ್ಲರೂ [illegible] ಪಾಸುಮಾಡಿದರು.

ನಿರ್ಣಯ:—

ನಮ್ಮ ನಡುವೆ ಅಪೂರ್ವ ಸ್ವಾರ್ಥತ್ಯಾಗದಿಂದಲೂ ಅತ್ಯಂತ ಉತ್ಸಾಹದಿಂದಲೂ ರಾಷ್ಟ್ರಕಾರ್ಯವನ್ನು ಮಾಡುತ್ತಿದ್ದ ಶ್ರೀಯುತ ಹೋಸ್ಟೆ ಗೋವಿಂದ ಪೈಗಳು ಸ್ವರ್ಗಸ್ಥರಾದುದರಿಂದ ಅವರ ಕುಟುಂಬಕ್ಕುಂಟಾದ ದುಃಖದಲ್ಲಿ ನಾವೂ ಸಹಭಾಗಿಗಳಾಗುತ್ತೇವೆ. ಅಲ್ಲದೆ ಅವರು ಕೈಕೊಂಡ ಕಾರ್ಯವನ್ನು ಮುಂದರಿಸಿ ಸಾರ್ಥಕಗೊಳಿಸುವಂತೆ ದೇವರು ನಮಗೆ ಸಹಾಯ ಮಾಡುವಂತೆ ಪ್ರಾರ್ಥಿಸುತ್ತೇವೆ.

(ಸಹಿ) ಕುಬೇರ ಪಾಂಡುರಂಗರಾವ್,
ಮುಖ್ಯ ಅಧ್ಯಾಪಕ, ರಾಷ್ಟ್ರೀಯ ವಿದ್ಯಾಮಂದಿರ, ಉಡುಪಿ.

ಜಾತಿಭೇದವಿಚಾರ ವಿಮರ್ಶೆ.

(ಲೇಖಕ— ಪಾಂಡುರಂಗಶಾಸ್ತ್ರೀ, ಓದ್ಲಮನೆ.)

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಈಗ ಮನುಷ್ಯಪದವು ಪುರುಷಪರವೆಂದು ಹೇಳುತ್ತೇವೆ. ಆದ್ದರಿಂದ ಭಗಿನೀವಿವಾಹವು ನಮಗೆ ಪ್ರಸಕ್ತವಾಗುವುದಿಲ್ಲ ಎಂದು ಧರ್ಮದೇವಜಿಯವರು ಹೇಳಿದರೆ ಅದು ಯೋಗ್ಯವಾಗಲಾರದು. ಕಾರಣ 'ಪುರೋಡಾಶಂ ಚತುರ್ಧಾ ಕರೋತಿ' ಎಂಬೀ ವಾಕ್ಯದಿಂದ ಪುರೋಡಾಶ ಸಾಮಾನ್ಯಕ್ಕೇನೆ ಪ್ರಾಪ್ತವಾಗಿರುವ ಚತುರ್ಧಾ ಕರಣವು 'ಆಗ್ನೇಯಂ ಚತುರ್ಧಾ ಕರೋತಿ' ಈ ವಾಕ್ಯದಿಂದ ಆಗ್ನೇಯ ಮಾತ್ರದಲ್ಲಿ ಸಂಕೋಚಿಸಲ್ಪಡುವಂತೆ ಪ್ರಕೃತದಲ್ಲಿ ಮನುಷ್ಯಪದವು ಪುರುಷಪರಮಾತ್ರವೆಂಬ ವಿಷಯವಾಗಿ ಸಂಕೋಚಕ ಪ್ರಮಾಣವಿಲ್ಲ. ಈಗ ಮನುಷ್ಯಪದಕ್ಕೆ ಪುರುಷಮಾತ್ರವೆಂಬ ಅರ್ಥವು ಇರುವುದರಿಂದ ಸಂಕೋಚಕ ಪ್ರಮಾಣವು ಅನವಶ್ಯಕವು. ಹೀಗೆ ಹೇಳಿದರೆ ಈ ಮಾತಿಗೆ ಪ್ರಮಾಣವಿಲ್ಲ. 'ಮನುಷ್ಯಾಣಾಂ ಪಶೂನಾಂ ಚ ದುಃಖಾಯ ಪ್ರಹೃತೇ ಸತಿ । ಯಥಾ ಯಥಾ ಮಹದ್ದುಃಖಂ ದಂಡಂ ಕುರ್ಯಾತ್ ತಥಾ ತಥಾ' ಈ ವಚನದಲ್ಲಿ ಮನುಷ್ಯಪದವು ಮನುಷ್ಯತ್ವಾವಚ್ಛಿನ್ನ ಶಕ್ತವಾದ ಕಾರಣ ಯಾವತ್ ಸ್ತ್ರೀಪುರುಷ ವ್ಯಕ್ತಿಗಳಿಗೆ ಹಾಗೂ ಪಶುಗಳಿಗೆ ಪೀಡೋತ್ಪಾದನಾರ್ಥವಾಗಿ ಪ್ರಹಾರವನ್ನು ಮಾಡಿದರೆ ಹೇಗೆ ದುಃಖವು ಹೆಚ್ಚಾದೀತೋ ಹಾಗೆಯೆ ದಂಡವನ್ನು ಸಹ ಹೆಚ್ಚು ವಿಧಿಸತಕ್ಕದ್ದು.' ಈ ಪ್ರಕಾರ ವಿಧಿಸಿರುವ ದಂಡವು ನಿಮ್ಮ ಅಭಿಪ್ರಾಯದಂತೆ ಮನುಷ್ಯಪದವು ಪುರುಷಪರವೆಂದು ಗ್ರಹಿಸಿದರೆ ಸ್ತ್ರೀ ಪ್ರಹಾರಕನಿಗೆ ದಂಡವು ಪ್ರಾಪ್ತವಾಗಲಾರದು. ಇದಲ್ಲದೆ ಪುರುಷಮಾತ್ರರು ಭ್ರಾತೃರಾದ ಕಾರಣ ತನ್ನ ಹೆಂಡತಿಯ ತಂದೆಯು ತನಗೆ ಭ್ರಾತೃವಾದ ಪ್ರಯುಕ್ತ ಈ ಮತದಲ್ಲಿ ಭ್ರಾತೃಕನ್ಯಾ ವಿವಾಹವು ಕೂಡ ಅಪರಿಹಾರ್ಯವಾಗಿದೆ.

ಈಗ ಅವರು ಬರೆದ ಅರ್ಥವು—"ಇಂತಹ ಜ್ಞಾನದಿಂದಲೆ ಇವರನ್ನು ಕೂಡಿಕೊಂಡು ಕೆಲಸಮಾಡಿ ಉನ್ನತಿಯನ್ನು ಹೊಂದಬಹುದು." ಈ ಅರ್ಥವು ಸಹ ಅಪ್ರಾಮಾಣಿಕವಾಗಿದೆ. ಕಾರಣ ತತ್ತ್ವದರ್ಥವಾಚಕ ಪದಗಳ ಮೇಲಿನ ಮಂತ್ರದಲ್ಲಿಲ್ಲ. ಅದಲ್ಲದೆ ಅನೇಕ ವಿಧಾನಮಾಡಿದ್ದರಿಂದ ಆ ಅರ್ಥದಲ್ಲಿ ವಾಕ್ಯಭೇದ ದೋಷವು ದುಷ್ಪರಿಹಾರ್ಯವಾಗಿದೆ. ಪ್ರಕೃತದಲ್ಲಿ 'ಅಜ್ಯೇಷ್ಠಾಸಃ' 'ಅಕನಿಷ್ಠಾಸಃ' ಈ ಪದಗಳನ್ನು ಕುರಿತು ವಿಚಾರಿಸುವ 'ನಞ್' ಅಭಾವತ್ವಾವಚ್ಛಿನ್ನತ್ವದಲ್ಲಿ ಶಕ್ತವಾಗಿರುವ ಕಾರಣ ಜ್ಯೇಷ್ಠಪದಘಟಕವಾದ ನಞರ್ಥಕ್ಕೆ ಜ್ಯೇಷ್ಠತ್ವ ಪ್ರತಿಯೋಗಿಕ ಪ್ರಾಗಭಾವವೆಂಬ ಅರ್ಥವೆ? ಇಲ್ಲವೆ, ಜ್ಯೇಷ್ಠ ಪ್ರತಿಯೋಗಿಕ ಪ್ರಧ್ವಂಸಾಭಾವ ಪರತ್ವವೆಂಬ ಅರ್ಥವೆ? ಅಥವಾ ಜ್ಯೇಷ್ಠತ್ವ ಪ್ರತಿಯೋಗಿಕಾತ್ಯಂತಾಭಾವ ಪರತ್ವವೆಂಬ ಅರ್ಥವೆ? ಪ್ರಥಮಪಕ್ಷವು ನಿಮ್ಮ ಇಷ್ಟಾರ್ಥವನ್ನು ಸಾಧಿಸುವುದಿಲ್ಲ. ಕಾರಣ ಪ್ರಾಗಭಾವ ಪ್ರತಿಯೋಗಿತ್ವವು ಕಾರ್ಯದ ಲಕ್ಷಣವು. ಕಾರ್ಯವು ಹುಟ್ಟುವ ಪೂರ್ವದಲ್ಲಿ 'ಈ ಅಧಿಕರಣದಲ್ಲಿ ಘಟವು ಉಂಟಾಗುವುದು' ಎಂಬೀ ಪ್ರತೀತಿಯಲ್ಲಿ ವಿಷಯವಾಗುವ ಯಾವ ಅಭಾವವೋ ಅದು ಪ್ರಾಗಭಾವವು. ಅದರ ಪ್ರತಿಯೋಗಿಯೆ ಘಟಾದಿ ರೂಪಕಾರ್ಯವು. ಅರ್ಥಾತ್ ಪ್ರಾಗಭಾವವು ಸಹ ಅವಶ್ಯಕಾರ್ಯಜನಕವಾಗಿರುವ ಕಾರಣ ಈ ಕಾಲದಲ್ಲಿ ಜ್ಯೇಷ್ಠತ್ವ ವಿರಲು ಬಾಧಕವಿಲ್ಲೆಂದು ಸಿದ್ಧವಾಗುತ್ತದೆ. ಈ ವಿಚಾರವು ಅಕನಿಷ್ಠಾಸಃ ಎಂಬ ಕಡೆಯಲ್ಲಿ ಊಹಿಸಿಕೊಳ್ಳುವುದು. ಎರಡನೆ ಕಲ್ಪವು ಸಹ ನಿಯಮಸಾಧಕವಲ್ಲದ ಕಾರಣ ಜ್ಯೇಷ್ಠತ್ವ ಕನಿಷ್ಠತ್ವ ಇವು ಕಾರ್ಯಧರ್ಮಗಳು. ಕಾರ್ಯವು ಪ್ರವಾಹದಿಂದ ಅವ್ಯಾಹತವಾಗಿ ಉಂಟಾಗುತ್ತಲೆ ಇದ್ದ ಕಾರಣ ಅದರ ಧರ್ಮಗಳನ್ನು ಅಪಲಪಿಸಲು ನಿಮಗೆ ಸಾಧ್ಯವಿಲ್ಲ. ಈಗ 'ಅಜ್ಯೇಷ್ಠಾಸಃ' ಈ ಪದದ ಜ್ಯೇಷ್ಠಾವಚ್ಛಿನ್ನ ಜ್ಯೇಷ್ಠ ಪ್ರತಿಯೋಗಿತಾಕಾತ್ಯಂತಾ ಭಾವಶಾಲಿ' ಎಂಬುದು ಹಾಗೂ 'ಅಕನಿಷ್ಠಾಸಃ' ಈ ಪದದ ಕನಿಷ್ಠತ್ವಾವಚ್ಛಿನ್ನ ಪ್ರತಿಯೋಗಿತಾಕಾತ್ಯಂತಾ ಭಾವಾಧಿಕರಣೀಭೂತ ಎಂಬ ಅರ್ಥ, ಈ ಮೂರನೆ ಕಲ್ಪವೂ ಸಹ ನಿಮಗೆ ಸಾಧಕವಲ್ಲ. 'ಜ್ಯೇಷ್ಠ,' 'ಕನಿಷ್ಠ' ವಿಷಯಕ ಪ್ರತೀತಿಯು ನಿಮಗೆ ಉಂಟೇ ಇಲ್ಲವೆ? ಆದ್ಯಪಕ್ಷವು ಸಂಭವಿಸುವುದಿಲ್ಲ. ಕಾರಣ ಪ್ರತೀತಿ ವಿಷಯೀಭೂತವಾದ ಪದಾರ್ಥವನ್ನು ಪ್ರತಿಷೇಧಿಸಲು ಸಾಧ್ಯವಿಲ್ಲ. [illegible] ಪಕ್ಷದಲ್ಲಿ 'ಪ್ರತಿಯೋಗಿ ವಿಷಯಕ ಜ್ಞಾನವಿಲ್ಲದೆ ನಿಷೇಧವು ಉಪಪನ್ನವಾಗುವುದಿಲ್ಲ. ಕಾರಣ ಅಭಾವಬುದ್ಧಿಯನ್ನು ಕುರಿತು ಪ್ರತಿಯೋಗಿತಾವಚ್ಛೇದಕ ವಿಶಿಷ್ಟ ಪ್ರತಿಯೋಗಿ ಜ್ಞಾನವೆ ಕಾರಣವು. ಈಗ ಅನ್ಯೋನ್ಯಾ ಭಾವಪಕ್ಷವೂ ಕೂಡ ಉಪಪನ್ನವಾಗುವದಿಲ್ಲ. ಸಾರಾಂಶ ಅವರು ಬರೆದಿರುವ ಅರ್ಥವು ಅವರ ಅಭಿಮತಾರ್ಥವನ್ನು ಸಾಧಿಸಿಕೊಡುವದಿಲ್ಲ. "ಎಲ್ಲ ಮನುಷ್ಯರು" ಎಂಬ ಅರ್ಥದ ಪದಗಳು ಈ ಮಂತ್ರದಲ್ಲಿ ಮಾತ್ರವಲ್ಲ, ಇಡೀ ಸೂಕ್ತದಲ್ಲಿ ಸಹ ಇಲ್ಲವೆಂಬುದಕ್ಕೆ ಆ ಸೂಕ್ತವನ್ನೆ ನೋಡಬಹುದು.

ಈಳೇ ಅಗ್ನಿಂ ಸ್ವವಸಂ ನಮೋಭಿರಿಹ ಪ್ರಸತ್ತೋ ವಿಚಯತ್ ಕೃತಂ ನಃ ॥ ರಥೈರಿವ ಪ್ರಭರೇ ವಾಜಯದ್ಭಿಃ ಪ್ರದಕ್ಷಿಣಿನ್ಮರುತಾಂ ಸ್ತೋಮಮೃಧ್ಯಾಂ ॥ [illegible] ಅಜ್ಯೇಷ್ಠಾಸೋ ಅಕನಿಷ್ಠಾಸ [illegible] ॥ [illegible]

(ಮುಂದರಿಯುವುದು)

ವಿದೇಶ ವರ್ತಮಾನ.

ತುರ್ಕರ ವಿಜಯ— ತುರ್ಕಿಯ ಸಮಸ್ಯೆಯನ್ನು ಇತ್ಯರ್ಥಪಡಿಸುವದಕ್ಕೆ ನವಂಬರ ತಿಂಗಳ ಪ್ರಾರಂಭದಲ್ಲಿ ಕೂಡಲಿಕ್ಕಿರುವ ಕೊನ್ಫರೆನ್ಸನ್ನು ಬರುವ ನವಂಬರ ತಾ ೧೩ಕ್ಕೆ ಮುಂದರಿಸಿ ಇಡಲಿಕ್ಕೆ ಫ್ರೆಂಚರು ಒಪ್ಪಿದ್ದಾರೆ. ಥ್ರೇಸ, ಕೊನ್‌ಸ್ಟಂಟಿನೋಪಲ್, ಏಸಿಯಾಮೈನರ ಮುಂತಾದ ಪ್ರದೇಶಗಳನ್ನು ಬಿಟ್ಟು ಬೇರೆ ಕಡೆಗೆ ಹೋಗುತ್ತಿರುವ ಅರ್ಮೇನಿಯನರ ಸ್ಥಿತಿಯು ಬಹಳ ದುಃಖಕರವಾಗಿದೆಯಂತೆ. ಅನೇಕರು ಆಹಾರವಿಲ್ಲದೆ ಬಳಲುತ್ತಿರುವರು. ಈಗಿನ ಶೀತಹವೆಯೂ, ಮಳೆ ಸುರಿಯುವಿಕೆಯೂ ಇವರ ಕಷ್ಟಗಳನ್ನು ಹೆಚ್ಚಿಸಿವೆಯಂತೆ.

ಮಿ। ಲೊಯಿಡ ಜೋರ್ಜರು:— ಬ್ರಿಟಿಷ ಸಾಮ್ರಾಜ್ಯದ ಮುಖ್ಯ ಅಮಾತ್ಯರಾದ ಲೊಯಿಡ್ ಜೋರ್ಜರು ತಮ್ಮ ಅಮಾತ್ಯಪದವಿಗೆ ರಾಜಿನಾಮೆ ಕೊಟ್ಟಿರುವುದನ್ನು ಚಕ್ರವರ್ತಿಯವರು ಅಂಗೀಕರಿಸಿಕೊಂಡಿದ್ದಾರೆ. ಲೊಯಿಡ ಜೋರ್ಜರು ಬಾಂಧವ್ಯದ ಬೆಂಬಲದಿಂದಾಗಲಿ ಅಥವಾ ವಂಶಪರಂಪರೆಯಿಂದ ಮುಖಂಡರಾಗುವ ಹಕ್ಕಿನ ಬಲದಿಂದಾಗಲಿ ಈ ಪದವಿಯನ್ನು ಹೊಂದಿದ್ದಲ್ಲ. ಪರಂತು, ಇವರ ಅಸಾಧಾರಣ ರಾಜಕಾರಣ ನಿಪುಣತೆಯೂ, ವಾಕ್ಪಟುತ್ವವೂ, ಕಾರ್ಯಶಕ್ತಿಯೂ, ಮೇಧಾಶಕ್ತಿಯೂ ಇವರನ್ನು ಈ ಪದವಿಗೆ ತಂದಿತೆಂದು ತಿಳಿದುಬರುತ್ತದೆ. ಇವರು ಯುದ್ಧಕಾಲದಲ್ಲಿ ಸಾಮ್ರಾಜ್ಯದ ಮಂತ್ರಿಗಳಾಗಿ ಬಹಳ ಕೆಲಸವನ್ನು ಮಾಡಿದ್ದಾರೆ. ಯುದ್ಧಮುಗಿದು ಸಂಧಿಯು ನಡೆದು ಈಗ ಪರರಾಷ್ಟ್ರಗಳ ವಿಷಯ ಲೊಯಿಡ್ ಜೋರ್ಜರು ನಡಿಸುವ ಧೋರಣವು ಅನೇಕರಿಗೆ ಮೆಚ್ಚಿಗೆಯಾಗಲಿಲ್ಲ. ತುರ್ಕಿಯ ಸಮಸ್ಯೆಯ ಕುರಿತು ಇವರ ಧೋರಣವು ಅನೇಕ ಕಡೆಗಳಲ್ಲಿ ನಿಷೇಧಿಸಿದ, ಕನ್ಸರ್ವೇಟಿವ್ ಪಂಗಡದವರು ಪ್ರಬಲಗೊಂಡುದುದೇ ಇವರು ಥಟ್ಟನೆ ರಾಜಿನಾಮೆಯನ್ನು ಕೊಡಲು ಮುಖ್ಯ ಕಾರಣವಾಗಿದೆ.

ಲೊಯಿಡ ಜೋರ್ಜರು ಮುಖ್ಯ ಅಮಾತ್ಯಪದವಿಗೆ ರಾಜಿನಾಮೆಯನ್ನು ಕೊಟ್ಟದ್ದರಿಂದ ಈಗ ಅವರ ಪದವಿಯನ್ನು ಮಿ। ಬೊನರಲೋ ಇವರು ವಹಿಸಿಕೊಳ್ಳಲಿಕ್ಕಿದ್ದಾರೆ. ಲೋರ್ಡ ಕರ್ಝನರೂ ಲೋರ್ಡ ಡರ್ಬಿಯವರೂ ಮಿ। ಬೊನರಲೋ ಇವರಿಗೆ ಸಹಾಯಕರಾಗಿಯೇ ಇರುವರಂತೆ. ಮತ್ತು ಲೋರ್ಡ ಕರ್ಝನರು ಪರರಾಷ್ಟ್ರಗಳ ಕುರಿತು ವ್ಯವಹಾರವನ್ನು ನಡಿಸುವ 'ಸೆಕ್ರೆಟರಿ ಒಫ್ ಸ್ಟೇಟ್ ಫೊರ್ ಫೋರಯಿನ್ ಎಫೇರ್ಸ್' ಈ ಪದವಿಯಲ್ಲಿ ಇರುವರೆಂದು ವರ್ತಮಾನವಿದೆ.

ಸರ್. ವಿಲಿಯಮ್ ಮೇಯರ್:—ಇಂಗ್ಲೆಂಡಿನಲ್ಲಿ ಹಿಂದುಸ್ಥಾನದ ಹೈ ಕಮ್ಮಿಶನರಾಗಿದ್ದ ಇವರು ಅಕಸ್ಮಾತ್ತಾಗಿ ಕಾಲವಾದರು. ಇವರು ಥಟ್ಟನೆ ಮಾರ್ಗದಲ್ಲಿ ಬಿದ್ದಾಗ ಇವರನ್ನು ವೆಸ್ಟಮಿನಿಸ್ಟರ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಪರೀಕ್ಷಿಸಿ ನೋಡಲು ಇವರ ಪ್ರಾಣ ಹೋಗಿದೆಯಾಗಿ ತಿಳಿದುಬಂತು.

ಒಳದೇಶ ವರ್ತಮಾನ.

ಗಯಾ ಕೊನ್ಫರೆನ್ಸ್—ಈ ಕೊನ್ಫರೆನ್ಸಿನ ಸಿದ್ಧತೆಗಳು ಯೋಗ್ಯವಾಗಿ ನಡೆಯುತ್ತಿವೆ. ಕೊಂಗ್ರೆಸ ಮಂಟಪವು ರೈಲ್ವೆ ಸ್ಟೇಶನಿನಿಂದ ಮೂರು ಮೈಲು ದೂರವಿರುವುದು. ಈ ಮಂಟಪದ ಸ್ಥಳವು ಪವಿತ್ರವಾದ ಫಲ್ಗು ನದಿಯ ದಡದ ಮೇಲಿರುವುದು. ಇದರ ಸುತ್ತಮುತ್ತಲಿನ ಪ್ರದೇಶವು ನೈಸರ್ಗಿಕ ಸೌಂದರ್ಯದಿಂದ ಕೂಡಿದೆ. ಪ್ರಖ್ಯಾತಿಪಟ್ಟ ಬುದ್ಧಗಯವು ಕೊಂಗ್ರೆಸ ಮಂಟಪದಿಂದ ಬರೇ ೪ ಮೈಲು ದೂರವಿದೆ. ಹಿಂದೂ ಗಯಾ ಮತ್ತು ವಿಷ್ಣುಪಾದವು ಒಂದು ಮೈಲು ದೂರವಿದೆ. ಮಂಟಪದ ಬುನಾದಿಕಲ್ಲು ಈ ಮೊದಲೇ ಹಾಕಿ ಆಗಿದೆ. ೨೫,೦೦೦ ಜನರಿಗೆ ಕೂತುಕೊಳ್ಳಲು ಸಾಕಾಗುವಷ್ಟು ವಿಸ್ತೀರ್ಣದ ಮಂಟಪವನ್ನು ಕಟ್ಟಿಸುವ ಕಾರ್ಯವನ್ನು ಒಂದು ಕಂಪೆನಿಯವರಿಗೆ ವಹಿಸಿಕೊಟ್ಟಿದೆ. ಪ್ರತಿನಿಧಿಗಳಿಗೆ ಉಳಕೊಳ್ಳಲು ಸ್ಪೆಶಲ್ ಗುಡಿಸಲುಗಳನ್ನು ನದಿಯ ದಡದಲ್ಲಿ ಸಿದ್ಧಗೊಳಿಸಲಾಗುವುದು. ಕೊಂಗ್ರೆಸ್ಸಿನ ಸಮಯದಲ್ಲಿ ಗಯಾದಲ್ಲಿ ಶೀತಹವೆ ಇರುವುದರಿಂದ ಪ್ರತಿನಿಧಿಗಳು ಬರುವಾಗ ಚಳಿಯನ್ನು ಹೋಗಲಾಡಿಸಲು ಅನುಕೂಲವಾಗುವ ವಸ್ತ್ರಗಳನ್ನು ತಮ್ಮೊಡನೆ ತರತಕ್ಕದ್ದು.

ತಿರುಪುರಿನಲ್ಲಿ ಕೂಡಿದ ಸಾಧುಗಳ ಪರಿಷತ್ತು:—ತಿರುಪುರಿನಲ್ಲಿ ಕೂಡಿದ ಸಾಧುಗಳ ಪರಿಷತ್ತಿನಲ್ಲಿ ಕೆಳಗಿನ ಠರಾವುಗಳು ಪಾಸಾಗಿವೆ. ದಕ್ಷಿಣ ಹಿಂದೂಸ್ಥಾನದ ಪ್ರತಿ ಜಿಲ್ಲೆಯಲ್ಲೂ, ತಾಲೂಕಿನಲ್ಲೂ, ಹಳ್ಳಿಯಲ್ಲೂ ಸಾಧುಮಂಡಲಗಳನ್ನು ಸ್ಥಾಪಿಸತಕ್ಕದ್ದು. ದಕ್ಷಿಣ ಹಿಂದೂಸ್ಥಾನದ ಸಾಧುಗಳೆಲ್ಲರೂ ಖಾದಿಯನ್ನು ಧರಿಸಿಕೊಳ್ಳಬೇಕಾಗಿ ಈ ಪರಿಷತ್ತು ಒತ್ತಾಯಪಡಿಸುತ್ತದೆ. ದಕ್ಷಿಣ ಹಿಂದೂಸ್ಥಾನದ ದೇವಸ್ಥಾನಗಳಲ್ಲಿ ಪೂಜೆಯ ವೃತ್ತಿಯನ್ನು ನಡಿಸಿಕೊಂಡಿರುವ ವೈದಿಕರು, ಪುರೋಹಿತರು, ಅರ್ಚಕರು ಮೊದಲಾದವರು ಖಾದಿಯು ಪರಿಶುದ್ಧವಾದದ್ದೆಂದು ತಿಳಿದು ತಮ್ಮ ಸ್ವೇಚ್ಛೆಯಿಂದ ಅದನ್ನು ಉಟ್ಟುಕೊಳ್ಳಬೇಕಾಗಿ ಪರಿಷತ್ತು ಸೂಚಿಸುತ್ತದೆ. ದೇಶೀಯ ಕರ್ಪೂರವನ್ನೂ, ಕಾಶ್ಮೀರ ಕುಂಕುಮ ಕೇಸರವನ್ನೂ ದೇವಸ್ಥಾನಗಳಲ್ಲಿ ಉಪಯೋಗಿಸತಕ್ಕದ್ದು.

ಸಾಧುಗಳು ರೈಲ್ವೆ ಬಂಡಿಗಳಲ್ಲಿ ಟಿಕೇಟುಗಳನ್ನು ಹೊಂದದೆ ಪ್ರಯಾಣ ಮಾಡುವುದು ತಪ್ಪಾಗಿರುವುದರಿಂದ ಸಾಧುಮಂಡಲವು ಇದನ್ನು ನಿಷೇಧಿಸಿ ಅವರು ಈ ಕ್ರಮವನ್ನು ಬಿಟ್ಟುಬಿಡುವಂತೆ ಮಾಡಬೇಕು.

ಸಾಧುಗಳು ಗಾಂಜಾ ಸೇದಿಸುವುದೂ ಅಫೀಮು ಸೇದುವುದೂ ಈ ಮೊದಲಾದ ದುರಾಭ್ಯಾಸಗಳನ್ನು ಬಿಟ್ಟುಬಿಡಬೇಕು. ಮತ್ತು ಈ ಮಂಡಲವು ಸಾಧುಗಳು ಈ ದುರಭ್ಯಾಸವನ್ನು ಬಿಟ್ಟುಬಿಡುವಂತೆ ಪ್ರಯತ್ನಿಸಬೇಕು.

ಕಲ್ಕತ್ತದಲ್ಲಿ ಬೆಂಕಿಯ ಅನಾಹೂತ:—ಇಲ್ಲಿಯ ಮಿನರ್ವಾ ಥಿಯೇಟರಿಗೆ ಬೆಂಕಿತಗಲಿ ಸುಮಾರು ೩ ಲಕ್ಷದಷ್ಟು ನಷ್ಟವುಂಟಾಗಿದೆ. ಬೆಂಕಿಯು ಉಂಟಾದ ಸರಿಯಾದ ಕಾರಣವು ಈ ವರೆಗೆ ತಿಳಿಯಲಿಲ್ಲ. ಈ ಕಟ್ಟೋಣದ ಮೇಲೆ ಇನ್ಸ್ಯೂರ್ ಮಾಡಲಿಲ್ಲವಂತೆ. ಥಿಯೇಟರಿನಲ್ಲಿರುವ ಇಲೆಕ್ಟ್ರಿಕ್ ಸಂಗೆಯ ಮೂಲಕ ಈ ಬೆಂಕಿಯು ಉಂಟಾಯಿತಂತೆ.

ಹೈದರಾಬಾದ:—ಸರ್. ಅಲಿಇಮಾಮರು ತಮ್ಮ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟ ನಂತರ ಹೈದರಾಬಾದಿನ ರೆವಿನ್ಯೂಮೆಂಬರರಾಗಿ ನೇಮಕಪಟ್ಟ ಮಿ। ಆಸಫ ಅಲಿಯವರು ತಮ್ಮ ಈಗಿನ ಹುದ್ದೆಗೆ ರಾಜಿನಾಮೆಯನ್ನು ಕೊಟ್ಟಿರುವರು.

ಬಂಗಾಳದ ನೆರೆ:—ಈ ನೆರೆಯ ಹಾವಳಿಯು ಒಟ್ಟು ರೂ. ೪ ಕೋಟಿಯಾಗಬಹುದೆಂದು ಅಂದಾಜುಹಿಡಿದಿದೆ. ಹಳ್ಳಿ ನಿವಾಸಿಗಳಿಗೆ ಮಾಗಿಕಾಲದ ಬೆಳೆಯು ಹಾಳಾದುದರಿಂದ ಹೊಟ್ಟೆಗೆ ಆಹಾರವು ದೊರಕುವುದು ದುರ್ಲಭವಾಗಿದೆ. ಈ ಜನರಿಗೆ ಬಟ್ಟೆಯ ಕುಟ್ಟಿಯೂ ಬಹಳವಾಗಿದೆ. ಕಳೆದ ತಾರೀಕು ೧೮ರ ವರೆಗೆ ನೆರೆಯ ರಿಲೀಫ್ ಕಮ್ಮಿಟಿಗೆ ರೂ. ೧೧೦,೦೦೦ ಸಹಾಯಧನವಾಗಿ ದೊರಕಿದೆ. ಈ ಹಣವು ಏನೂ ಸಾಕಾಗದ್ದರಿಂದ ಈಗ ಕಲ್ಕತ್ತದಲ್ಲಿ ಪ್ರತಿ ಮನೆಗೆ ಹೋಗಿ ಸಹಾಯಧನವನ್ನು ಕೇಳುವ ಏರ್ಪಾಡು ಮಾಡಿದೆ.

ಅಲಿ ಸಹೋದರರ ದಿನ:—ಬರುವ ನವಂಬರ ತಾ. ೧ಕ್ಕೆ ಅಲಿಸಹೋದರರಿಗೆ ಶಿಕ್ಷೆಯನ್ನು ವಿಧಿಸಿ ೧ ವರುಷವಾಗುವುದರಿಂದ ಈ ದಿನವನ್ನು ಹಿಂದೂ-ಮುಸಲ್ಮಾನರು ಅಲಿಸಹೋದರರ ದಿನವೆಂದು ಆಚರಿಸಬೇಕಾಗಿ ಖಿಲಾಫತ ಕಮ್ಮಿಟಿಯ ಸೆಕ್ರೆಟರಿಗಳಾದ ಡಾ. ಅನ್ಸಾರಿಯವರು ಒಂದು ಸೂಚನೆಯನ್ನು ಸೂಚಿಸಿದ್ದಾರೆ.

ಮದದ್ರಾವಕಗಳ ಜಾಹೀರಾತು:—ಸರಕಾರದವರು ಟಪ್ಪಾಲು ಚೀಟುಗಳ ಪುಸ್ತಕಗಳ ಮೇಲೆ ಮಾದಕದ್ರವ್ಯಗಳ ಜಾಹೀರಾತುಗಳನ್ನು ಪ್ರಕಟಿಸುವುದು ಸಕಲ ವಿಧದಲ್ಲೂ ಆಕ್ಷೇಪಕರವಾಗಿದೆ. ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರು ಸರಕಾರದವರು ಈ ಜಾಹೀರಾತುಗಳನ್ನು ಪ್ರಕಟಿಸುವುದನ್ನು ನಿಲ್ಲಿಸುವಂತೆ ಒತ್ತಾಯ ಪಡಿಸುವರೆಂದು ತಮ್ಮ ನಂಬಿಕೆಯಾಗಿದೆ. ಮತ್ತು ಹಿಂದೂಸ್ಥಾನದಲ್ಲಿರುವ ತಮ್ಮ ಸಂಘದ ಶಾಖೆಗಳು ಸರಕಾರದವರು ಪ್ರಕಟಿಸುವ ಈ ಜಾಹೀರಾತುಗಳನ್ನು ನಿಲ್ಲಿಸುವದಕ್ಕೆ ಪ್ರಯತ್ನಿಸುವವೆಂದು ತಮಗೆ ಭರವಸೆ ಇದೆ ಎಂದು ಎಂಗ್ಲೋ ಇಂಡಿಯನ್ ಟೆಂಪರೆನ್ಸ್ ಎಸೋಸಿಯೇಶನು ಸದರಿ ಎಸೋಸಿಯೇಶನಿನ ಅಧಿಕಾರಿಯಲ್ಲಿ ಪ್ರಕಟಿಸಿದೆ.

ಭವಿಷ್ಯವು:—ಬ್ರಿಟಿಷ ಜನರಲ್ ಒಫ್ ಅಸ್ಟ್ರೋಲೋಜಿಯಲ್ಲಿ ಈ ಪ್ರಕಾರ ಬರೆದಿರುತ್ತದೆ. "೧೯೨೬ನೇ ಇಸವಿಯಲ್ಲಿ ಜಗತ್ತಿನಲ್ಲಿ ರಾಜಕೀಯ ಸಾಮಾಜಿಕ ಆರ್ಥಿಕ ಕ್ರಾಂತಿಗಳಾಗುವುವು. ಭಯಂಕರ ಗದ್ದಲವೇ ಗದ್ದಲ. ಪ್ಲೇಗ, ಕೊಲೇರಾ, ಇನ್‌ಫ್ಲುಯೆಂಜಾ ಮುಂತಾದ ರೋಗಗಳ ಉಪದ್ರವಾದರೂ ಆಗುವುದು. ೧೯೩೦ನೇ ಇಸವಿಯಲ್ಲಿ ಮುಸಲ್ಮಾನ ಮತ್ತು ಇಂಗ್ಲೀಷರ ನಡುವೆ ಯುದ್ಧವಾಗಿ ಆ ಮೇಲೆ ಜಗತ್ತಿನಲ್ಲಿ ಪೂರ್ವ ಶಾಂತತೆಯು ನೆಲೆಗೊಳ್ಳುವುದು. ನಮ್ಮಲ್ಲಿಯ ಕೆಲವು ಜನರು ಮಾತ್ರ ಉಳಿಯಬಹುದು". ಭವಿಷ್ಯವು ನಿಜವಾಗುತ್ತದೋ ಇಲ್ಲವೋ ನೋಡಬೇಕು.

ಕ. ವೈಭವ.

ಕಾಶೀ ವಿಶ್ವವಿದ್ಯಾಲಯ:—ಈ ವಿಶ್ವವಿದ್ಯಾಲಯದಲ್ಲಿ ಕಡಿಮೆಪಕ್ಷ ೧೦೦ ಮಂದಿ ಸ್ತ್ರೀವಿದ್ಯಾರ್ಥಿಗಳಿಗೆ ಸಾಕಾಗುವಷ್ಟು ವಿಸ್ತೀರ್ಣದ ಒಂದು ನಿಲಯ (Hostel)ವನ್ನು ಕಟ್ಟಿಸಲು ಶ್ರೀಯುತ ಮುಲ್‌ರಾಜಕಾಟೂ ಮತ್ತು ಇವರ ಇಬ್ಬರು ಅಳಿಯರು ಒಟ್ಟು ೨ ಲಕ್ಷ ರೂಪಾಯಿ ದಾನವಾಗಿ ಕೊಟ್ಟಿರುವರು.

ಖಡ್ಡಾಯದ ಶಿಕ್ಷಣ:—ಶಾಲೆಗಳಿಗೆ ದಾಖಲು ಮಾಡುವ ಪ್ರಾಯಕ್ಕೆ ಬಂದ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣವನ್ನು ಖಡ್ಡಾಯವಾಗಿ ಕೊಡತಕ್ಕದೆಂದು ತಲಚೇರಿ ಹಾಗು ತಿರುಪುರ ಮುನ್ಸಿಪಾಲಿಟಿಯವರು ಮಾಡಿದ ಠರಾವುಗಳನ್ನು ಸರಕಾರವು ಅಂಗೀಕರಿಸಿದೆ.

ಡಾಕ್ಟರ ವರದ ರಾಜಲು:—ಇವರು ಕಳೆದ ಒಗಸ್ಟಿನಲ್ಲಿ ತುರಂಗದಿಂದ ಹೊರಗೆ ಬಂದಂದಿನಿಂದ ಒಟ್ಟು ೧೭ ಪರಿಷತ್ತುಗಳ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಇವರಿಗೆ ಆಮಂತ್ರಣ ಬಂತಂತೆ. ಇವರು [illegible] ತಾಲೂಕಿನ ಕೊನ್ಫರೆನ್ಸಿನ ಅಧ್ಯಕ್ಷಸ್ಥಾನವನ್ನು ಮಾತ್ರ ಬಹಳ ಒತ್ತಾಯ ಪಡಿಸಿದ್ದರಿಂದ ವಹಿಸಿಕೊಳ್ಳಲು ಒಪ್ಪಿರುವರು. ತಾನು ಜನರ ಆಜ್ಞೆಯನ್ನು ಶಿರಸಾ ವಹಿಸಲೂ ದೇಶಕಾರ್ಯವನ್ನು ಸ್ವಾರ್ಥತ್ಯಾಗದಿಂದ ಮಾಡಲೂ ಸಿದ್ಧನಿದ್ದೇನೆ. ಆದರೆ ಎಂದಿಗೂ ಮುಖಂಡನಾಗಲೂ ಅಧ್ಯಕ್ಷಪದವಿಯನ್ನು ವಹಿಸಿಕೊಳ್ಳಲೂ ಇಚ್ಛಿಸುವುದಿಲ್ಲ. ಇದಕ್ಕಾಗಿ ತನ್ನನ್ನು ಕ್ಷಮಿಸಬೇಕು ಎಂದು ಇವರು ತಿಳಿಸಿದ್ದಾರೆ.

ಅರ್ಲವಿಂಟರಟನ್ನರು:—ಹಿಂದೂಸ್ಥಾನದ ಅಂಡರ ಸೆಕ್ರೆಟರಿಗಳಾದ ಇವರು ಕಳೆದ ತಾ. ೨೧ಕ್ಕೆ ಮುಂಬಯಿಯಿಂದ ವಿಲಾಯತಿಗೆ ಪಯಣಬೆಳೆಸಿದರು. ಇವರ ಕಾರ್ಯಕ್ರಮದ ಪಟ್ಟಿಯ ಮೇರೆಗೆ ಇವರು ಬರುವ ತಾ. ೨೮ಕ್ಕೆ ಇಲ್ಲಿಂದ ತೆರಳಬೇಕಿತ್ತು. ಪರಂತು ಇಂಗ್ಲೆಂಡಿನ ಈಗಿನ ರಾಜಕೀಯ ಪರಿಸ್ಥಿತಿಯು ಇವರನ್ನು ಕೂಡಲೇ ಇಲ್ಲಿಂದ ಹೊರಟುಹೋಗುವಂತೆ ಮಾಡಿತಂತೆ.

ಸ್ವಾಮಿ ವಿಶ್ವಾನಂದ:—ಇವರಿಗೆ ಸೆಕ್ಷನ್ ೧೨೪ನ್ನು ಅನುಸರಿಸಿ ಒಂದು ವರುಷದ ಸಾದಾಶಿಕ್ಷೆಯು ವಿಧಿಸಲಾಗಿದೆ.

ಗುಂಟೂರಿನಲ್ಲಿ ಪ್ಯುನಿಟಿವ್ ಟೇಕ್ಸ್— ಗುಂಟೂರು ಮುನ್ಸಿಪಾಲಿಟಿ ರೂ ೬,೦೦೦; ತೆನ್ನಾಲಿ ಮುನ್ಸಿಪಾಲಿಟಿ ರೂ. ೫೧೦೦ ಒಂಗಾಲೋ ಮುನ್ಸಿಪಾಲಿಟಿ ರೂ ೧೫೦೦; ನರಸರುಪೇಟ್ ಮುನ್ಸಿಪಾಲಿಟಿ ರೂ. ೨೪೦೦; ಗುಂಟೂರು ತಾಲೂಕು ರೂ. ೬,೦೦೦; ಸೆಟಿನಪಳ್ಳಿ ತಾಲೂಕು ರೂ. ೫೦೦೦; ತೆನ್ನಾಲಿ ತಾಲೂಕು ರೂ. ೧೨,೫೦೦; ರಪ್ಪಲ್ಲಿ ತಾಲೂಕು ರೂ. ೭,೨೦೦; ಬಪಟಾಲ್ ತಾಲೂಕು ರೂ. ೧೨,೫೦೦; ಒಂಗೋಲು ತಾಲೂಕು ರೂ. ೫,೦೦೦; ನರಸರುಪೇಟ್ ತಾಲೂಕು ರೂ. ೫೦೦೦; ವಿನುಕೊಂಡ ತಾಲೂಕು ರೂ. ೨,೧೦೦; ಪಲ್ನಾಡ್ ತಾಲೂಕು ರೂ. ೫೦೦೦.

ಮೈಸೂರು—ಅರ್ಥಸಾಧಕ ಪತ್ರಿಕೆಯ ಪ್ರಕಟನೆಯನ್ನು ಮ॥ ಎಂ. ಗೋಪಾಲಯ್ಯಂಗಾರರು ಬಿಟ್ಟದರಿಂದ ಈ ಅಕ್ಟೋಬರ ತಾ. ೧೫ರಿಂದ ೩ ವರ್ಷಗಳ ವರೆಗೆ ಕರ್ನಾಟಕ ಮತ್ತು ಇಂಡಿಯನ್ ರಿವ್ಯೂ ಆಫ್ ರಿವ್ಯೂಸ್ ಪತ್ರಿಕೆಗಳ ಸಂಪಾದಕರಾದ ಮ॥ ಡಿ. ವಿ. ಗುಂಡಪ್ಪನವರಿಗೆ ಸರಕಾರದವರು ವಹಿಸಿಕೊಟ್ಟಿರುವರಲ್ಲದೆ ಇದರ ವೆಚ್ಚಕ್ಕಾಗಿ ಮೊದಲನೆಯ ವರ್ಷದಲ್ಲಿ ೩೫೦೦ ರೂಪಾಯಿಗಳನ್ನೂ, ಅನಂತರ ಪ್ರತಿವರ್ಷದಲ್ಲಿ ೩೦೦೦ ರೂಪಾಯಿಗಳನ್ನೂ ಕೊಡುವುದಾಗಿಯೂ, ಜನರ ಸ್ಥಿತಿ ಮತ್ತು ಸಾಂಪತ್ತಿಕಾಭಿವೃದ್ಧಿ ವಿಚಾರಕ್ಕೆ ಸಂಬಂಧಪಟ್ಟ ಖಾತಾಧಿಕಾರಿಗಳೂ, ಸಂಪದಭಿವೃದ್ಧಿ ಸಮಾಜದ ಸೆಂಟ್ರಲ್ ಬೋರ್ಡುಗಳ ಸೆಕ್ರೆಟರಿಗಳೂ ಈ ಪತ್ರಿಕೆಯ ಪ್ರಕಟನೆಯ ವಿಚಾರದಲ್ಲಿ ಸಹಾಯಮಾಡಬೇಕಾಗಿಯೂ ಅಪ್ಪಣೆ ಮಾಡಿರುತ್ತಾರೆ.

ಕರ್ನಾಟಕದ ಏಕೀಕರಣ ಮತ್ತು ಖಾದಿಯ ಪ್ರಸಾರ ಈ ಎರಡು ಕಾರ್ಯಗಳನ್ನು ಮಾಡುವ ಉದ್ದೇಶದಿಂದ ಕರ್ನಾಟಕದ ಒಬ್ಬ ಮುಖಂಡರಾದ ಶ್ರೀಯುತ ರಾಘವೇಂದ್ರರಾವ ಕಡಪ ಇವರು ಸದ್ಯದಲ್ಲಿ ಮೈಸೂರಿಗೆ ತೆರಳಲಿಕ್ಕಿದ್ದಾರೆ.

ಮೈಸೂರು ಸಂಸ್ಥಾನದ ರೈಲ್ವೆ ಉತ್ಪತ್ತಿಯು ಕಳೆದ ಸೆಪ್ಟಂಬರ ತಾ. ೩೦ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ೧೨೪೭೬೮ ರೂಪಾಯಿ ಎಂದರೆ, ಅದರ ಹಿಂದಣ ವಾರಕ್ಕಿಂತ ರೂ. ೬೩,೩೮೫ ಹೆಚ್ಚಾಗಿ ಆಗಿರುವುದು. ಮಹಾನವಮಿ ಉತ್ಸವಕ್ಕಾಗಿ ಪ್ರಯಾಣಿಕರ ಸಂಖ್ಯೆಯು ಹೆಚ್ಚಾಗಿದ್ದುದೇ ಇದಕ್ಕೆ ಕಾರಣವಾಗಿದೆ.

ಸ್ವರಾಜ್ಯವೇ ಮುಖ್ಯ ಸಂಪಾದನೆ—ಹಕೀಮ ಅಜಮಲ್‌ಖಾನರೂ ಶೇಟ್ ಚೋಟಾನಿಯವರೂ ಲಂಡನಿನ ಡೈಲಿ ಹೆರೊಲ್ಡಿನ ಬಾತಮಿದಾರರೊಡನೆ ತಮಗೆ ಎಲ್ಲಕ್ಕಿಂತಲೂ ಸ್ವರಾಜ್ಯವೇ ಮುಖ್ಯವಾದದ್ದೆಂದು ಹೇಳಿರುವರು.

ಮುಂಬಯಿ—ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ಕಾರ್ಯಕಾರಿ ಮಂಡಲದ ಅಧಿವೇಶನವು ಬರುವ ತಾ. ೧ಕ್ಕೆ ಮುಂಬಯಿಯಲ್ಲಿ ಕೂಡುವುದು.

ಬರ್ಮಾ ಗವರ್ನರರು—ಸರ್ ರೆಜಿನಾಲ್ಡ ಕ್ರೆಡೊಕ್ಕರು ದಶಂಬರ ತಾ. ೩೧ಕ್ಕೆ ಬರ್ಮಾದಿಂದ ತೆರಳುವರು. ಮತ್ತು ಸರ್ ಅರ್. ಕೆಟ್ ಬಟ್ಲರರು ಜನವರಿ ತಾ. ೨ಕ್ಕೆ ಬರ್ಮಾದ ಗವರ್ನರರಾಗಿ ಬರುವರು.

ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿ—ಈ ತಿಂಗಳ ಅಂತ್ಯದ ಮೊದಲು ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿಯ ವರದಿಯನ್ನು ಕೊಂಗ್ರೆಸ ಕಮ್ಮಿಟಿ ಮೆಂಬರರಿಗೆ ಕಳುಹಿಸಲು ಅನನುಕೂಲವಾದ್ದರಿಂದಲೂ ಮತ್ತು ಸದರಿ ರಿಪೋರ್ಟ ಎಲ್ಲಾ ಮೆಂಬರರಿಗೆ ತಲುಪಿ ಅವರು ಮೀಟಿಂಗಿಗೆ ಬರಲು ಕಾಲವಿಳಂಬವಾಗುವುದರಿಂದಲೂ ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮೆಂಬರರು ಮೀಟಿಂಗನ್ನು ಬರುವ ತಾ. ೨೦ಕ್ಕೆ ಮುಂದರಿಸಿದಲ್ಲಿ ಸಮ್ಮತಿ ಇದರ ತನಗೂ ಸಮ್ಮತವಿದೆಯಾಗಿ ಕೊಂಗ್ರೆಸ ಕಮ್ಮಿಟಿಯ ಅಧ್ಯಕ್ಷರು ತಿಳಿಸಿದ್ದಾರೆ. ಮೆಂಬರರು ತಮ್ಮ ಸೂಚನೆಯನ್ನು ತಂತಿಯ ಮೂಲಕ ತಿಳಿಸಬೇಕಾಗಿ ಜನರಲ್ ಸೆಕ್ರೆಟರಿಯವರು ಪ್ರಕಟಿಸಿದ್ದಾರೆ.

ದಕ್ಷಿಣ ಕನ್ನಡ

ಬಂಟವಾಳ:— ಕಳೆದ ವಾರ ಮಂಚಿಗ್ರಾಮದ ಕುಕ್ಕಾಜೆ ಎಂಬಲ್ಲಿ ಒಬ್ಬ ರೋಮನ ಕೆಥೋಲಿಕ ಕ್ರೈಸ್ತ ಬಸ್ತ್ಯಾಂ ಎಂಬವನನ್ನು ಒಬ್ಬ ಬಿಲ್ಲವನು ಹೊಡದು ಕೊಂದಿರುತ್ತಾನಂತೆ.

ಆಸ್ಪತ್ರೆಯಲ್ಲಿ ಮದ್ದು ಕಡಿಮೆಯಾಗಿದೆ. ಆಸ್ಪತ್ರೆಯಲ್ಲಿ ಒಳರೋಗಿಗಳ ಆಹಾರ ವಹಿಸಲಿಕ್ಕೆ ಹಣ ಕಡಿಮೆಯಾಗಿರುವುದರಿಂದ ನೇಮಿಸಿದ ಸಂಖ್ಯೆಗಿಂತ ಹೆಚ್ಚು ಮಂದಿಯನ್ನು ಆಸ್ಪತ್ರೆಗೆ ಒಳರೋಗಿಗಳಾಗಿ ದಾಖಲುಮಾಡಬಾರದೆಂಬ ಹುಕುಂ ಬಂದಿದಂತೆ. ಮಂಗಳೂರು ತಾಲೂಕು ಬೋರ್ಡಿನ ಕೈಕೆಳಗೆ ಇರುವ ಆಸ್ಪತ್ರೆಯು (hospital) ಒಂದೇಯಾದರೂ ಅದಕ್ಕೂ ಸೌಕರ್ಯವನ್ನು ಒದಗಿಸಲಿಕ್ಕೆ ಹಣದ ಅಭಾವವೇ.

ಇಲ್ಲಿಯ ಹಿಂದೂಗಳ ಶವದಹನ ಮಾಡುವ ಸ್ಥಳದ ಒಂದಂಶವನ್ನು ತಮಗೆ ಕೊಡಬೇಕಾಗಿ ಇಲ್ಲಿಯ ಪ್ರೊಟೆಸ್ಟಂಟ ಕ್ರೈಸ್ತರು ಮನವಿಮಾಡಿದ್ದರಿಂದ ಆ ಬಗ್ಗೆ ತನಖಿ ನಡಿಯುತ್ತದೆ. ಈ ಸ್ಥಳವು ಮೊದಲೇ ಸಣ್ಣದಾದ್ದರಿಂದ ಈಗಲೇ ಹಳೆ ಹೊಂಡಗಳ ಹತ್ತರವೇ ಹೊಸ ಹೆಣಗಳನ್ನು ಹುಗಿಯುವ ಅವಶ್ಯಬೀಳುತ್ತದೆ. ಆದ್ದರಿಂದ ಇದರ ಅಂಶವನ್ನು ಕ್ರೈಸ್ತರಿಗೆ ಕೊಡದೆ ಕ್ರೈಸ್ತರಿಗೆ ಪ್ರತ್ಯೇಕ ಒಂದು ಸ್ಥಳವನ್ನು ಒದಗಿಸಿಕೊಟ್ಟರೆ ಹಿಂದೂಗಳ ಕಷ್ಟ ಪರಿಹಾರವಾಗುತ್ತಿತ್ತು.

ವೃತ್ತಿತೆರಿಗೆಯನ್ನು ಕೊಡದೆ ಇದ್ದುದಕ್ಕಾಗಿ ಜಪ್ತಿಮಾಡಿದ ಸೊತ್ತು ಏಲಂ ಆಗುತ್ತಾ ಇದೆ. ಏಲಾಗುವಾಗ ಜನರು ಹೆಚ್ಚಿದ್ದಾಗ್ಯೂ ಏಲಮಿಗೆ ನಿಂತವರು ಪೋಲೀಸ ಕೊನ್ಸಟೇಬಲ್, ಹೆಡ್‌ಕೊನ್ಸಟೇಬಲರೂ, ರಿಜಿಸ್ತ್ರಿ ಆಫೀಸಿನ ಪೇದೆಗಳೂ, ವಕೀಲರ ಉಗ್ರಾಣಿಗಳೂ, ಪಿಟಿಶನ್ ರೈಟರುಗಳೂ ಇನ್ನು ಕೆಲವರೂ. ಸೊತ್ತೆಲ್ಲವೂ ಬಹಳ ಕಡಿಮೆ ಕ್ರಯಕ್ಕೆ ಮಾರಲ್ಪಟ್ಟಿದೆ. ಹೀಗೆ ಕಡಿಮೆ ಕ್ರಯಕ್ಕೆ ಮಾರುಮಾಡುವ ಬದಲಾಗಿ ಮಂಗಳೂರಿನಲ್ಲಿ ಏಲಂ ಮಾಡಿದರೆ ಒಳ್ಳೇ ಕ್ರಯವು ಸಿಕ್ಕುತ್ತಿತ್ತು.

ಗುರುಕಂಬಳದ ನೆಶನಲ್ ಶಾಲೆಯ ಅಧ್ಯಾಪಕರು ತನ್ನ ಶಾಲೆಗೆ ಹಣದ ಸಹಾಯವನ್ನು ಅಪೇಕ್ಷಿಸಿ ಉರ್ದುಭಾಷೆಯಲ್ಲಿ ಒಂದು ಭಾಷಣವನ್ನು ಕೊಟ್ಟರು. ಇಲ್ಲಿಯ ಮಹನೀಯರು ಅಲ್ಪಸ್ವಲ್ಪ ಹಣ ವಂತಿಗೆಕೊಡುವರಾಗಿ ವಾಗ್ದತ್ತಮಾಡಿರುತ್ತಾರೆ.

ಇಲ್ಲಿಯ ಕೊಂಗ್ರೆಸ ಆಫೀಸಿನಲ್ಲಿ ಮಹಾತ್ಮಾ ಗಾಂಧಿಜಿಯವರ ಬಂಧನದ ದಿನವನ್ನು ಗಾಯನ ಇತ್ಯಾದಿ ಸಂತೋಷಗಳಿಂದ ಆಚರಿಸಲಾಯಿತು.

ಫರಂಗಿಪೇಟೆ:—ಇಲ್ಲಿ ಜೀರ್ಣಸ್ಥಿತಿಯಲ್ಲಿದ್ದ ಶ್ರೀ ವರದೇಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರಮಾಡುವ ಉದ್ದೇಶ್ಯ ಸದರಿ ದೇವಸ್ಥಾನದ ಸನ್ನದ್ದನ್ನು ಪಡೆದಿರುವ ಮ॥ರಾ॥ಸು॥ರು ಸಿ.ವಿ. ನಾಯ್ಕರ ಅಧ್ಯಕ್ಷತೆಯಲ್ಲಿ ತಾ. ೧೫-೧೦-'೨೨ರಲ್ಲು ೪ ಗ್ರಾಮದ ಹಿಂದು ಮತಸ್ಥರು ಸಭೆಸೇರಿ—ಸದರಿ ದೇವಸ್ಥಾನದ ಕಟ್ಟೋಣ ವಗೈರೆ ಕಟ್ಟಿಸಿ ನಿತ್ಯ ಪೂಜೆ ನಡಿಸುವ ಬಗ್ಗೆ ಅಂದಾಜು ರೂ. ೮೧೨೫ ತಗಲಬಹುದಾದ್ದರಿಂದ ಸದರಿ ಹಣ ಎತ್ತುವುದಕ್ಕೂ ಮುಂದೆ ಸದರಿ ದೇವಸ್ಥಾನದ ಆಡಳ್ತೆ ನಡಿಸುವ ಬಗ್ಗೆ ರೂ. ೨೫೦, ವಂತಿಗೆ ಕೊಟ್ಟ ಯಾವನೊಬ್ಬ ಮೆಂಬರನು ಮೊಕ್ತೇಸರ ಮೆಂಬರನಾಗಬಹುದೆಂದೂ ರೂಪಾಯಿ ೧೦೦ ವಂತಿಗೆ ಕೊಟ್ಟವರು ಸಾದಾ ಮೆಂಬರರಾಗಬಹುದೆಂದೂ ನಿರ್ಣಯಿಸಿದಲ್ಲದೆ ಹಾಗೆ ಸದರಿ ದೇವಸ್ಥಾನದ ಮೊಕ್ತೇಸರರೂ ಮೆಂಬರರು ಕೂಡಿ ಒಂದು ಟೆಂಪಲ್ ಕಮಿಟಿಯಾಗಿ ಮಾಡಿ ಅದನ್ನು ರಿಜಿಸ್ತ್ರಿ ಮಾಡಬೇಕಾಗಿಯೂ ನಿರ್ಣಯಿಸಲಾಯಿತು.

ಅದರಂತೆ ಸಭೆಯಲ್ಲಿ ಹಾಜರು ಇದ್ದವರ ಪೈಕಿ ರಾಗಳಾದ ಸಿ.ವಿ. ನಾಯ್ಕರು, ಕಾಂಜಿಲಕೋಡಿ ಸುಬ್ರಾಯ ಭಟ್ಟರು, ಕೊಡಮಣ್ಣು ಮಂಜಯ್ಯಶೆಟ್ಟಿ, [illegible] ಸಂಕಪ್ಪ ಕಂಬಳಿಯವರು, ಮತ್ತು ನಾಲದೆ ಶೀನು ಭಂಡಾರಿಗಳು ರೂಪಾಯಿ ೨೫೦ರಂತೆಯೂ ಹಲವರು ರೂ. ೧೦೦ ರಂತೆಯೂ ವಂತಿಗೆ ವಾಗ್ದಾನಮಾಡಿದ್ದಲ್ಲದೆ ಇತರರು ತಮಗೆ ಯುಕ್ತಕಂಡ ವಂತಿಗೆಯನ್ನು ವಾಗ್ದಾನಮಾಡಿದರು. ಜುಮ್ಲಾ ರೂಪಾಯಿ ೨೮೧೫. ಕಮಿಟಿಯ ಉಪನಿಬಂಧನೆಗಳನ್ನು ಮಾಡುವುದಕ್ಕೂ ಕಾರ್ಯನಿರ್ವಾಹಕ ಸಭೆಯನ್ನು ಏರ್ಪಡಿಸಲಿಕ್ಕೂ ಸಭೆಯು ತಾ. ೨೯—೧೦—'೨೨ಕ್ಕೆ ದೇವಸ್ಥಾನದಲ್ಲಿ ಸೇರಬೇಕಾಗಿ ನಿರ್ಣಯಿಸಲಾಯಿತು. ಫರಂಗಿಪೇಟೆ ವಿದ್ಯಾವರ್ಧಕ ಸಂಘದ ಮೇಲ್ಪಂಕ್ತಿಯನ್ನು ಇಟ್ಟುಕೊಂಡು ದೇವಸ್ಥಾನದ ಆಡಳ್ತೆ ಕ್ರಮಗಳನ್ನು ಏರ್ಪಡಿಸುವುದು ಉತ್ತಮವಾಗಿ ತೋರುತ್ತದೆ.

ಇಲ್ಲಿಯ ಸೈಂಟ್ ಫ್ರೆನ್ಸಿಸ್ (ಕೊನ್ವೆಂಟ್) ಇಗರ್ಜಿಯ ವರ್ಷಾವಧಿ ಹಬ್ಬವು ತಾ. ೧೯ರಲ್ಲು ಬಹು ವಿಜೃಂಭಣೆಯಿಂದ ನಡೆಯಿತು. ಮಂಗಳೂರು ಲೊರ್ಡ ಬಿಶೋಪ್ ದೊರೆಗಳೂ ಈ ಹಬ್ಬಕ್ಕೆ ದಯಮಾಡಿದ್ದರು.

ಕಾಸರಗೋಡು.—ಕಳೆದ ೨೧ನೆಯ ಶನಿವಾರ ದಿನ ರಾತ್ರಿ ಸುಮಾರು ೮ ಗಂಟೆ ಸಮಯಕ್ಕೆ ಇಲ್ಲಿ ಫೊರೆಸ್ಟ ರೇಂಜ್ ಆಫೀಸ ಕ್ಲಾರ್ಕರಾಗಿದ್ದ ಐತುಶೆಟ್ಟಿ ಎಂಬವರು ತಮ್ಮ ಮನೆಯ ಸಮೀಪವಿರುವ ಒಂದು ಮನೆಯ ಬಚ್ಚಲು ಕೊಟ್ಟಿಗೆಯಲ್ಲಿ ನೇಣುಹಾಕಿಕೊಂಡು ಪ್ರಾಣತ್ಯಾಗ ಮಾಡಿಕೊಂಡರೆಂಬ ವಾರ್ತೆಯು ಬಹು ವಿಷಾದಕರವಾಗಿರುತ್ತದೆ. ಇವರು ಎಲ್ಲರ ಪ್ರೀತಿಗೂ ಪಾತ್ರರಾಗಿದ್ದರು. ಇವರು ಪ್ರಾಣತ್ಯಾಗಮಾಡಿಕೊಂಡ ಸರಿಯಾದ ಕಾರಣವು ಇನ್ನೂ ಹೊರಬೀಳಲಿಲ್ಲ. ಇವರಿಗೆ ಅತ್ಯಧಿಕ ಸಾಲಗಳಿದ್ದ ಪ್ರಯುಕ್ತ ಇವರು ಮರಣಪಟ್ಟರೆಂತ ಕೆಲವರೂ ಖಾಸಗಿ ತೊಂದರೆಗಳು ಹೆಚ್ಚಿದ್ದ ಪ್ರಯುಕ್ತ ಮರಣಪಟ್ಟರೆಂತ ಇನ್ನು ಕೆಲವರೂ ಆಡಿಕೊಳ್ಳುತ್ತಾರೆ.

ಈಗ ಇತ್ತೀಚೆಗೆ ಇಲ್ಲಿಯ ಪೇಟೆಯ ನಡುಮಧ್ಯಕ್ಕೆ ಸರಿಯಾಗಿ ಎದುರಿರುವ ಸಮುದ್ರತೀರಾರಿಯಲ್ಲಿ ಒಂದು ದೊಡ್ಡ ಫಿಶ್ ಕ್ಯೂರಿಂಗ್‌ಯಾರ್ಡ ಮತ್ತು ಕೆಲವು ಫಿಶ್ ಗುವಾನೋ ಫೇಕ್ಟರಿಗಳು ವಗೈರೆ ತೆರೆಯೋಣಾಗಿ ಅಲ್ಲಿ ಕೆಲಸ ನಡಿಯುತ್ತಿರುವಾಗ ದುರ್ವಾಸನೆಯು ಸೀದಾ ಗಾಳಿಯಿಂದ ಟೌನಿಗೆ ಒಯ್ಯಲ್ಪಟ್ಟು ಅತ್ಯಧಿಕವಾದ ದುರ್ಗಂಧವು ಪೇಟೆಯ ಎಲ್ಲಾ ಕಡೆಗೂ ವ್ಯಾಪಿಸುತ್ತಿದೆ. ಈ ದುರ್ಗಂಧವು ಎಡೆಬಿಡದೆ ವೃದ್ಧಿಹೊಂದುವುದರಿಂದ, ಇಲ್ಲಿಯ ನಿವಾಸಿಗರಿಗೆ ಅಂಗಡಿಗಳಲ್ಲಿಯೂ, ಮನೆಗಳಲ್ಲಿಯೂ, ಕೋರ್ಟು ಕಚೇರಿಗಳಲ್ಲಿಯೂ ಕೂತು ಕೆಲಸ ಕೂಡಾ ಮಾಡುವರೆ ಅತ್ಯಧಿಕ ತೊಂದರೆ ಉಂಟಾಗುತ್ತದೆ. ಈ ನಮೂನೆಯ ದುರ್ವಾಸನೆಯನ್ನು ತಪ್ಪಿಸುವರೆ ತಕ್ಕ ಏರ್ಪಾಡನ್ನು ಮಾಡದಿದ್ದಲ್ಲಿ ಪೇಟೆಯೆಲ್ಲಾ ದುರ್ಗಂಧಮಯವಾಗಿ ಕಡೆಗೆ ಜನರ ಆರೋಗ್ಯಕ್ಕೂ ಬಾಧಕಬರಬಹುದಾಗಿ ಹೇಳುವುದು ಅತಿಶಯೋಕ್ತಿಯಾಗಲಾರದೆಂದು ನಂಬುತ್ತೇವೆ.

ಈ ದಿನ ಬೆಳಿಗ್ಗೆ ಮದ್ರಾಸು ಕಡೆಗೆ ಹೋಗುವ ಮೈಲು ಟ್ರೈನು ಬರುತ್ತಿರುವಾಗ ೫೦, ೫೫ ವರುಷದ ಮುದುಕನೊಬ್ಬನು ಬಂಗ್ರಮಂಜೇಶ್ವರ ಹೊಳೆಯ ಸಂಕದಲ್ಲಿ ಸಿಕ್ಕಿಬಿದ್ದು ರೈಲು ಸವಾರಿ ಬರುತ್ತಲೇ ಸಂಕದಿಂದ ಕೆಳಗೆ ಬಿದ್ದು ಸ್ವಲ್ಪ ಗಾಯಗಳಾಗಿ ಸದರಿ ರೈಲಿನಲ್ಲಿಯೇ ಇಲ್ಲಿ ಒಯ್ಯಲ್ಪಟ್ಟು ಆಸ್ಪತ್ರೆಗೆ ಮುಟ್ಟಿದ ಕೂಡಲೆ ಮೃತಪಟ್ಟನು. ಈತನು ಪೆರಡೂರು ಗ್ರಾಮಕ್ಕೆ ಸೇರಿದ ರಂಗನೆಂಬ ಒಬ್ಬ ಮೊಗೇರನಿರುವನೆಂದು ಜನರು ಆಡಿಕೊಳ್ಳುತ್ತಾರೆ.

ಅನುಕ್ರಮಣಿಕೆ

ಅಗ್ರಲೇಖ:—
ಸ್ಪಷ್ಟೀಕರಣದ ಇನ್ನೆರಡು ಮಾತುಗಳು . . . ೬
ಸಮ್ಮಿಶ್ರಪಕ್ಷದ ಪತನ . . .
ಸ್ಫುಟವಿಚಾರಗಳು—
೧. ನ್ಯಾಯಪ್ರಿಯರಾದ ಮೆಜಿಸ್ಟ್ರೇಟರು . . . ”
೨. ಅಸಹಕಾರವನ್ನು ನಿರ್ಮೂಲಪಡಿಸುವ ಸಾಧನ . . .
೩. ಪಂಡಿತ ಮದನಮೋಹನ ಮಾಲವೀಯರ ಅಭಿಪ್ರಾಯ . . . ”
ಮಂಗಳೂರು—
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ದ. ಕನ್ನಡ, . . . ೮
ಬಂಟವಾಳ, ಫರಂಗಿಪೇಟೆ, ಕಾಸರಗೋಡು, ಕುಂಬಳೆ. . . . ”
ದಯಾನಂದ ಸರಸ್ವತೀಯವರ ಪುಣ್ಯತಿಥಿ . . . ”
ಶಾರದಾ ವಾಚಕಮಂದಿರ, ಪುತ್ತೂರು . . . ”
ಪತ್ರವ್ಯವಹಾರ ೧, ೨. . . . ”
ಮಂಗಳೂರು ಮುನ್ಸಿಪಾಲಿಟಿಯ ಆಡಳಿತೆಯ ವರದಿ . . . ”
ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ ಕಮಿಟಿ . . . ೯
ಉಡುಪಿ ರಾಷ್ಟ್ರೀಯ ವಿದ್ಯಾಮಂದಿರ . . . ”
ಜಾತಿಭೇದವಿಚಾರ ವಿಮರ್ಶೆ . . . ”

ಸ್ವದೇಶಾಭಿಮಾನಿ

ಶಕ ೧೮೪೪ ಕಾರ್ತೀಕ ಶು। ೭ಯ ಶುಕ್ರವಾರ.

ಸ್ಪಷ್ಟೀಕರಣದ ಇನ್ನೆರಡು ಮಾತುಗಳು.

ರಾಷ್ಟ್ರೀಯ ಸಭೆಯ ಪ್ರಕೃತದ ಕಾರ್ಯಕ್ರಮವು ಯಶಸ್ವಿಯಾಗಲಿಲ್ಲವಾದ್ದರಿಂದ ಸರ್ವಜನರ ಸಮಾವೇಶವಾಗುವ ನಮೂನೆಯಲ್ಲಿ ಬದಲಾವಣೆಯಾಗುವುದು ಎಷ್ಟು ಆವಶ್ಯಕವೆಂಬುದನ್ನು ಹಿಂದಿನ ಎರಡು ಮುಖ್ಯ ಲೇಖಗಳಲ್ಲಿ ಮತ್ತು ಉಪಲೇಖಗಳಲ್ಲಿ ಪ್ರಸ್ತಾಪಿಸಿದ್ದೇವೆ. ಕೊಂಗ್ರೆಸಿನ ಕಾರ್ಯಕ್ರಮವೆಂದರೆ ಖಾದಿ ಪ್ರಚಾರ ಇತ್ಯಾದಿ ಒಂದೆರಡು ಸಂಗತಿಗಳನ್ನು ಬಿಟ್ಟರೆ, ತ್ರಿದಲಾತ್ಮಕ ಬಹಿಷ್ಕಾರವೆ ಮುಖ್ಯವಾಗಿರುವುದು. ಈ ಬಹಿಷ್ಕಾರವು ಕಾರ್ಯರೂಪದಲ್ಲಿ ಏನೂ ತೃಪ್ತಿಕರವಾಗಿ ಬರಲಿಲ್ಲ. ಆದ್ದರಿಂದ ಅದರ ಪರಿವರ್ತನದ ಸಮಯವು ಪ್ರಾಪ್ತವಾಗಿದೆ. ಮೂರು ಬಗೆಯ ಬಹಿಷ್ಕಾರದಲ್ಲಿ, ವಿಶೇಷತಃ ಕೌನ್ಸಿಲ್ ಬಹಿಷ್ಕಾರದ ಅಸ್ತ್ರವನ್ನು ಕೊಂಗ್ರೆಸು ಉಪಸಂಹರಿಸುವುದು ಅತ್ಯಂತ ಯುಕ್ತವಾಗಿದೆ. ಕೌನ್ಸಿಲ್-ಪ್ರವೇಶ-ಬಹಿಷ್ಕಾರ ಈ ವಿಷಯಗಳಲ್ಲಿ ಎರಡು ಮೂರು ಮತಗಳು ಪ್ರಚಲಿತವಾಗಿವೆ. ಕೌನ್ಸಿಲುಗಳನ್ನು ಪ್ರವೇಶಿಸಿ ಸರಕಾರಕ್ಕೆ ಸಹಾಯವನ್ನು ಕೊಡಬೇಕು, ಎಂದು ಒಂದು ಕಡೆಯವರು ವಾದಿಸುವಾಗ ಇನ್ನೊಂದು ಕಡೆಯವರು ಕೌನ್ಸಿಲುಗಳನ್ನು ಸರ್ವಥಾ ಪ್ರವೇಶಿಸಕೂಡದು ಎಂದು ಆಗ್ರಹವನ್ನು ಹಿಡಿಯುವರು. ಕೌನ್ಸಿಲುಗಳನ್ನು ಪ್ರವೇಶಿಸಿ ಸರಕಾರಕ್ಕೆ ಸಂಪೂರ್ಣ ಸಹಾಯವನ್ನು ಕೊಡಬೇಕೆಂದು ಹೇಳುವವರು ಸುಧಾರಣೆಗಳನ್ನು ರೂಪಾಯಿಗೆ ೧೬ ಆಣೆ ನಂಬುತ್ತಾರೆ ಎಂದಲ್ಲ, ಆದರೂ ಸರಕಾರದ ಪ್ರಸನ್ನತೆಯೆ ಆತ್ಮೋದ್ಧಾರದ ಮಾರ್ಗವೆಂದು ಇವರ ತಿಳಿವು. ಕೌನ್ಸಿಲುಗಳನ್ನು ಬಹಿಷ್ಕರಿಸುವುದರಲ್ಲೆ ಅಸಹಕಾರದ ಸಂಪೂರ್ಣ ಸಾಫಲ್ಯವೆಂದು ಇನ್ನೊಂದು ಪಕ್ಷದವರು ತಿಳಿಯುವರು. ಈ ಎರಡೂ ಮತಗಳು ಕ್ರಮವಾಗಿ ದಕ್ಷಿಣೋತ್ತರ ಧ್ರುವಗಳಲ್ಲಿವೆ. ಆದ್ದರಿಂದಲೆ ಒಂದು ಸ್ವತ್ವ ವಿಘಾತಕವಾಗಿರುವಲ್ಲಿ ಇನ್ನೊಂದು ಅವ್ಯವಹಾರ್ಯವಾಗಿದೆ. ಈ ಎರಡೂ ನಿರರ್ಥಕವಾದ ದಾರಿಗಳನ್ನು ಬಿಟ್ಟು, ಪ್ರತಿಯೋಗಿ ಅಸಹಕಾರದ ಮಾರ್ಗವೆ ಈಗ ಶ್ರೇಯಸ್ಕರವಾಗಿದೆ. ಈ ಮೂರು ಪಕ್ಷಗಳಲ್ಲಿ ಪ್ರತಿಯೋಗಿ ಅಸಹಕಾರವಾದಿಗಳು ಸುಧಾರಣೆಗಳನ್ನು ನಂಬುವವರಲ್ಲ. ಎಂದ ಮೇಲೆ ಅಂಥವರು ಕೌನ್ಸಿಲ್ ಪ್ರವೇಶವನ್ನು ಮಾಡುವುದು ಸರಕಾರದೊಡನೆ ಸಹಕರಿಸಲು ಎಂದು ಕಡು ಅಸಹಕಾರವಾದಿಗಳಾದರೂ ತಿಳಿಯುವದಿಲ್ಲ. ಸರಕಾರದ ಕಾರಭಾರದ ಗತಿಯನ್ನು ಕುಂಠಿಸುವುದು ಅಸಹಕಾರದ ಯಾವ ಮುಖ್ಯ ಲಕ್ಷಣವೊ ಅದು ಕೌನ್ಸಿಲ್ ಪ್ರವೇಶದಿಂದ ಒಂದು ತೂಕ ಹೆಚ್ಚೆ ಸಾಧ್ಯವಾಗುವುದರಿಂದ ಬಹಿಷ್ಕಾರವಾದಿಗಳಿಗಿಂತ ರಾಷ್ಟ್ರೀಯ ಪಕ್ಷವೆ ಸರಕಾರದ ದೃಷ್ಟಿಗೆ ಹೆಚ್ಚು ತೀಕ್ಷ್ಣವಾಗಿ ತೋರುವುದು. ಇದಕ್ಕೆ “ಅಸಹಕಾರಿಗಳು ಕೌನ್ಸಿಲುಗಳನ್ನು ಆಕ್ರಮಿಸಿ ಸರಕಾರದ ರೈಲುಬಂಡಿಗೆ ಬ್ರೇಕ ಹಾಕಿದ್ದಾದರೆ ನಾವು ಸುಧಾರಣೆಗಳನ್ನು ಹಿಂದಕ್ಕೆ ತೆಕ್ಕೊಂಡೇವು” ಎಂದು ಮಾಜಿ ಪ್ರಧಾನ ಮಂತ್ರಿಗಳು ಅಪ್ಪಣೆಕೊಡಿಸಿದ್ದೆ ಸಾಕ್ಷಿಯು. ಲೊಯ್ಡ ಜೊರ್ಜರ ಈ ವಿಧಾನದ ನಿಜವಾದ ಮರ್ಮವನ್ನು ಮನಸ್ಸಿಗೆ ತಾರದೆ ಕೆಲವರು “ಸುಧಾರಣೆಗಳನ್ನು ನಂಬಿ ಈಗಿನ ಕೌನ್ಸಿಲುಗಳಿಗೆ ಯಾರು ಹೋಗಿ ದೇಶ ಸೇವೆಯನ್ನು ಮಾಡುತ್ತಿದ್ದಾರೊ, ಅಂಥವರ ನಂಬಿಕೆಯನ್ನು ಅಸಹಕಾರಿಗಳು ಕೌನ್ಸಿಲುಗಳಿಗೆ ಹೋದದ್ದರಿಂದ ಸರಕಾರವು ಸುಧಾರಣೆಗಳನ್ನು ಹಿಂದಕ್ಕೆ ತೆಕ್ಕೊಂಡು ಕೆಡಿಸಿದ್ದಂತಾಗುತ್ತದೆ”. ಆಧಾರಕ್ಕೆ ಇನ್ನೊಂದು ಆಧಾರವನ್ನು ಕೊಡುವುದಿದ್ದರೆ, “ಸುಧಾರಣೆಗಳನ್ನು ಹಿಂದಕ್ಕೆ ತಕ್ಕೊಳ್ಳಲಿಕ್ಕಿಲ್ಲ. ನಾವು ಮುಂದಕ್ಕೆ ಕೆಲಸ ಮಾಡಿಯೇವೇ” ಮೊನ್ನೆ ಪೀಲ ದೊರೆಗಳ ಈ ಹೇಳಿಕೆಯನ್ನು ಈ ಮಾತಿಗೆ ಉದಾಹರಿಸಬಹುದು ಇನ್ನೊಂದು ವಿಚಾರ. ಸುಧಾರಣೆಗಳು ನಿಜವಾಗಿ ಟೊಳ್ಳು ಎಂದಾದ ಮೇಲೆ ಅವುಗಳನ್ನು ಸರಕಾರವು ಹಿಂದಕ್ಕೆ ಎಳೆದರೆ ಇನ್ನಷ್ಟು ಒಳ್ಳೆಯದಲ್ಲವೆ? ಒಂದು ಕಡೆಯಿಂದ ಟೊಳ್ಳೆಂದು ಅವುಗಳನ್ನು ಬಹಿಷ್ಕರಿಸೋಣ ಮತ್ತು ಇನ್ನೊಂದು ಕಡೆಯಿಂದ ಅವುಗಳನ್ನು ಹಿಂದಕ್ಕೆ ತೆಗೆಯ ಬಾರದೆಂದು ಮನಸ್ಸಿನಲ್ಲಿ ಪ್ರಾರ್ಥಿಸೋಣ ಇದು ವೈಸಾಂಗತ್ಯದ ಒಂದು ಚಂದವಾದ ಉದಾಹರಣವು. ಈಗ ಸುಧಾರಣೆಗಳನ್ನು ಹಿಂದಕ್ಕೆ ಎಳೆಯುವುದರಿಂದ ಅವುಗಳನ್ನು ನಂಬಿದವರ ನಂಬಿಕೆಯನ್ನು ಕೆಡಿಸಿದಂತಾಗುತ್ತದೆ ಎಂಬ ಯುಕ್ತಿವಾದವು ಸರಿಯಲ್ಲ. ಸತ್ಯ ಹೇಳುವುದಾದರೆ, ಈ ಸುಧಾರಣೆಗಳು ಪರಮೋತ್ಕೃಷ್ಟ ಮತ್ತು ಸ್ವರ್ಗತುಲ್ಯವೆಂದು ಯಾರೂ ನಂಬುವುದಿಲ್ಲ. ಹಿಂದೂಸ್ಥಾನದಲ್ಲಿ ಅಂಥ ಹಿಂದಿ ಪ್ರಾಣಿಯೆ ಇಲ್ಲವೆಂದು ಹೇಳಬಹುದು. ಒಂದು ವೇಳೆ ಆ ರೀತಿಯಿಂದ ನಂಬುವವರಿದ್ದಾರೆ ಮತ್ತು ಅವರ ತಿಳಿವಿಗೆ ಬಾಧೆ ಬರುತ್ತದೆ ಎಂದು ವಾದಿಸಿದರೂ ಅದರಲ್ಲಿ ಸಾರವಿಲ್ಲ. ಈ ರೀತಿಯ ತಿಳಿವಿನವರ ಸಮಾಧಾನದ ಬಗ್ಗೆ ರಾಷ್ಟ್ರೀಯ ಸಭೆಯು ಕೌನ್ಸಿಲನ್ನು ಆಕ್ರಮಿಸಬಾರದೆಂದು ಹೇಳತೊಡಗಿದರೆ ಆ ಮೇಲೆ ಸಾಮಾನ್ಯ ಅಸಹಕಾರದಿಂದ ಸಹ ದೇಶಕ್ಕೆ ಹಾನಿಯುಂಟಾಗಿದೆ ಎಂದು ಯಾರಾದರೂ ಹೇಳುವವರು ಭೇಟಿಯಾದರೆ ನಾವು ಅಂಥವರ ಸಮಾಧಾನಕ್ಕೋಸ್ಕರ ಸಾಮಾನ್ಯ ತರದ ಅಸಹಕಾರವನ್ನೂ ನಿಲ್ಲಿಸಬೇಕಾದೀತು. ರಾಜಕೀಯ ಚಳವಳವನ್ನೂ ನಿಲ್ಲಿಸಬೇಕಾದೀತು. ಇಂಥ ಪ್ರಸಂಗವು ಬಂದೊದಗುತ್ತದೆ. ಸುಧಾರಣೆಗಳು ನಿರರ್ಥಕವೆಂದು ಮನಃಸಾಕ್ಷಿಗೆ ಖಚಿತವಾದ ಬಳಿಕ ಅಂಥ ಸುಧಾರಣೆಗಳ ಕಾರಭಾರವನ್ನು ನಿಲ್ಲಿಸಲು ಮತ್ತು ಸ್ವರಾಜ್ಯದ ಮುಖ್ಯ ಧ್ಯೇಯವನ್ನು ಪಡೆಯಲು ಶಾಂತತೆಯ ಶಿಷ್ಟಾಚಾರದ ಮತ್ತು ಸ್ವಾಭಿಮಾನದ ಯಾವ ಉಪಾಯಗಳಿವೆಯೊ ಅವುಗಳನ್ನು ಅವಲಂಬಿಸುವುದು ಪ್ರಾಮಾಣಿಕತನದ ಲಕ್ಷಣವಾಗಿದೆ. ಸಾರಾಂಶ ಯಾವ ದೃಷ್ಟಿಯಿಂದ ವಿಚಾರಿಸಿದರೂ ಕೌನ್ಸಿಲ್ ಬಹಿಷ್ಕಾರವು ಸಮರ್ಪಕವಾಗುವುದಿಲ್ಲ.

ಇರಲಿ, ರಾಷ್ಟ್ರೀಯ ಸಭೆಯ ಈಗಿನ ಕಾರ್ಯಕ್ರಮವು ಅವ್ಯವಹಾರ್ಯವೆಂಬುದಕ್ಕೆ ನಾವು ೩-೪ ಸಂಚಿಕೆಗಳಲ್ಲಿ ಪ್ರತಿಪಾದಿಸಿದ್ದೇವೆ. ಇದು ಪ್ರಾಮಾಣಿಕ ಮತಭೇದದ ವಿಷಯವಾಗಿದೆ. ಅಸಹಕಾರ ಚಳವಳವು ಪ್ರಾರಂಭವಾಗಿ, ಅದರ ಪ್ರಸಾರದ ಉದ್ದೇಶದಿಂದ ಮಹಾತ್ಮಜಿಯವರು ಎಲ್ಲ ಕಡೆಯಲ್ಲಿ ಸಂಚರಿಸುತ್ತಿದ್ದಂತೆ, ಎರಡು ವರ್ಷದ ಹಿಂದೆ ನಮ್ಮ ಪಟ್ಟಣಕ್ಕೆ ದಯಮಾಡಿಸಿದ್ದರು. ಆಗ ಅವರ ಮೆರವಣಿಗೆಯ ಕಾಲದಲ್ಲಿ, ಸ್ವದೇಶಾಭಿಮಾನಿ ಆಫೀಸಿನ ಪರವಾಗಿ ಅವರನ್ನು ನಾವು ಸನ್ಮಾನಿಸಿದಾಗ ಸ್ವತಃ ಮಹಾತ್ಮಜಿಯವರು ಅಸಹಕಾರದ ಬಗ್ಗೆ ನಮ್ಮ ಮತವನ್ನು ಕೇಳಿದರು. ಆಗ “ಅಸಹಕಾರದ ಪ್ರತಿಯೊಂದು ಕಾರ್ಯಕ್ರಮವನ್ನು ನಾವು ಅನುಮೋದಿಸಲಾರೆವು. ಅನೇಕ ಸಂಗತಿಗಳಲ್ಲಿ ನಮ್ಮ ಮತಭೇದವಿದೆ” ಎಂದು ನಾವು ಯಾವ ಉತ್ತರವನ್ನು ಕೊಟ್ಟಿದ್ದೇವೊ ಅದೆ ನಮ್ಮ ಮತವು ಈಗಲೂ ಇದೆ. ಪರಂತು ಕಲಕತ್ತೆಯ ಮತ್ತು ನಾಗಪುರದ ಅಧಿವೇಶನಗಳಲ್ಲಿ ಕಾರ್ಯಕ್ರಮವನ್ನು ಅಂಗೀಕರಿಸೋಣಾದ್ದರಿಂದ ರಾಷ್ಟ್ರೀಯ ಪಕ್ಷದವರು ತತ್ಕಾಲದ ಮಟ್ಟಿಗೆ ತಮ್ಮ ತಮ್ಮ ಮತಭೇದಗಳನ್ನು ಒದಿಗಿಟ್ಟು ಕೆಲಸ ಮಾಡಿದರು. ಆದರ ಒಂದು ವರ್ಷವಲ್ಲ. ಎರಡು ವರ್ಷದ ನಂತರವೂ ಅದು ಯಶಸ್ವಿತೆಯನ್ನು ಹೊಂದಲಿಲ್ಲ. ಈ ಕಾರಣದಿಂದ ಅ. ಇಂ. ಕೊಂಗ್ರೆಸ್ ಕಮಿಟಿಗೆ ದೇಶದೊಳಗಿನ ಲೋಕಮತವನ್ನು ತಿಳಕೊಳ್ಳುವ ಉದ್ದೇಶದಿಂದ ಸಿ. ಡಿ. ಒ. ಕಮಿಟಿಯನ್ನು ನೇಮಿಸಬೇಕಾಗಿ ಬಂತು. ಬೇರೆ ಮಾತುಗಳಿಂದ ಹೇಳುವುದಾದರೆ ಮತಭೇಧಗಳನ್ನು ಸಂಗ್ರಹಿಸಲು ಒಲ್ ಇಂಡಿಯಾ ಕೊಂಗ್ರೆಸ ಕಮಿಟಿಯು ತಾನಾಗಿ ಸಿದ್ಧವಾಯಿತು. ಇಂಥ ಸಂದರ್ಭದಲ್ಲಿ ಅವರವರು ತಮ್ಮ ತಮ್ಮ ಮತಗಳನ್ನು ಜಾಹೀರುಪಡಿಸಿದ್ದಲ್ಲಿ ಅದರಿಂದ ಯಾರಿಗೂ ವಿಷಾದವುಂಟಾಗುವ ಕಾರಣವಿಲ್ಲ. ಲೋಕಮತವನ್ನು ಕೇಳಿಕೊಂಡ ಬಳಿಕ ಅ. ಇಂ. ಕೊಂ. ಕಮಿಟಿಯಾಗಲಿ ಅಥವಾ ರಾಷ್ಟ್ರೀಯಸಭೆಯ ಮಹಾಧಿವೇಶನವಾಗಲಿ ಆ ರೀತಿಯಿಂದ ಕಾರ್ಯಕ್ರಮವನ್ನು ಬದಲಾಯಿಸುತ್ತದೊ ಅಥವಾ ಇದ್ದದ್ದನ್ನೆ ಇರಗೊಡುತ್ತದೊ ಎಂಬೀ ಸಂಗತಿಯು ಬೇಗನೆ ಗೊತ್ತಾಗುವುದಿದೆ. ಆದ್ದರಿಂದ ಈ ವಿಷಯದಲ್ಲಿ ಹೆಚ್ಚಿನ ತರ್ಕ ವಿತರ್ಕವನ್ನು ಮಾಡುವುದು ಬೇಡ.

ಸಮ್ಮಿಶ್ರ ಪಕ್ಷದ ಪತನ.

ಇಂಗ್ಲಂಡದ ರಾಜಕಾರಣದ ವಾತಾವರಣದಲ್ಲಿ ಮಹತ್ತಾದ ಸ್ಥಿತ್ಯಂತರಗಳು ಸಂಭವಿಸಿದವು. ಸಮ್ಮಿಶ್ರಪಕ್ಷದ ಮಂತ್ರಿಮಂಡಲವು ಅಧಿಕಾರಾರೂಢವಾಗಿತ್ತು. ಮಿ. ಲೊಯ್ಡ ಜೊರ್ಜರು ಪ್ರಧಾನಮಂತ್ರಿಗಳಾಗಿದ್ದರು. ಅವರ ಈ ಮಂತ್ರಿಮಂಡಲವು ಈ ತಿಂಗಳ ತಾ. ೧೯ನೇಯ ಮಧ್ಯರಾತ್ರಿಯ ಅತ್ಯಂತ ಪ್ರಶಾಂತ ಸಮಯದಲ್ಲಿ ರಾಜಿಯನ್ನು ಕೊಟ್ಟಿತು! ರಾಜಿಯನ್ನು ಕೊಟ್ಟ ಸಮಯವು ಅತ್ಯಂತ ಪ್ರಶಾಂತವಾಗಿದ್ದರೂ, ಆ ರಾಜಿನಾಮೆಯಿಂದ ಬ್ರಿಟಿಷ್ ಸಾಮ್ರಾಜ್ಯದ ರಾಜಕೀಯ ವಾತಾವರಣದಲ್ಲಿ ಮಹತ್ತಾದ ಸ್ಥಿತ್ಯಂತರಗಳುಂಟಾಗುತ್ತಲಿದ್ದಾವೆ. ಸಮ್ಮಿಶ್ರಪಕ್ಷದ ಮಂತ್ರಿಮಂಡಲದ ರಾಜಿನಾಮೆಯು ಅನಪೇಕ್ಷಿತವಾದ ಸಂಗತಿಯಲ್ಲ. ಲೊಯ್ಡ ಜೊರ್ಜರ ಮಂತ್ರಿಪದ ಮತ್ತು ಅದಕ್ಕೆ ಆಧಾರಭೂತವಾಗಿರುವ ಸಮ್ಮಿಶ್ರಪಕ್ಷ ಇವು ಬೇಗನೆ ಪತನವನ್ನು ಹೊಂದ್ಯಾವೆಂದು ಇಂಗ್ಲಂಡದೊಳಗಿನ ಲೋಕಮತದಿಂದ ಇತ್ತಲಾಗಿ ಊಹಿಸಬಹುದಾಗಿತ್ತು. ಪೂರ್ವಏಸಿಯದ ಧೋರಣ, ತುರ್ಕೀ-ಗ್ರೀಕ ಯುದ್ಧದ ಪುನರಾರಂಭ, ಗ್ರೀಕರ ಪರಾಜಯ ಇತ್ಯಾದಿ ಸಂಗತಿಗಳು ಲೊಯ್ಡ ಜೊರ್ಜರಿಂದ ಅಧಿಷ್ಠಿತವಾದ ಸಮ್ಮಿಶ್ರ ಮಂತ್ರಿಮಂಡಲಕ್ಕೆ ದೊಡ್ಡ ಅಪಶಕುನಗಳಾಗಿದ್ದವು. ಮತ್ತು ಈ ಎಲ್ಲಾ ಸಂಗತಿಗಳು ಒಟ್ಟುಗೂಡಿ ಸಮ್ಮಿಶ್ರಪಕ್ಷದ ಮಂತ್ರಿಮಂಡಲದ ಪತನಕ್ಕೆ ಕಾರಣವಾದವು. ವಿಲಾಯತಿಯಲ್ಲಿ ಅನೇಕ ರಾಜಕೀಯ ವಿಷಯಗಳನ್ನು ಕುರಿತು ವಿವಿಧ ಮತಭೇಧಗಳುಂಟಾಗುತ್ತಿದ್ದದರಿಂದ ಸಮ್ಮಿಶ್ರ ಮಂತ್ರಿ ಮಂಡಲವು ಮುರಿದುಹೋಗಿ, ಹೊಸದಾಗಿ ಜನರಲ್ ಇಲೆಕ್‌ಶನು ಬಂದೀತೆಂದು ಎಲ್ಲರೂ ನಿರೀಕ್ಷಿಸಿಕೊಂಡಿದ್ದರು. ಅಧಿಕಾರಾರೂಢವಾದ ಪಕ್ಷವು ಯಾವ ಕೃತ್ಯವನ್ನು ಮಾಡುವದೊ ಅದು ಲೋಕಮತಕ್ಕೆ ಸಮ್ಮತವಿಲ್ಲವಾದರೆ, ವಿಲಾಯತಿಯ ಕೊನ್ಸ್ಟಿಟ್ಯೂಶನಿನ ಪ್ರಕಾರ ಆ ಮಂತ್ರಿಮಂಡಲವು ಹೋಗಬೇಕಾದ್ದು. ಈ ಕ್ರಮಕ್ಕನುಸಾರವಾಗಿ ಲೊಯ್ಡ ಜೊರ್ಜರ ಆಳಿಕೆಯ ಮೇಲೆ ಅನೇಕ ಆಕ್ಷೇಪಗಳು ಇತ್ತಲಾಗಿ ಬರುತ್ತಿದ್ದವು. ಅವರು ಜನರಲ್ ಇಲೆಕ್ಶನಿಗೆ ಸಿದ್ಧರಾಗಿದ್ದರೂ, ಸ್ವಕೃತ್ಯದ ಸಮರ್ಥನವನ್ನು ಮಾಡಲು ಅವರೂ, ಮಿ. ಚೆಂಬರಲೇನ, ಮಿ. ಚರ್ಚಹಿಲ್ ಈ ಗೃಹಸ್ಥರೂ ಬೇರೆ ಬೇರೆ ಕಡೆಗಳಲ್ಲಿ ಉಪನ್ಯಾಸಗಳಿಂದ ಯತ್ನಿಸಿದರು. ಆದರೆ ಈ ಪ್ರಯೋಗವು ದುರ್ದೈವದಿಂದ ಲೊಯ್ಡ ಜೊರ್ಜರ ಪಥ್ಯಕ್ಕೆ ಬೀಳಲಿಲ್ಲ! ಆಗ ಜನರಲ್ ಇಲೆಕ್ಶನಿಗೆ ಎಡೆಕೊಡಲು ಅವರಿಗೆ ರಾಜಿಯನ್ನು ಕೊಡಬೇಕಾಯಿತು. ಜನರಲ್ ಇಲೆಕ್ಶನಿನಲ್ಲಿ ಲಿಬರಲ್ ಮತ್ತು ಕನ್ಸರ ವೇಟಿವ್ ಪಕ್ಷದವರು ಒಟ್ಟುಗೂಡಿ ಉಮೇದುವಾರರ ಚುನಾವಣೆಯನ್ನು ಮಾಡಬೇಕೆಂದು ಚೆಂಬರಲೇನ ಮತ್ತು ಲೊಯ್ಡ ಜೊರ್ಜರ ಅಭಿಪ್ರಾಯವಿತ್ತು. ಆದರೆ ಈ ಅಭಿಪ್ರಾಯಕ್ಕೆ ಲಿಬರಲ್ ಪಾರ್ಟಿಯವರು ಅವಕಾಶವನ್ನು ಕೊಡಲಿಲ್ಲ. ಇಲೆಕ್ಶನು ಅವರವರ ಪಕ್ಷದಲ್ಲಿ ಸ್ವತಂತ್ರವಾಗಿಯೆ ಆಗಬೇಕೆಂದು ಅವರು ಹೇಳಿದರು. ಆಗ ನಿರುಪಾಯವಾಗಿ ಲೊಯ್ಡ ಜೊರ್ಜರ ಸಮೇತ ಅವರ ಮಂತ್ರಿಮಂಡಲವು ರಾಜಿಯನ್ನು ಕೊಟ್ಟಿತು. ಅವರ ಖಾಲಿಯಾದ್ದ ಜಾಗೆಯನ್ನು ಮಿ. ಬೊನರಲೊರವರು ಅಂಗೀಕರಿಸಿದ್ದಾರೆ ಮತು ಅವರು ಬೇರೆ ಮಂತ್ರಿ ಮಂಡಲವನ್ನು ರಚಿಸುವವರಿದ್ದಾರೆ.

ಮಿ. ಲೊಯ್ಡ ಜೊರ್ಜರು ವಿಲಾಯತಿಯಲ್ಲಿ ಈಗಿರುವ ಮುತ್ಸದಿಗಳಲ್ಲಿ ಶ್ರೇಷ್ಠ ತರಗತಿಯವರೆನ್ನಲು ಅಡ್ಡಿ ಇಲ್ಲ. ಮಿ. ಎಸ್‌ಕ್ವಿಥರಂಥ ಉದಾರಪಕ್ಷದ ಕಡು ಪುರಸ್ಕರ್ತೃಗಳು ಇವರಿಗೆ ಪ್ರತಿಸ್ಪರ್ಧಿಗಳಾಗಿರುವಾಗಲೂ ಇವರು ತಮ್ಮ ಆಳಿಕೆಯನ್ನು ಇಷ್ಟು ಕಾಲದ ವರೆಗೆ ಉದ್ದ ಎಳೆದರು. ಇವರಲ್ಲಿ ಸಾಮರ್ಥ್ಯಕ್ಕಿಂತ ಯುಕ್ತಿಯು ಅಧಿಕವಾಗಿದೆ. ಯುರೋಪದ ಘನಘೋರ ಯುದ್ಧವು ಪ್ರಾರಂಭವಾಗಿ ಅದರ ಪೂರ್ವಾರ್ಧದಲ್ಲಿ ಇಂಗ್ಲಂಡಕ್ಕೆ ಮತ್ತು ಮಿತ್ರಸಂಘಕ್ಕೆ ಅಪಜಯಗಳ ಮೇಲೆ ಅಪಜಯಗಳು ಬರುತ್ತ ಹೋದ ಬಳಿಕ ಮಿ. ಎಸ್‌ಕ್ವಿಥರ ಮಂತ್ರಿಮಂಡಲವು ವಿಸರ್ಜಿತವಾಯಿತು. ಮತ್ತು ಲೊಯ್ಡ ಜೋರ್ಜರು ಅಧಿಕಾರಾರೂಢರಾದರು. ದೈವದ ಅನುಕೂಲ್ಯವು ಇವರಿಗೆ ಅಧಿಕವಾಗಿದ್ದದರಿಂದ, ಅಮೇರಿಕಕ್ಕೆ ಈ ಯುದ್ಧದಲ್ಲಿಳಿಯುವ ಆಲೋಚನೆಯು ಹುಟ್ಟಿತು. ಅಥವಾ ಹೀಗೆನ್ನುವುದಕ್ಕಿಂತ ಇಂಥ ಆಲೋಚನೆಯನ್ನು ಅದರ ತಲೆಯಲ್ಲಿ ಇಂಗ್ಲಂಡವು ತಂದು ಕೊಟ್ಟಿತೆನ್ನುವುದು ಇನ್ನೂ ಸಮರ್ಪಕವಾಗಿದೆ. ಅಮೇರಿಕವು ತನ್ನ ಯುದ್ಧಸಾಮಗ್ರಿಗಳಿಂದ ಮಿತ್ರಸಂಘಕ್ಕೆ ಉತ್ತಮವಾದ ಸಹಾಯವನ್ನು ಕೊಡಹತ್ತಿದ ಕೂಡಲೆ, ಇದುವರೆಗಿನ ಜಯಾಪಜಯದ ತಕ್ಕಡಿಯು ತಿರುಗಿ ಅದು ಸರಿ ವಿರೋಧವಾಗಿ ನಿಂತಿತು. ಮತ್ತು ಕೊನೆಗೆ ಮಿತ್ರಸಂಘಕ್ಕೆ ಜಯಶ್ರೀಯು ದೊರಕಿತು. ಈ ಸಂಗತಿಯನ್ನು ಆಲೋಚಿಸಿದರೆ ಮಿ. ಲೊಯ ಜೊರ್ಜರ ಮಂತ್ರಿಮಂಡಲವು ಎಷ್ಟು ಭಾಗ್ಯಶಾಲಿ ಎಂಬುದು ಗೊತ್ತಾಗುತ್ತದೆ. ಮಹಾ ಯುದ್ಧದಲ್ಲಿ ಜಯವನ್ನು ಸಂಪಾದಿಸಬೇಕಾದರೆ ಮಿ. ಲೊಯ್ಡ ಜೊರ್ಜರಿಗೆ ಯಾವ ಯಾವ ಸವ್ಯಾಪಸವ್ಯಗಳನ್ನು ಮಾಡಬೇಕಾಗಿ ಬಂತು ಎಂಬುದನ್ನು ಇಲ್ಲಿ ಬರೆಯಬೇಕಾದ ಅಗತ್ಯವಿಲ್ಲ. ಆದರೆ ಹಿಂದೂಸ್ಥಾನದೊಳಗಿನ ಮುಸಲ್ಮಾನರ ಮನಸ್ಸನ್ನು ಸಮಾಧಾನಪಡಿಸಲು ಅವರು ತುರ್ಕಿಯ ಖಿಲಾಫತ್ತಿನ ಸಂರಕ್ಷಣದ ಬಗ್ಗೆ ಹೇಗೆ ಬೆಣ್ಣೆಯಂತೆ ಮಧುರವಾದ ವಚನವನ್ನು ಕೊಟ್ಟಿದ್ದರೆಂಬುದು ಹಿಂದೂಸ್ಥಾನದ ಜನರು ಇನ್ನೂ ಮರೆತಿರಲಿಲ್ಲ. ಮತ್ತು ಅದೆ ಸಮಯದಲ್ಲಿ ಅವರು ಮಾಡಿದ ವಚನಭಂಗವನ್ನು ಸಹ ಹಿಂದೂಸ್ಥಾನದವರು ಮರೆತಿರಲಿಕ್ಕಿಲ್ಲ. ಮಿ. ಲೊಯ್ಡ ಜೊರ್ಜರು ತಾನು ಯುದ್ಧವನ್ನು ಗೆದ್ದಿದ್ದೇನೆಂಬದೊಂದು ಭಾವನೆಯನ್ನಿಟ್ಟುಕೊಂಡು ಆ ಬಲದಿಂದ ಸಮ್ಮಿಶ್ರ ಪಕ್ಷದಿಂದ ಅಸ್ತಿತ್ವವನ್ನು ಕಾದುಕೊಂಡಿದ್ದರು. ಆದರೆ ಅದರ ಅವಧಿಯು ಕಳೆದವಾರ ತುಂಬಿ ಬಂದು ಅದು ಬಿದ್ದುಹೋಯಿತು. ಮಿ. ಲೊಯ್ಡ ಜೊರ್ಜರ ರಾಜನೀತಿಯು, ಭರ್ತೃಹರಿಯ ಉಕ್ತಿಗನುಸಾರವಾಗಿ “ವಾರಾಂಗನೆ”ಯಂತೆ ಅನೇಕ ರೂಪನಾಗಿದ್ದರೂ, ಮತ್ತು ಈ ಕಾರಣದಿಂದಲೆ ಅದು ಎಷ್ಟೊ ಸಾರಿ ಯಶಸ್ವಿಯಾಗುತ್ತಿದ್ದರೂ,

ಕೊನೆಗೆ ಪೂರ್ವಏಸಿಯದ ಅವರ ರಾಜಕೀಯ ಧೋರಣದ ನೆವ ಸಿಕ್ಕಿ, ಮತಭೇದವುಂಟಾಗಿ, ವಾದವು ವಿಕೋಪಕ್ಕೆ ಹೋಗಿ ಅದು ಅವರ ಮಂತ್ರಿಪದವನ್ನು ಬೀಳಿಸಿತು. ಇವರು ಪದಾರೂಢರಾಗಿರುವಾಗ ಹಿಂದೀ ಸ್ವರಾಜ್ಯದ ಕಾನೂನು ಪಾಸಾಗಿದ್ದದಾದರೂ ಮತ್ತು ಆ ಕಾಲದಲ್ಲಿ ಅವರು ತಮ್ಮ ಭಾಷಣ ದ್ವಾರಾ ಅದನ್ನು ಪುಷ್ಟೀಕರಿಸಿದ್ದಾರಾದರೂ, ಕೊನೆಗೆ ಸಿವಿಲಿಯನರ ಸಂತೋಷಾರ್ಥವಾಗಿ ಮೊನ್ನೆ ಮೊನ್ನೆ “ಹಿಂದೀ ಸುಧಾರಣೆಗಳು ಪ್ರಯೋಗಾರ್ಥವಾಗಿವೆ” ಎಂದು ಹೇಳಿ ಒಳಗಿನ ಕಹಿತನವನ್ನು ಹೊರಗೆ ಹಾಕಿದರು. ಇದು ಎಲ್ಲರ ಕಣ್ಣುಮುಂದಿರುವ ವಿಷಯವಾಗಿದೆ. ಇವರ ವಿಷಯವಾಗಿ ಒಂದೆ ಮಾತಿನಿಂದ ಹೇಳುವುದಾದರೆ ಇಂತಹದೆ ಎಂದು ಇವರಿಗೆ ಸ್ವತಂತ್ರ ಮತವಿಲ್ಲ. ಯಾವ ಉಪಾಯದಿಂದಲೆ ಆಗಲಿ ತಾನು ಅಧಿಕಾರಾರೂಢನಾಗಿರುವುದೆ ಇವರ ಮತವು. ಪರಂತು ಈಗಿನ ಕಾಲದ ಓಘದಲ್ಲಿ ಅದು ಮಗ್ನವಾಯಿತು. ಲೊಯ್ಡ ಜೊರ್ಜರು ಅಧಿಕಾರಚ್ಯುತರಾಗಿ ಈಗ ತಾತ್ಕಾಲಿಕವಾಗಿ ಬೋನರಲೊ ಇವರು ಬಂದಿರುವರು. ಇನ್ನುಮುಂದೆ ವಿಲಾಯತಿಯ ರಾಜಕಾರಣದಲ್ಲಿ ಏನು ಬದಲಾವಣೆಗಳಾಗಲಿಕ್ಕಿವೆ ಎಂಬ ವಿಷಯದಲ್ಲಿ ಅನೇಕರ ದೃಷ್ಟಿಯು ವಿದ್ಧವಾಗಿದೆ.

ಸ್ಫುಟವಿಚಾರಗಳು.

೧. ಅಸಹಕಾರಿಗಳನ್ನು ಸರಕಾರಿ ಅಧಿಕಾರಿಗಳು—ವಿಶೇಷತಃ ಕೆಳಗಿನ ತರಗತಿಯ ಮೆಜಿಸ್ಟ್ರೇಟರು ಹೇಗೆ ಪೀಡಿಸುತ್ತಿರುವರೆಂಬುದು ಈಗ ಜನಜನಿತವಾದ ಸಂಗತಿಯೆ ಸರಿ. ಒಬ್ಬನು ಅಸಹಕಾರಿಯಾಗಿದ್ದಾನೆ, ರಾಜಕೀಯ ಚಳವಳಗಾರನಾಗಿದ್ದಾನೆ ಎಂದು ತಿಳಿದರೆ ಸಾಕು, ಸರಕಾರಿ ಅಧಿಕಾರಿಗಳು ಅವನನ್ನು ಬೇರೆ ಬೇರೆ ಅಲ್ಪಗುನ್ಹೆಯ ದೆಸೆಯಿಂದ ಅಸಾಮಾನ್ಯವಾದ ಶಿಕ್ಷೆಯನ್ನು ವಿಧಿಸಲು ಎಂದೂ ಹೇಸುವುದಿಲ್ಲ. ಆದರೆ ಭಂಗಿಗಿಡಗಳ ಮಧ್ಯದಲ್ಲಿ ತಪ್ಪಿ ಒಂದು ತುಲಸಿಗಿಡವಿರುವಂತೆ ಇಂಥಾ ಮೆಜಿಸ್ಟ್ರೇಟರ ಮಧ್ಯದಲ್ಲಿ ಎಲ್ಲಾದರೂ ಒಬ್ಬನು ನ್ಯಾಯಪ್ರಿಯನಾಗಿರುವವನು ಇದ್ದರೆ ಇದು ದುರ್ದೈವದಲ್ಲಿ ಒಂದು ಸುದೈವವೆಂದೆ ತಿಳಿಯಬೇಕು. ಅಲಹಾಬಾದದಲ್ಲಿ ಒಂದು ಇದೆ ನಮೂನೆಯ ಸಂಗತಿಯು ನಡೆಯಿತು. ಗಡರಾಮನೆಂಬ ಒಬ್ಬ ಅಸಹಕಾರಿಯ ಮೇಲೆ ಸಾಹೇಸ್ ಅಲ್ಲಿಯನ್ನು ಕೊಂಚ ನೋಯಿಸಿದ ಆರೋಪಣೆಯಿತ್ತು. ಈ ಆರೋಪಿತನಿಗೆ ಸಬ್‌ಓರ್ಡಿನೇಟ ಮೆಜಿಸ್ಟ್ರೇಟರು ಎರಡು ವಾರದ ಕಠಿಣ ಶಿಕ್ಷೆ ಮತ್ತು ೧೦೦ ರೂಪಾಯಿ ದಂಡವನ್ನು ವಿಧಿಸಿದರು. ಗುಡ್‌ರಾಮನು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರೊಡನೆ ಅಪೀಲನ್ನು ಮಾಡಿದನು. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಎಲ್ಲವನ್ನು ಸರಿಯಾಗಿ ವಿಮರ್ಶಿಸಿ ಆರೋಪಿಯನ್ನು ನಿರ್ದೋಷಿಯನ್ನಾಗಿ ನಿರ್ಧರಿಸಿ ಬಿಟ್ಟುಬಿಟ್ಟರು. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಈ ರೀತಿಯಿಂದ ಗುಡ್‌ರಾಮನನ್ನು ಬಿಟ್ಟುಕೊಡುವಾಗ ಯಾವ ತೀರ್ಪನ್ನು ಕೊಟ್ಟರೊ ಅದರಲ್ಲಿ ಆ ಸಬೋರ್ಡಿನೇಟ ಮೆಜಿಸ್ಟ್ರೇಟರ ಕಣ್ಣಿಗೆ ಸರಿಯಾದ ಅಂಜನವನ್ನು ಹಾಕಿದ್ದಾರೆ. ಆರೋಪಿತಗೃಹಸ್ಥನು ಅಸಹಕಾರಿಯೆಂಬುದು ಸಬೋರ್ಡಿನೇಟ ಮೆಜಿಸ್ಟ್ರೇಟರಿಗೆ ಗೊತ್ತಾಗದೆ ಹೋಗಿದ್ದರೆ ಅವರು ಎಂದೂ ಇಂಥಕಠಿಣ ಮತ್ತು ಕಠೋರವಾದ ಶಿಕ್ಷೆಯನ್ನು ವಿಧಿಸುತ್ತಿರಲಿಲ್ಲ. ಒಬ್ಬನ ರಾಜಕೀಯ ಮತವು ಅಥವಾ ಚಳವಳವು ಇಂತಿಂಥ ನಮೂನೆಯದಿದ್ದಾವೆಂದು ತಿಳಿದು ಅದರ ಮೇಲಿಂದ ಅವನ ಇತರ ಅಪರಾಧಕ್ಕೆ ಶಿಕ್ಷೆಯನ್ನು ನಿರ್ಣಯಿಸುವುದು ಅಕ್ಷಮ್ಯವಾಗಿದೆ. ರಾಜಕೀಯ ಚಳವಳವು ದೇಶಾಯಿದೆಶೀರು ಇದ್ದುದಾದರೆ ಅದನ್ನು ನಿಲ್ಲಿಸಲು ಅಥವಾ ತಡೆಗಟ್ಟಲು ಎಷ್ಟೊ ಕಾನೂನುಗಳಿವೆ. ಅವುಗಳ ಬಲದಿಂದ ಮೆಜಿಸ್ಟ್ರೇಟರು ಪ್ರವರ್ತಿಸಬಹುದಲ್ಲದೆ ಇಂಥ ಅಪ್ರಶಸ್ತಮಾರ್ಗವನ್ನು ಅವಲಂಬಿಸುವುದು ಒಳ್ಳೆಯದಲ್ಲ. ಆದರೆ ಇತ್ತಲಾಗಿ ಸಾಧಾರಣವಾಗಿ ಎಲ್ಲಾ ಕಡೆಗಳಲ್ಲಿ ಇಂಥ ಅಗತ್ಯವಿಲ್ಲದ ಕಲಮುಗಳನ್ನೆಲ್ಲ ತೆಕ್ಕೊಂಡು ಪ್ರವರ್ತಿಸೋಣಾಗುತ್ತದೆ. ಎಂದು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟಿರುವರು. ಡಿ. ಮೆಜಿಸ್ಟ್ರೇಟರ ಈ ಅಭಿಪ್ರಾಯವು ಅಭಿನಂದನೀಯವಾಗಿದೆ. ಅವರು ಕೊಟ್ಟಿರುವ ಯೋಗ್ಯವಾದ ಎಚ್ಚರವನ್ನು ಎಲ್ಲ ಅಧಿಕಾರಿಗಳು ಮನಸ್ಸಿಗೆ ತಂದುಕೊಂಡಿದ್ದಾದರೆ ಅಕಾರಣವಾಗಿ ಅವರ ತಲೆಯ ಮೇಲೆ ಹೆಚ್ಚಿನ ಕೆಲಸದ ಭಾರವು ಬೀಳಲಿಕ್ಕಿಲ್ಲ. ಈ ಸಂಗತಿಯು ಹೌದಾದರೂ, ಅಸಹಕಾರದ ಕುತ್ತಿಗೆಯನ್ನು ಹಿಸುಕಲು ಅಧಿಕಾರಿಗಳು ಮಾಡುತ್ತಿರುವ ಅಯೋಗ್ಯವರ್ತನವು ಸುಳ್ಳಲ್ಲ.

೨. ಅಸಹಕಾರಿತೆಯನ್ನು ನಿರ್ಮೂಲಪಡಿಸಲು ಹಿಂದೂಸ್ಥಾನದಲ್ಲಿ ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಅಧಿಕಾರಿವರ್ಗವು ಹೇಗೆ ಭಗೀರಥ ಪ್ರಯತ್ನವನ್ನು ನಡಿಸಿಕೊಂಡಿದೆ ಎಂಬುದು ಕೆಲವು ಭಾಗಗಳಲ್ಲಿ ಬಹಿರಂಗವಾಗಿ ತಿಳಿದುಬಂದರೂ ಪಂಡಿತ ಮದನಮೋಹನ ಮಾಲವೀಯರು ಹೇಳಿರುವ ಮೇರೆಗೆ ಅಂತರಂಗದಿಂದ ಕೂಡ ಅನೇಕ ಯತ್ನಗಳು ನಡೆದಿವೆ ಎಂದು ಗೊತ್ತಾಗುತ್ತದೆ. ಪಂಡಿತಜಿಯವರು ಕೆಲವು ಸಮಯದ ಹಿಂದೆ ಮುಂಬಯಿಗೆ ಬಂದಿರುವ ಸಮಯದಲ್ಲಿ ಅಲ್ಲಿಯ ಒಂದು ಪತ್ರಿಕೆಯ ಬಾತಮಿದಾರನು ಪಂಡಿತಜಿಯವರ ಭೇಟಿಯನ್ನು ಪಡಕೊಂಡನು. ಅವನೊಡನೆ ಪಂಡಿತಜಿಯವರು ಪ್ರಕೃತದ ದೇಶದ ಸ್ಥಿತಿಯನ್ನು ಸರಿಯಾಗಿ ಬಣ್ಣಿಸಿ ಮುಂದಿನಂತೆ ಮುಂದರಿಸಿದರು. “ಅಸಹಕಾರದಿಂದ ದೇಶದಲ್ಲಿ ತುಂಬಾ ಜಾಗೃತಿಯುಂಟಾಗಿದೆ. ಜನತೆಯಲ್ಲಿ ಯೋಗ್ಯವಾದ ಸ್ವಾಭಿಮಾನವು ಉದಯಿಸಿದೆ. ಅನ್ಯಾಯದ ತಿರಸ್ಕಾರವೂ, ನಿರ್ಭೀತಿಯೂ ಸಹ ಉತ್ಪನ್ನವಾಗಿವೆ. ಸ್ವರಾಜ್ಯದ ಆಕಾಂಕ್ಷೆಯು ಜನತೆಯಲ್ಲಿ ನೆಲೆಗೊಂಡಿದೆ. ಈ ಮೇರೆಗೆ ಅಸಹಕಾರವು ಹಿಂದೂಸ್ಥಾನದ ಮೇಲೆ ತುಂಬಾ ಉಪಕಾರವನ್ನು ಮಾಡಿದೆ. ಇಂಥಾ ಚಳವಳವನ್ನು ಮುರಿದುಬಿಡಲು ಅಧಿಕಾರಿಗಳು ಇಲ್ಲಿಂದ ಅಲ್ಲಿ ವರೆಗೆ ಗುಪ್ತ ವಿಧದಿಂದ ಹೇಗೆ ಹೇಗೆ ಕೃತ್ಯಗಳನ್ನು ನಡಿಸಿದರು ಎಂಬುದರ ಸಪ್ರಮಾಣವಾದ ಮಾಹಿತಿಯನ್ನು ನಾನು ಸಂಗ್ರಹಿಸಿರುವೆನು. ಅದನ್ನು ಪುಸ್ತಕ ರೂಪದಿಂದ ಪ್ರಕಾಶಿಸಬೇಕೆಂದಿದ್ದೇನೆ. ಅದು ಪ್ರಕಟವಾದ ಬಳಿಕ ಸರಕಾರದ ಇಂಗಿತ ಮತ್ತು ಗುಪ್ತಕೃತ್ಯ ಇವುಗಳ ಮೇಲೆ ಸರಿಯಾದ ಪ್ರಕಾಶವು ಬಿದ್ದೀತು” ಎಂದು ಪಂಡಿತಜಿಯವರು ಸರಕಾರದ ಸ್ವರೂಪವನ್ನು ಬೆಳಕಿಗೆ ತರಹತ್ತಿದ್ದಾರೆ, ಇದು ಸಂತೋಷದ ಮಾತು.

೩. ಪಂಡಿತ ಮದನಮೋಹನ ಮಾಲವೀಯರು ಸರಕಾರದ ಕೃಷ್ಣಕಾರಸ್ಥಾನವನ್ನು ಈ ಮೇರೆಗೆ ಹೊರಗೆಡಹುವ ಸಂಕಲ್ಪವನ್ನು ವ್ಯಕ್ತಗೊಳಿಸಿದ್ದಾರೆ, ಮಾತ್ರವಲ್ಲ, ಅಲ್ಲಿಯ ಒಂದು ಉಪನ್ಯಾಸದಲ್ಲಿ ಮುಂಚಿನ ಮತ್ತು ಈಗಿನ ಎಲ್ಲ ರಾಜಕೀಯ ಪರಿಸ್ಥಿತಿಯನ್ನು ವರ್ಣಿಸಿ ಸರಕಾರವನ್ನು ಪ್ರತಿರೋಧಿಸಲು ನಿಜವಾದ ದೇಶಭಕ್ತರು ಕೌನ್ಸಿಲುಗಳಿಗೆ ಹೋಗುವುದು ಎಷ್ಟು ಆವಶ್ಯಕವೆಂಬುದನ್ನು ವಿಶದಪಡಿಸಿದರು. ರಾಷ್ಟ್ರೀಯ ಸಭೆಯ ಕಾರ್ಯಕ್ರಮವನ್ನು ಸಂಕುಚಿತವನ್ನಾಗಿಟ್ಟುಕೊಳ್ಳುವುದು ಯುಕ್ತವಲ್ಲ. ಕೌನ್ಸಿಲುಗಳನ್ನು ನುಗ್ಗಬೇಕೆಂದು ಹೇಳುವವರ ಮೇಲೆ ಕೊಂಗ್ರೆಸ ಬಹಿಷ್ಕಾರವನ್ನಿಡುವುದು ಶ್ರೇಯಸ್ಕರವಲ್ಲ. ಮಾನಾಮಾನ್ಯತೆಯ ಉದ್ದೇಶದಿಂದ ಅಲ್ಲ, ಕೇವಲ ದೇಶಸೇವೆಯ ಸದುದ್ದೇಶವನ್ನಿಟ್ಟುಕೊಂಡು ಕೌನ್ಸಿಲುಗಳಲ್ಲಿ ಪ್ರವೇಶಿಸುವವರಿಗೆ ರಾಷ್ಟ್ರೀಯ ಸಭೆಯು ಸಹಿಷ್ಣುತೆಯಿಂದ ಅನುಮತಿಯನ್ನು ಕೊಡಬೇಕು. ಈ ವಿಷಯದಲ್ಲಿ ಅಕಾರಣವಾಗಿ ಮತಭೇದವನ್ನು ಬೆಳಸಿ ಪರಸ್ಪರ ಒಡಕನ್ನು ತಂದುಕೊಳ್ಳುವುದರಿಂದ ಸ್ವರಾಜ್ಯದ ಧ್ಯೇಯವು ಕೈಗೂಡುವುದಿಲ್ಲ. ಅಸಹಕಾರವು ಧ್ಯೇಯವಲ್ಲ, ಸಾಧನವು. ಈ ಸೂಕ್ಷ್ಮಭೇದವನ್ನು ಮನಸ್ಸಿನಲ್ಲಿಟ್ಟುಕೊಂಡು ರಾಷ್ಟ್ರೀಯ ಸಭೆಯಭಕ್ತರು ಯೋಗ್ಯ ಬದಲಾವಣೆಗಳನ್ನು ಮಾಡುವುದು ಇಷ್ಟವೆಂದು ಪಂಡಿತಜಿಯವರು ಮುಂಬಯಿಯ ಶ್ರೋತೃಸಮಾಜಕ್ಕೆ ಶ್ರುತಪಡಿಸಿದರು. ಕೌನ್ಸಿಲು ಪ್ರವೇಶದ ಬಗ್ಗೆ ಅವರು ಆಡಿತೋರಿಸಿರುವ ವಿಚಾರಸರಣಿಯು ಕೆಲವರಿಗೆ ಒಪ್ಪಲಿ, ಒಪ್ಪದೆ ಇರಲಿ, ಆದರೆ ಒಡಕನ್ನು ಮುರಿದುಕೊಂಡು ಸ್ವರಾಜ್ಯವನ್ನು ಸಂಪಾದಿಸಬೇಕೆಂದು ಅವರು ಅತ್ಯಂತ ರಾಷ್ಟ್ರೀಯ ಭಕ್ತಿಯಿಂದ ಹೇಳಿದ ಅಭಿಪ್ರಾಯವು ಯಾರಿಗೂ ಅಮಾನ್ಯವಾಗಲಿಕ್ಕಿಲ್ಲವೆಂದು ಹೇಳಬಹುದು. ಪಂಡಿತ ಮಾಲವೀಯರು ಈ ೪೦-೪೫ ವರ್ಷದಿಂದ ಹಿಂದೂಸ್ಥಾನದ ಅವಿಶ್ರಾಂತ ಸೇವೆಯನ್ನು ಮಾಡಿದ್ದಾರೆ. ಮತ್ತು ಆ ಸೇವೆಯನ್ನು ಮಾಡುವಾಗ ಅವರು ಯಾವ ತರದ ಸ್ವಾರ್ಥಸಾಧನೆಗೆ ಪ್ರವರ್ತಿಸಿದವರಲ್ಲವೆಂದು ಅವರ ಕಡು ದ್ವೇಷಿಗಳು ಸಹ ಹೇಳತಕ್ಕ ಮಾತಾಗಿದೆ. ಇಂಥ ಸನ್ಮಾನ್ಯ ಮುಖಂಡರು ಹೇಳುವ ಉಪದೇಶದಲ್ಲಿ ಎಷ್ಟು ತಥ್ಯವಿದೆ, ಅವರ ಅನವರತ ತಪಸ್ಯೆಯಲ್ಲಿ ಎಷ್ಟು ತೇಜಸ್ಸಿದೆ ಎಂಬೀ ಸಂಗತಿಗಳನ್ನು ದೇಶವು ಶಾಂತರೀತಿಯಿಂದ ಆಲೋಚಿಸಿ ಅವರು ತೋರಿಸಿಕೊಟ್ಟಿರುವ ದಾರಿಯನ್ನು ಅವಲಂಬಿಸೀತೆಂದು ಭರವಸೆಪಟ್ಟರೆ ಅದು ಅಸ್ಥಾನದಲ್ಲಾಗಲಿಕ್ಕಿಲ್ಲವೆಂದು ನಾವು ದೃಢವಾಗಿ ನಂಬಿದ್ದೇವೆ.

ಮಂಗಳೂರು.

ಬಾತ್ಮೀದಾರರಿಗೆ ವಿನಂತಿ.— U. G. N.ರಿಂದ ಬಂದ “ಆರ್ಯರ ವರ್ಣಾಶ್ರಮಧರ್ಮ”—ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು. ರಾ। ಧರ್ಮದೇವ ಸಿದ್ಧಾಂತಾಲಂಕಾರ—ಇವರ “ಜಾತಿಭೇದವಿಚಾರ ಸಮಾಲೋಚನಾ ವಿಮರ್ಶೆ” ಇದು ವೇದಮೂರ್ತಿ ಪಾಂಡುರಂಗ ಶಾಸ್ತ್ರಿಯವರ “ಜಾತಿಭೇದ ವಿಚಾರ”ದ ವಿಮರ್ಶೆಯು ಮುಗಿಯುವ ಮುಂಚೆ ಪ್ರಕಟಿಸುವುದು ಯುಕ್ತ ತೋರುವುದಿಲ್ಲವಾದ್ದರಿಂದ ಈ ಸರ್ತಿ ಪ್ರಕಟಿಸಲಿಲ್ಲ.

ಕಲ್ಯಾಣ್ ಟ್ಯಾಲ್ ವರ್ಕ್ಸಿನ ಮೆನೇಜರರೂ ಸ್ವರ್ಗಸ್ಥರಾದ ಮಿ. ಸ್ಯಾಮುನ್ ಅಲ್ವರಿಸರ ಮಕ್ಕಳೂ ಆದ ಮಿ. ಎಡ್ವಿನ್ ಅಲ್ವರಿಸರು ಕಲ್ಯಾಣ್ ಮುನ್ಸಿಪಾಲಿಟಿಯ ಕೌನ್ಸಿಲರಾಗಿ ಆರಿಸಲ್ಪಟ್ಟಿದ್ದಾರಂತೆ.

ಕೆಲವು ಸಮಯ ಇಲ್ಲಿಯ ಫಾದರ್ ಮುಲ್ಲರ ಆಸ್ಪತ್ರೆಯ ಒಬ್ಬ ಡಾಕ್ಟರರಾದ ಡಾಕ್ಟರ ಅಬುನ್‌ಡಿಸ್ ಎ. ಅಬ್ರೇವೊ ಇವರು ಎಡಿನ್ ಬರ್ಗಿನ ಎಫ್. ಆರ್. ಸಿ. ಎಸ್. ಪರೀಕ್ಷೆಯನ್ನು ಪಾಸಾಗಿರುವರಾಗಿ ತಿಳಿದುಬರುತ್ತದೆ.

ಹಿಂದೂ ಕ್ರಿಕೆಟ್ ಟೀಮಿಗೂ ಕೊಸ್ಮೋಪೊಲಿಟನ್ ಕ್ರಿಕೆಟ್ ಟೀಮಿಗೂ ನಡೆದ ಕೊರನೇಶನ್ ಕ್ರಿಕೆಟ್ ಪಂದ್ಯಾಟದಲ್ಲಿ ಹಿಂದೂ ಟೀಮಿನವರು ಗೆದ್ದಿರುತ್ತಾರೆ.

ಪ್ರತಿ ಸೋಮವಾರ ಸಾಮಾನುಗಳನ್ನು ತೆಗೆದುಕೊಂಡು ಹೋಗುವ ಸ್ಟೀಮರುಗಳಲ್ಲದೆ ಪ್ರಯಾಣಿಕರ ಸೌಕರ್ಯಕ್ಕಾಗಿ ವೇಗದಿಂದ ಓಡುವ ತಮ್ಮ ಇನ್ನೊಂದು ಸ್ಟೀಮರು ಇಂದಿನಿಂದ ಮಂಗಳೂರು ಲೈನಿನ ಬಂದರುಗಳಲ್ಲಿ ಚಲಾವಣೆಗೆ ಇಡಲಾಗುವುದೆಂದು ಮುಂಬಯಿ ಸ್ಟೀಮ ನೆವಿಗೇಶನ ಕಂಪೆನಿಯವರು ತಿಳಿಸುತ್ತಾರೆ.

ಸೆಲ್ಫ ಗವರ್ನಮೆಂಟ ಮಿನಿಸ್ಟರ ಒನರೇಬಲ್ ರಾಜಾ ಓಫ್ ಪೆನಗಲ್‌ರವರು ಕಳೆದ ಮಂಗಳವಾರ ಸಾಯಂಕಾಲ ಇಲ್ಲಿಗೆ ಬಂದು ಡಿಸ್ಟ್ರಿಕ್ಟಬೋರ್ಡ ಪ್ರೆಸಿಡೆಂಟರಾದ ರಾವ್ ಬಹದ್ದೂರ್ ಎನ್. ಸುಬ್ಬರಾಯರ ಅತಿಥಿಗಳಾಗಿದ್ದರು. ಇವರು ಮುನ್ಸಿಪಲ್ ಆಫೀಸನ್ನು ಸಂದರ್ಶಿಸಿದಾಗ ಮುನ್ಸಿಪಲ್ ಚೆಯರ್ಮನರಿಂದ ಒಂದು ಮಾನಪತ್ರವು ಬೆಳ್ಳಿಯ ಕರಡಿಗೆಯಲ್ಲಿಟ್ಟು ಒಪ್ಪಿಸಲಾಯಿತು. ಇಲ್ಲಿಯ ವೆನ್‌ಲೋಕ ಆಸ್ಪತ್ರೆ ಮತ್ತು ಹೆಂಗಸರ ಆಸ್ಪತ್ರೆಯನ್ನು ಇನ್ನೂ ವಿಳಂಬ ಮಾಡದೇ ಬೇಗ ಕಟ್ಟಿಸಿಕೊಡಬೇಕು, ಪಟ್ಟಣದಲ್ಲಿ ನಿರ್ಮಲವಾದ ನೀರು ನಳಿಗೆಯ ಮೂಲಕ ದೊರಕಿಸಿಕೊಡುವ ವಿಲೆವಾರಿ ಮಾಡಿಸಬೇಕು, ಪಟ್ಟಣದಲ್ಲಿ ಈಗ ಮೋಟರ ಗಾಡಿ ಮೊದಲಾದವುಗಳ ಚಲಾವಣೆಯು ಹೆಚ್ಚಾದುದರಿಂದ ಮುಖ್ಯ ಮಾರ್ಗಗಳನ್ನು ಯೋಗ್ಯವಾಗಿ ಸರಿಪಡಿಸಲು ಸಾಕಷ್ಟು ಧನ ಸಹಾಯ ಮಾಡಬೇಕು, ಈ ಮೂರು ಮುಖ್ಯ ವಿಷಯಗಳನ್ನು ಈ ಮಾನಪತ್ರದಲ್ಲಿ ವಿಜ್ಞಾಪಿಸಿಕೊಳ್ಳಲಾಯಿತು. ಮಾನಪತ್ರಕ್ಕೆ ಉತ್ತರ ಕೊಡುವಾಗ ಮಿನಿಸ್ಟರರು ಆಸ್ಪತ್ರೆ ಕಟ್ಟಡಗಳ ಬಗ್ಗೆ ಹಣ ಸೆಂಕ್ಶನ್ ಮಾಡಲು ಈಗ ಹಣದ ಅಡಚಣೆ ಇರುವುದರಿಂದ ಇದು ಅಸಾಧ್ಯವೆಂದೂ ಮಾರ್ಗಗಳ ಬಗ್ಗೆ ಹೆಚ್ಚಿನ ಗ್ರೆಂಟನ್ನು ಕೊಡುವ ವಿಷಯವನ್ನು ಒಂದು ಬೋರ್ಡಿನವರು ಪರ್ಯಾಲೋಚಿಸುತ್ತಿರುವರೆಂದೂ ಹೇಳಿದರು. ನೀರಿನ ಪುರವಣಿಯ ಕುರಿತು ಅವರು ಏನೂ ಹೇಳಲಿಲ್ಲವಂತೆ. ಮಂತ್ರಿಗಳು ಡಿಸ್ಟ್ರಿಕ್ಟ ಬೋರ್ಡನ್ನು ಸಂದರ್ಶಿಸಿದಾಗ ಡಿ. ಬೋರ್ಡ ಪ್ರೆಸಿಡೆಂಟರು ಒಂದು ಚಿಕ್ಕ ಭಾಷಣವನ್ನುಮಾಡಿ ವಿದ್ಯಾಭಿವೃದ್ಧಿ ಪಡಿಸುವುದು, ಮಾರ್ಗಗಳ ದುರುಸ್ತಿ ಮಾಡುವುದು ಮೊದಲಾದ ಕಾರ್ಯಗಳ ಬಗ್ಗೆ ಬೋರ್ಡಿಗೆ ಇನ್ನೂ ಹೆಚ್ಚಿನ ಸಹಾಯ ಮಾಡುವುದು ಅಗತ್ಯವಿದೆ ಎಂದು ವಿಜ್ಞಾಪಿಸಿಕೊಂಡರು. ಸರಕಾರದ ಈಗಿನ ಹಣದ ಅಡಚಣೆಯು ನಿವಾರಣೆಯಾದರೆ ಸಾಕಷ್ಟು ಹಣ ಸಹಾಯ ಮಾಡಲಾಗುವುದೆಂದು ಆಶ್ವಾಸನವನ್ನಿತ್ತರು. ಬೋರ್ಡಿನ ಮೀಟಿಂಗಿನ ಅಧಿವೇಶನವು ನಡಿಯುವಾಗ ಸಹ ಮಿನಿಸ್ಟರರು ಹಾಜರಿದ್ದರು. ಮೀಟಿಂಗು ಮುಗಿದ ತರುವಾಯ ಮಿನಿಸ್ಟರರು ಡಿ. ಬೋರ್ಡ ಪ್ರೆಸಿಡೆಂಟರೂ ಇಂಜಿನಿಯರ ಒಟ್ಟಿಗೆ ಗುರುಪುರಕ್ಕೆ ಹೋಗಿ ಅಲ್ಲಿಯ ಸಂಕವನ್ನು ನೋಡಿ ಹಿಂತಿರುಗಿ ಬಂದು ನಿನ್ನೆ ದಿನ ಇಲ್ಲಿಂದ ತೆರಳಿದರು.

ಜಿಲ್ಲಾ ಕಲೆಕ್ಟರರಾದ ಮ. ರಾ. ರಾಮಚ್ಚ ನೆಡುಂಜಾಡಿಯವರು ೩ ತಿಂಗಳ ಪ್ರಿವಿಲೆಜ್ ರಜೆಯನ್ನು ಪಡೆದಿರುವುದರಿಂದ ಇವರ ಬದಲಿಗೆ ಕಡಲೂರಿನ ಟ್ರೆಜರಿ ಡಿಪ್ಯುಟಿ ಕಲೆಕ್ಟರರಾದ ಮ. ರಾ. ರಾವ್ ಬಹದ್ದೂರ್ ಯನ್. ವಿ. ಯಸ್ ರಾಜಾಚಾರ್ಯ ಇವರು ನೇಮಕಪಟ್ಟಿದ್ದಾರೆ.

ಜಿಲ್ಲೆಯಲ್ಲಿರುವ ಮೊಗವೀರರ ಫಿಶರಿಸ್ ಸೊಸೈಟಿಗಳಿಗಾಗಿಯೇ ಒಬ್ಬ ಪ್ರತ್ಯೇಕ ಇನ್ಸ್‌ಪೆಕ್ಟರರನ್ನು ನೇಮಿಸಲಾಗುವುದಂತೆ.

ಬರುವ ತಾ. ೩೦ರಲ್ಲಿ ಅಥವಾ ೩೧ರಲ್ಲಿ ಶ್ರೀಯುತ ಡಿ. ಕೆ. ಭಾರದ್ವಾಜರು ಅವರ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ಬರುವರಾಗಿ ವಾರ್ತೆ ಇದೆ.

ಡಿಸ್ಟ್ರಿಕ್ಟ ಬೋರ್ಡಿನ ಬರುವ ತಿಂಗಳ ಅಧಿವೇಶವು ಕುಲಗುಂದದಲ್ಲಿ ಸೇರುವುದು.

ಮದರಾಸ ನ್ಯಾಯವಿಧಾಯಕ ಸಭೆಯ ಅಧಿವೇಶನವು ಬಹುಶಃ ನವಂಬರ ತಿಂಗಳಲ್ಲಿ ತಾ. ೧೩ರಿಂದ ೧೭ರ ವರೆಗೂ ದಶಂಬರ ತಿಂಗಳಲ್ಲಿ ತಾ. ೧೮ರಿಂದ ೨೨ರ ವರೆಗೂ ನಡಿಯುವುದೆಂದು ತಿಳಿದುಬರುತ್ತದೆ.

ಬೆಂಗಳೂರಿನಲ್ಲಿ ಆರ್ಯಸಮಾಜದ ಪರವಾಗಿ ಕೆಲಸಮಾಡುತ್ತಿರುವ ಹರಿದ್ವಾರ ಗುರುಕುಲ ವಿದ್ಯಾಪೀಠದ ಬಿ. ಎ. ಪಾಸಾದ ನನ್ನ ಮಿತ್ರ ಪಂಡಿತ ಸತ್ಯವ್ರತ ಸಿದ್ಧಾಂತಾಲಂಕಾರರು ಇದೇ ೨೭ನೇ ತಾರೀಕಿಗೆ ಮಂಗಳೂರಿಗೆ ಬರುತ್ತಾರೆಂಬುದನ್ನು ತಿಳಿಸುವರೆ ತುಂಬಾ ಸಂತೋಷಪಡುತ್ತೇನೆ. ಅವರು ೨೮ನೇ ತಾರೀಕು ಶನಿವಾರ ಅಪರಾಹ್ನ ೫ ಗಂಟೆಗೆ ಮೈದಾನಿನಲ್ಲಿಯೂ, ಮರುದಿನ ಬೆಳಿಗ್ಗೆ ಸನ್ಯಾಸಿಗುಡ್ಡೆಯ ಆರ್ಯಸಮಾಜದ ಮಂದಿರದಲ್ಲಿಯೂ ಉಪನ್ಯಾಸಗಳನ್ನು ಕೊಡುವರು. ಪಟ್ಟಣಿಗರೆಲ್ಲರೂ ಅವರಿಗೆ ಸುಸ್ವಾಗತವನ್ನಿತ್ತು ಅವರ ಉಪನ್ಯಾಸಗಳಿಗೂ ದಯವಿಟ್ಟು ಬರಬೇಕಾಗಿ ವಿನಂತಿ.

ಧರ್ಮದೇವ ಸಿದ್ಧಾಂತಾಲಂಕಾರ,
ಆರ್ಯಸಮಾಜ, ಮಂಗಳೂರು.

ನೋಟೀಸು.

ಶ್ರೀ ಮದನಂತೇಶ್ವರ ದೇವಸ್ಥಾನ, ಮಂಜೇಶ್ವರ.

ಶ್ರೀ ಮದನಂತೇಶ್ವರ ದೇವಸ್ಥಾನದ ಆಡಳಿತೆ ನೋಡುವ ಬಗ್ಗೆ ಗೌಡಸಾರಸ್ವತ ವೃಂದಕ್ಕೆ ಸೇರಿದ ೩೦ ವರುಷಕ್ಕೆ ಮಿಕ್ಕಿದ ಒಬ್ಬ ಮೆನೇಜರನು ಬೇಕಾಗಿರುವನು. ಸೆಕ್ಯೂರಿಟಿ ರೂಪಾಯಿ 2000 ಕೊಡಬೇಕು. ತಲಬು ತಿಂಗಳಿಗೆ ರೂಪಾಯಿ 100ರಂತೆ. ಮತ್ತು ಬಾಡಿಗೆ ಇಲ್ಲದ ಮನೆ ಸಹ. ಅರ್ಜಿಗಳು ಈ ಕೆಳಗೆ ದಸ್ಕತು ಮಾಡಿದವರಿಗೆ ನವೆಂಬರ 15ರ ಒಳಗೆ ತಲಪಬೇಕು.

ಮಂಜೇಶ್ವರ,
ತಾ. 12-10-'22
ಯಂ. ಅನಂತ ಶೆಣೈ,
ಟ್ರಸ್ಟಿ.

ಕುಂಬಳೆ:— ದಾರಿಗರನ್ನು ಸುಲಿಗೆಮಾಡುತ್ತಿದ್ದ ಇಲ್ಲಿಯ ಅಬ್ಬುಲ್ಲ ಬ್ಯಾರಿಗೆ ೩ ವರ್ಷ ಮಾಡಂಗಾಗೆ ೧೫ ವರ್ಷದ ಕಠಿಣ ಶಿಕ್ಷೆಯು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರವರಿಂದ ವಿಧಿಸಲ್ಪಟ್ಟಿತು. ತೀರ್ಪು ವಿಧಿಸುವ ದಿನ ಬೆಳಿಗ್ಗೆ ೫ ಗಂಟೆ ಸಮಯ ಸದರಿ ಅಬ್ಬುಲ್ಲಬ್ಯಾರಿಯು ಸಬ್ ಜೈಲಿನಲ್ಲಿ ಆತ್ಮಹತ್ಯೆಕ್ಕೆ ಪ್ರಯತ್ನಿಸುವೆನೆಂಬವರಿಂದ ಇದರ ತನಖಿಯು ಅಲಾಹಿದ ಬಾಕಿ ಇಟ್ಟಿರುವುದಾಗಿ ವದಂತಿ ಇದೆ.

ಸುಲಿಗೆಯು ಅಂತ್ಯವಾದಾಗ್ಯೂ ಜುಗಾರಾಟದ ಚಿಲ್ಲರೆ ಕಳವುಗಳೂ ನಡೆಯುತ್ತಲೇ ಇರುವುದರಿಂದ ಇವುಗಳನ್ನು ಸಹಾ ಅಡಗಿಸಿದ್ದಲ್ಲಿ ಈ ಊರಿನವರಿಗೆ ಸದ್ಯ ನಿರ್ಭೀತಿಯೆಂತ ಹೇಳಬಹುದು.

ಇಲ್ಲಿ ಹಾಯರ್ ಎಲಿಮೆಂಟರಿ ಶಾಲೆಯನ್ನಿಡುವರೆ ಸಂಕ್ಷನ್ ಮಾಡಿದ ನಮ್ಮ ಮಾನ್ಯ ಬೋರ್ಡಿನವರಿಗೆ ಸರ್ವರೂ ಕೃತಜ್ಞತೆಯುಳ್ಳವರಾಗಿರುವರು.

ಪೊಳಲಿ:— ಶ್ರೀ ರಾಜರಾಜೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ಬಡಕಬೈಲ ಪರಮೇಶ್ವರಯ್ಯನವರಿಂದ ಸ್ಥಾಪಿಸಲ್ಪಟ್ಟ ಭಜನೆ ಮಂಡಳಿಯವರಿಂದ ಇದೇ ಕಾರ್ತಿಕ ಶು| ೧ ರಿಂದ ಕ್ರಮದಂತೆ ಎಂಟನೇ ವರ್ಷದ ವಾರ್ಷಿಕ ಭಜನೆಯು ಪ್ರಾರಂಭವಾಗಿರುವುದು. ಬರುವ ಏಕಾದಶೀ ವರೆಗೆ ಪ್ರತಿ ದಿನ ಸಂಜೆಗೆ ಭಜನೆ, ದ್ವಾದಶಿಯಿಂದ ಕಾಂಚೀನೇತ್ರರ ಅಖಿಲೇಶ್ವರ ದೇವಸ್ಥಾನಗಳ ವರೆಗೆ ಪಟ್ಟಣ ಪರ್ಯಟನ, ಪೌರ್ಣಮಿಯು ಸ್ಥಿರವಾರ ಅಹೋರಾತ್ರಿ ಭಜನೆ, ಮಧ್ಯಾಹ್ನ ಬ್ರಾಹ್ಮಣ ಸಂತರ್ಪಣೆ, ರಾತ್ರಿ ರಂಗಪೂಜೆ, ದೀಪೋತ್ಸವವಾಗಿ ಮರುದಿನ ಬೆಳಿಗ್ಗೆ ಪೋಕುಳಿಯೊಂದಿಗೆ ಅವಭೃತಸ್ನಾನವಾಗಿ ಭಜನೆ ಮಂಗಲವಾಗುವುದು. ಭಜಕ ಮಂಡಲಿಯವರು ಈ ಭಜನೋತ್ಸವದೆಡೆಯಲ್ಲಿ ಪುಷ್ಪ, ಕುಂಕುಮ, ಕರ್ಪೂರ, ವ ನಗದಿಯಿಂದ ವಗೈರೆ ಯಥೋಚಿತ ಸೇವೆಯೊಂದಿಗೆ ಕಲಿಯುಗದಲ್ಲಿ ಶ್ರೇಷ್ಠ ಕರ್ಮವಾದ ಸಂಕೀರ್ತನಾ ಸೇವೆಯ ಪುಣ್ಯ ಭಾಗಿಗಳಾಗಬೇಕಾಗಿ ಪ್ರಾರ್ಥನೆ.

ದಯಾನಂದಸರಸ್ವತೀಯವರ ಪುಣ್ಯತಿಥಿ.

ಆರ್ಯಸಮಾಜದ ಸಂಸ್ಥಾಪಕರಾದ ಮಹರ್ಷಿ ಸ್ವಾಮಿ ದಯಾನಂದ ಸರಸ್ವತೀಯವರ ಮೃತ್ಯು ದಿವಸದ ವಾರ್ಷಿಕೋತ್ಸವವು ಮಂಗಳೂರು ಆರ್ಯಸಮಾಜದ ಮಂದಿರದಲ್ಲಿ ಕಳೆದ ತಾರೀಕು ೨೧ನೇ ಶನಿವಾರ ಪ್ರಾತಃಕಾಲ ಗಂಟೆ ೭-೩೦ರಿಂದ ೧೧ ಗಂಟೆ ವರೆಗೆ ಬಹಳ ವಿಜೃಂಭಣೆಯಿಂದ ಜರಗಿತು. ಪ್ರಾತಃಕಾಲ ಹವನ ಮತ್ತು ದೇವಾರಾಧನೆ ಆದ ತರುವಾಯ ಶ್ರೀಯುತ ಪಂಡಿತ ಧರ್ಮದೇವಸಿದ್ಧಾಂತಾಲಂಕಾರರವರು ಮಹರ್ಷಿಯವರ ಜೀವನ ಚರಿತ್ರೆಯನ್ನೂ ಅವರು ಮಾಡಿದ ವಿಶೇಷ ಕಾರ್ಯಗಳನ್ನೂ ವಿವರಿಸಿದರು. ಜೀರ್ಣವಾದ ವೈದಿಕ ಧರ್ಮವನ್ನು ಪುನರುದ್ಧಾರ ಮಾಡುವಾಗ ಅವರು ಅನೇಕಾನೇಕ ಕಷ್ಟಗಳನ್ನು ಪಟ್ಟರೂ ಅವುಗಳನ್ನು ಲಕ್ಷ್ಯಕ್ಕೆ ತಾರದೆ ಸ್ಥಿರಪ್ರಯತ್ನದಿಂದ ವೇದಗಳ ನಿಜವಾದ ಅರ್ಥವನ್ನು ಜನರು ತಿಳಿಯುವಂತೆ ಸತ್ಯಾರ್ಥಪ್ರಕಾಶ ಮೊದಲಾದ ಅನೇಕ ಗ್ರಂಥಗಳನ್ನು ಬರೆದರು ಮತ್ತು ಉತ್ತರ ದೇಶದಲ್ಲಿ ಅನೇಕ ಆರ್ಯ ಸಮಾಜಗಳನ್ನು ಸ್ಥಾಪಿಸಿ ಅವರ ಮುಖ್ಯ ಧ್ಯೇಯವಾಗಿರುವ ವೈದಿಕ ಧರ್ಮದ ಜೀರ್ಣೋದ್ಧಾರವನ್ನು ಅತೀ ಪರಿಶ್ರಮದಿಂದ ಮಾಡಿದರು ಎಂಬುದನ್ನೆಲ್ಲಾ ವಿವರಿಸಿ ಕಡೆಗೆ ಅವರನ್ನು ಕೊಲ್ಲಬೇಕೆಂತ ಸನಾತನ ಧರ್ಮದ ಅನುಯಾಯಿಗಳು ಅನೇಕಾವರ್ತಿ ಅವರಿಗೆ ವಿಷಪ್ರಯೋಗಿಸಿದರು, ಕಡೇಸಾರಿ ಅವರ ಅಡಿಗೆಯವನಿಂದ ಹಾಲಿನಲ್ಲಿ ಕೊಡಿಸಿಕೊಟ್ಟ ಕಠೋರವಾದ ವಿಷದಿಂದ ಅವರು ಪರಂಧಾಮವನ್ನೈದಿದರು. ತನಗೆ ವಿಷವನ್ನು ಕೊಟ್ಟ ಆ ಮನುಷ್ಯನನ್ನು ಸರಕಾರದ ಶಿಕ್ಷೆಯಿಂದ ತಪ್ಪಿಸುವಗೋಸ್ಕರ ಅವನ ಮೇಲೆ ಕನಿಕರ ಪಟ್ಟು ಅದೇ ರಾತ್ರಿ ಅವನಿಗೆ ರೂಪಾಯಿ ೨೦೦ರನ್ನು ಕೊಟ್ಟು ನೇಪಾಳಕ್ಕೆ ಹೋಗುವರೆ ಸಹಾಯ ಮಾಡಿ ಕಳುಹಿಸಿದರು ಎಂಬುದನ್ನು ತಿಳಿಸಿ, ಅವರ ಬ್ರಹ್ಮಚರ್ಯ ಸತ್ಯ, ನಿರ್ಭಯತೆ, ಸರ್ವಭೂತದಯೆ, ಅಹಿಂಸಾ, ಭಕ್ತಿ ಮೊದಲಾದ ಅವರಲ್ಲಿದ್ದ ಗುಣಗಳನ್ನು ವಿವರಿಸಿ ಅವರ ಜೀವನವನ್ನನುಸರಿಸಿ ನಾವೆಲ್ಲರೂ ನಮ್ಮ ಜೀವನದ ಪವಿತ್ರತೆಯನ್ನು ಸಂಪಾದಿಸಿಕೊಳ್ಳಬೇಕೆಂದು ಹೇಳಿ ತನ್ನ ಭಾಷಣವನ್ನು ಮುಗಿಸಿದರು. ಅನಂತರ ಶ್ರೀಯುತ ಎಸ್. ವಿ. ಶಾಸ್ತ್ರಿ ಆಯುರ್ವೇದ ಭೂಷಣರವರು ಈ ಭರತ ಖಂಡವೆಂಬ ವಿರಾಟಪುರುಷನಿಗೆ ಉಂಟಾದ ತರತರದ ರೋಗಗಳ ಚಿನ್ಹೆಗಳಿಗೆ ವೈದ್ಯರಾದ ಗೌತಮ ಬುದ್ಧ ಮೊದಲ್ಗೊಂಡು ಅನೇಕ ಆಚಾರ್ಯರ ಪೈಕಿ ಶಂಕರಾಚಾರ್ಯರು ರಾಮಾನುಜಾಚಾರ್ಯರು ಮಧ್ವಾಚಾರ್ಯರು ವಲ್ಲಭಾಚಾರ್ಯರು ಮತ್ತು ಕಬೀರದಾಸ, ನಾನಕ ಮೊದಲಾದ ಅನೇಕ ಸಂತರು ಈ ಭಾರತವರ್ಷದ ರೋಗವನ್ನು ನಿವಾರಿಸುವರೆ ಪ್ರಯತ್ನಪಟ್ಟರೂ ಅವರು ತತ್ಕಾಲದ ಔಷಧವನ್ನೇ ಕೊಟ್ಟರು ಹೊರತು ಆ ರೋಗವು ಮಹಾ ಕ್ಷಯರೋಗವೆಂದೂ ಅದರ ಮೂಲ ಕಾರಣವನ್ನು ತಿಳಿಯದೆ ಹೋದರು. ಅನಂತರ ಮಹರ್ಷಿ ದಯಾನಂದ ಸರಸ್ವತಿಯವರು ಜನನಕ್ಕೆಬಂದು ಈ ರೋಗದ ಮೂಲ ಕಾರಣವನ್ನು ಕಂಡುಹಿಡಿದು ಈ ವಿರಾಟ ಪುರುಷನ ದೇಹದಲ್ಲಿ ಲೋಪವಾದ ರಸಧಾತು (Tissues) ಅಂಶವನ್ನು ಸೇರಿಸುವದರಿಂದ ಈ ರೋಗವು ಬೇರು ಸಮೇತ ನಾಶವಾಗಬಹುದು ಎಂದು ದೃಢವಾಗಿ ಹೇಳಿದರು. ಆ ಲೋಪವಾದ ರಸಧಾತುಗಳೇ ವೇದಗಳು. ಆ ವೇದಗಳ ನಿಜವಾದ ಅರ್ಥವನ್ನು ಜನರು ಯಾವ ವರೆಗೆ ಸೇವಿಸದೆ ಸರಿಯಾಗಿ ಅನುಪಾನದಿಂದ ನಡಕೊಳ್ಳುವುದಿಲ್ಲವೊ ಆ ತನಕ ಈ ರೋಗವು ಗುಣವಾಗದು ಎಂದು ಢಂಗುರಘೋಷದಿಂದವೇದಜ್ಞಾನವನ್ನೂ ಅದರ ನಿಜವಾದ ಉತ್ಕೃಷ್ಟವಾದ ಅರ್ಥವನ್ನೂ ಜನರಿಗೆ ವಿಕಸಿತ ಪಡಿಸಿದರು. ಆದ್ದರಿಂದ ಅನಾದಿಯಾದ ವೈದಿಕ ಧರ್ಮವೇ ಈ ರೋಗನಿವಾರಣೆಯ ಮುಖ್ಯ ಔಷಧಿಯೆಂದೂ ಆ ರೋಗದಿಂದ ಉಂಟಾದ ಪಶು ಹಿಂಸೆ ಮೊದಲಾದ ಅತ್ಯಾಚಾರಗಳೂ ಬಾಲ ವಿವಾಹ ಜಾತಿಭೇದ ಭಾಷಾಭೇದ ಮತದ್ವೇಷ ಮೊದಲಾದ ಚಿನ್ಹೆಗಳು ದೂರ ಹೋಗಿ ಭಾರತ ವಿರಾಟ ಪುರುಷನ ದೇಹಕ್ಕೆ ಸೌಖ್ಯವನ್ನೂ ಆತ್ಮಕ್ಕೆ ಶಾಂತಿಯನ್ನೂ ಒದಗಿಸಿಕೊಡುವ ವೈದಿಕ ಧರ್ಮವೆಂಬ ಈ ಶ್ರೇಷ್ಠ ಔಷಧಿಯನ್ನು ಕಂಡುಹಿಡಿದು ಭಾರತೀಯರ ಮುಂದಿಟ್ಟರು ಎಂದು ಹೇಳಿ ತನ್ನ ಭಾಷಣವನ್ನು ಸಮಾಪ್ತಿಮಾಡಿದರು. ಮತ್ತು ಅಧ್ಯಕ್ಷರಾದ ಹೈಕೋರ್ಟ ವಕೀಲ ಮ. ರಾ. ರಾ. ಉ. ಬಾ. ಕೃಷ್ಣಭಟ್ಟರು ಇದನ್ನು ಅನುಮೋದಿಸಿ ಮಹರ್ಷಿಯವರ ಸಹನ ಶಕ್ತಿಯನ್ನೂ ದಯೆಯನ್ನೂ ದೇಶಭಕ್ತಿ ದೇಶಭಾಷೆ ಪ್ರಚಾರದ ಆವಶ್ಯಕತೆಯ ವಿಚಾರವನ್ನೂ ಸ್ವರಾಜ್ಯದ ಸುಖವನ್ನೂ ಪರ್ಯಾಲೋಚಿಸಿ ಈ ಮಹರ್ಷಿಯವರು ಮಾಡಿದ ಸಾಹಸವನ್ನು ಕುರಿತು ಕೊಂಡಾಡಿದರು. ಅದೇ ದಿವಸ ಸಾಯಂಕಾಲ ಗಂಟೆ ೫ಕ್ಕೆ ಮೈದಾನಿನಲ್ಲಿ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರವರು ಶ್ರೀಯುತ ಶ್ರೀಪಾದ ಕರ್ಮಾರರವರು ಮತ್ತು ಶ್ರೀಯುತ ಉ. ಬಂಟಪ್ಪನವರು ಸಹಾ ಆ ಮಹರ್ಷಿಯವರ ಚರಿತ್ರೆ ಕುರಿತು ಭಾಷಣ ಕೊಟ್ಟರು.

ಶಾರದಾ ವಾಚಕಮಂದಿರ, ಪುತ್ತೂರು.

ಈ ವಾಚಕಮಂದಿರದ ಹದಿನೈದನೆಯ ವರುಷದ ವರ್ಧಂತಿ ಉತ್ಸವವು ಕಳೆದ ತಾ. ೬ನೇ ಆದಿತ್ಯವಾರ ಅಲ್ಲಿಯ ಮುನ್ಸಿಫರಾದ ಮ. ರಾ. ಎಸ್. ಆರ್. ಚಂದರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸದರಿ ವರುಷದ ವರದಿಯು ನಮ್ಮ ಬಳಿಗೆ ಬಂದಿರುವುದನ್ನು ಆದರಪೂರ್ವಕವಾಗಿ ಸ್ವೀಕರಿಸಿದ್ದೇವೆ. ಈ ವಾಚಕಮಂದಿರವು ಅಭಿವೃದ್ಧಿಯನ್ನು ಹೊಂದುತ್ತಿರುವುದು ಸಂತೋಷಕರವಾಗಿದೆ. ಸದರಿ ಮಂದಿರದ ಕಾರ್ಯನಿರ್ವಾಹಕ ಮಂಡಳಿಯ ಅಧ್ಯಕ್ಷರು ಮ| ರಾ| ಕೆ. ಎಸ್. ಪರಮೇಶ್ವರ ಶಾಸ್ತ್ರಿಗಳವರೂ ಕಾರ್ಯದರ್ಶಿಗಳು ಮ| ರಾ| ಎಚ್. ಅನಂತ ಕಾಮತ್, ಮತ್ತು ಮ| ರಾ| ಕುಂಡಪ್ಪ ಪುಂಡಲೀಕ ಉಪ್ಪ ಇವರೂ ಆಗಿರುವರು. ವರದಿಯ ವರುಷದ ಕೊನೆಗೆ ವಾಚನಾಲಯಕ್ಕೆ ೧೩೩ ಮಂದಿ ಸದಸ್ಯರಿದ್ದರು. ವರದಿಯ ವರುಷದಲ್ಲಿ ೧೧ ಮಂದಿ ಸದಸ್ಯರು ಸೇರಿರುವರು. ಈ ವರುಷದಲ್ಲಿ ಒಂದು ಮಹಾಸಭೆಯೂ, ೪ ಕಾರ್ಯನಿರ್ವಾಹಕ ಸಭೆಗಳೂ ಜರಗಿದವು. ಈ ವಾಚನಾಲಯಕ್ಕೆ ಇಂಗ್ಲಿಷ ಭಾಷೆಯ ೩ ದಿನಚರಿ ಪತ್ರಿಕೆಗಳು, ೪ ವಾರಪತ್ರಿಕೆಗಳು, ೪ ಮಾಸಪತ್ರಿಕೆಗಳು ಬರುತ್ತಿವೆ. ಕನ್ನಡ ಭಾಷೆಯ ಸಂಪದಭ್ಯುದಯವೆಂಬ ದಿನಚರಿ ಪತ್ರಿಕೆಯೂ, ೮ ವಾರಪತ್ರಿಕೆಗಳೂ, ೯ ಮಾಸಪತ್ರಿಕೆಗಳೂ ಬರುತ್ತಿವೆ. ಈ ವಾಚಕಮಂದಿರದ ಪುಸ್ತಕಭಂಡಾರದಲ್ಲಿ ಒಟ್ಟು ೩೩೩೩ ಪುಸ್ತಕಗಳಿವೆ. ಮಂದಿರದ ಆಯವು ಕಡಿಮೆಯಾಗಿ ರೂ. ೬೦ ಖಿಲ್ಡಿಯಿಂದ ಸಾಲ ಪಡಿಯಬೇಕಾಯಿತು. ಆದರೆ ಒಗಸ್ಟ ತಿಂಗಳಲ್ಲಿ ರೂ. ೧೨೦ರ ಒಂದು ಚೀಟಿಫಂಡು ಏರ್ಪಡಿಸಿ ಆ ಸಾಲವನ್ನು ಸಲಾಯಿಸಿದೆ. ದಿನೇ ದಿನೇ ಅಂಗ್ಲೇಯ ಭಾಷೆಯು ಮುಂದುವರಿದ ಹಾಗೆ ಮಾತೃಭಾಷೆಯು ಹಿಂಜರಿಯುವುದನ್ನು ಕಂಡು ಭಾಷಾಜ್ಞಾನವನ್ನು ವೃದ್ಧಿಪಡಿಸಲು ಸಹಾಯಕವಾಗುವಂತೆ ಈ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಅದು ತನ್ನ ಉದ್ದಿಷ್ಟಕಾರ್ಯವನ್ನು ನೆರವೇರಿಸಲು ಶೈಲಾವಷ್ಟು ಸಾಹಸವನ್ನು ಕಳೆದ ಹದಿನೈದು ವರುಷಗಳಿಂದ ಮಾಡುತ್ತಿರುವುದು ಸ್ತುತ್ಯಾರ್ಹವಾಗಿದೆ. ಭಾಷಾಭಿವೃದ್ಧಿಗೂ ಜ್ಞಾನಾಭಿವೃದ್ಧಿಗೂ ಸಾಧನವಾದ ಇಂಥಾ ವಾಚನಾಲಯಗಳು ಜಿಲ್ಲೆಯ ಪ್ರತಿಯೊಂದು ಕಡೆಯಲ್ಲೂ ಸ್ಥಾಪಿಸತಕ್ಕದ್ದು ಬಹಳ ಅಗತ್ಯವಿದೆ.

ಪತ್ರವ್ಯವಹಾರ.

ಅಯ್ಯಾ,

ನಮ್ಮ ಈ ಬಂಟ್ವಾಳ ನಿವಾಸಿಕರ ಮೇಲೆ ಹೊರಿಸೋಣಾದ ವೃತ್ತಿತೆರಿಗೆ ಎಂಬ ನೂತನ ತೆರಿಗೆಯನ್ನು ಊರಿನ ನಿವಾಸಿಕರೆಲ್ಲರೂ ಒಮ್ಮನಸ್ಸಿನಿಂದ್ದು ಕೊಡಲಾಗದೆಂದು ಈ ಮೊದಲು ಪತ್ರಿಕೆಯಲ್ಲಿ ಪ್ರಕಟಿಸಿರುತ್ತದೆ. ಆ ಸಂಬಂಧ ಸದರಿ ನೂತನ ತೆರಿಗೆಯನ್ನು ಹೊರಿಸೋಣಾದವರ ಪೈಕಿ ಈ ಕೆಳಗೆ ಹೆಸರು ಕಾಣಿಸಿದ ಗೃಹಸ್ಥರಲ್ಲಿ ಗ್ರಾಮ ಉದ್ಯೋಗಸ್ಥರ ಮುಖಾಂತರ ಆ ವೃತ್ತಿತೆರಿಗೆಯನ್ನು ಕೊಡದಿರುವ ಬಗ್ಗೆ ಜಪ್ತಿ ಮಾಡೋಣಾಯಿತು. ಅಲ್ಲದೆ ಸದರಿ ಜಪ್ತಿಯಿಂದವೈಯೋಣಾದ ಮಹಾಲನ್ನು ನಿನ್ನೆ ತಾ. ೧೯-೧೦-'೨೨ನೇ 'ಟ ಳಕ್ಕೆ ಏಲಮಿಗೆ ಇಡೋಣಾಗಿರುತ್ತದೆ ಎಂತ ಏಲಂ ನೋಟೀಸನ್ನು ಪೇಟೆಯಲ್ಲಿ ಪ್ರಕಟನೆ ಬಗ್ಗೆ ಗ್ರಾಮಉದ್ಯೋಗಸ್ಥರ ಉಗ್ರಾಣಿಯು ಗಂಟೆ ೪ಗೆ ತಂದು ನಿನ್ನೆ ದಿನ ಏಲಮು ಆಗದೆ ಬಾಕಿ ಆಗಿ ಈ ದಿನ ತಾರೀಕು ೨೦-೧೦-'೨೨ಕ್ಕೆ ಪುನಃ ಏಲಮು ಕರಿಯಲಾಯಿತು. ಏಲಮು ಕರಿಯುವ ಸಮಯ ಪೇಟೆಯ ವ. ಹಳ್ಳಿಯ ಹಿಂದೂ-ಮುಸಲ್ಮಾನರು ಬಹಳವಾಗಿ ನೆರೆದಿದ್ದು ಗ್ರಾಮಉದ್ಯೋಗಸ್ಥರ ಉಗ್ರಾಣಿ ವ ಸಬ್‌ರಿಜಿಸ್ಟ್ರಿ ಆಫೀಸಿನ ಪೇದೆ ವ ಪೋಲೀಸ ನೌಕರರು ಏಲಮಿಗೆ ನಿಂತು ಏಲಂ ಕರಿಯೋಣಾದ ಸೊತ್ತು ಹೀನಕ್ರಯಕ್ಕೆ ಹೋಗಿರುವುದು. ಜನರ್‍ಯಾರೂ ಏಲಮಿಗೆ ನಿಲ್ಲದೆ ಈ ಜಪ್ತಿಯ ಮೂಲವಾದ ವೃತ್ತಿತೆರಿಗೆಯು ಇಡಿ ಜನಾಂಗಕ್ಕೆಷ್ಟೆ ಅತೃಪ್ತಿಕರವಾದ್ದು ಎಂತ ತಿಳಿಯಲು ಕಾರಣವಾಗುತ್ತದೆ.

ಈ ಕೆಳಗೆ ತೋರುವವರಲ್ಲಿ ಮಾತ್ರವೆ ಜಪ್ತಿ ಆಗಿ ಬಾಕಿ ಜಪ್ತಿಯನ್ನು ಯಾವ ಕಾರಣದಿಂದ ಮನ್ನಾಯಿಸಲಾಯಿತು ಎಂಬುದು ತಿಳಿಯುವುದಿಲ್ಲ. ಬಹುಶಃ ಇದು ನಮೂನೆ ನೋಡಲು ಮಾಡಿರುತ್ತಾರೇನೋ ನೋಡಬೇಕು. ಅಂಗಡಿಯ ಯಜಮಾನನು ಇಲ್ಲದಿರುವ ಕಾಲದಲ್ಲಿ ಜಪ್ತಿಮಾಡುವ ಈ ನ್ಯಾಯ ವ ಕಾನೂನು ಯಾವದೊ ತಿಳಿಯುವುದಿಲ್ಲ. ಈ ವೃತ್ತಿತೆರಿಗೆಯ ಬಗ್ಗೆ ಎಂತಲೇ ಕೆಲವು ಕಾನೂನುಗಳನ್ನು ಏರ್ಪಡಿಸಿದ್ದಾರೋ, ಏನೋ ಎಂಬುದನ್ನು ಮತ್ತು ಅಂಗಡಿಯ ಬಾಗಿಲುಗಳು ವ ಲೆಖ್ಖದ ಪುಸ್ತಕವನ್ನು ಜಪ್ತಿಮಾಡಲಾದೀತ್ಯ ಎಂತ ಗದರಿಸುವದನ್ನು ನೋಡಲು ಇನ್ನು ಏನೇನು ಕಾನೂನು ಬರುವುದೋ ದೇವರೇ ಬಲ್ಲ.

ಜಪ್ತಿಯಾದ ವೃತ್ತಿ ತೆರಿಗೆದಾರರ ಹೆಸರುಗಳು.

ಮ| ರಾ| ಜನಾರ್ಧನ ಸುಬ್ರಾಯ ಬಾಳಿಗ ಇವರಲ್ಲಿಯ ಅಕ್ಕಿ ಮುಡಿ ೭ ಖರೀದಿ ಕ್ರಯ ರೂಪಾಯಿ ೫೬-೧-೯, ಏಲಮು ಕ್ರಯ ರೂಪಾಯಿ ೪೦-೩-೦

ಪಾಂಡುಬಾಳಿಗ ಎಂಡ್ ಸನ್ಸ್ ಇವರಲ್ಲಿ ತಾಮ್ರದ ವೊಹರು ಹಾಕಿಸಿದ ಹೊಸ ತೇರಿನ ಸಟೆಗಳು ವ ತಾಮ್ರದ ಹೊಸ ಚೆಂಬುಗಳು ಕೂಡಾ ಖರೀದಿ ಕ್ರಯ ೨೪-೬-೮, ಏಲಮು ರೂಪ್ಯಾ ೭-೧-೬.

ನಂದಾವರ ನರಸಿಂಹ ಶ್ಯಾನಭಾಗ ಮತ್ತು ಬ್ರದರ್ಸ್ ಇವರಲ್ಲಿ ಜಪ್ತಿ ಆದ ಮಹಾಲಿನ ಪೈಕಿ ಕಬ್ಬಿಣದ ಹಾರೆಗಳು, ಕಿಂಡಾಲುಗಳು, ಹಿತ್ತಾಳಿ ಬೀಗಗಳು, ಕಬ್ಬಿಣದ ಬೀಗಗಳು, ಇಲೆಕ್ಟ್ರಿಕ್ ಬೆಟರಿಗಳು ಕೂಡಾ ಅದರ ಖರೀದಿ ರೂಪ್ಯಾ ೧೬-೦-೦, ಏಲಮು ಆದ ಕ್ರಯ ರೂಪ್ಯಾ ೪-೮-೬ ಇನ್ನು ಅವರಲ್ಲಿ ಜಪ್ತಿ ಆದ ಮಹಾಲು ಏಲಮಿಗೆ ಬಾಕಿ ಇರುತ್ತದೆ.

ಗುಂಡಿತ್ತೋಡಿ ವಿಟ್ಟಪ್ಪ ಕಿಣಿ ಮತ್ತು ಕಂಪೆನಿಯವರಲ್ಲಿ ಜಪ್ತಿ ಆದ ಮಹಾಲಿನ ಪೈಕಿ ಜೇಬು ಗಡಿಯಾರಗಳು ೫ರ ಖರೀದಿ ರೂಪ್ಯಾ ೮-೩-೦, ಏಲಮು ಆದ ಕ್ರಯ ರೂಪ್ಯಾ ೦-೮-೬ಇನ್ನು ಅವರಲ್ಲಿ ಜಪ್ತಿ ಆದ ಮಹಾಲು ಏಲಮಿಗೆ ಬಾಕಿ ಇರುತ್ತದೆ.

ಗುರುಪುರ ವಿಟ್ಟಪ್ರಭು ಬ್ರದರ್ಸ್ ಇವರಲ್ಲಿ ಜಪ್ತಿ ಆದ ನಕ್ಷಿ ಸೋಲಾಪುರ ಚಕ್ಕು ವಾರು ೧೮ ಕ್ರಯ ರೂಪ್ಯಾ ೦-೧-೩ ರಂತೆ ೭ ವಾರು ಏಲಮು ಆಗಿರುತ್ತದೆ. ಇದರ ಖರೀದಿ ವಾರು ೧೮ ದರ ರೂಪ್ಯಾ ೦-೬-೦ ಪ್ರಕಾರ ರೂಪ್ಯಾ ೨-೧೦-೦. ಇನ್ನು ಇವರಲ್ಲಿ ಜಪ್ತಿ ಆದ ಹೆಚ್ಚಿನ ಟಾಳೆಗಳು ಬಾಕಿ ಇರುತ್ತವೆ.

ಮ| ರಾ| ರಾಮಚಂದ್ರ ಸ್ವೋರಪ್ಪಬಾಳಿಗರಲ್ಲಿ ಜಪ್ತಿ ಆದ ಮಹಾಲಿನ ಪೈಕಿ ಏಲಮು ಆದ ಮಿಶ್ಯನ್ ಮಂದ್ರಿ ೧೮ ಖರೀದಿ ರೂಪಾಯಿ ೨-೩-೦, ಏಲಮು ಆದ ಕ್ರಯ ರೂಪಾಯಿ ೧-೩-೦. ಇನ್ನು ಅವರಲ್ಲಿ ಈ ಮಹಾಲು ಏಲಮಿಗೆ ಬಾಕಿ ಉಂಟು.

ಇನ್ನು ಕೆಲವು ವಸ್ತುಗಳನ್ನು ಏಲಮು ಮಾಡಲು ಪ್ರಯತ್ನಿಸಿದಾಗ್ಗೆ ಯಾರೂ ಏಲಮಿಗೆ ನಿಲ್ಲದೆ ಇದ್ದದರಿಂದ ಎಲ್ಲಾ ವಸ್ತುಗಳು ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರಿಗೆ ರವಾನಿಸುತ್ತಾರಾಗಿ ಕೇಳಬರುತ್ತದೆ. ಅಂಥಾ ಮಹಾಲು ಮಂಗಳೂರಲ್ಲಿ ಏಲಮು ಆಗುವಾಗ್ಗೆ ಯಾರೂ ನಿಲ್ಲಲಿಕ್ಕಿಲ್ಲವಾಗಿ ನಂಬುತ್ತೇವೆ.

B. M. P.

ಅಯ್ಯಾ ಸ್ವದೇಶಾಭಿಮಾನಿ ಪತ್ರಕರ್ತರೇ,

ನನ್ನ ಕಳೆದ ಪತ್ರಕ್ಕೆ ನೀವು ಕೊಟ್ಟ ಉತ್ತರವನ್ನು ನಿಮ್ಮ ಕಳೆದ ಸಂಚಿಕೆಯ ಅಗ್ರಲೇಖವನ್ನೂ ಓದಿನೋಡಿದೆನು. ತನ್ನ ಇನ್ನೆರಡು ಮಾತುಗಳನ್ನು ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ವ್ಯವಹಾರದಲ್ಲಿರಲು ಸಾಧ್ಯವಿಲ್ಲದ ಠರಾವನ್ನು ಸಭೆಯಲ್ಲಿ ಪಾಸುಮಾಡುವುದು ಹಾಸ್ಯಾಸ್ಪದ ಸಂಗತಿಯೆಂದು ನೀವು ಹೇಳುವ ಮಾತನ್ನು ಎಲ್ಲರೂ ಒಪ್ಪಲೇಬೇಕು. ಆದರೆ ಹೆಚ್ಚಿನ ವಿದ್ಯಾರ್ಥಿಗಳು ಕಾಲೇಜುಗಳನ್ನು ಬಹಿಷ್ಕರಿಸದೆ ಇದ್ದ ಮಾತ್ರಕ್ಕೆ ಆ ಬಹಿಷ್ಕಾರದ ಠರಾವು ವ್ಯವಹಾರದಲ್ಲಿ ಬರಲು ಸಾಧ್ಯವಿಲ್ಲದ ಠರಾವೆಂದು ಹೇಳುವುದು ಸರಿಯಲ್ಲ. ಆ ಬಹಿಷ್ಕಾರವು ವ್ಯವಹಾರದಲ್ಲಿ ಬರಲು ಸಾಧ್ಯವಿದೆಯೆಂದು ತಿಳಕೊಂಡೇ ಕೊಂಗ್ರೆಸ್ಸಿನಲ್ಲಿ ಅದನ್ನು ಪಾಸುಮಾಡಿದರು. ಕೊಂಗ್ರೆಸ್ಸಿನ ಅಭಿಪ್ರಾಯವು ಸರಿಯಾದುದೆಂದು ಕೆಲವು ಮಂದಿ ವಿದ್ಯಾರ್ಥಿಗಳೂ ವಕೀಲರೂ ತೋರಿಸಿಕೊಟ್ಟರು. ಕೊಂಗ್ರೆಸ್ಸಿನಿಂದ ಭಿನ್ನಾಭಿಪ್ರಾಯವಿದ್ದ ಕೆಲವರನ್ನು ಬಿಟ್ಟು, ಹೆಚ್ಚಿನ ವಿದ್ಯಾರ್ಥಿಗಳೂ ವಕೀಲರೂ ತಮ್ಮ ಸ್ವಾರ್ಥ ಬುದ್ಧಿ ಅಥವಾ ಇಂಥ ಯಾವುದೊ ದೌರ್ಬಲ್ಯದಿಂದ ಬಹಿಷ್ಕಾರದ ಠರಾವುಗಳನ್ನು ಆಚರಣೆಗೆ ತರಲಿಲ್ಲ. ಇಂಥವರು ಈಗ ತಮ್ಮ ದೌರ್ಬಲ್ಯವನ್ನು ಸರಳತನದಿಂದ ಒಪ್ಪಿಕೊಂಡು ಸುಲಭ ಸಾಧ್ಯವಾದ ಇತರ ಸಂಗತಿಗಳ ಮಟ್ಟಿಗಾದರೂ ನಮಗೆ ಸಹಾಯಮಾಡುವುದು ಯೋಗ್ಯವಿದೆ. ಅಲ್ಲದೆ ವಿದ್ಯಾರ್ಥಿಗಳ ಮತ್ತು ವಕೀಲರಲ್ಲಿ ಹೆಚ್ಚಿನವರು ಠರಾವನ್ನು ಆಚರಣೆಯಲ್ಲಿ ತರಲಿಲ್ಲವೆಂಬ ಮಾತ್ರಕ್ಕೆ ಕೊಂಗ್ರೆಸ್ಸು ಅದನ್ನು ಬದಲಾಯಿಸಲೇ ಬೇಕೆಂಬುದಕ್ಕೆ ಹೆಚ್ಚಿನ ಅರ್ಥವಿಲ್ಲ. ಕೊಂಗ್ರೆಸು ಸಭೆಯು ವಿದ್ಯಾರ್ಥಿ ಮತ್ತು ವಕೀಲರ ಸಭೆಯು ಮಾತ್ರವಾಗಿರದೆ ಇಡೀ ಜನಾಂಗದ ಪ್ರತಿನಿಧಿ ಸಭೆಯೆಂಬುದನ್ನು ನೀವು ಮರೆತಂತೆ ಕಾಣುತ್ತದೆ. ನಿಮ್ಮ ಕಳೆದ ಅಗ್ರಲೇಖದಲ್ಲಿ ಶಾಲಾಕಾಲೇಜುಗಳನ್ನು ಬಹಿಷ್ಕರಿಸಿದ ವಿದ್ಯಾರ್ಥಿಗಳಿಗೆ ತಕ್ಕ ಶಿಕ್ಷಣವನ್ನು ಕೊಡುವ ನೈತಿಕ ಜವಾಬ್ದಾರಿಯನ್ನು ಮುಖಂಡರು ವಹಿಸುವುದಿಲ್ಲವಾಗಿ ವರ್ಣಿಸಿದ್ದೀರಿ. ಇತರರ ಆಶ್ರಯದ ಹಂಗಿಲ್ಲದೆ ತನ್ನ ಸಂಪೂರ್ಣ ಜವಾಬ್ದಾರಿಯನ್ನು ತಿಳಕೊಂಡ ವಿದ್ಯಾರ್ಥಿಗಳನ್ನು ಮಾತ್ರ ಕೊಂಗ್ರೆಸ್ಸಿನವರು ಹೊರಗೆ ಕರೆದಿದ್ದರೆಂಬುದು ನಿಮಗೆ ಗೊತ್ತೇ ಇಲ್ಲವೇ?

ಕೌನ್ಸಿಲುಬಹಿಷ್ಕಾರದ ವಿಷಯದಲ್ಲಿ ನಾನು ಕಳೆದ ಸಾರಿ ಬರೆದ ಪ್ರಶ್ನೆಗಳಲ್ಲಿ ಒಂದಕ್ಕಾದರೂ ನೀವು ಉತ್ತರ ಕೊಟ್ಟಿಲ್ಲ. ಆದುದರಿಂದ ಈ ವಿಚಾರದಲ್ಲಿ ನಾನು ಒಂದು ಮಾತನ್ನಾದರೂ ಹೆಚ್ಚು ಹೇಳಬೇಕಾಗಿಲ್ಲ. ಆದರೆ ಕೌನ್ಸಿಲುಗಳ ಸದಸ್ಯರನ್ನು ಹುಚ್ಚರ ಆಸ್ಪತ್ರೆಯಲ್ಲಿದ್ದವರಿಗೆ ಸರಿತೋಲಿಸಿದೆನೆಂದು ನೀವು ತಪ್ಪಾಗಿ ತಿಳಕೊಂಡಂತೆ ಕಾಣುತ್ತದೆ. ಕೌನ್ಸಿಲುಗಳಲ್ಲಿ ಅನೇಕ ದೇಶಭಕ್ತರಿರುವರೆಂದು ನನಗೆ ಗೊತ್ತಿದೆ ಎಂಬ ಉತ್ತರ ವಾಕ್ಯವನ್ನು ನೋಡಿದರೆ ನನ್ನ ಅಭಿಪ್ರಾಯವು ಸ್ಪಷ್ಟವಾಗದೆ ಇರದು. ಕೌನ್ಸಿಲುಗಳು ಈಗ ನಡೆಯುತ್ತ ಇವೆ ಎಂಬ ಮಾತ್ರದಿಂದ ಬಹಿಷ್ಕಾರವು ಜಯಹೊಂದಲಿಲ್ಲವೆಂದು ನಿಮ್ಮ ವಾದವು ಸರಿಯಲ್ಲವೆಂದು ತೋರಿಸಲು ಉದಾಹರಣೆಕೊಟ್ಟುದಲ್ಲದೆ ಬೇರೆ ಅಲ್ಲ.

ಮಹಾತ್ಮಜೀಯವರು ಏಕೆ ಬಾರ್ಡೋಲಿಯಲ್ಲಿ ಕಾಯಿದೆಭಂಗವನ್ನು ಆರಂಭಿಸಲು ಹೋದರು. ಏಕೆ ನಿಲ್ಲಿಸಿದರು ಎಂಬ ವಿಚಾರಗಳನ್ನು ಅವರೇ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ನಿಮ್ಮ ವಾಚಕರ ಮುಂದೆ ಇಡದೆ ಅವರನ್ನು ನೀವು ಖಂಡಿಸುವುದು ಎಷ್ಟು ಮಾತ್ರಕ್ಕೂ ಯೋಗ್ಯವಲ್ಲವೆಂದು ನಿಮಗೆ ಸೂಚಿಸುತ್ತೇನೆ. ಪತ್ರವನ್ನು ಉದ್ದ ಬೆಳಸದೆ ಇಲ್ಲಿಗೆ ನಿಲ್ಲಿಸುತ್ತೇನೆ.

ನಿಮ್ಮ
ರಾಮರಾಯಮಲ್ಯ,
ರಾಷ್ಟ್ರೀಯ ವಿದ್ಯಾಮಂದಿರ ಉಡ್ಪಿ.

. ಅವ್ಯವಹಾರ್ಯವಾದ ಠರಾವುಗಳನ್ನು ಪಾಸುಮಾಡುವದು ಹಾಸ್ಯಾಸ್ಪದವೆಂದು ಮೇಲಿನ ಆಕ್ಷೇಪಕಾರರು ಪ್ರಾಂಜಲತನದಿಂದ ಒಪ್ಪುತ್ತಾರೆ. ಇದು ತುಂಬಾ ಸಂತೋಷದ ಮಾತು. ವಿದ್ಯಾರ್ಥಿಗಳು ಮತ್ತು ವಕೀಲರು ಇವರಲ್ಲಿ ಹೆಚ್ಚಿನವರು ಕೊಂಗ್ರೆಸಿನ ಠರಾವನ್ನು ಆಚರಣದಲ್ಲಿ ತರಲಿಲ್ಲವೆಂಬುದು ಎಲ್ಲ ದೇಶಕ್ಕೆ ತಿಳಿದ ವಿಷಯವು. ಕೊಂಗ್ರೆಸಿನ ಕಾರ್ಯಕ್ರಮವು ಮುಖ್ಯವಾಗಿ ಸ್ವರಾಜ್ಯ ಧ್ಯೇಯವನ್ನು ಸಂಪಾದಿಸಲು ಇರುವದು. ಆ ಧ್ಯೇಯವು, ನೇಕಡಾ ನಾಲ್ಕೈದು ವಿದ್ಯಾರ್ಥಿಗಳು ಮತ್ತು ವಕೀಲರು ಮಾಡುವ ಬಹಿಷ್ಕಾರದಿಂದ ಸಾಧ್ಯವಾಗುತ್ತಿದೆ ಮತ್ತು ಆದೀತೆಂದು ಯಾರಿಗೆ ಪ್ರಾಮಾಣಿಕತನದಿಂದ ತೋರುವದೊ ಅವರೊಡನೆ ವಿವಾದಿಸಿ ಫಲವಿಲ್ಲ. ಒಂದು ಕಾರ್ಯಕ್ರಮದ ಸಿದ್ಧತೆಗೆ ಕಡಿಮೆ ಪಕ್ಷದಲ್ಲಿ ಅರ್ಧಕ್ಕಿಂತ ಹೆಚ್ಚಿನವರಾದರೂ, ಅದನ್ನು ಆಚರಿಸುವವರಾಗಿರಬೇಕೆಂದು ಸಮಂಜಸರಾದವರೆಲ್ಲರು ಅಭಿಪ್ರಾಯಪಟ್ಟಾರು. ಹೆಚ್ಚಿನವರು ಆಚಾರದಲ್ಲಿ ತರಲಿಲ್ಲವೆಂಬುದಕ್ಕೆ ಅವರ "ಸ್ವಾರ್ಥಪರತೆ" ಮುಂತಾದ ಕಾರಣವಿರಬಹುದು. ಅಲ್ಲದೆ ಈ ಕಾರ್ಯಕ್ರಮದ ತತ್ವವು ಸಹ ಉದಾತ್ತವಾದ ಸತ್ಯದ ಮೇಲೆ ನಿಲ್ಲಿಸಲ್ಪಟ್ಟಿರಬಹುದು. ಈ ಎಲ್ಲ ಸಂಗತಿಗಳು ನಿಜ. ಆದರೆ ಪ್ರಶ್ನೆ ಏನೆಂದರೆ, ಅಂಥ ಅತ್ಯುತ್ತಮವಾದ ಬಹಿಷ್ಕಾರ ಸೂತ್ರವನ್ನು ನೇಕಡಾ ೩-೪ ಜನರು ಸಹ ಅನುವರ್ತಿಸದ ಮೇಲೆ ಅದಕ್ಕೆ ವ್ಯವಹಾರ್ಯವೆನ್ನಬಹುದೇ. ಅಪವಾದಕ್ಕೆ ಕೆಲವರು ಮಾತ್ರ ಆಚರಿಸಿ ತೋರಿಸುವದರಿಂದ ಅಥವಾ ಠರಾವು ಪಾಸಾಗುವ ಸಮಯದಲ್ಲಿ ಮಾತ್ರ ಬಹುಮತವನ್ನು ತೋರಿಸುವದರಿಂದ ಒಂದು ತತ್ವವು ವ್ಯವಹಾರ್ಯವಾಗುವದಿಲ್ಲ. ನೇಕಡಾ ೫೦ ಜನರಾದರೂ ಅನುವರ್ತಿಸುವದು ವ್ಯವಹಾರ್ಯವು. ಈ ದೃಷ್ಟಿಯಿಂದ ವಿಚಾರ ಮಾಡಿದ್ದಲ್ಲಿ ಕೊಂಗ್ರೆಸಿನ ಕಾರ್ಯಕ್ರಮವು ವ್ಯವಹಾರ್ಯವಲ್ಲವೆಂದೆ ಪುನಃ ಹೇಳಬೇಕಾಗುತ್ತದೆ. ಕೊಂಗ್ರೆಸು ಇಡಿ ಜನಾಂಗದ ಸಭೆಯಾದುದರಿಂದ ವಿದ್ಯಾರ್ಥಿಗಳು ಮತ್ತು ವಕೀಲರು, ಹೆಚ್ಚಿನವರು ಅದರ ಠರಾವನ್ನು ಆಚರಿಸದೆ ಇದ್ದರೂ ಬಾಧಕವಿಲ್ಲ, ಆ ದೃಷ್ಟಿಯಿಂದ ಆ ಠರಾವು ನಿಷ್ಫಲ್ಯವಾದರೂ ಬಾಧಕ ಎಲ್ಲಿಂದು ಆಕ್ಷೇಪಕರು ತಿಳಕೊಳ್ಳುತ್ತಾರೆಂದು ತೋರುತ್ತದೆ. ಆಯಾ ಕಾರ್ಯಕ್ರಮಕ್ಕೆ ಸಂಬಂಧಪಟ್ಟವರು "ಓ"ಗೊಡದ ಠರಾವನ್ನು ಪಾಸುಮಾಡಬೇಕೆಂದು ಹಟಹಿಡಿಯುವದಾದರೆ, ಅವರ ಕೈಯನ್ನು ಯಾರೂ ತಡಿಸುವರಿಲ್ಲವೆಂದು ಈಗ ಎರಡು ವರ್ಷಗಳ ಕಾರ್ಯಕ್ರಮದಿಂದ ಗೊತ್ತಾಗುತ್ತದೆ. ತಮ್ಮ ಸಂಪೂರ್ಣ ಜವಾಬ್ದಾರಿಯನ್ನು ಅರಿತ ವಿದ್ಯಾರ್ಥಿಗಳೇ ಬಹಿಷ್ಕಾರವನ್ನು ಕೈಕೊಳ್ಳಬೇಕೆಂದು ಹೇಳುವದರ ಅರ್ಥವೆ— ಹೇಳುವವರ ಅಶಕ್ತಿಯನ್ನು ತೋರಿಸುವುದು ಮತ್ತು ಆದ್ದರಿಂದಲೆ ಅಂಥಾ ಬಹಿಷ್ಕಾರವು ಅವ್ಯವಹಾರ್ಯವೆಂದು ಪರ್ಯಾಯದಿಂದ ತಿಳಿಯಪಡಿಸುವದಾಗಿದೆ. ಕೌನ್ಸಿಲುಗಳಿಗೆ ಹೋದವರಲ್ಲಿ ಕೆಲವರಿಗೆ "ಹುಚ್ಚರ ಆಸ್ಪತ್ರೆಯಲ್ಲಿಯುವವರ" ಉಪಮೆಯನ್ನು ಕೊಟ್ಟು ಪುನಃ ಮುಂದೆ "ದೇಶಭಕ್ತ"ರ ಪದವಿಯನ್ನು ಅರ್ಪಿಸುವುದು ಲೇಖನ ಪದ್ಧತಿಯ ಒಂದು ಚಮತ್ಕಾರವಾಗಿದ್ದರೂ ಅದರಿಂದ ಮುಂಚಿನ ಉಪಮೆಯು ನಿರರ್ಥಕವಾಗುವುದಿಲ್ಲ. ನೀವು ಅವರನ್ನು ಹುಚ್ಚರ ಆಸ್ಪತ್ರೆಯಲ್ಲಿರುವರೆಂದು ಬೇಕಿರಿ, ಅಥವಾ ದೇಶಭಕ್ತರೆಂದು ಬೇಕಾದರೆ ಕರೆಯಿರಿ, ಅಂಥವರ ಕೌನ್ಸಿಲಿನ ಮೇಲೆ ಕಾಯಿದೆಭಂಗದ ರೂಪದಿಂದ ಬಹಿಷ್ಕಾರವನ್ನು ಯಾಕೆ ಹಾಕಲಿಲ್ಲವೆಂಬ ಯಾವ ಮುಖ್ಯ ಪ್ರಶ್ನೆ ಇದೆಯೋ ಅದಕ್ಕೆ ಆಕ್ಷೇಪಕರು ಉತ್ತರವನ್ನು ಕೊಡಲಿಲ್ಲ. ಮತ್ತೆ ನಮಗೆ ಅವರಿಂದ ಅದರ ಉತ್ತರವೂ ಅಗತ್ಯವಿಲ್ಲ. ಮಹಾತ್ಮಾಜಿಯವರು ಬಾರದೋಲಿಯ ವಿಷಯದಲ್ಲಿ ಮತ್ತು ಡಿಲ್ಲಿಯ ಒಲ್ ಇಂಡಿಯಾ ಕೊಂಗ್ರೆಸ ಠರಾವಿನ ವಿಷಯದಲ್ಲಿ ಆಗಾಗ್ಗೆ ಕಾರಣಗಳನ್ನು ಕೊಡುತ್ತಾ ಇದ್ದರೆಂಬುದು ನಿಜ. ಪರಂತು ಅವುಗಳಿಂದ ದೇಶದ ಸಮಾಧಾನವಾಗಲಿಲ್ಲವೆಂಬುದು, ಸಿವಿಲ್ ಡಿಸ್ ಒಬ್ಬೀಡಿಯನ್ಸ ಕಮಿಟಿಯ ರಿಪೋರ್ಟಿನಿಂದಲೆ ಸ್ಪಷ್ಟವಾಗುವಾಗ ಈ ವಿಷಯದಲ್ಲಿ ಹೆಚ್ಚು ಬರೆಯಬೇಕಾದ ಅಗತ್ಯವಿಲ್ಲ. ಇರಲಿ ನಮ್ಮ ಈ ಬರವಣಿಗೆಯ ಮೇಲೂ ಅನೇಕ ಆಕ್ಷೇಪಗಳು ಪುನಃ ಆಕ್ಷೇಪಕರಿಗೂ ಇತರರಿಗೂ ಬರಬಹುದು, ಅವುಗಳಿಗೆ ಪುನಃ ಸಮಾಧಾನವನ್ನು ನಾವು ಕೊಡಬಹುದು. ಆದರೆ ಇದು ಪ್ರಾಮಾಣಿಕ ಮತಭೇದದ ವಿಷಯವಾದ್ದರಿಂದ ಈ ವಿಷಯದಲ್ಲಿ ತಿರುಗಿ ತಿರುಗಿ ಅವವೆ ಮಾತುಗಳನ್ನು ಪ್ರತಿಪಾದಿಸುತ್ತಾ ಕೊಡುವದರಲ್ಲಿ ಸ್ವಾರಸ್ಯವಿಲ್ಲದ್ದರಿಂದ ಪುನಃ ಇದಕ್ಕೆ ಪ್ರತಿಸಮಾಧಾನವನ್ನು ಮಾಡಲು ನಾವು ಅಪೇಕ್ಷಿಸುವದಿಲ್ಲವೆಂದು ಅವರಿಗೆ ನಮ್ಮ ವಿನಂತಿ.

ಸಂಪಾದಕ ಸ್ವದೇಶಾಭಿಮಾನಿ.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುವು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.
ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಶ್, ನೂತನ ಬಿಲ್ಡಿಂಗ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇದ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು
ಆಯುರಾರೋಗ್ಯವನ್ನು ಅಭಿವೃದ್ಧಿಪಡಿಸಿ ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ [illegible] ಉಚಿತವಾಗಿ ಕಳುಹಿಸುವೆವು.
ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ಜಾ. [illegible] ಮದ್ರಾಸ್.
Local Agents: Raphael & Co.
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ
ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ಇರಿಸಿ ನಾನಾ ವಿಧದ ಮೋಲ್ಡು ಸಿಗಿದು ತಯಾರಾಗುತ್ತಿರುವುದು. ಹಂಚಿನ ಕಾರಖಾನೆಗಳಲ್ಲಿ ಹಂಚು ಬಡಿಯಲಿಕ್ಕೆ ಬೇಕಾದ ಮರದ ಪೌಳಿಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕಾಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೆ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
Manager,
Sri Lakshmi Mills, KASARGOD, S. K.

The Canara Bank Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000-0-0
Reserve and other sinking Funds „ 181,250-0-0
ಅಧಿಕಾರಗೊಳಿಸಲ್ಪಟ್ಟ, ಪೂರ್ತಿಯಾಗಿ ಕೊಟ್ಟ ಮೂಲಧನವು ರೂ. 300,000-0-0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250-0-0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಸ್ವೀಕರಿಸಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,
ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ಮನೆಯಲ್ಲಿದ್ದರೆ ವೈದ್ಯರ ಸಹಾಯವನ್ನು [illegible]. ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದರದನ್ನು [illegible] ಆರೋಗ್ಯಶಾಲಿಗಳಾಗುವಿರಿ. [illegible] ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ [illegible] ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ತೆರಹ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, [illegible], ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಲಕ್ಷಾವಧಿ ಇನ್‌ಫ್ಲುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅತ್ಯುತ್ತಮವಾಗಿವೆ. ವ್ಯಾಯಾಮವನ್ನು ಮಾಡಲು ಅವಕಾಶವಿಲ್ಲದ ವ್ಯಾಪಾರಸ್ಥರಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಜಿಸ್ಟರಾದ ಈ ವ್ಯಾಪಾರದ ಗುರ್ತ ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ಹಿಡಿಯುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1-4-0, 12 ಸೀಸೆಗಳಿಗೆ 2-7-0, 25 ಸೀಸೆಗಳಿಗೆ 4-10-0. ಅಂಚೆ ವೆಚ್ಚ ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.
ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.
ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ಸರ ಲಪ್ಪಾ ಎಣ್ಣೆ.
[illegible] ಕ್ರಯ ಬಾಟ್ಲಿ 1ಕ್ಕೆ ರೂ. 1-4-0.
ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.
[illegible]
60 ಮಾತ್ರೆಗಳ ಸೀಸೆ 1ಕ್ಕೆ ರೂ. 1-4-0.
ಆರ್ ಮಾರ್ಟಿನ್ನರ ಗಿಟೋಡಯಿನ್.
[illegible]
ಬೆಲೆ ಸೀಸೆ 1ಕ್ಕೆ ರೂ. 3-0-0.
ವಿಳಾಸ—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ವೈಟ ಎಂಡ್ ಕೋ ಹತ್ತರ, ಫೋರ್ಟ, ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು
—ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.
ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭದರದ ಕ್ರಯಕ್ಕೆ ತಯಾರಿಸಿಕೊಡುತ್ತೇವೆ. [illegible]
ಪಟ್ಟಿಗಳ ವಿವರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.
ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.
☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ
ರಥಬೀದಿ ಮಂಗಳೂರು.
ಎಲ್ಲಾ ಬಗೆಯ ಜರ್ಮನ್ ಗ್ರಾಮೊಫೋನುಗಳು, [illegible] ಪ್ರಿಂಟಿಂಗ್ ಪೇಪರ್, ಬ್ರೌನ್ ಪೇಪರ್, [illegible] ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುವವು.

ಅಚ್ಚಿನಲ್ಲಿದೆ! ಅಚ್ಚಿನಲ್ಲಿದೆ!

ಎಂ. ಜಿ. ಐಗಳ್, ಇವರಿಂದ ರಚಿತವಾದ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಯಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1–8–0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲೆಸಿದ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟತಾಳಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತನಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವೇದವ್ಯಾಸೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬೂಬಕರ—ಅಲಿ—ಕಲೀಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚೆರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟಿದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾರ್ಸೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬುಡಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಶೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಚ್ಚಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾ ನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ರಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—ಬ್ರುಚೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಸಂಚ—ಸೂಳ್ಯ—ಬೆಳ್ಳಾರೆ—ಅಮರಸೂಳಗಳು—ಬೆಳ್ಳಾರೆ, ಪುತ್ತೂರು ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ-ಗುರುವಾಯನಕೆರೆ ಪಟ್ಟಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಟಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮಾರಿಗುಡಿ—ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪಾಂಡ್ಯನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಮಹಾಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಜ ನಿರ್ಮಾಣ—ಐಕಳನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿಮಂತೂರು—ಮೂಲಿಕೆ—ವಳಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಿಸ್ಸಲ—ಸೋಮನಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾರ್ಸೆಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ದಿನ್ನಾಣರು—ಪಣಿಲ ಕೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮೆ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಟ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟುಪಾಡಿ ಸಿದಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಅಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ವಮಹೆಗಡೆ 1.

ವಿಳಾಸ:— ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶಿ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನು ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇವರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವು ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಬುಟ್ಟಾ ಸಹ, ಇವರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಪತ್ರದ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರು, ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಬಹಳ ಕಡಿಮೆಮಾಡಿ ಇರುತ್ತದೆ. ೨—೮—೦ ಟಪ್ಪಾಲು ಖರ್ಚು ೦—೪—೦ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ, ನಾಟಕ ಶಾಸ್ತ್ರ, ಕಥೆಗಳು, ಯುಕ್ತ ಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು !! ಬೇಗನೇ ತರಿಸಿಕೊಳ್ಳಿರಿ !!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಅದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೇ ಶೋಧನಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗುಪ್ತರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು, ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರ್ಣರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಪಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ

ಶ್ರೀನಿವಾಸ ರಂಗಪ್ಪೈ
ರಥಬೀದಿ, ಮಂಗಳೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆಗಲಿ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜನಿಗೂ ಇರತಕ್ಕದ್ದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಆಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುಕ್ತಿಪತ ಸರ	0—12—0	ಸಂಪರಾಮಾಯಣ ಹೊಸ ಮುದ್ರಣ	5—0—0
ಸಂತಾನಕ-ಕಾದಂಬರಿ	0—6—0	ಸಂಪರಾಮಾಯಣದ ಕಥೆ ಸಹಿತ	0—12—0
ಚಂದ್ರಮುಖಿ ,,	0—3—0	S. S. L. C. Kannada Texts	
ರಾಜಪುತ್ರರಮಣಿಯರು	0—8—0	ಚಿಂದಾಸಿ	0—5—0
ಕೆಲವು ಸಣ್ಣ ಕಥೆಗಳು	1—0—0	ಸುಚಿರೆ	0—6—0
ರಾಜಯೋಗಿ	1—0—0	ಅದಯಿಯ ಮಡುಗ	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered: No. M. 498.

6/11/22

SWADESHABHIMANI. MANGALORE.

ಸ್ವದೇಶಾಭಿಮಾನಿ.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ ,, 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ!

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ತಾ- । ಗದ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೬. ಮಂಗಳೂರು, ತಾರೀಕು ೩ನೇ ಶುಕ್ರವಾರ ನವಂಬರ ೧೯೨೨. ಸಂಚಿಕೆ ೪೩.

ದಿ ಕೆನರಾ ಬ್ಯಾಕಿಂಗ್ ಕೊರ್ಪೊರೇಶನ್

-ಉಡುಪಿ ಲಿಮಿಟೆಡ್.-

ಅಧಿಕಾರಿಗೊಳಿಸಲ್ಪಟ್ಟ ಮೂಲಧನ	ರೂ.	3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ		2,00,000—0—0
ಚಂದಾ ಹಾಕಿ ಎತ್ತಿದ ಮೂಲಧನ		1,00,000—0—0
ಮೌಲ್ಯ ತೆತ್ತ ಮೂಲಧನ		90,365—7—11
ಠೇವಣಾತಿಗಳು		3,33,300—0—0
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ ೬ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ		4,54,322—11—0

ಕಳೆದ 2 ವರುಷಗಳಲ್ಲಿ ಪಾಲುದಾರರಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್‌ಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಕರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ನಿರಖು ಠೇವಣಾತಿಗಳನ್ನೂ, 15 ದಿನಗಳ ನೋಟೀಸು ಮೂಲಕ ಶೇಕಡಾ 6½ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾದಿ ಠೇವಣಾತಿಗಳನ್ನೂ, ಬೇಕೆಂದಾಗ್ಗೆ ವಾಪಾ[illegible] ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ನಡೆಯುವ ಚಾಲ್ತಿ ಠೇವಣಾತಿಗಳನ್ನೂ, [illegible] 4½ ಬಡ್ಡಿ ಪಡೆಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ, ಶಿ[illegible]ಗಟ್ಟಿಯಿಂದ ತೆರುವ ಕಂತು ಠೇವಣಾತಿಗಳನ್ನೂ, ಡಿಪೋಜಿಟಾಗಿ ಪಡೆಯುವದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದಲ್ಲಿ ತಿಳಿಯುವದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ಎಲುಬುಗೊಬ್ಬರದಲ್ಲಿ ಇದ್ದಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರೆತಿರುವದು. ಎಕ್ರೆಗೆ 100—200 ರಾತ್ತಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪತ್ರಿಕೆಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಳ್ವರಾಚು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತವಿವೇಕ	ಕ್ರಯ	೦—೧೦—೦
ಕೇಶಭಂಗ	,,	೦—೧೨—೦
ಸಂಕ್ಷೇಪಗೀತೆ	,,	೦—೧೦—೦

ಅಣ್ಣೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತೋಲ್ಲಾಸ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ವಾಸ್ತವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ [illegible], ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅನಕಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಶುವನಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೩—೦ ಸ್ಥಳೀಕರಿಗೆ ರೂ ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ಗದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಡೈರಿಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಬು, ಫ್ಲೂಟ್ ರೂಲುಗಳು, ಇತರ [illegible] ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಳಂದಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋಂಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪತಿಕ್, ಹೋಮಿಯೋಪೆತಿಕ್ ಮತ್ತು ಚಿಕ್ಕ ಔಷಧಿಗಳು—ರೋಗಿಗಳಿಗೂ, ಬಾಲಕರಿಗೂ ಬೇಕಾಗುವ ಪ್ರಾಚ್ಯ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ರೀತಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

—ಅಮೃತಾಂಜನ—

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಕಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 6—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್ಸ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ರತಾಪಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇವಕ್ಕೆ ಪ್ರತಿಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಶಿಫಾರಸು ಪತ್ರಗಳು ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ 'ಪ್ರತಾಪಕಷಾಯ' ಎಲ್ಲಾ ವಿಧದ [illegible] ಗುಣಪಡಿಸುತ್ತದೆ. [illegible]

ಕ್ರಯ ರೂ. 4—[illegible] [illegible]

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ತಿಫೀಟಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೆನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೆನ್ ಇವರ ಖುದ್ದು ನಿಗಾವಣಿಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಬಿಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬಿಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ 25 ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬಗೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ⅛ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿಶ್ಶಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ¼ಗ್ರೈನಿನಿಂದ ½ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೆನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಚನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ 2ರೂ. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಓರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,
Hampankatta, MANGALORE S' K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರ್ಮ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ ಎಂಡ ಎಮ್ಯುನಿಶನ್ ಮಾರ್ಟ,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ವಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಹಿತ್ತಾಳೆಯ 32 ಸಾಮಾನುಗಳ ಸಣ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 5—0—0 ಪೋಸು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಮಡಿ, ಜರಿ, ಸಾದಾ, ಸೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಫಟಿಕಮಣಿ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು. ಕ್ಯಾಟಲಾಗ್ ಇನಾಂ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೂಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಾಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ. 1—4—0.

ಹುಳದ ಪೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿಕ್ ಡಿಸ್ಪೆನ್ಸರಿ,
ಹಂಪನಕಟ್ಟೆ, ಮಂಗಳೂರು.



ಆರೋಗ್ಯದ ಬೆಳ್ಳಿ ಕಟ್ಟೆಯು

ಸಪ್ಪ ಕೈಕಾವನ್ನು ಆಹಾರದಿಂದ ಕಪ್ಪಾಗಿ ಶೋಷಿಸಿದ ಕಿರಾಣಿ ಇರುವವು. ಬಲಹೀನರು ಮತ್ತು ಕೈಹಶೀಣರಾದವರು ಕಷ್ಟ ಅಸಟಿನ ಆಹಾರದಿಂದ ಏನೇನು ಫಲ ಹೊಂದಲಿಲ್ಲಾದರೆ.

'ಕೆಪ್ಲರ್'
(ಟ್ರೇಡ್ ಮಾರ್ಕ)

'KEPLER' Cod Liver Oil with Malt Extract
(Trade Mark)

ಕಾಡ್ ಲಿವರ್ ಆಯಿಲ್ ವಿತ್ ಮಾಲ್ಟ ಎಕ್ಸ್‌ಟ್ರಾಕ್ಟನ್ನು ಉಪಯೋಗಿಸಿದರೆ ಅಧಿಕ ಪ್ರಯೋಜನ ಹೊಂದುವರು.

ಅನೇಕ ಸಾಮಗ್ರಿಗಳಿಂದ ಅಡಗಿಸಿದ ಈ ಆಹಾರವು ಬಲವಾದ ಎಲುಬುಗಳನ್ನುಂಟುಮಾಡುವದು, ಅವುಗಳನ್ನು ಆರೋಗ್ಯವಾದ ಮಾಂಸದಿಂದ ಹೊದಿಗಿಸುತ್ತದೆ. ಬೆಳೆಯುವ ಮಕ್ಕಳಿಗೆ ಇದಕ್ಕೆ ಹೋಲಿಕೆ ಮತ್ತು ಯಾವದಿಲ್ಲ. ಇದು ವ್ಯಾಧಿಸ್ಥರಿಗೆ ರಿಕೆಗೆ ಬಹಳ ಅನುಕೂಲವಾದದ್ದು ಮತ್ತು ವಾರ್ಧಕ್ಯರಿಗೂ ಬಲಹೀನರಿಗೂ ಶಕ್ತಿಯನ್ನು ಸತ್ವರಸವನ್ನು ಕೊಡುವದು. ಕಾಯಿಗದ ಕಷ್ಟ ಹಾಲಿನ ಸ್ಥಾನವನ್ನು ಮತ್ತು ಪರಿಮಾಣವನ್ನು ಇದರ ಉಪಯೋಗದಿಂದ ಹೆಚ್ಚಿಸುವರು.

ಇದು ಎರಡು ಅಳತೆ ಬಾಟ್ಲಿಗಳಲ್ಲಿ ಕೆಮಿಸ್ಟರಲ್ಲಿಯೂ ಮತ್ತು ಔಷಧ ಅಂಗಡಿಗಳಲ್ಲಿಯೂ ಸಿಕ್ಕುವದು.

ಬರ್ರೋಸ್ ವೆಲ್‌ಕಂ ಅಂಡ್ ಕೋ
ಲಂಡನ್ ಅಂಡ್ ಬಂಬಾಯಿ.

Burroughs Wellcome & Co., London and Bombay

All Rights Reserved

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯ ಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ದೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವಶೀ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!!
ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಬೇಕೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯುವದು.

ಸೋಲ್ ಏಜಂಟ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ಣಾಟಕ ಪ್ರಕಟನಾಲಯ, ಬಸವನಗುಡಿ ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠದೀಕ್ಷಿತರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿನ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ಯಾವಂತರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" "ದೇವರಲ್ಲಿ" ಎಂಬ ಆಂಗ್ಲ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ವಟ್ಟಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

NOTICE.

AUCTION SALE OF A HORSE

IN THE COURT OF THE SUBORDINATE JUDGE OF S. K.
ORIGINAL SUIT NO. 40 of 1921.
(BADILA FAMILY SUIT)

A horse belonging to the estate in the above suit will be sold by public auction in the Sub Court of South Kanara on Monday, the 13th of November 1922 at 11-30 A. M. The sale will be confirmed in the name of the highest bidder who will have to pay the whole of the purchase money on the spot.

The animal may be inspected by arrangement with the under signed.

MANGALORE, 28—10—1922 } (Sd). P. P. MENON.
Vakil & Receiver.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{399}{22}$

1. ಕೊಡಂಗೆ ಶ್ರೀನಿವಾಸ ನ್ಯಾಕ
2. ಕಲ್ಯಾ ಉಪೇಂದ್ರ ಶ್ಯಾನುಭಾಗ
3. ಕೊರಗ ಶ್ಯಾನುಭಾಗ
4. ನರಸಪ್ಪ ಕಮ್ತಿ

} ವಾದಿರು.

ಮತ್ತು

1. ಅದಾಂ ಸೋಜಾ
2. ಲುಕಸ್ ಮೊಂತೇರಾ

} ಪ್ರತಿವಾದಿರು.

ಮೇಲೆ ಕಾಣಿಸಿದ ವಾದಿರು ಮಂಗಳೂರು ತಾಲೂಕು ಪದವು ಗ್ರಾಮದ ಸರ್ವೆ ನಂಬ್ರ 59-3Aನೇ ಪ್ರತಿವಾದಿರ ಬಾಬ್ತು ವಳ ಮೂಲಗೇಣಿ ಸ್ಥಳದ ನಡುವಿನಿಂದ ಹೋಗುವ ವಹಿವಾಟು ದಾರಿಯ ಆತಂಕದ ಬಾಬಿನಲ್ಲಿ ಪ್ರತಿವಾದಿರ ಮೇಲೆ ದಾಖಲುಮಾಡಿದ ವ್ಯಾಜ್ಯವನ್ನು, ತಮ್ಮ ವ ಪದವು ಗ್ರಾಮದ ಕಲ್ಯಾ ನಾಂತೂರು, ಕೊಡಂಗೆ, ಗುಂಡಿಗೆ, ಕುಂಟಲ್ಪಾಡಿ, ಕೊಟ್ಟಾರು, ಬಾಂದೊಟ್ಟು, ಮಗ್ರುಕೋಡಿ, ಬನದಳಿ ಎಂಬಲ್ಲಿರುವ ಸಮಸ್ತ ವಾಸಿಕರ ಬಗ್ಗೆ ಮುಂದರಿಸುವರೆ ಹುಕುಂ ಕೊಡಬೇಕಾಗಿ ಅರ್ಜಿ ಹಾಕಿ ಅದೇ ಮೇರೆಗೆ ವಾದಿರಿಗೆ ಕೋರ್ಟಿನವರಿಂದ ತಾ. 17-10-1922ರಲ್ಲು ಹುಕುಂ ಕೊಡೋಣವಾಗಿಯದೆ. ಈ ವಿಷಯದಲ್ಲಿ ಆಕ್ಷೇಪಗಳು ಇದ್ದರೆ ವ್ಯಾಜ್ಯದ ತನಿಖಾ ತಾರೀಕಾದ 18-11-1922ನೇ ದಿವಸ ಕೋರ್ಟಿನವರಿಗೆ ವ್ಯಾಪೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 23-10-1922 } ಕುಂಬ್ಳಾಜೆ ರಾಮಮೋಹನರಾವ್,
ವಾದಿ ಪರ ವಕೀಲ್.

ಸುಸಂದರ್ಭ ತ್ವರೆ

ದರ ಸುಲಭ! ಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಸೀರೆಗಳನ್ನು ನಾವು ತಯಾರಿಸುವುದಲ್ಲದೆ, ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ., ಬಿ. ಎಲ್.

ಕೊಂಕಣಿ ಭಾಷೆಯಲ್ಲಿ ಸಂಗೀತ

ಪ್ರಹ್ಲಾದ ಚರಿತ್ರ ನಾಟಕ.

ಬೆಲೆ: 0—8—0 ಪೋಸ್ಟ್ ಖರ್ಚು 0—1—0.

ಚಂದ್ರಹಾಸ ನಾಟಕ.

ತಿದ್ದಿದ ಮೂರನೇ ಮುದ್ರಣ ಬೆಲೆ: 0—4—6. ಪೊ. ಖ. 0-1-0

ಒಂದೊಂದು ಪುಸ್ತಕ ಬೇಕಾದವರು ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ:—ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದ. ಕನ್ನಡ.

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ, ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ತಲು 1ರ ರೂ. 2—12—0.
ಸ್ಪೆಶ್ಯಲ್ ರಾತ್ತಲು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸೆಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರೀಸ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ್ ಡಿಪೋಜಿಟರಿ,
ಮಂಗಳೂರು.

ಶಾಲಿವಾಹನಶಕೆ ೧೮೪೪ನೆಯ ದುಂ[illegible]
ಶು| ೧೫ ಶನಿವಾರದಿಂದ ದುಂದುಭಿ[illegible]
ಶುಕ್ರವಾರದ ವರೆಗಿನ ಪಂ[illegible]
(೧೯೨೨ನೆಯ ತುಲಾ ಬೊಂ[illegible]

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ		
4	ಶನಿ.	⊙	೪೬.೪೪	ಅಶ್ವಿನಿ	೨೦.೦	೧೮	6.27	
5	ರವಿ	೧	೪೯.೪೦	ಭರಣಿ	೨೫.೦	೧೯	6.27	
6	ಸೋಮ	೨	೫೧.೪೫	ಕೃತ್ತಿಕಾ	೨೯.೧	೨೦	6.28	6.
7	ಕುಜ	೩	೫೩.೩೨	ರೋಹಿಣಿ	೩೧.೪೬	೨೦	6.28	6.
8	ಬುಧ	೪	೫೩.೧೬	ಮೃಗಶಿರಾ	೩೩.೧೬	೨೨	6.28	6.
9	ಗುರು	೫	೫೦.೩೦	ಆರ್ದ್ರಾ	೩೩.೩೧	೨೩	6.29	6.
10	ಶುಕ್ರ	೬	೪೭.೩೪	ಪುನರ್ವಸು	೩೨.೩೪	೨೪	6.29	6.

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ಒಕ್ಟೋಬರ್)

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಿಮೆ	ದಿನದ ಮಳೆ	ಒಟ್ಟು ಮಳೆ.
26	86—6	74—0	—	—
27	90—2	75—1	—	—
28	90—2	74—6	0—31	—
29	89—3	75—4	0—18	—
30	89—0	75—8	0—04	—
31	86—3	75—3	0—70	—
1	88—2	75—5	0—02	135.75

ಮಂಗಳೂರಿನ ಪೇಟೆ ಧಾರಣೆ

ಜೀನಸು		ಇಂದ	ವರೆಗೆ
		ರೂ. ಅ.	ರೂ. ಅ.
ಮಸೂರಿ ಅಕ್ಕಿಮುಡಿ ೧ಕ್ಕೆ	...	8— 4	8—12
ಸುಗ್ಗಿಗೆ	...	7—10	7—12
ಗುಡ್ಡು,	...	7—10	8— 0
ಹೊಸ ರಾಶಿ		7— 4	7— 9
ಅವ್ವಲ್ ಬೆಳ್ತಿಗೆ „	...	9— 0	9—12
ಗುಡ್ಡು ಬೆಳ್ತಿಗೆ „	...	7—10	8— 4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	12— 0	12— 8
ಗೋಧಿ ಗೋಣಿ ೧ಕ್ಕೆ	...	17— 0	21— 0
ಹುರುಳಿ ಗೋಣಿ ೧ಕ್ಕೆ	...	12— 8	12—12
ಕಡಲೆ ಗೋಣಿ ೧ಕ್ಕೆ	...	13— 0	16— 0
ತೊಗರಿ ಗೋಣಿ ೧ಕ್ಕೆ	...	14— 0	14—8
ತೊಗರಿಬೇಳೆ ಗೋಣಿ ೧ಕ್ಕೆ	...	16— 0	20— 0
ಉದ್ದು ಗೋಣಿ ೧ಕ್ಕೆ	...	17— 0	17— 4
ಹೆಸರು ಗೋಣಿ ೧ಕ್ಕೆ	...	13— 0	—
ಊರು ಬೆಲ್ಲ ಖಂಡಿ ೧ಕ್ಕೆ	...	45— 0	47— 8
ಉಪ್ಪು ಗೋಣಿ ೧ಕ್ಕೆ	...	4—12	5— 0
ಕೊಬ್ರಿ ಖಂಡಿ ೧ಕ್ಕೆ	...	85— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	50— 0	50— 8
ಎಳ್ಳಿಂಡಿ ಖಂಡಿ ೧ಕ್ಕೆ	...	45— 0	50— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7— 6	8— 2
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 8	9— 0
ಹರಳೆಣ್ಣೆ ಬೆಟ್ಟಿಗೆ ೧ಕ್ಕೆ	...	9— 0	—
ಮಾರಿಷ ಸಕ್ಕರೆ ಮುಡಿ ೧ಕ್ಕೆ	...	6— 0	6— 0
ಊರ ಮುಡಿಸಿದ ಬಾಯಿ ಮುಡಿ ೧ಕ್ಕೆ	...	8— 0	8— 4
ಸಾಸಿವೆ ಮುಡಿ ೧ಕ್ಕೆ	...	9— 0	9— 8
ಕೊತ್ತಂಬರಿ ಮುಡಿ ೧ಕ್ಕೆ	...	5— 0	5— 4
ಕಾಫಿ ಖಂಡಿ ೧ಕ್ಕೆ	...	330— 0	335— 0
ಮೆಣಸು ಅಡಕೆ ಖಂಡಿ ೧ಕ್ಕೆ ಹಳ್ಳು	...	175— 0	180— 0
[illegible] New, ಹೊಸ್ತು	...	120— 0	125— 0
[illegible] ಖಂಡಿ ೧ಕ್ಕೆ	...	120— 0	125— 0
[illegible] ಮುಡಿ ೧ಕ್ಕೆ	...	26— 0	28— 0
[illegible] ಮುಡಿ ೧ಕ್ಕೆ	...	2— 2	2— 4
[illegible] ಖಂಡಿ ೧ಕ್ಕೆ	...	55— 0	65— 0
[illegible] ೧ಕ್ಕೆ	...	23— 0	24— 0
[illegible] ಮುಡಿ ೧ಕ್ಕೆ	...	38— 0	—
[illegible] ೧ಕ್ಕೆ	...	24— 0	—
[illegible] 1ಕ್ಕೆ	...	21— 0	—

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ 122/1922.

ಕೆ. ಯಲ್ ವ್ಯಾಸರಾಯ ಶಾಸ್ತ್ರೀ, ಕೊಳುವ್ಯಾಲ್
ಲಕ್ಷ್ಮೀನಾರ್ಣಪ್ಪಯ್ಯನವರ ಮಗ, ಮಂಗಳೂರು } ಅರ್ಜಿದಾರ.
ಗವರ್ನಮೆಂಟ ಕೊಲೇಜಿನ ಸಂಸ್ಕೃತ ಉಪಾಧ್ಯಾಯ

ಮಂಗಳೂರು ತಾಲೂಕು ಶಿವಳ್ಳಿ ಮತಸ್ಥಾಪನೆಯ ಕಮಿಟಿ ಮೆಂಬರರಾಗಿದ್ದ ಉದ್ಯಾವರ ವೆಂಕಟ ವರಹಾಚಾರ್ಯರು ರಾಜಿನಾಮೆ ಕೊಟ್ಟಿರುವುದರಿಂದ ಆ ಮೆಂಬರಿಕೆಯು ನನಗಾಗಬೇಕೆಂದು ಉಮೇದ್ವಾರನಾಗಿ ನಿಂತು ನಾನು ಮಾಡಿಕೊಂಡಿರುವ ಅರ್ಜಿಯು ಇದೇ ತಿಂಗಳ ತಾ. 20ಕ್ಕೆ ತನಖಿಗೆ ಇಟ್ಟಿರುವುದರಿಂದ ಸದರಿ ಮೆಂಬರಿಕೆಯು ನನಗಾಗುವ ವಿಷಯದಲ್ಲಿ ಆಕ್ಷೇಪ ಯಾ ಅನಾಕ್ಷೇಪ ಇದ್ದವರು ತಿಳಿಸಬಹುದು.

ಮಂಗಳೂರು,
2-11-'22. } K. L. Vyasaraya Shastry.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. No. 129/1922.

ಕೆ. ರಾಮರಾವ್ ಕೆ. ನಾರ್ಣಪ್ಪಯ್ಯನ
ಮಗ ಮೂಡುಶೆಡ್ಡೆ ಗ್ರಾಮಸ್ಥ. } ಅರ್ಜಿದಾರ.

ಮಂಗಳೂರು ತಾಲೂಕು ಶಿವಳ್ಳಿ ಮತ ಸ್ಥಾಪನೆಯ ಕಮಿಟಿ ಮೆಂಬರರ ಪೈಕಿ ಉಡುಪಿ ಉದ್ಯಾವರ ವೆಂಕಟ ವರಹಾಚಾರ್ಯರು ತನ್ನ ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವುದರಿಂದ ಆ ಉದ್ಯೋಗ ಯಾನೆ ಮೆಂಬರಿಕೆಯು ಅರ್ಜಿದಾರಗೆ ಆಗಬೇಕೆಂತ ಸದರಿ ಅರ್ಜಿದಾರನು ಕೊಟ್ಟ ಅರ್ಜಿ ತನಖಿಯು ಇದೇ ಬರುವ ತಾ. 20—11—'22ಕ್ಕೆ ತನಖಿಗೆ ಇಟ್ಟಿರುತ್ತದೆ.

J. H. A. MASCARENCHAS,
B. A. L. L. B.
Pleader for petitioner,

ಪ್ರಕಟಣೆ.

ತಾ. ೨-೧೦-'೨೨ನೇ ಗಾಂಧಿ ಜನ್ಮದಿನೋತ್ಸವದಲ್ಲಿ ಉಡ್ಪಿಯಲ್ಲಿ ತಾಲೂಕು ಮಹಾಜನರ ನೂಲುವ ಪಂದ್ಯಾಟವಿತ್ತು. ಪಂದ್ಯಾಟಕ್ಕೆ ಒಟ್ಟು ೧೨ ಜನರು ಕೂತಿದ್ದರು. ಸದರಿ ಪಂದ್ಯಾಟದಲ್ಲಿ ಒಂದನೇ ಬಹುಮಾನವಾದ ಚಿನ್ನದ ಪದಕವು ಹಿರಿಯಡ್ಕ ರಾಷ್ಟ್ರೀಯ ಶಾಲೆಯ ಮಂಜುನಾಥನಿಗೂ ಮತ್ತು ೨ನೇ ಬಹುಮಾನವಾದ ಬೆಳ್ಳಿ ಪದಕವು ಉಡ್ಪಿ ರಾಷ್ಟ್ರೀಯ ವಿದ್ಯಾಮಂದಿರದ ತೇಜ ಎಂಬವನಿಗೂ ಸಿಕ್ಕಿದೆ.

ಕರ್ನಾಟಕದ ಸುಪ್ರಸಿದ್ಧ ಮುಖಂಡರಾದ ಶ್ರೀಯುತ ಗಂಗಾಧರರಾವ್ ದೇಶಪಾಂಡೆ ಅಥವಾ ಶ್ರೀಯುತ ದತ್ತೋಪಂತ ಮಜಲಿಯವರನ್ನು ಅಧ್ಯಕ್ಷರಾಗಿ ಕರೆಯಿಸಿ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಥಮ ಪರಿಷತ್ತು ದಸಂಬರ ತಿಂಗಳ ಪ್ರಥಮ ವಾರದಲ್ಲಿ ಉಡ್ಪಿಯಲ್ಲಿ ಜರಗಿಸಬೇಕಾಗಿ ನಿಶ್ಚಯಿಸಿತ್ತಷ್ಟೆ! ಆದರೆ ಸದರಿಯವರಿಬ್ಬರಿಗೂ ಜನವರಿ ತಿಂಗಳ ಮಧ್ಯಕ್ಕಿಂತ ಮುಂಚೆ ಇತ್ತಕಡೆ ಬರುವರೆ ಅಸಾಧ್ಯವೆಂದು ಅವರು ತಂತಿಯಿಂದ ಸೂಚಿಸಿರುವ ಕಾರಣ ಇದನ್ನು ಮುಂದರಿಸಲಾಗಿದೆ. ಅಷ್ಟರ ವರೆಗೆ ಜಿಲ್ಲೆಯ ಯಾವತ್ತು ಭಾಗದಲ್ಲಿ ಚೆನ್ನಾಗಿ ರಾಷ್ಟ್ರಜಾಗ್ರತಿಯ ಕೆಲಸದಿಂದ ಮುಂದಿನ ತಯಾರಿಮಾಡಬೇಕಾಗಿ ವಿನಂತಿ. ಪರಿಷತ್ತಿನ ವಿಷಯ ಹಿಂದಿನಿಂದ ಸೂಚಿಸಲ್ಪಡುವುದು.

ಉಡುಪಿ ತಾಲೂಕು ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳೂ, ಉಡ್ಪಿ ರಾಷ್ಟ್ರೀಯ ವಿದ್ಯಾಮಂದಿರದ ಅಧ್ಯಾಪಕರೂ ಆಗಿದ್ದ ಶ್ರೀಯುತ ತೋನ್ಸೆ ಗೋವಿಂದ ಪೈಯವರು ಸನ್ನಿಪಾತಜ್ವರದಿಂದ ಇದೇ ತಾ. ೨೪-೧೦-'೨೨ನೇ ಬೆಳಿಗ್ಗೆ ದೈವಾಧೀನರಾದರೆಂಬುದನ್ನು ತಿಳಿಸುವರೆ ಅತಿ ವ್ಯಸನಪಡುತ್ತೇವೆ. ಇವರ ಅಕಾಲಮರಣದಿಂದ ರಾಷ್ಟ್ರೀಯ ಕೆಲಸಕ್ಕೆ ಉಂಟಾದ ಹಾನಿಯನ್ನು ಒಂದೇ ಮಾತಿನಿಂದ ವಿವರಿಸಲು ಸಾಧ್ಯವಿಲ್ಲ. ಪೇಟೆಯ ಹಲವು ಪ್ರಮುಖ ಗೃಹಸ್ಥರೂ ವಿದ್ಯಾಮಂದಿರದ ಉಪಾಧ್ಯಾಯರೂ ಸೇರಿ ದೇವರ ಭಜನೆಯಿಂದ ಇವರ ದೇಹವನ್ನು ಸ್ಮಶಾನಕ್ಕೆ ಕೊಂಡುಹೋಗಿ ಅಲ್ಲಿ ದಹನಸಂಸ್ಕಾರವಾಯಿತು.

ಉಡ್ಪಿಯಲ್ಲಿ ಕಳೆದ ತಾ. ೧೮-೧೦-'೨೨ನೇ ಗಾಂಧಿ ದಿನ ನಿಮಿತ್ತ ಸ್ವಯಂಸೇವಕರು ಖಾದಿ ಮಾರಲಿಕ್ಕಾಗಿಯೂ, ರಾಷ್ಟ್ರೀಯ ವಿದ್ಯಾಮಂದಿರಕ್ಕೆ ತಿಲಕ ಸ್ವರಾಜ್ಯನಿಧಿಯನ್ನು ಕೂಡಿಸಲಿಕ್ಕೂ ತಿರುಗಾಡಿದರು. ಸುಮಾರು ರೂ. ೭೫) ರಾಷ್ಟ್ರೀಯ ವಿದ್ಯಾಮಂದಿರದ ಸಹಾಯಾರ್ಥವಾಗಿ ವಸೂಲಾಗಿದೆ. ಮತ್ತು ಸುಮಾರು ೨೦೦ ಮೌಲ್ಯದ ಖಾದಿಯು ಮಾರಾಟವಾಗಿದೆ. ನಮ್ಮೂರಿನ ಬಾಂಧವರಿಂದ ಬರುವ ತಿಂಗಳಲ್ಲಿ ಈ ರಾಷ್ಟ್ರೀಯ ಕೆಲಸಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಲೆಂದು ಪ್ರಾರ್ಥಿಸುವೆವು.

ಇತಿ,
ಓ. ರಾಮರಾಯ ಮಲ್ಯ.
ಉಡುಪಿ ತಾಲೂಕು ಕೊಂಗ್ರೆಸು ಕಮಿಟಿಯ ಕಾರ್ಯದರ್ಶಿ.

ಆರ್ಯರ ವರ್ಣಾಶ್ರಮಧರ್ಮ.

ಮಾ। ರಾ। ರಾ। U. K. N.ರವರು ಸ್ವದೇಶಾಭಿಮಾನಿಪತ್ರದ ಕಳೆದ ಅಗೋಸ್ತು ತಿಂಗಳ ತಾ. ೨೫ನೇ ಲಾಗಾಯಿತು ಇದೇ ತಿಂಗಳ ತಾ. ೧೩ನೆಯ ವರೆಗಿನ ಸಂಚಿಕೆಗಳಲ್ಲಿ ಬಹಳ ಶ್ರಮಪಟ್ಟು ಆರ್ಯರ ವರ್ಣಾಶ್ರಮ ಧರ್ಮವನ್ನು ಕಾಪಾಡುವುದರಿಂದಲೇ ಆರ್ಯರ ಐಹಿಕ, ಆಮುಷ್ಮಿಕ ಐಶ್ವರ್ಯದ ಉದಯವೂ, ಅಭಿವೃದ್ಧಿಯೂ ಅಸ್ತಿತ್ವವೂ ಉಂಟಾಗುವುದೆಂದೂ ಪ್ರಾಚೀನ ಆರ್ಯರು ಈ ವರ್ಣಾಶ್ರಮ ಧರ್ಮದಿಂದ ಉನ್ನತ ರೀತಿಯಿಂದ ಮೆರೆಯುತ್ತಿದ್ದರು ಎಂದು ಶಾಸ್ತ್ರ ಆಧಾರಗಳಿಂದ ವಾಚಕರಿಗೆ ತೋರ್ಪಡಿಸಿದ್ದನ್ನು ನಾನು ಸಹಾ ಕಂಡು ಬಹಳ ಆನಂದಪಡಬೇಕಾಯಿತು. ಹಿಂದುಸ್ಥಾನದ ಪ್ರಾಚೀನ ಆರ್ಯರು ಆತ್ಮೋನ್ನತಿಯನ್ನು ಸಾಧಿಸಿಕೊಳ್ಳುವದಕ್ಕಾಗಿ ಸಮಾಜದಲ್ಲಿ ಆವಶ್ಯಕವಾದ ಶಾಂತಿ ಸಮಾಧಾನ ನೆರೆಗೊಳ್ಳುವದಕ್ಕಾಗಿ ಆ ಸಮಾಜಕಟ್ಟುಕಟ್ಟಳೆಗಳನ್ನು ಉಂಟುಮಾಡಿದರು. ಮತ್ತು ಆ ವರ್ಣಭೇದ ಅವರವರ ಕರ್ಮದ ವಿಭಜನೆ ಪದ್ಧತಿಯಲ್ಲಿ (Division of labour) ಹೊಂದಿಕೊಂಡಿದೆ ಎಂದು ಸದರಿ ಮಹಾಶಯರು ಬರೆದದ್ದು ಸೂಕ್ಷ್ಮವಿಚಾರಿಗಳು ಎಲ್ಲರೂ ಒಪ್ಪತಕ್ಕದ್ದೆಂಬುದು ನಿಸ್ಸಂದೇಹ. ಆದ್ದರಿಂದ ಬ್ರಾಹ್ಮಣರು ಆಕಾಯ ಸರ್ವವ್ಯಾಪಕನಾದ ಪರಮೇಶ್ವರನ ಮುಖದಿಂದ ಬಂದವರು ಅಲ್ಲ. ಅವರವರ ಗುಣಕರ್ಮಗಳಿಂದ ಬ್ರಾಹ್ಮಣರಾಗುವರು ಎಂದು ಸ್ಪಷ್ಟವಾಗುತ್ತದೆ.

"ಬ್ರಾಹ್ಮಣೋಽಸ್ಯ ಮುಖಮಾಸೀತ್ ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥"

ಎಂಬ ಋಗ್ವೇದ ಮಂತ್ರದಲ್ಲಿ ಮನುಷ್ಯಸಮಾಜವನ್ನು ಒಬ್ಬ ಪುರುಷನಿಗೆ ಹೋಲಿಸಿ ಬ್ರಾಹ್ಮಣನು ಮುಖದ ಹಾಗೆ ಶೋಭಿಸಿ ಜ್ಞಾನಪ್ರಚಾರದ ಕೆಲಸವನ್ನು ಮಾಡುವಂಥವನು, ಕ್ಷತ್ರಿಯನು ಬಾಹುಗಳೋಪಾದಿಯಲ್ಲಿ ಶತ್ರುಗಳನ್ನು ಜಯಿಸಿ ದುರ್ಬಲರನ್ನು ರಕ್ಷಿಸುವವನು, ವೈಶ್ಯನು ಜಂಘೆಗೆ ಸರಿಯಾಗಿ ಎಲ್ಲಾ ದಿಕ್ಕಿಗೆ ಹೋಗಿ ವ್ಯಾಪಾರಮಾಡುವವನು ಮತ್ತು ಶೂದ್ರನು ಪಾದಗಳಂತೆ ಇತರ ಮೂರು ವರ್ಣಗಳ ಸೇವೆಮಾಡುವವನು ಎಂಬ ಭೂಲೋಕದ ಸರ್ವ ಜನರು ಒಪ್ಪಬೇಕಾದ ಅತಿ ಸುಲಭವಾದ ಈ ಅರ್ಥವನ್ನು ಬಿಟ್ಟುಬಿಟ್ಟು ಸ್ವಾರ್ಥಪರರಾದ ಈಗಿನ ಕೆಲವು ಬ್ರಾಹ್ಮಣರೆನ್ನಿಸಿಕೊಳ್ಳುವವರು ತಾವು ಬ್ರಹ್ಮನ ಮುಖದಿಂದ ಉದ್ಭವಿಸಿದ್ದೆವು, ತಾವೇ ಪೂಜೆಗೆಯೋಗ್ಯರು, ಅನ್ಯರು ವೇದಾಧ್ಯಯನಕ್ಕೆ ಅರ್ಹರಲ್ಲವೆಂದು ಮನಸೋಇಚ್ಛೆ ವೇದಮಂತ್ರಗಳಿಗೆ ಅರ್ಥವನ್ನು ಕಲ್ಪಿಸಿದ್ದಲ್ಲದೆ ಬ್ರಾಹ್ಮಣರು ಮಾಡತಕ್ಕ ಧರ್ಮಗಳನ್ನು ಸಾವಿರದಲ್ಲಿ ಒಬ್ಬನಾದರೂ ಮಾಡದೆ ಬ್ರಾಹ್ಮಣರು ಎಂಬ ನಾಮಮಾತ್ರ ಧರಿಸಿಕೊಂಡು ನಮ್ಮ ಪುರಾತನ ಆರ್ಯರ ವರ್ಣಾಶ್ರಮ ಧರ್ಮಕ್ಕೆ ಮಹಾ ಕೆಡುಕನ್ನು ಉಂಟುಮಾಡಿ ಹಿಂದುಸ್ಥಾನದ ಆರ್ಯರ ಅಧಃಪತನಕ್ಕೆ ಮುಖ್ಯ ಕಾರಣರಾದರು ಎಂದು ನಿಸ್ಸಂದೇಹದಿಂದ ಹೇಳಬಹುದು. ಅದಲ್ಲದೆ ವರ್ಣಾಶ್ರಮ ಧರ್ಮದ ನಿಜತತ್ವವನ್ನು ಮೂಲೆಗೊತ್ತಿ, ಮನುಷ್ಯ ಜಾತಿಯಲ್ಲಿರುವ ನಾಲ್ಕು ವರ್ಣವನ್ನು ಬಿಟ್ಟು ಬಿಟ್ಟು ನಾಲ್ಕು ಜಾತಿಯನ್ನಾಗಿ ಕಲ್ಪಿಸಿಕೊಂಡು ಅದಕ್ಕನುಸಾರವಾಗಿ ಪುರಾತನ ಗ್ರಂಥಗಳಲ್ಲಿ ಸಮಯಾನುಸಾರ ತಮಗೆ ಇಷ್ಟಬಂದಂತೆ ಪ್ರಕ್ಷೇಪವನ್ನು (interpolation) ಮಾಡುತ್ತಾ ಬಂದರು. ಹೀಗೆ ವರ್ತಿಸುತ್ತಾ ಬಂದು ನಾಲ್ಕು ಜಾತಿಯಿಂದ ಈಗ ನಾಲ್ಕು ಸಾವಿರದ ಮೇಲಿನ ಜಾತಿಗಳು ಹಿಂದೂಸ್ಥಾನದಲ್ಲಿ ಉಂಟಾಗುವದಾಯಿತು. ಒಂದು ಜಾತಿಯವರು ಮತ್ತೊಂದು ಜಾತಿಯವರಿಗಿಂತ ಮೇಲು. ಹೀಗೆ ತಾವು ಮೇಲು ತಾವು ಮೇಲು ಎಂದೇ ಮನುಷ್ಯಜಾತಿಯಲ್ಲಿ ಭ್ರಾತೃತ್ವವನ್ನು ಬೆಳೆಸುವ ಬದಲಾಗಿ ವೈರತ್ವವನ್ನೂ ದ್ವೇಷವನ್ನೂ ಬೆಳೆಯಿಸುತ್ತಾ ಕಡೆಗೆ ತಮ್ಮ ಪ್ರಾಚೀನ ಶ್ರೇಷ್ಠ ನಾಗರಿಕತೆಯನ್ನೂ ವಿದ್ಯೆಯನ್ನೂ ವೇದಜ್ಞಾನವನ್ನೂ ಕಳಕೊಂಡು ಪಾಶ್ಚಾತ್ಯ ಮ್ಲೇಚ್ಛರಿಂದ ಈಗ ಹಿಂದುಗಳು ಸರ್ವಜ್ಞಾನವನ್ನು ಸಂಪಾದಿಸಿಕೊಳ್ಳುವ ಕಾಲವು ಬಂದು ಒದಗಿತು. ಮಾ। ರಾ। ರಾ। U. K. N.ರವರು, ಮಹಾಭಾರತದಲ್ಲಿ ಕೃಷ್ಣದ್ವೈಪಾಯನರು ವರ್ಣವ್ಯವಸ್ಥೆತತ್ವವನ್ನು ಸವಿಸ್ತಾರವಾಗಿ ವರ್ಣಿಸುತ್ತಾರೆಂದು ತಮ್ಮ ಲೇಖದಲ್ಲಿ ಬರೆದದ್ದು ನಿಜವಾದ ಸಂಗತಿಯಾಗಿದೆ. ಆದರೆ ಆ ವರ್ಣವ್ಯವಸ್ಥೆಯ ಆಧಾರವು ಗುಣಕರ್ಮದ ಮೇಲೆ ಹೊಂದಿದೆ ಎಂಬುದು ಸ್ಪಷ್ಟವಾಗಿರುತ್ತದೆ. ಉದಾಹರಣೆಯಾಗಿ ಒಂದೆರಡು ಶ್ಲೋಕಗಳನ್ನು ವಾಚಕರ ಮುಂದಿಡುತ್ತೇನೆ.

ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ ॥
ಎಂದು ಭಗವದ್ಗೀತೆಯಲ್ಲಿದೆ.
ನಕುಲೇನ ನಜಾತ್ಯಾವಾಕ್ರಿಯಾಭಿ ಬ್ರಾಹ್ಮಣೋ ಭವೇತ್ ॥
ಅರಣ್ಯಪರ್ವ ಅಧ್ಯಾಯ ೩೧೩.
ನಯೋನಿರ್ನಾಪಿ ಸಂಸ್ಕಾರೋ ನ ಶ್ರುತಂ ನಚಸಂತತಿಃ । ಕಾರಣಾನಿ ದ್ವಿಜತ್ವಸ್ಯ ವೃತ್ತಮೇವತು ಕಾರಣಂ ॥ ವೃತ್ತೇ ಸ್ಥಿತಸ್ತು ಶೂದ್ರೋಽಪಿ ಬ್ರಾಹ್ಮಣತ್ವಂ ಸಗಚ್ಛತಿ ।

ಇವುಗಳಿಂದ ಚಾತುರ್ವರ್ಣವು ಗುಣಕರ್ಮಗಳನ್ನು ಆದರಿಸಿಕೊಂಡಿದೆ. ಕುಲದಿಂದಲೂ, ಜನ್ಮದಿಂದಲೂ ಬ್ರಾಹ್ಮಣನಾಗುವುದಿಲ್ಲ. ಕ್ರಿಯೆಯಿಂದ ಮಾತ್ರವೇ ಬ್ರಾಹ್ಮಣನಾಗುತ್ತಾನೆ. ತಾಯಿತಂದೆಯವರು ಬ್ರಾಹ್ಮಣರಾದರೆ ಮಕ್ಕಳಿಗೆ ಬ್ರಾಹ್ಮಣತ್ವವು ಬರುವುದಿಲ್ಲ. ಬ್ರಾಹ್ಮಣೋಚಿತ ಸದಾಚಾರವೇ ಶೂದ್ರ ಕುಲದವನನ್ನು ಬ್ರಾಹ್ಮಣನನ್ನಾಗಿ ಮಾಡಬಲ್ಲುದು ಎಂದು ಸಾವಿರಾರು ಸ್ಥಳಗಳಲ್ಲಿ ಸ್ಪಷ್ಟವಾಗಿ ಮಹಾಭಾರತದಲ್ಲಿ ಹೇಳಿಯದೆ. ಹೊರತು ಜನ್ಮದಿಂದ ಜಾತಿಭೇದವನ್ನು ಖಂಡನೆಮಾಡಿ ಗುಣಕರ್ಮದಿಂದಲೇ ವರ್ಣವ್ಯವಸ್ಥೆಯನ್ನು ಸ್ಥಾಪಿಸುತ್ತದೆ ಎಂಬದುನಿಸ್ಸಂದೇಹ.

ಅಷ್ಟೇಕೆ? ಒಬ್ಬ ವ್ಯಕ್ತಿಯು B. A. M. A. degree ಪಡೆದೊಡನೆ ಏನೂ ಕಲಿಯುವರೆ ಅಶಕ್ತನಾದ, ಅಜ್ಞಾನಿಯಾದ ಅಥವಾ ಪ್ರಯತ್ನಪಟ್ಟು ಕಲಿಯದೆ ಇರುವ ಆತನ ಮಗನಿಗೆ ತನ್ನಷ್ಟಕ್ಕೆ ಆ ಡಿಗ್ರಿ ದೊರೆಯುವುದೋ ಅಥವಾ ಬಾಹುಬಲ ಪರಾಕ್ರಮವಿಲ್ಲದೆ ನಿರ್ಬಲ ರೋಗಿಷ್ಟನಾದವನನ್ನು ಸೇನೆಯಲ್ಲಿ ಕೂಡಿಸಿಕೊಳ್ಳುವರೋ ವಾಚಕರೇ ನೀವೇ ಯೋಚನೆಮಾಡಿರಿ. ಆದ್ದರಿಂದ ಎಲ್ಲಾ ಜೀವಿಗಳು ಭ್ರಾತೃಗಳಾಗಿದ್ದು ಪರಮಪಿತನಾಗಿರುವ ಪರಮಾತ್ಮನ ಸೃಷ್ಟಿಯಲ್ಲಿ ಸಮಭಾಗಿಗಳಾಗಿ ಎಲ್ಲರೂ ಪ್ರೇಮ ಐಕ್ಯದಿಂದ ಇಹಪರ ಸುಖಗಳ ಸಾಧನೆಗಳನ್ನು ಮಾಡುವುದು ಪ್ರತಿ ಒಬ್ಬನ ಕರ್ತವ್ಯವಾಗಿರುವುದು.

U. G. N.

ಜಾತಿಭೇದವಿಚಾರ ವಿಮರ್ಶೆ.

(ಲೇಖಕ—ಪಾಂಡುರಂಗಶಾಸ್ತ್ರೀ, ಓಡ್ಲಮನೆ)

ಜಾತಿಭೇದವಿಚಾರ ಪುಸ್ತಕಕಾರರು ವರ್ಣಭೇದವು ಗುಣಕರ್ಮದ ಮೇಲೆ ಅವಲಂಬಿಸಿ ಉಂಟೆಂಬ ಬಗ್ಗೆ ಉದಾಹರಿಸಿರುವ ಎರಡನೆಯ ಮಂತ್ರವನ್ನು ಮತ್ತು ಅವರು ಬರೆದಿರುವ ಅದರ ಅರ್ಥವನ್ನು ವಿಮರ್ಶಿಸೋಣ. "ಪ್ರಿಯಂ ಮಾ ಕೃಣು ದೇವೇಷು ಪ್ರಿಯಂ ರಾಜಸು ಮಾ ಕೃಣು ಪ್ರಿಯಂ ಸರ್ವಸ್ಯ ಪಶ್ಯತ ಉತಶೂದ್ರ ಉತಾರ್ಯೇ ॥" ಎಂದರೆ ಹೇ ಪರಮೇಶ್ವರ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳಲ್ಲಿಯೂ ನನ್ನನ್ನು ಪ್ರಿಯನನ್ನಾಗಿ ಮಾಡು. ನಾವು ಎಲ್ಲ ವರ್ಣಗಳ ಹಿತವನ್ನು ಸಾಧಿಸಿ ಲೋಕಪ್ರಿಯನಾಗಬೇಕು. ಈ ಮಂತ್ರಗಳಿಂದ ವೇದವು ಜನ್ಮತಃ ಉಚ್ಚ ನೀಚಭಾವಕ್ಕೆ ಸಾಧಕವಲ್ಲ. ಎಂದರೆ, ಈ ಜಾತಿಭೇದವು ವೇದಸಮ್ಮತವಲ್ಲ. ಎಂದು ಜಾತಿಭೇದವಿಚಾರ ಪುಸ್ತಕಕರ್ತರು ಬರೆದಿರುತ್ತಾರೆ. ವರ್ಣವ್ಯವಸ್ಥೆಯು ಗುಣಕರ್ಮ ಮೂಲಕವಾದದ್ದೆಂಬುದು ಈ ಮಂತ್ರದಲ್ಲಿ ಪ್ರತಿಪಾದಿತವಾಗಿಲ್ಲ. ಯಾಕೆಂದರೆ, ತದ್ವಾಚಕ ಪದಗಳು ಈ ಮಂತ್ರದಲ್ಲಿ ಇಲ್ಲ. ಎಂದಮೇಲೆ ಈ ಮಂತ್ರವು ಅವರಿಗೆ ಹೇಗೆ ಪ್ರಮಾಣವಾಗುತ್ತದೆ? "ಹೇ ಪರಮೇಶ್ವರಾ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳಲ್ಲಿಯೂ ನನ್ನನ್ನು ಪ್ರಿಯನನ್ನಾಗಿ ಮಾಡು," ಎಂದು ಒಬ್ಬನು (ದೇವರೊಡನೆ) ಪ್ರಾರ್ಥಿಸಿಕೊಂಡರೆ, "ಜಾತಿಭೇದ ವೇದಸಮ್ಮತವಲ್ಲ"ವೆಂದು ಹೇಗೆ? ಈ ಮಂತ್ರದಲ್ಲಿ "ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ" ಈ ರೀತಿಯಿಂದ ನಾಲ್ಕು ವರ್ಣಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನಿರ್ದೇಶಮಾಡಿದ ಕಾರಣ ವರ್ಣಭೇದವು ವೇದಸಮ್ಮತವೆಂದೇ ಸಿದ್ಧವಾಗುತ್ತದೆ. ಹೀಗಿರಲು ಪುಸ್ತಕಕಾರರು "ಈ ಜಾತಿಭೇದವು ವೇದಸಮ್ಮತವಲ್ಲ"ವೆಂದು ಏನು ಬರೆದಿರುವರೋ ಅದು ಅವ್ಯವಹಿತವಾಗಿದೆ. ನಾಲ್ಕು ವರ್ಣಗಳೆಲ್ಲರೂ ಅವುಗಳ ಭೇದವನ್ನೊಪ್ಪಲಿಕ್ಕಿಲ್ಲವೆಂದು ಹೇಳಿದರೆ, ಅವುಗಳನ್ನು ಪೃಥಕ್ಕಾಗಿ ಉದ್ದೇಶಿಸಿರುವ ಕಾರಣವೇನು ಎಂಬ ಪ್ರಶ್ನೆಯು ಬರುತ್ತದೆ. ಅನ್ಯಥಾ "ಅಮುಕ ಜಾತಿಗಳು ದೇವಾ" ಎಂಬಂತೆ ಈ ಮಂತ್ರಕ್ಕೆ [illegible] ಬರುತ್ತದೆ. ಅದನ್ನು [illegible] "ಪ್ರಿಯಂ ಮಾ ಕೃಣು" ಈ ವಾಕ್ಯಕ್ಕೆ [illegible] ವ್ಯರ್ಥವಾಗುತ್ತದೆ. [illegible] ವ್ಯಾಖ್ಯಾನಕ್ಕೆ ಬರುವುದು.

ಮೇಲಿನ ಈ ಪ್ರಾರ್ಥನೆಗೆ "ವರ್ಣಭೇದವು ಗುಣಕರ್ಮಕೃತ"ವೆಂಬ ಅರ್ಥವು ಹೇಗೆ ಸಂಭವಿಸುತ್ತದೆ? ವಾಚ್ಯವೃತ್ತಿಯಿಂದಲೋ ಅಥವಾ ಲಕ್ಷಣಾವೃತ್ತಿಯಿಂದಲೋ? ಆದ್ಯಪಕ್ಷದಲ್ಲಿ ಶಕ್ತಿಗ್ರಾಹಕ ಪ್ರಮಾಣವು ಯಾವುದು? ದ್ವಿತೀಯಪಕ್ಷದಲ್ಲಿ ಯಾವ ಪದಕ್ಕೆ ಎಲ್ಲಿ ಲಕ್ಷಣೆ? ಆ ಲಕ್ಷಣೆಯಾದರೂ ಜಹಲ್ಲಕ್ಷಣೆಯೋ ಅಜಹಲ್ಲಕ್ಷಣೆಯೋ, ಜಹದಜಹಲ್ಲಕ್ಷಣೆಯೋ? ಲಕ್ಷಣಾಬೀಜವು ಯಾವುದು? ಅನ್ವಯಾನುಪಪತ್ತಿ ಪಕ್ಷವನ್ನು ಸ್ವೀಕರಿಸಿದರೆ ವಿವಾದ್ಯವಾಕ್ಯದಲ್ಲಿ ಅನ್ವಯಾನುಪಪತ್ತಿಯು ಹೇಗೆ ಸಂಭವಿಸುತ್ತದೆ? "ಕಾಕೇಭ್ಯೋ ದಧಿರಕ್ಷ್ಯತಾಂ" ಇತ್ಯಾದಿ ಸ್ಥಲಗಳಲ್ಲಿ ಲಕ್ಷಣಾ ಪ್ರಸಕ್ತಿಯನ್ನು ಹೇಗೆ ಉಪಪಾದಿಸಬಹುದು? ಅಲ್ಲಿ ತಾತ್ಪರ್ಯಾನುಪಪತ್ತಿಯನ್ನು ಸ್ವೀಕರಿಸುತ್ತೇವೆಂದು ಹೇಳಿದರೆ, ಲಕ್ಷಣಾಬೀಜಾಂಶದಲ್ಲಿ ಅನನುಗಮ ದೋಷವುಂಟಾಗುತ್ತದೆ. ಇದಲ್ಲದೆ, ವಿವಾದವಾಕ್ಯದಿಂದ "ಜಾತಿಭೇದವು ವೇದಸಮ್ಮತವಲ್ಲವೆಂದು ತಾತ್ಪರ್ಯವನ್ನು ಹೊರಡಿಸಲು ತಾತ್ಪರ್ಯ ನಿರ್ಣಾಯಕವು ಯಾವುದು?

"ಪ್ರಿಯಂ ಮಾ ಕೃಣು" ಈ ಮಂತ್ರದಲ್ಲಿ ಬ್ರಾಹ್ಮಣಾದಿ ನಾಲ್ಕು ವರ್ಣಗಳಲ್ಲಿ ನನ್ನನ್ನು ಪ್ರಿಯನನ್ನಾಗಿ ಮಾಡೆಂದು ಪ್ರಾರ್ಥಿಸುತ್ತಾನೆ. ಪ್ರಿಯತೆಗೂ ಜಾತ್ಯೈಕ್ಯಕ್ಕೂ ಪರಸ್ಪರ ಸಂಬಂಧವಿಲ್ಲ. ಕಾರಣ, ಜನ್ಮತಃ ವರ್ಣಭೇದವನ್ನು ಒಪ್ಪಿಕೊಳ್ಳುವವರಾದರೂ ತಮಗಿಂತ ಕೆಳಗಿನ ತರಗತಿಯ ವ್ಯಕ್ತಿಯನ್ನು ಪ್ರೀತಿದೃಷ್ಟಿಯಿಂದ ನೋಡತಕ್ಕ ಸಂಗತಿಯು ಲೋಕದಲ್ಲಿ ಆಬಾಲ ಪ್ರಸಿದ್ಧವಾಗಿದೆ. "ಪ್ರೀತಿವಿಷಯತ್ವ" ಮತ್ತು "ಜನ್ಮತೋ ಜಾತಿಭೇದಾಭಾವಃ" ಇವುಗಳಿಗೆ ವ್ಯಾಪ್ಯವ್ಯಾಪಕಭಾವವನ್ನು ಜಾತಿಭೇದ ವಿಚಾರ ಪುಸ್ತಕಕಾರರು ಸ್ವೀಕರಿಸಿರುತ್ತಾರೆ. ಆದರೆ ಇದು ಎಷ್ಟರ ಮಟ್ಟಿಗೆ ಸಮಂಜಸವೆಂಬುದನ್ನು ನೋಡೋಣ. ಈಗ "ಯತ್ರ ಯತ್ರ ಪ್ರೀತಿ ವಿಷಯತ್ವಂ ತತ್ರ ತತ್ರ ಜಾತಿಭೇದಾಭಾವಃ" ಈ ರೀತ್ಯಾ ವ್ಯಾಪ್ತಿಯು ಸಂಭವಿಸುತ್ತದೆ. ಒಬ್ಬನು ದನ, ಕುದುರೆ, ಗಿಳಿ, ಬೆಕ್ಕು ಈ ಪ್ರಾಣಿಗಳನ್ನು ಪೋಷಿಸುತ್ತಿದ್ದು ಅವುಗಳನ್ನು ಪ್ರೇಮದೃಷ್ಟಿಯಿಂದ ನೋಡುತ್ತಾನೆ. ಆ ಪ್ರಾಣಿಗಳು ಅವನಿಗೆ ಪ್ರೇಮಾಸ್ಪದವಾಗಿವೆ. ಆದರೆ ಅವನಿಗೂ ಮತ್ತು ದನ, ಕುದುರೆ ಮುಂತಾದ ಆ ಪ್ರಾಣಿಗಳಿಗೂ ಪರಸ್ಪರ ಜನ್ಮತಃ ಜಾತಿಭೇದವಿಲ್ಲವೆಂದು ಯಾರೂ ತಿಳಿಯರು. ಅರ್ಥಾತ್ ಅನ್ವಯವ್ಯಾಪ್ತಿಯು ಕೂಡುವುದಿಲ್ಲ. ಹಾಗು ಈ ಉದಾಹರಣೆಯಲ್ಲಿಯೇ ಜನ್ಮಸಿದ್ಧವಾದ ಜಾತಿಭೇದವಿದ್ದು ಪ್ರೀತ್ಯಭಾವವಿಲ್ಲದ ಪ್ರಯುಕ್ತ "ಯತ್ರ ಯತ್ರ ಜನ್ಮತೋ ಜಾತಿಭೇದಾಭಾವಾಭಾವಃ ತತ್ರ ತತ್ರ ಪ್ರೀತಿವಿಷಯತ್ವಾಭಾವಃ" ಈ ರೀತಿ ವ್ಯತಿರೇಕ ವ್ಯಾಪ್ತಿಯು ಸಹ ಸಂಭವಿಸುವುದಿಲ್ಲ, ಎಂದಮೇಲೆ ಧರ್ಮದೇವಜಿ ಮಹಾಶಯರ ಈ ಅನುಮಾನವು ಸಾಧಾರಣಾನೈಕಾಂತಿಕವಾದ್ದರಿಂದ ದುಷ್ಟವೆಂಬುದು ಸ್ಪಷ್ಟವು. ಪ್ರಕೃತಕ್ಕೆ ನಿರರ್ಥಕವಾಗಿರುವ ವಾಕ್ಯಗಳನ್ನು ಪ್ರಮಾಣತ್ವೇನ ಉದಾಹರಿಸುವ ಜಾತಿಭೇದ ವಿಚಾರ ಪುಸ್ತಕಕಾರರು ಅಮರಕೋಶದ ಮಂಗಲಶ್ಲೋಕದ "ಯಸ್ಯ ಜ್ಞಾನ ದಯಾಸಿಂಧೋಃ" ಈ ಪ್ರಥಮ ಚರಣವನ್ನು ಸಹ ಯಾಕೆ ಆಧಾರವನ್ನಾಗಿ ಇಟ್ಟುಕೊಳ್ಳಲಿಲ್ಲ! ಇದರಲ್ಲಿಯ "ಜ್ಞಾನದಯಾಸಿಂಧೋಃ" ಈ ಪದದ "ಜ್ಞಾನಂ ಚ ದಯಾ ಚ ಜ್ಞಾನದಯೇ, ತಯೋಃ ಸಿಂಧುರಿವ ಸಿಂಧುಃ" ಎಂದು ವಿಗ್ರಹವಾಕ್ಯವಿರುವುದು. ಇದರಿಂದ ಪರಮೇಶ್ವರನಿಗೆ ಸಮುದ್ರದ ಉಪಮೆಯನ್ನು ಕೊಟ್ಟದ್ದು ಸ್ಪಷ್ಟವಾಗುತ್ತದೆ. ಸಮುದ್ರವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಈ ನಾಲ್ಕು ವರ್ಣದವರು ಸ್ಪರ್ಶಿಸುತ್ತಾರೆ. ಅವರು ಅದರಲ್ಲಿ ಸ್ನಾನಮಾಡುತ್ತಾರೆ. ಈ ಮೇರೆಗೆ ಸಮುದ್ರಕ್ಕೆ ನಾಲ್ಕು ವರ್ಣಗಳಲ್ಲಿ ಸಮದೃಷ್ಟಿಯಿರುವದರಿಂದ ಆ ನಾಲ್ಕು ವರ್ಣಗಳಲ್ಲಿ "ದೊಡ್ಡವ ಅಥವಾ ಸಣ್ಣವ"ನು ಯಾರೂ ಇಲ್ಲ. ಇದರ ಮೇಲಿಂದ "ಅಜ್ಯೇಷ್ಠಾಸೋ ಅಕನಿಷ್ಠಾಸಃ" ಇತ್ಯಾದಿ ಶ್ರುತ್ಯರ್ಥವು ಸಮುದ್ರೋಪಮೆಯಲ್ಲಿ ಸೂಚಿತವಾಗಿದೆ! ಇದಲ್ಲದೆ ಜ್ಞಾನದಯೆಗಳ ಸಿಂಧುವಾದ ಪ್ರಯುಕ್ತ ಆ ಬ್ರಾಹ್ಮಣಾದಿ ನಾಲ್ಕು ವರ್ಣಗಳಿಗೆ ಸಮಾನ ಪ್ರೇಮಾಸ್ಪದನಾಗಿದ್ದಾನೆ. ಎಂಬುದು ಸ್ಪಷ್ಟವು. ಎಂದಮೇಲೆ, "ಪ್ರಿಯಂ ಮಾ ಕೃಣು" ಈ ಮಂತ್ರಾರ್ಥವು ಸಹ ಮೇಲಿನ ಅಮರ ಮಂಗಲದಲ್ಲಿ ಅಡಕವಾಗಿದೆ ಎಂದು ಹೇಳಲು ಶ್ರೀಯುತ ಧರ್ಮದೇವಜಿಯವರಿಗೆ ಯಾವ ಸಂಕೋಚವಿಲ್ಲ! ಆದ್ದರಿಂದ ಇಂಥ ಸರ್ವಪರಿಚಿತವಾದ ಉತ್ತಮ ಪ್ರಮಾಣವಾಕ್ಯವನ್ನು ಧರ್ಮದೇವಜಿ ಮಹಾಶಯರು ತಮ್ಮ ಪುಸ್ತಕದಲ್ಲಿ ಯಾಕೆ ಸೇರಿಸಲಿಲ್ಲವೆಂಬುದು ಗೊತ್ತಾಗುವುದಿಲ್ಲ.

ಸಾರಾಂಶ ಮೇಲಿನ ಎರಡೂ ಮಂತ್ರಗಳು ಪುಸ್ತಕಕಾರರ ಯಾವ ಇಷ್ಟಾರ್ಥವನ್ನೂ ಸಾಧಿಸಕೊಡದೆ ಅವರನ್ನು ಮರೀಚಿಕೆಯಂತೆ ತಮ್ಮ ಹಿಂದಕ್ಕೆ ಓಡಿಸಿದ್ದು ಪಾಪ! ಅನುಕಂಪನೀಯವಾಗಿದೆ!

ಇದುವರೆಗೆ "ಅಜ್ಯೇಷ್ಠಾಸಃ" "ಪ್ರಿಯಂ ಮಾ ಕೃಣು" ಈ ಎರಡು ಮಂತ್ರಗಳನ್ನು ವಿಮರ್ಶಿಸಿದ್ದಾಯಿತು. ಇದರ ಮುಂದೆ ಪುರುಷಸೂಕ್ತದೊಳಗಿನ "ಬ್ರಾಹ್ಮಣೋಽಸ್ಯ" ಈ ಮಂತ್ರವು ಬರುತ್ತದೆ. ಈ ಮಂತ್ರವು ಕೂಡ ವರ್ಣಗಳು ಗುಣಕರ್ಮಸಿದ್ಧವೆಂದು ಹೇಳುವುದಿಲ್ಲ. ಯಾಕೆಂದರೆ, "ಪದ್ಭ್ಯಾಂ ಶೂದ್ರೋ ಅಜಾಯತ" ಎಂದು ಸ್ಪಷ್ಟವಾಗಿ ಹೇಳೋಣಾಗಿದೆ. ಈ ಸೂಕ್ತದಲ್ಲಿ ಸೃಷ್ಟಿಪ್ರಕರಣವು ಉಕ್ತವಾಗಿರುವುದರಿಂದ ರೂಪಕಕ್ಕೂ ಇದಕ್ಕೂ ಸಂಬಂಧವಿಲ್ಲ. ಹಿಂದೆ ಮುಂದೆ ಉತ್ಪತ್ತಿಯನ್ನು ಹೇಳಿ ಮಧ್ಯದಲ್ಲಿ ಮಾತ್ರ ರೂಪಕವನ್ನು ಹೇಳುವುದೆಂದರೆ ಹೇಳುವವನ ಮೇಲೆ ಅಸಂಗತಭಾಷಿತೆಯನ್ನು ಆರೋಪಿಸುವದಾಗಿದೆ. ಆದ್ದರಿಂದ ರೂಪಕದ ಮಾರ್ಗವು ಶಾಸ್ತ್ರಸಮ್ಮತವಲ್ಲ. ಇರಲಿ. ಅಂತು ಮಂತ್ರ ಸಂಹಿತೆಯೇ ವರ್ಣಗಳ ಗುಣಕರ್ಮ ಸಿದ್ಧತೆಗೆ ಪರಮ ಆಧಾರವೆಂದು ಇಟ್ಟುಕೊಂಡವರಿಗೆ, ಆ ಬಗ್ಗೆ ವಾಚಕವಾದ ಮಂತ್ರಗಳನ್ನು ಸರ್ವಥಾ ತೋರಿಸಲು ಆಗಲಿಲ್ಲ. ಇದನ್ನು ಯಾರೂ ಮರೆಯಕೂಡದು. ಯಾವುದಾದರೂ ಪದಕ್ಕೆ ಏನಾದರೂ ಅರ್ಥವನ್ನು ಕಲ್ಪಿಸಿ ಹೇಳುವುದು ಅಥವಾ ಬರೆಯುವುದು ಸುಲಭವಾದ ದಾರಿ. ಆದರೆ ಅದು ವೇದಶಾಸ್ತ್ರಸಮ್ಮತವಲ್ಲ. ಜಾತಿಭೇದ ಪುಸ್ತಕಕಾರರು ಇನ್ನಾದರೂ ಮಂತ್ರಸಂಹಿತೆಗಳಿಂದ ಪ್ರತಿಪದೋಕ್ತವಾದ ಪ್ರಮಾಣಗಳನ್ನು ಎತ್ತಿ ತೋರಿಸಿಕೊಡಲಿ; ಅವುಗಳನ್ನು ನಾವು ಅತ್ಯಾದರದಿಂದ ಸ್ವೀಕರಿಸಬಹುದು. ಅವರಿಗೆ ಆಧಾರ ವೇದಗಳು ಮಾತ್ರ. ಅವೇ ಅವರಿಗೆ ಅನುಕೂಲವಿಲ್ಲ. ಎಂದಮೇಲೆ ಇತರ ಪ್ರಮಾಣಗಳನ್ನು ವಿಮರ್ಶಿಸುವ ಅಗತ್ಯವಿಲ್ಲ. ಅಲ್ಲದೆ "ವರ್ಣಗಳು ಉತ್ಪತ್ತಿಸಿದ್ಧವಾಗಿಯೆ ಇವೆ" ಎಂಬ ಪುಸ್ತಕವು ಬೇಗನೆ ಪ್ರಕಾಶಿತವಾಗುವದಿದೆ. ಅದರಲ್ಲಿ ಎಲ್ಲ ಪ್ರಮಾಣಗಳನ್ನು ಸಾಂಗೋಪಾಂಗವಾಗಿ ವಿಶದಪಡಿಸುವದಿದ್ದುದರಿಂದ ಮತ್ತು ರಾಜಕೀಯಾದಿ ವಿಷಯಗಳನ್ನು ಪ್ರತಿಪಾದಿಸುವ ವಾರಪತ್ರಿಕೆಗಳ ಜಾಗೆಯನ್ನು "ಅಜ್ಯೇಷ್ಠಾಸಃ ಅಕನಿಷ್ಠಾಸಃ" ಇತ್ಯಾದಿ ಬರವಣಿಗೆಯಿಂದ ತುಂಬುವುದು ಶ್ರೇಯಸ್ಕರವಲ್ಲದ್ದರಿಂದ ಹಾಗು "ಜ್ಯೇಷ್ಠತ್ವಾವಚ್ಛಿನ್ನ," "ಜ್ಯೇಷ್ಠ ಪ್ರತಿಯೋಗಿತಾ ಕಾತ್ಯಂತಾಭಾವ" ಇತ್ಯಾದಿ ಇತ್ಯಾದಿ ಪಾರಿಭಾಷಿಕ ಲೇಖನವು [illegible] ಮುದ್ರಿತವಾಗುವ ಕಾರಣ ಯಥಾರ್ಥ ಬೋಧಕ್ಕೆ ಪ್ರತಿಬಂಧಕವಾಗುವುದರಿಂದ ಈ ವಿಮರ್ಶಾತ್ಮಕ ಲೇಖವು ಇಲ್ಲಿಗೆ ನಿಲ್ಲಿಸಲ್ಪಟ್ಟಿದೆ. "ಈ ದಿನಗಳಲ್ಲಿ ಬ್ರಾಹ್ಮಣರಾಗಲಿಕ್ಕೆ ಯಾರು [illegible] ಮಾಡುತ್ತಾರೋ" ಎಂಬ ಬರವಣಿಗೆಯಾಗಲಿ ಅಥವಾ ಇದೆ ಜಾತಿಯ ಈ ಪುಸ್ತಕದೊಳಗಿನ ಬೇರೆ ಬರವಣಿಗೆಯಾಗಲಿ ಇವು "ಯಾವ [illegible] ಬರೆಯಕೂಡದೆಂದು" ಉಪದೇಶಿಸುವ ಮಹಾತ್ಮಜಿಯವರ ಶಾಂತಿಪ್ರಧಾನವಾದ ಈ ಕಾಲದ ದಿನಗಳಲ್ಲಿ ಚಂದವಲ್ಲ. ಎಲ್ಲರನ್ನು ಒಟ್ಟಿಗೆ ಸೇರಿಸಿ ಪರಸ್ಪರ ಪ್ರೀತಿಯನ್ನು ಬೆಳಸುವ ಸ್ತುತ್ಯರಾದ ಯಾವ ಉದ್ದೇಶವನ್ನು ಜಾತಿಭೇದ ವಿಚಾರ ಪುಸ್ತಕಕಾರರು ಇಟ್ಟುಕೊಂಡಿದ್ದಾರೋ ಆ ಉದ್ದೇಶಕ್ಕೆ ಇಂಥ [illegible] ಸಹಾಯಕವಾದದ್ದಾದರೆ ಅವುಗಳನ್ನು [illegible] ಯಾರ ಆಕ್ಷೇಪಣೆಯೂ ಇಲ್ಲ. [illegible]

ವಿದೇಶ ವರ್ತಮಾನ.

ಇಂಗ್ಲೆಂಡಿನ ಪಾರ್ಲಿಮೆಂಟು:—ಕಳೆದ ತಾ. ೨೬ಕ್ಕೆ ಹಳೆಯ ಪಾರ್ಲಿಮೆಂಟು ಮುಕ್ತಾಯವಾಯಿತು. ಬರುವ ತಾ. ೪ರಿಂದ ಪಾರ್ಲಿಮೆಂಟ ಸಭಾಸದರ ಆರಿಸುವಿಕೆಯು ಪ್ರಾರಂಭವಾಗುವುದು. ಹೊಸದಾಗಿ ಆರಿಸಲ್ಪಟ್ಟ ಪ್ರತಿನಿಧಿಗಳುಳ್ಳ ಪಾರ್ಲಿಮೆಂಟು ಬರುವ ತಾ. ೨೦ಕ್ಕೆ ಮೊದಲನೆಯ ಸಲ ಜರಗಬೇಕೆಂದು ನಿರ್ಧಾರವಾಗಿದೆ. ಈಗಿನ ಹೊಸ ನಿಬಂಧನೆಯ ಮೇರೆಗೆ ಪಾರ್ಲಿಮೆಂಟ ಸಭಾಸದರನ್ನು ಆರಿಸುವ ಅಧಿಕಾರವುಳ್ಳ ಜನರು ೨ ಕೋಟಿ ಇರುವರು. ಇವರಲ್ಲಿ ಸ್ತ್ರೀಯರು ಸಹ ಕೂಡಿರುವರು. ಒಟ್ಟು ೬೧೫ ಮಂದಿ ಪ್ರತಿನಿಧಿಗಳನ್ನು ಆರಿಸಬೇಕಾಗಿದೆ. ಕನ್ಸರ್ವೆಟಿವ್, ಲಿಬರಲ್ ಮತ್ತು ಲೇಬರ ಈ ಮೂರು ಪಕ್ಷಗಳಲ್ಲಿ ಯಾವ ಪಕ್ಷದವರಿಗೆ ಹೆಚ್ಚು ಓಟು ಸಿಕ್ಕುವುದೋ ನೋಡಬೇಕಾಗಿದೆ.

ಹೊಸದಾಗಿ ನೇಮಕಪಟ್ಟ ಮಂತ್ರಿಮಂಡಲವು.—ಮಿ। ಬೊನರಲೋ ಮುಖ್ಯ ಮಂತ್ರಿಗಳು, ಲೋರ್ಡಕೇವ್ ಲೋರ್ಡ ಚೆನ್ಸಲರರು, ಸರ್. ಯಸ್ ಬಾಲ್ಡವಿನ್ ಚಾನ್ಸಲರ ಒಫ್ ಎಕ್ಸ್ಚೆಕ್ಕರ್, ಲೋರ್ಡ ಕರ್ಝನ್ ಪರರಾಷ್ಟ್ರಗಳ ಮಂತ್ರಿಗಳು, ಡ್ಯೂಕ್ ಒಫ್ ಡಿವೊನ್ಶಿಯರ್ ವಸಾಹತುಗಳ ಸೆಕ್ರೆಟರಿಗಳು, ಲೋರ್ಡ ದರ್ಬಿ ಯುದ್ಧದ ಮಂತ್ರಿಗಳು, ವ್ಯಾಕೌಂಟಪೀಲ್ ಹಿಂದೂಸ್ಥಾನದ ಸೆಕ್ರೆಟರಿಗಳು, ಲೋರ್ಡ ಸೆಲಿಸ್ಬರಿ ಲೋರ್ಡಪ್ರೆಸಿಡೆಂಟ ಆಫ್ ದಿ ಕೌನ್ಸಿಲ್ ಬ್ರಿಜ್ಮನ್ ಹೋಮ್ ಸೆಕ್ರೆಟರಿಗಳು, ಸರ್ ಫಿಲಿಪ್ ಲೊಯಡ ಗ್ರೇಮ್ಸ ಬೋರ್ಡ ಒಫ್ ಟ್ರೇಡ್, ಲೋರ್ಡ ಎಡ್ವಕೇಟ್ ಮಿಲಿಯಂ ಕೆ. ಸಿ. ಮಿನಿಸ್ಟರ್ ಒಫ್ ಎಜ್ಯುಕೇಶನ್. ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಯಾಗಿದ್ದ ಮಿ। ಮೊಂಟೆಗ್ಯೂರವರು ಕನ್ಸರವೇಟಿವ ಪಕ್ಷದ ಉಮೇದ್ವಾರರಾಗಿರುವರೆಂಬ ವಾರ್ತೆಯು ಇದೆ. ಈ ವರ್ತಮಾನವು ಸುಳ್ಳೆಂದು ಅವರು ತಿಳಿಸಿರುವದಾಗಿ ನಂತರ ಬಂದ ವರ್ತಮಾನದಿಂದ ತಿಳಿದುಬರುತ್ತದೆ. ಹಿಂದೂಸ್ಥಾನದ ಈಗಿನ ಅಂಡರ ಸೆಕ್ರೆಟರಿಗಳಾದ ಅರ್ಲ ವಿಂಟರಟನ್ನರು ಕನ್ಸರವೇಟಿವ್ ಪಕ್ಷದ ಒಬ್ಬ ಉಮೇದ್ವಾರರಾಗಲು ಇಚ್ಛಿಸುವರಾಗಿ ಮುಂಬಯಿಯಲ್ಲಿರುವಾಗಲೇ ಇಂಗ್ಲೆಂಡಿಗೆ ತಂತಿ ಬಿಟ್ಟು ತಿಳಿಸಿದ್ದಾರಂತೆ. ಎಲ್ಲಾ ಕಡೆಗಳಲ್ಲೂ ಶಾಂತಿಯನ್ನೆ ನೆಲೆಗೊಳಿಸಬೇಕೆಂಬುದೇ ತನ್ನ ಮುಖ್ಯ ಉದ್ದೇಶವಾಗಿದೆ ಎಂದು ಈಗಿನ ಮುಖ್ಯ ಅಮಾತ್ಯರು ತಿಳಿಸಿದ್ದಾರೆ. ಐರ್ಲೆಂಡಿನ ಒಪ್ಪಂದವನ್ನು ಸ್ಥಿರಪಡಿಸುವುದು ತಮ್ಮ ಪ್ರಥಮಕಾರ್ಯವೆಂದು ಅವರು ತಿಳಿಸಿದ್ದಾರೆ.

ಯುವರಾಜರು:—ಪ್ರಿನ್ಸ್ ಆಫ್ ವೇಲ್ಸರು ೧೯೨೩ರಲ್ಲಿ ಆಫ್ರಿಕವನ್ನು ಸಂದರ್ಶಿಸಲು ಅನುಕೂಲವಂತೆ.

ತುರ್ಕಿಯ ವಿಜಯ:—ತುರ್ಕಿಯ ಸಮಸ್ಯೆಯನ್ನು ಇತ್ಯರ್ಥಪಡಿಸಲು ಸೇರುವ ಕೊನ್ಫರೆನ್ಸು ಬರುವ ತಾ. ೨೦ಕ್ಕೆ ಮುಂದರಿಸಿ ಇಡಲಾಗುವುದೆಂದು ವರ್ತಮಾನವಿದೆ.

ಲೋರ್ಡಸಿಂಹರು:—ಇವರು ಲಂಡನ್ನಿನಲ್ಲಿ ಕಠಿಣ ಅಸ್ವಸ್ಥದಲ್ಲಿರುವರು.

ಒಳದೇಶ ವರ್ತಮಾನ.

ವೈಸರಾಯರು:—ಎರಡು ವರುಷ ಈ ಪದವಿಯಲ್ಲಿದ್ದುದರಿಂದ ಪುನಃ ಸ್ವದೇಶಕ್ಕೆ ಹೋಗಬೇಕೆಂಬ ಉದ್ದೇಶದಿಂದಲೆ ವೈಸರಾಯರು ತಮ್ಮ ಈಗಿನ ಪದವಿಯನ್ನು ಬಿಟ್ಟುಕೊಡುವರಲ್ಲದೆ ಇಂಗ್ಲೆಂಡಿನ ಆಡಳಿತೆಯ ಮಂಡಲದಲ್ಲಿ ಬದಲಾವಣೆಗಳಾದುದರಿಂದಲ್ಲವೆಂದು ವರ್ತಮಾನವಿದೆ.

ಆಸ್ಪತ್ರೆಗಳು:—ಹುಚ್ಚು ನಾಯಿಯಿಂದ ಕಚ್ಚಲ್ಪಟ್ಟವರು ಕೂನೂರು ಅಥವಾ ಕಸೋಲಿ ವೈದ್ಯಾಲಯಗಳಿಗೆ ಹೋಗಬೇಕಾಗಿತ್ತಷ್ಟೆ. ಈಗ ಮುಂಬಯಿ ಸರಕಾರದವರು ಮುಂಬಯಿಯ ಪರೇಲ್, ಪೂನಾ, ಕರಾಚಿ, ಅಹಮ್ಮದನಗರ, ಅಹಮ್ಮದಾಬಾದ ಮತ್ತು ಬೆಳಗಾಂ ಈ ಪಟ್ಟಣಗಳಲ್ಲಿರುವ ಸರಕಾರಿ ವೈದ್ಯಾಲಯಗಳಲ್ಲಿ ಮೇಲಿಕಂಡ ವಿಷಚಿಕಿತ್ಸೆಯು ನಡಿಯುವಂತೆ ಏರ್ಪಡಿಸಿದ್ದಾರೆ. ಇಲ್ಲಿ ಬಡಬಗ್ಗರಿಗೆ ಉಚಿತವಾಗಿ ಚಿಕಿತ್ಸೆ ಮಾಡಲಾಗುತ್ತದೆ.

ಹೈಕಮಿಶನರ್:—ಮುಂಬಯಿಯಲ್ಲಿ ಇಂಡಿಯನ್ ಮರ್ಚಂಟ್ಸ ಚೇಂಬರಿನವರು ಲಂಡನಿನಲ್ಲಿ ಹಿಂದೂಸ್ಥಾನದ ಹೈಕಮಿಶನರಾದ ಸರ್. ವಿಲಿಯಂ ಮೇಯರರು ಮೃತರಾದ ಬಗ್ಗೆ ತಮ್ಮ ವಿಷಾದವನ್ನು ಸೂಚಿಸಿ, ಈ ಪದವಿಗೆ ಮುಂದಕ್ಕೆ ಭಾರತೀಯರಲ್ಲೊಬ್ಬರನ್ನೆ ನೇಮಿಸಬೇಕಾಗಿ ತಮ್ಮ ಮನೋಗತವನ್ನು ತಿಳಿಸಿದ್ದಾರೆ.

ಪುದುಕೋಟೆ:—ಪುದುಕೋಟೆಯ ರಾಜರು ಅವರ ಖಾಸಗಿ ವರ್ತನದಿಂದಲೂ ಸಂಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯಿಂದಲೂ ಕಾಯಂ ಆಗಿ ಹಿಂದೂಸ್ಥಾನವನ್ನು ಬಿಟ್ಟು ಹೊರಗೆ ನಿಲ್ಲಬೇಕಾಗಿ ಬಂದುದರಿಂದ ಈಗಿನ ದಿವಾನರಾದ ಮಿ। [illegible] ಆರ್. ದುರೈ ರಾಜರನ್ನು ರಿಜೆಂಟರಾಗಿ ನೇಮಿಸಲಾಗಿದೆ.

ಕರ್ನಾಟಕದಲ್ಲಿ ಕೊಂಗ್ರೆಸ ಕಾರ್ಯ:—ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರೂ ಶ್ರೀಯುತ ದತ್ತೋಪಂತ ಮಜಲಿಯವರೂ ಉತ್ತರ ಕನ್ನಡದ ೬ ತಾಲೂಕುಗಳನ್ನು ಸಂದರ್ಶಿಸಿದರು.

ಪಾಟ್ನಾ:—ಪಾಟ್ನಾ ಯುನಿವರ್ಸಿಟಿ ಸಿನೇಟಿನವರು ತಮ್ಮ ಉತ್ಪನ್ನವನ್ನು ಹೆಚ್ಚಿಸುವುದಕ್ಕಾಗಿ ಪರೀಕ್ಷೆಯ ಫೀಸನ್ನು ಹೆಚ್ಚಿಸುವ ಇರಾದೆಯಲ್ಲಿದ್ದಾರೆ.

ಸರ್. ಫೆಡರಿಕ ವ್ಯಾಟೆ:—ಲೆಜಿಸ್ಲೇಟಿವ್ ಎಸೆಂಬ್ಲಿಯ ಪ್ರೆಸಿಡೆಂಟರಾದ ಸರ್. ಫೆಡರಿಕ ವ್ಯಾಟರು ಬರುವ ತಾ. ೬ಕ್ಕೆ ಸಿಮ್ಲಾದಿಂದ ಹೊರಟು ಡಿಲ್ಲಿಗೆ ಬಂದು ಅಲ್ಲಿ ಎರಡು ಮೂರು ವಾರ ಉಳಕೊಂಡು ಅನಂತರ ಮುಂಬಯಿ, ಪೂನಾ, ಮದರಾಸಕ್ಕೆ ಹೋಗುವರು.

ಕರ್ನಾಟಕ ಎಜ್ಯುಕೇಶನಲ್ ಕೊನ್ಫರೆನ್ಸ್:—ಶ್ರೀಯುತ ದತ್ತಾತ್ರೇಯ ಬಾಲಕೃಷ್ಣ ಕಲೇಲಕರರು ತಾ. ೨ ಮತ್ತು ೩ರಲ್ಲಿ ಜರಗುವ ಕರ್ನಾಟಕ ಎಜ್ಯುಕೇಶನಲ್ ಕೊನ್ಫರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು.

ಮೈಸೂರು:—ಈ ಸಂಸ್ಥಾನದ ದಿವಾನರು ಜನವರಿ ತಿಂಗಳಲ್ಲಿ ಮಲೆನಾಡು ಪ್ರದೇಶಗಳನ್ನು ಸಂಚಾರಮಾಡುವರು. ಆ ಸಮಯದಲ್ಲಿ ಆಗುಂಬೆಯಲ್ಲಿ ಸಾಹುಕಾರ ರಾ ಡಿ. ವೆಂಕಟರಾಮಯ್ಯನವರಿಂದ ಉಚಿತವಾಗಿ ಕಟ್ಟಿಸಲ್ಪಟ್ಟಿರುವ ಆಸ್ಪತ್ರೆ ಕಟ್ಟಡವನ್ನು ಇವರು ತೆರದು ಆಸ್ಪತ್ರೆಯನ್ನು ಪ್ರಾರಂಭಿಸುವರು.

ಗುರುಕಾಬಾಗ ಚೌಕಸಿಯ ಕಮಿಟಿ:—ಶ್ರೀಯುತ ಯಸ್. ಶ್ರೀನಿವಾಸ ಅಯ್ಯಂಗಾರರು ಜ್ವರದಿಂದ ಪೀಡಿತರಾಗಿರುವುದರಿಂದ ತಾ. ೧೮ರಲ್ಲಿ ನಡೆಯುವ ಚೌಕಸಿಯ ಸಮಯ ಅವರಿಗೆ ಹಾಜರಾಗಲು ಆಗಲಿಲ್ಲ. ಬರುವ ತಾ. ೧೧ರ ನಂತರ ಇವರು ಪುನಃ ಕಮಿಟಿಯನ್ನು ಸೇರುವರು.

ಖಿಲಾಫತ್ ಕಮ್ಮಿಟಿಯ ಕಾರ್ಯಕಾರಿ ಮಂಡಲದ ಮೀಟಿಂಗು ಕಳೆದ ತಾ. ೧೮ರಲ್ಲಿ ಮುಂಬಯಿಯಲ್ಲಿ ಕೂಡಲಿಕ್ಕಿರುವ ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ಮೀಟಿಂಗು ಮುಂದರಿಸಲ್ಪಟ್ಟಿದೆ. ಶೇಟ ಛೋಟಾನಿಯವರು ಡಿಲ್ಲಿಯಲ್ಲಿ ಅಸ್ವಸ್ಥರಾಗಿರುವರು.

ಓಲ್ ಇಂಡಿಯಾ ಕೊಂಗ್ರೆಸು ಕಮ್ಮಿಟಿ ಮೀಟಿಂಗು:—ಹೆಚ್ಚಿನ ಮೆಂಬರರು ಮೀಟಿಂಗನ್ನು ಮುಂದರಿಸಿ ಇಡಲಿಕ್ಕೆ ಒಪ್ಪಿದ್ದರಿಂದ ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮೀಟಿಂಗು ಬರುವ ತಾ. ೨೦ರಲ್ಲಿ ಕಲ್ಕತ್ತದಲ್ಲಿ ಸೇರುವುದು.

ಬಿಅಮ್ಮನವರ ಬಿಜಾಪುರ ಸಂದರ್ಶನ:—ಬಿಅಮ್ಮನವರು ಬೇಗಮ್ಮ ಮಹಮ್ಮದಾಲಿಯವರೊಡನೆ ಕಳೆದ ತಾರೀಕು ೨೬ನೇ ಮಧ್ಯಾಹ್ನಕ್ಕೆ ಬಿಜಾಪುರವನ್ನು ತಲ್ಪಿದರು. ಆ ದಿನ ಸಾಯಂಕಾಲ ಬಿಅಮ್ಮನವರ ಒಂದು ಭಾಷಣವಾಯಿತು. ತಮ್ಮ ಭಾಷಣದಲ್ಲಿ ಅವರು ಬ್ರಿಟಿಷ ಸಾಮ್ರಾಜ್ಯದ ಈಗಿನ ಪರಿಸ್ಥಿತಿಯನ್ನು ವರ್ಣಿಸಿ, ಮುಸ್ತಾಫಾ ಕೆಮಲ್ ಪಾಶಾರವರ ಜಯವನ್ನೂ ಅದರಿಂದ ಖಿಲಾಫತ್ ಪ್ರಕರಣದ ಮೇಲೆ ಉಂಟಾದ ಪರಿಣಾಮವನ್ನೂ ತಿಳಿಸಿದರು. ಬ್ರಿಟಿಷರು ಈ ಮುಂಚೆ ಗ್ರೀಕರ ಮೇಲೆ ತೋರಿಸಿದ ಸಹಾನುಭೂತಿಯಿಂದ ಅವರು ಹಿಂದೂಸ್ಥಾನದ ಸ್ನೇಹವನ್ನು ಕಳಕೊಂಡರಲ್ಲದೆ ಇಟಲಿ ಮೊದಲಾದ ದೇಶಗಳ ಸ್ನೇಹವಿಯೋಗಹೊಂದಿ ಒಂಟಿಯಾಗಿ ನಿಂತ ಸಂಗತಿಯನ್ನು ಹೇಳಿದರು. ಮತ್ತು ಸ್ವರಾಜ್ಯ ಸಂಪಾದನೆಗಾಗಿಯೂ ಖಿಲಾಫತ್ ಪ್ರಕರಣದ ಇತ್ಯರ್ಥಕ್ಕಾಗಿಯೂ ಇನ್ನೂ ಹೆಚ್ಚಿನ ರಭಸದಿಂದ ಕಾರ್ಯಮಾಡಬೇಕಾಗಿದೆಯಾಗಿ ಸೂಚಿಸಿದರು. ಈ ಸಂಧಿಯನ್ನು ಕಳಕೊಂಡರೆ ನಾವು ದೊಡ್ಡ ಪಾಪಿಗಳಾಗಿ ಅನಂತರ ವ್ಯಥೆಪಡಬೇಕಾಗುವುದೆಂದು ತಿಳಿಸಿದರು. ಆ ಮೇಲೆ ಅಕಾಲಿಗಳು ಧೈರ್ಯದಿಂದ ಅಹಿಂಸಾತ್ಮಕ ಅಸಹಕಾರವನ್ನು ಅನುಸರಿಸಿ ಸ್ವಾರ್ಥತ್ಯಾಗಮಾಡಿ ಬಹಳ ಕಷ್ಟಪಟ್ಟು ತಮ್ಮ ಕಾರ್ಯವನ್ನು ಸಾಧಿಸುವ ವಿವರವನ್ನು ವಿವರಿಸಿದರು. ಕೊನೆಗೆ ರಾಷ್ಟ್ರೀಯ ಹೋರಾಟದಲ್ಲಿ ಎಲ್ಲ ಮಹಿಳೆಯರೂ ಸ್ವಾರ್ಥತ್ಯಾಗದಿಂದ ತಮ್ಮ ಗಂಡಂದಿರಿಗೂ, ಮಕ್ಕಳಿಗೂ, ಭ್ರಾತೃಗಳಿಗೂ ಸಹಾಯಮಾಡಬೇಕಾಗಿ ನಿವೇದಿಸಿಕೊಂಡರು. ಅದೇ ದಿನ ಇವರು ಮೌಲಾನಾ ಮಹಮ್ಮದಾಲಿಯವರ ಭೇಟಿಯನ್ನು ಪಡೆದರು.

ಬೆಂಗಳೂರು:—ಪ್ಲೇಗರೋಗವು ಈ ಪಟ್ಟಣದಲ್ಲಿ ತಲೆ ಎತ್ತಿದೆ. ಪ್ಲೇಗು ದಾಕನ್ನು ಹಾಕುವ ಕೆಲಸವು ನಡಿಯುತ್ತಿದೆ.

ರೈಲ್ವೆ ನೌಕರರ ಕೊನ್ಫರೆನ್ಸ್:—ಇಂಡಿಯಾ ಮತ್ತು ಬರ್ಮಾದ ರೈಲ್ವೆ ನೌಕರರ ಕೊನ್ಫರೆನ್ಸು ಬರುವ ತಾ. ೨೪ರಿಂದ ೨೮ರ ವರೆಗೆ ಮುಂಬಯಿಯಲ್ಲಿ ದೀನಬಂಧು ಅಂಡ್ರೂಜರ ಅಧ್ಯಕ್ಷತೆಯಲ್ಲಿ ಸೇರುವುದು.

ಆಲ್ ಇಂಡಿಯಾ ಲಿಬರಲ್ ಫೆಡರೇಶನ್:—ಇದರ ವಾರ್ಷಿಕ ಅಧಿವೇಶನಕ್ಕೆ ಶ್ರೀಯುತ ನಾಮದಾರ ಶ್ರೀನಿವಾಸ ಶಾಸ್ತ್ರಿಗಳವರನ್ನು ಅಧ್ಯಕ್ಷರಾಗಿ ಚುನಾಯಿಸಿದೆ.

ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟ:—ಈ ಕಮ್ಮಿಟಿಯ ರಿಪೋರ್ಟು ಬರುವ ತಾ. ೫ಕ್ಕೆ ಪ್ರಕಟವಾಗುವುದು.

ಗಯಾ ಕೊಂಗ್ರೆಸ್:—ಕೊಂಗ್ರೆಸ ಮಂಟಪದ ಸಿದ್ಧತೆಗಳು ನಡಿಯುತ್ತಿವೆ. ಈ ಕೊಂಗ್ರೆಸ್ಸಿಗೆ ಮಹಿಳೆಯರೂ ಹೆಚ್ಚಾಗಿ ಬರುವಂತೆ ಅವರಿಗೆ ರೂ. ೧೦ರಂತೆ ಪ್ರವೇಶ ಫೀಸು ಇಟ್ಟಿದೆ. ಪುರುಷರಿಗೆ ರೂ. ೨೫, ೫೦, ೧೦೦, ೨೫೦, ೫೦೦ ಮತ್ತು ೧೦೦೦ರ ದಂತೆ ೬ ಕ್ಲಾಸುಗಳು ಮಾಡಲ್ಪಟ್ಟಿವೆ. ರೂ. ೨೫ರ ಟಿಕೇಟುಗಳನ್ನು ರಿಜರ್ವಮಾಡಿ ಇಡಲು ಸಾಧ್ಯವಿಲ್ಲವಂತೆ.

ಡಿಲ್ಲಿ ಪ್ರೊವಿನ್ಸಿಯಲ್ ಕೊನ್ಫರೆನ್ಸ.—ಡಿಲ್ಲಿ ಪ್ರೊವಿನ್ಸಿಯಲ್ ಕೊನ್ಫರೆನ್ಸಿನ ಮೂರನೆಯ ಅಧಿವೇಶನವು ಕಳೆದ ತಾ. ೨೭ ಮತ್ತು ೨೮ರಲ್ಲಿ ಶ್ರೀಮತಿ ಸರೋಜಿನಿ ನಾಯ್ಡೋರವರ ಅಧ್ಯಕ್ಷತೆಯಲ್ಲಿ ಜರಗಿತು. ಬಿಅಮ್ಮ, ಬೇಗಮ್ ಮಹಮ್ಮದ ಅಲಿ, ಪಂಡಿತ ಮದನಮೋಹನ ಮಾಲವೀಯ, ರಾಮದಾಸ ಗಾಂಧಿ ಮೊದಲಾದವರು ಈ ಪರಿಷತ್ತಿನಲ್ಲಿ ಹಾಜರಿದ್ದರು.

ಬೆಂಗಳೂರು:—ಒಕ್ಕಲಿಗರ ಪತ್ರಿಕೆಯ ಸಂಪಾದಕರರಾದ ಮ. ರಾ. ಯಂ. ಸುಬ್ಬಯ್ಯ ಬಿ. ಎ. ಇವರು ಬೆಂಗಳೂರ ಡಿಸ್ಟ್ರಿಕ್ಟ ಬೋರ್ಡಿನ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು.

ಓಲ್ ಇಂಡಿಯಾ ಪೋಸ್ಟಲ್ ಕೊನ್ಫರೆನ್ಸ್:—ಕೌನ್ಸಿಲ್ ಒಫ್ ಸ್ಟೇಟಿನ ಮೆಂಬರರಾದ ಮ. ರಾ. ಕೆ. ವಿ ರಾಮಸ್ವಾಮಿ ಅಯ್ಯಂಗರರ ಅಧ್ಯಕ್ಷತೆಯಲ್ಲಿ ಈ ಕೊನ್ಫರೆನ್ಸು ನಡೆಯಿತು.

ಡಾಕ್ಟರ ಎನ್ನಿಬಿಸೆಂಟ್:—ಬರುವ ಆದಿತ್ಯವಾರ ಇವರು ಪುನೆಯನ್ನು ಸಂದರ್ಶಿಸುವರು.

ಶ್ರೀಯುತ ನಾಯಕರಿಗೆ ಶಿಕ್ಷೆ:—ನಂದಗಡದ ಶ್ರೀಯುತ ಹನಮಂತ ನಾಯಕರಿಗೆ ಜಾಮೀನನ್ನು ಕೊಡದೆ ಇದ್ದುದರಿಂದ ಸೆಕ್ಶನ್ ೧೦೮ರ ಮೇರೆಗೆ ೧ ವರುಷದ ಕಠಿಣ ಶಿಕ್ಷೆಯು ವಿಧಿಸಲಾಗಿದೆ.

ದಕ್ಷಿಣ ಕನ್ನಡ

ಬಂಟವಾಳ:—ಉಪ್ಪಿನಂಗಡಿ ತಾಲೂಕಿನ ನೆರಿಯೆ ಗ್ರಾಮದಲ್ಲಿ ೮ ಮಂದಿ ದಕಾಯಿತರು (ಹಗಲು ಕಳ್ಳರು) ಒಬ್ಬ ಐಶ್ವರ್ಯವಂತ ಕನಡ ಕುಂಬಾರನ ಮನೆಗೆ ನುಗ್ಗಿ ಮನೆಯ ಯಜಮಾನಿಗೆ ಬಾಯಿ, ಮೂಗಿಗೆ ಹೊಡದು ಕೊಂದಿದ್ದಾರೆ. ಯಜಮಾನನಿಗೆ ಚೆನ್ನಾಗಿ ಹೊಡೆದಿದ್ದಾರೆ. ಸಾಯಲಿಲ್ಲ. ಸಣ್ಣ ಹುಡುಗಿಗೆ ಕಣ್ಣಿನ ಹತ್ತಿರ ಹೊಡೆದಿದ್ದಾರೆ. ಮಗನೊಬ್ಬನು ಮಾತ್ರ ತಪ್ಪಿಸಿಕೊಂಡು ನೆರೆಕರೆಯವರಿಗೆ ವರ್ತಮಾನ ಕೊಟ್ಟನಂತೆ. ಆದರೆ ಅವರು ಬರುವಷ್ಟರಲ್ಲಿ ಮನೆಯಲ್ಲಿದ್ದ ವಿತ್ತವೆಲ್ಲವನ್ನು ದಕಾಯಿತರು ತೆಗೆದುಕೊಂಡು ಓಡಿಬಿಟ್ಟರು. ಹೆಂಗಸಿನ ಹೆಣವನ್ನೂ, ಜಖಂ ಆದ ಮನೆಯ ಯಜಮಾನನನ್ನೂ ಹುಡುಗಿಯನ್ನೂ ಬಂಟವಾಳ ಆಸ್ಪತ್ರೆಗೆ ಪೋಸ್ಟ ಮೋರ್ಟಂ ಮತ್ತು ಚಿಕಿತ್ಸೆ ಬಗ್ಗೆ ತಂದಿರುತ್ತಾರೆ.

ಪಾಣೆಮಂಗಳೂರು:—ಈ ಊರಿನ ದೇವಸ್ಥಾನದ ಬಳಿಯಲ್ಲಿದ್ದ ಸರಕಾರಿ ಬಾವಿಯನ್ನು ರೂ. ೧೦, ಖರ್ಚಿನೊಳಗೆ ಮುಚ್ಚಿದ್ದಾಯಿತು. ಈಗ ಮತ್ತೊಂದು ಹೊಸ ಬಾವಿಯನ್ನು ಮಾಪಿಳ್ಳಾ ಹುಡುಗರ ಶಾಲೆಯ ಸಮೀಪ ಒಂದರೆ ಈಗ ಬೋರ್ಡು ಹುಡುಗಿಯರ ಶಾಲೆಯ ಹೆಡ್ಮಿಸ್ಟ್ರೆಸ್ ಇರುವ ಮನೆಯ ಹತ್ತಿರ ಒಂದು ಸ್ಥಳವನ್ನು ಎಕ್ವಾಯರ್ ಮಾಡಲಿಕ್ಕೆ ಬೋರ್ಡ ಮೀಟಿಂಗಿನಲ್ಲಿ ಸಂಕಲ್ಪವಾಗಿಯದೆ. ಈ ಸ್ಥಳದ ಹತ್ತಿರವೇ ಲೋಕಲ್ ಬೋರ್ಡಿನವರ ಒಂದು ಬಾವಿ ಇರುತ್ತಾ ಇನ್ನೊಂದು ಬಾವಿಯನ್ನು ಯಾರ ಉಪಯೋಗಕ್ಕಾಗಿ ಅಗಿಸುವುದೆಂದು ತಿಳಿಯುವುದಿಲ್ಲ. ಆ ಸ್ಥಳದ ಹತ್ತಿರ ಹೆಡ್ ಮಿಸ್ಟ್ರೆಸ್ ಮತ್ತು ಕಂಡಕ್ಟ್ರೆಸಿನ ಮನೆಯಲ್ಲದೆ ಬೇರೆ ಒಂದು ಮನೆಯಾದರೂ ಇಲ್ಲ. ಆದ್ದರಿಂದ ಆ ಸ್ಥಳದಲ್ಲಿ ಬಾವಿಯನ್ನು ಅಗಿಸುವ ಬದಲಾಗಿ ಮೊದಲು ಮುಚ್ಚಿದ ಬಾವಿಯ ಹತ್ತಿರವೇ ಇರುವ ಸರಕಾರಿ ಸ್ಥಳದಲ್ಲಿ ಬಾವಿಯನ್ನು ತೋಡಿಸಿದರೆ ಹೆಚ್ಚು ಮನೆಯವರಿಗೂ, ಗಾಡಿಯವರಿಗೂ ಅಡಿಗೆ ಮಾಡಲಿಕ್ಕೂ, ಹುಡುಗಿಯರ ಶಾಲೆಗೂ ನೀರು ಸಿಕ್ಕುವ ಹಾಗಾಗುತ್ತಿತು. ಆದ್ದರಿಂದ ಎಕ್ವಾಯರ್ ಮಾಡಬೇಕೆಂದಿರುವ ಸ್ಥಳವನ್ನು ಎಕ್ವಾಯರ್ ಮಾಡದೆ ಹುಡುಗಿಯರ ಶಾಲೆಯ ಹತ್ತಿರವಿರುವ ಸರಕಾರಿ ಖಾಲಿ ಸ್ಥಳದಲ್ಲಿ ತೋಡಿಸುವುದು ಉತ್ತಮ.

ಮಂಜೇಶ್ವರ:—ಇಲ್ಲಿಯ ಹೊಳೆಯ ಸಂಕದ ವಿಷಯ ಬಾಕಿಯಿಟ್ಟ ಪೇಪರುಗಳು ಸಂಕದ ಡಿಸ್ಟ್ರಿಕ್ಟ ಬೋರ್ಡಿನವರ ಮುಂದೆ ಬರಲೇ ಇಲ್ಲವೆಂದು ಕಾಣುತ್ತದೆ. ಈ ಸಂಕವನ್ನು ಪ್ರಯೋಜನಕರವಾದ ಸಂಕವು ಕಾಸರಗೋಡು ತಾಲೂಕಿನಲ್ಲಿ ಮತ್ತೊಂದಿಲ್ಲ. ಹೊಳೆಯ ಅಗಲದ ಅರ್ಧ ಭಾಗವನ್ನು ಮುಚ್ಚಿ ಉಳಿದ ಭಾಗಕ್ಕೆ ಸಂಕ ಕಟ್ಟಿದರೆ ನೀರು ಹರಿಯಲು ಏನೊಂದು ತುಂಬಿಸಲಿಕ್ಕೆ ಮಣ್ಣು ಹತ್ತಿರವೇ ಇದೆ. ಕಲ್ಲುಗಳು ಅದಿಗಿಂತ ಸಂಕದ ಎತ್ತರವು ಅವಶ್ಯವಿಲ್ಲ. ಮಾನ್ಯ ಬೋರ್ಡು ಪ್ರೆಸಿಡೆಂಟರೂ, ರಾ। ನರಸಿಂಹ ಶಾಸ್ತ್ರರೂ ಮೆಂಬರರಾಗಿರುವುದರಿಂದ ಇವರು ಸಾಧನೆಮಾಡಿದರೆ ಜನರಿಗೆ ಕರವಾದ ಒಂದು ಸೇತುವೆಯು ಆಗುವುದರಲ್ಲಿ ಸಂದೇಹವಿಲ್ಲ.

ಉದಿಯಾವರ:—ತಾ. ೨೧-೧೦-೧೯೨೨ನೇ ಶನಿ ಪಾದ್ಯದ ದಿನವಾಗಿತ್ತು. ಇಂದು ಸಂತೋಷವು ಜನರ ನಾಡಿಗ ರಿಸಿ, ಮುಖದಲ್ಲಿ ಏರಿ, ತುಟಿಗಳಲ್ಲಿ ಹೊಳೆದು, ನುಡಿಗಳಲ್ಲಿ ಕಾರ್ಯರಂಗದಲ್ಲಿ ಕುಣಿದಾಡುವಾಗ ಉದಿಯಾವರದ ಉತ್ಸಾಹವು ದಲ್ಲಿ ಬೆಪ್ಪಾಗಿ ನಿಂತಿರಲಿಲ್ಲ. ಅದೂ "ನೆಶನಲ್ ಜುಬಿಲಿ ಕ್ಲಬ್ಬ"ನ್ನು ತನ್ನ ಆನಂದವನ್ನು ಹೊರಚೆಲ್ಲಿತು. ಈಗಾಗಲೇ ಸುಮಾರು ೫೦ ಸದಸ್ಯರು ದುದು ಕ್ಲಬ್ಬಿನ ಮುಂದಿನ ಏಳಿಗೆಯನ್ನು ಸೂಚಿಸುತ್ತದೆ. ಹಲವು ಮಹಾಶಯ ಕುರ್ಚಿ, ಬೆಂಚು, ಹಾಗು ಮೇಜುಗಳನ್ನು ಕ್ಲಬ್ಬಿಗೆ ದಾನಮಾಡಿದುದು ಅವರ ಉದಾರ ಭಾವಕ್ಕೊಂದು ಸಾಕ್ಷಿಯಾಗಿರುತ್ತದೆ. ಕ್ಲಬ್ ಕೆಥೋಲಿಕ್ ಶಾಲೆಯ ಮಗ್ಗ ಲ್ಲಿರುವ ರಾಜೇಶ್ರಿ ಬೋನಿಫಾಸ್ ಪಿರೇರರ ಹೊಸ ಕಟ್ಟೋಣದಲ್ಲಿ ಒಂಟಿಗಾಲಲ್ಲಿ ನಿಂತುಕೊಂಡು ತನ್ನ ಪುಟ್ಟಿಕ್ಕೆಗಳಿಂದ ಆಶ್ರಯದಾತರನ್ನು ಬನ್ನಿ ಬನ್ನಿರೆಂದು ಆಮಂತ್ರಿಸುತ್ತಿದೆ. ಸಭೆಯಲ್ಲಿ ರೆವರೆಂಡ್ ಫಾದರ್ ಜೆ. ಲೋಬೋರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಶ್ರೀಯುತ ಕುಕ್ಕಾಲು ರಾಮಯ್ಯ ಸೆಟ್ರು ಉಪನ್ಯಾಸಕರಾಗಿದ್ದರು.

ಬೆಳ್ಳೆ:—ಇಲ್ಲಿಯ ಬೋರ್ಡು ಶಾಲೆಯಲ್ಲಿ ಮೊದಲು ೩ ಮಂದಿ ಉಪಾಧ್ಯಾಯರಿದ್ದರು. ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚಾದ್ದರಿಂದ ಕಳೆದ ಎಪ್ರೀಲ್ ತಿಂಗಳ ಲಾಗಾಯಿತು ಹಜರತ್ ಪ್ರೆಸಿಡೆಂಟರವರು ಇನ್ನೊಬ್ಬ ಉಪಾಧ್ಯಾಯನನ್ನು ಹಂಗಾಮಿಯಾಗಿ ನೇಮಿಸಿದ್ದರು. ಶಾಲಾ ಉಪಾಧ್ಯಾಯರೆಲ್ಲರ ಉತ್ಸಾಹಪೂರಿತವಾದ ಶಿಕ್ಷಣದಿಂದ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ದಿನೇ ದಿನೇ ಏರುತ್ತಿತ್ತು. ಹೊಸ ಹೊಸ ವಿದ್ಯಾರ್ಥಿಗಳೂ ಜಾರಿಗೆ ಬರುತಿದ್ದವು. ಇಷ್ಟರಲ್ಲಿಯೇ ಹೆಡ್ಮಾಸ್ಟರರ ವರ್ಗಾವರ್ಗಿಯ ಹುಕುಂ ಕೈಸೇರಿತು. ವರ್ಗವಾಗಿ ಬಂದ ರಾ। ಮಾಸೆಲ ಆಳ್ವರು ಕಳೆದ ತಾ. ೨೫ಕ್ಕೆ ಕೆಲಸಕ್ಕೆ ಹಾಜರಾದ್ದರಿಂದ ಮಾಜಿ ಹೆಡ್ಮಾಸ್ಟರ್ ಜೋಸೆಫ ನಜ್ರೆತರನ್ನು ಶಾಲಾ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಯೋಗ್ಯರೀತಿಯಿಂದ ಸತ್ಕರಿಸಿ, ಈ ವರ್ಗಾವರ್ಗಿಯ ಸಂಬಂಧ ತಮಗುಂಟಾದ ವ್ಯಸನವನ್ನು ಸೂಚಿಸಿ, ಸದರಿ ನಜ್ರೆತರಿಗೆ ಆಯುರಾರೋಗ್ಯೈಶ್ವರ್ಯಗಳನ್ನು ಅನುಗ್ರಹಿಸೆಂದು ಶ್ರೀ ಜಗದೀಶ್ವರನನ್ನು ಪ್ರಾರ್ಥಿಸಿದರು. ಅನಂತರ ನಜ್ರೆತರು ತನ್ನ ಶಿಷ್ಯವರ್ಗವನ್ನು ಆಶೀರ್ವದಿಸಿ, ಸಹಾಯಕರಿಗೆ ತನ್ನ ಅಭಿವಂದನೆಯನ್ನರ್ಪಿಸಿ, ಹಿರಿಯಡ್ಕ ಬೋರ್ಡು ಶಾಲೆಯ ಕಡೆಗೆ ತೆರಳಿದರು.

ಪಡುಬಿದ್ರೆ:—ಇಲ್ಲಿ ಪ್ರತಿವರ್ಷ ಆಶ್ವೀಜ ಶು। ೧೦ರಿಂದ ಕಾರ್ತಿಕ ಶು। ೧೧ರ ವರೆಗೆ ೧ ತಿಂಗಳು ದೇವಸ್ಥಾನದಿಂದ ಹೊರಟು ಪೇಟೆ ತಿರುಗಿ ಬರುವ ಭಜನೆ ಕ್ರಮವಿತ್ತು. ಮುಂಚಿನ ಕಾಲದಲ್ಲಿ ತಾಳತಂಬೂರಿಗಳಿಂದ ಸವಿ ಇಂಪಾದ ಸ್ವರದಿಂದ ದಾಸರಪದಗಳನ್ನೂ ಅಭಂಗಗಳನ್ನೂ ಹಾಡಿ ಕಡೇ ದಿನ ಏಕಾದಶೀ ಜಾಗರಣೆಗೋಸ್ಕರ ಪ್ರತಿಮನೆ ಬಾಗಿಲಲ್ಲಿ ದೀಪಗಳನ್ನು ಶೃಂಗರಿಸಿಟ್ಟು ಅದರ ಸುತ್ತು ಬಂದು ಕೀರ್ತನೆಗಳನ್ನು ಹಾಡಿ ಬೆಳಗಿನ ಜಾಮಕ್ಕೆ ಸರಿಯಾಗಿ ದೇವಸ್ಥಾನಕ್ಕೆ ಬಂದು ಭಜನೆಮಂಗಲ ಮಾಡುವುದಿತ್ತು. ಕೆಲವು ವರುಷಗಳಿಂದೀಚೆ ಸದರಿ ಭಜನೆಯ ಸಂತರು ಕಾವಿಯ ಅಂಗಿಗಳನ್ನೂ ಕಾಲಿಗೆ ಗೆಜ್ಜೆಗಳನ್ನೂ ಹಾಕಿ ಪ್ರತಿ ಮನೆ ಬಾಗಲಲ್ಲಿ ಶೃಂಗರಿಸಿ ಇಟ್ಟ ದೀಪಗಳ ಸುತ್ತುಬಂದು ಕುಣಿಯುತ್ತಾ ಇದ್ದು ೧೨ ಗಂಟೆ ರಾತ್ರಿಗೆ ಸರಿಯಾಗಿ ದೇವಸ್ಥಾನಕ್ಕೆ ಬಂದು ಅಲ್ಲಿ ೧ ಗಂಟೆ ವರೆಗೆ ದೊಡ್ಡ ಕೋಲಾಹಲ ಧ್ವನಿಯಿಂದ ಭಜನೆ ಮುಗಿ ಪೂಜೆ ಆಗುವ ಪದ್ಧತಿ ಶುರುವಾಗಿಯದೆ. (ಇದು ಪೂಜೆಯ ನಿಯಮಕ್ಕೂ ದೇವರಪೂಜೆ ನಂತರ ಊಟಮಾಡುವ ದೇವರ ಅರ್ಚಕರಿಗೂ ಬಹಳ ತೊಂದರೆ. ಈ ಸಂಗತಿ ಪೂಜೆ ಅರ್ಚಕರು ಹೇಳಿದ್ದೂ ಉಂಟು.) ೨ ವರ್ಷಗಳ ಮುಂಚಿನ ವರೆಗೆ ಸಂತಮಂಡಳಿಯ ಮುಖಂಡರಿಗೆ ಉಡುಗೆರೆ ಉಚಿತಗಳನ್ನು ಕೊಟ್ಟು ಸತ್ಕರಿಸುವುದೂ, ಪ್ರತಿ ಮನೆ ಬಾಗಲಲ್ಲಿ ದಿವಸಕ್ಕೆ ಕೆಲವು ಕಡೆಗಳಲ್ಲಿ ದೀಪಗಳನ್ನು ಬಹಳ ಎತ್ತರಕ್ಕೆ ಶೃಂಗರಿಸಿಟ್ಟು ಸುತ್ತಲೂ ಹಲವು ವಿಧದ ಪಠಗಳಿಂದಲೂ, ಗೊಂಬೆಗಳಿಂದಲೂ ಶೃಂಗರಿಸಿ ಆ ದಿನ ಪಂಚಕಜ್ಜಾಯ, ಪಾನಕ, ಲಾಡು, ಮಿಠಾಯಿ ವಗೈರೆ ಹಂಚುವಿಕೆಯೂ ಭಜನೆ ದಿವಸಗಳಲ್ಲಿ ಪೇಟೆಯಲ್ಲಿ ಸಾವಿರಾರು ಜನರ ಗದ್ದಲವೂ, ಆಗ ಸಂತಮಹಾಶಯರು ಅರ್ಧ ಮೈಲಿಗೆ ದೂರವಿದ್ದರೂ ವಿಠೋಬನಿಗೆ ಕೇಳಿಸುವಂತೆ ಹಾಡುವ ಪದಗಳೂ ಬಹಳ ಎತ್ತರದ ವರೆಗೆ ಹಾರಿ ಕುಣಿಯುವುದೂ (ಮಧ್ಯ ಸ್ಮೃತಿ ತಪ್ಪಿ ಬೀಳುವುದೂ ಉಂಟು) ಇತ್ತು. ಕಳೆದ ವರ್ಷದಿಂದೀಚೆ ಇದೊಂದೂ ಸಂಭ್ರಮವಿಲ್ಲ. ಆದರೆ ರಿವಾಜು ಪ್ರಕಾರ ೧೨ ಗಂಟೆ ನಂತರ ದೇವರ ಪೂಜೆಯೂ, ಸಂತಮಂಡಳಿಯವರ ಕಾವಿಯ ಅಂಗಿಗಳೂ ಕಾಲಿನ ಗೆಜ್ಜೆಗಳೂ ಉಂಟು. ಈ ಸಂತಮಂಡಳಿಯವರಿಗೆ "ಮಹಾತ್ಮಾ ಗಾಂಧಿ" ಎಂಬ ಮಾತನ್ನು ಕೇಳಿದೊಡನೆ ಬಹಳ ಸಿಟ್ಟು. 'ಮಹಾತ್ಮ'ರ ಹೆಸರು ಕೇಳಿದೊಡನೆ ಅಬದ್ಧವಾದ ಕಠಿಣ ಮಾತನ್ನು ಆಡುವುದು ನೋಡಿದರೆ "ಸಂತ"ರೆಂದರೆ ಶಾಂತಗುಣವುಳ್ಳವರು. ಶಾಂತವಾದ ನುಡಿಗಳನ್ನು ಆಡುವವರು. ಇವರ ಈ ಗುಣಕ್ಕೂ ಇವರ ಹೆಸರಿಗೂ ಬಹಳ ವ್ಯತ್ಯಾಸಕಾಣುತ್ತದೆ. ಇಡೀ ಜಗತ್ತೇ ಮಹಾತ್ಮರ ಗುಣಗಳನ್ನೂ ತತ್ವಗಳನ್ನೂ ಹೊಗಳಿ ಕೀರ್ತಿಸುತ್ತಿರುವಾಗ ಇಂಡಿಯಾ ದೇಶವೇ, ಹಿಂದೂ ಜನಾಂಗವೇ ಸ್ವರಾಜ್ಯಕ್ಕೋಸ್ಕರ ಹೋರಾಡುವಾಗ "ಸ್ವರಾಜ್ಯ" 'ಸ್ವದೇಶಿ' 'ಮಹಾತ್ಮಾ ಗಾಂಧಿ' ಎಂಬ ವಾಕ್ಯಗಳನ್ನು ಕೇಳಿದೊಡನೆ ಕಿಡಿಕಿಡಿಯಾಗಿ ಸಿಟ್ಟಾಗುವ ಇವರ ವರ್ತನೆಯನ್ನು ನೋಡಿ ವ್ಯಸನಪಡಬೇಕಾಗುತ್ತದೆ. ಮೊನ್ನೆ ಒಬ್ಬರು ದೀಪದ ಹತ್ತಿರ ಮಹಾತ್ಮರ ಪಠವನ್ನು ಅಲಂಕರಿಸಿಟ್ಟಿದ್ದರು. ಅದನ್ನು ನೋಡಿ ದೀಪದ ಸುತ್ತು ತಿರುಗದೆ ಸಂತಮಂಡಳಿಯು ಮುಂದರಿಸಿತು. ಮುಂಚೆ ವಿಲಾಯತಿ ಪಠಗಳನ್ನೂ, ಗೊಂಬೆಗಳನ್ನೂ, ರವಿವರ್ಮರ ಚಿತ್ರಪಠಗಳನ್ನೂ ಇಟ್ಟದ್ದುಂಟು. ಆಗ ಸಂತಮಹಾಶಯರು ಪದ್ಧತಿಗಿಂತ ಹೆಚ್ಚಾಗಿ ಕುಣಿದದ್ದೂ ಉಂಟು. ಕನ್ನಡ ವಾಚಕರೇ, ಇದೂ ಒಂದು ನೂತನ ವಿಷಯ. ಸಂತಮಹಾಶಯರೇ, ನಿಮಗೂ ವಂದನೆ. ನಿಮ್ಮನ್ನು ದ್ವೇಷಿಸಿ ಈ ಲೇಖವನ್ನು ಬರೆದದ್ದಲ್ಲ. ದ್ವೇಷಬುದ್ಧಿಯನ್ನು ಬಿಟ್ಟು ಮಹಾತ್ಮರನ್ನು ಪೂಜಿಸಿರಿ. ಅವರ ಗುಣಗಳನ್ನು ಕೀರ್ತನೆಮಾಡಿರಿ. ಸ್ವರಾಜ್ಯಕ್ಕೋಸ್ಕರ ದೇವರೊಡನೆ ಪ್ರಾರ್ಥಿಸಿರಿ. ನೀವೂ ನಮ್ಮ ಭ್ರಾತೃವರ್ಗದವರೇ.

ಭಜಕರಲ್ಲೊಬ್ಬ.

ಪಂಜಾಬಕ್ಕೆ ದೇಶಬಂಧು ದಾಸರ ಸಂದೇಶ.

ಅಸಹಕಾರವು ಕಳೆಗುಂದಿತು, ಮತ್ತು ಸ್ವರಾಜ್ಯ ಯುದ್ಧದಲ್ಲಿ ನಾವು ಅಪಜಯವನ್ನು ಪಡೆದೆವು, ಎಂದು ಅನೇಕರು ಹೇಳುವರು. ಆದರೆ ನಾನು ಇದನ್ನು ನಂಬುವುದಿಲ್ಲ. ಸತ್ಯವಾಗಿ ಹೇಳುವುದಾದರೆ ಕಳೆದ ಎರಡು ವರುಷದ ಕಾರ್ಯದಿಂದ ಜಯವು ದೊರಕಿದೆ. ವಿದ್ಯಾವಂತರಿಗಿಂತಲೂ ಸಾಮಾನ್ಯ ಜನರಲ್ಲಿ ಸ್ವತಂತ್ರವನ್ನು ಪಡಿಯಬೇಕೆಂಬ ಆಕಾಂಕ್ಷೆಯು ಬಲವಾಗಿ ಉಂಟಾದ್ದು ಮುಖ್ಯವಾಗಿದೆ. ಕಳೆದ ಎರಡು ವರುಷಗಳಲ್ಲಿ ನಾವು ಸ್ವರಾಜ್ಯದ ಬುನಾದಿಕಲ್ಲನ್ನು ಹಾಕಿದೆವು. ಈಗ ಸ್ವರಾಜ್ಯ ಮಂದಿರವನ್ನು ಕಟ್ಟುವುದು ಅಗತ್ಯ. ಪಂಜಾಬದಲ್ಲಿ ಸ್ವರಾಜ್ಯವು ಬರುವ ಶುಭಸೂಚನೆಗಳನ್ನು ನಾವು ಕಾಣುವುದಿಲ್ಲವೇ? ಅಕಾಲಿಗಳ ಆ ಮಹಾತ್ಮ್ಯದ ಕೆಲಸವನ್ನು ನೋಡಿರಿ! ಸತ್ಯದಲ್ಲಿ ಪೂರ್ಣ ವಿಶ್ವಾಸವಿಟ್ಟು ಆ ಅಕಾಲಿಗಳು ಸರ್ವ ಸ್ವಾರ್ಥತ್ಯಾಗವನ್ನು ಮಾಡಿದ್ದಾರೆ. ಇದೇ [illegible] ಬೇಕಾದ್ದು. ಸತ್ಯವೆಂದು ನಂಬಿದ ವಿಷಯಕ್ಕಾಗಿ ಹೋರಾಡಲು ನಾವು ಸಿದ್ಧರಾಗಬೇಕು. ಪ್ರಖ್ಯಾತರಾದ ಅಕಾಲಿಗಳ ಆ ಸ್ವಾರ್ಥತ್ಯಾಗವೇ ನನಗೆ ಸ್ವರಾಜ್ಯಕ್ಕಾಗಿ ಹೋರಾಡಲು ಇನ್ನಷ್ಟು ಸ್ಫೂರ್ತಿಯನ್ನು ಉಂಟುಮಾಡುತ್ತದೆ. ಈಗ ಸೆರೆಯಲ್ಲಿರುವ ಅಕಾಲಿಗಳ ಬಗ್ಗೆ [illegible] ಹೆಚ್ಚು ಗೌರವವನ್ನು [illegible] ಸಂದೇಹವಿಲ್ಲ." ಮುಲ್ತಾನ ದಂಗೆಯನ್ನು [illegible] "ನಾವು ನಮ್ಮ [illegible] ಗಳನ್ನು ಒಪ್ಪಬೇಕು. ಆದರೆ ನಾವು ನಮ್ಮ [illegible] ಧೈರ್ಯಗುಂದಬಾರದು [illegible] ಎಲ್ಲರೂ ಒಗ್ಗಟ್ಟಾಗಿದ್ದರೆ ಸ್ವರಾಜ್ಯವು [illegible]"

ಅನುಕ್ರಮಣಿಕೆ

ಖಃ—
ಬೊನರಲೊ ಮತ್ತು ಹಿಂದುಸ್ಥಾನ ೧
ವಿಚಾರಗಳು—
. ಶೋಚನೀಯವಾದ ವೃತ್ತಾಂತ ೨ ಒಬ್ಬ ಇನಾಮುದಾರರ ಪದಚ್ಯುತಿಯ ವಾರ್ತೆ. ೩. ಮದರಾಸ ಸರಕಾರದ ಪ್ರಯಾಣದ ಖರ್ಚು. ೪. ಶ್ರೀಯುತ ಡಿ. ಕೆ. ಭಾರದ್ವಾಜರ ಬಿಡುಗಡೆ. ೫. ಕ್ರಿಸ್ತಾನುಜ ವತ್ಸರ ನಿಧನ. ,,
ಂಗಳೂರು—
ರ್ತಮಾನ ಸಂಗ್ರಹಗಳು:—
ದೇಶ ವರ್ತಮಾನ, ಹೊರದೇಶ ವರ್ತಮಾನದ ಕನ್ನಡ, ಬಂಟವಾಳ, ಪಾಣೆಮಂಗಳೂರು, ಮಂಜೇಶ್ವರ, ಉದ್ಯಾವರ, ಬೆಳ್ಳೆ, ಪಡುಬಿದ್ರೆ. ೫
ಪಂಜಾಬಕ್ಕೆ ದೇಶಬಂಧು ದಾಸರ ಸಂದೇಶ ,,
ಶ್ರೀಯುತ ಡಿ. ಕೆ. ಭಾರದ್ವಾಜರಿಗೆ ನಮ್ಮ ಬಾತ್ಮಿದಾರರು ಕೇಳಿದ ಪ್ರಶ್ನೆಗಳಿಗೆ ಅವರು ಕೊಟ್ಟ ಉತ್ತರ ,,
ಪತ್ರವ್ಯವಹಾರ ೧, ೨, ೩. ೬
ಆರ್ಯರ ವರ್ಣಾಶ್ರಮಧರ್ಮ, ಜಾತಿಭೇದವಿಚಾರ ವಿಮರ್ಶೆ. ,,

ಸ್ವದೇಶಾಭಿಮಾನಿ.

ಶಕ ೧೮೪೪ ಕಾರ್ತಿಕ ಶು| ೧೪ಯು ಶುಕ್ರವಾರ.

ಮಿ. ಬೊನರಲೊ ಮತ್ತು ಹಿಂದುಸ್ಥಾನ.

ವಿಲಾಯತಿಯ ರಾಜಕಾರಣದಲ್ಲಿ ಸಮ್ಮಿಶ್ರಪಕ್ಷದ ಪತನವಾಗುವಷ್ಟು ಹೇಗೆ ಕ್ರಾಂತಿಯುಂಟಾಗಿದೆ ಎಂಬುದನ್ನು ಹಿಂದಿನ ಸಂಚಿಕೆಯಲ್ಲಿ ತೋರಿಸಿದ್ದೇವೆ. ಮಾಜಿ ಮಂತ್ರಿಗಳಾದ ಮಿ. ಲೊಯ್ಡು ಜೋರ್ಜರು ಪಾತಾಳಯಂತ್ರಿಗಳಾದರೂ, ಕೊನೆಗೆ ಅವರ ಬೇಳೆಯು ಬೇಯದೆ, ಹುಳಿ ಮೋರೆಯಿಂದ ಮಂತ್ರಿಪದಕ್ಕೆ ರಾಜಿಯನ್ನು ಕೊಟ್ಟರಷ್ಟೆ. ಮಿ. ಬೊನರಲೊ ಇವರು ಮಂತ್ರಿತ್ವದ ವಸ್ತ್ರಗಳನ್ನು ಧರಿಸಿದ್ದಾದರೂ ಇವರು ಮತ್ತು ಇವರ ಮಂತ್ರಿಮಂಡಲವು ಕಾಯಮಿನ ಸ್ವಭಾವದ್ದಲ್ಲ. ಇವರು "ಹಂಗಾಮಿ" ಮಂತ್ರಿಗಳು. ಹಾಗು ಇವರ ಸಹಕಾರಿಗಳಾದರೂ "ಹಂಗಾಮಿ"ಗಳೆ ಸರಿ. ಈ ನವಂಬರ ತಿಂಗಳಲ್ಲಿ ಜನರಲ್ ಇಲೆಕ್ಶನು ಆಗತಕ್ಕದಿದೆ. ಆ ಇಲೆಕ್ಶನಿನಲ್ಲಿ ಯಾರು ಸೋಲುವರು ಮತ್ತು ಯಾರು ಗೆಲ್ಲುವರೆಂಬುದು ಗೊತ್ತಾಗುವುದು. ಅನಂತರ ಪಾರ್ಲಿಮೆಂಟು ಮತ್ತು ಮಂತ್ರಿಮಂಡಲವು ಸ್ಥಿರವಾಗುವವು.

ಒಂದು ಪಕ್ಷವು ಅಧಿಕಾರಚ್ಯುತವಾಗಿ ಇನ್ನೊಂದು ಪಕ್ಷವು ಅಧಿಕಾರಾರೂಢವಾಗುವ ಸಮಯದಲ್ಲಿ ಅಥವಾ ಒಂದು ತಂಡವು ರಾಜಿಯನ್ನು ಕೊಟ್ಟು ಇನ್ನೊಂದು ತಂಡವು ರಾಜ್ಯಭಾರವನ್ನು ನಡಿಸುವ ಸಂಧಿಕಾಲದಲ್ಲಿ ಅನೇಕರು ಸ್ವಪ್ರಯೋಜನಗಳನ್ನು ಸಾಧಿಸುವ ಮನೋರಾಜ್ಯದಲ್ಲಿ ಸಂಚರಿಸುತ್ತಿರುವರು. ರಾಜ್ಯಕಾರಭಾರದ ಸೂತ್ರಗಳನ್ನು ನಡಿಸಬೇಕೆಂದು ಅಪೇಕ್ಷಿಸುವವರಿಗೆ ಜನರ ಬೆಂಬಲವು ಬೇಕಾಗಿರುವುದು. ಎಲ್ಲ ಪಕ್ಷದವರು, ಹೆಚ್ಚಾಗಿ ಬಹು ಪಕ್ಷದವರು ಆರಿಸಿಕೊಡದನೆ, ಪ್ರಾತಿನಿಧಿಕ ಸಂಸ್ಥೆಗಳಲ್ಲಿ ಅಧಿಕಾರ ಸೂತ್ರಗಳನ್ನು ಕೈಕೊಳ್ಳಲು ಉಪಾಯವಿಲ್ಲ. ಈ ಕಾರಣದಿಂದ ಅಧಿಕಾರ ಸಂಸ್ಥೆಗಳಲ್ಲಿ ಹೋಗಲಿಚ್ಛಿಸುವವರು ಲೋಕಾರಾಧನೆಗೆ ಪ್ರಥಮತಃ ಬರಬೇಕಾಗುತ್ತದೆ. ಜನರಿಗಾದರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಮುಂದೊತ್ತಲು ಅಥವಾ ತಮ್ಮತಮ್ಮ ಕೊರತೆಗಳನ್ನು ಹೋಗಲಾಡಿಸಿಕೊಳ್ಳಲು ಇದೆ ಸಮಯವು ಮುಖ್ಯವಾಗಿರುವುದು. ಇದೊಂದು ಅವರಿಗೆ ಪರ್ವಕಾಲವಾಗಿರುವುದು. ವಿಲಾಯತಿಯಂಥ ಕನ್ಸರ್ವೇಟಿವ್, ಲಿಬರಲ್, ಯೂನಿಯನಿಸ್ಟ್, ಲೇಬರಪಾರ್ಟಿ ಮುಂತಾದ ವಿವಿಧ ಸಂಬಂಧಗಳುಳ್ಳ ರಾಜಕೀಯ ಪಕ್ಷಗಳು ಎಲ್ಲಿರುವವೊ ಅಲ್ಲಿ ಹೊಸ ಚುನಾವಣೆಯು ಬರೆ ಪರ್ವಕಾಲ ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಿನ ಮಹತ್ವದ ಸಮಯವೆಂದು ಹೇಳಬಹುದು. ತಮ್ಮ ಪಕ್ಷವೆ ಯಶಸ್ವಿಯಾಗಬೇಕು ಎಂಬ ಆಗ್ರಹವು ಪ್ರತಿಯೊಂದು ಕಡೆಯವರಲ್ಲಿ ತುಂಬಿರುವುದರಿಂದ ಅವರು ಸ್ವಮನೋರಥ ಸಿದ್ಧಿಯ ಬಗ್ಗೆ ಬೇಕಾದ ಯತ್ನಗಳನ್ನೆಲ್ಲ ಮಾಡುತ್ತಿರುತ್ತಾರೆ. "ಕನ್ಸರವೇಟಿವ್ ಪಕ್ಷದ ಸೂತ್ರಗಳನ್ನು ಭಂಗಪಡಿಸದನೆ ಲಿಬರಲ್ ಪಕ್ಷದ ಆಕಾಂಕ್ಷೆಗಳನ್ನು ಪೂರಯಿಸುವೆವು, ಸಾವುಕಾರರ, ಕಾರಖಾನೆ ಮಾಲಿಕರ ಮತ್ತು ವ್ಯಾಪಾರಿಗಳ ಹಿತ ಸಂರಕ್ಷಣವನ್ನು ಮಾಡಿ, ಕೂಲಿ ಸಂಘದ ಅಭ್ಯುದಯವನ್ನು ಪರಾಕಾಷ್ಠೆಯಿಂದ ಸಾಧಿಸುವೆವು". ಇತ್ಯಾದಿ ರೂಪದಿಂದ ಚುನಾವಣೆಗೆ ನಿಲ್ಲುವ ಉಮೇದುವಾರರು ಜಾಹೀರನಾಮೆಗಳನ್ನು ಪ್ರಕಟಿಸುವರು. ಅಧಿಕಾರಾರೂಢರಾದವರು ಎಲ್ಲ ಸಂಗತಿಗಳನ್ನು—ಪರಸ್ಪರ ವಿರುದ್ಧವಾದ ಎಲ್ಲ ಸಂಗತಿಗಳನ್ನು ಸಾಧಿಸಿ ಕೊಡುವುದೆಂದರೆ ಹೇಗೆ? ಕಲ್ಪ ವೃಕ್ಷವು ಬೇಕಾದವರಿಗೆ ಬೇಕಾದ ಫಲಗಳನ್ನು ಪೂರಯಿಸುತ್ತದೆ ಎಂದು ಪೌರಾಣಿಕ ಗಾಥೆ ಇದೆ. ಹಾಗೆ ಉಮೇದುವಾರರಾಗಿ ನಿಂತವರು ಕನ್ಸರ್ವೇಟಿವ್ ಲಿಬರಲ್, ಲೇಬರ ಮುಂತಾದ ಒಂದಕ್ಕೊಂದು ಕೂಡಿಬಾರದ ಹಿತ ಸಂಬಂಧಗಳನ್ನು ಒದಗಿಸಿಕೊಡಲು ಕಲ್ಪವೃಕ್ಷಗಳೊ ಅಥವಾ ಕಾಮಧೇನುವಿನ ಸಂತತಿಯವರೊ? ಅಲ್ಲ, ಎಂದ ಮೇಲೆ ಮೇಲಿನ ಅರ್ಥದ ಜಾಹೀರನಾಮೆಗಳು ಕೇವಲ ಅರ್ಥವಾದಮಾತ್ರವಲ್ಲದೆ ಅವುಗಳಿಂದ ಸರಿಯಾದ ಅರ್ಥವನ್ನು ಕಲ್ಪಿಸುವುದು ಸಮಂಜಸವಲ್ಲ. ಇಂಥ ಬರವಣಿಗೆಗಳ ಮುಖ್ಯ ತಾತ್ಪರ್ಯವು ತಮ್ಮನ್ನು ಚುನಾಯಿಸಿಕೊಡಬೇಕು ಎಂಬುದಿಷ್ಟೆ ಇರುವುದು ಹೊರತು ಜಾಹಿರನಾಮೆಗಳೊಳಗಿನ ಪ್ರತಿಯೊಂದು ಶಬ್ದವು ಅರ್ಥಾನುಧಾವಿಯಾಗಿರುತ್ತದೆಂದು ತಿಳಕೊಳ್ಳಬಾರದು.

ಈಗಿನ ಹಂಗಾಮಿ ಮಂತ್ರಿಗಳಾದ ಮಿ. ಬೊನರಲೊ ಇವರು ಒಂದು ಜಾಹೀರನಾಮೆಯನ್ನು ಪ್ರಕಟಿಸಿದ್ದಾರೆ. ಅದಾದರೂ ಮೇಲಿನ ನಿಯಮಕ್ಕೆ ಅನುಸಾರವಾಗಿಯೆ ಇದೆ. ತಮ್ಮ ಜಾಹೀರನಾಮೆಯಲ್ಲಿ ಬೊನರಲೊ ಸಾಹೇಬರು "peace throughout the world" ಲೋಕದಲ್ಲೆಲ್ಲ ಶಾಂತಿಯನ್ನು ಸ್ಥಾಪಿಸುವುದೆ ತನ್ನ ಕಾರಭಾರದ ಪ್ರಧಾನವಾದ ಉದ್ದೇಶವೆಂದು ಪ್ರಕಟಿಸಿದ್ದಾರೆ. ಈ ಉದ್ದೇಶವು ಅತ್ಯಂತ ಸ್ತುತ್ಯವಾದ್ದು. ಆದರೆ ಯಾರಿಗೆ ತಾನೆ ಲೋಕಶಾಂತಿಯು ಬೇಡವಾಗಿದೆ? ಸುಖ, ಶಾಂತಿ, ಸಮಾಧಾನ ಈ ದೈವಿಕ ಸಂಪತ್ತುಗಳು ಎಲ್ಲರಿಗೆ ಬೇಕು. ಅವುಗಳನ್ನು ನಿರಾಕರಿಸುವವನು ಬಹು ಕಡಿಮೆ. ಹೀಗಿರಲು ಬೊನರಲೊ ಸಾಹೇಬರು "ಲೋಕ ಶಾಂತಿಯೆ" ತನ್ನ ಪ್ರಧಾನಪದದ ಪ್ರಧಾನ ಉದ್ದೇಶವೆಂದು ಜಾಹೀರನಾಮೆಯ ಮುಖದಲ್ಲೆ ಏನು ಹೇಳಿರುವರೊ ಅದು, ಹೆಚ್ಚೆಂದರೆ ಅನುವಾದಾತ್ಮಕವಾದ್ದು ಅಥವಾ ಅರ್ಥವಾದ ರೂಪವಾದ್ದು. ಲೋಕ ಶಾಂತಿಯು ಮಿ. ಬೊನರಲೋ ಸಾಹೇಬರಿಗೆ ಮಾತ್ರ ಬೇಕೆಂದುಂಟೆ? ಅವರಿಗಿಂತ ಮುಂಚಿನ ಮಂತ್ರಿಗಳಾದ ಲೊಯ್ಡ ಜೋರ್ಜರಿಗೆ ಬೇಕಿದ್ದಲ್ಲವೆ? ಮಂತ್ರಿಪದದ ಅವರ ಗುರಿಯಾದರೂ ಲೋಕಶಾಂತತೆಯೆ ಇತ್ತು. ಆಗಲೂ ಈಗಲೂ ಅಧಿಕಾರದ ಕುರ್ಚಿಯನ್ನು ಅಂಟಿಕೊಂಡು ಕುಳಿತಿರುವ ಲೋರ್ಡ ಕರ್ಝುನರದಾದರೂ ಲೋಕಶಾಂತತೆಯೆ ಮುಖ್ಯೋದ್ದೇಶವಾಗಿದೆ. ಈ ರೀತಿಯಿಂದ ಸಮಸ್ತರ ಉದ್ದೇಶವು ಲೋಕದಲ್ಲಿ ಶಾಂತತೆಯ ಸಾಮ್ರಾಜ್ಯವನ್ನು ಸಂಸ್ಥಾಪಿಸಬೇಕೆಂದಿರುತ್ತದೆ. ಆದರೂ ಲೋಕಶಾಂತಿಯು ಮಾತ್ರ ಅತ್ತಿ ಹೂವಿನಂತೆ ಅದೃಶ್ಯವಾಗಿಯೆ ಇರುವುದು! ಹೀಗಿರಲು ಈಗಿನ ಮಂತ್ರಿಗಳು ತಮ್ಮ "ಹಂಗಾಮಿ" ಯಾದ ಪದವಿಯನ್ನು "ಕಾಯಮಿನ"ದಾಗಿ ಮಾಡಿಕೊಳ್ಳಲು ಯಾವ ಜಾಹೀರನಾಮೆಯನ್ನು ಹೊರಡಿಸಿದ್ದಾರೊ ಅದರಲ್ಲಿಯ ಲೋಕಶಾಂತಿಯ ವಿಧಾನವು ನಿಜವಾಗಿ ಅಶ್ರುತಪೂರ್ವವಲ್ಲ. ಯಾವ ಈ ಮಹಾ ಉದ್ದೇಶವನ್ನಿಟ್ಟುಕೊಂಡಿರುವಾಗಲೂ ಲೊಯ್ಡ ಜೋರ್ಜರಿಗೆ ಅದನ್ನು ಸಾಧಿಸಲಾಗಲಿಲ್ಲ, ಮೇಲಾಗಿ ಬೇರೆ ನೂರಾರು ಅಶಾಂತತೆಯ ಮೋಡಗಳು ಬಂದು ಮುಸುಕ ಹತ್ತಿದವು, ಆ ಉದ್ದೇಶವನ್ನು ಈಗಿನ ಬೊನರಲೊ ಸಾಹೇಬರಾದರೂ ಎಷ್ಟರ ಮಟ್ಟಿಗೆ ಕೈಗೂಡಿಸಿಯಾರೆಂಬುದು ಎಲ್ಲರಿಗೆ ತಿಳಿದ ವಿಷಯವೆ ಸರಿ. ಯುರೋಪದ ಮಹಾಯುದ್ಧದ ಹುಣ್ಣಿಗೆ ಒಂದು ಕಡೆಯಲ್ಲಿ ಮುಲಾಮು ಪಟ್ಟಿಯನ್ನು ಹಚ್ಚುವಾಗ ಇನ್ನೊಂದು ಕಡೆಯಿಂದ ಅದು ಮೂಡಿ ಬರುತ್ತದೆ. ಐರ್ಲಂಡಿನಲ್ಲಿಯ ಯಾದವ ಕಲಹವು ಅಶಾಂತ ಸ್ಥಿತಿಯಲ್ಲಿಯೆ ಇದೆ; ಇಜಿಪ್ತಿನಲ್ಲಿ ಅಸಂತೋಷವು ಬಾಯಿತೆರೆದು ಕುಳಿತಿದೆ; ಮೆಸಿಪೊಟೊಮಿಯಾದಲ್ಲಿ ಹಾಗು ಇತರ ಮಹಮ್ಮದೀಯ ಪ್ರಜೆಗಳಲ್ಲಿ ಲೊಯ್ಡ ಜೋರ್ಜರ ವಚನಭಂಗವು ಶಲ್ಯದಂತೆ ಚುಚ್ಚುತ್ತಿದೆ; ಹಿಂದುಸ್ಥಾನದಲ್ಲಿ ಸ್ವರಾಜ್ಯದ ಚಳವಳವನ್ನು ಅಧಿಕಾರಿ ವರ್ಗವು ಮೆಟ್ಟಬಿಡುವ ಉಪಾಯದಲ್ಲಿ ನಿರತವಾಗಿರುವುದರಿಂದ ಸಂತೋಷ, ಸಮಾಧಾನ ಮತ್ತು ಶಾಂತಿ ಇವೊಂದೂ ಇಲ್ಲದಂತಾಗಿವೆ. ವಸಾಹತುಗಳಲ್ಲಿ ಪರಸ್ಪರ ಸ್ಪರ್ಧೆಯ ಭಾವನೆಯು ಹಾಗೆಯೆ ಇದೆ. ಈ ರೀತಿಯಿಂದ ಸಾಮ್ರಾಜ್ಯದ ಎಲ್ಲ ಭಾಗಗಳಲ್ಲಿ ಒಂದು ಬಗೆಯ ಅಶಾಂತಿಯು ನೆಲೆಗೊಂಡಿರುವಾಗ ಅದನ್ನು ಪರಿಹರಿಸಲು ಸಾಧ್ಯವಾಗದೆ ಹೋಗಿ ಲೊಯ್ಡ ಜೋರ್ಜರು ಅಧಿಕಾರ ಧನುಸ್ಸನ್ನು ಕೆಳಗಿಟ್ಟರು. ಆಗ ಇವರು ಎದೆ ತಟ್ಟಿ ಮುಂದೆ ಬರುತ್ತಾರೆ; ಇದು ರಾಜಕಾರಣದ ರಂಗಭೂಮಿಯಲ್ಲಿ ಕ್ಷಣೈಕ ಆಶ್ಚರ್ಯವನ್ನುಂಟುಮಾಡಿದರೂ ಕೊನೆಗೆ ಇವರಾದರೂ ಲೊಯ್ಡ ಜೋರ್ಜರ ಕಚ್ಚೆಯನ್ನೆ ಹಿಡಿದು ಅಂಬೆಗಾಲನ್ನಿಡುವರಿದೆ! ಅರ್ಥಾತ್ ಲೋಕಶಾಂತಿಯ ಈ ಕಾರಣವು ಕೇವಲ ಭ್ರಮಾತ್ಮಕವಾಗಿದೆ.

ಇನ್ನು ಹೊಸ ಪ್ರಧಾನಜಿಯವರು ಹಿಂದುಸ್ಥಾನದ ವಿಷಯದಲ್ಲಿ ಹೊರಡಿಸಿದ ಉದ್ಗಾರಗಳನ್ನು ವಾಚಕರ ಮುಂದಿಡುವುದು ನಮ್ಮ ಕರ್ತವ್ಯವಾಗಿದೆ: "ಹಿಂದುದೇಶಕ್ಕೆ ೧೯೧೯ನೆಯ ಇಸವಿಯ ಹಿಂದೀ ಸುಧಾರಣಾ ಕಾನೂನಿನ ಮೇರೆಗೆ ಯಾವ ಸನದು ಕೊಡಲ್ಪಟ್ಟಿದೆಯೊ ಅದರ ಪ್ರಶಾಂತ ಮತ್ತು ವ್ಯವಸ್ಥಿತವಾದ ಪ್ರಗತಿಯನ್ನು ಸಾಧಿಸಲು ನಾವು ಇಚ್ಛಿಸುವೆವು. ದೇಶದ ಅಭಿವೃದ್ಧಿಗೆ ಎಲ್ಲರ ಸಹಕಾರವು ಆವಶ್ಯಕವಾದದ್ದು. ಅದು ಲಭಿಸಿತೆಂದರೆ, ಔದ್ಯೋಗಿಕ ಉನ್ನತಿಯನ್ನು ಸಾಧಿಸಿ ಆ ಮೂಲಕ ಸಾಂಪತ್ತಿಕ ಪರಿಸ್ಥಿತಿಯನ್ನು ಬೆಳಸಬಹುದು." ಬೊನರಲೊ ಸಾಹೇಬರು ಹಿಂದುಸ್ಥಾನಕ್ಕೆ ಮಾಡತಕ್ಕ ಉಪಕಾರವು ಇಷ್ಟು! ತಾನು, ಅಧಿಕಾರಾರೂಢನಾದ ಬಳಿಕ ಇಂಥಿಂಥ ಮಹೋಪಕಾರಗಳನ್ನು ಮಾಡಬಲ್ಲೆನೆಂದು ಬೋನರ್‌ಲೊ ಇವರು ಕೊಟ್ಟ ವರಪ್ರದಾನವು ಇದೆ ಸರಿ! ಆದರೆ ಬೋನರ್‌ಲೊ ಸಾಹೇಬರೆ! ನಿಮ್ಮ ಈ ಆಶ್ವಾಸನದಿಂದ ಸಂತುಷ್ಟರಾಗತಕ್ಕ ಪ್ರಾಣಿಗಳು ಹಿಂದುಸ್ಥಾನದಲ್ಲಿ ಸದ್ಯಃ ಇಲ್ಲವೆಂದು ನೀವು ಖಂಡಿತ ತಿಳಿಯಬೇಕು. ಹಿಂದೂಸ್ಥಾನದ ಔದ್ಯೋಗಿಕ ಉನ್ನತಿಯನ್ನು ನೀವು ಸಾಧಿಸಿಕೊಡಬೇಕಾಗಿದೆಯಲ್ಲವೆ? ಹಿಂದೂಸ್ಥಾನದ ಸುಧಾರಣಾಕಾನೂನನ್ನು, ನಿಮಗಿಂತ ಮುಂಚಿನವರು ಹುಡುಗರು ಪತಂಗವನ್ನು ಹಾರಿಸುವಂತೆ 'ಪ್ರೂ' ಎಂದು ಗಾಳಿಯಲ್ಲಿ ಹಾರಿಸಿದಿಟ್ಟರು! ನೀವು ದಾರಕಟ್ಟಿ, ಅದನ್ನು ಹಿಂದಕ್ಕೆ ಎಳೆದು ನಿಲ್ಲಿಸುವಿರಾ! ಆದರೆ ಗಾಳಿಯಲ್ಲಿ ತೇಲಾಡುವ ಪತಂಗವು ನಿಜವಾಗಿ ಎಷ್ಟು ಬೆಲೆಯುಳ್ಳದ್ದಿದೆಯೊ ಮತ್ತು ಎಷ್ಟು ಕಾರ್ಯಕಾರಿಯಾಗಿದೆಯೊ ಅಷ್ಟೆ ನಿಮ್ಮ ಸುಧಾರಣಾ ಕಾನೂನು ಕೂಡ ಕಾರ್ಯಕಾರಿಯಾಗಿದೆ. ಈ ಗಾಳಿಪಟವನ್ನು ಹಾರಿಸಿದರೇನು, ಬಾರಿಸದರೇನು? ಯಾರು ಕೇಳುವರು? ಹಿಂದೂದೇಶಕ್ಕೆ ಈಗ ನಿಜವಾಗಿ ಬೇಕಾದ್ದು ಸ್ವರಾಜ್ಯ. ಬೇರೆ ಯಾವದೂ ಅಲ್ಲ. ದಾಹಶಾಂತಿಗೆ ಹೇಗೆ ಶುದ್ಧವಾದ ನೀರು ಆವಶ್ಯಕವೊ ಅಥವಾ ಗ್ರೀಷ್ಮಋತುವಿನಿಂದ ಸಂತಪ್ತವಾದ ಭೂಮಿಗೆ ಹೇಗೆ ಮಳೆಯು ಅಗತ್ಯವೊ ಹಾಗೆ ಹಿಂದುಸ್ಥಾನಕ್ಕೆ—ಕೆಳಗೆ ಬಿದ್ದಿರುವ ಹಿಂದುಸ್ಥಾನಕ್ಕೆ ಸ್ವರಾಜ್ಯವು ಆವಶ್ಯಕವು. ಪಕ್ಷಿಗಳು ಉಚ್ಚವಾದ ವಾತಾವರಣದಲ್ಲಿ ಹಾರಿ ಸಂತೋಷಪಡುವಂತೆ ಮತ್ತು ಆ ಉತ್ಪನದಿಂದ ತಮ್ಮ ಸ್ವಾಭಾವಿಕವಾದ ಸ್ವಾತಂತ್ರ್ಯವನ್ನು ಆ ಪಕ್ಷಿಗಳು ಉಪಭೋಗಿಸುವಂತೆ, ಮನುಷ್ಯನಿಗೆ ನಿಸರ್ಗಸಿದ್ಧವಾದ ಸ್ವರಾಜ್ಯದ ಹಕ್ಕು—ಹಕ್ಕು ಮಾತ್ರವಲ್ಲ, ಅದರ ಉಪಭೋಗವು ಆವಶ್ಯಕವಾಗಿದೆ ಮತ್ತು ಸಂತೋಷಕರವಾಗಿದೆ. ಈ ವಿಷಯಗಳನ್ನು ಮನಸ್ಸಿಗೆ ತಾರದೆ ಅವುಗಳನ್ನು ಮನಃಪೂರ್ವಕ ಉಚ್ಚರಿಸದೆ ಹಿಂದೂಸ್ಥಾನದ ಪ್ರಗತಿ, ಹಿಂದುಸ್ಥಾನದ ಔದ್ಯೋಗಿಕ ಅಭ್ಯುದಯ ಇತ್ಯಾದಿ ಕಣ್ಣುಕಟ್ಟಿನ ಮಾತುಗಳನ್ನು ಆಡಿ ಸಮಯವನ್ನು ಜಾರಿಸುವದು ಈಗಿನ ದಿವಸಗಳಲ್ಲಿ ಜಾಣರೆನ್ನಿಸಿಕೊಳ್ಳುವವರ ಲಕ್ಷಣವಾದರೂ ಅಂಥ ಭಾಷೆಗೆ ಮರುಳಾಗುವ ಜನಸಮಾಜವು ಕಡಿಮೆ ಎಂಬುದನ್ನು ಬೋನರಲೊ ಸಾಹೇಬರು ಮನಸ್ಸಿನಲ್ಲಿ ತಿಳುಕೊಳ್ಳಲಿ.

ಈ ಹೊತ್ತು ಬೊನರಲೊ ಸಾಹೇಬರ ಜಾಹೀರನಾಮೆ, ನಾಳೆ ಇನ್ನೊಬ್ಬರ ಜಾಹೀರನಾಮೆ, ಈ ರೀತಿಯಿಂದ ಜಾಹೀರನಾಮೆಗಳು ಒಂದೆ ಸಮನೆ ಎಷ್ಟೆ ಹೊರಟರೂ ಹಿಂದೂಸ್ಥಾನಕ್ಕೆ ಇಂಥ ಜಾಹೀರನಾಮೆಗಳಿಂದ ಎಂದೂ ಸ್ವರಾಜ್ಯವು ಸಿಗಲಿಕ್ಕಿಲ್ಲ! ಹಿಂದೂಸ್ಥಾನವು ಸ್ವರಾಜ್ಯಕ್ಕೋಸ್ಕರ ಸ್ವಾವಲಂಬನದ ಪ್ರಯತ್ನಗಳನ್ನು ಮಾಡಬೇಕು. ಲೊಯ್ಡ ಜೋರ್ಜರ ಮುಖದ ಕಡೆಗೆ ಅಥವಾ ಬೊನರಲೊರ ಕೈಯ ಕಡೆಗೆ ನೋಡಿ ಕುಳಿತರೆ ಅದಕ್ಕೆ ಸ್ವರಾಜ್ಯವು ಲಭಿಸಲಿಕ್ಕಿಲ್ಲ. ಈ ಎಲ್ಲ ಸಾಹೇಬರು ತಮ್ಮ ತಮ್ಮ ಅಧಿಕಾರಗಳನ್ನು ಕಾಪಾಡಿಕೊಳ್ಳಲು ಹಾಗು ತಮ್ಮ ತಮ್ಮ ದೇಶದ ಅಭ್ಯುನ್ನತಿಯನ್ನು ಸಾಧಿಸಲು ಬಂದವರು. ನಿಜವಾಗಿ ಅದು ಅವರ ತಪ್ಪೆಂದು ಹೇಳಲಾಗದು. ಅವರ ಕರ್ತವ್ಯವನ್ನು ಅವರು ಮಾಡುತ್ತಾರೆ. ಹಾಗೆಯೆ ಹಿಂದುಸ್ಥಾನವು ಸಹ ತನ್ನ ಕರ್ತವ್ಯವನ್ನು ತಾನು ಮಾಡಬೇಕಾದ್ದು. ಬೊನರಲೊ ಸಾಹೇಬರನ್ನವಲಂಬಿಸಿ ಅಂದು ಎಂದೂ ಇರಬಾರದು.

ಸ್ಫುಟ ವಿಚಾರಗಳು.

೧. ನಾಮದಾರ ಶಾಸ್ತ್ರಿಗಳ ಸರ್ವೆಂಟ್ ಒಫ್ ಇಂಡಿಯಾ ಪತ್ರಿಕೆಯಲ್ಲಿ ಮುಂದಿನ ಶೋಚನೀಯ ವೃತ್ತಾಂತವು ಪ್ರಕಟವಾಗಿದೆ. ಹಿಂದುಸ್ಥಾನದ ಪಶ್ಚಿಮಭಾಗದಲ್ಲಿಯ ಒಬ್ಬ ಸಂಸ್ಥಾನಿಕರ ಪ್ರಜೆಗಳಲ್ಲಿ ಒಬ್ಬ ಸರದಾರನು ಜಾತಿಯಲ್ಲಿ ತನ್ನಿಂದ ಕೊಂಚ ಮೇಲ್ತರಗತಿಯ ಹುಡುಗಿಯನ್ನು, ಆ ಹುಡುಗಿಯ ತಾಯಿತಂದೆಯಂದಿರ ಸಮ್ಮತಿಯ ಮೇರೆಗೆ ಮದುವೆಮಾಡಿಕೊಂಡನು. ಆದರೆ ಆ ಹುಡುಗಿಯ ಜಾತಿಯ ಹಿತವನ್ನು ಸಾಧಿಸುವುದು ತನ್ನದೆ ಅಧಿಕಾರವೆಂದು ಆ ಸಂಸ್ಥಾನಿಕರು ತಿಳಕೊಳ್ಳುತ್ತಿದ್ದರು. ಆದ್ದರಿಂದ ಈ ಮದುವೆಯನ್ನು ಕಾನೂನಿನ ಮೇರೆಗೆ ತಪ್ಪೆಂದು ವಿಧಿಸಿದರು ಮತ್ತು ಅವರು ತನ್ನ ಮಾತಿನ ಮೇಲಿರುವ ಒಬ್ಬನಿಗೆ ಆ ಕನ್ಯೆಯನ್ನು ದಾನಮಾಡಿಸಿದರು. ಹಾಗು ಮೊದಲು ಮದುವೆಮಾಡಿಕೊಂಡ ಆ ದೊಡ್ಡ ಮನುಷ್ಯನ ಆಸ್ತಿಯನ್ನು ಸರಕಾರಕ್ಕೆ ಜಮೆಮಾಡಿ, ಸಂಸ್ಥಾನದ ಗಡಿಯಿಂದ ಅವನನ್ನು ಹೊರಗೆ ತಳ್ಳಿದರು! ಈ ಅನ್ಯಾಯವನ್ನು ಪರಿಮಾರ್ಜಿಸಲು ಆ ಸರದಾರನು ಪೊಲಿಟಿಕಲ್ ಏಜಂಟನಿಗೆ ಬರಕೊಂಡಿದ್ದಾನೆ ಅವನ ಅರ್ಜಿಗೆ ಯಾವ ಜವಾಬು ಬಂತು, ಇದು ಇನ್ನೂ ಗೊತ್ತಾಗಲಿಲ್ಲ. ಈ ಸಂಸ್ಥಾನದ ಪ್ರಜೆಯಾದ ಇನ್ನೊಬ್ಬ ಗೃಹಸ್ಥನು, ಮುಂಬಯಿಯಲ್ಲಿ ಕೆಲವು ಸಮಯ ನಿಂತು, ವ್ಯಾಪಾರ ಉದ್ಯೋಗಗಳನ್ನು ನಡಿಸಿ, ಹಣ ದುಡಿದು ಆ ಸಂಸ್ಥಾನದ ರಾಜಧಾನಿಯಲ್ಲಿ ಸುಂದರವಾದ ಬಂಗಲೆಯನ್ನು ಕಟ್ಟಿಸಿದ್ದನು. ಸಂಸ್ಥಾನಾಧಿಪತಿಗಳ ಕಣ್ಣು ಆ ಸುಂದರವಾದ ಕಟ್ಟೋಣದ ಮೇಲೆ ಬಿತ್ತು. ಆದರೆ ಅದನ್ನು ಥಕ್ಕನೆ ಕೈವಶಮಾಡುವುದು ಹೇಗೆ? ಆದ್ದರಿಂದ ಒಂದಾನೊಂದು ಕಾರಣದ ಮೇಲಿಂದ ಮಾಲಿಕನನ್ನು ಗಡಿಪಾರುಮಾಡಲಾಯಿತು. ಕೆಲವು ತಿಂಗಳು ದಾಟಿದ ಬಳಿಕ ಅವನಿಗೆ ಕತ್ತಲೆಕೋಣೆಯಲ್ಲಿ, ಯಾವ ತನಿಖೆಯೂ ಇಲ್ಲದೆ ದಿವಸಗಳನ್ನು ದೂಡಬೇಕಾಯಿತು. ಆದರೆ ಮೇಲಿಂದ ಅಂಕುಶವು ಬಿದ್ದ ಬಳಿಕ—ಆ ದುರ್ದೈವಿಗೃಹಸ್ಥನ ಬಂಧಮುಕ್ತತೆಯಾಯಿತು. ಆದರೂ ಆ ಸುಂದರ ಕಟ್ಟೋಣದ ಮಾಲಿಕನು, ಈ ಎಲ್ಲ ಯಾತನೆಗಳಿಂದ ಪೀಡಿತನಾಗಿ ಬೇಗನೆ ಮೃತ್ಯುವಿಗೆ ಗುರಿಯಾದನು. ಆತನ ವಿಧವೆಯು ಈ ಕಟ್ಟೋಣವನ್ನು ದಾನ ಕೊಡುವ ಆಲೋಚನೆಯಲ್ಲಿದ್ದಳು. ಈ ಸುದ್ದಿಯು ಸಂಸ್ಥಾನಾಧಿಪತಿಗಳ ಕಿವಿಗೆ ಬಿದ್ದು, ಅವರು ತನ್ನ ಸಮ್ಮತಿಯಿಲ್ಲದೆ ಯಾರೂ ಯಾವುದನ್ನೂ ದಾನಮಾಡಕೂಡದೆಂದು ಹುಕುಮನ್ನು ಹೊರಡಿಸಿದರು! ಈ ಸಂಸ್ಥಾನಿಕರ ಸತ್ಕೃತ್ಯಗಳಲ್ಲಿ ಇನ್ನೊಂದು ಸತ್ಕೃತ್ಯವು ಉದಾಹರಣೀಯವಾಗಿದೆ. ಇವರ ಸಂಸ್ಥಾನದಲ್ಲಿ ಒಮ್ಮೆ ಬರಗಾಲವು ಬಿತ್ತು. ಆಗ ಇವರು ಪ್ರಜೆಗಳ ಒಂದು ಸಭೆಯನ್ನು ಸೇರಿಸಿ ಒಂದು ಫಂಡನ್ನು ಜಮಾಯಿಸಲು ನಿಶ್ಚಯಿಸಿದರು. ಜನರು ಶೇಖರಿಸಿದ ಹಣದಷ್ಟೆ ಹಣವನ್ನು ಕೊಡಲು ಈ ಸಂಸ್ಥಾನಿಕರು ಆ ಸಭೆಯಲ್ಲಿ ಆಶ್ವಾಸನವನ್ನಿತ್ತರು. ಮತ್ತು ಆ ಫಂಡಿನ ಕೋಶಾಧ್ಯಕ್ಷರಾದರು. ೫೦ ಸಾವಿರ ರೂಪಾಯಿಯು ವರ್ಗಣಿಯು ಸೇರಿತು. ಇತ್ತ ಬರಗಾಲವು ಸಂಸ್ಥಾನದಲ್ಲಿ ಪಸರಿಸಹತ್ತಿತು. ಆದರೆ ಕೂಡಿದ ಹಣವು ಏನಾಯಿತೆಂದು ವಿಚಾರಿಸಲು ಯಾರಿಗೂ ಧೈರ್ಯವು ಬರಲಿಲ್ಲ!

೨. ಒಂದು ಕಡೆಯಲ್ಲಿ ಮೇಲಿನಂತೆ ಸಂಸ್ಥಾನಿಕರ ವೃತ್ತಾಂತವು ಪ್ರಕಟವಾಗುವಾಗ ಮತ್ತು ಸಂಸ್ಥಾನಿಕರ ಸಂರಕ್ಷಣದ ಪ್ರೆಸ್ ಕಾನೂನು ಕೌನ್ಸಿಲುಗಳಲ್ಲಿ ಪಾಸಾಗುವಾಗ ಇನ್ನೊಂದು ಕಡೆಯಲ್ಲಿ ಒಬ್ಬ ಇನಾಮುದಾರರ ಪದಚ್ಯುತಿಯ ವಾರ್ತೆಯು ಪ್ರಕಟವಾಗುತ್ತದೆ.

ಶ್ರೀ. ಗೋಪಾಳದಾಸ ಅಂಬಾದಾಸ ದೇಸಾಯಿ ಇವರು ಗುಜರಾಥ ಪ್ರಾಂತದಲ್ಲಿಯ ಒಬ್ಬ ತಾಲೂಕದಾರರು. ಇವರಿಗೆ "ಚೀಫ್" ಎಂಬ ಸಂಜ್ಞೆ ಇದ್ದು, ಇವರು ಆರನೆಯ ತರಗತಿಯವರಾಗಿರುತ್ತಾರೆ. ಇವರು ಹಿಂದೂಸ್ಥಾನ ಸರಕಾರದೊಡನೆ ಮಿತ್ರತ್ವದಿಂದ ನಡಕೊಳ್ಳುವುದಿಲ್ಲ, ಸರಕಾರದ ವಿರೋಧಿಗಳಾದ ಅಸಹಕಾರಿಗಳೊಡನೆ ಸಹಕಾರದಿಂದ ನಡಕೊಳ್ಳುತ್ತಾರೆ, ಕಾಠೇವಾಡದ ಕಡೆಗೆ ಮುಂಬಯಿ ಗವರ್ನರರು ಸಂಚಾರಾರ್ಥ ಹೋಗಿರುವಾಗ ಇವರು ಗವರ್ನರರನ್ನು ಸಂದರ್ಶಿಸಲು ಬರುವುದಿಲ್ಲ, ಈ ಎಲ್ಲ ಆರೋಪಗಳನ್ನು ಹೊರಿಸಿ ಶ್ರೀಯುತ ಗೋಪಾಲ ದೇಸಾಯಿಗಳನ್ನು ಅವರ ತಾಲೂಕದಾರಿಯಿಂದ ಚ್ಯುತಪಡಿಸೋಣಾಗಿದೆ! "ಮುಂಬಯಿ ಸರಕಾರದ ಕಾರಭಾರವು ಏಕತಂತ್ರಿಯಾಗಿದೆ" ಎಂದು ದೇಸಾಯಿಯವರು ಹೇಳಿದ್ದರೆಂದು ಕೂಡ ಅವರ ಮೇಲೆ ಆರೋಪಣೆ ಇತ್ತು. ಈ ಆರೋಪಣೆ ಮತ್ತು ಮೇಲಿನ ಆರೋಪಣೆಗಳನ್ನು ಒಟ್ಟುಗೂಡಿಸಿ, ಮುಂಬಯಿ ಸರಕಾರವು ಅವರನ್ನು ತಾಲೂಕದಾರಿಯ ಹಕ್ಕಿನಿಂದ ದೂರಪಡಿಸಿದೆ. ಈ ಮೇರೆಗೆ ಅವರ ಉಪಭೋಗದ ಹಕ್ಕನ್ನು ರದ್ದುಪಡಿಸುವಾಗ ಮುಂಬಯಿ ಸರಕಾರವು ಹೊರಡಿಸಿದ ಉದ್ಗಾರಗಳು ಬಹು ಪ್ರಶಂಸನೀಯವಾಗಿವೆ! "ಸರಕಾರದೊಡನೆ ಮಿತ್ರತ್ವದ ಸಂಬಂಧವನ್ನು ಕಡೆದುಕೊಂಡು ಯಾರಿಗೂ ಹಿಂದುಸ್ಥಾನದಲ್ಲಿ ಒಂದು ಸಂಸ್ಥಾನದ ಅಥವಾ ಒಂದು ಇಸ್ಟೇಟಿನ ರೂಲಿಂಗ್ ಚೀಫರಾಗಿ ನಿಲ್ಲಲು ಸಾಧ್ಯವಿಲ್ಲ". ಶ್ರೀಯುತ ದೇಸಾಯಿಗಳ ಮೇಲಿನ ಆರೋಪಣೆ ಮತ್ತು ಮುಂಬಯಿ ಸರಕಾರದ ಈ ಸ್ಪಷ್ಟೀಕರಣ ಹಾಗು ಕೊನೆಯ ತೀರ್ಮಾನ ಇವುಗಳ ತುಲನೆಯನ್ನು ಮಾಡಿದರೆ, ಅಸಹಕಾರಿಗಳ ಮೇಲಿನ ಕೇವಲ ಸಹಾನುಭೂತಿಯು ಇಂಥ ಕಾಯಮಿನ ಹಕ್ಕನ್ನು ರದ್ದುಪಡಿಸಲು ಸಾಕಾದ ಕಾರಣವಾಗುತ್ತದೆಂದ ಮೇಲೆ, ಬ್ರಿಟಿಷ್ ರಾಜ್ಯದೊಳಗಿನ ಪ್ರಜೆಗಳ ಮತ್ತು ಸಂಸ್ಥಾನಿಕರ ವೈಭವವು ಎರಡು ದಿವಸದ್ದು, ಅಸ್ಥಿರವಾದ್ದು ಎಂಬ ವೇದಾಂತವು ಎಲ್ಲರ ಮನಸ್ಸಿಗೆ ಹೊಳೆಯದೆ ಇರಲಿಕ್ಕಿಲ್ಲ! ಇಂಥ ಪರಿಸ್ಥಿತಿಯಲ್ಲಿ ಪ್ರೆಸ್ ಕಾನೂನನ್ನು ಸಂಸ್ಥಾನಿಕರ ಸಂರಕ್ಷಣದ ನೆವದಿಂದ ಪಾಸುಮಾಡಿ ಪ್ರೇಮವನ್ನು ವ್ಯಕ್ತಗೊಳಿಸುವುದಕ್ಕೆ ಯಾವ ಹೆಸರನ್ನು ಕೊಡಬೇಕೆಂಬುದು ನಮಗೆ ಗೊತ್ತಾಗುವುದಿಲ್ಲ. ಒಂದೊಂದು ಕಡೆಯಲ್ಲಿ ಒಂದೊಂದು ವೇಷವನ್ನು ಹಾಕಿಕೊಂಡು, ಅಂತು ಕೊನೆಗೆ ಸ್ವಾರ್ಥ ಸಾಧನದ ಯಾವ ಪರಮ ಧ್ಯೇಯವುಂಟೊ ಅದನ್ನು ಬ್ರಿಟಿಷ್ ಸರಕಾರದ ಆಳ್ಮರು ಉತ್ತಮ ರೀತಿಯಿಂದ ಮತ್ತು ಯಾವ ಪ್ರಸಂಗದಲ್ಲೂ ತಪ್ಪದೆ, ಸಾಧಿಸುತ್ತಾರೆಂಬ ನೀತಿ ಪಾಠವನ್ನು ಈ ಎಲ್ಲ ಚರಿತ್ರೆಯಿಂದ ಕಲಿಯಬಹುದಾಗಿದೆ.

೩. ಮದ್ರಾಸ ಸರಕಾರದ ಪ್ರಯಾಣದ ಖರ್ಚು: ಈ ಪ್ರಯಾಣದ ಖರ್ಚು ಎಷ್ಟಾಗಿದೆ ಎಂದು ಕೌನ್ಸಿಲಿನಲ್ಲಿ ಸಭಾಸದರೊಬ್ಬರು ಪ್ರಶ್ನೆ ಕೇಳಿದ್ದರು. ಈ ಪ್ರಶ್ನೆಗೆ ಸರಕಾರವು ತನ್ನ ಪ್ರಯಾಣದ ಮಾಹಿತಿಯನ್ನು ಪ್ರಕಟಿಸಿದೆ. ಮದ್ರಾಸ ಸರಕಾರದ ಅಧಿಪತಿಗಳಾದ ಒಬ್ಬ ಲೊರ್ಡ ವಿಲಿಂಗ್‌ಡನ್ನರ ಪ್ರಯಾಣದ ಖರ್ಚು ೧,೩೩,೩೦೭ ರೂಪಾಯಿಯು ಬಂದಿದೆ! ವಸ್ತುತಃ ವಿಚಾರಮಾಡಿ ನೋಡಿದರೆ, ಸ್ವತಃ ಗವರ್ನರ ಸಾಹೇಬರ ಸಂಬಳವಾದರೂ ಇಷ್ಟು ಇದ್ದೀತೆ ಎಂದು ಕೆಲವರು ಆಶಂಕಿಸಿಕೊಂಡಾರು. ಆದರೆ ಅಂಥವರು ಸಂಶಯಪಡುವುದು ಅಗತ್ಯವಿಲ್ಲ; ಸಂಬಳಕ್ಕಿಂತ ಈ ಪ್ರಯಾಣದ ಖರ್ಚು ಅಧಿಕವಾಗಿದೆ ಎಂಬುದು ನಿಶ್ಚಿತ. ಈಗ ಗವರ್ನರ ಸಾಹೇಬರು ಹಿಂದೀ ಜನರ ಇಷ್ಟು ಹಣವನ್ನು ವೆಚ್ಚಮಾಡಿ ಹಿಂದುಸ್ಥಾನದಲ್ಲಿ ಪ್ರಯಾಣಮಾಡುವ ಕಷ್ಟವನ್ನು ವಹಿಸಿದ್ದು ಜನತೆಯ ಅಭ್ಯುದಯಕ್ಕಾಗಿಯೆ ಅಲ್ಲವೆ? ಎಂದಮೇಲೆ ಪ್ರಯಾಣದ ಖರ್ಚಿನ ರಕಮು ಇಷ್ಟು ದೊಡ್ಡದಾಯಿತೆಂದು ಜನರು ಗುಣಗುಟ್ಟುವುದು ಯಾಕೆ? ಕಾರ್ಯಕಾರಿ ಮಂಡಲದೊಳಗಿನ ಹಿಂದಿ ಸಭಾಸದರ ಪ್ರಯಾಣದ ಖರ್ಚು ಕೂಡ ಇದೆ ರೀತಿಯಿಂದ ಮಿತಿಯನ್ನು ಅತಿಕ್ರಮಿಸಿದೆ. ಈ ಪ್ರಯಾಣದ ಖರ್ಚು ೧೦,೦೦೦ ರೂಪಾಯಿಗೆ ಬಂದು ನಿಂತಿದೆ. ಬೇರೆ ಎರಡು ಸಂದರ್ಭಗಳಲ್ಲಿ ರೂ. ೧೮,೮೪೦ ಮತ್ತು ರೂ. ೧೩,೩೪೦ ಆಗಿದೆ ಯಾರ ಹಣ! ಖರ್ಚ ಮಾಡುವುದು ಯಾರು? ಈ ಎಲ್ಲ ಅನವಸ್ಥೆಗಳನ್ನು ನೋಡುವಾಗ, ಹಿಂದುಸ್ಥಾನ ಸರಕಾರವು ರಿಟ್ರೆಂಚಮೆಂಟ ಕಮಿಟಿಯ ನೇಮಕದ ಫಾರ್ಸನ್ನು ಯಾಕೆ ಮಾಡುತ್ತದೆ? ಎಂಬ ಸವಾಲನ್ನು ಕೇಳಬೇಕಾಗಿ ಬರುತ್ತದೆ. ಹಣವಿಲ್ಲ, ಖರ್ಚಿನ ಪರಮಾವಧಿಯು ಏರುತ್ತ ಹೋಗಿದೆ ಎಂದು ಹೇಳಿ ಕೆಳಗಿನ ತರಗತಿಯ ನೌಕರರುಗಳ ಇಸಮುಗಳನ್ನೆ ತೆಗೆಯುವುದು ಅಥವಾ ಅವರ ಸಂಬಳವನ್ನು ಕಡಿಮೆಮಾಡುವುದು ಈ ಅಸ್ವಾಭಾವಿಕ ಮತ್ತು ವಕ್ರವಾದ ಯಾವ ಕ್ರಮಗಳು ಈಗಿನ ಹಣದ ಬರಗಾಲದ ದಿವಸಗಳಲ್ಲಿ ಪ್ರಾರಂಭವಾಗಿವೆಯೊ ಅವುಗಳಿಗಿಂತಲೂ ಮೀಸೆಗೆ ತುಪ್ಪ ಹಚ್ಚಿ ಕೈಬೀಸುತ್ತಾ ತಿರುಗಾಡುವ ಮೇಲಾಧಿಕಾರಿಗಳ ಪ್ರಯಾಣದ ಮತ್ತು ಬಹುದೊಡ್ಡ ಸಂಬಳದ ರಕಮನ್ನು ಕಡಿಮೆ ಮಾಡುವುದು ಹಿತಾವಹವಾದ ಸಂಗತಿಯು. ಆದರೆ ಈಗಿನ ಸ್ವಾರ್ಥಪರತೆಯ ದಿವಸಗಳಲ್ಲಿ ಹಿತಾವಹತೆಯ ಕಾರಣಗಳನ್ನು ಯಾರು ವಿಮರ್ಶಿಸುತ್ತಾರೆ? ಸಾರಾಂಶಃ ದರಬಾರದ ಖರ್ಚಿನ ಬಾಯಿಯನ್ನು ಆದಷ್ಟು ಸಂಕೋಚಮಾಡಬೇಕು ಮತ್ತು ಅದನ್ನು ಮಾಡುವಾಗ ಪ್ರಯಾಣದಂಥ ಅನವಶ್ಯಕ ಸಂಗತಿಯನ್ನು ತೆಗೆದುಹಾಕಬೇಕು. ಇದೆ ಎಲ್ಲರ ಅಭಿಪ್ರಾಯವು.

೪. ಕಳೆದ ವರ್ಷ ನವಂಬರ ತಿಂಗಳ ಅಂತ್ಯದಲ್ಲಿ ರಾಜದ್ರೋಹದ ಆರೋಪಣೆಯಿಂದ ೧೨ ತಿಂಗಳು ಶಿಕ್ಷೆಯನ್ನು ಹೊಂದಿದ ವಿದ್ಯಾಭೂಷಣರಾದ ಶ್ರೀಯುತ ಡಿ. ಕೆ. ಭಾರದ್ವಾಜರು ಒಕ್ಟೋಬರ ತಾ. ೨೮ರಲ್ಲಿ ಕಡಲೂರ ಜೈಲಿನಿಂದ ಬಿಡುಗಡೆಯನ್ನು ಹೊಂದಿ ಮೊನ್ನೆಯ ಮಂಗಳವಾರ ಇಲ್ಲಿಗೆ ಬಂದು ತಲಪಿರುವರು. ಇವರನ್ನು ನಾಗರಿಕರು ಸಂಭ್ರಮದಿಂದ ಮತ್ತು ಮೆರವಣಿಗೆಯಿಂದ ಸ್ವಾಗತೀಕರಿಸಿದ್ದರು. ಶ್ರೀಯುತ ಭಾರದ್ವಾಜರಿಗೆ ೧೨ ತಿಂಗಳ ಶಿಕ್ಷೆಯಾಗಿದ್ದಾದರೂ, ಅವರ ಚಲೋವರ್ತನದ ದೆಸೆಯಿಂದ ೧ ತಿಂಗಳು ಕಡಿಮೆಯಾಗಿದ್ದದರಿಂದ ಅವರು ಒಕ್ಟೋಬರದ ಅಂತ್ಯದಲ್ಲಿ ಬಿಡುಗಡೆ ಹೊಂದಿದ್ದಾರೆಂದು ತಿಳಿಸಲು ನಮಗೆ ತುಂಬಾ ಸಂತೋಷವಾಗುವುದು. ಶ್ರೀಯುತ ಭಾರದ್ವಾಜರು ಸರಕಾರವು ವಿಧಿಸಿರುವ ಶಿಕ್ಷೆಯನ್ನು ಧೈರ್ಯದಿಂದ ಸಹಿಸಿ ಮತ್ತು ಮುಗಿಸಿ ಹೇಗೆ ಬಂದಿರುವರೊ ಹಾಗೆಯೆ ಉಚಿತವಾದ ವಿಶ್ರಾಂತಿಯನ್ನು ಹೊಂದಿದ ಬಳಿಕ ಅದೆ ಧೈರ್ಯದಿಂದ ಮತ್ತು ಕರ್ತವ್ಯನಿಷ್ಠೆಯಿಂದ ಮುಂದಿನ ಮಾರ್ಗವನ್ನು ಆಕ್ರಮಿಸದೆ ಇರಲಿಕ್ಕಿಲ್ಲ. ವಿದ್ಯಾಭೂಷಣ ಭಾರದ್ವಾಜರಂಥ ೨೦-೨೫ ಸಾವಿರ ದೇಶಭಕ್ತರು ಈ ಹಿಂದೂಸ್ಥಾನದಲ್ಲಿ ಮಾತೃಭೂಮಿಯ ಸೇವೆಗಾಗಿ ಮತ್ತು ಉದ್ಧಾರಕ್ಕಾಗಿ ಬಂದಿವಾಸದ ಯಾವ ಕಷ್ಟವನ್ನು ಸಹಿಸಿರುವರೊ ಮತ್ತು ಯಾವ ಗೃಹಸೌಖ್ಯವನ್ನೂ ಸ್ವಾರ್ಥತ್ಯಾಗವನ್ನೂ ಮಾಡಿರುವರೊ ಆ ಎಲ್ಲ ಸತ್ಕೃತ್ಯಕ್ಕೆ ಈಗಲೆ ಇಲ್ಲವಾದರೂ ಬೇಗನೆ ಸುಫಲವು ಬಂದೀತೆಂಬುದಕ್ಕೆ ಸಂದೇಹವಿಲ್ಲ. ಅನೇಕ ದೇಶಭಕ್ತರು ಜೈಲಿಗೆ ಹೋಗಿ ಬಂದರು; ಹಿಂದೂಸ್ಥಾನಕ್ಕೆ ಇನ್ನೂ ಸ್ವರಾಜ್ಯವು ಸಿಗಲಿಲ್ಲವಲ್ಲ, ಆದ್ದರಿಂದ ಇನ್ನು ಮುಂದೆಯೂ ಬರಲಿಕ್ಕಿಲ್ಲವೆಂದು ಅಷ್ಟು ಬೇಗನೆ ಯಾರೂ ನಾಸ್ತಿಕರಾಗಬಾರದು. ದಿನೇ ದಿನೇ ರಾಷ್ಟ್ರವು ತನ್ನ ಪ್ರಯಾಣದಲ್ಲಿ ಸ್ವರಾಜ್ಯವನ್ನು ಹೆಚ್ಚು ಹೆಚ್ಚು ಸಮೀಪಿಸಹತ್ತಿದೆ. ಎಂಬುದನ್ನು ಸೂಕ್ಷ್ಮ ರೀತಿಯಿಂದ ನೋಡುವವರಿಗೆ ತಿಳಿಯದೆ ಇರಲಿಕ್ಕಿಲ್ಲ. ಆದ್ದರಿಂದ ಈ ವಿಷಯದಲ್ಲಿ ಯಾರೂ ನಿರಾಶಾವಾದಿಗಳಾಗಬಾರದು. ಇರಲಿ. ಡಿಸ್ಟ್ರಿಕ್ಟ ಕೊಂಗ್ರೆಸ್ಸಿನ ಸೆಕ್ರೆಟರಿಗಳಾದ ವಿದ್ಯಾಭೂಷಣ ಭಾರದ್ವಾಜರು ಪುನಃ ಸ್ವಜನರಲ್ಲಿ ಬಂದು ಸೇರಿದ್ದಕ್ಕೆ ಅವರನ್ನು ಅಭಿನಂದಿಸಿ ಪೂರ್ವವತ್ ಅವರ ಉದ್ಯೋಗವು ಪ್ರಾರಂಭವಾಗಲಿ ಎಂದು ಬಯಸುವೆವು.

೫. ಇಲ್ಲಿಯ ಸುಪ್ರಸಿದ್ಧ ಕ್ರೈಸ್ತ ಮಿಶನರಿಗಳಾದ ಕ್ರಿಸ್ತಾನುಜವತ್ಸರು ತಮ್ಮ ೭೭ನೆಯ ವಯಸ್ಸಿನಲ್ಲಿ ಕಳೆದ ಶನಿವಾರ ಪರಲೋಕವಾಸಿಗಳಾದರೆಂದು ತಿಳಿಸಲು ನಾವು ತುಂಬಾ ವ್ಯಸನ ಪಡುತ್ತೇವೆ. ಇವರು ಬೈಬಲನ್ನು ಕಲಿಸುವ ವೈದಿಕ ಶಾಲೆಯಲ್ಲಿ ಸುಮಾರು ೪೦-೫೦ ವರ್ಷ ಅಧ್ಯಾಪಕರಾಗಿದ್ದರು. ಲೆಟಿನು, ಗ್ರೀಕು, ಮತ್ತು ಮುಖ್ಯವಾಗಿ ಸಂಸ್ಕೃತ ಈ ಭಾಷೆಗಳಲ್ಲಿ ಇವರಿಗೆ ಹೆಚ್ಚಿನ ಪರಿಚಯವೂ, ಪರಿಶ್ರಮವೂ ಇದ್ದ ಕಾರಣ ವೈದಿಕ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಾಪಕರಾಗಿದ್ದರು. ಮಿಶನರಿಗಳ ತರಬೇತಿನ ಕ್ರಮದಂತೆ ಅವರ ವೈದಿಕರಿಗೆ ಎಲ್ಲ ಧರ್ಮಗಳ ಜ್ಞಾನವಿರುವುದು ಸಹಜವಾಗಿದ್ದರೂ ರೆವರೆಂಡ ಕ್ರಿಸ್ತಾನುಜರಿಗೆ ಪ್ರಚಲಿತವಾಗಿರುವ ಪ್ರತಿಯೊಂದು ಧರ್ಮದ ಮತ್ತು ಮತದ ಸರಿಯಾದ ಜ್ಞಾನವಿತ್ತು. ಈ ರೀತಿಯಿಂದ ಸಕಲ ಮತ ಮತಾಂತರಗಳ ಸೂಕ್ಷ್ಮತೆಯನ್ನು ತಿಳಿದು ಕ್ರಿಸ್ತಾನುಜರು ಸ್ವಧರ್ಮದಲ್ಲಿ ಸಂಪೂರ್ಣ ನಿಷ್ಠಾವಂತರಾಗಿದ್ದರು. ಕ್ರಿಸ್ತ ಧರ್ಮದೊಳಗಿನ ಮುಖ್ಯ ರಹಸ್ಯವಾದ ಯಾವ ಭಕ್ತಿಮಾರ್ಗವಿದೆಯೊ, ಅದರ ಪರಮ ಆಸ್ವಾದವನ್ನು ಅವರು ಪಡೆದವರಾದ ಕಾರಣ ಅವರ ಶುದ್ಧ ವರ್ತನದಲ್ಲಿ ಮತ್ತು ಮಧುರ ವಾಕ್ಯದಲ್ಲಿ ಒಂದು ಬಗೆಯ ಅಪೂರ್ವವಾದ ಅಧಿಕಾರವಿತ್ತೆನ್ನಬಹುದು. ಸಮಸ್ತ ಲೋಕದ ಶಾಂತಿ ಮತ್ತು ವಿಶ್ವಬಂಧುತೆ ಇವೆ ಕ್ರಿಸ್ತಮತದೊಳಗಿನ ಉದಾತ್ತವಾದ ತತ್ವಗಳೆಂದು ಅವರು ಯಾವಾಗಲೂ ಹೇಳುತ್ತಿದ್ದರು. ಮತ್ತು ಅವರ ವರ್ತನದ ನೋಟವು ಕೂಡ ಹಾಗೆಯೆ ಇತ್ತೆಂದು ವಿಧಿಸಿದರೆ ಅದು ಅತ್ಯುಕ್ತಿಯಾಗಲಾರದು. ರೆವರೆಂಡ್ ಕ್ರಿಸ್ತಾನುಜರು ಈ ಮೇರೆಗೆ ಹೇಗೆ ಧಾರ್ಮಿಕ ರಾಜ್ಯದಲ್ಲಿ ಭಕ್ತಶಿರೋಮಣಿಯ ಪದವಿಯನ್ನು ಹೊಂದಿದ್ದಾರೊ ಹಾಗೆಯೆ ಕನ್ನಡ ವಾಙ್ಮಯ ಸೇವಕರಲ್ಲಿ ಸಹ ಮೇಲಿನ ಸ್ಥಾನವನ್ನು ಪಡೆದಿದ್ದರು. "ಮಸೀಹ ವಿಜಯ" ಮುಂತಾದ ಕ್ರಿಸ್ತ ಧರ್ಮದೊಳಗಿನ ಪೌರಾಣಿಕ ಕಥೆಗಳನ್ನು ಅವರು ತಿಳಿಗನ್ನಡದಲ್ಲಿ ಉತ್ತಮ ಶೈಲಿಯಿಂದ ಬರೆದದ್ದಲ್ಲದೆ ಇಂಗ್ಲಿಷ್ ಕರ್ನಾಟಕ ಕೋಶವನ್ನು ತಯಾರಿಸಿದ್ದರು. ಈ ಕೋಶದ ಮೊದಲಿನ ಪ್ರತಿಗಳೆಲ್ಲವೂ ಖರ್ಚಾಗಿ ಹೋಗಿ ಈಗ ಅದರ ಮುದ್ರಣದ ಪುನಃ ಸುಧಾರಿಸಿದ ಹೊಸ ಆವೃತ್ತಿಯು ನಡೆಯುತ್ತಿದೆ. ಈ ವೃದ್ಧಾವಸ್ಥೆಯಲ್ಲಿ ಸಹ ಅವರು ಕೋಶ ಸಂಸ್ಕರಣದ ಈ ಶ್ರಮವನ್ನು ಮಾಡುತ್ತಿದ್ದರು. ಅವರಿಗೆ ಯಾವಾಗಲೂ ವಿದ್ಯೆಯಲ್ಲಿಯೆ ಆಸಕ್ತಿಯು ಇತ್ತು. ಇರಲಿ, ಈ ರೀತಿಯಿಂದ ಜ್ಞಾನ ವೃದ್ಧರೂ, ಶಾಂತಸ್ವಭಾವಿಗಳೂ, ಧಾರ್ಮಿಕರೂ, ಬಹುಶ್ರುತರೂ ಆದ ಕ್ರಿಸ್ತಾನುಜ ವತ್ಸರು ಗತಿಸಿದ ಕಾರಣ ಇಲ್ಲಿಯ ಕ್ರೈಸ್ತ ಸಮಾಜಕ್ಕೆ ಮಾತ್ರವಲ್ಲ, ಅವರು ಕರ್ನಾಟಕ ವಾಙ್ಮಯ ಭಕ್ತರಾದ ಕಾರಣ ಕನ್ನಡ ದೇಶಕ್ಕೂ ಕೂಡ ಒಂದು ದೊಡ್ಡ ಹಾನಿಯೆ ಸರಿ. ಕ್ರಿಸ್ತ ಸಮಾಜಕ್ಕೆ ಅವರು ಹೇಗೆ ಒಂದು ರತ್ನವಾಗಿದ್ದರೊ ಹಾಗೆ ಕನ್ನಡಿಗರಿಗೆ ಒಂದು ಅಲಂಕಾರವಾಗಿದ್ದರು. ಇಂಥವರ ನಿಧನದಿಂದ ಅವರ ಕುಟುಂಬಕ್ಕೆ ಹಾಗು ಅವರ ಪುತ್ರರಿಗೆ ದುಃಖವಾದೀತು. ತಥಾಪಿ ಮರಣವು ಯಾರಿಗೂ ತಪ್ಪದೆಂಬೀ ಸಹಜ ನಿಯಮವನ್ನು ಲಕ್ಷ್ಯಕ್ಕೆ ತಂದುಕೊಂಡು ಪದವೀಧರರಾದ ಅವರ ಇಬ್ಬರೂ ಮಕ್ಕಳು ಪಿತೃಮರಣದ ಶೋಕವನ್ನು ಮರೆತು ಅವರ ಅನುಕರಣೀಯ ಗುಣಗಳನ್ನು ಅನುಕರಿಸಿಯಾರೆಂದು ನಂಬಿದ್ದೇವೆ.

ಮಂಗಳೂರು.

ದಿ ಕೆನರಾ ಸ್ಕೂಲ್ ಒಫ್ ಕಮ್ಮರ್ಸ ಹಂಪನಕಟ್ಟೆ ಮಂಗಳೂರು ಇದರ ಪ್ರಿನ್ಸಿಪಾಲರಾದ ಮಿ. ಯಂ. ಡಬ್ಲ್ಯು. ಸೋನ್ಸ ಎ. ಸಿ. ಆರ್. ಎ. ಇವರು ಕಳುಹಿಸಿದ ತಮ್ಮ ಶಾಲೆಯ (prospectus) ಪ್ರಸಿದ್ಧಿ ಪತ್ರಗಳನ್ನು ಸ್ಥಳೀಯ ಚಂದಾದಾರರ ಅವಗಾಹನೆ ಬಗ್ಗೆ ಈ ಸಂಚಿಕೆಯೊಡನೆ ಇಟ್ಟಿದೆ.

ಇದೇ ತಿಂಗಳ ತಾ. ೨ನೇ ಸಾಯಂಕಾಲ ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನವರ ಆಮಂತ್ರಣದ ಪ್ರಕಾರ ಮೋಟರ ಬಸ್ಸುಗಳ ಮಾಲಿಕರ ವ ಬಸ್ಸು ಕಂಪೆನಿಗಳ ಪ್ರತಿನಿಧಿಗಳ ಸಭೆಯು ಕೂಡಿತ್ತು. ಮಿ. ಜೋಸೆಫ್ ಅಲ್ವರೀಸರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಈಗ ಜಾರಿಯಲ್ಲಿರುವ ಮೋಟರ್ "ವೆಹಿಕಲ್ ಏಕ್ಟ" ಇದರ ನ್ಯೂನತೆಗಳು, ಅಧಿಕಾರಿಗಳು ಬಸ್ ಚಲಾವಣೆಗೆ ಲೈಸನ್ಸುಗಳನ್ನು ಕೊಡುವ ವಿಧಾನಗಳು ಇತ್ಯಾದಿಗಳ ಚರ್ಚೆಯು ನಡೆದ ನಂತರ 'ಮೋಟರ್ ಬಸ್ಸ್ ಮಾಲಿಕರ ಒಂದು ಸಂಘವನ್ನು ಏರ್ಪಡಿಸುವುದು ಅಗತ್ಯವೆಂತ ನಿರ್ಧರಿಸಲಾಯಿತು. ಮತ್ತು ಈ ಸಂಘದ ನಿಯಮ ಇತ್ಯಾದಿಗಳನ್ನು ಏರ್ಪಡಿಸಲಿಕ್ಕೆ ಇದೇ ತಿಂಗಳ ತಾ. ೧೩ನೇ ಸೋಮವಾರ ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟು ಎಸೋಸಿಯೇಶನಿನ ಆಫೀಸಿನಲ್ಲಿ ಸಭೆಕೂಡಬೇಕೆಂತ ನಿರ್ಣಯಿಸಲಾಯಿತು. ಸಭೆಗೆ ಬಾರದೆ ಇದ್ದ ಮೋಟರ್ ಬಸ್ಸ ಕಂಪೆನಿಗಳ ಮಾಲಿಕರನ್ನು ತಾ. ೧೩ನೇ ದಿನ ಕೂಡುವ ಸಭೆಗೆ ಆಗತ್ಯಬರಬೇಕೆಂದು ಆಮಂತ್ರಿಸಬೇಕಾಗಿ ಸಹ ನಿರ್ಣಯಿಸಲಾಗಿದೆ.

ಇಲ್ಲಿಯ ಪೋಸ್ಟ ಮಾಸ್ಟರ ಮಿಸ್ಟರ್ ಎಸ್. ಪೋಟ್ಸ್ ಇವರ ತಂದೆಯವರೂ ಸುಪ್ರಸಿದ್ಧ ಕ್ರೈಸ್ತ ಮಿಶನರಿಗಳೂ ಕರ್ನಾಟಕ ವಾಙ್ಮಯ ಭಕ್ತರೂ ಆದ ಕ್ರಿಸ್ತಾನುಜ ವತ್ಸರು ಕಳೆದ ಶನಿವಾರ ತಮ್ಮ ೭೭ನೆಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವ್ಯಸನಪಡುತ್ತೇವೆ.

ಇಲ್ಲಿಯ ಪೋಲೀಸ ಪಂದ್ಯಾಟವು ಬರುವ ನವಂಬರ ತಾ. ೧೧ಕ್ಕೆ ನಡಿಯಲಿಕ್ಕಿದೆ.

ಸೆಂಟ ಫ್ರೆನ್ಸಿಸ್ ಜೇವಿಯರ ಪವಿತ್ರ ಶರೀರ ಪ್ರದರ್ಶನವು ಬರುವ ದೆಶಂಬರ ತಿಂಗಳಲ್ಲಿ ನಡಿಯುವುದು. ಈ ಸಮಯದಲ್ಲಿ ಇಲ್ಲಿಂದ ಗೋವೆಗೆ ಹೋಗಲಿಕ್ಕಿರುವವರ ಬಗ್ಗೆ ಒಂದು ಪ್ರತ್ಯೇಕ ಸ್ಟೀಮರಿನ ಏಲೆವಾರಿ ಮಾಡಲು ಕೆಥೋಲಿಕರ ಒಂದು ಮೀಟಿಂಗು ಸೇರಿ ಈ ಬಗ್ಗೆ ಒಂದು ಕಮ್ಮಿಟಿಯು ನೇಮಕವಾಗಿದೆ.

ಈ ಜಿಲ್ಲೆಯ ಕೊಂಗ್ರೆಸ ಕಾರ್ಯದರ್ಶಿಗಳಾಗಿ ತುರಂಗ ಯಾತ್ರೆಯನ್ನು ಮಾಡಿದ ಶ್ರೀಯುತ ಡಿ. ಕೆ. ಭಾರದ್ವಾಜರು ತಾ. ೩೧ನೇ ಮಧ್ಯಾಹ್ನ ೩|| ಗಂಟೆಯ ಲೋಕಲ್ ಬಂಡಿಯಲ್ಲಿ ಇಲ್ಲಿಗೆ ಬಂದು ತಲ್ಪಿದರು. ಇವರನ್ನು ಶ್ರೀಯುತ ಉಮೇಶರಾವ್ ಮೊದಲಾದವರು ಸ್ವಾಗತವನ್ನು ಮಾಡಿದ ಮೇಲೆ ಇವರನ್ನು ಮೋಟಾರಿನಲ್ಲಿ ಕುಳ್ಳಿರಿಸಿ ಸ್ವಯಂಸೇವಕರ ಗೀತ ಮತ್ತು ಜಯ ಜಯಕಾರದೊಡನೆ ಮೆರವಣಿಗೆಯು ಹೊರಟಿತು. ಈ ಮೆರವಣಿಗೆಯು ಗೋಳಿಕಟ್ಟೆ, ತೇರುಬೀದಿ ಮಾರ್ಗವಾಗಿ ತಿಲಕವಿದ್ಯಾಲಯವನ್ನು ಸೇರಿತು. ದಾರಿಯಲ್ಲಿ ಇವರನ್ನು ಅಲ್ಲಲ್ಲಿ ಹೂಮಾಲೆಯನ್ನು ಹಾಕಿ ಪನ್ನೀರನ್ನು ಚುಮುಕಿಸಿ ಸತ್ಕರಿಸಲಾಯಿತು. ತಿಲಕ ವಿದ್ಯಾಲಯದಲ್ಲಿ ಇವರ ಸ್ವಾಗತ ನಡೆದ ತರುವಾಯ ಬಹಳ ಆಯಾಸವಾದುದರಿಂದ ಜೈಲಿನ ಅನುಭವದ ಕುರಿತು ಮರುದಿನ ಭಾಷಣಮಾಡುವುದಾಗಿ ತಿಳಿಸಿ ಇವರು ಸೀದಾ ತಮ್ಮ ಮನೆಗೆ ಮೋಟಾರಿನಲ್ಲಿ ತೆರಳಿದರು

ಕಳೆದ ತಾ. ೧ರಲ್ಲಿ ರಾವ್ ಬಹದ್ದೂರ್ ಯನ್. ಎ. ಯಸ್. ರಾಜಾಚಾರ್ಯರು ಕಲೆಕ್ಟರ ಚಾರ್ಜನ್ನು ವಹಿಸಿಕೊಂಡರು.

ಗವರ್ನಮೆಂಟ ಕೊಲೇಜಿನ "ಕೊಲೋಜ್ ಡೇ." ಉತ್ಸವವು ಬರುವ ತಾ. ೧೮ರಲ್ಲಿ ಜರಗುವುದು.

ಕೊರನೇಶನ್ ಕ್ರಿಕೆಟ್ ಪಂದ್ಯಾಟದ ಕೊನೆಯ ಆಟವು ಸೇಂಟ್ ಎಲ್ಲೋಸಿಯಸ್ ಕೊಲೇಜಿಗೂ ಹಿಂದೂ ಟೀಮಿನವರಿಗೂ ಕಳೆದ ಸೋಮವಾರದಿಂದ ನಿನ್ನೆಯ ಬೆಳಿಗ್ಗೆ ವರೆಗೆ ನಡಿಯಿತು. ಪ್ರಥಮ ಸರ್ತಿಯ ಆಟದಲ್ಲಿ ಕೊಲೇಜಿನವರಿಗೆ ಹಿಂದೂ ಟೀಮಿನವರಿಗಿಂತ ಹೆಚ್ಚು ರನ್ನುಗಳಾದವು. ಆದರೆ ಅನಂತರದ ಆಟದಲ್ಲಿ ಅವರ ಯತ್ನವು ಸಾಗಲಿಲ್ಲ. ಹಿಂದೂ ಟೀಮಿನವರಿಗೆ ಕೊಲೇಜಿಗಿಂತ ಒಟ್ಟು ೪೩ ರನ್ನುಗಳು ಜಾಸ್ತಿಯಾದ್ದರಿಂದ ಹಿಂದೂ ಟೀಮಿನವರು ಗೆದ್ದರು. ವಿಜಯಿಗಳಾದ ಹಿಂದೂ ಟೀಮಿನ ಮೆರವಣಿಗೆಯು ಬ್ಯಾಂಡವಾದ್ಯ ಜಯಘೋಷ ಮೊದಲಾದ ಸಂಭ್ರಮಗಳಿಂದ ಮೈದಾನಿನಿಂದ ಹೊರಟು ಕೆನರಾ ಹ್ಯಾಸ್ಕೂಲಿಗೆ ಮುಟ್ಟಿತು.

ಕಳೆದ ಉತ್ಥಾನದ್ವಾದಶೀ ದಿವಸ ಅಲಿಸಹೋದರರ ಬಂಧನ ದಿನವು ಬಂದುದರಿಂದ ಬೆಳಿಗ್ಗೆ ಮೆರವಣಿಗೆಯೂ ಸಾಯಂಕಾಲ ಲೈನ್ ಮೈದಾನಿನಲ್ಲಿ ಭಾಷಣಗಳೂ ಆದವು. ನೆರದ ಸಭೆಯ ಮುಂದೆ ಶ್ರೀಯುತ ಭಾರದ್ವಾಜರು ತಮ್ಮ ಜೈಲಿನ ಅನುಭವವನ್ನು ಕುರಿತು ಮೊದಲನೆಯ ಪರಿಚ್ಛೇದವನ್ನು ಮುಗಿಸಿದರು. ಅಷ್ಟರಲ್ಲಿ ಕತ್ತಲೆಯು ಕವಿದದ್ದರಿಂದಲೂ ಅನೇಕರಿಗೆ ತುಳಸೀಪೂಜೆಯ ಬಗ್ಗೆ ತಮ್ಮ ತಮ್ಮ ಮನೆಗಳಿಗೆ ತೆರಳಬೇಕಾಗಿ ಬಂದದ್ದರಿಂದಲೂ ಮುಂದಿನ ಅನುಭವವನ್ನು ಮರುದಿನ ಹೇಳಲು ನಿಶ್ಚಯಿಸಲಾಯಿತು. ನಿನ್ನೆ ಜರಗಿದ ಮೀಟಿಂಗಿನಲ್ಲಿ ಇವರು ತಮ್ಮ ಜೈಲಿನ ಅನುಭವವನ್ನು ಹೇಳಿ ಮುಗಿಸಿದರು. ಈ ದಿನ ಸಾಯಂಕಾಲ ಇವರು ಇತರ ವಿಷಯಗಳನ್ನು ಕುರಿತು ಮಾತನಾಡುವರಲ್ಲದೆ ಬೇರೆಯವರ ಭಾಷಣಗಳೂ ಆಗುವುವು.

ಸ್ಟೀಮರುಗಳಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರ ಸೌಕರ್ಯಕ್ಕಾಗಿ ವೇಗದಿಂದ ಓಡುವ ಜೂಜಾ ಎಂಬ ಸ್ಟೀಮರು ಪ್ರತಿ ಸೋಮವಾರ ಮುಂಬಯಿಯಿಂದ ಹೊರಟು ಬುಧವಾರ ದಿನ ಮಧ್ಯಾಹ್ನಕ್ಕೆ ಇಲ್ಲಿಗೆ ತಲಪಿ ಮರುದಿನ ಇಲ್ಲಿಂದ ಪ್ರಯಾಣಿಕರ ಸಮೇತ ಹೊರಟು ಶನಿವಾರ ಮುಂಬಯಿಗೆ ತಲ್ಪುವುದಾಗಿ ಮುಂಬಯಿ ಸ್ಟೀಮ ನೇವಿಗೇಶನ ಕಂಪೆನಿಯವರು ಪ್ರಕಟಿಸಿರುತ್ತಾರೆ.

ಮುಷ್ಟಿ ಫಂಡಿಗೆ ಕಳೆದ ೩ ಆದಿತ್ಯವಾರಗಳಲ್ಲಿ ಆದ ಜುಮ್ಲಾ ಜಮೆ ಅಕ್ಕಿ ಸೇರು ೨೮೬||, ರೂಪಾಯಿ ೧೧೮—೧೨—೦.

ತಾ. ೬-೧೦-'೨೨ರಲ್ಲು ಕೂಡಿದ ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯ ಮಹಾ ಸಭೆಯ ನಿರ್ಣಯಗಳು:--

ಪ್ರಾಂತಿಕ ಕಮಿಟಿಯಿಂದ ಲೆಕ್ಕ ಪರಿಶೋಧನೆಯನ್ನು ಮಾಡಿಸಿ ವಿವರವನ್ನು ತಿಳಿಸಬೇಕಾಗಿ ಪದೇ ಪದೇ ಕಾಗದಗಳು ಬಂದಿರುವುದರಿಂದ ಬರುವ ತಾ. ೧೫ರೊಳಗೆ ಆದರೂ ಪರಿಶೋಧನೆಯನ್ನು ಮಾಡಬೇಕಾಗಿ ಸಭೆಯವರು ರಾ. ಭಂಡಾರಕಾರರಿಗೆ ವಿನಂತಿಮಾಡಿಕೊಳ್ಳುತ್ತಾರಾಗಿ ಸದರಿಯವರಿಗೆ ತಿಳಿಸಬೇಕು.

ತಾಲೂಕು ಕಾಂಗ್ರೆಸು ಕಮಿಟಿಯ ೧೯೨೨ನೇ ಜೂನು ವರೆಗಿನ ಲೆಕ್ಕವು ತನ್ನ ಕೂಡೆ ಬಂದಿರುತ್ತದಾಗಿಯೂ ಪರಿಶೋಧನೆಯನ್ನು ತಾನು ಪ್ರಾರಂಭಿಸಿರುತ್ತೇನಾಗಿಯೂ ಈ ವರೆಗೆ ಪರಿಶೋಧಿಸಲ್ಪಟ್ಟ ಲೆಕ್ಕದ ವಿಷಯ ತನ್ನ ಅಭಿಪ್ರಾಯ ಕೂಡ ಪ್ರಕಟಣೆಯ ಬಗ್ಗೆ ರಾ. ಭಂಡಾರಕಾರರು ಕೊಡಬೇಕಾಗಿ ಈ ಸಭೆಯವರು ವಿನಂತಿಮಾಡಿಕೊಳ್ಳುತ್ತಾರಾಗಿ ತಿಳಿಸಬೇಕು.

ತಿಲಕ ಸ್ವರಾಜ್ಯನಿಧಿಯನ್ನು ಕೂಡಲೇ ಕೂಡಿಸಲು ಪ್ರಾರಂಭ ಮಾಡಬೇಕಾಗಿ ನಿಶ್ಚಯಿಸಲಾಯಿತು.

ಈ ಕೆಳಗಿನ ಗೃಹಸ್ಥರನ್ನು ಗಯಾ ಕೊಂಗ್ರೆಸಿಗೆ ಹೋಗುವ ಬಗ್ಗೆ ಚುನಾಯಿಸಲಾಯಿತು. ೧. ರಾ. ಕಾರ್ನಾಡು ಸದಾಶಿವರಾವ್, ೨. ರಾ. ಅ. ಭೋಜರಾವ್, ೩. ರಾ. ಉ. ಗೋವಿಂದರಾವ್. ೪. ರಾ. ಪ. ರಾಮಚಂದ್ರರಾವ್, ೫. ಭವಾನಿಯಮ್ಮ.

ಇತರ ಉಮೇದ್ವಾರರಿಗೆ ಸಿಕ್ಕಿದ ಓಟುಗಳು ರಾ| ರಾಮಣ್ಣ ಸೆಟ್ಟಿ ೧೮, ರಾ| ಜಮಾಲುದ್ದೀನ್ ಸಾಹೇಬರು ೧೮, ರಾ| ನಾರಾಯಣ ಸೋಮಯಾಜಿ ೧೩, ರಾ| ಶೀತಾರಾಮ ಕಮ್ತಿ ೭, ರಾ| ಮುಲ್ಕಿ ನರಹರಿ ಕಮ್ತಿ ೭. ರಾ| ಪಾದೆಬೆಟ್ಟು ಕೃಷ್ಣರಾವ್ ೩.

ಗಯಾ ಕೊಂಗ್ರೆಸಿಗೆ ಆರಿಸಲ್ಪಟ್ಟ ಪ್ರತಿನಿಧಿಗಳ ಪೈಕಿ ನಮ್ಮ ತಾಲೂಕಿನಿಂದ ಮಹಮ್ಮದಿ ಮತದವರೊಬ್ಬರು ಇರುವುದು ಅತ್ಯಾವಶ್ಯಕವಾದುದರಿಂದ ಅ. ಭೋಜರಾಯರು ತನ್ನಸ್ಥಾನವನ್ನು ಮಿ. ಜಮಾಲುದ್ದೀನ ಸಾಹೇಬರಿಗೆ ಬಿಟ್ಟುಕೊಟ್ಟಿರುವುದರಿಂದಲೂ ರಾ. ಜಮಾಲುದ್ದೀನ ಸಾಹೇಬರನ್ನು ಸಭೆಯವರು ಸರ್ವಸಮ್ಮತದಿಂದ ವಿನಂತಿಮಾಡಿಕೊಂಡ ಮೇರೆಗೆ ಅವರನ್ನು ಪ್ರತಿನಿಧಿಯನ್ನಾಗಿ ಸ್ವೀಕರಿಸಲಾಯಿತು.

ಶ್ರೀಮತಿ ಉ. ಚಂದ್ರಾಸನಾಬಾಯಿಯವರು ತನ್ನನ್ನು ಕಾ. ಕಾ. ಕಮಿಟಿಯ ಕಾರ್ಯಕಾರಿ ಮಂಡಳಿಯಿಂದ ತೆಗೆಯಬೇಕಾಗಿ ಇಚ್ಛಿಸಿದುದರಿಂದ ಅವರ ರಾಜಿನಾಮೆಯನ್ನು ಅಂಗೀಕರಿಸಿ ಖಾಲಿ ಬಿದ್ದ ಸ್ಥಳದಲ್ಲಿ ಶ್ರೀಯುತ ಪಂಡಿತ ಧರ್ಮದೇವರನ್ನು ಬಹುಮತದಿಂದ ಆರಿಸಲಾಯಿತು.

ಕರ್ನಾಟಕ ಪ್ರಾಂತಿಕ ಕಮಿಟಿಗೆ ಈ ಕೆಳಗಿನ ಐದು ಮಂದಿಯನ್ನು ಚುನಾಯಿಸಲಾಯಿತು:—೧. ರಾ. ಕಾರ್ನಾಡ ಸದಾಶಿವರಾವ್ ೨. ರಾ. ಉ. ಗೋವಿಂದರಾವ್, ೩. ರಾ. ದಾಸಪ್ರಭುಗಳು, ೪. ರಾ. ಯಸ್. ಇ. ಡಿ'ಕುಂಞ, ೫ ರಾ. ಬಿ. ಪರಮೇಶ್ವರಯ್ಯನವರು. ಬೇರೆ ಉಮೇದ್ವಾರರು ರಾ. ಅ ಭೋಜರಾವ್,

ಈ ಕೆಳಗಿನ ಐವಜುಗಳು ಸಭೆಯಲ್ಲಿ ತಿಲಕ ಸ್ವರಾಜ್ಯ ಫಂಡಿಗೋಸ್ಕರ ಜಮೆಯಾದವು.

ರಾ. ಅ. ಭೋಜರಾವ್ ರೂ.೭, ರಾ. ಜಮಾಲುದ್ದೀನ ಸಾಹೇಬರೂ. ೧, ರಾ. ಬಿ. ಪರಮೇಶ್ವರಯ್ಯ ರೂ. ೫, ರಾ. ಬಿ. ನಾರಾಯಣ ಸೋಮಯಾಜಿ ರೂ. ೧, ರಾ. ಗಂಗಯ್ಯನವರು ರೂ. ೧, ರಾ. ಎಸ್. ಇ. ಡಿ. ಕುಂಞ ೧, ದಿವಂಗತ ಪಾರ್ವತಿ ಬಾಯಿಯವರ ಬಗ್ಗೆ ಅವರ ಮೊಮ್ಮಗ ರೂ. ೧. ಈ ಸಭೆಯನ್ನು ತಾ. ೧೨-೧೧-೨೨ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ತಿಲಕಮಹಾ ವಿದ್ಯಾಲಯದಲ್ಲಿ ಮುಂದರಿಸಿಡಬೇಕಾಗಿ ನಿಶ್ಚಯಿಸಲಾಯಿತು.

ನೋಟೀಸು.

ನಂಬ್ರ ೨೦೬೨ನೇ ಕೋಟೆಕಾರು ಸಹಕಾರ ಸಂಘದ ಎಲ್ಲಾ ಮೆಂಬರರಿಗೆ ಈ ಮೂಲಕ ತಿಳಿಸುವದೇನೆಂದರೆ—

ಈ ಸಂಘದ ಎಲ್ಲಾ ಮೆಂಬರರ ೧೯೨೨-೨೩ನೇ ವರ್ಷದ ೧ನೇ ಮಹಾಸಭೆಯು ಇದೇ ನವಂಬರ ತಾ. ೧೨ನೇ ಆದಿತ್ಯವಾರ ಮಧ್ಯಾಹ್ನ ೧೨ ಗಂಟೆಗೆ ಕೋಟೆಕಾರು ಪ್ರಾಯರ್ ಎಲಿಮೆಂಟರಿ ಶಾಲೆಯ ಕಟ್ಟೋಣದಲ್ಲಿ ಜರುಗಬೇಕೆಂಬದಾಗಿ ನಿರ್ಣಯಿಸೋಣಾಗಿಯದೆ. ಈ ಸಭೆಗೆ ತಾವೆಲ್ಲರೂ ದಯಮಾಡಿ ಬಂದು ಆಲೋಚಿಸಲಿಕ್ಕಿರುವ ವಿಷಯಗಳಿಗೆ ತಮ್ಮ ಅಭಿಪ್ರಾಯವನ್ನು ಸರಿಯಾಗಿ ತಿಳಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ತಾ. ೨೮-೧೦-೧೯೨೨. K SUBBANNAYA.

ನೋಟೀಸು.

ಶ್ರೀ ಮದನಂತೇಶ್ವರ ದೇವಸ್ಥಾನ, ಮಂಜೇಶ್ವರ.

ಶ್ರೀ ಮದನಂತೇಶ್ವರ ದೇವಸ್ಥಾನದ ಆಡಳಿತೆ ನೋಡುವ ಬಗ್ಗೆ ಗೌಡಸಾರಸ್ವತ ವೃಂದಕ್ಕೆ ಸೇರಿದ 30 ವರುಷಕ್ಕೆ ಮಿಕ್ಕಿದ ಒಬ್ಬ ಮೆನೇಜರನು ಬೇಕಾಗಿರುವನು. ಸೆಕ್ಯೂರಿಟಿ ರೂಪಾಯಿ 2000 ತೆರಬೇಕು. ತಲಬು ತಿಂಗಳಿಗೆ ರೂಪಾ 100ರಂತೆ. ಮತ್ತು ಬಾಡಿಗೆ ಇಲ್ಲದ ಮನೆ ಸಹ. ಅರ್ಜಿಗಳು ಈ ಕೆಳಗೆ ದಸ್ಕತು ಮಾಡಿದವರಿಗೆ ನವಂಬರ 15ರ ಒಳಗೆ ತಲಪಬೇಕು.

ಮಂಜೇಶ್ವರ, } ಯಂ. ಅನಂತ ಶಿಣೈ,
ತಾ. 12-10-'22 } ಟ್ರಸ್ಟೀ.

ಶ್ರೀಯುತ ಡಿ. ಕೆ. ಭಾರದ್ವಾಜರಿಗೆ ನಮ್ಮ ಬಾತ್ಮಿದಾರರು ಕೇಳಿದ ಪ್ರಶ್ನೆಗಳಿಗೆ ಅವರು ಕೊಟ್ಟ ಉತ್ತರ.

೧. ತಮ್ಮನ್ನು ಯಾವ ಯಾವ ಜೈಲುಗಳಿಗೆ ವಯ್ದರು? ಎಷ್ಟೆಷ್ಟು ಸಮಯ?

ನನ್ನನ್ನು ತಾ. ೩೦—೧೧—'೨೧ಕ್ಕೆ ಬೆಳಗ್ಗಿನ ಮೈಲಿನಲ್ಲಿ ಸೀದಾ ಕಣ್ಣಾನೂರಿಗೆ ತೆಗೆದುಕೊಂಡು ಹೋಗಲಾಯಿತು. ಕಳೆದ ಡಿಸೆಂಬರ ತಾ. ೨೨ಕ್ಕೆ ಅಲ್ಲಿಂದ ಮದರಾಸಿಗೆ ಟ್ರಾನ್ಸ್‌ಫರ ಮಾಡಿದ್ದರು. ತಾ. ೨೮ಕ್ಕೆ ಮದರಾಸಿಗೆ ಮುಟ್ಟಿದೆನು ಕಳೆದ ಮಾರ್ಚಿ ೨೮ಕ್ಕೆ ಕಡಲೂರಿಗೆ ಟ್ರಾನ್ಸ್‌ಫರ್ ಮಾಡಿದರು. ಬೇರೆ ಬೇರೆ ಕಡೆಗಳಲ್ಲಿ ರಾಜಕೀಯ ಕೈದಿಗಳು ಹೆಚ್ಚಾದ್ದರಿಂದ ನಮ್ಮನ್ನೆಲ್ಲಾ ಒಂದೇ ಕಡೆಯಲ್ಲಿ ಇಡಲು ಕಡಲೂರ ಜೈಲನ್ನು ರಾಜಕೀಯ ಕೈದಿಗಳ ಜೈಲಾಗಿ ಮಾರ್ಪಡಿಸಿ ಅಲ್ಲಿಗೆ ವಯ್ದರು.

೨. ೧೨ ತಿಂಗಳು ಶಿಕ್ಷೆಯಾಗಿರುವಾಗ ಒಂದು ತಿಂಗಳು ಕಡಿಮೆ ಮಾಡಲು ಕಾರಣವೇನು?

ಕಠಿಣ ಶಿಕ್ಷೆಯಾದವರಿಗೆ ಅವರು ಜೈಲಿನಲ್ಲಿ ಮಾಡುವ ಕೆಲಸಕ್ಕಾಗಿ ತಿಂಗಳಿಗೆ ಎರಡು ದಿವಸದಂತೆ, ಒಳ್ಳೇ ನಡತೆ ಬಗ್ಗೆ ಒಂದು ದಿನ ಹೀಗೆ ಒಟ್ಟು ಮೂರು ದಿನಗಳಂತೆ ಮಾರ್ಕ್ಸ ಕೊಡುತ್ತಾರೆ. ಜೈಲನ್ನು ಪ್ರವೇಶಿಸಿದ ತಿಂಗಳೂ ಅಲ್ಲಿಂದ ಹೊರಗೆ ಬರುವ ತಿಂಗಳೂ ಮಾರ್ಕ್ಸನ್ನು ಎಣಿಸುವುದಿಲ್ಲ ಉಳಿದ ಹತ್ತು ತಿಂಗಳಿಗೆ ಮಾರ್ಕ್ಸ ಉಂಟು. (ಹೀಗೆ ಹತ್ತು ತಿಂಗಳಲ್ಲಿ ೩೦ ದಿನ ಕಡಿಮೆಯಾಯಿತು.)

೩. ಜೈಲಿನಲ್ಲಿ ಆಹಾರ ಮೊದಲಾದವುಗಳ ವ್ಯವಸ್ಥೆ ಹೇಗೆ? ನೀವು ತಿರುಗಿದ ಜೈಲುಗಳಲ್ಲಿ ಯಾವದು ಒಳ್ಳೆಯದು.?

ಎಲ್ಲಾ ಜೈಲುಗಳಲ್ಲೂ ಅನ್ನವನ್ನೂ ಹುಳಿಯನ್ನೂ ಕೊಟ್ಟಿದ್ದರು. ಮಲಗಿಕೊಳ್ಳುವುದಕ್ಕೆ ತೆಂಗಿನ ಮರದ ನಾರಿನ ಚಾಪೆಯನ್ನೂ ಹೊದ್ದುಕೊಳ್ಳುವುದಕ್ಕೆ ಒಂದು ಕಂಬಳಿಯನ್ನೂ ಕೊಟ್ಟಿದ್ದರು. ತೊಟ್ಟುಕೊಳ್ಳುವುದಕ್ಕೆ ತೋಳುಗಳಿಲ್ಲದ ಎರಡು ಜಾಕೇಟುಗಳನ್ನೂ ಉಡುವ ಪಂಚೆಗಳ ಬದಲಾಗಿ ಮೊಣಕಾಲಿನ ವರೆಗೆ ಕೂಡ ಬಾರದ ಎರಡು ನಿಕ್ಕರುಗಳನ್ನೂ ಕೊಟ್ಟಿದ್ದರು. ಅಲ್ಲದೆ ಒಂದು ಲಂಗೋಟಿಯನ್ನೂ ಒಂದು ಮೊಳ ಚದರಳತೆಯುಳ್ಳ ಒಂದು ಕರವಸ್ತ್ರವನ್ನೂ, ಒಂದು ಕೆಂಪು ಟೋಪಿಯನ್ನೂ ಒದಗಿಸಿದ್ದರು. ಜಾಕೇಟುಗಳಿಗೆ ತೋಳಿಲ್ಲದ್ದರಿಂದ ಛಳಿಗಾಲದಲ್ಲಿ ಬಹಳ ಕಷ್ಟ. ಆಹಾರ ಪಾನಗಳಿಗಾಗಿ ಕಣ್ಣಾನೂರಿನಲ್ಲಿ ಎಲ್ಯುಮಿನಿಯಮ್ ತಟ್ಟೆ ಮತ್ತು ಗ್ಲಾಸ್, ಮದರಾಸಿನಲ್ಲಿ ಮಣ್ಣಿನ ಮಲ್ಲೆ ಮತ್ತು ಒಂದು ಗಡಿಗೆ, ಕಡಲೂರಿನಲ್ಲಿ ಮೊದಮೊದಲು ಅದೇ ರೀತಿ. ಇತ್ತೀಚೆಗೆ ಎಲ್ಯುಮಿನಿಯಮ್ ಪಾತ್ರೆಗಳನ್ನು ಕೊಡಲಾರಂಭಿಸಿದ್ದರು. ಎಲ್ಲಾ ಜೈಲುಗಳಿಗಿಂತಲೂ ಕಡಲೂರ ಜೈಲಿನಲ್ಲಿ ನಡಿಸುವ ವಿಧಾನವು ಒಳ್ಳೆಯದಾಗಿತ್ತು.

೪. ಯಾವ ಕೆಲಸವನ್ನು ಕೊಟ್ಟಿದ್ದರು?

ಕಣ್ಣಾನೂರಿನಲ್ಲಿ ತೆಂಗಿನ ಹುರಿಹಗ್ಗ ಮಾಡುವ ಕೆಲಸ, ಮದರಾಸಿನಲ್ಲಿ ಮೊದಮೊದಲು ರಾಗಿ ಬೀಸುವದು. ಅನಂತರ ಮರದ ಕೆಲಸ ಹುರಿಹಗ್ಗ ಮಾಡುವುದು, ಕಡಲೂರಿನಲ್ಲಿ ಗೋದಿಯ ಆಹಾರವನ್ನು ತಯಾರಿಸುವುದು, ಹುರಿಹಗ್ಗ ಮಾಡುವುದು ಈ ಕೆಲಸಗಳನ್ನು ಕೊಟ್ಟಿದ್ದರು. ನನ್ನ ವಿರಾಮ ಕಾಲದಲ್ಲಿ ಕೆಲವು ತರುಣ ರಾಜಕೀಯ ಕೈದಿಗಳಿಗೆ ಭಗವದ್ಗೀತೆ, ಸಂಸ್ಕೃತ, ಕನ್ನಡ ಮೊದಲಾದ ಪಾಠಗಳನ್ನು ಕಲಿಸಲು ಪರವಾನಗಿಯನ್ನು ಕೊಟ್ಟಿದ್ದರು. ಪ್ರತಿ ದಿನ ಬೆಳಗ್ಗೆ ೭ರಿಂದ ೧೧ರ ವರೆಗೂ ಮತ್ತೆ ೧೨ರ ರಿಂದ ೪ರ ವರೆಗೂ ಕೆಲಸಮಾಡಬೇಕಾಗಿತ್ತು.

೫. ಪತ್ರವ್ಯವಹಾರ ಆಪ್ತೇಷ್ಟರ ಭೇಟಿ ಈ ಕ್ರಮ ಹೇಗಿತ್ತು? ಓದಲಿಕ್ಕೂ ಬರೆಯಲಿಕ್ಕೂ ಅನುಕೂಲವಿತ್ತೊ? ಯಾವ ಯಾವದನ್ನು ಓದಿದ್ದೀರಿ?

ಆಪ್ತೇಷ್ಟರನ್ನು ಜೈಲಿನಲ್ಲಿ ಭೇಟಿಮಾಡಲಿಕ್ಕೆ ಮೊದಲು ೩ ತಿಂಗಳಿಗೊಮ್ಮೆ ಬಿಡುತ್ತಿದ್ದರು. ಆದರೆ ಇತ್ತೀಚೆಗೆ ತಿಂಗಳಿಗೊಮ್ಮೆ ಭೇಟಿಯಾಗಬಹುದೆಂತ ನೇಮ ಮಾಡಿದ್ದಂತೆ ತೋರುತ್ತದೆ. ನನ್ನನ್ನು ಕಾಣಬರಲು ಕೆಲವರು ಇಚ್ಛಿಸಿದ್ದರೂ ನಾನು ಕ್ಷೇಮದಲ್ಲಿ ಇರುವುದರಿಂದ ಯಾರೂ ನನ್ನನ್ನು ಕಾಣಲು ಬರುವುದು ಅಗತ್ಯವಿಲ್ಲವೆಂದು ತಿಳಿಸಿದ್ದೆನು. ಓದಲಿಕ್ಕೆ ರಾಜಕೀಯ ಸಂಬಂಧವಿಲ್ಲದ ಪುಸ್ತಕಗಳನ್ನು ಕೊಡುತ್ತಿದ್ದರು. ಪರಂತು ಕಠಿಣಶಿಕ್ಷೆಯಾದವರಿಗೆ ಲೇಖನ ಸಾಮಗ್ರಿಗಳ್ಯಾವವನ್ನೂ ಕೊಡುತ್ತಿರಲಿಲ್ಲ. ಇತ್ತೀಚೆಗೆ ನಾವು ಓದುವುದಕ್ಕೆ ನಮ್ಮ ಸ್ವಂತ ದೀಪಗಳನ್ನು ಇಟ್ಟುಕೊಳ್ಳಬಹುದೆಂದು ಪರವಾನಗಿಯನ್ನು ಕೊಟ್ಟಿದ್ದರು. ಮತ್ತು ಅವರು ದೀಪದ ಎಣ್ಣೆಯನ್ನು ಒದಗಿಸಿಕೊಡುತ್ತಿದ್ದರು. ರಾಜಕೀಯವಲ್ಲದ ಇಂಗ್ಲೀಷ್ ಹಿಂದೀ, ಮರಾಠಿ ಪುಸ್ತಕಗಳನ್ನು ಓದಿದ್ದೇನೆ. ಕನ್ನಡ ಪುಸ್ತಕಗಳು ನನ್ನ ಕಡೆಗೆ ಬಂದರೆ ಜೈಲಿನ ಅಧಿಕಾರಿಗಳು ಈ ಭಾಷೆಯು ತಮಗೆ ತಿಳಿಯುವುದಿಲ್ಲವೆಂದು ಹೇಳಿ ಇವು ಯಾವ ಸಂಬಂಧದವು ಎಂದು ವಿಚಾರಿಸಿ ಕೊಡಲಾಗುವುದೆಂದು ತಿಳಿಸಿ ತಮ್ಮೊಡನೆಯೇ ಇಟ್ಟುಕೊಳ್ಳುತ್ತಿದ್ದರು

೬. ವರ್ತಮಾನ ಪತ್ರಿಕೆಗಳನ್ನು ಓದಲಿಕ್ಕೆ ಬಿಡುತ್ತಿದ್ದರೋ?

ಯಾವ ತರದ ವರ್ತಮಾನ ಪತ್ರಿಕೆಗಳನ್ನೂ ಓದಲಿಕ್ಕೆ ಬಿಡುತ್ತಿರಲಿಲ್ಲ.

೭. ಮಹಾತ್ಮರಿಗೆ ಶಿಕ್ಷೆಯಾದದ್ದು ಜೈಲಿನಲ್ಲಿ ತಿಳಿಯ ಬಂತೋ?

ಮಹಾತ್ಮರಿಗೆ ಶಿಕ್ಷೆಯಾದಾಗ ನಾನು ಮದರಾಸಿನಲ್ಲಿದ್ದೆ. ಅವರನ್ನು ಕೈದು ಮಾಡಿದ ವರ್ತಮಾನವು ಜೈಲಿನಲ್ಲಿ ಕೆಲಸಮಾಡುವುದಕ್ಕೆ ಹೊರಗಿನಿಂದ ಬರುವ ಜನರಿಂದ ಕೂಡಲೇ ತಿಳಿದುಬಂತು.

೮. ಹೊರಗೆ ನಡಿಯುವ ವಿದ್ಯಮಾನಗಳು ತಿಳಿಯ ಬರುತ್ತಿದ್ದವೋ?

ಒಂದು ಜೈಲಿಂದ ಇನ್ನೊಂದು ಜೈಲಿಗೆ ತೆಗೆದುಕೊಂಡು ಹೋಗುವಾಗ ನಮ್ಮನ್ನು ಕಾಣಲು ಬರುವ ಜನರಿಂದ ನಮಗೆ ಸ್ವಲ್ಪ ಸ್ವಲ್ಪ ವರ್ತಮಾನ ಮಾತ್ರ ತಿಳಿಯುತ್ತಿತ್ತು.

೯. ಗಡ್ಡವನ್ನು ಇಲ್ಲಿಂದ ಹೋದಂದಿನಿಂದ ಬೆಳೆಸಿದ್ದಿರೋ? ಹೀಗೆ ಬೆಳಸಲು ಕಾರಣವೇನು?

ಪ್ರಥಮದಲ್ಲಿ ಸುಮಾರು ಎರಡು ಮೂರು ತಿಂಗಳು ಕ್ಷೌರವನ್ನು ಮಾಡಿಸಿದ್ದೆನು. ಅನಂತರ ನಾನು ಒಂದು ದೀಕ್ಷೆಯನ್ನು ಹಿಡಿದುಕೊಂಡು ಈ ಗಡ್ಡವನ್ನು ಬೆಳಸಿದ್ದೇನೆ.

೧೦. ಮತಸಂಬಂಧದ ಆಚಾರಗಳಿಗೆ ನಿರ್ಬಂಧವಿತ್ತೋ?

ಮತವಿಚಾರದ ಕಾರ್ಯಗಳನ್ನು ಮಾಡಲು ಅಷ್ಟೊಂದು ಆಕ್ಷೇಪವಿರಲಿಲ್ಲ.

೧೧. ತಮ್ಮೊಡನೆ ಅಲ್ಲಿ ಯಾರ್‍ಯಾರು ಇದ್ದರು?

ನನ್ನೊಡನೆ ಕಡಲೂರ ಜೈಲಿನಲ್ಲಿ ಆಂಧ್ರದೇಶದ ಸುಪ್ರಸಿದ್ಧ ದೇಶಭಕ್ತರಾದ ಕೊಂಡ ವೆಂಕಟಪ್ಪಯ್ಯ, ಜನಾಬ ಯಾಕೂಬ್ ಹಸ್ಸನ, ಡಾಕ್ಟರ ವರದರಾಜುಲು ನ್ಯಾಡೂ, ಡಾಕ್ಟರ ಸುಬ್ರಹ್ಮಣ್ಯಂ, ಡಾಕ್ಟರ ಶಾಸ್ತ್ರೀ ಇವರೇ ಮೊದಲಾದವರಿದ್ದರು. ನಾನು ಅಲ್ಲಿಂದ ಹೊರಗೆ ಬರುವಾಗ ಸುಮಾರು ಅಲ್ಲಿ ೧೫೦ ಮಂದಿಗಳಿದ್ದರು.

೧೨. ಜೈಲಿನಲ್ಲಿರುವ ಕೈದಿಗಳೊಡನೆ ಮಾತನಾಡಲು ಬಿಡುತ್ತಿದ್ದರೋ?

ಕಡಲೂರ ಜೈಲಿನಲ್ಲಿ ಅಲ್ಲದೆ ನನ್ನನ್ನಿಟ್ಟ ಬೇರೆ ಎರಡು ಜೈಲುಗಳಲ್ಲಿ ರಾಜಕೀಯ ಕೈದಿಗಳಲ್ಲದ ಇತರ ಕೈದಿಗಳೂ ಇದ್ದದರಿಂದ ರಾಜಕೀಯ ಕೈದಿಗಳಿಗೆ ಇತರ ಕೈದಿಗಳೊಡನೆ ಮಾತನಾಡಲು ಬಿಡುತ್ತಿರಲಿಲ್ಲ. ಕಡಲೂರ ಜೈಲಿನಲ್ಲಿ ಎಲ್ಲರೂ ರಾಜಕೀಯ ಕೈದಿಗಳೇ ಆದುದರಿಂದ ತೊಂದರೆ ಇರಲಿಲ್ಲ.

೧೩. ಔಷಧೋಪಚಾರ ಕ್ರಮವು ಹೇಗಿತ್ತು?

ಮಿಕ್ಕ ಜೈಲುಗಳಿಗಿಂತ ಕಡಲೂರು ಜೈಲಿನಲ್ಲಿ ಔಷಧೋಪಚಾರದ ಕ್ರಮವು ಯೋಗ್ಯವಿತ್ತು.

೧೪. ತಮ್ಮನ್ನು ಎಲ್ಲಿ ಬಿಟ್ಟರು? ಮತ್ತು ಅಲ್ಲಿಂದ ಎಲ್ಲಿ ಹೋದಿರಿ?

ನನ್ನನ್ನು ೨೮ನೇ ತಾರೀಕಿನ ಬೆಳಗ್ಗೆ ೧೦ ಗಂಟೆಗೆ ಬಿಡುಗಡೆಮಾಡಿದರು. ನಾನು ಹೊರಗೆಬಂದ ತರುವಾಯ ಕಡಲೂರಿನ ಕೊಂಗ್ರೆಸ ಸೆಕ್ರೆಟರಿಯವರು ನನ್ನನ್ನು ಪಂಡರೋತಿ ಎಂಬಲ್ಲಿಗೆ ಕರಕೊಂಡು ಹೋದರು. ಅಲ್ಲಿ ಜೈಲಿನ ಅನುಭವದ ವಿಷಯವಾಗಿ ನನ್ನದೊಂದು ಭಾಷಣವಾಯಿತು. ತಾ. ೨೮ನೇ ರಾತ್ರಿ ಅಲ್ಲಿಂದ ಹೊರಟು ತಾ. ೨೯ಕ್ಕೆ ತಿರುಚಿನಾಪಳ್ಳಿಗೆ ಮುಟ್ಟಿದೆನು. ಅಂದು ಸಾಯಂಕಾಲ ೪ ಗಂಟೆ ವರೆಗೆ ಶ್ರೀರಂಗವನ್ನು ನೋಡಿದೆನು. ಸಾಯಂಕಾಲ ೫ ಗಂಟೆಗೆ ನನ್ನನ್ನು ಡಿಸ್ಟ್ರಿಕ್ಟ ಕೊಂಗ್ರೆಸ ಆಫೀಸಿಗೆ ಕರಕೊಂಡು ಹೋದರು. ಅಲ್ಲಿ ನನಗೆ ಸ್ವಾಗತವನ್ನಿತ್ತರು. ಅಲ್ಲಿ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗು ನಡಿಯುತ್ತಿದ್ದುದರಿಂದಲೂ ಅಲ್ಲಿರುವ ಅರ್ಧ ಜನರು ತುರಂಗ ಯಾತ್ರೆಯನ್ನು ಮಾಡಿದವರಾದ್ದರಿಂದಲೂ ಅಲ್ಲಿ ನನ್ನ ಯಾವ ಅನುಭವವನ್ನೂ ಹೇಳುವ ಅಗತ್ಯವಿರಲಿಲ್ಲ. ಮರುದಿನ ಬೆಳಗ್ಗೆ ಅಲ್ಲಿಂದ ಹೊರಟು ಲೋಕಲ್ ಟ್ರೇನು ಬಂಡಿಯಲ್ಲಿ ಮಂಗಳೂರಿಗೆ ಬಂದು ತಲ್ಪಿದೆನು.

ಪತ್ರವ್ಯವಹಾರ.

ಅಯ್ಯಾ,

ನಮ್ಮ ಮುನ್ಸಿಪಾಲಿಟಿಗಳಲ್ಲಿ ಕಾಫಿ ಹೊಟೇಲಿನ ಅಂಗಡಿಗಳನ್ನು ತೆರೆಯಬೇಕಾದವರು ಮತ್ತು ಈ ಮುಂಚೆ ತೆರೆದವರು ಏನೋ ಒಂದು ತರದ ಲ್ಯಾಸನ್ಸು ಪಡೆಯಬೇಕೆಂದು ಕ್ರಮವುಂಟೆಂದು ಕೇಳುತ್ತೇನೆ. (?) ಆದರೆ ಆ ಲ್ಯಾಸನ್ಸಿನ ಅರ್ಥ ಯಾರಿಗೆ ಗೊತ್ತು? ಕೆಲವರು ಅದನ್ನು ಲ್ಯಾ-ಸನ್ಸು ಎಂತ ಕರೆಯುತ್ತಾರೆ. ಬೇರೆಯವರು ಲಾಯಸ-ಸೆನ್ಸು ಎಂತಲೂ ಹೇಳುತ್ತಾರೆ. ಆದರೆ ಆ ಲ್ಯಾಸನ್ಸು ಕೊಡುವಾಗ ಪಬ್ಲಿಕ್ ರೋಡಿನ ಚರಂಡಿಗಳ ಮೇಲೆಯೂ ಈ ಹೊಟೇಲಿನವರಿಗೆ ಸಂಪೂರ್ಣಾಧಿಕಾರದ ಲ್ಯಾಸನ್ಸು ಕೊಡಲ್ಪಟ್ಟಿರುತ್ತದೋ ಎಂಬುದು ಒಂದು ಪ್ರಶ್ನೆ. ಅವರಿಗೆ ಆ ಚರಂಡಿಗಳ ಮೇಲೆ ಸಂಪೂರ್ಣಾಧಿಕಾರವಿದ್ದರೆ ನಾನು ಮಾತನಾಡುವುದಿಲ್ಲ. ಆದರೆ ಹಾಗೆ ಆಗಲಾರದೆಂದು ನನ್ನ ಭಾವನೆ ಇದ್ದಕಾರಣ ಇದನ್ನು ಬರೆದೆನು. ಇದರ ನಿಜತ್ವವನ್ನು ತಿಳಿಯಲು ಮುನ್ಸಿಪಾಲಿಟಿಯವರಲ್ಲಿ ಯಾರನ್ನು ಪ್ರಾರ್ಥಿಸಿಕೊಳ್ಳಬಹುದು?

ಜನರಿಂದ ಓಟುಪಡಕೊಳ್ಳಬೇಕೆಂಬ ಉದ್ದೇಶದಿಂದ ಕೆಲವು ದಿವಸಗಳ ಪುರ್ಸತು ಮಾಡಿಕೊಳ್ಳುವುದೇನೋ ಅದು ಬಹು ಕಷ್ಟದಿಂದ. ಮುನ್ಸಿಪಾಲಿಟಿಯ ನೌಕರರೊ, ಮೆನೇಜರರೊ, ಸೆನಿಟರಿ ಇನ್ಸಪೆಕ್ಟರರೊ ಇನ್ನಾರೋ? ಅವರಿಗೂ ಅವರ ತೊಂದರೆ ಉಂಟೆ ಉಂಟು. ಅವರೂ ಸಂಸಾರಿಗಳಲ್ಲವೋ? ಕುಟುಂಬ ಸಂರಕ್ಷಣೆ ಮಾಡುವ ತೊಂದರೆ ಇಲ್ಲವೋ? ಮತ್ತು ಅವರು ಕೃತಜ್ಞತಾಭಾವಿಗಳು, ಕಂಡವರ ಮನಸ್ಸು ನೋಯಿಸಿ ಅವರಿಗುಂಟಾಗುವ ಪ್ರಯೋಜನವೇನು? ಎಂತೂ ಬಹುಜನ ಸಂಚಾರವಿರುವ ನಮ್ಮ ಮಂಗಳೂರು ಶಹರಿನ ಆ ಕಾರಸ್ಟ್ರೀಟಿನ ಆಕಾರವೇನು? ಅಲ್ಲಿಯ ಹೊಟೇಲುಗಳಿಂದ ಹೊರಹೊರಟು ಬಂದು ಆ ಪಬ್ಲಿಕ್ ರೋಡಿನ ಚರಂಡಿಗಳಲ್ಲಿ ನಿಂತು ಕೊಳೆತು ಗಮಗಮಿಸುವ ಆ ದುರ್ಗಂಧವೇನು? ಅದರೂ ಚಿಂತಿಲ್ಲ. ಪಕ್ಕನೆ ಅದರಿಂದ ಕಾಲರಾ ಹಿಡಿಯಿತೆಂದರೆ ಆ ಚರಂಡಿಗೆ ಸಮೀಪವಾಗಿ ಕೆಲವು ಔಷಧಾಲಯಗಳಿವೆ! ಹೆದರಿಕೆ ಇಲ್ಲ! ಆ ಕಾರಸ್ಟ್ರೀಟಿನಿಂದ ಉತ್ತರಾಭಿಮುಖವಾಗಿ ಹೋದರೆ ಪುತ್ತುಪ್ರಭುಗಳದೊಂದು ಓಣಿ. ಅಲ್ಲಿಂದ ಗದ್ದೆಕೇರಿ ರಸ್ತೆವರೆಗೆ ತಿರುಗಾಡುವವರು ಪ್ರಾಣಾಯಾಮದಲ್ಲೆ ತಿರುಗಾಡುವರು. ಆ ರಸ್ತೆಯಲ್ಲೇನೋ ಒಂದು ನಾಟಕಶಾಲೆಯಾಗುತ್ತದೆಂದು ಕೇಳಬರುತ್ತದೆ. ಆದಾದ ಮೇಲೆಯಾದರೂ ಈ ಕೇರಿ ಶುದ್ಧವಾಗುವುದೋ? ನೋಡಬೇಕು. ಅನಂತರ ಈ ಕಾರಸ್ಟ್ರೀಟಿನಿಂದ ಚುಡ್ಡೆಗಲ್ಲಿಗಾಗಿ ತಿರುಗುವ ತನಕ ಈ ರೋಡಿನ ಇಕ್ಕಡೆಯು ವಿಶೇಷವಾಗಿ ದಕ್ಷಿಣದ ಚರಂಡಿಯ ನಾತದಿಂದ ಅಂಗಡಿ ವ್ಯಾಪಾರಸ್ಥರೂ ಆ ಅಂಗಡಿಗೆ ಹೋಗುವ ಗಿರಾಕಿಗಳು ಪಡುವ ಆ ಅಸಹ್ಯವನ್ನು ವರ್ಣಿಸ ತೀರದು. ಕಾರಣ ಈ ವಿಷಯ ನಮ್ಮ ಮುನ್ಸಿಪಾಲಿಟಿಯವರು ಕೂಡಲೇ ತಕ್ಕ ಸಿಗಾ ಕೊಡುವರೆಂದು ನಿರೀಕ್ಷಿಸಲಾಗಿದೆ.

ತೆರಿಗೆ ರಹಿತ.

ಶ್ರೀಮದನಂತೇಶ್ವರ ದೇವಸ್ಥಾನ, ಮಂಜೇಶ್ವರ.

ಸ್ವಾಮಿ,

ದಕ್ಷಿಣ ಕನ್ನಡ ಜಿಲ್ಲೆಯ ಗೌಡಸಾರಸ್ವತ ಬ್ರಾಹ್ಮಣರ ಹದಿನೆಂಟು ಪೇಟೆಗಳ ವರ್ಗದ ಖ್ಯಾತಿಹೊಂದಿದ ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನದ ಆಡಳಿತೆ ಬಗ್ಗೆ ಮಂಗಳೂರಿನ ಪ್ರಮುಖ ವಕೀಲರೂ, ಇತರರೂ ಕೂಡಿಕೊಂಡು ಒಂದು 'ಸ್ಕೀಮನ್ನು' ಏರ್ಪಡಿಸಿ, ಜಾರಿಗೆ ತಂದಿದ್ದಾರೆಂಬ ವರ್ತಮಾನವನ್ನು ನಿಮ್ಮ ಪತ್ರಮೂಲಕವೋ ಅಥವಾ ಬೇರೆ ಕಡೆಗಳಿಂದಲೋ ಕೇಳಿ ಬಹಳ ಸಮಯ ದಾಟಿತು. ಈ ಸ್ಕೀಮಿನ ಪ್ರಕಾರ ಮೊಕ್ತೇಸರರು ೧೮ ಪೇಟೆಗಳ ಪ್ರತಿನಿಧಿಗಳಾಗಿರುವರೋ ಎಂಬ ವಿವರ ಈ ತನಕ ತಿಳಿದುಬಂದಿಲ್ಲ. ಹದಿನೆಂಟು ಪೇಟೆಗಳ ವರ್ಗದ ದೇವಸ್ಥಾನವಾದುದರಿಂದ ಈ ಪೇಟೆಗಳಿಂದ ಆಡಳಿತೆ ಮಂಡಲದಲ್ಲಿ ಕನಿಷ್ಟಪಕ್ಷ ಒಬ್ಬೊಬ್ಬ ಪ್ರತಿನಿಧಿಯಿರುವದು ಅಗತ್ಯ. ಪೇಟೆಗಳ ಹಕ್ಕಿನ ಈ ವಿಚಾರವನ್ನು, ಸ್ಕೀಮನ್ನು ಏರ್ಪಡಿಸಿದ ಮಂಗಳೂರಿನ ಸ್ವಜಾತಿ ಪ್ರಮುಖ ವಕೀಲರು ಚೆನ್ನಾಗಿ ಗೊತ್ತಿರುವಂಥವರು. ಹಕ್ಕಿಗೆ ಬಾಧೆ ತರುವಂಥವರಲ್ಲ. ಈ ವಿಷಯ ನಮಗೆಲ್ಲರಿಗೂ ಸಂಪೂರ್ಣ ಅನುಭವವಿದೆ. ಆದರೂ ಗೌಡಸಾರಸ್ವತ ಬ್ರಾಹ್ಮಣರಲ್ಲಿ ಹದಿನೆಂಟು ಪೇಟೆಗಳ ಪೈಕಿ ಪ್ರಮುಖ ಪೇಟೆಯಾದ ಈ ನಮ್ಮ ಬಂಟ್ವಾಳ ತರ್ಫೆನಿಂದ ಈ ತನಕ ಯಾರನ್ನಾದರೂ ಚುನಾಯಿಸಿದ್ದು ಕಂಡುಬರುವದಿಲ್ಲ. ಬಹುಶಃ ಚುನಾವಣೆಗೆ ಇನ್ನೂ ದಿವಸಗಳು ಇದ್ದಾವೋ ಏನೋ. ಹೀಗಿದ್ದರೆ ನಮ್ಮ ಪೇಟೆಯವರ ಹಕ್ಕನ್ನು ಮರೆತುಬಿಟ್ಟರೆ ಅನರ್ಥಕ್ಕೆ ಕಾರಣವಾದೀತೆಂತ ಮುಂದಾಗಿಯೇ ಸೂಚಿಸುತ್ತೇವೆ. ತನ್ಮಧ್ಯೆ ಒಂದು ಸಂಗತಿಯಿಂದ ಸ್ವಲ್ಪ ಅನುಮಾನಕ್ಕೆ ಕಾರಣವಾಗುತ್ತದೆ. ಏನಂದರೆ, ನಿಮ್ಮ ಪತ್ರದ ಕಳೆದ ಒಂದೆರಡು ಸಂಚಿಕೆಗಳಲ್ಲಿ "ಯಂ. ಅನಂತ ಶಿಣೈ" ಎಂತ ದಸ್ಕತು ಹಾಕಿಕೊಂಡು ಸದರಿ ದೇವಸ್ಥಾನದ ಆಡಳಿತೆ ಬಗ್ಗೆ ಮೆನೇಜರ ಬೇಕೆಂತ ಪ್ರಕಟಿಸಿರುತ್ತಾರೆ ಎಂದರೆ ಮೊಕ್ತೇಸರರ ಚುನಾವಣೆಯಾಯಿತೋ? ಹಾಗಾದರೆ ನಮ್ಮ ಪೇಟೆಯ ಪ್ರತಿನಿಧಿಯನ್ನು ಯಾಕೆ ಆರಿಸಲಿಲ್ಲ? ನಿಮ್ಮ ವಾಚಕರ ಪೈಕಿ ಯಾರಾದರೂ ಅಥವ ಸದರಿ ಯಮ್. ಅನಂತ ಶಿಣೆಯರಾದರೂ ಈ ಎಲ್ಲಾ ಮಾಹಿತಿಯನ್ನು ಹದಿನೆಂಟು ಪೇಟೆಗಳ ಅನುಭವದ ಬಗ್ಗೆ ತಮ್ಮ ಪತ್ರದಲ್ಲಿ ಪ್ರಕಟಿಸುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು.

ತಾಜಾ ಕಲಂ — ಸದರಿ ದೇವಸ್ಥಾನದ ವ್ಯವಹಾರ ಕಾಲದಲ್ಲಿ ನಮ್ಮ ಮಿತ್ರರ ಪೈಕಿ ಒಬ್ಬರು ಅಫಿದಾವಿತ್‌ಗಳನ್ನು ನಮ್ಮಿಂದ ಪಡೆದು ಹದಿನೆಂಟು ಪೇಟೆಗಳಿಗೆ ಹಕ್ಕುಸ್ಥಾಪನೆಯಾಗುತ್ತದೆಂತ ಹೇಳಿದ್ದುಂಟು. ಹೀಗೆ ಹೇಳಿದ ಮಹಾತ್ಮರಾದರೂ ಈ ದೇವಸ್ಥಾನಕ್ಕೆ ಸಂಬಂಧಪಟ್ಟ ಈ ಹೊಸ ಸ್ಕೀಮಿನ ಜಾರಿಯ ಎಲ್ಲಾ ವಿವರವನ್ನು ತಮ್ಮಪತ್ರಮೂಲಕ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಬಂಟ್ವಾಳ, } ಬಂಟ್ವಾಳ ಪೇಟೆಯವ.
೩೦-೧೦-೧೯೨೨ }

U. K. N. ರಿಗೆ ಕೇಳಿದ ಪ್ರಶ್ನೆಗೆ ಉತ್ತರ.

೧ನೇ. ಈ ಪ್ರಶ್ನಾಕರ್ತರು ನನ್ನ ಆ ಎಲ್ಲಾ ಲೇಖನಗಳನ್ನು ದಯಮಾಡಿ ಇನ್ನೊಮ್ಮೆ ಓದಿದರೆ ಅವರ ಮನಸ್ಸಿನ ಸಂಶಯವು ನಿವೃತ್ತಿಯಾಗಬಹುದೆಂದು ಭಾವಿಸುತ್ತೇನೆ. ಇನ್ನಷ್ಟು ಸ್ಪಷ್ಟಪಡಿಸಿ ಈ ಪ್ರಶ್ನಾಕರ್ತರ ಸಂಶಯವನ್ನು ಪರಿಹಾರಮಾಡಬೇಕಾದರೆ ಈ ಮುಂಚೆ ನಾನು ಬರೆದ ಲೇಖನಗಳಿಗಿಂತಲೂ ಹೆಚ್ಚು ಬರೆಯಬೇಕಾಗುವುದು. ಅವನ್ನೆಲ್ಲ ಪ್ರಕಟಿಸಲು ಪತ್ರಾಧಿಪರಿಗೆ ಅನುಕೂಲವಿರಲಾರದು. ಆದರೆ ಈ ಪ್ರಶ್ನಾಕರ್ತರು ತಮ್ಮ ಈ ಎರಡು ಶಬ್ದಗಳ "ಜನ್ಮದ ಮೇಲಿನಿಂದ" ಮತ್ತು "ಯೋಗ್ಯತೆಯ ಮೇಲಿನಿಂದ" ಅಭಿಪ್ರಾಯವನ್ನು ಸೂಚಿಸಿದರೆ ಅವರ ಮೇಲಾದರೂ ಆಧರಿಸಿ ಆ ಸಂಶಯವನ್ನು ನಿವಾರಿಸಲು ಪ್ರಯತ್ನಿಸುವೆನು.

೨. ನನ್ನ ಹೆಸರನ್ನು ಸಂಕೇತಾಕ್ಷರಗಳಿಂದ ಪ್ರಕಟಿಸಿದರಿಂದ ನನಗೇನೂ ದೋಷಬಾರದು, ಅಥವಾ ಅದನ್ನು ಸಂಪೂರ್ಣಾಕ್ಷರಗಳಿಂದ ಪ್ರಕಟಿಸಿ ವಿನಾದರೆಂದು ಬಹುಮಾನ ಪಡೆಯಬೇಕೆಂಬ ಆಶೆಯೂ ಇರದು. ನನ್ನ ಹೆಸರಿನಿಂದ ಯಾರಿಗೇನು ಪ್ರಯೋಜನವಾಗುವುದೋ? ತಿಳಿಯೆನು.

U. K. N.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.
ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0 | ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 181,250—0—0 | ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು,
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,
ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮ [illegible]ರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸದಂ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಅಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಕರಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.



ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೋವು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು. ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.
ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.
ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇಧ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು
ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.
ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೨೬, (ಚತ್ರಾದ್ರೀ, ಮದ್ರಾಸ್.
Local Agents: Raphael & Co.
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ
ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
Manager,
Sri Lakshmi Mills, KASARGOD, S. K.

ಆರ್. ಮಾರ್ಟಿನ್ನರ ಅಪ್ತಾ ಎಣ್ಣೆ.
ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ ರೂ. 1-4-0.
ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.
ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜಯೋಗಿಯೂ, ಎದೆಗೆ ಬಲಕೊಟ್ಟು ಮೇಲ್ಪಿಂದ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.
60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.
ಆರ್ ಮಾರ್ಟಿನ್ನರ ಗಿಟೋಡಯಿನ್.
ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ. ಕೀವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಧಾರಾಳವಾಗಿ ನಿರ್ಮಲವಾಗುವುದಲ್ಲದೆ ರೋಗದ ಚಿಹ್ನೆಯೇ ಇಲ್ಲದಾಗುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.
ಬೆಲೆ ಸೀಸೆ 1ಕ್ಕೆ ರೂ. 2—0—0.
ವಿಳಾಸ—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು —
— ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.
ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.
ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.
ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.
☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ
ರಥಬೀದಿ ಮಂಗಳೂರು.
ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ರಾಟೆಗಳೂ, ಯುನಾಮಲ್ಡ್ ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ ಬ್ರವುನ್ ಪೇಪರ್, ರಟ್ಟೆ, ಖಾಲಿ ಕವರು, ಫೌಂಟಿನ್‌ಪೆನ್, ಕಾಯುವಗ್ಯೆರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, [illegible] ಇತರ ಕಟ್ಲರಿ ಸಾಮಾನುಗಳೂ, ಪುರುಷರಿಗೆ [illegible] ತೊಡುವುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ [illegible] ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗ ವಗೈರೆ ಸಾಮಾನು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯು

ಅಚ್ಚಿನಲ್ಲಿದೆ! ಎಂ. ಜಿ. ಐಗಳ್, ಇವರಿಂದ ರಚಿತವಾದ ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಯಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿಂತ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ದಾರಕರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಆಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರೆ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರೆ—ವಿಟ್ಲ—ಕುಟಾದ್ರಿ—ಸೂಡ ಮಠಗಳು—ಕೇಜಿಗಾರರು—ಹಾಲುವಕ್ಕಿ ನರ್ಸಿಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತಶಾಯಿ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟಿದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತ ಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಬಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವೆ ಗೌಡಸಾರಸ್ವತರು ಮಾಧ್ವರಾದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚಿರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾರ್ಸೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬಿದಿನೂರು—ನೀಲೇಶ್ವರ ಯುದ್ಧ—ತುಳುರಾಜರು ವೃತ್ತಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ವೀರ ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಚಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾ ನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ಬಾಯ—ಕುಂಬಳೆ ಸುಬ್ಬಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—ಬುಚೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಪಂಜ—ಸುಳ್ಯ—ಬೆಳ್ಳಾರೆ—ಅಮರಸೂಳಗಳು—ಬೆಳ್ಳಾರೆ, ಮುಖ್ಯ ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ-ಗುರುವಾಯನಕೆರೆ ಪಟ್ಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮೂರಿಗುಡಿ—ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜಾಲ ಅಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ವಾರಾಹಿ ಯುದ್ಧ—ಬಂಟವಾಳ ಮಣಿಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜನವತ್ತರಾಯ—ಹುಂಬುಚ್ಚ ನಿರ್ಮಾಣ—ಏಳನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶೀಮುಂತೂರು—ಮೂಲಿಕೆ—ವರಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಿಡ್ಡಲ—ಸೋಮಲಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾರ್ಸೆಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ದಿನ್ನಾಣರು—ಪಡುಬಿಲ ಕೊಣ್ಣಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ಕುಂಬಳೆಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ದೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮೆ ಅರಸರು—ಮಾಯಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಣ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಹೆಜಮಾಡಿ ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟುಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಆಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಪಮುಹೆಗಡೆ 1.

ವಿಳಾಸ:— ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ವಶೀಕರಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಮುಟ್ಟಾ ಸಹ, ಇದರಲ್ಲಿ ಉಂಟು, ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವೂ ಅವರ ವಿಕಾಸವೂ ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಅತ್ಯದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಕಡಿಮೆ ಮಾಡಿ ಇರುವದು. ೨—೮—೦. ಟಪ್ಪಾಲು ಖರ್ಚು ಬೇರೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯುಕ್ತಿಗಳು, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ !!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನು ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೨೭)

"ಇದರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪರ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರತಿಗಳಿಗೂ ರಾಜಾಂಗೂ ಇರತಕ್ಕುದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉಪಪಾದಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೪—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0—12—0	ಪಂಚರಾಮಾಯಣ ಹೊಸ ಮುದ್ರಣ .	5—0—0
ಸಂತಾಪಕ-ಕಾವಂಬರಿ	0—6—0	ಪಂಚರಾಮಾಯಣದ	
ಚಂದ್ರಮುಖಿ ,,	0—8—0	ಕಥೆ ವಚನ .	0—12—0
ರಾಜಪುತ್ರರಮಣಿಯರು	0—8—0	S. S. L. C. Kannada Texts	
ಕಿಂಡ್ ನಸ್ಯ ಕಥೆಗಳು	1—0—0	ಹರಿದಾಸಿ . . .	0—5—0
ರಾಜಯೋಗ . .	1—0—0	ಸುಶೀಲೆ . . .	0—6—0
		ಅಡವಿಯ ಹುಡುಗಿ .	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published, by V. S. Kamath at the Mangalore Trading Association's Sharada Press, MANGALORE.

Registered No. M. 498.

SWADESHABHIMANI. MANGALORE.

ಸ್ವದೇಶಾಭಿಮಾನಿ.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ ,, 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ಪುಸ್ತಕ ೧೬. ಮಂಗಳೂರು, ತಾರೀಕು ೧೧ನೇ ಶುಕ್ರವಾರ ನವಂಬರ ೧೯೨೭. ಸಂಚಿಕೆ ೪೪

11/11/27

ರತ್ನೈರ್ಮಹಾರ್ಘೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಳಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥೧॥

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ
—ಉಡುಪಿ ಲಿಮಿಟೆಡ್.—

ಅಧಿಕಾರಿಗೊಳಿಸಲ್ಪಟ್ಟ ಮೂಲಧನ	ರೂ.	3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ		2,00,000—0—0
ಚಂದಾ ಹಾಕಿ ಎತ್ತಿದ ಮೂಲಧನ		1,00,000—0—0
ಮೌಲ್ಯ ತೆತ್ತ ಮೂಲಧನ		90,365—7—11
ಠೇವಣಾತಿಗಳು		3,33,300—0—0
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ ೮ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ		4,54,322—11—0

ಕಳೆದ 2 ವರುಷಗಳಲ್ಲಿ ಪಾಲುದಾರ್ರಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಶರ್ತದ ಮೇಲೆ ಶೇಕಡಾ 7ರಂತೆ 7½ ಬಡ್ಡಿಯಲ್ಲಿ ನಿರಖು ಠೇವಣಾತಿಗಳನ್ನೂ 15 ದಿನಗಳ ನೋಟೀಸು ಮೂಲಕ ಶೇಕಡಾ ೮½ರ ಬಡ್ಡಿ ಸಮೇತ ವಾಪಾಸು ಪಡಿಯುವ ಚಿಕ್ಕ ಮ್ಯಾದೆ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ಸಿಗುವ ಚಾಲ್ತಿ ಠೇವಣಾತಿಗಳನ್ನೂ ಶೇಕಡಾ 4½ ಬಡ್ಡಿ ಪಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ ತಿಂಗಳುಗಟ್ಟೆಯಿಂದ ತೆರುವ ಕಂತು ಠೇವಣಾತಿಗಳನ್ನೂ ಡಿಪೋಜಿಟಾಗಿ ಪಡೆಯುವದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟೆರಿಯವರಿಗೆ ಬರದಲ್ಲಿ ಸಿಕ್ಕುವದು.

ನಯಂಪಳ್ಳಿ ಆನಂದರಾವ್,
ಸಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಿಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಹಿಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ಎಮಾನಿಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತಲ್ ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ನಿರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಟ್ಟಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಷನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಕ್ಯಾದಾಸು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವೃತವಿವೇಕ ಕ್ರಯ		೦—೧೦—೦
ಕೇತುಭಂಗ	,,	೦—೧೨—೦
ಸಂಕ್ಷೇಪಗೀತ	,,	೦—೧೦—೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತಿಸ್ತೋತ್ರಸಾರ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ, ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿವಿಲಾಸ, ಶ್ರಾವ್ಯಶೀಲ, ಮಾಧವ ಕರುಣಾವಿಲಾಸ, ಅನರ್ಘರಾಘವ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಚಿತ್ರಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಂಕಗಣಿತ, ಭೂಗೋಳ, ವ್ಯಾಕರಣ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೩—೦ ಸ್ಥಳೀಕರಿಗೆ ರೂ. ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರರಿಗೆ ಬರೆಯಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಅಕ್ಷರ ಪುಸ್ತಕಗಳು, ನೋಟು ಬುಕ್ಕುಗಳು, ಶ್ಲೇಟುಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸು, ಬ್ಲಾಟಿಂಗ್ ಪೇಪರುಗಳು, ಇತರ ಬರೆವದಕ್ಕೆ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕೀಲರಿಗೆ ಇತ್ಯಾದಿ ಕೋರ್ಟ್ ಫೋರ್ಮುಗಳು, ವರ್ತಕರ ಫೋರ್ಮು, ಕುಂಭಕೋಣಂ ರಚನೆ ವ ಇತರ ರಚನೆ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಚನೆ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪತಿಕ್, ಹೋಮಿಯೋಪತಿಕ್ ಮತ್ತು ಆಯುರ್ವೇದ ಔಷಧಿಗಳು—ರೋಗಿಗಳಿಗೂ, ಬಾಲಕರಿಗೂ ಬೇಕಾಗುವ ಪೇಟೆಂಟ್ ಔಷಧಿಗಳು.

ನೈಟ್ರೇಟ್ ಆಫ್ ಸೋಡಾ ಇತ್ಯಾದಿ ತೋಟಗಳಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯೂಕಲಿಪ್ಟಸ್ ಓಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧ ಇಲಾಖೆಯ ಕಳೆದ ೩೫ ವರುಷಗಳ ಅನುಭವದಿಂದ ತಯ್ಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿರಶೂಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ವಾಸವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಗೂಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ರಾಕೃತಕಷಾಯ

U. B. DUTT & Co. CALICUT

ಮರೆಯಾಳ ದೇಶದ ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ [illegible] ಅನೇಕ ಅತ್ಯುತ್ತಮ ಔಷಧಗಳನ್ನು [illegible] ಅನೇಕ ಕಾಲದಿಂದ ಉಪಯೋಗಿಸುತ್ತೇವೆ. [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ [illegible] ಯೋಗ್ಯತಾಪತ್ರಗಳೂ ಬೇರಳವಾಗಿವೆ.

ಅಂಥಾ ಅತ್ಯುತ್ತಮ ಔಷಧಿಗಳಲ್ಲಿ ನಮ್ಮ '[illegible]' ಎಲ್ಲಾ ವಿಧದ [illegible] ಗುಣಪಡಿಸುತ್ತದೆ. [illegible]

[illegible] ರೂ. [illegible]—0 [illegible] ಕಂಪೆನಿ, [illegible]

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೇನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು-

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ.

ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಖುದ್ದು ನಿಗಾವಣೆಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬಿಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾಯತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ 25 ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬಗೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ¼ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ¼ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೇನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಚನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ ೨ರೂ. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಆರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,

Hampankatta, MANGALORE S' K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರ್ಮ, ಸೆಂಟ್ಸು, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ್ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಸ ಎಂಡ್ ವಾಚು, ಮೆರಿಡಿಯನ್ ಬರ್ವಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫ್ಲೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲುಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವವು. ಇದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಹಿತ್ತಾಳೆಯ 32 ಸಾಮಾನುಗಳ ಸಣ್ಣ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 6—0—0 ಪೋಸು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ ಮಡಿ, ಜರಿ, ಸಾದಾ, ಸೀರೆ, ಶಟಿ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಫಟಿಕ ಸ್ಫಟಿಕೆ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಯಿಂದ ಕಳುಹಿಸಲಾದೀತು. ಕ್ಯಾಟಲಾಗ್ ಇನಾಂ.

ವಿಳಾಸ:—

ಎ. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಸುರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಾಣಿ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ. 1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಡಬ್ಬಿಗೆ ರೂ. 0—8—0.

ನಮ್ಮ ವಿಳಾಸ:— **ಎ. ಫೆರ್ನಾಂಡಿಸ್,**
ಇಲೆಕ್ಟ್ರೊ ಹೊಮಿಯೊಪೆತಿಕ್ ಡಿಸ್ಪೆನ್ಸರಿ,
ಹಂಪನಕಟ್ಟೆ ಮಂಗಳೂರು.

ಬಸರಿಯಾದ ಬಾಣಂತಿಯ ಮತ್ತು ಬೆಳೆಯುವ ಮಕ್ಕಳ
ಮತ್ತು ಅನೇಕರು ವಿಶೇಷ ಪ್ರಮಾಣಗಳಲ್ಲಿ ಪುಷ್ಟಿಯಾದ ಆಹಾರ
ಅವಶ್ಯವಾಗುವಾಗ

'ಕೆಪ್ಲರ್'
(ಟ್ರೇಡ್ ಮಾರ್ಕ)

'KEPLER'

(Trade Mark)

Cod Liver Oil with Malt Extract

ಕಾಡ್ ಲಿವರ್ ಆಯಿಲ್ ವಿಥ್ ಮಾಲ್ಟ್ ಎಕ್ಸ್‌ಟ್ರಾಕ್ಟನ್ನು
ಉಪಯೋಗಿಸ ಬಹುದು.

ಈ ಆಹಾರ ದ್ರವ್ಯದ ಪೋಷಣೆ ಅಧಿಕವಾಗಿ ಜೀರ್ಣಕ್ಕನುವಾಗುವ ಶಕ್ತಿಯನ್ನು ಹೆಚ್ಚಿಸುತ್ತದೆ. ಇದು ಸ್ತ್ರೀಗಳಿಗೆ ಪ್ರಸವಕಾಲದಲ್ಲಿ ಅಸುವಶತ್ವಕ್ಕೆ ಬಹಳ ಸಹಾಯ ಶಕ್ತಿಕೊಟ್ಟು ಮತ್ತು ಅವರ ಸ್ತನಗಳಲ್ಲಿ ಉತ್ತಮವಾದ ಹಾಲನ್ನುಂಟು ಮಾಡುತ್ತದೆ.
ಬೆಳೆಯುವ ಮಕ್ಕಳಿಗೆ, ಎಲುಬು, ಹಲ್ಲು, ನರ, ಮತ್ತು ದೃಢವಾದ ಮಾಂಸವನ್ನುಂಟುಮಾಡುವದು.
'ಕೆಪ್ಲರ್' ಕಾಡ್ ಲಿವರ್ ಆಯಿಲ್ ವಿಥ್ ಮಾಲ್ಟ್ ಎಕ್ಸ್‌ಟ್ರಾಕ್ಟನ್ನು ಯಲ್ಲಾ ಋತುಗಳಲ್ಲಿಯೂ ತಿನ್ನಬಹುದು, ಕರಗಿ ಹೋಗುವಂತಹ ರೋಗದಿಂದ ಶಕ್ತಿಯು ಹಾನಿ ಹೊಂದುವವರು ಇದನ್ನು ಖಡ್ಡಿಯಾಗಿ ಉಪಯೋಗಿಸಬೇಕು.

ಬರ್ರೋಸ ವೆಲ್‌ಕಂ ಎಂಡ್ ಕೋ
ಲಂಡನ್ ಅಂಡ್ ಬೊಂಬಾಯಿ.

Burroughs Wellcome & Co.
London and Bombay

Can. 8 All Rights Reserved.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ
ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯ ಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಅಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ
ಗುಣ ವಿಶೇಷ! ಹುಡಿ ಹೆಚ್ಚು!!
ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಬೇಕೆನ್ನೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಸೋಲ್ ಏಜಂಟ್:—
ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" ದೇವರಲ್ಲಿ" ಎಂಬ ಆಂಗ್ಲ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.
ವಿಳಾಸ:—ಮ್ಯಾನೇಜರ್,

ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ

O. P. ನಂಬ್ರ 124/1922

ಕಾರಿಂಜೆ ಪದ್ಮನಾಭ ಆಚಾರ್ಯ—ಅರ್ಜಿದಾರ.

ಶಿವಳ್ಳಿ ಬ್ರಾಹ್ಮಣ ಮತಸ್ಥಾಪನೆ ಕಮಿಟೆಯ ಮೆಂಬರರಾಗಿದ್ದು ಇತ್ತಲಾಗಿ ರಾಜಿಕೊಟ್ಟ ವೆಂಕಟ ವರಹಾಚರ್ಯರ ಸ್ಥಾನಕ್ಕೆ ತನ್ನನ್ನು ಕಮಿಟಿ ಮೆಂಬರನನ್ನಾಗಿ ನೇಮಿಸಬೇಕಾಗಿ ಅರ್ಜಿದಾರನು ಕೊಟ್ಟ ಮೇಲ್ಕಂಡ ಅರ್ಜಿಯು ತನ್ನಿ ಬಗ್ಗೆ ತಾ. 20—11—1922ಕ್ಕೆ ಇಟ್ಟಿರುವುದರಿಂದ ಆ ಬಗ್ಗೆ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದರಿ ಕೋರ್ಟಿನ ಮುಂದೆ ಜಾಹೀರುಮಾಡಿಕೊಳ್ಳತಕ್ಕದ್ದೆಂದು ಈ ಮೂಲಕ ತಿಳಿಸೋಣಾಗಿದೆ.

ಮಂಗಳೂರು. } M. ANANTHA SHASTRI.
ತಾ. 9—11—'22 } ಅರ್ಜಿದಾರನ ಕಡೆ ವಕೀಲ್.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 399/22

1. ಕೊಡಂಗೆ ಶ್ರೀನಿವಾಸ ನ್ಯಾಕ
2. ಕಲ್ಯಾ ಉಪೇಂದ್ರ ಶ್ಯಾನುಭಾಗ
3. ಕೊರಗ ಶ್ಯಾನುಭಾಗ
4. ನರಸಪ್ಪ ಕಮ್ತಿ

} ವಾದಿರು.

ಮತ್ತು

1. ಅಧಾಂ ಸೋಜಾ
2. ಲುಕಸ್ ಮೊಂತೇರಾ

} ಪ್ರತಿವಾದಿರು.

ಮೇಲೆ ಕಾಣಿಸಿದ ವಾದಿರು ಮಂಗಳೂರು ತಾಲೂಕು ಪದವು ಗ್ರಾಮದ ಸರ್ವೆ ನಂಬ್ರ 69—3Aನೇ ಪ್ರತಿವಾದಿರ ಬಾಬ್ತು ವಳ ಮೂಲಗೇಣಿ ಸ್ಥಳದ ನಡುವಿನಿಂದ ಹೋಗುವ ಮಾಮೂಲ ದಾರಿಯ ಆತಂಕದ ಬಾಬಿನಲ್ಲಿ ಪ್ರತಿವಾದಿರ ಮೇಲೆ ದಾಕಲುಮಾಡಿದ ವ್ಯಾಜ್ಯವನ್ನು ತಮ್ಮ ವ ಪದವು ಗ್ರಾಮದ ಕಲ್ಯಾ ನಾಂತೂರು, ಕೊಡಂಗೆ, ಗುಂಡಿಗೆ, ಕುಂಟಲ್ಪಾಡಿ, ಕೊಟ್ಟಾರು, ಬಾಂದೊಟ್ಟು, ಮಗ್ರುಕೋಡಿ, ಬನದಳೆ ಎಂಬಲ್ಲಿರುವ ಸಮಸ್ತ ವಾಸಿಕರ ಬಗ್ಗೂ ಮುಂದರಿಸುವರೆ ಹುಕುಂ ಕೊಡಬೇಕಾಗಿ ಅರ್ಜಿ ಹಾಕಿ ಅದೇ ಮೇರೆಗೆ ವಾದಿರಿಗೆ ಕೋರ್ಟಿನವರಿಂದ ತಾ. 17-10-1922ರಲ್ಲು ಹುಕುಂ ಕೊಡೋಣಾಗಿಯದೆ. ಈ ವಿಷಯದಲ್ಲಿ ಆಕ್ಷೇಪಗಳು ಇದ್ದರೆ ವ್ಯಾಜ್ಯದ ತನಖಿ ತಾರೀಕಾದ 13--11--1922ನೇ ದಿವಸ ಕೋರ್ಟಿನವರಿಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, } ಕುಂಡಾಜೆ ರಾಮಮೋಹನರಾವ್,
ತಾ. 23-10-1922. } ವಾದಿ ಕಡೆ ವಕೀಲ್.

ಸುಸಂದರ್ಭ ತ್ವರೆ
ದರ ಸುಲಭ! ಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟಿಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ., ಬಿ. ಎಲ್.

ಕೊಂಕಣಿ ಭಾಷೆಯಲ್ಲಿ ಸಂಗೀತ

ಪ್ರಹ್ಲಾದ ಚರಿತ್ರ ನಾಟಕ.

ಬೆಲೆ: 0—8—0 ಪೋಸ್ಟ್ ಖರ್ಚು 0—1—0.

ಚಂದ್ರಹಾಸ ನಾಟಕ.

ತಿದ್ದಿದ ಮೂರನೇ ಮುದ್ರಣ ಬೆಲೆ: 0—4—6. ಪೋ. ಖ. 0-1-0

ಒಂದೊಂದು ಪುಸ್ತಕ ಬೇಕಾದವರು ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ:—ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದ. ಕನ್ನಡ.

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ
ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯ ಕ್ಕೋಸ್ಕರ ಇಟ್ಟದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ತು 1ರ ರೂ. 2—12—0.
ಸ್ಪೆಶ್ಯಲ್ ರಾತ್ತು 1ರ ರೂ. 3—0—0.
2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರೆಕ್ಟ ಡಿಪೊಜಿಟರಿ,
ಮಂಗಳೂರು.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂ॥ರದ ಕಾರ್ತಿಕ ಬ॥ ೭ ಶನಿವಾರದಿಂದ ದುಂದುಭಿ ಸಂ॥ ಕಾರ್ತಿಕ ಬ॥ ೧೩ ಶುಕ್ರವಾರದ ವರೆಗಿನ ಪಂಚಾಂಗ

(೧೯೨೨ನೆಯ ತುಲಾ ಬೊಂತೆಲ್)

ತಾರೀಕು	ವಾರ.	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರದಿನ.	ಸೂರ್ಯ ಉ.	ಸೂರ್ಯ ಅಸ್ತ.
11	ಶನಿ	೭	೪೩.೪೬	ಪುಷ್ಯ	೩೦.೪೬	೨೫	6.30	6. 1
12	ರವಿ	೮	೩೯.೧೪	ಆಶ್ಲೇಷಾ	೨೮. ೨	೨೬	6.30	6. 1
13	ಸೋಮ	೯	೩೪. ೦	ಮಘಾ	೨೪.೩೨	೨೭	6.31	6. 1
14	ಕುಜ	೧೦	೨೮.೧೬	ಹುಬ್ಬಾ	೨೦.೪೬	೨೮	6.31	6. 1
15	ಬುಧ	೧೧	೨೨.೩೨	ಉತ್ತರಾ	೧೬.೪೪	೨೯	6.32	6. 0
16	ಗುರು	೧೨	೧೬.೪೪	ಹಸ್ತಾ	೧೨.೪೫	೩೦	6.32	6. 0
17	ಶುಕ್ರ	೧೩	೧೦.೪೬	ಚಿತ್ತಾ	೮ .೪೬	೧	6.33	6. 0

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ನವಂಬರ್)

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡ್ಮೆಯದ್ದು	ದಿನದ ಮಳೆ	ಜುಮಲಾ ಮಳೆ.
3	89—2	76—3	0—14	—
4	88—5	74—5	—	—
5	89—6	75—8	0—20	—
6	86—2	75—0	0—45	—
7	84—8	74—8	0—02	—
8	86—6	74—3	0—43	—
9	88—7	74—3	0—80	137.79

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ	ವರೆಗೆ
		ರೂ. ಆ.	ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ	...	8— 4	8—12
ಸುಗ್ಗಿಗೆ	...	7—10	8— 0
ಗುಡ್ಡು,	...	7—10	8— 0
ಹೊಸ ರಾಶಿ		6—12	7— 9
ಅವ್ವಲ್ ಬೆಳ್ತಿಗೆ ,,	...	9— 0	9— 4
ಗುಡ್ಡು ಬೆಳ್ತಿಗೆ ,,	...	7—10	8— 0
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	12— 0	12— 8
ಗೋದಿ ಗೋಣಿ ೧ಕ್ಕೆ	...	17— 0	21— 0
ಹುರುಳಿ ಗೋಣಿ ೧ಕ್ಕೆ	...	12— 8	12—12
ಕಡಲೆ ಗೋಣಿ ೧ಕ್ಕೆ	...	13— 0	16— 0
ತೊಗರಿ ಗೋಣಿ ೧ಕ್ಕೆ	...	14— 0	14—8
ತೊಗರಿಬೇಳೆ ಗೋಣಿ ೧ಕ್ಕೆ	...	16— 0	20— 0
ಉದ್ದು ಗೋಣಿ ೧ಕ್ಕೆ	...	17— 0	17— 4
ಹೆಸರು ಗೋಣಿ ೧ಕ್ಕೆ	...	13— 0	—
ಊರು ಬೆಲ್ಲ ಖಂಡಿ ೧ಕ್ಕೆ	...	45— 0	47— 8
ಉಪ್ಪು ಗೋಣಿ ೧ಕ್ಕೆ	...	4—12	5— 0
ಕೊಬ್ರಿ ಖಂಡಿ ೧ಕ್ಕೆ	...	85— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	50— 0	51— 0
ಎಳ್ಳಿಂಡಿ ಖಂಡಿ ೧ಕ್ಕೆ	...	45— 0	50— 0
ಕೊಬ್ರಿ ಎಣ್ಣೆ ಮಣ ೧ಕ್ಕೆ	...	7—10	9— 0
ಎಳ್ಳೆಣ್ಣೆ ಮಣ ೧ಕ್ಕೆ	...	7— 8	9— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	9— 0	—
ಮೋರಿಸ ಸಕ್ಕರೆ ಮಣ ೧ಕ್ಕೆ	...	6— 0	6— 0
ಊರ ಮೆಣಸಿನ ಕಾಯಿ ಮಣ ೧ಕ್ಕೆ	...	8— 0	8— 4
ಸಾಸಿವೆ ಮುಡಿ ೧ಕ್ಕೆ	...	9— 0	9— 8
ಕೊತ್ತಂಬರಿ ಮುಡಿ ೧ಕ್ಕೆ	...	5— 0	5— 4
ಕಾಫಿ ಖಂಡಿ ೧ಕ್ಕೆ	...	330— 0	335— 0
ಬೀಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	175— 0	180— 0
ಬೀಗೋಟು New, ಹೊಸ್ತು	...	115— 0	120— 0
ಕಾಳುಮೆಣಸು ಖಂಡಿ ೧ಕ್ಕೆ	...	120— 0	125— 0
ಯಾಲಕ್ಕಿ ಮಣ ೧ಕ್ಕೆ	...	26— 0	28— 0
ಗೇರುಬೀಜ ಮುಡಿ ೧ಕ್ಕೆ	...	2— 2	2— 4
ಕಬ್ಬಿಣ ಖಂಡಿ ೧ಕ್ಕೆ	...	55— 0	65— 0
ತಾಂಬ್ರ ತಗಡು ಮಣ ೧ಕ್ಕೆ	...	23— 0	24— 0
ತಾಂಬ್ರ ಪಾತ್ರಗಳು ಮಣ ೧ಕ್ಕೆ೧ಕ್ಕೆ	...	36— 0	—
ಚೀನ ಬೆಳ್ಳಿ ಸೇರು ೧ಕ್ಕೆ	...	24— 0	—
ಒಪ್ಪಾಳ ಪವನುಮಣ 1ಕ್ಕೆ	...	21— 0	—

"ಸುಪಾನ"

ಕಾಫಿ, ಚಾ ವಗೈರೆ ಕುಡಿದು ಆರೋಗ್ಯವನ್ನು ಕೆಡಿಸಿಕೊಳ್ಳುವುದರ ಬದಲಾಗಿ ನಾಮದಬೇರು ಮೊದಲಾದ ೧೭ ಬಗೆಯ ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟ "ಸುಪಾನ" ಎಂಬ ಕಷಾಯದ ಪುಡಿಯಿಂದ ಸುಖಕರ, ಆರೋಗ್ಯಕರವಲ್ಲದೆ ಮೇಹ, ಮಲೇರಿಯಗಳನ್ನು ನಾಶಗೊಳಿಸುವ ಅತ್ಯುತ್ತಮವಾದ ಪಾನವನ್ನು ಮಾಡಿಕೊಳ್ಳಬಹುದು. ಒಮ್ಮೆ ಪರೀಕ್ಷಿಸಿರಿ. ಕ್ರಯ ಅಳತೆ ಸೇರು ೧ಕ್ಕೆ ೦—೧೨—೦. ಪೌಂಡುಒಂದಕ್ಕೆ ರೂ. ೧—೦—೦. ವಿ. ಪಿ. ಪ್ರತ್ಯೇಕ.

ಸ್ಯಾಂಪಲು ಅಪೇಕ್ಷಿಸುವವರು ೩ಆಣೆ ಸ್ಟಾಂಪನ್ನು ಮುಂಗಡವಾಗಿ ಕಳುಹಿಸತಕ್ಕದ್ದು.

ಕೆ. ಸೋಮಯ್ಯ ಸೆಟ್ಟಿ.
ಜೈಲ್ ರೋಡು, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ

O. P. ನಂಬ್ರ 182/1922

ಕಾವೂರ ರಾಮ ಪೈ.—ಅರ್ಜಿದಾರ.

ಮೃತಪಟ್ಟ ಕಾವೂರ ದಾಸಪ್ಪೈಯ ವೀಲಿನ ಪ್ರೊಬೆಟ್ಟು ಅಪೇಕ್ಷಿಸಿ ಅರ್ಜಿದಾರನು ಕೊಟ್ಟ ಸದರಿ ಅರ್ಜಿಯು ಇದೇ ತಿಂಗಳ ತಾ. 27ಕ್ಕೆ ತನ್ನಿಗೆ ಇಟ್ಟಿರುವುದರಿಂದ ಈ ಕುರಿತು ಆಕ್ಷೇಪಿಸುವವರು ಸದರಿ ತಾ. 27—11—'22ಕ್ಕೆ ಮಧ್ಯಾಹ್ನ 11ಘಂಟೆಗೆ ಮೇಲ್ಕಂಡ ಕೋರ್ಟ ಮುಂದೆ ಹಾಜರಾಗಿ ಜಾಹೀರುಮಾಡತಕ್ಕದ್ದು.

ಮಂಗಳೂರು. ತಾ. 4—11—'22 }
B. SHRINIVAS POI,
Vakil for Petitioner.

ವಿನಂತಿ.

ಮಂಗಳೂರು ತಾಲೂಕು ಕಾಂಗ್ರೆಸು ಕಮ್ಮಿಟಿಯು ಮುಂದರಿಸಿಟ್ಟ ಮಹಾಸಭೆಯು ಇದೇ ತಾ. ೧೨—೧೧—೧೯೨೨ನೇ ಆದಿತ್ಯವಾರ ಮಧ್ಯಾಹ್ನದ ಮೇಲೆ ೩ಗಂಟೆಗೆ ಮಂಗಳೂರಿನಲ್ಲಿ ಕರ್ನಾಟಕ ತಿಲಕ ಮಹಾ ವಿದ್ಯಾಲಯದಲ್ಲಿ ಜರಗುವುದು. ಸವಿನಯ ಆಜ್ಞಾಭಂಗದ ಮಂಡಲಿಯವರು ಮಾಡಿದ ವರದಿಯ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಹೊರಪಡಿಸುವುದು, ತಿಲಕ ಸ್ವರಾಜ್ಯ ನಿಧಿಯನ್ನು ಖರ್ಚು ಮಾಡುವ ವಿಧಾನ, ಬರುವ ವರುಷದ ತಾಲೂಕು ಚುನಾವಣೆಯಾಗುವುದರೊಳಗಾಗಿಯೇ ತಾಲೂಕಿನಲ್ಲಿ ಎಲ್ಲಾ ಗ್ರಾಮ ಕಮ್ಮಿಟಿಗಳ ಸ್ಥಾಪನೆ ಮತ್ತು ಸದಸ್ಯರ ಸಭೆಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ವೃದ್ಧಿಗೊಳಿಸುವುದು, ಖಾದಿ ಪ್ರಚಾರದ ಏರ್ಪಾಟು ಇವೇ ಮೊದಲಾದ ಮಹತ್ವದ ವಿಷಯಗಳ ಕುರಿತು ಸಭೆಯು ಇತ್ಯರ್ಥದ ಬಗ್ಗೆ ಅದರ ಮುಂದೆ ಸೂಚನೆಗಳು ಬರಲಿಕ್ಕೆ ಇರುವುದರಿಂದಲೂ, ಈ ವರುಷದ (೧೯೨೨ನೇ ಇಸವಿಯ) ಬಗ್ಗೆ ಇದು ಕಡೇ ಮಹಾಸಭೆ ಆಗಿರುವುದರಿಂದ ಕೂಡ ಸದಸ್ಯರೆಲ್ಲರೂ ಮಂಗಳೂರು ಪಟ್ಟಣದಲ್ಲಿ ೧೯೨೨ನೇ ಇಸವಿ ಬಗ್ಗೆ ೪ಆಣೆ ವರ್ಗಣೆಕೊಟ್ಟು ಸದಸ್ಯರಾದವರೂ ಗ್ರಾಮ ಕಮ್ಮಿಟಿಗಳ ಪ್ರತಿನಿಧಿಗಳೂ) ತಪ್ಪದೆ ಬರಬೇಕಾಗಿ ಸವಿನಯ ವಿನಂತಿ.

ಮ. ತಾ. ಕಾ. ಕ. ತಾ. ೭—೧೧—'೨೨ }
ಮೂ. ಉಮೇಶರಾವ್,
ಕಾರ್ಯದರ್ಶಿ.

ದಕ್ಷಿಣ ಕನ್ನಡ ಜಿಲ್ಲಾ ದ್ರಾವಿಡ ಬ್ರಾಹ್ಮಣರ ಮೂರನೆಯ ಪರಿಷತ್ತು.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಮೂರನೆಯ ಪರಿಷತ್ತು ಇದೇ ದುಂದುಭಿ ನಾಮ ಸಂವತ್ಸರದ ವೃಶ್ಚಿಕ ಬ ೯ ಮತ್ತು ೧೦ಕ್ಕೆ ಸರಿಯಾದ ೧೯೨೨ನೇ ಇಸವಿ ದಶಂಬರ ತಿಂಗಳ [illegible]ರಲ್ಲಿ ಕಾರ್ಕಳ ತಾಲೂಕು ಕಾರ್ಕಳ ಕಸಬೆಯಲ್ಲಿ ಜರಗಿಸಬೇಕೆಂತ ಸ್ವಾಗತಮಂಡಳಿಯವರು ನಿರ್ಣಯಿಸಿದ್ದಾರೆ. ಬಹುಮಾನಪಟ್ಟ ಮದ್ರಾಸು ಹೈಕೋರ್ಟ ವಕೀಲ, ಮ. ರಾ. ರಾ. ಬಂಟವಾಳ ಸೀತಾರಾಮರಾವ್ ಅವರ್ಗಳ್ ಬಿ. ಎ. ಬಿ. ಯಲ್ ಇವರನ್ನು ಸದರಿ ಪರಿಷತ್ತಿನ ಅಗ್ರಸ್ಥಾನವನ್ನು ವಹಿಸಿಕೊಂಡು ಸದರಿ ಪರಿಷತ್ತಿನ ಕಾರ್ಯಗಳನ್ನು ನೆರವೇರಿಸಿಕೊಡುವಂತೆ ಕೇಳಿಕೊಳ್ಳಲಾದ್ದಕ್ಕೆ ಅವರು ಸಮ್ಮತಿಸಿರುತ್ತಾರೆ. ಸದರಿ ಪರಿಷತ್ತಿನ ಪ್ರವೇಶವು ಟಿಕೇಟುಗಳ ಮುಖಾಂತರವಾಗಿರುತ್ತದೆ. ಸದರಿ ಟಿಕೇಟುಗಳ ದರವನ್ನು ಅಪೇಕ್ಷಿಸುವವರು ಕೆಳಗೆ ದಸ್ಕತುಮಾಡಿದ ಕಾರ್ಯದರ್ಶಿಗಳ ಪೈಕಿ ಯಾರಿಗಾದರೂ ಬರಕೊಂಡಲ್ಲಿ ತಿಳಿಸೋಣಾಗುವುದು.

ಸದರಿ ಪರಿಷತ್ತಿನಲ್ಲಿ ಆಲೋಚಿಸತಕ್ಕ ವಿಷಯಗಳನ್ನು ಹಿಂದಿನಿಂದ ಪ್ರಕಟಿಸೋಣಾಗುವುದು. ಸದರಿ ಪರಿಷತ್ತಿನಲ್ಲಿ ಪ್ರವೇಶಿಸುವ ಬಗ್ಗೆ ಟಿಕೇಟು ಪುಸ್ತಕಗಳನ್ನು ಸ್ವಾಗತಮಂಡಳಿಯವರು ಛಾಪಿಸಿರುತ್ತಾರೆ.

ಈ ಸಂದರ್ಭಗಳಲ್ಲಿ ಸಂಬಂಧಪಟ್ಟ ದ್ರಾವಿಡ ಬ್ರಾಹ್ಮಣರೆಲ್ಲರೂ ಈ ಪರಿಷತ್ತಿನ ಸಮಾಚಾರವನ್ನು ತಮ್ಮ ಇಷ್ಟಮಿತ್ರರೊಳಗೆ ಪ್ರಚಾರಪಡಿಸಿ ಈ ಪರಿಷತ್ತಿನ ಉದ್ದೇಶಗಳು ನೆರವೇರುವಂತೆ ಹಾಗು ಪರಿಷತ್ತಿಗೆ ಆದಷ್ಟು ಹೆಚ್ಚು ಮಂದಿ ನೆರೆಯುವಂತೆ ಮಾಡುವುದಲ್ಲದೆ ಈ ಪರಿಷತ್ತಿನಲ್ಲಿ ಆಲೋಚಿಸತಕ್ಕ ವಿಷಯಗಳ ಕುರಿತು ಏನಾದರೂ ಸೂಚನೆಗಳು ಇರುವುದಾದರೆ ಅದನ್ನು ಇದೇ ಬರುವ ದಶಂಬರ ತಿಂಗಳ ತಾರೀಕು ೧೦ರ ಒಳಗೆ ಈ ಕೆಳಗೆ ದಸ್ಕತು ಮಾಡಿರುವ ಸ್ವಾಗತ ಮಂಡಳಿಯ ಕಾರ್ಯದರ್ಶಿಯವರಿಗೆ ತಲುಪುವಂತೆ ವಿರಳವಾಗಿಯೂ ಸ್ಪಷ್ಟವಾಗಿಯೂ ಬರೆದು ರವಾನಿಸುವಂತೆ ಅಪೇಕ್ಷಿಸೋಣಾಗುತ್ತದೆ.

ದ್ರಾವಿಡ ಬ್ರಾಹ್ಮಣರೆಲ್ಲರಿಗೂ ಅತ್ಯಗತ್ಯಬೇಕಾದ ಈ ವಿಷಯ ಇನ್ನು ಹೆಚ್ಚಿಗೆ ಏನು ಬರೆಯಲಿ, ಎಲ್ಲರೂ ಶಕ್ತಿಮೀರಿ ಪ್ರೋತ್ಸಾಹಿಸುವರಾಗಿ ನಂಬುತ್ತೇವೆ.

ಇಂತಿ ಸಜ್ಜನರ ಅತ್ಯಂತ ವಿಧೇಯ ಸೇವಕರು. ಕುದ್ಮಲ ವಾಸುದೇವಯ್ಯ, ಬಿ. ಎ. ಬಿ. ಎಲ್, ವಕೀಲ್ ಕಾರ್ಕಳ, ಹೊಸಹಿತ್ಲು ಅನಂತ ಭಟ್ಟ, ರೈತ ಮಿಯಾರು ಗ್ರಾಮ, ಡಿ. ವೆಂಕಟೇಶ ಪಾಠಕ್ ಡಿ-ಬೊ-ಹ್ಯಾಸ್ಕೂಲ್ ಅಧ್ಯಾಪಕ.

ಸ್ವಾಗತ ಮಂಡಳಿಯವರ ಅಧ್ಯಕ್ಷರ ಅಪ್ಪಣೆ ಪ್ರಕಾರ.

ಕಾರ್ಕಳ, ತಾ. 5-11—1922. }
ಕಾರ್ಯದರ್ಶಿ.

ಶ್ರೀಮನ್ ಮೈಸೂರು ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ., ಜಿ. ಸಿ. ಬಿ. ಇ., ಯವರು ೪ನೇ ಸ್ಕೌಟ್ ವರ್ಧಂತಿ ಮಹೋತ್ಸವದಲ್ಲಿ ಸ್ಕೌಟ್‌ಬಾಲಕರ ರೆವ್ಯೂಆದ ನಂತರ ಅಪ್ಪಣೆ ಕೊಡಿಸಿದ ಸುಭಾಷಣವು.

ಸ್ಕೌಟುಗಳಿರಾ,

ಮೈಸೂರು ಸಂಸ್ಥಾನದ ಸ್ಕೌಟುಗಳನ್ನು ನೋಡುವ ಮತ್ತು ಅವರಿಗೂ ಅವರ ನಾಯಕರಿಗೂ ಕೆಲವು ಮಾತುಗಳನ್ನು ಹೇಳುವ ಶುಭಸಮಯವನ್ನು ಈ ಧ್ವಜ ಪ್ರದಾನ ಮಹೋತ್ಸವವು ನನಗೆ ಒದಗಿಸಿರುತ್ತದೆ.

ಬೆಂಗಳೂರಿನ ಪ್ರಹ್ಲಾದ ಸ್ಕೌಟು ಟ್ರೂಪಿನವರು ಈ ಬಹುಮಾನವನ್ನು ಸಂಪಾದಿಸಿಕೊಳ್ಳುವ ಶ್ಲಾಘ್ಯಯೋಗ್ಯತೆಯನ್ನು ಪಡೆದುದಕ್ಕಾಗಿ ಮೊಟ್ಟಮೊದಲು ಅವರನ್ನು ಅಭಿನಂದಿಸುತ್ತೇನೆ. ಮೈಸೂರು ಸಂಸ್ಥಾನದ ಸ್ಕೌಟು ಹುಡುಗರಲ್ಲಿ ಪ್ರಥಮಸ್ಥಾನವನ್ನು ಪಡೆಯುವುದು ಸುಲಭಕಾರ್ಯವಲ್ಲ. ಬೆಂಗಳೂರು ಮೈಸೂರು ಪಟ್ಟಣಗಳಲ್ಲಿಯೂ ಇತರ ಕೆಲವು ಊರುಗಳಲ್ಲಿಯೂ ಅವಿಶ್ರಾಂತವಾದ ಉತ್ತಮ ಶಿಕ್ಷಣದಿಂದ ಪ್ರಬಲ ಪ್ರತಿಕಕ್ಷಿಗಳಾಗಿರುವ ಇತರ ಸ್ಕೌಟು ಟ್ರೂಪುಗಳಿರುವುದನ್ನು ನಾನು ಬಲ್ಲೆ. ಪ್ರಥಮಸ್ಥಾನ ಗೌರವಕ್ಕೆ ಅರ್ಹರಾದ ಅನೇಕರಲ್ಲಿ ಪ್ರಥಮಸ್ಥಾನವನ್ನು ಪಡೆಯುವುದು ಮತ್ತಷ್ಟು ಶ್ಲಾಘ್ಯವಾಗಿರುತ್ತದೆ. ಇದು ಸ್ತೋತ್ರಾರ್ಹವಾದ ನಾಯಕತ್ವಕ್ಕೆ ನಿದರ್ಶನವಾಗಿರುವುದು; ಹುಡುಗರ ದೇಹದಾರ್ಢ್ಯ ಬುದ್ಧಿಶಕ್ತಿಗಳಿಗಲ್ಲದೆ ಹುಡುಗರ ಸುಸ್ವಭಾವ ಶೀಲಗಳಿಗೂ ನಿದರ್ಶನವಾಗಿರುವುದು.

ಮೈಸೂರು ಸಂಸ್ಥಾನದಲ್ಲಿ ಸ್ಕೌಟು ಕ್ರಮಾಚರಣೆಯು ಶೀಘ್ರವಾಗಿ ಬೆಳೆದು ಬಂದಿರುವುದು ಈಗಿನ ಕಾಲದ ವಿದ್ಯಮಾನಗಳಲ್ಲಿ ಶುಭಸೂಚಕವಾದದ್ದೂ ಅತ್ಯಂತ ಪ್ರೋತ್ಸಾಹಕರವಾದದ್ದೂ ಆಗಿದೆ. ಮೈಸೂರು ಸಂಸ್ಥಾನದ ಬಾಲಕರಲ್ಲಿರುವ ಸತ್ವವು ಎಂಥ ಉತ್ತಮವಾದುದೆಂಬುದನ್ನು ಈ ಪದ್ಧತಿಯು ಆಗಲೇ ತೋರಿಸಿರುತ್ತದೆ. ಸ್ಥೈರ್ಯವನ್ನೂ ಉತ್ಸಾಹವನ್ನೂ ಬಾಲಕರು ತೋರಿಸಿರುವರು; ಅವರಲ್ಲಿರುವ ಉತ್ತಮ ಗುಣಗಳನ್ನು ಸ್ಕೌಟು ಶಿಕ್ಷಣವು ಪ್ರಕಾಶಕ್ಕೆ ತಂದಿರುವುದು. ಆದರೆ ಉತ್ತಮ ಸ್ಕೌಟುಗಳಾಗತಕ್ಕ ಅನೇಕ ಹುಡುಗರು ಇನ್ನೂ ಈ ಗುಂಪಿಗೆ ಸೇರಿಲ್ಲ. ತಾನು ಅತ್ಯುತ್ತಮ ಸ್ಥಿತಿಗೆ ಬರಬೇಕಾದರೆ ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ಕೌಟಾಗಬೇಕು; ಇತರ ಬಾಲಕರನ್ನು ಸ್ಕೌಟು ಗುಂಪಿಗೆ ಸೇರಿಸುವುದು ತಮ್ಮ ಮುಖ್ಯ ಕರ್ತವ್ಯವೆಂಬುದು ಎಲ್ಲ ಸ್ಕೌಟುಗಳು ತಿಳಿದ ವಿಷಯವೇ ಆಗಿದೆ; ಹೀಗೆ ಸೇರುವುದರಲ್ಲಿ ಚಟುವಟಿಕೆಯುಳ್ಳ ಮತ್ತು ಬಹುಜನಪ್ರಿಯರಾದ ಹುಡುಗರನ್ನಲ್ಲದೆ, ನಾಚಿಕೆಯೂ, ಹಿಂದೆ ಅಡಗಿಸಿಕೊಳ್ಳುವ ಸ್ವಭಾವವೂ ಉಳ್ಳ ಹುಡುಗರನ್ನು—ಅದರಲ್ಲಿಯೂ ದೇಹದಾರ್ಢ್ಯವಿಲ್ಲದಿರುವವರನ್ನು—ಸೇರಿಸಬೇಕು; ಏಕೆಂದರೆ ಸ್ಕೌಟು ಟ್ರೂಪುಗಳಲ್ಲಿ ದೊರೆಯುವ ಸ್ನೇಹಪರತೆಗೂ ಒಳ್ಳೆಯ ಶಿಕ್ಷಣಕ್ಕೂ ಇಂತಹ ಬಾಲಕರೇ ಸತ್ಪಾತ್ರರು.

ಈ ಕ್ರಮಾಚರಣೆಯ ಬಾಲ್ಯದೆಶೆಯಲ್ಲಿ ಸ್ಕೌಟುಗಳಿಗೆ ಶಿಕ್ಷಣಕೊಟ್ಟು ಮುಂದುವರಿಸಿದ ಎಲ್ಲ ಜನರಿಗೂ ಹಿಂದಿನ ಮತ್ತು ಈಗಿನ ಸ್ಕೌಟುಕಮಿಷನರುಗಳಿಗೂ ಮತ್ತು ಅವರ ಕೈಕೆಳಗೆ ಕೆಲಸಮಾಡಿರುವ ಇತರರಿಗೂ, ಅತ್ಯಧಿಕವಾದ ಕೃತಜ್ಞತೆಯು ಸಲ್ಲಬೇಕಾಗಿದೆ. ಸಾಮಾನ್ಯವಾಗಿ, ಅವಿಶ್ರಾಂತ ಶ್ರಮಸಹಿಷ್ಣುಗಳಾಗಿ ಇರತಕ್ಕ ಅಲ್ಪಸ್ವಲ್ಪ ಅವಕಾಶವನ್ನು ತಮ್ಮ ಶಿಕ್ಷಣಕ್ಕೂ ತಮ್ಮ ಟ್ರೂಪುಗಳ ಶಿಕ್ಷಣಕ್ಕೂ ಸಂತೋಷಪೂರ್ವಕವಾಗಿಯೇ ವಿನಿಯೋಗಿಸಿರುವ ಸ್ಕೌಟು ಉಪಾಧ್ಯಾಯರನ್ನು ಎಷ್ಟು ಸ್ತೋತ್ರಮಾಡಿದರೂ ಹೆಚ್ಚಲ್ಲ.

ಯಾವದೊಂದು ಬುದ್ಧಿವಾದವನ್ನೂ ನಿಮಗೆ ಹೇಳಲು ನಾನು ಇಚ್ಛಿಸುವುದಿಲ್ಲ; ಏಕೆಂದರೆ ನಿಮಗೆ ಅದರ ಆವಶ್ಯಕತೆಯೇನೂ ಇಲ್ಲ. ಪ್ರಪಂಚದಲ್ಲೆಲ್ಲ ಅತ್ಯುತ್ತಮ ಬುದ್ಧಿವಾದವು ನೀವು ಗಟ್ಟಿಮಾಡಿಯೇ ಇರುವ ಸ್ಕೌಟು ನಿಯಮದಲ್ಲಿದೆ. ಆ ನಿಯಮವು ಬಹಳ ಸುಲಭವಾದದ್ದು; ಆದರೂ ನೀವು ಬೆಳೆಯುತ್ತ ಹೋದ ಹಾಗೆಲ್ಲ ಅದರಲ್ಲಿ ಹೊಸದಾದ ಮತ್ತು ಹೆಚ್ಚಿನ ಅರ್ಥವನ್ನು ಯಾವಾಗಲೂ ಕಾಣುವಿರಿ. ವಸ್ತುತಃ ಸ್ಕೌಟು ನಿಯಮಕ್ಕೆ ಜೀವನಸ್ಥಿತಿಯೇ ಉತ್ತಮವಾದ ವ್ಯಾಖ್ಯಾನ. ನಾವು ಮಾಡುವುದರಲ್ಲೆಲ್ಲ ಆ ಸ್ಕೌಟು ನಿಯಮವನ್ನು ಅನುಸರಿಸಲು ಶ್ರಮವಹಿಸಿದರೆ, ಈ ಪ್ರಯತ್ನದ ಮೂಲಕ ಸ್ಕೌಟು ನಿಯಮವು ಎಷ್ಟು ಅರ್ಥಪರಿಪೂರ್ಣವಾದದ್ದು, ಎಷ್ಟು ಆನಂದದಾಯಕವಾದದ್ದು ಎಂಬುದನ್ನು ಕಂಡುಹಿಡಿಯುವೆವು. ಆ ನಿಯಮದಲ್ಲಿ ಎರಡು ಸಾಮಾನ್ಯಸಂಗತಿಗಳು ಮುಖ್ಯವಾಗಿ ನೆನಪಿನಲ್ಲಿರಲು ಯೋಗ್ಯವಾಗಿ ಕಂಡು ಬರುತ್ತವೆ. ಮೊದಲನೆಯದು—ಆ ನಿಯಮದಲ್ಲಿ ಕೆಲಸ ಮಾಡುವುದರ ವಿಚಾರವೇ ಹೆಚ್ಚು, ಮಾತನಾಡುವುದರ ವಿಚಾರ ತೀರ ಕಡಿಮೆ. ಆ ನಿಯಮವು ಎಂಥ ಶ್ಲಾಘ್ಯವಾದುದು ಎಂಬುದನ್ನು ಈ ಸಂಗತಿಯೇ ತೋರಿಸುತ್ತದೆ. ಮಾತನಾಡುವ ಬದಲು ಕೆಲಸಮಾಡುವಾತನೇ ಸ್ಕೌಟು. ಬಾಲಕನು ಸ್ಕೌಟಾಗುವಾಗ ಮಾತ್ರ ಪ್ರತಿಜ್ಞೆಯನ್ನು ಮಾಡಬೇಕು, ಆ ಮೇಲೆ ಅವನು ಇನ್ಯಾವ ಪ್ರತಿಜ್ಞೆಯನ್ನೂ ಮಾಡುವುದಿಲ್ಲ. ತನ್ನ ಎಲ್ಲ ಶಕ್ತಿಯನ್ನೂ ಸೇವಾಕಾರ್ಯದಲ್ಲಿಯೇ ವಿನಿಯೋಗಿಸುವನು. ಮಾತನಾಡುವುದನ್ನೇನೋ ನಾವು ಅಲ್ಲಗಳೆಯಬಾರದು; ಏಕೆಂದರೆ ವಿವೇಕಭಾಷಣದಿಂದ ಯಥಾರ್ಥವಾದ ಸೇವೆಮಾಡುವ ಅನೇಕರಿರುತ್ತಾರೆ; ಆದರೆ ಸರ್ವಸಾಮಾನ್ಯ ಮನುಷ್ಯನಿಗೆ ಆದಷ್ಟು ಸ್ವಲ್ಪ ಮಾತಾಡುವುದೂ ಆದಷ್ಟು ಹೆಚ್ಚು ಕೆಲಸಮಾಡುವುದೂ ಎಂದಿಗೂ ಕೆಟ್ಟ ಆಚರಣೆಯಲ್ಲ. ಸಹಾಯವನ್ನೂ ಸಂತೋಷವನ್ನೂ ಉಂಟುಮಾಡುವ ಮಾತುಗಳನ್ನಾಡುವುದು ಸ್ಕೌಟಿನ ಕರ್ತವ್ಯ. ಆದರೆ ಸ್ಕೌಟುನಿಯಮವು ಅವಿಶ್ರಾಂತೋದ್ಯೋಗವನ್ನೇ ಒತ್ತಿ ಹೇಳುತ್ತದೆ.

ಎರಡನೆಯ ಸಂಗತಿಯು (ಇದು ಮೊದಲಿನದಕ್ಕೆ ಸಂಬಂಧಿಸಿಯೇ ಇದೆ.) ಏನೆಂದರೆ—ಈ ಸ್ಕೌಟು ನಿಯಮವು, ಯಾವದನ್ನು ಮಾಡಬಾರದು ಎಂಬುದನ್ನು ಶ್ರಮವಹಿಸಿ ಹೇಳುವ ಬದಲು, ಯಾವುದನ್ನು ಮಾಡಬೇಕು ಎಂಬುದನ್ನೇ ಹೇಳುತ್ತಿರುತ್ತದೆ. "ನಿಮ್ಮ ಶಿಕ್ಷಣ ಕ್ರಮದ ಮೂಲಭಾವವು ನಿಷೇಧಾರ್ಥಕವಾಗಿರುವುದಕ್ಕಿಂತ ವಿಧ್ಯರ್ಥಕವಾಗಿರಲಿ, ಎಂದರೆ—ಕೆಟ್ಟದನ್ನು ಮಾಡಬಾರದು ಎಂದು ಬಾಲಕರಿಗೆ ನಿಷೇಧಿಸುವ ಬದಲು ಒಳ್ಳೆಯದನ್ನು ಮಾಡತಕ್ಕದ್ದು ಎಂದು ವಿಧಿಸುವವರಾಗಿರಿ" ಎಂಬುದಾಗಿ ಒಬ್ಬ ಇಂಗ್ಲೀಷು ಸ್ಕೌಟು ಕಮಿಷನರು ಸ್ಕೌಟು ಉಪಾಧ್ಯಾಯರುಗಳಿಗೆ ಹೇಳಿದಾಗ ಈ ನಿಯಮದ ತತ್ವವನ್ನೇ ಪ್ರತಿಪಾದಿಸುತ್ತಿದ್ದನು. ಒಳ್ಳೆಯದನ್ನೇ ಮಾಡುವಂತೆ ಶಿಕ್ಷಿತನಾದ ಉತ್ತೇಜಿತನಾದ ಹುಡುಗನು ಹುಡುಗನೇ ಏಕೆ, ದೊಡ್ಡವನೂ ಸ್ವಭಾವತಃ ಕೆಟ್ಟದ್ದರ ಕಡೆಗೆ ಹೋಗನು. ಸ್ಕೌಟುನಿಯಮವು ಅಪೇಕ್ಷಿಸುವಂಥ ಪರೋಪಕಾರಪರನಾದ ಸ್ಕೌಟು ಬಾಲಕನು ಕೇಡನ್ನು ತನಗೂ ಉಂಟುಮಾಡಿಕೊಳ್ಳುವುದಿಲ್ಲ, ಇತರರಿಗೂ ಉಂಟುಮಾಡುವುದಿಲ್ಲ. ನೆರೆಹೊರೆಯವರಿಗೂ ದೇಶಕ್ಕೂ ನಿಜವಾದ ಉಪಕಾರವನ್ನು ಮಾಡದವನು ಅಹಿಂಸಾವ್ರತಿಯಾದ ಸಾಧುವಾದರೂ ಅವನ ಜೀವನವು ಒಳ್ಳೆಯ ಜೀವನವಲ್ಲ—ಎಂಬುದೇ ಸ್ಕೌಟು ನಿಯಮವಾಗಿರುತ್ತದೆ.

ಈ ಸಭೆಯಲ್ಲಿರುವ ಯಾವ ಸ್ಕೌಟ್ ಹುಡುಗನೇ ಆಗಲಿ, ಮೊದಲನೆಯ ದರ್ಜೆಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವ ವರೆಗೂ, ಚಿಕಿತ್ಸಾವಿದ್ಯೆಯ ಬಿರುದನ್ನು ಪಡೆಯುವ ವರೆಗೂ ತೃಪ್ತಿ ಹೊಂದುವುದಿಲ್ಲವೆಂದು ನಾನು ತಿಳಿಯುತ್ತೇನೆ. ಆ ಯೋಗ್ಯತಾ ಪತ್ರಗಳಿಂದ ಆ ಸ್ಕೌಟು ಹುಡುಗನು ಸರ್ವತೋಮುಖಗುಣಭೂಷಿತನಾದ ಪ್ರಜೆಯೆಂದೂ ನಿಜವಾಗಿಯೂ ಪ್ರಯೋಜನಕಾರಿಯೆಂದೂ ಸೂಚಿತನಾಗುವುದು. ಸ್ಕೌಟು ಹುಡುಗನು ಇಷ್ಟು ಮುಂದುವರಿದಾಗ ತನ್ನ ವಿದ್ಯಾಭ್ಯಾಸಕ್ಕೆ ನಿಜವಾಗಿಯೂ ಆಗತಾನೆ ಮೊದಲುಮಾಡಿರುವನೆಂಬುದು ಒಂದು ರೀತಿಯಲ್ಲಿ ಸ್ವಾರಸ್ಯವಾದ ವಿಷಯ. ದೋಷಯುಕ್ತವೆಂದು ನಿಂದಿತವಾದ ಪರೀಕ್ಷಾ ಪದ್ಧತಿಯನ್ನು ಸ್ಕೌಟು ಶಿಕ್ಷಣ ಕ್ರಮವೂ ಅನುಸರಿಸಿದೆ; ಆದರೆ ಈ ಒಂದು ಸಂದರ್ಭದಲ್ಲಂತೂ ಗೊಣಗಾಡಲೇನೂ ಕಾರಣವಿಲ್ಲ. ಸ್ಕೌಟು ಹುಡುಗನು ತೇರ್ಗಡೆಹೊಂದಬಹುದಾದ ಪರೀಕ್ಷೆಗಳ ಪಟ್ಟಿಯನ್ನು ನೀವೆಲ್ಲರೂ ನೋಡಿರುವುದರಲ್ಲಿ ಸಂದೇಹವಿಲ್ಲ. ಅವುಗಳೆಲ್ಲವೂ ಕಾರ್ಯರೂಪಗಳಲ್ಲೇ ಇರುವುವು. ಹೆಚ್ಚು ಕಡಿಮೆ ಪ್ರತಿಯೊಂದು ಕೈಗೆಲಸದಲ್ಲಿಯೂ ಪರೀಕ್ಷೆ ಕೊಟ್ಟು ಸ್ಕೌಟು ಹುಡುಗನು ಬಿರುದುಗಳನ್ನು ಪಡೆಯಬಹುದೆಂಬುದು ನನ್ನ ಗಮನಕ್ಕೆ ಬಂದಿದೆ; ಇವುಗಳಲ್ಲಿ "ಪ್ರಾಣಿಗಳ ಮಿತ್ರ" ಎಂಬ ಬಿರುದಿಗಾದರೂ, ನಮ್ಮ ಸಣ್ಣ ವಯಸ್ಸಿನ ಉತ್ಸಾಹಶಾಲಿಗಳ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಥಮಸ್ಥಾನವಿರಬೇಕೆಂದು ನನಗೆ ತೋರುತ್ತದೆ. ಈ ವಿದ್ಯೆಗಳೆಂದರೆ, ಪ್ರತಿಯೊಂದೂ ಜ್ಞಾನಲಾಭ; ಮತ್ತು ಹೊಸಪರಿಯ ಯೋಗ್ಯತೆ ಮತ್ತು ಶಕ್ತಿ. ಈ ಸಂಸ್ಥಾನದಲ್ಲಿ ಸ್ಕೌಟು ಶಿಕ್ಷಣ ಕ್ರಮವು ಇನ್ನೂ ಶೈಶವಾವಸ್ಥೆಯಲ್ಲಿದೆ; ಆದುದರಿಂದ ಈ ಪರೀಕ್ಷಾ ಪ್ರಾಯವು ಸಂಪೂರ್ಣಾಚರಣೆಗೆ ಬರಲು ಕೆಲವುಕಾಲವಾಗಬಹುದು; ಆದರೆ ಅಷ್ಟರೊಳಗಾಗಿ ಈ ಪರೀಕ್ಷೆಗಳಲ್ಲಿ ಪ್ರತಿಯೊಂದರ ವಿಚಾರವಾಗಿಯೂ ಬೇಕಾದ ಶಿಕ್ಷಣಗಳನ್ನು ಕೊಡುವ "ಬಾಯ್ ಸ್ಕೌಟ್ ಟೆಸ್ಟ್" ಎಂಬ ಅಧಿಕಾರಿಕ ಪುಸ್ತಕವು ಎಲ್ಲಾ ದೊಡ್ಡ ಸ್ಕೌಟು ಹುಡುಗರ ಕೈಗಳಲ್ಲಿರುವುದು ಆವಶ್ಯಕ.

ಇನ್ನು ನಾನು ಮಾಡಬೇಕಾಗಿ ಉಳಿದಿರುವುದು ಒಂದೇ—ಸ್ವಂತ ಅಭ್ಯುದಯವನ್ನು ಪಡೆಯಬೇಕೆಂದಿರುವ ಮತ್ತು ಸೋದರ ಪ್ರಜೆಗಳ ಶ್ರೇಯಸ್ಸನ್ನು ಬೆಳಸಬೇಕೆಂದಿರುವ ನಿಮ್ಮ ಸ್ತುತ್ಯವಾದ ಅಭಿಲಾಷೆಯಲ್ಲಿ ನಿಮಗೆ ಅವಿಚ್ಛಿನ್ನವಾದ ಜಯಲಾಭವುಂಟಾಗಲೆಂದು ಹಾರೈಸುವೆನು.

ಜಾತಿಭೇದ ವಿಚಾರ ಸಮಾಲೋಚನಾ ವಿಮರ್ಶೆ.

ನನ್ನ ಮಿತ್ರರಾದ ಪಂಡಿತ ಪಾಂಡುರಂಗ ಶಾಸ್ತ್ರಿಗಳು ಜಾತಿಭೇದ ವಿಚಾರವಾಗಿ ನಾನು ಬರೆದ ಚಿಕ್ಕ ಪುಸ್ತಕವನ್ನು ದಯೆಯಿಟ್ಟು ವಿಮರ್ಶಿಸುತ್ತಿರುವುದಕ್ಕಾಗಿ ನಾನವರಿಗೆ ವಂದನೆಗಳನ್ನು ಸಮರ್ಪಿಸುತ್ತೇನೆ. ಸಭ್ಯರೀತಿಯಿಂದವರು ಆ ಪುಸ್ತಕವನ್ನು ಪರಿಶೀಲಿಸಿದುದಕ್ಕಾಗಿಯೂ ನಾನವರನ್ನು ಮನಃಪೂರ್ವಕವಾಗಿ ಅಭಿವಂದಿಸದಿರಲಾರೆನು. ಆದರೆ ಅವರು ಕೆಲವು ವಿಷಯಗಳಲ್ಲಿ ಮಾತ್ರ ನನ್ನ ಮಾತುಗಳಿಗೆ ಅವಜ್ಞತೆಯನ್ನು ಕೊಡುವುದರಿಂದ ಅವುಗಳನ್ನು ನಾನು ವಿಚಾರಿಸುವಾಗ, ಪಾಠಕರು ಎಲ್ಲಾ ವಿಷಯಗಳನ್ನೂ ಯೋಚಿಸಿ. ನಿಷ್ಪಕ್ಷಪಾತ ದೃಷ್ಟಿಯಿಂದ ಗ್ರಹಿಸುವರೆಂಬ ನಂಬುಗೆ ನನಗಿದೆ.

ಈ ಪುಸ್ತಕದ ಹೆಸರಿನ ವಿಷಯವಾಗಿ ಅವರ ಪ್ರಥಮಾಕ್ಷೇಪವು ವರ್ಣ ಜಾತಿಗಳಲ್ಲಿರುವ ಭೇದವನ್ನು ತೋರಿಸಿ, ಅವರು ಆ ಪುಸ್ತಕಕ್ಕೆ ವರ್ಣಭೇದ ವಿಚಾರವೆಂಬ ಹೆಸರಾಗಬೇಕಿತ್ತೆಂದು ಹೇಳುತ್ತಾರೆ. ವರ್ಣ ಜಾತಿಗಳಲ್ಲಿರುವ ಭೇದಗಳನ್ನು ಕುರಿತು ಅವರು ಹೇಳುವುದಕ್ಕೆ ನನ್ನ ಸಂಪೂರ್ಣ ಸಮ್ಮತವಿದೆ. ಶ್ರಮವಿಭಾಗಕ್ಕೋಸ್ಕರ ಗುಣಾನುಸಾರವಾಗಿ ನೆಲೆಗೊಂಡ ವರ್ಣವ್ಯವಸ್ಥೆಯ ಬದಲಾಗಿ ಜಾತಿಭೇದವೆಂಬುದನ್ನು ನಾನು ಯಾವಾಗಲೂ ಪ್ರಯೋಗಿಸುವುದಿಲ್ಲ. ಆದರೆ ನನ್ನ ಪುಸ್ತಕವು ವರ್ಣಚತುಷ್ಟಯವನ್ನು ಸಾಂಗವಾಗಿ ವಿವರಿಸದೆ, ವೇದದಲ್ಲಿ ಪ್ರತಿಪಾದ್ಯವಲ್ಲದ ಆನುವಂಶಿಕ ಜಾತಿಭೇದದಿಂದುಂಟಾಗುವ ದೋಷಗಳನ್ನು ಹೆಚ್ಚಾಗಿ ಪ್ರತಿಪಾದಿಸುವುದರಿಂದ, ಅದಕ್ಕೆ ಆ ಹೆಸರೆ ಎಂದರೆ ಜಾತಿಭೇದ ವಿಚಾರವೆಂಬ ಹೆಸರೆ ಒಪ್ಪುತ್ತದೆಂದು ನನ್ನ ನಿಶ್ಚಿತಾಭಿಪ್ರಾಯ. ಪ್ರಥಮಾಕ್ಷೇಪಕ್ಕೆ ಉತ್ತರವಿಷ್ಟೆ ಸಾಕು.

ನನ್ನ ಮಿತ್ರರು ಹೇಳುವ ಇನ್ನೊಂದು ವಿಷಯವನ್ನು ವಿಚಾರಿಸುವುದು ಈಗಣ ಎರಡನೆಯ ಕೆಲಸವಾಗಿದೆ. ನಾನು ಅನೇಕವೇಳೆ ಉದಾಹರಿಸಿದ ಮತ್ತು ಎಲ್ಲಾ ಮನುಷ್ಯರೂ ಸಮಾನರೆಂದೂ, ಅವರಲ್ಲಿ ಜನ್ಮಮಾತ್ರದಿಂದ ಉಚ್ಚರು, ನೀಚರೆಂಬ ಭೇದವಿಲ್ಲವೆಂದೂ ಸಾರುವ ಋಗ್ವೇದದ ಸುಪ್ರಸಿದ್ಧ ಮಂತ್ರವು ಮರುತರ ಸ್ವಭಾವದ ವಿಷಯವಾಗಿ ಮಾತ್ರ ಹೇಳುತ್ತದೆಂದು ಅವರೆನ್ನುತ್ತಾರೆ. ನನ್ನ ಮಿತ್ರರು ಪೌರಾಣಿಕ ಕಥೆಯೊಂದನ್ನುದ್ಧರಿಸಿ, 'ಮರುತ್' ಎಂಬ ಶಬ್ದವು 'ಮನುಷ್ಯ' ಎಂಬ ಅರ್ಥವನ್ನು ಕೊಡುವುದಿಲ್ಲವೆಂದು ಹೇಳುತ್ತಾರೆ.

ಆದರೆ ನನ್ನ ಮಿತ್ರರು ಮರುಚ್ಛಬ್ದ ವ್ಯುತ್ಪತ್ತಿಯನ್ನು ಪರಿಗಣಿಸದೆ, ಇಂತಹ ಅಭಿಪ್ರಾಯವನ್ನು ಕೊಟ್ಟರೆಂದು ತಿಳಿಸಲು ನನಗೆ ಬಹಳ ಆಶ್ಚರ್ಯವಾಗುತ್ತದೆ. 'ಮರುತ್' ಎಂಬ ಶಬ್ದವು ಮೃ=ಸಾಯು, ಎಂಬ ಧಾತುವಿನಿಂದ ಹುಟ್ಟಿ ಖಂಡಿತವಾಗಿ "ಮರ್ತ್ಯ ಅಥವಾ ಮನುಷ್ಯ" ಎಂಬರ್ಥವನ್ನೀಯುತ್ತದೆ. ಮರುತ್‌ಮತ್ತು ಮರ್ತ್ಯ ಎಂಬೆರಡು ಶಬ್ದಗಳೂ ಮೃ ಎಂಬ ಧಾತುವಿನಿಂದಲೆ ವ್ಯುತ್ಪನ್ನವಾದುವುಗಳೆಂಬುದು ಗ್ರಹಿಸತಕ್ಕ ವಿಷಯವಿದೆ, ಹೆಚ್ಚಿನ ಕಾರಣಗಳು ಬೇಕಾದರೆ ಸಾಯಣಾಚಾರ್ಯರ ಟೀಕೆಯ ಋ. ೧೦-೭೭-೩ನೆಯ ಭಾಗವನ್ನು ನೋಡಬಹುದು. ಅಲ್ಲಿ ಅವರು "ಮನುಷ್ಯರೂಪಾವಾ ಮರುತಃ" ಎಂದೆನ್ನುವುದರಿಂದ ಮರುತರೆಂದರೆ ಮನುಷ್ಯರೆಂಬುದು ವಿಶದವಾಗುತ್ತದೆ. ನರ, ಮರ್ತ್ಯ ಎಂಬೀ ಶಬ್ದಗಳು ಖಂಡಿತವಾಗಿ ಮನುಷ್ಯವಾಚಕಗಳಾದುದರಿಂದಲೂ, 'ಮರುತ್' ಎಂಬ ಶಬ್ದಕ್ಕೆ ನರ, ಮರ್ಯ ಎಂಬ ಪರ್ಯಾಯಪದಗಳು ರೂಢಿಯಲ್ಲಿರುವುದರಿಂದಲೂ ಮೇಲಿನ ಅಭಿಪ್ರಾಯವು ಮತ್ತಷ್ಟು ಸ್ಪಷ್ಟವಾಗುತ್ತದೆ. ಈ ಶಬ್ದಗಳ ಪ್ರಯೋಗವು ಋ. ೬-೫೯-೩,೪ ಮತ್ತು ೫-೫೯-೬ ಈ ಸ್ಥಳಗಳಲ್ಲಿವೆ. ನನ್ನ ಮಿತ್ರರು ಇನ್ನಷ್ಟು ಕಾರಣಗಳನ್ನು ಕೇಳುವುದಿದ್ದರೆ ಋಗ್ವೇದದ ೩-೨೬-೫ನೆಯ ಮಂತ್ರವನ್ನು ಕೊಡಬಹುದು.

"ಅಗ್ನಿಶ್ರಿಯೋ ಮರುತೋ ವಿಶ್ವಕೃಷ್ಟಯ ಆತ್ವೇಷಮುಗ್ರಮವ ಈಮಹೇ ವಯಮ್ ।" ಇಲ್ಲಿ 'ವಿಶ್ವಕೃಷ್ಟಯಃ' ಎಂಬ ಶಬ್ದವು 'ಮರುತಃ' ಎಂಬುದರ ವಿಶೇಷಣಪದವಾಗಿದೆ. ಸುಪ್ರಸಿದ್ಧವಾದ ವೇದಕೋಶವನ್ನು (ನಿಘಂಟುವನ್ನು) ನೀವು ಅವಲೋಕಿಸಿದರೆ 'ಕೃಷ್ಟಿ' ಎಂಬುದಕ್ಕೆ 'ಮನುಷ್ಯ' ಎಂಬ ಅರ್ಥವು ನಿಮಗೆ ಸಿಕ್ಕುವುದು. ಆದುದರಿಂದ 'ವಿಶ್ವಕೃಷ್ಟಯಃ' ಎನ್ನುವುದರಿಂದ, ಎಲ್ಲಾ ಮನುಷ್ಯರು ಅಥವಾ ಮನುಷ್ಯಜಾತಿ ಎಂಬ ಅರ್ಥವಾಗುತ್ತದೆ. ಮೇಲಣ ಕಾರಣಗಳಿಂದ ಮರುತ್ ಎಂದರೆ ಮನುಷ್ಯನೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿ ತಿಳಿದುಬರುವುದರಿಂದ ನನ್ನ ಮಿತ್ರರಾದ ಪಂಡಿತ ಪಾಂಡುರಂಗ ಶಾಸ್ತ್ರಿಗಳು ಇನ್ನು ಮುಂದೆ ಇಂತಹ ನಿರಾಧಾರಗಳಾದ ವಾಕ್ಯಗಳನ್ನು ಮುಕ್ತಕಂಠರಾಗಿ ಹೇಳರೆಂದು ನಾನು ನಂಬುತ್ತೇನೆ.

ಅವರು ಹೇಳಿದ ಪೌರಾಣಿಕ ಕಥೆಯ ವಿಷಯವಾಗಿ ವೇದದಿಂದದಕ್ಕೆ ಏನಾದರೂ ಆಧಾರವಿದೆಯೊ ಎಂದೂ, ಇದ್ದರೆ ಅದನ್ನು ಹೇಳಬೇಕೆಂದೂ ಅವರೊಡನೆ ನಾನು ಕೇಳಿಕೊಳ್ಳುತ್ತೇನೆ. ನಿರಾಧಾರಗಳಾದರೆ, ವೈದಿಕ ಧರ್ಮಾನುಯಾಯಿಗಳಲ್ಲಿ ಅವಕ್ಕೆ ಬೆಲೆಯಿಲ್ಲವೆಂದು ಖಂಡಿತವಾಗಿ ತಿಳಿಸುತ್ತೇನೆ.

ಶೇಷಾಂಶದಲ್ಲಿ ಪಂಡಿತ ಶಾಸ್ತ್ರಿಗಳು ವೇದಪ್ರತಿಪಾದ್ಯವಾದ ಭ್ರಾತೃಭಾವದ ವಿಷಯವಾಗಿ ಹಲಕೆಲವು ಆಢ್ಯಶಬ್ದಗಳನ್ನು ಹಾಸ್ಯರೀತಿಯಿಂದ ಹೇಳುವಷ್ಟು ಸಹೃದಯತ್ವವನ್ನು ಪ್ರಕಟೀಕರಿಸಿರುವರು. ಇಂತಹ ಅಲ್ಪ ವಿಷಯಗಳಲ್ಲಿ ನನ್ನ ಮಾತುಗಳನ್ನು ಕಳೆಯಬೇಕಾಗಿಲ್ಲ.

ಆರ್ಯಸಮಾಜ, ಮಂಗಳೂರು. ತಾ. ೩೦-೧೦-೧೯೨೨. }
ಧರ್ಮದೇವ ಸಿದ್ಧಾಂತಾಲಂಕಾರ,

ವಿದೇಶ ವರ್ತಮಾನ.

ಇಂಗ್ಲೆಂಡಿನಲ್ಲಿ ಹಿಂದುಸ್ಥಾನದ ವಿದ್ಯಾರ್ಥಿಗಳು:—ಕಳೆದ ಮಾರ್ಚ ತಾರೀಕು ೩೧ಕ್ಕೆ ಅಂತ್ಯವಾಗುವ ವರುಷದಲ್ಲಿ ಯುನೈಟೆಡ್ ಕಿಂಗಡಮ್ಮಿನಲ್ಲಿ ಹಿಂದೂಸ್ಥಾನದ ಒಟ್ಟು ೧೫೦೦ ವಿದ್ಯಾರ್ಥಿಗಳಿದ್ದರು. ಈ ಪೈಕಿ ೬೫೦ ಲಂಡನ್ ಯುನಿವರ್ಸಿಟಿಯಲ್ಲಿರುವರು.

ಇಂಗ್ಲೆಂಡಿನ ಪಾರ್ಲಿಮೆಂಟು:—ಕಳೆದ ತಾ. ೩ರ ವರೆಗೆ ಪಾರ್ಲಿಮೆಂಟಿಗೆ ೧೪೯೫ ಮಂದಿ ಉಮೇದ್ವಾರರು ತಮ್ಮ ನೊಮಿನೇಷನ್ ಅರ್ಜಿಗಳನ್ನು ಕೊಟ್ಟಿರುವರು. ಈ ಪೈಕಿ ಕನ್ಸರವೇಟಿವ್ ಪಕ್ಷದವರು ೪೭೭, ಇಂಡಿಪೆಂಡೆಂಟ ಲಿಬರಲ್ಲ ೩೩೫, ನೇಶನಲ್ ಲಿಬರಲ್ಲ ೧೯೦. ೫೪ ಮಂದಿ ಉಮೇದ್ವಾರರು ಅವರಿಗೆ ಎದುರಾಗಿ ಯಾರೂ ನಿಲ್ಲದೆ ಇರುವುದರಿಂದ ಪಾರ್ಲಿಮೆಂಟ ಮೆಂಬರರಾಗಲು ಅರ್ಹರಾಗಿರುವರು. ಇವರಲ್ಲಿ ಬಹುಮಂದಿ ಯೂನಿಯನಿಸ್ಟ ಪಂಗಡದವರಾಗಿರುವರು.

ಚೈನಾದೇಶವೂ ಹಿಂದೂಸ್ಥಾನವೂ:—ಚೈನಾದೇಶದ ಮುಖ್ಯ ಮುಖ್ಯ ದಿನವಹಿ ಪತ್ರಿಕೆಗಳು ಆಗಾಗ್ಗೆ ಮಹಾತ್ಮಾ ಗಾಂಧಿಯವರು ಮತ್ತು ಅವರ ಕಾರ್ಯ ಇವುಗಳನ್ನು ಕುರಿತು ಬರೆಯುತ್ತಿದ್ದಾವೆ. ಮಹಾತ್ಮರು ಅಸಾಮಾನ್ಯ ಪುರುಷರೆಂದು ಅಲ್ಲಿಯ ಅನೇಕ ಮಾಸಿಕ ಪತ್ರಿಕೆಗಳೂ ಒಪ್ಪುತ್ತಿವೆ. ಅಸಹಕಾರ ಚಳವಳವನ್ನು ಕುರಿತು ಚ್ಯಾನಿಸ್ ಭಾಷೆಯಲ್ಲಿ ಅನೇಕ ಹಸ್ತ ಪ್ರತಿಗಳು ಹಂಚಲಾಗುತ್ತಿವೆ. ಅನೇಕರು ಇವನ್ನು ಆತುರದಿಂದ ಓದಿ ಹಿಂದೂಸ್ಥಾನದ ರಾಜಕೀಯ ಸ್ಥಿತಿಯನ್ನು ತಿಳಿಕೊಳ್ಳುತ್ತಾರೆ. ಒಟ್ಟಾರೆ ಹಿಂದುಸ್ಥಾನದ ಮೇಲೆ ಚೈನಾದೇಶದ ಸಂಪೂರ್ಣ ಸಹಾನುಭೂತಿ ಇದೆ ಎಂದು ಸ್ವರಾಜ್ಯ ಪತ್ರಿಕೆಯ ಒಬ್ಬ ಬಾತಮಿದಾರರು ಆ ಪತ್ರಿಕೆಗೆ ಬರೆಯುತ್ತಾರೆ.

ಅಮೇರಿಕಾ:—ಈ ದೇಶದಲ್ಲಿ ಹಿಂದೂಸ್ಥಾನ ಸ್ವಾತಂತ್ರ್ಯ ಮಿತ್ರವೆಂಬ ಒಂದು ಸಂಸ್ಥೆಯು ಸ್ಥಾಪಿತವಾಗಿದೆ. ಮಹಾತ್ಮಾ ಗಾಂಧಿಯವರ ದಿನವನ್ನು ಪಾಲಿಸುವುದಲ್ಲದೆ ಈ ಸಂಸ್ಥೆಯವರು ಅಮೇರಿಕದವರಿಗೆ ಅಸಹಕಾರ ತತ್ವಗಳನ್ನು ಕಲಿಸುತ್ತಿರುವರು.

ಇಂಗ್ಲೆಂಡ್:—ಮೋಟರುಕಾರುಗಳನ್ನು ತಯಾರಿಸುವ ಸಾಹುಕಾರರಾದ ಮಿ। ಫೋರ್ಡ ಇವರ ಒಂದು ದಿವಸದ ಉತ್ಪನ್ನವು ೧೧೦೦೦೦ ಪೌಂಡಂತೆ.

ಇಂಗ್ಲೆಂಡಿನ ಪಾರ್ಲಿಮೆಂಟು:—ಪಾರ್ಲಿಮೆಂಟ ಮೆಂಬರಿಕೆಯ ಚುನಾವಣೆಗೆ ಕಳೆದ ಶನಿವಾರದ ವರೆಗೆ ಒಟ್ಟು ೧೪೩೬ ಉಮೇದ್ವಾರರಿರುವರು. ಕನ್ಸರವೇಟಿವ್ ಪಕ್ಷದವರು ೫೮೧, ಲೇಬರ ಪಕ್ಷದವರು ೪೧೪, ಲಿಬರಲ್ಲ ೧೫೫ ಇಂಡಿಪೆಂಡೆಂಟ್ಸ ಮತ್ತು ಇತರರು ೬೭, ಐರಿಶ್ ಯೂನಿಯನಿಸ್ಟ ೧೩.

ಬ್ರಿಟಿಷ ಕೆಬಿನೆಟ್:—ಬ್ರಿಟನಿನ ಮಂತ್ರಿಮಂಡಲದ ಸಭೆಯು ಪ್ರಥಮ ಅಧಿವೇಶನವು ಮಿ। ಬೊನರಲೋ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೧ರಲ್ಲಿ ನಡೆಯಿತು.

ಇಟಲಿಯ ಗೊಂದಲ:—ಇಟಲಿಯಲ್ಲಿ ಫಾಸಿಸ್ಟರ ಎಂದರೆ ರಾಷ್ಟ್ರೀಯ ಪಕ್ಷದವರ ಆಡಳಿತೆಯೇ ಆಗುವಂತೆ ಕಾಣುತ್ತದೆ. ಈ ಪಂಗಡದವರ ಸೂತ್ರಗಳನ್ನೆಲ್ಲಾ ಸಿನ್ಯೋರ ಮುಸೋಲಿನಿ ಎಂಬ ಒಬ್ಬ ಪ್ರಖ್ಯಾತ ಪ್ರಜಾಮಾನ್ಯ ಪುರುಷರು ತನ್ನ ಕೈಯಲ್ಲಿ ತೆಗೆದುಕೊಂಡಿರುವರು. ಒಂದು ಹನಿ ನೆತ್ತರನ್ನು ನೆಲಕ್ಕೆ ಬೀಳದಂತೆ ಫಾಸಿಸ್ಟ ಪಂಗಡದವರು ಇದುವರೆಗೆ ಅನೇಕ ಊರುಗಳನ್ನು ತೆಗೆದುಕೊಂಡಿದ್ದಾರೆ.

ತುರ್ಕಿ:—ಸುಲ್ತಾನರ ಸ್ಥಾನವನ್ನು ರದ್ದುಮಾಡಿ ತುರ್ಕಿಯಲ್ಲಿ ರಿಪಬ್ಲಿಕನ್ನು ಸ್ಥಾಪಿಸುವಂತೆ ಅಂಗೋರಾ ಎಸೆಂಬ್ಲಿಯು ನಿರ್ಧರಿಸಿರುವುದಾಗಿ ವರ್ತಮಾನವಿದೆ.

ಮಾಜಿ ಕೈಜರರು:—ಜರ್ಮನಿಯ ಮಾಜಿ ಕೈಜರರ ವಿವಾಹವು ಮುಗಿಯಿತು.

ಒಳದೇಶ ವರ್ತಮಾನ.

ಹಿಂದೂಸ್ಥಾನದ ವೈಸರಾಯರು:—ರೆಡಿಂಗ ದೊರೆಗಳ ವೈಸರಾಯ ಪದವಿಗೆ ಒರ್ಕನ ಹೇಡ್ ದೊರೆಗಳು ಬರುವರೆಂದು "ಸಂಡೇ ಎಕ್ಸಪ್ರೆಸ್" ಪತ್ರಿಕೆಯ ರಾಜಕೀಯ ಬಾತಮಿದಾರನ ಅಂದಾಜು ಇದೆ.

ಕರಗುಪ್ಪಿ ಕೃಷ್ಣರಾಯರು:—ಬೆಳಗಾಂವಿಯ ಜಿಲ್ಲಾ ಕೊಂಗ್ರೆಸ ಕಮ್ಮಿಟಿಯ ಕಾರ್ಯದರ್ಶಿಗಳೂ ಅಖಿಲ ಭಾರತ ಕೊಂಗ್ರೆಸ ಕಮ್ಮಿಟಿಯ ಒಬ್ಬ ಸಭಾಸದರೂ ಆದ ಶ್ರೀಯುತ ಕೃಷ್ಣರಾವ ಕರಗುಪ್ಪಿಕರ ಇವರು ತಮ್ಮ ೩೩ನೇ ವರುಷ ಪ್ರಾಯದಲ್ಲಿ ಪ್ಲೇಗಿಗೆ ತುತ್ತಾಗಿ ಕಳೆದಾಟೆಯ ಶನಿವಾರ ಅಕಾಲ ಮರಣವನ್ನು ಹೊಂದಿದರೆಂದು ತಿಳಿಸಲು ತುಂಬಾ ವ್ಯಸನಪಡುತ್ತೇವೆ. ಇವರ ಸ್ಮಶಾನಯಾತ್ರೆಗೆ ನಾಲ್ಕೈದು ಸಾವಿರ ಜನಸಮೂಹವು ಸೇರಿತ್ತು.

ಹಿಂದೂ ವಿಶ್ವ ವಿದ್ಯಾಲಯ:—ಪಂಡಿತ ಮದನ ಮೋಹನ ಮಾಲವೀಯರು ಕಾಶೀ ಕ್ಷೇತ್ರದೊಳಗಿನ ಹಿಂದೂ ವಿಶ್ವ ವಿದ್ಯಾಲಯಕ್ಕಾಗಿ ೯೩ ಲಕ್ಷ ರೂಪಾಯಿಯನ್ನು ಒಟ್ಟುಮಾಡಿರುವರು. ಈ ವಿಶ್ವ ವಿದ್ಯಾಲಯವನ್ನು ಸುಸೂತ್ರವಾಗಿ ಅದರ ಧ್ಯೇಯಕ್ಕೆ ಅನುರೂಪವಾಗಿ ನಡಿಸಬೇಕಾದರೆ ಆ ಬಗ್ಗೆ ಇನ್ನೂ ೭೦ಲಕ್ಷ ರೂಪಾಯಿ ಅವಶ್ಯವಿರುವುದಂತೆ.

ಜಯ ಕರ್ನಾಟಕ:—ಧಾರವಾಡದಲ್ಲಿ ನಾಡದು ಗೌರೀ ಹುಣ್ಣಿಮೆಯಿಂದ ಜಯ ಕರ್ನಾಟಕವೆಂಬ ಹೊಸಮಾಸಿಕ ಪುಸ್ತಕವು ಹೊರಡುವುದು. ಶ್ರೀಯುತ ವೆಂಕಟರಾವ್ ಭೀಮರಾವ್ ಆಲೂರರವರು ಇದರ ಸಂಪಾದಕರಾಗುವರು.

ಬಪಟಾಲದಲ್ಲಿ ಪ್ಯುನಿಟಿವ್ ಟೆಕ್ಸ್:—ಸುಮಾರು ೧೧,೦೦೦ ಜನಸಂಖ್ಯೆ ಇರುವ ಬಪಟಾಲದಲ್ಲಿ ೧೬ ಮಂದಿ ಗೃಹಸ್ಥರಿಗೆ ಮಾತ್ರ ಈ ತೆರಿಗೆ ಹೊರಿಸಿದೆ. ಈ ಗೃಹಸ್ಥರು ಆಂಧ್ರ ಪ್ರೊವಿನ್ಸಿಯಲ್ ಕೊಂಗ್ರೆಸ ಕಮ್ಮಿಟಿಯ ನಿರ್ಧಾರಕ್ಕೆ ವಿಧೇಯವಾಗಿ ಪ್ಯುನಿಟಿವ್ ಟೆಕ್ಸನ್ನು ಕೊಟ್ಟುಬಿಟ್ಟರು. ಇಬ್ಬರಿಗೆ ರೂ. ೧೬೫ರಂತೆ, ಒಬ್ಬ ಗೃಹಸ್ಥರಿಗೆ ರೂ. ೧೦೦, ಇನ್ನೊಬ್ಬರಿಗೆ ರೂ. ೬೦ ಮೂವರಿಗೆ ರೂ. ೩೫ರಂತೆ, ಮತ್ತೊಬ್ಬರಿಗೆ ರೂ. ೨೦, ನಾಲ್ಕು ಮಂದಿಗಳಿಗೆ ರೂ. ೧೫ರಂತೆ, ಬಾಕಿ ನಾಲ್ಕು ಮಂದಿಗಳಿಗೆ ರೂ ೧೦ರಂತೆ ಒಟ್ಟು ರೂ. ೬೮೫.

ಮೌಲಾನಾ ಮಹಮ್ಮದಾಲಿಯವರ ಮಗಳು:—ಮೌಲಾನಾ ಮಹಮ್ಮದ ಆಲಿಯವರ ಚಿಕ್ಕ ಮಗಳು ವಿದೇಶಿ ಟೋಪಿಗಳನ್ನು ಒಟ್ಟುಮಾಡುವುದರಲ್ಲಿ ಬಹಳ ಸಾಹಸವನ್ನು ತೋರಿಸುವಳಂತೆ.

ಯುನೈಟೆಡ್ ಪ್ರೊವಿನ್ಸಿನ ಸಾಮಾಜಿಕ ಪರಿಷತ್ತು:—ಈ ಪರಿಷತ್ತಿನ ಕಾರ್ಯಕ್ರಮವನ್ನು ಮುಗಿಸುವಾಗ ಶ್ರೀಮತಿ ಸರೋಜಿನಿ ನಾಯ್ಡುರವರು ತಮ್ಮ ಉಪಸಂಹಾರದ ಭಾಷಣದಲ್ಲಿ ಹೀಗೆಂದರು:—"ಹಿಂದೂಸ್ಥಾನದಲ್ಲಿ ತುಂಬಾ ದೇವಾಲಯಗಳಿವೆ, ಆದರೆ ಅವುಗಳಲ್ಲಿ ದೇವತೆಗಳಿಲ್ಲ। ಸ್ತ್ರೀಯರೆಲ್ಲರೂ ತಮ್ಮ ಭ್ರಾತೃಗಳನ್ನು ಈ ಅಹಿಂಸಾತ್ಮಕ ಯುದ್ಧದಲ್ಲಿ ಸಹಾಯಮಾಡಬೇಕಾಗಿದೆ. ಸ್ತ್ರೀಯರು ಅಬಲೆಯರಲ್ಲ ಸಬಲೆಯರೆಂದು ತೋರಿಸಬೇಕಾಗಿದೆ. ಹಿಂದೂಸ್ಥಾನವನ್ನು ಸ್ವತಂತ್ರವನ್ನಾಗಿಮಾಡಲು ಅವರೇ ಮುಖ್ಯ ಬಲ. ಅವರು [illegible] ವಿದ್ಯಾಪ್ರಸಾರವನ್ನು ಮಾಡಿ, ಪುರುಷರಿಗೆ ಸಹಾಯಕರಾಗಿ ನಿಂತು ಕೆಲಸಮಾಡಿ ರಾಮರಾಜ್ಯವನ್ನು ಸ್ಥಾಪಿಸಬೇಕಾಗಿದೆ."

ಲೋರ್ಡ ಇಂಚ್‌ಕೇಪ್:—ರಿಟ್ರೆಂಚ್‌ಮೆಂಟ ಕಮ್ಮಿಟಿಯ ಅಧ್ಯಕ್ಷರಾದ ಲೋರ್ಡ ಇಂಚ್‌ಕೇಪರು ತಮ್ಮ ಮಗಳೊಡನೆ ಕಳೆದ ತಾ. ೩ಕ್ಕೆ ಮುಂಬಯಿಗೆ ಬಂದು ಡಿಲ್ಲಿಗೆ ತೆರಳಿದರು.

ಶ್ರೀಯುತ ಸಿ. ರಾಜಗೋಪಾಲಾಚಾರ್ಯರು:—ಚಿತ್ತೂರು ಜಿಲ್ಲೆಯ ಕೊಂಗ್ರೆಸ ಕಮ್ಮಿಟಿಯ ಅಧ್ಯಕ್ಷಪದವಿಗೆ ಇವರು ರಾಜಿನಾಮೆಯನ್ನು ಕೊಟ್ಟಿರುವರು. ಕಾರಣವು ತಿಳಿಯಬರುವುದಿಲ್ಲ.

ಕೃಷ್ಣಸ್ವಾಮಿ ಶರ್ಮ:—ಕಡಲೂರ ಜೈಲಿನಿಂದ ವೆಲ್ಲೂರು ಜೈಲಿಗೆ ಒಯ್ಯಲ್ಪಟ್ಟ ಕೃಷ್ಣಸ್ವಾಮಿ ಶರ್ಮ ಎಂಬವರು ತನಗೆ ಯೋಗ್ಯವಾದ ಆಹಾರವು ಒದಗಿಸಲಾಗುವುದಿಲ್ಲವೆಂದು ಹೇಳಿ ಈಗ ಆಹಾರವನ್ನು ತೆಗೆದುಕೊಳ್ಳುವುದೇ ಇಲ್ಲ.

ಶ್ರೀಯುತ ಕಸ್ತೂರಿ ರಂಗ ಅಯ್ಯಂಗರ್:—ಮದರಾಸಿನ ಹಿಂದೂ ಪತ್ರಿಕೆಯ ಸಂಪಾದಕರಾದ ಶ್ರೀಯುತ ಕಸ್ತೂರಿ ರಂಗ ಅಯ್ಯಂಗರರು ಅಸ್ವಸ್ಥದಲ್ಲಿದ್ದರು. ಈಗ ಅವರ ಅಸ್ವಸ್ಥ ಗುಣವಾಗುತ್ತಿದೆಯಂತೆ.

ಬೆಳಗಾಂವಿನಲ್ಲಿ ಅಲಿಸಹೋದರರ ದಿನ:—ಈ ದಿನ ಸಾಯಂಕಾಲ ಸಾರ್ವಜನಿಕ ಸಭೆಯು ಶ್ರೀಯುತ ಮಜಲಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಈ ಸಭೆಗೆ ಶ್ರೀಯುತ ಗಂಗಾಧರ ರಾವ್ ದೇಶಪಾಂಡೆಯವರಿಗೆ ಹಾಜರಿರಲು ಅನಾನುಕೂಲವಾದ್ದರಿಂದ ಅವರು ಅಲಿಸಹೋದರರ ಸ್ವಾರ್ಥತ್ಯಾಗದ ಕುರಿತು ತಮ್ಮ ಸಂದೇಶವನ್ನು ಕಳುಹಿಸಿದ್ದರು. ಅಲಿಸಹೋದರರ ಸ್ವಾರ್ಥತ್ಯಾಗದ ಕುರಿತು ಹಲವರ ಭಾಷಣಗಳಾದ ಮೇಲೆ ಶ್ರೀಯುತ ಕರಗುಪ್ಪಿಕರರ ನಿಧನದ ಕುರಿತು ದುಃಖದ ಠರಾವೂ ಸೆಕ್ಷನ್ ೧೨೪ರ ಮೇರೆಗೆ ಶಿಕ್ಷೆ ವಿಧಿಸಲ್ಪಟ್ಟ ಶ್ರೀಯುತ ಹನುಮಂತ ರಾಯರಿಗೆ ಸಹಾನುಭೂತಿಯನ್ನು ಸೂಚಿಸುವ ಠರಾವೂ ಪಾಸಾಯಿತು.

ಮಹಾರಾಷ್ಟ್ರದ ಮುಖಂಡರು:—ಶ್ರೀಯುತ ಸಿ. ಆರ್. ದಾಸರ ಆಮಂತ್ರಣದ ಮೇರೆಗೆ ಮಹಾರಾಷ್ಟ್ರದ ಮುಖಂಡರಾದ ಶ್ರೀಯುತ ಯನ್. ಸಿ. ಕೇಳಕರ, ಡಾಕ್ಟರ ಮುಂಜೆ, ಶ್ರೀಯುತ ಡಿ. ವಿ. ಗೋಖಲೆ, ಕರಂದಿಕರ ಮೊದಲಾದವರು ಅಮರಾವತಿಗೆ ಹೋಗಿದ್ದಾರೆ.

ನಾಮದಾರ ಶ್ರೀನಿವಾಸ ಶಾಸ್ತ್ರಿಯವರು:—ಇವರು ಬರುವ ತಾ. ೩೦ರೊಳಗಾಗಿಯೇ ಮುಂಬಯಿಗೆ ತಲ್ಪುವರೆಂದು ವದಂತಿ ಇದೆ.

ಮೈಸೂರು:—ಶ್ರೀಯುತ ರಾಘವೇಂದ್ರ ರಾವ್ ಕಡಪ ಇವರು ಶಿವಮೊಗ್ಗೆ ಪ್ರಥಮದಲ್ಲಿ ಬಂದು ಅಲ್ಲಿ ಕರ್ನಾಟಕದ ಐಕ್ಯ ಈ ಕುರಿತು ಭಾಷಣ ಮಾಡಿದರು.

ಕೊಂಗ್ರೆಸ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗು:—ಇಂಡಿಯನ್ ನೇಶನಲ್ ಕೊಂಗ್ರೆಸ್ಸಿನ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗು ಬರುವ ತಾ. ೧೯ರಲ್ಲಿ ಕಲ್ಕತ್ತದಲ್ಲಿ ಸೇರುವುದು.

ಖಾದರ ಕಮ್ಮಿಟಿ ಮೀಟಿಂಗು:—ಖಾದರ ಕಮ್ಮಿಟಿಯ ಮೀಟಿಂಗು ಬರುವ ತಾ. ೧೩ಕ್ಕೆ ಬೆಜವಾಡದಲ್ಲಿ ಕೂಡುವುದು.

ಮೌಲವಿ ಮಹಮ್ಮದ ಸಾಹೇಬ:—ಖಿಲಾಫತ್ ಕಾರ್ಯವನ್ನು ನಡಿಸುತ್ತಿರುವ ಮೌಲವೀ ಮಹಮ್ಮದ ಸಾಹೇಬ ಇವರಿಗೆ ಬ್ರಿಟಿಷ ಇಂಡಿಯವನ್ನು ಬಿಟ್ಟು ಹೋಗಲು ಸರಕಾರದ ಅಪ್ಪಣೆಯಾಗಿದೆ. ಆದ್ದರಿಂದ ಇವರು ತನಗೆ ಅಂಗೋರಕ್ಕೆ ಹೋಗಲು ಪಾಸಪೋರ್ಟನ್ನು ಒದಗಿಸಿಕೊಡಬೇಕಾಗಿ ಕೇಳಿದ್ದಾರೆ.

ಓಲ್‌ಇಂಡಿಯಾ ಪೋಸ್ಟಲ್ ಆರ್. ಯಂ. ಯಸ್. ಕೊನ್ಫರೆನ್ಸ:—ಈ ಕೊನ್ಫರೆನ್ಸಿನ ಬರುವ ವರುಷದ ಅಧಿವೇಶನವು ಕಲ್ಕತ್ತದಲ್ಲಿ ಕೂಡುವುದು.

ಲಾಹೋರ:—ಪಂಜಾಬದ ಮಜೂರಪಕ್ಷದವರ ಒಂದು ಪ್ರಚಂಡ ಸಭೆಯು ನೋರ್ತ ವೆಸ್ಟರ್ನ ರೈಲ್ವೆ ಯೂನಿಯನ್ನಿನ ಆಶ್ರಯದಲ್ಲಿ ಸೇರಿತು. ಪೂರ್ವ ಆಸಿಯಾದಲ್ಲಿನ ಯುದ್ಧವನ್ನು ನಿಲ್ಲಿಸಿ ಮುಸಲ್ಮಾನರ ಮನಸ್ಸನ್ನು ಬಹಳವಾಗಿ ನೋಯಿಸುವ ಖಿಲಾಫತ್ ಸಮಸ್ಯೆಯ ಇತ್ಯರ್ಥವಾಗುವಂತೆ ಪ್ರಯತ್ನ ನಡಿಸಿದ ಬ್ರಿಟನ್ನಿನ ಮಜೂರರ ಈ ಕಾರ್ಯವನ್ನು ಇಲ್ಲಿಯ ಮಜೂರರು ಅನುಮೋದಿಸುತ್ತಾರೆ, ಮತ್ತು ಯುರೋಪದಲ್ಲಿನ ಮಜೂರರಿಗೆ ತಮ್ಮಿಂದ ಸಾಧ್ಯವಾದಷ್ಟು ಸಹಾಯವನ್ನು ಮಾಡಲು ಪಂಜಾಬದ ಮಜೂರರು ಸಿದ್ಧರಾಗಿದ್ದಾರೆ ಎಂಬ ಠರಾವನ್ನು ಮಿ। ಮಲ್ಲಿಕರು ಸಭೆಯ ಮುಂದೆ ತಂದರು. ಈ ಠರಾವು ಪಾಸಾದಲ್ಲದೆ ಇಂಗ್ಲೆಂಡಿನ ಪಾರ್ಲಿಮೆಂಟಿನ ಬರುವ ಚುನಾವಣೆಯಲ್ಲಿ ಕೂಲಿಪಕ್ಷದವರೇ ಯಶಸ್ವಿಯಾಗುವಂತೆ ಪಂಜಾಬದ ಕೆಲಸಗಾರರು ಇಚ್ಛಿಸುತ್ತಾರೆ. ಎಂಬ ಠರಾವೂ ಮಂಜೂರಾಯಿತು.

ಸೆಂಟ್ರಲ್ ಪ್ರೊವಿನ್ಸ ರಿಟ್ರೆಂಚ್‌ಮೆಂಟ ಕಮ್ಮಿಟಿ:—ಈ ಸಂಸ್ಥಾನದ ಖರ್ಚನ್ನು ೪೪ ಲಕ್ಷ ಕಡಿಮೆ ಮಾಡಬಹುದೆಂದು ಶಿಫಾರಸು ಮಾಡಿದೆ. ಇದರಂತೆ ಕೌನ್ಸಿಲಿನ ಪ್ರೆಸಿಡೆಂಟರಿಗೆ ವರುಷಕ್ಕೆ ರೂ. ೧೦,೦೦೦ ಕೊಡಲಾಗುವುದು.

ಅಹಮ್ಮದಾಬಾದ:—ಅಸಹಕಾರವಾದಿಗಳೂ ಶಾಂತಪಕ್ಷದವರೂ ತಮ್ಮ ತಮ್ಮ ಕಾರ್ಯವನ್ನು ನಡಿಸುತ್ತಿದ್ದಾರೆ ಗುಜರಾಥ ಪ್ರೊವಿನ್ಸಿಯಲ್ ಕೊಂಗ್ರೆಸ ಕಮ್ಮಿಟಿಯವರು ಬರುವ ದಶಂಬರ ತಾ. ೩೧ರ ಒಳಗೆ ೨೫,೦೦೦ ಸ್ವಯಂಸೇವಕರನ್ನು ಕೂಡಿಸಬೇಕಾಗಿ ನಿರ್ಧರಿಸಿದ್ದಾರೆ. ವಿದೇಶ ವಸ್ತ್ರಬಹಿಷ್ಕಾರ ಚಳವಳವೂ ನಡೆಯುತ್ತಿದೆ.

ರವೀಂದ್ರನಾಥ ಠಾಕೂರರು:—ಇವರು ಕಳೆದ ತಾ. ೬ರಲ್ಲಿ ಸಿಲೋನಿನಿಂದ ಹೊರಟು ಟ್ಯೂಟಿಕೋರಿನ ಮಾರ್ಗವಾಗಿ ತಿರುವಾಂಕೂರಿಗೆ ಬಂದು ಅನಂತರ ಮದರಾಸನ್ನೂ ಮುಂಬಯಿಯನ್ನೂ ಪುನಃ ಸಂದರ್ಶಿಸಬೇಕೆಂದು ನಿಶ್ಚಯಿಸಿದ್ದಾರಾಗಿ ತಿಳಿದುಬರುತ್ತದೆ.

ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿಯ ರಿಪೋರ್ಟ:—ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕಮ್ಮಿಟಿಯ ರಿಪೋರ್ಟ ಕಳೆದ ತಾರೀಕು ೫ರಲ್ಲಿ ಪ್ರಕಟವಾಗಿದೆ. ಅದು ೧೬೦ ಪುಟಕ್ಕಿಂತ ಹೆಚ್ಚಾಗಿದೆ. ಈ ರಿಪೋರ್ಟ ಅಲಹಾಬಾದಿನಿಂದ ಪ್ರಕಟವಾಗಿದೆ, ಕ್ರಯ ರೂ. ೪. ಈ ವರದಿಯು ೮ ಅಧ್ಯಾಯದಲ್ಲಿದೆ. ಮೊದಲಿನ ಭಾಗವು ಅಸಹಕಾರದ ಪ್ರಾರಂಭ ಮತ್ತು ಬೆಳವಣಿಗೆಯನ್ನು ಸೂಚಿಸುತ್ತದೆ. ಅನಂತರ ಅದು ಸರಕಾರವು ಈ ಚಳವಳವನ್ನು ತಗ್ಗಿಸಲು ಯತ್ನಿಸಿದರೂ ಸಾಧ್ಯವಾಗದೆ ಇರುವ ಸಂಗತಿಯನ್ನು ವಿವರಿಸಿದೆ. ಕೌನ್ಸಿಲಿಗೆ ಹೋಗಬೇಕೋ ಬೇಡವೋ ಎಂಬ ಸಂಗತಿಯಲ್ಲಿ ಕಮ್ಮಿಟಿಯ ಮೆಂಬರರಲ್ಲಿ ಸಮ ಎರಡು ವಿಭಾಗವಾಗಿದೆ. ಮತ್ತು ಆಕ್ಷೇಪೆಯವರೂ ಸದರಿ ವಿಷಯವನ್ನು ಕುರಿತು ತಮ್ಮ ತಮ್ಮ ವರದಿಯನ್ನು ಕೊಟ್ಟಿರುತ್ತಾರೆ. ಈ ಕಮ್ಮಿಟಿಯ ಮೆಂಬರರು, ಪಂಡಿತ ಹಕೀಮ ಅಜಮಲ್ ಖಾನ (ಅಧ್ಯಕ್ಷ), ಪಂಡಿತ ಮೋತಿಲಾಲನೇಹರು, ಡೊಕ್ಟರ ಅನ್ಸಾರಿ, ಶ್ರೀಯುತ ರಾಜಗೋಪಾಲಾಚಾರ್ಯ, ಶ್ರೀಯುತ ವಿ. ಜೆ. ಪಟೇಲ, ಶ್ರೀಯುತ ಯಸ್. ಕಸ್ತೂರಿರಂಗಅಯ್ಯಂಗರ ಈ ಆರು ಮಂದಿ ಗೃಹಸ್ಥರಾಗಿದ್ದರು. ಇವರು ೩೬೬ ಮಂದಿ ಪ್ರಮುಖರ ಅಭಿಪ್ರಾಯದ ವಿಚಾರಣೆಯನ್ನು ಮಾಡಿರುವರು. ೬ ವಾರಗಳ ಕಾಲ ಇವರು ಸಾಕ್ಷಿ ಪುರಾವೆಗಳನ್ನು ಪಡೆಯಲು ಮುಖ್ಯ ಮುಖ್ಯ ಭಾಗಗಳನ್ನು ಸಂಚರಿಸಿದ್ದಾರೆ.

ಆಲಿಘರ ಮುಸ್ಲಿಮ್ ಯೂನಿವರ್ಸಿಟಿ:—ಈ ವಿಶ್ವವಿದ್ಯಾಲಯದವರು ತಮ್ಮ ಖರ್ಚಿನಲ್ಲಿ ರೂ. ೩೦,೦೦೦ವನ್ನು ಕಡಿಮೆ ಮಾಡಲು ನಿಶ್ಚಯಿಸಿದ್ದಾರೆ. ಹಾಗು ಸಂಸ್ಕೃತವನ್ನು ಕಲಿಸುವ ಏರ್ಪಾಡನ್ನು ಮಾಡುವ ಠರಾವನ್ನು ಪಾಸು ಮಾಡಿದ್ದಾರೆ.

ಎನ್ನಿಬಿಸೆಂಟರು:—ಡಾಕ್ಟರ ಪರಾಂಜಪೆಯವರ ಅಧ್ಯಕ್ಷತೆಯಲ್ಲಿ ಎನ್ನಿಬಿಸೆಂಟರು ಕಳೆದ ತಾ. ೫ರಲ್ಲಿ ಪುನೆಯಲ್ಲಿ ಇಂಡಿಯನ್ ಹೋಮ್‌ರೂಲ್ ಎಂಬ ವಿಷಯವನ್ನೆತ್ತಿ ಭಾಷಣಮಾಡಿದರು.

ತಮಿಳುನಾಡು ಕೊನ್ಫರೆನ್ಸ:—ಈ ಪರಿಷತ್ತಿನಲ್ಲಿ ಸಾಮ್ರಾಜ್ಯ ಪ್ರದರ್ಶನಕ್ಕೆ ಬಹಿಷ್ಕಾರ ಹಾಕಬೇಕೆಂತ ಠರಾವು ಪಾಸಾಗಿದೆ. ಈ ಪ್ರಾಂತದ ಮುಂದಿನ ಪರಿಷತ್ತು ಸೇಲಮಿನಲ್ಲಿ ಜರಗಿಸಬೇಕಾಗಿ ನಿರ್ಧಾರವಾಗಿದೆ.

ಮುಳಸಿ ಸತ್ಯಾಗ್ರಹ:—ಮಳೆಗಾಲದ ನಿಮಿತ್ತ ನಿಲ್ಲಿಸಿದ ಮುಳಸಿ ಸತ್ಯಾಗ್ರಹವು ಪುನಃ ಪ್ರಾರಂಭವಾಗುವುದು.

ಶ್ರೀಯುತ ಸಿ. ಆರ್. ದಾಸರು:—ಮಹಾರಾಷ್ಟ್ರ ಪ್ರಾಂತ್ಯದ ಮುಖಂಡರೊಡನೆ ಪ್ರಚಲಿತ ಪರಿಸ್ಥಿತಿಯನ್ನು ಕುರಿತು ಆಲೋಚಿಸುತ್ತಿರುವಾಗ ಶ್ರೀಯುತ ದಾಸರು ಕೌನ್ಸಿಲಿಗೆ ಹೋಗಿ ಅಲ್ಲಿ ಅಸಹಕಾರವನ್ನು ನಡಿಸಬೇಕಾಗಿ ಹೇಳಿರುವದಾಗಿ ತಿಳಿದುಬರುತ್ತದೆ.

ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯ ಮೀಟಿಂಗು:—ಬರುವ ತಿಂಗಳಲ್ಲಿ ಹೊಸ ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯು ಸ್ಥಾಪನೆಯಾಗಲಿಕ್ಕಿರುವುದರಿಂದ ಬರುವ ತಾ. ೨೦ ಅಥವಾ ೨೫ರಲ್ಲಿ ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮೀಟಿಂಗನ್ನು ಸೇರಿಸುವುದಕ್ಕಿಂತ ಬರುವ ದಶಂಬರ ತಿಂಗಳಲ್ಲಿ ಕೊಂಗ್ರೆಸ ಕಮ್ಮಿಟಿಯ ಮೀಟಿಂಗನ್ನು ಜರಗಿಸುವುದು ಯೋಗ್ಯವೆಂದು ಶ್ರೀಯುತ ಟಿ. ಪ್ರಕಾಶಂರವರು ತಿಳಿಸಿದ್ದಾರೆ.

ಮೈಸೂರಿನಲ್ಲಿ ಹೊಸ ಸಹಕಾರ ಸಂಘ:—ಮೈಸೂರು ಸಂಸ್ಥಾನದ ರಾಜಗೃಹದ ನೌಕರರ ಬಗ್ಗೆ ಒಂದು ಸಹಕಾರ ಸಂಘ. ಇದರ ಮೂಲ ಧನ ರೂ. ೫ರ ೩೦,೦೦೦ ಪಾಲುಗಳು.

ಧಾರವಾಡ:—ಧಾರವಾಡದಲ್ಲಿ ಪ್ಲೇಗು ಇನ್ನೂ ಕಡಿಮೆಯಾಗದ್ದರಿಂದ ರಾಷ್ಟ್ರೀಯ ವಿದ್ಯಾಲಯವು ಕಾರ್ತಿಕ ವದ್ಯ ಪ್ರತಿಪದೆಗೆ ಪ್ರಾರಂಭವಾಗದೇ ಮಾರ್ಗಶೀರ ಶುದ್ಧ ಪ್ರತಿಪದೆಗೆ ಪ್ರಾರಂಭವಾಗುವುದು.

ಡಿಲ್ಲಿ:—ಇಲ್ಲಿ ಒಬ್ಬನು ತಾನು ಉಜ್ಜನಿಯ ರಾಜನಿರುವನೆಂದೂ, ಗ್ವಾಲಿಯರ ಮಹಾರಾಜರ ಖಾಸಗಿ ಕಾರಭಾರಿ ಇರುವನೆಂದೂ ಹೇಳಿ ಅನೇಕ ದೊಡ್ಡ ದೊಡ್ಡ ಅಂಗಡಿಗಳಲ್ಲಿ ವ್ಯಾಪಾರಮಾಡಿ ಅಂಗಡಿಕಾರರಿಗೆ ಸುಳ್ಳು ಚೆಕ್ಕುಗಳನ್ನು ಕೊಡುತ್ತಿದ್ದನು. ಈ ಮೊದಲು ಇವನು ಕಲ್ಕತ್ತೆಯಲ್ಲಿ ಇದೇ ಆಟವಾಡಿ ಬಂದದ್ದರಿಂದ ಪೋಲೀಸರು ಈ ಸಂಗತಿಯನ್ನು ಡಿಲ್ಲಿಯಲ್ಲಿಯ ಪೋಲೀಸರಿಗೆ ತಂತಿಯಿಂದ ತಿಳಿಸಲು ಅವನನ್ನು ಸೆರೆಯಲ್ಲಿಟ್ಟಿರುವರು. ಈತನು ಲಖನೌದಲ್ಲಿರುವ ಒಬ್ಬ ನ್ಯಾಯಾಧೀಶನ ಮಗನಂತೆ. ರಾಜಹಂಸ.

ಮಾಪಿಳ್ಳಾ ಕೈದಿ:—ಮಾಪಿಳ್ಳಾ ಕೈದಿಯೊಬ್ಬನನ್ನು ಮದರಾಸಿನಿಂದ ಮಲಬಾರಿಗೆ ಒಯ್ಯುತ್ತಿರುವಾಗ ಅವನು ಟ್ರೈನಿನಿಂದ ಹಾರಿ ಸಮೀಪದಲ್ಲಿರುವ ಅರಣ್ಯವನ್ನು ಸೇರಿದನಂತೆ.

ದಕ್ಷಿಣ ಕನ್ನಡ

ಬಂಟವಾಳ:—ಈ ಗ್ರಾಮದ ನೆರೆಗ್ರಾಮದ ನಾವೂರು ಕೂಡಿಬೈಲಿನಲ್ಲಿ ಇಬ್ಬರು ಕೆಥೋಲಿಕರಿಗೂ ಬಿಲ್ಲವರಿಗೂ ಜಗಳವಾಗಿ ರೋಮನ ಕೆಥೋಲಿಕರಿಬ್ಬರಿಗೂ ಕಠಿಣ ಜಖಂ ಆಗಿಯದೆ. ಇವರನ್ನು ದೋಣಿಯಲ್ಲಿ ಹಾಕಿ ಬಂಟವಾಳ ಆಸ್ಪತ್ರೆಗೆ ತಂದಾಗ ಇಲ್ಲಿ ಸ್ಥಳಸಂಕೋಚದ ದೆಸೆಯಿಂದ ಮಂಗಳೂರಿಗೆ ಒಯ್ದರು. ಬಿಲ್ಲವರು ಬಂಟವಾಳ ಆಸ್ಪತ್ರೆಯಲ್ಲಿದ್ದಾರೆ. ಕೆಥೋಲಿಕರು ಮಂಗಳೂರ ಆಸ್ಪತ್ರೆಯಲ್ಲಿ ಮೃತಪಟ್ಟರಂತೆ.

ದೇವಶ್ಯಪಡೂರು ಗ್ರಾಮದಲ್ಲಿರುವ ಒಬ್ಬ ಬಿಲ್ಲವನು ಒಬ್ಬ ಹೊಲತಿಗೆ ಮುಡಿಕಟ್ಟುವ ಕೊಡಂಟಿಯಿಂದ ಕೊಚಿದು ಕೈ ಮುರಿದಿದ್ದಾನಂತೆ. ಹೊಲತಿಯು ಬಂಟವಾಳ ಆಸ್ಪತ್ರೆಯಲ್ಲಿದ್ದಾಳೆ.

ಈ ವಾರದಲ್ಲಿ ಬಂಟವಾಳ ಆಸ್ಪತ್ರೆಯಲ್ಲಿ ಮೃತಪಟ್ಟ ಒಂದು ಅನಾಥ ಶವವನ್ನು ತಾ. ೪ನೇ ಸಂಜೆ ೫ಗಂಟೆಗೆ ಇಲ್ಲಿಯ ಕೋಟಿಗರು ಕಸತುಂಬಿಸುವ ಗಾಡಿಯಲ್ಲಿ ಒಂದು ಕಡೆಯಲ್ಲಿ ಕಾಲುಗಳನ್ನೂ ಹೊರಗೆ ನೇತಾಡಿಸಿ ಇನ್ನೊಂದು ಕಡೆಯಲ್ಲಿ ಕಣ್ಣುಬಾಯಿ ವಿಕಾರಹೊಂದಿದ ಮುಖವನ್ನು ಇಟ್ಟು ನಾಯಿಗಳಿಗಿಂತ ಕಡೆ ರೀತಿಯಲ್ಲಿ ದಫನ ಸ್ಥಳಕ್ಕೆ ಒಯ್ದರು. ಮಾರ್ಗದಲ್ಲಿರುವ ಜನರು, ಮನೆ ಜಗಲಿಗಳಲ್ಲಿ ಕೂತಿರುವ ಹೆಂಗಸರು ಮಕ್ಕಳು ಈ ವಿಕಾರಸ್ವರೂಪವಾದ ಶವವನ್ನು ಕೋಟಿಗಳು ಆ ಶವಕ್ಕೆ ಒಂದು ವಸ್ತ್ರವನ್ನಾದರೂ ಹಾಕಿ ಮುಚ್ಚದೆ ಕೊಂಡುಹೋಗುವುದನ್ನು ನೋಡಿ ಕೆಲವರು ಬೇಸರ ಪಟ್ಟರು, ಮಕ್ಕಳಲ್ಲಿ ಭಯವುಂಟಾಯಿತು, ಹೆಂಗಸರಲ್ಲಿ ಹಾ! ಹಾ! ಕಾರವು ಹುಟ್ಟಿತು. ಸಮಯಾನುಕೂಲತೆ ಇದ್ದರೆ ಮಾನ್ಯ ಪ್ರೆಸಿಡೆಂಟರು ಇದನ್ನು ತನಿಖೆಮಾಡಿದರೆ ಮುಂದೆ ಈ ರೀತಿ ಶವಸಂಸ್ಕಾರವಾಗುವುದು ನಿಂತುಹೋದೀತು.

ಕೆಲ್ಲಡ್ಕ:—ಇಲ್ಲಿಯ ಬೋರ್ಡ ಶಾಲೆಯ ಹೆಡ್‌ಮಾಸ್ತರರಾದ ರಾ. ಕೃಷ್ಣಪೈಗಳಿಗೆ ಯಾವುದೋ ತಪ್ಪಿಲ್ಲದಿದ್ದರೂ ಅವರಿಗೆ ಊರಿನ ಹಿತಕ್ಕಾಗಿ ಪಣಂಬೂರು ಶಾಲೆಗೆ ವರ್ಗವಾಗಿಯದೆ. ಇವರು ಕೆಲಸ ನೇಮಕವಾದಂದಿನಿಂದ ಶಾಲೆಗೆ ಕ್ರಮಪ್ರಕಾರ ಬರುತ್ತಿದ್ದರು, ಪಾಠಗಳೂ ಸರಿಯಾಗಿ ನಡೆಯುತ್ತಿದ್ದವು. ಸೆಕೆಂಡ ಗ್ರೇಡಿನ ಉಪಾಧ್ಯಾಯರು ಈ ಜ್ಯಾಯರ ಎಲಿಮೆಂಟರಿ ಶಾಲೆಯಲ್ಲಿ ಅವರು ಒಬ್ಬರೆ.

ಪುತ್ತೂರು:—ಇಲ್ಲಿಯ ತೂಕದ ಮತ್ತು ಅಳತೆಯ ಸಾಧನಗಳಿಗೆ ಮೊಹರುಹಾಕುವ ಸರಕಾರಿ ನೌಕರರು ಬಂದು ಸುಮಾರು ಒಂದು ತಿಂಗಳಾಯಿತು. ಅನೇಕ ವರ್ತಕರು ಅಳತೆ ಸಾಧನಗಳ ನಿಗದಿ ತಿಳಿಯದೆ ತೊಂದರೆಯಾಗಿದೆ. ಅದರಿಂದ ವರ್ತಕರು ಸರಕಾರಿ ಅಳತೆಯನ್ನು ತಿಳಕೊಂಡರೆ ತೊಂದರೆಯಾಗಲಿಕ್ಕಿಲ್ಲ. ಕಳಸೆಯ ಬಾಯಿಯ ಅಡ್ಡಳತೆ 9½ ಇಂಚು ಒಂದು ಸೇರಿನ ಬಾಯಿಯ ಅಡ್ಡಳತೆ 3½ ಇಂಚು, ಅರ್ಧ ಸೇರಿನ ಬಾಯಿಯ ಅಡ್ಡಳತೆ 3 ಇಂಚು, ಒಂದು ಪಾವಿನ ಅಡ್ಡಳತೆ 2¼ಇಂಚು. ಅರ್ಧಪಾವಿನ ಅಡ್ಡಳತೆ 2 ಇಂಚು, ಕಾಲುಪಾವಿನ ಅಡ್ಡಳತೆ 1½ಇಂಚು. ಈಗ ಸಾಧನಗಳನ್ನು ತಯಾರಿಸುವಾಗ ಈ ಸರಕಾರಿ ಅಳತೆ ಪ್ರಕಾರ ತಯಾರಿಸಿದರೆ ಮೊಹರು ಹಾಕುವವರಿಗೆ ಕಷ್ಟ ಕಡಿಮೆಯಾದೀತು, ವರ್ತಕರಿಗೆ ಮಜೂರಿ ಕಡಿಮೆಯಾದೀತು.

ಹಡುಬಿದ್ರೆ:—ಗೌಡಸಾರಸ್ವತ ಬ್ರಾಹ್ಮಣ ಪೈಂದಳ್ಕೆ ಸೇರಿದ ಅಲ್ಲಿಯ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದಲ್ಲಿ ಕಳೆದ ತಾ. [illegible] ಉತ್ಥಾನ ದ್ವಾದಶಿ ದಿವಸ ಸದರಿ ದೇವಸ್ಥಾನದ ಮೊಕ್ತೇಸರರೂ [illegible] ಕೊಂಗ್ರೆಸು [illegible] ಮಹಾತ್ಮಾ ಗಾಂಧಿ [illegible] ನಮ್ಮ [illegible] ಸ್ವರಾಜ್ಯವು ಬೇಗನೇ [illegible]

ಅನುಕ್ರಮಣಿಕೆ

ಸ್ಫುಟವಿಚಾರಗಳು.—
೧, ೨, ೩, ೪, ೫, ಸಿವಿಲ್ ಡಿಸ್ ಒಬ್ಬೀಡಿಯನ್ಸ್ ಕಮ್ಮಿಟಿಯ ವರದಿ, ೬
೬. ಸಿ. ಆರ್. ದಾಸರ ಅಭಿಮತ. ೭. ತುರ್ಕಿಯ ವಿಜಯ. ,,
೮. ಅಖಿಲ ಭಾರತ ಗೋಸೇವಾ ಪರಿ. ,,
ಷತ್ತು. ೯. ಫಿಸ್ಕಲ್ ಕಮಿಷನು. ೧೦. ರಾಜನಿಷ್ಠೆಯನ್ನು ಕಲಿಸುವಿಕೆ ೭
ಮಂಗಳೂರು.—
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ದ. ಕನ್ನಡ, ಬಂಟವಾಳ, ಕಲ್ಲಡ್ಕ, ಪುತ್ತೂರು, ಪಡುಬಿದ್ರೆ, ಪೊಳಲಿ, ಕಾಪು, ,,
ದೇಹಲಿಯಲ್ಲಿ ಪಂಡಿತ ಹಕೀಮ ಅಜಮಲ್‌ಖಾನರು ಮಾಡಿದ ಭಾಷಣ ೮
ವಾಯುವೇಗದಲ್ಲಿ ಓಡುವ ತರುಣ ,,
ಜಿಲ್ಲಾ ಕೊಂಗ್ರೆಸ ಕಮ್ಮಿಟಿಯ ಸೂಚನೆ ,,
ಕಾಸರಗೋಡು ತಾಲೂಕು ಕೊಂಗ್ರೆಸ ಕಮ್ಮಿಟಿ ಮೀಟಿಂಗು. ೬
ದಕ್ಷಿಣ ಕನ್ನಡ ಜಿಲ್ಲಾ ದ್ರಾವಿಡ ಬ್ರಾಹ್ಮಣರ ಮೂರನೇ ಪರಿಷತ್ತು ೪.
ಶ್ರೀಯುತ ಮೈಸೂರು ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹ ,,
ದ್ದೂರ್ ಜಿ. ಸಿ. ಯಸ್. ಐ. ಜಿ. ಸಿ. ಬಿ. ಇ. ಯವರು ೪ನೇ ಸ್ಕೌಟ್ ,,
ವರ್ಧಂತಿ ಮಹೋತ್ಸವದಲ್ಲಿ ಸ್ಕೌಟ ಬಾಲಕರ ರೆವ್ಯೂ ಆದ ನಂತರ ಅಪ್ಪಣೆ ,,
ಕೊಡಿಸಿದ ಸುಭಾಷಣವು ,,
ಜಾತಿಭೇದ ವಿಚಾರ ಸಮಾಲೋಚನಾ ವಿಮರ್ಶೆ ,,

ಸ್ವದೇಶಾಭಿಮಾನಿ.

ಶಕ ೧೮೪೫ ಕಾರ್ತಿಕ ಬ|| ೭ಯು ಶುಕ್ರವಾರ.

ಸ್ಫುಟವಿಚಾರಗಳು.

೧. ಈ ಹೊತ್ತು, ನಾಳೆ, ಈ ವಾರ ಬರುವ, ವಾರ ಎಂದು ಕೊನೆಗೆ ಕಳೆದ ವಾರ ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಎನ್‌ಕ್ವಾಯರಿ ಕಮಿಟಿಯ ರಿಪೋರ್ಟು ಜನತೆಯ ಮುಂದೆ ಬಂತು. ನೊನ್ ಕೊ-ಒಪರೇಶನಿನ ಚಳವಳವನ್ನು ರಾಷ್ಟ್ರೀಯ ಸಭೆಯು ಅಂಗೀಕರಿಸಿದಂದಿನಿಂದ ರಾಷ್ಟ್ರದ ಪರಿಸ್ಥಿತಿಯು ಹೇಗಿದೆ, ರಾಷ್ಟ್ರೀಯ ಸಭೆಯು ಹಾಕಿಕೊಟ್ಟ ಕಾರ್ಯಕ್ರಮವು ಯಶಸ್ವಿಯಾಗಿದೆಯೊ ಇಲ್ಲವೊ ಯಶಸ್ವಿಯಾಗದೆ ಇದ್ದರೆ, ಸ್ವರಾಜ್ಯ ಸಿಗುವವರೆಗೆ "[illegible] ಕೊವೋಯಮ್" ಎಂಬ ಮಾತಿನಂತೆ ಈ ಸವಳು ಬಾವಿಯ ನೀರನ್ನೆ ಕುಡಿಯುತ್ತಿರಬೇಕೊ ಅಥವಾ ಜನಸಾಮಾನ್ಯರ ಆಚರಣಕ್ಕೆ ಬರುವ ಕಾರ್ಯಕ್ರಮಗಳನ್ನು ಹಾಕಿಕೊಟ್ಟು ಸ್ವರಾಜ್ಯದ ಧ್ಯೇಯವನ್ನು ಸಮೀಪಿಸಬೇಕೊ ಎಂದು ಮುಖ್ಯ ಪ್ರಶ್ನೆಯು ಕಮಿಟಿಯ ಮುಂದಿತ್ತು. ಕಮಿಟಿಯು ದೇಶದ ಎಲ್ಲ ಭಾಗಗಳಲ್ಲಿ ಸಂಚರಿಸಿ, ಹೆಚ್ಚಾಗಿ ರಾಷ್ಟ್ರೀಯ ಸಭೆಯ ಅನುಯಾಯಿಗಳ ಅಂಬೋಣಗಳನ್ನು ಕೇಳಿಕೊಂಡು ತನ್ನ ಮಂಡಲದ ಒಂದೆರಡು ಅಧಿವೇಶನಗಳನ್ನು ಮಾಡಿ ಕೊನೆಗೆ ೧೬೦ ಪುಟಕ್ಕಿಂತಲೂ ಕೊಂಚ ದೊಡ್ಡದಾದ ವರದಿಯನ್ನು, ಅದು ಜನರ ಅವಗಾಹನೆಗೆ ಮುಂದಿಟ್ಟಿದೆ. ರಿಪೋರ್ಟಿಗೆ ೮ ಪ್ರಕರಣಗಳೂ, ಒಂದು ಪೀಠಿಕೆಯೂ ಇರುವುದರಿಂದ ರಿಪೋರ್ಟು ಮಹಾ ಗಾತ್ರವಿರುತ್ತದೆ. ರಿಪೋರ್ಟಿನೊಳಗಿನ ಸಾಕ್ಷಿ ಪುರಾವೆಗಳ ಭಾಗವನ್ನು ಬಿಟ್ಟರೆ ಪ್ರಥಮತಃ ಅಸಹಕಾರವು ಹೇಗೆ ಪ್ರಾಚೀನವಾಗಿಯೆ ಇದೆ, ನೂತನವಲ್ಲವೆಂದು ಪ್ರದರ್ಶಿಸಿ ಸದರಿ ರಿಪೋರ್ಟು ಬೇರೆ ಬೇರೆ ವಿಷಯಗಳನ್ನು ಚರ್ಚಿಸಿದೆ. ಅಸಹಕಾರವು ಪ್ರಾರಂಭವಾದ ಬಳಿಕ ಮತ್ತು ಮುಖ್ಯವಾಗಿ ಬಾರಡೋಲಿಯ ನಿರ್ಣಯವಾದ ಬಳಿಕ ಸರಕಾರವು ಹೇಗೆ ಒತ್ತಾಟವನ್ನು ಪ್ರಾರಂಭಿಸಿ ಅವಿವೇಕ ಕೃತ್ಯಗಳ ಪರಮಾವಧಿಯನ್ನು ಮಾಡಿತು ಎಂಬಿತ್ಯಾದಿ ವಿಷಯಗಳು ಪ್ರಸ್ತಾಪಿಸಲ್ಪಟ್ಟು ಈ ಚಳವಳವನ್ನು ನಿರ್ಮೂಲಿಸುವುದೆ ಸರಕಾರದ ಪರಮಧ್ಯೇಯವಾಗಿತ್ತೆಂಬ ಮಾತು ಕನ್ನಡಿಯಲ್ಲಿ ಚಿತ್ರವನ್ನು ತೋರಿಸುವಂತೆ ಅಷ್ಟು ಚಂದವಾಗಿ ವಿವರಿಸಲ್ಪಟ್ಟಿದೆ. ಸರಕಾರವು ಈ ಮೇರೆಗೆ ಒತ್ತಾಳಿಕೆಯ ಪ್ರಭುತ್ವವನ್ನು ಸಂಪಾದಿಸಿದಾಗ್ಯೂ ಜನರು ಬಹು ಶಾಂತವಾಗಿ ಈ ಎಲ್ಲ ಸಂಕಷ್ಟಗಳನ್ನು ತಾಳಿದರು. ಇದರಿಂದ ಜನರಲ್ಲಿ ಸ್ವರಾಜ್ಯತತ್ವದ ಪ್ರಸಾರವುಂಟಾಯಿತು. ಮತ್ತು ಅದರೊಟ್ಟಿಗೆನೆ ಸ್ವರಾಜ್ಯಾಕಾಂಕ್ಷೆಯು ಮೂಲೆ ಮೂಲೆಗಳಲ್ಲಿ ಹಬ್ಬಿ ನವಚೈತನ್ಯವು ಸರ್ವತ್ರ ಅಂಕುರಿಸಿತು. ಈ ಸಂಗತಿಗಳನ್ನು ವಿಶದಪಡಿಸಿ, ರಿಪೋರ್ಟು ಸಿವಿಲ್ ಡಿಸ್ ಒಬ್ಬೀಡಿಯನ್ಸು ಕೌನ್ಸಿಲ್ ಪ್ರವೇಶ ಮುಂತಾದ ಕಾರ್ಯಕ್ರಮದ ವಿಷಯಗಳನ್ನು ವಿವೇಚಿಸಿದೆ.

೨. ಸಿವಿಲ್ ಡಿಸ್ ಒಬ್ಬೀಡಿಯನ್ಸ್ ಎನ್‌ಕ್ವಾಯರಿ ಕಮಿಟಿಯು ಕಾನೂನುಭಂಗದ ವಿಷಯದಲ್ಲಿ ಮಾಡುವ ಸಿಫಾರಸನ್ನು ವಾಚಕರ ಮುಂದಿಡಬೇಕಾಗಿದೆ. ಸಾರ್ವತ್ರಿಕ ಕಾನೂನುಭಂಗವನ್ನು ಮಾಡುವುದು ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಆದರೆ ಇನ್ನು ಮುಂದೆ ವಿವಕ್ಷಿತ ಕಾನೂನುಗಳನ್ನು ಮಾತ್ರ ಭಂಗಪಡಿಸಲು ಅನುರೂಪವಾಗುವಂಥ ಪರಿಸ್ಥಿತಿಯನ್ನು ಕಲ್ಪಿಸಬಹುದು. ಮತ್ತು ಈ ಕಾರ್ಯವನ್ನು ಪ್ರಾಂತಿಕ ಕೊಂಗ್ರೆಸ್ ಕಮಿಟಿಗಳು ತಮ್ಮ ಭಾಗಗಳಲ್ಲಿ ನಡಿಸಿ ಸಾರ್ವತ್ರಿಕ ಕಾಯಿದೆಭಂಗವನ್ನು ಮಾಡಬಹುದು. ಅವು ಈ ವಿಧದಿಂದ ಸ್ವಂತ ಜವಾಬದಾರಿಯ ಮೇಲೆ ಮಾಡುವಂತೆ ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಅಪ್ಪಣೆಯನ್ನು ಕೊಡತಕ್ಕದ್ದು. ವೈಯುಕ್ತಿಕ ಕಾಯಿದೆಭಂಗದ ವಿಷಯದಲ್ಲಿ ಡಿಲ್ಲಿಯ ಠರಾವೆ ಉಜ್ಜೀವಿಸಲ್ಪಟ್ಟಿದೆ. ಎರಡು ಬಗೆಯ ಕಾಯಿದೆಭಂಗಗಳಲ್ಲಿ ಸಾರ್ವತ್ರಿಕ ಕಾಯಿದೆಭಂಗವನ್ನು ಪ್ರಾರಂಭಿಸುವಷ್ಟು ದೇಶವು ಪಕ್ವವಾಗಲಿಲ್ಲವೆಂದು ಕಮಿಟಿಯು ಕೊಟ್ಟ ಅಭಿಪ್ರಾಯವನ್ನು ಯಾರೂ ಒಪ್ಪಬೇಕಾದ್ದೆ ಸರಿ. ಸಾರ್ವತ್ರಿಕ ಕಾಯಿದೆಭಂಗವೆಂದರೆ ಒಂದು ದೃಷ್ಟಿಯಿಂದ ಸರ್ವನಾಶವೆ ಸರಿ. ಈ ನಾಶವನ್ನು ಆಮಂತ್ರಿಸುವಾಗ ಯಾವತರದ ವಿಕಾರಕ್ಕೂ ಯಾರೂ ವಶರಾಗಿರಕೂಡದು, ಇದೆ ಇದರ ಮುಖ್ಯ ತತ್ವವು. ಅಶಸ್ತ್ರಪ್ರತಿಕಾರದಿಂದ ಸ್ವರಾಜ್ಯವನ್ನು ಸಂಪಾದಿಸುವ ಕಾರ್ಯದಲ್ಲಿ ಜನತೆಯಲ್ಲಿ ಅಖಂಡವಾದ ಐಕ್ಯ. ಸಂಪೂರ್ಣವಾದ ಸ್ವಾವಲಂಬನ ಮತ್ತು ಅಚಲವಾದ ಆತ್ಮಸಂಯಮನ ಈ ಗುಣಗಳು ಅತ್ಯಾವಶ್ಯಕವಿರುವುದರಿಂದ ಅವುಗಳನ್ನು ಸಂಪಾದಿಸಲು ಪ್ರಥಮತಃ ಪೂರ್ವಸಿದ್ಧತೆಯನ್ನು ಮಾಡಬೇಕು. ಯಾವ ಕಾರ್ಯದಲ್ಲಾದರೂ ಸೇಕಡಾ ನೂರು ಉತ್ತರವು ಬರುವುದು ಕೊಂಚ ಅಸಾಧ್ಯ. ಅಂಥ ಪರಿಸ್ಥಿತಿಯಲ್ಲಿ ಸೇಕಡಾ ೮೦-೯೦ ಆದರೂ ಉತ್ತರವು ಬರಬೇಕು ಆಗ ಆ ಚಳವಳವನ್ನು ಪ್ರಾರಂಭಿಸಬಹುದು. ಈ ದೃಷ್ಟಿಯಿಂದ ವಿಚಾರಮಾಡಿದ್ದಲ್ಲಿ ಸಾರ್ವತ್ರಿಕ ಕಾಯಿದೆಭಂಗದ ಚಳವಳವನ್ನು ಪ್ರಾರಂಭಿಸಲು ಇನ್ನು ಸ್ವಲ್ಪಕಾಲವನ್ನಾದರೂ ಪ್ರತೀಕ್ಷಿಸುವುದು ಅನವಶ್ಯಕವೆಂದು ಯಾರು ಹೇಳಿಯಾರು? ವೈಯಕ್ತಿಕ ಕಾಯಿದೆಭಂಗವು ವ್ಯಕ್ತಿಯ ಇಚ್ಛಾಯತ್ತವಾಗಿದೆಯಾದರೂ ಪ್ರಾಂತಿಕ ಕಮಿಟಿಗಳ ಅನುಜ್ಞೆಯ ಬಂಧನವನ್ನು ಅದಕ್ಕೆ ಹಾಕಿದ್ದು ಪ್ರಾಂತದ ಮಟ್ಟಿಗಾದರೂ ಚಳವಳದ ಏಕರೂಪತೆ ಮತ್ತು ಸಾಂಘಿಕಶಕ್ತಿ ಈ ದೃಷ್ಟಿಯಿಂದ ಸುಸಂಗತವಾಗಿದೆ ಎಂಬುದಕ್ಕೆ ಸಂದೇಹವಿಲ್ಲ. ತಥಾಪಿ ಪ್ರಕೃತ ಚಳವಳದ ಸಜೀವತೆಯನ್ನು ಜನತೆಯ ಮನಸ್ಸಿನ ಮೇಲೆ ಪ್ರತಿಬಿಂಬಿಸುವ ದೃಷ್ಟಿಯಿಂದ ಇದು ಎಷ್ಟರಮಟ್ಟಿಗೆ ಸಾಧಕವಾದೀತೆಂಬುದು ಚಿಂತ್ಯವಾಗಿದೆ.

೩. ಅಸಹಕಾರದ ಸಾಧನಗಳಲ್ಲಿಯ ಕೊನೆಯ ಸಾಧನವು ಕಾನೂನಭಂಗವು. ಅದನ್ನು ಕುರಿತು ಕಮಿಟಿಯು ಮೇಲಿನಂತೆ ತನ್ನ ಸಿಫಾರಸುಗಳನ್ನು ಮಾಡಿದ ಬಳಿಕ ಉಳಿದ ಗೌಣ ವಿಷಯಗಳ ಬಗ್ಗೆ ಅದು ಯಾವ ಅಭಿಪ್ರಾಯವನ್ನು ಬರೆಯುತ್ತದೆ, ಎಂಬುದು ಅಷ್ಟೊಂದು ಮಹತ್ವದ ಪ್ರಶ್ನೆಯಲ್ಲ. ಆದರೂ ಕೆಲವರ ಪ್ರತಿಪಾದನದ ಶೈಲಿಯಿಂದ ಮತ್ತು ಆಗ್ರಹದಿಂದ ಗೌಣ ಸಂಗತಿಗಳಿಗೆನೆ ಈಗ ಪ್ರಾಮುಖ್ಯಬಂದಿರುವುದು. ಆದ್ದರಿಂದ ಕಮಿಟಿಯು ಅಂಥ ವಿಷಯಗಳನ್ನು ಸಹ ಪ್ರಮುಖವಾಗಿ ವಿಮರ್ಶಿಸಿದೆ. ಶಾಲಾ ಕೊಲೆಜುಗಳ ಬಹಿಷ್ಕಾರ, ಕೋರ್ಟು ಬಹಿಷ್ಕಾರ, ಕೌನ್ಸಿಲು ಬಹಿಷ್ಕಾರ ಈ ತ್ರಿದಲಾತ್ಮಕವಾದ ಬಹಿಷ್ಕಾರವನ್ನು ಕುರಿತು ಕಮಿಟಿಯು ತನ್ನ ರಿಪೋರ್ಟಿನಲ್ಲಿ ವಿಶದವಾಗಿಯೂ ದೀರ್ಘವಾಗಿಯೂ ಮತ್ತು ಕೆಲವೆಡೆಯಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿಯೂ ಚರ್ಚಿಸಿದೆ ಬಾರ್ಡೊಲಿಯ ವರ್ಕಿಂಗ್ ಕಮಿಟಿಯ ನಿರ್ಣಯದಿಂದ ಅಸಹಕಾರ ಚಳವಳದ ಮುಖವನ್ನೆ ತಿರುಗಿಸಿಟ್ಟ ಹಾಗಾಗಿದೆ ಎಂಬುದು ಎಲ್ಲರಿಗೆ ಗೊತ್ತಿದ್ದ ಸಂಗತಿಯೆ ಸರಿ. ಅಲ್ಲಿ ಸರಕಾರಿ ಶಿಕ್ಷಣಾಲಯಗಳ ಬಹಿಷ್ಕಾರದ ಬಗ್ಗೆ ಆಗಿದ್ದ ಯಾವ ಠರಾವೊ—ಶಾಲಾ ಕೊಲೇಜುಗಳ ಹತ್ತಿರ ಹೋಗಿ ವಿದ್ಯಾರ್ಥಿಗಳನ್ನು ಶಿಕ್ಷಣ ಸಂಸ್ಥೆಗಳ ಬಹಿಷ್ಕಾರದ ಬಗ್ಗೆ ಉಪದೇಶಿಸಕೂಡದು, ರಾಷ್ಟ್ರೀಯ ಶಿಕ್ಷಣಾಲಯಗಳ ಆಕರ್ಷಕತೆಯಿಂದಲೆ ವಿದ್ಯಾರ್ಥಿಗಳು ಸರಕಾರಿ ಶಾಲಾಕೊಲೇಜುಗಳನ್ನು ಬಿಡುವಂತೆ ಮಾಡಬೇಕು, ಎಂಬ ಅರ್ಥದ ಯಾವ ಠರಾವೊ—ಅದನ್ನೆ ಸಿ. ಡಿ. ಒ. ಕಮಿಟಿಯು ಸಿಫಾರಸುಮಾಡಿದೆ. ಶಿಕ್ಷಣ ಬಹಿಷ್ಕಾರದ ಈ ಠರಾವು ಸಜೀವವೊ, ನಿರ್ಜೀವವೊ ಯಾವದನ್ನೂ ಹೇಳಲು ಸಾಧ್ಯವಿಲ್ಲ. ಉಪದೇಶದ ಸಂತೆಯು ಇಲ್ಲದೆ ಇರುವುದರಿಂದ ವಿದ್ಯಾರ್ಥಿಗಳು ಸರಕಾರಿ ಶಿಕ್ಷಣಾಲಯಗಳನ್ನು ಬಹಿಷ್ಕರಿಸ್ಯಾರೆಂದು ತಿಳಿದು ಅವರಿಂದ ಈ ಬಗೆಯ ಸ್ವಾರ್ಥತ್ಯಾಗವನ್ನು ನಿರೀಕ್ಷಿಸುವುದು ಎಷ್ಟರಮಟ್ಟಿಗೆ ಸಫಲವಾದೀತೊ ಗೊತ್ತಾಗದು. ಎಂದರೆ ಸ್ಪಷ್ಟ ಹೇಳುವುದಾದರೆ ಈ ದೃಷ್ಟಿಯಿಂದ ಈ ಠರಾವಿಗೆ ಜೀವವಿಲ್ಲವೆಂದೆ ಹೇಳಬೇಕು. ಆದರೆ ರಾಷ್ಟ್ರೀಯ ಶಿಕ್ಷಣದ ಸಂಸ್ಥೆಗಳನ್ನು ನಿಜವಾಗಿ ಜ್ಞಾನಪ್ರದವಾದವುಗಳನ್ನಾಗಿ ಮಾಡಿ ಎಲ್ಲ ವಿಧದಿಂದಲೂ ವಿದ್ಯಮಾನವಾದ ಸರಕಾರಿ ಶಾಲೆಗಳಿಗಿಂತಲೂ ಹೆಚ್ಚಿನ ಉಪಯುಕ್ತ ಮತ್ತು ಸಮರ್ಥಗಳನ್ನಾಗಿ ತಯಾರಿಸಿದ್ದಲ್ಲಿ ಮಕರಂದಭರಿತವಾದ ಪುಷ್ಪಗಳಿದ್ದಲ್ಲಿಗೆ ಭ್ರಮರುಗಳು ಬರುವಂತೆ ಅಂತಹ ಶಿಕ್ಷಣಾಲಯಗಳಲ್ಲಿ ವಿದ್ಯಾರ್ಥಿಗಳು ಓಡಿ ಓಡಿ ಬಂದಾರೆಂಬುದಕ್ಕೆ ಸಂದೇಹವಿಲ್ಲ. ಈ ದೃಷ್ಟಿಯಿಂದ ಮೇಲಿನ ಠರಾವು ಮತ್ತು ಸಿಫಾರಸು ಸಜೀವವೆಂದು ಹೇಳಬಹುದು. ಆದರೆ ಇಂಥ ಸ್ಪೃಹಣೀಯ ಪರಿಸ್ಥಿತಿಯು ರಾಷ್ಟ್ರೀಯ ಶಾಲೆಗಳಿಗೆ ಬಂದ ಬಳಿಕ ಮೇಲಿನ ಅಂಬೋಣಕ್ಕೆ ಅನ್ವರ್ಥತೆಯು ಬಂದೀತೆಂಬುದನ್ನು ಯಾರೂ ಮರೆಯಕೊಡದು. ಇರಲಿ, ಎನ್‌ಕ್ವಾಯರಿ ಕಮಿಟಿಯು ಮಾಡಿದ ಶಿಫಾರಸುಗಳಲ್ಲಿ ವಕೀಲರ ಮೇಲಿನ ಪ್ರತಿಬಂಧವನ್ನು ಬಗೆಹರಿಸಿದೆ ಎಂಬುದನ್ನು ಇಲ್ಲಿ ನಿರ್ದೇಶಿಸಬೇಕಾದ ಸಂಗತಿಯು. ಪಂಚಾಯತು ಕೋರ್ಟುಗಳನ್ನು ಸಂಸ್ಥಾಪಿಸಲು ಮಹಾ ಪ್ರಯತ್ನಗಳನ್ನು ತೆಕ್ಕೊಳ್ಳಬೇಕು. ಮತ್ತು ಜನತೆಯ ಅಭಿಪ್ರಾಯವು ಪಂಚಾಯತು ಸಂಸ್ಥೆಗಳ ವಿಷಯದಲ್ಲಿ ಅತ್ಯಂತ ಅನುಕೂಲವಾಗುವಂತೆ ಯತ್ನಿಸತಕ್ಕದ್ದು. ಜನರ ಕೋರ್ಟುಗಳನ್ನು ಸ್ಥಾಪಿಸಿ ಸರಕಾರದ ಕೋರ್ಟುಗಳ ಬಲವನ್ನು ತಗ್ಗಿಸಬೇಕೆಂಬುದು ಇವರ ಅರ್ಥವು. ಕೋರ್ಟು ಬಹಿಷ್ಕಾರದ ಮಟ್ಟಿಗೆ ಲಕ್ಷ್ಯದಲ್ಲಿಡಬೇಕಾದ ಇನ್ನೊಂದು ಸಂಗತಿ ಇದೆ. ಕೋರ್ಟುಕಚೇರಿಗಳಲ್ಲಿ ಹೋಗುತಿದ್ದ ವಕೀಲರು ಎಂದರೆ ತಮ್ಮ ವಕಾಲತನ್ನು ನಿಲ್ಲಿಸದ ವಕೀಲರು ಕೊಂಗ್ರೆಸಿನ ಕಾರ್ಯಕಾರಿ ಸಂಸ್ಥೆಗಳಲ್ಲಿರಕೂಡದೆಂಬ ನಿರ್ಬಂಧವಿತ್ತು. ಇಂಥ ವಕೀಲ ವರ್ಗದ ಅಂತಃ ಪ್ರವೇಶದಿಂದ ಕೊಂಗ್ರೆಸಿಗೆ ಮೈಲಿಗೆ ಬರುತ್ತದೆಂದು ಯಾವ ಪ್ರತಿಬಂಧವಿತ್ತೊ ಅದು ದೂರಮಾಡಲ್ಪಟ್ಟಿದೆ. ಬೇರೆ ಮಾತಿನಿಂದ ಹೇಳುವುದಾದರೆ, ಸರಕಾರಿ ಕೋರ್ಟುಗಳಲ್ಲಿ ವಾದಿಸುವ ವಕೀಲರು ಇನ್ನು ಮುಂದೆ ಕೊಂಗ್ರೆಸ್ಸಿನ ಕಾರ್ಯಕಾರಿ ಸಂಸ್ಥೆಗಳನ್ನು ನಡಿಸಬಹುದು. ಕೋರ್ಟು ಬಹಿಷ್ಕಾರದ ಸುದ್ದಿಯನ್ನು ಬಿಟ್ಟು, ಬರೆ ಪಂಚಾಯತು ಸಂಸ್ಥೆಗಳ ಸಂಸ್ಥಾಪನೆ ಮತ್ತು ವಕೀಲರ ಪ್ರತಿಬಂಧದ ನಿವಾರಣೆ ಇವುಗಳ ಸ್ಪಷ್ಟ ಅರ್ಥವು ಕೋರ್ಟು ಬಹಿಷ್ಕಾರವು ಶಿಥಿಲ ಮಾಡಲ್ಪಟ್ಟಿತು ಎಂದಿರುತ್ತದೆ.

೪. ಈ ರೀತಿಯಿಂದ ತ್ರಿದಲ ಬಹಿಷ್ಕಾರದ ಎರಡು ಎಲೆಗಳ ಹಾಲಹವಾಲೆಯನ್ನು ತಿಳಕೊಂಡ ಬಳಿಕ ಕೌನ್ಸಿಲ್ ಬಹಿಷ್ಕಾರದ ಸಂಗತಿಯನ್ನು ತಿಳಕೊಳ್ಳಲು ವಾಚಕರು ಬಹು ಉತ್ಸುಕರಾಗದೆ ಇರರು. ಆದರೆ ಕಮಿಟಿಯ ಸಭಾಸದರಲ್ಲಿ ಈ ಮಟ್ಟಿಗೆ ಏಕಮತ್ಯವಿಲ್ಲವಾಗಿದೆ ಇದು ತುಂಬಾ ಶೋಚನೀಯವು. ಮದ್ರಾಸಿನ ಹಿಂದೂ ಪತ್ರಿಕೆಯ ಸಂಪಾದಕರಾದ ಕಸ್ತೂರಿ ರಂಗ ಅಯ್ಯಂಗಾರ, ಡೊ. ಅನ್ಸಾರಿ ಸಿ. ರಾಜಗೋಪಾಲಾಚಾರ್ಯ ಈ ಮೂವರು ಕೌನ್ಸಿಲ್ ಬಹಿಷ್ಕಾರದ ಪರವಾಗಿ ನಿಂತಿರುವರು. ಮಹಾತ್ಮಜಿಯವರ ಕಡುಅನುಯಾಯಿಗಳಾದ ಪಂಡಿತ ಮೋತಿಲಾಲನೇಹರು, ಹಕೀಮ ಅಜಮಲಖಾನ ವಿ. ಜೇ. ಪಟೇಲ ಈ ಮೂವರು ಕೌನ್ಸಿಲ್ ಪ್ರವೇಶದ ಪರವಾಗಿ ನಿಂತಿರುವರು. ಈ ಮೇರೆಗೆ ಈ ಪ್ರಶ್ನೆಯ ವಿಷಯವಾಗಿ ಕಮಿಟಿಯ ಮೆಂಬರುಗಳು ಸಮ ಸಂಖ್ಯೆಯಿಂದ ವಿಭಕ್ತರಾಗಿರುವಲ್ಲಿ ಕಮಿಟಿಯ ಅಧ್ಯಕ್ಷರಾದ ಹಕೀಮ ಸಾಹೇಬರು—ಅಧ್ಯಕ್ಷರಿಗಿರುವ ಒಂದು ಅಧಿಕ ಮತವನ್ನು ಕೌನ್ಸಿಲ್ ಪ್ರವೇಶದ ಕಡೆಗೆನೆ ಕೊಟ್ಟು ಅಧಿಕಮತದಿಂದ ಕೌನ್ಸಿಲ್ ಬಹಿಷ್ಕಾರದ ವಿಸರ್ಜನೆಯನ್ನು ಮಾಡಿರುವರು. ಕೌನ್ಸಿಲ್ ಬಹಿಷ್ಕಾರದ ಪ್ರಶ್ನೆಯು ಸಮಂಜಸವಾಗಲಿ, ಅಸಮಂಜಸವಾಗಲಿ, ಪ್ರವೇಶದಿಂದ ಅಸಹಕಾರದ ತತ್ವಕ್ಕೆ ಬಾಧೆ ಬರುತ್ತದೆಂದು ತಿಳಕೊಳ್ಳಲಿ; ಅಥವಾ ಅಸಹಕಾರವು ಅದರಿಂದ ದೃಢವಾಗುತ್ತದೆಂದಿರಲಿ, ಈ ಎಲ್ಲ ವಿಷಯಗಳು ಇದುವರೆಗೆ ಹಲವು ವಿಧದಿಂದ ಹಲವು ಕಡೆಗಳಲ್ಲಿ ಹಲವರು ಚರ್ಚಿಸುವುದರಿಂದ ಪುನಃ ಇಲ್ಲಿ ಅದರ ಊಹಾಪೋಹವನ್ನು ಮಾಡುವುದು ಅಗತ್ಯವಿಲ್ಲ. ಕಮಿಟಿಯ ಮೆಂಬರುಗಳಲ್ಲಿ ಕೌನ್ಸಿಲ್ ಬಹಿಷ್ಕಾರವನ್ನು ಸಮರ್ಥಿಸಿದವರಾದರೂ ಯಾವ ಹೊಸ ಸಂಗತಿಗಳನ್ನೂ ಹೇಳಲು ಸಮರ್ಥರಾಗಲಿಲ್ಲ. ಕೌನ್ಸಿಲ್ ಪ್ರವೇಶವು ಯಾರಿಗೂ ಅಭಿಮತವಿಲ್ಲ; ಬರೆ ಕೆಲವರು ಮಾತ್ರ ಇದನ್ನು ಎತ್ತಿಹಿಡಿಯುವರು ಎಂದು ಅಸಹಕಾರವಾದಿಗಳು ಪ್ರತಿಪಾದಿಸುತ್ತಿದ್ದರು. ಈಗಲಾದರೂ ಅದೆ ರೀತಿಯಿಂದ ಪ್ರತಿಪಾದಿಸುತ್ತಿದ್ದಾರೆ ಎನ್ನೋಣ. ಮಾತ್ರವಲ್ಲ, ಮೇಲಿನ ಸಮರ್ಥಕರಾದರೂ ಇದೆ ಮಾತನ್ನು ಅಂಕಗಣಿತದ ಕೌಶಲ್ಯದಿಂದ ತೋರಿಸಲು ಯತ್ನಿಸಿರುವರು. ಆದರೆ ಸ್ವಯಂ ಕಮಿಟಿಯಲ್ಲೆ ಈ ವಿಷಯಕ್ಕೆ ತುಲ್ಯ ಬಲತ್ವವು ಪ್ರಾಪ್ತವಾಗಿ, ಕೊನೆಗೆ ಅಧಿಕಮತದಿಂದ ಕೌನ್ಸಿಲ್ ಪ್ರವೇಶವೆ ಸಿಫಾರಸನ್ನು ಹೊಂದಿರುವುದೆಂಬುದನ್ನು ಯಾರೂ ಮರೆಯಕೂಡದು. ನಾವು ಮೇಲೆ ಹೇಳಿದಂತೆ ಈ ಪ್ರಶ್ನೆಯ ಪೂರ್ವಪಕ್ಷ-ಸಮಾಧಾನಗಳನ್ನು ವಿವರಿಸುವುದರಲ್ಲಿ ಸ್ಥಳವನ್ನು ವೆಚ್ಚ ಮಾಡುವುದು ಪ್ರಶಸ್ತವಲ್ಲ.

೫. ಸಿವಿಲ್ ಡಿಸ್‌ಒಬೀಡಿಯನ್ಸಿನ ಈ ಪ್ರಸ್ತಾಪವನ್ನು ಮುಗಿಸುವ ಮುಂಚೆ ಒಂದು ಮಾತನ್ನು ಹೇಳಬೇಕಾಗಿದೆ. ಕೊಂಗ್ರೆಸಿನ ಕಾರ್ಯಕ್ರಮದಲ್ಲಿ ಕಮಿಟಿಯು ಸೂಚಿಸಿದ ಬದಲಾವಣೆಗಳು ಬರೆ ಸಿಫಾರಸುಗಳಲ್ಲದೆ ಕೊನೆಯ ನಿರ್ಣಯಗಳಲ್ಲ. ಓ. ಇ. ಕೊ. ಕಮಿಟಿಯ ಬರುವ ಅಧಿವೇಶನ, ರಾಷ್ಟ್ರೀಯ ಸಭೆಯ ವಿಷಯನಿಯಾಮಕ ಸಭೆ ಮತ್ತು ಮಹಾಸಭೆ, ಇವುಗಳಲ್ಲಿ ಇವೆ ಸಿಫಾರಸುಗಳು ಚರ್ಚೆಗೆ ಬಂದು ನಿಶ್ಚಿತ ಸ್ವರೂಪವನ್ನು ಹೊಂದಬೇಕು. ಕೌನ್ಸಿಲ್ ಪ್ರವೇಶದ ವಿಷಯಕ್ಕಂತೂ ಇದಕ್ಕಿಂತಲೂ ಹೆಚ್ಚಿನ ತಪಸ್ಯೆಯು ಆವಶ್ಯಕವಾಗಿದೆ. ಕೌನ್ಸಿಲ್ ಪ್ರವೇಶಕ್ಕೆ ಸಮ್ಮತಿಯನ್ನು ಕೊಟ್ಟಿರುವ ಹಕೀಮ ಸಾಹೇಬ ಮುಂತಾದವರು ಕೌನ್ಸಿಲುಗಳ ಚುನಾವಣೆಯು ೧೯೨೪ನೆಯ ಜನವರಿಯಲ್ಲಿ ಉಂಟಾಗುವುದಿದ್ದರಿಂದ, ಈ ಕಾರ್ಯಕ್ಕಾಗಿಯೆ ೧೯೨೩ನೆಯ ಇಸವಿಯ ರಾಷ್ಟ್ರೀಯ ಸಭೆಯ ಅಧಿವೇಶನವನ್ನು, ಎಂದಿನಂತೆ ದಶಂಬರದ ಅಂತ್ಯದವಾರದಲ್ಲಿ ಜರುಗಿಸದೆ ಮೊದಲಿನ ವಾರದಲ್ಲಿ ಜರುಗಿಸಿ ಈ ವಿಷಯಕ್ಕೆ ಆಜ್ಞೆಯನ್ನು ಕೊಡಬೇಕು ಎಂದು ಹೇಳಿರುವರು. ಎಂದಮೇಲೆ ಕೌನ್ಸಿಲಿನ ವಿಷಯವು ಮುಂದಿನ ಮೂರು ಪರೀಕ್ಷೆಗಳನ್ನು ದಾಟಬೇಕಾಗಿದೆ. ಎರಡು ವರ್ಷದ ಹಿಂದಿನ ಅನುಭವವನ್ನು ಕಟ್ಟಿಕೊಂಡು ಮುಂದಿನ ಸಂಗತಿಯ ಅನುಮಾನ (ಊಹನೆ) ಮಾಡುವುದಿದ್ದರೆ ಒಂದೆ ಹೇಗೆ ಈಗಿನ ಕಾರ್ಯಕ್ರಮಕ್ಕೆ ಸಭೆಗಳಲ್ಲಿ ಬಹುದೊಡ್ಡ ಬಹುಮತವು.—ಯಾಕೆ ಅತ್ಯಂತ ಪ್ರಚಂಡ ಬಹುಮತವೆಂದು ಹೇಳಬಹುದು—ಇತ್ತೊ, ಹಾಗೆಯೆ ಕೌನ್ಸಿಲ್ ಪ್ರವೇಶದ ಠರಾವನ್ನು ಮುರಿದುಹಾಕಲು, ಅಷ್ಟಾದಷ್ಟು ದೊಡ್ಡ ಬಹುಮತವು ಇದ್ದೀತೆಂಬುದಕ್ಕೆ ಸಂಶಯವಿಲ್ಲ. ರಾಷ್ಟ್ರೀಯ ಸಭೆಗಳಲ್ಲಿ ಇಂಥ ಪ್ರಸಂಗಗಳಲ್ಲಿ ಉಂಟಾಗುವ ಬಹುಮತವು ಮುಂದಿನ ಕಾರ್ಯಕ್ಕೆ ಎಷ್ಟರಮಟ್ಟಿಗೆ ಸಾಧಕವಾಗುತ್ತದೆಂಬುದು ಇದುವರೆಗೆ ಗೊತ್ತೆ ಆಗಿದೆ. ಆದರೂ ಬಹುಮತದ ಮೋಹವು ಹೋಗುವುದಿಲ್ಲ. ಇರಲಿ. ಅಂತು ಸಿವಿಲ್ ಡಿಸ್ ಒಬೀಡಿಯನ್ಸಿನ ಕಮಿಟಿಯು ಕೂಡಿದಷ್ಟು ನಿಜವಾದ ಲೋಕಮತವನ್ನು ಆಕಲನೆಮಾಡಿ ಹಿತಪ್ರದವಾದ ಸಿಫಾರಸುಗಳನ್ನು ಮಾಡಿದೆ. ಇದು ತುಂಬಾ ಸಮಾಧಾನದ ಸಂಗತಿಯಾಗಿದೆ ಎಂಬುದಕ್ಕೆ ಅಡ್ಡಿ ಇಲ್ಲ.

೬. ಕೌನ್ಸಿಲ್ ಪ್ರವೇಶದ ವಿಷಯವನ್ನು ಈ ಸಂಚಿಕೆಯ ಮಟ್ಟಿಗೆ ಮುಕ್ತಾಯಗೊಳಿಸಬೇಕೆಂದಿದ್ದೆವು. ಅಷ್ಟರೊಳಗೆ ದೇಶಬಂಧು ದಾಸರ ಇದೆ ವಿಷಯದ ಅಭಿಪ್ರಾಯವು ಪ್ರಕಟವಾಗಿದೆ. ಅದನ್ನು ವಾಚಕರು ಕೊಂಚಮಟ್ಟಿಗೆ ಆಸ್ವಾದಿಸುವುದು ಯುಕ್ತ ತೋರುತ್ತದೆ. ಚಿತ್ತರಂಜನದಾಸರು ಮಹಾದೇಶಭಕ್ತರು. ಅಸಹಕಾರದ ಚಳವಳವು ಬರುವ ಮೊದಲೆ ಅವರು ದೇಶಸೇವಕರಾಗಿದ್ದರು. ಈ ಹೊಸ ಚಳವಳವು ಬಂದ ಬಳಿಕ ಅದರ ಹಿತಾಹಿತಗಳನ್ನು ರಾಷ್ಟ್ರವು ಕೆಲಸಮಯ ಪರೀಕ್ಷಿಸುವಂತೆ, ಅವರು ಸಹ ಇತರ ರಾಷ್ಟ್ರೀಯರಂತೆ ಈ ಹೊಸ ಚಳವಳವನ್ನು ಸ್ವಾಗತೀಕರಿಸಿದರು. ಮಾತ್ರವಲ್ಲ, ಈ ಚಳವಳಕ್ಕೆ ಬಂಗಾಲದಲ್ಲಿ ಸಜೀವತೆಯನ್ನು ತರಲು ಅವರು ಸ್ವಯಂ ಜೈಲಿಗೆ ಹೋದರು. ಈ ರೀತಿಯಿಂದ ಮಾಡಬೇಕಾದ ಎಲ್ಲಾ ಆತ್ಮಯಜ್ಞವನ್ನು ಅವರು ಮಾಡಿದ್ದಾರೆ. ಕಳೆದ ವರ್ಷವೆ ಅವರು ರಾಷ್ಟ್ರೀಯ ಸಭೆಗೆ ನಿಯುಕ್ತ ಅಧ್ಯಕ್ಷರಾಗಿದ್ದರು. ಈ ವರ್ಷವು ಸಹ ಹಿಂದೀ ರಾಷ್ಟ್ರವು ಅವರನ್ನೆ ಅಧ್ಯಕ್ಷಸ್ಥಾನದಲ್ಲಿಟ್ಟಿದೆ. ಈ ಮೇರೆಗೆ ಸರ್ವ ದೃಷ್ಟಿಗಳಿಂದ ಮಾನ್ಯರಾದ ದಾಸರು ಕಾರ್ಯಕ್ರಮದ ಬದಲಾವಣೆಯ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ಪಡುತ್ತಾರೆ ಎಂದು ಅವರ ಕಡೆಗೆ ಎಲ್ಲರ ದೃಷ್ಟಿಯು ವಿದ್ಧವಾಗಿತ್ತು. ಅವರು ಬದಲಾವಣೆ ಬೇಕು ಬೇಡವೆಂದು ಹೇಳುವ ಎರಡೂ ಕಡೆಯ ಮುಖಂಡರನ್ನು ಅಮರಾವತಿಯಲ್ಲಿ ಕರೆಯಿಸಿ ಅವರೊಡನೆ ವಿಚಾರವಿನಿಯಮವನ್ನು ಮಾಡಿದರು. ದೇಶಭಕ್ತ ಕೇಳಕರ, ಡೊ. ಮುಂಜೆ ಮುಂತಾದ ಸನ್ಮಾನ್ಯ ಮುಖಂಡರು ಮಹಾರಾಷ್ಟ್ರದಿಂದ ಹೋಗಿದ್ದರು. ಕೊನೆಗೆ ದಾಸರವರು ಅಸಹಕಾರತತ್ವವನ್ನು ಎಳ್ಳಷ್ಟು ಸಹ ಬಿಡದೆ ಬೇರೆ ಪರಿವರ್ತನಗಳನ್ನು ಅದರಲ್ಲಿ ಮಾಡಬೇಕೆಂದು ಅಭಿಪ್ರಾಯಪಟ್ಟರು. ಕೌನ್ಸಿಲ್ ಪ್ರವೇಶದ ಮಟ್ಟಿಗೆ ಅವರಿಗೆ ಯಾವ ಆಕ್ಷೇಪವೂ ಇಲ್ಲ. ಕೌನ್ಸಿಲಿಗೆ ಹೋಗುವುದು ಸಹಕಾರಕ್ಕಲ್ಲ, ಅಸಹಕಾರಕ್ಕೆ ಆಗಿದೆ ಎಂದು ಸ್ಪಷ್ಟ ಅಭಿಪ್ರಾಯವನ್ನು ಅವರು ಕೊಟ್ಟಿದ್ದಾರೆಂದು ಪ್ರಕಟವಾಗಿದೆ. ಸಾರಾಂಶ, ಮಹಾತ್ಮಾಜಿಯವರ ಕಡು ಅನುಯಾಯಿಗಳಾದ ಹಕೀಮ ಅಜಮಲಖಾನ ಸಾಹೇಬ, ಪಂಡಿತ ಮೋತಿಲಾಲ ನೇಹರು, ಶ್ರಿಯುತ ಚಿತ್ತರಂಜನದಾಸ ಮತ್ತು ದೇಶವತ್ಸಲರಾದ ವಿ. ಜೆ. ಪಟೇಲ ಈ ನಾಲ್ವರು ಪ್ರಕೃತದ ಚಳವಳದಲ್ಲಿ ಯೋಗ್ಯ ಸುಧಾರಣೆಗಳನ್ನು ಮಾಡಲು ಮಾತ್ರವಲ್ಲ, ಕೌನ್ಸಿಲುಗಳನ್ನು ಅಸಹಕಾರಿಗಳು ಆಕ್ರಮಿಸಲು ಅಭಿಪ್ರಾಯಪಟ್ಟಿದ್ದಾರೆ. ಇದು ಅಭಿನಂದನೀಯವಾಗಿದೆ.

೭. ತುರ್ಕಿಗೂ ಗ್ರೀಸಿಗೂ ಯುದ್ಧವು ನಡೆದು, ಗ್ರೀಸು ಸೋತುಹೋಗಿ ತುರ್ಕಿಯೊಡನೆ ಹೇಗೆ ಒಪ್ಪಂದ ಮಾಡಿಕೊಳ್ಳಬೇಕಾಯಿತು, ಎಂದೀ ಸಂಗತಿ ಎಲ್ಲರಿಗೆ ವಿದಿತವಾದ್ದೆ ಸರಿ. ಈ ಚಿಕ್ಕ ಯುದ್ಧದಿಂದ ಹಲವು ಮಹತ್ವದ ಪರಿವರ್ತನೆಗಳು ಆಗುತ್ತಿವೆ. ತುರ್ಕಿಯಲ್ಲಿ ಲೋಕಸತ್ತಾತ್ಮಕವಾದ ಸರಕಾರವು ಸ್ಥಾಪಿತವಾಗುವ ದಾರಿಗೆ ಬಂದಿದೆ. ಕೊನ್ಸಟಂಟಿನೋಪಲಿನಲ್ಲಿ "ಅಂಗೋರಾ ನೆಶನಲ್ ಎಸೆಂಬ್ಲಿ"ಯು ಸ್ಥಾಪಿತವಾಗಿ ಅದು ಇದೇ ನವಂಬರಿನಲ್ಲಿ ಒಂದು ಕಾನೂನನ್ನು ಪಾಸುಮಾಡಲಿಕ್ಕಿದೆ. ಆ ಕಾನೂನಿನ ಮೇರೆಗೆ ಆ ದೇಶದ ರಾಜ್ಯಕಾರಭಾರವು ಈ ಹೊಸ ಮಂಡಲದ ಕೈಯಲ್ಲೆ ಉಳಿದೀತಲ್ಲದೆ ಬೇರೆ ಯಾವ ನಮೂನೆಯ ರಾಜ್ಯಕ್ರಮವು ಅಸ್ತಿತ್ವದಲ್ಲಿ ಬರಲಿಕ್ಕಿಲ್ಲ. ಮತ್ತು ಇನ್ನು ಮುಂದೆ ಕೊನ್ಸ್‌ಟಂಟಿನೋಪಲಿನಲ್ಲಿದ್ದಂತೆ ವೈಯಕ್ತಿಕ ಅಧಿಕಾರವು ಇರಲಿಕ್ಕಿಲ್ಲ. ಖಿಲಾಫತ್ತಿನ ಅಧಿಕಾರವು "ಒತ್ತೋಮನ" ಸಭೆಯ ಕೈಯಲ್ಲಿರುವುದು, ಆದರೆ ಅಂಗೋರಾ ನೇಶನಲ್ ಎಸೆಂಬ್ಲಿಯು ಸದಾಚಾರಿಯೂ, ನೀತಿಶುದ್ಧನೂ, ಗುಣಾಢ್ಯನೂ ಆದವನನ್ನು ಅಧಿಕಾರಸ್ಥಾನಕ್ಕೆ ಆರಿಸುವುದು. ಖಿಲಾಫತ್ತಿನ ವ್ಯವಸ್ಥೆಯನ್ನು ಮುಖ್ಯವಾಗಿ ತುರ್ಕಿ ಸರಕಾರವು ಮಾಡೀತು. ಅಂಗೋರಾ ಎಸೆಂಬ್ಲಿಯು ಈ ರೀತಿಯಿಂದ ತನ್ನ ಅಭಿಪ್ರಾಯಗಳನ್ನೂ, ಭಾವಿ ನಿಯಮಗಳನ್ನೂ ಪ್ರಕಟಿಸಿದೆ. ಖಿಲಾಫತ್ತಿನ ವಿಷಯದಲ್ಲಿ ಇದು ಯಾವ ಸರ್ವ ಪ್ರಭುತ್ವವನ್ನು ತೆಕ್ಕೊಂಡಿದೆಯೊ ಅಲ್ಲ ಮಹಮ್ಮದೀಯ ಜಗತ್ತಿಗೆ ಎಷ್ಟರಮಟ್ಟಿಗೆ ಮಾನ್ಯವಾದೀತೆಂದು ಈಗಲೆ ಹೇಳಲು ಸಾಧ್ಯವಿಲ್ಲ. ಆದರೂ ಖಿಲಾಫತ್ತಿನ ವಿಷಯವಾಗಿ ಒತ್ತಮನ್ ಸಭೆಯು ಏಕಮುಖಿಯಾದ ಅಧಿಕಾರವನ್ನು ಇಟ್ಟುಕೊಳ್ಳಲು ಯತ್ನಿಸಿದ್ದು ಅನೇಕರಿಗೆ ಹಿತವಲ್ಲವೆಂದು ಈಗಿನವರೆಗೆ ಪ್ರಕಟವಾದ ಮಹಮ್ಮದೀಯ ಲೋಕಮತದ ಮೇಲಿಂದ ಗೊತ್ತಾಗುತ್ತದೆ.

೮. ಬರುವ ದಶಂಬರ ತಿಂಗಳಲ್ಲಿ ಗಯಾದಲ್ಲಿ, ರಾಷ್ಟ್ರೀಯ ಸಭೆಯ ವಾರದಲ್ಲಿ ಸಾಮಾಜಿಕ, ಶೈಕ್ಷಣಿಕ, ವಿಷಯಗಳ ಪರಿಷತ್ತುಗಳು ಸೇರಲಿರುವಂತೆ ಅಖಿಲ ಭಾರತ ಗೋಸೇವಾ ಪರಿಷತ್ತು ಕೂಡ ಕೂಡಲಿಕ್ಕಿದೆ. ಹಿಂದೂಸ್ಥಾನದಲ್ಲಿ ಹಲವು ವಿಧದಿಂದ ಮತ್ತು ನೆವಗಳಿಂದ ಗೋಹತ್ಯೆಯು ಆಗುತ್ತಲೆ ಇದೆ. ಹಿಂದು ಧರ್ಮದಲ್ಲಿ ಗೋವು ದೇವತೆಯೆಂದು ಹೇಳಲ್ಪಟ್ಟಿದೆ. ಮಹಮ್ಮದೀಯ ಧರ್ಮದಲ್ಲಿ ಗೋವುಗಳನ್ನು ಕಡಿಯಲೆ ಬೇಕೆಂದು ಕೆಲವು ಸಮಯದ ಹಿಂದೆ ಧರ್ಮಾಜ್ಞೆಗಳನ್ನು ಸರಿಯಾಗಿ ತಿಳಕೊಳ್ಳದ ಮಹಮ್ಮದೀಯರು ಹೇಳುತ್ತಿದ್ದರು; ಮತ್ತು ಅಂತೆಯೆ ಆಚರಿಸುತ್ತಲೂ ಇದ್ದರು. ಆದರೆ ಕಾಬೂಲಿನ ಅಮೀರಸಾಹೇಬರು ಈ ಪ್ರಶ್ನೆಯ ಮೇಲೆ ಸರಿಯಾದ ಪ್ರಕಾಶವನ್ನು ಹಾಕಿ ದನಗಳನ್ನು ಕಡಿಯುವುದು ಅನವಶ್ಯಕವೆಂದು ತಿಳಿಸಿದಂದಿನಿಂದ ಇದರ ಗಾಢ ಅಜ್ಞಾನವು ನಷ್ಟವಾಗಿದೆ. ಆದರೆ ಮಹಮ್ಮದೀಯ ಬಂಧುಗಳು ಸಹೃದಯತೆಯಿಂದ ಈ ವಿಷಯವನ್ನು ಮನಸ್ಸಿಗೆ ತಂದು ಗೋವಧೆಯ ದುಷ್ಕೃತ್ಯವನ್ನು ನಿಲ್ಲಿಸಬೇಕು. ಇರಲಿ. ಸರಕಾರವು ಕೇವಲ ವಿಧರ್ಮೀಯವಾದ್ದರಿಂದ ಹಿಂದುಗಳೆ ಗೋಮಾತೆಯ ರಕ್ಷಣೆಯನ್ನು ಮಾಡಬೇಕಾಗಿದೆ. ಗಯಾದಲ್ಲಿ ಸೇರಲಿಕ್ಕಿರುವ ಪರಿಷತ್ತಿನಲ್ಲಿ ಇದರ ಸರಿಯಾದ ಊಹಾಪೋಹನವುಂಟಾಗಿ ಗೋಮಾತೆಯ ಸಂರಕ್ಷಣೆಯಾದೀತೆಂದು ನಂಬಿದ್ದೇವೆ.

೯. ಹಿಂದುಸ್ಥಾನ ದೇಶದ ಕಲ್ಯಾಣಕ್ಕಾಗಿಯೆ ಸರಕಾರವು ಆಗಾಗ್ಗೆ ಕಮಿಶನುಗಳನ್ನು ನೇಮಿಸುತ್ತಿರುತ್ತದೆ, ಇದೆಲ್ಲರಿಗೆ ತಿಳಿದ ವಿಷಯವೆ ಸರಿ. ಸರಕಾರವು ಕಮಿಶನನ್ನು ನೇಮಿಸಿದ ಬಳಿಕ ಆ ಕಮಿಷನು ಅಲ್ಲಲ್ಲಿ ಸಂಚರಿಸಿ, ಸಾಕ್ಷಿ ಪುರಾವೆಗಳನ್ನು ಒಟ್ಟುಗೂಡಿಸುತ್ತದೆ. ಪುರಾವೆಗಳನ್ನು ಸಂಗ್ರಹಿಸಿದ ಬಳಿಕ ಈ ಕಮಿಶನು ಪುರಾವೆಗಳ ಅನುಭವದ ಮೇಲಿಂದ ತನ್ನ ಸೂಚನೆಗಳನ್ನು ಮುಂದಿಡುತ್ತದೆ. ಸರಕಾರವು ಕಮಿಶನಿನ ಸೂಚನೆಗಳನ್ನು—ಬೇಕಾದವುಗಳನ್ನು ಮಾತ್ರ ಸ್ವೀಕರಿಸುತ್ತದೆ. ಈ ಕಮಿಶನಿನ ಕಾಮಧೇನುವು ಹಿಂದುಸ್ಥಾನದ ಲಾಭಕ್ಕೆ ಮತ್ತು ಪ್ರಯೋಜನಕ್ಕೆ ಎಷ್ಟರ ಮಟ್ಟಿಗೆ ಸಾಧಕವಾಗುತ್ತದೆ ಎಂಬೀ ಪ್ರಶ್ನೆಯು ಪ್ರತ್ಯೇಕವಾದ್ದು. ಆದರೆ ಈ ಕಮಿಶನಿನಿಂದ ಕಮಿಶನರ್ಸರಿಗೆ ಮಾತ್ರ ಉತ್ತಮ ಸಂಧಿಯು ದೊರಕುತ್ತದೆ ಎಂಬುದು ನಿಜವು. ಇದಕ್ಕೆ ಈಗ ತಾನೆ ಪ್ರಕಟವಾಗಿರುವ ಫಿಸ್ಕಲ್ ಕಮಿಶನಿನ ರಿಪೋರ್ಟು ಉತ್ತಮವಾದ ದೃಷ್ಟಾಂತವೆನ್ನಬಹುದು. ಈ ಕಮಿಶನಿನ ಅಧಿವೇಶನದ ದೆಸೆಯಿಂದ ಖರ್ಚಿನ ಯಾವ ಭಾರವು ಹಿಂದುಸ್ಥಾನದ ತಲೆಯ ಮೇಲೆ ಬಿದ್ದಿರುತ್ತದೊ ಅದನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲದ ಮಾತಾಗಿದೆ! ಫಿಸ್ಕಲ್ ಕಮಿಶನಿನ ಸಭಾಸದರ ಸಂಬಳದ ಮತ್ತು ಆ ಆಫೀಸಿನ ಖರ್ಚಿನ ರಕಮು ೨,೩೩,೫೦೦ ರುಪಾಯಿಯಾಗಿದೆ. ಅವರ ಪ್ರಯಾಣದ ಖರ್ಚು ೮೧,೪೭೦ ರುಪಾಯಿಯಾಗಿದೆ. ಮುದ್ರಣದ ಕಾರ್ಯದಲ್ಲಿ ೧೩,೨೦೦ ರುಪಾಯಿಗಳು ವೆಚ್ಚವಾಗಿವೆ. ಬೇರೆ ಚಿಲ್ಲರೆ ೯,೩೩೦ ರುಪಾಯಿಗಳು ತಾಗಿವೆ. ಈ ಮೇರೆಗೆ ಈ ಒಂದು ಫಿಸ್ಕಲ್ ಕಮಿಶನಿನ ಒಟ್ಟು ಖರ್ಚು ೩,೩೭,೫೦೦ ರುಪಾಯಿಗೆ ಬಂದು ನಿಂತಿದೆ. ಈ ಸಂಗತಿಯನ್ನು ನೋಡುವಾಗ ಮತ್ತು ಇಂಥ ಕಮಿಷನುಗಳಿಂದ ನಿಷ್ಪನ್ನವಾಗುವ ಸಂಗತಿಗಳನ್ನು ಮನಸ್ಸಿಗೆ ತರುವಾಗ ಹಿಂದುಸ್ಥಾನದಂಥ ಬಡ ದೇಶಕ್ಕೆ ಈ ಕಮಿಶನುಗಳ ಪ್ರಾಯಶ್ಚಿತ್ತವು ಯಾಕೆ ಎಂದು ಯಾರಿಗೂ ಸವಾಲು ಬಾರದೆ ಇರದು. ಆದರೆ ಇಂಥ ಸವಾಲುಗಳ ಕಡೆಗೆ ಕಿವಿಗೊಡುವವರು ಯಾರು?

೧೦. ಕಲಕತ್ತೆಯ "ಸ್ಟೇಟ್ಸಮನ" ಪತ್ರದಲ್ಲಿ ಒಂದು ಚಮತ್ಕಾರಿಕವಾದ ಸಂಗತಿಯು ಉಪಲಬ್ಧವಾಗುತ್ತಿದೆ. ಸೈನ್ಯದಲ್ಲಿ ಅಸಹಕಾರಿತೆಯು ಹಬ್ಬದಂತೆ ಮತ್ತು ಒಂದು ವೇಳೆ ಕೆಲವಂಶದಲ್ಲಿ ಹಬ್ಬಿದ್ದಾದರೆ, ಆ ದೋಷವನ್ನು ಪರಿಮಾರ್ಜಿಸುವಂತೆ ಸೈನಿಕರಿಗೆ ಉಪನ್ಯಾಸಗಳನ್ನು ಕೊಡಲು ಕೆಲವು ಗೃಹಸ್ಥರ ಮಂಡಲವು ಸ್ಥಾಪಿತವಾಗಿದೆ. ಇವರು ಮೇಲಧಿಕಾರಿಗಳ ಸಮ್ಮತಿಯಿಂದ ಸೈನಿಕರ ಮುಂದೆ ಉಪನ್ಯಾಸಗಳನ್ನು ಮಾಡುವರು. ರಾಜನಿಷ್ಠೆಯ ಸೂಕ್ತಗಳನ್ನು ಪಠಿಸುವರು. ಇಂಥ ಕಾರ್ಯದಲ್ಲಿ ಯಾರಿಗೆ ಅಭಿರುಚಿ ಇದೆಯೊ ಅವರು ತಮ್ಮ ಹೆಸರುಗಳನ್ನು ಕೊಡಬೇಕೆಂದು ಸಹ ಸದರಿ ಪ್ರಕಟಣೆಯಲ್ಲಿ ಸೂಚಿಸೋಣಾಗಿದೆ. ಈ ಉಪನ್ಯಾಸಕರ್ತರಿಗೆ ಅವರ ಉಪನ್ಯಾಸಗಳ ಬಗ್ಗೆ ಸಂಬಳವಿಲ್ಲವಂತೆ. ತಾತ್ಪರ್ಯ ಕೇವಲ ಕರ್ತವ್ಯವೆಂಬ ಭಾವನೆಯಿಂದ ಈ ಸದ್‌ಗೃಹಸ್ಥರು ಸೈನಿಕರ ರಾಜನಿಷ್ಠೆಯನ್ನು ಕಾಪಾಡಲು ಹೊರಟಿದ್ದಾರೆ. ಈ ವಿಧದಿಂದ ರಾಜನಿಷ್ಠೆಯನ್ನು ಸಂರಕ್ಷಿಸುವುದಕ್ಕಿಂತ ದೇಶಕ್ಕೆ ಸ್ವರಾಜ್ಯವನ್ನು ಕೊಟ್ಟು ಜನತೆಯ ಪ್ರೀತಿಯನ್ನು ಎಳೆಯುವುದು ಲೇಸಲ್ಲವೆ?

ಮಂಗಳೂರು.

ಇದೇ ತಿಂಗಳ ತಾ. ೧೧ನೆಯ ಆದಿತ್ಯವಾರ ೫ಗಂಟೆಯ ಸಮಯಕ್ಕೆ ಶ್ರೀಯುತ ಧರ್ಮದೇವ ಸಿದ್ಧಾಂತಾಲಂಕಾರರು ಮೈದಾನಿನಲ್ಲಿ "ಮೂರ್ತಿಪೂಜೆ" ಎಂಬುದನ್ನು ಕುರಿತು ಭಾಷಣವನ್ನು ಮಾಡುವರು. ಸರ್ವರೂ ಬರಬೇಕಾಗಿ ವಿನಂತಿ ಇದೆ.

ಈ ತಿಂಗಳಲ್ಲಿ ಡಿಸ್ಟ್ರಿಕ್ಟಬೋರ್ಡಿನ ಮೀಟಿಂಗು ಇಲ್ಲವೆಂದು ಬೋರ್ಡಿನ ಪ್ರೆಸಿಡೆಂಟರು ಪ್ರಕಟಿಸಿರುವರು.

ಬಂಟರ ಯಾನೆ ನಾಡವರ ಸಂಘದ ಮಹಾ ಸಭೆಯನ್ನು ಬರುವ ದಶಂಬರ ತಾ. ೩೧ಕ್ಕೆ ಕಾಸರಗೋಡಿನಲ್ಲಿ ಜರಗಿಸಬೇಕಾಗಿ ನಿಶ್ಚಯವಾಗಿದೆ. ಈ ಬಗ್ಗೆ ಒಂದು ಸ್ವಾಗತ ಕಮ್ಮಿಟಿಯು ನೇಮಕವಾಗಿದೆ. ಈ ಕಮ್ಮಿಟಿಗೆ ಮ. ರಾ. ಕೊಡಿಂಗಾರು ಶಂಕರ ಆಳ್ವರು ಅಧ್ಯಕ್ಷರಾಗಿರುವರು.

'ಆರ್ಮಿಸ್ಟಿಸ್ ಎನವರಸರಿ' ಯುದ್ಧ ನಿವರ್ತನೆಯ ವರ್ಧಂತಿಯನ್ನು ಆಚರಿಸುವುದಕ್ಕಾಗಿ ನಾಳೆ ದಿವಾ ೧೧ ಗಂಟೆಗೆ ಎರಡು ಮಿನುಟುಗಳ ವರೆಗೆ ಬ್ರಿಟಿಷ ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿ ಎಲ್ಲಾ ಕೆಲಸಗಳನ್ನು ನಿಲ್ಲಿಸಿ ಸಂಪೂರ್ಣ ನಿಶ್ಶಬ್ದವಾಗಿರಬೇಕು ಎಂದು ತಮ್ಮ ಅಪೇಕ್ಷೆಯಾಗಿರುವುದೆಂದು ಚಕ್ರವರ್ತಿಯವರು ಜಾಹೀರು ಮಾಡಿರುತ್ತಾರೆ.

ಕವಿವರ್ಯ ಡಾಕ್ಟರ ರವೀಂದ್ರನಾಥ ಠಾಕೂರರ ವಿಶ್ವಭಾರತಿ ಫಂಡಿಗೆ ನಮ್ಮ ಜಿಲ್ಲೆಯಲ್ಲಿ ಈ ವರೆಗೆ ಜಮೆಯಾದ ಮೊಬಲಗು ರೂ. ೧೫೮೦. ಟಿಕೇಟು ಮಾರಾಟದಲ್ಲಿ ಖರ್ಚು ಕಳೆದು ರೂ. ೮೦೫ ಮ. ರಾ. ಮಂಜೇಶ್ವರ ನರಸಯ್ಯ ಶ್ಯಾನುಭಾಗರು ರೂ. ೧೦೦, ರಾವ್ ಬಹದ್ದೂರ್ ಯನ್. ಸುಬ್ಬರಾಯರು ರೂ. ೧೦೦, ಮ. ರಾ. ಕೆ. ಸದಾಶಿವರಾವ್ ರೂ. ೧೦೦, ಮ. ರಾ. ಯಂ. ನಾರೋಜಿಯವರು ರೂ. ೧೦೦, ಮ. ರಾ. ಅಮ್ಮೆಂಬಳ ಶ್ರೀನಿವಾಸಪೈ ರೂ. ೫೦, ಮ. ರಾ. ಯಂ. ಗೋವಿಂದ ಪೈ. ರೂ. ೨೫, ಮ. ರಾ. ಯಂ. ವಿ. [illegible] ರೂ. ೨೫, ಮ. ರಾ. ಬಿ. ಬಾಲಕೃಷ್ಣಶೆಟ್ಟಿ ರೂ. ೫೦, ಮ. ರಾ. ಎನ್. ವೆಂಕಟರಾವ್ ರೂ. ೧೦೦. ಈ ಮೊಬಲಗನ್ನು ಸಿ. ಎಫ್. ಎಂಡ್ರ್ಯೂಸರಿಗೆ ಕಳೆದ ಬುಧವಾರ ಇನ್ಶ್ಯೂರ್ ಮೂಲಕ ಕಳುಹಿಸಿದೆಯಂತೆ.

ಇಲ್ಲಿಯ ಕೆನರಾ ಹ್ಯಾಸ್ಪಿಟಲಿನ ಸಹಾಯಾರ್ಥವಾಗಿ ಒಂದು ಸೋಡ್ತಿಯು ಏರ್ಪಡಿಸಲಾಗುವುದಂತೆ. ಮೊದಲನೇ ಇನಾಮು ೨೫,೦೦೦, ರೂ. ೧ರ ಒಟ್ಟು ೨ಲಕ್ಷ ಟಿಕೇಟುಗಳು ಮಾರಲಾಗುವುದು.

ಮಂಗಳೂರ ಮೈಲಿನ ಸಂಪಾದಕ, ಕಾರ್ಯಕಾರಿ ಮೆನೇಜರ, ಮತ್ತು ಪ್ರಿಂಟರ ಈ ಮೂವರ ಮೇಲೆ ಮಿಲಾಗ್ರಿಸ್ ಇಗರ್ಜಿಯ ಗುರುಗಳಾದ ರೆವರೆಂಡ್ ಫಾದರ ಪಿರೇರರು ಮಾನನಷ್ಟದ ಬಗ್ಗೆ ದಾಖಲು ಮಾಡಿದ ವ್ಯಾಜ್ಯದ ವಿಚಾರಣೆಯು ನಡಿಯುತ್ತಿದೆ.

ದಕ್ಷಿಣ ಕನ್ನಡ ಜಿಲ್ಲಾ ದ್ರಾವಿಡ ಬ್ರಾಹ್ಮಣರ ಪರಿಷತ್ತು ಬರುವ ದಶಂಬರ ತಾ. ೨೭-೨೮ರಲ್ಲಿ ಕಾರ್ಕಳದಲ್ಲಿ ಮದರಾಸ ಹೈಕೋರ್ಟ ವಕೀಲ ಮ|| ರಾ|| ಬಂಟವಾಳ ಸೀತಾರಾಮರಾವ್ ಅವರ್ಗಳ್ ಬಿ. ಎ. ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಕಳೆದ ಡಿಸ್ಟ್ರಿಕ್ಟಬೋರ್ಡು ಮೀಟಿಂಗಿನಲ್ಲಿ ಬೋರ್ಡಿನ ಮೆಂಬರರಾದ ರಾಯಸಾಹೇಬ ಇ. ಸಿ. ಯಂ. ಮೆಸ್ಕರೇನ್ಹಾಸ್, ಮ|| ರಾ|| ಕೆ. ದುಗ್ಗಣ್ಣ ಬೊಂಟ್ರಾ, ಮ|| ರಾ|| ಯಂ. ವೈಕುಂಠ ಭಕ್ತ, ಮ|| ರಾ|| ಕೆ. ನರಸಿಂಹ ನಾಯ್ಕ ಇವರೆಲ್ಲಾ ರಾಜನಿಷ್ಠೆಯ ಪ್ರತಿಜ್ಞೆಯನ್ನು ತೆಗೆದುಕೊಂಡರು. ಪಾಣೆಮಂಗಳೂರು ಸಂಕಕ್ಕೆ ಬಣ್ಣ ಹಚ್ಚಲಿಕ್ಕೆ ರೂ. ೭೦೦೭, ಬಾರಕೂರ ಕಡವಿನ ಜಂಗಲ್ ರಿಪೇರಿಗೆ ರೂ. ೧೦೦, ಕುಂದಾಪುರ ಶಾಲೆಯ ಕಟ್ಟೋಣ ರಿಪೇರಿಗೆ ರೂ. ೭೫, ಕೂಳೂರು ಕಡವಿನ ಶೆಡ್ಡಿನ ರಿಪೇರಿಗೆ ರೂ. ೩೦, ಚಾಲತಿ ವರುಷದ ಬಗ್ಗೆ ಪುಸ್ತಕಗಳು, ರಸಾಯನಶಾಸ್ತ್ರ ಕಲಿಸುವ ಸಾಮಗ್ರಿಗಳು ಮೊದಲಾದ ಸಾಹಿತ್ಯಗಳನ್ನು ತರಿಸಲು ಪುತ್ತೂರು ಬೋರ್ಡಶಾಲೆಗೆ ರೂ. ೬೫೦, ಕಾಸರಗೋಡು ಬೋರ್ಡಶಾಲೆಗೆ ರೂ. ೭೫೦-೫-೭, ಬೈಂದೂರು ಬೋರ್ಡ ಮಿಡ್ಲಸ್ಕೂಲಿಗೆ ರೂ. ೨೭೭-೭-೦, ಬೋರ್ಡ ಮಿಡ್ಲ್‌ಸ್ಕೂಲ್ ಮೂಡಬಿದ್ರಿ ರೂ. ೩೬೨, ಕಾರ್ಕಳ ಮೂಡಬಿದ್ರೆ ಉಡುಪಿ ಕಾಸರಗೋಡ ಶಾಲೆಗಳಿಗೆ ಸಾಮಾಗ್ರಿ ಪುಸ್ತಕ ಇತ್ಯಾದಿಗಳ ಬಗ್ಗೆ ರೂ. ೪೪. ರೂ. ೨೫, ರೂ. ೩-೧೩-೦ ಮತ್ತು ರೂ. ೪೦-೮-೦, ದೇರಬೈಲು ಸೆಟ್ಲಮೆಂಟಿನ ಸಮೀಪವಿರುವ ಬಾವಿಯನ್ನು ಆಳಮಾಡಲು ರೂ. ೧೫೦ ಸೆಂಕ್ಶನ್ ಮಾಡಲಾಯಿತು. ಇಲ್ಲಿಯ ಟ್ರೈನಿಂಗ ಶಾಲೆಯಲ್ಲಿ ತರಬೇತನ್ನು ಹೊಂದುತ್ತಿರುವ ಬೋರ್ಡಿನ ಕೆಲವು ಉಪಾಧ್ಯಾಯ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ. ೮ರಂತೆ ಸ್ಟೈಪೆಂಡ ಹೆಚ್ಚಿಸಿ ಕೊಡಲು ಬೋರ್ಡಿನ ಮಂಜೂರಾತಿ ಕೊಡೋಣಾಯಿತು. ಗುರುಪುರ ಸಂಕದ ಕೆಲಸದ ಮೇಲ್ತನಿಖೆಯನ್ನು ನೋಡುವುದಕ್ಕಾಗಿ ರಾ|| ಸಿ. ವಾಸುದೇವ ಕಾಮತರನ್ನು ತಿಂಗಳಿಗೆ ರೂ. ೪೫ರಂತೆ ೧೨ ತಿಂಗಳು ಹಂಗಾಮಿ ಸಬ್ ಓವರ್ಸಿಯರರಾಗಿ ನೇಮಿಸಲು ಸಮ್ಮತಿದೊರಕಿತು.

ಉಡ್ಪಿ ಕೊಂಗ್ರೆಸ ಕಮ್ಮಿಟಿಯ ಮಹಾಸಭೆ.

ತಾ. ೪—೧೧—'೨೩ನೇ ಆದಿತ್ಯವಾರ ಸಾಯಂಕಾಲ ೫ಘಂಟೆಗೆ ಉಡ್ಪಿ ರಾಷ್ಟ್ರೀಯ ವಿದ್ಯಾಮಂದಿರದಲ್ಲಿ ಸೇರಿದ ಉಡ್ಪಿ ಟೌನ್ ಕೊಂಗ್ರೆಸ್ ಕಮಿಟಿಯ ಮಹಾಸಭೆಯಲ್ಲಿ ಈ ಕೆಳಗಿನ ಠರಾವುಗಳು ಪಾಸಾದವು.

ಶ್ರೀಯುತ ನಯಂಪಳ್ಳಿ ಆನಂದರಾಯರು ಈ ಕೆಳಗಿನ ಠರಾವನ್ನು ಓದಿ ಅದರ ವಿಷಯ ಮಾತನಾಡಿದ ಮೇಲೆ, ಶ್ರೀಯುತ ಆರ್. ಎಸ್. ಶೆಣೈಯವರು ಸದರಿ ಠರಾವನ್ನು ಅನುಮೋದಿಸಿದರು. ಕೊನೆಗೆ ಎಲ್ಲರೂ ನಿಂತು ಈ ಠರಾವನ್ನು ಮಂಜೂರು ಮಾಡಿದರು.

(೧) ಉಡ್ಪಿ ಟೌನ್ ಕೊಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯ ಸದಸ್ಯರೂ, ಖಜಾನಜಿಯವರೂ ಆಗಿದ್ದು ನಮ್ಮ ನಡುವೆ ಅಪೂರ್ವ ಸ್ವಾರ್ಥತ್ಯಾಗದಿಂದಲೂ ಅತ್ಯಂತ ಉತ್ಸಾಹದಿಂದಲೂ ರಾಷ್ಟ್ರಕಾರ್ಯವನ್ನು ಮಾಡುತ್ತಿದ್ದ ಶ್ರೀಯುತ ತೋನ್ಸೆ, ಗೋವಿಂದ ಪೈಗಳು ಅಕಾಲದಲ್ಲಿ ಸ್ವರ್ಗಸ್ಥರಾದುದರಿಂದ ಅವರ ಕುಟುಂಬಕ್ಕುಂಟಾದ ದುಃಖದಲ್ಲಿ ನಾವು ಸಹಭಾಗಿಗಳಾಗುತ್ತೇವೆ. ಅವರ ಆತ್ಮಕ್ಕೆ ದೇವರು ಶಾಂತಿಯನ್ನು ಉಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

(೨) ಶ್ರೀಯುತ ತೋನ್ಸೆ ಗೋವಿಂದ ಪೈಗಳವರ ದೊಡ್ಡ ಭಾವಚಿತ್ರವನ್ನು ಕಮಿಟಿಯವರು ಉಡ್ಪಿ ರಾಷ್ಟ್ರೀಯ ವಿದ್ಯಾಮಂದಿರಕ್ಕೆ ದಾನವಾಗಿ ಕೊಡಬೇಕೆಂದೂ, ಮತ್ತು ಈ ಠರಾವುಗಳ ಪ್ರತಿಗಳನ್ನು ಅವರ ಕುಟುಂಬದವರಿಗೆ ಕಳುಹಿಸಬೇಕೆಂದೂ ನಿರ್ಣಯಿಸಲಾಯಿತು.

ಈ ಕಮಿಟಿಯ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಮ|| ರಾ|| [illegible] ಕೆ. ಪದ್ಮನಾಭ ಪೈಗಳವರನ್ನು ಅಧ್ಯಕ್ಷರನ್ನಾಗಿಯೂ, ನ. ಆನಂದರಾಯರನ್ನು ಉಪಾಧ್ಯಕ್ಷರನ್ನಾಗಿಯೂ, ಕುಂಬಳೆ ರಾಘುವೇಂದ್ರಾಯರನ್ನು ಕಾರ್ಯದರ್ಶಿಯನ್ನಾಗಿಯೂ, ಕೆ. ಪಾಂಡುರಂಗ ಪೈಗಳನ್ನು ಖಜಾಂಚಿಗಳನ್ನಾಗಿಯೂ, ಆರ್. ಎಸ್. ಶೆಣೈ ಮತ್ತು ಪಿ. [illegible] ಇವರನ್ನು ಇತರ ಸದಸ್ಯರನ್ನಾಗಿಯೂ ಸರ್ವಸಮ್ಮತಿಯಿಂದ ಚುನಾಯಿಸಲಾಯಿತು.

ಈ ವಿಷಯ [illegible] ಸದ್‌ಗೃಹಸ್ಥರನ್ನು ತಾಲೂಕು ಕೊಂಗ್ರೆಸ್ ಕಮಿಟಿಗೆ ಪ್ರತಿನಿಧಿಗಳಾಗಿ ಆರಿಸಲಾಯಿತು. ಮತ್ತು ಉಡ್ಪಿ ಟೌನ್ ಕೊಂಗ್ರೆಸ ಕಮಿಟಿಯ ಕೆಲಸಮಾಡುವ ಸ್ವಯಂಸೇವಕರಿಗೆ [illegible] ನಾರಾಯಣರಾಯರನ್ನು [illegible]ನ್ನಾಗಿ ನೇಮಿಸಲಾಯಿತು.

ಕುಂಬಳೆ ರಾಘುವೇಂದ್ರ ರಾವ್,
ಕಾರ್ಯದರ್ಶಿ.
ಉಡುಪಿ ಟೌನ್ ಕೊಂಗ್ರೆಸ್ ಕಮಿಟಿ.

ಪೊಳಲಿ:— ಶ್ರೀ ರಾಜರಾಜೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ಇತ್ತೀಚೆಗೆ ಕೆಲವು ವರ್ಷಗಳಿಂದ ಪ್ರತಿ ಕಾರ್ತಿಕ ಮಾಸದಲ್ಲಿ ನಡೆದು ಬರುವ ಭಜನೋತ್ಸವವು ಮೊನ್ನೆ ಆದಿತ್ಯವಾರಕ್ಕೆ ಮಂಗಳವಾಯಿತು. ಪಟ್ಟಣ ಪರ್ಯಟಣದಲ್ಲಿ ಈ ವರ್ಷ ಬಹು ದೀಪಗಳು ವೃದ್ಧಿಗೆ ಬಂದದ್ದಲ್ಲದೆ ಪೌರ್ಣಿಮಿಯ ಮಹಾ ಭಜನೆ ದಿವಸ ಪ್ರತಿ ಮನೆಯಲ್ಲಿಯೂ ಕುರುಜು ಮೀರುವ ತೋರಣಗಳಿಂದ ಅಲಂಕರಿಸಿದ್ದುದಲ್ಲದೆ ಪ್ರತಿಯೊಬ್ಬ ಗೃಹಸ್ಥನು ಸಂತರನ್ನು ಆದರದಿಂದ ಬರಮಾಡಿಕೊಂಡು ತಕ್ಕ ಮನ್ನಣೆಯಿಂದ ಪ್ರೋತ್ಸಾಹಿಸಿ ತಾನೂ ಕೂಡ ಮುಂದ್ವರಿದು ಬರುತ್ತಿದ್ದುದನ್ನು ಕಂಡರೆ ಎಲ್ಲರಲ್ಲಿಯೂ ಕೀರ್ತನಾ ಸೇವೆಯ ಬೀಜವು ಮೊಳೆತಂತೆ ಕಾಣುತ್ತಿತ್ತು. ಮಧ್ಯೆ ಮಧ್ಯೆ ೧೦-೧೫ ವರ್ಷದ ೪೦-೫೦ ಮಕ್ಕಳು ತಮ್ಮ ಮೈಯ್ಯನ್ನು ಮರೆದಂತೆ ಆಸಕ್ತಿಯಿಂದ ಆವೇಶ ಪೂರ್ವಕ ಭಜಿಸಿ ಕುಣಿಯುತ್ತಿದ್ದುದು ನೋಡುವವರನ್ನು ಬೆರಗುಗೊಳಿಸುತ್ತಿದ್ದುದಲ್ಲದೆ ಹಲವರ ಕಣ್ಣುಗಳಿಂದ ಗಂಗಾ ಪ್ರವಾಹದಂತೆ ಆನಂದಭಾಷ್ಪವು ಸುರಿಯುತ್ತಿತ್ತು. ದೇವೀ ಸನ್ನಿಧಿಯಲ್ಲಿಯೂ ಭಜನಾಸ್ಥಾನದಲ್ಲಿಯೂ ದೇವಸ್ಥಾನದಲ್ಲೆಲ್ಲೆಲ್ಲಿಯೂ ಗೋಪುರದಲ್ಲಿಯೂ ಹಲವು ಮಂಟಪಗಳಲ್ಲಿ, ಉಡುಪಿ ಪ್ರಭಾಕರ ಪ್ರೆಸ್ಸಿನವರಿಂದ ತಯಾರಿಸಲ್ಪಟ್ಟ "ಜೈ ಜೈ ರಾಮಕೃಷ್ಣಹರಿ" ಎಂಬ ಸುಂದರಾಕ್ಷರಗಳ ನಾಮಾಂಕಿತದಿಂದ ಇಡೀ ಪೊಳಲಿಪುರವು ರಾಮರಾಜ್ಯವೋ ಗೋಕುಲವೋ ಎಂಬಂತೆ ಕಾಣುತ್ತಿತ್ತು. ಇಷ್ಟರಲ್ಲಿ ಒಬ್ಬ ಹುಚ್ಚನ ದೆಸೆಯಿಂದ ಭಜನಾಸ್ಥಾನದ ಪ್ರಧಾನ ದೀಪವೇ ಕೆಟ್ಟು ಹೋಗಿ ಉಳಿಕೆ ಪರಿವಾರ ದೀಪಗಳಿಂದ ಅದನ್ನು ಪುನರುಜ್ಜೀವಿಸಿ ದೋಷ ಪರಿಹಾರಾರ್ಥವಾಗಿ ಹಲವು ತೆಂಗಿನ ಕಾಯಿಗಳನ್ನು ಒಡೆದು ಇದರಿಂದ ಮುಂದೆ ಬರತಕ್ಕ ರಾಜಾರಿಷ್ಟ ಲೋಕಾರಿಷ್ಟಗಳನ್ನು ದೇವಿಯು ಪರಿಹರಿಸುವಂತೆ ಪ್ರಾರ್ಥಿಸಿಕೊಳ್ಳಬೇಕಾಗಿ ಶ್ರೀಯುತ ಬಡಕಬೈಲ ಪರಮೇಶ್ವರಯ್ಯನವರು ಸೂಚಿಸಿದಂತೆ ಸರ್ವರೂ ಏಕಕಂಠದಿಂದ ಶ್ರೀ ಮಹಾಮಾರಿ ಅಮ್ಮನವರನ್ನು ಪ್ರಾರ್ಥಿಸಿಕೊಂಡು ಮೊದಲಿನಂತೆ ಭಜನೆಯು ಪ್ರಾರಂಭವಾಯಿತು. ಮಧ್ಯಾಹ್ನ ಬ್ರಾಹ್ಮಣರ ಸಂತರ್ಪಣೆ ರಾತ್ರಿ ದೀಪೋತ್ಸವ ರಂಗಪೂಜೆ ಉತ್ಸವ ಇತ್ಯಾದಿಗಳು ಬಹು ವಿಜೃಂಭಣೆಯಿಂದ ನಡೆದು ಅವಶ್ಯಕವಾಗಿ ಎಲ್ಲಾ ಭಜನ ಮಂಡಲಿಯವರಿಗೆ ಶ್ರೀ ಬಿ. ಯಸ್. ಪರಮೇಶ್ವರಯ್ಯನವರಲ್ಲಿ ಔತಣವಾಗಿ ಅವರವರ ಮನೆಗೆ ಹಿಂತೆರಳಿದ ವಿಷಯವನ್ನು ತಿಳಿಸುವರೆ ಸಂತೋಷ ಪಡುತ್ತೇವೆ.

ಕಾಪು:— ಇಲ್ಲಿ ಪ್ರತಿವರ್ಷ ಆಶ್ವೀಜ ಶು| ಪೂರ್ಣಿಮಿಯಿಂದ ಕಾರ್ತಿಕ ಶು| ೧೪ಯು ವರೆಗೆ ದೇವಸ್ಥಾನದಿಂದ ಹೊರಟು ಪೇಟೆ ತಿರಿಗಿ ಬರುವ ಭಜನೆಯ ಸಾಂಪ್ರದಾಯವಿತ್ತು. ಆದರೆ ಇತ್ತ ಕೆಲವು ವರುಷಗಳಿಂದ ಊರ ಜನರ ಅಂತಃಕಲಹಗಳಿಂದ ಈ ಸಾಂಪ್ರದಾಯವು ನಿಂತು ಹೋಗಿತ್ತು. ಆದರೆ ಈ ವರ್ಷವೂ ಈ ಕಲಹಗಳು ಇದ್ದರೂ ಊರ ಹಲವು ತರುಣರಿಗೆ ಉತ್ತೇಜನ ಬಂದು ಈ ಭಜನೆಯ ಸಾಂಪ್ರದಾಯವನ್ನು ಪುನಃ ಆಚರಣೆಗೆ ತಂದರು. ಊರಲ್ಲಿದ್ದ ಸುಮಾರು ೬೦ ಮನೆಗಳನ್ನು ೫ ವಾರ್ಡುಗಳನ್ನಾಗಿ ವಿಂಗಡಿಸಿ ಅದಕ್ಕೆ ಪ್ರತಿಯೊಂದು ವಾರ್ಡಿಗೆ ಒಬ್ಬ ಮೆಂಬರನಂತೆ ಚುನಾಯಿಸಿ ತಲೆಗೆ ೫ ದುಡ್ಡಿನ ಪ್ರಕಾರವೂ ಪಶುಗಳಿಗೆ ೨|| ದುಡ್ಡಿನ ಪ್ರಕಾರವೂ ವಂತಿಗೆಯನ್ನು ವಸೂಲುಮಾಡಿ ಭಜನೆಯ ಕಾರ್ಯವನ್ನು ಬಹಳ ಸಂಭ್ರಮದಿಂದ ನಡಿಸಿದರು. ರಾ. ಬಿ. ಆನಂದ ಬಾಳಿಗರು ಇಲ್ಲಿ ಇದ್ದುದರಿಂದ ಈ ಸಂಭ್ರಮವು ಇಲ್ಲಿ ಈ ವರುಷ ಸಾಧ್ಯವಾಯಿತು. ಭಜನೆಯು ಸುಮಾರು ರಾತ್ರೆ ಘಂಟೆ ೯ಕ್ಕೆ ಶುರುವಾಗಿ ಸಾಧಾರಣ ೧ ಗಂಟೆಗೆ ಪುರಂದರ ದಾಸರ ಮಂಗಲ ಕೀರ್ತನೆಗಳನ್ನು ಹಾಡಿ ದೇವರಿಗೆ ಮಂಗಲಾರ್ತಿ ಆದೊಡನೆ ಪಾನಕ, ಮಿಠಾಯಿ ಪಂಚಕಜ್ಜಾಯ ಇತ್ಯಾದಿಗಳನ್ನು ಹಂಚಿ ಮುಗಿಯಿತು. ಭಜನೆಯ ಕಡೇ ದಿವಸ ಮಂಗಲವನ್ನಾಚರಿಸಿ ಭಜನೆಯು ಬಹಳ ವಿಜೃಂಭಣೆಯಿಂದ ಮುಕ್ತಾಯವಾಯಿತು.

ಇಲ್ಲಿಯ ದೇವಸ್ಥಾನದ ಮತ್ತು ಮಾರಿಗುಡಿಯ ಆಡಳ್ತೆ ಮೊಕ್ತೇಸರರು ರದ್ದಾಗಿ ಆಡಳ್ತೆ ಮೆಂಬರರಾಗಿದ್ದಾರೆಂತ ತಿಳಿದುಬರುತ್ತದೆ. ಆಡಳ್ತೆ ಮೆಂಬರರಾಗಿದ್ದಾರೆಂಬ ಸಂಗತಿಯು ಪ್ರಕಟವಾಗುವ ಮುಂಚೆಯೇ ಇವರ ಉತ್ತೇಜನ ಮತ್ತು ಸಾಹಸವನ್ನು ಕಂಡರೆ ಮುಂದಿನ ದೇವಸ್ಥಾನದ ಮತ್ತು ಶ್ರೀ ಮಾರಿಗುಡಿಯ ಏಳಿಗೆಯನ್ನು ಸೂಚಿಸುತ್ತದೆ.

ಇಲ್ಲಿ ೧೦-೧೫ ದಿವಸಗಳಿಂದ ಪ್ರತಿ ದಿವಸ ಸಾಯಂಕಾಲ ಮಳೆಯು ತಪ್ಪದೆ ಸುರಿಯುತ್ತದೆ. ಆದರೆ ನಮ್ಮಲ್ಲಿಯ ಕಾರ್ತಿಕ ಶು| ಚತುರ್ದಶಿಯ ಸಂತರ್ಪಣೆಗೂ ವ ಉತ್ಸವಕ್ಕೂ ಮಳೆಯ ಸಂಬಂಧ ಏನೂ ಬಾಧಕವಿರಲಿಲ್ಲ.

ಇಲ್ಲಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಅಧ್ಯಾಪಕರಾದ ಮಾಸ್ಟರ ಕೆ. ಗಣಪತಿರಾಯರು ಬ್ರಹ್ಮಾವರ ಶಾಲಾ ಮುಖ್ಯೋಪಾಧ್ಯಾಯರಾಗಿ ವರ್ಗಾಯಿಸಲ್ಪಟ್ಟಿರು.

ಡೇರಾಡೂನಿನಲ್ಲಿ ಪಂಡಿತ ಹಕೀಮ ಹಜಮಲ್ ಖಾನರು ಮಾಡಿದ ಭಾಷಣ.

ಕಳೆದ ತಾರೀಕು ೧೮ರಲ್ಲಿ ಹಕೀಮ ಹಜಮಲ್‌ಖಾನರು ದೇರಾಡೂನಿಗೆ ಬಂದು ತಲ್ಲಿ ವಿಧಾಯಕ ಕಾರ್ಯಕ್ರಮವನ್ನು ಕುರಿತು ಭಾಷಣಮಾಡಿದರು. ಪ್ರಥಮದಲ್ಲಿ ಹಿಂದೂ-ಮುಸಲ್ಮಾನರ ಐಕ್ಯವನ್ನು ಕುರಿತು ಹೇಳಿದರು. ಯಾವಕಾಲದವರೆಗೆ ಹಿಂದೂ ಮುಸಲ್ಮಾನರು ಒಗ್ಗಟ್ಟಾಗುವುದಿಲ್ಲವೋ ಮತ್ತು ಪರಸ್ಪರ ಕಲಹವನ್ನು ಬಿಟ್ಟು ಒಡಹುಟ್ಟಿದ ಸಹೋದರರಂತೆ ವರ್ತಿಸುವುದಿಲ್ಲವೋ ಆ ತನಕ ಸ್ವರಾಜ್ಯದ ಎಲ್ಲಾ ಮಾತುಗಳು ಪ್ರಯೋಜನವಿಲ್ಲ. ಹಿಂದೂ-ಮುಸಲ್ಮಾನರು ಕಾಯೇನವಾಚಾ ಒಗ್ಗಟ್ಟಾಗಿ ಪರಸ್ಪರ ಮತದ್ವೇಷವನ್ನೂ ಸಮಾಜದ್ವೇಷವನ್ನೂ ಬಿಟ್ಟು ಉದಿಷ್ಟ ಧ್ಯೇಯವನ್ನು ಕೈಸೆಗಾಣಿಸಬೇಕು. ಮಾಲ್‌ಟಾನ್ ದಂಗೆಯ ಕುರಿತು ತನಗೆ ತುಂಬಾ ಖೇದವಾಗುತ್ತದೆ, ಈ ಲಾಂಛನಾಸ್ಪದವಾದ ಸಂಗತಿಗೆ ಮುಸಲ್ಮಾನರೇ ಮುಖ್ಯ ಕಾರಣರೆಂದು ತನಗೆ ತಿಳಿದಿದೆ. ಆದರೆ ಮುಂದಕ್ಕೆ ಅವರು ಯೋಗ್ಯವಾಗಿ ವರ್ತಿಸುವರೆಂದು ತನಗೆ ಭರವಸವಿದೆ ಎಂದರು. ಅನಂತರ ಇವರು ಖಾದಿಯ ಪ್ರಸಾರವನ್ನು ಕುರಿತು ಅದು ಸಾಕಷ್ಟು ಆಗಲಿಲ್ಲ. ಸ್ವರಾಜ್ಯವು ದೊರಕುವಷ್ಟು ಖಾದಿ ಪ್ರಸಾರವಾಗಲಿಲ್ಲ. ಸ್ವರಾಜ್ಯ ಫಂಡನ್ನು ಒಟ್ಟುಗೂಡಿಸುವ ಕಾರ್ಯವೂ ಕೊಂಗ್ರೆಸ ಮೆಂಬರರನ್ನು ಸೇರಿಸುವ ಕೆಲಸವೂ ಅಷ್ಟೊಂದು ಯೋಗ್ಯವಾಗಿ ನಡೆಯಲಿಲ್ಲ. ಕಳೆದ ವರುಷ ೫೦೦ ಮೆಂಬರರಾದ ಕಡೆಯಲ್ಲಿ ಈ ವರುಷ ಬರೆ ೫೦ ಮಂದಿ ಮೆಂಬರರಾಗಿರುವರು ಎಂದು ಮುಖಶಾಗಿ ಹೇಳಿದರು.

ಅನಂತರ ಕೌನ್ಸಿಲನ್ನು ಸೇರುವ ವಿಷಯವನ್ನು ಎತ್ತಿದರು. ಕೌನ್ಸಿಲನ್ನು ಸೇರುವ ಅಥವಾ ಬಾಯಿದೆಗಳನ್ನು ಜರಿಗಿಸುವುದನ್ನು ಕುರಿತು ತನಗೆ ಯಾವ ಅಭಿಪ್ರಾಯವನ್ನೂ ಹೇಳಲು ಅನಾನುಕೂಲವೆಂದರು. ಆದರೆ ಸಿವಿಲ್ ಡಿಸ್‌ಒಬಿಡಿಯನ್ಸ್ ಕಮಿಟಿಯ ವರದಿಯು ಪ್ರಕಟವಾಗಿ ಕೊಂಗ್ರೆಸ ಕಮಿಟಿಯವರೂ ಕೊಂಗ್ರೆಸ್ಸೂ ತಮ್ಮ ನಿರ್ಧಾರವನ್ನು ಕೊಟ್ಟ ಬಳಿಕ ದೇಶವು ಅದರಂತೆ ವರ್ತಿಸಬೇಕು. ಮತ್ತು ಎಲ್ಲರೂ ಹಿಂದೂಸ್ಥಾನದ ಹಾಗು ಅಸ್ಯಾಖಂಡದ ಸ್ವಾತಂತ್ರ್ಯಕ್ಕಾಗಿ ಈಗಿನ ಹೋರಾಟವು ಜರುಗುತ್ತಿದೆಯೆಂದು ತಿಳಿಯಬೇಕು. ಹಿಂದೂಸ್ಥಾನದ ಸ್ವತಂತ್ರದ ಮೇಲೆ ಅಸ್ಯಾಖಂಡದ ಸ್ವತಂತ್ರವೂ ಅಸ್ಯಾಖಂಡದ ಸ್ವತಂತ್ರದಮೇಲೆ ಹಿಂದೂಸ್ಥಾನದ ಸ್ವತಂತ್ರವೂ ಪರಸ್ಪರ ಅವಲಂಬಿಸಿಕೊಂಡಿದೆ. ಆದ್ದರಿಂದಲೇ ತುರ್ಕಿಯ ವಿಜಯದ ಕುರಿತು ಹಿಂದೂಸ್ಥಾನವು ಸಂತೋಷಪಡಬೇಕಾಗಿದೆ ಎಂದರು. ಕೊನೆಗೆ ಇವರು ಹಿಂದೂಸ್ಥಾನದ ೬ ಕೋಟಿ ಜನರನ್ನು ಅಸ್ಪೃಶ್ಯರೆಂದು ದೂರವಿಟ್ಟರೆ ಸ್ವರಾಜ್ಯವು ದೂರ ಹೋಗುವುದರಿಂದ ಈ ಅಸ್ಪೃಶ್ಯತೆಯನ್ನು ಕಿತ್ತುಹಾಕಬೇಕು. ಕೊಂಗ್ರೆಸ್ಸಿನಲ್ಲಿ ಜಾತಿಭೇದ ಮತಭೇದವಿಲ್ಲದ್ದರಿಂದ ಎಲ್ಲರೂ ಐಕ್ಯರಾಗಬೇಕಾಗಿದೆ ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ವಾಯುವೇಗದಲ್ಲಿ ಓಡುವ ತರುಣ.

ಇತ್ತಲಾಗಿ ಓಡುವುದರಲ್ಲಿ ಬಹಳ ಪ್ರಖ್ಯಾತಿಪಟ್ಟ ಯನ್. ವರದರಾಜಲು ನ್ಯಾಡೋ ಎಂಬ ೨೨ ವರುಷ ಪ್ರಾಯದ ಯುವಕನು ಕಳೆದ ಎರಡು ವರುಷಗಳ ಸಮಯದೊಳಗಾಗಿಯೇ ೧೫ ಬೆಳ್ಳಿಯ ಪದಕಗಳನ್ನೂ ಎರಡು ಬಂಗಾರದ ಪದಕಗಳನ್ನು ಒಟ್ಟು ಎಂಟು 'ಕಪ್ಪು'ಗಳನ್ನೂ ಬಹುಮಾನವಾಗಿ ಹೊಂದಿರುವನು. ಬೆಂಗಳೂರಿನ ಮೆಕೆನಿಕಲ್ ಇಂಜನಿಯರಿಂಗ ಕ್ಲಾಸಿನಲ್ಲಿ ಈ ಯುವಕನು ಕಲಿಯುತ್ತಿದ್ದಾನೆ. ಇವನು ಮಾಂಸ ಮೊದಲಾದುವನ್ನು ಆಹಾರವಾಗಿ ತಗೆದುಕೊಳ್ಳುವುದಿಲ್ಲ; ಶಾಕಾಹಾರಿ. ಕ್ರಮಶ್ವಾಸ (Breathing exercise) ಪ್ರಾಣಾಯಾಮದ ವ್ಯಾಯಾಮವನ್ನು ಮಾಡುವನು. ಇತ್ತಲಾಗಿ ಏಳು ವರ್ಷಗಳಿಂದ ಇವನು ದೇಶೀಯ ಕ್ರಮದ ವ್ಯಾಯಾಮವನ್ನು ಹೊಂದಲು ಪ್ರಾರಂಭಿಸಿದ್ದನು. ವೇಗದಿಂದ ಓಡುವುದಲ್ಲದೆ, ಈಜುವುದು, ಹಾರುವುದು, ಭಾರವನ್ನು ಎತ್ತುವುದು ಇವುಗಳಲ್ಲೂ ಇವನು ಬಹಳ ಸಮರ್ಥನು. ಕಳೆದ ೧೯೧೯-೨೦ರಲ್ಲಿ ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆದ ವ್ಯಾ. ಯಂ. ಸಿ. ಎ. ಪಂದ್ಯಾಟದಲ್ಲಿ ಈ ತರುಣನು ಪ್ರಥಮಸಲ ಪ್ರಸಿದ್ಧಿಗೆ ಬಂದನು. ಈ ಪಂದ್ಯಾಟಗಳಲ್ಲಿ ಇವನು ೧೦ ಬಹುಮಾನಪದಕಗಳನ್ನೂ ನಾಲ್ಕು ಕಪ್ಪುಗಳನ್ನೂ ಆರು ಹಣದ ಬಹುಮಾನಗಳನ್ನೂ ಓಡುವ ಸ್ಪರ್ಧೆಯಲ್ಲೇ ಹೊಂದಿದನು. ಕಳೆದ ೧೯೨೧ರಲ್ಲಿ ಮದರಾಸಿನಲ್ಲಿ ಜರುಗಿದ ಪಾರ್ಕ ಫೇರ್ ಸ್ಪೋರ್ಟ್ಸಿನಲ್ಲಿ ಇವನು ಓಡುವ ಆಟದ ಸ್ಪರ್ಧೆಗೆ ನಿಂತು ಒಂದು ಕಪ್ಪನ್ನೂ ಒಂದು ಹಣದ ಬಹುಮಾನವನ್ನೂ ಪಡೆದನು. ಕಳೆದ ೧೯೨೧ನೇ ದಶಂಬರ ತಿಂಗಳ ತಾ. ೨೬, ೨೭, ಮತ್ತು ೨೮ರಲ್ಲಿ ಬೆಂಗಳೂರಿನಲ್ಲಿ ನಡೆದ ಓಲ್ ಇಂಡಿಯಾ ಎತ್‌ಲೇಟಿಕ್ ಟೂರ್ನಮೆಂಟಿನಲ್ಲಿ ಈ ಯುವಕನು ಓಡುವ ಸ್ಪರ್ಧೆಯಲ್ಲಿ ಕೆಳಗಿನ ಬಹುಮಾನಗಳನ್ನು ಹೊಂದಿದನು.

(೧) ಒಂದು ಮೈಲು ಓಟ, ೪ ಮಿನಿಟು ೩೦ ಸೆಕುಂಡು, ಮೊದಲನೆ ಬಹುಮಾನ ಯುವರಾಜ ಕಪ್ (೨) ಐದು ಮೈಲುಗಳ ಓಟ, ೩೦ ಮಿನಿಟುಗಳಲ್ಲಿ, ಮೊದಲನೇ ಬಹುಮಾನ ಧಿವಾನ್ ಕಪ್. (೩) ೨೨ ಮೈಲುಗಳ ಓಟ, ಒಂದು ಗಂಟೆ ೫೨ ಮಿನಿಟುಗಳಲ್ಲಿ, ಮೊದಲನೇ ಬಹುಮಾನ ಮೂನ್‌ಸನ್ನಪ್ಯಾಸ್ ಚೆಂಪಿಯನ್‌ಶಿಫ್ ಕಪ್.

ಕಡೆಗೆ ಸೂಚಿಸಿದ ೨೨ ಮೈಲುಗಳ ಓಟದಲ್ಲಿ ಈ ತರುಣನು ತನ್ನನ್ನು ಹಿಂಬಾಲಿಸಿಕೊಂಡು ಸೈಕಲಿನಲ್ಲಿ ಬಂದವರನ್ನು ಸಹ ಹಿಂದೆಹಾಕಿ ತಾನು ಮುಂದೆ ನಡೆದು ಎಲ್ಲರಿಗೂ ಅತಿಶಯವಾದ ಆಶ್ಚರ್ಯವನ್ನು ಉಂಟುಮಾಡಿದ್ದನಂತೆ. ಮೇಲಿನ ಆಟಗಳಿಗಾಗಿ ಬಹುಮಾನವನ್ನು ಕೊಡುವಾಗ ಮೈಸೂರಿನ ಯುವರಾಜರು ಈ ಯುವಕನ ಸಾಮರ್ಥ್ಯವನ್ನು ಕಂಡು ಬೆರಗಾಗಿ ಇವನನ್ನು ಯೂರೋಪದಲ್ಲಿ ನಡಿಯುವ ಮಾರಥೋನ್ ಓಟದ ಪಂದ್ಯಾಟಕ್ಕೆ ಕಳುಹಿಸಲು ತಮಗೆ ಅಪೇಕ್ಷೆಯಿದೆಯಾಗಿ ತಿಳಿಸಿದ್ದಾರಂತೆ.

ದ. ಕನ್ನಡ ಜಿಲ್ಲಾ ಕೊಂಗ್ರೆಸ ಕಮ್ಮಿಟಿಯ ಸೂಚನೆ.

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಚುನಾಯಿಸುವ ಬಗ್ಗೆ ನಮ್ಮ ಜಿಲ್ಲಾ ಕಮಿಟಿಯವರು ಶಿಫಾರಸುಮಾಡುವರೆ ಗಯಾ ಕೊಂಗ್ರೆಸ್ಸಿಗೆ ಪ್ರತಿನಿಧಿಗಳಾಗಿ ಹೋಗಲಿಚ್ಛಿಸುವ ಉಮೇದ್ವಾರರು ತಮ್ಮ ಹೆಸರುಗಳನ್ನು ಇದೇ ನವಂಬರ ತಾ. ೧೫ರೊಳಗೆ ಜಿಲ್ಲಾ ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಿಗೆ ತಲ್ಪುವಂತೆ ಕಳುಹಿಸಿಕೊಡತಕ್ಕದ್ದು. ಕುಂದಾಪುರ ತಾಲೂಕಿನ ಬಗ್ಗೆ ಆ ತಾಲೂಕು ಕಮಿಟಿಯವರು ಯಾರನ್ನೂ ಚುನಾಯಿಸಿ ಜಿಲ್ಲಾ ಕಮ್ಮಿಟಿಗೆ ಕಳುಹಿಸದಿದ್ದುದರಿಂದ ಆ ತಾಲೂಕಿನಿಂದ ಉಮೇದ್ವಾರರಾಗಿ ಬರುವವರಲ್ಲಿ ಜಿಲ್ಲಾ ಕ. ಕಾರ್ಯದರ್ಶಿಗೆ ಯೋಗ್ಯಕಂಡ ಇಬ್ಬರ ಹೆಸರುಗಳನ್ನು ಶಿಫಾರಸು ಪಟ್ಟಿಯಲ್ಲಿ ಮೊದಲನೆಯದಾಗಿ ಹಾಕುವ ಅಧಿಕಾರವನ್ನು ಜಿಲ್ಲಾ ಕಮ್ಮಿಟಿಯವರು ಜಿ. ಕ. ಕಾರ್ಯದರ್ಶಿಯವರಿಗೆ ಕೊಟ್ಟಿರುತ್ತಾರೆ.

ಉಡುಪಿ ಗೋವಿಂದರಾವ್,
ಕಾರ್ಯದರ್ಶಿ.

ಕಾಸರಗೋಡು ತಾಲೂಕು ಕೊಂಗ್ರೆಸ ಕಮ್ಮಿಟಿ ಮೀಟಿಂಗು.

೧೯೨೨ನೇ ಇಸವಿ ಒಕ್ಟೋಬರ ತಿಂಗಳ ತಾ. ೨೯ರಲ್ಲಿ ಪೂರ್ವಾಹ್ನ ಗಂಟೆ ೯||ಗೆ ಕಾಸರಗೋಡು ರಾಷ್ಟ್ರೀಯ ಶಾಲೆಯಲ್ಲಿ ರಾ ಬದಿಯಡ್ಕ ರಾಮರಾಯ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿದ ತಾಲೂಕು ಕಾಂಗ್ರೆಸು ಕಮ್ಮಿಟಿಯ ಮಹಾ ಸಭೆಯ ವರದಿ.

(೧) ರಾಗಳಾದ ಸಿ. ಬಾಪು ಕುಂಞಾಬ್ಬಾರಿ, ಮಹಮ್ಮದ್ ಶೆರೂಲ್ ಸಾಹೇಬರು, ಬಳಂಬೆಟ್ಟು ಮಾಧವಪೈ ಮತ್ತು ಪುತ್ತಿ ಉಮಾನಾಥರಾವ್ ಇವರುಗಳನ್ನು ಸರ್ವಸಮ್ಮತದಿಂದ ಗಯಾ ಕೊಂಗ್ರೆಸ್ಸಿಗೆ ಪ್ರತಿನಿಧಿಗಳನ್ನಾಗಿ ಚುನಾಯಿಸಲಾಯಿತು.

(೨) ಪ್ರಾಂತಿಕ ಕಮಿಟಿಗೆ ಈ ಕೆಳಗಿನವರನ್ನು ಪ್ರತಿನಿಧಿಗಳನ್ನಾಗಿ ಚುನಾವಣೆಮಾಡಲಾಯಿತು. (1) ರಾ. ಗಳಾದ ಕೊಡಿಯಾಲು ಪುಂಡರೀಕಶೆಟ್ಟು, (2) ಕಲ್ಲ್ಯಾಣಿಯಾರು ರಾಮಕೃಷ್ಣಯರು. (3) ಮಹಮ್ಮದ್ ಶೆರೂಲ್ ಸಾಹೇಬರು. (4) ಬದಿಯಡ್ಕ ರಾಮರಾಯ ಶೆಣೈಗಳವರು.

(೩) ಮಂಗಳೂರು ತಾಲೂಕಿನ ಕಮಿಟಿಯ ನಿಯಮಗಳನ್ನು ನಮ್ಮ ತಾಲೂಕಿಗೆ ಆವಶ್ಯಕವೆಂತ ಕಂಡ ತಿದ್ದುಪಡಿಯನ್ನು ಮಾಡಿ ಸರ್ವಸಮ್ಮತದಿಂದ ಮಂಜೂರು ಮಾಡಲಾಯಿತು.

(೪) ಬರುವ ಜಿಲ್ಲಾ ಪರಿಷತ್ತನ್ನು ಉಡುಪಿಯಲ್ಲಿ ಜರಗಿಸುವುದರಲ್ಲಿ ಆಕ್ಷೇಪವಿಲ್ಲವೆಂದು ಸರ್ವಸಮ್ಮತದಿಂದ ಮಂಜೂರಾಯಿತು.

(೫) ಬರುವ ಮಹಾ ಸಭೆಯನ್ನು ತಾ. ೩-೧೨-'೨೨ನೇ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಇದೇ ರಾಷ್ಟ್ರೀಯ ಶಾಲೆಯಲ್ಲಿ ನಡಿಸಬೇಕಾಗಿ ನಿಶ್ಚಯಿಸಲಾಯಿತು.

(೬) ತಾ. ೧-೧೧-'೨೨ನೇ ದಿವಸ ಅಲಿ ಸಹೋದರರ ಬಂಧನ ದಿವಸವನ್ನು ತಾಲೂಕಿನ ಎಲ್ಲಾ ಗ್ರಾಮಗಳಲ್ಲಿಯೂ ಯೋಗ್ಯರೀತಿಯಿಂದ ಆಚರಿಸಬೇಕಾಗಿ ನಿಶ್ಚಯಿಸಲಾಯಿತು.

ಶೆಡ್ಡೆ ಲಕ್ಷ್ಮಣರಾವ್,
ಕಾಸರಗೋಡು ತಾ. ಕೊ. ಕಮಿಟಿ, ಕಾರ್ಯದರ್ಶಿ.

ತಾ. ೩—೧೧—೧೯೨೨ರಲ್ಲು ಕ. ತಿ. ವಿದ್ಯಾಲಯದಲ್ಲಿ ಜರಗಿದ ಜಿ. ಕಾ. ಕ. ಕಾರ್ಯಕಾರಿ ಮಂಡಳಿಯ ಸಭೆ.

ಠರಾವುಗಳು:—೪. ರಾ| ಕೆ. ಪಿ. ಕದ್ರಿಯ ರಾಜಿನಾಮೆಗೆ ಸಂಬಂಧಪಟ್ಟ ಚುನಾವಣೆ ನಾಳಿನ ಮಹಾಸಭೆಯಲ್ಲಿ ಮಾಡಬೇಕಾಗಿ ನಿರ್ಣಯಿಸಲಾಯಿತು.

ಬೇರೆ ತಾಲೂಕಿನವರ ಆಮಂತ್ರಣ ಮೇರೆಗೆ ಈ ಕಾರ್ಯಕಾರಿ ಮಂಡಳಿಯವರು ಆಗಿಂದಾಗ್ಗೆ ನಿಶ್ಚಯಿಸುವ ತಾಲೂಕು ಮುಖ್ಯ ಪಟ್ಟಣಗಳಲ್ಲಿ ಈ ಕಾರ್ಯಕಾರಿ ಮಂಡಲಿಯ ಸಭೆಸೇರಿಸಬಹುದಾಗಿ ನಿರ್ಣಯಿಸಲಾಯಿತು.

ಪ್ರಾ. ಕಾ. ಕ. ಕಾರ್ಯದರ್ಶಿಯವರ ತಾ. ೨—೧೦—೧೯೨೨, ೨೫—೧೦—'೨೨, ೩೦—೧೦—'೨೨ ಮತ್ತು ೩೧—೧೦—'೨೨ರ ಪತ್ರಗಳನ್ನು ಓದಲಾಯಿತು. ಈ ಪೈಕಿ ೩೦ರ ಪತ್ರದಲ್ಲಿ ಕಾಣುವಂತೆ ಖಾದರ್ ಬೋರ್ಡನ್ನು ಮಾಡುವುದಕ್ಕೂ ಅದಕ್ಕೆ ನಿಯಮಗಳ ಮಸೂದೆಯನ್ನು ತಯಾರಿಸಿ ನಾಳಿನ ಮಹಾಸಭೆಯ ಮುಂದೆ ಇಡಲಿಕ್ಕೆ ರಾ| ಕೆ. ಎನ್ ದಾಸಪ್ರಭುಗಳನ್ನೂ ಉ. ಸಂಜೀವ ರಾಯರನ್ನೂ ಉಪಕಮಿಟಿ ಮಾಡಲಾಯಿತು. ತಾ. ೩೧ರ ಪತ್ರದಲ್ಲಿ ಕಾಣುವಂತೆ ನಮ್ಮ ಕರ್ನಾಟಕಕ್ಕೆ ಗಯಾ ಕಾಂಗ್ರೆಸಿನಲ್ಲಿ ಪ್ರತ್ಯೇಕ ಒಂದು ಅಡಿಗೆ ವ್ಯವಸ್ಥೆಯನ್ನು ಮಾಡುವುದು ಅಗತ್ಯವೆಂದು ಪ್ರಾಂತಿಕ ಕಮಿಟಿಗೆ ತಿಳಿಸಬೇಕೆಂದು ನಿರ್ಣಯಿಸಲಾಯಿತು.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ,
O P. ನಂಬ್ರ 136/1922.
ಯಂ. ವೆಂಕಟ್ರಾವ್, ಗೋಪಾಲಭಟ್ರ ಮಗ, ಮಂಗಳೂರು
ತಾಲೂಕು ಮರೋಳಿಗ್ರಾಮದಲ್ಲಿರುವವ
ಅರ್ಜಿದಾರ.

ಮಂಗಳೂರು ತಾಲೂಕು ಶಿವಳ್ಳಿ ಮಠಸ್ಥಾಪನೆಯ ಕಮಿಟಿ ಮೆಂಬರರಾಗಿದ್ದ ಉದ್ಯಾವರ ವೆಂಕಟ ವರಹಾಚಾರ್ಯರು ರಾಜಿನಾಮೆ ಕೊಟ್ಟಿರುವುದರಿಂದ ಆ ಮೆಂಬರಿಕೆಯು ನನಗಾಗಬೇಕೆಂದು ಉಮೇದ್ವಾರನಾಗಿ ನಿಂತು ನಾನು ಮಾಡಿಕೊಂಡಿರುವ ಅರ್ಜಿಯು ಇದೇ ತಿಂಗಳ ತಾ. 20ಕ್ಕೆ ತನಖಿಗೆ ಇಟ್ಟಿರುವುದರಿಂದ ಸದರಿ ಮೆಂಬರಿಕೆಯು ನನಗಾಗುವ ವಿಷಯದಲ್ಲಿ ಆಕ್ಷೇಪ ಯಾ ಅನಾಕ್ಷೇಪ ಇದ್ದವರು ತಿಳಿಸಬಹುದು.

ಮಂಗಳೂರು,
ತಾ. ೯—೧೧—'೨೨ } M. Venkat Rao.

ನೋಟೀಸು.

ಶ್ರೀ ಮದನಂತೇಶ್ವರ ದೇವಸ್ಥಾನ, ಮಂಜೇಶ್ವರ.

ಶ್ರೀ ಮದನಂತೇಶ್ವರ ದೇವಸ್ಥಾನದ ಆಡಳಿತೆ ನೋಡುವ ಬಗ್ಗೆ ಗೌಡಸಾರಸ್ವತ ವೃಂದಕ್ಕೆ ಸೇರಿದ ೩೦ ವರುಷಕ್ಕೆ ಮಿಕ್ಕಿದ ಒಬ್ಬ ಮೆನೇಜರನು ಬೇಕಾಗಿರುವನು. ಸೆಕ್ಯೂರಿಟಿ ರೂಪಾಯಿ 2000 ತೆರಬೇಕು. ತಲಬು ತಿಂಗಳಿಗೆ ರೂಪಾಯಿ 100ರಂತೆ. ಮತ್ತು ಬಾಡಿಗೆ ಇಲ್ಲದ ಮನೆ ಸಹ. ಅರ್ಜಿಗಳು ಈ ಕೆಳಗೆ ದಸ್ಕತು ಮಾಡಿದವರಿಗೆ ನವಂಬರ 15ರ ಒಳಗೆ ತಲಪಬೇಕು.

ಮಂಜೇಶ್ವರ.
ತಾ. 12-10-'22 } ಯಂ. ಅನಂತ ಕಿಣಿ,
ಟ್ರಸ್ಟೀ.

ವಿಜ್ಞಾಪನೆ.

ಪ್ರಿಯ ದೇಶಭಾಂದವರೇ,

ಶ್ರೀಯುತ ಪಡಮನ್ನೂರು ರಾಮಚಂದ್ರರಾಯರ ಹೆಸರು ಈ ಜಿಲ್ಲೆಯಲ್ಲಿ ಮಾತ್ರವಲ್ಲ ಇನ್ನೂ ಅನೇಕ ಕಡೆಗಳಲ್ಲಿ ಪ್ರಸಿದ್ಧಿಯಾಗಿದೆ ಎಂಬದನ್ನು ನಾನು ಬರೆಯಬೇಕಾದುದಿಲ್ಲ. ಅವರ ಪತ್ನಿಯವರೂ ಅಡಿಗೊತ್ತಲ್ಪಟ್ಟವರನ್ನು (Depressed classes) ಅನಾಥರನ್ನು ಉದ್ಧರಿಸುವುದಕ್ಕೂ ಮಹಿಳೆಯರಿಗೆ ವಿ[illegible]ಯನ್ನು ಕೊಡುವುದಕ್ಕೂ ತನ್ನ ಗಂಡನೊಂದಿಗೆ ರಾತ್ರಿ ಹಗಲು ಸಾಹಸಪಡುತ್ತಿದ್ದರು. ಅವರ ಸುಪುತ್ರಿಯಾದ ಪದ್ಮಾವತಿಯನ್ನು ಮದ್ರಾಸ ಯುನಿವರ್ಸಿಟಿಯ ಇಂಟರ್ ಮೀಡಿಯೇಟಿನಲ್ಲಿ ಪ್ರಥಮ ತರಗತಿಯಲ್ಲಿ (first class) ತೇರ್ಗಡೆ ಹೊಂದಿದಲ್ಲದೆ ಇಂಗ್ಲಿಷಿನಲ್ಲಿ ಉತ್ಕೃಷ್ಟ ಕವಿತಾ ಶಕ್ತಿಯುಳ್ಳವಳಾಗಿದ್ದು ಅವಳ ಅಪಾರ ಶಕ್ತಿಯನ್ನು ಪದ್ಯರೂಪದಲ್ಲಿ ಬರೆದಿಟ್ಟು ಪದ್ಮವು ಸಂಪೂರ್ಣ ವಿಕಸಿತವಾಗಿ ಲೋಕದ ಜನರ ಹೃದಯ ಕಮಲವನ್ನರಳಿಸುವ ಮೊದಲಾಗಿಯೇ ಮಿತ್ರನೆಡೆಗೆ ಒಯ್ಯಲ್ಪಟ್ಟಿತು. ಈ ವಿಷಯವು ನಡೆದ ಕೆಲ ದಿನಗಳಲ್ಲೇ ಅವಳ ತಾಯಿಯೂ ಅವಳನ್ನು ಹಿಂಬಾಲಿಸಿದರು.

ಈಗ ಪದ್ಮಾವತಿಯ ಗಂಡನಾದ ರಾಮಕೃಷ್ಣರಾಯರು (ಬರಹಾಂಪುರ) ಎದುರಿದ್ದ ಪದ್ಮರಾಗದ ಮಾಧುರ್ಯವನ್ನು ಜನರಿಗೆ ಕೊಡಬೇಕೆಂಬ ಸದುದ್ದೇಶದಿಂದ ಪದ್ಮಾವತಿಯ ಪದ್ಯಗಳನ್ನು ಪ್ರಕಟಿಸಲಿದ್ದಾರೆ. ಇದಕ್ಕೆ ಹರೀಂದ್ರನಾಥ ಚಟ್ಟೋಪಾಧ್ಯಾಯರು ಪುಸ್ತಕಕರ್ತರಾಗಲು ಒಪ್ಪಿರುತ್ತಾರೆ. ಈ ಸಂದರ್ಭದಲ್ಲಿ ಪದ್ಮಾವತಿ ಮತ್ತು ಆಕೆಯ ತಾಯಿಯ ಜೀವಮಾನದಲ್ಲಿ ಅತಿ ವಿಶೇಷ ಸಂಗತಿಗಳನ್ನು ಕಂಡಿದ್ದ ಜನರು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಪುಸ್ತಕಕರ್ತರು ತಮ್ಮ ಪುಸ್ತಕದಲ್ಲಿ ಹಾಕಲು ಅನುಕೂಲವಾಗುವುದು. ಆದುದರಿಂದ ಯಾರ್ಯಾರು ಅವಾಂಛ್ಛರ ಕೊಡಿಯಾಡಿದ್ದಾರೋ ಅವರು ತಮ್ಮ ಅನುಭವವನ್ನು ಕೊಡುವುದು ಅವರ ಕರ್ತವ್ಯವೆಂದು ಭಾವಿಸುವ.

ಪದ್ಮಾವತಿ ಮತ್ತು ಆಕೆಯ ಚಿತ್ರದ ಸ್ನೇಹಿತಳೂ ಒಡನಾಡಿಯೂ ಆದ ಸರಸ್ವತಿ ಬಾಯಿ C/o. ಎಮ್ ರಾಮರಾವ್, ಪೆನ್ಸಿಲೇಶನ್ ಡಿಪಾರ್ಟ್‌ಮೆಂಟಿನ ಸುಪರಿಂಟೆಂಡೆಂಟ್, ಕುಂದಾಪುರ ದ. ಕನ್ನಡ.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.
ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇಧ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು
ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.
ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೨೬, (ಬ್ರಾಡ್ವೇ, ಮದ್ರಾಸ್.
Local Agents: Raphael & Co.
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್, ಕಾಸರಗೋಡು, ದಕ್ಷಿಣ ಕನ್ನಡ
ಇತ್ತಲಾಗಿ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಜೊತೆಗೆ ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಕೋಲು ಸಿಗಿದು ತಯ್ಯಾರಾಗುತ್ತಿರುವುದು. [illegible]

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0
Reserve and other sinking Funds ,, 181,250—0—0
ಅಧಿಕಾರಕೊಡಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 181,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಡಿಪಾಜಿಟುಗಳೂ, ಸೇವಿಂಗ್ಸ್ ಬೇಂಕ್ ಡಿಪಾಜಿಟುಗಳೂ, ತೆಗೆದುಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,
ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು [illegible] ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ಹಿಡಿದಿರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಬೇಗನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಕ್ಷೇಪಣೆಯಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ತೊಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, [illegible], ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, [illegible] ಮೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಅನೇಕರು ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅಮೃತಶಕ್ತಿಯುಳ್ಳವು. ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷ್ಠಿಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ಇರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಅಂಚೆಕೂಲಿ ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.
ಏಜಂಟ್
ಮಂಗಳೂರು ಟವನಿಗೆ ಮಾತ್ರ,
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.
ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ನರ ಲಿಪ್ತಾ ಎಣ್ಣೆ.
ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುದ್ಧವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ ರೂ. 1—0.
ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.
ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧದ ಕೆಮ್ಮಲು, ಗೂರಲು ಶ್ವಾಸ, ಕ್ಷಯ, ಸೆಗಣ್ಣು, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರುವರು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡಲಾರಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಮಬಾಣವಾಗಿಯೂ, ಎದೆಗೆ ಬಲಕೊಟ್ಟು ಮುಂದೆ ರೋಗಗಳು ಹತ್ತದಂತೆ ಮಾಡುತ್ತದೆ.
60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.
ಆರ್ ಮಾರ್ಟಿನ್ನರ [illegible]
[illegible]
ಸೀಸೆ 1ಕ್ಕೆ ರೂ. 2—0—0.
ವಿಳಾಸ—ಆರ್. ಡಿ. [illegible] ಮತ್ತು [illegible]
[illegible] & Co.
[illegible]

ಮಂಗಳೂರು —
— ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.
ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.
ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.
ಟಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.
☞ ಇಂಗ್ಲಿಷು, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪ್ಪೈ
ರಥಬೀದಿ ಮಂಗಳೂರು.
[illegible]

ಅಚ್ಚಿನಲ್ಲಿದೆ! ಎಂ. ಜಿ. ಐಗಳ್. ಇವರಿಂದ ರಚಿತವಾದ ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾಗುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಯಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿದ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಆದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—[illegible] ಕಾಪ್ರಿ—ಸೂಡ ಮಠಗಳು—ಕೇಜಗಾರರು—ಹಾಲುವಕ್ಕಿ ನರ್ಸಪ್ಪನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತನಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಭಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ್—ಅಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚೆರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾರ್ಸೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬೂದಿಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಷೋಪರು—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಚಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ಧೋಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ಬಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—ಬುಕೆನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಪಂಜ—ಸುಳ್ಯ—ಬೆಳ್ಳಾರೆ—ಅಮರಮಾಗಣೆಗಳು—ಬೆಳ್ಳಾರೆ, ಮುಚ್ಚು ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ—ಗುರುವಾಯನಕೆರೆ ಪಟ್ಟಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಟಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮಾರಿಗುಡಿ—ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸೂಣಾರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ಸಾರಾವಿ ಯುದ್ಧ—ಬಂಟವಾಳ ಮಣಿಯುದ್ಧ—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿವರ್ತನ—ಕಳಸಾಡು ಚಿಕ್ಕಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ಭೇದ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿಮಂತೂರು—ಮೂಲಿಕೆ—ವರಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ಕಿಲ್ಲಲ—ಸೋಮನಾಥೇಶ್ವರ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾರ್ಸೆಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ಬಿನ್ನಾಣರು—ಪಡಿಲ ಕೊಣ್ಣಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವವೃತ್ತಾಂತ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮೆ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೋಮಶೇಖರನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಟ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟಪಾಡಿ ಪಿದಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಅಲೂಪರು 27—ಪಶ್ಚಿಮ ಚಾಲುಕ್ಯ 1—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23—ಹೈದರಾಲಿ 1—ಇಂಗ್ಲೀಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ಪಮುಹೆಗಡೆ 1.

ವಿಳಾಸ:—

ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.
ಅಥವಾ
ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾನಂದತೋಷರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನು ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, [illegible] ಮುನಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. [illegible]

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಇದರಲ್ಲಿ ಜನೋಪಕಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. [illegible]

ಇದರ ಬೆಲೆ ೧—೮—೦. ಟಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ತಿನಿಸಿನವುಳ್ಳ ನೂಲಿನ ಮಳಿಗೆ

[illegible]

ಶ್ರೀನಿವಾಸ ರಂಗಪ್ಪ
[illegible]

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು—(೨೮—೭—೧೯೨೭)

ಇದರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲಾರರು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪಾತಿವ್ರತ್ಯ[illegible] ..... [illegible] ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ. ಸಚಿತ್ರ ರೂ. ೧—೦—೦.

[illegible] ರೂ. ೦—೧೨—೦.

[illegible]	0—12—0	[illegible]	
[illegible]	0—6—0	[illegible]	5—0—0
[illegible]	0—8—0	[illegible]	
[illegible]	0—8—0	[illegible]	0—12—0
[illegible]	1—0—0	S. S. L. C. Kannada Texts	
[illegible]	1—0—0	[illegible]	0—6—0
		[illegible]	0—6—0
		[illegible]	0—12—0

ಎಂ. ಎಸ್. ರಾವ್ ಕಂಪೆನಿ,
[illegible], ಬೆಂಗಳೂರು ಸಿಟಿ.

Edited, Printed & Published by [illegible]

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ಸ್ವದೇಶಾಭಿಮಾನಿ.

SWADESHABHIMANI.
MANGALORE.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ!

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೬. ಮಂಗಳೂರು, ತಾರೀಕು ೧೮ನೇ ಶುಕ್ರವಾರ ನವಂಬರ ೧೯೨೭. ಸಂಚಿಕೆ ೪೫

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್
—ಉಡುಪಿ ಲಿಮಿಟೆಡ್.—

ಅಧಿಕಾರಿಗೊಳಿಸಲ್ಪಟ್ಟ ಮೂಲಧನ ರೂ.	3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00,000—0—0
ಚಂದಾ ಹಾಕಿ ಎತ್ತಿದ ಮೂಲಧನ	1,00,000—0—0
ಮೌಲ್ಯ ಕತ್ರ ಮೂಲಧನ	90,365—7—11
ಠೇವಣಾತಿಗಳು	3,33,300—0—0
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ ೮ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	4,54,322—11—0

ಕಳೆದ 2 ವರುಷಗಳಲ್ಲಿ ಪಾಲುವಂತಿಕೆಗಳಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸು ಬಿಕ್ರೀಗೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ಕೊಡುವ ಶರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ನಿರಖು ಠೇವಣಾತಿಗಳನ್ನೂ, 15 ದಿವಸಗಳ ನೋಟೀಸು ಮೂಲಕ ಶೇಕಡಾ 6½ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ಮುದ್ದತಿನ ಠೇವಣಾತಿಗಳನ್ನೂ, ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ಸಿಗುವ ಚಾಲ್ತಿ ಠೇವಣಾತಿಗಳನ್ನೂ ಶೇಕಡಾ 4½ ಬಡ್ಡಿ ಸಿಗುವ ಸೇವಿಂಗ್ಸು ಬ್ಯಾಂಕು ಠೇವಣಾತಿಗಳನ್ನೂ ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನೂ, ಡಿಪೋಜಿಟಾಗಿ ವಹಿಸುವದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವದು.

ಈ ಬ್ಯಾಂಕಿಗೆ ಕೊಡತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮಿಟಿಂಗು:—ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮಿಟಿಂಗನ್ನು ಮುಂದರಿಸಬೇಕಾಗಿ ಕಮ್ಮಿಟಿಯ ಕೆಲವು ಮೆಂಬರರು ಸೂಚಿಸಿರುವರು. ಆದರೆ ಬಹು ಮಂದಿಗಳು ಇದನ್ನು ಮುಂದರಿಸಿ ಇಡಬೇಕಾಗಿ ತಿಳಿಸದೇ ಇದ್ದುದರಿಂದ ಈ ಮಿಟಿಂಗು ಬರುವ ತಾ. ೨೦ರಲ್ಲಿ ಕಲ್ಕತ್ತದಲ್ಲೇ ನೆರೆಯಿಸಲು ನಿರ್ಧರಿಸಿದೆ.

ಖಿಲಾಫತ್ ಕಮ್ಮಿಟಿಯ ರಿಪೋರ್ಟು:—ಸಿವಿಲ್ ಡಿಸ್ ಒಬ್ಬಿಡಿಯನ್ಸಿನ ಕುರಿತು ನೇಮಕಪಟ್ಟ ಖಿಲಾಫತ್ ಎನ್‌ಕ್ವಾಯರಿ ಕಮ್ಮಿಟಿಯ ರಿಪೋರ್ಟು ಈಗ ಪ್ರಕಟವಾಗಿದೆ. ಈ ಕಮ್ಮಿಟಿಯವರು ಒಟ್ಟು ೬೧೯ ಮೈಲುಗಳನ್ನು ೪೯ದಿನಗಳಲ್ಲಿ ಸಂಚರಿಸಿ ೨೧೧ ಸಾಕ್ಷಿಗಳನ್ನು ವಿಚಾರಿಸಿದರು. ವರದಿಯು ೬೭ ಪುಟಗಳಿದ್ದು ಉರ್ದುಭಾಷೆಯಲ್ಲಿ ಪ್ರಕಟವಾಗಿದೆ. ವಿದೇಶಿ ವಸ್ತ್ರಗಳ ಬಹಿಷ್ಕಾರ ಮತ್ತು ಮಾದಕ ಪದಾರ್ಥಗಳ ಉಪಯೋಗವನ್ನು ನಿಲ್ಲಿಸುವಂತೆ ಪಿಕೆಟಿಂಗನ್ನು ಕೂಡಲೇ ಪ್ರಾರಂಭಿಸಬೇಕಾಗಿ ಈ ಕಮ್ಮಿಟಿಯವರು ಸೂಚಿಸಿದ್ದಾರೆ. ಕೋರ್ಟುಗಳಿಗೆ ಬಹಿಷ್ಕಾರವನ್ನು ಹಾಕಬೇಕಾಗಿಯೂ ಇವರು ಅಭಿಪ್ರಾಯ ಪಟ್ಟಿದ್ದಾರೆ. ಶಾಲಾ ಕೊಲೇಜುಗಳಿಗೆ ಬಹಿಷ್ಕಾರಹಾಕುವುದನ್ನು ಕೈಕೊಳ್ಳಬೇಕು; ಪರಂತು ಈ ಕಾರ್ಯವನ್ನು ಮಾಡುವಾಗ ಹೊಸ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಬೇಕು; ಹಾಗು ಹಳೆ ರಾಷ್ಟ್ರೀಯ ಶಾಲೆಗಳನ್ನು ಅಭಿವೃದ್ಧಿಗೆ ತರಬೇಕು ಎಂದು ಈ ಕಮ್ಮಿಟಿಯವರು ತಿಳಿಸಿದ್ದಾರೆ. ಕೌನ್ಸಿಲುಗಳನ್ನು ಸೇರುವುದೆಂದರೆ ಅಸಹಕಾರದ ಚಳವಳಕ್ಕೆ ಮಹತ್ವಾದ ಒಂದು ಅಪಜಯವಾದ್ದರಿಂದ ಕೌನ್ಸಿಲಿಗೆ ಸೇರುವುದನ್ನು ಕಮ್ಮಿಟಿಯವರು ನಿಷೇಧಿಸಿದ್ದಾರೆ. ಕಾನೂನುಭಂಗವನ್ನು ಜಾರಿಗೆ ತರಲು ದೇಶವು ಸಿದ್ಧವಾಗಿಲ್ಲವೆಂದು ಕಮ್ಮಿಟಿಯವರು ಮನಗಂಡಿದ್ದಾರೆ.

ವಿಶ್ವಭಾರತಿ ಫಂಡ್:-ತ್ರಿವೆಂಡ್ರಮಿನಲ್ಲಿ ಠಾಗೂರರನ್ನು ಸ್ವಾಗತಮಾಡುವ ಕಮ್ಮಿಟಿಯವರು ವಿಶ್ವಭಾರತಿ ಫಂಡಿಗೆ ರೂ. ೧೦೦೦ ವನ್ನು ಕೊಟ್ಟಿರುವರು.

ಆರ್ಮಿಸ್ಟಿಸ್ ದೇ:—ಯುದ್ಧ ನಿವರ್ತನೆಯ ವರ್ಧಂತಿಯು ಅನೇಕ ಕಡೆಗಳಲ್ಲಿ ಆಚರಿಸಲಾಯಿತು.

ಗೋವೆ:—ಸೆಂಟ ಫ್ರೆನ್ಸಿಸ್ ಜೇವಿಯರ ಪವಿತ್ರ ಶರೀರ ಪ್ರದರ್ಶನವು ಬರುವ ದಶಂಬರ ತಾ. ೩ರಿಂದ ಪ್ರಾರಂಭವಾಗಿ ಜನವರಿ ತಾ. ೬ರ ವರೆಗೆ ಹಳೇ ಗೋವೆಯಲ್ಲಿ ನಡಿಯುವುದು. ಇದೇ ಸ್ಥಳದಲ್ಲಿ ಓಲ್ ಇಂಡಿಯಾ ಕೆಥೋಲಿಕ ಕೊನ್ಫರೆನ್ಸು, ದಶಂಬರ ತಾರೀಕು ೨೮, ೨೯, ಮತ್ತು ೩೦ರಲ್ಲಿ ಜರಗುವುದು. ಫ್ರೆನ್ಸಿಸ್ ಜೇವಿಯರು ೧೫೦೬ರಲ್ಲಿ ಸ್ಪೈನ್ ದೇಶದಲ್ಲಿ ಜನಿಸಿದರು. III ನೇ ಪೋಪ್ ಪೌಲರ ಕಾಲದಲ್ಲಿ ಇವರು ಜೆಜುಯಿಟ್ಸ್ ಸೊಸೈಟಿಯ ಮಿಶನರಿಗಳಾಗಿ ತಮ್ಮ ೩೫ನೇ ವರುಷ ಪ್ರಾಯದಲ್ಲಿ ಹಿಂದೂಸ್ಥಾನಕ್ಕೆ ಬಂದು ೧೫೪೨ನೇ ಇಸವಿಯ ಮೇ ತಿಂಗಳ ತಾರೀಕು ೬ರಲ್ಲಿ ಗೋವೆಯಲ್ಲಿ ಇಳಿದರು. ಸೆಂಟ ಫ್ರೆನ್ಸಿಸರು ದಕ್ಷಿಣ ಹಿಂದೂಸ್ಥಾನದ ಅನೇಕ ಪ್ರದೇಶಗಳನ್ನು ಸಂಚರಿಸಿದ ತರುವಾಯ ಜಪಾನ್ ದೇಶಕ್ಕೆ ಹೋಗಿ ಅಲ್ಲಿಂದ ಚೈನಾ ದೇಶಕ್ಕೆ ಪ್ರಯಾಣ ಮಾಡುವಾಗ ದಾರಿಯಲ್ಲಿ ೧೫೫೨ನೇ ದಶಂಬರ ೩ರಲ್ಲಿ ಸೆನ್‌ಚಾನ್ ದ್ವೀಪದಲ್ಲಿ ಕಾಲವಾದರು. ಕೆಲವು ಕಾಲದ ತರುವಾಯ ಇವರ ಪವಿತ್ರ ಶರೀರವನ್ನು ಮಲಕಾ ದ್ವೀಪಕ್ಕೆ ತಂದರು. ಕೊನೆಗೆ ಇದನ್ನು ಗೋವೆಗೆ ತಂದರು.

೨೬ ಗುಂಡುಗಳನ್ನು ಸಹಿಸಿದ ಸತ್ಯಾಗ್ರಹ ವೀರನು:—ಪಲನಾಡ ತಾಲೂಕಿನಲ್ಲಿ ಮಿಂಚಲಪಾಡು ಎಂಬ ಹಳ್ಳಿಯಲ್ಲಿ ಅಡವಿಯ ಅನ್ಯಾಯಗಳಾಗ ಹತ್ತಿದ್ದರಿಂದ ಅಲ್ಲಿಯ ಕೆಲ ರೈತರು ಅಡವಿಯ ಕಂದಾಯವನ್ನು ಕೊಡಬಾರದೆಂದು ನಿಶ್ಚಯಿಸಿದ್ದರು. ಅವರ ವ್ಯವಸ್ಥೆ ಮಾಡಬೇಕೆಂದು ಕಲೆಕ್ಟರು ಫೌಜುದಾರರನ್ನು ಕರೆದುಕೊಂಡು ಅಲ್ಲಿಗೆ ಹೋದರು. ಆದಕ್ಕೆ ಆ ಹಳ್ಳಿಯ ಮುಖಂಡರಾದ ಕನ್ನೆಗಂಟಿ ಹನುಮಂತನೆಂಬುವನು ಅಡ್ಡಿಮಾಡಿದನು. ಆಗ್ಗೆ ಪೋಲೀಸರು ಅವನ ಮೇಲೆ ಗುಂಡು ಹಾರಿಸಿದರು. ಹನುಮಂತನು ವೀರ್ಯದಿಂದ ಇದಕ್ಕೆ ಎದುರಾಗಿ ಒಬ್ಬನೇ ೨೬ ಗುಂಡುಗಳನ್ನು ಸಹಿಸಿಕೊಂಡನು. ಆದರೆ ಮುಂದೆ ಕೆಲ ಹೊತ್ತಿಗೆ ಮಡಿದನು. ಅವನ ಹೆಂಡತಿಯು ಅವನ ಗೋರಿಯ ಮೇಲೆ ಮೇಲಿನ ಸಂಗತಿಯನ್ನು ಕಲ್ಲಿನಲ್ಲಿ ಕೊರೆಯಿಸಿರುವಳಂತೆ. ರಾಜಹಂಸ.

ದಕ್ಷಿಣ ಕನ್ನಡ

ಕೋಟೆಕಾರು:—ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ಇದೇ ನವಂಬರ ತಾ. ೧೨ನೇ ಆದಿತ್ಯವಾರ ದಿವಸ ಮಧ್ಯಾಹ್ನ ೧½ ಗಂಟೆಗೆ ಶ್ರೀಯುತ ಬ್ರಹ್ಮಶ್ರೀ ಒಡ್ಡಮನೆ ಆತ್ಮರಾಮ ಶಾಸ್ತ್ರಿ [illegible] ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ನೆರವೇರಿತು. [illegible] ಬಂದೊಡನೆಯೇ [illegible] ಉತ್ಸವ ಆರಂಭವಾಯಿತು. ಸೂಚೀಪತ್ರ ಪ್ರಕಾರ ದೇವರ ಪ್ರಾರ್ಥನೆ, ಸ್ವಾಗತಗೀತ, ಮಕ್ಕಳ ಆಟಿಕೆ, ವರದಿ ಓದುವಿಕೆ, ಇನಾಂ ಹಂಚೋಣ ಸಹಾ ನಡೆದವು. ತದನಂತರ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಅಧ್ಯಾಪಕರಾದ ಮ. ರಾ. ರಾ. ಎಮ್. ಬಾಬು, ಬಿ. ಎ. ಎಲ್. ಟಿ.ಯವರು ಸುಶಿಕ್ಷಿತ ಪರವಾಗಿ ಈ ಶಾಲಾ ಅಭಿವೃದ್ಧಿಯ ವಿಷಯ ಒಂದು ಬೋಧಪ್ರದವಾದ ಭಾಷಣವನ್ನು ಮಾಡಿದರು. ಅಧ್ಯಕ್ಷ ಮಹಾಶಯರು, ಈ ಶಾಲೆಯನ್ನು ಅಭಿನಂದಿಸಿ ಸುರಸವಾದ ರೀತಿಯಲ್ಲಿ [illegible] ಭಾಷಣದಿಂದ ಆನಂದಗೊಳಿಸಿದರು. ಈ ಉತ್ಸವ ಸಂದರ್ಭದಲ್ಲಿ [illegible] ಸಂಘದ [illegible] ಸಂಘದ ಸಹಾಯದಿಂದ [illegible] ಉತ್ತಮ ಬ್ಯಾಂಡ್ ವಾದ್ಯ[illegible]ದಿಂದ ಸಭೆಗೆ [illegible] ಉಂಟುಮಾಡಿದರು. ಈ ಶಾಲಾ ಮೆನೇಜರರು ಅಧ್ಯಕ್ಷರಿಗೆ [illegible] ಪುಷ್ಪಮಾಲೆಯನ್ನು ಹಾಕಿ, ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು. [illegible] ಭಾಷಣ ಮಾಡಿದ ಮ. ರಾ. ರಾ. ಎಮ್. ಬಾಬು, ಬಿ. ಎ. ಎಲ್. ಟಿ. ಯವರನ್ನು ವಂದಿಸಿ ಸಮಸ್ತ ಸಭಿಕರಿಗೆ ತನ್ನ ಕೃತಜ್ಞತೆಯನ್ನು ಅರ್ಪಿಸಿದರು. [illegible] ಸಭೆಯು ಮುಕ್ತಾಯವಾಗಿ [illegible] ಸಭೆಯು ಆರಂಭವಾಯಿತು.

ಕಾಸರಗೋಡು:—೧೯೨೨ನೇ ಇದೇ ನವಂಬರ ತಿಂಗಳ [illegible] ಗಂಟೆ [illegible] ಬೋರ್ಡು ಮೆಂಬರರ ಸಭೆಯು [illegible] ನಲ್ಲಿ ಕೂಡುವುದು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಮಂಗಳೂರು.

ತಾ. ೫—೧೧—'೨೨ರಲ್ಲಿ ಮಂಗಳೂರು ಕರ್ನಾಟಕ ತಿಲಕ ಮಹಾವಿದ್ಯಾಲಯದಲ್ಲಿ ಜರುಗಿದ ಜಿಲ್ಲಾ ಕಾಂಗ್ರೆಸ್ ಕಮಿಟಿಯು ಮಹಾಸಭೆಯ ವರದಿ:—

೧. ನಮ್ಮ ಜಿಲ್ಲೆಯ ಉಡುಪಿ ತಾ. ಕಾ. ಕ. ಯ ಕಾರ್ಯದರ್ಶಿಯರಾಗಿದ್ದು ತಮ್ಮ ಸರ್ವಸ್ವವನ್ನೂ ಭಾರತಮಾತೆಯ ಸೇವೆಗಾಗಿ ಅರ್ಪಿಸಿ ಅತ್ಯುತ್ಸಾಹದಿಂದ ಕೆಲಸಮಾಡುತ್ತಿದ್ದು ಅಕಾಲಮರಣಹೊಂದಿದ ದೇಶಭಕ್ತ ಕೋಸ್ಟೆ ಗೋವಿಂದ ಪೈಗಳ ಆತ್ಮಕ್ಕೂ ಬೆಳಗಾಂವಿನಲ್ಲಿ ಅತ್ಯುತ್ಸಾಹದಿಂದ ದೇಶಸೇವೆ ಮಾಡುತ್ತಿದ್ದು ಅಕಾಲಮರಣಹೊಂದಿದ ದೇಶಭಕ್ತ ಕೃಷ್ಣರಾವ್ ಶಿ. ಕರುಗುಪ್ಪೀಕರರವರ ಆತ್ಮಕ್ಕೂ ಶಾಂತಿಯಾಗಲಿ. ಈ ಠರಾವನ್ನು ಅವರವರ ಕುಟುಂಬದವರಿಗೆ ಕಳುಹಿಸಬೇಕಾಗಿ ನಿರ್ಣಯಿಸಲಾಯಿತು.

೨. ಮಂಗಳೂರು, ಉಡುಪಿ ಮತ್ತು ಕಾಸರಗೋಡು ತಾಲೂಕು ಕಮಿಟಿಗಳ ಮಹಾ ಸಭೆಗಳಿಂದ ಶಿಫಾರಸುಮಾಡಲ್ಪಟ್ಟ ಗಯಾಕಾಂಗ್ರೆಸಿನ ಪ್ರತಿನಿಧಿಗಳ ಹೆಸರುಗಳನ್ನು ನಾವು ಮಂಜೂರುಮಾಡಿ, ಜಿಲ್ಲೆಯಿಂದ ಚುನಾಯಿಸಲ್ಪಡಲು ಬಾಕಿ ಉಳಿಯುವ ಹತ್ತು ಸ್ಥಳಗಳಿಗೆ ಈ ಕೆಳಗಿನ ಮಹಾಶಯರನ್ನು ಪ್ರತಿನಿಧಿಗಳಾಗಿ ಚುನಾಯಿಸಲಾಯಿತು:—

ಕಾರ್ಕಳ—೧ ಕೆ. ಲಕ್ಷ್ಮಣ ಕುಡುವರು, ೨ ಪುಳ್ಕೇರಿ ರಾಮ ಪ್ರಭುಗಳು, ಪುತ್ತೂರು, ೩ ಬಿ. ವೆಂಕಪ್ಪಯ್ಯಗಳು, ೪ ಕಲ್ಲೆ ಭುವನೆ ಹೆಗ್ಗಡೆಯರು, ೫ ಕೆ. ಎನ್. ದಾಸಪ್ರಭುಗಳು, ಉಳ್ಳಾಲ ಸಂಜೀವರಾಯರು, ೭ ಅ. ಭೋಜರಾಯರು, ೮ ಬಂಗ್ಲೆ ಸೀತಾರಾಮ ಶಾಸ್ತ್ರಿಯರು, ೯ ಮುಲ್ಕಿ ನರಹರಿ ಶಾಸ್ತ್ರಿಯರು, ೧೦ ಶೇಕ್‌ಫರೀದ್ ಸಾಹೇಬರು.

ಮಂಗಳೂರು ತಾಲೂಕಿನಿಂದ ಚುನಾಯಿಸಿ ಬಂದವರು:—೧ ಕಾ. ಸದಾಶಿವರಾಯರು, ೨ ಮಹಮ್ಮದ್ ಜಮಾಲುದ್ದೀನ್ ಸಾಹೇಬರು, ೩ ಉಡುಪಿ ಗೋವಿಂದರಾಯರು, ೪ ಎ. ರಾಮಚಂದ್ರರಾಯರು ೫ ಶ್ರೀಮತಿ ಅ. ಭವಾನಿಯಮ್ಮ.

ಉಡುಪಿ ತಾಲೂಕಿನಿಂದ ಚುನಾಯಿಸಿ ಬಂದವರು:—೧ ಕೊ. ಪಾಂಡುರಂಗ ಪೈಗಳು, ೨ ನರಸಿಂಹ ರಾಮಶರ್ಮರು, ೩ ಉಪೇಂದ್ರ ಅನಂತ ಪೈಗಳು, ೪ ಅನಂತ ಪದ್ಮನಾಭ ಭಟ್ಟ, ೫ ಶ್ರೀಮತಿ ಸಾ. ಗೌರಿಬಾಯಿ.

ಕಾಸರಗೋಡು ತಾಲೂಕಿನಿಂದ ಚುನಾಯಿಸಿ ಬಂದವರು:—೧ ಸಿ. ಬಾಪುಕುಂಞ್ ಬ್ಯಾರಿಗಳು, ೨ ಬಳ್ಳಂಬೆಟ್ಟು ಮಾಧವ ಪೈಗಳು, ೩ ಪುತ್ತಿ ಉಮಾನಾಥರಾಯರು, ೪ ಮಹಮ್ಮದ್ ಶೆರೂಲರು,

೩. ಈ ಕೆಳಗಿನ ಉಮೇದ್ವಾರರನ್ನು ಪ್ರಾಂತಿಕ ಕಮಿಟಿಯು ಚುನಾಯಿಸುವ ಬಗ್ಗೆ ಶಿಫಾರಸು ಮಾಡಲಾಗಿದೆ. ಅವರ ಹೆಸರು ಅವರಿಗೆ ದೊರೆತ ವೋಟಿನ ಸಂಖ್ಯೆಯ ಕ್ರಮದಲ್ಲಿದೆ:—೧ ಅಬ್ದುಲ್ ಖಾದರ್ ಅಸಾದಿ ಯೂನಿ ಬಾದಶಾ ಸಾಹೇಬರು, ೨ ಎಮ್. ಜಿ. ರಾಮಣ್ಣಶೆಟ್ಟಿ, ೩ ನಾರಾಯಣ ಸೋಮಯಾಜಿಗಳು, ೪ ಪಾ. ಕೃಷ್ಣರಾಯರು, ೫ ಟಿ. ಮಾರಪ್ಪನವರು.

೪. ಇನ್ನು ಬರಬಹುದಾದ ಉಮೇದ್ವಾರರ ಹೆಸರುಗಳನ್ನು ಕಾರ್ಯದರ್ಶಿಯರು ಪ್ರಾ. ಕಮಿಟಿಗೆ ಶಿಫಾರಸು ಮಾಡಲು ಅಧಿಕಾರಹೊಂದಿರುತ್ತಾರೆ. ಈ ಶಿಫಾರಸು ಮಾಡುವಾಗ್ಗೆ ಕುಂದಾಪುರ ತಾಲೂಕಿನಿಂದ ಬರಬಹುದಾದ ಉಮೇದ್ವಾರರ ಪೈಕಿ ಇಬ್ಬರನ್ನು ಅವರು ಯೋಗ್ಯ ಕಂಡಹಾಗೆ ಚುನಾಯಿಸಿ ಪ್ರಾ. ಕಮಿಟಿಗೆ ಶಿಫಾರಸುಮಾಡಿದ ಇಡೀ ಪಟ್ಟಿಯಲ್ಲಿ ಪ್ರಥಮ ಪಕ್ಕಕ್ಕೇ ಕೊಡತಕ್ಕದ್ದು. ಉಮೇದ್ವಾರರು ತಮ್ಮ ಹೆಸರುಗಳನ್ನು ಈ ತಿಂಗಳ ೧೫ನೇ ತಾರೀಕಿನೊಳಗೆ ಇಲ್ಲಿಗೆ ತಲಪುವ ಹಾಗೆ ಕಳುಹಿಸತಕ್ಕದ್ದು ಮತ್ತು ಹೀಗೆ ಕಳುಹಿಸುವರೆ ಪತ್ರಗಳಲ್ಲಿ ಕಾರ್ಯದರ್ಶಿಯವರು ಸೂಚಿಸತಕ್ಕದ್ದು.

೫. ಪ್ರಾಂತಿಕ ಕಮಿಟಿಗೆ ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ ಮತ್ತು ಕಾಸರಗೋಡು ತಾಲೂಕುಗಳಿಂದ ಚುನಾಯಿತವರನ್ನು ನಾವು ಅಂಗೀಕರಿಸಿ ಉಳಿದ ಸ್ಥಳಗಳಿಗೆ ಈ ಕೆಳಗಿನವರನ್ನು ಚುನಾಯಿಸಲಾಯಿತು:—೧ ಅ. ಭೋಜರಾಯರು, ೨ ಉಚಿಲ ರಾಮರಾಯರು, ೩ ಉಳ್ಳಾಲ ಸಂಜೀವರಾಯರು, ೪ ಬಿ. ವೆಂಕಪ್ಪಯ್ಯಗಳು, ೫ ಅರಿಯಡ್ಕ ಸುಬ್ಬಯ್ಯ ರೈಗಳು, ೬ ಬಾಯರ ಸೀತಾರಾಮ ಪದಕಣ್ಣಾಯರು, ೭ ಬಿ. ಮಹಾಬಲ ಹೊಳ್ಳರು, ೮ ವ. ಕೃ. ಭಾರದ್ವಾಜರು, ೯ ಅ. ಭವಾನಿಯಮ್ಮ, ೧೦ ಕಾ. ಶಾಂತಾಬಾಯಮ್ಮ.

ಮಂಗಳೂರು ತಾಲೂಕು ಕಮಿಟಿಯಿಂದ ಚುನಾಯಿಸಲ್ಪಟ್ಟವರ ಹೆಸರು:—೧ ಕಾ. ಸದಾಶಿವರಾಯರು, ೨ ಉಡುಪಿ ಗೋವಿಂದರಾಯರು, ೩ ಕೆ. ಎನ್. ದಾಸಪ್ರಭುಗಳು, ೪ ಎಸ್. ಇ. ಡಿ. ಕುಂಞರು, ೫ ಬಿ. ಪರಮೇಶ್ವರಯ್ಯ, ಉಡುಪಿ ತಾಲೂಕಿನಿಂದ ಚುನಾಯಿಸಲ್ಪಟ್ಟವರ ಹೆಸರು:—೧ ಕುಂಬಳೆ ರಾಘವೇಂದ್ರರಾಯರು, ೨ ಕೊ. ನರಸಿಂಹ ಪೈಗಳು, ೩ ಐ. ಎ. ಪೈಗಳು, ೪ ದಿನೇಶ ವೆಂಕಟ್ರಮಣಯ್ಯನವರು, ೫ ಸಾ. ಅನಂತಪದ್ಮನಾಭ ಭಟ್ಟ, ಕಾಸರಗೋಡು ತಾಲೂಕಿನಿಂದ ಚುನಾಯಿಸಲ್ಪಟ್ಟವರ ಹೆಸರು:—೧ ಕೊ. ಭುವನೆ ಶೆಟ್ಟಿ, ೨ ಇಣ್ಣೂರು ರಾಮಶಾಸ್ತ್ರಿಯವರು, ೩ ಮಹಮ್ಮದ್ ಶೆರೂಲರು, ೪ ಬದಿಯಡ್ಕ ರಾಮರಾಯ ಶೆಣ್ಯ.

ಚುನಾಯಿಸಲ್ಪಟ್ಟ ಪ್ರಾಂತಿಕ ಕಮಿಟಿಯ ಪ್ರತಿಯೊಬ್ಬ ಸದಸ್ಯರು ತಮ್ಮ ಪ್ರವೇಶ ಹಣ ರೂಪಾಯಿ ೫ನ್ನು ಈ ತಿಂಗಳ ತಾ. ೨೦ರ ಒಳಗೆ ಕಾರ್ಯದರ್ಶಿಯರಿಗೆ ಕೊಡತಕ್ಕದ್ದು. ತಪ್ಪಿದಲ್ಲಿ ಅವರ ಬದಲಿಗೆ ಬೇರೆಯವರನ್ನು ಚುನಾಯಿಸುವ ಅಧಿಕಾರವು ಈ ಸಭೆಯು ಕಾರ್ಯಕಾರಿ ಮಂಡಲಿಗೆ ಕೊಟ್ಟಿದೆ.

೬. ಜಿಲ್ಲಾ ಖಾದಿ ಭಂಡಾರವನ್ನು ಮಂಗಳೂರು ತಾಲೂಕು ಕಮಿಟಿಗೆ ವಹಿಸಿಕೊಡುವ ವಿಚಾರದಲ್ಲಿ ಉಡುಪಿ ತಾ. ಕಾ. ಕಮಿಟಿಯವರು ತಾ. ೧೮-೩-೨೨ ಮತ್ತು ೧೯-೯-'೨೨ರಲ್ಲಿ ಬರಕೊಂಡ ಪತ್ರಗಳನ್ನು ಓದಲಾಯಿತು. ಪ್ರಕೃತಕ್ಕೆ ಜಿಲ್ಲಾ ಖಾದಿ ಭಂಡಾರವು ಜಿಲ್ಲಾ ಕಮಿಟಿಯಿಂದಲೇ ನಡೆಯುವುದು ಯುಕ್ತವೆಂದೂ, ಅಗತ್ಯಬಿದ್ದ ಇತರ ತಾಲೂಕುಗಳಲ್ಲಿ ತೆರೆಯುವುದು ವಗೈರೆ ಯೋಗ್ಯ ವ್ಯವಸ್ಥೆಯನ್ನು ಕೂಡೆ ಅನುಕೂಲವಿದ್ದಷ್ಟು ಮಟ್ಟಿಗೆ ಮಾಡಬೇಕಾಗಿಯೂ ನಿರ್ಣಯಿಸಲಾಯಿತು.

೭. ಖಾದಿ ಭಂಡಾರದ ಕಮಿಟಿಯನ್ನು ಹೋಗಲಾಡಿಸಿ ಖಾದಿ ಭಂಡಾರದ ಆಡಳಿತೆಯನ್ನು ಜಿ. ಕಾ. ಕ. ಯ ಕಾರ್ಯಕಾರಿ ಮಂಡಳಿಯೇ ನೋಡಬೇಕಾಗಿ ನಿರ್ಣಯಿಸಲಾಯಿತು.

೮. ನಮ್ಮ ಜಿಲ್ಲೆಯಲ್ಲಿ ಖಾದಿಪ್ರಚಾರ ಕೆಲಸವನ್ನು ಸರಿಯಾಗಿ ನಡೆಯಿಸುವರೆ ಹಣದ ಅಡಚಣೆಯು ಬಹಳ ಇರುವುದರಿಂದ ಅಖಿಲಭಾರತ ರಾಷ್ಟ್ರೀಯ ಕಮಿಟಿಯಿಂದ (A. I. C. C.) ಪ್ರಾಂತಿಕ ಕಮಿಟಿಯವರು ನಮಗೆ ಐದುನಾರು ಸಾವಿರ ರೂಪಾಯಿಗಳನ್ನು ಕೂಡಲೇ ಸಾಲವಾಗಿ ತೆಗಿಸಿ ಕೊಡುವಂತೆ ಪ್ರಾಂತಿಕ ಕಮಿಟಿಯನ್ನು ಪ್ರಾರ್ಥಿಸತಕ್ಕದ್ದು.

೯. ಉಡುಪಿ ತಾ. ಕ. ಕಾರ್ಯದರ್ಶಿಯವರ ತಾ. ೩-೧೧-'೨೨ರ ಪತ್ರ ಓದಲ್ಪಟ್ಟಿತು. ಅವರ ಕೇಳಿಕೆಯಂತೆ ಜಿಲ್ಲಾ ಪ್ರಥಮ ಪರಿಷತ್ತನ್ನು ಈ ಕೆಳಗಿನ ಉಪಕಮಿಟಿಯವರು ಮಾಡುವ ನಿರ್ಣಯಗಳಿಗೊಳಪಟ್ಟು ಉಡುಪಿಯಲ್ಲಿ ಜರಗಿಸಬಹುದಾಗಿ ನಿರ್ಣಯಿಸಲಾಯಿತು.

೧೦. ಕನ್ನಡ ರಾಷ್ಟ್ರೀಯ ಶಿಕ್ಷಣ ಮಂಡಲ ಮುಂಬಾಯಿಯವರಿಗೆ ನಮ್ಮ ರಾಷ್ಟ್ರೀಯ ಶಾಲೆಗಳ ಸಂಪೂರ್ಣ ಅನುಭವವನ್ನು ಕೊಟ್ಟು ಹಣ ಸಹಾಯವನ್ನು ಕೇಳುವ ಸಂಪೂರ್ಣ ಅಧಿಕಾರವನ್ನು ಮೇಲಿನ ಕಮಿಟಿಗೆ ಕೊಡಲಾಯಿತು.

ಉತ್ತಮವಾದೊಂದು ವಿದ್ಯಾಶಾಲೆಯ ಅಭಿವೃದ್ಧಿಗೆ ಸಹಾಯಮಾಡಿರಿ.

ಮಂಗಳೂರಿನ ಕೆನರಾ ಹೈಸ್ಕೂಲು ಇನ್ನೂ ಅಭಿವೃದ್ಧಿಯನ್ನು ಹೊಂದುವ ಹಾಗೆ ಔದ್ಯೋಗಿಕ ಶಿಕ್ಷಣ, ಆಟಬುಗಳ ತರಬೇತು, ವನಸ್ಪತಿ ಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದುವನ್ನು ಕಲಿಸಿಕೊಡಲು ಅಗತ್ಯವಾದ ಸಾಧನೋಪಕರಣಗಳು ವ ಔದ್ಯೋಗಿಕ ಉಪಾಧ್ಯಾಯರ ಸಂಬಳ ಬಡತಿ ಮುಂತಾದುವನ್ನು ಒದಗಿಸಿಕೊಳ್ಳಲು ಅವಶ್ಯಕವಾಗಿರುವ ವಿಶೇಷ ಧನವನ್ನು ಕೂಡಿಸಲು ಈಗ ಸೋಡ್ತಿಯ ಮೂಲಕ ಸಾಧಿಸಬೇಕೆಂದು ಸದರಿ ಶಾಲಾ ಆಡಳಿತೆಯ ಕೌನ್ಸಿಲಿನವರೂ ಇತರ ಸದ್ಗೃಹಸ್ಥರೂ ಸೇರಿ ಒಂದು ಕಮಿಟಿಯು ಏರ್ಪಾಡಾಗಿರುವುದು. ಈ ವಿದ್ಯಾಶಾಲೆಯು ಸಂಸ್ಥಾನದ ಶಾಲೆಗಳಲ್ಲಿ ಅತ್ಯುತ್ತಮ ತರಗತಿಗೆ ಸೇರಿದೆ ಎಂಬುದಕ್ಕೆ ವಿದ್ಯಾಖಾತೆಯ ಇನ್ಸ್‌ಪೆಕ್ಟರರು ಈ ಶಾಲೆಯು ತನ್ನ ಇಡೀ ಸರ್ಕಲಿನಲ್ಲಿ ಅತ್ಯುತ್ತಮವಾದ ಶಿಕ್ಷಣ ಸಾಧನೋಪಕರಣಗಳಿಂದ ಸಜ್ಜುಗೊಂಡಿದೆ' ಎಂದು ಬರೆದಿರುವ ಪ್ರಶಂಸೆಯೆ ಸಾಕ್ಷಿಯಾಗಿದೆ. ಈ ಶಾಲೆಯಿಂದ ಕಲಿತುಕೊಂಡಿರುವ ವಿದ್ಯಾರ್ಥಿಗಳಲ್ಲಿ ಐ. ಸಿ. ಎಸ್ ಆಫೀಸರರೂ, ಐ. ಎಮ್. ಎಸ್ ಆಫೀಸರರೂ, ಜಿಲ್ಲಾ ಕಲೆಕ್ಟರರೂ, ಜಿಲ್ಲಾ ಜಡ್ಜರೂ, ವ ಇತರ ಪ್ರಾಮುಖ್ಯ ಗೃಹಸ್ಥರೂ ಹಲವರಿದ್ದಾರೆ.

ಶಾಲೆಯ ಈ ಉದ್ದೇಶಗಳು ಮೊನ್ನೆಯ ತನಕ ಸಾಧಿಸಲ್ಪಡುವುದು ಸುಲಭವಾಗಿದ್ದಿಲ್ಲ. ಇದಕ್ಕೆ ಸ್ಥಳ ಸಂಕೋಚತೆಯೇ ಮುಖ್ಯವಾದ ಕಾರಣವಾಗಿದ್ದಿತು. ಈಗ ದಯಾಳುವಾದ ಸರಕಾರದವರು ಶಾಲೆಯ ಸಹಾಯಕ್ಕೆ ನೆರವಾಗಿ ಸುತ್ತಲಿನ ಸ್ಥಳವನ್ನು ಶಾಲೆಗಾಗಿ ಕೊಂಡುಕೊಟ್ಟಿರುವುದರಿಂದ, ಸ್ಥಳ ಸಂಕೋಚತೆಯು ಇಲ್ಲವೆಂತಾದರೂ ಆ ಸ್ಥಳಕ್ಕಾಗಿ ಶಾಲೆಯ ಪಾಲಿಗೆ ಬಿದ್ದ ಖರ್ಚನ್ನು ತೆರುವುದಕ್ಕೆ ಆಡಳಿತೆಯವರ ಕೈಯಲ್ಲಿದ್ದ ಹಣದ ಹೆಚ್ಚಿನ ಪಾಲು ವ್ಯಯವಾಯಿತು. ಕಮ್ಮಿಯಾದ ಶಾಲಾ ಭಂಡವಾಳ ಭರ್ತಿಮಾಡುವ ಬಗ್ಗೆ ಮೇಲೆ ಹೇಳಿದ ರೀತಿಯಲ್ಲಿ ಈ ಸೋಡ್ತಿ ಏರ್ಪಡಿಸಿರುತ್ತದೆ.

(ಮಾಜಿ) ಡಿಪ್ಯುಟಿ ಕಲೆಕ್ಟರರೂ, ಮುನ್ಸಿಪಲ್ ಚೆಯರ್ಮೇನ್ ವ ಕೌನ್ಸಿಲರರೂ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರೂ ಹೈಕೋರ್ಟ ವ ಇತರ ವಕೀಲರೂ ದೊಡ್ಡ ಸಾಹುಕಾರರೂ ಜಮೀನುದಾರರೂ ಸೇರಿರುವ ಒಂದು ಕಮಿಟಿಯವರ ಮೂಲಕ ಈ ಸೋಡ್ತಿಯ ಕಾರ್ಯವನ್ನು ನಿರ್ವಹಿಸಲಾಗುವುದು.

ಟಿಕೇಟಿಗೆ ಒಂದೊಂದು ರೂಪಾಯಿ ಮೌಲ್ಯದ ಎರಡು ಲಕ್ಷ ಟಿಕೇಟುಗಳ ಮಾರಾಟದಿಂದ ಹುಟ್ಟುವ ಎರಡು ಲಕ್ಷ ರೂಪಾಯಿಗಳ ಮೊಬಲಗಿನಲ್ಲಿ ಸಮ ಅರ್ಧ ಐವೇಜನ್ನು ಶಾಲೆಯ ಪ್ರಯೋಜನಕ್ಕಾಗಿ ಪ್ರತ್ಯೇಕಿಸಿಟ್ಟು, ಉಳಿದ ಹಣದಿಂದ ಸೋಡ್ತಿಯ ಖರ್ಚನ್ನು ಕಳೆದು ಮಿಕ್ಕುಳಿದ ಸಿಲ್ಕು ಹಣವನ್ನು ಕೆಳಗೆ ಕಾಣಿಸಿರುವ ರೀತಿಯಲ್ಲಿ ಬಹುಮಾನವಾಗಿ ಟಿಕೇಟುದಾರರಿಗೆ ಹಂಚುವಂತೆ ಎಣಿಸಲಾಗಿದೆ.

ಮೊದಲನೆಯ ಬಹುಮಾನ ರೂಪಾಯಿ ೨೫,೦೦೦ ಎರಡನೆಯದು ರೂ. ೧೦,೦೦೦, ಮೂರನೆಯದು ರೂ. ೫೦೦೦, ಇವಲ್ಲದೆ ಕನಿಷ್ಠ ಪಕ್ಷ ೫ ರೂಪಾಯಿಯಿಂದ ರೂ. ೨೫೦೦ ವರೆಗಿನ ಒಟ್ಟು ½ ಲಕ್ಷ ಮೌಲ್ಯದ ೩೩೬೬ ಇತರ ಬಹುಮಾನಗಳಿವೆ.

ಟಿಕೇಟು ಮಾರಾಟವನ್ನು ೩೧-೭-'೨೩ನೇ ತಾರೀಕಿಗೆ ಮುಗಿಸಿ, ತಾ. ೧೮-೮-೨೩ಕ್ಕೆ ಸೋಡ್ತಿಯನ್ನು ತೆಗಿಯುವುದಾಗಿ ನಿರ್ಧರಿಸಿದೆ. ಟಿಕೇಟು ಮಾರಿದವರಿಗೂ ಪತ್ರಿಕೆಗಳಿಗೂ ಸೋಡ್ತಿಯ ಫಲಿತಾಂಶವು ಪ್ರಕಟನೆಯ ಬಗ್ಗೆ ತಿಳಿಸಲಾಗುವುದು.

ಪ್ರತಿ ೨೪ ಟಿಕೇಟುಗಳನ್ನು ಮಾರುವವರಿಗೆ ಒಂದೊಂದು ಟಿಕೇಟು ಉಚಿತ. ಅದಲ್ಲದೆ ಟಿಕೇಟು ಮಾರುವವರ ಬಗ್ಗಾಗಿಯೆ ರೂ. ೧೨೫ ರಿಂದ ರೂ. ೧೦೦೦ ವರೆಗೆ ಅವರವರು ಮಾರಿದ ಟಿಕೇಟುಗಳ ಸಂಖ್ಯೆಯ ಮೇಲೆ ಬಹುಮಾನಗಳು ಕೊಡಲಾಗುವುವು.

ಈ ರೀತಿಯಾಗಿ ಶಾಲೆಗೆ ಸಹಾಯ ಮಾಡುವವರೂ ತಮ್ಮ ಅದೃಷ್ಟ ವಶಾತ್ ಬಹುಮಾನಗಳನ್ನು ಪಡೆದರೆ ಭಾಗ್ಯವಂತರಾಗಬಹುದು.

ಎಲ್ಲಾ ಪತ್ರವ್ಯವಹಾರಕ್ಕೂ ಮಾಹಿತು ಪಡೆಯುವುದಕ್ಕೂ ವಿಳಾಸ.—

ಗೌರವ ಕಾರ್ಯದರ್ಶಿ,
ಕೆನರಾ ಹ್ಯಾಸ್ಕೂಲ ಸೋಡ್ತಿ ಕಮಿಟಿ, ಉರ್ವ ಪೋಸ್ಟ ಆಫೀಸು.
ದಕ್ಷಿಣ ಕನ್ನಡ.

ಹುಬ್ಬಳ್ಳಿಯಲ್ಲಿ ಜರುಗಿದ ಶಿಕ್ಷಣ ಪರಿಷತ್ತು.

ಕರ್ನಾಟಕದ ಮೊದಲನೆಯ ಶಿಕ್ಷಣ ಪರಿಷತ್ತು, ಕಳೆದ ತಾರೀಕು ೨ ಮತ್ತು ೩ರಲ್ಲಿ ಅಹಮ್ಮದಾಬಾದಿನ ಶ್ರೀಯುತ ಕಲೇಲಕರರ ಅಧ್ಯಕ್ಷತೆಯಲ್ಲಿ ಜರಗಿತು. ಈ ಪರಿಷತ್ತಿನಲ್ಲಿ ಪಾಸಾದ ಕೆಲವು ಠರಾವುಗಳು ಕೆಳಗೆ ಕೊಟ್ಟಿವೆ.

೧. ಶ್ರೀ. ಕರಗುಪ್ಪೀಕೃಷ್ಣರಾಯರೂ ಶ್ರೀ. ಜಯರಾವ್ ದೇಶಪಾಂಡೆಯವರೂ ಸ್ವಾರ್ಥತ್ಯಾಗದಿಂದ ರಾಷ್ಟ್ರಕಾರ್ಯವನ್ನು ಮಾಡಿ ಸ್ವರ್ಗಸ್ಥರಾದ ಬಗ್ಗೆ ಈ ಪರಿಷತ್ತು ತನ್ನ ದುಃಖವನ್ನು ಸೂಚಿಸುವುದಲ್ಲದೆ ಅವರ ಕುಟುಂಬಕ್ಕೂ ತನ್ನ ಸಂತಾಪವನ್ನು ತಿಳಿಸುತ್ತದೆ.

೨. ಬಾರದೋಲಿಯಲ್ಲಿ ಆದ ಶಾಲೆ ಕೋಲೇಜುಗಳ ಬಹಿಷ್ಕಾರದ ಠರಾವಿಗೆ ಈ ಪರಿಷತ್ತಿನ ಒಪ್ಪಿಗೆ ಇದೆ. ಅದರಲ್ಲೇನೂ ಹೆಚ್ಚು ಕಡಿಮೆ ಮಾಡಲು ಇದು ಇಚ್ಛಿಸುವುದಿಲ್ಲ; ಅಥವಾ ಅಗತ್ಯವೆಂದು ಅಭಿಪ್ರಾಯಪಡುವುದಿಲ್ಲ.

೩. ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಹಳ್ಳಿಗಳಲ್ಲೂ ಸ್ಥಾಪಿಸತಕ್ಕದ್ದು. ಈ ಬಗ್ಗೆ ಒಂದು ಕಮಿಟಿಯು ನೇಮಕಮಾಡಲಾಯಿತು.

೪. ರಾಷ್ಟ್ರೀಯ ಶಿಕ್ಷಣವೂ ಧರ್ಮಾಭಿಮಾನವೂ ದೇಶದ ಹೆಣ್ಣು ಮಕ್ಕಳಲ್ಲೂ ಪ್ರಸಾರವಾಗುವಂತೆ ಹುಡುಗಿಯರ ರಾಷ್ಟ್ರೀಯ ಶಾಲೆಗಳನ್ನು ಭಗಿನಿ ಮಂಡಲದವರು ಸ್ಥಾಪಿಸಬೇಕು. ಮತ್ತು ಇವಕ್ಕೆ ಕೊಂಗ್ರೆಸು ಕಮಿಟಿಗಳು ಸಹಾಯ ಮಾಡಬೇಕು.

೫. ರಾಷ್ಟ್ರೀಯ ಶಾಲೆಗಳ ಮೇಲ್ವಿಚಾರಿ ನೋಡುವುದು, ಆಗಾಗ್ಗೆ ಹಿತಸೂಚನೆಗಳನ್ನು ಕೊಡುವುದು, ಹಾಗು ಹಣ ಸಹಾಯದ ವ್ಯವಸ್ಥೆ ಮತ್ತು ಇತರ ವ್ಯವಸ್ಥೆಗಳನ್ನು ಮಾಡಲು ಒಂದು 'ಎಜ್ಯುಕೇಶನ ಬೋರ್ಡ'ನ್ನು ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ನೇಮಿಸುವುದು ಅಗತ್ಯವೆಂದು ಈ ಸಭೆಯ ಅಭಿಪ್ರಾಯವಾಗಿದೆ.

೬. ಪ್ರತಿಯೊಂದು ಶಾಲೆಯಲ್ಲಿ ಹತ್ತಿ ಹಿಂಜುವುದು, ನೂಲುಮಾಡುವುದು ವಸ್ತ್ರವನ್ನು ತಯಾರಿಸುವುದು ಸಹ ಕಲಿಸಬೇಕು.

೭. ಪ್ರತಿಯೊಂದು ಜಿಲ್ಲೆಯಲ್ಲಿ ಪ್ರೌಢ ವಿದ್ಯಾರ್ಥಿಗಳಿಗಾಗಿ ಮಾದರಿಯ ಶಿಕ್ಷಣಾಲಯಗಳನ್ನು ಇಡಬೇಕು.

೮. ರಾಷ್ಟ್ರೀಯ ಶಾಲೆಗಳಲ್ಲಿ ಅಸ್ಪೃಶ್ಯರನ್ನು ಸೇರಿಸಿಕೊಳ್ಳಬೇಕು. ಅಸ್ಪೃಶ್ಯರು ಇನ್ನೂ ಏಳಿಗೆಯನ್ನು ಹೊಂದಲಿಲ್ಲವಾದ್ದರಿಂದ ಅವರಿಗೆ ವಿದ್ಯಾಭ್ಯಾಸವನು ಕೊಡಲು ಹೆಚ್ಚಿನ ಪ್ರಯತ್ನಗಳನ್ನು ನಡಿಸಬೇಕು.

೯. ಹಿಂದೀ ಭಾಷೆಯನ್ನು ಅಗತ್ಯವಾಗಿ ಎಲ್ಲಾ ಶಾಲೆಗಳಲ್ಲೂ ಕಲಿಸಬೇಕು.

೧೦. ಇಂಗ್ಲಿಷನ್ನು ಸಹ ಕಲಿಸಲು ಏರ್ಪಾಡುಗಳನ್ನು ಮಾಡಬೇಕು.

೧೧. ಶಾರೀರಿಕ ಶಿಕ್ಷಣವನ್ನೂ ಸಂಗೀತ ಶಿಕ್ಷಣವನ್ನೂ ಈ ಶಾಲೆಗಳಲ್ಲಿ ಕೊಡಬೇಕು.

೧೨. ಕೂಲಿ ಕೆಲಸಮಾಡುವವರ ಸ್ಥಿತಿ ಹಾಗು ಸಾಂಪತ್ತಿಕ ಸ್ಥಿತಿಯು ಅಭಿವೃದ್ಧಿ ಹೊಂದುವಂತೆ ಮಾಡುವುದಕ್ಕಾಗಿ ಹಗಲು ಶಾಲೆಗಳನ್ನೂ, ರಾತ್ರಿ ಶಾಲೆಗಳನ್ನೂ ಔದ್ಯೋಗಿಕ ಕಾರಖಾನೆಗಳು ಇರುವ ಹುಬ್ಬಳ್ಳಿ ಮೊದಲಾದ ಕಡೆಗಳಲ್ಲಿ ಸ್ಥಾಪಿಸಬೇಕು.

೧೩. ರಾಷ್ಟ್ರಕಾರ್ಯಗಳನ್ನು ನಡಿಸುವ ರೀತಿಯನ್ನು ಕಲಿಸಲು ಸಹಾಯವಾಗುವಂತೆ ಆಶ್ರಮಗಳನ್ನು ಸ್ಥಾಪಿಸುವುದು ಅವಶ್ಯವಿದೆ.

೧೪. ಆಯಾ ಕಡೆಗಳಲ್ಲಿನ ದೇಶೀಯ ಭಾಷೆಗಳಲ್ಲಿ ಪಾಠಗಳನ್ನು ಕಲಿಸುವುದು ರಾಷ್ಟ್ರೀಯ ಶಿಕ್ಷಣಕ್ಕೆ ಸೇರಿದ ಕಾರ್ಯವಾಗಿದೆ. ಆದ್ದರಿಂದ ಕರ್ನಾಟಕದಲ್ಲಿ ಬಹು ಕಡೆಗಳಲ್ಲಿ ಕರ್ನಾಟಕವೇ ಮುಖ್ಯ ಭಾಷೆಯಾಗಿರಬೇಕು. ಮರಾಠಿ ಮಾತಾಡುವವರ ಬಗ್ಗೆ ಇಟ್ಟ ಶಾಲೆಗಳಲ್ಲಿ ಮರಾಠಿಯಿಂದಲೇ ಪಾಠಗಳನ್ನು ಕಲಿಸಬೇಕು. ಆದರೆ ಈ ಶಾಲೆಗಳಲ್ಲೂ ಕರ್ನಾಟಕವು ಖಡ್ಡಾಯವಾಗಿ ಕಲಿಸಬೇಕು. ಇವೇ ಮೊದಲಾದ ಠರಾವುಗಳು ಪಾಸಾಗಿವೆ.

ಅಖಿಲ ಭಾರತೀಯ ಕೀರ್ತನ ಸಮ್ಮೇಲನ ಗಯಾ.

ದೇಶದ ಏಳಿಗೆಗೆ ಸ್ವದೇಶಾಭಿಮಾನವೇ ಮುಖ್ಯವಾದುದು. ಅಂಥ ದೇಶಾಭಿಮಾನವನ್ನು ಜಾಗ್ರತಪಡಿಸಲಿಕ್ಕೆ ವೃತ್ತಪತ್ರಿಕೆ, ಮಾಸಪತ್ರಿಕೆ, ವ್ಯಾಖ್ಯಾನ ಮತ್ತು ಹರಿಕೀರ್ತನೆ ಮುಂತಾದ ಅನೇಕ ಸಾಧನಗಳಿರುತ್ತವೆ. ಅವುಗಳಲ್ಲಿ ಕೀರ್ತನೆ ಇದೊಂದು ದೊಡ್ಡ ಭಾಗವಾಗಿದೆ. ಯಾಕೆಂದರೆ ಈ ಕೀರ್ತನೆಯು ದೈವಭಕ್ತಿ, ದೇಶಪ್ರೀತಿಗಳನ್ನು, ಏಕಕಾಲಕ್ಕೆ ಜಾಗ್ರತಗೊಳಿಸುವ ಸುಲಭೋಪಾಯವೆಂತು ತಿಳಿದು ಹಿಂದಿನ ಕಾಲದಿಂದ ನಮ್ಮ ಧರ್ಮಭೂಮಿಯಾದ ಆರ್ಯಾವರ್ತದಲ್ಲಿ ಅನೇಕ ಸಾಧುಪುರುಷರು ಅವತರಿಸಿ ಕೀರ್ತನ ದ್ವಾರಾ ಜನರಲ್ಲಿ ಜಾಗ್ರತೆಯನ್ನು ಹುಟ್ಟಿಸಿರುವರು. ಅಂಥ ಸಾಧುಶಿಖಾಮಣಿಗಳಲ್ಲಿ ಬಂಗಾಲದ ಲಾರ್ಡ್‌ಗೌರಂಗ, ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರು, ಪಂಜಾಬದಲ್ಲಿ ಗುರುನಾನಕ'ನಂಥವರು, ಮಹಾರಾಷ್ಟ್ರದಲ್ಲಿ ಸಾಧುವರ್ಯ ತುಕಾರಾಮ, ಶ್ರೀರಾಮದಾಸರು, ಕರ್ನಾಟಕದಲ್ಲಿ ಕನಕದಾಸರು, ಪುರಂದರದಾಸರಂಥವರು ಮುಖ್ಯರು. ಇಂಥ ಕಲಿಕಾಲದಲ್ಲಿ ಸಹ ಅನೇಕ ಉಪನ್ಯಾಸಗಳಿಗಿಂತ ಕೀರ್ತನೆಗಳಿಂದ ಆ ಬಾಲವೃದ್ಧರಿಗೂ ಪಂಡಿತ ಪಾಮರರರಿಗೂ, ಸ್ತ್ರೀವರ್ಗಕ್ಕೂ, ಬೋಧವು ಸುಲಭವಾಗಿ ತಿಳಿದು ಅನೇಕ ಮಹತ್ವದ ಕಾರ್ಯಗಳು ಜರಗಿದ್ದನ್ನು ನಮ್ಮ ಅನುಭವದಿಂದ ಬಲ್ಲೆವು. ಸದ್ಯದ ಸ್ವರಾಜ್ಯ ಚಳವಳಿಯಲ್ಲಿ ಶುದ್ಧ ಸಾತ್ವಿಕಭಾವವು ಉತ್ಪನ್ನವಾಗಿ ಶಾಂತಿಮಯ ಅಹಿಂಸಾತತ್ವವು ಬೇರೂರಬೇಕಾದರೆ ಕೀರ್ತನಕಾರರ (ಭಾಗವತರ) ಸುಲಭ ಸುಶ್ರಾವ್ಯ ಕೀರ್ತನೆಯೇ ಮುಖ್ಯ ಸಾಧನವಾದದ್ದರಿಂದ ಈ ವರ್ಷ ಗಯಾದಲ್ಲಿ ಕೂಡುವ ಅಖಿಲ ಭಾರತರಾಷ್ಟ್ರೀಯ ಸಭೆಯ ಜೊತೆಗೆ ಅಖಿಲಭಾರತ ಕೀರ್ತನಕಾರರ ಸಮ್ಮೇಲನವನ್ನು ಕೂಡಿಸಬೇಕೆಂಬ ಇಚ್ಛೆಯಿಂದ ಎಲ್ಲಾ ಕೀರ್ತನಕಾರರಿಗೆ ಈ ವಿನಂತಿಯು ಮಾಡಲ್ಪಡುತ್ತದೆ. ಅದರಂತೆ ಅಖಿಲ ಭಾರತೀಯರು ಇದರಲ್ಲಿ ಮನಸ್ಸು ಇಟ್ಟು ಇಂಥ ಕಾರ್ಯಗಳು ಅವಶ್ಯ ಊರ್ಜಿತ ಸ್ಥಿತಿಗೆ ಬರಬೇಕೆಂದು ಹಾರೈಸಿ ಶ್ರೀ ಕ್ಷೇತ್ರಗಯೆಗೆ ದಯಮಾಡಿ ಬಂದು ಅಲ್ಲಿ ಜರಗುವ ಈ ಕೆಲಸಕ್ಕೆ ಉತ್ಸಾಹಕೊಟ್ಟು ಮಹಾತ್ಮಾ ಗಾಂಧಿಯವರ ಸ್ವರಾಜ್ಯ ಚಳವಳಿಗೆ ತನುಮನಧನಗಳನ್ನು ಅರ್ಪಿಸಿ ವಾಙ್ಮಯರೂಪವಾದ ಸೇವೆಯನ್ನು ಅತ್ಯವಶ್ಯ ಮಾಡುವಿರೆಂದು ನಂಬಿದ್ದೇವೆ. ಈ ಸಮ್ಮೇಲನದ ಪೂರ್ವ ಸಿದ್ಧತೆಗೆ ಅಖಿಲ ಭಾರತ ರಾಷ್ಟ್ರೀಯ ಸಭೆಯವರಿಗೆ ಸ್ಥಳ ವಗೈರೆ ಕೊಡುವುದಕ್ಕೂ ವಿನಂತಿ ಮಾಡಿಕೊಂಡಿದೆ. ಕೊಂಗ್ರೆಸ್ಸಿನ ಜೊತೆಗೆ ಈ ಸತ್ಕಾರ್ಯವನ್ನು ನಡಿಸಲು ಪ್ರಯತ್ನ ಪಡುತ್ತೇವೆ.

ಈ ಪರಿಷತ್ತಿಗೆ ಶ್ರೀಯುತ ಪಂಡಿತ ಮದನಮೋಹನ ಮಾಲವೀಯರಂಥ ಸಾಧು ಪುರುಷರನ್ನು ಅಧ್ಯಕ್ಷ ಪದವಿಗೆ ಆರಿಸಬೇಕೆಂದು ಯೋಚನೆ ಇದೆ. ದಿವಸಗಳು ತೀರ ಸಮೀಪಿಸಿರುವುದರಿಂದ ಅಖಿಲ ಭರತಖಂಡದ ಎಲ್ಲ ಕೀರ್ತನಕಾರರೂ ಮತ್ತು ಈ ಕೀರ್ತನಾಭಿಮಾನಿಗಳಾದ ಸಜ್ಜನರೂ ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ಒಡನೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕು.

ಕೀರ್ತನಕಾರರಿಗೆ ಪ್ರವೇಶ ಫೀ ಹತ್ತು ರೂಪಾಯಿ ಇಡಲ್ಪಡುತ್ತದೆ. ಮತ್ತು ಇಳಿಯುವ ಜಾಗೆ ಊರುಗಳ ವ್ಯವಸ್ಥೆಯು ಬೇರೆ ಮಾಡಲ್ಪಡುತ್ತದೆ. ಅದರ ಮಾಹಿತಿಯನ್ನು ಓಲ್-ಇಂಡಿಯಾ ಕಾಂಗ್ರೆಸ್ ಕಮಿಟಿಯವರಿಂದ ಉತ್ತರ ಬಂದ ಕೂಡಲೇ ತಿಳಿಸುತ್ತೇವೆ.

ಮನುಷ್ಯನು ಜನ್ಮಕ್ಕೆ ಬಂದ ಮೇಲೆ ಗಯಾಕ್ಷೇತ್ರದ ಯಾತ್ರೆಯನ್ನು ಮಾಡದಿದ್ದರೆ ಎಲ್ಲವೂ ವ್ಯರ್ಥವಾಗುವುದೆಂಬುದು ಸರ್ವ ಮಾನವ ಜಾತಿಗೆ ಗೊತ್ತೇ ಇದೆ. ಅಂದಮೇಲೆ ಇಂಥಾ ಸುಸಂಧಿಯನ್ನು ನಮ್ಮ ಕೀರ್ತನಕಾರರು ಮತ್ತು ನೋಡಲಿಕ್ಕೆ ಬರುವ ಸಜ್ಜನರು ಕಳೆದುಕೊಳ್ಳಲಿಕ್ಕಿಲ್ಲೆಂದು ನಂಬಿದ್ದೇವೆ.

ಈ ವಿನಂತಿಯನ್ನು ಪ್ರಕಟಿಸುವುದಕ್ಕೋಸ್ಕರವಾಗಿ ಅಖಿಲ ಭಾರತ ರಾಷ್ಟ್ರೀಯ ಸಭೆಗೂ, ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೂ, ಎಲ್ಲಾ ವೃತ್ತಪತ್ರಿಕೆಗಳಿಗೂ ಕಳಿಸುತ್ತದೆ. ಅವರು ಅದಷ್ಟು ಮಟ್ಟಿಗೆ ತಮ್ಮ ತಮ್ಮ ಪ್ರಾಂತದ ಭಾಷೆಯಲ್ಲಿ ತಮ್ಮ ತಮ್ಮ ಪ್ರಾಂತದಲ್ಲಿರುವ ಕೀರ್ತನಕಾರರಿಗೆ (ಭಾಗವತರಿಗೂ, ಭಜನೆ ಮೇಳಿಗಳಿಗೂ) ತಿಳಿಸಬೇಕು. ಆಯಾ ಪ್ರಾಂತದ ಕಾಂಗ್ರೆಸ್ ಕಮಿಟಿಯವರು ಈ ವಿನಂತಿ ಪತ್ರಿಕೆಯನ್ನು ತಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಗೂ, ತಾಲೂಕು ಕಾಂಗ್ರೆಸ್ ಕಮಿಟಿಗಳಿಗೂ, ಉಳಿದ ಸಂಸ್ಥೆಯವರಿಗೂ, ಕಳಿಸಿ ಕೂಡಲೇ ಪ್ರಕಟಿಸಬೇಕೆಂದು ಪ್ರಾರ್ಥನೆ. ಎಲ್ಲಾ ಪತ್ರವ್ಯವಹಾರವನ್ನು ಕೆಳಗಿನ ವಿಳಾಸಕ್ಕೆ ಮಾಡಬೇಕು.

ಭಾರತ ಸೇವಕರಾದ
ಕೀರ್ತನ ಕೇಸರಿ ಜಯರಾಮಾಚಾರ್ಯ
ಎಸ್. ಕೆ. ಸಿಟ್ಟೋರ್, ಬಿ. ಎ. ಎಲ್. ಎಲ್ ಬಿ.,
ಅಖಿಲ ಭಾರತೀಯ ಕೀರ್ತನ ಸಮ್ಮೇಲನದ ಕಾರ್ಯದರ್ಶಿಗಳು.
ತುಮಕೂರು.
(ಮೈಸೂರ ಪ್ರಾಂತ್ಯ)

ವಿದೇಶ ವರ್ತಮಾನ.

ಮಿ| ಲೆನಿನರು:—ಇವರಿಗೆ ಗುಂಡಿನೇಟಿನಿಂದ ಉಂಟಾಗಿದ್ದ ಅಸ್ವಸ್ಥತೆ ಸಂಪೂರ್ಣ ವಾಸಿಯಾಯಿತು. ಇವರಿಗೆ ಆರೋಗ್ಯವಾದುದಕ್ಕಾಗಿ ಬೋಲ್‌ಶೆವಿಕ್ ಪಂಗಡದವರು ದೇವರಿಗೆ ವಂದನೆಗಳನ್ನು ಮಾಡುತ್ತಲಿರುವರು.

ಲೊಯಿಡ ಜೋರ್ಜರು:—ಇವರು ಅಸ್ವಸ್ಥದಲ್ಲಿರುವುದರಿಂದ ಲಾರ್ಡ ಬರ್ಕನ್ ಹೆಡ್‌ರವರು ಅವರ ವಕೀಲತನವನ್ನು ನಡಿಸುವರು.

ತಂತಿ ವರ್ತಮಾನ:—ಈಗ ಕಳುಹಿಸಲ್ಪಡುವ ತಂತಿ ವರ್ತಮಾನಗಳು ತಂತಿ ವರ್ತಮಾನದ ಆಫೀಸಿನ ನೌಕರರಿಗೆ ತಿಳಿಯುವುದು. ಅವರಿಗೂ ತಿಳಿಯದಂತೆ ವರ್ತಮಾನವನ್ನು ಕಳುಹಿಸತಕ್ಕ ಯಂತ್ರವನ್ನು ಒಬ್ಬ ಫ್ರೆಂಚ್ ಇಂಜನಿಯರರು ಕಂಡುಹಿಡಿದಿದ್ದಾರೆ.

ಮಿ| ಬೊನರಲೋ:—ಇಂಗ್ಲೆಂಡಿನ ಈಗಿನ ಮುಖ್ಯ ಮಂತ್ರಿಗಳಾದ ಇವರಿಗೆ ನೆಗಡಿಯುಂಟಾದ್ದರಿಂದ ಕೆಲವು ದಿನಗಳವರೆಗೆ ಇವರು ಹಾಸಿಗೆಯಲ್ಲಿ ಇರಬೇಕಾಗಿದೆ.

ಮಿ| ಎಸ್‌ಕ್ವಿತರು:—ಇವರಿಗೂ ಶೀತವುಂಟಾದ್ದರಿಂದ ಕಳೆದ ತಾರೀಕು ೧೧ರಲ್ಲಿ ಜರಗಲಿಕ್ಕಿದ್ದ ಒಂದು ಸಭೆಯಲ್ಲಿ ಭಾಷಣಮಾಡಲು ಆಗಲಿಲ್ಲ.

ಅಫಘಾನಿಸ್ಥಾನ:—ಅಫಘಾನಿಸ್ಥಾನದ ಅಮೀರರು ತಮ್ಮಲ್ಲಿ ಸೈನಿಕ ಶಿಕ್ಷಣವನ್ನು ಒತ್ತಾಯದಿಂದ ಕೊಡುವ ಆಲೋಚನೆಯಲ್ಲಿರುವರು.

ತುರ್ಕಿ:—ತುರ್ಕಿಯ ಗೊಂದಲವನ್ನು ಇತ್ಯರ್ಥಪಡಿಸುವುದಕ್ಕೆ ಲಸಾನಿ ಎಂಬಲ್ಲಿ ಕೂಡತಕ್ಕ ಪರಿಷತ್ತು ಬರುವ ತಾ. ೨೦ರಲ್ಲಿ ಕೂಡುವುದು. ಈ ತಾರೀಕಿನ ಮೊದಲು ಬಹುಶಃ ಬರುವ ಆದಿತ್ಯವಾರ ಲಸಾನಿಯಲ್ಲಿ ಒಂದು ಪ್ರಿಲಿಮ್‌ನರಿ ಮೀಟಿಂಗು ಸೇರುವುದು.

ಭೂಕಂಪ:—ದಕ್ಷಿಣ ಅಮೇರಿಕದ ಒಂದು ಭಾಗದಲ್ಲಿ ಉಂಟಾದ ಭೂಕಂಪದಿಂದ ೨೦೦ ಮಂದಿಗಳು ಮಡಿದರು; ೪೦೦ ಮಂದಿಗಳಿಗೆ ಜಖಂ ಆಗಿದೆ.

ತುರ್ಕಿಯ ಗೊಂದಲ:—ತುರ್ಕಿ ಸುಲ್ತಾನರಿಗೆ ಲೌಕಿಕ ಅಧಿಕಾರ ಹಾಗು ವೈದಿಕ ಅಧಿಕಾರ ಹೀಗೆ ಎರಡೂ ಅಧಿಕಾರಗಳಿರುವವು. ಲೌಕಿಕ ಅಧಿಕಾರವನ್ನು ಚಲಾಯಿಸುವುದರಲ್ಲಿ ಇವರು ಸುಲ್ತಾನರಾಗಿರುವರು. ವೈದಿಕ ಅಧಿಕಾರವನ್ನು ಚಲಾಯಿಸುವುದರಲ್ಲಿ ಇವರು ಕಲಿಫರಾಗಿರುವರು. ಈ ಎರಡೂ ಅಧಿಕಾರಗಳನ್ನು ಪ್ರತ್ಯೇಕಪಡಿಸಬೇಕೇ ಇಲ್ಲವೇ ಎಂಬ ವಿಷಯದಲ್ಲಿ ಈಗ ಬಹಳ ಚರ್ಚೆಯು ನಡಿಯುತ್ತಿದೆ. ಈಗ ತುರ್ಕಿಯ ಸುಲ್ತಾನರನ್ನು ಪದಚ್ಯುತರನ್ನಾಗಿ ಮಾಡಬೇಕಾಗಿ ರಾಷ್ಟ್ರೀಯ ಸರಕಾರವು ಪ್ರಯತ್ನಿಸುತ್ತಿದೆ. ಆದರೆ ಸುಲ್ತಾನರು ತಮ್ಮ ಸ್ಥಾನವನ್ನು ಬಿಟ್ಟುಕೊಡುವಂತೆ ತೋರುವುದಿಲ್ಲ! ಅಂಗೋರಾ ಸರಕಾರವು ಈಗ ಮುದೇನಿಯಾದಲ್ಲಿ ನಡೆದ ಕರಾರುಗಳಿಗೆ ಒಪ್ಪಿ ನಡಿಯುವಂತೆ ಕಾಣುವುದಿಲ್ಲ. ಮಿತ್ರಮಂಡಲಿಯವರು ಕೊನ್ಸ್‌ಟೆಂಟಿನೋಪಲಿನಲ್ಲಿ ದಂಡು ಕಾನೂನನ್ನು ಜಾರಿಗೆ ತರುವ ಆಲೋಚನೆಯೂ ನಡಿಯುತ್ತಿದೆ.

ಒಳದೇಶ ವರ್ತಮಾನ.

ಎಫ್. ಎಲ್. ಪರೀಕ್ಷೆ:—ಕಳೆದ ತಿಂಗಳ ಮದರಾಸ ಯುನಿವರ್ಸಿಟಿಯ ಎಫ್. ಎಲ್. ಪರೀಕ್ಷೆಯಲ್ಲಿ ೨ನೇ ತರಗತಿಯಲ್ಲಿ ೩೬ ಜನ ವಿದ್ಯಾರ್ಥಿಗಳು, ೩ನೇ ತರಗತಿಯಲ್ಲಿ ೫೦ ಜನ ವಿದ್ಯಾರ್ಥಿಗಳು; ಬಿ.ಎಲ್. ಪರೀಕ್ಷೆಯಲ್ಲಿ ೧ನೇ ತರಗತಿಯಲ್ಲಿ ಇಬ್ಬರೂ ೨ನೇ ತರಗತಿಯಲ್ಲಿ ೮ ಜನರೂ ೩ನೇ ತರಗತಿಯಲ್ಲಿ ೬ ಜನರೂ ತೇರ್ಗಡೆಯಾಗಿರುವರು.

ಸಾಮ್ರಾಜ್ಯ ಪ್ರದರ್ಶನ:—ಈ ಪ್ರದರ್ಶನಕ್ಕೆ ಹಿಂದೂಸ್ಥಾನದ ಕಮಿಷನರಾದ ದಿವಾನಬಹದ್ದೂರ್ ಟಿ. ವೀರರಾಘವಾಚಾರ್ಯರು ಇಂಗ್ಲೆಂಡಿನಿಂದ ಡಿಲ್ಲಿಗೆ ಬಂದು ತಲ್ಪಿರುವರು.

ಮುಂಬಯಿ ರಿಟ್ರೆಂಚ್‌ಮೆಂಟ್ ಕಮಿಟಿ:—ಮುಂಬಯಿಯ ಈಗಿನ ರಿಟ್ರೆಂಚ್‌ಮೆಂಟ ಕಮಿಟಿಯ ಅಧ್ಯಕ್ಷರು ಅಸ್ವಸ್ಥದಲ್ಲಿರುವುದರಿಂದ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರಾದ ಮಿ. ಸಿ. ಯಂ. ಗಾಂಧಿಯವರು ಈ ಕಮಿಟಿಯ ಅಧ್ಯಕ್ಷರಾಗಿ ನೇಮಕಪಟ್ಟಿರುವರು.

ಸರೋಜಿನಿ ದೇವಿಯವರು:—ಇವರು ಆಗ್ರಾಕ್ಕೆ ಹೋಗಿರುವರು ತಾ. ೧೫ರಲ್ಲಿ ನಡಿಯುವ ಪಂಜಾಬ ಪ್ರೊವಿನ್ಶಿಯಲ್ ಕೊನ್ಫರೆನ್ಸಿನ ಅಧ್ಯಕ್ಷತೆಯನ್ನು ಇವರು ವಹಿಸಿಕೊಳ್ಳುವರು.

ದಕ್ಷಿಣ ಹಿಂದೂಸ್ಥಾನದ ಸಾಧು ಮಹಾ ಮಂಡಲ:—ಶಾರದಾಪೀಠದ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ತಿರುವಣ್ಣಮಲಾಯ್ ಎಂಬಲ್ಲಿ ಬರುವ ತಾ. ೨ ಮತ್ತು ೩ರಲ್ಲಿ ಸಾಧುಗಳ ಒಂದು ಜಾದಾ ಪರಿಷತ್ತು ಸೇರುವುದು.

ಮಿ| ಯಂ. ಜೆ. ಯಂ. ಬರ್‌ಗರಿ:—ಕೆಲವು ಸಮಯದ ಹಿಂದೆ ಕೌನ್ಸಿಲ್ ಒಫ್ ಸ್ಟೇಟಿನ ಮೆಂಬರಿಕೆಗೆ ರಾಜೀನಾಮೆಯನ್ನು ಕೊಟ್ಟ ಈ ಗೃಹಸ್ಥರು ಇಂಗ್ಲೆಂಡಿನಿಂದ ಹಿಂದೂಸ್ಥಾನಕ್ಕೆ ಬಂದು ತಲ್ಪಿರುವರು.

ಕೊಲೊಂಬೋದಲ್ಲಿ ನೆರೆ:—ಈ ಪಟ್ಟಣದಲ್ಲಿ ದೊಡ್ಡದಾದ ನೆರೆಯು ಬಂದಿದೆ.

ಪಿಕೆಟಿಂಗ್:—ಪಿಕೆಟಿಂಗ್ ಕಾರ್ಯವನ್ನು ನಡಿಸುತ್ತಿರುವ ಕರಿಮ್ ಬಾಜಾ ಎಂಬ ಹುಡುಗನು ೩ ತಿಂಗಳ ಶಿಕ್ಷೆಯನ್ನು ಅನುಭವಿಸಿದನು. ಕಾನೂನಿಗೆ ವ್ಯತಿರಿಕ್ತವಾಗಿ ನಡೆದ ತಪ್ಪಿಗಾಗಿ ವಿಧಿಸಿದ ಜುರುಮಾನೆ ರೂ. ೫೦ನ್ನು ಕೊಡದೆ ಇದ್ದ ಬಗ್ಗೆ ಈ ಹುಡುಗನಿಗೆ ಒಂದು ತಿಂಗಳ ಸಾದಾ ಶಿಕ್ಷೆಯು ವಿಧಿಸಲಾಗಿದೆ.

ಶ್ರೀಯುತ ಚೌಧರಿ ರಘುವೀರ ನಾರಾಯಣ ಸಿಂಗ:—ಮಿರತ್ತಿನ ಡಿಸ್ಟ್ರಿಕ್ಟ್ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಚೌಧರಿ ರಘುವೀರ ನಾರಾಯಣ ಸಿಂಗ ಇವರನ್ನು ಸೆಕ್ಷನ್ ೧೨೪-ಎ ನ್ನು ಅನುಸರಿಸಿ ಕೈದುಮಾಡಿದ್ದಾರೆ.

ಗಯಾ ಕೊಂಗ್ರೆಸ್:—ಎಂದಿನಂತೆ ಕೊಂಗ್ರೆಸ್ಸಿನ ಬಗ್ಗೆ ಸ್ವಯಂಸೇವಕರ ದಳವು ಸಿದ್ಧವಾಗುತ್ತಿದೆ. ಈ ದಳದಲ್ಲಿ ಒಟ್ಟು ೧೫೦೦ ಮಂದಿ ಸ್ವಯಂಸೇವಕರಿರುವರು. ಕುದುರೆಯ ಮೇಲೆ ಹಾಗು ಸೈಕಲಿನ ಮೇಲೆ ಸವಾರಿ ಮಾಡುವ ಸ್ವಯಂಸೇವಕರಲ್ಲದೆ ಕೆಲವು ಸ್ತ್ರೀಸ್ವಯಂಸೇವಕರೂ ಬಾಯಸ್ಕೌಟ್ಸರೂ ಈ ದಳದಲ್ಲಿ ಸೇರುವರು. ಇದರಲ್ಲಿ ಸೇರುವ ಪ್ರತಿಯೊಬ್ಬ ಸ್ವಯಂಸೇವಕನು ೧೬ ಅಥವಾ ಅದಕ್ಕಿಂತ ಹೆಚ್ಚು ಪ್ರಾಯದವನಾಗಿದ್ದು ಎಲ್ಲಾ ಕ್ರಮಗಳನ್ನು ಅನುಸರಿಸಿ ನಡಿಯುವುದಾಗಿಯೂ ಯಾವ ವಿಧದಲ್ಲೂ ಶಾಂತತೆಯನ್ನು ಬಿಟ್ಟು ಅತ್ಯಾಚಾರವನ್ನು ಮಾಡಲಿಕ್ಕಿಲ್ಲವೆಂದೂ ಬರೆದು ಕೊಡಬೇಕಾಗಿದೆ. ಸ್ವಾಗತಕಮಿಟಿಯವರು ನಿರ್ಧರಿಸಿದ ಖಾದಿಯ ಪೋಷಾಕನ್ನು ಸ್ವಯಂಸೇವಕರು ತಮ್ಮ ಸ್ವಂತ ಖರ್ಚಿನಿಂದ ಒದಗಿಸಿಕೊಳ್ಳಬೇಕು. ಸ್ತ್ರೀಸ್ವಯಂಸೇವಕರು ಯಾವುದಾದರೂ ಒಂದೇ ನಮೂನೆಯ ವಸ್ತ್ರವನ್ನು ಉಟ್ಟುಕೊಳ್ಳಬೇಕೆಂದು ನೇಮವನ್ನು ಮಾಡಲಿಲ್ಲ; ಪರಂತು ಎಲ್ಲರೂ ಖಾದಿಯನ್ನೇ ಧರಿಸಿಕೊಳ್ಳಬೇಕಾಗಿದೆ. ಕೊಂಗ್ರೆಸ್ ನಗರದಲ್ಲಿ ಸ್ವಯಂಸೇವಕರ ಬಗ್ಗೆ ಬಿಡಾರಗಳ ವ್ಯವಸ್ಥೆಯು ಮಾಡಲಾಗುವುದು.

ಅಹಮ್ಮದಾಬಾದಿನಲ್ಲಿ ಗಿರಣಿಗಳ ಕೆಲಸದವರ ಮುಷ್ಕರ:—ಕಳೆದ ತಾರೀಕು ೧೦ರಲ್ಲಿ ಅಹಮ್ಮದಾಬಾದಿನ ಮಿಲ್ಲುಗಳ ಕೆಲಸದವರ ಮುಷ್ಕರವು ಪ್ರಾರಂಭವಾಗಿದೆ. ವರುಷಾಂತ್ಯದಲ್ಲಿ ಕೊಡುವ ಬೋನಸ್ಸಿನ ಕುರಿತು ಕೆಲವು ಸಮಯದಿಂದ ಕೆಲಸದವರು ಅಸಮಾಧಾನವನ್ನು ಹೊಂದಿದ್ದರು. ಬಳಿಕ ಕೂಲಿಯ ದರವು ಕಡಿಮೆಮಾಡಿದೆ ಎಂಬ ವಾರ್ತೆಯನ್ನು ಕೆಲಸದವರು ಕೇಳಿ ಇವರ ವಿರೋಧವು ಹೆಚ್ಚಾಗಿ ಮುಷ್ಕರವು ಜೋರಾಗಿದೆ. ಕೆಲಸದವರು ಮುಷ್ಕರವನ್ನು ಹಿಡಿದು ಕಾರಖಾನೆಗಳನ್ನು ಹಾಳುಮಾಡತೊಡಗಿದ್ದರಿಂದಲೂ ಮುಷ್ಕರವನ್ನು ಹಿಡಿಯದೇ ಇದ್ದವರನ್ನು ಪೀಡಿಸಲು ಪ್ರಾರಂಭಿಸಿದುದರಿಂದಲೂ ಲೇಬರ ಯೂನಿಯನ್ನಿನ ಪ್ರೆಸಿಡೆಂಟರಾದ ಅನಸೂಯಾ ಬಾಯಿಯವರು ತಮ್ಮ ಅಧ್ಯಕ್ಷಪದವಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಮತ್ತು ಮಜೂರರು ಈ ರೀತಿ ಅತ್ಯಾಚಾರಗಳನ್ನು ನಡಿಸುವುದು ಮಹಾತ್ಮರ ಉಪದೇಶಕ್ಕೆ ಸರಿಯಾದ್ದಲ್ಲವೆಂದು ಅವರಿಗೆ ತಿಳಿಸಿದ್ದಾರೆ.

ಅಹಮ್ಮದಾಬಾದಿನಲ್ಲಿ ಎರಡು ದಿವಸದ ವರೆಗೆ ಮುಷ್ಕರವನ್ನು ಹಿಡಿದು ಕಾರಖಾನೆಗಳನ್ನು ಹಾಳುಮಾಡಿದ ಮಜೂರರು ಕಳೆದ ತಾರೀಕು ೧೨ರಲ್ಲಿ ಪುನಃ ತಮ್ಮ ತಮ್ಮ ಕೆಲಸಗಳಿಗೆ ಹೋಗಿರುವರು. ಮತ್ತು ತಾವು ಮಾಡಿದ ಹಾವಳಿಗಾಗಿ ತಮ್ಮ ಪಶ್ಚಾತ್ತಾಪವನ್ನು ಸೂಚಿಸಿರುವರು. ಅಲ್ಲದೆ ಇಬ್ಬರನ್ನು ತಮ್ಮ ಪರವಾಗಿ ಕಾರಖಾನೆಗಳ ಪ್ರತಿನಿಧಿಗಳೊಡನೆ ಮಾತಾಡಿ ಮುಂದಿನ ಇತ್ಯರ್ಥವನ್ನು ಮಾಡಲು ನೇಮಿಸಿರುವರು. ನೂಲುವವರ ಸಂಘದ ಅಧ್ಯಕ್ಷರಾಗಿದ್ದು ಈ ಗಲಾಟೆಯ ಸಂಬಂಧ ರಾಜಿನಾಮೆಯನ್ನು ಕೊಟ್ಟಿರುವ ಅನಸೂಯಾ ಇವರು ತಮ್ಮ ರಾಜಿನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಿಲ್ಲ.

ಬಿಅಮ್ಮನವರ ಸಂದೇಶ:—ಖಿಲಾಫತ್ ಮತ್ತು ಕೊಂಗ್ರೆಸ್ ಎನ್‌ಕ್ವಾಯರಿ ಕಮಿಟಿಯವರು ಸೂಚಿಸಿದ ಸೂಚನೆಗಳನ್ನು ವಿಚಾರಮಾಡಿನೋಡಿದಾಗ ಕೌನ್ಸಿಲುಗಳನ್ನು ಸೇರುವುದೆಂದರೆ, ಕಳೆದ ಎರಡು ವರುಷಗಳಿಂದ ಚಳವಳವನ್ನು ನಡಿಸಿ, ದೇಶದ ೨೫ಸಾವಿರ ಸುಪುತ್ರರನ್ನು ತುರಂಗಯಾತ್ರೆಗೆ ಕಳುಹಿಸಿ ಜನರಲ್ಲಿ ಉಂಟುಮಾಡಿದ ಯಾವ ಪವಿತ್ರ ಉತ್ಸುಕತೆಯುಂಟೋ ಅದನ್ನು ಕುಗ್ಗಿಸಿದಂತಾಗುವುದು. ಕೊಂಗ್ರೆಸ ಮತ್ತು ಖಿಲಾಫತ್ ಕಮಿಟಿಗಳು ಮಂಜೂರುಮಾಡಿದ ವಿಧಾಯಕ ಕಾರ್ಯಕ್ರಮಗಳನ್ನು ಧೈರ್ಯದಿಂದ ಕೊನೆಗಾಣಿಸಲು ದೇಶದ ಪುರುಷರಿಗೆ ಅಸಾಧ್ಯವಾಗಿದ್ದರೆ ಈ ಕಾರ್ಯವನ್ನು ಅಬಲೆಯರು ಕೈಕೊಳ್ಳಬೇಕಾಗಿ ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಆದರೆ ಪುರುಷರು ಈ ಕಾರ್ಯವನ್ನು ಕುಂಠಿಸಿ ಸ್ತ್ರೀಯರು ಮುಂದಕ್ಕೆ ಬಂದು ಈ ಚಳವಳವನ್ನು ಕೊನೆಗಾಣಿಸುವ ಅಗತ್ಯವನ್ನು ಉಂಟುಮಾಡಬಾರದಾಗಿ ಸತ್ಪಾತ್ರರಾದ ನಮ್ಮ ದೇಶ ಮಾತೆಯ ಪುತ್ರರಿಗೆ ನಾನು ಇನ್ನೊಮ್ಮೆ ಅರಿಕೆಮಾಡಿಕೊಳ್ಳುತ್ತೇನೆ. ನಮ್ಮ ದೇಶದ ಪುರುಷರು ಎಂದೂ ತಮ್ಮ ಹೆಸರನ್ನು ಕೆಡಿಸಿಕೊಳ್ಳಲಿಕ್ಕಿಲ್ಲವೆಂದು ನನಗೆ ತುಂಬಾ ಭರವಸೆ ಇದೆ. ಸರಿಯಾದ ದಾರಿಯಲ್ಲಿ ನಡಿಯಲು ಸರ್ವಶಕ್ತಿಯಾದ 'ಅಲ್ಲಾ' ಇವನು ಹೆಚ್ಚಿನ ಜ್ಞಾನವನ್ನೂ ತ್ರಾಣವನ್ನೂ ನಮ್ಮ ದೇಶದ ಪುರುಷರಿಗೆ ಕೊಡಲೆಂದು ನಾನು ಪ್ರಾರ್ಥಿಸುತ್ತೇನೆ.'

ಕೊಂಗ್ರೆಸ್ಸಿನ ಕಾರ್ಯಕಾರಿ ಕಮಿಟಿ ಮೀಟಿಂಗು:—ತಾ ೧೮ನೇ ದಿನ ಓಲ್-ಇಂಡಿಯಾ ಕೊಂಗ್ರೆಸ್ ಕಮಿಟಿಯು ಕಾರ್ಯಕಾರಿ ಮಂಡಲದ ಮೀಟಿಂಗು ಕಲ್ಕತ್ತದಲ್ಲಿ ಸೇರುವುದು.

ಕರಾಚಿ:—ಅಲ್‌ವಾಹಿದ್ ಎಂಬ ದೇಶಭಾಷೆಯ ಪತ್ರಿಕೆಯ ಸಂಪಾದಕರಾದ ಮಿ| ದಿನ್‌ನೂರ್ ಮಹಮ್ಮದ್ ಅಲಿಗ್ ಎಂಬವರನ್ನು ಸೆಕ್ಷನ್ ೧೨೪ರ ಮೇರೆಗೆ ಕಳೆದ ತಾರೀಕು ೧೨ರಲ್ಲಿ ಕೈದು ಮಾಡಿದೆ.

ಸರ್. ಆರ್. ಕೋರ್ಟ ಬಟ್ಲಲರರು:—ಇವರಿಗೆ ಲಕ್ನೋ ವಿಶ್ವವಿದ್ಯಾಲಯದವರಿಂದ ಸಾಹಿತ್ಯ ಪಂಡಿತ್' ಎಂದು ಬಿರುದು ಕೊಡಲಾಗಿದೆ.

ತುರ್ಕಿ ಸುಲ್ತಾನರು:—ತುರ್ಕಸ್ಥಾನ ಖಲೀಫರನ್ನು ಹಿಂದೂಸ್ಥಾನಕ್ಕೆ ತಂದು ಇಲ್ಲಿ ಉಂಬಳಿ ಕೊಟ್ಟು ಇಡುವರೆಂದು ಸುದ್ದಿ ಇದೆ. ಅಂತೂ ಹಿಂದೂದೇಶವು ದೇಶದ್ರೋಹಿಗಳ ಆಶ್ರಯಸ್ಥಾನವಾಗುವುದೇ? [ರಾಜಹಂಸ.]

ಹಿಂದೂಸ್ಥಾನದ ಲಷ್ಕರಿ ಖರ್ಚು:—೧೯೧೩-೧೪ರಲ್ಲಿ ಹಿಂದೂಸ್ಥಾನದೊಳಗಿನ ಲಷ್ಕರೀ ಖರ್ಚು [illegible] ಇತ್ತು. ೧೯೨೧-೨೨ರಲ್ಲಿ [illegible] ರೂಪಾಯಿಗೆ ಏರಿತು. ಈ ಖರ್ಚು ಉತ್ಪನ್ನಮಾನದಿಂದ ಸೇಕಡಾ ೭೦ ಬೀಳುತ್ತದೆ.

ಹೊಸತೆರಿಗೆ:—ಮಧ್ಯಪ್ರಾಂತದ ವರ್ಹಾಡಪ್ರಾಂತದಲ್ಲಿ ಮಹಾರಜ್ಞಿಯಾ ಎಂಬ ಹೊಸತೆರಿಗೆಯೊಂದು ಎತ್ತುವ ಸರಕಾರದ ಯೋಚನೆಯಾಗಿದೆ. ಈ ಯೋಚನೆಯಂತೆ ರೈತರೆಲ್ಲರೂ ಸರಕಾರಿ ತೀರ್ವೆಯ ರೂಪಾಯಿ ಒಂದಕ್ಕೆ ೯ ಪೈ ಕೊಡಬೇಕಾಗುವುದು. ವರ್ಹಾಡಸ್ಥರೆಲ್ಲರೂ ಸಂತಪ್ತರಾಗಿರುವರು. ಈ ತೆರಿಗೆಯು ಕಾಯಂ ಆದಲ್ಲಿ ಈ ಬಗ್ಗೆ ಸತ್ಯಾಗ್ರಹ ಕೈಕೊಳ್ಳಬೇಕೆಂದು ಮಹಕರ ತಾಲೂಕು ಪರಿಷತ್ತಿನಲ್ಲಿ ನಿರ್ಣಯವಾಗಿದೆ. ದಿನಂಪ್ರತಿ ಸಾವಿರಾರು ಅರ್ಜಿಗಳ ಗಂಟುಗಳು ಸರಕಾರಿ ಆಫೀಸಿನಲ್ಲಿ ಸೇರುತ್ತಿರುವುವು. ಸುಧಾರಣಾ ಯುಗದ ಟೇಕ್ಸಿನ ಸುಧಾರಣೆ ಇದು. [[illegible]]

ಆಂಧ್ರ ಪ್ರೊವಿನ್ಸಿಯಲ್ ಕೊಂಗ್ರೆಸ ಕಮಿಟಿಯ ಮೀಟಿಂಗು:—ಕಳೆದ ತಾರೀಕು ೧೦ರಲ್ಲಿ ಆಂಧ್ರ ಪ್ರೊವಿನ್ಶಿಯಲ್ ಕೊಂಗ್ರೆಸ ಕಮಿಟಿಯ ಮೀಟಿಂಗು ಶ್ರೀಯುತ ಟಿ. ಪ್ರಕಾಶಂ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಗುಂಟೂರಿನಲ್ಲೂ ಸೀತಾ ನಗರದಲ್ಲೂ ಪ್ಯೂನಿಟಿವ್ ಟೇಕ್ಸ್ ವಿಧಿಸಿದ ವಿಷಯವು ಈ ಮೀಟಿಂಗಿನಲ್ಲಿ ಚರ್ಚೆಗೆ ಬಂತು. ಕೆಲವು ಜನರ ಮೇಲೆ ಈ ಟೇಕ್ಸನ್ನು ವಿಧಿಸುವುದರಿಂದ ಇತರರನ್ನು ಗದರಿಸಬೇಕೆಂಬುದೇ ಸರಕಾರದ ಉದ್ದೇಶವಾಗಿದೆ. ಆದುಕಾರಣ ಸರಕಾರದವರು ವಿಧಿಸಿದ ಈ ಟೇಕ್ಸನ್ನು ಕೊಡುವುದಕ್ಕಾಗಿ ಇಡೀ ಪ್ರಾಂತದಲ್ಲಿ ವಂತಿಗೆಯನ್ನು ಕೂಡಿಸಿ ಬಡವರಿಗೆ ಸಹಾಯವಾಗುವಂತೆ ಮಾಡಿದರೆ ಸರಕಾರದ ಉದ್ದೇಶವು ನೆರವೇರದು ಎಂದು ಮುಂತಾಗಿ ಶ್ರೀಯುತ ಟಿ. ಪ್ರಕಾಶಂರವರು ಭಾಷಣ ಮಾಡಿದರು. ಈಗ ತಿಲಕ ಸ್ವರಾಜ್ಯ ಫಂಡಿಗೆ ಹಣ ವಂತಿಗೆಮಾಡಿ ಇಡಿಯಾದ ಹಣದಿಂದ ತೆರಿಗೆ ಹೊರಿಸಲ್ಪಟ್ಟ ಜನರಿಗೆ ಸಹಾಯಮಾಡಿ ಅವರಿಂದ ಸರಕಾರಕ್ಕೆ ಈ ತೆರಿಗೆ ಸಲ್ಲಿಸುವ ಏರ್ಪಾಡುಮಾಡಿದೆ. ಓಲ್ ಇಂಡಿಯಾ ಕೊಂಗ್ರೆಸ್ಸಿನ ಬರುವ ೧೯೨೩ನೇ ಇಸವಿಯ ಅಧಿವೇಶನವನ್ನು ಆಂಧ್ರ ಪ್ರಾಂತದಲ್ಲಿ ಜರಗಿಸಲು ಕೊಂಗ್ರೆಸ್ಸಿಗೆ ಆಮಂತ್ರಣವನ್ನು ಕೊಡಬೇಕಾಗಿ ಈ ಮೀಟಿಂಗಿನಲ್ಲಿ ನಿಶ್ಚಯಿಸಿದೆ.

ಓಲ್ ಇಂಡಿಯಾ ಪ್ರೆಸ್ ಕೊನ್ಫರೆನ್ಸ್:—ಕೊಂಗ್ರೆಸ ವಾರದಲ್ಲಿ ಓಲ್ ಇಂಡಿಯಾ ಪ್ರೆಸ್ ಕೊನ್ಫರೆನ್ಸು ಸಹ ಗಯಾದಲ್ಲಿ ಜರಗಲಿಕ್ಕಿದೆ.

ಅಕಾಲಿಗಳ ಸತ್ಯಾಗ್ರಹ:—ಈ ವರೆಗೆ ೫೦೦೦ಕ್ಕಿಂತ ಹೆಚ್ಚು ಮಂದಿಗಳನ್ನು ಸೆರೆ ಹಿಡಿದು ಕೈದಿನಲ್ಲಿಟ್ಟಿದೆ. ಪರಂತು ಅಕಾಲಿಗಳು ಎದೆಗುಂದದೆ ಅನೇಕ ತಂಡತಂಡವಾಗಿ ಕೈದಿಗೆ ಹೋಗಲು ಸಿದ್ಧರಾಗಿಯೇ ಇರುವರು. ಸೈನ್ಯದಲ್ಲಿ ಕೆಲಸಮಾಡಿ ಪೆನ್ಶನ್ ಹೊಂದುತ್ತಿರುವ ಅನೇಕ ಅಕಾಲಿ ಜನರೂ ಈ ಚಳವಳದಲ್ಲಿ ಸೇರಿದ್ದಾರೆ. ಕೈದಿನಲ್ಲಿರುವವರಿಗೆ ಒದಗಿಸುವ ಆಹಾರವು ಯೋಗ್ಯವಾಗಿಲ್ಲದ್ದರಿಂದ ಅನೇಕರು ಈ ಆಹಾರವನ್ನು ತೆಗೆದುಕೊಳ್ಳಲು ಒಪ್ಪುವದಿಲ್ಲ. 'ರಕ್ತಾತಿಸಾರದಿಂದ ನರಳುತ್ತಿರುವ ಹರಿಸಿಂಗ ಎಂಬವರು ಕೈದಿನಲ್ಲೇ ಕಾಲವಾದರು. ಈ ಸತ್ಯಾಗ್ರಹಿಯ ಶವವನ್ನು ಮೆರವಣಿಗೆಯಿಂದ ಸ್ಮಶಾನಕ್ಕೆ ತೆಗೆದುಕೊಂಡರು. ಜೋರಿ ದಹನಮಾಡಲಾಯಿತು. ಈ ವರೆಗೆ ೫೧೨ ಮಂದಿಗಳನ್ನು ಸೆರೆ ಹಿಡಿದಿದೆ.

ಓಲ್ ಇಂಡಿಯಾ ಫೆಡರೇಶನ್:—ಓಲ್ ಇಂಡಿಯಾ ಫೆಡರೇಶನ ಅಧಿವೇಶನವು ಬರುವ ದಶಂಬರ ತಾ. ೨೭ರಲ್ಲಿ ಜರಗುವುದು.

ಡಾಕ್ಟರ್ ರವೀಂದ್ರನಾಥ ಠಾಕೂರು:—ಕಳೆದ ತಾರೀಕು ೯ರಲ್ಲಿ ತಿರುವನಂತಪುರದಲ್ಲಿ ತಲ್ಪಿದರು. ದೀನಬಂಧು ಸಿ. ಎಫ್. ಎಂಡ್ರ್ಯೂಸರು ಸಹ ಇವರೊಡನಿದ್ದರು. ಇಲ್ಲಿ ಅವರನ್ನು ಯೋಗ್ಯರೀತಿಯಲ್ಲಿ ಸ್ವಾಗತಮಾಡಿದರು.

ಮುಂಬಯಿ:—ಕಳೆದ ತಾ. ೧೨ರಲ್ಲಿ ಮುಂಬಯಿಯಲ್ಲಿ ವಾರ್‌ಕಾರ್ಟ ಬ್ರದರ್ಸ್ ಇವರ ಎರಡು ಸಾವಿರ ಬೇಲ್ಸ ಹತ್ತಿಯ ಮೂಟೆಗಳು ಬೆಂಕಿಯಿಂದ ಸುಟ್ಟುಹೋದವು. ನಷ್ಟ ಸುಮಾರು ೧½ ಲಕ್ಷ ರೂಪಾಯಿ. ಆದರೆ ಇದು ಇನ್‌ಶೂರ್ ಮಾಡಲ್ಪಟ್ಟಿದೆ.

ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಮೀಟಿಂಗು:—ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯ ಮೀಟಿಂಗನ್ನು ಮುಂದರಿಸಬೇಕಾಗಿ ಕಮಿಟಿಯ ಕೆಲವು ಮೆಂಬರರು ಸೂಚಿಸಿರುವರು. ಆದರೆ ಬಹು ಮಂದಿಗಳು ಇದನ್ನು ಮುಂದರಿಸಿ ಇಡಬೇಕಾಗಿ ತಿಳಿಸದೇ ಇದ್ದುದರಿಂದ ಈ ಮೀಟಿಂಗು ಬರುವ ತಾ. ೨೦ರಲ್ಲಿ ಕಲ್ಕತ್ತದಲ್ಲೇ ನೆರೆಯಿಸಲು ನಿರ್ಧರಿಸಿದೆ.

ಖಿಲಾಫತ್ ಕಮಿಟಿಯ ರಿಪೋರ್ಟ:—ಸಿವಿಲ್ ಡಿಸ್ ಒಬ್ಬಿಡಿಯನ್ಸಿನ ಕುರಿತು ನೇಮಕವಪಟ್ಟ ಖಿಲಾಫತ್ ಎನ್‌ಕ್ವಾಯರಿ ಕಮಿಟಿಯ ರಿಪೋರ್ಟ ಈಗ ಪ್ರಕಟವಾಗಿದೆ. ಈ ಕಮಿಟಿಯವರು ಒಟ್ಟು ೬೦೯ ಮೈಲುಗಳನ್ನು ೪೯ದಿನಗಳಲ್ಲಿ ಸಂಚರಿಸಿ ೨೧೧ ಸಾಕ್ಷಿಗಳನ್ನು ವಿಚಾರಿಸಿದರು. ವರದಿಯು ೬೭ ಪುಟಗಳದ್ದು ಉರ್ದುಭಾಷೆಯಲ್ಲಿ ಪ್ರಕಟವಾಗಿದೆ. ವಿದೇಶಿ ವಸ್ತ್ರಗಳ ಬಹಿಷ್ಕಾರ ಮತ್ತು ಮಾದಕ ಪದಾರ್ಥಗಳ ಉಪಯೋಗವನ್ನು ನಿಲ್ಲಿಸುವಂತೆ ಪಿಕೆಟಿಂಗನ್ನು ಕೂಡಲೇ ಪ್ರಾರಂಭಿಸಬೇಕಾಗಿ ಈ ಕಮಿಟಿಯವರು ಸೂಚಿಸಿದ್ದಾರೆ. ಕೋರ್ಟುಗಳಿಗೆ ಬಹಿಷ್ಕಾರವನ್ನು ಹಾಕಬೇಕಾಗಿಯೂ ಇವರು ಅಭಿಪ್ರಾಯ ಪಟ್ಟಿದ್ದಾರೆ. ಶಾಲಾ ಕೋಲೇಜುಗಳಿಗೆ ಬಹಿಷ್ಕಾರಹಾಕುವುದನ್ನು ಕೈಕೊಳ್ಳಬೇಕು; ಪರಂತು ಈ ಕಾರ್ಯವನ್ನು ಮಾಡುವಾಗ ಹೊಸ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಬೇಕು; ಹಾಗು ಹಳೆ ರಾಷ್ಟ್ರೀಯ ಶಾಲೆಗಳನ್ನು ಅಭಿವೃದ್ಧಿಗೆ ತರಬೇಕು ಎಂದು ಈ ಕಮಿಟಿಯವರು ತಿಳಿಸಿದ್ದಾರೆ. ಕೌನ್ಸಿಲುಗಳನ್ನು ಸೇರುವುದೆಂದರೆ ಅಸಹಕಾರದ ಚಳವಳಕ್ಕೆ ಮಹತ್ವಾದ ಒಂದು ಅಪಜಯವಾದ್ದರಿಂದ ಕೌನ್ಸಿಲಿಗೆ ಸೇರುವುದನ್ನು ಕಮಿಟಿಯವರು ನಿಷೇಧಿಸಿದ್ದಾರೆ. ಕಾನೂನುಭಂಗವನ್ನು ಜಾರಿಗೆ ತರಲು ದೇಶವು ಸಿದ್ಧವಾಗಿಲ್ಲವೆಂದು ಕಮಿಟಿಯವರು ಮನಗಂಡಿದ್ದಾರೆ.

ವಿಶ್ವಭಾರತಿ ಫಂಡ್:-ತ್ರಿವೇಂದ್ರಮಿನಲ್ಲಿ ಠಾಗೂರರನ್ನು ಸ್ವಾಗತಮಾಡುವ ಕಮಿಟಿಯವರು ವಿಶ್ವಭಾರತಿ ಫಂಡಿಗೆ ರೂ. ೧೦೦೦ ವನ್ನು ಕೊಟ್ಟಿರುವರು.

ಆರ್ಮಿಸ್‌ಟಿಸ್ ಡೇ:—ಯುದ್ಧ ನಿವರ್ತನೆಯ ವರ್ಧಂತಿಯು ಅನೇಕ ಕಡೆಗಳಲ್ಲಿ ಆಚರಿಸಲಾಯಿತು.

ಗೋವೆ:—ಸೆಂಟ ಫ್ರೆನ್ಸಿಸ್ ಜೇವಿಯರ ಪವಿತ್ರ ಶರೀರ ಪ್ರದರ್ಶನವು ಬರುವ ದಶಂಬರ ತಾ. ೩ರಿಂದ ಪ್ರಾರಂಭವಾಗಿ ಜನವರಿ ತಾ. ೬ರ ವರೆಗೆ ಹಳೇ ಗೋವೆಯಲ್ಲಿ ನಡಿಯುವುದು. ಇದೇ ಸ್ಥಳದಲ್ಲಿ ಓಲ್ ಇಂಡಿಯಾ ಕೆಥೋಲಿಕ ಕೊನ್ಫರೆನ್ಸು, ದಶಂಬರ ತಾರೀಕು ೨೮, ೨೯, ಮತ್ತು ೩೦ರಲ್ಲಿ ಜರಗುವುದು. ಫ್ರೆನ್ಸಿಸ್ ಜೇವಿಯರು ೧೫೦೬ರಲ್ಲಿ ಸ್ಪೈನ್ ದೇಶದಲ್ಲಿ ಜನಿಸಿದರು. III ನೇ ಪೋಪ್ ಪೌಲರ ಕಾಲದಲ್ಲಿ ಇವರು ಜೆಸುಯಿಟ್ ಸೊಸೈಟಿಯ ಮಿಶನರಿಗಳಾಗಿ ತಮ್ಮ ೩೫ನೇ ವರುಷ ಪ್ರಾಯದಲ್ಲಿ ಹಿಂದೂಸ್ಥಾನಕ್ಕೆ ಬಂದು ೧೫೪೨ನೇ ಇಸವಿಯ ಮೇ ತಿಂಗಳ ತಾರೀಕು ೬ರಲ್ಲಿ ಗೋವೆಯಲ್ಲಿ ಇಳಿದರು. ಸೆಂಟ ಫ್ರೆನ್ಸಿಸರು ದಕ್ಷಿಣ ಹಿಂದೂಸ್ಥಾನದ ಅನೇಕ ಪ್ರದೇಶಗಳನ್ನು ಸಂಚರಿಸಿದ ತರುವಾಯ ಜಪಾನ್ ದೇಶಕ್ಕೆ ಹೋಗಿ ಅಲ್ಲಿಂದ ಚೈನಾ ದೇಶಕ್ಕೆ ಪ್ರಯಾಣ ಮಾಡುವಾಗ ದಾರಿಯಲ್ಲಿ ೧೫೫೨ನೇ ದಶಂಬರ ೩ರಲ್ಲಿ ಸೆನ್‌ಚಾನ್ ದ್ವೀಪದಲ್ಲಿ ಕಾಲವಾದರು. ಕೆಲವು ಕಾಲದ ತರುವಾಯ ಇವರ ಪವಿತ್ರ ಶರೀರವನ್ನು ಮಲಕಾ ದ್ವೀಪಕ್ಕೆ ತಂದರು. ಕೊನೆಗೆ ಇದನ್ನು ಗೋವೆಗೆ ತಂದರು.

೨೬ ಗುಂಡುಗಳನ್ನು ಸಹಿಸಿದ ಸತ್ಯಾಗ್ರಹ ವೀರನು:—ಪಲ್ನಾಡ ತಾಲೂಕಿನಲ್ಲಿ ಮಿಂಚಲಪಾಡು ಎಂಬ ಹಳ್ಳಿಯಲ್ಲಿ ಅಡವಿಯ ಅನ್ಯಾಯಗಳಾಗುತ್ತಿದ್ದರಿಂದ ಅಲ್ಲಿಯ ಕೆಲ ರೈತರು ಅಡವಿಯ ಕಂದಾಯವನ್ನು ಕೊಡಬಾರದೆಂದು ನಿಶ್ಚಯಿಸಿದ್ದರು. ಅವರ ವ್ಯವಸ್ಥೆ ಮಾಡಬೇಕೆಂದು ಕಲೆಕ್ಟರು ಫೌಜದಾರರನ್ನು ಕರೆದುಕೊಂಡು ಅಲ್ಲಿಗೆ ಹೋದರು. ಅದಕ್ಕೆ ಆ ಹಳ್ಳಿಯ ಮುಖಂಡರಾದ ಕನ್ನೆಗಂಟಿ ಹನುಮಂತನೆಂಬುವನು ಅಡ್ಡಿಮಾಡಿದನು. ಆಗ್ಗೆ ಪೋಲೀಸರು ಅವನ ಮೇಲೆ ಗುಂಡು ಹಾರಿಸಿದರು. ಹನುಮಂತನು ವೀರ್ಯದಿಂದ ಇದಕ್ಕೆ ಎದುರಾಗಿ ಒಬ್ಬನೇ ೨೬ ಗುಂಡುಗಳನ್ನು ಸಹಿಸಿಕೊಂಡನು. ಆದರೆ ಮುಂದೆ ಕೆಲ ಹೊತ್ತಿಗೆ ಮಡಿದನು, ಅವನ ಹೆಂಡತಿಯು ಅವನ ಗೋರಿಯ ಮೇಲೆ ಪೋಲಿಸ ಸಂಗತಿಯನ್ನು ಕಲ್ಲಿನಲ್ಲಿ ಕೊರೆಯಿಸಿರುವಳಂತೆ. ರಾಜಹಂಸ.

ದಕ್ಷಿಣ ಕನ್ನಡ

ಕೋಟೆಕಾರು:—ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ಇದೇ ನವಂಬರ ತಾ. ೧೨ನೇ ಆದಿತ್ಯವಾರ ದಿವಸ ಮಧ್ಯಾಹ್ನ ೧½ ಗಂಟೆಗೆ ಶ್ರೀಯುತ ಬ್ರಹ್ಮಶ್ರೀ ಒಡ್ಡಮನೆ ಆತ್ಮರಾಮ ಶಾಸ್ತ್ರಿ ವಿದ್ಯಾವಾಚಸ್ಪತಿಗಳವರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ನೆರವೇರಿತು. ಅಧ್ಯಕ್ಷರಿಗೆ [illegible] ಮೇಲೆ ಉತ್ಸವ ಆರಂಭವಾಯಿತು. ಸೂಚೀಪತ್ರ ಪ್ರಕಾರ ದೇವರ ಪ್ರಾರ್ಥನೆ, ಸ್ವಾಗತಗೀತ, ಮಕ್ಕಳ ನಟನೆ, ವರದಿ ಓದುವಿಕೆ, ಇನಾಂ ಹಂಚೋಣ ಸಹಾ ನಡೆದವು. ತದನಂತರ ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಅಧ್ಯಾಪಕರಾದ ಮ. ರಾ. ರಾ. ಎಮ್. ಬಾಬು, ಬಿ. ಎ. ಎಲ್. ಟಿ.ಯವರು ಸುಶಿಕ್ಷಿತ ಪರವಾಗಿ ಈ ಶಾಲಾ ಅಭಿವೃದ್ಧಿಯ ವಿಷಯ ಒಂದು ಬೋಧಪ್ರದವಾದ ಭಾಷಣವನ್ನು ಮಾಡಿದರು. ಅಧ್ಯಕ್ಷ ಮಹಾಶಯರು, ಈ ಶಾಲೆಯನ್ನು ಅಭಿನಂದಿಸಿ ಸುರಸವಾದ ರೀತಿಯಲ್ಲಿ ಸಭಿಕರನ್ನು ಭಾಷಣದಿಂದ ಆನಂದಗೊಳಿಸಿದರು. ಈ ಉತ್ಸವ ಸಂದರ್ಭದಲ್ಲಿ ಈ ಕೋಟೆಕಾರು ಸಹಕಾರ ಸಂಘದ ಮುಖಂಡ [illegible] ಉತ್ತಮ ಬ್ಯಾಂಡ್ [illegible] ಅಂಟುಮಾಡಿದರು. ಈ ಶಾಲಾ ಮಕ್ಕಳು [illegible] ಪುಷ್ಪಮಾಲೆಯನ್ನು ಹಾಕಿ [illegible] ಸಮರ್ಪಿಸಿದರು. [illegible] ಭಾಷಣ ಮಾಡಿದ ಮ. ರಾ. ರಾ. ಎಮ್. ಬಾಬು, ಬಿ. ಎ. ಎಲ್. ಟಿ. ಯವರನ್ನು ವಂದಿಸಿ ಸಮಸ್ತ ಸಭಿಕರಿಗೆ ತನ್ನ ಕೃತಜ್ಞತೆಯನ್ನು ಅರ್ಪಿಸಿದರು. [illegible] ಸಭೆಯು ಮುಕ್ತಾಯವಾಯಿತು.

ಕಾಸರಗೋಡು:—[illegible]

ಅನುಕ್ರಮಣಿಕೆ

ರಿಪೋರ್ಟು ಪ್ರಕಟನೆಯ ಅನಂತರ . . . ೬
ಸ್ಫುಟವಿಚಾರಗಳು—
೧. ಸೀಖಜನರ ಚಳವಳ . . ,,
೨. ಅಸಹಕಾರಿಗಳನ್ನು ಜೈಲಿನಲ್ಲಿ ನಡಿಸುವ ವಿಧಾನ . ,,
೩. ಐರ್ಲೆಂಡಿನ ಪರಿಸ್ಥಿತಿ . . ,,
೪. ತುರ್ಕಿಯ ಪರಿಸ್ಥಿತಿ . . ೭
೫. ಮದ್ಯಪಾನನಿಷೇಧ . . ,,
ಮಂಗಳೂರು—
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ . . ೮
ದ. ಕನ್ನಡ, ಕೋಟೆಕಾರು, ಕಾಸರಗೋಡು . . ,,
ಶ್ರೀಯುತ ಧರ್ಮದೇವರು ತಮ್ಮ ಬ್ರಾಹ್ಮಣ ಸಹೋದರರಿಗೆ ಬರೆದ
ಅನಾವೃತ ಪತ್ರ . ; . ,,
ಪತ್ರವ್ಯವಹಾರ
ಬಂಟವಾಳ ಪೇಟೆಯವನಿಗೆ ಉತ್ತರ. . ,,
ಕೊಡಗು ಸರಕಾರದ ಪಂಕ್ತಿಭೇದವೂ ದಕ್ಷಿಣಕನ್ನಡದವರ ದುರ್ದೈವವೂ
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಮಂಗಳೂರು . ೯
ಉತ್ತಮವಾದೊಂದು ವಿದ್ಯಾಶಾಲೆಯ ಅಭಿವೃದ್ಧಿಗೆ ಸಹಾಯಮಾಡಿರಿ ,,
ಹುಬ್ಬಳ್ಳಿಯಲ್ಲಿ ಜರುಗಿದ ಶಿಕ್ಷಣ ಪರಿಷತ್ತು ,,
ಅಖಿಲ ಭಾರತೀಯ ಕೀರ್ತನ ಸಮ್ಮೇಲನ ಗಯಾ ,,

ಸ್ವದೇಶಾಭಿಮಾನಿ.

ಶಕ ೧೮೪೪ ಕಾರ್ತಿಕ ಬ| ೧೩ಯು ಶುಕ್ರವಾರ.

ರಿಪೋರ್ಟು ಪ್ರಕಟನೆಯ ಅನಂತರ.

ಸಿವಿಲ್ ಡಿಸ್ ಒಬ್ಬೀಡಿಯನ್ಸ್ ಎನ್‌ಕ್ವಾಯರಿ ಕಮಿಟಿಯ ರಿಪೋರ್ಟು ಪ್ರಕಟವಾಗಿ ಎರಡು ವಾರಗಳಾದವು. ರಿಪೋರ್ಟಿನ ಮುಖ್ಯಮುಖ್ಯ ಸಂಗತಿಗಳನ್ನು ಹಿಂದಿನ ಸಂಚಿಕೆಯ ಸ್ಫುಟವಿಚಾರಗಳಲ್ಲಿ ಪ್ರಕಟಿಸಿದ್ದೇವಷ್ಟೆ. ಅದರ ಪ್ರಕಟನೆಯ ಈ ಎರಡು ವಾರಗಳ ಅವಧಿಯಲ್ಲಿ ಹಿಂದುಸ್ಥಾನದೊಳಗಿನ ವಿವಿಧ ಲೋಕಮತವು ಪ್ರಕಟವಾಗುತ್ತಿದೆ. ಅಸಹಕಾರಿ, ರಾಷ್ಟ್ರೀಯ, ಶಾಂತಪಕ್ಷ, ಮಹಮ್ಮದೀಯ ಪಕ್ಷ, ಕ್ರಿಸ್ತನ್, ಎಂಗ್ಲೊ ಇಂಡಿಯನ್ ಮೊದಲಾದ ಬೇರೆ ಬೇರೆ ಪಂಗಡದವರ ಮತಗಳು ಪ್ರಕಟವಾಗ ತೊಡಗಿವೆ. ಈ ಪಕ್ಷಗಳಲ್ಲಿ ಎಂಗ್ಲೊ ಇಂಡಿಯನ್ನರ ಅಭಿಮತವನ್ನು ಪ್ರತ್ಯೇಕಿಸಿ ಬಿಡೋಣ. ವಸ್ತುತಃ ಎಂಗ್ಲೊ ಇಂಡಿಯನ್ನರಾದರೂ ಹಿಂದಿ ರಾಜಕಾರಣದಲ್ಲಿ ಕೆಲವಂಶವನ್ನು ಎತ್ತುವವರು. ಅವರ ಹಿತಸಂಬಂಧವು ಸಾಧಾರಣವಾಗಿ, ಅವರು ಇಲ್ಲೆ ನಿಲ್ಲುವವರಾದರೆ, ಕೇವಲ ಭಿನ್ನವಾದ್ದೆಂದು ಹೇಳಲಾಗುವುದಿಲ್ಲ; ಆದರೆ ಅವರು ಈ ವಿಷಯವನ್ನು ಮರೆತುಬಿಟ್ಟು ಈ ದೇಶದ ಯಾವದು ಯಾವದು ಒಳ್ಳಿತಿರುವುದೊ ಅದೆಲ್ಲ ತಮ್ಮ ವಿರೋಧದ್ದು ಎಂದು ತಿಳಕೊಳ್ಳುವ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ. ಅವರ ಈ ತಿಳಿವಿಗನುಸಾರವಾಗಿ ಹೇಳುವುದಾದರೆ, ಮೇಲೆ ಬರೆದಂತೆ ಅವರ ಮತವನ್ನು ಪ್ರತ್ಯೇಕಿಸಿಬಿಡೋಣ. ಈ ಮೇರೆಗೆ ಸಿ. ಡಿ. ಕಮಿಟಿಯ ರಿಪೋರ್ಟಿನ ವಿಷಯವಾಗಿ ಎಂಗ್ಲೋ ಇಂಡಿಯನ್ನರ ಮತವನ್ನು ಬಿಟ್ಟ ಬಳಿಕ ಉಳಿದ ವಿವಿಧ ಲೋಕಮತವನ್ನು ಎರಡು ವಿಧವಾಗಿ ವಿಂಗಡಿಸಬಹುದು. ಕಾನೂನುಭಂಗವನ್ನು ಮಾಡಬೇಕು, ಕಾನೂನುಭಂಗವನ್ನು ಮಾಡಬಾರದು; ತ್ರಿದಲ ಬಹಿಷ್ಕಾರವನ್ನಿಟ್ಟುಕೊಳ್ಳಬೇಕು, ತ್ರಿದಲ ಬಹಿಷ್ಕಾರವನ್ನು ತೆಗೆದು ಹಾಕಬೇಕು ಎಂಬಿತ್ಯಾದಿ ರೂಪದಿಂದ "ಬೇಕು-ಬೇಡ" ಎಂದರೆ ವಿಧಿನಿಷೇಧರೂಪದಿಂದ ಹೇಳುವವರ ತಂಡಗಳು ಎರಡೆ ಆಗಿವೆ ಎನ್ನಬಹುದು. ಇಂಥ ಸಂದರ್ಭಗಳಲ್ಲಿ ಅಕ್ಷರಶಃ ವರ್ಗೀಕರಣವನ್ನಾಗಲಿ, ಪ್ರತಿಪಾದನೆಯನ್ನಾಗಲಿ ಮಾಡುವುದು ಕೊಂಚ ಕಷ್ಟದ ಸಂಗತಿಯೆ ಸರಿ. ಉದಾಹರಣಾರ್ಥವಾಗಿ ಕಾನೂನುಭಂಗದ ವಿಧಿಪಕ್ಷವನ್ನಿಟ್ಟುಕೊಳ್ಳೋಣ. ಕಾನೂನುಭಂಗವನ್ನು ಮಾಡಬೇಕೆಂದು ಹೇಳುವವರಲ್ಲಿ ಪುನಃ ಒಳಗೆ ಬೇರೆ ಬೇರೆ ಮತಗಳಿವೆ. ಹಲವರು ಈ ಹೊತ್ತೆ ಸಾರ್ವತ್ರಿಕ ಕಾನೂನುಭಂಗವನ್ನು ಪ್ರಾರಂಭಿಸಬೇಕೆಂದು ಹೇಳುವವರಿದ್ದರೆ, ಇನ್ನು ಹಲವರು ಒಂದಾನೊಂದು ವಿವಕ್ಷಿತ ಸ್ಥಳದಲ್ಲಿ ಪ್ರಾರಂಭಿಸೋಣವೆಂದು ವಾದಿಸುವವರಿದ್ದಾರೆ. ಬೇರೆ ಕೆಲವರು ವೈಯಕ್ತಿಕ ಕಾನೂನುಭಂಗದಿಂದಲೆ ತತ್ಕಾಲಕ್ಕೆ ಸಂತುಷ್ಟರಾಗುವವರಿದ್ದಾರೆ. ಅವರಲ್ಲಿ ಪುನಃ ಯಾವುದಾದರೂ ಒಂದೆ ಕಾನೂನನ್ನು ಭಂಗಪಡಿಸಿದರೆ ಸಾಕೆಂದು ಅಭಿಪ್ರಾಯಪಡುವವರು ಬೇರೆ. ಈ ರೀತಿಯಿಂದ ಪ್ರಭೇದಗಳು ಹೆಚ್ಚಿವೆ. ಕಾನೂನುಭಂಗವನ್ನು ಮಾಡಕೂಡದು ಎಂದು ನಿಷೇಧಪಕ್ಷದಲ್ಲಿ ಸಹ ಯಾವಾಗಲೂ ಕೂಡದು, ಕೆಲವು 'ಸರ್ವಸಿದ್ಧತೆಯುಂಟಾಗುವವರೆಗೆ ಕೂಡದು, ಇಂತಿಂತ ಪ್ರತಿಜ್ಞೆಪತ್ರಿಕೆಗಳನ್ನು ದಸ್ತತುಮಾಡಿಕೊಡುವವರೆಗೆ ಕೂಡದು' ಇತ್ಯಾದಿ ರೂಪದಿಂದ ಬೇರೆ ಬೇರೆ ಮತಗಳನ್ನು ಪ್ರತಿಪಾದಿಸುವವರಿದ್ದಾರೆ. ಈ ಮೇರೆಗೆ ಒಳಮತಗಳು ವಿವಿಧವಾಗಿದ್ದರೂ ಬೇಕು-ಬೇಡವೆಂಬ ಎರಡೆ ಶಿರೋಲೇಖಗಳ ಕೆಳಗೆ ಅವುಗಳನ್ನು ಸಂಗ್ರಹಿಸಬಹುದಾದ ಕಾರಣ, ಪ್ರಕಟವಾದ ಲೋಕಮತದಲ್ಲಿ ಮುಖ್ಯವಾದ ಎರಡೆ ವಿಭಾಗಗಳನ್ನು ಕಲ್ಪಿಸಿದ್ದೇವೆ.

ಸಿವಿಲ್ ಡಿಸ್‌ಒಬ್ಬೀಡಿಯನ್ಸಿನ ವಿಷಯದಲ್ಲಿ ಹೇಗೆ ಭಿನ್ನ ಭಿನ್ನ ಮತಗಳಿವೆಯೊ ಹಾಗೆಯೆ ತ್ರಿದಲ ಬಹಿಷ್ಕಾರಗಳ ವಿಷಯದಲ್ಲಿ ಸಹ ಮತಭೇದವಿದೆ. ಈ ತ್ರಿದಲ ಬಹಿಷ್ಕಾರಗಳಲ್ಲಿ ಶಾಲಾ-ಕಾಲೇಜು ಬಹಿಷ್ಕಾರ ಮತ್ತು ಕೋರ್ಟು ಬಹಿಷ್ಕಾರ ಇವುಗಳ ಬಗ್ಗೆ ಯಾರೂ ಹೆಚ್ಚಿನ ಆತುರತೆಯಿಂದ ತಮ್ಮ ತಮ್ಮ ಮತಗಳನ್ನು ಮುಂದೊತ್ತುವುದಿಲ್ಲ. ಯಾಕೆ, ಈ ಎರಡು ಬಹಿಷ್ಕಾರಗಳು ಈಗ ಅವ್ಯವಹಾರ್ಯವೆಂದೆ ಎಲ್ಲರೂ ಪರ್ಯಾಯದಿಂದ ಒಪ್ಪಿದ್ದಾರೆ. ಕಮಿಟಿಯೂ ಅಂತೆಯೆ ಸಿಫಾರಸುಮಾಡಿದೆ. ರಿಪೋರ್ಟು ಪ್ರಕಟನೆಯ ಬಳಿಕವಾದರೂ ಈ ವಿಷಯದಲ್ಲಿ ಎಲ್ಲಿಯೂ ಮತಭೇದ ಪ್ರದರ್ಶನೆಯಾಗುವದಿಲ್ಲ. ಶಾಲಾ-ಕಾಲೇಜುಗಳ ಬಹಿಷ್ಕಾರ, ಕೋರ್ಟುಬಹಿಷ್ಕಾರ, ಸರಕಾರಿ ನೌಕರಿ ಬಹಿಷ್ಕಾರ, ಕಾಯಿದೆಭಂಗ ಮುಂತಾದ ಒಂದಕ್ಕಿಂತಲೂ ಒಂದು ಅಧಿಕವಾದ ಸ್ವಾರ್ಥತ್ಯಾಗವನ್ನು ಕೇಳುವ ಮತ್ತು ಉತ್ತರೋತ್ತರ ಅಧಿಕ ಕಾರ್ಯಕಾರಿಯಾದ ಯಾವ ಕಾರ್ಯಕ್ರಮಗಳಿದ್ದಾವೊ ಅವುಗಳು ಬರಬರುತ್ತ ಮೂಲೆಗೆ ಬೀಳಹತ್ತಿದವು, ಕೊನೆಗೆ ಕಮಿಟಿಯೆ-ಸ್ವಯಂ ತಾನಾಗಿ ಈ ಕಾರ್ಯಕ್ರಮಗಳ ಮೇಲೆ ವಿಸರ್ಜನೆಯ ಅಕ್ಷತೆಗಳನ್ನು ಹಾಕಿದೆ; ಈ ವಿಷಯದಲ್ಲಿ—ಇಂಥ ಮಹತ್ವದ ವಿಷಯದಲ್ಲಿ ಯಾರೂ ಹೆಚ್ಚಿನ ಅಥವಾ ಅಲ್ಪ [illegible] ಮತಭೇದವನ್ನು ಪ್ರದರ್ಶಿಸುವುದಿಲ್ಲ. ಆದರೆ ಈ ಎಲ್ಲ ಸಂಗತಿಗಳಲ್ಲಿ ತೋರಿಸಿಕೊಳ್ಳದ ಮತಭೇದದ ಸಂಕ್ರಾಂತಿಯು ಕೌನ್ಸಿಲ್ ಪ್ರವೇಶದ ಮೇಲೆ ಬಂದು ಕುಳಿತಿದೆ. ಕೌನ್ಸಿಲಿನಲ್ಲಿ ಪ್ರವೇಶಿಸಬೇಕು ಎಂದೊಡನೆ, ಬಾಯಿಗೆ ಬಂದ ತುತ್ತು ಕೆಳಗೆ ಬೀಳುವಂತೆ ಹಿಂದಿ ಜನರ ಕೈಗೆ ಬಂದ ಸ್ವರಾಜ್ಯವು ನಷ್ಟವಾಯಿತೊ ಎಂದು ಅನೇಕರು ನೆನಸುತ್ತಾರೆ. ಇಂಥವರಲ್ಲಿ ಅನೇಕರು ಒಂದು ವಿಶೇಷವಾದ ಮಾತನ್ನಾಡುವುದುಂಟು. "ರಿಪೋರ್ಟು ಪ್ರಸಿದ್ಧವಾದ ಬಳಿಕ ದೇಶದಲ್ಲೆಲ್ಲ ಪ್ರಕಟವಾದ ಲೋಕಮತವನ್ನು ನೋಡುವಾಗ ಕೌನ್ಸಿಲ್ ಬಹಿಷ್ಕಾರವನ್ನೆ ನಿಷೇಧಿಸುವ ಪಕ್ಷವು ಪ್ರಬಲವಾಗಿದೆ. ಚಿಕ್ಕದೊಡ್ಡ ಸಭೆಗಳಲ್ಲಿ ಅಲ್ಲಲ್ಲಿಯ ಮುಖಂಡರು ಅಖಂಡವಾಗಿ ಕೌನ್ಸಿಲಪ್ರವೇಶವನ್ನು ವಿರೋಧಿಸುವರು. ಅನೇಕ ಶ್ರೀಯುತರು ಮತ್ತು ಶ್ರೀಮತಿಯರು ಕೌನ್ಸಿಲ್ ಪ್ರವೇಶಕ್ಕೆ ತಮ್ಮ ಅಸಮ್ಮತಿಯನ್ನು ತೋರಿಸುವರು. ಈ ಪ್ರಕಾರವಾಗಿ ಪ್ರಬಲವಾದ ವಿರೋಧವಿರುವಾಗ ಕೌನ್ಸಿಲ್ ಪ್ರವೇಶದ ಹಟವನ್ನು ಹಿಡಿಯುವುದು ಚಂದವೆ?" ಎಂದು ಮಾರ್ಮಿಕವಾದ ಸವಾಲನ್ನೆ ಕೇಳುವವರೆ ಹೆಚ್ಚಾಗಿದ್ದಾರೆ, ಅದೂ ಅಲ್ಲದೆ, ಮಹಾತ್ಮಜಿಯವರಂಥ ಆಕರ್ಷಕ ಮಹಾ ಪುರುಷರು ದೃಷ್ಟಿಗೆ ಅದೃಶ್ಯವಾದ ಕಾರಣ ಬೇರೆಬೇರೆ ಪ್ರಾಂತಿಕ ಮುಖಂಡರು ತಮ್ಮ ತಮ್ಮ ಮತಭೇದದ ಕುದುರೆಯನ್ನು ಸ್ವೇಚ್ಛೆಯಿಂದ ಈಗ ಹಾರಿಸುತ್ತಿದ್ದಾರೆ ಎಂಬುದಾಗಿಯೂ ಅನೇಕರು ಸ್ಪಷ್ಟವಾಗಿ ಮತ್ತು ಅಸ್ಪಷ್ಟವಾಗಿ ವಾದಿಸುತ್ತಿದ್ದಾರೆ. ಈ ಆಕ್ಷೇಪಗಳನ್ನು ಕ್ರಮಶಃ ವಿಚಾರಿಸೋಣ.

ಕೌನ್ಸಿಲ್ ಪ್ರವೇಶಕ್ಕೆ ಈಗ ಮಾತ್ರ ಪ್ರಚಂಡ ಲೋಕಮತವು ವಿರುದ್ಧವಿದೆಯೆಂದಲ್ಲ, ಮೊದಲಾದರೂ ವಿರೋಧವಿರಲಿಲ್ಲವೆ? ಈಗ ಎರಡು ವರುಷಗಳಿಂದ ರಾಷ್ಟ್ರೀಯ ಸಭೆಗಳಲ್ಲಿ ಅಸಹಕಾರಪರವಾಗಿಯೆ ಲೋಕಮತದ ಬಾಹುಲ್ಯವು ಮೆರೆದುಕೊಂಡಿರುವುದು. ಸಿವಿಲ್ ಡಿಸ್ ಒಬ್ಬೀಡಿಯನ್ಸ ಕಮಿಟಿಯ ಮುಂದೆ ಆದ ಸಾಕ್ಷಿಗಳಲ್ಲಿ ಕೂಡ ಕೌನ್ಸಿಲ್ ಪ್ರವೇಶವನ್ನು ಖಂಡಿಸುವವರೆ ಬಹು ಸಂಖ್ಯಾಕರಾಗಿದ್ದಾರೆ. ಕಮಿಟಿಯ ಮುಂದೆ ಆದ ಸಾಕ್ಷಿಗಳಲ್ಲಿ ೩೦೩ ಗೃಹಸ್ಥರು ಕೌನ್ಸಿಲ್ ಪ್ರವೇಶಕ್ಕೆ ಎದುರಿದ್ದಾರೆ, ೧೮೩ ಗೃಹಸ್ಥರು ಮಾತ್ರ ಒಂದಿಲ್ಲವಾದರೆ ಇನ್ನೊಂದು ರೂಪದಿಂದ ಕೌನ್ಸಿಲ್ ಪ್ರವೇಶವನ್ನು ಅನುಮೋದಿಸುವರು. ಕಮಿಟಿಯ ಮುಂದಿನ ಈ ತುಲನೆಯನ್ನು ಲಕ್ಷ್ಯಕ್ಕೆ ತಂದರೆ, ವಿರೋಧಿಗಳ ಬಹುಮತವು ಈಗಲೂ ಹೇಗೆ ಇದೆಯೊ ಹಾಗೆಯೆ ಮೊದಲೂ ಇತ್ತು. ಮಾತ್ರವಲ್ಲ, ಈ ಬಹುಮತವನ್ನು ನೋಡಿಯೂ ಸಹ ಈ ಕಮಿಟಿಯಲ್ಲಿಯ ಮೂವರು ಸಭಾಸದರು ಕೌನ್ಸಿಲ್ ಪ್ರವೇಶವನ್ನು ಸಮರ್ಥಿಸಿದ್ದಾರೆ. ಈಗಿನ ಬಹುಮತವು ಮೊದಲೂ ಇತ್ತು ಎಂದಾದರೆ ಈಗ ಮಾತ್ರ ಅದಕ್ಕೆ ಒಂದು ವಿಶೇಷವಾದ ಬೆಲೆಯನ್ನು ಕೊಡಬೇಕಾದ ಅಗತ್ಯವು ಏನು? ಕಮಿಟಿಯ ಮುಂದಿನ ಸಾಕ್ಷಿಗಳ ಬಹುಮತವನ್ನು ಆಕಲನೆ ಮಾಡಿಯೆ ಪಂಡಿತಜಿಯವರು ಮತ್ತು ಹಕೀಮಜಿಯವರು ಹಾಗು ಪಟೇಲ ಸಾಹೇಬರು ಕೌನ್ಸಿಲ್ ಪ್ರವೇಶವನ್ನು ವಿಧಿಸಿದ್ದಾರೆ. ಇಷ್ಟು ಪ್ರಬಲವಾದ ಬಹುಮತವಿರುವಾಗ ಅದನ್ನು ಲಕ್ಷ್ಯಕ್ಕೆ ತಾರದೆ ಅದಕ್ಕೆ ವಿರುದ್ಧವಾಗಿ ಕಮಿಟಿಯ ಸಭಾಸದರು ಸಿಫಾರಸನ್ನು ಮಾಡಿದ್ದು ಹೇಗೆ ಸಮಂಜಸವು? ಎಂದು ಹಲವರು ಈ ಸಂದರ್ಭದಲ್ಲಿ ಆಕ್ಷೇಪಿಸಬಹುದು. ಪರಂತು ಈ ಆಕ್ಷೇಪವು ನಿಸ್ಸಾರವಾಗಿದೆ. ಈ ಬಹುಮತವು ದೇಶದ ನಿಜವಾದ ಬಹುಮತವಲ್ಲ. ಇದು ಕೃತ್ರಿಮ ಬಹುಮತವು. ಅಸಹಕಾರವಾದಿಗಳೆ ಇಂಥ ಸಭೆಗಳಲ್ಲಿ ಬಹುಮತವನ್ನು ಮಾಡುತ್ತಾರೆ. ಸಭೆಗಳಲ್ಲಿ ಬಹುಮ[illegible] ದೇಶದಲ್ಲಿ ಬಹುಮತವು ಕಾರ್ಯರೂಪದಲ್ಲಿ ಬಂದರೆ ಆಗ ಈ ಬಹುಮತವು ಸಾರ್ಥಕವಾಗಬಹುದು. ಆದರೆ ದೇಶದಲ್ಲಿ ಅಂಥ ಬಹುಮತವು ಯಾರ ಅನುಭವಕ್ಕು ಬರುವುದಿಲ್ಲ. ಸಭೆಗಳಲ್ಲಿ ಕೈಗಳನ್ನೆತ್ತಿ ಬಹುಮತವನ್ನು ಸಾಧಿಸಿದರೆ ಕೃತಾರ್ಥರಾದೆವು ಎಂದು ತಿಳಕೊಳ್ಳುವುದೆ ಎಲ್ಲಿ ಕರ್ತವ್ಯ ಧರ್ಮವಾಗಿದೆಯೊ ಅಲ್ಲಿ ಕಾರ್ಯಾಕಾರ್ಯತೆಯನ್ನು ವಿಚಾರಿಸುವವರು ಯಾರು? [illegible] ಬಹುಮತವು ಯಾವ ಯಾವ ರೀತಿಯಿಂದ ಉಂಟಾಗಿತ್ತು ಎಂಬುದು ಬಹಿರಂಗವಾದ ಗೋಷ್ಟವಾದ್ದರಿಂದ ಅದನ್ನು ಇಲ್ಲಿ ಬರೆದು ತೋರಿಸಬೇಕಾದ ಅಗತ್ಯವಿಲ್ಲ. ಅಥವಾ ಮತಗಳನ್ನು ಕೊಟ್ಟವರು ಸರಿಯಾದ ಲೋಕ ಪ್ರತಿನಿಧಿಗಳು ಮತ್ತು ಈ ಪ್ರತಿನಿಧಿಗಳು ನಿಜವಾದ ಲೋಕಮತವನ್ನೆ ವ್ಯಕ್ತಗೊಳಿಸಿದ್ದಾರೆ ಎಂದಿದ್ದರೆ ಆ ಮಾನದಿಂದ ಕಾರ್ಯಕ್ರಮದಲ್ಲಿ ಯಾಕೆ ಯಶಸ್ವಿತೆಯು ಬರಲಿಲ್ಲ? ಸಭೆಗಳಲ್ಲಿ ಕೈಗಳನ್ನೆತ್ತಿ ಬಹುಮತವನ್ನು ಸಾಧಿಸಿ ತೋರಿಸಿದರೆ ಕೆಲಸವಾಯಿತೆಂದು ಇವರು ತಿಳಿಯುವರೆ? ಸಾರಾಂಶ ಈಗಿನ ಎರಡು ವರ್ಷಗಳಲ್ಲಿಯ ಬಹುಮತವು ಕೃತ್ರಿಮವಾದ ಬಹುಮತವೆಂದು ಹೇಳಲು ಅಡ್ಡಿ ತೋರುವುದಿಲ್ಲ. ಇಂಥ ಕೃತ್ರಿಮ ಬಹುಮತವು ಮೊದಲಿದ್ದರೇನು, ಅಥವಾ ಈಗ ಇದ್ದರೇನು ಎರಡೂ ಒಂದೆ. ಕಾರ್ಯೋಪಯೋಗಿ ಆಗದ ಮತ್ತು ಬರೆ ಒಂದು "ದೇಖಾವೆ"ಗಾಗಿ ಮಾತ್ರ ಇರುವ ಈ ಬಹುಮತವನ್ನು ಸಿ. ಡಿ. ಕಮಿಟಿಯವರು ವಿಶೇಷವಾಗಿ ಎಣಿಸದೆ ಕೌನ್ಸಿಲ್ ಪ್ರವೇಶವನ್ನು ಸೂಚಿಸಿದ್ದಾರೆ. ಈಗಲಾದರೂ ಅದೆ ವಿಷಯದಲ್ಲಿ ಬಹುಮತದ ಯಾವ ಆಡಂಬರವು ತೋರಿಬರುವದೊ ಅದಕ್ಕಾದರೂ ವಿಚಾರವಂತರು ಹೆಚ್ಚಿನ ಬೆಲೆ ಕೊಡಲಿಕ್ಕಿಲ್ಲವೆಂದು ತೋರುತ್ತದೆ. ದೇಶಬಂಧುಗಳಾದ ಚಿತ್ತರಂಜನ ದಾಸರು ಪ್ರಕಟಿಸುವ ಅಭಿಪ್ರಾಯದ ಮೇಲಿಂದಲೂ ಇದೆ ಸಂಗತಿಯು ನಿಷ್ಪನ್ನವಾಗುತ್ತದೆ.

ಒಮ್ಮೆ ಅನುಭವವು ಬಂದರೂ ಪುನಃ ಪುನಃ ದೀಪದಿಂದ ಕೈ ಸುಟ್ಟುಕೊಳ್ಳುವುದೆ ಜಾಣತನವೆಂದು ತಿಳಿಯುವಂತೆ ಕೃತ್ರಿಮ ಬಹುಮತದಿಂದ ತಿರುತಿರುಗಿ ಅವ್ಯವಹಾರ್ಯ ಕಾರ್ಯಕ್ರಮದ ಗೊಂಡೆಯನ್ನು ನಿಲ್ಲಿಸಿ, ಪ್ರಗತಿಯ ಮಾರ್ಗವನ್ನು ಕುಂಠಿಸುವುದೆ ಪುರುಷಾರ್ಥವೆಂದು ನೆನಸುವುದಾದರೆ ದೇಶದ ದುರ್ದೈವವೆ ಒದಗಿದೆ ಎಂದು ಹೇಳಬೇಕಾಗುತ್ತದೆ. ಅನುಭವವಿಲ್ಲ, ಸಮರ್ಪಕವಾದ ಯುಕ್ತಿಗಳಿಲ್ಲ, ಬೇರೆ ಕಡೆಯ ದೃಷ್ಟಾಂತಗಳಿಲ್ಲ, ಪೂರ್ವಾಪರ ಪರಂಪರೆಯ ಬಲವಿಲ್ಲ, ಆದರೆ ಇವೆಲ್ಲವುಗಳ ಬದಲಿಗೆ "ಹೀಗಾಗಲೆ ಬೇಕು, ಹಾಗಾಗಲೆ ಬೇಕು" ಎಂಬ ಒಂದೆಯೊಂದು ದುರಾಗ್ರಹವನ್ನು ಕಟ್ಟಿಕೊಂಡು ಅಪ್ರಯೋಜಕವಾದ ಕಾರ್ಯಕ್ರಮದಲ್ಲಿ ಧನ್ಯತೆಯನ್ನು ಮನ್ನಿಸುವವರ ಬಗ್ಗೆ ಅನುಕಂಪೆಯನ್ನು ಮಾಡಿದಷ್ಟು ಕ[illegible]ಮೆಯೆ ಸರಿ! ಇದಿ ಎರಡು ವರ್ಷಗಳ ಅವಧಿಯಲ್ಲಿ ನೀವು ಹಾಕಿಕೊಂಡ ಕಾರ್ಯಕ್ರಮದ ಕ್ಷೇತ್ರದಲ್ಲಿ ಏನೇನು ಕಾರ್ಯವಾಗಿದೆ, ಆ ಕಾರ್ಯಕ್ಕೆ ಯಾವ ಯಾವ ಫಲವು ಬಂದಿದೆ ಈ ಎಲ್ಲ ಸಂಗತಿಗಳನ್ನು ರಿಪೋರ್ಟು ವಿಶದವಾಗಿ ತೋರಿಸಿಕೊಡುತ್ತಿದೆ. ಮತ್ತು ಈ ಎಲ್ಲ ಅನುಭವವನ್ನೆ ಮುಂದಿಟ್ಟುಕೊಂಡು ಮಹಾತ್ಮಜಿಯವರ ಕಡು ಅನುಯಾಯಿಗಳಾದ ಸಭಾಸದರು—ಪಂಡಿತಜಿ ಮತ್ತು ಹಕೀಮಜಿಯಂಥವರು—ಕಾರ್ಯಕ್ರಮದ ಬದಲಾವಣೆಯನ್ನು ಸೂಚಿಸುತ್ತಿದ್ದಾರೆ; ಕೌನ್ಸಿಲ್ ಪ್ರವೇಶವನ್ನು ಸಪ್ರಮಾಣವಾಗಿಯೂ, ಸಯುಕ್ತಿಕವಾಗಿಯೂ ಸಮರ್ಥಿಸುತ್ತಿದ್ದಾರೆ. ಅವರು ತೋರಿಸಿರುವ ಕಾರಣಗಳನ್ನು ಖಂಡಿಸದೆ, ಕೆಲವು ಆಗ್ರಹನಿಷ್ಠವ್ಯಕ್ತಿಗಳು ಒಟ್ಟಿಗೆ ಸೇರಿಕೊಂಡು ಏನಾದರೂ ಒಂದು ಗುಲ್ಲು ಎಬ್ಬಿಸಿ ಸಭೆಗೂಡಿಸಿ ಭಾಷಣಮಾಡುವದು ನಿಜವಾದ ಲೋಕಮತವಲ್ಲ. ಇಂಥ ಲೋಕಮತದಿಂದಲೆ ಇದುವರೆಗೆ ಹಾನಿಯು ಬಂದಿದೆ. ಇನ್ನು ಮುಂದೆಯಾದರೂ ಶೋಚನೀಯವಾದ ಈ ದುರ್ದೈವವು ಅಸ್ತಮಿಸೀತು ಮತ್ತು ಅಸ್ತಮಿಸಬೇಕು ಎಂದು ದೇಶವತ್ಸಲರಾದವರು ಯಾರೂ ಕೋರದೆ ಇರಲಿಕ್ಕಿಲ್ಲ.

ಮಹಾತ್ಮಜಿಯವರಂಥ ಅಸಾಮಾನ್ಯ ಸತ್ಪುರುಷ ವ್ಯಕ್ತಿಯು ದೃಷ್ಟಿಯಿಂದ ದೂರಕ್ಕೆ ಹೋದ ಬಳಿಕ ಈ ರೀತಿಯ ಮತಭೇದಗಳು ಉತ್ಪನ್ನವಾಗಿವೆ ಎಂದು ಹಲವರ ಮತದ ಯಾವ ಅನುವಾದವನ್ನು ನಾವು ಮೇಲೆ ಮಾಡಿರುವೆವೊ ಅದರ ಬಗ್ಗೆ ಒಂದೆರಡು ಮಾತುಗಳನ್ನು ಬರೆ[illegible], ಈ ಹೊತ್ತಿನ ಲೇಖವನ್ನು ಮುಗಿಸುವೆವು. ಕೌನ್ಸಿಲ್ ಬಹಿಷ್ಕಾರದಂಥ ಬದಲಾವಣೆಯನ್ನು ಸೂಚಿಸುವವರಾದ ದಾಸ, ಕೇಳಕರ ಮುಂತಾದವರ ಮತಭೇದಗಳು ಈ ಹೊತ್ತು ಇವೆ. ಮಹಾತ್ಮಜಿಯವರ ಹಾಜರಿಯಲ್ಲಿಯೂ ಇದ್ದವು. ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಗಳ ಮತ್ತು ವಿಷಯ ನಿಯಾಮಕ ಸಭೆಗಳ ವೃತ್ತಾಂತವನ್ನು ಪರಿಶೀಲಿಸಿದವರಿಗೆ ಈ ಸಂಗತಿಯು ಗೊತ್ತಿದೆ. ಆದರೆ ಆಗ ಇದುವರೆಗೆ ವರ್ಣಿಸಿದ ಕೃತ್ರಿಮ ಬಹುಮತದ ಬೆಂಬಲವು ಸಭೆಗಳಲ್ಲಿರುತ್ತಿತ್ತು. ಅದಕ್ಕಾಗಿ ಸಮರ್ಪಕವಾದ ಯುಕ್ತಿವಾದಕ್ಕೆ ಸಹ ಎಡೆಯು ಸಿಗುತ್ತಿರಲಿಲ್ಲ. ಈಗಲಾದರೂ ಇಂಥ ಕೃತ್ರಿಮ ಬಹುಮತದ ಬೆಂಬಲವು ಇರುವದಾದರೆ ಬದಲಾವಣೆಯನ್ನಪೇಕ್ಷಿಸುವವರು ಎಂದಿನಂತೆ ನಿರುಪಾಯರಾಗಿ ಸುಮ್ಮನಾದರು. ದಾಸ, ಕೇಳಕರ, ನೆಹರು, ಲಾಲಾ ಲಜಪತರಾಯ ಮುಂತಾದ ಸಕ್ರಿಯ ದೇಶಭಕ್ತರು ಗಾಂಧಿ ಮಹಾರಾಜರ ಬರೆ ವ್ಯಕ್ತಿಮಹಾತ್ಮ್ಯದಿಂದ, ಕಣ್ಣು ಕಟ್ಟಿದವರಾಗಿ ತಮ್ಮ ಪ್ರಾಮಾಣಿಕ ಮತಭೇದಗಳನ್ನು ಗಂಟು ಮೂಟೆ ಕಟ್ಟಿ ಬದಿಗಿಟ್ಟಿದ್ದರು ಎಂದು ತಿಳಕೊಳ್ಳುವವರು ಹಿಂದುಸ್ಥಾನದ ಇದುವರೆಗಿನ ರಾಜಕೀಯ ಇತಿಹಾಸವನ್ನು ಕೊಂಚವೂ ವ್ಯಾಸಂಗಿಸಲಿಲ್ಲ. ಮತ್ತು ಕೇವಲ ವೈಯಕ್ತಿಕವಾದ ಕುರುಡು ಭಕ್ತಿಯಿಂದ ಇಂಥ ಅಪ್ರಬುದ್ಧ ಆರೋಪಣೆಗಳನ್ನು ದಾಸರಂಥ ಸನ್ಮಾನ್ಯ ಮುಖಂಡರ ಮೇಲೆ ಏನೂ ನಾಚದೆ ಮಾಡತೊಡಗಿದ್ದಾರೆ. ಈ ಮಹಾಶಯರ ಆಕ್ಷೇಪಗಳಿಗೆ ತುದಿಬುಡ ಮೊದಲಾದ್ದೇನೂ ಇಲ್ಲವಾದ ಕಾರಣ ಉಪೇಕ್ಷೆಯೆ ಅವುಗಳಿಗೆ ನಿಜವಾದ ಉತ್ತರವು. ಆದರೆ ರಾಜಕಾರಣದಲ್ಲಿ ಧ್ಯೇಯ ಸಾಧ್ಯತೆಯ ಕಡೆಗೆ ಕಣ್‌ಮರೆ ಮತ್ತು ಮೈಗಳ್ಳತನವಾದಿ ಅಂಥ ಶ್ರದ್ಧೆಯ ಕತ್ತಲೆಯಲ್ಲಿ ವ್ಯಕ್ತಿಗಳು ಯಾವಾಗ ಮಹಾನಂದವನ್ನು ಒಟ್ಟು ತಾವು ಕೃತಾರ್ಥರೆಂಬ ಭಾವನೆಯನ್ನು ಕಟ್ಟಿಕೊಳ್ಳುತ್ತವೊ ಆಗ ಆ ದೇಶದ ಉನ್ನತಿಯು ದೂರದೂರಕ್ಕೆ ಹೋಗುತ್ತದೆ ಎಂಬುದನ್ನು ಸೂಚಿಸದೆ ನಮ್ಮಿಂದಿರಲಾಗದು. ಕೊನೆಗೆ ಒಂದು ಮಾತನ್ನು ಯಾರೂ ಮರೆಯಕೂಡದು ಕೌನ್ಸಿಲ್ ಬಹಿಷ್ಕಾರವು ಎಲ್ಲ ತರದ ಅಸಹಕಾರಕ್ಕೆ ಮೂಲಾಧಾರವೆಂದು ಈಗ ಏನು ತಿಳಿಯಲಾಗಿದೆಯೊ ಇದು ಮಹಾತ್ಮಜಿಯವರ ಮೂಲ ಕಾರ್ಯಕ್ರಮದಲ್ಲಿ ಹೇಗೆ ಸಮಾವಿಷ್ಟವಾಗಿರಲಿಲ್ಲ ಬಳಿಕ ಲಾಲಾಜಿಯವರ ಕಲ್ಪನೆಯು ಇದರಲ್ಲಿ ಹೇಗೆ ಸೇರ್ಪಡಿಸಲ್ಪಟ್ಟಿತು, ಇತ್ಯಾದಿ ಪಂಡಿತಜೀಯವರು ಪ್ರಕಟಿಸಿರುವ ಸಂಗತಿಗಳನ್ನು ಆಲೋಚಿಸುವಾಗ ಕೌನ್ಸಿಲ್ ಬಹಿಷ್ಕಾರದ ರಬ್ಬರನ್ನು ಮಹಾತ್ಮಜಿಯವರ ಪೂಜ್ಯ ಹೆಸರಿನಿಂದ ಈಗ ವೃಥಾ ಉದ್ದಕ್ಕೆ ಎಳೆಯುವುದು ಶ್ರೇಯಸ್ಕರವಲ್ಲವೆಂದು ತಿಳಿಯಬೇಕು.

ಸ್ಫುಟವಿಚಾರಗಳು.

೧. ಸೀಖ ಗುರುದ್ವಾರದ ಚರ್ಚೆಯಲ್ಲಿ ಪಂಜಾಬ ಸರಕಾರದವರು ಅಕಾಲಿಗಳನ್ನು ಪ್ರಥಮದಲ್ಲಿ ಬಿರುಸಾದ ಪೆಟ್ಟಿಗೆ ಗುರಿಮಾಡಿದ್ದನ್ನೂ, ತಮ್ಮ ಈ ಕೃತ್ಯವನ್ನು ನೋಡಿ ಇಡಿ ಜಗತ್ತು ಛಿ ಎನ್ನುವುದನ್ನು ಗ್ರಹಿಸಲಾರದೆ ಅಕಾಲಿಗಳನ್ನು ಸೆರೆಹಿಡಿಯಲು ಆರಂಭಮಾಡಿದ್ದನ್ನು ವಾಚಕರು ಬಲ್ಲರು. ಈ ಅಕಾಲಿ ಕೈದಿಗಳು ೫ ಸಾವಿರಕ್ಕಿಂತ ಹೆಚ್ಚಾದರೂ ಸೀಖರ ಬೆನ್ನು ಬಗ್ಗದಿದ್ದದ್ದು ನೋಡಿ ಸರಕಾರವು ಸಮಾಧಾನಕ್ಕೆ ಬಂದಿದೆ. ಆದರೆ ನಿಜವಾದ ಸಮಾಧಾನವನ್ನು ಆಶಿಸದೆ, ಗುರುದ್ವಾರ ಪ್ರಬಂಧಕ ಸಮಿತಿಗೂ ಇಡಿ ಸೀಖರ ಮತಸ್ಥರಿಗೂ ಸಮಾಧಾನವಿಲ್ಲದ ಒಂದು ಬಿಲ್ಲನ್ನು ಈಗ ಕೌನ್ಸಿಲಿನ ಮುಂದೆ ತಂದಿದ್ದಾರೆ. ಅದುಮಾತ್ರವಲ್ಲ; ಅತ್ತಿತ್ತಲಾಗಿ ನೋಡದೆ ಮುಂದೆ ಬಂದ ಬಿಲು ಕೌನ್ಸಿಲಿನಲ್ಲಿನ ಸೀಖ ಮೆಂಬರರ ಅರಿಕೆಯಂತೆ ತಂದಿದ್ದೇವೆಂಗು ಬಾಯಿಬಿಟ್ಟು ಬಹಿರಂಗಮಾಡಿದರು. ಆದರೆ, ಪಾಪ! ಸೀಖ ಮೆಂಬರರು ಸುಮ್ಮನೆ ಕೂತುಕೊಳ್ಳಲಿಲ್ಲ. ಅವರಲ್ಲಿ ಕೆಲವರು ಈಗ ತಂದ ಬಿಲು ಗುರುದ್ವಾರದ ಪ್ರಸಂಗದ ಮುಂಚೆಯೆ ತರಲು ತಾವು ಕೇಳಿದ್ದೇವೆಂದೂ ಈಗಣ ಸಂದರ್ಭದಲ್ಲಿ ಅದಕ್ಕೆ ತಮ್ಮ ಸಹಾನುಭೂತಿಯಿಲ್ಲವೆಂತಲೂ ಪ್ರಕಟಿಸಿದ್ದಾರೆ. ಸರಕಾರದ ಮಾತು ಅವರ ಜೇಬಿನಲ್ಲೆ ಉಳಿಯಿತು. ಇದನ್ನೆಲ್ಲ ನೋಡಿದರೆ, "ಬ್ರಿಟಿಷ ಸರಕಾರವು ಏನಾದರೂ ಒಳ್ಳೆಯದು ಮಾಡಿದ್ದರೆ, ಒಳ್ಳೆಯ ಕೆಲಸಗಳ ಮೇಲೆ ಅದಕ್ಕೆ ಪ್ರೀತಿಯಿದ್ದಲ್ಲ, ನಿರ್ವಾಹವಿಲ್ಲದೆ ಮಾಡಿದ್ದು" ಎಂದು ಒಬ್ಬ ಮಹನೀಯರು ಹೇಳಿದ ಮಾತು ಸತ್ಯವೆಂದು ವಿಶದವಾಗುತ್ತದೆ. ಸೀಖ ಮೆಂಬರರು ಕೇಳಿದಾಗ ಈ ಬಿಲು ತಂದಿದ್ದರೆ ಈಗಣ ಅವಸ್ಥೆಯು ಬರುತ್ತಿದ್ದಿಲ್ಲ. ಒಲೆಯ ಬೆಂಕಿಯನ್ನು ಒಂದು ಗಿಂಡಿ ನೀರಿನಿಂದ ಆರಿಸಬಹುದೆಂದು ಹೇಳಿದ್ದನ್ನು ಕೇಳಿ ಮನೆಗೆ ಬೆಂಕಿ ಬಿದ್ದರೂ ಒಂದೆ ಗಿಂಡಿ ನೀರು ತರುವುದು ಎಷ್ಟರ ಜಾಣತನ? ಮಿಂಚಿನ ವೇಗದಯಾನಗಳ ಈ ಕಾಲದಲ್ಲಿ ನಮ್ಮ ಸರಕಾರವು ಮುದಿಎತ್ತಿನ ಗಾಡಿಯಲ್ಲಿ ಬರುತ್ತ ಹಿಂದೆ ಬಿದ್ದದ್ದು ನೋಡಿದರೆ ನಮಗೆ ಕನಿಕರವುಂಟಾಗುತ್ತದೆ. ಇನ್ನಾದರೂ ಸೀಖ ಮೆಂಬರರು ತಮ್ಮ ಅಭಿಪ್ರಾಯವನ್ನು ತಿಳಿಸಿದ ನಂತರ ಸರಕಾರವು ನಿಜಸ್ಥಿತಿಯನ್ನು ತಿಳಿದೀತೇ? ನೋಡಲಿಕ್ಕಿದೆ!

೨. ಅಸಹಕಾರಿಗಳು ಕಳ್ಳಕಾಕರಂತೆ ತಮ್ಮ ನೀಚ ಕೃತ್ಯಗಳಿಗಾಗಿ ಜೈಲಿಗೆ ಹೋದವರಲ್ಲ; ತಮ್ಮ ದೇಶಸೇವೆಯನ್ನು ಮಾಡುವುದರಲ್ಲಿ ಯಾರಿಗೂ ಏನು ಹಾನಿಯನ್ನು ಮಾಡದೆ ಜೈಲಿಗೆ ಹೋದವರು. ಹೀಗಿದ್ದರೂ ಜೈಲ್ ಅಧಿಕಾರಿಗಳು ಅವರನ್ನು ಬೇರೆ ಕೈದಿಗಳಂತೆಯೆ ಪೀಡಿಸುತ್ತಾರೆಂದು ಅನೇಕ ವರ್ತಮಾನಗಳು ಬರುತ್ತಿವೆ. ಅವೆಲ್ಲಕ್ಕಿಂತ ರಾಜಕೀಯ ಕೈದಿಗಳನ್ನು ಮರ್ಯಾದೆಯಿಂದ ನೋಡುತ್ತಾರೆಂದು ಹೊಗಳಿಕೊಳ್ಳುವ ಸಂಯುಕ್ತ ಪ್ರಾಂತಗಳಿಂದ ಬಂದ ಒಂದು ವರ್ತಮಾನವು ಹೃದಯದ್ರಾವಕವಾದ್ದು. ಲಕ್ನೊ ಜೈಲಿನಲ್ಲಿದ್ದ ನಾರಾಯಣಲಾಲ್ ಎಂಬೊಬ್ಬ ಅಸಹಕಾರಿಯನ್ನು ಅವನ ದೇಹಾರೋಗ್ಯವನ್ನು ಗಣಿಸದೆ ಬಿಸಿಲಿನಲ್ಲಿ ಕೆಲಸಮಾಡಲು ಒತ್ತಾಯಪಡಿಸಿದರಂತೆ; ಹೀಗಾಗಿ ಅವನು ಉಷ್ಣಬಾಧೆಯಿಂದ ಸಾಯಲಿಕ್ಕೆ ಹತ್ತಿದರೂ ಜೈಲ್‌ವಾರ್ಡರರು ಡಾಕ್ಟರರನ್ನು ಕರಿಸದೆ ಕಡೆಗೆ ಕೈದಿಯು ಸತ್ತುಹೋದನಂತೆ. ಇದರ ವಿಷಯ ವಿಚಾರ ಮಾಡಿದ ಕಮಿಟಿಯವರು ಕೈದಿಯ ಮರಣಕ್ಕೆ ಕಾರಣವೇನೆಂದು ಹೇಳದಿದ್ದರೂ ಅವರು ವಿಚಾರಿಸಿದ ಬೇರೆ ಕೈದಿಗಳ ಹೇಳಿಕೆಯಿಂದ ತಿಳಿಯಬರುವುದೇನೆಂದರೆ, ನಾರಾಯಣಲಾಲನ ಹತ್ತಿರವಿದ್ದ ಬೇರೆ ರಾಜಕೀಯ ಕೈದಿಗಳು ಅವನಿಗಾಗಿ ಡಾಕ್ಟರರನ್ನು ಕರೆಸಿರೆಂದು ಎಷ್ಟು ಬೇಡಿದರೂ ವಾರ್ಡರರು ಹಾಗೆ ಮಾಡದೆ ಕಟ್ಟಕಡೆಗೆ ಮೂರು ಗಂಟೆಯು ವಿಳಂಬಮಾಡಿ ವೈದ್ಯರನ್ನು ಕರೆಸಿದರು. ವೈದ್ಯರು ಬಂದು ಏನಾದರೂ ಉಪಾಯಮಾಡುವಷ್ಟರಲ್ಲಿ ನಾರಾಯಣಲಾಲನು ಸ್ವರ್ಗಸ್ಥನಾದನು. ಜೈಲ್‌ವಾರ್ಡರರ ಆಲಸ್ಯ ಮತ್ತು ಕ್ರೂರತನದಿಂದ ಒಬ್ಬ ಗೃಹಸ್ಥನು ಸತ್ತುಹೋದರೂ ಕೇಳುವವರಿಲ್ಲ. ಯುದ್ಧದಲ್ಲಿನ ಬಂದಿಗಳನ್ನು ನಡಿಸುವುದಕ್ಕಿಂತ ಕಠಿಣ ರೀತಿಯಲ್ಲಿ ಏನು ಅಕೃತ್ಯಮಾಡದೆ ಅಸಹಕಾರಿಗಳನ್ನು ದಂಡಿಸುವ ಕಲ್ಲೆದೆಯು ಸರಕಾರಿ ಉದ್ಯೋಗಸ್ಥರಲ್ಲಿದ್ದದ್ದು ವಿಷಾದಕರವಾದ ಸಂಗತಿ. ನೌಕರರ ಇಂಥ ಅಕೃತ್ಯಗಳಿಂದಲೆ ಸರಕಾರವು ಜನರ ಪ್ರೀತಿಗೆ ಬಾಹಿರವಾದ್ದೆ ಹೊರತು ರಾಜಕೀಯ ಚಳವಳ ಹುಟ್ಟಿಸುವವರ ದುರ್ಬೋಧನೆಯಿಂದಲ್ಲ.

೩. ಐರ್ಲೆಂಡಿನಲ್ಲಿ ಇನ್ನೂ ಸಮಾಧಾನವು ನೆಲೆಗೊಳ್ಳಲಿಲ್ಲ. ಕೆಲವು ವಾರಗಳಿಂದ ಸುಮ್ಮನಿದ್ದ ಡಿ'ವೆಲೇರರವರು ಈಗಣ 'ಫ್ರೀ ಸ್ಟೇಟ'ನ್ನು ನಾಶಮಾಡುವ ಕಾರ್ಯವನ್ನು ತಿರಿಗಿ ಪ್ರಾರಂಭಿಸಿದಂತೆ ತೋರುತ್ತದೆ. ಡಿ'ವೆಲೇರರವರ ಮತ್ತು ಅವರ ಅನುಯಾಯಿಗಳ ದೇಶಭಕ್ತಿಯು ಕೀಳು ತರಗತಿಯದೆಂದು ನಾವು ಹೇಳಲಿಕ್ಕಿಲ್ಲ; ಆದರೆ ಕಳೆದ ಚುನಾವಣೆಯಲ್ಲಿ ತನ್ನ ಪಕ್ಷದವರು ಸೋತುಹೋದ್ದರಿಂದ ಐರ್ಲೆಂಡಿನ ಪ್ರಜಾಗಣವು ತನ್ನ ಬೆಂಬಲಕ್ಕಿಲ್ಲವೆಂದು ವೆಲರರವರು ತಿಳಿಯಬೇಕಿತ್ತು. ಹಾಗೆ ಮಾಡದೆ ತನ್ನ ಪುಂಡರ ಕೂಟವನ್ನು ಕಟ್ಟಿಕೊಂಡು ಇಡೀ ಐರ್ಲೆಂಡಿನಲ್ಲಿ ಜಗಳವೆಬ್ಬಿಸಿ ಪ್ರಜೆಗಳನ್ನೆಲ್ಲ ತನ್ನ ಮತಕ್ಕನೆ ಬಗ್ಗುವಂತೆ ಮಾಡಲು ಯತ್ನಿಸುವುದು ದೇಶಭಕ್ತಿಯೊ? ಎಂದು ಸಂಶಯವು ನಿಜವಾಗಿ ಹುಟ್ಟುತ್ತದೆ. ನೂರಾರು ವರ್ಷಗಳಿಂದ ಪರರಿಂದ ಪೀಡೆಯನ್ನು ಹೊಂದಿಯಾಗಲಿ ತನ್ನ ಅಂತಃಕಲಹಗಳಿಂದಾಗಲಿ ನೊಂದಿರುವ ಐರ್ಲೆಂಡು ಶಾಂತತೆಗಾಗಿ ಬಾಯ್ತೆರೆದು ಕಾದಿರುತ್ತದೆ. ಈಗಣ 'ಫ್ರೀ ಸ್ಟೇಟ್' ಎಂಬುದು ಸಂಪೂರ್ಣ ಸ್ವಾತಂತ್ರ್ಯವಲ್ಲದಿದ್ದರೂ 'ಸಿಕ್ಕಿದಷ್ಟು ಮಕ್ಕಳ ಪುಣ್ಯ'ವೆಂದು ತತ್ಕಾಲಕ್ಕಾದರೂ ತೃಪ್ತಿಹೊಂದಿದ ಜನಾಂಗಕ್ಕೆ ಇನ್ನೂ ದುಃಖ ಕೊಡುವುದನ್ನು ಯಾರಾದರೂ ಸಮರ್ಥಿಸಲಿಕ್ಕಿಲ್ಲ. ಸಮಯ ಸೂಚನೆಗಳು ನಿಜವಾಗಿದ್ದರೆ ವೆಲರರವರು ಹೆಚ್ಚುಕಾಲ ತನ್ನ ಕಾರ್ಯವನ್ನು ನಡಿಸಲಾರರೆಂದು ತೋರುತ್ತದೆ. ಹತ್ತುಜನರ ಮನಸ್ಸಿಗೆ ವಿರೋಧವಾದ ಕೆಲಸವು ಎಷ್ಟರ ತನಕ ನಡೆದೀತು? ಹೇಗಾದರೂ, ಆದಷ್ಟು ಬೇಗ ಐರ್ಲೆಂಡಿನಲ್ಲಿ ಶಾಂತತೆಯು ಸ್ಥಿರವಾಗಲೆಂದು ನಾವು ಸಹ ಕೋರುತ್ತೇವೆ. 'ನೊಂದವರಿಗೆ ನೋವು ತಿಳಿಯುವುದು' ಐರ್ಲೆಂಡಿನ ನೋವು ಹಿಂದುಸ್ಥಾನದ ನಮಗೆ ಗೊತ್ತು.

೪. ಅಂಗೋರಾ ಸರಕಾರದವರು ಖಲೀಫನ ರಾಜಕೀಯ ಅಧಿಕಾರವೆಲ್ಲ ಮಹಾಸಭೆಗೆ ಒಳಪಟ್ಟಿರಬೇಕೆಂದೂ ಮತಸಂಬಂಧವಾದ ಅಧಿಕಾರವು ತಾವು ಚುನಾಯಿಸಿದವನಿಗೆನೆ ಸಿಕ್ಕಬೇಕೆಂದೂ ನಿರ್ಧಾರಮಾಡಿದ್ದು ಹಿಂದುಸ್ಥಾನದಲ್ಲಿ ಮೊತ್ತಮೊದಲು ಸ್ವಲ್ಪ ಆಶ್ಚರ್ಯವನ್ನುಂಟುಮಾಡಿತು. ಈಗ ಹಕೀಮ ಅಜ್ಮಲ್‌ಖಾನ್ ಮುಂತಾದ ಮುಸಲ್ಮಾನ ಮುಖಂಡರು ಹೆಚ್ಚು ಆಲೋಚನೆ ಮಾಡಿ ಪ್ರಕಟಮಾಡಿದ್ದಾರೇನೆಂದರೆ—"ಖಲೀಫನನ್ನು ಚುನಾಯಿಸುವುದು ಹೊಸ ಪದ್ಧತಿಯಲ್ಲ; ಹಿಂದೆ ಅದು ವಾಡಿಕೆಯಲ್ಲಿತ್ತು. ರಾಜಕೀಯ ಅಧಿಕಾರವು ಮಹಾಸಭೆಗೆ ಸೇರಿದ್ದರಿಂದ ಬೇರೆ ಸರಕಾರದವರು ಖಲೀಫನನ್ನು ಸ್ವಾರ್ಥಕ್ಕಾಗಿ ಉಪಯೋಗಿಸದಂತಾಯಿತು. ಹೀಗಿರುವಾಗ ಇಲ್ಲಿನ ಮುಸಲ್ಮಾನರು ಗಾಬರಿಯಾಗಬಾರದು." ನಾವೇನೂ ಮಹಮ್ಮದೀಯ ಶಾಸ್ತ್ರದಲ್ಲಿಯಾಗಲಿ ಅವರ ಪ್ರಾಚೀನ ಪದ್ಧತಿಗಳಲ್ಲಾಗಲಿ ಹೆಚ್ಚು ಪ್ರವೀಣರಲ್ಲ; ಆದ್ದರಿಂದ ಮುಸಲ್ಮಾನ ಮುಖಂಡರು ಹೇಳಿದನ್ನು ಸತ್ಯವೆಂದು ಎಣಿಸಬೇಕು. ಮುಸಲ್ಮಾನ ಬಂಧುಗಳ ಅಪೇಕ್ಷೆಗೆ ವಿರುದ್ಧವಾಗಿ ಯಾವ ಕಾರ್ಯವೂ ಆಗಿಲ್ಲವೆಂಬುದನ್ನು ನೋಡಿ ನಾವು ಸಂತೋಷಪಡುತ್ತೇವೆ.

೫. ಮದ್ಯಪಾನ ನಿಷೇಧದ ಚಳವಳವು ಎಷ್ಟು ಫಲಕಾರಿಯಾದದ್ದೆಂದು ಮದ್ರಾಸ ಸರಕಾರವು ಪ್ರಕಟಿಸಿದ ಅಂಕೆಗಳ ಮೇಲಿಂದ ತಿಳಿದುಬರಬಹುದು. ಈ ಅಂಕೆಗಳು ಇತ್ತಲಾಗಿನ ಮೂರು ವರ್ಷದ್ದಾಗಿವೆ. ಮದ್ಯಮಾರಾಟವು ಮದ್ರಾಸಿನ ಎಲ್ಲ ಜಿಲ್ಲೆಗಳಲ್ಲಿ ಕಡಿಮೆಯಾಗುತ್ತ ಬಂದಿದೆ ಎಂದು ಗೊತ್ತಾಗುತ್ತದೆ. ತಮಿಳು ದೇಶ, ಸೇಲಮು ಮತ್ತು ಕೊಯಮುತ್ತೂರು ಇವುಗಳಲ್ಲಿ ೧೯೧೯-೨೦ನೆಯ ಇಸವಿಯಲ್ಲಿ ೧೪,೫೨,೧೨೦ ಮತ್ತು ೧೫,೬೭,೮೧೨ ರೂಪಾಯಿ ಇತ್ತು, ಈ ರಕಮು ೧೯೨೦-೨೧ನೆಯ ಇಸವಿಯಲ್ಲಿ ೧,೨೦೦,೬೧೨ ಮತ್ತು ೧೨, ೫೪, ೮೧೦ಕ್ಕೆ ಬಂದು ನಿಂತಿದೆ. ಮಾತ್ರವಲ್ಲ, ೬,೦೪,೦೩೪ ಮತ್ತು ೬,೮೩,೧೫೧ ರೂಪಾಯಿ ೧೯೨೧-೨೨ನೆಯ ಇಸವಿಯಲ್ಲಾಗಿದೆ. ತಿರುಚಿನಾಪಳ್ಳಿ ಮತ್ತು ತಂಜಾವೂರಿನಲ್ಲಿ ೯,೮೯,೪೭೨ ಮತ್ತು ೧೬,೧೬,೯೯೨ ರೂಪಾಯಿ ಇದ್ದವು. ೧೯೨೦-೨೧ನೆಯ ಇಸವಿಯಲ್ಲಿ ೫೦೩,೯೧೦ ಮತ್ತು ೧೯೨೧-೨೨ನೆಯ ಇಸವಿಯಲ್ಲಿ ೧೫೯,೯೬೦ ರೂ. ಹುಟ್ಟಿದೆ. ಇದೆ ಮೇರೆಗೆ ಮಧುರಾ, ಉತ್ತರ ಆರ್ಕಾಟು ಮತ್ತು ಚಂಗಲ್‌ಪೇಟೆ ಹಾಗು ಆಂಧ್ರ ದೇಶದಲ್ಲಿ ಸಹ ಉತ್ತರೋತ್ತರ ಮದ್ಯದ ಉತ್ಪನ್ನವು ಕಡಮೆಯಾಗಿದೆ ಎಂದು ಕಂಡುಬರುತ್ತದೆ. ನಮ್ಮ ನೆರೆಯ ಜಿಲ್ಲೆಯ ಮಲಬಾರಿನಲ್ಲಿ ಸಹ ಕೆಲವುಮಟ್ಟಿಗೆ ಕಡಿಮೆಯಾಗಿದೆ. ಅನಂತಪುರ, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲಿ ಸಹ ಮದ್ಯದ ಉತ್ಪನ್ನವು ಕಡಿಮೆಯಾಗಿದೆ. ಇದರ ಶ್ರೇಯಸ್ಸು ಕೊಂಗ್ರೆಸ್ ಪರವಾಗಿ ನಡೆದಿರುವ ಮದ್ಯಪಾನ ನಿಷೇಧದ ಚಳವಳಿಗೆ ಕೊಡಬೇಕಾಗಿದೆ. ಅದೆ ರೀತಿಯಿಂದ ಶಾಂತವಾಗಿ ಚಳವಳವನ್ನು ಮುಂದರಿಸುತ್ತಿದ್ದಲ್ಲಿ ಈ ದುರ್ವ್ಯಸನದ ಮೂಲಕ್ಕೆನೆ ಕೊಡಲಿಯು ಬೀಳುತ್ತಿತ್ತು. ಆದರೆ ಪಾನಸ್ವಾತಂತ್ರ್ಯದ ಬೆಕ್ಕು ಅಡ್ಡ ಬಂದು ಆ ಚಳವಳವನ್ನು ನಿಲ್ಲಿಸಿಬಿಟ್ಟಿತು. ಕೆಲವು ಜಿಲ್ಲೆಗಳಲ್ಲಿ ಮೇಲಿನಂತೆ ಕಡಿಮೆಯಾಗಿರುವಾಗ ಮದ್ರಾಸಿನಂತಹ ಕೆಲವು ಕಡೆಗಳಲ್ಲಿ ಕೆಲವು ಮಟ್ಟಿಗೆ ಸರಕಾರದ ಉತ್ಪನ್ನವು ಹೆಚ್ಚಾಗಿದೆ. ಇದರ ಮೇಲಿಂದ ಜನರ ನೀತಿ ಭ್ರಷ್ಟತೆಯು ಹೇಗೆ ವಿಶದವಾಗುತ್ತದೊ ಹಾಗೆಯೆ ಸರಕಾರದ ಲೋಭಿತ್ವವು ಕೂಡ ವಿಶದವಾಗುತ್ತದೆ. ಇರಲಿ, ಇಂಥ ವ್ಯಸನಗಳನ್ನು ಪರಿಹರಿಸಲು ಈಗಿನ ಕೌನ್ಸಿಲುಗಳು ಕೆಲಸಮಾಡಿದರೆ ಬಹಳ ಚಂದವಾಗುತ್ತಿತ್ತು. ಪರಂತು ಅಂಥ ಕೌನ್ಸಿಲುಗಳನ್ನು ರಾಷ್ಟ್ರೀಯರು ಪ್ರವೇಶಿಸಬೇಕಾದರೆ ರಾಷ್ಟ್ರೀಯ ಸಭೆಯು ಅಪ್ಪಣೆಯನ್ನು ಕೊಡಬೇಕಾಯಿತಷ್ಟೆ!

ಮಂಗಳೂರು.

ಹೆಜಮಾಡಿಯಲ್ಲಿ ದೂಮ ಮರಕಾಲನು ತನ್ನ ಕೆಲಸದ ರಾಮು ಎಂಬವನಿಗೆ ಚೂರಿ ಹಾಕಿ ಕೊಂದ ಅಪಾದನೆಯ ಮೊಕದ್ದಮೆ ತನಖಿಯು ಇದೇ ಬರುವ ತಾ. ೨೭ರಲ್ಲೂ ಕುದ್ರೋಳಿಯಲ್ಲಿ ಮಲ್ಲು ಮರಕಾಲನು ತನ್ನ ಹೆಂಡತಿಯನ್ನು ಬರ್ಜಿಯಿಂದ ತಿವಿದುಕೊಂದ ಅಪಾದನೆಯ ನಂಬ್ರದ ತನಖಿಯು ತಾರೀಕು ೨೩ಕ್ಕೂ ಇಟ್ಟಿದೆ.

ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ಮೀಟಿಂಗು ಬರುವ ತಾರೀಕು ೨೭ರಲ್ಲಿ ಜರಗುವುದು.

ಕಾಸರಗೋಡು ತಾಲೂಕು ಹೆಡ್ ಎಕೌಂಟಾಂಟರಾದ ಮ. ರಾ. ವೆಂಕಪ್ಪನವರು ಕೆಲಸದಿಂದ ನಿವೃತ್ತರಾಗುವುದರಿಂದ ಮೆ| ಸಿ ಪ್ಯಾಸರು ಕಾಸರಗೋಡು ತಾಲೂಕು ಹೆಡ್ ಎಕೌಂಟಾಂಟರಾಗಿ ನೇಮಕಪಟ್ಟಿರುವರು.

ಮಂಗಳೂರ ತಾಲೂಕಿನ ಎಕೌಂಟಾಂಟರಾದ ಮ. ರಾ. ಉಪ್ಪಿನಂಗಡಿ ರಾಮನಾಯ್ಕರವರು ೩ತಿಂಗಳ ಪ್ರಿವಿಲೆಜ್ ರಜೆಯನ್ನು ಹೊಂದಿರುವುದರಿಂದ ಮೆ| ವಿಠ್ಠಲ ಸಲ್ದಾಂಜಾರು ಇಲ್ಲಿಯ ತಾಲೂಕು ಹೆಡ್ ಎಕೌಂಟಾಂಟರಾಗಿ ನೇಮಕಪಟ್ಟಿರುವರು.

ಮ. ರಾ. ಸುಂದರೇಶ ಅಯ್ಯರರು ಹಜೂರಿನ ಕಾಯಂ ಟ್ರೆಜರರಾಗಿ ನೇಮಕವಾಗಿದೆ.

ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗಿಗೆ ಇಲ್ಲಿಂದ ಮ. ರಾ. ಅರೆಬೈಲ್ ಭೋಜರಾಯರು ಹೋಗುವರು.

ಮಂಗಳೂರ ಮೈಲಿನ ಸಂಪಾದಕ, ಕಾರ್ಯಕಾರಿ ಮೆನೇಜರ್ ಮತ್ತು ಪ್ರಿಂಟರ ಇವರಮೇಲೆ ರೆವರೆಂಡ ಫಾದರ್ ಪಿರೇರರವರು ಮಾಡಿದ ಮೊಕದ್ದಮೆಯ ಮುಂದಿನ ತನಖಿಯು ತಾ. ೨೮ಕ್ಕೆ ಇಟ್ಟಿದೆ.

ಪೋಲೀಸ್ ಸ್ಪೋರ್ಟ್ಸು ತಾ. ೧೮ಕ್ಕೆ ಮುಂದರಿಸಿ ಇಟ್ಟಿದೆ.

ಮಂಗಳೂರು ತಾಲೂಕು ಬೋರ್ಡಿನ ಈ ತಿಂಗಳ ಅಧಿವೇಶನವು ಬರುವ ತಾರೀಕು ೨೧ನೇ ಮಂಗಳವಾರ ಸದರಿ ತಾಲೂಕು ಬೋರ್ಡಿನ ಆಫೀಸಿನಲ್ಲಿ ಜರಗುವುದು.

ನಮ್ಮ ಜಿಲ್ಲೆಯ ಕಲೆಕ್ಟರರಾಗಿದ್ದು ಈಗ ರಜೆಯಮೇಲಿರುವ ಮ. ರಾ. ಎ. ರಾಮಣ್ಣ ನೆಡುಬಾಡಿಯವರು ತಮ್ಮ ಜನ್ಮದಿನದ ಸಂತೋಷಾರ್ಥವಾಗಿ ನಾಳೆ ಶನಿವಾರ ಬಡವರಿಗೆ ಒಂದು ಔತಣವನ್ನು ಕೊಡಲಿಕ್ಕಿದ್ದಾರೆ.

ಸಹಕಾರಿ ಇಲಾಖೆಯ ಸುಪರ್‌ವೈಜರುಗಳ ಪರೀಕ್ಷೆಯು ಬರುವ ಜನವರಿ ತಿಂಗಳ ಕಡೆ ಶನಿವಾರದ ಹಿಂದಿನ ಶನಿವಾರ ದ. ಕನ್ನಡಾ ಸಹಕಾರಿ ಸಂಘಗಳ ಎಸಿಸ್ಟಾಂಟ ರಿಜಿಸ್ಟ್ರಾರರ ಆಫೀಸಿನಲ್ಲಿ ಜರಗುವುದು. ಉಮೇದ್ವಾರರು ಪರೀಕ್ಷೆಯ ಫೀಸನ್ನು ಕಟ್ಟಬೇಕಾಗಿಲ್ಲ. ಉಮೇದ್ವಾರರು ತಮ್ಮ ಅರ್ಜಿಗಳನ್ನು ಇದೇ ತಿಂಗಳ ತಾರೀಕು ೩೦ರೊಳಗೆ ಮ. ರಾ. ಅಸಿಸ್ಟಾಂಟ ರಿಜಿಸ್ಟ್ರಾರರ ಆಫೀಸಿಗೆ ತಪ್ಪಿಸತಕ್ಕ[illegible] ಮಿ| ಹೆಮಿಂಗ್ವೇಯವರು ತಯಾರಿಸಿದ ಮದರಾಸ ಕೋ ಒಪರೇಟಿವ್ ಮೆನುವೇಲು ಪಠ್ಯಪುಸ್ತಕವಾಗಿರುವುದು.

ಜಿಲ್ಲಾ ಕಲೆಕ್ಟರ ದೊರೆಗಳವರ ಸರ್ಕೀಟು—ತಾ. ೧೯ಕ್ಕೆ ಉಪ್ಪಿನಂಗಡಿ, ತಾ. ೨೦ಕ್ಕೆ ಉಪ್ಪಿನಂಗಡಿಯಿಂದ ಕುಂತೂರು, ತಾ. ೨೧ಕ್ಕೆ ಕುಂತೂರಿನಿಂದ ಕಡಬ, ತಾ. ೨೨ಕ್ಕೆ ಕುಲಗುಂದ, ತಾ. ೨೩ಕ್ಕೆ ಸುಬ್ರಹ್ಮಣ್ಯ ಮತ್ತು ತಾ. ೩೦ಕ್ಕೆ ಮಂಗಳೂರಿಗೆ ಹಿಂತಿರುಗುವರು.

ನಿನ್ನೆ ದಿನ ನಡೆದ ಇಂಟರ್ ಸ್ಕೂಲ್ ಜಮಖಾನಾ ಜಿಮ್ನಾಸ್ಟಿಕ್ಸ್ ಪಂದ್ಯಾಟದಲ್ಲಿ ಕೆನರಾ ಹೈಸ್ಕೂಲ್ ಗೆದ್ದಿರುವುದು.

ಗಾಯನ ವಿದ್ಯಾವಿಶಾರದರಾದ ಪ್ರೊಫೆಸರ ಅಬ್ದುಲ್ಲ ಕರೀಮರು ಮಂಗಳೂರಿಗೆ ದಶಂಬರ ತಿಂಗಳಲ್ಲಿ ಬರುವರು.

ಕಳೆದ ತಾ. ೩ರ ಸಂಚಿಕೆಯಲ್ಲಿ ಸೂಚಿಸಿದಂತೆ ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ ಎಸೋಸಿಯೇಶನಿನ ಆಫೀಸಿನಲ್ಲಿ ಇಲ್ಲಿಯ ಬಸ್ ಮ್ಹಾಲಿಕರ ವ ಬಸ್ಸು ಕಂಪೆನಿಗಳ ಪ್ರತಿನಿಧಿಗಳ ಒಂದು ಸಭೆ ಕೂಡಿ "ಬಸ್ ಎಸೋಸಿಯೇಶನನ್ನು" ಮಾಡಬೇಕಾಗಿ ನಿಶ್ಚಯಿಸಿ ಈ ಬಗ್ಗೆ ನಿಬಂಧನೆಗಳನ್ನು ಮಾಡಲು ಒಂದು ಕಮಿಟಿಯು ನೇಮಕಮಾಡಲಾಯಿತು.

ನಾಳೆ ಜರಗಲಿಕ್ಕಿರುವ ಗವರ್ನಮೆಂಟ ಕೊಲೇಜಿನ ವರ್ಧಂತಿ ಉತ್ಸವ ಸಮಾರಂಭದ ಅಧ್ಯಕ್ಷತೆಯನ್ನು ಕಥೋಲಿಕರ ಮಂಗಳೂರ ಬಿಶೋಪರು ವಹಿಸಿಕೊಳ್ಳುವರು. ಕೊಲೇಜ್ ಟೋಸ್ಟನ್ನು ಇಂಪೀರಿಯಲ್ ಬೇಂಕಿನ ಎಜಂಟರಾದ ಮ| ರಾ| ಯು. ಆನಂದರಾಯರು ಸೂಚಿಸುವರು.

ಪ್ರಕಟಣೆ.

ಫರಂಗಿಪೇಟೆ ಶ್ರೀ ರಾಮಾ ಹಾಯ್ಯರ್ ಎಲಿಮೆಂಟರಿ ಶಾಲೆಯ [illegible] ವಾಗಿ ಏರ್ಪಡಿಸಿದ ಸೊತ್ತಿಯನ್ನು, ಇದೇ ಬರುವ ದಶಂಬರ [illegible] ಬೇಕೆಂದು [illegible] ಸಕಲ ಶಾಲೆಯ ಹಿತಚಿಂತಕರೆಲ್ಲರೂ [illegible] ಗಳನ್ನು ದಶಂಬರ ತಾ. ೧೫ರ ಒಳಗೆ [illegible]. ಅನಂತರ [illegible] ದೊರೆಯಲಾರವು ಎಂದು ಈ ಮೂಲಕ ವಿನಂತಿ.

ಫರಂಗಿಪೇಟೆ,
ತಾ. 13—11—'22

ಸಿ. ರಾಮಚಂದ್ರ ಬೆಗ್ಗ.
ಸೆಕ್ರೆಟರಿ, [illegible]

ನನ್ನ ಎಲ್ಲಾ ಬ್ರಾಹ್ಮಣ ಸಹೋದರರಿಗೆ ಒಂದು ಅನಾವೃತ ಪತ್ರವು.

ಪ್ರಿಯ ಸಹೋದರರೇ,

ಪುರಾತನ ಬ್ರಾಹ್ಮಣರ ಜ್ಞಾನಕ್ಕೆ ಆಶ್ಚರ್ಯಪಟ್ಟವನಾಗಿ ನಾನು, ಈ ದಿನ, ನಿಮ್ಮೆಲ್ಲರ ಕರ್ತವ್ಯಗಳನ್ನೂ ಜವಾಬ್ದಾರಿಕೆಗಳನ್ನೂ ನಿಮಗೆ ತಿಳಿಸುವುದಕ್ಕಾಗಿ ಈ ಸುಸಂದರ್ಭವನ್ನು ಕೈಕೊಂಡಿರುತ್ತೇನೆ. "ಆರ್ಯಸಮಾಜವು ಬ್ರಾಹ್ಮಣಧರ್ಮ ವಿರುದ್ಧವಾಗಿರುವ ಒಂದು ಚಳವಳಿ" ಎಂಬ ಅಭಿಪ್ರಾಯವು ನಿಮ್ಮಲ್ಲಿದ್ದರೆ, ಅದನ್ನು ನಿಮ್ಮ ಮನಸ್ಸಿನಿಂದ ದೂರತೊಲಗಿಸಬೇಕಾಗಿ, ಪ್ರಥಮದಲ್ಲೇ ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ.

ಮಹರ್ಷಿ ಸ್ವಾಮಿ ದಯಾನಂದ ಸರಸ್ವತಿಗಳು ತಾವೇ ಸ್ವತಃ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರಾದುದರಿಂದ, ಅವರ ಆಂದೋಲನವು ಹೇಗೆ ಬ್ರಾಹ್ಮಣ ಧರ್ಮ ವಿರುದ್ಧವಾದೀತು? ಕೆಲವು ಸಲ ತಮ್ಮ ಜೀವದ ಆಸೆಯನ್ನು ಕೂಡಾ ಬಿಟ್ಟು ಇಂದಿನ ವರೆಗೆ ಆ ಪವಿತ್ರವಾದ ವೇದವಿದ್ಯೆಯನ್ನು ಕಾಪಾಡಿದ ಬ್ರಾಹ್ಮಣರಿಗೆ, ವೈದಿಕ ಧರ್ಮದ ಅನುಯಾಯಿಯು ಕೃತಘ್ನನಾಗುವುದು ಅದು ಹೇಗೆ? ಪೂರ್ವದ ಮಹರ್ಷಿಗಳ ಹೊರತು, ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯ ಮಧ್ವಾಚಾರ್ಯ, ಮಹರ್ಷಿ ದಯಾನಂದ, ರಾಜಾರಾಮ ಮೋಹನರಾಯ, ಮಹರ್ಷಿ ದೇವೇಂದ್ರನಾಥ ಠಾಗೂರ್, ಲೋಕಮಾನ್ಯ ತಿಲಕ, ಪಂಡಿತ ಮಾಲವೀಯ ಮತ್ತು ಪಂಡಿತ ಮೋತಿಲಾಲ ನೆಹರು, ಮೊದಲಾದವರಿಗೆ ಜನ್ಮವಿತ್ತ ಬ್ರಾಹ್ಮಣ ಧರ್ಮವನ್ನು ಒಬ್ಬನು ಹೇಗೆ ಖಂಡಿಸುವನು? ಹಾಗೆ ಖಂಡಿಸುವಂಥಾದ್ದು ಕೇವಲ ಹುಚ್ಚುತನವೇ ಸರಿ. ನಾವು ಬ್ರಾಹ್ಮಣರನ್ನು ಸನ್ಮಾನಿಸಲೇ ಬೇಕು. ಯಾವ ಸಂಘದಲ್ಲಿ ನಿಯಮ ವಿಧಾಯಕರೂ ನೇತಾರರೂ, ನಿಜವಾದ ಬ್ರಾಹ್ಮಣರಾಗಿರುತ್ತಾರೋ, ಅಂತಹ ಸಂಸ್ಥೆಯು ಮಾತ್ರವೇ ಸಫಲವಾಗ ಬಲ್ಲದು.

ಪ್ರಿಯ ಬ್ರಾಹ್ಮಣರೇ, ನಿಮ್ಮ ಪೂರ್ವಜರು ಹಿಂದಿನ ಕಾಲದಲ್ಲಿ ಇಡೀ ಭೂಲೋಕದ ಬೋಧಕರಾಗಿದ್ದರು! ಆದರೆ, ಅವರು ತಮ್ಮ ಮುಂದೆ ಯಾವ ಗುರಿಯನ್ನು ಇಟ್ಟುಕೊಂಡಿದ್ದರೆಂಬುದು ನಿಮಗೆ ಗೊತ್ತಿದೆಯೋ? ಸನ್ಮಾನಾದ್ ಬ್ರಾಹ್ಮಣೋ ನಿತ್ಯ ಮುದ್ವಿಜೇತ ವಿಷಾದಿವ॥ ವಿಷವನ್ನು ತ್ಯಜಿಸುವಂತೆ, ನಿಜವಾದ ಬ್ರಾಹ್ಮಣನು ಮಾನವನ್ನು ಇಚ್ಛಿಸದಿರಲಿ; ಅಪಮಾನವನ್ನು ಹುಡುಕಲಿ. ನಿಮ್ಮ ಪೂರ್ವಜರು ಕಷ್ಟವನ್ನು ಸಹಿಸಿಕೊಂಡು ಆತ್ಮಸಂತುಷ್ಟಿಯಿಂದ ಎಂತಹ ಬಡತನದ ಜೀವನವನ್ನನುಸರಿಸುತ್ತಿದ್ದರೆಂದು ನೀವರಿತಿರುವಿರೋ? ಅದ್ಯೈಹಿಕೋ ವಾಪಿ ಭವೇದಶ್ವಸ್ತನಿಕ ಏವವಾ। ನಿಯಮ ಕರ್ತನಾದ ಮನುವು ಹೇಳುವಂಥಾದ್ದು ಇದೇ ಆಗಿದೆ. ಒಬ್ಬ ಬ್ರಾಹ್ಮಣನು ತನ್ನೊಂದಿಗೆ ಮೂರು ದಿನಗಳಿಗೆ ಬೇಕಾದ ಸಾಮಾಗ್ರಿಗಳನ್ನು ಇಟ್ಟುಕೊಳ್ಳಲಿ; ಇಲ್ಲವಾದರೆ, ಒಂದು ದಿನದ ಸಾಮಾಗ್ರಿಯನ್ನು ಕೂಡಾ ಇಡದಿರುವುದು ಉತ್ತಮವು. ಈಗ ಸ್ಮೃತಿಗಳಲ್ಲುಕ್ತವಾದ ಪದ್ಧತಿಗಳನ್ನು ನಿಮ್ಮಲೆಷ್ಟು ಮಂದಿ ಅನುಸರಿಸುತ್ತೀರಿ? ಮನುವಿನನುಸಾರವಾಗಿ ವೇದವನ್ನು ಕಲಿಯದೆ ದಿವಸದಲ್ಲಿ ಎರಡು ಸಲ ಸಂಧ್ಯೆಯನ್ನು ಸರಿಯಾಗಿ ಮಾಡದಿದ್ದವನು ಬ್ರಾಹ್ಮಣ ಕುಲೋತ್ಪನ್ನನಾದರೂ ಅವನು ಶೂದ್ರನೇ ಎಂಬುದು ನಿಮಗೆ ಗೊತ್ತಿಲ್ಲವೋ? ನಿಮ್ಮಲ್ಲೆಷ್ಟು ಮಂದಿ ವೇದವನ್ನು ಕಲಿಯುತ್ತಿರುವಿರೆಂದು ನಾನು ನಿಮ್ಮನ್ನು ಮನಃಪೂರ್ವಕವಾಗಿ ಕೇಳುತ್ತೇನೆ. ಪ್ರಕೃತದಲ್ಲಿ ಸುಶಿಕ್ಷಿತ ಬ್ರಾಹ್ಮಣರು ಕೂಡಾ ಪವಿತ್ರವಾದ ವೇದಗಳನ್ನು ಅಭ್ಯಾಸಿಸುವುದಿಲ್ಲವೆಂಬುದು ಬಹು ದುಃಖಕರವಾದ ಸಂಗತಿಯಲ್ಲವೇ? ಯಾವ ಸಲ್ಲಕ್ಷಣಗಳು ಇಲ್ಲದಿದ್ದರೆ ಒಬ್ಬನು ಬ್ರಾಹ್ಮಣನಾಗಲಾರನೋ, ಭಾರತದಲ್ಲಿ ಹೇಳಲ್ಪಟ್ಟ ಅಂತಹ ಲಕ್ಷಣಗಳನ್ನು ಇಲ್ಲಿ ನಿಮ್ಮ ಜ್ಞಾಪಕಕ್ಕೋಸುಗ ನಾನು ಹೇಳಲೇ? ಮಹಾ ಭಾರತದಲ್ಲಿ ಭೃಗು ಋಷಿಗಳು ಹೀಗೆ ಹೇಳುತ್ತಾರೆ. ॥ಸತ್ಯಂ ದಾನಮಥಾದ್ರೋಹ ಆನೃಶಂಸ್ಯಂ ತ್ರಪಾಘೃಣಾ ತಪಶ್ಚ ದೃಶ್ಯತೇಯತ್ರ ಸ ಬ್ರಾಹ್ಮಣ ಇತಿ ಸ್ಮೃತಃ॥ ಸತ್ಯ, ದಾನ, ಕ್ರೂರತೆಮತ್ತು ನಿಂದೆ ಇಲ್ಲದಿರುವಿಕೆ, ದಯೆ ಮತ್ತು ತಪಸ್ಸು ಇವು ಯಾರಲ್ಲಿರುವವೋ ಅವನನ್ನು ಬ್ರಾಹ್ಮಣನೆಂದು ತಿಳಿಯಿರಿ.

ಪ್ರಿಯ ಸಹೋದರರೇ, ಮೇಲೆ ಹೇಳಿದ ಗುಣಗಳು ನಿಮ್ಮೆಲ್ಲರಲ್ಲಿಯೂ ಇವೆಯೋ? ಹೀನ ಕುಲೋತ್ಪನ್ನರೆಂದೆನಿಸಿಕೊಳ್ಳುವವರಲ್ಲಿ, ಈ ಎಲ್ಲಾ ಗುಣಗಳಿದ್ದ ಅನೇಕರನ್ನು ನೀವು ನೋಡುವುದಿಲ್ಲವೇ? ಈ ಸಮಯದಲ್ಲಿ, ಪಂಡಿತ ಮಾಲವೀಯ ಡಾಕ್ಟರ್ ರವೀಂದ್ರನಾಥ ಠಾಗೂರ್ ಮತ್ತು ಪಂಡಿತ ಮೋತಿಲಾಲ ನೇಹರುರವರಂತಹ ಮನುಷ್ಯರು ಬ್ರಾಹ್ಮಣರಾದರೆ, ಮಹಾತ್ಮಾ ಗಾಂಧಿ ಮತ್ತು ಲಾಲಾ ಲಜಪತರೈಗಳು ವೈಶ್ಯರಲ್ಲಿಯೂ, (ಶ್ರೀಯುತ ಸಿ. ಆರ್. ದಾಸ್ ಮತ್ತು ಅರಬಿಂದ ಘೋಷರು ಶೂದ್ರರಲ್ಲಿಯೂ ಹುಟ್ಟಲಿಲ್ಲವೇ? ಹೀಗಿರುವಲ್ಲಿ ಒಬ್ಬನು ಉತ್ತಮ ವರ್ಣದವನಲ್ಲದ ಮಾತ್ರಕ್ಕೇನೇ ಅವನನ್ನು ಕಡೆಗಣ್ಣಿನಿಂದ ನೋಡಿ ಹೀನೈಸುವುದೇಕೆ? ಈಗ, ವೇದಾಭ್ಯಾಸ ಮತ್ತು ಯಜ್ಞೋಪವೀತ ಧಾರಣ ಇವುಗಳನ್ನು ಬೇರೆ ಎಲ್ಲಾ ವರ್ಣಗಳಿಗೆ ಬಿಡದೆ ನೀವು ನಿಮ್ಮ ಉಪಯೋಗಕ್ಕೇನೇ ಇಟ್ಟುಕೊಂಡಿರುವಿರಿ, ಕ್ಷತ್ರಿಯ ವೈಶ್ಯವರ್ಣದವರು ವೇದಶಾಸ್ತ್ರಗಳನ್ನು ಕಲಿಯಲಾಗದೆಂದು ಹೇಳಲಿಕ್ಕೆ ಶಾಸ್ತ್ರಗಳಲ್ಲಿ ಏನಾದರೊಂದು ಆಧಾರವಿದೆಯೋ? ಪ್ರಾಚೀನ ಮತ ಸಂಬಂಧವಾದ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಅವರು ವೇದಾಭ್ಯಾಸಕ್ಕೆ ನಮ್ಮಷ್ಟೇ ಹಕ್ಕುಳ್ಳವರೆಂಬುದು ನಿಜವಲ್ಲವೋ? ವೇದ ಮೊದಲಾದವುಗಳನ್ನು ತಿಳಿಯುವಷ್ಟು ಜ್ಞಾನಶಕ್ತಿ ಇರುವುದಾದರೆ ಮಾತ್ರವೇ ಶೂದ್ರರೂ ಕೂಡ ಇವೆಲ್ಲವನ್ನು ಕಲಿಯಲು ಹಕ್ಕುಳ್ಳವರಿದ್ದಾರೆ. ವೇದವಿದ್ಯೆಯು ಈಗ ಕಳೆಗುಂದುತ್ತಿರುವುದು, ನೀವು ಅದನ್ನು ನಿಮ್ಮಲ್ಲೇ ಇಟ್ಟುಕೊಂಡುದುದರ ಪರಿಣಾಮವಲ್ಲವೇ? ಧರ್ಮ ಸೂತ್ರಗಳನ್ನನುಸರಿಸುವ ಎಲ್ಲರೊಡನೆಯೂ ಮಿಶ್ರಭೋಜನ ಮಾಡುವುದರಿಂದ ಏನೂ ಕೆಡುಕಿಲ್ಲವೆಂದು ಶಾಸ್ತ್ರಗಳಲ್ಲಿ ಹೇಳಿಲ್ಲಲ್ಲವೇ? ॥ಸರ್ವವರ್ಣಾನಾಂ ಸ್ವಧರ್ಮೇ ವರ್ತಮಾನಾನಾಂ ಭೋಕ್ತವ್ಯಂ ಆಪಸ್ತಂಬ॥ ಹಾಗಾದರೆ, ಈ ವಿಷಯದಲ್ಲಿ ನಿಮ್ಮ ವರ್ತನೆಯು ಹೇಗೆ ಸರಿಯಾದೀತು? ಪ್ರಿಯ ಸಹೋದರರೇ, ನೀವು ಒಮ್ಮೆ ಇಡೀ ಭೂಲೋಕದ ಬೋಧಕರಾಗಿದ್ದಿರಿ. ನಿಜವಾದ ಬ್ರಾಹ್ಮಣರಲ್ಲಿ ರತ್ನಂಥಾ ಎಲ್ಲಾ ಗುಣಗಳನ್ನು ನೀವು ಸಂಪಾದಿಸಿಕೊಂಡು ಇಡೀ ಲೋಕಕ್ಕೆ, ಸರಿಯಾದ ಒಂದು ಮಾರ್ಗವನ್ನು ಕಲ್ಪಿಸಿಕೊಡಲು ನಿಮಗೆ ಸುಲಭವಾಗಿರುತ್ತದೆ. ದೇವರ ನಾಮವನ್ನು ಧ್ಯಾನಿಸಿ ಜಾತಿ ವಿಷಯವಾದ ಎಲ್ಲಾ ವಿವಾದಗಳನ್ನು ಬಿಟ್ಟು ಬಿಡಿರಿ. ವ್ಯಕ್ತಿ ಅಥವಾ ಜಾತಿ ಸಂಬಂಧವಾದ ಎಲ್ಲಾ ಕಲಹಗಳನ್ನು ಬದಿಗೊತ್ತಿ, ಜನಾಂಗದ ಚೈತನ್ಯದ ಪಂಚಾಂಗವನ್ನು ಕೊರೆಯುವಂಥಾ ಪರಸ್ಪರ ವೈಮನಸ್ಸಿನ ಕೊರತೆಗಳನ್ನು ಹೋಗಲಾಡಿಸಲು ಅವುಗಳ ವಿರುದ್ಧವಾಗಿ ಧರ್ಮವನ್ನು ಬೋಧಿಸುವುದಕ್ಕೆ ನಿಮಗೆ ಸುಸಮಯವು ಇದೇ ಆಗಿದೆ. ನಿಮ್ಮ ಪೂರ್ವಿಕರಿಂದ ಹೇಳಲ್ಪಟ್ಟ ಗುಣಗಳು ನಿಮ್ಮಲ್ಲಿ ಇದ್ದರೆ ಪವಿತ್ರವೇ, ನಿಮ್ಮ ಪಾದದಲ್ಲಿ ಈ ಇಡೀ ಲೋಕವು ಬೀಳುವುದು. ಹಾಗಿದ್ದರೆ, ತಾವು ಬೇರೆಯವರಿಂದ ಉತ್ತಮರೆಂದು ಹೇಳುವ ಅಗತ್ಯವು ನಿಮಗೆ [illegible] ಇಲ್ಲ. ಆಗ ನಿಮ್ಮ ಸದ್ವರ್ತನೆಗಳಿಂದ, ಇತರರಿಂದ ಸನ್ಮಾನ್ಯರಾಗುವುದಕ್ಕೋಸುಗ ದೂರವಾಗಿದ್ದುಕೊಳ್ಳುವ ಅಗತ್ಯವಿರಲಾರದು.

ನಾನು ಒಮ್ಮೆ, ಪ್ರಾಚೀನ ಬ್ರಾಹ್ಮಣರ ಜ್ಞಾನಕ್ಕೆ ಆಶ್ಚರ್ಯಪಟ್ಟವನಾಗಿ, ನೀವು ನಿಮ್ಮ ಅಭ್ಯುದಯಸಾಧನೆಗಳಿಗೆ ಲಕ್ಷ್ಯ ಕೊಡದೆ ನಿಮ್ಮ ಕರ್ತವ್ಯದಲ್ಲಿ ಮಗ್ನರಾಗಬೇಕೆಂದು ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನೀವು, ಯಾವ ಗುಣಗಳಿಲ್ಲವಾದರೆ ಒಬ್ಬನು ಬ್ರಾಹ್ಮಣನಾಗಲಾರನೋ ಅಂತಹ ಸುಗುಣಗಳನ್ನು ಅಭಿವೃದ್ಧಿಸುವುದಕ್ಕಾಗಿ ಪ್ರಯತ್ನಪಟ್ಟರೆ ಮಾತ್ರವೇ ಎಲ್ಲವೂ ಸರಿಯಾಗಿ ನಡೆಯುವುದು. ॥ನಕುಲೇನ ನ ಜಾತ್ಯಾ ವಾ ಕ್ರಿಯಾಭಿರ್ ಬ್ರಾಹ್ಮಣೋ ಭವೇತ್॥ ಎಂದರೆ ಸದ್ಗುಣಗಳಿಂದಲೂ ಸತ್ಕರ್ಮಗಳಿಂದಲೂ ಒಬ್ಬನು ಬ್ರಾಹ್ಮಣನಾಗುತ್ತಾನೆ.

ಇತಿ,
ಧರ್ಮದೇವ ಸಿದ್ಧಾಂತಾಲಂಕಾರ.

[ಈ ಮೇಲಿನ ಪತ್ರವ್ಯವಹಾರವನ್ನು ಧರ್ಮದೇವಜಿಯವರು ಬಹಳ ಸರಳವಾಗಿ ಬರೆದಿರುವರಾದರೂ ಇದರಲ್ಲಿ ಒಂದೇ ವರ್ಗಕ್ಕೆ ಮಾತ್ರ ನಿಷೇಧವಿದೆ. ಪ್ರಾಚೀನಕಾಲದ ವರ್ಣಭೇದವು ರೂಪಾಂತರ ಹೊಂದಿ ಈಗಿನ ಜಾತಿಭೇದದಲ್ಲಿ ಹೇಗೆ ಪರಿಣಮಿಸಿತು ಎಂಬುದಕ್ಕೆ ಇತರ ಬಲವಾದ ಕಾರಣಗಳಿರುತ್ತಾ ಒಂದೇ ವರ್ಗದ ನಿಷೇಧವನ್ನು ಸಾರುವುದರಿಂದ ಈಗಿನ ಕಾಲದಲ್ಲಿ ಇತರರನ್ನು ಕೆಣಕಿಸಿದಂತಾಗುವುದು. ಇದರಿಂದ ನಮಗೇನೂ ಪ್ರಯೋಜನ ಕಾಣದು. ಜನಾಂಗ ಚೈತನ್ಯದ ಪಂಚಾಂಗಗಳನ್ನು ಕೊರೆಯುವಂಥಾ ಪರಸ್ಪರ ವೈಮನಸ್ಸಿನ ಕೊರತೆಗಳನ್ನು ಹೋಗಲಾಡಿಸಲಿಕ್ಕೆ ಇಂಥಾ ಲೇಖನಗಳನ್ನು ಆಗಿಂದಾಗ್ಗೆ ಪ್ರಕಟಿಸುವುದರಿಂದ ಈ ಉದ್ದೇಶಕ್ಕೆ ಇದು ಎಷ್ಟು ಸಹಾಯಕವಾದೀತೆಂಬುದರಲ್ಲಿ ನಮಗೆ ಅನುಮಾನವಿದೆ. ಇನ್ನು ಇಂಥಾ ಲೇಖನಗಳು ಅಥವಾ ಇವುಗಳಿಗೆ ಬರೆಯಬಹುದಾದ ಉತ್ತರಗಳು ಇಲ್ಲಿಗೆ ಸಮಾಪ್ತಗೊಳ್ಳಬೇಕಾಗಿ ನಮ್ಮ ವಿನಂತಿ.] ಸಂಪಾದಕ, ಸ್ವದೇಶಾಭಿಮಾನಿ.

ಪತ್ರವ್ಯವಹಾರ.

ಕೊಡಗು ಸರಕಾರದ ಪಂಕ್ತಿಭೇದವೂ ದಕ್ಷಿಣ ಕನ್ನಡದವರ ದುರ್ದೈವವೂ.

ಕೊಡಗು ಜಿಲ್ಲೆಯಲ್ಲಿ ಕೊಡಗಿನವರಿಗಿರುವಂತೆಯೆ ಅಲ್ಲಿ ಕೆಲವು ವರ್ಷಗಳಿಂದ ಉತ್ತರ ಕನ್ನಡ, ದಕ್ಷಿಣ ಕನ್ನಡ ಮೊದಲಾದ ಇತರ ಜಿಲ್ಲೆಯವರಿಗೂ ಏಲಕ್ಕಿ ಮಲೆಗಳಿವೆ. ಅವುಗಳಲ್ಲಿ "ಜಮ್ಮ," "ಕಾಫಿ ಸಾಗುವಳ್ಳಿ," "ಗೇಣಿ ಮಲೆ"ಗಳೆಂದು ಮೂರು ಪ್ರಕಾರಗಳಿವೆ. "ಜಮ್ಮ"ವೆಂದರೆ ಕೊಡಗು ನಿವಾಸಿಕರಿಗೆ ಅಲ್ಲಿಯ ಪೂರ್ವರಾಜರು ಬಿಟ್ಟ ಉಂಬಳಿಯಾಗಿದೆ. "ಕಾಫಿ ಸಾಗುವಳ್ಳಿ" ಎಂದರೆ ಶಾಶ್ವತವಾದ ವರ್ಗದ ಆಸ್ತಿಗಳಂತೆಯೇ ಪಟ್ಟಾದಾಖ್ಲೆಯಿಂದ ತೀರ್ವೆ ತೆತ್ತು ಬರುವ ಏಲಕ್ಕಿ ಮಲೆಗಳು, "ಗೇಣಿ ಮಲೆ"ಗಳು ಎಂದರೆ ಫೋರೆಸ್ಟು ಖಾತೆಯವರಿಂದ ಏಲಂ ಕಾಲದಲ್ಲಿ ಆಯ್ದೈದು ದರಕಾಸ್ತಿಗೆ ಪಡಕೊಂಡಷ್ಟು ಗೇಣಿ ರೂಪವಾದ ಕಂದಾಯವನ್ನು ಪ್ರತಿ ವರ್ಷವೂ ಇಪ್ಪತ್ತೊಂದು ವರ್ಷಗಳ ಅವಧಿ ವರೆಗೆ ತೆತ್ತು ಬರುವ ಏಲಕ್ಕಿ ಮಲೆಗಳು. ಸದರಿ ಏಲಕ್ಕಿ ಮಲೆಗಳ ಕಂದಾಯ ವಗೈರೆ ಎಲ್ಲಾ ವಿಷಯಗಳಲ್ಲಿಯೂ ಕೊಡಗು ಸರಕಾರವು ಅನೇಕ ಕಾಲಗಳಿಂದ ಕೊಡಗಿನವರಿಗೂ, ಇತರ ಜಿಲ್ಲೆಯವರಿಗೂ ಒಂದೇ ತರದ ರಿಯಾಯತಿಯನ್ನು ಮಾಡುತ್ತಿದ್ದು ಕೆಲವು ವರ್ಷಗಳಿಂದಿತ್ತ, ಕೊಡಗಿನವರೆನ್ನಿಸಿಕೊಳ್ಳುವವರಿಗೆ ಒಂದು ವಿಧ, ದಕ್ಷಿಣ ಕನ್ನಡದವರಿಗೆ ಮತ್ತೊಂದು ವಿಧ ಈ ರೀತಿ ಭೇದ ಮಾಡಲಾರಂಭಿಸಿ ಸಂ। ೧೯೨೨ನೇ ಇಸವಿಯ ಕಂದಾಯ ವಸೂಲಿಯಲ್ಲಿ ಅದು ತನ್ನ ಪಂಕ್ತಿ ಭೇದದ ಪರಮಾವಧಿಯನ್ನು ತೋರಿಸಿದೆ. ಈಗ ಕೆಲವು ವರ್ಷಗಳಿಂದ ಏಲಕ್ಕಿ ಬೆಳೆಯು ಕಡಿಮೆಯಾಗಿದ್ದು ಆದ ಏಲಕ್ಕಿಗೂ ಬೆಲೆಯು ಅತಿ ಹೀನಸ್ಥಿತಿಗಿಳಿದು ಫಸಲು ಜಮಾಯಿಸುವ ಖರ್ಚು ಸಹ ಸಂಪೂರ್ಣ ಹುಟ್ಟಿಬಾರದಾದ್ದರಿಂದ ಹಾಗೂ ಫೋರೆಸ್ಟಿನವರ ಹುಕುಮಿನಂತೆ ಕೆಲವು ಏಲಕ್ಕಿ ಗಿಡಗಳನ್ನು ನಾಶಪಡಿಸಿದ್ದರಿಂದ ಸಹ ಕಂದಾಯವನ್ನು ಮಾಫಿಮಾಡಬೇಕು, ಯಾ ಕೆಲವು ಅಂಶಕೊಡಬೇಕಾದರೆ ಅದಕ್ಕಾದರೂ ಸಮಯ ಸಿಕ್ಕಬೇಕು ಎಂಬಿತ್ಯಾದಿಯಾಗಿ ಅಲ್ಲಿಯ ಸರಕಾರಕ್ಕೆ ಅನೇಕರು ಅನೇಕಾವರ್ತಿ ಅರ್ಜಿ ವಗೈರೆ ಮಾಡಿದರು. ಹೀಗಿದ್ದರೂ ೧೯೨೨ನೇ ಇಸವಿಯ ಕಂದಾಯದಲ್ಲಿ ದಕ್ಷಿಣಕನ್ನಡದವರನ್ನು ಮಾತ್ರ ಬಿಟ್ಟು ಇತರರಿಂದ ಸೇಕಡಾ ೭೦ರಂತೆ ವಸೂಲುಮಾಡುವ ಹಾಗೆ ಅಲ್ಲಿಯ ಸರಕಾರವು ತಮ್ಮ ಕೆಳಗಿನ ಅಧಿಕಾರಿಗಳಿಗೆ ಸೂಚಿಸಿತ್ತು. ಆದರಿಂದ ಸಂತುಷ್ಟರಾಗದೆ ಅಲ್ಲಿಯವರು ಸಂಪೂರ್ಣ ಮಾಫಿಯಾಗಬೇಕೆಂದು ಪುನಃ ಕೇಳಿಕೊಂಡಾಗ ತಿರುಗಿ ಅವರಿಗೆ ಸೇಕಡಾ ಮೂವತ್ತರಷ್ಟು ಕಮ್ಮಿ ಮಾಡಿ ಸೇಕಡಾ ನಾಲ್ವತ್ತರಂತೆ ಮಾತ್ರ ವಸೂಲುಮಾಡುವಂತೆ ಸೂಚಿಸಿದ್ದು ಕೆಲವು ಮಟ್ಟಿಗೆ ಸಮಾಧಾನಕರವೆ. ಆದರೆ ದಕ್ಷಿಣಕನ್ನಡದವರಿಗೆ ಈ ವಿಷಯದಲ್ಲಿ ಕೆಲವು ತಿಂಗಳ ಸಮಯ ಸಿಕ್ಕಿದ್ದರೂ ಕಂದಾಯದಲ್ಲಿ ಒಂದು ಪೈಯ್ಯಷ್ಟಾದರೂ ಕಡಿಮೆಯಾಗದಿರುವುದು ಕೊಡಗು ಸರಕಾರದ ಪಂಕ್ತಿಭೇದವೋ? ದಕ್ಷಿಣ ಕನ್ನಡದವರಾದ ನಮ್ಮ ದುರ್ದೈವವೋ? ಇದರ ನಿರ್ಣಯವನ್ನು ವಾಚಕರೆ ಮಾಡತಕ್ಕದು. ಕಳೆದ ೧೯೨೧ನೇ ಇಸವಿಯ ಕಂದಾಯ ವಸೂಲಿಯಲ್ಲಿ ಇಂತಹ ದುಷ್ಕಾಲ ಒದಗಿದಾಗ ಕೊಡಗು ವಗೈರೆ ಇತರರಂತೆ ನಮಗೂ ಸರಕಾರದ ರಿಯಾಯತಿಯು ದೊರಕಿತ್ತು. ಸಟ್ಲಿಮೆಂಟಿನ ಸಮಯದಲ್ಲಿಯೂ ನಮ್ಮ ನ್ಯಾಯಪ್ರಿಯ ಸರಕಾರವು ಯಾವ ತರಹ ಭೇದವನ್ನು ತೋರಿಸಿದ್ದಿಲ್ಲ. ಇದೇ ಕಾರಣದಿಂದ ಇತರರಂತೆ ದಕ್ಷಿಣ ಕನ್ನಡದವರಿಗೂ, ೧೯೨೨ನೇ ಇಸವಿಯ ಕಂದಾಯದಲ್ಲಿ ಸರಿಯಾದ ರಿಯಾಯತಿಯನ್ನು ಮಾಡೀತೆಂದೂ ಮೊನ್ನೆಮೊನ್ನೆಯ ವರೆಗೂ ನಂಬಿಕೊಂಡಿರುವಾಗಲೆ ಬಾಕಿಯಾದ ಸಂಪೂರ್ಣ ಕಂದಾಯಕ್ಕೆ ವರ್ಗದ ಆಸ್ತಿಗಳನ್ನು ಏಲಂಮಿಗೆ ಇಟ್ಟಿತು. ಕೆಲವರು ಪೂರ್ಣ ಕಂದಾಯ ಕಟ್ಟಿ ಏಲಮ್ಮಿನಿಂದ ಆಸ್ತಿಗಳನ್ನು ಉಳಿಸಿಕೊಂಡರು. ಕೆಲವರ ಮಲೆ ವಗೈರೆಗಳು ಏಲಂ ಆದವು. ಇನ್ನು ಕೆಲವು ಏಲಂ ಆಗಲಿಕ್ಕಿವೆ. ಎನ್ನುವಾಗ ಇವರಿಗೆ ಯಾವ ತರದ ರಿಯಾಯತಿಯನ್ನು ಮಾಡಿದಂತಾಯಿತು. ಬಹಳ ವರ್ಷಗಳಿಂದ ಕೊಡಗಿನಲ್ಲಿ ಹೊಲ, ಗದ್ದೆ, ಮನೆ, ತೋಟ ವಗೈರೆ ಮಾಡಿಕೊಂಡು ಅಲ್ಲೇ ವಾಸವಾಗಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರಿಗೆ ಭೂಮಿ, ಮನೆಗಳಿರುವವೆಂಬ ಮಾತ್ರದಿಂದ ಯಾವುದೊಂದು ತರದ ರಿಯಾಯತಿಯನ್ನು ಹೊಂದಲಾರರೆ! ಅಥವಾ ಬಡ ಪ್ರಜೆಗಳ ಮೇಲೆ ಒಂದೇ ತರದ ನ್ಯಾಯವನ್ನು ತೋರಿಸಿ, ರಿಯಾಯತಿಯಿಂದ ನಡಿಸಿಕೊಳ್ಳುವುದರಿಂದ ನಮ್ಮ ಶ್ರೀಮಂತ ಸರಕಾರಕ್ಕೆ ಬಾರಿದ್ರ್ಯವು ಉಂಟಾಗುತ್ತಿತ್ತೆ? ಆದುದರಿಂದ ದಕ್ಷಿಣ ಕನ್ನಡದವರ ಮೇಲೂ ಸಂಪೂರ್ಣ ಕೃಪೆಯನ್ನು ತೋರಿಸಿ ಇನ್ನಾದರೂ ಬ್ರಿಟಿಷ ಸರಕಾರವು ತನ್ನ ನ್ಯಾಯಪ್ರಿಯತೆಯನ್ನು ಕಾಪಾಡುವುದೆಂದು ನಂಬುವ,

ದಕ್ಷಿಣ ಕನ್ನಡದ ಕೊಡಗು ನಿವಾಸಿಕ.

ಬಂಟವಾಳ ಪೇಟೆಯವನಿಗೆ ಉತ್ತರ.

ಶ್ರೀ ಮದನಂತೇಶ್ವರ ದೇವಸ್ಥಾನ, ಮಂಜೇಶ್ವರ.

ಆಯ್ಯಾ ಪತ್ರ ಸಂಪಾದಕರೇ,

ಈ ತಿಂಗಳ ತಾರೀಕು ೩ನೇ ಸ್ವದೇಶಾಭಿಮಾನಿಯ ಸಂಚಿಕೆಯಲ್ಲಿ ಪ್ರಕಟವಾದ "ಬಂಟವಾಳ ಪೇಟೆಯವನ" ಲೇಖನಕ್ಕೆ ಸಂಬಂಧಪಟ್ಟವರು ಎಂದರೆ ಮ. ರಾ. ಮಂಜೇಶ್ವರ ಅನಂತ ತೀರ್ಥರಾಗಲೀ ಅಥವಾ ಸ್ಕೀಮನ್ನು ನಿರ್ಮಿಸಿದ ಮಂಗಳೂರಿನ ಸ್ಥಾನಿಕ ವಕೀಲರಾಗಲೀ ಅಥವಾ ಮ। ರಾ। ರಾ। ಮಂಗಳೂರು ಸಾಹುಕಾರ ಗೋವಿಂದ ಪೈಗಳಾಗಲೀ ಉತ್ತರ ಬರೆಯಲಿಕ್ಕೆ ಸಾಕೆಂತ ಹಾರೈಸಿಕೊಂಡಿದ್ದ ಸದರಿ ಸಂಬಂಧಪಟ್ಟವರು ಪ್ರತ್ಯೇಕಕ್ಕೆ ಸದರಿ ದೇವಸ್ಥಾನದ ಆಡಳಿತೆಯನ್ನು ವಹಿಸಿಕೊಳ್ಳುವ ಅಥವಾ ವಹಿಸಿಕೊಡುವ ಅವಸರದಲ್ಲಿ ಇರುವುದರಿಂದ ಬಂಟವಾಳ ಪೇಟೆಯವನ ಪತ್ರಕ್ಕೆ ಲಕ್ಷ್ಯಕೊಡದೆ ಇರಬಹುದು. ಆದುದರಿಂದ ನನಗೆ ತಿಳಿದಿರುವ ಮಟ್ಟಿಗೆ ಶ್ರೀ ಮದನಂತೇಶ್ವರ ದೇವಸ್ಥಾನದ ಬಗ್ಗೆ ಏರ್ಪಡಿಸಿದ ಸ್ಕೀಮಿನ ವಿಷಯ ಬಂಟವಾಳ ಪೇಟೆಯವನಿಗೆ ಬೇಕಾದ ಉತ್ತರವನ್ನು ಈ ಮೂಲಕ ಕೊಡಲು ಪ್ರಯತ್ನಿಸುವೆನು.

ಸ್ಕೀಮು ಯಾರಿಗೆ ತರಬೇಕಾದರೆ ಅದೆಲ್ಲವೂ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆ ಕಾಲದಲ್ಲಿ ಈ ಬಂಟವಾಳ ಪೇಟೆಯವನೂ ಎಚ್ಚರವಾಗಲಿಲ್ಲವೇಕೆ? ಆಕ್ಷೇಪಗಳು ಅಥವಾ ಸೂಚನೆಗಳು ಇದ್ದರೆ ಈತನು ವಕಾಲತು ಕೊಟ್ಟು ಕೋರ್ಟಿನಲ್ಲಿ ವ್ಯವಹರಿಸಬೇಕಿತ್ತು. ಅದೆಲ್ಲಾ ಬಿಟ್ಟು ಈತನು ಮುಂಚಾಗ್ರತೆ ಸೂಚಿಸಿದ ರೀತಿಯನ್ನು ನೋಡಿದರೆ ಈತನ ಟೊಳ್ಳು ದರ್ಪವೇ ಈತನ ಲೇಖನದಲ್ಲಿ ಕಾಣುತ್ತದೆ; ಹೊರತು ಮತ್ತೊಂದಿಲ್ಲ. ಸ್ಕೀಮು ಪ್ರಕಟಿಸಲ್ಪಟ್ಟ ನಂತರ ಕೋರ್ಟಿನಲ್ಲಿ ಸಾಕಷ್ಟು ಕಾಲ ವಾದಿ ಪ್ರತಿವಾದಿಗಳಿಂದ ವ್ಯವಹರಿಸಲ್ಪಟ್ಟು ಸಬ್ ಜಡ್ಜರಿಂದ ಅಖೈರಿಗೆ ಡಿಕ್ರಿ ರೂಪ ಮೂಲಕ ಜಾರಿಗೆ ಬಂದದೆ. ಏನಂದರೆ, ವಾದಿ ಪ್ರತಿವಾದಿಗಳ ವಕೀಲರು ಕೂಡಿಕೊಂಡು ತಾಯಿ ಪೇಟೆಯಾದ ನಮ್ಮ ಮಂಗಳೂರಿನಿಂದ ಮೂರು ಜನರೂ, ಕುಂಬಳೆ ಪೇಟೆಯಿಂದ ಒಬ್ಬರೂ ಮಂಜೇಶ್ವರದಿಂದ ಮೂವರೂ ಈ ರೀತಿ ಏಳು ಜನ ಸಂಭಾವಿತ ಮತ್ತು ಶ್ರೀಮಂತ ಸದ್ಗೃಹಸ್ಥರನ್ನು ಕೌನ್ಸಿಲರರಾಗಿ ಚುನಾಯಿಸಿರುತ್ತಾರೆ. ಮತ್ತು ಈ ಕೌನ್ಸಿಲರರಿಗೆ ಮಾಜಿ ಮೊಕ್ತೇಸರರಾಗಿರುವವರೂ ಆಗಿದ್ದ ಮಂಜೇಶ್ವರ ಸಾಹುಕಾರ ಛಕಾರಿ ಭಟ್ಟರ ಮಗ ಪದ್ಮನಾಭ ಭಟ್ಟರಿಂದ ಸದರಿ ದೇವಸ್ಥಾನದ ಆಡಳಿತೆಯನ್ನು ವಹಿಸಿಕೊಟ್ಟಿರುತ್ತಾರೆ.

ದೇವಸ್ಥಾನದ ಸಕಲ ಚಿನ್ನಾಭರಣಗಳು, ವಾಹನಗಳು, ರಿಕಾರ್ಡು, ಲೆಕ್ಕದ ಪುಸ್ತಕಗಳು, ಹಣಕಾಸು ವಗೈರೆ ಯಾವತ್ತು ಸ್ಥಿರಚರ ಸೊತ್ತುಗಳನ್ನು ಮೇಲಿನ ಏಳು ಜನ ಕೌನ್ಸಿಲರಿಗೆ ಈ ಮೊದಲೇ ಒಪ್ಪಿಸಿಕೊಟ್ಟಿರುತ್ತಾರೆ. ಈ ವಿವರವೆಲ್ಲಾ ಸಮಸ್ತ ಜನರಿಗೆ ಗೊತ್ತಿದ್ದರೂ ಬಂಟವಾಳ ಪೇಟೆಯವನು ಮಾತ್ರ ಗೊತ್ತಿಲ್ಲದವನ ಹಾಗೆ ನಟಿಸುವದು ಯಾವ ಸ್ವಾರ್ಥಕ್ಕೆಂಥಾ ತಿಳಿಯುವುದಿಲ್ಲ. ಮಂಗಳೂರು ಪೇಟೆಯಲ್ಲಿ ಹದಿನೆಂಟು ಪೇಟೆಗಳಿಂದ ಜನರು ಬಂದು ವಾಸಿಸಿ ವ್ಯಾಪಾರ ಉದ್ಯೋಗಗಳನ್ನು ಮಾಡಿಕೊಂಡು ಆಯಾ ಪೇಟೆಗಳ ಪ್ರತಿನಿಧಿಗಳೆಂಬಂತೆ ಇರ್ಬ್ಯವರು. ಇಂಥಾ ಪೇಟೆಯಿಂದ ಕೌನ್ಸಿಲರರನ್ನು ಆರಿಸಿದ್ದರಿಂದ ಎಲ್ಲಾ ಪೇಟೆಯವರಿಗೂ ತೃಪ್ತಿಯಿರುವಾಗ ಬಂಟವಾಳ ಪೇಟೆಯವನು ಮಾತ್ರ ಅಸಮಾಧಾನಕ್ಕೆ ಕಾರಣವಾಗುವುದೆಂದು ಹೆದರಿಸಿದರೆ ಅಂಜುವವನು ಯಾರೂ ಇಲ್ಲ. ಈತನು ಸೂಚಿಸಿದಂತೆ ಪ್ರತಿ ಪೇಟೆಯಿಂದ ಪ್ರತಿನಿಧಿಗಳನ್ನು ಆರಿಸಿದರೆ ಸ್ಕೀಮು ಕಾಗದದಲ್ಲಿ ಚಂದ ತೋರುವುದಲ್ಲದೆ ಕಾರ್ಯಕ್ಕೆ ಬಾರದು. ಇನ್ನು ಸದ್ಯದಲ್ಲಿ ಸದರಿ ಶ್ರೀಮದನಂತೇಶ್ವರ ದೇವಸ್ಥಾನವಲ್ಲಿ ಸೃಷ್ಟಿಮಹೋತ್ಸವವು ನಡಿಯತಕ್ಕದಿದೆ. ಈ ಮಹೋತ್ಸವಕ್ಕೆ "ಬಂಟವಾಳ ಪೇಟೆಯವನು" ಬಂದು ಇನ್ನು ಬೇಕಾದ ಮಾಹಿತಿಯನ್ನು ಸ್ವತಹಾ ಪಡೆಯಬಹುದು. ಅಂಥಾ ಮಾಹಿತಿಪಡೆದ ನಂತರ ಏನಾದರೂ ಕುಂದು ಕೊರತೆಗಳು ಕಂಡುಬಂದರೆ ಮಹೋತ್ಸವಕ್ಕೆ ಬಂದವರ ಮಹಾ ಸಭೆಯನ್ನು ಕೂಡಿಸಿ ಬೇಕಾದಂತೆ ನಿರ್ಣಯಗಳನ್ನು ಮಂಜೂರುಮಾಡಿಸಿ ತನಗೆ ಬೇಕಾದ ಕಾರ್ಯಪ್ರಯತ್ನಗಳನ್ನು ಸಾಧಿಸಬಹುದು. ಇವಕ್ಕೆಲ್ಲಾ ಉದ್ದುದ್ದ ಪತ್ರವ್ಯವಹಾರವೇಕೆ? ಬೊಗಳುವ ನಾಯಿ ಕಚ್ಚದು ಕಚ್ಚುವ ನಾಯಿ ಬೊಗಳದು.

ಮಂಗಳೂರು. ತಾ. ೧೩—೧೧—'೨೨. ಇಂತಿ ನಮಸ್ಕಾರ.
"ಮಂಗಳೂರಿನವ".

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕ ಫಂಡ್.

ಸದರಿ ಫಂಡಿಗೆ ಕಳೆದ ಒಕ್ಟೋಬರ ತಿಂಗಳಿಂದ ಈ ವರೆಗೆ ಸದಸ್ಯ ಮೆಂಬರರಾಗಿ ಸೇರಿ ಧನವಾಗ್ದಾನಮಾಡಿದ ಯಾ ಕೊಟ್ಟು ಸೇರಿದ ಮಹನೀಯರ ಹೆಸರುಗಳು.

ಮ. ರಾ. ರಾ. ಬಾರಾಡಿಬೀಡಿನ ಕುಮಾರ ಹೆಗಡೇರು, ರೂ. ೨೫, ಮೂಡಬಿದ್ರೆ ಸಿ. ಶಾಲಾ ಹೆಡ್ ಮಾಸ್ತರ ಕೆ. ಕೃಷ್ಣರಾಯರು, ರೂ. ೨೦, ಕರಂಜೆ ಗೋವಿಂದ ಪೈಗಳವರು, ೧೫, ಈದುಗುತ್ತು ದೇವರಾಜ ಹೆಗಡೇಯರು, ಪಟೇಲ ಪದ್ಮಯ ಹೆಗಡೆಯರು, ನಾರಾಯಣ ಆಚಾರ್ಯರು, ಬೋಳೂರು ಅಪ್ಪು ಕಡಂಬರು, ರೂ. ೧೦ರಂತೆಯೂ ಡಾಕ್ಟರ್ ನರಸಪ್ಪಯ್ಯನವರು, ಸಬ್ ಇನ್ಸ್‌ಪೆಕ್ಟರ್, ತ್ರಿಯಂಬಕರಾಯರು, ಗುಮಾಸ್ತ ಸೋಮೇಶ್ವರ ವೆಂಕಪ್ಪಯ್ಯನವರು, ಎನ್. ಸೋಮಯ್ಯನವರು, ಕುಲ್ಯಾಡಿ ಅಣ್ಣ ಪೈಗಳವರು, ಮಧ್ವರಾಯಭಟ್ಟರು, ಮಂಜುನಾಥ ಶ್ಯಾನಭಾಗರು, ಜಿನರಾಜ ಇಂದ್ರರು ಸಹಾ ರೂ. ೫ರಂತೆಯೂ ಕೂಡಾ ೧೪೦ ಆಗಿರುತ್ತದೆ. ಸದರಿ ಈ ತಿಂಗಳಲ್ಲಿ ವಸೂಲು ರೂ ೨೨-೦-೦ ಆಗಿರುತ್ತದೆ.

ವೇಣೂರು ಕೃಷ್ಣಯ್ಯ.

"ಸುಪಾನ"

ಕಾಫಿ, ಚಾ ವಗೈರೆ ಕುಡಿದು ಆರೋಗ್ಯವನ್ನು ಕೆಡಿಸಿಕೊಳ್ಳುವುದರ ಬದಲಾಗಿ ನಾಮದಬೇರು ಮೊದಲಾದ ೧೭ ಬಗೆಯ ಗಿಡ ಮೂಲಿಕೆಯಿಂದ ತಯಾರಿಸಲ್ಪಟ್ಟ "ಸುಪಾನ" ಎಂಬ ಕಷಾಯದ ಪುಡಿಯಿಂದ ಸುಖಕರ, ಆರೋಗ್ಯಕರವಲ್ಲದೆ ಮೇಹ, ಮಲೇರಿಯಗಳನ್ನು ನಾಶಗೊಳಿಸುವ ಅತ್ಯುತ್ತಮವಾದ ಪಾನವನ್ನು ಮಾಡಿಕೊಳ್ಳಬಹುದು. ಒಮ್ಮೆ ಪರೀಕ್ಷಿಸಿರಿ. ಕ್ರಯ ಅಳತೆ ಸೇರು ೧ಕ್ಕೆ ೦—೧೨—೦. ಪೌಂಡುಬಂದಕ್ಕೆ ರೂ. ೧—೦—೦. ವಿ. ಪಿ. ಪ್ರತ್ಯೇಕ.

ಸ್ಯಾಂಪಲು ಅಪೇಕ್ಷಿಸುವವರು ಅರೆ ಆಣೆ ಸ್ಟಾಂಪನ್ನು ಮುಂಗಡವಾಗಿ ಕಳುಹಿಸತಕ್ಕದು.

ಕೆ. ಸೋಮಯ್ಯಾ ಸೆಟ್ಟಿ,
ಜೈಲ್ ರೋಡು, ಮಂಗಳೂರು.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುವು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.
ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇದ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು
ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.
ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ಜಾ. (ಬ್ರಾಡ್ವೇ, ಮದ್ರಾಸ್.
Local Agents: Raphael & Co.
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ
ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕಾಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ವಗೈರೆ ಎಲ್ಲಾ ವಿಧದ ಫರ್ನಿಚರನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
Manager,
Sri Lakshmi Mills, Kasargod, S. K.

The Canara Bank Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 181,250—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧಾಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,
ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ವ್ಯಾಧಿಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ತೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್ಫ್ಲುಯನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.
ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು.
ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.
ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.
ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ.
ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಕೂದಲು ಚನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ ರೂ. 1-4-0.
ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.
ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡಬಾರದು. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಿಂದ ರೋಗಗಳು ಕಳೆಯಲ್ಪಡುವಂತೆ ಮಾಡುತ್ತದೆ.
60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.
ಆರ್ ಮಾರ್ಟಿನ್ನರ ಗಿಟೋಡಯಿನ್.
ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಚಿಹ್ನೆಯೇ ಅಡಗಿಸಲ್ಪಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.
ಚಿಕ್ಕ ಸೀಸೆ 1ಕ್ಕೆ ರೂ. 2—0—0.
ವಿಳಾಸ—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು —
— ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.
ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.
ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.
ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.
☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪ್ಪೈ
ರಥಬೀದಿ ಮಂಗಳೂರು.
ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, [illegible] ಯುನಾಮಲ್ಲು ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ [illegible] ಬ್ರೌನ್ ಪೇಪರ್, ರಟ್ಟು, ಖಾಲಿ ಕವರು, ಫೌಂಟನ್‌ಪೆನ್, [illegible] ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಸಿಲ್ವರದ ಸಾಹಿತ್ಯಗಳೂ, [illegible] ಇತರ ಚಿಲ್ಲರೆ ಸಾಮಾನುಗಳೂ, ಪುರುಷರಿಗೆ ಬೇಕಾಗುವ [illegible] ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ [illegible] ವಾದ ಸ್ವದೇಶಿ ವಸ್ತ್ರಗಳೂ, ಸಾಮಾನುಗಳೂ, [illegible] ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ [illegible]

ಅಚ್ಚಿನಲ್ಲಿದೆ!

ಎಂ. ಜಿ. ಐಗಳ್, ಇವರಿಂದ ರಚಿತನಾದ

ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಸಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿಂತ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗರದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಆಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಾದ್ರಿ—ಸೂಡ ಮಠಗಳು—ಕೇಜಾರಾರು—ಪಾಲುವಕ್ಕಿ ನರ್ಸಿಭವ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯಿಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸನ್ಯಾಸಗ್ರಹಣ—ಅಚ್ಯುತ ಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಬಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚೆರುಮಾನ ಪಳ್ಳಿ, ಬಾರ್ಕೂರು—ಬಾರ್ಕೂರು, ಮಂಗಳೂರು ಅಲ್ಯಾಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾರ್ಸಿಲೋರ [illegible] ಕಟ್ಟಿದ್ದು. 18. ಪೋರ್ತುಗೀಸರು—ಮೂರರು ವ್ಯಾಪಾರ ಕರ ತೆರಿಗಾತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬೂದಿಬಸವಪ್ಪ—ನೀಲೇಶ್ವರ ಯುದ್ಧ—ವೀರ ವೃಷಿ—ವಂಶಾವಳಿ. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ವರಾಡಗಳು—ವಿಚಾರರು. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪುವು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಕೋಪರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೊನ್ನಾಣಿರು ಮಠವಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನಾರ್ವಿವರ್ತಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೋಯಮುತ್ತೂರು ಸುಬ್ರಾಯ—ಕುಂಬಳೆ ಸುಬ್ರಾಯನ ದಂಗೆ—ಸರ್ ಟಾಮಸ್ ಮನ್ರೋ, ಮೊದಲನೇ ಕಲೆಕ್ಟರ—ಬುಚೆನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಕಂಜ—ಸೂಳ್ಯ—ಬೆಳ್ಳಾರೆ—ಅಮರಸುಳ್ಯಗಳು—ಬೆಳ್ಳಾರೆ, ಮುಡ್ಕ ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ-ಗುರುವಾಯನಕೆರೆ ಪಟ್ಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೇಲಂಗಡಿ—ಮಂಜೇಶ್ವರ ಕೋಟೆಗಳ ನೆಲ್ಸಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮಾರಿಗುಡಿ ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮುಟನ ಪ್ರತಿಷ್ಠೆ—ಸಾರಾವಿ ಯುದ್ಧ—ಬಂಟವಾಳ ಮಣಿಯುದ್ಧ—ದೇವಪೂಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ಐರನಾಡು ಹೆಗ್ಗಡೆ—ವೀರಪಾಂಡ್ಯ ಗುಮುಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿರ್ಲಾಲು—ಮೂಲಿಕೆ—ವರಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಿಡ್ಲೆ—ಸೋಮುಳಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ವೀರಾಪುರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಜರ ಸಂಗಡ ಬಾರ್ಸಿಲೋರ ಬಾರಕೂರು ಯುದ್ಧಗಳು. 31. ಹೊಸಂಗಡಿ ಬಿನ್ನಾಣರು—ಪಜಿಲ ಕೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವವೃತ್ತಾಂತ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ [illegible]—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಣ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮ ಬಲ್ಲಾಳರು—ಚಿಟ್ಟಿಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಆಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ವಮುಹೆಗಡೆ 1.

ವಿಳಾಸಃ—

ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವವರೆಗೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇವರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಮಾಡಿಕೊಳ್ಳುವ ವಿವರವು ಇದೆ. ೩ನೇದು ಜ್ಯೋ. ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ಸತ್ಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳಕ್ಕೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭೂವಾಡಗಳ ಚಿಕಿತ್ಸಾ ಸಹ, ಇವರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿವರವು ತಿಳಿಸಿರುವರು. ೫ನೇದು ಮಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮ ರಾಕ್ಷಸ, ಮಸ್ಕರ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇವರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಪತ್ರ ಬಳಿ ಎಲ್ಲಾ ದೇವಾನು ದೇವತೆಗಳು ದ್ರವ್ಯ ಶಕ್ತಿ ವೃದ್ಧಿಯೂ ಜೋತಿಷ್ಯರು, ಮಾಂತ್ರಿಕರು ಮಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಇದ್ದಕ್ಕಿಂದ ನೋಡಿರಲಿಕ್ಕಿಲ್ಲ. ಪ್ರತಿಯೊಬ್ಬರು ತರಿಸಿ ನೋಡತಕ್ಕದ್ದು ಇದರ ಬೆಲೆ ಕೀಲ ಕಡಿಮೆಮಾಡಿ ಇರುವದು. ೨—೮—೦. ಟಪಾಲು ಖರ್ಚು ಬೇರೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕತೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನು, ಆನಂದೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನು, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನು ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರು ಶೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೪—೦. ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದವರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೆ

ರಥಬೀದಿ, ಮಂಗಳೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಅ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು—(೨೮—೬—೧೯೨೭)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಕಹಾನಿ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಸಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಸ್ವಾರ್ಥನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. ೧—೪—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುಕ್ತಿನ ಸರ . .	0—12—0
ಸಂಪಾದಕ-ಕಾದಂಬರಿ	0—6—0
ಚಂದ್ರಮತಿ ,,	0—8—0
ರಾಜಪುತ್ರರಮಣಿಯರು	0—8—0
ಕೆಲವು ಸಣ್ಣ ಕಥೆಗಳು	1—0—0
ರಾಜಯೋಗ . .	1—0—0
ಸಂಪೂರ್ಣರಾಮಾಯಣ ಹೊಸ ಮುದ್ರಣ .	5—0—0
ಸಂಪೂರ್ಣರಾಮಾಯಣದ ಕಥೆ ವಚನ .	0—12—0
S. S. L. C. Kannada Texts	
ಚಂದ್ರಹಾಸ . .	0—5—0
ಸುಶೀಲೆ . .	0—6—0
ಆದಿಪುಯ ಪುರಾಣ.	0—12—0

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published, by V. S. Kamath at the Mangalore Trading Association's Sharada Press MANGALORE

Registered: No. M. 498.

ಸ್ವದೇಶಾಭಿಮಾನಿ

SWADESHABHIMANI. MANGALORE.

ಚಂದಾನಿರ್ಣಯಃ—ವರ್ಷ ಒಂದಕ್ಕೆ ರೂಪಾಯಿ 2—0—0.

ಟಪ್ಪಾಲ್ ಹಾಸಲು ಸೇರಿ ,, 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ ||
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ || ೧ ||

ವಾರಪತ್ರಿಕೆ

ದೊರೆಯಲನುಪಮರತ್ನಗಳು ಸಾ- | ಗರವ ಮಥಿಸಲು ಸುರಗಿಡರಿಂ |
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ||
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೧೮. ಮಂಗಳೂರು, ತಾರೀಕು ೨೫ನೇ ಶುಕ್ರವಾರ ನವಂಬರ ೧೯೨೭. ಸಂಚಿಕೆ ೪೮.

ದಿ ಕೆನರಾ ಬ್ಯಾಕಿಂಗ್ ಕೊರ್ಪೊರೇಶನ್

—ಉಡುಪಿ ಲಿಮಿಟೆಡ್.—

ಅಧಿಕಾರಿಗೊಳಿಸಲ್ಪಟ್ಟ ಮೂಲಧನ	ರೂ.	3,50,000—0—0
ಚಂದಾ ಪಾಳಲಿಕ್ಕೆ ಅರ್ಪಿಸಿದ ಮೂಲಧನ		2,00,000—0—0
ಚಂದಾ ಹಾಕಿ ಎತ್ತಿದ ಮೂಲಧನ		1,00,000—0—0
ಮೌಲ್ಯ ತಕ್ಕ ಮೂಲಧನ		90,365—7—11
ಠೇವಣಾತಿಗಳು		3,33,300—0—0
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ 6ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ		4 54,322—11—0

ಕಳೆದ 2 ವರುಷಗಳಲ್ಲಿ ಪಾಲುದಾರರಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತರುವ ಶರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ನಿಯಮ ಠೇವಣಾತಿಗಳನ್ನು, 15 ದಿನಗಳ ನೋಟೀಸು ಮೂಲಕ ಶೇಕಡಾ 6½ರ ಬಡ್ಡಿ ಪಡೆಯುತ ವಾಪಾಸು ಪಡೆಯುವ ಚಿಕ್ಕ ವ್ಯಾದಿ ಠೇವಣಾತಿಗಳನ್ನು ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ನಡೆಯುವ ಚಾಲ್ತಿ ಠೇವಣಿಗಳನ್ನು ಶೇಕಡಾ 4½ ಬಡ್ಡಿ ನಡೆಯುವ ಸೇವಿಂಗ್ಸು ಬ್ಯಾಂಕು ಠೇವಣಾತಿಗಳನ್ನು ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನು ಡಿಪೋಜಿಟಾಗಿ ಪಡೆಯುವದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವದು.

ಈ ಬ್ಯಾಂಕಿಗೆ ತರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದಲ್ಲಿ ಸಿಕ್ಕುವದು.

ನಯಂಪಳ್ಳಿ ಆನಂದರಾವ್,

ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ವಿಶಿಷ್ಟ ಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಡಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ಡಿ. ಚಿಲಿಯನ್ ನೈಟ್ರೇಟ್ ಕಮಿಟಿ,

6, ಮಿಶ್ಶನ್ ರೌ, ಕಲ್ಕತ್ತಾ.

THE DIRECTOR CHILEAN NITRATE COMMITTEE,

(INDIAN DELEGATION)

6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾರ್ಥಿಮಿತ್ರಕ್ಕೆ ಅನುವಾದು ಶಾಸ್ತ್ರಗಳಿಂದ ಬರೆಯಲ್ಪಟ್ಟ

ಚಂದ್ರ ವ್ರತವಿವೇಕ ಕ್ರಯ		೦—೧೦—೦
ಕೇಶಭಂಗ	,,	೦—೧೨—೦
ಸಂಕೀರ್ತನೆ	,,	೦—೧೦—೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ

ಸ್ವರಾಜ್ಯ ಛಕ್ರೋರ್ನ್ಯಾಸ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ, ಸತೀ ಸಾಹಸ, ಅಂಗದನ ಕ್ರಿಯಾಡ್ಯು, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅನೇಕ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿ ಕತೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಕಕುವಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨—೧೩—೦ ಸ್ಥಳೀಕರಿಗೆ ರೂ. ೨—೦—೦. ವಿ. ಪಿ. ಖರ್ಚು ಬೇರೆ ರೂ. ೪—೦—೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಶಿಕ್ಷದ ಪುಸ್ತಕಗಳು, ನೋಟು ಬುಕ್ಕುಗಳು, ಪೈಂಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಬು, ಫೋಟ್ ರೂಲುಗಳು, ಇತರ ವಿರಾಮದ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಮಹಜರು ಫೋರ್ಮು, ಕುಂಭಿಣಿ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪತಿಕ್, ಹೋಮಿಯೋಪತಿಕ್ ಮತ್ತು ಬಿಟ್ಟು ಔಷಧಗಳು—ರೋಗಿಗಳಿಗೂ, ಬಾಲಕರಿಗೂ ಬೇಕಾಗುವ ಪಾಷ್ಟಿಕ ಔಷಧಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಬೆಳೆಗೆ ಬೇಕಾಗುವ ಗೊಬ್ಬರಗಳು.

ಸುಪ್ರಿಯಾದ ಯೂಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ. ಗಜಕರ್ಣದ ಮುಲಾಮು. ನಮ್ಮ ಔಷಧ ಶಾಲೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ದೇನೆಯುಂಟಾದಾಗ ಚೇತನವು ಕಡಿಮೆಯಾಗುತ್ತದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ದೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ದೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

—ಅಮೃತಾಂಜನ—

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಎಷ್ಟೇ ಕಠಿಣವಿದ್ದರೂ ನಿಲ್ಲುವುದು. ಇದು ಎಂಥಾ ತರದ ಶಿಥಿಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಆಗಾಗ್ಗೆ ಉಂಟುಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮುಃ—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನಃ—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 3.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಕರಸಾಯನ

U. B. DUTT & Co.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಔಷಧಿಗಳಲ್ಲಿ ಅತಿ ಶ್ರೇಯಸಿನಿಂದ ಮತ್ತೇ ನಿಷ್ಕೃತ ಔಷಧಿಯಾಗಿರುವ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು, ಪಿತ್ತವಾತ, ಅನೇಕ ಕಾಲದಿಂದ ಉಪಯೋಗಿಸಲ್ಪಟ್ಟ [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿದಿನವೂ "ಆರ್ಡರ್‌ಗಳು" ಬರುತ್ತಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಯೋಗ್ಯತಾಪತ್ರಗಳೂ ಜಾಸ್ತಿಯಾಗಿವೆ.

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ 'ಪಾಕರಸಾಯನ' ಎಲ್ಲಾ ವಿಧದ ವಾತಗಳನ್ನು, ಗುಣಪಡಿಸುತ್ತದೆ. ಅವಯವಗಳಲ್ಲಿ ಊದಿಕೊಳ್ಳುವ ಸ್ವಭಾವ, ಗಂಟು, ಸಂದು, ಅವಯವ, ಅಂಗಕೋಶ ಮೊದಲಾದುವು ಶೀಘ್ರವಾಗಿ ಗುಣವಾಗುವುವು. [illegible] ಅಂಥಾ ಪಾಕರಸಾಯನ ತೆಗೆದುಕೊಳ್ಳಲು ಪ್ರಾರಂಭಿಸಿದರೆ [illegible] ಸಂಪೂರ್ಣ ಗುಣಹೊಂದುವರೆಗೆ ಯಾವ ಸಂಶಯವೂ ಇಲ್ಲ. ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕೆಮ್ಮು, [illegible] ಧಾತುಪುಷ್ಟಿ, ಹಲ್ಲುನೋವು, ಶಿರನೋವು, ಆಮಶಂಕೆ, ಮೊದಲಾದವುಗಳಿಗೆ ದಿವ್ಯ ಔಷಧಗಳಿವೆ, "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ ಮಲಬಾರ.

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದುಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ ದಾಯಕ ಪತ್ರವನ್ನು ಹೊಂದಿರುವ

ಕವಿರಾಜ ನಾಗೇಂದ್ರನಾಥ ಸೇನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎಸ್. ಸುಬ್ರಮಣ್ಯ ಎಂಡ್ ಕೋ,
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಖುದ್ದು ನಿಗಾವಣಿಯಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಒಳ್ಳೇ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕೆ ಇವೆ.

ಇಲ್ಲಿ ಎಲ್ಲಾ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತವೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾಯಿತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ 25 ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರದ್ದಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ತೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರ್ಯೇನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬಗೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಲಯಸಕಾಂತ ಭಸ್ಮ:—ಅರಕ್ತತೆ, ಕ್ಷಯ, ಸಾಮಾನ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರ್ಯನ್‌ನಿಂದ 2 ಗ್ರ್ಯನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರ್ಯನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಕ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ¼ ಗ್ರ್ಯನಿನಿಂದ 1 ಗ್ರ್ಯನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಸಂಬಂಧವಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಠರೋಗ, ಮಹೋದರ, ಉಬ್ಬಸ, ಶ್ವಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ½ ಗ್ರ್ಯನಿನಿಂದ ½ ಗ್ರ್ಯನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರ್ಯನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ 2.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—ಕವಿರಾಜ ಎನ್. ಎನ್. ಸೇನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ I ಕ್ಲಾಸ್ ಕಸ್ತೂರಿಗೆ ತೊಲೆಗೆ ರೂ 40.

ಗೋರೋಜನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ 2ರೂ. ಪಚ್ಚಕರ್ಪೂರ ತೊಲೆಗೆ ರೂ 4.

ಎಲ್ಲಾ ಆರ್ಡರುಗಳನ್ನು ಮದರಾಸಿನ ಸೋಲ್ ಏಜಂಟರಿಗೆ ಕಳುಹಿಸತಕ್ಕದ್ದು.

GUN RUST-PROOF OUR SPECIALITY

The Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ವಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲ್‌ಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಪಡಕೊಂಡ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಚಿತ್ರಾವಳಿ 32 ಸಾಮಾನುಗಳ ಸಹ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ 4—8—0, ದೊಡ್ಡದು 6—0—0 ಪೋಸು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಮಡಿ, ಜರಿ, ಸಾದಾ, ಸೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಫಟಿಕ ಸ್ಫಟಿಕಮಣಿ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವುದು. ಕ್ಯಾಟಲಾಗ್ ಇನಾಂ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಲೆ ಉಳಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ. 1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿಕ್ ಡಿಸ್ಪೆನ್ಸರಿ,
ಹಂಪನಕಟ್ಟೆ, ಮಂಗಳೂರು.

ಸೌಂದರ್ಯದ ಉತ್ತಮ ಮಿತ್ರ

ಸೋಕದಲ್ಲಿ ಅತಿ ಸೌಂದರ್ಯಕ್ಕೆ ಯಶಸ್ಸು ಪಡೆದಂಥಾ ಸ್ತ್ರೀಯರು ಉಪಯೋಗಿಸುವದು

"ಹಾಜಿಲೀನ್ 'ಸ್ನೋ'"

(ಟ್ರೇಡ್ ಮಾರ್ಕ)

"HAZELINE' (Trade Mark) SNOW"

ಪತ್ರಕರ್ಣದ ಯೌವನತ್ವವನ್ನು ಕಾಪಾಡಿ, ಕಳ್ಳಹಿಗಿಲಿಂದಲು ಪುಡುಡಗಳಿಂದಲು ರಕ್ಷಿಸುವದು "ಹಾಜಿಲೀನ್ 'ಸ್ನೋ'" ಇದು ಮುಖಕಾಂತಿಗೆ ನಿಷ್ಪುಕೆಂಟು ಕರ್ಮವನ್ನು ಮೃದು ನಯನವನ್ನು ಕೊಡುತ್ತದೆ.

ಇದು ಕಂಜಿನ ವಾತ್ರೆಗಳಲ್ಲಿ ಕಟ್ಟ ಪತ್ರುಉಗ್ರಾಣದ ಮನಿಯವರಿಂದಲು ಮಾರಲ್ಪಡುವದು.

ಬರ್ರೊಸ್ ವೆಲ್ಕಂ ಅಂಡ್ ಕೋ.
ಲಂಡನ್ ಅಂಡ್ ಬಂಬಾಯಿ.

Burroughs Wellcome & Co.
London and Bombay

Can. 2

All Rights Reserved

HAZELINE SNOW

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯ ಕಾಲದ ವರೆಗೆ ಭಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅಮುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವವರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಹುಳ್ಳುಕಟ್ಟುವದೂ, ವಸಡು ದೀಗಿಕೊಂಡು ಆಹಾರ ತಿನ್ನುವಲ್ಲಿ ಅಶಕ್ತವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬಾಳಿಕೆಗೆ ಅಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ
ಗುಣ ವಿಶೇಷ! ಹುಡಿ ಹೆಚ್ಚು!!
ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರಸ್ಥಳಗಳಲ್ಲಿ ಏಜಂಟರಾಗಬೇಕೆಂಬುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಸೋಲ್ ಏಜಂಟ್ಸ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ನಾಟಕ ಪ್ರಕಟನಾಲಯ, ಬಸವನಗುಡಿ ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ಯಾವಂತರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿರುವುದರ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" ದೇವರಲ್ಲಿ" ಎಂಬ ಅಂಗ ಕವಿತೆಗಳ, ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳುಹಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

"ಸುಪಾನ"

ಕಾಫಿ, ಚಾ ವಗೈರೆ ಕುಡಿದು ಆರೋಗ್ಯವನ್ನು ಕೆಡಿಸಿಕೊಳ್ಳುವುದರ ಬದಲಾಗಿ ನಾಮದಬೇರು ಮೊದಲಾದ ೧೬ ಬಗೆಯ ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟ "ಸುಪಾನ" ಎಂಬ ಕಷಾಯದ ಪುಡಿಯಿಂದ ಸುಖಕರ, ಆರೋಗ್ಯಕರವಲ್ಲದೆ ಮೇಹ, ಮಲೇರಿಯಗಳನ್ನು ನಾಶಗೊಳಿಸುವ ಅತ್ಯುತ್ತಮವಾದ ಪಾನವನ್ನು ಮಾಡಿಕೊಳ್ಳಬಹುದು. ಒಮ್ಮೆ ಪರೀಕ್ಷಿಸಿರಿ. ಕ್ರಯ ಅಳತೆ ಸೇರು ೧ಕ್ಕೆ ೦—೧೨—೦. ಪೌಂಡು ಒಂದಕ್ಕೆ ರೂ. ೧—೦—೦. ವಿ. ಪಿ. ಪ್ರತ್ಯೇಕ.

ಸ್ಯಾಂಪಲು ಅಪೇಕ್ಷಿಸುವವರು ೨ ಆಣೆ ಸ್ಟಾಂಪನ್ನು ಮುಂಗಡವಾಗಿ ಕಳುಹಿಸತಕ್ಕದ್ದು.

ಕೆ. ಸೋಮಯ್ಯ ಸೆಟ್ಟಿ.
ಜೈಲ್ ರೋಡು, ಮಂಗಳೂರು.

WANTED.

An expert spinning & weaving master for a national school on Rs. 35-45 P. M. Apply at once with the copies of the testimonials to:—

Kanjarpane Gopalkrishnaya,
(Son of Venkatramanaiah)
LAND HOLDER, Sullia Post, S. Kanara.

ಬೇಕಾಗಿದೆ.

ನೂಲುವುದನ್ನೂ ನೇಯುವುದನ್ನೂ ಕಲಿಸಲು ಸಮರ್ಥನಾದ ಒಬ್ಬ ಉಪಾಧ್ಯಾಯನು ಒಂದು ರಾಷ್ಟ್ರೀಯ ಶಾಲೆಯ ಬಗ್ಗೆ ಬೇಕಾಗಿದೆ. ಸಂಬಳ ತಿಂಗಳಿಗೆ ರೂ. 35—45. ಉಪಾಧ್ಯಾಯರಾಗಲಪೇಕ್ಷಿಸುವವರು ತಮ್ಮ ಯೋಗ್ಯತಾ ಪತ್ರಗಳ ಸಹಿತ ಕೆಳಗೆ ಸಹಿ ಮಾಡಿದವರಿಗೆ ಬರೆಯಬೇಕು.

ಕಂಜರಪಣೆ ಗೋಪಾಲಕೃಷ್ಣಯ್ಯ,
(ವೆಂಕಟರಮಣಯ್ಯನವರ ಮಗ)
ಲೇಂಡ್ ಹೋಲ್ಡರ್, ಸುಳ್ಯ ದ. ಕ.

ಸುಸಂದರ್ಭ ತ್ವರೆ
ದರ ಸುಲಭ! ಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿರ್ಸ್ಪೈಲದೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂತು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ. ಬಿ. ಎಲ್.

ಕೊಂಕಣಿ ಭಾಷೆಯಲ್ಲಿ ಸಂಗೀತ

ಪ್ರಹ್ಲಾದ ಚರಿತ್ರ ನಾಟಕ.

ಬೆಲೆ: 0—8—0 ಪೋಸ್ಟ್ ಖರ್ಚು 0—1—0.

ಚಂದ್ರಹಾಸ ನಾಟಕ.

ತಿದ್ದಿದ ಮೂರನೇ ಮುದ್ರಣ ಬೆಲೆ: 0—4—6. ಪೊ. ಖ. 0-1-0

ಒಂದೊಂದು ಪುಸ್ತಕ ಬೇಕಾದವರು ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ:—ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದ. ಕನ್ನಡ.

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯ ಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತು 1ರ ರೂ. 2—12—0.
ಸ್ಪೆಶ್ಯಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕೆಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಷ್ಟಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಭಾಷಾಣಾನೆ, ರಥಬೀದಿ, ಮಂಗಳೂರು. ಮತ್ತು

ಕೆನರಾಸ್ ಮಿಶ್ಯನ್ ಬುಕ್ ಎಂಡ್ ಟ್ರ್ಯಾಕ್ಟ ಡಿಪೊಜಿಟರಿ,
ಮಂಗಳೂರು.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಮಾರ್ಗ... ಶು ೭ ಶನಿವಾರದಿಂದ ದುಂದುಭಿ ಸಂ ಮಾರ್ಗಶಿರ ಶು ೧೩ ಶುಕ್ರವಾರದ ವರೆಗಿನ ಪಂಚಾಂಗ

(೧೯೨೨ನೆಯ ವೃಶ್ಚಿಕ ಚಾರ್ಟ)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
25	ಶನಿ	೭	೩೫.೨	ಶ್ರವಣ	೪.೪೧	೯	6.37	6. 1
26	ರವಿ	೮	೩೮.೪೬	ಧನಿಷ್ಠಾ	೮.೨	೧೦	6.37	6. 1
27	ಸೋಮ	೯	೬೦.೦	ಶತಭಿಷ	೧೪.೧೬	೧೧	6.38	6. 1
28	ಮಂಗಳ	೯	೩ ೪೪	ಪೂ. ಭಾ.	೧೯.೧೪	೧೨	6.39	6. 1
29	ಬುಧ	೧೦	೮.೪೬	ಉ. ಭಾ.	೨೫.೪೨	೧೩	6.39	6. 1
30	ಗುರು	೧೧	೧೪.೫೮	ರೇವತಿ	೩೨.೧೬	೧೪	6,40	6. 1
1	ಶುಕ್ರ	೧೨	೧೮.೫೭	ಅಶ್ವಿನಿ	೩೮.೨	೧೫	6.40	6. 1

ಮಂಗಳೂರಿನ ವಾಯುಸ್ಥಿತಿ.

(೧೯೨೨ನೆಯ ನವಂಬರ್)

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಳದ್ದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜನವರಿಯಿಂದ ಮಳೆ
16	89—8	72—5	—	—
17	89—3	71—1	—	—
18	89—2	73—5	—	—
19	91—5	72—2	—	—
20	88—6	68—1	—	—
21	90—0	66—2	—	—
22	86—9	73—2	—	138.35

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಅ.	ವರೆಗೆ ರೂ. ಅ.
ಮಸ್ಸೂರಿ ಅಕ್ಕಿಮುಡಿ ೧ಕ್ಕೆ	...	8—6	8—14
ಸುಗ್ಗಿಗೆ	...	7—12	8—2
ಗುಡ್ಡು,	...	7—10	8—2
ಹೊಸ ರಾಶಿ		6—10	7—0
ಅನ್ನಲ್ ಬೆಳ್ತಿಗೆ „	...	8—12	9—0
ಗುಡ್ಡು ಬೆಳ್ತಿಗೆ „	...	7—10	8—0
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	—	13—0
ಗೋದಿ ಗೋಣಿ ೧ಕ್ಕೆ	...	16—0	22—0
ಹುರುಳಿ ಗೋಣಿ ೧ಕ್ಕೆ	...	11—8	12—8
ಕಡಲೆ ಗೋಣಿ ೧ಕ್ಕೆ	...	13—8	16—8
ತೊಗರಿ ಗೋಣಿ ೧ಕ್ಕೆ	...	14—0	14—8
ತೊಗರಿಬೇಳೆ ಗೋಣಿ ೧ಕ್ಕೆ	...	16—0	24—0
ಉದ್ದು ಗೋಣಿ ೧ಕ್ಕೆ	...	17—0	17—8
ಹೆಸರು ಗೋಣಿ ೧ಕ್ಕೆ	...	—	14—0
ಊರು ಬೆಲ್ಲ ಖಂಡಿ ೧ಕ್ಕೆ	...	60—0	61—4
ಉಪ್ಪು ಗೋಣಿ ೧ಕ್ಕೆ	...	5—4	5—8
ಕೊಬ್ರಿ ಖಂಡಿ ೧ಕ್ಕೆ	...	85—0	95—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	52—0	53—0
ಎಳ್ಳಿಂಡಿ ಖಂಡಿ ೧ಕ್ಕೆ	...	52—8	55—0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7—8	9—0
ಎಳ್ಳೆಣ್ಣೆ ಮುಡಿ ೧ಕ್ಕೆ	...	7—8	9—0
ಹಿಪ್ಪೆಎಣ್ಣೆ ಪೆಟ್ಟಿಗೆ ೧ಕ್ಕೆ	...	9—0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	6—0	6—0
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	8—0	8—4
ಸಾಸಿವೆ ಮುಡಿ ೧ಕ್ಕೆ	...	9—0	9—8
ಕೊತ್ತಂಬರಿ ಮುಡಿ ೧ಕ್ಕೆ	...	4—12	5—0
ಕಾಫಿ ಖಂಡಿ ೧ಕ್ಕೆ	...	330—0	335—0
ಅಡಿಕೆ ಹಳೆ ಖಂಡಿ ೧ಕ್ಕೆ ಹಳ್ಳು	...	175—0	180—0
ಅಡಿಕೆ New, ಹೊಸ್ತು	...	125—0	130—0
ಗೇರುಬೀಜ ಖಂಡಿ ೧ಕ್ಕೆ	...	120—0	125—0
[illegible] ಮುಡಿ ೧ಕ್ಕೆ	...	26—0	28—0
[illegible] ಮುಡಿ ೧ಕ್ಕೆ	...	2—2	2—8
[illegible] ಖಂಡಿ ೧ಕ್ಕೆ	...	55—0	65—0
[illegible] ಮುಡಿ ೧ಕ್ಕೆ	...	21—0	23—0
[illegible] ಮುಡಿ ೧ಕ್ಕೆ	...	36—0	—
[illegible] ಸೇರು ೧ಕ್ಕೆ	...	24—0	—
[illegible] 1ಕ್ಕೆ	...	20—0	21

ನೋಟೀಸು.

ಉಡುಪಿ ಶ್ರೀ ಸೋದೆ ಮಠದ ಶ್ರೀ ಮದ್ವಿಶ್ವಾಧೀಶ ತೀರ್ಥ ಶ್ರೀ ಪಾದಂಗಳವರ ಶಿಷ್ಯರು ಶ್ರೀ ಮದ್ವಿಶ್ವೇಂದ್ರ ತೀರ್ಥ ಶ್ರೀಪಾದಂಗಳವರು ಸಮಸ್ತರಿಗೆ ತಿಳಿಸುವದೇನಂದರೆ:—

ನಮ್ಮ ಗಾರ್ಡಿಯನ್‌ಶಿಪ್ ಯಾನೆ ರಕ್ಷಣೆಯಲ್ಲಿ ಇರುವ ಮ್ಯಾನರರಾದ ಶ್ರೀ ಶೀರೂರು ಮಠದ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು, ಆರಾಧಿಸುವ ಶ್ರೀ ವಿಠಲದೇವರ ಭಂಡಾರದ ಸ್ಥಿರಚರ ಸೊತ್ತುಗಳ ಆಡಳಿತೆಯನ್ನು ನಮ್ಮಿಂದ ತಾ. ೯—೧೨—೧೯೧೭ರಲ್ಲು ರಿಜಿಸ್ತ್ರಿ ನಿಶಿಂ ಜನರಲ್ ಪವರ್ ಒಫ್ ಎಟೊರ್ನಿ ಮೂಲಕ ಅಧಿಕಾರ ಪಡೆದ ರಾಜಗೋಪಾಲಾಚಾರ್ಯರಿಗೆ ನಾವು ಕೊಟ್ಟಿರುವ ಅಧಿಕಾರಗಳ ಪೈಕಿ ಸದರಿ ಮಠದ ಕಡೆಯಿಂದ ಆಗತಕ್ಕ ವಸೂಲಿ ಯಾ ಲೇವಾದೇವಿ ಕೆಲಸದ ಅಧಿಕಾರಗಳನ್ನು ನಾವು ತಾ. ೭—೧೧—'೨೨ರಲ್ಲು ಬರಹಮೂಲಕ ರದ್ದುಪಡಿಸಿರುತ್ತೇವೆ. ಆದ್ದರಿಂದ ಸದರಿಯವರ ಕೂಡೆ ಯಾರೊಬ್ಬರೂ ಮೇಲ್ಕಂಡ ಪವರ್ ಒಫ್ ಎಟೊರ್ನಿ ಆಧಾರದಿಂದ ಯಾವ ಲೇವಾದೇವಿಗಳನ್ನು ನಡಿಸುವದಾಗಲಿ, ವಸೂಲಿ ಕೊಡುವುದಾಗಲಿ ಕೂಡದಾಗಿ ಈ ಮೂಲಕ ತಿಳಿಸಿಯದೆ. ಇದಕ್ಕೆ ವಿರೋಧವಾಗಿ ನಡಕೊಂಡವರಿಗೆ ಸದರಿ ಲೇವಾದೇವಿ ವಗೈರೆಯಿಂದ ಏನೊಂದು ಪ್ರಯೋಜನ ಶಿಕ್ಕಲಾರದು.

ತಾ. 21-11-1922, | ಶ್ರೀ ವಿಶ್ವೇಂದ್ರ ತೀರ್ಥ
ಶ್ರೀ ಪಾದಂಗಳವರು.

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಕೋರ್ಟಿನಲ್ಲಿ,

ಕ್ರಮ ಅರ್ಜಿ ನಂಬ್ರ $\frac{148}{1922}$

ಅರ್ಜಿದಾರಳು—ಉಳ್ಳಾಲ ಕಮಲಾ ಯಾನೆ ಉಮಾ ಬ್ಯಾಮ್ಯಾನರಳು. ಕ್ಷೇಮಚಿಂತಕ ಪೊಂಬತ್ತ ಮಜಲು ಮಂಗೇಶರಾವ್.

ಮೇಲ್ಕಂಡ ಅರ್ಜಿದಾರಳ ಗಂಡ ಮೃತ ಉಳ್ಳಾಲ ಸಂಜೀವರಾಯರು ಭಾರತ ಕೊ-ಒಪರೇಟಿವ್ ಇನ್ಶುರೆನ್ಸ್ ಕಂಪೆನಿಯಲ್ಲಿ ರೂ. 1000ಕ್ಕೆ ಮಾಡಿರುವ ನಂಬ್ರ 21071ನೇ ಪೊಲಿಸಿಯ ಹಣವನ್ನು ವಸೂಲು ಮಾಡುವರೆ ವಾರಿಸ್ದಾರ ಸರ್ಟಿಫಿಕೇಟಿನ ಬಗ್ಗೆ ಅರ್ಜಿದಾರಳು ಈ ಕೋರ್ಟಿಗೆ ಕೊಟ್ಟಿರುವ ಅರ್ಜಿಯು ತಾ. 8-12-'22ರಲ್ಲು ತನ್ಖಿಗೆ ಇಟ್ಟಿರುವುದು. ಈ ವಿಷಯದಲ್ಲಿ ಆಕ್ಷೇಪಣೆಗಳು ಇದ್ದರೆ ತನ್ಖಿ ದಿವಸ ಕೋರ್ಟಿಗೆ ಜಾಹೀರುಮಾಡಿಕೊಳ್ಳತಕ್ಕದ್ದೆಂದು ಈ ಮೂಲಕ ತಿಳಿಸೋಣಾಗಿಯದೆ,

ಮಂಗಳೂರು. } ಕುಂಡಾಜೆ ರಾಮ ಮೋಹನ ರಾವ್.
ತಾ. 23-11-'22 } ಅರ್ಜಿದಾರಳ ಕಡೆ ವಕೀಲ್.

ಯುನಿವರ್ಸಲ್ ಸ್ಟೀಮ್ ನೇವಿಗೇಶನ್ ಕಂಪೆನಿ, ಮುಂಬಯಿ.

ನೋಟೀಸು.

ನಮ್ಮ ಕಂಪೆನಿಯ ಸ್ಟೀಮರು ಈ ದಿನ ಮುಂಬಯಿಯಿಂದ ಮಂಗಳೂರಿಗೆ ಹೊರಡುವುದು, ಮತ್ತು ಈ ಸ್ಟೀಮರು ಇದೇ ತಾ. ೨೫ನೇ ಶನಿವಾರದೊಳಗಾಗಿಯೇ ತಲ್ಪಬಹುದೆಂದು ನಿರೀಕ್ಷಿಸಿದೆ.

ಈ ಸ್ಟೀಮರು ಬಂದು ತಲ್ಪುವ ಸರಿಯಾದ ತಾರೀಕು ಮತ್ತು ಸಮಯ ಹಾಗು ಇಲ್ಲಿಂದ ಅದು ಹಿಂತಿರುಗುವ ತಾರೀಕು ಮತ್ತು ಸಮಯವನ್ನು ಬಂದರಿನಲ್ಲಿರುವ ಮಸೀದಿಯ ಕೆರೆಯ ಸಮೀಪದಲ್ಲಿರುವ ಕಂಪೆನಿಯ ಆಫೀಸಿನ ಬೋರ್ಡಿನ ಮೇಲೆ ನಾಳೆ ಸಾಯಂಕಾಲ ೪ ಗಂಟೆಯೊಳಗೆ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಯನ್ನು ಕಂಪೆನಿಯ ಆಫೀಸಿನಿಂದ ತಿಳಕೊಳ್ಳುವುದು.

ನಮ್ಮ ಕಂಪೆನಿಯ ಆಫೀಸು ಬಂದರಿನಲ್ಲಿ ಮಸೀದಿಯ ಕೆರೆಯಿಂದ ಮುನ್ಸಿಪಲ್ ಆಫೀಸಿಗೆ ಹೋಗುವ ರಸ್ತೆಯಲ್ಲಿರುವ ಮೆಸ್ಸರ್ಸ್ ಸಿ. ಅಬ್ದುಲ್ ರಹಿಮಾನ್ ಎಂಡ್ ಕೊರಗಪ್ಪ ಇವರ ಕಟ್ಟೋಣದ ಮಾಳಿಗೆಯ ಮೇಲಿರುವುದು. ಮಾಳಿಗೆಯ ಕೆಳಗಿನ ಕಟ್ಟೋಣದಲ್ಲಿ ಮೆಸ್ಸರ್ಸ್ ಎಚ್. ಸಿ. ಫೆರ್ನಾಂಡಿಸ್ ಎಂಡ್ ಕೋ. ಇವರಿರುವರು.

ಮಂಗಳೂರು, } ಪಿ. ಎಮ್. ಕಾಮತ್,
ತಾ. 23-11-'22 } ಏಜಂಟ್.

GOVERNMENT OF MADRAS.

PUBLIC DEPARTMENT.

An open competitive examination for the I. C. S., will be held in London commencnig on the 1st August 1923.

The age of the candidates on the 1st August 1923 must ordinarily be less than 24 years but not less than 21 years; but candidates who have rendered military service during the war are entitled to certain special concessions as regards age. Application from intending candidates must reach the Secretary, Civil Service Commission, London, on or before the 1st June 1923. Copies of the form of application and other particulars can be obtained from the Publicity officer.

Detailed rules and regulations and a syllabus of the examination will be published in the Fort St. George Gazette dated 22nd November 1922.

(Sd) R. A. Graham,
Chief Secretary to Govt.

ಪತ್ರವ್ಯವಹಾರ.

ಮಂಗಳೂರಿನ ಮೋಟಾರುಗಳು.

ವಾಚಕರೇ,

ನಮ್ಮ ಮಂಗಳೂರು ಪಟ್ಟಣದಲ್ಲಿ ದಿನೇ ದಿನೇ ಮೋಟಾರುಗಳು ಹೆಚ್ಚುತ್ತಿವೆ. ಈ ಮೋಟಾರುಗಳು ರಭಸದಿಂದ ಓಡುತ್ತಿರುವಾಗ ಧೂಳು ತೆರೆಗಳಂತೆ ಮೇಲಕ್ಕೆ ಎದ್ದು ಮಾರ್ಗಗಳಲ್ಲಿ ನಡಿಯುವವರ ಕಣ್ಣುಕಟ್ಟಿ ಅವರು ಮೋಟಾರು ಬಂದಾಗ ಮುಂದಕ್ಕೆ ಹೆಜ್ಜೆ ಇಡುವುದೇ ಕಷ್ಟವಾಗಿದೆ. ಮುದುಕರೂ ಮಕ್ಕಳೂ ಇತರ ಪ್ರಾಣಿಗಳೂ ಅನೇಕ ಸಲ ಹೆಚ್ಚಿನ ಗಂಡಾಂತರಗಳಿಗೆ ಒಳಗಾಗಬೇಕಾಗುತ್ತದೆ. ಅಲ್ಲದೆ ಮೋಟಾರುಗಳ ಓಟದ ಕಾಲದಲ್ಲಿ ಮೇಲಕ್ಕೆ ಎದ್ದ ಧೂಳು ಮಾರಾಟಕ್ಕೆ ಇಟ್ಟ ಪದಾರ್ಥಗಳನ್ನು ಬಹಳವಾಗಿ ಹಾಳುಮಾಡುತ್ತಿರುವುದು ಕಾಣುವುದು. ಇಕ್ಕಟ್ಟಾದ ಮಾರ್ಗಗಳಲ್ಲಿ ಒಂದೇ ಸಲ ಎರಡು ಮೂರು ಮೋಟಾರುಗಳು ಬಂದರೆ ಆಗ ಉಂಟಾಗುವ ತೊಂದರೆಗಳು ಬಹಳವಾಗಿವೆ. ಕಾರ್‌ಸ್ಟ್ರೀಟಿನಲ್ಲಿ ಕಾರುಗಳ ಸಂಚಾರವು ಸದಾ ಕಾಲ ಇದ್ದೇ ಇರುವುದು. ಈ ಇಕ್ಕಟ್ಟಾದ ಬೀದಿಯಲ್ಲಿ ಜನರ ಸಂಚಾರವೂ ವಿಶೇಷ. ಇಕ್ಕಟ್ಟಾದ ಬೀದಿಯನ್ನು ಈಗ ಅಗಲ ಪಡಿಸುವುದು ತೀರಾ ಅಸಾಧ್ಯವೆ. ಆದರೆ ಮೇಲಕ್ಕೆ ಏಳುವ ಧೂಳನ್ನಾದರೂ ಕಡಿಮೆ ಮಾಡುವಂತೆ ಪ್ರಯತ್ನಿಸಬಹುದಲ್ಲವೇ? ಹೀಗೆ ಧೂಳು ಏಳುವುದರಿಂದ ಈ ರಸ್ತೆಯಲ್ಲಿ ಸಂಚಾರಮಾಡುವವರಿಗೂ ಅಂಗಡಿಗಳನ್ನೂ ಮನೆಗಳನ್ನೂ ಮಾಡಿಕೊಂಡಿರುವವರಿಗೂ ಆರೋಗ್ಯಕ್ಕೆ ಹಾನಿಯುಂಟಾಗುವುದೆಂಬುದನ್ನು ಮರೆಯಕೂಡದು. ನೊನ್ನೆಯ ವರೆಗೆ ಮಳೆ ಸುರಿದುದರಿಂದ ಕೆಲವು ತೊಂದರೆಗಳುಂಟಾಗಿದ್ದರೂ ಮೋಟಾರುಗಳು ಓಡುವ ಮಾರ್ಗಗಳಲ್ಲಿ ಧೂಳು ಮೇಲಕ್ಕೆ ಏರುವುದು ಸ್ವಲ್ಪಮಟ್ಟಿಗೆ ಕಡಿಮೆಯಾಗಿತ್ತು. ಮಾರ್ಗಗಳಲ್ಲಿ ನೀರು ಚಿಮಿಕಿಸುವ ಬಗ್ಗೆ ಮುನ್ಸಿಪಾಲಿಟಿಯವರು ಒಂದು ಮೋಟಾರ ಲೋರಿಯನ್ನು ಕಳೆದ ವರುಷವೆ ತರಿಸಿದ್ದರು. ಆದರೆ ಈ ಮೋಟಾರ ಲೋರಿಯಿಂದ ನೀರು ಚಿಮಿಕಿಸುವ ಕೆಲಸವನ್ನು ಪ್ರಾರಂಭಿಸುವ ಮೊದಲೇ ಮಳೆಯು ಪ್ರಾರಂಭಿಸಿದುದರಿಂದ ಆ ಕೆಲಸವನ್ನು ಕಳೆದ ವರ್ಷ ಮಾಡಲಾಗಲಿಲ್ಲವೆಂದು ಮುನ್ಸಿಪಾಲಿಟಿಯ ಕಳೆದ ವರುಷದ ವರದಿಯಿಂದ ತಿಳಿದುಬರುತ್ತದೆ. ಈ ವರುಷದ ವರ್ಷಾಕಾಲವು ಮುಗಿದುದರಿಂದ ಇನ್ನಾದರೂ ಮೋಟಾರ ಲೋರಿಯ ಮೂಲಕ ಮಾರ್ಗಗಳಲ್ಲಿ ನೀರು ಚಿಮಿಕಿಸುವ ಕೆಲಸವು ಪ್ರಾರಂಭವಾದೀತೆಂದು ನೆನಸಬಹುದು. ಕಾರಣಾಂತರಗಳಿಂದ ಈ ಮೋಟಾರ ಲೋರಿಯಿಂದ ಒಡನೆಯೆ ನೀರು ಚಿಮಿಕಿಸುವ ಏರ್ಪಾಡಿಯಾಗಲು ಸ್ವಲ್ಪ ತಡವಾದರೂ ಮೋಟಾರುಕಾರುಗಳ ಚಲಾವಣೆಯು ವಿಶೇಷವಾಗಿರುವ ಕಡೆಗಳಲ್ಲಿನ ನಿವಾಸಿಗಳು ತಮ್ಮ ತಮ್ಮ ಅಂಗಡಿಗಳ ಅಥವಾ ಮನೆಗಳ ಮುಂಬಾಗದ ಮಾರ್ಗಗಳಲ್ಲಿ ನೀರನ್ನು ಚಿಮಿಕಿಸುವ ಏರ್ಪಾಡು ಮಾಡಿದರೆ ಎಷ್ಟೋ ಉತ್ತಮವಾಗುತ್ತಿತ್ತು!

ದಾರಿಗ.

ಅಯ್ಯಾ ಪತ್ರಾಧಿಪರೇ!

"ಎಲ್ಲಾ ಉದ್ಯೋಗಗಳಿಗಿಂತಲೂ ಉಪಾಧ್ಯಾಯವೃತ್ತಿಯು ಕುಂಬಾ ಗೌರವಾಸ್ಪದವಾದುದು" ಎಂಬ ಮಾತೇನೋ ದೊಡ್ಡ ಅಕ್ಷರಗಳಿಂದ ಕೆತ್ತಲ್ಪಟ್ಟಿದೆ. ಮಾತ್ರವಲ್ಲದೆ ಘಂಟಾಘೋಷವಾಗಿ ಸಾರಲ್ಪಡುತ್ತಿದೆ. ಆದರೇನು ಮಾಡುವುದು! ಒಂದು ಕಾಲದಲ್ಲಿ ಈ ವೃತ್ತಿಯು ಅತೀ ಮಹತ್ವದ್ದೆಂದು ಭಾವಿಸಲ್ಪಟ್ಟು, ಜನರೇನೋ ಉಪಾಧ್ಯಾಯನನ್ನು ಒಳ್ಳೆಯ ಗೌರವದಿಂದ ಕಂಡು, ಅವನಿಗೆ ಯಾವದೊಂದು ಭಾಗದಲ್ಲಿಯೂ ಚಿಂತೆಗೆ ಎಡೆ ಇಲ್ಲದಂತೆ ಕೈಗೊಟ್ಟು, "ಅವನ ಕಲ್ಯಾಣವೇ ನಮ್ಮ ಮಕ್ಕಳ ವ ದೇಶದ ಭಾವೀಕಲ್ಯಾಣದ ಸುಪಥವೆಂಬ ಕಲ್ಪನೆಯಿಂದ ಆತ್ಮಸಂತೋಷದಿಂದ ಅವನ ಶ್ರೇಯಸ್ಸನ್ನು ಹಾರೈಸುತ್ತಿದ್ದರು. ಆದರೆ ಇತ್ತಿತ್ತ ಈ ಭಾವನೆಯೇ ಮಾಯವಾಗಿ "ಉಪಾಧ್ಯಾಯರೆಂಬವರು ನಮ್ಮ ಮಕ್ಕಳಿಗೆ ವಿದ್ಯೆ ಹೇಳಿ ಕೊಡತಕ್ಕ ಆಳುಗಳು" ಎಂಬದಾಗಿ ಪರಿಗಣಿಸಲ್ಪಟ್ಟು, ಅತ್ತ ಡಿಪಾರ್ಟುಮೆಂಟಿನ ಆಧಾರವೂ ಇಲ್ಲದೆ, ಇತ್ತ ಜನರ ಸಹಾನುಭೂತಿಯೂ ಇಲ್ಲದೆ, ಉಪಾಧ್ಯಾಯರ ಜೀವಮಾನವು ಮೃತಜೀವನದಂತಿರುವುದು. ಇದು ಎಲ್ಲರ ತಿಳುವಳಿಕೆಗೂ ಬಂದ ಪ್ರತ್ಯಕ್ಷ ವಿಷಯವೇ ಸರಿ.

ಮೇಲಿನ ವಿಷಯದಿಂದ ಉಪಾಧ್ಯಾಯರ ಜೀವನೋಪಾಯಕ್ಕೆ ಸಾಕಷ್ಟು ಅನುಕೂಲತೆ ಇಲ್ಲವೆಂಬ ಸಂಗತಿಯಿಂದ ಉಪಾಧ್ಯಾಯರು ಅರೆಹೊಟ್ಟೆ, ಹರಕು ಬಟ್ಟೆಯಿಂದ ಜೀವನ ಮಾಡುವ ಹಾಗಾದರೆ, ಅವರೇನು ಮನಃಪೂರ್ವಕ ಕೆಲಸ ಮಾಡುವಂತೆ ಉತ್ತೇಜನವೇ ಇಲ್ಲವೆಂದ ಮೇಲೆ, ಮಕ್ಕಳ ಮುಂದಿನ ಏಳ್ಗೆಯ ಬುನಾದಿಗೇನೇ ಕಿಚ್ಚಿಟ್ಟಂತಾಯಿತು. ಮೇಲಾಗಿ ಡಿಪಾರ್ಟುಮೆಂಟಿನವರಿಗೇನೇ ಉಪಾಧ್ಯಾಯರ ಈ ದುರವಸ್ಥೆಯು ಹೊಳೆಯುವುದಿಲ್ಲವೆಂದ ಮೇಲೆ ಇನ್ನು ಈ ಅರಣ್ಯರೋದನಕ್ಕೆ ಕಿವಿಕೊಡುವವರ್ಯಾರು?

ಇದೆಲ್ಲ ಹಾಗಿರಲಿ! ಯಾವುದೊಂದು ಸಮಾಜದ ವ ಸಂಘದ ಕಾರ್ಯಕ್ರಮಗಳು ಸುಗಮವಾಗಬೇಕಾದರೆ, ಪರಸ್ಪರ ಒಕ್ಕಟ್ಟಿರಬೇಕು. ಅದಲ್ಲದೆ ತಾವು ಮಾಡಬಹುದಾದ ಏರ್ಪಾಡುಗಳು ಸರ್ವಸಮದೃಷ್ಟಿಯಿಂದ ಕೂಡಿದ್ದು, ನ್ಯಾಯಸಮ್ಮತವಾಗಿದ್ದರೆ, ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲದೆ ಎಲ್ಲರಿಗೂ ಸಮಾಧಾನವಾಗುವುದರಲ್ಲಿ ಸಂಶಯವಿಲ್ಲ. ಹಾಗೆ ಮಾಡದೆ, ತಮ್ಮ ಕೈಕೆಳಗಿನ ನೌಕರರ ಸಂಬಳದ ವಿಷಯದಲ್ಲಿ ಭೇದವನ್ನು ಕಲ್ಪಿಸಿದ್ದೆ ಆದರೆ, ಹಲವರ ಮನಸ್ಸು ನೊಂದು, ಕುಂದುಕೊರತೆಗಳಿಗೆ ಕಾರಣವಾಗುವುದು. ತಂದೆಗೆ ತನ್ನ ಮಕ್ಕಳೆಲ್ಲರೂ ತನ್ನ ದೃಷ್ಟಿಗೆ ಸರಿಸಮಾನರು ಎಂಬ ಭಾವನೆ ಇರಬೇಕಲ್ಲದೆ "ಒಬ್ಬನ ಮೇಲೆ" ಹೆಚ್ಚಿನ ಪ್ರೇಮ, ಇನ್ನೊಬ್ಬನ ಮೇಲೆ ಶಿಥಿಲಪ್ರೇಮ, ಬೇರೊಬ್ಬನನ್ನು ಕಂಡರೆ ಆಗದು ಎಂದಿದ್ದರೆ, ಮನೆಯು ನಾಶವನ್ನೆ ಕಟ್ಟಿಕೊಂಡಂತಾಗುವುದು. ಹಾಗೆಯೇ ಬೋರ್ಡು ನೌಕರರು ಎಂದರೆ, ಎಲ್ಲರೂ ಸರಿಸಮಾನರು, ಎಲ್ಲರಿಗೂ ನ್ಯಾಯವು ದೊರೆಯಲೇ ಬೇಕು. ಎಲ್ಲರ ಹೊಟ್ಟೆಪಾಡು ಒಂದೇ ಎಂಬ ವಿಚಾರವಿರಬೇಕು.

ಅದು ಇರಲಿ! ಈಗ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ೬ ತಾಲೂಕುಗಳು. ಈ ಆರು ತಾಲೂಕುಗಳಿಗೆ ೬ ಬೋರ್ಡುಗಳು. ಒಂದೊಂದು ಬೋರ್ಡಿನಲ್ಲಿ ಒಂದೊಂದು ಕ್ರಮ. ಇದು ಕುಂಬಾ ಶೋಚನೀಯ. ಉಪಾಧ್ಯಾಯರ ವ ಇತರ ನೌಕರರ ಸ್ಕೇಲು ವ ಸಂಬಳದ ವಿಷಯ ಒಂದೊಂದರಲ್ಲಿ ಒಂದೊಂದು ರೀತಿ. ಇದು ಡಿಸ್ಟ್ರಿಕ್ಟ ಬೋರ್ಡಿನವರ ತಿಳುವಳಿಕೆಗೆ ಬರಲಿಲ್ಲವೇನೋ? ಬಡ ನೌಕರರು ತಮಗೆ ದೊರೆಯಬಹುದಾದ ಅಲ್ಪ ಸಂಬಳದಿಂದ ಜೀವನವನ್ನು ಮಾಡುವುದು ತೀರಾ ಕಷ್ಟ. ಆದುದರಿಂದ ಉದಾರ ಮನಸ್ಸಿನಿಂದ ಆಲೋಚನೆ ಮಾಡಿ ನಮಗೆ ಯೋಗ್ಯ ಬಡತಿಯನ್ನು ಕೊಡಬೇಕೆಂದು ಅತೀ ದೀನಭಾವದಿಂದ ಬರಕೊಂಡ ಕೂಡಲೇ ಉರಿದುಬಿದ್ದರೆ ಇನ್ನು ಗತಿಯೇನು? "ನಿಮಗೆ ಕೊಟ್ಟ ಸಂಬಳವು ನ್ಯಾಯಸಮ್ಮತವಾದುದು; ಇದಕ್ಕಿಂತಲೂ ಹೆಚ್ಚಿಗೆ ಬೇಕೆಂದಿದ್ದರೆ ಹೆಚ್ಚಿಗೆ ದೊರೆಯುವಲ್ಲಿ ಹೋಗಬಹುದು" ಎಂದು ಅಪ್ಪಣೆಯಾಗುವುದಾದರೆ ನಮ್ಮ ನಮ್ಮ ಸಂಸಾರಗಳಿಗೆ [illegible] ತೋರುತ್ತದೆ. ಮಗುವು ಸಂಪನ್ನನಾದ ತನ್ನ ತಂದೆಯ ಬಳಿಗೆ ಹೋಗಿ "ಅಪ್ಪಾ, ನನಗೆ ಒಂದು ಕೋಡೆ ಆಗಬೇಕು, ಒಂದು ಅಂಗಿ ಅಗತ್ಯಬೇಕು, ಒಂದು ಪುಸ್ತಕ ಬೇಕು" ಎಂದು ತನಗೆ ಅಗತ್ಯವಾದ ವಸ್ತುಗಳನ್ನು ಕೇಳಿಕೊಂಡರೆ, "ನನ್ನಿಂದ ಇವುಗಳನ್ನು ಒದಗಿಸಿ ಕೊಡುವುದು ಅಸಾಧ್ಯ. ನಿನಗೆ ಖುಶಿಯಿದ್ದರೆ ಇಲ್ಲಿ ನಿಲ್ಲು, ಇಲ್ಲದಿದ್ದರೆ ಬೇರೆ ಯಾರದ್ದಾದರೂ ಸೇರಿಕೊಳ್ಳು" ಎಂದರೆ, ಇಲ್ಲಿ ಇನ್ನೊಬ್ಬ ತಂದೆಯನ್ನು ಅರಸು ಎಂಬರ್ಥವೆ? ಈ ಉತ್ತರವು [illegible] ಕೂಡ ಇತರರಂತೆ ಮಕ್ಕಳ ತಂದೆಯೆಂಬ ಗೌರವವುಳ್ಳಂಥವನಿಗೆ ಈ ಉತ್ತರವು ಯೋಗ್ಯವೋ?

ಈ ವರ್ಷದ ಡಿಸ್ಟ್ರಿಕ್ಟ ಬೋರ್ಡಿನ ಪರಿಶೋಧನೆಯಲ್ಲಿ ಮಂಗಳೂರು, ಉಡುಪಿ, ಕಾಸರಗೋಡು ಈ ಮೂರು ಬೋರ್ಡುಗಳು ಒಂದನೆಯ ತರಗತಿಯ ತಾಲೂಕು ಬೋರ್ಡುಗಳೆಂದು ಗೊತ್ತುಮಾಡಲ್ಪಟ್ಟವೆಯಂತೆ. ಎಂದರೆ ಈ ಮೂರು ಬೋರ್ಡುಗಳು ಒಳ್ಳೇ ಸಂಪನ್ನವಾಗಿವೆ ಎಂಬ ಅಭಿಪ್ರಾಯವು. ಈ ಮೂರರಲ್ಲಿ ಉಡುಪಿ ಮತ್ತು ಕಾಸರಗೋಡು ಬೋರ್ಡುಗಳು ತಮ್ಮ ಕೆಳನೌಕರರಿಗೆ ಒಳ್ಳೇ ಪರಿಮಿತಿಯ ಸಂಬಳದ ದರವನ್ನು ದೀರ್ಘಾಲೋಚಿಸುವ ವರೆಗೆ ಶೇಕಡಾ ೫೦ರ ದರದಂತೆ ಭತ್ಯೆಯನ್ನು ಕೊಡುತ್ತವೆ. ಬರೇ ಬಡ ತಾಲೂಕು ಬೋರ್ಡುಗಳೆಂದು ಗೊತ್ತುಮಾಡಲ್ಪಟ್ಟ ಕುಂದಾಪುರ, ಕಾರ್ಕಳ ಬೋರ್ಡುಗಳು ಕೂಡಾ ಸರ್ವಿಸ್ ಎಣಿಸಿ ಯಾ ಎಲೌವೆನ್ಸ್ ಮೂಲಕ ಸಹಾಯ ಮಾಡುತ್ತವೆ ಎಂಬುದು ನಿಜವರ್ತಮಾನ. ಹಾಗಾದರೆ, ಒಂದನೇಯ ತರಗತಿಯ ಅದರಲ್ಲೂ ನಮ್ಮ ಜಿಲ್ಲೆಯ ಪ್ರಧಾನಪುರದ ಮಂಗಳೂರು ತಾಲೂಕು ಬೋರ್ಡು ಮಾತ್ರ ಹೀಗೆ ಗಟ್ಟಿ ಮನಸ್ಸಿನಿಂದ ಇರುವುದೆಂದರೆ ಕುಂಬಾ ದುಃಖಕರ. ಆದುದರಿಂದ ವಯೋವೃದ್ಧರೂ, ಜ್ಞಾನವೃದ್ಧರೂ, ನ್ಯಾಯಶೀಲರೂ ಆದ ನಮ್ಮ ದಯಾಳು ಪ್ರೆಸಿಡೆಂಟರವರೂ, ಬೋರ್ಡಿನ ಮೆಂಬರರೂ ಈ ಬಡ ನೌಕರರ ಗೋಳನ್ನು ತಮ್ಮ ದಿವ್ಯ ಚಿತ್ತಕ್ಕೆ ತಂದುಕೊಂಡು ಯೋಗ್ಯ ಪರಿಮಿತಿಯ ಸ್ಕೇಲು ಅಥವಾ ಸಂಬಳವನ್ನು ಗೊತ್ತುಹಚ್ಚಿ, ಆ ವರೆಗೆ ಕಳೆದ ವರುಷದಂತೆಯೇ ಹಿಂದಿನ ಸಂಬಳಕ್ಕೆ ಶೇಕಡಾ ೫೦ರಂತೆ ಭತ್ಯೆಯನ್ನು ಕೊಟ್ಟು, ಬಡವರ್ಗದವರ ಶ್ರೇಯೋಕಾಂಕ್ಷಿಗಳಾಗಿ, ಉಳಿದ ಬೋರ್ಡುಗಳಿಗೆ ಮಾದರಿಯಾಗಿ ಚಿರಕೀರ್ತಿಗೆ ಪಾತ್ರರಾಗಬೇಕಾಗಿ ಅತೀದೀನಭಾವದಿಂದ ಪ್ರಾರ್ಥಿಸುವ,

ಮೂಳ್ಕಿ, } ಮಂಗಳೂರು ತಾಲೂಕು ಬೋರ್ಡಿನ
ತಾ. ೨೧-೧೧-'೨೨ } ಬಡ ನೌಕರ.

ಶಿಕ್ಷಣ ಪರಿಷತ್ತಿನ ವರದಿಯು.

(ವಾರ್ತಾ ಪ್ರಸಾರಕ ಸಂಘ ಹುಬ್ಬಳ್ಳಿ)

ಮೊನ್ನೆ ಮೊನ್ನೆ ಆಗಿಹೋದ ಕರ್ನಾಟಕ ಪ್ರಾಂತಿಕ ಪ್ರಥಮ ಶಿಕ್ಷಣ ಪರಿಷತ್ತಿನ ಬಗ್ಗೆ ಸ್ವಲ್ಪ ವಿಚಾರಮಾಡಿ ನೋಡಿದರೆ ಅದು ಅನೇಕ ದೃಷ್ಟಿಯಿಂದ ಮಹತ್ವದ್ದಿತ್ತೆಂದು ಮನವರಿಕೆಯಾಗದೆ ಇರದು. ಪರಿಷತ್ತು ಕರೆದ ಉದ್ದೇಶವು ಕೇವಲ ಅಸಹಕಾರಿಗಳ ಮತವನ್ನಷ್ಟೇ ನಿರ್ಧರಿಸುವದಿರದೆ ಅಖಿಲ ಜನಾಂಗಕ್ಕೆ ಸಮ್ಮತವಾದಂಥ ಮತ್ತು ಪೋಷಕವಾದಂಥ ಶಿಕ್ಷಣದ ಧೋರಣವನ್ನು ನಿಶ್ಚಯಿಸುವುದಾಗಿತ್ತು. ಮುಂಚಿತವಾಗಿಯೇ ಪ್ರಸಿದ್ಧಮಾಡಿದ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಶ್ನಮಾಲಿಕೆಗೆ ಸಹಕಾರಿಗಳಿಂದಲೂ ಅಸಹಕಾರಿಗಳಿಂದಲೂ ಇತರ ಗೃಹಸ್ಥರಿಂದಲೂ ಉತ್ತರಗಳು ಬಂದವು. ಮತ್ತು ಇವೆಲ್ಲವುಗಳ ಯೋಗ್ಯ ವಿಚಾರಾನಂತರವೇ ಠರಾವುಗಳ ಪೂರ್ವ ತಯಾರಿಯು ಯೋಜಿಸಲ್ಪಟ್ಟಿತ್ತೆಂಬುದು ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿದೆ.

ಕರ್ನಾಟಕದ ನಾಲ್ಕು ದಿಕ್ಕಿನಿಂದಲೂ ವಿದ್ಯಾಭಿಮಾನಿಗಳು ಬಂದು ತಮ್ಮ ತಮ್ಮ ಮತಪ್ರದರ್ಶನ ಮಾಡಿ ಐಕ್ಯಮತ್ಯದಿಂದ ಶಿಕ್ಷಣದ ಧೋರಣವನ್ನು ನಿಶ್ಚಯಿಸಿದ್ದರಿಂದ ಈ ಧೋರಣವು ಕೇವಲ ವಿಶಿಷ್ಟಭಾಗದವರದೆಂದೆನಿಸದೆ, ಅಖಿಲ ಕರ್ನಾಟಕದ್ದೆಂದೆನಿಸಿದಂತಾಗಿ ಪರಿಷತ್ತಿನ "ಉದ್ದೇಶವು" ಚೆನ್ನಾಗಿ ಕೈಗೂಡಿತೆಂಬುದು ಮೊದಲನೇ ಮಹತ್ಕಾರ್ಯವು. ಅನೇಕ ಕಾರ್ಯಗಳಿದ್ದರೂ ಅವನ್ನು ಬದಿಗೊತ್ತಿ ಮಹಾತ್ಮಾ ಗಾಂಧಿಯವರ ಬಲಹಸ್ತದಂತಿರುವ ಕಾಕಾ ಸಾಹೇಬ ಕಾಲೇಲಕರ ಇವರು ಅಧ್ಯಕ್ಷರಾದದ್ದು ವಿದ್ವನ್ಮಣಿಗಳಾದಂಥ ಪಂಡಿತ ತಾರಾನಾಥ ಶ್ರೀ ಮಂಜಪ್ಪಾ ಹರ್ಡೇಕರ, ಮತ್ತು ಶ್ರೀ ಸೆಟ್ಲೂರರಂಥ ಮಹನೀಯರು ಮಾರ್ಗದರ್ಶಕರಾಗಿ ಲಭಿಸಿದ್ದು, ಕರ್ನಾಟಕಸ್ಥರ ವಿಶೇಷತಃ ಹುಬ್ಬಳ್ಳಿ ನಾಗರಿಕರ ಭಾಗ್ಯೋದಯವೇ ಸರಿ. ಅದರೊಳಗೂ ಲೋಕೈಕ ಗಾಯಕರಾದಂಥ ಕುಮಾರ ಮನೋಹರ ಬರ್ವೆ ಇವರು ಗಾಯನದ ಮೇಲಿನ ಠರಾವನ್ನು ಮುಂದೆ ತಂದು ಸಶಾಸ್ತ್ರಸಂಗೀತ ಪ್ರಯೋಗವನ್ನು ಮಾಡಿ ತೋರಿಸಿದ್ದು ಪರಿಷತ್ತಿಗೆ ಅದ್ವಿತೀಯ ವಾದಶೋಭೆಯನ್ನುಂಟುಮಾಡಿತು.

ಬೇರೆ ಕಡೆಯಿಂದ ಬಂದ ಪ್ರಶ್ನೆ ಮಾಲಿಕೆಯ ಉತ್ತರಗಳು ವಿಸ್ತಾರವಾಗಿ ಚರ್ಚಿಸಲ್ಪಟ್ಟವು. ಪರಿಷತ್ತಿನ ಮೊದಲನೇ ದಿವಸವೆಲ್ಲ ಸ್ವಾಗತಮಂಡಲದ ಅಧ್ಯಕ್ಷರ ಮತ್ತು ಪರಿಷತ್ತಿನ ಅಧ್ಯಕ್ಷರ ಭಾಷಣದಲ್ಲಿಯೇ ಹೋಯಿತು. ಅಧ್ಯಕ್ಷರು ಹಿಂದೀ ಭಾಷೆಯಲ್ಲಿ ಮಾಡಿದ ಭಾಷಣವನ್ನು ಪಂಡಿತ ತಾರಾನಾಥರು ಕನ್ನಡಿಸಿ ಹೇಳಿದರು. "ಇಂದಿನ ವರೆಗೆ ಶಿಕ್ಷಣದ ವಿಷಯಕ್ಕೆ ನಾನು ಕೇಳಿದ ಎಲ್ಲ ಭಾಷಣಗಳಿಗಿಂತ ಇಂದಿನ ಅಧ್ಯಕ್ಷರ ಭಾಷಣವು ಬಹು ಶ್ರೇಷ್ಠವಾದದ್ದು" ಎಂದು ತಾರಾನಾಥರಾಯರು ಅಂದಿನ ರಾತ್ರಿ ತೆಗೆದ ಉದ್ಗಾರದ ಮೇಲಿಂದಲೇ ಅಧ್ಯಕ್ಷರ ಭಾಷಣದ ಮಹತ್ವವನ್ನು ಇತರರು ಊಹಿಸಬಹುದು.

ಅದೇ ದಿವಸವೇ ಎಲ್ಲ ಪ್ರತಿನಿಧಿಗಳು ಕೂಡಿ ಏಳು ಜನ ಸದ್ಗೃಹಸ್ಥರದೊಂದು ಮಂಡಲವನ್ನು ಸ್ಥಾಪಿಸಿ ಅವರಿಗೆ ಪರಿಷತ್ತಿನ ಮುಂದೆ ಬರತಕ್ಕ ಠರಾವುಗಳ ಯೋಗ್ಯ ವಿಚಾರಣೆಯನ್ನು ಮಾಡುವ ಕೆಲಸವು ಒಪ್ಪಿಸಲ್ಪಟ್ಟಿತು. ಮರುದಿನ ಪ್ರಾತಃಕಾಲದಿಂದ ಈ ಮಂಡಲದವರು ಕೆಲವು ಚೀಟಿಗಳ ಮುಖಾಂತರವಾಗಿ ಬಂದ ಠರಾವುಗಳನ್ನು ಆಯಾ ಗೃಹಸ್ಥರ ಕೂಡ ಚರ್ಚಿಸಿ ಕೆಲವು ಠರಾವುಗಳನ್ನು ಸಿಫಾರಸುಮಾಡಿದರು. ಮತ್ತು ಅವೇ ಠರಾವುಗಳು ಪರಿಷತ್ತಿನಲ್ಲಿ ಸರ್ವಾನುಮತದಿಂದ ಪಾಸಾದವು. ಈ ಠರಾವುಗಳಲ್ಲಿ ಗಾಯನವು ಶಾಲೆಗಳಲ್ಲಿ ಅವಶ್ಯ ವಿಷಯಗಳಲ್ಲಿ ಒಂದಾಗಿರಬೇಕು. ಇನ್ನು ಮುಂದೆ ಶಿಕ್ಷಣಕ್ಕೆ ಹಳ್ಳಿಗಳನ್ನೇ ಮುಖ್ಯಸ್ಥಾನಗಳನ್ನಾಗಿ ಮಾಡಬೇಕು, ಆಶ್ರಮಗಳನ್ನು ಸ್ಥಾಪಿಸಿ ಬ್ರಹ್ಮಚಾರಿಗಳನ್ನು ತಯಾರಿಸಬೇಕು, ಎಂಬ ಠರಾವುಗಳು ಅತ್ಯಂತ ಮಹತ್ವದ್ದಾಗಿರುತ್ತವೆ. ಧಾರವಾಡದ ರಾಷ್ಟ್ರೀಯ ಶಾಲೆಯ ಮುಖ್ಯಾಧ್ಯಾಪಕರಾದ ದೇಸಾಯಿ ಇವರು ಹಳ್ಳಿಗಳಲ್ಲಿಯ ಶಿಕ್ಷಣ ವಿಷಯಕ್ಕೆ ೫ ಸದ್ಗೃಹಸ್ಥರದೊಂದು ಮಂಡಲವನ್ನು ಕರೆದು ಅವರ ಅನುಮತಿಯಿಂದ ಒಂದು ಯೋಜನೆಯನ್ನು ತಯಾರಿಸತಕ್ಕದ್ದೆಂದು ಠರಾಯಿಸಿರುತ್ತದೆ. ಅದರಂತೆ ಕೆಲವು ಮೆಂಬರರು ತಮ್ಮ ಮತವನ್ನಾದರೂ ಲೇಖಿಯಿಂದ ಕಳಿಸಿದ್ದಾರೆ.

ಈ ಪರಿಷತ್ತಿಗೆ ಬಂದ ಪ್ರತಿನಿಧಿಗಳು ತಮ್ಮ ತಮ್ಮ ಸ್ಥಳಕ್ಕೆ ತಿರುಗಿ ಹೋದ ಕೂಡಲೆ ಈ ಪರಿಷತ್ತಿನ ಠರಾವುಗಳನ್ನು ಅಮಲಿನಲ್ಲಿ ತರುತ್ತಾರೆಂಬುದು ನಿರ್ವಿವಾದವಾದ ಮಾತು. ಅವುಗಳಲ್ಲಿ ಎಷ್ಟೋ ಠರಾವುಗಳು ಹೊಸವಾಗಿ ರೂಢಿಯಲ್ಲಿ ಸೇರಿಸಬೇಕಾದ್ದರಿಂದ ಎಷ್ಟೋ ಕಡೆಗೆ ಅನೇಕ ಅಡಚಣೆಗಳು ಬರಬಹುದು. ಆಯಾ ಪ್ರತಿನಿಧಿಗಳು ತಮ್ಮ ತಮ್ಮ ಅನುಭವಗಳನ್ನು ವೃತ್ತಪತ್ರದ್ವಾರದಿಂದ ಆಗಾಗ್ಗೆ ಪ್ರಸಿದ್ಧಮಾಡುತ್ತಿದ್ದರೆ ಇತರರಿಗೆ ಅನುಕರಣಮಾಡಲಿಕ್ಕೆ ಸಹಾಯವಾಗುವುದು.

ವಿದೇಶ ವರ್ತಮಾನ.

ಬ್ರಿಟನಿನ ಪಾರ್ಲಿಮೆಂಟು:—ಪಾರ್ಲಿಮೆಂಟಿನ ಹೊಸ ಮೆಂಬರರ ಚುನಾವಣೆಯು ಮುಗಿಯಿತು. ಕನ್ಸರವೇಟಿವ್ ಪಕ್ಷವೇ ಜಯಹೊಂದಿದೆ. ಕನ್ಸರವೇಟಿವ್ ಪಕ್ಷದ ಮೆಂಬರರು ೩೪೦, ಲೇಬರ ಪಕ್ಷದವರು ೧೪೧, ಲಿಬರಲ್ಸ ೬೦, ನೇಶನಲ್ ಲಿಬರಲ್ಸ ೫೨, ಇನ್‌ಡಿಪೆಂಡೆಂಟ್ಸ ೮. ಹೊಸಪಾರ್ಲಿಮೆಂಟಿನ ಮೆಂಬರರ ಸಭೆಯು ಬರುವ ಸೋಮವಾರ ಪ್ರಥಮ ಸಲ ಕೂಡುವುದು. ಪಾರ್ಲಿಮೆಂಟಿನ ಮೀಟಿಂಗು ತಾ. ೨೩ಕ್ಕೆ ಇಟ್ಟಿದೆ. ಪ್ರಥಮಸಲ ಕೂಡುವ ಪಾರ್ಲಿಮೆಂಟು ಹತ್ತು ದಿವಸಗಳ ಪರಿಯಂತ ತಮ್ಮ ಮೀಟಿಂಗನ್ನು ಜರಗಿಸಿ ಪ್ರಥಮದಲ್ಲಿ ಐರಿಶ್ ಫ್ರಿಸ್ಟೇಟಿನ ಇತ್ಯರ್ಥ ಮಾಡುವುದು. ಮಿ| ರಮ್‌ಸೇ ಮೆಕ್‌ಡೊನಲ್ಡ ಇವರು ಲೇಬರ ಪಂಗಡದ ಅಧಿನಾಯಕರಾಗಿರುವರು.

ಇಂಗ್ಲೆಂಡಿನ ಪಾರ್ಲಿಮೆಂಟಿನ ಮೆಂಬರರಾಗಿ ಆರಿಸಲ್ಪಟ್ಟ ಹಿಂದೂಸ್ತಾನದ ಮಿ| ಯಸ್. ಡಿ. ಸಕಲತ್‌ವಾಲಾ ಇವರು ತಮ್ಮ ತಾಯಿಯ ಕಡೆಯಿಂದ ಮುಂಬಯಿಯ ಸುಪ್ರಸಿದ್ಧ ಟಾಟಾ ಕುಟುಂಬದ ಸಂಬಂಧಿಕರು. ಇವರು ೧೮೭೪ರಲ್ಲಿ ಜನಿಸಿದರು. ೧೯೦೨ರಲ್ಲಿ ಇವರು ಟಾಟಾ ಕಂಪೆನಿಯವರೊಡನೆ ಕೂಡಿದರು. ೧೯೦೫ರಲ್ಲಿ ಇವರು ಇಂಗ್ಲೆಂಡಿಗೆ ಹೋಗಿ ಕಳೆದ ೧೭ ವರುಷಗಳಿಂದ ಅಲ್ಲಿರುವರು. ಇವರು ಈಗ ಲಂಡನಿನಲ್ಲಿರುವ ಟಾಟಾ ಲಿಮಿಟೆಡ್ ಸ್ಟೀಲ್ಸ್ ಡಿಪಾರ್ಟುಮೆಂಟಿನ ಮೆನೇಜರರಾಗಿರುವರು. ಸಕಲತ್ ವಾಲರು ಇಂಗ್ಲೆಂಡಿನ ಒಬ್ಬ ಹೆಂಗಸನ್ನು ಮದುವೆಯಾಗಿದ್ದಾರೆ. ಈ ಹೆಂಗಸಿಗೆ ಐದು ಮಂದಿ ಮಕ್ಕಳು ಹುಟ್ಟಿರುವವು.

ಮದ್ಯಪಾನದ ವೆಚ್ಚ:—ಅಮೇರಿಕದಲ್ಲಿ ಮದ್ಯಪಾನ ನಿಷೇಧವಾದ್ದರಿಂದ ವರುಷಕ್ಕೆ ೬೦ ಕೋಟಿ ಪೌನು ಪ್ರಜೆಗಳಿಗೆ ಲಾಭದಾಯಕವಾಗುತ್ತದಂತೆ. ಗ್ರೇಟ ಬ್ರಿಟನ್ನಿನ ಪ್ರಜಾ ಸಂಖ್ಯೆಯು ೪ ಕೋಟಿ, ಇವರಿಗೆ ೩೦ ಕೋಟಿ ಹಣವು ಮದಿರಾಪಾನಕ್ಕೆ ವೆಚ್ಚವಾಗುತ್ತದೆ.

ಜರ್ಮನಿ ದೇಶದ ನಾಯಿಯ ಸಾಮರ್ಥ್ಯ:—ಜರ್ಮನಿಯ ಲೋಲಾ ಎಂಬ ಒಂದು ನಾಯಿಯು ವಿಚಿತ್ರವಾದ ಕೆಲಸಗಳನ್ನು ಮಾಡುತ್ತದೆ. ತನ್ನ ಕಾಲಿನಿಂದ ಸಂಜ್ಞೆಮಾಡಿ ಲೆಕ್ಕವನ್ನು ಮಾಡುವುದು, ಗಂಟೆಯನ್ನು ಹೇಳುವುದು, ಮುಂದೆ ಬರುವ ವಾಯುಗುಣವನ್ನು ತಿಳಿಸುವುದು, ಪ್ರಶ್ನೆಗಳಿಗೆ ಉತ್ತರವನ್ನು ಹೇಳುವುದು, ಕಾಗದ ಪತ್ರಗಳನ್ನು ಸೂಚಿಸಿ ಬರೆಸುವುದು. [ಸಾಕ್ಷಿ]

ತುರ್ಕಿಯ ಗೊಂದಲ:—ಈಗಿನ ಸುಲ್ತಾನರಿಗೆ ಅಂಗೋರಾ ಪ್ರಭುತ್ವದವರು ರಾಜ್ಯಪದವಿಯನ್ನು ಬಿಟ್ಟುಬಿಡಲು ಸೂಚಿಸಿದ್ದರಷ್ಟೆ! ಅಲ್ಲದೆ ಈ ಅಂಗೋರಾ ಪ್ರಭುತ್ವದವರು ಪೂರ್ವದ ಸುಲ್ತಾನ ಮಂತ್ರಿಮಂಡಲದವರಿಗೆಲ್ಲಾ ತಮ್ಮ ತಮ್ಮ ಪದವಿಗಳಿಗೆ ರಾಜಿನಾಮೆಯನ್ನು ಕೊಡಬೇಕಾಗಿ ದಸ್ತ್ಯಾಯಮಾಡಿದ್ದಾರೆ. ಈ ಆಂತರಿಕ ವಿವಾದವನ್ನು ತುರ್ಕರೇ ಇತ್ಯರ್ಥಪಡಿಸಿಕೊಳ್ಳಬೇಕಾದ ಸಂಗತಿಯಾಗಿದೆ. ಆಂತರಿಕ ವಿವಾದದ ಈ ಸಂಗತಿಯಲ್ಲಿ ತಾವು ಪ್ರವೇಶಿಸುವುದಿಲ್ಲವೆಂದು ಫ್ರೆಂಚರು ಉತ್ತರ ಕೊಟ್ಟಿರುವರು. ಸುಲ್ತಾನರು ತಮ್ಮ ಜೀವವನ್ನೇ ಉಳಿಸಿಕೊಳ್ಳುವುದು ಬಹಳ ಕಷ್ಟಕರವಾಗಿ ಕಂಡು ಬಂದುದರಿಂದ ಬ್ರಿಟಿಷರ ಮರೆಹೊಕ್ಕು ಮಾಲ್ಟಾಕ್ಕೆ ಹೋಗಿರುವರು.

ತುರ್ಕಿಯ ಸುಲ್ತಾನರು ಮಾಲ್ಟಾಕ್ಕೆ ಹೋಗುವ ಮೊದಲು ತಮ್ಮ ಪತ್ನಿಯವರನ್ನೂ ಕುಟುಂಬದವರನ್ನೂ ಜನರಲ್ ಹೆರಿಂಗ್ಟನ್ ಇವರ ಸ್ವಾಧೀನಕ್ಕೆ ಒಪ್ಪಿಸಿರುವರು. ತುರ್ಕಿಯ ಸುಲ್ತಾನರು ದೇಶವನ್ನು ಬಿಟ್ಟ ಕೂಡಲೇ ಅಲ್ಲಿಯ ರಾಷ್ಟ್ರೀಯ ಪಕ್ಷದವರು ನೇಶನಲ್ ಎಸೆಂಬ್ಲಿಯನ್ನು ಸೇರಿಸಿ ಯುವರಾಜನಾದ ಅಬ್ದುಲ್ ಮಜೀದ್ ಇವರನ್ನು ಕಲೀಫರಾಗಿ ಆರಿಸಿರುತ್ತಾರೆ.

ಈಗ ತುರ್ಕಿಯ ಕಲೀಫರಾಗಿ ಆರಿಸಲ್ಪಟ್ಟ ಅಬ್ದುಲ್ ಮಜೀದರಿಗೆ ೫೪ ವರ್ಷ ಪ್ರಾಯ. ಇವರು ಸುಲ್ತಾನ್ ಅಬ್ದುಲ್ ಅಜೀಜರ ಪುತ್ರರು. ಇವರು ಹೆಚ್ಚಿನ ವಿದ್ಯಾಭ್ಯಾಸವನ್ನು ಹೊಂದಿರುವರು. ಸಂಗೀತದಲ್ಲಿಯೂ ಚಿತ್ರಪಟಗಳನ್ನು ಬಿಡಿಸುವುದರಲ್ಲಿಯೂ ಇವರಿಗೆ ಹೆಚ್ಚಿನ ಇಷ್ಟ.

ಮಾರ್‌ಕ್ವಿಸ್ ಕ್ರ್ಯೂ:—ಲೋರ್ಡ ಹಾರ್ಡಿಂಜರ ಬದಲಿಗೆ ಮಾರ್‌ಕ್ವಿಸ್ ಕ್ರ್ಯೂ ಇವರು ಪೆರಿಸ್ಸಿನ ಬ್ರಿಟಿಷ ರಾಯಭಾರಿಗಳಾಗಿ ನೇಮಕಪಟ್ಟಿರುವರು.

ಭೂಕಂಪ:—ಚಿಲಿಯಾ ದೇಶದಲ್ಲಿ ಉಂಟಾದ ಭಯಂಕರ ಭೂಕಂಪದ ಬಿಸಿಯಿಂದ ಮಡಿದ ೬೦೦ ಹೆಣಗಳು ಈ ವರೆಗೆ ಸಿಕ್ಕಿವೆ. ಸುಮಾರು ೧೨೦೦ ಮಂದಿ ಸತ್ತಿರಬೇಕೆಂದೂ ೨೦೦೦ ಮಂದಿಗಳಿಗೆ ಗಾಯ ಆಗಿರಬೇಕೆಂದೂ ಈ ವರೆಗಿನ ಅಂದಾಜು. ನಷ್ಟವೆಷ್ಟೋ ಇನ್ನೂ ಗೊತ್ತಾಗಲಿಲ್ಲ.

ಜಾಮೀನಿಗಿಂತ ಸೆರೆಮನೆಯೇ ಸೌಖ್ಯ:—ಐರ್ಲೆಂಡದ ಗತಿಸಿದ ವೀರ ಮಿ| ಮೆಕ್‌ಸ್ವಿನಿಯವರ ಪತ್ನಿಯವರು ಬೇರೆ ೬ ಮಂದಿ ಹೆಂಗಸರೊಡನೆ ಅಮೇರಿಕದಲ್ಲಿ ತಮ್ಮ ಆಯರಿಶ್ ಪ್ರಜಾಧಿಪತ್ಯವನ್ನು ಮನ್ನಿಸಿರೆಂದು ಕೇಳಲಿಕ್ಕೂ ಐರ್ಲೆಂಡದ ಸೆರೆ ಮನೆಯಲ್ಲಿದ್ದ ತನ್ನ ಮಗಳನ್ನು ಬಿಡಿರೆಂದೂ ಬ್ರಿಟಿಷ ರಾಯಭಾರಿಗಳನ್ನು ಕೇಳಿಕೊಳ್ಳಲಿಕ್ಕೆ ಹೋದಾಗ ಅವರನ್ನೆಲ್ಲಾ ಸೆರೆಹಿಡಿದರು. ಆ ವೀರ ರಮಣಿಯರು ಜಾಮೀನುಕೊಟ್ಟು ಬಿಡುಗಡೆ ಹೊಂದುವುದಕ್ಕಿಂತ ಸೆರೆ ಮನೆಯಲ್ಲಿರುವುದೇ ಲೇಸೆಂದು ಸೆರೆಮನೆಯನ್ನು ಸೇರಿದರು.

ಒಳದೇಶ ವರ್ತಮಾನ.

ಠರಾವು ಮಂಜೂರಾಗಲಿಲ್ಲ:—ಹೆಣ್ಣುಮಕ್ಕಳ ೧೪ನೇ ವರುಷದ ವಯಸ್ಸಿಗಿಂತ ಮುಂಚೆ ಫಲಶೋಭನವನ್ನು ಮಾಡಕೂಡದೆಂದೂ ಹಾಗೆ ಮಾಡಿದಲ್ಲಿ ತಕ್ಕ ಶಿಕ್ಷೆ ವಿಧಿಸಬೇಕೆಂದೂ ನಿರ್ಬಂಧಪಡಿಸುವ ಒಂದು ಬಿಲ್ಲನ್ನು ಮಾಡುವ ಠರಾವು [illegible] ಎಂಬವರು ಡೆಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಸೂಚನೆ ತಂದರು. ಆದರೆ ಈ ಕಾಯಿದೆಯು ಜನಾಂಗಕ್ಕೆ ಸಂಬಂಧವಿಲ್ಲವೆಂದು ಅದರಲ್ಲಿ ಹಾಕಬೇಕೆಂದು ಸರ್. [illegible] ಹೇಳಿದರು. ಅದರಂತೆ ಠರಾವು ಮರುಕಳ್ಸಿ ಮಾಡಲ್ಪಟ್ಟು ಕೌನ್ಸಿಲಿನ ಮುಂದೆ ಬಂದರೂ ನಾಪಾಸಾಯಿತು. (ಅಕಾಲದಲ್ಲಿ ಪೂರ್ಣ ಬೆಳವಣಿಗೆಯಾಗದಿರುವಾಗಲೇ ಹೆಣ್ಣು ಮಕ್ಕಳಿಗೆ ತಾಯಿಗಳಾಗುವ ಪ್ರಸಂಗ ಬರುತ್ತಿದ್ದುದರಿಂದ ಪ್ರತಿ ವರುಷ ಹಿಂದೂಸ್ಥಾನದಲ್ಲಿ ೩.೨ ಲಕ್ಷ ಇಂಥ ಬಾಲಮಾತೆಯರು ಮಡಿಯುತ್ತಿರುವರೆಂದು ತಿಳಿದುಬರುತ್ತದೆ. (ಕರ್ಮವೀರ.)

ಬಾವಟೆಗಳಿಗೆ ಬಹುಮಾನ:—[illegible] ನಡೆದಿರುವ ಸತ್ಯಾಗ್ರಹ ಯುದ್ಧದ ವಿಷಯವಾಗಿ ತೆಲುಗಿನಲ್ಲಿಯಾಗಲೀ ಕನ್ನಡದಲ್ಲಿಯಾಗಲೀ ಉತ್ತಮವಾದ ಬಾವಟೆಗಳನ್ನು ರಚಿಸಿದವರಿಗೆ ಬಳ್ಳಾರಿಯ ಪ್ರಸಿದ್ಧ ವಕೀಲರಾದ ಶ್ರೀಯುತ ರಾಘವಾಚಾರ್ಯ ಇವರು ಐವತ್ತು ರೂಪಾಯಿಗಳನ್ನು ಬಹುಮಾನಕೊಡುವವರಾಗಿದ್ದಾರೆ. ಬಾವಟೆಗಳಲ್ಲಿ ಅಸಹಕಾರದ ಭಾಗು ಈಗ ನಡೆದಿರುವ ಸತ್ಯಾಗ್ರಹ ಯುದ್ಧದ ತತ್ವ ವಿವೇಚನೆ, ಅಕಾಲಿ ಜನರ ಉದ್ದೇಶ, ಅವರ ಗೋಳಾಟ ಇವೇ ಮುಂತಾದವುಗಳು [illegible]ವಾಗಿ ವರ್ಣಿತವಾಗಿರಬೇಕು. ಬಾವಟೆಗಳನ್ನು ವೆಂಕಟೇಶ ಭೀಮರಾವ್ ಆಲೂರ ಸಂಪಾದಕ ಕರ್ಮವೀರ ಇವರಿಗೆ ಕಳುಹಿಸಬೇಕು.

ಬಡವರಿಗೆ ನೌಕರಿ:—ನೀಲಗಿರಿ ಬೆಟ್ಟದ ಮೇಲೆ ಮುನ್ಸಿಪಾಲಿಟಿಯವರು [illegible] ರೋಗಾದಿಗಳಿಗೆ [illegible] ಅವರುಗಳಿಗೆಲ್ಲಾ [illegible] ಮನೆಗಳನ್ನು ಆರೋಗ್ಯಕರವಾಗಿ ಕಟ್ಟಿಸಿ ಕೊಡಬೇಕೆಂದೂ ಆ ಹಣವನ್ನು ಅವರಿಂದ ಅನೇಕ ವರುಷಗಳಲ್ಲಿ ಕಿಸ್ತುಗಳ ಪ್ರಕಾರ ವಸೂಲುಮಾಡಿಕೊಳ್ಳಬೇಕೆಂದೂ ತೀರ್ಮಾನಮಾಡಿದ್ದಾರೆ.

ಧರ್ಮಾರ್ಥ ಶಿಕ್ಷಣ:—ಪದುಕೋಟೆ ಸಂಸ್ಥಾನಕ್ಕೆ ಸೇರಿದ ರಾಮಚಂದ್ರಪುರದಲ್ಲಿ ಮಿ| ಟಿ. ಎಸ್. ನಾಗಪ್ಪ ಚೆಟ್ಟಿಯಾರ್ ಎಂಬವರು ತಮ್ಮ ಧರ್ಮ ಪಾಠಶಾಲೆಯಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯ ಕ್ಲಾಸಿನ ತನಕ ವಿದ್ಯಾರ್ಥಿಗಳಿಗೆ ಸಂಬಳವಿಲ್ಲದೆ ಮುಫತ್ತಾಗಿ ಪಾಠಗಳನ್ನು ಕಲಿಸುತ್ತಿದ್ದಾರೆ. ಈ ಶಾಲೆಗೆ ಸರಕಾರದವರಿಂದ ವರುಷಕ್ಕೆ ರೂ. ೬೫೦೦ ಬರುತ್ತದಾದರೂ ಶಾಲೆಯನ್ನು ಸ್ಥಾಪಿಸಿದ ಆ ಗೃಹಸ್ಥರು ರೂ. ೧೫೪೦೦ ಖರ್ಚು ಮಾಡುವರು.

ಬೊಲಶೆವಿಕರು:—ಬೊಲಶೆವಿಕರ ಮತಪ್ರಚಾರ ಮಾಡುವುದಕ್ಕೆ ಯುಕ್ತಿ ಸುತ್ತಿದ್ದ ನೀಲಕಂಠ ಬ್ರಹ್ಮಚಾರಿ ಇವರಿಗೆ ೩ ವರುಷದ ಶಿಕ್ಷೆಯಾಗಿದೆ

ಲಾಹೋರ್:—ಟ್ರಿಬ್ಯೂನ್ ಪತ್ರದ ಸುದ್ದಿಗಾರನು ಕೆಳಗಿನ ವರ್ತಮಾನವನ್ನು ತಿಳಿಸುವನು. ಒಬ್ಬ ಒನರರಿ ಮೆಜಿಸ್ಟ್ರೇಟರು ತಮ್ಮ ನಾಲ್ಕು ಬೈಠಕುಗಳಲ್ಲಿ ಒಟ್ಟು ಸರಕಾರಕ್ಕೆ ರೂ. ೧೫,೬೦೦ಗಳನ್ನು ಸಂಗ್ರಹಿಸಿಕೊಟ್ಟರು. ಹೇಗೆಂದರೆ ೨೭ನೇ ಸಪ್ಟಂಬರಕ್ಕೆ ೪೦ ಅಕಾಲಿ ಸ್ತ್ರೀಗಳಿಗೆ ಕೂಡಿ ರೂ. ೧೬,೦೦೦ ದಂಡ ಹೊರಿಸಿದರು. ೪ನೇ ಅಕ್ಟೋಬರಕ್ಕೆ ೫೦ ಜನ ಅಕಾಲಿಗಳಿಗೆ ರೂ. ೨೩,೦೦೦ ದಂಡ ವಿಧಿಸಿದರು. ೯ನೇ ಒಕ್ಟೋಬರಕ್ಕೆ ೪ ಜನರ ಎರಡು ಭಾಗಗಳಲ್ಲಿ ಪ್ರತಿಯೊಂದಕ್ಕೆ ರೂ. ೨೪,೦೦೦, ಅದೇ ೧೨ನೇ ತಾರೀಕಿನಲ್ಲಿ ೧೦೦ ಜನರ ಒಂದು ಭಾಗಕ್ಕೆ ರೂ. ೧೫,೦೦೦ ದಂಡ ಹೊರಿಸಿದರು.

ಮದರಾಸ:—ಕಳೆದ ತಾರೀಕು ೧೫ನೇ ರಾತ್ರಿ ಮದರಾಸಿನಲ್ಲಿ ಬಹಳ ಮಳೆ ಸುರಿದು ಕೆಲವು ಮನೆಗಳು ಕುಸಿದು ಬಿದ್ದವು. ತಾ. ೧೬ನೇ ಮಧ್ಯಾಹ್ನದ ವರೆಗೆ ಎಂದಿನಂತೆ ಟ್ರಾಮ್ ಗಾಡಿಗಳ ಚಲಾವಣೆ ಸರಿಯಾಗಿ ಆಗಲಿಲ್ಲ. ರೈಲ್ವೆ ಮಾರ್ಗಗಳಲ್ಲೂ ನೀರು ನಿಂತಿತ್ತು.

ಟೆಲಿಫೋನ್:—ನಾಗಪುರದಿಂದ ಕಲ್ಕತ್ತದ ಪರಿಯಂತ ೭೦೩ ಮೈಲುಗಳ ದೂರದ ವರೆಗೆ ಟೆಲಿಫೋನನ್ನು ಇಡಲು ನಡಿಸಿದ ಪ್ರಯತ್ನವು ಸಫಲವಾಗಿದೆ.

ಮೌಲಾನಾ ಜಲಾಲುದ್ದೀನ ಅಹಮ್ಮದ್:—ಚಾಟ್ಗಾಂ ಜಿಲ್ಲೆಯ ಖಿಲಾಫತ್ ಕೊಂಗ್ರೆಸ್ ಸೆಕ್ರೆಟರಿಗಳಾದ ಮೌಲಾನಾ ಜಲಾಲುದ್ದೀನ ಅಹಮ್ಮದರನ್ನು ಸೆಕ್ಶನ್ ೧೨೪ ಎ. ಮತ್ತು ೧೫೩ ಎ. ಮೇರೆಗೆ ಪುನಃ ಕೈದು ಮಾಡಿದೆ.

ರಾಜಕೀಯ ಕೈದಿಗಳು:—ಮಿ| ಭಾಸನಾಳಿಯವರನ್ನು ಯರವಾಡ ಜೈಲಿನಿಂದ ಬೇರೆ ಕಡೆಗೆ ಕೈದಿಡೆ. ಮಿ| ಜಯ ರಾಮದಾಸ ಮತ್ತು ಸಾಹೇಬ್ ಖುರೇಶಿ ಇವರನ್ನು ಥಾನಾ ಜೈಲಿನಿಂದ ಬೇರೆ ಕಡೆಗೆ ತೆಗೆದುಕೊಂಡು ಹೋಗಿರುವರು. ಮೌಲಾನಾ ಹಜರತ್ ಮೊಹಾನಿಯವರನ್ನು ಕಾರವಾರ ಜೈಲಿಗೆ ವರ್ಗಾಯಿಸಿರುವರು.

ಗ್ರಾಮ ಉದ್ಯೋಗಸ್ಥರು:—ಸೂರತ್ ಜಿಲ್ಲೆಯಲ್ಲಿ ೪೦೦ ಮಂದಿ ಗ್ರಾಮ ಉದ್ಯೋಗಸ್ಥರಲ್ಲಿ ೧೩೦ ಮಂದಿಗಳನ್ನು ಕೆಲಸದಿಂದ ತೆಗೆದುಹಾಕಲಿಕ್ಕಿದ್ದಾರೆ.

ಓಲ್-ಇಂಡಿಯಾ ಕೊಂಗ್ರೆಸ್ಸ ಕಮ್ಮಿಟಿಯ ಕಾರ್ಯಕಾರಿ ಮಂಡಲದ ಸಭೆ:—ಈ ಸಭೆಯು ತಾ. ೧೮ರಲ್ಲಿ ಕಲ್ಕತ್ತದಲ್ಲಿ ದೇಶಬಂಧು ದಾಸರ ಅಧ್ಯಕ್ಷತೆಯಲ್ಲಿ ಸೇರಿದೆ. ಮದರಾಸಿನ ಶ್ರೀಯುತ ಟಿ. ಪ್ರಕಾಶಂ ಮತ್ತು ಮುಂಬಯಿಯ ಚೋಟಾನಿಯವರು ಬಿಟ್ಟು ಎಲ್ಲಾ ಮೆಂಬರರೂ ಈ ಸಭೆಯಲ್ಲಿ ಹಾಜರಿದ್ದರು. ಕಾಯಿದೆಭಂಗ ವಿಚಾರಣಾ ಕಮ್ಮಿಟಿಯ ರಿಪೋರ್ಟಿನ ಚರ್ಚೆಯು ನಡಿಯಿತು.

ಮುಂಬಯಿ ಅದಿಪತ್ಯದೊಳಗಿನ ಸಿವಿಲ್ ವ್ಯಾಜ್ಯಗಳು:—೨೫೦,೦೦೦ಕ್ಕಿಂತ ಹೆಚ್ಚು ಸಿವಿಲ್ ವ್ಯಾಜ್ಯಗಳು ಮುಂಬಯಿಯ ಕೋರ್ಟುಗಳಲ್ಲಿ ಕಳೆದ ವರುಷ ವಿಚಾರಣೆಗೆ ಬಂದವು.

ಬೆಂಗಳೂರು:—ಮದರಾಸಿನಲ್ಲಿ ಸುರಿದಂತೆ ಬೆಂಗಳೂರಿನಲ್ಲೂ ಮಳೆಯು ವಿಶೇಷವಾಗಿ ಸುರಿದು ಕೆಲವು ಮನೆಗಳು ಬಿದ್ದವು.

ರಾಜಕೀಯ ಕೈದಿಗಳು:—ರಾಜಕೀಯ ಕೈದಿಗಳನ್ನು ಒಂದು ಜೈಲಿನಿಂದ ಇನ್ನೊಂದು ಜೈಲಿಗೆ ಒಯ್ಯುವಾಗ ಅವರು ಜೈಲಿನ ಪೋಷಾಕನ್ನೆ ಧರಿಸಿಕೊಳ್ಳಬೇಕೆಂಬ ನಿರ್ಬಂಧವು ತೆಗೆದುಹಾಕಿದೆ.

ತಿರುಪತಿ ಮುನ್ಸಿಪಾಲಿಟಿ:—ಈ ಮುನ್ಸಿಪಾಲಿಟಿಗೆ ಅಸಹಕಾರವಾದಿಗಳಾದ ಶ್ರೀಮಾನ್ ಟಿ. ಕೆ. ನರಸಿಂಹ ಆಚಾರ್ಯರ್ ಇವರು ಚೆಯರ್ಮೇನರಾಗಿ ಆರಿಸಲ್ಪಟ್ಟಿರುತ್ತಾರೆ.

ಡಾಕ್ಟರ ಟಿ. ಯಸ್. ಯಸ್. ರಾಜನ್:—ಖಾಸಗಿ ಕೆಲಸದ ಸಂಬಂಧ ಇವರ ಭೇಟಿಯನ್ನು [illegible] ಜೈಲಿನಲ್ಲಿ ಪಡಿಯಲು ಇಬ್ಬರು ಗೃಹಸ್ಥರು ಜೈಲಿನ ಸುಪರಿಂಟೆಂಡೆಂಟರ ಅನುಮತಿಯನ್ನು ಕೇಳಿದರು. ಆದರೆ ಸುಪರಿಂಟೆಂಡೆಂಟರು ಅನುಮತಿಯನ್ನು ಕೊಡಲು ಒಪ್ಪಲಿಲ್ಲ.

ಅಹಮ್ಮದಾಬಾದ ಗಿರಣಿಗಳ ಮುಷ್ಕರ:—ಅಹಮ್ಮದಾಬಾದಿನ ಎಲ್ಲಾ ಗಿರಣಿಗಳ ಮುಷ್ಕರವು ನಿಂತು ಈಗ ಗಿರಣಿಗಳಲ್ಲಿ ಕೆಲಸವು ಎಂದಿನಂತೆ ಪ್ರಾರಂಭವಾಗಿದೆ.

ಮಿ| ಮೊಂಟೆಗ್ಯೂರವರ ಸ್ಮಾರಕ:—ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಗಳಾದ ಮಿ| ಮೊಂಟೆಗ್ಯೂರವರ ಪ್ರತಿಮೆಯನ್ನು ಮದರಾಸ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಇಡಲು ಲೆಜಿಸ್ಲೇಟಿವ್ ಕೌನ್ಸಿಲಿನ ಕೆಲವು ಮಂದಿ ಮೆಂಬರರು ನಿಶ್ಚಯಿಸಿರುತ್ತಾರೆ.

ತಿನ್ನವಲ್ಲಿ:—ಕಪಿಗಳು ಪಟ್ಟಣಕ್ಕೆ ಬಂದು ಬಹಳ ಉಪದ್ರವನ್ನು ಕೊಡಲು ಪ್ರಾರಂಭಿಸಿವೆ.

ಹಿಂದೂ ಮುಸಲ್ಮಾನರ ಕಲಹ:—ಮೈಸೂರು ಸಂಸ್ಥಾನದ ಪಟ್ಟಣದಲ್ಲಿ ಹಿಂದೂ ಮುಸಲ್ಮಾನರ ವೈಮನಸ್ಯವು ಇನ್ನೂ ಶಾಂತವಾಗಲಿಲ್ಲ. ಹಿಂದೂ ಮುಸಲ್ಮಾನರೊಳಗಿನ ಪರಸ್ಪರ ದ್ವೇಷವನ್ನು ಈಗಲೇ ಶಮನಮಾಡದಿದ್ದರೆ [illegible] ಆಗುವುದೆಂದು ಅಲ್ಲಿಂದ ಬರುವ ವರ್ತಮಾನಗಳಿಂದ ಕಾಣುತ್ತದೆ.

ಮಹಾತ್ಮಾ ಗಾಂಧಿಯವರ ಬಂಧನ ದಿನ:—ಮಹಾತ್ಮರ ಬಂಧನ ದಿನಾಚರಣೆಯು ಕಳೆದ ತಾರೀಕು ೧೮ರಲ್ಲಿ ಮದರಾಸ ಸಿಟಿ ಮೊದಲಾದ ಕಡೆಗಳಲ್ಲಿ ಯೋಗ್ಯವಾಗಿ ಆಚರಿಸಲಾಯಿತು.

ಸೆಂಟ್ರಲ್ ಖಿಲಾಫತ್ ಕಮ್ಮಿಟಿ:—ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ಕಾರ್ಯಕಾರಿ ಮಂಡಲದ ಸಭೆಯು ಕಲ್ಕತ್ತದಲ್ಲಿ ಸೇರಿ ತುರ್ಕರ [illegible] ಪರಿಸ್ಥಿತಿಯನ್ನು ಕುರಿತು ಚರ್ಚಿಸುತ್ತದೆ.

ಗವರ್ನರರ ಸಂದರ್ಶನಕ್ಕೆ ಬಹಿಷ್ಕಾರ:—ಗವರ್ನರರು ಬರಂಪುರವನ್ನು ಸಂದರ್ಶಿಸಿದಾಗ ಅವರ ಸಂದರ್ಶನಕ್ಕೆ ಬಹಿಷ್ಕಾರ ಹಾಕಿ ಹರತಾಳವನ್ನು ಆಚರಿಸಬೇಕಾಗಿ ಅಲ್ಲಿಯ ಕೊಂಗ್ರೆಸ ಕಮ್ಮಿಟಿಯವರ ಸೂಚನೆ. ಆದರೆ ಮುನ್ಸಿಪಾಲಿಟಿಯ ಅಧ್ಯಕ್ಷ ಮೊದಲಾದವರು ಇದಕ್ಕೆ ವಿರೋಧವಾಗಿದ್ದಾರೆ.

ಖಿಲಾಫತ್ ಕೊನ್ಫರೆನ್ಸಿನ ಸಿದ್ಧತೆಗಳು:—ಖಿಲಾಫತ್ ಕಮ್ಮಿಟಿಯ ಸ್ವಾಗತ ಕಮ್ಮಿಟಿಯ ಅಧ್ಯಕ್ಷರು ಗಯಾ ಪೋಟರ್ ವರ್ಕ್ಸಿನ ಸಮೀಪದ ಸ್ಥಳದಲ್ಲಿ ಪ್ರತಿನಿಧಿಗಳ ಬಗ್ಗೆ ಬಿಡಾರಗಳನ್ನು ಏರ್ಪಡಿಸಲು ಹಾಗು ಒಂದು ಚಪ್ಪರವನ್ನು ಕಟ್ಟಲು ಮುನ್ಸಿಪಾಲಿಟಿಯ ಅನುಮತಿಯನ್ನು ಪಡೆದರು. ಅದರಂತೆ ಚಪ್ಪರ ಹಾಗು ಪ್ರತಿನಿಧಿಗಳ ಬಗ್ಗೆ ಗುಡಿಸಲುಗಳನ್ನು ಏರ್ಪಡಿಸುವ ಕಾರ್ಯವು ಮುಂದರಿಸುತ್ತಿದೆ. ಹೀಗಿರುವಾಗ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಎಲ್ಲಾ ಕಡೆಗಳಲ್ಲಿನ ಜನರನ್ನು ಅಲ್ಲಿ ಇಳುಕೊಳ್ಳಲು ಬಿಟ್ಟರೆ ಪಟ್ಟಣದ ಆರೋಗ್ಯವು ಕೆಡುವುದೆಂದು ಸೂಚಿಸಿ, ಈ ಕೆಲಸವನ್ನು ನಿಲ್ಲಿಸುವಂತೆ ಮಾಡಬೇಕಾಗಿ ಮುನ್ಸಿಪಲ್ ಚೆಯರ್ಮೇನರಿಗೆ ತಿಳಿಸಿರುತ್ತಾರೆ.

ಮುಂಬಯಿಯ ಸ್ತ್ರೀಯರು:—ಮುಂಬಯಿಯ ರಾಷ್ಟ್ರೀಯ ಸ್ತ್ರೀಯರ ಸಂಘದ ಆಶ್ರಯದಲ್ಲಿ ಸ್ತ್ರೀಯರು ಒಂದು ಸಭೆ ಕೂಡಿ ಕೌನ್ಸಿಲನ್ನು ಸೇರಬೇಕೆಂದು ಕಾನೂನುಭಂಗ ವಿಚಾರಣಾ ಕಮ್ಮಿಟಿಯವರು ಸೂಚಿಸಿದ ಸೂಚನೆಯನ್ನು ನಿಷೇಧಿಸಿದರು.

ಇಂಚ್‌ಕೇಪ್ ಕಮ್ಮಿಟಿ:—ದಿ ಇಂಡಿಯನ್ ಮರ್ಚೆಂಟ್ಸ್ ಚೇಂಬರ ಎಂಡ್ ಬ್ಯೂರೋದವರು ಇಂಚ್‌ಕೇಪ್ ಕಮ್ಮಿಟಿಯವರಿಗೆ ಮುಖ್ಯವಾಗಿ ಮಿಲಿಟರಿ ಖರ್ಚು ಕಡಿಮೆ ಮಾಡುವುದು ಅಗತ್ಯವೆಂದು ಸೂಚಿಸಿದ್ದಾರೆ.

ಓಲ್-ಇಂಡಿಯಾ ಖಿಲಾಫತ್ ಕೊನ್ಫರೆನ್ಸ:—ಈ ಕೊನ್ಫರೆನ್ಸಿಗೆ ಹೋಗತಕ್ಕ ಪ್ರತಿನಿಧಿಗಳು ರೂ. ೫ 'ಡೆಲಿಗೇಶನ್ ಫೀ' ಕೊಡಬೇಕಾಗಿದೆ.

ಸೂರತ್ ಮುನ್ಸಿಪಾಲಿಟಿ:—ಕಳೆದ ಎರಡು ವಾರಗಳಿಂದ ಮುನ್ಸಿಪಲ್ ತೆರಿಗೆಯನ್ನು ಕೊಡಕೂಡದೆಂಬ ಚಳವಳವು ಜೋರಾಗಿ ನಡಿಯುತ್ತಿದೆ. ಕೆಲವು ಪ್ರಮುಖ ಗೃಹಸ್ಥರು ಪಟ್ಟಣದಲ್ಲೆಲ್ಲಾ ತಿರುಗಿ ಜನರಿಗೆ ತೆರಿಗೆಯನ್ನು ಕೊಡಕೂಡದೆಂದು ಉಪದೇಶಿಸುತ್ತಿದ್ದಾರೆ. ಮುನ್ಸಿಪಾಲಿಟಿಯ ಸುಮಾರು ೧೫೦೦ ಬಿಲ್ಲುಗಳು ಜನರಿಂದ ಹಿಂದಕ್ಕೆ ಕಳುಹಿಸಲ್ಪಟ್ಟಿವೆ. ಸ್ವಯಂಸೇವಕರನ್ನು ಒಟ್ಟುಗೂಡಿಸುವ ಹಾಗು ವಿದೇಶಿ ವಸ್ತ್ರದ ಪಿಕೆಟಿಂಗ ಕಾರ್ಯವು ನಡಿಯುವುದು. ತಾರೀಕು ೧೫ರ ವರೆಗೆ ೭೬ ಮಂದಿ ಸ್ವಯಂಸೇವಕರು ಸೇರಿದರು. ಇವರಲ್ಲಿ ಹೆಚ್ಚಿನ ಮಂದಿ ಸ್ತ್ರೀಯರಾಗಿರುವರು.

ನೋಟು ಕಳವು:—ಕರೆನ್ಸಿ ಆಫೀಸಿನಲ್ಲಿ ನಿಂತುಕೊಂಡಿದ್ದ ಒಬ್ಬ ಮನುಷ್ಯನ ಕಿಸೆಯಿಂದ ರೂ. ೩೦,೦೦೦ರ ಕರೆನ್ಸಿ ನೋಟುಗಳನ್ನು ಕಸಕೊಂಡ ಬಗ್ಗೆ ಒಬ್ಬ ಮಹಮ್ಮದೀಯ ಹುಡುಗನಿಗೆ ಮುಂಬಯಿಯ ಮೆಜಿಸ್ಟ್ರೇಟರು ೩ ವರುಷದ ಶಿಕ್ಷೆಯನ್ನು ವಿಧಿಸಿದರು.

ಕಣ್ಣಾನೂರು:—ಕಳೆದ ತಾರೀಕು ೧೧ರಲ್ಲಿ ಕಣ್ಣಾನೂರಿನಲ್ಲಿ ಅಲ್ಲಿಯ ಮುನ್ಸಿಪಾಲಿಟಿಯ ಚೆಯರ್ಮೇನರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಒಂದು ಇಂಡಸ್ಟ್ರಿಯಲ್ ಬೇಂಕು ಸ್ಥಾಪಿಸಲಾಯಿತು.

ವಿಜಾಪುರ ಜಿಲ್ಲಾ ಪರಿಷತ್ತು:—ವಿಜಾಪುರ ಜಿಲ್ಲಾ ಕಾಂಗ್ರೆಸ ಕಮಿಟಿಯ ವಾರ್ಷಿಕ ಸಭೆಯ ಠರಾವನ್ನು ಅನುಸರಿಸಿ ಈ ವರ್ಷ ವಿಜಾಪುರದಲ್ಲಿ ಜಿಲ್ಲಾ ಪರಿಷತ್ತು ಬರುವ ತಾರೀಕು ೩ರಲ್ಲಿ ಜರಗಿಸಬೇಕಾಗಿ ನಿಶ್ಚಯಿಸಿದೆ.

ಮೈಸೂರು:—ತುಮಕೂರಿನ ಎಡ್ವೋಕೇಟ್ ರಂಗ ಅಯ್ಯಂಗಾರರು ಮೈಸೂರು ಕ್ರಾನಿಕಲ್ ಪತ್ರವನ್ನು ಇಂಗ್ಲಿಷ ಭಾಷೆಯಲ್ಲಿ ಪ್ರಕಟಿಸುತ್ತಿರುವರಷ್ಟೆ! ಈ ತಿಂಗಳಿನಿಂದ ಕನ್ನಡದಲ್ಲೂ ಒಂದು ವಾರಪತ್ರಿಕೆಯನ್ನು ಹೊರಡಿಸಲು ಉದ್ಯುಕ್ತರಾಗಿರುವರು.

ಲಾಲಾಜಿಯವರ ಮಗಳ ಬಂಧನ:—ಪಂಜಾಬದಲ್ಲಿ ಕೊಂಗ್ರೆಸ್ ಕಾರ್ಯಪ್ರಚಾರವನ್ನು ಮಾಡುತ್ತಿರುವ ಶ್ರೀಮತಿ ಪಾರ್ವತಿಬಾಯಿ ಇವರನ್ನು ಸೆಕ್ಶನ್ ೧೨೪ ಎ ಮತ್ತು ಸೆಕ್ಶನ್ ೧೫೩ ಎ. ಮೇರೆಗೆ ಶ್ರೀಯುತ ಲಾಲಾ ಲಜಪತರಾಯರ ಮನೆಯಲ್ಲಿ ಕಳೆದ ತಾರೀಕು ೨೦ಕ್ಕೆ ಕೈದುಮಾಡಿದೆ. ಇವರನ್ನು ಕೂಡಲೇ ಹರಿದ್ವಾರಕ್ಕೆ [illegible] ತೆಗೆದುಕೊಂಡು ಹೋಗಿರುವರು. ಇವರ ವಸ್ತ್ರಾಗಲೀ ಬಿಛಾನೆಯನ್ನಾಗಲೀ ಸಂಗಡ ತೆಗೆದುಕೊಂಡು ಹೋಗಲು ಬಿಡಲಿಲ್ಲ.

ಕೌನ್ಸಿಲ್ ಪ್ರವೇಶಕ್ಕೆ ಸಮ್ಮತಿ:—ಓಲ್-ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಕಾರ್ಯಕಾರಿ ಮಂಡಲದ ಸಭೆಯಲ್ಲಿ ಅಧ್ಯಕ್ಷರ ಕಾಸ್ಟಿಂಗ್ ವೋಟಿನ ಬಲದಿಂದ ಕೌನ್ಸಿಲನ್ನು ಸೇರಬೇಕೆಂಬ ಠರಾವು ಮಂಜೂರಾಗಿದೆ.

ಅಂಗೋರಾ ಫಂಡ್:—ಈ ಫಂಡಿಗೆ ಡೆಲ್ಲಿಯಲ್ಲಿ ೧ ಲಕ್ಷ ಮದರಾಸಿನಲ್ಲಿ ರೂಪಾಯಿ ಹತ್ತು ಸಾವಿರ ಜಮೆಯಾಗಿದೆ.

ಮುಪ್ಪಿನ ದಂಪತಿಗಳಿಗೆ ಸತ್ಯಾಗ್ರಹದ ಸ್ಫೂರ್ತಿ—[illegible] ಎಂಬೂರಿನ ನಾಗರಿಕರಾದ ಶ್ರೀಯುತ ವಿಠೋಬಾಜಿ ಎಂಬ ೭೫ ವರುಷದ ಮುದುಕರೂ ಅವರ ೬೦ ವರುಷದ ಪತ್ನಿಯವರೂ ಪಂಜಾಬಿನ ಸತ್ಯಾಗ್ರಹಕ್ಕೆ ಹೊರಟಿರುವರು.

ಓಲ್-ಇಂಡಿಯಾ ಮುಹಮ್ಮಡನ್ ಎಜ್ಯುಕೇಶನಲ್ ಕೊನ್ಫರೆನ್ಸ:—ಅಲಿಘರಿನಲ್ಲಿ ಸೇರಲಿಕ್ಕಿರುವ ಈ ಕೊನ್ಫರೆನ್ಸಿನ ಅಧ್ಯಕ್ಷಸ್ಥಾನವನ್ನು [illegible] ಕೊಳ್ಳಲು ಪಂಜಾಬದ ಎಜ್ಯುಕೇಶನ್ ಮಿನಿಸ್ಟರರು ಸಮ್ಮತಿಸಿದ್ದಾರೆ.

ಜಗದ್ಗುರು ಶ್ರೀ ಶಂಕರಾಚಾರ್ಯರು:—ಈ ತಿಂಗಳ ಅಂತ್ಯದಲ್ಲಿ ಜಗದ್ಗುರು ಶ್ರೀ ಶಂಕರಾಚಾರ್ಯರು ಮದರಾಸನ್ನು ಸಂದರ್ಶಿಸಲಿದ್ದಾರೆ.

ಮುಂಬಯಿ:—ಮುಂಬಯಿಯ ಮುನ್ಸಿಪಲ್ [illegible] ವಾರ್ಡ ಕೌನ್ಸಿಲ್ ಮೆಂಬರಿಕೆಗೆ ಮಿಸೆಸ್ [illegible] ಎಂಬ ಹೆಂಗಸು ಒಬ್ಬ ಉಮೇದ್ವಾರಳಾಗಿರುವಳು.

ಅನುಕ್ರಮಣಿಕೆ

ಅಗ್ರಲೇಖ—
ಮಜೂರಪಕ್ಷವೂ ಹಿಂದುಸ್ಥಾನವೂ . . . ೬-೭
ಸ್ಫುಟವಿಚಾರಗಳು—
೧. ಅಕಾಲಿಗಳ ಚಳವಳದ ಫಲಿತಾಂಶ. ೨-೪. ಪಾರ್ಲಿಮೆಂಟಿನ ಹೊಸ ಚುನಾವಣೆ. ೫. ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಮೀಟಿಂಗು ,,
ಮಂಗಳೂರು—
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ . . . ೫
ದ. ಕನ್ನಡ, ಹೊಸದುರ್ಗ, ಕುಂಬಳೆ, ಪಡುಬಿದ್ರೆ, ಪುತ್ತೂರು. . . ೮
ಮದರಾಸ ನ್ಯಾಯವಿಧಾಯಕ ಸಭೆಯ ಅಧಿವೇಶನ . . . ,,
ಅಕಾಲಿಗಳ ವಿಜಯ . . . ,,
ಖಾದಿ ಪ್ರದರ್ಶನ . . . ,,
ಕೌನ್ಸಿಲುಗಳನ್ನು ಕೈವಶಮಾಡಿರಿ . . . ,,
ಪತ್ರವ್ಯವಹಾರ ೧, ೨. . . . ೯
ರಾಷ್ಟ್ರೀಯ ಶಿಕ್ಷಣ ವರದಿಯು . . . ,,

ಸ್ವದೇಶಾಭಿಮಾನಿ

ಶಕ ೧೮೪೪ ಮಾರ್ಗಶಿರ ಶು| ೬ಯು ಶುಕ್ರವಾರ.

ಮಜೂರಪಕ್ಷವೂ ಹಿಂದುಸ್ಥಾನವೂ.

ಇದು ಸ್ವಾವಲಂಬನದ ಯುಗವೆಂಬುದು ನಿಜವು. ತನ್ನ ಕಾಲಿನ ಮೇಲೆ ತಾನೆ ನಿಂತುಕೊಳ್ಳುವಷ್ಟು ಪ್ರಶಸ್ತವಾದ ಉದ್ಯೋಗವು ಬೇರೆ ಇಲ್ಲವೆಂಬ ಮಾತು ಕೂಡ ಒಪ್ಪ ಬೇಕಾದದ್ದೆ ಸರಿ. ಆದರೆ ಮನುಷ್ಯನು ಯಾವಾಗ ಪರಿಸ್ಥಿತಿಯ ಮಹಾತ್ಮ್ಯದಿಂದ ಸಂಪೂರ್ಣ ಪರಾವಲಂಬನದ ಬಲೆಯಲ್ಲಿ ಸಿಲುಕಿ ಬೀಳುತ್ತಾನೊ ಆಗ ಸ್ವಾವಲಂಬನದಿಂದಲೆ ಈ ಬಲೆಯಿಂದ ತಪ್ಪಿಸಿಕೊಂಡೇನೆಂದು ಅವನಿಂದ ಹೇಳಲಾಗಲಿಕ್ಕಿಲ್ಲ. ಕಡಿಮೆ ಪಕ್ಷದಲ್ಲಿ ನೆವಕ್ಕಾದರೂ ಒಬ್ಬನು ಬೇಕಾಗುವನು. ಬಲೆಯನ್ನು ಕತ್ತರಿಸಲು ಬೇರೆಯವನನ್ನು ಸಹಾಯಕ್ಕೆ ತೆಕ್ಕೊಳ್ಳುವುದು ಸ್ವಾವಲಂಬನದ ತತ್ವಕ್ಕೆ ಅನುಚಿತವೆಂದಿದ್ದರೆ ಅದನ್ನು ಕತ್ತರಿಸುವ ಸಾಧನವೆಂಬುದಾಗಿಯಾದರೂ ಇಟ್ಟುಕೊಳ್ಳಬಹುದಲ್ಲವೆ? ಒಂದು ಕಾರ್ಯವನ್ನು ಸಾಧಿಸುವಾಗ ಎಲ್ಲ ಬಗೆಯ ಪ್ರಯತ್ನವು ಆವಶ್ಯಕವಾಗಿದೆ. ಆದರೆ ಆ ಪ್ರಯತ್ನವು ರಾಜಮಾನ್ಯವಾಗಿರಬೇಕು ಮತ್ತು ಸ್ವಾಭಿಮಾನಕ್ಕೆ ಕುಂದನ್ನುಂಟುಮಾಡದ್ದಾಗಿರಬೇಕು. ಈ ದೃಷ್ಟಿಯಿಂದ ಹೇಳುವುದಾದರೆ ಹಿಂದುಸ್ಥಾನದ ರಾಜಕೀಯ ಮುಖ್ಯ ಧ್ಯೇಯವಾಗಿರುವ ಸ್ವರಾಜ್ಯವನ್ನು ಸಾಧಿಸಲು ಸ್ವಾವಲಂಬನದುಪಾಯಗಳೊಟ್ಟಿಗೆನೆ ಇತರ ಯೋಗ್ಯ ಪ್ರಯತ್ನಗಳನ್ನು ಸಹ ಕೈಕೊಳ್ಳುವುದು ಅಸಮಂಜಸವಾಗಲಾರದು. ಯಾವುದರಲ್ಲಾದರೂ ಕುರುಡನು ಹಿಡಿದದ್ದೆ ಬಡಿಗೆ ಎಂದು ತಿಳಿಯುವುದು ಯೋಗ್ಯವಲ್ಲ. ಪರಾವಲಂಬನದಿಂದ ವಿಮೋಚನೆಯನ್ನು ಹೊಂದಲು ಪರಾಶ್ರಯವನ್ನು ಸಹ ಮಾಡಬೇಕಾಗುತ್ತದೆ. ವಿಷದ ಬಾಧೆಯನ್ನು ಕೆಲವು ಸಾರಿ ವಿಷದಿಂದಲೆ ಪರಿಹರಿಸಬೇಕಾಗುತ್ತದೆ. ಆದ್ದರಿಂದ ಪರಾವಲಂಬತೆಯನ್ನು ಬೇರೆಯವರ ಸಹಾಯ್ಯದಿಂದ ಬಗೆ ಹರಿಸಲುದ್ಯುಕ್ತರಾಗುವುದು ಯಾರದೂ ತಪ್ಪೆಂದು ಹೇಳಲಾಗುವುದಲ್ಲ. ಆದರೆ ಸ್ವಾವಲಂಬನದ ಮೇಲಿನ ದೃಷ್ಟಿಯನ್ನು ಮಾತ್ರ ಎಂದೂ ತೆಗೆಯಕೂಡದೆಂಬುದು ನಿಜ.

ಈ ಹೊತ್ತು ಈ ಆಲೋಚನೆಗಳು ಬರಲು ಕಾರಣವೇನೆಂದರೆ, ಇಂಗ್ಲಂಡಿನ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಮಜೂರಪಕ್ಷದ ಆಧಿಕ್ಯವೆ ಹೆಚ್ಚಾಗಿದೆ. ಈ ಮಜೂರಪಕ್ಷವು ಹಿಂದುಸ್ಥಾನದ ಸ್ವರಾಜ್ಯದ ವಿಷಯದಲ್ಲಿ ಅತ್ಯಂತ ಸಹಾನುಭೂತಿಯುಳ್ಳದ್ದು. ಕನ್ಸರವೇಟಿವ್ ಪಕ್ಷದಿಂದ ಹಿಂದುಸ್ಥಾನಕ್ಕೆ ಯಾವ ಸಹಾಯವೂ ಉಂಟಾಗಲಿಕ್ಕಿಲ್ಲ. ಮತ್ತು ಹಿಂದುಸ್ಥಾನವು ಅದನ್ನು ಅಪೇಕ್ಷಿಸಲೂ ಇಲ್ಲ. ಕರ್ಝುನ್, ಸಿಡ್ನೆಹೆಮ್ ಮುಂತಾದ ಈ ಪಕ್ಷದ ಶಿಖಾಮಣಿಗಳು ಆಗಾಗ್ಗೆ ಸಾಧ್ಯವಿದ್ದಷ್ಟು ನಂಜುಕಾರಿ ಹಿಂದುದೇಶವನ್ನು ಬೈಯ್ದದ್ದು ಏನಾದರೂ ಕಡಿಮೆಯೆ? ಇದೆ ಈ ಪಕ್ಷದಿಂದ ಸಿಗತಕ್ಕ ಮಹಾಲಾಭವೆಂದು ಹಿಂದುಸ್ಥಾನವು ತಿಳಿದಿದೆ. "ಲಿಬರಲ್" ಎಂಬ ಮನೋಹರವಾದ ಹೆಸರನ್ನು ಎತ್ತಿಕೊಂಡರೂ ಉದಾರ ಪಕ್ಷದವರು ಹಿಂದುಸ್ಥಾನದ ಹಿತದ ಕಡೆಗೆ ಮನಸ್ಸನ್ನು ಕೊಡುವಷ್ಟು ಪುರಸತ್ತುಳ್ಳವರಲ್ಲ. ಅಲ್ಲಿಯ ಸಂಗತಿಗಳೆ ಅವರಿಗೆ ಸಾಕಷ್ಟು ಇವೆ. ಅವುಗಳನ್ನು ಆಕ್ಷೇಪದಿಂದ ವ್ಯವಸ್ಥೆಗೊಳಿಸುವುದೆ ಸಾಕಾಗಿದೆ. ಅವರ ಕೆಲಸವೆ ಅವರಿಗೆ ತಲೆ ತುಂಬಾ ಇರುವಾಗ ನಮ್ಮ ಕಡೆಗೆ ನೋಡಲು ಅವರಿಗೆ ಸಮಯವೆಲ್ಲಿ? ಒಂದು ವೇಳೆ ತಮ್ಮ ಕೆಲಸವನ್ನು ಸಾಧಿಸಿ ಉಳಿದ ಸಮಯವನ್ನು ಹಿಂದುಸ್ಥಾನದ ಹಿತದಲ್ಲಿ ವೆಚ್ಚಮಾಡೋಣವೆಂದು ನೆನೆಸಿದರೂ ಅವರ ಪ್ರಯತ್ನಕ್ಕೆ ಯಶಸ್ಸು ಬರುವುದು ಅಷ್ಟೆಂದು ಆಸೆ ಇಲ್ಲ. ಕಾರಣ, ಈಗ ಅವರು ಅಲ್ಪ ಸಂಖ್ಯಾಕರಾಗಿದ್ದಾರೆ. ಆದ್ದರಿಂದ ಈ ಪಕ್ಷವೂ ಹಿಂದುಸ್ಥಾನದ ಮಿತ್ರವರ್ಗದಿಂದ ಮೆಲ್ಲನೆ ಕಳಚಿಕೊಳ್ಳಹತ್ತಿದೆ. ಅರ್ಥಾತ್, ಹಿಂದುಸ್ಥಾನದ ಯೋಗಕ್ಷೇಮವನ್ನು ವಿಚಾರಿಸುವುದು [illegible] ಮಜೂರ ಪಕ್ಷದ ಕೆಲಸವಾಗಿದೆ ಎಂದು ಹೇಳಬೇಕಾಗುತ್ತದೆ. ಮಜೂರಪಕ್ಷದ ಮೇಲೆ ಬಂದಿರುವ ಈ ದೊಡ್ಡ ಜವಾಬದಾರಿಯನ್ನು ಆ ಪಕ್ಷದವರು ಸರಿಯಾಗಿ ತಿಳಿದಿದ್ದಾರೆಂದು ಅವರು ಪ್ರಕಟಿಸಿರುವ ಪ್ರಕಟಣೆಯಿಂದ ಗೊತ್ತಾಗುತ್ತದೆ. ಕನ್ಸರವೇಟಿವ್ ಮತ್ತು ಲಿಬರಲ್ ಪಕ್ಷದವರ ಉದ್ದೇಶ ಪತ್ರಿಕದಲ್ಲಿ ಹಿಂದುಸ್ಥಾನದ ಉಲ್ಲೇಖವು ಎಷ್ಟೊ ಅಷ್ಟೆ ಉಂಟಲ್ಲದೆ ಹೆಚ್ಚಿಗೆ ಇಲ್ಲ. ಯಾಕೆ, ಅದು ಇಲ್ಲವೆಂತಲೆ ಹೇಳುವುದು ಒಳ್ಳೆಯದು.

ಈ ಹೊಸ ಚುನಾವಣೆಯಲ್ಲಿ ಬಹುಮತದ ಬಲವನ್ನು ಪಡೆದಿರುವ ಮಜೂರ ಪಕ್ಷದಲ್ಲಿ ಅನೇಕರು ಹಿಂದುಸ್ಥಾನದ ಹಿತೈಷಿಗಳಾಗಿದ್ದಾರೆ. ಒಂದಿಲ್ಲವಾದರೆ ಇನ್ನೊಂದು ವಿಧದಿಂದ ಅವರಲ್ಲೇನಕರು ಹಿಂದೂಸ್ಥಾನದ ಪರಿಚಯ ಪಡೆದವರಿದ್ದಾರೆ. ಚುನಾಯಿಸಿ ಬಂದ ಈ ವರ್ಗದಲ್ಲಿ ಅನೇಕರು ಸುಪ್ರಸಿದ್ಧಲೇಖಕರಿದ್ದಾರೆ. ಈ ರೀತಿಯಿಂದ ಕಾರ್ಯಕ್ಷಮವಾದ ಈ ವರ್ಗವು ಹಿಂದಿ ಸ್ವರಾಜ್ಯದ ಪ್ರಶ್ನೆಯನ್ನು ಕೈಕೊಂಡು ವಾದಿಸಹತ್ತಿದರೆ ಅದರಿಂದ ಹಿಂದೂಸ್ಥಾನಕ್ಕೂ ಹಿತವು; ವಿಲಾಯತಿಗೂ ಹಿತವು. ಹಿಂದೂಸ್ಥಾನಕ್ಕೆ ಸ್ವರಾಜ್ಯವು ಪ್ರಾಪ್ತವಾಗದೆ ಇದ್ದ ಕಾರಣ ಈ ಹೊತ್ತು ವಿಲಾಯತಿಯ ಮಜೂರ ವರ್ಗದ ಮೇಲೆ ಯಾವ ತೊಂದರೆಗಳು ಬಂದೊದಗಿವೆ ಎಂಬುದು ಅವರಿಗೆನೆ ಗೊತ್ತಲ್ಲದೆ, ಇತರರಿಗೆ ಗೊತ್ತಾಗದು. ಹಿಂದೂಸ್ಥಾನದ ಕಾಮಧೇನುವು ಕೈಗೆ ಸಿಕ್ಕಿರುವುದರಿಂದ ಇಲ್ಲಿಯ ನೋಕರ ಶಾಹಿಯ ಒಂದೆ ಮಾಲೆಯ ಮಣಿಗಳಾದ ವಿಲಾಯತಿಯ ಕಾರಖಾನದಾರರು ಅಲ್ಲಿಯ ಮಜೂರು ವರ್ಗದ ವಿದ್ಯಮಾನಗಳನ್ನು ಲಕ್ಷ್ಯಿಸುವುದಿಲ್ಲ. ಹಿಂದೂಸ್ಥಾನಕ್ಕೆ ಸ್ವರಾಜ್ಯವು ಪ್ರಾಪ್ತವಾದ್ದಾದರೆ, ಆ ಮೂಲಕ ಮಜೂರ ವರ್ಗದ ಹಿತವು ಎಷ್ಟಕ್ಕೂ ಏರುವುದು. ಈ ಮರ್ಮವನ್ನು ಬಲ್ಲಾದ ಕಾರಣ ಮಜೂರ ವರ್ಗವು ತನ್ನ ಪ್ರಕಟನೆಯಲ್ಲಿ ಹಿಂದೂಸ್ಥಾನದ "ಸೆಲ್ಫಗವರ್ನಮೆಂಟ್" ಎಂಬ ಶಬ್ದದಿಂದ ಉಲ್ಲೇಖವನ್ನು ಮಾಡಿದೆ. ಈ ಪಕ್ಷದವರಿಗಾದರೂ ತಮ್ಮ ಸ್ವಂತ ತೊಂದರೆಗಳಿಲ್ಲವೆಂದಲ್ಲ. ಅವರಿಗೂ ಸಾಕಷ್ಟಿವೆ. ಆದರೆ, ಹಿಂದೂಸ್ಥಾನಕ್ಕೆ ಸ್ವರಾಜ್ಯವು ಸಿಗುವುದು ಕೂಡ ಅವರ ಕಾರ್ಯಗಳಲ್ಲೆ ಒಂದು ಕಾರ್ಯವಾದ್ದರಿಂದ ಈ ಪಕ್ಷದ ಮುಂದಾಳುಗಳು ಈ ಪ್ರಶ್ನೆಯನ್ನು ಎತ್ತಿಕೊಂಡು ಚರ್ಚಿಸದೆ ಇರಲಾರರು. ಎರಡು ವರ್ಷದ ಹಿಂದೆ ಹಿಂದೂಸ್ಥಾನಕ್ಕೆ ಬಂದಿದ್ದ ಮಿ. ಬೆನ್‌ಸ್ಪೂರ ಮುಂತಾದವರು ಆಗಲೆ ಹಿಂದುಸ್ಥಾನದ ಬಗ್ಗೆ ಇರುವ ತಮ್ಮ ಪ್ರೇಮವನ್ನು ಸಕ್ರಿಯವಾಗಿ ವ್ಯಕ್ತಗೊಳಿಸಿದ್ದಾರೆ. ಈಗಲಂತೂ ಆ ಪಕ್ಷವೆ ಕೊಂಚ ಬಲವನ್ನು ಹೊಂದಿದೆ. ಇಂಥ ಪರಿಸ್ಥಿತಿಯಲ್ಲಿ ಅವರೆ ತಮ್ಮ ಪ್ರಕಟಣೆಯಲ್ಲಿ ಸೂಚಿಸಿದ್ದಂತೆ "ಹಿಂದಿ ಸ್ವರಾಜ್ಯ"ದ ಪ್ರಶ್ನೆಯನ್ನು ಎತ್ತಿ ಅದಕ್ಕೆ ಇಷ್ಟವಾದ ಸ್ವರೂಪವನ್ನು ಕೊಡದೆ ಇರಲಿಕ್ಕಿಲ್ಲ. ಮದ್ರಾಸಿನ ಹಿಂದು ಪತ್ರಿಕೆಯ ಖಾತಮಿದಾರನು ಬರೆದು ತಿಳಿಸುವ ಮೇರೆಗೆ ಮಿ. ಹಾಲ್‌ಫೋರ್ಡನಾಯ್ಟ ಎಂಬವರು ತಾನು ಚುನಾಯಿಸಿ ಬಂದಲ್ಲಿ ತನ್ನಿಂದ ಸಾಧ್ಯವಾದ ಎಲ್ಲ ದಾರಿಗಳಿಂದ ಹಿಂದೀ ರಾಷ್ಟ್ರದ ಉಚ್ಚಧ್ಯೇಯವನ್ನು ಕೈಗೂಡಿಸಿ ಕೊಡಲು ಯತ್ನಿಸದೆ ಇರಲಿಕ್ಕಿಲ್ಲವೆಂದು ಸೂಚಿಸಿರುವರು. ಇದರಂತೆ ಇತರ ಎಷ್ಟೊ ಉಮೇದುವಾರರು ತಮ್ಮ ತಮ್ಮ ಉದ್ದೇಶ ಪತ್ರಿಕೆಗಳಲ್ಲಿ ಹಿಂದುಸ್ಥಾನದ ವಿಷಯವಾಗಿ ಸದುದ್ದೇಶಗಳನ್ನು ವ್ಯಕ್ತಗೊಳಿಸಿದ್ದಾರೆ. ಬ್ರಿಟಿಷ್ ಜನಾಂಗವು ಸ್ವಾತಂತ್ರ್ಯಪ್ರಿಯವಾದ್ದು ಎಂಬೀ ಸಂಗತಿಯು ಇತ್ತಲಾಗಿ ಇಂಥ ಲೇಬರ ಪಾರ್ಟಿಯ ಉದ್ದೇಶ ಪತ್ರಿಕೆಗಳಿಂದಲೆ ತಿಳಿಯಬೇಕಲ್ಲದೆ ಇತರ ಪಕ್ಷಗಳು ಆತ್ಮ ಹಿತ ಸಾಧನಗಳಲ್ಲಿ ಮಗ್ನವಾಗಿವೆ. ಮೊನ್ನೆಯ ಚುನಾವಣೆಯಲ್ಲಿ ೧೪೦ ಸ್ಥಾನಗಳನ್ನು ಮಜೂರು ಉಮೇದುವಾರರು ಆಕ್ರಮಿಸಿದ್ದಾರೆ. ಇದು ಎಷ್ಟು ಸಂತೋಷದ ಮತ್ತು ಅಭಿಮಾನಾಸ್ಪದವಾದ ಮಾತಾಗಿದೆಯೊ, ಮಿ. ಸಕಲಾತವಾಲಾ ಎಂಬ ಮುಂಬಯಿಯ ಸದ್‌ಗೃಹಸ್ಥರು ಇದೆ ಯಶಸ್ವಿ ಉಮೇದುವಾರರಲ್ಲಿ ಒಬ್ಬರಾಗಿದ್ದರೆಂಬುದು ಸಹ ಅಷ್ಟೆ ಅಭಿಮಾನಾಸ್ಪದ ಸಂಗತಿಯಾಗಿದೆ. ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಪರಲೋಕವಾಸಿಗಳಾದ ದಾದಾಭಾಯಿ ನವರೋಜಿಯವರು ಮತ್ತು ಸರ್. ಮಂಚರಜಿ ಭಾವನಗರಿಯವರು ಸಭಾಸದತ್ವದ ಸ್ಥಾನವನ್ನು ಅಲಂಕರಿಸಿದ್ದಾರೆ ಎಂಬುದು ನಿಜ. ಹಿಂದಿ ಗೃಹಸ್ಥರು ಈ ಮೇರೆಗೆ ಮೊದಲೆ ಪಾರ್ಲಿಮೆಂಟ ಪ್ರವೇಶವನ್ನು ಪಡೆದಿರುವ ಕಾರಣ ಮಿ. ಸಕಲಾತವಾಲರ ಪ್ರವೇಶವು ಅಪೂರ್ವವಾದ ವಿಷಯವಲ್ಲವೆಂದು ವಾಚಕರು ನೆನೆಸಬಹುದು. ಆದರೆ ಮೊದಲಿನ ಕಾಲದ ರಾಜಕೀಯ ಕಲ್ಪನೆಗಳಿಗೂ ಈಗಿನ ಪರಿಸ್ಥಿತಿಗೂ ಮತ್ತು ಉಚ್ಚಧ್ಯೇಯಕ್ಕೂ ಎಷ್ಟೊ ಅಂತರವಿರುವ ಕಾರಣ ಮತ್ತು ಈ ಅಂತರವನ್ನು ತಿಳಿದು ತನಗೆ ಸಿಕ್ಕಿದ ಸಂದರ್ಭವನ್ನು ಮಿ. ಸಕಲತ್‌ವಾಲರು ಹಿಂದಿ ಸ್ವರಾಜ್ಯದ ಸಾಧನದಲ್ಲಿ ಉಪಯೋಗಿಸಿದ್ದಾದರೆ ಅವರ ಪ್ರವೇಶವು ನಿಜವಾಗಿ ಅಪೂರ್ವವೆಂದೆ ಹೇಳಬೇಕಾದೀತು. ಮಿ. ಸಕಲಾತವಾಲರು ತನ್ನ ಪವಿತ್ರ ಕರ್ತವ್ಯವನ್ನು ಸಾಧಿಸಿ ದೇಶಬಾಂಧವರ ಇನ್ನಷ್ಟು ಅಭಿನಂದನಕ್ಕೆ ಪಾತ್ರರಾದಾರೆಂದು ನಂಬಿದ್ದೇವೆ. ಕೊನೆಗೆ ಒಂದು ಮಾತನ್ನು ಹೇಳಿ ಈ ಲೇಖವನ್ನು ಮುಕ್ತಾಯಗೊಳಿಸುವೆವು. ಹಿಂದುಸ್ಥಾನದ ಸ್ವರಾಜ್ಯವು ಹಿಂದಿ ಜನಗಳ ಸ್ವಾವಲಂಬನದ ಪ್ರಯತ್ನಗಳನ್ನೆ ಅಪೇಕ್ಷಿಸುತ್ತದೆ ಎಂಬುದು ನಿಜ. ಪರಕೀಯರ ಮೇಲೆ ಆಧರಿಸಿ ನಿಲ್ಲಬಾರದು ಎಂಬ ತತ್ವವು ಸತ್ಯಪೂರ್ಣವಾದ್ದು. ಆದರೂ ಅನಾಯಾಸವಾಗಿ ಸಿಗುವ ಸಂದರ್ಭವನ್ನು ಕಳಕೊಳ್ಳುವವನು ಹತದೈವಿಯೆಂಬ ಮಾತು ಸಹ ಅಷ್ಟೆ ಬೆಲೆಯುಳ್ಳದ್ದು ಮತ್ತು ತೂಕದ್ದಾಗಿದೆ. ಇದನ್ನು ಯಾರೂ ಮರೆಯಕೂಡದು. ಆದ್ದರಿಂದ ತಾರತಮ್ಯವನ್ನು ಉಪಯೋಗಿಸಿ ಹಿಂದುಸ್ಥಾನವು ಈ ಮಜೂರ ಪಕ್ಷದ ಬಹುಮತದ ಸದುಪಯೋಗವನ್ನು ಪಡಕೊಳ್ಳಲು ಎಂದೂ ತಪ್ಪಲಿಕ್ಕಿಲ್ಲ. ಮತ್ತು ಅದರ ಈ ಕಾರ್ಯದಲ್ಲಿ ಯಾರೂ ಅಪಶಕುನಮಾಡಲಿಕ್ಕಿಲ್ಲವೆಂದು ಭರವಸವಿದೆ.

ಸ್ಫುಟವಿಚಾರಗಳು.

೧. ಈಗ ಎರಡು ಮೂರು ತಿಂಗಳಿಂದ ಪಂಜಾಬದಲ್ಲಿ ನಡೆಕೊಂಡಿದ್ದ ಅಕಾಲಿಜನರ ಸತ್ಯಾಗ್ರಹಕ್ಕೆ ಕೆಲವಂಶದಲ್ಲಿ ಜಯಬಂತೆಂದು ಹೇಳಬಹುದು. ಸರಕಾರವು ಇದು ವರೆಗೆ ೫೦೦೦ಕ್ಕಿಂತಲೂ ಹೆಚ್ಚು ಅಕಾಲಿ ಸತ್ಯಾಗ್ರಹಿಗಳನ್ನು ಪ್ರತಿಬಂಧಿಸಿದೆ. ಪರಂತು ಈ ಚಳವಳವು ಇಷ್ಟರಿಂದಲೆ ನಿಲ್ಲದೆ, ಸಿಕ್ಕರಲ್ಲಿ ಇನ್ನೂ ಅಧಿಕ ಪ್ರಮಾಣದಿಂದ ಹಬ್ಬಹತ್ತಿ, ಆ ಮೂಲಕ ಸೈನ್ಯದಲ್ಲಿ ಅಸಂತೋಷವು ಪಸರಿಸಬಹುದೆಂದು ಎಣಿಸಿ, ಅಧಿಕಾರಿಗಳು ಗುರಕಾಬಾಗದಿಂದ ಪೋಲೀಸರನ್ನು ಹಿಂದಕ್ಕೆ ಎಳೆದಿದ್ದಾರೆ. ಸತ್ಯಾಗ್ರಹಿಗಳನ್ನು ಕೈದುಮಾಡುವುದನ್ನು ನಿಲ್ಲಿಸಿದ್ದಾರೆ. ಸುಂದರದಾಸನೆಂಬ ಮಹತನು ಆ ಗುರಕಾಬಾಗವನ್ನು ಬೇರೊಬ್ಬನಿಗೆ ಕೊಟ್ಟಿರುವನು. ಆ ಸುಂದರ ದಾಸನ ಸಂರಕ್ಷಣೆಗಾಗಿ ೫ ಜನ ಪೋಲೀಸರನ್ನು ಇಟ್ಟದೆ. ಸರಕಾರವು ತನ್ನ ಕಡೆಯ ಅತ್ಯಾಚಾರವನ್ನು ನಿಲ್ಲಿಸಿ ದೂರದರ್ಶಿತೆಯನ್ನು ತೋರಿಸಿದೆ ಎಂದು ಹೇಳಬಹುದು. ಈ ಹೊತ್ತು ಸರಕಾರವು ಯಾವ ತಿಳಿವಿಗೆ ಬಂದು ತಲಪಿದೆಯೊ, ಅದು ಮೊದಲೆ ಆ ತಿಳಿವನ್ನು ಕಂಡುಹಿಡಿಯಬಹುದಿತ್ತು. ಆದರೆ ಆಗ ಅದರ ತಲೆಯಲ್ಲಿ ಯಾವ ಆಲೋಚನೆಗಳಿದ್ದವೊ ತಿಳಿಯದು. ಆದರೆ ಅಕಾಲಿಬಂಧುಗಳು ಈ ತರದ ದೃಢನಿಶ್ಚಯದಿಂದ ಸತ್ಯಾಗ್ರಹವನ್ನು ಕೈಕೊಂಡರು, ಇದೆ ಸತ್ಯಾಗ್ರಹವು ಕೆಲಸಮಯ ಮುಂದರಿಸಿದ್ದಾದರೆ, ಒಂದು ವೇಳೆ ಮೇಲೆ ಸೂಚಿಸಿದಂತೆ ದಾರುಣಪ್ರಸಂಗವು ಒದಗೀತೆಂದು ತಿಳಿದು, ಯಾರು ಯಾವ ತರದ್ದೂ ಪ್ರತಿಬಂಧವನ್ನು ಮಾಡದೆ ಉದಾಸೀನನಾಗಿದ್ದಾನೊ ಅಂಥವನ ಕುತ್ತಿಗೆಗೆ ಗುರಕಾಬಾಗವನ್ನು ಕಟ್ಟಿಸಿ, ತನ್ನ ಸೈನ್ಯವನ್ನು ಹಿಂತೆಗೆಯುವ ಯುಕ್ತಿಯನ್ನು ಪಂಜಾಬ ಸರಕಾರವು ಮಾಡಿದೆ. ಈ ಮೇರೆಗೆ ಅಕಾಲಿ ವರ್ಗದ ಆಕ್ಷೇಪಣೆಗೆ ಕಾರಣವಾದ ಸಂಗತಿಯನ್ನು ಸರಕಾರವು ಅಪ್ರತ್ಯಕ್ಷ ರೀತಿಯಿಂದ ತಪ್ಪಿಸಿದ ಕಾರಣ ಅಕಾಲಿಗಳ ಸತ್ಯಾಗ್ರಹವು ನಿಂತಿದೆ. ಇದರಿಂದ ಗುರಕಾಬಾಗದ ಸಂಬಂಧವಾದ ಅಕಾಲಿ ಸತ್ಯಾಗ್ರಹಿಗಳ ಚಳವಳದ ಒಂದನೆಯ ಅಂಕವು ಮುಗಿದು, ಪರದೆ ಬಿದ್ದಂತೆ ಆಗಿದೆ ಎಂಬುದಕ್ಕೆ ಸಂಶಯವಿಲ್ಲ. ಆದರೂ ಕಾಯಿದೆ ಕೌನ್ಸಿಲಿನಲ್ಲಿ ಗುರಕಾಬಾಗದ ಬೀಲು ಅಕಾಲಿಗಳಿಗೆ ಅಭಿಮತವಾದ ರೀತಿಯಲ್ಲಿ ಬಂದು ಪಾಸಾಗುವ ವರೆಗೆ ಇದು ಸಂಪೂರ್ಣ ಶಾಂತವಾಯಿತೆಂದು ತಿಳಿಯಲು ಮಾತ್ರ ಸಾಧ್ಯವಿಲ್ಲ.

೨. ಅಕಾಲಿಗಳಿಗೆ ಪಂಜಾಬ ಸರಕಾರವು ಈ ರೀತಿಯಿಂದ ಸತ್ಯಾಗ್ರಹವನ್ನು ಮಾಡಗೊಡದೆ ಮೊದಲೆ ಅವರ ಅಭಿಮತವನ್ನು ಅನುಕೂಲಿಸಿ ಕೊಟ್ಟದ್ದಾದರೆ, ಈ ಚಳವಳದ ದೆಸೆಯಿಂದ ಸರಕಾರಿ ಪೋಲೀಸರಿಗೆ ಮತ್ತು ಸೈನ್ಯಕ್ಕೆ ಯಾವ ಅನೇಕ ಭಯಂಕರ ಕೃತ್ಯಗಳನ್ನು ಆಚರಿಸಬೇಕಾಗಿ ಬಂತೊ, ಮತ್ತು ಈ ಕಾರಣದಿಂದ ಅಕಾಲಿ ಬಾಂಧವರಿಗೆ ಯಾವ ಅನೇಕ ಸಂಕಷ್ಟಗಳನ್ನು ಅನುಭವಿಸಬೇಕಾಗಿ ಬಂತೊ ಅವುಗಳೊಂದರದೂ ಆವಶ್ಯಕತೆಯು ಇರಲಿಲ್ಲ. ಈ ದೃಷ್ಟಿಯಿಂದ ವಿಚಾರಿಸಿದ್ದಲ್ಲಿ ಸರಕಾರವು ಎಂದಿನಂತೆ ಬಹು ದೊಡ್ಡ ಪ್ರಮಾದವನ್ನು ಮಾಡಿತೆಂದು ಹೇಳಬೇಕಾಗುತ್ತದೆ. ಒಂದು ದೃಷ್ಟಿಯಿಂದ ಸರಕಾರದ ಈ ಕೃತ್ಯವು ಶೋಚನೀಯವಾಗಿದ್ದರೂ ಇನ್ನೊಂದು ದೃಷ್ಟಿಯಿಂದ ಸರಕಾರವನ್ನು ಅಭಿನಂದಿಸಬಹುದು. ಸಾರ್ವತ್ರಿಕ ಸಿವಿಲ್ ಡಿಸ್‌ಒಬ್ಬೀಡಿಯನ್ಸನ್ನು ಮತ್ತು ಕೆಲವಂಶದಿಂದ ವೈಯಕ್ತಿಕ ಸಿವಿಲ್‌ಡಿಸ್‌ಒಬ್ಬೀಡಿಯನ್ಸನ್ನು ಪ್ರಾರಂಭಿಸುವುದು ಸದ್ಯಃ ಅಶಕ್ಯವೆಂದು ಬಾರಡೋಲಿಯ ಕಾಯಿದೆಭಂಗದ ಚಳವಳವನ್ನು ನಿಲ್ಲಿಸಿದಂದಿನಿಂದ ಜನತೆಯು ಹೆಚ್ಚಾಗಿ ಮಹಾತ್ಮರ ಕಡು ಅನುಯಾಯಿಗಳ ತಿಳಿವುಂಟಾಗಿದೆ. ಆದರೆ ಈ ತಿಳಿವು ವಸ್ತುಸ್ಥಿತಿಗೆ ಎಷ್ಟರ ಮಟ್ಟಿಗೆ ಬಿಟ್ಟಿರುತ್ತದೆ ಎಂಬುದ್ದೊ ಅಕಾಲಿಗಳು ಶಾಂತಪ್ರಧಾನವಾದ ತಮ್ಮ ಚಳವಳದಿಂದ ಜಗತ್ತಿನ ನಿದರ್ಶನಕ್ಕೆ ತಂದು ಕೊಟ್ಟಿದ್ದಾರೆ. ಇಂಥ ತಿಳಿವನ್ನು ತಂದುಕೊಡಲು ಒಂದು ರೀತಿಯಿಂದ ಸರಕಾರವೆ ಸಹಾಯಕವಾದ್ದರಿಂದ ಆ ಬಗ್ಗೆ ಅದನ್ನು ಅಭಿನಂದಿಸದೆ ಯಾರಿಂದಲೂ ಇರಲಾಗದು. ಆಂಧ್ರ ಪ್ರಾಂತದಲ್ಲಿ ಪ್ರಾರಂಭವಾಗಲಿಕ್ಕಿದ್ದ ಅಥವಾ ಬಾರದೋಲಿಯಲ್ಲಿ ಸುರುವಾಗಲಿಕ್ಕಿದ್ದ ಸತ್ಯಾಗ್ರಹವು ಧಾರ್ಮಿಕ ಉದ್ದೇಶದ್ದಲ್ಲ, ಇಲ್ಲವೆ ಒಂದು ವಿವಕ್ಷಿತ ವರ್ಗದ ಹಿತಸಂಬಂಧದ್ದೂ ಅಲ್ಲ. ಈ ಸಂಗತಿಗಳು ನಿಜ. ಸಾಮುದಾಯಿಕ ಸ್ವರೂಪದ ಮತ್ತು ಕರಭಂಗದಂಥ ಸರಕಾರದ ಸಂಬಂಧದ ಚಳವಳದಲ್ಲಿ ಅನೇಕ ದಾರಿಗಳಿಂದ ಹಲವು ವಿಧವಾಗಿ ತೊಂದರೆಗಳು ತಲೆದೋರಿ ನೋಡುತ್ತವೆ. ಮತ್ತು ರೋಗದ ಅಣುಗಳು ಸಂಧಿಯನ್ನು ಹುಡುಕುವಂತೆ ಚಳವಳವನ್ನು ಕಡಿದು ಹಾಕಲು ಅನೇಕ ವಿಘ್ನಗಳು ತತ್ಪರವಾಗಿ ನಿರೀಕ್ಷಿಸುತ್ತಿರುತ್ತವೆ ಎಂಬುದು ಕೂಡ ಸತ್ಯವಾದ ಸಂಗತಿಯೆ ಸರಿ. ಆದರೆ ಸಂಕುಚಿತವಾದ ವಿವಕ್ಷಿತ ಉದ್ದೇಶದಿಂದ ಮಾಡಲಿರುವ ಸತ್ಯಾಗ್ರಹದಲ್ಲಿ ಶಾಂತತಾ ವಾತಾವರಣವು ಬೇಡವೆ ಬೇಡವೆಂದಿಲ್ಲ. ಹೀಗಿರುವಲ್ಲಿ ಅಂಥ ಅಕಾಲಿಗಳು ಅಂಥ ಒಂದು ಚಳವಳವನ್ನು ಯಶಸ್ವಿಯನ್ನಾಗಿ ಮಾಡಿದರು,—ಅದು ಕೂಡ ಡಿಕ್ಟೇಟರರ ಅಭಾವದಲ್ಲಿ, ಇಡಿ ದೇಶದಲ್ಲಿ ೧೫ ಘಂಟೆಯ ಮಧ್ಯರಾತ್ರಿಯು ಶಾಂತತೆಯು ಸಂಪೂರ್ಣವಾಗಿರಬೇಕೆಂದು ಹೇಳುವ ಡಿಕ್ಟೇಟರರ ಅಭಾವದಲ್ಲಿ—ಪುನಃ ಮುಲ್ತಾನಿನಲ್ಲಿ ದಂಗೆಯಾ[illegible]ವಾಗ ಸಹ ಈ ಚಳವಳವನ್ನು ಯಶಸ್ವಿಯನ್ನಾಗಿ ತೋರಿಸಿದರು—ಈ ಬಗ್ಗೆ ಅಕಾಲಿಗಳು ಹಿಂದಿಗಳ ಸ್ತುತಿಗೆ ಪಾತ್ರರಾಗದೆ ಇರರು. ಶಾಂತತಾ ಪ್ರಧಾನವಾದ ಚಳವಳದ ರುಚಿಯು ಕಾಯಿದೆ ಭಂಗದಲ್ಲಿದ್ದಂತೆ ಬರೆ ನೀರಸವಾದ ವಿಧಾಯಕ ಚಳವಳದಲ್ಲಿ ಇಲ್ಲ, ಅದಕ್ಕಿಂತ ಕೌನ್ಸಿಲ್ ಪ್ರವೇಶವಾದರೂ ಸಾವಿರ ಪಾಲಿಗೆ ಆದೀತು ಎಂಬೀ ಮತಕ್ಕೆ ಅಕಾಲಿಗಳ ಸತ್ಯಾಗ್ರಹದ ಚಳವಳವು ಸರಿಯಾಗಿ ಪುಷ್ಟೀಕರಣವನ್ನು ಕೊಡುತ್ತದೆ.

೩. ವಿಲಾಯತಿಯ ಪಾರ್ಲಿಮೆಂಟಿನ ಚುನಾವಣೆಯು ಕಳೆದವಾರ ಮುಗಿಯಿತು. ಸ್ವಾತಂತ್ರ್ಯ ಪ್ರಿಯ ದೇಶದಲ್ಲಿ, ಇಂಗ್ಲಂಡು ಉಚ್ಚಸ್ಥಾನವನ್ನು ಪಡೆದಿದೆಯಾದರೂ ಮಧ್ಯಾಹ್ನ ಸೂರ್ಯನ ಸ್ಪಷ್ಟ ಪ್ರಕಾಶದಲ್ಲಿ ಸಹ ಮರದ ಓಟೆಗಳಲ್ಲಿ ಅಥವಾ ಗಿರಿ ಗುಹೆಗಳಲ್ಲಿ ಗೂಬೆಗಳು ಕುಳಿತುಕೊಳ್ಳುವಂತೆ ಅಂಥ ವಿಲಾಯತಿಯಲ್ಲಿ ಕೂಡ, ಈ ಹೊತ್ತು ಕನ್ಸರವೇಟಿವ್ ತಲೆಗಳು ಸುಳಿದಾಡುತ್ತವೆ ಎಂದು ಈಗಿನ ಇಲೆಕ್ಷನಿನಿಂದ ಸಹ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಪಾರ್ಲಿಮೆಂಟಿನ ೬೧೫ ಜನ ಸಭಾಸದರಲ್ಲಿ ಕನ್ಸರವೇಟಿವ್ ಪಕ್ಷದಿಂದ ಯಾವ ೩೪೭ ಜನರು ಚುನಾಯಿಸಿ ಬಂದಿದ್ದಾರೊ ಅದರ ಮೇಲಿಂದ ಅವರಿಗೆ ಅಪವಾದರೂಪದಲ್ಲಿರುವ ಗೂಬೆಯ ದೃಷ್ಟಾಂತವನ್ನು ಮೇಲೆ ಉದಾಹರಿಸಿದ್ದು ಅಷ್ಟೊಂದು ಸಮರ್ಪಕವಲ್ಲವೆಂದೆ ವಾಚಕರು ತಿಳಿದಾರು. ಎಲ್ಲಿಯ ರಾಜ್ಯ ಪದ್ಧತಿಯು ಇನ್ನೂ ಅರ್ಧಕ್ಕಿಂತ ಹೆಚ್ಚು ಅನುದಾರ ಮತಾನುಯಾಯಿಗಳನ್ನೆ ಒಪ್ಪಿಕೊಳ್ಳುವುದೊ ಅದರ ಪ್ರಶಂಸೆಯನ್ನು ಮಾಡುವುದು ಶಬ್ದಗಳ ವಾಸ್ತವ ಮರ್ಯಾದೆಯನ್ನು ಉಲ್ಲಂಘಿಸುವದಾಗಿದೆ. ಆದರೂ ಈಗಿನ ಚುನಾವಣೆಯಲ್ಲಿ ಬಹು ದೊಡ್ಡ ಸಮಾಧಾನದ ಒಂದು ಚಿಕ್ಕ ಸಂಗತಿಯು ಇದೆ. ಮುಂಚಿನ ಚುನಾವಣೆಗಳಲ್ಲಿ ಲೇಬರ ಪಾರ್ಟಿಯು ಸಾಧಾರಣವಾಗಿ ೭೦-೮೦ ಸ್ಥಾನಗಳನ್ನು ಹೊಂದುತ್ತಿತ್ತು; ಈಗಿನ ಚುನಾವಣೆಯಲ್ಲಿ ಸರಿ ಇಮ್ಮಡಿ ಎಂದರೆ ೧೪೦ ಜನ ಸಭಾಸದರು ಲೇಬರಪಾರ್ಟಿಯ ಪರವಾಗಿ ಚುನಾಯಿಸಲ್ಪಟ್ಟಿದ್ದಾರೆ. ಇದೆ ಕ್ರಮವು ಕಾಲಕ್ರಮೇಣ ಮುಂದರಿಸಿದರೆ ಲೇಬರ ಪಾರ್ಟಿಯು ಒಂದು ಕಾಲದಲ್ಲಿ—ಯಾಕೆ ಬೇಗನೆ, ಬಹು ಸಂಖ್ಯಾಕವಾಗಿ ಅಧಿಕಾರಾರೂಢವಾದೀತು ಎಂದು ಅನೇಕರು ಅಭಿಪ್ರಾಯಪಡುತ್ತಾರೆ. ಮತ್ತು ಸುತ್ತುಮುತ್ತಲಿನ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದು ಹೇಳುವುದಾದರೆ ಇದರಲ್ಲಿ ಎಷ್ಟೊ ಸತ್ಯಾಂಶವಿದೆ ಎಂದು ಯಾರಿಗೂ ತಿಳಿಯದೆ ಇರದು. ಮಜೂರಪಕ್ಷವೆ ಇನ್ನು ಮುಂದೆ ಅಧಿಕಾರಾರೂಢವಾಗುವುದೆಂಬ ಸಂಗತಿಯನ್ನು ೩-೪ ವರ್ಷಗಳ ಹಿಂದೆಯೆ ಬೆ. ಬೆಪ್ಪಿಸ್ಸರರು ಊಹಿಸಿ ಹಿಂದಿ ಸ್ವರಾಜ್ಯದ ವಿಷಯವಾಗಿ ಅದರ ಯೋಗ್ಯ ಸಹಾನುಭೂತಿಯನ್ನು ಹೇಗೆ ಹೊಂದಿರುವರು, ಅನಂತರ ಆ ಪಕ್ಷದ ಒಂದು ಸುಪ್ರಸಿದ್ಧ ಪರಿಷತ್ತಿನಲ್ಲಿ ಅವರು ಹಿಂದಿ ಸ್ವರಾಜ್ಯದ ಠರಾವನ್ನು ಹೇಗೆ ಪಾಸುಮಾಡಿದರು ಇತ್ಯಾದಿ ವಿಷಯಗಳು ಹಿಂದಿ ಜನಾಂಗದ ಮುಂದೆ ಇದ್ದೆ ಇವೆ. ನಾಲ್ಕು ವರ್ಷಗಳ ಹಿಂದಿನ ಬೆಪ್ಪಿಸ್ಸರ ಭವಿಷ್ಯವು ಈ ಹೊತ್ತಿನ ದಿವಸ ಅನುಭವಕ್ಕೆ ಬರಹತ್ತಿದೆ. ಇದರ ಯೋಗ್ಯ ಪ್ರಯೋಜನವನ್ನು ಈಗಲಾದರೂ ರಾಷ್ಟ್ರೀಯ ಸಭೆಯು ಪಡಕೊಳ್ಳದೆ ಇರಲಿಕ್ಕಿಲ್ಲ. "ಈಗಲಾದರೂ" ಎಂದು ಹೇಳುವ ಕಾರಣವೇನೆಂದರೆ, ಬಹಿಷ್ಕಾರದ ಈ ದಿವಸಗಳಲ್ಲಿ ರಾಷ್ಟ್ರೀಯ ಸಭೆಯು ನಾಗಪುರದ ಅಧಿವೇಶನದಂದಿನಿಂದ ಇಂಗ್ಲಂಡಿನೊಳಗಿನ ಮತ್ತು ಇತರ ದೇಶಗಳಲ್ಲಿಯ ಹಿಂದಿ ಸ್ವರಾಜ್ಯದ ಚಳವಳವನ್ನು ಅನವಶ್ಯಕವೆಂದು ನಿಲ್ಲಿಸಲು ಕಟ್ಟಪ್ಪಣೆಯನ್ನು ಕೊಟ್ಟು ಅದರ ಮೇಲೆ ಬಹಿಷ್ಕಾರವನ್ನು ಹಾಕಿದ್ದರಿಂದ ಅಲ್ಲಿಯ ಚಳವಳದ ನಾಡಿಗಳನ್ನು ಸಂಕುಚಿತ ಪಡಿಸಿದ ಹಾಗಾಗಿದೆ! ಈಗಲಾದರೂ ಈ ಸುಸಂದರ್ಭದ ಪ್ರಯೋಜನವನ್ನು ರಾಷ್ಟ್ರೀಯ ಸಭೆಯು ಪಡಕೊಂಡರೆ ಸಾಧ್ಯವು ಇನ್ನಷ್ಟು ಬೇಗನೆ ಸಮೀಪಿಸುವುದು. ಇರಲಿ.

೪. ಕೆಲವು ಸಮಯದ ಹಿಂದೆ ಅಧಿಕಾರಾರೂಢವಾಗಿದ್ದ ಲಿಬರಲ್ ಪಕ್ಷವು ಇಂಗ್ಲಂಡಿನ ಇತ್ತಲಾಗಿನ ಅನುದಾರಮತದ ಕೃಷ್ಣಪಕ್ಷದ ರಾತ್ರಿಗಳಲ್ಲಿ ಚಿಕ್ಕದಾಗುತ್ತ ಬಂದಿದೆ. ಇದೊಂದು ಶೋಚನೀಯವಾದ ವಿಷಯವೆ ಸರಿ. ಯುದ್ಧದ ಪೂರ್ವದಲ್ಲಿ ಮತ್ತು ಆದಿಯಲ್ಲಿ ಲಿಬರಲ್ ಪಕ್ಷವು ಪ್ರಬಲವಾಗಿದ್ದು ಮಿ. ಎಸ್‌ಕ್ವಿತರು ಮುಖ್ಯ ಮಂತ್ರಿಗಳಾಗಿದ್ದರು. ಆದರೆ ಯುದ್ಧದಲ್ಲಿ ಆ ಸಮಯಕ್ಕೆ ಬರುತ್ತಿದ ಅಪಜಯದಿಂದ ಈ ಪಕ್ಷದ ಮೇಲಿನ ನಂಬಿಕೆಯು ಮತ್ತು ಅಭಿಮಾನವು ಕಡಿಮೆಯಾಗುತ್ತ ಹೋಗಿ ಈಗ ಅದು ಕಡಿಮೆ ತನದಲ್ಲಿ ಎಷ್ಟು ಪರಮಾವಧಿಯನ್ನು ಹೊಂದಿದೆ ಎಂದರೆ, ಮೊನ್ನೆಯ ಚುನಾವಣೆಯಲ್ಲಿ ೫೪ ಜನರು ಈ ಪಕ್ಷದಲ್ಲಿ ಚುನಾಯಿಸಿ ಬಂದಿರುವರು! ನೆಶನಲ್ ಲಿಬರಲ್ಸರು ೪೫, ಇಂಡಿಪೆಂಡಂಟ್ಸರು ೧೫ ಈ ಮೇರೆಗೆ ಇತರರು ಅಲ್ಪ ಸ್ವಲ್ಪ ಚುನಾಯಿಸಿ ಬಂದಿರುತ್ತಾರೆ. ಆದರೆ ಇನ್ನು ಮುಂದಿನ ಕಾರಭಾರದಲ್ಲಿ ಕನ್ಸರವೇಟಿವ್ ಮತ್ತು ಮಜೂರ ಪಕ್ಷದವರೊಳಗೆನೆ ಸರಿಯಾದ ಕಚ್ಚಾಟವು ನಡೆದೀತಲ್ಲದೆ, ಇತರ ಪಕ್ಷಗಳು ಬರೆ ನಾಮಧಾರಿಗಳೆ ಸರಿ. ಒಂದು ಸಂಗತಿಯು ಮಾತ್ರ ನಿಶ್ಚಿತವಾದ್ದು. ಮಂತ್ರಿಮಂಡಲವು ಮೊದಲಿನಂತೆ ಕನ್ಸರವೇಟಿವರ ಬಾಹುಲ್ಯದಿಂದ ಕೂಡಿರುವುದು. ಲೊಯ್ಡ ಜೋರ್ಜರ ಸಮ್ಮಿಶ್ರ ಪಕ್ಷದವರಲ್ಲಿ ಮಿ. ಚರ್ಚಹಿಲ್ ಮುಂತಾದವರು ಹಾಗು ಮಿ. ಮೊಂಟೆಂಗ್ಯುಗಳು ಚುನಾಯಿಸಲ್ಪಡಲಿಲ್ಲ. ಹಿಂದುಸ್ಥಾನದ ಮಟ್ಟಿಗೆ ಮಿ. ಮೊಂಟೆಗ್ಯುಗಳು ಚುನಾವಣೆಯಲ್ಲಿ ಯಶಸ್ಸನ್ನು ಹೊಂದದೆ ಇದ್ದದ್ದು ವ್ಯಸನಕರವೆಂಬುದಕ್ಕೆ ಸಂಶಯವಿಲ್ಲ. ಮಿ. ಸಕಲಾತವಾಲಾ ಎಂಬರೊಬ್ಬ ಮುಂಬಯಿಯ ಗೃಹಸ್ಥರು ಮಜೂರ ಪಕ್ಷದಲ್ಲಿ ಚುನಾವಣೆ ಹೊಂದಿರುತ್ತಾರೆ, ಇದು ಸಂತೋಷದ ಮಾತಾಗಿದೆ. ಪಾರ್ಲಿಮೆಂಟಿನ ಚುನಾವಣೆಯು ಈ ಮೇರೆಗೆ ಉಂಟಾಗಿದೆಯಾದರೂ ವಿಲಾಯತಿಯ ಕಾಯಮಿನ ಮಂತ್ರಿಮಂಡಲವು ಇನ್ನು ಮುಂದೆ ಆಗಬೇಕಾಗಿದೆ. ಆದರೆ ಮಿ. ಬೋನರಲೊ ಇವರು ತಮ್ಮ ಮಂತ್ರಿಪದವನ್ನು ಗಟ್ಟಿಮಾಡಿಕೊಳ್ಳದೆ ಇರಲಿಕ್ಕಿಲ್ಲ. ಇವರ ಮಂತ್ರಿಮಂಡಲವಾದರೂ ಸಮ್ಮಿಶ್ರ ಪಕ್ಷದ ತತ್ವದಿಂದಲೆ ನಡೆದೀತು. ಈ ಸಮ್ಮಿಶ್ರ ಪಕ್ಷದಲ್ಲಿ ಕನ್ಸರವೇಟಿವರ ವರ್ಚಸ್ಸು ಅಧಿಕವಾಗಿ ಬೀಳುವದಿದ್ದ ಕಾರಣ ಸ್ವಯಂ ಇಂಗ್ಲಂಡಿನ ವಿಷಯವಾಗಿ ಅಂತರ್ಗತ ಕಾರಭಾರದ ಸಂಬಂಧ ಅಷ್ಟೊಂದು ತೊಂದರೆಯು ಉಪಸ್ಥಿತವಾಗದಿದ್ದರೂ ಈಜಿಪ್ಟ, ಹಿಂದುಸ್ಥಾನ ಮುಂತಾದ ಅಂಕಿತ ರಾಷ್ಟ್ರಗಳನ್ನು ತಲೆಎತ್ತಲು ಬೋನರಲೊ ಸಾಹೇಬರ ಮಂತ್ರಿಮಂಡಲವು ಬಿಡಲಿಕ್ಕಿಲ್ಲ. ಐರ್ಲಂಡಿನ ಇಷ್ಟಸಿದ್ಧಿಗೂ ಎಷ್ಟರ ಮಟ್ಟಿಗೆ ಇದು ತೊಡಕಾಗಿ ನಿಂತೀತೆಂಬುದು ಸಹ ಊಹನೀಯವಾಗಿದೆ. ಸಾರಾಂಶ ಮುಂದಿನ ಮಂತ್ರಿಮಂಡಲವು ಬೋನರಲೊ ಸಾಹೇಬರ ಧುರೀಣತೆಯ ಕೆಳಗೆ ಬಂದದ್ದಾದರೆ ಬ್ರಿಟಿಷ್ ಸಾಮ್ರಾಜ್ಯಕ್ಕೆ ಹೆಚ್ಚಿನ ಸುಖ ಪ್ರಾಪ್ತಿಯಾದೀತೆಂದು ಎಷ್ಟೋ ರಾಜಕಾರಣಿಗಳು ಒಪ್ಪುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯವು ಲೋಕದೊಳಗಿನ ವಿದ್ಯಮಾನ ರಾಷ್ಟ್ರಗಳಲ್ಲಿ ಒಂದನೆಯ ತರಗತಿಯದಾದ್ದರಿಂದ ಜಗತ್ತಿನ ರಾಜಕರಣದ ಮೇಲೆ ಈ ಚುನಾವಣೆಯು ಮತ್ತು ಮುಂದಿನ ಮಂತ್ರಿಮಂಡಲದ ಯಾವ ಪರಿಣಾಮವುಂಟಾಗುವುದೆಂಬುದನ್ನು ಈಗಲೆ ವಿಶದಪಡಿಸಿ ಹೇಳುವುದು ಅಥವಾ ಹೇಳಲು ಯತ್ನಿಸುವುದು ಅವಸರದ ಮತ್ತು ಅಚಾತುರ್ಯದ ಕೆಲಸವಾದೀತು. ಆದ್ದರಿಂದ ಈ ಪ್ರಶ್ನೆಯನ್ನು ಬಿಟ್ಟು ಬರಿ ಹಿಂದುಸ್ಥಾನದ ಭಾವಿ ರಾಜಕಾರಣದ ವಿಷಯವನ್ನೆ ಊಹನೆಯಿಂದ ಹೇಳುವುದಾದರೆ, ಕನ್ಸರವೇಟಿವರ ಅನುದಾರಕಾರಭಾರದ ಸೆಕೆಯಿಂದ ಹಿಂದುಸ್ಥಾನದ ರಾಜನಿಷ್ಠೆಯ ಅರಗು ಕರಗಹತ್ತುವುದು. ಆಗ ಹಿಂದುಸ್ಥಾನದ ಅಸಹಕಾರವು ಇನ್ನಷ್ಟು ಗಟ್ಟಿಯಾಗುವುದು. ಈ ಸಂದರ್ಭದಲ್ಲಿ ಲೇಬರ ಪಕ್ಷವು ಮಧ್ಯದಲ್ಲಿ ಬಿದ್ದು ಹಿಂದುಸ್ಥಾನದ ಹೋಮ್‌ರೂಲ್ ಬೀಲನ್ನು ಪಾರ್ಲಿಮೆಂಟಿನ ಮುಂದೆ ತರಲಿಕ್ಕೂ ಸಾಕು. ಈ ಕಾರಣದಿಂದ ಬಳಿಕ ಕನ್ಸರವೇಟಿವ್ ಪಕ್ಷವು ರಾಜಿಯನ್ನು ಕೊಟ್ಟು ಹೋಗಲಿಕ್ಕೂ ಸಾಕು! ಇವೆಲ್ಲ ಊಹನೆಗಳು. ಆದರೆ ಭವಿಷ್ಯತ್ಕಾಲದ ಹೊಟ್ಟೆಯಿಂದ ನಿಜವಾಗಿ ಯಾವ ಯಾವ ಸಂಗತಿಗಳು ಹೊರಗೆ ಬರಲಿಕ್ಕಿಲ್ಲವೆ ಎಂಬುದನ್ನು ಗಟ್ಟಿಯಾಗಿ ಈಗಲೆ ಹೇಗೆ ಹೇಳೋಣ.

೫. ಓಲ್-ಇಂಡಿಯಾ ಕೊಂಗ್ರೆಸ್ ಕಮಿಟಿಯ ಅಧಿವೇಶನವು ಮೊದಲು ಪ್ರಸಿದ್ಧವಾದಂತೆ ಕಲಕತ್ತೆಯಲ್ಲಿ ದೇಶಬಂಧುಗಳಾದ ಚಿತ್ತರಂಜನದಾಸರವರ ಅಧ್ಯಕ್ಷತೆಯಲ್ಲಿ ಸೇರಿತು. ಸಿವಿಲ್ ಡಿಸ್ ಒಬೀಡಿಯನ್ಸ ಎನ್‌ಕ್ವಾಯರಿ ಕಮಿಟಿಯ ರಿಪೋರ್ಟನ್ನು ಕಮಿಟಿಯ ಮುಂದಿಟ್ಟು ಆ ವಿಷಯಗಳನ್ನು ಚರ್ಚಿಸುವದಿದ್ದರಿಂದ ಆ ಅಧಿವೇಶನವು ಅತ್ಯಂತ ಮಹತ್ವದ್ದಾಗಿದೆ. ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ೩೫೦ ಜನ ಸಭಾಸದರಲ್ಲಿ ೨೦೦ ಜನ ಸಭಾಸದರು ಈ ಅಧಿವೇಶನಕ್ಕೆ ಸೇರಿರುವರೆಂದು ಪ್ರಗಟವಾಗಿದೆ. ಓ. ಇ. ಕೊ. ಕಮಿಟಿಯ ಅಧಿವೇಶನದ ಮುಂಚಿನ ದಿವಸ ಎಂದರೆ ತಾ. ೧೯ನೆಯ ದಿವಸ ವರ್ಕಿಂಗ್ ಕಮಿಟಿಯು ಜರುಗಿತು. ಅದರಲ್ಲಿ ಸಿ. ಡಿ. ಕಮಿಟಿಯ ಕೌನ್ಸಿಲ್‌ಪ್ರವೇಶದ ಠರಾವು ಪಾಸಾಯಿತು. ಮರುದಿನ ಓ. ಇಂ. ಕೊಂಗ್ರೆಸ್ ಕಮಿಟಿಯನ್ನು ಪ್ರಾರಂಭಿಸುವಾಗ ದೇ| ಬಂ| ದಾಸರವರು ಹೃತ್ಪೂರ್ವಕವಾದ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. "ಇಲ್ಲಿ ಸೇರಿದ ಮೆಂಬರರಲ್ಲಿ ಮತಭೇದಕ್ಕೆ ಆಸ್ಪದವಾದ ಅನೇಕ ಪ್ರಶ್ನೆಗಳು ಚರ್ಚೆಯಲ್ಲಿ ಬರತಕ್ಕವಿವೆ. ಆದರೂ ಕೊಂಗ್ರೆಸಿನ ಶಿವಾಲಯದಲ್ಲಿ ಎಲ್ಲರೂ ಒಂದೇ ಎಂದು ತಿಳಿಯಬೇಕು. ನಾವೆಲ್ಲರೂ ಸನ್ಮಾನ್ಯ ಸಂಸ್ಥೆಯ ಸಭಾಸದರೆಂದು ತಿಳಿದು, ಆ ಸಂಸ್ಥೆಯ ಕೀರ್ತಿಗೆ ಅನುರೂಪವಾಗಿಯೆ ಈ ಅಧಿವೇಶನವನ್ನು ಕೊನೆಗಾಣಿಸಬೇಕು. ತಮ್ಮ ತಮ್ಮ ಮತಭೇದಗಳನ್ನು ಬಚ್ಚಿಟ್ಟುಕೊಳ್ಳದೆ ಸ್ಪಷ್ಟವಾಗಿಯೂ, ಯೋಗ್ಯವಾದ ರೀತಿಯಲ್ಲೂ [illegible]ಬೇಕು. ಆದರೂ ಎಲ್ಲರೂ ರಾಷ್ಟ್ರೀಯ ಸಭೆಯ ಪತಾಕೆಯ ಕೆಳಗಿರುವರೆಂಬ ಭಾವನೆಯನ್ನು ಬಿಡಬಾರದು". ದೇ| ಬಂ| ದಾಸರವರ ಭಾಷಣದ ಅನಂತರ ಪಂಡಿತ ಮೋತಿಲಾಲ ನೆಹರುಗಳು ಕಾಯಿದೆಭಂಗದ ವಿಷಯವಾಗಿ ಸಿ. ಡಿ. ಕಮಿಟಿಯ ಠರಾವನ್ನು ಮುಂದಿಟ್ಟರು. ದೇಶವು ಈಗ ಸಾಮುದಾಯಿಕ ಕಾಯಿದೆಭಂಗಕ್ಕೆ ಸಿದ್ಧವಾಗಿಲ್ಲ. ಆದರೂ ಇಂಥ ಸಿದ್ಧತೆಯನ್ನು ಗೊಳಿಸುವಂತೆ ನೋಡಿ ಯತ್ನಿಸಬಹುದು ಎಂದು" ಪಂಡಿತಜಿಯವರು ತಂದ ಠರಾವಿನ ಅಭಿಪ್ರಾಯವಿತ್ತು. ಈ ಠರಾವಿಗೆ ಪುಷ್ಟಿಯಾಗಿ ಕಳೆದ ನವಂಬರದಲ್ಲಿ ಡಿಲ್ಲಿಯಲ್ಲಿ ಆದ ಠರಾವು ಪುನರುಚ್ಚರಿಸಲ್ಪಟ್ಟಿರುವದು. ಡಿಲ್ಲಿಯ ಠರಾವಿನ ಇತ್ಯರ್ಥವೇನೆಂದರೆ ಕಾಯಿದೆ ಭಂಗದ ವಿಷಯದಲ್ಲಿ ಪ್ರಾಂತಗಳಿಗೆ ಅಧಿಕಾರವು ಕೊಡಲ್ಪಟ್ಟದೆ. ಕಾಯಿದೆಭಂಗವನ್ನು ಯಾವ ಜಿಲ್ಲೆಯಲ್ಲಿ ಅಥವಾ ತಾಲೂಕಿನಲ್ಲಿ ಇಲ್ಲವೇ ತಹಬಿನಲ್ಲಿ ಮಾಡಲಿಕ್ಕಿರುವದೊ ಅಲ್ಲಿ ವಿವಿಧ ಜಾತಿಗಳ ಐಕ್ಯ, ಖಾದರದ ಸ್ವಾವಲಂಬನ ಇತ್ಯಾದಿ ಇರಬೇಕು. ಪಂಡಿತಜಿಯವರು ತಂದ ಮೇಲಿನ ಠರಾವಿಗೆ ಮದ್ರಾಸಿನ ಟಿ. ಪ್ರಕಾಶಂ ಎಂಬವರೊಬ್ಬರು ಅದ್ದಿಯನ್ನು ಮಾಡಿದ್ದರು. ಇನ್ನೊಂದು ಪಕ್ಷದಿಂದ ಕಾಯಿದೆಭಂಗದ ಪ್ರಾರಂಭಕ್ಕೆ ಕೆಲವು ಅನವಶ್ಯಕವಾದ ಯಾವ ಶರ್ತಗಳಿವೆಯೊ ಅವುಗಳನ್ನು ರದ್ದುಪಡಿಸಬೇಕೆಂದು ಹಲವು ಉಪಸೂಚನೆಗಳು ಬಂದಿದ್ದವು. ಆದರೆ ಪ್ರಕಾಶಂರ ಪ್ರತಿಬಂಧವಾಗಲಿ ಇತರರ ಉಪಸೂಚನೆಗಳಾಗಲಿ ಒಂದು ಪಾಸಾಗದೆ ಬಿದ್ದುಹೋದವು. ಮೂಲ ಠರಾವು ಪಾಸಾಯಿತು. ಶಾಲಾ-ಕೊಲೆಜು ಬಹಿಷ್ಕಾರ ಮತ್ತು ಕೋರ್ಟು ಬಹಿಷ್ಕಾರ ಇವು ಆದರ್ಶವನ್ನಾಗಿ ಇಟ್ಟುಕೊಳ್ಳಬೇಕೆಂದು ನಿರ್ಣಯಿಸಲಾಯಿತು. ಎಂದರೆ ಇವು ಈಗ ಠರಾವಿನ ಗ್ರಂಥಗಳಲ್ಲಿ ಇರುವದಾಯಿತು. ಇವೆಲ್ಲ ನಿಜವಾದ ತೀವ್ರ ಮತಭೇದದ ವಿಷಯಗಳಲ್ಲಾಗಿವೆ. ಕೌನ್ಸಿಲ್ ಪ್ರವೇಶವು ಕಠಿಣಾಟದ ವಿಷಯವಾಗಿ ಉಳಿದಿದೆ. ಈ ಠರಾವನ್ನು ಸಹ ಪಂಡಿತ ಮೋತಿಲಾಲನೆಹರುಗಳೆ ಅಧಿವೇಶನದ ಮುಂದಿಟ್ಟಿರುವರು. ಅವರು ಈ ಠರಾವನ್ನು, ಈಗ ೨ ವರ್ಷಗಳಲ್ಲಿ ಉಂಟಾಗಿರುವ ಕೌನ್ಸಿಲ್ ಬಹಿಷ್ಕಾರದ ಅವಸ್ಥೆಗಳನ್ನು ಶಬ್ದ ಚಿತ್ರದ ಮುಖಾಂತರ ಮುಂದೆ ನಿಲ್ಲಿಸಿ ಸಮರ್ಥಿಸಿದರು. ಕೌನ್ಸಿಲುಗಳು ನಡೆಯುತ್ತಿದ್ದ ಕಾರಣ ಕೌನ್ಸಿಲ್ ಬಹಿಷ್ಕಾರವಾಗಲಿಲ್ಲ, ರಾಷ್ಟ್ರೀಯ ಸಭಾನುಯಾಯಿಗಳ ಬಹಿಷ್ಕಾರವೆ ಆಗಿದೆ! ಈಗಿನ ಕೌನ್ಸಿಲುಗಳು ಮಾಡಿರುವ ಕಾನೂನುಗಳನ್ನು ರಾಷ್ಟ್ರೀಯ ಸಭೆಯು ಎಷ್ಟರ ವರೆಗೆ ಭಂಗಪಡಿಸುವದಿಲ್ಲವೊ ಅಷ್ಟರ ವರೆಗೆ ಕೌನ್ಸಿಲ್ ಬಹಿಷ್ಕಾರವೆಂದರೆ ಒಂದು ನಿದಂಬನೆಯೆ ಸರಿ! ಸರಕಾರದ ರಥಕ್ಕೆ ಬ್ರೇಕನ್ನು ಹಾಕಲು ಕೌನ್ಸಿಲ್ ಬಹಿಷ್ಕಾರದ ತತ್ವವು ಮುಂದಕ್ಕೆ ಬಂದದ್ದು. ಆದರೆ ಅದರ ಬದಲು ಅದನ್ನು ಸಂಗಾಗವಾಗಿ ನಡೆಯಲು ಈ ತರದ ಬಹಿಷ್ಕಾರದಿಂದ ಎಡೆಕೊಟ್ಟಂತಾಗಿದೆ. ಇದರ ಅನೇಕ ಅನುಭವಿಕ ದುರವಸ್ಥೆಗಳನ್ನು ಹೋಗಲಾಡಿಸಲು, ಕಡುಅಸಹಕಾರಿಗಳು ಆ ಕೌನ್ಸಿಲುಗಳನ್ನು ನುಗ್ಗುವದೇ ಅತ್ಯುತ್ತಮವಾದ ಉಪಾಯವಾಗಿದೆ. ಆದ್ದರಿಂದ ಓ. ಇಂ. ಕೊಂ. ಕಮಿಟಿಯು ಕೌನ್ಸಿಲ್ ಪ್ರವೇಶಕ್ಕೆ ಅಪ್ಪಣೆಯನ್ನು ಕೊಡಬೇಕು" ಎಂದು ಪಂಡಿತಜಿಯವರು ಭಾಷಣ ಮಾಡಿದರು. ಅವರನ್ನು ಒಬ್ಬರಿಬ್ಬರು ಪುಷ್ಟೀಕರಿಸಿದ್ದಾರೆ. ಹಾಗೆಯೆ ಎಷ್ಟೊ ಜನರು ವಿರೋಧಿಸಿದ್ದಾರೆ. ಈ ಚರ್ಚೆಯ ಮೇಲೆ ತಾ. ೨೧ನೆಯ ಅಧಿವೇಶನವು ಮುಂದರಿಸಲ್ಪಟ್ಟದೆ. ಈ ವಿಷಯ ಹೆಚ್ಚು ಮತಭೇದದ್ದಾದರಿಂದ ಎರಡೂ ಕಡೆಗಳಿಂದ ತುಂಬಾ ಚರ್ಚೆಯು ಆಗಲಿಕ್ಕಿದೆ. ಇದು ವರೆಗಿನ ಅನುಭವವನ್ನಿಟ್ಟುಕೊಂಡು ಹೇಳುವದಾದರೆ ಕೌನ್ಸಿಲ್ ಬಹಿಷ್ಕಾರಕ್ಕೆನೆ ಬಹುಮತವು ಸಿಕ್ಕಿಯದೆ. ಅದೆ ಬಹುಮತವು ಈ ಸಾರಿಯೂ ಆಶ್ರಯಿಸುತ್ತದೊ ಏನೊ ಎಂಬದನ್ನು ನೋಡಬೇಕಾಗಿದೆ.

ಮಂಗಳೂರು.

ಮುಂಬಯಿಯ ಯುನಿವರ್ಸಲ್ ಸ್ಟೀಮ್ ನೇವಿಗೇಶನ್ ಕಂಪೆನಿಯ ಸ್ಟೀಮರು ಮುಂಬಯಿಯಿಂದ ನಾಳೆ ಇಲ್ಲಿಗೆ ತಲ್ಪಲಿಕ್ಕೆ ಸಾಕೆಂದು ಸದರಿ ಕಂಪೆನಿಯ ಇಲ್ಲಿಯ ಏಜಂಟರು ತಿಳಿಸುತ್ತಾರೆ.

ಕೀರ್ತಿ ಶೇಷ ಅಮ್ಮೆಂಬಳ ಸುಬ್ರಾಯ ಮೆಮೋರಿಯಲ್ ದಿನಾಚರಣೆಯು ಕಳೆದ ಆದಿತ್ಯವಾರ ಕೆನರಾ ಹ್ಯಾಸ್ಕೂಲಿನಲ್ಲಿ ಜರಗಿತು.

ನಿನ್ನೆ ದಿನ ನಡೆದ ಇಂಟರ್ ಸ್ಕೂಲ್ ಜಮ್‌ಖಾನಾ ಜೂನಿಯರ ಸ್ಪೋರ್ಟ್ಸ ಪಂದ್ಯಾಟದಲ್ಲಿ ಸೆಂಟ ಎಲ್ಲೊಸಿಯಸ್ ಕೊಲೇಜು ಗೆದ್ದಿರುವುದು. ಸೀನಿಯರ್ ಸ್ಪೋರ್ಟ್ಸ ನಾಳೆ ಆಗುವುದು.

ಇಲ್ಲಿನ ಡಿಸ್ಟ್ರಿಕ್ಟ ಜಡ್ಜರಾದ ಮ| ರಾ| ಎ. ಯಸ್. ನಾರಾಯಣ ಐಯ್ಯರ ಬಿ. ಎ. ಬಿ. ಎಲ್ ಇವರನ್ನು ಪುನಃ ಸಬ್ ಜಡ್ಜಸ್ಥಾನಕ್ಕೆ ವರ್ಗಾಯಿಸುವುದರಿಂದ ಕ್ರಿಸ್ತ್‌ಮಸ್ ರಜೆಯು ಕಳೆದ ಬಳಿಕ ಮ| ರಾ| ಕೆ. ಯಸ್. ಮೆನೋನ್ ಬಾರ್ ಎಟ್ ಲೋ ಇವರು ಈ ಜಿಲ್ಲೆಯ ಜಡ್ಜರಾಗಿ ಬರುವರೆಂದು ವಾರ್ತೆ ಇದೆ.

ಗವರ್ನಮೆಂಟ 'ಕೊಲೇಜ್ 'ಡೇ' ಸಮಾರಂಭವು ಕಳೆದ ತಾರೀಕು ೧೮ರಲ್ಲಿ ಜರಗಿತು. ಬೆಳಿಗ್ಗೆ ಹಳೇ ಮತ್ತು ಈಗಣ ವಿದ್ಯಾರ್ಥಿಗಳು ಒಟ್ಟು ಕೂಡಿ ಟೆನಿಸ್ ಮೊದಲಾದ ಆಟಗಳನ್ನು ಆಡಿದರು. ಬಂದವರಿಗೆಲ್ಲಾ ಕಾಫಿ ಫಲಾಹಾರ ಸತ್ಕಾರವೂ ತದನಂತರ ಸಾಯಂಕಾಲದ ವರೆಗೆ ಸ್ಪೋರ್ಟ್ಸ ಪಂದ್ಯಾಟಗಳೂ ನಡೆದವು. ಸಾಯಂಕಾಲ ೫|| ಗಂಟೆಗೆ ಕೊಲೇಜಿನ ಸಭಾಸದನದಲ್ಲಿ ಮಹಾಸಭೆಯು ಜರಗಿತು. ಅಧ್ಯಕ್ಷ ಸ್ಥಾನವನ್ನು ಕಥೋಲಿಕರ ಮಂಗಳೂರ ಬಿಶೋಪರಾದ ರೆವರೆಂಡ್ ಡಾಕ್ಟರ್ ಪೌಲ್ ಪೆರಿನಿ ಎಸ್. ಜೆ. ಡಿ. ಡಿ. ಯವರು ವಹಿಸಿದ್ದರು. ಕೊಲೇಜಿನ ಪ್ರಿನ್ಸಿಪಾಲರು ಕೊಲೇಜಿನ ಗತವರುಷದ ವರದಿಯನ್ನು ಓದಿದ ನಂತರ ಇಲ್ಲಿಯ ಇಂಪೀರಿಯಲ್ ಬೇಂಕಿನ ಏಜಂಟರಾದ ಮ| ರಾ| ಯು. ಆನಂದ ರಾಯರು ಕೊಲೇಜಿನ ಅಭ್ಯುದಯವನ್ನೂ ಶ್ರೇಯಸ್ಸನ್ನೂ ಬಯಸುವ ಟೋಸ್ಟನ್ನು ಸೂಚಿಸಿದರು. ಬಳಿಕ ಇನಾಮುಗಳನ್ನು ಹಂಚಲಾಯಿತು. ತದನಂತರ ಅಧ್ಯಕ್ಷರ ಭಾಷಣವಾಗಿ ಪ್ರೊ| ಮಾರ್ಕನ್ ಇವರ ಮೆಜಿಕ್ ಆಟವಾಯಿತು. ಕೊನೆಗೆ 'ದಿ. ಡಾರ್ಕ ಲೇಡಿ ಒಫ್ ದಿ ಸೊನೆಟ್' ಎಂಬ ಇಂಗ್ಲಿಷ್ ನಾಟಕವನ್ನು ಕೊಲೇಜಿನ ವಿದ್ಯಾರ್ಥಿಗಳು ಅಭಿನಯಿಸಿದ ಮೇಲೆ ಕೊಲೇಜಿನ ಪ್ರಿನ್ಸಿಪಾಲರು ನೆರೆದವರಿಗೆ ವಂದನೆಗಳನ್ನು ಅರ್ಪಿಸಿದ ನಂತರ ಈ ಸಮಾರಂಭವು ಕೊನೆಗಂಡಿತು.

ಮೆಸ್ಸರ್ಸ್ ಹಿಂದೂಸ್ಥಾನ ಸಿನೆಮಾ ಕಂಪೆನಿಯವರು ಇಲ್ಲಿ ಬಸವನಗುಡಿ ರಸ್ತೆಯಲ್ಲಿ ನೂತನವಾಗಿ ಕಟ್ಟಿಸಿದ 'ಪ್ರಿಮಿಯರ್ ಪಿಕ್ಚರ್ ಪೆಲ್ಲೆಸ್' ಎಂಬ ಭವ್ಯವಾದ ಕಟ್ಟೋಣಕ್ಕೆ ನಿನ್ನೆ ಸಾಯಂಕಾಲ ಗಂಟೆ ೫ಕ್ಕೆ ಮುಹೂರ್ತವಾಯಿತು. ಇಲ್ಲಿಯ ಪೋಲೀಸ್ ಸುಪರಿಂಟೆಂಡೆಂಟರ ಪತ್ನಿಯಾದ ಮಿಸ್ಸೆಸ್ ಆರ್. ಟಿ. ಪಿ. ಡೊಸನ್‌ರವರು ಈ ಸಮಾರಂಭದಲ್ಲಿ ಕಟ್ಟೋಣವನ್ನು ಪ್ರಥಮತಃ ತೆರೆಯುವ ವಿಧಿಯನ್ನು ಸ್ವತಃ ನೆರವೇರಿಸಿ ಕೊಟ್ಟರು. ಮಂಗಳೂರಿನ ಪ್ರಮುಖನಾಗರಿಕರೆಲ್ಲರಿಗೂ ಆಮಂತ್ರಣವಿತ್ತು. ಈ ಆಮಂತ್ರಣವನ್ನು ಮನ್ನಿಸಿ ಅನೇಕ ಸದ್ಗೃಹಸ್ಥರು ಈ ಸಮಾರಂಭಕ್ಕೆ ದಯಮಾಡಿಸಿದ್ದರು. ಕಂಪೆನಿಯ ಪಾಲುಗಾರರ ಪೈಕಿ ಒಬ್ಬರಾದ ಮ. ರಾ. ರಾ. ಕೊಜ್ಜಿಕಾರ್ ಪದ್ಮನಾಭಶೆಟ್ಟಿ ಇವರು ಅತಿಥಿಗಳೆಲ್ಲರನ್ನು ವಂದಿಸಿ ಭಾಷಣ ಮಾಡಿ ಕಟ್ಟೋಣದ ಪ್ಲೆನ್ ಇತ್ಯಾದಿಯನ್ನು ತಯಾರಿಸಿ ಕೊಟ್ಟ ಮ. ರಾ. ಟಿ. ಕೇಶವರಾವ್, ಈ [illegible]ನಂತೆ ಕೆಲಸವು ಬೇಗನೇ ನೆರವೇರುವಂತೆ [illegible] ತಕ್ಕೊಂಡ ರಾ. ಸಾಹುಕಾರ ಬಿ. ಮಾಧವ ಬಾಳಿಗ, ಇತರ ರೀತಿಯಲ್ಲಿ ತಮಗೆ ಸಹಾಯಮಾಡಿದ ರಾ. ಸಾಹುಕಾರ ಶಾಂತಯ್ಯ ಕಿಣಿ ಮತ್ತು ರಾ. ವಕೀಲ ಕುಡ್ವಿ ವೆಂಕಟ್ರಾವ ಮೊದಲಾದವರಿಗೆ ತಮ್ಮ ಧನ್ಯವಾದಗಳನ್ನು ಸೂಚಿಸಿದರು. ಮೇಸ್ತ್ರಿ ಕಮ್ಮಾರರು ಮೊದಲಾದವರಿಗೆ ತಮ್ಮ ಕೆಲಸಗಳನ್ನು ಆಗ್ರಹ ಪೂರ್ವಕವಾಗಿ ಪೂರೈಸಿ ಕೊಟ್ಟದ್ದಕ್ಕೆ ಮಿಸ್ಸೆಸ್ ಪಿ. ಡೋಸನ್‌ರವರಿಂದ ಇನಾಮುಗಳು ಹಂಚೋಣವಾದವು. ಮಿಸ್ಸೆಸ್ ಡೊಸನರವರನ್ನು ವಂದಿಸಿದ ನಂತರ ಸಭಿಕರೆಲ್ಲರನ್ನೂ [illegible] ಪನ್ನೀರುಗಳಿಂದ ಸತ್ಕರಿಸಿದರು. ನಂತರ "ರಾಧಾ ವಿಲಾಸ"ವು ಬಹು ಅಂದವಾಗಿ ಪ್ರದರ್ಶಿಸಲ್ಪಟ್ಟಿತು.

ಕಳೆದ ತಾರೀಕು ೨೧ನೇ ಮಂಗಳವಾರ ಬೊಕ್ಕಪಟ್ಣದಲ್ಲಿ ಒಬ್ಬ ಪ್ರೊಟೆಸ್ಟಾಂಟ ಕ್ರೈಸ್ತರ ಮನೆಯಲ್ಲಿ ಕಾಪಿಯನ್ನು ಬಿಸಿಮಾಡುತ್ತಿರುವಾಗ ಕಾಪಿಯನ್ನು ತುಂಬಿಸಿದ ಪಾತ್ರೆಯು [illegible] ಥಕ್ಕನೆ ಒಡೆದುಹೋಗಿ ಮೂರು ಮಕ್ಕಳಿಗೂ [illegible] ನಿಗೂ ವಿಶೇಷವಾದ ಗಾಯ ಆಗಿದೆ. ೪ ಮಂದಿಗಳನ್ನು [illegible] ಆಸ್ಪತ್ರಿಗೆ ಒಯ್ದರು. ಆದರೆ ಈ ನಾಲ್ವರಲ್ಲಿ ಸುಮಾರು [illegible] ಷದ ಹುಡುಗಿಯೊಬ್ಬಳು ಆಸ್ಪತ್ರಿಯಲ್ಲಿ ಮೃತಪಟ್ಟಳು.

ದಕ್ಷಿಣ ಕನ್ನಡ

ಹೊಸದುರ್ಗ:—ದಕ್ಷಿಣ ಕನ್ನಡಾ ಜಿಲ್ಲೆಯ ಕೃಷಿ ಇಲಾಖೆಯ ಡೈರೆಕ್ಟರಾದ ಮ॥ ರಾ॥ ರಾ॥ ಕೆ. ಟಿ. ಆಳ್ವರು ಮತ್ತು ಡಿಮೋನ್‌ಸ್ಟ್ರೇಟರಾದ ಮ॥ ರಾ॥ ರಾ॥ ಮಂಗೇಶರಾಯರು ತಾ. ೧೦—೧೧—'೨೨ರಲ್ಲು ಇಲ್ಲಿಗೆ ಬಿತ್ತೈಸಿ ತಾ. ೧೧—೧೧—'೨೨ನೇ ಆದಿತ್ಯವಾರ ದಿವಸ ಇಲ್ಲಿಯ ಕೋಟಚೇರಿ ಭಾರತ ವಾಚನಾಲಯದಲ್ಲಿ ಇಲ್ಲಿಯ ಡಿ. ತಹಸೀಲ್ದಾರರಾದ ಮ॥ ರಾ॥ ರಾ॥ ಕೆ. ರಾಮವರ್ಮ ರಾಜರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಸಭೆಗೆ ಸೇರಿದ್ದ ಬಲವು ಜನ ಕುಡಿಯುವವರ ರೈತರಿಲ್ಲದಿಗಳು. ಇವರು ಆಳ್ವರು ಕೃಷಿಯನ್ನು ವೃದ್ಧಿಗೆ ತರುವ ವಿಷಯವನ್ನು ಕುರಿತು ಚತುರೋಪಾಧ ಭಾಷಣ ಕೊಟ್ಟರು. ಇನ್ನಾದರೂ ಕೃಷಿಯು ಒಳ್ಳೇ ಸ್ಥಿತಿಗೆ ಬಂದೀತೆಂತ ಭಾವಿಸುತ್ತೇವೆ.

ಕುಂಬಳೆ:—ಇಲ್ಲಿಯ ಆಸ್ಪತ್ರೆಗೆ ಹಿಂದೋಟ ತಿಳಿವಾಗಿ ದೂರದ ಗ್ರಾಮಗಳಿಂದ ಸಹಾ ಬರುವ ಜನ ಸಂಖ್ಯೆಯು ಜಾಸ್ತಿಯಾಗಿರುವುದರಿಂದ ಆಸ್ಪತ್ರೆ ಔಷಧವು ಕಡಿಮೆಯಾಗುತ್ತಾ ಬಂದಿದೆ. ಬೇಗನೆ ಔಷಧ ಬಾರದಿದ್ದಲ್ಲಿ ಬಡವರ ಸಂಕಷ್ಟಕ್ಕೆ ಪಾರವಿಲ್ಲ.

ಕಳೆದವಾರ ಜಿಲ್ಲಾ ಸರ್ಜನ್ ದೊರೆಗಳವರು ಆಸ್ಪತ್ರೆಯನ್ನು ಸಂದರ್ಶಿಸಿ ಇಲ್ಲಿ ಕಾಯಂ ಆಸ್ಪತ್ರೆಯು ಅಗತ್ಯವೆಂಬದಾಗಿಯೂ ಆಸ್ಪತ್ರೆಯ 'ಸ್ಟಾಫ್' ಒಳ್ಳೆದಿದ್ದು ಕಟ್ಟೋಣವು ಅಯೋಗ್ಯವೆಂತ ಅಭಿಪ್ರಾಯಪಟ್ಟಿರುವರಾಗಿ ತಿಳಿದುಬರುತ್ತದೆ. ನಮ್ಮ ವಾರ್ಡ ಬೋರ್ಡಿನವರು ಇದನ್ನು ನೆರವೇರಿಸಿ ಕೊಡಬೇಕಾಗಿ ಪ್ರಾರ್ಥನೆ.

ಇಲ್ಲಿ ಸ್ಕೀಂ ಶರ್ತದಂತೆ ಮನೆ ಕಟ್ಟಿ ವಾಸಿಸುವ ಕೆಲವರಿಗೆ ಬಾವಿಯಿಲ್ಲದಿರುವುದು ಕಷ್ಟವಾಗಿರುವುದರಿಂದ ೧ ಲೋಕಲ್ ಫಂಡ್ ಬಾವಿಯು ಅತೀ ಅಗತ್ಯವಾಗಿದೆ.

ಪಡುಬಿದ್ರೆ:—ಇಲ್ಲಿ ವಾಡಿಕೆಯ ಪ್ರಕಾರ ಆಗುವ ಸೀಮೆ ಕೋಳಿ ಅಂಕವು ಇದೇ ಮುಂದಿನ ಸಂಕ್ರಮಣ ಮಾರ್ಗಶಿರ ಬಹುಳ(ವೃಶ್ಚಿಕ ಮಾಸದ ೩ನೇ ಸಲುವ) ತಾ. ೨೨-೧೧-೨೨ ನೇ ಮಂಗಳವಾರ ದಿವಸದಂತ ನಿಶ್ಚಯಿಸಿಯದೆ.

ಪುತ್ತೂರು:—ಉಪ್ಪಿನಂಗಡಿ ತಾಲೂಕು ಬೋರ್ಡಿನ ಮೀಟಿಂಗು ಬರುವ ತಾ. ೨೮ರಲ್ಲಿ ಸಾಯಂಕಾಲ ೪ ಗಂಟೆಗೆ ಪುತ್ತೂರಿನಲ್ಲಿ ಸೇರುವುದು ಸುಳ್ಯ ಬೋರ್ಡ ಶಾಲೆಯಲ್ಲಿ ಅನೇ ಕ್ಲಾಸನ್ನು ತೆರೆಯುವ ವಿಷಯವನ್ನೂ, ಆದಿ ದ್ರಾವಿಡರ ಬಗ್ಗೆ ಪುತ್ತೂರಿನಲ್ಲಿ ಒಂದು ರಾತ್ರಿ ಶಾಲೆಯನ್ನು ತೆರೆಯುವ ವಿಷಯವನ್ನೂ ಈ ಮೀಟಿಂಗಿನಲ್ಲಿ ಆಲೋಚಿಸಲಾಗುವುದು.

ಕಾಪು:—ಇಲ್ಲಿ ತಾ. ೧೮—೧೧—'೨೨ರಲ್ಲು ವ್ಯವಸಾಯದ ಇಲಾಖೆಯ ಡೈರೆಕ್ಟರಾದ ಮ. ರಾ. ಕೆ. ಟಿ. ಆಳ್ವರು ಬಂದು ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಕಟ್ಟಡದಲ್ಲಿ ವ್ಯವಸಾಯದ ವಿಷಯವಾಗಿ ಭಾಷಣಮಾಡಿದರು. ಇವರು ಇಲ್ಲಿಂದ ಮರುದಿವಸವೇ ಉಡುಪಿಗೆ ತೆರಳಿದರು.

ಇಲ್ಲಿಯ ೩ ದೇವಸ್ಥಾನಗಳಲ್ಲಿಯೂ ಬರುವ ಮಂಗಳವಾರ ಜಾರ್ದೆ ಮಾರಿ ಪೂಜೆಯು ಬಹಳ ವಿಜ್ರಂಭಣೆಯಿಂದ ನಡೆಯುವದು.

ಇಲ್ಲಿಯ ಬೋರ್ಡು ಶಾಲೆಯ ಉಪಾಧ್ಯಾಯರಾದ ಕೆ. ಗಣಪತಿರಾಯರ ಬದಲಾಗಿ ಬಂದ ಬಿ. ಗೋವಿಂದರಾಯರು ಶಾಲೆಗೆ ಬಂದ ದಿವಸವೇ ಶಾಲಾ ಮಕ್ಕಳಿಗೆ ಮಿಠಾಯಿಯನ್ನು ಹಂಚಿ ಮರುದಿನವೇ ರಜೆಯ ಮೇಲೆ ಹೋದಿರುತ್ತಾರೆ.

ಮದರಾಸ ನ್ಯಾಯವಿಧಾಯಕ ಸಭೆಯ ಅಧಿವೇಶನ.

ನ್ಯಾಯವಿಧಾಯಕ ಸಭೆಯ ಅಧಿವೇಶನವು ಕಳೆದ ತಾ. ೧೩ರಲ್ಲು ಪ್ರಾರಂಭವಾಗಿ ೧೭ರಲ್ಲಿ ಮುಗಿಯಿತು. ನಾಲ್ಕು ಮಂದಿ ಹೊಸ ಮೆಂಬರರು ರಾಜನಿಷ್ಠೆಯ ಪ್ರತಿಜ್ಞೆಯನ್ನು ತೆಗೆದುಕೊಂಡರು. ೧೯೬ ಪ್ರಶ್ನೆಗಳು ಕೇಳಲ್ಪಟ್ಟವು.

ದಿವಾನ ಬಹದೂರ ಯಂ. ಕೃಷ್ಣನ್ ನಾಯರರು ಹೋಂ ಮೆಂಬರರಿಗೆ ಕೆಳಗಿನ ಪ್ರಶ್ನೆಯನ್ನು ಕೇಳಿದರು. (ಎ) ಮಾಪಿಳ್ಳಾ ದಂಗೆಯಿಂದ ಎಷ್ಟು ಜನ ನಾಗರಿಕರು ಹತರಾದರು. (ಬಿ) ಹೀಗೆ ಹತರಾದವರಲ್ಲಿ ಹೆಂಗಸರು ಮತ್ತು ಮಕ್ಕಳ ಸಂಖ್ಯೆ ಎಷ್ಟು? (ಸಿ) ಸಂಪೂರ್ಣವಾಗಿ ಅಥವಾ ಅಂಶತಃ ಹಾಳು ಮಾಡಲ್ಪಟ್ಟ ದೇವಸ್ಥಾನಗಳೆಷ್ಟು? (ಡಿ) ಭ್ರಷ್ಟಮಾಡಲ್ಪಟ್ಟ ದೇವಾಲಯಗಳೆಷ್ಟು? (ಯಿ) ಬಲಾತ್ಕಾರದಿಂದ ಮತಾಂತರಗೊಳಿಸಲ್ಪಟ್ಟ ಹಿಂದೂಗಳ ಸಂಖ್ಯೆ ಎಷ್ಟು? ಈ ಪ್ರಶ್ನೆಗಳಿಗೆ ಕೆಳಗಿನ ಉತ್ತರವು ದೊರೆಯಿತು (ಎ) ದಂಗೆಯಲ್ಲಿ ಹತರಾದ ನಾಗರಿಕರ ಸಂಖ್ಯೆಯು ಸುಮಾರು ೫೦೦ ಅಥವಾ ೬೦೦ರ ಅಂದಾಜು ಹಿಡಿದಿದೆ. ಬಿ. ಈ ವಿಷಯದಲ್ಲಿ ಸರಿಯಾದ ಮಾಹಿತಿಯು ಸಿಗಲಿಲ್ಲ. ಸಿ. ಮತ್ತು ಡಿ. ಈ ಕುರಿತು ಸರಿಯಾದ ಸಂಖ್ಯೆಯು ಗೊತ್ತಿಲ್ಲ. ಆದರೆ ಹಾಳುಮಾಡಲ್ಪಟ್ಟ ಅಥವಾ ಭ್ರಷ್ಟಮಾಡಲ್ಪಟ್ಟ ದೇವಸ್ಥಾನಗಳ ಸಂಖ್ಯೆಯು ನೂರಕ್ಕೆ ಮಿಕ್ಕಿರಬೇಕು. (ಯಿ) ಬಹುಶಃ ಮತಾಂತರಗೊಳಿಸಲ್ಪಟ್ಟವರ ಸಂಖ್ಯೆಯು ಅಧಿಕವಾಗಿರಬೇಕು. ಸ್ವಪ್ರೇರಣೆಗಳಿಂದ ಸರಕಾರದವರು ಸರಿಯಾದ ಸಂಖ್ಯೆಯನ್ನು ಗೊತ್ತುಮಾಡಲಿಲ್ಲ.

ಪಬ್ಲಿಸಿಟಿ ಬ್ಯುರೋವಿಗೆ ಕಳೆದ ೧೯೨೦-೨೧ ಮತ್ತು ೧೯೨೧-೨೨ರಲ್ಲಿ ಕಾಗದ, ಪ್ರಿಂಟಿಂಗ್ ಪೋಸ್ಟೇಜ್ ಈ ಬಗ್ಗೆ ಎಷ್ಟು ಹಣ ವೆಚ್ಚವಾಗಿದೆ ಎಂದು ರಾವ್ ಸಾಹೇಬ ಯು. ರಾಮರಾಯರು ಕೇಳಿದ ಪ್ರಶ್ನೆಗೆ ಕೆಳಗಿನ ಉತ್ತರದೊರಕಿದೆ. ೧೯೨೦-೨೧ ಕಾಗದ ರೂ. ೩೬,೦೨೦-೦-೦ ಪ್ರಿಂಟಿಂಗ್ ೧೫,೬೭೩-೧-೩. ಪೋಸ್ಟೇಜ್ ೧೯೬೦೦-೦-೦, ೧೯೨೧-೨೨ ಕಾಗದ ರೂ. ೨,೫೩೬-೦-೩, ಪ್ರಿಂಟಿಂಗ್ ೧೯೧೨೬-೬-೦, ಪೋಸ್ಟೇಜ್ ೩೯೨೫೦-೦-೦.

ಗುಂಟೂರು ಜಿಲ್ಲೆಯಲ್ಲಿರುವ ಪ್ಯುನಿಟಿವ್ ಪೋಲೀಸ ದಳದಲ್ಲಿ ಎಷ್ಟು ಮಂದಿ ಇದ್ದಾರೆ, ಈ ದಳದ ಬಗ್ಗೆ ತಿಂಗಳಿಗೆ ಎಷ್ಟು ಖರ್ಚು ತಗಲುತ್ತದೆ, ಈ ವರೆಗೆ ಎಷ್ಟು ಖರ್ಚು ತಗಲಿದೆ, ಈ ದಳವನ್ನು ಎಲ್ಲಿಟ್ಟಿದೆ, ಈ ಪೋಲೀಸರು ಕಳೆದ ಮಾರ್ಚಿಯಿಂದ ಈ ವರೆಗೆ ಮಾಡಿದ ಕೆಲಸವೇನು ಎಂಬ ಪ್ರಶ್ನೆಗಳನ್ನು ಶ್ರೀಯುತ ಪಿ. ವೆಂಕಟ ಸುಬ್ಬರಾವ್ ಇವರು ಸರಕಾರಿ ಹೋಂ ಮೆಂಬರರಿಗೆ ಕೇಳಿದರು.

ಈ ಪ್ಯುನಿಟಿವ್ ದಳದಲ್ಲಿ ಒಬ್ಬ ಅಸಿಸ್ಟೆಂಟ್ ಸೂಪರಿಂಟೆಂಡೆಂಟರೂ, ಒಬ್ಬ ಡೆಪ್ಯುಟಿ ಸೂಪರಿಂಟೆಂಡೆಂಟರೂ, ಒಬ್ಬ ಇನ್ಸ್‌ಪೆಕ್ಟರರೂ, ಒಬ್ಬ ಸಾರ್ಜೆಂಟರೂ ಒಬ್ಬ ಸಬ್‌ಇನ್ಸ್‌ಪೆಕ್ಟರೂ ೧೬ ಮಂದಿ ಹೆಡ್ ಕಾನ್‌ಸ್ಟೇಬಲರೂ ೨೦೦ ಮಂದಿ ಕಾನ್ಸ್ಟೇಬಲರೂ ಇರುವರು, ಈ ದಳಕ್ಕೆ ತಿಂಗಳಿಗೆ ಸಾಧಾರಣ ರೂ. ೧೭,೦೦೦ ಖರ್ಚು ಆಗುತ್ತದೆ. ಕಳೆದ ಆಗಸ್ಟ್ ತಾ. ೧೫ರ ವರೆಗೆ ಈ ದಳದ ಬಗ್ಗೆ ರೂ. ೫೫,೫೦೦ ಖರ್ಚು ತಗಲಿದೆ. ಈ ಜಿಲ್ಲೆಯಲ್ಲಿ ಅಗತ್ಯ ಕಂಡ ಸ್ಥಳಗಳಲ್ಲಿ ಈ ದಳವನ್ನು ಹಂಚಿ ಇಟ್ಟು ಹೋಗಿದೆ. ಪೋಲೀಸರು ಕ್ರಮವನ್ನು ನಿರ್ವಹಿಸಲು ಯಾವ ಕೆಲಸವನ್ನು ಮಾಡುವರೋ ಅದೇ ಕೆಲಸವನ್ನು ಈ ಪೋಲೀಸರೂ ಮಾಡುವರು ಎಂಬ ಜವಾಬು ಸಿಕ್ಕಿತು.

ಕೌನ್ಸಿಲಿನವರು ರೂ. ೨೬,೭೩೦ನ್ನು ಸಪ್ಲಿಮೆಂಟರಿ ಗ್ರೇಂಟಾಗಿ ಸೆಂಕ್ಷನ್ ಮಾಡಿದ್ದಾರೆ, ಈ ಪೈಕಿ ಮಲಬಾರಿನ ಪುನರ್ಘಟನಾ ಕಾರ್ಯಕ್ಕಾಗಿ ರೂ. ೧೯,೨೫೦, 'ಪ್ರಿನ್ಸ್ ಒಫ್ ವೇಲ್ಸರ ಸಂದರ್ಶನದ ಖರ್ಚಿನ ಬಗ್ಗೆ ರೂ. ೧೫೦೦, ಪಬ್ಲಿಸಿಟಿ ಆಫೀಸಿಗೆ ರೂ. ೫೦೦೦, 'ಎಡಿಷನಲ್ ಡಿಸ್ಟ್ರಿಕ್ಟ್ ಪೋಲೀಸ' ಖರ್ಚಿನ ಬಗ್ಗೆ ರೂ. ೬೬,೫೬೦ ಕೋರ್ಟುಗಳ ಮತ್ತು ನ್ಯಾಯಾಧಿಕಾರಿಗಳ ಬಗ್ಗೆ ರೂ. ೩೦,೩೦೦ ಸೆಂಕ್ಷನ್ ಮಾಡಿದೆ.

ಈ ವರುಷ ಮಾದಕ ಪದಾರ್ಥಗಳನ್ನು ಮಾರಾಟಮಾಡುವ ಅಂಗಡಿಗಳು ಕಡಿಮೆಯಾಗಿದೆಯೋ ಎಂದು ಖಾನ್ ಸಾಹೇಬ ಮುನಶಿ ಮಹಮ್ಮದ ಅಬ್ದುರ್ ರಹಿಮಾನ ಸಾಹೇಬ ಇವರು ವಿದ್ಯಾಖಾತೆಯ ಮಂತ್ರಿಗಳಿಗೆ ಪ್ರಶ್ನೆ ಕೇಳಿದರು. ಮಾದಕ ಪದಾರ್ಥಗಳ ಮಾರಾಟದ ಅಂಗಡಿಗಳ ಸಂಖ್ಯೆಯು ಕಡಿಮೆಯಾಗಲಿಲ್ಲವೆಂದು ಉತ್ತರ ದೊರಕಿದೆ. ಕೌನ್ಸಿಲಿನ ಮುಂದಿನ ಅಧಿವೇಶನವು ದಶಂಬರ ತಾ. ೧೮ರಲ್ಲಿ ಸೇರುವುದು.

ಅಕಾಲಿಗಳ ವಿಜಯ.

ಈ ವರೆಗೆ ಗುರುಕಾಬಾಗದ ಸ್ಥಳವನ್ನು ಅಕಾಲಿಗಳಿಂದ ಕಾಪಾಡುವುದಕ್ಕೆ ಮಹಂತರು ಸರಕಾರದ ಪೋಲೀಸ ಸಹಾಯವನ್ನು ಹೊಂದಿದ್ದರಷ್ಟೆ. ಈಗ ಮಹಂತರು ತನಗೆ ಪೋಲೀಸ ಸಹಾಯವು ಅಗತ್ಯವಿಲ್ಲವೆಂದು ಸೂಚಿಸಿರುವರು. ಇವರ ಅಪೇಕ್ಷೆಯಂತೆ ಇವರ ಅಂಗರಕ್ಷಣೆ ಬಗ್ಗೆ ಕೆಲವು ಪೋಲೀಸರನ್ನು ಮಾತ್ರ ಇಟ್ಟು ಬಾಕಿ ಪೋಲೀಸರನ್ನು ಸರಕಾರವು ಹಿಂದಕ್ಕೆ ಕರಿಸಿದೆ. ಆದುದರಿಂದ ಗುರುಕಾಬಾಗದ ಸ್ಥಳವನ್ನು ಪ್ರವೇಶಿಸುವವರನ್ನು ಮುಂದಕ್ಕೆ ಕೈದುಮಾಡಲಿಕ್ಕಿಲ್ಲ. ಗುರುಕಾಬಾಗಕ್ಕೆ ಹಾದಿರುವ ಸ್ಥಳವನ್ನು ಮಹಂತ ಸುಂದರ ದಾಸರು ಶ್ರೀಯುತ ಗಂಗಾರಾಮ ಎಂಬವರಿಗೆ ಗೇಣಿಗೆ ವಹಿಸಿಕೊಟ್ಟಿರುವರು. ಈ ಗೃಹಸ್ಥರು ಅಕಾಲಿಗಳ ಚಳವಳವನ್ನು ಶಾಂತಪಡಿಸುವ ಉದ್ದೇಶದಿಂದ ಮರಗಳನ್ನು ಕಡಿಯಲು ಬರುವ ಅಕಾಲಿಗಳಿಗೆ ಉಪದ್ರ ಕೊಡಲಿಕ್ಕಿಲ್ಲವೆಂದು ಜಾಹೀರ ಪಡಿಸಿರುವರು. ಇವರ ಈ ಕಾರ್ಯಕ್ಕೆ ಸರಕಾರದ ಬೆಂಬಲವೂ ಸಹಾನುಭೂತಿಯೂ ದೊರಕಿದೆ. ಅಕಾಲಿಗಳು ಪ್ರಥಮದಲ್ಲಿ ಬಹಳ ಕಷ್ಟಗಳನ್ನು ಸಹಿಸಿದುದರಿಂದ ಸರಕಾರದವರು ಇವರನ್ನು ಗುರುಕಾಬಾಗಕ್ಕೆ ಬರುವ ದಾರಿಯಲ್ಲಿ ತಡಿಸಿ ಬಲಾತ್ಕಾರದಿಂದ ಹಿಂದಕ್ಕೆ ಕಳುಹಿಸುವುದನ್ನು ಉಪಾಯವಿಲ್ಲದೆ ನಿಲ್ಲಿಸಿ ಅವರನ್ನು ಸೆರೆಹಿಡಿಯುವ ಮಾರ್ಗವನ್ನು ಅನುಸರಿಸಿದರು. ಇದು ಅಕಾಲಿಗಳಿಗೆ ಸಿಕ್ಕಿದ ಪ್ರಥಮ ಜಯವಾಗಿದೆ. ಈಗ ಗುರುಕಾಬಾಗಕ್ಕೆ ಹೋಗಿ ಮರಗಳನ್ನು ಕಡಿಯಲು ಯಾವ ಆತಂಕವೂ ಇಲ್ಲದೆ ಇರುವುದರಿಂದ ಅಕಾಲಿಗಳನ್ನು ಮುಂದಕ್ಕೆ ಸೆರೆಹಿಡಿಯುವುದನ್ನು ಸಹ ನಿಲ್ಲಿಸಬೇಕಾಗಿ ಬಂದಿದೆ. ಇದು ಅಕಾಲಿಗಳು ಸಂಪಾದಿಸಿದ ಎರಡನೆಯ ಜಯ. ಆದರೆ ಗುರುದ್ವಾರಾ ಕಮ್ಮಿಟಿಯ ಕೇಳಿಕೆಗಳನ್ನು ಸರಕಾರವು ಮನ್ನಿಸುವ ವರೆಗೆ ಹಾಗು ಈ ವರೆಗೆ ಕೈದುಮಾಡಿದ ಅಕಾಲಿಗಳನ್ನೆಲ್ಲಾ ಬಿಡುಗಡೆಮಾಡುವ ವರೆಗೆ ಅಕಾಲಿಗಳು ಎಂದೂ ಶಾಂತರಾಗಲಿಕ್ಕಿಲ್ಲ. ಕಳೆದ ತಾರೀಕು ೧೭ರಿಂದ ಗುರುಕಾಬಾಗಕ್ಕೆ ಹೋಗಿ ಕಟ್ಟಿಗೆಯನ್ನು ಕಡಿಯಲು ಯಾರ ಆಕ್ಷೇಪವೂ ಇಲ್ಲ. ಗುರುಕಾಬಾಗ ಚಳವಳವು ಪ್ರಾರಂಭವಾದಂದಿನಿಂದ ಈ ವರೆಗೆ ಒಟ್ಟು ೫೬೦೩ ಮಂದಿಗಳನ್ನು ಕೈದುಮಾಡಿದೆ. ಸಿಕ್ಖರೂ ಹಿಂದೂಗಳೂ ಕೆಲವು ಮಂದಿ ಮಹಮ್ಮದೀಯರೂ ಗುರುದ್ವಾರಾ ಬಿಲ್ಲನ್ನು ಪಾಸು ಮಾಡಕೂಡದೆಂದು ಸೂಚಿಸಿದರೂ ಆ ಬಿಲು ಪಂಜಾಬ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಪಾಸಾಗಿದೆ.

ಗುರುದ್ವಾರದ ಸಮೀಪದ ಸ್ಥಳವು ತಮ್ಮ ಮೇಲ್ವಿಚಾರಣೆಗೆ ಒಳಪಟ್ಟಿದ್ದರಿಂದ ಮಹಂತರಿಗೆ ಅದನ್ನು ಗೇಣಿಗೆ ಕೊಡಲು ಹಕ್ಕಿಲ್ಲವೆಂದು ಗುರುದ್ವಾರ ಪ್ರಬಂಧ ಕಮ್ಮಿಟಿಯವರು ಸೂಚಿಸಿದ್ದಾರೆ.

ಅಕಾಲಿ ಎಂಬ ಪತ್ರದ ಸಂಪಾದಕರಾದ ಮಿ॥ ಯಸ್. ಜವಾಹರ್‌ಸಿಂಗ ಎಂಬವರನ್ನು ಗುರುಕಾಬಾಗದಲ್ಲಿನ ಮರಗಳನ್ನು ಕಡಿಯುವಂತೆ ಅಕಾಲಿಗಳನ್ನು ಪ್ರೇರೇಪಿಸಿದ ತಪ್ಪಿನ ಆರೋಪದ ಮೇಲೆ ಕೈದುಮಾಡಿದೆ. ಜಲಿಯನ್‌ವಾಲಾ ಬಾಗಿನಲ್ಲಿ ಪ್ರಚಂಡ ಜನಸ್ತೋಮದ ಮುಂದೆ ಸ್ವಾಮಿ ಶಂಕರಾಚಾರ್ಯರು ಗುರುದ್ವಾರದಲ್ಲಿ ನಡೆದ ಸಂಗತಿಯನ್ನು ಕುರಿತು ಭಾಷಣವನ್ನು ಮಾಡಿದರು. ಇವರು ಮಹಂತರ ಕಾರ್ಯಗಳನ್ನು ಸರಿಯಾಗಿ ಟೀಕಿಸಿ ಗುರುದ್ವಾರದಲ್ಲಿ ನಡೆದ ವಿದ್ಯಮಾನಗಳಿಗೆ ಸರಕಾರದವರು ಕೂಡ ಕಾರಣರಾಗಿದ್ದಾರೆಂದು ಸೂಚಿಸಿದರು. ಸ್ವಾಮಿಯವರ ಭಾಷಣವು ಮುಗಿದ ನಂತರ ಶ್ರೀಯುತ ಸತ್ಯಪಾಲರು ಇದೇ ವಿಷಯವನ್ನು ಕುರಿತು ಭಾಷಣ ಮಾಡಿದರು.

ಖಾದಿ ಪ್ರದರ್ಶನ.

ಗಯೆಯಲ್ಲಿ ಸೇರಲಿಕ್ಕಿರುವ ರಾಷ್ಟ್ರೀಯ ಸಭೆಯ ಸಮಯದಲ್ಲಿ ಅಖಿಲ ಭಾರತ ಖಾದಿ ಪ್ರದರ್ಶನವು ಜರಗುವುದು. ಹಿಂದುಸ್ಥಾನದಲ್ಲಿ ತಯಾರಾಗುವ ಖಾದಿಗೆ ಉತ್ತೇಜನಕೊಟ್ಟು ಅಲ್ಲಿಯ ವರೆಗೆ ಖಾದಿ ಪ್ರಚಾರದಲ್ಲಾದ ಪ್ರಗತಿಯನ್ನು ಜನತೆಗೆ ತೋರಿಸುವುದೇ ಇದರ ಮುಖ್ಯ ಉದ್ದೇಶ. ಆ ಪ್ರದರ್ಶನದಲ್ಲಿ ಕೆಳಗೆ ನಮೂದಿಸಿದ ವಸ್ತುಗಳು ಸೇರಿಸಲಾಗುವುವು.

೧. ಶುದ್ಧ ಖಾದಿ—ಕೈ ಮಗ್ಗದಲ್ಲಿ ಮತ್ತು ಕೈರಾಟೆಯಲ್ಲಿ ತಯಾರಿಸಿದ ರೇಶ್ಮೆ ಮತ್ತು ಹತ್ತಿಯ ನೂಲು, ಅದರಿಂದ ಮಾಡಿದ ವಸ್ತ್ರಗಳೂ ಶುದ್ಧ ಖಾದಿಯೆಂದು ಎಣಿಸಲ್ಪಡುವುವು.

೨. ಖಾದಿಯ ಸಾಧನಗಳು—ಹತ್ತಿ, ರೇಶ್ಮೆ ಮುಂತಾದವನ್ನು ಸ್ವಚ್ಛಮಾಡಲಿಕ್ಕೆ ಬೇಕಾದ ಸಾಧನಗಳು, ಕೈರಾಟೆಗಳು, ಕೈಮಗ್ಗಗಳು, ದೇಶದಲ್ಲೇ ತಯಾರಾಗುವ ಬಣ್ಣಗಳು ಮತ್ತು ಆ ಬಣ್ಣಗಳನ್ನು ಮಾಡಲು ಬೇಕಾದ ವನಸ್ಪತಿ. ಈ ಎಲ್ಲಾ ಸಾಧನಗಳು ದೇಶದಲ್ಲೇ ತಯಾರಾದ್ದು ಬೇಕು.

೩. ಖಾದಿಯ ಸಾಹಿತ್ಯ—ಬೇರೆ ಬೇರೆ ತರದ ಹತ್ತಿ, ಅದರ ಬೀಜ, ಅವನ್ನು ನಡುವ ಕ್ರಮ, ಅದರಿಂದ ತೆಗೆಯ ಬಹುದಾದ ನೂಲಿನ ನಂಬ್ರ, ರೇಶ್ಮೆ ಹುಳಗಳನ್ನು ಸಾಕುವ ಪದ್ಧತಿ ಮುಂತಾದ್ದುವೆಲ್ಲಾ ವಿವರಿಸುವುದೇ ಖಾದಿಯ ಸಾಹಿತ್ಯ.

೪. ಶುದ್ಧ ಖಾದಿ ಮತ್ತು ಅದರ ಸಾಹಿತ್ಯವನ್ನು ಮಾರಲು ಜಾಗವನ್ನು ನೇಮಿಸಲಿಕ್ಕೆ ಒಂದು ಕಮಿಟಿಯನ್ನು ನೇಮಿಸಲಾದೀತು.

೫. ಪ್ರದರ್ಶನವಾದ ನಂತರ ಇನಾಮುಗಳನ್ನು ಸಹ ಕೊಡಲಾದೀತು. ಅದಕ್ಕಾಗಿ ಬೇರೊಂದು ಕಮಿಟಿಯು ನೇಮಿಸಲಾಗುವುದು.

೬. ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸುವವರು ತಮ್ಮ ಖರ್ಚಿನಿಂದಲೇ ಕಳುಹಿಸಬೇಕು. ಆದರೆ ಖಾದಿಯ ವಿಷಯ ಬಲ್ಲವರನ್ನು ಕಮಿಟಿಯು ಸ್ವಂತ ಖರ್ಚಿನಿಂದ ಕರೆಸಿಕೊಳ್ಳುವದು.

೭. ಅಂಗಡಿಯ ಬಾಡಿಗೆಯನ್ನು ಬೇಗನೆ ನಿಶ್ಚಯಿಸಿ ಪ್ರಕಟಿಸಲಾದೀತು. ಸ್ವಾಗತ ಮಂಡಳಿಯು ಈ ಕೆಳಗಿನ ಇನಾಮುಗಳನ್ನು ಕೊಡುತ್ತದೆ, ಕೈರಾಟೆಗಳಿಗೆ ಇನಾಮುಗಳು ೩, ರೂ. ೧೫೦, ರೂ. ೧೦೦, ರೂ. ೫೦, ಸ್ವಚ್ಛ ಮಾಡುವ ಸಾಧನಗಳಿಗೆ ರೂ. ೧೦೦. ಹತ್ತಿಯನ್ನು ಬಿಡಿಸುವ ಸಾಧನಕ್ಕೆ ರೂ. ೧೦೦.

ಕೈನೂಲು ನೇಯುವ ಮಗ್ಗಗಳಿಗೆ ರೂ. ೧೫೦. ರೂ. ೧೦೦, ರೂ. ೫೦ ರೇಶ್ಮೆ, ನಾರು ಮುಂತಾದ ಕೈನೂಲಿನ ಮಗ್ಗಗಳಿಗೆ ರೂ. ೧೦೦, ರೂ. ೫೦, ರೂ. ೨೫ ಖಾದಿಗೆ ರೂ. ೧೦೦ ರೂ. ೫೦ ರೂ. ೨೫. ಬಣ್ಣಗಳಿಗೆ ರೂ. ೧೦೦ ರೂ. ೫೦ ರೂ. ೨೫. ಮಹಾತ್ಮಾ ಗಾಂಧಿಯವರು ಎರವಾಡಾ ಜೈಲಿನಲ್ಲಿ ತಯಾರಿಸಿದ ಪವಿತ್ರ ಕೈನೂಲು ಪ್ರದರ್ಶಿಸಲಾಗುವುದು.

ಸ್ಯಾಕಲ್ ಸವಾರರು, ಕುದುರೆ ಸವಾರರು ಅಲ್ಲದೆ ಬೇರೆ ೧೫೦೦ ಸ್ವಯಂಸೇವಕರ ದಳವು ತಯಾರಾಗುವುದು. ಸ್ವಯಂ ಸೇವಕರು ೧೮ವರ್ಷ ಪ್ರಾಯಕ್ಕಿಂತ ಕಮ್ಮಿಯಾಗ ಬಾರದು; ಅನತ್ಯಾಚಾರದ ಶಪಥವನ್ನು ಕೈಕೊಳ್ಳಬೇಕು; ಸ್ವಾಗತ ಸಮಿತಿಯು ಹೇಳಿದ ಸಮಾನಿಯ ಖಾದಿಯ ಉಡುಪನ್ನು ಸ್ವಂತ ಖರ್ಚಿನಿಂದಲೇ ತಯಾರಿಸಿಕೊಳ್ಳ ಬೇಕು. ಸ್ತ್ರೀಸ್ವಯಂ ಸೇವಕರ ಉಡುಪು ಖಾದಿಯಿಂದ ಆಗಬೇಕೆಂಬದೇ ಹೊರತು ಬೇರೆ ನಿರ್ಬಂಧವಿಲ್ಲ. ಊಟಪಾಟಗಳಿಗೆ ಸ್ವರಾಜ್ಯಪುರಿಯೊಳಗೆ ನಿಲ್ಲಬೇಕು. ಸ್ವಯಂ ಸೇವಕರಾಗಲಿಚ್ಛಿಸುವವರು "ರಾಷ್ಟ್ರ ಸಭಾ ಸೇವಕದಳ, ಸ್ವರಾಜ್ಯಪುರಿ, ಗಯಾ" ಎಂಬ ವಿಳಾಸಕ್ಕೆ ಬರೆದುಕೊಳ್ಳಬೇಕು.

ಕೌನ್ಸಿಲುಗಳನ್ನು ಕೈವಶಮಾಡಿರಿ.

ಖಿಲಾಫತ್ ಕಮ್ಮಿಟಿಯವರು ನಿಯಮಿಸಿದ ಕಾಯದೆಭಂಗ ವಿಚಾರಣಾ ಸಮಿತಿಗೆ ಸೇರಿದ್ದ ಮೌಲ್ವಿ ಜಹೂರ ಮಹಮ್ಮದರವರು ಈ ಅಭಿಪ್ರಾಯವನ್ನು ಹೇಳಿದ್ದಾರೆ:—

"ಹೊಸ ಚುನಾವಣೆಯ ಸಮಯವು ದೂರವಿದ್ದುದರಿಂದ ಈಗಲೇ ಅದನ್ನು ಚರ್ಚಿಸುವುದು ಅಗತ್ಯವಿಲ್ಲವೆಂದು ಕೆಲವರು ಹೇಳಿದರೂ ನನಗೆ ಅದು ಸರಿ ತೋರುವುದಿಲ್ಲ. ಮುಂದಿನ ಚುನಾವಣೆಗೆ ನಾವು ಉಮೇದ್ವಾರರಾಗಬೇಕಾದರೆ ಈಗಲೇ ಕೆಲಸ ಪ್ರಾರಂಭಿಸಬೇಕು. ಅದಕ್ಕಾಗಿ ನನ್ನ ಕಾರಣಗಳೇನಂದರೆ:—

ಕಳೆದ ಚುನಾವಣೆಯಲ್ಲಿ ಬರೇ ಶೇಕಡಾ ೧೫ ಯಾ ೨೦ರಷ್ಟು ಮತದಾರರು ತಮ್ಮ ಮತವನ್ನು ಕೊಟ್ಟಿದ್ದರಿಂದ ಬಹುಮತವು ಅಸಹಕಾರಿತೆಯ ಪಕ್ಷಕ್ಕಿದ್ದರೂ 'ಮತದಾರರು ಹೆದರಬೇಕಾದ್ದರಿಂದ ತಮ್ಮ ಆಲಸ್ಯದಿಂದಲೇ ಅವರು ಮತವನ್ನು ಕೊಡಲಿಲ್ಲ'ವೆಂದು ಶಾಂತಪಕ್ಷದವರೂ ಸರಕಾರವೂ ಪ್ರಕಟಿಸಿದ್ದು ಮಾತ್ರವಲ್ಲ ನಮ್ಮ ರಾಜಕೀಯ ಚಳವಳವನ್ನಡಗಿಸಲು ಸರಕಾರವು ಮಾಡಿದ ಕಾರ್ಯಗಳನ್ನು ಅನುಮೋದಿಸಿ ಸರಕಾರವು, ತನಗೆ ರಾಷ್ಟ್ರದ ಬೆಂಬಲವಿದೆ ಎಂದು ಹೇಳುವಂತೆ ಮಾಡಿದರು. ಇದನ್ನರಿತೇ ಮಾಜಿ ಮಂತ್ರಿಗಳಾದ ಲಾಯಿಡ್ ಜೋರ್ಜರೂ ವ್ಯಾಸರಾಯರೂ ಈಗಿನಂಥವರೇ ಮುಂದಿನ ಸಭಾಸದರಾಗಬೇಕೆಂದು ಬಾಯ್ಬಿಟ್ಟು ಹೇಳಿದರು. ಹೀಗಿರುವಾಗ ನಮ್ಮ ಕರ್ತವ್ಯವೇನು?

೧. ಸ್ವಲ್ಪ ಜನರು ಚುನಾಯಿಸಿದವರು ತಾವು ಪ್ರತಿನಿಧಿಗಳೆಂದು ಮೆರೆದು ನಮ್ಮ ಚಳವಳಕ್ಕೆ ಹಾನಿ ತರುವುದನ್ನು ತಡೆಗಟ್ಟುವುದು.

೨. ಈಗಣ ಸುಧಾರಣೆಯು ಮತದಾರರಿಗೆ ಒಪ್ಪುವುದಿಲ್ಲ; ಅವರೆಲ್ಲರೂ ನಮ್ಮ ಪಕ್ಕಿಗನೇ ಇದ್ದಾರೆ ಎಂಬುದನ್ನು ವ್ಯಕ್ತಗೊಳಿಸುವುದು.

ಕೌನ್ಸಿಲ ಬಹಿಷ್ಕಾರದ ವಿಷಯ ಮೊದಲು ಚರ್ಚಿಸಿದಾಗ ಈ ಆಲೋಚನೆಯು ಬಂದಿದ್ದರೂ ಮತದಾರರೆಲ್ಲರೂ ಮತನೀಯದೆ ನಿಲ್ಲಬೇಕೆಂಬುದೇ ಮುಖ್ಯ ಪ್ರಯತ್ನವಾಗಿತ್ತು. ಈ ಪ್ರಯತ್ನವು ಹೆಚ್ಚು ಮಟ್ಟಿಗೆ ಸಫಲವಾದರೂ ಶೇಕಡಾ ೧೫-೨೦ರಷ್ಟು ಜನರು ಮತವನ್ನು ಕೊಟ್ಟರು. ಮುಂದಿನ ಚುನಾವಣೆಯಲ್ಲಿ ಮತ ಕೊಡುವವರ ಸಂಖ್ಯೆಯನ್ನು ಇನ್ನೂ ಕಡಿಮೆಮಾಡುವುದು ಕಷ್ಟ ಸಾಧ್ಯವಾದ್ದರಿಂದ ಕೌನ್ಸಿಲಿಗೆ ಉಮೇದ್ವಾರರಾಗಿ ನಿಂತು ಬಹುಮತದವರು ತಮ್ಮನ್ನು ಆರಿಸಿದ್ದಾರೆಂಬುದು ವಿಶದಿಸಲಿಕ್ಕೆ ಸಾಧ್ಯವಿದೆ. ಹೀಗೆ ಮಾಡಿದ್ದರಿಂದ—

(ಅ) ಅನತ್ಯಾಚಾರ ಅಸಹಕಾರಿತೆಯಲ್ಲಿ ರಾಷ್ಟ್ರಕ್ಕೆ ವಿಶ್ವಾಸವಿದ್ದುದರಿಂದ ಪಂಜಾಬ ಮತ್ತು ಖಿಲಾಫತ್ತಿನ ಇತ್ಯರ್ಥವಾಗುವ ವರೆಗೆ ರಾಷ್ಟ್ರವು ಅದನ್ನು ಬಿಡದು ಎಂದು ವಿಶದವಾಗುವುದು.

(ಆ) ಕೌನ್ಸಿಲುಗಳಲ್ಲಿ ಲೋಕಮತವನ್ನು ತಿರಸ್ಕರಿಸುವ ಸ್ವಾರ್ಥಿಗಳು ಕೂತುಕೊಳ್ಳದಂತಾಗುವುದು.

(ಇ) ಮತ್ತು ಅಂಥ ಬಹುಮಾನಿಗಳಿಂದ ಚಳವಳಕ್ಕೆ ಹಾನಿಯಾಗದಂತಾಗುವುದು.

(ಈ) ಲೋಕ ಸಮ್ಮತಿಯು ತನ್ನ ಕೆಲಸಗಳ ಬೆಂಬಲಕ್ಕಿದೆ ಎಂದು ನೌಕರಶಾಹಿಯು ಹೇಳಲಾರದು.

(ಉ) ಕೌನ್ಸಿಲುಗಳು ಪಾಲಿಮೆಂಟು ಸರಕಾರದ ಕೆಲಸಕ್ಕೆಲ್ಲ ಅಡ್ಡಿ ತಂದಂತಾಗುವುದು.

(ಊ) ಅಸಹಕಾರಿತೆಯು ಸತ್ತಿಲ್ಲ ಪೂರ್ಣ ಜೀವದಿಂದಿದೆ ಎಂದು ಜಗತ್ತಿಗೆ ಪ್ರಕಟವಾಗುವುದು.

(ಋ) ಚುನಾವಣೆಗಾಗಿ ಮತದಾರರಿಗೆಲ್ಲ ಅಸಹಕಾರಿತೆಯ ಸಂಪೂರ್ಣ ಬೋಧೆಯು ಕೊಡಲ್ಪಡುವುದರಿಂದ ನಮ್ಮ ಚಳವಳದಲ್ಲಿ ನವೀನ ಜೀವನವು ತಲೆದೋರುವುದು.

ಇನ್ನು ಕೌನ್ಸಿಲುಗಳಿಗೆ ಉಮೇದ್ವಾರರಾಗಬಾರದೆಂಬವರ ಆಕ್ಷೇಪಣೆಯನ್ನು ನಿರಾಕರಿಸುತ್ತೇನೆ:—

(ಅ) ಸರಕಾರದೊಡನೆ ಸಹಕಾರಮಾಡುವ ಶಾಂತಪಕ್ಷದವರಿಂದ ಕೌನ್ಸಿಲುಗಳನ್ನು ಬಿಡಿಸಿ ತಮ್ಮ ಕೈವಶಮಾಡಿಕೊಂಡು ಆದಗೆ ಅವುಗಳಿಗೆ ಬಹಿಷ್ಕಾರ ಕೊಡುವುದರಿಂದ ಅಸಹಯೋಗಕ್ಕೇನೂ ಹಾನಿಯಿಲ್ಲ.

(ಆ) ನಮ್ಮ ಉದ್ದೇಶವನ್ನು ಮತದಾರರಿಗೆ ಪೂರ್ಣ ವಿವರಿಸಿದರೆ ಅವರ ಮನಸ್ಸು ಚಂಚಲವಾಗಲಿಕ್ಕಿಲ್ಲ; ಹೀಗಿರುವಾಗ ಚಂಚಲವಾದೀತೆಂಬ ಕುಂಟು ನೆವದಿಂದ ಕೈಯಲ್ಲಿದ್ದ ಬಾಣವನ್ನು ತೊಡದಿರುವುದು ಅಶ್ಲಾಘ್ಯ.

(ಇ) ಒಂದು ಸಲ ಮಾತು ಕೊಟ್ಟನಂತರ ಉಮೇದ್ವಾರರು ಶಪಥ ಮೀರುವರೆಂದರೆ ಉತ್ತಮ ವಿಶ್ವಾಸವೆಂಬುದೇ ಇಲ್ಲವೆಂದೆ ಆಯಿತು.

(ಈ) ನಮ್ಮ ಮೆಂಬರರಿಲ್ಲದೆ ಸರಕಾರವು ತಾನು ಚುನಾಯಿಸಿದ ಮೆಂಬರರಿಂದಲೇ ಕಾರ್ಯ ನಡೆಸಲಿಕ್ಕಿಲ್ಲ; ಏಕೆಂದರೆ ಆಗ ಸುಧಾರಣೆಯಲ್ಲಿರುವುದು?

(ಉ) ನಮ್ಮ ಮುಖಂಡರು ಕಾರಾಗೃಹವಾಸವನ್ನು ಅನುಭವಿಸಿದವರಾದ್ದರಿಂದ ಉತ್ತಮ ಉಮೇದ್ವಾರರಿಲ್ಲವೆಂಬುದು ವ್ಯರ್ಥ; ಶಾಂತಪಕ್ಷದವರ ಕೈಯಿಂದ ಕೌನ್ಸಿಲುಗಳನ್ನು ತಪ್ಪಿಸುವುದೇ ಮುಖ್ಯ ಉದ್ದೇಶವಿರುವಾಗ ಉಮೇದ್ವಾರರು ಯಾರಾದರೇನು?

ಇಂಥ ಯುಕ್ತಿಯಾದ ಕೆಲಸವನ್ನು ಮಾಡಲು ಕೊಂಗ್ರೆಸ್ ಮತ್ತು ಖಿಲಾಫತ್ ಕಮಿಟಿಯವರು ಈಗಿನಿಂದ ಕೆಲಸಮಾಡಿ, ಮತದಾರರಿಗೆ ತಮ್ಮ ಉದ್ದೇಶವನ್ನು ವಿವರಿಸಿ ತಮ್ಮ ಉಮೇದ್ವಾರರಿಗೇ ಮತವು ಸಿಕ್ಕುವಂತೆ ಮಾಡಬೇಕು. ಹೀಗೆ ಸ್ಥಳವನ್ನು ಕೈವಶ ಮಾಡಿದ ನಂತರ ೧೯೨೩ ನೇ ಇಸವಿಯ ಕೊಂಗ್ರೆಸ್, ಖಿಲಾಫತ್ ಮತ್ತು ಉಲೇಮರು ಹೇಳಿದಂತೆ ಕೌನ್ಸಿಲಿಗೆ ಹೋಗುವುದಾಗಲೀ ಬಿಡುವುದಾಗಲೀ ಮಾಡಬಹುದು."

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್ಸ್, ಮಾಧವ ಬಿಲ್ಡಿಂಗ್ಸ್.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇದ ಔಷಧಾಲಯವು.
— (ಸ್ಥಾಪಿತವಾದ್ದು 1881) —
ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಪಡಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೨೬. (ಪ್ರಾಡ್ವೈ) ಮದ್ರಾಸ್.
Local Agents: Raphael & Co.
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಮ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯಾರಿಸುವುದರ ಹೊರತು ನಮ್ಮ ಕಾರ್ಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಸ್ಥರಿಗೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

The Canara Bank Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0
Reserve and other sinking Funds „ 181,250—0—0
ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ತೆಗೆದುಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರೆಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ರೋಗಕ್ಕೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೆಯುಳ್ಳ ವಸ್ತುಗಳಾವುವೂ ಸೇರಿಸಲ್ಪಡದೆ ಇರುವುದರಿಂದ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸುವ ಜಠರಾಗ್ನಿ ಶಕ್ತಿಯನ್ನು ಸಮೃದ್ಧಿಗೊಳಿಸುತ್ತವೆ. ಕೆಟ್ಟ ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತಗಿಪಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಅರುಚಿ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್ಫ್ಲುಯೆನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

☞ ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟೌನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ.

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮುದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ತಲೆಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ತಲೆಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜನಾಗಿಯೂ, ಎದೆಗೆ ಬಲಕೊಟ್ಟು ಮೇಲ್ಗಿಂದ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.
60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿಯೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಶುದ್ಧವಾಗಿ ನಿರ್ಮಲವಾಗುವುದಲ್ಲದೆ ರೋಗದ ಪಕ್ಷಕ್ಕೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.
ಚಿಕ್ಕ ಸೀಸೆ 1ಕ್ಕೆ ರೂ. 2—0—0.

ವಿಳಾಸ—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಡಿ. ಫ್ರೇಯರ್ ರೋಡ್,
ರೈಟ್ ಎಂಡ್ ಕೋ ಹತ್ತಿರ, ಫೋರ್ಟ್ ಮುಂಬಯಿ.
R. D. Kately & Co.
No. D. Frere Road,
Near Wright & Co. Fort, Bombay.

ಮಂಗಳೂರು — ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ಅರಿಕೊಳ್ಳಬಹುದು.

ಕೆ. ವೆಂಕಟೇಶ ರಾಮಚಂದ್ರ ಕಮತ್
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪ್ಪ.
ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, [illegible] ಯನಾಮಲ್ಲ ಬಟ್ಟಲು ವಸ್ತ್ರ ಸಾಮಾನುಗಳೂ, ಪ್ರಿಂಟಿಂಗ್ [illegible] ಬ್ರೌನ್ ಪೇಪರ್, ರಟ್ಟು ಶಾಲಿ ಕವರು, [illegible] ಸ್ಟೇಶನರಿ ಸಾಮಾನುಗಳೂ, ಜರ್ಮನ್ ಸಿಲ್ವರ ಸಾಮಾನುಗಳೂ, [illegible] ಇತರ ಕಟ್ಲರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ [illegible] ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ [illegible] ವಸ್ತ್ರಗಳೂ, [illegible] ಸುಲಭ ಕ್ರಯಕ್ಕೆ [illegible]

ಅಚ್ಚಿನಲ್ಲಿದೆ! ಎಂ. ಜಿ. ಐಗಳ್, ಇವರಿಂದ ರಚಿತವಾದ ಅಚ್ಚಿನಲ್ಲಿದೆ!

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಸಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1-8-0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿದ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಜಂಗಳದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜೈನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಅಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಾಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟಿಕಾದ್ರಿ—ಸೂಡ ಮಠಗಳು—ಕೇಚಿಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತಪಾಕ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ದಂತಿದುರ್ಗ—3ನೇ ಗೋವಿಂದನೃಪತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ಶೈವ ಮಠ ವೈಷ್ಣವವಾದದ್ದು—ವಡಬಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದ್ದು—[illegible]—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹಂಪರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲೀಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಅಲಿರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚಿರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸ್ರೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—[illegible]—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—[illegible]—ವರಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—[illegible] ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ಪೇಟೆ ನಿರ್ಮಾಣ—ಅಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕದನ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಲಾಬಾದ ಯುದ್ಧ—[illegible] ಸುಬ್ರಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೊ, ಮೊದಲನೇ ಕಲೆಕ್ಟರ—[illegible]—[illegible] ಯುದ್ಧ—ಶಾಂತತೆ. 23. ಕೊಡಗರು—ವಂಶ—ಸೂಳ್ಯ—ಬೆಳ್ಳಾರೆ—ಅಮರಸೂಗಗಳು—ಬೆಳ್ಳಾರೆ, ಪುತ್ತೂರು ಪಟ್ಟಣ—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ—ಗುರುವಾಯನಕೆರೆ ಪಟ್ಣ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಣ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತಪ್ಪಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳ್ತಂಗಡಿ—ಮಂಜೇಶ್ವರ ಕೋಟೆಗಳ ಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚೆನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—[illegible]—ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಜಿರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—[illegible] ಅಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾವಾವಿ ಯುದ್ಧ—ಬಂಟವಾಳ [illegible]—ದೇವಪುಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—[illegible] ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—ಹಿರಿಯ ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶೀಮಂತೂರು—ಮೂಲಿಕೆ—ವಳಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ಸಿಸ್ಲ—[illegible]—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾಸ್ರೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ದಿನ್ನಾಣರು—[illegible] ಕೊನ್ನಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವಚರಿತ್ರೆ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—[illegible]. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮೆ ಅರಸರು—ಮಾಯಿಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಣ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳರು—ಬ್ರಾಹ್ಮಣ ಬಲ್ಲಾಳರು—ಚಟ್ಟಪಾಡಿ ಸಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಕರಾರುಗಳು. 2. 200 ಶಾಸನಗಳ ಅಭಿಪ್ರಾಯ—ಅಲೂಪರು 27—ಪಶ್ಚಿಮ ಚಾಲುಕ್ಯ 1—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23—ಹೈದರಾಲಿ 1—ಇಂಗ್ಲಿಷರು 1—ಬಂಗರು 5—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದ್ರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ವಮಹೆಗಡೆ 1.

ವಿಳಾಸ:— ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.

ಅಥವಾ

ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಶಿವ ರಾಯಚೂರು ಶೀವೂವಧೂತರು,

[illegible] ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ಇನ್ನೇನು ಮಂತ್ರ ಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನುದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ಇನ್ನೇನು ತಂತ್ರ ಪ್ರಕರಣದಲ್ಲಿ [illegible] ಉಪಾಯಗಳು ಹೊರದುವಿಕೆ, [illegible] ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ಇನ್ನೇನು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ಇನ್ನೇನು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಗಳ ಚಮತ್ಕಾರ ಸಹ, ಇದರಲ್ಲಿ [illegible] ಇದು ಪ್ರತಿವಂದು ಕುಟುಂಬದಲ್ಲಿ ಉಪಯೋಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ತಿಳಿಸಿ [illegible] ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ಇನ್ನೇನು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ ಪಿಶಾಚಿ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ಬರೆದಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ [illegible] ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಪುಸ್ತಕರ [illegible] ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷರಾಗಿ [illegible] ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು [illegible] ಪ್ರತಿಯೊಬ್ಬರು ತರಿಸಿ [illegible] ಇದರ [illegible] ಸಹ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ [illegible], ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಇದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬುದನ್ನು, ಜನನೇಂದ್ರಿಯಾದಿಗಳ ವರ್ಣನೆಯನ್ನು, ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನು, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನು, ನಪುಂಸಕತ್ವ ವಗೈರೆ ವ್ಯಾಧಿಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಬಹಳ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರೀಕ್ಷಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರ್ವಕರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮುಗ್ಗದಾರರಿಗೆ ಬೇಕಾಗುವ ಪಕ್ಕೇವಾರು ನೂಲುಗಳೂ, ಮಿಲ್ಲಿನ ನೂಲಿನಂಥ ಕೈಮಗ್ಗದಲ್ಲಿ ತಯಾರಾದ ಜಾಡಿಗಳೂ, ಇನ್ನು ಅನೇಕ ತರದ ವಸ್ತ್ರಗಳೂ ಸಗಟು ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ.

ಶ್ರೀನಿವಾಸ ರಂಗಪ್ಪೈ,
ರಥಬೀದಿ, ಮಂಗಳೂರು.

ಪದ್ಮಾವತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೭—೧೯೩೧)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪತಿವ್ರತಾ ರಾಜಪುತ್ರಿಯ ನಡವಳಿಕೆ' ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲುಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಸತ್ಯಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕುದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. [illegible] ಬಾಲಿಕೆಯರು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯರೂಪವಾಗಿ ಆದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ."

ಸಂಗೀತ ಸಮಯಸಾರ ಸಚಿತ್ರ ರೂ. [illegible]
ಭಕ್ತ ವಿಜಯ ಮೈಸೂರು ಪ್ರತಿ ರೂ. [illegible]

ಮುತ್ತಿನ ಹಾರ	0—12—0
[illegible]	0—6—0
ಚಂದ್ರಹಾಸ	0—8—0
ರಾಜಪುತ್ರರಮಣಿಯರು	0—8—0
ಕೆಲವು ಸಣ್ಣ ಕಥೆಗಳು	1—0—0
[illegible]	1—0—0

ಪಂಪರಾಮಾಯಣ ಹೊಸ ಮುದ್ರಣ	5—0—0
ಪಂಪರಾಮಾಯಣದ ಕಥೆ ವಚನ	0—12—0
B. S. L. C. Kannada Texts	
ಹರಿದಾಸ	0—5—0
ಸುಬೋಧ	0—6—0
ಅರುಣಯ [illegible]	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

Edited, Printed & Published, by V. S. Kamath at the Mangalore Trading Association's Sharada Press, MANGALORE

Registered: No. M. 498.

ಸ್ವದೇಶಾಭಿಮಾನಿ.

SWADESHABHIMANI. MANGALORE.

ಚಂದಾನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 2—0—0.
ಟೆಪ್ಪಾಲ್ ಹಾಸಲು ಸೇರಿ „ 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ!

ರಕ್ತೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ನಾ- । ಗರವ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೬. ಮಂಗಳೂರು, ತಾರೀಕು ೧ನೇ ಶುಕ್ರವಾರ ದಶಂಬರ ೧೯೩೩. ಸಂಚಿಕೆ ೪೮

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ —ಉಡುಪಿ ಲಿಮಿಟೆಡ್.—

ಅಧಿಕಾರಿಗಳೊಳಸಲ್ಪಟ್ಟ ಮೂಲಧನ	ರೂ.	3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ		2,00,000—0—0
ಚಂದಾ ಹಾಕಿ ಎತ್ತಿದ ಮೂಲಧನ		1,00,000—0—0
ಮೀಸಲು ಇಟ್ಟ ಮೂಲಧನ		90,365—7—11
ಠೇವಣಾತಿಗಳು		3,33,300—0—0
ಇನ್ವೆಸ್ಟ್‌ಮೆಂಟು (1927ನೇ ಇಸವಿ) ಶೇಕಡಾ ೮೮ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ		4,54,322—11—0

ಕಳೆದ ೩ ವರುಷಗಳಲ್ಲಿ ಪಾಲುದಾರರಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್‍ಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಶರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ನಿರಖು ಠೇವಣಾತಿಗಳನ್ನು, 15 ದಿವಸಗಳ ನೋಟೀಸು ಮೂಲಕ ಶೇಕಡಾ ೬ರ ಬಡ್ಡಿ ಸಮೇತ ವಾಪಾಸು ಪಡಿಯುವ ಚಿಕ್ಕ ಮ್ಯಾದೆ ಠೇವಣಾತಿಗಳನ್ನು, ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನು, ಶೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನು, ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನು, ಡಿಪೋಜಿಟಾಗಿ ಪಡೆಯುವದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವದು.

ಈ ಬ್ಯಾಂಕಿಗೆ ತರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟೆರಿಯವರಿಗೆ ಬರೆದಲ್ಲಿ ತಿಳ್ಯುವದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಿಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ಇತರಗೊಬ್ಬರದಲ್ಲಿನದಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಿರುತ್ತೇವೆ.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೋ, ಕಲ್ಕತ್ತಾ.
THE DIRECTOR CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾಚಾರ್ಯಸ್ತತಿ ಅಶ್ವರಾಮ ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ಪ್ರತಪವೇಶ	ಕ್ರಯ	೦—೧೦—೦
ಕೇಶುಭಂಗ	„	೦—೧೨—೦
ಸಂಕ್ಷೇಪಗೀತೆ	„	೦—೧೦—೦

ಲಕ್ಷ್ಮೀನಾರಾಯಣ ಪುಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಿಕ್ಷೋಪನ್ಯಾಸ ಕ್ರಯ ೦—೩—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀ ದಾಸ ಬೋಧೆ, ವಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಜಿನಂಬರ ವಿಜಯ, ಸತೀ ಸಾಹಸ, ಅಂಗದನ ಭಿಯೋಗವು, ಮನೋರಮಾ, ಭ್ರಾಂತಿ ವಿಲಾಸ, ಕ್ಷಾತ್ರತೇಜ, ಮಾಧವ ತರುಣಾವಿಲಾಸ, ಅಸಹಕಾರದ ಹೋರಾಟಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೨-೧೩-೦. ಸ್ಥಳೀಕರಿಗೆ ರೂ. ೨-೦-೦. ವಿ. ಪಿ. ಮುಖಾಂತರ ಕಳುಹಿಸಿದರೆ ರೂ. ೩-೦-೦. ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆದುಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಇಂಕುಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸು, ಫೋಟೋ ಫ್ರೇಮುಗಳು, ಇತರ ಬಿಡಿಬಿಡಿ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ತಾಲೂಕು ಇತರ ಕೋರ್ಟು ಫಾರಮ್ಮುಗಳು, ಪಲ್ಲಗಳು ಪ್ರೋನೋಟು, ಕುಂಭಕೋಣ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫಾರಮ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೊಪತಿಕ್, ಹೋಮಿಯೋಪತಿಕ್ ಮತ್ತು ಬಿಸ್ಕ್ಯು ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪಾಕ್ಯ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ತೋಟಗಳಿಗೆ ಬೇಕಾಗುವ ಗೊಬ್ಬರಗಳು.

ಪ್ರಖ್ಯಾತ ಯುಕಲಿಪ್ಟಸ್ ಆಯಿಲ್ ಅಥವಾ ನೀಲಗಿರಿ ತೈಲ. ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣಾಂತ ಬೇನೆಗಳಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯುಳ್ಳ ಇಲ್ಲದು. ಇದು ಯಾವ ತರದ ಶಿರಶೂಲೆಯನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಂಟುಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ-ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 6—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ವಾಸಿಯಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫೇರ್ಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಗೂಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

[illegible]
U. B. DUTT & Co. CALCUTTA

ಮಲೆಯೊಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ [illegible] ಅತಿ ಶ್ರೇಷ್ಠವಾದಿಂದ ಮಾತ್ರವೇ ಸಿಕ್ಕುವ [illegible] ಅನೇಕ ಅತ್ಯುತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಗುಣಹೊಂದಿರುವುದಲ್ಲದೆ, ನಮಗೆ ಪ್ರತಿಷ್ಠೆಯು "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ [illegible] ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಅತ್ಯುತ್ಕೃಷ್ಟ ಔಷಧಗಳಲ್ಲಿ ನಮ್ಮ "[illegible]" ಎಲ್ಲಾ [illegible] ಅವಯವಗಳಲ್ಲಿ ಉಂಟಾಗುವ ಸ್ಫೋಟ, ಗಂಟು, ಸಂಧು, ಅವಯವ [illegible] ಕೊಡುವುದು [illegible] ಅಧಿಕ [illegible] ಕೊಡುವುದು [illegible] ಇತ್ಯಾದಿಗಳಲ್ಲಿ [illegible] ಹೆಂಗಸರಲ್ಲಿ ಮಕ್ಕಳಿಗೆ ಕಾಣಿಸಿಕೊಂಡರೆ, [illegible] ನಮ್ಮ "[illegible]" ತಿನಿಸುವರ್ಗ್ಯವು [illegible] ಸಂಪೂರ್ಣ ಗುಣಹೊಂದುವುದರಲ್ಲಿ [illegible] ಪಿತ್ತ, ವಾತ, ಕಫ, [illegible] ಕೆಮ್ಮು, ಉಬ್ಬಸ, [illegible] ಹಲ್ಲುನೋವು, ಹೊಟ್ಟೆನೋವು, [illegible] ಮುಂತಾದವುಗಳಲ್ಲಿಯೂ ನಮ್ಮ ಔಷಧಗಳಿವೆ. [illegible]

ಕ್ರಯ ರೂ. 4—4—0. ಯು. ಬಿ. ದತ್ತ ಕಂಪೆನಿ, [illegible]

ಪ್ರಖ್ಯಾತಿಪಟ್ಟ ಔಷಧಗಳು! ಪ್ರಖ್ಯಾತಿಪಟ್ಟ ಔಷಧಗಳು!

ಹಿಂದೂಸ್ಥಾನದೊಳಗಿನ ಶ್ರೇಷ್ಠ ಆಯುರ್ವೇದ ವೈದ್ಯರಾದ ಹಾಗು ಸರಕಾರದವರಿಂದ ವೈದ್ಯಕೀಯ ವ್ಯವಸಾಯದ ಬಗ್ಗೆ (ಡಿಪ್ಲೋಮಾ) ಅಧಿಕಾರ ದಾಖಲೆ ಪತ್ರವನ್ನು ಹೊಂದಿದ

ಕವಿರಾಜ ನಾಗೇಂದ್ರನಾಥ ಸೇನ್ ಎಂಡ್ ಕೋ.

ಇವರ ಔಷಧಾಲಯಕ್ಕೆ ದಕ್ಷಿಣ ಹಿಂದೂಸ್ಥಾನದ ಸೋಲ್ ಏಜಂಟರು—

ಟಿ. ಎನ್. ಸುಬ್ರಮಣ್ಯ ಎಂಡ್ ಕೋ.
ಟ್ರಿಪ್ಲಿಕೇನ್, ಮದರಾಸ.

ನಮ್ಮಲ್ಲಿ ಕವಿರಾಜ ನಾಗೇಂದ್ರನಾಥ ಸೇನ್ ಇವರ ಬುದ್ಧಿ ಸಾಮರ್ಥ್ಯದಿಂದ ಉತ್ಕೃಷ್ಟವಾದ ಮತ್ತು ಅಪೂರ್ವವಾದ ವನೌಷಧಗಳಿಂದ ತಯಾರಿಸಲ್ಪಟ್ಟ ಬಿಳೀ ಆಸವಗಳು, ಘೃತಗಳು, ತೈಲ್ಯಗಳು ಯಾವಾಗಲೂ ರಖಂ ಆಗಿ ಮಾರಾಟಕ್ಕೆ ಇವೆ.

ಇಲ್ಲಿ ಬರುವ ಔಷಧಗಳೂ ಕಲ್ಕತ್ತಾ ದರದಲ್ಲಿಯೇ ಬೀಕರಿ ಮಾಡಲಾಗುತ್ತದೆ. ವ್ಯಾಪಾರಸ್ಥರಿಗೂ ವೈದ್ಯರಿಗೂ ಆಯುರ್ವೇದ ಔಷಧಾಲಯಗಳಿಗೂ ಕಲ್ಕತ್ತೆಯಲ್ಲಿ ಕೊಡುವಷ್ಟೆ ರಿಯಾತಿ ದರದಲ್ಲಿ ಇಲ್ಲೂ ಕೊಡಲಾಗುವುದು.

ಕಳೆದ ೨೦ ವರುಷಗಳಿಂದ ನಾವು ಅನೇಕಾನೇಕ ಗಿರಾಕಿಗಳಿಗೆ ಈ ಕಂಪೆನಿಯ ಔಷಧಗಳನ್ನು ಒದಗಿಸುತ್ತಿದ್ದೇವೆ.

ಭಸ್ಮಗಳು:—ನಮ್ಮಲ್ಲಿ ದೊರಕುವ ಭಸ್ಮಗಳು ಖಾತ್ರಿಯಾಗಿ ಶುದ್ಧವಾಗಿಯೂ ಉತ್ತಮತರವಾಗಿಯೂ ಇವೆ. ಇತರ ಕಡೆಗಳಲ್ಲಿ ಸಿಗುವ ಭಸ್ಮಗಳಿಂದ ಸಿಗುವ ಪ್ರಯೋಜನಕ್ಕಿಂತ ದುಬಾರಿ ಗುಣವು ನಮ್ಮಲ್ಲಿ ದೊರಕುವವುಗಳಿಂದ ಹೊಂದಬಹುದು. ತೆಗೆದುಕೊಳ್ಳುವ ಶೇದಾತು ಸಹ ಬಾಕಿ ಭಸ್ಮಗಳಿಗಿಂತ ಕಡಿಮೆಯೇ ಆಗಿದೆ.

ಅಭ್ರಕಭಸ್ಮ:—ಕ್ಷಯ ಮುಂತಾದ ಪುಪ್ಪುಸರೋಗ, ನರಗಳ ಬಲಹೀನತೆ, ಮುದಿತನದಿಂದ ಶಕ್ತಿಕುಂದುವಿಕೆ ಮುಂತಾದ ರೋಗಗಳಿಗೆ ಹೆಚ್ಚಿನ ಪ್ರಯೋಜನಕರ. ಆಯುರ್ವೇದ ಔಷಧಗಳನ್ನು ತಯಾರಿಸುವಾಗ ಈ ಭಸ್ಮವು ಹೆಚ್ಚಾಗಿ ಉಪಯೋಗಿಸಲ್ಪಡುವುದು. ಸರ್ತಿಗೆ ಒಂದರಿಂದ ಎರಡು ಗ್ರೈನ್ ವರೆಗೆ ಈ ಭಸ್ಮವನ್ನು ಜೇನಿನಲ್ಲಿ ಅಥವಾ ಬೆಣ್ಣೆಯಲ್ಲಿ ಕೂಡಿಸಿ ತೆಗೆದುಕೊಳ್ಳುವುದು. 1000 ಸರ್ತಿ ಪುಟಕ್ಕೆ ಇಟ್ಟ ಈ ಭಸ್ಮಕ್ಕೆ ತೊಲೆಗೆ ರೂ. 8. ಬಗೆ 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 2.

ಆಯಸಕಾಂತ ಭಸ್ಮ:—ಅಶಕ್ತತೆ, ಕ್ಷಯ, ಸಾಮಾನ್ಯ ಅಶಕ್ತಿ, ಸ್ತ್ರೀಪುರುಷರ (ಜನನೇಂದ್ರಿಯ ಶಿಥಿಲತೆ) ಇತರ ಅಶಕ್ತಿ, ಮೆದುಳಿನ ನಿಃಶಕ್ತಿ, ನರಗಳ ಬಲಕುಂದುವಿಕೆ, ಗಂಡಮಾಲೆ, ದದ್ರು ಇವಕ್ಕೆ ಉಪಯೋಗಕರ. ಪ್ರತಿಯೊಂದು ಊಟದ ತರುವಾಯ ½ ಗ್ರೈನ್‌ನಿಂದ 2 ಗ್ರೈನ್ ವರೆಗೆ ಈ ಔಷಧವನ್ನು ಜೇನಿನಲ್ಲಿ ಬೆರಸಿ ಸೇವಿಸುವುದು. ಕ್ರಯ ತೊಲೆಗೆ ರೂ. 30.

ಬಂಗಭಸ್ಮ:—ಎಲ್ಲಾ ತರದ ಮೂತ್ರರೋಗ, ನರಗಳ ಅಶಕ್ತಿ ಮುಂತಾದವುಗಳಿಗೆ ಗುಣಕಾರಿಯಾದ ಔಷಧ. ಇದನ್ನು 1ರಿಂದ 2 ಗ್ರೈನು ವರೆಗೆ ಜೇನು ಮತ್ತು ಗಂಧಮೆಣಸಿನ ಹುಡಿ ಅಥವಾ ಬೆಣ್ಣೆಯೊಡನೆ ಮಿಶ್ರಮಾಡಿ ತೆಗೆದುಕೊಳ್ಳಬೇಕು. 1000 ಸಲ ಪುಟಕ್ಕೆ ಇಟ್ಟದುದಕ್ಕೆ ತೊಲೆಗೆ ರೂ. 4. 100 ಸಲ ಪುಟಕ್ಕೆ ಇಟ್ಟದುದಕ್ಕೆ ರೂ. 1.

ಸುವರ್ಣ ಭಸ್ಮ:—ಶಕ್ತಿವರ್ಧಕ, ಜ್ಞಾನವರ್ಧಕ, ಕಾಂತಿವರ್ಧಕ, ಉಷ್ಣಹರ, ಹೃದಯ ದೌರ್ಬಲ್ಯ ನಿವಾರಕ ಮತ್ತು ನರಗಳ ಅಶಕ್ತಿ, ಜನನೇಂದ್ರಿಯ ಅಶಕ್ತಿ, ನಾನಾ ತರದ ಜ್ವರಗಳು, ಮೆದುಳಿನ ಅಶಕ್ತಿ ಇವನ್ನು ಪರಿಹರಿಸಲು ದಿವ್ಯ ಔಷಧ. ⅛ ಗ್ರೈನಿನಿಂದ 1 ಗ್ರೈನ್ ವರೆಗೆ ಜೇನು ಅಥವಾ ಬೆಣ್ಣೆಯಲ್ಲಿ ಕಲಸಿ ತೆಗೆದುಕೊಳ್ಳುವುದು. ತೊಲೆಗೆ ರೂ. 50 ನಿಕ್ಕಿ ದರ.

ರೂಪ್ಯಾ (ಬೆಳ್ಳಿ) ಭಸ್ಮ:—ಮೇಹ ಮೊದಲಾದ ರೋಗಗಳಿಗೂ ನರಗಳ ನಿತ್ರಾಣದ ರೋಗಗಳಿಗೂ ಯೋಗ್ಯವಾದ ಔಷಧ. ಸಿಹಿಯಾದ ರುಚಿಯುಳ್ಳದ್ದು. ಕ್ರಯ ತೊಲೆಗೆ ರೂ. 4.

ತಾಮ್ರ ಭಸ್ಮ:—ಕುಷ್ಟರೋಗ, ಮಹೋದರ, ಉಬ್ಬಸ, ಕಾಸ, ಕ್ಷಯ ಮೂಲವ್ಯಾಧಿ ಮೊದಲಾದುವಕ್ಕೆ ಉಪಯೋಗಕರ. ತೊಲೆಗೆ ಆಣೆ 8. ⅛ಗ್ರೈನಿನಿಂದ ¼ಗ್ರೈನು ವರೆಗೆ ಜೇನು ಅಥವಾ ತುಪ್ಪದಲ್ಲಿ ಬೆರಸಿ ಸೇವಿಸುವುದು.

ಮುಕ್ತಾ (ಮುತ್ತು) ಭಸ್ಮ:—ಕಣ್ಣುರೋಗ, ಅಜೀರ್ಣ ಪುಪ್ಪುಸರೋಗ, ಜ್ಞಾಪಕ ಶಕ್ತಿಕುಂದುವಿಕೆ, ನರಗಳ ಅಶಕ್ತಿ ಅಲ್ಲದೆ ಕ್ಷಯ ಇವೆಲ್ಲಕ್ಕೆ ಉಪಯೋಗಕರವಾದ ಔಷಧ.

ಶುದ್ಧ ಮಾಡಲ್ಪಟ್ಟ ಸಲಾಜಿತು:—ಮೂತ್ರ ಸಂಬಂಧದ ಎಲ್ಲಾ ರೋಗಗಳಿಗೂ ಮೇಹ, ಬಹುಮೂತ್ರ, ನರಗಳ ಅಶಕ್ತಿ ಹಾಗು ಸಾಮಾನ್ಯ ಅಶಕ್ತಿ ಮೊದಲಾದ ರೋಗಗಳ ಪರಿಹಾರಕ್ಕೆ ತಕ್ಕುದಾದುದು. 2 ಗ್ರೈನನ್ನು ಗಂಧಮೆಣಸಿನಹುಡಿ ಮತ್ತು ಜೇನನ್ನು ಬೆರಸಿ ಸೇವಿಸತಕ್ಕದ್ದು. ಕ್ರಯ ತೊಲೆಗೆ ರೂ. 1.

ಶುದ್ಧವಾದ ಮತ್ತು ನಿರ್ಮಲವಾದ ಕಸ್ತೂರಿ:—[illegible] ಎನ್. ಎನ್. ಸೇನ್ ಇವರಿಂದಲೇ ಆರಿಸಿ ತೆಗೆಯಲ್ಪಟ್ಟ 1 [illegible] ತೊಲೆಗೆ ರೂ 40.

ಗೋರೋಚನಕ್ಕೆ ತೊಲೆಗೆ ರೂ 16. ಕುಂಕುಮಕೇಸರ ತೊಲೆಗೆ [illegible] ಪಚ್ಚಕರ್ಪೂರ ತೊಲೆಗೆ ರೂ 4.

[illegible]

GUN RUST-PROOF OUR SPECIALITY

The [illegible] Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯು ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ್ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು, ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ್ ಎಂಡ್ ವಾಚು, ಮೆರಿಡಿಯನ್ ಜರ್ಮನ್ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫ್ಲೂಟಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಫಿಡ್ಲುಗಳು ಮತ್ತು [illegible]ಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಕಾಣಿಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಖರೀದಿಸಿದ ಅಥವಾ ರಿಪೇರಿ ಮಾಡಿಸಿದ ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು



ಯಾವಾಗಲು ನೋಟಕರಿಗೆ ಚಲುವಾಗಿ
ಕಾಣಿಸಿಕೊಳ್ಳಬೇಕು
ಮತ್ತು ಸುಂದರವಾದ ಚರ್ಮದ
ಒಡೆಯನಾಗಲಿಕೆ

"'ಹಾಜಿಲೀನ್' ಸ್ನೋ"
(ಟ್ರೇಡ್ ಮಾರ್ಕ್)

"'HAZELINE'
(Trade Mark)
SNOW"

ವನ್ನು ಉಪಯೋಗಿಸಬೇಕು

"ಹಾಜಿಲೀನ್ ಸ್ನೋ"ವನ್ನು ಉಪಯೋಗಿಸ ಕೊಡಲೆ ಅಲಂಕಾರದ [illegible] ಪ್ರದವಾದ ಚೆಲುವು ಕೊಡುತ್ತದೆ ಅದು ಚರ್ಮವನ್ನು ಆರೋಗ್ಯಸ್ಥಿರಯಲ್ಲಿಟ್ಟು ಮತ್ತು ಸುಗಂಧ ಬರುವದನ್ನು ತಡೆಮಾಡುವದು "ಹಾಜಿಲೀನ್' ಸ್ನೋ"ದಲ್ಲಿ ಯಾವ ಜಿಗಟ್ಟಾದ ಕೊಬ್ಬು ಕೂಡಿರುವದಿಲ್ಲ ಅದ ಕಾರಣ ಎಲ್ಲಾಜಾತಿ ಉತ್ತಮ ಜನರು ಅದನ್ನು ಪ್ರಯೋಗಿಸಬಹುದು

ಇದು ಕಂಚಿನ ಪಾತ್ರೆಗಳಲ್ಲಿ ಕೆಮಿಸ್ಟ್ ಮತ್ತು ಉಗ್ರಾಣದ ಮನೆಯವರಿಂದಲು ಮಾರಲ್ಪಡುವದು.

ಬರ್ರೋಸ ವೆಲ್‌ಕಂ ಅಂಡ್ ಕೋ.
ಲಂಡನ್ ಅಂಡ್ ಬಂಬಾಯಿ.

Burroughs Wellcome & Co.
London and Bombay

CAN. 4 All Rights Reserved

ಉತ್ತಮ ತರದ ಮಾಲು ಕ್ರಯ ಸುಲಭ



ಮಸ್ಕತ ಆಟದ ಜೊಬ್ಬಿಯ 32 ಸಾಮಾನುಗಳ ಸೆಟ್ಟು 1ಕ್ಕೆ ರೂ. 1—14—0 ದುಪ್ಪಟ್ಟು 3—0—0, ಉತ್ತಮ ರೂ 4—8—0, ದೊಡ್ಡದು 5—0—0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ ಮಡಿ, ಜರಿ, ಸಾದಾ, ಶೀರೆ, ಶಲ್ಯ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಪಟಿಕ ಸ್ಪಟಿಕಮಣಿ, ಲಿಂಗ, ಧಾವಳಿ ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಪಿ ಮೂಲಕ ಕಳುಹಿಸಲಾಗುವುದು. ಕೆಟಲಾಗ್ ಉಚಿತ.

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಕಂಬಾ, ಕಾಶಿ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹ ರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ದಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶಿಶೆ ಒಂದರ ಕ್ರಯ:—ರೂ.1—4—0.

ಹುಳದ ವ್ರೋಮ (ಜರ್ಮನ್).

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— **ಎ. ಫೆರ್ನಾಂಡಿಸ್,**
ಇಲೆಕ್ಟ್ರೋ ಹೊಮಿಯೊಪೆತಿಕ್ ಡಿಸ್ಪೆನ್ಸರಿ,
ಹಂಪನಕಟ್ಟ, ಮಂಗಳೂರು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ
ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯ ಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುದಿನವು ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಚ್ಛಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲುಗಾಡುವ ಹಲ್ಲುಗಳು ಗಟ್ಟಿಯಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಅನ್ನದ ಉಂಟಾಗುತ್ತದೆ.

ಅನುಭವವೇ ಮುಖ್ಯ
ಗುಣ ವಿಶೇಷ! ಪುಡಿ ಹೆಚ್ಚು!!
ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರಿನವರು [illegible] ಕೊಳ್ಳಬಹುದು,

ಸೋಲ್ ಏಜಂಟ್:—
ಜಿ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟ, ಮಂಗಳೂರು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ನಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" ದೇವರಲ್ಲಿ" ಎಂಬ ಅಂಗ ಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಸಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತ ಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

"ಸುಪಾನ"

ಕಾಫಿ, ಚಾ ವಗೈರೆ ಕುಡಿದು ಆರೋಗ್ಯವನ್ನು ಕೆಡಿಸಿಕೊಳ್ಳುವುದರ ಬದಲಾಗಿ ನಾಮದಬೇರು ಮೊದಲಾದ ೧೬ ಬಗೆಯ ಗಿಡ ಮೂಲಿಕೆಯಿಂದ ತಯಾರಿಸಲ್ಪಟ್ಟ "ಸುಪಾನ" ಎಂಬ ಕಷಾಯದ ಪುಡಿಯಿಂದ ಸುಖಕರ, ಆರೋಗ್ಯಕರವಲ್ಲದೆ ಮೇಹ, ಮಲೇರಿಯಗಳನು ನಾಶಗೊಳಿಸುವ ಅತ್ಯುತ್ತಮವಾದ ಪಾನವನ್ನು ಮಾಡಿಕೊಳ್ಳಬಹುದು. ಒಮ್ಮೆ ಪರೀಕ್ಷಿಸಿರಿ. ಕ್ರಯ ಅಳತೆ ಸೇರು ೧ಕ್ಕೆ ೦—೧೨—೦. ಪೌಂಡುಒಂದಕ್ಕೆ ರೂ. ೧—೦—೦. ವಿ. ಪಿ. ಪ್ರತ್ಯೇಕ.

ಸ್ಯಾಂಪುಲು ಅಪೇಕ್ಷಿಸುವವರು ೨ಆಣೆ ಸ್ಟಾಂಪನ್ನು ಮುಂಗಡವಾಗಿ ಕಳುಹಿಸತಕ್ಕದ್ದು.

ಕೆ. ಸೋಮಯ್ಯ ಸೆಟ್ಟಿ.
ಜೈಲ್ ರೋಡು, ಮಂಗಳೂರು.

ತ್ವರೆ ಮಾಡಿರಿ ॥ ತ್ವರೆ ಮಾಡಿರಿ

ಮಾರಾಟಕ್ಕೆ ಸಿದ್ಧವಾಗಿದೆ

"1923ನೇ ಇಸವಿಯ"
ಚಿಕ್ಕ ಮತ್ತು ದೊಡ್ಡ ಸೈಜಿನ

ಪೋಕೆಟ್ ಡೈರಿಗಳು

ದೊಡ್ಡ ಸೈಜು ಕ್ರಯ ೦—೧೨—೦.
ಸಣ್ಣ ಸೈಜು „ ೦—೮—೦.

ಅತ್ಯುತ್ತಮ ಗ್ರಂಥ

ಸಂಕ್ಷೇಪಗೀತೆ

ಬೆಲೆ: ೦—೧೦—೦.

ವಿಳಾಸ:— ಮ್ಯಾನೇಜರ್,
ಶಾರದಾ ಭಾಷಾಶಾಲೆ,
ರಥಬೀದಿ, ಮಂಗಳೂರು

ಸುಸಂದರ್ಭ ತ್ವರೆ
ದರ ಸುಲಭ! ಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ. ಬಿ. ಎಲ್.

ಕೊಂಕಣಿ ಭಾಷೆಯಲ್ಲಿ ಸಂಗೀತ

ಪ್ರಹ್ಲಾದ ಚರಿತ್ರ ನಾಟಕ.

ಬೆಲೆ: 0—8—0 ಪೋಸ್ಟ್ ಖರ್ಚು 0—1—0.

ಚಂದ್ರಹಾಸ ನಾಟಕ.

ತಿದ್ದಿದ ಮೂರನೇ ಮುದ್ರಣ ಬೆಲೆ: 0—4—6. ಪೊ. ಖ. 0-1-0

ಒಂದೊಂದು ಪುಸ್ತಕ ಬೇಕಾದವರು ಅಂಚೆ ಚೀಟನ್ನು ಕಳುಹಿಸುವುದು ಉತ್ತಮ.

ವಿಳಾಸ:—ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದ. ಕನ್ನಡ.

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತಲ್ 1ರ ರೂ. 2—12—0.
ಸ್ಪೆಶ್ಯಲ್ ರಾತ್ತಲ್ 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸ್ಯಾಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ವಿದ್ಯಾವಾಚಸ್ಪತಿ ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಷ್ಟು ಜಾಸಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಭಾಷಾಶಾಲೆ, ರಥಬೀದಿ, ಮಂಗಳೂರು, ಮತ್ತು ಜೆನರಲ್ ಮಿಶನ್ ಬುಕ್ ಎಂಡ್ ಟ್ರಾಕ್ಟ್ ಡಿಪಾಸಿಟರಿ,
ಮಂಗಳೂರು.

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಮಾರ್ಗಶಿರ ಬ। ೫ ಶನಿವಾರದಿಂದ ದುಂದುಭಿ ಸಂ। ಮಾರ್ಗಶಿರ ಬ। ೧೨ ಶುಕ್ರವಾರದ ವರೆಗಿನ ಪಂಚಾಂಗ
(೧೯೨೨ನೆಯ ವೃಶ್ಚಿಕ [illegible])

ತಾರೀಖು	ವಾರ.	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರದಿನ.	ಸೂರ್ಯ ಉ.	ಸೂರ್ಯ ಅಸ್ತ.
9	ಶನಿ	೫	೩೦.೩೨	ಆಶ್ಲೇಷಾ	೪೭.೪೪	೨೩	6.44	6. 3
10	ರವಿ	೬	೧೬. ೦	ಮಘಾ	೪೪.೪೬	೨೪	6.44	6. 3
11	ಸೋಮ	೭	೧೦.೪೬	ಪುಬ್ಬಾ	೪೦.೪೫	೨೫	6.44	6. 3
12	ಕುಜ	೮	೫ ೧೬	ಉತ್ತರಾ	೩೬.೪೬	೨೬	6.45	6. 4
13	ಬುಧ	೧೦	೫೩. ೨	ಹಸ್ತಾ	೩೨.೪೬	೨೭	6.45	6. 4
14	ಗುರು	೧೧	೪೮. ೧	ಚಿತ್ತಾ	೨೮.೪೮	೨೮	6.46	6. 4
15	ಶುಕ್ರ	೧೨	೪೩.೪೬	ಸ್ವಾತೀ	೨೫. ೧	೨೯	6.46	6. 5

ಮಂಗಳೂರಿನ ವಾಯುಸ್ಥಿತಿ.
(೧೯೨೨ನೆಯ ದಶಂಬರ್)

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿವಸದ ಮಳೆ	Rainfall. ಮಳೆ ಜುಮಲಾ ಮಳೆ.
30	98—4	77—6	—	—
1	92—5	77—3	—	—
2	87—2	76—3	—	—
3	90—2	74—8	—	—
4	89—4	74—7	—	—
5	90—7	69—6	—	—
6	91—8	68—8	—	138.69

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ	ವರೆಗೆ
		ರೂ. ಆ.	ರೂ. ಆ.
ಮುಸ್ಕತಿ ಅಕ್ಕಿಮುಡಿ ೧ಕ್ಕೆ	...	8— 6	9— 0
ಸುಗ್ಗಿಗೆ	...	7—12	8— 4
ಗುಡ್ಡ,	...	7—10	8— 2
ಹೊಸ ರಾಶಿ		6—10	7— 0
ಅಮ್ಸಲ್ ಬೆಳ್ತಿಗೆ ,,	...	8—12	9— 0
ಗುಡ್ಡ ಬೆಳ್ತಿಗೆ ,,	...	7—10	8— 0
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	11— 8	12— 0
ಗೋದಿ ಗೋಣಿ ೧ಕ್ಕೆ	...	18— 8	22— 0
ಹುರುಳಿ ಗೋಣಿ ೧ಕ್ಕೆ	...	11— 4	12— 8
ಕಡಲೆ ಗೋಣಿ ೧ಕ್ಕೆ	...	13— 0	16— 8
ತೊಗರಿ ಗೋಣಿ ೧ಕ್ಕೆ	...	14— 0	14— 8
ತೊಗರಿಬೇಳೆ ಗೋಣಿ ೧ಕ್ಕೆ	...	16— 0	24— 0
ಉದ್ದು ಗೋಣಿ ೧ಕ್ಕೆ	...	17— 0	17— 8
ಹೆಸರು ಗೋಣಿ ೧ಕ್ಕೆ	...	—	14— 0
ಊರು ಬೆಲ್ಲ ಖಂಡಿ ೧ಕ್ಕೆ	...	50— 0	51— 4
ಉಪ್ಪು ಗೋಣಿ ೧ಕ್ಕೆ	...	4—14	5— 0
ಕೊಬ್ರಿ ಖಂಡಿ ೧ಕ್ಕೆ	...	85— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	48— 0	49— 0
ಎಳ್ಳಿಂಡಿ ಖಂಡಿ ೧ಕ್ಕೆ	...	52— 8	55— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7— 8	9— 0
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 8	9— 0
ಚಿಮಿಣೆಣ್ಣೆ ಪೆಟ್ಟಿಗೆ ೧ಕ್ಕೆ	...	9— 0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	6— 0	6— 0
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	8— 0	8— 4
ಸಾಸಿವೆ ಮುಡಿ ೧ಕ್ಕೆ	...	8—12	9— 0
ಕೊತ್ತಂಬರಿ ಮುಡಿ ೧ಕ್ಕೆ	...	4— 8	4—10
ಕಾಫಿ ಖಂಡಿ ೧ಕ್ಕೆ	...	330— 0	335— 0
[illegible] ಖಂಡಿ ೧ಕ್ಕೆ [illegible]	...	175— 0	190— 0
[illegible] New, [illegible]	...	115— 0	120— 0
[illegible] ಖಂಡಿ ೧ಕ್ಕೆ	...	120— 0	[illegible]
[illegible] ಮುಡಿ ೧ಕ್ಕೆ	...	26— 0	28— 0
ಗೇರುಬೀಜ ಮುಡಿ ೧ಕ್ಕೆ	...	1—12	1—15
[illegible] ಖಂಡಿ ೧ಕ್ಕೆ	...	55— 0	[illegible]
[illegible] ಮುಡಿ ೧ಕ್ಕೆ	...	31— 0	[illegible]
[illegible] ಮುಡಿ ೧ಕ್ಕೆ	...	33— 0	—
[illegible] ೧ಕ್ಕೆ	...	24— 0	—
[illegible] ೧ಕ್ಕೆ	...	29— 0	31— 0

ಕಂಬಳಿ ಟೋಪಿಗಳು.

ಈ ಟೋಪಿಗಳನ್ನು ಸಾಚಾ ಉಲ್ಲನ್‌ನಿಂದ ತಯಾರಿಸಿದೆ. ಇದನ್ನು ಛಳಿ, ಮಳೆ, ಹಿಮ, ಮುಂತಾದ ಕಾಲಗಳಲ್ಲಿ ಉಪಯೋಗಿಸುವುದರಿಂದ ಯಾವ ವಿಧವಾದ ವ್ಯಾಧಿಯನ್ನೂ ಹತ್ತರ ಬರಲು ಬಿಡುವುದಿಲ್ಲ. ಈ ಟೋಪಿ ಒಂದು ಇದ್ದರೆ ಮನೆಯವರೆಲ್ಲ ಉಪಯೋಗಿಸಬಹುದು. ಬೇರೆಯವರು ಉಲ್ಲನ್ ಎಂದು ಹೇಳಿ ನೂಲಿನ ಟೋಪಿಯನ್ನು ಕಳುಹಿಸುವರು. ನಾವು ಹಾಗೆ ಮಾಡುವುದಿಲ್ಲ. ಸಾಚ ಉಲ್ಲನ್ ಟೋಪಿಯನ್ನೇ ಕಳುಹಿಸುವೆವು.

ಕ್ರಯ ಟೋಪಿ 1ಕ್ಕೆ... 2—0—0 ನಂ. 2... 2—4—0

ರೋಲ್ಡ್ ಗೋಲ್ಡ್ ಭಂಗಾರದ ಕೈಗಡಿಯಾರಗಳು.

(ರೋಲ್ಡ್ ಗೋಲ್ಡ್ ಭಂಗಾರದ ಕೈಗಡಿಯಾರ.)

ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆ ಗಂಟೆ ನೋಡಬೇಕಾದರೆ ಬೆಳಕು ಅವಶ್ಯವಾಗಿಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೊ ಅಷ್ಟು ಚೆನ್ನಾಗಿ ಸೂರ್ಯನ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಈ ಗಡಿಯಾರವು ಅಮೇರಿಕಾ ದೇಶದಲ್ಲಿ ಮಜಬೂತಾದ ಮೂವೆಂಟ್ಸ್‌ಗಳಿಂದ ತಯಾರಾದದ್ದು. ಮತ್ತು ಯಾರೇ ಆಗಲಿ ಇದರಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಮತ್ತು ನಿಧಾನವಾಗಿ ಹೋದರೂ, ಬೇಗನೆ ಹೋದರೂ ನಾವೇ ಸರಿಮಾಡಿಕೊಳ್ಳಬಹುದು.

4 ವರುಷ ಶಾಸ್ತ್ರಿಯಾದ ಗ್ಯಾರಂಟಿ ಸಹಿತ

ನಂ. 1 ಭಂಗಾರದ ಗಡಿಯಾರ 1ಕ್ಕೆ 10-8-0 ನಂ. 2 ಗಡಿಯಾರಕ್ಕೆ 8-8-0

ಚಿಸ್ಟ್ ಲೀವರ್ ಪಾಕೆಟ್ ವಾಚ್.

12 ಬಹುಮಾನಗಳ ಸಹಿತ ಕ್ರಯ ಗಡಿಯಾರ 1ಕ್ಕೆ 5—8—0

ಈ ನಮ್ಮ ಚಿಸ್ಟ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಿದೆ. ಗಾಳಿಗೂ, ಧೂಳೂ ಸೇರದಂತೆ ಗ್ಲಾಸ್ ಟೋಪು ಇರುವದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವೇ ಸರಿಮಾಡಿಕೊಳ್ಳಬಹುದು. ಮತ್ತು ನೋಟ ಗಂಭೀರವಾಗಿಯೂ, ಸುಂದರವಾಗಿಯೂ ಇರುವಂಥ ಇಂಗ್ಲೀಷು ನಮೂನೆಯಾಗಿರುವುದು. ಈ ಗಡಿಯಾರದಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಬಹಳವಾಗಿ ವರ್ಣನೆ ಮಾಡುವುದೇತಕ್ಕೆ? ಒಂದನ್ನು ತರಿಸಿನೋಡಿರಿ, ತಿಳಿಯುವುದು. ಈ ನಮ್ಮ ಗಡಿಯಾರವು ಲೋಕ ಪ್ರಸಿದ್ಧಿಯಾಗುವ ಹಾಗೆ ೬ ತಿಂಗಳಲ್ಲಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:— ಸರಪಣಿ 1, ಮುಖನೋಡುವ ಕನ್ನಡಿ 1, ಬ್ರೋಚ್ 1, ಭಂಗಾರದ ಗಿಲೀಟಿನ ಜಪಮಾಲೆ 1, ವಜ್ರದ ಸರಟು ಗುಂಡಿಗಳು ೪, ಚಾಬಿಚೈನ್ 1, ಸೆಂಟ್ ಬಾಟಲ್ 1, ರೋಲ್ಡ್ ಗೋಲ್ಡ್ ಉಂಗುರ 1, ಜುಮ್ಲಾ 11 ಬಹುಮಾನಗಳು ಸಹಿತ ಗಡಿಯಾರ 1ಕ್ಕೆ ಕ್ರಯ...5—8—0

ವಿಳಾಸ:— ಎಟೋನಿಯಾ — ಅಂಡ್ ಕೊ.

308. ತಂಬೂಚೆಟ್ಟಿ ಬೀದಿ, ಮದರಾಸು.

ಕಾಶೀ ವಿಶ್ವವಿದ್ಯಾಲಯ.

ಈ ವಿಶ್ವವಿದ್ಯಾಲಯದ ಕನ್ವೋಕೇಶನ್ ಎಂಬ ವಾರ್ಷಿಕ ಮಹಾಸಭೆಯು ಶ್ರೀ ಕಾಶೀಕ್ಷೇತ್ರದಲ್ಲಿ ಕಳೆದ ತಿಂಗಳ ತಾ. ೩೦ರಲ್ಲಿ ಕೂಡಿತು. ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಡಿಪ್ಲೊಮಾಗಳನ್ನು ಹಂಚಿ ಆದ ನಂತರ ವ್ಯಾಸ್ ಚೆನ್ಸಲರಾದ ಡಾಕ್ಟರ್ ಚಕ್ರವರ್ತಿಗಳು ಈ ವಿಶ್ವವಿದ್ಯಾಲಯದ ಅಭಿವೃದ್ಧಿಸ್ಥಿತಿಯನ್ನು ಕುರಿತು ಹೇಳಿದ್ದೇನೆಂದರೆ:—ವಿಶ್ವವಿದ್ಯಾಲಯದ ಕೊಲೇಜುಗಳಲ್ಲಿ ಆರ್ಟ್ಸ್, ಸಾಯನ್ಸ್, ಇಂಜಿನಿಯರಿಂಗ್ ಮತ್ತು ಥಿಯೊಲೊಜಿಗಳ ಶಿಕ್ಷಣದ ಬಗ್ಗೆ ಸಾಕಷ್ಟು ಏರ್ಪಾಡಿದೆ. ಕಟ್ಟೋಣಗಳಿಗೆ ಇಷ್ಟರ ತನಕ ೪೦ ಲಕ್ಷ ರುಪಾಯಿ ತಗಲಿರುವುದು. ನಾಲ್ಕು ಕೊಲೇಜುಗಳಿರುವವು. ೧೧೦೦ ವಿದ್ಯಾರ್ಥಿಗಳಿಗೂ ೧೦೦ ಜನ ಪ್ರೊಫೆಸ್ಸರರಿಗೂ ಉಳಕೊಳ್ಳಲು ಅನ್ಕೂಲವಿರುವ ಮೂರು ವಿದ್ಯಾರ್ಥಿ ಭವನಗಳಿರುವುವು. ಕೊಲೇಜು ಕ್ಲಾಸುಗಳಲ್ಲಿ ೧೫೦೦ ವಿದ್ಯಾರ್ಥಿಗಳೂ, ಹ್ಯಾಸ್ಕೂಲ್ ಕ್ಲಾಸುಗಳಲ್ಲಿ ೬೦೦ ವಿದ್ಯಾರ್ಥಿಗಳೂ ಇರುವರು. ಸ್ಥಳದ ಅಡಚಣೆಯಿಂದ ೨೦೦ ಜನ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಡಲು ಆಗಲಿಲ್ಲ. ಸ್ತ್ರೀ ವಿದ್ಯಾರ್ಥಿನಿಯರಿಗೆ ಒಂದು ವಿದ್ಯಾರ್ಥಿಭವನವು ಅಗತ್ಯ. ಈ ಬಗ್ಗೆ ಮುಂಬಯಿ ಶ್ರೀಮಂತರಾದ ಶ್ರೀಯುತ [illegible]ರವರು ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು. ವಿಶ್ವವಿದ್ಯಾಲಯದ ವಠಾರದಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸುವ ಬಗ್ಗೆ ರೂ. ೫ ಲಕ್ಷದ ಅಂದಾಜು ಮಾಡಿರುತ್ತಾರೆ. ಈ ದೇವಸ್ಥಾನವನ್ನು ಕಟ್ಟಿಸಲಿಕ್ಕೆ ಮತ್ತು ಆಯುರ್ವೇದ ವಿದ್ಯೆಯನ್ನು ಕಲಿಸಲಿಕ್ಕೆ ಬೇಕಾದ ಏರ್ಪಾಡು ಮಾಡುವರೆ ಸಾಕಷ್ಟು ಹಣವು ಇಲ್ಲದ್ದರಿಂದ ಅವುಗಳನ್ನು ತತ್ಕಾಲಕ್ಕೆ ಬಾಕಿ ಇಟ್ಟಿರುವರು. ಕಾಶೀ ವಿಶ್ವವಿದ್ಯಾಲಯದ ಬಗ್ಗೆ ಈ ತನಕ [illegible] ಹಣವು ಒಂದು ಕೋಟಿ [illegible] ಲಕ್ಷ ಆಗಿರುವುದು. ದೇವರ ಅಸ್ತಿತ್ವ ಮತ್ತು ಆತನಲ್ಲಿ ಇರಬೇಕಾದ ವಿಶ್ವಾಸದ ಕುರಿತು [illegible] ವ್ಯಾಸ್ ಚೆನ್ಸಲರು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ನೋಟೀಸು.

ಉಡುಪಿ ಶ್ರೀ ಸೋದೆ ಮಠದ ಶ್ರೀ ಮದ್ವಿಶಜ್ವಾಧೀಶ ತೀರ್ಥ ಶ್ರೀ ಪಾದಂಗಳವರ ಶಿಷ್ಯರು ಶ್ರೀ ವಿಶ್ವೇಂದ್ರ ತೀರ್ಥ ಶ್ರೀಪಾದಂಗಳವರು ಸಮಸ್ತರಿಗೆ ತಿಳಿಸುವದೇನಂದರೆ:—

ನಮ್ಮ ಗಾರ್ಡಿಯನ್‌ಶಿಪ್ ಯಾನೆ ರಕ್ಷಣೆಯಲ್ಲಿ ಇರುವ ಮ್ಯಾನರಂಶದ ಶ್ರೀ ಶೀರೂರು ಮಠದ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು, ಆರಾಧಿಸುವ ಶ್ರೀ ವಿಠಲದೇವರ ಭಂಡಾರದ ಸ್ಥಿರಚರ ಸೊತ್ತುಗಳ ಆಡಳಿತೆಯನ್ನು ನಮ್ಮಿಂದ ತಾ. ೯—೧೨—೧೯೧೮ರಲ್ಲು ರಿಜಿಸ್ಟ್ರಿ ನಿಶಿಂ ಜನರಲ್ ಪವರ್ ಒಫ್ ಎಟೊರ್ನಿ ಮೂಲಕ ಅಧಿಕಾರ ಪಡೆದ ರಾಜಗೋಪಾಲಾಚಾರ್ಯರಿಗೆ ನಾವು ಕೊಟ್ಟಿರುವ ಅಧಿಕಾರಗಳ ಪೈಕಿ ಸದರಿ ಮಠದ ಕಡೆಯಿಂದ ಆಗತಕ್ಕ ವಸೂಲಿ ಯಾ ಲೇವಾದೇವಿ ಕೆಲಸದ ಅಧಿಕಾರಗಳನ್ನು ನಾವು ತಾ. ೬—೧೧—'೨೨ರಲ್ಲು ಬರಹಮೂಲಕ ರದ್ದುಪಡಿಸಿರುತ್ತೇವೆ. ಆದ್ದರಿಂದ ಸದರಿಯವರ ಕೂಡೆ ಯಾರೊಬ್ಬರೂ ಮೇಲ್ಕಂಡ ಪವರ್ ಒಫ್ ಎಟೊರ್ನಿ ಆಧಾರದಿಂದ ಯಾವ ಲೇವಾದೇವಿಗಳನ್ನು ನಡಿಸುವದಾಗಲಿ, ವಸೂಲಿ ಕೊಡುವುದಾಗಲಿ ಕೂಡದಾಗಿ ಈ ಮೂಲಕ ತಿಳಿಸಿಯದೆ. ಇದಕ್ಕೆ ವಿರೋಧವಾಗಿ ನಡಕೊಂಡವರಿಗೆ ಸದರಿ ಲೇವಾದೇವಿ ವಗೈರೆಯಿಂದ ಏನೊಂದು ಪ್ರಯೋಜನ ಶಿಕ್ಕಲಾರದು.

ತಾ. 21—11—1922, | ಶ್ರೀ ವಿಶ್ವೇಂದ್ರ ತೀರ್ಥ
ಶ್ರೀ ಪಾದಂಗಳವರು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ,

O. P. No. 90/1922

ಅರ್ಜಿದಾರರು 1. ಕಾಳಾವರ ಶೇಶಗಿರಿರಾವ
2. ಭವಾನಿಶಂಕರರಾವ, (ಮ್ಯಾನರ)
ಕ್ಷೇಮಚಿಂತಕ 1ನೇ ಅರ್ಜಿದಾರ.
ಮತ್ತು
ಎದ್ರಿರು— 1. ರತ್ನಾ ಬ್ಯಾ
2. ಹೇಮಲತಾ ಬ್ಯಾ, (ಮ್ಯಾನರಳು)
ಇವಳ ರಕ್ಷಕ ಇವಳ ತಾಯಿಯ ತಂದೆ ಹಿರೆಬೆಟ್ಟು ಶೇಶಗಿರಿರಾವ.
ಇವರೊಳಗೆ

1ನೇ ಅರ್ಜಿದಾರನ ಹಿರೆ ಮಗ, 2ನೇ ಅರ್ಜಿದಾರನ ಅಣ್ಣ 1ನೇ ಎದ್ರಿಳ ಗಂಡ, 2ನೇ ಎದ್ರಿಳ ತಂದೆಯಾಗಿದ್ದ ಇತ್ತಲಾಗೆ ಮೃತಪಟ್ಟ ಕಾಳಾವರ ದತ್ತಾತ್ರಯರಾಯರಿಗೆ ಎಂಪಾಯರ್ ಒಫ್ ಇಂಡಿಯಾ ಲ್ಯಾಫ ಎಸ್ಸುರೆನ್ಸ ಕಂಪೆನಿ ಮತ್ತು ಹಿಂದೂಸ್ಥಾನ ಕೊ-ಒಪರೇಟಿವ್ ಸೊಸ್ಯಾಟಿ ಬಾಬ್ತು ಕೂಡಾ ಎರಡು ಪೊಲಿಸ್ಸಿಗಳ ಬರತಕ್ಕ ಐವಜುಗಳ ವಸೂಲಿ ಕುರಿತು 1ನೇ ಅರ್ಜಿದಾರನ ಹೆಸರಲ್ಲಿ ವಾರಿಸಿ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಅರ್ಜಿ ಕೊಟ್ಟಿರುವುದರಿಂದ ಸದರಿ ಅರ್ಜಿ ತನಿಖಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 4—1—'23ಕ್ಕೆ ಇಟ್ಟಿರುವುದರಿಂದ ಆಕ್ಷೇಪ ಇದ್ದವರು ಸದರಿ ತಾರೀಕಿನ ಹಗಲು 10 ಗಂಟೆಗೆ ಸದರಿ ಕೋರ್ಟ ಮುಂದೆ ಹಾಜರಾಗಿ ಅವರ ಆಕ್ಷೇಪ ಇದ್ದರೆ ಜಾಹಿರುಮಾಡತಕ್ಕದ್ದು.

ಕುಂದಾಪುರ, | K. Venkat Rao,
ತಾ. 5—12—1922. | ಅರ್ಜಿದಾರರ ವಕೀಲ.

ದ್ರಾವಿಡ ಬ್ರಾಹ್ಮಣರ ಪರಿಷತ್ತು.

ಸ್ವಸ್ತಿ ಶ್ರೀ ಜಯಾಭ್ಯುದಯನೃಪ ಶಾಲಿವಾಹನ ಶಕ ವರುಷ ೧೮೪೪ನೇ ದುಂದುಭಿ ನಾಮ ಸಂವತ್ಸರದ ಮಾರ್ಗಶಿರ ಶು|| ೫ಯು ಗುರುವಾರ ಮಂಗಳೂರು ತಾಲೂಕು ಕಳ್ಳಿಗೆ ಗ್ರಾಮದಲ್ಲಿರುವ ಶ್ರೀಯುತ ನೇತ್ರಕೆರೆ ಪರಮೇಶ್ವರ ಹೊಳ್ಳರ ಮನೆಯಲ್ಲಿ ಶ್ರೀಯುತ ತಲೆ ನೊಗರು ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿದ ದ್ರಾವಿಡ ಬ್ರಾಹ್ಮಣ ಸಭೆಯ ಪ್ರೊಸಿಡಿಂಗ್ಸು.

೧. ಪರಿಷತ್ತಿನ ಕಾರ್ಯನಿರ್ವಾಹಕ ಸಭೆಯಲ್ಲಿ ವೈದೀಕ-ಧಾರ್ಮಿಕ ರಾಜಕೀಯ ಮೊದಲಾದ ವಿಚಾರಗಳಲ್ಲಿ ಸರ್ವಸಾಧಾರಣ ಸಮಾನಮತಿ ಮೆಂಬರರು ಇರತಕ್ಕದ್ದು. ಎಂಬ ಸೂಚನೆಯನ್ನು ತಲೆನೊಗು ವಾಸ್ತೇವಯ್ಯನವರು ಸೂಚಿಸಿದರು. ಪತ್ತುಮುಡಿ ವಾಸುದೇವಯ್ಯನವರು ಅನುಮೋದಿಸಿ ಸರ್ವಾನುಮತದಿಂದ ಮಂಜೂರುಮಾಡಲಾಯಿತು.

೨. ದ್ರಾವಿಡ ಬ್ರಾಹ್ಮಣರಲ್ಲಿ ಶಿಥಿಲವಾಗುತ್ತಾ ಬರುತ್ತಿರುವ ವೈದಿಕ ಧರ್ಮಗಳನ್ನು ವೃದ್ಧಿಪಡಿಸುವದಕ್ಕೋಸ್ಕರ ಪ್ರತಿ ಗ್ರಾಮಗಳಲ್ಲಿ ವೈದಿಕ ಪಾಠಶಾಲೆಯನ್ನು ಏರ್ಪಡಿಸುವದು ಅಗತ್ಯವಂತ ಬಡಕಳ್ಳಿಲು ಪರಮೇಶ್ವರಯ್ಯನವರು ಸೂಚಿಸಿದರು. ಚೆಂಡಾಡಿ ನಾರಾಯಣ ಸೋಮಯಾಜಿಗಳು ಅನುಮೋದಿಸಿ ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

೩. ದ್ರಾವಿಡ ಬ್ರಾಹ್ಮಣರ ಸ್ತ್ರೀಸೊತ್ತುಗಳು ಅನ್ಯಾಕ್ರಾಂತವಾಗಿ ಹೋಗದ ರೀತಿ [illegible] ಈಗಿನ ದಾಯಭಾಗ [illegible] ಮಾಡಿ ಕುಟುಂಬದಲ್ಲಿ [illegible] ಗಳೆಲ್ಲರ [illegible] ದಂತೆಯೂ ಕುಟುಂಬದ ಎಲ್ಲಾ ಮೆಂಬರರಿಗೆ ಸ್ವತ್ತಿನ ಪ್ರತಿಫಲ [illegible] ಗವರ್ನಮೆಂಟಿನಲ್ಲಿ ಕಾನೂನು ಪಾಸಾಗುವಂತೆ ಈ ಪರಿಷತ್ತು ಏರ್ಪಡಿಸುವುದು ಅಗತ್ಯವೆಂತ ಅಧ್ಯಕ್ಷ ತಲೆನೊಗು ಕೃಷ್ಣಯ್ಯನವರು ಸೂಚಿಸಿದ್ದನ್ನು ಬಡಕಳ್ಳಿಲು [illegible] ಅನುಮೋದಿಸಿ ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ಈ ಮೇಲಿನ ೩ ನಿರ್ಣಯಗಳಲ್ಲಿ ಪರಿಷತ್ತಿನ ಸಭೆಯಲ್ಲಿ ಚರ್ಚಿಸುವ ಅಧಿಕಾರವನ್ನು ಆಯಾಯ ಸೂಚಕರಿಗೂ ಅನುಮೋದಕರಿಗೂ ಅಧಿಕಾರವನ್ನು ಕೊಡಲಾಯಿತು.

ಇವರ [illegible] ಪರಿಷತ್ತಿನ [illegible] ಯವರ [illegible] ಮತ್ತು [illegible] ಪತ್ರಗಳಿಂದ ಇದನ್ನು ಪ್ರಕಟಿಸುವರೂ ಶ್ರೀಯುತ ಬಡಕಳ್ಳಿಲು [illegible] ವನ್ನು [illegible] ಸಭಾ ಸಮಾಪನವಾಯಿತು.

ಮಂಗಳೂರು ತಾಲೂಕು ಬೋರ್ಡಿನ ನೌಕರರ ಗೋಳಾಟ.

ನೌಕರಿಯೇ ಎಲ್ಲದಕ್ಕಿಂತಲೂ ನೀಚತರಗತಿಯದ್ದಾಗಿದೆ. ಅದರಲ್ಲೂ ಸ್ವರಾಜ್ಯದ ಪ್ರಥಮ ಸೋಪಾನವಾದ ನಮ್ಮ ತಾಲೂಕು ಬೋರ್ಡಿನ ನೌಕರಿಯ ವಿಚಿತ್ರ ಲೀಲೆಯನ್ನು ವರ್ಣಿಸಲುಸಫಲವೇ ಸರಿ. ಈ ಮೊದಲು ತಾಲೂಕು ಬೋರ್ಡು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ದಯಾಳು ಸರಕಾರದವರ ಪ್ರತಿನಿಧಿಯವರೇ, ಅಂದರೆ ಡಿವಿಜನ ಆಫೀಸರ್ ಮತ್ತು ಜಿಲ್ಲಾ ಕಲೆಕ್ಟರ್‌ರವರೇ ನೇಮಿಸಲ್ಪಡುತ್ತಿದ್ದರೂ ಆಗಿನ ಬೋರ್ಡು ನೌಕರರ ಅವಸ್ಥೆಯು ನಿಜವಾಗಿ ಒಳ್ಳೇದಿತ್ತೆನ್ನಬಹುದು. ಯಾಕೆಂದರೆ ಸರಕಾರದವರು ಯಾವ ಸಂಬಳದ ದರವನ್ನು ತಮ್ಮ ನೌಕರರಿಗೆ ಕೊಡುತ್ತಿದ್ದರೋ, ಅದೇ ದರವನ್ನು ಆಗಿನ ಪ್ರೆಸಿಡೆಂಟರು ತಮ್ಮ ನೌಕರರಿಗೆ ದಯಪಾಲಿಸುತ್ತಿದ್ದರು. ಆದರೆ ಈಗಿನ ಪ್ರೆಸಿಡೆಂಟರು ಜನರಿಂದ ಆರಿಸಲ್ಪಟ್ಟವರಾದರೂ, ತಾವು ಸ್ವತಂತ್ರನಾದ ಬೋರ್ಡಿನ ಅಧ್ಯಕ್ಷ ಮಹಾಶಯರೆಂದೂ ಸರಕಾರದ ಯಾವ ಹುಕುಮಿದ್ದರೂ ಸಂಪೂರ್ಣ ಅಧಿಕಾರ ತಮಗೆನೇ ಎಂದೂ, ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರು ಇದ್ದರೂ ತಾವು ಮಾತ್ರ ಅವರ ಅಧಿಕಾರಕ್ಕೆ ಒಳಪಡುವವರಲ್ಲವೆಂದೂ; ತಿಳಿದಿರುವರೋ ಏನೋ! ಇಂತು ಬೋರ್ಡಿನ ನೌಕರರ ಸ್ಥಿತಿಯು ತ್ರಿಶಂಕುವಿಗೆ ಸ್ವರ್ಗಪ್ರಾಪ್ತವಾದಂತಾಗಿದೆ. ಮದರಾಸ ಸರಕಾರದವರು ತಮ್ಮ ನೌಕರರ ಸಂಬಳದ ದರವನ್ನು ನಿಶ್ಚಯಿಸಲಿಕ್ಕೆ ಸಾವಿರಾರು ರೂಪಾಯಿ ಖರ್ಚಿನಿಂದ ಒಂದು ಕಮ್ಮಿಟಿಯನ್ನು ಏರ್ಪಡಿಸಿ ದೀರ್ಘಕಾಲದ ಮೇಲೆ, ಮೇಘರಾಜನನ್ನು ನಿರೀಕ್ಷಿಸುತ್ತಿರುವ ಚಾತಕಪಕ್ಷಿಗಳಂತಿರುವ ಬಡ ನೌಕರರಿಗೆ ಅಲ್ಪ ಸ್ವಲ್ಪ ಸಂಬಳವನ್ನು ಹೆಚ್ಚಿಸಿದರು. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬೋರ್ಡ ಅಧಿಕಾರಿಗಳು ತಮ್ಮ ನೌಕರರಿಗೆ ಅದೇ ರೀತಿಯಲ್ಲಿ ಬೋರ್ಡ ಮೆಂಬರರ ಕಮಿಟಿಯೊಂದನ್ನು ನೇಮಿಸಿ, ಆಯಾಯ ತಾಲೂಕು ಬೋರ್ಡ ಪ್ರೆಸಿಡೆಂಟರ ಸೂಚನೆಯನ್ನು ಪಡೆದು, ಒಂದು ದರವು ಕಮ್ಮಿಟಿಯವರಿಂದ ಸೂಚಿಸಲ್ಪಟ್ಟಿತು. ಜೀನಸುಗಳ ಕ್ರಯ ಕಮ್ಮಿಯಾಗಿದ್ದಾಗ ಇದ್ದ ಸಂಬಳದ ದರಕ್ಕಿಂತಲೂ ಈ ಕಮ್ಮಿಟಿಯವರ ದರವು ಕಮ್ಮಿ ಎಂದು ತಿಳಿಯಿತು. ಇದರಲ್ಲಿ ಆಶ್ಚರ್ಯವೇನು? ಮೆಂಬರ ಮಹಾಶಯರು ಗೌರವಕ್ಕೆಂದೇ ಈ ಬೋರ್ಡುಗಳಲ್ಲಿ ಪ್ರವೇಶವನ್ನು ಪಡೆದು ಅಧ್ಯಕ್ಷ ಮಹಾಶಯರ ಮಾತಿಗೆ ಎದುರಾಡದೆ, ತಮ್ಮ ಸ್ಥೈರ್ಯವನ್ನು ಮೌನಭಾವದಿಂದಲೇ ವ್ಯಕ್ತಗೊಳಿಸುವರಾದ ಮೇಲೆ ಭಯಂಕರವಾದ ಕಷ್ಟದಿಂದ ಜೀವಿಸುತ್ತಿರುವ ಬೋರ್ಡ ನೌಕರರ ದುಸ್ಥಿತಿಯು ಹೇಗೆ ಪರಿಹಾರವಾಗುವದು? ಜನಪ್ರಿಯರೂ, ದಯಾಳುಗಳೂ, ಆದ ಉಡುಪಿ, ಮತ್ತು ಕಾಸರಗೋಡ ತಾಲೂಕು ಬೋರ್ಡಿನ ಪ್ರೆಸಿಡೆಂಟರು ಮಾತ್ರ ಕಮ್ಮಿಟಿಯವರು ಸೂಚಿಸಿದ ಅತೀ ಅಲ್ಪವಾದ ಸಂಬಳದ ದರವನ್ನು ತಿರಸ್ಕರಿಸಿ ಸರಿಯಾದ ಸಂಬಳವನ್ನು ಕೊಡುವ ವರೆಗೆ ೫೦% ಎಲೋವೆನ್ಸ ಕೊಟ್ಟಿದ್ದಲ್ಲದೆ ಈಗಲೂ ಕೊಡುತ್ತಿದ್ದಾರೆ. ಕುಂದಾಪುರ, ಮತ್ತು ಕಾರ್ಕಳ ತಾಲೂಕು ಬೋರ್ಡಿನವರು ಸಹಾ ಇವರನ್ನೇ ಅನುಸರಿಸಿದರು. ವಯೋವೃದ್ಧರೂ ಜ್ಞಾನವೃದ್ಧರೂ ಆದ ನಮ್ಮ ಮಂಗಳೂರು ತಾಲೂಕು ಬೋರ್ಡ ಪ್ರೆಸಿಡೆಂಟರು ಕಳೆದ ಫೆಬ್ರುವರಿ ತಿಂಗಳ ವರೆಗೆ ಮಾತ್ರ ೫೦% ಎಲೋವೆನ್ಸ ಕೊಟ್ಟರು. ಅನಂತರ ಸರಿಯಾದ ಹೆಚ್ಚಿಗೆ ಸಂಬಳದ ದರವು ಅವರವರ ಸರ್ವೀಸಿನಂತೆ ಸೆಂಕ್ಷನ ಮಾಡಲ್ಪಡುವುದೆಂದು ಬೋರ್ಡಿನ ನೌಕರರೆಲ್ಲರೂ ಹಾರೈಸಿದ್ದರು. ಆದರೆ ಅಭಾಗ್ಯರಾದ ನೌಕರರ ದುರಾದೃಷ್ಟದಿಂದ ಇತರ ಜನಪ್ರಿಯರಾದ ಪ್ರೆಸಿಡೆಂಟರು ಅಲ್ಪವೆಂದು ತಿರಸ್ಕರಿಸಿದ ಸಂಬಳದ ದರವೇ ಬಹಳ ಉದಾರ ಬುದ್ಧಿಯಿಂದ ನೌಕರರಿಗೆ ದಯಪಾಲಿಸಲ್ಪಟ್ಟಿತು. ಇಂತಹ ದರವು ಇತರ ತಾಲೂಕು ಬೋರ್ಡಿಗಿಂತ ಕಮ್ಮಿ ಎಂದೂ ಈ ಅಲ್ಪ ಸಂಬಳದ ದರದಲ್ಲೂ ತಮ್ಮ ಸರ್ವಿಸನ್ನು ಎಣಿಸಿ ದರವನ್ನು ನಿರ್ಣಯಿಸಬೇಕೆಂದೂ, ಪ್ರಾರ್ಥಿಸಿದುದಕ್ಕೆ ಈ ನ್ಯಾಯವೃಕ್ಷರಾದ ಮಹಾಶಯರು "ಇನ್ನು ಹೆಚ್ಚಿಗೆ ಸಂಬಳ ದೊರೆಯಲಾರದೆಂದೂ, ಬೇರೆ ತಾಲೂಕು ಬೋರ್ಡುಗಳಲ್ಲಿ ಹೆಚ್ಚಿಗೆ ಸಿಕ್ಕುವದಾದರೆ ಅಲ್ಲಿಗೆ ಹೋಗಬಹುದೆಂದೂ", ನಿರ್ದಾಕ್ಷಿಣ್ಯದಿಂದ ಉತ್ತರ ಕೊಟ್ಟರಂತೆ. ಇದೆಂತಹ ಲೋಕಲ್ ಸೆಲ್ಫ ಗವರ್ನಮೆಂಟಿನ ಪ್ರಭಾವ? ಇಂತಹ ಅಪ್ಪಣೆಯನ್ನು ಕೇಳಿ ತಾಲೂಕು ಬೋರ್ಡಿನ ನೌಕರರೆಲ್ಲರೂ ಗಾಬರಿಗೊಂಡು ಇನ್ನೇನು ಮಾಡಬೇಕೆಂದು ಆಲೋಚಿಸುತ್ತಿರುವರು. ತಾಲೂಕು ಬೋರ್ಡಿನ ನೌಕರರ ಒಂದು ಸಭೆಯು ಬೇಗನೇ ಆಮಂತ್ರಿಸಬೇಕಾಗಿ ಒಂದು ಆಲೋಚನೆ ನಡಿಯುತ್ತಿದೆ ಎಂತ ಕೇಳಬರುತ್ತದೆ. ಈ ನುಂಚೆ ಜನಪ್ರಿಯರಾಗಿದ್ದ ಕಲೆಕ್ಟರ ದೊರೆಗಳು ಒಂದೇ ಜಿಲ್ಲೆಯ ತಾಲೂಕು ಬೋರ್ಡುಗಳಲ್ಲಿ ಈ ತರದ ಬೇರೆ ಬೇರೆ ಸಂಬಳದ ದರ ಇರುವದು ಅಸಂತುಷ್ಟಿಗೆ ಕಾರಣವೆಂದೂ, ಅನ್ಯಾಯವೆಂದೂ, ಅಭಿಪ್ರಾಯಪಟ್ಟಿರುವರಂತೆ. ಇಷ್ಟಾದರೂ ನಮ್ಮ ಮಂಗಳೂರ ತಾಲೂಕು ಬೋರ್ಡಿನವರು ತಮ್ಮ ನೌಕರರ ಸಂಕಷ್ಟವನ್ನು ಅರಿತೂ ಅರಿಯದೆ ಇರುವುದು ಸ್ವಲ್ಪ ಆಶ್ಚರ್ಯ? ತಾಲೂಕು ಬೋರ್ಡಿನೊಳಗೆ ಇರುವ ಎರಡು ಆಸ್ಪತ್ರೆಗಳನ್ನು ನಡಿಸಲಿಕ್ಕೂ, ಆಸ್ಪತ್ರೆಯಲ್ಲಿ ಕೆಲಸಮಾಡುವ ನೌಕರರಿಗೆ ಯೋಗ್ಯವಾದ ಸಂಬಳ ದರವನ್ನು ಇತರ ತಾಲೂಕು ಬೋರ್ಡಿನಲ್ಲಿ ಕೊಡುವಂತೆ ಕೊಡಲಿಕ್ಕೂ ಬೋರ್ಡಿನಲ್ಲಿ ಹಣ ಇಲ್ಲವಂತೆ. ಮಾರ್ಗಗಳ ಮೇಲೆ,—ಸಂಕಗಳ ಮೇಲೆ, ನೀರಿನಂತೆ ಚೆಲ್ಲಲಿಕ್ಕೆ ಹಣವಿದೆ. ಬಡ ನೌಕರರಿಗೆ ಮಾತ್ರ ಸ್ವಲ್ಪ ಸಂಬಳ ಏರಿಸಲಿಕ್ಕೆ ಹಣವಿಲ್ಲವಂತೆ. ಬರುವ ದಶಂಬರ ತಿಂಗಳ ಮೀಟಿಂಗಿನಲ್ಲಿ ಮ. ರಾ. ಕೊಂಪ್ರಬೈಲು ಕೃಷ್ಣರಾಯರಂತೆ ಇತರ ಮೆಂಬರರು ಸಹಾ ನೌಕರರ ಕಷ್ಟವನ್ನು, ಸಿರ್ಭೀತಿಯಿಂದ ಚರ್ಚಿಸಿ ನೌಕರರ ಹಿತಚಿಂತಕರಾಗುವರೆಂದು ನಂಬುತ್ತೇವೆ. ಪತ್ರಕರ್ತರೇ! ನನ್ನೀ ಉದ್ದವಾದ ಪತ್ರವನ್ನು ತಮ್ಮ ಅಮೂಲ್ಯವಾದ ಪತ್ರದಲ್ಲಿ ಪ್ರಕಟಿಸಲಿಕ್ಕೆ ಎಡೆಕೊಟ್ಟುದಕ್ಕಾಗಿ ತಾಲೂಕು ಬೋರ್ಡಿನ ನೌಕರರೆಲ್ಲರೂ ತಮಗೆ ಕೃತಜ್ಞರಾಗಿರುವರು.

Justice.

ಮಧುರೆಯಲ್ಲಿ ಶಂಕರಾಚಾರ್ಯರ ಭಾಷಣ.

ಜಗದ್ಗುರು ಶ್ರೀ ಶಂಕರಾಚಾರ್ಯರು ಮಧುರೆಗೆ ಚಿತ್ತೈಸಿದಾಗ ಅಲ್ಲಿ ಅನೇಕ ಭಾಷಣಗಳನ್ನು ಮಾಡಿದರು. ಕಳೆದ ತಾರೀಕು ೧೫ರಲ್ಲಿ ಅವರು ಮಾಡಿದ ಭಾಷಣಕ್ಕೆ ಬಹಳ ಜನಸ್ತೋಮವು ಕೂಡಿತ್ತು. ನಮ್ಮ ಭರತಖಂಡಕ್ಕೆ ಎಲ್ಲಾ ಮತದ ಜನರು ಬಂದು ಇಲ್ಲಿ ವಾಸ್ತವ್ಯಮಾಡಿಕೊಂಡಿರುವ ವಿಷಯವನ್ನು ತಿಳಿಸಿ ಈ ಜನರನ್ನು ಪರರೂ ದ್ವೇಷಿಸುವುದು ಸರಿಯಲ್ಲವೆಂದು ಹೇಳಿದರು. ಪ್ರತಿಯೊಬ್ಬನಿಗೆ ತನ್ನ ಮತಕ್ಕೆ ಸರಿಯಾಗಿ ನಡಿಯಲು ಹಾಗು ಅವನ ಪಾಡಿಕೆಯಂತೆ ದೇವರನ್ನು ಪೂಜಿಸಲು ಸ್ವಾತಂತ್ರ್ಯವಿರಬೇಕು. ಆದರೆ ಇಲ್ಲಿ ನೆಲಸಿಕೊಂಡಿರುವ ಕೆಲವು ಅನ್ಯ ಜನರು ವಿಶೇಷವಾಗಿ ಕ್ರೈಸ್ತ ಮಿಶನರಿಗಳು ತಮ್ಮ ಮತಪ್ರಸಾರಣೆಯಾಗುವಂತೆ ಹಿಂದೂಗಳಿಗೆ ತಮ್ಮ ಧರ್ಮದಲ್ಲಿರುವ ನಂಬಿಕೆಯು ಕಡಿಮೆಯಾಗುವ ಹಾಗೆ ಮಾಡಿದರು. ಇವರು ತಮ್ಮ ಶಾಲೆಗಳಲ್ಲಿ ಕೊಡುತ್ತಿರುವ ವಿದ್ಯಾಭ್ಯಾಸವು ಇವರ ಈ ಕಾರ್ಯಕ್ಕೆ ಬಹಳ ಸಹಾಯವನ್ನು ಮಾಡಿತು. ಈ ವಿದ್ಯಾಭ್ಯಾಸವು ಎಷ್ಟರ ಮಟ್ಟಿಗೆ ನಮ್ಮ ಧರ್ಮದ ಅವನತಿಗೆ ಸಹಾಯಮಾಡಿತೆಂದರೆ ಹಿಂದುಗಳು ವಿಶೇಷವಾಗಿ ನಮ್ಮ ಭಾವಿ ಜನಾಂಗದ ತರುಣರು ತಮ್ಮ ಧರ್ಮದ ಮುಖ್ಯ ಸೂಕ್ತಗಳನ್ನೂ, ತಮ್ಮ ರಾಷ್ಟ್ರದ ಮಹತ್ವವನ್ನೂ ತಿಳಿಯುವುದನ್ನು ಬಿಟ್ಟುಬಿಟ್ಟರು. ಅಲ್ಲದೆ ಅವರು ಅತ್ಯಾಸಕ್ತಿಯಿಂದ ವಿದೇಶೀಯ ರೀತಿಗಳನ್ನು ಅನುಸರಿಸುತ್ತಿದ್ದಾರೆ. ಹಿಂದೂಗಳು ತಾವು ಒಂದು ಜನಾಂಗದವರೆನ್ನಿಸಿಕೊಳ್ಳುವುದಿಲ್ಲ. ಅವರು ತಮ್ಮ ಹಕ್ಕನ್ನು ತಾವೇ ಕಳಕೊಂಡಿರುವರು. ಹಿಂದುಗಳಿಗೆ ತಮ್ಮ ಉನ್ನತಿಯನ್ನು ಸ್ವತಂತ್ರವಾಗಿ ಉಂಟುಮಾಡಲು ಆಗಲಿಲ್ಲ. ಅವರು ಸ್ವರಾಜ್ಯ ಜೀವನವನ್ನು ನಡಿಸುತ್ತಿರುವರು. ಆದರೆ ಇದರಲ್ಲಿ ವಾಡಿಕ [illegible] ಕಡಿಮೆ ಯಾಗಿದೆ. ತಾವು ಗಳಿಸುವ ಸ್ವರಾಜ್ಯವನ್ನು ಸ್ಥಿರಪಡಿಸಲು ಈ [illegible] ಹಿಂದುಗಳಿಗೆ ಅವಶ್ಯವಿದೆ. ಆದ್ದರಿಂದ ಹಿಂದುಗಳು ಅದನ್ನು ಅಭಿವೃದ್ಧಿ ಪಡಿಸಬೇಕಾಗಿದೆ ಎಂದು ತಿಳಿಸಿದ ನಂತರ ಅವರು ಹಿಂದುಸ್ಥಾನದೊಳಗಿನ ಜಾತಿಗಳು ಈ ವಿಷಯವನ್ನು ಕುರಿತು ಮಾತಾಡಿದರು.

ವಿದೇಶ ವರ್ತಮಾನ.

ಐರಿಸ್ ಫ್ರೀಸ್ಟೇಟ್:—ಇದನ್ನು ಸ್ಥಾಪಿಸುವ ಮಸೂದೆಯು ಬ್ರಿಟಿಷ ಪಾರ್ಲಿಮೆಂಟಿನ ಪ್ರಭುಸದನದಲ್ಲಿ ಮೂರನೇ ಸಲ ಪರ್ಯಾಲೋಚನೆಗೆ ಬಂತು. ಇದು ಪಾಸಾದೊಡನೆ ಐರಾಳಕ್ಕೆ ಬ್ರಿಟಿಷ ಕೊಲೊನಿಗಳಂತೆಯೇ ಸ್ವತಂತ್ರರಾಜ್ಯವು ಸ್ಥಾಪಿಸಲ್ಪಡುವುದು. ಐರಿಸ್ ಸಾಮ್ರಾಜ್ಯರಿಂದಲೇ ಮೇ. ಟಿಮ್. ಹೇಲೀ ಎಂಬವರು ಈ ಸ್ವತಂತ್ರ್ಯರಾಜ್ಯದ ಗವರ್ನರ ಜನರಲರಾಗಿ ನೇಮಿಸಲ್ಪಟ್ಟಿರುತ್ತಾರೆ. ಐರಾಳದಲ್ಲಿ ಐಕ್ಯವನ್ನೂ ಶಾಂತತೆಯನ್ನೂ ಇನ್ನು ಬಹು ಬೇಗನೆ ಸ್ಥಾಪಿಸಲಾಗುವುದೆಂದು ಮೆ. ಹೇಲೀರವರು ಕೋರುತ್ತಾರೆ. ಅಮೇರಿಕದ ಪತ್ರಗಳೆಲ್ಲವೂ ಹೇಲೀಯವರನ್ನು ಗವರ್ನರ ಜನರಲರನ್ನಾಗಿ ನೇಮಿಸಿದ್ದಕ್ಕೆ ತಮ್ಮ ಸಂತೋಷವನ್ನು ಪ್ರದರ್ಶಿಸುತ್ತಿರುವವು.

ಲೊಸ್ಸೆನ್—ಸ್ಟ್ರೇಟ್ಸ್‌ಗಳಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳು ಕಮ್ಮಿಟಿಯ ಅಧ್ಯಕ್ಷರಾದ ಕರ್ಜನ್ ಪ್ರಭುಗಳಿಂದ ಬೇಗನೆ ಕಮ್ಮಿಶನಿನ ಮುಂದೆ ಇಡೋಣಾಗುವವು. ಲೊಸ್ಸೆನ್ ಕನ್ಫರೆನ್ಸಿನ ಮುಂದೆ ರುಷ್ಯಯನರ ಪರವಾಗಿ ಚಿಚೇರಿನ್ ಎಂಬವರು "ಬ್ಲೇಕ್ ಸಿ" ಮತ್ತು ಸ್ಟ್ರೇಟ್ಸ್‌ಗಳ ವಿಷಯ ತಮ್ಮ ಸೂಚನೆಗಳನ್ನು ಈ ರೀತಿ ಹೇಳಿರುತ್ತಾರೆ. ರಿಪಬ್ಲಿಕ ಸ್ಟೇಟ್ಸ್‌ಗಳ ಹೊರತು ಬೇರೆ ಎಲ್ಲವರ ಯುದ್ಧನಾವೆಗಳಿಗೆ ಬ್ಲೇಕ್‌ಸಿಯಲ್ಲಿ ಪ್ರವೇಶವು ದೊರೆಯಕೂಡದು. ವ್ಯಾಪಾರದ ಬಗ್ಗೆ ಸ್ಟ್ರೇಟ್ಸುಗಳಲ್ಲಿ ಎಲ್ಲರಿಗೂ ಶಾಂತತಾ ಕಾಲದಲ್ಲಿಯೂ ಯುದ್ಧಕಾಲದಲ್ಲಿಯೂ ಪ್ರವೇಶ ದೊರಕಬೇಕು. ಆದರೆ ಟರ್ಕಿಯ ಹೊರತು ಇತರ ಯಾರ ಯುದ್ಧನಾವೆಗಳಾದರೂ ಸ್ಟ್ರೇಟ್ಸನ್ನು ಪ್ರವೇಶಿಸಕೂಡದು. ಸ್ಟ್ರೇಟ್ಸನ್ನು ಬೇಕಾದ ಯುದ್ಧನಾವೆ ಇತ್ಯಾದಿಗಳಿಂದ ಸುರಕ್ಷಿತಗೊಳಿಸುವ ಸಂಪೂರ್ಣ ಸ್ವತಂತ್ರವು ಟರ್ಕಿಗೆ ಇರಬೇಕು. ಟರ್ಕಿಯವರ ಸೂಚನೆಗಳು ಯಾವವೆಂತ ಕೇಳಿದ್ದಲ್ಲಿ ಇಸ್ಮೆಟ್ ಪಾಶಾರವರು ತಮ್ಮ ಯಾವ ಸೂಚನೆಯೂ ಸಿದ್ಧವಾಗಿಲ್ಲ. ತಮ್ಮ ಮುಂದ ಬಂದ ಸೂಚನೆಗಳಲ್ಲಿ ರುಷ್ಯದ ಸೂಚನೆಗಳೇ ಒಳ್ಳೆಯವುಗಳೆಂದು ತನಗೆ ತೋರುತ್ತದೆಂತ ಹೇಳಿರುವರು.

ಅಮೇರಿಕದ ಅತ್ಯಧಿಕ ಸಂಪನ್ನರು:—೫೦ ಮಿಲಿಯ ಡೊಲರುಗಳಿಗಿಂತ ಅಧಿಕವಾದ ಉತ್ಪನ್ನವುಳ್ಳ ಸಂಪನ್ನರು ನಾಲ್ಕು ಜನರು ಅಮೇರಿಕದಲ್ಲಿರುವರೆಂತ ಅಲ್ಲಿಯ ಆದಾಯ ತೆಂಗೆಯ ಲೆಕ್ಕದಿಂದ ಗೊತ್ತಾಗಿದೆ. ಆದರೆ ಇವರು ಯಾರ್‍ಯಾರೆಂಬುದಕ್ಕೆ ಈ ಲೆಕ್ಕದಲ್ಲಿ ಹೆಸರುಗಳು ಇಲ್ಲದೆ ಹೋದರೂ ಇವರ್‍ಯಾರಾಗಿರಬೇಕೆಂದು ಜನರು ನಿಶ್ಚಿತಮಾಡಿಕೊಂಡಿರುವರು. ಫೋರ್ಡ ಮೊಟರ್ ಗಾಡಿಗಳನ್ನು ತಯ್ಯಾರಿಸುವ ಕಾರ್ಖಾನೆಯ ಮ್ಯಾಲಿಕರಾದ ಮಿ| ಫೋರ್ಡ ಮತ್ತು ಇವರ ಮಗ, ಮ. ತ್ತೊಬ್ಬರು ರೊಕಫೆಲ್ಲರ್ ಮತ್ತು ಅವರ ಮಗ.

ಒಳದೇಶ ವರ್ತಮಾನ.

ರೈಲು ಪ್ರಯಾಣದಲ್ಲಿ ಒಂದನೇ ತರಗತಿಯ ಫೀಸಿನ ಭತ್ತೆಯನ್ನು ತಕ್ಕೊಂಡು ಎರಡನೇ ತರಗತಿಯಲ್ಲಿ ಪ್ರಯಾಣ ಬೆಳೆಸಿದ ಬಗ್ಗೆ ಕ್ರಿಮಿನಲ್ ವ್ಯವಹರಣೆ:—ಮಿ| ರೊಬರ್ಟ್ಸ್ ಗೆಸ್ಪರ್ ಎಂಬವರಿಗೆ ಜೋಸ್‌ಪುರದಿಂದ ಫರಹಾಬಾದಿಗೆ ಎರಡು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಾಕ್ಷಿ ನುಡಿಯಲಿಕ್ಕಾಗಿ ಸಮನ್ಸ್ ಮಾಡೋಣಾಗಿತ್ತು. ಈ ಬಗ್ಗೆ ಇವರು ನಾಲ್ಕು ಸಲ ರೈಲ್ವೆ ಪ್ರಯಾಣದ ಬಗ್ಗೆ ಒಂದನೇ ತರಗತಿಯ ಫೀಸನ್ನು ವಸೂಲುಮಾಡಿ ಎರಡನೇ ತರಗತಿಯಲ್ಲಿ ಪ್ರಯಾಣ ಬೆಳಸಿ ಹಣ ಉಳಿಸಿಕೊಂಡರು. ಮಿ| ಗೆಸ್ಪರರ ಈ ವರ್ತನೆಯು ವಂಚನೆದ್ದು ಎಂತ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಯು ದಾಖಲಾಗಿದೆ.

ಮುಂಬಯಿಯಲ್ಲಿ ಮದ್ರಾಸಿನವರಿಗೆ ಕೊ-ಒಪರೇಟಿವ್ ಹೊಟೇಲು. ಮುಂಬಯಿಯಲ್ಲಿರುವ ಮದ್ರಾಸಿನವರಿಗೆ ಊಟಕ್ಕೂ ಉಳಕೊಳ್ಳಲಿಕ್ಕೂ ಯೋಗ್ಯವಾದ ಸ್ಥಳಗಳಿಲ್ಲದೆ ಬಹಳ ಅಡಚಣೆಯಿರುವದು. ಹೆಂಡತಿ ಮಕ್ಕಳೊಡನೆ ಬಿಡಾರಮಾಡಿಕೊಂಡು ನಿಲ್ಲುವಷ್ಟು ಸಂಬಳವು ೧೦೦ರಲ್ಲಿ ೯೯ ಜನರಿಗೆ ಸಿಗದು. ಈ ವಿದ್ಯಮಾನಗಳಲ್ಲಿ ಮುಂಬಯಿಯಲ್ಲಿ ಹೊಟೇಲುಗಳಲ್ಲಿ ನಿಂತು ಕಾಲಕ್ಷೇಪ ಮಾಡುವವರೇ ಬಹಳವಿರುವರು. ಸಾಮಾನ್ಯ ಹೊಟೇಲುಗಳಲ್ಲಿ ಹಿತಕರವಾದ ಆಹಾರವೂ ಸ್ವಚ್ಛವಾದ ಸ್ಥಳವೂ ಇರದು. ಇಂಥಾ ಅಡಚಣೆಯನ್ನು ನಿವಾರಿಸುವ ಬಗ್ಗೆ ಕಳೆದ ವರುಷ ಸಹಕಾರಿ ಸಂಘಗಳ ಆಕ್ಟು ಪ್ರಕಾರ ಮಿತಜವಾಬ್ದಾರಿಯ ೫೦,೦೦೦ ರೂಪಾಯಿಗಳ ಪಾಲುಭಂಡವಾಳವುಳ್ಳ ಒಂದು ಸಹಕಾರಿ ಹೊಟೇಲು ಮದ್ರಾಸಿಗಳ ಬಗ್ಗೆ ಸ್ಥಾಪಿಸಲ್ಪಟ್ಟಿತು. ಈ ಸಂಘವು ಮುಂಬಯಿಯ ದಾದರ ಎಂಬಲ್ಲಿ ಒಂದು ಹೊಟೇಲನ್ನು ನಡಿಸುತ್ತಿದೆ. ಈ ಸಂಘದ ನಿಯಮಗಳ ಪ್ರಕಾರ ಸಂಘದಲ್ಲಿ ಉಳಿಯುವ ಮುನಾಫೆಯಲ್ಲಿ ಪಾಲುಭಂಡವಾಳದ ಮೇಲೆ ಸೇಕಡಾ ೮ಕ್ಕಿಂತ ಹೆಚ್ಚಿಗೆ ಮುನಾಫೆ ಹಂಚಕೂಡದು. ಮತ್ತು ಮುನಾಫೆಯ ಸೇಕಡಾ ೧೦ರ ಅಂಶವನ್ನು ಧರ್ಮದ ಬಗ್ಗೆ ಪ್ರತ್ಯೇಕಿಸಿಡಬೇಕಾಗಿದೆ. ದಾದರದಲ್ಲಿ ಸ್ಥಾಪಿಸಿರುವ ಹೊಟೇಲಿನಲ್ಲಿ ಇತರ ಸಾಮಾನ್ಯ ಹೊಟೇಲುಗಳಿಗಿಂತ ಉತ್ಕೃಷ್ಟವಾದ ಊಟವು ದೊರೆಯುವುದಲ್ಲದೆ ಉಳಕೊಳ್ಳುವ ಬಗ್ಗೆ ಹೊಟೇಲು ವಠಾರವನ್ನು ಬಹಳ ಖುಷಿಯಾಗಿಡುತ್ತಿರುವರು. ಒಂದು ವರುಷ ಕಾಲದೊಳಗೆ ಹೊಟೇಲಿಗೆ ಮೆಂಬರರಾಗಿ ಸೇರುವವರ ಸಂಖ್ಯೆಯು ಏರಿರುವದರಿಂದ ಇನ್ನೊಂದು ಹೊಟೇಲನ್ನು ಸ್ಥಾಪಿಸುವ ಏರ್ಪಾಡು ನಡಿಯುತ್ತಿದೆ. ಇಂಥಾ ಸಹಕಾರಿ ಹೊಟೇಲುಗಳ ಮೂಲಕ ಮತ್ತಷ್ಟು ಪ್ರಯೋಜನವನ್ನು ಹೊಂದಬಹುದು. ಇದಕ್ಕೆ ಮುಂಬಯಿಯಲ್ಲಿರುವ ಮದ್ರಾಸಿಗಳ ಸಹಕಾರವು ಅಗತ್ಯವಾಗಿದೆ. ಇಂಥಾ ಸಹಕಾರವು ತಮಗೆ ಸಿಕ್ಕಲು ಸಾಧ್ಯವಿದೆಯೆಂತ ಈ ಸಂಘದ ಸ್ಥಾಪಕರು ಕೋರುತ್ತಾರೆ.

ಕುಂಭಕೋಣ ಮುನ್ಸಿಪಾಲಿಟಿಯಲ್ಲಿ ಸರಕಾರದ ಜಿ. ಓ. ನಂಬ್ರ ೬೧೩ನ್ನು ಜಾರಿಗೆ ತರುವದು:— ಬ್ರಾಹ್ಮಣೇತರರಿಗೆ ಸರಕಾರದಲ್ಲಿ ನೌಕರಿಯನ್ನು ಹೆಚ್ಚಿನ ದಾಮಾಷಾಯಿಯಲ್ಲಿ ಕೊಡಬೇಕೆಂತ ನಂಬ್ರ ೬೧೩ನೇ ಸರಕಾರದ ಅಪ್ಪಣೆ ಇರುವದು. ಈ ಅಪ್ಪಣೆಯ ತತ್ವವನ್ನು ಕುಂಭಕೋಣ ಮುನ್ಸಿಪಾಲಿಟಿಯ ನೌಕರರ ನೇಮಕದಲ್ಲಿ ಜಾರಿಗೆ ತರಬೇಕೆಂತ ಅಲ್ಲಿಯ ಒಬ್ಬ ಮುನ್ಸಿಪಲ್ ಕೌನ್ಸಿಲರು ಒಂದು ನಿರ್ಣಯವನ್ನು ಮುನ್ಸಿಪಲ್ ಕೌನ್ಸಿಲಿನ ಮುಂದೆ ತಂದರು. ಬ್ರಾಹ್ಮಣೇತರ ಕೌನ್ಸಿಲರರೇ ಈ ಕೌನ್ಸಿಲಿನಲ್ಲಿ ಅಧಿಕವಾಗಿದ್ದದ್ದರಿಂದ ನಿರ್ಣಯದ ವಾದವನ್ನು ಬಾಕಿಯಿಡಬೇಕೆಂತ ಮಾಡಿದ ಸೂಚನೆಯು ವ್ಯರ್ಥವಾಯಿತು. ಈ ನಿರ್ಣಯವು ಪ್ರಕೃತಕ್ಕೆ ಕೌನ್ಸಿಲಿನ ಮುಂದೆ ವಾದಕ್ಕೆ ಬರುವದು ಸರಿಯಲ್ಲವೆಂತ ನಂತರ ಆಕ್ಷೇಪಿಸಿದರು. ಚೇಯರ್ಮೇನರು ಇಂಥ ಆಕ್ಷೇಪವು ನ್ಯಾಯವಾದ್ದೆಂತ ಅಪ್ಪಣೆಕೊಡಿಸಿದ್ದರಿಂದ ನಿರ್ಣಯದ ಮುಂದಿನ ವಾದ ನಡಿಯದೆ ಅದು ಬಿದ್ದು ಹೋಯಿತು.

ಮೈಸೂರು ವಿಶ್ವವಿದ್ಯಾಲಯ:—ಈ ವಿಶ್ವವಿದ್ಯಾಲಯದ ಸೆನೇಟು ಸಭೆಯ ಮುಂದೆ ಒಂದು ವಿಶೇಷವಾದ ನಿರ್ಣಯವು ಬಂದಿತ್ತು. ಮಹಾರಾಣಿ ಕೊಲೇಜಿನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರ ಬಗ್ಗೆ ಲೆಕ್ಚರ್ ಕ್ಲಾಸುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿರಗೊಳಿಸುವುದನ್ನು ಬಿಟ್ಟು ಮಹಾರಾಜಾ ಕೊಲೇಜಿನ ಕಲಿಯುವ ವಿದ್ಯಾರ್ಥಿಗಳೊಂದಿಗೆ ಒಂದೇ ಕ್ಲಾಸನ್ನು ಏರ್ಪಡಿಸುವುದು ಉತ್ತಮವೆಂತ ಶ್ರೀಯುತ ಎಸ್. ಪಿ. ಶಾಸ್ತ್ರಿಯವರ ನಿರ್ಣಯವಾಗಿತ್ತು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಒಂದೇ ಕ್ಲಾಸಿನಲ್ಲಿ ಒಟ್ಟಿಗೆ ತಮ್ಮ ಶಿಕ್ಷಣವನ್ನು ಪಡಿಯುವುದು ಉತ್ತಮವೆಂತ ಆಧುನಿಕ ಪಂಡಿತವರ್ಯರ ಮತವಾಗಿರುತ್ತ, ಬಹಳವಾಗಿ ಸುಧಾರಿಸಿದ ಸಮಾಜದವರಲ್ಲಿ ಈ ಮತವನ್ನು ಜಾರಿಗೆ ತರುವುದು ಯುಕ್ತವಾಗಿದೆ. ಅಲ್ಲದೆ ಸಂಖ್ಯೆಯಲ್ಲಿ ಬಹು ಸ್ವಲ್ಪವಾಗಿರುವ ಸ್ತ್ರೀಯರ ಬಗ್ಗೆ ಪ್ರತ್ಯೇಕವಾಗಿ ಒಂದು ಕೊಲೇಜನ್ನು ವಿಶೇಷ ಖರ್ಚು ಮುಟ್ಟಿಸಿ ನಡಿಸುವುದು ಈಗಿನ ವಿದ್ಯಮಾನಗಳಲ್ಲಿ ಯುಕ್ತವಲ್ಲವೆಂಬಿತ್ಯಾದಿ ಘನವಾದ ವಾದಗಳು ಶಾಸ್ತ್ರೀಯವರ ಭಾಷಣದಲ್ಲಿದ್ದವು. ಆದರೆ ಈ ನಿರ್ಣಯವು ಸಭಿಕರಲ್ಲಿ ಅನೇಕರಿಂದ ನಿಷೇಧಿಸಲ್ಪಟ್ಟಿತು. ಶ್ರೀ ಕೆ. ಡಿ. ರುಕ್ಮಿಣಿ ಅಮ್ಮ ಮತ್ತು ಮಿಸಿಸ್ ಜೆಸ್ಸ್ಮನ್‌ರವರು ಈ ನಿರ್ಣಯಕ್ಕೆ ವಿರೋಧವಾಗಿದ್ದು ನಿರ್ಣಯದಲ್ಲಿ ಸೂಚಿಸೋಣಾದ ವಿಷಯವು ಪ್ರಕೃತಕ್ಕೆ ಸಾಧ್ಯವಲ್ಲವೆಂತ ಸೂಚಿಸಿದ್ದರಿಂದ ನಿರ್ಣಯವು ಬಿದ್ದುಹೋಯಿತು.

ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿಯವರು:—ಕಳೆದ ತಿಂಗಳ ೩೦ನೇ ರಾತ್ರಿ ಶಾಸ್ತ್ರಿಯವರಿಗೆ ಲೋರ್ಡ ರೇಡಿಂಗ್‌ರೊಡನೆ ಡಿಲ್ಲಿಯಲ್ಲಿ ಔತಣವಿತ್ತು. ತಾರೀಕು ೩ಕ್ಕೆ ಡಿಲ್ಲಿಯಿಂದ ಹೊರಟು ೬ಕ್ಕೆ ಮದ್ರಾಸಿಗೆ ತಲ್ಪಿ ಅಲ್ಲಿಂದ ತಾ. ೧೦ಕ್ಕೆ ಪುನೆಗೆ ಬಂದು ತಲ್ಪುವರು. ನಾಗಪುರದಲ್ಲಿ ಜರಗಲಿಕ್ಕಿರುವ ಲಿಬರಲ್ ಫಿಡರೇಶನ್ ಸಭೆಯ ಅಧ್ಯಕ್ಷತೆಯನ್ನು ವಹಿಸಿ, ನಂತರ ಡಿಲ್ಲಿಗೆ ಕೌನ್ಸಿಲ್ ಒಫ್ ಸ್ಟೇಟಿನ ಅಧಿವೇಶನಕ್ಕೆ ಹೋಗುವರು.

ಮಧುರೆಯಲ್ಲಿ ವಿಪರೀತ ಮಳೆ:—ಕಳೆದ ತಿಂಗಳ ತಾ. ೩೦ನೇ ರಾತ್ರಿ ಮಧುರಾ ಜಿಲ್ಲೆಯಲ್ಲಿ ಮಳೆಯು ಬಹಳ ವಿಪರೀತವಾಗಿ ಸುರಿಯಿತು. ವೈಗೈ ನದಿಯ ನೆರೆಯು ಪಟ್ಟಣದ ಬಹುಭಾಗವನ್ನು ಆವರಿಸಿತು. ಮಧುರಾ ಪಟ್ಟಣದ ಉತ್ತರ ಭಾಗದಲ್ಲಿರುವ ಪೇಟೆ, ಮನೆಗಳು ವ್ಯಾಪಾರ ಭಂಡಸಾಲೆಗಳಲ್ಲಿ ಹಲವು ಕುಸಿದುಬಿದ್ದಿವೆ. ರೈಲ್ವೆ ಮಾರ್ಗದ ಮೇಲೆ ಏಳೆಂಟು ಅಡಿ ನೀರು ಬಂದು ಮಾರ್ಗವು ಕೆಲವು ಕಡೆಗಳಲ್ಲಿ ಕಡಿದುಹೋಯಿತು. ಪೊಲೀಸು ಅಧಿಕಾರಿಗಳು ಜಿಲ್ಲಾ ಕಲೆಕ್ಟರರು ಇವರೆಲ್ಲರೂ ನೆರೆಯ ಹಾವಳಿಯನ್ನು ತಗ್ಗಿಸಲು ಬಹಳ ಪ್ರಯತ್ನ ನಡಿಸುತ್ತಿರುವರು.

ಲಾಲಾ ಲಜಪತರೈಗಳವರ ಅನಾರೋಗ್ಯ:—ಲಾಲಜಿಯವರಿಗೆ ಜೈಲಿನಲ್ಲಿ ಪಿತ್ತಕೋಶದ ಬಾಧೆಯು ಪ್ರಾಪ್ತವಾಗಿದೆ ಎಂತ ಗೊತ್ತಾಗಿ ಇವರ ಸಹೋದರರಾದ ಶ್ರೀಯುತ ಧನಪತ್‌ರೈ ಬಿ. ಎ. ಎಲ್, ಎಲ್. ಬಿ. ಯವರು ಬರೆಯುವುದೇನೆಂದರೆ:-ಪಿತ್ತಕೋಶದ ಬಾಧೆಯು ಕಳೆದ ೨೫ ವರುಗಳಿಂದ ಲಾಲಜಿಯವರಿಗಿದ್ದಿಲ್ಲ ಆದರೆ ೨೫ ವರುಷಗಳ ಹಿಂದೆ ಇವರಿಗೆ ಈ ಬಾಧೆಯು ಇತ್ತು. ಇದರಿಂದ ಇವರು ಸಂಪೂರ್ಣ ಗುಣಹೊಂದಿದ್ದರು. ಸರಕಾರದವರು ಇವರನ್ನು ಜೈಲಿಗೆ ಕಳುಹಿಸಿದಾಗ ಪಿತ್ತಕೋಶವು ಸರಿಯಾಗಿದ್ದು ಪಿತ್ತದ ಯಾವ ಬಾಧೆಯೂ ಇರಲಿಲ್ಲ. ೧೯೦೭ರಲ್ಲಿ ಸರಕಾರದವರು ಲಾಲಜಿಯವರನ್ನು ಗಡಿಪಾರುಮಾಡಿ ಮಂಡಲೆಯಲ್ಲಿರಿಸಿದಾಗ ಯಾವ ಬಾಧೆಯೂ ಇವರಿಗೆ ತಟ್ಟಲಿಲ್ಲ. ಇದು ಏಕೆಂದರೆ ರಾಜಕೀಯ ಕೈದಿಗಳನ್ನು ಆ ಕಾಲದಲ್ಲಿ ನಡಿಸುವ ರೀತಿಯು ಈಗಿನಂತೆ ಕ್ಷುದ್ರವಾಗಿರಲಿಲ್ಲ. ದೇಶಮಿತ್ರರಾದ ಗೋಖಲೆಯಂಥವರು ಕೌನ್ಸಿಲುಗಳಲ್ಲಿ ಇದ್ದದ್ದೆ ಇದಕ್ಕೆ ಕಾರಣವಾಗಿತ್ತು. ಕೌನ್ಸಿಲುಗಳನ್ನು ಪ್ರವೇಶಿಸಕೂಡದೆಂತ ಹೇಳುವ ಅಸಹಕಾರಿಗಳು ತಮ್ಮ ಬಾಂಧವರು ಗತ್ಯಂತರವಿಲ್ಲದೆ ಜೈಲುಗಳಲ್ಲಿ ಕೊಳೆಯುತ್ತಿರುವ ಸಂಗತಿಯನ್ನು ಮರೆಯಕೂಡದು. ಸಿವಿಲ್ ಡಿಸ್ ಒಬ್ಬಿಡಿಯನ್ಸ್ ಕೈಕೊಳ್ಳುವರೆ ದೇಶವು ತಯ್ಯಾರಿಲ್ಲವಾದರೆ ಬ್ಯುರೋಕ್ರಸಿಯನ್ನು ಆಟೋಪಕ್ಕೆ ತರುವ ವಿಧಾನಗಳನ್ನು ಕೈಕೊಳ್ಳುವುದು ಅಗತ್ಯ.

ಶ್ರೀಮತಿ ಪಾರ್ವತಿ ದೇವಿ:—ಇವರ ಮೇಲೆ ನಡೆಯುತ್ತಿದ್ದ ರಾಜದ್ರೋಹದ ಮೊಕದ್ದಮೆಯು ಮೀರತ್ತಿನಲ್ಲಿ ತೀರ್ಮಾನಿಸಲ್ಪಟ್ಟು ಎರಡು ವರುಷಗಳ ಕಠಿಣ ಸಜೆಯು ಇವರಿಗೆ ವಿಧಿಸೋಣಾಗಿದೆ. ಪಾರ್ವತಿ ದೇವಿಯವರು ವಿಚಾರಣಾ ಕಾಲದಲ್ಲಿ ಕೋರ್ಟಿನಲ್ಲಿ ಬರಕೊಟ್ಟ ಇವರ ಹೇಳಿಕೆಯು ಪ್ರಕಟಿಸಲ್ಪಟ್ಟಿರುವುದು.

ನಿರಾಶ್ರಿತ ಜನರಿಗೆ ಪರೀಕ್ಷೆ ಫೀಸುಗಳಿಂದ ವಿನಾಯತಿ—ಸಂಸ್ಥಾನದ ಇತರ ಜಿಲ್ಲೆಗಳಂತೆಯೇ ಈ ಜಿಲ್ಲೆಯಲ್ಲಿರುವ ಚೆರುಮರು ಮತ್ತು ಹೊಲೆಯರು ಈ ಜಾತಿಯವರ ವಿದ್ಯಾರ್ಥಿಗಳು ಅತೀ ಗರೀಬರೆಂತ ಶಾಲಾ ಹೆಡ್‌ಮಾಸ್ತರರು ಸರ್ಟಿಫಿಕೇಟು ಕೊಟ್ಟಲ್ಲಿ ಇಂಥವರಿಗೆ ಪರೀಕ್ಷೆ ಫೀಸಿನಿಂದ ವಿನಾಯತಿ ಕೊಡುವ ಅಧಿಕಾರವನ್ನು ಸರಕಾರದವರು ಡೈರೆಕ್ಟರರಿಗೆ ಕೊಟ್ಟಿರುತ್ತಾರೆ.

ಕುಂಬಳಕಾಯಿ ಬಳ್ಳಿಯಲ್ಲಿ ನಾಗನ ಅವತಾರ:—ಕೊಯಂಬತ್ತೂರಿಗೆ ಸಮೀಪವಿರುವ ರಾಮನಾಥಪುರದಲ್ಲಿ ಮಿ| ಟಿ. ಕೃಷ್ಣಚೆಟ್ಟಿಯವರ ಮನೆ ವಠಾರದಲ್ಲಿ ಕುಂಬಳಕಾಯಿ ಬಳ್ಳಿಯ ಒಂದು ಶಾಖೆಯು ವಿಚಿತ್ರ ರೀತಿಯಲ್ಲಿ ಸರ್ಪದ ಆಕೃತಿಯಲ್ಲಿದೆ. ಈ ಕೊಂಬೆಯ ಒಂದು ಕಡೆಯು ಐದು ಹೆಡೆಗಳುಳ್ಳ ಹಾವಿನಂತೆಯೆ ಇದ್ದು ಪ್ರತಿ ಹೆಡೆಯಲ್ಲಿ ಚಿಕ್ಕ ಪುಷ್ಪಗಳಿರುವುದರಿಂದ ಸರ್ಪನು ನಾಲಿಗೆಯನ್ನು ಹೊರಚಾಚಿದಂತೆ ತೋರುವುದು. ಕೊಂಬೆಯ ಈ ಸ್ವರೂಪದಲ್ಲಿ ಏನೋ ವಿಶೇಷವಿದೆ ಎಂದು ಜನರು ಅಂದುಕೊಳ್ಳುವರು ವಿನಹ, ಅಂಥಾ ವಿಶೇಷವು ಏನೆಂಬುದನ್ನು ಯಾರೂ ಹೇಳಲಾರರು. ಜಿಲ್ಲೆಯ ಹಲವು ಕಡೆಗಳಿಂದ ಜನರು ಬಂದು ಇದು ಶೇಷನ ಅವತಾರವೆಂತ ಹಾಲು, ಕರ್ಪೂರ ಇತ್ಯಾದಿಗಳಿಂದ ಪೂಜೆಗಳನ್ನು ಮಾಡುತ್ತಿದ್ದಾರೆ.

ಸಾಮ್ರಾಜ್ಯ ಪ್ರದರ್ಶನದಲ್ಲಿ ಹಿಂದೂಸ್ಥಾನದ ಖರ್ಚು:—ಡಿಲ್ಲಿಯಲ್ಲಿ ಲೋರ್ಡ ಇಂಚ್‌ಕೇಪ್ ಕಮ್ಮಿಟಿಯವರು ಸರಕಾರದ ಖರ್ಚು ಹೇಗೆ ಕಡಿಮೆಮಾಡಬಹುದೆಂದು ಇಂಡಿಯಾ ಸರಕಾರದ ಸೆಕ್ರೆಟೇರಿಯಟ್ ಕಟ್ಟೋಣದ ಒಂದು ಭಾಗದಲ್ಲಿ ಕೂತುಕೊಂಡು ಆಲೋಚಿಸುತ್ತಿರುವಾಗ ಈ ಕಟ್ಟೋಣದ ಇನ್ನೊಂದು ಭಾಗದಲ್ಲಿ ಫಿನೆನ್ಸ್ ಕಮ್ಮಿಟಿಯವರು ಸಾಮ್ರಾಜ್ಯ ಪ್ರದರ್ಶನದ ಬಗ್ಗೆ ಲಂಡನಿನಲ್ಲಿ ಹಿಂದುಸ್ಥಾನದ ಪರವಾಗಿ ರೂಪಾಯಿ ೬ ಲಕ್ಷವನ್ನು ಸೆಂಕ್ಷನ್ ಮಾಡಿರುತ್ತಾರೆ. ಕಮ್ಮಿಟಿಯು ಮಂಜೂರು ಮಾಡಿದ ಈ ಖರ್ಚಿನ ಮೊಬಲಗು ಸೆಂಕ್ಷನ್ ಬಗ್ಗೆ ಲೆಜಿಸ್ಲೆಟಿವ್ ಎಸೆಂಬ್ಲಿ ಮುಂದೆ ಬರಲಿಕ್ಕಿದೆ. ಅಂಥಾ ಸಮಯದಲ್ಲಿ ಎಸೆಂಬ್ಲಿ ಮೆಂಬರರು ಕಣ್ಣುಮುಚ್ಚಿ ಈ ದೊಡ್ಡ ಮೊಬಲಗಿಗೆ ತಮ್ಮ ಸಮ್ಮತಿಯನ್ನು ಕೊಡುವರೋ ಎಂಬ ಪ್ರಶ್ನೆಯು ಈಗಲೆ ಉದ್ಭವವಾಗಿರುವುದು.

ಮುನ್ಸಿಪಲ್ ಕೌನ್ಸಿಲರರಾಗಿ ಸ್ತ್ರೀಯರ ಚುನಾವಣೆ—ಸೈದಾಪೇಟೆಯ ಮುನ್ಸಿಪಲ್ ಕೌನ್ಸಿಲಿಗೆ ಸೌ| ಎಲ್. ಸುಬ್ಬಲಕ್ಷ್ಮೀ ಮತ್ತು ಸೌ| ಸಿ. ಕೃಷ್ಣಅಮ್ಮಾಳ್ ಇವರಿಬ್ಬರು ಕೌನ್ಸಿಲರರಾಗಿ ನೇಮಿಸಲ್ಪಟ್ಟಿರುತ್ತಾರೆ. ಮದ್ರಾಸ್ ಕೊರೊಪರೇಶನ ಮುನ್ಸಿಪಲ್ ಕೌನ್ಸಿಲರರಾಗಿ ಮಿಸಸ್ ದೇವದಾಸರವರು ನೇಮಕ ಪಡೆದಿರುವರು. ಎಲ್. ಸುಬ್ಬಲಕ್ಷ್ಮಿ ಎಂಬವರು ಸೈದಾಪೇಟೆಯ ಟ್ರೇನಿಂಗ್ ಕೊಲೇಜಿನ ಪ್ರಿನ್ಸಿಪಾಲರಾದ ಶ್ರೀಯುತ [illegible] ಅಯ್ಯರವರ ಪತ್ನಿಯಾಗಿರುವರು. ಮಿಸಸ್ [illegible] ಶ್ರೀಯುತ [illegible] ಪತ್ನಿ. ಇವರು ತನ್ನ ಗಂಡನ [illegible] ಕಾರ್ಖಾನೆಯನ್ನು ವಿಶೇಷ ದಕ್ಷತೆಯಿಂದ ನಡೆಸುತ್ತಿರುವರು. ಮಿಸಸ್ ದೇವದಾಸರವರು [illegible] ಜಸ್ಟೀಸ್ [illegible] ದೇವದಾಸರವರ ಪತ್ನಿಯಾಗಿರುವರು.

ಮದ್ರಾಸ್ ಸಂಸ್ಥಾನದಲ್ಲಿ ಮುನ್ಸಿಪಲ್ ಕೌನ್ಸಿಲ್ ಮೆಂಬರುತನಕ್ಕೆ [illegible] ಗಳಾಗುತ್ತಿರುವಾಗ ಮುಂಬಯಿಯಲ್ಲಿ ಸ್ತ್ರೀಯರು ಉಮೇದ್ವಾರರಾಗಿ [illegible] ನಿಂತಿರುವರು. ಇವರ್‍ಯಾರೆಂದರೆ:—ಶ್ರೀಮತಿ ಸರೋಜಿನಿದೇವಿ ಮತ್ತು ಮಿಸ್ [illegible] ಬಾಯಿ ಆರ್. ರೋಟಿವಾಲ ಇವರಿಬ್ಬರು ರಾಷ್ಟ್ರೀಯ ಪಕ್ಷದ ಉಮೇದ್ವಾರರಾಗಿರುತ್ತಾರೆ. ತಾವು ಕೌನ್ಸಿಲರರಾಗಿ ಆರಿಸಲ್ಪಟ್ಟರೆ ಕೊಂಗ್ರೆಸ್ ಕ್ರಮಕ್ಕೆ ಅನುಗುಣವಾದ ಕಾರ್ಯಸಾಧನೆಯನ್ನು ಮುಂಬಯಿಯ ಕೊರಪರೇಶನಿನಲ್ಲಿ ಹೇಗೆ ಸಾಧಿಸುವೆವೆಂಬುದನ್ನು ಇವರು ಹೊರಡಿಸಿದ ಸೂಚೀಪತ್ರದಲ್ಲಿ ನಮೂದಿಸೋಣಾಗಿದೆ.

ಮಹಾರಾಜಸಿಂಧ್ಯರ ಮುಂಬಯಿ ಬಂಗ್ಲೆಯಲ್ಲಿ ಕಳವು—ಮುಂಬಯಿಯಲ್ಲಿ ಜೊಸಿಗಾಟಿ ವೆಲ್ಲಾರ್ಡ ಎಂಬಲ್ಲಿರುವ ಮಹಾರಾಜ ಸಿಂಧ್ಯರ ಬಂಗ್ಲೆಯ ಪೋಷಾಕನ್ನು ಹಾಕಿಕೊಳ್ಳುವ ಕೋಣೆಯಿಂದ ನಗದು ಮತ್ತು ಸಾಮಾಗ್ರಿಗಳು ಕೂಡಾ ರೂ ೩೦೦೦ ಕ್ರಯಬಾಳುವ ಸೊತ್ತನ್ನು ಯಾರೋ ಎತ್ತಿಕೊಂಡು ಹೋಗಿರುವರೆಂದು ಆ ಬಂಗ್ಲೆಯ ಸುಪರಿಂಟೆಂಡೆಂಟರು ಪೋಲೀಸರಿಗೆ ರಿಪೋರ್ಟನ್ನು ಕೊಟ್ಟಿರುತ್ತಾರೆ.

ಲೋರ್ಡ ಮತ್ತು ಲೇಡಿಸಿಂಹ—ಇವರಿಬ್ಬರು ಲಂಡನಿಂದ ಹಿಂದೂಸ್ಥಾನಕ್ಕೆ ತೆರಳಿರುವರು.

ಗಯಾಕ್ಷೇತ್ರದಲ್ಲಿ ಕೊಂಗ್ರೆಸ್ಸ ಸಭೆ:—ಕೊಂಗ್ರೆಸ್ಸು ಸಭೆಯು ಗಯಾಕ್ಷೇತ್ರದಲ್ಲಿ ತಾ. ೨೬ರಲ್ಲಿ ಪ್ರಾರಂಭವಾಗಿ ೪ ದಿವಸ ಪರ್ಯಂತರ ನಡೆಯುವುದು. ಕೊಂಗ್ರೆಸ್ಸಿನ ನಿಯಾಮಕ ಕಮ್ಮಿಟಿಯು ತಾ. ೨೪ರಲ್ಲಿ ಕೂಡಿ ತಾ. ೨೫ರ ತನಕ ನಡಿಯುವುದು. ಖಿಲಾಫತ್ ಕೊನ್ಫರೆನ್ಸ್ ಕೊಂಗ್ರೆಸ್ಸು ಕೂಡುವ ಸ್ಥಳದಲ್ಲಿಯೇ ಅದೇ ದಿನಗಳಲ್ಲಿ ಆದರೆ ಬೇರೆ ಸಮಯದಲ್ಲಿ ನಡುವುದು.

ಹಿಂದೂಗಳ ಮತಸಂಸ್ಥೆಗಳ ಬಗ್ಗೆ ಹೊಸ ಕಾನೂನು ಮಸೂದೆ:-ಮದ್ರಾಸು ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಈ ಕಾನೂನು ಮಸೂದೆಯು ಸದ್ಯದಲ್ಲಿ ಇಡೋಣಾಗುವುದು. ಈಗ ಜ್ಯಾರಿಯಲ್ಲಿರು- ೧೮೬೩ನೆಯ ಆಕ್ಟನ್ನು ರದ್ದುಪಡಿಸಿ ಇದರ ಬದಲಿಗೆ ದೇವಸ್ಥಾನ ಗುರುಮಠ ಮೊದಲಾದ ಮತಸಂಸ್ಥೆಗಳ ಆಡಳಿತೆಯು ಸರಿಯಾಗಿ ನಡಿಯುವಂತೆ ತಕ್ಕ ಕಾನೂನನ್ನು ಏರ್ಪಡಿಸುವುದು ಈ ಮಸೂದೆಯ ಮುಖ್ಯ ಉದ್ದೇಶವಾಗಿದೆ.

ತಿರುನಲ್ವೆಲ್ಲಿಯಲ್ಲಿ ನೆರೆಯ ಭಯಂಕರವಾದ ಹಾವಳಿ:—ಕಳೆದ ಗುರುವಾರ ಅಂದರೆ ಕಳೆದ ತಿಂಗಳ ತಾ. ೩೦ರಲ್ಲಿ ಎದ್ದ ಗಾಳಿ ಮಳೆಯಿಂದ ತಿರುನಲ್ವೆಲಿ ಜಿಲ್ಲೆಯ ಶಂಕರನ್ಯಾರ್ನಾ ಮತ್ತು ತೆಂಕಾಸಿ ತಾಲೂಕುಗಳಲ್ಲಿ ಹೆಚ್ಚಿನ ಹಾವಳಿ ಉಂಟಾಗಿರುವುದು. ನಂಗನೇರಿಯಲ್ಲಿ ನೆರೆಯಿಂದ ಸಂಕಷ್ಟಕ್ಕೆ ಗುರಿಮಾಡಲ್ಪಟ್ಟವರ ಸಂಖ್ಯೆಯು ಬಹಳವಿದೆ. ಒಂದು ಸಾವಿರ ಎಕ್ರೆಗಳಲ್ಲಿ ಭತ್ತ ಸಾಗುವಳಿಗೆ ಬೇಕಾದ ನೀರಿನ ಜಲಾಶಯವನ್ನು ಕೂಡಿಸಿಡುವ ಕೆರೆಯು ತಿರುಕುರುಂಗುಡಿ ಎಂಬಲ್ಲಿ ಕುಸಿದುಬಿದ್ದಿದೆ. ೧೦೦ ಫೀಟು ಅಗಲ ೪೦೦ ಫೀಟು ಉದ್ದಕ್ಕೆ ಕೆರೆಯ ದಡವು ಕುಸಿದು ಬಿದ್ದು ಹತ್ತಿರವಿರುವ ೬೦ ಎಕ್ರೆ ವಿಸ್ತೀರ್ಣದಲ್ಲಿ ಬೆಳೆದು ಬಂದ ಬೆಳೆಯು ಒಂದಡಿಯಿಂದ ನಾಲ್ಕಡಿ ವರೆಗಿನ ಪ್ರಮಾಣದ ಮಣ್ಣು ರಾಶಿಗಳ ಅಡಿಯಲ್ಲಿ ಬಿದ್ದಿರುವುದು. ನಡು ರಾತ್ರೆಯು ದಾಟಿ ಬೆಳಗ್ಗಿನ ಝಾಮದಲ್ಲಿ ತಮ್ಮ ಗುಡಿಸಲು ಮನೆಗಳಲ್ಲಿ ನಿದ್ರಾವಸ್ಥೆಯಲ್ಲಿದ್ದಾಗ ಕೆರೆಯ ನೀರಿನ ನೆರೆಯು ಮನೆಯ ಸುತ್ತಲೂ ಆವರಿಸಿ ಮಲಗಿದವರ ಕೋಣೆಗಳನ್ನು ಸಹ ಹೊಕ್ಕಿತು. ಜನರು ಪ್ರಾಣಭಯದಿಂದ ಹತ್ತರ ಇರುವ ಧರ್ಮಶಾಲೆ ದೇವಸ್ಥಾನಗಳಿಗೆ ಓಡಿ ಹೋದರು. ೬೦ ಮಣ್ಣಿನ ಗುಡಿಸಲುಗಳು [illegible] ಹಿತ್ತಲುಗಳು ನಾಶವಾಗಿ ಹೋಗಿವೆ. ಕೆಲವು ಹಂಚಿನ ಮನೆಗಳು ಬಿದ್ದಿರುವವು. ನೆರೆಯಲ್ಲಿ ಸಿಲುಕಿ ಬಿದ್ದು ಸತ್ತ ದನಕರುಗಳ ರಾಶಿಯು ಬಹಳ ಭಯಂಕರವಾಗಿದೆ. ಅಲ್ಲಿಯ ರೆವೆನ್ಯು ಡಿವಿಜನಲ್ ಆಫೀಸರರು ಮತ್ತು ರೆವೆನ್ಯು ಇನ್ಸ್‌ಪೆಕ್ಟರರು ಜನರನ್ನು ನೋಡಿಕೊಂಡು ನೆರೆಯ ಸಂಕಷ್ಟ ನಿವಾರಣಾ ಉಪಾಯಗಳನ್ನು ಗೊತ್ತುಮಾಡಿಕೊಳ್ಳುತ್ತಿದ್ದಾರೆ.

ಅಹಮ್ಮದಾಬಾದಿನಲ್ಲಿ ವಸ್ತ್ರ ಗಿರಣಿಗಳ ದುರವಸ್ಥೆ:—ಗಿರಣಿಗಳಲ್ಲಿ ತಯ್ಯಾರಾಗುವ ವಸ್ತ್ರಕ್ಕೆ ಗಿರಾಕಿಯಿಲ್ಲದೆಯೂ ಮತ್ತು ಕ್ರಯವು [illegible]ಯೂ ಸಹ ಗಿರಣಿಗಳ ಸ್ಥಿತಿಯು ಬಹಳ ಕಠಿಣವಾಗಿ ಬಂದಿರುವುದು. ಮಿಲ್ ಎಸೋಸಿಯೇಶನಿನವರು ಮಿಲ್ಲುಗಳಲ್ಲಿ ಕೆಲಸಮಾಡುತ್ತಿರುವ ಕೆಲಸಗಾರರ ಸಂಬಳಗಳ ದರಗಳನ್ನು ತಗ್ಗಿಸಲು ನಿರ್ಣಯಿಸಿರುವರು. ಮಿಲ್ಲುಗಳಲ್ಲಿ ಕೆಲಸಮಾಡುತ್ತಿರುವ ಕೆಲಸಗಾರರ ಜೀವನದ ಖರ್ಚಿಗೆ ಮೊದಲಿನಷ್ಟು ಈಗ ಬೇಕಾಗಿಲ್ಲ. ಲೇಬರ್ ಯೂನಿಯನ್ನಿನ ಕಾರ್ಯನಿರ್ವಾಹಕರ ಮೆಂಬರರೊಡನೆ ಆಲೋಚಿಸಿಕೊಂಡು ಕೂಲಿ ದರಗಳು ಕಡಿಮೆಮಾಡೋಣಾಗುವವು. ಮಿಲ್ಲುಗಳಲ್ಲಿ ದಾಸ್ತಾನು ಬಿದ್ದ ವಸ್ತ್ರಗಳ ಮೂಟೆಗಳು ಬಹಳವಿರುವುದರಿಂದ ಕಾರ್ಖಾನೆ ಮಾಲಿಕರಿಗೆ ಈ ವಿಷಯ ಕುಂಬಾ ಯೋಚನೆಯು ಪ್ರಾಪ್ತವಾಗಿರುವುದು. ಕೆಲವು ಕಾರ್ಖಾನೆಗಳಲ್ಲಿ ಒಂದು ವಾರದಲ್ಲಿ ಮೂರು ದಿವಸಗಳು ಮಾತ್ರ ಕೆಲಸದೊರಕುವುದು.

ಮುಂಬಯಿಯ 'ಕ್ರೋನಿಕಲ್' ಪತ್ರ:—ಈ ಪತ್ರದ ಮೇಲಿನ ಕೋರ್ಟ ತುಚ್ಛೀಕಾರದ ಮೊಕದ್ದಮೆಯಲ್ಲಿ ಪತ್ರ ಸಂಪಾದಕರಿಗೆ ರೂ. ೫೦೦೦ದ ದಂಡವು ಮತ್ತು ಮೊಕದ್ದಮೆಯ ಖರ್ಚು ಸಹ ತೆರಬೇಕೆಂತ ವಿಧಿಸೋಣಾಗಿರುವುದು.

ಶ್ರೀ ಶಂಕರಾಚಾರ್ಯರನ್ನು ಕೈದು ಮಾಡಿರುವರು:—ಇದೇ ತಿಂಗಳ ತಾ. ೭ರಲ್ಲು ಶಾರದಾಪೀಠದ ಶಂಕರಾಚಾರ್ಯರವರನ್ನು ಕೈದು ಮಾಡಿರುವರೆಂತ ಕಲ್ಕತ್ತೆಯ ಮುಸ್ಲಿಮ್ ವಾರ್ತಾಪತ್ರಕರೊಬ್ಬರು ತಿಳಿಸಿರುವರು.

ದಕ್ಷಿಣ ಕನ್ನಡ

ಉಡುಪಿ:—ಇಲ್ಲಿಯ ಕೇರುಬೀದಿಗಳಲ್ಲಿ ಯಾವಾಗಲು ಸ್ವಚ್ಛವಾಗಿರಬೇಕೆಂಬ ಉದ್ದೇಶದಿಂದ ಬೀದಿಗಳ ಸುತ್ತಲೂ ತಕ್ಕಷ್ಟು ಆಳವಾದ ಚರಂಡಿಗಳನ್ನು ತೆಗಿಸಿದುದಾಯಿತು. ಅಲ್ಲದೆ ತಾಲೂಕು ಬೋರ್ಡಿನವರು ಪಟ್ಟಣದ ಆರೋಗ್ಯ ಸ್ಥಾಪನೆಗೆ 'ಹೆಲ್ತ್ ಆಫೀಸರ್'ರೊಬ್ಬರನ್ನು ನೇಮಿಸಿರುತ್ತಾರೆ. ಆದರೂ ಈ ಚರಂಡಿಗಳಲ್ಲಿ ಯಾವಾಗಲೂ ಕೊಳೆತ ಪದಾರ್ಥಗಳೂ ನೀರೂ ನಿಂತುಕೊಂಡಿರುವುದಲ್ಲದೆ ಅನೇಕರು ಮಲಮೂತ್ರ ವಿಸರ್ಜನೆಯನ್ನು ಅಲ್ಲಿಯೇ ಮಾಡುತ್ತಿರುವುದರಿಂದ ಉಂಟಾದ ದುರ್ವಾಸನೆಯಿಂದಲೂ ಮಲೇರಿಯಾ ಮುಂತಾದ ಸಾಂಕ್ರಾಮಿಕ ರೋಗಗಳನ್ನು ಹೆಚ್ಚಿಸಲು ಉದಾರ ಏಜಂಟರುಗಳಾದ ಸೊಳ್ಳೆಗಳ ಕಾಟದಿಂದ [illegible]ನಲ್ಲಿ ವಾಸಿಸುವುದೇ ಬಹಳ ಅಸಾಧ್ಯವಾಗುತ್ತ ಬರುತ್ತಿದೆ. ತಾಲೂಕು ಬೋರ್ಡಿನವರಾಗಲೀ ಟೌನಿನ ಆರೋಗ್ಯರಕ್ಷಣೆಗಾಗಿ ನೇಮಿಸಲ್ಪಟ್ಟವರಾಗಲೀ ಬೇಗನೆ ಈ ಚರಂಡಿಗಳ ಕಡೆಗೆ ಇನ್ನಾದರೂ ಗಮನಕೊಡದಿದ್ದರೆ ಇದನ್ನು ಸ್ವಚ್ಛವಾಗಿಡಬೇಕಾದರೆ ಅನ್ಯಾವ ಉಪಾಯವೂ ತೋರುವುದಿಲ್ಲ. ಚರಂಡಿಯ [illegible] ಬದಿಗಳಲ್ಲಿನ ಮನೆಗಳನ್ನು ಮುಚ್ಚಿ [illegible] ಇದರಲ್ಲಿ [illegible] ರೋಗಗಳ [illegible] ಗಳ ಪ್ರಾಬಲ್ಯವಾಯಿತಲ್ಲದೆ. ಟೌನಿನ ಆರೋಗ್ಯರಕ್ಷಣೆಗಾಗಿ ಸಾವಿರಾರು ಖರ್ಚುಮಾಡಿ ಕಟ್ಟಿಸಿದ ಚರಂಡಿಯು ಅನಾರೋಗ್ಯಕ್ಕೆ ಮತ್ತು [illegible]

ಅನುಕ್ರಮಣಿಕೆ

ಅಗ್ರಲೇಖ—

ಹಿಂದೀ ಸ್ವರಾಜ್ಯವೂ ಪರದೇಶದ ಚಳವಳವೂ . . . ೬
ಸ್ಫುಟವಿಚಾರಗಳು—
೧. ಪಾರ್ಲಿಮೆಂಟಿನ ಹಿಂದುಸ್ಥಾನವು . . . ೬
೨. ಸಂಸ್ಥಾನಿಕರ ಸಂರಕ್ಷಣೆ ಬಗ್ಗೆ ಏರ್ಪಡಿಸಿದ ಪ್ರೆಸ್ ಎಕ್ಟು . . . ೭
೩. ಹಿಂದುಸ್ಥಾನದ ಭವಿಷ್ಯತ್ತು . . . „
೪. ಮತಭೇದಗಳು . . . „
೫. ಸುಳ್ಳು ಸಾಕ್ಷಿಯನ್ನು ಹೇಳಿದ ಸರಕಾರಿ ನೌಕರರು . . . „
೬. ಇಂಚ್‌ಕೇಪ್ ಕಮಿಟಿ . . . „
ಮಂಗಳೂರು— . . . [illegible]
ವರ್ತಮಾನ ಸಂಗ್ರಹಗಳು:—
ವಿದೇಶೀ ವರ್ತಮಾನ, ಸ್ವದೇಶೀ ವರ್ತಮಾನ . . . ೮
ದಕ್ಷಿಣ ಕನ್ನಡ—ಉಡುಪಿ, ಮುಲ್ಕಿ, ಪಾಣೆಮಂಗಳೂರು, ಬಂಟ್ವಾಳ, ಮಂಜೇಶ್ವರ, ಹೊಸದುರ್ಗ
ಶ್ರೀ ವೆಂಕಟರಮಣ ದೇವಸ್ಥಾನ, ಮುಲ್ಕಿ
ಕಾಶೀ ವಿಶ್ವವಿದ್ಯಾಲಯ
ದ್ರಾವಿಡ ಬ್ರಾಹ್ಮಣರ ಪರಿಷತ್ತು
ಮಂಗಳೂರು ತಾಲೂಕು ಬೋರ್ಡಿನ ನೌಕರರ ಗೋಳಾಟ
ಮಥುರೆಯಲ್ಲಿ ಶಂಕರಾಚಾರ್ಯರ ಭಾಷಣ

ಸ್ವದೇಶಾಭಿಮಾನಿ

ಶಕ ೧೮೪೪ನೆ ಮಾರ್ಗಶಿರ ಬ೫ ಯು ಶುಕ್ರವಾರ

ಹಿಂದೀ ಸ್ವರಾಜ್ಯವೂ ಪರದೇಶದ ಚಳವಳವೂ.

ಈಗಿನ ಕಾಲವು ವಿಚಾರದ್ದಲ್ಲ, ಮೀಮಾಂಸೆಯದಲ್ಲ, ಆಲೋಚನೆಯದಲ್ಲ, ಕೂಡಲೆ ಕೆಲಸಮಾಡಲು ಪ್ರವೃತ್ತರಾಗುವದೆ ಈಗಿನ ಸಮಯದ ಮುಖ್ಯ ಲಕ್ಷಣವು. ಅದು ಹೇಗೆ, ಇದು ಹೇಗೆ ಎಂದು ಆಲೋಚಿಸುತ್ತ ಕುಳಿತರೆ ಅಥವಾ ಎರಡು ಮೂರ್ನಾಲ್ಕು ಬಗೆಯ ಕಾರ್ಯಕ್ರಮಗಳಲ್ಲಿ ಸರಸವಾದದ್ದು ಯಾವದು, ನೀರಸವಾದದ್ದು ಯಾವದು ಎಂದು ತರ್ಕವಿತರ್ಕಗಳನ್ನು ಮಾಡತೊಡಗಿದರೆ ಅದರಲ್ಲಿ ಸಮಯವು ಖರ್ಚಾಗಿ ಹೋಗುವದು. ಕೂಟಪ್ರಶ್ನೆಯನ್ನು ಬಿಡಿಸುವದರಲ್ಲಿ ಬುದ್ಧಿವಂತಿಕೆ ಬೇಕೆಂಬುದು ಹೌದಾದರೂ ಅಥವಾ ನೂರಾರು ಸುತ್ತುಗಳನ್ನು ಹಾಕಿ ತಯಾರಿಸಿದ ಬಟ್ಟೆಯ ಚೆಂಡಿನ ಆಕಾರದ ಗಂಟನ್ನು ಬಿಚ್ಚಿ ತೋರಿಸುವದರಲ್ಲಿ ಕೌಶಲ್ಯವು ಆವಶ್ಯಕವೆಂಬುದು ನಿಜವಾದರೂ, ಈ ಕೌಶಲ್ಯವು ಅಥವಾ ಆ ಬುದ್ಧಿವಂತಿಕೆಯು ಇವೆ ಮನುಷ್ಯನ ಪರಮಾರ್ಥವಲ್ಲ. ಅಲ್ಲದೆ, ಇವುಗಳ ಸರಿಯಾದ ಉತ್ತರವನ್ನು ಕಂಡುಹಿಡಿಯುವದರಲ್ಲೆ ಎಲ್ಲ ಸಮಯವು ಮತ್ತು ಸಾಮರ್ಥ್ಯವು ಖರ್ಚಾಗಿ ಹೋಗುತ್ತದೆ. ಆ ಮಾರ್ಗದಿಂದ ಫಲವೇನೂ ಇಲ್ಲ. ಅದ್ದರಿಂದ ಕೂಡಲೆ ಕರ್ತವ್ಯವನ್ನೆ ಪ್ರಾರಂಭಿಸುವದು ವಿಹಿತವಾಗಿದೆ. ಈ ತರದ ಅನೇಕ ಆಲೋಚನೆಗಳನ್ನು ಮುಂದಿಟ್ಟು, ಜನಾಂಗದ ಮುಂದಿರುವ ಈಗಿನ ಕರ್ತವ್ಯವನ್ನೆ ಯಾವ ಬದಲಾವಣೆಯೂ ಇಲ್ಲದೆ ಮುಂದರಿಸಬೇಕೆಂದು ಹೇಳಲಾಗುತ್ತದೆ. ಈ ರೀತಿಯಿಂದ ಉಪದೇಶಿಸುವವರು ನಿಜವಾಗಿ ಅವರ ಕರ್ತವ್ಯಪರತೆಯ ಬಗ್ಗೆ ಅಭಿನಂದನೀಯರಾಗಿದ್ದಾರೆಂಬುದಕ್ಕೆ ಅಡ್ಡಿ ಇಲ್ಲ. ಅವರ ಈ ತತ್ಪರತೆಯ ಉಪದೇಶದಿಂದ ಅವರು ಸ್ವರಾಜ್ಯ ಸಂಪಾದನದಲ್ಲಿ ಅತ್ಯಂತ ಉತ್ಸುಕರಾಗಿದ್ದಾರೆಂದು ಸ್ಪಷ್ಟವಾಗುತ್ತದೆ. ಮತ್ತು ಆ ಬಗ್ಗೆ ಅವರ ಕೌತುಕವನ್ನು ಮಾಡಿದಷ್ಟು ಕಡಿಮೆಯೆ ಸರಿ.

ಆದರೆ ವಿಚಾರ, ಮೀಮಾಂಸೆ, ಆಲೋಚನೆ, ತರ್ಕವಿತರ್ಕ ಮುಂತಾದ್ದರಲ್ಲೆ ಸಮಯವನ್ನು ದುರುಪಯೋಗಿಸುವದು, ಅಶ್ರೇಯಸ್ಕರವೆಂಬುದನ್ನು ನಾವು ಸಹ ಒಪ್ಪುವೆವು. ಪರಂತು ಸಾಧ್ಯಾಸಾಧ್ಯತೆ, ಹಿತಾಹಿತ, ಇತ್ಯಾದಿ ವಿಷಯಗಳನ್ನು ವಿಮರ್ಶಿಸದೆನೆ ಒಂದು ಕಾರ್ಯದಲ್ಲಿ ಇಳಿಯುವದು ಕೇವಲ ಅಪ್ರಶಸ್ತವಾದ ಸಂಗತಿಯು. ಯಾವದು ಶೀಘ್ರ ಕಾರ್ಯಕಾರಿಯು ಮತ್ತು ಯಾವದು ವಿಲಂಬದಿಂದ ಸಾಧ್ಯವಾಗತಕ್ಕದ್ದು ಮತ್ತು ಯಾವದು ವ್ಯವಹಾರ್ಯವು, ಯಾವದು ಅವ್ಯವಹಾರ್ಯವು ಈ ಸಂಗತಿಗಳನ್ನು ಸಹ ಶಾಂತಮನಸ್ಸಿನಿಂದ ಆಲೋಚಿಸಬೇಕಾಗುತ್ತದೆ. ಈ ರೀತಿಯಿಂದ ಆಲೋಚಿಸಿ ಮಾಡಿದ ಕಾರ್ಯವು "ಸುವಿಚಾರ್ಯ ಯತ್ ಕೃತಂ ಸುದೀರ್ಘಕಾಲೇಽಪಿ ನಯಾತಿ ವಿಕ್ರಿಯಾಂ" ಎಂದು ರಾಜನೀತಿಯಲ್ಲಿ ಹೇಳಿರುವಂತೆ ಯಶಸ್ವಿಯಾಗುತ್ತದೆ. ಅದ್ದರಿಂದ ಕೊಂಗ್ರೆಸ್ಸಿನ ಕಾರ್ಯಕಾರಿ ಮಂಡಲವು ಕೊಂಗ್ರೆಸ್ಸಿನ ಕಾರ್ಯಕ್ರಮದ ಪರಿಶೋಧನೆಗೆಂದು ಮಾಡಲು ಕಮಿಟಿಯನ್ನು ನೇಮಿಸಿತ್ತು. ಆ ಕಮಿಟಿಯು ಈಗಿರುವ ಕ್ರಮಗಳಲ್ಲಿಯ ದೋಷಗಳನ್ನು ತೋರಿಸಿ ಮುಂದಿನ ಚಳವಳದ ರಥವನ್ನು ಯಾವ ದಾರಿಯಿಂದ ಮತ್ತು ಯಾವ ಸಾಧನಗಳಿಂದ ಕೊಂಡುಹೋಗಬೇಕೆಂಬುದನ್ನು ತನ್ನ ರಿಪೋರ್ಟಿನಲ್ಲಿ ತೋರಿಸಿದೆ. ಈ ಮೇರೆಗೆ ತೋರಿಸಿದ ಸಾಧನಗಳಲ್ಲಿ ಹಿಂದಿಸ್ವರಾಜ್ಯವನ್ನು ಕುರಿತು ಅನ್ಯ ದೇಶಗಳಲ್ಲಿಯ ಚಳವಳವು ಒಂದಾಗಿದೆ. ಹಿಂದಿ ಸ್ವರಾಜ್ಯಕ್ಕೂ ಮತ್ತು ಇಂಗ್ಲೆಂಡ, ಅಮೇರಿಕಾ ಮುಂತಾದ ದೇಶಗಳಲ್ಲಿ ನಡಿಸತಕ್ಕ ಹಿಂದಿಗಳ ಚಳವಳಕ್ಕೂ ಎಷ್ಟು ನಿಕಟಸಂಬಂಧವಿದೆ ಎಂಬುದನ್ನು ಈ ಹೊತ್ತು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸೋಣ.

ಅಸಹಕಾರವು ಉತ್ತಮವಾದ ಸಾಧನವೆಂಬುದಕ್ಕೆ ಸಂದೇಹವಿಲ್ಲ. ಆದರೆ ಈ ಅಸಹಕಾರದ ಜನ್ಮವು ಯಾವ ತತ್ವಗಳ ಮೇಲಿಂದುಂಟಾಗಿದೆಯೊ ಅವು ಮಾತ್ರ ಕ್ಷಣಿಕವಾದವುಗಳು. ಬೇರೆ ಮಾತಿನಿಂದ ಹೇಳುವುದಾದರೆ, ಯಾವ ಕಾರಣಗಳು ಅಸಹಕಾರವನ್ನು ಪ್ರಸವಿಸಿದವೊ ಅವು ತಾತ್ಕಾಲಿಕವಾದವುಗಳು. ಹಾಗು ಯಾವ ಮಾತುಗಳು ಮುಂದಕ್ಕೆ ಬಂದು ಈ ಹೊಸ ತತ್ವದ ಪ್ರಸಾರಣೆಯುಂಟಾಗಿದೆಯೊ ಆ ಮಾತುಗಳು ಸಹ ಸ್ಥಾಯಿಗಳಲ್ಲ ಎಂದರೆ ವಿಚಾರಭೂಮಿಯಲ್ಲಿ ಕೊನೆತನಕ ನಿಲ್ಲುವವುಗಳಲ್ಲ. ಮನುಷ್ಯನಿಗೆ ಸಿಟ್ಟುಬರುತ್ತದೆ. ಆದರೆ ಅದು ಸರ್ವದಾ ನಿಲ್ಲುವುದಿಲ್ಲ. ಅದು ಕ್ಷಣಿಕವಾದ್ದು. ಮನುಷ್ಯನಿಗೆ ವ್ಯಸನವುಂಟಾಗುತ್ತದೆ. ಅದು ಕೂಡ ಸರ್ವದಾ ನಿಲ್ಲುವುದಿಲ್ಲ. ಕ್ಷಣ ಭಂಗುರವಾಗಿದೆ. ವಿಕಾರಗಳು ಕ್ಷುಬ್ಧವಾದಾಗ ಒಂದು ಕಾರ್ಯವು ಉಂಟಾದಂತೆ ತೋರುತ್ತದೆ. ಪರಂತು, ಸೋಡಾ ಓಟರಿನ ಗಾಸ್ಸು ಹೇಗೆ ಕ್ಷಣೈಕಜೀವಿಯೊ ಹಾಗೆಯೆ ಮನೋವಿಕಾರಗಳ ಆಯುಷ್ಯವು ಕೂಡ ಅಲ್ಪವಾಗಿರುವುದು. ಇಂಥ ಸಂದರ್ಭದಲ್ಲಿ ವಿಚಾರವೆ ಬೇಕಾಗಿರುವುದು. "ಸರಕಾರದ ಕೌನ್ಸಿಲುಗಳು ಪಾಪಮಯ, ಸರಕಾರಿ ಶಾಲೆಗಳು ಪಾಪಮಯ, ಸರಕಾರದ ಕೋರ್ಟುಗಳು ಪಾಪಮಯ" ಈ ಎಲ್ಲ ಸಂಗತಿಗಳು ರೂಪಾಯಿಗೆ ೧೬ ಆಣೆ ನಿಜವಾದವುಗಳು. ಈ ವಿಧಾನಗಳಲ್ಲಿ ಯಾವ ತಪ್ಪೂ ಇಲ್ಲ. ಪರಂತು ಹರಿದಾಸನು ನಿರೂಪಣದಲ್ಲಿ "ನರತನುವು ನಶ್ವರವಾದ್ದು." ಎಂದು ಅತಿಸತ್ಯವಾದ ಸಂಗತಿಯನ್ನು ಪ್ರತಿಪಾದಿಸುತ್ತಾನೆ. ಅದನ್ನು ಕೇಳುವ ಶ್ರೋತೃಸಮಾಜವು ವಿಷಯವೈರಾಗ್ಯದಿಂದ ತುಂಬಿಹೋಗುತ್ತದೆ; ಪ್ರಪಂಚದ ಮೇಲೆ, ದೇಹದ ಮೇಲೆ ತುಚ್ಛತಾ ಬುದ್ಧಿಯನ್ನು ಧರಿಸುತ್ತದೆ. ಆದರೆ ಹರಿಕಥಾಮಂದಿರವನ್ನು ಬಿಟ್ಟು ಹೊರಗೆ ಬಂದ ಬಳಿಕ ಅದೆ ಜನಸಮಾಜವು ಪೂರ್ವವತ್ ಸ್ವವ್ಯಾಪಾರದಲ್ಲಿ ಮಗ್ನವಾಗುತ್ತದೆ. ನಿರೂಪಣದಿಂದ ಉಂಟಾದ ವಿಕಾರವು ಕ್ಷಣಜೀವಿಯಾದ್ದು. ಅನಂತರ ಅದು ನಿಲ್ಲುವದಿಲ್ಲ. ಹಾಗೆಯೆ ಅಸಹಕಾರವನ್ನು ಬೋಧಿಸಲು ಪ್ರವೃತ್ತವಾದ ಪಾಪಮಯತೆಯ ಯುಕ್ತಿಗಳೆಲ್ಲವು ಕೆಲಕಾಲ ಉತ್ತಮ ಕೆಲಸವನ್ನು ಮಾಡಿದವು. ಪುನಃ ಅವು ವಿಲೀನವಾದವು. ಆಗ ಹೊಸ ಕಾರ್ಯಕ್ರಮವು ಬೇಕಾಗಿರುವುದು. ಸ್ವರಾಜ್ಯದ ಚಳವಳವು ಹಲವು ಬಗೆಯ ಕಾರ್ಯಕ್ರಮವನ್ನು ಅಪೇಕ್ಷಿಸುತ್ತದೆ. ಒಂದು ಫಲ ರಹಿತವಾದರೆ ಇನ್ನೊಂದನ್ನು ತಯಾರಿಸಬೇಕು. ಆ ಬಗ್ಗೆ ಆಗ್ರಹವನ್ನು ಇಟ್ಟುಕೊಳ್ಳ ಕೂಡದು. ಮರವು ತನ್ನ ಅಭಿವೃದ್ಧಿಗೆ ಮಳೆ, ಚಳಿ, ಬಿಸಿಲು ಇವುಗಳಲ್ಲಿ ಒಂದನ್ನೆ ಅಪೇಕ್ಷಿಸದೆ ಹೇಗೆ ಎಲ್ಲವನ್ನೂ ಅಪೇಕ್ಷಿಸುವದೊ ಹಾಗೆಯೆ ಹಿಂದಿ ಸ್ವರಾಜ್ಯವು ಎಲ್ಲ ತರದ ಕಾರ್ಯ ಕ್ರಮಗಳನ್ನು ಅಪೇಕ್ಷಿಸುತ್ತದೆ. ಮತ್ತು ಈ ಕಾರಣದಿಂದಲೆ ಸಿ. ಡಿ. ಕಮಿಟಿಯವರು ಸ್ವದೇಶದೊಳಗಿನ ಚಳವಳದಂತೆ ದೇಶಾಂತರಗಳಲ್ಲಿಯ ಚಳವಳವನ್ನು ಸಹ ಉಪದೇಶಿಸಿದ್ದಾರೆ. ಅದರ ಕಡೆಗೆ ದುರ್ಲಕ್ಷ್ಯವನ್ನು ಮಾಡಕೂಡದು. ದೇಶಾಂತರಗಳಲ್ಲಿಯ ಚಳವಳವು ಅತ್ಯಂತ ಮಹತ್ವದ್ದು. ಆ ಬಗ್ಗೆ ಮುಂದಿನ ಉಪಪಾದನವು ಬೋಧಕವಾಗಬಹುದು.

ಹಿಂದಿ ಸ್ವರಾಜ್ಯದ ಚಳವಳವು ಹಿಂದಿ ದೇಶದಲ್ಲಿ ಮಾತ್ರ ನಡೆದರೆ ಸಾಲದು, ಇಂಗ್ಲೆಂಡ, ಅಮೇರಿಕಾ ಮುಂತಾದ ಇತರ ದೇಶಗಳಲ್ಲೂ ನಡೆಯಬೇಕು. ಇಂಗ್ಲೆಂಡಿನವರು ರಾಜ್ಯಕರ್ತರಾಗಿರುವದರಿಂದ ಅಲ್ಲಿ ಸ್ವರಾಜ್ಯದ ಚಳವಳವು ಆವಶ್ಯಕವು. ಹಿಂದುಸ್ಥಾನದಿಂದ ಇಂಗ್ಲೆಂಡಿಗೆ ಹಲವು ವಿಧದಿಂದ ಸಾಹಾಯ್ಯ, ಉಪಕಾರ, ಬಲ, ಇವೆಲ್ಲ ಸಿಗುತ್ತಿರುವದರಿಂದ ಅಂಥ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವದು ಎಷ್ಟು ಆವಶ್ಯಕ, ಹಿಂದಿ ಜನರಲ್ಲಿ ಹೇಗೆ ಉಚ್ಚತಮ ಆಕಾಂಕ್ಷೆಗಳು ಮೂಡಿವೆ ಇತ್ಯಾದಿ ವಿಷಯಗಳು ವಿಲಾಯತಿಯ ಜನರಿಗೆ ತಿಳಿಯಬೇಕಾದ್ದು. ವಿಲಾಯತಿಯ ಪಾರ್ಲಿಮೆಂಟಿನ ಸಭಾಸದರು ಮತ್ತು ಮತದಾರರು ಹಿಂದುಸ್ಥಾನದ ನಿಜಸ್ಥಿತಿಯ ವಿಷಯವಾಗಿ ಕೇವಲ ಅಜ್ಞಾನದಲ್ಲಿದ್ದಾರೆ. ಬೆರಳೆಣಿಕೆಗೆ ಸಾಕಾಗುವಷ್ಟು ಸಿವಿಲಿಯನರು ಇಲ್ಲಿ ಯಾವ ಕಾರಭಾರವನ್ನು ನಡಿಸುತ್ತಿದ್ದಾರೊ ಅದರಿಂದಲೆ ಹಿಂದುಗಳು ಸಂತುಷ್ಟರಿದ್ದಾರೆ ಎಂದು ತಿಳಿಯುವವರೆ ವಿಲಾಯತಿಯಲ್ಲಿ ಬಹು ಜನರು. ಲೊರ್ಡ ಸಿಡೆನ್‌ಹೆಮ್ ಮತ್ತು ಅಂಥವರೆ ಅನೇಕ ಕೃತಜ್ಞ ಸಾಹೇಬರು "ಹಿಂದುಸ್ಥಾನವು ಸ್ವರಾಜ್ಯಕ್ಕೆ ಅರ್ಹವಲ್ಲ, ಅವರವರಲ್ಲಿ ಕಚ್ಚಾಟವಿದೆ, ಜಾತಿಭೇದ, ಧರ್ಮಭೇದ, ಮುಂತಾದ ಕಾರಣಗಳಿಂದ ಅವರಲ್ಲಿ ಐಕ್ಯವಿಲ್ಲ. ಸ್ವರಾಜ್ಯವು ಸಿಕ್ಕಿದರೆ ಕೆಲವು ವರ್ಗಗಳಿಗೆ ತೊಂದರೆಯು ಬರುವದು. ಈ ಎಲ್ಲ ಆಪತ್ತಿಗಳನ್ನು ನಿವಾರಿಸಲು ಹಿಂದುಸ್ಥಾನಕ್ಕೆ ಬ್ರಿಟಿಷರ ಸಂರಕ್ಷಣವೆ ಬೇಕು" ಎಂದಿತ್ಯಾದಿ ಚಾವಾಟಕತನದ ನುಡಿಗಳನ್ನು ಬೀರಿ, ಮೊದಲೆ ಇಲ್ಲಿಯ ವಸ್ತುಸ್ಥಿತಿಯ ಅಜ್ಞಾನದಲ್ಲಿರುವ ಇಂಗ್ಲೆಂಡಿನ ಲೋಕಮತವನ್ನು ಸಂಪೂರ್ಣ ಕೆಡಿಸಿಬಿಡುವರು. ಇಂಥವರ ಘಾತಕ ಮತ್ತು ಅಪಾಯಕರವಾದ ಪ್ರಯತ್ನಗಳಿಗೆ ಬೇಲಿ ಹಾಕಬೇಕಾದರೆ ಅಥವಾ ವ್ಯಕ್ತರೂಪದಿಂದ ಹೇಳುವದಾದರೆ ಇಂಥ ಪ್ರಯತ್ನಗಳನ್ನು ಬೇರು ಸಹಿತ ಕಿತ್ತು ತೆಗೆಯಬೇಕಿದ್ದರೆ ಇಂಗ್ಲೆಂಡಿನಲ್ಲಿ ರಾಷ್ಟ್ರೀಯ ಸಭೆಯು ಸರಿಯಾಗಿ ಸ್ವರಾಜ್ಯ ಚಳವಳವನ್ನು ನಡಿಸುವದು ಪ್ರಯೋಜನಕರವಾಗಿದೆ. ತನ್ನ ಕೈಕೆಳಗಿರುವ ದೇಶಗಳ ಸ್ವಾತಂತ್ರ್ಯ, ಸ್ವರಾಜ್ಯ, ಹಕ್ಕು ಇತ್ಯಾದಿಗಳ ಬಗ್ಗೆ ಇಂಗ್ಲೆಂಡಿಗೆ ಕುಂಭಕರ್ಣನ ಉಪಮೆಯನ್ನು ಕೊಡಬಹುದು. ನಿದ್ದೆ ಹತ್ತಿದ ಬಳಿಕ ಎಷ್ಟು ಪ್ರಯತ್ನಗಳನ್ನು ಮಾಡಿದ್ದಾಗ್ಯೂ ಕುಂಭಕರ್ಣನು ಕಣ್ಣು ಬಿಚ್ಚನು ಮತ್ತು ಏಳನು. ಹಾಗೆಯೆ ಐರ್ಲೆಂಡಿಗೆ "ಹೋಮ್‌ರೂಲನ್ನು ಕೊಡಬೇಕು" "ಇಜಿಪ್ತಿಗೆ ಸ್ವಯಂ ನಿರ್ಣಯದ ಹಕ್ಕಿರಬೇಕು" ಎಂಬಿತ್ಯಾದಿ ಹಕ್ಕು ಪ್ರಸ್ತಾಪಗಳು ಬರೋಣ, ಮತ್ತೆ ಇಂಗ್ಲೆಂಡಿಗೆ ದೊಡ್ಡ ನಿದ್ದೆಯೆ ಸರಿ. ಈ ಮಹಾನಿದ್ದೆಯಿಂದ ಅದು ಬೇಗನೆ ಕಣ್ಣು ಬಿಡುವದೆ? ಬೆಲ್ಜಿಯಮಿನ ಸ್ವಾತಂತ್ರ್ಯಕ್ಕೆ ಕುಂದು ಬರುತ್ತದಾದರೆ ಇದೆ ಇಂಗ್ಲೆಂಡು ಯುದ್ಧಕ್ಕೆ ಸೊಂಟಕಟ್ಟುವದು! ಆದರೆ ಬಡ ಹಿಂದುಸ್ಥಾನದ ಮೇಲೆ ಸ್ವರಾಜ್ಯದ ಒಂದೆಯೊಂದು ಕಿರಣವನ್ನು ಸಹ ಬೀಳಗೊಡದು. ಇಂಥ ಪರಿಸ್ಥಿತಿಯಲ್ಲಿ ವಿಲಾಯತಿಯಲ್ಲಿ ಚಳವಳವು ಬೇಡವೆ?

ಕೊನೆಗೆ ವರ್ಣಿಸಿದ ಈ ಪರಿಸ್ಥಿತಿಯು ವಿಲಾಯತಿಯ ಚಳವಳವನ್ನು ಎಷ್ಟು ಅಪೇಕ್ಷಿಸುವದೊ ಅದಕ್ಕಿಂತಲೂ ಹೆಚ್ಚು ಅಮೇರಿಕದಂಥ ಇತರ ಜನಾಂಗಗಳಲ್ಲಿಯ ಚಳವಳವನ್ನು ಅಪೇಕ್ಷಿಸುವುದು. ಇಂಗ್ಲೆಂಡವು ರಾಷ್ಟ್ರಮಂಡಲಗಳಲ್ಲಿ ತಾನು ಶ್ರೇಷ್ಠ ಪರಗತಿಯದು, ತಾನು ಮುಕುಟ ಮಣಿ ಎಂದು ತಿಳಕೊಳ್ಳುತ್ತದೆ. ಸ್ವಾತಂತ್ರ್ಯದಾನವೆ ಇಂಗ್ಲೆಂಡಿನ ದೀಕ್ಷೆ ಎಂಬೀ ಭಾವನೆಯು ಇತರ ಜನಾಂಗಗಳಲ್ಲಿ ಹುಟ್ಟುವಂತೆ ಅದು ಯತ್ನಿಸುತ್ತದೆ. ಆದರೆ ಹಿಂದೂಸ್ಥಾನಕ್ಕೆ ಅದು ಹೇಗೆ ಹೇಗೆ ಕುಣಿಸುತ್ತಿದೆ ಎಂದು ಅಮೇರಿಕಾ, ಫ್ರಾನ್ಸ್, ಜರ್ಮನಿ ಮೊದಲಾದ ರಾಷ್ಟ್ರಗಳಿಗೆ ತಿಳಿಯಹತ್ತಿದರೆ, ಇಂಗ್ಲೆಂಡಿನ ಗೌರವವು ತನ್ನಷ್ಟಕ್ಕೆನೆ ಕಡಿಮೆಯಾಗುತ್ತ ಬರುವುದು, ಮತ್ತು ಅದರ ಹಿತ್ತಾಳೆಯು ಹೊರಬೀಳುವುದು. ಲಾಲಾ ಲಜಪತರಾಯರು ಅಮೇರಿಕದಲ್ಲಿ ಹಲವು ವರ್ಷಗಳ ವರೆಗೆ ನಿಂತು, ಹಿಂದಿ ಸ್ವರಾಜ್ಯದ ಪ್ರಶ್ನೆಯನ್ನು ಅಲ್ಲಿಯವರ ಲಕ್ಷಕ್ಕೆ ಮಾತ್ರವಲ್ಲ, ಪರಿಚಯಕ್ಕೆ ಸಹ ತಂದುಕೊಟ್ಟಿದ್ದಾರೆ. ಇದೆ ರೀತಿಯಿಂದ ಬೇರೆ ಬೇರೆ ರಾಷ್ಟ್ರಗಳಿಗೆ ಹೋಗಿ ಅಲ್ಲಿ ಹಿಂದಿ ಜನರ ಅಂಬೋಣವನ್ನಿಟ್ಟು, ಅವರ ಸಹಾನುಭೂತಿಯನ್ನು ಪಡೆಯಬೇಕು. ಇದರಿಂದ ಇಲ್ಲಿಯ ಜನರು ಮಾಡುವ ಚಳವಳಕ್ಕೆ ಇಮ್ಮಡಿ ಸಾಮರ್ಥ್ಯವು ಪ್ರಾಪ್ತವಾದೀತು. ರಾಜಕೀಯ ಚಳವಳಕ್ಕಾಗಿ ಅನ್ಯ ದೇಶಗಳಿಗೆ ಹೋಗುವುದು ಎಷ್ಟು ಆವಶ್ಯಕವೊ ಅಷ್ಟೆ ಹಿಂದಿ ವ್ಯಾಪಾರಾಭಿವೃದ್ಧಿಗೋಸ್ಕರ ಹೋಗುವುದು ಅಗತ್ಯವು. ಶ್ರೀಯುತ ಕೃಷ್ಣಕಾಂತ ಮಾಲವೀಯರು ಕೆಲವು ಸಮಯದ ಹಿಂದೆ, ಓಲ್-ಇಂಡಿಯಾ ಕಮಿಟಿಯ ಎಲ್ಲ ಸಭಾಸದರ ತಿಳಿವಿನ ಬಗ್ಗೆ ಬರೆದಿರುವ ಜಾಹೀರ ಪ್ರಕಟನೆಯಲ್ಲಿ, ಬ್ರಿಟಿಷ್ ಮ್ಹಾಲುಗಳ ಮೇಲೆ ಬಹಿಷ್ಕಾರವನ್ನು ಹಾಕಿದ ಬಳಿಕ ಹಿಂದೂಸ್ಥಾನದವರು ಇತರ ದೇಶಗಳಿಂದ ಆಯಾ ಜೀನಸುಗಳನ್ನು ತರುವುದು ಹೇಗೆ ಅಗತ್ಯವೆಂಬುದನ್ನು ಬಹು ಸಮರ್ಪಕವಾಗಿ ತೋರಿಸಿರುವರು. ಸಾರಾಂಶ ಯಾವ ದೃಷ್ಟಿಯಿಂದ ನೋಡಿದರೂ ಅನ್ಯದೇಶಗಳಲ್ಲಿ ಹಿಂದೀ ರಾಜಕಾರಣದ ಪ್ರಶ್ನೆಯನ್ನು ಕೊಂಡುಹೋಗುವುದು ಅವಶ್ಯವಾದ್ದೆಂದು ಕಂಡುಬರುತ್ತದೆ. ಇಲ್ಲಿ ಮಾಡುವ ಚಳವಳಕ್ಕೆ ಸರಿಯಾದ ಬಲವು ಬರಬೇಕಾದರೆ ದೇಶಾಂತರಗಳಲ್ಲಿ ಮತ್ತು ಇಂಗ್ಲೆಂಡಿನಲ್ಲಿ ಇಲ್ಲಿಯ ಚಳವಳದ ಪ್ರತಿಬಿಂಬವು ಬೇಕು. ಐರ್ಲೆಂಡು ಇಂಗ್ಲಂಡಿನಲ್ಲಿ ಚಳವಳವನ್ನು ಇಷ್ಟು ಸಮಯ ಮಾಡಲಿಲ್ಲವೆ? ಹಿಂದೂಸ್ಥಾನಕ್ಕಾದರೂ ಏನು ಸಿಕ್ಕೀತು? ಎಂದು ಹಲವರು ವಾದಿಸಬಹುದು. ಆದರೆ ಐರ್ಲೆಂಡ ಮತ್ತು ಹಿಂದೂಸ್ಥಾನ ಇವುಗಳಿಗೆ ತುಂಬಾ ವ್ಯತ್ಯಾಸವಿದೆ. ಹಿಂದೂಸ್ಥಾನವು ಬಹು ದೂರ, ಹೆಚ್ಚು ವಿಸ್ತೃತ ಪ್ರದೇಶ ಜನಸಂಖ್ಯೆಯು ಹೆಚ್ಚು. ಇಂಥ ಪರಿಸ್ಥಿತಿಯಲ್ಲಿ ಅದರ ಆಕಾಂಕ್ಷೆಯ ಕಡೆಗೆ ಹೆಚ್ಚು ಸಮಯ ಅಲಕ್ಷ್ಯಮಾಡಲು ಇಂಗ್ಲೆಂಡಿಗೆ ಸಾಧ್ಯವಿಲ್ಲ. ಈ ಮರ್ಮವನ್ನು ತಿಳಿದು ಬರುವ ರಾಷ್ಟ್ರೀಯ ಸಭೆಯಲ್ಲಿ ಈ ಪ್ರಶ್ನೆಯ ಇತ್ಯರ್ಥವಾದೀತೆಂದು ತಿಳಿಯುತ್ತೇವೆ.

ಸ್ಫುಟವಿಚಾರಗಳು.

೧. ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಪ್ರಸ್ತಾಪಗಳು ಯಾವಾಗಲೂ ಅಪರೂಪವಾಗಿಯೆ ಬರತಕ್ಕವುಗಳು. ಪಂಜರದಲ್ಲಿರುವ ಗಿಳಿಯು ಒಬ್ಬ ದೊಡ್ಡ ಮಾಯಾವಿಯ ಮರ್ಮಸ್ಥಾನವಾಗಿತ್ತಂತೆ. ಹಾಗೆ ಹಿಂದುಸ್ಥಾನವು ಬ್ರಿಟಿಷ್ ಸಾಮ್ರಾಜ್ಯದ ಮರ್ಮಸ್ಥಾನವು. ಹೀಗಿದ್ದರೂ ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಅದರ ಹೆಚ್ಚಿನ ಪ್ರಸ್ತಾಪಗಳು ಬರುವದಿಲ್ಲ. ಆದರೂ ಲೊ. ಸಿಡೆನ್‌ಹೆಮರು ಹಿಂದುಸ್ಥಾನದ ವಿಷಯಗಳನ್ನು, ಉಪಕಾರಬುದ್ಧಿಯಿಂದ ಅಲ್ಲವಾದರೂ, ಆಗಾಗ್ಗೆ ಎತ್ತುತ್ತಿರುವರು. ಕೆಲವು ಸಮಯದ ಹಿಂದೆ ಇಲ್ಲಿಯ ಬ್ರಾಹ್ಮಣೇತರ ವರ್ಗದ ಇವರ ಪ್ರೇಮೋದಧಿಯು ಉಕ್ಕುತ್ತಿತ್ತು. ಈಗ ಅದಕ್ಕೆ ಇಳಿತ ಬಂದಿದೆ ಎಂದರ್ಥವಲ್ಲ; ಪರಂತು ಈಗ ಸಾಹೇಬ ಬಹಾದ್ದೂರರ ಚಿತ್ತವು ಇಂಡಿಯನ್ ಸಿವಿಲ್ ಸರ್ವಿಸಿನವರ ಯೋಗಕ್ಷೇಮದ ಕಡೆಗೆ ಹೆಚ್ಚಾಗಿ ಉದ್ಧವಾಗಿದೆ ಎಂದು ತೋರುತ್ತದೆ. ಇವರಿಗೆ ಲೊ. ಎಂಪ್ಟಿಲ್‌ರು ಸಹಕಾರಿಗಳು. ಇವರಿಬ್ಬರು ಕೂಡಿ ಸಿವಿಲ್ ಸರ್ವಿಸಿನ ಉದ್ಧಾರದ ಪ್ರಯತ್ನವನ್ನು ನಡಿಸಿದ್ದಾರೆ. ಹೊಸ ಸುಧಾರಣಾ ಕಾನೂನಿನಿಂದ ಸಿವಿಲಿಯನರ ವರ್ಚಸ್ಸು ಕಡಿಮೆಯಾದ ಕಾರಣ ಉತ್ತಮ ತರಗತಿಯ ಜನರು ಇದಕ್ಕೆ ಸೇರುವದಿಲ್ಲ, ರಾಜ್ಯನಿರೋಧವು ಇಂಥದ್ದೆ ಎಂದು ಪ್ರಕಟಿಸಿ ಸಿವಿಲಿಯನರಿಗೆ ಪೂರ್ವದ ಗೌರವಸ್ಥಾನವು ಸಿಗಬೇಕು ಎಂದು ಮುಂತಾದ ರೀತಿಯಿಂದ ಯೋಗ್ಯತೆಯು ಪ್ರತಿಪಾದಿಸತೊಡಗಿತ್ತು. ಲೊರ್ಡ ಪೀಲ

ಹಿಂದುಸ್ಥಾನ ಮಂತ್ರಿಗಳು, ಈ ಸಂದರ್ಭದಲ್ಲಿ ಉದ್ಧವಾದ ಒಂದು ಭಾಷಣವನ್ನು ಕೊಟ್ಟು ಹಿಂದುಸ್ಥಾನದ ರಾಜ್ಯಕಾರಭಾರದ ಧೋರಣವು ಪೂರ್ವದಲ್ಲೆ ಪ್ರಕಟವಾಗಿದೆ. ಸಿವಿಲ್ ಸರ್ವಿಸ ಮುಂತಾದ ವಿಷಯಗಳನ್ನು ನಡಿಸಲು ಸರಕಾರಕ್ಕೆ ಸ್ವಯಂ ಅಧಿಕಾರವಿರುವದರಿಂದ, ಅದಕ್ಕೋಸ್ಕರ ಜಿಡೊನೆಲ್ ಸರಕಾರ್ಯಲಯಗಳನ್ನಾಗಲಿ ಬೇರೆಯದನ್ನಾಗಲಿ ಆಶ್ರಯಿಸಬೇಕಾದ ಅಗತ್ಯವಿಲ್ಲ. ಹಿಂದುಸ್ಥಾನದ ರಾಜ್ಯಕಾರಭಾರದ ಧೋರಣದ ಬಗ್ಗೆ ಈಗ ಪ್ರಶ್ನೆಯೆ ಇಲ್ಲ. ಈ ರೀತಿಯಿಂದ ಲೊರ್ಡ ಪೀಲರು ಉತ್ತರಕೊಟ್ಟದ್ದಲ್ಲದೆ, ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿ ವಿಲಾಯತಿಯಿಂದ ಉತ್ತಮ ತರಗತಿಯ ಜನರು ಸೇರಿಸಲ್ಪಡುತಿದ್ದಾರೆಂದು ಎಂಪ್ಟಿಲ್ ದೊರೆಗಳಿಗೆ ನಿವೇದಿಸಿ, ಒಂದು ವಿಧದಿಂದ ಆಶ್ವಾಸನವನ್ನು ಕೊಟ್ಟರು. ಮತ್ತು ಲೊ. ಸಿಡೆನ್‌ಹೆಮರ ಹಿಂದೀ ರಾಜಕಾರಣಗಳನ್ನು ಅದಷ್ಟು ದೂರದಲ್ಲಿಡುವದರ ಸೂಚನೆಯನ್ನು ವಿಷಾದಪೂರ್ವಕವಾಗಿ ನಿರಾಕರಿಸಿದರು. ಪಾರ್ಲಿಮೆಂಟಿನ ಹೌಸ್ ಒಫ್ ಲೊರ್ಡ್ಸಿನಲ್ಲಿ ಈ ರೀತಿಯಿಂದ ಹಿಂದುಸ್ಥಾನದ ಸ್ವರಾಜ್ಯಕ್ಕೆ ಅಹಿತಕಾರಕವಾದ ಪ್ರಸ್ತಾಪಗಳೆ ಒಂದು ವೇಳೆ ಬರುತ್ತವಲ್ಲದೆ, ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡಬೇಕು, ಹಿಂದುಸ್ಥಾನದ ವ್ಯಾಪಾರಾಭಿವೃದ್ಧಿಯಾಗಬೇಕು, ಹಿಂದುಸ್ಥಾನದ ಆರ್ಥಿಕ ಸುಧಾರಣೆಯಾಗಬೇಕು, ಈ ತರದ ಚರ್ಚೆಗಳು ಬರುವದಿಲ್ಲ.

೨. ಪಾರ್ಲಿಮೆಂಟಿನ ಹೌಸ್ ಒಫ್ ಲೊರ್ಡ್ಸಿನಲ್ಲಿ ಇಂಥ ಪ್ರಸ್ತಾಪಗಳು ಚರ್ಚಿಸಲ್ಪಡುವಾಗ ಕೊಮನ್ಸಿನ ಸಭೆಯಲ್ಲಿ ಕರ್ನಲ್ ವೆಜ್‌ವುಡ್ ಮತ್ತು ಮಿ. ಬೊನರಲೊರವರಲ್ಲಿ "ಸಂಸ್ಥಾನಿಕರ ಸಂರಕ್ಷಣ ಬೀಲಿ"ನ ವಿಷಯವಾಗಿ ಪ್ರಶ್ನೋತ್ತರಗಳು ನಡೆದವು. ಪ್ರೆಸ್ ಎಕ್ಟು ರದ್ದುಮಾಡಿದ ಕಾರಣ ಹಿಂದಿ ಸಂಸ್ಥಾನಿಕರ ಸಂರಕ್ಷಣಕ್ಕಾಗಿ ಹಿಂದುಸ್ಥಾನ ಸರಕಾರವು ಮೇಲಿನ ಹೊಸ ಕಾನೂನನ್ನು, ಲೋಕಪ್ರತಿನಿಧಿಗಳ ಸರಿಯಾದ ಉಪರೋಧವಿರುವಾಗಲೂ, ಅದನ್ನು ಗಣ್ಯಮಾಡದೆ ವ್ಯಾಸರಾಯರ ಸರ್ಟಿಫಿಕೇಟಿನ ನಿರಂಕುಶ ಸಾಧನದಿಂದ ಹೇಗೆ ಪಾಸುಮಾಡಿತು ಎಂಬೀ ಪೂರ್ವಚರಿತ್ರೆಯನ್ನು ವಾಚಕರು ಇಷ್ಟು ಬೇಗನೆ ಮರೆತಿರಲಿಕ್ಕಿಲ್ಲ. ಅದೆ ಈ ಬೀಲು, ಪಾರ್ಲಿಮೆಂಟಿನ ಸಮ್ಮತಿಗೆ ವಿಲಾಯತಿಗೆ ಕಳುಹಿಸಲ್ಪಟ್ಟು, ಪಾರ್ಲಿಮೆಂಟಿನ ಚರ್ಚೆಗೆ ಬಂದಿದೆ. ಕರ್ನಲ್ ವೆಜ್‌ವುಡರು ಈ ಬೀಲಿನ ಸಾಧಕ ಬಾಧಕವಾದ ಅಂಗೋಪಾಂಗಗಳು ಚರ್ಚಿಸಲ್ಪಡಬೇಕೆಂದು ಸೂಚನೆ ಮಾಡಿದರು. ಮುಖ್ಯಮಂತ್ರಿಗಳಾದ ಬೊನರಲೊರು "ಇದು ಬಹಳ ಚಿಕ್ಕ ಅಧಿವೇಶನ; ಆ ಬೀಲನ್ನು ಚರ್ಚಿಸಲು ಸಾಕಷ್ಟು ಸಮಯವಿಲ್ಲ. ಬೇಗನೆ ಇದು ಕಾಯಿದೆಯ ಸ್ವರೂಪವನ್ನು ಹೊಂದಬೇಕಾದ ಕಾರಣ, ಹೆಚ್ಚು ಸಮಯವನ್ನು ವೆಚ್ಚಮಾಡುವದು ಚಂದವಲ್ಲ. ಆದರೂ ಸಭಾಸದರು, ಅಪೇಕ್ಷಿಸುವದಾದರೆ, ಇಲ್ಲಿ ಚರ್ಚೆಯಾಗುವ ವರೆಗೆ ಭಾರತಮಂತ್ರಿಗಳು ಬಾದಶಹರ ಸಮ್ಮತಿಯನ್ನು ಪಡೆಯಲಿಕ್ಕಿಲ್ಲವೆಂದು ಹೇಳಬಹುದು." ಮಿ. ಸಕಲಾತ್‌ವಾಲರು ಮುಂಬಯಿಯಿಂದ ಈ ಬಗ್ಗೆ ಜನರ ಹೇಳಿಕೆಯು ಕಳುಹಿಸಲ್ಪಟ್ಟಿದೆ. ಅದನ್ನೆಲ್ಲ ಸಮಾಲೋಚಿಸಿ ವಾದವಿವಾದವಾಗುವ ವರೆಗೆ ಅದು ಕಾನೂನು ಪುಸ್ತಕದಲ್ಲಿ ಪ್ರವಿಷ್ಟವಾಗಕೂಡದು ಎಂದು ಹೇಳಿದರು. ಬೊನರಲೊ ಸಾಹೇಬರು ಅದನ್ನು ಸಮ್ಮತಿಸಿದರು. ಸಂಸ್ಥಾನಿಕರ ಈ ಪ್ರೆಸ್ ಬೀಲಿನ ವಿಷಯದಲ್ಲಿ ಒಂದು ಮಾತನ್ನು ನೆನಪಿಗೆ ತಂದುಕೊಳ್ಳಬಹುದು. ವೈಸರಾಯರು ಅಷ್ಟು ಅವಸರಪಟ್ಟು ಸರ್ಟಿಫಿಕೇಟಿನ ಕೊನೆಯ ದಾರಿಯನ್ನು ಹಿಡಿದು ಸದರಿ ಬೀಲನ್ನು ಎಸೆಂಬ್ಲಿಯಿಂದ ಕೌನ್ಸಿಲ್ ಒಫ್ ಸ್ಟೇಟ್ಸಿಗೆ ಏನು ಕಳುಹಿಸಿಕೊಟ್ಟರೊ ಅದು ಯಾಕೆ? ಆಗ ಯಾರಿಗೆ ಅಷ್ಟು ಎಳೆದುಬರುತ್ತಿತ್ತು? ಪಾರ್ಲಿಮೆಂಟಿಗೆ ಹೋದ ಬಳಿಕ ಮೊನ್ನೆಯ ಅಧಿವೇಶನದಲ್ಲಿ ಅದು ಈಗ ನಿಂತಿರುವುದರಿಂದ ಇನ್ನೊಂದು ಅಧಿವೇಶನದ ವರೆಗೆ ಹಾಗೆ ಉಳಿದೀತೆಂಬುದು ಸ್ಪಷ್ಟವು. ಹೀಗಿರುವಲ್ಲಿ ಹಿಂದುಸ್ಥಾನ ಸರಕಾರವು ಏನೋ ಗುಪ್ತಪ್ರೇರಣೆಯಿಂದ ಮೊದಲು ಅವಸರಮಾಡಿದ್ದೆಂಬುದಕ್ಕೆ ಬೇರೆ ದಾಖಲೆಗಳು ಬೇಡವೆಂತ ತೋರುತ್ತದೆ. ಪಾರ್ಲಿಮೆಂಟಿನಲ್ಲಿ ಕಾಲಹರಣವಾಗುವದರಿಂದ ಸದರಿ ಬೀಲೆ ರದ್ದಾಯಿತೆಂದು ಮಾತ್ರ ಯಾರೂ ತಿಳಿಯುವದಿಲ್ಲ. ಆದರೆ "ಅಶುಭಸ್ಯ ಕಾಲಹರಣಂ" ಈ ದೃಷ್ಟಿಯಿಂದ ಕೆಲವು ಮಟ್ಟಿಗೆ ಸಂತೋಷ!

೩. ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಹಿಂದಿ ರಾಜಕಾರಣದ ಪ್ರಸ್ತಾಪಗಳು ಬರುವದು ಅಪರೂಪವಾದರೂ, ಹಿಂದುಸ್ಥಾನದ ಹಿತಸಂಬಂಧದಲ್ಲಿ ಅಭಿರುಚಿಯುಳ್ಳವರನೇಕರು ಪಾರ್ಲಿಮೆಂಟಿನಲ್ಲಿ ಚುನಾಯಿಸಿ ಬಂದಿರುವರೆಂದು 'ರೂಟರ್ ಏಜನ್ಸಿ'ಯು ತಿಳಿಸುತ್ತದೆ. ಹಿಂದುಸ್ಥಾನದೊಳಗಿನ ಅಸಹಕಾರ ಚಳವಳವು ಅಯಶಸ್ವಿಯಾದ ಬಗ್ಗೆ ಅಲ್ಲಿಯವರಿಗೆ ಸಮಾಧಾನವಾಗಿದೆಯಾದರೂ, ಹಿಂದುಸ್ಥಾನದೊಳಗಿನ ಕ್ಷೋಭವು ನಷ್ಟವಾಗಿಲ್ಲವೆಂಬೀ ಸಂಗತಿಯು ಅವರಿಗೆ ಗೊತ್ತಿದೆ. ಇಂಗ್ಲೆಂಡಿನಲ್ಲಿ ಕನ್ಸರವೇಟಿವ್ ಪಕ್ಷವು ಅಧಿಕಾರಾರೂಢವಾಗಿರುವದರಿಂದ ಹಿಂದುಸ್ಥಾನದೊಳಗಿನ ಸುಧಾರಣೆಗಳಿಗೆ ಬಾಧೆಯು ತಟ್ಟುವ ಸಂಭವವಿದೆ ಎಂಬೀ ತರದ ಭಯವು ಹಿಂದುಸ್ಥಾನದಲ್ಲಿ ಉಂಟಾಗಿದೆ. ಆದರೆ ಇಂಗ್ಲೆಂಡಿನಲ್ಲಿ ಈ ಮಾತು ಧಿಕ್ಕರಿಸಲ್ಪಡುತ್ತದೆ. ಇಂಥ ಅಪನಂಬಿಕೆಗೆ ಯಾವ ಆಧಾರವೂ ಇಲ್ಲ. ಸುಧಾರಣಾ ಕಾಯಿದೆಯ ಮೇರೆಗೆ ಹಿಂದಿ ಜನರಿಗೆ ತಮ್ಮ ಪ್ರಗತಿಯನ್ನು ಸಾಧಿಸಲು ಯಾವ ಯಾವ ಸಂದರ್ಭಗಳು ಬೇಕೊ ಅವುಗಳನ್ನು ಒದಗಿಸಿಕೊಡಬೇಕೆಂದು ಪಾರ್ಲಿಮೆಂಟಿನ ಲೋಕಸಭೆಯ ಅಭಿಪ್ರಾಯವಿದೆ. ಲೋಕಸಭೆಯ ಈ ಅಭಿಪ್ರಾಯವೆ ಇಂಗ್ಲೆಂಡಿನ ಅಭಿಪ್ರಾಯವೆಂದು ನಿಸ್ಸಂಶಯವಾಗಿ ಹೇಳಬಹುದು. ಎರಡೂ ಜನಾಂಗಗಳಲ್ಲಿ ಇರುವ ಪರಸ್ಪರ ಪ್ರೇಮವು ಹಿಂದುಸ್ಥಾನದ ಬಲಕ್ಕೆ ಕಾರಣವಾಗುವದೆಂಬ ಆಸೆಯು ತೋರುತ್ತಿದೆ. ಆದರೆ ಪ್ರಿನ್ಸ್ ಒಫ್ ವೇಲ್ಸರ ಆಗಮನದ ಕಾಲದಲ್ಲಿ ಕೆಲವು ಹಿಂದಿಗಳು ಹರತಾಳ ಹಾಕಿ ಯಾವ ವರ್ತನವನ್ನು ಮಾಡಿರುವರೊ ಅದರಿಂದ ರಾಜಸಿಂಹಾಸನಕ್ಕೆ ಮಾತ್ರವಲ್ಲ, ಬ್ರಿಟಿಷ್ ಜನತೆಗೂ ದೊಡ್ಡ ಅಪಮಾನವುಂಟಾಗಿದೆ ಎಂದು ಇಂಗ್ಲೆಂಡಿನೊಳಗಿನ ಯೋಗ್ಯರಾದವರು ಅಭಿಪ್ರಾಯಪಡುತ್ತಿದ್ದಾರೆ. ಅವರ ಈ ಅಭಿಪ್ರಾಯವನ್ನು ಕೆಲವರು ಹಿಂದುಸ್ಥಾನದ ಸ್ಥಿತಿಯನ್ನು ಕೆಡಿಸುವದರಲ್ಲಿ ಉಪಯೋಗಿಸಿಕೊಂಡರು. ಶಾಂತಪಕ್ಷದವರು ವಿಲಾಯತಿಯವರ ಮನಸ್ಸಿನ ಮೇಲುಂಟಾದ ಈ ದುರಭಿಪ್ರಾಯವನ್ನು ತೆಗೆದುಹಾಕಲು ಸಂದರ್ಭವನ್ನು ಸಾಧಿಸಿಯಾರೆಂದು ಹೊಸ ಪಾರ್ಲಿಮೆಂಟಿನ ಅನೇಕ ಇಂಗ್ಲಿಷ್ ಸಭಾಸದರ ಅಭಿಪ್ರಾಯವಿದೆ. ಈ ರೀತಿಯಿಂದ ಮಾಡುವದರಿಂದ ಹಿಂದುಸ್ಥಾನಕ್ಕೆ ಇಂಗ್ಲೆಂಡಿನ ಸಹಾನುಭೂತಿಯ ಲಾಭವುಂಟಾಗಿ ಆ ಮೂಲಕ ಹಿಂದುಸ್ಥಾನವು ಈಗ ಯಾವ ಮಾರ್ಗದಿಂದ ಪ್ರಯಾಣಮಾಡುತ್ತಿದೆಯೊ. ಅದನ್ನು ದಾಟುವದರಲ್ಲಿ ತುಂಬಾ ಸಹಾಯವಾದೀತೆಂಬುದಕ್ಕೆ ಅಡ್ಡಿ ಇಲ್ಲ.

೪. ರೂಟರನು ತಿಳಿಸಿದ ಸಂಗತಿಯು ಇಷ್ಟು. ಹಿಂದುಸ್ಥಾನದಲ್ಲಿ ರೂಟರನು ಇದನ್ನು ಯಾವ ಹೇತುವಿನಿಂದಲೆ ತಿಳಿಸಿದ್ದಿರಲಿ, ಪರಂತು ಇಲ್ಲಿಯ ರಾಜಕಾರಣದ ವಿಷಯವಾಗಿ ವಿಲಾಯತಿಯವರ ಮನಃಸ್ಥಿತಿಯ ಮೇಲೆ ಸರಿಯಾದ ಪ್ರಕಾಶವನ್ನು ಕೊಡದೆ ಇರಲಿಕ್ಕಿಲ್ಲವೆಂದು ಹೇಳದೆ ನಮ್ಮಿಂದಿರಲಾಗದು. ಅಸಹಕಾರದ ಪ್ರಾಂತದಲ್ಲಿ ತತ್ಕಾಲಕ್ಕೆ ಯಾವ ಕೆಲವು ಮತಭೇದಗಳು ಹುಟ್ಟಿವೆಯೊ, ಅವುಗಳನ್ನು ನೋಡಿ ಅಸಹಕಾರಿತೆಯು ಮುಮೂರ್ಷುವಾಗಹತ್ತಿದೆ ಎಂದು ಇಂಗ್ಲಿಷ ಬಂಧುಗಳು ಸಂತೋಷಪಡುತ್ತಿದ್ದಾರಾದರೆ ಅದು ನಿರರ್ಥಕವೆಂದು ಹೇಳಬೇಕಾಗುತ್ತದೆ. ಕೆಸರಿನಲ್ಲಿ ಹೂಳುವ ಗೂಟವನ್ನು ಅಲ್ಲಾಡಿಸುವದು ಹೇಗೆ ಅದನ್ನು ಇನ್ನಷ್ಟು ಗಟ್ಟಿಮಾಡುವದಕ್ಕಾಗಿಯೆ ಇರುವದೊ ಹಾಗೆಯೆ ಈ ಮತಭೇದಗಳಿಂದ ಸ್ವರಾಜ್ಯದ ಪ್ರಯತ್ನವು ಇನ್ನಷ್ಟು ಬಲವತ್ತಾದೀತೆಂದೆ ಇದಿ ಲೋಕಮತವು ತಿಳಿಯಬೇಕಾಗಿದೆ. ಇಂಗ್ಲೆಂಡಿನಲ್ಲಿ ಕನ್ಸರವೇಟಿವ್ ಪಕ್ಷದ ಪ್ರಾಬಲ್ಯದ ದೆಸೆಯಿಂದ ರೂಟರನು ಸೂಚಿಸುವಂತೆ ಕೆಲವರಲ್ಲಿ ಭಯವುಂಟಾಗಿರಬಹುದು. ಆದರೆ ಬೆಂಕಿಯಿಂದ ಚಿನ್ನಕ್ಕೆ ಪುಟವು ಹೇಗೆ ಸಿಗುವದೊ ಹಾಗೆಯೆ ಅನುದಾರಧೋರಣ, ಜಿತ್ತಾಳಿಕೆ, ದಂಡೋಪಾಯ ಮುಂತಾದ ಕಠಿನ ಕ್ರಮದಿಂದ ಜನತೆಯ ಸತ್ವವು ಇನ್ನಷ್ಟು ವಿಕಾಸಗೊಳ್ಳುವದು. ಆದ್ದರಿಂದ ಅನುದಾರ ಮುತ್ಸದ್ದಿಗಳು ಚುಕ್ಕಾಣಿಯನ್ನು ನಡಿಸಹತ್ತಿದರೆ ಏನಾದೀತೊ, ಇಂಥವರ ಕೈಯಲ್ಲಿ ರಾಜ್ಯಸೂತ್ರಗಳು ಬಂದರೆ ಆಕಾಶವೆ ಹರಿದು ಬಿದ್ದೀತೊ ಎಂದು ಯಾರೂ ಭಯಪಡಬೇಕಾದ ಅಗತ್ಯವಿಲ್ಲ. ತಥಾಪಿ "ಹಿಂದಿಗಳ ಇಂಥ ಭಯಕ್ಕೆ ಆಸ್ಪದವಿಲ್ಲ, ಸುಧಾರಣಾ ಎಕ್ಟನ್ನು ಯಶಸ್ವಿಯನ್ನಾಗಿ ಮಾಡಲು ಅವರಿಗೆ ಯಾವ ಯಾವ ಸಂದರ್ಭಗಳು ಅವಶ್ಯವೊ ಅವುಗಳನ್ನು ಒದಗಿಸಿಕೊಡಬೇಕೆಂದು ಪಾರ್ಲಿಮೆಂಟು ತಿಳಕೊಳ್ಳುತ್ತಿದೆ. ಇದು ಕೊಂಚ ಮಟ್ಟಿಗೆ ಸಮಾಧಾನದ ಮಾತು. ರೂಟರನು ತಿಳಿಸಿದ ಈ ಉದ್ದ ಬಾತಮಿಯಲ್ಲಿ ಕೆಲವು ಬೇಡದ ಸಂಗತಿಗಳೂ ಇವೆ. ಪ್ರಿನ್ಸ್ ಒಫ್ ವೇಲ್ಸರ ಆಗಮನದ ಸಮಯದಲ್ಲಿ ಹಿಂದುಸ್ಥಾನದಲ್ಲಿ ಬಿದ್ದಿರುವ ಪ್ರಚಂಡ ಹರತಾಳವು ಇಂಗ್ಲೆಂಡಿನ ಯೋಗ್ಯಜನರ ಮನಸ್ಸಿಗೆ ಇನ್ನೂ ಶಲ್ಯಪ್ರಾಯವಾಗಿದೆ ಎಂದು ರೂಟರನು ಸೂಚಿಸಿರುವನು. ಆದರೆ ಪಂಜಾಬದಲ್ಲಿಯ ಅಸುರಕೃತ್ಯ, ಖಿಲಾಫತ್ತಿನ ವಚನಭಂಗ, ಸ್ವರಾಜ್ಯದ ಅಶಕ್ಯತೆ ಇವುಗಳನ್ನು ಅಧಿಕಾರಿಗಳು ಹಿಂದುಸ್ಥಾನದ ಮೇಲೆ ಹೊರಿಸಬಹುದು. ಆ ವಿಷಯದಲ್ಲಿ ಪಾರ್ಲಿಮೆಂಟು ಕಣ್ಣೆತ್ತಿ ಕೂಡ ನೋಡದಿರಬಹುದು, ಮತ್ತು ಬಾದಶಹರು ಹಾಗು ಬಾದಶಹರ ಪುತ್ರರು, ವೇದಾಂತ ಶಾಸ್ತ್ರದೊಳಗಿನ ಕೂಟಸ್ಥ ಬ್ರಹ್ಮಚೈತನ್ಯದಂತೆ ಈ ಎಲ್ಲ ಕಾರಭಾರದಿಂದ ಅಲಿಪ್ತರೆಂಬೀ ತತ್ವಜ್ಞಾನವು ಪಸರಿಸಲ್ಪಡಬಹುದು. ಈ ಸಂಗತಿಗಳಲ್ಲೊಂದಕ್ಕೂ ದೋಷವಿಲ್ಲ. ಆದರೆ ಜನರು ನಿಮ್ಮ ಗೋಜಿಗೆ ಬಾರದೆ ಅವರಷ್ಟಕ್ಕೆ ಅವರು ದೂರ ಕುಳಿತರೆ ಅದು ಮಾತ್ರ ದೋಷಾವಹವಾಗುವದೊ? ಶಾಭಾಸ! ಈ ಶಾಸ್ತ್ರಾರ್ಥವು ಅಪೂರ್ವವೆ ಸರಿ! ಆದರೆ ಒಂದು ಕಡೆಯಲ್ಲಿ ಪ್ರೀತಿ, ಸಹಾನುಭೂತಿ, ಸಮಭಾವನೆ, ಆದರ ಮೊದಲಾದದ್ದೊಂದೂ ಇಲ್ಲದಿರುವಾಗ ಇನ್ನೊಂದು ಕಡೆ ಭಕ್ತಿ, ವಿಧೇಯತೆ ಇತ್ಯಾದಿಗಳನ್ನು ಅಪೇಕ್ಷಿಸುವದು ಅಸ್ವಾಭಾವಿಕವಲ್ಲವೆ? ಸಾರಾಂಶ ಇಂಗ್ಲೆಂಡಿನಲ್ಲಿರುವವರಾಗಲಿ, ಪಾರ್ಲಿಮೆಂಟಿನವರಾಗಲಿ ಸದ್ಭಾವನೆಗೆ ಎರಡೂ ಪಕ್ಷಗಳು ಕಾರಣವೆಂಬುದನ್ನು ಮರೆಯಕೂಡದು. ಇರಲಿ. ರೂಟರನ ಬಾತಮಿಯಲ್ಲಿ ಒಂದು ಮರ್ಮಸ್ಥಾನವಿದೆ. ಶಾಂತಪಕ್ಷದವರು ಹಿಂದಿಜನರ ಬಗ್ಗೆ ತಮಗೆ ಉಂಟಾಗಿರುವ ದುರಭಿಪ್ರಾಯವನ್ನು ತೆಗೆದುಹಾಕಬೇಕೆಂದು ಈ ಸಂದೇಶದಲ್ಲಿ ಸೂಚಿಸೋಣಾಗಿದೆ. ಶಾಂತಪಕ್ಷದವರು ಅಧಿಕಾರಿಗಳ ಅನುವರ್ತಿಗಳೆಂಬುದು ನಿಜ. ಆದರೆ ಅಧಿಕಾರಿಗಳು ಕೂಡಿದಷ್ಟು ನಿಗ್ರಹವನ್ನೆ ಮಾಡತೊಡಗಿ ಜನರನ್ನು "ಸಾಕೊ ಸಾಕು" ಎಂದು ಮಾಡಲು ಯತ್ನಿಸುತ್ತಿದ್ದರೊಳಿ, ಆಗ ಶಾಂತಪಕ್ಷದವರು ಪೂರ್ವವತ್ ಶಾಂತಿಸೂಕ್ತವನ್ನು ಹೇಳಿ ಪುನಃ ಅಧಿಕಾರಿಗಳ ಆರಾಧನೆಯನ್ನು ಮಾಡೋಣ, ಈ ಸಂಗತಿಯು ಯಾವಾಗಲೂ ಸಂಭವಿಸೀತೆಂದು ನಿರೀಕ್ಷಿಸಹತ್ತಿದರೆ, ಶಾಂತಪಕ್ಷೀಯರಿಗೆ ಅಭಿಮಾನವಿಲ್ಲ, ದೇಶವಾತ್ಸಲ್ಯವಿಲ್ಲ, ಸ್ವರಾಜ್ಯಾಪೇಕ್ಷೆ ಇಲ್ಲ. ಚುಟಕಿನಿಂದ ಅವರಿಗೆ ಬಂದಿಷ್ಟು ತಲೆಯು ಇಲ್ಲವೆಂದು ತಿಳಿಯುವಂತಾಗಿತು! ಆದರೆ ಈ ತಿಳಿವಿಗೆ ನಿಜವಾಗಿ ಅಸ್ತಿತ್ವವಿಲ್ಲವೆಂದು ಹೇಳಬೇಕಾಗುತ್ತದೆ!

೫. ಸಂಯುಕ್ತ ಪ್ರಾಂತದ ಕೌನ್ಸಿಲಿನಲ್ಲಿ ಮನೋರಂಜಕವಾದ ಪ್ರಶ್ನೋತ್ತರಗಳು ನಡೆದಿರುವವು. ಇಬ್ಬರು ಪೋಲೀಸ್ ಸಬ್ ಇನ್ಸಪೆಕ್ಟರುಗಳು ಮಿರತ್ ಜಿಲ್ಲೆಯಲ್ಲಿ ನಡೆದ ಒಂದು ಖಟ್ಲೆಯಲ್ಲಿ ಸುಳ್ಳುಸಾಕ್ಷಿಯನ್ನು ಕೊಟ್ಟಿದ್ದರು. ಇವರು ಕೊಟ್ಟಿರುವ ಸಾಕ್ಷಿಗಳು ಸುಳ್ಳೆಂಬುದು ಅದೆ ಖಟ್ಲೆಯಲ್ಲಿ ಸರಕಾರದ ದೃಷ್ಟಿಗೂ ಬಹಿರಂಗವಾಗಿದೆ. ಆದರೆ ಸದರಿ ಅಧಿಕಾರಿಗಳು ತಮ್ಮ ಪೋಲೀಸ್ ಇನ್ಸಪೆಕ್ಟರರ ಸ್ಥಾನದ ಮೇಲೆಯೆ ಇನ್ನೂ ಇದ್ದಾರೆ. ಇದನ್ನು ಕಂಡು ಅಲ್ಲಿಯ ಒಬ್ಬ ಕೌನ್ಸಿಲ್ ಸಭಾಸದರಿಗೆ ಆಶ್ಚರ್ಯವಾಯಿತು. ಅಶಿಕ್ಷಿತ ಮತ್ತು ತಿಳಿಗೇಡಿಯಾದ ಒಬ್ಬ ಮನುಷ್ಯನು ಸುಳ್ಳುಸಾಕ್ಷಿಯನ್ನು ಕೊಟ್ಟರೆ ಅವನಿಗೆ ಜುಲುಮಾನು, ಶಿಕ್ಷೆ ಇತ್ಯಾದಿ ಪಿನಲ್ ಕೋಡಿನ ಎಲ್ಲ ವೈಭವವು ಪ್ರಾಪ್ತವಾಗುತ್ತದೆ. ಆದರೆ ಈ ಸಬ್ ಇನ್ಸಪೆಕ್ಟರುಗಳು ಇದ್ದ ಕೆಲಸದಲ್ಲೆ ಇದ್ದಾರೆ ಇದೇನು ಸಂಗತಿ, ತಿಳಕೊಳ್ಳೋಣವೆಂಬ ಕುತೂಹಲದಿಂದ ಅಲ್ಲಿಯ ಒಬ್ಬ ಸಭಾಸದರು "ಮಿರತ ಜಿಲ್ಲೆಯ ಖಟ್ಲೆಯಲ್ಲಿ ಸುಳ್ಳುಸಾಕ್ಷಿಗಳನ್ನು ಕೊಟ್ಟ ಇನ್ಸಪೆಕ್ಟರುಗಳಿಗೆ ಸರಕಾರವು ಯಾವ ಶಿಕ್ಷೆಯನ್ನು ವಿಧಿಸಿದೆ ?" ಎಂದು ಪ್ರಶ್ನೆಯನ್ನು ಕೇಳಿದರು. ಈ ಪ್ರಶ್ನೆಗೆ ಸರಕಾರ ಮಂತ್ರಿಗಳು ಮುಂದಿನಂತೆ ಉತ್ತರವನ್ನು ಕೊಟ್ಟಿರುವರು. "ಇಬ್ಬರು ಸಬ್ ಇನ್ಸಪೆಕ್ಟರುಗಳಿಗೆ ಬೇರೆ ಕಡೆಯಲ್ಲಿ ವರ್ಗಾಯಿಸಲ್ಪಟ್ಟಿದ್ದಾರೆ; ಒಬ್ಬನು ಬಹಳ ಚಿಕ್ಕ ಸ್ಟೇಶನಿಗೆ ಕಳುಹಿಸಲ್ಪಟ್ಟಿದ್ದಾನೆ; ಇನ್ನೊಬ್ಬನು ಎರಡನೆ ಒಫೀಸರನಾಗಿ ಮಾಡಲ್ಪಟ್ಟಿದ್ದಾನೆ. (ಆದರೂ) ಇಬ್ಬರೂ ಇನ್ನೂ ಸಬ್ ಇನ್ಸಪೆಕ್ಟರುಗಳಾಗಿಯೆ ಇದ್ದಾರೆ. ಇವರಲ್ಲಿ ಸೀನಿಯರನಿಗೆ ಫಸ್ಟಕ್ಲಾಸಿನ ಸಂದರ್ಭವನ್ನು ಹಾಗು ಇನ್ಸಪೆಕ್ಟರನ ಹಕ್ಕನ್ನು ತೆಗೆಯೋಣಾಗಿದೆ. ಅಂದಿನಿಂದ ಅವನು ದಕಾಯತುಗಳ ಶೋಧನದ ಕೆಲಸವನ್ನು ಚಲೊ ರೀತಿಯಿಂದ ಮಾಡುತ್ತಿದ್ದಾನೆ. ಜೂನಿಯರನಿಗೆ ಇನ್ನು ಮುಂದಿನ ಬಡತಿಯು ತೆಗೆದು ಹಾಕಲ್ಪಟ್ಟಿದೆ." ಮಂತ್ರಿಗಳ ಈ ಉತ್ತರವನ್ನು ನೋಡಿ, ಅಧಿಕಾರಿಗಳಲ್ಲಿ ಈಗ ಪಕ್ಷಪಾತವು ಹೇಗೆ ಪ್ರಬಲಗೊಂಡಿದೆ ಎಂಬುದು ಸರಿಯಾಗಿ ಗೊತ್ತಾಗುವುದು. ಪಂಜಾಬದಲ್ಲಿ ನಡೆದ ಅಮಾನುಷಕೃತ್ಯಗಳ ಬಗ್ಗೆ ಆ ಕೃತ್ಯದ ಕರ್ತೃಗಳನ್ನು ಪ್ರೇರಕರನ್ನು ಮತ್ತು ಅನುಮಂತೃಗಳನ್ನು ಯಾವ ಸರಕಾರವು ಪೆನ್‌ಶನು ಕೊಡುವ ಕಣ್ಣುಕಟ್ಟಿನ ಹೊರಗೆ ಏನೂ ಮಾಡಲಿಲ್ಲವೊ ಆ ಸರಕಾರವು ಸಬ್ ಇನ್ಸಪೆಕ್ಟರುಗಳಿಗೆ ಇಂಥ ಚಿಲ್ಲರೆ ಸಂಗತಿಗಳಲ್ಲಿ ಇದಕ್ಕಿಂತ ಹೆಚ್ಚು ಏನು ಮಾಡೀತು? ಮತ್ತು ಅದು ಹಾಗೆ ಮಾಡಲು ಹೊರಟರೆ ಅದಕ್ಕೆ ಸ್ವಜನ ಪಕ್ಷಪಾತಿಯೆಂದು ಯಾರು ಹೇಳ್ಯಾರು ಅಲ್ಲವೆ ?

೬. ಹಿಂದುಸ್ಥಾನ ಸರಕಾರದ ರಾಜ್ಯಕಾರಭಾರದಲ್ಲಿ ಕಂಡಾಬಟ್ಟೆ ಬೆಳೆದಿರುವ ಖರ್ಚನ್ನು ಕಡಿಮೆ ಮಾಡುವ ಉಪಾಯಗಳನ್ನು ಕಂಡು ಹಿಡಿದು ಸೂಚಿಸಲು ಬಂದಿರುವ ಲೊ. ಇಂಚಕೇಪರು ಮೊನ್ನೆ ಕಲಕತ್ತದಲ್ಲಿ ಒಂದು ಭಾಷಣವನ್ನು ಕೊಟ್ಟರು. ಇವರ ಭಾಷಣದಲ್ಲಿ ಆಶಾವಾದಿತ್ವವು ತುಂಬಾ ಕಂಡುಬರುತ್ತದೆ. ಕಂಕುಳನ್ನೂ ಜೇಬುಗಳನ್ನೂ ಜಾಡಿಸಿ ದಿವಾಳಿ ತೆಗೆಯಲು ಹೊರಟ ಹಿಂದುಸ್ಥಾನ ಸರಕಾರಕ್ಕೆ ಭವಿಷ್ಯತ್ಕಾಲದಲ್ಲಿ ಸಾಂಪತ್ತಿಕ ಪರಿಸ್ಥಿತಿಯ ಆಶಾಕಿರಣಗಳನ್ನು ತೋರಿಸಿ ಮೇಲಕ್ಕೆ ಎತ್ತಲು ಬಂದಿರುವ ಇಂಚಕೇಪ ಸಾಹೇಬರು ದೇಶದ ಮೇಲೆ ಹೊಸ ತೆರಿಗೆಯನ್ನು [illegible] ಹೊರಿಸಲಿಕ್ಕಿಲ್ಲ, ಇದ್ದ ಖರ್ಚನ್ನೆ ಕಡಿದು ಆಯವ್ಯಯಗಳ ಬಾಯನ್ನು ಒಟ್ಟುಗೂಡಿಸಬೇಕು. ನ್ಯಾಯವಾಗಿ ಸಾಹೇಬರ ಸಂಕಲ್ಪವು ಉತ್ತಮವಾದ್ದೆಂಬುದಕ್ಕೆ ಅಡ್ಡಿ ಇಲ್ಲ. ಹಾಸಿಗೆನೋಡಿ ಕಾಲುನೀಡಬೇಕೆಂಬುದು ಹಿರಿಯರು ಹೇಳುವ ಮಾತು ಮನೆಯ ಖರ್ಚಿನಲ್ಲೆ ಎಂದಲ್ಲ, ರಾಜ್ಯಕಾರಭಾರದ ವ್ಯಯದಲ್ಲಿ ಸಹ ಸರಿಯಾಗಿ ಅನ್ವಿತವಾಗುತ್ತದೆ. ಇಲ್ಲವಾದರೆ "ಮಿಯಾ ಮೂಠಭರ, ದಾಡಿ ಹಾತಭರ" ಎಂದರೆ "ಸಾಹೇಬನು ಒಂದು ಮುಷ್ಟಿ ಉದ್ದ, ಗಡ್ಡ ಒಂದು ಮೊಳಉದ್ದ" ಎಂದು ಹೇಳಿದ ಹಾಗೆ ಸಂಪಾದನಕ್ಕಿಂತಲೂ ಖರ್ಚಿನ ರಕಮು ಬೆಳೆದು ಹೋದರೆ ಉಪಹಾಸಾಸ್ಪದ ಮಾತ್ರವಲ್ಲ, ಬಹು ದುಃಖಕರವಾದೀತು. ಇಂಚಕೇಪ ಸಾಹೇಬರು ಸರಕಾರದ ಯಾವ ಯಾವ ಖಾತೆಗಳಲ್ಲಿ ಖರ್ಚನ್ನು ಕಡಿಮೆಮಾಡಬಹುದು, ಕೌನ್ಸಿಲು ಸಭಾಸದರ ಫಸ್ಟ ಕ್ಲಾಸಿನ ಇಮ್ಮಡಿ ಬತ್ತೆಯು ಹೇಗೆ ಅಧಿಕವಾಗಿದೆ, ಇತ್ಯಾದಿ ಹಲವು ಸಂಗತಿಗಳನ್ನು ಪ್ರಸ್ತಾಪಿಸಿದರು. ಸರಕಾರದ ಖರ್ಚನ್ನು ಯಾವ ಯಾವ ವಿಧದಿಂದ ಕಡಿಮೆ ಮಾಡಬಹುದು ಎಂಬೀ ವಿಷಯದಲ್ಲಿ ಹಿಂದೊಮ್ಮೆ ವಿಸ್ತೃತವಾಗಿ ನಾವು ನಮ್ಮ ವಿಚಾರಗಳನ್ನು ಪ್ರಕಟಿಸಿರುವದರಿಂದ ಪುನಃ ಈ ಹೊತ್ತು ಪುನರುಕ್ತಿಯನ್ನು ಮಾಡುವ ಕಾರಣವಿಲ್ಲ. ಇಂಚಕೇಪ ದೊರೆಗಳು ಖರ್ಚು ಕಡಿಮೆ ಮಾಡುವ ಯಾವ ಕೆಲಸಕ್ಕೆ ಬಂದಿರುವರೊ ಮತ್ತು ಅದೆ ವಿಷಯದ ಪ್ರಯತ್ನ ಮತ್ತು ಅದೆ ವಿಷಯದ ಭಾಷಣಗಳನ್ನು ಮಾಡುವದು ಚಂದಮಾತ್ರವಲ್ಲ, ಯೋಗ್ಯವಾದ್ದು. ಆದರೆ ಅವರು ಇಲ್ಲಿಯ ರಾಜಕೀಯಪರಿಸ್ಥಿತಿಯನ್ನು ಕುರಿತು ಭಾಷಣ ಮಾಡುವದು ಅಪ್ರಾಸಂಗಿಕತೆಯನ್ನು ಅಂಗೀಕರಿಸುವದಾಗಿದೆ. ಈ ಭಾಷಣವಾದರೂ ಸರಳವಾಗಿಯೂ, ಸಮಂಜಸವಾಗಿಯೂ ಉಂಟೆ? ಅದೂ ಇಲ್ಲ, ರಾಜಕೀಯ ಚಳವಳಗಾರರ ಹೆಸರನ್ನು ಎತ್ತಿ ಎಂಗ್ಲೋ ಇಂಡಿಯನ್ನರಂತೆ ಅವರ ತಲೆಗೆ ಕಲ್ಲು ಹಾಕುವದು ಕೇವಲ ಅಪ್ರಶಸ್ತ್ಯವಾಗಿದೆ. ರುಶ್ಯದಲ್ಲಿ ರಾಜಕೀಯ ಚಳವಳವು ನಿಷ್ಫಲವಾಯಿತೆಂದು ಇಂಚಕೇಪರು ಏನು ಹೇಳುತ್ತಿದ್ದಾರೊ ಅದು ಕೇವಲ ಅಜ್ಞಾನದ ಮಾತಾಗಿದೆ. ಅಲ್ಲಿಯ ಚಳವಳ ಇಲ್ಲಿಯ ಚಳವಳ ಇವುಗಳಿಗೆ ಅಜಗಜಾಂತರವಿದೆ. ರುಶ್ಯದಲ್ಲಿಯ ಲೋಕಸತ್ತಾವಾದಕ್ಕೂ ಹಿಂದುಸ್ಥಾನದ ಸ್ವರಾಜ್ಯ ಚಳವಳಕ್ಕೂ ಸಾಮ್ಯವನ್ನು ಕಲ್ಪಿಸುವದು ಅಸಮಂಜಸವಾದ್ದು. ರುಶ್ಯದಲ್ಲಿ ಒಂದು ನಿಷ್ಫಲವಾದ್ದಾದರೆ ಜರ್ಮನಿ, ಗ್ರೀಸ ಮುಂತಾದ ಕಡೆಗಳಲ್ಲಿ ಮಾತ್ರವಲ್ಲ, ಅದೆ ರುಶ್ಯದಲ್ಲಿ ಏಕತಂತ್ರಿ ಆಳಿಕೆಯು ಕಚ್ಚಾರೆಯಾಗಲಿಕ್ಕಿಲ್ಲವೆ? ಇಂಥ ಅನೇಕ ದೃಷ್ಟಾಂತಗಳಿದ್ದಾಗ್ಯೂ, ಅವುಗಳನ್ನು ಇಂಚಕೇಪ ಸಾಹೇಬರು [illegible] ವದು ಪ್ರಶಸ್ತವಲ್ಲ. ಹಣವು ಹೇಗೆ [illegible] ಇದೆ. ಆದ್ದರಿಂದ ಖರ್ಚ ಕಡಿಮೆಮಾಡಲು ಬಂದವರು [illegible] ಕಡಿಮೆ ಮಾಡುವದೆ ಒಳ್ಳೆಯದು.

ಮಂಗಳೂರು.

ಶ್ರೀ ಕಾಶೀ ಮಠದ ಶ್ರೀ ಸುಕೃತೀಂದ್ರ ಸ್ವಾಮಿಯವರ ಮೇಲೆ ದಂಡ ಹೊಂಸಿದ ಇಲ್ಲಿಯ ಕೋರ್ಟುಗಳ ತೀರ್ಮಾನವು ಮದ್ರಾಸು ಹ್ಯಾಕೋರ್ಟಿನಲ್ಲಿ ರದ್ದಾದ ಸಮಾಚಾರವು ಶ್ರೀ ಮಠದ ಅನುಯಾಯಿಗಳವರೆಲ್ಲರಲ್ಲಿಯೂ ಅತ್ಯಾನಂದವನ್ನುಂಟುಮಾಡಿದೆ. ತಂತೀ ವಾರ್ತೆಯು ಬಂದು ತಲ್ಪಿದ ದಿನ ಸಾಯಂಕಾಲ ಇಲ್ಲಿಯ ಗೌಡಸಾರಸ್ವತರ ಶ್ರೀ ವೆಂಕಟರಮಣ ದೇವಸ್ಥಾನದಿಂದ ದೊಡ್ಡ ಉತ್ಸವವು ಹೊರಡಿತು. ಶ್ರೀ ಪಾದಂಗಳವರ ಮತ್ತು ಅವರ ಗುರುವರ್ಯರ ಚಿತ್ರಪಠಗಳನ್ನು ಪಲ್ಲಕಿಯಲ್ಲಿಟ್ಟುಕೊಂಡು ಇದರ ಹಿಂದಿನಿಂದ ದೇವರ ಪ್ರತಿಮೆಯನ್ನು ಪ್ರತ್ಯೇಕವಾಗಿ ಲಾಲಕಿಯಲ್ಲಿರಿಸಿ ಗೌಡಸಾರಸ್ವತ ಬ್ರಾಹ್ಮಣ ಸಮಾಜವು ವಾಸಿಸಿರುವ ಪ್ರಮುಖ ಬೀದಿಗಳಲ್ಲಿ ವಾದ್ಯಘೋಷಗಳಿಂದ ಉತ್ಸವದ ಮೆರವಣಿಗೆಯನ್ನು ತಕ್ಕೊಂಡು ಹೋದರು. ಶ್ರೀ ಸ್ವಾಮಿಗಳ ಹೆಸರಿನೊಡನೆ ಜಯಕಾರಗಳು ಎಲ್ಲೆಲ್ಲಿಯೂ ಮೆರವಣಿಗೆಯು ಹೋಗುತ್ತಿದ್ದಾಗೆಲ್ಲ ಕೇಳುತ್ತಿದ್ದವು. ತಮ್ಮ ಸಂತೋಷವನ್ನು ಮತ್ತು ಅಭಿಮಾನ ಸ್ಫೂರ್ತಿಯನ್ನು ಮತ್ತಷ್ಟು ಉತ್ಸಾಹದಿಂದ ವ್ಯಕ್ತಗೊಳಿಸಬೇಕೆಂದು ಇಲ್ಲಿಯ ಬಂದರದ ಸ್ವಜಾತಿಯ ಸಾಹುಕಾರರೂ ಅಂಗಡಿಗಾರರೂ ಇತರರೂ ಕೂಡಿ ಸಾಕಾದಷ್ಟು ವಂತಿಗೆಯನ್ನು ಧಾರಾಳವಾಗಿ ಕೊಡಿಸಿ ಶ್ರೀ ಮಠದಲ್ಲಿ ಸಂತರ್ಪಣೆಯು ಬಗ್ಗೆ ಬೇಕಾದ ಐವಜನ್ನು ಕಳುಹಿಸಿ ಕೊಟ್ಟ ನಂತರ ಇಲ್ಲಿಯ ದೇವಸ್ಥಾನದಲ್ಲಿ ನಿನ್ನೆ ದಿನ ಸಮಾರಾಧನೆ ರಥೋತ್ಸವಗಳನ್ನು ಮಾಡಿಸಿದರು. ಬೆಳಗ್ಗೆ ಅಭಿಷೇಕ, ಪೂಜೆ ಆರಾಧನೆ ಅನಂತರ ಸಮಾರಾಧನೆ, ರಾತ್ರಿ ರಥೋತ್ಸವ; ಊಟಕ್ಕೆ ಸುಮಾರು ೩೦೦೦ ಜನಕ್ಕಿಂತ ಹೆಚ್ಚಿನ ಸ್ತೋಮವು ಕೂಡಿತ್ತು. ನಿನ್ನೆ ಮಧ್ಯಾಹ್ನ ಇಲ್ಲಿಯ ಹಳೆ ತಾಲೂಕು ಕಚೇರಿಯಲ್ಲಿ ಭಿಕ್ಷುಕರಿಗೂ ಬಡವರಿಗೂ ಅಕ್ಕಿಯನ್ನು ಹಂಚಿದರು. ಜಾತಿಯ ಸರ್ವರೂ ಈ ಉತ್ಸವ ಸಮಾರಾಧನೆಗಳಲ್ಲಿ ಭಾಗಿಗಳಾಗುವಂತೆ ನಿನ್ನೆ ದಿನ ಗೌಡ ಸಾರಸ್ವತ ಬ್ರಾಹ್ಮಣರ ಅಂಗಡಿ ಭಂಡಸಾಲೆಗಳೆಲ್ಲವೂ ಬಾಗಿಲು ಮುಚ್ಚಿದ್ದವು. ಕ್ರೈಸ್ತ ದೇವಾಲಯಕ್ಕೂ ಮಹಮ್ಮದೀಯರ ಮಸಿದಿಗೂ ಬಡವರಿಗೆ ಕೊಡಲು ಅಕ್ಕಿಯನ್ನು ಕಳುಹಿಸಿಕೊಟ್ಟಿರುವರಾಗಿ ತಿಳಿಯುತ್ತೇವೆ.

ಶ್ರೀ ಗುರುವರ್ಯರಿಗೆ ಜಾತಿಯ ಪವಿತ್ರತೆಯನ್ನು ಕಾಪಾಡಲು ಉಂಟಾದ ಅಧಿಕಾರ ನ್ಯೂನತೆಯನ್ನು ಹೋಗಗೊಳಿಸಿದ ಹ್ಯಾಕೋರ್ಟು ತೀರ್ಮಾನದಿಂದ ಉಂಟಾದ ಆನಂದವು ಸ್ವಜಾತಿಯ ಶಾಲಾ ವಿದ್ಯಾರ್ಥಿಗಳಲ್ಲಿಯೂ ಪರಿಪೂರ್ಣವಾಗಿ ತಲೆದೋರಿತ್ತು. ವಿದ್ಯಾರ್ಥಿಗಳು ಕೆನರಾ ಹೈಸ್ಕೂಲ್ ಶಾಲೆಗೆ ೧೦ ಗಂಟೆಗೆ ಹೋದೊಡನೆಯೆ ಶಾಲಾಧಿಕಾರಿಗಳಿಂದ ರಜೆಯನ್ನು ಪಡೆದು ದೇವಸ್ಥಾನದಲ್ಲಿ ನಡಿಯುವ ಸಂಭ್ರಮಗಳಲ್ಲಿ ಭಾಗಿಗಳಾಗಲು ಬಂದಿದ್ದರು. ಇಪ್ಪತ್ತನೇ ಶತಮಾನದ ಈ ಕಾಲದಲ್ಲಿ ಗೌಡ ಸಾರಸ್ವತರು ತಮ್ಮ ಮಠದವರ ಮೇಲೆ ತೋರಿಸಿದ ಈ ಅಭಿಮಾನವು ಪ್ರಶಂಸನೀಯವಾಗಿದೆ. ಶಹಭಾಸ್ ಎಂತ ಇತರರೆಲ್ಲರೂ ತಲೆದೂಗಿ ಹೇಳುವಂತೆ ಸರ್ವ ಸಂಭ್ರಮಗಳೂ ಅತ್ಯುತ್ಕೃಷ್ಟವಾಗಿ ನಡೆದವು. ವೃದ್ಧಾಪ್ಯದ ದೆಸೆಯಿಂದ ಮನೆ ಬಿಡಲಾರದೆ ಇದ್ದಲ್ಲಿಯೇ ಇದ್ದುಕೊಂಡ ವಯೋವೃದ್ಧರು ತಮ್ಮ ತರುಣ ಪೀಳಿಗೆಯವರಲ್ಲಿ ಸ್ಫೂರ್ತಿಗೊಂಡ ಈ ಅಭಿಮಾನವನ್ನು ಕಂಡು ಅತ್ಯಾನಂದಗೊಂಡು ಹಿಂದೆ ತಮ್ಮ ಕಾಲದಲ್ಲಿ ಆಗಿಹೋದ ಇಂಥಾ ಜಾತಿ ಅಭಿಮಾನದ ಲೀಲೆಯನ್ನು ಸ್ಮರಿಸಿ ಈ ಅಭಿಮಾನವು ಬಾಳಲಿ, ಕಾರ್ಯ ರೂಪುಗೊಳ್ಳಲಿ ಜಾತಿ ಧರ್ಮಾಭಿವೃದ್ಧಿಯಲ್ಲಿ ಈ ಅಭಿಮಾನವು ಕೊನೆಗೊಂಡು ಸಾರ್ಥಕಗೊಳ್ಳಲಿ ಎಂದು ತಮ್ಮ ಮನಸ್ಸಿನಲ್ಲಿಯೇ ಕೈಮುಗಿದು ಮನೋದೇವತೆಯನ್ನು ಪ್ರಾರ್ಥಿಸಿ ಆನಂದ ಭಾಷ್ಪಗಳನ್ನು ತಮ್ಮ ಅಶ್ರುಗಳಿಂದ ಸುರಿಸಿ ಬಹಳ ಸಂತುಷ್ಟಚಿತ್ತರಾದರು.

ಇದೇ ಬರುವ ೧೯೩೪ನೇ ಜನವರಿ ೧ನೇ ತಾರೀಕಿನಿಂದ ಒಂದು ವರುಷದ ವರೆಗೆ ಮಂಗಳೂರು ಮುನ್ಸಿಪಾಲಿಟೆಯಲ್ಲಿ ಮತ್ತು ಮುನ್ಸಿಪಾಲಿಟಿಯಿಂದ ಐದು ಮೈಲುಗಳ ವಿಸ್ತೀರ್ಣಕ್ಕೆ ಇರುವ ಗ್ರಾಮಗಳಲ್ಲಿಯೂ ತೆಂಗು ತಾಳೆ ಮೊದಲಾದವುಗಳಿಗೆ ತಗಲಿರುವ ಹುಳಗಳ ರೋಗ ನಿವೃತ್ತಿಗಾಗಿ ೧೯೧೯ನೆಯ 'ಎಗ್ರಿಕಲ್ಚರಲ್ ಪೆಸ್ಟ್ ಮತ್ತು ಡಿಸೀಜಸ್ ಆಕ್ಟು' ಜ್ಯಾರಿಯಲ್ಲಿರಬೇಕೆಂತ ಮದ್ರಾಸು ಸರಕಾರದವರ ಅಪ್ಪಣೆಯಾಗಿದೆ.

ಬ್ರಹ್ಮಾವರದ ಗೌಡ ಸಾರಸ್ವತ ಬ್ರಾಹ್ಮಣರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀ ಸುಕೃತೀಂದ್ರ ಗುರುಗಳಿಗೆ ಹ್ಯಾಕೋರ್ಟಿನಲ್ಲಿ ಆದ ದಂಡ ವಿಮೋಚನೆಯ ವರ್ತಮಾನವನ್ನು ಕೇಳಿ ಆನಂದಪಟ್ಟು ಬ್ರಾಹ್ಮಣ ಸಂತರ್ಪಣೆ ಪೂಜಾ ಇತ್ಯಾದಿ ವಿನಿಯೋಗಗಳು ನಡಿಸೋಣಾದವೆಂತ ಹಂಗಾರಕಟ್ಟೆಯಿಂದ ರಾ| ಸಾಹುಕಾರ ಕೊಚ್ಚಿಕಾರ ರಾಮಚಂದ್ರ ಪೈಗಳವರು ತಿಳಿಸಿರುತ್ತಾರೆ.

ಡಿಸ್ಟ್ರಿಕ್ಟ್ ಬೋರ್ಡು ಸಭೆಯ ಅಧಿವೇಶನವು ಇದೇ ತಿಂಗಳ ತಾ. ೧೨ರಲ್ಲಿ ಕೂಡುವುದು. ಮೆಂಬರರಾದ ಮ| ರಾ| ಮುಲ್ಕಿ ರಾಮಕೃಷ್ಣ ಪೂಂಜರವರು ಕೇಳಿದ ಪ್ರಶ್ನೆಗಳಿಗೆ ಈ ಮೀಟಿಂಗಿನಲ್ಲಿ ಉತ್ತರಗಳು ಕೊಡೋಣಾಗುವವು. ಡಿಸ್ಟ್ರಿಕ್ಟ್ ಬೋರ್ಡಿನ ಮಂಗಳೂರು ಸಂಪಾಜೆ ರಸ್ತೆಯ ರಿಪೇರಿ ಬಗ್ಗೆ ರೂ. ೩,೫೫೦ ಅಂದಾಜು ಪಟ್ಟಿಗಳು ಸೆಂಕ್ಷನ್ ಬಗ್ಗೆ ಸಭೆಯ ಮುಂದೆ ಬರುವವು.

ಇಲ್ಲಿ ಬಸವನಗುಡಿ ರಸ್ತೆಯ ಸಮೀಪವಿರುವ ಒಂದು ಮನೆಯಲ್ಲಿ ಅಲ್ಲಿಯೇ ಬಿಡಾರವಿದ್ದ ಒಬ್ಬ ಸ್ತ್ರೀಯಳ ಶವವು ಬಾವಿಯಲ್ಲಿ [illegible] ವಿಷಯ ತನಿಖೆ ನಡೆಯುತ್ತಿರುವುದು.

ಇಲ್ಲಿಯ ಗವರ್ನಮೆಂಟ ಕೊಲೇಜಿನಲ್ಲಿ ನಡೆದ ಅಬ್ದುಲ್ ಕರೀಮ್ ಖಾನರ ಗಾಯನದ ಖಚೇರಿಯ ಟಿಕೇಟು ಮಾರಾಟದಿಂದ ರೂ. ೫೦೦ಕ್ಕೆ ಮಿಕ್ಕಿದ ಮೊಬಲಗು ಉತ್ಪನ್ನವಾಗಿದೆಯಾಗಿ ಕೇಳುತ್ತೇವೆ.

ಕೆಲಸದಿಂದ ನಿವೃತ್ತರಾದ ಉಪಾಧ್ಯಾಯರಿಗೆ ಬಹುಮಾನ— ಕೆನರಾ ಹೈಸ್ಕೂಲಿನ ಸ್ಥಾಪನೆಯ ಕಾಲದಿಂದ ಈ ಶಾಲೆಯಲ್ಲಿ ಸಹಾಯಕ ಉಪಾಧ್ಯಾಯರಾಗಿದ್ದು ಶಾಲಾ ಕೆಲಸಗಳನ್ನು ಅಭಿಮಾನದಿಂದಲೂ ಉತ್ಸಾಹದಿಂದಲೂ ನೋಡುತ್ತಿದ್ದ ರಾ| ಉದ್ಯಾವರ ಶ್ರೀನಿವಾಸರಾಯರು ತಮ್ಮ ವೃದ್ಧಾಪ್ಯದ ದೆಸೆಯಿಂದ ಕೆಲಸದಿಂದ ನಿವೃತ್ತರಾಗಿರುವರು. ಇವರ ಸರ್ವಿಸು ಈ ಶಾಲೆಯಲ್ಲಿ ೩೦ ವರುಷಗಳಿಗಿಂತ ಮಿಕ್ಕಿದೆ. ಶಾಲಾ ಪ್ರಾರಂಭ ಕಾಲದಲ್ಲಿ ಶಾಲೆಗೆ ಬೇಕಾದ ದ್ರವ್ಯಸಹಾಯವು ಇಲ್ಲದೆ ಅದು ಬಿಕ್ಕಟ್ಟಿನ ಸ್ಥಿತಿಯಲ್ಲಿದ್ದಾಗ ಅಲ್ಪ ಸಂಬಳದಿಂದ ಸಂತುಷ್ಟಿಗೊಂಡು ಕೆಲಸಮಾಡಿದ ಉಪಾಧ್ಯಾಯರಲ್ಲಿ ಇವರೊಬ್ಬರಾಗಿರುವರು. ಶಾಲೆಯ ಅಧ್ಯಾಪಕರ ಕೆಲಸವನ್ನು ನಿರ್ವಹಿಸಿದ್ದು ಮಾತ್ರವಲ್ಲ, ಶಾಲಾ ಕಟ್ಟಡಗಳನ್ನು ಆಗಿಂದಾಗ್ಗೆ ಕಟ್ಟಿಸುವದರಲ್ಲಿ ಇವರು ಪ್ರತಿಫಲವಿಲ್ಲದೆ ತಕ್ಕೊಂಡ ಶ್ರಮವು ಶ್ಲಾಘನೀಯವಾಗಿರುವುದು. ಇಂಥವರು ತಮ್ಮ ಕೆಲಸದಿಂದ ನಿವೃತ್ತಿ ಹೊಂದುವ ಕಾಲದಲ್ಲಿ ಶಾಲಾ ಆಡಳಿತೆಯ ಕಮ್ಮಿಟಿಯ ಮೆಂಬರರೂ ಉಪಾಧ್ಯಾಯರೂ ಇವರನ್ನು ತಕ್ಕ ರೀತಿಯಲ್ಲಿ ಸನ್ಮಾನಿಸಿದರು. ಇವರು ಅಧ್ಯಾಪಕರಾಗಿದ್ದಾಗ ಮಾಡಿದ ಉಪಕಾರ ಸ್ಮರಣೆಯನ್ನು ಮಾಡಿ ಒಂದು ಬಹುಮಾನ ಪತ್ರವೂ ಬೆಳ್ಳಿ ಪಾತ್ರದಲ್ಲಿ ಇವರಿಗೆ ಕೊಡೋಣಾಯಿತು. ಇದು ಕೊಡೋಣಾಗುವ ಸಂದರ್ಭದಲ್ಲಿ ನೆರೆದವರಿಗೆ ಫಲಹಾರ ತಾಂಬೂಲಾದಿಗಳ ಸತ್ಕಾರವಿತ್ತು.

ಕೆನರಾ ಹೈಸ್ಕೂಲಿನ ಶಾಲಾ ವಾರ್ಷಿಕ ದಿನದ ಆಚರಣೆಯು ಇದೇ ತಿಂಗಳ ತಾ. ೨೬ನೇ ಮಂಗಳವಾರಕ್ಕೆಂತ ನಿಶ್ಚಯಿಸಿಯದೆ. ಇದಕ್ಕೆ ಬೇಕಾದ ಹಣ ಸಹಾಯವನ್ನು ಶಾಲೆಯ ಹಳೆ ವಿದ್ಯಾರ್ಥಿಗಳು ಉದಾರ ಮನಸ್ಸಿನಿಂದ ಮಾಡಬೇಕೆಂತ ಶಾಲಾ ಹೆಡ್ ಮಾಸ್ತರರು ವಿನಂತಿಮಾಡಿಕೊಂಡಿರುವರು. ಶಾಲೆಯ ಎಂಡೌಮೆಂಟ್ ಫಂಡಿನ ಸಹಾಯಾರ್ಥವಾಗಿ ಈ ಸಲ "ಲಕ್ಕಿಬೇಗ್" ಏರ್ಪಡಿಸೋಣಾಗುವುದು. ಮಾಜಿ ಹೆಡ್‌ಮಾಸ್ತರ್, ಎ. ವಾಸುದೇವರಾಯರ ಹೆಸರಲ್ಲಿ ಒಂದು ವಿದ್ಯಾರ್ಥಿ ಭವನದ ಶಾಖೆಯು ಸ್ಥಾಪಿಸಲ್ಪಟ್ಟಿದೆ. ವಾಸುದೇವರಾಯರ ಮತ್ತು ಆರ್ಕಳ ಶ್ರೀನಿವಾಸರಾಯರ ಹೆಸರಲ್ಲಿ ಎರಡು ವಿದ್ಯಾರ್ಥಿ ವೇತನಗಳನ್ನು ಏರ್ಪಡಿಸಬೇಕೆಂತ ನಿರ್ಣಯಿಸೋಣಾಗಿದೆ. ಇದಕ್ಕೂ ಬೇಕಾದ ಸಹಾಯವನ್ನು ಹಳೆ ವಿದ್ಯಾರ್ಥಿಗಳು ಮಾಡಬಹುದಾಗಿ ಶಾಲಾ ಹೆಡ್ ಮಾಸ್ತರರು ವಿಜ್ಞಾಪಿಸಿಕೊಂಡಿರುತ್ತಾರೆ.

ಮುಲ್ಕಿ— ಇದೇ ತಿಂಗಳ ತಾ. ೪ರಲ್ಲಿ ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀ ನರಸಿಂಹದೇವರ ಪ್ರತಿಷ್ಠೆ ಮಹೋತ್ಸವವು ಯಥಾಪ್ರಕಾರ ಬಹಳ ಸಂಭ್ರಮದಿಂದ ನಡೆಯಿತು. ಸಾಯಂಕಾಲ ಶ್ರೀ ದೇವರಿಗೆ ಅಭಿಷೇಕವು ಮುಗಿದು ಮಹಾ ಪೂಜೆ ನಂತರ ಹೊರಗೆ ಬಂದ ದರ್ಶನದಲ್ಲಿ ಶ್ರೀ ಸ್ವಾಮಿಯವರಿಗೆ ಹ್ಯಾ ಕೋರ್ಟಿನಲ್ಲಿ ಮಾಡಿದ ಅಪೀಲಿನಲ್ಲಿ ಜಯ ಸಿಕ್ಕುವ ಸಂಭವದ ವಿಷಯ ಕಳೆದ ವರುಷ ದಯಪಾಲಿಸಿದ ವಚನಗಳನ್ನು ನಡಿಸಿಕೊಡಬೇಕಾಗಿ ಕೇಳಿಕೊಂಡರು. ಹ್ಯಾಕೋರ್ಟಿನಲ್ಲಿ ಖಂಡಿತವಾಗಿ ಶ್ರೀ ಸ್ವಾಮಿಯವರಿಗೆ ಜಯ ಪ್ರಾಪ್ತಿಯು ಆಗುತ್ತದೆಂತ ಅಭಯವಾಯಿತು. ಈ ವರುಷ ಹುಣ್ಣಿಮೆಯ ಉತ್ಸವಕ್ಕೆ ಜನಸ್ತೋಮವು ಬಹಳವಾಗಿ ಕೂಡಿತ್ತು. ಮೋಟಾರು ಬಸ್ಸುಗಳ ಚಲಾವಣೆಯು ಬಹಳವಾಗಿದ್ದುದರಿಂದ ಪರಊರುಗಳಿಂದ ಭಜಕ ವರ್ಗಕ್ಕೆ ಮುಲ್ಕಿಗೆ ಬರಲು ಬಹಳ ಅನುಕೂಲವಾಯಿತು. ಬ್ರಾಹ್ಮಣ ಸಂತರ್ಪಣೆಗೆ ಸುಮಾರು ೫೦೦೦ದ ಮೇಲಣ ಸಮುದಾಯವು ಕೂಡಿತ್ತು. ರಾತ್ರಿಯಲ್ಲಿ ರಥೋತ್ಸವ ದರ್ಶನ ಸುತ್ತು ವಸರಕಪೂಜೆ ಇತ್ಯಾದಿಗಳು ನಡದವು.

ಮರುದಿನ ದೇವಸ್ಥಾನದಲ್ಲಿ ಮಧ್ಯಾಹ್ನ ಮೂರು ಗಂಟೆಗೆ ವೋಟರರ ಸಭೆ ಕೂಡುವ ಪ್ರಾರಂಭದಲ್ಲಿ ಶ್ರೀ ಸುಕೃತೀಂದ್ರ ಸ್ವಾಮಿಯವರಿಗೆ ಹ್ಯಾ ಕೋರ್ಟಿನಲ್ಲಿ ಆದ ಜಯದ ವರ್ತಮಾನವು ತಂತೀ ಮೂಲಕ ಮದ್ರಾಸಿನಿಂದ ಬಂದು ತಲ್ಪಿತು. ತಂತಿಯನ್ನು ಓದಿದ ಕೂಡಲೇ ಸಭಿಕರೆಲ್ಲರಿಗೂ ಆನಂದ ಉಂಟಾಗಿ ಕೂಡಲೇ ವಂತಿಗೆ ಎತ್ತಿ ಮಾರಣೆ ದಿನ ಸಂತರ್ಪಣೆ ಉತ್ಸವಗಳು ನಡದವು. ಸಾವಿರಕ್ಕೆ ಮಿಕ್ಕಿ ಜನರು ಊಟಕ್ಕೂ ಉತ್ಸವಕ್ಕೂ ಹಾಜರಿದ್ದರು.

ಪಾಣೆಮಂಗಳೂರು:— ಶ್ರೀ ಕಾಶೀಮಠದ ದಂಡವಿಮೋಚನೆಯ ಶುಭವರ್ತಮಾನವನ್ನು ಕೇಳುತ್ತಲೆ ಪಾಣೆಮಂಗಳೂರಿನಲ್ಲಿ ಬ್ರಾಹ್ಮಣಸಂತರ್ಪಣೆ ಉತ್ಸವ ಇತ್ಯಾದಿಗಳು ಬಹಳ ವಿಜೃಂಭಣೆಯಿಂದ ನಡೆದವೆಂತ ಒಬ್ಬ ಬಾತಮಿದಾರರು ತಂತೀಮೂಲಕ ತಿಳಿಸಿರುತ್ತಾರೆ.

ಬಂಗ್ರಮಂಜೇಶ್ವರ:— ಶ್ರೀಮತ್ ಕಾಶೀಮಠದ ಶ್ರೀ ಸುಕೃತೀಂದ್ರ ತೀರ್ಥ ಶ್ರೀ ಪಾದಂಗಳವರ ಮೇಲೆ ಆದ ಕ್ರಿಮಿನಲ್ ಮೊಕದ್ದಮೆ ಮೇಲೆ ಮದ್ರಾಸು ಹ್ಯಾಕೋರ್ಟಿನಲ್ಲಿ ದಾಖಲುಮಾಡಿದ ಅಪೀಲು ನಿನ್ನೆ ಶ್ರೀ ಪಾದಂಗಳವರ ಪಕ್ಷಕ್ಕೆ ತೀರ್ಮಾನವಾದ ಸಂಗತಿ ಬಂಗ್ರಮಂಜೇಶ್ವರ ಗ್ರಾಮದವರು ತಿಳಿದು ಸಂತೋಷಪಟ್ಟು, ಆ ಬಗ್ಗೆ ಸದರಿಯವರು ಸಭೆಕೂಡಿ ವಂತಿಗೆಯಿಂದ ಮಂಜೇಶ್ವರ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಪಂಚಾಮೃತ ಅಭಿಷೇಕ, ಸಂತರ್ಪಣೆ, ರಾತ್ರಿ ಪೂಜೆ, ಮಾರಣೆ ದಿನ ಪಶುಗಳಿಗೆ ಗೋಗ್ರಾಸ ಮತ್ತು, ಎಲ್ಲಾ ಜಾತಿಯವರಿಗೆ ಅನ್ನದಾನ ವಗೈರೆ ಸಾಂಗವಾಗಿ ನಡಿಸಿದ ಸಂಗತಿ ತಿಳಿಸುವರೆ ಸಂತೋಷದ ವಾರ್ತೆ.

ಹೊಸದುರ್ಗ:— ಇಲ್ಲಿ ಇದೇ ತಿಂಗಳ ೧ನೇ ತಾರೀಕಿನಿಂದ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆ VIನೇ ಕ್ಲಾಸ ತಕ್ಕಾಲಕ್ಕೆ ಛತ್ರದ ಕಟ್ಟೋಣದಲ್ಲಿ ತೆರೆಯೋಣಾಗಿಯದೆ. ಸದ್ಯಕ್ಕೆ ಅಲ್ಪ ಸಂಖ್ಯೆಯು ಸದರಿ ದರ್ಜೆಗೆ ದಾಖಲಾಗಿರುತ್ತಾರೆ. ಬೋರ್ಡಿನವರ ಈ ಉಪಕಾರವು ಎಂದೆಂದಿಗೂ ಸ್ಮರಿಸತಕ್ಕದ್ದಾಗಿರುತ್ತದೆ. ಯೋಗ್ಯ ಕಟ್ಟೋಣವನ್ನು ಅರಿಸಿ ಮುಂದಿನ ವಿದ್ಯೆಯ ಅಭಿವೃದ್ಧಿಗೆ ಶ್ರೀ ಭಗವಂತನು ಸಹಾಯ ಮಾಡಿ ಬೋರ್ಡಿನವರ ಪ್ರಯತ್ನವು ಸಫಲವಾಗುವುದು ಎಂತ ನಂಬುತ್ತೇವೆ.

ಮೊನ್ನೆ ಇಲ್ಲಿಯ ಕೋಮಲ ವಿಲಾಸ ಕಾಫಿ ಹೋಟೆಲಿಗೆ ಆದರ ತೆಂಕು ಅಂಗಡಿಯ ಉಪನಾಹಿಗೆ ಆಕಸ್ಮಾತ್ ಬೆಂಕಿ ಹಾಗಿ ಹೋಟೆಲ್ ಪೂರಾ ಭಸ್ಮವಾದ ಸಂಗತಿಯು ವಿಷಾದಕರವಾಗಿರುತ್ತದೆ. ಇದು ರಾತ್ರಿ [illegible] ಸಮಯವಾದ್ದರಿಂದ ಜನಸಹಾಯ ಅಲ್ಪವಾದ ಸಂಬಂಧ ಹೆಚ್ಚಿನ ಆಪತ್ತು ದೇವರು ತಪ್ಪಿಸಿದ್ದು [illegible] ಪೂರ್ವ ಪುಣ್ಯದಿ ಎಂತ ಅನ್ನಬಹುದು. ಈ ಸಂದರ್ಭದಲ್ಲಿ ಇಲ್ಲಿಯ ಶಾಲಾ ಮಾಸ್ತರ್ ಅಬ್ದುಲ್ ಎಂಬವರ ಪ್ರಯತ್ನವು ಶ್ಲಾಘನೀಯವಾದದ್ದು. ಇಲ್ಲವಾದರೆ ಹೆಚ್ಚಿನ ಅಪಾಯ [illegible] ಅನುಕೂಲವಿತ್ತು.

ಇಲ್ಲಿಯ [illegible] ತಲೆದೋರಿಯದೆ.

ಶ್ರೀ ವೆಂಕಟರಮಣ ದೇವಸ್ಥಾನ ಮುಲ್ಕಿ.

ಈ ದೇವಸ್ಥಾನದ ಆಡಳಿತೆಯ ಬಗ್ಗೆ ಇತ್ತಲಾಗಿ ಆದ ಸಬ್‌ಕೋರ್ಟ ಎವಾರ್ಡು ಡಿಕ್ರಿ ಪ್ರಕಾರ ಜಾರಿಗೆ ಬಂದ ಸ್ಕೀಮನ್ನನುಸರಿಸಿ ನಡೆಸಿದ ಆಡಳಿತೆಯ ವೃತ್ತಾಂತದ ಗೋಷ್ವಾರೆಯು:—

ದೇವಸ್ಥಾನದ ಆಡಳಿತೆಯು ಕಳೆದ ದುರ್ಮತಿ ಸಂವತ್ಸರ ಪುಷ್ಯ ಬ|೧೦ (ತಾ. ೨೧-೧-'೩೩)ರಲ್ಲಿ ಈಗಿನ ಕೌನ್ಸಿಲಿನ ಸ್ವಾಧೀನಕ್ಕೆ ಬಂದಿತ್ತು. ಕಾರ್ತಿಕ ಶು| ೧೫ಕ್ಕೆ ದೇವಸ್ಥಾನದ ವರುಷವು ಮುಗಿಯುವುದರಿಂದ ಈ ಕಾಲದ ವರೆಗಿನ ಎಂದರೆ ೧೦ ತಿಂಗಳ ವೃತ್ತಾಂತವನ್ನು ಮಾತ್ರ ಪ್ರಕಟಿಸಲು ಸಾಧ್ಯವಾಯಿತು.

ಈ ವರದಿಯ ಕಾಲದಲ್ಲಿ ಉದಿಯಾವರ ವಿಟ್ಠಲ ಶ್ಯಾನುಭಾಗರು ರಾ. ತಲಚೇರಿ ಜನಾರ್ಧನ ಶ್ಯಾನುಭಾಗರು ದೇವಸ್ಥಾನದ ಹೆಂಡಿಟರಿ ಮೊಕ್ತೇಸರರಾಗಿಯೂ ಇದ್ದಾರೆ. ರಾ. ಮೇಗಿನಪೇಟೆ ಮುಕುಂದ ವಾಸುದೇವಕಮ್ತಿ, ರಾ| ಪಡುಬಿದ್ರೆ ಚೆರ್ಪ ಕಮ್ತಿ, ರಾ| ವಡೇರ ಬೆಟ್ಟು ರುಕ್ಮಯ ಕಮ್ತಿ, ರಾ| [illegible] ವಿಟ್ಠಲ ಶ್ಯಾನುಭಾಗ, ರಾ| ಬೋಳ ಮಾಧವರಾವ್ ಇವರು ಕೌನ್ಸಿಲರಾಗಿಯೂ ಇವರ ಪೈಕಿ ಮೇಗಿನ ಪೇಟೆ ಮುಕುಂದ ಕಮ್ತಿ ಮತ್ತು ಚೆರ್ಪ ಕಮ್ತಿಯವರು ಟ್ರಸ್ಟರರಾಗಿದ್ದಾರೆ. ಸ್ಕೀಮಿನ ಕ್ರಮಗಳಿಗನುಸಾರವಾಗಿ ತಾ. ೧೬-೩-'೩೩ರಿಂದ ಮೆ| ಕೆ. ಕೋದಂಡ ರಾಮಕೋಯಿಸ ಬಿ. ಎ. ಯವರನ್ನು ದೇವಸ್ಥಾನದ ಮೆನೇಜರರನ್ನಾಗಿ ನೇಮಿಸಿದ್ದಾರೆ. ಈ ಹತ್ತು ತಿಂಗಳ ಕಾಲದಲ್ಲಿ ಹೆಂಡಿಟರಿ ಮೊಕ್ತೇಸರರ ಪೈಕಿ ರಾ| ಉದ್ಯಾವರ ಲಕ್ಷ್ಮಣ ಶ್ಯಾನುಭಾಗರು ಕೌನ್ಸಿಲಿನ ಮೀಟಿಂಗಿಗೆ ಬಾರದೆ ಇದ್ದದ್ದರಿಂದ ಅವರ ಸ್ಥಳದಲ್ಲಿ ಹಂಗಾಮಿಯಾಗಿ ರಾ. ಉದ್ಯಾವರ ವಿಟ್ಠಲ ಶ್ಯಾನುಭಾಗರನ್ನು ನೇಮಿಸಬೇಕಾಗಿ ಬಂತು. ಮತ್ತು ರಾ| ಮುಲ್ಕಿ ಮೇಗಿನ ಪೇಟೆ ರಾಮಕಮ್ತಿಯವರು ತಮ್ಮ ಕೌನ್ಸಿಲ್ ಮೆಂಬರಶಿಪ್ಪಕ್ಕೆ ರಾಜಿನಾಮೆ ಕೊಟ್ಟದ್ದರಿಂದ ಅವರ ಬದಲಾಗಿ ರಾ. ಮುಕುಂದ ವಾಸುದೇವ ಕಮ್ತಿಯವರನ್ನು ಕೌನ್ಸಿಲರರಾಗಿ ನೇಮಿಸಿದರು. ವರದಿಕಾಲದ ದೇವಸ್ಥಾನದ ಆದಾಯವ್ಯಯಗಳನ್ನು ಸೊತ್ತು ಜವಾಬ್ದಾರಿಗಳನ್ನು ತೋರಿಸುವ ತಖ್ತೆಗಳನ್ನು ತಯ್ಯಾರಿಸಿ ಸ್ಕೀಮಿನಲ್ಲಿ ನಮೂದಿಸಿದ ಮೇರೆಗೆ ವೋಟರರ ಅವಗಾಹನೆ ಬಗ್ಗೆ ದೇವಸ್ಥಾನದ ನೋಟೀಸು ಬೋರ್ಡಿಗೆ ಅಂಟಿಸಿ ಪ್ರಕಟಿಸಿರುವರು. ಈ ತಖ್ತೆಗಳು ದೇವಸ್ಥಾನದ ಸ್ಥಿತಿಯನ್ನು ಏನೂ ನ್ಯೂನತೆಯಿಲ್ಲದೆ ತೋರಿಸುವಂಥವುಗಳೆಂತ ಹೇಳಲು ಆಸ್ಪದವಿಲ್ಲ. ಅನೇಕ ಕಾಲದಿಂದ ದೇವಸ್ಥಾನದಲ್ಲಿ ವ್ಯವಹರಣೆಯು ಬಿದ್ದು ರಿಕಾರ್ಡು ಲೆಕ್ಕ ಪತ್ರ ಇತ್ಯಾದಿಗಳು ವ್ಯವಸ್ಥಿತ ಸ್ಥಿತಿಯಲ್ಲಿ ಇಲ್ಲದ್ದರಿಂದಲೂ, ಇಂಥಾ ವ್ಯವಹರಣೆ ಸಂಬಂಧ ದೇವಸ್ಥಾನದ ಸೊತ್ತುಗಳಲ್ಲಿ ಹೊರಗಿನಿಂದ ಬರಬೇಕಾದ ಹಣಗಳಿಗೆ ಆಧಾರವಾಗಿರುವ ರಿಕಾರ್ಡುಗಳು ಯಾವ್ಯಾವ ಕೋರ್ಟುಗಳಲ್ಲಿ ಮತ್ತು ಯಾವ್ಯಾವ ವಕೀಲರಲ್ಲಿ ಇವೆ ಎಂಬುದನ್ನು ನಿರ್ಣಯಿಸಿ ಸಂಗ್ರಹಿಸುವುದು ಸುಲಭಕಾರ್ಯವಲ್ಲದ್ದರಿಂದ ಪ್ರಕೃತ ತಮ್ಮ ಸ್ವಾಧೀನ ಹಾಜರಿಯಲ್ಲಿರುವ ಲೆಕ್ಕ ಪತ್ರ ರಿಕಾರ್ಡುಗಳ ಸಹಾಯದಿಂದ ಈ ತಖ್ತೆಗಳನ್ನು ತಯ್ಯಾರಿಸಿದ್ದಾಗಿರುತ್ತದೆ. ದೇವಸ್ಥಾನದ ಲೆಕ್ಕಪತ್ರಗಳನ್ನು ಪರಿಶೋಧನೆಗೆ ಅನುಕೂಲವಾಗುವಂತೆ ಹೇಗೆ ಇಡಬೇಕೆಂಬುದನ್ನು ತೋರಿಸಿಕೊಟ್ಟು ವರದಿಯಲ್ಲಿ ಪ್ರಕಟಿಸಿದ ತಖ್ತೆಗಳನ್ನು ತಯಾರಿಸುವುದರಲ್ಲಿ ಬಹಳ ಅನುಭವವನ್ನು ಕೊಟ್ಟು ಶ್ರಮವನ್ನು ತಗೆದುಕೊಂಡ ಇಂಪೀರಿಯಲ್ ಬೇಂಕಿನ ಮಾಜಿ ಕೇಶ್‌ಕೀಪರರಾದ ಮ. ರಾ. ರಾ. ಬಂಟವಾಳ ನಾರಾಯಣ ಪೈಗಳಿಗೆ ಕೌನ್ಸಿಲ್ ಸಭೆಯವರು ತಮ್ಮ ಉಪಕಾರ ಸ್ಮರಣೆಯನ್ನು ಮಾಡಿ ಪೈಗಳವರ ಆರೋಗ್ಯಾಭಿವೃದ್ಧಿಗಳ ಬಗ್ಗೆ ಶ್ರೀ ಸನ್ನಿಧಿಯಲ್ಲಿ ಪ್ರಾರ್ಥಿಸಿರುತ್ತಾರೆ.

ಶ್ರೀ ದೇವರ ಸನ್ನಿಧಿಯಲ್ಲಿ ಪಾತ್ರಿಗಳಾದ ರಂಗಪ್ಪ ನಾಯ್ಕರ ಸೇವೆಯನ್ನು ಸ್ಮರಿಸಿ ಸದರಿಯವರಿಗೆ ತಮ್ಮ ಈ ವೃದ್ಧಾಪ್ಯಕಾಲದಲ್ಲಿ ಆಯುರಾರೋಗ್ಯಗಳನ್ನು ಶ್ರೀ ದೇವರು ದಯಪಾಲಿಸಲೆಂದು ಪ್ರಾರ್ಥಿಸಿರುವರು. ವರದಿಯ ಕಾಲದಲ್ಲಿ ಬಂದ ಕಾಣಿಕೆಗಳು ಬಹು ತೃಪ್ತಿಕರವಾಗಿದ್ದವು. ಜಮಾ ಖರ್ಚಿನ ವಿವರದಲ್ಲಿ— ಕಾಣಿಕೆ ೧೩೪೦೮—೧೧—೧೦. ವಿನಿಯೋಗ— ೮೭೬—೫—೭, ಡಿಪೋಜಿಟ್ ರೂ ೧೬೯೩—೩—೬, ವಿಕ್ರಿತ ೫೫೭೨—೨—೧, ಅಮಾನತು ೧೧,೦೧೪-೧೧-೮ ಸ್ಥಿರಾಸ್ತಿ ರೂ. ೧೧,೫೩೨—೩—೨, ಚರಸೊತ್ತು ೩೧೯—೧೫—೭, ಲೇವಾದೇವಿ ರೂ. ೨೨,೫೫೭—೬—೪, ಇಂಬಿತ್ಯಾದಿ ಮೊಬಲಗುಗಳು ಜಮೆ ಇರುವದಾಗಿಯೂ, ವಿನಿಯೋಗ ರೂ. ೭೭೨—೧—೧೦, ಬಡ್ಡಿ ರೂ. ೬೦—೦—೦ ಅಮಾನತು ೧೦,೦೧೬—೨—೮, ಅಡವು ೩೯,೫೬೨—೧೨—೩, ಕ್ರಯಸಾಧನ ೮,೬೩೨—೧೨—೯, ವ್ಯವಹರಣೆ ೧,೭೭೩—೧೦—೭ ಚರಸೊತ್ತು ೩೮೬—೩—೪, ಲೇವಾದೇವಿ ೧೨,೮೯೮—೯—೧೦, ಲಾಗವಾಡು ತೀರ್ವೆ ಇತ್ಯಾದಿ ೪೫೧೨—೨—೧೧ | ಮೊದಲಾದ ಐಟೆಮುಗಳ ಖರ್ಚು ಇರುವದೆಂತಲೂ ತಿಳಿದುಬರುತ್ತದೆ. ವ್ಯವಹರಣೆ ಖರ್ಚಿನ ರೂ. ೧,೭೭೩—೧೦—೭ರಲ್ಲು ರೂಪಾಯಿ ೫೦೦ ಸ್ಕೀಮು ಪ್ರಕಾರ ಇನ್ಸ್‌ಪೆಕ್ಟರ್ ಕಮಿಶನು ಫೀಸು ಮತ್ತು ರೂಪಾಯಿ ೪೬೧—೦—೬ ಆಸ್ತಿ ಸ್ವಾಧೀನತೆ ಬಗ್ಗೆ ಕೃತಡ ಮೌಲ್ಯಕ್ಕೆ ಕೊಟ್ಟ ಮೊಬಲಗುಗಳು ಸೇರಿರುವವು. ದೇವಸ್ಥಾನದಿಂದ ಸಾಧ್ಯವಾದಷ್ಟು ಕೋರ್ಟು ವ್ಯವಹರಣೆಗಳನ್ನು ಕಡಿಮೆಮಾಡಿ ಈ ಬಾಬಿನಲ್ಲಿ ಖರ್ಚನ್ನು ಕೂಡ ಕಡಿಮೆಮಾಡಬೇಕೆಂದು ಈಗಿನ ಆಡಳಿತೆಯವರ ಉದ್ದೇಶವಾಗಿರುವದು. ಈ ಉದ್ದೇಶದ ಪ್ರಕಾರ ವಕ್ಕುಗಳ ವಗೈರೆರ ಮೇಲೆ ಮಾಡಿದ ದಾವೆಗಳನ್ನು ದೇವಸ್ಥಾನದ ಭಂಡಾರಕ್ಕೆ ನಷ್ಟ ಉಂಟಾಗದಂತೆ ರಾಜಿಯಿಂದಲೇ ತೀರ್ಮಾನಿಸಿರುತ್ತಾರೆ.

ದೇವಸ್ಥಾನದ ಈ ವೃತ್ತಾಂತಸಹಿತ್ತು ಲೆಕ್ಕ ತಖ್ತೆಗಳನ್ನು ಪರ್ಯಾಲೋಚಿಸಿ ಮಂಜೂರುಮಾಡುವ ಬಗ್ಗೆ ಶ್ರೀ ದೇವರ ಸನ್ನಿಧಿಯಲ್ಲಿ ಮೊನ್ನೆ ತಾರೀಕು ೫ನೇ ಮಂಗಳವಾರ ಸಾಯಂಕಾಲ ವೋಟರರ ಸಭೆಯು ಕೂಡಿತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಸಭಿಕರ ಅಪೇಕ್ಷೆ ಪ್ರಕಾರ ಊರ ಪ್ರಮುಖರೂ ಡಿಸ್ಟ್ರಿಕ್ಟ ಬೋರ್ಡು ಮೆಂಬರರೂ ಆದ ಮ. ರಾ. ರಾ. ಬೋಳ ಮಾಧವರಾಯರು ವಹಿಸಿಕೊಂಡಿದ್ದರು. ಕ್ರಮ ಪ್ರಕಾರ ಸಭೆ ಕೂಡಿಸಿದ ನೋಟೀಸನ್ನೂ ಸಭೆಯ ಮುಂದೆ ಬರುವ ವಿಷಯಗಳ ಪಟ್ಟಿಯನ್ನೂ ಓದಿ ಆದ ನಂತರ ಆಡಳಿತೆಯ ವರದಿಯೂ ಲೆಕ್ಕ ತಖ್ತೆಗಳೂ ದೇವಸ್ಥಾನದ ಮೆನೇಜರರು ಓದಿ ಸಭಿಕರೆಲ್ಲರಿಗೂ ವಿವರಿಸಿ ಹೇಳಿದರು. ಕೌನ್ಸಿಲರರ ಕಡೆಯಿಂದ ಲೆಕ್ಕ ತಖ್ತೆಗಳಲ್ಲಿರಬಹುದಾದ ನ್ಯೂನತೆಗಳನ್ನು ವಿವರಿಸುವಾಗ ಸ್ಕೀಮಿನ ೪೪ನೇ ಕ್ರಮದ ಪ್ರಕಾರ ಲೆಕ್ಕ ತಖ್ತೆಗಳನ್ನು ಸಕಾಲದಲ್ಲಿ ಪರಿಶೋಧಿಸಲಿಕ್ಕೆ ಯಾಕೆ ಆಗಲಿಲ್ಲವೆಂಬುದನ್ನು ವಿವರಿಸಿ ಈ ಬಗ್ಗೆ ಇರುವ ಕಾರಣಗಳನ್ನು ಸಭೆಯ ಮುಂದಿಟ್ಟರು. ಅನಂತರ ವೋಟರರ ಈ ವರದಿಯು ಮತ್ತು ಲೆಕ್ಕ ತಖ್ತೆಗಳ ವಿಚಾರವು ನಡೆದು ವರದಿಯೂ ಲೆಕ್ಕ ತಖ್ತೆಗಳೂ, ಸರ್ವಸಮ್ಮತವಾಗಿ ಮಂಜೂರಾದವು. ಬರುವ ವರುಷಕ್ಕೆ ಲೆಕ್ಕ ಪತ್ರಗಳನ್ನು ಪರಿಶೋಧಿಸಿ ವಾರ್ಷಿಕ ಸಭೆಯು ಮುಂದೆ ಅವುಗಳನ್ನು ತರಬೇಕೆಂತ ಮಹಾಸಭೆಯಿಂದ ಸೂಚಿಸೋಣಾಗಿದೆ.

ಕೌನ್ಸಿಲರರ ಮೆಂಬರುಶಿಪ್ಪಿನಿಂದ ಸ್ಕೀಮು ಕ್ರಮಗಳ ಪ್ರಕಾರ ನಿವೃತ್ತರಾದ ರಾ. ಮೇಗಿನ ಪೇಟೆ ಮುಕುಂದ ವಾಸುದೇವ ಕಮ್ತಿ, ರಾ. ವಡೇರಬೆಟ್ಟು ರುಕ್ಮಯ್ಯ ಕಮ್ತಿಯವರನ್ನು ಪುನಹ ಕೌನ್ಸಿಲರರನ್ನಾಗಿ ಆರಿಸಿದರು.

ಸ್ಕೀಮಿನಲ್ಲಿ ಅಗತ್ಯವಿರುವ ತಿದ್ದುಪಡಿಗಳನ್ನು ಸೂಚಿಸಲು ಒಂದು ಕಮ್ಮಿಟಿಯೂ ಏರ್ಪಡಿಸಲ್ಪಟ್ಟಿದೆ. ಈ ಕಮ್ಮಿಟಿಯು ಸೂಚನೆಗಳನ್ನು ಸಭೆಯ ಮುಂದೆ ಹಾಕಿ ಇನ್ನೂ ಇತರ ವಿಷಯಗಳನ್ನು ಆಲೋಚಿಸುವ ಬಗ್ಗೆ ಬರುವ ಯುಗಾದಿ ದಿನ ವೋಟರರ ಒಂದು ಮಹಾ ಸಭೆಯನ್ನು ಕರೆಯಬೇಕಾಗಿ ನಿರ್ಣಯಿಸಿ ಸಭೆಯು ಮುಕ್ತಾಯವಾಯಿತು.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.
ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.
ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0
Reserve and other sinking Funds „ 181,250—0—0
ಅಧಿಕಾರಗೊಳಿಸಲ್ಪಟ್ಟು, ಪೂರ್ತಿಯಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ ಪಡೆಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರೆಕೊಳ್ಳುವದು.
Canara Bank Ltd.,
Mangalore, 21st Feb. 1922.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧಾಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,
ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಬಾರದು. ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಯಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಲ್ಪಡದೆ ಹುಟ್ಟಿದ ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಜಠರಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.
ಮಂದ, ಸೆಗಣಿ, ಕೆಮ್ಮಲು, ಶೀತ, ಶೀತವಾತ, ಮೃತ್ಯುಕಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು. ಕರುಳಿನ ನೋವು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲೂಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು.
ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.
☞ ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0. ಫೀಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.
ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.
ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ
ಆಯುರ್ವೇದ ಔಷಧಾಲಯವು.
—(ಸ್ಥಾಪಿತವಾದ್ದು 1881)—
ಆತಂಕನಿಗ್ರಹ ಔಷಧಾಲಯವು
ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.
ತಮಗೆ ಒಂದು ಬೇಕಾಗಿರುತ್ತದೆ.
ವಿಳಾಸ—ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ಜಾ (ಟ್ರಿಪ್ಲಿಕೇನ್) ಮದ್ರಾಸ್.
Local Agents: Raphael & Co,
Brito Buildings,
Hampankatta, MANGALORE.

Sri Lakshmi Mills, Kasargod, S. K.
ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದಕ್ಷಿಣ ಕನ್ನಡ
ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹೆಂಚಿನ ಕಾರಖಾನೆಗಳಿಗೆ ಹೆಂಚು ಒಣಗಿಸಲಿಕ್ಕೆ ಬೇಕಾದ ಮರದ ಹಲಗೆಗಳನ್ನು ವಿಶೇಷವಾಗಿ ಒದಗಿಸುವವರಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ಗಳನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
Manager,
Sri Lakshmi Mills, KASARGOD, S. K.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ.
ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮುದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.
ಕ್ರಯ ಬಾಟ್ಲಿ 1ಕ್ಕೆ ರೂ. 1-4-0.
ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.
ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, [illegible] ಚಳುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜೆಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಗಿಂದ ರೋಗಗಳು ತಲೆಯುಳ್ಳದಂತೆ ಮಾಡುತ್ತದೆ.
60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.
ಆರ್ ಮಾರ್ಟಿನ್ನರ ಗಿಟೋಡಯಿನ್.
ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದವೆಲ್ಲಾ ನಿಂತುಹೋಗುವುದಲ್ಲದೆ [illegible] ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಶುಭ್ರವಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟಿಕ್ಕೇ ಅಪಾಯವಿರುತ್ತದೆ. [illegible] ರುಚಿಯಾಗಿಯೂ ನಿರ್ಮಲವಾಗಿಯೂ ಇರುತ್ತೆ.
ಚಿಕ್ಕ ಸೀಸೆ 1ಕ್ಕೆ ರೂ. 2—0—0.
ವಿಳಾಸ—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
[illegible]
R. D. Kately & Co.
No. D. Frere Road,
[illegible] Bombay.

ಮಂಗಳೂರು — ಟೈಪ್ ಫೌಂಡ್ರಿ.
ಡೊಂಗರಕೇರಿ, ಮಂಗಳೂರು.
ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.
ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.
ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.
☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು [illegible] ನಾವು ಸಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪ್ಪೈ
ರಥಬೀದಿ ಮಂಗಳೂರು.
ಎಲ್ಲಾ ಬಗೆಯ [illegible] ಯುನಾಮಲ್ಲ ಬಟ್ಟು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ [illegible] ಬ್ರವುನ್ ಪೇಪರ್, ರದ್ದಿ, ಪಾಟಿ ಕವರು, [illegible] ಸ್ಟೇಶನರಿ ಸಾಹಿತ್ಯಗಳೂ, [illegible] ಇತರ ಕಟ್ಟಿರಿ ಸಾಮಾನುಗಳೂ, [illegible]

48.4.9.

ಅಚ್ಚಿನಲ್ಲಿದೆ! ಅಚ್ಚಿನಲ್ಲಿದೆ!

ಎಂ. ಜಿ. ಐಗಳ್, ಇವರಿಂದ ರಚಿತವಾದ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.

ಈ ಜಿಲ್ಲೆಯ ಇತಿಹಾಸವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ಪ್ರಕಟವಾದುದಿಲ್ಲ. ಕಳೆದ ಐದಾರು ವರುಷಗಳಿಂದ ಈ ಗ್ರಂಥರಚನೆಯ ಪ್ರಯತ್ನವನ್ನು ಪ್ರಾರಂಭಿಸಿ ಐತಿಹಾಸಿಕ ವಿಶೇಷತ್ವವುಳ್ಳ ಜಿಲ್ಲೆಯ ಹಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ಸಿಕ್ಕಿದ ಪುರಾತನ ಶಾಸನ ಇತ್ಯಾದಿಗಳ ಆಧಾರದಿಂದ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ಜಿಲ್ಲಾಭಿಮಾನಿಗಳಿಂದಲೂ ಕನ್ನಡನಾಡಿನ ಇತಿಹಾಸದಲ್ಲಿ ಅಭಿರುಚಿಯುಳ್ಳ ಇತರರೆಲ್ಲರಿಂದಲೂ ಈ ಗ್ರಂಥರಚನೆಯ ಪ್ರಯತ್ನದಲ್ಲಿ ಪ್ರೋತ್ಸಾಹವು ಅಗತ್ಯವಾಗಿದೆ.

ಪುಸ್ತಕದ ಪುಟಗಳ ಸಂಖ್ಯೆಯು ಕ್ರೌನ್ ⅛ ಸ್ಸಾಜಿನ 300ಕ್ಕೆ ಮಿಕ್ಕಿರುವುದು. ಕ್ರಯ ರೂ. 1–8–0 ಮಾತ್ರ.

ಪ್ರತಿಗಳು ಬೇಕಾದವರು ತಮ್ಮ ಹೆಸರುಗಳನ್ನು ಕೆಳಗಿನ ವಿಳಾಸಕ್ಕೆ ಬರೆದು ದಾಖಲು ಮಾಡಿಕೊಳ್ಳಬಹುದು.

ವಿಷಯಾನುಕ್ರಮಣಿಕೆ.

1. ದಕ್ಷಿಣ ಕನ್ನಡ ಜಿಲ್ಲೆಯ ಪರ್ವತಗಳೂ ನದಿಗಳೂ. 2. ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಸ್ಥಿತಿ—ಮಲೆಕುಡಿಯರು—ಕೊರಗರು—ಮುಂಡಾಲ—ಬಾಕುಡರು—ದ್ರಾವಿಡ ವಂಶದವರು—ಬಂಟರು—ಇತರ ತುಳುಜನರು. 3. ಕೇರಳೋತ್ಪತ್ತಿ—ಪರಶುರಾಮ—ಕಾರ್ತವೀರ್ಯಾರ್ಜುನ—ಬ್ರಾಹ್ಮಣರು ನೆಲಸಿಂತ 64 ಗ್ರಾಮಗಳು—ಆರ್ಯರ ಆಗಮನ. 4. ಬನವಾಸಿಯ ಕದಂಬರು—ಮಯೂರವರ್ಮನೂ 32 ಗ್ರಾಮಗಳ ಬ್ರಾಹ್ಮಣರೂ—ಹಂಗೆಲದ ಕದಂಬರು—ಕಾಮದೇವ—ಬಂಟರ ದಂಗೆ—ವಂಶಾವಳಿ. 5. ಜೈನರೂ ಜಿನಮತವೂ—ಮಹಾವೀರ—ದಕ್ಷಿಣಕ್ಕೆ ಜೈನರ ಆಗಮನ—ಭದ್ರಬಾಹು—ದಿಗಂಬರ—ಶ್ವೇತಾಂಬರ—ಜೈನರ ಅಭಿವೃದ್ಧಿ. 6. ಭೂತಾಳಪಾಂಡ್ಯನ ವಂಶ—ಬಾರಕೂರು—ಅಳಿಯಕಟ್ಟು. 7. ನಾಡವರು—ಬಂಟರು—ಸೇನಾಧಿಪತಿಗಳು—ಗುತ್ತುಗಳು. 8. ಪ್ರಾಚೀನ ಕಾಲದ ಸಾಮಾಜಿಕ ಪದ್ಧತಿಗಳು—ರಾಜ್ಯಭಾರ ಕ್ರಮ—ಕಂದಾಯ—ಸೈನ್ಯ. 9. ಬಾದಾಮಿಯ ಪಶ್ಚಿಮ ಚಾಲುಕ್ಯರು—ಜಯಸಿಂಗ—ಪುಲಿಕೇಶಿ—1ನೇ ವಿಕ್ರಮಾದಿತ್ಯ—2ನೇ ವಿಕ್ರಮಾದಿತ್ಯ—2ನೇ ಕೀರ್ತಿವರ್ಮ—ವಂಶಾವಳಿ. 10. ಆಲೂಪ ಅರಸರು—ಉದ್ಯಾವರ ರಾಜಧಾನಿ—ಭುಜಬಲ ಕವಿ—ಬಂಕಿದೇವ—ಮಂಗಳೂರು ರಾಜಧಾನಿ—ಕುಂದವರ್ಮ—ಕದ್ರಿ ದೇವಸ್ಥಾನ ಪ್ರತಿಷ್ಠೆ—ಮಠ ಕಟ್ಟಿದ್ದು. 11. ನಾಥಸಂಪ್ರದಾಯವೂ ಜೋಗಿಯರೂ—ಆದಿನಾಥ—ಮತ್ಸ್ಯೇಂದ್ರನಾಥ—ಗೋರಕ್ಷನಾಥ—ಮಂಗಳಾದೇವಿ ದೇವಸ್ಥಾನ ಪ್ರತಿಷ್ಠೆ—ಕದ್ರಿ—ವಿಟ್ಲ—ಕುಟತ್ತಾಡಿ—ಸೂಡ ಮಠಗಳು—ಕೇಚಿಗಾರರು—ಹಾಲುವಕ್ಕಿ ನರ್ಸಣ್ಣನ ಜಾತಿ. 12. ಶಂಕರಾಚಾರ್ಯರು—ಜನನ—ವಿದ್ಯಾಭ್ಯಾಸ—ಸನ್ಯಾಸಗ್ರಹಣ—ಶೃಂಗೇರಿ ಮಠ—ಉಡುಪಿ ಶೈವಮಠ ಸ್ಥಾಪನೆ—ಅನಂತನಾಥ ಬಸದಿ, ಅನಂತೇಶ್ವರ ದೇವಸ್ಥಾನವಾದದ್ದು—ಜಗನ್ನಾಥ—ಬದರಿ—ದ್ವಾರಕೆ—ಮಠಗಳು. 13. ರಾಷ್ಟ್ರಕೂಟರು—ದಂತಿವರ್ಮ—ಇಂದ್ರ—ನೃಪಮಾರ್ಗ—3ನೇ ಗೋವಿಂದನ್ನೂ ತುಂಗ—ಅಮೋಘವರ್ಷ—ವಂಶಾವಳಿ. 14. ದ್ವಾರಸಮುದ್ರದ ಯಾದವ ಹೊಯ್ಸಳ ಬಲ್ಲಾಳರು—1ನೇ ಬಲ್ಲಾಳ, ವಿಷ್ಣುವರ್ಧನ—ತುಳು ರಾಜ್ಯ ಜಯಿಸಿದ್ದು—1ನೇ ನರಸಿಂಗ—ತುಳು ರಾಜ್ಯ ಬಿಟ್ಟುಕೊಟ್ಟಿದ್ದು—3ನೇ ವೀರ ಬಲ್ಲಾಳ—ವಂಶಾವಳಿ. 15. ಮಧ್ವಾಚಾರ್ಯರು—ಜನನ—ಸಂನ್ಯಾಸಗ್ರಹಣ—ಅಚ್ಯುತಪ್ರೇಕ್ಷಾಚಾರ್ಯ—ಉಡುಪಿ ದ್ವೈತ ಮತ ವೃದ್ಧಿಪಡಿಸಿದ್ದು—ವಿದ್ಯಾಮಾಂಡೇಶ್ವರ—ಉಡುಪಿ ಪ್ರತಿಷ್ಠೆಗಳು—ಗೋವ ಗೌಡಸಾರಸ್ವತರು ಮಾಧ್ವರಾದದ್ದು—ಕಣ್ವತೀರ್ಥ—ವಿಷ್ಣುತೀರ್ಥಾಚಾರ್ಯರ ಸಂನ್ಯಾಸಗ್ರಹಣ—ಅಷ್ಟಮಠಸ್ಥಾಪನೆ—ಪರ್ಯಾಯ. 16. ವಿಜಯನಗರದ ಅರಸರು—ರಾಜ್ಯಸ್ಥಾಪನೆ ಉದ್ದೇಶ—1ನೇ ಹರಿಹರ—2ನೇ ದೇವರಾಯ—ತುಳು ನರಸನಾಯಕ—ಕೃಷ್ಣದೇವರಾಯ—ವಂಶಾವಳಿ. 17. ಮಹಮ್ಮದೀಯರು—ಮಹಮ್ಮದ ಗುರುಗಳ ಜನನ—ಮತಸ್ಥಾಪನೆ—ಹಿಜರಿ—ಅಬ್ಬುಬಕರ—ಅಲಿ—ಕಲಿಫ—ಮಹಮ್ಮದೀಯರು—ಮಾಪಿಳ್ಳೆಯರು—ಮೂರರು—ಚೇರರಾಜ—ಸುಲ್ತಾನ ಪಳ್ಳಿ, ಮಂಗಳೂರು—ಚೆರುಮಾನ ಪಳ್ಳಿ, ಬಾರ್ಕೂರು. 18. ಪೋರ್ತುಗೀಸರು—ಮೂರರು ವ್ಯಾಪಾರ ಕಳಕೊಂಡದ್ದು—ಬಾರ್ಕೂರು, ಮಂಗಳೂರು ಕಲ್ಯಾಣಪುರ ಸುಟ್ಟದ್ದು—ಮಾಪಿಳ್ಳೆಯರ ಯುದ್ಧಗಳು—ಮಂಗಳೂರು—ಬಾಸೆಲೋರ ಕೋಟೆ ಕಟ್ಟಿದ್ದು. 19. ಇಕ್ಕೇರಿ ಅರಸರು—ಸದಾಶಿವನಾಯಕ—ವೆಂಕಟಪ್ಪನಾಯಕ—ತುಳುರಾಜರು ಶರಣಾಗತರಾದ್ದು—ಮಂಗಳೂರು ಯುದ್ಧ—ಕಾರ್ಕಳ ಕೋಟೆ—ಶಿವಪ್ಪನಾಯಕ—ಕುಂಬಳೆ—ಕಾಸರಗೋಡು—ಬೇಕಲ ಕೋಟೆ ಕಟ್ಟಿದ್ದು—2ನೇ ಸೋಮಶೇಖರ—ಹೊಸದುರ್ಗ ಕೋಟೆ ಕಟ್ಟಿದ್ದು—ಬುದಿಬಸವಪ್ಪ—ನೀಲೇಶ್ವರ ಯುದ್ಧ—ವೀರಮ್ಮಾಜಿ—ವಂಶಾವಳಿ. 20. ರೋಮನ ಕೆಥೋಲಿಕರು—ಕ್ರೈಸ್ತರ ಆಗಮನ—ಇಕ್ಕೇರಿಯವರ ಕಾಲದ ಸುಖ—ಟಿಪ್ಪು 1 ಲಕ್ಷ ಜನರನ್ನು ಸೆರೆ ಹಿಡಿದದ್ದು—ಇಂಗ್ಲೀಷರ ಕಾಲದಲ್ಲಿ ಕಷ್ಟನಿವಾರಣೆ—ಇಗರ್ಜಿಗಳನ್ನು ಕಟ್ಟಿದ್ದು—ಬಿಶೋಪರು—ವಾಡಗಳು—ವಿಗಾರರು. 21. ಹೈದರಾಲಿ—ಟಿಪ್ಪುಸುಲ್ತಾನ—ಇಕ್ಕೇರಿ ಸ್ವಾಧೀನವಾದದ್ದು—ಕನ್ನಡ ಜಿಲ್ಲೆಗೆ ಆಗಮನ—ಪೂನ್ಬಾರು ಮಠದಲ್ಲಿ ಆದ ತುಳುರಾಜರ ಸಭೆ—ಮಂಗಳೂರು—ಕಾಪು—ಕುಂದಾಪುರ ಕೋಟೆಗಳು—ನೌಕಾನಿರ್ಮಾಣ—ಆಲಿರಾಜ—ಮಂಗಳೂರು ಯುದ್ಧ—ಹೊಸಂಗಡಿ ಕಣಿವೆ ಯುದ್ಧ—ಬಂಟವಾಳ ಯುದ್ಧ—ಮಂಗಳೂರು ಒಪ್ಪಂದ—ರಾಜ್ಯಭಾರ ಕ್ರಮ. 22. ಇಂಗ್ಲೀಷರು—ದೊಂಡಿಯನ ದಂಗೆ—ಜಮಾಲಾಬಾದ ಯುದ್ಧ—ಕೊಯಮುತ್ತೂರು ಸುಬ್ಬಾಯ—ಕುಂಬಳೆ ಸುಬ್ರಾಯನ ದಂಗೆ—ಕೆಪ್ಟನ್ ಮನ್ರೋ, ಮೊದಲನೇ ಕಲೆಕ್ಟರ—ಬುಕಾನನ ಪ್ರಯಾಣ—ಈಶ್ವರಮಂಗಲ ಯುದ್ಧ—ಶಾಂತತೆ. 23. ಕೊಡಗರು—ಪಂಜ—ಸುಳ್ಯ—ಬೆಳ್ಳಾರೆ—ಅಮರಮಾಗಣೆಗಳು—ಬೆಳ್ಳಾರೆ, ಮುಚ್ಚುಪಟ್ಟಿತು—ಕಲ್ಯಾಣಪ್ಪನ ದಂಗೆ. 24. ಬಂಗರರಸರು—ವೀರ ನರಸಿಂಹ—ಬಂಗಾಡಿ ನಿರ್ಮಾಣ—ಚಂದ್ರಶೇಖರ—ಮಂಗಳೂರು ಅರಮನೆ ಕಟ್ಟಿದ್ದು—ಶರವಿನ ಗಣಪತಿ ದೇವಸ್ಥಾನ ಪ್ರತಿಷ್ಠೆ—ಬೋಳಾರ ಮಂಗಳಾದೇವಿ ದೇವಸ್ಥಾನದ ಕೋಟೆ ಕಟ್ಟಿದ್ದು—ಹಾವಳಿ-ಭಂಗ ರಾಜ-ಗುರುವಾಯನಕೆರೆ ವಸ್ತಿ ನಿರ್ಮಾಣ—ಲಕ್ಷ್ಮಪ್ಪರಸ—ನಂದಾವರ ಪಟ್ಟ ನಿರ್ಮಾಣ—ಶಂಕರದೇವಿ—ಮಂಗಳೂರು ರಾಜಧಾನಿ ತ್ಯಜಿಸಿದ್ದು—ಮಂಗಳೂರು—ಉಪ್ಪಿನಂಗಡಿ—ಬಂಗಾಡಿ—ಬೆಳತಂಗಡಿ—ಮಂಜೇಶ್ವರ ಕೋಟೆಗಳ ನೆಲಸ್ಥಾಪನೆ—ರಾಜ್ಯ ಕಳಕೊಂಡದ್ದು. 25. ಚೌಟರರಸರು—ತಿರುಮಲರಾಯ—ಉಳ್ಳಾಲ ಅರಮನೆ ಕಟ್ಟಿದ್ದು—ಚನ್ನರಾಯ ಪುತ್ತಿಗೆ ಅರಮನೆ ಕಟ್ಟಿದ್ದು—ಸಾವಿರ ಕಂಬದ ಬಸ್ತಿ ಕಟ್ಟಿದ್ದು—ಭೋಜರಾಯ—ಮಾರಿಗುಡಿ—ಕಡಂದಲೆ ದೇವಸ್ಥಾನ ಪ್ರತಿಷ್ಠೆ—ಅಬ್ಬಕ್ಕದೇವಿ—ಉಳ್ಳಾಲ ಯುದ್ಧ—ಸಾಣೂರು ಯುದ್ಧ—ಭೋಜರಾಯ—ಮೂಡಬಿದರೆ ಅರಮನೆ ಕಟ್ಟಿದ್ದು. 26. ಅಜಿಲರು—ತಿಮ್ಮಣ್ಣಾಜಿಲ—ಪೂಂಜನ ಆಳಿಕೆ—ರಾಯಕುಮಾರ—ಅಳದಂಗಡಿ ನಿರ್ಮಾಣ—ವೀರ ತಿಮ್ಮಣ್ಣಾಜಿಲ—ಗುಮಟನ ಪ್ರತಿಷ್ಠೆ—ನಾರಾವಿ ಯುದ್ಧ—ಬಂಟವಾಳ ಪುನಃಯುದ್ಧ—ದೇವಪೂಂಜ. 27. ಕಾರ್ಕಳ ಭೈರರಸ ಒಡೆಯರು—ಜಿನದತ್ತರಾಯ—ಹುಂಬುಚ್ಚ ನಿರ್ಮಾಣ—ಏಳುನಾಡು ಹೆಗ್ಗಡೆ—ವೀರಪಾಂಡ್ಯ ಗುಮಟ ಪ್ರತಿಷ್ಠೆ—[illegible] ಭೈರವ ದೇವ ಒಡೆಯ—ಕಾರ್ಕಳ ಗುರುಮಠಸ್ಥಾಪನೆ—ಇಮ್ಮಡಿ ಭೈರವರಾಯ—ಅನಂತೇಶ್ವರ ದೇವಸ್ಥಾನ ಪ್ರತಿಷ್ಠೆ—ಚತುರ್ಮುಖ ಬಸ್ತಿ ಕಟ್ಟಿದ್ದು. 28. ಮೂಲಿಕೆ ಸಾವಂತರು—ರಾಜಧಾನಿಗಳು—ಶಿಮಂತೂರು—ಮೂಲಿಕೆ—ವಳಲಂಕೆ—ಬಪ್ಪನಾಡು—ಗೌಡಸಾರಸ್ವತ ನರಸಿಂಹ ದೇವಸ್ಥಾನಗಳು. 29. ಬೈಲಂಗಡಿ ಮೂಲರು—ರಾಜಧಾನಿಗಳು ಬೈಲಂಗಡಿ—ನಿಸ್ಸಲ—ಸೋಮನಾದೇವಿ—ಬಂಗರರ ಸಂಗಡ ಯುದ್ಧ. 30. ಸುರಾಲ ತೋಳಾರರು—ರಾಜಧಾನಿ—ಸುರಾಲ—ಕೊಕರ್ಣೆ—ನೀಲಾವರ—ಶಂಕರನಾರಾಯಣ—ಪೆರ್ಡೂರು ದೇವಸ್ಥಾನಗಳು—ಪೋರ್ತುಗೀಸರ ಸಂಗಡ ಬಾಸಲೋರ ಬಾರ್ಕೂರು ಯುದ್ಧಗಳು. 31. ಹೊಸಂಗಡಿ ಬಿನ್ನಾಣರು—ಪಣಿಲ ಕೊಣ್ಣಾರರು. 32. ವಿಟ್ಲ ಅರಸರು—ವಿಟ್ಲ ರಾಜಧಾನಿ—ಪೂರ್ವತಂತ್ರ—ವಿಜಯನಗರ ಕಾಲದ ಉನ್ನತ ಸ್ಥಿತಿ—ಇಕ್ಕೇರಿ ಹೈದರನ ಕಾಲದ ಕಷ್ಟಗಳು—ಮಂಜೇಶ್ವರ ದೇವಸ್ಥಾನದ ಸುಲಿಗೆ—ತಲಚೇರಿಯಲ್ಲಿದ್ದದ್ದು. 33. ಕುಂಬಳೆ ಅರಸರು—ಮೂಲಪುರುಷ—ಜಯಸಿಂಹ—ಮೊಗರಾಜ ಬಡಜನ ಸಂಗಡ ಯುದ್ಧ—ಉಪ್ಪಳ ರಾಮನಾಥಪುರ ರಾಜಧಾನಿ—ಶಿವಪ್ಪನಾಯಕನ ಸಂಗಡ ಯುದ್ಧ—ಕೊಡ್ಯಮೆ ಅರಸರು—ಮಾಯಪಾಡಿ ಅರಮನೆ ಕಟ್ಟಿದ್ದು. 34. ನೀಲೇಶ್ವರ ಅರಸರು—ಇಕ್ಕೇರಿ ಮಂಗಳೂರು ಗವರ್ನರ್ ಸೂರಪ್ಪಯ್ಯನ ಸಂಗಡ ಯುದ್ಧ—ಹೈದರ ಟಿಪ್ಪುವಿನ ಸಂಗಡ ಯುದ್ಧ—ನೀಲೇಶ್ವರ ಪಟ್ಟ ಹಾಳಾದ್ದು. 35. ಜೈನ ಬಲ್ಲಾಳರು—ಕಟ್ಟಪಾಡಿ—ಕಾಪು—ಎರ್ಮಾಳ—ಪಡುಬಿದ್ರೆ—ಪಣಂಬೂರು ಕುಳೂರು—ಬ್ರಾಹ್ಮಣ ಬಲ್ಲಾಳರು—ಚಿಟ್ಟುಪಾಡಿ ನಿಡಂಬೂರು.

ಪುರವಣಿ—1. ಪ್ರಸಿದ್ಧಪಟ್ಟ 14 ಊರುಗಳು. 2. 200 ಶಾಸನಗಳ ಅಭಿಪ್ರಾಯ—ಆಲೂಪರು 27—ಪಶ್ಚಿಮ ಚಾಲುಕ್ಯ 1,—ರಾಷ್ಟ್ರಕೂಟ 1—ಹೊಯ್ಸಳ 2—ವಿಜಯನಗರ 95—ಇಕ್ಕೇರಿ 23 ಹೈದರಾಲಿ 1—ಇಂಗ್ಲಿಷರು 1—ಬಂಗರು 6—ಚೌಟರು 3—ಭೈರವ ಅರಸರು 16—ಅಜಿಲರು 5—ವಿಟ್ಲ ಅರಸರು 3—ತೋಳಾರರು 3—ಪಡುಬಿದರೆ ಬಲ್ಲಾಳರು 11—ಸಾವಂತರು 1—ಎರ್ಮಾಳ ವಮುಹೆಗಡೆ 1.

ವಿಳಾಸ:— ಎಂ. ಗಣಪತಿರಾವ್, ಸಹಾಯಕ ಉಪಾಧ್ಯಾಯ, ಟೆಂಪಲ್ ಸೆಕೆಂಡರಿ ಶಾಲೆ, ಬಂಟವಾಳ ದ. ಕನ್ನಡ.
ಅಥವಾ
ಮ್ಯಾನೇಜರ್, ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

೧. ಈ ಜಗತ್ತಿನಲ್ಲಿ ಯಾವುದಾದರೂ ನೆವದಿಂದ ಪ್ರಸಿದ್ಧಿಗೆ ಬರಬೇಕೆಂಬ ಉದ್ದೇಶವುಳ್ಳ ಕೆಲವು ಗೃಹಸ್ಥರಿರುವರು. ಅದರಲ್ಲೂ ದೇಶದ ರಾಜಕೀಯ ಪ್ರಗತಿಯು ಬಹು ಗಲಿಬಿಲಿಯಲ್ಲಿರುವಾಗಲಂತೂ ಅನೇಕರು ತಮ್ಮ ಉದ್ದೇಶಗಳನ್ನೂ ಹಲವು ತರದಿಂದ ಮುಂದೆ ನೂಕುವರು. ಮಿಸೆಸ್. ಬಿಝುಂಟಮ್ಮನವರ ಹೆಸರನ್ನು ಕೇಳದವರು ಹಿಂದುಸ್ಥಾನದಲ್ಲಿ ಬಹು ಕಡಿಮೆ. ಇವರು ಹಿಂದುದೇಶಕ್ಕೆ ಅನ್ಯದೇಶೀಯರಾದರೂ ನಮ್ಮ ಹಿತವಾದಿಗಳಲ್ಲಿ ಪ್ರಮುಖರಾಗಿರುವರು. ಇವರ ಮೊಂಟೆಗ್ಯು ಸುಧಾರಣೆಯನ್ನು ಉತ್ತಮ ರೀತಿಯಿಂದ ನಡಸುವೆವೆಂಬ ಶಪಥವನ್ನು ಸ್ವೀಕರಿಸಿದ ಶಾಂತಪಕ್ಷದ ಕೆಲವು ಅಗ್ರಣಿಗಳನ್ನು ತಮ್ಮ ಅನುಯಾಯಿಗಳನ್ನಾಗಿ ಮಾಡಿಕೊಂಡಿರುವರು. ಇತ್ತೀಚೆಗೆ ಸುಧಾರಣೆಗಳನ್ನು ನಿರಾಶಾಜನಕವೆಂದು ಕಂಡು ಸದ್ಯದಲ್ಲಿಯೆ ಶಾಂತಪಕ್ಷದವರ ಒಂದು ಸಭೆಯನ್ನು ಸೇರಿಸಿರುವರು. ಲೊರ್ಡ ಪೀಲರು ಕಳುಹಿಸಿದ ಸಂದೇಶದಿಂದಂತೂ ಅವರ ಮತಿಯು ಭ್ರಮೆಗೊಂಡಿದೆ. ಈ ಎಲ್ಲಾ ಪರಿಸ್ಥಿತಿಯನ್ನು ನೋಡಿ ನಮ್ಮ ಹಿತಚಿಂತಕರಾದ ಬಿಝುಂಟಮ್ಮನವರು ದಿಲ್ಲಿಯಲ್ಲಿ ಬಹಳ ಸಾಹಸದಿಂದ ಸಭೆಯನ್ನು ಸೇರಿಸಿ ತಮ್ಮ ಮನೋಕ್ಲೇಶಗಳನ್ನೂ ನೆರೆದ ಜನರ ಮುಂದೆ ಚೆಲ್ಲಿಬಿಟ್ಟರು. ಈ ಸಂದರ್ಭದಲ್ಲಿ ಇವರು ಸೆಕ್ರೆಟರಿ ಪದವನ್ನು ಸ್ವೀಕರಿಸಿ ಸ್ವಾಗತಪರಭಾಷಣವನ್ನು ಮಾಡಿದ ಮೇಲೆ ಡೊ. ಸಪ್ರು ಇವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶಾಂತಪಕ್ಷದವರ ಯಥೋಚಿತ ಇತಿಹಾಸವನ್ನು ಪಾರಾಯಣಮಾಡಿ ನಮಗೆ ಇನ್ನೂ ಹೆಚ್ಚು ಸುಧಾರಣೆಗಳನ್ನು ಕೊಡಬೇಕಾಗಿ ವಿನಂತಿಮಾಡಿಕೊಂಡರು. "ಕೆಲವರು ಈ ಕೌನ್ಸಿಲುಗಳನ್ನು ಭೇದಿಸಿ ನಮಗೆ ಕೊಟ್ಟ ಸುಧಾರಣೆಯು ನಿಷ್ಪ್ರಯೋಜನವೆಂದು ಮಾಡಲಿಕ್ಕಿರುವರು. ಆದರೆ ಅದು ಎಷ್ಟು ಅಸಾಧ್ಯವೆಂಬುದನ್ನು ನಾನು ಬಲ್ಲೆನು. ಯಾಕೆಂದರೆ ನಾನು ಸರಕಾರಿ ಅಧಿಕಾರಿಗಳ ಸ್ಥಿತಿಯನ್ನು ಬಲ್ಲೆನು. ಅವರು ಬಲವತ್ತರವಾಗಿದ್ದು ಕೌನ್ಸಿಲನ್ನು ಭೇದಿಸಲಿಕ್ಕೆ ಬಿಡರು." ಈ ಪ್ರಕಾರ ಡೊ. ಸಪ್ರು ಇವರು ಹೇಳಿದರು. ಸರಕಾರವು ಯಾವಾಗಲೂ ಬಲವತ್ತರವಾಗಿದೆ. ಕೌನ್ಸಿಲ್ ಮುರಿಯಲಿಕ್ಕೆ ಜನರು ಬರುತ್ತಾರೆಂದು ತಿಳಿದೆ ಅದು ಹೆಚ್ಚು ಬಲವನ್ನು ಸಂಪಾದಿಸಲಿಕ್ಕಿಲ್ಲ. ಒಮ್ಮೆ ವೇಳೆ ಅದು ಹೆಚ್ಚು ಬಲವತ್ತಾಗಿದ್ದರೂ, ಬಲಶಾಲಿಗಳೊಡನೆಯೆ ಯುದ್ಧಮಾಡುವುದು ಧೀರರ ಲಕ್ಷಣವು, ಹೊರತು ಬಲಹೀನರೊಡನೆ ಜಗಳಮಾಡುವದು ನಮ್ಮ ಉದ್ದೇಶವಲ್ಲವೆಂದು ಡೊ. ಸಪ್ರುಗಳು ಮನಸ್ಸಿನಲ್ಲಿಡಬೇಕು. ನಿರ್ಬಲರೊಡನೆ ಜಗಳಮಾಡುವುದಾಗಲಿ ಯಾಚನೆಮಾಡುವದಾಗಲಿ ಸ್ತ್ರೀ ಪ್ರಕೃತಿಗೆ ಉಚಿತವಾದದ್ದು. ಹೀಗಿರುತ್ತ ಹಿಂದಿಗಳು ಸ್ತ್ರೀಯರಲ್ಲವೆಂಬುದು ಸಪ್ರುಗಳಿಗೆ ಹೇಗೆ ಗೊತ್ತಾಗಲಿಲ್ಲ. ಪ್ರಾಂತಿಕ ಸರಕಾರದ ವಿಷಯವನ್ನು ವಿಚಾರಮಾಡುವಾಗ ಅಧ್ಯಕ್ಷರು ಹೇಳುತ್ತಾರೆ:—ಕಡೆಗೆ ಪ್ರಾಂತಿಕ ಸ್ವರಾಜ್ಯವನ್ನಾದರೂ ಮೊದಲು ಸೂಚಿಸಿದಂತೆ ಕಳೆದ ಈ ಎರಡು ವರುಷಗಳಲ್ಲಿ ಕೊಡಬಹುದಿತ್ತು. ಆದರೆ ಬ್ರಿಟಿಷ ಜನಾಂಗವು ಈಗಲಾದರೂ ಅದನ್ನು ಕೊಡುವುದು ಉಚಿತವು, ಮೊನ್ನೆಯ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ರೋಯಲ್ ಕಮ್ಮಿಶನ್ ಇಲ್ಲಿಗೆ ಬರುವುದೆಂದು ಸರಕಾರದಿಂದ ಸೂಚಿಸಿದೆ. ಆದರೆ ರೋಯಲ್ ಕಮಿಶನ್ನಿನ ಅಗತ್ಯವು ಯಾರಿಗಿತ್ತು? ಈ ಪ್ರಕಾರ ಹೇಳಿ ಅಧ್ಯಕ್ಷತೆಯ ಭಾಷಣವು ಮುಗಿಸಲ್ಪಟ್ಟಿತು. ಈ ಸಭೆಗೆ ಹೇಗಿದ್ದರೂ ವಿ. ಶ್ರೀನಿವಾಸ ಶಾಸ್ತ್ರಿಗಳು ಬಂದಾರೆಂದು ನೆನಸಿದ್ದರು. ಯಾಕೆಂದರೆ ಮೊಂಟೆಗ್ಯು ಅನುಯಾಯಿಗಳಲ್ಲಿ ಅವರೊಬ್ಬರಾಗಿರುವರು. ಆದರೆ ವಿಷಾದದ ಸಂಗತಿಯೇನೆಂದರೆ, ಕಾರಣಾಂತರದಿಂದ ಅವರಿಗೆ ಬರಲು ಅಸಾಧ್ಯವಾಯಿತು. ಆದರೂ ಬಿಝುಂಟಮ್ಮನವರ ಮೇಲಿನ ಪ್ರೀತಿಯಿಂದ ಅವರು ತಮ್ಮ ಭಾಷಣವನ್ನು ಬರೆದು ದಿಲ್ಲಿಗೆ ಕಳುಹಿಸಿದ್ದರು. ಅದನ್ನು ಮಿ. ಜಮುನಾದಾಸ ದ್ವಾರಕಾದಾಸ ಇವರು ಓದಿದರು. ಇವರ ಭಾಷಣದಲ್ಲಿಯೂ [illegible] ಹೇಗೂ ಇರಲಿ. [illegible] ಶಾಂತಪಕ್ಷದವರು [illegible] ಆನಿಸಿಕೊಂಡಿದ್ದರೂ ಬರೆ [illegible] ಜನರು ದಿಲ್ಲಿಯ ಸಭೆಗೆ ಬಂದವರು ಮಾತ್ರ ಬಂದಿದ್ದರು,

ಇದನ್ನು ನೋಡಿ ಬಿಝುಂಟಮ್ಮನವರಿಗೆ ವಿಷಾದವಾಗದೆ ಇರದು. ಈ ಪ್ರಕಾರ ಅವರ ಪ್ರಥಮ ದಿವಸ ಪ್ರಕಾಶಗೊಂಡಿತು.

೨. ವಿದ್ಯಾರ್ಥಿಗಳು ವಯೋವೃದ್ಧರ ಹೇಳಿಕೆಯನ್ನು ಕೇಳುತ್ತಾರೆಂದು ವಾಡಿಕೆಯಲ್ಲಿ ಬಿದ್ದಿದೆ. ಇದನ್ನು ಲಕ್ಷ್ಯದಲ್ಲಿ ತಂದು ಕೆಲವು ವಯೋವೃದ್ಧ ಜನರು ವಿದ್ಯಾರ್ಥಿಗಳಿಗೆ ಅಹಿತವಾದ ಬುದ್ಧಿಯನ್ನು ಹೇಳ ಹೋದರೆ ಅದನ್ನು ಹೇಗೆ ವಿದ್ಯಾರ್ಥಿಗಳಾದವರೂ ಸ್ವೀಕರಿಸ್ಯಾರು? ಈ ನಮ್ಮ ಹೇಳಿಕೆಯ ಹೊಸ ಉದಾಹರಣೆಯು ಮುಂಬಯಿಯಲ್ಲಿ ನಡೆದ ಒಂದು ವಿಶೇಷ ಸಂಗತಿಯಿಂದ ಕಂಡುಬಂದೀತು. ಅಲ್ಲಿಯ ಯುನಿವರ್ಸಿಟಿಯ ವಿದ್ಯಾರ್ಥಿಗಳು 'ಇಂಟರ್ ಕೊಲೇಜಿಯೆಟ್ ಯೂನಿಯನ್'ಎಂಬ ಒಂದು ಸಂಘವನ್ನು ಸ್ಥಾಪಿಸುವ ಉದ್ದೇಶದಿಂದ ಮುಂಬಯಿ ವಿದ್ಯಾರ್ಥಿಗಳ ಅಖಿಲ ಪರಿಷತ್ತನ್ನು ನೆರವೇರಿಸಿದ್ದರು. ಈ ಸಮಾರಂಭಕ್ಕೆ ಅಲ್ಲಿಯ ವ್ಹಾಯ್ಸ್ ಚೆನ್ಸಲರಾದ ಸರ್. ಸಿತಲವಾಡರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಅಧ್ಯಕ್ಷರು ಇಂಗ್ಲಂಡಿನಲ್ಲಿಯೂ ಇಂಥಾ ಸಂಘಗಳಿರುವವೆಂದು ಸೂಚಿಸಿ ಸಂಘದ ಉದ್ದೇಶ ಮತ್ತು ನಡತೆಗಳನ್ನು ಹೇಳಿದರು. ಅದರಲ್ಲಿ ಅವರು ವಿದ್ಯಾರ್ಥಿಗಳು ರಾಜಕೀಯ ವಿಷಯಗಳಲ್ಲಿ ಮನಸ್ಸನ್ನು ಹಾಕಬಾರದೆಂಬ ಉದ್ದೇಶದ ಒಂದು ನಿರ್ಬಂಧವನ್ನು ಸಹ ತಂದರು. ಯುನಿವರ್ಸಿಟಿಯ ವಿದ್ಯಾರ್ಥಿಗಳೆಂದರೆ ಸಾಮಾನ್ಯ ಇತರ ವಿದ್ಯಾರ್ಥಿಗಳ ಹಾಗಲ್ಲ; ಮಾತೃಭೂಮಿಯ ಸೇವೆಯಲ್ಲಿ ಸೇರುವ ತರುಣವೀರರು. ಅಂಥವರಿಗೆ ಈ ನಿರ್ಬಂಧವನ್ನು ಹಾಕುವುದರ ಫಲವು ಸ್ವತಃ ಅಧ್ಯಕ್ಷರಿಗೆ ಮುಂದೆ ಗೊತ್ತಾಯಿತು. ಈ ನಿಬಂಧನೆಯನ್ನು ಹಾಕಿದೊಡನೆಯೆ ಕೆಲವು ವಿದ್ಯಾರ್ಥಿಗಳು ಅದನ್ನು ತೆಗೆಯಬೇಕೆಂದು ಅಧ್ಯಕ್ಷರಿಗೆ ಹೇಳಿದರು, ಆದರೆ ಅವರು ತಮ್ಮ ಹಟವನ್ನು ಬಿಡದೆ ವಿದ್ಯಾರ್ಥಿಗಳ ಸೂಚನೆಯನ್ನು ಮೂಲೆಗೊತ್ತಿದರು. ಆ ಮೇಲೆ ಒಂದು ಭಯಂಕರ ಸಂಗತಿಯು ಅಧ್ಯಕ್ಷರ ಕಣ್ಣಿನ ಮುಂದೆಯೆ ಸಂಭವಿಸಿತು. ಸಭೆಗೆ ಅಲ್ಲಿಯ ವಿದ್ಯಾಖಾತೆಯ ಮಂತ್ರಿಗಳಾದ ಡೊ. ಪರಾಂಜಪೆ ಇವರು ಹಾಜರಿದ್ದರು. ಇವರನ್ನು ಸಹ ಗಣ್ಯಮಾಡದೆ ವಿದ್ಯಾರ್ಥಿಗಳು ಗೊಂದಲವನ್ನೆಬ್ಬಿಸಿ ನಿರ್ಬಂಧವನ್ನು ತೆಗೆಯಬೇಕೆಂದು ಕೂಗಹತ್ತಿದರು. ಆದರೆ ಅದಕ್ಕೆ ಅಧ್ಯಕ್ಷರು ಸಮ್ಮತಿಸರು. ಮತ್ತು ವಿದ್ಯಾರ್ಥಿಗಳೂ ಸಹ ಗೊಂದಲವನ್ನು ನಿಲ್ಲಿಸರು. ಇಂಥ ಪರಿಸ್ಥಿತಿಯಲ್ಲಿ ಸಭೆಯ ಕಾರ್ಯಕ್ರಮವನ್ನು 'ನಡಿಸುವುದು ಅಸಾಧ್ಯವಾಗಿ ಕಂಡುಬಂದು ಅಷ್ಟರಲ್ಲಿಯೆ ಅದನ್ನು ಮುಗಿಸಬೇಕೆಂದು ಮಾಡಿದರು. ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದಕ್ಕೆ ಅಧ್ಯಕ್ಷರಿಗೆ ಸಭೆಯ ಅಂತ್ಯದಲ್ಲಿ ಮನ್ನಣೆ ಮಾಡುವುದು ಸಂಪ್ರದಾಯವಿರುತ್ತದೆ! ಆದರೆ ಆ ಮನ್ನಣೆಯನ್ನು ಸಹ ವಿದ್ಯಾರ್ಥಿಗಳು ಮಾಡದೆ ತಾವು ಮನ್ನಣೆಯನ್ನು ಕೊಡಲಿಕ್ಕಿಲ್ಲವೆಂದು ಸ್ಪಷ್ಟವಾಗಿ ಹೇಳಿ ಅವರ ಕಣ್ಣೆದುರಿನಲ್ಲೆಲ್ಲರೂ ಹೊರಟುಹೋದರು. ಈ ಪ್ರಕಾರ ಮುಂಬಯಿಯ ಅವಸ್ಥೆಯಾಯಿತು. ಕೆಲವರು ಕೆಚ್ಚಾಗಿ ಮರಾಗ್ರಹಿಗಳು ವಿದ್ಯಾರ್ಥಿಗಳು ಮಾಡಿದ್ದು ಉದ್ಧಟತನವೆಂದು ಹೇಳಿಯಾರು. ಆದರೆ ಸ್ವತಃ ಅಧ್ಯಕ್ಷರೆ ಉದ್ಧಟತನವನ್ನು ಸ್ವೀಕರಿಸುವಾಗ ಬಡ ವಿದ್ಯಾರ್ಥಿಗಳಾದರೂ ಏನು ಮಾಡಿಯಾರು? ಇರಲಿ. ಈಗಲಾದರೂ ಅಧಿಕಾರಿಗಳಿಗೆ ವಿದ್ಯಾರ್ಥಿಗಳ ನಿಜವಾದ ಪರಿಸ್ಥಿತಿಯು ಗೊತ್ತಾಗದೆ ಇರಲಿಕ್ಕಿಲ್ಲ. ಆದ್ದರಿಂದ ಅವರು ಇನ್ನು ಮುಂದೆ ವಿದ್ಯಾರ್ಥಿಗಳನ್ನು ರೋಷಗೊಳಿಸುವ ಉಪಾಯವನ್ನು ಸ್ವೀಕರಿಸದೆ ಇದ್ದಾರೆಂದು ನಾವು ನಂಬಿದ್ದೇವೆ.

೩. ಪಂಜಾಬದಲ್ಲಿಯ ಮುಖ್ಯ ಸ್ಥಳದಲ್ಲಿರುವ ಲೊರೆನ್ಸ್ ಪ್ರತಿಮೆಯನ್ನು ಕೀಳಬೇಕೆಂದು ಅಲ್ಲಿಯ ಕೊಂಗ್ರೆಸ ಕಮ್ಮಿಟಿಯು ನಿಶ್ಚಯಿಸಿತ್ತೆಂದು ನಾವು ಮೊದಲೆ ಸೂಚಿಸಿದ್ದೇವೆ. ಆ ಪ್ರಕಾರ ಕೊಂಗ್ರೆಸ ಕಮ್ಮಿಟಿಯು ಸಿವಿಲ್ ಡಿಸ್-ಒಬ್ಬಿಡಿಯನ್ಸ ಮಾಡಿ ಅದನ್ನು ಕೀಳಬೇಕೆಂದು ನಿಶ್ಚಯಿಸಿ ಸ್ವಯಂಸೇವಕರ ಸೈನ್ಯವನ್ನು ಕೂಡಿಸತೊಡಗಿತು. ಅದನ್ನು ಸಹಿಸಲಾರದೆ ಪಂಜಾಬ ಸರಕಾರವು ಸ್ವಯಂಸೈನಿಕರನ್ನು ಕ್ರಿಮಿನಲ್ ಲೊ ಎಮೆಂಡಮೆಂಟ ಎಕ್ಟಿನ ಕೆಳಗೆ ಕೈದುಮಾಡತೊಡಗಿದೆ! ಸ್ವಯಂಸೈನಿಕರನ್ನು ಮಾತ್ರವಲ್ಲ ಪ್ರಾಂತಿಕ ಕೊಂಗ್ರೆಸ್ ಕಮ್ಮಿಟಿಯ ಅಧ್ಯಕ್ಷರಾದ ಲಾಲಾ ದುನೀಚಂದರನ್ನು ಸಹ ಕೈದುಮಾಡಿಯದೆ. ಇವರು ಈಗ ತಾನೆ ಜೈಲುವಾಸದಿಂದ ಬಂದಿರುವರು. ಹೀಗಿರುವಾಗ ಅವರನ್ನು ತಿರುಗಿ ಕೈದುಮಾಡುವುದೆಂದರೆ ಎಂಥ ಆಶ್ಚರ್ಯವು! ಬೇರೆ ಎಲ್ಲ ಪ್ರಾಂತಿಕ ಸರಕಾರಗಳು ಕ್ರಿಮಿನಲ್ ಲೊ ಎಮೆಂಡ್‌ಮೆಂಟ್ ಎಕ್ಟನ್ನು ರದ್ದುಮಾಡಿರುವಾಗ ಪಂಜಾಬ ಸರಕಾರವು ಮಾತ್ರ ಆ ಸತ್ತ ಹೆಣವನ್ನು ಎಬ್ಬಿಸಿ ದಬ್ಬಾಳಿಕೆಯ ಕ್ರಮವನ್ನು ಶುರುಮಾಡುವುದು ಎಷ್ಟು ಮೂರ್ಖತನವು! ಸಂಯುಕ್ತ ಪ್ರಾಂತದ ಗವರ್ನರರು ಸರ್ ವಿಲಿಯಮ್ ಮೋರಿಸರು ಇತ್ತೀಚೆಗೆ ರಾಜಕೀಯ ಕೈದಿಗಳನ್ನು ಬಿಡಿಸಿ ಆ ಪಿಶಾಚವನ್ನು—ಕ್ರಿಮಿನಲ್ ಲೊ ಎಮೆಂಡ್‌ಮೆಂಟ್ ಎಕ್ಟನ್ನು ಅಟ್ಟಿದ್ದಾರೆ. ಹೀಗಿರುವಾಗ ಈ ಪ್ರಾಂತದವರು ಮಾತ್ರ ಹೀಗೇಕೆ ಮಾಡುತ್ತಾರೆ. ಲೊರೆನ್ಸ್ ಪ್ರತಿಮೆಯನ್ನು ಹಿಂದಿಗಳಿಗೆ ನೋಡಲಿಕ್ಕಾಗುವುದಿಲ್ಲವೆಂದಲ್ಲ; ಆದರೆ ಮೇಲಿನ ನಿಂದ್ಯವಾಕ್ಯವು ಮಾತ್ರ ಅಸಹ್ಯವಾಗಿರುವುದು. ಆ ವಾಕ್ಯ ಯಾವುದೆಂದರೆ:—ನಿಮ್ಮನ್ನು ಕತ್ತಿಯಿಂದ ಆಳಬೇಕೊ? ಲೇಖಣಿಯಿಂದಲೊ? ಈ ಮುಖ್ಯವಾಕ್ಯದ ಗೂಢಾರ್ಥವೇನೆಂದರೆ, "ನಿಮ್ಮನ್ನು ಕಡಿಯಬೇಕೊ ಅಥವಾ ನಮ್ಮ ಗುಲಾಮರಾಗುವಿರೊ?" ಇಂಥ ನಿಂದ್ಯಪ್ರತಿಮೆಯನ್ನು ತೆಗೆಯಬೇಕೆಂಬ ಚಳವಳವು ೧೯೨೦ನೆಯ ಇಸವಿಯಿಂದಲೆ ಪ್ರಾರಂಭವಾಗಿತ್ತು. ಆಗಿನ ಮುನ್ಸಿಪಾಲಿಟಿಯು ಅದನ್ನು ಇನ್ನೊಂದು ಸ್ಥಳದಲ್ಲಿ ಇಡಬೇಕೆಂದಿತ್ತು. ಆದರೆ ಸರಕಾರವು ಬೇಕೆಂದು ಎಲ್ಲ ಜನರ ದೃಷ್ಟಿಗೆ ಬೀಳಬೇಕೆಂತಲೆ ಅಲ್ಲಿಯೆ ಸ್ಥಾಪಿಸಿತು. ತಿರುಗಿ ಮರುವರ್ಷ ಅದನ್ನು ಇನ್ನೊಂದು ಕಡೆಗೆ ಇಡಬೇಕೆಂದು ಕೇಳಿದಾಗ ಸರಕಾರವು "ಅದು ನಮಗೆ ಉಚಿತವಾಗಿ ಬಂದಿದೆ. ಅದನ್ನು ಕೊರೆದವನೂ, ಇಲ್ಲಿಗೆ ತಂದ ಉಗಿಹಡಗಗಳೂ, ಉಗಿ ಬಂಡಿಗಳೂ ಧರ್ಮಾರ್ಥವಾಗಿ ಕೆಲಸ ಮಾಡಿರುವವು. ಆದ್ದರಿಂದ ಅದನ್ನು ಬೇರೆಕಡೆಗೆ ತೆಗೆದು ಇಡಲು ಸಾಧ್ಯವಿಲ್ಲ"ವೆಂದು ಉತ್ತರ ಕೊಟ್ಟಿತು! ಆ ಪ್ರತಿಮೆ ಇರುವ ಜಾಗೆಯು ಸರಕಾರ ವಶವಾಗಿದ್ದು ಮುನ್ಸಿಪಾಲಿಟಿಯ ಹಕ್ಕಿನಲ್ಲಿರುವುದು. ಆದ್ದರಿಂದ ತಿರುಗಿ ಮುನ್ಸಿಪಾಲಿಟಿಯು ೧೯೨೧ನೆಯ ವರುಷ ಇದನ್ನು ತೆಗೆಯಲುದ್ಯುಕ್ತವಾಗಿ ತನ್ನ ಇಂಜಿನಿಯರುಗಳನ್ನು ಕೀಳಲು ಕಳುಹಿಸಿತು. ಆದರೆ ಸರಕಾರವು ಅಲ್ಲಿ ಪೋಲೀಸರನ್ನು ನಿಲ್ಲಿಸಿ ಕೀಳಲಿಕ್ಕೆ ಬಂದ ಜನರನ್ನು ಬಲಾತ್ಕಾರದಿಂದ ಚದರಿಸಿತು! ಸಾರಾಂಶ, ಪೂರ್ವದಿಂದಲೂ ಬಂದ ಈ ಚಳವಳಕ್ಕೆ ಪಂಜಾಬ ಪ್ರಾಂತ ಮಾತ್ರವಲ್ಲ ಹಿಂದಿಗಳೆಲ್ಲರು ಸಾಹಾಯ್ಯರಾಗಿ ನಿಲ್ಲುವುದು ಯೋಗ್ಯವು. ಆದ್ದರಿಂದಲೆ ದಿಲ್ಲಿಯ ಜನರು ಕೂಡ ತಾವು ಈ ಚಳವಳಕ್ಕೆ ಸಾಹಾಯ್ಯಮಾಡುವೆನೆಂದು ಠರಾವು ಪಾಸುಮಾಡಿದ್ದಾರೆ.

೪. ಹಿಂದಿಗಳ ಹಣವನ್ನು ನಮ್ಮ ಸರಕಾರವು ಯಾವ ಯಾವ ತರದಿಂದ ನಾಶಮಾಡುತ್ತದೆಂಬ ಸಂಗತಿಯು ದಿನೆದಿನೆ ಹೆಚ್ಚು ಬೈಲಿಗೆ ಬೀಳಹತ್ತಿದೆ. ಪರದೇಶದಲ್ಲಿ ನಮಗೆ ಇತರ ಜನಾಂಗದವರ ಹಕ್ಕನ್ನೆ ಕೊಡಬೇಕೆಂಬ ಉದ್ದೇಶದಿಂದ ಸರಕಾರವು ನಾಮದಾರ ಶಾಸ್ತ್ರಿಗಳನ್ನು ಕಳುಹಿಸಿ ಎಷ್ಟು ದ್ರವ್ಯನಾಶಮಾಡಿತೆಂಬುದು ಎಲ್ಲರಿಗೂ—ಸ್ವತಃ ಶಾಸ್ತ್ರಿಗಳಿಗೂ ಗೊತ್ತಿರುವ ಸಂಗತಿಯೆ. ಈ ರೀತಿಯಾಗಿ ಹಣ ನಾಶಮಾಡಿ ಉಪಯೋಗವಿರುವ ಸ್ಥಳದಲ್ಲಿ ರಿಟ್ರೆಂಚಮೆಂಟಮಾಡುವುದು ಏನು ಉಪಯೋಗವು? ಇನ್ನೊಂದು ರೀತಿಯಿಂದ ಸರಕಾರವು ನಮ್ಮ ಹಣವನ್ನು ವೆಚ್ಚಮಾಡುವ ಸಂಗತಿಯು ಸದ್ಯದಲ್ಲಿಯೆ ಗೊತ್ತಾಗಿದೆ. ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ನಾಮದಾರ ಕಾಳೆ ಇವರು ಒಂದು ಪ್ರಶ್ನೆಯನ್ನು ತಂದರು. ಹಿಂದುಸ್ಥಾನದ ಹೆಸರಿನಿಂದ ಪ್ರೊ. ಚೆರ್ನೆ ಎಂಬವನು ಅಮೇರಿಕದಲ್ಲಿ ಚಳವಳವನ್ನು ಮಾಡಲು ಸರಕಾರವು ಹೇಳಿತ್ತು. ಅವನು ಯಾವ ಕಾರ್ಯವನ್ನು ಮಾಡಿದನು ಮತ್ತು ಅವನ ಸಂಬಳವು ಯಾವ ಖಜಾನೆಯಿಂದ ಕೊಡಲ್ಪಟ್ಟಿತು? ಈ ಪ್ರಕಾರ ಪ್ರಶ್ನೆಯನ್ನು ನಾಮದಾರ ಕಾಳೆ ಇವರು ಕೇಳಿದರು. ಇವರ ಪ್ರಶ್ನೆಗೆ ಕೊಟ್ಟ ಸರಕಾರದ ಉತ್ತರವನ್ನು ನೋಡಿದರೆ ಯಾರಿಗೂ ಆಶ್ಚರ್ಯವಾಗದೆ ಇರಲಿಕ್ಕಿಲ್ಲ. 'ಅವನ ಸಂಬಳವು ಹಿಂದುಸ್ಥಾನದಲ್ಲಿ ತೆರಿಗೆಯಿಂದ ಉತ್ಪನ್ನವಾದ ಹಣದಿಂದಲೆ ಕೊಡಲ್ಪಡುತ್ತದೆ. ಆದರೆ ಅವನು ಯಾವ ಕಾರ್ಯವನ್ನು ಮಾಡುತ್ತಾನೆಂದು ಮಾತ್ರ ನಮಗೆ ಗೊತ್ತಿಲ್ಲ. ಪರಂತು ಸಮಯವನ್ನು ಕೊಟ್ಟ ಪಕ್ಷದಲ್ಲಿ ನಿಜವಾದ ಉತ್ತರವನ್ನು ಕೊಡಬಹುದೆಂದು ಸರಕಾರವು ಹೇಳಿದೆ. ಈ ಪ್ರಕಾರ ಪ್ರಜೆಗಳ ಹಣವನ್ನು ಕೇವಲ ಪರದೇಶಿಯವನಿಗೆ ಕೊಟ್ಟು ಯಾವುದನ್ನು ಅವನು ಮಾಡುತ್ತಾನೆಂದು ತಿಳಕೊಳ್ಳದೆ ಇರುವುದು ದುಂದುಗಾರಿಕೆಯಲ್ಲವೊ? ಈ ರೀತಿಯಾಗಿ ಸರಕಾರವು ಅಜಾಗ್ರತೆಯನ್ನು ಯಾಕೆ ತೆಕ್ಕೊಳ್ಳುತ್ತದೆ? ಪ್ರಜೆಗಳ ಹಣದ ಒಂದು ಪೈಯನ್ನು ಸಹ ಸರಕಾರವು ಹಾಳುಮಾಡದೆ ಯೋಗ್ಯ ರೀತಿಯಲ್ಲಿ ವೆಚ್ಚಮಾಡಬೇಕು. ಹೀಗಿರುತ್ತ ನ್ಯಾಯಶಾಸ್ತ್ರನಿಪುಣವಾದ ಸರಕಾರವು ದುಂದುಗಾರಿಕೆಯ ಕ್ರಮವನ್ನು ಯಾಕೆ ಹಿಡಿದಿರುವುದು? ಯಾವಾಗ ಅವನ ಹೊಟ್ಟೆಯನ್ನು ನಮ್ಮ ಹಣದಿಂದ ತುಂಬಿಸಲ್ಪಡುತ್ತದೊ ಆಗ ಅವನು ಕಾರ್ಯ ಮಾಡುತ್ತಾನೊ ಅಥವಾ ಮೈಗಳ್ಳತನದಿಂದ ಸುಮ್ಮನಿರುವನೊ ಎಂಬದನ್ನು ವಿಚಾರಮಾಡಬೇಕಿತ್ತು. ಹಾಗೆ ಮಾಡದೆ ಇದ್ದುದು ನಮ್ಮ ದುರ್ಭಾಗ್ಯವೆ ಎಂದು ತಿಳಕೊಳ್ಳಬೇಕು.

೫. ಈ ರೀತಿಯಾಗಿಯೆ ಸರಕಾರವು ದ್ರವ್ಯನಾಶಮಾಡುತ್ತದೆಂಬುದು ಮಾತ್ರವಲ್ಲ. ಇನ್ನು ಎಷ್ಟೊ ನಿರರ್ಥಕ ಕಾರ್ಯಗಳಲ್ಲಿ ಹಣವನ್ನು ಉಪಯೋಗಿಸಿ ಯಾವ ಉಪಯೋಗವನ್ನೂ ಪಡಕೊಳ್ಳುವುದಿಲ್ಲ. ಇದಕ್ಕೆ ಇನ್ನೊಂದು ದೃಷ್ಟಾಂತವನ್ನು ಕೊಡಬಹುದು. ಹಿಂದುಸ್ಥಾನದ ಸರಹದ್ದು ಎಷ್ಟೊ ಸಮಯದಿಂದ ಬಹು ಅತೃಪ್ತಿಕರವಾದ ಸ್ಥಿತಿಯಲ್ಲಿರುವುದು. ಅದನ್ನು ಯೋಗ್ಯರೀತಿಯಾಗಿ ತರಲು ಸರಕಾರವು ಯಥಾಕ್ರಮವಾಗಿ ತನ್ನ ದಂಡನ್ನು ಕಳುಹಿಸಿ ಎಷ್ಟೊ ದ್ರವ್ಯವನ್ನು ನಾಶಮಾಡಿಯದೆ. ಆದರೂ ಕೂಡ ಅಲ್ಲಿಯ ಪರಿಸ್ಥಿತಿಯು ಪೂರ್ವದಂತೆಯೆ ಇದೆ! ಆದ್ದರಿಂದ ಸರಕಾರವು ಎಷ್ಟು ದ್ರವ್ಯವನ್ನು ಈ ಕಾರ್ಯದಲ್ಲಿ ವೆಚ್ಚಮಾಡಿ ಏನೆಲ್ಲ ಕಾರ್ಯಗಳನ್ನು ಮಾಡಿತೆಂಬ ಅರ್ಥದ ಕೆಲವು ಪ್ರಶ್ನೆಗಳನ್ನು ಮಿ| ಬಿ. ಎಸ್. ಕಾಮತರು ಎಸೆಂಬ್ಲಿಯಲ್ಲಿ ಕೇಳಿದರು. ಇದಕ್ಕೆ ಸರಕಾರದ ಉತ್ತರ, ೧೯೨೩ ಇಸವಿಯ ಒಕ್ಟೋಬರ ವರೆಗಿನ ಖರ್ಚು ಮುಂದಿನಂತಿರುವುದು. ಲಷ್ಕರಿಯ ಸಂಬಂಧ ಹಣ ಖರ್ಚು ೧೧೯ ಲಕ್ಷ ರೂಪಾಯಿಗಳು. ೭೮ ಟನ್ ಬೊಂಬುಗಳು ಉಪಯೋಗಿಸಲ್ಪಟ್ಟವು. ನಮ್ಮ ಕಡೆಯಿಂದ ೭೭ ಜನರು ಮಡಿದರು. ವೈರಿಗಳಲ್ಲಿ ೫೫ ಜನರು ಮಾತ್ರ ನಾಶವಾಗಿದ್ದಾರೆ! ಈ ಅಸಮಾಧಾನಕರವಾದ ಉತ್ತರವನ್ನು ಕೇಳಿ ಹಿಂದಿಗಳಿಗೆ ವಿಷಾದವಾದೀತು. ಯಾಕೆಂದರೆ ೧೧೯ ಲಕ್ಷ ರೂಪಾಯಿಗಳನ್ನೂ ಅಷ್ಟು ಜನರ ನಾಶವನ್ನೂ ಮಾಡಿ ಯಾವ ಸತ್ಕಾರ್ಯವನ್ನು ಸರಕಾರವು ಮಾಡಿರುವುದು? ಅವರ ಬರೆ ೫೫ ಜನರನ್ನು ನಾಶಮಾಡಲು ನಮ್ಮ ಇಷ್ಟು ದ್ರವ್ಯ ಮತ್ತು ರಕ್ತನಾಶವಾಗಬೇಕಾದರೆ ಕಲ್ಪಾಂತರದವರೆಗೂ ಈ ಸರಹದ್ದಿನ ಪ್ರಶ್ನೆಯನ್ನು ಹಾಗೆಯೆ ಇಡಬೇಕಾದೀತು. ಇಷ್ಟಾಗಿಯೂ ಕೂಡ ಅಲ್ಲಿಯ ಸ್ಥಿತಿಯು ಪೂರ್ವದಂತೆಯೆ ಇದೆ! ಈ ತರದ ಯುದ್ಧದ ಕ್ರಮವನ್ನಾದರೂ ಬಿಟ್ಟು ಬೇರೆ ಯಾವ ತರದ ಶಾಂತ ಉಪಾಯದಿಂದ ಬ್ರಿಟಿಷ್ ಸರಕಾರವು ಒಪ್ಪಂದವನ್ನು ಮಾಡಕೊಳ್ಳಬಾರದೆ? ಖಿಲಾಫತ್ ಪ್ರಶ್ನೆಯನ್ನು ಯೋಗ್ಯರೀತಿಯಿಂದ ತೀರ್ಮಾನ ಮಾಡಿ ಅಫಘಾನಿಸ್ಥಾನದ ಅಮೀರನ ಸಹಾಯ ಪಡಕೊಳ್ಳಬೇಕು. ಮತ್ತು ಅವನ ಮುಖಾಂತರ ನಮ್ಮ ಸರಹದ್ದಿನ ಪ್ರಶ್ನೆಯನ್ನು ನಿರ್ಣಯಿಸಿ ಶಾಂತತೆಯನ್ನು ಸ್ಥಾಪಿಸಬೇಕು. ಈ ರೀತಿಯಾಗಿ ನಮ್ಮ ಸರಕಾರವು ಮಾಡಿದರೆ ಬೇಗನೆ ಒಪ್ಪಂದವಾಗಿ ದ್ರವ್ಯನಾಶವೂ ರಕ್ತಪಾತವೂ ನಿಲ್ಲುವುದು. ಇಲ್ಲದಿದ್ದರೆ ಖಜಾನೆಯ ಬೊಕ್ಕಸದಿಂದ ಹಣದ ಮಳೆಯನ್ನು ಸುರಿಸಬೇಕಾದೀತು. ಆದ್ದರಿಂದ ನಮ್ಮ ವೈಸರಾಯರಾದರೂ ಈ ಪ್ರಶ್ನೆಯನ್ನು ಯೋಗ್ಯ ರೀತಿಯಿಂದ ಪರಿಶೀಲಿಸಿ ಬೇಗನೆ ಪರಿಸ್ಥಿತಿಯನ್ನು ಬದಲಾಯಿಸುವರೆಂದು ನಾವು ನಂಬಿದ್ದೇವೆ.

ಮಂಗಳೂರು.

ಈ ಜಿಲ್ಲೆಯ ಸ್ಕೂಲ್ ಇನ್ಸ್‌ಪೆಕ್ಟರರಾಗಿರುವ ಮಿ| ಜಿ. ಎ. ಏಟ್ಸ್ ಎಮ್. ಎ. ಐ. ಇ. ಎಸ್‌ರವರು ಈ ಸರ್ಕಲನ್ನು ಬಿಟ್ಟುಹೋಗುವುದರಿಂದ ಅವರು ಈ ವರೆಗೆ ಈ ಜಿಲ್ಲೆಗೆ ಮಾಡಿದ ಉಪಕಾರವನ್ನು ಸ್ಮರಿಸಿ ಅವರನ್ನು ಉಪಚರಿಸುವುದಕ್ಕಾಗಿ ಕಳೆದ ಆದಿತ್ಯವಾರ ಮ. ರಾ. ನೆಲ್ಲಿಕಾಯಿ ವೆಂಕಟರಾಯರ ಭವನದಲ್ಲಿ ಒಂದು ಸಂತೋಷಕೂಟವು ಕೂಡಿತು. ಟೀಪಾರ್ಟಿಯ ಸತ್ಕಾರ, ಗದಗಿನ ನಾಟಕ ಕಂಪೆನಿಯ ಗಾಯನ ಇವು ಆದ ಬಳಿಕ ದೊರೆಗಳವರ ಗುಣಕಥನವನ್ನು ಮಾಡಿ ಕೆಲವರ ಭಾಷಣವಾದ ನಂತರ ದೊರೆಗಳು ಈ ಜಿಲ್ಲೆಯ ಶಿಕ್ಷಣಾಧಿಕಾರಿಗಳ ನಿಪುಣತೆ ಮುಂತಾದನ್ನು ಕುರಿತು ಸಮಯೋಚಿತ ಭಾಷಣವನ್ನು ಮಾಡಿದ ಬಳಿಕ ಗೊಂಬೆಯಾಟದ ಪ್ರದರ್ಶನವು ತುಸುಹೊತ್ತು ನಡೆದು ಕೊನೆಗೆ ದೊರಗಳವರನ್ನು ಅಭಿವಂದಿಸಿದ ನಂತರ ಸಭೆಹೇರಿತು.

ಗವರ್ನಮೆಂಟ ಹ್ಯಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತಿ ಉತ್ಸವವು ಕಳೆದ ತಾ. ೧೧ರಲ್ಲಿ ಮ. ರಾ. ರಾ. ಅಮ್ಮೆಂಬಳ ಶ್ರೀನಿವಾಸ ಪೈ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಫಲಾಹಾರ ಸತ್ಕಾರವೂ ಅನಂತರ ಶಾಲಾ ಮಕ್ಕಳಿಗೆ ಇನಾಮು ಹಂಚೋಣವೂ ಆಯಿತು. ಸಾಯಂಕಾಲ ವರ್ಧಂತಿ ಉತ್ಸವದ ಮಹಾಸಭೆಯು ಕೂಡಿತು. ಸಭಾಕಾರ್ಯದ ಪ್ರಾರಂಭದಲ್ಲಿ ಶಾಲಾ ಬಾಲಕರ ಪ್ರಾರ್ಥನೆಯಾದ ಮೇಲೆ ಮುಖ್ಯೋಪಾಧ್ಯಾಯರು ಶಾಲಾವರದಿಯನ್ನು ಓದಿದರು. ಬಳಿಕ ಅಧ್ಯಕ್ಷರು ಸ್ಟುಡೆಂಟ್ಸರಿಗೆ ಇನಾಮುಗಳನ್ನು ಹಂಚಿದರು. ಅನಂತರ ಮೋಡೆಲ್ ಶಾಲೆಯ ಬಾಲಕರು ಕಾರ್ಕಳದ ಭೈರವರಾಯನು ವಿಜಯ ನಗರದ ದೇವರಾಯರನ್ನು ತನ್ನ ಪರಿವಾರ ಸಮೇತ ಗೋಮಟ ಬೆಟ್ಟದಲ್ಲಿ ಎದುರುಗೊಂಡು ಸ್ವಾಗತೀಕರಿಸಿದ ಈ ಜಿಲ್ಲೆಯ ಪೂರ್ವ ಚರಿತ್ರೆಯ ಒಂದು ಭಾಗವನ್ನು ಅಭಿನಯಿಸಿದರು. ತರುವಾಯ ಶಾಲೆಯ ಉಮೇದುವಾರರು 'ಎಕ್ ರೋಜ್‌ಕ ಖಲೀಫ್' ಎಂಬ ಕನ್ನಡ ನಾಟಕವನ್ನು ಅಭಿನಯಿಸಿದರು. ಕೊನೆಗೆ ದೇವತಾ ಸ್ತುತಿಯನ್ನೂ ರಾಜಗೀತವನ್ನೂ ಹಾಡಿ ಆದ ಮೇಲೆ ನಾಟಕದಲ್ಲಿ ವೇಶವನ್ನು ಹಾಕಿ ಕೊಂಡವರಲ್ಲಿ ಮೂರು ಮಂದಿ ಶಾಲೆಯ ಉಮೇದುವಾರರಿಗೆ ಅಧ್ಯಕ್ಷರು ಇನಾಮುಗಳನ್ನು ಹಂಚಿದ ಮೇಲೆ ಅಂದಿನ ಸಮಾರಂಭವು ಕೊನೆಗೊಂಡಿತು.

ದೇಶಭಕ್ತ ಸಿ. ರಾಜಗೋಪಾಲಾಚಾರ್ಯರೂ ಅಖಿಲ ಭಾರತೀಯ ಕಾಂಗ್ರೆಸ್ ಕಮ್ಮಿಟಿಯ ಕಾರ್ಯದರ್ಶಿಗಳಾದ ಮಜುಮೂಲಿ ಮತ್ತು ಬಾಬು ರಾಜೇಂದ್ರ ಪ್ರಸಾದರೂ, ಕರ್ನಾಟಕ ಪ್ರಾಂತಿಕ ಕಮ್ಮಿಟಿಯ ಅಧ್ಯಕ್ಷರಾದ ದೇ. ಗಂಗಾಧರರಾವ್ ದೇಶಪಾಂಡೆಯವರೂ ಕರ್ನಾಟಕವನ್ನು ಸಂದರ್ಶಿಸುವರೆಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮ್ಮಿಟಿಯ ಕಾರ್ಯದರ್ಶಿಯವರ ಪತ್ರ ಬಂದಿದೆ. ಈ ಎಲ್ಲಾ ಮುಂಖಂಡರೂ ಉಡುಪಿ ಜಿಲ್ಲಾ ಪರಿಷತ್ತಿಗೆ ದಯಮಾಡಿಸುವಂತೆ ತಂತಿ ಮೂಲಕ ವಿನಂತಿ ಮಾಡಿಕೊಂಡಿದೆಯೆಂದು ಜಿಲ್ಲಾ ಕೊಂಗ್ರೆಸ್ ಕಮ್ಮಿಟಿಯ ಸೆಕ್ರೆಟರಿಗಳು ತಿಳಿಸುವರು.

[illegible] ಸಹಕಾರ ಸಂಘದ ಮಹಾಸಭೆಯು ಇದೇ ತಾ. ೩೦ರಲ್ಲು ಮಧ್ಯಾಹ್ನ ೩ ಗಂಟೆಗೆ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರುಗುವುದು.

ಭಾಷಾ ಸಾಹಿತ್ಯಗಳ ಅಭಿವೃದ್ಧಿಯನ್ನು ಮಾಡುವುದಕ್ಕಾಗಿ ಜಿಲ್ಲೆಯೊಳಗಿನ ಕನ್ನಡ ಭಾಷಾಭಿಮಾನಿಗಳ ಸಾಹಿತ್ಯ ಸಭೆಯೊಂದನ್ನು ಏರ್ಪಡಿಸಿ ಬರುವ ಮೇ ತಿಂಗಳಲ್ಲಿ ಈ ಕುರಿತು ಒಂದು ಮಹಾ ಸಭೆಯನ್ನು ಕೂಡಿಸಲು ಕಳೆದ ತಾ. ೧೨ರಲ್ಲಿ ಮ. ರಾ. ನೆಲ್ಲಿಕಾಯಿ ವೆಂಕಟರಾಯರ ಭವನದಲ್ಲಿ ಒಂದು ಸಭೆ ಸೇರಿತು. ಮತ್ತು ಆ ದಿನ ಒಂದು ಕಾರ್ಯಕಾರಿ ಕಮ್ಮಿಟಿಯು ನೇಮಕವಾಯಿತು. ಮುಂದಿನ ಎಲ್ಲಾ ವಿಚಾರಗಳನ್ನು ಪರಾಮರ್ಶಿಸಿ ಅಗತ್ಯವಿರುವ ಏರ್ಪಾಡುಗಳನ್ನು ಮಾಡಲು ಬರುವ ತಾ. ೨೬ರಲ್ಲಿ ಪುನಃ ಒಂದು ಸಭೆ ಸೇರಲಿಕ್ಕಿದೆ.

ನಾಳೆ ದಿನ ಶ್ರೀ ರಾಮಕೃಷ್ಣ ಪರಮ ಹಂಸರವರ ೮೮ನೇ ಜನ್ಮದಿನವಾದುದರಿಂದ ಇಲ್ಲಿಯ ಶಿವ ಬ್ರಾಹ್ಮಣರ ವಿದ್ಯಾರ್ಥಿ ಭವನದಲ್ಲಿ ಆ ದಿನವನ್ನು ಆಚರಿಸುವಂತಾಗಿ ಕೇಳುತ್ತೇವೆ. ಸಾಯಂಕಾಲ ೫-೩೦ ಗಂಟೆಗೆ ಮ. ರಾ. ರಾ. ಬಿ. ಪುಂಡರೀಕ ಬಾಳಿಗೆರವರು ಸದರಿ ಭವನದಲ್ಲಿ ರಾಮಕೃಷ್ಣ ಪರಮಹಂಸರವರ ವಿಷಯವಾಗಿ ಉಪನ್ಯಾಸಕೊಡುವರು. ಇದಕ್ಕೆ ಎಲ್ಲರಿಗೂ ಸ್ವಾಗತವಿದೆ.

ರಾಷ್ಟ್ರೀಯ ಶಾಲೆಗಳ ಬಗ್ಗೆ ಕೊಡಿಸೋಣಾಗುವ ಮುಷ್ಟಿಫಂಡಿಗೆ ತಾ. ೧೧—೨—'೨೨ರಲ್ಲಿ ಜಮೆ:—೭೮ ಸೇರು ಅಕ್ಕಿ, ರೂ. ೩೫—೭—೦. ಮಂಗಳೂರು ತಾಲೂಕು ಕೊಂಗ್ರೆಸ್ಸು ಕಮ್ಮಿಟಿಯ ಮಹಾ ಸಭೆಯನ್ನು ಇದೇ ತಾ. ೧೯ನೇ ಆದಿತ್ಯವಾರ ಮಧ್ಯಾಹ್ನ ೨ ಗಂಟೆಗೆ ಮುಂದರಿಸಿಟ್ಟಿಯದೆ. ಈ ವರ್ಷದ ಬಗ್ಗೆ ಸದಸ್ಯರಾಗಿದ್ದವರು ವರ್ಗಣೆ ಹಣ ಆಣೆ ನಾಲ್ಕನ್ನು ತೆಗೆದುಕೊಂಡೇ ಬರಬೇಕಾಗಿ ವಿನಂತಿ.

ಮ. ತಾ. ಕೊ. ಕಮ್ಮಿಟಿ, } ಮು. ಉಮೇಶ ರಾವ್,
ತಾ. ೧೫—೨—'೨೨. } ಕಾರ್ಯದರ್ಶಿ.

ದಕ್ಷಿಣ ಕನ್ನಡ

ಬೆಳ್ಳಿ:—ಇಲ್ಲಿಯ ಬೋರ್ಡು ಶಾಲೆಯ ವಾರ್ಷಿಕ ವರ್ಧಂತಿಯು ಇದೇ ಕಳೆದ ಜನವರಿ ತಾ. ೩೧ನೇ ಮಂಗಳವಾರ ಅಪರಾಹ್ನ ೫ ಗಂಟೆಗೆ ಅದಕ್ಕಾಗಿ ತಯಾರಿಸಲ್ಪಟ್ಟ ಚಪ್ಪರದಲ್ಲಿ ನೆರೆಯಿತು. ಚಪ್ಪರವು ತಳಿರುದೋರಣಾದಿಗಳಿಂದ ಅಲಂಕರಿಸಲ್ಪಟ್ಟಿತ್ತು. ಶಾಲಾ ಪಠಾಳಿಯು ದಾರಿಯಲ್ಲಿ ಹಾದು ಹೋಗುವ ಜನರನ್ನು ಇಲ್ಲಿಗೆ ಕರೆಯುವಂತಿತ್ತು. ದೇವತಾ ಪ್ರಾರ್ಥನೆ, ಸ್ವಾಗತ ಪದ್ಯ, ಅಧ್ಯಕ್ಷರನ್ನು ಆರಿಸುವುದು ಮತ್ತು ಅಧ್ಯಕ್ಷರ ಪ್ರಥಮ ಭಾಷಣ, ಶಾಲಾ ವರದಿ, ಉಪನ್ಯಾಸ. ಶಾಲಾ ಬಾಲಕರ ತಾಳಮದ್ದಳೆ, ರಾ ಬೆಳ್ಳಿ ಅನಂತ ರಾಮ ಉಪಾಧ್ಯಾಯರ ಮನೋಹರ ವಾದ್ಯ ಸಂಗೀತ, ವಿದ್ಯಾರ್ಥಿಗಳ "ಭರತನ ಭ್ರಾತೃ ಭಕ್ತಿ" ಎಂಬ ನಾಟಕ, ಇನಾಮು ಹಂಚುವುದು, ಅಧ್ಯಕ್ಷರ ಭಾಷಣ, ಧನ್ಯವಾದಗಳನ್ನರ್ಪಿಸುವದು, ರಾಷ್ಟ್ರಗೀತ ಮೊದಲಾದವುಗಳು ಕ್ರಮದಂತೆ ನಡೆದವು. ಚಿಕ್ಕ ತಾಳ, ಚಿಕ್ಕ ಮದ್ದಳೆ, ಚಿಕ್ಕ ಹುಡುಗರು, ಚಿಕ್ಕ ಅರ್ಥ ಇವೆಲ್ಲವೂ ಸಭಿಕರನ್ನು ಅತ್ಯಾನಂದ ಪಡಿಸಿತು. ಪದ್ಯವನ್ನು ಹೇಳಿದ ಸುಂದರ ಶೆಟ್ಟಿ, ಮದ್ದಳೆಯನ್ನು ಬಾರಿಸಿದ ಶಂಕರನಾರಾಯಣ, ವಿಶ್ವಾಸನ ಅರ್ಥವನ್ನು ಹೇಳಿದ ಐತ್ತಲ ಶೆಟ್ಟಿ, ಗಾರುಡಿಯ ಅರ್ಥವನ್ನು ಹೇಳಿದ ಕೋವಿಸ್ ಮಾರ್ಟಿಸ್ ಮತ್ತು ಬಾಲ್ಯದ ಪಾತ್ರವನ್ನು ವಹಿಸಿದ ವಾಸುದೇವ ಭಟ್ಟ ಮೊದಲಾದ ಚಿಕ್ಕ ಹುಡುಗರನ್ನೂ, ಭರತನ ಪಾತ್ರವನ್ನು ವಹಿಸಿದ ಸುಂದರ ಶೆಟ್ಟಿ, ಕೈಕೆಯ ಪಾತ್ರವನ್ನು ವಹಿಸಿದ ಕೆ. ಪದ್ಮನಾಭ ಶೆಟ್ಟಿ, ಕೌಸಲ್ಯೆಯ ಪಾತ್ರವನ್ನು ವಹಿಸಿದ ತಮ್ಮಯ್ಯ ಸೇರಿಗಾರ, ರಾಮನ ಪಾತ್ರವನ್ನು ವಹಿಸಿದ ಬಿ. ಪದ್ಮನಾಭ ಶೆಟ್ಟಿ ಮೊದಲಾದವರನ್ನು ಪ್ರತಿಯೊಬ್ಬರು ಕೊಂಡಾಡಿದರು. ಪಾತ್ರವರ್ಗದಲ್ಲಿ ಭರತನು ಪ್ರಥಮ ಸ್ಥಾನವನ್ನೂ, ಕೈಕೆಯು ಎರಡನೆಯ ಸ್ಥಾನವನ್ನೂ, ರಾಮನು ಮೂರನೆಯ ಸ್ಥಾನವನ್ನೂ ಹೊಂದಿ ಇನಾಮು ಪಡೆದದ್ದಲ್ಲದೆ, ಅತ್ಯುತ್ಕೃಷ್ಟವಾದ [illegible] ಕೌಸಲ್ಯೆಗೂ ಇನಾಮು ಕೊಡಲಾಯಿತು. ಹಾಗೆಯೇ ತಾಳ ಮದ್ದಳೆಯ ಪಾತ್ರವರ್ಗಕ್ಕೂ ನಾಟಕಾಭಿನಯದ ಇತರ ಪಾತ್ರವರ್ಗಕ್ಕೂ ಬಹುಮಾನಗಳು ಹಂಚಲಾದವು. ಇಂದಿನ ಅಧ್ಯಕ್ಷಸ್ಥಾನಕ್ಕೆ ಮ. ರಾ. ರಾ. ಉಡ್ಪಿ ರೇಂಜ್ ಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರು ಆರಿಸಲ್ಪಟ್ಟಿದ್ದರು. ಬಡ ವಿದ್ಯಾರ್ಥಿಗಳ ಸಹಾಯಕ್ಕಾಗಿ ಶ್ರೀಯುತ ಅಧ್ಯಕ್ಷ ಮಹಾಶಯರು ರೂಪಾಯಿ ೫ನ್ನು ದಾನಮಾಡಿದುದು ಅವರ ಉದಾರ ಮನಸ್ಸನ್ನು ವ್ಯಕ್ತಗೊಳಿಸುತ್ತದೆ. ಇವರು ತಮ್ಮ ಭಾಷಣದಲ್ಲಿ ಈ ಶಾಲೆಯ ಮೇಲೆ ತಮಗಿದ್ದ ಪ್ರೀತಿಯನ್ನು ಬಹಿರಂಗಪಡಿಸಿದರು. ಜನ ಸಮುದಾಯವು ಒಂದೂವರೆ ಸಾವಿರಕ್ಕೆ ಸಮೀಪಿಸಿತ್ತು. ಹಳ್ಳಿಯ ಮೂಲೆಯಲ್ಲಿದ್ದ ಬೆಳ್ಳಿ ಬೋರ್ಡು ಶಾಲೆಯ ಕಟ್ಟೋಣವು ಸದ್ಯದಲ್ಲೇ ದುರಸ್ತಿಯಾಗಿ ಶಾಲೆಯು ದಿನೇ ದಿನೇ ಅಭಿವೃದ್ಧಿಯನ್ನೈದುವಂತೆ ಶ್ರೀ ಭಗವಂತನು ಅನುಗ್ರಹಿಸಲಿ!

ಕಾಸರಗೋಡು:— ಕಾಸರಗೋಡು ತಾಲೂಕು ಜಮಾಬಂದಿಯು ಇದೇ ತಿಂಗಳ ತಾ. ೮ರಿಂದ ಪ್ರಾರಂಭವಾಗಿಯದೆ. ತಾ. ೮ ಮತ್ತು ೯ನೆಗೆ ಮಂಜೇಶ್ವರ ಫಿರ್ಕಾ [illegible] ಜಮಾಬಂದಿಯು ಆಯಿತು. ಈ ತಿಂಗಳ [illegible] ಡಿವಿಜನ್ ಜಮಾಬಂದಿಯು ಮುಗಿಯುವುದಾಗಿ ವರ್ತಮಾನ ಇದೆ. ಈ ಮೇಲೆ ಹೊಸದುರ್ಗ ಡಿವಿಜನ್ ಜಮಾಬಂದಿಯು ಪ್ರಾರಂಭವಾಗುವುದು. ಈ ಸರ್ತಿ ಈ ತಾಲೂಕಿಗೆ ಹಜರತ್ ಜಿಲ್ಲಾ ಕಲೆಕ್ಟರಾವರ ಜಮಾಬಂದಿಯಾಗಿರುತ್ತದೆ.

ನಿನ್ನೆ ದಿನ ಇಲ್ಲಿಯ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಶಿವರಾತ್ರಿಯ ಪೂಜಾ ಉತ್ಸವ ವಿಶೇಷ ಬಹು ವಿಜೃಂಭಣೆಯಿಂದ ನಡೆಯಿತು. [illegible] ಬಹು ಒಳ್ಳೆಯ ರೀತಿಯಲ್ಲಿ ಜರಗಿದವು.

ಪ್ರಕೃತ ಇಲ್ಲಿರುವ ಮಂಗಳೂರು ಶ್ರೀ [illegible] ನಾಟಕ ಮಂಡಳಿಯವರು ತಮ್ಮ [illegible] ಮುಖ್ಯ ಕಾರಣವಿರುತ್ತದಂತೆ. ಇವರು [illegible] ನಾಟಕಗಳಲ್ಲಿ ಜನರ ಮನಸ್ಸನ್ನು ಆಕರ್ಷಿಸಿರುತ್ತಾರೆ. ಡ್ರೆಸ್, ಸೀನ ವಗೈರೆಗಳು [illegible] ರೀತಿಯಲ್ಲಿ ನಾಟಕ ಮಾಡುವವರು ಬಹಳ ಕೊಂಚವೆಂದು ಜನರು ಆಡುತ್ತಾರೆ.

ಸೆಕೆಯು ಬಹು ವಿಶೇಷ ಇರುವದರಿಂದ ಇಲ್ಲಿಯ ಬೋರ್ಡು ಮತ್ತು ಸೆಕೆಂಡರಿ ಶಾಲೆಯ ಅಧಿಕಾರಿಗಳು ಶಾಲಾ ಟೈಮನ್ನು ಬೆಳಗ್ಗೆ ೭-೩೦ರಿಂದ ೧೦-೩೦ ಮತ್ತು ೩-೩೦ರಿಂದ ೫ ಹೀಗೆ ಪಟ್ಟಿಲಮಾಡಿರುತ್ತಾರೆ.

ಇಲ್ಲಿ ಪ್ರಕೃತವಿರುವ ಲಾಟೀನುಗಳು ಬಹು ದೂರ ದೂರ ಇಟ್ಟದ್ದು ಅಲ್ಲದೆ ರಾತ್ರಿ ಸರಿಯಾಗಿ ಉರಿಯುವುದೂ ಇಲ್ಲವಾಗಿ ಕಾಣುತ್ತದೆ. ಕಗ್ಗತ್ತಲೆಯ ರಾತ್ರಿಯಲ್ಲಿ ಮಾರ್ಗದಲ್ಲಿ ಬೆಳಕು ಇಲ್ಲದಿದ್ದಲ್ಲಿ ಬಡ ಜನರಿಗೆ ಅತ್ತಿತ್ತ ಹೋಗುವರೆ ಬಹಳ ತೊಂದರೆಯಾಗುತ್ತದೆ. ಈಗ ಇರುವ ಕಂಬಗಳಿಗೆ ನಡುಮಧ್ಯದಲ್ಲಿ ಒಂದೊಂದು ಕಂಬವನ್ನು ಹಾಕಿಸುವದಲ್ಲದೆ, ಇನ್ನು ಎಲ್ಲೆಲ್ಲಿ ಕಂಬಗಳಿಲ್ಲವೋ ಅಲ್ಲಲ್ಲಿ ಸಹ, ಕಂಬಗಳನ್ನು ಹಾಕಿಸಿ ಸರಿಯಾಗಿ ಉರಿಸುವಂತೆ ಏರ್ಪಾಡುಮಾಡಿದರೆ ಎಲ್ಲಾ ಜನರಿಗೂ ಬಹಳ ಉಪಕಾರವಾಗುತ್ತಿತ್ತು. ಅಲ್ಲದೆ ಬ್ಯಾಂಕ್ ಲಿಮಿಟೆಡ್ಡಿಗೆ ಒಳಪಟ್ಟ ಬೀರಂತ ಟೈಲ್‌ಫ್ಯಾಕ್ಟರಿಗೆ ಹೋಗುವ ಗದ್ದೆಯ ಸಮೀಪ ಒಂದು ಲಾಟೀನು ಬಹು ಅಗತ್ಯವಿರುತ್ತದೆ. ಈ ದಾರಿಯಿಂದ ಇಳಿದು ಹೋಗುವ ಜನರಿಗೆ ಕತ್ತಲೆಯ ಸಮಯದಲ್ಲಿ ಬಹು ಸಂಕಟಗಳು ಒದಗಿ ಒಂದೊಂದು ವೇಳೆ ಕೆಳಗಿರುವ ದೊಡ್ಡ ತೋಡಿನಲ್ಲಿ ವ ಗದ್ದೆಯಲ್ಲಿ ಸಹ ಬೀಳುವದುಂಟು.

ಕಾರ್ಕಳ:— ಮಿ. ಅಲೆಕ್ಸ್ ಆಲ್ವರಿಸ್ ಎಂಬ ದಂತ ವೈದ್ಯರು ಇದೇ ತಾರೀಕು ೧೩ರಿಂದ ೨ ವಾರಗಳ ವರೆಗೆ ಮಿ. ಯಸ್. ಯಲ್ ವಂಥಾಯಸರ ಮನೆಯಲ್ಲಿದ್ದು ಹಲ್ಲು ಬೇನೆಯ ಚಿಕಿತ್ಸೆಯನ್ನು ಅಪೇಕ್ಷಿಸುವವರಿಗೆ ಚಿಕಿತ್ಸೆಯನ್ನು ಮಾಡುವರು.

ಲಾಸೇನ್ ಸಂಧಿ ಪರಿಷತ್ತು.

ತುರ್ಕಿಯ ಸಮಸ್ಯೆಯನ್ನು ಕುರಿತು ಆಲೋಚಿಸಲು ಲಾಸೇನಿನಲ್ಲಿ ಕೂಡಿದ ಪರಿಷತ್ತಿನ ಪ್ರಯತ್ನವು ಸಫಲವಾಗಲಿಲ್ಲ. ಮಿತ್ರಮಂಡಲಿಯವರು ಸೂಚಿಸಿದ ಸಂಧಿ ಶರ್ತಗಳಲ್ಲಿ ತುರ್ಕಿಯವರು ಸೇಕಡಾ ೮೦ರಷ್ಟು ಒಪ್ಪಿರುವರು. ಈ ಸಂಧಿ ನಿಬಂಧನೆಗಳಂತೆ ಇಜಿಪ್ಟ, ಸೌಡಾನ್ ಪ್ರದೇಶಗಳು ತುರ್ಕರ ಆಳಿಕೆಗೆ ಒಳಪಡತಕ್ಕದ್ದಲ್ಲ. ಇಜಿಯನ್ ಸಮುದ್ರದಿಂದ ಕಪ್ಪು ಸಮುದ್ರದ ವರೆಗೆ ಸಮುದ್ರಧುನಿಗಳ ಎರಡು ದಂಡೆಗಳ ಮೇಲಿನ ಸರಾಸರಿ ೧೫ ಮೈಲುಗಳ ವಿಸ್ತೀರ್ಣದಲ್ಲಿ ಸೈನ್ಯ ಏರಬಾರದು. ಮೇಲಿನ ಸಮುದ್ರ ಧುನಿಗಳಲ್ಲಿ ಇತರ ರಾಷ್ಟ್ರಗಳಿಗೆ ಮೂರು ಮೂರು ಯುದ್ಧನೌಕೆಗಳು ಓಡಲು ಪ್ರತಿಬಂಧವಿರಬಾರದು. ಕೊನ್ಸ್ಟಂಟಿನೋಪಲಿನಲ್ಲಿ ೧೨ ಸಾವಿರದ ವರೆಗೆ ಸೈನ್ಯವಿಡಲು ಅನುಮತಿ ಇದೆ. ಸ್ವತಂತ್ರವಾದ ಪ್ರದೇಶಗಳ ಮೇಲಿನ ರಾಜಕೀಯ ಹಕ್ಕುಗಳನ್ನೆಲ್ಲಾ ಖಲೀಫರು ಬಿಟ್ಟುಕೊಡತಕ್ಕದ್ದು. ಸೈನ್ಯವಿಲ್ಲದಿರುವ ಪ್ರದೇಶಗಳ ಆಡಳಿತೆಯನ್ನು ನೋಡಲು ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಜಪಾನ್, ತುರ್ಕಸ್ಥಾನ, ಬಲ್ಗೇರಿಯಾ, ರುಮೇನಿಯಾ ಇವೇ ಮೊದಲಾದ ರಾಷ್ಟ್ರಗಳ ಒಂದು ಅಂತರಾಷ್ಟ್ರೀಯ ಕಮಿಶನನ್ನು ನೇಮಿಸಿದೆ. ಈ ಕಮಿಶನಿನ ಅಧ್ಯಕ್ಷಸ್ಥಾನವನ್ನು ತುರ್ಕಿಗೆ ವಹಿಸಿದೆ. ತುರ್ಕರಿಗೆ ಕೊನ್ಸ್ಟಂಟಿನೋಪಲನ್ನು ಬಿಟ್ಟುಕೊಟ್ಟಿದ್ದರೂ ಈಗಿನ ಸಂಧಿ ಶರ್ತಗಳ ಮೇರೆಗೆ ಕೊನ್ಸ್ಟಂಟಿನೋಪಲಿನ ಭದ್ರತೆಗೆ ಅವಕಾಶವಿಲ್ಲ. ಲಾಸೇನನ್ನು ಬಿಟ್ಟು ಕಳೆದ ತಾರೀಕು ೪ನೇ ಮಧ್ಯಾಹ್ನಕ್ಕೆ ಇಂಗ್ಲೆಂಡಿನ ಪ್ರತಿನಿಧಿಗಳಾದ ಲಾರ್ಡ ಕರ್ಝೂನ ಸಾಹೇಬರು ಸ್ವದೇಶಕ್ಕೆ ತೆರಳಿದರು. ಮಿತ್ರಮಂಡಲಿಯ ಇತರ ಪ್ರತಿನಿಧಿಗಳು ತಾ. ೫ಕ್ಕೆ ಲಾಸೇನಿನಿಂದ ಹೊರಟುಹೋದರು. ಜಲಸಂಧಿ ಸಂಬಂಧವಾದ ಶರ್ತಗಳಿಗೆ ರುಷ್ಯರು ಒಪ್ಪಲಿಲ್ಲ. ಅಲ್ಲದೆ ರುಜುವನ್ನು ಕೂಡ ಮಾಡಲಿಲ್ಲ. ತುರ್ಕಸ್ಥಾನದೊಳಗಿನ ಈಗಿನ ಪರಿಸ್ಥಿತಿಯನ್ನು ಕಾಣುವಾಗ ಅದು ವಿಪರೀತವಾಗಿಯೇ ಇದೆ. ಗ್ರೀಕರು ಕೊನ್ಸ್ಟಂಟಿನೋಪಲಿನ ಮೇಲೆ ದಾಳಿಯನ್ನು ನಡಿಸಬೇಕೆಂದು ಹೊಂಚು ಹಾಕಿಕೊಂಡಿರುವರು. ತುರ್ಕರು ಮೊಸೂಲು ಪಟ್ಟಣದ ಉತ್ತರಕ್ಕೆ ಸೈನ್ಯವನ್ನು ಕೂಡಿಸುತ್ತಲೇ ಇದ್ದಾರೆ. ಬಗದಾದಿನಿಂದ ಇಂಗ್ಲಿಷರ ಸೈನ್ಯವು ಮೊಸೂಲಿನ ಪ್ರಾಂತ್ಯಕ್ಕೆ ರವಾನೆಯಾಗುತ್ತದೆ. ರುಷ್ಯ ದೇಶವಂತೂ ತುರ್ಕಿಗೆ ತನ್ನ ಕೈಲಾದಷ್ಟು ಸಹಾಯವಮಾಡಲಿಕ್ಕಿದೆ. ಫ್ರಾನ್ಸಿಗೂ ಇಟಲಿಗೂ ಈಗ ಜರ್ಮನರ ತೊಂದರೆಯಿಂದ ಪಾರಾಗಿರುವ ವರೆಗೆ ಇದರಲ್ಲಿ ಕೈಹಾಕಲು ಮನಸ್ಸಿಲ್ಲ.

ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಗೊತ್ತಾದ ಈ ವರುಷದ ಕನ್ನಡ A ಪದ್ಯಪುಸ್ತಕವೂ, ಅದರ ಟಿಪ್ಪಣಿಯೂ.

[ಕಳೆದ ಸಂಚಿಕೆಯಿಂದ ಮುಂದರಿದುದು.]

ಪದ್ಯ ೨೬. 'ನಿರುತ—ಯವಾಗಲೂ' 'ನಿರುತ'ವೆಂದರೆ ನಿಶ್ಚಯ, ನಿಜವೆಂಬ ಅರ್ಥವು ಸ್ಪಷ್ಟವಾಗಿದೆ. 'ಯವಾಗಲೂ' ಎಂಬ ಅರ್ಥವು ಸಂದರ್ಭಕ್ಕೆ ಕೂಡ ಸರಿಹೋಗುವುದಿಲ್ಲ. '[illegible]'—ಎಂದರೆ 'ನಿಜವನ್ನು ಹೇಳದಿರು' ಎಂಬ ಅರ್ಥವು ಸುಬೋಧೆಯಾಗಿದೆ.

ಪದ್ಯ ೨೮. 'ಪರುಕಿಸದ ಮಾತು—ವಂಚನೆಯ ಮಾತು' 'ಪರುಕಿಸ' ಎಂಬ ಪದವು ಭಾರತದಲ್ಲಿ ಎರಡು ಕಡೆ ಬರುವುದು. ಒಂದು ಕಡೆ ಅರ್ಥ ಕೊಡುವಷ್ಟು ಕಷ್ಟವಾಗಿದೆ. ಇನ್ನೊಂದು ಕಡೆ ಮಾತ್ರ ಟೀಕು ಬರೆಯುವುದಕ್ಕೆ ಪ್ರಯತ್ನಪಟ್ಟುದು ವಿನೋದಕರವಾಗಿದೆ. 'ಅರಸು ಮಗಳನು ತೊತ್ತು ಕೆಲಸಕೆ ಪರುಕಿಸಿದರೆ,' ಎಂದರೆ 'ನಿಯಮಿಸಿದರೆ' ಎಂಬ ಅರ್ಥವು ಸ್ಪಷ್ಟವಾಗಿ ಒಡೆದು ತೋರುವುದು. ಅದರ ನಿಜವಾದ ಅರ್ಥವು ಅದೇ. 'ಪಾರ್ಥನ ಪರುಕಿಸದ ಮಾತುಗಳಿನಿಂದಲು' ಎಂಬಲ್ಲಿಯೂ ಅದೇ ಅರ್ಥವು ಸುಭದ್ರಾಪ್ರಸಂಗದಲ್ಲಿ. ಪಾರ್ಥನು, ಸುಭದ್ರೆಯನ್ನು ದ್ರೌಪದಿಯು [illegible] ಸರಕೊಡಿದ್ದನು. ಆಗ 'ಪರುಕಿಸದ ಮಾತು' ಎಂದರೆ ಆ ನಿಯಮಿಸದ ಮಾತನ್ನು ಹೇಳಿದನು. 'ವಂಚನೆಯ ಮಾತು' ಎಂಬ ಅರ್ಥವು ವಂಚನೆಯ ಮಾತಾಗಿಯೇ ತೋರುವುದು.

"[illegible] ಕನ್ನಡ ಭಾಗವತದ [illegible] ಸಂಧಿಯುಳ್ಳ [illegible] ಸಂಧಿ [illegible] ಪ್ರಮಾದದಿಂದಲೋ [illegible] ತಿಳಿಸಬೇಕು. ವಿದ್ಯಾರ್ಥಿಗಳು ಕನ್ನಡ ಭಾಗವತದ ದಶಮಸ್ಕಂಧದ ಎರಡನೆಯ ಸಂಧಿಯಲ್ಲಿ ಆ ಕಥಾಭಾಗವನ್ನು ಓದಬಹುದು. ಆ ಭಾಗದಲ್ಲಿ:—

ಪದ್ಯ ೬. 'ಕಳೆಯೊದೆದು' ಇದು ತಪ್ಪಾದ ಪಾಠವು. ಮೂಲದಲ್ಲಿ 'ಕೆಡೆಯೊದೆದು' ಎಂದಿದೆ. ಈ ತಪ್ಪಾದ ಪಾಠವನ್ನು ಇಟ್ಟುಕೊಂಡುದರಿಂದ—'ರಥದಲ್ಲಿ ತನ್ನ ಹಿಂದೆ ಅಡ್ಡಲಾಗಿದ್ದ ಹಲಗೆಯನ್ನು ಮುರಿದು ಬೀಳುವ ಹಾಗೆ ಒದೆದು' ಎಂದು ಬಹು ದೂರಕ್ಕೆ ಕೈಚಾಚಿ ಅರ್ಥ ಬರೆಯಬೇಕಾಯಿತು. ಹಾಗೆ ಹಲಗೆಯನ್ನು ಮುರಿದು ಹೋಗುವಂತೆ ಒದೆಯುವ ಉದ್ದೇಶವಾದರೂ ಆ ಸಂದರ್ಭದಲ್ಲಿ ಸ್ಪಷ್ಟವಾಗಿ ಕಾಣಿಸದು. 'ಕೆಡೆಯೊದೆದು' ಎಂದರೆ (ಕೋಪದಿಂದ) ಹಲಗೆಯನ್ನು ಬಲವಾಗಿ ತುಳಿದು ಎಂಬುದು ಸ್ಪಷ್ಟವಾಗುವುದು.

ಪದ್ಯ ೧೩. 'ನಿನ್ನೀನಾರಿಗುಪದೇಶಿಸುವುದೊಡಲಿದು ನಿತ್ಯವಲ್ಲೆಂದು' ಇಲ್ಲಿ 'ನಿನ್ನೀನಾರಿ' ಎಂಬುದು ತಪ್ಪಾದ ಪಾಠವೆಂದು ನಾವು ಊಹಿಸುವೆವು. ಆ ಪಾಠವನ್ನು ಇಟ್ಟುಗೊಂಡುದರಿಂದ 'ಮರಣಕ್ಕಾಗಿ ಭಯಪಡಬಾರದೆಂದು ನನಗೆ ಹೇಳತಕ್ಕ ತತ್ವವನ್ನೇ ನೀನು ಈಗ ಈ ನಿನ್ನ ಹೆಂಡತಿಗೆ ಉಪದೇಶಿಸಿ, ಅವಳ ಕೊಲೆಗೆ ಅಡ್ಡಬಾರದೇ ಸುಮ್ಮನಿರಬಹುದಲ್ಲವೇ? ಎಂದು ಕಂಸನು ವಸುದೇವನನ್ನು ಹಾಸ್ಯಮಾಡಿದುದಾಗಿ ಭಾವವು'—ಎಂಬ ಪರಿಹಾಸ್ಯಕರವಾದ ಅರ್ಥವನ್ನು ಬರೆಯಬೇಕಾಯಿತು. 'ನಿನ್ನೀನಾರಿಗೆ' ಎಂಬ ಪಾಠವನ್ನು 'ನೀನಿನ್ನಾರಿಗೆ' ಎಂದಿಟ್ಟುಕೊಂಡರೆ ಅರ್ಥವು ಸಂದರ್ಭಕ್ಕೆ ಸುಗಮವಾಗುವುದಲ್ಲದೆ ಸುಬೋಧೆಯೂ ಆಗುವುದು. 'ನೀನಿನ್ನಾರಿಗುಪದೇಶಿಸುವುದೊಡಲಿದು ನಿತ್ಯವಲ್ಲೆಂದು' ಎಂಬುದೇ ಕವಿಯ ಆಶಯವೆಂದು ತೋರುವುದು.

ಪದ್ಯ ೧೫. 'ಉಮ್ಮಳಿಸಿ—ಸಂಕಟಪಟ್ಟು'—ಸಂಕಟವು ಶಾರೀರಕವಾದುದು. ಉಮ್ಮಳವು ಮಾನಸಿಕವಾದುದು. ಇದಕ್ಕೆ ಚಿಂತಿಸಿ, ದುಃಖಿಸಿ, ಶೋಕಿಸಿ—ಎಂಬ ಅರ್ಥವೇ ಸಾಧುವಾಗಿದೆ.

ನಳಚರಿತ್ರೆಯಲ್ಲಿ:—

ಪದ್ಯ ೩. 'ಜಾಲಂಧ್ರ—ಗವಾಕ್ಷ' 'ಜಾಲಂಧ್ರ'ವೆಂದರೆ ಸಣ್ಣ ಸಣ್ಣ ರಂಧ್ರಗಳುಳ್ಳ ಕಿಟಿಕಿ. ಅಂತಃಪುರಗಳಿಗೆ ಇಂತಹವು ಇರುತ್ತವೆ. ದಮಯಂತಿ ತಾನು ಕಾಣಿಸಿಕೊಳ್ಳದಂತೆ ನಳನನ್ನು ಜಾಲಂಧ್ರದೊಳಗಿಂದ ನೋಡಿದಳು. 'ಗವಾಕ್ಷ'ವೆಂದರೆ ಇದು ಅಲ್ಲ.

ಪದ್ಯ ೫. 'ಗರಗಂಕೆ ತಪ್ಪಿದ—ಉತ್ಸಾಹದ ಕಳೆಯಿಲ್ಲದ' 'ಗರಗಂಕೆ' ಎಂದರೆ ಚೊಕ್ಕಟ, ಸೊಬಗು, ಎಂದು ಚತುರಾಸ್ಯ ನಿಘಂಟೂ, ಶಬ್ದಮಂಜರಿಯೂ ಹೇಳುವುವು. ದಮಯಂತಿಯು ಮನಸ್ಸಿನ ಬೇಸರದಿಂದ ಸಿಂಗಾರಗಳನ್ನು ತೊರೆದುದರಿಂದ ಆಕೆಯ ಮುಖದ 'ಗರಗಂಕೆ' ಎಂದರೆ ಸೊಬಗು, ಹೊರಟು ಹೋಗಿದ್ದಿತು. 'ಉತ್ಸಾಹದ ಕಳೆ' ಎಂದರೆ ಮನಸ್ಸಿನೊಳಗಣ ಒಂದು ಬಗೆಯ ಉತ್ಸುಕತೆಯಿಂದ ಮುಖದಲ್ಲಿ ಕಾಣುವ ಕಾಂತಿ ಎಂಬ ಅರ್ಥವಾಗಬಹುದು. ಇದು ಅಷ್ಟು ಪ್ರಕೃತವಾಗಿ ಕಾಣುವುದಿಲ್ಲ.

ಕೊನೆಗೆ ಶ್ರೀ ಚೆಲ್ವನಾರಾಯಣ ಶತಕದಲ್ಲಿ:—

ಪದ್ಯ ೧. 'ವ್ಯಕ್ತಾಂತ-ಮುಖ' ಎಂದು ಹೇಳುವಲ್ಲಿ, 'ಮುಖದೊಳಗೆ' ಎಂದು ಹೇಳುವುದೇ ಉತ್ತಮವಾಗಿದ್ದಿತು.

ಟಿಪ್ಪಣಿಯು ಅವಕಾಶವಾಗಿರಬೇಕಾದರೆ ಟಿಪ್ಪಣಿಕಾರರು "ಮಾನಿಪಪದಪಂಪದಸಂ! ಧ್ಯಾನಮನರ್ಘಪ್ರತೀತಿಯಿಂಕವಿಹೃದಯಂ ಸ್ಥಾನಮಂ" ಚೆನ್ನಾಗಿ ತಿಳಿದೇ ಬರೆಯಬೇಕೆಂದು ನಮಗೆ ಕಾಣುವುದು.

ಉಗ್ರಾಣ ಮಂಗೇಶರಾಯ.

ಕದಿಕೆ ತುಕ್ರ ಗುರಿಕಾರರ ಸ್ಮರಣೋತ್ಸವ.

ಪಾವಂಜೆ ಗ್ರಾಮದ ಕದಿಕೆ ತುಕ್ರ ಗುರಿಕಾರರು ಮೊಗವೀರ ಸಮುದಾಯದ ಅಗ್ರಗಣ್ಯ ಮುಂದಾಳುಗಳಲ್ಲಿ ಒಬ್ಬರಾಗಿದ್ದರು. ಇವರು ತನ್ನ ಯೌವನ ಪ್ರಾಯದಲ್ಲಿ ಮುಂಬಯಿಗೆ ಹೋಗಿದ್ದು ಅಲ್ಲಿಯ ಸುಪ್ರಸಿದ್ಧ ಪಾರ್ಸಿ ಸಾವುಕಾರರಾಗಿದ್ದ ಪಿ. ಎ. ಹೊರ್ಮಾರ್ಜೀ ವಾಡಿಯಾರವರಲ್ಲಿ ಸುಮಾರು ೪೦ ವರುಷಗಳ ವರೆಗೆ ನಂಬಿಕೆಯಿಂದ ಕೆಲಸಮಾಡಿ ಲಕ್ಷಗಟ್ಟಲೆ ದ್ರವ್ಯವನ್ನಾದರೂ ಸ್ವಾಧೀನಕೊಡುವಷ್ಟು, ತನ್ನ ಯಜಮಾನರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಸುಮಾರು ೨೧ ವರುಷಗಳ ಮೊದಲು ಇವರು ವೃದ್ಧಾಪ್ಯದ ದೆಸೆಯಿಂದ ಊರಿಗೆ ಬಂದಿದ್ದರು. ಇವರ ಯಜಮಾನರಾದ ವಾಡಿಯಾ ಕುಟುಂಬದವರು ಇವರಿಗೆ ಸಾಯುವ ವರೆಗೂ ಪೆನ್ಶನನ್ನು ಕೊಡುತ್ತಿದ್ದರು. ಕಳೆದ ವರುಷ ಇವರ ಮರಣದ ತರುವಾಯ ಇವರ ವಿಧವೆಗೂ ಪೆನ್ಶನು ಕೊಡುತ್ತಾರಲ್ಲದೆ, ತಮ್ಮ ನಂಬಿಕೆಯ ಸೇವಕನ ನೆನಪು ಸದಾ ಉಳಿಯುವಂತೆ ಆತನ ಜನ್ಮಸ್ಥಾನದಲ್ಲಿ ೫೦೦ ರೂಪಾಯಿಗಳು ಖರ್ಚು ಮುಟ್ಟಿಸಿ ಒಂದು ಗೋರಿ ಕಟ್ಟಿಸಲು ಕೂಡಾ ಸದರಿಯವರ ಅಳಿಯ ಮುದ್ದು ಗುರಿಕಾರರ ಮುಖಾಂತರ ವ್ಯವಸ್ಥೆಮಾಡಿದ್ದರು. ಈ ಗೋರಿಯ ಪ್ರವೇಶ ಮುಹೂರ್ತ ಸಮಾರಂಭವು ಕಳೆದ ತಾ. ೬ರಲ್ಲಿ ಜರಗಿತು. ಈ ಬಗ್ಗೆ ಪಾವಂಜೆ ಗ್ರಾಮದ ಪ್ರಮುಖ ಜಮೀನ್ದಾರರೂ, ಸಾವುಕಾರರೂ, ಗ್ರಾಮ ಉದ್ಯೋಗಸ್ಥರೂ ಹಾಜರಾಗಿದ್ದರಲ್ಲದೆ, ಮೊಗವೀರ ಮಹಾಜನ ಸಭೆಯೂ ವಿಶೇಷವಾಗಿ ನೆರೆದುಬಂದಿತ್ತು. ಮ. ರಾ. ರಾ. ಪಡು ಪಣಂಬೂರು ತಾವು ರಾಯರೂ, ಇನ್ನು ಕೆಲವರೂ ಕಾಲೋಚಿತ ಭಾಷಣಗಳನ್ನು ಮಾಡಿದರು. ಪರಲೋಕದಲ್ಲಿ ತುಕ್ರ ಗುರಿಕಾರರ ಆತ್ಮಕ್ಕೆ ಶಾಂತಿಯೂ, ಧರ್ಮಾತ್ಮರಾದ ವಾಡಿಯಾ ಕುಟುಂಬದವರಿಗೆ ಆಯುರಾರೋಗ್ಯ ಸಂಪತ್ತು ಒದಗಲೆಂದೂ ಕೂಡಿದವರೆಲ್ಲರೂ ಪ್ರಾರ್ಥಿಸಿದರು. ಅನಂತರ ಗೋರಿಯ ಛಾಯಾಚಿತ್ರ ತೆಗೆಯಲ್ಪಟ್ಟಿತು.

ಗೋರಿಯು ಚಿತ್ರವಿಚಿತ್ರವಾದ ಸುಣ್ಣದ ಗಾರೆಯ ಕೆಲಸದಿಂದ ಅತ್ಯಂತ ಮನೋಹರವಾಗಿತ್ತು. ಇದರ ಪೂರ್ತಿ ಕೆಲಸವನ್ನು ಮುಂಡಾಲ ಜಾತಿಯ ದೇಜಗು ಎಂಬ ಒಬ್ಬ ಪಂಚಮನು ಮಾಡಿದ್ದಾಗಿರುತ್ತದೆ. ಈತನು ಮೇಲು ಜಾತಿಯ ಕಲ್ಲು ಮೇಸ್ತ್ರಿಗಳೊಂದಿಗೆ ಕೆಲಸ ಕಲಿಯದವನಾಗಿದ್ದರೂ, ತನ್ನ ಸ್ವಾಭಾವಿಕ ಬುದ್ಧಿಶಕ್ತಿಗಳನ್ನು ಉಪಯೋಗಿಸಿ ಮಾಡಿದ ಕೆಲಸವು ಎಲ್ಲರಿಂದಲೂ, ಶ್ಲಾಘಿಸಲ್ಪಟ್ಟಿತು.

ಸ್ವಾರ್ಥಪೂರ್ಣವಾದ ಸಾಮಾಜಿಕ ರೂಢಿಗಳಿಂದ ಅವಗಣಿಸಲ್ಪಟ್ಟ ನಮ್ಮ ಬಂಧುಗಳಾದ ಪಂಚಮರಲ್ಲಿ ದೇಜುನಂತೆ ಕಲಾಕೌಶಲವುಳ್ಳ ಸಾವಿರಾರು ಜನರು ಬೇಗನೇ ಉದಯಕ್ಕೆ ಬರಲೆಂದೂ, ಕದಿಕೆ ತುಕ್ರ ಗುರಿಕಾರರಂಥ ಸ್ವಾಮಿಭಕ್ತಿಯ ಸೇವಕರೂ ತನ್ನ ಸೇವಕನ [illegible] ಗುಣವನ್ನೇ ಗ್ರಹಿಸಿ ಆತನ ಸುಖದುಃಖಗಳಲ್ಲಿ ಪಾಲುಗಾರರಾಗುವ ಮತ್ತು ಮರಣದ ನಂತರವೂ [illegible] ಹೊರ್ಮಾರ್ಜೀ ವಾಡಿಯರಂಥ ಪುಣ್ಯಾತ್ಮ ಧಣಿಗಳು ನಮ್ಮ ದೇಶದಲ್ಲಿ ಹುಟ್ಟಬೇಕೆಂದು ಶ್ರೀ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ಮೋಹನಪ್ಪ, ತಿಂಗಳಾಯ.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ. ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತ" "ಆತ್ಮಗೀತ" "ದೇವರೆಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಸ್ತೂರಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರೀಕ್ಷಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ, ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರ

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 181,250—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 21st Feb. 1922.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲೊಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು [illegible] ಹಾಗೆಯೇ ಆಗಲೀ ಉಪಯೋಗಿಸುವ ಪಕ್ಷದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮೃದ್ಧಿಯುಳ್ಳದ್ದಾಗಿಸುತ್ತವೆ. ಶೀತ, ಮಳೆ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, [illegible], ಕೆಮ್ಮಲು, ಶೀತ, ಶೀತವಾತ, [illegible], ಆಹಾರವು ಜೀರ್ಣವಾಗದೆ ಬರುವ ಶೀತ ಸೋರು, ಕರುಳಿನ ನೋವು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತ ಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ [illegible] ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಅಡಗಿ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಫೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೭—೧೯೨೧)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ನೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಜೋಡಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0—12—0	ಚಂಪೂರಾಮಾಯಣ ಹೊಸ ಮುದ್ರಣ .	5—0—0
ಸಂತಾಪಕ-ಕಾದಂಬರಿ	0—6—0	ಚಂಪೂರಾಮಾಯಣದ ಕಥೆ ವಚನ .	0—12—0
ಚಂದ್ರಮುಖಿ ,,	0—8—0	S. S. L. C. Kannada Texts	
ರಾಜಪುತ್ರರಮಣಿಯರು	0—8—0	[illegible] . .	0—5—0
ಕೆಲವು ಸಣ್ಣ ಕಥೆಗಳು	1—0—0	[illegible] . .	0—6—0
ರಾಜಯೋಗ . .	1—0—0	ಅಡವಿಯ ಹುಡುಗಿ .	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ, ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೧. ಟಪ್ಪಾಲು ಖರ್ಚು ಕೂಡಿ ಆಣೆ ೧೨ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಷ್ಟು ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾ ಮಿಶನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,
ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಪಿಟ್ಟಾಳಿಯ 32 ಸಾಮಾನುಗಳ ಸೆಟ್ಟು ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ. 4—8—0, ದೊಡ್ಡದು 5—0—0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ, ಮಣಿ, ಜರಿ, ಸಾಡಾ, ಸೀರೆ, ಶಾಲು, [illegible], ರುದ್ರಾಕ್ಷಿ, ಸ್ಫಟಿಕ [illegible], ಲಿಂಗ, [illegible] ಬೇಕಾದ [illegible] ಕಳುಹಿಸುವವರಿಗೆ [illegible] ಕ್ಯಾಟಲಾಗ್ ಉಚಿತ.

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಬೆಂಗಾಲಾ, ಕಾಶೀ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಜುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮು—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ.1—4—0.

ಹುಳದ ವ್ಹೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ ಮಂಗಳೂರು.

ಜರ್ಮನ ದೇಶದಲ್ಲಿ ತಯ್ಯಾರಾಗಿ ಬಂದಂಥಾ

4 ಮತ್ತು 4½ ರಾತ್ತಿನ ಹಾರೆಗಳೂ, 8 ರಾತ್ತಿನ ಗುದ್ದಲಿಗಳೂ, 6 ರಾತ್ತಿನ ಕುಂಟೂನಿಗಳೂ, 4 ರಾತ್ತಿನ ಕೊಡ್ಡಿಗಳೂ, ಎಲ್ಲಾ ಪರಿಮಾಣದ ಮುಳ್ಳು ಮೊಳೆಗಳೂ, ಮಾರಾಟಕ್ಕೆ ಇವೆ.

ವ್ಯಾಪಾರಸ್ಥರಿಗೆ ಬಹು ರಿಯಾತಿಯ ಧಾರಣಿಯಲ್ಲಿ ವಿಕ್ರಯಮಾಡಲಾದೀತು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಕೋಮನ್ ವೆಲ್ತ್ ಟ್ರಸ್ಟ್, ಲಿಮಿಟೆಡ್,
ಕಲ್ಲಿಕೋಟೆ.

ಇಲ್ಲವೆ—ಕೋಮನ್ ವೆಲ್ತ್ ಸ್ಟೋರ್ಸ್,
ಮಂಗಳೂರು.

ರೋಲ್ಡ್ ಗೋಲ್ಡ್ ಬಂಗಾರದ ಕೈಬಳೆಗಳು.



ಈ ಬಳೆಗಳು ಸೀಮೆ ಬಂಗಾರದಿಂದ ಮಾಡಿದೆ. ಬಣ್ಣ ಹೋಗದಂತೆ ಅಪರಂಜಿ ಬಂಗಾರದ ಗಿಲೀಟುಮಾಡಿದೆ. ಇದನ್ನು ಕೈಯಲ್ಲಿ ಹಾಕಿಕೊಳ್ಳುವುದರಿಂದ ಯಾವ ತೊಂದರೆಯೂ ಇಲ್ಲ. ಗಾಜಿನ ಬಳೆಗಳು ಒಡೆದುಹೋಗುವಂತೆ ಇವು ಹೋಗುವುದಿಲ್ಲ. ಮತ್ತು ಕೆಡುವುದೂ ಇಲ್ಲ. ಇವನ್ನು ನೋಡಿದವರು ನಿಜವಾದ ಬಂಗಾರದ ಬಳೆಗಳೆಂದೇ ಹೇಳುವರು. ಕ್ರಯ ಜೋಡು 1ಕ್ಕೆ 3—0—0.

ವಿಳಾಸ:—
ಎಟೋನಿಯಾ ಅಂಡ್ ಕೊ.,
ಪೋಸ್ಟು ಬೋಕ್ಸ್ ನಂಬ್ರ 65,
ಮದರಾಸು.

ಬ್ರ! ರಾ! ವಾಸುದೇವಾಚಾರ್ಯ ಕೆರೂರು,
ಸಂಪಾದಕ ಶುಭೋದಯ.
ಇವರು ಬರೆದ,

ಯದುಮಹಾರಾಜ.

ಎಂಬ ವಿನೋದನ ಕಾದಂಬರಿಯು,

ಬೆಲೆ—ಒಂದು ರೂಪಾಯಿ ಅಂಚೆ ಸಿಕ್ಕ ಬೇರೆ

ಸ್ವಾಮಿ ರಾಘವೇಂದ್ರಾಚಾರ್ಯ ಕೆರೂರು,
ಬಾಗಲಕೋಟೆ ಡಿ. ಬಿಜಾಪೂರ,

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಶ್ರೀವಾಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಅಡಿಯಿಂದಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ವಗ್ಯೆರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ವೈದ್ಯರು ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯವರು ತರಿಸಿ ನೋಡಬೇಕೆಂದು ಇದರ ಬೆಲೆ ಶೀರ ಕಡಿಮೆಮಾಡಿ ಇರುವದು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು —ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು. ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ,

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯನಾಮಲ್ಲ ಬಟ್ಟಲು ವಗ್ಯೆರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರೌನ್ ಪೇಪರ್, ರದ್ದಿ, ಖಾಲಿ ಕವರು ಫೌಂಟನ್‌ಪೆನ್, ಶಾಯಿ ವಗ್ಯೆರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗ್ಯೆರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0,

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಕೀವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ತಿಳುವಾಗಿ ನಿರ್ಮಲವಾಗುವುದಲ್ಲದೆ ರೋಗದ ಪತ್ತೆಸ್ಸೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ವಿಳಾಸ—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ, ಡಿ. ಫ್ರಿಯರ್ ರೋಡ್,
ವೈಟ್ ಎಂಡ್ ಕೋ ಹತ್ತರ, ಫೋರ್ಟ ಮುಂಬಯಿ.
R. D. Kately & Co.
No. D. Frere Road,
Near Wright & Co. Fort Bombay.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

SWADESHABHIMANI. MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ |
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖

ವಾರಪತ್ರಿಕೆ.

ದೊರೆಯಲನುಪಮರತ್ನಗಳು ಸಾ- | ಗರವ ಮಥಿಸಲು ಸುರರಿಗದರಿಂ |
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ |
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೧೭. ಮಂಗಳೂರು, ತಾರೀಕು ೨೪ನೇ ಶುಕ್ರವಾರ ಫೆಬ್ರುವರಿ ೧೯೨೮. ಸಂಚಿಕೆ ೮

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಿಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00,000—0—0
ಚಂದಾ ಹಾಕಿ ಎತ್ತಿದ ಮೂಲಧನ	1,90,000—0—0
ಮೀಸಲು ತತ್ತ ಮೂಲಧನ	90,365—7—11
ಠೇವಣಾತಿಗಳು	3,33,300—0—0
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ ೧ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	4,54,322—11—0

ಕಳೆದ 2 ವರುಷಗಳಲ್ಲಿ ಪಾಲುದ್ದಾರರಿಗೆ ಸಾಲೀಯಾನ್ ಶೇಕಡಾ ೧೦ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತರುವ ಶರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ನಿರಖು ಠೇವಣಾತಿಗಳನ್ನೂ 15 ದಿನಗಳ ನೋಟೀಸು ಮೂಲಕ ಶೇಕಡಾ ೫½ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ಮೊತ್ತದ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ ೩½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ, ಶೇಕಡಾ 4½ ಬಡ್ಡಿ ಪಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ ತಿಂಗಳುಗಟ್ಟಲೆಯಿಂದ ತರುವ ಕಂತು ಠೇವಣಾತಿಗಳನ್ನೂ ಡಿಪೋಜಿಟಾಗಿ ಪಡೆಯುವದಲ್ಲದೆ ಬ್ಯಾಂಕಿಗೆಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವದು.

ಈ ಬ್ಯಾಂಕಿಗೆ ತರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಅಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರದ್ದಲ್ಲಿ ತಿಳಿಯುವದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ, ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ಇದು ಗೊಬ್ಬರದಲ್ಲಿ ಸಿಕ್ಕುವಂತೆ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದ ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೊ, ಕಲ್ಕತ್ತಾ.

THE DIRECTOR
CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಚ್ಚರಾಮು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಬಂಧಮೂ ವ್ರತವಿವೇಕ ಕ್ರಯ	೦—೧೦—೦
ಕೇತುಭಂಗ	„ ೦—೧೨—೦
ಸಂಕ್ಷೇಪಗೀತೆ	„ ೦—೧೦—೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಫಲೋತ್ಸವ ಕ್ರಯಂ —೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀವಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ವಾಕ್ಯವಿವೇಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ,ಅಂಗದನ ಥಿಯಾಗ್ಡು, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿ ಕಥೆಗಳು, ಹೊಸ ಕನ್ನಡ, ಮೊದಲನೆಯ ಪುಸ್ತಕ,ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳಿಕರಿಗೆ ರೂ ೨-೦-೦. ಡಿ. ಪಿ. ಖರ್ಚುಕೂಡಿ ರೂ. ೩-೦-೦ ಪ್ರಕಟಣೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ಗದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಸ್ಲೇಟುಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫೂಟ್ ರೂಲುಗಳು, ಇತರ ಬರೆಯುವ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಸರ್ವೆ ಫೋರ್ಮು, ಕುಂಭಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋಂಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೊಮಿಯೊಪೆಥಿಕ್ ಮತ್ತು ಆಯುರ್ವೇದ ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪಾಷ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಗೆಬೇಕಾಗುವ ಗೊಬ್ಬರಗಳು.

ಖಾತ್ರಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTANJAN
Best Indian Pain Balm
Amrutanjan
BOMBAY

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ದೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ದೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ ೧ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ೧ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ದ್ರಾಕ್ಷಾಕಷಾಯ

U. B. DUTT & Co. CALCUTTA.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ಬೇರುಬೇರುಗಳಿಂದ ಕಾಢ ಅನೇಕ ಅತ್ಯುತ್ತಮ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿಶ್ಯವು "ಅರ್ಜಗಳು" ಬರುತ್ತವೆ. [illegible]

[illegible]

ಕ್ರಯ ರೂ. 4—4—0.

ಯು. ಬಿ. ದತ್ತ್, ಕಂಪೆನಿ, ಕಲ್ಲಿಕೋಟೆ ಮಲಬಾರ್,

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇದ ಔಷಧಾಲಯವು.

— (ಸ್ಥಾಪಿತವಾದ್ದು 1884) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ೩೬, (ಬ್ರಾಡ್ವೇ, ಮದ್ರಾಸ್.

Local Agents: **Raphael & Co,**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು.. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೋಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರಕೊಳ್ಳಿ,

ದಿ ಕೆನರಾ ಆರ್ಮ್ಸ್ ಎಂಡ್ ಎಮ್ಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಉತ್ತಮ ತರದ ಹಾರ್ಮೋನಿಯಮ್, ವಾಚು, ಗಡಿಯಾರಗಳು ಇತ್ಯಾದಿ ಬೇಕಾದರೆ ದಯವಿಟ್ಟು, ನಮ್ಮಲ್ಲಿ ಬಂದು ನೋಡಿರಿ!

ಲೋಕ ಪ್ರಸಿದ್ಧವಾದ ವೆಸ್ಟ ಎಂಡ್ ವಾಚು, ಮೆರಿಡಿಯನ್ ಬರ್ಮಾ ಮತ್ತು ಒಮೆಗಾ ಕಂಪೆನಿಯವರ ಭಂಗಾರದ ವ ಬೆಳ್ಳಿಯ ರಿಸ್ಟುವಾಚುಗಳೂ, ಟೈಮ್‌ಪೀಸುಗಳೂ ವಿವಿಧ ತರದ ರಿಸ್ಟುಬೆಲ್ಟುಗಳೂ, ಸರಪಣಿಗಳೂ ಈ ದೇಶದ ಹವಾಗುಣಕ್ಕೆ ಅನುಸಾರವಾಗಿ ತಯಾರಿಸಿದ ಫ್ಲೋಲ್ಡಿಂಗ್ ವ ಹೇಂಡ್ ಹಾರ್ಮೋನಿಯಮ್‌ಗಳೂ, ಪಿಡ್ಲಗಳು ಮತ್ತು ತಬ್ಲೆಗಳು ನಮ್ಮಲ್ಲಿ ಕಮ್ಮಿ ಕ್ರಯಕ್ಕೆ ಸಿಗುವುದಲ್ಲದೆ ಮೇಲ್ಯಾಚೆಸಿದವುಗಳನ್ನು ಒಳ್ಳೇದಾಗಿ ರಿಪೇರಿಮಾಡಿ ಕೊಡುವೆವು.

ನಮ್ಮಲ್ಲಿಂದ ಕೊಂಡುಕೊಂಡ [illegible] ವಾಚು ವ ಹಾರ್ಮೋನಿಯಮ್‌ಗಳಿಗೆ ಒಂದು ವರ್ಷದ ಗ್ಯಾರಂಟಿ ಕೊಡಲಾಗುವದು.

ಎಮ್. ಸಂಜೀವ ರಾವ್,
ರಥಬೀದಿ, ಮಂಗಳೂರು.

ಪ್ರಕಟಣೆ.

ರುಧಿರೋದ್ಗಾರಿ ಸಂ।ರದ ಪಂಚಾಂಗ.

ಇದು ಚೆ। ಸುಬ್ಬಣ್ಣ ಶಾಸ್ತ್ರಿಗಳಿಂದ ಗುಣಿಸಲ್ಪಟ್ಟು, ಮಂಗಳೂರು ಶಾರದಾ ಛಾಪಖಾನೆಯಲ್ಲಿ ಸುಂದರವಾಗಿ ಮುದ್ರಿತವಾಗುತ್ತಿದೆ. ಅಗತ್ಯವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಪಂಚಾಂಗಕರ್ತರಲ್ಲಿಯೂ ದೊರೆಯುವುದು. ಪಂಚಾಂಗ ಪ್ರತಿ ೧ಕ್ಕೆ ಕ್ರಯ ೩॥ ಆಣೆ, ೫೦ಕ್ಕೆ ರೂ. ೮—೦—೦.

ವಿಳಾಸ:-
ಶಾರದಾ ಛಾಪಖಾನೆ,
ಮಂಗಳೂರು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತವುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಅಸ್ಪದಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್ಸ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಪ್ರಕಟಣೆ.

ಮದರಾಸಿನ ಎಡಿಸನ್ ಕಂಪೆನಿ (Addison & Co.) ಇವರಿಂದ ಸೈಕಲುಗಳನ್ನು ಕಂತು ಪ್ರಕಾರ ಹಣ ಸಲಾಯಿಸುವ ಶರ್ತದಲ್ಲಿ ಮಾರುವದಕ್ಕೆ ಈ ಪ್ರಾಂತ್ಯದಲ್ಲಿ ಆರ್ಡರ್ ಕೊಡಿಸುವರೆ ನಾನು ಅವರಿಂದ ಅನುಮತಿ ಪಡದಿರುತ್ತೇನೆ. ಕಂತು ಪ್ರಕಾರ (Hire purchase system)ದಲ್ಲಿ ಸೈಕಲುಗಳನ್ನು ಕೊಂಡುಕೊಳ್ಳುವರೆ ಅಪೇಕ್ಷಿಸುವವರು ಈ ಕೆಳಗೆ ಹೆಸರು ಕೊಟ್ಟಿರುವ ನನ್ನಿಂದ ಮಾಹಿತಿಯನ್ನು ಪಡೆಯಬಹುದು.

ಬಿ. ಮಂಜುನಾಥ,
ಸೈಕಲ ವ್ಯಾಪಾರಿ.
ಮಂಗಳೂರು.

B. Manjunath,
Cycle dealer.
Mangalore.

Coorg's Commissioner's Office.

FOR SALE.

Double crown wharfdale machine with moulds, stocks and chases.	1	Rs. 3,750
Petter's oil Engine $1\frac{1}{2}$ H. P.	1	„ 325
Old Demi machine by Fredderick Ullmar	1.	
Melting kettle	1. „	2
Form rack	1. „	2
Compositor's Stools	6. „	12
Galley press—cylinders	1. „	60
Beating hammer	1. „	2
Hand perforater	1. „	1
Press standing	1. „	50
Woodcutting press	2. „	30

For further particulars apply to the Manager, Coorg Commissioner's Office.

1st Feb. 1923.

C. A. Souter.
Commissioner.

ಸುಸಂದರ್ಭ! ದರ ಸುಲಭ! ತ್ವರೆಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಸೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಗಿರಿ ಭಿಡೆ, ಬಿ. ಎ. ಬಿ. ಎಲ್

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ಲು 1ರ ರೂ. 2—12—0.
ಸ್ಪೆಶ್ಯಲ್ ರಾತ್ಲು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲ್ಸು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಗೆಜ್ಜೆ ಕಟ್ಟಿದ ಬಂಗಾರದ ಗಿಲೀಟಿನ ಡಾಬುಗಳು.

ಇದು ಬಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು, ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3—0—0.

ರೋಲ್ಡ್ ಗೋಲ್ಡ್ ಬಂಗಾರದ ಉಂಗುರಗಳು.

ಈ ಉಂಗುರಗಳು ವಿಲಾಯತಿಯಲ್ಲಿ ತಯಾರಿಸಿದ್ದು, ಅತ್ಯುತ್ತಮವಾದ ವಜ್ರದ ಹರಳುಗಳನ್ನು ಇಟ್ಟು ಸೀಮೆ ಬಂಗಾರದಿಂದ ತಯಾರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟು ಮಾಡಿದೆ. ನೋಡಲು ಬಹು ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು.

ಕ್ರಯ ೧ಕ್ಕೆ 2—0—0. ೩ಕ್ಕೆ ರೂ. 5—8—0.

ಎಟೋನಿಯಾ ಆಂಡ್ ಕೊ,
ಪೋಸ್ಟ್ ಬೋಕ್ಸ್ ನಂಬ್ರ 65,
ಮದರಾಸು.

ರೋಲ್ಡ್ ಗೋಲ್ಡ್ ಡೈಮನ್ಡ್ ಉಂಗುರ.

ಈ ನಕ್ಷೆಯಲ್ಲಿ ಕಾಣುವ ಉಂಗುರವನ್ನು ಸೀಮೆಯಲ್ಲಿ ರೋಲ್ಡ್ ಗೋಲ್ಡ್ ಬಂಗಾರದಿಂದ ಮಾಡಿ ಪ್ರಕಾಶವಾದ ಇಮಿಟೇಷನ್ ಡೈಮಂಡ್ ಕಲ್ಲುಗಳು ಮಧ್ಯ ಇಂಗ್ಲೀಷ ನಮೂನೆಯಲ್ಲಿ ಕಟ್ಟಿದ ಕಟ್ಟಿರುತ್ತೆ, ಇದರಲ್ಲಿ ಇಟ್ಟಿರುವ ಕಲ್ಲುಗಳು ರಾತ್ರಿ[illegible] ನಿಜ [illegible]ವಾಗಿ ಥಳಥಳಿಸುವದು. ಶ್ರೀಮಂತರೂ ಸಹ [illegible] ನೋಡಿದವರು ನಿಜವಾದ ವಜ್ರದ ಉಂಗುರವೆಂದೆ ಹೇಳು[illegible].

ಬಣ್ಣಕ್ಕೆ 2 ವರ್ಷ ಗ್ಯಾರಂಟಿ ಕ್ರಯ ಉಂಗುರ 1ಕ್ಕೆ [illegible] 0-0.

ಜರ್ಮನಿ ದೇಶದ ಅಲಾರಂ ಕೊಡುವ ಬೀಗ.

ಈ ಬೀಗ ನೋಡುವುದಕ್ಕೆ ಬೆಳ್ಳಿಯ ಹಾಗೆಯೇ ತೋರುವದು. ಈ ಬೀಗವನ್ನು ಹಾಕಬೇಕಾದರೂ ತೆಗಿಯಬೇಕಾದರೂ ಅಲಾರಂ (ಗಂಟೆ) ಹೊಡಿದಾಗುತ್ತೆ. ಕಳ್ಳತನದಿಂದ ತರೆಯುವವನನ್ನು ಹಿಡಿಯಬಹುದು. ಬಹಳ ಮಜಭೂತಾಗಿ ಇರುವದು.

ಚಿಕ್ಕ ಬೀಗ ೧ಕ್ಕೆ ರೂ. 1—4—0.

ನಮ್ಮ ವಿಳಾಸ:—
ಜನರಲ್ ಮೇಲ್ ಆರ್ಡರ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 282 ಮದರಾಸು

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಫಾಲ್ಗುಣ ಶು। ೮ ಶನಿವಾರದಿಂದ ದುಂದುಭಿ ಸಂ। ಫಾಲ್ಗುಣ ಶು। ೧೪ ಶುಕ್ರವಾರದ ವರೆಗಿನ ಪಂಚಾಂಗ

(೧೯೨೩ನೆಯ ಮಾಯಿ ಸುಗ್ಗಿ)

ತಾರೀಕು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ.	ಸೂರ್ಯ ಉ.	ಸೂರ್ಯ ಅಸ್ತ.
24	ಶನಿ	೮	೨೧.೪೬	ರೋಹಿಣೀ	೪೬.೩೨	೧೨	6.52	6.38
25	ರವಿ	೯	೨೩.೧೬	ಮೃಗಶಿರಾ	೪೯. ೫	೧೩	6.52	6.38
26	ಸೋಮ	೧೦	೨೩.೨೮	ಆರ್ದ್ರಾ	೫೦.೧೫	೧೪	6.51	6.38
27	ಕುಜ	೧೧	೨೨.೩೦	ಪುನರ್ವಸು	೫೦.೧೪	೧೫	6.50	6.38
28	ಬುಧ	೧೨	೨೦.೩೨	ಪುಷ್ಯಾ	೪೯.೧೬	೧೬	6.50	6.38
1	ಗುರು	೧೩	೧೭.೧೬	ಆಶ್ಲೇಷಾ	೪೭.೧೬	೧೭	6.49	6.38
2	ಶುಕ್ರ	೧೪	೧೩.೧೫	ಮಘಾ	೪೪.೧೫	೧೮	6.48	6.39

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಫೆಬ್ರವರಿ)

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದ	Minimum ಕಡಿಮೆ	ದಿನದ ಮಳೆ	ಜುಮಲಾ ಮಳೆ.
15	88—6	69—4	—	—
16	89—6	69—7		—
17	88—2	71—4	—	—
18	88—2	72—2	—	—
19	87—7	74—8	—	—
20	88—8	71—7	—	—
21	88—9	70—9	—	139.58

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ಮಸ್ಸತಿ ಅಕ್ಕಿಮುಡಿ ೧ಕ್ಕೆ ...	7-10	8— 4
ಹೊಸ ಗುಡ್ಡು, ...	6-12	7— 4
ಹೊಸ ರಾಶಿ	6- 2	6— 8
ಅಮ್ಮರ್ ಬೆಳ್ತಿಗೆ „ ...	7-14	8— 8
ಗುಡ್ಡು ಬೆಳ್ತಿಗೆ „ ...	7- 6	7-10
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	12-8	13— 0
ಗೋಧಿ ಗೋಣಿ ೧ಕ್ಕೆ ...	16— 8	21— 0
ಹುರುಳಿ ಗೋಣಿ ೧ಕ್ಕೆ ...	9— 8	8— 8
ಕಡಲೆ ಗೋಣಿ ೧ಕ್ಕೆ ...	12— 0	16— 0
ತೊಗರಿ ಗೋಣಿ ೧ಕ್ಕೆ ...	13— 0	—
ತೊಗರಿಬೇಳೆ ಗೋಣಿ ೧ಕ್ಕೆ ...	14— 4	24— 0
ಉದ್ದು ಗೋಣಿ ೧ಕ್ಕೆ ...	14— 0	—
ಹೆಸರು ಗೋಣಿ ೧ಕ್ಕೆ ...	—	13— 0
ಊರು ಬೆಲ್ಲ ಖಂಡಿ ೧ಕ್ಕೆ ...	45— 0	47— 8
ಉಪ್ಪು ಗೋಣಿ ೧ಕ್ಕೆ ...	5— 0	6— 4
ಕೊಬ್ರಿ ಖಂಡಿ ೧ಕ್ಕೆ ...	98— 0	106— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	46— 0	48— 0
ಎಳ್ಳಿಂಡಿ ಖಂಡಿ ೧ಕ್ಕೆ ...	50— 0	55— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7-10	9— 0
ಎಳ್ಳೆಣ್ಣೆ ಮುಡಿ ೧ಕ್ಕೆ ...	6-12	9— 0
ಹಿಪ್ಪೆಎಣ್ಣೆ ಪಟ್ಟಿಗೆ ೧ಕ್ಕೆ ...	9— 0	—
ಮೋರಿಸ್ ಸಕ್ಕರೆ ಮುಡಿ ೧ಕ್ಕೆ ...	6— 4	—
ಊರ ಬೂತಿಸಿದ ಕಾಯಿ ಮುಡಿ ೧ಕ್ಕೆ ...	7— 0	7— 4
ಸಾಸಿವೆ ಮುಡಿ ೧ಕ್ಕೆ ...	8— 8	9— 0
ಮೆಂತ್ಯ ಮುಡಿ ೧ಕ್ಕೆ ...	3-12	3—14
ಕಾಫಿ ಖಂಡಿ ೧ಕ್ಕೆ ...	290— 0	310— 0
ಬೀಗೋಟು ಅಡಿಕೆ ಖಂಡಿ ೧ಕ್ಕೆ ಹಳ್ಳು ...	200— 0	295— 0
ಬೀಗೋಟು New, ಹೊಸ್ತು ...	160— 0	165— 0
ಕಾಳುಮೆಣಸು ಖಂಡಿ ೧ಕ್ಕೆ ...	115— 0	120— 0
ಹುಣಸೆ ಮುಡಿ ೧ಕ್ಕೆ ...	60— 0	70— 0
ಗೇರುಬೀಜ ಮುಡಿ ೧ಕ್ಕೆ ...	1-14	2— 0
ಅಕ್ಕಿಬ ಖಂಡಿ ೧ಕ್ಕೆ ...	50— 0	65— 0
ಶಾಂಬ್ರು ಕರಡು ಮುಡಿ ೧ಕ್ಕೆ ...	20-12	23— 0
ಶಾಂಬ್ರು ಪಾತ್ರಗಳು ಮುಡಿ ೧ಕ್ಕೆ ...	34— 0	—
[illegible] ಸೇರು ೧ಕ್ಕೆ ...	24— 0	—
ಟಿಕ್ಕಾಳ ಕಡುಮುಡಿ 1ಕ್ಕೆ ...	20— 0	21— 0

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೇಟ್ ಗಡಿಯಾರ.

(ಗ್ಯಾರಂಟಿ 3 ವರುಷ ಕೊಡುವೆನು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs. 150
¾ Page Rs. 80. ½ Page	„ 50
2 in. Single Column	„ 20
1 in. Single Column	„ 15
Name alone in Bold Types	„ 5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:
The Kanara Press, Madras.
Telegrams: "KETHAKI" Phone: 540.

THE FIRST RAFFLE

IN AID OF

The National Girl's School, Mangalore.
Conducted by its Executive Committee
as authorised by
THE BOARD OF TRUSTEES

Total value of EIGHT ANNA Tickets

TEN THOUSAND RUPEES.

Total Prizes-183. Value-Rs. 4000.
Ist Prize, Rs. 1000. 2nd Prize, Rs. 500.
3rd prize, Rs. 250. 5 prizes of Rs. 100.
5 of Rs. 50. 20 of Rs. 25. 50 of Rs. 10.
100 of Rs. 5.

Date of closing—15-4-'23. Date of drawing—29-4-'23.

All communications to be addressed to—

HON. SECRETARY.
Raffle Office, National Girl's Schoo
Kodialbail P. O., S. Kanara

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ, 5 ಮೊಳ ಉದ್ದ 2½ಮೊಳ ಅಗಲವಿರುವದು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 ರೂ. 6—8—0
„ 2 „ 7—8—0

ವಿಳಾಸ:—ಎಸ್. ಆರ್. ಕೃಷ್ಣ ಎಂಡು ಕೊ,
1. ತಂಬುನಾಯಕನ ಬೀದಿ, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶಿವ್ಯಾಪಾರಿ

ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ ರೂ. 3—4—0
ಸೇ. 1 („ 24) „ „ 2—0—0

ಪೋಸ್ಟು ಪೇಕಿಂಗ್ ಖರ್ಚು ನಮ್ಮದು.

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 3-0-0.

ಸ್ವಂತ ಖರ್ಚಿಗೆ ತರಿಸುವವರು ಪೋಸ್ಟ್ ಪೇಕಿಂಗ್ ಖರ್ಚು ಕೊಡಬೇಕಾಗುವುದು

ನಶ್ಯ ಒಂದೇ ತರದ್ದು.

ಈಗಲೇ ಸಿದ್ಧವಾಗಿದೆ! ಬೇಗನೆ ತರಿಸಿಕೊಳ್ಳಿರಿ!!

ಕಾಮಶಾಸ್ತ್ರ (ಎನ್ನುವ ಶರೀರಧರ್ಮಶಾಸ್ತ್ರ)

ಈ ಪುಸ್ತಕವು ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಇದ್ದದನ್ನು ಇದ್ದ ಹಾಗೆಯೇ ತಿಳಿಸುವಂತೆ ಚಿತ್ರಪಟಗಳ ಸಹಿತ ಗ್ಲೇಜು ಕಾಗದದಲ್ಲಿ ಮುದ್ರಿಸಿರುತ್ತೇವೆ. ಇದರಲ್ಲಿ ಸ್ತ್ರೀ ಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ದಂಪತಿಗಳು ಅನ್ಯೋನ್ಯವಾಗಿರುವದಕ್ಕೆ ಮಾಡಬೇಕಾದ ಉಪಾಯಗಳು, [illegible] ಚಿಕಿತ್ಸೆ, ಶಯನಗೃಹದ ನಿಯಮಗಳು, ಇತ್ಯಾದಿ ಸ್ತ್ರೀ ಪುರುಷರುಗಳಿಗೆ ಬೇಕಾದ ರಹಸ್ಯಗಳು ತುಂಬಿತುಳುಕುತ್ತಿರುವದು. ಕ್ರಯ ಮರ್ಮಶಾಸ್ತ್ರ ರೂ. 1-0-0.

ವಿಳಾಸ:— ಟಿ. ರಾಮಚಂದ್ರರಾವ್ ಕಂಪೆನಿ,
೫೩ ತಿರುಪಳ್ಳಿ ಬೀದಿ,
ಸಾಹುಕಾರಪೇಟೆ, ಮದರಾಸು.

ಫೌಂಟನ್ ಪೇನುಗಳು.

ಈ ಪೇನುಗಳನ್ನು ಎಲಾಬುತಿಯಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು. ಇದಕ್ಕೆ ಕ್ಯಾರೆಟ್ ಬಂಗಾರದ ಮುಳ್ಳು ಇರುವದು. ಒಂದಾವರ್ತಿ ಮಸಿಯನ್ನು ಹಾಕಿದರೆ ಸುಮಾರು 1,000 ಮಾತುಗಳು ಬರೆಯುವದು. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 6 ರೋಸ್ ಸೆಂಟ್ ಬಾಟಲ್‌ಗಳು ಇನಾಂ ಕೊಡುವೆವು.

ಕ್ರಯ ರೂ. 1ಕ್ಕೆ 1-12-0.

Ripon Watch Co, *Triplicane*,
Madras.

ಯುನೈಟೆಡ್ ಕಮರ್ಶಿಯಲ್ ಕಂಪನಿ,
ಪೋಸ್ಟ ಬಾಕ್ಸ ನಂಬ್ರ 388, ಮುಂಬಯಿ.

ಈ ಕಂಪೆನಿಯವರು ನಾನಾ ತರದ ಕಾಗದಗಳನ್ನೂ ಛಾಪಖಾನೆಗೆ ಬೇಕಾದ ಉಪಕರಣಗಳನ್ನೂ ರಖಂ ಬಟ್ಟಿಯಲ್ಲಿ ಮಾರಾಟಮಾಡುವರು. ಈ ಕಂಪೆನಿಗೆ ಬೇಜು ಹಾಕುವ (Numbering) ಅನೇಕ ಮೆಶಿನ್ನುಗಳು ಈಗಲೇ ಬಂದಿರುತ್ತವೆ. ಗಿರಾಕಿಗಳು ತಮಗೆ ಬೇಕಾದ ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳುವುದು.

ಸೀಮೆ ಬಂಗಾರದ ರೇಡಿಯಂ ಗಡಿಯಾರಗಳು.

ಈ ಗಡಿಯಾರಗಳು ಸ್ವಿಜರ್‌ಲಾಂಡ್ ದೇಶದಲ್ಲಿ ತಯಾರುಮಾಡಿ ಬಂದಿವೆ. ಇತರ ಗಡಿಯಾರಗಳು ರಾತ್ರಿವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ನಮ್ಮ ಗಡಿಯಾರಗಳಿಗೆ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಅವಶ್ಯವಿಲ್ಲ. ಎಷ್ಟು ಕತ್ತಲೆಯಾಗುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ತೋರುವುದು. ನಮ್ಮಲ್ಲಿ ಸ್ವಲ್ಪ ದಾಸ್ತವೇ ಇರುವುದರಿಂದ ಬೇಕಾದವರು ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕೈಯಲ್ಲಿ ಕಟ್ಟುವ ಸರಪಣಿ ಸಹಿತ. ಗಡಿಯಾರ 1ಕ್ಕೆ ರೂ. 8-8-0.

ವಿಳಾಸ:- Ripon Watch Co,. *Triplicane*,
Madras.

ನೋಟೀಸು.

ಮಂಗಳೂರು ತಾಲೂಕು ಕರಿಯಂಗಳ ಗ್ರಾಮದ ತಲಿಕಳ ವೆಂಕಟರಮಣಯ್ಯನ ಮಗ ವೆಂಕಪ್ಪಯ್ಯನಾದ ನನಗೆ, ತಾ. 14—2—'23ರಲ್ಲಿ ಮೂಡಬಿದ್ರಿ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕ ಫಂಡಿನ ಕಾರ್ಯದರ್ಶಿಯಾದ ವೇಣೂರು ಕೃಷ್ಣಯ್ಯನು ರೂಪಾಯಿ 500ಕ್ಕೆ ಡಿಮಾಂಡ್ ನೋಟು ಬರಕೊಟ್ಟು ಹಣ ಪಡೆದಿರುವ ತನ್ಮಧ್ಯೆ ಸದರಿ ನೋಟಿನ ಹಣದ ಪೈಕಿ 2 ದಪೆಯಿಂದ ನಾವು ರಶೀದಿ ಕೊಟ್ಟು ರೂಪಾಯಿ 445—0—0 ಮಾತ್ರ ಪಡದು ಮಿಕ್ಕ ಸದರಿ ನೋಟಿನ ಹಣ ಆ ಕೃಷ್ಣಯ್ಯನು ವಸೂಲುಕೊಡದ್ದರಿಂದ ಮುಂದಿನ ವ್ಯವಹರಣೆ ನಡಿಸುವ ಅನುಭವದ ಬಗ್ಗೆ ಮೇಲಿನ ನೋಟು, ನಾನು ಧರಿಸುವ ರೂಪಾಯಿ 6—0—0 ಕ್ರಯದ ಮಡಿಪಟ್ಟೆ, ಸ್ನಾನದ ಪಂಜಿ ಎರಡು, ನಗದು ರೂಪಾಯಿ 15—0—0 ಸಮೇತ ಗಂಟಿನಲ್ಲಿ ಕಟ್ಟಿ ನನ್ನ ಮನೆಯಿಂದ ಹೊರಟು ಕಾರ್ಕಳಕ್ಕೆ ಹೋಗುವದೆಂತ ಮಧ್ಯದಾರಿಯಲ್ಲಿ ನಾನು ಎಲೆಅಡಿಕೆ ತಿನ್ನಲಿಕ್ಕೆ ಕೂತಿದ್ದ ಸ್ಥಳದಲ್ಲಿ ಆ ಗಂಟು ಬಿಟ್ಟು ಸ್ವಲ್ಪ ದೂರ ಹೋದ ನಂತರ ವಾಪಾಸು ಬಿಟ್ಟ ಸ್ಥಳಕ್ಕೆ ಬಂದು, ನೋಡಿದಾಗ್ಯೆ ಆ ಗಂಟು ಸಿಕ್ಕಲಿಲ್ಲಾ ಪುದರಿಂದ, ಯಾರಿಗಾದರೂ ಆ ಗಂಟು ಸಿಕ್ಕಿ ಮೇಲಿನ ನೋಟು ಹಣ ವ. ಸೊತ್ತುಗಳು ಸಮೇತ ನನಗೆ ತಂದು ಕೊಟ್ಟಲ್ಲಿ ಸದರಿಯವರಿಗೆ ರೂಪಾಯಿ 15—0—0 ಇನಾಂ ಕೊಡಲಿಕ್ಕೆ ಸಿದ್ಧನಿದ್ದೇನೆಂತ ಈ ಮೂಲಕ ತಿಳಿಸಿದ್ದೇನೆ.

ವೆಂಕಪ್ಪನ ರುಜು.

ವಿಕ್ರಿತಕ್ಕೆ ಸಿದ್ಧವಾಗಿದೆ.

ಮಂಗಳೂರಿನ ಬೆಂಟ್‌ಲೆಂಡ್ ಪೇಟೆಯಲ್ಲಿ ನೂತನವಾಗಿ ಕಟ್ಟಿಸಲ್ಪಟ್ಟ ತಕ್ತಪೋಶಿ, ಮನೆ, ಹಟ್ಟಿ, ಕೊಟ್ಟಿಗೆ ಇತ್ಯಾದಿ ಕೂಡಿರುವ ಹಿತ್ತಲು ವಿಕ್ರಿತಕ್ಕೆ ಸಿದ್ಧವಾಗಿರುವುದು. ಮನೆಯು ಸಂಪೂರ್ಣ ಕಲ್ಲುಗಳಿಂದಲೂ ಬಣ್ಣಬೋವು ಇತ್ಯಾದಿ ಉತ್ಕೃಷ್ಟ ಜಾತಿ ಮೋಪಿನಿಂದಲೂ ಈಗಿನ ಅಭಿರುಚಿಗೆ ತಕ್ಕುದಾದ ರೀತಿಯಲ್ಲಿ ಕಟ್ಟಿಸಲ್ಪಟ್ಟಿರುವುದು. ಮನೆಯ ಸುತ್ತಲಿನ ಗೋಡೆಯೂ ಸಹ ಕಲ್ಲಿನಿಂದಲೇ ಕಟ್ಟಿಸಲ್ಪಟ್ಟಿದೆ. ಹಿತ್ತಲಿನ ವಿಸ್ತೀರ್ಣ ಸುಮಾರು ೩೮ ಸೆಂಟ್ಸ ಇರುವುದು. ಬೇಕಾದವರು ಈ ಪತ್ರದ ಮೆನೇಜರರೊಡನೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಮುಖತಃ ಎಲ್ಲಾ ವಿವರವನ್ನು ತಿಳಕೊಳ್ಳಬಹುದು.

X Co/o.
ಮೆನೇಜರ್,
ಸ್ವದೇಶಾಭಿಮಾನಿ,
ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಕಾರ್ಯಕ್ರಮ.

ತಾರೀಖು ೨೩—೨—೧೯೨೩ ಶುಕ್ರವಾರ.

೧. ಮಧ್ಯಾಹ್ನ ಗಂಟೆ ೩ಕ್ಕೆ ಅಧ್ಯಕ್ಷ ಮತ್ತು ದೇಶಭಕ್ತ ಮುದವೇಡಕರರಿಗೆ ಸ್ವಾಗತ ಮತ್ತು ಮೆರವಣಿಗೆ, ೨. ಮಂಗಳೂರು ಮತ್ತು ಜಿಲ್ಲೆಯ ಇತರ ಭಾಗಗಳಿಂದ ಬರುವ ಅತಿಥಿಗಳಿಗೆ ಸ್ವಾಗತ.

ತಾರೀಖು ೨೪—೨—೧೯೨೩ ಶನಿವಾರ.

೧. ಬೆಳಿಗ್ಗೆ ಘಂಟೆ ೮-೩೦ಕ್ಕೆ ವಸ್ತುಪ್ರದರ್ಶನವನ್ನು ತೆರೆಯುವುದು. ೨. ೩ರಿಂದ ೧೦-೩೦ಕ್ಕೆ ಪ್ರದರ್ಶನಮಂಟಪದಲ್ಲಿ ವೀಣಾ, ಕೊಳಲು ಜಲತರಂಗ—ಇತ್ಯಾದಿ ಸಂಗೀತ, ೩. ಮಧ್ಯಾಹ್ನ ಗಂಟೆ೧ಕ್ಕೆ ಜಿಲ್ಲಾ ಪರಿಷತ್ತಿನ ಅಧಿವೇಶನದ ಆರಂಭ (ಸ್ವಾಗತಮಂಡಳಿಯ ಅಧ್ಯಕ್ಷರ ಮತ್ತು ಅಧ್ಯಕ್ಷರ ಭಾಷಣಗಳು.) ೪. ಮಧ್ಯಾಹ್ನ ಘಂಟೆ ೫-೩೦ಕ್ಕೆ ವಿಷಯ ನಿಯಾಮಕ ಮಂಡಳಿಯ ಸಭೆ. ೫. ರಾತ್ರೆ ಗಂಟೆ ೯-೩೦ಕ್ಕೆ ನಾಟಕ ಥಿಯೇಟರಿನಲ್ಲಿ ಕೆಲವು ಮಿತ್ರರು ರಾಷ್ಟ್ರೀಯ ವಿದ್ಯಾಮಂದಿರದ ಸಹಾಯಾರ್ಥವಾಗಿ ನಾಟಕವನ್ನಭಿನಯಿಸುವರು.

ತಾರೀಖು ೨೫—೨—೧೯೨೩ ಆದಿತ್ಯವಾರ.

೧. ಬೆಳಿಗ್ಗೆ ಗಂಟೆ ೮-೩೦ಕ್ಕೆ ಪರಿಷತ್ತಿನ ಅಧಿವೇಶನವು ಮುಂದರಿಯುವುದು. (ಪರಿಷತ್ತಿನ ಠರಾವುಗಳ ಚರ್ಚೆ) ೨. ರಾತ್ರೆ ಘಂಟೆ ೯-೩೦ಕ್ಕೆ ಪರಿಷತ್ತಿನ ಮಂಟಪದಲ್ಲಿ ತಾಳಮದ್ದಳೆ.

ಬೇರೆ ಊರುಗಳಿಂದ ಬರುವವರು ತಾ. ೨೩ರೊಳಗೆ ಬರಬೇಕಾಗಿ ವಿನಂತಿ.

ಸ್ತ್ರೀಯರ ಉದ್ಧರಣೆಯ ಆವಶ್ಯಕತೆಗಳು.

'ವೆಲ್ಪ ಓಫ್ ಇಂಡಿಯ' ಪತ್ರದಲ್ಲಿ ಮಿ| ಮದನಮೋಹನ ವರ್ಮರೆಂಬವರು ಹಿಂದೂಸ್ಥಾನದ ಸ್ತ್ರೀಯರ ಸಂಪತ್ತು ಅಭಿವೃದ್ಧಿಯ ವಿಷಯದಲ್ಲಿ ಕೆಲವು ಸೂಚನೆಯನ್ನು ಮಾಡಿರುವರು. ಮೊದಲಾಗಿ ಸ್ತ್ರೀಯರು ಸಾಮಾಜಿಕ ಕಾರ್ಯಗಳಲ್ಲಿ ಭಾಗಿಗಳಾಗದಂತೆ ಇರುವ ಪರ್ದಾಪದ್ಧತಿ ಮೊದಲಾದುವನ್ನು ತೆಗೆದುಹಾಕಬೇಕು. ಎರಡನೆಯದಾಗಿ ಸ್ತ್ರೀಯರ ವಿದ್ಯಾಭ್ಯಾಸದ ಬಗ್ಗೆ ಸಾಂಗೋಪಾಂಗವಾದ ಯೋಜನೆಯನ್ನು ತಯಾರಿಸಿ ಆ ಯೋಜನೆಯಂತೆ ಕಾರ್ಯ ನಡೆಯುವಂತೆ ಮಾಡಬೇಕು. ವಿವಾಹವಾಗುವ ಮೊದಲು ವಿದ್ಯಾಭ್ಯಾಸವೆಲ್ಲವನ್ನೂ ಹೊಂದುವಂತೆ ಹೆಮ್ಮಕ್ಕಳ ವಿವಾಹ ಪ್ರಾಯವನ್ನು ಹೆಚ್ಚಿಸತಕ್ಕದ್ದು ಮೂರನೆಯ ಕಾರ್ಯವಾಗಿದೆ. ಮಕ್ಕಳನ್ನು ತರಬೇತುಮಾಡುವ ವಿಧಾನವನ್ನು ಸ್ತ್ರೀಯರಿಗೆ ಕಲಿಸತಕ್ಕದ್ದು ನಾಲ್ಕನೇದು. ಇದಲ್ಲದೆ ನಮ್ಮ ದೇಶದ ಸ್ತ್ರೀಯರ ನಾಗರೀಕತೆ ವಿದ್ಯಾಭ್ಯಾಸ ಮುಂತಾದ್ದು ವೃದ್ಧಿಯಾಗಿ ಅವರು ನಮ್ಮ ಭಾವಿ ಜನಾಂಗವಾದ ಚಿಕ್ಕಮಕ್ಕಳನ್ನೂ ದೇಶವನ್ನೂ ಉದ್ಧಾರಮಾಡುವುದಕ್ಕೆ ಸಹಾಯಕರಾಗುವ, ಎಲ್ಲ ಅನುಕೂಲತೆಗಳನ್ನು ಅವರಿಗೆ ಮಾಡಿಕೊಡತಕ್ಕದ್ದು.

ಮಂಗಳೂರು ತಾಲೂಕು ಕೊಂಗ್ರೆಸ್ ಕಮಿಟಿ.

ತಾ ೧೮—೨—'೨೩ರಲ್ಲಿ ಕೂಡಿದ ಮಂಗಳೂರು ತಾಲೂಕು ಕಮ್ಮಿಟಿಯ ಮಹಾ ಸಭೆಯ ಕೆಲವು ನಿರ್ಣಯಗಳು.

ತಾಲೂಕಿನಲ್ಲಿ ಪ್ರಚಾರ ಕೆಲಸದ ಬಗ್ಗೆ ರಾ. ಅ. ಭೋಜರಾಯರನ್ನು ನೇಮಿಸಬೇಕಾಗಿಯೂ ಕಾರ್ಯಕಾರಿ ಮಂಡಳಿಯವರು ಅದಷ್ಟು ಬೇಗ ಕೂಡುವಷ್ಟು ಮಂದಿ ಸ್ವಯಂಸೇವಕರನ್ನು ಅನುಕೂಲಿಸಿಕೊಡಬೇಕಾಗಿಯೂ ನಿರ್ಣಯಿಸಲಾಯಿತು.

ಮಂಗಳೂರು ತಿಲಕ ವಿದ್ಯಾಲಯವನ್ನು ಮಾತ್ರ ತಾಲೂಕು ಕಮ್ಮಿಟಿಯವರು ನಡಿಸಬೇಕಾಗಿಯೂ ತಾಲೂಕಿನ ಇತರ ಶಾಲೆಗಳನ್ನು ಆಯಾಯ ಸ್ಥಳೀಕ ಸಂಸ್ಥೆಗಳೇ ನಡಿಸಬೇಕಾಗಿಯೂ ನಿರ್ಣಯಿಸಲ್ಪಟ್ಟಿತು.

ಯಾವುದಾದರೂ ಸಂಸ್ಥೆಯವರು ನಮ್ಮ ಶಾಲೆಗಳನ್ನು ಕೂಡಿಸಿ ಹಣವ ಕೊಡಲು ಇದ್ದಲ್ಲಿ ಕಾರ್ಯಕಾರಿ ಮಂಡಳಿಯವರು ಮಹಾ ಸಭೆಯವರ ಪರವಾಗಿ ಇಲ್ಲದೆ ಸದರಿ ಸಂಸ್ಥೆಗಳು ಕೂಡಿಸಿದ ಹಣಕ್ಕಿಂತ ಹೆಚ್ಚಿಗೆ ಹಣದ ಸಹಾಯಮಾಡಬಾರದು. ಇದು ಎಪ್ರಿಲ್ ೧ರಿಂದ ಜಾರಿಗೆ ಬರತಕ್ಕದ್ದು. ಈಗ ಖಾಲಿಇರುವ ಸ್ಥಳಗಳಿಗೆ ತಕ್ಕ ಜನಗಳು ಆಗುವ ಹಾಗೆ ಅಧ್ಯಕ್ಷರು, ಕಾರ್ಯದರ್ಶಿಗಳು, ಶ್ರೀವಾಡಿರಾಜ ಅ. ಬೋಜರಾವ್ ಮತ್ತು ಮಾಸ್ತರ್ ಡಿ ಸೋಜರು ಮಹಾ ಅಧ್ಯಕ್ಷರಿಗಳ ವ್ಯವಸ್ಥೆ ಮಾಡಬೇಕು.

ಮಿ. ಡಿ. ಸೋಜರಿಗೆ ಕದ್ರಿಯ ರಾಷ್ಟ್ರೀಯ ಶಾಲೆಯನ್ನು ಬಲಪಡಿಸುವುದಕ್ಕೆ ಕದ್ರಿಯಲ್ಲಿ ಗ್ರಾಮ ಕಮಿಟಿಯನ್ನು ಏರ್ಪಡಿಸುವುದಕ್ಕೆ ಬರುವ ೩೧ನೇ ಅಕ್ಟೋಬರ ವರೆಗೆ ತಿಂಗಳಿಗೆ ರೂ. ೩೦ ಸಂಬಳದ ಮೇಲೆ ನೇಮಿಸಬೇಕಾಗಿ ನಿರ್ಣಯಿಸಲ್ಪಟ್ಟಿತು. ಆ ಸಮಯದಲ್ಲಿ ಅವರು ಅಲ್ಲಿ ಮುಖ್ಯೋಪಾಧ್ಯಾಯರಾಗಿಯೂ ಇರತಕ್ಕದು.

ಕಾರ್ಯಕಾರಿ ಮಂಡಳಿಯ ವ ಜಿಲ್ಲಾ ಕಮಿಟಿಗೆ ಪ್ರತಿನಿಧಿಗಳ ಚುನಾವಣೆ ಮತ್ತು ಇತರ ಕೆಲಸದ ಬಗ್ಗೆ ೧೯೨೩ನೇ ಮಾರ್ಚ ತಿಂಗಳ ತಾ ೨೪ನೇ ಶನಿವಾರ ಸಾಯಂಕಾಲ ಗಂಟೆ ೪ಕ್ಕೆ ಮಹಾ ಸಭೆಯನ್ನು ತಿಲಕ ವಿದ್ಯಾಲಯದಲ್ಲಿ ಕೂಡಿಸಬೇಕಾಗಿಯೂ ನಿಶ್ಚಯಿಸಲಾಯಿತು.

ಜರ್ಮನಿಯ ಸತ್ಯಾಗ್ರಹ.

ಫ್ರೆಂಚರು ರೂರ ಪ್ರಾಂತವನ್ನು ಪ್ರವೇಶಿಸಿದನ್ನು ನಿಷೇಧಿಸಿ ಜರ್ಮನಿಯು ನಡಿಸುತ್ತಿರುವ ಸತ್ಯಾಗ್ರಹವೂ ಫ್ರೆಂಚರ ಪ್ರತಿಕಾರವೂ ಇನ್ನೂ ನಡಿಯುತ್ತಲೇ ಇದೆ. ಜರ್ಮನಿಯು ಜೀವಾಳವಾದ ರೂರ್ ಪ್ರಾಂತದಿಂದ ಈ ದೇಶದ ಇತರ ಕಡೆಗಳಿಗೆ ಅನೇಕ ತರದ ಸಾಮಾನುಗಳನ್ನು ಕಳುಹಿಸಲು ನಿರ್ಬಂಧವಿಟ್ಟಿದೆ. ಇದರಿಂದ ಜರ್ಮನಿಗೆ ವಿಶೇಷ ತೊಂದರೆಯುಂಟಾಗಿದೆ. ಫ್ರೆಂಚರು ರೂರ್ ಪ್ರಾಂತವನ್ನು ಸ್ವಾಧೀನಮಾಡಿಕೊಂಡಿರುವುದರಿಂದ ಅವರಿಗೆ ಈ ವರೆಗೆ ಹೆಚ್ಚಿನ ನಷ್ಟವೇ ಉಂಟಾಗಿದೆಯಲ್ಲದೆ ಹೆಚ್ಚಿನ ಲಾಭವೇನೂ ಆಗಲಿಲ್ಲ. ಜರ್ಮನ ಗಣಿಗಳಿಂದ ಕಲ್ಲಿದ್ದಲನ್ನು ಅಗಿಯುವುದು ಮುಂತಾದ ಕಾರ್ಯಗಳನ್ನು ನಡಿಸುವುದಕ್ಕಾಗಿಯೆ ಫ್ರೆಂಚರಿಗೆ ವಿಶೇಷ ಧನವು ಬೇಕಾಗಿದೆ. ಈ ಬಗ್ಗೆ ಫ್ರಾನ್ಸ್ ಸಾಲವನ್ನೆತ್ತಲಿಕ್ಕಿದೆ. ಜರ್ಮನಿಯ ಕಲ್ಲಿದ್ದಲ್ಲಿನ ಗಣಿಗಳಲ್ಲಿ ಕೆಲಸ ಮಾಡುವಾಗ ತಮಗೆ ಖರ್ಚು ಹೆಚ್ಚು ತಗಲುವುದರಿಂದ ತಮ್ಮ ಕೂಲಿಯ ದರವನ್ನು ಹೆಚ್ಚಿಸಲೇಬೇಕು, ಇಲ್ಲವೆ ತಾವು ಮುಷ್ಕರವನ್ನು ಹಿಡಿಯುವೆವೆಂದು ಕೆಲವು ಫ್ರೆಂಚ ಕೂಲಿಗಳೇ ಸೂಚಿಸುತ್ತಿದ್ದಾರೆ. ಜರ್ಮನ ಕೂಲಿಗಳಲ್ಲಿ ಕೆಲವರು ತಮಗೆ ಜೀವನಕ್ಕೆ ತೊಂದರೆಯಾಗಿ ಬೇರೆ ಉಪಾಯವನ್ನು ಕಾಣದೆ ಫ್ರೆಂಚರ ಮರೆಹೊಕ್ಕಿಕೊಂಡು ರೂರ್ ಪ್ರಾಂತದ ಗಣಿಗಳಲ್ಲಿ ಕೆಲಸಮಾಡಲು ಆತುರಗೊಂಡಿದ್ದರೂ ಇವರು ಫ್ರೆಂಚರ ಕೈ ಕೆಳಗೆ ಕೆಲಸಮಾಡುವುದಾದರೆ ತಮ್ಮ ಪ್ರಾಣದ ಆಶೆಯನ್ನು ಬಿಟ್ಟು ಬಿಡತಕ್ಕದೆಂದು ಅನಾಮಿಕ ಪತ್ರಗಳು ಬರುವುದರಿಂದ ಇವರೂ ಸ್ವಲ್ಪ ಯೋಚನೆಯಲ್ಲಿ ಬಿದ್ದಿರುವರು. ರೂರ್ ಪ್ರಾಂತದ ಸಮಾಚಾರವನ್ನು ಬಂದುಮಾಡುವ ಉದ್ದೇಶದಿಂದ ಫ್ರೆಂಚರು ತಮ್ಮ ಕೈವಶಮಾಡಿಕೊಂಡಿದ್ದ ಪ್ರದೇಶದಲ್ಲಿನ ೮೬ ವರ್ತಮಾನ ಪತ್ರಗಳನ್ನು ನಿಲ್ಲಿಸಿ ಬಿಟ್ಟಿರುವರು. ಜರ್ಮನಿಯ ರೈಲ್ವೆ ಲ್ಯಾನುಗಳಲ್ಲಿ ಮುಷ್ಕರ ಉಂಟಾಗಿರುವುದರಿಂದ ಜರ್ಮನಿಯಿಂದ ಕಲ್ಲಿದ್ದಲನ್ನು ಫ್ರಾನ್ಸಿಗೆ ಕಳುಹಿಸಲು ಅನುಕೂಲವಾಗುವಂತೆ ಬ್ರಿಟಿಷ ಗಡಿಗೆ ಒಳಪಟ್ಟ ಕೆಲವು ರೈಲ್ವೆ ಲ್ಯಾನುಗಳನ್ನು ತಮಗೆ ಬಿಟ್ಟು ಕೊಡತಕ್ಕದೆಂದು ಫ್ರೆಂಚರು ಬ್ರಿಟಿಷರಿಗೆ ಬರಕೊಂಡಿರುವರೆಂದೂ ಈ ವಿಷಯದಲ್ಲಿ ಒಂದು ಒಪ್ಪಂದದ ಏರ್ಪಾಡು ಆಗಿರುವುದೆಂದೂ ವರ್ತಮಾನವಿದೆ. ಫ್ರೆಂಚರ ಅತ್ಯಾಚಾರದಿಂದ ಕಲ್ಲಿದ್ದಲಿನ ಗಣಿಗಳು ಅವರ ವಶವಾಗಿ ಜರ್ಮನ ಕೈಗಾರಿಕೆಗಳೆಲ್ಲವೂ ನಾಶವಾಗುವ ಸಂಭವ ಬಂದಿರುವುದರಿಂದ ಮುಂದೆ ಯುರೋಪಿಗೂ ಉಳಿದ ಪ್ರಪಂಚಕ್ಕೂ ಉಂಟಾಗಬಹುದಾದ ಹಾನಿಯನ್ನು ತಪ್ಪಿಸಲು ಅಮೇರಿಕನ್ನ ಸರಕಾರವು ಪ್ರಯತ್ನಪಡಬೇಕೆಂದು ೧೨೦ ಲಕ್ಷ ಜರ್ಮನ್ ಮಂದಿಯುಳ್ಳ ಟ್ರೇಡ್ ಯೂನಿಯನ್ನುಗಳು ಆ ದೇಶದ ಪತ್ರಿಕೆಗಳಲ್ಲಿ ಪ್ರಕಟಿಸಿರುವರು. ಜರ್ಮನಿಯ ಪೋಲೀಸರು ಫ್ರೆಂಚ್ ಅಧಿಕಾರಿಗಳಿಗೆ ಸಲಾಂ ಮಾಡಲಿಲ್ಲವೆಂಬ ಕಾರಣದಿಂದ ಅವರನ್ನೆಲ್ಲಾ ಸೆರೆಹಿಡಿದರಂತೆ. ಅನಂತರ ಫ್ರೆಂಚ ಸೈನಿಕರು ಬಂದು ಪೋಲೀಸರನ್ನೆಲ್ಲಾ ಸಲಾಗಿ ನಿಲ್ಲಿಸಿ ಸಲಾಂಮಾಡಬೇಕಾಗಿ ಗದರಿಸಿದರೂ ಅವರು ಇದಕ್ಕೆ ಒಪ್ಪಲಿಲ್ಲವಂತೆ. ಬಳಿಕ ಇವರೆಲ್ಲರನ್ನೂ ಬಲಾತ್ಕಾರದಿಂದ ತೋಟಂಗೆ ಹತ್ತಿಸಿ ಸಾಗಿಸಿಕೊಂಡು ಹೋದರಂತೆ. ಜರ್ಮನರು ಫ್ರೆಂಚರು ನಡಿಸುತ್ತಿರುವ ಹೊಗೆ ಬಂಡಿಗಳನ್ನು ಪಟ್ಟಿಗಳಿಂದ ತೊಲಗಿಸಿ ಉರುಳಿಸಲೂ ಸೇತುವೆಗಳನ್ನು ನಾಶಪಡಿಸಲೂ ಉಪಕ್ರಮಿಸುವುದರಿಂದ ಲೋಹ ಮಾರ್ಗಗಳ ಬಳಿಯಲ್ಲೂ ಸೇತುವೆಗಳ ಬಳಿಯಲ್ಲೂ ಯಾವ ಜರ್ಮನಿಯವನಾದರೂ ಹೊಂಚುಹಾಕುತ್ತಿದ್ದರೆ ಅವನನ್ನು ಸುಟ್ಟುಬಿಡಬೇಕೆಂದು ಫ್ರೆಂಚರು ಆಜ್ಞಾಪಿಸಿರುವರು. ಜರ್ಮನ್ ಚಾನ್ಸ್‌ಲರರು ರೂರ್ ಪ್ರಾಂತವನ್ನು ಪ್ರವೇಶಿಸಕೂಡದೆಂದು ಫ್ರೆಂಚರು ಪ್ರಕಟಿಸಿದ್ದಾರೆ. ಜರ್ಮನಿಯಲ್ಲಿ ಕೆಲಸಮಾಡುವ ೩೭೦೦ ಫ್ರೆಂಚಕೂಲಿಗಳಲ್ಲಿ ೪೦೦೦ ಮಂದಿಗಳು ತಮ್ಮ ಕೂಲಿಯ ದರವನ್ನು ಏರಿಸಬೇಕೆಂದು ಮುಷ್ಕರವನ್ನು ಹಿಡಿದಿರುವರು.

ಜರ್ಮನಿಯು ತನ್ನ ಸತ್ಯಾಗ್ರಹವನ್ನು ಎಂದಕ್ಕೂ ನಡಿಸಲು ನಿರ್ಧರಿಸಿದೆ. ಇದರಲ್ಲಿ ತಮ್ಮನ್ನು ಯಾರಿಂದಲೂ ಗೆಲ್ಲಲು ಅಗದೆಂದು ಜರ್ಮನಿಯ ಚಾನ್ಸ್‌ಲರರಾದ ಮಿ| ಕುನೋ ಎಂಬವರು ತಮ್ಮ ಒಂದು ಭಾಷಣದಲ್ಲಿ ಹೇಳಿರುವರು. ಜರ್ಮನಿಯಲ್ಲಿ ಫ್ರೆಂಚರು ಆಕ್ರಮಿಸದೆ ಇರುವ ಪ್ರದೇಶಗಳಲ್ಲಿ ಕಲ್ಲಿದ್ದಲ್ಲಿನ ಅಭಾವದಿಂದ ಕೈಗಾರಿಕೆಯ ಕೆಲಸ ನಡೆಯದೆ [illegible] ಅವಶ್ಯವಾಗಿದೆ. ಈಗ ಬ್ರಿಟನ್ನಿನಿಂದ ಇಲ್ಲಿಗೆ ಕಲ್ಲಿದ್ದಲನ್ನು ತರಿಸುವ ಏರ್ಪಾಡುಗಳು ನಡಿಯುತ್ತಿವೆ. ಫ್ರಾನ್ಸಿಗೆ ಕಲ್ಲಿದ್ದಲನ್ನು ಕಳುಹಿಸಲು ಅತಂಕವನ್ನುಂಟುಮಾಡಿದ ಅಪಾದನೆಯ ಮೇಲೆ ಎಸೆಯ ಬರ್ಗೋ ಮಾಸ್ತರ ಎಂಬ ಅಧಿಕಾರಿಗೆ ಎರಡು ವರುಷಗಳ ಶಿಕ್ಷೆಯು ವಿಧಿಸಿದೆ. ಬರ್ನ್‌ಹೆಸನ್ ಎಂಬಲ್ಲಿ ವಿದ್ಯುಲ್ಲತೆಯನ್ನು ಒದಗಿಸುವ ಕಾರ್ಖಾನೆಯು ಡ್ಯಾರೆಕ್ಟರರಿಗೆ ವಿದ್ಯುಲ್ಲತೆಯನ್ನು ಒದಗಿಸದೆ ಇದ್ದ ತಪ್ಪಿಗಾಗಿ ೫ ಮಿಲಿಯ ಮಾರ್ಕುಗಳ ದಂಡವನ್ನು ವಿಧಿಸಿದೆ. ೧೯೧ರಲ್ಲಾ ಯುದ್ಧದ ನಮೂನೆಯ ಕಾದಾಟವನ್ನು ಜರ್ಮನರು ನಡಿಸುವ ತವಕದಲ್ಲಿದ್ದಾರೆಂದು ಕೆಲವು ಫ್ರೆಂಚರ ಹೇಳಿಕೆಯಾಗಿದೆ ಮತ್ತು ಜರ್ಮನರು ಆ ನಮೂನೆಯ ಯುದ್ಧವನ್ನು ಪ್ರಾರಂಭಿಸುವುದಾದರೆ ಅವರನ್ನು ಹತೋಟಿಗೆ ತರಲು ಸಹಾಯವಾಗುವಂತೆ ರೂರ ಪ್ರಾಂತದಲ್ಲಿ ಫ್ರೆಂಚರು ಇನ್ನೂ ಸೈನ್ಯವನ್ನು ಕಳಿಸುತ್ತಲೇ ಇದ್ದಾರೆ.

ಇಂಗ್ಲೆಂಡಿನ ಪಾರ್ಲಿಮೆಂಟಿನ ಮಜೂರ ಪಕ್ಷದ ನಾಲ್ಕು ಮಂದಿ ಮೆಂಬರರು ಎಸ್ಸೆನ್ನಿಗೆ ಬಂದು ಇಳಿದಿರುವರು. ಮುಷ್ಕರ ಹಿಡಿದಿರುವವರಿಗೆ ಸಹಾಯ ಮಾಡುವುದಕ್ಕಾಗಿ ಜರ್ಮನರು ಬಟ್ಟೆ ಕೂಡಿಸಿ ಇಟ್ಟಿದ್ದ ೬೫೦ ಮಿಲಿಯ ಮಾರ್ಕುಗಳನ್ನು ಫ್ರೆಂಚರು ತಮ್ಮ ಸ್ವಾಧೀನ ಮಾಡಿಕೊಂಡಿರುವರು. ಗೆಸೋನ್ ಕರ್ಚನ್ ಎಂಬ ಪಟ್ಟಣದವರು ಫ್ರೆಂಚರು ವಿಧಿಸಿದ ದಂಡವಾದ ಹಣ ೧,೦೦೦೦೦೦೦೦ ಮಾರ್ಕುಗಳನ್ನು ಕೊಡದೆ ಹೋದುದರಿಂದ ಫ್ರೆಂಚರು ಆ ಪಟ್ಟಣದ ಮುನ್ಸಿಪಲ್ ಬ್ಯಾಂಕಿನಿಂದ ೧೧೦೦೦೦೦೦೦ ಮಾರ್ಕುಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡಿರುವರು. ಜರ್ಮನರು ಹಲವು ಕಡೆಗಳಲ್ಲಿ ರೈಲ್ವೆ ಬಂಡಿಗಳು ಮಗುಚಿ ಬೀಳುವಂತೆ ಮಾಡಿರುವರು. ಇದರಿಂದ ಕೆಲವು ಪ್ರಾಣಹತ್ಯೆಗಳೂ ಸಂಭವಿಸಿವೆ.

* * *

ವಿದೇಶ ವರ್ತಮಾನ.

ಐರ್ಲೆಂಡು:—ಡಬ್ಲಿನ್ನಿನಲ್ಲಿ ಮೂರಿ ದೊಳ್ಳನ ಮತ್ತು ಇನ್ನಿಬ್ಬರನ್ನು ಕೈದುಮಾಡಿ ಅನಂತರ ಬಿಟ್ಟು ಬಿಟ್ಟರು.

ಬ್ರಿಟಿಷ ಚಕ್ರವರ್ತಿಗಳ ಖರ್ಚು:—ಸಾರ್ವಭೌಮ ಪಂಚಮ ಜೋರ್ಜ ಬಾದಶಹರಿಗೆ ಪ್ರತಿ ತಿಂಗಳಿಗೆ ೬೯ ಲಕ್ಷ ೪೨ ಸಾವಿರ ರೂಪಾಯಿಗಳ ಖರ್ಚು ತಗಲುತ್ತದೆ.

ಇಂಗ್ಲೆಂಡಿನ ಸಾಲ:—ಅಮೇರಿಕನ್ನರಿಗೆ ಇಂಗ್ಲೆಂಡಿನವರು ಸಲ್ಲಿಸಬೇಕಾಗಿರುವ ಸಾಲದ ವಿಷಯದಲ್ಲಿ ಉಭಯತರಗಿಯೂ ಈಗ ಸಮಾಧಾನಗಳು ಕುದುರಿದ್ದವು. ಆಂಗ್ಲರು ಕಂತಿನ ಮೇರೆಗೆ ೬೦ ವರ್ಷಗಳಲ್ಲಿ ಸಲ್ಲಿಸುವುದಕ್ಕೆ ಮಾಡಿದ್ದ ಸೂಚನೆಗಳು ಅಂಗೀಕೃತವಾದವು.

ತಂಬಾಕು ಭಕ್ತ:—ಆಸ್ಟ್ರಿಯಾ ದೇಶದ ಒಬ್ಬ ತಂಬಾಕು ಭಕ್ತನು ೪೫ ವರುಷಗಳಲ್ಲಿ ೬,೨೮,೭೦೩ ಚುಟ್ಟಗಳನ್ನು ಸೇದಿದನಂತೆ. ಆ ಲೆಕ್ಕವನ್ನು ತಾನೇ ಬರೆದಿಟ್ಟುಕೊಂಡಿರುವನು. ದಿನಕ್ಕೆ ೩೮ ಚುಟ್ಟಗಳನ್ನು ಬೂದಿ ಮಾಡುತ್ತಿದ್ದನಂತೆ. ನಮ್ಮ ಪ್ರಾಚೀನ ಕಾಲದ ಅಹಿತಾಗ್ನಿಗಳ ಸಂಖ್ಯೆಯು ಮೃಗ್ಯವಾಗುತ್ತ ಬಂದಂತೆ ಇಂಥ ಅಗ್ನಿ ಹೋತ್ರಿಗಳ ಸಂಖ್ಯೆಯು ಜಗತ್ತಿನಲ್ಲಿ ಈಗ ಹೆಚ್ಚುತ್ತಿರುವುದು. ಪಶ್ಚಿಮ ನಾಗರಿಕತೆಯ ಪ್ರಭಾವವಾಗಿದೆ. [ಮೈಸೂರ ಸ್ಟಾರ.

ಜಪಾನ:—ಜಪಾನ ಚಕ್ರವರ್ತಿಗಳ ಚಿಕ್ಕಪ್ಪಂದಿರಾದ ಪ್ರಿನ್ಸನ್ ಫುಶೂಮಿ ಎಂಬ ರಾಜವಂಶಿಕರು ಕಳೆದ ತಾ. ೫ರಲ್ಲಿ ಮೃತಪಟ್ಟರು.

ರುಷ್ಯ:—ರುಷ್ಯ ರಾಜ್ಯದ ಬೋಲ್‌ಶೆವಿಕ ಸರಕಾರವು ಯುದ್ಧ ಸನ್ನದ್ಧರಾಗುತ್ತಿರುವಂತೆ ತೋರುತ್ತದೆ. ಸೈನ್ಯಾಧಿಕಾರಿಗಳಾದ ಟ್ರಾಟ್‌ಸ್ಕಿ ಎಂಬವರು ಪಶ್ಚಿಮ ಭಾಗದ ಸೈನ್ಯವನ್ನು ನೋಡಲಿಕ್ಕೆ ಹೋಗಿದ್ದಾಗ ಮುಂದಿನ ಮೇ ತಿಂಗಳಲ್ಲಿ ಯುದ್ಧ ಪ್ರಾರಂಭವಾಗಬಹುದೆಂದೂ ಸಿಪಾಯಿಗಳೆಲ್ಲರೂ ಸಿದ್ಧರಾಗಿರಬೇಕೆಂದೂ ಹೇಳಿದರಂತೆ.

ಜರ್ಮನಿಯಲ್ಲಿ ತಯಾರಾಗುವ ಜಪಲಿನ್:—ಅಮೇರಿಕನ್ನರಿಗೋಸ್ಕರ ಜರ್ಮನಿಯಲ್ಲಿ ದೊಡ್ಡ ಜಪಲಿನ್ ವಿಮಾನವು ನಿರ್ಮಿಸಲ್ಪಡುತ್ತಿದೆ. ಇದು ಚಿಕಾಗೋವಿಗೆ ಹೋಗಬೇಕಾದರೆ ಫ್ರಾನ್ಸಿನ ಮೇಲೆಯೇ ಹಾದುಹೋಗಬೇಕು. ಜರ್ಮನ್ ವೈಮಾನಿಕರೇ ಇದನ್ನು ನಡಿಸಿಕೊಂಡು ಹೋಗಲಿಕ್ಕಿದ್ದಾರೆ. ಇದೆಲ್ಲಾ ಕೂಡದೆಂದು ಫ್ರಾನ್ಸ್ ಪ್ರಭುತ್ವದವರು ಅಮೇರಿಕಾ ಸಂಯುಕ್ತ ರಾಷ್ಟ್ರದ ಅಧಿಕಾರಿಗಳಿಗೆ ಬರೆದು ತಿಳಿಸಿರುವರು.

ಅಮೇರಿಕಾ:—ಅಮೇರಿಕಾದಲ್ಲಿ ವಿದೇಶಿಯರ ಸಂಖ್ಯೆಯನ್ನು ತಗ್ಗಿಸಲು ಅನುಕೂಲವಾದ ಕಾನೂನನ್ನು ಏರ್ಪಡಿಸಲು ಪ್ರಯತ್ನವು ನಡಿಯುತ್ತಿದೆ. ಇನ್ನು ಮುಂದೆ ಈ ದೇಶಕ್ಕೆ ೧೬,೮೦೦೦ ಮಂದಿಗಳನ್ನು ಮಾತ್ರವೇ ಹೊರಗಿನಿಂದ ಬಂದವರನ್ನು ಸೇರಿಸಿಕೊಳ್ಳುವರು. ಒಟ್ಟು ೩೫,೮೦೦೦ ಮಂದಿಗಳಿಗಿಂತ ಹೆಚ್ಚಾಗಿ ಅನ್ಯ ದೇಶೀಯರು ಇರಕೂಡದೆಂದು ಇವರ ಪ್ರಯತ್ನ.

ಚೈನಾದಲ್ಲಿರುವ ಹುಡುಗಿಯರ ಶಾಲೆಗಳು:—ಚೈನಾದಲ್ಲಿ ಈಗ ೧೫,೦೦೦ ಹುಡುಗಿಯರ ಶಾಲೆಗಳಿರುವವು. ಒಟ್ಟು ಅರ್ಧ ಮಿಲಿಯ ವಿದ್ಯಾರ್ಥಿನಿಯರಿರುವರು.

ಇಂಗ್ಲೆಂಡಿನ ಸಾಲ:—ಅಮೇರಿಕದ ಸಾಲವನ್ನು ೬೦ ವರುಷಗಳಲ್ಲಿ ಸಲ್ಲಿಸಬೇಕೆಂದು ನಿಶ್ಚಯವಾದ ಮೇರೆಗೆ ಇಂಗ್ಲೆಂಡದವರಿಗೆ ಈ ಸಾಲವನ್ನು ೬೦ ವರುಷದೊಳಗಾಗಿ ಸಲ್ಲಿಸಬೇಕಾದರೆ ಪ್ರತಿಯೊಬ್ಬನಿಗೆ ವರುಷಕ್ಕೆ ಒಂದು ಪೌಂಡು ಕರ ಕೊಡ್ಡಿಸಬೇಕಾಗುವುದಂತೆ.

ಒಳದೇಶ ವರ್ತಮಾನ.

ಅಲಿಘರ ರಾಷ್ಟ್ರೀಯ ವಿಶ್ವವಿದ್ಯಾಲಯ:—ಹಕೀಮ ಅಜಮಲ್‌ಖಾನ ಮತ್ತು ಡಾಕ್ಟರ ಅನ್ಸಾರಿ ಮೊದಲಾದವರು ಅಲಿಘರ ರಾಷ್ಟ್ರೀಯ ವಿಶ್ವವಿದ್ಯಾಲಯದ ಫಂಡಿನ ಬಗ್ಗೆ ರೂ. ೧೦ ಲಕ್ಷವನ್ನು ಕೂಡಿಸುವುದಕ್ಕಾಗಿ ಮುಂಬಯಿ, ಕಲ್ಕತ್ತಾ, ಕಾಥಿಯಾವಾಡ, ಗುಜರಾಥ ಮತ್ತು ರಂಗೂನನ್ನು ಸಂದರ್ಶಿಸಲಿಕ್ಕಿದ್ದಾರೆ.

ಮೈಸೂರು ಕೊಂಗ್ರೆಸ ಕಮ್ಮಿಟಿ:—ಮೈಸೂರು ಡಿಸ್ಟ್ರಿಕ್ಟ ಕೊಂಗ್ರೆಸ ಕಮ್ಮಿಟಿಯ ಮೀಟಿಂಗಿನಲ್ಲಿ ಇಡೀ ಸಂಸ್ಥಾನವನ್ನು ತಿರುಗಿ ಕೊಂಗ್ರೆಸ ಕಾರ್ಯಪ್ರಚಾರ ಮಾಡುವುದಕ್ಕಾಗಿ ಒಂದು ಕಮ್ಮಿಟಿಯು ನೇಮಕವಾದಲ್ಲಾಯಿತು. ಈ ಕಮ್ಮಿಟಿಯು ಬರುವ ಏಪ್ರಿಲ್ ತಾರೀಕು ೩೦ರೊಳಗೆ ರೂ. ೧೦,೦೦೦ವನ್ನು ಖಾದಿ ಫಂಡಿಗಾಗಿ ಕೂಡಿಸತಕ್ಕದ್ದು, ೧೦,೦೦೦ ಕೊಂಗ್ರೆಸ ಮೆಂಬರರನ್ನು ಸೇರಿಸಿಕೊಳ್ಳತಕ್ಕದ್ದು, ಅಲ್ಲಲ್ಲಿ ಸಬ್ ಕಮ್ಮಿಟಿಗಳನ್ನು ನೇಮಕಮಾಡತಕ್ಕದ್ದು, ವಿಧಾಯಕ ಕಾರ್ಯವನ್ನು ನಿರ್ವಹಿಸಲಿಕ್ಕೆ ಸ್ವಯಂಸೇವಕರ ದಳವನ್ನು ಏರ್ಪಡಿಸತಕ್ಕದ್ದು ಎಂದು ನಿರ್ಣಯಿಸಿದೆ.

ಮುಂದಿನ ಕೊಂಗ್ರೆಸ್ಸಿನ ತಯಾರಿ:—ಆಂಧ್ರ ದೇಶದಲ್ಲಿ ಮುಂದಿನ ವರುಷದ ಕೊಂಗ್ರೆಸ್‌ಸಭೆಯ ತಯಾರಿಯು ಈಗಿನಿಂದಲೇ ನಡಿಯುತ್ತಿದೆ.

ಮದರಾಸ ಹ್ಯಾಕೋರ್ಟು:—ಮದರಾಸ ಹ್ಯಾ ಕೋರ್ಟು ಇಸ್ಟರ್ ರಜೆಯ ಬಗ್ಗೆ ಮಾರ್ಚ ತಾರೀಕು ೩೦ರಿಂದ ಏಪ್ರಿಲ್ ೨ರ ವರೆಗೂ ಸೆಕೆಕಾಲದ ರಜೆಯ ಬಗ್ಗೆ ಏಪ್ರಿಲ್ ೩೦ರಿಂದ ಜುಲ್ಯಾ ೮ರ ವರೆಗೂ ಮುಚ್ಚಲ್ಪಡುವುದು.

ಓಲ್ ಇಂಡಿಯಾ ಮುಸ್ಲಿಂ ಲೀಗು:—ಈ ಲೀಗಿನ ವಾರ್ಷಿಕ ಸಮ್ಮೇಲನವು ಇಸ್ಟರ್ ರಜಾ ದಿನಗಳಲ್ಲಿ ಲಖ್ನೌದಲ್ಲಿ ಕೂಡುವುದು.

ಓಲ್ ಇಂಡಿಯಾ ನೇಶನಲ್ ಎಡ್ಯುಕೇಶನಲ್ ಕೊನ್ಫರೆನ್ಸು:—ಈ ಕೊನ್ಫರೆನ್ಸು ಬನಾರಸ್ಸಿನಲ್ಲಿ ಇದೇ ತಾರೀಕು ೨೪ರಿಂದ ಪ್ರಾರಂಭವಾಗುವುದು.

ಮೌಲಾನಾ ಕುತುಬುದ್ದೀನ್:—ದಿಲ್ಲಿ ಪಟ್ಟಣದ ಕೊಂಗ್ರೆಸ್ ಎಂಬ ದೈನಿಕ ಪತ್ರಿಕೆಯ ಸಂಪಾದಕರಾದ ಮೌಲಾನಾ ಕುತುಬುದ್ದೀನ ಎಂಬವರನ್ನು ಅವರ ಸ್ನೇಹಿತರೂ ಕುಟುಂಬದವರು ಜೈಲಿನಲ್ಲಿ ಕಂಡಾಗ ಅವರಿಗೆ ಸಾಧಾರಣ ಕೈದಿಗಳಂತೆ ನಡಿಸುತ್ತಾರಲ್ಲದೆ ಯೋಗ್ಯ ರೀತಿಯಲ್ಲಿ ನಡಸದೆ ಇರುವುದರಿಂದ ಅಸ್ವಸ್ಥ ಪ್ರಕೃತಿಯಲ್ಲಿರುವ ಈ ಗೃಹಸ್ಥರು ಭಾರದಲ್ಲಿ ಕಡಿಮೆಯಾಗಿದ್ದಾರೆಂದು ತಿಳಿಸಿಂದರು. ಹೀಗಿದ್ದರೂ ಇವರು ಸಮಾಧಾನದಿಂದಲೂ ಸಂತೋಷದಿಂದಲೂ ಇರುವರು.

ಶಿಶಿರ:—ಇಲ್ಲಿ ಇಲಿಗಳು ಬೀಳಲು ಪ್ರಾರಂಭವಾಗಿ ಒಬ್ಬೊಬ್ಬರಿಗೆ ಪ್ಲೇಗ ರೋಗವು ತಗಲಿ ಅವರು ಮೃತಪಟ್ಟರಂತೆ.

ಮಾಪಿಳ್ಳಾ ದಂಗೆ:—ಮಾಪಿಳ್ಳೆಯವರ ದಂಗೆಯಲ್ಲಿ [illegible] ದೇವಸ್ಥಾನಗಳಿಗೂ ಮಠ ಸಂಬಂಧವಾದ ಕಟ್ಟಡಗಳಿಗೂ ಪರಿಹಾರ ಕೊಡುವನ್ನು ಎಷ್ಟರ ಮಟ್ಟಿಗೆ ಕೊಡಬೇಕೆಂದು ನಿರ್ಧರಿಸಲು ನೇಮಕವಾದ ಕಮ್ಮಿಟಿಯವರು ಎರಡು ಲಕ್ಷ ರೂಪಾಯಿಗಳನ್ನು ಕೊಡುವುದೆಂದು ತೀರ್ಮಾನಿಸಿರುವರು. ಆದರೆ ಆಸ್ತಿ ಪಾಸ್ತಿಗಳನ್ನು ಕಳಕೊಂಡ ಪ್ರಜೆಗಳಿಗ್ಯಾರಿಗೂ ಸರಕಾರ ದ್ರವ್ಯವು ದೊರೆಯುವುದಿಲ್ಲವೆಂದು ತಿಳಿದಿದೆ.

ಅಮೇರಿಕದ ಧನಿಕರ ಹಿಂದೂಸ್ಥಾನದ ಸಂದರ್ಶನ:—ಅಮೇರಿಕದ ಧನಿಕರಾದ ಸ್ತ್ರೀ ಪುರುಷರು ವರುಷಂಪ್ರತಿ ಈ ಋತುವಿನಲ್ಲಿ ಪ್ರಪಂಚವನ್ನು ಸುತ್ತಿಕೊಂಡು ಬರಲು ಹೊರಡುವ ವಾಡಿಕೆಯನ್ನಿಟ್ಟುಕೊಂಡಿರುವರು. ಅದರಂತೆ ಈಗ ಸುಮಾರು ೪೫೦ ಜನ ಪುರುಷರು ಕಲ್ಕತ್ತೆಗೆ ಬಂದು ಹಡಗು ಇಳಿದಿರುವರು. ಅಲ್ಲಿ [illegible] ದಿನಗಳದ್ದು ಅನಂತರ ಅವರು ಕಾಶೀಕ್ಷೇತ್ರ [illegible] ಸ್ಥಳಗಳನ್ನು ನೋಡಿಕೊಂಡು ಮುಂಬಯಿಯಿಂದ ಹಡಗು ಹತ್ತಿ ಯುರೋಪಿಗೆ ಹೋಗುವರು.

ತಿಲಕ ಸ್ವರಾಜ್ಯ ಫಂಡಿಗೆ ವಂತಿಗೆ:—ಈ ಫಂಡಿಗೆ ಕಲ್ಕತ್ತೆಯ ಶೇಟ ಹಿರಾಲಾಲ ಕರಿಲಾಲ ಎಂಬ ಶ್ರೀಮಂತರು ರೂ [illegible] ಗಳನ್ನು ಕೊಟ್ಟಿರುವರು.

ಮಿ| ಮಾಧವನ್ ನಾಯರರು:—ಸರ್ ಶಂಕರ ನಾಯರರ ಅಳಿಯಂದಿರಾದ ಮಿ| ಮಾಧವನ ನಾಯರರು ಮದರಾಸ ಎಡ್ವೊಕೇಟ ಜನರಲರಾಗಿರುವರು.

ಬ್ರಾಹ್ಮಣ ಬ್ರಾಹ್ಮಣೇತರರ ವಾದ:—ಶ್ರೀ ಕ್ಷೇತ್ರ ಪಿದುಂಬರದಲ್ಲಿ ಶ್ರೀ ದತ್ತಾತ್ರಯ ದೇವಸ್ಥಾನದಲ್ಲಿ ಮಾಘ ವದ್ಯ ಚೌತಿಯ ದಿವಸ ಆಗುವ ಉತ್ಸವದಲ್ಲಿ ಬಹು ಕಾಲದಿಂದ ಬ್ರಾಹ್ಮಣ ಭೋಜನವಾಗುವುದು. ಬ್ರಾಹ್ಮಣರ ಕೂಡ ತಮ್ಮದೂ ಭೋಜನವಾಗಬೇಕೆಂದು ಬ್ರಾಹ್ಮಣೇತರರು ಜಗಳತೆಗಿಯಲು ಮಾಡಿದ ಅಡಿಗೆಯು ಕೆಟ್ಟು, ಅದನ್ನು ಭೂಮಿಪಾಲು ಮಾಡಬೇಕಾಯಿತು. ಕಲೆಕ್ಟರರಿಗೆ ತಾರು ಕಳಿಸಿದರೂ ಅವರಿಂದ ಉತ್ತರವೇ ಬರಲಿಲ್ಲ. (ಕಾನಡಾವೃತ್ತ ಮತ್ತು ಧರ್ಜಯ).

ಕಲ್ಕತ್ತ:—ಕೆಲವು ದಿನಗಳ ಹಿಂದೆ ಕಲ್ಕತ್ತಾ ಪಟ್ಟಣದ ಬಳಿಯಲ್ಲಿರುವ ಪರ್ಬೀಲಿಯಾ ಕಲ್ಲಿದ್ದಲ್ಲು ಗಣಿಯಲ್ಲಿ ೧೫೦೦ ಅಡಿ ಕೆಳಗೆ ಕೂಲಿಗಾರರು ಕೆಲಸ ಮಾಡುತ್ತಿರುವಾಗ್ಗೆ ಗಣಿಯಲ್ಲಿ ಮಹಾಬ್ಬದಿಂದ ವಾಯುಸ್ಫೋಟವಾಗಿ ಸಿಡಿದು ೬೨ ಮಂದಿ ಗಂಡಸರೂ ೩೩ ಮಂದಿ ಹೆಂಗಸರೂ ಸತ್ತರು. ಅನೇಕರಿಗೆ ಗಾಯಗಳಾದವು.

ಗೋವಧೆ:—ಮುಂಬಯಿ ಸಂಸ್ಥಾನದ ಬಾರಸಿ ಎಂಬಲ್ಲಿ ಗೋವಧೆ ಮಾಡುವುದನ್ನು ೧೯೨೦ರಲ್ಲಿ ನಿಲ್ಲಿಸಿತ್ತು. ಈಗ ಅಲ್ಲಿಯ ಕಲೆಕ್ಟರರು ಕಾನೂನಿನ ಬಲದಿಂದ ಅಲ್ಲಿ ಪುನಃ ಗೋವಧ ಮಾಡುವುದನ್ನು ಜಾರಿಗೆ ತರಲಿಕ್ಕಿದ್ದಾರೆ.

ಮಹಾತ್ಮಾಗಾಂಧಿಗಳ ಬಂಧನ ದಿನ:—ಮಹಾತ್ಮಾ ಗಾಂಧಿಗಳ ಬಂಧನದ ೧೧ನೇ ತಿಂಗಳಿನ ದಿನವಾದ ಕಳೆದ ತಾರೀಕು ೧೦ನೇ ದಿನವನ್ನು ಮದರಾಸ ಮುಂಬಯಿ ಮತ್ತು ದೇಶದ ಅನೇಕ ಕಡೆಗಳಲ್ಲಿಯೂ ಯೋಗ್ಯ ರೀತಿಯಿಂದ ಆಚರಿಸಲಾಯಿತು.

ಅಲಹಾಬ್ಬಾದ ಮುನ್ಸಿಪಾಲಿಟಿ:—ಹಕೀಮ ಅಜ್ಮಲ್‌ಖಾನ ಮತ್ತು ದೇಶಬಂಧು ಶ್ರೀಯುತ ಸಿ. ಆರ್. ದಾಸ ಇವರು ಅಲಹಾಬಾದನ್ನು ಸಂದರ್ಶಿಸಿದಾಗ ಮುನ್ಸಿಪಾಲಿಟಿಯು ಕಡೆಯಿಂದ ಇಬ್ಬರಿಗೂ ಸನ್ಮಾನ ಪತ್ರವನ್ನು ಒಪ್ಪಿಸಬೇಕಾಗಿ ನಿಶ್ಚಯಿಸಿದೆ.

ಅಲಿಘರ್ ಮುಸ್ಲಿಂ ಯುನಿವರ್ಸಿಟಿ:—ಮುದಾಬಾದಿನ ರಾಜರು ರಾಜಿನಾಮೆಯನ್ನು ಕೊಟ್ಟಿರುವ ಅಲಿಘರ್ ಮುಸ್ಲಿಂ ಯುನಿವರ್ಸಿಟಿಯ ವ್ಯಾಸ ಚೆನ್ಸಲರ ಪದವಿಗೆ ಇಂಡಿಯಾ ಕೌನ್ಸಿಲಿನ ಸಾಹೇಬಜಾದಾ ಅಫತಾಬ ಅಹಮ್ಮದಖಾನ ಇವರು ನೇಮಕಪಟ್ಟಿರುವ.

ಮಿನಿಸ್ಟರರ ಮೇಲೆ ವ್ಯಾಜ್ಯ:—ಮದರಾಸ ಲೋಕಲ್ ಸೆಲ್ಫ್ ಗವರ್ನಮೆಂಟ ಮಿನಿಸ್ಟರರಾದ ಪನಗಲ್ ರಾಜಾರವರು ಮಾಡಿದ ಒಂದು ಭಾಷಣದಿಂದ ತನಗೆ ಅಪಮಾನವಾಯಿತೆಂದು ಮದರಾಸ್ ಕ್ರಿಶ್ಚನ್ ಕೋಲೇಜಿನ ಲೆಕ್ಚರರ್ ರಾವ್ ಬಹದ್ದೂರ್ ಕಂದಸ್ವಾಮಿ ಚೆಟ್ಟಿಯವರು ಇವರ ಮೇಲೆ ಹೈ ಕೋರ್ಟಿನಲ್ಲಿ ಮಾನನಷ್ಟದ ದಾವಾ ದಾಖಲುಮಾಡಿವರು.

ಶಂಕರ ಲಾಲಾ ಬೇಂಕರ್:—ಎರವಾಡಾ ಜೈಲಿನಲ್ಲಿರುವ ಶಂಕರ ಲಾಲಾ ಬೇಂಕರರವರು ತಿಲಕ ಸ್ವರಾಜ್ಯ ಫಂಡಿಗೆ ರೂ [illegible]ವನ್ನು ಕೊಟ್ಟಿರುವರು.

ಶ್ರೀಮತಿ ಸರೋಜಿನಿ ನ್ಯಾಡು:—ಇವರು ಈ ತಾರೀಕು ೧೯ಕ್ಕೆ ಲಾಹೋರಿಗೆ ತಲ್ಪಿರುವರು. ಇವರು ಈಗ ಪಂಡಿತ ರಾಂಭಜ ದತ್ತರವರ ಅತಿಥಿಗಳಾಗಿರುವರು.

ಮಿ| ಜಿನ್ನಾ:—ತಾನು ಶ್ರೀಯುತ ಸಿ. ಆರ್. ದಾಸರ ಪಕ್ಷಕ್ಕೆ ಸೇರುವನೆಂಬ ವಾರ್ತೆಯು ನಿಜವಲ್ಲವೆಂದು ಮಿ| ಜಿನ್ನಾರವರು ತಿಳಿಸಿರುವ.

ನವಜೀವನ್ನ ಪತ್ರಿಕೆಯ ಖಟ್ಲೆ:—ಈ ಖಟ್ಲೆಯ ತೀರ್ಮಾನವು ಕಳೆದ ತಾ. ೨೦ರಲ್ಲಿ ನಡಿಯಿತು. ಈ ಖಟ್ಲೆಯಲ್ಲಿ ಮಹಾತ್ಮಾ ಗಾಂಧಿಯವರ ಮಕ್ಕಳಾದ ಶ್ರೀಯುತ ರಾಮದಾಸ ಗಾಂಧಿಯವರೂ ಶ್ರೀಯುತ ಕೇಲ್ಕರರು ಜಾಮೀನನ್ನು ಕೊಡಲೊಪ್ಪಲಿಲ್ಲ. ಶ್ರೀಯುತ ರಾಮದಾಸ ಗಾಂಧಿಯವರಿಗೆ ಮುಂಜಾಗ್ರತೆ ಕೊಟ್ಟು ಅವರ ಮೇಲಿನ ಖಟ್ಲೆಯನ್ನು ಮುಗಿಸಿ ಬಿಟ್ಟರು ಡಿಸ್‌ಚಾರ್ಜ ಮಾಡಿದರು. ಆದರೆ ಶ್ರೀಯುತ ಕೇಲ್ಕರರಿಗೆ ಒಂದು ವರುಷದ ಸಾದಾ ಶಿಕ್ಷೆಯನ್ನು ವಿಧಿಸಿರುವರು.

ವಿದೇಶಿ ವಸ್ತ್ರ ಬಹಿಷ್ಕಾರ:—ವಿಕ್ಟೋರಿಂಗ ಕಾಲದಲ್ಲಿ ವಿದೇಶಿ ವಸ್ತ್ರವನ್ನು ತರಿಸಲಿಕ್ಕಿಲ್ಲವೆಂದು ಭಾಷೆಯನ್ನು ಕೊಟ್ಟ ಕೆಲವು ಮುಂಬಯಿಯ ಅಹಮದಾಬಾದಿನ ವ್ಯಾಪಾರಸ್ಥರು ಈಗ ಪುನಃ ವಿದೇಶಿವಸ್ತ್ರವನ್ನು ತರಿಸಹತ್ತಿರುವರು.

ಮುಂಬಯಿ:—ಶ್ರೀಮತಿ ಸರೋಜಿನಿ ನ್ಯಾಡೂರವರು ಮುಂಬಯಿಯ ಮುನ್ಸಿಪಾಲಿಟಿ ಕೌನ್ಸಿಲಿಗೆ ಬುಲೇಶ್ವರ್ ವಾರ್ಡಿನಿಂದ ಆರಿಸಲ್ಪಟ್ಟದನ್ನು ಆಕ್ಷೇಪಿಸಿ ಮಿ| ಆರ್. ಯಸ್. ನವಲ್‌ಕರರು ದಾವೆಯನ್ನು ಮಾಡಿರುವರು. ಇದರ ತನಿಖೆಯು ಮಾರ್ಚ ತಾ. ೫ರಲ್ಲಿ ನಡಿಯುವುದು.

ದೇಶಬಂಧು ಶ್ರೀಯುತ ಸಿ. ಆರ್. ದಾಸ:—ಇವರು ತಮ್ಮ ಮಗ ಚಿರಂಜೀವಿ ಶ್ರೀಯುತ ಸೇನ್‌ಗುಪ್ತರೊಡನೆ ಅಲಹಾಬಾದಿಗೆ ತಾ. ೧೯ಕ್ಕೆ ಬಂದು ಮುಟ್ಟಿದರು. ರೈಲ್ವೆ ಸ್ಟೇಶನಿನಲ್ಲಿ ಶ್ರೀಯುತ ದಾಸರನ್ನು ಅನೇಕರು ಸಡಗರದಿಂದ ಸ್ವಾಗತಿಸಿದರು.

[illegible] ದ ರೈಲ್ವೆ ಗಾಡಿಯಲ್ಲಿ ಶ್ರೀಯುತ ಎ. ರಂಗಸ್ವಾಮಿ [illegible] ಯುತ ಸತ್ಯಮೂರ್ತಿಯವರೂ ಬಂದಿರುವರು.

[illegible] ಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು:- [illegible] ಕಾರಿ ಕಮ್ಮಿಟಿಯು ಮೀಟಿಂಗು ಮುಂಬಯಿಯಲ್ಲಿ [illegible] ಅಬ್ದುಲ್ ಕಲಂ ಅಜದರು ಈಗ ಕೊಂಗ್ರೆಸ್ಸಿನಲ್ಲಿ [illegible] ನ್ನು ಹೋಗಲಾಡಿಸಲು [illegible] ಕಮ್ಮಿಟಿಯು ಮುಂದಿಟ್ಟರು. ಆಗ ಕೊಂಗ್ರೆಸ್ಸಿನ ಕಾರ್ಯ [illegible] ಒಡಕನ್ನು ಹೋಗಲಾಡಿಸುವ ಯತ್ನಗಳನ್ನು ಮಾಡಲು [illegible] ನಾ ಅಬ್ದುಲ್ ಕಲಂ ಅಜದರು ಸೂಚಿಸಿದ ಯೋಜ [illegible] ಪಂಡಿತ ಹಕೀಮ ಅಜಮಲ್‌ಖಾನರೂ, ಪಂಡಿತ [illegible] ಗಳವರೂ ಒಪ್ಪಿರುವರು. ಅಲ್ಲದೆ ಹೆಚ್ಚಿನ ವಿಷಯ [illegible] ಸಿ. ಆರ್. ದಾಸರೂ ಒಪ್ಪಿರುವರು. [illegible] ಅಜದರ ಸೂಚನೆಯಂತೆ ಬರುವ ತಾರೀಕು ೨೭ರಲ್ಲಿ [illegible] ಕೊಂಗ್ರೆಸ್ ಕಮ್ಮಿಟಿಯ ಕಾರ್ಯಕಾರಿ ಕಮ್ಮಿಟಿಯು [illegible] ೨೭ರಲ್ಲಿ ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯು [illegible] ಬಾದಿನಲ್ಲಿ ಕೂಡಲಿಕ್ಕಿದೆ. ಅಲಹಾಬಾದಿನಲ್ಲಿ ಮೀಟಿಂ [illegible] ಕೂಡಲಿಕ್ಕಿರುವುದರಿಂದ ಕೊಂಗ್ರೆಸ್ ಮುಖಂಡರು ಕೊಂ [illegible] ಪ್ರಚಾರಕ್ಕಾಗಿ ಹಿಂದೂಸ್ಥಾನದ ಆಯಾಯ ಭಾಗಗಳನ್ನು [illegible] ನ್ನು ಮುಂದರಿಸಿಟ್ಟಿದೆ.

[illegible] ರಿ:—ಡಾಕ್ಟರ ಪರ್ಡೀಕರ ಮತ್ತು ಅವರ ಸಂಗಾತಿ [illegible] ರಲ್ಲಿ ಹಾವೇರಿಯನ್ನು ಸಂದರ್ಶಿಸಿದರು. ಸ್ವಯಂಸೇವಕ [illegible] ಳ್ಳುವ ಮುಖ್ಯ ಕಾರ್ಯವನ್ನು ಅವರು ದೇವಸ್ಥಾನದಲ್ಲಿ [illegible] . ಇಲ್ಲಿಯ ನಿವಾಸಿಗಳು ಅವರನ್ನು ಯೋಗ್ಯ ರೀತಿ [illegible] ಸಿದರು.

[illegible] ಗಳೂರು:—ಶ್ರೀಯುತ ರಾಜ ಗೋಪಾಲಾಚಾರ್ಯ, ರಾ [illegible] ದ ಮತ್ತು ಮಹಮದ್ ಅಲಿ ಇವರನ್ನು ಸ್ವಾಗತಮಾಡುವ [illegible] ಮಾಡುವುದಕ್ಕಾಗಿ ಶ್ರೀಯುತರಾದ ಮಜಲಿ, ವಿಶ್ವನಾಥ ರಾವ್ [illegible] ಲರಾವ್ ಜೋಶಿ ಇವರೆಲ್ಲರೂ ಬೆಂಗಳೂರಿಗೆ ಮುಂದಾಗಿಯೇ [illegible]. ಕರ್ನಾಟಕದ ಮುಖಂಡರು ಬೆಂಗಳೂರಿನಲ್ಲಿ ಭಾಷಣ [illegible] ಗಿ ಏರ್ಪಾಡುಗಳನ್ನು ಮಾಡಿದಾಗ ಅಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿ [illegible] ಇವರು ಭಾಷಣವನ್ನು ಮಾಡಬಾರದೆಂದು ಹುಕುಮನ್ನು [illegible]

[illegible] ಮೈಸೂರು:—ಇದೇ ಫೆಬ್ರವರಿ ತಾರೀಕು ೩೦ಕ್ಕೆ ಅಂತ್ಯವಾಗುವ [illegible] ಸಂಸ್ಥಾನದಲ್ಲಿ ಒಟ್ಟು [illegible] ಜನರಿಗೆ ಪ್ಲೇಗು ತಗಲಿ [illegible] ಆ ಉಪದ್ರವದಲ್ಲಿ ತೀರಿಹೋದರು.

ಶ್ರೀಯುತ ಸಿ. ಆರ್. ದಾಸ:—ಇವರು ಜಲ್ಪೈಗುರಿ [illegible] ಗಾಡಿಯ ಅಪಘಾತದಿಂದ ಸ್ವಲ್ಪ ಗಾಯ ಹೊಂದಿರುವರು.

ಅಲಹಾಬಾದ್:—ಕೊಂಗ್ರೆಸ್ ಖಿಲಾಫತ್ ಸ್ವರಾಜ್ಯ ಪಾರ್ಟಿ [illegible] ಟಿಂಗು ಕಳೆದ ತಾರೀಕು ೨೦ರಲ್ಲಿ ಅಲಹಾಬಾದಿನಲ್ಲಿ ಆನಂದ [illegible] ಮಧ್ಯಾಹ್ನ ೩ಗಂಟೆಗೆ ಸೇರಿತು. ಅನಂತರ ಇದು ತಾ. [illegible] ಮಧ್ಯಾಹ್ನ ಸಹ ಕೂಡಿತು. ಈ ಮೀಟಿಂಗಿನಲ್ಲಿ ಶ್ರೀಯುತ ಸಿ. ದಾಸ, ಪಂಡಿತ ಮೋತಿಲಾಲ ನೇಹರು, ಮದನ ಮೋಹನ ಮಾಲ [illegible], ಶ್ರೀಯುತ ಕೃಷ್ಣ ಕಾಂತ ಮಾನಲವೀಯ, ಶ್ರೀಯುತ ಎ. ರಂಗ ಅಯ್ಯಂಗಾರ, ಶ್ರೀಯುತ ಸತ್ಯ ಮೂರ್ತಿ ಮೊದಲಾದ ಅನೇಕ [illegible] ಮಹಿಳೆಯರೂ ಕೂಡಿ ಒಟ್ಟು ಸುಮಾರು ೧೦೦ ಮಂದಿಗಳು [illegible] ದ್ದರು.

ಓಲ್ ಇಂಡಿಯಾ ಟ್ರೇಡ್ ಯೂನಿಯನ್ ಕೊಂಗ್ರೆಸ್:—[illegible] ಯೂನಿಯನ್ನಿನ ಕೊಂಗ್ರೆಸು ಬರುವ ಮಾರ್ಚ ತಿಂಗಳಲ್ಲಿ ಜರಗು [illegible]. ಶ್ರೀಯುತ ಸಿ. ಆರ್. ದಾಸರು ಇದರ ಅಧ್ಯಕ್ಷತೆಯನ್ನು [illegible] ವಹಿಸಿಕೊಳ್ಳುವರು.

ದಕ್ಷಿಣ ಕನ್ನಡ.

ಕೋಟೆಕಾರು:— ಕೋಟೆಕಾರು ಸಹಕಾರ ಸಂಘದ ೨೨—'೩ನೇ ವರುಷದ ೨ನೇ ಮಹಾಸಭೆಯು ಇದೇ ಬರುವ ಮಾರ್ಚ ತಾ. ೧೧ನೇ ಆದಿತ್ಯವಾರ ಮಧ್ಯಾಹ್ನ ೨ ಗಂಟೆಗೆ ಕೋಟೆಕಾರು ಹಾಯರ್ ಎಲಿಮೆಂಟರಿ ಶಾಲೆಯ ಕಟ್ಟೋಣದಲ್ಲಿ ಜರಗಿಸಬೇಕೆಂದು ನಿಶ್ಚಯಿಸಿದೆ. ಈ ಸಭೆಗೆ ಎಲ್ಲಾ ಮೆಂಬರರು ದಯಮಾಡಿಬಂದು ಆಲೋಚಿಸಲಿಕ್ಕಿರುವ ವಿಷಯಗಳಿಗೆ ತಮ್ಮ ತಮ್ಮ ಸರಿಯಾದ ಅಭಿಪ್ರಾಯವನ್ನು ಕೊಡಬೇಕಾಗಿ ಅಪೇಕ್ಷಿಸಲಾಗುತ್ತದೆ.

ಸೂಚಿಪತ್ರ:— (೧) ೧೯೨೩ನೇ ಎಪ್ರಿಲ್ ತಾ ೧ರಿಂದ ೧೯೨೪ನೇ ಮಾರ್ಚ ತಾ ೩೧ರ ವರೆಗಿನ ಬಜೆಟನ್ನು (೨) ಸಂಘದ ಆಫೀಸು ಕಟ್ಟೋಣದ ವಿಷಯ. (೩) ಇತರ ವಿಷಯ.

ಪುತ್ತೂರು:—ಇಲ್ಲಿಯ ಪೋಲೀಸಿನವರ ಮೇಲೆ ಸಬ್ ಡಿವಿಜನಲ ಮೆಜಿಸ್ಟ್ರೇಟ ಕಚೇರಿಯಲ್ಲಿ ನಡಿಯುತ್ತಿದ್ದ ಮೊಕದ್ದಮೆಯು ಇದೇ ತಾ. ೧೯ರಲ್ಲಿ ತನಿಖೆಯಾಗಿ ಸಬ್ ಇನ್ಸ್‌ಪೆಕ್ಟರು ರಾ| [illegible] ರಾವ್, ಹೆಡ್ ಕೊನ್ಸ್‌ಟೇಬಲ್ ನರಸಿಂಗ ರಾವ್, ಕೊನ್ಸ್‌ಟೇಬಲ್ ಶೇಷಗಿರಿ ಪೈ, ರಾಮಕೃಷ್ಣಯ್ಯ, ಕುರ್ಪು, ಅಡಿಯೋಡಿ, ಪರಮೇಶ್ವರ, ನಂಬಿಯಾರ, ಬಿದ್ದಪ್ಪ, ಹುವಯ್ಯ ಇವರ ಪೈಕಿ ಪರಮೇಶ್ವರ ಎಂಬವರನ್ನು ಬಿಡುಗಡೆಪಡಿಸಿ ಬಾಕಿ ಅಪರಾಧಿಗಳನ್ನು ಇಂಡಿಯನ್ ಪೆನಲ್ ಕೋಡು [illegible] ೩೩೦A ಮತ್ತು [illegible] ಕೆಳಗೆ [illegible] ಮೇಲೆ [illegible] ಪ್ರಕಾರ [illegible] ಕೋರ್ಟಿಗೆ ಕಮಿಟ್‌ಮಾಡಿ [illegible] ಸ್ಥಿರುವರು.

ಇದೇ ತಾ. ೧೭ರಲ್ಲು ಬೆಟ್ಟಂಪಾಡಿ ಗ್ರಾಮದ ಕೆಲಂಬಲು ದೇವಸ್ಥ [illegible] ಎಂಬಲ್ಲಿ [illegible] ಗುಂಡು [illegible] ಕೊಂದು ಬಿಟ್ಟರಂತೆ.

ಇಲ್ಲಿಯ [illegible] ಗಳನ್ನು ತಾ. ೧೯ರಲ್ಲು [illegible] ವರೆಗೆ ಇಲ್ಲಿಯ [illegible] ಬಂದಿರುವರು.

ಅನುಕ್ರಮಣಿಕೆ.

ಸೈನ್ಯದಲ್ಲಿ ಹಿಂದಿಗಳ ಅಧಿಕಾರ
ಸ್ಫುಟವಿಚಾರಗಳು.—
೧. ಡಿಲ್ಲಿ ಪರಿಷತ್ತು
೨. ೩. ೪. ಲೆಜಿಸ್ಲೇಟಿವ್ ಎಸೆಂಬ್ಲಿ
೫. ಕೆನಿಯಾದಲ್ಲಿರುವ ಹಿಂದಿಗಳು
೬. ದೇಶೀಯ ಸಕ್ಕರೆ
ಮಂಗಳೂರು—
ವರ್ತಮಾನ ಸಂಗ್ರಹಗಳು:—
ಏದೇಶ ವರ್ತಮಾನ, ಒಳದೇಶ ವರ್ತಮಾನ
ದಕ್ಷಿಣಕನ್ನಡ—ಕೋಟೇಶ್ವರ, ಪುತ್ತೂರು,
ಮಹಾರಾಷ್ಟ್ರ ಧರ್ಮ ಪರಿಷತ್ತು
ಪ್ರಪಂಚದ ಪ್ರಚಲಿತ ಪರಿಸ್ಥಿತಿ
ಅಫಘಾನಿಸ್ಥಾನದ ಬದಲಾವಣೆಗಳು
ಕೆನಿಯಾದಲ್ಲಿರುವ ಹಿಂದಿಗಳ ಸ್ಥಿತಿ
ಬಹಿಷ್ಕಾರ ಚಳವಳದ ಪರಿಣಾಮ
ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಕಾರ್ಯಕ್ರಮ
ಶ್ರೀಯರ ಉದ್ಧರಣೆಯ ಅವಶ್ಯಕತೆಗಳು.

ಸ್ವದೇಶಾಭಿಮಾನಿ.

ಶಕ ೧೮೪೪ ಪಾಲ್ಗುಣ ಶು ೭ಯು ಶುಕ್ರವಾರ.

ಸೈನ್ಯದಲ್ಲಿ ಹಿಂದಿಗಳ ಅಧಿಕಾರ.

ಡಿಲ್ಲಿಯ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲೂ ಕೌನ್ಸಿಲ್ ಓಫ್ ಸ್ಟೇಟ್ಸನಲ್ಲೂ ಹಿಂದುಸ್ಥಾನ ಸರಕಾರದ ಸೈನ್ಯದ ವಿಷಯವಾಗಿ ಎರಡು ಮೂರು ವಿಧದಿಂದ ಪ್ರಸ್ತಾಪಗಳು ಬಂದವು. ಮಿ| ಯಾಮಿನ್‌ಖಾನ್ ಎಂಬವರು ಹಿಂದುಸ್ಥಾನದ ಸೈನ್ಯದಲ್ಲಿ ಬಾದಶಹರಿಂದ ಮತ್ತು ವೈಸರಾಯರಿಂದ ನೇಮಕವಾಗತಕ್ಕ ಎಂದರೆ ಉಚ್ಚತರಗತಿಯ ಎಲ್ಲ ಅಧಿಕಾರದ ಸ್ಥಾನಗಳು ಹಿಂದಿಗಳಿಗೆ ಕೊಡಲ್ಪಡಬೇಕೆಂದು ಒಂದು ಠರಾವನ್ನು ತಂದಿದ್ದರು. ಇನ್ನುಮುಂದೆ ಈ ದೊಡ್ಡ ಹುದ್ದೆಗಳ ಮೇಲೆ ನೇಮಿಸುವಾಗ ಹೊಸದಾಗಿ ಹಿಂದಿಗಳನ್ನು ತೆಕ್ಕೊಳ್ಳಬೇಕು, ಅಥವಾ ಕೆಳಗಿನ ಹಿಂದಿ ಹುದ್ದೆದಾರರಿಗೆ ಮೇಲಿನ ಹುದ್ದೆಗೆ ಬಡತಿಮಾಡಬೇಕು ಎಂಬೀ ಅರ್ಥದ ಠರಾವನ್ನು ಅವರು ತಂದಿದ್ದರು. ಎಸೆಂಬ್ಲಿಯಲ್ಲಿ ಮಿ| ಯಾಮಿನ ಖಾನರ ಈ ಠರಾವು ಬರುವುದಕ್ಕಿಂತ ಮುಂಚೆ ಕೌನ್ಸಿಲ್ ಒಫ್ ಸ್ಟೇಟ್ಸನಲ್ಲಿ ಸೈನ್ಯದ ವಿಷಯವಾಗಿಯೆ ಎರಡು ಠರಾವುಗಳು ಬಂದಿದ್ದವು. ಹಿಂದಿನ ಒಂದು ಕಾನೂನಿನ ಮೇರೆಗೆ ಸೈನ್ಯದಲ್ಲಿ ಹಿಂದಿಗಳಿಗೆ ಪ್ರವೇಶವಿದ್ದಿಲ್ಲ. ಸೈನ್ಯದಲ್ಲಿ ಪ್ರವೇಶವಿದ್ದಿಲ್ಲವೆಂದ ಕೂಡಲೆ ಹಿಂದಿಗಳಿಗೆ ಸೈನ್ಯದಲ್ಲಿ ಸಿಪಾಯರಾಗಲಿಕ್ಕೆ ಪ್ರತಿಬಂಧವಿತ್ತು ಎಂದು ಯಾರೂ ಅರ್ಥಮಾಡಕೂಡದು. ಸೈನ್ಯಖಾತೆಗಳಲ್ಲಿ ಮೇಲ್‌ತರಗತಿಯ ಹುದ್ದೆಗಳು ಯುರೋಪಿಯನರಿಂದಲ್ಲದೆ ಇತರರಿಂದ ಭರ್ತಿಯಿಸಲ್ಪಡಕೂಡದೆಂದು ಮೊದಲು ಒಂದು ಕಾನೂನು ಪಾಸಾಗಿತ್ತು. ಹಿಂದಿ ಸ್ವರಾಜ್ಯದ ಚಳವಳವು ಪ್ರಾರಂಭವಾದಂದಿನಿಂದ ಇಂಥ ಪ್ರಶ್ನೆಗಳಿಗೆ ವಿಶೇಷ ಚಾಲನೆಯು ಬಂದಿರುವುದು. ರಾಷ್ಟ್ರೀಯ ಸಭೆಯು ಈಗ ೩೫-೪೦ ವರ್ಷದಂದಿನಿಂದ ಹಿಂದಿಗಳಿಗೆ ಹತ್ಯಾರು ಹಿಡಿಯುವ ಅಧಿಕಾರ, ಲಷ್ಕರಿನಲ್ಲಿ ಮುಖ್ಯಮುಖ್ಯ ಹುದ್ದೆಗಳ ಮೇಲೆ ನೇಮಕ ಮುಂತಾದ್ದಿರಬೇಕೆಂದು ಉರುಸ್ಕೋಟಮಾಡಿಕೊಂಡು ಹೇಳುತ್ತಲೆ ಇತ್ತು. ಇತರ ಖಾತೆಗಳಲ್ಲಿ ಹೇಗೊ ಹಾಗೆಯೆ ಸೈನ್ಯದಲ್ಲಿ ಸಹ ಇರುವ ಹಿಂದಿ-ಯುರೋಪಿಯನ್ ಈ ಪಂಕ್ತಿಪ್ರಪಂಚವನ್ನು ತೆಗದುಹಾಕಬೇಕೆಂಬುದಾಗಿಯೂ ಜನತೆಯ ಕೇಳಿಕೆ ಇತ್ತು. ಆದರೂ ಸರಕಾರವು ಅದರ ಕಡೆಗೆ ಕಿವಿಗೊಟ್ಟಿರಲಿಲ್ಲ. ಆರ್ಥಿಕ ಸ್ವಾತಂತ್ರ್ಯ, ಔದ್ಯೋಗಿಕ ಸ್ವಾತಂತ್ರ್ಯ ಇವು ಹೇಗೆ ರಾಷ್ಟ್ರದ ಅಪೇಕ್ಷೆಯಾಗಿದ್ದಾವೊ ಹಾಗೆಯೆ ಸೈನ್ಯದ ಸ್ವರಾಜ್ಯವಾದರೂ (ಇಂಡಿಯನಾಯ್‌ಝೇಶನ್ ಒಫ್ ಆರ್ಮಿಯೂ ಕೂಡ) ಹಿಂದೀ ರಾಷ್ಟ್ರದ ಪ್ರಧಾನ ಅಂಬೋಣವಾಗಿತ್ತು. ಮನುಷ್ಯನು ಕೆಲವು ವೇಳೆ ನ್ಯಾಯವಾದ ಕೇಳಿಕೆಗಳಿಗೂ, ಸ್ವಾರ್ಥಕ್ಕೆ ಬಲಿಬಿದ್ದು ದುರ್ಲಕ್ಷ್ಯಮಾಡುತ್ತಾನೆ. ನಮ್ಮ ನೋಕರಶಾಹಿಯ ಅವಸ್ಥೆಯು ಈ ನಿಯಮಕ್ಕೆ ಅಪವಾದವಾಗಿರಲಿಲ್ಲ. ಆದರೂ ಪ್ರಜೆಗಳ ಆಕಾಂಕ್ಷೆಗಳು ಇತರ ವಿಧದಿಂದ ವ್ಯಕ್ತವಾಗುವಂತೆ ಕೌನ್ಸಿಲುಗಳಲ್ಲೂ ಠರಾವುಗಳ ರೂಪದಿಂದ ಆಗಾಗ್ಗೆ ವ್ಯಕ್ತವಾಗುವ ರೂಢಿಯೆ ಇತ್ತು. ಈ ರೂಢಿಗನುಸಾರವಾಗಿ ಕೌನ್ಸಿಲು ಓಫ್ ಸ್ಟೇಟ್ಸನಲ್ಲಿ ಸರ್ ವಾಚ್ಛರು ಸೈನ್ಯದಲ್ಲಿರುವ ಪಂಕ್ತಿಭೇದವನ್ನು ಮುರಿಯಬೇಕೆಂದು ಒಂದು ಠರಾವನ್ನು ತಂದಿದ್ದರು. ಇದಲ್ಲದೆ ಮಿ. ಸೆಟ್ನಾ ಎಂಬವರು ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿ ಚಿಕ್ಕಾಯದಿಂದ್ಲ ಲಷ್ಕರಿ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ಒಂದು ಠರಾವನ್ನು ತಂದಿದ್ದರು. ಈ ಮೇರೆಗೆ ಕೌನ್ಸಿಲಿನಲ್ಲಿ ಬಂದ ಸೈನ್ಯದ ವಿಷಯವಾಗಿ ಎರಡು ನಮೂನೆಯ ಠರಾವುಗಳು ಬಂದಿದ್ದವು. ಇಂಥ ಠರಾವುಗಳ ಮೇಲಿಂದ ಸುಪ್ರಬುದ್ಧವಾದ ಸರಕಾರವು ಜನತೆಯ ಮನಸ್ಸಿನ ಮಾಪನವನ್ನು ಮಾಡಿಕೊಂಡಿತ್ತೆನ್ನಬಹುದು.

ಇಂಥಸಂದರ್ಭದಲ್ಲಿ ಮೇಲೆ ಹೇಳಿದ ಯಾಮಿನಖಾನರ ಠರಾವು ಲೆಜಿಸ್ಲೆಟಿವ್ ಎಸೆಂಬ್ಲಿಯ ಮುಂದೆ ಬಂತು. ಕೌನ್ಸಿಲಿನಲ್ಲಿ ವಾಚಾ ಮತ್ತು ಸೇಟ್ನಾ ಇವರಿಬ್ಬರು ತಂದ ಠರಾವುಗಳನ್ನು ಸರಕಾರವು ತನ್ನ ಪ್ರಬಲವಾದ ವಿರೋಧದಿಂದ ಮೂಲೆಗೊತ್ತಿತ್ತು. ಆದ್ದರಿಂದ ಸಭಾಸದರಲ್ಲಿ ಒಂದು ಬಗೆಯ ತುಫಾನು ಏಳಾಗಿತ್ತು. ಅನೇಕ ಸಭಾಸದರು ಯಾಮಿನ ಖಾನರ ಠರಾವಿಗೆ ಸೈನ್ಯದಲ್ಲಿ ಹಿಂದಿಮಯತ್ವವನ್ನು ಸಾಧಿಸುವ ಹಾಗೆ ಬೇರೆಬೇರೆ ಉಪಸೂಚನೆಗಳನ್ನು ತರುವ ಬಗ್ಗೆ ನೋಟೀಸುಗಳನ್ನು ಇಟ್ಟಿದ್ದರು. ಲಷ್ಕರಿಶಿಕ್ಷಣದ ಠರಾವಿನ ವಾದವಿವಾದವನ್ನುಮುಂದರಿಸಿಟ್ಟು, ಇತ್ತ ಎಸೆಂಬ್ಲಿಯಲ್ಲಿ ಯಾಮಿನ ಖಾನರ ಠರಾವು ಬಂದಾಗ ಕಮೆಂಡರ್-ಇನ್-ಚೀಫ ಇವರು ಸರಕಾರದ ಕಡೆಯಿಂದ ಸರಕಾರಿ ಸಹಾನುಭೂತಿಯನ್ನು ಜಾಹೀರಪಡಿಸಿದರು. ಅಧಿಕಾರಿಗಳು ಯಾವಾಗಲೂ ಆಡತಕ್ಕ ಇದೊಂದು ಆಟವು! ಒಂದು ಕಡೆಯಿಂದ ಲೋಕಮತವು ಕ್ಷುಬ್ಧವಾದರೆ ಇನ್ನೊಂದು ಕಡೆಯಲ್ಲಿ ಅಲ್ಪ ಸ್ವಲ್ಪ ದಾನವನ್ನು ಕೊಟ್ಟು ಅದರ ತೀವ್ರತೆಯನ್ನು ಮತ್ತು ತೀಕ್ಷ್ಣತೆಯನ್ನು ತಗ್ಗಿಸುವ ಚಾತುರ್ಯವನ್ನು ನಮ್ಮ ಸರಕಾರದಿಂದಲೆ ಕಲಿಯಬೇಕಲ್ಲದೆ ವೃಥಾ ಸಾಧನವಿಲ್ಲ. ಆದ್ದರಿಂದ ಕಮೆಂಡರ್-ಇನ್-ಚೀಫ್‌ಇವರು ಸೈನ್ಯದಲ್ಲಿ ಹಿಂದಿಗಳಿಗೆ ಸ್ವರಾಜ್ಯವನ್ನು ಕೊಡಲಾರಂಭಿಸಿದ ಸುದ್ದಿಯನ್ನು ಪ್ರಕಟಿಸಿದರು. ಇಂಡಿಯನಾಯಿಝೇಶ್-ಆಫ್-ಆರ್ಮಿ ಎಂಬುದರ ಅಭಿಪ್ರಾಯವನ್ನು "ಸೈನ್ಯದ ಸ್ವರಾಜ್ಯ"ವೆಂಬೀ ಮಾತಿನಿಂದ ಈ ಲೇಖದಲ್ಲಿ ಮುಂಚೆಯೆವ್ಯಕ್ತಗೊಳಿಸಿದ್ದೇವೆ. ಇರಲಿ.

ಕಮೆಂಡರ್-ಇನ್-ಚೀಫರು ಸರಕಾರದ ಕಡೆಯಿಂದ "ಮೆಹರ್‌ಬಾ"ಯಿಂದ ಕೊಡೋಣಾಗುವ ಯಾವ ಹಕ್ಕುಗಳನ್ನು ಜಾಹಿರಪಡಿಸಿದ್ದಾರೊ ಅವಾದರೂ ಯಾವವು ಎಂಬುವನ್ನು ವಾಚಕರಿಗೆ ಒಂದು ಸಾರಿ ಹೇಳೋಣ. ಕಾಲಾಳು ಮತ್ತು ಕುದುರೆ ಸವಾರರಲ್ಲಿ ೮ ತುಕಡಿಗಳು ಕ್ರಮೇಣಹಿಂದಿಮಯವಾಮಾಡಲ್ಪಟ್ಟಾವು. ಈ ೮ ತುಕಡಿಗಳಮೇಲೆ ೨೦೦ ಜನ ಹಿಂದಿಗನ್ನು ಮುಖ್ಯ ಆಫೀಸರರನ್ನಾಗಿ ಮಾಡುವುದುಂಟು. ಇದು ಪ್ರಥಮ ಕಂತು. ಈ ಹುದ್ದೆಯನ್ನು ಅನುಭವಿಸಿ ನಮ್ಮ ಪಾತ್ರತೆಯನ್ನು ಸಿದ್ಧಗೊಳಿಸಿದ ಬಳಿಕ ಮುಂದಿನ ಚೂರುಗಳು ನಮ್ಮ ಸೆರಗಲ್ಲಿ ಬೀಳುವವಿದ್ದಾವೆ. ಸರಕಾರವು ಬಹು ಔದಾರ್ಯದ ಕೊಟ್ಟ ಈ ಹೊಸ ಅಧಿಕಾರವು ಎಷ್ಟು ದೊಡ್ಡದು ಎಂದರೆ ಹಿಂದುಸ್ಥಾನ ಸರಕಾರದ ಕೈಕೆಳಗಿರುವ ಸೈನ್ಯದಲ್ಲಿ ಎಂಟು ತುಕಡಿಗಳು ಎಷ್ಟು ಜಾಗೆಯನ್ನು ಆಕ್ರಮಿಸುತ್ತವೆಎಂಬದನ್ನು ವಾಚಕರಿಗೆ ತಿಳಿಸುವುದು ಒಳ್ಳೇಯದು. ಹಿಂದಿ ಸೈನ್ಯವು ೧೫೮ ತುಕಡಿಗಳಿಂದ ಕೂಡಿದ್ದಿದೆ. ಈ ೧೫೮ ತುಕಡಿಗಳಲ್ಲಿ ೮ ತುಕಡಿಗಳೆಂದರೆ, ೧೯ರಲ್ಲಿ ಒಂದಂಶ. ೧೬ ಕಲೆಗಳ ಕೂಡಿದ ಚಂದ್ರನು ಪ್ರತಿಪತ್ತಿನ ದಿವಸ ಹೇಗೆ ಒಂದೇ ಕಲೆಯ ಯುಕ್ತನಾದವನಾಗಿ ಜನರ ಕಣ್ಣಿಗೆ ದೃಶ್ಯನಾಗನೂ ಆಗಯೆ ಈ ಎಂಟು ತುಕಡಿಗಳು ಸಮುದ್ರದಲ್ಲಿ ಬಿಂದುಪ್ರಾಯವಾಗಿವೆ. ನಿತ್ಯವ್ಯವಹಾರದ ಉದಾಹರಣೆಯಿಂದ ಮಾಡುವುದಾದರೆ ೧೯೮ ತುಕಡಿಗಳಲ್ಲಿ ಈ ಎಂಟು ತುಕಡಿಗಳು ರೂಪಾಯಿಯಲ್ಲಿ ಒಂದು ಆಣೆಯ ಬೆಲೆಯನ್ನು ಹೊಂದುತ್ತಿ ಇಷ್ಟು ಅಲ್ಪದಾನದಿಂದ ದಾನಮಾಡಿದವರು ಯಾವ ಅಭಿಮಾನವನ್ನು ಹೊತ್ತುಕೊಳ್ಳಬಹುದು ಮತ್ತು ದಾನವನ್ನು ಪಡೆದವರು ಯಾವ ಆನಂದವನ್ನು ತಾಳಬಹುದು! ಅದರೂ ಕೆಲ ಸಭಾಸದರು ಪುನಃ ಪುನಃ ವಿವಿಧ ರೂಪದಿಂದ ಠರಾವುಗಳನ್ನು ತಂದು ಇಷ್ಟಾರ್ಥವನ್ನು ಸಾಧಿಸಿಯಾರೆಂದು ತಿಳಿಯಬೇಕಾಗಿದೆ. ಈ ಸಂದರ್ಭದಲ್ಲಿ—ಕೌನ್ಸಿಲ್ ವಿರೋಧಿಗಳ ವಿಷಯವಾಗಿ ಒಂದು ಮಾತನ್ನು ಸೂಚಿಸಬೇಕಾಗಿದೆ. ಕೌನ್ಸಿಲಿನಲ್ಲಿ ಈಗ ಇರುವ ಸಭಾಸದರು ಸರಿಯಾಗಿ ಹಟ ಹಿಡಿಯುವವರಲ್ಲವೆಂದು ಕೆಲವು ಕೌನ್ಸಿಲು ವಿರೋಧಿಗಳು ಬರೆದಿರುತ್ತಾರೆ. ಕೌನ್ಸಿಲುಗಳನ್ನು ನಮ್ಮ ಸತ್ಯಾಗ್ರಹಮಾಡಿ ಇಷ್ಟಾರ್ಥವನ್ನು ಸಾಧಿಸಬೇಕೆಂದು ಹೇಳುವ ಕೌನ್ಸಿಲುವಾದಿಗಳ ದೃಷ್ಟಿಯಿಂದ ಮೇಲಿನ ಅಂಬೋಣ ಸುಸಂಗತವಾಗುತ್ತದಾದರೂ "ನಮಗೆ ಕೌನ್ಸಿಲೆ ಬೇಡ, ಅದನ್ನು ನಾವು ಬಹಿಷ್ಕರಿಸೋಣ." ಇತ್ಯಾದಿ ರೂಪದಿಂದ ಅಖಂಡಕಾಂಡವನ್ನು ಮಾಡುವವರು "ಕೌನ್ಸಿಲಿನಲ್ಲಿ ಹಾಗೆ ಹಟ ಹಿಡಿಯಬೇಕು, ಹೀಗೆ ಹಟ ಹಿಡಿಯಬೇಕು, ಅದನ್ನು ವಿರೋಧಿಸಬೇಕು, ಇದನ್ನು ಸಾಧಿಸಬೇಕು" ಮುಂತಾದ ಉಪದೇಶವನ್ನು ಮಾಡುವುದು ಅಂಗೀಕೃತ ತತ್ವಕ್ಕನುಸಾರ ಆಗ್ರಹಕ್ಕೆ ವಿಸಂಗತವಲ್ಲವೆ? ಬರೆ ವಿಸಂಗತವಾಗಿರುತ್ತಿ ಇರಲಿಲ್ಲ; ತನ್ನ ಅಭಿಪ್ರಾಯವನ್ನು ತಾನೆ ಖಂಡಿಸಿಕೊಳ್ಳುವುದು, ತನ್ನ ಉಚ್ಚಾರದ ಮೇಲೆ ತಾನೆ ನೀರು ಚೆಲ್ಲುವುದು ಹಾಗು ತನ್ನ ಬರವಣಿಗೆಯ ಮೇಲೆ ತಾನೆ ಹರಿದ್ರಾಲೇಪನವನ್ನು ಮಾಡುವುದು ಕೇವಲ ಲಜ್ಜಾಸ್ಪದವಾಗಿದೆ ಹಾಗೆ ಶೋಚನೀಯವು. ಆದರೆ ಇಷ್ಟರಮಟ್ಟಿಗೆ ಸಾಂಗತ್ಯವು ಹುಟ್ಟುತ್ತದ್ದುದಾದರೆ, ಈಗಿನ ಈ ಅವಸ್ಥೆಗಳು ಸಂಭವಿಸುತ್ತಿದ್ದವೆ?

ಸ್ಫುಟವಿಚಾರಗಳು.

೧ ಮಿಸೆಸ್ ಬಿಝೆಂಟಮ್ಮನವರ ಪರಿಷತ್ತು. ಡಿಲ್ಲಿಯಲ್ಲಿ ಕೂಡಿತ್ತೆಂದು ನಾವು ಕಳೆದವಾರ ಸೂಚಿಸಿದ್ದೇವಷ್ಟೆ! ಆ ಸಭೆಯಲ್ಲಿ ಬಿಝೆಂಟಮ್ಮನವರ ಬರೆ ಡಿಲ್ಲಿಯ ಅನುಯಾಯಿಗಳಿದ್ದರು. ಪರಿಷತ್ತೆಂಬ ದೊಡ್ಡ ಹೆಸರಿನಿಂದ ಇವರು ಯಾವುದನ್ನು ಮಾಡಿದರು ಎಂಬ ಪ್ರಶ್ನೆಯು ಮುಂದೆ ಬರುವುದು. ಇದುವರೆಗೆ ರಾಜಕೀಯ ಪ್ರಗತಿಯಲ್ಲಿಯ ಭೇದವನ್ನು ಅಥವಾ ಕುಂದನ್ನು ಇವರು ಕಡಿಮೆಮಾಡಿದರು ಅಥವಾ ಹಿಂದೂಸ್ಥಾನಕ್ಕೆ ಉಪಯುಕ್ತಾಂಶವನ್ನು ಸಂಪಾದಿಸಿದರೊ? ಆದರೆ ಸೂಕ್ಷ್ಮ ದೃಷ್ಟಿಯಿಂದ ಸಭೆಯಲ್ಲಿ ನಡೆದ ಸಂಗತಿಗಳನ್ನು ವಿಚಾರಮಾಡಿದರೆ ಯಾವ ಉಪಯೋಗವೂ ಈ ಪರಿಷತ್ತಿನಿಂದ ಆಗಲಿಲ್ಲವೆಂದು ಸಹಜವಾಗಿ ಗೊತ್ತಾಗುವುದು. ಯಥಾಕ್ರಮ ಪೂರ್ವದಿಂದಲೂ ಹೇಳಿಕೊಂಡು ಬಂದಂತೆ ಈ ತಂಡದವರು ತಿರುಗಿ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೇಳಿದ್ದಾರೆ; ಹೊರತು ಇನ್ನೂ ಹೆಚ್ಚಿನ ಸಂಗತಿಗಳನ್ನು ಕೇಳಲು ಅವರಲ್ಲಿ ಧೈರ್ಯವಿದೆಯೆ? ಆದರೆ ಇನ್ನೂ ವಿಷಾದಕರವಾದ ಸಂಗತಿಯೇನೆಂದರೆ ಇವರ ಮೆಟ್ಟು ಇನ್ನೂ ಹಿಂದಕ್ಕಿರುವುದು. ಹಿಂದುಸ್ಥಾನಕ್ಕೆ ಪೂರ್ಣ ಸ್ವರಾಜ್ಯವನ್ನು ನಡಿಸುವಷ್ಟು ಧೈರ್ಯವಿಲ್ಲ. ಆದ್ದರಿಂದ ಕ್ರಮೇಣ ನಮಗೆ ಹಕ್ಕನ್ನು ಕೊಡಬೇಕು. ಮೊದಲು ಪ್ರಾಂತಿಕ ಸರಕಾರಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ವರಿಷ್ಠ ಸರಕಾರದಲ್ಲಿ ಕೆಲವನ್ನು ಮಾತ್ರ ಹಿಂದಿಗಳ ವಶಕ್ಕೆ ಕೊಟ್ಟರೆ ಸಾಕು. ಉದಾಹರಣಾರ್ಥವಾಗಿ ಸೈನ್ಯವನ್ನಾಗಲಿ, ಹಡಗುಗಳನ್ನಾಗಲಿ ಹಿಂದಿಗಳ ವಶದಲ್ಲಿ ಸದ್ಯದಲ್ಲಿಡುವುದು ಬೇಡ. ಆದರೆ ಈಗ ಹಿಂದಿಗಳ ವಶದಲ್ಲಿರುವ ಖಾತೆಗಳು ಚನ್ನಾಗಿ ನಡಿಯುವುವೆಂದು ಕಂಡರೆ ಅವುಗಳನ್ನು ಕೊಡಬಹುದು. ಈ ಪ್ರಕಾರ ಇವರ ತಂತ್ರವಿರುವುದು. ನಡೆದ ಪರಿಷತ್ತಿನಲ್ಲಿಯೂ ಕೂಡ ಹಲವು ಪ್ರಶ್ನೆಗಳು ಕೇಳಲ್ಪಟ್ಟವು. ಮಿ. ಶಮಲ್‌ದಾಸರೆಂಬವರು ಹಿಂದುಸ್ಥಾನಕ್ಕೆ ಯಾವಾಗ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡಬೇಕೆಂಬದನ್ನು ನಿಶ್ಚಯಿಸಬೇಕೆಂದು ಆರಿಕೆಮಾಡಿಕೊಂಡರು. ಮಾನ್ಯ ಅಧ್ಯಕ್ಷರಾದ ಸಪ್ರುಗಳು ಅದನ್ನು ಕಮಿಟಿಯ ಮುಂದಿಡಬೇಕೆಂದು ಸೂಚಿಸಿದರು. ಆ ಕಮಿಟಿಯಾದರೂ ಯಾವ ಉತ್ತರದ ಮುತ್ತುಗಳನ್ನು ಚಲ್ಲುವದೆಂಬದನ್ನು ನೋಡಲು ನಮಗೆ ಅವಕಾಶವಿಲ್ಲ. ಇರಲಿ. ಈ ಪ್ರಕಾರ ಡಿಲ್ಲಿಯ ಸಭೆಯು ಅಂತ್ಯವಾಯಿತು. ಇಂಥ ಸಭೆಯನ್ನು ತಾನು ಎಂದು ಕೂಡಿಸಿಯೇನು ಎಂಬದೊಂದು ದೊಡ್ಡ ಚಿಂತಾಗ್ನಿಯು ನಮ್ಮ ಬಿಝೆಂಟಮ್ಮನವರನ್ನು ಆಗಾಗ್ಗೆ ಸುಡುತಿತ್ತು. ಈಗಲಾದರೊ ಅವರ ಇಚ್ಛೆಯು ನೆರವೇರಿತು. ಇಂಥ ದೊಡ್ಡ ಸಭೆಯ ಸ್ವಾಗತಾಧ್ಯಕ್ಷಪದವಿಯನ್ನು ಇವರು ಗಳಿಸಲಿಲ್ಲವೆ? ಇದರಿಂದಲೂ ಮಹತ್ವವಾದ ಸ್ಥಾನವು ಇನ್ನಾವುದಿರುವುದು? ಆದ್ದರಿಂದಲೆ ಇವರು ಕೃತಕೃತ್ಯರಾದರು. ಇವರು ತಮ್ಮಲ್ಲಿ ಪಾಸಾದ ಠರಾವುಗಳನ್ನು ವರಿಷ್ಠಸರಕಾರದ ಮುಂದಿಡಲಿಕ್ಕಿದ್ದಾರೆ. ಇವರ ಈ ನಿಯಮಿತ ಅಂಬೋಣಗಳನ್ನಾದರೂ ಸರಕಾರವು ಎಷ್ಟರ ಮಟ್ಟಿಗೆ ಸ್ವೀಕರಿಸುವುದೆಂಬುದನ್ನು ನೋಡುವಾ!

೨. ಮಿ. ಜಮ್ನಾದಾಸ ದ್ವಾರಕಾದಾಸ ಇವರು ಲೆಜಿಸ್ಲೇಟಿವ ಎಸೆಂಬ್ಲಿಯಲ್ಲಿ ಕಳೆದವಾರ ಹಿಂದುಸ್ಥಾನದ ತೆರಿಗೆಯ ವಿಷಯವಾದ ಒಂದು ಠರಾವನ್ನು ತಂದಿದ್ದರು. ಅದರ ಸಾರಾಂಶವೇನೆಂದರೆ, ಸಂಕಾರವು ಹಿಂದುಸ್ಥಾನದ ತೆರಿಗೆಯ ಹಣವನ್ನು ಇಲ್ಲಿಯ ಕೈಗಾರಿಕೆಯ ಸಾಮಾನುಗಳನ್ನು ತಯಾರಿಸುವುದಕ್ಕಾಗಿ ಉಪಯೋಗಿಸಬೇಕು. ಈ ಠರಾವಿನ ವಿಷಯವಾಗಿ ಭಾಷಣಮಾಡುವಾಗ ಮಿ. ದ್ವಾರಕಾದಾಸರು ಹೇಳಿದರೇನೆಂದರೆ:—"ಹಿಂದುಸ್ಥಾನವು ದ್ರವ್ಯದಿಂದ ಪರಿಪೂರ್ಣವಾಗಿದೆಂದು ಮೊದಲು ಹೇಳುತಿದ್ದರು. ಆದರೆ ದ್ರವ್ಯವೆಲ್ಲ ಪರದೇಶದ ಸಾಮಾನುಗಳನ್ನು ಕೊಂಡುಕೊಳ್ಳುವುದರಲ್ಲಿಯೆ ನಾಶವಾಗಿ ಇತರ ದೇಶಗಳ ಮುಂದೆ ಹಿಂದುಸ್ಥಾನವು ತೀರ ಬಡತನವನ್ನು ಹೊಂದಿದೆ. ಇದಕ್ಕೆ ಮುಖ್ಯ ಕಾರಣವು ಲಿಂಕಶಾಯರಾಗಿದೆ. ಹಿಂದುಸ್ಥಾನದಲ್ಲಿ ಬೇಸಾಯವು ಆಗುತ್ತಿದೆಂಬದು ನಿಜವು. ಆದರೆ ಎಷ್ಟೊ ಕಡೆಗಳಲ್ಲಿ ಕೈಗಾರಿಕೆಯ ಕಾರಖಾನೆಗಳನ್ನು ತೆಗಿಯುವ ಸಂದರ್ಭವು ಕಾಣುತ್ತದೆ. ಇಂಥ ಕಾರಖಾನೆಗಳನ್ನು ತೆಗೆಯುವುದಕ್ಕೆ ಬೇಕಾಗುವ ಯಂತ್ರ ಸಾಮಗ್ರಿಗಳನ್ನು ಪರದೇಶದಿಂದಲೆ ತರಬೇಕಾಗುತ್ತದೆ. ಇನ್ನು ಮುಂದೆ ನಮ್ಮ ತೆರಿಗೆಯಲ್ಲಿಯ ಎಷ್ಟೊ ಭಾಗದಿಂದ ಇಲ್ಲಿಯೆ ಯಂತ್ರಗಳನ್ನು ತಯಾರುಮಾಡುವದಾದರೆ ಹಿಂದುಸ್ಥಾನವು ಪರದೇಶದ ಮೇಲೆ ಅವಲಂಬಿಸಿ ಕುಳಿತುಕೊಳ್ಳುವ ಅವಶ್ಯವಿಲ್ಲ. ಈ ಪ್ರಕಾರ ದ್ವಾರಕಾದಾಸರು ತಮ್ಮ ಠರಾವಿನ ಮಹತ್ವವನ್ನು ಬಿಚ್ಚಿಹೇಳಿದರು. ಸರಕಾರದಿಂದ ಮಿ| ಇನ್ನಸ್ ಇವರು ಈ ಠರಾವನ್ನು ಮೂಲೆಗೊತ್ತಿ ಇನ್ನೊಂದು ಅರ್ಥದ ಠರಾವನ್ನು ತಂದರು. ಅದು ಹಿಂದುಸ್ಥಾನದ ಕೈಗಾರಿಕೆಯನ್ನು ಎಷ್ಟು ಮಾತ್ರಕ್ಕೂ ಅಭಿವೃದ್ಧಿಗೊಳಿಸುವದಿಲ್ಲ. ಅವರು ಹೇಳಿದುದೇನಂದರೆ, ವರಿಷ್ಠ ಸರಕಾರವು ಆಮದುರಫ್ತುಗಳ ಕರದಿಂದಲೆ ಎಷ್ಟೊ ಹಣವನ್ನು ಸಂಪಾದಿಸುತ್ತದೆ. ಅದಲ್ಲದೆ ಈಗ ಹಿಂದುಸ್ಥಾನ ಸರಕಾರಕ್ಕೆ ಎಷ್ಟೊ ಸಾಲವಿರುವದು. ಆದ್ದರಿಂದ ಸಂಪೂರ್ಣ ತೆರಿಗೆಯ ಹಣದಿಂದ ಕೈಗಾರಿಕೆಯ ಸಾಮಾನುಗಳನ್ನೂ ಪುರವಠೆ ಮಾಡುವದು ಅಸಾಧ್ಯವು. ಆದರೂ ಹಿಂದೀಕೈಗಾರಿಕೆಯ ವಿಷಯವಾಗಿ ಸರಕಾರವು ಅದಷ್ಟು ಜಾಗ್ರತೆ ತೆಗೆದುಕೊಂಡೀತೆಂಬುದರಲ್ಲಿ ಸಂಶಯವಿಲ್ಲ. ಫಿಸ್ಕಲ್ ಕಮಿಶನು ಯಾವದನ್ನು ಹೆಚ್ಚು ಒತ್ತಿ ಹೇಳಿತ್ತೊ ಅದನ್ನೆ ನಾವು ಆಚರಣೆಯಲ್ಲಿ ತರಬೇಕು, ಮುಂತಾದ ಹಲವು

ನುಣುಪಾದ ಮಾತುಗಳಿಂದ ಜನರನ್ನು ಮೋಹಿಸಿ ಕಡೆಗೆ ಮಿ| ಇನಾಸರು ತಮ್ಮ ಠರಾವನ್ನೆ ಪಾಸುಮಾಡಿಬಿಟ್ಟರು. ಎಸೆಂಬ್ಲಿಯಲ್ಲಿದ್ದ ಪ್ರತಿನಿಧಿಗಳು ಈ ಪ್ರಕಾರ ಬರೆ ಒಬ್ಬ ಯುರೋಪಿಯನ್ನನ ಮಾತಿನ ಬಲೆಯಲ್ಲಿ ಸಿಲುಕಿ ನಿಜವಾದ ಠರಾವನ್ನು ಮೂಲೆಗೊತ್ತಿ ನಮ್ಮ ಕೈಗಾರಿಕೆಯ ಅಭಿವೃದ್ಧಿಯನ್ನು ನಿಲ್ಲಿಸಿಬಿಟ್ಟರೆ? ಫಿಸ್ಕಲ್ ಕಮಿಶನ್‌ದಲ್ಲಿ ಸೂಚಿಸಿರುವ ಹೇಳಿಕೆಗಳೂ ಕೂಡ ನಿಷ್ಪ್ರಯೋಜನವಾಗಿರುವವು. ಸರಕಾರದ ಈಗಿನ ಹೇಳಿಕೆಯನ್ನು ಕೇಳಿದರೆ ಆ ಕಮಿಶನಿನಲ್ಲಿರುವ ಸೂಚನೆಗಳನ್ನು ಸಹ ಅದು ಜಾರಿಗೆತರಲು ಇಚ್ಛಿಸುವದಿಲ್ಲ. ಈ ಪ್ರಕಾರ ನಮ್ಮ ನೋಕರಶಾಹಿಯು ಎಲ್ಲ ಭಾಗಗಳಲ್ಲೂ ಹಿತಶತ್ರುವಾಗಿ ನಿಂತುಕೊಂಡಿದೆ! ಇದು ನಮ್ಮ ದುರ್ಭಾಗ್ಯವೆ ಸರಿ!

೪. ಬಿಹಾರ ಪ್ರಾಂತದ ಕೌನ್ಸಿಲಿನಲ್ಲಿ ರಾಜಕೀಯ ಕೈದಿಗಳನ್ನು ಸೆರೆಮನೆಯಿಂದ ಬಿಡುಗಡೆಮಾಡಬೇಕೆಂದು ವಿಜ್ಞಾಪನಾರೂಪವಾದ ಒಂದು ಠರಾವು ಬಂತು. ಈ ಠರಾವಿನ ಚರ್ಚೆಯಲ್ಲಿ ಸರಕಾರದ ಕಡೆಯಿಂದ ಅದನ್ನು ಉಪರೋಧಿಸುವಾಗ ಮೆಕ್‌ಫರ್ಸನ ಸಾಹೇಬರು ಕೆಲವು ವಿಚಿತ್ರವಾದ ವಿಧಾನಗಳನ್ನು ಮಾಡಿದರು. ಅಥವಾ ಮೆಕ್‌ಫರ್ಸನರಂಥ ಅಸಹಾನುಭೂತಿಯ ಬಹದ್ದೂರರಿಗೆ ಯಾವುದು ತಾನೆ ವಿಚಿತ್ರ? ಗಣೇಶದತ್ತಸಿಂಗರೆಂಬವರು ಠರಾವನ್ನು ತಂದಾಗ ಸಯುಕ್ತಿಕವಾದ ಭಾಷಣವನ್ನು ಮಾಡಿದ್ದರು ಒಂದು ಕಾಲದಲ್ಲಿ ರಾಜಕೀಯ ಚಳವಳವು ಭಾವನಾಮಯವಾಗಿದ್ದರೂ ಈಗ ಅದು ಈ ಬಿಹಾರ ಪ್ರಾಂತದಲ್ಲಿ ಶಾಂತಸ್ಥಿತಿಗೆ ಬಂದು ನಿಂತಿದೆ. ಆದ್ದರಿಂದ ಕ್ರಿಮಿನ್ ಲೋ ಎಮೆಂಡ್‌ಮೆಂಟ್ ಎಕ್ಟಿನ ದೆಸೆಯಿಂದ ಜೈಲಿಗೆ ಕಳುಹಿಸಿದವರನ್ನು ಸರಕಾರವು ಇತರ ಪ್ರಾಂತಿಕ ಸರಕಾರಗಳಂತೆ ಬಿಟ್ಟುಕೊಡಬೇಕು ಎಂದು ಗಣೇಶ ಸಿಂಗರ ಅಂಬೋಣವಿತ್ತು. ಮೆಕ್‌ಫರ್ಸನ್ ಸಾಹೇಬರು ಈ ಠರಾವನ್ನು ಉಪರೋಧಿಸುವಾಗ ಉಪಯೋಗಿಸಿದ ವಿಚಾರಸರಣಿಯು ಕೇವಲ ಅಸಹಾನುಭೂತಿಯದಾಗಿತ್ತು. "ಅಸಹಕಾರದ ಚಳವಳವು ಮೃತವಾಗಲಿಲ್ಲ. ಅದರಲ್ಲಿ ಕೆಲವು ಅವ್ಯವಸ್ಥೆಗಳು ಮಾತ್ರ ಉಂಟಾಗಿವೆ. ಗಯಾದಲ್ಲಿ ಕೊಂಗ್ರೆಸ್ಸು ೫೦,೦೦೦ ಸ್ವಯಂಸೇವಕರನ್ನೂ ೨೫ ಲಕ್ಷ ರೂಪಾಯಿ ಹಣವನ್ನೂ ಕೂಡಿಸಬೇಕೆಂದು ಯಾವ ಠರಾವು ಪಾಸುಮಾಡಿದೆಯೊ ಅದೆ ಈ ಠರಾವಿಗೆ ಸಮರ್ಪಕವಾದ ಉತ್ತರವು" ಎಂದು ಕೆಲವು ನಂಜುಮಾತುಗಳನ್ನು ಆಡಿ ಮೆಕ್‌ಫರ್ಸನರು "ಕಾನೂನು ಭಂಗದ ಸಾಧನೆಯನ್ನು ಎಷ್ಟರ ವರೆಗೆ ಜನತೆಯು ಬಿಡಲಿಕ್ಕಿಲ್ಲವೊ ಅಷ್ಟರ ವರೆಗೆ ಸರಕಾರವಾದರೂ ತನ್ನ ಶಸ್ತ್ರಾಸ್ತ್ರಗಳನ್ನು ಬಿಟ್ಟುಬಿಡಲಿಕ್ಕಿಲ್ಲ. ಇತರ ಪ್ರಾಂತಿಕ ಸರಕಾರಗಳು ಮಾಡಿದ್ದಾವೆಂದು ನಮಗೂ ಹಾಗೆ ಮಾಡಲಾಗುವದಿಲ್ಲ. ಆಯಾ ಸರಕಾರಗಳಿಗೆ ಅವರವರ ನಿರ್ಣಯಗಳು ಇದ್ದೆ ಇದ್ದಾವೆ. ಇತರರ ಅನುಕರಣವು ಅಗತ್ಯವಿಲ್ಲ. ಅಸಹಕಾರಿಗಳಿಗೆ ದಯೆತೋರಿಸಿ ಅವರನ್ನು ಶಾಂತಪಡಿಸುವುದು ಚಂದವಲ್ಲ !!" ಮೆಕ್‌ಫರ್ಸನರ ಈ ಮುಕ್ತಾಫಲಗಳು ಎಷ್ಟು ಅತ್ಯಾಜ್ಯವಾದವೆಂಬುದನ್ನು ಹೇಳುವ ಅಗತ್ಯವಿಲ್ಲ. ಉಗ್ರತ್ವದಿಂದಲೆ ಎಂದರೆ ದಂಡವನ್ನು ಸಿದ್ಧಪಡಿಸಿಕೊಂಡೆ ರಾಜ್ಯವನ್ನು ಆಳುವುದು ಗಂಡಸುತನ ಮಾತ್ರವಲ್ಲ, ಜಾಣತನದ ಕೆಲಸವೆಂದು ಅವರು ತಿಳಕೊಳ್ಳುತ್ತಾರೆ. ಮತ್ತು ಆದಕಾರಣ ಸರಕಾರಿ ಉಗ್ರಧೋರಣದ ಮತ್ತು ಕಾನೂನಿನ ಕತ್ತಿಯನ್ನು ಜನತೆಯ ತಲೆಯ ಮೇಲೆ ನೇತಾಡಿಸಿಕೊಂಡೆ ಇಡಬೇಕೆಂದು ಈ ಬಹದ್ದೂರರ ಅಭಿಪ್ರಾಯವಿರಬಹುದು. ಆದರೆ ಸೌಮ್ಯಸ್ಥಿತಿಯಲ್ಲಿದ್ದ ಜನರು ಸಕ್ಕನೆ ಅಸಹಕಾರವನ್ನು ಯಾಕೆ ಅಪ್ಪಿಕೊಂಡರು! ಈ ಪ್ರಶ್ನೆಗೆ ಸರಕಾರದ ಇಂಥ ನೋಕರರ ಅವಿವೇಕವೆ ಕಾರಣವೆಂದು ಉತ್ತರವು ಬರುತ್ತದೆ.

೪. ಬಿಹಾರ ಪ್ರಾಂತದ ಕೌನ್ಸಿಲಿನಲ್ಲಿ ಬಂದಿರುವ ರಾಜಕೀಯ ಕೈದಿಗಳ ಠರಾವನ್ನು ಮೆಕ್‌ಫರ್ಸನ್ ಸಾಹೇಬರು ಮೇಲೆ ಉಲ್ಲೇಖಿಸಿದ ಮೇರೆಗೆ ವಿಪರೀತ್ವವಾದ ಪೂತ್ಕಾರಗಳಿಂದ ಉಪರೋಧಿಸಿದಾಗ್ಯೂ ಆ ಠರಾವು ಬಹುಮತದಿಂದ ಪಾಸಾಯಿತು. ರಾಜಕೀಯ ಕೈದಿಗಳನ್ನು ಬಿಹಾರ ಪ್ರಾಂತದ ಕೌನ್ಸಿಲು ಬಂಧಮುಕ್ತರನ್ನಾಗಿ ಮಾಡಬಹುದೆಂದು ಸೂಚಿಸಿದಂತಾಯಿತು. ಇತ್ತ ಮುಂಬಯಿ ಸರಕಾರವು ಸಹ ಸಾಧಾರಾಜಕೀಯ ಕೈದಿಗಳನ್ನು ಹೆಚ್ಚಿನ ಸ್ವಾತಂತ್ರದಿಂದಲೂ ಸೌಕರ್ಯದಿಂದಲೂ ನಡಿಸಬೇಕೆಂದು ಯೋಚಿಸಿದೆ ಎಂಬುದಾಗಿ ಪ್ರಕಟವಾಗಿದೆ. ಇಂಥ ಠರಾವುಗಳು ಬರೆ ಕೌನ್ಸಿಲುಗಳಲ್ಲಿ ಪಾಸಾದ ಮಾತ್ರದಿಂದ ರಾಜಕೀಯ ಕೈದಿಗಳನ್ನು ಬೆನ್ನಟ್ಟುವ ಅಧಿಕಾರಿಗಳ "ಸನೇಮಿರ"ವು ತಪ್ಪಿದಂತಾಗುವುದಿಲ್ಲ. ಕೌನ್ಸಿಲುಗಳಲ್ಲಿ ಪಾಸಾದ ಠರಾವುಗಳನ್ನು ಆಚರಣದಲ್ಲಿ ತಂದರೆ ಅವು ಪಾಸಾದದ್ದು ಸಾರ್ಥಕವು. ಇಲ್ಲವಾದರೆ ಕೌನ್ಸಿಲುಗಳಿಗೊಂದು ಕೆಲಸ ಮತ್ತು ಸಭಾಸದರಿಗೊಂದು ವೃತ್ತಿ! ಇರಲಿ. ಬಿಹಾರ ಪ್ರಾಂತದ ಕೌನ್ಸಿಲಿನಲ್ಲಿ ರಾಜಕೀಯ ಕೈದಿಗಳ ವಿಷಯಕವಾದ ಠರಾವು ಪಾಸಾಗಿ ಲೋಕಮತದ ವಿಜಯವು ಈ ಮಟ್ಟಿಗಾದರೂ ಉಂಟಾಗಿದೆ. ಇದು ಸಂತೋಷದ ಮತ್ತು ಅಭಿನಂದನೀಯವಾದ ಮಾತಾಗಿದೆ. ಅಧಿಕಾರಿಗಳ ಕಾರ್ಯವು ಯಾವಾಗಲೂ ಸಿದ್ಧವಾಗುತ್ತದಾದರೂ ಸದಾ ಸರ್ವಥಾ ಅವರ ಅಭಿಪ್ರಾಯವೆ ಯಶಸ್ವಿಯಾಗುತ್ತದೆ ಎಂದು ಹೇಳಲಾಗುವುದಿಲ್ಲ. ಇದಕ್ಕೆ ಮೇಲಿನ ಠರಾವೆ ದೃಷ್ಟಾಂತವಾಗಿದೆ. ಕೌನ್ಸಿಲ್ ಬಹಿಷ್ಕಾರವಾದಿಗಳು ಇಂಥ ದೃಷ್ಟಾಂತಗಳನ್ನು ನೋಡಿಯಾದರೂ ತಮ್ಮ ದುರಾಗ್ರಹವನ್ನು ಬಿಟ್ಟು ಕೌನ್ಸಿಲು ಪ್ರವೇಶದ ಕಾರ್ಯಕ್ರಮವನ್ನು ಕೈಕೊಂಡಿದ್ದಾದರೆ ದೇಶದ ಮೇಲೆ ತುಂಬಾ ಉಪಕಾರವಾಗಬಹುದಿತ್ತು. ಆದರೆ ಪ್ರತಿಕಾರಶೂನ್ಯ ಚಳವಳಗಾರರಿಂದ ಇಂಥ ಉಪಯುಕ್ತತೆಯನ್ನು ಅಪೇಕ್ಷಿಸುವುದು ನಿರರ್ಥಕವಾಗಿದೆ.

೫ ಕೆನಯಾದಲ್ಲಿರುವ ಹಿಂದಿಗಳ ದೀನಸ್ಥಿತಿಯನ್ನು ನಾವು ಎಷ್ಟೊ ಸಲ ತಿಳಿಸಿದ್ದೇವೆ. ಪ್ರತಿದಿನವೂ ಅಲ್ಲಿಯ ಯುರೋಪಿಯನರ ಹಾವಳಿಯು ಬಹು ಭಯಂಕರವಾಗುತ್ತ ಹೋಗಿದೆಂದು ತೋರುತ್ತದೆ. ಕೊಲನಿಗಳ ಸೆಕ್ರಿಟರಿಗಳು ಸದ್ಯದಲ್ಲಿಯೆ ಸುಧಾರಣೆಯನ್ನು ಗುಪ್ತರೀತಿಯಾಗಿ ಕೆನಯಾದ ಗವರ್ನರರಿಗೆ ಕಳುಹಿಸಿದ್ದಾರೆ. ಇದು ಎಷ್ಟು ಗುಪ್ತರೀತಿಯಿಂದ ಕಳುಹಿಸಲ್ಪಟ್ಟರೂ ಅಲ್ಲಿಯ ಯುರೋಪಿಯನರು ಅದರ ನಿಜ ಸ್ಥಿತಿಯನ್ನು ತಿಳಕೊಂಡು ಬರೆ ಅಶಿಕ್ಷಿತರಂತೆ ದಂಗೆಮಾಡ ಪ್ರಾರಂಭಿಸಿದ್ದಾರೆ. ಅಲ್ಲಿ ನಡಿಯುವ ಸ್ಥಿತಿಗಳನ್ನು ಅಲ್ಲಿಯ ಕೊಂಗ್ರೆಸ್ ಕಮಿಟಿಯ ಸೆಕ್ರೆಟರಿಗಳು ಹಿಂದೂ ಪತ್ರದಲ್ಲಿ ಪ್ರಕಟಸಿದ್ದಾರೆ. ಅವರು ಹೇಳುವ ರೀತಿಯನ್ನು ನೋಡಿದರೆ ಯಾರ ಮನಸ್ಸು ಸಹ ಅವರ ನಿರ್ಮರ್ಯಾದೆಯನ್ನು ನೋಡಿ ಹೇಸದಿರದು. ಗವರ್ನರರನ್ನು ಸಹ ಅವರು ಕಲ್ಲಿನಿಂದ ಹೊಡೆಯಲು ಹೋದರು. ಮತ್ತು ಹಿಂದಿಗಳ ಮನೆಯನ್ನು ಬೆಂಕಿಯಿಂದ ಸುಟ್ಟರು. ಇಷ್ಟರಿಂದಲೂ ತೃಪ್ತರಾಗದೆ ಅವರು ಕೋರ್ಟುಗಳಲ್ಲಿ ಹೋಗಿ ಹಿಂದೀ ಅಪರಾಧಿಗಳನ್ನು ನಿಷ್ಕಾರಣವಾಗಿ ಹೊಡೆಯ ಹತ್ತಿದರು. ಇವರು ಹೀಗೆ ಯಾಕೆ ಮಾಡುತ್ತಾರೆಂದು ಕೇಳಿದರೆ ಆಗ ಅವರು ಹೇಳುವರು—"ಕೋರ್ಟುಗಳಲ್ಲಿ ಹಿಂದಿಗಳಿಗೆ ಕೊಡುವ ಶಿಕ್ಷೆಯು ಯೋಗ್ಯವಾಗಿರುವುದಿಲ್ಲ. ಆದ್ದರಿಂದ ನಾವೆ ಯೋಗ್ಯವಾದ ಶಿಕ್ಷೆಯನ್ನು ಕೊಡುವೆವು". ಒಬ್ಬ ಅತಿ ದೊಡ್ಡ ಯುರೋಪಿಯನ್ ಗೃಹಸ್ಥನು ತನ್ನ ಕುರಿಗಳನ್ನು ಕೊಂಡುಹೋದನೆಂಬ ನೆವದಿಂದ ಒಬ್ಬ ಹಿಂದಿಯನ್ನು ಗುಂಡುಹಾಕಿ ಕೊಂದನು. ಇವುಗಳಿಗಿಂತಲೂ ಕಠಿಣವಾದ ಪಾಶವವೃತ್ತಿಗಳು ಬೇರೆ ಇರಲಿಕ್ಕಿಲ್ಲ. ಇವೆಲ್ಲ ಸ್ಥಿತಿಗಳು ನಡಿಯುತ್ತಿದ್ದರೂ ಮೇಲಿನ ಅಧಿಕಾರಿಗಳು ಹೆಂಗಸರಂತೆ ಸುಮ್ಮನೆ ಕೂತಿರುವರು! ಇದು ಎಂಥ ದುರ್ದೈವ! ತನ್ನ ಪ್ರಜೆಗಳು ಈ ರೀತಿಯಾಗಿ ಕಷ್ಟಪಡುತ್ತಿರುವಾಗ ಸರಕಾರವು ಮೌನವಾಗಿರುವುದು ಅದಕ್ಕೆ ನಾಚಿಕೆಯಲ್ಲವೆ? ಆ ಮರ್ಯಾದೆ ಹೀನರ ಪುಂಡಾಟವನ್ನು ನಿಲ್ಲಿಸಲು ಸರಕಾರವು ಸಮರ್ಥವಿಲ್ಲವೊ? ಕೆನೆಯಾದಲ್ಲಿ ಮಾತ್ರ ಈ ರೀತಿಯಾಗಿದೆಂತಲ್ಲ, ಮಲೆಯಾದಲ್ಲಿರುವ ಹಿಂದಿಗಳ ಅವಸ್ಥೆಯೂ ಇಷ್ಟೆ ಶೋಚನೀಯವಾಗಿರುವುದು. ಅಲ್ಲಿಯ ಯುರೋಪಿಯನರೂ ಸಹ ಹಿಂದಿಗಳನ್ನು ಪೀಡಿಸುತ್ತಿರುವರು. ಇಷ್ಟೆಲ್ಲವಾದರೂ ನಮ್ಮ ಹಿಂದೂಸ್ಥಾನ ಸರಕಾರವು ನಿದ್ದೆಯಲ್ಲಿಯೆ ಇದೆ.

೬. ಹಿಂದುಸ್ಥಾನದಲ್ಲಿ ಕಬ್ಬು ಹೆಚ್ಚಾಗಿ ಬೆಳೆದರೂ ಸಕ್ಕರೆಯು ತಯಾರಾಗುವದಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಆದರೆ ಇತ್ತೀಚೆಗೆ ಸಕ್ಕರೆಯನ್ನು ದೇಶಿ ಮಿಲ್ಲುಗಳನ್ನು ಇಟ್ಟು ನಮ್ಮಲ್ಲಿಯೆ ಮಾಡಹತ್ತಿದ್ದಾರೆ. ಈ ಸಕ್ಕರೆಯು ಪರದೇಶೀ ಸಕ್ಕರೆಯಷ್ಟು ಬೆಳ್ಳಗಿರದೆ ಸ್ವಲ್ಪ ಕೆಂಪಗಾಗಿದೆ. ಬಾರಾಮತಿಯ ಸಮೀಪದಲ್ಲಿ ಸದ್ಯದಲ್ಲಿಯೆ ಒಂದು ಸಕ್ಕರೆ ಕಂಪೆನಿ ಸ್ಥಾಪಿಸಲ್ಪಟ್ಟಿದೆ. ಇದರ ಹೆಸರು 'ನಿರಾಷ್ಟಲಿ ಶುಗರ್ ಕಂಪೆನಿ ಲಿಮಿಟೆಡ್' ಎಂಬದಾಗಿದ್ದು ಇದಕ್ಕೆ ಮಿ. ಸಹಸ್ರಬುದ್ಧೆ ಇವರು ಮ್ಯಾನೇಜರರಾಗಿರುವರು. ಈ ಕಾರ್ಖಾನೆಯಲ್ಲಿ ತಯಾರಾದ ಸಕ್ಕರೆಯು ಪುಣೆಯ 'ಕೇಸರಿ' ಪತ್ರದ ಸಂಪಾದಕರ ಬಳಿಯಲ್ಲಿ ಅವಗಾಹನೆಯ ಬಗ್ಗೆ ಕಳುಹಿಸಲ್ಪಟ್ಟಿತ್ತು. ಅದನ್ನು ಅವರು ಪರೀಕ್ಷಿಸಿ ಹೇಳುವದೇನಂದರೆ "ಯಂತ್ರದಲ್ಲಿ ತಯಾರಾದ ಹೊಸ ಸಕ್ಕರೆಯಾದ್ದರಿಂದ ಸ್ವಲ್ಪ—ಬಹು ಸ್ವಲ್ಪ ಕೆಂಪಗೆ ತೋರುತ್ತದೆ. ಆದರೆ ಯಂತ್ರವನ್ನು ಉಪಯೋಗಿಸುತ್ತಾ ಹೋದ ಮೇಲೆ ಇದರಲ್ಲಿಯ ಸಕ್ಕರೆಯು ಪರದೇಶ ಸಕ್ಕರೆಯಂತೆಯೆ ಹೋಲುವದೆಂಬುದರಲ್ಲಿ ಆಕ್ಷೇಪವಿಲ್ಲ." ಮಿ. ಸಹಸ್ರಬುದ್ಧೆ ಇವರು ಅಮೇರಿಕಕ್ಕೆ ಹೋಗಿ ಸಕ್ಕರೆಯ ಮಾಹಿತಿಯನ್ನೆಲ್ಲ ತಿಳಕೊಂಡು ಹಿಂದುಸ್ಥಾನಕ್ಕೆ ಬಂದು ಇಲ್ಲಿಯೂ ಕೂಡ ಒಂದು ದೇಶೀ ಸಕ್ಕರೆಯ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದಿದ್ದರು. ಆದರೆ ಹಣದ ಕೊರತೆಯಿಂದ ಅವರ ಮನೋರಥವು ನೆರವೇರಲಿಲ್ಲ. ಇಂಥಾ ಸಂದರ್ಭದಲ್ಲಿ ಅಲ್ಲಿಯ ಸಂಸ್ಥಾನಿಕ ಮಹಾರಾಜರು ಮತ್ತು ಇತರ ನೋಕರರೂ ಕೂಡ ಅವರಿಗೆ ಹಣದ ಅನುಕೂಲತೆ ಮಾಡಿಕೊಟ್ಟದ್ದರಿಂದ ಇಂಥ ಕಂಪನಿಯನ್ನು ಸ್ಥಾಪಿಸಲಾಯಿತು! ಈ ಕಾರ್ಖಾನೆಯಲ್ಲಿ ತಯಾರಾಗುವ ಸಕ್ಕರೆಯು ಧರ್ಮದೃಷ್ಟಿಯಿಂದಲೂ ಶುದ್ಧವಾಗಿರುವದು. ಕಬ್ಬಿನ ರಸವನ್ನು ಶುದ್ಧಮಾಡುವಾಗ ಇವರು ಬರೆ ಸುಣ್ಣ ಮತ್ತು ಗಂಧಕದ ಹೊಗೆ ಇವೆರಡುಗಳನ್ನು ಮಾತ್ರ ಉಪಯೋಗಿಸುತ್ತಾರೆ. ಆದ್ದರಿಂದ ಈ ಸಕ್ಕರೆಯು ಬಹು ಪರಿಶುದ್ಧವಾಗಿರುವುದು. ಇತರ ಸಕ್ಕರೆಗಳಲ್ಲಿಯಾದರೂ ಗೊರಕ್ತ, ಎಲುಬಿನ ಭಸ್ಮ ಮುಂತಾದ ಪದಾರ್ಥಗಳು ಬೀಳುವವು. ಆದ್ದರಿಂದ ನಮ್ಮಲ್ಲಿಯ ಗಿರಾಕಿಗಳೂ, ಅಂಗಡಿಯವರೂ ಮೇಲಿನ ಪತ್ತೆಗೆ ಬರೆದಲ್ಲಿ ಉತ್ತಮ ತರದ ಸಕ್ಕರೆಯನ್ನು ತರಿಸಿಕೊಳ್ಳಬಹುದು.

ಮಂಗಳೂರು.

ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ ಎಸೋಸಿಯೇಶನಿನ ಜನರಲ್ ಮಿಟಿಂಗು ಬರುವ ಮಾರ್ಚ ತಿಂಗಳ ತಾ. ೩ನೇ ದಿವಸ ಸಾಯಂಕಾಲ ೪ಗಂಟೆಗೆ ಬೆಂಚ್ ಕೋರ್ಟ ಆಫೀಸಿನಲ್ಲಿ ಸೇರುವುದು.

ಈ ಮುಂಚೆ ಇಲ್ಲಿಯ ಕಲೆಕ್ಟರರಾಗಿದ್ದ ಮಿ| ಎಲ್ಲಿಸ್ ದೊರೆಗಳವರು ಅಮಿನಾದೀವಿಗೆ ಹೋದವರು ಕಳೆದ ಬುಧವಾರ ಇಲ್ಲಿಗೆ ಬಂದಿರುವರು.

ಇಲ್ಲಿಯ ಲೋಕಲ್ ಬೋರ್ಡುಗಳ ಮತ್ತು ಮುನ್ಸಿಪಲ್ ನೌಕರರುಗಳ ಬಗ್ಗೆ "ಮಂಗಳೂರ ಲೋಕಲ್ ಬೋರ್ಡ್ಸ ಎಂಡ್ ಮುನ್ಸಿಫಲ್ ಸರ್ವೆಂಟ್ಸ್ ಸೋಸೈಟಿ ಲಿಮಿಟೆಡ್ ಎಂಬ ಸಹಕಾರ ಸಂಘವು ರಿಜಿಸ್ಟರ್‌ಆಗಿದೆ.

ಇಂಟರ್ ಸ್ಕೂಲ್ ಟೆನ್ನಿಸ್ ಸಂದ್ಯಾಟವು ಕಳೆದ ತಾ. ೨೦ರಲ್ಲಿ ನಡೆಯಿತು. ಇದರಲ್ಲಿ ಗವರ್ನಮೆಂಟ್ ಕೋಲೇಜು ಗೆದ್ದಿರುವುದು.

ಫೂಟ್‌ಬೋಲ್ ಪಂದ್ಯಾಟವು ನಡಿಯುತ್ತಲೇ ಇದೆ.

ದಕ್ಷಿಣ ಕನ್ನಡ ಮಲಬಾರ ಮತ್ತು ಕೊಯಮುತ್ತೂರು ಜಿಲ್ಲೆಗಳ ಬಗ್ಗೆ ಏರ್ಪಡಿಸಿದ ಟೆನ್ನಿಸ್ ಟೊರ್ನಮೆಂಟ ಪಂದ್ಯಾಟವು ಬರುವ ಮಾರ್ಚ ತಾರೀಕು ೧೫ರಿಂದ ಪ್ರಾರಂಭವಾಗುವುದು. ಉಮೇದುವಾರರು ತಮ್ಮ ಹೆಸರುಗಳನ್ನು ಇದೇ ತಿಂಗಳ ತಾರೀಕು ೨೮ರೊಳಗೆ ಮುನ್ಸಿಪಲ್ ಚೆಯರ್ಮೇನರಿಗೆ ತಿಳಿಸಿ ದಾಖಲು ಮಾಡಿಕೊಳ್ಳತಕ್ಕದ್ದು.

ಕಳೆದ ತಾರೀಕು ೧೯ರಲ್ಲಿ ಸೇರಿದ ಡಿಸ್ಟ್ರಿಕ್ಟ ಬೋರ್ಡ ಮಿಟಿಂಗಿನಲ್ಲಿ ೧೯೨೩-'೨೪ನೇ ವರುಷದ ಬಜೆಟ್ ಅಂದಾಜು ಪಟ್ಟಿಯು ಪಾಸುಮಾಡಲ್ಪಟ್ಟಿತು.

ಅಲಹಾಬಾದಿನಲ್ಲಿ ಸೇರುವ ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಮಿಟಿಂಗಿಗೆ ಹಾಜರಾಗುವುದಕ್ಕಾಗಿ ಶ್ರೀಯುತ ಕಾರ್ನಾಡ ಸದಾಶಿವರಾಯರು ಈ ದಿನದ ಮೈಲ್ ಟ್ರೈನ್ ಬಂಡಿಯಲ್ಲಿ ಹೊರಟು ಹೋಗಿರುವರು.

ಇಲ್ಲಿಗೆ ಪುನಃ ಬಂದಿರುವ ಗದಗಿನ ನಾಟಕ ಮಂಡಲಿಯವರು ರಾಷ್ಟ್ರೀಯ ವಿದ್ಯಾಪ್ರಚಾರದ ಸಹಾಯಾರ್ಥವಾಗಿ ಬರುವ ತಾ. ೨೭ರಲ್ಲಿ ಒಂದು ನಾಟಕವನ್ನು ಅಭಿನಯಿಸಲಿಕ್ಕಿರುವರು.

ನಾಳೆಯಿಂದ ಉಡುಪಿಯಲ್ಲಿ ಪ್ರಾರಂಭವಾಗುವ ದಕ್ಷಿಣ ಕನ್ನಡಾ ಜಿಲ್ಲಾ ಪ್ರಥಮ ಪರಿಷತ್ತಿಗೆ ಹಾಜರಾಗುವುದಕ್ಕಾಗಿ ಈ ಪರಿಷತ್ತಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಕರ್ಮವೀರ ಪತ್ರಿಕೆಯ ಸಂಪಾದಕರಾದ ಶ್ರೀಯುತ ರಂಗನಾಥ ರಾಮಚಂದ್ರ ದಿವಾಕರ ಎಂ. ಎ., ಎಲ್. ಎಲ್, ಬಿ. ಮತ್ತು ಕರ್ನಾಟಕ ವೃತ್ತ, ಮತ್ತು ಧನಂಜಯ ಪತ್ರಿಕೆಯ ಸಂಪಾದಕರಾದ ಶ್ರೀಯುತ ಕೃಷ್ಣರಾವ ಮುದವೇಡಕರರು ಕಳೆದ ಬುಧವಾರ ಸಾಯಂಕಾಲದ ಮೈಲ್ ಬಂಡಿಯಲ್ಲಿ ಇಲ್ಲಿಗೆ ಬಂದು ತಲ್ಪಿದರು. ಇವರನ್ನು ಸ್ವಾಗತಮಾಡಿ ಶ್ರೀಯುತ ಕಾರ್ನಾಡ ಸದಾಶಿವ ರಾಯರ ಮನೆಗೆ ಕರತಂದರು.

ಉಡುಪಿಯಲ್ಲಿ ಜರಗುವ ಕೊಂಗ್ರೆಸ್ಸಿಗೆ ನಿನ್ನೆ ದಿನ ಸುಮಾರು ೪೦ ಮಂದಿ ಸ್ವಯಂಸೇವಕರು ಕಾಲುನಡೆಯಾಗಿ ಹೋಗಿರುವರು.

ಇಂದಿನ ೧೧ ಗಂಟೆಗೆ ಮೋಟಾರ ಬಂಡಿಯಲ್ಲಿ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀಯುತ ದಿವಾಕರರೂ ಶ್ರೀಯುತ ಮುದವೇಡಕರರೂ ಇತರ ಗೃಹಸ್ಥರೂ ಹೊರಟು ಹೋಗಿರುವರು.

ಬರುವ ತಾ. ೨೭ರಲ್ಲಿ ಶ್ರೀಯುತ ಮುದವೇಡಕರರು ಮಂಗಳೂರಿನಲ್ಲಿ ಒಂದು ಹರಿಕೀರ್ತನೆಯನ್ನು ಮಾಡುವರೆಂದು ಕೇಳುತ್ತೇನೆ.

ನಿನ್ನೆ ದಿನ ಸಾಯಂಕಾಲ ಲೈನು ಮೈದಾನಿನಲ್ಲಿ ಶ್ರೀಯುತ ಕಾರ್ನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತು. ಪ್ರಥಮದಲ್ಲಿ ಶ್ರೀಯುತ ಡಿ. ಕೆ. ಭಾರದ್ವಾಜರು ನೆರೆದ ಜನರಿಗೆ ಈ ದಿನ ಭಾಷಣ ಮಾಡಲಿಕ್ಕಿರುವ ಶ್ರೀಯುತ ರಂಗನಾಥ ರಾಮಚಂದ್ರ ದಿವಾಕರ ಮತ್ತು ಶ್ರೀಯುತ ಕೃಷ್ಣರಾವ್ ಮುದವೇಡಕರ ಇವರ ಪರಿಚಯವನ್ನು ಮಾಡಿಕೊಟ್ಟ ಬಳಿಕ ಶ್ರೀಯುತ ದಿವಾಕರರು ನಮ್ಮ ಸದ್ಯದ ಕರ್ತವ್ಯವೆಂಬ ವಿಷಯವನ್ನು ಕುರಿತು ಭಾಷಣ ಮಾಡಿದರು. ಇವರು ತಮ್ಮ ಭಾಷಣದಲ್ಲಿ ಸ್ವರಾಜ್ಯವನ್ನು ಬ್ರಿಟಿಷರು ಕೊಡತಕ್ಕದ್ದೂ ಅಲ್ಲ, ಅಥವಾ ಮಹಾತ್ಮರು ಸಂಪಾದಿಸಿ ಕೊಡತಕ್ಕದ್ದೂ ಅಲ್ಲ, ಪರಂತು ನಾವು ಸ್ವತಃ ದುಡಿದು ಕಷ್ಟಗಳನ್ನು ಸಹಿಸಿ ಸಂಪಾದಿಸತಕ್ಕದ್ದು. ಇದಕ್ಕೆ ಮಹಾತ್ಮರು ತೋರಿಸಿಕೊಟ್ಟ ಅಸಹಕಾರ ಕಾರ್ಯಕ್ರಮವೇ ಮುಖ್ಯ ಉಪಾಯವಾಗಿದೆ ಎಂದು ವಿವರಿಸಿದರು. ಅನಂತರ ಶ್ರೀಯುತ ಮುದವೇಡಕರರು ಮೇಲಿನ ವಿಷಯಗಳನ್ನು ಸಮಗ್ರವಾಗಿ ವಿವರಿಸಿ ತಾವು ಕುರಂಗಾವನದಲ್ಲಿ ದಿಕ್ಕಿಗೆ ರಚಿಸಿದ ಪದ್ಯಗಳನ್ನು ಹಾಡಿ ಜನರ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮಕರವಾದ ಮತ್ತು ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು.

ಇಲ್ಲಿಯ ಹೆಣ್ಮಕ್ಕಳ ಗವರ್ನಮೆಂಟ ಟ್ರೈನಿಂಗ ಸ್ಕೂಲಿನ ಮಿಸ್ಟ್ರೆಸ್ ಆಗಿದ್ದ ಶ್ರೀಮತಿ ನಾರಾಯಣಿ ಪಾರಿಶಿಯರ್ ಬಿ. ಎ.ಯವರು ಕಳೆದ ಶನಿವಾರ ಇಲ್ಲಿಯ 'ವಿಮೆನ್ ಎಂಡ್ ಚಿಲ್ಡ್ರನ್' ಆಸ್ಪತ್ರೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದ ಪಡುತ್ತೇವೆ.

ಪಂಜಾಬ ಗುರುಕುಲದ ವಾರ್ಷಿಕ ವರ್ಧಂತಿ ಉತ್ಸವ ಸಮಾರಂಭಕ್ಕೆ ಹಾಜರಾಗಲು ಪಂಡಿತ ಧರ್ಮದೇವ ಸಿದ್ಧಾಂತಾಲಂಕಾರರು ಇಲ್ಲಿಂದ ಪಂಜಾಬಕ್ಕೆ ತೆರಳಿರುವರು.

ಪಟ್ಟಣದಲ್ಲಿ ಪ್ಲೇಗು ಇಲಿಗಳು ಸಾಯುವುದು ಹೆಚ್ಚಾಗಿದೆ. ನಿನ್ನೆ ದಿನ ವಾಶನ್ ಹೈಸ್ಕೂಲಿನಲ್ಲಿ ಪ್ಲೇಗು ಇಲಿಯು ಬಿದ್ದಿರುವುದರಿಂದ ಈ ಶಾಲೆಗೆ ರಜೆಯು ಕೊಟ್ಟಿದೆ.

ತಾ. ೧೮ರ ಮುಷ್ಟಿಫಂಡಿನ ಜಮೆ:—೧೦೦೦॥ ಸೇರು ಅಕ್ಕಿ, ಮತ್ತು ರೂ. ೫೬—೧೧—೩. ಮುಷ್ಟಿ ಫಂಡಿನಿಂದ ಸಿಕ್ಕಿದ ಹಣವೆಲ್ಲವೂ ರಾಷ್ಟ್ರೀಯ ಶಾಲೆಗಳಿಗಾಗಿಯೇ ಉಪಯೋಗಿಸಲ್ಪಡುತ್ತದೆ. ತಾ. ೨೫ರಲ್ಲು ಉಡುಪಿಯಲ್ಲಿ ಕೂಡುವ ಪರಿಷತ್ತಿಗೆ ಸ್ವಯಂಸೇವಕರೆಲ್ಲರೂ ಹೋಗುವುದರಿಂದ ಮುಷ್ಟಿ ಫಂಡಿಗೆ ಅವರು ತಾ. ೨೮ನೇ ಬುಧವಾರ ಬರುವರು. ಎಲ್ಲರೂ ದಯವಿಟ್ಟು ತಾವು ಕೊಡುವ ಅಕ್ಕಿ ಯಾ ಹಣವನ್ನು ಆ ದಿನ ಕೊಡಬೇಕಾಗಿ ವಿನಂತಿ.

ನಮ್ಮ ತಾಲೂಕಿನಿಂದ ಏಪ್ರಿಲ್ ಅಖೈರಿಯೊಳಗೆ ೬,೦೦೦ ರೂಪಾಯಿ ಮತ್ತು ೨೦೦ ಸ್ವಯಂಸೇವಕರನ್ನು ಕೊಡಿಸಬೇಕಾಗಿ ಜಿಲ್ಲಾ ಕಮಿಟಿಯವರು ನಿರ್ಣಯಿಸಿರುತ್ತಾರೆ. ನಮಗೆ ವಹಿಸಲ್ಪಟ್ಟ ಈ ಕಾರ್ಯವನ್ನು ಸಾಧ್ಯಗೊಳಿಸುವಂತೆ ಧನ ಸಹಾಯವನ್ನು ಮಾಡುವುದಲ್ಲದೆ ಸ್ವಯಂಸೇವಕರಾಗಬೇಕಾಗಿ ತಾಲೂಕಿನ ನಿವಾಸಿಗಳಿಗೆ ವಿನಂತಿ.

ದೇಶಭಕ್ತರಾದ ಶ್ರೀಯುತ ರಂಗನಾಥ ರಾಮಚಂದ್ರ ದಿವಾಕರ ಮತ್ತು ಶ್ರೀಯುತ ಕೃಷ್ಣರಾವ ಮದವೇಡಕರ ಇವರು ಜಿಲ್ಲಾ ಪರಿಷತ್ತಿಗೆ ಬಂದವರು ನಮ್ಮ ಜಿಲ್ಲೆಯಲ್ಲಿ ಈ ತಿಂಗಳ ತಾ. ೨೮ರ ವರೆಗೆ ಇರುವರು. ಅವರ ಮುಂದಿನ ಕಾರ್ಯಕ್ರಮವು ಈ ಕೆಳಗಿನಂತಿರುತ್ತದೆ. ತಾ. ೨೪, ೨೫ ಉಡುಪಿ, ತಾ. ೨೬ ಕಾಸರಗೋಡು; ತಾ. ೨೭ ಮಂಗಳೂರು; ತಾ. ೨೮ ಕಾರ್ಕಳ; ಮಾರ್ಚ ತಾ. ೧ ತೀರ್ಥಹಳ್ಳಿ. ಇವರಿಗೆ ಯೋಗ್ಯವಾದ ಆಮಂತ್ರಣವನ್ನು ಕೊಟ್ಟು ಅಲ್ಲಲ್ಲಿ ಕೂಡುವ ಸಭೆಗಳಿಗೆ ಬರಬೇಕಾಗಿ ವಿನಂತಿ.

ಮ ತಾ. ಕಾ. ಕಮಿಟಿ,
ತಾ. ೨೦—೨—೧೯೨೩.

ಮೂ. ಉಮೇಶರಾವ್,
ಕಾರ್ಯದರ್ಶಿ.

ಮಹಾರಾಷ್ಟ್ರ ಧರ್ಮ ಪರಿಷತ್ತು.

ಮಹಾರಾಷ್ಟ್ರ ಧರ್ಮ ಪರಿಷತ್ತಿನ ಮೂರನೇ ಅಧಿವೇಶನವು ಕಳೆದ ತಾರೀಕು ೧೭ರಲ್ಲಿ ಬೆಳಿಗ್ಗೆ ೯ ಗಂಟೆಗೆ ಯೇವತಮಾಳ ಎಂಬಲ್ಲಿ ಪ್ರಾರಂಭಿಸಿತು. ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಕರವೀರ ಪೀಠದ ಶ್ರೀ ಶಂಕರಾಚಾರ್ಯರು ವಹಿಸಿಕೊಂಡಿದ್ದರು. ಅನೇಕ ಪಂಡಿತರೂ ಇತರ ಭಕ್ತವರ್ಗದವರೂ ಮಹಾರಾಷ್ಟ್ರದ ಎಲ್ಲಾ ಭಾಗಗಳಿಂದ ಬಂದು ಈ ಪರಿಷತ್ತಿಗೆ ಹಾಜರಾಗಿದ್ದರು. ಮೊದಲನೇ ದಿನ ಸ್ವಾಗತ ಕಮಿಟಿಯ ಅಧ್ಯಕ್ಷರ ಭಾಷಣ, ಅನಂತರ ಅಧ್ಯಕ್ಷರ ಭಾಷಣ, ವಿಷಯ ನಿಯಾಮಕ ಕಮಿಟಿಯ ಮಿಟಿಂಗು ನಡೆಯಿತು. ಪರಿಷತ್ತಿನ ಎರಡನೇ ದಿನದ ಅಧಿವೇಶನದಲ್ಲಿ ಅನೇಕ ಉಪಯುಕ್ತ ಠರಾವುಗಳು ಪಾಸಾದವು. ಈ ಪರಿಷತ್ತಿನ ಉದ್ದೇಶಗಳ ಮುಂದಿನ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ೧೩ ಮಂದಿ ಮೆಂಬರರುಳ್ಳ ಒಂದು ಕಾರ್ಯಕಾರಿ ಕಮಿಟಿಯು ನೇಮಕವಾಯಿತು. ಈ ಪರಿಷತ್ತಿಗೆ ಅಗತ್ಯವಿರುವ ಆಲೋಚನೆ ಮತ್ತು ಹೆಚ್ಚಿನ ಮಾಹಿತಿ ಮೊದಲಾದುವನ್ನು ಕೊಡುವ ಬಗ್ಗೆ ಪಂಡಿತರ ಒಂದು ಮಂಡಲವೂ ನೇಮಕವಾಯಿತು. ಅಗತ್ಯವಿರುವ ನಿಬಂಧನೆಗಳನ್ನು ಮಾಡುವ ಕಾರ್ಯವನ್ನು ಮಿ॥ ಎನ್. ಸಿ. ಕೇಳಕರ, ಮಿ॥ ಅಣೆ ಮತ್ತು ಡಾಕ್ಟರ ಮುಂಜೆ ಇವರಿಂದ ಕೂಡಿದ ಕಮಿಟಿಗೆ ವಹಿಸಿಕೊಟ್ಟಿದೆ. ಇವರು ನಿಬಂಧನೆಯ ಯೋಜನೆಗಳನ್ನು ತಯಾರಿಸಿ ಬರುವ ಮೇ ತಿಂಗಳಲ್ಲಿ ಕಾರ್ಯಕಾರಿ ಕಮಿಟಿಯ ಮುಂದಿಡತಕ್ಕದ್ದು. ಈ ಅಧಿವೇಶನದಲ್ಲಿ ಡಾಕ್ಟರ ಗೋರ್‌ರವರ 'ಸಿವಿಲ್ ಮರೇಜ್ ಬಿಲ್ ಎಮೆಂಡಮೆಂಟು' ಸಹ ನಿಷೇಧಿಸಲಾಯಿತು. ದೇವಸ್ಥಾನ, ಪವಿತ್ರ ಸ್ಥಳಗಳು ಮತ್ತು ಬಾವಿಗಳು ಈ ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ [illegible] ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯತೆಯನ್ನು ತಿರಸ್ಕರಿಸುವುದಕ್ಕೆ ಈ ಕೊನ್ಫರೆನ್ಸು ಶಿಫಾರಸು ಮಾಡುತ್ತದೆಂಬ ಠರಾವು ಸಹ ಈ ಅಧಿವೇಶನದಲ್ಲಿ ಮಂಜೂರಾಗಿದೆ. ಔರಂಗಜೇಬನ ಕಾಲದಲ್ಲಿ ಬಲಾತ್ಕಾರದಿಂದ ಮಹಮ್ಮದೀಯ ಮತಕ್ಕೆ ಸೇರಿಸಲ್ಪಟ್ಟ ೪॥ ಲಕ್ಷ ಹಿಂದುಗಳನ್ನು ಪುನಃ ಹಿಂದೂಮತಕ್ಕೆ ಸೇರಿಸಬೇಕೆಂದು ಆಗ್ರಾದೊಳಗಿನ ಕ್ಷತ್ರಿಯ ಸಭೆಯವರು ನಿರ್ಧರಿಸಿದ ಬಗ್ಗೆ ಈ ಸಭೆಗೆ ಧನ್ಯವಾದಗಳನ್ನು ಅರ್ಪಿಸುವ ಇನ್ನೊಂದು ಠರಾವು ಸಹ ಪಾಸಾಗಿದೆ.

ಪ್ರಪಂಚದ ಪ್ರಚಲಿತ ಪರಿಸ್ಥಿತಿ.

ಅಮೇರಿಕದ ಡಾಕ್ಟರ ಶರ್ವುಡ ಎಂಬವರು ಭೂಲೋಕದ ಪ್ರಚಲಿತ ಪರಿಸ್ಥಿತಿಯನ್ನು ಕುರಿತು ಕಳೆದ ತಾರೀಕು ೧೩ರಲ್ಲಿ ಒಂದು ಭಾಷಣವನ್ನು ಮಾಡಿದರು. ಅವರ ಉದ್ಬೋಧಕ ಭಾಷಣದ ಸಾರಾಂಶವನ್ನು ಕೆಳಗೆ ಕೊಟ್ಟಿದೆ. "ನಾವು ಈ ವರೆಗೆ ಅಸಾಧಾರಣವಾದ ತೆರೆಗಳನ್ನು [illegible]. ಸ್ವಾತಂತ್ರ್ಯ, ಸಮಾನತೆಯ ಹಕ್ಕು ಮತ್ತು ಮಿತ್ರತ್ವ ಮುಂತಾದ [illegible] ಶರ್ತಗಳು ಅವುಗಳ ಗದ್ದಲವೇ ಸರ್ವತ್ರ ವ್ಯಾಪಿಸಿತ್ತು. ಈ ಇಡೀ ಬ್ರಹ್ಮಾಂಡದಲ್ಲಿ ಪ್ರತ್ಯಕ್ಷ ಸಮಾಧಾನದಿಂದಿರುವ ಒಂದೇ ಒಂದು ದೇಶ ಕೂಡ ಇಲ್ಲ. ವ್ಯಕ್ತಿವ್ಯಕ್ತಿಗಳೊಳಗೂ, ಪಂಗಡ ಪಂಗಡಗಳೊಳಗೂ, ಮತ ಮತಗಳೊಳಗೂ, ರಾಷ್ಟ್ರ ರಾಷ್ಟ್ರಗಳೊಳಗೂ ಕಲಹವು ನಡೆಕೊಂಡಿತ್ತು, ಸ್ವಾರ್ಥ, ದುರಾಶೆ ಮತ್ತು ಕಲಹ ಇವು ಇಡೀ ಲೋಕದಲ್ಲಿ ವ್ಯಾಪಿಸಿತ್ತು. ಯುದ್ಧಮಾಡುವುದೆಂದರೆ, ಮಾನವಜಾತಿಗಳಿಗೆ ಯುಕ್ತವಾದುದಲ್ಲ, ಕ್ರೈಸ್ತ ಧರ್ಮಕ್ಕೆ ಸರಿಹೊಂದುವುದಲ್ಲ. ಮತ್ತು ಯುದ್ಧವೇ ಎಲ್ಲ ರಾಷ್ಟ್ರಗಳಲ್ಲಿ ಅಶಾಂತಿಯನ್ನುಂಟುಮಾಡಿತು. ಯುದ್ಧದ ನಂತರ ಜನರಲ್ಲಿ ಸ್ವಾರ್ಥದ ಮತ್ತು ಸ್ವತಂತ್ರದ ಅಲ್ಲೋಲಕಲ್ಲೋಲಗಳು ತುಂಬಿವೆ. ಮಜೂರರ ಕೆಲಸವು ಹೆಚ್ಚಾದ ಕ್ರೋಧದಿಂದಲೂ ಈಗ ಬಂದೊದಗಿದೆ. ಮಜೂರರಿಗೆ ನ್ಯಾಯವು ದೊರಕುವಂತೆ ಮಾಡಬೇಕು. ಈ ರಾಷ್ಟ್ರೀಯ ಸಮಸ್ಯೆಯು ಇತ್ಯರ್ಥವಾಗಬೇಕಾದರೆ ಕೇವಲ ಅಧ್ಯಾತ್ಮಿಕವಾದ ಆಧಿಬೌತಿಕತ್ವವು (Materialism) ಮಾಯವಾಗಬೇಕು" ಎಂದು ಹೇಳಿದರು. ಅನಂತರ ಇವರು ಜಪಾನ ದೇಶವು ಸ್ವಲ್ಪದರೂ ಸುಧಾರಣೆಯನ್ನು ಹೊಂದಲಿಲ್ಲ. "ಚೈನಾದೇಶವು ಸುಧಾರಣೆಯ ದಾರಿಯನ್ನು ಕಂಡುಹಿಡಿದಿದೆ. ಹಿಂದೂಸ್ಥಾನವು ಕೂಡ ಬಹುತರ ಸುಧಾರಣೆಯನ್ನು ಹೊಂದಿದೆ. ಪೂರ್ವದೇಶಗಳೂ ಪಶ್ಚಿಮ ದೇಶಗಳೂ ಪರಸ್ಪರ ಸಹಕಾರದಿಂದ ನಡೆಯಬೇಕು. ಮಜೂರು ಪಕ್ಷದವರ ಹಕ್ಕುಗಳನ್ನು ಇತರರು ಸಹೋದರ ಭಾವದಿಂದ ಕಾಣಬೇಕು" ಎಂದು ಮುಂತಾಗಿ ಹೇಳಿರುವರು. ಇವರು ತಮ್ಮ ಭಾಷಣದಲ್ಲಿ ಮಾನವ ಕುಲದ ಕಡೆಗೆ ಆದರವನ್ನೂ ಪ್ರೇಮವನ್ನೂ ಯಾವಾಗಲೂ ತೋರಿಸುವುದು ಎಷ್ಟು ಅಗತ್ಯವೆಂದು ಹೇಳಿ, ಅನಂತರ ಘನಘೋರ ಯುದ್ಧದ ನಂತರ ಕಷ್ಟದ ದಿನಗಳು ಸಂದುಹೋಗಿ, ಈಗ ಹೊಸ ಶಕವು ಹೇಗೆ ಪ್ರಾರಂಭವಾಗಿ ಪ್ರಜಾಪಕ್ಷದ ಉಪಕಾಲವು ಹೇಗೆ ಪ್ರಾಪ್ತವಾಗಿದೆಯೆಂದು ತಿಳಿಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಅಫಘಾನಿಸ್ಥಾನದ ಬದಲಾವಣೆಗಳು.

ನಿಕುಲಿನ್ ಎಂಬವರು ಅಫಘಾನಿಸ್ಥಾನದ ಈಗಿನ ಸ್ಥಿತಿಯನ್ನು ಕುರಿತು 'ವೊಸ್ಕೊ ಇವೆಸ್ಟಿಯಾ' ಎಂಬುದರಲ್ಲಿ ಪ್ರಕಟಿಸಿದ ವಿಷಯಗಳ ಸಾರಾಂಶ:—

ಕಾಬೂಲಿನಲ್ಲಿ ಸ್ತ್ರೀಯರ ಬಗ್ಗೆ ಒಂದು ಶಾಲೆಯು ಸ್ಥಾಪಿಸಿದೆ. ಸಂಸ್ಥಾನಗಳಲೆಲ್ಲಾ ಅನೇಕ ಪ್ರಾಥಮಿಕ ಶಾಲೆಗಳು ತೆರೆಯಲ್ಪಟ್ಟಿವೆ. ಈಗ ಅಪೂರ್ವವಾಗಿ ಸಾವಿರದಲ್ಲಿ ಒಬ್ಬನಿಗೆ ಓದಲಿಕ್ಕೂ ಬರೆಯಲಿಕ್ಕೂ ಬರುತ್ತದಾದರೂ ಮಕ್ಕಳು ಶಾಲೆಗಳಲ್ಲಿ ಹಾಜರಾಗಲೇಬೇಕೆಂಬ ಬದ್ಧಾಯ ಶಿಕ್ಷಣದ ಕ್ರಮವನ್ನು ವಿಧಾಯಿಸಿದೆ. ಗುಲಾಮಗಿರಿಯು ಕಳೆದ ೧೯೨೧ನೇ ಇಸವಿಯ ಜನವರಿಯಲ್ಲಿ ತೆಗೆದುಹಾಕಲಾಯಿತು. ಅಫಘಾನ ಸರಕಾರಕ್ಕೆ ತನ್ನ ಹೊಸ ಸುಧಾರಣೆಗಳನ್ನು ಜಾರಿಗೆ ತರಲು ತಕ್ಕುದಾದ ಉದ್ಯೋಗಸ್ಥರು ಸಿಕ್ಕದೇ ಇದ್ದುದೇ ದೊಡ್ಡ ಕಷ್ಟವಾಗಿದೆ. ಮಾಜಿ ಅಧಿಕಾರಿಗಳು ಸರಕಾರದ ಪರಿಪಾಟುಗಳಿಗೆ ವಿಶೇಷವಾಗಿ ವಿರೋಧಿಗಳಾಗಿದ್ದರು. ಆದ್ದರಿಂದ ಕಳೆದ ೧೯೨೧ನೇ ಇಸವಿಯಲ್ಲಿ ಒಮ್ಮೆಲೇ ಮುಂಚಿನ ಎಲ್ಲಾ ಗವರ್ನರರನ್ನು ಕೆಲಸದಿಂದ ತೆಗೆದುಹಾಕುವ ಅಗತ್ಯವಿತ್ತು. ಹೊಸ ಅಧಿಕಾರಿಗಳು ರಾಷ್ಟ್ರೀಯ ಉಡುಪನ್ನು ಧರಿಸುವುದಿಲ್ಲ. ಅದರ ಸಂಪೂರ್ಣ ಯುರೋಪಿಯನರ ಸಮಾಜದ ಉಡುಪನ್ನು ಧರಿಸುವರು. ಸರಕಾರಿ ಆಫೀಸುಗಳಲ್ಲಿ ಈಗಿನ ಮಾದರಿಯ ಮೇಜುಗಳೂ ಕುರ್ಚಿಗಳೂ ಇವೆ. ಸರಕಾರಿ ಕಾರಕೂನರು ತಮ್ಮ ಕೆಲಸವನ್ನು ಮಾಡುವಾಗ ನೆಲದ ಮೇಲೆ ಕೂತುಕೊಳ್ಳುವುದನ್ನು ಈಗ ನಿಷೇಧಿಸಿದೆ. ಕಾಬೂಲಿನಿಂದ ಕಂದಾಹಾರಕ್ಕೆ ಮೋಟರಿನ ಮೂಲಕ ಪ್ರಯಾಣ ಮಾಡಲು ಸಾಧ್ಯವಿದೆ. ಈ ಪಟ್ಟಣಗಳೊಳಗೆ ವರ್ತಮಾನ ವಹಿವಾಟು ನಡೆಯಲು ಸಾಧ್ಯವಾಗುವಂತೆ ಟೆಲಿಫೋನಿನ ಅನುಕೂಲವಿದೆ. ಅಫಘಾನ ಜನಾಂಗದ ತರುಣರು ಜಪಾನೀಸರೊಡನೆ ಸ್ಪರ್ಧಿಸುವ ಆಶೆಯಿಂದಿರುವರು. ಪ್ರಚಲಿತ ಸುಧಾರಣೆಯ ದಾರಿಯಲ್ಲಿ ಇವರು ಪ್ರವೇಶಿಸುವುದಾದರೂ ಪ್ರಾಚೀನ ರಾಷ್ಟ್ರೀಯ ಭಾವವನ್ನು ರಕ್ಷಿಸಿಕೊಂಡಿದ್ದಾರೆ. ಅಫಘಾನಿಸ್ಥಾನದಲ್ಲಿ ಪಾರ್ಸಿಗಳು ಬಹಳ ಉನ್ನತ ಸ್ಥಿತಿಯಲ್ಲಿರುವರು. ಪೇಟೆಯ ಒಂದು ಭಾಗದಲ್ಲಿ ಹಿಂದೂಗಳ ಅಂಗಡಿಗಳಿರುವವು. ಇವರು ತಮ್ಮ ಅಂಗಡಿಗಳಲ್ಲಿ ಯುರೋಪಿಯನ್ ಸಾಮಾನುಗಳನ್ನು ಮಾರಾಟ ಮಾಡುವರು. ಹಿಂದುಗಳ ಅಂಗಡಿ ಮೊದಲಾದುವುಗಳು ಶುಚಿಯುಳ್ಳದ್ದಾಗಿಯೂ ನೋಡಲು ಒಳ್ಳೇದಾಗಿಯೂ ಇರುವವು. ಇಲ್ಲಿ ಸಹ ಖದ್ದ ಮೊದಲಾದ ಹಳೆಯ ಸಾಮಾನುಗಳು ಮಾರಾಟಕ್ಕೆ ಇವೆ.

ಕೆನೆಯಾದಲ್ಲಿರುವ ಹಿಂದಿಗಳ ಸ್ಥಿತಿ.

ಈ ವರುಷದ ಪ್ರಾರಂಭದಿಂದ ಕೆನೆಯಾದಲ್ಲಿರುವ ಬಿಳೇ ವಸಾಹತುವಾಲರು ಅಲ್ಲಿರುವ ಹಿಂದಿಗಳಿಗೆ ಯಾವತರದ ಹೆಚ್ಚಿನ ಹಕ್ಕುಗಳೂ ದೊರೆಯದಂತೆ ಮಾಡಲು ಚಳವಳಿಸುತ್ತಿದ್ದಾರೆ. ಕೆನೆಯಾದಲ್ಲಿ ಹಿಂದಿಗಳಿಗೆ ಸಮಾನತೆಯ ಹಕ್ಕನ್ನು ಕೊಟ್ಟದ್ದೆ ಆದರೆ ತಾವು ಶಕ್ತಿಪ್ರಯೋಗವನ್ನೂ ಕೂಡ ಮಾಡಲು ಹಿಂಜರಿಯಲಿಕ್ಕಿಲ್ಲವೆಂದು ಬಿಳೇ ವಸಾಹತುವಾಲರು ಬಹಿರಂಗವಾಗಿ ಸಾರುತ್ತಿದ್ದಾರೆ. ಅಲ್ಲಿರುವ ಬಿಳೇ ಜನರು ಗವರ್ನರರನ್ನು ಕೂಡ ಬೆದರಿಸಿದ್ದರಿಂದ ಅವರು ತಮ್ಮ ರಾಜೀನಾಮೆಯನ್ನು 'ಕಳುಹಿಸುವರೆಂದು ವಾರ್ತೆ ಕೂಡ ಇದೆ. ಕೊಲೋನಿಯಲ್ ಸೆಕ್ರೆಟರಿಗಳು ಈ ವಾದವನ್ನು ಇತ್ಯರ್ಥಗೊಳಿಸಲು ನ್ಯಾಯ ದೊರೆಯುವ ರೀತಿಯಲ್ಲಿ ತೀರ್ಮಾನಮಾಡಲಿಕ್ಕಿದ್ದಾರೆಂಬ ವದಂತಿಯೂ ಇದೆ. ಪರಂತು ರೂಟರ ಏಜನ್ಸಿಯ ತಂತಿಗಳನ್ನು ನೋಡುವಾಗ ಸರಿಯಾದ ನೆಲೆಯು ಸಿಗುವುದಿಲ್ಲ. ಕೆಲವು ತಂತಿಗಳ ವರ್ತಮಾನವನ್ನು ಕೇಳುವಾಗ ಕೊಲೋನಿಯಲ್ ಸೆಕ್ರೆಟರಿಗಳು ಹಿಂದೂಗಳಿಗೆ ಸಮಾನತೆಯ ಹಕ್ಕು ಸಿಕ್ಕಬೇಕೆಂಬುವ ವಿಷಯದಲ್ಲಿ ಅನುಕೂಲರಾಗಿರುವರೆಂತಲೂ ಇನ್ನು ಕೆಲವನ್ನು ಕೇಳುವಾಗ ಪ್ರತಿಕೂಲರಾಗಿರುವರೆಂತಲೂ ತೋರುತ್ತದೆ. ಸರಕಾರದವರು ತಮ್ಮ ಅಂದಾಜುಗಳನ್ನು ಲಕ್ಷ್ಯಕ್ಕೆ ತಾರದೆ ಹೋದರೆ ತಾವು ಸಶಸ್ತ್ರ ಮಾರ್ಗವನ್ನು [illegible] ಕೊಡುವುದನ್ನು ನಿಲ್ಲಿಸುವೆವೆಂದು ಹಿಂದಿಗಳು ನಿಶ್ಚಯಿಸಿರುವರು. ಎಲ್ಲಾ "ವಸಾಹತುಗಳಲ್ಲಿ ಹಿಂದಿಗಳು ಸುಖವಾಗಿರುವರು. ಪರಂತು ರಾಜಕೀಯ ಹಕ್ಕುಗಳ ಕುರಿತು ಮಾತ್ರ ಅವರ ದೂರುವುದು" ಎಂದು ಮಾನ್ಯರಾದ ಶ್ರೀನಿವಾಸ ಶಾಸ್ತ್ರೀಗಳೇ ಸ್ವತಃ ತಿಳಿಸಿರುವಾಗ ಕೆನೆಯಾದಲ್ಲಿ ಮಾತ್ರ ಹಿಂದಿಗಳಿಗೆ ಸ್ವಾತಂತ್ರ್ಯ ಕೊಡುವ ಆಲೋಚನೆಯನ್ನು ಕೈಬಿಡತಕ್ಕದ್ದೆಂದು ಬಿಳೇ ಜನರ ಪಕ್ಷದಲ್ಲಿ ಒಬ್ಬರು ತರ್ಕಮಾಡುತ್ತಿರುವರು. ಹಿಂದಿಗಳಿಗೆ ಸಮಾನತೆಯ ಹಕ್ಕನ್ನು ಕೊಡುವುದಾದರೆ ತಾವು ಹಿಂದೂಸ್ಥಾನದೊಡನೆ ವ್ಯಾಪಾರ ವಹಿವಾಟನ್ನು ನಿಲ್ಲಿಸುವೆವೆಂದು ಬಿಳೇ ವಸಾಹತುವಾಲರು ಸೂಚಿಸುತ್ತಿದ್ದಾರೆ. ಕಳೆದ ೧೯೨೧ನೇ ಇಸವಿಯಲ್ಲಿ ಜರುಗಿದ ಇಂಪೀರಿಯಲ್ ಕೊನ್ಫರೆನ್ಸಿನ ಠರಾವನ್ನು ಅನುಸರಿಸಿ ಹಿಂದಿಗಳಿಗೆ ಕೆಲವು ಹಕ್ಕುಗಳನ್ನು ಕೊಡುವುದು ಅಗತ್ಯವೆಂದು ಕೆಲವು ಯುರೋಪಿಯನರ ಅಭಿಪ್ರಾಯ. ಹಿಂದಿಗಳಿಗೆ ಸಮಾನ ಹಕ್ಕನ್ನು ಕೊಟ್ಟರೆ [illegible]ದಲ್ಲಿ ಯುರೋಪಿಯನರು ಈ ಪ್ರದೇಶವನ್ನು ಬಿಟ್ಟು ಹೋಗಬೇಕಾದೀತೋ ಎಂಬ ಶಂಕೆಯು ಬಿಳೇ ಜನರಲ್ಲಿ ಬಲವಾಗಿ ನಾಟಿಕೊಂಡಿದೆ. ಯುರೋಪಿಯನರು ಬಹಳವಾಗಿ ಬೆದರಿಸಿದ್ದರಿಂದ ಅಲ್ಲಿಯ ಸರಕಾರವು ಹಿಂದಿಗಳ ಬೇಡಿಕೆಗೆ ತಕ್ಕಷ್ಟು ಬರುವಂತೆ ಕಾಣುವುದಿಲ್ಲ.

ಬಹಿಷ್ಕಾರ ಚಳವಳಿಯ ಪರಿಣಾಮ.

[ಕಳೆದು ಬಂದುದು.]

ಖದ್ದರಿನ ಮೇಲಿನ ಪ್ರಜಾನುರಾಗ.

ಮಂಚೆಸ್ಟರ್ ಗಾರ್ಡಿಯನಿನ ವಾರ್ಷಿಕ ವರದಿಯ ಕೆಲವು ಅಂಶಗಳು.

೧೯೨೨ನೇ ಇಸವಿಯು ಕಳೆದುಹೋದದ್ದಕ್ಕಾಗಿ ಯಾರೂ ದುಃಖಿಸರು. ವ್ಯಾಪಾರಸ್ಥರು ಒಳಗಾಗಬೇಕಾದ ಕಷ್ಟ ದುಃಖಗಳು ಈ ವರ್ಷದಷ್ಟು ಇತರ ಯಾವ ವರ್ಷಗಳಲ್ಲೂ ಉಂಟಾಗಿಲ್ಲ. ಹಿಂದುಸ್ಥಾನದಲ್ಲಿ ಅಂತೂ ಮುಂಬಯಿಯಲ್ಲಿ ದಿವಾಳಿ ಹೋಗುವುದು ದಿನನಿತ್ಯದ ಕಥೆಯಾಗಿತ್ತು. ಈ ನಷ್ಟವನ್ನು ಭರ್ತಿಮಾಡಬೇಕೆಂದು ಹುಡುಕುತ್ತಿದ್ದ ದಾರಿಗಳಲ್ಲವೂ [illegible] ಗಾತ್ರವಾದ ನಷ್ಟದ ಹೊಂಡಕ್ಕೆ ಒಯ್ಯುತ್ತಿತ್ತು. ಕಳೆದ ಮೇ ಜೂನ್ ತಿಂಗಳಲ್ಲಿ ಸಾಧಾರಣ ಹೆಚ್ಚಿನ ದರದಲ್ಲಿ ಕೊಂಡುಕೊಂಡವರು ಈ ವರುಷದಲ್ಲಿ ಧಾರಣೆಯು ಇಳಿದುಹೋದ ಕಾರಣ ಲಾಭವಿಲ್ಲದೆ, ಅಲ್ಲದೆ ನಷ್ಟಪಟ್ಟು ಕೂಡ ಮಾರಾಟಮಾಡಬೇಕಾಗಿ ಬಂದಿರುವುದು.

ಆದರೆ ಗಾಂಧಿಯ ಬಂಧನದ ತರುವಾಯ ಅಮದು ಆಗಿ ಬರುವ ವಸ್ತ್ರದ ಮೇಲಿನ ತೀವ್ರವಾದ ಬಹಿಷ್ಕಾರವು ಕೊಂಚಕೊಂಚವಾಗಿ ಶಿಥಿಲವಾಗುತ್ತಾ ಬಂತು. ಆದರೂ ಈ ಚಳವಳಿಯ ಫಲಗಳು ಮಹತ್ವಾದವುಗಳೇ ಸರಿ. ಅಲ್ಲದೆ ಇದು ಬಿದ್ದುಹೋಗುವ ಲಕ್ಷಣಗಳು ಕೂಡ ಕಂಡು ಬರುವುದಿಲ್ಲ. ಖದ್ದರು ದೇಶಕ್ಕೆ ಅನುಗುಣವಾದ, ಹಿತಕರವಾದ ಮತ್ತು ಉಪಯುಕ್ತ ಉಡುಪಾಗಿ ಪರಿಣಮಿಸಿರುತ್ತದೆ, ಅಲ್ಲದೆ ಈಚೆಗೆ ಅದು ಒಂದು ಆಡಂಬರದ ವಸ್ತು (Fashion) ಎಂದು ಅನ್ನಿಸಿಕೊಳ್ಳುತ್ತದೆ.

ಖಾದಿಯ ಪ್ರಸಾರಕ್ಕೆ ಬಹುಶಃ ಜನಾಂಗದ ಬಡತನವೇ ಮುಖ್ಯ ಕಾರಣವೆಂಬುದಾಗಿ ಊಹಿಸಿಕೊಳ್ಳಬಹುದು. ವಿದೇಶಿ ವಸ್ತ್ರಕ್ಕೆ ತಗಲುವ ವೆಚ್ಚದ ಸಾಧಾರಣ ಐದನೇ ಒಂದು ಅಂಶದಿಂದ ಈಗ ಒಂದು ಇಡೀ ಕುಟುಂಬದ ಪೋಷಕನ್ನು ತಯಾರಿಸಿಕೊಳ್ಳಬಹುದು. ಖದ್ದರು ಅಗ್ಗ ಮಾತ್ರವೇ ಅಲ್ಲ, ಸೋಟಕ್ಕೆ ಇಂಪಾದ ಉಡುಪಾಗಿರುತ್ತದೆ. ಅಲ್ಲದೆ ಹಿಂದುಸ್ಥಾನದ ಮಡಿವಾಳನ ತೊಳೆಗೆ ಸೊಗಸಾಗಿ ನಿಲ್ಲುತ್ತದೆ.

ಹಿಂದುಸ್ಥಾನದಂಥ ಬಡದೇಶದಲ್ಲಿ ಕೃತ್ರಿಮ ದಾರಿದ್ರ್ಯವೇ ಸ್ವದೇಶಿ ಆಚರಣೆಯ ಮೂಲಕಾರಣವೆಂದು ಅಂಗ್ಲಾಂಡದಲ್ಲಿರತಕ್ಕ ಜನರಿಗೆ ವಿಶದ ಪಡಿಸುವುದು ಸುಲಭಸಾಧ್ಯವಿಲ್ಲ. ಕಳೆದ ಹನ್ನೆರಡು ತಿಂಗಳಿಂದಲೂ ಅಂಗ್ಲಾಂಡದ ಎಲ್ಲಾ ಪತ್ರಿಕಾಕಾರರು ಹಿಂದುಸ್ಥಾನದ ಮಾರ್ಕೆಟು (Indian Market) ಸುಸ್ಥಿತಿಗೆ ಬರುವುದು ಎಂದು ಆಗಿಂದಾಗ್ಗೆ ಸಂತೋಷ ಸೂಚಕವಾದ ಉಕ್ತಿಗಳಿಂದ ಭವಿಷ್ಯವನ್ನು ಬರೆಯುತ್ತಿದ್ದುದಲ್ಲದೆ, ಪ್ರಮುಖ ವ್ಯಾಪಾರಸ್ಥ ಜನರು ಮುಖ್ಯಕರಿಸುತ್ತಿರುವ ಹಿಂದೀಯರು ಲಂಕಾಶೈರಿನ ವಸ್ತ್ರ ದೊರೆಯದೆ ಬದುಕುವುದೇ ಅಸಾಧ್ಯ ಎಂದು ಪ್ರತಿಪಾದಿಯೂ [illegible] ಇಲ್ಲ.

ಆದರೆ, ಈವರು ತಮ್ಮ ಸ್ವದೇಶದಲ್ಲಿಯೇ ತಯಾರಾದ ಬಟ್ಟೆಗಳ ಸಹಾಯವೂ ಕೂಡ ಇಲ್ಲದೆ ಜೀವಿಸುವರು. ತನ್ನಲ್ಲಿ ತಯಾರಾದ ಎಲ್ಲಾ ಬಟ್ಟೆಗಳನ್ನು ಮಾರತಕ್ಕಂಥ ಗಿರಣಿಯು ಹಿಂದುಸ್ಥಾನದಲ್ಲಿ ಈ ಹೊತ್ತಿನ ದಿನ ಒಂದಾದರೂ ಇರುವುದಿಲ್ಲ.

ಸ್ಥಳಿಕ ಕೈಗಾರಿಕೆಯಿಂದ ಸಿಗತಕ್ಕ ಲಾಭವು ಅತ್ಯಂತ ಅಲ್ಪವಾಗಿಯದೆ. ಕಳೆದ ಮೂರು ಯಾ ನಾಲ್ಕು ತಿಂಗಳಿನಿಂದ ಹತ್ತಿಯ ಬೆಲೆಯು ಏರಿದಾಗ್ಯೂ ನೂಲಿನ ಬೆಲೆಯು ಪ್ರತಿ ರಾತ್ತಲಿಗೆ ೩ ಆಣೆಯಂತೆ ತಗ್ಗಿರುತ್ತದೆ. ಆದರೂ ವ್ಯಾಪಾರವು ಬಹಳ ನಿರ್ಜೀವಾವಸ್ಥೆಯಲ್ಲಿರುವದು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಪ್ ಕೋರ್ಟಿನಲ್ಲಿ

O. P. ನಂಬ್ರ $\frac{9}{23}$

ಮಹಾದೇವ ಉಪಾಧ್ಯ, ಅರ್ಜಿದಾರ.

ಬಡಾಕೆರೆ ಮಂಜಯ್ಯ ಅಡಿಗಳ ಮಗ ಕಾಳಿಂಗ ಅಡಿಗಳು ತಾರೀಕು 25—1—'22ರಲ್ಲು ಬರೆದಿಟ್ಟ ವಿಲು ಪ್ರಕಾರ ಹೊರಗಿನಿಂದ ಬರತಕ್ಕ ಸಾಲಗಳ ಬಗ್ಗೆ ತನಗೆ ಸಕ್ಸೆಶ್ಯನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರ ನಂದನವನ ಗ್ರಾಮದ ಮಹಾಬಲೇಶ್ವರದಲ್ಲಿರುವ ಮಹಾದೇವ ಉಪಾಧ್ಯನು ಸದರಿ ಕೋರ್ಟು ಒ. ಪಿ. ನಂಬ್ರ $\frac{9}{23}$ನೇ ಅರ್ಜಿ ದಾಖಲು ಮಾಡಿದ್ದಾನೆ. ಈ ಅರ್ಜಿಯು ತಾರೀಕು 9—3—1923ಕ್ಕೆ ವಿಚಾರಣೆಗೆ ಇಟ್ಟಿದೆ.

ಕುಂದಾಪುರ,
ತಾ. 21-2-'23.

B. MAHABALA HOLLA,
Vakil.

ಪ್ರಕಟಣೆ.

ಶ್ರೀ ರಾಮ ಹಾಯ್ಕರ್ ಎಲಿಮೆಂಟರಿ ಶಾಲೆಯ ಸಹಾಯಾರ್ಥವಾಗಿ ಏರ್ಪಡಿಸಿದ ಲೋಟರಿಯನ್ನು ಇದೇ ತಿಂಗಳ ತಾ. ೨೮ಕ್ಕೆ ತೆಗೆಯುವದಾಗಿ ನಿಶ್ಚಯಿಸಿತ್ತು. ಆದರೆ ಪರಊರಿಗೆ ಕಳುಹಿಸಿದ್ದ ಟಿಕೇಟು ಪುಸ್ತಕಗಳು ಕೆಲವು ಇನ್ನೂ ಮಾತ್ರ ಬಾರದ ನಮ್ಮ ಕೈಸೇರದ್ದರಿಂದ ತಾ. ೨೮ಕ್ಕೆ ನಿಶ್ಚಯಿಸಿದ್ದ ಲೋಟರಿಯನ್ನು ಬರುವ ಮಾರ್ಚ ತಾ. ೩೧ನೇ ಶನಿವಾರ, ದಿನ್ನ ಸ್ವಾಮ ಗಂಟೆ ೫ಕ್ಕೆ ಶಾಲಾ ಹಾಲಿನಲ್ಲಿ ತೆಗೆಯುವದಾಗಿ ಮಾಡಿದ್ದೆ. ನಿರ್ಣಯವನ್ನು ಈ ಮೂಲಕ ಟಿಕೇಟು ಪಡಕೊಂಡ ಸರ್ವ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲಾಗಿದೆ.

ಫರಂಗಿಪೇಟೆ ವಿದ್ಯಾವರ್ಧಕ ಸಂಘ,
ತಾ. ೨೦—೨—೨೩.

ಎ. ರಾಮಚಂದ್ರ ಹೆಗಡೆ,
ಸೆಕ್ರೆಟರಿ.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯವಿಟ್ಟು ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವನಗೀತ" "ಆತ್ಮಗೀತ" ದೇವರೆಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,

ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತಂಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಸ್ವಲ್ಪ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪಾಲು ಹಾಸಲು ೦—೩—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ಣಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ವಾಗ್ಗಡಾರದಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಬಗೆಯೂ ಚಿಲ್ಲರೆ ಬಗೆಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರ

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs.	300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ.	300,000—0—0
Reserve and other sinking Funds „	181,250—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು „	181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS

ಖಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 21st Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದರದನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂಥ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಜಠರಶಕ್ತಿಯನ್ನು ಸಮಸ್ಥಿತಿಯಲ್ಲಿಡುತ್ತವೆ. ಚಳಿ, ಮಳೆ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು. ಕರುಳಿನ ಮುರಿತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಜನ [illegible] ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷ್ಠಾಶ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾಗಿವೆ. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜುಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಏಜೆಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪತಿವ್ರತ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕುದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0—12—0	ಸಂಬರರಾಮಾಯಣ ಹೊಸ ಮುದ್ರಣ .	5—0—0
ಸಂಧ್ಯಾಕಾಲ ಕಾದಂಬರಿ	0—6—0	ಸಂಬರರಾಮಾಯಣದ	
ಚಂದ್ರಮತಿ . .	0—8—0	ಕಥೆ ವಚನ .	0-12—0
ರಾಜಪುತ್ರರಮಣಿಯರು	0—8—0	S. S. L. C. Kannada Texts	
ಕೆಲವು ಸಣ್ಣ ಕಥೆಗಳು	1—0—0	ಪರಿಮಳ . . .	0—5—0
ರಾಜಯೋಗ . .	1—0—0	[illegible] . . .	0—6—0
		ಅಡುಗೆಯ ಹುಡುಗಿ.	0-12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಷ್ಟು ಜಾಸಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾ ಮಿಶ್ಶನ್ ಬುಕ್ ಎಂಡ್ ಟ್ರಾಕ್ಟ ಡಿಪೋಸಿಟರಿ,
ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಟಿಕ್ಕಾಲಿಯು 32 ಸಾಮಾನುಗಳ ಸಹ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ. 4—8—0, ದೊಡ್ಡದು 5—0—0 ಪೋಸ್ಟು ಖರ್ಚು ಬೇರೆ. ಮತ್ತು ಊರಿನಲ್ಲಿ ತಯಾರಾಗುವ ರೇಷ್ಮೆ: ಮಿರಿ, ಜರಿ, ಸಾದಾ, ಸೀರೆ, ಶಾಲು, ಕಾಶ್ಮೀರ ಶಾಲು, ರುಮಾಲು, ಪ್ರಿಂಟ್ ಶ್ರೀಗಂಧದ ಮಾಲು, ಧೋತಿ, ಭಾವಚಿತ್ರ ಬಾಗಿಲ್ ಇವುಗಳನ್ನು ಕೇಳುವವರಿಗೆ ವಿ. ಪಿ. ಪಿ. ಮೂಲಕ ಕಳುಹಿಸಿಕೊಡಲಾಗುವುದು. ಕ್ಯಾಟಲಾಗ್ ಉಚಿತ.

ವಿಳಾಸ:—

ಎಸ್. ಎಮ್. ನಾರಾಯಣಾಚಾರ್ಯರು ಮತ್ತು ಕಂಪೆನಿ,
ಕೋಟೆಬೀದಿ, ಕಾಶಿ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೇ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಜುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ದಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ.1—4—0.

ಹುಳದ ವ್ಹೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೋಪೆತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ಜರ್ಮನ ದೇಶದಲ್ಲಿ ತಯ್ಯಾರಾಗಿ ಬಂದಂಥಾ

4 ಮತ್ತು 4½ ರಾತ್ಲಿನ ಹಾರೆಗಳೂ, 8 ರಾತ್ಲಿನ ಗುದ್ದಲಿಗಳೂ, 6 ರಾತ್ಲಿನ ಕುಂಟಾನಿಗಳೂ, 4 ರಾತ್ಲಿನ ಕೊಡ್ಲಿಗಳೂ, ಎಲ್ಲಾ ಪರಿಮಾಣದ ಮುಳ್ಳು ಮೊಳೆಗಳೂ, ಮಾರಾಟಕ್ಕೆ ಇವೆ.

ವ್ಯಾಪಾರಸ್ಥರಿಗೆ ಬಹು ರಿಯಾತಿಯ ಧಾರಣೆಯಲ್ಲಿ ವಿಕ್ರಯಮಾಡಲಾದೀತು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಕೋಮನ್ ವೆಲ್ತ್ ಟ್ರಸ್ಟ್, ಲಿಮಿಟೆಡ್,
ಕಲ್ಲಿಕೋಟೆ.

ಇಲ್ಲವೆ—ಕೋಮನ್ ವೆಲ್ತ್ ಸ್ಟೋರ್ಸ್,
ಮಂಗಳೂರು.

ರೋಲ್ಡ್ ಗೋಲ್ಡ್ ಬಂಗಾರದ ಕೈಬಳೆಗಳು

ಈ ಬಳೆಗಳು ಸೀಮೆ ಬಂಗಾರದಿಂದ ಮಾಡಿದೆ. ಬಣ್ಣ ಹೋಗದಂತೆ ಅಪರಂಜಿ ಬಂಗಾರದ ಗಿಲೀಟುಮಾಡಿದೆ. ಇದನ್ನು ಕೈಯಲ್ಲಿ ಹಾಕಿಕೊಳ್ಳುವುದರಿಂದ ಯಾವ ತೊಂದರೆಯೂ ಇಲ್ಲ. ಗಾಜಿನ ಬಳೆಗಳು ಒಡೆದುಹೋಗುವಂತೆ ಇವು ಹೋಗುವುದಿಲ್ಲ. ಮತ್ತು ಕೆಡುವುದೂ ಇಲ್ಲ. ಇವನ್ನು ನೋಡಿದವರು ನಿಜವಾದ ಬಂಗಾರದ ಬಳೆಗಳೆಂದೇ ಹೇಳುವರು. ಕ್ರಯ ಜೋಡು 1ಕ್ಕೆ 3—0—0.

ವಿಳಾಸ:—
ಎಟೋನಿಯಾ ಅಂಡ್ ಕೊ,
ಪೋಷ್ಟು ಬೋಕ್ಸ್ ನಂಬ್ರ 65,
ಮದರಾಸು.

ವೈ। ರಾ। ವಾಸುದೇವಾಚಾರ್ಯ ಕೆರೂರು,
ಸಂಪಾದಕ ಶುಭೋದಯ.
ಇವರು ಬರೆದ,

ಯದುಮಹಾರಾಜ.

ಎಂಬ ವಿನೋದನ ಕಾದಂಬರಿಯು.

ಬೆಲೆ—ಒಂದು ರೂಪಾಯಿ ಅಂಚೆವೆಚ್ಚ ಬೇರೆ

ಸ್ವಾಮಿ ರಾಘವೇಂದ್ರಾಚಾರ್ಯ ಕೆರೂರು,
ಬಾಗಲಕೋಟೆ ಜಿ. ವಿಜಾಪೂರ,

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು, ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇವರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೩—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಭಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್ಸ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು. ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ವಿಚಾರಿಸಿಕೊಳ್ಳಬಹುದು.

ಓ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟಿನುಗಳೂ, ಯಿನಾಮಲ್ಲ ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಖಾಲಿ ಕವರು ಫೌಂಟೆನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

ಆರ್. ಮಾರ್ಟಿನ್ನರ.

(ಸಾರಸಾಪರಿಲ್ಲಾ)

ಈ ಸಾರಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವುದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರದ ಕಾಯಿಲೆ ಉಬ್ಬುವುದು, ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕ್ಷ್ಮಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ ಮತ್ತು ಚರ್ಮದ ರೋಗಗಳು, ವಿಷ ಕಡಿತದಿಂದುಂಟಾದ ವ್ಯಾಧಿ, ಸೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು, ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು, ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ.

ಬಾಟ್ಲಿ 1ಕ್ಕೆ ಕ್ರಯ ರೂ. 1—12—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾರಿಜ್ವರ, ಸನ್ನಿಪಾತ ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳೂ ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಕಂಠೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೆಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತಿರ, ಫೋರ್ಟ್, ಮುಂಬಯಿ.

R. D. KATELY & CO.,
No. B. Frere Road,
Near Wright & Co. Fort BOMBAY.

Edited, Printed & Published by V. S. Kamath at the M. T. A. Sharada Press, Mangalore.

Registered No. M. 498

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ " 2—13—0.

ಸ್ವದೇಶಾಭಿಮಾನಿ.

SWADESHABHIMANI MANGALORE.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ.

ರಕ್ಷ್ಯೈರ್ಮಹಾರ್ಹೈರ್ನತುಷುರ್ನ ದೇವಾಃ ।
ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರದ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಘುತ್ತೆ ವಿಷ್ಯದ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಪಡೆದು ತೃಪ್ತರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೭ ಮಂಗಳೂರು, ತಾರೀಕು ೩ನೇ ಶುಕ್ರವಾರ ಮಾರ್ಚ್ ೧೯೩೩. ಸಂಚಿಕೆ ೯

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಿಗೊಳಿಸಲ್ಪಟ್ಟ ಮೂಲಧನ	ರೂ. 3,50,000— 0— 0
ದಾ ಪಾಲಿಕ್ಕೆ ಅರ್ಪಿಸಿದ ಮೂಲಧನ	2,00,000— 0— 0
ದಾ ಹಾಕಿ ಎತ್ತಿದ ಮೂಲಧನ	1,00,000— 0— 0
ಲ್ಕ ತೆತ್ತ ಮೂಲಧನ	90,365— 7—11
ಣಾತಿಗಳು	3,33,300—0— 0
ಸ್ಟಮೆಂಟು (1927ನೇ ಇಸವಿಯು) ಶೇಕಡಾ ರದ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 26,700 ಕೂಡಾ	4,54,322—11— 0

ಕಳೆದ 2 ವರುಷಗಳಲ್ಲಿ ಪಾಲುದಾರರಿಗೆ ಸಾಲಿಯಾನ್ ಶೇಕಡಾ ರಂತೆ ಲಾಭಾಂಶ ಹಂಚಿಯದೆ. ಶೇರ್ಸ್‌ಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ಕೊಡುವ ಕರಾರಿನ ಮೇಲೆ ಶೇಕಡಾ 7ರಂತೆ 7½ ಬಡ್ಡಿಯಲ್ಲಿ ನಿಯಮ ಠೇವಣಾತಿಗಳನ್ನು 15 ದಿವಸಗಳ ನೋಟೀಸು ಮೂಲಕ ಶೇಕಡಾ 6½ರ ಬಡ್ಡಿ ಸಮೇತ ವಾಪಾಸು ಪಡಿಯುವ ಚಿಕ್ಕ ವ್ವಾದ ಠೇವಣಾತಿಗಳನ್ನು ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನು, ಶೇಕಡಾ 4½ ಬಡ್ಡಿ ಪಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನು, ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನು, ಡಿಪೋಜಿಟಾಗಿ ಪಡೆಯುವದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯುಳ್ಳ ಹಣವನ್ನು ಸಾಲವಾಗಿಯೂ ಕೊಡಲಾಗುವದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರದಲ್ಲಿ ತಿಳಿಯುವದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, ವೀಳ್ಯದೆಲೆ ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ, ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರ ಜನಕವು 15—16% ಅಂದರೆ ಎಲುಬು ಗೊಬ್ಬರದಲ್ಲಿ ನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಪು ನಾಟಕ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶ್ಶನ್ ರೋ, ಕಲ್ಕತ್ತಾ.

THE DIRECTOR
CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಿಯಾಸ್ಪತಿ ಅತ್ತಾರಾಮ ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತವಿವೇಕ ಕ್ರಯ	೦—೧೦—೦
ಕೇತುಥಂಗ "	೦—೧೨—೦
ಸಂಕ್ಷೇಪಗೀತೆ "	೦—೧೦—೯

ಲಕ್ಷ್ಮೀನಾರಾಯಣ ಪುತೆಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಫಿಲಾಸಫಿ ಕ್ರಯಂ—೨—೦

ಕರ್ಣಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀಮದ್ಭಾಗವತ ಬೋಧೆ, ವಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ,ಅಂಗದನ ಫಿಯರ್ಲೆಸ್, ಮನೋರಮಾ, ಭ್ರಾಂತಿವಿಲಾಸ, ಸ್ವಾತಂತ್ರ್ಯ, ಮಾಧವ ಕರುಣಾವಿಲಾಸ, ಅಸಹಕಾರದ ಹೋರಾಟಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪಾಠಗಳು, ಅಜ್ಜ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ,ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳಿಕರಿಗೆ ರೂ ೨-೦-೦. ವಿ. ಪಿ. ಖರ್ಚು ಕೂಡಿ ರೂ. ೩-೦-೦ ಪ್ರಕಟಿಸಿದ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ಮ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು, ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಡ್ರೈಂಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫೋಟೋ ರೂಲುಗಳು, ಇತರ ವಿಲಾಸದ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಮರ್ಗಟು ಫೋರ್ಮು, ಕುಂಭಂದಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋಂಡ ಫೋರ್ಮುಗಳು ವ ಇತರ ಲೆಕ್ಕ ಬರಿಯುವ ಪುಸ್ತಕಗಳು.

ಎಲೊಪೆಥಿಕ್, ಹೋಮಿಯೋಪೆಥಿಕ್ ಮತ್ತು ಬಿಷ್ಮು ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪಾಷ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಕರಿಗೆಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯು ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN B
AMRUTANJAN
Best Indian Pain Balm
Amrutanjan D
BOMBAY.

ದೇಸೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ವೇದನೆ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ದೇಸೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ದೇಸೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇಸೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇಸೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

☞ ಮಂಗಳೂರಲ್ಲಿ— ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ರಕೃತಿಕಷಾಯ

U. L. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಹೆಸರು ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಸಂಗ್ರಹಿಸಿ [illegible]

[illegible]

ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ ಮಲಬಾರ.

ಕ್ರಯ ರೂ. 1—4—0.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ೫೬, (ಬ್ರಾಡ್ವೇ, ಮದ್ರಾಸ್.

Local Agents: **Raphael & Co.**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ್ ಎಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಈಗಲೇ ಪ್ರಿಂಟಾಗಿದೆ! ಬೇಗನೆ ತರಿಸಿಕೊಳ್ಳಿರಿ!

ಕಾಮಶಾಸ್ತ್ರ (ಎನ್ನುವ ಶರೀರ ಮರ್ಮಶಾಸ್ತ್ರ)

ಈ ಪುಸ್ತಕವು ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಇದ್ದದನ್ನು ಇದ್ದ ಹಾಗೆಯೇ ತಿಳಿಸುವಂತೆ ಚಿತ್ರಪಟಗಳ ಸಹಿತ ಗ್ಲೇಜು ಕಾಗದದಲ್ಲಿ ಮುದ್ರಿಸಿರುತ್ತೇವೆ. ಇದರಲ್ಲಿ ಸ್ತ್ರೀ ಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ದಂಪತಿಗಳು ಅನ್ಯೋನ್ಯವಾಗಿರುವದಕ್ಕೆ ಮಾಡಬೇಕಾದ ಉಪಾಯಗಳು, ಗುಪ್ತವೈದ್ಯಗಳ ಚಿಕಿತ್ಸೆ, ಶಯನಗೃಹದ ನಿಯಮಗಳು, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ರಹಸ್ಯಗಳು ತುಂಬಿತುಳುಕುತ್ತಿರುವವು. ಕ್ರಯ ಮರ್ಮಶಾಸ್ತ್ರ ರೂ. 1—0—0.

ವಿಳಾಸ:— ಟಿ. ರಾಮಚಂದ್ರರಾವ್ ಕಂಪೆನಿ,
೨೩ ತಿರುಪಳ್ಳಿ ಬೀದಿ,
ಸಾಹುಕಾರಪೇಟೆ, ಮದರಾಸು.

ಪ್ರಕಟಣೆ.

ರುಧಿರೋದ್ಗಾರಿ ಸಂ।ರದ ಪಂಚಾಂಗ.

ಇದು ಜ। ಸುಬ್ಬಣ್ಣ ಶಾಸ್ತ್ರಿಗಳಿಂದ ಗುಣಿಸಲ್ಪಟ್ಟು ಮಂಗಳೂರು ಶಾರದಾ ಛಾಪಖಾನೆಯಲ್ಲಿ ಸುಂದರವಾಗಿ ಮುದ್ರಿತವಾಗುತ್ತಿದೆ. ಅಗತ್ಯವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಪಂಚಾಂಗಕರ್ತರಲ್ಲಿಯೂ ದೊರೆಯುವುದು. ಪಂಚಾಂಗ ಪ್ರತಿ ೧ಕ್ಕೆ ಕ್ರಯ ೩॥ ಆಣೆ, ೫೦ಕ್ಕೆ ರೂ. ೮—೦—೦.

ವಿಳಾಸ:-
ಶಾರದಾ ಛಾಪಖಾನೆ,
ಮಂಗಳೂರು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ದೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಫೌಂಟನ್ ಪೇನುಗಳು.

ಈ ಪೇನುಗಳನ್ನು ವಿಲಾಯತಿಯಲ್ಲಿ ಮೇಲಾದ ವಾಲ್ಕನೈಟ್‌ನಿಂದ ತಯಾರಿಸಿದ್ದು. ಇದಕ್ಕೆ ಕ್ಯಾರೆಟ್ ಬಂಗಾರದ ಮುಳ್ಳು ಇರುವದು. ಒಂದಾವರ್ತಿ ಮಸಿಯನ್ನು ಹಾಕಿದರೆ ಸುಮಾರು 1,000 ಮಾತುಗಳು ಬರೆಯುವದು. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 6 ರೋಸ್ ಸೆಂಟ್ ಬಾಟಲ್‌ಗಳು ಇನಾಂ ಕೊಡುವೆವು.

ಕ್ರಯ ರೂ. 1ಕ್ಕೆ 1—12—0.

Ripon Watch Co, *Triplicane*,
Madras.

ಯುನೈಟೆಡ್ ಕಮರ್ಶಿಯಲ್ ಕಂಪೆನಿ,

ಪೋಸ್ಟ ಬಾಕ್ಸ ನಂಬ್ರ 388, ಮುಂಬಯಿ.

ಈ ಕಂಪೆನಿಯವರು ನಾನಾ ತರದ ಕಾಗದಗಳನ್ನೂ ಛಾಪಖಾನೆಗೆ ಬೇಕಾದ ಉಪಕರಣಗಳನ್ನೂ ರಖಂ ಖಟ್ಲೆಯಲ್ಲಿ ಮಾರಾಟಮಾಡುವರು. ಈ ಕಂಪೆನಿಗೆ ಪೇಜು ಹಾಕುವ (Numbering) ಅನೇಕ ಮೆಶಿನ್ನುಗಳು ಈಗಲೇ ಬಂದಿರುತ್ತವೆ. ಗಿರಾಕಿಗಳು ತಮಗೆ ಬೇಕಾದ ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳುವುದು.

ಸೀಮೆ ಬಂಗಾರದ ರೇಡಿಯಂ ಗಡಿಯಾರಗಳು.



ಈ ಗಡಿಯಾರಗಳು ಸ್ವಿಜರ್‌ಲಾಂಡ್ ದೇಶದಲ್ಲಿ ತಯಾರುಮಾಡಿ ಬಂದಿವೆ. ಇತರ ಗಡಿಯಾರಗಳು ರಾತ್ರಿವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ನಮ್ಮ ಗಡಿಯಾರಗಳಿಗೆ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಅವಶ್ಯವಿಲ್ಲ. ಎಷ್ಟು ಕತ್ತಲೆಯಾಗುತ್ತೋ ಅಷ್ಟೊ ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ತೋರುವುದು. ನಮ್ಮಲ್ಲಿ ಸ್ವಲ್ಪ ಮಾತ್ರವೇ ಇರುವುದರಿಂದ ಬೇಕಾದವರು ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕೈಯಲ್ಲಿ ಕಟ್ಟುವ ಪಟಪಟಿ ಸಹಿತ ಗಡಿಯಾರ 1ಕ್ಕೆ ರೂ. 8-8-0.

ವಿಳಾಸ:— Ripon Watch Co., *Triplicane*,
Madras.

ಸುಸಂದರ್ಭ ದರ ಸುಲಭ! ತ್ವರೆಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ. ಬಿ. ಎಲ್

'ಕವಿ'ಯವರ
ತಾಜಾ
ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ಲು 1ಕ್ಕೆ ರೂ. 2—12—0.
ಸ್ಪೆಶ್ಯಲ್ ರಾತ್ಲು 1ಕ್ಕೆ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸೆಂಪಲ್ಸು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಗೆಜ್ಜೆಕಟ್ಟಿದ ಬಂಗಾರದ ಗಿಲೀಟಿನ ಡಾಬುಗಳು.

ಇದು ಬಂಗಾರದ ಗಿಲೀಟಿನಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು, ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟ ತೋರುವುದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿ ನೋಡಿರಿ. ಡಾಬು 1ಕ್ಕೆ ರೂ. 3—0—0.

ರೋಲ್ಡ್ ಗೋಲ್ಡ್ ಬಂಗಾರದ ಉಂಗುರಗಳು.

ಈ ಉಂಗುರಗಳು ವಿಲಾಯತಿಯಲ್ಲಿ ತಯಾರಿಸಿದ್ದು, ಅತ್ಯುತ್ತಮವಾದ ವಜ್ರದ ಹರಳುಗಳನ್ನು ಇಟ್ಟು ಸೀಮೆ ಬಂಗಾರದಿಂದ ತಯಾರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟು ಮಾಡಿದೆ. ನೋಡಲು ಬಹು ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು.

ಕ್ರಯ ೧ಕ್ಕೆ 2—0—0. ೩ಕ್ಕೆ ರೂ. 5—8—0.

ಎಟೋನಿಯಾ ಆಂಡ್ ಕೊ,
ಪೋಸ್ಟು ಬೊಕ್ಸ್ ನಂಬ್ರ 65,
ಮದರಾಸು.

ರೋಲ್ಡ್ ಗೋಲ್ಡ್ ಡೈಮನ್ಡ್ ಉಂಗುರ.

ಈ ನಕ್ಷೆಯಲ್ಲಿ ಕಾಣುವ ಉಂಗುರವನ್ನು ಸೀಮೆಯಲ್ಲಿ ರೋಲ್ಡ್ ಗೋಲ್ಡ್ ಬಂಗಾರದಿಂದ ಮಾಡಿ ಪ್ರಕಾಶವಾದ ಇಮಿಟೇಷನ್ ಡೈಮಂಡ್ ಕಲ್ಲುಗಳು ಮಡಗಿ ಇಂಗ್ಲೀಷ ನಮೂನೆಯಲ್ಲಿ ಕಟ್ಟಿದ ಕಟ್ಟಿರುತ್ತೆ. ಇದರಲ್ಲಿ ಇಟ್ಟಿರುವ ಕಲ್ಲುಗಳು ರಾತ್ರಿಕಾಲದಲ್ಲಿ ವಜ್ರಕ್ಕೆ ಸರಿಸಮಾನವಾಗಿ ಥಳಥಳಿಸುವದು. ಶ್ರೀಮಂತರೂ ಸಹ ಉಪಯೋಗಿಸುತ್ತಾರೆ. ನೋಡಿದವರು ನಿಜವಾದ ವಜ್ರದ ಉಂಗುರವೆಂದೇ ಹೇಳುವರು.

ಬಣ್ಣಕ್ಕೆ 2 ವರ್ಷ ಗ್ಯಾರಂಟಿ ಕ್ರಯ ಉಂಗುರ 1ಕ್ಕೆ ರೂ. 2-0-0.

ಜರ್ಮನಿ ದೇಶದ ಆಲಾರಂ ಕೊಡುವ ಬೀಗ.

ಈ ಬೀಗ ನೋಡುವುದಕ್ಕೆ ಬೆಳ್ಳಿಯ ಹಾಗೆಯೇ ತೋರುವದು. ಈ ಬೀಗವನ್ನು ಹಾಕಬೇಕಾದರೂ ತೆಗೆಯಬೇಕಾದರೂ ಆಲಾರಂ (ಗಂಟೆ) ಶಬ್ದವಾಗುತ್ತೆ. ಕಳ್ಳತನದಿಂದ ಕದಿಯುವವರನ್ನು ಹಿಡಿಯಬಹುದು. ಬಹಳ ಮಜಬೂತಾಗಿ ಇರುವದು. ಬೆಲೆ ಬೀಗ ೧ಕ್ಕೆ ರೂ. 1—4—0.

ನಮ್ಮ ವಿಳಾಸ:— ಜನರಲ್ ಮೇಲ್ ಆರ್ಡರ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. 282 ಮದರಾಸು

ಶಾಲಿವಾಹನಶಕ ೧೮೪೪ನೆಯ ದುಂದುಭಿ ಸಂವತ್ಸರದ ಫಾಲ್ಗುಣ ಶು। ೧೫ ಶನಿವಾರದಿಂದ ದುಂದುಭಿ ಸಂ। ಫಾಲ್ಗುಣ ಬ। ೭ ಶುಕ್ರವಾರದ ವರೆಗಿನ

ಪಂಚಾಂಗ

(೧೯೨೩ನೆಯ ಕುಂಭ ಮಾಸ)

ತಾರೀಕು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ ದಿ.	ಸೂರ್ಯ ಉ.	ಸೂರ್ಯ ಅಸ್ತ.
3	ಶನಿ	○	೮.೧೬	ಪುಬ್ಬಾ	೪೧. ೦	೧೯	6.48	6.39
4	ರವಿ	೧	೩. ೦	ಉತ್ತರಾ	೩೬.೫೯	೨೦	6.47	6.39
5	ಸೋಮ	೨	೫೧.೧೬	ಹಸ್ತಾ	೩೩.೫೮	೨೧	6.46	6.39
6	ಕುಜ	೪	೪೫.೩೨	ಚಿತ್ತಾ	೨೮.೫೬	೨೨	6.46	6.39
7	ಬುಧ	೫	೪೦. ೦	ಸ್ವಾತೀ	೨೪.೫೬	೨೩	6.45	6.39
8	ಗುರು	೬	೩೪.೪೬	ವಿಶಾಖಾ	೨೧.೨೮	೨೪	6.44	6.39
9	ಶುಕ್ರ	೭	೩೦.೧೬	ಅನುರಾಧಾ	೧೮.೪೬	೨೫	6.44	6.39

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಫೆಬ್ರವರಿ)

Date ತಾರೀಕು	Temperature ಉಷ್ಣ (ಕಾವು) Maximum ಹೆಚ್ಚಾದ್ದು	Temperature ಉಷ್ಣ (ಕಾವು) Minimum ಕಡಿಮೆ	Rainfall ಮಳೆ ದಿವಸದ ಮಳೆ	Rainfall ಮಳೆ ಜುಮಲಾ ಮಳೆ.
22	89—3	69—2	—	—
23	89—3	69—4		—
24	88—8	68—8	—	—
25	90—4	71—1	—	—
26	87—8	71—0	—	—
27	91—2	74—8	—	—
28	98—8	73—8	—	139.58

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ
ಹೊಸ ಮಸ್ಕತಿ ಅಕ್ಕಿಮುಡಿ ೧ಕ್ಕೆ ...	7-10	8- 4
ಹೊಸ ಗುಡ್ಡು, ...	6-12	7- 4
ಹೊಸ ರಾಶಿ	6- 2	6- 8
ಅವ್ವಲ್ ಬೆಳ್ತಿಗೆ ,, ...	7-14	8- 8
ಗುಡ್ಡು ಬೆಳ್ತಿಗೆ ,, ...	7- 6	7-10
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	12-8	13.- 0
ಗೋಧಿ ಗೋಣಿ ೧ಕ್ಕೆ ...	16- 8	21- 0
ಹುರುಳಿ ಗೋಣಿ ೧ಕ್ಕೆ ...	9- 8	8- 4
ಕಡಲೆ ಗೋಣಿ ೧ಕ್ಕೆ ...	12- 0	16- 0
ತೊಗರಿ ಗೋಣಿ ೧ಕ್ಕೆ ...	13- 0	—
ತೊಗರಿಬೇಳೆ ಗೋಣಿ ೧ಕ್ಕೆ ...	14- 4	24- 0
ಉದ್ದು ಗೋಣಿ ೧ಕ್ಕೆ ...	13- 0	—
ಹೆಸರು ಗೋಣಿ ೧ಕ್ಕೆ ...	—	13- 0
ಊರು ಬೆಲ್ಲ ಖಂಡಿ ೧ಕ್ಕೆ ...	42- 0	45- 0
ಉಪ್ಪು ಗೋಣಿ ೧ಕ್ಕೆ ...	5- 0	5- 4
ಕೊಬ್ರಿ ಖಂಡಿ ೧ಕ್ಕೆ ...	98- 0	106- 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	45- 0	46- 0
ಎಳ್ಳಿಂಡಿ ಖಂಡಿ ೧ಕ್ಕೆ ...	50- 0	55- 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7-10	9- 0
ಎಳ್ಳೆಣ್ಣೆ ಮುಡಿ ೧ಕ್ಕೆ ...	6-12	9- 0
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ ...	9- 0	—
ಬೋರಾಸ ಸಕ್ಕರೆ ಮುಡಿ ೧ಕ್ಕೆ ...	6- 8	—
ಊರ [illegible] ಕಾಯಿ ಮುಡಿ ೧ಕ್ಕೆ ...	7- 0	7- 4
ಸಾಸಿವೆ ಮುಡಿ ೧ಕ್ಕೆ ...	8- 8	9- 0
ಕೊತ್ತುಂಬರಿ ಮುಡಿ ೧ಕ್ಕೆ ...	3-12	3-14
ಕಾಫಿ ಖಂಡಿ ೧ಕ್ಕೆ ...	285- 0	310- 0
[illegible] ಖಂಡಿ ೧ಕ್ಕೆ ...	200- 0	295- 0
[illegible] New, [illegible] ...	160- 0	165- 0
[illegible] ಖಂಡಿ ೧ಕ್ಕೆ ...	116- 0	120- 0
[illegible] ಮುಡಿ ೧ಕ್ಕೆ ...	60- 0	70- 0
ಗೇರುಬೀಜ ಮುಡಿ ೧ಕ್ಕೆ ...	1-14	2- 0
[illegible] ಖಂಡಿ ೧ಕ್ಕೆ ...	50- 0	65- 0
[illegible] ಮುಡಿ ೧ಕ್ಕೆ ...	20-12	23- 0
[illegible] ಮುಡಿ ೧ಕ್ಕೆ ...	32- 0	—
[illegible] ೧ಕ್ಕೆ ...	22- 8	—
[illegible] ೧ಕ್ಕೆ ...	20- 0	21- 0

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 3 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಬಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟ ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಆವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs. 150
½ Page Rs. 80. ¼ Page	„ 50
2 in. Single Column	„ 20
1 in. Single Column	„ 15
Name alone in Bold Types	„ 5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:
The Kanara Press, Madras.
Telegrams: "KETHAKI" Phone: 540

THE FIRST RAFFLE

IN AID OF

The National Girl's School, Mangalore.
Conducted by its Executive Committee
as authorised by
THE BOARD OF TRUSTEES
Total value of EIGHT ANNA Tickets
TEN THOUSAND RUPEES.

Total Prizes-183. Value-Rs. 4000.
Ist Prize, Rs. 1000. 2nd Prize, Rs. 500.
3rd prize, Rs. 250. 5 prizes of Rs. 100.
5 of Rs. 50. 20 of Rs. 25. 50 of Rs. 10.
100 of Rs. 5.

Date of closing—15-4-'23. Date of drawing—29-4-'23.

All communications to be addressed to—

HON. SECRETARY.
Raffle Office. National Girl's Schoo
Kodialbail P. O., S. Kanara

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ ಮೊಳ ಅಗಲವಿರುವದು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 ರೂ. 6—8—0
„ 2 „ 7—8—0

ವಿಳಾಸ:—ಎನ್. ಆರ್. ಕೃಷ್ಣ ಎಂಡು ಕೊ,
1. ತಂಬುನಾಯಕನ ಬೀದಿ, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶೆವ್ಯಾಪಾರಿ.

ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ.

ರಾ. 1 (ತೊಲೆ 40) ದರ ರೂ. 3—4—0
ಸೇ. 1 („ 24) „ „ 2—0—0

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು.

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 3-0-0.

ಸ್ವಂತ ಖರ್ಚಿಗೆ ತರಿಸುವವರು ಪೋಸ್ಟ್. ಪೇಕಿಂಗ್ ಚಾರ್ಜು ತರಬೇಕಾಗುವುದು

ನಶ್ಯ ಒಂದೇ ತರದ್ದು.

IN THE HIGH COURT OF JUDICATURE AT MADRAS.
Ordinary original civil Jurisdiction.
O. P. No. 28 of 1923.
IN THE MATTER OF THE
"Canara Banking Corporation Ltd., UDIPI"

N. Ananda. Rao. *Petitioner.*

Take notice that an application has been made to the Honorable the High Court of Judicature at Madras under section 12 sub sec 2 of Act VII of 1913 for confirmation of a special resolution passed on 27-8-1922 and confirmed on 20-9-1922 by the shareholders of the "Canara Banking Corporation" for altering the provisions of the memorandum and articles of association so as to enlarge the area of the operation of the "Banking Corporation" at centers outside Udipi and to carry on its work on correct Banking principles. The petition stands posted for final orders to the 19th of March 1923.

Dated this 20th day of February 1923.
K. SUNDARA RAO.
Vakil for petitioner.

ವಿಕ್ರಿತಕ್ಕೆ ಸಿದ್ಧವಾಗಿದೆ.

ಮಂಗಳೂರಿನ ಪೆಂಟ್‌ಲೆಂಟ್ ಪೇಟೆಯಲ್ಲಿ ನೂತನವಾಗಿ ಕಟ್ಟಿಸಲ್ಪಟ್ಟ ತಕ್ತಪೋಶಿ, ಮನೆ, ಹಟ್ಟಿ, ಕೊಟ್ಟಿಗೆ ಇತ್ಯಾದಿ ಕೂಡಿರುವ ಹಿತ್ತಲು ವಿಕ್ರಿತಕ್ಕೆ ಸಿದ್ಧವಾಗಿರುವುದು. ಮನೆಯು ಸಂಪೂರ್ಣ ಕಲ್ಲುಗಳಿಂದಲೂ ಬಣ್ಣ, ದೋವು ಇತ್ಯಾದಿ ಉತ್ಕೃಷ್ಟ ಜಾತಿ ಮೋಪಿನಿಂದಲೂ ಈಗಿನ ಆಯಕ್ಕೆ ತಕ್ಕುದಾದ ರೀತಿಯಲ್ಲಿ ಕಟ್ಟಿಸಲ್ಪಟ್ಟಿರುವುದು. ಮನೆಯ ಸುತ್ತಲಿನ ಗೋಡೆಯು ಸಹ ಕಲ್ಲಿನಿಂದಲೆ ಕಟ್ಟಿಸಲ್ಪಟ್ಟಿದೆ. ಹಿತ್ತಲಿನ ವಿಸ್ತೀರ್ಣ ಸುಮಾರು ೩೦ ಸೆಂಟ್ಸ ಇರುವದು. ಬೇಕಾದವರು ಈ ಪತ್ರದ ಮೇನೆಜರರೊಡನೆ ಅಥವಾ ‥‥‥ ವಿಳಾಸಕ್ಕೆ ಬರೆದು ಅಥವಾ ಮುಖತಃ ಎಲ್ಲಾ ವಿವರವನ್ನು ತಿಳಕೊಳ್ಳಬಹುದು.

X Co/o.
ಮೆನೇಜರ್,
ಸ್ವದೇಶಾಭಿಮಾನಿ, ಮಂಗಳೂರು.

ವಿನಂತಿ.

ಸರ್ವ ಬಿಲ್ಲವ ಅಭ್ಯುದಯಕ್ಕಾಗಿ ಕೆಲವು ಕಾಲದ ಹಿಂದೆ ಮಂಗಳೂರಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರಿಂದ ಸ್ಥಾಪಿತವಾದ ಶ್ರೀ ಗೋಕರ್ಣನಾಥ ಕ್ಷೇತ್ರದ ಪರವಾಗಿ ಮುಂಬಯಿಯಲ್ಲಿರುವ ಉಪಸಂಘದ ವರ್ಷಾವಧಿ ಮಹಾ ಶಿವರಾತ್ರಿಯ ದಿನಾಚರಣೆಯ ಬಗ್ಗೆ ಮಹಾ ಸಭೆಯೊಂದು ಕಳೆದ ಮಂಗಳವಾರ ತಾ. ೧೩-೨-'೨೩ರಲ್ಲು ಮುಂಬಯಿಯ ಶೇರ್ ಬಜಾರ ಹೋಲಿನಲ್ಲಿ ಮ. ರಾ. ರಾ. ಬಿ. ವಾಮನರಾಯರವರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ಕಾರ್ಯಕ್ರಮಗಳನ್ನು ರಿಪೋರ್ಟಿನ ಮೂಲಕ ಸಭೆಗೆ ಓದಿ ತಿಳಿಯಪಡಿಸಿದ ನಂತರ ಸಂಘದ ಮೆಂಬರರಲ್ಲಿ ಕೆಲವರು ತಮ್ಮ ಸ್ವಜಾತಿಯು ತಮ್ಮಲ್ಲಿ ವ್ಯತಿರಿಕ್ತವಾದ ಐಕ್ಯತೆಯಿಲ್ಲದೆ ಇತರ ಸಮಾಜಗಳಿಗಿಂತ ದೀನಸ್ಥಿತಿಗೆ ಬರುವರೆ ಕಾರಣವೆಂತಲೂ, ನಮ್ಮ ಸ್ವದೇಶದಲ್ಲಿ ಇತರ ಸಮಾಜದವರ ದೇವಾಲಯಗಳಿಗೆ ನಾವು ಹೋದರೆ ಅಲ್ಲಿ ನಾವು ಮನುಷ್ಯರೆಂದು ಗ್ರಹಿಸಲ್ಪಡುವುದಿಲ್ಲವೆಂತಲೂ ಮತ್ತು ನಮ್ಮ ಐಕ್ಯತೆಯನ್ನು ಬಲಪಡಿಸಿದರೆ ಇತರರು ನಮ್ಮನ್ನು ಉದಾಸೀನ ಮನಸ್ಕರಾಗಿ ನೋಡದೆ ಸರಿಸಮಾನವಾದ ದೃಷ್ಟಿ ಭಾವನೆಯನ್ನು ತೋರಿಸದೆ ಇರಲಾರರೆಂದೂ ಇನ್ನಾದರೂ ನಾವು ಕಣ್ಣುಮುಚ್ಚಿಕೊಂಡು ಕಾಲಹರಣಮಾಡದೆ ನಮ್ಮ ಪ್ರತಿಯೊಬ್ಬ ಸ್ವಜಾತಿ ಬಂಧು ಕೂಡಾ ನಮ್ಮ ವೃಂದದ ಶ್ರೇಯಸ್ಸಿನ ಬಗ್ಗೆ ತನುಮನ ಧನವನ್ನು ಕೈಲಾದ ಮಟ್ಟಿಗಾದರೂ ಅರ್ಪಿಸಿ ಶಾಂತಸ್ವಭಾವದಿಂದ ದೇಹ ಪರಿಶ್ರಮಪಟ್ಟು ಪ್ರಯತ್ನಿಸುವಂತೆಯೂ ಕೂಡಾ ವ್ಯಕ್ತಪಡಿಸಿದರು.

ತದನಂತರ ಸಭಾಧ್ಯಕ್ಷರಾಗಿ ನಮ್ಮ ಜಾತಿಯ ಅಭ್ಯುದಯಕಾಂಕ್ಷಿಯರಾದ ಮ. ರಾ. ರಾ. ಬಿ. ವಾಮನರಾಯರು ಜಾತಿಭೇದಗಳಿಗೆ ಮನುಷ್ಯರೇ ಕಾರಣರಲ್ಲದೆ ದೇವರ ದೃಷ್ಟಿಗೆ ಎಲ್ಲರೂ ಸರಿಸಮಾನರೆಂತಲೂ ಆ ಸರ್ವಾಂತರ್ಯಾಮಿಯಾದ ಭಗವಂತನು ನಿಷ್ಪಕ್ಷಪಾತಿಯಾಗಿರುತ್ತಾನೆಂತಲೂ ಬೋಧಪ್ರದವಾಗಿ ವ್ಯಕ್ತಪಡಿಸಿದಲ್ಲದೆ ಐಕ್ಯತೆಯನ್ನು ಸಾಧಿಸಬೇಕಾಗಿ ತಿಳಿಸಿದರು. ಹಾಗೂ ಭಗವದ್ಗೀತೆಯಲ್ಲಿ "ಶ್ರೀ ಕೃಷ್ಣ ಪರಮಾತ್ಮನು" ಅರ್ಜುನನಿಗೆ ಬೋಧಿಸಿದ ಶ್ಲೋಕವಾಕ್ಯದಲ್ಲಿ ತೋರುವಂತೆ ಕಾಲಗುಣಗಳನ್ನನುಸರಿಸಿ ಆಲೋಚಿಸುವಾಗ್ಗೆ ಕೇವಲ ಧರ್ಮಸಂಸ್ಥಾಪನೆಗಾಗಿಯೆ ಆ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರು ಅವತರಿಸಿರಬಹುದೆಂತಲೂ ಅವರು ನಿಮ್ಮ ಜಾತಿ ಏಳಿಗೆಯ ಕುರಿತು ಪೂರ್ಣ ಕರುಣೆಯನ್ನು ಬೀರಿ ನಿಮ್ಮೂರ ಮೇಲ್ಮೆಯ ಬಗ್ಗೆ ಪ್ರತಿಷ್ಠಿಸಿದ ಶ್ರೀ ಗೋಕರ್ಣನಾಥ ಕ್ಷೇತ್ರವು ಅಭಿವೃದ್ಧಿ ಹೊಂದುವಂತೆ ಪ್ರತಿಯೊಬ್ಬರೂ ಭಕ್ತಿಯನ್ನು ಅನುಸರಿಸಿ ನಡೆಯುವುದು ನಿಮ್ಮ ಪ್ರಾಮುಖ್ಯ ಕರ್ತವ್ಯವಾಗಿರುತ್ತದೆಂತಲೂ ಹಾಗೆ ಪ್ರತಿಯೊಬ್ಬನೂ ಪ್ರಯತ್ನಿಸಿದ ಪಕ್ಷಕ್ಕೆ ನಿಮ್ಮ ಸಮಾಜವು ಬೇಗನೆ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿರದೆಂದೂ ಬಹು ಸಮಾಧಾನದಿಂದ ಸರ್ವರಿಗೂ ತಿಳಿಯುವಂತೆ ವಿವರಿಸಿ ತಿಳಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಇತಿ,
ಸಜ್ಜನ ಸೇವಕ,
ಸ್ವಜಾತಿ ಬಾಂಧವರಲ್ಲೊಬ್ಬ.

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮ್ಮಿಟಿಯ ಅಧ್ಯಕ್ಷರಿಗೆ—

೧. ನಾನು ಹೋದ ವರ್ಷ ಎಂದರೆ ೧೯೨೨ನೇ ಇಸವಿಯ ಬಾಬತು ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೆಂಬರನಿದ್ದು ಈ ವರ್ಷವಾದರೂ ಕರ್ನಾಟಕ ಪ್ರಾಂತಿಕ ಕಮ್ಮಿಟಿಯವರು ಪುನಃ ನನ್ನನ್ನು ಆ ಕಮ್ಮಿಟಿಯ ಮೆಂಬರನನ್ನಾಗಿ ಆರಿಸಿದ್ದಾರೆ. ಹೋದ ವರ್ಷ ಮತ್ತು ಈ ವರ್ಷ ಇದುವರೆಗೆ ನನ್ನ ಕೈಲಾದಷ್ಟು ಆ ಕಮ್ಮಿಟಿಯ ಮೇಲೆ ಕೆಲಸಮಾಡಿದ್ದೇನೆ. ಈಗ ಸದ್ಯಕ್ಕೆ ಕೆಳಗೆ ನಮೂದಿಸಿದ ಕಾರಣಗಳ ಮೂಲಕ ನನ್ನ ಸದಸ್ಯತ್ವದ ರಾಜೀನಾಮೆಯನ್ನು ಕೊಡುವುದು ಅವಶ್ಯವಾಗಿದೆ.

೨. ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯಂಥ ಮಹತ್ವ ಮತ್ತು ಜವಾಬದಾರಿಯುಳ್ಳ ಸಂಸ್ಥೆಯ ಸಭಾಸದನಾಗುವದಕ್ಕೆ ನಾನು ಯೋಗ್ಯನಲ್ಲೆಂದು ನನಗೆ ಅನಿಸಿದ್ದರಿಂದಲೂ ಮತ್ತು ನನಗಿಂತ ಹೆಚ್ಚು ಯೋಗ್ಯತೆಯುಳ್ಳ ಕಾರ್ಯಕರ್ತರು ನಮ್ಮ ಕರ್ನಾಟಕದಲ್ಲಿ ಇದ್ದು ಈ ಸಮಯಕ್ಕೆ ಈ ನನ್ನ ಸ್ಥಾನವನ್ನು ಅವರು ತೆಗೆದುಕೊಂಡರೆ ಅವರಿಂದ ಹೆಚ್ಚು ದೇಶಕಾರ್ಯವಾದೀತೆಂದು ನನಗೆ ತಿಳಿದು ಬಂದದ್ದರಿಂದಲೂ ನಾನು ರಾಜೀನಾಮೆಯನ್ನು ಕೊಡುತ್ತೇನೆ.

೩. ಸದ್ಯದ ಸಂಸ್ಥಿತಿಯಲ್ಲಿ ಹಿಂದುಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯವು ದೊರೆಯಬೇಕೆಂಬ ನನ್ನ ಇಚ್ಛೆಯು ಸಫಲವಾಗಬೇಕಾದರೆ ಗ್ರಾಮಸಂಘಟನ ಕಾರ್ಯವೇ ಇತರ ಎಲ್ಲಾ ಕಾರ್ಯಗಳಿಗಿಂತ ಹೆಚ್ಚು ಮಹತ್ವದೆಂದು ನನ್ನ ಮನವರಿಕೆಯಾದ್ದರಿಂದ ಈ ನಂತರ ಎಲ್ಲಾ ವೇಳೆಯನ್ನು ಮುಖ್ಯವಾಗಿ ಆ ಕಾರ್ಯದಲ್ಲಿಯೇ ಖರ್ಚುಮಾಡತಕ್ಕದೆಂದು ನಾನು ನಿಶ್ಚಯ ಮಾಡಿಕೊಂಡಿದ್ದೇನೆ. ಇದು ಎರಡನೇ ಕಾರಣವು.

೪. ಏಪ್ರೀಲ್ ೩೦ನೇ ತಾರೀಕಿನೊಳಗಾಗಿ ೨೦೦೦ ರಾಷ್ಟ್ರಸೇನೆಯನ್ನು ಕೊಡಿಸಲಿಕ್ಕೆ ರಾಷ್ಟ್ರಸೇನಾಮಂಡಳದವರು ನನಗೆ ಆಜ್ಞಾಪಿಸಿದ್ದರಿಂದಲೂ ಆ ಕಾರ್ಯವನ್ನು ನನ್ನ ಮಿತ್ರರೊಡನೆ ಶಕ್ಯವಿದ್ದಷ್ಟು ಕಡೆಗಾಣಿಸುವುದು ನನ್ನ ನಿಶ್ಚಯವಿದ್ದುದರಿಂದಲೂ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಗೆ ಹಾಜರು ಆಗಲಿಕ್ಕೆ ಸಮಯ ದೊರೆಯುವುದಿಲ್ಲೆಂಬುದು ಮೂರನೇ ಕಾರಣವು.

ಈ ಕಾರಣಗಳ ಮೂಲಕ ನಾನು ಈ ದಿವಸ ಮೇಲಿನ ಕಮ್ಮಿಟಿಯ ಸದಸ್ಯತ್ವದ ರಾಜೀನಾಮೆಯನ್ನು ಕೊಟ್ಟಿರುತ್ತೇನೆ. ಅದನ್ನು ತಾವು ದಯವಿಟ್ಟು ಸ್ವೀಕರಿಸಬೇಕೆಂದು ನನ್ನ ನಮ್ರ ವಿನಂತಿ ಇದೆ. ಮತ್ತು ನನಗಿಂತ ಹೆಚ್ಚು ಯೋಗ್ಯತೆಯವರೂ, ಅನುಭವಿಕರೂ, ಹುಬ್ಬಳ್ಳಿಯ ಪ್ರಸಿದ್ಧ ಪುಢಾರಿಗಳೂ ಆದ ದೇಶಭಕ್ತ ವಿಶ್ವನಾಥ ರಾವಜ್ಯೋತಿ ಇವರನ್ನು ಆ ಕಮ್ಮಿಟಿಯ ಮೇಲೆ ಆರಿಸುವಿರೆಂದು ನನ್ನ ಬಲವಾದ ಇಚ್ಛೆಯಿದ್ದು ಇದನ್ನು ನೀವು ಪೂರ್ಣಮಾಡುವಿರೆಂದು ನಾನು ತುಂಬಾ ನಂಬಿದ್ದೇನೆ.

ಹುಬ್ಬಳ್ಳಿ.

ತಮ್ಮ ಸೇವಕ,
ಎನ್. ಎಸ್. ಹರ್ಡೇಕರ.

ಬೆಂಗಳೂರಿನಲ್ಲಿ ಜರುಗಿದ ರಾಷ್ಟ್ರ ಸೇವಕರ ಪರಿಷತ್ತು.

ಮೈಸೂರು ಸಂಸ್ಥಾನದಲ್ಲೆಲ್ಲಾ ಕೊಂಗ್ರೆಸ್ ಕಾರ್ಯಪ್ರಚಾರವು ಯೋಗ್ಯ ರೀತಿಯಲ್ಲಿ ನಡಿಯುವಂತೆ ತಕ್ಕ ಕಾರ್ಯ ಕ್ರಮವನ್ನು ನಿರ್ಧರಿಸುವುದು ಮೊದಲಾದ ಕಾರ್ಯಗಳನ್ನು ಮಾಡುವುದಕ್ಕಾಗಿ ಬೆಂಗಳೂರಿನಲ್ಲಿರುವ ಮೈಸೂರು ಡಿಸ್ಟ್ರಿಕ್ಟ ಕೊಂಗ್ರೆಸ ಕಮ್ಮಿಟಿಯು ಸಂಸ್ಥಾನದಲ್ಲಿರುವ ರಾಷ್ಟ್ರ ಸೇವಕರ ಒಂದು ಪರಿಷತ್ತನ್ನು ಜರಗಿಸಬೇಕೆಂದು ನಿಶ್ಚಯಿಸಿತ್ತು. ಧಾರವಾಡದಿಂದ ಕರ್ನಾಟಕದ ಮುಖಂಡರು ಬೆಂಗಳೂರಿಗೆ ಬರುವ ಸುಸಂಧಿಯನ್ನು ನೋಡಿ ಮೇಲಿನ ಪರಿಷತ್ತು ಕಳೆದ ತಾ ೧೯ ಮತ್ತು ೨೦ರಲ್ಲಿ ಬೆಂಗಳೂರಿನಲ್ಲಿ ಸೇರಿಸಲಾಯಿತು. ಈ ಪರಿಷತ್ತಿಗೆ ಮೈಸೂರು ಸಂಸ್ಥಾನದ ತುಮಕೂರು, ಮಧುಗಿರಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ತಿಪಟೂರು, ಕ್ಲೋಸಪೇಟೆ, ಮೈಸೂರ ಮೊದಲಾದ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಸಾಗರ, ತೀರ್ಥಹಳ್ಳಿ ಮೊದಲಾದ ಕಡೆಗಳಿಂದ ಸಹಾನುಭೂತಿಪರವಾದ ಪತ್ರಗಳೂ ಬಂದಿದ್ದವು. ಅಲ್ಲದೆ ಶ್ರೀಯುತ ಮುಜಲಿ, ಶ್ರೀಯುತ ಮುದವೇಡಕರ, ಶ್ರೀಯುತ ದಿವಾಕರ ಇವರೆಲ್ಲಾ ಹಾಜರಿದ್ದು ಹಿತ ಸೂಚನೆಗಳನ್ನು ಮಾಡಿದರು. ಸಭಾ ಕಾರ್ಯ ಕ್ರಮವನ್ನು ಪ್ರಾರಂಭಿಸುವಾಗ ಶ್ರೀಯುತ ಮುಜಲಿಯವರು ಮೈಸೂರು ಸಂಸ್ಥಾನವು ಇಡೀ ಕರ್ನಾಟಕದ ಮೂರನೆಯ ಒಂದಂಶವಾಗಿದೆ, ಮತ್ತು ಈ ಸಂಸ್ಥಾನದಲ್ಲಿ ರಾಷ್ಟ್ರೀಯ ಜಾಗ್ರತೆಯನ್ನು ಉಂಟುಮಾಡದೆ ಇದ್ದರೆ ಕರ್ನಾಟಕದ ಉಳಿದ ಭಾಗಕ್ಕೆ ವಾಸ್ತವಿಕವಾಗಿ ಹೆಚ್ಚಿನ ಕಾರ್ಯವನ್ನು ಮಾಡಲು ಸಾಧ್ಯವಾಗದು. ಗಯಾ ಕೊಂಗ್ರೆಸ್ಸಿನ ಕಾರ್ಯಕ್ರಮವನ್ನು ಅನುಸರಿಸಿ ಇಡೀ ಕರ್ನಾಟಕವು ಒಟ್ಟು ಒಂದು ಲಕ್ಷ ರೂಪಾಯಿಯನ್ನು ಕೊಡಿಸಬೇಕಾಗಿದೆ, ಮೈಸೂರಿನಲ್ಲಿ ಸರಿಯಾಗಿ ರೂ. ೩೦,೦೦೦ಕ್ಕಿಂತ ಹೆಚ್ಚು ಮೊಬಲಗು ಕೊಡಿಸಬೇಕಾಗಿದೆ. ಆದ್ದರಿಂದ ರಾಷ್ಟ್ರೀಯ ಕಾರ್ಯವನ್ನು ಮಾಡುವವರು ರಚನಾಶೀಲ ಕಾರ್ಯವನ್ನು ರಭಸದಿಂದ ಮುಂದೊತ್ತುವಂತೆಯನ್ನು ಕೊಡಿಸುವುದರಲ್ಲಿ ಹೆಚ್ಚು ಪ್ರಯತ್ನವನ್ನು ನಡಿಸತಕ್ಕದ್ದು ಎಂದು ಮುಂತಾಗಿ ಭಾಷಣಮಾಡಿದರು. ಅನಂತರ ಕೆಲವು ತಾಸುಗಳವರೆಗೆ ಇತರ ಚರ್ಚೆಗಳು ನಡೆದು ಕೊನೆಗೆ ಕೆಳಗಿನ ನಿರ್ಧಾರಗಳು ಮಂಜೂರಾದವು.

ಮೈಸೂರು ಸಂಸ್ಥಾನದ ಪ್ರತಿಯೊಂದು ಜಿಲ್ಲೆಯಲ್ಲಿ ಒಂದೊಂದು ಡಿಸ್ಟ್ರಿಕ್ಟ ಕೊಂಗ್ರೆಸ ಕಮ್ಮಿಟಿಯು ಇರತಕ್ಕದ್ದು; ಇಡೀ ಸಂಸ್ಥಾನದ ಬಗ್ಗೆ ಮುಖ್ಯ ಕೊಂಗ್ರೆಸ್ ಆಫೀಸು ಬೆಂಗಳೂರಿನಲ್ಲಿರತಕ್ಕದು. ಮೈಸೂರು ಡಿಸ್ಟ್ರಿಕ್ಟ ಕೊಂಗ್ರೆಸ ಕಮ್ಮಿಟಿಯವರು ಬರುವ ಮಾರ್ಚ ಮತ್ತು ಏಪ್ರಿಲ್ ತಿಂಗಳ ಬಗ್ಗೆ ತಯಾರಿಸಿದ ಕಾರ್ಯಕ್ರಮದಲ್ಲಿ ಕೆಲವು ಬದಲಾವಣೆಗಳು ಮಾಡಲ್ಪಟ್ಟು ಅವು ಈ ಸಭೆಯಿಂದ ಅಂಗೀಕರಿಸಲ್ಪಟ್ಟವು. (೧) ಸಾಧ್ಯವಿದ್ದಷ್ಟು ಮಟ್ಟಿಗೆ ಡಿಸ್ಟ್ರಿಕ್ಟಿನ ಮತ್ತು ತಾಲೂಕಿನ ಮುಖ್ಯ ಭಾಗಗಳಲ್ಲಿ ಕೊಂಗ್ರೆಸ ಕಮ್ಮಿಟಿಗಳನ್ನು ಸ್ಥಾಪಿಸತಕ್ಕದ್ದು; (೨) ಕೊಂಗ್ರೆಸ್ಸಿನ ವಿಧಾಯಕ ಕಾರ್ಯಗಳ ಸಹಾಯಕ್ಕಾಗಿ ಸಾಧ್ಯವಿದ್ದಷ್ಟು ಸ್ವಯಂಸೇವಕರ ದಳವನ್ನು ಏರ್ಪಡಿಸತಕ್ಕದ್ದು. (೩) ಈ ವರುಷದ ಏಪ್ರಿಲ್ ೩೦ರೊಳಗಾಗಿ ತಿಲಕ ಸ್ವರಾಜ್ಯ ಫಂಡಿಗೆ ರೂ. ೨೦,೦೦೦ ವನ್ನು ಮೈಸೂರು ಸಂಸ್ಥಾನದಲ್ಲಿ ಒಟ್ಟು ಕೊಡಿಸತಕ್ಕದು. ಈ ೨೦,೦೦೦ದಲ್ಲಿ ಸಂಸ್ಥಾನದ ೮ ಜಿಲ್ಲೆಗಳಲ್ಲಿ ಪ್ರತಿಯೊಂದು ಜಿಲ್ಲೆಯು ರೂ ೨,೦೦೦, ಬೆಂಗಳೂರ ಸಿಟಿ ಮತ್ತು ಕೆನ್ಟೋನ್ಮೆಂಟು ರೂ ೩೦೦೦ ಮೈಸೂರು ಪಟ್ಟಣವು ರೂ ೧೦೦೦ (೪) ಏಪ್ರಿಲ್ ೩೦ರೊಳಗೆ ಇಡೀ ಸಂಸ್ಥಾನದಲ್ಲಿ ಒಟ್ಟು ೧೦,೦೦೦ ಮೆಂಬರರನ್ನು ಕೊಡಿಸತಕ್ಕದು. ಈ ೧೦,೦೦೦ದಲ್ಲಿ ಪ್ರತಿಯೊಂದು ಜಿಲ್ಲೆಯು ೧೦೦೦, ಮೆಂಬರರನ್ನು ಕೊಡಿಸತಕ್ಕದು. ರಾಷ್ಟ್ರೀಯಕಾರ್ಯವನ್ನು ನಡಿಸುವವರ ಇನ್ನೊಂದು ಕೊನ್ಫರೆನ್ಸನ್ನು ಬರುವ ಮಾರ್ಚ ತಿಂಗಳ ಅಂತ್ಯದಲ್ಲಿ ಕೊಡಿಸಬೇಕಾಗಿ ನಿಶ್ಚಯಿಸಲಾಯಿತು.

ದೇಶಬಂಧು ದಾಸರ ಅಲಹಾಬಾದಿನ ಭಾಷಣದ ಕೆಲವಂಶಗಳು.

ಸನ್ಮಾನ ಪತ್ರವನ್ನು ಅರ್ಪಿಸಿದ ಬಗ್ಗೆ ನೆರೆದವರೆಲ್ಲರಿಗೂ ತನ್ನ ಆಭಾರಗಳನ್ನು ತಿಳಿಸಿದ ತರುವಾಯ ದೇಶಬಂಧುಗಳು ಹೀಗೆಂದು ಮಾತಾಡಿದರು.

ನನ್ನ ಮೇಲಿದ್ದ ನಿಮ್ಮ ವಿಶ್ವಾಸವೇ ನನ್ನಲ್ಲಿರುವ ಸ್ವರಾಜ್ಯದ ಉಜ್ವಲ ಆಸೆಯನ್ನು ಇನ್ನಷ್ಟು ವೃದ್ಧಿಗೊಳಿಸುವುದು. ನಿಮ್ಮ ಸನ್ಮಾನಪತ್ರದಲ್ಲಿ ಸೂಚಿಸಿದಂತೆ ನಾನು ಒಬ್ಬ ನಾಯಕನಾಗಿರಲಿ, ಅಥವಾ ಕೇವಲ ಒಬ್ಬ ಅನುಯಾಯಿಯೂ ಕೂಡ ಇಲ್ಲದ ಸಾಮಾನ್ಯ ಸೈನಿಕನಾಗಿರಲಿ, ಪರಂತು ನಾನು ಎಂದೆಂದಿಗೂ ಕೊಂಗ್ರೆಸು ಸಂಸ್ಥೆಗೆ ಅಧೀನನಾಗಿಯೇ ಇರುವೆನು. ಚಳವಳದ ಬಾಲ್ಯಾವಸ್ಥೆಯಲ್ಲಿ ನಾನು ಸಂದರ್ಶಿಸಿದ ಸ್ಥಳಗಳಲ್ಲೆಲ್ಲಿಯೂ, ಸ್ವರಾಜ್ಯಬೇಕೊ? ಎಂದು ಕೇಳುತ್ತಿದ್ದ ಪ್ರಶ್ನೆಗಳಿಗೆಲ್ಲ ಕಣ್ಣಾ, ಜನರು ಮೋರೆಯಿಂದಲೂ, ನಯನಗಳಿಂದಲೂ, ಘೋಷಗಳಿಂದಲೂ, ಸ್ವರಾಜ್ಯ ಕಾಂಕ್ಷೆಯ ಚಿನ್ಹೆಗಳನ್ನು ಸ್ಪಷ್ಟವಾಗಿ ತೋರ್ಪಡಿಸುತ್ತಿದ್ದರು. ಆದರೆ ಒಂದು ಯಾ ಒಂದುವರೆ ವರುಷದ ಹಿಂದೆ ಕಾಣಿಸಿಕೊಳ್ಳುತ್ತಿದ್ದ ಉತ್ಸಾಹವೇನೂ ಈಗ ಕಂಡುಬರುವುದಿಲ್ಲ. ಈ ಸ್ವರಾಜ್ಯ ಯುದ್ಧದಲ್ಲಿ ನನ್ನೊಟ್ಟಿಗೆ ಎದೆಕಟ್ಟಿ ಬರತಕ್ಕವನು ಒಬ್ಬನಾದರೂ ಇಲ್ಲದೆ ಇರಬಹುದು. ಆದರೆ ಪರಮಾತ್ಮನ ಕೃಪಾಕಟಾಕ್ಷವಿದ್ದರೆ ನಾನು ಸಾಧಿಸಿಕೊಂಡು ಹೋಗಬಲ್ಲೆ. ನನ್ನ ಜೀವಮಾನವು ಹೋರಾಟದ ಒಂದು ಚರಿತ್ರೆಯಾಗಿದೆ. ನಿರಾಶಾಜನಕವಾದ ಪ್ರಸಂಗಗಳಲ್ಲಿಯೂ ಕೂಡ ನಾನು ಹೋರಾಡುತ್ತಿದ್ದೆನು. ಅಲ್ಲದೆ ಇಂದಿನ ದಿನ ನಮ್ಮವರ ಪೈಕಿ ಯಾರಾದರೂ ಈಗಿನ ಪ್ರಸಂಗವೇನೊ ಬರಿ ನಿರಾಶಾಜನಕವಾಗಿದೆ ಎಂದು ಹೇಳಿದರೆ ನಾನು ಮಾತ್ರ ಇದು ಸರಿಯಲ್ಲ ಎಂಬುದಾಗಿ ಕಂಠೋಕ್ತವಾಗಿ ಹೇಳಬಲ್ಲೆನು. ಹಾಗು ಇಂದಿನ ಮನವಸ್ಥೆಯು ನಾಳಿನ ಕಲ್ಯಾಣವನ್ನು ಮಾತ್ರ ಸೂಚಿಸುವುದು.

ನಮ್ಮ ಭೇದಗಳು.

ನಮ್ಮ ಇತ್ತಂಡಗಳೊಳಗಿನ ಭೇದವನ್ನು ಮನಕ್ಕೆ ಹಚ್ಚಿಕೊಂಡು ಆಲೋಚಿಸುವುದೇ ನಮ್ಮ ಅಧೋಪತನಕ್ಕೆ ಕಾರಣವು. ಒಟ್ಟಾರೆ ಭೇದಕ್ಕೆ ಕಾರಣವೇನು? ಸ್ವರಾಜ್ಯದ ಪ್ರಶ್ನೆಯಲ್ಲ. ಸ್ವರಾಜ್ಯವು ಇತ್ತಂಡದವರ ಉದ್ದೇಶವೇ ಸರಿ. ಅಭಿಪ್ರಾಯ ಭೇದದಿಂದ ಹಾನಿಯಲ್ಲ? ಅವುಗಳಿಗಾಗಿ ಮಾಡುವ ಕಲಹಗಳೇ ಹಾನಿಕರ! ನೀವು ಸ್ವರಾಜ್ಯ ಲಾಭಕ್ಕಾಗಿ ಹೋರಾಡುವುದಿಲ್ಲವಾದರೆ, ನೀವು ಈಗ ತಾನೇ ಅರ್ಪಿಸಿದ ಪುಷ್ಪಗಳು ನನಗೆ ನಿಂದ್ಯಾಸ್ಪದವಾದುವುಗಳೇ ಸರಿ. ನಿಮ್ಮ ಪುಷ್ಪಗಳನ್ನೂ, ಬಿನ್ನಾಹ ಪತ್ರಗಳನ್ನೂ ಗಣಿಸತಕ್ಕವನು ನಾನಲ್ಲ. ಆದರೆ ಈ ರಣದಲ್ಲಿ ನಾನು ನಿಮ್ಮ ಅಂತಃಕರಣವನ್ನು ಮಾತ್ರ ಆಶಿಸುವೆನು. ಸ್ವರಾಜ್ಯ ವಿನಹ ಜೀವಿಸುವುದಕ್ಕಿಂತ ಸಾಯುವುದು ಸಾವಿರಪಾಲು ಲೇಸು ಎಂದು ಲೋಕಕ್ಕೆ ವಿಶದಪಡಿಸುವುದು ಮತ್ತು ನಿಮ್ಮ ಅಂತರಂಗದಲ್ಲಿ ಇದನ್ನು ಖಚಿತಮಾಡಿಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ.

ಸ್ವಾತಂತ್ರ್ಯಕ್ಕಾಗಿ ಹೋರಾಟ.

ಸ್ವಾತಂತ್ರ್ಯವನ್ನು ಪಡಿಯುವುದು ಹೇಗೆ? ಬಿನ್ನಾಭಿಪ್ರಾಯಕ್ಕೆ ಆಸ್ಪದ ಕೊಡುವ ಮಾತುಗಳನ್ನು ಎತ್ತದೆ ಹೇಳುವುದಾದರೆ ನಾವು ಈಗ ಅದಕ್ಕಾಗಿ ಕಾದಾಡುವುದೇ ಮುಖ್ಯ. ಅದಕ್ಕಾಗಿ ಬರೇ ಆಲೋಚಿಸುವುದನ್ನು ಬಿಟ್ಟು ಒಡನೆಯೇ ಕರ್ಮರಂಗಕ್ಕೆ ಇಳಿಯೋಣ. ನಮಗೂ ಸ್ವಾತಂತ್ರ್ಯಕ್ಕೂ ನಡುವೆ ಇರುವ ಅಭ್ಯಂತರ ಯಾವುದು? ಇದು ಬಿರೋಕ್ರಸಿಯೇ (Bureaucracy) ಸರಿ, ಈ ಸರಕಾರದ ಮಾಯಾಶಕ್ತಿಯು ನಮ್ಮ ಆತ್ಮವನ್ನು ಸೂರೆಗೊಳ್ಳುತ್ತಿದೆ. ಈ ಬ್ಯುರೋಕ್ರೆಸಿಯ ಶಕ್ತಿಯನ್ನು ನಿಲ್ಲಿಸುವುದೇ ನಮ್ಮ ಮುಖ್ಯ ಕರ್ತವ್ಯ.

ಸ್ವರಾಜ್ಯದ ಕುರಿತು ನನ್ನ ಧ್ಯೇಯ.

ಮಧ್ಯ ತರಗತಿಯವರ ಸ್ವರಾಜ್ಯದ ಮೇಲೆ ನನಗೆ ಕಿಂಚಿತ್ತಾದರೂ ನಂಬಿಕೆಯಿರುವುದಿಲ್ಲ. ದೇಶದ ಎಲ್ಲಾ ಪಂಗಡಗಳಿಗೂ, ಜಾತಿಗಳಿಗೂ, ಜನಸಾಮಾನ್ಯಕ್ಕೂ ಅನುಕೂಲವಾದ ಸ್ವರಾಜ್ಯವನ್ನೇ ನಾನು ಅಪೇಕ್ಷಿಸುವೆನು. ಬಿನ್ನಬಿನ್ನ ಪಂಗಡಗಳಲ್ಲಿರುವ ಕೃತ್ರಿಮ ಭೇದಗಳನ್ನು ಹೋಗಲಾಡಿಸುವ ರೀತಿಯ ರಾಜ್ಯಾಡಳಿತೆಯನ್ನು ಪ್ರಾರಂಭಿಸುವುದೇ ನಮಗೆ ಬೇಕಾದ ಸ್ವರಾಜ್ಯ. ಇದನ್ನು ಸಾಧಿಸಬೇಕಾದರೆ ಈಗಲೇ ಪ್ರಾರಂಭಿಸಬೇಕು. ನೀವು ಇವರ ಜೀವವನ್ನು, ಬತ್ತಿ ಜನಸಾಮಾನ್ಯರ ಅಂತಃಕರಣವನ್ನು ಮೊದಲೇ ಜಾಗ್ರತೆಗೊಳಿಸಿದ್ದೀರಿ. ಮಹಾತ್ಮಾ ಗಾಂಧಿಗಳವರ ನ್ಯಾಯಕತ್ವದಲ್ಲಿ ನಾವು ಹಿಂದೂಸ್ಥಾನದಲ್ಲಿ ಇಷ್ಟು ಅಲ್ಪ ಸಮಯದಲ್ಲಿ ಉಂಟುಮಾಡಿದಷ್ಟು ಜಾಗ್ರತೆಯನ್ನು ಲೋಕದಲ್ಲಿ ಯಾವ ರಾಷ್ಟ್ರವು ಮಾಡಿದ್ದು ಈ ವರೆಗಿನ ಚರಿತ್ರೆಯಲ್ಲಿ ಕಂಡುಬರುವುದಿಲ್ಲ. ಬೇರೆ ದೇಶಗಳಲ್ಲಿ [illegible] ವರುಷಗಳ ಸಮಯವಾದರೂ ಬೇಕಾದ ಈ ಕಾರ್ಯವು ನಮ್ಮ ದೇಶದಲ್ಲಿ ಬರೇ ೩ ವರುಷಗಳಲ್ಲಿ ಸಾಧಿಸಿದೆ. ನೀವು ಜನಸಾಮಾನ್ಯರ ಅಂತಃಕರಣಗಳನ್ನು ಜಾಗ್ರತಗೊಳಿಸಿದ್ದೀರಿ. ಈಗ ಅವರಿಗೆ ಸರಿಯಾದ ದಾರಿಯನ್ನು ತೋರಿಸುವ ನಿಮ್ಮ ನಾಯಕತ್ವವು ಅಗತ್ಯವಿದೆ. ಈಗ ನಮ್ಮೆಲ್ಲರಲ್ಲಿರುವ ಉತ್ಸಾಹವನ್ನೂ ಜಾಗ್ರತೆಯನ್ನೂ ನೀವು ಒಗ್ಗಟ್ಟಾಗಿ ಕಾರ್ಯಕ್ಷೇತ್ರದಲ್ಲಿ ತೋರಿಸಿ ಸ್ವರಾಜ್ಯವನ್ನು ಗಳಿಸುವ ಮಾರ್ಗದಲ್ಲಿ ಮುಂದುವರಿಯುವುದೇ ಪ್ರಕೃತ ಕರ್ತವ್ಯವಾಗಿದೆ ಎಂದು ಮುಂತಾಗಿ ಹೇಳಿ ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದರು.

ವಿದೇಶ ವರ್ತಮಾನ.

ಲಂಡನಿನ ಖಾನೇಸುಮಾರಿ :— ಕಳೆದ ೧೯೨೧ರಲ್ಲಿ ತೆಗೆದ ಖಾನೇಸುಮಾರಿಯ ರೀತಿಗೆ ಲಂಡನಿನಲ್ಲಿ ೧೪೮,೦೦೦ ವಿದೇಶಿಯರಿರುವರು. ಈ ಪೈಕಿ ರಷ್ಯಿಯಾ ದೇಶದವರು ೩೮,೦೦೦, ಪೋಲ್ಸರು ೩೦,೦೦೦ ಫ್ರೆಂಚರು ೧೩,೦೦೦, ಇಟಲಿ ದೇಶದವರು ೧೧,೦೦೦ ಜರ್ಮನ್ಸ್ ೯,೦೦೦.

ಆಂಗ್ಲರಾಯ ಭಾರಿಗಳು :— ಕಾಬೂಲಿನಲ್ಲಿ ಆಂಗ್ಲರಾಯಭಾರಿಗಳ ವರ್ಗವು ಇರುತ್ತಿದೆ. ಅದರ ವ್ಯಯ ಭಾರವನ್ನೆಲ್ಲಾ ಭರತಖಂಡವೇ ವಹಿಸುತ್ತಿದೆ. ಕಳೆದ ವರುಷದಲ್ಲಿ ಅದಕ್ಕಾಗಿ ರೂ ೪೮,೦೦೦೦ಗಳ ವೆಚ್ಚವಾಗಿರುತ್ತದೆ.

ಆಂಗ್ಲ ಕವಿಯ ವಿಲ್ ನಾಮೆ— ವಿಲ್ಫ್ರೆಡ್ ಬ್ಲಂಟ ಎಂಬ ಆಂಗ್ಲೇಯ ಕವಿಯು ಕೈ ಬರಹದ ಒಂದು ಪ್ರತಿಯನ್ನು ಒಂದು ಪೆಟ್ಟಿಗೆಯಲ್ಲಿ ಭದ್ರಪಡಿಸಿ ಮೂವತ್ತು ವರುಷಗಳ ವರೆಗೆ ಅದನ್ನು ಯಾರು ತೆಗೆಯಬಾರದೆಂತಲೂ ತನ್ನ ಆಸ್ತಿಯಲ್ಲಿ ೨೦೦ ಪವನನ್ನುಗಳನ್ನು ಅರಬಿನ ನಗರದ ಮಹಮ್ಮದೀಯರ ಉಪಯೋಗಾರ್ಥವಾಗಿ ಕಟ್ಟಲ್ಪಡುವ ಒಂದು ಪ್ರಾರ್ಥನಾಮಂದಿರಕ್ಕೆ ಕೊಡಬೇಕೆಂತಲೂ ಪೂರ್ವ ರಾಜ್ಯಗಳಲ್ಲಿ ದೊರೆಯುವ ಪುರಾತನ ಹಸ್ತ ಪ್ರತಿಗಳನ್ನು ಕೊಳ್ಳಲು ೫೦ ಪವನನ್ನುಗಳನ್ನು ಕೊಡಬೇಕೆಂದೂ ಮರಣಶಾಸನ ಬರೆದಿರುವರು.

ತುರ್ಕಿ ಸರಕಾರದ ಕಾನೂನು :— [illegible] ಪ್ರಜಾ ಸಂಖ್ಯೆಯು ಕಡಿಮೆಯಾಗಿರುವುದರಿಂದ ಅದನ್ನು ಅಭಿವೃದ್ಧಿಗೆ ತರಬೇಕೆಂದು ತುರ್ಕಿ ಸರಕಾರದವರು ಈಗ ಒಂದು ಕಾನೂನನ್ನು ಜಾರಿಯಲ್ಲಿ ತಂದಿರುವರು. ೨೫ ವರುಷ ವಯಸ್ಸಿನ ಪ್ರತಿಯೊಬ್ಬ ಯೌವನಸ್ಥನೂ ಮದುವೆಯಾಗಬೇಕೆಂತಲೂ ಪ್ರತಿಮೂರು ವರುಷಕ್ಕೊಂದರಂತಾದರೂ ಸಂತಾನವನ್ನು ಪಡಿಯಬೇಕೆಂತಲೂ ಈ ಕಾನೂನಿನ ಅಭಿಪ್ರಾಯವಾಗಿದೆ. ತುರ್ಕಿ ಸರಕಾರದ ಈ ಅಭಿಪ್ರಾಯವು ನೆರವೇರಿದರೆ ಅನಾಟೋಲಿಯದಲ್ಲಿ ಈಗ ಇರುವ ೮೦ ಲಕ್ಷ ಪ್ರಜೆಗಳಿಗೆ ಬದಲಾಗಿ ಇನ್ನು ೨೫ ವರುಷಗಳ ನಂತರ ೧೮೦ ಲಕ್ಷ ಪ್ರಜೆಗಳಾಗುವವು.

ಒಳದೇಶ ವರ್ತಮಾನ.

ಕಲ್ಕತ್ತಾ ಯುನಿವರ್ಸಿಟಿ:— ಬಂಗಾಳ ಲೆಜಿಸ್ಲೆಟಿವ್ ಕೌನ್ಸಿಲಿನ ಪ್ರೆಸಿಡೆಂಟರಾದ ಹೊನರೇಬಲ್ ಎಚ್. ಇ. ಕೋಟನ್‌ರವರು ಕಲ್ಕತ್ತಾ ಯುನಿವರ್ಸಿಟಿಯ ವ್ಯಾಸ ಚೆನ್ಸ್ಲಲರರಾಗಿ ನೇಮಕಪಟ್ಟಿರುವರು.

ಸರ್. ಪಿ. ಸಿ. ರೈ:— ಸ್ವದೇಶಿ ಖದ್ದರ ನೂಲುಗಳಿಗೆ ನಾನಾ ತರದ ರಂಗುಗಳನ್ನು ಹಾಕಿ ನೆಯ್ಯುವ ಪದ್ಧತಿಯು ಈಗ ಪ್ರಬಲಿಸುತ್ತದೆ. ಸರ್. ಪಿ. ಸಿ. ರಾಯರವರು ಈ ರಂಗನ್ನು ರಚಿಸುವ ವಿಧಾನವನ್ನು ಕುರಿತು ಒಂದು ಗ್ರಂಥವನ್ನು ಬರೆದು ಮುದ್ರಿಸಿದ್ದಾರೆ.

ಪತಿತೆಯರನ್ನು ಉದ್ಧರಿಸುವುದು:— ಮದರಾಸಿನ ಶ್ರೀಮತಿ ಯಾಮಿನಿ ಪೂರ್ಣತಿಲಕಮ್ಮನವರು ಪ್ರಮಾದವಶದಿಂದ ಕೆಟ್ಟುಹೋದ ಸ್ತ್ರೀಯರಿಗೆ ಪ್ರಾಯಶ್ಚಿತ್ತವನ್ನು ಮಾಡಿಸಿ ಅವರಿಗೆ ಸನ್ಯಾಸವನ್ನು ಕೊಡಿಸಬೇಕೆಂಬುದಾಗಿಯೂ ಅವರು ದಾದಿಯರಾಗಿಯೂ ಸೂಲಗಿತ್ತಿಯರಾಗಿಯೂ ವೈದ್ಯರಾಗಿಯೂ ಆರೋಗ್ಯಶಾಸ್ತ್ರದ ಪ್ರಚಾರಕರಾಗಿಯೂ ಹಿತೋಪದೇಶಕರಾಗಿಯೂ ಲೋಕಸೇವೆಯನ್ನು ಮಾಡಿ ಸದ್ಗತಿಯನ್ನು ಹೊಂದುವಂತೆ ಮಾಡಬೇಕೆಂದು ಪ್ರಯತ್ನ ಮಾಡುತ್ತಲಿರುವರು. ಇವರಿಗೆ ಸದ್ವಿದ್ಯಾಭ್ಯಾಸವನ್ನು ಮಾಡಿಸಿ ಇವರು ಗುಣವತಿಯರೆಂದು ಯಶಸ್ಸನ್ನು ಹೊಂದಿದ ಮೇಲೆ ಅನುರೂಪವಾದ ದಂಪತಿಗಳು ದೊರಕಿದರೆ ಅವರು ವಿವಾಹವನ್ನು ಅಥವಾ ಪುನರ್ವಿವಾಹವನ್ನು ಮಾಡಿಕೊಂಡು ಸಾಧ್ವೀಮಣಿಗಳಾಗಿ ಇರುವಂತೆ ಮಾಡುವುದೂ ಕೂಡಾ ಶ್ರೇಯಸ್ಕರವಾದ್ದು. [ಸಾಧ್ವಿ]

ಮೈಸೂರು ಬಾಯ್ಸ್ ಸ್ಕೌಟು ಫಂಡು:— ಈ ಫಂಡಿಗೆ ಶ್ರೀಮನ್‌ಮಹಾರಾಜರವರು ರೂ. ೧೫೦೦, ಶ್ರೀಮನ್‌ಯುವರಾಜರವರು ರೂ. ೧೦೦೦, ಮಗಳಾದ ತ್ಯಾಗರಾಜಯ್ಯರು, [illegible] ಮತ್ತು ಗೋವಿಂದರಾಜ ಮುದಲಿಯಾರರವರು ತಲಾ ರೂ. ೧೦೦ರಂತೆ ಚಂದಾ ಕೊಟ್ಟಿರುವರು.

ಮಂಗಳೂರ ಹಾಸನ್ ರೈಲ್ವೇ— ಹಾಸನದಿಂದ ಮಂಗಳೂರಿಗೆ ರೈಲ್ವೆ ಸಂಬಂಧವನ್ನು ಏರ್ಪಡಿಸಲು ಮೈಸೂರು ದೇಶದಲ್ಲಿ ೪೯ ಮೈಲಿಗಳಷ್ಟು ದೂರಕ್ಕೆ ರೂ. [illegible]ಗಳ ಖರ್ಚಿನಿಂದ ರೈಲುಮಾರ್ಗವನ್ನು ಮಾಡಿದರೂ ಉಳಿಯುವ ೫೯ ಮೈಲುಗಳ ರಸ್ತೆಯನ್ನು ಮದರಾಸ ಸರಕಾರದವರು ಜತೆಯಲ್ಲಿಯೇ ಪೂರೈಸಿಕೊಡುವ ಸಂಭವವಿಲ್ಲವೆಂದೂ, ಆದ್ದರಿಂದ ಮೈಸೂರು ದೇಶಕ್ಕೆ ಅಗತ್ಯವಾದ ತೀರಾ ಸಂಬಂಧಬೇಕಾದರೆ ಶಿವಮೊಗ್ಗೆಯಿಂದ [illegible] ಮಾರ್ಗವಾಗಿ ಭಟ್ಕಳಕ್ಕೆ ರೈಲು ಹಾಕಿಸುವುದು ಉತ್ತಮವೆಂತಲೂ, ಭದ್ರಾವತಿಯ ಕಾರ್ಖಾನೆಯ ದೆಸೆಯಿಂದ ಭಟ್ಕಳ ಸಂಬಂಧವೇ ಮುಂದೆಯಾದರೂ ಸರಕಾರದವರ ಯೋಚನೆಗೆ ಅರ್ಹವಾಗಿರುವುದೆಂದೂ ನಮ್ಮ ದಿವಾನರವರು ಹಾಸನದ ಮುನ್ಸಿಪಾಲಿಟಿಯವರ ಅರ್ಜಿಗೆ ಉತ್ತರಕೊಟ್ಟಿರುವರು. [ಒಕ್ಕಲಿಗರ ಪತ್ರಿಕೆ].

ಕರ್ನಾಟಕ ಕಾಲೇಜ್:— ಕರ್ನಾಟಕ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಪೂರ್ಣ ಅಭ್ಯಾಸ ಮಾಡಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಠರಾವನ್ನು ಬರುವ ಕೌನ್ಸಿಲಿನಲ್ಲಿ ಶ್ರೀಯುತ ಹುಲಿಕೋಟಿಯವರು ತರತಕ್ಕವರಿದ್ದಾರೆ.

ಡಾಕ್ಟರ ವರದರಾಜಲು ನಾಯ್ಡು:— ಸರಕಾರದವರು ತಮ್ಮ ಸ್ವಾಧೀನಪಡಿಸಿಕೊಂಡ ಇವರ ಮೋಟಾರಕಾರನ್ನು ಸೇಲಂ ಸೆಂಟ್ರಲ್ ಜೈಲಿನಲ್ಲಿ ಕಳೆದ ತಾರೀಕು ೨೮ರಲ್ಲು ಏಲಂ ಮೂಲಕ ಮಾರಾಟ ಮಾಡಲಾಯಿತು. ರೂ. ೧೯೫೦ರ ವರೆಗೆ ಮಿ. ರಂಗಯ್ಯ ಚೆಟ್ಟಿಯಾರ್ ಎಂಬವರು [illegible] ನಿಂತರು.

ದಿ. ನೇಶನ್:— ನೇಶನ್ ಎಂಬ ಪತ್ರಿಕೆಯ ಸಂಪಾದಕರಾದ ಮಿ. ಜಿ. ಜಿ. ಅಣ್ಣನ್‌ರವರು ತಮ್ಮ ಸಂಪಾದಕ ಪದವಿಗೆ ರಾಜೀನಾಮೆಯನ್ನು ಕೊಟ್ಟು ಬಿಟ್ಟಿರುವರು.

ಓಲ್ ಇಂಡಿಯಾ ಟ್ರೇಡ್ ಯೂನಿಯನ್ ಕೊಂಗ್ರೆಸ್:— ಈ ಕೊಂಗ್ರೆಸ್ ಬರುವ ಮಾರ್ಚ ತಾರೀಕು ೨೫ರಲ್ಲಿ ಲಾಹೋರಿನಲ್ಲಿ ಸೇರುವುದು.

ರಾಷ್ಟ್ರಸೇವಕರ ಜೇಲಗಳು:— ಕರ್ನಾಟಕ ರಾಷ್ಟ್ರಸೇವಕ ಮಂಡಳಿಯವರು ಠರಾಯಿಸಿದಂತೆ ತಯಾರಿಸಲ್ಪಟ್ಟ ರಾಷ್ಟ್ರಸೇವಕರ ಜೇಲಗಳು ಹುಬ್ಬಳ್ಳಿ ತಾಲೂಕ ಕೊಂಗ್ರೆಸ ಕಮ್ಮಿಟಿಯಲ್ಲಿ [illegible] ದೊರೆಯುವವು. [illegible] ಎಲ್ಲ ಜೇಲಗಳನ್ನು ಹುಬ್ಬಳ್ಳಿ [illegible] ತಯಾರಿಸುತ್ತಾರೆ. ಈ ವರ್ಷ 'ಪ್ರತಿಜ್ಞಾ ಪತ್ರಿಕೆ'ಯ ಮೇಲೆ ಸಹೀಮಾಡಿದಂಥ ಕರ್ನಾಟಕದ ಎಲ್ಲ ರಾಷ್ಟ್ರಸೇವಕರೂ ತಮ್ಮ ತಮ್ಮಲ್ಲಿಯ ಕೊಂಗ್ರೆಸ ಕಮ್ಮಿಟಿಗಳ ಮುಖಾಂತರವಾಗಿ ಕೆಳಗಿನ ವಿಳಾಸಕ್ಕೆ ಬರೆದರೆ, ಚೀಲಗಳು ವಿ. ಪಿ.ಯಿಂದ ರವಾನಿಸಲ್ಪಡುವವು ಎಂದು ಕರ್ನಾಟಕ ಕೊಂಗ್ರೆಸ್ ಕಮ್ಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮಿ. ಮಹಮದ್ ಅಲಿಯವರ ಪರ್ಯಟನೆ:— ಇವರು ಕಳೆದ ತಾರೀಕು ೨೩ರಲ್ಲಿ ಬೆಂಗಳೂರಿನಿಂದ ಧಾರವಾಡ ಮಾರ್ಗವಾಗಿ ಬೆಳಗಾಂವಿಗೆ ಬಂದು ತಲ್ಪಿದರು. ಇವರು ಸುಮಾರು ೫೦೦೦ ಜನಸಮೂಹದ ಕೂಡಿದ ಸಭೆಯಲ್ಲಿ ಸ್ವರಾಜ್ಯವೂ ಖಿಲಾಫತ್ ಪ್ರಶ್ನೆಯೂ ಒಂದರ ಮೇಲೆ ಇನ್ನೊಂದು ಹೊಂದಿಕೊಂಡಿವೆ ಎಂದು ತಿಳಿಸಿ ಕೊಂಗ್ರೆಸ್ಸಿನ ಠರಾವನ್ನು ತಪ್ಪಿಸಿ ಸ್ವಯಂಸೇವಕರನ್ನು ದಾಖಲುಮಾಡಿ ತಿಲಕ ಸ್ವರಾಜ್ಯ ಫಂಡಿಗೆ ಹಣವನ್ನು ಕೊಡಿಸಬೇಕಾಗಿಯೂ ಹಿಂದೂ ಮುಸಲ್ಮಾನರು ಐಕ್ಯರಾಗಬೇಕಾಗಿಯೂ ವಿನಂತಿಮಾಡಿಕೊಂಡರು.

ದುವ್ವೇರಿ ಸುಬ್ಬಮ್ಮಗಾರು:— ಕಾರಾಗೃಹಕ್ಕೆ ಹೋದ ಪ್ರಥಮ ಮಹಿಳೆಯಾದ ದುವ್ವೇರಿ ಸುಬ್ಬಮ್ಮಗಾರುರವರು ಬರುವ ತಾ. ೭ಕ್ಕೆ ತುರಂಗವಾಸದ ಅವಧಿಯು ಮುಗಿದು ತುರಂಗದಿಂದ ಹೊರಗೆ ಬರುವರು.

ಲೇಡಿ ಅಫಾಮಾನ:— ಇವರು ಈಗಲೇ ಯುರೋಪಿನಿಂದ ಬಂದು ಯರವಾಡಾ ಜೈಲಿನಲ್ಲಿ ಮಹಾತ್ಮಾಗಾಂಧಿಯವರ ಭೇಟಿಯನ್ನು ಪಡೆದರು. ಮಹಾತ್ಮರು ತುರಂಗದಲ್ಲಿ ಸೌಖ್ಯದಲ್ಲಿ ಇರುವರು ಎಂಬ ವಾರ್ತೆಯು ಅಹಮ್ಮದಾಬಾದಿನ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಖಿಲಾಫತ್ ಡೇ:— ಲೋಸೇನ್ ಪರಿಷತ್ತಿನ ಕಾರ್ಯವನ್ನು ಬ್ರಿಟಿಷರು ತುರ್ಕರೊಡನೆ ವರ್ತಿಸಿದ ಭಾವದಿಂದ [illegible] ದಿನವಾಗಿ ಕಳೆದ ತಾ ೨೩ನೇ ದಿವಸವನ್ನು ಖಿಲಾಫತ್ ದಿನವಾಗಿ ಡಿಲ್ಲಿ ಮುಂಬಯಿ ಮದರಾಸ ಕಡೆಗಳಲ್ಲೂ ಕರ್ನಾಟಕ ಪ್ರಾಂತದ ಹುಬ್ಬಳ್ಳಿ ಗದಗ ಮೊದಲಾದ ಪಟ್ಟಣಗಳಲ್ಲೂ ಆಚರಿಸಲಾಯಿತು.

ಖಿಲಾಫತ್ ಬಾವುಟ:— ಮಹಮ್ಮದಿ ಮತದ ಶ್ರೇಷ್ಠ ಗುರುಗಳಾದ ಖಲೀಫ್-ಉಲ್-ಇಸ್ಲಾಮ್ ಎಂಬವರು ಹಿಂದೂಸ್ಥಾನದ ಸೆಂಟ್ರಲ್ ಖಿಲಾಫತ್ ಕಮ್ಮಿಟಿಗೆ ಒಂದು ಬಾವುಟೆಯನ್ನು ದಯಪಾಲಿಸಿರುವರು. ಈ ಬಾವುಟೆಯನ್ನು ಅಮೃತಸರ ಬೆಂಸ್ಟರ ಮೌ ಸಿದ್ದಿಕ ಎಂಬವರು ಮುಂಬಯಿಗೆ ತಂದರು. ಕಳೆದ ತಾರೀಕು ೨೩ಕ್ಕೆ ಅದು ಅಜಮೀರಕ್ಕೆ ಒಯ್ಯ[illegible]ಯಿತು.

ದಕ್ಷಿಣ ಕನ್ನಡ

ಸಂಪಾಜೆ— ದ. ಕನ್ನಡ ಗೌಡ ವಿದ್ಯಾಸಂಘದ ಮಹಾ ಸಭೆಯು ಕಳೆದ ತಾ. ೧೭ನೇ ಶ್ಯಾಮ ಗಂಟೆ ೨ಕ್ಕೆ ಪಂಚ ಬೋರ್ಡ ಶಾಲೆಯಲ್ಲಿ ಶ್ರೀಯುತ ಕೊಜಗೋಡು ತಿಮ್ಮಪ್ಪ ಗೌಡರ ಅಧ್ಯಕ್ಷತೆಯಲ್ಲಿ ನೆರದಿತ್ತು. ಸಭೆಗೆ ಪುತ್ತೂರು ಹೈಸ್ಕೂಲ್ ಹೆಡ್‌ಮಾಸ್ತರರೆ ಶ್ರೀಯುತ ರಾಮ ನರಬಿಯಾರ್. (ಬಿ. ಎ. ಯಲ್. ಟಿ.) ಯವರು, ಅದೇ ಶಾಲೆಯ ಸೈನ್ಸ್ ಮಾಸ್ತರರಾದ ಶ್ರೀಯುತ ಲಕ್ಷ್ಮಣ ಕಾರಂತ (ಬಿ. ಎ.) ಯವರು ಕೂಡ ಪಯಮಾಡಿಸಿದ್ದರು. ಇವರೀರ್ವರೂ ಹಿಂದುಳಿದ ನಮ್ಮ ಗೌಡ ಜಾತಿಯವರಲ್ಲಿ ತೋರ್ಪಡಿಸಿದ ಔದಾರ್ಯವು ಅತೀ ಶ್ಲಾಘನೀಯವಾದುದೇ ಸರಿ. ಸದರಿ ಹೆಡ್‌ಮಾಸ್ತರರು ವಿದ್ಯೆಯ ಮೇಲ್ಮೆಯನ್ನು, ಸಂಘದ ಪ್ರಯೋಜನವನ್ನೂ ಐಕ್ಯತೆಯ ಶ್ರೇಯಸ್ಸನ್ನು ಕುರಿತು, ಕೂಡಿದ ಸಭಿಕರ ಮನಸ್ಸನ್ನಾಕರ್ಷಿಸುವಂತೆ ಮನೋರಂಜಕವಾದ ಭಾಷಣವನ್ನು ಮಾಡಿದರು. ಮುಂದೆ ಈ ಸಂಘಕ್ಕೆ ದ್ರವ್ಯಸಹಾಯವೇ ಪ್ರಾಮುಖ್ಯವಾದ ಸಾಧನವಾದುದರಿಂದ ಸ್ವಜಾತಿಯಾಭಿಮಾನಿಗಳಾದ ಗೌಡ ಜಾತಿಯವರೆಲ್ಲರೂ ಒಮ್ಮನಸ್ಸಿನಿಂದ ಈ ಕಾರ್ಯವು ಸುಸೂತ್ರವಾಗಿ ಸಾಂಗಗೊಳಿಸುವಂತೆ ತನುಮನ ಧನವನ್ನರ್ಪಿಸಿ ಸ್ಥಿರವಾಗಿ ನಿಂತು ತಮ್ಮ ಸಮಾಜದೇಳಿಗೆಯನ್ನು ಮುಂದೆ ವೃದ್ಧಿಪಡಿಸಿ ಮುಂದಿನ ಜನರ ಸತ್ಕೀರ್ತಿಗೆ ಪಾತ್ರರಾಗುವಂತೆ ಭಗವಂತನು ಅನುಗ್ರಹಿಸಲೆಂದು ಶ್ರೀ ಶಾರದಾಂಬೆಗೆ ಸ್ತುತಿಸಿದ ನಂತರ ಸಭೆಯು ಬರಕಾಸ್ತಾಯಿತು.

ಬಂಟವಾಳ :— ಇಲ್ಲಿ ವರ್ಷಂಪ್ರತಿ ಜರುಗುವಂತೆ ಈ ವರ್ಷವೂ ತಿರುಮಲ ದೇವಳದ ರಥೋತ್ಸವವು ಜರಗಿತು. ಜನರು ಬಹಳ, ಸಂತೆಗಳು ಅಧಿಕ, ವ್ಯಾಪಾರ ಹೆಚ್ಚು. ಈ ದಿವಸದ ಉತ್ಸವಗಳಲ್ಲಿಯೂ ಏನೊಂದು ಗಲಾಟೆ ಇಲ್ಲದೆ ಗದ್ದಲದಿಂದ ನಡೆಯಿತು.

ಇದೇ ಫೆಬ್ರವರಿ ತಾ ೨೪ಕ್ಕೆ ಕಾಲಾವಧಿ ಜಮಾಬಂದಿ ಮೀಟಿಂಗ್ ಬೋರ್ಡ ಗರ್ಲ್ಸ್ ಸ್ಕೂಲಿನಲ್ಲಿ ಡಿವಿಜನಲ್ ಆಫೀಸರವರಿಂದ ಜರಗಿಸಲ್ಪಟ್ಟಿತು. ಊರಿನವರ ಅಹವಾಲಿಯಲ್ಲಿ ಬಂಟವಾಳದಲ್ಲಿ ಉದ್ದಕ್ಕೆ ಒಂದೇ ಮಾರ್ಗವಿದ್ದು ಈಗಿನ ಮೋಟಾರು ಬಸ್ಸುಗಳ ಧೂಳಿನ ಬಾಧೆಯೂ ಗಾಡಿಗಳಿಗೂ ಜನರಿಗೂ ಜಾನುವಾರುಗಳಿಗೂ ಒಂದೇ ಮಾರ್ಗದಿಂದ ಅನೇಕ ಅಪಾಯಗಳು ಆಗಾಗ್ಗೆ ಆಗುತ್ತಿರುವದರಿಂದ [illegible] ಪೂರ್ವ ಪಕ್ಕದಲ್ಲಿ [illegible] ಕಲೆಕ್ಟರವರು ಈ ಮೊದಲು ಸರ್ವೆ [illegible] ಮಾರ್ಗವನ್ನು ಮಾಡಿಸಿ ಕೊಡಬೇಕೆಂಬುದೇ ಮುಖ್ಯವಾಗಿತ್ತು. ಮಾಡಿಸಿ ಕೊಟ್ಟರೆ ಜನಗಳಿಗೆ ಬಹಳ ಉಪಕಾರವಾಗುತ್ತಿತ್ತು.

ಇಲ್ಲಿಗೆ ಇತ್ತಲಾಗಿ ವರ್ಗವಾಗಿ ಬಂಟವಾಳ ಆಸ್ಪತ್ರೆಗೆ ಬಂದಿರುವ ಸೂಲಗಿತ್ತಿ ಲೋಬೊರವರಿಗೆ ಜನರ ಪರಿಚಯವು ಆಗುವ ಮೊದಲೇ ಪುತ್ತೂರಿಗೆ ವರ್ಗವಾಯಿತು ಎಂಬ ವರ್ತಮಾನ ಕೇಳಿ ಅನೇಕರಿಗೆ ವ್ಯಸನವಾಗಿದೆ.

ಕಾಸರಗೋಡು:— ಎರಡು ಮೂರು ದಿನಗಳ ಹಿಂದೆ ಇಲ್ಲಿಯ ಮಲಿಯಾಳಿಯವರ ಹೋಟೇಲಿನಲ್ಲಿ ಕಲ್ಲಿಕೋಟೆಯ ಒಬ್ಬ ನಾಯರ್ ಯುವಕನು ಕುತ್ತಿಗೆಗೆ ನೇಣುಹಾಕಿಕೊಂಡು ಸತ್ತಿರುತ್ತಾನೆ. ಸರಿಯಾಗಿ ಸುಮಾರು ೨೫-೩೦ ವರ್ಷ ಪ್ರಾಯದವನಾಗಿರಬಹುದಂತೆ. ಹೋಟೇಲಿನ [illegible] ಇರುವ ಒಂದು ಮುರಿಯ ಕೋಣೆಗೆ ತನ್ನ [illegible]ಯಿಂದ ರಾತ್ರಿ ಕಾಲದಲ್ಲಿ ನೇಣುಹಾಕಿಕೊಂಡದ್ದಾಗಿ ಕಾಣುತ್ತದೆ.

ಇದೇ ಕಳೆದ ಆದಿತ್ಯವಾರ ದಿನ ಪೆರ್ಣಾಲ್ ಸಮೀಪ ಮಧ್ಯಾಹ್ನದ ಲೋಕಲ್ ಬಂಡಿ ಬರುತ್ತಿರುವಾಗ ಒಬ್ಬ ಮಾಪಿಳ್ಳೆ ಹುಡುಗನು ಬಂಡಿಯ ಅಡಿಗೆ ಸಿಕ್ಕಿ ಜಖಂ ಆಗಿ ಇಲ್ಲಿಯ ಆಸ್ಪತ್ರೆಗೆ ಒಯ್ಯಲ್ಪಟ್ಟಿರುತ್ತಾನೆ.

ಮಂಗಳೂರು ಶ್ರೀ ಅಂಬಾ ಪ್ರಸಾದಿಕ ನಾಟಕ ಮಂಡಲಿಯವರು ಈ ದಿನ ಲಂಕಾದಹನವೆಂಬ ಕಥೆ ನಾಟಕವನ್ನು ಅಭಿನಯಿಸಿ ಇಲ್ಲಿಂದ ಕುಂಬಳೆಗೆ ಹೋಗುವವರಿದ್ದಾರಂತೆ.

ಕಾಸರಗೋಡು ಮತ್ತು ಆದೂರು ಫಿರ್ಕಗಳ ಜಮಾಬಂದಿಯು ಮಾರ್ಚ ತಿಂಗಳ ತಾ. ೧೫ಕ್ಕೆ ಮುಂದರಿಸಿರುತ್ತದಾಗಿ ತಿಳಿದುಬರುತ್ತದೆ, ಅಲ್ಲದೆ ಹೊಸದುರ್ಗದ ಜಮಾಬಂದಿಯು ತಾ. ೮ ಮತ್ತು ೯ ನೀಲೇಶ್ವರ ೧೩ ಮತ್ತು ೧೪ ಈ ತಾರೀಕಿನಲ್ಲಿಯೇ ನಡಿಸಲ್ಪಡುವದಂತೆ.

ಕೊಂಗ್ರೆಸ ಕಮ್ಮಿಟಿ ಮಿಟಿಂಗು.

ಕೊಂಗ್ರೆಸ್ಸಿನ ಕಾರ್ಯಕಾರಿ ಕಮಿಟಿಯ ಮಿಟಿಂಗು ಕಳೆದ ತಾ. ೨೬ರಲ್ಲಿ ಸೇರಿತು. ಪತ್ರಿಕೆಗಳ ಪ್ರತಿನಿಧಿಗಳಿಗೆ ಈ ಮಿಟಿಂಗಿನ ಸಮಾಚಾರಗಳನ್ನು ತಿಳಕೊಳ್ಳಲು ಎಡೆ ಇರಲಿಲ್ಲ. ಕೊಂಗ್ರೆಸ್ಸಿನಲ್ಲಿ ಉಂಟಾದ ಎರಡು ಪಂಗಡಗಳನ್ನು ಐಕ್ಯಗೊಳಿಸುವುದು ಈ ಮಿಟಿಂಗಿನ ಮುಖ್ಯ ಕಾರ್ಯ. ಇತ್ತಂಡದವರನ್ನು ಐಕ್ಯಗೊಳಿಸಲು ಸ್ವರಾಜ್ಯ ಪಕ್ಷದ ೭ ಮಂದಿ ಪಂಚಾಯತರು ಇರುವ ಬೋರ್ಡ ನೇಮಿಸಿ ಇವರೊಡನೆ ರಾಜಿಯ ಶರ್ತುಗಳನ್ನು ಚರ್ಚಿಸಲು ಇನ್ನೊಂದು ಪಕ್ಷದ ಮೂರು ಮಂದಿ (ಶ್ರೀಯುತ ರಾಜಗೋಪಾಲಾಚಾರ್ಯ, ಮಿ. ಮುಜಮ್ ಅಲಿ, ಶ್ರೀಯುತ ವಲ್ಲಭಭಾಯಿ ಪಟೇಲ) ಗೃಹಸ್ಥರ ಒಂದು ಬೋರ್ಡ ಪ್ರಥಮದಲ್ಲಿ ನೇಮಿಸಲಾಯಿತು. ಅಬ್ದುಲ್ ಕಲಂ ಆಜದರು ಪ್ರಥಮದಲ್ಲಿ ಸೂಚಿಸಿದ ಶರ್ತಗಳನ್ನು ಅನುಸರಿಸಿಯೇ ಎಂದರೆ, ಗಯಾ ಕೊಂಗ್ರೆಸ್ಸಿನ ಕಾರ್ಯಕ್ರಮವನ್ನೇ ಅನುಸರಿಸಿ ಇತ್ತಂಡದವರೂ ಬರುವ ಮೇ ತಿಂಗಳ ವರೆಗೆ ಕೊಂಗ್ರೆಸ್ ಕಾರ್ಯವನ್ನು ಮುಂದೊತ್ತುವುದು, ಅನಂತರ ಒಂದು ತಿಂಗಳ ಅವಧಿಯ ವರೆಗೆ ಆಯಾಯ ಪಂಗಡದವರು ತಮ್ಮ ತಮ್ಮ ಸ್ವತಂತ್ರ ಕಾರ್ಯಕ್ರಮವನ್ನು ದೇಶದಲ್ಲಿ ಪ್ರಕಾಶ ಮತ್ತು ಪ್ರಚಾರಗೊಳಿಸುವುದು, ಅನಂತರ ಕೊಂಗ್ರೆಸ್ಸಿನ ಒಂದು ಜಾದಾ ಅಧಿವೇಶನವನ್ನು ಜರುಗಿಸಿ ಆ ಅಧಿವೇಶನದ ನಿರ್ಣಯವನ್ನು ಇತ್ತಂಡದವರೂ ಮಾನ್ಯಮಾಡುವುದು ಅಗತ್ಯವೆಂದು ಬೇಡಬದಲಾವಣೆ ಪಕ್ಷದವರ ಸೂಚನೆ. ಆದರೆ ಸ್ವರಾಜ್ಯ ಪಾರ್ಟಿಯವರು ಅಬ್ದುಲ್ ಕಲಂಆಜದರು ಅನಂತರ ಸೂಚಿಸಿದ ಮಾರ್ಗವನ್ನು ಹಿಡಿಯಬೇಕಾಗಿ ನಿಶ್ಚಯಿಸಿದ್ದರು. ಇದರಂತೆ ಬರುವ ಮೇ ತಿಂಗಳ ವರೆಗೆ ಎರಡು ಪಕ್ಷದವರೂ ಗಯಾ ಕಾರ್ಯಕ್ರಮವನ್ನೇ ಅನುಸರಿಸಿ ಮುಂದರಿಸಬೇಕು; ಕಾನೂನುಭಂಗವನ್ನು ಜಾರಿಗೆ ತರುವ ವಿಷಯವನ್ನು ಆಲೋಚಿಸಲು ಮೇ ತಿಂಗಳ ಆದಿಯಲ್ಲೇ ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಒಂದು ಮಿಟಿಂಗನ್ನು ಸೇರಿಸಬೇಕು, ಮತ್ತು ಈ ಮಿಟಿಂಗಿನಲ್ಲಿ ಕಾನೂನು ಭಂಗವನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದು ನಿರ್ಧಾರವಾದರೆ ಆಗ ಜೂನ್ ತಿಂಗಳಲ್ಲಿ ಕೊಂಗ್ರೆಸ್ಸಿನ ಒಂದು ಜಾದಾ ಅಧಿವೇಶನವನ್ನು ಸೇರಿಸತಕ್ಕದ್ದು, (ಈ ಜಾದಾ ಅಧಿವೇಶನಕ್ಕೆ ಪ್ರತಿನಿಧಿಗಳನ್ನು ಸರಿಯಾಗಿ ಚುನಾಯಿಸಲು ಸಹ ಕೆಲವು ಸೂಚನೆಗಳನ್ನು ಮಾಡಿದೆ). ಸರಕಾರದವರು ಸಾಧಾರಣ ಬರುವ ಜುಲೈ ತಿಂಗಳೊಳಗಾಗಿಯೇ ಈಗಿನ ಕೌನ್ಸಿಲುಗಳನ್ನು ರದ್ದು ಮಾಡಿ ಹೊಸ ಕೌನ್ಸಿಲುಗಳ ಚುನಾವಣೆಯನ್ನು ಬೇಗನೇ ನಡಿಸುವುದಾದರೆ ಮೇಲಿನ ಒಪ್ಪಂದದ ಶರ್ತ ಮೊದಲಾದವುಗಳನ್ನು ಕೂಡಲೇ ಬಿಟ್ಟುಬಿಡಬೇಕು.

ಅಲಹಾಬಾದಿನ ಆನಂದ ಭವನದಲ್ಲಿ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮಿಟಿಂಗು ಕಳೆದ ತಾರೀಕು ೨೭ನೇ ಮಂಗಳವಾರ ಮಧ್ಯಾಹ್ನ ೩ ಗಂಟೆಗೆ ಶ್ರೀಯುತ ಸಿ. ಆರ್. ದಾಸರ ಅಧ್ಯಕ್ಷತೆಯಲ್ಲಿ ಸೇರಿತು. ಸ್ವರಾಜ್ಯ ಪಾರ್ಟಿಯವರು ಮತ್ತು ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಕಾರ್ಯಕಾರಿ ಮಂಡಳಿಯವರು ನೇಮಿಸಿದ ಐದುಮಂದಿ ಗೃಹಸ್ಥರು ಒಪ್ಪಿದ ಶರ್ತಗಳನ್ನು ಈ ಸಭೆಯ ಮುಂದಿಡಲಾಯಿತು. ಈ ಶರ್ತಗಳ ಠರಾವನ್ನು ಶ್ರೀಯುತ ರಾಜಗೋಪಾಲಾಚಾರ್ಯರು ಸಭೆಯ ಮುಂದಿಟ್ಟರು. ಪಂಡಿತ ಮೋತಿಲಾಲರು ಇದನ್ನು ಅನುಮೋದಿಸಿದರು. ಠರಾವಿನ ಶರ್ತಗಳು. ೧. ಕೌನ್ಸಿಲು ಪ್ರೊಪೆಗಂಡಾ ಕಾರ್ಯವನ್ನು ಇತ್ತಂಡದವರೂ ಇದೇ ಏಪ್ರಿಲ ತಿಂಗಳ ವರೆಗೆ ತಹಕೂಬ್ ಇಡತಕ್ಕದ್ದು. ೨. ಇಷ್ಟರ ವರೆಗೆ ಇತ್ತಂಡದವರೂ ತಮ್ಮ ತಮ್ಮ ಕಾರ್ಯಕ್ರಮದ ಇತರ ಕಾರ್ಯಗಳನ್ನು ಒಂದು ಪಕ್ಷದವರು ಇನ್ನೊಂದು ಪಕ್ಷದ ಕಾರ್ಯಪ್ರಚಾರದ ಗೋಜಿಗೆ ಹೋಗದೆ ಮುಂದರಿಸತಕ್ಕದ್ದು. ೩. ಹಣ ಸಂಗ್ರಹದ ಮತ್ತು ಸ್ವಯಂಸೇವಕರನ್ನು ಒಟ್ಟುಗೂಡಿಸುವ ವಿಷಯದಲ್ಲಿ ಕೊಂಗ್ರೆಸ್ ಬಹುಪಕ್ಷದ ಪಂಗಡದವರಿಗೆ ಗಯಾ ಕಾರ್ಯಕ್ರಮವನ್ನು ಅನುಸರಿಸಿ ನಡಿಯಲಿಕ್ಕೆ ಸ್ವತಂತ್ರವಿರತಕ್ಕದ್ದು. ೪. ವಿಧಾಯಕ ಕಾರ್ಯಕ್ರಮದ ಕಾರ್ಯದ ಬಗ್ಗೆ ಹಾಗು ಇತರ ಸಾಮಾನ್ಯ ವಿಷಯಗಳ ಬಗ್ಗೆ ಅಗತ್ಯವಿರುವ ಜನ ಸಹಾಯವನ್ನೂ ಹಣ ಸಹಾಯವನ್ನೂ ಶೇಖರಿಸಲು ಅಲ್ಪ ಪಕ್ಷದವರು ಬಹು ಪಕ್ಷದವರಿಗೆ ಸಹಕಾರಿಗಳಾಗಿರಬೇಕು. ೫. ಏಪ್ರಿಲ್ ಅಂತ್ಯದ ನಂತರ ಪ್ರತಿಯೊಂದು ಪಕ್ಷವು ತನಗೆ ಅಗತ್ಯಕಾಣುವ ಮಾರ್ಗವನ್ನು ಅನುಸರಿಸತಕ್ಕದ್ದು. ೬. ಈಗಿನ ಕೌನ್ಸಿಲುಗಳು ಅವರ ಸಮಯದ ವರೆಗೆ ನಡೆಯಬೇಕೆಂದು ಈ ಮುಂಚೆ ವಿಧಿಸಲಾಗಿದೆಯೋ ಆ ಅವಧಿಯ ಮುಂಚೆ ಸರಕಾರದವರು ಯಾವದಾದರೂ ಒಂದು ಪ್ರಾಂತದ ಕೌನ್ಸಿಲನ್ನು ಕೂಡ ರದ್ದುಮಾಡದ ಇದ್ದರೆ ಮಾತ್ರ ಮೇಲಿನ ಶರ್ತಗಳು ಜಾರಿಯಲ್ಲಿರತಕ್ಕದ್ದು. ಮೇಲಿನ ಠರಾವು ಪಾಸುಮಾಡಲಾಯಿತು. ಇತ್ತಂಡದವರಿಗೂ ರಾಜಿಯನ್ನು ಮಾಡಲು ಪ್ರಯತ್ನಿಸಿದ ಮೌಲಾನಾ ಅಬ್ದುಲ್‌ಕಲಂ ಆಜದರನ್ನು ಅಭಿನಂದಿಸುವ ಇನ್ನೊಂದು ಠರಾವು ಸಹ ಪಾಸುಮಾಡಲಾಯಿತು. ಈ ಸಭೆಯ ಕಾರ್ಯಕ್ರಮದ ಅಂತ್ಯದಲ್ಲಿ ಅಧ್ಯಕ್ಷರು ತನ್ನ ಕಾರ್ಯದಲ್ಲಿ [illegible] ತೋರಿಸಿದ ಕಮ್ಮಿಟಿಯನ್ನು [illegible] ಮುಂದಕ್ಕೆ ಕಾನೂನು ಭಂಗವನ್ನು ಜಾರಿಗೆ ತರುವುದು ಅಸಾಧ್ಯವೆಂದು ತನಗೆ ತೋರುತ್ತದೆ, ಆದರೆ ಇದು ಸಾಧ್ಯವೆಂದು ಸಹ ಇತರರು ನಂಬಿರುವರು. ಪರಂತು ತನ್ನ ಈ ಅಭಿಪ್ರಾಯದಲ್ಲಿ ತಪ್ಪು ಇರಬಹುದು ಎಂದು ತಿಳಿಸಿದರು. ಬಹುಪಕ್ಷದವರು ಕಾನೂನು ಭಂಗವನ್ನು ಆಚರಣೆಗೆ ತರಲಿಕ್ಕಿರುವುದನ್ನು ಅಭ್ಯಂತರಪಡಿಸುವುದು ತಮ್ಮ ಪಕ್ಷಕ್ಕೆ ಎಂದಿಗೂ ಮನಸ್ಸಿಲ್ಲವೆಂಬುದನ್ನು ಸೂಚಿಸುವುದಕ್ಕಾಗಿಯೇ ತಾವು ಈ ರಾಜಿಗೆ ಸಮ್ಮತಿಸಿದ ಕಾರಣವೆಂದು ಹೇಳಿದರು. ಬಹುಪಕ್ಷದವರು ತಮ್ಮ ಕಾರ್ಯದಲ್ಲಿ ವಿಜಯಿಗಳಾದರೆ ಅಲ್ಪ ಪಕ್ಷದವರಿಗೂ ಅವರನ್ನು ಹಿಂಬಾಲಿಸುವಂತೆ ತಾವು ಮಾಡುವೆಂದು ತಿಳಿಸಿದರು. ಆದರೆ ಪ್ರಸ್ತುತಕ್ಕೆ ಅಲ್ಪ ಪಕ್ಷದವರಿಗೆ ಈ ವಿಷಯದಲ್ಲಿ ವಿಶ್ವಾಸ ಮಾತ್ರ ಬೇಕಾಗಿದೆ. ಮೇ ತಿಂಗಳ ಪ್ರಥಮ ವಾರದೊಳಗಾಗಿ [illegible] ಕಾನೂನು ಭಂಗವನ್ನು ಜಾರಿಗೆ ತರುವುದರಿಂದ [illegible] ರಾಜಿಯನ್ನು [illegible]. ಪರಂತು ಅಲ್ಪ ಪಕ್ಷದವರು ಬಹು ಪಕ್ಷದವರಿಗೆ ತಮ್ಮ ಕಾರ್ಯವನ್ನು ತೋರಿಸಲಿಲ್ಲದೆ [illegible] ಕೊಟ್ಟಂತೆ ಆಗಿದೆ ಎಂದು ಮುಂತಾಗಿ ಹೇಳಿದರು.

ಅನುಕ್ರಮಣಿಕೆ.

ಕರ್ನಲ್ ಏಟರ ಏಟು ೬-೭
ಸ್ಫುಟವಿಚಾರಗಳು.—
೧. ಭೋಪಾಳದ ಬೇಗಮ್ಮ ಸಾಹೇಬರು ೭
೨. ಲೆಜಿಸ್ಲೇಟಿವ್ ಎಸೆಂಬ್ಲಿ ,,
೩. ಮಿ| ಮೊಂಟೆಗ್ಯು ಸಾಹೇಬರು ,,
೪. ನಾಮದಾರ ಶಾಸ್ತ್ರಿಗಳ ಸಾಮ್ರಾಜ್ಯ ಯಾತ್ರೆಯ ವರದಿ ,,
೫. ದ್ವಿದಲ ರಾಜ್ಯಪದ್ಧತಿಯ ಕ್ರಮ ,,
೬. ಶಿಕ್ಷಣ ಪರಿಷತ್ತು ,,
ಮಂಗಳೂರು— ೭-೮
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಸಂಪಾಜೆ, ಬಂಟವಾಳ, ಕಾಸರಗೋಡು
ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ಪರಿಷತ್ತು, ಉಡುಪಿ, ೫
ಕೊಂಗ್ರೆಸ್ಸಿನ ಮೀಟಿಂಗು ೮
ಕರ್ನಾಟಕದ ದೇಶಾಭಿಮಾನಿಗಳ ಪರ್ಯಟನ ೫
ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮ್ಮಿಟಿಯ ಅಧ್ಯಕ್ಷರಿಗೆ ೮
ದೇಶಬಂಧು ದಾಸರ ಅಲಹಾಬಾದಿನ ಭಾಷಣದ ಕೆಲವಂಶಗಳು ೪
ಬೆಂಗಳೂರಿನಲ್ಲಿ ಜರುಗಿದ ರಾಷ್ಟ್ರ ಸೇವಕರ ಪರಿಷತ್ತು ,,

ಸ್ವದೇಶಾಭಿಮಾನಿ

ಶಕ ೧೮೪೪ ಫಾಲ್ಗುಣ ಶು|೧೮ಯು ಶುಕ್ರವಾರ

ಕರ್ನಲ್ ಏಟರ ಏಟು!

ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯು ಬಹು ನಾಜೂಕಾಗಿದೆ. ಗಯಾ ಕೊಂಗ್ರೆಸ್ಸು ಮುಗಿದಂದಿನಿಂದ ದೇಶದಲ್ಲಿ ಪಕ್ಷಭೇದಗಳುಂಟಾಗಿ ಸ್ವರಾಜ್ಯ ಸಂಪಾದನೆಯ ಯಾವ ಕಾರ್ಯವೂ ಭರದಿಂದ ನಡೆಯದ ಹಾಗಾಗಿದೆ. ಗಯಾ ಕೊಂಗ್ರೆಸ್ಸಿನಲ್ಲಿ 'ಬೇಡಬದಲಾವಣೆ'ಯವರು ದುರಾಗ್ರಹ ದೇವತೆಯನ್ನು ಅಪ್ಪಿಕೊಂಡ ಕಾರಣ ರಾಷ್ಟ್ರೀಯಪಕ್ಷವು ಕೊಂಗ್ರೆಸ್ಸಿನ ಛತ್ರದಲ್ಲಿ ಇನ್ನೊಂದು "ಸ್ವರಾಜ್ಯಪಕ್ಷ"ವನ್ನು ಸ್ಥಾಪಿಸಿ ತನ್ನ ಉದ್ದೇಶವನ್ನು ಸಾಧಿಸಲು ತನ್ನ ಸಾಧನಗಳಿಂದ ಯತ್ನಿಸುತ್ತಿದೆ. ಈ ಪಕ್ಷದ ಮೊದಲನೆಯ ಸಭೆಯು ಮುಂಬಯಿಯಲ್ಲಿ ಸೇರಿತ್ತು; ಅನಂತರ ಅಲ್ಲಿ ರೂಪಿಸಿದ ಯೋಜನೆಯನ್ನು ಬೇರೆ ಬೇರೆ ಮುಖಂಡರು ಸರಿಯಾಗಿ ವಿಮರ್ಶಿಸಿ ಪುನರ್ವಿಮರ್ಶೆಯ ಬಗ್ಗೆ ಮತ್ತು ಕೊನೆಯ ನಿರ್ಣಯದ ಬಗ್ಗೆ ಅಲಹಾಬಾದದಲ್ಲಿ ಎರಡನೆಯ ಸಭೆಯು ಸೇರಿತ್ತು. ಈ ಸಭೆಯಲ್ಲಿ ದೇಶಬಂಧುಗಳಾದ ಚಿತ್ತರಂಜನದಾಸರು ಬಾಬುಭಗವಾನದಾಸರ ಸಹಾಯದಿಂದ ತಯಾರಿಸಿದ ಸ್ವರಾಜ್ಯಯೋಜನೆಯನ್ನು ಸಭಾಸದರ ವಿಚಾರಕ್ಕೆ ತಂದಿದ್ದರು. ಆ ಯೋಜನೆಯಲ್ಲಿ ಯುಕ್ತ ಪರಿವರ್ತನಗಳನ್ನು ಮಾಡಿ ರಾಷ್ಟ್ರೀಯ ಪಕ್ಷದ ಮುಖಂಡರಾದ ಚಿತ್ತರಂಜನರು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಈ ಯೋಜನೆಯು ಇನ್ನೂ ನಿಶ್ಚಿತ ಸ್ವರೂಪವನ್ನು ಹೊಂದಿಲ್ಲವಾದಕಾರಣ ಅದರ ಗುಣ ವಿಮರ್ಶೆಯನ್ನು ನಾವು ಈ ಹೊತ್ತೆ ಮಾಡಲು ಇಚ್ಛಿಸುವುದಿಲ್ಲ. ಶ್ರೀ ದಾಸರು ತಯಾರಿಸಿದ ಸ್ವರಾಜ್ಯಯೋಜನೆಯ ಮುಖ್ಯ ಲಕ್ಷಣವನ್ನು ಒಂದೆ ಮಾತಿನಿಂದ ಹೇಳುವುದಾದರೆ ಅವರ ಯೋಜನೆಯು ಕಾರ್ಯರೂಪದಲ್ಲಿ ಬಂದಲ್ಲಿ ಈಗಿನ ಬ್ರಿಟಿಷ್ ಸರಕಾರಕ್ಕೆ ಅದು ಸರಿಯಾದ ಪ್ರತಿಸ್ಪರ್ಧಿಯಾದೀತೆನ್ನಲು ಅಡ್ಡಿ ಇಲ್ಲ. ಪಂಚಾಯತ ಸಂಸ್ಥೆಗಳ ಮಹತ್ವವು ಮತ್ತು ಕಾರ್ಯಪ್ರವರ್ತಕತ್ವವು ಅವರ ಯೋಜನೆಯಿಂದ ಸ್ಪಷ್ಟವಾಗುತ್ತವೆ. ರಾಷ್ಟ್ರೀಯಪಕ್ಷವು "ಸ್ವರಾಜ್ಯಪಾರ್ಟಿ" ಎಂಬ ಹೆಸರನ್ನು ತಾಳಿ ಯಾವ ಈ ಹೊಸ ಕಾರ್ಯಗಳನ್ನು ಮಾಡಲುಪಕ್ರಮಿಸಿರುವುದೊ ಅಷ್ಟರೊಳಗೆ ಕೆಲವು ಇತರ ದೇಶಭಕ್ತರು ರಾಷ್ಟ್ರೀಯ ಸಭೆಯಲ್ಲಿ ಈ ಒಡಕು ಬೇಡ, ಇತ್ತಂಡಗಳೂ ಒಪ್ಪಿಗೆ ಇರುವ ಶರ್ತಗಳ ಮೇಲೆ ಐಕ್ಯವಾಗಬೇಕು ಎಂದು ಯತ್ನಿಸಿ ಅದೆ ಅಲಹಾಬಾದದಲ್ಲಿ ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯನ್ನು ಸೇರಿಸಿ ಪರಸ್ಪರ ವಿಚಾರಗಳ ವಿನಿಮಯವನ್ನು ಮಾಡುತ್ತಿದ್ದಾರೆ. ಈ ಐಕ್ಯಪ್ರಯತ್ನವು ಎಷ್ಟರಮಟ್ಟಿಗೆ ಸಫಲವಾದೀತೆಂದು ಈ ಹೊತ್ತೆ ನಮ್ಮಿಂದ ಹೇಳಲಾಗದು. ರಾಷ್ಟ್ರೀಯಪಕ್ಷದವರ ಅಭಿಪ್ರಾಯಕ್ಕನುಗುಣವಾಗಿ ಎಂದರೆ ಅವರ ಶರ್ತಗಳ ಮೇರೆಗೆ ಒಪ್ಪಂದವಾಗುವದಾದರೆ ಸಂತೋಷವೆ ಸರಿ. ಬಹುಪಕ್ಷದವರ ದುರಾಗ್ರಹದಿಂದ ಕೊಡಲಿನಂತೆ ಒಡಕು ಉಳಿದುಹೋದರೂ ಅದರಲ್ಲಿ ನಮಗನಕ ವ್ಯಸನವಿಲ್ಲ. ಅಂತು ಈ ಐಕ್ಯದ ಪ್ರಶ್ನೆಯನ್ನು ಬಿಟ್ಟುಬಿಟ್ಟು ಹಿಂದುಸ್ಥಾನದ ಈ ಹೊತ್ತಿನ ರಾಜಕೀಯ ಪರಿಸ್ಥಿತಿಯನ್ನು ನಿರೀಕ್ಷಿಸಿದರೆ ಎಲ್ಲಕಡೆಯಲ್ಲಿ ಕಾರ್ಯವ್ಯಾಮೋಹವು ಮುಚ್ಚಿಕೊಂಡಿದೆ. ರಾಷ್ಟ್ರೀಯ ಸಭೆಯು ಈಗ ನಾಲ್ವತ್ತು ವರ್ಷಗಳಿಂದೀಚೆ ದೇಶದ ರಾಜಕಾರಣದ ಪ್ರವರ್ತಕನಾಗಿತ್ತು. ಪರಂತು ಇತ್ತಲಾಗಿ ಅದು ಆತ್ಮಿಕಬಲದ ಹೆಸರಿನಿಂದ ಅನತ್ಯಾಚಾರಿತ್ವದ ಸ್ತೋತ್ರವನ್ನು ಬೆಳಸಿ ರಾಜಕಾರಣದ ವೃಕ್ಷಕ್ಕೆ ಹುಳಹಿಡಿಸಿತು. ವಿಧಾಯಕ ಕಾರ್ಯಕ್ರಮದ ಸುಂದರ ಸ್ತೋತ್ರವನ್ನು ಹಾಡಿ ಜನರಲ್ಲಿರುವ ರಾಜಕೀಯ ಸಂಸ್ಕಾರಗಳನ್ನೆ ಅದು ಉನ್ಮೂಲಿಸಹತ್ತಿದೆ. ರಾಷ್ಟ್ರೀಯ ಸಭೆಯು ಗಯಾದೊಳಗಿನ ವಿಷ್ಣುಪಾದದ ಮೇಲೆ, ಬುದ್ಧಮುನಿಯ ಜ್ಞಾನವೃಕ್ಷದ ಮುಂದೆ ತನ್ನ ಕೃತ್ಯದ ಪರಮಾವಧಿಯನ್ನು ಹೊಂದಿದೆ. ಬೇರೆ ಮಾತುಗಳಿಂದ, ಗಯಾದಲ್ಲಿ ಫಲ್ಗು ನದಿಯು ಹೇಗೆ ಗುಪ್ತಗಾಮಿನಿಯಾಗಿದೆಯೊ ಹಾಗೆಯೆ ರಾಷ್ಟ್ರೀಯ ಸಭೆಯು ರಾಜಕಾರಣದಲ್ಲಿ ಮಾಯವಾಗಿಹೋಗಿದೆ. ಇದು ಈಗಿನ ಹಿಂದುಸ್ಥಾನದ ನಿಜವಾದ ರಾಜಕೀಯ ಪರಿಸ್ಥಿತಿಯು. ಇದು ದೇಶದ ಸಾತ್ವಿಕ ವೀರವೃತ್ತಿಯನ್ನು ಕಳೆದುಹಾಕಿ ತೇಜೋಭಂಗವನ್ನು ಮಾಡಹತ್ತಿದೆ. ಇದಕ್ಕೆ ಎಷ್ಟು ಬೆಲೆ ಎಂಬುದು ನಾವು ಜನರೂ ಬಲ್ಲೆವು, ಅಧಿಕಾರಿಗಳೂ ಬಲ್ಲರು. ನಿರ್ಮಾಲ್ಯತುಲ್ಯವಾದ ಈ ರಾಷ್ಟ್ರೀಯ ಸಭೆಯಿಂದ ಯಾವ ರಾಜಕೀಯ ಪ್ರಗತಿಯೂ ಸಾಧ್ಯವಾಗಲಿಕ್ಕಿಲ್ಲವೆಂಬುದು ಇಲ್ಲಿ ಎಲ್ಲರಿಗೆ ಗೊತ್ತಿದ್ದ ವಿಷಯವೆ ಸರಿ. ಆದರೂ ಇಂಗ್ಲಾಂಡಿನಲ್ಲಿ ಕೆಲವು ಉಪಾಧ್ಯಾಪಿಗಳು ಹಿಂದೂಸ್ಥಾನವನ್ನು ಪಾಶವಬಲದಿಂದ ಈ ಲೋಕದಲ್ಲಿ ಇಲ್ಲದ್ದನ್ನಾಗಿಯೆ ಮಾಡಬೇಕೆಂದು ಬಹು ಕುತೂಹಲವುಳ್ಳವರಾಗಿದ್ದಾರೆ. ಹಿಂದೂಸ್ಥಾನದಲ್ಲಿ ಉಗ್ರ ಚಳವಳವಂತೂ ಇಲ್ಲ, ಸಾಮಾನ್ಯ ಚಳವು ಕೂಡ ರೂಪಾಂತರವನ್ನು ಹೊಂದುತ್ತಾ ಹೊಂದುತ್ತಾ ಕೊನೆಗೆ ಲುಪ್ತವಾಗುವ ದಾರಿಗೆ ಬಂದಲ್ಲೂ ವಿಲಾಯತಿಯ ಉಪಾಧ್ಯಾಪಿಗಳಿಗೆ ಹಿಂದೂಸ್ಥಾನದಲ್ಲಿ ಚಳವಳದ ಪ್ರಲಯಾಗ್ನಿಯು ಹೊತ್ತಿಕೊಂಡಿದೆ ಎಂದು ತೋರುತ್ತದೆ! ಹಿಂದೂಸ್ಥಾನದಲ್ಲಿ ಪಕ್ಷಭೇದಗಳು ಜನಿಸಿ ರಾಜಕೀಯ ಚಳವಳದ ಒರತೆಯು ಬತ್ತಿಹೋಗುವಾಗ ಇನ್ನೊಂದು ಕಡೆ ಅಧಿಕಾರಿ ವರ್ಗದ ವಿಪರೀತ ಕಾನೂನುಗಳ ದೆಸೆಯಿಂದ ಮತ್ತು ಉಗ್ರಧೋರಣದಿಂದ ರಾಜಕೀಯ ಚಳವಳದ ಪಸೆಯು ಕೂಡ ಆರಿಹೋಗುವಾಗ ವಿಲಾಯತಿಯ ಉಪದ್ಯಾಪಿಗಳಿಗೆ ಇಲ್ಲಿ ರಾಜಕೀಯ ಚಳವಳದ ಸಹಸ್ರಮುಖಿಯಾದ ಪ್ರವಾಹವೆ ತೋರುವುದು! ಹಿಂದುಸ್ಥಾನದಲ್ಲಿ ರಾಜಕೀಯ ಚಳವಳದ ಉತ್ಕಟತೆಯು ಇಲ್ಲವೆಂಬ ಸತ್ಯವಾದ ಸಂಗತಿಯು ವಿಲಾಯತಿಯ ಉಪದ್ಯಾಪಿಗಳಿಗೆ ಗೊತ್ತಿಲ್ಲವೆ? ಗೊತ್ತಿದೆ. ಆದರೂ ಉಪದ್ಯಾಪಿಗಳೆ ಅವರು! ಮೊದಲೆ ಮುಮೂರ್ಷುವಾದ ಚಳವಳದ ತಲೆಗೆ ದಂಡೋಪಾಯದ ಒಂದು ದೊಡ್ಡ ಕಲ್ಲನ್ನು ಹಾಕಿದರೆ ಉಸುರುಗಟ್ಟಿ ಅದು ನಿಶ್ಶೇಷವಾದೀತೆಂಬ ಶುಭನಿರೀಕ್ಷೆಯಿಂದ ಈ ಉಪದ್ಯಾಪಿಗಳು "ಹಿಂದುಸ್ಥಾನದಲ್ಲಿ ರಾಜಕೀಯ ಚಳವಳದ ತೋಳವು! ತೋಳವು!" ಎಂದು ಕೂಗಿಕೊಂಡೆ ಇರುವರು. ಈ ರೀತಿಯಿಂದ ಕೂಗುವುದರಲ್ಲಿ ಇವರ ಇಂಗಿತವು ವಜ್ರದ ಕತ್ತಿಯಿಂದ ಸರಕಾರವು ಇಲ್ಲಿಯ ಚಳವಳದ ಅಂಕುರವನ್ನೆ ಕಡಿದುಹಾಕಬೇಕೆಂದಿರುವದು. ಇಂಥ ಉಪದ್ಯಾಪಿಗಳಲ್ಲಿ ಕರ್ನಲ್ ಏಟರು ಶಿಖಾಮಣಿಗಳಾಗಿದ್ದಾರೆ. ಇವರು ಹಿಂದುಸ್ಥಾನದ ವಿಷಯವಾಗಿ ಹೆಚ್ಚಿನ ಜಾಗ್ರತೆಯನ್ನು ತೆಕ್ಕೊಂಡು ಹಿಂದುಸ್ಥಾನದಲ್ಲಿ ಶಾಂತತೆಯ ಸಂರಕ್ಷಣೆ ಸ್ವಾಸ್ಥ್ಯದ ಬೆಳವಣಿಗೆ, ನೀತಿಯ ಸ್ಥಿರತ್ವ ಇವುಗಳನ್ನು ಸಾಧಿಸಿಕೊಡುವವನು ತಾನೆ ಎಂದು ತಿಳಕೊಳ್ಳುತ್ತಾರೆ. ಹಿಂದುಸ್ಥಾನದಲ್ಲಿ ಬ್ರಿಟಿಷ್ ರಾಜ್ಯವು ಟಿಟ್ಟಿಭದ ಕಾಲಿನ ಆಧಾರದಮೇಲೆ ವಿಸ್ತೃತವಾದ ಆಕಾಶವು ನಿಂತಿರುವಂತೆ ತನ್ನ ಜಾಗ್ರತೆಯ ಮೇಲೆಯೆ ನಿಂತುಕೊಂಡಿದೆ ಎಂದು ಈ ಏಟ ಸಾಹೇಬರು ತಿಳುಕೊಂಡಿದ್ದಾರೆ. ಮತ್ತು ಈ ತಿಳಿವಿನಿಂದ ಅವರು ಪಾರ್ಲಿಮೆಂಟಿನಲ್ಲಿ ದೇಶಕಾಲಗಳ ಯಾವ ನಿರ್ಬಂಧವನ್ನೂ ಲೆಕ್ಕಿಸದೆ ಹಿಂದುಸ್ಥಾನದ ರಾಜ್ಯದಾಡಳಿತವನ್ನು ಕುರಿತು ಪ್ರಶ್ನೆಗಳ ಕುದುರೆಗಳನ್ನು ಭಾರತಮಂತ್ರಿ ಮತ್ತು ಉಪಭಾರತಮಂತ್ರಿ ಇವರ ಮೇಲೆ ಹಾರಿಸಹತ್ತಿದ್ದಾರೆ. ನಿತ್ಯದ ಈ ಕ್ರಮದಂತೆ ಈ ಕರ್ನಲ್ ಏಟರು ಮೊನ್ನೆ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಅಧಿಕಾರಿಗಳಿಗೂ ಮತ್ತು ಪರ್ಯಾಯದಿಂದ ಭಾರತ ಮಂತ್ರಿಗಳಿಗೂ ಒಂದು ಬಗೆಯ ಏಟನ್ನು ಕೊಟ್ಟಿರುವರು. "ಹಿಂದುಸ್ಥಾನದಲ್ಲಿ ರಾಜಕೀಯ ಚಳವಳವು ಭಯಂಕರ ಸ್ಥಿತಿಯಲ್ಲಿ ನಡಕೊಂಡಿದೆ. ಗಯಾ ಕೊಂಗ್ರೆಸ್ಸಿನಲ್ಲಿ ಸರಕಾರದ್ರೋಹಕರವಾದ ಎಷ್ಟೊ ಠರಾವುಗಳು ಪಾಸಾಗಿವೆ ಮಾತ್ರವಲ್ಲ, ಆ ಠರಾವುಗಳನ್ನು ಕುರಿತು ವೈಸರಾಯರು ಸಹ ಭಾಷಣವನ್ನು ಮಾಡಿದ್ದಾರೆ. ಹೀಗಿರುವಲ್ಲಿ ಅಲ್ಲಿ ಉತ್ಪನ್ನವಾಗಲಿಕ್ಕಿದ್ದ ಗಲಭೆಯನ್ನು ನಿಲ್ಲಿಸಲು ಸರಕಾರವು ಯಾವ ಮುಂಜಾಗ್ರತೆಯನ್ನು ತಕ್ಕೊಂಡಿದೆ? ಗಲಾಟೆಯು ಉತ್ಪನ್ನವಾದ ಮೇಲೆ ಅದನ್ನು ನಿಲ್ಲಿಸಲು ಯತ್ನಿಸುವುದಕ್ಕಿಂತ ಮುಂಜಾಗ್ರತೆಯನ್ನು ತೆಕ್ಕೊಳ್ಳುವುದೆ ಲೇಸಲ್ಲವೆ?" ಇತ್ಯಾತಿ ಅರ್ಥವನ್ನು ಸೂಚಿಸುವ ಪ್ರಶ್ನೆಗಳನ್ನು ಕರ್ನಲ್ ಏಟರು ಹಾಕಿದರು. ಹಿಂದುಸ್ಥಾನದಲ್ಲಿ ಉಗ್ರಧೋರಣವನ್ನು ಪುನಃ ಪ್ರಾರಂಭಿಸಿ ಚಳವಳದ 'ಕತ್ತನ್ನು ಹಿಸುಕಬೇಕೆಂಬುದೆ ಇವರ ಮೇಲಿನ ಪ್ರಶ್ನೆಯ ಇಂಗಿತವು. ಹಿಂದುಸ್ಥಾನವು ಮೊದಲೆ ದೊಡ್ಡ ಅಧಿಕಾರಿಗಳ ಹೆಚ್ಚು ಹೆಚ್ಚು ಸಂಬಳದ ಭಾರದಿಂದ ಬಗ್ಗಿಹೋಗಿದೆ. ದಾರಿದ್ರ್ಯವು ಆಯೆಂದು ಬಾಯಿ ತೆರೆದಿರುವಾಗ ಮತ್ತು ಆ ಅಸಂತೋಷದ ಜ್ವಾಲೆಗಳು ಎಲ್ಲಾ ಕಡೆಯಲ್ಲಿ ದಹಿಸಿಕೊಂಡಿರುವಾಗ ಕರ್ನಲ್ ಏಟರ ಅಭಿಪ್ರಾಯದಂತೆ ಪುನಃ ದಂಡೋಪಾಯವನ್ನು ಕೈಕೊಂಡರೆ ಹಿಂದುಸ್ಥಾನದ ಅವಸ್ಥೆಯು ಏನಾದೀತೆಂದು ಯಾರು ಹೇಳಬಲ್ಲರು! ಇಲ್ಲಿಯ ರಾಜ್ಯಕಾರಭಾರವು ಎಷ್ಟರಮಟ್ಟಿಗೆ ಖರ್ಚಿನದಾಗಿದೆ ಎಂದರೆ ಕಾಯಿದೆ ಕೌನ್ಸಿಲಿನ ಮಂತ್ರಿಗಳು ಮತ್ತು ಅಧ್ಯಕ್ಷರು—ಉದಾಹರಣಾರ್ಥವಾಗಿ, ಮದ್ರಾಸಿನ ಕೌನ್ಸಿಲ್ ಮಂತ್ರಿಗಳು ಮತ್ತು ಅಧ್ಯಕ್ಷರು ತಮ್ಮ ಸಂಬಳವನ್ನು ತಗ್ಗಿಸಿಕೊಳ್ಳಲು ತಾವೆ ಸೂಚಿಸಿಕೊಂಡು ನಡತೆಯಲ್ಲಿ ತರಲಾರಂಭಿಸಿದ್ದಾರೆ. ಸಿವಿಲಿಯನರು ಕೂಡ ಈ ಸ್ತುತ್ಯ ಸಂಗತಿಯನ್ನು ಅನುಕರಿಸಿದ್ದರೆ ಆಗಬಹುದಿತ್ತು; ದೇಶವು ಅವರ ಋಣೀಯಾಗಬಹುದಿತ್ತು. ಇಂಥ ಸದಾಲೋಚನೆಯು ಇಲ್ಲಿಯ ಸಿವಿಲಿಯನರ ತಲೆಯಲ್ಲಿ ಬರುವುದಿಲ್ಲವಾದರೆ ವಿಲಾಯತಿಯಲ್ಲಿ ಕ. ಏಟರು ಇಂಥ ಪ್ರಶ್ನೆಗಳನ್ನು ಕೇಳಬಹುದಿತ್ತಲ್ಲವೆ? ಅದರ ಬದಲಾಗಿ ಉಗ್ರ ಉಪಾಯದ ಸೂಚನೆಯನ್ನು ಕೊಡುವ ಉಪದ್ಯಾಪವನ್ನು ಈ ಬಹದ್ದೂರರು ಮಾಡತೊಡಗಿದ್ದಾರೆ. ಹಿಂದುಸ್ಥಾನಕ್ಕೆ ಇನ್ನೂ ಏಟುಗಳನ್ನು ಕೊಡಬೇಕೆಂಬುದೆ ಇವರ ತಾತ್ಪರ್ಯವು. ಆದರೆ ಅರ್ಲವಿಂಟೆರಟನ್ನರು ಏಟಂಗೆನೆ ತಿರುಗಿ ಏಟುಗಳನ್ನು ಕೊಟ್ಟರೆನ್ನಬಹುದು. "ಹಿಂದುಸ್ಥಾನವನ್ನು ಹೇಗಾಳಬೇಕು, ಶಾಂತತೆ ಮತ್ತು ಸುವ್ಯವಸ್ಥೆ ಇವುಗಳನ್ನು ಹೇಗಿಡಬೇಕು ಎಂಬುದು ಅಲ್ಲಿಯ ಅಧಿಕಾರಿಗಳಿಗೆ ಗೊತ್ತಿದೆ. ಒಂದು ವರುಷದ ಹಿಂದೆ ಇದ್ದಷ್ಟು ಕಷ್ಟಪಂಸ್ಥಿತಿಯು ಈಗ ಇಲ್ಲ. ಹೀಗಿರುವಲ್ಲಿ ನಮ್ಮ ಏಟರು ಈ ಬಗ್ಗೆ ಹೆಚ್ಚಿನ ಪರಿಶ್ರಮವನ್ನು ಪಡುವ ಅಗತ್ಯವಿಲ್ಲಾ" ಎಂದು ಸಮರ್ಪಕವಾದ ಉತ್ತರವನ್ನು ಕೊಟ್ಟರು. ಈ ಉತ್ತರದಿಂದ ಕೆಲವರಿಗೆ, ವಿಶೇಷತಃ ವಾಯ ಕೌಂಟ್ ಕರ್ಜನರಿಗೆ ಕಪಾಲಶೂಲವು ಪ್ರಾರಂಭವಾಗಿ, ಸಭ್ಯತೆಯನ್ನು ಬಿಟ್ಟು ಚಿಕ್ಕ ಮಕ್ಕಳಂತೆ ಕೂಗಲು ಪ್ರಾರಂಭಿಸಿದರಂತೆ! ಏನು ಶೋಚನೀಯವಿದು! ಆದರೆ ವಿಲಾಯತಿಯಲ್ಲಿ ಅಸಭ್ಯತೆಯಲ್ಲಿ ಸಭ್ಯತೆಯು ಇದೆ! ಇರಲಿ. ಸಾರಾಂಶ ಹಿಂದುಸ್ಥಾನದ ಪ್ರಕೃತ ರಾಜಕೀಯ ಪರಿಸ್ಥಿತಿಯು ದುರ್ಬಲವಾಗಿರುವಾಗಲೂ, ಇನ್ನಷ್ಟು ಉಪದ್ರವವನ್ನುಂಟುಮಾಡಬೇಕೆಂಬ ಬುದ್ಧಿಯಿಂದ ಕ. ಏಟರಂಥವರು ಅಲ್ಲದ ಸಲ್ಲದ ಪ್ರಶ್ನೆಗಳನ್ನು ಮಾಡಿ ಹಿಂದುಸ್ಥಾನದ ಜನತೆಗೂ ಅಧಿಕಾರವರ್ಗಕ್ಕೂ ಹೀನಯಿಸುವ ಅವ್ಯಾಪಾರೇಷು ವ್ಯಾಪಾರವನ್ನು ಮಾಡುತ್ತಿದ್ದಾರೆ. ಪರಂತು ಅವರ ಏಟು ಅವರಿಗೆನೆ ತಗಲಿತು! ಇದು ಸಂತೋಷದ ಮಾತು.

ಸ್ಫುಟವಿಚಾರಗಳು.

೧. ಭೋಪಾಳ ಸಂಸ್ಥಾನದ ಬೇಗಮು ಸಾಹೇಬರು ತಮ್ಮ ರಾಜ್ಯದಲ್ಲಿ ಒಂದು ಸ್ತುತ್ಯವಾದ ಕೃತ್ಯವನ್ನು ಮಾಡಿ ಎಲ್ಲರ ಅಭಿನಂದನಕ್ಕೆ ಪಾತ್ರರಾಗಿದ್ದಾರೆಂದು ತಿಳಿಸಲು ನಾವು ಸಂತೋಷಪಡುತ್ತೇವೆ. ಬೇಗಮುಸಾಹೇಬರು ತಮ್ಮ ರಾಜ್ಯದಲ್ಲಿ ಮದ್ಯ ಮಾರಾಟವನ್ನು ಸಂಪೂರ್ಣ ನಿಲ್ಲಿಸಿದ್ದಾರೆ. ಮದ್ಯದ ಗುತ್ತೆಯಿಂದ ಭೋಪಾಳಸಂಸ್ಥಾನಕ್ಕೆ ಪ್ರತಿ ವರ್ಷ ೪ ಲಕ್ಷದಿಂದ ೫ಲಕ್ಷ ರೂಪಾಯಿ ವರೆಗೆ ಉತ್ಪನ್ನವಾಗುತಿತ್ತು. ಈ ಉತ್ಪನ್ನವು ನಿಂತುಹೋದಕಾರಣ ಸಂಸ್ಥಾನಕ್ಕೆ ನಷ್ಟ ಒದಗುವುದಾದರೂ ಸಂಸ್ಥಾನದೊಳಗಿನ ಇತರ ಖಾತೆಗಳಲ್ಲಿ ಉಂಟಾಗುವ ತಕ್ಕ ಸುಧಾರಣೆಗಳಿಂದ ಆ ನಷ್ಟವು ತುಂಬಿಬರಬಹುದೆಂದು ಬೇಗಮುಸಾಹೇಬರಿಗೆ ಭರವಸೆ ಇದೆ. ವಸ್ತುತಃ ಈ ನಷ್ಟದ ವಿಚಾರವು ಅಷ್ಟೊಂದು ಮಹತ್ವದ್ದಲ್ಲ. ಮದ್ಯಪಾನದ ನಿವೃತ್ತಿಯಿಂದ ಉಂಟಾಗುವ ಹಾನಿಯು ಬೇರೆ ಉತ್ಪನ್ನದಿಂದ ತುಂಬಿಬರಲಿ ಅಥವಾ ಬಾರದೆ ಇರಲಿ, ಆದರೆ ಈ ರೀತಿಯಿಂದ ಸ್ವಯಂ ಸಂಸ್ಥಾನವೆ ಈ ವ್ಯಾಪಾರವನ್ನು ಅಥವಾ ದಲಾಲಿಯನ್ನು ನಿಲ್ಲಿಸಿ ಪ್ರಜೆಗಳ ದುರ್ವ್ಯಸನವನ್ನು ಬಿಡಿಸಲು ಏನು ಯತ್ನಿಸಿದೆಯೊ ಅದರಷ್ಟು ದೊಡ್ಡಲಾಭವು ಬೇರೆ ಇರದೆಂದು ನಾವು ತಿಳಿಯುತ್ತೇವೆ. ಭೋಪಾಳ ಸಂಸ್ಥಾನದ ಮಾನದಿಂದ ೪-೫ ಲಕ್ಷ ರೂಪಾಯಿಯ ಉತ್ಪನ್ನವು ಮುಳುಗುವುದು ನಿಜವಾಗಿ ಸಾಮಾನ್ಯದ ಸಂಗತಿಯಲ್ಲ. ಚಿಕ್ಕ ಸಂಸ್ಥಾನಕ್ಕೆ ೪-೫ಲಕ್ಷದ ರಕಮು ಎಷ್ಟೊ ದೊಡ್ಡ ಗಂಟೆ ಸರಿ. ಆದರೂ ಪ್ರಜೆಗಳು ನಿರ್ವ್ಯಸನಿಗಳಾಗಿರುವುದೆ ಸಂಸ್ಥಾನದ ಪ್ರಗತಿಯೂ ಲಾಭವೂ ಆಗಿದೆ ಎಂದು ಬೇಗಮ್ ಅಮ್ಮನವರ ತಿಳುವಳಿಕೆ ಇದ್ದಕಾರಣ ಮದ್ಯಮಾರಾಟದಿಂದ ಕಾಸಿಗೆಕಾಸು ಕೂಡಿಸಿಡುವ ಲೋಭವು ಅವರಿಗುಂಟಾಗಲಿಲ್ಲ. ಇದು ಸಂತೋಷದ ಮಾತಾಗಿದೆ. ಬೇಗಮರು ಸಂಸ್ಥಾನದಲ್ಲಿ ಮಾಡಿದ ಈ ಸ್ತುತ್ಯ ಉಪಕ್ರಮವು ಇತರ ಸಂಸ್ಥಾನಿಕರಿಂದ ಅನುಕರಿಸಲ್ಪಟ್ಟೀತೆ? ಹಿಂದು ಧರ್ಮದಲ್ಲಿ ಮದ್ಯವು ನಿಷಿದ್ಧವಾಗಿರುವುದು. ಹೀಗಿರುವಾಗ ಹಿಂದು ಸಂಸ್ಥಾನಿಕರು ಇದನ್ನು ಈ ಮೊದಲೆ ಮಾಡಬೇಕಿತ್ತು; ಮಹಮ್ಮದೀಯ ಸಂಸ್ಥಾನಿಕರು ಮಾಡಿದ ಬಳಿಕವಾದರೂ ಮೈಸೂರು, ಇಂದೂರು, ಕೊಚ್ಚಿ, ಕೊಲ್ಲಾಪುರ ಮುಂತಾದ ಹಿಂದು ಸಂಸ್ಥಾನಗಳಲ್ಲಿ ಮದ್ಯದ ರಾಜಕೀಯ ಮಾರಾಟವು ನಡೆಕೊಂಡಿರುವುದು ಲಾಂಛನಾಸ್ಪದವಾದ್ದು! ನಮ್ಮ ಬ್ರಿಟಿಷ್ ರಾಜ್ಯದಲ್ಲಂತೂ ಮದ್ಯವು ಅವರ ಧರ್ಮದೃಷ್ಟ್ಯಾನಿಂದ್ಯವಲ್ಲ. ಪಾನ ಸ್ವಾತಂತ್ರ್ಯದ ಹಕ್ಕು ಎಲ್ಲಕ್ಕೆಯು ಮೇಲು ಮತ್ತು ಮುಖ್ಯವಾದ್ದು! ಹೀಗಿರಲು ಬ್ರಿಟಿಷ್ ಸರಕಾರವು ಅದನ್ನು ಹೇಗೆ ನಿಲ್ಲಿಸೀತು? ಜನರು ನೀತಿಭ್ರಷ್ಟರಾಗಲಿ, ಇಲ್ಲವೆ ವ್ಯಸನಾಸಕ್ತರಾಗಲಿ ಸರಕಾರದ ಖಜಾನೆಯು ತುಂಬಿಕೊಂಡಿದ್ದರೆ ಸರಿ!

೨. ಡಿಲ್ಲಿಯಲ್ಲಿ ನಡಿಯುವ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಮದ್ರಾಸಿನ ರಂಗಾಚಾರ್ಯರು ಪೀಲರ ಡಿಸ್‌ಪೆಚಿನ ವಿಷಯವಾಗಿ ಒಂದು ಠರಾವನ್ನು ತಂದರು. ಭಾರತ ಮಂತ್ರಿಗಳಾದ ಪೀಲಸಾಹೇಬರು ಹಿಂದುಸ್ಥಾನಕ್ಕೆ ೧೦ ವರ್ಷಕ್ಕಿಂತ ಮುಂಚೆ ಸುಧಾರಣೆಗಳನ್ನು ಪುನಃ ಕೊಡಲಾಗುವುದಿಲ್ಲವೆಂದು ತಮ್ಮ ಡಿಸ್‌ಪೇಚಿನಲ್ಲಿ ಹೇಳಿದ್ದರಿಂದ ಎಸೆಂಬ್ಲಿಯ ಆತ್ಯಂತಿಕ ಅಸಮಾಧಾನವನ್ನು ಭಾರತಮಂತ್ರಿಗಳಿಗೆ ತಿಳಿಸಬೇಕೆಂದು ರಂಗಾಚಾರ್ಯರ ಠರಾವಿನಲ್ಲಿ ನಮೂದಿಸಲ್ಪಟ್ಟಿತ್ತು. ಎಸೆಂಬ್ಲಿಯ ಮುಂದೆ ಈ ಠರಾವನ್ನು ತರುವಾಗ ರಂಗಾಚಾರ್ಯರು ಮತ್ತು ಅದನ್ನು ಅನುಮೋದಿಸುವಾಗ ಮುನಸಿ ಈಶ್ವರ ಶರಣರು ಸುಧಾರಣೆಗಳ ಮುಂದಿನ ಕಂತನ್ನು ಕೊಡುವುದರಲ್ಲಿ ವಿಳಂಬವಾದರೆ ಹಿಂದುಸ್ಥಾನದಲ್ಲಿ ಇನ್ನಷ್ಟು ಅಸಂತೋಷವು ಹೇಗುಂಟಾದೀತು, ಹಿಂದುಸ್ಥಾನ ಸರಕಾರವು ಸ್ವತಂತ್ರವಾಗಬೇಕಾದಕಾರಣ ಅದರ ಮೇಲಿನ ಭಾರತಮಂತ್ರಿಗಳ ಅತ್ತೆಯ ಅಧಿಕಾರವನ್ನು ತೆಗೆದುಹಾಕುವುದು ಎಷ್ಟುಹಿತಾವಹವು ಇತ್ಯಾದಿ ಸಂಗತಿಗಳನ್ನು ಪ್ರಸ್ತಾಪಿಸಿದರು. ಮದ್ರಾಸ ಸರಕಾರದ ಪ್ರತಿನಿಧಿಗಳಾದ ಮಿ. ಮೊಯರ ಎಂಬವರು ಮತ್ತು ಆಸಾಮುಪ್ರಾಂತಿಕ ಸರಕಾರದ ಪ್ರತಿನಿಧಿಗಳಾದ ಮಿ. ಎಲೆನ್ ಎಂಬವರು ರಂಗಾಚಾರ್ಯರನ್ನೂ ಹಿಂದುಸ್ಥಾನದೊಳಗಿನ ರಾಜಕೀಯ ಮುಖಂಡರನ್ನೂ ಯಥೇಚ್ಛವಾಗಿ ಬೈದು ತಮ್ಮ ಮನಸ್ಸಿನ ಸಮಾಧಾನವನ್ನು ಮಾಡಿಕೊಂಡರು. ಡೊ. ಗೌರ ಎಂಬವರು ಅವರ ಮತಗಳನ್ನು ಖಂಡಿಸಿದರು. ಈ ರೀತಿಯಿಂದ ಈ ವಾದವಿವಾದಕ್ಕೆ ಸರಿಯಾದ ಬಣ್ಣವು ಬರಹತ್ತಿದ್ದನ್ನು ಕಂಡು ಹೈೃಡನ್ ಎಂಬ ಒಬ್ಬ ಸಭಾಸದರು ಈ ಚರ್ಚೆಯನ್ನು ನಿಲ್ಲಿಸುವ ಬಗ್ಗೆ ಸೂಚನೆಯನ್ನು ತಂದರು. ಈ ಸೂಚನೆಯಮೇಲೆ ಭವತಿ-ನ-ಭವತಿ ನಡೆದು ಸೂಚನೆ ಪಾಸಾಯಿತು. ಮೂಲ ಠರಾವು ತತ್ರಸ್ಥವಾಯಿತು. ಈ ಕ್ರಮಗಳನ್ನೆಲ್ಲ ನೋಡುವಾಗ ಲೋಕಮತದ ತೀವ್ರತೆಯನ್ನು ಕೌನ್ಸಿಲುಗಳಲ್ಲಿ ಇನ್ನೂ ಭರದಿಂದ ಮತ್ತು ದಾರ್ಢ್ಯದಿಂದ ಪ್ರತೀತಿಗೆ ತಂದುಕೊಡುವವರು ಬೇಕಾಗಿರುವರೆಂಬುದು ಸಿದ್ಧವಾಗುತ್ತದೆ. ಕಳೆದಸಾರಿ ಹಿಂದುಸ್ಥಾನಕ್ಕೆ ಹೆಚ್ಚಿನ ಸುಧಾರಣೆಗಳನ್ನು ಕೊಡಬೇಕೆಂದು ಪಾಸುಮಾಡಿದ ಠರಾವನ್ನು ಹಿಂದುಸ್ಥಾನ ಸರಕಾರದ ಗೃಹಮಂತ್ರಿಗಳು ಹಿಂದುಸ್ಥಾನ ಸರಕಾರದ ಮತ್ತು ತಮ್ಮ ಸ್ವಂತ ಅನುಮತಿಯಿಂದ ಕಳುಹಿಸಿಕೊಟ್ಟಿದ್ದರು. ಅಂಥ ಠರಾವನ್ನು ಭಾರತಮಂತ್ರಿಗಳು ಉಜ್ಜಿಹಾಕುತ್ತಾರೆಂದಾದಮೇಲೆ ಇದು ಹಿಂದುಸ್ಥಾನ ಸರಕಾರದ ಉಪಮರ್ದವಲ್ಲವೆ? ಅದನ್ನಾದರೂ ಸಹಿಸಿಕೊಳ್ಳಬಹುದು. ಪರಂತು ಹಿಂದುಸ್ಥಾನಕ್ಕೆ ಸದ್ಯ ಹೆಚ್ಚಿನ ಸುಧಾರಣೆಗಳು ಅವಶ್ಯವಲ್ಲ ಎಂಬುದೆ ಈಗಿನ ನೋಕರಶಾಹಿಯ ಅಭಿಮತವಾಗಿರಬಹುದೆಂದು ತೋರುತ್ತದೆ. ಇಂಥ ಅಭಿಪ್ರಾಯವನ್ನು ಅದು ಕಟ್ಟಿಕೊಳ್ಳುವುದಾದರೆ ಅದರಿಂದ ಅದಕ್ಕನೆ ಹೆಚ್ಚಿನ ತೊಂದರೆಯು ಬಂದು ಸಂಭವಿಸೀತು.

೩. ಈಗಿನ ಭಾರತಮಂತ್ರಿಗಳಾದ ಲೊ. ಪೀಲರು ಈ ಮೇರೆಗೆ ಅನುದಾರತೆಯನ್ನು ತೋರ್ಪಡಿಸುವಾಗ ಮಾಜಿ ಭಾರತ ಮಂತ್ರಿಗಳಾದ ಮೊಂಟೆಗ್ಯೂ ಸಾಹೇಬರು ಹಿಂದೂಸ್ಥಾನದ ಆಕಾಂಕ್ಷೆಗಳ ವಿಷಯವಾಗಿ ಸಹಾನುಭೂತಿಯನ್ನೂ, ಅನುರಾಗವನ್ನೂ, ಸದ್ಭಾವನೆಯನ್ನೂ ವ್ಯಕ್ತಗೊಳಿಸುತ್ತಿದ್ದಾರೆ. ಕೇಂಬ್ರಿಜಿನಲ್ಲಿರುವ ಹಿಂದಿಗಳು ಕೊಟ್ಟಿರುವ ಔತನದಲ್ಲಿ ಮಿ| ಮೊಂಟೆಗ್ಯುಗಳು ಸಹಾನುಭೂತಿ ಪೂರ್ಣವಾದ ಒಂದು ಭಾಷಣವನ್ನು ಕೊಟ್ಟರು. ಹಿಂದುಸ್ಥಾನವನ್ನು ತಾನು ಸಂಪೂರ್ಣವಾಗಿ ಪ್ರೀತಿಸುತ್ತೇನೆ, ಸುಧಾರಣಾ ಕಾನೂನಿನಲ್ಲಿ ಎಷ್ಟೊ ವೈಗುಣ್ಯಗಳಿದ್ದುವಾದರೂ, ಇಂಗ್ಲಂಡವು ಆ ಕಾನೂನಿನ ತತ್ವವನ್ನು ಒಮ್ಮೆ ಒಪ್ಪಿಕೊಂಡ ಬಳಿಕ, ಅದರಿಂದಲೆ ಮುಂದೆ ಹಿಂದೂಸ್ಥಾನವು ಜನರ ಕೈಸೇರುವದು. ಎಂಬುದಾಗಿ ಹೇಳಿ ಮೊಂಟೆಗ್ಯುಗಳು ಶಾಸ್ಯರ ವಿಶ್ವಾಸವನ್ನು ಸಂಪಾದಿಸುವ ಕಲೆಯು ಇಂಗ್ಲಿಷ್ ರಾಜ್ಯಪದ್ಧತಿಯಾಗಿದೆಯಲ್ಲದೆ ಬರೆ ವಕ್ತೃತ್ವವಾಗಲಿ, ವಾದವಿವಾದವಾಗಲಿ, ಅಲ್ಲವೆಂದು ಆದಿತೋರಿಸಿದರು. ಬಳಿಕ ಪಾಶ್ಚಾತ್ಯ ದೇಶಗಳೊಳಗಿನ ರಾಜ್ಯ ಕ್ರಮಗಳಿಂದ ಐಶ್ವರ್ಯವಂತರ ಮತ್ತು ದರಿದ್ರರ ವರ್ಗಗಳು ಉತ್ಪನ್ನವಾಗಿ ಆ ಕಾರಣದಿಂದ ರಾಷ್ಟ್ರೀಯ ಮತ್ತು ಸಾಮಾಜಿಕ ಆಪತ್ತುಗಳು ಹೇಗೆ ಬರುತ್ತಿವೆ ಎಂಬುದಾಗಿ ವರ್ಣಿಸಿ, ಇಂಥ ಅನಿಷ್ಟ ಪರಿಸ್ಥಿತಿಯು ಹಿಂದೂಸ್ಥಾನದಲ್ಲಿ ಹುಟ್ಟಬಾರದೆಂದು ಆಶಿಸಿ ತಾನು ಹಿಂದೂಸ್ಥಾನದ ಆಕಾಂಕ್ಷೆಗಳ ಕಡೆಗೂ, ಅಭಿವೃದ್ಧಿ ಕಡೆಗೂ ಸಂಪೂರ್ಣವಾಗಿದ್ದೇನೆಂದು ನುಡಿದು ಭಾಷಣವನ್ನು ಉಪಸಂಹರಿಸಿದರು. ಮೊಂಟೆಗ್ಯು ಸಾಹೇಬರು, ಈಗ ಅನಧಿಕೃತರಾಗಿದ್ದಾರೆ; ಮೊದಲು ಅಧಿಕಾರದಲ್ಲಿರುವಾಗ ಅವರು ಹಿಂದುಸ್ಥಾನಕ್ಕೆ ಕೊಟ್ಟ ದೊಡ್ಡ ಕುಂಬಳಕಾಯಿಯು ಯಾವದು ಎಂದು ಅನೇಕರು ಈ ಸಂದರ್ಭದಲ್ಲಿ ನೆನಸಿಯಾರು. ಪರಂತು, ಮನಸ್ಸಿನಲ್ಲಿ ವಿಚಾರ, ಬಾಯಿಯಲ್ಲಿ ಭಾಷಣ, ಕೈಯಲ್ಲಿ ಕ್ರಿಯೆ ಇವುಗಳಲ್ಲಿ ಒಂದೆಯೊಂದು ಇಲ್ಲದ ಬಳಿಕ, ಮೇಲಾಗಿ ಅಸಹಾನುಭೂತತೆಯು, ಅನುದಾರತನದ ಮತ್ತು ಅನಪೇಕ್ಷಿತವಾದ ಧೋರಣವೆ ಕೈಕೊಳ್ಳಲ್ಪಡುವಲ್ಲಿ ಸವಿನುಡಿಯ ಸಹಾನುಭೂತಿಯಾದರೂ ಶ್ಲಾಘ್ಯವಲ್ಲವೆ?

೪. ನಾಮದಾರರೂ ಮತ್ತು ರಾಜಮಾನ್ಯರೂ ಆದ ಶ್ರೀನಿವಾಸ ಶಾಸ್ತ್ರಿಗಳು ತಮ್ಮ ಸಾಮ್ರಾಜ್ಯಯಾತ್ರೆಯ ವರದಿಯನ್ನು ತಯಾರಿಸಿ ಹೊರಗೆಡಹಿದ್ದಾರೆ. ಇವರು ಪ್ರಕಟಿಸಿರುವ ವರದಿಯನ್ನು ಒಂದೆ ಮಾತಿನಿಂದ ವರ್ಣಿಸಬೇಕಾದರೆ, ಸ್ವತಃ ಶಾಸ್ತ್ರಿಗಳು ಮತ್ತು ಆ ಸಂಗಡದವರು—ಬಿಸಿರ್ ಗುದುರೆಯನ್ನು ಅತ್ತಿಕೊಂಡು ಹೋಗುವ ಯಾವ ಪ್ರವೃತ್ತಿಯನ್ನು ಇಟ್ಟುಕೊಂಡಿದ್ದರೊ ಅದೆ ಈ ರಿಪೋರ್ಟಿನಲ್ಲಿ ಕಂಡುಬರುತ್ತದೆ. ಅಸ್ವಾಭಾವಿಕವಾದ ಆಶಾವಾದಕಗಳನ್ನು ಸವಿನೋಡುವ ದುರಭ್ಯಾಸವು ಈ ಸಂಗಡದವರ ಮುಖ್ಯ ಧರ್ಮವಾಗಿದೆ. ಅನ್ನರಿಂದ ಆದ ಶ್ರೀನಿವಾಸ ಶಾಸ್ತ್ರಿಗಳಿಗೆ ಮಾತ್ರ ಹೇಗೆ ಬಿಟ್ಟುಹೋದೀತು? ಈ ಎಲ್ಲ ಸಂಗತಿಗಳು ಅವರ ರಿಪೋರ್ಟಿನಲ್ಲಿ ಪ್ರತಿಬಿಂಬಿತವಾಗಿವೆ. "ಕೊಲೊನಿಯದ ಜನರು ಸಾಮಾನ್ಯವಾಗಿ ಹಿಂದುಸ್ಥಾನವು ದರಿದ್ರವೆಂದೂ, ಅಸುಧಾರಿತವೆಂದೂ ತಿಳಕೊಳ್ಳುತ್ತಾರೆ. ೬೦ ವರ್ಷಗಳಿಂದ ಈಚೆ ಹಿಂದುಸ್ಥಾನವು ಯಾವ ಸುಧಾರಣೆಗಳನ್ನು ಮಾಡಿದೆಯೊ ಅವುಗಳ ಪರಿಜ್ಞಾನವು ಈ ವಸಾಹತುಗಳಿಗೆ ಉಂಟಾಗಲಿಲ್ಲ." ಇತ್ಯಾದಿ ಉದ್ಗಾರಗಳನ್ನು ಹೊರಡಿಸಿ ವರದಿಕರ್ತರು ಒಸ್ಟ್ರೇಲಿಯಾ, ನ್ಯೂಝಿಲೆಂಡ, ಕೆನಡಾ ಮುಂತಾದ ವಸಾಹತುಗಳಲ್ಲಿರುವ ಹಿಂದಿಗಳ ಪರಿಸ್ಥಿತಿ ಮತ್ತು ಅಲ್ಲಲ್ಲಿಯ ಯುರೋಪಿಯನ್ ವಸಾಹತುಗಾರರ ಮನಸ್ಥಿತಿ ಇವುಗಳನ್ನು ಚಿತ್ರಿಸಿದ್ದಾರೆ. ವಸಾಹತುಗಳಲ್ಲಿ ಹಿಂದಿಗಳಿಗೆ ಪ್ರವೇಶ, ಮತದಾನದ ಹಕ್ಕು, ಸಾಮಾನ್ಯ ನಾಗರೀಕತೆ ಮುಂತಾದ ಈ ವಿಷಯಗಳು ವಸ್ತುಸ್ಥಿತಿಯಲ್ಲಿ ಆಪದ್ಗ್ರಸ್ತಗಳೂ, ಆಕುಲವಾದವುಗಳೂ ಆದಾಗ್ಯೂ ನಾಮದಾರ ಶಾಸ್ತ್ರಿಗಳು, ಹಿಂದಿನ ಸಾಮ್ರಾಜ್ಯ ಪರಿಷತ್ತಿನಲ್ಲಿ ಹಿಂದುಸ್ಥಾನಕ್ಕೆ ಸಿಕ್ಕಿರುವ ಸಮಾನತೆ, ಪ್ರಧಾನಮಂತ್ರಿಗಳ ವಾಗ್ದಾನ, ಆಶ್ವಾಸನ, ಇತ್ಯಾದಿ ಟೊಳ್ಳು ಸಾಧನಗಳನ್ನವಲಂಬಿಸಿಕೊಂಡು ಮುಂದಿನ ಅಭ್ಯುದಯವನ್ನು ನಿರೀಕ್ಷಿಸುತ್ತಿದ್ದಾರೆ! ದೊಡ್ಡ ಮನುಷ್ಯರ ಮತ್ತು ಮುತ್ಸದ್ದಿಗಳ ಅಭಿವಚನಗಳೂ, ಆಶ್ವಾಸನಗಳೂ ಗಾರುಡಿಯ ರೂಪಾಯಿಗಳಂತೆ ನೋಟಕ್ಕೆ ಮಾತ್ರ ಚಂದವಲ್ಲದೆ ಕಾರ್ಯಕಾರಿಗಳಲ್ಲವೆಂಬುದು ಶಾಸ್ತ್ರಿಗಳಂಥ ಚಾಣಾಕ್ಷರಾದ ಜಾಣರಿಗೆ ಇನ್ನೂ ತಿಳಿಯಬರಲಿಲ್ಲ. ಇದು ದೇಶದ ದುರ್ದೈವವೆ ಸರಿ! ಮತ್ತು ಈ ಕಾರಣದಿಂದಲೆ ಇಂಥವರ ಅಮೂಲ್ಯವಾದ ಸಾಮರ್ಥ್ಯದ ಅಪವ್ಯಯವಾಗುವದು. ಇದು ಶೋಚನೀಯವಲ್ಲವೆ?

೫. ದ್ವಿದಲ ರಾಜ್ಯಪದ್ಧತಿಯು ಜನತೆಯ ದೃಷ್ಟಿಯಿಂದ ಮಾತ್ರ ದೋಷಾವಹವಾದದ್ದೆಂದಲ್ಲ, ನೋಕರಶಾಹಿಗೂ ಅದು ದೋಷವುಳ್ಳದ್ದಾಗಿಯೆ ತೋರುವುದು. ಬಿರ್ಖುಂಟಬಾಯಿಯವರು ವಿಶ್ವಪ್ರಯತ್ನದಿಂದ ಒದಗಿಸಿದ ಡಿಲ್ಲಿಯ "ಬಿರ್ಖುಂಟ್ ಪರಿಷತ್ತಿ"ನ ಅಧ್ಯಕ್ಷರಾದ ಡೊ. ಸಪ್ರುಗಳು ತಮ್ಮ ಅಧ್ಯಕ್ಷಸ್ಥಾನದ ಭಾಷಣದಲ್ಲಿ ದ್ವಿದಲ ರಾಜ್ಯಪದ್ಧತಿಯು ಅಧಿಕಾರಿ ವರ್ಗಕ್ಕಾದರೂ ತೃಪ್ತಿಕರವೆಂದು ಹೇಳಲಾಗುವುದಿಲ್ಲವೆಂಬುದಾಗಿ ಹೇಳಿದ್ದರು. ಡೊ. ಸಪ್ರುಗಳು ವರಿಷ್ಠ ಸರಕಾರದ ಕಾಯಿದೆ ಮಂತ್ರಿಗಳಾಗಿದ್ದ ಕಾರಣ, ಅಧಿಕಾರಿ ವರ್ಗದ ಇಂಗಿತವು ಅವರಿಗೆ ಗೊತ್ತಾಗುವುದು ಅಸಾಧ್ಯವಲ್ಲ. ಅಂತು ಅವರು ನೋಕರಶಾಹಿಯ ಇಂಗಿತವನ್ನು ಹೊರಗೆಡಹಲು ತಕ್ಕವರಾದ ಅಧಿಕಾರಿಗಳೆ ಎಂದೆನಲು ಬಾಧಕವಿಲ್ಲ. ದ್ವಿದಲ ರಾಜ್ಯಪದ್ಧತಿಯನ್ನು ಕುರಿತು ಈ ರೀತಿಯಿಂದ ಕೇವಲ ಜನತೆಯೂ, ಕೇವಲ ಅಧಿಕಾರಿ ವರ್ಗವೂ ಅಸಮಾಧಾನವನ್ನು ವ್ಯಕ್ತಗೊಳಿಸುವಾಗ, ಈ ಎರಡೂ ಧ್ರುವಗಳ ಮಧ್ಯದಲ್ಲಿ ನಿಂತಿರುವ ಗೃಹಸ್ಥರು ಈ ವಿಷಯವಾಗಿ ಏನು ಅಭಿಪ್ರಾಯಪಡುತ್ತಾರೆ ಎಂಬುದನ್ನು ತಿಳಕೊಳ್ಳಲು ಯಾರಿಗೂ ಕುತೂಹಲವುಂಟಾಗದೆ ಇರಲಿಕ್ಕಿಲ್ಲ. ಈಗಿನ ಕಾಯಿದೆ ಕೌನ್ಸಿಲುಗಳ ಮಂತ್ರಿಗಳೆ ಈ ಎರಡೂ ಧ್ರುವಗಳ ಮಧ್ಯದಲ್ಲಿರುವ ಪ್ರಾಣಿಗಳು! ಇವರಲ್ಲಿ ಲಾಲಾ ಹರಿಕಿಸನಲಾಲ ಎಂಬವರು, ಪಂಜಾಬದ ಎಗ್ರಿಕಲ್ಚರ ಇಖಾಲೆಯ ಮಂತ್ರಿಗಳು, ಒಬ್ಬರಾಗಿರುವರು. ಇವರು ಮೊನ್ನೆ ಒಂದು ಸಂದರ್ಭದಲ್ಲಿ ದ್ವಿದಲ ರಾಜ್ಯಪದ್ಧತಿಯನ್ನು ಕುರಿತು ಸ್ವಾಭಿಪ್ರಾಯನ್ನು ಹೊರಗೆಡಹಿದರು. "ದ್ವಿದಲ ರಾಜ್ಯಪದ್ಧತಿಯು ಕೆಲವು ಸಂಗತಿಗಳನ್ನು ಕೊಟ್ಟಿದೆಯಾದರೂ, ನಿಜವಾಗಿ ಅದು ನಿರರ್ಥಕವಾಗಿಯೆ ಪರಿಣಮಿಸಿದೆ. ದ್ವಿದಲ ರಾಜ್ಯಪದ್ಧತಿಗಿಂತ ಸುಧಾರಣೆಗಳು ಹೆಚ್ಚಿನ ಯೋಗ್ಯತೆಯವುಗಳು; ಈ ಎರಡಕ್ಕಿಂತಲೂ ರಾಜಕಾರಣವು ಮೇಲಿನ ತರಗತಿಯುಳ್ಳದೆ." ಲಾಲಾ ಹರಿಕಿಸನರು ರಾಜಕಾರಣ, ದ್ವಿದಲ ರಾಜ್ಯಕ್ರಮ, ಸುಧಾರಣೆ ಇವುಗಳ ತರಗತಿಯನ್ನು ಹೇಗೆ ಬೇಕು ಹಾಗೆ ಹಚ್ಚಲಿ, ಆ ಬಗ್ಗೆ ನಮ್ಮ ಅಡ್ಡಿ ಇಲ್ಲ. ದ್ವಿದಲ ರಾಜ್ಯಪದ್ಧತಿಯ ಯೋಗ್ಯತೆಯು ಎಷ್ಟು, ಎಂಬುದೆ ಮಹತ್ವದ ಪ್ರಶ್ನೆಯು. ಅದನ್ನು ಕುರಿತು ಲಾಲಾ ಹರಿಕಿಸನರು ನಿರರ್ಥಕವೆಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ಸಾರಾಂಶ ಜನತೆ, ನೋಕರಶಾಹಿ, ಕೌನ್ಸಿಲುಗಳ ಮಂತ್ರಿಗಳು ಈ ಎಲ್ಲರ ದೃಷ್ಟಿಯಿಂದ ದ್ವಿದಲ ರಾಜ್ಯಪದ್ಧತಿಯ ನಾಣ್ಯವು ಟಕ್ಕಿನದೆಂದೆ ಸಿದ್ಧವಾಗುತ್ತದೆ. ಇಂಥ ಅಪ್ರಯೋಜಕ ನಾಣ್ಯಗಳನ್ನು ಸೆರಗಿಗೆ ಕಟ್ಟಿಕೊಂಡು ವ್ಯಾಪಾರಕ್ಕೆ ಹೊರಡುವ ಶಾಂತಪಕ್ಷೀಯ ಮುಖಂಡರಿಗೆ ಯಾವ ಜೇನಕು ಸಿಗುವ ಹಾಗಿದೆ! ವಸ್ತುತಃ ಹೇಳುವುದಾದರೆ, ಶಾಂತಪಕ್ಷದವರಿಗೂ ಈಗಿನ ದ್ವಿದಲ ರಾಜ್ಯಪದ್ಧತಿಯ ದೋಷಗಳು ಗೊತ್ತಾಗಿವೆ. ಅನ್ನರಿಂದಲೆ ಅವರು ಸಹ ಮುಂದಿನ ಕಂತುಗಳನ್ನು, ಮಧ್ಯವರ್ತಿ ಸರಕಾರದಲ್ಲಿ ಬಿಟ್ಟು ಉಳಿದ ಪ್ರಾಂತಿಕ ಸರಕಾರಗಳಲ್ಲಿ ಸಂಪೂರ್ಣ ಸ್ವಾಯತ್ತತೆಯನ್ನು ಕೇಳುತ್ತಿದ್ದಾರೆ. ತಾತ್ಪರ್ಯ. ಈ ಮೇರೆಗೆ ದ್ವಿದಲ ರಾಜ್ಯಭಾರ ಕ್ರಮವು ಯಾರಿಗೂ ಮಾನ್ಯವಿಲ್ಲವೆಂಬುದೆ ಈ ಎಲ್ಲ ಪ್ರತಿಪಾದನದ ರಹಸ್ಯವು.

೬. ಪವಿತ್ರ ಕ್ಷೇತ್ರವಾದ ಶ್ರೀಕಾಶಿಯಲ್ಲಿ ರಾಷ್ಟ್ರೀಯ ಶಿಕ್ಷಣದ ಭಕ್ತರ ಒಂದು ಕೂಟವು ಸೇರಿದೆ. ಇದರಲ್ಲಿ ಗುಜರಾಥದಿಂದಲ್ಲವಾದರೂ ಇತರ ಕಡೆಗಳಲ್ಲಿಯ ಸುಪ್ರಸಿದ್ಧ ರಾಷ್ಟ್ರೀಯ ವಿದ್ಯಾ ಸಂಸ್ಥೆಗಳಿಂದ ಪ್ರತಿನಿಧಿಗಳು ಬಂದಿರುವರು. ಸಂಯುಕ್ತ ಪ್ರಾಂತದ ರಾಷ್ಟ್ರೀಯ ವಿದ್ಯಾಪೀಠದ ಪ್ರಿನ್ಸಿಪಾಲರು ಮತ್ತು ತಮ್ಮ ಆಯುಸ್ಸನ್ನು ಶಿಕ್ಷಣದಾನದ ಪವಿತ್ರ ಕಾರ್ಯದಲ್ಲಿ ವ್ಯಯಮಾಡುತ್ತಿರುವವರೂ ಆದ ಬಾಬುಭಗವಾನದಾಸರು ಈ ಪರಿಷತ್ತಿನ ಅಧ್ಯಕ್ಷರಾಗಿರುವರು. ಶಿಕ್ಷಣಪ್ರೇಮಿಗಳು ಒಟ್ಟಿಗೆ ಸೇರಿ ಚರ್ಚಿಸುವ ಈ ಸಭೆಯ ಮುಂದೆ ಸುಮಾರು ೨೦-೨೫ ಮಹತ್ವದ ಪ್ರಶ್ನೆಗಳು ಬಂದಿದ್ದಾವೆ. ಈ ಪ್ರಶ್ನೆಗಳ ಸ್ವಭಾವವನ್ನು ನೋಡುವಾಗ ಶಿಕ್ಷಣದ ಜೀವಾತುವಾದ ಜ್ಞಾನವೂ, ಸ್ವಾವಲಂಬನವೂ, ಮತ್ತು ಉಪಯುಕ್ತತೆಯೂ ಈ ಚರ್ಚೆಯಿಂದ ನಿಷ್ಪನ್ನವಾದಾವೆಂದು ಹೇಳಲು ಯಾವ ಸಂಕೋಚವೂ ತೋರುವದಿಲ್ಲ. ಶಿಕ್ಷಣದ ಮೂಲ ಉದ್ದೇಶವೂ, ಅಂತಿಮಧ್ಯೇಯವೂ ಯಾವದಿರಬೇಕು, ಉಪಾಧ್ಯಾಯರ ಪಾತ್ರತೆಯು ಯಾವದು, ಅಂಥ ಸಮರ್ಥ ಮತ್ತು ಪಾತ್ರರಾದ ಉಪಾಧ್ಯಾಯರನ್ನು ಸಂಪಾದಿಸುವ ಉಪಾಯಗಳು ಯಾವವು, ಸಾಮಾನ್ಯ ಶಿಕ್ಷಣ, ವಿಶೇಷ ಶಿಕ್ಷಣ, ಮತ್ತು ಕಲಾಕೌಶಲ್ಯಾತ್ಮಕವಾದ ಉಪಜೀವಿಕೆಯ ಶಿಕ್ಷಣ ಇವುಗಳ ಯೋಜನೆಯನ್ನು ಹೇಗೆ ತಯಾರಿಸಬೇಕು. ಐಚ್ಛಿಕ ಮತ್ತು ಆವಶ್ಯಕವಾದ ವಿಷಯಗಳು ಯಾವವು. ಶಾಸ್ತ್ರೀಯ ವಿಷಯಗಳಿಗೂ ಮತ್ತು ಪ್ರಾಚೀನ ಹಾಗು ಅರ್ವಾಚೀನ ಭಾಷೆಗಳಿಗೂ ಶಿಕ್ಷಣದಲ್ಲಿ ಯಾವ ಸ್ಥಾನವನ್ನು ಕೊಡಬೇಕು, ಇತ್ಯಾದಿ ಅನೇಕ ಮಹತ್ವದ ಪ್ರಶ್ನೆಗಳು ಸಭೆಯ ಮುಂದೆ ನಿರ್ಣಯಿಸಲಿರುವವಲ್ಲದೆ ಶಿಕ್ಷಣದ ಸ್ಥಳ, ಕಾಲ, ರೀತಿ, ಮಧ್ಯವರ್ತಿಯಾದ ಭಾಷೆ, ಸಂಯುಕ್ತ ಶಿಕ್ಷಣ, ಕ್ರಮ ಇತ್ಯಾದಿ ವಿಷಯಗಳು ಸಹ ಚರ್ಚಿಸಲ್ಪಡತಕ್ಕವಿದ್ದಾವೆ. ಈ ಪ್ರಶ್ನೆಮಾಲಿಕೆಯನ್ನು ನೋಡುವಾಗ ಅದರ ಸರಿಯಾದ ಚರ್ಚೆಯುಂಟಾದಲ್ಲಿ ಬಾಲ್ಯದಶೆಯಲ್ಲಿ ಅಲ್ಲ, ದೀಕ್ಷಾವಸ್ಥೆಯಲ್ಲಿರುವ ರಾಷ್ಟ್ರೀಯ ಶಿಕ್ಷಣವು ನಮ್ಮ ದೇಶದಲ್ಲಿ ಬೇಗನೆ ಉನ್ನತಿಯನ್ನು ಹೊಂದೀತೆಂಬುದಕ್ಕೆ ಸಂದೇಹವಿಲ್ಲ. ರಾಷ್ಟ್ರೀಯ ಶಿಕ್ಷಣ, ಗುರುಕುಲ, ಋಷಿಕುಲ, ವಿದ್ಯಾಪೀಠ ಮುಂತಾದ ಭವ್ಯವಾದ ಮತ್ತು ಆಕರ್ಷಕವಾದ ಹೆಸರುಗಳನ್ನು ಕೊಟ್ಟು ಹುಡುಗರನ್ನು ಹಿಡಿದು ಹಾಕಿ ಏನಾದರೂ ಕಲಿಸುವದೆಂದರೆ ಅದು ಗಾಡಿಯನ್ನು ಹೊಡೆಯುವ ಕಿಟ್ಟನು ಎತ್ತುಗಳನ್ನು ಎಬ್ಬಿಸುವಾಗ ರಾಗಹಾಡುವಂತೆಯಾಗಿದೆ! ಇರಲಿ. ಕಾಶೀಕ್ಷೇತ್ರದಲ್ಲಿ ನೆರೆದಿರುವ ಶಿಕ್ಷಣ ಪರಿಷತ್ತಿನಲ್ಲಿ ಫಲಿತವಾದ ವಿಷಯಗಳನ್ನು ಇನ್ನೊಮ್ಮೆ ಪ್ರಸ್ತಾಪಿಸೋಣ.

ಮಂಗಳೂರು.

ಮಂಗಳೂರ ಕೆಥೋಲಿಕ ಕೊ-ಒಪರೇಟಿವ್ ಸೊಸೈಟಿಯ ವರುಷಾವಧಿ ಮಹಾಸಭೆಯು ಬರುವ ಆದಿತ್ಯವಾರ ಬೆಳಗ್ಗೆ ೧೦ ಗಂಟೆಗೆ ಕೆಥೋಲಿಕ ಯೂನಿಯನ್ ಕ್ಲಬ್ಬಿನಲ್ಲಿ ಸೇರುವುದು.

ಮಂಗಳೂರ ರೆವಿನ್ಯು ಡಿವಿಜನಲ್ ಆಫೀಸರರ ಸರ್ಕೀಟು:- ತಾ. ೨ ಮತ್ತು ೩ ತಂಕ ಎಡಪದವು, ತಾ. ೪ ಮತ್ತು ೫ ಬಜಪೆ, ತಾ. ೬ರಿಂದ ೧೪ರ ವರೆಗೆ ಮಂಗಳೂರು, ತಾ. ೧೫ರಿಂದ ೧೬ರ ವರೆಗೆ ಕೋಟೆಕಾರ, ತಾ. ೧೭ ಮಂಗಳೂರು.

ಎಲಿಮೆಂಟರಿ ಶಾಲೆಗಳ ಬಗ್ಗೆ ಸಿಲೆಬಸ್‌ಗಳನ್ನು ತಯಾರಿಸಲು ನೇಮಕಪಟ್ಟ ಕಮ್ಮಿಟಿಯ ಮೀಟಿಂಗು ಬರುವ ತಾ. ೭, ೮, ೯. ಮತ್ತು ೧೦ರಲ್ಲಿ ಜರಗುವುದು.

ಡೆವಲಪ್‌ಮೆಂಟ್ ಮಿನಿಸ್ಟರರು ಬರುವ ಏಪ್ರಿಲ್ ತಿಂಗಳ ತಾ. ೬ಕ್ಕೆ ಮಂಗಳೂರಿಗೆ ಬರುವವರಿದ್ದಾರೆ.

ಇಲ್ಲಿಯ ಮುನ್ಸಿಫಲ್ ಕೌನ್ಸಿಲಿನ ಮೆಂಬರರಾಗಿ ಆರಿಸಲ್ಪಟ್ಟ ಶ್ರೀಯುತ ಕಾರ್ನಾಡ ಸದಾಶಿವರಾಯರು ರಾಜನಿಷ್ಠೆಯ ಪ್ರತಿಜ್ಞೆಯನ್ನು ತೆಗೆದುಕೊಳ್ಳದೆ ಇರುವುದರಿಂದ ಅವರ ಬದಲಿಗೆ ಬೇರೊಬ್ಬ ಕೌನ್ಸಿಲರರನ್ನು ಮುನ್ಸಿಪಾಲಿಟಿಯು ಈ ತಿಂಗಳ ತಾ. ೨೧ರಲ್ಲಿ ಚುನಾಯಿಸಲಿಕ್ಕಿದೆ. ಈ ಮೆಂಬರಿಕೆಗೆ ಉಮೇದುವಾರರಾಗತಕ್ಕವರು ತಮ್ಮ ನೋಮಿನೇಶನ್ ಅರ್ಜಿಗಳನ್ನು ಇದೇ ತಾ. ೬ನೇ ಸಾಯಂಕಾಲ ೪ ಗಂಟೆಯೊಳಗೆ ಮುನ್ಸಿಫಲ್ ಆಫೀಸಿನಲ್ಲಿ ಹಾಜರುಪಡಿಸತಕ್ಕದ್ದು.

ಫುಟ್‌ಬೋಲ್ ಪಂದ್ಯಾಟದ ಮೇಜು ಗವರ್ನಮೆಂಟ್ ಕೊಲೇಜು ಟೀಮಿಗೂ ಬಂಟ್ಸ್ ಟೀಮಿಗೂ ೩ ಸಲ ನಡೆದರೂ ಯಾರೂ ಗೆಲ್ಲಲಿಲ್ಲ. ಕೊನೆಗೆ ಬಂಟ್ಸ್ ಟೀಮಿನವರು [illegible]

ದನ್ನು ಬಿಟ್ಟುಬಿಟ್ಟರು. ಫೂಟ್‌ಬೋಲ್ ಪಂದ್ಯಾಟದ ಕಡೆಯ ಮ್ಯೇಚು ಯಂಗ್‌ಮೇನ್ಸ್ ಟೀಮಿಗೂ ಗವರ್ನಮೆಂಟ ಕೋಲೇಜಿನ ಟೀಮಿಗೂ ಬರುವ ತಾ. ೩ರಿಂದ ಪ್ರಾರಂಭವಾಗಲಿಕ್ಕಿದೆ.

ಮಹಮ್ಮದೀಯ ರೂರಲ್ ಕೊನ್‌ಸ್ಟಿಟ್ಯೂಯೆನ್ಸಿನ ಬಗ್ಗೆ ನಮ್ಮ ಜಿಲ್ಲೆಯಿಂದ ಮದರಾಸು ಲೆಜಿಸ್ಲೇಟಿವ್ ಕೌನ್ಸಿಲಿಗೆ ಮೆಂಬರರಾಗಿ ಆರಿಸಲ್ಪಟ್ಟ ಮಿ| ಅಬ್ದುಲ್ ಖಾಸಿಂ ಬ್ಯಾರಿ ಸಾಹೇಬ ಬಹದ್ದೂರರು ರಾಜೀನಾಮೆ ಕೊಟ್ಟದ್ದರಿಂದ ಇವರ ಮೆಂಬರಿಕೆಗೆ ಇದೇ ತಾ. ೨೮—೩—'೨೩ರೊಳಗೆ ಇನ್ನೊಬ್ಬರನ್ನು ಚುನಾಯಿಸಲಿಕ್ಕಿದ್ದಾರೆ. ಈ ಸ್ಥಾನಕ್ಕೆ ಉಮೇದುವಾರರಾಗತಕ್ಕವರು ಇದೇ ತಾ. ೧೦ರೊಳಗಾಗಿ ನೋಮಿನೇಷನ್ ಅರ್ಜಿಗಳನ್ನು ಹಾಜರುಪಡಿಸತಕ್ಕದ್ದು.

ದಕ್ಷಿಣ ಕನ್ನಡದೊಳಗಿನ ಕರ್ನಾಟಕ ಭಾಷೆಯ ಏಳಿಗೆಗಾಗಿ ದಕ್ಷಿಣ ಕನ್ನಡಾ ಜಿಲ್ಲೆಯ ಸಾಹಿತ್ಯಸಮ್ಮೇಲನದ ಪರಿಷತ್ತನ್ನು ಕೂಡಿಸುವದಕ್ಕಾಗಿ ಕಳೆದ ತಾ. ೨೫ನೇ ಸಾಯಂಕಾಲ ಶ್ರೀಯುತ ನೆಲ್ಲಿಕ್ಕಾ ವೆಂಕಟರಾಯರ ಮನೋಹರ ವಿಲಾಸದಲ್ಲಿ ಭಾಷಾಭಿಮಾನಿಗಳ ಒಂದು ಪರಿಷತ್ತು ಸೇರಿತು. ಈ ಸಭೆಯಲ್ಲಿ ಇದೇ ಏಪ್ರಿಲ್ ತಿಂಗಳ ಕಡೇ ವಾರದಲ್ಲಿ ಮಂಗಳೂರಿನಲ್ಲಿ ದಕ್ಷಿಣಕನ್ನಡ ಜಿಲ್ಲಾ ಸಾಹಿತ್ಯಪರಿಷತ್ತನ್ನು ಜರಗಿಸಬೇಕಾಗಿ ನಿಶ್ಚಯಿಸಲಾಯಿತು. ಈ ಪರಿಷತ್ತಿನ ಸ್ವಾಗತ ಮಂಡಳಿಯ ಅಧ್ಯಕ್ಷರಾಗಿ ಶ್ರೀಯುತ ರಾಯಬಹದ್ದೂರ್ ಎಂ. ರಘುನಾಥ ರಾಯರನ್ನು ಆರಿಸಿದೆ. ಸ್ವಾಗತ ಕಮ್ಮಿಟಿಯ ಮೆಂಬರರಾಗತಕ್ಕವರು ರೂ. ೩ನ್ನು ಕೊಡಬೇಕಾಗಿ ನಿರ್ಧರಿಸಿದೆ.

ಉಡುಪಿಯಲ್ಲಿ ಜರುಗಿದ ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ಪ್ರಥಮ ಪರಿಷತ್ತು.

(ಬರೆದು ಬಂದದ್ದು.)

ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಥಮ ರಾಜಕೀಯ ಪರಿಷತ್ತು ಮೊನ್ನೆ ಅಷ್ಟಮಿ ಮತ್ತು ನವಮಿ ತಿಥಿಗಳಲ್ಲಿ ಉಡುಪಿ ರಾಷ್ಟ್ರೀಯ ಶಾಲಾ ಮಂದಿರದ ಬಳಿಯ ಚಪ್ಪರದಲ್ಲಿ ಜರಗಿತು. ಪರಿಷತ್ತಿನ ಮಂಟಪವು ಕಳೆದ ವರ್ಷ ಮಂಗಳೂರಿನಲ್ಲಿ ಜರಗಿದ ಪ್ರಾಂತಿಕ ಪರಿಷತ್ತಿನ ಮಂಟಪದ ಪರಿಮಾಣದಲ್ಲಿ ಸ್ವಲ್ಪ ಚಿಕ್ಕದಾಗಿದ್ದರೂ ಅದೇ ಮಾದರಿಯದ್ದಾಗಿತ್ತು. ಪ್ರವೇಶದ್ವಾರದ ಶಿಖರದಲ್ಲಿ ಚರಕಾಂಕಿತವಾದ ಒಂದು ದೊಡ್ಡ ಸ್ವರಾಜ್ಯ ಧ್ವಜವು ಏರಿಸಲ್ಪಟ್ಟಿತ್ತು.

ಪರಿಷತ್ತಿನ ಮಂಟಪದ ಬಳಿಯಲ್ಲಿ ಪ್ರದರ್ಶನ ಮಂಟಪವು ರಚಿಸಲ್ಪಟ್ಟಿತ್ತು. ಇಲ್ಲಿ ಜಿಲ್ಲೆಯ ಇತರ ವಿವಿಧ ತಾಲೂಕುಗಳಲ್ಲಿ ತಯಾರಾದ ಕೈನೂಲಿನ ಸೂತ ಮತ್ತು ಕೈಮಗ್ಗದಿಂದ ನೇಯಿದ ಖದ್ದರ್ ಬಟ್ಟೆಯ ಪ್ರದರ್ಶನವೇ ಮುಖ್ಯ ಭಾಗವಾಗಿತ್ತು. ಹಿರಿಯಡ್ಕ, ಬೈಲೂರು, ಉಡುಪಿ, ಕಾಸರಗೋಡು, ಕುಂದಾಪುರ ಹಾಗೂ ಮಂಗಳೂರಿನ ಜಿಲ್ಲಾ ಖಾದಿಭಂಡಾರ ಈ ಎಲ್ಲಾ ಸ್ಥಳಗಳ ಖಾದಿಯ ವಿಧವಿಧದ ನಮೂನೆಗಳು ನೋಟಕರ ನೇತ್ರಕ್ಕೆ ಆನಂದವನ್ನು ಉಬ್ಬಿಸುತ್ತಿತ್ತು. ಇವುಗಳ ಪೈಕಿ ಹಿರಿಯಡ್ಕದ ಖಾದಿಯೇ ಕಮ್ಮಿ ಕ್ರಯದಲ್ಲಿಯೂ ಯೋಗ್ಯ ನೇಯ್ಗೆಯಲ್ಲಿಯೂ ಸಪೂರವಾದ ನೂಲುಗಳಿಂದ ತಯಾರಾದ ಬಟ್ಟೆಗಳಲ್ಲಿಯೂ ಮಿಕ್ಕ ಸ್ಥಳಗಳಿಗಿಂತ ಮಿಗಿಲಾಗಿದೆ. ಅದರೆ ನವನವ ಬಣ್ಣಗಳ ಮಟ್ಟಿಗೂ ಪರಿಮಾಣದಲ್ಲಿಯೂ ಮಂಗಳೂರು ಖಾದಿಯೇ ಜಿಲ್ಲೆಯ ಮುಖ್ಯ ಪಟ್ಟಣಕ್ಕೆ ಸೇರಿದ್ದೆಂದು ಸ್ಪಷ್ಟಗೊಳಿಸುತ್ತಿತ್ತು. ಕಾರ್ಕಳದ ಖಾದಿಯು ಅಷ್ಟು ಸುಧಾರಿಸಿದ್ದಲ್ಲ. ಪುತ್ತೂರು ಪ್ರದರ್ಶನಮಂಟಪವನ್ನು ಖಾದಿ ಬಟ್ಟೆಗಳಿಂದ ಅಲಂಕರಿಸಲಿಲ್ಲ. ಬೈಲೂರಿನ ರಾಷ್ಟ್ರೀಯ ಶಾಲೆಯ ಖಾದಿಯು ಆ ಚಿಕ್ಕ ಹಳ್ಳಿಯ ಬಾಲಕರ ಉದ್ಯೋಗ ಕುಶಲತೆಯನ್ನೂ ಸ್ವರಾಜ್ಯಭಕ್ತಿಯನ್ನೂ ಸರಿಯಾಗಿ ಪ್ರಕಾಶಿಸುತ್ತಿತ್ತು. ಇದರ ಸಮೀಪದಲ್ಲಿದ್ದುದೇ ಔದ್ಯೋಗಿಕ ಕೈಗಾರಿಕೆಗಳ ಪ್ರದರ್ಶನವಿತ್ತು. ಇಲ್ಲಿಯ ಮಹಾತ್ಮನ ಮತ್ತು ತರುಣರಲ್ಲಿ ಸಂತೋಷೋತ್ಪಾದಕವಾದ ನಗೆಯನ್ನೂ ಉಂಟುಮಾಡುವ ಶ್ರೀಯುತ ವೃದ್ಧ ರಘುರಾಮರಾಯ ಮಲ್ಕರ ಚರಕ. ಈ ಚರಕವು ಉತ್ಸಾಹದಲ್ಲಿ ತರುಣರಾದ ಆ ಮುದಿ ಮನುಷ್ಯನ ಸ್ವಂತ ಕೈಗಳಿಂದಲೇ ತಯಾರಿಸಲ್ಪಟ್ಟ ಚರಕವಾಗಿತ್ತು. ಒಂದೇ ಸಮನೆ ನೂಲುಗಳನ್ನು ನೂಲುವುದೇ ಇದರ ಲಕ್ಷಣ. ಇವರ ಬಳಿಯಲ್ಲಿಯೇ ಹಿರಿಯಡ್ಕದಲ್ಲಿ ಬೆಳೆದ ಪಿಂಜಾರಿಯಿಂದ ಹಿಂಜಿದ ಧವಲಮಯವಾದ ಹತ್ತಿಯ ಬತ್ತಿಗಳ ಸಮೂಹವು ಇತ್ತು.

ಕೈಗಾರಿಕೆಗಳಲ್ಲಿ ಮುಖ್ಯವಾಗಿ, ಕೈಮಗ್ಗ ಬಡಿಗೆ ಕೆಲಸ ಮೊದಲಾದವುಗಳ ಪ್ರದರ್ಶನವಿತ್ತು. ರಾಷ್ಟ್ರೀಯ ಪುಸ್ತಕ ಭಂಡಾರಗಳು ಸಹ ಇದ್ದವು. ಅಲ್ಲದೆ ಚಿತ್ರಕಲಾ ಪ್ರದರ್ಶಕವಾದ ಮನೋಹರ ಚಿತ್ರಗಳಿದ್ದವು.

ಪ್ರಾಂತಿಕ ಪರಿಷತ್ತಿನಲ್ಲಿಲ್ಲದ ಇನ್ನೊಂದು ಆಕರ್ಷಕ ಉತ್ತಮವಾದ ನೂತನವಾವುದೆಂದರೆ,—ಸಂಗೀತ ಪ್ರದರ್ಶನ.

ಅಧ್ಯಕ್ಷರೂ ಮತ್ತು ಅವರೊಂದಿಗೆ ಬಂದ ಇತರ ಮುಖ್ಯ ಅತಿಥಿಗಳೂ ಪಟ್ಟಣವನ್ನು ೩॥ ಗಂಟೆ ಅಪರಾಹ್ನಕ್ಕೆ ಸೇರಿದರು. ಅವರನ್ನು ಎದುರುಗೊಳ್ಳುವರೆ ಸ್ವಾಗತಮಂಡಳಿಯ ಅಧ್ಯಕ್ಷರಿಂದ ಮೊದಲುಗೊಂಡು ಪಟ್ಟಣದ ಕೆಲವು ಸದ್ಗೃಹಸ್ಥರೂ ಸ್ವಯಂಸೇವಕರೂ ಮಿಷನ್ ಹೈಸ್ಕೂಲಿನ ಬಳಿಯಲ್ಲಿ ಕಾದಿದ್ದರು. ಮೆರವಣಿಗೆಯು ಪಟ್ಟಣದ ಮುಖ್ಯ ಬೀದಿಗಳನ್ನು ಹಾದು ರಾ. [illegible] ಪದ್ಮನಾಭ ಪೈಗಳ ಮನೆಯ ಬಳಿಯಲ್ಲಿ ಅಂತ್ಯವಾಯಿತು.

ಮುಂದಿನ ಎಂದರೆ, ಸೋಮವಾರ ಪ್ರಾತಃಕಾಲ ೮॥ ಗಂಟೆಗೆ ಪ್ರಾಂತಿಕ ಖಾದರ್ ಬೋರ್ಡಿನ ಕಾರ್ಯದರ್ಶಿಯರಾದ ರಾ. ಹನುಮಂತರಾವ್ ಕೌಜಲಗಿಯವರಿಂದ ಪ್ರದರ್ಶನವು ತೆರೆಯಲ್ಪಟ್ಟಿತು. ಸಂಗೀತವು ಶುರುವಾಗುವುದರ ಮೊದಲು ದೇಶಭಕ್ತ ಮುದವೇಡಕರರು ಸ್ವದೇಶಿಯ ವಿಷಯವಾಗಿ ಒಂದು ಭಾಷಣವನ್ನು ಮಾಡಿದರು. ಹನುಮಂತರಾಯರು [illegible] ವಿಷಯದಲ್ಲಿ ಇನ್ನೂ ಮಾಡಬೇಕಾದ ಸುಧಾರಣೆಗಳ [illegible] ಮಾತಾಡಿದರು.

[illegible] ಮಧ್ಯಾಹ್ನ ೩ ಗಂಟೆಗೆ ಪರಿಷತ್ತಿನ ಅಧಿವೇಶನವು ಜರಗಿತು. ಮೊದಲು ರಾಷ್ಟ್ರೀಯ ಗೀತಗಳನ್ನು ಹಾಡುವುದೇ ಕಾರ್ಯವಿಧಿಯ ಆರಂಭದ ಕೆಲಸವಾಗಿತ್ತು. ಪೂರ್ಣ ಖಾದಿಯನ್ನು ಧರಿಸಿದ ೩ ಕನ್ನಿಕೆಯರು 'ವಂದೇ ಮಾತರಂ' ಹಾಡನ್ನು ಹಾಡಿದ ತರುವಾಯ 'ದಕ್ಷಿಣ ಕರ್ನಾಟಕ ದೇವಿ,' ಕರ್ನಾಟಕ ಮಾತೆ ಧನ್ಯೆ ಧನ್ಯೆ ಎಂಬ ಮೊದಲಾದ ರಾಷ್ಟ್ರೀಯ ಪದಗಳನ್ನು ಸುರಸವಾಗಿ ಕೆಲವು ಸ್ವಯಂಸೇವಕರು ಹಾಡಿದರು.

ಸ್ವಾಗತಮಂಡಳಿಯ ಅಧ್ಯಕ್ಷರ ಭಾಷಣವು ತರುವಾಯದ ಕಾರ್ಯವಾಗಿತ್ತು. ಇವರ ಭಾಷಣವು ಆದನಂತರ ಉಪಚಾರಿಕ ರೀತಿಯಲ್ಲಿ ಅಧ್ಯಕ್ಷರ ಚುನಾವಣೆಯಾದ ಕೂಡಲೇ ಶ್ರೀಯುತ ದಿವಾಕರರಾಯರು ತಮ್ಮ ಅಧ್ಯಕ್ಷತನದ ಭಾಷಣವನ್ನು ಮಾಡಿದರು. ಸಾಯಂಕಾಲ ೫॥ ಘಂಟೆಗೆ ಸಭೆಯು ಮುಗಿಯಿತು. ಸಾಯಂಕಾಲ ವಿಷಯ ನಿಯಾಮಕ ಸಭೆಯ ಅಧಿವೇಶನವು ಜರಗಿತು. ಚರ್ಚಿಸತಕ್ಕ ವಿಷಯಗಳ ಸಲುವಾಗಿ ಹಿಂದಿನ ರಾತ್ರಿಯೇ ಕಾರ್ಯಕಾರಿ ಮಂಡಳಿಯ ಕೆಲವು ಮುಖ್ಯ ಗೃಹಸ್ಥರು ಠರಾವುಗಳನ್ನು ತಯಾರಿಸಿದ್ದರು. ಅವುಗಳೇ ಮುಂದಿಡಲ್ಪಟ್ಟವು. ಗಯಾ ಕೊಂಗ್ರೆಸ್ಸು ಠರಾವುಗಳೇ ಹೆಚ್ಚಿನ ಮಹತ್ವದ ವಿಷಯವಾಗಿತ್ತು. ರಾತ್ರಿ ೯॥ ಗಂಟೆಗೆ ಇದು ಮುಕ್ತಾಯವಾಯಿತು.

ಮರುದಿನ ಎಂದರೆ ಆದಿತ್ಯವಾರ ಮಹಾಸಭೆಯು ಪೂರ್ವಾಹ್ನ ಮತ್ತು ಅಪರಾಹ್ನಗಳಲ್ಲಿಯೂ ನಡೆಯಿತು. ಹಿಂದಿನ ದಿನದಲ್ಲಿ ವಿಷಯ ನಿಯಾಮಕ ಮಂಡಳಿಯಲ್ಲಿ ಪಾಸಾದ ಠರಾವುಗಳೇ ಇಂದು ಜಿಲ್ಲೆಯ ಬೇರೆ ಬೇರೆ ತಾಲೂಕಿನಿಂದ ಬಂದ ಪ್ರತಿನಿಧಿಗಳಿಂದ ಅನುಮೋದನೆಯನ್ನು ಹೊಂದಿ ಸಮರ್ಥಿಸಲ್ಪಟ್ಟು ಪಾಸಾದವು. ಸಾಯಂಕಾಲ ಕೊಟ್ಟಿಕಾರ ಪದ್ಮನಾಭ ಪೈಗಳಲ್ಲಿ ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಒಂದು ಫಲಾಹಾರವಿತ್ತು. ೯॥ ರಾತ್ರಿ ಕೃಷ್ಣರಾಯರ ಹರಿಕಥೆಯು ಪರಿಷತ್ತಿನ ಮಂಟಪದಲ್ಲಿ ನಡೆಯಿತು. ಇದಕ್ಕೆ ಪಟ್ಟಣದ ನಿವಾಸಿಕರೆಲ್ಲರಿಗೂ ಟಿಕೇಟಿಲ್ಲದೆ ಪ್ರವೇಶವಿತ್ತು. ಪರಿಷತ್ತಿನ ಸಮಯದಲ್ಲಿ ನಡೆದ ಬಹು ವಿಶೇಷ ಸಂಗತಿ ಯಾವುದೆಂದರೆ ನಿವಾಸಿಕರು ತಯಾರಿಸಿದ 'ಭಾರತೋದಯ'ವೆಂಬ ನಾಟಕವನ್ನು ಅಭಿನಯಿಸಬಾರದೆಂದು ಕಳುಹಿಸಿದ ಪ್ರತಿಬಂಧಕತ್ವದ ಹುಕುಂ ಆಗಿದೆ.

ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಈ ಕೆಳಗೆ ತೋರಿಸಿದ ಪ್ರಕಾರ ಪ್ರತಿನಿಧಿಗಳು ಬಂದಿದ್ದರು. ಮಂಗಳೂರು ಸುಮಾರು ೫೦, ಕುಂದಾಪುರ ೫೦, ಕಾರ್ಕಳ ೪೦, ಪುತ್ತೂರು ೧೦, ಕಾಸರಗೋಡು ೧೫. ಪಟ್ಟಣದ ಎಲ್ಲಾ ತರಗತಿಯ ಜನರು ಪರಿಷತ್ತು ಯಶಸ್ವಿಯಾಗಿ ನಡೆಯುವದಕ್ಕೆ ತಮ್ಮ ಸಹಾಯವನ್ನು ಕೊಟ್ಟಿರುತ್ತಾರೆ.

ಪರಿಷತ್ತಿನಲ್ಲಿ ಪಾಸಾದ ಠರಾವುಗಳು,

೧. ನಮ್ಮ ಜಿಲ್ಲಾ ಕಾಂಗ್ರೆಸ್ ಕಮ್ಮಿಟಿಯ ಅಧ್ಯಕ್ಷರಾದ ದೇಶಭಕ್ತ ಕಾರ್ನಾಡು ಸದಾಶಿವರಾಯರ ಧರ್ಮಪತ್ನಿ ಶ್ರೀಮತಿ ಸೌಭಾಗ್ಯವತಿ ಕಾರ್ನಾಡು ಶಾಂತಾಬಾಯಿಯವರ ಮತ್ತು ಉಡುಪಿಯ ತಾಲೂಕು ಕಾಂಗ್ರೆಸ್ ಕಮ್ಮಿಟಿಯ ಕಾರ್ಯದರ್ಶಿಯರಾಗಿ ಅತೀ ಉತ್ಸಾಹದಿಂದ ಕೆಲಸಮಾಡುತ್ತಿದ್ದ ದೇಶಭಕ್ತ ತೋನ್ಸೆ ಗೋವಿಂದ ಪೈಗಳ ಅಕಾಲಮರಣದಿಂದ ನಮ್ಮಲ್ಲಿಯ ರಾಷ್ಟ್ರೀಯ ಕೆಲಸಕ್ಕೆ ಸಂಭವಿಸಿದ ನಷ್ಟಕ್ಕಾಗಿ ಈ ಪರಿಷತ್ತು ದುಃಖಿಸುವುದಲ್ಲದೆ ಅವರ ಕುಟುಂಬಕ್ಕೆ ಉಂಟಾದ ದುಃಖದಲ್ಲಿ ಸಹಭಾಗಿಯಾಗುತ್ತದೆ. ಅಧ್ಯಕ್ಷರಿಂದ ಸೂಚಿತವಾಗಿ ಒಮ್ಮತದಿಂದ ಸಭಿಕರು ನಿಂತು ಈ ಠರಾವನ್ನು ಪಾಸುಮಾಡಿದರು. ೨. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮ್ಮಿಟಿಯ ಕಾರ್ಯದರ್ಶಿಯರಾಗಿದ್ದು ರಾಷ್ಟ್ರಸೇವೆಯನ್ನು ಬಹಳ ಉತ್ಸಾಹದಿಂದ ಮಾಡಿ ಫಲಿತಾಂಶವಾಗಿ ಕಾರಾಗೃಹವಾಸಕ್ಕೆ ಹೋಗಲಿಕ್ಕೆ ನಮ್ಮ ಜಿಲ್ಲೆಯಲ್ಲಿ ಮೊದಲನೇಯವರಾದ ಹಾಗೂ ಸ್ವರಾಜ್ಯಾಶ್ರಮದ ವಾಸವನ್ನು ತೀರಿಸಿಕೊಂಡು ಪುನಃ ಹೆಚ್ಚಿನ ಉತ್ಸಾಹದಿಂದ ಯುಕ್ತರಾಗಿ ಈ ಕಾರ್ಯದಲ್ಲೇ ಉದ್ಯುಕ್ತರಾದ ಮತ್ತು ಈಗ ಜಿಲ್ಲಾ ಕಾಂಗ್ರೆಸ್ ಕಮ್ಮಿಟಿಯ ಉಪಾಧ್ಯಕ್ಷರಾಗಿರುವ ದೇಶಭಕ್ತ ದತ್ತಾತ್ರೇಯ ಕೃಷ್ಣ ಭಾರದ್ವಾಜರನ್ನು ಈ ಪರಿಷತ್ತು ಅಭಿನಂದಿಸುತ್ತದೆ. ಅಧ್ಯಕ್ಷರಿಂದ ಸೂಚಿತವಾಗಿ ಸರ್ವಾನುಮತದಿಂದ ಪಾಸಾಯಿತು. ೩. ಲಾಸೆನ್ ಪರಿಷತ್ತಿನಲ್ಲಿ ತುರ್ಕಸ್ಥಾನದ ಪ್ರಶ್ನೆಯು ಸಮಾಧಾನಕರವಾಗಿ ನಿರ್ಣಯವಾಗದೆ ಹೋದರೆ ತುರ್ಕಸ್ಥಾನವು ಮುಂದೆ ಹೂಡಬೇಕಾದ ಸ್ವಾತಂತ್ರ್ಯ ಯುದ್ಧದಲ್ಲಿ ಹಿಂದೀ ರಾಷ್ಟ್ರವು ಕಾಂಗ್ರೆಸಿನ ತತ್ವಕ್ಕನುಸರಿಸಿ ಮಾಡಬಹುದಾದ ಸರ್ವ ಸಹಾಯಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ತನಗೆ ಯೋಗ್ಯ ಭಾಗವನ್ನು ವಹಿಸತಕ್ಕದ್ದೆಂದು ಈ ಪರಿಷದವು ನಿಶ್ಚಯಿಸುತ್ತದೆ. (ಅಧ್ಯಕ್ಷರಿಂದ ಸೂಚಿತವಾಗಿ ಸರ್ವಾನುಮತದಿಂದ ಪಾಸಾಯಿತು.) ೪. ಹಿಂದೀ ಕ್ರಿಶ್ಚಿಯನ್ ಸದ್ಗೃಹಸ್ಥರು ಕಾಂಗ್ರೆಸ್ಸಿನ ಕೆಲಸಕ್ಕೆ ಸಹಾಯ ಮಾಡಿದ್ದಕ್ಕಾಗಿ ಈ ಪರಿಷತ್ತು ಅವರನ್ನು ಅಭಿನಂದಿಸುವುದಲ್ಲದೆ ಪೂರ್ಣ ಅಸಹಕಾರವನ್ನು ಕೈಕೊಳ್ಳಲು ಶಕ್ಯವಿಲ್ಲದವರಾದ ನಮ್ಮ ಕ್ರಿಶ್ಚಿಯನ್ ಬಾಂಧವರು "ಅಲ್ ಇಂಡಿಯಾ ಕ್ರಿಶ್ಚಿಯನ್ ಕಾನ್ಫರನ್ಸ್"ದಲ್ಲಿ ಪಾಸಾದ ಠರಾವುಗಳಂತೆ ಮಹಾತ್ಮಾ ಗಾಂಧಿಯವರಿಂದ ನಿರ್ದಿಷ್ಟವಾದ ಸಮಾಜಕ್ಕೆ ಹಿತಕರವಾದ ರಾಟಿಯ ಪ್ರಸಾರ ಖಾದಿಯ ವಿಸ್ತಾರ, ಮದ್ಯಪಾನ [illegible] ಇವುಗಳಲ್ಲಿ ರಾಷ್ಟ್ರೀಯ ಸಭೆಯ ಪ್ರಚಾರಕರಿಗೆ ಮನಃಪೂರ್ವಕವಾಗಿ ಸಹಾಯಮಾಡಬೇಕೆಂದು ಈ ಪರಿಷತ್ತು ಅವರನ್ನು ಪ್ರಾರ್ಥಿಸುತ್ತದೆ (ಅಧ್ಯಕ್ಷರಿಂದ, ಸೂಚಿತ, ಐಕ್ಯಮತದಿಂದ ಮಂಜೂರು), ೫. ಗಯಾದಲ್ಲಿ ಸೇರಿದ ರಾಷ್ಟ್ರೀಯ ಸಭೆಯಲ್ಲಿ ಮಂಜೂರಾದ ಕೌನ್ಸಿಲ್ ಬಹಿಷ್ಕಾರದ ಠರಾವನ್ನೂ ವಿಧಾಯಕ ಕಾರ್ಯಕ್ರಮದ ಠರಾವನ್ನೂ ಈ ಪರಿಷತ್ತು ಸಂಪೂರ್ಣವಾಗಿ ಅನುಮೋದಿಸುವುದು. ೬. ರಾಷ್ಟ್ರೀಯ ಸಭೆಯ ನಿರ್ಣಯದಂತೆ ನಮ್ಮ ಜಿಲ್ಲೆಯ ಪಾಲಿಗೆ ಬೀಳುವ ೧೫,೦೦೦ ರೂಪಾಯಿಗಳನ್ನೂ ೫೦೦ ಮಂದಿ ಸ್ವಯಂ ಸೇವಕರನ್ನು ಬರುವ ಎಪ್ರೀಲ್ ೩೦ರ ಒಳಗೆ ಸೇರಿಸುವರೆ ಇಡೀ ಜಿಲ್ಲೆಯವರು ಸರ್ವ ಪ್ರಯತ್ನವನ್ನು ಮಾಡತಕ್ಕದ್ದು. ಹಾಗೂ ಜಿಲ್ಲೆಯೊಳಗೆ [illegible] ಒಳಗೆ ೫೦ ಸಾವಿರ ಸದಸ್ಯರನ್ನು ಕೂಡಿಸತಕ್ಕದ್ದು.

ಸೂಚಕರು—ಶ್ರೀ ಭಾರದ್ವಾಜರು. ಅನುಮೋದಕರು—ಶ್ರೀ ರಾಮರಾಯ ಮಲ್ಯರು. ಪುಷ್ಟೀಕರಿಸುವವರು—ಶ್ರೀ ಮುದವೇಡಕರರು.

೭. ಮದ್ರಾಸು ಶಾಸನನಿರ್ಮಾಪಕ ಸಭೆಯ ಮುಂದೆ ಈಗ ಚರ್ಚಿಸಲ್ಪಡುವ ಹಿಂದೂ ಧರ್ಮ ಸಂಬಂಧವಾದ ಉಂಬಳಿಯ ಕಾಯಿದೆಯ (Religious Endowment Bill) ಮಸೂದೆಯನ್ನು ನೋಡಿದರೆ ಆ ಕಾಯಿದೆ ಸ್ವರೂಪದಿಂದ ಕೂಡಲೇ ನಮ್ಮ ಭಾಗದೊಳಗಿನ ಎಲ್ಲಾ ಮಠ ಸಂಸ್ಥೆಗಳು ಆ ಕಾಯಿದೆಯ ಬಲದೊಳಗೆ ಸಿಲುಕಿ ಧಾರ್ಮಿಕ ಸ್ವಾತಂತ್ರ್ಯಕ್ಕೆ [illegible] ಒಳಗಾಗಬೇಕಾಗುವದರಿಂದ ಆ ಕಷ್ಟಕ್ಕೊಳಗಾಗುವವರೊಂದಿಗೆ ಈ ಪರಿಷತ್ತು ಅಂತಃಕರಣಪೂರ್ವಕವಾದ ಸಹಾನುಭೂತಿಯನ್ನು ವ್ಯಕ್ತಪಡಿಸುವುದು ಹಾಗೂ ಇಂಥಾ ಪ್ರಸಕ್ತಿಯಲ್ಲಿ ರಾಷ್ಟ್ರವು ಕೈಕೊಳ್ಳತಕ್ಕ ಶಾಂತಿಮಯ ಸತ್ಯಾಗ್ರಹ ತತ್ವವನ್ನು ಆ ಸಂಸ್ಥೆಗಳು ಕೂಡ ತಪ್ಪದೆ ಆಚರಿಸಿ ತಮ್ಮ ತಮ್ಮ ಧರ್ಮಗಳನ್ನು ಪರಕೀಯ ಸರಕಾರದ ಹಾವಳಿಯಿಂದ ರಕ್ಷಿಸಿಕೊಳ್ಳುವದಕ್ಕೆ ಸಿದ್ಧರಾಗಬೇಕೆಂದು ಈ ಪರಿಷತ್ತು ಅಂಥವರಿಗೆ ವಿಜ್ಞಾಪಿಸುತ್ತದೆ. ಈ ವಿಚಾರದಲ್ಲಿ ಈ ಪರಿಷದವು ಪೂರ್ಣ ಬೆಂಬಲ ಕೊಡುವದೆಂದು ಆಶ್ವಾಸನಕೊಡುತ್ತದೆ. ಐಕ್ಯಮತ್ಯದಿಂದ ಪಾಸಾಯಿತು. ಸೂಚಕರು—ಅರಿಬೈಲು ಭೋಜರಾಯರು. ಅನುಮೋದಕರು—ಬಿಜೂರು ಸೂರಪ್ಪಯ್ಯನವರು.

೮. ಅಸ್ಪೃಶ್ಯತಾನಿವಾರಣೆಯ ಬಗ್ಗೆ ಮಂಗಳೂರಲ್ಲಾದ ಕೆಲಸವನ್ನು ನೋಡಿ ತುಂಬಾ ಸಂತೋಷದಿಂದ ಮಂಗಳೂರಿನವರನ್ನು ಅಭಿನಂದಿಸುವದಲ್ಲದೆ ಇತರ ತಾಲೂಕಿನವರೂ ಈ ವಿಚಾರದಲ್ಲಿ ಹೆಚ್ಚಿನ ಕೆಲಸವನ್ನು ಮಾಡತಕ್ಕದ್ದೆಂದು ಸೂಚಿಸುತ್ತದೆ. ಐಕ್ಯಮತ್ಯದಿಂದ ಪಾಸಾಯಿತು.

ಸೂಚಕರು—ಶ್ರೀ ಎಚ್. ನಾರಾಯಣ ರಾವ್. ಅನುಮೋದಕರು—ಶ್ರೀ ಬಿಜೂರು ಸೂರಪ್ಪಯ್ಯನವರು. ಪುಷ್ಟೀಕರಿಸುವವರು—ಶ್ರೀ ಭೋಜರಾಯರು.

೯. ನಮ್ಮ ಜಿಲ್ಲೆಯಲ್ಲಿ ಈಗ ಇರುವ ಹಾಗೂ ಇನ್ನು ಮುಂದೆ ತೆರೆಯಲಿಕ್ಕಿರುವ ರಾಷ್ಟ್ರೀಯ ಶಾಲೆಗಳನ್ನು ಉತ್ತಮ ಸ್ಥಿತಿಯಲ್ಲಿ ನಡೆಸುವ ಎಲ್ಲಾ ವ್ಯವಸ್ಥೆಯನ್ನು ಮಾಡುವುದಕ್ಕಾಗಿ ಒಂದು ಜಿಲ್ಲಾ ರಾಷ್ಟ್ರೀಯ ಶಿಕ್ಷಣಸಮಿತಿಯನ್ನು ಏರ್ಪಡಿಸುವುದಲ್ಲದೆ ಆ ಸಮಿತಿಯು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಮಿತಿಯ ಸೂಚನೆಗಳನ್ನು ಮಾನ್ಯಮಾಡಿ ಸ್ಥಳೀಕ ಸ್ಥಿತಿಗತಿಗಳಿಗನುಸಾರವಾಗಿ ಮುಂದುವರಿಯತಕ್ಕದ್ದು. ಇದಲ್ಲದೆ ಕರ್ನಾಟಕಕ್ಕೆ ಒಂದು ವಿದ್ಯಾಪೀಠವನ್ನು ಬೇಗನೇ ಸ್ಥಾಪಿಸುವಂತೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರೊಡನೆ ಈ ಪರಿಷತ್ತು ಕೇಳಿಕೊಳ್ಳುತ್ತದೆ.

ಸೂಚಕರು—ಶ್ರೀ ಶ್ರೀಪಾದ ಶರ್ಮರು; ಅನುಮೋದಕರು—ಶ್ರೀ ಉಮೇಶರಾಯರು.

೧೦. ಮುಂಬಯಿಯಲ್ಲಿ ಜರುಗಿದ ಅಖಿಲ ಭಾರತ ರಾಷ್ಟ್ರೀಯ ಕಮ್ಮಿಟಿಯ ಕಾರ್ಯಕಾರಿ ಮಂಡಳಿಯ ನಿರ್ಣಯದಂತೆ ಮಹಾತ್ಮಾ ಗಾಂಧಿಯವರಿಗೆ ಶಿಕ್ಷೆಯಾದ ದಿನದ ವರ್ಷಂತಿ ಬರುವ ಮಾರ್ಚಿ ತಾ. ೧೮ಕ್ಕೆ ಚಂದ್ರಮಾನ ಯುಗಾದಿ ಅವರೂ ಇಡೀ ಜಿಲ್ಲೆಯಲ್ಲಿ ಹರತಾಳವನ್ನು ಆಚರಿಸಬೇಕಾಗಿ ಈ ಪರಿಷದವು ಇಡೀ ಜಿಲ್ಲೆಯವರನ್ನು ವಿಜ್ಞಾಪಿಸಿಕೊಳ್ಳುತ್ತದೆ.

ಸೂಚಕರು—ಶ್ರೀ ಕೆ. ಎನ್. ದಾಸಪ್ರಭುಗಳು. ಅನುಮೋದಕರು—ಶ್ರೀ ಭಾರದ್ವಾಜರು. ಪುಷ್ಟೀಕರಿಸುವವರು—ಶ್ರೀ ಹಿರಿಯಡ್ಕ ನಾರಾಯಣರಾಯರು.

೧೧. ಸರಕಾರಿ ನ್ಯಾಯಸ್ಥಾನಗಳನ್ನು ಬಹಿಷ್ಕರಿಸಿ ಅವುಗಳ ಮೂಲಕ ಜನರಿಗೆ ಉಂಟಾಗುವ ಅಪರಿಮಿತ ಹಾನಿಯನ್ನು ದೂರಮಾಡುವುದಕ್ಕಾಗಿ ಅನುಕೂಲವಾಗುವಂತೆ ನ್ಯಾಯ ನಿರ್ಣಯಕ್ಕಾಗಿ ಪಂಚಾಯತಿ ಸಭೆಗಳನ್ನು ಜಿಲ್ಲೆಯ ಮುಖ್ಯ ಮುಖ್ಯ ಸ್ಥಳಗಳಲ್ಲಿ ಏರ್ಪಡಿಸಬೇಕೆಂದು ಈ ಪರಿಷದವು ನಿರ್ಣಯಿಸುತ್ತದೆ. ಮತ್ತು ಸಂಪೂರ್ಣ ಅಸಹಕಾರಿಗಳಲ್ಲದ್ದರೂ ಈ ವಿಚಾರದಲ್ಲಿಯಾದರೂ ಹೆಚ್ಚಿನ ಮನಸ್ಸು ಕೊಡಬೇಕಾಗಿ ವಿನಂತಿಮಾಡಿಕೊಳ್ಳುತ್ತದೆ.

ಸೂಚಕರು—ಅರಿಬೈಲು ಭೋಜರಾಯರು. ಅನುಮೋದಕರು—ಬಿಜೂರು ಸೂರಪ್ಪಯ್ಯನವರು.

೧೨. ಕುಂದಾಪುರ ತಾಲೂಕಿನವರು ಮುಂದಿನ ವರ್ಷಕ್ಕಾಗಿ ಅಂದರೆ ಸನ್ ೧೯೨೪ನೆಯ ಇಸವಿಗಾಗಿ ಅತ್ಯಂತ ಪ್ರೇಮಪೂರ್ವಕವಾಗಿ ಈ ಪರಿಷತ್ತಿಗೆ ಕೊಡುವ ಆಮಂತ್ರಣವನ್ನು ಈ ಪರಿಷತ್ತು ಆದರಪೂರ್ವಕ ಸ್ವೀಕರಿಸುತ್ತದೆ. (ಐಕಮತ್ಯದಿಂದ ಮಂಜೂರಾಯಿತು) ಅನಂತರ ಶ್ರೀಯುತ ಆರ್. ಎಸ್. ಶ್ಯಾನುಭಾಗರು, ಉಡುಪಿ ಗೋವಿಂದರಾಯರು ವೆಂಕಪ್ಪಶೆಟ್ಟಿ, ಶಿರ್ವ ಲಕ್ಷ್ಮಣರಾಯರು, ಸತ್ಯಮಿತ್ರ ಬಂಗೇರ ಇವರು ಅಧ್ಯಕ್ಷರಿಗೆ ವಂದನೆಯನ್ನರ್ಪಿಸುವ ಠರಾವನ್ನು ತರಲು ಅದೂ ಒಮ್ಮತದಿಂದ ಪಾಸಾಗಿ, ಅನಂತರ ಸ್ವಾಗತ ಮಂಡಳಿಯ ಅಧ್ಯಕ್ಷರು, ಸ್ವಯಂಸೇವಕರು, ಪರಿಷತ್ತಿನ ಕಾರ್ಯದಲ್ಲಿ ತನುಮನ ಧನವೇ ಮೊದಲಾದ ರೀತಿಯಿಂದ ಸಹಾಯಮಾಡಿದ ಎಲ್ಲರಿಗೂ ವಂದನೆಗಳನ್ನರ್ಪಿಸಿ, ಸಭೆಯು ಮುಕ್ತಾಯವಾಯಿತು.

ಕರ್ನಾಟಕದ ದೇಶಾಭಿಮಾನಿಗಳ ಪರ್ಯಟನ.

ಉಡುಪಿಯಲ್ಲಿ ಪರಿಷತ್ತು ಮುಗಿದ ಮರುದಿನ ಶ್ರೀಯುತರಾದ ರಂಗರಾವ್ ದಿವಾಕರ, ಕೃಷ್ಣರಾವ ಮುದವೇಡಕರ, ಹನುಮಂತರಾವ್ ಕೌಜಲಗಿ, ದತ್ತಾತ್ರೇಯ ಕೃಷ್ಣರಾವ್ ಭಾರದ್ವಾಜ ಇವರು ಕುಂದಾಪುರಕ್ಕೆ ತೆರಳಲು ಅಲ್ಲಿ ೨೬—೨—೨೩ನೇ ದಿನ ಅಲ್ಲಿನ ವಕೀಲರು, ಪುರವಾಸಿಗಳೇ ಮೊದಲಾದವರು ಅವರಿಗೆ ಸ್ವಾಗತವಿತ್ತು ನಂತರ ನಾಲ್ವರ ಭಾಷಣಗಳು ಆದವು. ಭಾಷಣಗಳೆಲ್ಲ ಅಸಹಕಾರತತ್ವ, ಅಹಿಂಸಾ ಧರ್ಮ, ಖಾದೀಪ್ರಚಾರ ಮೊದಲಾದ ರಸಭರಿತ ವಿಷಯಗಳನ್ನೊಳಗೊಂಡಿತ್ತು. ತಾ. ೨೭ನೆಯ ಮಂಗಳವಾರ ಶ್ರೀಯುತ ದಿವಾಕರ ಮುದವೇಡಕರ ಭಾರದ್ವಾಜರು ಮಂಗಳೂರಿಗೆ ಪ್ರಯಾಣ ಬೆಳಸಿ, ಅದೇ ದಿನ ಮಧ್ಯಾಹ್ನದಲ್ಲಿ ಶ್ರೀಯುತರಾದ ಭಾರದ್ವಾಜ, ದಿವಾಕರ, ಉಮೇಶರಾವ್ ಇವರ ಭಾಷಣಗಳು ನಡೆದು ಕರ್ನಾಟಕ ವೃತ್ತ ಮತ್ತು ಧನಂಜಯದ ಸಂಪಾದಕ ಮುದವೇಡಕರರ ಕೀರ್ತನೆಯೂ ಆಯಿತು. ಅದೇ ರಾತ್ರಿ ಶ್ರೀ ದತ್ತಾತ್ರೇಯ ನಾಟಕ ಮಂಡಳಿಯವರು "ವಿಷಮ ವಿವಾಹ" ಎಂಬ ನಾಟಕವನ್ನಭಿನಯಿಸಿ ತಮ್ಮ ಖರ್ಚು ಕಳೆದು ಉಳಿದ ಆ ದಿನದ ಆದಾಯವನ್ನು "ತಿಲಕ ಮಹಾ ವಿದ್ಯಾಲಯ"ಕ್ಕೆ ಕೊಟ್ಟರು. ತಾ. ೨೮ನೆಯ ಬುಧವಾರ ಶ್ರೀಯುತರಾದ ದಿವಾಕರ, ಮುದವೇಡಕರ, ಭಾರದ್ವಾಜ ಇವರು ಮೈಲ್ ಗಾಡಿಯಲ್ಲಿ ಮಂಜೇಶ್ವರಕ್ಕೆ ಬಂದು ಅಲ್ಲಿ ಶ್ರೀಯುತ ಪಾಂಡುರಂಗ ಕಾಮತರವರು ಅವರನ್ನು ಭಕ್ತಿಪೂರ್ವಕ ಸ್ವಾಗತಿಸಿ ಶ್ರೀಯುತ [illegible] ರಾಯರ ಮನೆಯಲ್ಲಿ ಉಪಾಹಾರವು ಮುಗಿದಮೇಲೆ ಎಲ್ಲರೂ ಶ್ರೀ ಅನಂತೇಶ್ವರನ ದರ್ಶನವನ್ನು ಮಾಡಿಕೊಂಡು, ಸಾಧು [illegible] ಬಿಡಾರಕ್ಕೆ ಬಂದು, ಮೂವರೂ ಸಾಧುಗಳ ಪಾದಗಳಿಗೆರಗಿ ಖಾದಿಯ ದಾನವಿತ್ತು ಮೂವರೂ ಭಾಷಣಮಾಡಿ ಲೋಕಲ್ ಬಂಡಿಯಲ್ಲಿ ಕಾಸರಗೋಡಿಗೆ ಬಂದರು. ಇಲ್ಲಿ ಪುರನಿವಾಸಿಗಳು, ವರ್ತಕರು, ಶ್ರೀಯುತ [illegible] ಅಪ್ಪಯ್ಯರಾಯರು, ರಾಷ್ಟ್ರೀಯ ಶಾಲಾ ವಿದ್ಯಾರ್ಥಿಗಳು ಅವರನ್ನು ಸ್ವಾಗತಿಸಿ ಮೆರವಣಿಗೆಯಿಂದ ಸಂಭ್ರಮಪೂರ್ವಕವಾಗಿ ಬಿಡಾರಕ್ಕೆ ಕರೆದೊಯ್ದರು. ಸಂಧ್ಯಾಕಾಲದಲ್ಲಿ ಅಲ್ಲಿಯ ಆಸ್ಪತ್ರೆಯ ಬಳಿ ಮೈದಾನದಲ್ಲಿ ಮೂವರೂ ಸ್ಫೂರ್ತಿದಾಯಕವಾದ ಭಾಷಣಗಳನ್ನು ಮಾಡಿದರು. ಇಲ್ಲಿನ ಕೆಲವು ವಿದ್ಯಾರ್ಥಿಗಳು ಈ ದೇಶಾಭಿಮಾನಿಗಳಿಗೆ ೭೦ ರೂಪಾಯಿಗಳನ್ನೂ ಪುರವಾಸಿಗಳು ಒಂದು ಮಾನಪತ್ರವನ್ನೂ ಸಮರ್ಪಿಸಿದರು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ನಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇವರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರುಪೀಠ ದೀಕ್ಷಿತರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತ" "ಆತ್ಮಗೀತ" "ದೇವರೆಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!
ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಇದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ; ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ.

ಶ್ರೀನಿವಾಸ ರಂಗಶೆಟ್ಟಿ
ರಥಬೀದಿ, ಮಂಗಳೂರು

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0
Reserve and other sinking Funds „ 181,250—0—0

ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿಗಾಗಿ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 21st Feb. 1922.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಎರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಶ್ಲೇಷದೋಷವಾದ ವಸ್ತುಗಳಾವವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂಥ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೆಟ್ಟ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಶೂಲೆ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಇರುವ ತಲೆನೋವು, ಕರುಳಿನ ಬೇನೆ, ಜ್ವರ, [illegible] ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ [illegible] ಇನ್‌ಫ್ಲ್ಯೂಯನ್ಸಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು
ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಮುದ್ರಿತವಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—[illegible]—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.
ಹೊಸ ಕಾದಂಬರಿ. ಬೆಲೆ, 1 ರೂ. [illegible] ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವ ಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾ[illegible]
ವೃತ್ತಾಂತ ಪತ್ರಿಕೆ, ಮೈಸೂರು—([illegible]) ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾ[illegible] ಒಬ್ಬ [illegible] ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ [illegible] ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ವರೆಗೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕರ್ತವ್ಯನಿಷ್ಠೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, [illegible] ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿ ಪ್ರೀತಿ ಮುಂತಾದ್ದು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯರು ಕಲಿ[illegible] ದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪ[illegible] ಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು [illegible]

ಸಂಗೀತ ಸಮಯಸಾರ ಸಚಿತ್ರ ರೂ. ೧—೮—
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—[illegible].

ಮುತ್ತಿನ ಸರ	0—12—0	ಸಂಪರಾಮಾಯಣ ಹೊಸ ಮುದ್ರಣ	5—0
ಸಂತಾಪಕ-ಕಾದಂಬರಿ	0—6—0	ಸಂಪರಾಮಾಯಣ	
ಚಂದ್ರಮತಿ „	0—8—0	[illegible]	[illegible]—0
ರಾಜಪುತ್ರರಮಣಿಯರು	0—8—0	S. S. L. C. Kannada [illegible]	[illegible]—0
ಕೆಲವು ಸಣ್ಣ ಕಥೆಗಳು	1—0—0	[illegible]	[illegible]—0
ರಾಜಯೋಗ	1—0—0	[illegible]	[illegible]—0

ಎಂ. ಎಸ್. ರಾವ್ ಕಂಪ[illegible]
ಪುಸ್ತಕವ್ಯಾಪಾರಿಗಳು, ಬೆಂಗಳೂರು [illegible]

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.
ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,
ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಪೆಟ್ಟಿಗೆಯು 32 ಸಾಮಾನುಗಳ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ. 4—8—0, ಶ್ರೇಷ್ಠ 5—0—0 ಪೋಸ್ಟು ಖರ್ಚು ಬೇರೆ. ಮತ್ತು [illegible] ತಯಾರಾಗುವ [illegible]

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
[illegible], ಕಾಶೀ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಷ್ಟವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೇ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಜುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ.1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪೆತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ಜರ್ಮನ ದೇಶದಲ್ಲಿ ತಯ್ಯಾರಾಗಿ ಬಂದಂಥಾ

4 ಮತ್ತು 4½ ರಾತ್ತಲಿನ ಹಾರೆಗಳೂ, 8 ರಾತ್ತಲಿನ ಗುದ್ದಲಿಗಳೂ, 6 ರಾತ್ತಲಿನ ಕುಂಟಾನಿಗಳೂ, 4 ರಾತ್ತಲಿನ ಕೊಡ್ಲಿಗಳೂ, ಎಲ್ಲಾ ಪರಿಮಾಣದ ಮುಳ್ಳು ಮೊಳೆಗಳೂ, ಮಾರಾಟಕ್ಕೆ ಇವೆ.

ವ್ಯಾಪಾರಸ್ಥರಿಗೆ ಬಹು ರಿಯಾಯಿತಿಯ ಧಾರಣೆಯಲ್ಲಿ ವಿಕ್ರಯಮಾಡಲಾದೀತು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಕೋಮನ್ ವೆಲ್ತ್ ಟ್ರಸ್ಟ್, ಲಿಮಿಟೆಡ್,
ಕಲ್ಲಿಕೋಟೆ,
ಇಲ್ಲವೆ—ಕೋಮನ್ ವೆಲ್ತ್ ಸ್ಟೋರ್ಸ್,
ಮಂಗಳೂರು.

ರೋಲ್ಡ್ ಗೋಲ್ಡ್ ಬಂಗಾರದ ಕೈಬಳೆಗಳು



ಈ ಬಳೆಗಳು ಸೀಮೆ ಬಂಗಾರದಿಂದ ಮಾಡಿದೆ. ಬಣ್ಣ ಹೋಗದಂತೆ ಅಪರಂಜಿ ಬಂಗಾರದ ಗಿಲೀಟು ಮಾಡಿದೆ. ಇದನ್ನು ಕೈಯಲ್ಲಿ ಹಾಕಿಕೊಳ್ಳುವುದರಿಂದ ಯಾವ ತೊಂದರೆಯೂ ಇಲ್ಲ. ಗಾಜಿನ ಬಳೆಗಳು ಒಡೆದುಹೋಗುವಂತೆ ಇವು ಹೋಗುವುದಿಲ್ಲ. ಮತ್ತು ಕೆಡುವುದೂ ಇಲ್ಲ. ಇವನ್ನು ನೋಡಿದವರು ನಿಜವಾದ ಬಂಗಾರದ ಬಳೆಗಳೆಂದೇ ಹೇಳುವರು. ಕ್ರಯ ಜೋಡು 1ಕ್ಕೆ 3—0—0.

ವಿಳಾಸ:—
ಎಟೋನಿಯೊ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65,
ಮದರಾಸು.

ವೈ. ಡಾ. ವಾಸುದೇವಾಚಾರ್ಯ ಕೆರೂರು,
ಸಂಪಾದಕ ಶುಭೋದಯ.

ಇವರು ಬರೆದ

ಯದುಮಹಾರಾಜ.

ಎಂಬ ವಿನೂತನ ಕಾದಂಬರಿಯು.

ಬೆಲೆ:—ಒಂದು ರೂಪಾಯಿ ಅಂಚೆವೆಚ್ಚ ಬೇರೆ

ಸ್ವಾಮಿ ರಾಘವೇಂದ್ರಾಚಾರ್ಯ ಕೆರೂರು,
ಬಾಗಲಕೋಟೆ ಡಿ. ಬಿಜಾಪೂರ,

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕೃಪೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನೂ ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಉಪಯೋಗವಾಗುತ್ತದೆಯೋ, ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರೆದಿರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇಟ್ಟ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಬಹಳ ಕಡಿಮೆ ಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಆಯುಷ್ಯ, ಪುಷ್ಟಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ, ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ್, ಮುಂಬಯಿ.

ಮಂಗಳೂರು ಏಜಂಟರು
ಉಲನ್ ಮಾರ್ಟ್, ರಾಘವ ಬಿಲ್ಡಿಂಗ್ಸ್.

ಮಂಗಳೂರು — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು, ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಟಿ. ವೆಂಕಟೇಶ ರಾಮಚಂದ್ರ ಶೆಣೈ
ಪ್ರೊಪ್ರೈಟರ್.

ಇಂಗ್ಲಿಷ್, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪ್ಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳು, ಲಾಟೀನುಗಳು, ಯಿನಾಮಲ್ಲ ಬಟ್ಟಲು ವಗೈರೆ ಸಾಮಾನುಗಳು, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರದ್ದಿ, ಖಾಲಿ ಕವರು ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅಲ್ಲದೆ ಇತರ ಅಲ್ಯುಮಿನಿಯಂ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

~~~~

ಆರ್. ಮಾರ್ಟಿನ್ನರ.

(ಸಾರಸಾಪರಿಲ್ಲಾ)

ಈ ಸಾರಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರದ ಕಾಯಿಲೆ ಉಬ್ಬುವುದು, ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕ್ಷ್ಮಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ ಮತ್ತು ಚರ್ಮದ ರೋಗಗಳು, ವಿಷ ಕಡಿತದಿಂದುಂಟಾದ ವ್ಯಾಧಿ, ಸೆರೊಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು, ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ.

ಬಾಟ್ಲಿ 1ಕ್ಕೆ ಕ್ರಯ ರೂ. 1—12—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಳಿಜ್ವರ, ಸನ್ನಿಪಾತ ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳೂ ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಕಂಠೆಯೂ ನವೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಡಬ್ಬಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಗಂಟುಗಳು, ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಿಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಬೇನೆಯ ನೋವನ್ನು ಕೂಡಲೆ ಶಾಂತಿ ಮಾಡುತ್ತದೆ.

ಡಬ್ಬಿ 1ಕ್ಕೆ ರೂ. 1—8—0.

ವಿಳಾಸ:—ಆರ್. ಡಿ. ಕಾಟ್ಲಿ ಮತ್ತು ಕಂಪೆನಿ,
ನಂಬ್ರ 8, ಫ್ರಿಯರ್ ರೋಡ್,
ವೈಟ್ ಎಂಡ್ ಕೋ ಹತ್ತಿರ ಫೋರ್ಟ್, ಮುಂಬಯಿ.

R. D. KATELY & CO.,
No. 8, Frere Road,
Near Wright & Co. Fort BOMBAY.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498.

ಸ್ವದೇಶಾಭಿಮಾನಿ.

SWADESHABHIMANI.
MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
" ಟಪ್ಪಾಲ್ ಹಾಸಲು ಸೇರಿ " 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ರಕ್ಷೈರ್ಮಹಾರ್ಹೈಸ್ತುತುಷುರ್ನದೇವಾ
ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರದ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಮತ್ತೆ ವಿಷವ ಪುಟುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊಡಿದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೭. ಮಂಗಳೂರು, ತಾರೀಕು ೯ನೇ ಶುಕ್ರವಾರ ಮಾರ್ಚ್ ೧೯೨೮. ಸಂಚಿಕೆ ೧೦

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ.	3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ		2,00,000—0—0
ಚಂದಾ ಹಾಕಿ ಎತ್ತಿದ ಮೂಲಧನ		1,00,000—0—0
ಮೌಲ್ಯ ಕೊಟ್ಟ ಮೂಲಧನ		90,365—7—11
ಠೇವಣಾತಿಗಳು		3,33,300—0—0
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ 6ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ		4,54,322—11—0

ಕಳೆದ 2 ವರುಷಗಳಲ್ಲಿ ಪಾಲುಮ್ಹಾಲಿಕರಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಶರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯುಳ್ಳ ಖಾಯಮ ಠೇವಣಾತಿಗಳನ್ನೂ, 15 ದಿನಗಳ ನೋಟೀಸು ಮೂಲಕ ಶೇಕಡಾ 6¼ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾದೆ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ, ಶೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ, ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನೂ ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ಕೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದಲ್ಲಿ ಸಿಕ್ಕುವುದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ಏಲಕ್ಕಿ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ, ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರ ಅಂಶವು 15—16% ಅಂದರೆ ವಿತ್ತಿನ ಗೊಬ್ಬರದಲ್ಲಿ ನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತಲ ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಟ್ಟಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೋ, ಕಲ್ಕತ್ತಾ.

THE DIRECTOR
CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾಶಾಖಸ್ಥರ ಅಧ್ಯಾಪಕರು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವೃತವಿವೇಕ ಕ್ರಯ		೦—೧೦—೦
ಕೇಶಕುಶ್ಚಂಗ	"	೦—೧೩—೦
ಸಂಕ್ಷೇಪಗೀತೆ	"	೦—೧೦—೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತಿ ನೀತಿ ಪುಸ್ತಕ ಕ್ರಯಂ —೩—೦

ಕರ್ನಾಟಕ ಕವಿ ಚಂಡ, ಮರಾಟರ ಅವನತಿ, ಶ್ರೀವಾಸ ಬೋಧೆ, ವಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ, ಅಂಗದನ ಕೈಯೂರು, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಹೋರುಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಚ್ಚ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಚಿಕಪುಸ್ತಕ, ಭೂಗೋಳ, ವ್ಯಾಕರಣ ಇತ್ಯಾದಿ.

ಸ್ವದೇಶಾಭಿಮಾನ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳಿಕರಿಗೆ ರೂ ೨-೦-೦. ವಿ. ಪಿ. ಖರ್ಚು ಕೂಡಿ ರೂ. ೩-೦-೦ ಪ್ರಕಟಿಕೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆದುಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ನಾಟಕರಂಗಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಖನ ಪುಸ್ತಕಗಳು, ನೋಟು ಬುಕ್ಕುಗಳು, ಇಂಕುಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಹೋಲ್ಡರುಗಳು, ಇತರ ಬಿಲ್ಲಾಯತಿ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮು ಗಳು, ಪರ್ಮಿಟು ಫೋರ್ಮು, ಕುಂಕುಂದಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋಂಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪತಿಕ್, ಹೊಮಿಯೊಪತಿಕ್ ಮತ್ತು ಪೇಟೆಂಟು ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪಾಷ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಕರಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಓಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೩೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTANJAN
Best Indian Pain Balm
Amrutanjan D
BOMBAY.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿರಶೂಲವಾದರೂ ನೋವಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ, ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ವಡಕತುವಿ

U. B. DUTT & Co. CALCUTTA

[illegible]

ಕ್ರಯ ರೂ. 4—4—0. ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ [illegible]
~~~~

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩, (ಬ್ರಾಡ್ವೇ, ಮದ್ರಾಸ್.

Local Agents: **Raphael & Co,**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ತರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಬಡಿಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರಕೊಳ್ಳಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಈಗಲೇ ಪ್ರಕಟವಾಗಿದೆ! ಬೇಗನೆ ತರಿಸಿಕೊಳ್ಳಿರಿ!

ಕಾಮಶಾಸ್ತ್ರ (ಎನ್ನುವ ಶರೀರ ಮರ್ಮಶಾಸ್ತ್ರ)

ಈ ಪುಸ್ತಕವ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಇದ್ದದನ್ನು ಇದ್ದ ಹಾಗೆಯೇ ತಿಳಿಸುವಂತೆ ಚಿತ್ರಪಟಗಳ ಸಹಿತ ಗ್ಲೇಜು ಕಾಗದದಲ್ಲಿ ಮುದ್ರಿಸಿರುತ್ತೇವೆ. ಇದರಲ್ಲಿ ಸ್ತ್ರೀ ಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ದಂಪತಿಗಳು ಅನ್ಯೋನ್ಯವಾಗಿರುವದಕ್ಕೆ ಮಾಡಬೇಕಾದ ಉಪಾಯಗಳು, ಗುಪ್ತವೈದ್ಯಗಳ ಚಿಕಿತ್ಸೆ, ಶಯನಗೃಹದ ನಿಯಮಗಳು, ಇನಿತು, ಸ್ತ್ರೀ ಪುರುಷರುಗಳಿಗೆ ಬೇಕಾದ ರಹಸ್ಯಗಳು ತುಂಬಿತುಳುಕುತ್ತಿರುವವು. ಕ್ರಯ ಮರ್ಮಶಾಸ್ತ್ರ ರೂ. 1—0—0.

ವಿಳಾಸ:— ಟಿ. ರಾಮಚಂದ್ರರಾವ್ ಕಂಪೆನಿ,
೨೨ ತಿರುಪ್ಪಳಿ ಬೀದಿ,
ಸಾಹುಕಾರಪೇಟೆ, ಮದರಾಸು.

ಪ್ರಕಟಣೆ.

ರುಧಿರೋದ್ಗಾರಿ ಸಂವರದ ಪಂಚಾಂಗ.

ಇದು ಚಿ। ಸುಬ್ಬಣ್ಣ ಶಾಸ್ತ್ರಿಗಳಿಂದ ಗುಣಿಸಲ್ಪಟ್ಟು ಮಂಗಳೂರು ಶಾರದಾ ಛಾಪಖಾನೆಯಲ್ಲಿ ಸುಂದರವಾಗಿ ಮುದ್ರಿತವಾಗುತ್ತಿದೆ. ಅಗತ್ಯವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಪಂಚಾಂಗಕರ್ತರಲ್ಲಿಯೂ ದೊರೆಯುವುದು. ಪಂಚಾಂಗ ಪ್ರತಿ ೧ಕ್ಕೆ ಕ್ರಯ ೩। ಆಣೆ, ೫೦ಕ್ಕೆ ರೂ. ೮—೦—೦.

ವಿಳಾಸ:-
ಶಾರದಾ ಛಾಪಖಾನೆ,
ಮಂಗಳೂರು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಖುದಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs. 150
¼ Page Rs. 80. ½ Page	„ 50
2 in. Single Column	„ 20
1 in. Single Column	„ 15
Name alone in Bold Types	„ 5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ಸುಸಂದರ್ಭ! ದರ ಸುಲಭ! ತ್ವರೆಮಾಡಿರಿ!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಎಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ. ಬಿ. ಎಲ್.

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ಲು 1ರ ರೂ. 2—12—0.
ಸ್ಪೆಶ್ಯಲ್ ರಾತ್ಲು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲ್ಸು ಕಳುಹಿಸಲ್ಪಡುವದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಫಿಡಲ್ 1ಕ್ಕೆ „ 15—0—0

ಬೇಕಾದವರು 5 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೋಟೋಗಳು



ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65, ಮದರಾಸು.

ಶಾಲಿವಾಹನಶಕೆ ೧೮೪೪ನೆಯ ದುಂದುಭಿ ಸಂವತ್ಸರದ ಫಾಲ್ಗುಣ ಬ॥ ೮ ಶನಿವಾರದಿಂದ ದುಂದುಭಿ ಸಂ॥ ಫಾಲ್ಗುಣ ಬ॥೧೪ ಶುಕ್ರವಾರದ ವರೆಗಿನ

ಪಂಚಾಂಗ

(೧೯೨೩ನೆಯ ಕುಂಭ ಮಾಸ)

ತಾರೀಕು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
10	ಶನಿ	೮	೩೬.೨೮	ಜ್ಯೇಷ್ಠಾ	೧೬.೧೪	೨೬	6.43	6.39
11	ರವಿ	೯	೩೩.೪೭	ಮೂಲಾ	೧೫. ೦	೨೭	6.42	6.39
12	ಸೋಮ	೧೦	೩೦. ೦	ಪೂ. ಷಾ.	೧೫. ೨	೨೮	6.42	6.39
13	ಮಂಗಳ	೧೧	೨೧.೪೩	ಉ. ಷಾ.	೧೬. ೫	೨೯	6.41	6.40
14	ಬುಧ	೧೨	೨೨.೩೭	ಶ್ರವಣಾ	೧೮.೧೬	೩೦	6.40	6.40
15	ಗುರು	೧೩	೨೮.೪೭	ಧನಿಷ್ಠಾ	೨೧.೪೩	೧	6.40	6.40
16	ಶುಕ್ರ	೧೪	೨೦. ೫	ಶತಭಿಷಾ	೨೪.೧೭	೨	6.39	6.40

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಫೆಬ್ರವರಿ)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
1	92—3	73—5	—	—
2	92—2	72—7	—	—
3	92—2	74—9	—	—
4	91—3	73—2	—	—
5	88—9	74—2	—	—
6	92—2	73—2	—	—
7	90—2	73—2	—	139.58

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮುಸ್ಕತಿ ಅಕ್ಕಿಮುಡಿ ೧ಕ್ಕೆ ...	7-10	8— 4
ಹೊಸ ಗುಜ್ಜು, ...	6-12	7— 4
ಹೊಸ ರಾಶಿ ...	6- 2	6— 8
ಅಮ್ಮಲ್ ಬೆಳ್ತಿಗೆ „ ...	7-14	8— 8
ಗುಜ್ಜು ಬೆಳ್ತಿಗೆ „ ...	7- 6	7—10
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	12-8	13— 0
ಗೋಧಿ ಗೋಣಿ ೧ಕ್ಕೆ ...	16- 8	19— 0
ಹುರುಳಿ ಗೋಣಿ ೧ಕ್ಕೆ ...	9- 8	8— 4
ಕಡಲೆ ಗೋಣಿ ೧ಕ್ಕೆ ...	14- 8	14— 8
ಕೊಣಂ ಗೋಣಿ ೧ಕ್ಕೆ ...	12- 8	—
ತೊಗರಿಬೇಳೆ ಗೋಣಿ ೧ಕ್ಕೆ ...	14- 0	19— 2
ಉದ್ದು ಗೋಣಿ ೧ಕ್ಕೆ ...	13- 0	—
ಹೆಸರು ಗೋಣಿ ೧ಕ್ಕೆ ...	—	12— 8
[illegible] ಖಂಡಿ ೧ಕ್ಕೆ ...	42- 0	45— 0
ಉಪ್ಪು ಗೋಣಿ ೧ಕ್ಕೆ ...	6- 4	6— 8
ಕೊಬ್ರಿ ಖಂಡಿ ೧ಕ್ಕೆ ...	98- 0	106— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	44- 0	49— 8
ಎಳ್ಳಿಂಡಿ ಖಂಡಿ ೧ಕ್ಕೆ ...	50- 0	55— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7-12	9— 0
ಎಳ್ಳೆಣ್ಣೆ ಮುಡಿ ೧ಕ್ಕೆ ...	6-12	9— 0
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ ...	9- 0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	6-10	—
ಊರ ಮುಷ್ಟಿನ ಕಾಯಿ ಮುಡಿ ೧ಕ್ಕೆ ...	7- 0	7— 4
ಸಾಸಿವೆ ಮುಡಿ ೧ಕ್ಕೆ ...	8- 8	9— 0
ಕೊತ್ತುಂಬರಿ ಮುಡಿ ೧ಕ್ಕೆ ...	3-12	3—14
ಕಾಫಿ ಖಂಡಿ ೧ಕ್ಕೆ ...	285- 0	302— 0
ಬೀಗೋಟು ಅಡಿಕೆ ಖಂಡಿ ೧ಕ್ಕೆ ಹಳ್ತು ...	200- 0	205— 0
ಬೀಗೋಟು New, ಹೊಸ್ತು ...	160- 0	165— 0
ಕಾಳುಮೆಣಸು ಖಂಡಿ ೧ಕ್ಕೆ ...	115- 0	120— 0
ಯಾಲಕ್ಕಿ ಮುಡಿ ೧ಕ್ಕೆ ...	60- 0	70— 0
ಗೇರುಬೀಜ ಮುಡಿ ೧ಕ್ಕೆ ...	1-14	2— 0
ಅಕ್ಕಿಜ ಖಂಡಿ ೧ಕ್ಕೆ ...	50- 0	65— 0
ಕಾಯ್ಲಿ ಕಣಸು ಮುಡಿ ೧ಕ್ಕೆ ...	20-12	23— 0
[illegible] ...	32- 0	—
ಜೀಡಿ ಬೆಲ್ಲ ಸೇರು ೧ಕ್ಕೆ ...	22- 8	—
ಒಣ್ಮೀ ಕಣಿಮುಡಿ 1ಕ್ಕೆ ...	20- 0	21—

ಈಗಲೇ ತರಿಸುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 3 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆಯೇ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನ ಎಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟ ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯ ಎಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಬಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

ಯುನೈಟೆಡ್ ಕಮರ್ಶಿಯಲ್ ಕಂಪೆನಿ,

ಪೋಸ್ಟ ಬಾಕ್ಸ ನಂಬ್ರ 388, ಮುಂಬಯಿ.

ಈ ಕಂಪೆನಿಯವರು ನಾನಾ ತರದ ಕಾಗದಗಳನ್ನೂ ಛಾಪಖಾನೆಗೆ ಬೇಕಾದ ಉಪಕರಣಗಳನ್ನೂ ರಖಂ ಬಿಕ್ಕಿಯಲ್ಲಿ ಮಾರಾಟಮಾಡುವರು. ಈ ಕಂಪೆನಿಗೆ ಪೇಜು ಹಾಕುವ (Numbering) ಅನೇಕ ಮೆಶಿನ್ನುಗಳು ಈಗಲೇ ಬಂದಿರುತ್ತವೆ. ಗಿರಾಕಿಗಳು ತಮಗೆ ಬೇಕಾದ ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳುವುದು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O. S. No. $\frac{127}{1923}$

ಉಡುಪಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್ ಲಿಮಿಟೆಡ್ ಸಂಘದ ಸೆಕ್ರೆಟರಿ ನಯಂಪಳ್ಳಿ ಆನಂದರಾವ್, ವಾದಿ.

ಮತ್ತು

1. ಟಿ. ರಾಜಾರಾಮಚಂದ್ರಪ್ಪೈ
2. ಕೆ. ವಾಸುದೇವ ಭಕ್ತಾ } ಪ್ರತಿವಾದಿರು.

ಇವರೊಳಗೆ ಉಡುಪಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ ಲಿಮಿಟೆಡ್ ಸಂಘದಿಂದ ಸಾಲಪಡದ ರೂಪಾಯಿ 1000ಕ್ಕೆ ಪ್ರತಿವಾದಿರು ಸದರಿ ಬ್ಯಾಂಕಿಗೆ ತಾ. 17-8-1922ರಲ್ಲಿ ಬರಕೊಟ್ಟ ಡಿಮಾಂಡನೋಟು ಪ್ರಕಾರದ ದವಜು ಬಡ್ಡಿ ಕೂಡಾ ರೂಪಾಯಿ 1026—1—6ಕ್ಕೆ ಸದರಿ ಸಂಘದ ಕಡೆಯಿಂದ ವಾದಿಯು ದಾವಾ ಮಾಡಿರುತ್ತಾನೆ. ಈ ಕುರಿತು 1ನೇ ಪ್ರತಿವಾದಿಯು ಆಕ್ಷೇಪ ಇದ್ದರೆ ಸದರಿ ನಂಬ್ರ ತನಖಿಗೆ ಇಟ್ಟ ತಾರೀಕು 20-3-1923ನೆ ದಿವಸ ಹಗಲು 10 ಗಂಟೆಗೆ ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ ಹಾಜೀರುಮಾಡತಕ್ಕದ್ದೆಂಬ ಸಂಗತಿ ಈ ಮೂಲಕ ಪ್ರಕಟಿಸಿರುತ್ತದೆ.

M. Vittal Kamath,
Vakil for Plaintiff.

ಫೋಟೋ ಉಂಗುರಗಳು.

ಈ ತಿಂಗಳಲ್ಲಿ ತರಿಸಿದವರಿಗೆ ರೋಸಾ ಸೆಂಟ್ ಬಾಟಲ್ ಇನಾಂ.

ಈ ಉಂಗುರಗಳನ್ನು ಸೀಮೆಯ ಬಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಶನ್ ವಜ್ರದ 5 ಕಲ್ಲುಗಳು ಕೆತ್ತಲ್ಪಟ್ಟವೆ. ಇದರ ಮಧ್ಯದಲ್ಲಿ ಒಂದು ಭೂತಕನ್ನಡಿ ಇರುವುದು. ಅದರಲ್ಲಿ ನೋಡಿದರೆ ರಾಮ, ಕೃಷ್ಣ, ಲಕ್ಷ್ಮಿ, ಗಾಂಧಿ, ತಿಲಕ, ಅರವಿಂದ ಮುಂತಾದವು ವಿವರವಾಗಿ ಕಾಣುವವು. ಇದರ ಬಣ್ಣವು ಹೋಗದಂತೆ ಸುವರ್ಣಭಂಗಾರದ ಗಿಲೀಟು ಮಾಡಿಯದೆ. ಇದು ಬೆರಳಿಗೆ ಹಾಕಿಕೊಳ್ಳಲು ಯೋಗ್ಯವಾಗಿರುವುದು. ಕ್ರಯ 1ಕ್ಕೆ ರೂ. 2—0—0

ವಿಲಾಯತಿಯ ರೇಜರು.

ಈ ರೇಜರುಗಳು ವಿಲಾಯತಿಯಲ್ಲಿ ತಯಾರಾದದ್ದು. ಇದರಲ್ಲಿ ಕ್ಷೌರವನ್ನು ಮಾಡಿಕೊಳ್ಳುವುದರಿಂದ ಉರಿಯುವುದಿಲ್ಲ. ನೋವಾಗುವುದಿಲ್ಲ. ಅಂಟುವ್ಯಾಧಿಗಳು ಸೇರುವುದಿಲ್ಲ. ಇದರ ಕತ್ತಿಯು ಬಹು ಮೇಲಾದ ಲೋಹದಿಂದ ಮಾಡಿದೆ. ಬಿಳಿ ದಂತದ ಹಿಡಿ ಇರುವುದು.

ಕ್ರಯ 1ಕ್ಕೆ ರೂ. 2—0—0.

ವಿಳಾಸ:— ರಿಪನ್ ವಾಚ್ ಕಂಪೆನಿ,
1/16 ಕದಶ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು

ಪಾಕೆಟ್ ಬೈಸ್ಕೋಪ್‌ಗಳು.

ಈ ಬಾಯಸ್ಕೋಪುಗಳು ಜರ್ಮನ್ ದೇಶದಲ್ಲಿ ತಯಾರಾದವು. ಇದರಲ್ಲಿ (ಫಿಲ್ಮ) ಚಿತ್ರಪಟಗಳನ್ನು ಹಾಕಿ ನೋಡಿದರೆ ಬೈಸ್ಕೋಪಿನಲ್ಲಿ ಇದ್ದಂತೆಯೇ ಇರುವುದು. ಈ ಒಂದು ಯಂತ್ರವನ್ನು ಇಟ್ಟುಕೊಂಡು ಜಾತ್ರೆಗಳಲ್ಲಿ ಬಂದವರಿಗೆ ತೋರಿಸಿ ಹಣವನ್ನು ಸಂಪಾದನೆ ಮಾಡಬಹುದು. ಇದಕ್ಕೆ ಮುಂಚಿತವಾಗಿ ಈ ಮಾದರಿ ಯಂತ್ರಗಳು ಮಾರಾಟಕ್ಕೆ ಬರಲಿಲ್ಲ. ಈಗ ತಾನೆ ಬಂದಿರುವವು. ಕ್ರಯ 1-0-0. 2-0-0.

ವಿಳಾಸ:— ರಿಪನ್ ವಾಚ್ ಕಂಪೆನಿ,
22 ಕೃಷ್ಣಪ್ಪ ಮೊದಲಿ ಬೀದಿ, ಟ್ರಿಪ್ಲಿಕೇನ್, ಮದರಾಸು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 3½ಮೊಳ ಅಗಲವಿರುವದು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 ರೂ. 6—8—0
„ 2 „ 7—8—0

ವಿಳಾಸ:—ಎಸ್. ಆರ್. ಕೃಷ್ಣ ಎಂಡು ಕೊ,
1, ತಂಬುನಾಯಕನ ಬೀದಿ, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶ್ಯವ್ಯಾಪಾರಿ

ರಥಬೀದಿ, ಮಂಗಳೂರು.

I-ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ ರೂ. 3—4—0
ಶೇ. 1 („ 24) „ „ 2—0—0

ಪೋಸ್ಟು ಪೇಕಿಂಗ್ ಖರ್ಚು ಪ್ರತ್ಯೇಕ

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 3-0-0.

ಸ್ವಂತ ಖರ್ಚಿಗೆ ತರಿಸುವವರು ಪೋಸ್ಟು ಪೇಕಿಂಗ್ ಖರ್ಚು ಕೊಡಬೇಕಾಗುವುದು

ನಶ್ಯ ಒಂದೇ ತರದ್ದು.

ಪ್ರಕಟಣೆ.

O. P. No. 7/23

ಮಂಗಳೂರು ತಾಲೂಕು ಕೋರ್ಟ ಮತಸ್ಥಾಪನೆಗಳ ಕಮಿಟಿ ಮೆಂಬರರು ತಿಳಿಸುವುದೇನೆಂದರೆ:—

ಬಂಟ್ವಾಳ ಮಹಾಲಿಂಗೇಶ್ವರ ದೇವಳದಲ್ಲಿ ಪ್ರಕೃತ ಮೂರು ಮೊಕ್ತೇಸರ ಸ್ಥಾನಗಳು ಖಾಲಿ ಉಂಟು. ಆದ್ದರಿಂದ ಮಾಜಿ ಮೊಕ್ತೇಸರರ ಪ್ರತಿನಿಧಿ ವಾರಿಸ್ತಾರರು ಮತ್ತು ಸದರಿ ದೇವಳ ಕೂಡುಗಟ್ಟಿಗೆ ಸೇರಿದ್ದು ದೇವಳ ಪ್ರವೇಶಕ್ಕೆ ಅರ್ಹರಾದ ಇತರ ಉಮೇದುವಾರರು ಇದೇ ತಿಂಗಳ ತಾ. ೩೦ರ ಒಳಗೆ ನಮ್ಮ ಪೊಳಲಿ ಆಫೀಸಿಗೆ ಅರ್ಜಿ ಬರಕೊಳ್ಳತಕ್ಕದ್ದು. ಅನಂತರ ಅಗತ್ಯವುಳ್ಳ ತನಿಖಿ ಅಥವಾ ಚುನಾವಣಿಯಿಂದ ಆಯಾ ಸ್ಥಾನಗಳನ್ನು ಭರ್ತಿ ಮಾಡೋಣಾಗುವುದು.

ಮೊಕ್ಕಾಂ ಪೊಳಲಿ,
ತಾ. ೧ನೆ ಮಾರ್ಚಿ ೧೯೨೩. } ಬಡಕಬೈಲ್ ಪರಮೇಶ್ವರಯ್ಯ
ಕಮಿಟಿ ಮೆಂಬರರ ಬಗ್ಗೆ.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ,

O. P. ನಂಬ್ರ 28/1923

1. ಸವೂರ ಭವಾನಿಶಂಕರ ರಾವ್,
2. ಸವೂರ ರಾಜಾರಾಮ ರಾವ್. } ಅರ್ಜಿದಾರರು.

ಮಂಗಳೂರು ಶಹರಿನಲ್ಲಿ ಮೃತಪಟ್ಟ ವೊಂಬತ್ತಕೆರೆ ರಾಮರಾಯರ ಬಾಬ್ತು ಹೊರಗಿನಿಂದ ಸಲ್ಲತಕ್ಕ ಸಾಲಗಳು ವಸೂಲುಮಾಡುವರೆ ಸದರಿ ಅರ್ಜಿದಾರರು ಮೇಲ್ಕಂಡ ಅರ್ಜಿ ದಾಖಲುಮಾಡಿರುತ್ತಾರೆ. ಅದು ತಾರೀಕು 16-3-'23ಕ್ಕೆ ತನಖಿಗೆ ಇಟ್ಟಿರುತ್ತದೆ. ಆ ಸಂಬಂಧ ಯಾರಾದರೂ ಆಕ್ಷೇಪಿಸುವವರಿದ್ದರೆ ಅವರ ಆಕ್ಷೇಪಗಳನ್ನು ಸದರಿ ಮೇಲ್ಕಂಡ ವಾಯಿದೆಯೊಳಗೆ ಮೇಲ್ಕಂಡ ಕೋರ್ಟಿನಲ್ಲಿ ಜ್ಯಾಹೀರುಮಾಡತಕ್ಕದೆಂತ ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

Gangolly Krishna Rao.
Pleader for Petitioners.

ಹಿಂದೂ ದೇಶದ ರಾಜ್ಯಭಾರದ ಖರ್ಚು ಕಡಿಮೆ ಮಾಡಲು ನೇಮಿಸಲ್ಪಟ್ಟ ಇಂಚ್‌ಕೇಪ್ ಕಮ್ಮಿಟಿಯ ರಿಪೋರ್ಟು.

ರಿಟ್ರೆಂಚಮೆಂಟ್ ಕಮ್ಮಿಟಿಯ ಮುಖ್ಯಸ್ಥರಾದ ಲೊರ್ಡ ಇಂಚ್‌ಕೇಪ್ ಸಾಹೇಬರೂ ಕಮ್ಮಿಟಿಯ ಇತರ ಮೆಂಬರರೂ ಇದೇ ಮಾರ್ಚಿ ತಿಂಗಳ ತಾ. ೨ನೇ ಬೆಳಗ್ಗೆ ಸುಮಾರು ೩೦೦ ಪುಟಗಳಿರುವ ತಾವು ತಯಾರಿಸಿದ ರಿಪೋರ್ಟನ್ನು ವೈಸರಾಯ ದೊರೆಗಳಿಗೆ ಒಪ್ಪಿಸಿದರು.

ಈ ರಿಪೋರ್ಟಿನ ಪ್ರಕಾರ ೧೯॥ ಕೋಟಿ ರೂಪಾಯಿಗಳ ಖರ್ಚು ಕಡಿಮೆಯಾಗುತ್ತದೆ. ಆದರೆ ಈ ೧೯॥ ಕೋಟಿ ರೂಪಾಯಿಯನ್ನೆಲ್ಲಾ ಇದೇ ವರುಷ ಕಡಿಮೆಮಾಡಲು ಸಾಧ್ಯವಿಲ್ಲ. ಕ್ರಮೇಣ ಕಡಿಮೆಮಾಡಲ್ಪಡುವುದು.

ಮಿಲಿಟರಿ ಇಲಾಖೆ—೧೯೨೩-'೨೪ನೇ ಇಸವಿಯ ಆದಾಯ ವೆಚ್ಚದ ಪಟ್ಟಿ ತಯಾರಿಸುವಾಗ ೫೭॥ ಕೋಟಿ ರೂಪಾಯಿಗಳು ಮಾತ್ರವೆ ಖರ್ಚು ತೋರಿಸಬೇಕು. ಎಂದರೆ ೧೯೨೨-೧೯೨೩ಕ್ಕಿಂತ ೧೦॥ ಕೋಟಿ ಕಡಿಮೆ ಮಾಡಬೇಕು. ೧೯೨೨-'೨೩ರಲ್ಲಿ ಈ ರೀತಿಯಲ್ಲಿ ಕಡಿಮೆಮಾಡಬೇಕು. ಸೈನಿಕರಲ್ಲಿ ೩ ಕೋಟಿ ರೂಪಾಯಿ ಕಡಿಮೆಮಾಡಬೇಕು. ಹೇಗೆಂದರೆ—(a) ಈಗ ಇಂಗ್ಲಿಷ ಸಿಪಾಯಿಯರಿರುವ ಒಂದೊಂದು ಬೆಟಲಿಯನ್‌ನಲ್ಲಿ ಈಗ ೧೦೯೨ ಮಂದಿ ಇರುತ್ತಾರೆ. ಅದರಲ್ಲಿ ೮೮೪ ಮಾತ್ರವೇ ಇಡಬೇಕು. ಈ ರೀತಿಯಲ್ಲಿ ೫೭೬೦ ಇಂಗ್ಲಿಷ ಸಿಪಾಯಿಗಳನ್ನು ಕಡಿಮೆಮಾಡಬೇಕು. (b) ಇಂಗ್ಲಿಷ ಕುದುರೆಸವಾರರ ೩ ರೆಜಿಮೆಂಟುಗಳನ್ನು ಕಡಿಮೆಮಾಡಬೇಕು. (c) ಫಿರಂಗಿ ಸೈನ್ಯವನ್ನು ಕಡಿಮೆಮಾಡಬೇಕು. (d) ಈಗಿನ ಹಿಂದೀ ಸಿಪಾಯಿಯರ ಒಂದೊಂದು ಬೆಟಲಿಯನ್‌ನಲ್ಲಿ ೮೦೬ ಮಂದಿ ಸಿಪಾಯಿಯರಿರುತ್ತಾರೆ. ಅದರಲ್ಲಿ ೬೬೭ ಮಾತ್ರವೇ ಇಡಬೇಕು. ೮೫ ಬೆಟಲಿಯನ್‌ಗಳಲ್ಲಿ ೬೬೪೩ ಹಿಂದೀ ಸಿಪಾಯಿಗಳನ್ನು ಕಡಿಮೆಮಾಡಬೇಕು. ಹೊಸತಾಗಿ ತರಬೇತುಮಾಡುವ ಸಿಪಾಯಿಯರಲ್ಲಿ ಸೇಕಡಾ ೫೦ರ ಪ್ರಕಾರ ಕಡಿಮೆಮಾಡಬೇಕು. ೨. ಯುದ್ಧ ಕಾಲದಲ್ಲಿದ್ದ ರಿಜರ್ವ ಸಿಪಾಯಿಗಳನ್ನು ಈಗ ಸಮಾಧಾನ ಕಾಲದಲ್ಲಿ ಸೇಕಡಾ ೨೦ರ ಪ್ರಕಾರ ಕಡಿಮೆಮಾಡಬೇಕು. ೩. ಸೈನ್ಯಕ್ಕೆ ಒದಗಿಸಿರುವ ಮೋಟಾರ ಗಾಡಿಗಳನ್ನು ಕಡಿಮೆಮಾಡಬೇಕು. ೪. ಮದ್ದುಗುಂಡುಗಳನ್ನು ತಯಾರಿಸಿ ದಾಸ್ತಾನು ಇಡುವುದನ್ನು ಕಡಿಮೆಮಾಡಬೇಕು. ೫. ಸೈನ್ಯ ಸಂಬಂಧವಾದ ಕಾಮಗಾರಿಗಳಿಗೆ ಉಪಯೋಗಿಸುವ ಹಣದಲ್ಲಿ ೬೭ ಲಕ್ಷ ಕಡಿಮೆಮಾಡಬೇಕು. ೬. ಇಂಡಿಯನ್ ಮೆರ್‍ಯಾನ್ ಎಂಬ ಕಲಾಸಿಗಳ ಸಂಖ್ಯೆಯನ್ನು ಬಹಳ ಕಡಿಮೆಮಾಡಬೇಕು. ಮೇಲೆ ಹೇಳಿದ ವಿಧಗಳಲ್ಲಿ ಖರ್ಚು ಕಡಿಮೆಮಾಡಲಿಕ್ಕೆ ಕಮಾಂಡರ್ ಇನ್ ಚೀಫ್ ಇವರು ಒಪ್ಪಿಗೆಕೊಟ್ಟಿರುತ್ತಾರೆಂದು ಕಮಿಟಿಯವರು ಹೇಳುತ್ತಾರೆ.

ರೈಲ್ವೆಯ ಖರ್ಚು—ರೈಲ್ವೆ ವಿಷಯ ಖರ್ಚು ಕಡಿಮೆಮಾಡುವ ರಿಪೋರ್ಟು ೩೦ ಪುಟಗಳಿವೆ. ಕಮ್ಮಿಟಿಯವರ ಮೊದಲನೇ ಸೂಚನೆ ಏನೆಂದರೆ, ಕಡಿಮೆ ಮುನಾಫೆ ಸಿಕ್ಕುವ ಕೆಲವು ರೈಲ್ವೆ ಲೈನುಗಳಲ್ಲಿ ಖರ್ಚು ಹೆಚ್ಚಾಗಿಯದೆಂಬುದು. ಕೆಲವು ಕಡೆಗಳಲ್ಲಿ ವಹಿವಾಟಿಗೆ ಬೇಕಾದ್ದಕ್ಕಿಂತಲೂ ಹೆಚ್ಚು ಇಂಜಿನುಗಳೂ ಗಾಡಿಗಳೂ ಇವೆ ಎಂಬುದು ಇನ್ನೊಂದು. ಆದ್ದರಿಂದ ಆದಾಯ ಕಡಿಮೆ ಇರುವಲ್ಲಿ ಖರ್ಚು ಕಡಿಮೆಮಾಡಲೇಬೇಕು. ಕಾಮಗಾರಿಯ ಖರ್ಚನ್ನು ಕಡಿಮೆಮಾಡಿ ಕಂಪೆನಿಗಳಲ್ಲಿರುವ ಸರಕಾರ ಹಣಕ್ಕೆ ಸೇಕಡಾ ೫॥ ಪ್ರಕಾರವಾದರೂ ಬಡ್ಡಿ ಸಿಕ್ಕುವ ಹಾಗೆ ಮಾಡಬೇಕು. ರೈಲ್ವೆ ಕಂಪೆನಿಯವರಿಗೆ ಮಾರ್ಗ ದುರುಸ್ತಿಮಾಡಲಿಕ್ಕೂ ಗಾಡಿಗಳನ್ನು ಕೊಂಡುಕೊಳ್ಳಲಿಕ್ಕೂ ಸೀಮೆಯ ಹಣದಿಂದ ಒಂದು ಅಂಶವನ್ನು ಕೊಡುವುದನ್ನು ನಿಲ್ಲಿಸಿ ಕಂಪೆನಿಯವರೇ ಇವರ ಖರ್ಚನ್ನು ನೋಡಿಕೊಳ್ಳಬೇಕು. ರೈಲ್ವೆ ಕಂಪೆನಿಗಳ ಮೇಲ್ವಿಚಾರಣೆಗಳ ವಿಷಯ ಕಮ್ಮಿಟಿಯವರ ಅಭಿಪ್ರಾಯವೇನೆಂದರೆ, ಈಗ ಇರುವ ರೈಲ್ವೆ ಏಜಂಟರುಗಳನ್ನು ಜನರಲ್ ಮೆನೇಜರುಗಳಾಗಿ ಮಾಡಿ ಇವರಿಗೆ ಮೇಲ್ವಿಚಾರಣೆ, ಕೆಲಸ ನಡಿಸುವುದು, ಮತ್ತು ಖರ್ಚಿನ ವಿಷಯ ವಹಿಸಿಕೊಟ್ಟು ಇವುಗಳಿಗೆಲ್ಲಾ ಇವರನ್ನು ಜವಾಬದಾರರನ್ನಾಗಿ ಮಾಡಬೇಕು. ಕಂಪೆನಿಗಳಿಗೆ ಲಾಭಾದಾಯದ ವಿಷಯ ಅನುಭವವನ್ನು ಕೊಡಲಿಕ್ಕೆ ಒಬ್ಬ ಫೈನಾನ್ಸಿಯಲ್ ಎಡ್‌ವೈಜರರನ್ನು ನೇಮಿಸುವುದಕ್ಕೆ ಕಮ್ಮಿಟಿಯು ಶಿಫಾರಸುಮಾಡುತ್ತದೆ. ೧೯೨೨ ಮತ್ತು '೨೩ನೇ ಇಸವಿಯಲ್ಲಿ ಕಡಿಮೆಮಾಡಲಿಕ್ಕೆ ಶಿಫಾರಸುಮಾಡಿದ ೪॥ ಕೋಟಿ ರೂಪಾಯಿಗಳಲ್ಲಿ ೨ ಕೋಟಿ ೮೦ ಲಕ್ಷ ರೂಪಾಯಿಗಳನ್ನು ರವಿನ್ಯು ಖರ್ಚಿನಲ್ಲೂ ಉಳಿದುದನ್ನು ಸಾಧಾರಣ ತರದ ಕೆಲಸಗಳಲ್ಲೂ ಕಡಿಮೆಮಾಡತಕ್ಕದ್ದು.

ಟಪ್ಪಾಲು ಮತ್ತು ಟೆಲಿಗ್ರಾಫ್ ಇಲಾಖೆ— ಟೆಲಿಗ್ರಾಫ್ ಇಲಾಖೆಗಳಲ್ಲಿ ಕಾಮಗಾರಿ ವಿಷಯ ೫೦ ಲಕ್ಷ ರೂಪಾಯಿಯನ್ನು ಕಡಿಮೆಮಾಡಬೇಕು. ಅಲ್ಲದೆ ೧ ಕೋಟಿ ೩೦ ಲಕ್ಷ ರೂಪಾಯಿಯನ್ನು ಬೇರೆ ವಿಧದಿಂದ ಕಡಿಮೆಮಾಡಬೇಕು. ಈ ಕೆಳಗಿನ ರೀತಿಯಲ್ಲಿ ಕಡಿಮೆಮಾಡತಕ್ಕದ್ದು. (a) ಟಪ್ಪಾಲು ಮತ್ತು ಟೆಲಿಗ್ರಾಫ್ ಸಿಬ್ಬಂದಿಯ ಖರ್ಚಿನಲ್ಲಿ ೨೫ ಲಕ್ಷ ಕಡಿಮೆಮಾಡಬೇಕು. (b) ಟಪ್ಪಾಲು ಒಯ್ಯುವುದರಲ್ಲಿ ೭ ಲಕ್ಷ ಕಡಿಮೆಮಾಡಬೇಕು; (c) ಕಟ್ಟೋಣಗಳನ್ನು ಕಟ್ಟಿಸುವುದರಲ್ಲಿಯೂ ದುರುಸ್ತಿ ಇಡುವುದರಲ್ಲಿಯೂ ೯ ಲಕ್ಷ ಕಡಿಮೆಮಾಡಬೇಕು; (d) ವರ್ಷದಲ್ಲಿ ೯ ತಿಂಗಳಿಗೆ ಮಾತ್ರವೇ ಬೇಕಾದ ಸಾಮಾನನ್ನು ದಾಸ್ತಾನು ಇಡಬೇಕು; ಹೊಸ ಸಾಮಾನುಗಳನ್ನು ಕೊಂಡುಕೊಳ್ಳುವುದರಲ್ಲಿ ೫೪ ಲಕ್ಷ ಕಡಿಮೆಮಾಡಬೇಕು; (e) ಸಿಬ್ಬಂದಿಗೆ ಮನೆಬಾಡಿಗೆಯನ್ನು ಮತ್ತು ಪ್ರಯಾಣದ ಭತ್ತೆಯನ್ನು ಕೊಡುವುದರಲ್ಲಿ ೭ ಲಕ್ಷ ಕಡಿಮೆಮಾಡಬೇಕು; (f) ಸಾಮಾನುಗಳ ಸಾದಿಲವಾರು ಮತ್ತು ಫೋರ್ಮುಗಳನ್ನು ಒದಗಿಸುವುದರಲ್ಲಿ ೧೫ ಲಕ್ಷ ರೂಪಾಯಿ ಕಡಿಮೆಮಾಡಬೇಕು; (g) ಹಳೇ ನಮೂನೆಯಲ್ಲಿ ಕಟ್ಟಿದ ವಾಯರ್‌ಲೆಸ್ ಟೆಲಿಗ್ರಾಫ್ ಸ್ಟೇಶನ್‌ಗಳನ್ನು ತೆಗೆದುಹಾಕಬೇಕು; (h) ಇಂಡೋ-ಯುರೋಪಿಯನ್ ಟೆಲಿಗ್ರಾಫ್ ಇಲಾಖೆಯಲ್ಲಿನ ಅಲ್ಪ ಸಂಗತಿಗಳಲ್ಲಿ ಸ್ವಲ್ಪ ಖರ್ಚು ಕಡಿಮೆಮಾಡಬೇಕು.

ಜನರಲ್ ಎಡ್‌ಮಿನ್‌ಸ್ಟ್ರೇಶನ್— ಇದರಲ್ಲಿ ೫೧ ಲಕ್ಷ ಕಡಿಮೆಮಾಡಬೇಕು. ಇದರಲ್ಲಿ ೧೬ ಲಕ್ಷವನ್ನು ಸಾಲದ ಬಡ್ಡಿಯಲ್ಲಿ ಕಡಿಮೆಮಾಡಬೇಕು. ಇನ್ನೂ ಕಡಿಮೆಮಾಡತಕ್ಕ ಸಂಗತಿಗಳು— (a) ಸೆಕ್ರೆಟರಿಯೇಟಿನ ಎಲ್ಲಾ ಇಲಾಖೆಗಳಲ್ಲಿಯೂ ಪೇದೆಗಳ ಸಂಖ್ಯೆಯನ್ನು ಇಳಿಸಿ ಸಾದಿಲುವಾರು ಖರ್ಚನ್ನು ಕಡಿಮೆಮಾಡಬೇಕು. (b) ರೈಲ್ವೆ ಟಪ್ಪಾಲು ಮತ್ತು ಟೆಲಿಗ್ರಾಫ್ ವಹಿವಾಟುಗಳನ್ನು ಒಬ್ಬ ಅಧಿಕಾರಿಗೆ ಒದಗಿಸಿಕೊಡಬೇಕು; ವ್ಯಾಪಾರ, ಕೈಗಾರಿಕೆ, ಕಂದಾಯ, ಬೇಸಾಯ, ವಿದ್ಯೆ, ಆರೋಗ್ಯ, ಪಬ್ಲಿಕ್ ಇಲಾಖೆಗಳನ್ನು ಎರಡು ಇಲಾಖೆಗಳಾಗಿ ಮಾಡಬೇಕು; ಎಂದರೆ, ವ್ಯಾಪಾರ ಮತ್ತು ಜನರಲ್ ಹೀಗೆ ೧೪ ಲಕ್ಷ ಕಡಿಮೆ ಮಾಡಬೇಕು; ಸುಂಕ ಅಫೀಮು ಮತ್ತು ಉಪ್ಪು ಇವುಗಳ ಮೇಲ್ವಿಚಾರಣೆಯನ್ನು ಬೋರ್ಡ್ ಒಫ್ ಇನ್ ಲೆಂಡ್ ರೆವಿನ್ಯು ಈ ಇಲಾಖೆಗೆ ಕೊಡಬೇಕು; ಟರಿಫನ್ನು ವ್ಯಾಪಾರದ ಇಲಾಖೆಗೆ ಕೊಡಬೇಕು; (c) ಇನ್‌ಸ್ಪೆಕ್ಟರ್ ಒಫ್ ಇರಿಗೇಶನ್ ಹುದ್ದೆಯನ್ನು ತೆಗೆದುಹಾಕಬೇಕು; (d) ಸೆಂಟ್ರಲ್ ಇಂಟಲಿಜನ್ಸ್ ಬೀರೋ ಇದರಲ್ಲಿ ೪ ಲಕ್ಷ ಕಡಿಮೆ ಮಾಡಬೇಕು; ಎಜ್ಯುಕೇಶನಲ್ ಕಮಿಶನರ್ ಎಂಬ ಹುದ್ದೆಯನ್ನು ತೆಗೆದುಹಾಕಬೇಕು; (e) ಇಂಗ್ಲಾಂಡಿನಲ್ಲಿರುವ ಇಂಡಿಯಾ ಆಫೀಸಿಗೆ ಜನರಲ್ ಎಡ್‌ಮಿನ್‌ಸ್ಟ್ರೇಶನಿನ ಬಗ್ಗೆ ಇಂಡಿಯಾದಿಂದ ಈಗ ಕೊಡುವ ಹಣದಲ್ಲಿ ೪೯,೭೦೦ ಪೌಂಡನ್ನು ಕಡಿಮೆಮಾಡಬೇಕು; ಸ್ಟೇಶನರಿ ಮತ್ತು ಪ್ರಿಂಟಿಂಗ್ ಕೆಲಸಕ್ಕೆ ಕೊಡುವ ಹಣದಲ್ಲಿ ೨೭೦೦ ಪೌಂಡು ಕಡಿಮೆಮಾಡಬೇಕು; (f) ಇಂಗ್ಲೆಂಡಿನಲ್ಲಿರುವ ಹೈ ಕಮಿಶನರ ಆಫೀಸಿಗೆ ಕೊಡುವ ಹಣದಲ್ಲಿ ೭೭೦೦ ಪೌಂಡು ಕಡಿಮೆಮಾಡಬೇಕು.

ಲೇಂಡ್ ರೆವಿನ್ಯು:—ವಾಯುವ್ಯ ಗಡಿಪ್ರಾಂತ್ಯದಲ್ಲಿ ೩೯೭೦೦೦ ಕಡಿಮೆಮಾಡತಕ್ಕದ್ದು.

ಎಕ್ಸೈಜ್. ಈ ಇಲಾಖೆಯಲ್ಲಿ ೧೯೦೦೦ವನ್ನೂ, ರಿಜಿಸ್ಟ್ರೇಶನ್ ಇಲಾಖೆಯಲ್ಲಿ ೪೦೦೦ ವನ್ನೂ, ೨೧ ಗವರ್ನಮೆಂಟ್ ಚೆಪಲಿಯನ್ ಇಸಮುಗಳನ್ನೂ ತೆಗೆದುಹಾಕಿ ೨೦೦,೦೦೦ ರೂಪಾಯಿಯನ್ನು ಕಡಿಮೆ ಮಾಡಬೇಕು.

ಸೈಂಟಿಫಿಕ್ ಇಲಾಖೆ:—(a) ಸರ್ವೆ ಪಾರ್ಟಿಗಳನ್ನು ಕಡಿಮೆಮಾಡಬೇಕು. (b) ಜೀಯೋಲೊಜಿಕಲ್ ಸರ್ವೆಯಲ್ಲಿ ಖಾಲಿ ಇದ್ದ ಹುದ್ದೆಗಳನ್ನು ಭರ್ತಿಮಾಡುವುದು ಬೇಡ. (c) ಸರಕಾರದವರು ಕ್ವೈನಿನ್ ತೆಗೆದುಕೊಳ್ಳುವದನ್ನು ಮಿತಿಪಡಿಸಿದೆ. (d) ಆರ್ಕ್ಯಿಯೊಲೊಜಿಕಲ್ ಇಲಾಖೆಗೆ ಸೇರಿದ ಕೆಲವು ಹಳೇ ಕಟ್ಟೋಣಗಳನ್ನು ದುರುಸ್ತಿ ಮಾಡುವದರಲ್ಲಿ ೬ ಲಕ್ಷ ಕಡಿಮೆಮಾಡತಕ್ಕದ್ದು. ಒಟ್ಟಾರೆ ಈ ಇಲಾಖೆಯಲ್ಲಿ ೩೦ ಲಕ್ಷದ ೨ ಸಾವಿರ ಕಡಿಮೆಮಾಡಬೇಕು.

ಎಜ್ಯುಕೇಶನ್:—ಗ್ರಾಂಟ್ ಇನ್ ಏಡ್ ಕೊಡುವದರಲ್ಲಿ ಖರ್ಚು ಕಡಿಮೆಮಾಡಿ ಡಿಲ್ಲಿಯುನ್ನುವರ್ಸಿಟಿಯನ್ನು ಸ್ಥಾಪಿಸುವದನ್ನು ಪುನರಾಲೋಚಿಸಿ ೫ ಲಕ್ಷ ೧೯ ಸಾವಿರ ಕಡಿಮೆಮಾಡಬೇಕು.

ಸಿವಿಲ್ ಎವಿಯೇಶನ್:—ಇದರಲ್ಲಿ ಚೀಫ್ ಇನ್‌ಸ್ಪೆಕ್ಟರ ಹುದ್ದೆಯನ್ನು ಕಡಿಮೆಮಾಡಿ ೩೩ ಸಾವಿರ ಕಡಿಮೆಮಾಡಬೇಕು.

ಮಿಸಲೇನಿಯಸ್:— (a) ಕಮ್ಮರ್ಶಿಯಲ್ ಇಂಟೆಲಿಜಿಯನ್ಸ್ ಇಲಾಖೆಯಲ್ಲಿ ಖರ್ಚು ಕಡಿಮೆಮಾಡಬೇಕು. (b) ಖಾನೇಸುಮಾರಿ ಇಲಾಖೆಯಲ್ಲಿ ಖರ್ಚು ಕಡಿಮೆಮಾಡಬೇಕು (c) ಇಂಡಿಯನ್ ಸ್ಟೋರ್ಸ್ ಇಲಾಖೆಯಲ್ಲಿ ಜಾಗ್ರತೆಯಿಂದ ಖರ್ಚುಮಾಡಬೇಕು (d) ಲಂಡನಿನಲ್ಲಿ ಈಗ ಇರುವ ಇಂಡಿಯನ್ ಟ್ರೇಡ್ ಕಮ್ಮಿಶನರ್ ಹುದ್ದೆಯನ್ನು ತೆಗೆದುಹಾಕಿ ಆ ಕೆಲಸವನ್ನು ಹೈ ಕಮ್ಮಿಶನರಿಗೆ ಕೊಡಬೇಕು. ಹಾಗೆ ೧೧ ಲಕ್ಷ ೧೧ ಸಾವಿರ ರೂಪಾಯಿ ಕಡಿಮೆಮಾಡಬೇಕು. ಕ್ಷಾಮ ನಿವಾರಣೆಗೆ ಖರ್ಚುಮಾಡುವುದರಲ್ಲಿ ೨೭ ಸಾವಿರ ರೂಪಾಯಿ ಕಡಿಮೆಮಾಡಬೇಕು.

ಟೆರಿಟೋರಿಯಲ್ ಮತ್ತು ಪೊಲಿಟಿಕಲ್ ಪೆನ್‌ಶನ್ ಕೊಡುವುದರಲ್ಲಿ ೧೦೮ ಸಾವಿರ ಕಡಿಮೆಮಾಡಬೇಕು.

ಸುಪರ್ ಎನ್ಯುಯೇಶನ್, ಭತ್ತೆ ಮತ್ತು ಪೆನ್‌ಶನಿನಲ್ಲಿ ೬೦೦,೮೦,೦೦೦ ಕಡಿಮೆಮಾಡಬೇಕು. ಪಬ್ಲಿಕ್ ಹೆಲ್ತ್ ಇಲಾಖೆಯನ್ನು ತೆಗೆದುಹಾಕಬೇಕು. ಮೆಡಿಕಲ್ ರಿಸರ್ಚ ಕಮ್ಮಿಶನರ್ ಮತ್ತು ಡೈರೆಕ್ಟರ್ ಹುದ್ದೆಯನ್ನು ತೆಗೆದುಹಾಕಬೇಕು. ಇವರ ಕೆಲಸವನ್ನು ಕಸೌಲಿ ಇನ್‌ಸ್ಟಿಟ್ಯೂಟಿನ ಡೈರೆಕ್ಟರಿಗೆ ವಹಿಸಿಕೊಡಬೇಕು.

ಮೆಡಿಕಲ್ ರಿಸರ್ಚ ಮತ್ತು ವೆಕ್ಸಿನೇಶನ್ ಇನ್‌ಸ್ಟಿಟ್ಯೂಟ್:— ೧೨೭ ಸಾವಿರ ಕಡಿಮೆಮಾಡಬೇಕು. ಜೈಲ್ ಎಡ್‌ಮಿನ್‌ಸ್ಟ್ರೇಶನಿನಲ್ಲಿ ೩೦,೩೦೦೦ ಕಡಿಮೆಮಾಡಬೇಕು.

ರಜಪುತಾನ ಮತ್ತು ಸೆಂಟ್ರಲ್ ಇಂಡಿಯಾ ಈ ಎರಡು ಏಜನ್ಸಿಗಳನ್ನು ಒಂದೇ ಮಾಡಬೇಕು.

ಗವರ್ನಮೆಂಟ್ ಪ್ರೆಸ್ಸುಗಳನ್ನು ಕಡಿಮೆಮಾಡಿ ಕಡಿಮೆ ಕ್ರಯದ ಕಾಗದವನ್ನು ಉಪಯೋಗಿಸಬೇಕು. ಹೀಗೆ ೧೦ ಲಕ್ಷ ೩೭ ಸಾವಿರ ರೂಪಾಯಿ ಕಡಿಮೆಮಾಡಬೇಕು.

ಜಂಗ್ಲಿ ಇಲಾಖೆಯಲ್ಲಿ ಒಳ ಬದಲಾವಣೆಗಳನ್ನು ಮಾಡಿ ಕಾಡುಗಳನ್ನು ವ್ಯಾಪಾರದ ನಮೂನೆಯಲ್ಲಿ ನಡಿಸಿ ಇಲಾಖಾ ಅಧಿಕಾರಿಗೆ ವ್ಯಾಪಾರದ ವಿಷಯ ಅನುಭವ ಕೊಡುವ ಹುದ್ದೆದಾರರನ್ನು ನೇಮಿಸಿ ಉತ್ಪತ್ತಿಯನ್ನು ಹೆಚ್ಚಿಸಿ ೬೯,೦೦೦೦ ರೂಪಾಯಿ ಕಡಿಮೆಮಾಡಬೇಕು.

ಡೆರಾಡೂನ್ ಫೋರೆಸ್ಟು ಇನ್‌ಸ್ಟಿಟ್ಯೂಟಿನ ಖರ್ಚು ಕಡಿಮೆಮಾಡಬೇಕು.

ಬೇಸಾಯ ಇಲಾಖೆ:— ೨ ಮಿಲಿಟರಿ ಡೈರಿ ಫಾರ್ಮುಗಳನ್ನು ಎಗ್ರಿಕಲ್ಚರಲ್ ಇಲಾಖೆಗೆ ವಹಿಸಿಕೊಡಬೇಕು. ಹೀಗೆ ೨೮೬,೦೦೦ ಕಡಿಮೆಮಾಡಬೇಕು. ಜೈಲುಗಳ ವಿಷಯ ಅಂದಾಜನ್ನು ಜೈಲಿನ ಖರ್ಚನ್ನು ಕಡಿಮೆ ಮಾಡಿ ೪೮೦,೦೦೦ ಉಳಿಸಬೇಕು.

ಪೈಲಟೇಜಿನಲ್ಲಿ ರೂ. ೨೧೧,೦೦೦ ಕಡಿಮೆಮಾಡಬೇಕು. ಒಡಿಟ್ ಇಲಾಖೆಯಲ್ಲಿ ೩೭೬೦೦೦ ಕಡಿಮೆಮಾಡಬೇಕು. ಬೆಳ್ಳಿಯ ರೂಪಾಯಿಯನ್ನು ಕಡಿಮೆ ಖರ್ಚಿನಲ್ಲಿ ತಯಾರಿಸುವದಾದರೆ ರೂಪಾಯಿ ನೋಟುಗಳನ್ನು ಹೊಸತಾಗಿ ತಯಾರಿಸುವುದು ಅವಶ್ಯವಿಲ್ಲ. ಕಲ್ಕತ್ತಾ ಮತ್ತು ಮುಂಬಯಿಯಲ್ಲಿ ಮಾತ್ರ ಎರಡು ಟಂಕಸಾಲೆಗಳನ್ನು ಇಡತಕ್ಕದ್ದು. ಕಲ್ಕತ್ತದಲ್ಲಿ ಬೆಳ್ಳಿಯ ನಾಣ್ಯಗಳನ್ನು ಮಾಡಿಸುವುದು ನಿಲ್ಲಿಸಬೇಕು ಮುಂಬಾಯಿಯಲ್ಲಿ ನಿಕ್ಕಲ್ ನಾಣ್ಯ ಮಾಡಿಸುವದನ್ನು ನಿಲ್ಲಿಸಬೇಕು. ಸಂಬಳ ರಜೆ ಮತ್ತು ಭತ್ತೆ ಈ ಮೂರನ್ನು ಕೆಳಗಿನ ಇಲಾಖೆಗಳಲ್ಲಿ ಕಡಿಮೆಮಾಡಬೇಕು

ದೇ॥ ಭ॥ ಡಾ॥ ಹರ್ಡೀಕರರ ಸಂದೇಶ.

(೧) ಗಯಾ ರಾಷ್ಟ್ರೀಯ ಮಹಾಸಭೆಯ ನಿರ್ಣಯದಂತೆ ಸಮಗ್ರ ಹಿಂದೂಸ್ಥಾನದಲ್ಲಿ ೫೦ ಸಾವಿರ ರಾಷ್ಟ್ರಸೇವಕರನ್ನು ಕೂಡಿಸಬೇಕಾಗಿದ್ದು ಕರ್ನಾಟಕದ ಪಾಲಿಗೆ ಬಂದ ೨ ಸಾವಿರ ರಾಷ್ಟ್ರಸೇವಕರನ್ನು ತಯಾರಿಸುವ ಕುರಿತು ಕರ್ನಾಟಕ ಪ್ರಾಂತಿಕ ರಾಷ್ಟ್ರ ಮಂಡಲದವರು ನೇಮಿಸಿದ ಸೇನಾ ಮಂಡಲದ ಆಜ್ಞಾನುಸಾರವಾಗಿ ವಿಜಾಪುರ ಬೆಳಗಾಂವ ಧಾರವಾಡ ಜಿಲ್ಲೆಗಳಲ್ಲಿ ಸಂಚಾರಮಾಡಿ ಇದೇ ೨೪ನೇ ತಾರೀಕಿಗೆ ಕಾರವಾರ ಜಿಲ್ಲೆಗೆ ಪ್ರಚಾರಕ್ಕಾಗಿ ಬಂದಿರುತ್ತೇನೆ. ಪ್ರಕೃತಕ್ಕೆ ಈ ಜಿಲ್ಲೆಯ ಸಿರ್ಸಿ ಸಿದ್ದಾಪುರ ಕುಮಟಾಗಳಲ್ಲಿ ನಾನು ಪ್ರಚಾರದ ಕೆಲಸ ನಡಿಸಿದ್ದು ಈ ಮೂರು ಸ್ಥಳಗಳಲ್ಲಿ ರಾಷ್ಟ್ರಕಾರ್ಯದ ಸಲುವಾಗಿ ಜನತೆಯು ತೋರಿಸಿದ ಉತ್ಸಾಹವನ್ನೂ, ವ್ಯವಸ್ಥೆಯನ್ನೂ, ಕಾರ್ಯಪದ್ಧತಿಯನ್ನೂ ಕಂಡು ನನಗೆ ಬಹು ಆನಂದವಾಯಿತು.

(೨) ಸಿರ್ಸಿಯಲ್ಲಿ ತಾರೀಕು ೨೪ನೇ ದಿವಸ ರಾತ್ರಿ ೧೦॥ ಗಂಟೆಗೆ ಸಿರ್ಸಿ ಡಿವಿಜನ್ನಿನಲ್ಲಿ ಅಂದರೆ, ಸಿರ್ಸಿ, ಸಿದ್ದಾಪುರ, ಕುಮಟಾ, ಹೊನ್ನಾವರ, ಭಟಕಳಗಳಲ್ಲಿ ಮಾತಾಡಬಾರದೆಂದು ೧೪೪ನೇ ಕಲಮಿನನ್ವಯ ನನ್ನ ಮೇಲೆ ಸಿರ್ಸಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಿಂದ ನೋಟೀಸು ಕೊಡಲ್ಪಟ್ಟಿತು. ಇದು ತೃತಿಯ ದಿವಸವಾಗಿದ್ದು ಮಾತಿನ ದಿನಗಳು ಆದಾಗಲೇ ಕಳೆದು ಹೋದುದರಿಂದ ಈ ನೋಟೀಸಿನಿಂದ ನನ್ನ ಸಮಯವೆಲ್ಲ ಕೇವಲ ಕೃತಿಮಯವಾದ ವಿಧಾಯಕ ಕಾರ್ಯಕ್ರಮದಲ್ಲಿ ಉಪಯೋಗಿಸಲ್ಪಡುವ ಸುಯೋಗವು ಬಂದೀತೆಂದು ನಾನು ಈ ನೋಟೀಸನ್ನು ಆದರದಿಂದ ಸ್ವಾಗತಮಾಡಿ ಅಭಿನಂದಿಸುತ್ತೇನೆ. ಅದಲ್ಲದೆ ಶಾಂತ ರೀತಿಯಿಂದ ಸೈನ್ಯ (ರಿಕ್ರ್ಯುಟ) ದ ಅಧಿಕಾರಿಗಳಂತೆ ರಾಷ್ಟ್ರಸೇವಕರನ್ನು ಕೂಡಿಸುವದು, ಬಾಲಸೇನಾ ಭಗಿನೀ ಮಂಡಲಗಳನ್ನು ಸ್ಥಾಪಿಸುವದು ಇತ್ಯಾದಿಗಳೇ ನನ್ನ ಕರ್ತವ್ಯವಾಗಿದ್ದು, ಮ್ಯಾಜಿಸ್ಟ್ರೇಟರ ಇಂತಹ ನೋಟೀಸುಗಳಿಂದ ನನ್ನ ಕೆಲಸಕ್ಕೆ ಬಾಧೆ ಬರಲಾರದೆಂದು ಅಲ್ಲಲ್ಲಿಯ ಅಧಿಕಾರಿಗಳಿಗೆ ಪ್ರತ್ಯಕ್ಷವಾಗಿ ತಿಳಿಸಿರುತ್ತೇನೆ. ನನ್ನ ಸಂಗಡ ಬಂದ ನನ್ನ ಸಹಕಾರಿಗಳಾದ ಶ್ರೀ. ಮಹಾಬಳ ದೀಕ್ಷಿತ ಇವರ ಮೇಲೂ ಕುಮಟೆಯಲ್ಲಿ ೧೪೪ ನೇ ಕಲಮಿನನ್ವಯ ನೋಟೀಸು ಕೊಡಲ್ಪಟ್ಟದ್ದೂ ನನ್ನ ಕೆಲಸಕ್ಕೆ ವಿಶೇಷ ಸಹಾಯಮಾಡಿತೆಂದು ನನಗೆ ಇನ್ನಷ್ಟು ಸಂತೋಷವಾಗುತ್ತಿದೆ.

(೩) ಕಾಯದೆಭಂಗ ಮಾಡಿರಿ ಎಂದು ಅನ್ನುವ ಸಂದರ್ಭದಲ್ಲಿ ನನ್ನ ಮೇಲೆ ೧೪೪ ನೇ ಕಲಮಿನನ್ವಯ ನೋಟೀಸು ಹೊರಟಿರಲು ಅದನ್ನು ಏಕೆ ಮುರಿಯಲಿಲ್ಲವೆಂದು ಅನೇಕರು ಪ್ರಶ್ನೆ ಮಾಡಬಹುದು. ಆದರೆ ನಾನು ಕಾಯದೆಯನ್ನು ಮುರಿಯುವದಕ್ಕೆ ಸ್ವತಃ ಸಿದ್ಧನಿದ್ದರೂ ಕೆಳಗಿನ ಕಾರಣಗಳಿಂದ ಅದು ನನಗೆ ಪ್ರಕೃತಕ್ಕೆ ಅವಶ್ಯಕವಾಗಿ ತೋರುವದಿಲ್ಲ.

[ಅ] ಕಾಯದೆಭಂಗಕ್ಕಾಗಿ ರಾಷ್ಟ್ರಸೇವಕರನ್ನು ಕೂಡಿಸುವ ಕುರಿತು ನಾನು ಸಂಚರಿಸುತ್ತಿದ್ದು ಯಾವದೊಂದು ಕಲಮನ್ನು ಬೇಕೆಂತ ಮುರಿಯುವ ಬಗ್ಗೆ ಇನ್ನೂ ರಾಷ್ಟ್ರ ಮಂಡಲದವರು ಆಜ್ಞೆ ಕೊಟ್ಟಿರುವದಿಲ್ಲ.

[ಬ] ಮುಖಬಂದಿಯಾದ ಸ್ಥಳಗಳಲ್ಲಿ ನಾನು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿಗೆ ಸ್ವಯಂಸೇವಕರು ಉತ್ಸಾಹದಿಂದಲೂ ಸ್ಫೂರ್ತಿಯಿಂದಲೂ ಹೆಸರು ದಾಖಲು ಮಾಡಿಸುತ್ತಿರುವರು.

[ಕ] ಆದ್ದರಿಂದ ಮ್ಯಾಜಿಸ್ಟ್ರೇಟರು ನನ್ನ ಹಾಗೂ ನನ್ನ ಸಹಕಾರಿಗಳ ಮೇಲೆ ಮುಖಬಂದಿಯ ನೋಟೀಸು ಕೊಟ್ಟಿದ್ದಕ್ಕಾಗಿ ಜನರು ಉತ್ತೇಜಿತರಾಗಿದ್ದರೆ ಹೆಚ್ಚೆಚ್ಚು ರಾಷ್ಟ್ರ ಸೇವಕರು ಸ್ವಯಂಸ್ಫೂರ್ತಿಯಿಂದ ಮುಂದೆ ಬಂದು ಅಧಿಕಾರಿಗಳ ಈ ದಬ್ಬಾಳಿಕೆಗೆ ಸರಿಯಾದ ಉತ್ತರ ಕೊಡಬೇಕಲ್ಲದೆ, ಅವರ ಬಗ್ಗೆ ದ್ವೇಷ ಬುದ್ಧಿಯನ್ನು ತೋರಿಸಬಾರದೆಂದು ನನ್ನ ದೇಶಬಾಂಧವರೆಲ್ಲರಿಗೂ ನನ್ನ ವಿನಯ ಪ್ರಾರ್ಥನೆಯಿದೆ. ನಾನು ಈ ಜಿಲ್ಲೆಯಲ್ಲಿ ಇನ್ನೂ ೫ ದಿನಗಳ ವರೆಗೆ ಇರತಕ್ಕವನಿದ್ದು ಆ ಬಳಿಕ ಮಂಗಳೂರಿಗೆ ಹೋಗತಕ್ಕವನಿರುತ್ತೇನೆ. ಆದ್ದರಿಂದ ಈ ಜಿಲ್ಲೆಯ ಬಂಧುಭಗಿನಿಯರು ರಾಷ್ಟ್ರಸೇವಕ ಸಭೆಗಳನ್ನೂ ಭಗಿನೀ ಮಂಡಲ, ಬಾಲಸೇನೆಗಳನ್ನೂ ಸ್ಥಾಪಿಸಿ ಬೆಳಸಿ ಸುವ್ಯವಸ್ಥಿತವಾಗಿಯೂ ಸುಸಂಘಟಿತವಾಗಿಯೂ ಉತ್ಸಾಹಪೂರ್ವಕವಾಗಿಯೂ ನಡಿಸಿ ತಮ್ಮ ಕರ್ತವ್ಯವನ್ನು ನೆರವೇರಿಸುವರೆಂದು ನನ್ನ ಪೂರ್ಣ ನಂಬಿಗೆಯಿದೆ.

ಕುಮಟಾ.
ತಾ. ೨೬-೨-೧೯೨೩. } ನಾರಾಯಣ ಸುಬ್ರಾವ ಹರ್ಡೀಕರ.

ವಿದೇಶ ವರ್ತಮಾನ.

ಅಫಘಾನಿಸ್ಥಾನದ ಸ್ವಾತಂತ್ರ್ಯದ ದಿನ:—ಕಳೆದ ೨೭ನೇ ತಾರೀಕಿನಲ್ಲಿ ಅಫಘಾನಿಸ್ಥಾನದ ಜನಗಳ ಸ್ವಾತಂತ್ರ್ಯದ ದಿವಸವು ಜಲಲಾಬಾದಿನಲ್ಲಿ ವಿಶೇಷ ವಿಜೃಂಭಣೆಯಿಂದ ಜರಗಿತು.

ಹಿಮವೃಷ್ಟಿ:—ಸ್ಕಾಟ್‌ಲೆಂಡ್ ಮತ್ತು ಇಂಗ್ಲೆಂಡಿನ ಉತ್ತರ ಭಾಗಗಳಲ್ಲಿ ಹಿಮವೃಷ್ಟಿಯು ಅತ್ಯಂತ ಜೋರಾಗಿರುವುದು. ರೈಲು ಸಂಚಾರ ಕೂಡ ನಿಂತಿರುವುದು.

ಜರ್ಮನಿ:—ರೂರ್ ಪ್ರಾಂತದಲ್ಲಿ ಫ್ರೆಂಚ ಅಧಿಕಾರಿಯೊಬ್ಬನು ಒಬ್ಬ ಜರ್ಮನ್ ಕೂಲಿ ಕೆಲಸದವನನ್ನು ಚಾಟಿಯಿಂದ ಹೊಡೆಯಲು ಕೆಲಸದವನು ಕೈಯಲ್ಲಿದ್ದ ದೊಡ್ಡ ಸುತ್ತಿಗೆಯಿಂದ ಅಧಿಕಾರಿಯನ್ನು ಹೊಡೆದು ಕೊಂದು ಅವನ ಕುದುರೆಯನ್ನೇರಿ ಪರಾರಿಯಾಗಿರುತ್ತಾನೆ.

ಅಮೇರಿಕ:—ಅಮೇರಿಕದ ಥಾಮಸ್ ಎಲ್ಲಿಸನ್ ಎಂಬವನಿಗೆ ಈಗ ೯೩ ವರುಷ ವಯಸ್ಸು. ಇವನಿಗೆ ಒಬ್ಬರಾದ ಮೇಲೊಬ್ಬರು ಮೂವರು ಪತ್ನಿಯರು. ಈ ಮೂವರಿಂದ ೫೦ ಮಕ್ಕಳೂ ೧೨೫ ಮೊಮ್ಮಕ್ಕಳೂ ೬೦ ಮುಮ್ಮೊಕ್ಕಳೂ, ೨೭ ಮರಿ ಮಕ್ಕಳೂ ಇದ್ದಾರೆ. ಇವರ ಹಿರೀ ಮಗನಿಗೆ ೭೫ ವರುಷ. ಕಿರೀ ಮಗನಿಗೆ ೧೧ ವರುಷ.

ಒಳದೇಶ ವರ್ತಮಾನ.

ಕಾರವಾರ:— ಕೀರ್ತನಕೇಸರಿ ಜಯರಾಮಾಚಾರ್ಯರವರ ಮೇಲೆ ಕ್ರಿ. ಪ್ರೊ. ಕೋಡಿನ ೧೦೮ನೇ ಕಲಮಿನನ್ವಯ ಹೊರಡಿಸಿದ ನೋಟೀಸನ್ನು ಸರಕಾರವು ಮರಳಿ ತೆಗೆದುಕೊಂಡಿರುವುದು, ಆಚಾರ್ಯರು ಕೊಂಗ್ರೆಸ್ಸು ಪ್ರಚಾರಕರಲ್ಲೆಂದು ಬಳಿಕ ಹೀಗಾಯಿತೆಂದು ತಿಳಿಯುತ್ತದೆ. [ಕಾನಡಾ ವೃತ್ತ].

ನಾಶಿಕ ಜಿಲ್ಲೆಯೊಳಗಿನ ಸತ್ಯಾಗ್ರಹ:—ನಾಶಿಕ ಜಿಲ್ಲೆಯ ಭಾಗೂರ ಎಂಬ ಊರಿನ ನಾಲ್ಕು ಸಾವಿರ ನಿವಾಸಿಗಳು ಸಂಪುಮಾಡಿದ್ದು ೪೫ ದಿವಸಗಳ ಹರತಾಳವನ್ನಾಚರಿಸಿದರು. ೧೫—೨೦ ಸಾವಿರ ಜನರು ಕೂಡುವ ಸಂತೆಯೇ ನಿಂತುಹೋಗಿದೆ. ಇದಕ್ಕೆ ಸರಕಾರದವರು ಈ ಹಳ್ಳಿಯ ಮೇಲೆ ದಂಡಿನ ಕಾಯಿದೆಯನ್ನು ಅಮಲಿನಲ್ಲಿ ತಂದುದೇ ಕಾರಣವಂತೆ.

ಬಾಗಲಕೋಟೆ:—ಬಾಗಲಕೋಟೆಯ ಮುನ್ಸಿಪಾಲಿಟಿಯವರು ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ನಿರ್ಣಯಿಸಿದ್ದಾರೆ.

ಮೈಸೂರು ಸಂಸ್ಥಾನದ ಕಟ್ಟು:—"ಸಣ್ಣ ವಯಸ್ಸಿನ ಬಾಲಕರು ಸಿಗರೇಟ್ ಬೀಡಿ ಸೇದಿದ್ದಲ್ಲಿ ಶಿಕ್ಷೆಗೆ ಗುರಿಮಾಡಲ್ಪಡುವರೆಂಬ ಕಾನೂನನ್ನು ಕೋಲಾರದ ಡಿಸ್ಟ್ರಿಕ್ಟಿಗೆ ಸೇರಿದ ಎಲ್ಲಾ ಮುನ್ಸಿಪಲ್ ಟೌನುಗಳಲ್ಲೂ ಮಾರ್ಚಿ ಲಾಗಾಯಿತು ಜಾರಿಗೆ ತರಲ್ಪಡತಕ್ಕದ್ದು."

ಮಿ. ಎಮ್. ಸುಬ್ಬಯ್ಯನವರು:—ಬೆಂಗಳೂರಿನ ಒಕ್ಕಲಿಗರ ಸಂಘದ ಸೆಕ್ರೆಟರಿಗಳೂ ಒಕ್ಕಲಿಗರ ಪತ್ರಿಕೆಯ ಸಂಪಾದಕರೂ ಬೆಂಗಳೂರು ಡಿಸ್ಟ್ರಿಕ್ಟ ಬೋರ್ಡಿಗೆ ಪ್ರಥಮ ಗೌರವ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟವರೂ ಆದ ಶ್ರೀಯುತ ಎಮ್. ಸುಬ್ಬಯ್ಯ, ಬಿ. ಎ. ಯವರು ಕಳೆದ ತಾರೀಕು ೨೧ರಲ್ಲಿ ಕಾಲವಾದರು.

ಶ್ರೀ ಶೃಂಗಗಿರಿ ಮಠದ ಸ್ವಾಮಿಗಳು:—ಇವರಿಗೆ ಅವಧೂತ ಲಕ್ಷಣವು ಕಾಣಿಸಿಕೊಂಡಿದೆ ಎಂದು ಹುಟ್ಟಿಸಿರುವ ಸುದ್ದಿಯು ನಿರಾಧಾರವೆಂತಲೂ ಅವರಿಗೆ ವಾತೋನ್ಮಾದ ವ್ಯಾಧಿಯು ಉಂಟಾಗಿರುವದೆಂತಲೂ ಒಬ್ಬ ಆಯುರ್ವೇದ ವೈದ್ಯರಿಂದ ಚಿಕಿತ್ಸೆಯು ನಡಿಯುತ್ತಿರುವದೆಂತಲೂ ಮೈಸೂರು ಪ್ರಭುತ್ವದವರು ಯಾವ ವೈದ್ಯರನ್ನೂ ಕಳುಹಿಸಿಕೊಡಲಿಲ್ಲವೆಂತಲೂ ಇವರ ಪೂರ್ವಾಶ್ರಮದ ಜನಕರಿಗೂ ಈ ತರದ ವ್ಯಾಧಿಯು ಕಾಣಿಸಿಕೊಂಡಿದೆವೆಂತಲೂ ಈಗ ವ್ಯಾಧಿಯು ಉಲ್ಬಣ ಸ್ಥಿತಿಗೆ ಬಂದಿರುವದೆಂತಲೂ ಆ ಸ್ಥಳದ ಆಯುರ್ವೇದ ರತ್ನಶೇಷ ಶಾಸ್ತ್ರಿಗಳು ಪತ್ರಿಕೆಗಳಿಗೆ ಬರೆದು ಪ್ರಕಟಿಸಿದ್ದಾರೆ. [ಮೈಸೂರು ಸ್ಟಾರ].

ಅಫಘಾನಿಸ್ಥಾನದ ಅಮೀರರು:—ಇವರು ಅಲಹಾಬಾದಿಗೆ ಬಂದಿರುವರು. ಆಗಾಖಾನರೇ ಮೊದಲಾದವರೊಡನೆ ತುರ್ಕಿಗೂ ಬ್ರಿಟಿಷ್ ಜನಗಳಿಗೂ ಉಂಟಾಗಿರುವ ವೈಮನಸ್ಯದ ವಿಷಯವಾಗಿ ಪರ್ಯಾಲೋಚಿಸುತ್ತಿರುವರು.

ದೇಶೀ ಬಣ್ಣಗಳು:—ಸರ್. ಪ್ರಫುಲ್ಲ ಚಂದ್ರರು ಬರೆದ ದೇಶೀ ರಂಗು ಎಂಬ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸಿ ಅಚ್ಚು ಹಾಕಿಸಬೇಕೆಂದು ಕರ್ನಾಟಕ ಪ್ರಾಂತಿಕ ಕಮ್ಮಿಟಿಯವರು ನಿಶ್ಚಯಿಸಿದ್ದಾರೆ.

ದೇಶಭಕ್ತ ಕೊಂಡ ವೆಂಕಟಪಯ್ಯ:—ಆಂಧ್ರ ದೇಶದ ಸುಪ್ರಸಿದ್ಧ ದೇಶಭಕ್ತರಾದ ಕೊಂಡ ವೆಂಕಟಪ್ಪಯ್ಯನವರನ್ನು ಬರುವ ಮಾರ್ಚಿ ತಾ. ೧೬ರಲ್ಲಿ ತುರಂಗದಿಂದ ಬಿಡಲಾಗುವುದೆಂದು ಅವರ ಸ್ವಾಗತ ಸಿದ್ಧತೆಗಳು ನಡಿಯುತ್ತಿದ್ದವು. ಆದರೆ ಇವರನ್ನು ಕಳೆದ ತಾರೀಕು ೨೭ನೇ ಸಾಯಂಕಾಲ ೬ ಗಂಟೆಗೆ ಥಟ್ಟನೆ ಬಿಡುಗಡೆ ಮಾಡಿದೆ.

ಖಿಲಾಫತ್ ಕಮ್ಮಿಟಿ ಮೀಟಿಂಗು:—ಇದೇ ತಾರೀಕು ೭ರಲ್ಲಿ ಡಿಲ್ಲಿಯಲ್ಲಿ ಕೂಡಬೇಕೆಂದು ನಿಶ್ಚಯಿಸಿದ ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ಮೀಟಿಂಗನ್ನು ಎಪ್ರಿಲ್ ತಿಂಗಳ ಮೊದಲನೇ ವಾರಕ್ಕೆ ಮುಂದರಿಸಿಟ್ಟಿದೆ.

ಬ್ರಿಟಿಷ ಹಿಂದೂಸ್ಥಾನದಲ್ಲಿರುವ ಜಾನುವಾರುಗಳು:— ೧೯೧೬-೧೭, ೧೪೯,೧೯೨೦೦೩; ೧೯೧೮-೧೯, ೧೪೫೫೦೧,೦೦೦; ೧೯-೨೦, ೧೪೬,೧೬೬೦೦೦; ೧೯೨೦-೨೧, ೧೪೫,೧೦೩,೦೦೦. ಒಟ್ಟು ನಾಲ್ಕು ವರುಷಗಳ ಅವಧಿಯಲ್ಲಿ ೪೦ ಲಕ್ಷ ಜಾನುವಾರುಗಳು ಕಡಿಮೆಯಾದವು.

ಮೈಸೂರು:—ಮೈಸೂರು ಎಸೆಂಬ್ಲಿಯ ದಸರಾ ಅಧಿವೇಶನದಲ್ಲಿ ಕೋರ್ಟು ವ್ಯವಹಾರಗಳಲ್ಲಿ ಕನ್ನಡ ಭಾಷೆಯನ್ನೆ ಮುಖ್ಯ ಭಾಷೆಯಾಗಿ ಮಾಡಬೇಕೆಂದು ವಿನಂತಿಮಾಡಿಕೊಂಡಿತ್ತು. ತಾಲೂಕುಗಳಲ್ಲೂ ಇತರ ಸಬೋರ್ಡಿನೇಟ ಆಫೀಸುಗಳಲ್ಲೂ ಅಲ್ಲದೆ ಇತರ ಆಫೀಸುಗಳಲ್ಲಿ ಇದನ್ನು ನಡಿಸಲು ಅಸಾಧ್ಯವೆಂದು ಈಗ ಮೈಸೂರು ಸರಕಾರದ ಹುಕುಂ ಹೊರಟಿದೆಯಂತೆ.

ಅಲಿಸಹೋದರರ ಮಾತೆಯವರು:—ಅಲಿಸಹೋದರರ ತಾಯಿಯಾದ ಬೀಅಮ್ಮ ಮತ್ತು ಬೇಗಮ್ಮ ಮಹಮದಾಲಿಯವರು ಕಳೆದ ತಾರೀಕು ೨೩ಕ್ಕೆ ಬಿಜಾಪುರಕ್ಕೆ ಬಂದಿದ್ದರು. ರೈಲ್ವೆ ಸ್ಟೇಶನಿನಲ್ಲಿ ಖಿಲಾಫತ್ ಮತ್ತು ಕೊಂಗ್ರೆಸ್ ಕಮ್ಮಿಟಿಯ ಮೆಂಬರರು ಇವರನ್ನು ಸ್ವಾಗತಮಾಡಿದರು. ಆ ದಿನ ಸಾಯಂಕಾಲ ಬೀಅಮ್ಮನವರ ಭಾಷಣವಾಯಿತು. ಸ್ವರಾಜ್ಯಕ್ಕಾಗಿ ಮಹಮ್ಮದೀಯರೆಲ್ಲರೂ ಒಗ್ಗಟ್ಟಾಗಬೇಕಾಗಿ ಇವರು ನಿವೇದಿಸಿಕೊಂಡರು. ಮರುದಿನ ಇವರು ಮೌಲಾನಾ ಮಹಮ್ಮದಾಲಿಯವರ ಭೇಟಿಯನ್ನು ಪಡೆದರು.

ಮೈಸೂರು:— ಸುಟ್ಟು ನಾಶವಾದ ಸೇಂಟ್‌ಮಾರ್ಕ್ಸ ಚರ್ಚಿನ ರೆಸ್ಟೋರೇಶನ್ ಫಂಡಿಗೆ ಮೈಸೂರು ಮಹಾರಾಜರು ರೂ. ೫೦೦೦ವನ್ನು ಕೊಟ್ಟಿರುವರು.

ರಜಪುತಾನ:—ಅವರಂಗಜೇಬನ ಆಳಿಕೆಯಲ್ಲಿ ಬಲಾತ್ಕಾರದಿಂದ ಮತಾಂತರಗೊಳಿಸಲ್ಪಟ್ಟ ಮಲ್ಕಾನ್ ರಜಪೂತರನ್ನು ಪುನಃ ಹಿಂದೂ ಸಮಾಜಕ್ಕೆ ಸೇರಿಸಿಕೊಳ್ಳುವ ಕಾರ್ಯವು ಭರದಿಂದ ನಡಿಯುತ್ತಿದೆ. ಕಳೆದ ತಾರೀಕು ೨೮ರಲ್ಲಿ ೧೫,೦೦೦ ಮಲ್ಕಾನ ರಜಪೂತರನ್ನು ಹಿಂದೂ ಸಮಾಜಕ್ಕೆ ಸೇರಿಸಿಕೊಳ್ಳಲಾಯಿತು.

ಶ್ರೀಯುತ ದೇಶಪಾಂಡೆಯವರು:—ಗಟಿಕೋಪಾರ ಎಂಬಲ್ಲಿ ಜರುಗಿದ ಸುಬರಬಾನ ಜಿಲ್ಲಾ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಶ್ರೀಯುತ ದೇಶಪಾಂಡೆಯವರು ವಹಿಸಿಕೊಂಡಿದ್ದರು. ಕೊಂಗ್ರೆಸ್ಸಿನಲ್ಲಿ ಉಂಟಾದ ಎರಡು ಪಂಗಡಗಳಲ್ಲೂ ರಾಜಿಯಾದೊಡನೆಯೇ ಈ ಪರಿಷತ್ತು ಸೇರಿದುದರಿಂದ ಇದು ಮಹತ್ವವಾದ್ದೆಂದು ಸೂಚಿಸಿ ಎರಡು ತಿಂಗಳ ವರೆಗೆ ಎಲ್ಲರೂ ಅಲಹಾಬಾದಿನ ನಿರ್ಣಯದಂತೆ ವರ್ತಿಸಬೇಕಾಗಿ ವಿನಂತಿ ಮಾಡಿಕೊಂಡರು. ಕಾನೂನುಭಂಗವನ್ನು ಜಾರಿಗೆ ತರುವುದನ್ನು ಬಲಪಡಿಸುವುದಕ್ಕಾಗಿಯೇ ಅಲಹಾಬಾದಿನಲ್ಲಿ ರಾಜಿಯ ತೀರ್ಮಾನಕ್ಕೆ ಒಪ್ಪಿಗೆ ಕೊಡೋಣಾಯಿತು. ಮತ್ತು ಸ್ವರಾಜ್ಯವನ್ನು ಗಳಿಸಲು ಕಾನೂನುಭಂಗವೇ ಮುಖ್ಯ ಸಾಧನವಾಗಿದೆಂದು ತಿಳಿಸಿದರು.

ಡಾಕ್ಟರ ಹರ್ಡೀಕರ:—ಕರ್ನಾಟಕ ಪ್ರಾಂತ್ಯದಲ್ಲಿ ೨೦೦೦ ಸ್ವಯಂಸೇವಕರನ್ನು ಒಟ್ಟು ಕೂಡಿಸಲು ಕಾರವಾರಕ್ಕೆ ಹೊರಟುಬಂದ ಶ್ರೀಯುತ ನಾರಾಯಣ ಸುಬ್ಬರಾವ್ ಹರ್ಡೀಕರ ಮತ್ತು ಇವರೊಡನೆ ಬಂದಿದ್ದ ಇನ್ನಿಬ್ಬರು ಗೃಹಸ್ಥರಿಗೆ ಸೆಕ್ಶನ್ ೧೪೪ರ ಮೇರೆಗೆ ಭಾಷಣ ಪ್ರತಿಬಂಧನ ಹುಕುಮನ್ನು ಕೊಟ್ಟಿರುವರು. ಆದ್ದರಿಂದ ಇವರಿಗೆ ಕಾರವಾರ ಜಿಲ್ಲೆಯಲ್ಲಿ ಭಾಷಣಗಳನ್ನು ಮಾಡಲು ಆಗಲಿಲ್ಲ. ಕಳೆದ ತಾರೀಕು ೨೮ರಲ್ಲಿ ಅಂಕೋಲೆಯಲ್ಲಿ ಇವರ ಭಾಷಣವಾಯಿತು.

ಉಪ್ಪಿನ ಮೇಲಿನ ಕರ:—ಇಂಪೀರಿಯಲ್ ಬಜೇಟಿನಲ್ಲಿ ಈ ಸಲ ೪ ೧/೨ ಕೋಟಿ ರೂಪಾಯಿ ಕಡಿಮೆ ಬಿದ್ದಿರುವುದರಿಂದ ಉಪ್ಪಿನ ಮೇಲೆ ಮಣಕ್ಕೆ ರೂ. ೧—೪—೦ ರಂತೆ ಇರುವ ಕರವನ್ನು ರೂ. ೨—೮—೦ಕ್ಕೆ ಏರಿಸಿದೆ.

ರಿಲಿಜಿಯಸ್ ಎಂಡೌಮೆಂಟ ಬಿಲ್ಲು:—ಸಿಲೆಕ್ಟ ಕಮ್ಮಿಟಿಯವರಿಂದ ತಿದ್ದಲ್ಪಟ್ಟ ಈ ಬಿಲ್ಲು ಬರುವ ತಾರೀಕು ೨೩ರಲ್ಲಿ ಮದರಾಸ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಲ್ಪಡುವುದು.

ಅಲಹಾಬಾದ ಮುನ್ಸಿಪಾಲಿಟಿ:—ಬರುವ ತಾರೀಕು ೧೯ರಲ್ಲಿ ನಡಿಯಲಿಕ್ಕಿರುವ ಅಲಹಾಬಾದ ಮುನ್ಸಿಪಾಲಿಟಿಯ ಮೆಂಬರರ ಚುನಾವಣೆಯಲ್ಲಿ ಎಲ್ಲ ಸ್ಥಾನಗಳನ್ನೂ ಅಸಹಕಾರಿಗಳೇ ಹೊಂದುವಂತೆ ಪ್ರಯತ್ನಗಳು ನಡಿಯುತ್ತಿವೆ.

ಮುಳಸಿ ಸತ್ಯಾಗ್ರಹಿಗಳ ಬಿಡುಗಡೆ:—ಕಳೆದ ತಾ. ೫ರಲ್ಲು ಈಗ್ಗೆ ಆರು ತಿಂಗಳಿನಿಂದ ಕಠಿಣ ಸಜೆಯನ್ನು ಅನುಭವಿಸಿಕೊಂಡಿದ್ದ ಮುಳಸಿ ಸತ್ಯಾಗ್ರಹಿಗಳ ಸೇನಾಧಿಪತಿಗಳಾದ ಶ್ರೀಯುತ ಬಾಪಟ ಇವರು ಬಿಡುಗಡೆ ಹೊಂದಿದರು. ಇವರೊಟ್ಟಿಗನೆ ಇನ್ನಿಬ್ಬರು ಸತ್ಯಾಗ್ರಹಿಗಳೂ ಎರವಾಡ ಜೈಲಿನಿಂದ ಬಿಡುಗಡೆ ಹೊಂದಿದರು. ಪುಣೆಯ ಪರಾಂಜಪೆ, ಪಟಕ, ದಾಮು ರುಸ್ತುಮು ಶೇಟ್, ಕರಂದಿಕರ, ಮೊದಲಾದ ಗೃಹಸ್ಥರು ಅವರನ್ನು ಸನ್ಮಾನಿಸಿದರು. ಅನಂತರ ಅವರನ್ನು ಜಿಲ್ಲಾ ಕಾಂಗ್ರೆಸು ಕಮಿಟಿಯ ಕಾರ್ಯಾಲಯಕ್ಕೆ ಕರಕೊಂಡುಹೋಗಿ ಯಥಾಯೋಗ್ಯವಾಗಿ ಸತ್ಕರಿಸಿದರು. ತನ್ನನ್ನು ಸತ್ಕರಿಸಿದ ಬಗ್ಗೆ ನೆರೆದವರನ್ನು ವಂದಿಸಿ ಶ್ರೀಯುತ ಬಾಪಟೆಯವರು ಮುಳಸಿ ಸತ್ಯಾಗ್ರಹ ಆಫೀಸಿಗೆ ಹೊರಟುಹೋದರು.

ದಕ್ಷಿಣ ಕನ್ನಡ

ಪೊಳಲಿ:— ಇದೇ ತಾ. ೧೪ನೇ ಮೀನ ಸಂಕ್ರಮಣ ಬುಧವಾರ ರಾತ್ರಿ ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇಗುಲದಲ್ಲಿ ಪದ್ಧತಿಯಂತೆ ಕೋಡಮಣಿತ್ತಾಯ ದೈವದ ಭಂಡಾರ ಬಂದು ಧ್ವಜಾರೋಹಣವಾಗಿ ಉತ್ಸವ ಪ್ರಾರಂಭವಾಗುವುದು. ಮರುದಿನ ಬೆಳಿಗ್ಗೆ ಕಡೆ ಚೆಂಡು ಮಹೋತ್ಸವಕ್ಕೂ ಮುಮ್ಮಡಿಯಾದ ವೈಭವದೊಡನೆ ಹೆಣ್ಣು ಗಂಡು ಮಕ್ಕಳು ಕೂಡಿದ ಕಂಚಿಲ ಸೇವೆಯ ದೀಪದ ಬಲಿಯಾಗಿ ನಂತರ ಮಹಾಜನಸಮುದಾಯದ ಮಧ್ಯರಂಜಕಾಸುರ, ಸೋಮಕಾಸುರರಿಂದ ಕೂಡಿದ ಕ್ಷೇತ್ರಪಾಲನ ಮುಖೇನ ಚೌಟರರ ಮನೆಯ ಜೋತಿಷ್ಯರಾದ ವ್ಯಕ್ತಿಗೆಯು ಆಚಾರ್ಯರಿಂದ ಗುಣಿಸಿ ಬಂದ ಉತ್ಸವಪ್ರತಿಷ್ಠೆ ದಿನವೆಂಬ ಡಂಗುರವು ಸಾರಲ್ಪಡುವದು.

ಉಡುಪಿ:— ತಾ. ೩ನೇ ಶನಿವಾರ ಸಾಯಂಕಾಲ ಸ್ಥಳೀಕ ಬೋರ್ಡು ಹ್ಯಾಸ್ಕೂಲಿನ "ಶಾಲಾ ದಿನ"ವು ಉಡುಪಿ ಡಿಸ್ಟ್ರಿಕ್ಟ ಮುನ್ಸೀಫರಾದ ರಾ. ಕುಂಞ್ ರಾಮನ್ ನಾಯರ್ ಬಿ. ಎ. ಬಿ. ಎಲ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಇಂತಹ ಉತ್ಸವವು ಈ ಶಾಲೆಯ ಇತಿಹಾಸದಲ್ಲಿ ಮೊದಲನೆಯದು. ಸ್ಥಳೀಕ ಮತ್ತು ಇತರ ಮಾನ್ಯ ಗೃಹಸ್ಥರ ಉದಾರಾಶ್ರಯದಿಂದ ಈ ಸಂದರ್ಭದಲ್ಲಿ ಹುಡುಗರಿಗೆ ಇನಾಮು ಹಂಚೋಣವೂ ಇತರ ಕಾರ್ಯಗಳೂ ಸಾಂಗವಾಗಿ ನೆರವೇರಿದವು. ಅನಂತರ ಶಾಲಾ ಮಾಸ್ತರರೊಬ್ಬರು ಸ್ವಂತವಾಗಿ ತಯಾರಿಸಿದ "ಸುಶೀಲಾ ಸುಂದರ" ಎಂಬ ಕರ್ನಾಟಕ ಸಂಗೀತ ನಾಟಕವನ್ನು ಶಾಲಾ ಹುಡುಗರು ಬಹು ಯೋಗ್ಯ ರೀತಿಯಲ್ಲಿ ಅಭಿನಯಿಸಿ ತೋರಿಸಿ ಸಭಿಕರನ್ನು ಆಹ್ಲಾದಗೊಳಿಸಿದರು. ಇದೇ ನಾಟಕವನ್ನು ಸ್ವಲ್ಪ ಸಮಯದಲ್ಲಿ ಟಿಕೇಟುಗಳನ್ನಿಟ್ಟು ಮತ್ತೊಮ್ಮೆ ಆಡಿ ತೋರಿಸಬೇಕಾಗಿಯೂ, ಸದರಿ ಹಣವನ್ನು ಶಾಲಾ ದಿನದ ಫಂಡಿಗೆ ಸೇರಿಸಬಹುದಾಗಿಯೂ, ಶಾಲೆಗೆ ಸ್ಥಳದ ಅಡಚಣೆಗಾಗಿ ಬೋರ್ಡಿನವರು ಕರುಣೆ ಮನಸ್ಸುಕೊಟ್ಟು ಕಟ್ಟೋಣವನ್ನು ನಿರ್ಮಿಸಿ ಅನುಕೂಲ್ಯಗಳನ್ನು ಒದಗಿಸಿಕೊಡುವರಾಗಿಯೂ ಹೇಳಿ ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದರು. ವಿಶ್ರಾಂತಸ್ಥಿತಿ ಇದೇ ರೀತಿ ಉತ್ಸವಗಳು ನಡೆದು ಶಾಲೆಗೆ ಯಶಸ್ಸು ಬರಲೆಂದು ಕೋರುತ್ತೇವೆ. ಉಡುಪಿಯ ಮಿಶ್ಯನ್ ಶಾಲೆಯಲ್ಲೂ ೪ ವರ್ಷಗಳ ಹಿಂದೊಮ್ಮೆ ಇಂತಹ ಉತ್ಸವವು ನಡೆದಿತ್ತು. ಈ ವರ್ಷವೇನೊ [illegible] ವಂತೆ. ಮೊನ್ನೆ ಮಂಗಳವಾರ ರಾತ್ರಿ ಡಾ. ಎನ್. ಎಸ್. ಹರ್ಡೀಕರರು ದಕ್ಷಿಣ ಕನ್ನಡದಲ್ಲಿ ಸ್ವಯಂಸೇವಕರ ದಳವನ್ನು ಕೂಡಿಸುವುದಕ್ಕಾಗಿ ಮಲ್ಪೆಗೆ ಬಂದು ಇಳಿದು, ಕಳೆದ ಬುಧವಾರ ಉಡ್ಪಿಯಲ್ಲಿದ್ದರು. ನಿನ್ನೆ ರಾಷ್ಟ್ರೀಯ ಶಾಲೆಯನ್ನು ಸಂದರ್ಶಿಸಿ, ಬಾಲಸೇವಕರ ದಳವನ್ನು ನಿರ್ಮಿಸುವುದರ ಕುರಿತು ಹುಡುಗರಿಗೆ ಬೋಧನೆಯನ್ನು ಮಾಡಿದರು. ನಿನ್ನೆ ಸಾಯಂಕಾಲ ರಥಬೀದಿಯಲ್ಲಿ ರಾಷ್ಟ್ರಸೇವಕರನ್ನು ಒಟ್ಟುಗೂಡಿಸುವುದಕ್ಕೆ ಸಭೆ ಸೇರಿ ಸೇನಾಪಥಕದ ಆವಶ್ಯಕತೆಯನ್ನು ಜನರಿಗೆ ವಿವರಿಸಿ ೨೫ ಮಂದಿಯನ್ನು ಸೇನಾಪಥಕಕ್ಕೆ ಸೇರಿಸಿಕೊಂಡರು. ಇನ್ನು ಹಲವು ಮಂದಿಗಳನ್ನು ಸೇರಿಸಲಿಕ್ಕಿರುವರು. ಎಪ್ರಿಲ್ ತಾ. ೩೦ರ ಒಳಗೆ ದಕ್ಷಿಣ ಕನ್ನಡದ ಪಾಲಿಗೆ ಬಂದ ೫೦೦ ಮಂದಿ ರಾಷ್ಟ್ರಸೇವಕರು ಬಾರದಿದ್ದಲ್ಲಿ ತಾನು ತಿರಿಗಿ ತಿರಿಗಿ ಬಂದು ಅಷ್ಟು ಮಂದಿಯನ್ನು ದೇಶಸೇವೆಗೆ ಮುಂದೆಳೆಯುವೆನೆಂದು ಹೇಳಿದರು.

ಬಂಟವಾಳ:— ಇಲ್ಲಿ ಮೈಲಿಗೆಯು ತಲೆ ಎತ್ತಿದೆ. ಇಲ್ಲಿಂದ ಮೂಡಬಿದರೆಗೆ ಕೊಂಡುಹೋದ ಫ್ಹಾಯರ್ ಇಂಜಿನನ್ನು ಇನ್ನೂ ಬಂಟವಾಳಕ್ಕೆ ತರಲಿಲ್ಲ. ಬಡ್ಡಕಟ್ಟೆಯಲ್ಲಿ ಈಗ ಮಾಂಸವನ್ನು ಮಾರ್ಗದ ಬದಿಯ ಅಂಗಡಿಯಲ್ಲಿ ಬಹಿರಂಗವಾಗಿ ತೂಗಾಡಿಸಿ ಮಾರಲು ಆರಂಭಿಸಿರುತ್ತಾರೆ. ಮಾಂಸ ತಿನ್ನದೆ ಇರುವವರಿಗೆ ಇದು ಬಹಳ ಅಸಹ್ಯವಾಗಿ ಕಂಡುಬರುತ್ತದೆ.

ಬಂಟವಾಳ ಡಿವಿಜನಿನ ತಾಲೂಕು ಬೋರ್ಡು ಮೆಂಬರರಲ್ಲಿ ಒಬ್ಬರಾದ ಶ್ರೀಯುತ ಕೊಂಬ್ರಬೈಲ ಕೃಷ್ಣರಾಯರು ತಮ್ಮ ತಾಲೂಕು ಬೋರ್ಡು ಮೆಂಬರಿಕೆಗೆ ರಾಜಿನಾಮೆಯನ್ನು ಕೊಟ್ಟಿರುತ್ತಾರೆ. ತಾಲೂಕು ಬೋರ್ಡು ನೌಕರರಿಗೂ ಸರಿಯಾಗಿ ಸಂಬಳ ಏರಿಸಲಿಕ್ಕೆ ಇವರು ೨-೩ಸಾರಿ ಬೋರ್ಡಿನ ಮುಂದೆ ತಂದ ಠರಾವನ್ನು ಬೋರ್ಡಿನವರು ಅಂಗೀಕರಿಸದೆ ಇದ್ದದ್ದೇ ಇದಕ್ಕೆ ಕಾರಣವೆಂದು ಕಾಣುತ್ತದೆ. ಇವರು ಮೆಂಬರರಾದ ಮೇಲೆ ಬಂಟವಾಳದಲ್ಲಿ ೧೦ ಮಾರ್ಗ ಲಾಟೀನುಗಳನ್ನೂ, ಒಂದು ಹುಡುಗಿಯರ ಶಾಲೆಯನ್ನೂ, ಒಂದು ಮಾಪಿಳ್ಳೆಯರ ಶಾಲೆಯನ್ನೂ, ನಾವೂರಲ್ಲಿ ಒಂದು ಶಾಲೆಯನ್ನೂ ಸೆಂಕ್ಷನ್ ಮಾಡಿಸಿದರು. ಜಕ್ಕಿಕೋಡಿ ಮಾರ್ಗವನ್ನು ಮಾಡಿಸಿದರು. ಬಂಟವಾಳ ಆಸ್ಪತ್ರೆಗೆ ಬಿಲ್ಲವರು, ಮುಂತಾದ ಜಾತಿಯವರು ಡಾಕ್ಟರರಾಗಿ ಬಂದರೆ ಅವರಿಗೆ ನಿಲ್ಲಲಿಕ್ಕೆ ಮನೆ ಸಿಕ್ಕುವದಿಲ್ಲವೆಂದು ಅಸಿಸ್ಟಾಂಟ ಸರ್ಜನರಿಗೊಂದು ತಾಲೂಕು ಬೋರ್ಡಿನದೆ ಒಂದು ಮನೆಯನ್ನು ಕಟ್ಟಿಸಿದರು. ಅಯ್ಯನಾಯಕ ಓಣಿಯ ಸಂಕವನ್ನು ಭದ್ರವಾಗಿ ಕಟ್ಟಿಸಿದರು. ಕಂಚಿಗಾರಕಟ್ಟೆಯಲ್ಲಿ ಜನರಿಗೆ ಆರಾಮಕ್ಕೆ ಕೂತುಕೊಳ್ಳುವುದಕ್ಕಾಗಿ ಎರಡು ಸೀಟುಗಳನ್ನು ಕಟ್ಟಿಸಿದರು. ಹೀಗೆ ಅನೇಕ ಕೆಲಸಗಳನ್ನು ಮಾಡಿ ಜನರ ಪ್ರೀತಿಗೆ ಪಾತ್ರರಾದರು. ಇವರು ಮೆಂಬರಿಕೆಗೆ ರಾಜಿನಾಮೆಕೊಟ್ಟದಕ್ಕೆ ಜನರು ವಿಷಾದಿಸುತ್ತಾರೆ.

ಕುಂಬಳೆ:— ಇಲ್ಲಿ ಇಷ್ಟರವರೆಗೆ ಹಂಗಾಮಿಯಾಗಿ ಇಟ್ಟ ಆಸ್ಪತ್ರೆಗೆ ಒಬ್ಬ ಖಾಯಂ ಸಬ್ ಅಸಿಸ್ಟಾಂಟರನ್ನು ಎಪ್ರಿಲ ೧ನೇ ತಾರೀಕಿನಿಂದ ಸೆಂಕ್ಷನ್ ಮಾಡಿರುತ್ತಾರೆ.

ಮಂಜೇಶ್ವರ:— ಮಂಜೇಶ್ವರ ಹೊಳೆಗೆ ಸಂಕವನ್ನು ಕಟ್ಟಿಸುವ ಪ್ರಸ್ತಾಪವು ಇನ್ನೂ ಡಿಸ್ಟ್ರಿಕ್ಟ ಬೋರ್ಡಿನವರ ಮುಂದೆ ಬಂದದು, ಕಂಡು ಬರುವದಿಲ್ಲ. ಕಳೆದ ವಾರದ ಫೋರ್ಟ ಸೈಂಟ ಜೋರ್ಜ ಗಜೇಟಿನಲ್ಲಿ G. O. No. 446 / ಪೆಬ್ರವರಿ 19—1923. L & M ಪ್ರಕಟಿಸಿದೆ. ಇದರ ಪ್ರಕಾರ ಟ್ರಂಕ್ ರೋಡುಗಳಲ್ಲಿ ಸಂಕಗಳನ್ನು ಬೋರ್ಡಿನವರು ಕಟ್ಟಿಸುವದಾದರೆ ಪೂರ್ಣ ಖರ್ಚನ್ನು ಸರಕಾರವೆ ಕೊಡುತ್ತದೆಂದೂ ಪ್ರತಿವರ್ಷ ಸಪ್ಟಂಬರ ತಿಂಗಳ ೩೦ರ ವಳಗೆ ಅಂದಾಜುಪಟ್ಟಿಯನ್ನೂ ಕಳುಹಿಸಿಕೊಡಬೇಕೆಂದೂ ಕಳೆದ ವರ್ಷ ಕೆಲವು ಬೋರ್ಡಿನವರು ಒಕ್ಟೋಬರದ ನಂತರ ಕಳುಹಿಸಿದ್ದಾರೆಂದೂ ಇದೆ. ಮಂಜೇಶ್ವರ ಸಂಕವು ಟ್ರಂಕರೋಡಿನಲ್ಲಿದೆ. ಇದು ಅತೀ ಉಪಯೋಗವಾದ ಸಂಕ. ಆದ್ದರಿಂದ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಹಣದ ಅಭಾವವಾದರೂ ಸರಕಾರವೆ ಪೂರ್ಣ ಖರ್ಚು ಕೊಡುತ್ತದಾದ್ದರಿಂದ ಈ ಸಂಕವನ್ನು ಮಾಡುವದಕ್ಕೆ ಏನೊಂದೂ ಅಡ್ಡಿಯಾಗಲಿಕ್ಕಿಲ್ಲ. ಆದ್ದರಿಂದ ಡಿಸ್ಟ್ರಿಕ್ಟ ಬೋರ್ಡಿನಲ್ಲಿರುವ ಕಾಸರಗೋಡು ತಾಲೂಕಿನ ಮೆಂಬರರು ಈ G. O ಪ್ರಕಾರ ಸಾಧನೆ ಮಾಡಿದರೆ ಸಂಕವಾಗುವುದರಲ್ಲಿ ಅಡ್ಡಿಯಾಗಲಿಕ್ಕಿಲ್ಲ.

ಪಡುಬಿದ್ರೆ:—"ಪಡುಬಿದ್ರೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ" ವರುಷಾವಧಿ ಉತ್ಸವವು ಇದೇ ಬರುವ ಫಾಲ್ಗುಣ ಬ ೧೨ಯು ಬುಧವಾರ ತಾ. ೧೪—೩—'೨೩ನೇ (ಮೀನ ಸಂಕ್ರಮಣ) ದಿವಸ ಧ್ವಜಾರೋಹಣ, ತಾ. ೧೫—೩—'೨೩ನೇ ಗುರುವಾರ ದಿವಸ ಅಯನವೂ, ತಾ. ೨೧—೩—'೨೩ನೇ ಬುಧವಾರ ದಿವಸ ರಥಾರೋಹಣವೂ, ತಾ. ೨೨—೩—'೨೩ನೇ ಗುರುವಾರ ದಿವಸ ಬಾಗಲು ತೆರೆಯೋಣ, ಚೆಂಡು ಮುಂತಾದ ಉತ್ಸವಾದಿಗಳು ಜರಗುವುದು. ಈ ದಿವಸ ತಾ. ೨೨ನೇ ಗುರುವಾರ ರಾತ್ರಿ ದೇವಸ್ಥಾನದ ಎದುರು ಗೋಪುರದಲ್ಲಿ ಉತ್ತರಾವತಿ, ದಕ್ಷಿಣಾವತಿ, ರಕ್ಷ್ಯಗಳ ತಾಳಮದ್ದಳೆ ನಡಿಯುವುದು.

ಮಹಾತ್ಮರ ಬಂಧನ ದಿನಾಚರಣೆ.

ತಾ. ೧೦ರಿಂದ ೧೮ರ ವರೆಗಿನ ಕಾರ್ಯಕ್ರಮ

೧. ಪ್ರತಿದಿನವೂ ಪ್ರಾತಃ ೬೦ರಿಂದ ೭॥ ವರೆಗೆ ಮೆರವಣಿಗೆ; ತಾರೀಕು ೧೦, ೧೧, ಮತ್ತು ೧೨ರಲ್ಲು ತಿಲಕ ವಿದ್ಯಾಲಯದಲ್ಲಿ ಕೂಡಿ ಭಜನೆ ಸಮೇತ ಕದ್ರಿ, ರಥಬೀದಿ, ಮತ್ತು ಮಾರ್ಕೇಟ್ ರಸ್ತೆಗಳಲ್ಲಿ ಮೆರವಣಿಗೆ; ತಾ. ೧೩, ಬೋಳಾರ ರಾಷ್ಟ್ರೀಯ ಪಾಠಶಾಲೆಯಲ್ಲಿ ಕೂಡಿ ಬೋಳಾರದಲ್ಲಿ ಮೆರವಣಿಗೆ; ತಾ. ೧೪, ಬೋಳೂರು ರಾಷ್ಟ್ರೀಯ ಪಾಠಶಾಲೆಯಲ್ಲಿ ಕೂಡಿ ಅಲ್ಲಿ ಮೆರವಣಿಗೆ; ತಾ. ೧೫, ೧೬ ಮೈದಾನಿನಲ್ಲಿ ಕೂಡಿ ಬಂದರ ಅಥವಾ ಅತ್ತಾವರದಲ್ಲಿ ಮೆರವಣಿಗೆ; ತಾ. ೧೭, ತಿಲಕ ವಿದ್ಯಾಲಯದಲ್ಲಿ ಕೂಡಿ ಬಲ್ಲೇರದಲ್ಲಿ ಮೆರವಣಿಗೆ; ತಾ. ೧೮, ಕದ್ರಿ ರಾಷ್ಟ್ರೀಯ ಶಾಲೆಯಲ್ಲಿ ಕೂಡಿ ಶಂಕರಪಾಡಿ ವರೆಗೆ ಮೆರವಣಿಗೆ.

೨. ತಿಲಕ ಸ್ವರಾಜ್ಯ ನಿಧಿಯ ಹಣವೂ ಚರಕಾಗಳನ್ನು [illegible] ವಿನಂತಿಮಾಡಿಕೊಳ್ಳುವುದಕ್ಕೋಸ್ಕರ ಕೆ. ಸದಾಶಿವರಾವ್, ಮು. ಅಮ್ಮೇಕರಾವ್, ಕೆ. ಯಂ. ದಾಸಪ್ಪಯ್ಯ, ಮತ್ತು ಇತರರಿಂದ ಕೂಡಿದ ಒಂದು ತಂಡವು ಹೊರಡುವುದು.

೩. ಬೇರೆ ಬೇರೆ ದಿನಗಳಲ್ಲಿ ಹರಿಕೀರ್ತನೆಗಳಿರುವವು. ಇದರ ವಿವರವು ಹಿಂದಿನಿಂದ ತಿಳಿಸಲಾಗುವುದು.

೪. ತಾ. ೧೭ ರ ಸಾಯಂಕಾಲ ೫ ಗಂಟೆ ಆಗ್ಗೆ ತಿಲಕ ವಿದ್ಯಾಲಯದಿಂದ ಮೆರವಣಿಗೆ ಹೊರಟು ಮೈದಾನಿನಲ್ಲಿ ಸಭೆಗಳು ಕೂಡುವುವು. ತಾ. ೧೮ರಲ್ಲಿ ಹರತಾಳವಾಗುವುದು.

ಈ ಎಲ್ಲಾ ವಿಷಯಗಳನ್ನು ಸಾಂಗವಾಗಿ ನೆರವೇರಿಸುವುದರಲ್ಲಿ ಪ್ರಜೆಗಳೆಲ್ಲರೂ ಸಹಾಯಮಾಡಬೇಕಾಗಿ ವಿನಂತಿ. ಮು. [illegible]

ಅನುಕ್ರಮಣಿಕೆ.

ರಾಜಿ ಆಯಿತು; ಆದರೆ— ೬
ಸ್ಫುಟವಿಚಾರಗಳು.— . . . ೭
೧. ಅಸಹಕಾರಿಗಳು . . . ,,
೨. ಹಿಂದೂಸ್ಥಾನದ ಜಮಾಖರ್ಚು . . ,,
೩-೪ ಉಪ್ಪಿನ ಮೇಲಿನ ಕರ . . . ,,
೫ ಇಂಚಕೇಪ ಕಮ್ಮಿಟಿ ವರದಿ . . ,,
ಮಂಗಳೂರು— ೭-೮

ವರ್ತಮಾನ ಸಂಗ್ರಹಗಳು:—

ವಿದೇಶ ವರ್ತಮಾನ, ಒಳದೇಶ ವರ್ತಮಾನ . . ೮
ದಕ್ಷಿಣ ಕನ್ನಡ— ಪೊಳಲಿ, ಉಡುಪಿ, ಬಂಟವಾಳ, ಕುಂಬಳೆ, ಮಂಜೇಶ್ವರ, ಪಡುಬಿದರೆ . . ,,
ಬಂಗಾಳದಲ್ಲಿರುವ ಹಿಂದುಳಿದ ವರ್ಗದವರು . . ೯
ಮಹಾತ್ಮರ ಬಂಧನದ ವರ್ಧಂತಿಯ ದಿನಾಚರಣೆ . . ,,
ಇಂಗ್ಲೆಂಡಿನಲ್ಲಿ ಕೈಯಿಂದ ನೂಲುವ ಮತ್ತು ನೇಯುವ ಕೈಗಾರಿಕೆಯ ಪುನರುಜ್ಜೀವನ . . ,,
ಜರ್ಮನಿಯ ಸತ್ಯಾಗ್ರಹ . . ,,
ದೇಶಬಂಧುಗಳ ಸಂದೇಶ . . ,,
ಉಪ್ಪಿನ ಮೇಲಿನ ಕರದಿಂದ ಸಾರ್ವಜನಿಕ ಆರೋಗ್ಯದ ಹಾನಿ. . ,,
ಮಂಗಳೂರು ಪಟ್ಟಣದ ವಿದ್ಯಾರ್ಥಿಗಳಿಗೆ ವಿನಂತಿ . . ,,
ಇಂಚ್‌ಕೇಪ್ ಕಮ್ಮಿಟಿಯ ರಿಪೋರ್ಟು . . ,,

ಸ್ವದೇಶಾಭಿಮಾನಿ.

ಶಕ ೧೮೪೪ ಪಾಲ್ಗುಣ ಬ। ೭ಯು ಶುಕ್ರವಾರ

ರಾಜಿ ಆಯಿತು; ಆದರೆ——

ಅಲಹಾಬಾದಿನಲ್ಲಿ ರಾಷ್ಟ್ರೀಯ ಪಕ್ಷದವರ "ಸ್ವರಾಜ್ಯ ಪಕ್ಷ"ವು ಸಂಸ್ಥಾಪಿತವಾದ ಬಳಿಕ ಆ ಪಕ್ಷದ ಕಾರ್ಯಕ್ರಮವು ಮತ್ತು ಚಳವಳವು ದೇಶದ ಎಲ್ಲ ಭಾಗಗಳಲ್ಲಿ ಪ್ರಾರಂಭವಾಗಬೇಕಾದ್ದು ನಿಜವು. ಆದರೆ ಶಬ್ದೈಕಪ್ರಾಮಾಣ್ಯೋಪಜೀವಿಗಳಾದ ಬಹುಸಂಖ್ಯಾಕರು ಮತ್ತು "ಬೇಕು ಬದಲಾವಣೆ"ಯ ನ್ಯೂನಸಂಖ್ಯಾಕರು ಈ ಉಭಯತರಲ್ಲಿ ಐಕ್ಯವನ್ನು ಸಾಧಿಸಬೇಕೆಂದು ಕೆಲವು ಸದ್ಗೃಹಸ್ಥರು ಈಗ ಒಂದೆರಡು ತಿಂಗಳಿಂದ ಯಾವ ಪ್ರಯತ್ನವನ್ನು ತೆಕ್ಕೊಳ್ಳುತ್ತಿದ್ದರೊ ಆ ಪ್ರಯತ್ನವು ಸದ್ಯದ ಮಟ್ಟಿಗಾದರೂ ಸಫಲವಾದಂತೆ ತೋರುತ್ತದೆ. ಸ್ವರಾಜ್ಯಪಕ್ಷದವರೊಡನೆ ರಾಜಿಯನ್ನು ಮಾಡಿಕೊಳ್ಳಲು ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಅಲ್ಲಿಯೆ ಸೇರಿತ್ತು. ಈ ಎರಡು ಪಕ್ಷಗಳಲ್ಲಿ ಮುಂದಿನ ೬ ಶರ್ತಗಳ ಮೇಲೆ ರಾಜಿಯಾಗಿದೆ:—೧ ಬರುವ ಎಪ್ರಿಲ್ ತಾ. ೩೦ರ ವರೆಗೆ ಉಭಯ ಪಕ್ಷದವರು ಕೌನ್ಸಿಲ್ ವಿಷಯದ ಚಳವಳವನ್ನು ನಿಲ್ಲಿಸಬೇಕು. ೨ ಮಧ್ಯದಲ್ಲಿ ಎರಡೂ ಪಕ್ಷದವರೂ ಸ್ವಂತ ಕಾರ್ಯಕ್ರಮಗಳಲ್ಲಿಯ ಇತರ ಸಂಗತಿಗಳನ್ನು ಮುಂದರಿಸಬೇಕು. ಈ ಸಂದರ್ಭದಲ್ಲಿ ಒಬ್ಬರು ಇನ್ನೊಬ್ಬರನ್ನು ಅಡ್ಡಿ ಮಾಡಕೂಡದು. ೩ ಗಯಾ ಕೊಂಗ್ರೆಸ್ಸಿನಲ್ಲಿ ಹಣ ಮತ್ತು ಸ್ವಯಂಸೇವಕರನ್ನು ಶೇಖರಿಸುವ ಯಾವ ಠರಾವು ಪಾಸಾಗಿದೆಯೊ ಅದರಂತೆ ಬಹುಸಂಖ್ಯಾಕರು ಪ್ರವರ್ತಿಸಲು ಅಡ್ಡಿ ಇಲ್ಲ. ೪. ಈ ಕಾರ್ಯದಲ್ಲಿ ಎಂದರೆ, ಜನಬಲ, ಧನಬಲ ಇವುಗಳನ್ನು ಸಂಗ್ರಹಿಸುವುದರಲ್ಲಿ ನ್ಯೂನಸಂಖ್ಯಾಕರು ಬಹುಸಂಖ್ಯಾಕರಿಗೆ ಸಹಾಯಮಾಡಬೇಕು. ೫. ತಾ. ೩೦ ಎಪ್ರಿಲ್ ದಾಟಿದ ಬಳಿಕ ಉಭಯ ಪಕ್ಷದವರು ತಮತಮಗೆ ಇಷ್ಟವಾದ ಮಾರ್ಗಗಳನ್ನು ಅವಲಂಬಿಸಬಹುದು. ೬ ಯಾವದಾದರೂ ಪ್ರಾಂತದೊಳಗಿನ ಕೌನ್ಸಿಲು ಕ್ಲಪ್ತ ಸಮಯದಲ್ಲಿ ವಿಸರ್ಜಿಸಲ್ಪಡದೆ ಇದ್ದರೆ ಮಾತ್ರ ಮೇಲಿನ ಠರಾವುಗಳು ಜಾರಿಯಲ್ಲಿ ಬಂದಾವು. ಈ ಆರು ಶರ್ತಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದ್ದಲ್ಲಿ ಮತ್ತು ಇಂಥ ಶರ್ತಗಳನ್ನು ಮಾನ್ಯ ಮಾಡಿ ನ್ಯೂನಸಂಖ್ಯಾಕರು ಯಾವ ಕಾರಣದಿಂದ ಒಪ್ಪಂದಕ್ಕೆ ಒಡಂಬಟ್ಟರೊ ಆ ಕಾರಣಗಳನ್ನು—ದೇಶಬಂಧುದಾಸರು ತಮ್ಮ ಪ್ರಕಟಣೆಯಲ್ಲಿ ಜಾಹೀರಪಡಿಸಿದ ಆ ಕಾರಣಗಳನ್ನು—ವಿಮರ್ಶಿಸಿದ್ದಲ್ಲಿ ಈಗ ಆಗಿರುವ ರಾಜಿಗೆ ಅಕ್ಷರಶಃ ಐಕ್ಯದ ಸ್ವರೂಪವನ್ನು ತಂದುಕೊಡುವುದು ಬಹುಸಂಖ್ಯಾಕರ ಕೈಯಲ್ಲಿಯೆ ಇದೆ ಎಂದು ಹೇಳಬೇಕಾಗುತ್ತದೆ. ಬೇರೆ ಮಾತಿನಿಂದ ಒಟ್ಟುಕೂಡಿಸಿದ ಸಂದುಗಳನ್ನು ಏಕಜೀವವನ್ನಾಗಿ ಮಾಡುವ ಜವಾಬದಾರಿಯು ಈ ದೊಡ್ಡ ಪಕ್ಷದ ಮೇಲೆಯೆ ಇದೆ. ರಾಷ್ಟ್ರೀಯಸಭೆಯಲ್ಲಿ ಯುಕ್ತಿವಾದಕ್ಕೆ ಅಸ್ಪದವಿಲ್ಲವೆಂದು ಕಂಡ ಬಳಿಕ ಅಂತರ್ಗತವಾದ ಇನ್ನೊಂದು ಪಕ್ಷವನ್ನು ಏರ್ಪಡಿಸಲು ಹೊರಟ ಅಲ್ಪಸಂಖ್ಯಾಕರಿಗೆನೆ ಈ ಐಕ್ಯವು ಬೇಕಿತ್ತೊ ಹೇಗೆ ಎಂಬುದನ್ನು ನೋಡಹೋದರೆ, ಸ್ವಂತ ಮತಗಳನ್ನು ಬದಿಗಿಟ್ಟು ಸಂತೋಷದಿಂದಿರುವ ಪಕ್ಷದಲ್ಲಿ ಅವರು ಮೊದಲೆ ತಮ್ಮ ಮತಭೇದಗಳನ್ನು ವಿಕೋಪಕ್ಕೆ ಕೊಂಡುಹೋಗುತ್ತಿರಲಿಲ್ಲ. ಕೌನ್ಸಿಲ್ ವಾದವನ್ನು ಉಪಸ್ಥಿತಪಡಿಸಿ ಅಲ್ಪಸಂಖ್ಯಾಕರು ಒಡಕನ್ನುಂಟುಮಾಡಿಕೊಂಡಿದ್ದರೆಂದು ಯಾರಾದರೂ ತಿಳಿಯುವಂಥಾದರೆ ಅದು ಶುದ್ಧಭ್ರಾಂತಿಯೆ ಸರಿ. ಕೌನ್ಸಿಲುಗಳೆಂದರೆ, ಸ್ವರಾಜ್ಯಮಂದಿರದ ಪ್ರಧಾನದ್ವಾರ, ಕೌನ್ಸಿಲುಗಳೆಂದರೆ, ಸ್ವರಾಜ್ಯಪೆಟ್ಟಿಗೆಯ ಬೀಗದಕೈ, ಪುನಃ ಕೌನ್ಸಿಲುಗಳೆಂದರೆ, ಸ್ವರಾಜ್ಯಪ್ರಾಪ್ತಿಯ ಸಾಧನಬ್ರಹ್ಮವೆಂಬುದಾಗಿ "ಬೇಕು ಬದಲಾವಣೆ"ಯವರು ಎಂದೂ ತಿಳಕೊಳ್ಳುವುದಿಲ್ಲ. ಸ್ವರಾಜ್ಯಪ್ರಾಪ್ತಿಗೆ ಈಗಿನ ವಿಧಾಯಕಕಾರ್ಯಕ್ರಮವು, ರೂಪಪ್ರತ್ಯಕ್ಷಕ್ಕೆ ಚಕ್ಷುರಿಂದ್ರಿಯದಂತೆ ಅದ್ವಿತೀಯವಾದ ಸಾಧನವೆಂದು ಈಗ ಹೇಗೆ ಕೆಲವು ಭಾವನಾದಾಸರು ತಿಳಕೊಳ್ಳುವರೊ ಹಾಗೆ ಈಚೆ ಕಡೆಯವರು ಕೌನ್ಸಿಲುಗಳೆ ಮೋಕ್ಷಸಾಧನವೆಂದು ಎಂದೂ ತಿಳಕೊಳ್ಳುವುದಿಲ್ಲ. ಈಚೆಕಡೆಯವರಿಗೆ ಮುಖ್ಯವಾಗಿ ನ್ಯಾಯಮಾರ್ಗದ ಎಲ್ಲತರದ ಚಳವಳಗಳು ಬೇಕು. ಹೇಗೆ ಒಂದು ಬಟ್ಟೆಯನ್ನು ತಯಾರಿಸಬೇಕಾದರೆ ನೂಲು, ಚಕ್ರ, ಜೀವರ, ನೇಯಿಗೆಯವನು ಮುಂತಾದ ಎಲ್ಲ ಅನುಕೂಲತೆಗಳು ಬೇಕೊ ಹಾಗೆಯೆ ಸ್ವರಾಜ್ಯಪ್ರಾಪ್ತಿಗೆ ನ್ಯಾಯವಾದ ಎಲ್ಲ ಸಾಧನಗಳೂ ಬೇಕು. ಇದೆ ಹೊಸ ಪಕ್ಷದ ತತ್ವಗಳ ಮರ್ಮವು. ಅವರು ಮೊದಲಿನಿಂದಲೆ ರಾಜಕೀಯ ವಾತಾವರಣವನ್ನು ಸಂಚಲನದಲ್ಲಿಯೆ ಇಡಿರಿ ಎಂದು ಹೇಳಿಕೊಂಡುಬಂದಿದ್ದರು. ಮಾತ್ರವಲ್ಲ, ಆ ತರದ ಪರಿಸ್ಥಿತಿಯಲ್ಲಿ ರಾಷ್ಟ್ರೀಯರು ತಮ್ಮ ಸಂಪೂರ್ಣ ಬಲದಿಂದ ಕಾರ್ಯೋದ್ಯುಕ್ತರಾಗಿದ್ದರು. ಅವರ ಪಕ್ಷದ ಕಾರ್ಯಪ್ರವಾಹ ರೂಪವಾದ ಯಾವ ಮರ್ಮವುಂಟೊ ಆ ಮರ್ಮವನ್ನು ಈ ಹೊತ್ತಿಗಾದರೂ ಲಕ್ಷ್ಯದಲ್ಲಿ ತಂದರೆ ಅವರು ಕಾನೂನುಭಂಗದ ಮೇಲೆ ಯಾಕೆ ಅಷ್ಟೊಂದು ಭಾರವನ್ನಿಡುತ್ತಾರೆಂಬುದು ಯಾರಿಗೂ ಗೊತ್ತಾಗದೆ ಇರದು. "ನಮಗೂ ಕೌನ್ಸಿಲುಗಳು ಬೇಡ. ಬೇಡವೆಂದು ಬರೆ ಬಾಯಿಯಿಂದ ಹೇಳಿ ಸುಮ್ಮನಿರುವುದರ ಬದಲು ಆ ಕೌನ್ಸಿಲುಗಳ ಅನ್ಯಾಯದ ಯಾವ ಕಾನೂನುಗಳಿವೆಯೊ ಅವುಗಳನ್ನು ಮುರಿಯೋಣ" ವೆಂದು ಹೊಸ ಪಕ್ಷದವರ ಅಂಬೋಣವು ಮೊದಲಿನಿಂದಲೆ ಇದೆ. ಈ ಭಾಗದಲ್ಲಿ ಅವರು ಎಂದೂ ಹಿಂಜರಿಯತಕ್ಕವರಲ್ಲ. ಮತ್ತು ಆದ್ದರಿಂದಲೆ ದೇಶಬಂಧುದಾಸರು ಮೊನ್ನೆಯ ಒಪ್ಪಂದಕ್ಕೆ ಒಡಂಬಡಿಕೆಯನ್ನು ಕೊಟ್ಟಿರುವರು.

ದೇಶಬಂಧುದಾಸರು ಅಲಹಾಬಾದಿನಲ್ಲಿ ಯಾವ ಅಭಿಪ್ರಾಯದ ಮೇಲಿನಿಂದ ರಾಜಿಯನ್ನು ಅಂಗೀಕರಿಸಿದ್ದಾರೆಂಬುದು ಮೇಲಿನ ಉಲ್ಲೇಖದ ಮೇಲಿಂದ ವಾಚಕರಿಗೆ ತಿಳಿದುಬಂದೀತು. ರಾಜಿಯಾದನಂತರ ಅವರು ತಮ್ಮ ಅಂಬೋಣವನ್ನು ಜಾಹೀರಪಡಿಸಿದ್ದಾರೆ. ಅದರಲ್ಲಿ ಮತ್ತು ಇತರ ಬಾತಮಿದಾರರೊಡನೆ ಮಾಡಿದ ಸಂಭಾಷಣದಲ್ಲಿ ಅವರು ಎಪ್ರಿಲ್ ತಿಂಗಳ ಅಂತ್ಯದಲ್ಲಿ ಸಿವಿಲ್ ಡಿಸ್ ಒಬೀಡಿಯನ್ಸನ್ನು ಬಹುಸಂಖ್ಯಾಕರು ಮಾಡಲುಪಕ್ರಮಿಸುವರು, ಎಂದರೆ, ರಾಷ್ಟ್ರೀಯ ಸಭೆಯು ಮಾಡಲಾರಂಭಿಸೀತೆಂಬ ಭರವಸೆಯಿಂದ ರಾಜಿಗೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆಂದು ತೋರುತ್ತದೆ. ದೇಶಭಕ್ತದಾಸರು ಈ ಹೊತ್ತೆ ಅಲ್ಲ, ಈ ಮತಭೇದ ಪ್ರದರ್ಶನದ ಆದಿಯಲ್ಲೆ ಸಿವಿಲ್ ಡಿಸ್ ಒಬೀಡಿಯನ್ಸನ್ನು ಪ್ರಾರಂಭಿಸುವುದಾದರೆ ಆ ಯಜ್ಞದಲ್ಲಿ ತಾನು ಪ್ರಥಮದ ಆಹುತಿಯೆಂಬುದಾಗಿ ಧೀರೋದಾತ್ತವಾದ ಉದ್ಗಾರಗಳನ್ನು ಹೊರಡಿಸಿದ್ದು ಎಲ್ಲರ ನೆನಪಿನಲ್ಲಿರಬಹುದು. ಸ್ವರಾಜ್ಯಪಾರ್ಟಿಯೆಂದು ಹೊಸ ಹೆಸರನ್ನು ಅಂಗೀಕರಿಸಿರುವ ರಾಷ್ಟ್ರೀಯರು ಇದುವರೆಗೆ ಎಂದೂ ಕರ್ತವ್ಯಭ್ರಷ್ಟರಾಗಿಲ್ಲ. ಇದೆ ಸಂಗತಿಯು ಶ್ರೀಯುತ ದಾಸರ ವರ್ತನದಿಂದಲೂ ಸ್ಪಷ್ಟವಾಗುತ್ತದೆ. ಉಭಯಪಕ್ಷದವರು ಯಾವ ಶರ್ತಗಳನ್ನು ಒಪ್ಪಿದ್ದಾರೊ ಅವುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿನಲ್ಲೂ ಇದೆ ಅರ್ಥವು ನಿಷ್ಪನ್ನವಾಗುವುದು. ಎಪ್ರಿಲ್ ೩೦ರ ವರೆಗೆ ಎರಡೂ ಕಡೆಯವರು ಸಂಯುಕ್ತ ಪ್ರಯತ್ನದಿಂದ ಜನಬಲ ಧನಬಲಗಳನ್ನು ಕೂಡಿಸಬೇಕೆಂದು ಹೇಳಿದೆ. ಯಾಕೆ? ಮುಂದೆ ಸಿವಿಲ್ ಡಿಸ್ ಒಬೀಡಿಯನ್ಸನ್ನು ಮಾಡುವುದಿಲ್ಲವಾದರೆ ಸ್ವಯಂಸೇವಕರು ಯಾಕೆ? ವಿಧಾಯಕಕಾರ್ಯಕ್ರಮದ ಪ್ರಸಾರವು ಯಾಕೆ? ಖಾದಿಮೂಲಕ ಸ್ವಾವಲಂಬನದ ಪಾಠವಾದರೂ ಯಾಕೆ? ಸಾರಾಂಶ, ಈ ಎಲ್ಲ ಕಾರ್ಯಗಳ ಸ್ವಾರಸ್ಯವು ಎಪ್ರಿಲ್ ಅಂತ್ಯದಲ್ಲಿ ಪ್ರಾರಂಭವಾಗಲಿರುವ ಸಿವಿಲ್ ಡಿಸ್ ಒಬೀಡಿಯನ್ಸ ಚಳವಳದಲ್ಲಿದೆ. ಮೃದಂಗಕ್ಕೆ ಎರಡು ಮುಖಗಳಿದ್ದ ಹಾಗೆ ಸ್ವರಾಜ್ಯಚಳವಳಕ್ಕೆ ಎರಡು ಮುಖಗಳಿವೆ ಎನ್ನಬಹುದು ಒಂದು ಕೌನ್ಸಿಲ್ ಪ್ರವೇಶವು. ಇನ್ನೊಂದು ಸಿವಿಲ್ ಡಿಸ್ ಒಬೀಡಿಯನ್ಸು. ವಸ್ತುತಃ ಇವೆರಡೂ ಪ್ರಾರಂಭವಾಗುವುದೆ ಇಷ್ಟವು. ಆದರ ಬದಲು ಆ ಎರಡೂ ಬಾಯಿಗಳನ್ನು ಕಟ್ಟಿಬಿಟ್ಟು ವಿಧಾಯಕ ಕಾರ್ಯಕ್ರಮದ ಒಂದೆ ಜಾಗಟೆಯನ್ನು ಬಡೆಯಹತ್ತಿದರೆ, ಆ ಭಾಗವತನ ಪದದಲ್ಲಿ ಸ್ವಾರಸ್ಯವಾಗಲಿ, ಜೀವಾಳವಾಗಲಿ ಇರಲಿಕ್ಕಿಲ್ಲ. ಎರಡಿಲ್ಲವಾದರೆ ಕಡಿಮೆಪಕ್ಷದಲ್ಲಿ ಯಾವುದಾದರೂ ಒಂದನ್ನು ಪ್ರಾರಂಭಿಸಲೆ ಬೇಕು. ಕೌನ್ಸಿಲುಗಳು ಬೇಡವೊ? ಹಾಗಾದರೆ ಕಾನೂನುಭಂಗದ ಸಿದ್ಧತೆಯನ್ನು ಆದಷ್ಟು ತ್ವರೆಯಿಂದ ಮಾಡಿ ಅದನ್ನಾದರೂ ವ್ಯವಹಾರದಲ್ಲಿ ತನ್ನಿರಿ. ಇದೆ ದಾಸಪಾರ್ಟಿಯ ಅಂಬೋಣವಿದೆ. ಮತ್ತು ಈ ತಿಳಿವಿನಿಂದಲೆ ಈ ಪಾರ್ಟಿಯವರು ಅಲಹಾಬಾದಿನಲ್ಲಿ ಗಂಗಾಯಮುನಾ ನದಿಗಳಂತೆ ಬಹುಪಕ್ಷದವರೊಡನೆ ಐಕ್ಯವನ್ನು ಹೊಂದಿದ್ದಾರೆ. ಎಪ್ರಿಲ್ ತಿಂಗಳ ಅಂತ್ಯದಲ್ಲಿ ಸಂಕಲ್ಪಿತ ಕಾಯಿದೆಭಂಗವನ್ನು ಮಾಡಲು ಸಾಧ್ಯವಿಲ್ಲವಾದರೆ ಆಗ ಅವರವರ ದಾರಿಯು ಬೇರೆಬೇರೆಯೆಂದೆ ತಿಳಿಯಬೇಕು. ಈ ಮಾತಿನ ಅರ್ಥವಾದರೂ ಸಿವಿಲ್ ಡಿಸ್ ಒಬೀಡಿಯನ್ಸಿನ ಆವಶ್ಯಕತೆಯನ್ನೆ ತೋರಿಸುತ್ತದೆ. ಬಹುಸಂಖ್ಯಾಕರಿಗೆ ಕೊಂಗ್ರೆಸಿನ ಮಟ್ಟಿಗೆ ಬಹುಪಕ್ಷದ ಹೆಗ್ಗಳಿಕೆ ಇದ್ದರೂ ಸರಕಾರದೊಡನೆ ನಾಳೆ ಹೋರಾಡುವಾಗ ಇದು ಎಷ್ಟಕ್ಕೂ ಅಲ್ಪಸಂಖ್ಯಾಕವೆ ಸರಿ! ಆದ್ದರಿಂದ ಈಗಿನ ಅಲ್ಪಸಂಖ್ಯಾಕರನ್ನು ಬಿಟ್ಟರೆ ಅವರಿಗೂ ಸುಪರಿಣಾಮವಿಲ್ಲ. ಈ ದೂರದೃಷ್ಟಿಯಿಂದಲೆ ಮೌ. ಅಬ್ದುಲಕಲಂಥವರು ಈ ರಾಜಿಯನ್ನು ಸಾಧಿಸಲು ಬಹು ಪ್ರಯಾಸವನ್ನು ಪಟ್ಟಿರುವರು. ಐಕ್ಯದ ಬೆಲೆಯನ್ನೂ ಸದ್ಗೃಹಸ್ಥರ ಪರಿಶ್ರಮದ ಬೆಲೆಯನ್ನೂ ತಿಳಕೊಂಡು ಬಹುಪಕ್ಷದ ಭಾವನಾಪ್ರಧಾನರು ವರ್ತಿಸಹತ್ತಿದರೆ ಈ ಐಕ್ಯವು ಅಭಂಗವಾಗಿ ನಿಲ್ಲುವುದೆಂದು ತೋರುತ್ತದೆ.

ಆದರೆ ರಾಜಿಯಾದ ಬಳಿಕ ಬಹುಪಕ್ಷದ ಮುಖಂಡರೆಂದೆನ್ನಿಸಿಕೊಳ್ಳುವ ಕೆಲವರ ಉದ್ಗಾರಗಳನ್ನು ಕೇಳುವಾಗ ಈ ಐಕ್ಯವು, ಈ ರಾಜಿಯು ಹೆಚ್ಚಿನ ಆಯುಸ್ಸನ್ನು ತೆಕ್ಕೊಂಡು ಬಂದಿಲ್ಲವೆಂದು ಹೇಳಬೇಕಾಗುತ್ತದೆ. ರಾಷ್ಟ್ರವು ಬೇಗನೆ ಕಾನೂನುಭಂಗವನ್ನು ಪ್ರಾರಂಭಿಸಬೇಕೆಂಬ ನಿರೀಕ್ಷೆಯಿಂದ ಮತ್ತು ಅಪೇಕ್ಷೆಯಿಂದ ಸ್ವರಾಜ್ಯಪಾರ್ಟಿಯವರು ರಾಜಿಯನ್ನು ಒಪ್ಪಿಕೊಂಡಿದ್ದಾದರೂ ಅದನ್ನು ಕಾಯಂ ಇಡುವುದು ಬಹುಸಂಖ್ಯಾಕರ ಕೈಯಲ್ಲಿದೆ ಎಂದು ನಾವು ಮೇಲೆ ಹೇಳಿದ್ದೆವಷ್ಟೆ. ಅದರ ಕಾರಣವು ಸಿವಿಲ್ ಡಿಸ್ ಒಬೀಡಿಯನ್ಸನ್ನು ಪ್ರಾರಂಭಿಸುವುದರಲ್ಲಿ ಅವರು ಕೂಡ ಬದ್ಧಪರಿಕರರಾಗಬೇಕು ಎಂಬುದಾಗಿದೆ. ಆದರೆ "ಬೇಡ ಬದಲಾವಣೆ"ಯವರಾದ ಭಾವನಾದಾಸರ ರಾಜಿಯ ಅನಂತರದ ವಿಚಾರಸರಣಿಯನ್ನು ಕೇಳುವಾಗ ಮೊದಲಿನಂತೆ ಈಗಲೂ ಅವರಿಗೆ ಕಾನೂನುಭಂಗದ ಯಾವ ಯಾತಾಯಾತವೂ ಬೇಕಿಲ್ಲವೆಂದು ತೋರುತ್ತದೆ. ಕಾನೂನುಭಂಗವನ್ನು ಪ್ರಾರಂಭಿಸಲು ಅವರ ಮತದಿಂದ ಅನೇಕ 'ರೆ'ಗಳು ಒಟ್ಟಿಗೆ ಸೇರಬೇಕು! ಒಂದುಕಾಲದಲ್ಲಿ ಮಹಾತ್ಮಾಜಿಗಳು ಬಾರಡೋಲಿಯಲ್ಲಿ ಚಳವಳದ ಬಲೆಯನ್ನು ಹಿಂದಕ್ಕೆ ಎಳಕೊಳ್ಳುವಾಗ ಹೇಳಿದ ಮಾತುಗಳನ್ನು ವೇದಪ್ರಾಮಾಣ್ಯವಾಗಿಟ್ಟುಕೊಂಡು "ಹೀಗಿರುವುದಾದರೆ, ಹಾಗಿರುವದಾದರೆ" ಇತ್ಯಾದಿ ಅನೇಕ 'ರೆ'ಗಳ ಕನ್ನಡಕಗಳಿಂದ ಅಧುನಿಕ ಪುರಸ್ಕರ್ತೃಗಳು ಸಿವಿಲ್ ಡಿಸ್ ಒಬೀಡಿಯನ್ಸಿಗೆ ಪಕ್ವವಾದ ಪರಿಸ್ಥಿತಿಯನ್ನು ನೋಡಹತ್ತಿದ್ದಾರೆ. ಇದನ್ನು ನೋಡಿ ಸಮುದ್ರದ ತೆರೆಗಳನ್ನು ನಿಲ್ಲಿಸಿ ಈಜಲು ಕಲಿಯಲಿಚ್ಛಿಸುವ ಹುಡುಗನ ಬುದ್ಧಿವೈಭವದ ಸ್ಮರಣವುಂಟಾಗದಿರದು. ದೇಶದಲ್ಲಿ ಸಂಪೂರ್ಣ ಶಾಂತತೆಯ ಸಾಮ್ರಾಜ್ಯವು ಅಖಂಡವಾಗಿ ಬೆಳಗಬೇಕೆಂಬೀ ತತ್ವವು ಈಗಲಾದರೂ ಹಳೆತಾಗಿದೆ. ಅದನ್ನು ತಿರುತಿರುಗಿ ಅಗಿಯುವುದರಿಂದ ಅದರಲ್ಲಿ ಯಾವ ನಾವೀನ್ಯವೂ ಬರಲಿಕ್ಕಿಲ್ಲ. ಆದರೆ ಇಂಥ ಆತಂಕಗಳನ್ನು ಮುಂದೊಡ್ಡುವುದರಿಂದ ಇವರಿಗೆ ಎಂದರೆ ಬಹುಸಂಖ್ಯಾಕರಿಗೆ ಕಾನೂನುಭಂಗದ ಪ್ರಯಾಸವು ಅವಶ್ಯವಿಲ್ಲ ಎಂದು ಸೂಚಿತವಾಗುವುದು. ಕಾನೂನುಭಂಗವೂ ಬೇಡ, ಕೌನ್ಸಿಲೂ ಬೇಡ. ಪಿಕೆಟಿಂಗೂ ಬೇಡ, ಚಳವಳವೂ ಬೇಡ, ಎಂದ ಮೇಲೆ ಇವರಿಗೆ ಬೇಕಾದದ್ದು ಯಾವದು? ಕ್ರಿಯಾಶೂನ್ಯರಾಗಿ ಕುಳಿತುಕೊಳ್ಳುವುದೆ ಇವರ ಧರ್ಮವೊ! ಹಾಗಿದ್ದದಾದರೆ ಹೊಸ ಪಕ್ಷದವರು ಈಗಿನ ಎರಡು ತಿಂಗಳನ್ನಾದರೂ, ಸಿವಿಲ್ ಡಿಸ್ ಒಬೀಡಿಯನ್ಸಿನ ನಿರೀಕ್ಷೆಯಿಂದ ಹಾಳುಮಾಡುವುದು ಎಂದೂ ಉಚಿತವಲ್ಲ. ಅವರು ತಮ್ಮ ಬುದ್ಧಿಯಂತೆ ಕೌನ್ಸಿಲ್ ಪ್ರವೇಶದ ಕಾರ್ಯಕ್ರಮವನ್ನು ಮಾಡಿ ದೇಶದ ಋಣದಿಂದ ಮುಕ್ತರಾಗಬೇಕು.

ಮೇಲಿನ ಎಲ್ಲ ಪ್ರತಿಪಾದನದ ಮೇಲಿಂದ ಐಕ್ಯವನ್ನು ಕಾದಿಡುವ ಭಾರವು ಬಹುಪಕ್ಷದವರ ತಲೆಯ ಮೇಲೆ ಹೇಗಿದೆ, ಆದರೆ ಆ ಬಹುಪಕ್ಷದವರು ಶಬ್ದೈಕ ಪ್ರಮಾಣೋಪಜೀವಿಗಳಾಗಿ ಈ ಐಕ್ಯವನ್ನು ಹೇಗೆ ನಿಲ್ಲಲು ಬಿಡಲಿಕ್ಕಿಲ್ಲವೆಂಬಿತ್ಯಾದಿ ವಿಷಯಗಳು ವಾಚಕವರ್ಗಕ್ಕೆ ವಿದಿತವಾದಾವು. ಬಹುಪಕ್ಷದ ಮುಖಂಡರು ಮೇಲಿನಂತೆ ಮಾತಾಡುವುದು ಮಾತ್ರವಲ್ಲ, ಆ ರೀತಿಯಿಂದ ಕಾನೂನುಭಂಗದ ಸುವರ್ಣ ಸಂಧಿಯನ್ನು ಹೇಗೆ ಕಳಕೊಳ್ಳುತ್ತಿದ್ದಾರೆಂಬುದು ಈಹೊತ್ತಿನ ಸ್ಫುಟವಿಚಾರಗಳಲ್ಲಿ ವಿಶದಪಡಿಸಿದ್ದೇವೆ. ಸೋದಾಹರಣವಾಗಿ ಜನತೆಯು ಮುಂದೆ ಬಂದ ಈ ದೌರ್ಬಲ್ಯವು ಮೊದಲಿನ ಮೊದರೇಟರರನ್ನು ಸಹ ನಾಚಿಸದೆ ಇರಲಿಕ್ಕಿಲ್ಲ. ಬಾಯಿಂದ ತಮ್ಮ ಪಕ್ಷವು ಸರಕಾರದ ವಕ್ರದೃಷ್ಟಿಗೆ ಪಾತ್ರವಾದ್ದು ಎಂದು ಕೊಚ್ಚಿಕೊಳ್ಳುತ್ತಿದ್ದು ಕಾರ್ಯದಲ್ಲಿ ಸರ್ವತ್ರ ಸಹಕಾರವನ್ನು ಮಾಡುವ ಈ ವಿತಂಡವಾದಿಗಳ ಕಾರ್ಯಾಕಾರ್ಯಗಳನ್ನು ಪರೀಕ್ಷಿಸಿದಷ್ಟಕ್ಕೆ ಅವು ಮಳಲಿನ ಬಾವಿಗಳು ತೋಡಿದಷ್ಟಕ್ಕೆ ಕುಸಿದು ಬೀಳುವಂತೆ ವಿದೀರ್ಣವಾಗಿ ಹೋಗುತ್ತವೆ. ಆದ್ದರಿಂದ ಈ ಪ್ರಸ್ತಾಪವನ್ನು ಇಲ್ಲಿಗೆ ಬಿಡುವದೆನೆ ಲೇಸು.

ಸಾರಾಂಶ, ಅಲಹಾಬಾದಿನಲ್ಲಿ ಉಭಯಪಕ್ಷಗಳಲ್ಲಿ ರಾಜಿಯಾಗಿದೆಯಾದರೂ, ಅದು ಕೊನೆತನಕ ನಿಲ್ಲುವುದು, ಬಹುಪಕ್ಷದವರಲ್ಲಿರುವ ಹುಳುಕಿನಿಂದ ಸಂಭವನೀಯವಾಗಿ ಕಾಣುವದಿಲ್ಲ.

ಸ್ಫುಟವಿಚಾರಗಳು.

೧ ನಮ್ಮ ಕರ್ನಾಟಕ ಪ್ರಾಂತದಲ್ಲಿ ಶುದ್ಧ ಅಸಹಕಾರಿತಾ ಪಕ್ಷದ ಕೆಲವು ಮುಖಂಡರು ಮಾಡಹತ್ತಿದ ಸಂಗತಿಗಳ ಮೇಲಿಂದ ಅವರು ಕೈಕೊಂಡ ಚಳವಳವು ಪ್ರಗತಿಯ ಪಥದಲ್ಲಿ ಇದೆಯೊ ಅಥವಾ ಪರಾಗತಿಯನ್ನು ಹೊಂದಹತ್ತಿದೆಯೊ ಎಂಬುದು ಯಾವುದೂ ಗೊತ್ತಾಗದು. ಇತ್ತಲಾಗಿ ಕೆಲವು ಸಮಯದ ಹಿಂದೆ ಬೆಂಗಳೂರಿನಲ್ಲಿ ಜೋಶಿ ಮತ್ತು ಮಜಲಿ ಎಂಬ ಮುಖಂಡರು ಉಪನ್ಯಾಸವನ್ನು ಕೊಡುವವರಿದ್ದರು. ಆದರೆ ಅಲ್ಲಿಯ ಮೆಜಿಸ್ಟ್ರೇಟರು ಪ್ರತಿಬಂಧಕ ಹುಕುಮನ್ನು ಹೊರಡಿಸಿದ ಕಾರಣ ಅವರು ಸಂಸ್ಥಾನದ ಸೀಮೆಯನ್ನು ಬಿಟ್ಟು ಕೆಂಟೋನ್‌ಮೆಂಟಿನಲ್ಲಿ ಬಂದು ಉಪನ್ಯಾಸವನ್ನು (ಅದಾದರೂ ರಾಜಕೀಯವಲ್ಲ.) ಕೊಟ್ಟರು! ಅನಂತರ ಅದೆ ಬೆಂಗಳೂರಿನಲ್ಲಿ ರಂಗನಾಥ ರಾಮಚಂದ್ರ ದಿವಾಕರ, ಮೊಝುಮ್ ಅಲ್ಲಿ ಮುದವೇದಕರ ಇವರ ಉಪನ್ಯಾಸಕ್ಕೆ ಪ್ರತಿಬಂಧ ಒದಗಿತು. ಇವರು ಕೆಂಟೋನ್‌ಮೆಂಟಿನಲ್ಲಿ ಸಹ ಸಭೆಕೂಡಿಸುವ ಗಲಾಟೆಗೆ ಬೀಳದೆ ಅಲ್ಲಿಂದ ನಿವೃತ್ತರಾದರು. ಉತ್ತರ ಕನ್ನಡ ಜಿಲ್ಲೆಯಲ್ಲೂ ಇದೆ ನಮೂನೆಯದೊಂದು ಉದಾಹರಣವು ಸಂಭವಿಸಿದೆ. ಕರ್ನಾಟಕ ಪ್ರಾಂತದಲ್ಲಿ ಸ್ವಯಂಸೇವಕರ ಪಥಕವನ್ನು ಒಟ್ಟುಕೂಡಿಸಲು ಸಂಚರಿಸುತ್ತಿದ್ದ ಎನ್. ಎಸ್. ಹರಡೀಕರ ಎಂಬವರಿಗೆ ಆ ಜಿಲ್ಲೆಯ ಫಸ್ಟ ಕ್ಲಾಸ್ ಮೆಜಿಸ್ಟ್ರೇಟರಾದ ಮಿ। ಕೊಯಿಮುತ್ತೂರ ಎಂಬವರು ಅವರ ಉಪನ್ಯಾಸಗಳನ್ನು ನಿಲ್ಲಿಸಲು ನೋಟೀಸನ್ನು ಕೊಟ್ಟರು. ಆಗ ಅವರು ಅದನ್ನು ಮನ್ನಿಸಿ ಉಪನ್ಯಾಸಗಳನ್ನು ನಿಲ್ಲಿಸಿರುವರು. ಉಡಿಪಿಯಲ್ಲಿ ಜಿಲ್ಲಾ ಪರಿಷತ್ತಿನ ಸಮಯದಲ್ಲಿ ನಾಟಕವನ್ನಾಡಲಿದ್ದ ನಟರಮೇಲೂ ಇದೆ ನಮೂನೆಯ ನೋಟೀಸುಗಳು ಜಾರಿಯಾಗಿವೆ ಎಂದು ಪ್ರಕಟವಾಗಿದೆ. ಈ ಎಲ್ಲಾ ಉದಾಹರಣೆಗಳನ್ನು ನೋಡುವಾಗ ಈ ಅಸಹಕಾರವೀರರು ಯಾವ ವಿಧದಿಂದ ಸರಕಾರದೊಡನೆ ಅಸಹಕಾರವನ್ನು ಮಾಡಹತ್ತಿದ್ದಾರೆಂಬುದು ಗೊತ್ತಾಗದು. ಉಡುಪಿಯ ಉದಾಹರಣವನ್ನು ಬಿಟ್ಟುಬಿಡೋಣ; ಉಳಿದ ಕಡೆಗಳಲ್ಲಿಯ ಮುಖಂಡರು ತಮ್ಮ ಮೇಲೆ ಅನಾಯಾಸವಾಗಿ ಬಂದಿರುವ ಕಾನೂನುಭಂಗದ ಸುಪ್ರಸಂಗವನ್ನು ಉಪಯೋಗಿಸದೆ ಇರುವುದನ್ನು ನೋಡುವಾಗ ಇದು ಚಳವಳದ ಪ್ರಗತಿಯೊ, ಪ್ರತಿಗತಿಯೊ! ಸುಕ್ಷಿತ ಮುಖಂಡರು ರಾಷ್ಟ್ರೀಯ ಸಭೆಯ ಠರಾವು ಬೇಕು, ಎಂದು ಹೇಳತೊಡಗಿದರೆ ಇದೊಂದು ಅಪಲಾಪವೆ ಎನ್ನಬೇಕಾದೀತು! ಸಾರ್ವತ್ರಿಕ ಕಾನೂನುಭಂಗಕ್ಕೆ ಪೂರ್ವಸಿದ್ಧತೆಯು ಬೇಕು, ಗಲಾಟೆಯಾಗದ ಹಾಗೆ ಎಲ್ಲರಿಗೆ ಸ್ವನಿಗ್ರಹದ ಶಿಕ್ಷಣವು ಬೇಕು. ಆದರೆ ಮುಖಂಡರೆ—ಎಲ್ಲವನ್ನು ತಿಳಿದ ಮುಖಂಡರೆ—ಸ್ವಂತ ಜವಾಬದಾರಿಕೆಯ ಮೇಲೆ ಸತ್ಯಾಗ್ರಹವನ್ನು ಎಲ್ಲಿ ಮಾಡಬಹುದೊ ಅಲ್ಲಿ ರಾಷ್ಟ್ರೀಯಸಭೆಯ ಕಟ್ಟು ಯಾಕೆ? ಇಂಥವರು ತಮ್ಮ ಉದಾಹರಣದಿಂದ ಸಾಮಾನ್ಯ ಜನರಿಗೆ ಉದಾತ್ತ ಉದಾರಣಗಳನ್ನು ಹಾಕಿಕೊಡಬೇಕು. ರಾಷ್ಟ್ರೀಯಸಭೆಯ ಆಜ್ಞಾಭಾವದ ನೆವವನ್ನು ಮುಂದಕ್ಕೆ ತರಬಾರದು. ಪುನಃ ಅದನ್ನೆ ತರುವುದೆಂಬುದರ ಅರ್ಥವು ಇವರ ಕರ್ತವ್ಯಚ್ಯುತಿಯನ್ನೆ ಸಮರ್ಥಿಸುತ್ತದೆ. ಇರಲಿ. ಇವರು ಕಾನೂನುಭಂಗವನ್ನು ಮಾಡಲೆಬೇಕು. ಎಂದು, ನಾವು ಹೇಳುವುದಿಲ್ಲ. ಅಡ್ಡಿಮಾಡುವ ಉದ್ದೇಶದಿಂದ ಕೌನ್ಸಿಲುಗಳಲ್ಲಿ ಪ್ರವೇಶಿಸುವುದು ಸಹ ಸಹಕಾರ್ಯವಾಗುತ್ತದೆಂದು ತತ್ವಜ್ಞಾನವನ್ನು ಚೆಲ್ಲುವವರು ಬರೆ ಒಂದು ಚಿಕ್ಕ ನೋಟಿಸಿಗೆ ತಲೆಬಗ್ಗಿಸಿ ಸರಕಾರದ ಕಾರಭಾರವನ್ನು ಸರಾಗವಾಗಿ ನಡಿಸಲು ಬಿಡುವ ಈ ನವೀನ ಮಹಾಶಯರ ಈ ಕೃತ್ಯವು ಮಾತ್ರ ಸಹಕಾರಿಯಾಯಿತ್ತಲ್ಲವೆ? ಇದೆ ನಮ್ಮ ಪ್ರಶ್ನೆಯಾಗಿದೆ.

೨. ಹಿಂದೂಸ್ಥಾನ ಸರಕಾರದ ಬರುವ ವರ್ಷದ ಅಂದಾಜು ಜಮಾ ಖರ್ಚಿನ ಪಟ್ಟಿಯು ವರಿಷ್ಠ ಕೌನ್ಸಿಲಿನ ಮುಂದೆ ಇಡಲ್ಪಟ್ಟಿದೆ. ಇದು ಹಲವು ಅಂಶಗಳಿಂದ ಸಂತೋಷಕರವೂ ಆಗಿದೆಯಾದರೆ ಇನ್ನು ಹಲವು ಅಂಶಗಳಲ್ಲಿ ವಿಷಾದಕರವಾಗಿದೆ. ಹಿಂದೂಸ್ಥಾನದ ರಾಜ್ಯಕಾರಭಾರದ ಪರಿಸ್ಥಿತಿಯು, ಲೋಕದಲ್ಲಿಯ ಯುದ್ಧ, ಸಾಮಾನುಗಳ ಕ್ರಯದ ಏರು, ಪರಸ್ಪರ ಸ್ಪರ್ಧೆ ಇತ್ಯಾದಿ ಕಾರಣಗಳಿಂದ ಬಹು ಖರ್ಚಿನದಾಗಿದೆ. ವರ್ಷಂಪ್ರತಿ ಹೊಸ ತೆರಿಗೆಯನ್ನು ಹೊರಿಸದೆ ರಾಜ್ಯಶಕಟವು ನಡಿಯದಂತಾಗಿದೆ. ಇತ್ಯಾದಿ ಯಥಾರ್ಥ ಸಂಗತಿಗಳನ್ನು ಕೋಶಮಂತ್ರಿಗಳು, ಸ್ಪಷ್ಟವಾಗಿ ತಮ್ಮ ಭಾಷಣದಲ್ಲಿ ಒಪ್ಪಿದ್ದಾರೆ. ಇದು ಕೆಲವು ಮಟ್ಟಿಗಾದರೂ ಸಮಾಧಾನದ ಮಾತಾಗಿದೆ. ಹಿಂದೂಸ್ಥಾನದ ಹೀನ ದೀನ ಸ್ಥಿತಿಯನ್ನು ಮನೋವೇಧಕವಾದ ಉಕ್ತಿಗಳಿಂದ ಚಿತ್ರಿಸಿದ್ದಲ್ಲಿ ಹಿಂದೂಸ್ಥಾನಕ್ಕೆ ಅದರಿಂದ ಕಾರ್ಯರೂಪವಾದ ಯಾವ ಲಾಭವೂ ದೊರಕುವುದಿಲ್ಲವೆಂಬುದು ನಿಜವಾದರೂ, ಹಿಂದೂಸ್ಥಾನದ ಎಮ್ಮೆಯಿಂದ ಬೇಕಷ್ಟು ಹಾಲನ್ನು ಹಿಂಡಬಹುದೆಂದು ತಿಳಕೊಂಡಿರುವವರ ಮತಕ್ಕಿಂತಲೂ ಮೇಲಿನದು ಎಷ್ಟೊ ಶ್ಲಾಘ್ಯವಲ್ಲವೆ? ಈ ದೃಷ್ಟಿಯಿಂದಲೆ ಕೋಶಮಂತ್ರಿಗಳ ಶಾಬ್ದಿಕ ಸಹಾನುಭೂತಿಯನ್ನು ಹಿಂದಿಗಳು ಅಭಿನಂದಿಸುತ್ತಿದ್ದಾರೆ. ಸರಕಾರದ ಕಾರಭಾರವು ಪ್ರತ್ಯಕ್ಷವಾಗಿ ದಿನೇ ದಿನೇ ದಿವಾಳಿಖೋರ ಸಾವಕಾರನ ವ್ಯಾಪಾರದಂತೆ ಹೊಂದ ನ್ಯೂನತೆಯುಳ್ಳದಾಗಿ ಉಬ್ಬಹತ್ತಿದೆ. ಇದಕ್ಕಾಗಿ ಹೊಸ ಹೊಸ ತೆರಿಗೆಗಳನ್ನು ಏರ್ಪಡಿಸುವ ಉಪಾಯವನ್ನು ಸರಕಾರವು ಕಲಿತಿದೆ. ೧೯೧೬ನೆಯ ಇಸವಿಯಿಂದ ೧೯೨೩ನೆಯ ಇಸವಿಯ ವರೆಗಿನ ೬-೭ ವರ್ಷಗಳ ಅವಧಿಯಲ್ಲಿ ಸರಕಾರವು ಬೇರೆ ಬೇರೆ ತೆರಿಗೆಗಳ ಆಕಾರದಿಂದ ೯೦ ಕೋಟಿ ರೂಪಾಯಿಗಿಂತಲೂ ಹೆಚ್ಚಿನ ದ್ರವ್ಯವನ್ನು ಶೋಷಿಸಿ, ಆ ಮೂಲಕ ಹಿಂದೂಸ್ಥಾನದ ನಿಕೃಷ್ಟಸ್ಥಿತಿಯನ್ನು ಮಾಡಿಬಿಟ್ಟಿದೆ. ಮೇಲೆ ತೋರಿಸಿದ ೬ ವರ್ಷದ ತೆರಿಗೆಯು ಮುಂಚಿನ ಕೋಶಮಂತ್ರಿಗಳಾದ ಸರ್ ಮೇಯರರು ರೂಪಿಸಿದ್ದು. ಆದು ಈಗಿನ ಕಾಲಸ್ಥಿತಿಯಲ್ಲಿ ಸಾಲದೆ ಬೇರೆ ಬೇರೆ ಪದಾರ್ಥಗಳ ಮೇಲೆ ಹೊಸ ತೆರಿಗೆಗಳು ಹೊರಿಸಲ್ಪಡುತ್ತಿದ್ದಾವೆ. ಇದಕ್ಕೆ ಉಪ್ಪಿನ ಮೇಲೆ ಹೊರಿಸಿದ ಹೊಸ ತೆರಿಗೆಯೆ ನವೀನವಾದ ದೃಷ್ಟಾಂತವಾಗಿದೆ.

೩. ಉಪ್ಪಿನ ಮೇಲೆ ಮಣವೊಂದಕ್ಕೆ ೨॥ ರೂಪಾಯಿ ತೆರಿಗೆಯು ಹಾಕಲ್ಪಟ್ಟಿದೆ. ಮೊದಲು ೧ರೂಪಾಯಿ ೪ ಆಣೆ ಇತ್ತು. ವಸ್ತುತಃ ಉಪ್ಪಿನ ಮೇಲೆ ತೆರಿಗೆಯನ್ನು ಏರಿಸುವುದು ಬಹು ನಿರ್ಘೃಣದ ಕೆಲಸವಾಗಿದೆ. ಉಪ್ಪು ಶ್ರೀಮಂತರಿಂದ ಬಡವರ ವರೆಗೆ ಎಲ್ಲರ ಉಪಯೋಗದಲ್ಲಿ ಉಂಟು. ಅಂಥಾ ಸರ್ವೋಪಯುಕ್ತವಾದ, ವಿಶೇಷತಃ ಬಡಜನರ ಉಪಯೋಗದಲ್ಲಿರುವ ಮತ್ತು ಅತ್ಯಾವಶ್ಯಕವಾದ ಪದಾರ್ಥದ ಮೇಲೆ ಇಮ್ಮಡಿ ತೆರಿಗೆಯನ್ನು ಹೊರಿಸುವುದು ಬಡಜನರ ರಕ್ತವನ್ನು ಹೀರಿದಂತಾಗುವುದು. ತೆರಿಗೆ ಹೆಚ್ಚು ಹಾಕಿದ್ದರಿಂದ ಜನರು ಉಪ್ಪು ತಿನ್ನುವುದನ್ನು ಸಹಜವಾಗಿಯೆ ಕಡಿಮೆ ಮಾಡಿಯಾರು. ಇದರಿಂದ ಮೊದಲೆ ಅನಾರೋಗ್ಯ ಸ್ಥಿತಿಯಲ್ಲಿರುವ ಜನರು ಇನ್ನಷ್ಟು ದುರ್ಬಲರಾದಾರು. ಉಪ್ಪಿನ ಉಪಯೋಗದ ವಿಷಯವಾಗಿ ಮತ್ತು ಅದರ ಮೇಲೆ ತೆರಿಗೆಯನ್ನು ಹಾಕಿದ ಕಾರಣ ಜನರಿಗೊದಗುವ ಹಲವು ವಿಧದ ರೋಗಗಳ ವಿಷಯವನ್ನು ಕುರಿತು ನಾವು ನಮ್ಮ ಮಾತುಗಳನ್ನು ಹೇಳುವುದಕ್ಕಿಂತ ಈ ವಿಷಯದಲ್ಲಿ ತಜ್ಞರಾದ ಡೊ। ಯು. ರಾಮರಾವ ಇವರ ಅಭಿಪ್ರಾಯವನ್ನೆ ವಾಚಕರು ಮನನಮಾಡುವುದು ಯುಕ್ತವು. ಅದನ್ನು ಬೇರೊಂದು ಕಡೆಯಲ್ಲಿ ವಾಚಕರ ಅವಗಾಹನೆಯ ಬಗ್ಗೆ ಪ್ರಕಟಿಸಿದ್ದೇವೆ. ಅದರ ಮೇಲಿಂದ ಈ ಹೊಸ ತೆರಿಗೆಯಿಂದುಂಟಾಗುವ ಅನರ್ಥಗಳ ಯಥಾರ್ಥ ಕಲ್ಪನೆಯು ಬಾರದೆ ಇರಲಿಕ್ಕಿಲ್ಲ.

ಮೇಲಿನ ಸಾಧನಗಳು ಸದ್ಯಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾದವುಗಳು ಎಂಬುವದನ್ನು ಈಗಲೇ ಹೇಳಲಿಕ್ಕಾಗದು. ಆದರೆ ಈ ಎರಡು ಸಾಧನಗಳಲ್ಲಿ ಮೊದಲು ವಿವರಿಸಿದ ಸಾಧನವ, ಎಂದರೆ, ಶಿಕ್ಷಣಸಂಸ್ಥೆಯ ಸ್ಥಾಪನೆಯ ವಿಷಯಕ್ಕೆ ಮಾತ್ರ ಅದು ಸಾಧ್ಯವಿದೆಯೆಂದು ನಾವು ಎದೆತಟ್ಟಿ ಹೇಳಬಲ್ಲೆವು. ಇಂಥ ಸಂಸ್ಥೆಯಲ್ಲಿ ಇಂತಿಷ್ಟು ಕಲಿತ ಹುಡುಗರನ್ನೇ ಸೇರಿಸಿಕೊಳ್ಳಬೇಕೆಂದು ನಿಯಮವನ್ನೇ ಹಾಕತಕ್ಕದ್ದಲ್ಲ. ಓದಲಿಕ್ಕೂ ಬರೆಯಲಿಕ್ಕೂ ಚೆನ್ನಾಗಿ ಬರುತ್ತಿದ್ದರೆ ಆಯಿತು. ಆದರೆ ಅವರು ೧೭ ವರ್ಷಕ್ಕೆ ಮಾತ್ರ ಮಿಕ್ಕಿದವರು ಇರತಕ್ಕದ್ದು. ಪ್ರಚಾರಕ ಕೆಲಸಕ್ಕೆ ಅವಶ್ಯವಿದ್ದ ಮಾಹಿತಿಯನ್ನು ಇವರಿಗೆ ಕಲಿಸತಕ್ಕದ್ದು. ಸಾಮಾನ್ಯವಾಗಿ ಕೆಳಗಿನ ವಿಷಯಗಳು ಅವಶ್ಯವಿರುವುವು.

ವಿಷಯಗಳು. (೧) ನಮ್ಮ ದೇಶದ ಆರ್ಥಿಕ ಅವನತಿ, ಅದನ್ನು ಸುಧಾರಿಸುವ ಉಪಾಯ. (೨) ಸ್ವರಾಜ್ಯವೆಂದರೇನು? (೩) ರೋಗಾದಿಗಳ ಕಾರಣ ಮತ್ತು ಅವುಗಳ ನಿವಾರಣೆ. (೪) ಜೋತಿಷ್ಯ ಶಾಸ್ತ್ರ. (೫) ಒಕ್ಕಲತನ. (೬) ಪ್ರಥಮ ಚಿಕಿತ್ಸಾ. ಸರಾಸರಿ ಒಂದು ವರ್ಷದ ವರೆಗೆ ಮೇಲಿನ ವಿಷಯಗಳ ಶಾಸ್ತ್ರಿಕ ಮತ್ತು ವ್ಯಾವಹಾರಿಕ ಜ್ಞಾನವನ್ನು ಮಾಡಿಕೊಟ್ಟು ಆ ಮೇಲೆ ಅವರನ್ನು ಹಳ್ಳಿಗಳಿಗೆ ಕಳುಹಿಸತಕ್ಕದ್ದು. ಶಿಕ್ಷಣವನ್ನು ಹೊಂದಿದನಂತರ ಹಳ್ಳಿಗಳಿಗೆ ಹೋಗಿ ಯಾವ ಪ್ರಕಾರ ಕೆಲಸವನ್ನು ಪ್ರಾರಂಭಿಸತಕ್ಕದ್ದೆಂಬುದರ ಬಗ್ಗೆ ವಿಚಾರಮಾಡುವ.

ರಾಷ್ಟ್ರಸೇವಕರ ವಾಸಸ್ಥಾನ. ರಾಷ್ಟ್ರ ಸೇವಕರು ಒಂದು ಗುಡಿಯಲ್ಲಿ ಆಗಲಿ, ಧರ್ಮಸಾಲೆಯಲ್ಲಿ ಆಗಲಿ ವಾಸಮಾಡಿ, ತಮ್ಮ ಕೈಯಿಂದಲೆ ಅಡಿಗೆಮಾಡಿಕೊಂಡು ಊಟಮಾಡತಕ್ಕದ್ದು.

ನಿತ್ಯ ಕ್ರಮವು.

(೧) ಪ್ರಾತಃಕಾಲ ೫ ಘಂಟೆಯಿಂದ ೮ ಘಂಟೆಯ ವರೆಗೆ ವ್ಯಾಯಮ, ಭಜನೆ, ಸ್ನಾನಾದಿಗಳನ್ನು ತೀರಿಸಿಕೊಳ್ಳುವದು. (೨) ೮ರಿಂದ ೧೧ರ ವರೆಗೆ ಊರಲ್ಲಿ ಭಿಕ್ಷೆಯನ್ನು ಬೇಡುವುದು. ಈ ಪ್ರಕಾರ ಕೂಡಿಸಿದ ಹಣವನ್ನು ಅದೇ ಹಳ್ಳಿಯಲ್ಲಿಯ ಬಡಬಗ್ಗರ ಹಿತಕ್ಕಾಗಿ ವೆಚ್ಚಮಾಡುವುದಕ್ಕೋಸ್ಕರ ಮಧ್ಯವರ್ತಿಸಭೆಯ ಕಡೆಗೆ ಕಳಿಸತಕ್ಕದ್ದು. (೩) ಊಟವಾದ ನಂತರ ತಮ್ಮ ವಿಚಾರದ ಹತ್ತಿರವೇ ಇರುವ ಬೈಲಿನಲ್ಲಿ ಯಾವುದಾದರೂ ಒಂದು ಗಿಡದ ಬುಡದಲ್ಲಿ ಕುಳಿತುಕೊಂಡು ಪುರಾಣ ಹೇಳುವುದು, ವಿವಿಧ ಸಂಗತಿಗಳ ವರ್ಣನೆಯನ್ನು ಮಾಡುವುದು, ವೃತ್ತಪತ್ರಗಳನ್ನು ಓದಿ ಹೇಳುವುದು ಮುಂತಾದ ಕಾರ್ಯಗಳಿಂದ ಹಳ್ಳಿಯ ಜನರ ಚಿತ್ತಾಕರ್ಷಣವನ್ನು ಮಾಡುವುದು. (೪) ಸಾಯಂಕಾಲ ಸಮಯದಲ್ಲಿ ಚಿಕ್ಕ ಹುಡುಗರನ್ನು ಕೂಡಿಸಿಕೊಂಡು ಕಥೆ ಹೇಳುವುದು, ರಾಷ್ಟ್ರೀಯ ಗೀತಗಳನ್ನು ಕಲಿಸುವುದು. ಇಲ್ಲವೆ ಆಟಗಳನ್ನು ಆಡಿಸುವುದು ಮುಂತಾದವುಗಳಿಂದ ಅವರ ಮನೋರಂಜನಮಾಡುವುದು. (೫) ಹಳ್ಳಿಗಳಲ್ಲಿಯ ಅಶಿಕ್ಷಿತರ ಸಲುವಾಗಿ ಹಗಲು ಅಥವಾ ರಾತ್ರಿ ಶಾಲೆಗಳನ್ನು ಸ್ಥಾಪಿಸುವುದು.

ಮತ್ತೊಂದು ಹೆಜ್ಜೆ ಮುಂದೆ. ರಾಷ್ಟ್ರಸೇವಕರು ತಾವು ತಮ್ಮ ಕೆಲಸಗಳನ್ನು ಮಾಡುವುದಕ್ಕೆ ಸಮರ್ಥರಾಗುವ ಹಾಗೆ ಅದೇ ಊರಲ್ಲಿ ಇತರ ತರುಣರನ್ನು ತಯಾರಿಸತಕ್ಕದ್ದು. ಅದೇ ಪ್ರಕಾರ ತಮ್ಮ ಹಳ್ಳಿಗಳಲ್ಲಿ ಸುವ್ಯವಸ್ಥಿತ ರೀತಿಯಿಂದ ಕೈಕೊಂಡ ಕೆಲಸವನ್ನು ನೆರವೇರಿಸುವುದರ ಸಲುವಾಗಿ ಗ್ರಾಮಸುಧಾರಣಾಮಂಡಲವೆಂಬ ಸಂಸ್ಥೆಯೊಂದನ್ನು ಸ್ಥಾಪಿಸತಕ್ಕದ್ದು ಖಾದೀಪ್ರಸಾರ ಮುಂತಾದ ಎಲ್ಲ ಕೆಲಸಗಳನ್ನು ಆ ಸಂಸ್ಥೆಯ ಕಾರ್ಯನಿರ್ವಾಹಕರ ಕಡೆಯಿಂದಲೇ ಮಾಡಿಸತಕ್ಕದ್ದು: ರಾಷ್ಟ್ರಸೇವಕರು ಇತರ ಯಾವುದೇ ಹಳ್ಳಿಗೆ ಹೋದರೆ ಅವರ ನಿಶ್ಚಿತ ಕೆಲಸಗಳನ್ನು ಅವರು ತಯಾರಿಸಿದ ತರುಣರು ನಿಲ್ಲಿಸಬಾರದು. ಆದರೆ ಕಾರ್ಯನಿರ್ವಾಹಕನು ಪ್ರಾಮಾಣಿಕನೂ ಯೋಗ್ಯನೂ ಇದ್ದು ದಿವಸಕ್ಕೆ ೨೪ ತಾಸು ಜನರ ಕಾರ್ಯಮಾಡಲಿಕ್ಕೆ ಸಿದ್ಧನಿರಬೇಕು. ಶಕ್ಯವಿದ್ದಲ್ಲಿ ಆ ಸ್ಥಾಯಿಕ ಕಾರ್ಯನಿರ್ವಾಹಕನ ಸಂಬಳವು ಕೂಡ ಮೇಲಿನ ಮಧ್ಯವರ್ತಿ ಮಂಡಲದಿಂದಲೇ ಬರುವ ವ್ಯವಸ್ಥೆಯಾಗಬೇಕು.

ಗ್ರಾಮಸ್ಥರ ಹಿತಕ್ಕಾಗಿ ಮಾಡತಕ್ಕ ಕಾರ್ಯಗಳು. (೧) ಹಳ್ಳಿಗಳಲ್ಲಿರುವ ಜನರಿಗೆ ಉಪದೇಶವನ್ನು ಮಾಡಿ ಅವರಲ್ಲಿದ್ದ ಪೂರ್ವಕಾಲದ ವೈಭವಗಳನ್ನು ಪುನರುಜ್ಜೀವಿಸಲಿಕ್ಕೆ ಪ್ರಯತ್ನಿಸುವುದು ರಾಷ್ಟ್ರಸೇವಕನ ಮುಖ್ಯಕರ್ತವ್ಯವಾಗಿದೆ. ಮುಂದಿನ ವಿಚಾರಮಾಡದೆ ಈಗ ಒಕ್ಕಲಿಗರು ತಮ್ಮಲ್ಲಿದ್ದ ಧಾನ್ಯವನ್ನೆಲ್ಲ ಹಣದಾಸೆಗಾಗಿ ಮಾರಿಬಿಡುತ್ತಾರೆ; ಆದರೆ ಹೀಗೆಮಾಡದೆ ಒಂದು ವರ್ಷ ಸಾಲುವಷ್ಟು ಧಾನ್ಯವನ್ನಾದರೂ ಸಂಗ್ರಹಿಸಿಟ್ಟು ಹೆಚ್ಚು ಉಳಿದದ್ದನ್ನು ಮಾರಿದರೆ ಬರಗಾಲದಲ್ಲಿ ಅವರಿಗೆ ಅನುಕೂಲವಾಗುತ್ತದೆ. (೨) ಒಕ್ಕಲಿಗರು ಬೆಳೆಯುವ ಹತ್ತಿಯಲ್ಲಿ ತಮ್ಮ ಮನೆಯ ಪೂರ್ತಿಯಾದರೂ ಸಾಲುವಂತೆ ಬಟ್ಟೆಗಳಿಗೋಸ್ಕರ ಹತ್ತಿಯನ್ನು ಇಟ್ಟು ಹೆಚ್ಚಿನದನ್ನು ಮಾರಬಹುದು. ಮತ್ತು ಬೇಸಿಗೆಯಲ್ಲಿ ನಾಲ್ಕು ತಿಂಗಳುಗಳ ವರೆಗೆ ಬೇಸಾಯದ ಕೆಲಸವಿಲ್ಲದಾಗ್ಗೆ ಅವರು ಗಂಡಸರೂ ಹೆಂಗಸರೂ ಕೂಡಿ ನೂತರೆ ವೇಳೆಯ ಸದುಪಯೋಗವಾಗಿ ಬಟ್ಟೆಯ ಸಲುವಾಗಿ ಕಳೆಯುವ ಎಷ್ಟೋ ರೂಪಾಯಿಗಳ ಉಳಿತಾಯವಾಗುವುದು.

ಇಂಥ ಸಾಮಾನ್ಯ ವಿಷಯಗಳ ಕಡೆಗೆ ಒಕ್ಕಲಿಗರ ಮನವನ್ನು ಒಲಿಸಿದರೆ ರಾಷ್ಟ್ರಸೇವಕರು ಎಷ್ಟೋ ಕೆಲಸಮಾಡಿದಂತಾಗುವುದು. ಅರ್ಥಾತ್ ಇವೆಲ್ಲ ಕೆಲಸಗಳನ್ನು ಒಮ್ಮೆಲೆ ಮಾಡಲಿಕ್ಕೆ ಅಸಾಧ್ಯವು. ಮತ್ತು ಇವು ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತವೆಂಬುದು ಆಯಾ ಹಳ್ಳಿಗಳ ಸ್ಥಿತಿಯನ್ನು ಅವಲಂಬಿಸಿರುತ್ತದೆ.

(೩) ಒಕ್ಕಲಿಗರನ್ನು ತನ್ನ ಕಡೆಗೆ ಎಳೆಕೊಳ್ಳುವ ಮತ್ತೊಂದು ಸುಲಭ ಉಪಾಯವೆಂದರೆ ಔಷಧವನ್ನು ಕೊಡುವುದು. ಮಧ್ಯವರ್ತಿ ಕಮ್ಮಿಟಿಯವರು ರಾಷ್ಟ್ರಸೇವಕರಿಗೆ ಔಷಧ ಮತ್ತು ಪ್ರಥಮಚಿಕಿತ್ಸೆಯ ಸಾಮಾನುಗಳನ್ನು ಪೂರೈಸಿಕೊಡತಕ್ಕದ್ದು. ಬೇನೆಯವರಿಗೆ ಈ ಔಷಧವನ್ನು ಕೊಡುತ್ತ ರಾಷ್ಟ್ರಸೇವಕರು ಸ್ವತಃ ಅವರಿಗೆ ಆರೈಕೆಯನ್ನು ಮಾಡಿದ್ದಾದರೆ ಹಳ್ಳಿಗಳಲ್ಲಿ ತೀವ್ರವೇ ಅವರು ಪ್ರಿಯರಾಗುತ್ತಾರೆ.

(೪) ಹಳ್ಳಿಗಳಲ್ಲಿಯ ಒಕ್ಕಲಿಗರು ಶಾಸ್ತ್ರೀಯ ದೃಷ್ಟಿಯಿಂದ ಕೃಷಿಕರ್ಮವನ್ನು ಮಾಡಲಾರರು. ಆದ್ದರಿಂದ ಈ ರಾಷ್ಟ್ರಸೇವಕರು ಸಂಭಾಷಣೆಯ ರೂಪದಿಂದಲೂ ತಿರುಗುವ ಚಿತ್ರಗಳನ್ನು ತೋರಿಸುವುದರಿಂದಲೂ ಒಕ್ಕಲತನದಲ್ಲಿ ಅವರಿಗೆ ಒಳ್ಳೆಯ ಉಪದೇಶಕರಾಗುತ್ತಾರೆ.

(೫) ಬರಬರುತ್ತಾ ನಾಲ್ಕು ಜನ ಯೋಗ್ಯಪುರುಷರನ್ನು ಕೂಡಿಕೊಂಡು ಗ್ರಾಮಪಂಚಾಯತಿಯನ್ನು ಸಹ ಸ್ಥಾಪಿಸುವುದರ ಕಡೆಗೆ ಲಕ್ಷ್ಯವಿರತಕ್ಕದ್ದು.

ಮೇಲೆ ಹೇಳಿದಂತೆ ನಡೆಯಬೇಕಾದರೆ ರಾಷ್ಟ್ರಸೇವಕರು ಒಳ್ಳೇ ಸಾಹಸಿಗಳೂ ದೃಢಮನಸ್ಸಿನವರೂ, ಸದಾಚರಣೆಯುಳ್ಳವರೂ ಇರಬೇಕಾಗುತ್ತದೆ. ಈ ಪ್ರಕಾರವಾಗಿ ನಮ್ಮ ಮುಂದಿನ ಕಾರ್ಯದ ಬಗ್ಗೆ ಸಾಧಾರಣ ಯೋಜನೆಯನ್ನು ಮೇಲೆ ಕೊಟ್ಟಿದ್ದೇವೆ. ಮತ್ತು ಅವನ್ನು ಅಮಲಿನಲ್ಲಿ ತರುವುದಕ್ಕಾಗಿ ನಾಳಿನ ವರ್ಷ ಪ್ರತಿಪದೆಯ ದಿವಸ (ಮಹಾತ್ಮರು ಸ್ವರಾಜ್ಯ ಯಾತ್ರೆಗೆ ತೆರಳಿ ಅಂದಿಗೆ ಪೂರ್ಣ ಒಂದು ವರ್ಷವಾಗುತ್ತದೆ) ಒಂದು ಪ್ರಬುದ್ಧ ವರ್ಗವನ್ನು ಹುಬ್ಬಳ್ಳಿಯಲ್ಲಿಯೇ ತೆರಿಯುವಂದ್ದೇವೆ. [ಆ ವರ್ಗದ ಅಭ್ಯಾಸಕ್ರಮವನ್ನು ಕುರಿತು ಕೊಟ್ಟ ಸೂಚನೆಯನ್ನು ಸ್ಥಳದ ಅಡಚಣೆಯಿಂದ ಪ್ರಕಟಿಸಲಿಲ್ಲ.]

ಶ್ರೀ ವೆಂಕಟರಮಣ ರಾಷ್ಟ್ರೀಯ ವಿದ್ಯಾ ಶಾಲೆ.

ಕುಂದಾಪುರ ತಾಲೂಕು ಬಿಜೂರು ಕೊಂಗ್ರೆಸ್ ಕಮ್ಮಿಟಿಯ ಕಡೆಯಿಂದ ನಾಯಕನಕಟ್ಟೆಯಲ್ಲಿ, ಮ. ರಾ. ಭಗವತಿ ಸುಬ್ರಾಯ ಶ್ಯಾನುಭಾಗರು ಉಚಿತವಾಗಿಕೊಟ್ಟ ಶಾಲಾ ಕಟ್ಟೋಣದ ಎದುರುಗಡೆ ತಳಿರು ತೋರಣ, ದೇಶಭಕ್ತರ ಭಾವಚಿತ್ರ ಮತ್ತು ನೀತಿವಾಕ್ಯಗಳಿಂದ ಅಲಂಕರಿಸಲ್ಪಟ್ಟ ಚಪ್ಪರದಲ್ಲಿ ತಾ. ೯—೩—೧೯೩೩ನೇ ದಿವಸ ಪೂರ್ವಾಹ್ನ ೧೧ ಘಂಟೆಯ ಸಮಯ ಶ್ರೀಯುತ ಕುಂದಾಪುರ ತಾಲೂಕು ಕೊಂಗ್ರೆಸ್ ಕಮ್ಮಿಟಿಯ 'ಅಧ್ಯಕ್ಷ ಶ್ರೀಯುತ ಬೈಂದೂರು ಮಹಾಬಲೇಶ್ವರ ಹೊಳ್ಳರ ಅಧ್ಯಕ್ಷತೆಯಿಂದ ಒಂದು ರಾಷ್ಟ್ರೀಯವಿದ್ಯಾಶಾಲೆಯನ್ನು ತೆರಿಯುವ ಸಮಾರಂಭವು ನಡೆಯಿತು. ಶೀರೂರು ಕೋಣಮಕ್ಕಿಯಲ್ಲಿ ಏಕಾಂತವಾದೊಂದು ಆಶ್ರಮದಲ್ಲಿ ಯೋಗನಿರತರಾಗಿದ್ದ ಶಾಂತಾನಂದ ಸಾಧುಗಳು ಈ ಸಮಾರಂಭಕ್ಕೆ ದಯಮಾಡಿಸಿದ್ದರು. ಅನೇಕ ಸನ್ಮಾನ್ಯ ಗೃಹಸ್ಥರೂ ಖಾದಿ ಪೋಷಾಕನ್ನು ಧರಿಸಿಕೊಂಡು ಬಂದಿದ್ದರು. ರಾಷ್ಟ್ರಗೀತ ವಿದ್ಯಾನಿಧಿಯ ವರದಿ, ಅಧ್ಯಕ್ಷರ ಹಾಗೂ ಸಾಧುವರ್ಯರ ಕಾಲೋಚಿತ ಭಾಷಣಗಳಾದನಂತರ, ಸಾಧು ಶಾಂತಾನಂದರವರ ಹಸ್ತದಿಂದ ಶಾಲಾ ಪ್ರವೇಶಮಾಡಲ್ಪಟ್ಟು ಶಾರದಾ ಪೂಜೆಯಾಗಿ ವಿದ್ಯಾರಂಭಕಾರ್ಯವು ಸಂಸ್ಕೃತ ಉಪಾಧ್ಯಾಯ ಮ. ರಾ. ಹಿರಿಯಣ್ಣ ಹೆಬ್ಬಾರರು, ಮುಖ್ಯೋಪಾಧ್ಯಾಯ ಮ. ರಾ. ಕೆ. ಮಾರುತಿರಾಯರು ಇವರಿಂದ ಆರಂಭವಾಗಿ ಅಧ್ಯಕ್ಷರ ಸಮಾಲೋಚನ ಭಾಷಣವಾದನಂತರ ಪುಷ್ಪತಾಂಬೂಲಾದಿ ಸತ್ಕಾರಗಳನ್ನು ಮಾಡಿದ ಬಳಿಕ ಅಂದಿನ ಬೆಳಿಗ್ಗಿನ ಸಭಾಕಾರ್ಯವು ಮುಕ್ತಾಯವಾಯಿತು. ಅತಿಥಿಗಳೆಲ್ಲರೂ ಮ. ರಾ. ಭಗವತಿ ಸುಬ್ರಾಯಶಾನುಭಾಗರ ಆತಿಥ್ಯದಿಂದ ಸತ್ಕೃತರಾದನಂತರ ಘಂಟೆ ೨ಕ್ಕೆ ತಾಲೂಕು ಕೊಂಗ್ರೆಸ್ ಕಮಿಟಿಯ ಮೀಟಿಂಗೂ ಅನಂತರ ಸಾಧು ಶಾಂತಾನಂದರ ಕೀರ್ತನೆಯೂ ಮ. ರಾ. ಶಿವರಾಮ ಕಾರಂತರ ಕಾಲೋಚಿತ ಭಾಷಣವೂ ಆಗಿ ಸಮಾರಂಭಕಾರ್ಯವು ಮುಕ್ತಾಯವಾಯಿತು.

ಈ ಪ್ರಾಂತದಲ್ಲಿ ಜನ್ಮತಾಳಿದ ವೇದವಿದ್ಯಾಭಿಮಾನಿಗಳೂ ವೇದಾಂತನಿಷ್ಠರೂ ಆದ ಕೀರ್ತಿಶೇಷ ಬೈಂದೂರು ವೆಂಕಟರಮಣ ಹೊಳ್ಳರ ಸ್ಮರಣಾರ್ಥವಾಗಿ ಈ ಶಾಲೆಗೆ ಅವರ ಹೆಸರಿನಿಂದ "ಶ್ರೀ ವೆಂಕಟರಮಣ ರಾಷ್ಟ್ರೀಯ ವಿದ್ಯಾ ಶಾಲೆ" ಎಂಬದಾಗಿ ನಾಮಧೇಯವನ್ನಿಡಬೇಕೆಂಬದಾಗಿ ಕಾರ್ಯದರ್ಶಿಗಳು ಸೂಚಿಸಿದ ಸೂಚನೆಯು ಸರ್ವಾನುಮತದಿಂದ ಅನುಮೋದಿತವಾಗಿ ಶಾಲೆಗೆ ಅದೇ ಹೆಸರಿಡಲ್ಪಟ್ಟಿತು

ಈ ದಿನ ಕೂಡಿದ ಸನ್ಮಾನ್ಯ ಗೃಹಸ್ಥರಲ್ಲಿ ಹಲವರು ಶಾಲೆಯ ಶ್ರೇಯೋಭಿಲಾಷೆಯ ಸ್ವಪ್ರೇರಣೆಯಿಂದ ರೂ. ೨೬೩—೦—೦ರ ದಾಗ್ದಾನವನ್ನೂ ಪ್ರತಿ ವರ್ಷಕ್ಕೂ ರೂ. ೫—೦—೦ರಂತೆ ಕೊಡುವ ದಾಗ್ದಾನವನ್ನೂ ಮಾಡಿರುವರು. ಹೀಗೆ ಉದಾರಿಗಳಾದ ಸದ್ಗೃಹಸ್ಥರು ಮಾಡಿದ ಸಹಾಯವನ್ನು ಆಭಾರಪೂರ್ವಕ ಶಾಲಾ ವ್ಯವಸ್ಥಾಪಕಮಂಡಲಿಯವರು ಸ್ವೀಕರಿಸಿರುವುದಲ್ಲದೆ ಸಾಧುಶಾಂತಾನಂದರು ಆಶೀರ್ವಾದ ರೂಪವಾಗಿ ಅನುಗ್ರಹಿಸಿದ ರೂ ೪—೦—೦ನ್ನು ಸ್ವೀಕರಿಸಿ ಸಕಲರಿಗೂ ಕೃತಜ್ಞತೆಯನ್ನರ್ಪಿಸುತ್ತಾರೆ. ಈ ಪ್ರಾಂತದ ಇತರ ಗೃಹಸ್ಥರೂ ಇದೇ ರೀತಿ ಉದಾರತೆಯಿಂದ ಪ್ರೋತ್ಸಾಹಿಸಬೇಕಾಗಿ ಸರ್ವರಿಗೂ ವಿನಂತಿ ಇದೆ. ನಮ್ಮ ಕುಂದಾಪುರ ತಾಲೂಕು ಕೊಂಗ್ರೆಸ್ ಕಮಿಟಿಯವರು ಉದಾರಭಾವದಿಂದ ಈ ಶಾಲೆಗೆ ೧೦ ಚರಕಗಳನ್ನೂ ಹತ್ತಿಗಳನ್ನೂ ಕೊಡುವ ನಿರ್ಣಯಮಾಡಿದ್ದಕ್ಕಾಗಿ ತಾಲೂಕು ಕೊಂಗ್ರೆಸ್ ಕಮಿಟಿಗೂ ಕೃತಜ್ಞತೆಯರ್ಪಿಸ್ಸುತ್ತದೆ

ತಾ. ೯—೩—'೩೩,
ಬಿಜೂರು.

ಬಿ. ನಾರಪ್ಪಯ್ಯ ಹೆಬ್ಬಾರ.
ಕಾರ್ಯದರ್ಶಿ ಕಾರ್ಯ ನಿರ್ವಾಹಕಮಂಡಳಿ ಶ್ರೀ ವೆಂಕಟರಮಣ ರಾಷ್ಟ್ರೀಯ ವಿದ್ಯಾಲಯ ನಾಯಕನ ಕಟ್ಟೆ.

ಉಡುಪಿ ಬೋರ್ಡ್ ಹೈಸ್ಕೂಲು.

ಈ ಶಾಲೆಯ ಪ್ರಥಮ ಶಾಲಾ ದಿನಾಚರಣೆಯು ತಾ. ೩ರಲ್ಲಿ ಉಡುಪಿ ಮುನ್ಸೀಫ್ ಮ. ರಾ. ವಿ. ಕುಂಞರಾಮನ್‌ನಾಯರ್ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಬಹು ವೈಭವದಿಂದ ನಡೆಯಿತು. ಮುಖ್ಯೋಪಾಧ್ಯಾಯರಾದ ಮ. ರಾ. ಶೀರಾಲೀ ಸುಬ್ಬರಾಯರು ಓದಿ ಹಂಚಿದ ಶಾಲಾ ವರದಿಯು ಶಾಲಾಭಿವೃದ್ಧಿಯನ್ನೂ ವಿದ್ಯಾ ಇಲಾಖೆಯವರೂ ಶಾಲೆಯನ್ನು ಸಂದರ್ಶಿಸಿದ ಇತರ ಮಾನ್ಯ ಗೃಹಸ್ಥರೂ ಶಿಕ್ಷಣದ ವಿಷಯ ಪಟ್ಟ ಸದಭಿಪ್ರಾಯವನ್ನೂ ಉತ್ತಮ ತರದ ಪರೀಕ್ಷಾಫಲಿತಾಂಶವನ್ನೂ ವ್ಯಕ್ತಪಡಿಸಿತು. ಅನಂತರ ವಿದ್ಯಾರ್ಥಿಗಳಿಗೆ ಇನಾಂ ಹಂಚೋಣಾಯಿತು. ಆ ಮೇಲೆ ರಾ| ಕೆ. ಶ್ರೀನಿವಾಸರಾಯರಿಂದ ರಚಿತವಾಗಿ ವಿದ್ಯಾರ್ಥಿಗಳಿಂದ ಅಭಿನಯಿಸಲ್ಪಟ್ಟ 'ಸುಶೀಲಾ ಸುಂದರ' ಎಂಬ ನವೀನ ಸಂಗೀತ ನಾಟಕವು ಮೂರು ಘಂಟೆಗಳ ವರೆಗೆ ಸಭಿಕರನ್ನು ಆನಂದ ಪರವಶರನ್ನಾಗಿ ಮಾಡಿತು. ನಾಟಕಾಂತ್ಯದಲ್ಲಿ ಅಧ್ಯಕ್ಷರು ಎರಡು ಮೂರು ನಾಟಕ ಮಂಡಲಿಯವರು ಉಡುಪಿಯನ್ನು ಸಂದರ್ಶಿಸಿ ಅನೇಕ ನಾಟಕಗಳನ್ನು ಆಡಿ ತೋರಿಸಿದ್ದರೂ ಈ ನಾಟಕವು ಅವುಗಳಿಗಿಂತ ಎಷ್ಟೋ ಮಿಗಿಲಾಗಿದೆ ಎಂಬ ತನ್ನ ಮಾತಿನಲ್ಲಿ ಒಂದಿಷ್ಟಾದರೂ ಅತಿಶಯೋಕ್ತಿಯಿಲ್ಲವೆಂದು ಹೇಳಿದ ಮಾತೂ ೩೦೦೦ಕ್ಕಿಂತಲೂ ಮಿಕ್ಕಿ ನೆರೆದಿದ್ದ ಸಭಿಕರ ಅಭಿಮತವೂ ಒಂದೇ ಆಗಿತ್ತು. ಇದೇ ನಾಟಕವನ್ನೇ ಇನ್ನೊಮ್ಮೆ ಆಡಿ ತೋರಿಸಬೇಕೆಂದೂ ಆಗ ತಮ್ಮ ಪ್ರೋತ್ಸಾಹದಿಂದ ಒಟ್ಟಾಗುವ ಹಣವನ್ನು 'ಸ್ಕೂಲ್‌ಡೇ ಫಂಡ್' ಎಂದು ಮಾಡಬೇಕೆಂದೂ ಸಭಿಕರು ಸೂಚಿಸಿರುವುದನ್ನು ಯೋಚಿಸಿದರೆ ಇಂಥ ಮನೋಹರವಾದ ಶಾಲಾದಿನಾಚರಣೆಯು ಪ್ರತಿ ವರ್ಷವೂ ಶಾಶ್ವತವಾಗಿ ನಡೆದುಬರಬೇಕೆಂದು ಸಭಿಕರ ಅಪೇಕ್ಷೆಯೆಂಬುದು ವ್ಯಕ್ತವಾಗುವುದು. ಇಂಥ ಅಭಿಪ್ರಾಯವು ಸಭಿಕರಲ್ಲುಂಟಾಗುವಂತೆ ಆನಂದದಾಯಕವಾದ ಶಾಲಾದಿನಾಚರಣೆಯನ್ನು ಮಾಡುವುದರಲ್ಲಿ ತುಂಬಾ ಶ್ರಮಪಟ್ಟ ಮುಖ್ಯೋಪಾಧ್ಯಾಯರಾದ ಮ. ರಾ. ರಾ. ಎನ್. ಸುಬ್ಬರಾಯರ ಮತ್ತು ಅವರೊಡನೆ ಭ್ರಾತೃಪ್ರೇಮದಿಂದ ಕಲಿತು ಸರ್ವ ವಿಧದಿಂದ ಸಲಹೆಯನ್ನು ಮಾಡಿದ ಸಹಾಯಕ ಉಪಾಧ್ಯಾಯರ ಪ್ರಯತ್ನಗಳು ತುಂಬಾ ಶ್ಲಾಘನೀಯವಾದುದು.

ಪ್ರೇಕ್ಷಕ.

ಕಣ್ಣಿಗೆ ವಿಶ್ರಾಂತಿಯನ್ನು ಕೊಡುವುದು ಹೇಗೆ?

ಓದುವುದು, ಬರೆಯುವುದು ಮೊದಲಾದವುಗಳಿಂದ ಕಣ್ಣಿಗೆ ಬೇಜಾರಾಗುವುದು. ಅಂಥಾ ಕಣ್ಣುಗಳಿಗೆ ವಿಶ್ರಾಂತಿಯನ್ನು ಕೊಡುವುದು ಆವಶ್ಯಕ. ಈ ವಿಶ್ರಾಂತಿಗಳು ಅನೇಕ ವಿಧವಾಗಿರುವುವು. ಕಣ್ಣನ್ನು ಮುಚ್ಚಿಕೊಂಡು, ಬೇಜಾರು ಬರುವ ವರೆಗೂ ಮಲಗಿ ನಿದ್ರೆಯನ್ನು ಹೋಗುವುದು, ತಣ್ಣೀರಿನಲ್ಲಿ ಕಣ್ಣನ್ನು ತೊಳೆಯುವುದು, ಹಸರು ಗಿಡಗಳೇ ಮೊದಲಾದವುಗಳನ್ನು ನೋಡುವುದು, ಚಿತ್ರವಿಚಿತ್ರವಾದ ರಂಗುಗಳನ್ನು ನೋಡುವುದು. ಇವುಗಳೆಲ್ಲಾ ಕಣ್ಣುಗಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಕೊಡತಕ್ಕ ವಿಧಾನಗಳು. ಸಮಸ್ತ ಇಂದ್ರಿಯಗಳಲ್ಲಿಯೂ ನೇತ್ರೇಂದ್ರಿಯವು ಅತ್ಯುತ್ತಮವಾದದ್ದು. ಈ ಇಂದ್ರಿಯರಕ್ಷಣೆಯನ್ನು ಮಾಡಿಕೊಳ್ಳುವುದು ಅತ್ಯಾವಶ್ಯಕ. ಈ ವಿಷಯಕ್ಕೆ ಎಲ್ಲರ ಗಮನವೂ ಕೊಡಲ್ಪಡುವುದೆಂದು ನಾವು ನಂಬಿ ಇದ್ದೇವೆ. (ಸಾ||(

ತ್ವರೆಮಾಡಿರಿ! ತ್ವರೆಮಾಡಿರಿ!!

ಮಾರಾಟಕ್ಕೆ ಸಿದ್ಧವಾಗಿದೆ.

ಪಂಡಿತ ಮಂಗಳೂರ ನಾರಾಯಣಾಚಾರ್ಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ,
ರುಧಿರೋದ್ಗಾರಿ ಸಂವತ್ಸರದ
ಪಂಚಾಂಗಗಳು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ವಿದೇಶ ವರ್ತಮಾನ.

ಬ್ರಿಟಿಷ ಪಾರ್ಲಿಮೆಂಟು:—ವಿವಾಹವಾಗುವುದಕ್ಕೆ ಮುಂಚೆ ಮಕ್ಕಳಾಗಿದ್ದು ಅನಂತರವಾದರೂ ಮಗುವಿನ ತಂದೆತಾಯಿಗಳು ಪರಸ್ಪರ ಮದುವೆಯಾದರೆ ಆ ಮಕ್ಕಳು ನ್ಯಾಯವಾದ ಹಕ್ಕುದಾರರೆಂಬುದನ್ನು ಸ್ಥಿರಪಡಿಸತಕ್ಕ ಕಾನೂನು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಎರಡನೇ ಸಲ ಎಲ್ಲರ ಸಮ್ಮತಿಯನ್ನು ಪಡೆದಿದೆ.

ಇಲಿ ಹೆಗ್ಗಣಗಳನ್ನು ನಾಶಮಾಡುವ ವಿಧಾನ:—ಇಲಿ ಹೆಗ್ಗಣಗಳನ್ನು ಪೂರ್ಣವಾಗಿ ನಾಶಮಾಡಲು ಅವುಗಳ ಬಿಲಗಳ ಬಾಯಿಗಳಿಗೆ 'ಕಾರಬನ್ ಡೈಸಲ್ಫೈಡ್' ಎಂಬ ದ್ರಾವಕವನ್ನು ಅರ್ಧ ಚಮಚದಷ್ಟು ಸುರಿದು ಅದೆಲ್ಲವೂ ಆವಿಯಾದ ಮೇಲೆ ಬೆಂಕಿತೋರಿಸಿದರೆ ಆವಿಯ ಮತ್ತು ಗಾಳಿಯ ಮಿಶ್ರವು ಸಿಡಿದು ಬಿಲವನ್ನು ವಿಷವಾಯುವಿನಿಂದ ತುಂಬಿಸುವುದು. ಈ ವಿಷವಾಯುವಿನಲ್ಲಿ ಇಲಿ ಹೆಗ್ಗಣಗಳು ಒಂದಾದರೂ ಉಳಿಯದಂತೆ ನಾಶವಾಗುವವೆಂದು ಡಚ್ ವ್ಯವಸಾಯ ಶೋಧನೆಯ ಇಲಾಖಾ ಮೆಂಬರರೊಬ್ಬರು ತಿಳಿಸುತ್ತಾರೆ. (ಒಕ್ಕಲಿಗರ ಪತ್ರಿಕೆ.)

ಒಡ್ವಾಯರರು:—ಒಡ್ವಾಯರ್ ಮತ್ತು ಸರ್ ಶಂಕರನ್ ನಾಯರ ಇವರಲ್ಲಿ ನಡೆದ ವ್ಯವಹರಣೆಯು ಮುಂದಿನ ವರುಷದ ವರೆಗೆ ನಿಲ್ಲಿಸಲ್ಪಟ್ಟಿದೆ.

ಕೆನೆಯಾದ ಪರಿಸ್ಥಿತಿ:—ಕೆನೆಯಾದಲ್ಲಿ ಹಿಂದೀಜನರ ಪರಿಸ್ಥಿತಿಯು ಶೋಚನೀಯವಾಗಿದೆ. 'ಡೆಮಾಕ್ರೆಟ್' ಎಂಬ ಪತ್ರಿಕೆಯ ಸಂಪಾದಕರಾದ ಶ್ರೀಯುತ ಸೀತಾರಾಮಾಚಾರ್ಯ ಇವರನ್ನು ಹದ್ದುಪಾರುಮಾಡುವ ಹುಕುಂ ಆಗಿದೆ.

ಹೊಸ ತರದ ಒಪರೇಶನ್:—ವಿಯೆನ್ನಾ ಯುನಿವರ್ಸಿಟಿಗೆ ಸೇರಿದ ಪ್ರೊಫೆಸರ್ ಸ್ಟೇನಾಕರರು ಮುದುಕರಿಗೆ ಪ್ರಾಯಬರತಕ್ಕ ಒಂದು ವಿಧವಾದ ಒಪರೇಶನ್ ಮಾಡುತ್ತಾರೆ. ಇದು ಮನುಷ್ಯೇತರ ಪ್ರಾಣಿಗಳಲ್ಲಿ ಸಂಪೂರ್ಣವಾಗಿ ಜಾರಿಗೆಬಂದಿರುತ್ತದೆ. ಮನುಷ್ಯರಲ್ಲಿಯೂ ಜಾರಿಗೆ ತರುವ ಪ್ರಯತ್ನವನ್ನು ಮಾಡುತ್ತಲಿರುವರು.

ಹಿಂದೂ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ:—ಜಿನಿವಾ (ಸ್ವೀಜರ್ಲಂಡ)ದಲ್ಲಿ ಜಗತ್ತಿಗೆ ಹೆಸರಾಗಿರುವ ಗಡಿಯಾರ ಮಾಡಲು ಕಲಿಸುವ ಶಾಲೆ ಇದ್ದು ಅದನ್ನು ಅಲ್ಲಿಯ ಮುನ್ಸಿಪಾಲಿಟಿಯವರು ನಡಿಸುತ್ತಿದ್ದಾರೆ. ಈ ಶಾಲೆಯಲ್ಲಿ ಆ ವಿದ್ಯೆಯನ್ನು ಕಲಿಯಲಿಕ್ಕೆ ಚೀನಾ, ಜಪಾನ್ ಮತ್ತು ಇತರ ದೂರ ದೂರ ದೇಶಗಳಿಂದ ವಿದ್ಯಾರ್ಥಿಗಳು ಬಂದಿದ್ದು ಹಿಂದುಸ್ಥಾನದವರೇ ಇಲ್ಲದ್ದರಿಂದ ಹಿಂದೂ ವಿದ್ಯಾರ್ಥಿಗಳನ್ನು ಆದರದಿಂದ ತಕ್ಕೊಳ್ಳಲು ಈ ಶಾಲೆಯವರು ಸಿದ್ಧರಿರುವರಂತೆ.

ಜರ್ಮನಿ:—ಈ ದೇಶದ ಜನರು ಜೀವನ ನಡಿಸುವುದು ಬಹಳ ಕಷ್ಟವಾಗಿದೆ. ಕೂಲಿಗಳ ದಿನನಿತ್ಯದ ಖರ್ಚು ಸೇಕಡಾ ೨೦೦ರಂತೆ ಏರಿದೆ. ಕೂಲಿ ಮತ್ತು ಬತ್ತೆಯನ್ನು ತಿಂಗಳಿಗೆ ೧೫೦,೦೦೦ ಮಾರ್ಕಿನಿಂದ ೩೫೦,೦೦೦ಕ್ಕೆ ಏರಿಸಿದೆ. ಜನರು ಹೆಚ್ಚಾಗಿ ಕಾಯಿಪಲ್ಯ, ಬೆಣ್ಣೆ ಮತ್ತು ಬ್ರೆಡ್ ಈ ಆಹಾರವನ್ನೇ ಉಪಯೋಗಿಸುತ್ತಿದ್ದಾರೆ. ಹಾಲಿನ ತುಟ್ಟಿಯು ಉಂಟಾಗಿದೆ. ಹಾಲು ದೊರಕುವುದೇ ಕಷ್ಟ. ಸಿಕ್ಕಿದರೂ ರಾತಲಿಗೆ ೪೫೦೦ ಮಾರ್ಕಿನಂತೆ ಕ್ರಯ. ಬೂಟ್ಸುಗಳ ಕ್ರಯವೂ ವಿಶೇಷವಾಗಿ ಏರಿದೆ.

ಮಾದಕ ಪದಾರ್ಥಗಳ ಮಾರಾಟಕ್ಕೆ ನಿರ್ಬಂಧ:—ಇಂಗ್ಲೆಂಡಿನಲ್ಲಿರುವ ಮಾದಕ ಪದಾರ್ಥಗಳನ್ನು ಮಾರಾಟಮಾಡುವ ಸ್ಥಳಗಳಲ್ಲಿ ಹದಿನೆಂಟು ವರುಷಕ್ಕೆ ಕಡಿಮೆ ಪ್ರಾಯದವರಿಗೆ ಮಾದಕ ಪದಾರ್ಥಗಳನ್ನು ವಿಕ್ರಯಿಸಕೂಡದೆಂಬ ಕಾನೂನು ಹೌಸ್ ಒಫ್ ಕೊಮನ್ಸಿನಲ್ಲಿ ಎರಡನೇ ಆವರ್ತಿ ಪ್ರಚಂಡ ಬಹುಮತದಿಂದ ಪಾಸಾಗಿದೆ

ಒಳದೇಶ ವರ್ತಮಾನ.

ಬರ್ಮಾದಲ್ಲಿ ಉಪ್ಪಿನ ಮೇಲಿನ ಕರ:—ಬರ್ಮಾ ರಾಜ್ಯದಲ್ಲಿ ತಯಾರಾಗುವ ಅಥವಾ ಅಲ್ಲಿಗೆ ಆಮದಾಗುವ ಉಪ್ಪಿನ ಮೇಲೆ ಪ್ರತಿ ನೂರು ವೀಸಕ್ಕೂ ಹತ್ತು ರೂಪಾಯಿ ಹದಿನೈದು ಆಣೆಯಂತೆ ತೆರಿಗೆಯನ್ನು ದಾಖಲುಮಾಡಿರುವುದಾಗಿ ಅಲ್ಲಿನ ಸರಕಾರಿ ಗೆಜೆಟಿನಲ್ಲಿ ಪ್ರಕಟವಾಗಿದೆ.

ಮುಂಬಯಿಯಲ್ಲಿ ರೈಲ್ವೆ ಮಾರ್ಗಗಳು:—ಮುಂಬಯಿ ನಗರದಲ್ಲಿ ಬೀದಿಗಳಲ್ಲಿ ರೈಲ್ವೆ ಮಾರ್ಗಗಳನ್ನು ವಿಸ್ತರಿಸುವುದಕ್ಕೆ ತೊಂದರೆಯಾಗಿರುವುದರಿಂದ ಭೂಮಿಯೊಳಗೆ ಸುರಂಗಗಳನ್ನು ಕೊರೆದು ರೈಲ್ವೆ ಮಾರ್ಗಗಳನ್ನು ಹಾಕಬಹುದೆಂದು ಸಿಟಿ ಕೊರಪೊರೇಶನವರು ತಮ್ಮ ಒಪ್ಪಿಗೆಯನ್ನು ಕೊಟ್ಟಿರುತ್ತಾರೆ.

ಸ್ವಯಂಸೇವಕ ವಿದ್ಯಾರ್ಥಿಗಳು:—ಭರತಖಂಡದ ಅನೇಕ ಭಾಗಗಳಲ್ಲಿ ತೀರ್ಥಸ್ಥಾನಗಳಿಗೂ ಜಾತ್ರೆಗಳಿಗೂ ಎಲ್ಲೆಲ್ಲಿ ವಿಶೇಷ ಸ್ತ್ರೀಪುರುಷರು ಸೇರುವರೋ ಅಲ್ಲಿ ಕಳವು ಮೊದಲಾದ ಅಪರಾಧಗಳಿಗೆ ಅವಕಾಶವಾಗದಂತೆ ಸ್ವಯಂಸೇವಕರಾದ ವಿದ್ಯಾರ್ಥಿಗಳು ಉಚಿತವಾಗಿ ಸಹಾಯ ಮಾಡುವುದಕ್ಕೆ ಹೊರಡುತ್ತಲಿದ್ದಾರೆ.

ಕಾಡುಮೃಗಗಳ ಹಾವಳಿ:—ಬ್ರಿಟಿಷ ಇಂಡಿಯದಲ್ಲಿ ಕಳೆದ ವರುಷ ಕಾಡುಮೃಗಗಳಿಂದ ಸತ್ತವರ ಸಂಖ್ಯೆಯು ೩೩೬೦. ಈ ಪೈಕಿ ಹುಲಿಗಳಿಂದ ಸತ್ತವರು ೧೪೫೫, ಚಿರತೆಗಳಿಂದ ಸತ್ತವರು ೫೬೦, ತೋಳಗಳಿಂದ ಸತ್ತವರು ೫೫೬, ಕರಡಿಗಳಿಂದ ಸತ್ತವರು ೬೯, ಆನೆಗಳಿಂದ ಸತ್ತವರು ೭೦, ಹಾವುಗಳಿಂದ ಕಡಿದು ಸತ್ತವರು ೧೯೩೯೬. ಈ ವರುಷ ಹಾವುಗಳಿಂದ ಸತ್ತವರ ಸಂಖ್ಯೆಯು ಕಡಿಮೆಯಾಗುತ್ತಲಿರುವುದು.

ಹರತಾಳ:—ಮಹಾತ್ಮಾ ಗಾಂಧಿಯವರನ್ನು ಬಂಧಿಸಿ ಇದೇ ತಾರೀಕು ೧೮ಕ್ಕೆ ಒಂದು ವರುಷವಾಗುವುದರಿಂದ ಈ ದಿನಾಚರಣೆಯನ್ನು ಆಚರಿಸಲು ದೇಶದ ಎಲ್ಲಾ ಕಡೆಗಳಲ್ಲಿ ಸಿದ್ಧತೆಗಳು ನಡೆಯುತ್ತಿವೆ.

ಶ್ರೀಯುತ ಗಣೇಶ ಶಂಕರ ವಿದ್ಯಾರ್ಥಿ:—ಪ್ರತಾಪ ಪತ್ರಿಕೆಯ ಮಾಜಿ ಸಂಪಾದಕರಾದ ಶ್ರೀಯುತ ಗಣೇಶ ಶಂಕರ ವಿದ್ಯಾರ್ಥಿ ಎಂಬವರನ್ನು [illegible] ಬಗ್ಗೆ ಕಳೆದವಾರ ಬುಧವಾರ ಮತ್ತು ಗುರುವಾರ ಕೋನ್‌ಪುರದಲ್ಲಿ ಹರತಾಳವು ಆಚರಿಸಲಾಯಿತು.

ಮುಂಬಯಿ ಪಬ್ಲಿಸಿಟಿ ಬರೋ:—ಮುಂಬಯಿ ನ್ಯಾಯವಿಧಾಯಕ ಸಭೆಯಲ್ಲಿ ಅಲ್ಲಿಯ ಪಬ್ಲಿಸಿಟಿ ಬರೋವನ್ನು ತೆಗೆದುಬಿಡುವ ವಿಷಯದಲ್ಲಿ ಬಹಳ ಚರ್ಚೆನಡೆದು ಕೊನೆಗೆ ಅದನ್ನು ತೆಗೆದುಬಿಡಬಾರದಾಗಿ ನಿರ್ಣಯಿಸಿದೆ.

ಅಂಗೋರಾ ಫಂಡ್:—'ನೆದರ್ ಲೆಂಡ್ ಟ್ರೇಡಿಂಗ್ ಸೊಸೈಟಿಯ ಮೂಲಕ ಸೆಂಟ್ರಲ್ ಖಿಲಾಫತ್ ಕಮ್ಮಿಟಿಯವರು ಮುಸ್ತಾಫಾ ಕೆಮಾಲ್ ಪಾಶಾರವರಿಗೆ ರೂ ೨೧ಲಕ್ಷ೧೦ಸಾವಿರವನ್ನು ಕಳುಹಿಸಿಕೊಟ್ಟಿದ್ದಾರೆ.

ದೇಶಭಕ್ತ ಕೊಂಡ ವೆಂಕಟಪ್ಪಯ್ಯ:—ಇತ್ತಲಾಗಿ ಜೈಲಿನಿಂದ ಬಿಡುಗಡೆಯಾದ ಆಂಧ್ರ ಪ್ರಾಂತದ ಸುಪ್ರಸಿದ್ಧ ದೇಶಭಕ್ತ ಕೊಂಡ ವೆಂಕಟಪ್ಪಯ್ಯನವರು ರಾಷ್ಟ್ರೀಯಕಾರ್ಯ ಜಾಗ್ರತಿಯನ್ನು ಉಂಟುಮಾಡುವುದಕ್ಕಾಗಿ ಆಂಧ್ರ ಪ್ರಾಂತದಲ್ಲೆಲ್ಲಾ ಸಂಚರಿಸುತ್ತಿದ್ದಾರೆ.

ಬಿಹಾರ ಮಂತ್ರಿಗಳು:—ಬಿಹಾರಪ್ರಾಂತದ ಲೋಕಲ್ ಸೆಲ್ಫ ಗವರ್ನಮೆಂಟಿನ ಮಂತ್ರಿಗಳಾದ ಮಿ| ಯಂ. ಯಸ್. ದಾಸರೆಂಬವರು ತಮ್ಮ ಪದವಿಗೆ ರಾಜಿನಾಮೆಯನ್ನು ಕೊಟ್ಟಿರುವರು. ಲೋಕಲ್ ಸೆಲ್ಫ ಗವರ್ನಮೆಂಟಿನ ಸುಧಾರಣೆಯ ರಾಜ್ಯಭಾರಕ್ರಮವು ಯಶಸ್ವಿಯಾಗಿ ನಡಿಯಬೇಕಾದರೆ ಲೋಕಲ್ ಸೆಲ್ಫ ಗವರ್ನಮೆಂಟಿನ ಮಂತ್ರಿಗಳಿಗೆ ಸಂಬಳವಿರಕೂಡದು, ತನಗೆ ವಕಾಲತು ವೃತ್ತಿಯನ್ನು ನಡಿಸಿ ತನ್ನ ಜೀವನ ಖರ್ಚನ್ನು ಒದಗಿಸಿಕೊಳ್ಳಲು ಬಿಟ್ಟರೆ ತಾನು ಈ ಮಂತ್ರಿಪದವಿಯನ್ನು ಸಂಬಳ ಪಡಕೊಳ್ಳದೆ ಗೌರವಾರ್ಥವಾಗಿ ನಡಿಸಲು ಸಿದ್ಧವಿರುವುದಾಗಿ ತಿಳಿಸಿದರು. ಆದರೆ ಗವರ್ನರರಿಗೆ ಮಿ| ದಾಸರಿಗೆ ವಕಾಲತುವೃತ್ತಿಯನ್ನು ಮಾಡಿ ಈ ಮಂತ್ರಿ ಪದವಿಯನ್ನು ನಡಿಸಲು ಬಿಡುವುದಕ್ಕೆ ಸಮ್ಮತಿ ಇಲ್ಲದೇ ಇರುವುದರಿಂದ ಮಿ| ದಾಸರು ತಮ್ಮ ಪದವಿಗೆ ರಾಜಿನಾಮೆಯನ್ನು ಕೊಡಲು ಕಾರಣವಾಗಿದೆ. ಇವರ ಹುದ್ದೆಯ ಚಾರ್ಜನ್ನು ತತ್ಕಾಲಕ್ಕೆ ಖಾನ್ ಬಹದ್ದೂರ್ ಪಖರುದ್ದೀನ್‌ರವರು ನೋಡುವರು.

ಲಾಹೋರಿನಲ್ಲಿ ಅತಿವೃಷ್ಟಿ:—ಕಳೆದ ತಾರೀಕು ೭ರಲ್ಲಿ ಲಾಹೋರ್ ಮತ್ತು ಅದರ ನೆರೆಜಿಲ್ಲೆಗಳಲ್ಲಿ ಬಿರುಗಾಳಿಯು ಬಂದು ಅತಿವೃಷ್ಟಿಯು ಸುರಿಯಿತು.

ದುವ್ವೇರಿ ಸುಬ್ಬಮ್ಮಗಾರು:—ಕಳೆದ ಒಂದು ವರುಷದಿಂದ ತುರಂಗವಾಸವನ್ನು ಅನುಭವಿಸಿಕೊಂಡಿದ್ದ ಆಂಧ್ರ ದೇಶದ ಸುಪ್ರಸಿದ್ಧ ಮಹಿಳೆಯಾದ ದುವ್ವೇರಿ ಸುಬ್ಬಮ್ಮಗಾರು ಇವರನ್ನು ಕಳೆದ ತಾ. ೭ನೇ ಪ್ರಾತಃಕಾಲ ೧೦ ಘಂಟೆಗೆ ರಾಜಮಹೇಂದ್ರಿ ಜೈಲಿನಿಂದ ಬಿಡುಗಡೆಮಾಡಿರುತ್ತಾರೆ. ಇವರಿಗೆ ರಾಜಮಹೇಂದ್ರಿಯಲ್ಲೂ ಕೊಕನಾಡದಲ್ಲೂ ಒಳ್ಳೇ ಸ್ವಾಗತವು ನಡಿಯಿತು.

ಓಲ್ ಇಂಡಿಯಾ ಸಾಹಿತ್ಯ ಸಮ್ಮೇಲನ:—ಈ ತಿಂಗಳ ತಾರೀಕು ೩೦ ಮತ್ತು ೩೧ರಲ್ಲಿ ಕೋನ್‌ಪುರದಲ್ಲಿ ಓಲ್-ಇಂಡಿಯಾ ಸಾಹಿತ್ಯ ಸಮ್ಮೇಲನದ ಹದಿಮೂರನೇ ವರುಷದ ಅಧಿವೇಶನವು ಶ್ರೀಯುತ ಪುರುಶೋತ್ತಮ ಟಂಡೋನ್ ಇವರ ಅಧ್ಯಕ್ಷತೆಯಲ್ಲಿ ನಡಿಯುವುದು.

ಶ್ರೀಮಂತ ಆಗಾಖಾನರು:—ಇವರು ಕಳೆದ ತಾ. ೧೩ರಲ್ಲಿ ಮದರಾಸ ಪಟ್ಟಣಕ್ಕೆ ತಲ್ಪಿದರು. ಇವರ ಸ್ವಾಗತ ಸತ್ಕಾರಗಳು ಯೋಗ್ಯವಾಗಿ ನಡೆದವು.

ಕೊಚ್ಚಿ ಸಂಸ್ಥಾನದ ಮಂತ್ರಿಗಳು:—ಮಿ| ಪಿ. ನಾರಾಯಣ ಮೇನನರು ಸದ್ಯದಲ್ಲಿ ತಮ್ಮ ಮಂತ್ರಿ ಪದವಿಗೆ ರಾಜಿನಾಮೆಯನ್ನು ಕೊಡುವರೆಂಬ ವಾರ್ತೆಯು ಇದೆ.

ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ಮೀಟಿಂಗು:—ಬರುವ ಎಪ್ರಿಲ್ ತಾರೀಕು ೧೬ನೆಯ ದಿನ ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ಮೀಟಿಂಗು ಲಕ್ನೋದಲ್ಲಿ ಸೇರುವುದು.

ಓಲ್-ಇಂಡಿಯಾ ಖಾದಿ ಪ್ರದರ್ಶನ:—ಅಖಿಲ ಭರತಖಂಡದ ಖಾದಿಯ ಪ್ರದರ್ಶನವು ಡಾಕ್ಟರ್ ಪಿ. ಸಿ. ರೇಯವರಿಂದ ಕಳೆದ ತಾರೀಕು ೧೧ರಲ್ಲಿ ಮುಂಬಯಿಯಲ್ಲಿ ತೆರಿಯಲಾಯಿತು. ಈ ಪ್ರದರ್ಶನಮುಹೂರ್ತ ಕಾಲದಲ್ಲಿ ಶ್ರೀಯುತ ರೇಯವರು ಖಾದಿಯ ಪ್ರಸಾರವು ಇಡೀ ಭರತಖಂಡದಲ್ಲಿ ಆಗುವುದು ಏಕೆ ಆಗತ್ಯವಿದೆ ಎಂಬುದನ್ನು ಕುರಿತು ಒಂದು ಭಾಷಣವನ್ನು ಮಾಡಿದರು.

ಚೌರಿಚೂರಾ ಖಟ್ಲೆಯ ಅಪೀಲು:—ಈ ಖಟ್ಲೆಯ ಅಪೀಲಿನ ತನಖೆಯು ನಡಿಯುತ್ತಿದೆ. ಈ ಖಟ್ಲೆಯಲ್ಲಿ ಪಂಡಿತ ಮದನಮೋಹನ ಮಾಲವೀಯರು ವ್ಯವಹರಿಸುತ್ತಿದ್ದಾರೆ.

ಅಹಮ್ಮದಾಬಾದ ಮಿಲ್ಲುಗಳು:—ಹತ್ತಿಯ ಗಿರಣಿಗಳಲ್ಲಿ ಮಜೂರಿಯ ದರವನ್ನು ಕಡಿಮೆಮಾಡಬೇಕೆಂದು ಗಿರಣಿಯ ಸಂಘದವರು ನಿರ್ಧರಿಸಿರುವುದರಿಂದ ಗಿರಣಿಗಳ ಕೂಲಿಗಳು ಮುಷ್ಕರಹಿಡಿಯುವರೆಂದು ತೋರುತ್ತದೆ. ಸುಮಾರು ೩೦ ಮಿಲ್ಲುಗಳ ಮ್ಯಾಲೀಕರಲ್ಲಿ ೮ ಮಂದಿಗಳು ಮಾತ್ರ ಕೂಲಿಯದರವನ್ನು ಕಡಿಮೆಮಾಡಲು ಪ್ರತಿಕೂಲರಾಗಿದ್ದಾರೆ.

ಅಹಮ್ಮದಾಬಾದ ಜೈಲಿನಲ್ಲಿರುವ ರಾಜಕೀಯ ಕೈದಿಗಳು:—ಈ ಜೈಲಿನಲ್ಲಿರುವ ರಾಜಕೀಯ ಕೈದಿಗಳೆಲ್ಲರೂ ಆಹಾರ ತೆಗೆದುಕೊಳ್ಳುವುದನ್ನು ಬಿಟ್ಟುಬಿಟ್ಟಿರುವರು.

ಗುಜರಾಥ ವಿದ್ಯಾಪೀಠದ ಶಂಕುಸ್ಥಾಪನೆ:—ಗುಜರಾಥ ವಿದ್ಯಾಪೀಠಮಂದಿರದ ಶಂಕುಸ್ಥಾಪನೆಯು ಡಾ. ಪಿ. ಸಿ. ರೇಯವರ ಹಸ್ತದಿಂದ ಕಳೆದ ತಾ. ೧೦ನೇ ಪ್ರಾತಃಕಾಲ ಹೆಚ್ಚಿನ ಸಡಗರದಿಂದ ಆಯಿತು.

ಜಬಲ್ ಪೂರ್:—ಕೊಂಗ್ರೆಸ್ ಡೆಪ್ಯುಟೇಶನು ಈ ಪಟ್ಟಣವನ್ನು ಸಂದರ್ಶಿಸುವಾಗ ಡೆಪ್ಯುಟೇಶನಿನ ಮೆಂಬರರಿಗೆ ಸ್ವಾಗತಪತ್ರವನ್ನು ಅರ್ಪಿಸಬೇಕು ಹಾಗು ಟೌನ್‌ಹೋಲಿನ ಮೇಲೆ ರಾಷ್ಟ್ರೀಯ ಪತಾಕೆಯನ್ನು ಏರಿಸಬೇಕು ಎಂದು ಮುನ್ಸಿಪಲ್ ಕಮ್ಮಿಟಿಯವರು ಮಾಡಿದ ಠರಾವನ್ನು ಇಲ್ಲಿಯ ಡಿಪ್ಯುಟಿ ಕಮ್ಮಿಶನರು ತಹಕೂಬ್ ಇಡುವಂತೆ ಮಾಡಿರುವರು. ಸಿವಿಲ್ ಡಿಸ್ ಒಬೀಡಿಯನ್ಸ್ ಕಮ್ಮಿಟಿಯು ಈ ಪಟ್ಟಣವನ್ನು ಸಂದರ್ಶಿಸಿದಾಗ ಮೇಲಿನ ಕಾರ್ಯಗಳನ್ನು ನಡಿಸಲು ನಿರ್ಬಂಧವಿರಲಿಲ್ಲ. ಡಿಪ್ಯುಟಿ ಕಮ್ಮಿಶನರ ಈ ವರ್ತನವನ್ನು ನಿಷೇಧಿಸಿ ಅಲ್ಲಿಯ ಜನರು ಕಾನೂನು ಭಂಗವನ್ನು ಮಾಡುವ ಆಲೋಚನೆಯಲ್ಲಿರುವರು.

ದಕ್ಷಿಣ ಕನ್ನಡ

ಬಂಟವಾಳ:—ತಾ. ೧೧ನೇ ಆದಿತ್ಯವಾರ ಸುಮಾರು ೧೧ ಘಂಟೆಗೆ ಇಬ್ಬರು ಸ್ವಯಂಸೇವಕರೊಡನೆ ಡಾಕ್ಟರ್ ಹರ್ಡೀಕರರು ಪುತ್ತೂರಿನಿಂದ ಇಲ್ಲಿಗೆ ಬಂದರು. ಬಂಟವಾಳದ ಕೆಲವು ಮಹನೀಯರು ಇವರನ್ನು ಎದುರುಗೊಳ್ಳುವುದಕ್ಕಾಗಿ ಪಾಣೆಮಂಗಳೂರಿನಲ್ಲಿ ಕಾಯುತ್ತಿದ್ದರು. ಶ್ರೀಯುತ ಡಿ. ಕೆ. ಭಾರದ್ವಾಜರು ಸಾಯಂಕಾಲ ಮೀಟಿಂಗಿನಲ್ಲಿ ಬಂದು ಸೇರಿದರು. ಸಾಯಂಕಾಲ ೬ ಘಂಟೆಗೆ ಸ್ವರಾಜ್ಯ ಧ್ವಜವನ್ನು ಹಿಡಿದು ಬೀದಿ ಮೆರವಣಿಗೆಯಾಯಿತು. ಈ ಸಣ್ಣ [illegible] ಮತ್ತು ಚಾಗಟೆಯನ್ನು [illegible]. ರಾತ್ರಿ ೮ ಘಂಟೆಗೆ ಶ್ರೀ ವೆಂಕಟರಮಣ ದೇವಸ್ಥಾನದ ಹಾಗಿಲಲ್ಲಿ ಕೂಡಿದ ಸಭಿಕರಿಗೆ ಭಾಷಣಗಳು ಕೊಡಲ್ಪಟ್ಟವು. ಮೊದಲು ಶ್ರೀಯುತ ಭಾರದ್ವಾಜರು ಬಂಟವಾಳದ ಖಾದಿಯನ್ನು ಉಪಯೋಗಿಸುವುದು ಹೆಚ್ಚೆಚ್ಚಾಗುತ್ತಾ ಬರುವುದನ್ನು ನೋಡಿ ಸಂತೋಷಪಟ್ಟ ಸಂಗತಿಯನ್ನು ಹೇಳಿದರು. ಖಾದಿ ಪ್ರಚಾರವನ್ನು ಇನ್ನೂ ಮುಂದರಿಸಬೇಕಾಗಿ ಹೇಳಿದರು. ನೂಲಿನ ಕೈಗಾರಿಕೆ ಮತ್ತು ಇತರ ಎಲ್ಲಾ ಕೈಗಾರಿಕೆಗಳು ೧೫ನೇ ಶತಮಾನದಿಂದಲೆ ಎಂದರೆ, ಪಾಶ್ಚಿಮಾತ್ಯರು ಇಲ್ಲಿಗೆ ಬಂದಂದಿನಿಂದ ಕಡಿಮೆ ಕಡಿಮೆಯಾಗುತ್ತಾ ಬಂದು ಲಂಗೋಟಿ ಉಟ್ಟುಕೊಳ್ಳುವ ವಸ್ತ್ರ ಸಹ ವಿಲಾಯತಿಯಿಂದಲೆ ಬರುವಷ್ಟು ಕೈಗಾರಿಕೆಗಳು ಬಿದ್ದುಹೋಗಿ ಕ್ಷಾಮಗಳು ಹೆಚ್ಚೆಚ್ಚಾಗುತ್ತಾ ಬಂದವೆಂದೂ, ಇನ್ನು ಮುಂದೆಯಾದರೂ ನಾವು ಎಚ್ಚೆತ್ತು ನಮ್ಮ ಕೈಗಾರಿಕೆಗಳನ್ನು ವೃದ್ಧಿಪಡಿಸಬೇಕೆಂದೂ ವಿವರಿಸಿ ಹೇಳಿದರು. ಅನಂತರ ಡೊಕ್ಟರ ಹರ್ಡೀಕರರು ಇಡೀ ಹಿಂದೂಸ್ಥಾನಕ್ಕೆ ಬೇಕಾದ ೫೦,೦೦೦ ಸ್ವಯಂಸೇವಕರಲ್ಲಿ ಕರ್ನಾಟಕ ಪ್ರಾಂತಕ್ಕೆ ೨೦೦೦ ಸ್ವಯಂಸೇವಕರು ಬೇಕಾಗಿದೆ ಎಂದೂ ಕನ್ನಡ ಜಿಲ್ಲೆಗೆ ೫೦೦ ಸ್ವಯಂಸೇವಕರು ಬೇಕಾಗಿದೆಯೆಂದೂ ತಿಳಿಸಿದರು. ಭಾಷಣದ ಮುಗಿದ ಕೂಡಲೇ ೩ ಮಂದಿ ಸ್ವಯಂಸೇವಕರು ದಾಖಲಾದರು. ಮೀಟಿಂಗಿನಲ್ಲಿ ಇಲ್ಲಿಯ ಸರ್ಕಲ ಇನ್ಸಪೆಕ್ಟರರೂ ಹಾಜರಿದ್ದರು.

ಕಿಲಂಜಾರು:—ಇಲ್ಲಿಯ ಶ್ರೀಶಂಕರಾನಂದ ಲೈಬ್ರರಿಯ ದ್ವಿತೀಯ ವಾರ್ಷಿಕ ವರದಿಯು ತಾ. ೧೩—೩—೧೯೩೩ನೇ ಸೋಮವಾರದಿನ ಪೊಳಲಿ ಕೋಡಿಮಜಲು ವಾಸುದೇವ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪುಸ್ತಕಭಂಡಾರಕ್ಕೆ ಮಾಸ, ವಾರಪತ್ರಿಕೆಗಳೂ ಮತ್ತು ಅನೇಕ ಗ್ರಂಥಗಳೂ ಸಂಗ್ರಹವಾಗಿದ್ದರೂ ಪುಸ್ತಕಭಂಡಾರವು ಬಹಳ ದೀನಸ್ಥಿತಿಯಲ್ಲಿರುವುದರಿಂದ ಇನ್ನೂ ಇದಕ್ಕೆ ಅನೇಕ ಗ್ರಂಥಗಳನ್ನು ಸಂಗ್ರಹಿಸುವ ವಿಷಯದಲ್ಲಿ ಇದರ ಕಾರ್ಯದರ್ಶಿಗಳು ಹೆಚ್ಚು ಮೆಹನತು ತೆಗೆದುಕೊಳ್ಳಬೇಕೆಂದು ಕೂಡಿದ ಮಹನೀಯರು ಹೇಳಿದ್ದಲ್ಲದೆ ಅನೇಕ ಮಹನೀಯರ ಸಹಾಯವೂ ದೊರೆಯಿತು. ಅಲ್ಲದೆ ಈ ಲೈಬ್ರರಿಯ ತೃತೀಯ ವರದಿಯು ಶ್ರೀಯುತ ಬಡಕಬೈಲ್ ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂದು ನಿರ್ಣಯಿಸಲಾಯಿತು.

ಮಿಜಾರು ಅಶ್ವತ್ಥಪುರ:—ದೇಶಸ್ಥಬ್ರಾಹ್ಮಣರ ಇಲ್ಲಿಯ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ವರ್ಷಂಪ್ರತಿ ನಡಿಯುವ ಶ್ರೀ ರಾಮನವಮಿ ಉತ್ಸವವು ಇದೇ ಬರುವ ರುಧಿರೋದ್ಗಾರಿ ಸಂ| ಚೈತ್ರ ಶು| ೧ವು ರವಿವಾರಕ್ಕೆ ಆರಂಭವಾಗಿ ಇದೇ ಶು| ೯ಯು ಚಂದ್ರವಾರ ರಾಮನವಮಿ, ಇದೇ ಶು| ೧೦ ಯು ಕುಜವಾರಕ್ಕೆ ರಥೋತ್ಸವ, ಬ್ರಾಹ್ಮಣ ಸಂತರ್ಪಣೆ ವಗೈರೆಗಳು ಜರಗುವುದರಿಂದ ಸಮಸ್ತ ಭಜಕವೃಂದದವರೂ ಬಂದು ಶ್ರೀ ದೇವರ ಪ್ರಸಾದಾದಿಗಳನ್ನು ಸೇವಿಸಿ ಯಥಾನುಶಕ್ತಿ ಸೇವೆನಡಿಸಿಕೊಂಡು ಹೋಗಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಇದೇ ಸಮಯದಲ್ಲಿ ದೇಶಸ್ಥಬ್ರಾಹ್ಮಣರ ಕಲಾನಿಧಿ ಕೊಒಪರೇಟಿವ್ ಸೊಸೈಟಿ ಎಂಬ ಸಹಕಾರಿ ಸಂಘವು ಮ. ರಾ. ಕಾರ್ಕಳ ಸರ್ಕಲ್ ಸಹಕಾರಿ ಇನ್ಸ್‌ಪೆಕ್ಟರರ ಮುಖಾಂತರ ತೆರಿಯೋಣಾಗುವುದು.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಪರಿಷದದ ಕಡೆಯಿಂದ

ಪ್ರಕಟಣೆ.

Insertin

ಕಾರ್ಕಳದಲ್ಲಿ ನೆರೆದ ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ತೃತೀಯ ಪಂಚಾಯತಿನಲ್ಲಿ ಮಂಜೂರಾದ ೨ನೇ ಮತ್ತು ೫ನೇ ನಿರ್ಣಯಕ್ಕನುಗುಣವಾಗಿ ದಕ್ಷಿಣ ಕನ್ನಡ ಜಿಲ್ಲೆಯೊಳಗಣ ದ್ರಾವಿಡ ಬ್ರಾಹ್ಮಣರಿಂದ ನಡಿಸಲ್ಪಡುವ ಸಂಸ್ಕೃತ ವ ಕೃಷಿ ಕೈಗಾರಿಕೆ ಮುಂತಾದ್ದನ್ನು ಕಲಿಸುವ ಪಾಠಶಾಲೆಗಳ ಮ್ಯಾನೇಜರ್ ಮುಂತಾದ ಶಾಲಾಧಿಕಾರಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಫಂಡಿನಿಂದ ದ್ರವ್ಯಸಹಾಯವನ್ನು ಪಡಿಯಲು ಅಪೇಕ್ಷಿಸುವ ಮೇಲಿನ ಸಂಸ್ಥೆಗಳ ಅಧಿಕಾರಿಗಳು ತಮ್ಮ ಸಂಸ್ಥೆಗಳ ಸ್ಥಿತಿಗತಿಗಳ ಕುರಿತು ಇದೇ ೧೯೩೩ನೇ ಇಸವಿ ಎಪ್ರಿಲು ಅಖೈರು ಒಳಗೆ ಕೆಳಗೆ ದಸ್ಕತುಮಾಡಿರುವವರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸೋಣಾಗುತ್ತದೆ:—

ಆ ರಿಪೋರ್ಟಿನಲ್ಲಿ ಈ ಕೆಳಗಿನ ವಿವರಗಳನ್ನು ಮುಖ್ಯವಾಗಿ ವ್ಯಕ್ತಪಡಿಸತಕ್ಕದ್ದು. (೧) ಸಂಸ್ಥೆ ಪ್ರಾರಂಭವಾದ ವರ್ಷ. (೨) ಅಧ್ಯಾಪಕರ ಸಂಖ್ಯೆ (೩) ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಯರ ಸಂಖ್ಯೆ ವ ತರಗತಿ (೪) ಶಾಲೆಗೆ ಮೂಲಧಂಡವಾಳವಿದ್ದರೆ ಎಷ್ಟು (೫) ಶಾಲೆಯ ಈ ವರ್ಷದ ಆಮ ಖರ್ಚ (೬) ಗ್ರಾಂಟು ಇದ್ದರೆ ಎಷ್ಟು (೭) ಸಂಸ್ಥೆಗೆ ಸ್ಥಳೀಯ ಪ್ರೋತ್ಸಾಹ ಯಾವ ರೀತಿಯಲ್ಲಿದೆ (೮) ಇತರ ವಿಷಯಗಳು ಇದ್ದರೆ ಅವುಗಳು ಸಹ.

ಸೂಚನೆ:—ಮೇಲೆ ಹೇಳಿದ ಅವಧಿಯ ತರುವಾಯ ಬರಬಹುದಾದ ವರದಿಗಳು ಅಂಗೀಕರಿಸಲ್ಪಡಲಿಕ್ಕಿಲ್ಲ.

ಶ್ರೀ ರಕ್ಷೆ.
ಮಂಗಳೂರು ತಾ. ೯-೩-೧೯೩೩.

ಕೆ. ರಾಮಚಂದ್ರ ಆಚಾರ್
ಕಾರ್ಯದರ್ಶಿ.
ಪರಿಷದದ ಪ್ರಮುಖ ಮಂಡಳಿ.

ಪ್ರಕಟಣೆ.

ಪರಂಗಿಪೇಟೆಯ ವಿದ್ಯಾವರ್ಧಕ ಸಂಘದವರಿಂದ ಏರ್ಪಟ್ಟ ರೂಪಾಯಿ ೨೦೦೦ರ ಲೋಟ್ರಿಯನ್ನು ನಿನ್ನೆ ದಿನ ೪ ಮಂದಿ ಗ್ರಾಮ ಉದ್ಯೋಗಸ್ಥರ ವ ಇತರ ಹಲವು ಮಂದಿ ಗೃಹಸ್ಥರ ಸಮಕ್ಷಮ ತೆಗೆಯಲಾಗಿ ಈ ಕೆಳಗೆ ನಮೂದಿಸಿದ ನಂಬ್ರಗಳ ಟಿಕೇಟುದಾರರಿಗೆ ಇನಾಮುಗಳು ದೊರಕಿರುತ್ತವೆ. ಸದರಿ ಇನಾಮುಗಳು ಎಪ್ರಿಲ್ ತಾ ೧ರಿಂದ ಹಂಚೋಣಾದಾವು. ೧ನೇ ಇನಾಮು ರೂ ೧೦೦ ನಂಬ್ರ ೪೯೯. ೨ ಇನಾಮುಗಳು| ರೂ. ೫೦ರಂತೆ ೧೨೩-೯೯೩. ೮ ಇನಾಮುಗಳು ರೂ ೨೫ರಂತೆ ೩೩೮—೮೧೩—೧೦೬೧, ೧೨೮೩, ೧೪೩೦, ೧೪೫೩, ೧೮೭೫, ೧೯೫೮. ೧೦ ಇನಾಮುಗಳು ರೂ. ೧೫ರಂತೆ ೩೩೮, ೫೨, ೮೫೮, ೧೨೭೦, ೧೨೭೯, ೧೫೬೯, ೧೬೧೩, ೧೬೬೦, ೧೯೫೯, ೧೯೮೮. ೨೦ ಇನಾಮುಗಳು ರೂ. ೧೦ರಂತೆ ೬೬, ೨೦೬, [illegible]

ಪರಂಗಿಪೇಟೆ,
ತಾ. ೧೧-೩-'೩೩.

ಎ. ರಾಮಚಂದ್ರ ಶೆಟ್ಟಿ,
ಸೆಕ್ರೆಟರಿ ವಿದ್ಯಾವರ್ಧಕ ಸಂಘ.

ಅನುಕ್ರಮಣಿಕೆ.

ಗಾಂಧಿ ಸಪ್ತಾಹ ... ೬
ಸ್ಫುಟವಿಚಾರಗಳು.— ೭
೧. ೨. ಹಿಂದುಸ್ಥಾನದ ಜಮಾಖರ್ಚು ”
೩, ೪, ರಿಲಿಜಿಯಸ್ ಎಂಡೌಮೆಂಟ ಬೀಲು ”
೫. ನಾಮದಾರ ದಾಸರು ”
ಮಂಗಳೂರು— ೭-೮
ವರ್ತಮಾನ ಸಂಗ್ರಹಗಳು:—
ಸ್ವದೇಶ ವರ್ತಮಾನ, ಪರದೇಶ ವರ್ತಮಾನ ... ೯
ದಕ್ಷಿಣ ಕನ್ನಡ— ಬಂಟವಾಳ, ಪುರಂಗಿಪೇಟೆ, ಕಿಲಂಜಾರು, ಅಶ್ವತ್ಥಪುರ. ”
ಮುಂದೇನು, ಗ್ರಾಮ ಸಂಸ್ಥೆಗಳ ಸಂಸ್ಥಾಪನೆಯು ”
ಶ್ರೀ ವೆಂಕಟರಮಣ ರಾಷ್ಟ್ರೀಯ ವಿದ್ಯಾಶಾಲೆ ”
ಕಲ್ಪವೆ ವಿಶ್ರಾಂತಿಯನ್ನು ಕೊಡುವುದು ಹೇಗೆ? ”
ಉಡುಪಿ ಬೋರ್ಡು ಹೈಸ್ಕೂಲು ”
ರಿಲಿಜಯಸ್ ಎಂಡೌಮೆಂಟ ಬೀಲು ”

ಸ್ವದೇಶಾಭಿಮಾನಿ

ಶಕ ೧೮೪೪ ಫಾಲ್ಗುಣ ಬ|| ೧೪ಯು ಶುಕ್ರವಾರ

ಗಾಂಧಿ ಸಪ್ತಾಹ.

ಶಾಂತತೆಯ ಸಂದೇಶಕರಾದ ಮಹಾತ್ಮಾ ಗಾಂಧಿಗಳ ಬಾಹ್ಯಸ್ವಾತಂತ್ರ್ಯವನ್ನು ನಮ್ಮ ಬ್ರಿಟಿಷ ಸರಕಾರವು ತಗ್ಗಿಸಿ ನಾಡದು ತಾ ೧೮ಕ್ಕೆ ಒಂದು ವರ್ಷವಾಗುತ್ತದೆ. ಮಹಾತ್ಮಾ ಗಾಂಧಿಗಳ ಶಾಂತತೆಯ ಸಂದೇಶವು ಈ ಹಿಂದುಸ್ಥಾನಕ್ಕೆ ಮಾತ್ರ ಅನುಲಕ್ಷಿಸಿ ಇದೆ ಎಂದಲ್ಲ; ಸ್ಪರ್ಧೆ, ನೇಲಾಟ, ಹೋರಾಟ, ಯುದ್ಧ ಮುಂತಾದ ಒಂದಕ್ಕಿಂತಲೂ ಒಂದು ಭಯಂಕರವಾದ ರೀತಿಯಿಂದ ಮಾನವಕುಲ ಸಂಹಾರದ ಸಾಧನಗಳನ್ನು ನಿರ್ಮಿಸಿ ಅಶಾಂತಿ, ಅತ್ಯಾಚಾರ ಮತ್ತು ಹಿಂಸೆ ಇವುಗಳನ್ನುಉಂಟುಮಾಡುವ ಈ ಭೂಲೋಕದ ಎಲ್ಲ ಜನಾಂಗಗಳಿಗೆ ಉದ್ದೇಶಿಸಿ ಇದೆ. ಔಷಧದ ವನಸ್ಪತಿಯು ಅವನಿಗೆ ಇವನಿಗೆ ಎಂದಲ್ಲ, ರೋಗವಿದ್ದವರೆಲ್ಲರಿಗೂ ಬೇಕಾಗಿರುತ್ತದೆ. ಲೋಕವು ಸ್ವಾರ್ಥದ ಮತ್ತು ಅತ್ಯಾಚಾರದ ಮಹಾಂಧಕಾರದಲ್ಲಿ ಮಗ್ನವಾದಾಗ ಮಹಾತ್ಮರ ಶಾಂತತಾ ಸಂದೇಶದ ಪ್ರದೀಪವು ಅದಕ್ಕೆ ಬೆಳಕನ್ನು ಕೊಟ್ಟಿದೆ. ಪ್ರಾಚೀನಕಾಲದಲ್ಲಿ ಗೌತಮಮುನಿ, ಜೀಝಸ್ ಕ್ರೈಸ್ತ ಇತ್ಯಾದಿ ಸಾಧುಪುರುಷರು ಅವತರಿಸಿ ಆ ಕಾಲದ ಲೋಕಕ್ಕೆ ಹೇಗೆ ಉಚ್ಚತಮವಾದ ಹಿತಾಚರಣದ ಮಾರ್ಗವನ್ನು ತೋರಿಸಿ ಕೊಟ್ಟರೋ ಹಾಗೆಯೆ ಮಹಾತ್ಮಾ ಗಾಂಧಿಗಳು ಈಗಿನಕಾಲದಲ್ಲಿ ಸತ್ಯವನ್ನು ಬೋಧಿಸುವ ಈಶ್ವರೀಯ ಕಾರ್ಯವನ್ನು ಮಾಡಿ ಲೋಕಋಣದಿಂದ ಮುಕ್ತರಾಗಿರುವರು. ಮಹಾತ್ಮಾಜಿಯವರ ತಪೋಬಲ, ಅಹಿಂಸಾಚರಣ, ಸತ್ಯವ್ರತ, ಲೋಕಹಿತಚಿಂತನೆ ಇವುಗಳನ್ನೂ, ಇಂಥ ಇತರ ಗುಣಗಳನ್ನೂ ಹೊಗಳಿದ್ದಷ್ಟು ಕಡಿಮೆ ಎಂದೆ ಹೇಳಬೇಕು. ಮಹಾತ್ಮಾಜಿಯವರ ಶುದ್ಧ ಚಾರಿತ್ರ್ಯ, ನಿರ್ಮಲಹೃದಯ, ಅನುದ್ವೇಗಕರವಾದ ಭಾಷಣ, ಮನಃಪ್ರಸಾದ ಇವೆಲ್ಲ ಈ ಹೊತ್ತು ಅಪ್ರತಿಮವಾದವುಗಳು. ಇಂಥ ಮಹಾಪುರುಷರು ಲೋಕಹಿತದಲ್ಲಿ ಪ್ರವರ್ತಿಸಿದೊಡನೆ, ಈಶ್ವರೀಯ ಲೀಲೆಯಿಂದ, ಅವರ ತಪೋಬಲವನ್ನು ಹೆಚ್ಚಿಸಲು ಕೆಲ ಲೌಕಿಕ ಸಾಮರ್ಥ್ಯಗಳು ಎದುರು ಬಂದು ಅವರನ್ನು ತಡೆಗಟ್ಟುವವು. ಈ ಕ್ರಮವು ಹಿಂದಿನಿಂದಲೆ ಸರ್ವತ್ರ ರೂಢವಾಗಿದೆ. ಈ ಕ್ರಮಕ್ಕನುಸಾರವಾಗಿ ಮಹಾತ್ಮಾ ಗಾಂಧಿಗಳು ಹಿಂದಿ ಸ್ವರಾಜ್ಯದ ಪ್ರಶ್ನೆಯನ್ನು ಎತ್ತಿಕೊಂಡು ಜನತೆಯಲ್ಲಿ ಜಾಗೃತಿ ಮತ್ತು ನಿರ್ಭಯತೆ ಹಾಗು ಸರಕಾರದಲ್ಲಿ ಸ್ಪರ್ಶವ್ಯಜ್ಞಾನ ಮತ್ತು ಪಶುಶಕ್ತಿನಿವಾರಣ ಈ ಮಹಾ ಕಾರ್ಯಗಳನ್ನು ಮಾಡಹತ್ತಿದ ಕೂಡಲೆ, ಸರಕಾರವು ಗಾಂಧಿಗಳನ್ನು ಬಂಧಿಸಿ ವಿಚಾರಣೆಯ ನಾಟಕವನ್ನು ನಡಿಸಿ ಅವರನ್ನು ತಪ್ಪುಗಾರರನ್ನಾಗಿ ನಿರ್ಣಯಿಸಿ ಆರು ವರ್ಷದ ಶಿಕ್ಷೆಯನ್ನು ವಿಧಿಸಿತು. ಮೊನ್ನೆಯ ಹತ್ತನೆಯ ತಾರೀಕು ಅವರ ಪ್ರತಿಬಂಧದ ದಿವಸವು. ನಾಡದು ೧೮ಕ್ಕೆ ಅವರ ಶಿಕ್ಷೆಯ ದಿವಸವು ಬರುವುದು. ಈ ಎಂಟು ದಿವಸದ ಅವಧಿಯು ನಮ್ಮ ಸ್ವರಾಜ್ಯ ಚರಿತ್ರೆಯಲ್ಲಿ ಸಂಸ್ಮರಣೀಯವಾಗಿರುವುದರಿಂದ ಗಾಂಧಿಸಪ್ತಾಹವೆಂದ ಹೆಸರಿನಿಂದ ದೇಶವತ್ಸಲರು ಆ ಮಹಾಪುರುಷನ ಸ್ಮರಣವನ್ನು ಮಾಡುತ್ತ ದೇಶಕಾರ್ಯವನ್ನು ಮಾಡುತ್ತಿರುತ್ತಾರೆ.

"ಗಾಂಧಿ ಸಪ್ತಾಹದ" ಎಂದರೆ, ವಾರದ ವೇಳೆಯಲ್ಲಿ ಸತ್ಯಾಗ್ರಹಿಗಳು, ಅಸಹಕಾರಿಗಳು, ರಾಷ್ಟ್ರೀಯ ಸಭೆಯವರು ದೇಶಕಾರ್ಯವನ್ನು ಮಾಡಲಾರಂಭಿಸಿದ ಸಂಗತಿಯು ಪತ್ರಿಕೆಗಳಲ್ಲಿ "ಪ್ರತ್ಯಕ್ಷ" ವ್ಯವಹಾರದಲ್ಲೂ "ಎಲ್ಲರಿಗೆ ವೇದ್ಯವಾದ್ದೆ ಸರಿ. ಮಹಾತ್ಮಾಜಿಯವರು ವಸ್ತುತಃ ಇನ್ನು ಯಾವುದರ ವೈರಿಗಳಲ್ಲವಾದರೂ ಅತ್ಯಾಚಾರದ ಮತ್ತು ಹಿಂಸೆಯ ವೈರಿಗಳೆಂಬುದು ಸುಳ್ಳಲ್ಲ. ಸರಕಾರಕ್ಕಾದರೂ ಗಾಂಧಿಗಳ ಹೇತುವು ಮತ್ತು ಆ ಹೇತುಗನುಗುಣವಾದ ಕೃತ್ಯವು ಅಮಾನ್ಯವಾದವುಗಳಲ್ಲ. ಶಾಂತತೆ, ಸುವ್ಯವಸ್ಥೆ ಈ ಎರಡು ಸ್ಪೃಹಣೀಯ ಗುಣಗಳನ್ನು ನೆಲೆಗೊಳಿಸಲು ಸರಕಾರವು ಕೋವಿ ಗುಂಡುಧಾರಿಯಾಗಿ ಯತ್ನಿಸುತ್ತದಾದರೆ ಮಹಾತ್ಮರು ತಮ್ಮ ಅನುಪಮೇಯವಾದ ಆತ್ಮಿಕಬಲಧಾರಿಗಳಾಗಿ ಸಾಧಿಸುತ್ತಿದ್ದಾರೆ. ಈ ಎರಡೂ ಪ್ರಯತ್ನಗಳು ಒಂದೆ ಕಡೆಗೆ ಸೇರುವುದಾದಮೇಲೆ ಸರಕಾರವು ಮಹಾತ್ಮರ ಸ್ವಾತಂತ್ರ್ಯಕ್ಕೆ ಆರು ವರ್ಷದ ಸಂಕೋಲೆಯನ್ನು ಯಾಕೆ ಹಾಕಿತು? ಜನತೆಯಲ್ಲಿಯ ಅಶಾಂತತೆಯನ್ನು ಹೋಗಲಾಡಿಸಿ ಸರ್ವತ್ರ ಸುಖಸಂಪತ್ತನ್ನುಂಟುಮಾಡಬೇಕೆಂದಿರುವ ಸರಕಾರವು ಅದೆ ಶಾಂತತೆಯ ಭಗವದ್ಗೀತೆಯನ್ನು ಸಾರುವ ಮಹಾತ್ಮರ ಬಾಯಿಯ ಮುಂದೆ ಮತ್ತು ಕಣ್ಣುಗಳ ಮುಂದೆ ಅಪಾರದರ್ಶಕವಾದ ತುರಂಗದ ಗೋಡೆಗಳನ್ನು ಯಾಕೆ ನಿಲ್ಲಿಸಿತು? ಪೋಲೀಸರ ಬಂದೋಬಸ್ತಿನಿಂದ ಅನ್ಯಾಯಗಳನ್ನು ಪರಿಮಾರ್ಜಿಸುತ್ತಿರುವ ಸರಕಾರವು ಜನತೆಯ ಆತ್ಮಶುದ್ಧಿಗಾಗಿ ವಿವೇಕದ ಮಂತ್ರೋದಕವನ್ನು ಪ್ರೋಕ್ಷಿಸುವ ಮಹಾತ್ಮಾಜಿಯವರ ಕೈಯನ್ನು ಯಾಕೆ ಹಿಡಿಯಿತು? ಈ ಪ್ರಶ್ನೆಗಳು ಇಲ್ಲಿ ಬರುತ್ತವೆ. ಇವುಗಳನ್ನು ಉತ್ತರಿಸುವುದು ಗಾಂಧಿ ಸಪ್ತಾಹದಲ್ಲಿ ಉಚಿತವಾಗಿದೆ. ಸರಕಾರ ಮತ್ತು ಗಾಂಧಿ ಈ ಎರಡು ಶಕ್ತಿಗಳ ಶಾಂತತಾ ಪ್ರಸ್ತಾಪನೆಯ ಉದ್ದೇಶವು ಒಂದೆಯಾಗಿರುವಾಗ ಒಂದು ಇನ್ನೊಂದನ್ನು ಪ್ರತಿಬಂಧಿಸಿದ್ದು ಯಾಕೆ? ಎಂಬುದೆ ಮುಖ್ಯ ಪ್ರಶ್ನೆಯು. ಇದರ ಉತ್ತರವು ಸುಲಭವಾಗಿದೆ. ಸರಕಾರವು ಶಾಂತತಾಪ್ರಸ್ಥಾಪನೆ ಎಂದು ಬಾಯಿಯಿಂದ ಬೇಕಷ್ಟು ಹೇಳಿದರೂ ಅದಕ್ಕೆ ತೋಳದ ಮುಂದೆ ಕುರಿಗಳ ಶಾಂತತೆಯು ಬೇಕಾಗಿದೆ. ತಾನು ಮುಂಚಿನಂತೆಯೆ ಅತ್ಯಾಚಾರಿಯಾಗಿದ್ದು, ತಾನು ಮುಂಚಿನಂತೆಯೆ ಪರರ ಹಕ್ಕುಗಳನ್ನು ಕೊಡುವುದರಲ್ಲಿ ಕೃಪಣವಾಗಿದ್ದು, ತಾನು ಮುಂಚಿನಂತೆಯೆ ವಿಚಾರಣೆಸಾಚಾರಣೆ ಇಲ್ಲದೆ ನಿರಂಕುಶವಾಗಿ ಕಾನೂನುಗಳನ್ನು ಜಾರಿಗೆತರಬೇಕೆಂದಿದ್ದು ಜನತೆಯು ಮಾತ್ರ ಅನತ್ಯಾಚಾರಿಯಾಗಿರಬೇಕು; ಅದು ಹಕ್ಕುಗಳನ್ನು ಅಪೇಕ್ಷಿಸಕೂಡದ್ದಾಗಿರಬೇಕು; ಅದು ಹೊರಡಿಸಿದ ಕಾನೂನುಗಳಿಗೆ ತಲೆಬಗ್ಗಿಸುವುದಾಗಿರಬೇಕು. ಇದು ಸರಕಾರಿ ಶಾಂತತಾ ಪ್ರಸ್ಥಾಪನೆಯ ತತ್ವಜ್ಞಾನವು. ಗಾಂಧಿಗಳ ಶಾಂತತೆಗೂ ಇದಕ್ಕೂ ಅಜಗಜಾಂತರವಿದೆ. ಅಲ್ಲ, ಬೆಳಕಿಗೂ ಕತ್ತಲೆಗೂ ಇರುವ ಅಂತರವಿದೆ ಎಂದು ಹೇಳಿದರೆ ಅದು ಇನ್ನೂ ಒಪ್ಪುವುದು. ಜನತೆಯಂತೆ ಸರಕಾರವಾದರೂ ಅನತ್ಯಾಚಾರಿಯಾಗಬೇಕು; ಜನತೆಯ ಸ್ವರಾಜ್ಯದ ಹಕ್ಕು ಜನತೆಗೆ ಸಿಗಬೇಕು. ಎರಡು ತಕ್ಕಡಿಗಳು ಸಮತೋಲವಾಗಿರಬೇಕು. ನ್ಯೂನಾಧಿಕ್ಯವು ಬೇಡ ಇದೆ ಮಹಾತ್ಮಾ ಗಾಂಧಿಗಳ ಶಾಂತತಾತತ್ವದ ಮುಖ್ಯ ಸೂತ್ರವು. ಮತ್ತು ಅದ್ದರಿಂದಲೆ ಸರಕಾರವು ಗಾಂಧಿಗಳಿಗೆ ೬ ವರ್ಷದ ಶಿಕ್ಷೆಯನ್ನು ವಿಧಿಸಿತು. ಜನತೆಯಲ್ಲಿಯ ಭಯವನ್ನು ಹೋಗಲಾಡಿಸಿ ಸರಕಾರದೊಡನೆ ಸಮಾನಸ್ಕಂಧರಾಗಿ ಹೋರಾಡುವ ಧೈರ್ಯವನ್ನು ಇವರು (ಗಾಂಧಿಗಳು) ಉಂಟುಮಾಡುತ್ತಾರೆ. ಆದ್ದರಿಂದ ಅವರನ್ನು ಜನತೆಯಿಂದ ತಪ್ಪಿಸಬೇಕೆಂದು ಸರಕಾರವು ಮೇಲಿನ ಉಪಾಯವನ್ನು ಮಾಡಿತು. ಇದೆ ಮೇಲಿನ ಎಲ್ಲ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವು.

ಮಹಾತ್ಮಾ ಗಾಂಧಿಗಳ ಪ್ರತಿಬಂಧದ ಈ ರಹಸ್ಯವನ್ನು ವಿಮರ್ಶಿಸಿನೋಡಿದರೆ ಮತ್ತು ಅವರು ಜೈಲಿಗೆ ಬಿದ್ದಂದಿನಿಂದ ದೇಶಸ್ಥಿತಿಯನ್ನು ನಿರೀಕ್ಷಿಸಿದರೆ ಸರಕಾರವು ಹೂಡಿದ ಬಾಣವೂ, ಈಗ ರಾಷ್ಟ್ರೀಯ ಸಭೆಯು ಇಟ್ಟ ಗುರಿಯೂ ದುರ್ದೈವದಿಂದ ಒಂದೆಯಾಗದೆ? ಜನತೆಯಲ್ಲಿಯ ಸಾತ್ವಿಕ ವೀರವೃತ್ತಿಯು ಲುಪ್ತವಾಗಿ ಹೋಗಲು ಯಾವ ಯಾವ ದಾರಿಗಳು ಬೇಕೊ ಅವೆಲ್ಲ ಈಗ ಸಿದ್ಧವಾಗಿವೆ. ಸ್ವರಾಜ್ಯ ಸಂಪಾದನೆಯ ಮಹಾತ್ಮರ ಉದ್ದೇಶವು ಸಫಲವಾಗುವ ಯಾವ ಕಾರ್ಯಕ್ರಮವೂ ದೇಶದ ಮುಂದಿಲ್ಲ. ಎಲ್ಲಿ ಹೋದರೂ ಈ ಚಿಕ್ಕ ಸಪ್ತಾಹದಲ್ಲಿ ಜನ, ಜನ, ಹಣ, ಹಣವೆಂಬ ದೀನಸ್ವರವೆ ಕೇಳಿಸುತ್ತದಲ್ಲದೆ, ಇನ್ನು ಯಾವ ಕಾರ್ಯಪ್ರವಣತೆಯೂ ಕಂಡುಬರುವುದಿಲ್ಲ. ಜನರು ಬೇಕೆಂದೆನ್ನುವರು. ಆದರೆ ಜನರು ಯಾಕೆ? ೫೦ ಸಾವಿರ ಜನರು ಕಾನೂನು ಭಂಗವನ್ನು ಮಾಡುವವರಿದ್ದಾರೆಯೆ? ಮಹಾತ್ಮರು ಹೊರಗೆ ಬರುವುದಕ್ಕಿಂತ ಮುಂಚೆ ಅವರ ಆಜ್ಞೆ ಇಲ್ಲದೆನೆ,—ಬಾರದೋಲಿಯಲ್ಲಿ ದೇಶವು ತಯಾರಿಲ್ಲವೆಂದು ಹೇಳಿ ಕಾನೂನು ಭಂಗವನ್ನು ಬಿಟ್ಟಿರುತ್ತ—ಪುನಃ ಕಾನೂನುಭಂಗವನ್ನು ಕೈಕೊಳ್ಳುವಿರಾ? ಇಲ್ಲ. ಇದು ಬರಿ ನೆವವು! ನಿಮಗೆ ಹಣವಾದರೂ ಯಾಕೆ? ೫೦ ಲಕ್ಷ ರೂಪಾಯಿಯನ್ನು ಕೂಡಿಸಿ ಏನು ಮಾಡುವವರಿದ್ದೀರಿ! ಕಾನೂನುಭಂಗಕ್ಕೆ ಉಪಯೋಗವು ಆಗುವವೆ? ಒಂದು ವರ್ಷದ ಮುಂಚೆ ಒಂದು ಕೋಟಿ ಹಣವನ್ನು ಕೂಡಿಸಿದ್ದೀರಿ. ಅದನ್ನು ಏನು ಮಾಡಿದ್ದೀರಿ? ಆ ಸಾರ್ವಹಿಂದುಸ್ಥಾನದ ಲೆಕ್ಕವನ್ನು ಒಟ್ಟಿಗೆ ಸೇರಿಸಿ ಜನತೆಯ ಮುಂದೆ ಇಟ್ಟಿರುವಿರಾ? ಮುಂಚಿನ ಹಣಕ್ಕೆನೆ ಈ ಗತಿಯಾದರೆ ಈಗ ಕೂಡಿಸುವುದರ ಪರಿಣಾಮವೇನಾದೀತು? ರಾಷ್ಟ್ರೀಯಸಭೆಯ ಹೆಸರು, ಮಹಾತ್ಮಾಜಿಯವರ ನಾಮೋಚ್ಚಾರ ತಿಲಕ ಸ್ವರಾಜ್ಯ ಫಂಡಿನ ಘೋಷ ಮುಂತಾದವುಗಳ ಸಹಾಯಪಡೆಕೊಂಡು ಜನರಿಂದ ಹಣ ಕೇಳಹತ್ತಿದರೂ, ಹಣವನ್ನು ಕೊಡುವಾಗ ಜನರು ಮೇಲಿನ ಸಂಗತಿಗಳನ್ನು ಆಲೋಚಿಸದೆ ಇರಲಿಕ್ಕಿಲ್ಲ. ವಿಧಾಯಕಕಾರ್ಯಕ್ರಮದ ಹೆಸರಿನ ಗಿರೀಟನ್ನು ಕೊಟ್ಟು, ಖಾದಿಯ ಗಂಟನ್ನು ಹೊತ್ತುಕೊಂಡು ತಿರುಗಾಡುವುದರಿಂದ ಸ್ವರಾಜ್ಯವು ಎಷ್ಟರ ಮಟ್ಟಿಗೆ ಹತ್ತಿರಬಂದೀತೆಂದು ಈ ಗಾಂಧಿ ಸಪ್ತಾಹದಲ್ಲಿ ಅನೇಕರಿಗೆ ತೋರದೆ ಇರಲಿಕ್ಕಿಲ್ಲ. ಅಲಹಾಬಾದಿನಲ್ಲಿ ಒಪ್ಪಂದವಾಗಿ ನ್ಯೂನಸಂಖ್ಯಾಕರು ಇನ್ನೊಂದು ಪಂಗಡದವರಿಗೆ ಧನಾರ್ಜನದಲ್ಲಿ ಸಹಾಯಮಾಡಬೇಕೆಂದು ಹೇಳೋಣಾಗಿದೆಯಾದರೂ ಹಣವನ್ನು ಕೊಡುವಾಗ ಪ್ರತಿಯೊಬ್ಬನು ಈಗಿನ ನಿರ್ವ್ಯಾಪಾರವಾದ ಕಾರ್ಯಕ್ರಮವನ್ನು (!) ನೋಡಿ ಮೇಲಿನ ಪ್ರಶ್ನೆಗಳನ್ನು ತನ್ನ ಮನಸ್ಸಿನಲ್ಲಿ ಕೇಳಿಕೊಳ್ಳದೆ ಇರಲಿಕ್ಕಿಲ್ಲ. ಗಾಂಧಿಸಪ್ತಾಹವನ್ನು ಆಚರಿಸುವುದಾದರೆ ಗಾಂಧಿಗಳ ಉತ್ತರಾಯುಷ್ಯದ ಮುಖ್ಯ ಧ್ಯೇಯವಾದ ಹಿಂದಿ ಸ್ವರಾಜ್ಯವನ್ನು ಆದಷ್ಟು ಹತ್ತಿರ ತರುವಂತೆಮಾಡಿರಿ, ಇದೆ ಜನತೆಯ ಹೇಳಿಕೆಯಾಗಿದೆ. ಈ ಸತ್ಯ ವಿಧಾನದ ಬಗ್ಗೆ ಸತ್ಯಪ್ರಿಯರು ಎಂದೂ ವಿಷಾದಪಡಲಿಕ್ಕಿಲ್ಲ.

ಸ್ಫುಟವಿಚಾರಗಳು.

೧. ಹಿಂದುಸ್ಥಾನ ಸರಕಾರದ ಅಂದಾಜಿನ ಜಮಾ-ಖರ್ಚಿನ ಪಟ್ಟಿಯೊಳಗಿನ ಕೆಲವು ವಿಷಯಗಳನ್ನು ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದ್ದೇವೆ. ಕೋಶಮಂತ್ರಿಗಳಾದ ನಾಮದಾರ ಬ್ಲೆಕೆಟ್ ಸಾಹೇಬರು ತಮ್ಮ ಜಮಾ-ಖರ್ಚನ್ನು ಅಲ್ಲಿಂದಲ್ಲಿಗೆ ಮಾಡಬಹುದಿತ್ತು. ಬರುವ ವರ್ಷದ ಯಾವ ಖರ್ಚನ್ನು ಅವರು ತೋರಿಸಿರುವರೊ ಅದು ಕೇವಲ ಮಿತಿಮೀರಿರುವುದು. ಈ ಭಾಗದಲ್ಲಿ ಮುಖ್ಯವಾಗಿ ಎರಡು ವಿಧದ ದೋಷಗಳನ್ನು ತೋರಿಸಬಹುದು. ರೈಲು, ಪೋಸ್ಟು ಮತ್ತು ಕಸ್ಟಮು ಈ ಇಲಾಖೆಗಳಲ್ಲಿ ಕಳೆದ ವರುಷ ಹೊಸ ತೆರಿಗೆಯನ್ನು ಏರಿಸಿದ್ದರಿಂದ ನಿರೀಕ್ಷಿಸಿದಷ್ಟು ಆ ಇಲಾಖೆಗಳಲ್ಲಿ ಉತ್ಪನ್ನವು ಈ ಗತಿಸಿದ ವರ್ಷ ಬರಲಿಲ್ಲವೆಂಬುದು ನಿಜವು. ಆದರೆ ಈ ಹೊಸ ವರ್ಷದಲ್ಲೂ ಕಳೆದ ವರ್ಷದಂತೆಯೆ ಉತ್ಪನ್ನವು ಏರಲಿಕ್ಕಿಲ್ಲವೆಂದು ತಿಳಿಯುವುದು ಸರಿಯಲ್ಲ. ಹೊಸ ತೆರಿಗೆಗಳು ಪ್ರಾರಂಭವಾದೊಡನೆ ಆ ಖಾತೆಗಳಲ್ಲಿ ಉತ್ಪನ್ನವು ಹೆಚ್ಚಾಗುವುದಿಲ್ಲವಾದರೂ ಮೆಲ್ಲಮೆಲ್ಲನೆ ಅದು ಏರಹತ್ತುತ್ತದೆ. ಈ ರೀತಿಯಿಂದ ಏರಹತ್ತಿ, ಬರುವ ವರ್ಷ ಕೋಶಮಂತ್ರಿಗಳು ಅಂದಾಜುಹಾಕಿಕೊಂಡಷ್ಟು ಖರ್ಚಿನ ಭಾಗದಲ್ಲಿ ನ್ಯೂನತೆಯು ಬರಲಿಕ್ಕಿಲ್ಲ. ಇದೊಂದು ಸಂಗತಿ. ಅಲ್ಲದೆ, ಖರ್ಚಿನ ಭಾಗದಲ್ಲಿ ಅವರು ಸಿವಿಲಿಯನರ ಲೀಲೆಗಳಿಗೆ ಯಾವ ರೀತಿಯಿಂದಲೂ ಬೇಲಿ ಹಾಕಿದ್ದಂತೆ ಕಾಣುವುದಿಲ್ಲ. ಇಂಚ್‌ಕೇಪ ಕಮ್ಮಿಟಿಯು ಸೂಚಿಸಿದ ಕಡಿಮೆ ಖರ್ಚನ್ನು ಇವರು ಅಂಗೀಕರಿಸಿ ಈ ವರ್ಷವೆ ಜಾರಿಯಲ್ಲಿ ತರಬೇಕಿತ್ತು. ರೈಲು ಇಲಾಖೆಯವರು ೩೦ ಕೋಟಿ ರೂಪಾಯಿಯನ್ನು ತಮ್ಮ ಪಾಲಿಗಿಟ್ಟುಕೊಂಡಿದ್ದಾರೆ. ಆದರೆ ಕಳೆದ ವರ್ಷದ ಅನುಭವವನ್ನು ನೋಡಿದರೆ ಸಂಕಲ್ಪಿತ ೩೦ ಕೋಟಿಯಲ್ಲಿ ೮ ಕೋಟಿಯು ಬಾಕಿ ಉಳಿದಿದೆ. ಇನ್ನು ಬರುವ ವರ್ಷ ಹೆಚ್ಚು ರಕಮು ಉಳಿಯುವುದು. ಹೀಗಿರಲು ೩೦ ಕೋಟಿಯನ್ನು ಆ ಇಲಾಖೆಯ ಖರ್ಚಿಗೆ ನಮೂದಿಸಿಕೊಂಡದ್ದು ತಪ್ಪೆ ಸರಿ. ಈ ತಪ್ಪಿನ ಜೊತೆಗೆನೆ ಇನ್ನೊಂದು ತಪ್ಪನ್ನು ಕೋಶಮಂತ್ರಿಗಳು ಈ ವಿಷಯದಲ್ಲಿ ಮಾಡಿರುವರು. ವಾಯವ್ಯ ಸರಹದ್ದಿನ ಮೇಲಿರುವ ವಝಿರಿಸ್ಥಾನದ ಮೇಲೆ ದಂಡೆತ್ತಿಹೋಗಲು ಕೋಶಮಂತ್ರಿಗಳು ೪|| ಕೋಟಿ ಹಣವನ್ನು ಸಂಕಲ್ಪಿಸಿಟ್ಟಿದ್ದಾರೆ. ಸೈನ್ಯದ ಇಲಾಖೆಯ ಮೇಲೆ ಖರ್ಚನ್ನು ಅಧಿಕವಾಗಿಮಾಡಬಾರದೆಂದು ಹಿಂದುಸ್ಥಾನವು ಪ್ರಥಮದಿಂದಲೆ ಕೂಗುತ್ತಿದೆ. ಅದರ ಕಡೆಗೆ ದುರ್ಲಕ್ಷ್ಯ ಮಾಡಿ ಪುನಃ ವಝಿರಿಸ್ಥಾನದ ಮೇಲೆ ಯುದ್ಧಕ್ಕೆ ಹೋಗಲು ೪||ಕೋಟಿಯ ರಕಮು ಪ್ರತ್ಯೇಕವಾಗಿ ತೆಗೆದಿಡೋಣಾಗುತ್ತದೆ. ಇದಕ್ಕೆ ಯಾವ ಹೆಸರನ್ನಿಡಬಹುದು? ವಝಿರಿಸ್ಥಾನದಲ್ಲಿ ಈಗ ನಾಲ್ಕು ವರ್ಷದಿಂದ ಬಂದಿರುವ ಅನುಭವದ ಮೇಲಿಂದ ಲಂಡನ್ ಟೈಮ್ಸಿನಂಥ ಸಾಮ್ರಾಜ್ಯವಾದಿಪತ್ರಿಕೆಯು ಕೂಡ ವಝಿರಿಸ್ಥಾನದ ಯುದ್ಧಪ್ರಸ್ತಾಪವನ್ನು ಕುರಿತು ಮೂಗು ಮುರಿಯುತ್ತದೆ. ಇಂಚ್‌ಕೇಪ ಕಮ್ಮಿಟಿಯಾದರೂ ಬೇಡವೆಂದು ಹೇಳುತ್ತದೆ. ಆದರೆ ಬ್ಲೆಕಟಸಾಹೇಬರಿಗೆ ಮತ್ತು ಹಿಂದುಸ್ಥಾನದ ಸರಕಾರಕ್ಕೆ ಯುದ್ಧೋತ್ಸಾಹವು ಕಡಿಮೆಯಾಗುವುದಿಲ್ಲ. ಇದು ಬಡಹಿಂದುಸ್ಥಾನದ ದುರ್ದೈವವೆಂದೆ ತಿಳಿಯಬೇಕು.

೨. ಸರ್ ಬ್ಲೆಕೆಟ ಸಾಹೇಬರು ಖರ್ಚನ್ನು ಕಡಿಮೆ ಮಾಡಲು ಮೇಲಿನ ಎರಡೂ ರಾಜಮಾರ್ಗಗಳನ್ನು ಬಿಟ್ಟುಕೊಟ್ಟು ಉಪ್ಪಿನ ಮೇಲೆ ಇಮ್ಮಡಿಕರವನ್ನು ಹಾಕುವ ಕಠಿಣ ಮತ್ತು ನಿಷ್ಠುರಸಂಕಲ್ಪವನ್ನು ಮಾಡಿದ್ದಾರೆ. ಈ ವಿಷಯವಾಗಿ ನಾವು ಹಿಂದಿನ ಸಂಚಿಕೆಯಲ್ಲಿ ಸಾಕಷ್ಟು ಬರೆದಿದ್ದೇವೆಯಾದರೂ ಒಂದೆರಡು ಮಾತುಗಳನ್ನು ಪುನಃ ಹೇಳಲಿಕ್ಕಿದ್ದೇವೆ. ಉಪ್ಪಿನ ಮೇಲೆ ತೆರಿಗೆಯನ್ನು ಏರಿಸುವುದು ಹಿಂದಿನ ಮಹಮ್ಮದೀಯರ ಕಾಲದಲ್ಲಿ ತಲೆತೆರಿಗೆ ಇಟ್ಟಂತೆಯೆ ಸರಿ. ಮಹಾಯುದ್ಧದ ಸಮಯದಲ್ಲಿ ಹಣದ ಬರಗಾಲವು ಬಿದ್ದಾಗ ಅಂಥ ಕಠಿಣಕಾಲದಲ್ಲಿ ಕೂಡ ನಾಲ್ಕು ಆಣೆಗಿಂತ ಹೆಚ್ಚು ಉಪ್ಪಿನ ಮೇಲೆ ಕರವು ಏರಿರಲಿಲ್ಲ. ಈಗಲಾದರೊ ಯುದ್ಧವು ಮುಗಿದು ೫ ವರ್ಷಗಳಾದುವು. ಪಾಪ! ಬಡ ಹಿಂದೂಸ್ಥಾನದ ದರಿದ್ರಜನರ ಉಪ್ಪಿನ ಮೇಲೆ ಕರವನ್ನು ಏರಿಸುವ—ಬರೆ ಕೆಲವು ಮಟ್ಟಿಗೆ ಏರಿಸುವುದು ಮಾತ್ರವಲ್ಲ, ಇಮ್ಮಡಿಯಷ್ಟು ಏರಿಸುವ ಸಂಕಲ್ಪವು ಹೊಸ ಮಂತ್ರಿಗಳ ಹೃದಯದಲ್ಲಿ ಹೇಗೆ ಹುಟ್ಟಿತು! ಸರಕಾರದ ಖರ್ಚಿನ ಬಾಬಿಗೆ ಹಣದ ಆವಶ್ಯಕತೆಯು ಇದ್ದರೆ ವಝಿರಸ್ಥಾನದ ಯುದ್ಧದಲ್ಲಿ ದುರುಪಯೋಗಿಸಲು ಇಟ್ಟ ಹಣವನ್ನು ನಿಲ್ಲಿಸಬಹುದಿತ್ತು. ಅಥವಾ ಇಂಗ್ಲೆಂಡಿನ ಇಲ್ಲವೆ ಸಾಮ್ರಾಜ್ಯದೊಳಗಿನ ವಸಾಹತುಗಳ ಅಥವಾ ಜಪಾನಿನ ವಸ್ತ್ರಗಳ ಮೇಲೆ ಕರವನ್ನು ಏರಿಸಿ ರಕಮನ್ನು ಭರ್ತಿಮಾಡಬಹುದಿತ್ತು. ಅದರ ಬದಲು ಉಪ್ಪಿನ ಮೇಲೆ ಕರವನ್ನು ಇಮ್ಮಡಿ ಏರಿಸಿ ಸ್ವಕಾರ್ಯವನ್ನು ಸಾಧಿಸುವುದು ನಿಂದ್ಯ ಮತ್ತು ಅನ್ಯಾಯದ್ದಾಗಿದೆ. ಆದರೆ ಈ ಅನ್ಯಾಯದ ಕರವು ಕೌನ್ಸಿಲಿನ ಮತ್ತು ಎಸೆಂಬ್ಲಿಯ ಚರ್ಚೆಯಲ್ಲಿ ನಿಲ್ಲಲಿಕ್ಕಿಲ್ಲ. ಸಭಾಸದರು ಏಕಮತ್ಯದಿಂದ ಕೋಶಮಂತ್ರಿಗಳ ಈ ಸೂಚನೆಯನ್ನು ಕಡಿದುಹಾಕಿಯಾರೆಂದು ಪೂರ್ಣ ಭರವಸೆ ಇದೆ. ಕೋಶಮಂತ್ರಿಗಳು ಉಪ್ಪಿನ ತೆರಿಗೆಯ ಸುದ್ದಿಯನ್ನು ಎತ್ತಿದೊಡನೆಯೆ ಅಲ್ಲಿಂದಲ್ಲೆ, ಡಾ. ಗೌರರು ಈ ಕರವನ್ನೇರಿಸಲು ನಾವು ಬಿಡಲಿಕ್ಕಿಲ್ಲವೆಂದು ಆಡಿದರೆಂದು ಪ್ರಕಟವಾಗಿದೆ. ಈ ಎಲ್ಲ ಸಂಗತಿಗಳ ಮೇಲಿಂದ ಈ ಅನ್ಯಾಯದ ಕರವು ನಿಲ್ಲಲಿಕ್ಕಿಲ್ಲವೆಂದು ನಂಬಿಕೆ ಇದೆ.

೩. "ರಿಲಿಜಿಸ್ ಎಂಡೌಮೆಂಟ್ ಬೀಲು" ಸಿಲೆಕ್ಟ ಕಮ್ಮಿಟಿಯಲ್ಲಿ ದುರುಸ್ತಿಯಾದ್ದರಮೇಲಿಂದ ಬೇತಾಳನು ಪುನಃ ಪೂರ್ವ ಸ್ಥಳದಲ್ಲಿ ಬರಹತ್ತಿದೆಂದು ಹೇಳಬೇಕಾಗುತ್ತದೆ. ತಾತ್ವಿಕದೃಷ್ಟಿಯಿಂದಲೆ ಹೇಳುವುದಿದ್ದರೆ, ಸರಕಾರಕ್ಕೆ, ಯಾಕೆ, ಮದ್ರಾಸ ನ್ಯೂಸ್ ಪತ್ರಿಕೆಯು ಹೇಳುವಂತೆ, ಜನತೆಯ ಮಂತ್ರಿಮಂಡಲಕ್ಕೆ ಹಿಂದುಧರ್ಮದಲ್ಲಿಯ ಮಾತ್ರ ದೇವಸ್ಥಾನ, ಗುರುಮಠ ಇತ್ಯಾದಿ ಧಾರ್ಮಿಕ ಸಂಸ್ಥೆಗಳ ವಶದಲ್ಲಿರುವ ಉಂಬಳಿಯ ಬಗ್ಗೆ ಕರುಣೆಯಿಂದೆ ಯಾಕೆ ಎದೆಯೊಡೆದು ಬರಬೇಕು, ಅವುಗಳಲ್ಲಿ ಮಾತ್ರ ಸದ್ವ್ಯವಸ್ಥೆಯಾಗಬೇಕೆಂದು ಯಾಕೆ ತೋರಬೇಕು, ಅಹಿಂದುಗಳ ಧಾರ್ಮಿಕ ಉಂಬಳಿಯ ವಿಷಯದಲ್ಲಿ ಯಾಕೆ ಆ ಭಾವನೆಯು ಹುಟ್ಟಬಾರದು ಮತ್ತು ಆ ಭಾವನೆಗನುಕೂಲವಾದ ಪ್ರಯತ್ನವಾಗ ಬಾರದು? ಇದಕ್ಕೆ ಮಂತ್ರಿಮಂಡಲದ ಹತ್ತಿರ ಯಾವ ಜವಾಬು ಇದೆ? ಮದ್ರಾಸು ಸಂಸ್ಥಾನದಲ್ಲಿ ಹೇಗೆ ಹಿಂದುಮತೀಯರಿದ್ದಾರೊ ಹಾಗೆಯೆ ಮಹಮ್ಮದ, ಕ್ರೈಸ್ತ ಇತ್ಯಾದಿ ಇತರ ಮತೀಯರು ಇದ್ದಾರೆ. ಅವರ ಉಂಬಳಿಗಳೂ ಇವೆ. ಆ ಬಗ್ಗೆ ಯೋಗ್ಯ ಜಾಗ್ರತೆಯನ್ನು ತೆಗೆದುಕೊಳ್ಳಲು ಈ ಮಂತ್ರಿಮಂಡಲದಲ್ಲಿ ಯೋಗ್ಯತೆ ಇಲ್ಲವೆ? ಹಾಗಿದ್ದದ್ದಾದರೆ ಈ ಮಂತ್ರಿಮಂಡಲವು ಅವುಗಳ ದಾರಿಗೆ ಯಾಕೆ ಹೋಗುವುದಿಲ್ಲ? ಸಾರಾಂಶ, ಇದು ದೇವಾಲಯ, ಗುರುಮಠ ಇವುಗಳಂಥ ಧಾರ್ಮಿಕ ಸಂಸ್ಥೆಗಳ ನಿಜವಾದ ಶ್ರೇಯಸ್ಸನ್ನು ಚಿಂತಿಸಿ ಮಾಡಿದ ಪ್ರಯತ್ನವಲ್ಲ. ಅನ್ಯಥಾ ಮನೋವಿಕಾರಗಳ ಪ್ರಾಬಲ್ಯದಿಂದ ಈ "ಬೀಲು" ಜನ್ಮವನೆತ್ತಿರುವುದು. ಆದ್ದರಿಂದಲೆ ಅದನ್ನು ನಿಷೇಧಿಸಿದ್ದಷ್ಟು ಕಡಿಮೆಯೆಂದೆ ನಾವು ತಿಳಿಯುವೆವು. ಮೇಲೆ ಹೇಳಿದ ಹಾಗೆ ಧಾರ್ಮಿಕ ಸಂಸ್ಥೆಗಳ ಶ್ರೇಯೋಭಿಲಾಷೆಯಿಂದ ಈ ಪ್ರಯತ್ನಗಳು ನಿಜವಾಗಿ ನಡೆಯುತ್ತಿದ್ದವಾದರೆ ನಾವು ಅವುಗಳನ್ನು ಎಲ್ಲರಿಗಿಂತಲೂ ಮುಂಚೆ ಅಭಿನಂದಿಸುತ್ತಿದ್ದೆವು. ಇದರ ಅಡಿಯಲ್ಲಿ ಕೆಲವರ ದುಃಸ್ವಾರ್ಥದ ಹುಳುಕು ಇದಗಿದ್ದದ್ದಕ್ಕೆ ಈ ಸಂಸ್ಥಾನದೊಳಗಿನ ಧರ್ಮಾಭಿಮಾನಿಗಳಾದ ಎಲ್ಲರೂ ಈ ಬೀಲನ್ನು ನಿಷೇಧಿಸುತ್ತಿದ್ದಾರೆ.

೪. ಮತ್ತು ಇಂಥ ದುಃಸ್ವಾರ್ಥದ ಹುಳುಕು ಇದರಡಿಯಲ್ಲಿದ್ದ ಕಾರಣ ಅದು ತಿದ್ದುಪಾಟನ್ನು ಹೊಂದಿದರೂ ತನ್ನ ಘಾತುಕತ್ವವನ್ನು ಬಿಟ್ಟಿಲ್ಲ. ನೀರುಳ್ಳಿಯ ಜಾಗೆ ಏಲಕ್ಕಿಯನ್ನು ಕೂಡಿಸಿದರೂ ಅಥವಾ ನೀರುಳ್ಳಿಯ ಪ್ರಮಾಣವನ್ನು ಕಡಿಮೆಮಾಡಿದರೂ ಅದು ತನ್ನ ಸ್ವಭಾವವನ್ನು ಬಿಡಬಲ್ಲದೆ? ಬೀಲಿನಲ್ಲಿ ನಿಜವಾಗಿ ಯಾವ ಸುಧಾರಣೆಗಳಾಗಿವೆ? "ಸೆಂಟ್ರಲ್ ಬೋರ್ಡಿ"ನಲ್ಲಿ ಆಯಾ ದೇವರ ಭಜಕರೆ ಮಾತ್ರ ಮೆಂಬರರಾಗಿರಬೇಕೆಂದಿಲ್ಲ; ಇತರರೂ ಇರಬಹುದು. ಎಂಬುದೊಂದು ಯಾವ ಕಲಮು ಉಂಟೊ ಅದು ಬೀಲಿನಲ್ಲಿ ಇನ್ನೂ ಇದೆ. ಸಾರ್ವಜನಿಕ ದೇಖರೇಖೆಯು ಇನ್ನೂ ಇಡಲ್ಪಟ್ಟಿದೆ. ಭಿಕ್ಷೆ ನೀಡುವ ಶ್ರಮದಿಂದ ಗುರುಮಠಗಳ ಆದಾಯವೆಚ್ಚವನ್ನು ತಿಳಿದು ಅದರ ಮೇಲೆ ಮಲ್ಲಿನಾಥಿಯನ್ನು ನಡಿಸಲು ಮತ್ತು ಅದನ್ನು ಸಾರ್ವಜನಿಕ ಉಪಯೋಗಾರ್ಥವಾಗಿ ಬಿಡುವಂತೆ ಏರ್ಪಡಿಸಲು ಉಪದ್ವ್ಯಾಪಿಗಳಿಗೆ ಸಾಕಷ್ಟು ಸಂದರ್ಭವು ಇನ್ನೂ ಇದೆ. ಇಂಥ ಅನೇಕ ದುಃಸಹವಾದ ವ್ಯಂಗಗಳು ಈ ಬೀಲಿನಲ್ಲಿ ಇರುತ್ತ ಬೀಲು ದುರುಸ್ತಿಯಾಗಿದೆ ಎಂದು ಸಂತೋಷಪಡುವುದಾಗಲಿ, ಕನಿಷ್ಠಪಕ್ಷದಲ್ಲಿ ಸಮಾಧಾನಪಡುವುದಾಗಲಿ ಅಪ್ರಯೋಜಕವೆ ಸರಿ. ಮೊದಲೆ ಈಗಿನ ಸ್ವರಾಜ್ಯ ಪ್ರಶ್ನೆಯಿಂದ ಸರಕಾರಕ್ಕೂ ಜನತೆಗೂ ಹಡಿದಾಟವು ಉಂಟು. ಅಂಥ ಪರಿಸ್ಥಿತಿಯಲ್ಲಿ ಸಾಕಷ್ಟು ವಿವೇಕವಿಲ್ಲದ್ದೂ ನಿರರ್ಗಲವೂ ಆದ ಮಂತ್ರಿಮಂಡಲದ ಮಾತಿನ ಮೇಲಿಂದ ಇಂಥ ಘಾತಕ ಆಲೋಚನೆಗಳಿಗೆ ಸರಕಾರವು ಕಾನೂನಿನಸ್ವರೂಪವನ್ನು ಕೊಡ ಹೋದರೆ ಬೆಂಕಿಯಲ್ಲಿ ತುಪ್ಪವಲ್ಲ, ಪೆಟ್ರೋಲನ್ನು ಹಾಕಿದ ಹಾಗಾದೀತು. ಆದ್ದರಿಂದ ಕೌನ್ಸಿಲಿನಲ್ಲಿ ಈ ವ್ಯಂಗತೆಯು ಒಂದು ವೇಳೆ ತಲೆಯನ್ನು ಎತ್ತಿ ಮುಂದರಿಸಿದರೂ ಇಲಾಖಾಧಿಪತಿಗಳು ತಮಗಿರುವ ಸರ್ಟಿಫಿಕೇಶನಿನ ಶಕ್ತಿಯಿಂದ ಕೊಯ್ದು ಲೋಕಮತವನ್ನು ಶಾಂತಪಡಿಸಿಯಾರೆಂದು ನಂಬಿದ್ದೇವೆ.

೫. ವರಿಷ್ಠ ಸರಕಾರದ ಕಾರಭಾರದಲ್ಲಿ ಹೇಗೊ ಹಾಗೆಯೆ ಪ್ರಾಂತಿಕ ಸರಕಾರಗಳ ಕಾರಭಾರಗಳಲ್ಲಿಯೂ ಖರ್ಚಿಗೆ ತತ್ಪರವಾಗಹತ್ತಿದೆ. ಇವರ ಎಲ್ಲಾ ಇಲಾಖೆಗಳಲ್ಲಿ ಹಣದ ಬರಗಾಲದ ದೊಡ್ಡ ಸಮುದ್ರವು ಪಸರಿಸಿಕೊಂಡಿದೆ. ಈ ಸಮುದ್ರವನ್ನು ಬತ್ತರಿಸಲು ಅಲ್ಲಲ್ಲಿ ಮಂತ್ರಿಗಳು ತಮ್ಮ ಸಂಬಳವನ್ನು ತಗ್ಗಿಸಿಕೊಳ್ಳುವ ಚಿಕ್ಕ ಚಿಕ್ಕ ಚಿಪ್ಪುಗಳಿಂದ ಯತ್ನಿಸುತ್ತಿದ್ದಾರೆ. ಮದ್ರಾಸಿನ ಮಂತ್ರಿಗಳು ಇಂಥದೊಂದು ಪ್ರಯತ್ನವನ್ನು ಕಾಯಿದೆಕೌನ್ಸಿಲಿನಲ್ಲಿ ಠರಾವಿನ ಮೂಲಕ ಮಾಡಿದ ಸಂಗತಿಯನ್ನು ವಾಚಕರಿಗೆ ತಿಳಿಸಿ ಹೆಚ್ಚು ಸಮಯವಾಗಲಿಲ್ಲ. ಅಷ್ಟರಲ್ಲಿ ಇದೆ ಸಾಲಿಗೆ ಸೇರಿದ ಆದರೂ ಇನ್ನೂ ಮನೋರಂಜಕವಾದ ಒಂದು ವಾರ್ತೆಯನ್ನು ತಿಳಿಪಡಿಸುವ ಸಂದರ್ಭವು ಒದಗಿದೆ. ಬಿಹಾರ ಪ್ರಾಂತದ ಕೌನ್ಸಿಲಿನ ಲೋಕಲ್ ಸೆಲ್ಫಗವರ್ನಮೆಂಟಿನ ಮಂತ್ರಿಗಳಾದ ನಾಮದಾರ ದಾಸರವರು ರಾಜಿಯನ್ನು ಕೊಟ್ಟಿರುವರು. ಈ ವಿಷಯದ ಸಂಕ್ಷಿಪ್ತವಾದ ಚರಿತ್ರೆಯು ಮುಂದಿನಂತಿರುವುದು. "ಮಂತ್ರಿಗಳಿಗೆ ಸಲ್ಲುವ ಸಂಬಳವು ಅಧಿಕವಾಗಿರುವುದು. ಆದರೂ ಬಹುಮಾನದ ಕಾರ್ಯವೆಂಬಂತೆ ಏನೂ ಸಂಬಳವನ್ನು ತೆಕ್ಕೊಳ್ಳದೆ ಮಂತ್ರಿತ್ವದ ಕಾರ್ಯವನ್ನು ನಡಿಸಲು ಗವರ್ನರರು ಮತ್ತು ವೈಸರಾಯರು ಅಪ್ಪಣೆಯನ್ನು ಕೊಡಬೇಕು, ಈ ರೀತಿಯಿಂದ ಗೌರವಾರ್ಥವಾಗಿ ಮಂತ್ರಿಯಾಗಲು ಸುಧಾರಣಾಕಾನೂನಿನಲ್ಲಿ ಅನುಕೂಲತೆಯು ಇಡಲ್ಪಟ್ಟಿದೆ." ಎಂದು ಉಲ್ಲೇಖಿಸಿ ನಾಮದಾರ ದಾಸರು ಬಿಹಾರ ಸರಕಾರಕ್ಕೆ ಒಂದು ಪತ್ರವನ್ನು ಬರೆದುಕೊಂಡರು. ಈ ಪತ್ರದಲ್ಲಿ, ಗೌರವಾರ್ಥವಾಗಿ ಮಂತ್ರಿತನವನ್ನು ತಾನು ನಡಿಸಲು ಸಿದ್ಧನಿದ್ದೇನೆ, ಆದರೆ ಆ ಮಂತ್ರಿತನದ ಉದ್ಯೋಗಕ್ಕೆ ಯಾವ ತರದಿಂದಲೂ ಬಾಧೆಬಾರದ ಹಾಗೆ ಉಳಿದ ಸಮಯದಲ್ಲಿ ವಕಾಲತನ್ನು ನಡಿಸಲು ತನಗೆ ಪ್ರತಿಬಂಧವಿರಬಾರದೆಂದು ನಾಮದಾರ ದಾಸರು ಉಲ್ಲೇಖಿಸಿದ್ದರು. ದಾಸರ ಈ ಪತ್ರವು ಗವರ್ನರರ ಕೈಯಲ್ಲಿರುವ ಈ ವೇಳೆಯಲ್ಲಿ, ಇತ್ತ ಕೌನ್ಸಿಲಿನಲ್ಲಿ ಲೋಕಪಕ್ಷದ ಸಭಾಸದರಲ್ಲೊಬ್ಬರು ಮಂತ್ರಿಗಳ ವೇತನವನ್ನು ತಗ್ಗಿಸಬೇಕೆಂಬ ಅರ್ಥದ ಠರಾವನ್ನು ತಂದರು. ಈ ಠರಾವಿನ ಮೇಲೆ ಚರ್ಚೆಯಾಗುವಾಗ "ನೀವು ಎಂದರೆ, ಜನರು ಹೇಳಿ ನಾವು ಸಂಬಳವನ್ನು ಕಡಿಮೆಮಾಡಿಕೊಳ್ಳುವುದರಲ್ಲಿ ಗೌರವವಾಗಲಿ ಸ್ವಾರ್ಥತ್ಯಾಗವಾಗಲಿ ಇರುವದಿಲ್ಲ. ನಾವಾಗಿಯೆ ಅದನ್ನು ಕಡಿಮೆ ಮಾಡಿಕೊಂಡರೆ ಅದೊಂದು ಭೂಷಣವು" ಎಂದು ಮುಂತಾದ ಉದಾತ್ತತತ್ವಗಳ ಮಿಶ್ರಣದಿಂದ ಕೂಡಿದ ಭಾಷಣವನ್ನು ನಾಮದಾರ ದಾಸಪ್ರಭೃತಿಗಳು ಮಾಡಿದರು. ತಥಾಪಿ ಮೇಲಿನ ಠರಾವು ಮುಂದರಿಸಿ ಪ್ರಚಂಡಬಹುಮತದಿಂದ ಪಾಸಾಯಿತು. ಕೌನ್ಸಿಲಿನಲ್ಲಿ ಈ ವಿಧವಾಗಿ ಮಂತ್ರಿಗಳ ಸಂಬಳಕ್ಕೆ ಚೂರಿಹಚ್ಚಿದಾಗ ಅತ್ತ ಬಿಹಾರಿನ ಗವರ್ನರ ಸಾಹೇಬರು ಸ್ಥಾನಿಕ ಸ್ವರಾಜ್ಯದ ಮಂತ್ರಿತ್ವದ ಉದ್ಯೋಗವನ್ನು ಬಹುಮಾನದ್ದಾಗಿ ಮಾಡಲು ಎಂದರೆ ನಿರ್ವೇತನನಾಗಿ ಮಾಡಲು ಅಲ್ಲಗಳೆದರು. ಗವರ್ನರು ತಮ್ಮ ಯೋಜನೆಯನ್ನು ಈ ಮೇರೆಗೆ ಅಲ್ಲಗಳೆದ ಪ್ರಯುಕ್ತ ನಾಮದಾರ ದಾಸರು ತಮ್ಮ ಉದ್ಯೋಗಕ್ಕೆ ರಾಜಿಯನ್ನು ಕೊಟ್ಟರು. ಇದು ವರೆಗೆ ವರಿಷ್ಠ ಸರಕಾರದ ಮತ್ತು ಪ್ರಾಂತಿಕ ಸರಕಾರಗಳ ಎಷ್ಟೊ ಹಿಂದಿ ಮಂತ್ರಿಗಳು ರಾಜಿಯನ್ನು ಕೊಟ್ಟಿದ್ದಾರೆ. ಶರೀರ ಪ್ರಕೃತಿಯ ಅಸ್ವಾಸ್ಥ್ಯ, ಹವಾಮಾನದ ಪ್ರತಿಕೂಲತೆ ಮುಂತಾದ ಸಂಗತಿಗಳೆ ಅವರ ರಾಜೀನಾಮೆಗಳ ಕಾರಣಗಳೆಂದು ತಿಳಿಯಬರುತ್ತಿತ್ತು. ಬಿಹಾರದ ದಾಸರ ಈ ರಾಜೀನಾಮೆಯಾದರೂ ಸರಕಾರಿ ಧೋರಣೆಗೂ ಮಂತ್ರಿಗಳ ಸೂಚನೆಗೂ ಸರಿಬೀಳದೆ ಇದ್ದದರಿಂದ ಸಂಭವಿಸಿರುವ ಕಾರಣ ಇದು ಈ ನಮೂನೆಯ ಮೊದಲನೆಯ ರಾಜೀನಾಮೆಯಾಗಿದೆ. ಈ ದೃಷ್ಟಿಯಿಂದ ಇದು ಮಹತ್ವದ್ದೆಂದು ತಿಳಿಯಬೇಕು.

ಮಂಗಳೂರು.

ಇಥಾರ ಸ್ವೀಕಾರ:—ಉಡುಪಿಯಲ್ಲಿ ಪ್ರಕಟವಾಗುವ ಸತ್ಯಾಗ್ರಹಿ ಎಂಬ ಕರ್ನಾಟಕ ವಾರಪತ್ರಿಕೆಯ ಪ್ರಥಮದ ಎರಡು ಸಂಚಿಕೆಗಳು ನಮ್ಮ ಕೈಸೇರಿವೆ. ಇದರಲ್ಲಿ ಕೊಂಗ್ರೆಸ್ಸಿನ ಪ್ರಚಲಿತ ಪರಿಸ್ಥಿತಿಯ ವಿಷಯಗಳು ಸುಲಭ ಶೈಲಿಯಿಂದ ಪ್ರಕಟವಾಗುತ್ತವೆ. ಇದರ ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೩-೧೪-೦. ಈ ನೂತನ ಬಂಧುವು ಚಿರಾಯುವಾಗಲೆಂದು ಬಯಸುವೆವು.

ಕೆನರಾ ಹೈಸ್ಕೂಲಿನ ೧೯೨೨ನೇ ವರುಷದ ವರದಿಯು ಸಹ ಕೈಸೇರಿದೆ.

ಉಡುಪಿಯ ಶಿರಸ್ತೆದಾರರಾದ ಮ. ರಾ. ಮುಲ್ಕಿ ಸುಬ್ಬರಾಯರಿಗೆ ಕುಂದಾಪುರದ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿ ವರ್ಗವಾಗಿದೆ. ಮತ್ತು ಮಿ| ಸಿ. ಪ್ಯಾಸರು ಉಡುಪಿಯ ಶಿರಸ್ತೆದಾರರಾಗಿ ವರ್ಗ ಹೊಂದಿದ್ದಾರೆ.

ಸ್ವಯಂಸೇವಕರು ಪಟ್ಟಣದಲ್ಲೆಲ್ಲಾ ತಿರುಗಿ ಖಾದಿಯನ್ನು ಮಾರುತ್ತಿರುವರು.

ನಮ್ಮ ಜಿಲ್ಲೆಯ ರೆವಿನ್ಯು ಇನ್ಸ್‌ಪೆಕ್ಟರರಲ್ಲಿ ಆರು ಮಂದಿಗಳನ್ನು ಕಡಿಮೆಮಾಡಲಿಕ್ಕಿದ್ದಾರೆ.

ನಮ್ಮ ಜಿಲ್ಲೆಯ ಸರ್ಜನರಾದ ಕರ್ನಲ್ ಜಿ. ಕರ್ರವೂಡರು ಒಂದು ತಿಂಗಳ ರಜೆಯನ್ನು ಹೊಂದಲಿಕ್ಕಿದ್ದಾರೆ. ಇವರ ರಜಾಕಾಲದಲ್ಲಿ ಇವರ ಬದಲಿಯನ್ನು ಕೆಪ್ಟನ್ ಮಂಗೇಶರಾವ್ ಎಂ. ಬಿ. ಬಿ. ಯಸ್. ಇವರು ನೋಡುವರು.

ಇದೇ ತಾರೀಕು ೧೮ ಮತ್ತು ೧೯ರಲ್ಲಿ ಮದರಾಸಿನಲ್ಲಿ ಸೇರುವ ಸಾಧುಮಂಡಲದ ಪರಿಷತ್ತಿಗೆ ಇಲ್ಲಿಂದಲೂ ನಾಲ್ಕು ಮಂದಿ ಪ್ರತಿನಿಧಿಗಳನ್ನು ಕಳುಹಿಸತಕ್ಕದೆಂದು ಕಳೆದ ತಾರೀಕು ೪ರಲ್ಲಿ ಸನ್ಯಾಸಿಗುಡ್ಡೆಯಲ್ಲಿ ಸೇರಿದ ಸಭೆಯಲ್ಲಿ ನಿರ್ಧರಿಸಿದೆ.

ಕಳೆದ ತಾರೀಕು ೧೫ರಿಂದ ಆರಂಭವಾಗತಕ್ಕದೆಂದು ನಿಶ್ಚಯಿಸಿದ ದಕ್ಷಿಣ ಕನ್ನಡ ಮಲಬಾರ ಮತ್ತು ಕೊಯಮುತ್ತೂರು ಜಿಲ್ಲೆಗಳ ಬಗ್ಗೆ ಏರ್ಪಡಿಸಿದ ಟೆನ್ನಿಸ್‌ಟೂರ್ನಮೆಂಟ ಪಂದ್ಯಾಟವು ಬರುವ ತಾರೀಕು ೨೭ರಿಂದ ಶುರುವಾಗುತ್ತದೆ.

ಇತ್ತಲಾಗಿ ಕೆಲವು ತಿಂಗಳುಗಳಿಂದ ವಕೀಲವೃತ್ತಿಯನ್ನು ನಡಿಸಿಕೊಂಡಿದ್ದ ಇಮಾಮುದ್ದೀನ್ ಸಾಹೇಬ್ ಬಹದ್ದೂರ್ ಬಿ. ಎ. ಬಿ. ಎಲ್. ರವರು ಕಳೆದ ಶನಿವಾರ ಪ್ಲೇಗ್ ರೋಗದಿಂದ ಅಕಾಲ ಮೃತ್ಯುವಿನ ವಶರಾದರೆಂದು ತಿಳಿಸಲು ತುಂಬಾ ಖೇದವಾಗುತ್ತಿದೆ. ಇಲ್ಲಿಯ ಮಹಮ್ಮದೀಯರಲ್ಲಿ ವಕಾಲತು ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಇವರು ಮೊದಲನೇಯವರು. ಪ್ರೌಢವಿದ್ಯೆಯನ್ನು ಹೊಂದಿದ ಈ ಗೃಹಸ್ಥರು ತಮ್ಮ ಉದ್ಯೋಗವನ್ನು ಪ್ರಾರಂಭಿಸಿ ಕೆಲವು ತಿಂಗಳುಗಳು ದಾಟುವುದರೊಳಗಾಗಿಯೇ ಕಾಲವಶವಾದುದು ಎಲ್ಲರ ವಿಶೇಷವಾಗಿ ನಮ್ಮ ಮಹಮ್ಮದೀಯ ಬಾಂಧವರ ದುರ್ದೈವವೇ ಸರಿ. ಇವರ ಆತ್ಮಕ್ಕೆ ಚಿರಶಾಂತಿಯನ್ನು ಬಯಸುವೆವು.

ನಮ್ಮ ಜಿಲ್ಲೆಯಿಂದ ಮದರಾಸ ಲೆಜಿಸ್ಲೇಟಿವ್ ಕೌನ್ಸಿಲಿಗೆ ಮಹಮ್ಮದೀಯ ರೂರಲ್ ಕೊನ್ಸ್‌ಟಿಟ್ಯುಯನ್ಸಿನ ಬಗ್ಗೆ ಮೆಂಬರರಾಗಿ ಆರಿಸಲ್ಪಟ್ಟ ಮಿ| ಅಬ್ದುಲ್ ಖಾಸಿಂಖ್ಯಾರಿ ಸಾಹೇಬ ಬಹದ್ದೂರರು ರಾಜಿಕೊಟ್ಟದ್ದರಿಂದ ಈ ಸ್ಥಾನಕ್ಕೆ ಉಡುಪಿತಾಲೂಕು ಬೋರ್ಡ ಪ್ರೆಸಿಡೆಂಟರಾದ ಖಾನ್ ಬಹದ್ದೂರ್ ಹಾಜಿಅಬ್ದುಲ್ಲ ಹಾಜಿಖಾಸಿಂ ಸಾಹೇಬ ಬಹದ್ದೂರರು ಉಮೇದುವಾರರಾಗಿ ನೊಮಿನೇಶನ್ ಅರ್ಜಿಯನ್ನು ಕೊಟ್ಟಿದ್ದಾರೆ.

ಕಳೆದ ತಾರೀಕು ೪ನೇ ಆದಿತ್ಯವಾರ ಮಂಗಳೂರ ಕೆಥೋಲಿಕ ಕೋ-ಒಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗು ಸೇರಿತು. ಈ ಮೀಟಿಂಗಿನಲ್ಲಿ ಚಾಲತಿ ವರುಷದ ಬಗ್ಗೆ ಕೆಳಗಿನ ಕಾರ್ಯಕಾರಿ ಮೆಂಬರರ ಕಮ್ಮಿಟಿಯು ಆರಿಸಲಾಯಿತು. ಡಾಕ್ಟರ್. ಎಲ್. ಪಿ. ಫೆರ್ನಾಂಡಿಸ್, ರೆವರೆಂಡ್ ಫಾದರ ಎ. ಜೆ. ಡಿಸೋಜ, ಮಿ| ಎ. ಜೆ. ಡಿಸೋಜ, ಮಿ| ಜೆ. ಪಿ. ಪಿಕೇರ ಬಿ. ಎ. ಬಿ. ಎಲ್. ಮಿ| ಎ. ಮೊಂತೇರೋ ಬಿ. ಎ. ಎಲ್. ಟಿ. ಮಿ| ಜೆ. ಎಂ. ಕಾಸ್ತೆಲಿನೋ, ಮಿ| ಎಲ್. ಸಿ. ಪ್ಯಾಸ್ ಬಿ. ಎ. ಬಿ. ಎಲ್. ಮಿ| ಎ. ಎಮ್. ಮಥಾಯಸ್, ಮಿ| ಪಿ. ಡಿ. ಸೋಜ ಬಿ. ಎ. ಬಿ. ಎಲ್. ಮಿ| ಜೆ. ಅಲ್ವರಿಸ್ ಮತ್ತು ಮಿ| ಯು. ಕಣ್ಣಪ್ಪ ಎ. [illegible] ಎಲ್. ಟಿ. ತಾ. ೪ರಲ್ಲಿ ನೆರೆದ ಸಭೆಯು ಕಾರ್ಯ ಮುಗಿಯದೆ ಇದ್ದುದರಿಂದ ಈ ಸಭೆಯನ್ನು ತಾರೀಕು ೧೧ಕ್ಕೆ ಮುಂದರಿಸಲ್ಪಟ್ಟಿತು. ಆದರೆ ಅಂದು ಸಾಕಷ್ಟು ಮೆಂಬರರು ಹಾಜರಿಲ್ಲದೆ ಇರುವುದರಿಂದ ಈ ಸಭೆಯನ್ನು ಬರುವ ಆದಿತ್ಯವಾರಕ್ಕೆ ಮುಂದರಿಸಿಟ್ಟಿದೆ.

ಪ್ಲೇಗ್‌ರೋಗವು ಇನ್ನೂ ಉಗ್ರ ಸ್ಥಿತಿಯಲ್ಲೆ ಇದೆ. ಇಲಿಗಳು ಬೀಳುವುದು ಕಡಿಮೆಯಾಗಲಿಲ್ಲ. ಸಿಡುಬು ಮೊದಲಾದ ಅಂಟುರೋಗಗಳೂ ತಲೆ ಎತ್ತಿವೆ. ಸೆಖೆಯು ಹೆಚ್ಚಾಗಿದೆ. ನಿನ್ನೆ ಸಾಯಂಕಾಲ ಸುಮಾರು ೬ ಘಂಟೆಗೆ ಸಣ್ಣ ಗುಡುಗು ಮಿಂಚು ಬಡಿದು ರಾತ್ರಿ ಮಳೆ ಸುರಿದಿದೆ.

ಮಂಗಳೂರು ತಾಲೂಕು ಕೊಂಗ್ರೆಸ್ ಕಮಿಟಿಯ ಮಹಾಸಭೆಯು ಇದೇ ತಾ. ೨೪ನೇ ಶನಿವಾರ ಸಾಯಂಕಾಲ ಘಂಟೆ ೪ಕ್ಕೆ ತಿಲಕ ಮಹಾ ವಿದ್ಯಾಲಯದಲ್ಲಿ ಜರಗುವುದು. ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆ, ಮುಂಚಿನ ಲೆಕ್ಕದ ಮಂಜೂರಾತಿ ನಿಯಮಗಳ ಬದಲಾವಣೆ ಮೊದಲಾದ ಕೆಲಸಗಳು ನಡೆಯುವುವು.

ಇಲ್ಲಿಯ ಮುನ್ಸಿಪಲ್ ಆಫೀಸಿನಲ್ಲಿ ಇಲಿ ಬಿದ್ದಿರುವುದರಿಂದ ಮುನ್ಸಿಪಲ್ ಆಫೀಸನ್ನು ಕಳೆದ ತಾರೀಖು ೧೨ರಿಂದ ಮ. ರಾ. ನೆಲ್ಲಿಕಾಯಿ ವೆಂಕಟರಾಯರ ಮನೋಹರ ವಿಲಾಸದ ಎದುರಿನಲ್ಲಿರುವ ಮಿಶನ್ ಶೋಪಿನ ಮಾಳಿಗೆಗೆ ಒಯ್ದಿದೆ.

ಮುನ್ಸಿಪಲ್ ಕೌನ್ಸಿಲಿನ ಈ ತಿಂಗಳ ಮೀಟಿಂಗು ಬರುವ ತಾರೀಖು ೧೯ರಲ್ಲಿ ಸೇರಲಿಕ್ಕಿದೆ.

ಮ. ರಾ. ಕಾರ್ನಾಡ ಸದಾಶಿವರಾಯರು ರಾಜನಿಷ್ಠೆಯ ಪ್ರತಿಜ್ಞೆಯನ್ನು ತೆಗೆದುಕೊಳ್ಳದೇ ಇರುವುದರಿಂದ ಅವರ ಬದಲಿಗೆ ಬೇರೊಬ್ಬರನ್ನು ಮುನ್ಸಿಪಲ್ ಕೌನ್ಸಿಲಿಗೆ ಮೆಂಬರರಾಗಿ ಆರಿಸಲಾಗುವುದೆಂದು ಜಾಹೀರಪಡಿಸಿತ್ತಷ್ಟೆ. ಈಗ ಸದರಿ ಸ್ಥಾನಕ್ಕೆ ಪುನಃ ಮ. ರಾ. ಸದಾಶಿವರಾಯರಲ್ಲದೆ ಬೇರೆ ಉಮೇದುವಾರರು ಮುಂದೆ ಬರಲಿಲ್ಲವಾದ್ದರಿಂದ ಅವರೇ ಪುನಃ ಕೌನ್ಸಿಲರರಾಗುವರು.

ಇದೇ ತಾ. ೧೬ರಿಂದ ೧೮ರ ವರೆಗಿನ ಕಾರ್ಯಕ್ರಮವು ಈ ಕೆಳಗಿನಂತಿರುವುದು. ತಾ. ೧೬ನೇ ಬೆಳಿಗ್ಗೆ ಘಂಟೆ ೭ಕ್ಕೆ ತಿಲಕ ವಿದ್ಯಾಲಯದಿಂದ ಮೆರವಣಿಗೆ. ಸಾಯಂಕಾಲ ಘಂಟೆ ೫ಕ್ಕೆ ತಿಲಕ ವಿದ್ಯಾಲಯದಲ್ಲಿ ಹರಿಕೀರ್ತನೆ. ತಾ. ೧೭ನೇ ಬೆಳಗ್ಗೆ ಘಂಟೆ ೭ಕ್ಕೆ ಮೆರವಣಿಗೆ. ಸಾಯಂಕಾಲ ಘಂಟೆ ೫ಕ್ಕೆ ಮೈದಾನಿನಲ್ಲಿ ಸಭೆ. ತಾ. ೧೮ನೇ ಬೆಳಿಗ್ಗೆ ಘಂಟೆ ೭ಕ್ಕೆ ಮೆರವಣಿಗೆ. ಹರತಾಲ ಸಾಯಂಕಾಲ ಘಂಟೆ ೪ಕ್ಕೆ ಮೆರವಣಿಗೆ. ಗಂಟೆ ೫ಕ್ಕೆ ಸಭೆ. ಈ ಎಲ್ಲಾ ಕಾರ್ಯಗಳಿಗೂ ಎಲ್ಲರೂ ಬರಬೇಕಾಗಿ ಮಂಗಳೂರ ತಾಲೂಕು ಕೊಂಗ್ರೆಸ್ ಕಮ್ಮಿಟಿಯ ಕಾರ್ಯದರ್ಶಿಗಳಾದ ಮ. ಉಮೇಶರಾಯರ ವಿನಂತಿ.

ಹಿಂದೂದೇವಸ್ಥಾನಗಳ ಮತ್ತು ಮಠಗಳ ಆಡಳಿತೆ ಬಗ್ಗೆ ತಯಾರಾದ ಬಿಲ್ಲಿನ ಕುರಿತು ನೇಮಿಸಲ್ಪಟ್ಟ ಕಮ್ಮಿಟಿಯವರಲ್ಲಿ ಬಹುಸಂಖ್ಯಾಕರ ರಿಪೋರ್ಟು.

ಈ ಕಮ್ಮಿಟಿಯ ಮೆಂಬರರಲ್ಲಿ ಬಹುಸಂಖ್ಯಾಕರು (Majority) ಕೆಳಗಿನ ರೀತಿಯಲ್ಲಿ ರಿಪೋರ್ಟನ್ನು ಬರೆದಿರುತ್ತಾರೆ:—

ಬಿಲ್ಲಿನಲ್ಲಿ ಕಾಣಿಸಿದ ಮುಖ್ಯವಾದ ಸಂಗತಿಗಳನ್ನು ಹಾಗೆಯೇ ಇಟ್ಟು, ಕೆಲವು ಸಂಗತಿಗಳಲ್ಲಿ ಅವನ್ನು ವಿವರವಾಗಿ ಬರೆದಿದ್ದೇವೆ. ಮತ್ತು ಕೆಲವು ಸಂಗತಿಗಳಿಗೆ ಸ್ವಲ್ಪ ಹೆಚ್ಚಿಗೆ ಕೂಡಿಸಿ ಬರೆದಿದ್ದೇವೆ. ಹೀಗೆ ಕೂಡಿಸಿದ್ದರಿಂದ ಬಿಲ್ಲಿನಲ್ಲಿರುವ ಅಧ್ಯಾಯಗಳನ್ನೂ, ಸೆಕ್ಷನುಗಳನ್ನೂ, ಬೇರೆ ವಿಧವಾಗಿ ಬರೆಯಬೇಕಾಯಿತು.

ಮಠಸಂಸ್ಥೆಗಳು:—ಮಠಾಧಿಪತಿಗಳಿಗೆ ಆಡಳಿತೆ ಬಗ್ಗೆ ಒಪ್ಪಿಸಿಕೊಟ್ಟ ದೇವಸ್ಥಾನಗಳ ಮತ್ತು ಮಠಸಂಸ್ಥೆಗಳ ಸಂಗತಿಗಳಲ್ಲಿ ಅಂಥಾ ಮಠಾಧಿಪತಿಗಳೇ ಆಡಳಿತೆದಾರರಾಗಿರುತ್ತಾರೆಂತ ತಿಳಕೊಳ್ಳಬೇಕು. ಮತ್ತು ಇವುಗಳನ್ನು ಹೊಸ ಕಾಯಿದೆಗೆ ಒಳಪಡಿಸುವುದರಲ್ಲಿ ಆಕ್ಷೇಪವಿಲ್ಲ. ಮಠಗಳ ಸ್ವಂತ ಆಸ್ತಿಯ ವಿಷಯದಲ್ಲಿ ಮಠಾಧಿಪತಿಗಳನ್ನು ಆಡಳಿತೆದಾರರಾಗಿ ಎಣಿಸಬಾರದು. ಮತ್ತು ಇಂಥಾ ಆಸ್ತಿಯ ಮೇಲ್ವಿಚಾರಣೆಯ ವಿಷಯದಲ್ಲಿ ಕೈಹಾಕಲಿಕ್ಕೆ ಹೊಸ ಕಾನೂನಿನಲ್ಲಿ ಎಡೆಕೊಡಬಾರದು. ಮೇಲಿನಂತೆ ಎಡೆಕೊಟ್ಟರೆ ಒಬ್ಬ ಖಾಸಗಿ ಮನುಷ್ಯನ ಆಡಳಿತೆಯಲ್ಲಿ ಕೈಹಾಕಿದಂತೆ ಅನ್ಯಾಯವಾಗುವುದು. ಈ ರೀತಿ ಮಠಾಧಿಪತಿಗಳನ್ನು ನಡಿಸುವುದು ಸರಿಕಾಣಲಿಕ್ಕಿಲ್ಲ. ಮಠದ ಆಸ್ತಿಯನ್ನು ಆಡಳಿತೆ ಬಗ್ಗೆ ಅತೀ ಅಗತ್ಯ ಸಂಗತಿಗಳಲ್ಲಿ ಅಲ್ಲದೆ ಇತರ ಸಂಗತಿಗಳಲ್ಲಿ ಬೇರೆಯವರಿಗೆ ವಹಿಸಿಕೊಡಲಿಕ್ಕೆ ಅಧಿಕಾರವಿರಕೂಡದು. ಮಠದ ಭೂಮಿಯ ಉತ್ಪತ್ತಿಯನ್ನೂ, ಮತ್ತು ಕಾಣಿಕೆ ಮುಂತಾದ್ದರಿಂದ ಹುಟ್ಟಿ ಬರುವ ಹಣವನ್ನೂ, (ನಮ್ಮ ಮುಂದೆ ಕೊಟ್ಟ ಸಾಕ್ಷಿಗಳ ಆಧಾರದಿಂದ) ಮಠದ ಖರ್ಚಿನ ಮತ್ತು ಮಠಾಧಿಪತಿಗಳ ಖರ್ಚಿನ ಬಗ್ಗೆ ಉಪಯೋಗಿಸಬಹುದು. ಬೇರೆ ಯಾವ ಉಪಯೋಗಕ್ಕಾದರೂ ಈ ಉತ್ಪತ್ತಿಯನ್ನು ಉಪಯೋಗಿಸುವುದು ಸರಿಯಲ್ಲ. ಆದ್ದರಿಂದ ಮಠದ ಆಸ್ತಿಯು ಆಯಾ ಸಮಯಗಳಲ್ಲಿ ಮಠಾಧಿಕಾರವನ್ನು ಹೊಂದುವ ಮಠಾಧಿಪತಿಗಳ ಸ್ವಂತ ಆಸ್ತಿಯೆಂದು ಎಣಿಸಲಾಗದೆ ದುರ್ಮಾರ್ಗಿಯವು ಕಂಡುಬಂದಲ್ಲಿ ಶಿಷ್ಯ ವರ್ಗದವರು ಆಡಳಿತೆಯಲ್ಲಿ ಕೈಹಾಕಿ ಸರಿಪಡಿಸಬಹುದು.

ಮಠಗಳನ್ನು ಸ್ಥಾಪಿಸಿದ ಉದ್ದೇಶವು ಶಿಷ್ಯವರ್ಗದವರ ಆತ್ಮಿಕ ವಿಚಾರಕ್ಕಾಗಿಯೇ ಆಗಿದೆಯಲ್ಲದೆ ಮತ್ತಾವುದಕ್ಕೂ ಅಲ್ಲ. ಮಠಾಧಿಪತಿಗಳೆಲ್ಲರೂ ಸನ್ಯಾಸಿಗಳಾದ್ದರಿಂದ, ಶಿಷ್ಯವರ್ಗದವರ ಆತ್ಮಿಕ ವಿಚಾರವನ್ನು ನೋಡುವ ಕೆಲಸವಲ್ಲದೆ ಬೇರೆ ಯಾವ ಕೆಲಸವೂ ಈ ಮಠಾಧಿಪತಿಗಳಿಗೆ ಇರುವುದಿಲ್ಲ. ಅನೇಕ ಮಠಾಧಿಪತಿಗಳ ಕೈಕೆಳಗೆ ಹೆಚ್ಚು ಆಸ್ತಿಯು ಇದ್ದುದರಿಂದಲೂ ಕೆಲವು ಮಠಾಧಿಪತಿಗಳು ಮಠದ ಹುಟ್ಟುವಳಿಯನ್ನು ತಮಗೆ ಸರಿತೋರಿದಂತೆ ದುರುಪಯೋಗಮಾಡಿದ್ದಾರೆಂದೂ, ಅನೇಕ ಸಂಗತಿಗಳಿಂದ ತಿಳಿದುಬಂದಿದೆ. ಹೀಗಿರುವುದರಿಂದ ಮಠಗಳನ್ನು ಈ ಕಾನೂನಿನಿಂದ ಹೊರಪಡಿಸುವುದು ಸಾಧ್ಯವಿಲ್ಲ.

ಅಂಗೀಕರಿಸಲ್ಪಟ್ಟ ದೇವಸ್ಥಾನಗಳು:—ಮೇಲಿನ ರೀತಿಯಲ್ಲಿಯೇ ಅಂಗೀಕರಿಸಲ್ಪಟ್ಟ ದೇವಸ್ಥಾನಗಳನ್ನು ಪಡಿಸುವುದಕ್ಕೆ ನಾವು ಶಿಫಾರಸು ಮಾಡಿದ್ದೇವೆ. ಅಂಗೀಕರಿಸಲ್ಪಟ್ಟ ದೇವಸ್ಥಾನಗಳು ಯಾವುವೆಂದು ಬಿಲ್ಲಿನ ೫ನೇ ಶೆಡ್ಯೂಲಿನಲ್ಲಿ ವಿವರಿಸಲ್ಪಟ್ಟಿದೆ.

“ಸಂತಾನಪಾರಂಪರ್ಯ ದೇವಸ್ಥಾನಗಳು”:—ಈ ಶಬ್ದಗಳನ್ನು ನಾವು ತೆಗೆದುಹಾಕಿದ್ದೇವೆ. ಸಂತಾನಪಾರಂಪರ್ಯ ದೇವಸ್ಥಾನಗಳೆಂದರೆ, ಸಂತಾನಪಾರಂಪರ್ಯ ಆಡಳಿತೆದಾರರು ಆಡಳಿತೆ ನೋಡಿಕೊಂಡು ಬರುವ ದೇವಸ್ಥಾನಗಳು ಎಂದು ಅರ್ಥ. ೧೮೪೨ನೇ ಇಸವಿಯಲ್ಲಿ ಇಂಡಿಯಾ ಸರಕಾರವು ಮೂರ್ತಿಪೂಜೆಮಾಡುವ ದೇವಸ್ಥಾನಗಳ ಆಡಳಿತೆಯನ್ನು ಬಿಟ್ಟುಬಿಡಬೇಕೆಂದು ಕೋರ್ಟ್ ಒಫ್ ಡ್ಯಾರೆಕ್ಟರರ ಹುಕುಂ ಜಾರಿಗೆ ಬಂತು. ಆ ಸಮಯದಲ್ಲಿ ಸಂತಾನಪಾರಂಪರ್ಯದ ಆಡಳಿತೆದಾರರಿಗೆ ಈ ದೇವಸ್ಥಾನಗಳನ್ನು ಒಪ್ಪಿಸಿಕೊಡುವಾಗ ೧೮೪೨ನೇ ಇಸವಿಯ ನಂತರ ಹೊಸ ಸಂತಾನಪಾರಂಪರ್ಯ ಹಕ್ಕಿನ ಆಡಳಿತೆದಾರರನ್ನು ಸರಕಾರವು ನೇಮಿಸಿತು. ಅಂಥಾ ಆಡಳಿತೆದಾರರ ಸಂಗತಿಯಲ್ಲಿಯೂ ಈ ಕಾನೂನಿನಿಂದ ಅವರನ್ನು ವಿನಾಯತಿಪಡಿಸಲು ಸಾಧ್ಯವಿಲ್ಲ. ಈ ಸಂತಾನಪಾರಂಪರ್ಯ ಆಡಳಿತೆದಾರರು ಹೆಚ್ಚಾಗಿ ಜವಿೂನುದಾರರೂ, ದೊಡ್ಡ ವರ್ಗದಾರರೂ ಆಗಿರುತ್ತಾರೆ. ಈ ಜವಿೂನುದಾರರೂ ವರ್ಗದಾರರೂ ಮತ್ತು ಇತರರು ಈ ದೇವಸ್ಥಾನಗಳಿಗೆ ಅವುಗಳ ವಿನಿಯೋಗಗಳ ಬಗ್ಗೆ ಹೆಚ್ಚು ಉಂಬಳಿಯನ್ನು ಬಿಟ್ಟಿರುತ್ತಾರೆ. ಆದ್ದರಿಂದ ಇಂಥಾ ದೇವಸ್ಥಾನಗಳ ಆಡಳಿತೆಯನ್ನು ಕಮ್ಮಿಟಿಯವರಿಗೆ ಒಪ್ಪಿಸಿಕೊಡಲಿಕ್ಕೆ ಇವರು ಆಕ್ಷೇಪಿಸುತ್ತಾರೆ. ಅದಲ್ಲದೆ ಅಂಥಾ ಜವಿೂನುದಾರರು ಮುಂತಾದವರ ಕೈಯಿಂದ ಆಡಳಿತೆಯನ್ನು ತಪ್ಪಿಸಿದರೆ ಅಂಥವರಿಂದ ಇಷ್ಟರ ವರೆಗೆ ಸಿಗುತ್ತಿದ್ದ ಮತ್ತು ಇನ್ನು ಮುಂದೆ ಸಿಗುವ ಹಣಸಹಾಯವು ಕಡಿಮೆಯಾಗಿ ದೇವಸ್ಥಾನಗಳು ಹೀನಸ್ಥಿತಿಗೆ ಬರುವುವು.

ಸೆಂಟ್ರಲ್ ಬೋರ್ಡುಗಳು:—ಬಿಲ್ಲಿನಲ್ಲಿ ಕಾಣಿಸಿದ ಕಮ್ಮಿಟಿ ಮೆಂಬರರೂ, ಆಡಳಿತೆದಾರರೂ ಅಲ್ಲದೆ, ಇಂಗ್ಲೆಂಡಿನಲ್ಲಿ ಧರ್ಮಸಂಸ್ಥೆಗಳ ಕಮ್ಮಿಶನರ (Charity Commissioner) ಹಾಗೆಯೇ ಇಲ್ಲಿಯೂ ಸರ್ವಾಧಿಕಾರದ ಒಂದು ಬೋರ್ಡು ಎಂಬುದನ್ನು ಮಾಡಬೇಕೆಂದು ಈಗ ನಾವು ತಿದ್ದುಪಡಿಮಾಡಿದ ಬಿಲ್ಲಿನಲ್ಲಿ ಕೂಡಿಸಿದ್ದೇವೆ. ಆಡಳಿತೆಯನ್ನು ನೋಡುವುದೇ ಈ ಬೋರ್ಡಿನವರ ಮುಖ್ಯ ಕೆಲಸ. ೧೮೬೩ನೇ ಇಸವಿಯ ೨೦ನೇ ಆಕ್ಟಿಗನುಗುಣವಾಗಿ ಮಾಡಿದ ದೇವಸ್ಥಾನಗಳ ಆಡಳಿತೆಯ ಸ್ಥಳೀಕ ಕಮ್ಮಿಟಿಗಳ ಮೇಲೆ ಸರಿಯಾದ ಮೇಲಾಧಿಕಾರವಿಲ್ಲದೆಯೂ ಕೆಲಸವು ಸರಿಯಾಗಿ ನಡಿಸುವ ರೀತಿಯೂ ಆ ಕಮ್ಮಿಟಿಗೆ ಸರಿಯಾಗಿ ತಿಳಿಯದೆಯೂ ಇದ್ದುದರಿಂದ ಕೆಲಸವು ಸರಿಯಾಗಿ ನಡಿಯಲಿಲ್ಲ. ಬೋರ್ಡನ್ನು ಉಂಟುಮಾಡಿದರೆ ಈ ಕೊರತೆಯನ್ನು ಹೋಗಲಾಡಿಸಿದಂತಾಗುವುದು. ಕಮ್ಮಿಟಿಯವರ ಅಧಿಕಾರದಿಂದ ವಿನಾಯಿಸಲ್ಪಟ್ಟ ಮಠಗಳ ಮತ್ತು ದೇವಸ್ಥಾನಗಳ ಮೇಲ್ವಿಚಾರಣೆಯನ್ನು ನೋಡುವುದು ಈ ಬೋರ್ಡಿನ ಕೆಲಸವಾಗಿದೆ. ಬೇರೆ ದೇವಸ್ಥಾನಗಳ ಕಮ್ಮಿಟಿಯವರು ಮಾಡಿದ ತೀರ್ಮಾನಗಳ ವಿಷಯವಾಗಿಯೂ ರೆವಿನ್ಯೂ ಬೋರ್ಡಿನವರು ಅಪೀಲುಗಳನ್ನು ತನಖಿ ಮಾಡಿದ ಹಾಗೆಯೇ ಈ ಬೋರ್ಡು ಮಠಸಂಸ್ಥೆಗಳ ಅಪೀಲುಗಳನ್ನು ತನಖಿ ಮಾಡುವುದು. ಈಗ ಪ್ರಥಮತಃ ಮದರಾಸು ಸಂಸ್ಥಾನಕ್ಕೆ ಇಂಥಾ ಒಂದು ಬೋರ್ಡನ್ನು ಸ್ಥಾಪಿಸಿದರೆ ಸಾಕಾಗುವುದು. ಅನಂತರ ಕೆಲಸ ಹೆಚ್ಚಾದ ಹಾಗೆ ಹೆಚ್ಚು ಬೋರ್ಡುಗಳನ್ನು ಸ್ಥಾಪಿಸಬಹುದು.

ಲೆಕ್ಕಗಳ ಸರಿಯಾದ ಪರಿಶೋಧನೆ:—ಈ ಮೊದಲು ತಯಾರಾದ ಬಿಲ್ಲಿನಲ್ಲಿ ಸರ್ಟಿಫಿಕೇಟು ಪಡೆದ ಲೆಕ್ಕಪರಿಶೋಧಕರಿಂದ ಲೆಕ್ಕ ತನಖಿಮಾಡಿದರೆ ಸಾಕೆಂದು ಇತ್ತು. ಲೆಕ್ಕ ಪರಿಶೋಧನೆ ಮಾಡಿದ್ದಕ್ಕಾಗಿ, ಲೆಕ್ಕಪರಿಶೋಧಕರು ತಮ್ಮ ಸಂಬಳವನ್ನು ಆಡಳಿತೆದಾರರಿಂದ ಪಡಿಯುವದಾದರೆ ಲೆಕ್ಕಗಳು ಸರಿಯಾಗಿ ಪರಿಶೋಧನೆ ಮಾಡಲ್ಪಡಲಿಕ್ಕಿಲ್ಲ. ಆದ್ದರಿಂದ ಸರಕಾರದವರಿಂದಲೇ ಲೆಕ್ಕಪರಿಶೋಧಕರನ್ನು ನೇಮಿಸುವುದು ಒಳ್ಳೇದು.

ಹಣದ ಉಪಯೋಗ:—ಈ ಮೊದಲು ತಯಾರಿಸಿದ ಬಿಲ್ಲಿನ ೩೨ನೇ ಕ್ಲೋಜಿನ ಪ್ರಕಾರ ಡಿಸ್ಟ್ರಿಕ್ಟ ಮುನ್ಸಿಪಾಲಿಟಿಯ ಮತ್ತು ಲೋಕಲ್ ಬೋರ್ಡಿನ ಆಕ್ಟುಗಳಿಗನುಗುಣವಾಗಿ ಕೆಲವು ಸಂಗತಿಗಳನ್ನು ಈ ಕ್ಲೋಜಿಗೆ ಕೂಡಿಸಿತ್ತು. ಈ ಕೂಡಿಸಿದ ಸಂಗತಿಗಳನ್ನು ತೆಗೆದುಹಾಕಬೇಕು. ಆಡಳಿತೆದಾರನಿಗೆ ಯಾತ್ರಿಕರ ಮತ್ತು ಆಯಾ ದೇವಸ್ಥಾನದ ಭಜಕರ ಅನುಕೂಲತೆಗಳಿಗೆ ಸರಿಯಾಗಿ ಖರ್ಚುಮಾಡುವ ಅಧಿಕಾರವನ್ನು ಕೊಡಬಹುದು. ಹೀಗೆ ಮಾಡಿದರೆ ಆಡಳಿತೆದಾರನು ಹಣವನ್ನು ದುರುಪಯೋಗಮಾಡುವದನ್ನು ನಿಲ್ಲಿಸಬಹುದು. ೬೩ನೇ ಕ್ಲೋಜು. ಈ ಮೊದಲು ತಯಾರಿಸಿದ ಬಿಲ್ಲಿನ ೩೩ನೇ ಕ್ಲೋಜಿಗೆ ಸರಿಯಾಗಿ ಈ ೬೩ನೇ ಕ್ಲೋಜು ಬರಿಯಲ್ಪಟ್ಟಿದೆ. ಇದಕ್ಕೆ ಎಲ್ಲಾ ಕಡೆಗಳಿಂದಲೂ ಅನೇಕ ಆಕ್ಷೇಪಗಳು ಬಂದಿವೆ. ಆದ್ದರಿಂದ ಇದರ ಪ್ರಕಾರವಿರುವ ಸೈಪ್ರಸ್ ಡೊಕ್ಟ್ರಿನನ್ನು ಲಗಾವು ಮಾಡುವುದನ್ನು ಬಹಳ ಕಡಿಮೆಮಾಡಿದ್ದೇವೆ. ಈ ಸೂತ್ರಕ್ಕೆ ಸರಿಯಾಗಿ ಹಣದ ಉಪಯೋಗಮಾಡುವ ಅಧಿಕಾರವು ಆಡಳಿತೆದಾರನಿಗೂ ಬೋರ್ಡಿಗೂ ಮಾತ್ರವೇ ಕೊಡಲ್ಪಟ್ಟಿದೆ. ದೇವಸ್ಥಾನದಲ್ಲಿ ಹೆಚ್ಚಿಗೆ ಹಣ ಉಳಿದದ್ದೂ ಎಂಬುದನ್ನು ನೋಡುವ ಅಧಿಕಾರವು ಕೋರ್ಟಿನವರಿಗೆ ಇಟ್ಟಿದೆ. ಆದರೆ ಅಂಥಾ ಕೋರ್ಟಿನವರು ಈ ಹಣವನ್ನು ರಿಜರ್ವ ಫಂಡಾಗಿ (ಆಪತ್ಧನವಾಗಿ) ಇಡುವ ಆವಶ್ಯವಿದೆಯೋ ಎಂದು ಆಲೋಚಿಸಬೇಕು. ದೇವಸ್ಥಾನದ ಎಲ್ಲಾ ವಿನಿಯೋಗಗಳಿಗೂ, ಆಪತ್ಧನಕ್ಕೂ ಉಪಯೋಗಿಸಿ ಉಳಿಯುವ ಹಣವನ್ನು ಮಾತ್ರವೇ ಬೇರೆ ಉಪಯೋಗಕ್ಕೆ ಉಪಯೋಗಿಸಲಿಕ್ಕೆ ಸೆಂಕ್ಷನ್ ಕೊಡಬಹುದು. ಆದರೆ ಈ ಉಳಿದ ಹಣವನ್ನು ಮಠ ಸಂಬಂಧವಾದ ವಿದ್ಯಾಭ್ಯಾಸಕ್ಕೆ ಹಾಗು ದೇವಸ್ಥಾನ ಮತ್ತು ಮಠಗಳಿಗೆ ಸಂಬಂಧಪಟ್ಟ ಕೆಲಸಗಳಿಗೆ ಮಾತ್ರವೇ ಉಪಯೋಗಿಸಬೇಕಲ್ಲದೆ ಮತ್ತಾವದಕ್ಕೂ ಉಪಯೋಗಿಸಲಿಕ್ಕೆ ಸೆಂಕ್ಷನ್ ಮಾಡಕೂಡದು.

ಪೈನೆನ್ಸ್ ಖರ್ಚು:—೬೫ನೇ ಕ್ಲೋಜು. ಬೋರ್ಡ ಮತ್ತು ಕಮ್ಮಿಟಿಯವರ ಖರ್ಚುಗಳು ಬೇರೆ ಬೇರೆ ಮಾಡಬೇಕು. ಎಲ್ಲಾ ಮಠಗಳಿಂದಲೂ, ಜವಿೂನುದಾರರ ವಶದಲ್ಲಿರುವ ದೇವಸ್ಥಾನಗಳಿಂದಲೂ ಮತ್ತು ಇತರ ಎಲ್ಲಾ ದೇವಸ್ಥಾನಗಳಿಂದಲೂ ಹುಟ್ಟುವಳಿಯ ಶೇಕಡಾ 1½ ಪ್ರಕಾರ ಬೋರ್ಡಿಗೆ (ಲೋಕಲ್ ಬೋರ್ಡಿಗೆ ಅಲ್ಲ) ಕೊಡಬೇಕು. ಶೇಕಡಾ 1½ ಪ್ರಕಾರ, ಜವಿೂನುದಾರರ ಕೈಯಲ್ಲಿಲ್ಲದ ದೇವಸ್ಥಾನಗಳಿಂದ ಕಮ್ಮಿಟಿಯವರಿಗೆ ಕೊಡತಕ್ಕದ್ದು. ಎಂದರೆ, ಮಠ ಮತ್ತು ಜವಿೂನುದಾರರ ದೇವಸ್ಥಾನಗಳಿಂದ ಹುಟ್ಟುವಳಿಯ ಶೇಕಡಾ 1½ ಪ್ರಕಾರವೂ ಇತರ ದೇವಸ್ಥಾನಗಳಿಂದ ಶೇಕಡಾ ೩ರ ಪ್ರಕಾರವೂ ಹಣವು ಬೋರ್ಡಿಗೆ ಮತ್ತು ಕಮ್ಮಿಟಿಯವರಿಗೆ ಸಲ್ಲತಕ್ಕದ್ದು. ಈ ಮೊದಲು ತಯಾರಿಸಿದ ಬಿಲ್ಲಿನ ಪ್ರಕಾರ ಹುಟ್ಟುವಳಿಯ ಶೇಕಡಾ ೩ರ ಪ್ರಕಾರ ಕೊಡುವುದಲ್ಲದೆ ಲೆಕ್ಕ ಪರಿಶೋಧಕರ ಖರ್ಚನ್ನೂ ಕೊಡಬೇಕಿತ್ತು. ನಮ್ಮ ತಿದ್ದುಪಡಿಯ ಪ್ರಕಾರ ಸರಕಾರದವರು ಶೇಕಡಾ ೩ರ ಪ್ರಕಾರ ವಸೂಲುಮಾಡುವ ಹಣದಿಂದಲೇ ಲೆಕ್ಕಪರಿಶೋಧಕರ ಖರ್ಚನ್ನು ಕೊಡತಕ್ಕದ್ದು. ಈ ಮೊದಲು ಕೋರ್ಟುಗಳು ಮಾಡಿದ ಸ್ಕೀಮಿಗೆ ಒಳಗಾದ ದೇವಸ್ಥಾನಗಳಿಂದಲೂ ಶೇಕಡಾ ೩ರ ಪ್ರಕಾರ ಕೊಡಬೇಕು.

ಈಗ ಇರುವ ದೇವಸ್ಥಾನಗಳ ಸ್ಕೀಮುಗಳು:—ಸಿವಿಲ್ ಪ್ರೊಸಿಜರ್ ಕೋಡಿನ ೯೨ನೇ ಸೆಕ್ಷನಿಗೆ ಅನುಗುಣವಾಗಿ ಕೋರ್ಟಿನವರು ತಯಾರಿಸಿದ ಸ್ಕೀಮಿನ ವಿಷಯ ನಾವು ಚೆನ್ನಾಗಿ ಆಲೋಚಿಸಿದ್ದೇವೆ. ಈ ಮಠಸಂಬಂಧವಾದ ಸಂಸ್ಥೆಗಳನ್ನು ಕ್ರಮಪಡಿಸುವುದೂ ಸ್ಕೀಮುಗಳನ್ನು ತಯಾರಿಸುವುದೂ ಈ ಬಿಲ್ಲಿನ ಉದ್ದೇಶವಾಗಿರುತ್ತದೆ. ಕೋರ್ಟಿನವರು ತಯಾರಿಸಿದ ಅನೇಕ ಸ್ಕೀಮುಗಳ ಪ್ರಕಾರ ಸರಿಯಾಗಿ ಕೆಲಸಗಳು ನಡಿಯುವುದಿಲ್ಲ. ಆದ್ದರಿಂದ ಅಂಥಾ ಪ್ರಯೋಜನವಿಲ್ಲದ ಸ್ಕೀಮುಗಳನ್ನು ರದ್ದುಪಡಿಸುವ ಅಧಿಕಾರವನ್ನು ಈ ಬಿಲ್ಲಿನಲ್ಲಿ ಸೇರಿಸಬೇಕು.

ಮೇಲಿನ ರಿಪೋರ್ಟಿಗೆ ಆಕ್ಷೇಪಣೆ ಕೊಟ್ಟ ಕೆಲವು ಮೆಂಬರರು, (೧) ರಾ. ರಾಮಚಂದ್ರರಾವ್ (೨) ರಾ. ಸೋಮಸುಂದರ ಮುದಲಿಯಾರ್ (೩) ರಾ. ಶಿವಜ್ಞಾನಂಪಿಳ್ಳೆ (೪) ರಾ. ಅರುಣಾಚಲಮುದಲಿಯಾರ್ (೫) ರಾ. ಗೋವಿಂದರಾಘವಅಯ್ಯರ (೬) ರಾ. ರಾಮಲಿಂಗಂಚೆಟ್ಟಿಯಾರ್ (೭) ಸರ್. ಎಂ. ಪಿ. ಟಿ. ಮುತ್ತೈಚೆಟ್ಟಿಯಾರ್.

ಶಿವಜ್ಞಾನಮ್ ಪಿಳ್ಳೆಯವರ ಆಕ್ಷೇಪ:—ದೇವಸ್ಥಾನದ ಆಡಳಿತೆದಾರರ ಹುದ್ದೆಯು ಸಂಬಳದ ಹುದ್ದೆಯಾಗಬಾರದು. ದೇವಸ್ಥಾನದ ಹಣವನ್ನು ಸಂಬಳಕ್ಕಾಗಿ ಉಪಯೋಗಿಸಬಾರದು.

ರಾಮಚಂದ್ರರಾಯರ ಆಕ್ಷೇಪ:—ಬೋರ್ಡನ್ನು ಮಾಡುವುದು ಅಗತ್ಯವಿಲ್ಲ. ಈ ಅಧಿಕಾರವನ್ನು ಪ್ರತಿ ಜಿಲ್ಲೆಯ ಕಮಿಟಿಗೆ ಕೊಡಬಹುದು. ಮಠಾಧಿಪತಿಗಳನ್ನು ಶಿಷ್ಯವರ್ಗದವರ ಆಡಳಿತೆಗೆ ಒಪ್ಪಿಸಿಕೊಡಬಾರದು.

ಸೋಮಸುಂದರ ಮುದಲಿಯಾರ ಮತ್ತು ಅರುಣಾಚಲ ಮುದಲಿಯಾರರ ಆಕ್ಷೇಪ:—ಕಮಿಶನರ ಅವಧಿಯನ್ನು ೫ ವರುಷಕ್ಕಿಂತ ಹೆಚ್ಚಿಸಬೇಕು, ಇಲ್ಲವಾದರೆ ಯೋಗ್ಯವಾದವರು ಸಿಗಲಿಕ್ಕಿಲ್ಲ. ಒಂದು ಜಾತಿಯ ಮಠಗಳನ್ನು ಆಯಾ ಜಾತಿಯ ಶಿಷ್ಯವರ್ಗದವರ ಕಮ್ಮಿಟಿಗೆ ಒಳಪಡಿಸಬೇಕು. (ಶೈವರು ಬೇರೆ, ಮಾಧ್ವರು ಬೇರೆ, ರಾಮಾನುಜರು ಬೇರೆ.)

ಗೋವಿಂದರಾಘವ ಅಯ್ಯರ:—ಬಿಲ್ಲಿನಲ್ಲಿ ಹೆಚ್ಚು ಬದಲಾವಣೆಗಳಾಗಿ ಇಡೀ ಬಿಲ್ಲನ್ನೇ ತಿರಿಗಿ ಬರೆದಿರುವುದರಿಂದ, ಎಲ್ಲಾ ಜನರ ತಿಳುವಳಿಕೆ ಬಗ್ಗೆ ಅದನ್ನು ತಿರಿಗಿ ಜಾಹೀರಪಡಿಸತಕ್ಕದ್ದು.

ರಾಮಲಿಂಗ ಚೆಟ್ಟಿಯಾರ್:—ಮಠಾಧಿಪತಿಗಳನ್ನು ಬರೇ ಮಠದ ಆಡಳಿತೆದಾರರೆಂದು ಉಪಯೋಗಿಸಿದ ಶಬ್ದವು ಸರಿಯಲ್ಲ. ಪ್ರತಿ ಒಂದು ಮಠದಲ್ಲಿಯೂ ಮಠಾಧಿಪತಿಗಳು ಹಳೆನಮೂನೆಯ ಕಮ್ಮಿಟಿ ಮೆಂಬರರ ಆಲೋಚನೆಯಿಂದಲೇ ಕೆಲಸನಡಿಸುತ್ತಾರೆ.

THE HINDU RELIGIOUS ENDOWMENT BILL.

Udipi, 7–3–1923.

A public meeting was held last evening in Shri Kaniyur Matt, for the purpose of organising a Reception Committee, to carry on the work of the Conference, which is arranged to meet at Udipi on the 31st instant. The proceedings of the meeting held at Mangalore on the 4th instant were read and confirmed.

The following gentlemen were chosen to form the Reception Committee—Mr. Hosakoppa Krishna Rao, M. L. C. of Mysore to be the President, Mr. U. Venkata Rao, retired Executive Engineer to be the Vice President, Mr. M. Venkobachar to be the Treasurer, Mr. B. Anantakrishnachar to be the convener and Secretary, other members are Messrs. Shantyar Venkatsubba Bhat, U. Krishnachar, Kinjur Vyasarao, P. Narayanachar, Shrinivasachar, Karkal Ganapathy Hegde, P. N. Prabhu, P. N. Rama Rao B. A; B. L, B. Bhujanga Rao B. A., Arur Laxminarayana Rao B. A. B. L., K. Laxminarayana Rao B. A. B. L, B. Sripathi Rao. K. Ramachandrachar, M. A; L. L. B, Venkatramana Hande, Muddanna Shetty of Sanur, V. S. Sanjiva Rao, P. Raghunatha Shetty B. A., M. Shrinivasa Rao, Shrinivasa Ballal, P. Padmanabha Rao, B. A. B. L, K. H. Soma, with others to be co-opted.

The quorum was fixed at 5. The petition to the Legislative Council, protesting against the passing of the Bill, was discussed and adopted. The meeting separated with thanks.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ಣಾಟಕ ಪ್ರಕಟನಾಲಯ, ಬಸವನಗುಡಿ ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ, ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ “ಜೀವಗೀತ” “ಆತ್ಮಗೀತ” ದೇವರೆಲ್ಲಿ? ಎಂಬ ಅಂಗಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು “ವಂದೇ ಮಾತರಂ”, ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲವದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ, ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧–೮–೦, ಟಪ್ಪಾಲು ಹಾಸಲು ೦–೪–೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮುಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪ
ರಥಬೀದಿ, ಮಂಗಳೂರ

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000–0–0
Reserve and other sinking Funds „ 181,250–0–0

ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 181,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 21st Feb. 1922.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂಥ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ಹೊಟ್ಟೆನೋವು, ಕರುಳಿನ ವಿಕಾರ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲ್ಯುಯೆನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅತ್ಯಂತ ಶಕ್ತಿಯುಳ್ಳವು
ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1–4–0, 12 ಸೀಸೆಗಳಿಗೆ 2–7–0, 25 ಸೀಸೆಗಳಿಗೆ 4–10–0 ಪೋಸ್ಟೇಜುಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.
ಹೊಸ ಕಾದಂಬರಿ. ಬೆಲೆ, 1 ರೂ. 6 ಆ.
ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.
ವೃತ್ತಾಂತ ಪತ್ರಿಕೆ, ಮೈಸೂರು— (೫–೬–೧೯೨೧)
ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪರಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕ ಬಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ
ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0–12–0	ಸಂಪೂರ್ಣರಾಮಾಯಣ ಹೊಸ ಮುದ್ರಣ .	5–0–0
ಸಂತಾಪಕ-ಕಾದಂಬರಿ	0–6–0	ಸಂಪೂರ್ಣರಾಮಾಯಣದ ಕಥೆ ವಚನ .	0–12–0
ಚಂದ್ರಮುಖಿ ,,	0–8–0	S. S. L. C. Kannada Texts	
ರಾಜಪುತ್ರರಮಣಿಯರು	0–8–0	[illegible] . . .	0–5–0
ಕೆಲವು ಸಣ್ಣ ಕಥೆಗಳು	1–0–0	[illegible] . . .	0–6–0
ರಾಜಯೋಗ . .	1–0–0	[illegible]	0–12–0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
“ಸಂಕ್ಷೇಪಗೀತೆ”
ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಕ್ರಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಷ್ಟು ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.
ಪುಸ್ತಕ ದೊರಿಯುವ ವಿಳಾಸ—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾ ಮಿಶನ್ ಬುಕ್ ಎಂಡ್ ಟ್ರೇಕ್ಟ ಡಿಪೋಜಿಟರಿ,
ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ [illegible] 32 [illegible] 1ಕ್ಕೆ ರೂ. 1–14–0 [illegible] 3–0–0, [illegible] 6–0–0 [illegible] [illegible]
ವಿಳಾಸ—
ಎಸ್. ಯು. [illegible] ಮತ್ತು ಕಂಪೆನಿ,
[illegible], ಕಾಶಿ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಣಿ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶಿಲೆ ಒಂದರ ಕ್ರಯ:—ರೂ. 1—4—0.

ಹುಳದ ವ್ರೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಡಬ್ಬಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ಜರ್ಮನ ದೇಶದಲ್ಲಿ ತಯ್ಯಾರಾಗಿ ಬಂದಂಥಾ

4 ಮತ್ತು 4½ ರಾತ್ತಿನ ಹಾರೆಗಳೂ, 8 ರಾತ್ತಿನ ಗುದ್ದಲಿಗಳೂ, 6 ರಾತ್ತಿನ ಕುಂಟಾನಿಗಳೂ, 4 ರಾತ್ತಿನ ಕೊಡ್ಡಿಗಳೂ, ಎಲ್ಲಾ ಪರಿಮಾಣದ ಮುಳ್ಳು ಮೊಳೆಗಳೂ, ಮಾರಾಟಕ್ಕೆ ಇವೆ.

ವ್ಯಾಪಾರಸ್ಥರಿಗೆ ಬಹು ರಿಯಾತಿಯ ಧಾರಣೆಯಲ್ಲಿ ವಿಕ್ರಯಮಾಡಲಾದೀತು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಕೋಮನ್ ವೆಲ್ತ್ ಟ್ರಸ್ಟ್, ಲಿಮಿಟೆಡ್,
ಕಲ್ಲಿಕೋಟೆ.

ಇಲ್ಲವೆ—ಕೋಮನ್ ವೆಲ್ತ್ ಸ್ಟೋರ್ಸ್,
ಮಂಗಳೂರು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ಚಿವ್ಯಾಪಾರಿ

ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ ರೂ. 8—4—0

ಶೇ. 1 („ 24) „ „ 2—0—0

ಫೋಸ್ಟು ಪೇಕಿಂಗ್ ಚಾರ್ಜು ನಮ್ಮದು

5 ರಾತ್ತು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ

ರಾತ್ತಿಗೆ ದರ ರೂ. 8-0-0.

ಸ್ವಂತ ಖರ್ಚಿಗೆ ತರಿಸುವವರು ಫೋಸ್ಟ್, ಪೇಕಿಂಗ್ ಚಾರ್ಜು ತೆರಬೇಕಾಗುವುದು

ನಶ್ಯ ಒಂದೇ ತರದ್ದು.

ಎಲಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ, ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಯೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಟೋನಿಯಾ ಅಂಡ್ ಕೊ
ಪೋಸ್ಟುಪೆಟ್ಟಿಗೆ ನಂಬ್ರ 85 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ, ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:

ಊಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು —
— ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು. ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಓ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯಿನಾಮಲ್ಲ ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಪಾಲಿ ಕವರು ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಸ್ಲೇರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

~~~~~

ಆರ್. ಮಾರ್ಟಿನ್ಸರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮುದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು - ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನೂ ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕು ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ಸರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉಂಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅದಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೈಯರ್ ರೋಡ್,
ರೈಟ್ ಎಂಡ್ ಕೋ ಹತ್ತಿರ, ಫೋರ್ಟ್ ಮುಂಬಯಿ.

R. D. Kately & Co.
No. D. Frere Road,
Near Wright & Co. Fort, Bombay.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ಸ್ವದೇಶಾಭಿಮಾನಿ.

SWADESHABHIMANI. MANGALORE.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ತೊಳಕರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೭ ಮಂಗಳೂರು, ತಾರೀಕು ೨೪ನೇ ಶುಕ್ರವಾರ ಮಾರ್ಚ್ ೧೯೩೩. ಸಂಚಿಕೆ ೧೨

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00,000—0—0
ಚಂದಾ ಹಾಕಿ ಎತ್ತಿದ ಮೂಲಧನ	1,00,000—0—0
ಮೌಲ್ಯ ತೆತ್ತ ಮೂಲಧನ	90,365—7—11
ಠೇವಣಾತಿಗಳು	3,33,300—0—0
ಇನ್ವೆಸ್ಟ್ಮೆಂಟು (1927ನೇ ಇಸವಿಯ) ಶೇಕಡಾ 6ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	4,54,328—11—0

ಕಳೆದ 2 ವರುಷಗಳಲ್ಲಿ ಪಾಲುದ್ಧಾರಿಗಳಿಗೆ ಸಾಲಿಯಾನ್ ಸೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು [illegible] ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ತರದ [illegible] 7ರಿಂದ 7½ ಬಡ್ಡಿಯಲ್ಲಿ ಇರಖು ಠೇವಣಾತಿಗಳನ್ನೂ 15 ದಿವಸಗಳ ನೋಟೀಸು ಮೂಲಕ ಶೇಕಡಾ 6½ರ ಬಡ್ಡಿ ಸಮೇತ ವಾಪಾಸು ಪಡಿಯುವ ಚಿಕ್ಕ ವ್ಯಾದಿ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಸೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ, ಶೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸು ಬ್ಯಾಂಕು ಠೇವಣಾತಿಗಳನ್ನೂ, ತಿಂಗಳುಗಟ್ಲೆಯಿಂದ ತೆರುವ ಕಂತು ಠೇವಣಾತಿಗಳನ್ನೂ ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಸೆಂಟ್ರಾಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರದ್ದಲ್ಲಿ ಸಿಕ್ಕುವುದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

‘ನೈಟ್ರೇಟ್ ಒಫ್ ಸೋಡಾ’

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, ವೀಳ್ಯದೆಲೆ ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ, ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಆಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ವಿಾನು ಗೊಬ್ಬರದಲ್ಲಿ ನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

“ಕೃಷಿ ಸುಧಾರಣೆ” ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶನ್ ರೌ, ಕಲ್ಕತ್ತಾ.

THE DIRECTOR
CHILEAN NITRATE COMMITTEE
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಪ್ಪರಾಮ ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತವಿವೇಕ ಕ್ರಯ ೦—೧೦—೦
ಶೇಷುಭಂಗ „ ೦—೧೨—೦
ಸಂಕ್ಷೇಪಗೀತೆ „ ೦—೧೦—೦

ಅಪ್ಪೀನಾರಾಯಣ ಪುರಂದರಾಚಾರ್ಯರಿಂದ ರಚಿತವಾದ ಸ್ವರಾಜ್ಯ ಭಗೀಶ್ವರೀಲ್ಯಸ ಕ್ರಯಂ —೨—೦

ಕರ್ನಾಟಕ ಕವಿ ಚರಿತ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ್ಯ ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಹೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮುಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳಿಕರಿಗೆ ರೂ ೨-೦-೦. ವಿ. ಪಿ. ಖರ್ಚುಕೂಡಿ ರೂ. ೩-೦-೦ ಪ್ರಕಟಣೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ಗದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು, ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಪೈಂಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫ್ಲಾಟ್ ರೂಲುಗಳು, ಇತರ ಬಿಲಾವತಿನ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಫಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಲೋನಿನ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ಟಿಕ್ಕು ಔಷಧಿಗಳು—ರೋಗಿಗಳಿಗೂ, ಬಾಲಿಶರಿಗೂ ಬೇಕಾಗುವ ಪಾಸ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇರಾಜಿಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BOMBAY
AMRUTANJAN
Best Indian Pain Balm
Amrutanjan Depot
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುವ ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಹಾಕಕಷಾಯ

U. B. DUTT & Co. CALCUTTA

ಮಲೆಯಾಳ ದೇಶವು ಔಷಧಗಳಿಗೆ ತೀರ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ [illegible] ಆಯುರ್ವೇದ [illegible] ಬೇರುಗಳಿಂದ ನಾವು ಅನೇಕ ಅಪೂರ್ವ ಔಷಧಗಳನ್ನು [illegible] ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, [illegible] ಪ್ರಶಂಸೆಪತ್ರ “ಅವರ್ ಗಳೂ” [illegible]. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಶ್ಲಾಘನೆಗಳೂ, [illegible] ಹೇರಳವಾಗಿದೆ.

ಅಂಥಾ ಅತ್ಯುತ್ತಮ ಔಷಧಗಳಲ್ಲಿ ನಮ್ಮ ‘ಹಾಕಕಷಾಯ’ [illegible] ಗುಣಪಡಿಸುತ್ತದೆ. [illegible]

[illegible]

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ, [illegible]
~~~~~

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇದ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೫೨, (ಪ್ರಾಡ್ವೇ) ಮದ್ರಾಸ್.

Local Agents: **Raphael & Co.**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಈಗಲೇ ಸ್ಟಿದ್ಧವಾಗಿದೆ! ಬೇಗನೆ ತರಿಸಿಕೊಳ್ಳಿರಿ!

ಕಾಮಶಾಸ್ತ್ರ (ಎನ್ನುವ ಶರೀರ ಮರ್ಮಶಾಸ್ತ್ರ)

ಈ ಪುಸ್ತಕವು ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಇದ್ದದನ್ನು ಇದ್ದ ಹಾಗೆಯೇ ತಿಳಿಸುವಂತೆ ಚಿತ್ರಪಟಗಳ ಸಹಿತ ಗ್ಲೇಜು ಕಾಗದದಲ್ಲಿ ಮುದ್ರಿಸಿರುತ್ತೇವೆ. ಇದರಲ್ಲಿ ಸ್ತ್ರೀ ಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ದಂಪತಿಗಳು ಅನ್ಯೋನ್ಯವಾಗಿರುವದಕ್ಕೆ ಮುಖ್ಯವಾದ ಉಪಾಯಗಳು, ಗುಪ್ತವ್ಯಾಧಿಗಳ ಚಿಕಿತ್ಸೆ, ವಶೀಕರಣ ವಿಧಾನಗಳು, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ರಹಸ್ಯಗಳು ಒಂದಾಗಿರುತ್ತವೆ. ಕ್ರಯ ಮರ್ಮಶಾಸ್ತ್ರ ರೂ. 1—0—0.

ವಿಳಾಸ:— ಟಿ. ರಾಮಚಂದ್ರರಾವ್ ಕಂಪೆನಿ,
೨೨ ತಿರುಪ್ಪತಿ ಬೀದಿ,
ಸಾಹುಕಾರಪೇಟೆ, ಮದರಾಸು.

ಪ್ರಕಟಣೆ.

ರುಧಿರೋದ್ಗಾರಿ ಸಂ॥ರದ ಪಂಚಾಂಗ.

ಇದು ಚಿ॥ ಸುಬ್ಬಣ್ಣ ಶಾಸ್ತ್ರಿಗಳಿಂದ ಗುಣಿಸಲ್ಪಟ್ಟು ಮಂಗಳೂರು ಶಾರದಾ ಛಾಪಖಾನೆಯಲ್ಲಿ ಸುಂದರವಾಗಿ ಮುದ್ರಿತವಾಗುತ್ತಿದೆ. ಅಗತ್ಯವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಪಂಚಾಂಗಕರ್ತರಲ್ಲಿಯೂ ದೊರೆಯುವುದು. ಪಂಚಾಂಗ ಪ್ರತಿ ೧ಕ್ಕೆ ಕ್ರಯ ೩॥ ಆಣೆ, ೫೦ಕ್ಕೆ ರೂ. ೮—೦—೦.

ವಿಳಾಸ:-
ಶಾರದಾ ಛಾಪಖಾನೆ,
ಮಂಗಳೂರು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್ಸ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs.	150
½ Page Rs. 80. ¼ Page	„	50
2 in. Single Column	„	20
1 in. Single Column	„	15
Name alone in Bold Types	„	5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ಸುಸಂದರ್ಭ! ದರ ಸುಲಭ! ತ್ವರೆಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಎಲ್ಲ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ. ಬಿ. ಎಲ್

'ಕವಿ'ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ತಲ 1ರ ರೂ. 2—12—0.
ಸ್ಪೆಶ್ಯಲ್ ರಾತ್ತಲ 1ರ ರೂ. 3—0—0.
2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಫಿಡಲ್ 1ಕ್ಕೆ „ 15—0—0

ಬೇಕಾದವರು 5 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟ್ ಬೋಕ್ಸ್ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೊಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65, ಮದರಾಸು.

ಶಾಲಿವಾಹನಶಕ ೧೮೪೫ನೆಯ ರುಧಿರೋದ್ಗಾರಿ ಸಂ॥ರದ ಚೈತ್ರ ಶು॥ ೭ ಶನಿವಾರದಿಂದ ರುಧಿರೋದ್ಗಾರಿ ಸಂ॥ ಚೈತ್ರ ಶು॥ ೧೩ ಶುಕ್ರವಾರದ ವರೆಗಿನ

ಪಂಚಾಂಗ

(೧೯೨೩ನೆಯ ಏಪ್ರಿಲ್?)

ತಾರೀಕು	ವಾರ.	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಅಸ್ತ.
24	ಶನಿ	೭	೫೯.೪೬	ರೋಹಿಣೀ	೩.೩೦	೧೦	6.35	6.41
25	ರವಿ	೮	೬೦.೦	ಮೃಗಶಿರಾ	೮.೨೮	೧೧	6.34	6.41
26	ಸೋಮ	೯	೦.೧೬	ಆರ್ದ್ರಾ	೯.೫೮	೧೨	6.33	6.41
27	ಕುಜ	೧೦	೫೬.೪೬	ಪುನರ್ವಸು	೧೦.೧೭	೧೩	6.33	6.41
28	ಬುಧ	೧೧	೫೩.೧೬	ಪುಷ್ಯಾ	೯.೩೬	೧೪	6.32	6.42
29	ಗುರು	೧೨	೪೯.೦	ಆಶ್ಲೇಷಾ	೭.೩೨	೧೫	6.31	6.42
30	ಶುಕ್ರ	೧೩	೪೪.೧೬	ಮಘಾ	೫.೦	೧೬	6.31	6.42

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಮಾರ್ಚ್)

Date ತಾರೀಕು	Temperature. ಉಷ್ಣ (ಕಾವು) Maximum ಅಧಿಕತಮ	Minimum ಅಲ್ಪತಮ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
15	94—4	78—5	—	—
16	90—7	73—5	0—47	—
17	89—2	78—3	—	—
18	93—0	78—7	—	—
19	93—2	78—6	—	—
20	93—7	78—4	—	—
21	93—8	78—8	—	140.05

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ ಅಕ್ಕಿಮುಡಿ ೧ಕ್ಕೆ ...	7- 4	8- 0
ಹೊಸ ಗುಡ್ಡು „	6- 6	7- 4
ಹೊಸ ರಾಶಿ	6- 2	6- 8
ಅವ್ವಲ್ ಬೆಳ್ತಿಗೆ „ ...	7-14	8-10
ಗುಡ್ಡು ಬೆಳ್ತಿಗೆ „ ...	7- 6	7-12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	12-8	13- 4
ಗೋಧಿ ಗೋಣಿ ೧ಕ್ಕೆ ...	16- 0	19- 0
ಹುರುಳಿ ಗೋಣಿ ೧ಕ್ಕೆ ...	9- 8	8- 4
ಕಡಲೆ ಗೋಣಿ ೧ಕ್ಕೆ ...	11- 0	14- 0
ತೊಗರಿ ಗೋಣಿ ೧ಕ್ಕೆ ...	12- 0	—
ತೊಗರಿಬೇಳೆ ಗೋಣಿ ೧ಕ್ಕೆ ...	14- 0	19- 2
ಉದ್ದು ಗೋಣಿ ೧ಕ್ಕೆ ...	13- 0	—
ಹೆಸರು ಗೋಣಿ ೧ಕ್ಕೆ ...	—	12- 0
ಊರು ಬೆಲ್ಲ ಖಂಡಿ ೧ಕ್ಕೆ ...	40- 0	45- 0
ಉಪ್ಪು ಗೋಣಿ ೧ಕ್ಕೆ ...	5- 1	5- 4
ಕೊಪ್ರ ಖಂಡಿ ೧ಕ್ಕೆ ...	100- 0	110- 0
ಕೊಪ್ರ ಹಿಂಡಿ ಖಂಡಿ ೧ಕ್ಕೆ ...	42- 0	—
ಎಳ್ಳಿಂಡಿ ಖಂಡಿ ೧ಕ್ಕೆ ...	50- 0	65- 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7-12	9- 0
ಎಳ್ಳೆಣ್ಣೆ ಮುಡಿ ೧ಕ್ಕೆ ...	6-12	9- 0
ಹಿಡುಚೆಎಣ್ಣೆ ಪೆಟ್ಟಿಗೆ ೧ಕ್ಕೆ ...	9- 0	—
ಮಾರಿಸ ಸಕ್ಕರೆ ಮುಡಿ ೧ಕ್ಕೆ ...	7-10	8- 0
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ ...	7- 0	7- 8
ಸಾಸಿವೆ ಮುಡಿ ೧ಕ್ಕೆ ...	8- 8	9- 0
ಕೊತ್ತಂಬರಿ ಮುಡಿ ೧ಕ್ಕೆ ...	3-12	3-14
ಕಾಫಿ ಖಂಡಿ ೧ಕ್ಕೆ ...	285- 0	302- 0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳ್ತು ...	200- 0	295- 0
ಬಿಳಿಗೋಟು New, ಹೊಸ್ತು ...	180- 0	185- 0
ಕಾಳುಮೆಣಸು ಖಂಡಿ ೧ಕ್ಕೆ ...	115- 0	120- 0
ಯಾಲಕ್ಕಿ ಮಣ ೧ಕ್ಕೆ ...	60- 0	70- 0
ಗೇರುಬೀಜ ಮುಡಿ ೧ಕ್ಕೆ ...	1-14	2- 0
ಚಕ್ಕೆ ಖಂಡಿ ೧ಕ್ಕೆ ...	50- 0	65- 0
ತಾಂಬ್ರ ತಗಡು ಮಣ ೧ಕ್ಕೆ ...	20-12	23- 0
ಹಿತ್ತಾಳೆ ಪಾತ್ರಗಳು ಮಣ ೧ಕ್ಕೆ೧ಕ್ಕೆ ...	32- 0	—
ಚೀನಿ ಬೆಲ್ಲ ಸೇರು ೧ಕ್ಕೆ ...	22- 8	—
ಒಣ್ಣಾಳೆ ಹೊಡುಮಣ 1ಕ್ಕೆ ...	20- 0	21-

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 8 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟ ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಆವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ, ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

ಯುನೈಟೆಡ್ ಕಮರ್ಶಿಯಲ್ ಕಂಪೆನಿ,

ಪೋಸ್ಟ ಬಾಕ್ಸ ನಂಬ್ರ 388, ಮುಂಬಯಿ.

ಈ ಕಂಪೆನಿಯವರು ನಾನಾ ತರದ ಕಾಗದಗಳನ್ನೂ ಛಾಪಖಾನೆಗೆ ಬೇಕಾದ ಉಪಕರಣಗಳನ್ನೂ ರಖಂ ಬಟ್ಟೆಯಲ್ಲಿ ಮಾರಾಟಮಾಡುವರು. ಈ ಕಂಪೆನಿಗೆ ಪೇಜು ಹಾಕುವ (Numbering) ಅನೇಕ ಮೆಶಿನ್ನುಗಳು ಈಗಲೇ ಬಂದಿರುತ್ತವೆ. ಗಿರಾಕಿಗಳು ತಮಗೆ ಬೇಕಾದ ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳುವುದು.

ತ್ವರೆಮಾಡಿರಿ! ತ್ವರೆಮಾಡಿರಿ!!

ಮಾರಾಟಕ್ಕೆ ಸಿದ್ಧವಾಗಿದೆ

ಪಂಡಿತ ಮಂಗಳೂರ ನಾರಾಯಣಾಚಾರ್ಯ ರಿಂದ ಗಣಿಸಿ ಪರಿಶೋಧಿಸಲ್ಪಟ್ಟ,

ರುಧಿರೋದ್ಗಾರಿ ಸಂವತ್ಸರದ ಪಂಚಾಂಗಗಳು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಫೋಟೋ ಉಂಗುರಗಳು.

ಈ ತಿಂಗಳಲ್ಲಿ ತರಿಸಿದವರಿಗೆ ರೋಸೆ ಸೆಂಟ್ ಬಾಟಿಲ್ ಇನಾಂ.

ಈ ಉಂಗುರಗಳನ್ನು ಸೀಮೆಯ ಬಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಶನ್ ವಜ್ರದ 5 ಕಲ್ಲುಗಳು ಕೆತ್ತಲ್ಪಟ್ಟಿವೆ. ಇದರ ಮಧ್ಯದಲ್ಲಿ ಒಂದು ಭೂತಕನ್ನಡಿ ಇರುವುದು. ಅದರಲ್ಲಿ ನೋಡಿದರೆ ರಾಮ, ಕೃಷ್ಣ, ಲಕ್ಷ್ಮಿ, ಗಾಂಧಿ, ತಿಲಕ, ಅರಮನೆ ಮುಂತಾದವು ವಿವರವಾಗಿ ಕಾಣುವವು. ಇದರ ಬಣ್ಣವು ಹೋಗದಂತೆ ಸುವರ್ಣ ಭಂಗಾರದ ಗಿಲೀಟು ಮಾಡಿಯದೆ. ಇದು ಬೆರಳಿಗೆ ಹಾಕಿಕೊಳ್ಳಲು ಯೋಗ್ಯವಾಗಿರುವುದು. ಕ್ರಯ 1ಕ್ಕೆ ರೂ. 2—0—0

ವಿಲಾಯತಿಯ ರೇಜರು.

ಈ ರೇಜರುಗಳು ವಿಲಾಯತಿಯಲ್ಲಿ ತಯಾರಾದದ್ದು. ಇದರಲ್ಲಿ ಕ್ಷೌರವನ್ನು ಮಾಡಿಕೊಳ್ಳುವುದರಿಂದ ಉರಿಯುವುದಿಲ್ಲ. ನೋವಾಗುವುದಿಲ್ಲ. ಅಂಟುವ್ಯಾಧಿಗಳು ಸೇರುವುದಿಲ್ಲ. ಇದರ ಕತ್ತಿಯು ಬಹು ಮೇಲಾದ ಲೋಹದಿಂದ ಮಾಡಿದೆ. ಬೇಲಿ ದಂತದ ಹಿಡಿ ಇರುವುದು.

ಕ್ರಯ 1ಕ್ಕೆ ರೂ. 2—0—0.

ವಿಳಾಸ:— ರಿಪನ್ ವಾಚ್ ಕಂಪೆನಿ,
1/16 ಕಡಪ ರಂಗಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು

ಪಾಕೆಟ್ ಬೈಸ್ಕೋಪ್‌ಗಳು.

ಈ ಬಾಯಸ್ಕೋಪುಗಳು ಜರ್ಮನ್ ದೇಶದಲ್ಲಿ ತಯಾರಾದವು. ಇದರಲ್ಲಿ (ಫಿಲ್ಲಂ) ಚಿತ್ರಪಟಗಳನ್ನು ಹಾಕಿ ನೋಡಿದರೆ ಬೈಸ್ಕೋಪಿನಲ್ಲಿ ಇದ್ದಂತೆಯೇ ಇರುವುದು. ಈ ಒಂದು ಯಂತ್ರವನ್ನು ಇಟ್ಟುಕೊಂಡು ಜಾತ್ರೆಗಳಲ್ಲಿ ಬಂದವರಿಗೆ ತೋರಿಸಿ ಹಣವನ್ನು ಸಂಪಾದನೆ ಮಾಡಬಹುದು. ಇದಕ್ಕೆ ಮುಂಚಿತವಾಗಿ ಈ ಮಾದರಿ ಯಂತ್ರಗಳು ಮಾರಾಟಕ್ಕೆ ಬರಲಿಲ್ಲ. ಈಗ ಹೊಸ ಬಂದಿರುವವು. ಕ್ರಯ 1-0-0. 2-0-0.

ವಿಳಾಸ:— ರಿಪನ್ ವಾಚ್ ಕಂಪೆನಿ,
22 ಕೃಷ್ಣಪ್ಪ ಮೊದಲಿ ಬೀದಿ, ಟ್ರಿಪ್ಲಿಕೇನ್, ಮದರಾಸು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ ಮೊಳ ಅಗಲವಿರುವದು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಜಿಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 ರೂ. 6—8—0
„ 2 „ 7—8—0

ವಿಳಾಸ:—ಎಸ್. ಆರ್. ಕೃಷ್ಣ ಎಂಡು ಕೊ,
1. ತಂಬುಸಾಯಕನ ಬೀದಿ, ಮದರಾಸು.

THE

Standard Bioscope Co.

MANGALORE

Eddie Polo.

The Bull's Eye

THE HIGH SPEED UNIVERSAL SERIAL IN 18 EPISODES

From 23-3-'23 to 30-3-'23.

EPISODES 4, 5, 6, 7, 8, 9, 10, 11 & 12.

Also 2 Side Films.

Every day two shows

I Show at 6-30 II Show 9 P. M.

Rates Rs. 1—0—0; 0—8—0; 0—6—0; 0—4—0; 0—2—0.

ಬೇಗನೇ ಸಿದ್ಧವಾಗುವುದು. ಬೇಗನೇ ಸಿದ್ಧವಾಗುವುದು.

ದಕ್ಷಿಣ ಕನ್ನಡಾ ಜಿಲ್ಲೆಗೆ ಸಂಬಂಧಪಟ್ಟ
The Law of Land Tenures in South Kanara.
ಭೂಮಿಯ ಹಿಡುವಳಿಗಾರಿಕೆಯ ಕಾನೂನು ಪುಸ್ತಕ.

ಜೆ. ಎಚ್. ಎ. ಮಸ್ಕರೇಂಞಾಸ್ ಬಿ. ಎ. ಎಲ್. ಎಲ್. ಬಿ.
ಹೈಕೋರ್ಟು ವಕೀಲ, ಮಂಗಳೂರು.
ಇವರಿಂದ ತಯಾರಿಸಲ್ಪಟ್ಟಿದೆ.

ನಮ್ಮ ಜಿಲ್ಲೆಯ ಡಿಸ್ಟ್ರಿಕ್ಟ ಕೋರ್ಟ ಶಿರಸ್ತೆದಾರ ಪಿ. ಯನ್. ಭಂಡಾರಕಾರ ಬಿ. ಎ. ಎಲ್. ಎಲ್. ಬಿ. ಇವರಿಂದ ತಿದ್ದಲ್ಪಟ್ಟಿದೆ.

ಮದರಾಸು ಸಂಸ್ಥಾನಾಧಿಪತಿಗಳಾದ ಬಹುಮಾನಪಟ್ಟ ಲೋರ್ಡ ಎಲ್ಲಿಂಗ್‌ಡನ್ ದೊರೆಗಳವರ ಮುದ್ದಾಂ ಅನುಮತಿ ಪಡೆದು ಈ ಪುಸ್ತಕವನ್ನು ಅವರಿಗೆ ಅರ್ಪಿಸಿದೆ.

ಇದರಲ್ಲಿ ನಮ್ಮ ಜಿಲ್ಲೆಯ ಸ್ಥಳೀಕ ಹಾಗು ವಾಡಿಕೆಯ ಕಾನೂನುಗಳೂ, ಈ ವರೆಗಿನ ಎಲ್ಲಾ ನಿಬಂಧನೆಗಳೂ, ಹುಕುಮುಗಳೂ, 1859ನೇ ಇಸವಿಯಿಂದ ರಿಪೋರ್ಟು ಆದ ಮತ್ತು ರಿಪೋರ್ಟು ಆಗದ ಹೈಕೋರ್ಟು ನಿರ್ಣಯಗಳೂ ಇದರಲ್ಲಿ ಅಡಕವಾಗಿವೆ.

ಈ ಪುಸ್ತಕವು ಪ್ರಕಟವಾಗುವ ಮೊದಲು ಒರ್ಡರು ಕೊಡುವವರಿಗೆ ತಾ. 31—4—'23ರ ವರೆಗೆ ಪುಸ್ತಕ ಒಂದರ ಬೆಲೆ ರೂ. 5—0—0 ಅನಂತರ ತರಿಸುವವರಿಗೆ ರೂ. 6-0-0.

ಕೆಲವೇ ಪ್ರತಿಗಳು ಪ್ರಕಟವಾಗುವುವು.
ಕೆಳಗಿನ ವಿಳಾಸಕ್ಕೆ ಬರೆದು ಒರ್ಡರನ್ನು ರಿಜಿಸ್ಟರುಮಾಡಿಕೊಳ್ಳಿರಿ!
ಜೆ. ಯಚ್. ಎ. ಮಸ್ಕರೇಂಞಾಸ್
ಬಿ. ಎ. ಎಲ್. ಎಲ್. ಬಿ.
ಹೈಕೋರ್ಟು ವಕೀಲ, ಮಂಗಳೂರು.

ಮದ್ರಾಸ್ ಹಿಂದೂ ಮಠ, ದೇವಸ್ಥಾನ ಮತ್ತು ಇತರ ಸಂಸ್ಥೆಗಳ ಉಂಬಳಿಗಳಿಗೆ ಸಂಬಂಧಪಟ್ಟ ಕಾನೂನಿನ ಮಸೂದೆಯ ಕುರಿತು.

ಮಹಾಶಯರೇ,

ಮದ್ರಾಸ್ ನ್ಯಾಯವಿಧಾಯಕ ಸಭೆಯ ಮುಂದೆ ಆಲೋಚನೆ ಬಗ್ಗೆ ಇರುವ ಹಿಂದೂ ಮಠ, ದೇವಸ್ಥಾನ ಮತ್ತು ಇತರ ಧರ್ಮಸಂಸ್ಥೆಗಳ ಉಂಬಳಿಗಳಿಗೆ ಸಂಬಂಧಪಟ್ಟ ಕಾನೂನಿನ ಮಸೂದೆಯು ಸಭೆಯಿಂದ ಅಂಗೀಕೃತವಾಗಿ ಕಾನೂನು ಆಗದಿರುವುದಕ್ಕೆ ಒಂದು ವೇಳೆ ಆ ಮಸೂದೆ ಅಂಗೀಕೃತವಾದರೂ ಆ ಕಾನೂನು ಜಾರಿಗೆಬಾರದಿರುವುದಕ್ಕೆ ನಮ್ಮ ಕರ್ತವ್ಯಗಳೇನೆಂಬುದನ್ನು ನಿರ್ಣಯಿಸತಕ್ಕ ಬಗ್ಗೆ ಹಿಂದೂ ಮಹಾಜನಗಳು ಮತ್ತು ಹಿಂದೂಮತಾಭಿವೃದ್ಧಿಯಲ್ಲಿ ಆಸಕ್ತರಾದವರು ಸಹ ಇದೇ ಮಾರ್ಚಿ ತಿಂಗಳ ತಾ. ೩೧ಕ್ಕೆ ದಕ್ಷಿಣಕನ್ನಡಾ ಜಿಲ್ಲಾ ಉಡುಪಿಯಲ್ಲಿ ಸಭೆಸೇರುವರು. ಪ್ರಕೃತ ಪ್ರಸ್ತಾಪಿಸಲ್ಪಟ್ಟ ಈ ಕಾನೂನು ತಮ್ಮಗಳಿಗೆ ತಿಳಿದಿರಬಹುದಾಗಿರುವಂತೆ ಹಿಂದೂಜನಗಳ ಮತರಕ್ಷಕರಾದ ಗುರುಗಳ ಮತ್ತು ಅವರ ಸೊತ್ತುಗಳ ಮೇಲೆ ಮೇಲ್ವಿಚಾರಣೆಯ ಸಂಪೂರ್ಣ ಅಧಿಕಾರ ಉಳ್ಳದ್ದಾಗಿ ಕೇವಲ ಪ್ರಳಯಕರವಾಗಿರುವುದು. ಮತ್ತು ಇಂಥಾ ಕಾನೂನಿನ ಮತ್ತು ಮಸೂದೆಯಲ್ಲಿ ತೋರುವಂತೆ ಹೆಚ್ಚು ಸಂಬಳವನ್ನು ತೆರಬೇಕಾದ ಉದ್ಯೋಗಗಳ ಆವಶ್ಯಕತೆ ಏನೆಂಬುದು ಸ್ಪಷ್ಟಪಡಿಸಿಲ್ಲ. ಮಠಗಳ ಮತ್ತು ದೇವಸ್ಥಾನಗಳ ಆಡಳಿತೆಯನ್ನು ಇನ್ನೂ ಅಭಿವೃದ್ಧಿಗೆತರಬೇಕೆಂಬ ಈ ಕಾನೂನಿನ ಮುಖ್ಯೋದ್ದೇಶವು ಬರೀ ತರ್ಪುದಾರರಾದ ಕೆಲವರಿಗೆ ಹೆಚ್ಚು ಸಂಬಳ ಸಿಗತಕ್ಕ ಉದ್ಯೋಗಗಳನ್ನು ಕೊಟ್ಟ ಮಾತ್ರಕ್ಕನೇ ಸಫಲವಾಗಲಾರದು; ಮತ್ತು ಅಂಥಾ ಉದ್ಯೋಗಿಗಳು ಹಿಂದೂಮತಧರ್ಮಗಳಲ್ಲಿ ನಂಬಿಕೆ ಉಳ್ಳವರಾಗಿ ಅವುಗಳ ಅನುಸಾರಕರಾಗಿರುವರೆಂಬ ಸಂಪೂರ್ಣ ಭರವಸೆ ಇಲ್ಲದಿರುವುದರಿಂದ ಅವರ ಅಧಿಕಾರದ ಚಲಾವಣೆಯಿಂದ ಹಿಂದೂ ಪಂಗಡದವರ ಧರ್ಮ ಮತಸಂಬಂಧವಾದ ಮನೋಭಾವಗಳಿಗೆ ಕೊರತೆ ಉಂಟಾಗುವುದಲ್ಲದೆ, ಕ್ರಮೇಣ ಹಿಂದೂಮತ ಧರ್ಮಗಳ ಮೂಲತತ್ವಕ್ಕೆನೇ ಭಂಗವುಂಟಾಗಬಹುದೆಂಬ ಭೀತಿಯೂ ಉಂಟಾಗಿರುವುದು. ಇಂಥಾ ಕಾನೂನಿನ ಪೀಡೆಯಿಂದ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಭಕ್ತ ಮತ್ತು ಶಿಷ್ಯವರ್ಗಗಳನ್ನುಳ್ಳ ಈ ಕಾನೂನಿಗೆ ಒಳಪಡುವ ಮಠ ಮತ್ತು ದೇವಸ್ಥಾನಗಳು ಸರಕಾರಿ ಉದ್ಯೋಗಸ್ಥರ ಬಲಾತ್ಕಾರಕ್ಕೆ ಗುರಿಯಾಗದಂತೆಯೂ, ಧರ್ಮಫಂಡುಗಳು ಲೌಕಿಕ ಉದ್ದೇಶಗಳ ಬಗ್ಗೆ ವಿನಿಯೋಗವಾಗದಂತೆಯೂ ಎಲ್ಲಾ ಹಿಂದೂ ಪಂಗಡದವರು ಆಲೆತು ಯೋಚಿಸಿ, ಸಾರ್ವತ್ರಿಕವಾಗಿ ಕೈಕೊಳ್ಳಬೇಕಾದ ಕರ್ತವ್ಯಗಳನ್ನು ನಿರ್ಣಯಿಸತಕ್ಕ ಬಗ್ಗೆ ಘನವಾದ ಸಮಯವು ಬಂದು ಒದಗಿಯದೆ.

ಈ ಉದ್ದೇಶಿರುವ ಹಿಂದೂ ಸಭೆಯು ಇದೇ ತಿಂಗಳ ತಾ. ೨೦ರಲ್ಲಿ ಮಂಗಳೂರಿನಲ್ಲಿ ಕೆಲವು ಮಾನ್ಯ ಹಿಂದೂಗೃಹಸ್ಥರು ಸೇರಿ ಯೋಚಿಸಿ ನಿರ್ಧರಿಸಲ್ಪಟ್ಟಿದ್ದಾಗಿರುತ್ತಾ ಒಳ್ಳೇ ರೀತಿಯಲ್ಲಿ ನಡೆಯಬಹುದಾದ್ದಾಗಿರುತ್ತದೆ. ಈ ಸಭೆಯಲ್ಲಿ ಪ್ರಸಕ್ತ ಕಾನೂನಿನ ವಿರೋಧದ ಬಗ್ಗೆ ನಿಯಮಿತವಾದ ಪ್ರಚಾರಕರ್ತವ್ಯಗಳು ಯೋಚಿಸಲ್ಪಡುವುದಲ್ಲದೆ, ಇನ್ನು ಮುಂದೆ ಈ ನಮ್ಮ ಹಿಂದೂಮತದ ಧರ್ಮರಕ್ಷಣೆಗಾಗಿ ಒಂದು ಶಾಶ್ವತವಾದ ಸಂಸ್ಥೆಯನ್ನು ಏರ್ಪಡಿಸುವ ಉದ್ದೇಶವೂ ಇದೆ.

ಮಹಾಶಯರೆಲ್ಲ ತಾವು ಈ ಮಹಾಸಭೆಗೆ ದಯಮಾಡಿಸುವುದಲ್ಲದೆ, ತಮ್ಮ ಜತೆಯಲ್ಲಿ ಈ ಸದುದ್ದೇಶದ ಸಾಫಲ್ಯದ ಬಗ್ಗೆ ಮನಃಪೂರ್ವಕವಾಗಿ ಕೆಲಸಮಾಡಲಿಚ್ಛಿಸುವ ಇತರ ಗೃಹಸ್ಥರನ್ನು ಕರೆದುಕೊಂಡು ಬರಬೇಕೆಂದು ಈ ಮಹಾಕಾರ್ಯವನ್ನು ಸಾರ್ಥಕಗೊಳಿಸಬೇಕಾಗಿ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಈ ಉಡುಪಿಯು ಶ್ರೀ ಕೃಷ್ಣಸಾನ್ನಿಧ್ಯದಿಂದೊಡಗೂಡಿದ್ದಾಗಿ ಮಹಾಕ್ಷೇತ್ರವಾಗಿರುವುದು. ಶಿವಮೊಗ್ಗಕ್ಕಾಗಲೀ, ಮಂಗಳೂರಿಗಾಗಲೀ ರೈಲ್ವೆ ಮೇಲೆ ಬಂದು ಅಲ್ಲಿಂದ ಸರ್ವಿಸ್ ಬಸ್ಸುಗಳ ಮೇಲೆ ಸ್ವಲ್ಪ ಸಮಯದಲ್ಲಿಯೇ ಇಲ್ಲಿಗೆ ತಲಪಬಹುದು. ಇಲ್ಲಿ ಅತಿಥಿಗಳಿಗೂ ಮತ್ತು ಪ್ರೇಕ್ಷಕರಿಗೂ ವಾಸ ಮತ್ತು ಭೋಜನ ಫಲಾಹಾರಗಳಿಗೆ ತಕ್ಕ ಅನುಕೂಲತೆಗಳು ಸ್ವಾಗತಮಂಡಳಿಯವರಿಂದ ಏರ್ಪಡಿಸಲ್ಪಡುವವು. ಈ ಸಂಬಂಧ ಯಾವ ವಿಷಯಗಳನ್ನು ತಿಳಿಸಬೇಕಾಗಿಯೂ, ಯಾ ತಿಳಿದುಕೊಳ್ಳಬೇಕಾಗಿಯೂ ಇದ್ದಲ್ಲಿ ಶ್ರೀಯುತ ಕಾಣಿಯೂರು ಮಠದ ಪಾರುಪತ್ಯಗಾರ ಬಿ. ಅನಂತ ಕೃಷ್ಣಾಚಾರ್ಯ ಇವರೊಡನೆ ಪತ್ರವ್ಯವಹಾರ ನಡೆಸಬಹುದು.

ತಾ. 8—3—1923.
ಉಡುಪಿ (ದಕ್ಷಿಣ ಕನ್ನಡ ಜಿಲ್ಲಾ)

ಹೊಸಕೊಪ್ಪ ಕೃಷ್ಣರಾವ್,
ಸ್ವಾಗತಮಂಡಳಿಯ ಅಧ್ಯಕ್ಷರು.
ಬಿ. ಅನಂತಕೃಷ್ಣಾಚಾರ್ಯ,
ಸೆಕ್ರೆಟರಿ.

ಕೈಮಗ್ಗವು ಸಾಯಲಾರದು.

ಮುಂಬಯಿ ಸರಕಾರದವರು ಈಚೆಗೆ ಪ್ರಕಟಗೊಳಿಸಿರುವ ಒಂದು ಪತ್ರಿಕೆಯಿಂದ ನಮ್ಮ ದೇಶದ ಕೈಮಗ್ಗಗಳ ಬಲವೆಷ್ಟು, ಬೆಲೆಯೆಷ್ಟು, ಎಂಬುದು ಚೆನ್ನಾಗಿ ಹೊರಪಡುತ್ತದೆ. ಆ ಪತ್ರಿಕೆಯು ಹೇಳುವುದೇನೆಂದರೆ:—

ಕೈನೆಯ್ಗೆಯು ಕ್ಷೀಣಿಸುವ ಕಸಬಲ್ಲ; ಅದು ಹೆಚ್ಚು ಅಭಿವೃದ್ಧಿ ಹೊಂದುತ್ತಲಿದೆ. ೧೯೧೫-೧೬ನೆಯ ಸಾಲಿಗೆ ಹಿಂದಿನ ಹದಿನೈದು ವರ್ಷಗಳೊಳಗಾಗಿ ಇಂಡಿಯಾದೇಶದ ಕೈಮಗ್ಗಗಳಿಗೆ ಉಪಯೋಗವಾದ ದಾರದ ಪರಿಮಾಣವು ಶೇಕಡಾ ೩೧ರಷ್ಟು ಅಧಿಕವಾಯಿತು. ಆ ಕಾಲದಲ್ಲಿ ಈ ದೇಶದ ಮಿಲ್ಲುಗಳಿಂದ ಎಷ್ಟು ಬಟ್ಟೆ ತಯಾರಾಗುತ್ತಿತ್ತೋ ಕೈಮಗ್ಗಗಳಿಂದಲೂ ಅಷ್ಟೆ ತಯಾರಾಗುತ್ತಿತ್ತು; ಅದು ಹೆಚ್ಚಿದಂತೆಯೇ ಇದೂ ಹೆಚ್ಚಿತು. ಪ್ರತಿ ವರ್ಷವೂ ಇಂಡಿಯಾದೇಶದ ಜನರು ಉಪಯೋಗಿಸಿಕೊಳ್ಳುವ ಬಟ್ಟೆಯ ಒಟ್ಟು ಪರಿಮಾಣದಲ್ಲಿ ಸುಮಾರು ಕಾಲಪಾಲು ಕೈಮಗ್ಗಗಳಿಂದಲೂ ಕಾಲಪಾಲು ಮಿಲ್ಲುಗಳಿಂದಲೂ ತಯಾರಾಗುತ್ತದೆ. ಉಳಿದ ಅರ್ಧಭಾಗ ವಿದೇಶಗಳಿಂದ ಆಮದಾಗಿ ಬರುತ್ತದೆ. ಯುದ್ಧಕಾಲದಲ್ಲಿ—ಎಂದರೆ, ೧೯೧೪—೧೮ರಿಂದೀಚೆಗೆ—ಕೈನೆಯ್ಗೆಯು ಸ್ವಲ್ಪ ಹಿಂದಕ್ಕೆ ಬಿದ್ದಿತು; ಈಚೆಗೆ ಅದು ಪುನಃ ಪ್ರಬಲಿಸಿ ತನ್ನ ಹಿಂದಿನ ಸ್ಥಿತಿಗೆ ಬಂದಿದೆ. ಈ ಸಂಗತಿಗಳನ್ನು ಸಮರ್ಥಿಸುವುದಕ್ಕೆ ತಕ್ಕ ಲೆಕ್ಕ ಪತ್ರಗಳಿವೆ. ಆದುದರಿಂದ ಕೈಮಗ್ಗದ ಕೆಲಸವು ಈಗಲೂ ಈ ದೇಶದ ಅತಿ ಮುಖ್ಯವಾದ ಕಸಬುಗಳಲ್ಲೊಂದು ಎಂಬುದು ಸ್ಪಷ್ಟವಾಗಿದೆ. ಈ ಬಗೆಯ ಮನೆಕಸಬು ರಾಜಕೀಯ ದೃಷ್ಟಿಯಿಂದಲೂ, ಸಾಮಾಜಿಕ ದೃಷ್ಟಿಯಿಂದಲೂ, ಸಾಂಪತ್ತಿಕ ದೃಷ್ಟಿಯಿಂದಲೂ ಸಹ ಸಕಲರ ಗಮನವನ್ನೂ ಪಡೆಯಬೇಕಾದುದಾಗಿದೆ. ಇಂಡಿಯಾದೇಶದ ಕೆಲಸಗಾರರ ಅಭ್ಯಾಸ, ಭಾವನೆ, ಪದ್ಧತಿಗಳಿಗೆ ಅದು ಬಹು ವಿಶೇಷವಾಗಿ ಒಪ್ಪಿದೆ. ದೊಡ್ಡ ದೊಡ್ಡ ಕಾರ್ಖಾನೆಗಳ ಮೂಲಕ ಉಂಟಾಗುವ ಅನಿಷ್ಟಗಳಲ್ಲಿ ಕೆಲವನ್ನೂ, ಆ ಕ್ರಮದಿಂದ ಕೆಲಸಗಾರರ ಸಂಸಾರಕ್ಕೆ ಬರುವ ಭಂಗಗಳನ್ನೂ ತಪ್ಪಿಸಲು ಕೈಮಗ್ಗವು ಸಹಾಯವಾಗುತ್ತದೆ. ಮುಂಬಯಿ [illegible]ದಲ್ಲಿ ಕೈಮಗ್ಗವನ್ನು ನಂಬಿಕೊಂಡು ಜೀವನ ಮಾಡುತ್ತಿರುವ ಜನರು ಎಂಟು ಲಕ್ಷವಿದ್ದಾರೆ. ಇವರಿಗೆ ಸಾಮಾನ್ಯವಾಗಿ ನೆಯ್ಗೆಯೇ ಮುಖ್ಯವಾದ ಕಸಬು; ಆದರೆ ಅನೇಕರು ಅದರ ಜೊತೆಗೆ ಸಣ್ಣ ಜಿರಾಯಿತಿದಾರರೂ ಹೌದು.

ಕರ್ನಾಟಕ ಜನಜೀವನ ಮತ್ತು
ಅರ್ಥಸಾಧಕ ಪತ್ರಿಕೆ.

ಜರ್ಮನಿಯ ಪರಿಸ್ಥಿತಿ.

ಜರ್ಮನ್ ದೇಶದಲ್ಲಿ ಈಗ ಒಟ್ಟು ೧೧೬,೦೦೦ ಫ್ರೆಂಚ್ ಯೋಧರು ಇರುವರು. ರೂರ ಪ್ರಾಂತದಲ್ಲಿ ಒಂದು ತಿಂಗಳ ವರೆಗೂ ಎಲ್ಲಾ ಜರ್ಮನ್ ಕೆಲಸಗಾರರಿಗೂ ಪೂರಾ ಸಂಬಳವನ್ನು ಕೊಟ್ಟು ಕೆಲಸಮಾಡಬೇಡಿ ಎಂಬದಾಗಿಯೂ ಫ್ರೆಂಚ್ ಜನಗಳಿಗೆ ಕಂದಾಯವನ್ನು ಕೊಡಬಾರದಾಗಿಯೂ ಜರ್ಮನಿಯವರು ಆಜ್ಞೆಯನ್ನು ಮಾಡಿರುವರು. ಜರ್ಮನಿದೇಶದ ಛಾನ್ಸಲರರು ತಮ್ಮ ಭಾಷಣದ ಅಂತ್ಯದಲ್ಲಿ, ಫ್ರೆಂಚರು ಅತಿಕ್ರಮದಿಂದ ಆಕ್ರಮಿಸಿರುವ ರೂರನನ್ನು ಅವರ ಸ್ವಾಧೀನದಲ್ಲಿಟ್ಟುಕೊಂಡಿರುವ ವರೆಗೂ ಮತ್ತು ನಿಷ್ಕಾರಣವಾಗಿ ಜರ್ಮನರನ್ನು ಕೈದಿನಲ್ಲಿಟ್ಟು ಹಿಂಸಿಸುವುದು ತಪ್ಪುವ ವರೆಗೂ ಜರ್ಮನಿಯು ಯಾವ ವಿಧಾನದ ಸಮಾಧಾನಕ್ಕೆ ಸಲಹೆಯನ್ನು ಕೊಡುವುದಿಲ್ಲವೆಂದೂ ಹೀಗೆ ಮಿಲಿಟರಿ ಜುಲುಂ ನಡೆಯುವುದು ಯಾವುದಾದರೊಂದು ದಿವಸ ನಿಲ್ಲಲೇಬೇಕೆಂಬುದಾಗಿಯೂ ಅಲ್ಲಿಯ ವರೆಗೂ ಜರ್ಮನಿಯು ಈ ಕಷ್ಟಗಳನ್ನೆಲ್ಲಾ ಅನುಭವಿಸಲೇಬೇಕೆಂದೂ ಅಪ್ಪಣೆಕೊಡಿಸಿದರಂತೆ. ಫ್ರೆಂಚರು ಆಕ್ರಮಿಸಿಕೊಂಡಿರುವ ರೂರ ಡಿಸ್ಟ್ರಿಕ್ಟಿನಲ್ಲಿ ಯುರೋಪ್ಯರಲ್ಲದ ವಿದೇಶೀಯ ಜನರ ಸೈನ್ಯ ಒಂದನ್ನು ರಕ್ಷಣೆಗೆ ಇಟ್ಟಿರುವರು. ಈ ಕಪ್ಪು ಜನರನ್ನು ಇಡಬಾರದೆಂದು ಫ್ರೆಂಚ್ ಪಾರ್ಲಿಮೆಂಟಿನಲ್ಲಿ ಮೆಂಬರರೊಬ್ಬರು ಆಕ್ಷೇಪಿಸಿದಕ್ಕೆ ಪ್ರೆಸಿಡೆಂಟರು—ಫ್ರೆಂಚ ಪ್ರಜೆಗಳಲ್ಲಿ ಎಲ್ಲರೂ ಒಂದೇ. ವರ್ಣಭೇದವನ್ನು ನೋಡುವುದಿಲ್ಲ. ಫ್ರೆಂಚ ಸರಕಾರಕ್ಕೆ ಸೇರಿರುವ ರಾಜ್ಯಗಳನ್ನೆಲ್ಲಾ ಕೂಡಿಸಿದರೆ ಫ್ರೆಂಚರ ಚಕ್ರಾಧಿಪತ್ಯವಾಗುವುದು. ಬರೀ ಫ್ರಾನ್ಸಿನಿಂದ ಆಗುವುದಿಲ್ಲ ಎಂದು ಬರಹ ಮೂಲಕ ಉತ್ತರಕೊಟ್ಟಿರುವರು. ರೂರ್ ಪ್ರಾಂತದಲ್ಲಿ ಫ್ರೆಂಚರು ಈಗ ೫ ಡಿವಿಜನ್ ಸೈನ್ಯವನ್ನೂ ೧೦೦ ವಿಮಾನಗಳನ್ನೂ ಇಟ್ಟುಕೊಂಡಿರುವರು. ಅಲ್ಲದೆ ಬರುವ ಮೇ ತಿಂಗಳಲ್ಲಿ ಮನೆಗೆ ಕಳುಹಿಸಬೇಕಾಗಿದ್ದ ಸೈನಿಕರನ್ನು ಇನ್ನೂ ಕೆಲವು ಕಾಲ ಸೈನ್ಯದಲ್ಲಿರುವಂತೆ ಹುಕುಂಕೊಟ್ಟಿರುವರು. ಈ ವರೆಗೆ ೧೦೦೦ ಜರ್ಮನ್ ಅಧಿಕಾರಿಗಳನ್ನೂ ೧೬೦೦ ಮಂದಿ ಜರ್ಮನ್ ಪೋಲೀಸರನ್ನೂ ದೇಶಭ್ರಷ್ಟರಾಗಿಮಾಡಿರುವುದಲ್ಲದೆ ೭೩ ಮಂದಿ ಜರ್ಮನ್ ಅಧಿಕಾರಿಗಳನ್ನು ಮಿಲಿಟರಿ ವಿಚಾರಣೆಗೆ ಗುರಿಮಾಡಿ ಶಿಕ್ಷಿಸಿರುತ್ತಾರೆ.

ಇತ್ತಲಾಗಿ ಬಂದ ವರ್ತಮಾನವನ್ನು ಕೇಳುವಾಗ ಜರ್ಮನರು ಫ್ರೆಂಚರನ್ನು ಉಪಾಯದಿಂದ ಕೊಲ್ಲಲು ಬೊಂಬುಗಳನ್ನು ಉಪಯೋಗಿಸುತ್ತಿರುವರೆಂದು ತಿಳಿದುಬರುತ್ತದೆ. ಅನೇಕ ಕಡೆಗಳಲ್ಲಿನ ತಂತಿಸರಿಗೆಗಳನ್ನು ಕಡಿದುಹಾಕಿದೆ. ಇವುಗಳನ್ನು ಸರಿಪಡಿಸಲು ೬ ತಿಂಗಳುಗಳಾದರೂ ಬೇಕಾಗುವುದಂತೆ.

ಕಾಸರಗೋಡು ತೀಯರ್ ಯಾನೆ ಬಿಲ್ಲವರ ಸಭೆ.

ಇದೇ ಕಳೆದ ತಾ. ೧೮-೩-೨೩ರಲ್ಲು ಕಾಸರಗೋಡು ತೀಯರ್ ಯಾನೆ ಬಿಲ್ಲವರ ಒಂದು ಮಹಾಜನಸಭೆಯು ಮಂಗಳೂರು ವಕೀಲ್ ಮ. ರಾ. ರಾ. ಎನ್. ಎಸ್. ಸುವರ್ಣ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಕಾಸರಗೋಡು ಶ್ರೀ ನಾರಾಯಣ ವಿಜಯ ಮಂದಿರದ ಕಟ್ಟೋಣದಲ್ಲಿ ಜರಗಿತು.

ಈ ಸಭೆಯಲ್ಲಿ ಕೆಲವು ವರ್ಗಗಳಿಂದ ತಂಡಗಳಾಗಿ ತಮ್ಮ ತಮ್ಮೊಳಗೆ ಕಿತ್ತಿಕೊಟ್ಟಿ ಕಾದಾಡುತ್ತಿದ್ದ ಇಲ್ಲಿಯ ತೀಯರ್ ಯಾನೆ ಬಿಲ್ಲವರು ಕೂಡಲೆ ತಮ್ಮ ಮನಸ್ತಾಪ ದ್ವೇಷಗಳನ್ನು ಬಿಟ್ಟುಬಿಟ್ಟು ಐಕ್ಯಭಾವದಿಂದ ಸಮುದಾಯದ ಏಳಿಗೆಗಾಗಿ ತನುಮನಧನಗಳಿಂದ ಪ್ರತಿಯೊಬ್ಬನೂ ಮುಂದೆಬಂದು ಹೋರಾಡಬೇಕಾದ ಈಗಿನ ಸುಸಂದರ್ಭದ ಕುರಿತು ಬಲವತ್ತಾಗಿ ಭಾಷಣವಾಯಿತು. ಜಾತಿ ಭೇದ, ಪ್ರಾಣಿಹಿಂಸೆ, ಅಸ್ಪೃಶ್ಯತೆಗಳ ವಿಷಯವಾಗಿ ಸಭೆಯಲ್ಲಿ ತೀಯರ್ ಯಾನೆ ಬಿಲ್ಲವ ವಿದ್ಯಾರ್ಥಿಗಳ ಸಂಘದವರ ಪೈಕಿ ಕೆ. ಎಸ್. ಗೋವಿಂದ ಮತ್ತು ಬಿ. ಮಾಧವ ಎಂಬ ವಿದ್ಯಾರ್ಥಿಗಳು ಪ್ರಬಂಧಗಳನ್ನು ಓದಿದರು. ವಿದ್ಯಾರ್ಥಿಗಳ ಸಂಘದ ಕುರಿತು ಕಳೆದ ಆರು ತಿಂಗಳ ವರದಿಯನ್ನು ಕೆ. ಪಿ. ಸುಕುಮಾರ ಇವರು ಓದಿಹೇಳಿದರು. ಈ ವಿದ್ಯಾರ್ಥಿಗಳ ಸಂಘವು ಕಳೆದ ಜುಲಾಯಿ ತಿಂಗಳಲ್ಲಿ ಸ್ಥಾಪಿತವಾದದ್ದು. ಇದರಲ್ಲಿ ಈಗ ೬೧ ಜನ ತೀಯ ಯಾನೆ ಬಿಲ್ಲವ ವಿದ್ಯಾರ್ಥಿಗಳು ಸದಸ್ಯರಾಗಿರುತ್ತಾರೆ. ಇವರು ಇಲ್ಲಿ ಮನೆಮನೆಗಳಿಗೆ ಹೋಗಿ ವಂತಿಗೆ ವಸೂಲುಮಾಡಿ ಒಂದು ಪುಸ್ತಕಾಲಯವನ್ನು ಇಡುವ ಪ್ರಯತ್ನದಲ್ಲಿದ್ದಾರೆ. ಈ ಬಗ್ಗೆ ಎಲ್ಲರೂ ಸಹಾಯಮಾಡಬೇಕಾಗಿ ಸಭೆಯವರನ್ನು ಬೇಡಿಕೊಂಡರು. ಈ ವಿಷಯದಲ್ಲಿ ವಿದ್ಯಾರ್ಥಿಗಳು ತೋರಿಸುವ ಅವಿಶಾಂತ ಪರಿಶ್ರಮಗಳನ್ನು ನೋಡಿ ಇವರ ಸಮುದಾಯದ ಪ್ರತಿ ಒಬ್ಬ ಮನುಷ್ಯನೂ ಮತ್ತು ದೇಶಬಾಂಧವರೂ ಕೂಡಾ ಸಹಾಯಮಾಡಬೇಕಾದದ್ದು ಅತೀ ಅವಶ್ಯ. ಇವರು ಸಭೆಯಲ್ಲಿ ಹಾಡಿದ ಸಂಕೀರ್ತನೆಗಳನ್ನೂ, ಸಂಘದ ಏರ್ಪಾಡುಗಳನ್ನೂ ಅಧ್ಯಕ್ಷರು ಬಹಳವಾಗಿ ಶ್ಲಾಘಿಸಿ ಇವರಿಗೆ ಬೇಕಾದ ಹೆಚ್ಚಿನ ಬುದ್ಧಿವಾದಗಳನ್ನು ಹೇಳಿದರು. ಕೊನೆಗೆ ಎಲ್ಲಾ ವಿರೋಧಪಕ್ಷಿಗಳನ್ನು ತಮ್ಮೊಳಗೆ ಐಕ್ಯಗೊಳಿಸಿ ಅವರಿಗೆ ಬೇಕಾದ ಬೋಧನೆಗಳನ್ನು ಕೊಟ್ಟು ಸಭೆಯ ಮುಖಂಡರಿಂದ ಧನ್ಯವಾದಗಳನ್ನು ಹೊಂದಿ ಅಧ್ಯಕ್ಷರು ಬಹಳ ಮನೋಲ್ಲಾಸದೊಡನೆ ಹೊರಟುಹೋದರು. ಇನ್ನಾದರೂ ಈ ಸಮುದಾಯವು ಅಭಿವೃದ್ಧಿ ಹೊಂದೀತೆಂದು ಕೋರುತ್ತದೆ.

ಸಮಾಜದ ಹಿತಚಿಂತಕ.

ಸ್ವೀಕಾರ:—ಯರ್ಮುಂಜ ಶಂಕರ ಜೋಯಿಸರಿಂದ ಆದರಪೂರ್ವಕವಾಗಿ ಕಳುಹಿಸಿಕೊಟ್ಟ ಕನ್ನಡ ವೈಜಯಂತಿ ಪಂಚಾಂಗವು ತಮ್ಮ ಕೈಸೇರಿದೆ. ಈ ಪಂಚಾಂಗವು ವೇ| ಯರ್ಮುಂಜ ಶಂಕರ ಜೋಯಿಸರಿಂದ ಹಾಗು ವೇ| ವಿಟ್ಲೂರು ನಾರಾಯಣ ಭಟ್ಟರಿಂದ ಗುಣಿಸಿ ಪರಿಶೋಧಿಸಲ್ಪಟ್ಟು ರಾ. ಬಿ. ಉಪೇಂದ್ರ ಪ್ರಭುಗಳವರಿಂದ ಪ್ರಕಟಿಸೋಣಾಗಿದೆ. ಪಂಚಾಂಗಶ್ರವಣದಿಂದ ತಿಳಿದುಕೊಳ್ಳಬೇಕಾದ ಎಲ್ಲಾ ವಿಷಯಗಳು ಇದರಲ್ಲಿವೆ. ಇದರ ಬೆಲೆ ಆಣೆ ಮೂರು. ಪಂಚಾಂಗ ದೊರಕುವ ವಿಳಾಸ:— ಯರ್ಮುಂಜ ಶಂಕರ ಜೋಯಿಸ, ವೈಜಯಂತಿ ಪಂಚಾಂಗ ಸಂಪಾದಕ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲಾ.

ಆಯುರ್ವೇದಭೂಷಣ ಶ್ರೀಯುತ ಎಮ್. ವಿ. ಶಾಸ್ತ್ರಿಗಳವರ ಗೋಪಾಲ ಭೇಷಜಾಶ್ರಮದ ವಾರ್ಷಿಕವರದಿಯು ನಮ್ಮ ಹಸ್ತಗತವಾಗಿದೆ. ವರದಿಯ ಪ್ರಾರಂಭದಲ್ಲಿ ಪಂಡಿತ ಶಾಸ್ತ್ರಿಯವರು ಮಂಗಳೂರ ಮುನ್ಸಿಪಾಲಿಟಿಯ ವಿಸ್ತೀರ್ಣದ ಜನಸಂಖ್ಯೆಯ ಕುರಿತು ಕೆಳಗಿನ ವಿವರವನ್ನು ಕೊಟ್ಟಿರುತ್ತಾರೆ. ಮಂಗಳೂರು ಪಟ್ಟಣವು ೮೪೩೦ ಮನೆಗಳಿಂದ ಕಟ್ಟಲ್ಪಟ್ಟಿದೆ. ಪಟ್ಟಣದ ಜನಸಂಖ್ಯೆ ೫೩೪೭೭. ಇದರಲ್ಲಿ ೨೮೩೦೪ ಗಂಡಸರು, ೨೫೧೭೩ ಹೆಂಗಸರು. ಮತರೀತ್ಯಾ ವಿಭಾಗಮಾಡಿದರೆ ೩೧,೧೯೪ ಹಿಂದುಗಳೂ ೬೦೦೩ ಮಹಮ್ಮದೀಯರೂ ೧೬,೨೦೩ ಕ್ರಿಸ್ಟಿಯನರೂ ೭೯ ಜನ ಇತರ ಮತಸ್ಥರೂ ಇರುವರು. ವರದಿಯ ವರುಷದಲ್ಲಿ ಎಂದರೆ, ೧೯೨೨ರಲ್ಲಿ ಪಟ್ಟಣದಲ್ಲಿ ಜುಮುಲಾ ೧೫೩೩ ಜನನಗಳೂ ೯೫೧ ಮರಣಗಳೂ ಆದವು. ಯಾವ ಯಾವ ರೋಗಗಳಿಂದ ಎಷ್ಟೆಷ್ಟು ಮಂದಿಗಳು ಮಡಿದರೆಂಬ ವಿವರವನ್ನು ಸಹ ಪ್ರಕಟಿಸಿದ್ದಾರೆ. ಶ್ರೀಯುತ ಶಾಸ್ತ್ರಿಯವರು ನಡಿಸಿಕೊಂಡು ಬರುವ ಎರಡು ಔಷಧ ಗೃಹಗಳಿವೆ. ಒಂದು ಕದ್ರಿಯಲ್ಲಿ, ಇನ್ನೊಂದು ಜೇಡಿಗುಡ್ಡೆಯಲ್ಲಿ. ಜೇಡಿಗುಡ್ಡೆಯ ಔಷಧಗೃಹವು ಬೆಳಿಗ್ಗೆ ೮ ಘಂಟೆಯಿಂದ ರಾತ್ರಿ ೮॥ ಘಂಟೆವರೆಗೆ ಸದಾ ತೆರೆದುಕೊಂಡೆ ಇರುವುದು. ಮತ್ತು ಕದ್ರಿ ಭೇಷಜಾಶ್ರಮವು ಬೆಳಿಗ್ಗೆ ೯॥ಯಿಂದ ೧೧॥ ವರೆಗೂ ಅನಂತರ ಸಾಯಂಕಾಲ ೫ ಘಂಟೆಯಿಂದ ೮॥ ವರೆಗೂ ತೆರದಿರುವುದೆಂದು ತಿಳಿಯುತ್ತದೆ. ವರದಿಯ ವರುಷದಲ್ಲಿ ಎಂದರೆ, ೧೯೨೨ನೇ ಜನವರಿ ೧ರಿಂದ ದಶಂಬರ ೩೧ಕ್ಕೆ ೨೫೯ ವಿವಿಧ ರೋಗಗಳಿಂದ ಪೀಡಿತರಾದ ೫೧೯೯ ರೋಗಿಗಳು ಇವರ ಔಷಧದಿಂದ ಉಪಸ್ಥಿತರಾಗಿದ್ದಾರೆಂದು ಸೂಚಿಸಿ ಉಪಸ್ಥಿತರ ತಪಸೀಲನ್ನು ಕೊಟ್ಟಿದೆ. ಗತವರುಷಕ್ಕಿಂತ ೫೨೭ ರೋಗಿಗಳು ಕಡಿಮೆ ಉಪಸ್ಥಿತರಾಗಿದ್ದರಿಂದ ಈ ವರುಷದ ರೋಗಿಗಳ ಉಪಸ್ಥಿತಿಯು ನಮ್ಮ ಪಟ್ಟಣದ ಆರೋಗ್ಯವನ್ನು ಆಲೋಚಿಸಿದರೆ ಚಲೋದಾಗಿದೆಂದು ಇವರ ಅಭಿಪ್ರಾಯ. ಹಿಂದಿನ ವರುಷಗಳಿಗಿಂತ ಸನ್ನಿಪಾತಜ್ವರದ ಸ್ಥಿತಿಯು ಈ ವರುಷ ಅಧಿಕವಾಗಿತ್ತು. ಈ ಸಂವತ್ಸರದಲ್ಲಿ ಸನ್ನಿಪಾತಜ್ವರವು ಯಾವ ಕಾರಣದಿಂದ ಅಧಿಕವಾಗಿತ್ತು ಎಂಬುದನ್ನು ಸಕಾರಣವಾಗಿ ಹೇಳುವರೆ ಯಾವ ಸಾಧನವೂ ಕಂಡುಬರುವುದಿಲ್ಲ. ಪ್ರಾಯಶಃ ಈ ವರುಷದ ಮಳೆಯ ಸ್ಥಿತಿಯಿಂದ ಇರಬಹುದೆಂಬದಾಗಿ ಊಹಿಸಬಹುದಾಗುತ್ತದೆ. ೧೯೨೧ರಲ್ಲಿ ೫೪ ಜನ ಸನ್ನಿಪಾತಜ್ವರದಿಂದ ಪೀಡಿತರಾದ ರೋಗಿಗಳು ಚಿಕಿತ್ಸಿಸಲ್ಪಟ್ಟಿದ್ದರು. ಈ ವರುಷ ೧೨೯ ಸನ್ನಿಪಾತಜ್ವರದಿಂದ ಪೀಡಿತರಾದ ರೋಗಿಗಳು ಚಿಕಿತ್ಸಿಸಲ್ಪಟ್ಟಿದ್ದರು. ಎಂದರೆ ಕಳೆದ ವರುಷಕ್ಕಿಂತ ೭೫ ಸನ್ನಿಪಾತರೋಗಿಗಳ ಸಂಖ್ಯೆಯು ಹೆಚ್ಚಾಗಿರುತ್ತದೆ, ಮೇಲಿನ ಎಲ್ಲ ಮಾಹಿತಿಯನ್ನು ವಿವರವಾಗಿ ಪ್ರಕಟಿಸಿ ವರದಿಯ ಕೊನೆಭಾಗದಲ್ಲಿ ವರದಿಯ ವರುಷದಲ್ಲಿ ಉಪಸ್ಥಿತರಾದ ರೋಗಿಗಳ ಮತ್ತು ರೋಗಗಳ ತಪಸೀಲು ಪಟ್ಟಿಯನ್ನು ಕಾಣಿಸಿರುವರು. ಪಂಡಿತ ಶಾಸ್ತ್ರಿಗಳು ಪಟ್ಟಣದಲ್ಲೂ ಜಿಲ್ಲೆಯಲ್ಲೂ ಚಿರಕಾಲ ಪರಿಚಿತರಾಗಿರುವುದರಿಂದ ಆಯುರ್ವೇದ ಚಿಕಿತ್ಸೆಯಲ್ಲಿ ಹೆಚ್ಚಿನ ನಂಬಿಕೆಯೂ ಪ್ರೋತ್ಸಾಹವೂ ಉಂಟಾಗುವ ಈ ಸಮಯದಲ್ಲಿ ಪಂಡಿತ ಶಾಸ್ತ್ರಿಯವರಿಗೆ ಎಂದಿಗಿಂತ ಜನರ ಪ್ರೋತ್ಸಾಹವು ಕಡಿಮೆಯಾಗಲಿಕ್ಕಿಲ್ಲವೆಂದು ನಮ್ಮ ನಂಬಿಗೆಯಾಗಿದೆ.

ವಿನಂತಿ.

ಪ್ರಿಯ ಉಪಾಧ್ಯಾಯರುಗಳೇ, ಇದೇ ೧೯೨೩ ನೇ ಇಸವಿ ಮಾರ್ಚಿ ತಿಂಗಳ ತಾ. ೩೧ನೇ ಶನಿವಾರ ಕಾರ್ಕಳ ತಾಲೂಕಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘವು ಮೂಡಬಿದ್ರೆ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಅಂದು ಮಧ್ಯಾಹ್ನ ೨ ಘಂಟೆಗೆ ಜರಗಿಸಬೇಕಾಗಿ ನಿಶ್ಚಯಿಸಿಯದೆ. ಆದಕಾರಣ ಎಲಿಮೆಂಟರಿ ಶಾಲಾ ಎಲ್ಲಾ ಉಪಾಧ್ಯಾಯರು, ವ. ಉಪಾಧ್ಯಾಯಿನಿಯರು ತಪ್ಪದೆ ದಯಮಾಡಿ ಬರಬೇಕಾಗಿ ಈ ಮೂಲಕ ಎಲ್ಲರಿಗೂ ವಿನಂತಿ ಮಾಡಿಕೊಂಡಿರುತ್ತೇನೆ.

ಕೆ. ಗಣೇಶ ಕಾಮತ್,
ಸೆಕ್ರೆಟರಿಗಳ ಬಗ್ಗೆ.

ವಿದೇಶ ವರ್ತಮಾನ.

ತುರ್ಕಿಗೆ ರುಷ್ಯಾದೇಶದ ಸಹಾಯ:—ರುಷ್ಯಾ ಸರಕಾರದವರು ಬ್ರಿಟಿಷ ಜನಗಳಿಗೂ ತುರ್ಕಿಯವರಿಗೂ ಯುದ್ಧವಾದ ಪಕ್ಷದಲ್ಲಿ ತುರ್ಕಿಯವರ ಸಹಾಯಕ್ಕೆ ೧೦ ಲಕ್ಷ ಸೈನ್ಯವನ್ನು ಕಳುಹಿಸುವುದಾಗಿ ಒಪ್ಪಿಕೊಂಡಿರುವರೆಂದು ವರ್ತಮಾನವಿದೆ.

ಅಮೇರಿಕಾ:—ಈ ಖಂಡದಲ್ಲಿ ಭಾರತೀಯರಿಗೆ ಅಲ್ಲಿನ ರೀತಿ [illegible]ಗಳಿಗೆ ಇರತಕ್ಕ ಹಕ್ಕು ಇರುವುದಿಲ್ಲವೆಂದು ಸದರಿ ಗವರ್ನಮೆಂಟಿನವರು ನಿಶ್ಚಯಮಾಡಿರುವರು.

ಅಫಘಾನಿಸ್ಥಾನದ ಫ್ರೆಂಚ ರಾಯಭಾರಿಗಳು:—ಅಫಘಾನಿಸ್ಥಾನದ ಅಮೀರರು ಫ್ರೆಂಚ ಸರಕಾರದಲ್ಲಿ ತಮ್ಮ ರಾಯಭಾರಿಗಳಾಗಲು ತಮ್ಮ ಸ್ವಂತ ಮಾವನವರನ್ನೇ ನೇಮಕಮಾಡಿರುವರು.

ಒಳದೇಶ ವರ್ತಮಾನ.

ಮದದ್ರಾವಕಗಳ ಸೇವನೆಗೆ ನಿರ್ಬಂಧ:—ಗುಜರಾಥಿನ ವಾಂಡವಿ ಮತ್ತು ವೇರಾಡ್ ತಾಲೂಕುಗಳಲ್ಲಿ ಮದದ್ರಾವಕಗಳ ಸೇವನೆಯನ್ನು ಅಲ್ಲಿಯ ಜನರು ಬಿಡಬೇಕೆಂದು ನಿರ್ಧರಿಸಿಕೊಂಡು ಕಳೆದ ಆರು ತಿಂಗಳುಗಳಿಂದಲೂ ಪಾನಮಾಡದೆ ಬಿಟ್ಟಿದುದರಿಂದ ಸರಕಾರದವರು ಆ ತಾಲೂಕುಗಳಲ್ಲಿದ್ದ ೧೬ ನಿಶಾಪದಾರ್ಥಗಳ ಅಂಗಡಿಗಳನ್ನು ಮುಚ್ಚಿರುವರು.

ವಿಮೇಕಂಪೆನಿಯನ್ನು ವಂಚಿಸಲು ಮಾಡಿದ ಪ್ರಯತ್ನ:—ತನ್ನ ಅಂಗಡಿಯನ್ನು ಬೆಂಕಿಯ ಹಾವಳಿಗೆ ವಿಮೇಮಾಡಿ ಅದರಲ್ಲಿದ್ದ ಸಾಮಾನುಗಳನ್ನು ಗುಟ್ಟಾಗಿ ಸಾಗಿಸಿ ತಾನೇ ಅಂಗಡಿಗೆ ಬೆಂಕಿಹಾಕಿ ಅದನ್ನು ಸುಟ್ಟುಬಿಟ್ಟು ವಿಮೇಕಂಪೆನಿಯಿಂದ ರೂ. ೩೦,೦೦೦ಗಳನ್ನು ಪಡೆಯಲು ಯತ್ನಿಸಿದ ಕರಾಚಿ ಪಟ್ಟಣದ ಒಬ್ಬ ವರ್ತಕನ ಮೋಸಕೃತ್ಯವು ಹೊರಗೆ ಬಿದ್ದು ಆತನಿಗೆ ಎರಡು ವರುಷಗಳ ಕಠಿಣ ಸಜೆಯೂ ರೂ. ೧೦೦೦ ಜುರ್ಮಾನೆಯೂ ಜುರ್ಮಾನೆ ತೆರಲಿಕ್ಕೆ ತಪ್ಪಿದರೆ ಮತ್ತಾರು ತಿಂಗಳ ಕಠಿಣ ಸಜೆಯೂ ವಿಧಿಸಲಾಗಿದೆ.

ಅಲಹಾಬಾದ ಮುನ್ಸಿಪಾಲಿಟಿ:—ಈ ಮುನ್ಸಿಪಾಲಿಟಿಯ ೩೦ ಸ್ಥಾನಗಳಿಗೆ ೨೦೦ ಮಂದಿ ಉಮೇದ್ವಾರರಿರುವರು. ಹೆಚ್ಚು ಮಂದಿ ಅಸಹಕಾರಿಗಳು ಆರಿಸಿಬರುವಂತೆ ಪ್ರಯತ್ನಗಳು ನಡಿಯುತ್ತಿವೆ.

ಓಲ್-ಇಂಡಿಯಾ ಸ್ಟೂಡೆಂಟ್ಸ ಕೊನ್ಫರೆನ್ಸ್:—ಬರುವ ದಶಂಬರದಲ್ಲಿ ಕೊಕನಾಡದಲ್ಲಿ ಓಲ್-ಇಂಡಿಯಾ ಕೊಂಗ್ರೆಸ್ಸಿನ ಅಧಿವೇಶನವನ್ನು ಜರುಗಿಸುವಾಗ ಓಲ್-ಇಂಡಿಯಾ ಸ್ಟೂಡೆಂಟ್ಸ ಕೊನ್ಫರೆನ್ಸನ್ನೂ ಸೇರಿಸತಕ್ಕದೆಂಬ ಪ್ರಯತ್ನಗಳು ನಡಿಯುತ್ತಿವೆ.

ಮುಸ್ಲಿಮ್ ಯುನಿವರ್ಸಿಟಿ:—ನವಾಬ ಮುಜಮಿಲುಲ್ಲಾ ಖಾನ್ ರವರು ಮುಸ್ಲಿಮ್ ಯುನಿವರ್ಸಿಟಿಯ ವ್ಹಾಯಿಸ್ ಚೆನ್ಸಲರರಾಗಿ ನೇಮಕಪಟ್ಟಿರುವರು.

ಅಂಗೋರಾ ಫಂಡು:—ಸಿಂಧ ಖಿಲಾಫತ್ ಕಮ್ಮಿಟಿಯವರು ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ಮೂಲಕ ಅಂಗೋರಾ ಫಂಡಿಗೆ ರೂ. ೧೨೫,೦೦೦ ಕಳುಹಿಸಿದ್ದಾರೆ. ಇದರಲ್ಲಿ ಈ ಕಮ್ಮಿಟಿಯ ಪ್ರೆಸಿಡೆಂಟರಾದ ಶೇಟ್‌ಹಾಜಿ ಅಬ್ದುಲ್ಲಾ ಹಾರೂನ್‌ರವರು ದಾನವಾಗಿ ಕೊಟ್ಟ ರೂ. ೫೦,೦೦೦ ಸಹ ಸೇರಿದೆ.

ಬರ್ಡ್ವಾನ್ ಮಹಾರಾಜರ ಅರಮನೆಯಲ್ಲಿ ಕಳವು:—ಇಲ್ಲಿ ೫೦ ಸಾವಿರ ರೂಪಾಯಿಯ ಜವಾಹೀರು ಕಳವಾಗಿಹೋಗಿದೆ.

ಅಸ್ಪೃಶ್ಯತೆಯ ನಿವಾರಣೆಯ ಅಗತ್ಯ:—ದಕ್ಷಿಣ ಹಿಂದೂಸ್ಥಾನದಲ್ಲಿ ಅಸ್ಪೃಶ್ಯತೆಯ ಮಹಿಮೆ ಹೆಚ್ಚು. ಮಲಬಾರದಲ್ಲಂತೂ ಈ ಹುಚ್ಚು ವಿಶೇಷವಿದೆ. 'ಧರ್ಮಜಾಗೃತಿ' ಎಂಬ ಮಾಸಿಕ ಪತ್ರಿಕೆಯ ಜನವರಿ ಸಂಚಿಕೆಯಲ್ಲಿ ಒಂದು ಬೋಧಪ್ರದ ಕಥೆಯು ಪ್ರಕಟಗೊಂಡಿದೆ. ಚಚೊರನಾಶಿ ಎಂಬ ಊರಿನಲ್ಲಿ ಹೀನಜಾತಿಯ ಒಬ್ಬ ನಾಯರ ಆಳು ಅಂಗಡಿಯೊಳಗಿಂದ ಒಡೆಯನ ಸಾಮಾನನ್ನು ತಲೆಯ ಮೇಲೆ ಹೊತ್ತುಕೊಂಡು ಒಡೆಯನ ಮನೆಗೆ ಹೋದನು. ದುರ್ದೈವದಿಂದ ಆಗ ಮನೆಯಲ್ಲಿ ಗಂಡಸರು ಯಾರೂ ಇದ್ದಿಲ್ಲ. ನಾಯರ ಆಳು ಹೊತ್ತುಕೊಂಡು ಬಂದ ಸಾಮಾನಿನ ಹೊರೆಯು ಬಲು ಒಜ್ಜೆಯಿತ್ತು. ಒಬ್ಬನಿಂದಲೇ ಇಳಿಸುವುದು ಅಸಾಧ್ಯವಿತ್ತು. ಮನೆಯೊಳಗಿನ ಒಡತಿಯು ಅದನ್ನು ನೋಡಿ ಮುಂದಾಗಿ ಆ ಹೊರೆಯನ್ನು ಇಳಿಸಿಕೊಂಡಳು. ಪತಿರಾಜರು ಅಷ್ಟರೊಳಗೆ ಮನೆಯಲ್ಲಿ ಬಂದು ದಾಖಲಾದರು. ಇವರಿಗೆ ಮಡಿಯ ಮರ್ಮವು. ಹೆಂಡತಿಯು ನಾಯರ ಆಳು ಹೊತ್ತ ಸಾಮಾನಿನ ಹೊರೆಗೆ ಕೈಹಾಕಿದ್ದರಿಂದ ಭ್ರಷ್ಟಳಾದಳೆಂದು ಅವಳಿಗೆ ಮನೆಯ ಹೊರಗೆ ಹಾಕಿಬಿಟ್ಟರು. ಬಡ ಹೆಂಗಸು! ಏನು ಮಾಡುತ್ತಾಳೆ? ಸಂಸಾರಕ್ಕಾಗಿ ಮುಸಲ್ಮಾನನೊಬ್ಬನ ಕೈಹಿಡಿದಳು. ಮತ್ತು ಅದೇ ಊರಿನಲ್ಲಿ ಅವನ ಹೆಂಡತಿಯಾಗಿ ಈಗ ನಡೆಯುತ್ತಾಳೆ. ಮೂಢರ ಮರುಳಿನಿಂದ ಹಿಂದೂಸಮಾಜದ ಮೇಲೆ ಒದಗುತ್ತಿರುವ ದುರವಸ್ಥೆಯಿದು. ಅಸ್ಪೃಶ್ಯತಾನಿವಾರಣೆಯ ಕಾರ್ಯವು ಎಷ್ಟು ಗಡುಚಾಗಿದೆ, ಎಷ್ಟು ಅವಶ್ಯಕವಿದೆ ಎಂಬುದು ಇದರ ಮೇಲಿಂದ ಸ್ಪಷ್ಟವಾಗುತ್ತದೆ.

ಕರ್ನಾಟಕ ವೃತ್ತ.

ಗುರುದ್ವಾರ ಪ್ರಬಂಧಕ ಕಮ್ಮಿಟಿ:—ಸಿಕ್ಖರ ಶಿರೋಮಣಿ ಗುರುದ್ವಾರ ಪ್ರಬಂಧಕ ಕಮ್ಮಿಟಿಗೆ ಅನೇಕ ಕಡೆಯಿಂದ ರೂ. ೧೫೦೦೦ಗಳಿಗೆ ಬಂದ ಒಂದು [illegible] ಅವರ ಕೈಸೇರಲಿಲ್ಲವೆಂದು ಸದರಿ ಕಮ್ಮಿಟಿಯವರು ಪ್ರಕಟಿಸಿರುವರು.

ಸೂರತ್ ಮುನ್ಸಿಪಾಲಿಟಿ:—ಈ ಮುನ್ಸಿಪಾಲಿಟಿಯನ್ನು ರದ್ದುಪಡಿಸಿ ಸರಕಾರವು ಹೊಸತಾಗಿ ಸ್ಥಾಪಿಸಿದ ಮೆನೇಜಮೆಂಟ್ ಕಮ್ಮಿಟಿಗೆ ಸೂರತ್ ನಾಗರಿಕರು ಮುನ್ಸಿಪಲ್ ಕರವನ್ನು ಕೊಡಲಿಕ್ಕಿಲ್ಲವೆಂದು ನಿಶ್ಚಯ ಮಾಡಿರುವರು. ಕಮ್ಮಿಟಿಯವರು ನಿರುಪಾಯರಾಗಿ ಸ್ಪೆಷಲ್ ಅಧಿಕಾರಿಯನ್ನು ಸರಕಾರದಿಂದ ಪಡೆದು ವಸೂಲಿಯ ಕ್ರಮವನ್ನು ಜೋರಿನಿಂದ ನಡಿಸಿರುವರು. ಮಾಜಿ ಮುನ್ಸಿಫಲ್ ಕೌನ್ಸಿಲರುಗಳ ಮೇಲೆ ವಾರಂಟುಗಳಾಗಿ ಅವರಲ್ಲಿನ ಖುರ್ಚಿ ಮೇಜು ಮೊದಲಾದ ಸಾಮಾನುಗಳು ಜಪ್ತಿಯಾಗಿರುವವು.

ಮುಂಬಯಿ ಮುನ್ಸಿಪಾಲಿಟಿ:—ಶ್ರೀಮತಿ ಅವಂತಿಕಾಬಾಯಿ ಗೋಖಲೆ ಅವರ ಚುನಾವಣೆಯು ಕಾಯದೆಗೆ ವಿರುದ್ಧವಾದದ್ದೆಂದು ನಿರ್ಣಯವಾಗಿ ಅವರ ಸ್ಥಾನದಲ್ಲಿ ಮಿ| [illegible] ಚುನಾಯಿತರಾದರು.

ಮಹಾತ್ಮಾ ಗಾಂಧಿಯವರ ಸಂದರ್ಶನಕ್ಕೆ ಪ್ರತಿಬಂಧ:—ಶ್ರೀಮತಿ ಸರೋಜಿನಿ ನ್ಯಾಡುರವರು ಪುಣೆಯಲ್ಲಿದ್ದಾಗ ಯರವಾಡಾ ಜೈಲಿನಲ್ಲಿರುವ ಮಹಾತ್ಮರ ಬರೆ ಮುಲಾಖಾತಿಗೆ ಪರವಾನಗಿಯನ್ನು ಕೊಡಬೇಕಾಗಿ ಕೇಳಿದಕ್ಕೆ ಜೈಲಿನ ಅಧಿಕಾರಿಗಳು ಪರವಾನಗಿಕೊಡಲು ಒಪ್ಪಲಿಲ್ಲ.

ರಂಗೂನ್ ಖಿಲಾಫತ್ ಸೆಕ್ರೆಟರಿಗೆ ಶಿಕ್ಷೆ:—ರಾಜದ್ರೋಹಕರವಾದ ಭಾಷಣವನ್ನು ಮಾಡಿದ ತಪ್ಪನ್ನು ಆರೋಪಿಸಿ ರಂಗೂನಿನ ಪ್ರಾಂತಿಕ ಖಿಲಾಫತ್ ಕಮ್ಮಿಟಿಯ ಸೆಕ್ರೆಟರಿಯವರಿಗೆ ಒಂದು ವರುಷದ ಕಠಿಣ ಶಿಕ್ಷೆಯು ವಿಧಿಸಿದೆ.

ಅಹಮ್ಮದಾಬಾದ ಮುನ್ಸಿಪಾಲಿಟಿ:—ಅಹಮ್ಮದಾಬಾದಿನ ಮಾಜಿ ಮ್ಯುನ್ಸಿಪಲ್ ಬೋರ್ಡಿನ ೧೯ ಮಂದಿ ಮೆಂಬರರ ಮೇಲೆ ಇಂಡಿಯಾ ಸರಕಾರದ ಸೆಕ್ರೆಟರಿಯವರು ರೂ. ೧೬೫೬೦೦ನ್ನು ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ದುರ್ವ್ಯಯಮಾಡಿದರೆಂದು ಅದನ್ನು [illegible] ಸಿವಿಲ್ ವ್ಯಾಜ್ಯವು ಕಳೆದ ಸೋಮವಾರ ವಿಚಾರಣೆಗೆ ತೆಗೆಯಲಾಯಿತು. ೧೯ಮಂದಿ ಮೆಂಬರರ ಪೈಕಿ ೮ ಮಂದಿಗಳ ಕಡೆಯಿಂದ ಮಾತ್ರ ವಕೀಲರು ವ್ಯವಹರಿಸಿದ್ದರು.

ಅಕಾಲಿ ಮುಖಂಡರ ಬಿಡುಗಡೆ:—ಕಳೆದ ಶುಕ್ರವಾರ ಸರದಾರ ಮೆಹತಾಬ್‌ಸಿಂಗ್ ಮತ್ತು ಇತರ ೫ ಮಂದಿ ಅಕಾಲಿ ಮುಖಂಡರನ್ನು ಅಮೃತಸರ ಜೈಲಿನಿಂದ ಬಿಡುಗಡೆಮಾಡಿದೆ. ಇವರನ್ನು ಸ್ವಾಗತಮಾಡಿ ಕರತರಲು ಅನೇಕ ಅಕಾಲಿ ಗೃಹಸ್ಥರು ನೆರೆದಿದ್ದರು. ಇನ್ನೂ ಅನೇಕ ಮಂದಿ ಮುಖಂಡರು ಜೈಲಿನಿಂದ ಬಿಡುಗಡೆಹೊಂದದೆ ಇರುವುದರಿಂದ ತಮ್ಮನ್ನು ಮೆರವಣಿಗೆಯಿಂದ ಕರೆದುಕೊಂಡು ಹೋಗುವುದು ಅನುಚಿತವೆಂದು ಈಗ ಬಿಡುಗಡೆ ಹೊಂದಿದ ಮುಖಂಡರು ತಿಳಿಸಿದರು. ಅನಂತರ ಈ ಮುಖಂಡರು ಕಾಲುನಡೆಯಾಗಿಯೇ ಅಕಾಲ್ ತಾಖಟನ್ನು ಸೇರಿದರು. ಇಲ್ಲಿ ಒಂದು ದೊಡ್ಡ ಸಭೆಯು ಸೇರಿತ್ತು. ಈ ಸಭೆಯ ಮುಂದೆ ಸರದಾರ ಮೆ॥ ತಾಬ್‌ಸಿಂಗ್ ಹಾಗು ಬಾಗವತ್ ಜಸವಂತಸಿಂಗರು ಭಾಷಣಗಳನ್ನು ಮಾಡಿದರು. ಜೈಲಿನಲ್ಲಿರುವ ಉಳಿದ ಅಕಾಲಿಗಳು ಬಿಡುಗಡೆಯೊಂದುವ ವರೆಗೆ ತಮಗೆ ಸ್ವಲ್ಪವಾದರೂ ವಿರಾಮವನ್ನು ಹೊಂದಲು ಅಸಾಧ್ಯವೆಂದು ತಿಳಿಸಿದರು.

ಶ್ರೀಮತಿ ಸರೋಜಿನಿ ನ್ಯಾಡು:—ಇವರನ್ನು ಮುಂಬಯಿ ಮ್ಯುನ್ಸಿಪಲ್ ಕೊರ್ಪೋರೇಶನಿಗೆ ಮೆಂಬರಾಗಿ ಆರಿಸಿದ್ದನ್ನು ಆಕ್ಷೇಪಿಸಿ ಮಿ| ನವಾಲಕರರು ಮುಂಬಯಿ ಕೋರ್ಟಿನಲ್ಲಿ ಅರ್ಜಿ ಮಾಡಿದ್ದರು. ಆದರೆ ಕೋರ್ಟಿನವರು ಸರೋಜಿನಿಯವರನ್ನು ಆರಿಸಿದುದು ನ್ಯಾಯಸಮ್ಮತವಾದುದೆಂದು ತೀರ್ಪನ್ನು ಕೊಟ್ಟಿದ್ದರು. ಮಿ| ನವಾಲಕರರು ಈ ವಿಷಯದಲ್ಲಿ ಈಗ ಹೈಕೋರ್ಟಿಗೆ ಅಪೀಲು ಮಾಡಿಕೊಂಡಿದ್ದಾರೆ.

ದಕ್ಷಿಣ ಕನ್ನಡ

ಮುಲ್ಕಿ:—ಇಲ್ಲಿಯ ಬಂದರ ಸಾಹುಕಾರರಲ್ಲೊಬ್ಬರಾದ ರಾಜೇಶ್ರೀ ಕಾಂತಪ್ಪನವರು ಮುಲ್ಕಿ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯ ಎದುರು ಗೋಪುರದ ಮುಂಭಾಗದಲ್ಲಿ ಇಕ್ಕೆಡೆಯಲ್ಲಿ ಎರಡು ವಿಶ್ರಾಂತಿಆಸನ (Seat)ಗಳನ್ನು ತನ್ನ ಖರ್ಚಿನಿಂದ ಕಟ್ಟಿಸಿದುದು ಮಾತ್ರವಲ್ಲದೆ ಅಲ್ಲಿಯೇ ಒಂದು ದೀಪಸ್ತಂಭವನ್ನು ಕಟ್ಟಿಸಿ ಸದಾಕಾಲವೂ ರಾತ್ರಿಹೊತ್ತು ದೀಪಹಚ್ಚುವಂತೆ ಏರ್ಪಡಿಸಿದುದು ತುಂಬಾ ಶ್ಲಾಘನೀಯವಾದ ಕೆಲಸವೇ ಸರಿ. ಇವರು ಇಲ್ಲಿಯ ಬಿಲ್ಲವಸಮಾಜದಲ್ಲಿ ಮುಖಂಡರೂ ಸಂಪನ್ನರೂ ಆಗಿರುತ್ತಾರಲ್ಲದೆ ದೈವಭಕ್ತಿಯುಕ್ತವಾದ ಕಾರ್ಯಗಳಲ್ಲಿ ತುಂಬಾ ಶ್ರದ್ಧೆಯುಳ್ಳವರಾಗಿರುತ್ತಾರೆ. ಇವರು ತಮ್ಮ ಸ್ವಜಾತಿಯವರಲ್ಲಿಯೂ ಇಂಥ ಭಗವದ್ಭಕ್ತಿಯು ಬೇರೂರಲೆಂದು ಒಂದು ಭಜನೆಮಂಡಲಿಯನ್ನು ಸ್ಥಾಪಿಸಿರುತ್ತಾರೆ.

ಸುರತ್ಕಲ್:—ಇಲ್ಲಿಯ ಮಾರಿಗುಡಿಯಲ್ಲಿ ಕ್ರಮವಂತೆ ನೆರವೇರಲಿಕ್ಕಿರುವ ಕೋಣಾಹುತಿಯ ಪೂಜೆಯು ಇದೇ ಬರುವ ಮಾರ್ಚಿ ತಾ. ೩೦ನೇ ಶುಕ್ರವಾರ ನೆರವೇರಿಸುವುದೆಂತ ನಿಶ್ಚಯಿಸಿರುತ್ತದೆ.

ಪುತ್ತೂರು:—ಇದೇ ತಾ. ೧೫ರಲ್ಲು ಇಲ್ಲಿ ವಿಪರೀತವಾಗಿ ಮಳೆ ಸುರಿಯಿತು.

ಇಲ್ಲಿ ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಳಿಯ ನಾಟಕವು ಕೆಲವು ದಿವಸಗಳಿಂದ ಆರಂಭವಾಗಿದೆ.

ಮಂಗಳೂರಿಂದ ಇಲ್ಲಿಗೆ ರನ್ನರರ ತಲೆಮೇಲೆ ಟಪ್ಪಾಲು ಬರುತ್ತಿರುವಾಗ್ಗೆ ಬೆಳಿಗ್ಗೆ ೯ಘಂಟೆಗೆ ಸರಿಯಾಗಿ ಬರುವ ಟಪ್ಪಾಲು ಮೋಟರ ಮೇಲೆ ಬರಲು ತೊಡಗಿದಂದಿನಿಂದ ಮಧ್ಯಾಹ್ನ ೨ಘಂಟೆಗೆ ತಲ್ಪುವುದು ದುರ್ಲಭ. ಟಪ್ಪಾಲು ಅಧಿಕಾರಿಗಳು ಯಾಕೆ ಈ ಕಡೆಗೆ ನಿಗಾ ಕೊಡುವುದಿಲ್ಲ?

ಇಲ್ಲಿಯ ಪಂಚಾಯತಕೋರ್ಟು ಕಳೆದ ಫೆಬ್ರವರಿ ತಾ. ೧೦ಕ್ಕೆ ಕಡದನಂತರ ಇದೇ ಮಾರ್ಚಿ ತಾ. ೧೭ರ ವರೆಗೆ ತೆರೆಯಲಿಲ್ಲ. ಮಾರ್ಚ ತಾ. ೨೬ಕ್ಕೆ ತೆರೆಯುವುದರಿಂದ ಮುನ್ಸಿಫ ಕೋರ್ಟುಗಳಿಗೆಲ್ಲಾ ಸೆಕೆಕಾಲದ ರಜೆ ಎಪ್ರಿಲ ಮೇ ತಿಂಗಳಲ್ಲಿ ಆರಂಭವಾಗುವಾಗ್ಗೆ ಇಲ್ಲಿಯ ಪಂಚಾಯತಕೋರ್ಟಿಗೆ ಸೆಕೆಕಾಲದ ರಜೆ ಫೆಬ್ರವರಿ ಮಾರ್ಚ ತಿಂಗಳುಗಳಲ್ಲಿ ಆದಂತಾಯಿತು. ಕೋರ್ಟುಕೆಲಸ ಮಾಡಲಿಕ್ಕೆ ನೇಮಕಪಟ್ಟ ಸ್ಥಾನಭಾಗಿಗೆ ಜಮಾಬಂದಿ ಕೆಲಸವನ್ನೂ ಕೋರ್ಟಿನ ಬರವಣಿಗೆ ಕೆಲಸವನ್ನೂ ಮಾಡಬೇಕಾದುದರಿಂದ ಕೋರ್ಟು ಬಂದುಮಾಡುವುದಾಯಿತಂತೆ. ೨೦ ತಿಂಗಳಿಂದ ದಾಖಲಾದ ಸುಮಾರು ನೂರು ನೂರೈವತ್ತು ಕಕ್ಷಿಗಾರರಿಗೆ ಕೋರ್ಟು ಬಾಗಿಲಿಗೆ ಬರುವುದು ಹೋಗುವುದು ಇದೇ ಕೆಲಸದಿಂದ ತುಂಬಾ ಕಷ್ಟವಾಯಿತು.

ಬಂಟವಾಳ:—[illegible] ದವರಿಗೆ ೬-೭ ವರ್ಷಗಳ ಸಜೆಯಾಯಿತು. ಒಬ್ಬನನ್ನು ಮಾತ್ರವೇ ಬಿಟ್ಟುಬಿಟ್ಟಿರುತ್ತಾರೆ. ಇನ್ನೊಂದು ತಂಡವು ಅಂಚೆಕಟ್ಟೆಯ ಹತ್ತಿರ ಇನ್ನೂ ಇದೆಯಂತೆ. ಇದು ಬರುವ ಹೋಗುವ ಗಾಡಿಗಳನ್ನು ಅಡ್ಡಕಟ್ಟಿ [illegible] ಗಾಡಿಯವರು ಮಾತಾಡುತ್ತಾ ಇದ್ದಾರೆ.

ಕಾಸರಗೋಡು:—ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ವರ್ಷಂಪ್ರತಿ ನೆರವೇರುವ ಜಾತ್ರೆಯ ಉತ್ಸವವು ಈ ಸಾರಿ ಸಹ ತಾ. ೧೯ನೆಯ ಸೋಮವಾರ ಪ್ರಾರಂಭವಾಗಿರುತ್ತದೆ.

ಕಾಸರಗೋಡು ತಾಲೂಕು ಜಮಾಬಂದಿಯು ಇದೇ ತಾ. ೧೬ಕ್ಕೆ ಮುಕ್ತಾಯವಾಯಿತು.

ಮಹಾತ್ಮರ ಬಂಧನ ದಿನಾಚರಣೆ.

(ಮಹಾತ್ಮಾ ಗಾಂಧಿಯವರು.)

ಮದರಾಸ್

ಮಹಾತ್ಮಾ ಗಾಂಧಿಯವರನ್ನು ಬಂಧನದಲ್ಲಿಟ್ಟು ಕಳೆದ ತಾ. ೧೮ಕ್ಕೆ ಒಂದು ವರುಷವಾಯಿತು. ಇವರ ಬಂಧನದಿನಾಚರಣೆಯು ಸಪ್ತಾಹವು ಕಳೆದ ತಾರೀಖು ೧೧ರಿಂದ ೧೮ರ ವರೆಗೆ ಎಲ್ಲಾ ಕಡೆಗಳಲ್ಲೂ ಸಾಂಗವಾಗಿ ನಡೆಯಿತು. ತಾ. ೧೮ರ ಹರತಾಳವು ಇಡೀ ಹಿಂದುಸ್ಥಾನದಲ್ಲಿ ಯೋಗ್ಯರೀತಿಯಲ್ಲಿ ಆಚರಿಸಲಾಯಿತು. ನಮ್ಮ ಸಂಸ್ಥಾನದ ಮುಖ್ಯ ಪಟ್ಟಣವಾದ ಮದರಾಸಿನಲ್ಲೂ ಈ ಹರತಾಳವು ಯೋಗ್ಯವಾಗಿ ಆಚರಿಸಲ್ಪಟ್ಟಿತು. ತಾರೀಖು ೧೮ರಲ್ಲಿ ಮದರಾಸ ಪಟ್ಟಣವೆಲ್ಲ ದುಃಖದಿಂದಿರುವಂತೆ ಇತ್ತು. ಇಡೀ ಪಟ್ಟಣದಲ್ಲಿ ಒಂದೇ ಒಂದು ಚಿಕ್ಕ ಅಂಗಡಿಯು ಸಹ ತೆರೆದಿರಲಿಲ್ಲ. ಈ ದಿನವು ತೆಲುಗು ಯುಗಾದಿಹಬ್ಬದ ದಿವಸವಾಗಿದ್ದರೂ ಮುಖ್ಯ ಮಾರ್ಕೆಟು ಆಗಿದ್ದ ಕೊಟವಾಲ್ ಮಾರ್ಕೆಟು ಕೂಡ ಮುಚ್ಚಿತ್ತು. ಎಲ್ಲಾ ಹೋಟೇಲುಗಳು ಸಹ ಬಂದುಮಾಡಲ್ಪಟ್ಟಿದ್ದವು. ಪ್ರಾತಃಕಾಲವೂ ಸಾಯಂಕಾಲವೂ ಜನರು ಲೋಕಮಾನ್ಯ ತಿಲಕರ ಹಾಗು ಮಹಾತ್ಮಾ ಗಾಂಧಿಯವರ ಭಾವಚಿತ್ರಗಳನ್ನು ಹಿಡಿದು ಬೀದಿಗಳಲ್ಲೆಲ್ಲಾ ತಿರುಗಾಡಿ ತಿಲಕಸ್ವರಾಜ್ಯಫಂಡಿಗೆ ಹಣವನ್ನು ಕೂಡಿಸುತ್ತಿದ್ದರು; ಕೊಂಗ್ರೆಸ್ಸಿಗೆ ಮೆಂಬರರನ್ನು ಸೇರಿಸುತ್ತಿದ್ದರು. ಅಂದು ಸಾಯಂಕಾಲ ಟ್ರಿಪ್ಲಿಕೇನ್ ಬೀಚಿನಲ್ಲಿ ಪ್ರಚಂಡ ಮಹಾಸಭೆಯು ಸೇರಿತು. ಈ ಸಭೆಗೆ ಅನೇಕರು ಗುಂಪುಗುಂಪಾಗಿ ಭಜನೆಯನ್ನು ಮಾಡುತ್ತಾ ಬಂದುಸೇರಿದರು. ಸುಮಾರು ಹದಿನೈದು ಸಾವಿರ ಜನರು ಈ ಸಭೆಗೆ ಬಂದು ನೆರೆದಿದ್ದರು, ಅನೇಕರು ಖಾದಿಯನ್ನೆ ಧರಿಸಿಕೊಂಡಿದ್ದರು. ಜನಸ್ತೋಮವು ವಿಶೇಷವಾಗಿದ್ದುದರಿಂದ ಮೂರು ಕಡೆಗಳಿಂದ ಭಾಷಣಗಳನ್ನು ಮಾಡಲು ಏರ್ಪಾಡು ಮಾಡಿತ್ತು. ಸಭಾಕಾರ್ಯವು ಪ್ರಾರಂಭವಾಗುವ ಮೊದಲು ಸಭೆಯ ಮುಂದೆ ಅನೇಕ ನಮೂನೆಯ ಚರಕಗಳು ಪ್ರದರ್ಶಿಸಲ್ಪಟ್ಟವು. ನೆರೆದ ಸಭೆಯಲ್ಲಿ ಅನೇಕರನ್ನು ಕೊಂಗ್ರೆಸ್ ಮೆಂಬರರಾಗಿ ಸೇರಿಸಿದುದಲ್ಲದೆ, ತಿಲಕ ಸ್ವರಾಜ್ಯಫಂಡಿಗೆ ವಂತಿಗೆಯನ್ನು ಕೂಡಿಸಲಾಯಿತು. ಅನೇಕ ಚಿಲ್ಲರೆ ಸಾಮಾನುಗಳ ಏಲಂ ಮಾಡಲಾಯಿತು. ಶ್ರೀಯುತ ರಂಗಸ್ವಾಮಿ ಅಯ್ಯಂಗರ, ಮಿ| ಶಫಿ ಮಹಮ್ಮದ್, ಶ್ರೀಯುತ ರಾಮದಾಸ ಮೊದಲಾದ ವಕ್ತೃಗಳು ಮಹಾತ್ಮಾ ಗಾಂಧಿಗಳವರ ಪೂಜ್ಯತೆಯನ್ನು ಕುರಿತು ಹಾಗು ಪ್ರಚಲಿತ ಕರ್ತವ್ಯವನ್ನು ಕುರಿತು ಭಾಷಣಮಾಡಿದರು.

ಜಬಲಪುರ.

ಜಬಲಪುರದಲ್ಲಿ ತಾ. ೧೮—೩—'೨೩ರಲ್ಲಿ ಸಂಪೂರ್ಣ ಹರತಾಳವು ಆಚರಿಸಲಾಯಿತು. ಸಾಯಂಕಾಲ ೫ ಘಂಟೆಗೆ ಒಂದು ಮೆರವಣಿಗೆಯು ಕಂಟೋನ್ಮೆಂಟಿಗೆ ಅಭಿಮುಖವಾಗಿ ಹೋಯಿತು. ಇದನ್ನು ನೋಡಿ ಅಸಿಸ್ಟಂಟ ಸುಪರಿಂಟೆಂಡೆಂಟರಾದ ಮಿ| ಬಾಂಬಾವಾಲರ್ ಪೋಲೀಸು ಆಕ್ಟಿನ ೩೦ನೇ ಕಲಮಿಗೆ ಅನುಸಾರವಾಗಿ ಶ್ರೀಯುತ ಸುಂದರಲಾಲ ಮತ್ತು ಇತರ ಒಂಬತ್ತು ಮಂದಿ ಗೃಹಸ್ಥರ ಮೇಲೆ ಸಿವಿಲ್ ಲೈನುಗಳೊಳಗೆ ತನ್ನ ಲೈಸನ್ಸು ಪಡೆಯದೆ ವಿನಹ ಪ್ರವೇಶಿಸಬಾರದೆಂಬದಾಗಿ ಹುಕುಂ ಜಾರಿಮಾಡಿದರು. ಅಂತೆಯೇ ಸುಂದರಲಾಲರು ಮತ್ತು ನಾತುರಾಮ್ ಮೋದಿಯವರು ಹೋಗಿ ಲೈಸನ್ಸ್ ಕೇಳಿದರು. ಆದರೆ ಧ್ವಜ ವಿನಹ ಮೆರವಣಿಗೆಯು ನಡಿಯುವುದಾದರೆ ಹುಕುಂ ದೊರಿಯಬಹುದು ಎಂದು ವಾಲರು ತಿಳಿಸಿದರು. ಆದರೆ ಅಸಹಕಾರಿಗಳು ತಮ್ಮ ಅಭಿಮಾನ ಸೂಚಕ ಧ್ವಜವನ್ನು ಬಿಟ್ಟು ಮೆರವಣಿಗೆಯನ್ನು ನಡಿಸಲು ಒಡಂಬಡಲಿಲ್ಲ. ಒಡನೆಯೆ ಅಲ್ಲಿ ನೆರೆದಿದ್ದ ಅಪಾರ ಸಭಿಕರಿಗೆ ಶ್ರೀಯುತ ಸುಂದರಲಾಲರು ಹೃದಯಂಗಮವಾದ ವಾಣಿಗಳಿಂದ ಶಾಂತತೆಯನ್ನು ಕಾಪಾಡಿ, ಸವಿನಯ ಕಾಯಿದೆಭಂಗವನ್ನು ಕೈಕೊಂಡು ಸ್ವಾತಂತ್ರ್ಯ ಸಾಧನಕಾರ್ಯಕ್ಕೆ ಈ ಜಬಲಪುರದ ಧ್ವಜಪ್ರಕರಣವನ್ನು ಕೇಂದ್ರಸ್ಥಾನವಾಗಿ ಮಾಡಿಕೊಳ್ಳಬೇಕೆಂದು ವಿಜ್ಞಾಪಿಸಿಕೊಂಡರು. ತರುವಾಯ ಸಾಧಾರಣ ೧೦,೦೦೦ಕ್ಕಿಂತ ಹೆಚ್ಚಾದ ಜನಸಮೂಹವು ಅವರನ್ನು ಹಿಂಬಾಲಿಸಿಕೊಂಡು ಹೋಯಿತು.

ಕ್ಲೋಕ್ ಟವರಿನ ಬಳಿ ಹೋದೊಡನೆಯೆ ಮೆರವಣಿಗೆಯು [illegible] ಸುಂದರಲಾಲರು ಈಗ ತಾನೇ ಕಾಯಿದೆ ಭಂಗಮಾಡಬೇಕಾದ ಅವಶ್ಯಕತೆಯನ್ನು ವಿವರಿಸಿ ಪೋಲೀಸು ಕಾಯಿದೆ ವಿರೋಧಿಸುವ ಹತ್ತು ಮಂದಿ ಸ್ವಯಂಸೇವಕರನ್ನು ಕೊಡಬೇಕಾಗಿ ಕೂಡಿದ ಜನಸ್ತೋಮದೊಡನೆ ಕೇಳಿಕೊಂಡರು. [illegible] ಸ್ವಯಂಸೇವಕರು [illegible] ಮತ್ತು ಇತರರಿಂದ ಕೂಡಿದ ಒಂದನೇ ಸ್ವಯಂಸೇವಕರ ತಂಡವು [illegible] ಸೇರಿತು. [illegible] ಈಗ ತಮ್ಮ ಮುಖಂಡರ ಮಾತಿಗೆ [illegible] ತಿಲಕ ಭೂಮಿಯಲ್ಲಿ ಸಭೆಯು ನೆರೆದಿತ್ತು. ಈ ದೊಡ್ಡ ಸಭೆಯು ಮುಖಂಡರ ಬಂಧನದ [illegible] ಸ್ವಯಂಸೇವಕರಾಗಿ ಮುಂದೆ ಬಂದರು. [illegible]

([illegible])

ಅನುಕ್ರಮಣಿಕೆ.

ಅಗ್ರಲೇಖ.—
ಸ್ವರಾಜ್ಯಪಕ್ಷದ ಸಂಘಟನೆ . . . ೬
ಸ್ಫುಟವಿಚಾರಗಳು.— ೬
೧. ಶ್ರೀಮತಿ ಸರೋಜಿನೀ ನಾಯುಡುರವರು ,,
೨. ಪಂಜಾಬ ಕಾಯಿದೆ ಕೌನ್ಸಿಲಿನ ಸಭಾಸದರು ,,
೩. ಮತಾಂತರಗೊಳಿಸಿದವರನ್ನು ಶುದ್ಧಿಗೊಳಿಸುವುದು ,,
೪. ಹಿಂದೂ ಮುಹಮ್ಮದೀಯರ ಐಕ್ಯದ ಆವಶ್ಯಕತೆ ,,
೫. ಸರಕಾರದ ವಿಪರೀತ ಖರ್ಚು ,,
೬. ಉಪ್ಪಿನ ಮೇಲಿನ ಕರ ,,
ಮಂಗಳೂರು.— ೬-೮
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ— ಮುಲ್ಕಿ, ಸುರತ್ಕಲ್, ಪುತ್ತೂರು, ಬಂಟವಾಳ, ,,
ಮಹಾತ್ಮರ ಬಂಧನ ದಿನಾಚರಣೆ. . . ೫-೮
ಮದ್ರಾಸ್ ಹಿಂದೂ ಮಠ, ದೇವಸ್ಥಾನ ಮತ್ತು ಇತರ ಸಂಸ್ಥೆಗಳ ಉಂಬಳಿಗಳಿಗೆ ಸಂಬಂಧಪಟ್ಟ ಕಾನೂನಿನ ಮಸೂದೆಯ ಕುರಿತು. ೪
ಸ್ವೀಕಾರ. . . . ೪

ಸ್ವದೇಶಾಭಿಮಾನಿ

ಶಕ ೧೮೪೫ ಚೈತ್ರ ಶು| ೬ ಯು ಶುಕ್ರವಾರ

ಸ್ವರಾಜ್ಯಪಕ್ಷದ ಸಂಘಟನೆ

ಕಳೆದ ತಿಂಗಳಲ್ಲಿ ಅಲಹಾಬಾದದಲ್ಲಿ ಸ್ವರಾಜ್ಯಭಕ್ತರಾದ ಚಿತ್ತರಂಜನದಾಸರ ಅಧ್ಯಕ್ಷತೆಯಲ್ಲಿ ಸ್ವರಾಜ್ಯಪಕ್ಷವು ಸೇರಿ, ಎರಡು ಮೂರು ದಿವಸ ಚರ್ಚೆನಡೆದು ಕೊನೆಗೆ ಯಾವ ನಿರ್ಣಯವು ನಿರ್ಣಯಿಸಲ್ಪಟ್ಟಿತೊ ಅದು ಎಲ್ಲ ದೇಶದ ಮುಂದೆ ಆಗಲೆ ಬಂದಿದೆ. ವಸ್ತುತಃ ಈ ಸ್ವರಾಜ್ಯಪಕ್ಷವು ಹೊಸತಲ್ಲ. ರಾಷ್ಟ್ರೀಯಪಕ್ಷವೆಂದು ೧೯೦೬ರಿಂದ ಯಾವುದು ಅಸ್ತಿತ್ವದಲ್ಲಿ ಬಂತೊ, ಯಾವುದರ ತತ್ವಗಳು ಮತ್ತು ವಿಶೇಷತಃ ಕಾರ್ಯಪದ್ಧತಿಗಳು ಮಾನ್ಯವಾಗದೆ ಇದ್ದುದರಿಂದ ಸುರತದಲ್ಲಿ ಒಡಕು ಹುಟ್ಟಿ ಶಾಂತಪಕ್ಷವು ಭಿನ್ನವಾಯಿತೊ, ಅನಂತರ ಮೆಲ್ಲಮೆಲ್ಲನೆ ಬೆಳೆಯುತ್ತ ಬಂದು ತನ್ನ ಕರ್ತೃತ್ವದಿಂದ ಲೋಕಪ್ರಿಯತೆಯನ್ನು ಸಂಪಾದಿಸಿದ ಕಾರಣ ಯಾವುದರೊಡನೆ ಶಾಂತಪಕ್ಷದ ರಾಷ್ಟ್ರೀಯಸಭೆಯು ಲಖನೌ ಅಧಿವೇಶನದಲ್ಲಿ ಒಪ್ಪಂದವನ್ನು ಮಾಡಿಕೊಂಡು ಐಕ್ಯವನ್ನು ಹೊಂದಿತೊ ಮತ್ತು ಯಾವುದು ಅಮೃತಸರ ಕೊಂಗ್ರೆಸಿನಲ್ಲಿ ಈ ಹೊಸ ಸುಧಾರಣೆಗಳನ್ನು ಯಾವ ರೀತಿಯಲ್ಲಿ ಉಪಯೋಗಿಸಕೊಳ್ಳಬೇಕೆಂದು ನಿರ್ಣಯಿಸಿಕೊಂಡಿತೊ ಅದೆ ಈ ಸ್ವರಾಜ್ಯಪಕ್ಷವಾಗಿದೆ. ಈ ಪಕ್ಷದಲ್ಲಿ ಪ್ರತಿಯೋಗಿ ಸಹಕಾರಿಗಳು ಪ್ರತಿಯೋಗಿ ಅಸಹಕಾರಿಗಳು, ಪ್ರತಿರೋಧಕರು, ಮುಷ್ಕರಗಾರರು ಎಂದು ಹಲವು ವಿಧದವರಿರಬಹುದು. ಆದರೂ ಅವರೆಲ್ಲರದೂ ಪಕ್ಷವು ಒಂದೆ ಎಂದ ಮೇಲೆ ಅವರು ವಿವಕ್ಷಿತ ಸಂಗತಿಗಳಲ್ಲಿ ನಿಶ್ಚಿತಾಭಿಪ್ರಾಯವುಳ್ಳವರಾಗಿದ್ದಾರೆ ಎಂಬುದನ್ನು ಸಹಜವಾಗಿಯೆ ಊಹಿಸಬಹುದು. ಈ ವಿಷಯದಲ್ಲಿ ಊಹನೆ ಮಾತ್ರವಲ್ಲ. ಅಲಹಾಬಾದದಲ್ಲಿ ಸ್ವರಾಜ್ಯಪಕ್ಷದ ಮುಖಂಡರು ಏಕತ್ರಸೇರಿ ಯಾವ ಕಾರ್ಯಕ್ರಮಗಳನ್ನು ಆಯಿದುಕೊಂಡಿರುವರೊ ಅದರ ಮೇಲಿಂದಲೆ ಮೇಲಿನ ಸಂಗತಿಯು ಪ್ರತ್ಯಕ್ಷವಾಗಿದೆ ಎನ್ನಬಹುದು. ಮತಭೇದಗಳು ತುಸು ಹೆಚ್ಚುಕಡಿಮೆ ಪ್ರಮಾಣದಲ್ಲಿ, ಎಲ್ಲ ತಂಡಗಳಲ್ಲಿ ಇದ್ದೆ ಇವೆ. "ಭಿನ್ನರುಚಿರ್ಹಿಲೋಕಃ" ಎಂಬಂತೆ ಅವರವರ ಮತಗಳು ಬೇರೆ ಬೇರೆ ಇರಬಹುದು. ಆದರೆ ಯಾವುದಾದರೂ ಒಂದೆರಡು ಮುಖ್ಯ ಮತ್ತು ಮಹತ್ವದ ವಿಷಯಗಳನ್ನು ಕುರಿತು ಏಕಮತ್ಯವಿದ್ದ ಮೇಲೆ ಕಾರ್ಯಾರಂಭಕ್ಕೆ ಮತ್ತು ಕಾರ್ಯಸಿದ್ಧಿಗೆ ಬಾಧೆಯು ಬರುವುದಿಲ್ಲ. ಉದಾಹರಣಾರ್ಥವಾಗಿ, ಕೌನ್ಸಿಲುವಾದಿಗಳಲ್ಲಿ ಕೌನ್ಸಿಲುಗಳಲ್ಲಿ ಪ್ರವೇಶಿಸಿ ಅನುಕೂಲತೆಯ ಸ್ವೀಕಾರ ಮತ್ತು ಪ್ರತಿಕೂಲತೆಗೆ ವಿರೋಧ ಇವುಗಳನ್ನು ಮಾಡಬೇಕು, ಅನುಕೂಲವಿರಲಿ ಪ್ರತಿಕೂಲವಿರಲಿ ಕೌನ್ಸಿಲ್ ಕಾರ್ಯಗಳನ್ನು ನಿಲ್ಲಿಸಬೇಕು, ಕೌನ್ಸಿಲಿನ ಎಲ್ಲ ಲೋಕನಿಯುಕ್ತ ಸ್ಥಾನಗಳನ್ನಾಕ್ರಮಿಸಿ ಮುಷ್ಕರವನ್ನು ಹಾಕಬೇಕು ಎಂದು ಮುಂತಾಗಿ ವಿವಿಧ ಮತಗಳನ್ನು ಪ್ರತಿಪಾದಿಸುವವರಿದ್ದರೂ, ಇವರ ಪರಸ್ಪರ ಮತಗಳು ಬೇರೆಬೇರೆ ಎಂದು ತೋರುವಂತಿದ್ದರೂ ಆ ಎಲ್ಲರ ಏಕವಾಕ್ಯತೆಯಾಗತಕ್ಕ ಒಂದು ವಿಷಯವಿದೆ. ರಾಷ್ಟ್ರೀಯರು ಎಲ್ಲ ಲೋಕನಿಯುಕ್ತ ಸ್ಥಾನಗಳನ್ನು ಆಕ್ರಮಿಸಬೇಕು ಎಂದ ವಿಷಯದಲ್ಲಿ ಈ ಪಕ್ಷದೊಳಗೆ ಯಾರಿಗೂ ಮತಭೇದವಿಲ್ಲ. ಪ್ರತಿಯೋಗಿ ಸಹಕಾರಿಗಳೂ ಪ್ರತಿಯೋಗಿ ಅಸಹಕಾರಿಗಳೂ, ಪ್ರತಿರೋಧಕರೂ ಮುಂತಾದ ಎಲ್ಲರೂ ಕೌನ್ಸಿಲಾಕ್ರಮಣದ ಅಂಶವನ್ನು ಒಪ್ಪಿಕೊಳ್ಳುತ್ತಾರೆ. ಹಾಗೆಯೆ ಖಾದಿಯ ವಿಷಯವಾಗಿ ಯಾರಿಗೂ ಮತಭೇದವಿಲ್ಲ. ಸಾಮಾನ್ಯ ಪರದೇಶೀಯ ವಸ್ತುಗಳ ಬಹಿಷ್ಕಾರದ ವಿಷಯದಲ್ಲಿ ಮತಭೇದವಿದ್ದರೂ ಬ್ರಿಟಿಷ್ ವಸ್ತುಗಳ ಬಹಿಷ್ಕಾರದ ವಿಷಯದಲ್ಲಿ ಅವರಲ್ಲಿ ಮತಭೇದವಿಲ್ಲ. ಸ್ವರಾಜ್ಯಪಕ್ಷದವರ ಏಕವಾಕ್ಯತೆಯ ಮೂರನೆಯ ವಿಷಯವು ಯಾವುದೆಂದರೆ, ಇಂಗ್ಲೆಂಡ್, ಅಮೇರಿಕಾ ಮುಂತಾದ ಅನ್ಯದೇಶಗಳಲ್ಲಿ ಹಿಂದಿ ಸ್ವರಾಜ್ಯದ ಚಳವಳಿವನ್ನು ಭರದಿಂದ ನಡಿಸಬೇಕು. ಇಂಥ ಮುಖ್ಯ ಸಂಗತಿಗಳಲ್ಲಿ ಒಮ್ಮತವಿರುವಕಾರಣ ಒಂದೆಪಕ್ಷವಾಗಿದ್ದುಕೊಂಡು ಮೇಲೆ ಹೇಳಿದ ಮೇರೆಗೆ ಕಾರ್ಯಾರಂಭವನ್ನು ಮಾಡಲು ಮತ್ತು ಕಾರ್ಯಸಿದ್ಧಿಯನ್ನು ಸಾಧಿಸಲು ಯಾವ ಪ್ರತ್ಯವಾಯವೂ ಇಲ್ಲ. ಮತ್ತು ಇದೆ ಕಾರಣದಿಂದ ಅಲಹಾಬಾದದಲ್ಲಿ ಸ್ವರಾಜ್ಯಪಕ್ಷವು ಸ್ಥಾಪಿತವಾಗಿದೆ. ಈ ಪಕ್ಷದ ಹೇತು, ಉದ್ದೇಶ ಮತ್ತು ಕಾರ್ಯಕ್ರಮ ಇವು ಈ ಮೊದಲೆ ಪ್ರಕಟವಾಗಿವೆ. ಅವುಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅಗತ್ಯವಿಲ್ಲ. ಫೆಬ್ರವರಿ ತಾ. ೨೮ರಲ್ಲಿ ಆನಂದಭವನದಲ್ಲಿ (ಪಂಡಿತ ಮೋತಿಲಾಲ ನೇಹರುಗಳ ಬಂಗಲೆಯಲ್ಲಿ) ಪುನಃ ಸಭೆ ಸೇರಿ ಸ್ವರಾಜ್ಯಪಕ್ಷದ ಪ್ರಾಂತಿಕ ಸಂಘಟನೆಯನ್ನು ಮಾಡಲು ಯಾವ ವ್ಯವಸ್ಥೆಗಳಾದವೊ ಅವುಗಳ ಮಾಹಿತಿಯ ಪತ್ರಕವು ನಮ್ಮ ಕಡೆಗೆ ಬಂದಿರುವುದು. ಆ ಮಾಹಿತಿಯ ಪತ್ರಕದಿಂದ ನಮ್ಮ ಕರ್ನಾಟಕ ಪ್ರಾಂತಕ್ಕೆ ಮತ್ತು ಮದ್ರಾಸ ಪ್ರಾಂತಕ್ಕೆ ಆವಶ್ಯಕವಾದ ಸಂಗತಿಗಳನ್ನು ಮಾತ್ರ ಉದ್ಧರಿಸಿ ಕೆಳಗೆ ಬಹು ಚುಟುಕಿನಿಂದ ವಿವರಿಸುತ್ತೇವೆ.

ಇಷ್ಟು ದೊಡ್ಡ ಹಿಂದೂಸ್ಥಾನ ದೇಶವನ್ನು ಕೊಂಗ್ರೆಸು ೧೬ ಪ್ರಾಂತಗಳನ್ನಾಗಿ ವಿಂಗಡಿಸಿದೆಯಷ್ಟೆ! ೧ ಬಂಗಾಲ, ೨ ಅಸ್ಸಾಮ್, ೩ ಬಿಹಾರ, ೪ ಸಂಯುಕ್ತ ಪ್ರಾಂತ, ೫ ದಿಲ್ಲಿ, ೬ ಪಂಜಾಬ, ೭ ಸಿಂಧ, ೮, ೯ ಮಧ್ಯ ಪ್ರಾಂತ (ಮರಾಠ ಮತ್ತು ಹಿಂದಿ) ೧೦ ವಹ್ರಾಡ, ೧೧ ಮುಂಬಯಿ, ೧೨ ಮಹಾರಾಷ್ಟ್ರ, ೧೩ ಕರ್ನಾಟಕ, ೧೪ ಕೇರಳ, ೧೫ ತಮಿಳು ಪ್ರಾಂತ, ೧೬ ಆಂಧ್ರ ಪ್ರಾಂತ ಇವು ೧೬ ವಿಭಾಗಗಳು ಕೊಂಗ್ರೆಸಿನ ಆಡಳಿತೆಯವುಗಳು. ಈ ವಿಭಾಗಗಳು ಭಾಷಾನುರೂಪವಾಗಿವೆ ಎಂಬುದನ್ನು ಇಲ್ಲಿ ಪ್ರತ್ಯೇಕವಾಗಿ ಪ್ರಸ್ತಾಪಿಸುವ ಆವಶ್ಯಕತೆ ಇಲ್ಲ. ಸ್ವರಾಜ್ಯಪಕ್ಷವಾದರೂ ಈ ವಿಭಾಗಗಳನ್ನೆ ಇಟ್ಟುಕೊಂಡಿದೆ. ಈ ೧೬ ವಿಭಾಗಗಳಲ್ಲಿ ಆಯಾ ಪ್ರಾಂತಗಳಲ್ಲಿ ಪ್ರಾಂತಿಕ ಸಂಘಟನೆಯನ್ನು ಮಾಡಲು ಬೇರೆ ಬೇರೆ ಗೃಹಸ್ಥರು ನೇಮಕಹೊಂದಿದ್ದಾರೆ. ಅದರ ಪ್ರಕಾರ ನಮ್ಮ ಕರ್ನಾಟಕ ಪ್ರಾಂತದಲ್ಲಿ ಸ್ವರಾಜ್ಯಪಕ್ಷದ ಸಂಘಟನಕಾರ್ಯವನ್ನು ಮಾಡಲು ಶ್ರೀ ದತ್ತಾತ್ರೇಯ ವೆಂಕಟೇಶ ಬೆಳವಿ, ಬೆಳಗಾಂವ ಇವರು ನೇಮಕಪಟ್ಟಿರುವರು. ಇವರು ಮುಂಬಯಿ ಪ್ರಾಂತದ ರಾಷ್ಟ್ರೀಯ ಪಕ್ಷದ ಮುಖ್ಯ ಧುರೀಣರಲ್ಲೊಬ್ಬರು. ಲೋಕಮಾನ್ಯರ ಸ್ವರಾಜ್ಯ ಚಳವಳದ ಕಾಲದಲ್ಲಿ ಇವರು ಅವರ ಮುಖ್ಯ ಹಸ್ತಕರಾಗಿದ್ದರು. ಶ್ರೀ. ಬೆಳವಿಯವರ ಹೆಸರು ನಮ್ಮ ದಕ್ಷಿಣ ಕನ್ನಡಿಗಳಲ್ಲಿ ಹೆಚ್ಚಿನ ಪರಿಚಯವನ್ನು ತಾಳದಿದ್ದರೂ ಅವರು ಎರಡೆರಡು ಸಾರಿ ಮುಂಬಯಿ ಕೌನ್ಸಿಲಿಗೆ ಕರ್ನಾಟಕದ ಕಡೆಯಿಂದ ಸಭಾಸದರಾಗಿ ಚುನಾಯಿಸಿ ಬಂದು ಎಷ್ಟೊ ಉಪಯುಕ್ತ ಮತ್ತು ಲೋಕಹಿತದ ಕಾರ್ಯಗಳನ್ನು ಸಾಧಿಸಿದವರಾದ ಕಾರಣ ಉತ್ತರ ಕರ್ನಾಟಕಸ್ಥರಿಗೆ ಅವರ ಸಂಪೂರ್ಣ ಪರಿಚಯವಿದೆ. ಮಾತ್ರವಲ್ಲ, ನಮ್ಮ ಬಂಧುವಾದ ಕುಮಟೆಯ "ಕಾನಡಾ ವೃತ್ತ"ವು ಹಿಂದೊಮ್ಮೆ ಬರೆದ ಮೇರೆಗೆ ಇಡಿ ಕರ್ನಾಟಕವು ಶ್ರೀ. ಬೆಳವಿಯವರ ಋಣಿಯಾಗಿದೆ ಎಂಬುದಕ್ಕೆ ಸಂಶಯವಿಲ್ಲ. ಇವರು ಸ್ವರಾಜ್ಯಪಕ್ಷವನ್ನು ನಮ್ಮ ಕರ್ನಾಟಕದಲ್ಲಿ ಅತ್ಯಂತ ಲೋಕಪ್ರಿಯವನ್ನಾಗಿ ಮಾಡಿಯಾರೆಂಬುದಕ್ಕೆ ಅಡ್ಡಿ ಇಲ್ಲ.

ಕೊಂಗ್ರೆಸು ತನ್ನ ಆಡಳಿತೆಯಲ್ಲಿ ಕರ್ನಾಟಕಕ್ಕೆ ಸ್ವತಂತ್ರವಾದ ವಿಭಾಗವನ್ನು ಕೊಟ್ಟಿದೆಯಾದರೂ ನಮ್ಮ ಬ್ರಿಟಿಷ್ ಸರಕಾರವು ಕಂಪೆನಿ ಸರಕಾರದ ಹಾದಿಯನ್ನೆ ತುಳಿಯುತ್ತಿದ್ದ ಕಾರಣ ಅದರ ಆಡಳಿತೆಯಲ್ಲಿ ಈ ಕರ್ನಾಟಕವು ಬೇರೆ ಬೇರೆ ಸರಕಾರಗಳಲ್ಲಿ ಶಕಲಿತವಾಗಿ ಹೋಗಿದೆ. ಉತ್ತರ ಕಾನಡಾ, ಧಾರವಾಡ, ವಿಜಾಪುರ, ಬೆಳಗಾಂವ ಇವು ಮುಂಬಯಿಯ ಕೌನ್ಸಿಲಿನ ಆಡಳಿತೆಗೆ ಒಳಪಟ್ಟವುಗಳಾದರೆ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಇವು ಮದ್ರಾಸ್ ಕೌನ್ಸಿಲಿನ ಬಳಿಗೆ ಸಿಕ್ಕಿವೆ. ಈ ರೀತಿಯಿಂದ ನಮ್ಮ ಜಿಲ್ಲೆಯು ಮದರಾಸು ಕಾಯಿದೆ ಕೌನ್ಸಿಲಿನ ಅಧಿಕಾರಕ್ಕೆ ಸೇರಿರುವ ಕಾರಣ ನಮಗೆ ಕೌನ್ಸಿಲಿನ ವಿಷಯದಲ್ಲಿ ಮದರಾಸು ಸಂಸ್ಥಾನವನ್ನು ಬಿಟ್ಟರೆ ಆಗಲಿಕ್ಕಿಲ್ಲ. ಆದ್ದರಿಂದ ಮದರಾಸಿನಲ್ಲಿ ಈ ಪಕ್ಷದ ಸಂಘಟಕರಾದ ಶ್ರೀ. ಎ. ರಂಗಸ್ವಾಮಿ ಐಯಂಗಾರ ಮತ್ತು ಶ್ರೀ. ಎಸ್. ಸತ್ಯಮೂರ್ತಿ ಇವರ ನಾಮನಿರ್ದೇಶವನ್ನು ಇಲ್ಲಿ ಮಾಡುವುದು ಯುಕ್ತವು. ಮದ್ರಾಸು ಕೌನ್ಸಿಲಿಗೆ ಸ್ವರಾಜ್ಯಪಕ್ಷದ ಉಮೇದುವಾರರನ್ನು ನಿಲ್ಲಿಸುವಾಗ ಶ್ರೀ. ರಂಗಸ್ವಾಮಿ ಐಯಂಗಾರ ಮತ್ತು ಶ್ರೀ ಸತ್ಯಮೂರ್ತಿ ಇವರ ಆಲೋಚನೆಯು ಆವಶ್ಯಕವಾಗಿದೆ. ಕಾಯಿದೆ ಕೌನ್ಸಿಲಿನ ಚುನಾವಣೆಯು ಮುಂದೆ ಇದೆ. ಆ ಸಮಯದಲ್ಲಿ ಹೌದಣ್ಣಾ, ಹೌದು ಎಂದು ಹೇಳುವ ಸಭಾಸದರು ಕೌನ್ಸಿಲಿಗೆ ಹೋಗುವುದು ಉಚಿತವೊ ಅಥವಾ ಆದಷ್ಟು ಬೇಗನೆ ಸ್ವರಾಜ್ಯವನ್ನು ಕಾರ್ಯರೂಪದಲ್ಲಿ ತರಬೇಕೆಂದಿರುವ ಪಕ್ಷದವರು ಕೌನ್ಸಿಲಿಗೆ ಹೋಗುವುದು ಹಿತಾವಹವೊ ಇದನ್ನು ನಿರ್ಣಯಿಸಿ ಮತದಾರರು ತಮಗೆ ಬೇಕಾದ ಸಭಾಸದರನ್ನು ಕಳುಹಿಸಿಕೊಡಲಿ. ಆ ವಾದವು ಈಗ ಸದ್ಯ ಅಗತ್ಯವಿಲ್ಲ. ಈ ವಿವಾದಾಸ್ಪದವಾದ ಕಾಯಿದೆ ಕೌನ್ಸಿಲ್ ಪ್ರವೇಶದ ಪ್ರಶ್ನೆಯನ್ನು ಬಿಟ್ಟರೂ ಸ್ವರಾಜ್ಯಪಕ್ಷಕ್ಕೆ ಕಾರ್ಯಕ್ಷೇತ್ರದಲ್ಲಿ ಎಷ್ಟೊ ಮಹತ್ವದ ಕಾರ್ಯಗಳಿವೆ. ಅವುಗಳನ್ನು ನಮ್ಮ ಕರ್ನಾಟಕದಲ್ಲಿ ಮೇಲಿನ ಸದ್‌ಗೃಹಸ್ಥರಾದ ಶ್ರೀಯುತ ದತ್ತಾತ್ರೇಯ ವೆಂಕಟೇಶ ಬೆಳವಿಯವರು ಸಾಧಿಸಿಯಾರೆಂದು ತಿಳಿಯುತ್ತೇವೆ. ಈ ವಿಷಯವನ್ನು ಮುಂದೆ ಯಥಾವಕಾಶ ಚರ್ಚಿಸೋಣ.

ಸ್ಫುಟವಿಚಾರಗಳು.

೧. "ಬೇಡಬದಲಾವಣೆ"ಯ ಮುಖ್ಯ ಆಧಾರಸ್ತಂಭರೂ, ಅಸಹಯೋಗದ ಪ್ರಾಣಜ್ಯೋತಿಯೂ ಮತ್ತು ತ್ರಿದಲಾತ್ಮಕ ಬಹಿಷ್ಕಾರದ ಅಖಂಡಪುರಸ್ಕರ್ತರೂ ಎನ್ನಿಸಿಕೊಳ್ಳುವವರು ಕೊಂಗ್ರೆಸ್ಸನ್ನು ಮೇಲಕ್ಕೆ ಎತ್ತಿಹಿಡಿದಿದ್ದಾರೆ. ಇವರ ಮಾತಿಗೂ ನಡತೆಗೂ ಎಷ್ಟರಮಟ್ಟಿಗೆ ಸಾಂಗತ್ಯವಿರುವುದೆಂದು ನೋಡುವುದು ಮನೋರಂಜಕವಾಗಿರುವುದು. ಗಯಾದಲ್ಲಿ ಸೇರಿದ ಕೊಂಗ್ರೆಸ್ಸಿನಲ್ಲಿ ಈ ಬೇಡಬದಲಾವಣೆಯವರು ಮುನ್ಸಿಪಾಲಿಟಿಗಳಲ್ಲಿ ಹಾಗೂ ಲೋಕಲ್ ಬೋರ್ಡುಗಳಲ್ಲಿ ಅಸಹಕಾರಿಗಳು ಸೇರಬೇಕೆಂದು ಸ್ಪಷ್ಟಅನುಜ್ಞೆಯನ್ನು ಕೊಡುವ ಠರಾವನ್ನು ತೆಗೆದು ಬದಿಗೆಹಾಕಿದ್ದರು. ಆದರೆ ಇದೆ ಬೇಡಬದಲಾವಣೆಯವರ ತಂಡಕ್ಕೆ ಸೇರಿದವರೂ, ಮುಂಬಯಿ ಕೊಂಗ್ರೆಸ್ ಕಮ್ಮಿಟಿಯ ಅಧ್ಯಕ್ಷರೂ ನಮ್ಮ ಕರ್ನಾಟಕ ಪ್ರಥಮ ಪ್ರಾಂತಿಕಪರಿಷತ್ತಿನ ಅಧ್ಯಕ್ಷರೂ, ಆದ ಶ್ರೀಮತಿ ಸರೋಜಿನೀ ನಾಯುಡು ಇವರು ಮುಂಬಯಿ ಕೊರ್ಪೊರೇಶನಿನ ಸಭಾಸದರಾಗಿ ಚುನಾಯಿಸಲ್ಪಟ್ಟಿದ್ದಾರೆ. ಮುನ್ಸಿಪಾಲಿಟಿಗಳಲ್ಲಿ ಹೋಗಕೂಡದು, ಬೋರ್ಡುಗಳಲ್ಲಿ ಪ್ರವೇಶಿಸಕೂಡದು ಎಂದು ಅಭಿಪ್ರಾಯವನ್ನು ಪ್ರತಿಪಾದಿಸುವವರ ತಂಡಕ್ಕೆ ಸೇರಿ ಸರೋಜಿನೀ ಬಾಯಿಯವರು ಇತ್ತ ಮುನ್ಸಿಪಾಲಿಟಿಗೆ ಉಮೇದುವಾರರಾಗಿ ನಿತದ್ದು ಸಮಂಜಸವೊ? ಒಂದು ವೇಳೆ ಮುಂಚೆಯೆ ನಿಂತದ್ದಾದರೆ, ಗಯಾದಲ್ಲಿ ಈ ಸ್ಥಳಿಕ ಸ್ವರಾಜ್ಯಸಂಸ್ಥೆಗಳ ಪ್ರವೇಶದ ಠರಾವನ್ನು ನಿರಾಕರಿಸಿದ ಬಳಿಕಾದರೂ ಅದನ್ನು ಬಿಡಬಹುದಿತ್ತಲ್ಲವೆ? ಆದರೆ ಸರೋಜಿನೀಯವರು ಅದನ್ನು ಬಿಡುವ ಮಾತಂತಿರಲಿ, ಅವರ ಎದುರುಕಡೆಯ ಉಮೇದುವಾರರು ಸರೋಜಿನೀಯವರ ಚುನಾವಣೆಯು ಕಾನೂನಿಗೆ ವಿರುದ್ಧವಾಗಿದ್ದದರಿಂದ ರದ್ದಾಗಬೇಕೆಂದು ಕೋರ್ಟಿನಲ್ಲಿ ವ್ಯವಹರಿಸಿದಾಗ ಶ್ರೀಮತಿ ಸರೋಜಿನೀಯವರು—ಕೋರ್ಟು ಬಹಿಷ್ಕಾರದ ಠರಾವನ್ನು ಪುರಸ್ಕರಿಸುವ ಬೇಡಬದಲಾವಣೆಯ ಪಕ್ಷದ ಮುಖಂಡರಾದ ಸರೋಜಿನಿಯವರು—ತನ್ನ ಕಡೆಯಿಂದ ವ್ಯವಹರಿಸಲು ವಕಾಲತನ್ನು ಕೊಟ್ಟು ಕೋರ್ಟಿನಲ್ಲಿ ವ್ಯವಹರಿಸಿ ನಂಬರವನ್ನು ಜಯಿಸಿದರು! "ಉಪದೇಶಕ್ಕೆ ತತ್ವಜ್ಞಾನ, ಆಚರಣಕ್ಕೆ ಸ್ವಾರ್ಥಸಾಧನ" ಇದೆ ಸತ್ಯವು! ಮುಂಬಯಿ ಕ್ರೊನಿಕಲ್ ಪತ್ರದ ಸಂಪಾದಕರಾದ ಪಿಕ್‌ಥೊಲ್ ಸಾಹೇಬ ಬಹದ್ದೂರರ ನೀತಿಯಾದರೂ ಇದಕ್ಕಿಂತ ಬೇರೆಯಲ್ಲ.

೨. ಪಂಜಾಬ ಪ್ರಾಂತದ ಕಾಯಿದೆ ಕೌನ್ಸಿಲಿನಲ್ಲಿ ಲೋಕಪ್ರತಿನಿಧಿಗಳು ಅಭಿನಂದನೀಯವಾದ ಒಂದು ಠರಾವನ್ನು ತಂದು ಪಾಸುಮಾಡಿಕೊಂಡಿರುವರು. ಗುರುದ್ವಾರಪ್ರಕರಣದಲ್ಲೂ ಮತ್ತು ಕಿರಪಾಣಪ್ರಕರಣದಲ್ಲೂ ಶಿಕ್ಷೆಯಾದ ಎಲ್ಲಾ ಅಪರಾಧಿಗಳಿಗೆ ಯಾವ ಶರ್ತವಿಲ್ಲದೆನೆ ಬಿಟ್ಟುಕೊಡಬೇಕೆಂದು ಸಭಾಸದರು ಒಂದು ಠರಾವನ್ನು ತಂದರು. ಆಗ ಯಥಾಪ್ರಕಾರ ಸರಕಾರದ ಪದ್ಧತಿಗನುಸಾರವಾಗಿ "ಇನ್ನುಮುಂದೆ ಇವರು ರಾಜಕೀಯ ಕಾರ್ಯಗಳಲ್ಲಿ ಸೇರದಹಾಗೆ ವಚನವನ್ನು ಕೊಡಬೇಕೆಂ"ದು ಸರಕಾರಿ ಉಪಸೂಚನೆಯು ಬಂತು. ತಥಾಪಿ ಲೋಕಪಕ್ಷದ ಹೆಚ್ಚಿನ ಸಭಾಸದರು ಸರಕಾರದ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಮೇಲಿನ ಉಪಸೂಚನೆಯನ್ನು ಸರಿಯಾಗಿ ವಿರೋಧಿಸಿ ಮೂಲಠರಾವನ್ನೆ ಪಾಸುಮಾಡಿಕೊಂಡರು. ಲೋಕಪಕ್ಷದ ಸಭಾಸದರು ಈ ಮೇರೆಗೆ ಪಾಸುಮಾಡಿಸಿದ ಠರಾವನ್ನು ಜಾರಿಯಲ್ಲಿ ತರುವ ಕಾರ್ಯವು ಸರಕಾರದ್ದಾಗಿದೆ. ಸರಕಾರವು ಅದನ್ನು ಜಾರಿಗೆ ತರಲಿ ಅಥವಾ ತಾರದೆ ಇರಲಿ. ಅದು ಅದರ ಕೆಲಸವು. ಆದರೆ ಲೋಕಪಕ್ಷದ ಸಭಾಸದರು ತಮ್ಮ ಕರ್ತವ್ಯವನ್ನು ಏನೂ ಹೆದರದೆ ಸಾಧಿಸಿದ್ದಾರೆ. ಇದು ಸಂತೋಷದ ಮಾತಾಗಿದೆ. ಲೋಕಹಿತದ ಸಂಗತಿಗಳು ಕೌನ್ಸಿಲಿನ ಮುಂದೆ ಬಂದಾಗ ಎಲ್ಲ ಕಡೆಗಳಲ್ಲಿ ಎಲ್ಲ ಸಭಾಸದರು ಇದೆ ಮೇರೆಗೆ ಧೈರ್ಯವನ್ನೂ, ದೇಶವಾತ್ಸಲ್ಯವನ್ನೂ, ಐಕ್ಯವನ್ನೂ, ತೋರಿಸಿದರೆ, ಕೌನ್ಸಿಲುಗಳು ವಸ್ತುತಃ ಅಕಿಂಚಿತ್ಕರವಾದರೂ, ಕೆಲವು ಮಟ್ಟಿನ ಪ್ರಯೋಜನವನ್ನು ಕೊಟ್ಟಾವು. ಒಂದು ವೇಳೆ ಅಂತೆ ಪ್ರಯೋಜನಕಾರಿಯಾಗದೆ ಹೋದಲ್ಲಿ ದೇಶಬಂಧು ದಾಸರು ಹೇಳುವಂತೆ ಅವು ಬೇಗನೆ ಸ್ವಂತ ಅಸ್ತಿತ್ವವನ್ನು ಕಳಕೊಳ್ಳದೆ ಇರಲಿಕ್ಕಿಲ್ಲ. ಈ ಮರ್ಮವನ್ನು ಪರಿಶೀಲಿಸಿಯೆ ರಾಷ್ಟ್ರೀಯರು ಕೌನ್ಸಿಲ್‌ಬಹಿಷ್ಕಾರವನ್ನು ಬಹಿಷ್ಕರಿಸಬೇಕೆಂದು ಹೇಳುವರೆ ಹೊರತು ಅದರಿಂದ ದೇಶಕ್ಕೆ ಸ್ವರಾಜ್ಯದ ಗಂಟು ಸಿಗತಕ್ಕದಿದೆ ಎಂದು ತಿಳಿದು ಹೇಳುವುದಲ್ಲ. ಆದರೆ ಅಪ್ಪಿಕಪ್ರಮಾಣೋಪಜೀವಿಗಳು ವಿವೇಕದ ಕಡೆಗೂ ಕರ್ತವ್ಯದ ಕಡೆಗೂ ಬೆನ್ನುಹಾಕಿ ಸ್ವಂತ ದುರಾಗ್ರಹವನ್ನೆ ಆಲಿಂಗಿಸಿಕೊಂಡಿರುವರು. ಇದು ಮಾತ್ರ ನಮ್ಮ ದೇಶದ ದುರ್ದೈವವೆ ಸರಿ.

೩. ಆರ್ಯಸಮಾಜಾನುಯಾಯಿಗಳಾದ ಸ್ವಾಮಿ ಶ್ರದ್ಧಾನಂದಜಿಯವರು ಈಗ ತಮ್ಮ ಶಕ್ತಿಸರ್ವಸ್ವವನ್ನು ಪತಿತಪರಾವರ್ತನದಲ್ಲಿ ಕೇಂದ್ರೀಕರಿಸಿದ್ದಾರೆ. ಇವರ ನೇತೃತ್ವದ ಕೆಳಗೆ ಶುದ್ಧಿಸಭೆಯು ಆಗ್ರಾದಲ್ಲಿ ಮಾಲಖಾನಿ ರಜಪೂತರನ್ನು ಶುದ್ಧಪಡಿಸಿ ಪುನಃ ಹಿಂದುಧರ್ಮದಲ್ಲಿ ತೆಕ್ಕೊಳ್ಳುವ ಕೆಲಸವನ್ನು ಭರದಿಂದ ಮಾಡಹತ್ತಿದೆ. ಕಳೆದ ವಾರ ಸಾಧಾರಣ ಎರಡುಸಾವಿರ ಮಾಲಿಖಾನಿ ರಜಪೂತರನ್ನು ಹಿಂದೂಧರ್ಮದಲ್ಲಿ ತೆಕ್ಕೊಳ್ಳಲು ಪ್ರಾಯಶ್ಚಿತ್ತಯಜ್ಞವು ನಡೆಯಿತು. ಈ ರಜಪೂತರನ್ನು ಅವರ ಮೊದಲಿನ ಯಾವ ಚೌಹಾಣವೆಂಬ ಕುಲವಿದೆಯೊ ಆ ಕುಲದಲ್ಲಿ ಸೇರಿಸೋಣಾಯಿತೆಂಬುದನ್ನು ಸೂಚಿಸಲು ಮಾತ್ರವಲ್ಲ, ಕೃತಿಯಿಂದ ಪ್ರತ್ಯಕ್ಷಪಡಿಸಲು ಆ ಚೌಹಾಣಕುಲದ ಈಗಿನ ರಜಪೂತರೊಟ್ಟಿಗೆ ಈ ಶುದ್ಧೀಕರಣಹೊಂದಿದವರ ಸಹಭೋಜನವು ನಡೆಯಿತು. ಇವರು ಮುಸಲ್ಮಾನರಾಗಿ ಈಗ ಅನೇಕ ವರ್ಷಗಳು ದಾಟಿಹೋಗಿರಬಹುದು. ಆದರೂ ಇವರು ಪ್ರಥಮತಃ ರಜಪೂತರಾಗಿದ್ದರೆಂಬುದನ್ನು ಯಾರೂ ಮರೆಯಕೂಡದು. ಅಂಥವರು ಹಿಂದೂಧರ್ಮದಲ್ಲಿ ಬಂದದ್ದು ಬೇರೆ ಯಾವ ದೃಷ್ಟಿಯಿಂದ ಅಲ್ಲವಾದರೂ ರಾಜಕೀಯದೃಷ್ಟಿಯಿಂದ ಅತಿ ಮಹತ್ವದ ಸಂಗತಿಯಾಗಿದೆ. ನಮ್ಮ ನೆರೆಯ ಮಲಬಾರದಲ್ಲಿ ಎರಡು ವರುಷಕ್ಕಿಂತ ಮುಂಚೆ ಉದ್ಭವಿಸಿದ ಅನರ್ಥದಲ್ಲಿ ಅನೇಕ ಹಿಂದೂಗಳನ್ನೂ—ಬ್ರಾಹ್ಮಣರನ್ನೂ ಕ್ಷತ್ರಿಯರನ್ನೂ ಶೂದ್ರರನ್ನೂ—ಧರ್ಮಾಂತರಗೊಳಿಸಿ ದಂಗೆಖೋರರು ಅತ್ಯಾಚಾರಗಳನ್ನು ಆಚರಿಸಿದರು. ಅಂಥವರನ್ನು ಎಂದರೆ, ಯಾವ ವಿಧದಿಂದಲೂ ಮತಪ್ರೇಮಿಗಳಾಗಿ ಮತಾಂತರಗೊಳಿಸಿದವರಲ್ಲ, ಇಂಥವರನ್ನು ಪುನಃ ಅವರ ಮಾತೃಧರ್ಮದ ಛತ್ರದಲ್ಲೆ ತರುವ ಕಾರ್ಯವು ಈಗಿನ ರಾಷ್ಟ್ರೀಯತೆಯ ಬಲಕ್ಕೆ ಮತ್ತು ಹಿಂದೂಧರ್ಮದ ಸ್ಥಿರತೆಗೆ ಅತ್ಯಂತ ಹಿತಾವಹವೂ, ಆವಶ್ಯಕವೂ ಆಗಿರುವುದು. ಅದನ್ನು ಶ್ರೀ ಶೃಂಗೇರಿ ಜಗದ್ಗುರುಗಳ ಮಠದ್ವಾರಾ, ಕಡಿಮೆ ಪಕ್ಷದಲ್ಲಿ ಅವರ ಸಮ್ಮತಿಯನ್ನು ತೆಕ್ಕೊಂಡು ಸನಾತನಧರ್ಮಾನುಯಾಯಿಗಳು ಮತ್ತು ಆ ಸಂಘದವರು ಮಾಡುವವರಿದ್ದಾರೆಂದು ಮೊದಲೆ ಪ್ರಕಟವಾಗಿತ್ತು. ಧರ್ಮಾತ್ಮರಾದ ಮದನಮೋಹನ ಮಾಲವೀಯರು ಈ ಕಾರ್ಯದಲ್ಲಿ ನಿಯುಕ್ತರಾಗಿದ್ದಾರೆಂದು ಕೂಡಾ ಪ್ರಕಟವಾಗಿತ್ತು. ಆ ಬಳಿಕ ಅದರ ವ್ಯವಸ್ಥೆಯೇನಾಯಿತೆಂಬುದು ಜಾಹೀರಾಗಲಿಲ್ಲ. ಮಲಬಾರದ ಈ ವಿಷಯವು ಹೇಗಿದ್ದರೂ. ಉತ್ತರ ದೇಶದಲ್ಲಿ ಆರ್ಯಸಮಾಜದವರು ಪತಿತಪರಾವರ್ತನದ ಶ್ಲಾಘ್ಯವಾದ ಕಾರ್ಯವನ್ನು ಉಪಕ್ರಮಿಸಿದ್ದಾರೆ. ಇದು ಅಭಿನಂದನೀಯ ವಿಷಯವಾಗಿದೆ.

೪. ಆದರೆ ಆರ್ಯಸಮಾಜದ ಈ ಶುದ್ಧೀಕರಣದ ಚಳವಳವು ಮೇಲೆ ಉಲ್ಲೇಖಿಸಿದ ಮೇರೆಗೆ ಯಶಸ್ವಿಯಾಗುತ್ತದೆಂಬುದನ್ನು ಕಂಡು ಉತ್ತರ ದೇಶದಲ್ಲಿ ಮಹಮ್ಮದೀಯ ಬಂಧುಗಳಿಗೆ ಕೋಪವು ಪ್ರಾರಂಭವಾದಂತೆ ತೋರುತ್ತದೆ. ಯಾಕೆಂದರೆ, ಕೆಲವು ಮಹಮ್ಮದೀಯ ಲೇಖಕರು "ಹಿಂದುಸ್ಥಾನದಲ್ಲಿರುವ ಹಿಂದುಗಳೆಲ್ಲ ಮಹಮ್ಮದೀಯರಾಗದೆ ಹಿಂದು ಮುಸಲ್ಮಾನರ ಜಗಳವು ಅಂತ್ಯವಾಗಲಿಕ್ಕಿಲ್ಲ"ವೆಂದು ಬರೆಯಹತ್ತಿದ್ದಾರೆ! ಹಿಂದು ಧರ್ಮವು ಅಸಹಿಷ್ಣುವೆಂದೂ ಸ್ವಧರ್ಮವು ಸಹಿಷ್ಣುವೆಂದೂ ಅವರು ಬರೆಯಹತ್ತಿದ್ದಾರೆ! ಇತರ ಧರ್ಮದವರನ್ನು ಕಾಡುವುದು ಮಹಮ್ಮದೀಯ ಧರ್ಮದಲ್ಲಿ ನಿಂದ್ಯವೆಂದು ಹೇಳಲ್ಪಟ್ಟಿದೆ ಎಂದು ಕೂಡಾ ಈ ಲೇಖಕರು ಬರೆದಿರುವರು! ಮಹಮ್ಮದೀಯ ಧರ್ಮದಲ್ಲಿ ಈ ರೀತಿಯ ಸಹಿಷ್ಣುತೆಯ ತತ್ವಜ್ಞಾನವು ಇದ್ದದ್ದಾದರೆ ನಿಜವಾಗಿ ಅದು ಪ್ರಶಂಸನೀಯವೆ ಸರಿ. ಆದರೆ ಒಂದು ಕಾಲದಲ್ಲಿ ಇವರ "ಒಂದು ಕೈಯಲ್ಲಿ ಕತ್ತಿ, ಇನ್ನೊಂದು ಕೈಯಲ್ಲಿ ಕುರಾಣ" ಇವಿದ್ದವೆಂದು ಇತಿಹಾಸಲೇಖಕರು ಸ್ವಾನುಭವವನ್ನು ಜಗತ್ತಿಗೆ ತೋರ್ಪಡಿಸಿದ್ದರು. ಈಗಲಾದರೂ "ಹಿಂದುಗಳೆಲ್ಲ ಮಹಮ್ಮದೀಯರಾಗದೆ ಹಿಂದೂಸ್ಥಾನದಲ್ಲಿ ಹಿಂದು ಮುಸಲ್ಮಾನರ ಜಗಳವು ನಿಲ್ಲಲಿಕ್ಕಿಲ್ಲ"ವೆಂದು ಬರೆಯುವ ಲೇಖಕರಿದ್ದಾರೆಂದ ಮೇಲೆ ಮತ್ತು ದಕ್ಷಿಣದಲ್ಲಿ ಮಲಬಾರ ಮತ್ತು ಉತ್ತರದಲ್ಲಿ ಮುಲ್ತಾನ ಇವುಗಳಲ್ಲಿ ಹಿಂದುಗಳ ಜೀವಿತವಿತ್ತಗಳು ಇವರ ದೆಸೆಯಿಂದ ವಿಪದ್‌ಗ್ರಸ್ತವಾಗುತ್ತವೆಂದ ಮೇಲೆ ಸ್ವಧರ್ಮವು ಸಹಿಷ್ಣುವೆಂದು ಹೇಳುವ ಮಾತು ಅರ್ಥಶೂನ್ಯವಾದ್ದಲ್ಲವೆ? ಇರಲಿ. ಆರ್ಯಸಮಾಜದವರು ಉಪಕ್ರಮಿಸಿರುವ ಶುದ್ಧೀಕರಣದ ಚಳವಳದಿಂದ ಅಲ್ಲಿಯ ಮುಸಲ್ಮಾನರಲ್ಲಿ ತುಂಬಾ ಕ್ಷೋಭವುಂಟಾಗಿ ಅದು ಬೇಗನೆ ಕಿಡಿಕಿನಲ್ಲಿ ಪರಿಣಮಿಸಬಹುದೆಂದು ಶ್ರೀಮತಿ ಸರೋಜಿನೀಬಾಯಿಗಳು ಬಾತಮಿದಾರನೊಟ್ಟಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ. ಅವರು ೧೦ ದಿನಗಳ ವರೆಗೆ ಪಂಜಾಬ ಪ್ರಾಂತದ ಪ್ರತ್ಯಕ್ಷಅನುಭವವನ್ನು ಸಂಪಾದಿಸಿಕೊಂಡು ಬಂದಿದ್ದಾರೆ. ಆ ಅನುಭವದ ಮೇಲಿಂದ ಅವರು ದೇಶದ್ದ ಮುಖಂಡರಿಗೆ ಕೌನ್ಸಿಲ್ ಬಹಿಷ್ಕಾರ, ಕೌನ್ಸಿಲ್ ಪ್ರವೇಶ ವಿಧಾಯಕ ಕಾರ್ಯಕ್ರಮ ಇತ್ಯಾದಿ ಸಂಗತಿಗಳನ್ನು ತತ್ಕಾಲದ ಮಟ್ಟಿಗೆ ಬದಿಗಿಟ್ಟು ಪಂಜಾಬದಲ್ಲಿ ಒದಗಿರುವ ಹಿಂದು ಮುಸಲ್ಮಾನರ ಐಕ್ಯದ ವಿಷಯದಲ್ಲಿ ಪ್ರವೇಶಿಸುವ ಬಗ್ಗೆ ವಿನಂತಿಮಾಡಿದ್ದಾರೆ. ಹಿಂದು ಮುಸಲ್ಮಾನರ ಐಕ್ಯವು ಹಿಂದುಗಳಿಗೆ ಎಷ್ಟು ಆವಶ್ಯಕವೊ ಅಷ್ಟೆ ಮುಸಲ್ಮಾನರಿಗೂ ಆವಶ್ಯಕವು. ಮೂರನೆಯವರು ಆಳುವಾಗ ಇಬ್ಬರು ಪ್ರತ್ಯೇಕಪ್ರತ್ಯೇಕವಾಗುವುದು ಇಬ್ಬರಿಗೂ ಕೆಟ್ಟದು. ಆದ್ದರಿಂದ ಇಬ್ಬರಲ್ಲಿಯ ವಿವೇಕಿ ಮುಖಂಡರು ಒಟ್ಟಿಗೆಸೇರಿ ತಮ್ಮ ಅಂಧ ಮತ್ತು ಅವಿವೇಕಿ ಅನುಯಾಯಿಗಳನ್ನು ಹತೋಟಿಯಲ್ಲಿ ತರಬೇಕೆಂದು ನಾವು ಸೂಚಿಸುವೆವು.

೫. ವರಿಷ್ಠ ಸರಕಾರವು ಮತ್ತು ಪ್ರಾಂತಿಕ ಸರಕಾರಗಳು ಬೇಸಿಗೆಕಾಲದಲ್ಲಿ ಶೀತಲಪ್ರದೇಶಕ್ಕೆ ತಮ್ಮ ತಮ್ಮ ಸಕಲ ಪರಿವಾರ ಸಮೇತವಾಗಿ ಹೋಗುವ ವ್ಯಸನವನ್ನಿಟ್ಟುಕೊಂಡ ಕಾರಣ ಆಡಳಿತೆಯಲ್ಲಿ ಎಷ್ಟು ಖರ್ಚು ಹೆಚ್ಚಾಗುತ್ತದೆ ಎಂಬುದನ್ನು ಈ ಹೊತ್ತು ಹೇಳಬೇಕಾದ ಅಗತ್ಯವಿಲ್ಲ. ನಮ್ಮ ಮದ್ರಾಸ್ ಸರಕಾರವು ನೀಲಗಿರಿಯ ಪ್ರಯಾಣವನ್ನು ನಿಲ್ಲಿಸಿ, ಆ ಸಂಬಂಧವಾಗಿ ಉಂಟಾಗುವ ಖರ್ಚನ್ನು ಉಳಿಸಿ ಜನತೆಯ ಅಭಿನಂದನಕ್ಕೆ ಪಾತ್ರವಾಗಿದೆ. ಇದು ಕೆಲವು ಮಟ್ಟಿಗೆ ಸಮಾಧಾನದ ಮಾತು. ಪರಂತು ಮದ್ರಾಸಸರಕಾರದ ಈ ಅನುಕರಣೀಯ ವಿಷಯವನ್ನು ಹಿಂದೂಸ್ಥಾನಸರಕಾರಕ್ಕೆ ಅನುಕರಿಸಲಾಗುವುದಿಲ್ಲ. ಇದು ತುಂಬಾ ಶೋಚನೀಯವು. ವರಿಷ್ಠ ಎಸೆಂಬ್ಲಿಯಲ್ಲಿ ಸಿಮ್ಲಾದ ಪ್ರಯಾಣವನ್ನು ಕುರಿತು ಎರಡು ಠರಾವುಗಳು ಬಂದಿದ್ದವು. "ಬೇಸಿಗೆಯ ಸಮಯದಲ್ಲಿ ಸಿಮ್ಲಾಕ್ಕೆ ಹೋಗಿ ನಿಲ್ಲುವ ಹಿಂದೂಸ್ಥಾನಸರಕಾರದ ಪದ್ಧತಿಯನ್ನು ನಿಲ್ಲಿಸಬೇಕು" ಎಂದು ಬಂದಿರುವ ಠರಾವಿನ ಮೇಲೆ ಲೋಕಪಕ್ಷದ ಸಭಾಸದರು "ಸರಕಾರದ ಇಂಥ ಪ್ರವೃತ್ತಿಯಿಂದ ಎಷ್ಟು ನಷ್ಟ ಉಂಟಾಗುತ್ತದೆ ಎಂಬುದನ್ನು ತೋರಿಸಿ ಕೊಟ್ಟದ್ದಲ್ಲದೆ, ಅಧಿಕಾರಿಗಳು ಗುಡ್ಡಗಳಲ್ಲಿ ಕುಳಿತು ರಾಜ್ಯಶಕಟವನ್ನು ನಡಿಸುವುದರಿಂದ ಜನತೆಯ ಹೃದ್ಗತವು ಅವರಿಗೆ ಗೊತ್ತಾಗುವುದಿಲ್ಲ. ಮತ್ತು ಈ ಕಾರಣದಿಂದ ಅವರ ಕಾರಭಾರವು ಅಸಹಾನುಭೂತಿಯದಾಗುತ್ತದೆ" ಎಂಬ ಸಮರ್ಪಕವಾದ ಪ್ರತಿಪಾದನವನ್ನು ಮಾಡಿದರು. ಪರಂತು ಅಧಿಕಾರದ ತೀಟೆಯ; ಮುಂದೆ ಯುಕ್ತಿವಾದಕ್ಕೆ ಅಥವಾ ಸತ್ಯವಾದಕ್ಕೆ ಅವಕಾಶವೆಲ್ಲಿ? ಸದರಿ ಠರಾವು ಮತಕ್ಕೆಹಾಕಲ್ಪಟ್ಟಲ್ಲಿ ಬಿದ್ದುಹೋಯಿತು. ಅನಂತರ ಇದೆ ವಿಷಯವನ್ನು ಕುರಿತು ಇನ್ನೊಂದು ಠರಾವು ಬಂತು. ಅದನ್ನು ಸರಕಾರಕ್ಕೆ ಅಂಗೀಕರಿಸಲು ಯಾವ ತೊಂದರೆಯೂ ಇದ್ದಿಲ್ಲ. ಕಾರ್ಯಕಾರಿ ಅಧಿಕಾರಿಗಳಿಗೆ ಸಿಮ್ಲಾಕ್ಕೆ ಹೋಗಲೆಬೇಕೆಂದು ಬಯಕೆ ಆಗುವ ಪಕ್ಷದಲ್ಲಿ ಅವರು ಹೋಗಲಿ; ಆದರೆ ಕೌನ್ಸಿಲಿನ ಇತರ ಪರಿವಾರವು ಯಾಕೆ ಹೋಗುವುದು? ಆದ್ದರಿಂದ ಇದನ್ನು ನಿಲ್ಲಿಸಿ ಸೇಕಡಾ ಒಂದೊಂದು ರೂಪಾಯಿಯಂತೆ ಖರ್ಚನ್ನು ಕಡಿಮೆಮಾಡಬಹುದು ಎಂದು ಈ ಠರಾವು ಸೂಚಿಸಿತ್ತು. ಈ ಸೂಚನೆಯಲ್ಲಿ ಅಗ್ರಾಹ್ಯವಾದ್ದು ಯಾವುದೂ ಇದ್ದಿಲ್ಲ. ತಥಾಪಿ ಇದು ಕೂಡ ಪಾಸಾಗದೆ ಹೋಯಿತು. ಸಾರಾಂಶ ಇಂಥ ಅನವಶ್ಯಕ ಖರ್ಚುಗಳನ್ನು ಉಳಿಸಿದ್ದಲ್ಲಿ ಅಧಿಕ ಕರಕ್ಕೆ ಅವಕಾಶವು ಇರುತ್ತಿದ್ದಿಲ್ಲ. ಆ ಅಧಿಕ ಕರವನ್ನು ನಿರವಕಾಶವನ್ನಾಗಿ ಮಾಡೋಣವೆಂದು ಸಭಾಸದರು ಈ ಸಿಮ್ಲಾ ಪ್ರಯಾಣದ ವಿಷಯವಾಗಿ ಯತ್ನಿಸಿದರೂ ಅದು ಫಲಕ್ಕೆ ಬಾರದೆ ಹೋಯಿತು. ಇದು ಶೋಚನೀಯವು.

೬. ಉಪ್ಪಿನ ಮೇಲೆ ಇಮ್ಮಡಿ ಕರವನ್ನು ಹಾಕಬೇಕೆಂದಿದ್ದ ವಿಷಯವು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಚರ್ಚೆಗೆ ಬಂತು. ಕೋಶಮಂತ್ರಿಗಳು ಮಣದ ಮೇಲೆ ರೂ ೧—೪—೦ ಇದ್ದದ್ದನ್ನು ೨—೮—೦ ಮಾಡಬೇಕೆಂದು ಸೂಚನೆಮಾಡಿದ್ದರು. ಕೋಶಮಂತ್ರಿಗಳ ಅಂದಾಜುಪಟ್ಟಿಯಲ್ಲಿ ಸೂಚಿತವಾದ ಈ ಅಂಶವನ್ನು ಲೋಪಿಸಬೇಕೆಂದು ಡೊಕ್ಟರ್ ಗೌರರು ಉಪಸೂಚನೆಯನ್ನು ತಂದಿದ್ದರು. ಆದರೆ ಕಾನೂನಿನ ವಿವಕ್ಷಿತ ಕಾರಣದ ಮೇಲಿಂದ ಮತ್ತು ಮಿ. ಭಾರ್ಗವರು ಹಿಂದೆಳೆಯಲು ಹೇಳಿದ ಕಾರಣ ಗೌರರು ತಮ್ಮ ಉಪಸೂಚನೆಯನ್ನು ಹಿಂತೆಗೆದರು. ಕೊನೆಗೆ ಮಿ. ರಂಗಾಚಾರ್ಯರು "ಉಪ್ಪಿನ ಕರವು ೧—೪—೦ ಇಷ್ಟೆ ಇರಬೇಕಲ್ಲದೆ ಅದನ್ನು ಹೆಚ್ಚಿಸಬಾರ"ದೆಂದು ಠರಾವನ್ನು ತಂದರು. ಈ ಠರಾವು ಎಸೆಂಬ್ಲಿಯ ಮುಂದೆ ಬಂದಾಗ ತುಂಬಾ ವಾದವಿವಾದವು ನಡೆಯಿತು. ಸರ್. ಕೆಂಬೆಲ್ ರೊಡಸ್, ಮೊಯರ ಮುಂತಾದ ಸಾಹೇಬರು ಸರಕಾರದ ಏರಿಗೆಯ ಸೂಚನೆಯನ್ನೆ ಸಮರ್ಥಿಸಿ ರಂಗಾಚಾರ್ಯರ ಠರಾವನ್ನು ವಿರೋಧಿಸಿದರು. ಈ ಬಿನ್ ಸರಕಾರದ ಸಭಾಸದರಿಗಿಂತ ಮುಂಚೆಯೆ ಮಿ. ಇನ್ನಸರು ಸರಕಾರಿ ಇಮ್ಮಡಿ ಕರವನ್ನು ಒತ್ತಿ ಒತ್ತಿ ಸಮರ್ಥಿಸಿದ್ದರು. ಈ ಮೇರೆಗೆ ಸೂಚಿತ ಕರವನ್ನು ಸರಕಾರದ ಕಡೆಯಿಂದ ಎತ್ತಿಹಿಡಿಯೋಣಾಯಿತಾದರೂ ಲೋಕಪ್ರತಿನಿಧಿಗಳು ಹಲವು ವಿಧದ ಯುಕ್ತಿಗಳಿಂದ ಮತ್ತು ಕಾರಣಗಳಿಂದ ಅದನ್ನು ವಿರೋಧಿಸಿದ್ದಲ್ಲದೆ ಮತಕೊಡುವಾಗಲೂ ರಂಗಾಚಾರ್ಯರ ಠರಾವಿಗೆನೆ ಬಲಕೊಟ್ಟರು. ಇಷ್ಟು ಧವತಿಸಭನತಿಯಾದ ಬಳಿಕ ರಂಗಾಚಾರ್ಯರ ಠರಾವು ೫೮ ಅನುಕೂಲ ಮತ್ತು ೪೭ ಪ್ರತಿಕೂಲ ಠರಾವಿನಿಂದ ಪಾಸಾಯಿತು. ಸಾರಾಂಶ ಉಪ್ಪಿನ ಮೇಲೆ ಇಮ್ಮಡಿ ಕರವನ್ನು ಏರಿಸಲಿದ್ದ ಸರಕಾರದ ಸೂಚನೆಯು ಲೋಕಪ್ರತಿನಿಧಿಗಳಿಂದ ಎಸೆಂಬ್ಲಿಯಲ್ಲಿ ಕೆಡಿದುಹಾಕಲ್ಪಟ್ಟಿತು. ಆದರೂ ಗವರ್ನರ ಜನರಲರು ತಮಗಿರುವ ಸರ್ಟಿಫಿಕೇಶನಿನ ಅಧಿಕಾರದ ಮೇಲಿಂದ ಇಮ್ಮಡಿಕರದ ಸಂಕಲ್ಪವನ್ನು ಸಾಧಿಸುವವರಿದ್ದಾರೆಂದು ವಾರ್ತೆಯು ಬಂದಿದೆ. ಈ ವಾರ್ತೆಯು ಸತ್ಯವಾಗುವಪಕ್ಷದಲ್ಲಿ ಗವರ್ನರ ಜನರಲರ ಈ ನಿರಂಕುಶ ಅಧಿಕಾರ ಪ್ರವರ್ತನೆಯಿಂದ ಲೋಕಪಕ್ಷದ ಸಭಾಸದರನ್ನು ಪರೀಕ್ಷಿಸುವ ಒಂದು ಸಂದರ್ಭವು ಬಂತೆಂದು ತಿಳಿಯಬೇಕಾಗುತ್ತದೆ. ಆ ಸಮಯದಲ್ಲಿ ಅವರು ಏನು ಮಾಡಲಿಕ್ಕಿದ್ದಾರೆ ಎಂಬುದನ್ನು ಮುಂದೆ ಸಹಜವಾಗಿಯೆ ಕಾಣುವುದು.

ಮಂಗಳೂರು.

ಜಿಲ್ಲೆಯ ಆಯಾಯ ಕಡೆಗಳಲ್ಲಿ ಹರತಾಳವು ಆಚರಿಸಲ್ಪಟ್ಟ ವರ್ತಮಾನವು ಬಂದಿದೆ. ಆದರೆ ಸ್ಥಳಸಂಕೋಚದ ದೆಸೆಯಿಂದ ಎಲ್ಲವನ್ನು ಪ್ರಕಟಿಸಲು ಆಗಲಿಲ್ಲ.

ಇದೇ ಬರುವ ಆದಿತ್ಯವಾರ ತಾ. ೨೫ರಲ್ಲು ಕದ್ರಿ ರಾಷ್ಟ್ರೀಯ ಧರ್ಮಪಾಠಶಾಲೆಯಲ್ಲಿ ಸಾಯಂಕಾಲ ೫ ಘಂಟೆ ಸಮಯಕ್ಕೆ ಕದ್ರಿ ರಾಷ್ಟ್ರೀಯ ಕಾರ್ಯನಿರ್ವಾಹಕ ಸಭೆಯನ್ನು ಚುನಾಯಿಸುವ ಬಗ್ಗೆ ಸದಸ್ಯರ ಸಭೆಯೂ, ದಿವಂಗತ ಲೋಕಮಾನ್ಯ ತಿಲಕರ ಪ್ರತಿಮೆಯ ಪ್ರಥಮ ಪ್ರದರ್ಶನವೂ, ಅನಂತರ ಪಡುಬಿದರೆಯ ಮ. ರಾ. ಸನಾತನದಾಸರ ಕೀರ್ತನೆಯೂ ಇರುವುದು. ರಾಷ್ಟ್ರಾಭಿಮಾನಿಗಳಿಗೆಲ್ಲಾ ಸ್ವಾಗತವಿದೆಯೆಂತ ಮಂಗಳೂರು ತಾಲೂಕು ಕೊಂಗ್ರೆಸ ಕಮ್ಮಿಟಿಯ ಕಾರ್ಯದರ್ಶಿಯರಾದ ಮೂ. ರಾ. ಮು. ಉಮೇಶರಾಯರು ತಿಳಿಸುತ್ತಾರೆ.

ಉಡ್ಪಿಯ ನಾಟಕದ ಸಂಬಂಧದಲ್ಲಿ ೧೪ನೇ ಸೆಕ್ಷನ್ ಪ್ರಕಾರ ನೋಟೀಸು ಜಾರಿಮಾಡಲ್ಪಟ್ಟ ಇಲ್ಲಿಯ ಸೆಕೆಂಡರಿ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿಯಾದ ಯು. ನಾರಾಯಣ ನ್ಯಾಕರನ್ನೂ, ಅದೇ ಶಾಲೆಯ ಕೆ. ವೆಂಕಟ್ರಾಯಪ್ಪ ಎಂಬವರನ್ನೂ ಇಲ್ಲಿ ತಾ. ೧೮ಕ್ಕೆ ಜರಗಿದ ಹರತಾಳದ ಮೆರವಣಿಗೆಯಲ್ಲಿ ಸೇರಿದರೆಂಬುವುದಕ್ಕಾಗಿ ಶಾಲೆಯಿಂದ ೭ ದಿನಗಳ ವರೆಗೆ ಸಸ್ಪೆಂಡ್ ಮಾಡಿರುತ್ತಾರೆ. ಆದರೆ ಮೆರವಣಿಗೆಯಲ್ಲಿ ಸೇರಿದ ಅದೇ ಶಾಲೆಯ ಇತರ ವಿದ್ಯಾರ್ಥಿಗಳಿಗೆ ಏನೂ ಮಾಡದೆ ಇವರಿಬ್ಬರನ್ನು ಮಾತ್ರ ಹೀಗೆ ಮಾಡಿರುವ ಕಾರಣವೇನೋ ತಿಳಿಯದು ಎಂದು ಒಂದು ಬಾತಮಿ ಬಂದಿದೆ.

ಈಗ ನಮ್ಮ ಜಿಲ್ಲಾ ಕಲೆಕ್ಟರರಾಗಿರುವ ಮಿ| ಯಸ್. ಯನ್. ಎ. ರಾಜಾಚಾರ್‌ರವರು ವರ್ಗಾಯಿಸಲ್ಪಟ್ಟು ಇವರ ಬದಲಿಗೆ ಯಫ್. ಯೆಲ್. ಬ್ರಿಗ್‌ಸ್ಟೋಕ್ಸ್ ಎಂಬವರು ಬರುವರೆಂದು ಕೇಳುತ್ತೇವೆ.

ನಿನ್ನೆ ಸಾಯಂಕಾಲ ಸ್ವಲ್ಪ ಮಳೆಯು ಸುರಿದಿದೆ.

ಕಳೆದ ಆದಿತ್ಯವಾರಕ್ಕೆ ಮುಂದರಿಸಿಟ್ಟ ಕೆಥೋಲಿಕ ಕೋಒಪರೇಟಿವ್ ಸೊಸೈಟಿಯ ಮೀಟಿಂಗನ್ನು ಬರುವ ಎಪ್ರಿಲ್ ತಾರೀಕು ೮ಕ್ಕೆ ಮುಂದರಿಸಿಟ್ಟಿದೆ.

ಮಲಬಾರದಲ್ಲಿ ಸ್ಪೆಶ್ಯಲ್ ಡಿಪ್ಯುಟಿ ಕಲೆಕ್ಟರರಾಗಿ ನೇಮಕಪಟ್ಟ ಮ. ರಾ. ಎ. ಕೆ. ಗೋವಿಂದನ್‌ರವರು ಇಲ್ಲಿಗೆ ವರ್ಗಾಯಿಸಲ್ಪಟ್ಟಿರುವರು.

ಡಿಸ್ಟ್ರಿಕ್ಟ ಕೊಂಗ್ರೆಸ್ ಕಮ್ಮಿಟಿಯ ವ್ಹಾಸ ಪ್ರೆಸಿಡೆಂಟರಾದ ಶ್ರೀಯುತ ಡಿ. ಕೆ. ಭಾರದ್ವಾಜರು ಕಳೆದ ತಾರೀಕು ೧೮ನೇ ಹರತಾಳದಿನ ಕಾಸರಗೋಡಿನಲ್ಲಿ ಭಾಷಣಮಾಡಿ ಮರುದಿನ ಇಲ್ಲಿಗೆ ಹಿಂತಿರುಗಿ ಬಂದು ಈಗ ಜ್ವರಪೀಡಿತರಾಗಿರುವುದರಿಂದ ಸದ್ಯಕ್ಕೆ ಇವರಿಗೆ ಕೊಂಗ್ರೆಸ್ ಕಾರ್ಯಪ್ರಚಾರಕ್ಕಾಗಿ ಜಿಲ್ಲೆಯಲ್ಲೆಲ್ಲಾ ಸಂಚರಿಸಲು ಅಸಾಧ್ಯವಾದ್ದರಿಂದ ಇವರು ತಮ್ಮ ಜಿಲ್ಲಾ ಪರ್ಯಟಣವನ್ನು ಮುಂದರಿಸಿಟ್ಟಿರುವರು.

ಕಳೆದ ತಾರೀಕು ೧೯ರಲ್ಲಿ ಸೇರಿದ ಮಂಗಳೂರ ಮುನ್ಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ೧೯೨೩-'೨೪ನೇ ವರುಷದ ಖರ್ಚಿನ ಬಜೇಟು ಮಂಜೂರಾಗಿದೆ.

ಉಪ್ಪಿನಂಗಡಿ ತಾಲೂಕು ಬೋರ್ಡು ಮೀಟಿಂಗು ಬರುವ ತಾ. ೨೮ರಲ್ಲಿ ಸಾಯಂಕಾಲ ೫ ಘಂಟೆಗೆ ಪುತ್ತೂರಿನಲ್ಲಿ ಸೇರುವುದು.

ಕಳೆದ ತಾರೀಕು ೨೦ನೇ ಸಾಯಂಕಾಲ ೪ ಘಂಟೆಗೆ ಕಾಸರಗೋಡಿನಿಂದ ಮಂಗಳೂರಿಗೆ ಬರುತ್ತಿದ್ದ ಗೂಡ್ಸ ಟ್ರೈನ್ ಬಂಡಿಯು ಕಾಸರಗೋಡಿನಲ್ಲಿ ಅಕಸ್ಮಾತ್ತಾಗಿ ರೈಲುಕಂಬಿಯಿಂದ ತಪ್ಪಿ ಮುಂದೆ ಚಲಿಸದೆ ನಿಂತಿತು. ಆದ್ದರಿಂದ ಮಂಗಳೂರಿನಿಂದ ಕಣ್ಣಾನೂರಿಗೆ ಹೋಗುವ ಶಟ್ಲಟ್ರೈನೂ ಮದರಾಸಿನಿಂದ ಮಂಗಳೂರಿಗೆ ಬರುವ ಮೈಲು ಟ್ರೈನೂ ಮರುದಿನ ಬೆಳಿಗ್ಗೆ ೪ ಘಂಟೆ ವರೆಗೆ ಕಾಸರಗೋಡಿನಲ್ಲಿ ನಿಲ್ಲಬೇಕಾಯಿತು. ಮಂಗಳೂರಿನಿಂದ ಇಂಜಿನಿಯರರು ಹೋಗಿ ಬಹಳ ಸಾಹಸ ನಡಿಸಿದ್ದರಿಂದ ಎಲ್ಲ ಟ್ರೈನುಗಳು ಬೆಳಿಗ್ಗೆ ೪ ಘಂಟೆಯ ತರುವಾಯ ಕಾಸರಗೋಡಿನಿಂದ ಹೊರಟವು. ಪ್ರಯಾಣಿಕರಿಗೆ ತುಂಬಾ ತೊಂದರೆಯಾಯಿತು.

ಡಿಪ್ಯುಟಿ ಕಲೆಕ್ಟರ್ ಮಿ| ಪೀರ್‌ಮಹಮ್ಮದ್ ಇವರಿಗೆ ಮದರಾಸಿಗೆ ವರ್ಗವಾಗಿದೆ.

ಕುಂದಾಪುರ ತಾಲೂಕು ಎಕೌಂಟಾಂಟರಾದ ಮ. ರಾ. ಪಿ. ಆನಂದರಾಯರು ರಜೆಹೊಂದಿರುವುದರಿಂದ ಕಲೆಕ್ಟರರ ಆಫೀಸಿನಲ್ಲಿ ಎಕೌಂಟ ಕ್ಲಾರ್ಕರಾಗಿರುವ ಮ. ರಾ. ಮೂಡಬಿದ್ರಿ ಶ್ರೀನಿವಾಸರಾಯರಿಗೆ ಕುಂದಾಪುರ ತಾಲೂಕು ಹೆಡ್ ಎಕೌಂಟಾಂಟರಾಗಿ ವರ್ಗವಾಗಿದೆ.

ಕಲ್ಕತ್ತ.

ಕಲ್ಕತ್ತದಲ್ಲಿ ತಾ. ೧೮ರಲ್ಲಿ ಹರತಾಳವು ಆಚರಿಸಲಾಗಿದೆ. ಆದರೆ ಈ ಪಟ್ಟಣದಲ್ಲಿ ಕೆಲವರು ತಮ್ಮ ಅಂಗಡಿಗಳನ್ನು ತೆರೆದು ವ್ಯಾಪಾರನಡಿಸಿದ್ದರು. ಅಸಹಕಾರಿಗಳ ವಿರೋಧಿಗಳು ಹರತಾಳವನ್ನು ಆಚರಿಸದೆ ಸ್ವದೇಶಿ ವಸ್ತ್ರವನ್ನು ಉಪಯೋಗಿಸಬೇಕು, ಕಾಂಗ್ರೆಸ್ಸಿಗೆ ಮೆಂಬರರಾಗಿ ಸೇರಬೇಕು, ಇತ್ಯಾದಿ ವಿಷಯಗಳನ್ನು ಘೋಷಿಸುತ್ತಿದ್ದರು. ಕಲ್ಕತ್ತದ ನಾಲ್ಕು ಕಡೆಗಳಲ್ಲಿ ಸಭೆಗಳು ಸೇರಿದ್ದವು. ಹಲಿಡೇಪಾರ್ಕಿನಲ್ಲಿ ಕೂಡಿದ ಸಭೆಯ ಅಧ್ಯಕ್ಷಸ್ಥಾನವನ್ನು ದೇಶಬಂಧು ದಾಸರು ವಹಿಸಿಕೊಂಡಿದ್ದರು. ದೇಶಬಂಧು ದಾಸರು ತಾನು ಹರತಾಳಕ್ಕೆ ಅನುಕೂಲವೇ ಆಗಿರುವುದಾಗಿ ತಿಳಿಸಿರುವರು. ದೇಶಬಂಧು ದಾಸರು ಈ ದಿನ ಮಾಡಿದ ಭಾಷಣದ ಸಾರಾಂಶ ಕೆಳಗೆ ಕೊಟ್ಟಿದೆ. "ದೇಶದ ಜನರಿಗೆ ಮಹಾತ್ಮರಲ್ಲಿ ಎಷ್ಟರಮಟ್ಟಿನ ಗೌರವವಿದೆ ಎಂಬುದು ಈ ದಿನದ ಹರತಾಳವು ಸೂಚಿಸುತ್ತದೆ. ಈ ವರ್ಧಂತಿದಿವಸ ನಾನು ಈಗಿನ ಕಾರ್ಯಕ್ರಮ ಅಥವಾ ಬೋಧಗಳನ್ನು ಕುರಿತು ಮಾತಾಡಲಾರೆನು. ಇಂದು ನಾನು ಅವರ ಜೀವನಚರಿತ್ರೆಯ ಕುರಿತು ನನಗೆ ತಿಳಿದಿರುವ ಕೆಲವು ಸಂಗತಿಗಳನ್ನು ಹೇಳುವೆನು. ಅವರ ಜೀವನದ ಮುಖ್ಯೋದ್ದೇಶವು ಸತ್ಯಾಗ್ರಹ. ಈ ಸತ್ಯಾಗ್ರಹ ತತ್ವವೇ ಅವರಲ್ಲಿ ನನಗೆ ಹೆಚ್ಚಿನ ವಿಶ್ವಾಸವನ್ನು ಉಂಟುಮಾಡಲು ಕಾರಣವಾಗಿದೆ. ರಾಜಕಾರಣದಲ್ಲಿ ಸತ್ಯಾಗ್ರಹವನ್ನು ಸೇರಿಸಿದ ಮೂಲಪುರುಷರು ಈ ಮಹಾತ್ಮರೇ. ಸತ್ಯಾಗ್ರಹವೆಂದರೇನು? ಸತ್ಯವೆಂಬುದನ್ನು ನಂಬಿದ್ದದನ್ನು ಅನುಸರಿಸಿ ನಡಿಯುವುದು ಸತ್ಯಾಗ್ರಹ. ಸತ್ಯಮಾರ್ಗವನ್ನು ಅನುಸರಿಸಿ ನಡೆಯುವವನಿಗೆ ಯಾವ ಅಡ್ಡಿಯೂ ತಡೆಯುತ್ತಿಲ್ಲ. ಮಧರಾಸಿನಲ್ಲಿ ಮಹಾತ್ಮರು ೧೯೧೯ (ಎ.) ಬಿ. ಪಿ. ಸಿ.ಯನ್ನು ಕುರಿತು ಭಾಷಣಮಾಡಿದಂದಿನಿಂದ ಹಿಂದೂಸ್ಥಾನದ ರಾಜಕೀಯ ಕಾರ್ಯದ ಹೊಸ ಕಾಲಗಣನೆಯು ಪ್ರಾರಂಭಿಸಿದೆ. ಮಹಾತ್ಮರ ಜೀವನಚರಿತ್ರೆಯ ಇನ್ನೊಂದು ವಿಷಯವನ್ನು ಕುರಿತು ಹೇಳುವೆನು. ಕಲ್ಕತ್ತಾ ಕಾಂಗ್ರೆಸ್ಸಿನಲ್ಲಿ ನಮ್ಮೊಳಗೆ ಏಕಭಾವನೆಗಳಿದ್ದರೂ ಮತಭೇದಗಳಿರಲಿಲ್ಲ. ಆದರೆ, ನಾವಿಬ್ಬರೂ ನಾಗಪುರದಲ್ಲಿ ಒಟ್ಟುಗೂಡಿದ ಮೇಲೆ ಎಲ್ಲರು ಒಗ್ಗಟ್ಟಾಗಬೇಕೆಂಬುದೇ ಮಹಾತ್ಮರ ಮುಖ್ಯ ಅಭಿಪ್ರಾಯವೆಂದು ನಾನು ತಿಳಿಕೊಂಡೆನು. ಇದಕ್ಕಾಗಿಯೆ ಅವರು ತಮ್ಮ ಅನೇಕ ಅಭಿಪ್ರಾಯಗಳನ್ನು ಬಿಟ್ಟುಬಿಟ್ಟರು. ನಾಗಪುರದ ಹಾಗು ಕಲ್ಕತ್ತದ ಠರಾವುಗಳನ್ನು ತುಲನೆಮಾಡಿನೋಡಿದರೆ ಅವರು ತಮ್ಮ ಅನೇಕ ಅಭಿಪ್ರಾಯಗಳನ್ನು ಬಿಟ್ಟುಕೊಟ್ಟು ನನ್ನ ಅಭಿಪ್ರಾಯಗಳನ್ನು ಅನೇಕ ಸಂಗತಿಗಳಲ್ಲಿ ಸ್ವೀಕರಿಸಿಕೊಂಡಿದ್ದಾರೆಂದು ತಿಳಿಯುವುದು. ಎಷ್ಟು ಭೇದಭಾವದ ಅಭಿಪ್ರಾಯಗಳಿದ್ದರೂ ಮಹಾತ್ಮರು ಯಾವಾಗಲೂ ಅವುಗಳನ್ನು ಮನ್ನಿಸುತ್ತಿದ್ದರು. ಅವರು ಪ್ರತಿಯೊಬ್ಬ ಶಾಂತಪಕ್ಷದವನನ್ನೂ ಅವನ ಅಭಿಪ್ರಾಯಗಳನ್ನೂ ಮನ್ನಿಸುತ್ತಿದ್ದರು. ಈಗ ಮಹಾತ್ಮರನ್ನು ಅಕ್ಷರಶಃ ಅನುಸರಿಸುವವರು ಅವರ ಈ ಸೂತ್ರವನ್ನು ಅಂಗೀಕರಿಸುವರೆ? ಅವರು ಮತಭೇದಗಳನ್ನು ಮಾನ್ಯಮಾಡುವರೆ? ಕಾಂಗ್ರೆಸ್ಸಿನ ನಿರ್ಧಾರಗಳನ್ನು ಎಲ್ಲರೂ ಮಾನ್ಯಮಾಡಬೇಕೆಂಬುದನ್ನು ನಾನು ಬಲ್ಲೆ. ಆದರೆ ಈಗಿನ ಕಾಂಗ್ರೆಸು ದೇಶದ ಎಲ್ಲಾ ಪ್ರತಿನಿಧಿಗಳಿಂದ ಕೂಡಿದೆಯೆ? ಆದ್ದರಿಂದ ಕಾಂಗ್ರೆಸನ್ನು ಇಡೀ ದೇಶದ ಪ್ರತಿನಿಧಿಗಳಿಂದ ಕೂಡಿದ ಸಂಸ್ಥೆಯಾಗಿ ಮಾಡಿರೆಂದು ನನ್ನ ಹೇಳಿಕೆಯಾಗಿದೆ. ನಮ್ಮ ದೇಶದ ಜನರಲ್ಲಿ ಸೇಕಡಾ ೯೯ ಮಂದಿಗಳು ವ್ಯವಸಾಯದಿಂದ ಜೀವಿಸುವ ಬಡಜನರು. ಈ ೯೯ ಮಂದಿಗಳನ್ನು ನಾವು ಬಿಟ್ಟುಬಿಟ್ಟಿದ್ದೇವೆ. ಮತ್ತು ಉಳಿದವರಿಂದ ನಾವು ಕಾಂಗ್ರೆಸನ್ನು ನಡಿಸುತ್ತಿದ್ದೇವೆ. ನಾವು ಅವರಲ್ಲಿ ಹೆಚ್ಚಿನ ಮಂದಿಗಳನ್ನು ಕಾಂಗ್ರೆಸಿನ ಒಳಗೆ ತೆಗೆದುಕೊಂಡರೂ ನಮ್ಮೊಳಗೆ ಮತಭೇದಗಳುಂಟಾದರೆ ನಾವು ಅವರನ್ನು ಬಿಟ್ಟುಬಿಡುತ್ತೇವೆ. ಸ್ವರಾಜ್ಯವು ಚರಕದ ಮೇಲೆ ಹೊಂದಿಕೊಂಡಿಲ್ಲ. ಮಹಾತ್ಮರು ಹೀಗೆಂದೂ ಹೇಳಲಿಲ್ಲ, ಹೆಚ್ಚು ಖಾದಿಯು ಆಗಬೇಕೆಂದು ಅವರು ಯೋಚಿಸಲಿಲ್ಲ. ಪ್ರತಿಯೊಂದು ಮನೆಯಲ್ಲೂ ಮನೆಕಸುಬಾಗಿ ನಡಿಸಿ ಸ್ವಂತ ಉಪಯೋಗಕ್ಕೆ ಬೇಕಾದಷ್ಟು ಖಾದಿಯನ್ನು ಪ್ರತಿಯೊಂದು ಮನೆಯವರೂ ತಯಾರಿಸಬೇಕಾದ್ದು ಅಗತ್ಯವೆಂದು ಅವರ ಅಭಿಪ್ರಾಯ. ಮಹಾತ್ಮರು ಚರಕ ಮತ್ತು ಖಾದಿಯ ಬಗ್ಗೆ ಮಾತ್ರ ಕೆಲಸಮಾಡಿದರಲ್ಲದೆ ಮತ್ತಾವುದಕ್ಕೂ ಅಲ್ಲವೆ? ಇನ್ನೊಂದು ಸಂಗತಿ. ಮಹಾತ್ಮರು ತಮ್ಮ ತಪ್ಪನ್ನು ಯಾವಾಗಲೂ ಒಪ್ಪುತ್ತಿದ್ದರು. ಮತ್ತು ತಾನು ತಪ್ಪಿಲ್ಲದವನೆಂದು ನೆನಸುತ್ತಿದ್ದರು. ಕಾಂಗ್ರೆಸ್ಸು ಮಹಾತ್ಮರನ್ನು ಅನುಸರಿಸುವುದಾದರೆ ಅದು ಈ ಸೂತ್ರಗಳನ್ನು ಅನುಸರಿಸಿ ನಡೆಯಬೇಕಾಗಿದೆ. ಅವರ ಈ ಮುಖ್ಯ ಸೂತ್ರಗಳನ್ನು ಲಕ್ಷಿಸದೆ ಬರೆ ಅವರ ಮಾತುಗಳನ್ನು ಮಾತ್ರ ಅನುಕರಿಸಿನಡಿಯುವುದೆಂದರೆ ಅದು ಅವರಿಗೆ ನಿಂದ್ಯಾಸ್ಪದವಾಗಿದೆ. ಮಹಾತ್ಮರು ಏನು ಹೇಳಿರುವರೆಂದು ನಾವು ನಮ್ಮ ಮನಸ್ಸಾಕ್ಷಿಯಿಂದ ತಿಳಿಯಬೇಕು, ಮತ್ತು ಮಹಾತ್ಮರ ಅಭಿಪ್ರಾಯಗಳು ನಮಗೆ ಸರಿಯಾಗಿ ತೋರದಿದ್ದರೆ ನಾವು ಅವರಿಗೆ ವಿರೋಧವಾಗಿ ನಿಲ್ಲಬಹುದು. ಇದರಿಂದ ನಾವು ಮಹಾತ್ಮರ ವೈರಿಗಳಾಗೆವು. ಮಹಾತ್ಮರನ್ನು ನನ್ನಷ್ಟು ಯಾರೂ ಪ್ರೀತಿಸುವುದಿಲ್ಲವೆಂದು ನನ್ನ ನಂಬಿಕೆ. ಪರಂತು ನಾನೂ ಒಬ್ಬ ಮಾನವನಾದ್ದರಿಂದ ಸೇರಿದ ವ್ಯಕ್ತಿಯಾಗಿನ್ನು ಪರಮಾತ್ಮನು ಕೊಟ್ಟ ಬುದ್ಧಿಶಕ್ತಿಯನ್ನು ಉಪಯೋಗಿಸಬೇಕಾಗಿದೆ. ಯಾವ ಸಂಗತಿಯೂ ಬದಲಾವಣೆಯನ್ನು ಹೊಂದದೆ ಸತತ ಸ್ಥಿರವೆಂದು ಮಹಾತ್ಮರು ನಿರ್ಧರಿಸಲಿಲ್ಲ. ಕಾಲ ಮತ್ತು ವಿದ್ಯಮಾನಗಳನ್ನು ನೋಡಿ ಅವರು ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುತ್ತಿದ್ದರು. ಆದುಕಾರಣ ನಾನು ಈಗ ತಿರುಗಿ ಹೇಳುವುದೇನೆಂದರೆ, ನಿಮಗೆ ಮಹಾತ್ಮರನ್ನು ಗೌರವಿಸಬೇಕೆಂದಿದ್ದರೆ, ಎಲ್ಲರೊಡನೆ ಐಕ್ಯದಿಂದ ಕೆಲಸಮಾಡಿರಿ. ಮತ್ತು ನಿಮ್ಮೊಡನೆ ಮತಭೇದವಿದ್ದವರ ಅಭಿಪ್ರಾಯಗಳನ್ನು ಮನ್ನಿಸಿ ನಡೆಯಿರಿ. ಇಲ್ಲವಾದರೆ ಈ ದಿನದ ಹರತಾಳವು ಬರೆ ಹರತಾಳವಲ್ಲದೆ ಮತ್ತೇನೂ ಅಲ್ಲ."

ಕಲ್ಕತ್ತದಲ್ಲಿ ಹರತಾಳವು ನಡೆದಾಗ ೪೦ ಮಂದಿ ಕಾಂಗ್ರೆಸ್ ಮತ್ತು ಖಿಲಾಫತ್ ಸ್ವಯಂಸೇವಕರನ್ನು ಪಿಕೆಟಿಂಗ್ ಮೊದಲಾದುದನ್ನು ನಡಿಸಿದ ಬಗ್ಗೆ ಕೈದುಮಾಡಿದರು. ಇವರಲ್ಲಿ ೩೩ ಮಂದಿಗಳಿಗೆ ಶಿಕ್ಷೆಯನ್ನು ವಿಧಿಸಿದೆ. ಉಳಿದವರಿಗೆ ರೂ. ೨೦ರಿಂದ ೫೦ರ ವರೆಗೆ ಜುಲ್ಮಾನೆ ವಿಧಿಸಿದೆ. ಖಿಲಾಫತ್ ವಾಲಂಟಿಯರರ ಕೆಪ್ಟನನೊಬ್ಬನು ಕುದುರೆಯ ಸ್ವಾರಿ ಮೆರವಣಿಗೆಯನ್ನು ನಡಿಸಿಕೊಂಡು ಹೋಗುವಾಗ ಅವನನ್ನು ಕೈದುಮಾಡಿ ರೂಪಾಯಿ ೫೦ ಜುಲ್ಮಾನೆ ವಿಧಿಸಿದೆ. ಒಬ್ಬ ಪೊಲೀಸ್ ಸರ್ಜೆಂಟನಿಗೆ ಎಚ್ಚರಿಕೆಯನ್ನು ಕೊಟ್ಟು ಮೆಜಿಸ್ಟ್ರೇಟರು ಬಿಟ್ಟು ಬಿಟ್ಟರು. ಇವನು ಪೋಲೀಸರಲ್ಲಿ [illegible] ಮಾಡಿದ ಬಗ್ಗೆ ಮೆಜಿಸ್ಟ್ರೇಟರು [illegible] ವಾರದ [illegible] ಶಿಕ್ಷೆಯನ್ನು ವಿಧಿಸಿದರು.

ವ್ಯಕ್ತಪಡಿಸಬೇಕಾಗಿ ಹೇಳಿದರು. ಜನರು ಇದನ್ನು ಪಾಲಿಸದಿದ್ದರೆ ತಮ್ಮ ದೌರ್ಬಲ್ಯವನ್ನು ತೋರಿಸಿದರೆ ಆಗ ಸರಕಾರವು ಇತರ ಮುಖಂಡರನ್ನೂ ಕಾರ್ಯಕಾರಿಗಳನ್ನೂ ಸೆರೆಯಲ್ಲಿಡುವರು ಇತ್ಯಾದಿ ವಿಷಯಗಳನ್ನು ಹೇಳಿ ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದರು.

ಬೆಂಗಳೂರು.

ಬೆಂಗಳೂರುಸಿಟಿ ಹಾಗು ಕೆಂಟೋನ್‌ಮೆಂಟಿನಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿದೆ. ಆ ದಿನ ಪ್ರಾತಃಕಾಲ ಹಾಗು ಸಾಯಂಕಾಲದಲ್ಲಿ ಭಜನೆಯು ನಡೆದಿತ್ತು. ಸಾಯಂಕಾಲ ಒಂದು ಸಭೆ ಕೂಡಿತು. ಸುಮಾರು ೫೦೦೦ ಜನರು ಹಾಜರಿದ್ದರು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಏಚ್. ದೂರ್ವಾನ್ ಸೇಟ್‌ರವರು ವಹಿಸಿಕೊಂಡಿದ್ದರು. ತಿಲಕ ಸ್ವರಾಜ್ಯಫಂಡಿಗೆ ಸುಮಾರು ರೂ. ೨೦೦೦ ವಂತಿಗೆಯಾಯಿತು. ಇವರಲ್ಲಿ ಒಬ್ಬ ಸ್ವರಾಜ್ಯಾಭಿಮಾನಿಗಳು ರೂ. ೧೦೦೦ವನ್ನು ಫಂಡಿಗೆ ವಂತಿಗೆಹಾಕಿರುವರು. ಮಹಾತ್ಮರ ಜೀವಚರಿತ್ರೆ ಅವರ ಬೋಧನೆಗಳನ್ನು ಕುರಿತು ರಚ್ಚುವಿ ಮೊದಲಾದವರ ಭಾಷಣಗಳಾದವು. ಅನಂತರ ಮೆರವಣಿಗೆಯು ಕಾಂಗ್ರೆಸ್ ಆಫೀಸಿಗೆ ಹೋಯಿತು.

ಪುಣೆ

ಪುಣೆಯಲ್ಲಿ ಹರತಾಳವು ಜಯಪ್ರದವಾಗಿ ನಡೆಯಿತು. ಶ್ರೀಯುತ ಪರಾಂಜಪೆ ಮತ್ತು ಶ್ರೀಯುತ ಯನ್. ಸಿ. ಕೇಳಕರರು ಭಾಷಣವನ್ನು ಮಾಡಿದರು.

ಮುಂಬಯಿ.

ಮುಂಬಯಿ ಪಟ್ಟಣದಲ್ಲಿ ಕಳೆದ ತಾರೀಕು ೧೮ರಲ್ಲಿ ಹರತಾಳವು ಸಾಂಗವಾಗಿ ನಡೆಯಿತು. ಪಟ್ಟಣದ ಅನೇಕ ಕಡೆಗಳಲ್ಲಿನ ಅಂಗಡಿ ಮೊದಲಾದವುಗಳು ಮುಚ್ಚಲ್ಪಟ್ಟಿದ್ದವು. ನಗರದ ಅನೇಕ ಕಡೆಗಳಲ್ಲಿ ಸಭೆಗಳು ಜರಗಿದವು. ಈ ದಿನಾಚರಣೆಯ ಬಗ್ಗೆ ರಾಷ್ಟ್ರೀಯ ಸ್ತ್ರೀ ಸಭೆಯ ಆಶ್ರಯದಲ್ಲಿ ಮೊರವಾಡಿವಿದ್ಯಾಲಯ ಸಭಾಸದನದಲ್ಲಿ ಮಹಿಳೆಯರ ಸಭೆ ಕೂಡಿತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಮತಿ ಸರೋಜಿನಿ ನಾಯ್ಡುರವರು ವಹಿಸಿಕೊಂಡಿದ್ದರು. ಅನೇಕ ಮಂದಿ ಪಾರಸಿ ಮತ್ತು ದೇಶ್ಯಾನಿ ಮಹಿಳೆಯರು ಖಾದಿಯನ್ನು ಉಟ್ಟುಕೊಂಡು ಬಂದಿದ್ದರು. ಸಭೆಯ ಒಂದು ಮುಖ್ಯಸ್ಥಾನದಲ್ಲಿ ಮಹಾತ್ಮರ ಭಾವಚಿತ್ರವನ್ನಿಟ್ಟು ಆ ಪಟಕ್ಕೆ ಕೈನೂಲಿನ ಕಟ್ಟುಗಳನ್ನು ಕೆಲವು ಮಹಿಳೆಯರು ಸಮರ್ಪಿಸಿದರು. ಅನಂತರ ಶ್ರೀಮತಿ ಸರೋಜಿನಿ ನಾಯ್ಡು, ಶ್ರೀಮತಿ ಅವಂತಿಕಾ ಬಾಯಿ ಗೋಖಲೆ, ಶ್ರೀಯುತ ವಿ. ಜೆ. ಪಟೇಲ ಇವರಲ್ಲರ ಭಾಷಣಗಳಾದವು.

ಮಧ್ಯಾಹ್ನದ ತರುವಾಯ ಚೌಪಾಟಿಯಲ್ಲಿ ಸ್ತ್ರೀಯರಿಂದ ಹಾಗು ಪುರುಷರಿಂದ ಕೂಡಿದ ಒಂದು ಸಾರ್ವಜನಿಕಸಭೆ ಕೂಡಿತು. ಈ ಸಭೆಯನ್ನು ಎರಡು ವಿಭಾಗವಾಗಿ ಮಾಡಿತ್ತು. ಒಂದು ಭಾಗದ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಮತಿ ಸರೋಜಿನೀ ದೇವಿಯವರು, ಇನ್ನೊಂದು ಭಾಗದ ಸಭೆಯ ಅಧ್ಯಕ್ಷಸ್ಥಾನವನ್ನು ಮಿ। ಬಿ. ಯನ್. ಮೋತಿವಾಲಾರು ವಹಿಸಿದ್ದರು. ಬಾರ್ಡೋಲಿಯ ಕಾರ್ಯಕ್ರಮವನ್ನು ಅನುಸರಿಸಿ ಮುಂದಿನ ಕಾರ್ಯವನ್ನು ನಡಿಸಬೇಕು ಎಂದು ಮುಖ್ಯವಾಗಿ ಸರೋಜಿನಿಯವರು ಭಾಷಣ ಮಾಡಿದರು. ಅಲ್ಲದೆ ಶ್ರೀಯುತ ವಿ. ಜೆ. ಪಟೇಲ ಮೊದಲಾದವರ ಭಾಷಣಗಳೂ ಆದವು.

ಲಾಹೋರ್.

ಲಾಹೋರಪಟ್ಟಣದಲ್ಲೂ ಹರತಾಳವು ಆಚರಿಸಲ್ಪಟ್ಟಿತು. ಆ ದಿನ ರಾತ್ರಿ ಪಂಡಿತ ಮೋತಿಲಾಲನೇಹರುಗಳವರು ಪ್ರಚಲಿತ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣಮಾಡಿದರು. ಪಂಜಾಬದ ಜನರೆಲ್ಲರೂ ತಮ್ಮ ಭೇದಗಳನ್ನು ಬದಿಗೊತ್ತಿ ಐಕ್ಯರಾಗಿ ಬರುವ ಮಾರ್ಚಿ ೧೮ರೊಳಗಾಗಿಯೆ ಮಹಾತ್ಮರನ್ನು ಬಿಡುಗಡೆಮಾಡಬೇಕೆಂದು ನಿವೇದಿಸಿಕೊಂಡರು. ಅನಂತರ ಅವರು ಈಗ ಹಿಂದೂ ಮುಸಲ್ಮಾನರಲ್ಲಿ ಉಂಟಾದ ಒಡಕನ್ನು ಕುರಿತು ತಮ್ಮ ಖೇದವನ್ನು ವ್ಯಕ್ತಪಡಿಸಿ ಸರಕಾರದವರು ಜನರ ಉತ್ಸಾಹವನ್ನು ಕುಗ್ಗಿಸಿ ಹಿಂದೂ ಮುಸಲ್ಮಾನರು ಪರಸ್ಪರ ಕಲಹಮಾಡಿಕೊಳ್ಳುವಂತೆ ಯೋಚಿಸುವರುಎಂದು ತಿಳಿಸಿ ಜನರು ಮಹಾತ್ಮಾ ಗಾಂಧಿಯವರನ್ನು ಬಿಡುಗಡೆಮಾಡುವ ವರೆಗೆ ಶಾಂತರಾಗಲಿಕ್ಕಿಲ್ಲವೆಂದು ಸರಕಾರಕ್ಕೆ

ದಕ್ಷಿಣ ಕನ್ನಡ.

ಮಂಗಳೂರು:—ಗಾಂಧಿಸಪ್ತಾಹವು ನಮ್ಮ ಮಂಗಳೂರು ಪಟ್ಟಣದಲ್ಲಿ ಯೋಗ್ಯವಾಗಿ ಆಚರಿಸಲ್ಪಟ್ಟಿತು. ಪ್ರತಿದಿನ ಸ್ವಯಂಸೇವಕರ ಭಜನೆ, ಕಾಂಗ್ರೆಸ್ಸಿಗೆ ಮೆಂಬರರನ್ನು ಸೇರಿಸುವುದು, ಖಾದಿಯನ್ನು ಮಾರುವುದು ಮುಂತಾದ ಕಾರ್ಯಗಳು ನಡೆದವು. ತಾರೀಕ ೧೮ರಲ್ಲಿ ಯುಗಾದಿ ಹಬ್ಬವಾಗಿದ್ದರೂ ಅಂಗಡಿಗಳೆಲ್ಲವೂ ಮುಚ್ಚಿದ್ದವು. ಈ ದಿನ ರಾಷ್ಟ್ರಗೀತವನ್ನು ಹಾಡಿ ಪಟ್ಟಣದಲ್ಲಿ ಮೆರವಣಿಗೆ ಇತ್ತಲ್ಲದೆ ಸಾಯಂಕಾಲ ೫ ಘಂಟೆಗೆ ಲೈನು ಮೈದಾನಿನಲ್ಲಿ ಒಂದು ದೊಡ್ಡ ಸಭೆಯು ಕೂಡಿತು. ಈ ಸಭೆಯಲ್ಲಿ ಮ. ರಾ. ಕಾರ್ನಾಡ ಸದಾಶಿವ ರಾವ್, ಮ. ರಾ. ಶರ್ಮ, ಮ. ರಾ. ಉಮೇಶರಾವ್ ಮೊದಲಾದವರ ಭಾಷಣಗಳಾದವು.

ಕಾರ್ಕಳ:—ಇಲ್ಲಿಯ ಗಾಂಧಿಸಪ್ತಾಹವು ಬಹಳ ವಿಜೃಂಭಣೆಯಿಂದ ಜರಗಿತು. ಮಹಾತ್ಮಾಜಿಯವರಿಗೆ ಬಂಧನವಲ್ಲಿರಿಸಿದ ದಿನವಾದ ತಾ. ೧೧ರಿಂದ ಇಲ್ಲಿಯ ವಿದ್ಯಾರ್ಥಿಗಳು ಮತ್ತು ಸ್ವಯಂಸೇವಕರು ಒಟ್ಟುಗೂಡಿ ತಾರೀಕು ೧೭ರ ವರೆಗೆ ಪ್ರತಿದಿನ ಸಾಯಂಕಾಲ ರಾಷ್ಟ್ರಗೀತಗಳನ್ನು ಹಾಡುತ್ತಾ ಜಯಜಯಕಾರದಿಂದ ಊರಿನಲ್ಲಿ ತಿರುಗುತ್ತಾ ಖಾದಿಯನ್ನು ಮಾರುತ್ತಿದ್ದರು. ತಾ. ೧೮ನೇ ಗಾಂಧಿ ದಿನದಲ್ಲಿ ಹರತಾಳವನ್ನು ಆಚರಿಸಬೇಕಾಗಿ ಕಾರ್ಕಳ ಕಾಂಗ್ರೆಸ್ ಕಮಿಟಿಯವರು ಹಸ್ತಪತ್ರಗಳನ್ನು ಛಾಪಿಸಿ ಅದನ್ನು ಪೇಟೆಯಲ್ಲಿಯೂ ಸರಗ್ರಾಮಗಳಲ್ಲಿಯೂ ಮೊದಲೇ ಪ್ರಕಟಿಸಿದ್ದರು. ತಾರೀಕು ೧೮ನೇ ದಿನ ಬೆಳಿಗ್ಗೆ ೫ ಘಂಟೆ ಸಮಯಕ್ಕೆ ರಾಮಸಮುದ್ರದಲ್ಲಿ ಸ್ನಾನಮಾಡಿ ಅಲ್ಲಿಂದ ಅಂದವಾಗಿ ಶೃಂಗರಿಸಲ್ಪಟ್ಟ ಮಹಾತ್ಮಾಜಿಯವರ ಭಾವಚಿತ್ರದೊಂದಿಗೆ ಬಾಲಕರು ಹಾಗೂ ಅನೇಕ ಗೃಹಸ್ಥರ ಸಮೇತ ರಾಷ್ಟ್ರಗೀತಗಳನ್ನು ಹಾಡುತ್ತಾ ಜಯಘೋಷದಿಂದ ಭಜನೆಯು ಪೇಟೆಯಲ್ಲೆಲ್ಲಾ ಸಂಚರಿಸಿ ಸುಮಾರು ೧೦ ಘಂಟೆ ಸಮಯಕ್ಕೆ ಕಾರ್ಕಳ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಸಭೆಯು ಜರಗಿ ಕಾಂಗ್ರೆಸ್ ಕಮಿಟಿಗೆ ಹೊಸ ಮೆಂಬರರ ಚುನಾವಣೆಯು ಆಯಿತು. ಶ್ರೀಯುತ ಮುರೂರು ಮಾಧವ ಪ್ರಭುಗಳವರನ್ನು ಕೋಶಾಧಿಕಾರಿಯನ್ನಾಗಿಯೂ ಶ್ರೀಯುತ ಕೆ. ಪಿ. ರಾಮಪ್ರಭುಗಳವರನ್ನು ಕಾರ್ಕಳ ಟೌನ್ ಕಾಂಗ್ರೆಸ ಕಮಿಟಿಯ ಅಧ್ಯಕ್ಷರನ್ನಾಗಿಯೂ ಶ್ರೀಯುತ ಕೆ. ಸಂಜೀವ ಹೆಗಡೆಯವರನ್ನು ಕಾರ್ಯದರ್ಶಿಯವರನ್ನಾಗಿಯೂ ಶ್ರೀಯುತ ಕೆ. ಪದ್ಮನಾಭ ಜೋಯಿಸರನ್ನು ಉಪಕಾರ್ಯದರ್ಶಿಯವರನ್ನಾಗಿಯೂ ಆರಿಸಲಾಯಿತು. ಮಹಾತ್ಮಾಜಿಯವರು ಹೂಡಿರುವಂಥಾ ಈ ಅಸಹಕಾರಯುದ್ಧದಲ್ಲಿ ನಾವು ಅವರಿಗೆ ಬೆಂಬಲವಾಗಿ ನಿಂತು ಮಾಡಬೇಕಾಗಿರುವಂಥಾ ಕಾರ್ಯಕ್ರಮಗಳನ್ನು ಸೂಚಿಸಿ ಇನ್ನು ಮುಂದೆ ನಾವು ಅವನತಿಯಿಂದ ಮುಕ್ತರಾಗುವ ಉಪಾಯವನ್ನು ಹೇಳಿಕೊಟ್ಟು ಇಲ್ಲಿಯ ಶ್ರೀಯುತ ವಕೀಲ ರಾ. ಲಕ್ಷ್ಮಣ ಪೈಗಳವರು ಬಹಳ ಚೆಲೋದಾದ ಭಾಷಣವನ್ನು ಕೊಟ್ಟರು. ಅನಂತರ ಶ್ರೀ ಹನುಮಾನ ದೇವಸ್ಥಾನದಲ್ಲಿ ವಾಯುಸ್ತುತಿ, ಪಾರಾಯಣ, ಸತ್ಯನಾರಾಯಣ ದೇವರ ವ್ರತ ಪೂಜೆ ಆದ ಕೂಡಲೆ ಸುಮಾರು ೧೧ ಘಂಟೆಯ ಸಮಯಕ್ಕೆ ತಿಲಕ ಸ್ವರಾಜ್ಯ ನಿಧಿಯನ್ನು ಒಟ್ಟುಗೂಡಿಸುವ ಬಗ್ಗೆ ಸ್ವಯಂಸೇವಕರ ಮತ್ತು ಊರ ಕೆಲವು ಗೃಹಸ್ಥರ ಕೂಟವು ಇಡೀ ಪೇಟೆಯಲ್ಲೆಲ್ಲಾ ಸಂಚರಿಸಿ ಸಾಯಂಕಾಲ ಘಂಟೆ ೬ರ ಸಮಯಕ್ಕೆ ಮರಳಿ ದೇವಸ್ಥಾನಕ್ಕೆ ಬಂದು ಸೇರಿದೊಡನೆ ದೇವರ ಉತ್ಸವವು ಶ್ರೀ ಹನುಮಾನ ದೇವರ ವಾಹನದ ಮೇಲೆ ಹೊರಟಿತು. ರಾತ್ರೆ ಘಂಟೆ ೧೦ರ ಸಮಯದಲ್ಲಿ ಪೂಜೆ ವಗೈರೆ ಜರಗಿ ಅಂದಿನ ದಿನದ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆದುದಾಯಿತು. ೯೫—೧೩—೦ರ ಮಟ್ಟಿನ ತಿಲಕ ಸ್ವರಾಜ್ಯನಿಧಿಯು ಕೂಡಿತು. ಹರತಾಳವು ಪೂರ್ಣವಾಗಿ ಆಚರಿಸಲ್ಪಟ್ಟಿತು. ಈ ರೀತಿ ಗಾಂಧಿ ಸಪ್ತಾಹವು ಬಹಳ ವಿಜೃಂಭಣೆಯಿಂದ ಸಮಾಪ್ತವಾಯಿತು.

ಕಾಸರಗೋಡು:— ಕಳೆದ ತಾ. ೯ರಲ್ಲಿ ಇಲ್ಲಿಯ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಎದುರುಗಡೆಯಲ್ಲಿ ಮ. ರಾ. ರಾ. ಡಿ. ಕೆ. ಭಾರದ್ವಾಜರ ಮತ್ತು ಡೋಕ್ಟರ್ ಹರ್ಡೀಕರರ, ರಾಜಕೀಯಭಾಷಣಗಳು ಇದ್ದವು. ಆ ಭಾಷಣಗಳ ಅಂತ್ಯದಲ್ಲಿ ಕಾಸರಗೋಡು ತಾಲೂಕಿನ ಬಗ್ಗೆ ಕಡಿಮೆ ಪಕ್ಷಕ್ಕೆ ೩೫ ಮಂದಿ ಸ್ವಯಂಸೇವಕರು ಆವಶ್ಯವಿರುತ್ತಾರೆಂದು ಹರ್ಡೀಕರರು ಸೂಚಿಸಿದಂತೆ ಇಲ್ಲಿಂದ ರಾ. ಉಮಾನಾಥ ರಾವ್ ಮತ್ತು ಬೆಳ್ಳಿಕೋತ್ ರಘುನಾಥ ರಾವ್ ಎಂಬ ಇಬ್ಬರು ಯುವಕರು ಮಾತ್ರ ಮುಂದೆಬಂದು ತಾವು ಇಲ್ಲಿಯ ಸ್ವಯಂಸೇವಕರಲ್ಲಿ ಮೊದಲನೆಯವರಾಗುತ್ತೇವೆಂದು ಹೇಳಿ ತಮ್ಮ ಹೆಸರುಗಳನ್ನು ಕೊಟ್ಟಿರುವರು. ಅಲ್ಲದೆ ಇದೇ ತಾ. ೧೮ನೆಯ ಆದಿತ್ಯವಾರ ದಿವಸ ಸಾಯಂಕಾಲ ಇದೇ ಸ್ಥಳದಲ್ಲಿ ಮ. ರಾ. ರಾ. ಡಿ. ಕೆ. ಭಾರದ್ವಾಜರ ಭಾಷಣವೂ ಅದಕ್ಕೆ ಮುಂಚೆ ರಾಷ್ಟ್ರೀಯ ಚಿಕ್ಕ ದೊಡ್ಡ ವಿದ್ಯಾರ್ಥಿವರ್ಗ ಮೊದಲಾದವರ ಮೆರವಣಿಗೆಯೂ, ಅಲ್ಲದೆ ದೇವಸ್ಥಾನದ ಎದುರುಗಡೆಯಿರುವ ಅಶ್ವತ್ಥಕಟ್ಟೆಯಲ್ಲಿ ಹುಡುಗರ ನೂಲುವಿಕೆಯ ಸಂದ್ಯಾಟವೂ ಖಾದಿ ವಸ್ತ್ರದ ಮಾರಾಟವೂ ಇತ್ತು. ಇದಲ್ಲದೆ ತಾ. ೧೮ನೆಯ ದಿವಸ ವ್ಯಾಪಾರಸ್ಥರ್ಯಾರೂ ತಮ್ಮ ಅಂಗಡಿಯ ಬಾಗಿಲುಗಳನ್ನು ತೆಗಿಯದೆ ಹರತಾಳವನ್ನು ಕೈಗೊಂಡರು. ಇಡೀ ಊರಿನ ಎಲ್ಲಾ ಕಡೆಗಳಲ್ಲಿಯೂ ಅಂಗಡಿಗಳು ಮುಚ್ಚಿಯೇ ಇದ್ದವು.

ಬಂಟವಾಳ:—ಇಲ್ಲಿ ಇದೇ ತಾ. ೧೮ರಲ್ಲು ಹರತಾಳವನ್ನು ಆಚರಿಸಿದರು. ಎಲ್ಲಾ ಅಂಗಡಿ, ಭಂಡಸಾಲೆ, ಕಾಫಿ, ಚಾ ದುಕಾನ ಎಲ್ಲವೂ ಹಿಂದೂ, ಕ್ರೈಸ್ತ, ಮುಸಲ್ಮಾನ ಎಂಬ ಭೇದವಿಲ್ಲದೆ ಮುಚ್ಚಲ್ಪಟ್ಟಿದ್ದವು. ಭಂಗಿ ಅಂಗಡಿ, ಶೇಂದಿ ಸರಾಬು ಅಂಗಡಿಗಳು ಮಾತ್ರ ತೆರೆದಿದ್ದವು.

ಪಾಣೆಮಂಗಳೂರು:— ಇಲ್ಲಿ ತಾ. ೧೮ನೇ ಆದಿತ್ಯವಾರ ಎಲ್ಲಾ ಅಂಗಡಿ ಭಂಡಸಾಲೆಗಳು ಮುಚ್ಚಿದ್ದವು. ಒಂದೆರಡು ಕಾಫಿ ಚಾ ದುಕಾನಗಳು ತೆರೆದಿದ್ದವು.

ಪಡುಬಿದ್ರೆ:— ಇಡೀ ಜಗತ್ತಿನಲ್ಲಿ ಶಾಂತಿಮಯವಾದ ತತ್ವಗಳನ್ನು ಪ್ರಕಾಶಗೊಳಿಸಲಿಕ್ಕೆ ಪವಿತ್ರವಾದ ಹಿಂದೂಭೂಮಾತೆಯ ಉದರದಲ್ಲಿ ಜನ್ಮತಾಳಿಬಂದ ಅವತಾರಿಕ ಮಹಾಪುರುಷ ಯೋಗಿವರ್ಯ ಮಹಾತ್ಮಾ ಗಾಂಧಿಗಳವರು ತಮ್ಮ ತತ್ವಗಳನ್ನು ಜನರಿಗೆ ಬೋಧಿಸುವಾಗ ಸರಕಾರದವರು ಕಳೆದ ವರುಷ ಮಾರ್ಚಿ ತಾರೀಕು ೧೮ರಲ್ಲು ಅವರನ್ನು ಸ್ವರಾಜ್ಯಾಶ್ರಮಕ್ಕೆ ಕಳುಹಿಸಿದರು. ಅಂಥಾ ಪವಿತ್ರ ದಿನವಾದ ಈ ವರುಷದ ಮಾರ್ಚಿ ತಾರೀಕು ೧೮ನೇ ದಿನವನ್ನು ಇಲ್ಲಿಯವರೂ ಮರೆಯದೆ ಮಹಾತ್ಮಾಜಿಯವರ ಮೇಲಿನ ಭಕ್ತಿಪೂರ್ವಕವಾಗಿ ಆಚರಿಸಿ "ಚಾಂದ್ರಮಾನ" ಯುಗಾದಿ ಆದರೂ ಉಪವಾಸದಿಂದಿದ್ದು ಬೆಳಗ್ಗೆ 'ಮಹಾತ್ಮಾ'' ಜೀಯವರ ಭಜನೆಯೊಡನೆ ಗ್ರಾಮದಲ್ಲಿ ಪ್ರತಿ ಮನೆಗೆ ಹೋಗಿ ಮಹಾತ್ಮಾರವರ ಸಂದೇಶ ಮಾಡಿಸಿ ಅವರ ತತ್ವಗಳನ್ನು ವಿವರಿಸಿ ಹೇಳಿ ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸಿದನಂತರ ಮಧ್ಯಾಹ್ನ ನಾಲ್ಕುವರೆ ಘಂಟೆಗೆ ಇಲ್ಲಿ ಕಾಂಗ್ರೆಸ ಸಂಸ್ಥೆಯ ಜನ್ಮಸ್ಥಳವಾದ ಸಂತೆಕಟ್ಟೆಯಲ್ಲಿ ಸಭೆಸೇರಿ ಅಲ್ಲಿಯೂ ಕಾಂಗ್ರೆಸ್ ಸದಸ್ಯರನ್ನು ದಾಖಲುಮಾಡಿ ಅಲ್ಲಿಂದ ಮಹಾತ್ಮಾಜೀಯವರ [illegible] ಪೇಟೆಯಲ್ಲಿ ಭಜನೆಕೀರ್ತನೆಗಳೊಂದಿಗೆ ರಾಷ್ಟ್ರೀಯ ಗೀತಗಳನ್ನು ಹಾಡಿ ತಿಲಕ ಸ್ವರಾಜ್ಯನಿಧಿಗೂ ಸ್ವಲ್ಪ ಹಣಶೇಖರಿಸಿ ಗ್ರಾಮದೇವಸ್ಥಾನವಾದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಬಂದು ಪ್ರಾರ್ಥನೆ ಮಾಡಿ ಪ್ರಸಾದ ಪಡದು, ತದನಂತರ ಶ್ರೀಲಕ್ಷ್ಮೀವೆಂಕಟ್ರಮಣ ದೇವಸ್ಥಾನಕ್ಕೆ ಬಂದು ಪ್ರಾರ್ಥನೆ ಮಾಡಿ, ಹರತಾಳ ಆಚರಣೆಯ ಕಾರ್ಯವನ್ನು ಪೂರ್ತಿಗೊಳಿಸಲಾಯಿತು. ಹರತಾಳದ ಮೆರವಣಿಗೆಗೆ ಊರಿನ ಹೆಚ್ಚಿನ ಆಬಾಲವೃದ್ಧರೆಲ್ಲರೂ ಹಾಜರಿದ್ದರು. ಕೆಲವು ಮಹನೀಯರು ಮಾತ್ರ ಆ ದಿನ ಅಂಗಡಿಬಾಗಿಲುಗಳನ್ನು ತೆರೆದಿಟ್ಟು ಈ ಮೆರವಣಿಗೆಗೂ ಪ್ರಾರ್ಥನೆಗೂ ಸಹಭಾಗಿಗಳಾಗದಿದ್ದುದಕ್ಕೆ ವಿಷಾದಪಡಬೇಕಾಗುತ್ತದೆ. ಶ್ರೀ ದೇವರು ಅವರ ಮನಸ್ಸಿನಲ್ಲಿಯೂ ತಾವು ಭರತಭೂಮಾತೆಯ ಪುತ್ರರೆಂಬುದನ್ನೂ ಸ್ವರಾಜ್ಯ ಹೊಂದುವುದೇ ತಮ್ಮ ಕರ್ತವ್ಯವೆಂಬುದನ್ನು ಭಾವಿಸಿ ತಾವೂ ಕೂಡಾ [illegible] ಇತರ ಆಡಂಬರದ ದುಂದುಗಾರಿಕೆಗೆ ವರ್ಷಾವಧಿ ಖರ್ಚುಮಾಡುವ ಹಣದ ನೂರರಲ್ಲಿ ಒಂದು ಪಾಲನ್ನಾದರೂ ಸ್ವರಾಜ್ಯಫಂಡಿಗೆ ಧನಸಹಾಯಮಾಡಿಯೂ ಕಾಂಗ್ರೆಸ್ ಸದಸ್ಯರಾಗಿ ಸೇರಿಯೂ ತಮ್ಮ ಈಗಿನ ಅಗತ್ಯವಾದ ಈ ಕರ್ತವ್ಯದ ಭಾಗವನ್ನು ಪೂರೈಸುವಂತೆ ಇನ್ನಾದರೂ ಪ್ರಯತ್ನಪಡಲೆಂದು ಶ್ರೀ ದೇವರೊಡನೆ ಪ್ರಾರ್ಥಿಸುತ್ತೇನೆ. ಸ್ವರಾಜ್ಯಾಭಿಲಾಷಿ.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು—
ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರುಪೀಠ ದೀಕ್ಷಿತರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ। ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತ" "ಅಗ್ನಿಗೀತ" "ದೇವರಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುದಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!
ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾಧಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿನಿ, ಸ್ತ್ರೀಯರ ಇವರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ನಂಥಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರ

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0
Reserve and other sinking Funds „ 205,250—0—0
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟೆರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1923.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ಸಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ. ಅದು ಹೇಗೆಂದರೆ ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುವದರಿಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಳ್ಳೀಪನೇಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂಥ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಕೆಟ್ಟ ಹವಾ, ಕೆಟ್ಟದಾದ ನೀರುಗಳಿಂದ ಯಾವ ಕೆಡುಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ನೆಗಡಿ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ನೋವು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಅಸಂಖ್ಯಾತರಾದ ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜುಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯೂ ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೭—೧೯೨೨)
ಇವರ ಅಭಿಪ್ರಾಯ. ಅಂದವಾದ ಮುದ್ರಣ. ನೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

		ಪಂಚರಾಮಾಯಣ ಹೊಸ	
ಮುತ್ತಿನ ಸರ . .	0—12—0	ಮುದ್ರಣ .	5—0—0
ಸಂತಾಪಕ-ಕಾದಂಬರಿ	0—6—0	ಪಂಚರಾಮಾಯಣದ	
ಚಂದ್ರಮುಖಿ ,,	0—8—0	ಕಥೆ ವಚನ .	0-12—0
ರಾಜಪುತ್ರರಮಣಿಯರು	0—8—0	S. S. L. C. Kannada Texts	
		ಪರಿವಾಣಿ . . .	0—5—0
ಕೆಲವು ಸಣ್ಣ ಕಥೆಗಳು	1—0—0	ಸುಶೀಲೆ . . .	0—6—0
ರಾಜಯೋಗ . .	1—0—0	ಆದರ್ಶ ಸುಮತಿ.	0-12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ,
ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಪೆಟ್ಟಿಗೆಯು 32 ಸಾಮಾನುಗಳ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ. 4—8—0, ದೊಡ್ಡದು 5—0—0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಮಣಿ, [illegible], ರುದ್ರಾಕ್ಷಿ, ಸ್ಫಟಿಕ [illegible] ಇವುಗಳನ್ನು ಬೇಕಾದವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವುದು. ಕ್ಯಾಟಲಾಗ್ [illegible].

ವಿಳಾಸ—
ಎಸ್. ಯು. [illegible] ಮತ್ತು ಕಂಪೆನಿ,
[illegible], ಕಾಶೀ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯಃ—ರೂ.1—4—0.

ಹುಳದ ವ್ಹೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪೆತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ಜರ್ಮನ ದೇಶದಲ್ಲಿ ತಯ್ಯಾರಾಗಿ ಬಂದಂಥಾ

4 ಮತ್ತು 4½ ರಾತ್ಲಿನ ಹಾರೆಗಳೂ, 8 ರಾತ್ಲಿನ ಗುದ್ದಲಿಗಳೂ, 6 ರಾತ್ಲಿನ ಕುಂಟಾನಿಗಳೂ, 4 ರಾತ್ಲಿನ ಕೊಡ್ಲಿಗಳೂ, ಎಲ್ಲಾ ಪರಿಮಾಣದ ಮುಳ್ಳು ಮೊಳೆಗಳೂ, ಮಾರಾಟಕ್ಕೆ ಇವೆ.

ವ್ಯಾಪಾರಸ್ಥರಿಗೆ ಬಹು ರಿಯಾಯಿತಿಯ ಧಾರಣೆಯಲ್ಲಿ ವಿಕ್ರಯಮಾಡಲಾದೀತು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಕೋಮನ್ ವೆಲ್ತ್ ಟ್ರಸ್ಟ್, ಲಿಮಿಟೆಡ್,
ಕಲ್ಲಿಕೋಟೆ.

ಇಲ್ಲಿನ—ಕೋಮನ್ ವೆಲ್ತ್ ಸ್ಟೋರ್ಸ್,
ಮಂಗಳೂರು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶ್ಯವ್ಯಾಪಾರಿ

ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ	ರೂ. 3—4—0
ಶೇ. 1 („ 24) „	„ 2—0—0

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 3-0-0.

ಸ್ವಂತ ಖರ್ಚಿಗೆ ತರಿಸುವವರು ಪೋಸ್ಟ್, ಪೇಕಿಂಗ್ ಚಾರ್ಜು ತೆರಬೇಕಾಗುವುದು

ನಶ್ಯ ಒಂದೇ ತರದ್ದು.

ಎಲಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯಕರವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಯೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಟೋನಿಯಾ ಅಂಡ್ ಕೊ
ಪೋಸ್ಟುಬಾಕ್ಸು ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು, ಶ್ರೀಕಾಶಿ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮುನಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ, ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ವೈದ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿ ವಬರು ತರಿಸಿ ನೋಡಬೇಕೆಂದು ಇದರ ಬೆಲೆ ೩ರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು, ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಟಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟಿನುಗಳೂ, ಯಿನಾಮಲ್ಲ ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್, ಬ್ರವುನ್ ಪೇಪರ್, ರಫ್ಲೋ, ಖಾಲಿ ಕವರು ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತದೆ.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಲು ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎ[illegible] ಬಳಕೊಟ್ಟು ಮೇಲ್ಪಂಡ ರೋಗಗಳು ಅಳಿಯಲ್ಪಡುವಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಕ್ಷನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್ ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಸ್ವದೇಶಾಭಿಮಾನಿ

SWADESHABHIMANI. MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರ್ಚಿ „ 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- | ಗರವ ಮಥಿಸಲು ಸುರರಿಗದರಿಂ |
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕೊಳೆಳರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೭. ಮಂಗಳೂರು, ತಾರೀಕು ೩೦ನೇ ಶುಕ್ರವಾರ ಮಾರ್ಚ್ ೧೯೩೪. ಸಂಚಿಕೆ ೧೩

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0— 0
ಚಂದಾ ಹಾಕಲಿಕ್ಕೆ ಆರ್ಪಿಸಿದ ಮೂಲಧನ	2,00000—0— 0
ಚಂದಾ ಹಾಕಿ ಎತ್ತಿದ ಮೂಲಧನ	1,54,400—0— 0
ವಾಲ್ಯು ತೆತ್ತ ಮೂಲಧನ	1,04,388—2—11
ಠೇವಣಾತಿಗಳು	3,49,151-12— 6
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ ೬ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	5,12,162-13— 2
ರಿಜರ್ವ ಮತ್ತು ಇತರ ಫಂಡುಗಳು	29,149—4— 2

ಕಳೆದ 2 ವರುಷಗಳಲ್ಲಿ ಪಾಲುದ್ಮಾರಿಕರಿಗೆ ಸಾಲಿಯಾನ್ ಸೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಶರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ಇರಖು ಠೇವಣಾತಿಗಳನ್ನೂ, 15 ದಿನಗಳ ನೋಟೀಸು ಮೂಲಕ ಶೇಕಡಾ 6¼ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ಮ್ಯಾದೆ ಠೇವಣಾತಿಗಳನ್ನೂ, ಬೇಕೆಂದಾಗ್ಯೆ ವಾಪಾಸು ಸಿಕ್ಕುವಂಥಾ ಸೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ, ಶೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸು ಬ್ಯಾಂಕು ಠೇವಣಾತಿಗಳನ್ನೂ, ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನೂ ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರಿಟರಿಯವರಿಗೆ ಬರೆದಲ್ಲಿ ತಿಳಿವುದು.

ನಯಂಪಳ್ಳಿ ಆನಂದರಾವ್,
ಸೆಕ್ರಿಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು. ಅಡಕೆ, ಮಾವು, ವೀಳ್ಯದೆಲೆ ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ, ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ದಿನು ಗೊಬ್ಬರದಲ್ಲಿ ನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

—ದಿ ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶ್ಯನ್ ರೋ, ಕಲ್ಕತ್ತಾ.

THE DIRECTOR
CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾಭಿವೃದ್ಧಿ ಅಧಿಕಾರಿಗಳು ಶಾಸ್ತ್ರಗಳಿಂದ ಆರಿಸಲ್ಪಟ್ಟ

ಹಿಂದೂ ವ್ರತವಿವೇಕ ಕ್ರಯ	೦—೧೦—೦
ಶೇತುಬಂಧ	„ ೦—೧೩—೦
ಸಂಕ್ಷೇಪಗೀತ	„ ೦—೧೦—೦

ಅಚ್ಯುತನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತಿರಸ ಕ್ರಯಂ —೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀವಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ, ಅಂಗದನ ಫಿರ್ಯಾದು, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಷ್ಟಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮುಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ದಮಯಂತ್ಯಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳಿಕರಿಗೆ ರೂ ೨-೦-೦. ವಿ. ಪಿ. ಖರ್ಚು ಕೂಡಿ ರೂ. ೩-೦-೦ ಪ್ರಕಟಿಕೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಇಂಕುಗಳು.

ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫೋಟೋ ಆಲ್ಬಮುಗಳು, ಇತರ ಬಿರಾಯಿದ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮು ಗಳು, ಪರ್ಮಿಟು ಫೋರ್ಮು, ಕುಂಭಿಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೊಪೆಥಿಕ್ ಮತ್ತು ಬಿಷ್ಮ ಔಷಧಿಗಳು—ರೋಗಿಗಳಿಗೂ, ಬಾಲಿಕರಿಗೂ ಬೇಕಾಗುವ ಪಾಕ್ಯತ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಕರಿಗೆ ಬೇಕಾಗುವ ಗೊಬ್ಬರಗಳು.

ಪಾತ್ರಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೩೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BOMBAY
AMRUTANJAN
Best Indian Pain Balm
Amrutanjan Depot BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ— ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಚಕಕಷಾಯ

U. B. DUTT & Co. CALICUT

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ದೊರೆಯುವ [illegible] ಬೇರುಗಳಿಂದ ನಾವು ಅನೇಕ ಆಶ್ಚರ್ಯ [illegible] ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿಷ್ಠಿತವೂ "[illegible]" [illegible]. ಈ [illegible] ಹೊಂದಿದವರಿಂದ ನಮಗೆ ಬಂದಿರುವ [illegible], ಯೋಗ್ಯ [illegible] ಸೇರಿಸಲಾಗಿದೆ.

ಅಂಥಾ ಆಶ್ಚರ್ಯ ಔಷಧಗಳಲ್ಲಿ ನಮ್ಮ 'ಪಾಚಕಕಷಾಯವು' ಎಲ್ಲಾ ವಿಧದ [illegible] ಗುಣಪಡಿಸುತ್ತದೆ. [illegible] ಇರುವ ನೋವು, ಅವಯವಗಳಲ್ಲಿ [illegible], ಗಂಟು [illegible], ಅವಯವ, [illegible] ಲಿಂಗವಾಗಿ [illegible]. [illegible] ಅಜೀರ್ಣ [illegible] ಮೂತ್ರದಲ್ಲಿ [illegible] ಇತ್ಯಾದಿಗಳಲ್ಲಿ ಯಾವುದಾದರೂ ಒಂದು [illegible], ಕೂಡಲೇ ನಮ್ಮ 'ಕಷಾಯ' ತೆಗೆದುಕೊಳ್ಳಲು ಪ್ರಾರಂಭಿಸಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ದೇಹಕ್ಕೆ ಸಂಪೂರ್ಣ ಗುಣಹೊಂದುವುದರಲ್ಲಿ [illegible], [illegible], ಕಫ, [illegible], ಕಾಮಾಲೆ, [illegible], ಕೆಮ್ಮು, ಜ್ವರ, [illegible], [illegible], [illegible], [illegible], [illegible] ಔಷಧಗಳಿವೆ. 'ಪ್ಯಾಟೆಂಟ'ನ್ನು [illegible].

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ [illegible]

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇದ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ಜಾ. (ಬ್ರಾಡ್ವೇ, ಮದ್ರಾಸ್.

Local Agents: **Raphael & Co.**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S K.

GUN RUST-PROOF OUR SPECIALITY

The
Canara Arms & Ammunition Mart,
Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಈಗಲೇ ಪ್ರಿಂಟಾಗಿದೆ! ಬೇಗನೆ ತರಿಸಿಕೊಳ್ಳಿರಿ!

ಕಾಮಶಾಸ್ತ್ರ (ಎನ್ನುವ ಶರೀರ ಮರ್ಮಶಾಸ್ತ್ರ)

ಈ ಪುಸ್ತಕವು ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಇದ್ದದನ್ನು ಇದ್ದ ಹಾಗೆಯೇ ತಿಳಿಸುವಂತೆ ಚಿತ್ರಪಟಗಳ ಸಹಿತ ಗ್ಲೇಜು ಕಾಗದದಲ್ಲಿ ಮುದ್ರಿಸಿರುತ್ತೇವೆ. ಇದರಲ್ಲಿ ಸ್ತ್ರೀ ಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ದಂಪತಿಗಳು ಅನ್ಯೋನ್ಯವಾಗಿರುವದಕ್ಕೆ ಮಾಡಬೇಕಾದ ಉಪಾಯುಗಳು, ಗುಹ್ಯವ್ಯಾಧಿಗಳ ಚಿಕಿತ್ಸೆ, ಶಯನಗೃಹದ ನಿಯಮಗಳು, ಇನ್ನು ಸ್ತ್ರೀ ಪುರುಷರುಗಳಿಗೆ ಬೇಕಾದ ರಹಸ್ಯಗಳು ತುಂಬಿತುಳುಕುತ್ತಿರುವದು. ಕ್ರಯ ಮರ್ಮಶಾಸ್ತ್ರ ರೂ. 1—0—0.

ವಿಳಾಸ:— ಟಿ. ರಾಮಚಂದ್ರರಾವ್ ಕಂಪೆನಿ,
೨೨ ತಿರುಪಳ್ಳಿ ಬೀದಿ,
ಸಾಹುಕಾರಪೇಟೆ, ಮದರಾಸು.

ಪ್ರಕಟಣೆ.

ರುಧಿರೋದ್ಗಾರಿ ಸಂ|ರದ ಪಂಚಾಂಗ.

ಇದು ಚಿ| ಸುಬ್ಬಣ್ಣ ಶಾಸ್ತ್ರಿಗಳಿಂದ ಗುಣಿಸಲ್ಪಟ್ಟು ಮಂಗಳೂರು ಶಾರದಾ ಛಾಪಖಾನೆಯಲ್ಲಿ ಸುಂದರವಾಗಿ ಮುದ್ರಿತವಾಗುತ್ತಿದೆ. ಅಗತ್ಯವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಪಂಚಾಂಗಕರ್ತರಲ್ಲಿಯೂ ದೊರೆಯುವುದು. ಪಂಚಾಂಗ ಪ್ರತಿ ೧ಕ್ಕೆ ಕ್ರಯ ೩|| ಆಣೆ, ೫೦ಕ್ಕೆ ರೂ. ೮—೦—೦.

ವಿಳಾಸ:-
ಶಾರದಾ ಛಾಪಖಾನೆ,
ಮಂಗಳೂರು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸ್ವಚ್ಛವಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ದೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಬೇಕೆಂದುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್ಸ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs. 150
½ Page Rs. 80. ¼ Page	„ 50
2 in. Single Column	„ 20
1 in. Single Column	„ 15
Name alone in Bold Types	„ 5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ಸುಸಂದರ್ಭ! ದರ ಸುಲಭ! ತ್ವರೆಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗ ಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ., ಬಿ. ಎಲ್.

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.*

ರಾತ್ಲು 1ರ ರೂ. 2—12—0.
ಸ್ಪೆಶ್ಯಲ್ ರಾತ್ಲು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸೆಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಫಿಡಲ್ 1ಕ್ಕೆ „ 15—0—0

ಬೇಕಾದವರು 5 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೊಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65, ಮದರಾಸು.

ಶಾಲಿವಾಹನಶಕ ೧೮೪೫ನೆಯ ರುಧಿರೋದ್ಗಾರಿ ಸಂ|ರದ ಚೈತ್ರ ಶು| ೧೪ ಶನಿವಾರದಿಂದ ರುಧಿರೋದ್ಗಾರಿ ಸಂ| ಚೈತ್ರ ಬ| ೫ ಶುಕ್ರವಾರದ ವರೆಗಿನ

ಪಂಚಾಂಗ

(೧೯೨೩ನೆಯ ಮೀನ ಸುಗ್ಗಿ)

ತಾರೀಖು.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ.	ಸೂರ್ಯ ಉ.	ಸೂರ್ಯ ಅಸ್ತ.
31	ಶನಿ	೧೪	೫೮.೫೦	ಹುಬ್ಬಾ	೧.೪೫	೧೭	6.30	6.42
1	ರವಿ	○	೫೨.೧೮	ಹಸ್ತಾ	೫೫.೪೬	೧೮	6.29	6.42
2	ಸೋಮ	೧	೨೬.೦	ಚಿತ್ರಾ	೪೯.೪೬	೧೯	6.29	6.42
3	ಕುಜ	೨	೨೦.೨	ಸ್ವಾತಿ	೪೬.೦	೨೦	6.28	6.42
4	ಬುಧ	೩	೧೫.೧೫	ವಿಶಾಖಾ	೪೨.೧೬	೨೧	6.28	6.42
5	ಗುರು	೪	೧೦.೨	ಅನುರಾಧಾ	೩೯.೧೫	೨೨	6.27	6.42
6	ಶುಕ್ರ	೫	೫.೩೧	ಜ್ಯೇಷ್ಠಾ	೩೬.೪೪	೨೩	6.27	6.42

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಮಾರ್ಚ್)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
23	91—0	72—8	0—25	—
24	91—6	75—0	—	—
25	92—2	78—8	—	—
26	93—6	77—2	—	—
27	94—0	75—9	—	—
28	93—5	75—8	—	—
29	92—3	80—2	—	140.80

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಸೂರಿ ಅಕ್ಕಿಮುಡಿ ೧ಕ್ಕೆ ...	7- 8	8— 2
ಹೊಸ ಗುಡ್ಡು, ...	6- 8	7— 4
ಹೊಸ ರಾಶಿ	6- 2	6— 8
ಅವ್ವಲ್ ಬೆಳ್ತಿಗೆ „ ...	7-14	8—10
ಗುಡ್ಡು ಬೆಳ್ತಿಗೆ „ ...	7- 6	7—12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	12-8	13— 0
ಗೋಧಿ ಗೋಣಿ ೧ಕ್ಕೆ ...	15- 8	19— 0
ಹುರುಳಿ ಗೋಣಿ ೧ಕ್ಕೆ ...	9-12	8— 8
ಕಡಲೆ ಗೋಣಿ ೧ಕ್ಕೆ ...	11- 0	14— 0
ತೊಗರಿ ಗೋಣಿ ೧ಕ್ಕೆ ...	12- 0	—
ತೊಗರಿಬೇಳೆ ಗೋಣಿ ೧ಕ್ಕೆ ...	14- 0	23— 0
ಉದ್ದು ಗೋಣಿ ೧ಕ್ಕೆ ...	13- 0	—
ಹೆಸರು ಗೋಣಿ ೧ಕ್ಕೆ ...	—	12— 0
ಊರು ಬೆಲ್ಲ ಖಂಡಿ ೧ಕ್ಕೆ ...	40- 0	45— 0
ಉಪ್ಪು ಗೋಣಿ ೧ಕ್ಕೆ ...	7- 4	7— 8
ಕೊಪ್ರಿ ಖಂಡಿ ೧ಕ್ಕೆ ...	100- 0	110— 0
ಕೊಪ್ರಿ ಹಿಂಡಿ ಖಂಡಿ ೧ಕ್ಕೆ ...	42- 0	—
ಎಳ್ಳಿಂಡಿ ಖಂಡಿ ೧ಕ್ಕೆ ...	50- 0	55— 0
ಕೊಪ್ರಿ ಎಣ್ಣೆ ಮುಡಿ ೧ಕ್ಕೆ ...	8- 2	9— 0
ಎಳ್ಳೆಣ್ಣೆ ಮುಡಿ ೧ಕ್ಕೆ ...	6-12	9— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	9- 0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	7-12	8— 0
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ ...	7- 0	7— 8
ಸಾಸಿವೆ ಮುಡಿ ೧ಕ್ಕೆ ...	8- 8	9— 0
ಕೊತ್ತುಂಬರಿ ಮುಡಿ ೧ಕ್ಕೆ ...	4- 0	4— 4
ಕಾಫಿ ಖಂಡಿ ೧ಕ್ಕೆ ...	285- 0	302— 0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳ್ಳು ...	200- 0	205— 0
ಬಿಳಿಗೋಟು New, ಹೊಸ್ತು ...	180- 0	195— 0
ಕಾಳುಮೆಣಸು ಖಂಡಿ ೧ಕ್ಕೆ ...	115- 0	120— 0
ಮೂಲಂಗಿ ಮುಡಿ ೧ಕ್ಕೆ ...	60- 0	70— 0
ಗೇರುಬೀಜ ಮುಡಿ ೧ಕ್ಕೆ ...	1-14	2— 0
ಕಬ್ಬಿಣ ಖಂಡಿ ೧ಕ್ಕೆ ...	50- 0	65— 0
ತಾಂಬ್ರ ತಗಡು ಮಣ ೧ಕ್ಕೆ ...	20-12	23— 0
ತಾಂಬ್ರ ಪಾತ್ರೆಗಳು ಮಣ ೧ಕ್ಕೆ ೧ಕ್ಕೆ ...	32- 0	—
ತುಪ್ಪ ಬೆಲ್ಲ ಸೇರು ೧ಕ್ಕೆ ...	22- 8	—
ಅಕ್ಕಾಳಿ ತಗಡುಮಣ 1ಕ್ಕೆ ...	20- 0	21—

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 8 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಟವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನ ಎಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಆವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

ಯುನೈಟೆಡ್ ಕಮರ್ಶಿಯಲ್ ಕಂಪೆನಿ,

ಪೋಸ್ಟ ಬಾಕ್ಸ ನಂಬ್ರ 388, ಮುಂಬಯಿ.

ಈ ಕಂಪೆನಿಯವರು ನಾನಾ ತರದ ಕಾಗದಗಳನ್ನೂ ಛಾಪಖಾನೆಗೆ ಬೇಕಾದ ಉಪಕರಣಗಳನ್ನೂ ರಖಂ ಖಚ್ಚಿಯಲ್ಲಿ ಮಾರಾಟಮಾಡುವರು. ಈ ಕಂಪೆನಿಗೆ ಪೇಜು ಹಾಕುವ (Numbering) ಅನೇಕ ಮೆಶಿನ್ನುಗಳು ಈಗಲೇ ಬಂದಿರುತ್ತವೆ. ಗಿರಾಕಿಗಳು ತಮಗೆ ಬೇಕಾದ ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳುವುದು.

ತ್ವರೆಮಾಡಿರಿ! ತ್ವರೆಮಾಡಿರಿ!!

ಮಾರಾಟಕ್ಕೆ ಸಿದ್ಧವಾಗಿದೆ

ಪಂಡಿತ ಮಂಗಳೂರ ನಾರಾಯಣಾಚಾರ್ಯರಿಂದ ಗಣಿಸಿ ಪರಿಶೋಧಿಸಲ್ಪಟ್ಟ,

ರುಧಿರೋದ್ಗಾರಿ ಸಂವತ್ಸರದ ಪಂಚಾಂಗಗಳು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಫೋಟೋ ಉಂಗುರಗಳು.

ಈ ತಿಂಗಳಲ್ಲಿ ತರಿಸಿದವರಿಗೆ ರೋಸಾ ಸೆಂಟ್ ಬಾಟಲ್ ಇನಾಂ.

ಈ ಉಂಗುರಗಳನ್ನು ಸೀಮೆಯ ಬಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಶನ್ ವಜ್ರದ 5 ಕಲ್ಲುಗಳು ಕೆತ್ತಲ್ಪಟ್ಟಿವೆ. ಇದರ ಮಧ್ಯದಲ್ಲಿ ಒಂದು ಭೂತ ಕನ್ನಡಿ ಇರುವುದು. ಅದರಲ್ಲಿ ನೋಡಿದರೆ ರಾಮ, ಕೃಷ್ಣ, ಲಕ್ಷ್ಮಿ, ಗಾಂಧಿ, ತಿಲಕ, ಅರವಿಂದ ಮುಂತಾದವು ವಿವರವಾಗಿ ಕಾಣುವವು. ಇದರ ಬಣ್ಣವು ಹೋಗದಂತೆ ಸುವರ್ಣಭಂಗಾರದ ಗಿಲೀಟು ಮಾಡಿಯದೆ. ಇದು ಬೆರಳಿಗೆ ಹಾಕಿಕೊಳ್ಳಲು ಯೋಗ್ಯವಾಗಿರುವುದು. ಕ್ರಯ 1ಕ್ಕೆ ರೂ. 2—0—0

ವಿಲಾಯತಿಯ ರೇಜರು.

ಈ ರೇಜರುಗಳು ವಿಲಾಯತಿಯಲ್ಲಿ ತಯಾರಾದದ್ದು. ಇದರಲ್ಲಿ ಕ್ಷೌರವನ್ನು ಮಾಡಿಕೊಳ್ಳುವುದರಿಂದ ಉರಿಯುವುದಿಲ್ಲ. ನೋವಾಗುವುದಿಲ್ಲ. ಅಂಟುವ್ಯಾಧಿಗಳು ಸೇರುವುದಿಲ್ಲ. ಇದರ ಕತ್ತಿಯು ಬಹು ಮೇಲಾದ ಲೋಹದಿಂದ ಮಾಡಿದೆ. ಆನೆ ದಂತದ ಹಿಡಿ ಇರುವುದು.

ಕ್ರಯ 1ಕ್ಕೆ ರೂ. 2—0—0.

ವಿಳಾಸ:— ರಿಪನ್ ವಾಚ್ ಕಂಪೆನಿ,
1/16 ಕಡಪ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು

ಪಾಕೆಟ್ ಬೈಸ್ಕೋಪ್‌ಗಳು.

ಈ ಬಾಯಸ್ಕೋಪುಗಳು ಜರ್ಮನ್ ದೇಶದಲ್ಲಿ ತಯಾರಾದವು. ಇದರಲ್ಲಿ (ಫಿಲ್ಲಂ) ಚಿತ್ರಪಟಗಳನ್ನು ಹಾಕಿ ನೋಡಿದರೆ ಬೈಸ್ಕೋಪಿನಲ್ಲಿ ಇದ್ದಂತೆಯೇ ಇರುವುದು. ಈ ಒಂದು ಯಂತ್ರವನ್ನು ಇಟ್ಟುಕೊಂಡು ಜಾತ್ರೆಗಳಲ್ಲಿ ಬಂದವರಿಗೆ ತೋರಿಸಿ ಹಣವನ್ನು ಸಂಪಾದನೆ ಮಾಡಬಹುದು. ಇದಕ್ಕೆ ಮುಂಚಿತವಾಗಿ ಈ ಮಾದರಿ ಯಂತ್ರಗಳು ಮಾರಾಟಕ್ಕೆ ಬರಲಿಲ್ಲ. ಈಗ ತಾನೆ ಬಂದಿರುವವು. ಕ್ರಯ 1-0-0. 2-0-0.

ವಿಳಾಸ:— ರಿಪನ್ ವಾಚ್ ಕಂಪೆನಿ,
22 ಕೃಷ್ಣಪ್ಪ ಮೊದಲಿ ಬೀದಿ, ಟ್ರಿಪ್ಲಿಕೇನ್, ಮದರಾಸು.

ರೇಷ್ಮೆವಸ್ತ್ರಗಳು.

ಈ ರೇಷ್ಮೆವಸ್ತ್ರಗಳನ್ನು ಹಸನಾದ ರೇಷ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ಮೊಳ ಅಗಲವಿರುವದು. ಮೇಲೆ ಹೊದೆಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಷ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 ರೂ. 6—8—0
„ 2 „ 7—8—0

ವಿಳಾಸ:—ಎಸ್. ಆರ್. ಕೃಷ್ಣ ಎಂಡು ಕೊ,
1. ತಂಬುನಾಯಕನ ಬೀದಿ, ಮದರಾಸು.

THE
Standard Bioscope Co.
MANGALORE

Eddie Polo.

The Bull's Eye

THE HIGH SPEED UNIVERSAL SERIAL IN 18 EPISODES

From 30-3-'23 to 6-4-'23.

EPISODES 10, 11, 12, 13, 14, 15, 16, 17 & 18.

Also 2 Side Films.

Every day two shows

I Show at 6-30 II Show 9 P. M.

Rates Rs. 1—0—0; 0—8—0; 0—6—0; 0—4—0; 0—2—0.

ಮಂಗಳೂರು ತಾಲೂಕು ಕೊಂಗ್ರೆಸ್ ಕಮ್ಮಿಟಿ.

ಇದೆ ತಾ. ೨೪ರಲ್ಲಿ ಕೂಡಿದ ಮ. ತಾ. ಕಾ. ಕಮಿಟಿಯ ಮಹಾ ಸಭೆಯಲ್ಲಿ ೫೧ ಮಂದಿ ಸದಸ್ಯರು ಹಾಜರಿದ್ದರು. ಅದರಲ್ಲಿ ಅಂದಾಜು ಪಟ್ಟಿಯು ಮಂಜೂರಾತಿ ಮತ್ತು ಹೊಸ ಚುನಾವಣೆಗಳನ್ನು ಮಾಡಲಾಯಿತು.

ಅಂದಾಜು ಜಮಾಪಟ್ಟಿ.

೧. ಮೊದಲನೇ ೩ ತಿಂಗಳಲ್ಲಿ ತಿ. ಸ್ವ. ಫಂಡಿಗೆ ಜಮೆ.	೩೭೦—೨—೩.
,, ,, ಮುಷ್ಟಿ ಫಂಡಿನಿಂದ ಜಮೆ.	೩೪೪—೯—೬.
ತಿ. ಸ್ವ. ಫಂಡಿಗೆ ಪಟ್ಟಣದಿಂದ ಎಪ್ರಿಲ್ ಆಖ್ಯೆರು ವರೆಗೆ ಕೊಡಿಸತಕ್ಕ ರೂ. ೩೦೦೦ರಪೈಕಿ ೩೩% ಪ್ರಕಾರ	೧೦೫೦—೦—೦
ತಿ. ಸ್ವ. ಫಂಡಿಗೆ ಹಳ್ಳಿಗಳಿಂದ ಎಪ್ರಿಲ್ ಆಖ್ಯೆರು ವರೆಗೆ ಕೊಡಿಸತಕ್ಕ ರೂ. ೩೦೦೦ಗಳ ಪೈಕಿ ೫೦% ಪ್ರಕಾರ	೧೫೦೦—೦—೦
ಮುಷ್ಟಿ ಫಂಡಿನಿಂದ ೧೦ ತಿಂಗಳುಗಳಿಗೆ	೧೬೦೦—೦—೦.
ಪಟ್ಟಣದ ೫೦೦೦ ಸದಸ್ಯರಿಂದ ¼	೬೨೫—೦—೦.
ಹಳ್ಳಿಗಳ ೧೨,೦೦೦ ,, ⅛	೬೨೫—೦—೦.
ಹಳ್ಳಿಗಳಿಂದ ಎಪ್ರಿಲ್ ನಂತರ ಸ್ವಯಂಸೇವಕರ ಬಗ್ಗೆ ಅವರು ಕೊಡಿಸತಕ್ಕ ತಿ. ಸ್ವ. ಫಂಡಿನ ಹಣದಿಂದ	೧೫೦೦—೦—೦.
ರಾಷ್ಟ್ರೀಯ ಶಾಲೆಗಳಿಗೆ ತಾಲೂಕು ಮತ್ತು ಹೊರಗಿನಿಂದ	೩೦೦೦—೦—೦.
ತಿ./ಸ್ವ. ಫಂಡಿಗೆ ಎಪ್ರಿಲ್ ನಂತರ ಪಟ್ಟಣದಿಂದ	೧೦೦೦—೦—೦.
	೯೩೧೯—೧೧—೯

ಅಂದಾಜು ಖರ್ಚು ಪಟ್ಟಿ.

ಸ್ವಯಂಸೇವಕರಿಗೆ	೨೫೮೦—೦—೦.
ತಿಲಕ ವಿದ್ಯಾಲಯಕ್ಕೆ	೨೪೮೦—೦—೦.
ಇತರ ಶಾಲೆಗಳಿಗೆ ಧನಸಹಾಯ	೧೦೮೦—೦—೦.
ಛಾಪೆ ಟಪ್ಪಾಲು ವಗೈರೆ	೩೦೦—೦—೦.
ನವಂಬರ ಡಿಸೆಂಬರ ತಿಂಗಳ ವೇತನ	೮೬೦—೦—೦.
ಸಾಲದ ಪೈಕಿ ಹಿಂದಕ್ಕೆ ಕೊಡತಕ್ಕದ್ದು	೧೦೧೦—೯—೦.
	೮೬೦೦—೦—೦.

ಮಂಗಳೂರು ತಾಲೂಕು ಕಮ್ಮಿಟಿಗೆ ಈ ಕೆಳಗಿನ ಗೃಹಸ್ಥರು ಆರಿಸಲ್ಪಟ್ಟಿರವರು. ಕೆ ಯಸ್. ಕಾರಂತ, ಖಜಾಂಚಿ; ಶ್ರೀಯುತರುಗಳಾದ ಕಾ. ಸದಾಶಿವರಾವ್, ಅಧ್ಯಕ್ಷ; ಮುಸ್ತಾ ಹಸನ ಸಾಹೇಬು, ಉಪಾಧ್ಯಕ್ಷ; ಮು. ಉಮೇಶರಾವ್, ಕಾರ್ಯದರ್ಶಿ; ಯಂ. ಮಾಧವರಾವ್; ದ. ಕೃ. ಭಾರದ್ವಾಜ; ಗಂಗೊಳ್ಳಿ ಕೃಷ್ಣರಾವ್; ಯಂ. ಯನ್. ಕಿಣಿ, ಎಲ್ಲೂರು ರಾಮರಾವ್; ಯಸ್. ಆ. ಡಿ. ಕುಂಜಾ.

ಜಿಲ್ಲಾ ಕೊಂಗ್ರೆಸು ಕಮಿಟಿಗೆ ಈ ಕೆಳಗಿನ ಹತ್ತು ಮಂದಿ ಚುನಾಯಿಸಲ್ಪಟ್ಟರು. ಶ್ರೀಯುತರುಗಳಾದ ಕಾರ್ನಾಡ್ ಸದಾಶಿವ ರಾವ್, ಉಡುಪಿ ಗೋವಿಂದ ರಾವ್, ಮುಸ್ತಾ ಹಸನ್ ಸಾಹೇಬ್, ಯಂ. ಕೆ. ವೈದ್ಯರ್, ಉಳ್ಳಾಲ ಸಂಜೀವ ರಾವ್, ಮು. ಉಮೇಶರಾವ್, ದ. ಕೃ. ಭಾರದ್ವಾಜ, ಅ. ಭೋಜರಾವ್, ಕೆ. ಯಂ. ದಾಸಪ್ರಭು, ಯಂ. ಮಾಧವರಾವ್.

ಲೆಕ್ಕದ ಮಂಜೂರಾತಿ ವ ಇತರ ವಿಷಯಗಳನ್ನು ನಿಶ್ಚಯಿಸುವುದನ್ನು ಮೇ ತಿಂಗಳಲ್ಲಿ ಕೂಡುವ ಮಹಾಸಭೆಯಲ್ಲಿ ಮಾಡಬೇಕಾಗಿ ನಿರ್ಣಯಿಸಲಾಯಿತು.

ಈ ವರೆಗೆ ಕೆಲವು ಗೃಹಸ್ಥರು ಒಟ್ಟಿಗೆ ರೂ. ೮೫ನ್ನು ತಿ. ಸ್ವ. ಫಂಡಿಗೆ ಕೊಟ್ಟಿರುತ್ತಾರೆ. ಈ ಪೈಕಿ ಶ್ರೀಯುತ ಹಟ್ಟಿಕುದುರು ನರಸಿಂಗ ರಾಯರು ರೂ. ೫೦, ಶ್ರೀಮತಿ ಹ. ಅಮ್ಮಣ್ಣಮ್ಮರು ರೂ. ೨೦. ಪಟ್ಟಣದಲ್ಲಿ ತಿ. ಸ್ವ. ಫಂಡಿಗೆ ಜಮೆಮಾಡುವುದನ್ನು ನಾಳೆಯಿಂದಲೇ ಪ್ರಾರಂಭಿಸುವುದು.

ತಾ. ೧೧, ೧೮ ವ ೨೫ರ ಮುಷ್ಟಿಫಂಡಿನ ಜಮೆ. ರೂ. ೯೧—೮—೧, ಮತ್ತು ೧೪೪ ಸೇರು ಅಕ್ಕಿ.

ಈ ವರೆಗೆ ಪಟ್ಟಣದಲ್ಲಿ ೫೬ ಮಂದಿ ಸ್ವಯಂಸೇವಕರಾಗಲು ಒಪ್ಪಿರುತ್ತಾರೆ. ತಾ. ೨೫ರಲ್ಲು ಕದ್ರಿಯಲ್ಲಿ ಸಭೆಕೂಡಿ ಅಲ್ಲಿಯ ರಾಷ್ಟ್ರೀಯ ಧರ್ಮಪಾಠಶಾಲೆಯನ್ನು ನಡೆಸುವುದಕ್ಕೂ ಕೊಂಗ್ರೆಸು ಕಮ್ಮಿಟಿಯನ್ನು ಸ್ಥಾಪಿಸುವ ಬಗ್ಗೆ ಯೋಗ್ಯ ಏರ್ಪಾಡುಮಾಡುವುದಕ್ಕೂ ಈ ಕೆಳಗಿನ ಗೃಹಸ್ಥರಿಂದ ಕೂಡಿದ ಒಂದು ಕಮ್ಮಿಟಿಯನ್ನು ಏರ್ಪಡಿಸಲಾಯಿತು.

ಶ್ರೀಯುತರುಗಳಾದ ಮುಂಡ್ಕೂರು ಶಿವರಾವ್; ಅಧ್ಯಕ್ಷ; ಉ. ರಾಮರಾವ್, ಕಾರ್ಯದರ್ಶಿ; ಯಂ. ವಿ. ಶಾಸ್ತ್ರಿ, ಯಂ. ಗೋಪಾಲಕೃಷ್ಣರಾವ್, ಕೆ. ಆರ್. ರಾಮಚಂದ್ರಾಚಾರ್, ಯಂ. ಎನ್. ಪ್ರಭು, ಎ. ಸಿ. ಅಂದ್ರಾದೆ, ಯಂ. ಡಿ. ಸೋಜ, ಟಿ. ಭೋಜರಾವ್.

ಮು. ಉಮೇಶರಾವ್.
ಕಾರ್ಯದರ್ಶಿ
ಮ. ತಾ. ಕಾ. ಕಮಿಟಿ

ಮ. ತಾ. ಕಾ. ಕಮಿಟಿ,
ತಾ. ೨೬—೩—'೨೩

ಖಾಸಗಿ ಶಾಲೆಗಳಿಗೆ ಒಂದು ಪ್ರೊವಿಡೆಂಟ ಫಂಡು ಆಯಿತು.

೧೯೨೨ನೆಯ ಇಸವಿಯ ಸೆಪ್ಟಂಬರದಲ್ಲಿ ಖಾಸಗಿ ಶಾಲೆಗಳ ಬಗ್ಗೆ ಒಂದು ಪ್ರೊವಿಡೆಂಟ ಫಂಡನ್ನು ಏರ್ಪಡಿಸುವದಕ್ಕಾಗಿ ಕೆಲವು ಸೂಚನೆಗಳನ್ನು ಎಲ್ಲರ ಅವಗಾಹನೆ ಬಗ್ಗೆ ಪ್ರಕಟಿಸಲ್ಪಟ್ಟಿತು. ಆ ಕ್ರಮಗಳು ಗವರ್ನಮೆಂಟಿನವರಿಂದ ಮಂಜೂರುಮಾಡಲ್ಪಟ್ಟು G. O. (Law Educational) No. 140 / 22 January 1923 ನೆಯ ಹುಕುಂ ಆಗಿಯದೆ.

ಈ ಕ್ರಮಗಳನ್ನು [illegible] ಏಪ್ರಿಲ್ ೧ನೆಯ ತಾರೀಕಿನಿಂದ ಜಾರಿಗೆತರುವ ಹಾಗೆ ಡೈರೆಕ್ಟರರವರಿಗೆ ಸರಕಾರದವರು ತಿಳಿಸಿದ್ದಾರೆ. ಖರಬೇಕಾದ (ಕ್ರಮವಾದ) ಎಲ್ಲಾ ಉಪಾಧ್ಯಾಯರೂ, ಉಪಾಧ್ಯಾಯಿನಿಯರೂ, ಮುನಸಿಗಳೂ, ಜಿಮ್ನಾಸ್ಟಿಕ್ ಇನ್‌ಸ್ಟ್ರಕ್ಟರರೂ ಲೈಬ್ರೇರಿಯನರೂ ಮತ್ತು ಗುಮಾಸ್ತರೂ, ೨೦ರೂ. ಅಥವಾ ಅದಕ್ಕಿಂತ ಹೆಚ್ಚು ಸಂಬಳ ಇರುವ ಮೇಲೆ ತೋರಿಸಿದ ಪ್ರತಿಯೊಬ್ಬರೂ ಈ ಫಂಡಿಗೆ ಸೇರಲೇ ಬೇಕು. ೨೦ ರೂಪಾಯಿಗಿಂತ ಕಡಿಮೆ ಸಂಬಳ ಇರುತ್ತವರು [illegible] ಬಹುದು, ಸೇರದೆ ಇರಲೂ ಬಹುದು. [illegible] ವರೂ ೩ ವರುಷಗಳ ವರೆಗೆ ಅಫಿಸಿಂಗ್ ಸಬ್ ಪ್ರೊಟಿಮು ಕೆಲಸ ಇರುವವರೂ, ಸೇರಲಾರರು. [illegible] ಇದ್ದವರು ಈ ಕ್ರಮ ಜಾರಿಗೆಬರುವಾಗ [illegible] ಇದ್ದರೆ ಸೇರುವುದು ಅಗತ್ಯವಿಲ್ಲ. ಪ್ರೊವಿಡೆಂಟ ಫಂಡು ಇದ್ದ ಶಾಲೆಗಳ ಉಪಾಧ್ಯಾಯರು ಸೇರುವ ಅಗತ್ಯವಿಲ್ಲ. [illegible] ಮುನೇಜರರು ಸೇರುವುದು ಅಗತ್ಯವಿಲ್ಲ. ಮತಸಂಬಂಧವಾದ ಉದ್ಯೋಗದವರು ಎಂದರೆ, ಪಾದ್ರಿ, [illegible] ಉಪಾಧ್ಯಾಯರಾಗಿರುವ ಸನ್ಯಾಸಿಗಳೂ, ಮುಕ್ತಿಗಳೂ ಇವರಿಗೆ ಸೇರುವ ಅವಶ್ಯವಿಲ್ಲ. ಈ ಫಂಡಿಗೆ ಪ್ರತಿ ತಿಂಗಳುಗಳ ಸಂಬಳದ ಪ್ರತಿ ರೂಪಾಯಿಗೆ ಒಂದು ಆಣೆ ಪ್ರಕಾರ ಉಪಾಧ್ಯಾಯ, ಉಪಾಧ್ಯಾಯಿನಿ ಮುಂತಾದವರು ಕೊಡಬೇಕು. ಮುನೇಜರರು ಉಪಾಧ್ಯಾಯನ ಸಂಬಳದ ಪ್ರತಿ ರೂಪಾಯಿಗೆ ಅರ್ಧ ಆಣೆ ಪ್ರಕಾರ ಕೊಡಲೆ ಬೇಕು. ಸರಕಾರವು ಅರ್ಧ ಆಣೆ ಕೊಡಲಿ ಬೇಕು. ಮುನೇಜರರು ಮತ್ತು ಉಪಾಧ್ಯಾಯರು ಪ್ರತಿ ತಿಂಗಳ ಸಂಬಳ ಬಟವಾಡೆಯಾಗುವಾಗ ಕೊಡಬೇಕು. ಉಪಾಧ್ಯಾಯರ ಸಂಬಳದಿಂದ ಈ ಹಣವನ್ನು ಕಳೆದು ಬಾಕಿ ಸಂಬಳವನ್ನು ಮಾತ್ರವೆ ಉಪಾಧ್ಯಾಯನ ಕೈಗೆ ಕೊಡಬೇಕು. ಈ ಹಣವನ್ನು ಕೂಡಲೆ ಟಪ್ಪಾಲ ಸೇವಿಂಗ್ಸ ಬೇಂಕ ಆಫೀಸಿಗೆ ಕಳುಹಿಸತಕ್ಕದ್ದು. ಅಲ್ಲಿ ಒಬ್ಬೊಬ್ಬ ಉಪಾಧ್ಯಾಯನಿಗೆ ಒಂದೊಂದು ಪುಸ್ತಕ ಪ್ರತ್ಯೇಕ ಇರಬೇಕು. ಈ ಪುಸ್ತಕವನ್ನು ಉಪಾಧ್ಯಾಯರ ಕೈಗೆ ಕೊಡಕೂಡದು. ಪುಸ್ತಕವು ಮುನೇಜರರ ಕೈಯಲ್ಲಿ ಇರಬೇಕು. ಉಪಾಧ್ಯಾಯರು ವರ್ಷಕ್ಕೊಂದಾವರ್ತಿ ಇದನ್ನು ನೋಡಿ ಲೆಕ್ಕ ಸರಿ ಇದೆಯೋ ಎಂದು ನೋಡಬೇಕು. ಡಿಸ್ಟ್ರಿಕ್ಟ ಎಜ್ಯುಕೇಶನಲ್ ಆಫೀಸರರು ಇದನ್ನು ಎಕ್ಸಟೆನ್ಸ ರೋಲಿಗೆ ಸರಿಯುಂಟೊ ಎಂದು ಮೊಖಾಬಿಲೆ ನೋಡಬೇಕು. ಸರಕಾರವು ಕೊಡುವ ಹಣವನ್ನು ಉಪಾಧ್ಯಾಯನು ವೃತ್ತಿಯನ್ನು ಬಿಡುವಾಗ ಅಥವಾ ಉಪಾಧ್ಯಾಯನು ಥಕ್ಕನೆ ಮರಣಹೊಂದ್ಯಾಗ ಕೊಡುವುದು. ಬಡ್ಡಿಯ ದರವು ಸೇಕಡಾ ೩. ಒಂದು ಶಾಲೆಯನ್ನು ಬಿಟ್ಟು ಇನ್ನೊಂದು ಶಾಲೆಗೆ ಹೋಗುವುದಾದರೆ ಪುಸ್ತಕವು ಆ ಶಾಲೆಯ ಮುನೇಜರಂಗೆ ಕಳುಹಿಸಲ್ಪಡುವುದು. ಉಪಾಧ್ಯಾಯ ಹಣವು ಆ ಊರಿನ ಸೇವಿಂಗ್ಸ ಬೇಂಕಿಗೆ ಹೋಗುವುದು. ಉಪಾಧ್ಯಾಯನಿಗೆ ೬೦ ವರ್ಷವಾದಾಗ ಈ ಹಣವು ಅವನಿಗೆ ಕೊಡಲ್ಪಡುವುದು. ಅಥವಾ ಅದರ ಮುಂಚೆ ಅವನು ಕಾಲವಾದರೆ ಅವನ ಹೆಂಡತಿ ಮತ್ತು ಚಿಕ್ಕ ಮಕ್ಕಳಿಗೆ ಕೊಡಲ್ಪಡುವುದು. ಮದುವೆಮಾಡಿಕೊಟ್ಟ ಹುಡುಗಿಯರಿಗಾಗಲೀ, ಕೆಲಸದಲ್ಲಿರುವ ಮಕ್ಕಳಿಗಾಗಲಿ ಸಿಗಲಿಕ್ಕಿಲ್ಲ. ಗತಿ ಇಲ್ಲದವನಾದರೆ ಅವನು ಮರಣಶಾಸನ ಮಾಡಿದ ಪ್ರಕಾರ ಕೊಡಬಹುದು. ಥಕ್ಕನೆ ಕಾಲವಾದರೆ ಮುನೇಜರರು ಅಥವಾ ಕೋರ್ಟಿನವರು ತಮ್ಮ ಮುನಾಸಬು ಪ್ರಕಾರ ಮಾಡಬಹುದು.

ಪತ್ರವ್ಯವಹಾರ.

ಕೇಂದಿ ಮತ್ತು ಶರಾಬು ಅಂಗಡಿಗಳು ಇನ್ನು ಮುಂದೆ ಕಾಯಂ ಆಗಿ ಒಂದೆ ಸ್ಥಳದಲ್ಲಿ ಇಡುವರೆ ಅನುಕೂಲವಾಗುವಂತೆ ಆಯಾ ಗ್ರಾಮಗಳಲ್ಲಿ ಯೋಗ್ಯವಾದ ಸ್ಥಳಗಳನ್ನು ಚುನಾಯಿಸಿ ಅಂಥ ಸ್ಥಳಗಳು 'ಲಿಕ್ಕರ ಶೋಫ್ ಪರಂಬೋಕ' ಎಂಬ ಶಿರೋನಾಮೆಗೆ ತಖ್ತೀಲು ಮಾಡಬೇಕಾಗಿಯೂ, ಅಂಥ ಸ್ಥಳಗಳನ್ನು ಆಯಾ ಗ್ರಾಮಗಳಲ್ಲಿ ವ್ಯಾಪಾರಕ್ಕೆ ಅಥವಾ ಗ್ರಾಮಸ್ಥರಿಗೆ ಯೋಗ್ಯವಾದ ಸ್ಥಳಗಳಲ್ಲಿದ್ದು, ದೇವಾರಾಧನೆಗೆ ಸಂಬಂಧಪಟ್ಟ ಸ್ಥಳ, ಶಾಲೆ, ಆಸ್ಪತ್ರೆ, ಕಾರ್ಖಾನೆ, ಜನರು ಸ್ನಾನಾರ್ಥವಾಗಿ ಉಪಯೋಗಿಸುವ, ಅಥವಾ ನೀರು ಬುಗ್ಗೆಗಳು ಇರುವ ಸ್ಥಳ ಮತ್ತು ಸಂತೆ ಮಾರ್ಕೆಟು ಅಥವಾ ವ್ಯಾಪಾರದ ಗಲಾಟೆ ಸ್ಥಳ, ಜನಸಮೂಹ ಕೂಡುವ ಬಹಿರಂಗವಾದ ಜಾತ್ರೆ, ಕೋಳಿಕಟ್ಟು ಮುಂತಾದ್ದು ನಡಿಯುವ ಸ್ಥಳಗಳಿಂದ ಕನಿಷ್ಟಪಕ್ಷಕ್ಕೆ ಅರ್ಧಮೈಲು ದೂರವಾಗಿರುವ ಸರಕಾರಿ ಸ್ಥಳಗಳನ್ನು ಚುನಾಯಿಸಿ ಅಂಥಾ ಸ್ಥಳಗಳು ಪ್ರಕೃತ ಇರುವ ಕೇಂದಿ, ಶರಾಬು ಅಂಗಡಿಗಳು ಇರುವ ಸ್ಥಳಗಳಿಂದ ಇರುವ ಫಾಸಿಲೆ ಸಿಂಪಟ್ಟಿ ತಯಾರಿಸಿ ರಿಪೋರ್ಟು ರವಾನಿಸಬೇಕೆಂತ ಜಿಲ್ಲಾ ಕಲೆಕ್ಟರ ದೊರೆಗಳವರ ಹುಕುಮಿನ ಮೇಲೆ ಈ ತಾಲೂಕಿನ ಎಲ್ಲಾ ಶಾನುಭಾಗರಿಗೆ ತಾಲೂಕು ತಹಸೀಲುದಾರರಿಂದ ಒಂದು ಸರ್ಕಿಲಾರು ಹೊರಟಿರುವುದು. ಆದರೆ ಆ ಸರ್ಕಿಲಾರಿನಲ್ಲಿ ಅಂಗಡಿಗಳು ರಸ್ತೆಯಿಂದ ಎಷ್ಟು ದೂರ ಇಡಬೇಕೆಂಬದಾಗಲಿ ಅಥವಾ ಸ್ಥಳ ಚುನಾಯಿಸಬೇಕೆಂಬದಾಗಲಿ ರಸ್ತೆ ಅಥವಾ ರೋಡ್ ಪರಂಬೋಕ ಸ್ಥಳದಲ್ಲಿ ಸ್ಥಳ ಚುನಾಯಿಸಬೇಕೆಂಬದಾಗಲೀ ಖಂಡಿತ ಇರುವುದಿಲ್ಲ. ಇಂಥಾ ಹುಕುಂ ಗುತ್ತೆ ಆರಂಭಕ್ಕೆ ಇನ್ನು ಸ್ವಲ್ಪ ದಿವಸವೆ ಮಾತ್ರ ಇರುವುದರಿಂದ ಅಷ್ಟರೊಳಗೆ ಸ್ಥಳ ಚುನಾಯಿಸಿ ಇತ್ಯರ್ಥದ ಹುಕುಂ ಸಿಕ್ಕುವುದರೊಳಗೆ ಗುತ್ತೆದಾರರಿಗೆ ಶರಾಬು ಮಾರಾಟಕ್ಕೆ ಏನು ಗತಿ? ಪ್ರಥಮ ವರುಷದ ಗುತ್ತೆದಾರರು ಚುನಾಯಿಸಿದ ಸ್ಥಳದಲ್ಲಿ ಖರ್ಚು ಮುಟ್ಟಿಸಿ ಅಂಗಡಿ ಕಟ್ಟಿಸಿದಾಗ್ಗ್ಯೂ ಬರುವ ವರುಷ ಆ ಗುತ್ತೆಯನ್ನು ಇನ್ನೊಬ್ಬರು ವಹಿಸಿಕೊಂಡರೆ ಮುಂಚಿನ ವರುಷ ಕಟ್ಟೋಣ ಕಟ್ಟಿದ ಗುತ್ತೆದಾರನಿಗೆ ಖರ್ಚು ಮಾಡಿದ ಹಣಕ್ಕೆ ಏನು ಗತಿ? ಗುತ್ತೆ ಸ್ಥಳಗಳು ಆರಿಸುವಾಗ್ಗೆ ಆಯಾ ಗ್ರಾಮದ ಶ್ಯಾನುಭಾಗರು ಆರಿಸುವುದಾಗ್ಗ ಆ ಬಗ್ಗೆ ಗ್ರಾಮಸ್ಥರ ಸಭೆಮಾಡಿ ಆ ಸಭೆಗೆ ಆ ಗ್ರಾಮದಲ್ಲಿ ಗುತ್ತೆಮಾಡಿದವರನ್ನೂ, ಮುಕ್ತೇಸರರನ್ನೂ, ಗ್ರಾಮಸ್ಥರನ್ನೂ ಬರಮಾಡಿ ಸ್ಥಳವನ್ನು ಆರಿಸಿದರೆ ಕುಡಿಕರಿಗೂ ಸರಕಾರಕ್ಕೂ ಪ್ರಯೋಜನ ಅಧಿಕಾರಿಗಳು ಇಂಥಾ ಹುಕುಂ ಜಾರಿಮಾಡುವುದು ಉತ್ತಮ.

ಪುತ್ತೂರು 17—3—'23 } ಗುತ್ತೆದಾರ.

ಮದ್ರಾಸ್ ನ್ಯಾಯವಿಧಾಯಕ ಸಭೆಗೆ ದಕ್ಷಿಣ ಕನ್ನಡದಿಂದ ಆರಿಸಲ್ಪಡಬೇಕಾದ ಮೆಂಬರರು.

ಅಯ್ಯಾ ಪತ್ರಕರ್ತರೇ,

ಬರುವ ನ್ಯಾಯವಿಧಾಯಕ ಸಭೆಗೆ ಮೆಂಬರರನ್ನು ಚುನಾಯಿಸುವ ಕೋಲಾಹಲವು ಇತರ ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಮಾತ್ರ ಎಲ್ಲಾ ಶಾಂತಸ್ಥಿತಿಯಲ್ಲಿದೆ. ನಮ್ಮವರು ನ್ಯಾಯವಿಧಾಯಕಸಭೆಯ ಮೆಂಬರಿಕೆಯು ಒಂದು ಬಹುಮಾನ ಮಾತ್ರವಲ್ಲದೆ ಅದರಿಂದ ಯಾವ ಉಪಯೋಗವೂ ಇಲ್ಲ ಎಂಬ ಅಭಿಪ್ರಾಯದಲ್ಲಿ ಈ ವರೆಗೆ ಇದ್ದಾರೆ. ಇದು ನಿಜವಾದರೆ ನಮಗೆ ರಿಫೋರ್ಮ್ಸ್‌ಗಳಿಂದ ಏನೊಂದು ಕಾರ್ಯಸಾಧನೆಗೆ ಮಾರ್ಗವಿಲ್ಲ ಎಂದಾಯಿತು. ಆದರೆ ನಿಜವಾಗಿ ಶೋಧಿಸಿದಲ್ಲಿ ತೆರಿಗೆ ಹಂದಾಯ ವಸೂಲಿ ಮತ್ತು ಖರ್ಚಿನ ಇಲಾಖೆಗಳನ್ನು ನಮ್ಮ ಸುಧಾರಿಗೆ ಕೊಡದ ಇದ್ದರೂ ತಕ್ಕಮಟ್ಟಿಗೆ ಸಾಧಾರಣ ಜನರ ಅಭಿಪ್ರಾಯಗಳು ಈ ರೀತಿ ಉಂಟೆಂತ ಸರಕಾರದವರಿಗೆ ವ್ಯಕ್ತಪಡಿಸಲಿಕ್ಕೆ ಸಾಕಷ್ಟು ಅನುಕೂಲತೆ ಉಂಟೆಂತ ನಾನು ಅಭಿಪ್ರಾಯಪಡುತ್ತೇನೆ. ಸಲೆಕ್ಟ ಕಮಿಟಿಯವರು ಕೆಳಗಿನ ಜಿಲ್ಲೆಗಳಲ್ಲಿ ಇನ್ನು ಮುಂದಿನ ಸೆಟ್ಟಮೆಂಟು ನಲ್ಲಿ ಹಂದಾಯ [illegible] ನ್ಯಾಯವಿಧಾಯಕ ಸಭೆಯವರ ಬಹುಮತದ ಅನುಮತಿಪಡಕೊಳ್ಳಬೇಕೆಂತ ವಿಧಿಸಿದ್ದಾರೆ. ಇದನ್ನು ಜಾರಿಗೆ ತರುವ ವಿಷಯದಲ್ಲಿ ಸರಕಾರದವರು ಹಿಮ್ಮೆಟ್ಟಿದ್ದಾರೆ. ಎಲ್ಲಾ ಜಿಲ್ಲೆಯ ಮೆಂಬರರು ಒಟ್ಟುಕೂಡಿ ಈ ನಿಬಂಧನೆಯನ್ನು ಜಾರಿಗೆಕೊಂಡರೆ ಮುಂದೆ [illegible] ಸರಕಾರದವರು ಈಗಲೆ ಕೆಲವು ಜಿಲ್ಲೆಗಳಲ್ಲಿ ಸೆಟ್ಟಮೆಂಟನ್ನು ಮಾಡಬೇಕೆಂದು ಪ್ರಯತ್ನದಲ್ಲಿದ್ದಾರೆ. [illegible] ವಿಚಾರಗಳೆಲ್ಲಾ ಖಾಲಿ ಎಂದರೆ, ಮುಂದೆ ಬರುವ ಸಭೆಯ ಎದುರಿಗೆ ಬರುವದು. ಅಗ್ಗೆ ನಮ್ಮ ಕಡೆಯಿಂದ ಬಲವಾಗಿ ಪ್ರತಿಪಾದಿಸುವ ಬಗ್ಗೆ ಮತ್ತು ಪ್ರೊಟೆಸ್ಟ ರೆಪ್ರೆಜೆಂಟೇಶನಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಇತರ ಜಿಲ್ಲೆಯ ಮೆಂಬರರ ಸಹಾಯಪಡಕೊಳ್ಳಬೇಕು. ಈ ಎಲ್ಲಾ ವಿಷಯಗಳಿಗಾಗಿ ನಮಗೆ ಇತರ ಸಂಗತಿಗಳಲ್ಲಿ ಭಿನ್ನ ಅಭಿಪ್ರಾಯಗಳಿದ್ದಾಗ್ಯೂ ನಾವೆಲ್ಲರೂ ಒಟ್ಟಾಗಿ ಒಬ್ಬರನ್ನೆ ಚುನಾಯಿಸುವುದು ಅತಿ ಅಗತ್ಯ ಉಂಟು. ಪ್ರಕೃತ ಸರಕಾರದವರು ಪ್ರತಿ ಒಂದು ಇಲಾಖೆಯನ್ನು ವ್ಯಾಪಾರದ ರೀತಿಯಲ್ಲಿ ನಡಿಸುತ್ತಾರೆ. ಜನರಿಗೆ ಒದಗುವ ಕಷ್ಟಗಳು ಮುಖ್ಯವಲ್ಲ. ಸರಕಾರಕ್ಕೆ ಆದಾಯ ಏನು ಬಂದೀತೆಂತ ಎಣಿಸುವುದೆ ಮುಖ್ಯ ಎಂಬ ಭಾವನೆಯಲ್ಲಿದ್ದಾರೆ. ಇದನ್ನು ಈಗಿನಿಂದಲೇ ನಾವು ತಿದ್ದುಪಡಿಮಾಡಿಸಲಿಕ್ಕೆ ಪ್ರಯತ್ನಪಡದಿದ್ದರೆ ಇನ್ನು ಮುಂದೆ ಸಂಕಷ್ಟಗಳು ಬರುವವು. ಈ ಎಲ್ಲಾ ಸಂಗತಿಗಳನ್ನು ಪರ್ಯಾಲೋಚಿಸಿ ಈ ಮೊದಲು ನಮ್ಮ ಕಡೆಯ ಮೆಂಬರರು ಮಾಡಿದ ಸಾಹಸಗಳನ್ನು ನೆನಪಿಗೆ ತಂದರೆ ನಾವು ಈ ಸರ್ತಿಯಲ್ಲಿ ಮದ್ರಾಸಿನಲ್ಲಿ ವಾಸ್ತವಿಸಿರುವ ಒಬ್ಬರನ್ನು ಚುನಾಯಿಸಬೇಕೆಂತ ನನ್ನ ಅಭಿಪ್ರಾಯವಿದೆ.

ಒಬ್ಬ ಪತ್ರಲೇಖಕ.

'ದಕ್ಷಿಣಕನ್ನಡ ಗೌಡ ವಿದ್ಯಾಸಂಘ'ದ ಮೆಂಬರರಿಗೊಂದು ವಿನಂತಿ ಪತ್ರ.

ಅಯ್ಯಾ,

'ದಕ್ಷಿಣಕನ್ನಡ ವಿದ್ಯಾಸಂಘ'ಕ್ಕೆ ವಾಗ್ದಾನಮಾಡಿದ ಹಣವನ್ನು ಪ್ರೆಸಿಡೆಂಟರವರು ಮತ್ತು ಕಾರ್ಯದರ್ಶಿಯವರು ವಸೂಲುಮಾಡಿ ರಶೀದಿ ಕೊಡಬೇಕೆಂಬ ನಿರ್ಣಯವಿತ್ತಷ್ಟೆ! ಆದರೆ ಆ ನಿರ್ಣಯ ಪ್ರಕಾರ ಕಳೆದ ಎರಡು ವರುಷಗಳಿಂದ ವಸೂಲಿಕೆಲಸವು ಅಷ್ಟೊಂದು ಯಶಸ್ವಿಯಾಗದುದರಿಂದ ಇದೇ ಕಳೆದ ಫೆಬ್ರವರಿ ತಿಂಗಳ ತಾರೀಕು ೧೭ರಲ್ಲು ಪಂಜ ಬೋರ್ಡುಶಾಲೆಯಲ್ಲಿ ಕೂಡಿದ ವರುಷಾವಧಿ ಮಹಾಸಭೆಯಲ್ಲಿ ಈ ಎರಡು ಜನ ಮಹನೀಯರಲ್ಲದೆ ಈ ಸಂಘದ ನಾಲ್ವರು ಪಂಚಾಯತ ಮೆಂಬರರಿಗೆ ಸಹ ಸಂಘಕ್ಕೆ ವಾಗ್ದಾನಮಾಡಿದ ಮಹನೀಯರಿಂದ ಹಣ ವಸೂಲು ಮಾಡಿ ರಶೀದಿಕೊಡುವ ಅಧಿಕಾರ ಕೊಟ್ಟದಲ್ಲದೆ ಪ್ರತಿ ಮೂರು ತಿಂಗಳಲ್ಲಿ ಸೇರತಕ್ಕ ಪಂಚಾಯತಿ ಸಭೆಗೆ ವಸೂಲು ಆದ ರೂಪಾಯಿ ಮತ್ತು ರಶೀದಿ ಪುಸ್ತಕವನ್ನು ಪರಿಶೀಲನೆ ಬಗ್ಗೆ ಸಭೆಯಲ್ಲಿ ಹಾಜರುಮಾಡಬೇಕೆಂಬದಾಗಿಯೂ, ಆಯಾ ಪ್ರಾಂತದ ಮೆಂಬರರಿಂದ ಹಣವನ್ನು ವಸೂಲುಮಾಡುವುದಕ್ಕೆ ಇಂತಿಂಥ ಮೆಂಬರರು ಎಂದು ನಿರ್ಣಯ ಕೂಡ ಆಗಿರುವುದು.

ಆದುದರಿಂದ ಈ ವಿಷಯದಲ್ಲಿ ಸ್ವಜಾತಿಯ ಅಭಿಮಾನಿಗಳು ತಾವು ವಾಗ್ದಾನಮಾಡಿದ ಮೊಬಲಗು ವಸೂಲುಕೊಡುವುದಲ್ಲದೆ ಆಯಾ ಪ್ರಾಂತದಲ್ಲಿ ವಸೂಲು ಬಗ್ಗೆ ಬರುವ ಗೃಹಸ್ಥರಿಗೆ ತಕ್ಕ ಸಹಾಯವನ್ನು ಕೊಟ್ಟು ಪ್ರೋತ್ಸಾಹಿಸಿ ಸಂಘವನ್ನು ವೃದ್ಧಿಪಡಿಸಿ ಸತ್ಕೀರ್ತಿಗೆ ಪಾತ್ರರಾಗಬೇಕಾಗಿ ಹಾರೈಸುವ ಸಂಘದ,

ಹಿತೈಷಿ.

ಅಯ್ಯಾ,

'ಶಂಕರವಿಟ್ಠಲ್ ಮೋಟರ್ ಸರ್ವಿಸು' ಮಂಗಳೂರಿಂದ ಮಡಿಕೇರಿಗೆ ಓಡಲಿಕ್ಕೆ ಪ್ರಾರಂಭವಾದುದರಿಂದ ಪ್ರಯಾಣಿಕನೇಕರಿಗೆ ಅನುಕೂಲವಾದುದಲ್ಲದೆ, ವಿಶೇಷ ವ್ಯವಹಾರ ವಹಿವಾಟು ನಡಿಸುವವರಿಗೆಲ್ಲಾ ಉತ್ತಮ ಸೌಕರ್ಯವನ್ನು ಒದಗಿಸಿದ ಶ್ರೇಯಸ್ಸು ಕೂಡ ಮಾಲಿಕರಿಗೆ ದೊರಕುವಂತಿತ್ತು. ಆದರೆ ಇತ್ತೀಚೆಗೆ ಬಸ್ಸರ್ವೀಸ್ ಸರಿಯಾಗಿ ನಡೆಯದೆ ಒಂದು ಸಣ್ಣ ಕಾರು ಮಾತ್ರ ಮಡಿಕೇರಿಯಿಂದ ಸಂಪಾಜೆ ವರೆಗೆ ಚಲಾವಣೆಯಲ್ಲಿದೆ. ಆದ್ದರಿಂದ ಕಾಫಿ ಸಾಗಿಬರುವ ಈ ಸಮಯದಲ್ಲಿ ಕೊಡಗಿನಿಂದ ಹೆಚ್ಚಾಗಿ ಮಂಗಳೂರು ವಗೈರೆ ಸ್ಥಳಗಳಿಗೆ ತ್ವರಿತದಿಂದ ಹೋಗುವ ಪ್ರಯಾಣಿಕರನೇಕರು ಸ್ಥಳ ಸಂಕೋಚದಿಂದ ಟಿಕೇಟು ದೊರೆಯದೆ ಕಾರನ್ನು ಕಾದು ಕಾರ್ಯಭಂಗ ಪಡುತ್ತಿರುವರು. ಇನ್ನಾದರೂ ಈ ಕೊರತೆಯನ್ನು ಹೋಗಲಾಡಿಸಿ ಬಸ್ಸರ್ವೀಸನ್ನೇ ಇಡುತ್ತಿದ್ದರೆ ಪ್ರಯಾಣಿಕರಿಗನುಕೂಲವೂ ಮಾಲೀಕರಿಗೆ ಲಾಭವೂ ದೊರೆಯುತ್ತಿತ್ತು.

ಪ್ರಯಾಣಿಕ.

ನರಯಜ್ಞದಿಂದ ಮಳೆ ತರಿಸುವುದು.

ಹೆಸ್ಪೇನಿಯಾದ ರಾಜಧಾನಿ ಬೊಲಿವಿಯಾ ಎಂಬಲ್ಲಿಯ ಮೂಲನಿವಾಸಿಗಳಲ್ಲಿ ಅನಾವೃಷ್ಟಿಯಾಗಲು ಮಳೆ ತರಿಸುವುದೊಂದು ವಿಚಿತ್ರ ಪದ್ಧತಿಯುದೆ. ಮೊನ್ನೆ ವರೆಗೆ ಮಳೆ ಬೀಳದ್ದರಿಂದ ಜನರು ಗಾಬರಿಯಾಗಿ ತಮ್ಮ ಪರ್ಜನ್ಯ ಪರೀಕ್ಷಕನಿಗೆ ಕೇಳಿದರು. ಆತನು ಪದ್ಧತಿಯಂತೆ ನರಮೇಧ ಮಾಡಬೇಕೆಂದು ಹೇಳಿದನು. ಆತನ ವಾಣಿನ ಚಾರಿಯ ಬಂತು. ಸಂತೋಷದಿಂದ ತನ್ನ ಮಗನ ಆಹುತಿಕೊಟ್ಟನು. ಮಂತ್ರತಂತ್ರಗಳಾಗಿ ಚಿತೆಯಲ್ಲಿ ಆ ಹುಡುಗನ ಆಹುತಿ ಹಾಕುವ ವರೆಗೆ ಸ್ವಲ್ಪ ಒಣಹವೆಯಿತ್ತು. ಆದರೆ ಆ ನರಯಜ್ಞವಾದ ಕೂಡಲೆ ಆವರೆಗೆಂದೂ ಆಗದಿದ್ದಷ್ಟು ಮಳೆಯಾಯಿತು. ಹೀಗೆ ಹಿಂದಕ್ಕೆ ಮಳೆ ಇಲ್ಲದ್ದಾಗ ನರಯಜ್ಞಮಾಡಿ ಮಳೆ ತರಿಸಿದ್ದರು. ಪಟ್ಟಣದ ಪೋಲೀಸರಿಗೆ ಈ ಮಾತು ತಿಳಿಯಲು ಅಲ್ಲಿ ಬಂದು ಮನುಷ್ಯವಧಮಾಡಿದ ಅಪರಾಧವೆಂದು ಜನರನ್ನು ಹಿಡಿಯತೊಡಗಿದರು. ಅವರು ತಮ್ಮ ಕ್ರಿಯೆಯಲ್ಲಿ ಶ್ರದ್ಧೆಯುಳ್ಳವರಾದುದರಿಂದ ಪೋಲೀಸರಿಗೆ ಎಲ್ಲ ವಿವರಿಸಿ ತಾವೇ ಈ ಕೃತಿ ಮಾಡಿದವರೆಂದು ಪೋಲೀಸರ ವಶರಾದರು. ೬೦ ಜನರನ್ನು ಸೆರೆಹಿಡಿದಿದ್ದಾರೆ.

[ಕರ್ಮವೀರ]

ಸ್ತ್ರೀ ಕುಂಭಕರ್ಣ.

ಯುರೋಪ ಖಂಡದಲ್ಲಿ ಉತ್ತರಕ್ಕೆ ಸ್ವೀಡನ ದೇಶವಿದೆ. ಅದರ ಮುಖ್ಯ ಪಟ್ಟಣವು ಸ್ಟೋಕ ಹೋಮ. ನೆರೆಯ ಗ್ರಾಮದಲ್ಲಿ ಒಂದು ಅದ್ಭುತ ಸ್ತ್ರೀಯೊರುವಳು. ಇವಳು ಸುಮಾರು ೧೩ ವರ್ಷ ಪ್ರಾಯದವಳಿದ್ದಾಗ ಶಾಲೆಗೆ ಓದುಬರಹ ಕಲಿಯಲಿಕ್ಕೆ ಓರಿಗೆಯವರ ಕೂಡೆ ಹೋಗಿದ್ದಳು. ಒಂದಾನೊಂದು ದಿನ ಹುಡುಗಿಯು ಓದುತ್ತಿರುವಾಗ, ಥಕ್ಕನೆ ಕಣ್ಣುಮುಚ್ಚಿ ನಿದ್ರೆಗೈದಳು. ಮಾಸ್ತರರು ಹುಡಿಗಿಯನ್ನು ಎಬ್ಬಿಸಿ, ಪಾಠ ಕಲಿಸಬೇಕೆಂದು ಪ್ರಯತ್ನಮಾಡಿದರು. ಏನು ಮಾಡಿದರೂ ಹುಡುಗಿಯು ಎಚ್ಚರ ತಿಳಿಯಲಿಲ್ಲ. ಕಟ್ಟಕಡೆಗೆ ಹುಡುಗಿಯನ್ನು ಎತ್ತಿ ಮನೆಗೆ ಕಳುಹಿಸಿದರು. ಹುಡುಗಿಯು ಏಳಲು, [illegible] ಕಾಲುಮಾನದಿಂದ ಅವಳ ವಯಸ್ಸು [illegible] ತಿಳಿಯುತ್ತದೆ. ೩೨ ವರುಷ ನಿದ್ರೆಮಾಡಿದರೂ, ಹುಡುಗಿಗೆ ಬರೇ ರಾತ್ರಿಗೆ ಮಲಗಿ, ಬೆಳಿಗ್ಗೆ ಎದ್ದಂತಾಯಿತಂತೆ! ಎಂಥ, ಅದ್ಭುತ ಚಮತ್ಕಾರವಲ್ಲವೇ! [illegible] ಕೆಲವು ಕಾಲದಿಂದಿದ್ದಾರೆ.

ಕಾನಡಾ ವೃತ್ತ.

ವಿದೇಶ ವರ್ತಮಾನ.

ಮಿ| ಲೆನಿನರು:—ರುಷ್ಯ ದೇಶದ ಪ್ರಸಿದ್ಧ ಮುಖಂಡರಾದ ಮಿ| ಲೆನಿನರ ಆರೋಗ್ಯವು ಬಹಳ ಕಠಿಣ ಸ್ಥಿತಿಯಲ್ಲಿದೆ.

ಜರ್ಮನಿ:—ಜರ್ಮನರು ಪುನಃ ಈಗ ಫ್ರೆಂಚರೊಡನೆ ಒಪ್ಪಂದ ಮಾಡಿಕೊಳ್ಳಲಿಕ್ಕೆ ಹವಣಿಸುತ್ತಿದ್ದಾರೆಂದು ತಿಳಿಯುತ್ತದೆ. ಇದರ ನಿಜಾಂಶವು ಈ ವರೆಗೆ ತಿಳಿದುಬರುವುದಿಲ್ಲ.

ಒಳದೇಶ ವರ್ತಮಾನ.

ಅಸಹಕಾರವನ್ನು ಹತೋಟಿಗೆ ತರುವ ಉಪಾಯ:—ಅಸಹಕಾರಿಗಳವರದಲ್ಲಿ ಸೇರಿದ ವ್ಯಕ್ತಿಗಳ ಅಥವಾ ಹಳ್ಳಿಗಳ ಗದ್ದೆಗಳಿಗೆ ಎರಡನೆ ಬೆಳೆಯ ಬಗ್ಗೆ ನೀರನ್ನು ೩ರು ವರುಷಗಳ ವರೆಗೆ ಒದಗಿಸಲಿಕ್ಕಿಲ್ಲ ಎಂಬ ಹುಕುಮನ್ನು ರಘುಲ್ಲಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಪ್ರಕಟಿಸಿರುವರು. ಕಳೆದ ವರುಷ ಸಹ ಇದೆ ಸವಾಣೆಯ ಹುಕುಮನು ಪ್ರಕಟಿಸಿತ್ತೆಂದು ತಿಳಿದುಬರುತ್ತದೆ.

ಶ್ರೀಯುತ ಸಿ. ಆರ್. ದಾಸರು:—ಕಳೆದ ಶುಕ್ರವಾರ ಲಾಹೋರ ರಾಷ್ಟ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಬಿರುದುಗಳನ್ನು ಕೊಡುವ ಸಮಾರಂಭವು ದೇಶಬಂಧು ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುತ ದಾಸರು ನೆರದ ವಿದ್ಯಾರ್ಥಿಗಳಿಗೆ ಹಿತೋಪದೇಶವನ್ನು ಮಾಡುವ ಭಾಷಣದಲ್ಲಿ ಕೆಳಗಿನ ವಿಷಯಗಳನ್ನು ತಿಳಿಸಿದರು. ಪ್ರಥಮದಲ್ಲಿ ಅವರು ಹಿಂದೂಸ್ಥಾನದಲ್ಲಿ ಪ್ರಚಾರಕ್ಕೆ ಬಂದ ಇಂಗ್ಲೀಷ ವಿದ್ಯಾಭ್ಯಾಸದ ಮೂಲತಂತ್ರಯನ್ನು ತಿಳಿಸಿ, ಅನಂತರ ಆ ವಿದ್ಯಾಭ್ಯಾಸವು ಹಿಂದುಗಳಲ್ಲಿದ್ದ ಸ್ವಾತಂತ್ರ್ಯಭಾವನೆಯನ್ನು ಕುಂದಿಸಿದ ವಿಷಯವನ್ನು ಹೇಳಿ, ಬ್ರಿಟಿಷರು ಹಿಂದುದೇಶವನ್ನು ಸ್ವಾಧೀನಪಡಿಸಿಕೊಳ್ಳುವ ಮೊದಲು ಈ ದೇಶದ ವಿದ್ಯಾಭ್ಯಾಸವು ಹೇಗೆ ನಡಿಯುತ್ತಿತ್ತೆಂಬದನ್ನು ವಿವರಿಸಿ, ಅವರು ತಮ್ಮ ವಿದ್ಯಾಭ್ಯಾಸವನ್ನು ಹರಡಿಸಿದುದರಿಂದ ಮುಂಚಿನ ವಿದ್ಯಾಸಂಸ್ಥೆಗಳು ಹೇಗೆ ಅದೃಶ್ಯವಾದವೆಂಬುದನ್ನು ತಿಳಿಸಿ, ನಮ್ಮ ಆಳರಸರು ಈಗ ನಮಗೆ ಕೊಡುತ್ತಿರುವ ವಿದ್ಯಾಭ್ಯಾಸವನ್ನು ಅವರು ತಮ್ಮ ಆಳಿಕೆಯು ಸುರಕ್ಷಿತವಾಗುವಂತೆ ಮಾಡುವುದಕ್ಕಾಗಿ ಪ್ರಾರಂಭಿಸಿದರಲ್ಲದೆ ನಮ್ಮ ಒಳ್ಳಿತಿಗಾಗಿ ಅಲ್ಲವೆಂದು ಹೇಳಿ, ವಿದ್ಯಾರ್ಥಿಗಳೆಲ್ಲರೂ ತಮ್ಮ ಆತ್ಮಶಕ್ತಿ ಮಾತೃಭೂಮಿಯ ಮೆಚ್ಚುಗೆಯಾಗುವ ರೀತಿಯಲ್ಲಿ ವರ್ತಿಸಬೇಕಾಗಿ ಬುದ್ಧಿವಾದವನ್ನು ಕೊಟ್ಟು ತಮ್ಮ ಭಾಷಣವನ್ನು ಕೊನೆಗಾಣಿಸಿದರು.

ಕೋಟವಾಲಜೀಯವರ ಮೈಸೂರು ಸಂದರ್ಶನ:—'ಹಿಂದಿ' ಪ್ರಚಾರಕಾರ್ಯಕ್ಕಾಗಿ ಶ್ರೀಯುತ ಕೋಟವಾಲಜೀಯವರು ತಮ್ಮ ಸಹೋದರ ಕೋಟವಾಲಜೀಯವರೊಡನೆ ಬೆಂಗಳೂರಿಗೆ ಹೋಗಿದ್ದರು. ಸ್ಥಳೀಯ ಕೊಂಗ್ರೆಸ ಕಮ್ಮಿಟಿಯವರ ಆಶ್ರಯದಲ್ಲಿ ಇವರ ಭಾಷಣಕ್ಕೆ ಏರ್ಪಾಡನ್ನು ಮಾಡಿತ್ತು. ಸಭೆಕೂಡಿ ಭಾಷಣವಾಗುವ ಮೊದಲು ಸೆಕ್ರೆಟರಿಗಳಾದ ಮಿ| ಕೃಷ್ಣಸ್ವಾಮಿರಾವ್ ಮತ್ತು ಶ್ರೀಯುತಕೋಟವಾಲಜೀಯವರ ಮೇಲೆ ಸೆಕ್ಷನ್ ೧೪೪ರ ಮೇರೆಗೆ ಹುಕುಂ ಕೊಡೋಣಾಯಿತು. ಇಬ್ಬರು ಕೋಟವಾಲಜೀಯವರು ಇದ್ದುದರಿಂದ ಈ ಹುಕುಂ ಯಾರ ಮೇಲೆ ಜಾರಿಯಾಗತಕ್ಕದೆಂದು ಸ್ಪಷ್ಟಪಡಿಸಲ್ಪಡದ ಕಾರಣ ಕೋಟವಾಲಜೀಯವರು ಅದನ್ನು ಸ್ವೀಕರಿಸಲು ನಿರಾಕರಿಸಿದರು.

ಮುಂಬಯಿ:—ಕಳೆದ ಶುಕ್ರವಾರ ಬೆಳಿಗ್ಗೆ ೬-೧೦ ಘಂಟೆಗೆ ಬ್ರೂಶ್ ಸ್ಟ್ರೀಟಿನ ಒಂದು ಕಟ್ಟೋಣದ ಒಂದು ಕೋಣೆ ಮೊದಲಾದ್ದು ಕುಸಿದುಬಿದ್ದು ಅದರಲ್ಲಿ ಕೆಲವು ಮಂದಿ ಜನರು ಹುಗಿಯಲ್ಪಟ್ಟರು.

ಬೆಂಗಳೂರು:—ಬೆಂಗಳೂರ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟ ಮಿ| ಸುಬ್ಬಯ್ಯನವರು ಸ್ವರ್ಗಸ್ಥರಾದ್ದರಿಂದ ಈ ಪದವಿಗೆ ಬೇರೊಬ್ಬರನ್ನು ಆರಿಸುವ ಚುನಾವಣೆಯು ನಡೆದು ಮಿ| ಬಿ. ಅಬ್ದುಲ್‌ರಹಿಮಾನ್‌ರವರಿಗೆ ಅಧಿಕ ವೋಟುಗಳು ದೊರಕಿದ್ದರಿಂದ ಇವರು ಆರಿಸಲ್ಪಟ್ಟಿರುವರು.

ಸ್ವರಾಜ್ಯ ಪ್ರಾಪ್ತಿಯ ಕಾಲ:—೧೯೨೩ನೇ ವರುಷದ ಕೊನೆಯೊಳಗೆ ಮಹಾತ್ಮಾ ಗಾಂಧಿಯವರಿಗೆ ಬಿಡುಗಡೆಯಾಗುವುದೆಂದೂ, ೧೯೨೪ನೇ ವರುಷದಲ್ಲಿ ಸ್ವರಾಜ್ಯವು ತಪ್ಪದೆ ಪ್ರಾಪ್ತವಾಗುವುದೆಂದೂ ಗಾಂಧಿಯವರ ಜಾತಕವನ್ನು ಪರಿಶೋಧಿಸಿ ಎನ್. ಯಂ. ಮಯಾಸ್ ಬಿ. ಎ; ಎಲ್. ಎಲ್. ಬಿ. ಯವರು ತಮ್ಮ ದಿವ್ಯವಾಣಿ ಎಂಬ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. [ಮೈಸೂರು ಸ್ಟಾರ್.]

ಅಲಹಾಬಾದ ಮುನ್ಸಿಪಾಲಿಟಿ:—ಅಲಹಾಬಾದಿನಲ್ಲಿ ನಡೆದ ಮುನ್ಸಿಪಲ್ ಚುನಾವಣೆಯಲ್ಲಿ ಕೊಂಗ್ರೆಸ್ ಮತ್ತು ಖಿಲಾಫತ್ ಪಕ್ಷದವರು ಅಧಿಕಸಂಖ್ಯಾಕವಾಗಿ ಆರಿಸಲ್ಪಟ್ಟಿರುತ್ತಾರೆ.

ಶ್ರೀಯುತ ವಲ್ಲಭಭಾಯ್ ಪಟೇಲ ಮತ್ತು ಶೇಟ್ ಜಮುನಾಲಾಲ ಬಾಜಜ:—ಕೊಂಗ್ರೆಸ್ ಕಾರ್ಯಪ್ರಚಾರಕ್ಕಾಗಿ ಶ್ರೀಯುತ ವಲ್ಲಭಭಾಯ್ ಪಟೇಲ ಮತ್ತು ಜಮುನಾಲಾಲ ಬಾಜಜರು ಕುಟುಂಬ ಸಹಿತ ಮಾದ್ರ ರಂಗೂನಿಗೆ ಹೊರಟುಹೋಗಿರುವರು. ಇವರು ಎಪ್ರಿಲ್ ತಿಂಗಳ ಮಧ್ಯಭಾಗದಲ್ಲಿ ಹಿಂತಿರುಗಿ ಮಹಾರಾಷ್ಟ್ರಪ್ರಾಂತವನ್ನು ಸಂದರ್ಶಿಸುವರು.

ಅಲವಾಹಿದ್ ಪತ್ರಿಕೆಯ ಸಂಪಾದಕರು:—ರಾಷ್ಟ್ರೀಯ ಪಕ್ಷದ ದಿನಚರಿ ಪತ್ರಿಕೆಯಾದ ಕರಾಚಿಯ 'ಅಲವಾಹಿದ್' ಪತ್ರಿಕೆಯ ಸಂಪಾದಕ ಮಿ| ನಬಿಬಕ್ಸ್ ಎಂಬವರನ್ನು ಸೆಕ್ಷನ್ ೧೨೪ (ಎ) ಮತ್ತು ೧೫೩ರ ಮೇರೆಗೆ ಕಳೆದ ಶುಕ್ರವಾರ ಕೈದುಮಾಡಿದೆ.

ಹೈದರಾಬಾದಿನ ಹಿಂದೂ ಪತ್ರಿಕೆಯ ಎಂಟನೆಯ ಸಂಪಾದಕರು:—ಕಳೆದ ಸೆಪ್ಟಂಬರ ತಿಂಗಳಲ್ಲಿ ಜೈಲಿನಿಂದ ಹೊರಗೆ ಬಂದ ಹೈದರಾಬಾದಿನ ಹಿಂದೂ ಪತ್ರಿಕೆಯ ಸಂಪಾದಕ ಮಿ| ಜೋಯಿಸ್ ರಾಮವಲೀಚಾ ಎಂಬವರನ್ನು ಕಳೆದ ಜನವರಿ ತಾರೀಕು ೫ರಲ್ಲಿ ಸಕ್ಕರ್ ಜಿಲ್ಲೆಯ ದಕ್ಷ್ಯಾನ್ ಎಂಬಲ್ಲಿ ರಾಜದ್ರೋಹಕರವಾದ ಭಾಷಣವನ್ನು ಮಾಡಿದರೆಂಬ ಆರೋಪದ ಮೇರೆ ಕೈದುಮಾಡಿದೆ.

ಮುನ್ಸಿಪಲ್ ಕೌನ್ಸಿಲರುಗಳ ಚುನಾವಣೆ:—ಸಂಯುಕ್ತಸಂಸ್ಥಾನದ ಅನೇಕ ಕಡೆಗಳಲ್ಲಿ ಮುನ್ಸಿಪಲ್ ಕೌನ್ಸಿಲರುಗಳ ಚುನಾವಣೆಯು ಆಯಿತು. ಎಲ್ಲೆಲ್ಲ ಕೊಂಗ್ರೆಸ್ ಪಕ್ಷದವರು ಈ ಚುನಾವಣೆಗಳಲ್ಲಿ ವಿಜಯಿಗಳಾಗಿರುವರೆಂದು ತಿಳಿದುಬರುತ್ತದೆ. ಅಲಹಾಬಾದ ಮುನ್ಸಿಪಲ್ ಕೌನ್ಸಿಲಿಗೆ ಶ್ರೀಯುತ ಪಂಡಿತ ಜವಹರಲಾಲನೇಹರು ಮತ್ತು ಶ್ರೀಯುತ ಪಿ. ಕೆ. ಮಾಲವೀಯ ಇವರೂ ಆರಿಸಲ್ಪಟ್ಟಿರುವರು.

ಅಹಮ್ಮದಾಬಾದ ಗಿರಣಿಯ ಕೂಲಿಗಳು:—ಇಲ್ಲಿಯ ನಾಲವತ್ತು ಗಿರಣಿಗಳ ಮಾಲೀಕರು ಕೂಲಿಯ ದರವನ್ನು ಶೇಕಡಾ ೨೦ರಂತೆ ತಗ್ಗಿಸುವುದರಲ್ಲಿದ್ದುದರಿಂದ ಗಿರಣಿಯ ಕೂಲಿಗಳು ಬರುವ ಎಪ್ರಿಲ್ ತಾರೀಕ ೧ರಿಂದ ಮುಷ್ಕರವನ್ನು ಹಿಡಿಯಬೇಕಾಗಿ ನಿಶ್ಚಯಿಸಿರುವರು. [illegible] ವ್ಯವಸ್ಥೆಯನ್ನಿಡಲು ೫೦೦ ಮಂದಿ ಕೂಲಿಗಳು ಸ್ವಯಂಸೇವಕರಾಗಿ ಸೇರಿರುವರು.

ಖಿಲಾಫತ್ ಸ್ವಯಂಸೇವಕರು:—ಕಲ್ಕತ್ತದಲ್ಲಿ ಸ್ವಯಂಸೇವಕರು, ಸಾರ್ವಜನಿಕ ಸಭೆ ಮುಂತಾದವುಗಳಿಗೆ ಹೋಗುವಾಗ (Lathis) ಕೋಲು ಮೊದಲಾದವುಗಳನ್ನು ಕೊಂಡುಹೋಗಕೂಡದೆಂದು ಡೆಪ್ಯುಟಿ ಪೋಲೀಸ ಕಮ್ಮಿಶನರ ಅಪ್ಪಣೆಯಾಗಿದೆ.

ಡೆಲ್ಲಿಯ ಸ್ವಯಂಸೇವಕರು:—ಕಳೆದ ತಾರೀಕು ೧೯ರಲ್ಲಿ [illegible] ಜನರಿಗೆ [illegible] ಹಸ್ತಪತ್ರಗಳನ್ನು ಹಂಚುವ [illegible] ಬಗ್ಗೆ ಇಬ್ಬರು ಸ್ವಯಂಸೇವಕರನ್ನು ಕೈದುಮಾಡಿದೆ.

ಸರ್ ಶಂಕರನ್ ನಾಯರರು:—ಇವರು ಕಳೆದ ಶುಕ್ರವಾರ ಲಾಹೋರಿಗೆ ತಲ್ಪಿರುವರು.

ಅಕಾಲಿ ಪರದೇಶ್ ಪತ್ರಿಕೆ:—ಅಕಾಲಿ ಪರದೇಶ್ ಎಂಬ ಪತ್ರಿಕೆಯ ಸಂಪಾದಕ ಮತ್ತು ಪ್ರಕಾಶಕರಾದ ಶ್ರೀಯುತ ಕರತಾರಸಿಂಗರೆಂಬವರಿಗೆ ಸೆಕ್ಷನ್ ೧೨೪ ಎ. ಐ. ಪಿ. ಸಿ. ಮೇರೆಗೆ ಎರಡು ವರುಷಗಳ ಕಠಿಣ ಶಿಕ್ಷೆ ಮತ್ತು ರೂ. ೨೦೦ ಜುರ್ಮಾನೆ, ಜುರ್ಮಾನೆ ತೆರಲಿಕ್ಕೆ ತಪ್ಪಿದರೆ ಆರು ತಿಂಗಳ ಹೆಚ್ಚಿನ ಕಠಿಣ ಶಿಕ್ಷೆ ವಿಧಿಸಿದೆ.

ಮದರಾಸ ನ್ಯಾಯವಿಧಾಯಕ ಸಭೆ:—ಈಗಿನ ನ್ಯಾಯವಿಧಾಯಕ ಕೌನ್ಸಿಲಿನ ಅವಧಿಯನ್ನು ಬರುವ ಅಗೋಸ್ತು ತಿಂಗಳಲ್ಲಿ ಮುಗಿಸಿ ಕೂಡಲೇ ಹೊಸ ಕೌನ್ಸಿಲನ್ನು ಆರಿಸತಕ್ಕದೆಂದು ಸರಕಾರವು ಆಲೋಚನೆಯನ್ನು ಮಾಡಿತ್ತು. ಆದರೆ ಈ ಕೌನ್ಸಿಲನ್ನು ನವಂಬರದ ವರೆಗೆ ನಡಿಸಿ ಅನಂತರ ಹೊಸ ಕೌನ್ಸಿಲು ಚುನಾವಣೆ ಮಾಡಲಾಗುವುದಂತೆ.

ಕೊನಪುರ ಮುನ್ಸಿಪಾಲಿಟಿ:—ಕೊನಪುರ ಮುನ್ಸಿಪಾಲಿಟಿಯ ಚುನಾವಣೆಗೆ ಕೊಂಗ್ರೆಸ ಪಕ್ಷದಿಂದ ೧೩ ಮಂದಿ ಉಮೇದುವಾರರು ನಿಂತಿದ್ದರು. ಅವರಲ್ಲಿ ೧೧ ಮಂದಿಗಳು ಆರಿಸಲ್ಪಟ್ಟರು.

ದಕ್ಷಿಣ ಕನ್ನಡ.

ಪೊಳಲಿ:—ಚಂಡಾಟದ ಬಿರುದಿನಿಂದ ಪ್ರಖ್ಯಾತಿಗೊಂಡ ಶ್ರೀರಾಜರಾಜೇಶ್ವರೀ ಅಮ್ಮನವರ ದೇಗುಲದಲ್ಲಿ ಇದೇ ಮಾರ್ಚ ತಾ. ೧೪ನೇ ಮೀನಸಂಕ್ರಮಣಕ್ಕೆ ಕ್ರಮದಂತೆ ಧ್ವಜಾರೋಹಣದೊಡನೆ ಉತ್ಸವ ಪ್ರಾರಂಭವಾಗಿ, ಇದೇ ಎಪ್ರೀಲ್ ತಾ. ೬ಕ್ಕೆ ಚಂಡಾಟದ ಉತ್ಸವವು ಶುರುವಾಗಿ ತಾ. ೧೦ನೇ ಚೈತ್ರ ಬ. ೧೦ಯು ಮಂಗಳವಾರ ಮಧ್ಯಾಹ್ನಕ್ಕೆ ಶ್ರೀಯುತ ಬಡಕಬೈಲ್ ಪರಮೇಶ್ವರಯ್ಯನವರ ಬಾಬ್ತು ಬ್ರಾಹ್ಮಣ ಸಂತರ್ಪಣೆಯಾಗಿ ರಾತ್ರಿ ಅನುಪಮ ಅಖಂಡಯಶೋಬಲ ಪ್ರಚಂಡ ಕಡೆ ಚಂಡಾಟ ಮಹೋತ್ಸವವು ಒದಗುವುದು. ಮರುದಿನ ರಥೋತ್ಸವ ತಾ. ೧೩ಕ್ಕೆ ಅವಭೃತವಾಗುವುದು. ಈ ದಿನಕ್ಕೆ ಪದ್ಧತಿಯಂತೆ ಬರುತ್ತಿದ್ದ ಅರ್ಕುಳ ಮಗರಂತಾಯ ದೈವದ ಭಂಡಾರವು ಸುಮಾರು ೫೨ ವರ್ಷಗಳಿಂದ ಊರೊಳಗಿನ ಇಕ್ಕಟ್ಟಿನಿಂದ ನಿಂತಿದ್ದು ಈ ವರ್ಷ ಬರುವುದು ಬಹು ವಿಶೇಷವೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ಬಾರುಗದ ಹಣ್ಣನ್ನು ಹಾರೈಸಿದ್ದ ಗಿಳಿಗಳೋಪಾದಿಯಲ್ಲಿ ಪೊಳಲಿಗೆ ಬರುವ ರಾಜರಸ್ತೆಯ ಕೆಲಸವು ಪೂರೈಸುವುದು ಯಾವ ಶತಮಾನಕ್ಕೆ ಎಂಬದೊಂದು ಸವಾಲು ಇನ್ನೂ ಬಾಕಿಯಿದೆ.

ಬಂಟವಾಳ:—ಕಾವಳಕಟ್ಟೆಯ ಹತ್ತಿರ ಗಾಡಿಹೋಗುವಾಗ ಒಂದು ಮೆಣಸಿನ ಗೋಣಿಯನ್ನು ಜಾರಿಸಿದ ಒಬ್ಬನನ್ನು ಬೀಟಿನ ಪೋಲೀಸಿನವರು ಹಿಡಿದುತಂದಿದ್ದಾರೆ. ಇನ್ನು ಕೆಲವರಿದ್ದಾರೆ ಎಲ್ಲರನ್ನೂ ಹಿಡಿದರೆ ಗಾಡಿಯವರಿಗೆ ಸೌಖ್ಯವಾಗುತ್ತಿತ್ತು.

ಬ್ರಿಟಿಷ್ ಧ್ವಜವನ್ನು ಏರಿಸುವುದಕ್ಕಾಗಿ ಡಿಪ್ಯುಟಿ ತಹಸೀಲದಾರರ ಕಚೇರಿ ಬಾಗಿಲಲ್ಲಿ ಕಾಯಂ ಧ್ವಜಸ್ತಂಭ ಸ್ಥಾಪಿಸಿರುತ್ತಾರೆ.

ಸವಾಲುಗಳಿಗೂ, ಟೀಕೆಗೂ ಉತ್ತರ.

'ಸ್ವದೇಶಾಭಿಮಾನಿ'ಯ ಇತ್ತಲಾಗಿನ ಒಂದೆರಡು ಲೇಖನಗಳನ್ನು ಕುರಿತು 'ಸತ್ಯಾಗ್ರಹೀ'ಪತ್ರದಲ್ಲಿ ಕೆಲವು ಸವಾಲುಗಳೂ, ಸ್ವಲ್ಪ ಟೀಕೆಯೂ ಬಂದಿರುವುವು. ಜನರ ತಿಳಿವಿನ ಬಗ್ಗೆ ಮುಂದಿನ ಮಾತುಗಳನ್ನು ಪ್ರಕಟಿಸಬೇಕಾಗಿ ವಿನಂತಿ.

ಬಹು ಪಕ್ಷದವರು ೨೫ ಲಕ್ಷ ರೂಪಾಯಿ, ಮತ್ತು ೫೦,೦೦೦ ಜನ ಇಷ್ಟು ಒದಗಿದರೆ ತಾವು ಕಾಯಿದೆಭಂಗವನ್ನು ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಿಲ್ಲ. ಗಯಾ ಕೊಂಗ್ರೆಸ್ಸು ಮುಗಿದ ಬಳಿಕ ಶ್ರೀ. ಟಿ. ಪ್ರಕಾಶಮ್, ಶ್ರೀ. ಸಿ. ರಾಜಗೋಪಾಲಾಚಾರ್ಯ ಮುಂತಾದ ವರ್ಕಿಂಗ್ ಕಮಿಟಿಯ ಮೆಂಬರುಗಳು ಆಗಾಗ್ಗೆ ಕೊಟ್ಟ ಭಾಷಣಗಳು, ಬರೆದ ಲೇಖನಗಳು, ಅಂಥಾ ದೃಢ ನಂಬಿಕೆಯನ್ನು ಹುಟ್ಟಿಸುವುದಿಲ್ಲ. ನಮ್ಮ ಕರ್ನಾಟಕ ಪ್ರಾಂತದ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ದೇಶಪಾಂಡೆಯವರು ಅದೇ ವರ್ಕಿಂಗ್ ಕಮಿಟಿಯ ಒಬ್ಬ ಸಭಾಸದರು. ಅವರು ಮಾರ್ಚ ತಾ. ೩ರಲ್ಲಿ ಘಾಟಕೋಪರದಲ್ಲಿ ಜರಗಿದ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುವಾಗ "ಎರಡು ತಿಂಗಳನಂತರ ನಾವು ಕಾಯಿದೆಭಂಗವನ್ನು ಮಾಡಲು ಬದ್ಧರಾಗಿ ಹೋಗಿದ್ದೇವೆಂದು ಇನ್ನೂ ಯಾರು ನಿರ್ಣಯಿಸಿಲ್ಲ"ವೆಂದು ಅಪ್ಪಣೆ ಕೊಡಿಸಿದ್ದಾರೆ. ವರ್ಕಿಂಗ್ ಕಮಿಟಿಯ ಯಜಮಾನರಲ್ಲಿ ಒಬ್ಬರು, ಇಬ್ಬರು ಮೂವರು ಈ ರೀತಿಯಿಂದ ಮುಂದಿನ ಕಾಯಿದೆಭಂಗದ ಬಗ್ಗೆ ಸಂದಿಗ್ಧ ಭಾಷೆಯನ್ನು ಉಪಯೋಗಿಸಲು ಪ್ರಾರಂಭಿಸಿದ ಬಳಿಕ "ಸವಿನಯ ಕಾಯಿದೆ ಭಂಗವನ್ನು ಆರಂಭಿಸುವುದಿಲ್ಲವೆಂದು" ಇನ್ನು "ಯಾರು ಹೇಳಬೇಕು?" ಈ ವಿಷಯದಲ್ಲಿ ಬಹು ದೂರಹೋಗುವುದು ಬೇಡ. ಈ ಪ್ರಾಸ್ತಿಕರೆ ಜನರು ಸೇರದಿದ್ದರೆ, ಹಣವು ಕೂಡದಿದ್ದರೆ, ಪೂರ್ವಸಿದ್ಧತೆಯು ಇಲ್ಲದಿದ್ದರೆ ಇತ್ಯಾದಿ ಹಲವು 'ರೆ'ಗಳ ಸೈನ್ಯವನ್ನು ನಿಲ್ಲಿಸಿ ಮುಂದಿನ ಕಾಯಿದೆಭಂಗದ ಭಂಗವನ್ನು ಸೂಚಿಸಿರುವರು! ಈ 'ರೆ'ಕಾರವು ಅನೇಕ ಸದ್ಗುಣಗಳಿಗೆ ಆಶ್ರಯವೆಂದು "There is much virtue in if" ಈ ಮಾತಿನಲ್ಲಿ ಶೇಕ್ಸ್ಪಿಯರನು ಹೇಳಿರುವನು. ಒಂದು ವರುಷದ ಸ್ವರಾಜ್ಯವಾದರೂ ಇದೆ 'ರೆ'ಗಳ ಪೆಟ್ಟಿಗೆಯಲ್ಲಿ ಮುಚ್ಚಿದ್ದು ಇತ್ತು! ಇರಲಿ. ಆ ಎಲ್ಲ ಕರ್ತವ್ಯಗಳನ್ನು ಸಾಂಗವಾಗಿ ಸಿದ್ಧಮಾಡದ ಬಳಿಕ ಈ ಟೀಕಾಕಾರರು [illegible] ಕಾಯಿದೆಭಂಗವನ್ನು ಮಾಡುತ್ತಾರೆ [illegible] ಸಂಖ್ಯಾಕರು ತುಂಬಾ ಸಂತೋಷಪಟ್ಟು ಅದನ್ನು [illegible].

ಮುಂದಿನ ಕಾಯಿದೆಭಂಗವನ್ನು [illegible] ಊಹಿಸಬಹುದು. "ಕೊಂಗ್ರೆಸು ಅನುಮತಿ ಕೊಟ್ಟಿಲ್ಲ. ಎಪ್ರಿಲ್ ಅಂತ್ಯದ ವರೆಗೆ ವಿಧಾಯಕ ಕಾರ್ಯಕ್ರಮದ ಬಹುಮಹತ್ವದ ಕೆಲಸವಿದೆ. ಅದಕ್ಕೆ ಕೊಡದರೆ ಬಂದೀತು." ಸರಿ, ಸರಿ. [illegible] ಕಾಯಿದೆಭಂಗವಾದ ಬಳಿಕ ಆ ಸ್ಥಾನವು ಖಾಲಿಯೇ ಬೀಳುತ್ತದಲ್ಲವೆ? ಮತ್ತು ಹಾಗಾಗುವ ಪಕ್ಷದಲ್ಲಿ ಅಂಥ ಚಳವಳವು ಯಶಸ್ವಿಯಾದೀತೆ? ನಿಶ್ಚಯವನ್ನು ಹೇಳುವುದಾದರೆ, ಇದೊಂದು [illegible] ನೆವವೇ ಸರಿ. ಕೊಂಗ್ರೆಸು ಅನುಮತಿಯನ್ನು ಕೊಟ್ಟಿಲ್ಲವೆಂಬುದು ಇದರಂತೆಯೇ ಇನ್ನೊಂದು ನೆವವು. ಕೊಂಗ್ರೆಸ್ಸಿನಲ್ಲಿ ಕಾಯಿದೆಭಂಗಕ್ಕೆ ಪ್ರತಿಕೂಲರಾಗಿರುವವರದೆ ಬಹುಮತವಿದೆ. ಅಂಥವರಿಂದಲೇ ಅದು ತುಂಬಿಹೋಗಿದೆ. ಆದ್ದರಿಂದ ಅದು ಹೇಗೆ ಅನುಮತಿಯನ್ನು ಕೊಟ್ಟೀತು? ಆದರೆ ಪುನಃ ಆ ಜನರೆ ಹೊರಗೆ ಬಂದು "ಕೊಂಗ್ರೆಸ್ಸು ಅನುಮತಿಯನ್ನು ಕೊಟ್ಟಿಲ್ಲ; ಇಲ್ಲವಾದರೆ ನಾವು ಕಾಯಿದೆಭಂಗವನ್ನು ಮಾಡಬಹುದಿತ್ತು" ಎಂದು ಹೇಳುವರು. ಈ ಎರಡೂವರ್ತಮಾನಗಳ ಸ್ವಾರಸ್ಯವು ಜನರಿಗೆ ಈಗ ಸರಿಯಾಗಿ ಗೊತ್ತಾಗಿದೆ.

ಈ ಜನರಿಗೆ ಕಾಯಿದೆಭಂಗವನ್ನು ಮಾಡಲು ಸ್ವದೇಶಾಭಿಮಾನಿಯು "ಒತ್ತಾಯ"ಪಡಿಸುವುದಿಲ್ಲ. ಮಾತ್ರವಲ್ಲ, ಅದರ ಬರವಣಿಗೆಯ ಅಭಿಪ್ರಾಯವೂ ಹಾಗಿಲ್ಲ. ಕಾರಣ ಮಾರ್ಚ ತಾ. ೯ನೇ ಸಂಚಿಕೆಯ ಸ್ಫುಟ ವಿಚಾರದಲ್ಲಿ "ಕಾನೂನುಭಂಗವನ್ನು ಮಾಡಬೇಕೆಂದು ನಾವು ಹೇಳುವುದಿಲ್ಲ"ವೆಂದು ಸ್ಪಷ್ಟವಾಗಿ ಹೇಳಿದೆ. ಸ್ವದೇಶಾಭಿಮಾನಿಯಾಗಲಿ, ಕೌನ್ಸಿಲ್‌ವಾದಿಗಳಾಗಲಿ ಯಾರೂ ಯಾರಿಗೂ ಕಾಯಿದೆಭಂಗದ ವಿಷಯವಾಗಿ "ಒತ್ತಾಯ"ಪಡಿಸುವುದೂ ಇಲ್ಲ. ಅಥವಾ "ಅವಸರ"ವೂ ಮಾಡುವುದಿಲ್ಲ. "ಒಂದು ವರುಷದೊಳಗೆ ಸ್ವರಾಜ್ಯವೆಂದು" "ಅವಸರ"ಪಡುವಾಗಲೂ "ಅವಸರದಿಂದ ಯಾವ ಪ್ರಯೋಜನವೂ ಆಗುವಂತಿಲ್ಲ"ವೆಂಬ ಮಾತು ಸ್ವದೇಶಾಭಿಮಾನಿಗೆ ಮತ್ತು ಕೌನ್ಸಿಲ್‌ವಾದಿಗಳಿಗೆ ಆಗಲೂ ಗೊತ್ತಿತ್ತು. ಈಗಲೂ ಗೊತ್ತಿದೆ. ಆದರೆ ಕೆಲವರಿಗೆ ಮಾತ್ರ ದೀಪವನ್ನು ಮುಟ್ಟಿಯೇ ಅದರ ಬಿಸಿಯನ್ನು ತಿಳಕೊಳ್ಳಬೇಕಾಗುತ್ತದೆ.

ಹಣವನ್ನು ಕೊಡುವಾಗ ಯೋಚಿಸಿಕೊಡಬೇಕು ಜನರನ್ನು ಹೇಳದು ಯುಕ್ತವೆಂದು ಪ್ರಾಜ್ಞರು ತಿಳಕೊಳ್ಳುತ್ತಾರೆ. ಇದು ಸಮಾಧಾನದ ಮಾತು. ಒಂದು ಕೋಟಿಯನ್ನು ಯಾವ ಯಾವ ರೀತಿಯಿಂದ ವ್ಯಯಮಾಡಿದ್ದೇವೆ ಎಂಬುದನ್ನು ನಿರಾಕ್ಷೇಪವಾಗಿ ತೋರಿಸುವುದರ ಬದಲು ಈಗಿನ ಕೊಂಗ್ರೆಸ್ ಯಜಮಾನರಾದ ರಾಜಗೋಪಾಲಚಾರ್ಯರು ಗೋಪವಾರಿಯ ಮಾತುಗಳನ್ನು (ಲೆಕ್ಕವಲ್ಲ!) ಆಡಿರುವರು. ಇದೇ ಅದರ ಸದ್ವ್ಯಯಕ್ಕೆ ಉತ್ತಮ ಸಾಕ್ಷಿಯಾಗಿದ್ದಾದರೆ ಇನ್ನು ಮುಂದೆ ಆ ಬಗ್ಗೆ ಯಾರೂ ಚಕಾರವನ್ನು ಕೂಡ ಎತ್ತಬಾರದೆಂಬುದು ನಿಜವು! ಪ್ರಯೋಜನಕಾರಿಯಾದ ಕಾರ್ಯದಲ್ಲಿ ಸದ್ವ್ಯಯವಾಗುವ ಪಕ್ಷದಲ್ಲಿ ೨೫ ಲಕ್ಷವಲ್ಲ, ೨೫ ಕೋಟಿ ರೂಪಾಯಿ ಕೂಡ ಪುನಃ ಎತ್ತುವುದು ಹೆಚ್ಚೆಂದು ಯಾರೂ ಹೇಳುವುದಿಲ್ಲ. "ಸರಕಾರದವರು ಈ ವರುಷ ಪುನಃ ೨೫ ಕೋಟಿ ಸಾಲ ಎತ್ತುವವರಿದ್ದಾರಾ"ವೆಂದ ಕೊಂಗ್ರೆಸು ಮುಂಚೆಯ ಸಾಲಕ್ಕೆ ತಾನು ಬಾಧ್ಯಸ್ತನಲ್ಲವೆಂದು ಅಡ್ಡಿ ಮಾಡಿದೆಯಲ್ಲವೆ? ಹಾಗಿದ್ದ ಮೇಲೆ ಆಲೋಚನೆ ಯಾಕೆ?

"ಮಹಾತ್ಮಾಜೀಯವರ ಮಾತುಗಳನ್ನು ನಿಂದಿಸುತ್ತೀರಿ." "ಪ್ರಾಂತ ಠಿಯು ನಿಂದಿಸುತ್ತಿದ್ದಂತೆ ನಮ್ಮನ್ನು ಜರೆಯುತ್ತೀರಿ." "ವಿಧಾಯಕ ಕಾರ್ಯಕ್ರಮವನ್ನು ನಿಂದಿಸುತ್ತೀರಿ." "ಖಾದಿಯ ಗಂಟನ್ನು ಹೊತ್ತುಕೊಂಡು ತಿರುಗುವುದನ್ನು ನಿಂದಿಸುತ್ತೀರಿ." "ನೀವು ನಮ್ಮನ್ನು ತಿರಸ್ಕರಿಸುತ್ತೀರಿ." ಎಂದು ಜರಿಯೋಣ ಮತ್ತು ತಿರಸ್ಕಾರ ಇವುಗಳೊಟ್ಟಿಗೆ ಸುಮಾರು ನಿಂದೆಗಳು ಈ ವಾಕ್ಯಗಳಲ್ಲಿ ಬಂದಿವೆ! ಸ್ವದೇಶಾಭಿಮಾನಿಯಾಗಲಿ ಬೇರೆಯವರಾಗಲಿ ಮಹಾತ್ಮಜಿಯವರ ಮಾತುಗಳನ್ನು ನಿಂದಿಸುವುದಿಲ್ಲ. ಮತಭೇದವನ್ನು ಹೇಳುವುದು ನಿಂದೆಯಲ್ಲ. ವಿಧಾಯಕಕಾರ್ಯಕ್ರಮವನ್ನಾದಲಿ ಖಾದಿಯ ಪ್ರಸಾರವನ್ನಾಗಲಿ ಯಾರೂ ನಿಂದಿಸುವುದಿಲ್ಲ. ವಿಧಾಯಕಕಾರ್ಯಕ್ರಮವೆ ಸ್ವರಾಜ್ಯಕ್ಕೆ ಮುಖ್ಯಸಾಧನ, ಖಾದಿಯೆ ಸ್ವರಾಜ್ಯದ ಬಾಗಿಲು ಎಂದು ತಿಳಿದು ಅಷ್ಟರಿಂದಲೆ ಇತಿಕರ್ತವ್ಯತೆಯನ್ನು ಮುಗಿಸುವವರ ಮಟ್ಟಿಗೆ ಮತ್ತು ಅಂಥವರ ಕ್ರಮದ ಮಟ್ಟಿಗೆ ವಿಷಾದವನ್ನು ತೋರಿಸೋಣಾಯಿತಲ್ಲದೆ ಅದು ನಿಂದೆಯಾಗಲಾರದು. ಅಥವಾ ತಿರಸ್ಕಾರವಾಗಲಾರದು. ವಿಷಾದ, ಖೇದ, ಪಶ್ಚಾತ್ತಾಪ, ಈ ಎಲ್ಲ ಮನೋಭಾವಗಳು 'ನಿಂದೆ' ಎಂಬ ಮಾತಿಗೆ ವಿಷಯವಾಗುವುದಿಲ್ಲ. ಇದು ಬಲ್ಲವರಿಗೆ ಹೇಳಬೇಕಾದ ಅಗತ್ಯವಿಲ್ಲ. "ಸರಕಾರದವರೂ ಖಾದಿಯ ಮಹತ್ವವನ್ನು ತಿಳಕೊಂಡ" ಮೇಲೆ ಅದಕ್ಕೆ ಅವರು ಉತ್ತೇಜನವನ್ನು ಕೊಡಲೇ ಬೇಕು ಎಂದ ಮೇಲೆ ಈಗಿನ ಕೊಂಗ್ರೆಸ್ಸ್ ಯಜಮಾನರ ಕಾರ್ಯವು ಅನಾಯಾಸದಿಂದಲೆ ಸಿದ್ಧವಾದಂತಾಯಿತೆನ್ನಬಹುದು. ಎಂದರೆ ಸ್ವರಾಜ್ಯವು ಸ್ವರ್ಗದಿಂದ ಈ ಸುವರ್ಣ ಭೂಮಿಯಲ್ಲಿ ಈಗ ಬೇಗನೆ ಅವತರಿಸುವುದೆನ್ನುವುದಕ್ಕೆ ಸಂದೇಹವಿಲ್ಲ!

"ದ್ರೌಪದಿಯು" ಮತ್ತು "ಧರ್ಮರಾಜನ" ದೃಷ್ಟಾಂತವು ಈ ಪ್ರಸಂಗದಲ್ಲಿ ಅಷ್ಟೊಂದು ಯಥಾರ್ಥವಾಗುವುದಿಲ್ಲ. ಶಸ್ತ್ರಾಸ್ತ್ರಗಳನ್ನು ಹಿಡಕೊಂಡು ರಥವನ್ನೇರಿ ರಣರಂಗದಲ್ಲಿ ಬಂದು ನಿಂತು "ನನಗೆ ಈ ನಿರ್ವಂಶಕಯುದ್ಧವು ಬೇಡ; ನಾನು ವಿಧಾಯಕ ಕಾರ್ಯಕ್ರಮವಾದ ಭಿಕ್ಷಾವೃತ್ತಿಯನ್ನು ಅವಲಂಬಿಸುವೆನೆಂ"ದು ಹೇಳಿದ ಲೋಕತ್ರಯ ವೀರನಾದ ಅರ್ಜುನನಿಗೆ, ಅವನ ಹೃದಯ ದೌರ್ಬಲ್ಯವನ್ನು ಹೋಗಲಾಡಿಸಲು ಕಾರ್ಯಾಕಾರ್ಯ ವಿವೇಕವನ್ನು ಹೇಳಿದ ಶ್ರೀ ಕೃಷ್ಣನ ಉಪದೇಶಕಾರ್ಯವನ್ನು ಈ ಹೊತ್ತು ದೇಶಭಕ್ತ ದಾಸರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ಸ್ವರಾಜ್ಯಪಕ್ಷವು ಮಾಡಬೇಕಾಗಿ ಬಂದಿದೆ. ಇದು ಸಮರ್ಪಕವಾದ ದೃಷ್ಟಾಂತವು.

ಅಲಹಾಬಾದದಲ್ಲಿ ಮಾತ್ರ ಕೊಂಗ್ರೆಸ್ಸಿನ ಎರಡು ಪಂಗಡವರು ಒಟ್ಟಿಗೆ ಸೇರಿ ಕೆಲಸ ಮಾಡಬೇಕೆಂದಾಯಿತಲ್ಲದೆ ಆ ತ್ರಿವೇಣೀ ಸಂಗಮದ ಪುಣ್ಯಕ್ಷೇತ್ರವನ್ನು ಬಿಟ್ಟು ಈಚೆಗೆ ಬಂದ ಬಳಿಕ ಆ ಭಾವನೆಯು ಬಹುಪಕ್ಷದವರ ಹೃದಯದಲ್ಲಿ ಇರಲಿಲ್ಲವೆಂದು ತೋರುತ್ತದೆ. ಕಾರಣ, ಅತ್ಯಂತ ದೇಶಭಕ್ತರಾದ ಗಂಗಾಧರರಾವ ದೇಶಪಾಂಡೆಯವರು ಕೊಂಗ್ರೆಸ್ ವರ್ಕಿಂಗ್ ಕಮಿಟಿಯ ಸಭಾಸದರು ಮತ್ತು ಕರ್ನಾಟಕ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರು—ಮೇಲೆ ಬರೆದಿರುವ ಘಾಟಕೋಪರದ ಪರಿಷತ್ತಿನಲ್ಲಿ ಕೌನ್ಸಿಲ್ ಪ್ರವೇಶದ ಪ್ರಶ್ನೆಯ ನಿಷೇಧವನ್ನು ಮಾಡಿ "ಎರಡು ತಿಂಗಳು ವರೆಗೆ ಕೌನ್ಸಿಲ್ ವಿಷಯವನ್ನು ಯಾರೂ ಪ್ರಸ್ತಾಪಿಸಕೂಡದು." ಎಂದಿರುವ ಒಪ್ಪಂದದ ನಿಯಮವನ್ನು ಮುರಿದರು. ಇದು ದೊಡ್ಡವರ ಸಂಗತಿ. ಹೀಗಿರಲು "ಕೊಂಗ್ರೆಸ್ಸಿನ ಎರಡು ಪಂಗಡದವರೂ ಒಟ್ಟುಸೇರಿ ಕೆಲಸಮಾಡುವ ಈ ಸಮಯದಲ್ಲಿ [illegible] ಕೆಲಸಕ್ಕೆ ಅಡ್ಡಿ ಬರಲು ಯತ್ನಿಸುವುದು [illegible] ಸರಿ ತೋರುವದಿಲ್ಲ"ವೆಂದು ಬರೆಯುವುದು ಬಹಳ ಚಲೋ. [illegible] ಈ ಪತ್ರದಲ್ಲಿ "ಕಾಯಿದೆಭಂಗದ ವಿಚಾರವು [illegible] ಕೊಂಡಂತೆ ಸರಿ ತೋರುವುದಿಲ್ಲ" "ನಮಗೆ ಎಚ್ಚರಿಸುತ್ತೀರಿ." "ನಮಗೆ ಇನ್ನೂ ತಿಳಿಯದೆ ಇದ್ದದ್ದು ಅಷ್ಟು ಯಾವುದು ಇದೆ?" ಮುಂತಾದ ಇನ್ನೂ ಚಲೋ ಮಾತುಗಳಿವೆ. ಆದರೆ ಆ ಪ್ರಾಜ್ಞರ ಬಳಿಗೆ ಇವುಗಳನ್ನು ತಿಳಕೊಳ್ಳಲು, ಮತ್ತು ಎಚ್ಚರವನ್ನು ಪಡೆಯಲು ಸ್ವದೇಶಾಭಿಮಾನ ಪತ್ರಕರ್ತರು ಸಿದ್ಧರಾಗಿ ಬಂದಿಲ್ಲವೆಂದು ತೋರುತ್ತದೆ. ಅಷ್ಟರವರೆಗೆ ಮೇಲಿನ ಮಾತುಗಳು "ಚಲೋ"ವಾದರೂ ಸಪ್ಪೆಯೇ ಸರಿ.

ಯು. ಕೆ. ಎನ್.

ಅನುಕ್ರಮಣಿಕೆ.

ಸ್ಫುಟವಿಚಾರಗಳು.— ೬
೧, ೨, ೩, ೪, ೫, ವರಿಷ್ಠ ಕೌನ್ಸಿಲುಗಳ ಪ್ರಸ್ತಾಪ ,,
೬, ೭, ಸ್ವರಾಜ್ಯದ ಪ್ರಶ್ನೆ ,,
ಮಂಗಳೂರು.— ೭-೮
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಸ್ವದೇಶ ವರ್ತಮಾನ ೩
ದಕ್ಷಿಣ ಕನ್ನಡ—ಪುತ್ತೂರು, ಬಂಟವಾಳ, ,,
ಸವಾಲುಗಳಿಗೂ ಟೀಕೆಗೂ ಉತ್ತರ ,,
ವಿಧಾಯಕ ಕಾರ್ಯಕ್ರಮ ೮
ಕಾಸರಗೋಡು ಕೊಂಗ್ರೆಸ್ ಕಮಿಟಿ, ,,
ಪತ್ರವ್ಯವಹಾರ ೪
ಮಂಗಳೂರು ತಾಲೂಕು ಕೊಂಗ್ರೆಸ್ ಕಮಿಟಿ ,,
ಖಾಸಗಿ ಶಾಲೆಗಳಿಗೆ ಒಂದು ಪ್ರೈವಿಡೆಂಟ ,,

ಸ್ವದೇಶಾಭಿಮಾನಿ

ಶಕ ೧೮೪೫ ಚೈತ್ರ ಶು॥ ೧೩ ಯು ಶುಕ್ರವಾರ

ಸ್ಫುಟವಿಚಾರಗಳು.

೧. ಈಗ ಸಾಮಾನ್ಯವಾಗಿ ಪತ್ರಿಕೆಗಳಲ್ಲಿ ಪ್ರಾಂತಿಕ ಕೌನ್ಸಿಲುಗಳ, ವರಿಷ್ಠ ಕೌನ್ಸಿಲಿನ ಮತ್ತು ಎಸೆಂಬ್ಲಿಯ ಸುದ್ದಿಗಳೆ ಬರುತ್ತಿರುವುವು. ಅದರಲ್ಲೂ ಈ ಮಾರ್ಚಿ ತಿಂಗಳ ಕೌನ್ಸಿಲುಗಳ ಪ್ರಸ್ತಾಪಗಳೆಂದರೆ ದಿವಾಳಿಖೋರತನವನ್ನು ಪ್ರಕಟಿಸುವ ಪಾಪರ ಅರ್ಜಿಗಳೆ ಸರಿ. ಎಸೆಂಬ್ಲಿಯ ಪ್ರಸ್ತಾಪವನ್ನು ಉದಾಹರಣಾರ್ಥವಾಗಿ ಪರಿಶೀಲಿಸೋಣ. ದಿಲ್ಲಿಯ ಎಸೆಂಬ್ಲಿಯಲ್ಲಿ ಬಜೆಟ್ ಚರ್ಚೆಯ ಸಂದರ್ಭದಲ್ಲಿ ಒಂದು ಮನೋರಂಜಕವಾದ ವಾದವಿವಾದವು ನಡೆಯಿತು. ರೊಯಲ್ ಕಮಿಶನಿನ ಖರ್ಜಿಗೆ ಬೇಕಾದ ೩ ಲಕ್ಷ ರೂಪಾಯಿಯನ್ನು ಮಂಜೂರುಮಾಡಬೇಕೆಂದು ಸರಕಾರದ ಕಡೆಯಿಂದ ಅಂದಾಜಪತ್ರಕದಲ್ಲಿ ನಿರ್ದೇಶಿಸೋಣಾಗಿದೆ. ಆದರೆ ಈ ರಕಮನ್ನು ಮಂಜೂರುಮಾಡಬೇಕೊ ಬೇಡವೊ ಎಂಬುದು ಎಸೆಂಬ್ಲಿಯಲ್ಲಿ ಚರ್ಚೆಯಿತ್ತು. ಈ ಚರ್ಚೆಯು ಯಾಕೆ ಹುಟ್ಟಿತು ಎಂಬುದಕ್ಕೆ ಅದರ ಪೂರ್ವ ವೃತ್ತವನ್ನು ಸ್ವಲ್ಪ ಪರಿಶೀಲಿಸಬೇಕು. ಸಿವಿಲ್ ಸರ್ವಿಸ್ ಕಮಿಶನನ್ನು ನೇಮಿಸುವುದು ನಮಗೆ ಸಮ್ಮತವಿಲ್ಲ, ಆದ್ದರಿಂದ ಅದು ಅಗತ್ಯವಿಲ್ಲವೆಂದು ಮೊದಲು ಇದೆ ಎಸೆಂಬ್ಲಿಯವರು ತಮ್ಮ ಪ್ರಚಂಡ ಬಹುಮತದಿಂದ ತಳ್ಳಿಹಾಕಿದ್ದಾರೆ. ಈ ಸಂಗತಿಯನ್ನು ವಾಚಕರು ಇನ್ನೂ ಮರೆತಿರಲಾರರು. ಈ ಮೇರೆಗೆ ತಾವೆ ಕೆಲವು ದಿನಗಳ ಹಿಂದೆ ತಳ್ಳಿಹಾಕಿದ ವಿಷಯಕ್ಕೆ ಪುನಃ ಅದರ ಖರ್ಜಿನ ಬಗ್ಗೆ ೩ ಲಕ್ಷ ರೂಪಾಯಿಯನ್ನು ಮಂಜೂರುಮಾಡುವುದು ವಿರುದ್ಧ ಮಾತ್ರವಲ್ಲ, ತನ್ನನ್ನು ತಾನೆ ನುಂಗಿದ ಹಾಗಾಗುತ್ತದೆ. ಇಂಥ ವಿಸಂಗತ ವರ್ತನವು ಎಸೆಂಬ್ಲಿಯ ಸಭಾಸದರ ಕೈಯಿಂದ ಆಗಲಿಕ್ಕಿಲ್ಲವೆಂಬುದು ಸಹಜವೆ ಸರಿ. ಆದರೆ ಬಹು ಆಳದಲ್ಲಿರುವ ನೋಕರಶಾಹಿಯು ಹಲವು ವಿಧದ ಯುಕ್ತಿಯ ಬಲೆಗಳನ್ನು ಬೀಸುವುದರಲ್ಲಿ ಜಾಣವಲ್ಲವೆ? ಮೊದಲು ಈ ಎಸೆಂಬ್ಲಿಯವರು ಸಿವಿಲ್ ಸರ್ವಿಸ್ ಕಮಿಶನಿನ ಠರಾವನ್ನು ತಳ್ಳಿಹಾಕಿದ ಬಳಿಕ ಮತ್ತು ಮೊನ್ನೆ ಅದರ ಖರ್ಜಿನ ಬಗ್ಗೆ ೩ ಲಕ್ಷ ರೂಪಾಯಿಯನ್ನು ಕೇಳುವುದಕ್ಕೆ ಮುಂಚೆ, ಮಧ್ಯದ ಈ ಅವಧಿಯಲ್ಲಿ ಜಾಣವಾದ ನೋಕರಶಾಹಿಯು ಸಿವಿಲ್ ಸರ್ವಿಸ್ ಕಮಿಶನಿನ ವಿಚಾರಣೆಯಲ್ಲಿ ಬರತಕ್ಕ ಅಥವಾ ಕಮಿಶನು ವಿಚಾರಿಸಬೇಕಾದ ಪ್ರಶ್ನೆಗಳನ್ನು ಪ್ರಕಟಿಸಿತು. (೧) ಸಿವಿಲ್ ಸರ್ವಿಸಿನಲ್ಲಿ ಈಗಿನ ನೋಕರರನ್ನು ಕೂಡಲೆ ಇಲ್ಲವೆ ಮೆಲ್ಲ ಮೆಲ್ಲನೆ ಪ್ರೊವಿನ್ಶಿಯಲ್ ಸರ್ವಿಸಿನಲ್ಲಿ ಸೇರಿಸಲು ಎಷ್ಟರ ಮಟ್ಟಿಗೆ ಸಂಭವವಿದೆ? (೨) ಸಿವಿಲ್ ಸರ್ವಿಸಿನಲ್ಲಿರುವ ನೋಕರರ ಸಾಂಪತ್ತಿಕ ಸ್ಥಿತಿ ಮುಂತಾದ್ದು ಹೇಗಿದೆ? (೩) ಸುಧಾರಣಾ ಕಾಯಿದೆಯ ಮೇರೆಗೆ ಯಾವ ಯುರೋಪಿಯನರನ್ನು ಮತ್ತು ಹಿಂದಿಗಳನ್ನು ನೋಕರಿಯ ಮೇಲೆ ನೇಮಿಸುವುದುಂಟೊ, ಅವರನ್ನು ಹೇಗೆ ಸಂಗ್ರಹಿಸಬಹುದು ಮತ್ತು ಈಗಿರುವವರನ್ನು ಹೇಗೆ ಕಾಯಮಿಡಬಹುದು? ಈ ಮೂರು ಪ್ರಶ್ನೆಗಳು. ಹೆಚ್ಚಾಗಿ ಮೊದಲನೆಯ ಪ್ರಶ್ನೆಯು ಹಿಂದಿಗಳಲ್ಲಿ ಕೆಲವು ಮಟ್ಟಿಗೆ ಆಸೆಯನ್ನು ಹುಟ್ಟಿಸುವದಿದ್ದದರಿಂದ ಈ ಬಲೆಯಲ್ಲಿ ಎಸೆಂಬ್ಲಿಯ ಮೆಂಬರರನ್ನು ಹಿಡಿಯಲು ನೋಕರಶಾಹಿಯ ಪ್ರಯತ್ನವಿತ್ತು. ಅಲ್ಲದೆ ಈ ರೊಯಲ್ ಕಮಿಶನಿನ ಮೇಲೆ ಉತ್ತಮೋತ್ತಮರಾದ ಮತ್ತು ಹಿಂದಿಗಳ ಸಂಪೂರ್ಣ ವಿಶ್ವಾಸಕ್ಕೆ ಪಾತ್ರರಾದ ಯಾವ ಯಾವ ಹಿಂದಿಗಳನ್ನು ನೇಮಿಸುವುದಿದೆ ಎಂಬುದನ್ನು ನೀವು ತಿಳಕೊಂಡಿರುವಿರಾ, ಎಂದು ಸೂಚಕ ಸವಾಲನ್ನು ಈ ಚರ್ಚೆಯ ಸಮಯದಲ್ಲಿ ಸರಕಾರದ ಕಡೆಯಿಂದ ಕೇಳೋಣಾಯಿತು. ಇದು ಬೇರೆ. ಈ ಎಲ್ಲ ಯುಕ್ತಿಗಳಿಂದ ಎಸೆಂಬ್ಲಿಯ ಸಭಾಸದರನ್ನು ಬಲೆಯಲ್ಲಿ ಹಿಡಿಯುವ ಸರಕಾರದ ಪ್ರಯತ್ನವಿತ್ತು.

೨. ಆದರೆ ಸರಕಾರದ ಈ ಯುಕ್ತಿಯ ಬಲೆಯಲ್ಲಿ ಯಾವ ಪಕ್ಷಿಯೂ ಬೀಳಲಿಲ್ಲ. ಇದು ಸಂತೋಷದ ಮಾತು. ಮೊದಲು ಸಿವಿಲ್ ಸರ್ವಿಸ್ ಕಮಿಶನಿನ ನೇಮಕವನ್ನು ನಿಂದಾವ್ಯಂಜಕ ಠರಾವಿನ ರೂಪದಿಂದ ಯಾರು ನಿಷೇಧಿಸಿದ್ದಾರೊ ಅವರೆ ಈಗಲಾದರೂ ೩ ಲಕ್ಷ ರೂಪಾಯಿಯನ್ನು ಖರ್ಜಿನ ರಕಮಿನಿಂದ ತೆಗೆದುಹಾಕಬೇಕೆಂದು ಸೂಚನೆಯನ್ನು ತಂದರು. ಮುನಶಿ ಈಶ್ವರ ಶರಣ ಇವರೆ ಮೊದಲು ಉಪರೋಧಿಸಿದವರು. ಈಗಲೂ ಅವರೆ ಮೇಲಿನ ಉಪಸೂಚನೆಯನ್ನು ತಂದರು. 'ಪ್ರಥಮತಃ ಸಿವಿಲ್ ಸರ್ವಿಸ್ ಕಮಿಶನನ್ನು ಈ ಎಸೆಂಬ್ಲಿಯು ನಿಷೇಧಿಸಿರುವಾಗ ಈಗ ಪುನಃ ಅದರ ಖರ್ಜಿನ ಬಗ್ಗೆ ಹಣವನ್ನು ಮಂಜೂರುಮಾಡುವುದು ಅಸಮಂಜಸ ಮತ್ತು ವಿಸಂಗತವು. ಹಿಂದೂಸ್ಥಾನ ಸರಕಾರಕ್ಕೂ, ಭಾರತಮಂತ್ರಿಗಳಿಗೂ ಈ ವಿಷಯವಾಗಿ ನಡೆದಿರುವ ಪತ್ರವ್ಯವಹಾರವನ್ನೂ ಪ್ರಕಟಿಸಿರಿ ಎಂದು ಹೇಳಿದರೂ, ಆ ಮಾತಿಗೆ ಸರಕಾರವು ಕಿವಿಗೊಡಲಿಲ್ಲ. ಆದ್ದರಿಂದ ಈ ೩ ಲಕ್ಷದ ರಕಮನ್ನು ಎಸೆಂಬ್ಲಿಯು ಮಂಜೂರುಮಾಡಬಾರದು,' ಎಂದು ಈಶ್ವರ ಶರಣರು ಸಮರ್ಪಕವಾಗಿ ಸ್ವಪಕ್ಷವನ್ನು ಸಮರ್ಥಿಸಿದರು. ಅಲ್ಲದೆ, "ನಾವು, ಎಸೆಂಬ್ಲಿಯ ಮೆಂಬರರು, ಈ ರಕಮನ್ನು ಮಂಜೂರುಮಾಡದೆ ಇದ್ದಲ್ಲಿ ವೈಸರಾಯರು ತಮ್ಮ ಸರ್ಟಿಫಿಕೇಶನಿನ ಅಧಿಕಾರದಿಂದ ಆ ಮೂರು ಲಕ್ಷ ರೂಪಾಯಿಯನ್ನು ಮಂಜೂರುಮಾಡಿಯಾರು. ಇದಕ್ಕೆ ಸಂದೇಹವಿಲ್ಲ. ಆದರೆ ನಾವು ಮಾತ್ರ ನಮ್ಮ ಮತವನ್ನು ಕೊಡಬಾರದು." ಎಂದು ಈಶ್ವರ ಶರಣರು ಸರ್ಟಿಫಿಕೇಶನಿನ ಯಾವ ಪ್ರಸ್ತಾಪವನ್ನು ಎತ್ತಿ ನಿರಾಕರಿಸಿದರೊ ಅದೆ ವಿಷಯವಾಗಿ ಮುಂದೆ ಮಿ॥ ಹರಚಂದರಾಯರೆಂಬ ಸಭಾಸದರು ಭಾಷಣ ಮಾಡುವಾಗ "ಸಭಾಸದರು ಮಂಜೂರುಮಾಡದೆ ಇದ್ದ ರಕಮನ್ನು ಸರಕಾರವು ತನ್ನ ಬಲಾತ್ಕಾರದ ಅಧಿಕಾರದ ಮೇಲಿಂದ ತಿರುಗಿ ಮಂಜೂರುಮಾಡಿಕೊಂಡರೆ, ಮಾಡಿಕೊಳ್ಳಲಿ. ಇಂಥ ಬಲಾತ್ಕಾರದ ಕೃತ್ಯಗಳಿಂದಲೆ ನೋಕರಶಾಹಿಯು ಬಲಹೀನವಾಗುತ್ತ ಬರುವುದು. ಮತ್ತು ಅದೆ ಅದಕ್ಕೆ ಕೊನೆಗೆ ಕೆಡಕು" ಎಂದು ಹೇಳಿದರು. ಈ ರೀತಿಯಿಂದ ಪ್ರಜಾಪಕ್ಷದ ಸಭಾಸದರು ತಮ್ಮ ತಮ್ಮ ಮತಗಳನ್ನು ನಿರ್ಭೀತಿಯಿಂದ ಪ್ರತಿಪಾದಿಸಿದ ಬಳಿಕ ಮಧ್ಯದಲ್ಲಿ ಮಾಲಕಮ್ ಹೇಲಿ ಸಾಹೇಬರು ಎಷ್ಟೆ ವಾಕ್‌ಪಾಂಡಿತ್ಯವನ್ನು ಪ್ರದರ್ಶಿಸಿದಾಗ್ಯೂ ಅದಕ್ಕೆ ವಶರಾಗದೆ ಸಭಾಸದರು ಸ್ವಮತವನ್ನೆ ಗಟ್ಟಿಯಾಗಿ ಧರಿಸಿದ ಬಳಿಕ ೩ ಲಕ್ಷದ ಸರಕಾರಿ ಖರ್ಚು ಮಂಜೂರಾಗದೆ ಹೋಯಿತು. ಈ ಮೇರೆಗೆ ಲೋಕಪಕ್ಷದ ಸಭಾಸದರ ದೃಢ ನಿಶ್ಚಯದಿಂದ ಸರಕಾರಕ್ಕೆ ಪರಾಜಯವನ್ನು ಹೊಂದಬೇಕಾಯಿತು.

೩. ಇಂಥ ಪರಾಜಯವು ಸರಕಾರಕ್ಕೆ ಬೇರೆ ಇನ್ನೆರಡು ಸಂದರ್ಭಗಳಲ್ಲಿ ಬಂದುಹೋಯಿತು. ಅದೆ ಬಜೆಟಿನ ವಾದವಿವಾದದಲ್ಲಿ ಸರಕಾರದ ವ್ಯಾಪಾರಿ ಮಂತ್ರಿಗಳಾದ ಮಿ॥ ಇನಸ್ ಇವರು ರೈಲು ಖಾತೆಯ ಖರ್ಜಿಗೋಸ್ಕರ ೬॥ ಕೋಟಿ ರೂಪಾಯಿಗಳನ್ನು ಕೇಳಿದ್ದರು. ಈ ಖರ್ಚನ್ನು ವಸ್ತುತಃ ೪ ಕೋಟಿಯಿಂದ ಕಡಿಮೆಮಾಡಬಹುದೆಂದು ಇಂಚಕೇಪ ಕಮಿಟಿಯು ಮೊದಲೆ ತನ್ನ ಅಭಿಪ್ರಾಯವನ್ನು ಕೊಟ್ಟಿದೆ. ಅದಕ್ಕನುಸಾರವಾಗಿ ಮಿ. ಜಿನಾಲಾ ಎಂಬವರು ಆ ನಾಲ್ಕು ಕೋಟಿ ರಕಮನ್ನು, ಇನಸ್ ಸಾಹೇಬರು ಕೇಳಿದ ೬॥ ಕೋಟಿಯಿಂದ ಕಡಿಮೆಮಾಡಬೇಕೆಂದು ಸೂಚನೆಯನ್ನು ತಂದರು. ಪರಂತು ಸರ್ವಾಧಿಕಾರಿ ಎಂಬವರು ಮಧ್ಯದಲ್ಲಿ ಅದೂ ಬೇಡ, ಇದೂ ಬೇಡವೆಂದು ಮಾಧ್ಯಸ್ಥ್ಯವನ್ನು ಮಾಡಿ ೫೦ ಲಕ್ಷ ರೂಪಾಯಿ ರಕಮನ್ನು ಸಂಕಲ್ಪಿತ ೬॥ ಕೋಟಿಯಿಂದ ಕಡಿಯಬೇಕೆಂದು ಉಪಸೂಚನೆಯನ್ನು ತಂದರು. ಈ ಉಪಸೂಚನೆಯನ್ನು ಸರಕಾರದ ಕಡೆಯವರು ಉಪರೋಧಿಸಿದಾಗ್ಯೂ ಲೋಕಮತದ ಸಭಾಸದರ ಬಹುಮತದಿಂದ ಕೊನೆಗೆ ಅದೆ ಪಾಸಾಯಿತು. ಇದಲ್ಲದೆ ಇನ್ನೊಂದು ಸಂದರ್ಭದಲ್ಲಿ ೧೯ ಲಕ್ಷ ರೂಪಾಯಿಯ ವಿಷಯವಾಗಿಯೂ ಸರಕಾರಕ್ಕೆ ಅಪಜಯವು ಬಂದೊದಗಿತು. ಕಸ್ಟಮ್ ಇಲಾಖೆಯ ಖರ್ಜಿನಲ್ಲಿ ೪ ಲಕ್ಷ ರಕಮನ್ನು ತೆಗೆದುಹಾಕಬೇಕೆಂಬ ಲೋಕಮತದ ಸಭಾಸದರ ಸೂಚನೆಗೆ ಒಂದು ಮತವು ಹೆಚ್ಚು ಸಿಕ್ಕಿ ಅದೂ ಪಾಸಾಯಿತು. ಸಾರಾಂಶ ಈ ಮೇರೆಗೆ ದಿಲ್ಲಿಯ ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ಸರಕಾರಕ್ಕೆ ಹಲವು ಅಪಜಯಗಳು ಆಗಾಗ್ಗೆ ಬರುತ್ತಿದ್ದಾವೆ.

೪. ಆದರೆ ಹಿಂದೂಸ್ಥಾನದ ನೋಕರಶಾಹಿಯು ಪಾತಾಳ ಯಂತ್ರಿಯಾದ್ದರಿಂದ ಅದು ಆತ್ಮಸಂರಕ್ಷಣಕ್ಕೆ ಹಲವು ಸ್ಥಾನಗಳನ್ನು ನಿರ್ಮಿಸಿಕೊಂಡಿದೆ ಎಂಬುದು ಸುಳ್ಳಲ್ಲ ಮತ್ತು ಕೌನ್ಸಿಲ್ ಒಫ್ ಸ್ಟೇಟ್ ಎಂಬುದು ನೋಕರಶಾಹಿಗೆ ಇಂಥ ಆತ್ಮಸಂರಕ್ಷಣ ಸ್ಥಾನಗಳಲ್ಲಿ ಒಂದಾಗಿದೆ ಎಂಬುದು ಉಪ್ಪಿನ ತೆರಿಗೆಯ ವೃತ್ತಾಂತದ ಮೇಲಿಂದ ಸ್ಪಷ್ಟವಾಗುತ್ತದೆ. ಲೋಕಪಕ್ಷದಿಂದ ಬರುವ ಗುಂಡುಗಳನ್ನು ತಪ್ಪಿಸಿಕೊಳ್ಳಲು ದುರೊಕ್ರಸಿಗೆ ಈ ಕೌನ್ಸಿಲ್ ಒಫ್ ಸ್ಟೇಟಿನ ಕೋಟೆಯನ್ನು [illegible] ಕಟ್ಟಿಕೊಟ್ಟಿದ್ದಾರೆಂಬುದು [illegible] ಈ ಸಂಗತಿಯು ಮುಂಚೆ ಎಷ್ಟೋ ಸಾರಿ ಪ್ರತ್ಯಯಕ್ಕೆ ಬಂದಿದೆ. ಆದ್ದರಿಂದ ಉಪ್ಪಿನ ಇಮ್ಮಡಿ ತೆರಿಗೆಯ ವಿಷಯವಾಗಿ ಅದೆ ಅನುಭವವು ಪುನಃ ಬಂದಿದ್ದಾದರೆ ಅದರಲ್ಲಿ ಆಶ್ಚರ್ಯವಿಲ್ಲ. ಲೆಜಿಸ್ಲೇಟಿವ ಎಸೆಂಬ್ಲಿಯು ಉಪ್ಪಿನ ಮೇಲೆ ಇಮ್ಮಡಿ ತೆರಿಗೆಯನ್ನು (ಮಣ ೧ಕ್ಕೆ ೨—೮—೦ಯನ್ನು) ಹಾಕಬೇಕೆಂದಿರುವ ಕೋಶಮಂತ್ರಿಯ ಸೂಚನೆಯನ್ನು ಏಕಮತದಿಂದ ತಳ್ಳಿಹಾಕಿದ ಮೇಲೆ ವೈಸರಾಯರು ತಮ್ಮ ಸರ್ಟಿಫಿಕೇಶನಿನ ವಾಸವಿಶಕ್ತಿಯನ್ನು ಉಪಯೋಗಿಸಿ, ಹೇಗಾದರೂ ಸರಕಾರಿ ಉದ್ದೇಶವನ್ನು ಸಾಧಿಸುವುದರಲ್ಲಿದ್ದಾರೆಂದು ಅದೆ ಸಮಯದಲ್ಲಿ ಒಂದು ವಾರ್ತೆಯು ಹೊರಟಿತ್ತು. ಮತ್ತು ಈ ವಾರ್ತೆಯನ್ನು ನಾವು ಆಗಲೆ ವಾಚಕರ ಕಿವಿಗೆ ಹಾಕಿದ್ದೇವೆ. ಇಂಥ ದುರ್ವಾರ್ತೆಗಳು ಸುಳ್ಳಾಗುವುದು ಬಹು ಅಪರೂಪವು. ಆದ್ದರಿಂದ ಬಡ ಹಿಂದೂಸ್ಥಾನದ ದುರ್ದೈವವು ಮುಂದೆ ನಿಂತು ನ್ಯಾಯಪ್ರಿಯರೂ, ವಿದ್ವಾಂಸರೂ, ವೃದ್ಧರೂ, ಒಂದು ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಉಚ್ಚತಮ ನ್ಯಾಯಸ್ಥಾನವನ್ನು ಅಲಂಕರಿಸಿದವರೂ ಆದ ರೆಡಿಂಗ ಸಾಹೇಬರ ಕಾಲದಲ್ಲಿ, ರೆಡಿಂಗ ಸಾಹೇಬರ ಆಲೋಚನೆಯಿಂದಲೆ, ಮತ್ತು ರೆಡಿಂಗ ಸಾಹೇಬರ ಕೈಯಿಂದಲೆ ಬಡ ಜನರ ಉಪ್ಪಿಗೆ ರೆಕಮಂಡೇಶನ ಎಂಬ ಹೆಸರಿನಿಂದ ಇಮ್ಮಡಿ ತೆರಿಗೆಯ ಬ್ರಹ್ಮಲಿಪಿಯು ಬರೆಯಲ್ಪಟ್ಟಿತು! ಉಪ್ಪಿನ ಮೇಲೆ ತೆರಿಗೆ ಹೆಚ್ಚಿಸುವ ಪ್ರಸ್ತಾಪವು ಮೊದಲು ಯಾವಾಗ ಯಾವಾಗ ಬಂದಿತ್ತೊ, ಆಗಾಗ್ಗೆ ಜನತೆಯು ಏಕಮುಖದಿಂದ ನಿಷೇಧಿಸಿದೆ. ಮೊನ್ನೆಯೂ ಇದೆ ಸಂದರ್ಭವು ಒದಗಿದಾಗ ಜನತೆಯು ದೇಶತುಂಬಾ ಈ ತೆರಿಗೆಯನ್ನು ನಿಷೇಧಿಸಿದೆ. ಎಸೆಂಬ್ಲಿಯು ಏಕಮುಖದಿಂದ ಸರಕಾರದ ಸೂಚನೆಯನ್ನು ಕಡಿದುಹಾಕಿತು. ಹೀಗಿರುವಾಗ ಇಂಥ ಸುಶಿಕ್ಷಿತ ಮತ್ತು ಅಶಿಕ್ಷಿತರ ಲೋಕಮತದಿಂದ ದೇಶದ ಅಭಿಪ್ರಾಯವು ವ್ಯಕ್ತವಾದ ಬಳಿಕವೂ ಅದನ್ನು ಲಕ್ಷಿಸದೆ ವೈಸರಾಯರು ಮತ್ತು ಅವರ ಹಸ್ತಕರು ಕೊನೆಗೆ ತಮ್ಮ ಹಟವನ್ನೆ ಸಾಧಿಸಿಕೊಂಡರು. ಎಸೆಂಬ್ಲಿಯು ತೆಗೆದುಹಾಕಿದ ಕರವನ್ನು ಕೌನ್ಸಿಲ್ ಒಫ್ ಸ್ಟೇಟು ಪುನಃ ಮಂಜೂರು ಮಾಡಿಕೊಟ್ಟಿತು. ಸರಕಾರದ ಕಡೆಗೆ ೨೮ ಅನುಕೂಲ ಮತ್ತು ೧೦ ಪ್ರತಿಕೂಲ ಈ ರೀತಿಯ ಮತಗಳು ವಿಭಾಗಿಸಲ್ಪಟ್ಟ ಈ ಬಹುಮತದ ಬಲದಿಂದ ಅದು ಇಮ್ಮಡಿ ಕರದ ಭಾರವನ್ನು ಬಡಬಗ್ಗರ ತಲೆಗೆ ಕಟ್ಟಿದೆ! ಕೌನ್ಸಿಲ್ ಒಫ್ ಸ್ಟೇಟಿನ ಈ ವಾದವಿವಾದದಲ್ಲಿ ಸರ್ ಎಮ್. ದಾದಾಭಾಯಿಗಳಂಥ ಸರಕಾರಿ ಬಹುಮಾನದ ಪದವಿವಾಲರೂ, ಪ್ರೊ. ಕಾಳೆಗಳಂಥ ಪಂಡಿತರೂ, ನಾಮದಾರ ಶಾಸ್ತ್ರಿಗಳಂಥ ಆಪ್ತೀಯ ಕೂಟಕ್ಕೆ ಸೇರಿದವರೂ ಭಾಗವನ್ನು ಎತ್ತಿರುತ್ತ, ಮತ್ತು ಹಾಗಲ್ಲ, ಹೀಗೆ ಎಂಬಿತ್ಯಾದಿ ಯುಕ್ತಿವಾದಗಳನ್ನೂ, ಬುದ್ಧಿವಾದಗಳನ್ನೂ ಹೇಳಿರುತ್ತ ಇದೆಲ್ಲವನ್ನು ತಿರಸ್ಕರಿಸಿ, ವೈಸರಾಯರ ಶಿಫಾರಸನ್ನು ಆಧರಿಸಿ, ಶುಷ್ಕ ಬಹುಮತದ ಬಲದಿಂದ ವರಿಷ್ಠ ನೋಕರಶಾಹಿಯು ತನ್ನ ಇಷ್ಟಾರ್ಥವನ್ನು ಸಾಧಿಸಿಕೊಂಡಿತು. ಇರಲಿ. ಎಸೆಂಬ್ಲಿಯವರು ತಮಗುಂಟಾದ ಈ ಅಪಮಾನವನ್ನು ಹಾಗೆಯೆ ಸಹಿಸಿಕೊಳ್ಳುವರೊ ಅಥವಾ ತಮ್ಮ ತಮ್ಮ ಸಭಾಸದತ್ವಕ್ಕೆ ರಾಜಿಯನ್ನು ಕೊಟ್ಟು ವೈಸರಾಯರ ಈ ನಿರಂಕುಶ ಕೃತ್ಯವನ್ನು ನಿಷೇಧಿಸಿ ಲೋಕಮತದ ಭಾವನೆಯನ್ನು ಮೇಲಕ್ಕೆ ಎತ್ತುವರೊ ಇದನ್ನು ಈಗ ನೋಡಬೇಕಾಗಿದೆ.

೫. ಎಸೆಂಬ್ಲಿಯ ಸಭಾಸದರು ರಾಜಿಯನ್ನು ಕೊಟ್ಟಾರೊ ಹೇಗೆ ಎಂದು ನಾವು ಮೇಲೆ ಯಾವ ಸಂಶಯವನ್ನು ಪ್ರದರ್ಶಿಸಿದ್ದೇವೊ ಅದರ ಕಾರಣವು ಯಾವುದೆಂದರೆ, ಕೌನ್ಸಿಲ್ ಒಫ್ ಸ್ಟೇಟು ವ್ಯಾಸರಾಯರ ಶಿಫಾರಸಿನ ಮೇರೆಗೆ ಉಪ್ಪಿನ ಇಮ್ಮಡಿಯ ಯಾವ ತೆರಿಗೆಯನ್ನು ಸ್ಥಾಪಿಸಿತೊ ಅದು ಎಸೆಂಬ್ಲಿಯ ಮುಂದೆ ಪುನರ್ವಿಮರ್ಶೆಗೆ ಬಂದಾಗ ಅದು ಮೊದಲಿನಂತೆಯೆ ಅದನ್ನು ಕಿತ್ತುಬಿಸಾಡಿತು. ಈ ಸಂದರ್ಭದಲ್ಲಿ ೬೮ ಮತಗಳು ಇಮ್ಮಡಿಯ ತೆರಿಗೆಗೆ ವಿರುದ್ಧವಾಗಿಯೂ, ೪೭ ಅನುಕೂಲವಾಗಿಯೂ ಇದ್ದವು. ಇದು ಕೊಂಚ ಶೋಚನೀಯವೆ ಸರಿ. ಉಪ್ಪಿನ ವಿಷಯದಂಥ ಮಹತ್ವದ ಸಂಗತಿಯು ಚರ್ಚೆಯಲ್ಲಿರುವಾಗಲೂ ಲೋಕಪಕ್ಷದ ಸಭಾಸದರು ಗೈರಹಾಜರಿರುವುದು ಇನ್ನೂ ಶೋಚನೀಯವು. ಎಸೆಂಬ್ಲಿಗೆ ಲೋಕಪಕ್ಷದಿಂದ ೧೦೦ ಜನರು ಚುನಾಯಿಸಲ್ಪಟ್ಟಿರುತ್ತ ಅವರಲ್ಲಿ ಬರೆ ೫೮ ಜನರು ಮಾತ್ರ ಇಂಥ ಮಹತ್ವದ ಚರ್ಚೆಯಲ್ಲಿ ಹಾಜರಿರುವುದೆಂದರೆ, ನಮ್ಮ ಜನಗಳಿಗೆ ದೇಶಹಿತದ ಆಕಾಂಕ್ಷೆಯು ಎಷ್ಟಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಎಲ್ಲ ಶೋಚನೀಯ ವಿಷಯಗಳಲ್ಲಿ ಸಂತೋಷದ ಒಂದು ಮಾತು ಯಾವುದೆಂದರೆ, ಇಂಗ್ಲಿಷ್ ವ್ಯಾಪಾರಿಗಳ ಕಡೆಯ ಸಭಾಸದರಾದ ಸರ್ ಮೊಂಟೆಗ್ಯು ವೆಬರು ಉಪ್ಪಿನ ಇಮ್ಮಡಿ ಕರವನ್ನು ಮನಃಪೂರ್ವಕವಾಗಿ, ರಾಜಕಾರಣದ ದೃಷ್ಟಿಯಿಂದ ಮತ್ತು ಆರ್ಥಿಕ ದೃಷ್ಟಿಯಿಂದ ತೀವ್ರ ನಿಷೇಧಿಸಿದರು. ಹಿಂದೂಸ್ಥಾನ ಸರಕಾರದ ಕೋಶಮಂತ್ರಿಗಳು ತಮ್ಮ ಅಂದಾಜು ಪತ್ರಕದಲ್ಲಿ ತೋರಿಸಿದ ಹಣದ ಕೊರತೆಯು ಬಹಳ ದೀರ್ಘವಾಗಿದೆ. ಅಷ್ಟು ನ್ಯೂನತೆಯು ಬರಲಿಕ್ಕಿಲ್ಲ. ಆದ್ದರಿಂದ ಪುನಃ ಉಪ್ಪಿನ ಮೇಲೆ ತೆರಿಗೆಯನ್ನು ಹೊರಿಸುವುದು ಅನ್ಯಾಯವು ಎಂದು ಹೇಳಿ ಮೊಂಟೆಗ್ಯು ವೆಬ್‌ಸಾಹೇಬರು ರಾಜಕೀಯ ದೃಷ್ಟಿಯಿಂದ ಅದರ ಘಾತುಕತೆಯನ್ನು ತೋರಿಸಿ ಹೇಳುವಾಗ "ಹಿಂದುಸ್ಥಾನದಲ್ಲಿ ಮೊದಲೆ ಅಸಂತೋಷವಿದೆ;

ಇದರಿಂದ ಪುನಃ ಅಸಂತೋಷದ ಜ್ವಾಲೆಗಳೆ ಉರಿಯಹತ್ತುವುವು. 'ಇದು ಪಾರ್ಲಿಮೆಂಟಿನ ಮತ್ತು ವಿಶೇಷವಾಗಿ ಡ್ಯೂಕ್ ಒಫ್ ಕೆನೆಟಿರಂಥವರ ಆಶ್ವಾಸನಗಳ ಮೇಲಿನ ನಂಬಿಕೆಯು ಹೋಗಲು ಒಂದು "ಉತ್ತಮ ಸಂದರ್ಭವನ್ನು" ತಂದುಕೊಟ್ಟಂತಾದೀತು'' ಎಂದು ಒತ್ತಿ ಮಾತಾಡಿದರು. ಈ ರೀತಿಯಿಂದ ಎಸೆಂಬ್ಲಿಯು ಭದ್ರವಾದ ಕೋಟೆಯನ್ನು ಕಟ್ಟಿದ್ದಾದರೂ ಅದರ ಮೇಲೆ ವ್ಯಾಸರಾಯರ 'ಸರ್ಟಿಫಿಕೇಶ'ನಿನ ಗುಂಡು ಬಿದ್ದು ಆ ಕೋಟೆಯು ಬೇಗನೆ ಒಡೆಯಲ್ಪಟ್ಟೀತೆಂದು ಹೇಳುತ್ತಾರೆ. ಇದು ನಿಜವೆ ಆದೀತೆನ್ನೋಣ. ಆಗ ನಮ್ಮ ಎಸೆಂಬ್ಲಿಯ ಸಭಾಸದರು ತಮ್ಮತಮ್ಮ ಜಾಗೆಗಳಿಗೆ ರಾಜಿಯನ್ನು ಕೊಟ್ಟು ದೇಶದ ಗೌರವವನ್ನು ಕಾಪಾಡುತ್ತಾರೊ ನೋಡಬೇಕು.

೬. ಲೋಕದಲ್ಲಿ ಪ್ರಜಾಸತ್ತೆ, ಸ್ವಯಂನಿರ್ಣಯ ಸ್ವರಾಜ್ಯ ಮುಂತಾದ ಒಳ್ಳೆ ಮಾತುಗಳು ಅಭಿಯುಕ್ತರ ಬಾಯಿಯಲ್ಲಿ ಬರಹತ್ತಿವೆ. ಇದು ಒಳ್ಳೆಯದೆ ಸರಿ. ಆದರೆ ಮೇಲಿನ ಈ ವಸ್ತುಗಳು ಸ್ವಂತರೂಪದಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಕಣ್ಣಿನ ಮೇಲೆ ದುರ್ಮಾಂಸವು ಬೆಳೆದುಹೋಗಿ ಅದರಿಂದ ಆ ಕಣ್ಣು ತನ್ನ ಶಕ್ತಿಯನ್ನು ಹೇಗೆ ಕಳೆದುಕೊಳ್ಳುವುದೊ ಹಾಗೆಯೆ ಪ್ರಜಾಸತ್ತೆ ಮುಂತಾದ್ದು ಇತರ ಉಪಾಧಿಗಳ ಪ್ರಾಬಲ್ಯದಿಂದ ಸ್ವಸ್ವರೂಪವನ್ನು ಕಳೆದುಕೊಂಡಿರುವುದು. ಪ್ರಜಾಸತ್ತೆ, ಸ್ವರಾಜ್ಯ ಇವು ದೇಶದೊಳಗಿನ ಎಲ್ಲ ವರ್ಗಗಳ ಪ್ರಾತಿನಿಧ್ಯದಿಂದ ಕೂಡಿರುವುದಾದರೆ ಮಾತ್ರ ಯೋಗ್ಯವು. ಅನ್ಯಥಾ ಅದೊಂದು ಶಬ್ದಚ್ಛಲವಾಗಿದೆ ಎಂದು ತಿಳಿಯಬೇಕು. ಯುರೋಪ, ಅಮೇರಿಕಾ ಇವು ಸಂಸ್ಕೃತಿಯ ಆಗರಗಳೆಂದು ಖ್ಯಾತಿಹೊಂದಿದವುಗಳಾದರೂ ಅಲ್ಲಿಯ ಸ್ವರಾಜ್ಯಗಳಲ್ಲಿ, ಅಲ್ಲಿಯ ಪ್ರಜಾಸತ್ತೆಯ ಅಧಿಕಾರದಲ್ಲಿ ಮತ್ತು ಅಲ್ಲಿಯ ಸ್ವಯಂನಿರ್ಣಯದಲ್ಲಿ ಎಷ್ಟು ವಿಪರೀತ ಪ್ರಕಾರಗಳು ನಡೆಯುತ್ತಿವೆ ಎಂಬುದು ಯಾರಿಗೆ ಗೊತ್ತಿಲ್ಲದ ವಿಷಯವು? ಹಿಂದೂಸ್ಥಾನದಲ್ಲಿಯೂ ಸ್ವರಾಜ್ಯವು ಬೇಕೆಂಬ ಶುಭ ಆಕಾಂಕ್ಷೆಯು ಸರ್ವತ್ರ ಉದಿತವಾಗಿವೆಯಾದರೂ ಈ ಹಿಂದೂಸ್ಥಾನದಲ್ಲಿರುವ ಬಡವರ್ಗದವರ ಸಮಾವೇಶವು ಅದರಲ್ಲಿ ಉಂಟೊ ಇಲ್ಲವೊ ಎಂಬುದು ಮಹತ್ವದ ಪ್ರಶ್ನೆಯಾಗಿದೆ. ಹಿಂದೂಸ್ಥಾನದಲ್ಲಿ ಒಕ್ಕಲಿಗರು, ಕಾಮಗಾರವರ್ಗದವರು (ಕೂಲಿಗಳು), ಬಡಜನರು ತುಂಬಾ ಇದ್ದಾರೆ. ಇಂಥ ಜನರಿಂದಲೆ ಈ ದೇಶವು ತುಂಬಿಹೋಗಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯ ಮಾತಲ್ಲ. ಅಥವಾ ಇಲ್ಲಿಯ ನಿಜವಾದ ಲೋಕಮತವೆಂದರೆ ಈ ಜನರದೆ ಸರಿ. ಅಂಥ ಜನರಿಗೆ ಇಲ್ಲಿಯ ಮುಂದಿನ ಸ್ವರಾಜ್ಯದಲ್ಲಿ ಅವಕಾಶವಿದೆಯೊ ಇಲ್ಲವೊ ಎಂಬುದು ದೇಶಹಿತದ ದೃಷ್ಟಿಯಿಂದ ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. ಅವರಿಗೆ ಎಡೆ ಇಲ್ಲದೆ ಮೇಲುತರಗತಿಯ ಜನರು ಕಾರಭಾರವನ್ನು ಹಬ್ಬಿಸಿ ಅದಕ್ಕೆ ಸ್ವರಾಜ್ಯವೆಂದು ಹೆಸರು ಕೊಟ್ಟರೂ ಅದು ಸಾರ್ಥಕವಾಗಲಾರದು.

೭. ಈ ಹೊತ್ತು ಈ ಆಲೋಚನೆಗಳು ಹುಟ್ಟಲು ಸ್ವರಾಜ್ಯಭಕ್ತರಾದ ಚಿತ್ತರಂಜನ ದಾಸರು ಪಂಜಾಬದಲ್ಲಿ 'ಟ್ರೇಡ್ ಯೂನಿಯನ್ ಕೊಂಗ್ರೆಸ್' (ಕಾಮಗಾರ ಸಂಘಗಳ ಪರಿಷತ್ತು) ಇದರಲ್ಲಿ ಅಧ್ಯಕ್ಷಸ್ಥಾನದಿಂದ ಪ್ರಕಟಿಸಿದ ಮನನೀಯ ವಿಚಾರಗಳೆ ಕಾರಣವಾಗಿವೆ. "ಕೂಲಿಕಸಬಿನಿಂದ ಜೀವಿಸುವ ಜನರ ಬಗ್ಗೆ ನಾನು ಅತ್ಯಂತ ಸಹಾನುಭೂತಿಯುಳ್ಳವನಾಗಿದ್ದಾನೆ. ಒಕ್ಕಲಿಗರನ್ನು ಕೂಡ ಇದೆ ವರ್ಗದಲ್ಲಿ ಸೇರಿಸುವುದು ವಿಹಿತವಾಗಿದೆ. ಇವರೆಲ್ಲರು ಕಾಮಗಾರ ವರ್ಗದವರು. ಇಂಥವರದೊಂದು ಸಂಸ್ಥೆಯನ್ನು ಅವಶ್ಯವಾಗಿ ಏರ್ಪಡಿಸಬೇಕಾದ್ದು. ಯಾಕೆಂದರೆ ಸೇಕಡಾ ೯೮ ಜನರು ಈ ಕಾಮಗಾರಿ ವರ್ಗಕ್ಕೆ ಸೇರಿದವರಿದ್ದಾರೆ ಎಂದ ಮೇಲೆ ಹಿಂದುಸ್ಥಾನದಲ್ಲಿ ಸ್ವರಾಜ್ಯವೆಂಬುದರ ಅರ್ಥವು ಈ ಕಾಮಗಾರ ವರ್ಗವನ್ನು ಅದರಿಂದ ಬಹಿಷ್ಕರಿಸಿದರೆ ಸತ್ಯಕ್ಕೆ ಅನುಸಾರಿಯಾದ್ದಾದೀತೆ? ಸೇಕಡಾ ೯೮ ಜನರ ಪ್ರವೇಶವು ಎಲ್ಲಿ ಇಲ್ಲವೊ, ಮತವು ಎಲ್ಲಿ ಇಲ್ಲವೊ, ಹಿತಸಂಬಂಧವು ಎಲ್ಲಿ ಇಲ್ಲವೊ ಅದು ಎಂತಹ ಸ್ವರಾಜ್ಯವು? ಮಾತ್ರವಲ್ಲ, ಅದು ಯಾರ ಸ್ವರಾಜ್ಯವು? ಹಲವು ವರ್ಗದವರಿಂದ ನಡಿಸಲ್ಪಡುವುದು, ಹಲವು ವರ್ಗದವರ ಹಿತಸಂಬಂಧವನ್ನೆ ಸಾಧಿಸುವ ಕ್ರಮವು ಸ್ವರಾಜ್ಯವಲ್ಲ. ಸ್ವರಾಜ್ಯದಲ್ಲಿ ಬಹುಸಂಖ್ಯಾಕರ ಸಮಾವೇಶವು ಇದ್ದು, ಅವರ ಹಿತಸಂಬಂಧಕ್ಕೆ ಅವಕಾಶವಿರಬೇಕು. ಕಾಮಗಾರರಲ್ಲಿ ರಾಜಕೀಯಚಳವಳಿಯ ಪಾತ್ರತೆಯು ಬರಲಿಲ್ಲವೆಂದು ನಾನು ಎಂದೂ ನಂಬುವುದಿಲ್ಲ. ಇಂಥ ಆಲೋಚನೆಗಳನ್ನು ಆಚ್ಛಿಕೊಳ್ಳುವಲ್ಲಿ ನಾನು ಭಾಗವನ್ನೆತ್ತಲಾರೆನು. ಎಲ್ಲಿ ಹೊಟ್ಟೆಹೊರಕೊಳ್ಳಲು ಒಂದು ತುತ್ತು ಅನ್ನವೂ ಇಲ್ಲವೊ, ಎಲ್ಲಿ ಒಂದು ಗೇಣು ಬಟ್ಟೆಯೂ ಇಲ್ಲವೊ ಮತ್ತು ಎಲ್ಲಿ ಜನರು ದೇಹವನ್ನೂ, ಆತ್ಮವನ್ನೂ ಕಾಪಾಡಿಕೊಳ್ಳಲು ಹಗಲೂ ಇರುಳೂ ಕಷ್ಟಪಡುವರೊ ಅಲ್ಲಿಯೆ ರಾಜಕಾರಣವು ಉದಯಿಸುವುದು. ಹೊರತು ಕ್ಲಬ್ಬುಗಳಲ್ಲಿ ಯಾಗಲಿ, ಶೋಕಿ-ಶೋಕಿನ ಸೊಸೈಟಿಗಳಲ್ಲಿ ಯಾಗಲಿ, 'ಉದಾರಮತದ ಸಂಘ'ಗಳಲ್ಲಿ ಯಾಗಲಿ ರಾಜಕಾರಣವಿರುವುದಿಲ್ಲ" ಎಂದು ಕಾಮಗಾರರ ಮತ್ತು ಕೂಲಿಕಸಬಿನ ಮಹತ್ವವನ್ನು ಶ್ರುತಪಡಿಸಿ ದಾಸರವರು ಕೊನೆಗೆ "ಕಾಮಗಾರಸಂಘವನ್ನು ಏರ್ಪಡಿಸದೆ ಇದ್ದರೆ ಸ್ವರಾಜ್ಯ ಚಳವಳಿಯು ಬಿದ್ದುಹೋಗದೆ ಇರಲಿಕ್ಕಿಲ್ಲ'' ಎಂದು ತನ್ನ ದೃಢ ನಂಬಿಕೆಯನ್ನು ಪ್ರಕಟಿಸಿ ಇದರ ಸಂಘಟನೆಯ ಆವಶ್ಯಕತೆಯನ್ನು ವಿವರಿಸಿದರು. ಸ್ವರಾಜ್ಯಭಕ್ತರಾದ ದಾಸರವರ ಭಾಷಣವು ಹೇಗೆ ಕಾಲೋಚಿತವೂ, ದೇಶಹಿತಪರಿಪ್ಲುತವೂ, ಸ್ವರಾಜ್ಯ ಮತ್ತು ಕಾಮಗಾರ ಸಂಘದ ಚಳವಳಿಗೆ ಮಾರ್ಗದರ್ಶಕವೂ ಆಗಿ ಇತ್ತೊ ಹಾಗೆಯೆ ಆ ಪರಿಷತ್ತಿನಲ್ಲಿ ಪಾಸಾದ ಠರಾವುಗಳು ಕೂಡ ಮಹತ್ವದವೂ ಮತ್ತು ಆ ವರ್ಗದ ಹಿತಸಂಬಂಧವನ್ನು ಬೆಳೆಸುವವುಗಳೂ ಆಗಿದ್ದವು. ಈ ಹೊಸ ಚಳವಳಿಯು ಸ್ವರಾಜ್ಯ ಸಂಪಾದನೆಯಲ್ಲಿ ಮತ್ತು ದೇಶಹಿತವರ್ಧನದಲ್ಲಿ ಬೇಗನೆ ಪರ್ಯವಸಾನವನ್ನು ಹೊಂದಲಿ ಎಂದು ಬಯಸುವೆವು.

ಮಂಗಳೂರು.

ಹಿಂದೂಮತ ಸ್ಥಾಪನೆಗಳ ಕುರಿತಾದ ಬೀಲು ಮದರಾಸ ನ್ಯಾಯವಿಧಾಯಕ ಸಭೆಯಲ್ಲಿ ಕಳೆದ ತಾ. ೨೭ರಿಂದ ಚರ್ಚಿಸಲ್ಪಡುತ್ತಿದೆ. ನಮ್ಮ ಜಿಲ್ಲೆಯ ದೇವಸ್ಥಾನಗಳ ಮತ್ತು ಮಠಗಳ ಪರವಾಗಿ ಡಾಕ್ಟರ ಯು. ರಾಮರಾಯರು ಈ ಕೌನ್ಸಿಲಿನಲ್ಲಿ ವಾದಿಸುತ್ತಿರುವರು.

ಪಡುಬಿದ್ರೆಯ ಗೌಡಸಾರಸ್ವತ ಬ್ರಾಹ್ಮಣರ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತೆಯ ಕುರಿತು ಬಾತ್ಮಿಯನ್ನು ಪತ್ರದಲ್ಲಿ ಪ್ರಕಟಿಸುವುದಕ್ಕಿಂತ ಸಂಬಂಧಪಟ್ಟವರಿಗೆ ಪ್ರಥಮದಲ್ಲಿ ಕ್ರಮಪ್ರಕಾರ ತಿಳಿಸುವುದು ಉತ್ತಮ.

ಉಡುಪಿಯ ಅಷ್ಟಮಠಗಳನ್ನು ಹಿಂದೂಮತ ಸ್ಥಾಪನೆಗಳ ಕುರಿತಾದ ಬೀಲಿನೊಳಗೆ ಸೇರಿಸಲಿಕ್ಕಾಗದೆಂದು ಉಡುಪಿಯ ಕೆಲವು ಮಹನೀಯರು ಕೌನ್ಸಿಲಿಗೆ ಒಂದು ಮನವಿಯನ್ನು ಮಾಡಿರುವರು. ಈ ಮನವಿಯ ಒಂದು ಪ್ರತಿಯು ನಮ್ಮ ಬಳಿಗೂ ಬಂದಿರುವುದು. ಆದರೆ ಸ್ಥಳ ಸಂಕೋಚದಿಂದ ಅದನ್ನು ಪ್ರಕಟಿಸಲು ಆಗಲಿಲ್ಲ.

ಸರ್ವ ಸಾಮಾಜಗಳ ಪ್ರೀತಿಭೋಜನವೊಂದು ಸದ್ಯದಲ್ಲಿಯೇ ಮಂಗಳೂರಿನಲ್ಲಿ ಆಗಲಿಕ್ಕಿದೆಂದು ಶ್ರೀಯುತ ಕಾರ್ನಾಡ ಸದಾಶಿವರಾಯರು ಇಂಡಿಯನ್ ನೇಶನಲ್ ಕೊನ್ಫರೆನ್ಸಿನ ಸೆಕ್ರೆಟರಿಗಳಿಗೆ ತಂತಿ ಕೊಟ್ಟಿರುತ್ತಾರೆ.

ಗವರ್ನಮೆಂಟ್ ಕೊಲೇಜ್ ಮಿಸ್ಲೆನಿ' ಎಂಬ ತ್ರೈಮಾಸಿಕ ಪತ್ರವು ಸದರಿ ಕೊಲೇಜಿನ ಪ್ರಿನ್ಸಿಪಾಲ ಶ್ರೀಯುತ ಜೆ. ಕೆ. ಚೆಟ್ಟೂರ ಬಿ. ಎ. (ಓನರ್ಸ ಆಕ್ಸಫರ್ಡ) ಇವರ ಸಂಪಾದಕತ್ವದಲ್ಲಿ ಸದ್ಯದಲ್ಲೆ ಹೊರಡಲಿಕ್ಕಿದೆ.

ನಮ್ಮ ಜಿಲ್ಲೆಯ ಕಲೆಕ್ಟರರಾಗಿ ಮಿ॥ ಬ್ರಿಗ್ ಸ್ಟೋಕ್ಸ ಐ. ಸಿ. ಯಸ್.ರವರು ಬರುತ್ತಾರೆಂಬ ವಾರ್ತೆ ಇತ್ತಷ್ಟೆ. ಈಗ ಇವರು ಕಲೆಕ್ಟರರಾಗಿಲ್ಲಿ ಬರುವುದಿಲ್ಲ. ಕುಂದಾಪುರ ತಾಲೂಕಿನಲ್ಲಿ ಮೊದಲು ಸಬ್ ಕಲೆಕ್ಟರರಾಗಿದ್ದ ಮಿ॥ ನೆಲ್ಸ ದೊರೆಗಳವರು ಇಲ್ಲಿಯ ಕಲೆಕ್ಟರರಾಗಿ ನೇಮಕಪಟ್ಟು ಬರುವ ತಾರೀಕು ೨ರಲ್ಲಿ ಚಾರ್ಜನ್ನು ವಹಿಸಿಕೊಳ್ಳಲಿಕ್ಕಿದ್ದಾರೆಂದು ಕೇಳುತ್ತೇನೆ.

ಇಲ್ಲಿಯ ಟೆನಿಸ್ ಟೂರ್ನಮೆಂಟ ಪಂದ್ಯಾಟವು ಕಳೆದ ಸೋಮವಾರದಿಂದ ಪ್ರಾರಂಭವಾಗಿದೆ. ಈ ವರುಷ ಹೊರಗಿನವರಾರೂ ಈ ಆಟಗಳಿಗೆ ಸ್ಪರ್ಧಿಸಲಿಲ್ಲ.

ಬಂಟವಾಳ ಸರ್ಕಲಿನಿಂದ ಮಂಗಳೂರ ತಾಲೂಕು ಬೋರ್ಡು ಮೆಂಬರರಾದ ಶ್ರೀಯುತ ಕೊಂಬ್ರಬೈಲ್ ಕೃಷ್ಣರಾಯರು ತಮ್ಮ ಮೆಂಬರಿಕೆಗೆ ರಾಜಿನಾಮೆಯನ್ನು ಕೊಟ್ಟಿದ್ದರಿಂದ ಅವರ ಬದಲಿಗೆ ಬೇರೊಬ್ಬ ಮೆಂಬರರನ್ನು ಬರುವ ಮೇ ತಿಂಗಳ ತಾ. ೩ರಲ್ಲಿ ಆರಸಲಿಕ್ಕಿದೆ. ಈ ಮೆಂಬರಿಕೆಗೆ ಉಮೇದುದಾರರಾಗತಕ್ಕವರು ತಮ್ಮ ನೊಮಿನೇಶನ್ ಅರ್ಜಿಗಳನ್ನು ಎಪ್ರಿಲ್ ತಾ. ೧೩ನೇ ಸಾಯಂಕಾಲ ೪ ಘಂಟೆಯೊಳಗೆ ಮಂಗಳೂರ ತಾಲೂಕು ಬೋರ್ಡು ಆಫೀಸಿನಲ್ಲಿ ಹಾಜರುಮಾಡತಕ್ಕದ್ದು.

ಈ ಸಂವತ್ಸರದ ಮೇಘಾಧಿಪನು ಗುರುವಾಗಿರುವನು. ಕಳೆದ ಎರಡು ಗುರುವಾರಗಳಲ್ಲೂ ಮಳೆ ಸುರಿದಂತೆ ನಿನ್ನೆ ರಾತ್ರಿಯೂ ಮಳೆಯ ಹನಿಗಳು ಬಿದ್ದಿದ್ದವು.

ತಾ. ೨೧—೩—೧೯೨೩ರಲ್ಲು ಎಡನೀರು ಮಠದ ಶ್ರೀಮದೀಶ್ವರಾನಂದ ಭಾರತಿ ಶ್ರೀಪಾದಂಗಳವರು ಇಲ್ಲಿಯ ದ್ರಾವಿಡಬ್ರಾಹ್ಮಣರ ವಿದ್ಯಾರ್ಥಿಭವನವನ್ನು ಸಂದರ್ಶನೆಮಾಡಿ ಸಂತೋಷಪಟ್ಟು ಈ ಸಂಸ್ಥೆಗೆ ತಾವು ಸಹ ೫೦೦ ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆಂಬ ಸಂಗತಿಯನ್ನು ಆ ಸಂಘದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ದಕ್ಷಿಣಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಳಿಯವರ ಸಭೆಯು ಕಳೆದ ತಾರೀಕು ೨೫ರಲ್ಲಿ ಮ. ರಾ. ನೆಲ್ಲಿಕಾಯಿ ವೆಂಕಟರಾಯರ ಮನೋಹರ ವಿಲಾಸದಲ್ಲಿ ಸೇರಿ ಪರಿಷತ್ತಿನ ಸಮ್ಮೇಲನವನ್ನು ಕೂಡಿಸುವ ವಿಷಯದಲ್ಲಿ ಕೆಲವು ನಿರ್ಣಯಗಳನ್ನು ಮಾಡಿರುವುದು. ಈ ನಿರ್ಣಯಗಳಂತೆ ಪರಿಷತ್ತಿನ ಸಮ್ಮೇಲನವನ್ನು ಬರುವ ಮೇ ತಾರೀಕು ೧೯ ಮತ್ತು ೨೦ರಲ್ಲಿ ಗವರ್ನಮೆಂಟ್ ಕೊಲೇಜಿನ ಸಭಾಸದನದಲ್ಲಿ ನೆರೆಯಿಸಬೇಕಾಗಿ ನಿಶ್ಚಯಿಸಿದೆ. ಸಮ್ಮೇಲನದವರ ವಿಹಾರವಿನೋದಕ್ಕಾಗಿ ೧೯ನೇ ತಾರೀಕಿನ ರಾತ್ರಿ ಗೊಂಬೆಯಾಟ, ಆದಿತ್ಯವಾರ ೨೦ನೇ ಮಧ್ಯಾಹ್ನ ೪-೩೦ರಿಂದ ೭ ಘಂಟೆ ವರೆಗೆ ಹರಿಕಥಾಕಾಲಕ್ಷೇಪ, ರಾತ್ರಿ ದಶಾವತಾರ ಆಟ, ಇಷ್ಟಕ್ಕೆ ಏರ್ಪಾಡುಮಾಡಬೇಕೆಂದು ನಿರ್ಧರಿಸಿದೆ. ದಕ್ಷಿಣಕನ್ನಡದವರಾಗಿದ್ದು ಈಗ ಈ ಜಿಲ್ಲೆಯಿಂದ ಹೊರಗೆ ನಿವಾಸಮಾಡುತ್ತಿರುವ ಗೃಹಸ್ಥರೆಲ್ಲರಿಗೆ ಆಮಂತ್ರಿಸುವುದಕ್ಕೆ ಅನುಕೂಲವಾಗುವಂತೆ ಒಂದು ಪಟ್ಟಿಯನ್ನು ತಯಾರಿಸಿ ಆಮಂತ್ರಣಗಳನ್ನು ಕೊಡಬೇಕೆಂದು ಸಹ ನಿರ್ಣಯಿಸಿದೆ.

"ಮಿರಾಜ್ ಎ. ಪಿ. ಮಿಶ್ಯನ್ ಆಸ್ಪತ್ರೆಯಲ್ಲಿ ಕೆಲಸಮಾಡಿಕೊಂಡಿದ್ದ ಡೊಕ್ಟರ ಒಫಾನಿಯಲ್ ಬೇವದತ್ತರೆಂಬವರು ಬರುವ ತಿಂಗಳ ಮೊದಲನೇ ವಾರದಲ್ಲಿ ನಮ್ಮ ಮಂಗಳೂರಿಗೆ ಬಂದು ಬಲ್ಮಠದಲ್ಲಿರುವ ಅವರ ಬಂಗಲೆಯಲ್ಲಿ ಉಳಕೊಳ್ಳುವರು. ಈ ಡಾಕ್ಟರರು ಈ ಪಟ್ಟಣದವರೇ ಆಗಿದ್ದು ಕಳೆದ ೧೯೧೧ನೇ ಇಸವಿಯ ವರೆಗೆ ಇಲ್ಲಿಯ ಮಿಶ್ಯನ್ ಶಾಲೆಯಲ್ಲಿ ಕಲಿತು, ಅನಂತರ ವೈದ್ಯಕೀಯಶಿಕ್ಷಣವನ್ನು ಮುಗಿಸಿದ ಬಳಿಕ ಸುಪ್ರಸಿದ್ಧ ಡೊಕ್ಟರ್ ವೆನ್‌ಲೇಸ್‌ರವರು ಇವರನ್ನು ತಮ್ಮ ಆಸ್ಪತ್ರೆಯಲ್ಲಿ ಕೆಲಸಕ್ಕೆ ನೇಮಿಸಿದರು. ಈ ಆಸ್ಪತ್ರೆಯ 'ಲೆಬರೇಟರಿಯಲ್ಲಿ ಇವರು ಕ್ರಮೇಣ ತಮ್ಮ ಅವಿರತ ಪರಿಶ್ರಮದಿಂದಲೂ, ಕುಶಾಗ್ರಬುದ್ಧಿಯಿಂದಲೂ, ವಿಶೇಷ ಸಾಧನೆಯಿಂದಲೂ ವೈದ್ಯಕೀಯ ಶಿಕ್ಷಣದಲ್ಲಿ ಎಂದರೆ, ವಿಶೇಷವಾಗಿ ಆಹಾರ, ರಕ್ತ, ಮಲ ಮತ್ತು ಮೂತ್ರ ಇತ್ಯಾದಿಗಳ ಪರೀಕ್ಷೆ, ಆಹಾರಗಳ ವಿಭಾಗ ವಿಧಾನ (Analysis of food) ಮೊದಲಾದವುಗಳಲ್ಲಿ ಹೆಚ್ಚಿನ ಪಾಂಡಿತ್ಯವನ್ನು ಪಡೆದರು. ಅಂತರ್ಗತ ಪದಾರ್ಥದ ಪರೀಕ್ಷೆಯಲ್ಲಿ ಇವರು ಹೆಚ್ಚಿನ ಪ್ರಖ್ಯಾತಿಗೊಂಡಿರುವರು. ಸ್ಪೆಶಲ್ ಇಂಜೆಕ್ಶನ್ ಮತ್ತು ಒಂದು ಪ್ರಾಣಿಯ ರಕ್ತವನ್ನು ಇನ್ನೊಂದರಲ್ಲಿ ಪ್ರಯೋಗಿಸುವುದು ಮುಂತಾದ ಚಿಕಿತ್ಸೆಗಳಲ್ಲಿ ಸೇಕಡಾ ೯೦ ಮಂದಿ ಡೊಕ್ಟರುಗಳಿಗೆ ಅಪೇಕ್ಷಿಸಿದ ಫಲವನ್ನು ಬರಮಾಡಿಕೊಳ್ಳಲು ಅಸಾಧ್ಯವಾಗಿದ್ದರೂ ಇವರು ಮೇಲಿನ ಚಿಕಿತ್ಸೆಯನ್ನು ಚಲೋದಾಗಿ ಮಾಡುವುದರಲ್ಲಿ ಪೂರ್ಣ ಸಮರ್ಥರು. ಇವರು ಸರಳರೂ ಎಲ್ಲರಲ್ಲೂ ಹೊಕ್ಕು ಬಳಕೆಯನ್ನು ಮಾಡಿಕೊಳ್ಳುವ ಸ್ವಭಾವದವರೂ ಆಗಿರುವರು. ಮಿರಾಜಿನಲ್ಲಿ ಎಲ್ಲರೂ ಇವರನ್ನು ಗೌರವಿಸುವರು. ಹೆಸರುಗೊಂಡ ಅನೇಕ ಡಾಕ್ಟರು ನಿರಾಶೆಪಟ್ಟು ಬಿಟ್ಟುಬಿಟ್ಟ ರೋಗಿಗಳನ್ನು ಇವರು ಗುಣಪಡಿಸಿದ್ದರಿಂದ ಅಲ್ಲಿಯವರು ಇವರ ಸಾಮರ್ಥ್ಯಕ್ಕೆ ಆಶ್ಚರ್ಯಗೊಂಡಿರುವರು. ನಮ್ಮ ಊರಿನವರೇ ಆದ ಇಂಥ ಸಶಕ್ತ ವೈದ್ಯರ ಪರಿಚಿತಿಯು ಇಲ್ಲಿ ಅನೇಕರಿಗೆ ಗೊತ್ತಿಲ್ಲ. ಈ ತರದ ಪಾಂಡಿತ್ಯವುಳ್ಳವರ ಸಹಾಯದಿಂದ ಇಲ್ಲಿಯೂ ಅನೇಕರು ಪ್ರಯೋಜನ ಹೊಂದಬಹುದೆಂದು ನನ್ನ ನಂಬಿಕೆ. ಕಳೆದ ಜನವರಿಯಲ್ಲಿ ನಾನು ಮಿರಾಜಿನಲ್ಲಿರುವಾಗ ನನಗೆ ಅವರ ಸ್ವತಃ ಅನುಭವವು ಇದ್ದುದರಿಂದಲೇ ಸಾರ್ವಜನಿಕ ಹಿತಕ್ಕಾಗಿ ನಾನು ಇದನ್ನು ಪ್ರಕಟಿಸಲು ಬರೆದಿರುವೆನು ಎಂದು ಮ. ರಾ. ವಿ. ಶಂಕರನಾರಾಯಣರಾವ್ ಬಿ. ಎ., ಹೆಡ್ ಕ್ಲಾರ್ಕ ಡಿಸ್ಟ್ರಿಕ್ಟ ಕೋರ್ಟ, ಮಂಗಳೂರು ಇವರು ತಿಳಿಸುವರು.

ದಕ್ಷಿಣ ಕನ್ನಡ ಜಿಲ್ಲೆಯ ರೈತರು ವ ವೋಟರರಿಗೆ ವಿಜ್ಞಾಪನೆ.

ಮದ್ರಾಸು ಸಂಸ್ಥಾನದ ನ್ಯಾಯವಿಧಾಯಕ ಸಭೆಗೆ ಮೆಂಬರರನ್ನು ಚುನಾಯಿಸುವ ಕಾಲವು ಸಮೀಪಿಸುತ್ತಿದೆ. ನನ್ನ ಮಿತ್ರಮಂಡಳಿಯಲ್ಲಿ ಅನೇಕರು ಪ್ರೋತ್ಸಾಹಕೊಟ್ಟಿರುವುದರಿಂದ ಈ ಸರ್ತಿಯ ಚುನಾವಣೆಗೆ ನಾನು ಉಮೇದುವಾರನಾಗಬೇಕೆಂತ ಅಪೇಕ್ಷಿಸುತ್ತೇನೆ. ಇತ್ತಲಾಗಿನ ಬಜೇಟುಗಳನ್ನು ಶೋಧಿಸಿದರೆ ಮನಸ್ಸಿಗೆ ದಿಗಿಲುಹುಟ್ಟುವುದಕ್ಕೆ ಕಾರಣವಿದೆ. ಸರಕಾರಕ್ಕೆ ಕಂದಾಯ ತೆರಿಗೆಗಳಿಂದ ಉಂಟಾಗುವ ಆದಾಯವು ಖರ್ಜಿಗೆ ಸಾಕಾಗುವುದಿಲ್ಲವೆಂಬುದು ಎಲ್ಲರಿಗೂ ವೇದ್ಯವಿದೆ. ಈ ಸ್ಥಿತಿಯು ಸದ್ಯದಲ್ಲಿ ನೆಟ್ಟಗಾಗಿ ನಮ್ಮ ಮೇಲೆ ಹೊರಿಸಿರುವ ತೆರಿಗೆಗಳು ಕಡಿಮೆಯಾಗುವ ಕಾಲವು ಬಹುದೂರ ಉಂಟೆಂತ ತೋರುತ್ತದೆ. ಈಗಿನ ತೆರಿಗೆಗಳನ್ನು ಏರಿಸುವ ವ ಹೊಸ ತೆರಿಗೆಗಳನ್ನು ವಿಧಿಸುವ ಸಂದರ್ಭವು ಬಂದು ಒದಗಬಹುದು. ಸರ್ವೇ ಸೆಟ್ಲಮೆಂಟುಗಳನ್ನು ಜಾರಿಗೆತರುವ ಪ್ರಯತ್ನಗಳು ಇವೆ. ಕಳೆದ ಸೆಟ್ಲಮೆಂಟಿನ ಬಾಧೆಯಿಂದ ಇನ್ನೂ ನಾವು ತಲೆಎತ್ತಲಿಲ್ಲ. ಫೋರೆಸ್ಟ ನಿಬಂಧನೆಗಳಿಂದ ನಮಗೆ ಸ್ವಲ್ಪವೂ ನಿವೃತ್ತಿಸಿಕ್ಕಲಿಲ್ಲ. ಈ ಎಲ್ಲಾ ವಿಷಯಗಳಲ್ಲಿಯೂ ಬಲವಾಗಿ ಕಾದಾಡುವ ಅಗತ್ಯ ಉಂಟು. ನನಗೆ ನಮ್ಮ ಜಿಲ್ಲೆಯಲ್ಲಿ ಸ್ವಲ್ಪ ಆಸ್ತಿ ಇದ್ದು ಮದ್ರಾಸಿನಲ್ಲಿ ವಾಸ್ತವಿಸಿ ಆಗಾಗ್ಗೆ ಪ್ರತಿವರ್ಷವೂ ಊರಿಗೆ ಹೋಗಿ ಬರುವ ಪ್ರಯುಕ್ತ ಈ ಪ್ರಾಂತದ ಅಭಿಪ್ರಾಯಗಳನ್ನು ತಿಳಕೊಂಡು ಅವರ ಸಹಾಯವನ್ನು ಪಡಕೊಳ್ಳುವುದಕ್ಕೆ ಸಾಕಷ್ಟು ಅನುಕೂಲತೆ ವ ಅವಕಾಶ ಇರುವುದರಿಂದ ನನ್ನನ್ನು ನೀವು ಚುನಾಯಿಸಿದರೆ ನಿಮ್ಮೆಲ್ಲರ ಕಡೆಯಿಂದ ನಾನು ಪೂರ್ಣ ಶ್ರದ್ಧೆಯಿಂದ ಕೆಲಸಮಾಡಲಿಕ್ಕೆ ಉದ್ಯುಕ್ತನಾಗಿದ್ದೇನೆ.

ಚಿತ್ರಕುಳಂ.
ಮೈಲಾಪುರ.
ತಾ. 27—3—'23

ಕೆ. ಸುಂದರರಾವ್,
[illegible]

ವಿಧಾಯಕ ಕಾರ್ಯಕ್ರಮ.

ಸ್ವರಾಜ್ಯಪಕ್ಷ [illegible] ಜಯಕರರವರ ಉಪನ್ಯಾಸದ ಸಾರಾಂಶ.

([illegible] ತಾ. ೨೪—೩—೧೯೨೩)

“ವಿಧಾಯಕ ಕಾರ್ಯಕ್ರಮ” ಎಂಬ ಶಬ್ದವು ಈಗ ರಾಜಕೀಯ ವಾಙ್ಮಯದಲ್ಲಿ ಹೊಸದಾಗಿ ಬಂದಿದೆ. ಈ ಶಬ್ದಕ್ಕೆ ಒಂದು ವಿಶೇಷವಾದ ಅರ್ಥವು ರೂಢವಾಗುತ್ತಬಂದಿದೆಯಾದರೂ ಈ ಅರ್ಥವು ಕೊನೆತನಕ ಕಾಯಮಾಗಿ ಒಂದು ವೇಳೆ ನಿಲ್ಲಲಿಕ್ಕಿಲ್ಲ. ಇದರಂತೆಯೆ ಬೇರೆ ನಾಲ್ಕು ಮಾತುಗಳು ನಮ್ಮಲ್ಲಿ ಮುಂದೆ ಬಂದಿವೆ. ಅಸಹಕಾರಿತೆ, ಸತ್ಯಾಗ್ರಹ, ನಿಃಶಸ್ತ್ರಪ್ರತಿಕಾರ, ಕಾಯಿದೆಭಂಗ ಇವೆ ಆ ನಾಲ್ಕು ಮಾತುಗಳು. ಈ ಐದು ಶಬ್ದಗಳಲ್ಲಿ “ಅಸಹಕಾರಿತೆ” ಎಂಬೀ ಮಾತು ವ್ಯಾಪ್ತಿಯಿಂದ ಎಲ್ಲಕ್ಕೂ ಹಿರಿದಾದುದು. ಅದಕ್ಕೆ ಅರ್ಥದಿಂದ ಎಲ್ಲಕ್ಕೂ ಹಿರಿದಾದುದು. ಅಸಹಕಾರಿತೆಯು ಒಂದು ಬಗೆಯ ಮನಃಪ್ರವೃತ್ತಿಯು. ಸರಕಾರಕ್ಕೆ ನಾವು ಸಾಧ್ಯವಿದ್ದಷ್ಟು ಸಹಕಾರಿತೆಯನ್ನು ಮಾಡಕೂಡದು ಎಂದು ಇದರ ಅರ್ಥವಿರುವುದರಿಂದ, ಮಹಾತ್ಮಾಜಿಯವರು ಬರೆದಂತೆ ಚಿಕ್ಕ ಮಕ್ಕಳೂ ಆ ಅಸಹಕಾರಿತೆಯನ್ನು ಸಾಧಿಸಬಹುದಾಗಿದೆ. ಇದರ ಮುಂದಿನ ಮೆಟ್ಟಲು ರಾಜಕೀಯ ಸತ್ಯಾಗ್ರಹದ್ದು. ಆತ್ಮಿಕಬಲವೆ ಸತ್ಯಾಗ್ರಹದ ಅಸ್ತ್ರವಾಗಿದೆ. ಅದರಲ್ಲಿ ಪ್ರತ್ಯಕ್ಷ ಕೃತಿಯು ಯಾವುದೂ ಇರುವುದಿಲ್ಲ. ಈ ಆತ್ಮಿಕಬಲದಿಂದ ಪ್ರತಿಪಕ್ಷದ ಬಲವು ತಾನೇ ಕುಗ್ಗಿಹೋಗುತ್ತದೆ ಎಂಬುದು ‘ಮಹಾಶ್ವೇತಾ’ ಎಂಬ ನಾಟಕದ ಒಂದು ಪ್ರಸಂಗದಲ್ಲಿ ಉತ್ತಮವಾಗಿ ತೋರಿಸಲ್ಪಟ್ಟಿದೆ. ಬಲಾತ್ಕರಿಸಲು ಒಬ್ಬ ಅಧಮನು ಓಡಿಬರುವಾಗ, ಯಾರ ಸಹಾಯವೂ ಇದ್ದಿಲ್ಲ; ಇಂಥಾ ಸಮಯದಲ್ಲಿ ಆ ಪತಿವ್ರತೆಯು ಕೇವಲ ಆತ್ಮಿಕಸಾಮರ್ಥ್ಯದಿಂದ ಅವನ ಕೈಯು ಅವಳ ಹೆಗಲ ಮೇಲೆ ಬೀಳುವುದರ ಬದಲು ಅವಳ ಕಾಲುಗಳ ಮೇಲೆ ಬಿದ್ದಿತು. ಮೂರನೆ ಮೆಟ್ಟಲು ನಿಃಶಸ್ತ್ರಪ್ರತಿಕಾರದ್ದು. ಅದು ದುರ್ಬಲರ ಅಸ್ತ್ರವಾಗಿದೆ. ಇಂಗ್ಲೆಂಡಿನಲ್ಲಿ ಮತಾಧಿಕಾರಾಕಾಂಕ್ಷಿಣೀ ಸ್ತ್ರೀಯರು, ಧರ್ಮಸ್ವಾತಂತ್ರ್ಯವಾದಿಗಳಾದ ನಾನ್‌ಕನ್‌ಫರ್ಮಿಸ್ಟರು, ಅಥವಾ ದಕ್ಷಿಣ ಆಫ್ರಿಕದಲ್ಲಿ ಒಂದು ಹಿಡಿಯಷ್ಟಿರುವ ಹಿಂದಿಗಳು ಈ ಸಾಧನವನ್ನು ಅವಲಂಬಿಸಿದ್ದರು. ಅಮೇರಿಕನ್ ತತ್ವವೇತ್ತನಾದ ತೋರೋ ಎಂಬವನು ಸತ್ಯಾಗ್ರಹಾತ್ಮಕಪ್ರತಿಕಾರದ ಸಿದ್ಧಾಂತವನ್ನು ಪ್ರಥಮತಃ ಸ್ಥಾಪಿಸಿದನು. ಆದರೆ ಅವನ ಪ್ರತಿಕಾರದಲ್ಲಿ ಸಂದರ್ಭಾನುಸಾರವಾಗಿ ಶಸ್ತ್ರಪ್ರತಿಕಾರಕ್ಕೂ ಅವಕಾಶವಿದ್ದ ಕಾರಣ ಮಹಾತ್ಮಾ ಗಾಂಧಿಗಳು “ನಿಃಶಸ್ತ್ರ”ವೆಂಬ ವಿಶೇಷಣವನ್ನು ಅದರೊಟ್ಟಿಗೆ ಸೇರಿಸಿ, ಹಿಂದೂಸ್ಥಾನಕ್ಕಾಗಿ ಈ ಹೊಸ ಸಿದ್ಧಾಂತವನ್ನು ಕಲ್ಪಿಸಿದರು. ಪ್ರತಿಕಾರವು ಸಶಸ್ತ್ರವಾಗಿರಲಿ ಅಥವಾ ನಿಃಶಸ್ತ್ರವಾಗಿರಲಿ, ಅದರಲ್ಲಿ ಯಾವುದಾದರೂ ಒಂದು ಬಗೆಯ ಶಾರೀರಶಕ್ತಿಯು ಇದ್ದೇಇರುತ್ತದೆ. ಅದು ಬರೆ ಮನಃಪ್ರವೃತ್ತಿಯಲ್ಲ, ಅಥವಾ ಅದು ಹೊರಗೆ ಕಾಣದಿರುವ ಆತ್ಮಿಕ ಸಾಮರ್ಥ್ಯದ ವಾಯರ್‌ಲೆಸ್ (ತಂತಿಗಳಿಲ್ಲದ) ತೆರೆಗಳಲ್ಲ. ಕಾಯಿದೆಭಂಗವು ಈ ಪರಂಪರೆಯಲ್ಲಿ ಐದನೆಯ ಮತ್ತು ಕೊನೆಯ ಮೆಟ್ಟಲಾಗಿದೆ. ನಿಜವಾದ ಕಾಯಿದೆಭಂಗವೆಂಬುದು ಸಾರ್ವತ್ರಿಕ ಕಾಯಿದೆಭಂಗವು, ಅದನ್ನು ಸಮುದಾಯವು ಪ್ರಾರಂಭಿಸಿದ ಬಳಿಕ ಅದೆ ರಾಜ್ಯಕ್ರಾಂತಿಯೆನಿಸಲ್ಪಡುವುದು.

“ಶಬ್ದಗಳ ಈ ಅನುಕ್ರಮವು ಶಬ್ದವ್ಯವಸ್ಥೆಗಾಗಿ ನಿರ್ಮಿಸಲ್ಪಟ್ಟಿದೆ. “ವಿಧಾಯಕ” ಕಾರ್ಯಕ್ರಮವೆಂಬುದರ ನಿಜವಾದ ಅರ್ಥವು ಅದರ ಪ್ರತಿಯೋಗಿ ಶಬ್ದವಾದ ವಿಧ್ವಂಸಕವೆಂಬ ಮಾತನ್ನು ಲಕ್ಷದಲ್ಲಿ ತಂದರೆ ಸರಿಯಾಗಿ ಗೊತ್ತಾಗುತ್ತದೆ. ಈ ಕಾರ್ಯಕ್ರಮದ ತಪಶೀಲುಗಳು ಈಗಿನ ಅಸಹಕಾರದ ಚಳವಳದಲ್ಲಿ ಎಂದಲ್ಲ, ಮುಂಚಿನ ರಾಷ್ಟ್ರೀಯ ಚಳವಳದಲ್ಲಿ ಇದ್ದೆ ಇದ್ದವು. ಆದರೆ ಆಗ ವಿಧಾಯಕ—ವಿಧ್ವಂಸಕ ಎಂಬೀ ಶಬ್ದಗಳು ಮಾತ್ರ ರೂಢವಾಗಿದ್ದಿಲ್ಲ. ಮಹಾತ್ಮಾ ಗಾಂಧಿಗಳ ಚಳವಳದಲ್ಲಿ ಸಹ ಕಾರ್ಯಕ್ರಮದ ತಪಶೀಲುಗಳ ಉಲ್ಲೇಖವು ವಿಶೇಷ ಜೋರಿನಿಂದ ಉಂಟಾಗಿದೆಯಾದರೂ, “ವಿಧಾಯಕ” ಎಂಬೀ ಮಾತು ಬೆಝವಾಡದ (ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ) ಸಭೆಯ ಅನಂತರವೂ ಸರಿಯಾಗಿ ರೂಢವಾಗಿರಲಿಲ್ಲ. ಆದರೆ ಬಾರಡೋಲಿಯ ಸಂಕಲ್ಪವು ಯಾವಾಗ ವ್ಯರ್ಥವಾಯಿತೊ ಅನಂತರವೆ ಈ ಶಬ್ದವು ರೂಢವಾಯಿತು. ಯಾಕೆಂದರೆ ಈ ವಿಧಾಯಕಕ್ಕೆ ಪ್ರತಿಯೋಗಿಯಾದ ಯಾವ ವಿಧ್ವಂಸಕ ಕಾರ್ಯಕ್ರಮವಿದೆಯೊ ಅದೆಲ್ಲ ಇನ್ನುಮುಂದೆ ತ್ಯಾಜ್ಯವೆಂದು ನಿರ್ಣಯಿಸಲ್ಪಟ್ಟು, ಮಹಾತ್ಮರಿಂದ ವಿಧಾಯಕಪಕ್ಷ [illegible] ಎಲ್ಲ ಭಾರವು ಇದರ ಮೇಲೆಂದು [illegible] ನಿರ್ಣಯಿಸಲಾಯಿತು. ಆದ್ದರಿಂದ ವಿಧಾಯಕ ಕಾರ್ಯಕ್ರಮದ ಮಥಿತಾರ್ಥವನ್ನು ನಿರ್ಣಯಿಸುವವನು ಬೆಝವಾಡಾ ಮತ್ತು ಬಾರಡೋಲಿ ಈ ಎರಡು ಧ್ರುವಾತ್ಮಕ ಬಿಂದುಗಳನ್ನು ಅವಶ್ಯವಾಗಿ ಕಣ್ಣೆದುರಿಟ್ಟುಕೊಳ್ಳಬೇಕು. ಕಾರ್ಯಕ್ರಮವು ಅದೆ; ಆದರೆ ಹೇತುಭೇದದಿಂದ ಅದಕ್ಕೆ ವಿಧ್ವಂಸಕ ಮತ್ತು ವಿಧಾಯಕವೆಂದು ಬೇರೆ ಬೇರೆ ಸ್ವರೂಪಗಳು ಬಂದವು. ಬೆಝವಾಡದ ಸಭೆಯ ವರೆಗೆ ಇದಕ್ಕೆ ವಿಧ್ವಂಸಕ ಸ್ವರೂಪವಿತ್ತು. ಕಾರಣ, ಬೇಗನೆ ಆಗಲಿಕ್ಕಿದ್ದ ಕಾಯಿದೆಭಂಗದ ಅಂಗ[illegible]ಯಾಗಿತ್ತು.

ಕ್ರಮೇಣ ಬಹಿಷ್ಕಾರಾತ್ಮಕವಾದ ವಿಧ್ವಂಸಕ ಕಾರ್ಯಕ್ರಮವು ಯಶಸ್ವಿಯಾಗಲಿಲ್ಲವೆಂಬುದು ಮಹಾತ್ಮಾಜಿಯವರಿಗೆ ಬೆಝವಾಡದಲ್ಲಿ ಗೊತ್ತಾಯಿತು, ಆದರೆ ಅವರು ಅದನ್ನು ತಮ್ಮ ಸ್ವಭಾವಸಿದ್ಧವಾದ [illegible]ದಿಂದ ಮರೆಸಿಹಾಕಲು ಪ್ರಯತ್ನಿಸಿದರು. ತಾ. ೧ನೇ ಜೂನು ೧೯೨೧ನೆಯ ‘ಯಂಗ ಇಂಡಿಯಾ’ದಲ್ಲಿ, ಎಂದರೆ, ಕಲ್ಕತ್ತೆಯ ಸ್ಪೆಶಲ್ ಕೊಂಗ್ರೆಸ್ಸು ಆದ ೯ ತಿಂಗಳಲ್ಲಿ, ಅವರು “ಶಾಲಾ ಕಾಲೇಜು, ಕೋರ್ಟು ಇವುಗಳ ವರ್ಚಸ್ಸು ಸಮೂಲ ಉನ್ಮೂಲನವಾಯಿತು” ಎಂದು ಬರೆದರು. ಆದರೆ ಇದು ಬರೆ ಮಾತು. ಡೀನ್ ಸ್ವಿಫ್ಟನು ಕೂಡ ಒಂದು ಲೇಖದಲ್ಲಿ ಪಂಚಾಂಗ [illegible] ಪಾಟ್ರಿಜ್ [illegible] ಅದನ್ನು ಪೂರೈಸಲೂ ತಪ್ಪಲಿಲ್ಲ. ಪಾರ್ಟ್ರಿಜನು ಪ್ರತ್ಯಕ್ಷವಾಗಿ [illegible] ತಾನು ಸಾಯಲಿಲ್ಲವೆಂದು ಹೇಳುವಾಗಲೆ ಡೀನ್ ಸ್ವಿಫ್ಟನ ಲೇಖನವು “ಛೇ! ಅಲ್ಲ, ನೀನು ಸತ್ತಿರುವಿ” ಎಂದು ನಿರ್ಣಯಿಸುವುದು. ಹಾಗೆಯೆ ಶಾಲೆ, ಕೋರ್ಟು, ಕೌನ್ಸಿಲುಗಳು ಇವು ಸಜೀವವಾಗಿಯೂ, ಪುಷ್ಟವಾಗಿಯೂ [illegible] ಸ್ಥಿತಿಯಲ್ಲಿದ್ದು ನಡೆಯುತ್ತಿರುವಾಗ ಮಹಾತ್ಮಾಜಿಯವರು, ಅವುಗಳ ಮರಣದ ಸಂದೇಶವು ಇಲ್ಲಿದೆ ಬರೆದುಬಿಟ್ಟರು. ಏನೆಂದರೆ:—We know exactly where we are; the institutions have lost their prestige. ಈ ವಾಕ್ಯದೊಳಗಿನ ಎರಡನೆಯ ಭಾಗಕ್ಕಿಂತಲೂ “We know exactly where we are” ಈ ವಾಕ್ಯವು ಸಂದಿಗ್ಧವಾಗಿದೆ. ಅದರ ಕೊನೆಗೆ ಅದು ನಿಜವಾಗಿದೆ. ಒಂದೆಯ ವೇಳೆ ಕುಂಬಾ ಹೊರೆಯುವ ತರಿಸಲು, ಅದರ ಹೊಟ್ಟೆಗೆ ಕಂಬಿಗಳನ್ನು ಕೊಟ್ಟು ಹಗ್ಗವು ಹರಿಯುವ ವರೆಗೆ ಎಳೆದು ಕಟ್ಟಿ, ಅನಂತರ “ಎಲ್ಲಿ ಹಗ್ಗ ಕಟ್ಟಿಯಾಯಿತು ನಿಜ, ಪರಂತು ಹಗ್ಗವು ಹರಿದು ಹೋಯಿತಲ್ಲ, ಎಂದು ಹೇಳುವುದು ಸಂಪೂರ್ಣ ಮಾತ್ರ ಅದೆ ಒಪ್ಪುತ್ತದೆ. ಆದರೆ ಹೀಗನ್ನದೆ “ಹಗ್ಗವನ್ನು ಸಾಕಷ್ಟು ಎಳೆದು ಕಟ್ಟಿಯಾಯಿತು, ಈಗ ಸಾಕುಮಾಡಿರಿ! ಎಂದು ಹೇಳುವುದರಲ್ಲಿ ಏನು ಅರ್ಥವಿದೆ? ಆದರೆ ಜನರು ಮಾತ್ರ ಈ ಮಾತಿಗೆ ಹೆಚ್ಚು ಗೊಡವೆ ಕೊಡಲಿಲ್ಲ. ಯಾಕೆಂದರೆ, ಹಗ್ಗವು ಹರಿಯದೆ ಬೇಕಷ್ಟು ಎಳೆಯಲ್ಪಡುತ್ತಲೆ ಇದೆ ಎಂದು ತಿಳಕೊಳ್ಳಲು ಅವರು ತಯಾರಿದ್ದರು. ಆದರೆ ಮುಂದೇನು! “ಹೌದಯ್ಯಾ! ನೀವು ಹೇಳುವಂತೆ ಬಹಿಷ್ಕಾರಗಳೆಲ್ಲಾ ಯಶಸ್ವಿಯಾಗಿದ್ದಾವೆ. ಒಪ್ಪಿಗೆ. ಆದರೆ ಮುಂದೆ ಏನು” ಎಂದು ಜನರು ತಮ್ಮ ಮನಸ್ಸಿಗೆ ಪ್ರಶ್ನೆಕೇಳಿಕೊಂಡರು. ಮತ್ತು ಬೆಝವಾಡದಿಂದ ಬಾರಡೋಲಿಯ ವರೆಗೆ ಕಾಯಿದೆಭಂಗದ ಭಾವನೆಯು ಪರಿಪೋಷವನ್ನು ಹೊಂದುತ್ತ ಇದ್ದ ಕಾರಣ, ವಿಧ್ವಂಸಕಕಾರ್ಯಕ್ಕೆ ಮತ್ತು ವಿಧಾಯಕದ ಸೌಮ್ಯಸ್ವರೂಪವು ಪ್ರಾಪ್ತವಾಗಿದ್ದಿಲ್ಲ. ಆದರೆ ಬಾರಡೋಲಿಯಲ್ಲಿ ರಿವರ್ಸಿಂಗ್ ಸ್ಟೇಶನಿನಂತೆ ಚಳವಳವು ಮುಟುವೆ ತಿರುಗಿತು. ಇದರಿಂದ ಟ್ರೈನಿನ ಕಂಪಾರ್ಟುಮೆಂಟುಗಳು ಅವೆ, ಮೊದಲಿನಂತೆಯೆ ಒಂದಕ್ಕೊಂದು ಸೇರಿದ್ದು, ಡ್ರಾಯ್ವರನು ಅವನೆ, ಮತ್ತು ಮುಂದಿನ ಎಂಜಿನು ಹಿಂಬದಿಯಲ್ಲಿ ಹಚ್ಚಿದ ಕಾರಣ ಪ್ರಗತಿಯು ಕೂಡ ಉಂಟಾಯಿತು. ಆದರೆ ಆ ಪ್ರಗತಿಯು ಬೆನ್ನುಬದಿಗಾಯಿತು. ಹಾಗೆಯೆ ಈ ಕಾರ್ಯಕ್ರಮವಾದರೂ ಮುಂಚಿನದೆ. ಆದರೆ ವಿಧ್ವಂಸಕ ಹದ್ದು ಹೋಗಿ ವಿಧಾಯಕವೆಂಬಮಾತು ಪ್ರಸಿದ್ಧಿಗೆ ಬಂತು.

ವಿಧಾಯಕಕಾರ್ಯಕ್ರಮವು ಯಾರಿಗೆ ಬೇಡವಾಗಿದೆ? ಅದರಲಿ ಯಾವುದು ಕೆಟ್ಟದಿದೆ? ಯಾಕೆ, ಸ್ವರಾಜ್ಯಪ್ರಾಪ್ತಿಯ ಪ್ರಯತ್ನದಲ್ಲಿ ಅವು ಅವಶ್ಯಕವಾದಿವೆ. ಆದರೆ ಈ ಕರ್ತವ್ಯಗಳ ಉಪದೇಶವು ಮೊದಲು ಯಾವಾಗ ಇದ್ದಿಲ್ಲ? ಅಸ್ಪೃಶ್ಯತೆಯ ನಿವಾರಣ, ಹಿಂದು ಮುಸಲ್ಮಾನರ ಐಕ್ಯ, ಸ್ವದೇಶಿ, ರಾಷ್ಟ್ರೀಯ ಶಿಕ್ಷಣ ಈ ಎಲ್ಲ ಸಂಗತಿಗಳು ಮುಂಚಿನವೆ ಸರಿ. ಇವುಗಳಿಗೆ ವಿಧಾಯಕ ಎಂಬ ಹೊಸ ಹೆಸರು ಕೊಟ್ಟ ಮಾತ್ರದಿಂದ ಅವೇನು ಹೊಸತಾಗುವುದಿಲ್ಲ. ಅವುಗಳಲ್ಲಿ ನೂತನತ್ವವು ಇತ್ತು; ಆದರೆ ಅದು ಸದ್ಯಃ ಫಲದಾಯಿತ್ವದ ಆವಿರ್ಭಾವವು ಮಾತ್ರ! ಮತ್ತು ಈ ಕಾರಣದಿಂದಲೆ ಇಂತಿಷ್ಟು ದಿವಸದೊಳಗೆ ಸ್ವರಾಜ್ಯ, ಸಂಖ್ಯಾಗಣನೆಯಿಂದ ಇಂತಿಷ್ಟು ವಿಧಾಯಕ ಕಾರ್ಯಕ್ರಮದ ಸಿದ್ಧತೆ ಮುಂತಾದ ಸಂಗತಿಗಳಲ್ಲಿ ಜನಗಳಿಗೆ ಮಹತ್ವವು ಕಂಡುಬಂತು. ಆದರೆ ಯಾವಾಗ ಈ ಸದ್ಯಃ ಫಲದಾಯಿತ್ವದ ಆವಿರ್ಭಾವವು ನಿಷ್ಫಲವಾಯಿತೊ ಆಗ ಎಂದರೆ ‘ವಿಧಾಯಕ ಕಾರ್ಯಕ್ರಮವನ್ನೆ ಮಾಡುತ್ತ ಇದ್ದುಕೊಳ್ಳಿರಿ, ಅದರಿಂದ ಎಂದಾದರೂ ಕಾಯಿದೆಭಂಗವು ಬರುವುದು. ಮತ್ತು ಆ ಕಾಯಿದೆಭಂಗದಿಂದ ಮುಂದೆ ಎಂದಾದರೂ ಸ್ವರಾಜ್ಯವು ಸಿಗುವುದು ಎಂಬುದಾಗಿ ದೂರಾನ್ವಯವಾಗಹತ್ತಿದ ಕಾರಣ, ಈ ಕಾರ್ಯಕ್ರಮ ಮತ್ತು ಸ್ವರಾಜ್ಯ ಇವುಗಳೊಳಗಿನ ಕಾರ್ಯಕಾರಣಭಾವವು ತನ್ನಷ್ಟಕ್ಕೆನೆ ಶಿಥಿಲವೂ ಲುಪ್ತವೂ ಆಗಹತ್ತಿತು. ಒಂದು ಹೆಜ್ಜೆ ವಿಧಾಯಕದ ಮೇಲೆ, ಇನ್ನೊಂದು ಕಾಯಿದೆಭಂಗದ ಮೇಲೆ ಕೂಡಲೆ ಮೂರನೆದು ಸ್ವರಾಜ್ಯದ ಮೇಲೆ ಎಂಬುದಾಗಿ ಒಂದರ ಹಿಂದೆ ಒಂದು ಕಾರ್ಯಕ್ರಮದ ಟ್ರಾಮ್‌ಟೇಬಲು ಬಾರಡೋಲಿ ವರೆಗೆ ಇತ್ತು. ಮತ್ತು ಹೀಗಿರುವುದರಿಂದಲೆ ಅಸಹಕಾರಕ್ಕೆ ಒಂದು ಬಗೆಯ ನಾವೀನ್ಯ ಇತ್ತು. ಈ ಟ್ರಾಮ್‌ಟೇಬಲು ರದ್ದುಮಾಡಲ್ಪಟ್ಟ ಬಳಿಕ ಕಟ್ಟು ಹೊಡೆಯುವ ಎತ್ತಿನ ಗಾಡಿಗೆ ಬೇಕಾದವರು ಪ್ರೀತಿಯಿಂದ ರೈಲುಗಾಡಿ ಎಂದು ಹೆಸರು ಕೊಡಲಿ, ಆದರೆ ಅದು ಸತ್ಯವಲ್ಲ. ವಿಧ್ವಂಸಕ ಕಾರ್ಯಕ್ರಮವು ಆಯುಷ್ಯಹೀನವಾಯಿತೆಂಬುದು ಅದಕ್ಕೆ ವಿಧಾಯಕ ಕಾರ್ಯಕ್ರಮದ ಹೆಸರು ಕೊಟ್ಟಂದಿನಿಂದಲೆ ತನ್ನಷ್ಟಕ್ಕೆ ಸಿದ್ಧವಾಗುತ್ತದೆ.

ಒಂದೆಳೆದ ಹೆಜ್ಜೆಯು ಮುಂದೆಯೆ ಇದೆ ಎಂದು ಆಗ್ರಹದಿಂದ ಬೇಕಾದವರು ಅಂದುಕೊಳ್ಳಲಿ. ಅವರಿಗೆ ಯಾರಿಂದಲೂ ಅಡ್ಡಿ ಇಲ್ಲ. ಈ ಹೆಜ್ಜೆಯು ಮುಂದರಿಸುತ್ತಿದ್ದಾಗ ಅಸಹಕಾರಿತೆಯ ಕಾರ್ಯಕ್ರಮದ ಮೇಲೆ ಹೆಚ್ಚಿನ ನಂಬಿಕೆ ಇಲ್ಲದವರೂ ಕೂಡ ಹೇಳಹತ್ತಿದರು. ಏನಂದರೆ, “ಆಗಲಿ, ನಿಮ್ಮ ಮನೆಯ ಕೋಳಿಯ ಕೂಗಿನಿಂದ ಸ್ವರಾಜ್ಯದ ಉಷಃಕಾಲವುಂಟಾಗುತ್ತದಾದರೆ ಆಗಲಿ. ಅದು ನಮಗೆ ಇಷ್ಟವೆ ಸರಿ. ರಾಜ್ಯಕ್ರಾಂತಿಯು ನಿಜವಾಗ ಉಂಟಾಗಹತ್ತಿ ಮತ್ತು ಆ ಸಮಯದಲ್ಲಿ ಶ್ರದ್ಧಾಹೀನರಾದ ನಾವು ಅದರಲ್ಲಿ ಹಿಂದೆ ಬಿದ್ದಿದ್ದಾದರೆ ಆ ದೋಷವನ್ನು ನಾವು ಯಾವ ಅನುಮಾನವೂ ಇಲ್ಲದೆ ಸೆರಗಿಗೆ ಕಟ್ಟಿಕೊಳ್ಳುವೆವು. ನಾವು ಇಲ್ಲವೆಂದು ಹೇಳಿದರೂ ಅದರಿಂದ ಏನಾದೀತು? ಅಲ್ಲದೆ ಎಲ್ಲರ ಉದ್ದಿಷ್ಟವು ಸಾಧ್ಯವಾಯಿತೆಂಬ ತಿಳುವಿಂದ ನಮ್ಮ ಆಜನ್ಮಾಸು ತಪ್ಪಿದ್ದಾದರೂ ವ್ಯಸನವಾಗಲಿಕ್ಕಿಲ್ಲ. ಆದರೆ ನಿಜವಾದ ಕ್ರಾಂತಿ ಇಲ್ಲ, ಸ್ವರಾಜ್ಯ ಪ್ರಾಪ್ತಿ ಇಲ್ಲ. ಮತ್ತು ಬದಲಾವಣೆಯನ್ನು ಇಂಥ ಸಂದರ್ಭದಲ್ಲಿ ಸೂಚಿಸಿದರೆ ನಾವೆ ತಪ್ಪುಗಾರರು! ಇಂಥ ಎರಡೂ ಕಡೆಯ ಪೆಟ್ಟು ಮಾತ್ರ ನಾವು ತಿನ್ನಲೊಲ್ಲೆವು. ನಮ್ಮನ್ನು ಹೀಯಾಳಿಸುತ್ತೀರಿಯಾದರೆ ನಾವು ಹೀಯಾಳಿಸುವುದನ್ನು ನೀವು ತಿಳಕೊಳ್ಳಬೇಕು. ಆದರೆ ಮಾತು ಮಾತ್ರ ರಾಜ್ಯಕ್ರಾಂತಿಯ ಅಸಹಕಾರಿತೆಯದು. ಆದರೆ ನಿಜವಾದ ಅಸಹಕಾರಿತೆಯು ಒಂದೆರಡು ಕೃತಿಯಿಂದ ಆಗಲೊಲ್ಲದು. ಆದ್ದರಿಂದ “ಹೇಳಿರಿ, ಯಥಾರ್ಥ ಸ್ವರೂಪದ ಯಾವ ಅಸಹಕಾರಿತೆಯನ್ನು ಮಾಡುತ್ತಿದ್ದೀರಿ?” ಇಂಥ ಪ್ರಶ್ನೆಯನ್ನು ನಾನು ಸಾವಿರಾರು ಜನರ ಸಭೆಯಲ್ಲಿ ಕೇಳುತ್ತೇನೆ. ಅದಕ್ಕೆ ಸರಳ ಉತ್ತರವು ಯಾರಿಂದಲೂ ಸಿಗುವುದಿಲ್ಲ.

“ಕೆಲವರು ಹೇಳುವರೇನೆಂದರೆ, ‘ಟಿಳಕರಿಗೆ ಇಂಥಾ ಪ್ರಶ್ನೆಯನ್ನು ಕೇಳಿದ್ದಾದರೆ ಹೇಗಾಗುತ್ತಿತ್ತು?’ ಇಂಥ ಪ್ರಶ್ನೆಗೆ ಅವಕಾಶಕೊಡುವ ಹಾಗೆ ಅವರ ಧೋರಣವಿದ್ದಿಲ್ಲ. ಅವರ ಧೋರಣವು ವ್ಯಾಪಕವಾಗಿಯೂ ಸಮಾಲೋಚನ ಸಂಗ್ರಾಹಕವಾಗಿಯೂ ಇರುತ್ತಿತ್ತು. ಆದರೆ ಅವರು ಸ್ವರಾಜ್ಯಪ್ರಾಪ್ತಿಗೆ ಅವಧಿಯನ್ನು ಹೇಳಿದ್ದಿಲ್ಲ. [illegible] ಕಾರ್ಯಕ್ರಮಕ್ಕೂ ಸ್ವರಾಜ್ಯಪ್ರಾಪ್ತಿಗೂ ಎಂಥ ಗಂಟುಹಾಕಿ ಕೊಡಲಿಲ್ಲ. ಟಿಳಕ ಮತ್ತು ಮಹಾತ್ಮಾ ಗಾಂಧಿ ಇವರ ಧೋರಣಗಳೊಳಗಿನ ವ್ಯತ್ಯಾಸವನ್ನು ತೋರಿಸಿಕೊಡುವುದರಲ್ಲಿ ಒಬ್ಬರ ಯೋಗ್ಯತೆ ಹೆಚ್ಚು ಮತ್ತೊಬ್ಬರದು ಕಡಿಮೆ ಎಂದು ಸೂಚಿಸುವ ಹೇತು ಇರುವುದಿಲ್ಲ. ಟಿಳಕ ಧೋರಣವು [illegible] ವಸ್ತುಸ್ಥಿತಿಯನ್ನು ತೋರಿಸುವ ಜೀವಾಳವು(?) ಪ್ರೇಯಸ್ಸು (ವೋಕ್ಸ್) ಮತ್ತು ಶ್ರೇಯಸ್ಸು [illegible] ಈ ಎರಡು ರೀತಿಗಳ ಭೇದವು [illegible]. ಟಿಳಕರು ತಮ್ಮ ಕಾಲವನ್ನರಿತಿದ್ದರು. ಮತ್ತು ಅದು ಸ್ಥಿರವಾಗಿ ನಿಲ್ಲುತ್ತಿತ್ತು. ಮಹಾತ್ಮಾ ಗಾಂಧಿಗಳು ಉತ್ಕೃಷ್ಟ ಧ್ಯೇಯವಾದಿಗಳಾದ ಕಾರಣ ಅವರು ಶ್ರೇಯಸ್ಸಿನ ಅಂತಿಮ ಸೀಮೆಯಲ್ಲಿ ನಿಂತು ತಮ್ಮ ನಿಶಾಣೆಯನ್ನು ಹೂಳುವರು. ಈ ಕಾರಣದಿಂದ ಅದ್ಭುತ ಪರಾಕ್ರಮಿಯಾದ ರಜಪೂತ ವೀರನಂತೆ ಅವರ ಸ್ಥಿತಿಯಾಗುತ್ತದೆ. ವೀರಸೇನಾನಾಯಕನು ಮೂರು ಗಾವದ ದಾಟಿ ಮುಂದರಿಸಿದನು, ನಿಜ ಆದರೆ ಹಿಂದಿನ ಸೇನೆಯವರ ಪತ್ತೆಯೇ ಇಲ್ಲ. ವಿದ್ವತ್ಪ್ರಧಾನರು, ವಿಚಾರಪ್ರಧಾನರು; ವಿಕಾರಪ್ರಧಾನರು ಎಂದು ಮೂರು ಬಗೆಯ ವಿಭೂತಿಗಳಿರುವರು. ಇವರಲ್ಲಿ ಮಹಾತ್ಮರು ಮೂರನೆಯ ವರ್ಗಕ್ಕೆ, ಟಿಳಕರು ಎರಡನೆಯ ವರ್ಗಕ್ಕೆ, ವಿಷ್ಣುಶಾಸ್ತ್ರಿ ಚಿಪಲೂಣಕರರು ಒಂದನೆಯ ವರ್ಗಕ್ಕೆ ಸೇರುತ್ತಾರೆ. ಮಹಾತ್ಮಾ ಗಾಂಧಿಗಳ ಧೋರಣವು ಭಾವನೆಯ ದೃಷ್ಟಿಯಿಂದ ಅತ್ಯಂತ ಉಜ್ವಲವಾದದ್ದು. ಆದರೆ ಅವರು ಸಾಮಾನ್ಯವಾಗಿ ಯಾವುದನ್ನು ನಡಿಸುತ್ತಿರುವರೊ ಅದಕ್ಕೆ ಯುದ್ಧವೆಂದು ಹೇಳಲಾಗುವುದಿಲ್ಲ. ಕ್ರಿಮಿಯನ್ ಯುದ್ಧದಲ್ಲಿ ೬೦೦ ಜನ ಶೂರರಾದ ಇಂಗ್ಲಿಷ ಸವಾರರು ಬೆಲಾಕ್ಲಾವಾ ಎಂಬಲ್ಲಿಯ ರಶಿಯನ್ ತೋಪುಗಳ ಬುರುಜುಗಳ ಮೇಲೆ ನುಗ್ಗಿಬಂದು ತಪ್ಪಿನಿಂದ ಸತ್ತುಹೋದರು. ಈ ಪ್ರಸಂಗವನ್ನು ಬಣ್ಣಿಸುವಾಗ ಯುದ್ಧಶಾಸ್ತ್ರಜ್ಞರು It is glorious but not war (ಇದು ಉಜ್ವಲವಾದ ಪರಾಕ್ರಮವು) ಎಂದು ಹೇಳಿರುವರು. ಮಹಾತ್ಮಾಜಿಗಳ ವೃತ್ತಿ ಮಟ್ಟಿಗೆ “ಇವನು ರಣಧೀರ ಶೂರ ಸಿಪಾಯಿಯು” ಎಂದಾದರೂ ಹೇಳಬಹುದು. ಒಂದು ವೇಳೆ ಅದು ಯುದ್ಧವೆ ಬೇಕಾದರೆ ಆಗದಿರಲಿ, ಪರಂತು ಅವರ ನಾಮೋಚ್ಚಾರವನ್ನು ಮಾಡಿ, ವಿಧಾಯಕ ಕಾರ್ಯಕ್ರಮದಿಂದ ಸ್ವರಾಜ್ಯವನ್ನು ತಂದುಕೊಡುತ್ತೇವೆಂದು ಹೇಳುವವರ ಆಚರಣೆಯನ್ನು ಕುರಿತು “It is neither glorious nor war” ಎಂದರೆ ಅದು ಯುದ್ಧವೂ ಅಲ್ಲ, ಪರಾಕ್ರಮವೂ ಅಲ್ಲ ಹೀಗೆ ಹೇಳಬೇಕಾಗುತ್ತದೆ. ತಾತ್ಪರ್ಯ ವಿಧಾಯಕ ಕಾರ್ಯಕ್ರಮವು ಬೇಕೇನು. ಅದನ್ನು ಎಲ್ಲರೂ ಅನುಸರಿಸಬೇಕು. ಆದರೆ ಅದರಿಂದಲೆ ಸ್ವರಾಜ್ಯವು ಸಿಗುವುದು ಅಥವಾ ಅದಿಲ್ಲದೆ ಸ್ವರಾಜ್ಯವು ಸಿಗಲಿಕ್ಕಿಲ್ಲವೆಂದು ಭ್ರಾಮಕವಾದ ಭಾವನೆಯನ್ನು ಮಾತ್ರ ಯಾರೂ ಇಟ್ಟುಕೊಳ್ಳಬಾರದು ಎಂಬುದೆ ನಮ್ಮ ಹೇಳಿಕೆಯಾಗಿದೆ.”

ಕಾಸರಗೋಡು ಕೊಂಗ್ರೆಸ್ಸ್ ಕಮಿಟಿ.

೧೯೨೩ನೆಯ ಇಸವಿ ಮಾರ್ಚಿ ತಾ. ೨೦ನೆಯ ಮಂಗಳವಾರ ದಿನ ಶ್ಯಾಮಘಂಟೆ ೫ಕ್ಕೆ ಕಾಸರಗೋಡು ಸಹಕಾರ ಸಂಘದ ಆಫೀಸಿನಲ್ಲಿ ರಾ! ಎಸ್. ವೆಂಕಟರಾಮರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಕಾಸರಗೋಡು ತಾಲೂಕು ಕೊಂಗ್ರೆಸ್ ಕಮ್ಮಿಟಿಯ ಮಹಾಸಭೆಯ ಪ್ರೊಸಿಡಿಂಗ್ಸು.

೧. ಕಾಸರಗೋಡು ತಾಲೂಕು ಕೊಂಗ್ರೆಸು ಕಮ್ಮಿಟಿಯ ಚಾಲತಿ ವರ್ಷದ ಕಾರ್ಯಕಾರಿ ಮಂಡಲಿಯ ಮೆಂಬರರಾಗಿ ಈ ಕೆಳಗೆ ಕಾಣಿಸಿದವರನ್ನು ಚುನಾಯಿಸಲಾಯಿತು (೧) ಸಿ. ಮಂಜುನಾಥ ಕಮ್ತಿ (ಅಧ್ಯಕ್ಷ) (೨) ಕೆ. ಕೃಷ್ಣ ಕಮ್ತಿ, (ಉಪಾಧ್ಯಕ್ಷ) (೩) ಶೆಡ್ಡೆ ಲಕ್ಷ್ಮಣರಾವ್ (ಕಾರ್ಯದರ್ಶಿ,) (೪) ದೇವದಾಸ ಶೆಣೈ, (ಖಜಾಂಚಿ,) (೫) ವಿಠಲ್ ಮಮ್ಮುಂಞ್, (೬) ಎಮ್. ಪಾಂಡುರಂಗರಾವ್, (೭) ಬದಿಯಡ್ಕ ರಾಮರಾಯ ಶೆಣೈ, (೮) ಬಳ್ಳಂಬೆಟ್ಟು ಮಾಧವಪ್ಪ, (೯) ಎಸ್. ವೆಂಕಟರಾಮರಾವ್, (೧೦) ಚೆಂಡಾಮರ ನರಸಿಂಗರಾವ್.

೨. ಈ ಕೆಳಗೆ ಕಾಣಿಸಿದವರನ್ನು ಜಿಲ್ಲಾ ಕೊಂಗ್ರೆಸು ಕಮಿಟಿಗೆ ಪ್ರತಿನಿಧಿಗಳಾಗಿ ಚುನಾಯಿಸಲಾಯಿತು.

೧. ಎಸ್. ವೆಂಕಟರಾಮರಾವ್, (೨) ಶೆಡ್ಡೆ ಲಕ್ಷ್ಮಣರಾವ್, (೩) ಕಟೀರಿ ಅಬ್ದುಲ್ಲಾ, (೪) ಕೆ. ನಾರಾಯಣ (೫) ಬಿ. ಮಾಧವಪ್ಪ, (೬) ರಾಮರಾಯ ಶೆಣೈ, (೭) ಪು. ಉಮಾನಾಥರಾವ್, (೮) ಎಮ್. ಪಾಂಡುರಂಗರಾವ್, (೯) ಕೆ. ರಾಮರಾವ್, (೧೦) ರಘುನಾಥ ಶೆಣೈ.

೩. ೧೯೨೧ನೇ ಮತ್ತು ೨೨ನೇ ಇಸವಿಗಳ ತಾಲೂಕು ಕೊಂಗ್ರೆಸು ಕಮ್ಮಿಟಿಯ ಲೆಕ್ಕ ಸಭೆಯ ಮುಂದಿಡಲಾಯಿತು. ಮತ್ತು ಅದು ಮಂಜೂರು ಮಾಡಲಾಯಿತು.

೪. ಕಾಸರಗೋಡು ತಾಲೂಕಿನಲ್ಲಿ ಬರುವ ಎಪ್ರಿಲ್ ತಾ. ೩೦ರ ಒಳಗೆ ವಸೂಲುಮಾಡಬೇಕಾದ ರೂ. ೫೦೦೦ವನ್ನು ಈ ಕೆಳಗೆ ವಿವರಿಸಿದ ಪ್ರಕಾರ ಹಂಚಿಹಾಕಲಾಯಿತು. ಕಾಸರಗೋಡು ಕಸಬಾ ರೂ. ೫೦೦, ಇತರ ಗ್ರಾಮ ಕಮ್ಮಿಟಿಗಳು ರೂ. ೧೦೦ಕ್ಕೆ ಕಮ್ಮಿ ಆಗದಂತೆ ವಸೂಲು ಮಾಡಬೇಕಾಗಿ ಸಹ ನಿರ್ಣಯಿಸಲಾಯಿತು. ಮತ್ತು ಪ್ರತಿಯೊಬ್ಬರೂ ಒಂದು ವರ್ಷಾವಧಿ ಆದಾಯದ ಶೇಕಡಾ ೧ರಕ್ಕಿಂತ ಕಮ್ಮಿ ಆಗದಂತೆ ಸ್ವರಾಜ್ಯ ಫಂಡಿಗೆ ಕೊಡಬೇಕಾಗಿ ವಿನಂತಿಮಾಡುವರೆ ನಿಶ್ಚಯಿಸಲಾಯಿತು. ಮತ್ತು ಸ್ವರಾಜ್ಯ ಫಂಡಿಗೆ ಹಣ ಕೂಡಿಸುವ ಬಗ್ಗೆ ಕೆಳಗೆ ಹೆಸರು ಕಾಣಿಸಿದ ಗೃಹಸ್ಥರನ್ನೊಳಗೊಂಡ ಒಂದು ಕಮ್ಮಿಟಿಯನ್ನು (ಇತರರನ್ನು ಸಹ ಕೂಡಿಸಿಕೊಳ್ಳುವ ಅಧಿಕಾರದೊಡನೆ) ನೇಮಿಸಲಾಯಿತು (೧) ಎಸ್. ವೆಂಕಟ್ರಾಮರಾವ್, (೨) ಸಿ. ಮಂಜುನಾಥ ಕಮ್ತಿ, (೩) ಶೆಡ್ಡೆ ಲಕ್ಷ್ಮಣರಾವ್, (೪) ಮಹಮ್ಮದ್ ಶೆರೂಲ್, (೫) ವಿಠಲ್ ಮಮ್ಮುಂಞ್, (೬) ಕೆ. ಕೃಷ್ಣ ಕಮ್ತಿ, (೭) ದೇವದಾಸ ಶೆಣೈ, (೮) ಎಮ್. ಪಾಂಡುರಂಗರಾವ್, (೯) ಕೆ. ರಾಮರಾವ್, (೧೦) ಭುವನಶೆಟ್ಟಿ, (೧೧) ಶೆಡ್ಡೆ ಸುಂದರರಾಮರಾವ್ (೧೨) ಬಿ. ವೆಂಕಪ್ಪ ಪೂಂಜ.

೫. ಬರುವ ರಾಷ್ಟ್ರೀಯ ವಾರದಲ್ಲಿ ಪ್ರತಿಗ್ರಾಮದ ಕಮಿಟಿಯವರು ತಮ್ಮ ಗ್ರಾಮದ ಜನಸಂಖ್ಯೆಯ ಶೇಕಡಾ ೨ಕ್ಕೆ ಕಮ್ಮಿಯಾಗದಂತೆ ಮೆಂಬರರನ್ನು ಸೇರಿಸಬೇಕಾಗಿ ನಿಶ್ಚಯಿಸಲಾಯಿತು.

೬. ಕಾಸರಗೋಡು ತಾಲೂಕಿನ ಪ್ರತಿಗ್ರಾಮದವರು ಒಬ್ಬೊಬ್ಬ ಸ್ವಯಂಸೇವಕನನ್ನಾದರೂ ಕೊಡಬೇಕಾಗಿ ನಿರ್ಣಯಿಸಲಾಯಿತು. ಸ್ವಯಂಸೇವಕರನ್ನು ಕೂಡಿಸುವ ಬಗ್ಗೆ ಉಮಾನಾಥರಾವ್, ರಘುನಾಥ ಶೆಣೈ, ರಾಮರಾಯ [illegible], ಕೇಶವ ಕಮ್ತಿ, [illegible], ದೇವದಾಸ ಶೆಣೈ, [illegible] ಇವರನ್ನೊಳಗೊಂಡ ಕಮಿಟಿಯನ್ನು ನೇಮಿಸಲಾಯಿತು. ಈ ಕಮಿಟಿಗೆ ಉಮಾನಾಥರಾಯರನ್ನು ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಅನಂತರ ಸಭೆಯು ಮುಕ್ತಾಯವಾಯಿತು.

(ಸಹಿ) ಎಸ್. ವಿ. ರಾಮರಾವ್,
ಪುತ್ತಿ ಉಮಾನಾಥರಾವ್,
ಕಾರ್ಯದರ್ಶಿಯರ ಬಗ್ಗೆ.

ಕಾ. ತಾ. ಕೊ. ಕ. ಕಚೇರಿ,
ಕಾಸರಗೋಡು ತಾ. ೨೦—೩—೨೩.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ನಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ಯಾವಂತರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪಾಖ್ಯಾನ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯವಿಟ್ಟು ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ “ಜೀವಗೀತೆ” “ಆತ್ಮಗೀತೆ” ದೇವರೆಲ್ಲಿ” ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು “ವಂದೇ ಮಾತರಂ”, ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಬಗೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!
ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಬಹಳ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ.

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರ

The Canara Bank Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು,

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds ,, 205,250—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂಥ ಕಠಿಣವಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡುಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಮರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಅನೇಕ ಇನ್‌ಫ್ಲುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅಮೋಘ ಶಕ್ತಿಯುಳ್ಳವು.
ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೫—೬—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕುದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯಸಾರ ಸಚಿತ್ರ ರೂ. ೧—೪—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಹಾರ . .	0—12—0	ಪಂಚರಾಮಾಯಣ ಹೊಸ ಮುದ್ರಣ .	5—0—0
ಸಂಪಾದಕ-ಕಾದಂಬರಿ	0—6—0	ಪಂಚರಾಮಾಯಣದ	
ಚಂದ್ರಮುಖಿ ,,	0—8—0	ಕಥೆ ದೀಪಿಕೆ .	0—12—0
ರಾಜಪುತ್ರರಮಣಿಯರು	0—8—0	S. S. L. C. Kannada Texts	
		ಪಂಚಾಮೃತ .	0—5—0
ಕೆಲವು ಸಣ್ಣ ಕಥೆಗಳು	1—0—0	ಸುಬೋಧ . .	0—6—0
ರಾಜಯೋಗ . .	1—0—0	ಅಡಿಗೆಯ ಪುಸ್ತಕ.	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಅತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
“ಸಂಕ್ಷೇಪಗೀತೆ”

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.
ಪುಸ್ತಕ ದೊರೆಯುವ ವಿಳಾಸ—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು ಕೆನರಾ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ, ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ



ಮಕ್ಕಳ ಆಟದ ಪೆಟ್ಟಿಗೆಯು 32 ಸಾಮಾನುಗಳ ಸಹ [illegible] 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ. 4—8—0, ದೊಡ್ಡದು 5—0—0 ಪೋಸ್ಟು ಖರ್ಚು ಬೇರೆ. ಮತ್ತು [illegible] ತಯಾರಾಗುವ [illegible] [illegible] ಅವುಗಳನ್ನು ಕೋರುವವರಿಗೆ ೨. ೩. ೪ ಮುಂಗಡ ಕಳುಹಿಸಬೇಕು. [illegible]
ವಿಳಾಸ—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
[illegible], ಕಾಶೀ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣ ಹೊಂದುವವು.

ಔಷಧ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ದಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ.1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪೆತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ಜರ್ಮನ ದೇಶದಲ್ಲಿ ತಯ್ಯಾರಾಗಿ ಬಂದಂಥಾ

4 ಮತ್ತು 4½ ರಾತ್ತಲಿನ ಹಾರೆಗಳೂ, 8 ರಾತ್ತಿನ ಗುದ್ದಲಿಗಳೂ, 6 ರಾತ್ತಿನ ಕುಂಟಾನಿಗಳೂ, 4 ರಾತ್ತಿನ ಕೊಡ್ಲಿಗಳೂ, ಎಲ್ಲಾ ಪರಿಮಾಣದ ಮುಳ್ಳು ಮೊಳೆಗಳೂ, ಮಾರಾಟಕ್ಕೆ ಇವೆ.

ವ್ಯಾಪಾರಸ್ಥರಿಗೆ ಬಹು ರಿಯಾತಿಯ ಧಾರಣೆಯಲ್ಲಿ ವಿಕ್ರಯಮಾಡಲಾದೀತು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಕೋಮನ್ ವೆಲ್ತ್ ಟ್ರಸ್ಟ್, ಲಿಮಿಟೆಡ್,
ಕಲ್ಲಿಕೋಟೆ.
ಇಲ್ಲವೆ—ಕೋಮನ್ ವೆಲ್ತ್ ಸ್ಟೋರ್ಸ್,
ಮಂಗಳೂರು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶ್ಯವ್ಯಾಪಾರಿ
ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40)	ದರ	ರೂ. 3—4—0
ಶೇ. 1 („ 24)	„	„ 2—0—0

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು
5 ರಾತ್ತಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ
ರಾತ್ತಲಿಗೆ ದರ ರೂ. 3-0-0.
ಸ್ವಲ್ಪ ಖರೀದಿಗೆ ತರಿಸುವವರು ಪೋಸ್ಟ್, ಪೇಕಿಂಗ್ ಚಾರ್ಜು ತೆರಬೇಕಾಗುವುದು
ನಶ್ಯ ಒಂದೇ ತರದ್ದು.

ಎಲಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಯೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಟೋನಿಯಾ ಅಂಡ್ ಕೊ.
ಪೋಸ್ಟುಬಾಕ್ಸು ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಶ್ರೀವಾಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇವಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರವಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಓ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟಿನುಗಳೂ, ಯಿನಾಮಲ್ಲ ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಶಾಲಿ ಕವರು ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

ಆರ್. ಮಾರ್ಟಿನ್ನರ.

(ಸಾರಸಾ ಪರಿಲ್ಲಾ)

ಈ ಸಾರಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವವರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರದ ಕಾಯಿಲೆ ಉಬ್ಬುವುದು, ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕ್ಷ್ಮಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ ಮತ್ತು ಚರ್ಮದ ರೋಗಗಳು, ವಿಷ ಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು, ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ.

ಬಾಟ್ಲಿ 1ಕ್ಕೆ ಕ್ರಯ ರೂ. 1—12—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾರಿಜ್ವರ, ಸನ್ನಿಪಾತ ಪಟ್ಟಿ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳೂ ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯರಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಕಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೆಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತಿರ, ಫೋರ್ಟ್, ಮುಂಬಯಿ.

R. D. KATELY & CO.,
No. B. Frere Road,
Near Wright & Co. Fort BOMBAY.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

SWADESHABHIMANI. MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ |
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖

ದೊರೆಯಲನುಪಮರತ್ನಗಳು ಸಾ- | ಗರವ ಮಥಿಸಲು ಸುರರಿಗದರಿಂ |
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ |
ಗರಲಕವರಂಜಿದರೆ! ಸುಧೆಯನು | ಪಡೆದು ಸ್ವಸ್ಥರ ತೆರದಿ ಕುಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೧೭. ಮಂಗಳೂರು, ತಾರೀಕು ೭ನೇ ಶುಕ್ರವಾರ ಎಪ್ರೀಲ್ ೧೯೩೩. ಸಂಚಿಕೆ ೧೪

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00000—0—0
ಚಂದಾ ಹಾಕಿ ಎತ್ತಿದ ಮೂಲಧನ	1,54,400—0—0
ಮೌಲ್ಯ ತೆತ್ತ ಮೂಲಧನ	1,04,388—9—11
ಠೇವಣಾತಿಗಳು	3,49,151-12—6
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ ೪ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	5,12,162-13—2
ರಿಜರ್ವ ಮತ್ತು ಇತರ ಫಂಡುಗಳು	29,149—4—2

ಕಳೆದ 2 ವರುಷಗಳಲ್ಲಿ ಪಾಲುದ್ವಾರಿಕರಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಶರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ನಿರಖು ಠೇವಣಾತಿಗಳನ್ನೂ 15 ದಿನಗಳ ನೋಟೀಸು ಮೂಲಕ ಶೇಕಡಾ 6½ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ನ್ಯಾದೆ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ತಿಳ್ಳುವಂಥಾ ಶೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ, ಶೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ, ತಿಂಗಳುಗಟ್ಟಲೆಯಂತೆ ತೆರುವ ಕಂತು ಠೇವಣಾತಿಗಳನ್ನೂ ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟ್ಯಾಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರದ್ದಲ್ಲಿ ತಿಳ್ಯುವುದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

‘ನೈಟ್ರೇಟ್ ಒಫ್ ಸೋಡಾ’

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ಬಾಳೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ, ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರ ಅನಿಲವು 15—16% ಅಂದರೆ ಮೀನು ಗೊಬ್ಬರದಲ್ಲಿ ನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—300 ರಾತ್ತು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯುವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

“ಕೃಷಿ ಸುಧಾರಣೆ” ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶ್ಶನ್ ರೊ, ಕಲ್ಕತ್ತಾ.

THE DIRECTOR
CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅತ್ತಿರಾಮ ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತವಿವೇಕ	ಕ್ರಯ	೦—೧೦—೦
ಶೇಷುಭಂಗ	„	೦—೧೨—೦
ಸಂಕ್ಷೇಪಗೀತೆ	„	೦—೧೦—೦

ಲಕ್ಷ್ಮೀನಾರಾಯಣ ಪುರಂತಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಕ್ತೀಪ್ಯೇಲ್ಪಸ ಕ್ರಯಂ —೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿನಂತರ ವಿಜಯ ಸತೀ ಸಾಹಸ, ಅಂಗದನ ಶ್ರೀಯೋಗ, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಹೋರಾಟಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ದಶ್ಯರಕ್ಷ್ಮಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳಿಕರಿಗೆ ರೂ ೨-೦-೦. ವಿ. ಪಿ. ಖರ್ಚು ಅಧಿಕ. ರೂ. ೩-೦-೦ ಪ್ರಕಟಣೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆದು ತಿಳಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ಗದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಡ್ರೈಂಗ್ ಪೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫೂಟ ರೂಲುಗಳು, ಇತರ ಬಿಸಾತಿನ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಭಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡಿನ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪಥಿಕ್, ಹೋಮಿಯೋಪಥಿಕ್ ಮತ್ತು ಟಿಬ್ಬಿ ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪೇಟೆಂಟ್ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯೂಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯು ಕಳೆದ ೩೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BOMBAY
Best Indian Pain Balm
Amrutanjan Depot BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ಹರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—8—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ್ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ— ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

[illegible]

U. B. DUTT & Co. CALICUT

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. [illegible]

ಕ್ರಯ ರೂ. [illegible]—4—0.

ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ [illegible]

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯು ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ೩೬, (ಬ್ರಾಡ್ವೇ, ಮದ್ರಾಸ್.

Local Agents: Raphael & Co.
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ 'ಕಾರ್ಖಾನೆ ಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ತರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಬಡಿಗಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

* * *

GUN RUST-PROOF OUR SPECIALITY

The Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಕೊಳ್ಳಿ.

ದಿ ಕೆನರಾ ಆರ್ಮ್ಸ ಎಂಡ ಎಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಈಗಲೇ ಪ್ರಿಂಟಾಗಿದೆ! ಬೇಗನೆ ತರಿಸಿಕೊಳ್ಳಿರಿ!

ಕಾಮಶಾಸ್ತ್ರ (ಎನ್ನುವ ಶರೀರ ಮರ್ಮಶಾಸ್ತ್ರ)

ಈ ಪುಸ್ತಕವು ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಇದ್ದದನ್ನು ಇದ್ದ ಹಾಗೆಯೇ ತಿಳಿಸುವಂತೆ ಚಿತ್ರಪಟಗಳ ಸಹಿತ ಗ್ಲೇಜು ಕಾಗದದಲ್ಲಿ ಮುದ್ರಿಸಿರುತ್ತೇವೆ. ಇದರಲ್ಲಿ ಸ್ತ್ರೀ ಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ದಂಪತಿಗಳು ಅನ್ಯೋನ್ಯವಾಗಿರುವದಕ್ಕೆ ಮಾಡಬೇಕಾದ ಉಪಾಯಗಳು, ಗುಪ್ತವ್ಯಾಧಿಗಳ ಚಿಕಿತ್ಸೆ, ಶಯನಗೃಹದ ನಿಯಮಗಳು, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ರಹಸ್ಯಗಳು ತುಂಬಿಸಲ್ಪಟ್ಟಿರುವವು. ಕ್ರಯ ಮರ್ಮಶಾಸ್ತ್ರ ರೂ. 1—0—0.

ವಿಳಾಸ:— ಟಿ. ರಾಮಚಂದ್ರರಾವ್ ಕಂಪೆನಿ,
೨೩ ತಿರುವಳ್ಳ ಬೀದಿ,
ಸಾಹುಕಾರಪೇಟೆ, ಮದರಾಸು.

ಪ್ರಕಟಣೆ.

ರುಧಿರೋದ್ಗಾರಿ ಸಂವತ್ಸರದ ಪಂಚಾಂಗ.

ಇದು ಚಿ| ಸುಬ್ಬಣ್ಣ ಶಾಸ್ತ್ರಿಗಳಿಂದ ಗುಣಿಸಲ್ಪಟ್ಟು ಮಂಗಳೂರು ಶಾರದಾ ಛಾಪಖಾನೆಯಲ್ಲಿ ಸುಂದರವಾಗಿ ಮುದ್ರಿತವಾಗುತ್ತಿದೆ. ಅಗತ್ಯವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಪಂಚಾಂಗಕರ್ತರಲ್ಲಿಯೂ ದೊರೆಯುವುದು. ಪಂಚಾಂಗ ಪ್ರತಿ ೧ಕ್ಕೆ ಕ್ರಯ ೩| ಆಣೆ, ೪೦ಕ್ಕೆ ರೂ. ೮—೦—೦.

ವಿಳಾಸ:-
ಶಾರದಾ ಛಾಪಖಾನೆ,
ಮಂಗಳೂರು.

ವಿಲ್ಲಿಯಮ್ಸ್ ಡಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವದರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್ಸ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs. 150
½ Page Rs. 80. ¼ Page	„ 50
2 in. Single Column	„ 20
1 in. Single Column	„ 15
Name alone in Bold Types	„ 5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ಸುಸಂದರ್ಭ! ದರ ಸುಲಭ! ತ್ವರೆಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಕೇಶವಭಟ್ ಭಿಡೆ, ಬಿ. ಎ. ಬಿ. ಎಲ್

'ಕವಿ'ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತಲ 1ರ ರೂ. 2—12—0.
ಸ್ಪೆಶ್ಯಲ್ ರಾತ್ತಲ 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ

ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾನೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಫಿಡಲ್ 1ಕ್ಕೆ „ 15—0—0

ಬೇಕಾದವರು 5 ರೂಪ್ಯಾ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೋಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿ

ದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ, ನಂಬ್ರ 65, ಮದರಾಸು.

[illegible]

ರುಧಿರೋದ್ಗಾರಿ [illegible] ಪಂಚಾಂಗ

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಅಸ್ತ
7	ಶ	[illegible]	[illegible]	[illegible]	[illegible]	[illegible]	6.26	6.42
8	ರವಿ	[illegible]	[illegible]	[illegible]	[illegible]	[illegible]	6.25	6.42
9	ಸೋಮ	[illegible]	[illegible]	[illegible]	[illegible]	[illegible]	6.24	6.42
10	ಮಂಗಳ	[illegible]	[illegible]	[illegible]	[illegible]	[illegible]	6.24	6.42
11	ಬುಧ	೧೦	[illegible]	[illegible]	[illegible]	[illegible]	6.23	6.42
12	ಗುರು	೧೧	[illegible]	[illegible]	[illegible]	[illegible]	6.22	6.42
13	ಶುಕ್ರ	[illegible]	[illegible]	[illegible]	[illegible]	[illegible]	6.22	6.42

ಮಂಗಳೂರಿನ ವಾಯುಸ್ಥಿತಿ.
([illegible] ಏಪ್ರಿಲ್)

Date ತಾರೀಖು	Temperature. ಉಷ್ಣ (ಶಾಖ) Maximum		Minimum		Rainfall. ಮಳೆ ದಿನದ ಮಳೆ	ಜುಮಲಾ ಮಳೆ.
29	92—8		80—2		0—25	—
30	94—9		79—0		—	—
31	95—2		77—7		—	—
1	94—8		78—8		—	—
2	94—8		78—7		—	—
3	95—2		76—4		—	—
4	94—6		77—2		—	1.0.30

ಮಂಗಳೂರಿನ ಪೇಟೆ ಧಾರಣೆ.

ಜಿನಸು		ರಿಂದ ರೂ.	ಆ.	ವರೆಗೆ ರೂ.	ಆ.
ಹೊಸ ಮಸ್ಕತಿ ಅಕ್ಕಿಮುಡಿ ೧ಕ್ಕೆ	...	7-	8	8—	2
ಕೆಂಪು ಗುಜ್ಜು	...	6-	8	7	4
ಹೊಸ [illegible]		0-	4	6—	8
ಅನ್ನದ ಬೆಳ್ತಿಗೆ „	...	7-	14	8—	10
ಗುಡ್ಡೆ ಬೆಳ್ತಿಗೆ „	...	7-	6	7-	12
[illegible] ಬೆಳ್ತಿಗೆ ಗೋಣಿ ೧ಕ್ಕೆ	...	12-	8	13—	[illegible]
ಗೋಧಿ ಗೋಣಿ ೧ಕ್ಕೆ	...	15-	8	16—	0
ಹುರುಳಿ ಗೋಣಿ ೧ಕ್ಕೆ	...	9-	12	8—	8
ಕಡಲೆ ಗೋಣಿ ೧ಕ್ಕೆ	...	11-	8	14—	0
ತೊಗರಿ ಗೋಣಿ ೧ಕ್ಕೆ	...	12-	0	—	
ತೊಗರಿಬೇಳೆ ಗೋಣಿ ೧ಕ್ಕೆ	...	14-	0	23—	0
ಉದ್ದು ಗೋಣಿ ೧ಕ್ಕೆ	...	13-	0	—	
ಹೆಸರು ಗೋಣಿ ೧ಕ್ಕೆ	...	—		12—	0
[illegible] ಖಂಡಿ ೧ಕ್ಕೆ	...	40-	0	45—	0
[illegible] ಗೋಣಿ ೧ಕ್ಕೆ	...	7-	4	7—	8
[illegible] ಖಂಡಿ ೧ಕ್ಕೆ	...	100-	0	116—	0
[illegible] ಖಂಡಿ ೧ಕ್ಕೆ	...	40-	0	—	
ಎಳ್ಳಿಂಡಿ ಖಂಡಿ ೧ಕ್ಕೆ	...	45-	0	52—	8
[illegible] ಎಣ್ಣೆ ಮುಡಿ ೧ಕ್ಕೆ	...	8-	2	9—	0
ಎಳ್ಳೆಣ್ಣೆ ಮುಡಿ ೧ಕ್ಕೆ	...	8-	12	9—	0
[illegible] ಪಟ್ಟಿಗೆ ೧ಕ್ಕೆ	...	9-	0	—	
[illegible] ಮುಡಿ ೧ಕ್ಕೆ	...	7-	12	8—	0
[illegible] ಮುಡಿ ೧ಕ್ಕೆ	...	7-	0	7—	12
[illegible] ಮುಡಿ ೧ಕ್ಕೆ	...	8-	8	[illegible]	0
[illegible] ಮುಡಿ ೧ಕ್ಕೆ	...	[illegible]	0	4—	8
[illegible] ಖಂಡಿ ೧ಕ್ಕೆ	...	[illegible]	0	302—	0
[illegible] ಖಂಡಿ ೧ಕ್ಕೆ	...	[illegible]	0	205—	0
[illegible] New, [illegible]	...	[illegible]	0	195—	0
[illegible] ಖಂಡಿ ೧ಕ್ಕೆ	...	[illegible]	0	120—	0
[illegible]	...	[illegible]	0	70—	0
[illegible]	...	[illegible]	14	2—	0
[illegible]	...	50-	0	55—	0
[illegible]	...	20-	12	23—	0
[illegible]	...	22-	0	—	
[illegible]	...	[illegible]	8	[illegible]	
[illegible]	...	20-	0	21—	

[illegible] ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 8 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು, ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವವು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮ ಎಂಡ್ ಕೋ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವುದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove, 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

ಯುನೈಟೆಡ್ ಕಮರ್ಷಿಯಲ್ ಕಂಪನಿ,

ಪೋಸ್ಟ ಬಾಕ್ಸ ನಂಬ್ರ ೬೦೮, ಮುಂಬಯಿ.

ಈ ಕಂಪೆನಿಯವರು ನಾನಾ ತರದ ಕಾಗದಗಳನ್ನೂ ಛಾಪಖಾನೆಗೆ ಬೇಕಾದ ಉಪಕರಣಗಳನ್ನೂ ರಖಂ ಬಟ್ಟೆಯಲ್ಲಿ ಮಾರಾಟಮಾಡುವರು. ಈ ಕಂಪೆನಿಗೆ ಪೇಜು ಹಾಕುವ (Numbering) ಅನೇಕ ಮೆಶಿನ್ನುಗಳು ಈಗಲೇ ಬಂದಿರುತ್ತವೆ. ಗಿರಾಕಿಗಳು ತಮಗೆ ಬೇಕಾದ ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳುವುದು.

ತ್ವರೆಮಾಡಿರಿ! ತ್ವರೆಮಾಡಿರಿ!!

ಮಾರಾಟಕ್ಕೆ ಸಿದ್ಧವಾಗಿದೆ

ಪಂಡಿತ ಮಂಗಳೂರು ನಾರಾಯಣಾಚಾರ್ಯ
ರಿಂದ ಗಣಿಸಿ ಪರಿಶೋಧಿಸಲ್ಪಟ್ಟ,

ರುಧಿರೋದ್ಗಾರಿ ಸಂವತ್ಸರದ ಪಂಚಾಂಗಗಳು.

ಶಾರದಾ ಛಾಪಖಾನೆ.
[illegible]

ರಾಷ್ಟ್ರೀಯ ವಾರ.

ರಾಷ್ಟ್ರೀಯ ವಾರ [illegible] ರಾಷ್ಟ್ರೀಯ ಸಮ್ಮಿಲನ [illegible].

"ರಾಷ್ಟ್ರೀಯ ವಾರವು ಏಪ್ರಿಲ್ ೬ಕ್ಕೆ ಆರಂಭವಾಗಿ [illegible] ದಲ್ಲಿ ಅತ್ಯಾಚಾರವು ನಡೆದ ೧೩ನೇ ತಾರೀಖಿಗೆ ಅಂತ್ಯವಾಗುತ್ತದೆ. [illegible] ಕಮಿಟಿಗಳು [illegible] ಇದೇ [illegible] ನವರು ರಾಷ್ಟ್ರೀಯ ವಾರವನ್ನು ಎಂದಿನಂತೆಯೇ [illegible] ಕೋರಿಕೆ ಇದೆ. ಇದೇ ವಾರದಲ್ಲಿ ಕಾಂಗ್ರೆಸ್ ಸದಸ್ಯರನ್ನು ಕೂಡಿಸುವುದಕ್ಕೂ, ತಿಲಕ ಸ್ವರಾಜನಿಧಿಗೆ ಹಣವನ್ನು ಸಂಗ್ರಹಿಸುವುದಕ್ಕೂ, ರಾಷ್ಟ್ರೀಯ ಸ್ವಯಂಸೇವಕರನ್ನು ಸೇರಿಸುವುದಕ್ಕೂ, ಖಾದಿ ಪ್ರಸಾರವನ್ನು ಮುಂದೊತ್ತುವುದಕ್ಕೂ ಪ್ರಯತ್ನಿಸತಕ್ಕದ್ದು. [illegible] ಶಾಂತಿಕಿನಿಯಮಗಳೇ ಹರಿತಾಳದಲ್ಲ. ಆದರೆ ಈ ಎರಡು ದಿನಗಳಲ್ಲಿ [illegible] ಅನ್ನು ಸೇರಿಸಿ ಆ ಮಹತ್ವದ ದಿನಗಳನ್ನು ಆಚರಿಸುವುದಲ್ಲದೆ ಇಡೀ ವಾರವನ್ನು ಪವಿತ್ರ ರೀತಿಯಿಂದ ಆಚರಿಸತಕ್ಕದ್ದು."

ಮೇಲೆ ಸೂಚಿಸಿದ ವಿಚಾರಗಳಲ್ಲಿ ಕಾರ್ಯವನ್ನು ಸಾಂಗವಾಗಿ ನಡೆಸುವರೆ ನಮ್ಮ ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಕಮಿಟಿಗಳೂ ಕಾಂಗ್ರೆಸ್ ಪ್ರಚಾರಕರೂ ಪ್ರಯತ್ನಿಸಬೇಕೆಂದೂ ವಿನಂತಿಮಾಡಿಕೊಳ್ಳುತ್ತೇನೆ. ಅಲ್ಲದೆ ಜಿಲ್ಲಾ ಮಹಾಜನರೂ ಮೇಲಿನ ಕಾರ್ಯದಲ್ಲಿ ಕಾಂಗ್ರೆಸ್ ಕಮಿಟಿಯವರಿಗೆ ತುಂಬಾ ಸಹಾಯಮಾಡಬೇಕಾಗಿ ವಿನಯ ಪೂರ್ವಕ ಪ್ರಾರ್ಥನೆ ಇದೆ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರು
ತಾ. 31—3—1923.

ಉಡುಪಿ ಗೋವಿಂದರಾವ್,
ಕಾರ್ಯದರ್ಶಿ.

ಪಾಕೆಟ್ ಬೈಸ್ಕೋಪ್‌ಗಳು.

ಈ ಬಾಯಸ್ಕೋಪುಗಳು ಜರ್ಮನ್ ದೇಶದಲ್ಲಿ ತಯಾರಾದವು. ಇದರಲ್ಲಿ (ಫಿಲ್ಲಂ) ಚಿತ್ರಪಟಗಳನ್ನು ಹಾಕಿ

ನೋಡಿದರೆ ಬೈಸ್ಕೋಪಿನಲ್ಲಿ ಇದ್ದಂತೆಯೇ ಇರುವುದು. ಈ ಒಂದು ಯಂತ್ರವನ್ನು ಇಟ್ಟುಕೊಂಡು ಹಾದಿಗಳಲ್ಲಿ ಬಂದವರಿಗೆ ತೋರಿಸಿ ಹಣವನ್ನು ಸಂಪಾದನೆ ಮಾಡಬಹುದು. ಇದಕ್ಕೆ ಮುಂಚಿತವಾಗಿ ಈ ತರದ ಯಂತ್ರಗಳು ಮಾರಾಟಕ್ಕೆ ಬರಲಿಲ್ಲ. ಈಗ ಹಾಸಿ ಬಂದಿರುವವು. ಕ್ರಯ 1-0-0, 2-0-0.

ವಿಳಾಸ:— ರಿವನ್ ವಾಚ್ ಕಂಪೆನಿ,
22 ಕೃಷ್ಣಪ್ಪ ನೊದಲಿ ಬೀದಿ, ಟ್ರಿಪ್ಲಿಕೇನ್, ಮದರಾಸು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹೊಸತಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2¼ಮೊಳ ಅಗಲವಿರುವವು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ ೬—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ [illegible]ವಾಗಿಯೂ, ನಯವಾಗಿಯೂ ಇವೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ [illegible]. ಬಣ್ಣ ಹೋಗದು, ೧೬ ಮೊಳ ಉದ್ದವಿದೆ. ದೊಡ್ಡವರನ್ನು [illegible] ದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 ರೂ. 6—8—0
„ 2 „ 7—8—0

ವಿಳಾಸ—ಎಸ್. ಆರ್. ಕೃಷ್ಣ ಎಂಡು ಕೊ,
1. ತಂಬುನಾಯಕನ ಬೀದಿ, ಮದರಾಸು.

THE
Standard Bioscope Co.
MANGALORE

Coming Coming

THE NEW HINDOO FILM

Bishma Prathijana

or

Bishma's Vow.

Also 2 Side Films.

Every day two shows

I Show at 6-30 II Show 9-30 P. M.

Rates Rs. [illegible]—0, 0—8—0, 0—6—0,
0—4—0, 0—2—0.

ಪ್ಲೇಗ್ ರೋಗವು.

(ಮದ್ರಾಸ್ ಪ್ರಕಟಣಾ ಸಂಘದಿಂದ)

ಪ್ಲೇಗ್‌ರೋಗವು ಇರುವ ಡಿಸ್ಟ್ರಿಕ್ಟಿನಲ್ಲಿರುವ ಜನರು ಕೆಳಗೆ ಹೇಳುವ ವಿಷಯಗಳನ್ನು ತಿಳಿದುಕೊಂಡಿರಬೇಕು.

ಪ್ಲೇಗ್‌ರೋಗವು ಯಾರಿಂದುಂಟಾಗುತ್ತದೆ?

ಕಣ್ಣಿನಿಂದ ನೋಡುವುದಕ್ಕಾಗದ ಬಹಳ ಸಣ್ಣ ಹುಳುವಿನಿಂದ ಈ ರೋಗವು ಉಂಟಾಗುವುದು.

ಈ ಪ್ಲೇಗ್‌ರೋಗದ ಹುಳವು ಎಲ್ಲಿರುತ್ತದೆ?

ಇಲಿಗಳನ್ನು ಕಡಿಯುವ ಚಿಕ್ಕಾಡುಗಳಲ್ಲಿ ಪ್ಲೇಗ್‌ರೋಗವನ್ನುಂಟುಮಾಡುವ ಹುಳಗಳು ಜೀವಿಸುತ್ತವೆ. ಪ್ಲೇಗ್‌ರೋಗದ ಹುಳವಿರುವ ಚಿಕ್ಕಾಡುವು ಇಲಿಯನ್ನು ಕಡಿದರೆ, ಆ ಹುಳಗಳು ಇಲಿಯ ರಕ್ತದಲ್ಲಿ ಸೇರಿ ಅಲ್ಲಿ ಹೆಚ್ಚುತ್ತವೆ. ಆಗ ಇಲಿಗೆ ಪ್ಲೇಗ್‌ರೋಗವು ಬರುವುದು. ತರುವಾಯ ಇನ್ನೊಂದು ಚಿಕ್ಕಾಡು ಈ ಇಲಿಯನ್ನು ಕಡಿದರೆ ಅದು ಇಲಿಯ ರಕ್ತದ ಸಂಗಡ ಪ್ಲೇಗ್‌ರೋಗದ ಹುಳವನ್ನು ಹೀರಿಬಿಡುವುದು. ಈ ಚಿಕ್ಕಾಡು ಇತರ ಇಲಿಗಳನ್ನು ಕಡಿದರೆ, ಅವುಗಳಿಗೆ ಪ್ಲೇಗ್‌ರೋಗವು ಬರುವುದು. ಈ ಪ್ರಕಾರವಾಗಿ ಇಲಿಗಳಿಂದ ಇಲಿಗಳಿಗೆ ರೋಗವು ತಗಲಿ ಅನೇಕ ಇಲಿಗಳು ಸಾಯುವುವು. ಇಲಿಗಳು ಸತ್ತಮೇಲೆ ಚಿಕ್ಕಾಡುಗಳಿಗೆ ಹಸಿವೆಯಾಗುವುದು. ಮನುಷ್ಯರನ್ನು ಕಡಿಯುವ ಚಿಕ್ಕಾಡುಗಳೂ, ಇಲಿಗಳನ್ನು ಕಡಿಯುವ ಚಿಕ್ಕಾಡುಗಳೂ ಬೇರೆ ಬೇರೆ ಜಾತಿಗೆ ಸೇರಿರುವುವು. ಇಲಿಗಳನ್ನು ಕಡಿಯುವ ಚಿಕ್ಕಾಡುಗಳು ಹಸಿವೆಯಾಗಿದ್ದಾಗ ಹಾರಿಕೊಂಡುಹೋಗಿ ಮನುಷ್ಯರನ್ನು ಕಡಿದು ಅವರಿಗೆ ಪ್ಲೇಗ್‌ರೋಗವನ್ನುಂಟುಮಾಡುವುವು. ಯಾವುದಾದರೂ ಒಂದು ಕಾರಣದಿಂದ ಒಂದು ಇಲಿಯು ಸತ್ತಿರುವುದನ್ನಾಗಲೀ ಅಥವಾ ಸಾಯುತ್ತಿರುವುದನ್ನಾಗಲೀ ನೋಡಿದಾಗ ನೀವು ಬಹಳ ಎಚ್ಚರಿಕೆಯಾಗಿದ್ದು ತತ್‌ಕ್ಷಣವೆ ಹತ್ತಿರವಿರುವ ಆಸ್ಪತ್ರೆಗೆ ಅಥವಾ ಮುನ್ಸಿಪಲ್ ಆಫೀಸಿಗೆ ಈ ವಿಷಯವನ್ನು ತಿಳಿಯಪಡಿಸಬೇಕು.

ಇಲಿಗಳು ಇಲ್ಲದಿದ್ದರೆ ಚಿಕ್ಕಾಡುಗಳು ಇರುತ್ತಿರಲಿಲ್ಲ. ಅದ್ದರಿಂದ ಪ್ಲೇಗ್‌ರೋಗವೂ ಇರುತ್ತಿರಲಿಲ್ಲ. ಇಲಿಗಳು ಬಹಳ ಕಡಿಮೆಯಾಗಿದ್ದರೆ ಚಿಕ್ಕಾಡುಗಳು ಕಡಿಮೆಯಾಗಿರುವುವು. ಇದರಿಂದ ಪ್ಲೇಗ್‌ರೋಗದ ಅಪಾಯವು ಬಹಳ ಕಡಿಮೆಯಾಗುವುದು. ನಮ್ಮ ಗ್ರಾಮಗಳಲ್ಲಿ ಇಲಿಗಳು ಇರದಂತೆ ಮಾಡಿದರೆ ಬಹಳ ಕ್ಷೇಮವಿರುವುದು. ಆದರೆ ಇದುವರೆಗೂ ಇಲಿಗಳನ್ನು ನಾಶಮಾಡುವುದರಲ್ಲಿ ನಮ್ಮ ಪ್ರಯತ್ನಗಳು ಸಾರ್ಥಕವಾಗಿಲ್ಲ.

ನಮ್ಮ ನೆರೆಹೊರೆಗಳಲ್ಲಿ ಪ್ಲೇಗ್‌ರೋಗವಿದ್ದರೆ ನಾವೇನು ಮಾಡಬೇಕು?

ಸಾಧ್ಯವಾದ ಮಟ್ಟಿಗೂ ಇಲಿಗಳನ್ನೂ, ಚಿಕ್ಕಾಡುಗಳನ್ನೂ, ನಾಶಗೊಳಿಸಬೇಕು. ಡಾಕ್ಟರರು ಹೇಳಿದಂತೆ ನಡೆದುಕೊಳ್ಳಬೇಕು. ಅವರು ಆರೋಗ್ಯಸ್ಥಿತಿಯಲ್ಲಿರುವವರನ್ನು ಪ್ಲೇಗ್‌ರೋಗವಿರುವವರ ಸಂಪರ್ಕವಿಲ್ಲದಂತೆ ಪ್ರತ್ಯೇಕವಾಗಿಡುವರು. ಪ್ಲೇಗಿನ ದಾಕು ಹಾಕಿಸಿಕೊಂಡಿರುವವರು ಮಾತ್ರವೆ ಪ್ಲೇಗ್‌ರೋಗವಿರುವವರ ಹತ್ತಿರಕ್ಕೆ ಹೋಗಿ ಸೇವೆಮಾಡಬಹುದೆಂದು ಹೇಳುವರು. ಡಾಕ್ಟರರು ನೀವು ಮನೆಗಳನ್ನು ಬಿಟ್ಟು ನಿಮ್ಮ ವಾಸಕ್ಕೆ ಕಟ್ಟಿರುವ ಕೊಠಡಿಯಲ್ಲಿ ವಾಸಮಾಡಬೇಕೆಂದು ಹೇಳಬಹುದು. ಆಗ ಇಲಿಗಳನ್ನೂ, ಇಲಿಗಳ ಮೇಲಿರುವ ಚಿಕ್ಕಾಡುಗಳನ್ನೂ ನಾಶಗೊಳಿಸುವುದಕ್ಕೆ ಏರ್ಪಾಡುಮಾಡುವರು. ನಿಮ್ಮ ಮನೆಯ ನೆಲಗಳನ್ನೂ ಗೋಡೆಗಳನ್ನೂ ರೋಗದ ಸೋಂಕು ಹೋಗಲಾಡಿಸತಕ್ಕಂಥಾ ಪದಾರ್ಥಗಳಿಂದ ತೊಳೆಸುವುದಕ್ಕೆ ಡಾಕ್ಟರರು ಅಭಿಪ್ರಾಯಪಡಬಹುದು. ನಿಮ್ಮ ಮನೆಯ ಮೇಲೆ ಹಂಚುಹಾಕಿದ್ದರೆ, ಕೆಲವು ದಿವಸಗಳ ವರೆಗೆ ಅವುಗಳ ಸ್ವಲ್ಪ ತೆಗೆದು ಒಳಗೆ ಬಿಸಿಲು ಬರುವ ಹಾಗೆ ಮಾಡಿಸಬಹುದು. ಮನೆಗೆ ಹುಲ್ಲು ಛಾವಣಿ ಮಾಡಿದ್ದರೆ ಅದನ್ನು ತೆಗೆದು ಸುಡಿಸಿ ಹೊಸದಾಗಿ ಹುಲ್ಲು ಛಾವಣಿ ಮಾಡುವರು. ಹೀಗೆ ಮಾಡುತ್ತಿರುವಾಗ್ಗೆ ಇಲಿಗಳು ಸಾಧಾರಣವಾಗಿ ಅವಿತುಕೊಳ್ಳುವ ಮನೆಯ ಒಳಭಾಗದ ಸ್ಥಳಗಳೂ, ಮೂಲೆಗಳೂ, ಒಳಭಾಗದಲ್ಲಿರುವ ಬಿಲ್ಲುಗಳೂ, ಗೋಡೆಗಳ ಮೇಲ್ಭಾಗಗಳೂ ಸೂರ್ಯನ ಕಿರಣಗಳನ್ನು ಕಂಡು ಪ್ರಯೋಜನವನ್ನು ಹೊಂದುವುವು. ಡಾಕ್ಟರರು ನಿಮ್ಮ ಬಟ್ಟೆಬರೆಗಳನ್ನೂ, ಹಾಸಿಗೆಗಳನ್ನೂ ಬಿಸಿಲಿಗೆ ಹಾಕಿಸಿ ಅವುಗಳಲ್ಲಿರುವ ಇಲಿಗಳ ಚಿಕ್ಕಾಡುಗಳನ್ನು ಸಾಯುವಂತೆ ಮಾಡುವರು. ಈ ಉದ್ದೇಶಕ್ಕೋಸ್ಕರ ಬಿಸಿಲು ಚುರುಕಾಗಿರುವಾಗ್ಗೆ ನಿಮ್ಮ ಬಟ್ಟೆಬರೆಗಳನ್ನೂ, ಹಾಸಿಗೆಗಳನ್ನೂ ಹೊರಗೆ ಹಾಕಬೇಕು. ಚಿಗಟುಗಳು ಅವಿತುಕೊಳ್ಳುವುದಕ್ಕೆ ನೆರಳು ಇಲ್ಲದೆ ಬಿಸಿಲು ಸರಿಯಾಗಿ ಬೀಳುವಂಥಾ ಸ್ಥಳದಲ್ಲಿ ನಿಮ್ಮ ಬಟ್ಟೆಬರೆಗಳನ್ನೂ, ಹಾಸಿಗೆ ಮುಂತಾದುವುಗಳನ್ನೂ ಹಾಕಬೇಕು. ಎರಡು ಗಂಟೆ [illegible] ಬಿಸಿಲಿನಲ್ಲಿ ಇವುಗಳನ್ನು ಇಡಬೇಕು. ಬಹಳ ದಪ್ಪವಾದ ಕಂಬಳಿ ಆಗಲಿ ಅಥವಾ ಬಟ್ಟೆಗಳಾಗಲಿ ಇದ್ದರೆ ಎರಡು ಕಡೆಗಳಲ್ಲೂ ಬಿಸಿಲು ಚೆನ್ನಾಗಿ ಕಾಯುವಂತೆ ಒಂದೆರಡು ಸಾರಿ ಮಗುಚಿಹಾಕುತ್ತಿರಬೇಕು.

ಪ್ಲೇಗ್‌ರೋಗವಿರುವ ಬೀದಿಗಳಿಂದಾಗಲಿ, ಪ್ಲೇಗ್ ರೋಗಿಗಳಿರುವ ಸ್ಥಳದಿಂದಾಗಲಿ ನೀವು ಮನೆಗೆ ಬಂದ ಮೇಲೆ ನೀವು ನಿಮ್ಮ ಬಟ್ಟೆಬರೆಗಳನ್ನು ಪುನಃ ಹಾಕಿಕೊಳ್ಳುವುದಕ್ಕೆ ಮುಂಚಿತವಾಗಿಯಾಗಲಿ ಬಿಸಿಲಿನಲ್ಲಿ ಹೆಚ್ಚು ಕಡಿಮೆ ಒಂದು ಗಂಟೆಯ ಪರಿಯಂತರ ಹಾಕಬೇಕು.

ನಿಮ್ಮ ಗ್ರಾಮದಲ್ಲಿ ಪ್ಲೇಗ್‌ರೋಗವಿದ್ದರೆ ನಿಮ್ಮ ನೆರೆಕರೆಯ ಇನ್ನೊಂದು ಗ್ರಾಮಕ್ಕೆ ಹೋಗಬೇಡಿ. ಹೀಗೆ ಮಾಡಿದರೆ ಇಲಿಗಳ ಮೇಲಿರುವ ಚಿಕ್ಕಾಡುಗಳನ್ನು ನಿಮ್ಮ ಬಟ್ಟೆಬರೆಗಳ ಮುಖಾಂತರದಿಂದಾಗಲಿ, ನಿಮ್ಮ ಸಂಗಡ ತೆಗೆದುಕೊಂಡು ಹೋಗುವ ಆಹಾರದ ಮುಖಾಂತರದಿಂದಾಗಲಿ ಸಾಗಿಸಿಕೊಂಡು ಹೋಗಬಹುದು.

ಪ್ಲೇಗ್ ರೋಗವಿರುವ ಗ್ರಾಮದಿಂದ ಅಕ್ಕಿಯನ್ನಾಗಲಿ, ಇತರ ಧಾನ್ಯವನ್ನಾಗಲಿ ಅಥವಾ ಬೇರೆ ಪದಾರ್ಥಗಳನ್ನಾಗಲಿ ತಂದುಕೊಳ್ಳುವ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕು. ಇಲಿಗಳು ಧಾನ್ಯಗಳುಳ್ಳ ಚೀಲಗಳೊಂದಿಗೆ ಸಂಚರಿಸುವುದರಿಂದ ಅನೇಕ ವೇಳೆ ಅವುಗಳ ಸಂಗಡ ಪ್ಲೇಗ್ ರೋಗವನ್ನು ತೆಗೆದುಕೊಂಡು ಹೋಗುವುವು. ಮೇಲೆ ಹೇಳಿರುವ ಪ್ರಕಾರ ಪ್ಲೇಗ್‌ರೋಗವಿರುವ ಗ್ರಾಮಗಳಿಂದ ಬರತಕ್ಕಂಥ ಪದಾರ್ಥಗಳನ್ನು ಬಿಸಿಲಿನಲ್ಲಿಡಬೇಕು.

ಇಲಿಗಳಿಲ್ಲದಿದ್ದರೆ ಪ್ಲೇಗ್‌ರೋಗವಿರುವುದಿಲ್ಲವೆಂದೂ, ಇಲಿಗಳು ಬಹಳ ಕಡಿಮೆಯಾಗಿದ್ದರೆ ಪ್ಲೇಗ್‌ರೋಗದ ಅಪಾಯವು ಕಡಿಮೆಯಾಗಿರುವುದೆಂದೂ ಮೊದಲೆ ತಿಳಿಸಿರುತ್ತದೆ. ಒಂದು ಗ್ರಾಮದಲ್ಲಿ ಇಲಿಗಳ ಸಂಖ್ಯೆಯನ್ನು ಹೇಗೆ ಕಡಿಮೆಮಾಡಬಹುದು? ಇಲಿಗಳು [illegible] ಗೋಡೆಗಳಲ್ಲಿ ವಾಸಿಸುತ್ತವೆ. ಅದ್ದರಿಂದ ಅವುಗಳನ್ನು ಶುದ್ಧಮಾಡಬೇಕು. ಅವುಗಳಲ್ಲಿ ನೀರನ್ನು ಚೆನ್ನಾಗಿ ಹರಿಸಬೇಕು. [illegible]ಗಳನ್ನೂ ಬಿರುಕುಗಳನ್ನೂ ಮುಚ್ಚಬೇಕು.

ನಿಮ್ಮ ಮನೆಗಳಲ್ಲಿ ನಾವು ಧಾನ್ಯಗಳನ್ನಿಡುವ ಪಾತ್ರೆಗಳೊಳಕ್ಕೆ, ಚೀಲಗಳೊಳಕ್ಕೆ, ಉಗ್ರಾಣಗಳೊಳಕ್ಕೆ, ಕಣಜಗಳೊಳಕ್ಕೆ ಇಲಿಗಳು ಪ್ರವೇಶಿಸಿ ಅವುಗಳನ್ನು ತಿಂದು ಜೀವಿಸುವುವು. ಇಲಿಗಳಿಗೆ ಸಿಕ್ಕದಂತೆ ಧಾನ್ಯಗಳನ್ನು ಕಾಪಾಡಿಟ್ಟದ್ದರೆ, ಇಲಿಗಳ ಸಂಖ್ಯೆಯು ಬಹಳ ಕಡಿಮೆಯಾಗುವುದು.

ಹೀಗೆ ಮಾಡಬೇಕಾದರೆ ಎರಡು ವಿಷಯಗಳನ್ನು ನೆನಪಿನಲ್ಲಿಡಬೇಕು.

ಇಲಿಗಳು ಮನೆಯ ಗೋಡೆಗಳ ಮೇಲೆ ಹತ್ತುವುವು. ಅದರೆ ಅವು ನೆಲದ ಮೇಲಿನಿಂದ ೩ ಅಡಿ ಎತ್ತರ ಹಾರಲಾರವು.

ಒಂದು ನುಣುಪಾದ ಗೋಡೆಯಿಂದ ಸಮಕೋನವನ್ನು ಮಾಡತಕ್ಕಂಥ ೯ ಅಂಗುಲವುಳ್ಳ ಅಂಚೆನ್ನು ಕಟ್ಟಿದರೆ, ಇಲಿಗಳು ನೆಲದ ಮೇಲಿನಿಂದ ಆ ಅಂಚಿಗೆ ಹತ್ತಲಾರವು.

ಅದ್ದರಿಂದ ನಾವು ನಮ್ಮ ಕಣಜಗಳನ್ನು ಕಟ್ಟುವಾಗ್ಗೆ ನೆಲದ ಮೇಲಿನಿಂದ ೩ ಅಡಿ ಎತ್ತರವುಳ್ಳ ಗದ್ದಿಗೆ ಕಲ್ಲನ್ನು ಕಟ್ಟಬೇಕು. ಈ ಗದ್ದಿಗೆ ಕಲ್ಲಿನ ಮೇಲ್ಭಾಗದಿಂದ ಕಾಟಕೋನವನ್ನು ಮಾಡುವಂತೆ ೯ ಅಂಗುಲವುಳ್ಳ ಅಂಚೆನ್ನು ಕಟ್ಟಬೇಕು. ಇದರ ಮೇಲೆ ನಾವು ಕಣಜವನ್ನು ಕಟ್ಟಬೇಕು. ಈ ಕಣಜಕ್ಕೆ ಮೆಟ್ಟುಗಳಿರಬಾರದು. ಗದ್ದಿಗೆ ಕಲ್ಲನ್ನು ಕಟ್ಟುವುದಕ್ಕಾಗದೆ ಒಂದು ಸಣ್ಣ ಕಣಜವನ್ನು ಕಟ್ಟಿದರೆ ನಾವು ಈ ಪ್ರಕಾರವಾಗಿ ಮಾಡಬಹುದು. ೩ ಅಡಿ ಎತ್ತರವುಳ್ಳ ಕಂಬಗಳ ಮೇಲೆ ಕಣಜವನ್ನು ಕಟ್ಟಬಹುದು. ಈ ಕಂಬಗಳ ಮೇಲೆ ಇಲಿಗಳು ಹತ್ತದಂತೆ ನೆಲದ ಮೇಲಿನಿಂದ ೩ ಅಡಿ ಎತ್ತರದಲ್ಲಿ ಕಂಬಗಳ ಸುತ್ತಲೂ ಅಂಚುಗಳನ್ನು ಕಟ್ಟಬೇಕು.

ಹೀಗೆ ಮಾಡಿದ್ದಾಗ್ಯೂ ಕಣಜದ ಮೇಲ್ಭಾಗದಲ್ಲಾಗಲಿ ಅಥವಾ ಇನ್ನು ಯಾವ ಕಡೆಗಳಲ್ಲಾಗಲಿ ನೀರ್ದ್ವಾರೆ ಒಂದು ಜೊತೆ ಇಲಿಗಳು ಕಣಜಕ್ಕೆ ಹೋಗಿ ಅಲ್ಲಿ ವಾಸವಾಗಿದ್ದು ಮರಿಗಳನ್ನಿಡಬಹುದು. ಅದರೆ ನೀರಿಲ್ಲದಿದ್ದರೆ ಅವು ಜೀವಿಸಲಾರವು. ಅದ್ದರಿಂದ ಕಣಜದಲ್ಲಿ ನೀರಿಲ್ಲದಂತೆ ನೋಡಿಕೊಳ್ಳಬೇಕು. ಕಣಜದ ಮೇಲ್ಭಾಗದಲ್ಲಿ ನೀರು ನಿಲ್ಲದಂತೆ ಮೇಲ್ಭಾಗವನ್ನು ಕಟ್ಟಬೇಕು.

ಒಂದು ಡಿಸ್ಟ್ರಿಕ್ಟಿನಲ್ಲಿ ಪ್ಲೇಗ್‌ರೋಗವಿದ್ದರೆ ಅದರಿಂದುಂಟಾಗುವ ಅಪಾಯವನ್ನು ಕಡಿಮೆಮಾಡುವುದಕ್ಕೆ ಸಾಧ್ಯವಾದ ಮಟ್ಟಿಗೂ ಅನೇಕ ಇಲಿಗಳನ್ನು ಕೊಲ್ಲುವುದಕ್ಕೆ ಡಾಕ್ಟರುಗಳು ಅಪೇಕ್ಷಿಸುವರು. ಇಲಿಗಳಿಗೆ ವಿಷವನ್ನಿಡುವುದಕ್ಕಾಗಲಿ, ಅವುಗಳನ್ನು ಹಿಡಿಯುವುದಕ್ಕೆ ಗೂಡುಗಳನ್ನಿಡುವುದಕ್ಕಾಗಲಿ ನಿಮ್ಮ ಸಹಾಯವನ್ನು ಅವರು ಕೋರಬಹುದು. ಅವರಿಗೆ ಬೇಕಾದ ಸಹಾಯವನ್ನು ಮಾಡಿ. ಇಲಿಗಳಿಲ್ಲದಿದ್ದರೆ, ಪ್ಲೇಗ್‌ರೋಗ ಬರುವುದಿಲ್ಲ. ಇಲಿಗಳು ಪ್ಲೇಗ್‌ರೋಗವನ್ನು ತರುವುದಲ್ಲದೆ, ಅವು ನಮಗೆ ಬೇಕಾದ ಆಹಾರ ಜೀನಸುಗಳನ್ನು ತಿಂದುಬಿಡುವುವು. ೫೦೦ ಇಲಿಗಳು ಒಂದು ವರ್ಷಕಾಲದಲ್ಲಿ, ೧,೦೦೦ ರೂ. ಬೆಲೆ ಬಾಳುವ ಧಾನ್ಯವನ್ನು ತಿಂದುಬಿಡುವುವು.

ಲಾಹೋರಿನ ಕೌಮಿ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ 'ಡಿಗ್ರಿಗಳ'ನ್ನು ಕೊಡುವ ಕಾಲದಲ್ಲಿ ದೇಶಬಂಧು ದಾಸರು ಮಾಡಿದ ಭಾಷಣದ ಸಾರಾಂಶ.

(ಬರೆದು ಬಂದದ್ದು.)

ಭ್ರಾತೃಗಳೇ ಮತ್ತು ಭಗಿನಿಯರೇ –

ಹಿಂದಿಯನ್ನು ಅರಿಯದವನಾದ ನಾನು ಇಂಗ್ಲೀಷು ಭಾಷೆಯಲ್ಲಿ ಮಾತಾಡುವುದಕ್ಕೆ ಬಹಳ ನಾಚುವೆನು. ಈ ಭೂಮಿಗೆ (ಪಂಜಾಬಕ್ಕೆ) ಪಂಚನದಿಗಳಿಂದ ದೊರಕತಕ್ಕ ಲಾಭದಷ್ಟೆ ಲಾಭವು ಈ ವಿದ್ಯಾಪೀಠದಿಂದಲೂ ದೊರಕತಕ್ಕದಿರುತ್ತದೆ. ಸತ್ಯವ್ರತ ಲಾಲಾ ಲಜಪತರಾಯರಂಥ ಮಹಾಪುರುಷರ ಸಂಬಂಧವು ಈ ವಿದ್ಯಾಪೀಠಕ್ಕೆ ಇರುವ ವೇಳೆ ಇದೊಂದು ಮಹತ್ವಾದ ವಿದ್ಯಾಪೀಠವೆ ಸರಿ. ಅವರು ಬಂಧಿಸಲ್ಪಟ್ಟರೂ ಅವರ ಆತ್ಮವು ಮಾತ್ರ ನಮ್ಮ ಸುತ್ತಮುತ್ತಲೂ ಇದ್ದು, ನಾನು ಅವರ ಪ್ರತಿನಿಧಿಯಾಗಿ ನಿಮಗೆ ಡಿಗ್ರಿಗಳನ್ನು ಹಂಚುತ್ತಿರುವ ಕಾಲದಲ್ಲಿ ಅವರ ಸ್ಪರ್ಶವು ನನ್ನ ಕೈಯ ಮೇಲೆ ಆಗುತ್ತಿದ್ದುದ್ದನ್ನು ನಾನು ಮರೆಯಲಾರೆನು. ಅಲ್ಲದೆ ಈ ಸಂದರ್ಭದಲ್ಲಿ ಹಿಂದೀ ಸ್ವರಾಜ್ಯಸ್ಥಾಪನಾಚಾರ್ಯರಾದ ಮಹಾತ್ಮಾ ಗಾಂಧಿಯವರನ್ನು ಮರೆಯಲಿಕ್ಕೆ ನಮಗೆ ಸಾಧ್ಯವಿರುವುದಿಲ್ಲ.

ಕಂಪೆನಿಯು ರಾಜ್ಯದ ಆಡಳಿತೆಯನ್ನು ನಡಿಸುವ ಪೂರ್ವದಲ್ಲಿ ಸಾಮುದಾಯಕಶಿಕ್ಷಣವು ಸಾಧಾರಣವಾಗಿ ಇತ್ತು. ಬಂಗಾಳದಲ್ಲಿಯೇ ಆ ಕಾಲದಲ್ಲಿ ೮೮,೦೦೦ ಹಳ್ಳಿ ಶಾಲೆಗಳು ಇದ್ದವು. ಎಂದರೆ, ಸಾಧಾರಣ ೪ ಹಳ್ಳಿಗಳಿಗೆ ಒಂದು ಶಾಲೆಯಂತೆ ಇರುತ್ತಿತ್ತು.

ಅದರೆ ಕಂಪೆನಿಯು ರಾಜ್ಯಭಾರವನ್ನು ಪ್ರಾರಂಭಿಸುವ ಸಮಯದೊಳಗಾಗಿ ಎಷ್ಟೊ ಶಾಲೆಗಳು ಕಾಣೆಸದಾದವು. ಗ್ರಾಮಸಂಸ್ಥೆಗಳ ನಾಶವೆ ಇದರ ಕಾರಣವಾಗಿರುತ್ತದೆ. ಈ ವಿಷಯದಲ್ಲಿ ಬೇಕಾದ ದೃಷ್ಟಾಂತಗಳನ್ನೂ ಉಲ್ಲೇಖಗಳನ್ನೂ ಕೊಟ್ಟು ತರುವಾಯ ದೇಶಬಂಧುಗಳು ಇಂಗ್ಲೀಷ್ ವಿದ್ಯಾಭ್ಯಾಸದ ಧ್ಯೇಯವನ್ನು ಕುರಿತು ಹೀಗೆಂದರು. "ಬ್ರಿಟಿಷ್ ಆಳಿಕೆಯನ್ನು ಪುಷ್ಟೀಕರಿಸುವುದಕ್ಕೂ, ಮತ್ತು ಶಾಶ್ವತಗೊಳಿಸುವುದಕ್ಕೂ ಈ ವಿದ್ಯಾಭ್ಯಾಸವನ್ನು ಜಾರಿಗೆ ತಂದಿದೆ."

ಡಿಗ್ರಿಯನ್ನು ಪಡಕೊಳ್ಳಲಿಕ್ಕೆ ಬಂದ ಪ್ರತಿಯೊಬ್ಬ ತರುಣನು ತೆಗೆದುಕೊಂಡ ಪ್ರತಿಜ್ಞೆ (ನಾನು ಧರ್ಮಕ್ಕೆ ಮತ್ತು ದೇಶಕ್ಕೆ ವಿರೋಧವಾದ ಯಾವ ಕೆಲಸವನ್ನೂ ಮಾಡಲಾರೆನು.) ಯನ್ನು ದಾಸರು ಬಹಳವಾಗಿ ಶ್ಲಾಘಿಸಿ ಧರ್ಮಕ್ಕೂ ಮತ್ತು ರಾಷ್ಟ್ರಕಾರ್ಯಕ್ಕೂ ಇದ್ದ ಅಚ್ಚುಮೆಚ್ಚನ್ನು ವಿವರಿಸಿದರು. ಬಳಿಕ ರಾಷ್ಟ್ರೀಯ ವಿದ್ಯಾಭ್ಯಾಸವೆಂದರೇನೆಂದು ವಿವರಿಸಿದರು. ಕೊನೆಗೆ ರಾಷ್ಟ್ರೀಯ ಶಿಕ್ಷಣವನ್ನು ಪಡೆಯುವುದೆ ಎಲ್ಲರ ಪ್ರಥಮ ಕರ್ತವ್ಯ, ಪ್ರತಿಯೊಬ್ಬನೂ ಪ್ರತಿದಿನವೂ ರಾಷ್ಟ್ರೀಯ ಶಿಕ್ಷಣಕ್ಕಾಗಿ ಮತ್ತು ಸ್ವರಾಜ್ಯಕ್ಕಾಗಿ ಕೆಲಸಮಾಡಬೇಕು, ಪರಮಾತ್ಮನು ರಾಷ್ಟ್ರೀಯ ವಿದ್ಯಾಭ್ಯಾಸದ ನಿಜವಾದ ಧ್ಯೇಯವನ್ನು ತಿಳಕೊಳ್ಳುವ ಶಕ್ತಿಯನ್ನು ಅವರೆಲ್ಲರಿಗೂ ಕರುಣಿಸಲೆಂದು ಪ್ರಾರ್ಥಿಸಿ ತಮ್ಮ ಉಪನ್ಯಾಸವನ್ನು ಉಪಸಂಹರಿಸಿದರು.

ಪತ್ರ ವ್ಯವಹಾರ.

ಮುಂಬಯಿಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಬಿಲ್ಲವರ ಸಮಾಜಕ್ಕೆ [illegible] ಶ್ರೀಯುತ ಮುಲ್ಕಿ [illegible]ನವರು ಇದೇ ಮಾರ್ಚ ತಾರೀಕು ೧೯ನೇ [illegible] "ಸ್ವದೇಶೀಯ" [illegible] ದೈವಾಧೀನರಾದರೆಂಬುದನ್ನು ತಿಳಿಸುವರೆ ಅತ್ಯಂತ ವ್ಯಸನಪಡುತ್ತೇವೆ. ಇವರು ಸುಮಾರು [illegible] ವರುಷಗಳ ಹಿಂದೆ, ತನ್ನ ಜೀವನೋಪಾಯವನ್ನು ಹುಡುಕಿ ಮುಂಬಯಿಗೆ ಬಂದಿದ್ದು, ಅಲ್ಪಸ್ವಲ್ಪವಿದ್ದ ತನ್ನ ವಿದ್ಯೆಯನ್ನು ಸ್ವಪ್ರಯತ್ನದಿಂದ ವೃದ್ಧಿಗೊಳಿಸಿ, ಮಾನ್ಯ ಉದ್ಯೋಗವನ್ನು ಪಡೆದು ಯಜಮಾನರಿಗೆ ಅಚ್ಚುಮೆಚ್ಚಿನ ಕೆಲಸದವರಾಗಿದ್ದರು. ಅತ್ಯಂತ ಹೀನರಾದ ತನ್ನ ಜಾತಿಯವರಾಗಲಿ ಅನ್ಯರಾಗಲಿ ಮುಂಬಯಿಗೆ ಬಂದರೆಂದರೆ, ಅವರಿಗೆ ತನ್ನ ಕೈಲಾದ ಸಹಾಯವನ್ನು ಕೊಡುತ್ತಾ, ವಿದ್ಯಾಹೀನರಿಗೆ ತನ್ನ ಶಕ್ತ್ಯನುಸಾರ ವಿದ್ಯೆಯನ್ನು ಉಪದೇಶಿಸುತ್ತಾ, ಪರಹಿತೈಷಿಗಳೆಂದು ಎಲ್ಲರಿಂದಲೂ ಹೊಗಳಲ್ಪಡುತ್ತಿದ್ದರು. ಸ್ವಜಾತಿಯವರೊಳಗೆ ಅನ್ಯೋನ್ಯಭಾವವು ಅಂಕುರಿಸುವಂತೆ ಯತ್ನಿಸುತ್ತಿದ್ದ ಇವರ ಸಾಧನೆಯು ಸ್ತೋತ್ರಾರ್ಹವಾಗಿದೆ. ಅಲ್ಲದೆ ಮಂಗಳೂರಿನಲ್ಲಿ ತನ್ನ ಜಾತಿಯವರಿಂದ ನಿರ್ಮಿತವಾದ ಶ್ರೀ ಗೋಕರ್ಣನಾಥ ಕ್ಷೇತ್ರ ದೇವಸ್ಥಾನದ ಪರವಾಗಿ ಇಲ್ಲಿ ಸ್ಥಾಪಿಸಲ್ಪಟ್ಟಿರುವ ಉಪಸಂಘದಲ್ಲಿ ಆರಂಭದಿಂದಲೂ ಕಾರ್ಯಭಾಗಿಗಳಾಗಿದ್ದು, ೧೯೨೦ನೇ ಇಸವಿಯಿಂದ ಆ ಸಂಘದ ಕಾರ್ಯದರ್ಶಿತೆಯ ಭಾರವನ್ನು ವಹಿಸಿ ಅದರ ಏಳಿಗೆಯನ್ನು ಅಹೋರಾತ್ರಿ ಚಿಂತಿಸುತ್ತಾ, ಅದಕ್ಕಾಗಿ ತನ್ನ ತನುಮನವನ್ನು ಸಂಕೋಚಿಸದೆ ಅರ್ಪಿಸುತ್ತಿದ್ದರು. ಹೀಗಿರುತ್ತ, ಪರೋಪಕಾರಿಗಳೂ ಕಾರ್ಯಧುರಂಧರರೂ ಆದ ಇವರ ಮರಣದಿಂದೊದಗಿದ ನಷ್ಟವು ಇವರ ಜಾತಿ ಬಂಧುಗಳಿಗೂ ಇಷ್ಟಮಿತ್ರರಿಗೂ ಸಹಿಸಕೂಡದಾಗಿದೆ. ಇದು ಅವರ ಶವಸಂಸ್ಕಾರದ ಸಂದರ್ಭದಲ್ಲಿ ಸ್ಮಶಾನಭೂಮಿಯಲ್ಲಿ ಕೂಡಿ ದುಃಖಿಸುತ್ತಿದ್ದ ಅಪರಿಮಿತ ಜನಸಂಖ್ಯೆಯಿಂದ ವ್ಯಕ್ತವಾಗುತ್ತಿತ್ತು.

ಎಳೆಯ ವಯಸ್ಸಿನಲ್ಲಿಯೇ ಮೃತ್ಯುವಿಗೆ ತುತ್ತಾದರೂ ತನ್ನ ಜನ್ಮವನ್ನು ಸಾರ್ಥಕಮಾಡಿಕೊಂಡರೆಂಬುದರಲ್ಲಿ ಸಂದೇಹವಿಲ್ಲ. ಅವರ ಗುಣ, ನಡತೆಗಳು ತನ್ನ ಜಾತಿಯುಹಿತವನ್ನೂ ಶ್ರೇಯಸ್ಸನ್ನೂ ಬಯಸುವ ಪ್ರತಿಯೊಬ್ಬನಿಗೂ ಅನುಸರಣೀಯವಾಗಿದೆ. ಪರಮಾತ್ಮನು ಮೃತರಿಗೆ ಮೋಕ್ಷವನ್ನೂ ಅವರ ಬಂಧುಬಳಗಕ್ಕೆಲ್ಲ ಶಾಂತಿಯನ್ನೂ ಅನುಗ್ರಹಿಸಲಿ.

ಮುಂಬಯಿ,
ತಾ. 29 – 3 – '23. } ಜಾತಿಗೃಹಸ್ಥರಲ್ಲೊಬ್ಬ.

ಸತ್ಯಾಗ್ರಹವಾರ.

ಇದೇ ತಾರೀಕಿನ ೬ರಿಂದ ೧೩ರ ವರೆಗೆ ಸತ್ಯಾಗ್ರಹವಾರವಾದುದರಿಂದ ಪ್ರತಿದಿನವೂ ಸ್ವಯಂಸೇವಕರು ಬೆಳಗ್ಗೆ ತಿಲಕ ವಿದ್ಯಾಲಯದಲ್ಲಿ ಕೂಡಿ ಭಜನೆಮಾಡುತ್ತ ಪಟ್ಟಣದ ಬೇರೆ ಬೇರೆ ಬೀದಿಗಳಲ್ಲಿ ಮೆರವಣಿಗೆಯಾಗಿ ಹೋಗುವರು. ಅನಂತರ ಖಾದಿ ಮಾರಾಟ, ತಿಲಕ ಸ್ವರಾಜ್ಯ ಫಂಡಿಗೆ ಹಣ, ಸದಸ್ಯರನ್ನು ವ ಸ್ವಯಂಸೇವಕರನ್ನು ಸೇರಿಸಿಕೊಳ್ಳುವುದನ್ನು ಮಾಡುವುದು. ಕೆಲವು ಸ್ವಯಂಸೇವಕರು ಹಳ್ಳಿಗಳಿಗೆ ಹೋಗಿ ಆ ಕೆಲಸವನ್ನು ಮುಂದರಿಸುವುದು, ಪಟ್ಟಣಿಗರು ಮೆರವಣಿಗೆಗಳಿಗೆ ಬರುವುದು, ಸದಸ್ಯರಾಗುವುದು, ತಿಲಕ ಸ್ವರಾಜ್ಯ ಫಂಡಿಗೆ ವಂತಿಗೆಯನ್ನು ಕೊಡುವುದು ಮೊದಲಾದ ಕಾರ್ಯಗಳನ್ನು ಮಾಡಿ, ಗಯಾ ಕಾಂಗ್ರೆಸಿನ ನಿರ್ಣಯಗಳ ಮೇರೆಗೆ ಮಂಗಳೂರು ತಾಲೂಕಿನ ಪಾಲಿಗೆ ಬಿದ್ದಿರುವ ಕೆಲಸವನ್ನು ಪೂರ್ತಿಗೊಳಿಸುವುದರಲ್ಲಿ ಸಹಭಾಗಿಗಳಾಗಬೇಕಾಗಿ ಸವಿನಯ ಪ್ರಾರ್ಥನೆ. ತಾ. ೬ ಮತ್ತು ೧೩ನೇ ಸಾಯಂಕಾಲ ಮೈದಾನಿನಲ್ಲಿ ಕೂಡುವ ಸಭೆಗಳಿಗೂ ಬರಬೇಕಾಗಿ ವಿನಂತಿ.

ಮು. ತಾ. ಕಾ. ಕಮಿಟಿ,
೩–೪–೧೯೨೩ } ಮೂ. ಉಮೇಶರಾವ್,
ಕಾರ್ಯದರ್ಶಿ.

ಎಯಿಡೆಡ್ ಸೆಕೆಂಡರಿ ಶಾಲೆಗಳ ಉಪಾಧ್ಯಾಯರಿಗೆ ಗ್ರೇಂಟು

ಎಯಿಡೆಡ್ ಸೆಕೆಂಡರಿ ಶಾಲೆಗಳಲ್ಲಿರುವ ಟ್ರೇಂಡ ಆದ ಉಪಾಧ್ಯಾಯರೊಳಗೆ ಹಂಚುವುದಕ್ಕಾಗಿ ಸರಕಾರದವರು ಸುಮಾರು ಒಂದು ಲಕ್ಷ ರೂಪಾಯಿಯನ್ನು ಶಾಲಾ ಮೇನೇಜರರಿಗೆ ಕೊಟ್ಟಿರುತ್ತಾರೆ. ತರಬೇತಾಗದ ಉಪಾಧ್ಯಾಯರಿಗೆ ಇದಕ್ಕೆ ಹಕ್ಕು ಇರುವುದಿಲ್ಲ. ಹಾಗೆಂದರೆ, ಅವರು ತರಬೇತಾದ ವಿನಹ 'ಕೊಲಿಫ್ಯಾಡ್ ಟೀಚರ್' ಎಂದು ಅನ್ನಿಸಿಕೊಳ್ಳವಲ್ಲ. ತರಬೇತುಹೊಂದದೆ ಎಲ್ಲರೂ 'ಕೊಲಿಫ್ಯಾಡ ಟಿಚರ್' ಆಗುವುದಾದರೆ ಸರಕಾರದವರು ಬಹಳ ಹಣ ವೆಚ್ಚಮಾಡಿ ಟ್ರೈನಿಂಗ ಶಾಲೆಗಳನ್ನು ಇಟ್ಟು ಪ್ರಯೋಜನವಿಲ್ಲ. ಕ್ರಮಕ್ಕೆ ವಿರೋಧವಾಗಿ ಹಂಚಲ್ಪಟ್ಟರೆ ಡಿಸ್ಟ್ರಿಕ್ಟ ಎಜುಕೇಶನಲ್ ಅಧಿಕಾರಿಗಳು ಇದರ ವಿಷಯ ಶೀಘ್ರ ಕೊಡಬೇಕಾದ ಅವಶ್ಯವಿದೆ.

ಉಪಾಧ್ಯಾಯ.

ಮಾರಾಟಕ್ಕಿದೆ.

ಉಡುಪಿ, ಮೂಡನಿಡಂಬೂರು ಗ್ರಾಮ, ಸರ್ವೇ ನಂಬ್ರ ೮೩ನೇ, ಸಬ್‌ಡಿವಿಜನ್ ೩ನೇ ಮೂಲಿ ಅಂಶಕ್ಕೆ ವರ್ಷ ೧೯ ರೂಪಾಯಿ ೫ರ ಪ್ರಕಾರ ಮೂಲಗೇಣಿ ತೆತ್ತುಬರುವ ಮೂಲಗೇಣಿ ವ ಕೃತದ ಹಕ್ಕಿನ ಆಸ್ತಿ ೬೭ ಸೆಂಟ್ಸ್ ವಿಸ್ತೀರ್ಣದ್ದು; ಇದರಲ್ಲಿ ಹಂಚು ಛಾವಣಿಯ ತಕ್ತಪೋಷಿಯ ಮನೆ, ಭಾವಿ, ಭಾಗಾಯತು ವ ಇತರ ಮರಮಟ್ಟುಗಳು ಕೂಡಾ ಇರುತ್ತವೆ. ಈ ಸ್ಥಳ ಉಡುಪಿ ಮಿಶ್ಯನ್ ಕಂಪೌಂಡಿನ ಪಡುಗೇಟಿನ ಎದುರಿಗೆ ರಾಜರಸ್ತೆ ಬದಿಯಲ್ಲಿರುತ್ತದೆ. ಬೇಕಾದವರು ರಿಕಾರ್ಡ ವ ಕ್ರಯದ ಅಂದಾಜು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ತಿಳಿಸಲಾಗುವುದು.

೪ನೇ ಎಪ್ರಿಲ್ ೧೯೨೩
ಮಂಗಳೂರು. } S. CH. GOJAR,
Mission Street,
MANGALORE.

ವಿನಂತಿ

ಇದೇ ತಾ. ೬ನೇ ಶುಕ್ರವಾರ ಸಾಯಂಕಾಲ ಘಂಟೆ ೫||ಗೆ ಮೈದಾನಿನಲ್ಲಿ ಅಖಿಲ ಭಾರತೀಯ ಕಾಂಗ್ರೆಸು ಕಮಿಟಿಯ [illegible] ಅನುಸಾರವಾಗಿ ಸಭೆ ಕೂಡುವುದು. ಶ್ರೀಯುತರುಗಳಾದ ದ. ಕೃ. ಭಾರದ್ವಾಜ, ಮು. ಶ್ರೀಪಾದ ಶರ್ಮ ಮೊದಲಾದವರ ಭಾಷಣಗಳಾಗುವುವು. ಎಲ್ಲರೂ ಬರಬೇಕಾಗಿ ವಿನಂತಿ.

ಮೂ. ಉಮೇಶರಾವ್, ಕಾರ್ಯದರ್ಶಿ.

ವಿದೇಶ ವರ್ತಮಾನ.

ಲಂಡನ್:—ನಮ್ಮ ಚಕ್ರವರ್ತಿ ಸಾರ್ವಭೌಮರವರು ಮಹಾರಾಜ್ಞೀಯರೊಡನೆ ಪರಿವಾರ ಸಮೇತ ಇಂಗ್ಲೆಂಡಿನಿಂದ ಇಟಲಿರಾಜಧಾನಿಗೆ ಪ್ರಯಾಣಮಾಡಿದ್ದಾರೆ.

ಮಳೆಯನ್ನು ತರಿಸುವ ವಿಧಾನ:—ಅಮೇರಿಕಕ್ಕೆ ಸೇರಿದ ಓಹಿಯೋ ಜಿಲ್ಲಾ ಡೆಯಟನ್ ಎಂಬ ಸ್ಥಳದಲ್ಲಿ ಕರ್ನೆಲ್ ಪಂಡಿತ ಸಂಘದ ಬ್ಯಾಕ್‌ಕ್ರಫ್ಟ ಎಂಬೊಬ್ಬ ಶಾಸ್ತ್ರಶೋಧಕನು ಮಳೆಯನ್ನು ಕರಸುವ ಪರೀಕ್ಷೆಗಳನ್ನು ಮಾಡುತ್ತಲಿದ್ದಾನೆ. ಸಮುದ್ರದ ಮರಳನ್ನು ವಿದ್ಯುಚ್ಛಕ್ತಿಯನ್ನು ಪ್ರಯೋಗಮಾಡಿ ವಿಮಾನ ಯಂತ್ರಗಳಲ್ಲಿ ಭರ್ತಿಮಾಡಿಕೊಂಡು ಅಂತರಿಕ್ಷದಲ್ಲಿ ಮೋಡಗಳ ಮೇಲಕ್ಕೆ ಹೋಗಿ ಅಲ್ಲಿಂದ ಆ ಕಾವುಳ್ಳ ಮರಳನ್ನು ಮೋಡಗಳ ಮೇಲೆ ಬಿರುಸಾಗಿ ಸುರಿಸುವರು. ಆ ಕಾಲಕ್ಕೆ ಮೋಡಗಳು ಕರಗಿ ಮಳೆ ಸುರಿಯುವುದು. ಈ ಪಂಡಿತನು ಈ ರೀತಿಯಾಗಿ ಒಂದೆರಡು ಸಲ ಮಳೆಯನ್ನು ಬರಮಾಡಿದನೆಂದು ತಿಳಿಸಲ್ಪಟ್ಟಿದೆ.

(ವೃತ್ತಾಂತ ಪತ್ರಿಕೆ)

ಜರ್ಮನಿಯ ಸ್ತ್ರೀಯರ ವಿನಂತಿ:—ಸೋಸಿಯಲ್ 'ಡಿಮೊಕ್ರೆಟಿಕ್ ಪಾರ್ಟಿ'ಗೆ ಸೇರಿದ ಸ್ತ್ರೀಯರ ಸಭೆಯು ಡೊರ್ಟ ಮುಂಡ್, ಎಲ್ಬರ ಫೀಲ್ಡ ಮೊದಲಾದ ಕಡೆಗಳಲ್ಲಿ ಸೇರಿ ಲೋಕದ ಸ್ತ್ರೀಯರೆಲ್ಲರೂ ಫ್ರೆಂಚರು ಮತ್ತು ಬೆಲ್ಜಿಯನ್ನರು ಜರ್ಮನಿಯಲ್ಲಿ ದಾಳಿಯನ್ನು ನಡಿಸದಂತೆ ತಮ್ಮ ಸಹಾನುಭೂತಿಯನ್ನು ತೋರಿಸಬೇಕಾಗಿ ಠರಾವನ್ನು ಪಾಸುಮಾಡಿಕೊಂಡಿರುವರು. ಯುರೋಪದ ಪುನರ್ಘಟನೆಯಲ್ಲಿ ತಮ್ಮ ದೇಶದಲ್ಲೂ ಶಾಂತಿ ಸಮಾಧಾನವು ನೆಲೆಗೊಳ್ಳುವಂತೆ ತಮಗೆ ಎಲ್ಲರ ಸಹಕಾರವು ಬೇಕಾಗಿದೆಯಲ್ಲದೆ ಯುದ್ಧವು ನಡಿಯಬೇಕೆಂಬುದು ತಮ್ಮ ಇಚ್ಛೆಯಲ್ಲವೆಂದು ತಮ್ಮ ಆಶಯವಾಗಿದೆ ಎಂದು ಇವರು ತಿಳಿಸಿರುವರು.

ಇಂಪೀರಿಯಲ್ ಪ್ರೆಸ್ ಕೊನ್ಫರೆನ್ಸು:—ಈ ಕೊನ್ಫರೆನ್ಸು ಬರುವ ೧೯೨೫ನೇ ಇಸವಿಯಲ್ಲಿ ಸೇರುವುದೆಂದು ವದಂತಿ ಇದೆ.

ಜರ್ಮನಿಯ ಪರಿಸ್ಥಿತಿ:—ಜೆಲಿಸೆಂಕಿರಚೆನ ಎಂಬಲ್ಲಿ ಫ್ರೆಂಚರ ಒಂದು ಮೋಟಾರ ಗಾಡಿಯು ಕತ್ತಲೆಯಲ್ಲಿ ದೀಪವಿಲ್ಲದೆ ನಡೆಯುತ್ತಿತ್ತು. ಅದನ್ನು ಜರ್ಮನ ಪೋಲೀಸನು ನಿಲ್ಲಿಸಲು ಫ್ರೆಂಚ ಸೋಲ್ಜರನು ಅವನನ್ನು ಗುಂಡುಹಾಕಿ ಕೊಂದನು. ಅಷ್ಟರಲ್ಲಿ ಹಲವು ಜರ್ಮನರು ಮುತ್ತಿ ಫ್ರೆಂಚರಿಗೆ ಹೊಡೆದರು. ಫ್ರೆಂಚ ಸೈನಿಕರು ತೋಪು ತುಪಾಕಿಗಳೊಡನೆ ಬಂದರು. ಆ ಊರಿನವರಿಗೆ ದಂಡವನ್ನು ವಿಧಿಸಿದರು. ಮುನ್ಸಿಪಾಲಿಟಿಯವರು ಕೊಡಲೊಪ್ಪಲಿಲ್ಲ. ಫ್ರೆಂಚರು ಹೆಚ್ಚಿಗೆ ಸೈನ್ಯವನ್ನು ಕಳುಹಿಸಿ ಮುನ್ಸಿಪಾಲಿಟಿಯನ್ನು ಸುಲಿದರು. ಜರ್ಮನಿಯ ರೈಲ್ವೆ ಚೀಫ್ ಇನ್ಸ್‌ಪೆಕ್ಟರ ಮತ್ತು ಇತರ ರೈಲ್ವೆ ನೌಕರರು ತಮಗೆ ವಿಧೇಯವಾಗಿ ನಡಿಯದೆ ಇರುವುದರಿಂದ ಅವಿಧೇಯ ನೌಕರರಿಗೆ ಫ್ರೆಂಚರು ದೀರ್ಘಕಾಲದ ಶಿಕ್ಷೆಯನ್ನು ಕೊಡುವರು.

ಜಪಾನ್:—ಪ್ರಾಯಕ್ಕೆ ಬಂದ ಎಲ್ಲ ಪುರುಷರಿಗೂ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಮತಕೊಡುವ ಅಧಿಕಾರವಿರತಕ್ಕದೆಂಬ ಸೂಚನೆಯು ಜಪಾನ ಪಾರ್ಲಿಮೆಂಟಿನಲ್ಲಿ ನಾಪಾಸಾದ್ದರಿಂದ ಜಪಾನಿನಲ್ಲಿ ಅಸಂತೋಷವು ಪಸರಿಸುತ್ತಿರುವುದು.

ಟೈಗ್ರಿಸ್ ನದಿಯ ನೆರೆ:—ಟೈಗ್ರಿಸ ನದಿಯು ತುಂಬಿಬಂದು ಬಗದಾದ ಪಟ್ಟಣದ ಆಚೆ ೧೫ ಮೈಲುಗಳವರೆಗೆ ನೀರು ಹರಡಿಕೊಂಡಿದೆ; ಬಗದಾದ ಪಟ್ಟಣದ ಸುತ್ತು ಮುತ್ತು ೧೦೦ ಚೌಕ ಮೈಲು ನೀರೇ ನೀರಾಗಿದೆ. ಅಮೀರ ಫೈಜುಲರವರು ನೀರು ಪಟ್ಟಣದೊಳಗೆ ಸೇರದಂತೆ ಒಡ್ಡು ಕಟ್ಟಲಿಕ್ಕೆ ಜನರಿಗೆ ನೆರವಾದರು. ಸುತ್ತು ಮುತ್ತಿನ ರೈತರೆಲ್ಲ ಬಗದಾದ ಪಟ್ಟಣದಲ್ಲಿ ಸೇರಿಕೊಳ್ಳುತ್ತಿದ್ದಾರೆ.

ಜಗೆಲುಲ್ ಪಾಶಾ:—ಸೆರೆಯಲ್ಲಿಡಲ್ಪಟ್ಟ ಈಜಿಪ್ಟದ ಮುಖಂಡರಾದ ಜಗಲುಲ್ ಪಾಶಾರವರನ್ನು ಅವರ ಅನಾರೋಗ್ಯದ ಸಂಬಂಧ ಬಿಡುಗಡೆ ಮಾಡಿರುವರೆಂದು ವರ್ತಮಾನವಿದೆ.

ಒಳದೇಶ ವರ್ತಮಾನ.

ವಸ್ತುಪ್ರದರ್ಶನಾಲಯಕ್ಕೆ ಮೂರ್ತಿಗಳನ್ನು ಒಯ್ಯುವುದು:—ಇತ್ತಲಾಗಿ 'ಪೃಥ್ವಿರಾಜ ಕೋಟೆ'ಯಿಂದ ಅಗೆದು ತೆಗೆದ ನಾನಾ ಅವತಾರಗಳ ಕೆಲವು ದಿವ್ಯ ವಿಷ್ಣುಪ್ರತಿಮೆಗಳು ಒಂದು ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಪ್ರತಿಷ್ಠಿಸಲ್ಪಟ್ಟಿರುತ್ತವೆ. ಇಲ್ಲಿ ಎಲ್ಲಾ ಕಡೆಗಳಿಂದಲೂ ಯಾತ್ರಿಕರು ದರ್ಶನಾರ್ಥವಾಗಿ ಬರುವರು. ಇವುಗಳನ್ನು ವಸ್ತುಪ್ರದರ್ಶನಾಲಯ (ಮ್ಯುಸಿಯಮ್) ದಲ್ಲಿ ಇಡಬೇಕೆಂಬ ಆಲೋಚನೆಗೆ ಹಿಂದೂವರ್ಗವು ಸಂಪೂರ್ಣವಾಗಿ ವಿರೋಧವಾಗಿರುತ್ತದೆ. ಕಳೆದ ತಾ. ೨೮ನೇ ತಾರೀಕಿನ ದಿನ ಶ್ರೀಯುತ ಪಂಡಿತ ಶಿವರಾಮಶರ್ಮರು ಭಕ್ತಿರಸದಿಂದ ತುಂಬಿ ತುಳುಕುತ್ತಿರುವ ಒಂದು ಭಾಷಣವನ್ನು ಕೊಟ್ಟರು. ದೇವರ ಅಸ್ತಿತ್ವವನ್ನು ನಂಬುವ ಯಾವ ಸರಕಾರವೆ ಆಗಲಿ ೨೨ ಮಿಲಿಯ ಹಿಂದೂಭಕ್ತಜನರಿಂದ ಪೂಜಿಸಲ್ಪಡುವ ಈ ಮೂರ್ತಿಗಳನ್ನು ಒಯ್ಯುವ ಅತ್ಯಾಚಾರಕೆಲಸವನ್ನು ನಡಿಸಲಿಕ್ಕಿಲ್ಲವೆಂದೂ ಇಂಥಾ ಮೂರ್ತಿಗಳು ಅಕಸ್ಮಾತ್ತಾಗಿ ಲಭಿಸಿದ್ದು ದೇಶದ ಅಭ್ಯುದಯವನ್ನು ಸೂಚಿಸುತ್ತದೆಂತಲೂ ಈ ಮೂರ್ತಿಗಳನ್ನು ಒಯ್ಯದ ಹಾಗೆ ಸರಕಾರದೊಡನೆ ಪತ್ರವ್ಯವಹಾರ ನಡಿಸುವುದಕ್ಕಾಗಿ ಒಂದು ಕಾರ್ಯಕಾರಿ ಮಂಡಳಿಯನ್ನು ಸ್ಥಾಪಿಸಬೇಕಾಗಿಯೂ ಸೂಚಿಸಿದರು.

ಪಂಡಿತ ಮಾಲವೀಯರು:—ಪಂಡಿತ ಮಾಲವೀಯರು ಸಂಯುಕ್ತ ಪ್ರಾಂತದ ಕೌನ್ಸಿಲಿಗೆ ಒಂದು ಕಾಗದ ಬರೆದು ಕೌನ್ಸಿಲು ಮಂದಿರವನ್ನು ಕಟ್ಟಲಿಕ್ಕೆ ದುಡ್ಡು ಹಾಳುಮಾಡಬೇಡಿರೆಂದು ಸೂಚಿಸಿದ್ದಾರೆ.

ರೋಗಿಗಳಿಂದ ಹಣ ವಸೂಲುಮಾಡುವುದು:—ಮುನ್ಸಿಪಲ್ ಮತ್ತು ಲೋಕಲ್ ಬೋರ್ಡುಗಳ ಆಸ್ಪತ್ರೆಗಳ ಆಡಳಿತ ಕಮಿಟಿಯವರಿಗೆ ಆಸ್ಪತ್ರೆಯಿಂದ ಚಿಕಿತ್ಸೆಯನ್ನು ಹೊಂದಲು ಬರುವವರಿಂದ (ಬಡವರ ಹೊರತು) ಫೀಸನ್ನು ತೆಗೆದುಕೊಳ್ಳುವ ಅಧಿಕಾರವನ್ನು ಕೊಡಬೇಕಾಗಿ ಬಂಗಾಳದ ಲೋಕಲ್ ಸೆಲ್ಫ್ ಗವರ್ನಮೆಂಟ ಮಿನಿಸ್ಟರರು ತಯಾರಿಸಿದ ನಿಬಂಧನೆಯನ್ನು [illegible] ಮುನ್ಸಿಪಾಲಿಟಿಯಲ್ಲಿ [illegible] ಮುಂದೆ [illegible] ಅದನ್ನು [illegible].

ಗೋದಾವರಿ ಕಲೆಕ್ಟರರ ಹುಕುಂ:—ಅಸಹಕಾರದಲ್ಲಿ ಸೇರಿದ ಕಾಂಗ್ರೆಸ ಪಕ್ಷದ ಜನರಿಗೆ ಸಾಗುವಳಿ ಬಗ್ಗೆ ನೀರಿನ ಪುರವಠೆಯನ್ನು ಮಾಡಲಿಕ್ಕಿಲ್ಲವೆಂದು ಗೋದಾವರಿ ಜಿಲ್ಲೆಯ ಕಲೆಕ್ಟರರು ಜಾಹೀರಪಡಿಸಿರು. ಸರಕಾರಕ್ಕೆ ಅಪಕೀರ್ತಿಯನ್ನು ಉಂಟುಮಾಡುವ ಈ (ಸರ್ಕ್ಯುಲರ) ಹುಕುಂವನ್ನು ಕುರಿತು ಸ್ಥಳೀಕ ಸರಕಾರವು ನ್ಯಾಯವಿಧಾಯಕ [illegible] ಸಭೆಯು ತುಂಬಿಕರೂ [illegible] ಈ ಹುಕುಂವು ಅಯೋಗ್ಯವಾದದೆಂದು ಅಭಿಪ್ರಾಯಪಡುತ್ತಿದ್ದಾರೆ.

ಮದನಪಳ್ಳಿ ತಾಲೂಕು ಬೋರ್ಡು:—ಮಿಸೆಸ್ ಗ್ರೇಸ್ ಥಾಮಸ್ ಎಂಬವಳು ಮದನಪಳ್ಳಿಯ ತಾಲೂಕು ಬೋರ್ಡ ಸಭಾಸದಳಾಗಿ ನೇಮಿಸಲ್ಪಟ್ಟಿರುವಳು.

ಅಲಿಘರ ಮುಸ್ಲಿಂ ಯುನಿವರ್ಸಿಟಿ:—ಅಲಿಘರ ಮುಸ್ಲಿಂ ಯುನಿವರ್ಸಿಟಿಗೆ ಮುಂಬಯಿ ಪಟ್ಟಣ ಒಂದರಲ್ಲಿಯೆ ೨ಲಕ್ಷ ರೂಪಾಯಿ ಜಮೆಯಾಗಿದೆ.

ಚಿಂಗಲ್ಪಟ್ಟು ಜಿಲ್ಲೆಯ ಅಸ್ಪೃಶ್ಯರ ಪರಿಷತ್ತು—ಚಿಂಗಲ್ಪಟ್ಟು ಜಿಲ್ಲೆಯ ಪಂಚಮರ ಎರಡನೆಯ ಪರಿಷತ್ತು ಕಳೆದ ಆದಿತ್ಯವಾರ ರಾವ್ ಸಾಹೇಬ್ ಯಂ. ಸಿ. ಮದ್ರಾಸಿ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಪರಿಷತ್ತಿಗೆ ಸುಮಾರು ೧೦,೦೦೦ ಮಂದಿ ಜನರು ಹಾಜರಿದ್ದರು.

ಫಾಸಿ ಶಿಕ್ಷೆ:—ಕೊಷ್ಟಾರ ಮಹಮ್ಮದ ಕೋಯಾ ತಂಗಲ ಎಂಬ ಮಲಬಾರ ದಂಗೆಯ ಒಬ್ಬ ಮುಖಂಡನಿಗೆ ವಿಚಾರಣೆಯಾಗಿ ದಕ್ಷಿಣ ಮಲಬಾರದ ಸೆಷನ್ಸ್ ಜಡ್ಜರು ಮರಣದಂಡನೆಯ ಶಿಕ್ಷೆಯನ್ನು ವಿಧಿಸಿರುವರು.

ತಿಲಕ ಸ್ವರಾಜ್ಯ ಫಂಡು:—ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ೧೯೨೧ನೇ ವರುಷದ ತಿಲಕ ಸ್ವರಾಜ್ಯ ಫಂಡಿನ ಲೆಕ್ಕದ ವರದಿಯು ಪ್ರಕಟವಾಗಿದೆ. ಈ ಫಂಡಿಗೆ ವಾಗ್ದಾನವಾದ ರೂ. ೧೧೯೬೧,೪೦೭ ರಲ್ಲಿ ಇನ್ನೂ ರೂ. ೧೦,೯೮೫೨ ವಸೂಲು ಆಗಲಿಕ್ಕೆ ಬಾಕಿ ಇದೆ. ಈ ಹಣದಲ್ಲಿ ಮುಂಬಯಿಯಲ್ಲಿ ಕೆಲವು ವಾರಗಳಲ್ಲಿ ರೂ. ೨,೬೩,೦೦೦ ವನ್ನು ವಸೂಲುಪಡಿಯಬಹುದೆಂದು ಭರವಸೆ ಇದೆ. ಅಹಮ್ಮದಾಬಾದಿನಲ್ಲಿ ರೂ. ೩೧,೬೦೦೦ ವಸೂಲಾಗತಕ್ಕದಿದೆ. ಈ ಹಣವನ್ನು ವಸೂಲು ಮಾಡುವುದರಲ್ಲಿ ಹೆಚ್ಚಿನ ಕಷ್ಟವಿಲ್ಲವಂತೆ. ಬಂಗಾಳದಲ್ಲಿ ಕೈಗಾರಿಕೆಯ ಶಾಲೆಯ ಬಗ್ಗೆ ವಾಗ್ದಾನಮಾಡಿದ ರೂ. ಒಂದು ಲಕ್ಷ, ಮತ್ತು ಆಯುರ್ವೇದ ಕೋಲೇಜಿನ ಬಗ್ಗೆ ರೂ. ೧,೩೬,೦೦೦ ವಾಗ್ದಾನಮಾಡಿದ್ದು ವಸೂಲು ಮಾಡಲು ಬಾಕಿ ಇದೆ.

ಕಲ್ಲಿಕೋಟೆ:—ಮೆಸ್ಸರ್ಸ್ ಇಬ್ರಾಹಿಮ್ ಕರೀಮ್ ಎಂಡ್ ಸನ್ಸ್ ಇವರಲ್ಲಿನ ಕೊಡೆಯ ಅಂಗಡಿಗೆ ಬೆಂಕಿಬಿದ್ದು ರೂ. ೧೦೦೦ ನಷ್ಟ ಉಂಟಾಗಿದೆ.

ಇಂಡಿಯನ್ ಟ್ರೇಡ ಕಮಿಶನರ್:—ಈಸ್ಟ ಆಫ್ರಿಕದಲ್ಲಿ ವ್ಯಾಪಾರದ ಸ್ಥಿತಿಯು ಕುಂದಿರುವುದರಿಂದಲೂ ಸರಕಾರದ ಖರ್ಚನ್ನು ಕಡಿಮೆಮಾಡಬೇಕಾಗಿ ಬಂದಿರುವುದರಿಂದಲೂ ಇಂಡಿಯಾ ಸರಕಾರದವರು ಈಸ್ಟ ಇಂಡಿಯಾದಲ್ಲಿರುವ ಇಂಡಿಯನ್ ಟ್ರೇಡ್ ಕಮಿಶನರ ಹುದ್ದೆಯನ್ನು ತೆಗೆದುಹಾಕಲು ನಿಶ್ಚಯಿಸಿರುವರು.

ಬೆನಾರಿಸ್ ಮುನ್ಸಿಪಾಲಿಟಿ:—ಈ ಮುನ್ಸಿಪಾಲಿಟಿಗೂ ಅಧಿಕ ಸಂಖ್ಯಾಕ ಅಸಹಕಾರಿಗಳು ಆರಿಸಲ್ಪಟ್ಟಿರುವರು.

ಗುಜರಾಥಿನಲ್ಲಿ ಕಾಂಗ್ರೆಸ ಕಾರ್ಯದ ಅಭಿವೃದ್ಧಿ:—ಗುಜರಾಥ ಪ್ರಾಂತದಲ್ಲಿ ತಿಲಕ ಸ್ವರಾಜ್ಯ ಫಂಡಿಗೆ ರೂ. ೧೦೩,೦೦೦ ವಂತಿಗೆಯಾಯಿತು. ಇದರಲ್ಲಿ ಅಹಮ್ಮದಾಬಾದ ೧೬,೪೦೦, ಕೈರಾ ೩೦,೦೦೦, ಬ್ರೋಚ್ ರೂ. ೩೦೦೦, ಸುರತ ರೂ. ೨೬,೫೦೦. ಸೂರತ ಪಟ್ಟಣದ ಜನರು ಟೇಕ್ಸನ್ನು ಕೊಡಲು ನಿರಾಕರಿಸಿರುವುದರಿಂದ ೨೨,೦೦೦ ಜಪ್ತಿವಾರಂಟುಗಳು ಹೊರಟಿವೆ. ಇದೇ ಪಟ್ಟಣದಲ್ಲಿ ಒಟ್ಟು ೨೦,೦೦೦ ತೆರಿಗೆದಾರರಿರುವರು.

ಕಾಂಗ್ರೆಸ್ಸಿನ ಕಾರ್ಯಕಾರಿ ಕಮಿಟಿಯ ಮಿಟಿಂಗು—ಬರುವ ತಾ. ೧೩ರಲ್ಲಿ ಮುಂಬಯಿಯಲ್ಲಿ ಕಾಂಗ್ರೆಸ್ಸಿನ ಕಾರ್ಯಕಾರಿ ಕಮಿಟಿಯ ಮಿಟಿಂಗು ಸೇರುವುದು. ಗಯಾ ಕಾಂಗ್ರೆಸ್ ಕಾರ್ಯಕ್ರಮದ ಮುಂದಿನ ಕಾರ್ಯವನ್ನು ಕುರಿತು ಆಲೋಚಿಸಲು ಈ ಮಿಟಿಂಗು ಸೇರತಕ್ಕದಿದೆ.

ಕಾಂಗ್ರೆಸ್ಸಿನ ಮುಖಂಡರು:—ಕಾಂಗ್ರೆಸ್ ಕಾರ್ಯಪ್ರಚಾರಕ್ಕಾಗಿ ಬರ್ಮಕ್ಕೆ ಹೊರಟುಹೋದ ಶ್ರೀಯುತ ಜಮುನಾಲಾಲ ಬಜಾಜ್ ಮತ್ತು ಶ್ರೀಯುತ ವಿ. ಜೆ. ಪಟೇಲ ಇವರು ಕಳೆದ ತಾ. ೨೫ಕ್ಕೆ ರಂಗೂನಿಗೆ ತಲಪಿದರು. ರಂಗೂನ ಪಟ್ಟಣದ ನಿವಾಸಿಕರು ಇವರನ್ನು ಯೋಗ್ಯರೀತಿಯಲ್ಲಿ ಸ್ವಾಗತಮಾಡಿ ಸನ್ಮಾನಪತ್ರವನ್ನು ಸಮರ್ಪಿಸಿ ಸತ್ಕರಿಸಿದರು.

ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧಿವೇಶನ:—ಲೆಜಿಸ್ಲೇಟಿವ್ ಎಸೆಂಬ್ಲಿಯ ಡಿಲ್ಲಿಯ ಮೂರನೆಯ ಅಧಿವೇಶನವು ಕಳೆದವಾರದ ಬುಧವಾರ ಮುಗಿಯಿತು.

ಶ್ರೀಮತಿ ಸರೋಜಿನಿ ನಾಯ್ಡೋ:—ಇವರನ್ನು ಮುಂಬಯಿ ಮುನ್ಸಿಪಲ್ ಕಾರ್ಪೋರೇಶನಿಗೆ ಮೆಂಬರರಾಗಿ ಆರಿಸಿದುದನ್ನು ಆಕ್ಷೇಪಿಸಿ ಮಿ| ಮನವೇಲ್ಕರರು ಮುಂಬಯಿ ಹೈಕೋರ್ಟಿನಲ್ಲಿ ಮಾಡಿದ ಅಪೀಲು ಅರ್ಜಿಯನ್ನು ಆ ಕೋರ್ಟಿನವರು ತೆಗೆದುಹಾಕಿರುವರು.

ಮುಂಬಯಿ ಖಿಲಾಫತ್ ಕೊನ್ಫರೆನ್ಸ್:—ಮುಂಬಯಿ ಸಂಸ್ಥಾನದ ಖಿಲಾಫತ್ ಕೊನ್ಫರೆನ್ಸಿಗೆ ಮೌಲಾನಾ ಅಬ್ದುಲ್ ಕಲಂ ಅಜಾದರನ್ನು ಅಧ್ಯಕ್ಷರಾಗಿ ಆರಿಸಿದೆ. ರಾಷ್ಟ್ರೀಯ ಸಪ್ತಾಹವಾರವು ಸಮಾಪಿಸಿದ್ದರಿಂದ ಈ ಕೊನ್ಫರೆನ್ಸನ್ನು ಮುಂದರಿಸಿಟ್ಟಿದೆ. ರಮ್‌ಜಾನ್ ಆದ ತರುವಾಯ ಕೊನ್ಫರೆನ್ಸು ಜರಗುವುದು.

ಕೋನ್‌ಪುರ:—ಇಲ್ಲಿ ಒಂದು ಹಿಟ್ಟು ಕಾರ್ಖಾನೆಗೆ ಬೆಂಕಿಬಿದ್ದು ಸುಮಾರು ೧೦-೧೧ ಲಕ್ಷ ರೂಪಾಯಿಗಳ ನಷ್ಟ ಸಂಭವಿಸಿದೆ.

ಪೂನಾ ಗೊಖಲೆ ಹೋಲ್:—ಪರಲೋಕವಾಸಿ ಗೋಖಲೆಯವರ ಪುತ್ರಿ ಶ್ರೀಮತಿ ಆನಂದಿಬಾಯಿ ಧಾವಲೆಯವರು ತಮ್ಮ ತಂದೆಯವರ ಸ್ಮಾರಕಕ್ಕಾಗಿ ಪುನೆಯಲ್ಲಿ ಕಟ್ಟಲಿಕ್ಕಿರುವ "ಗೋಖಲೆ ಹೋಲ್" ಎಂಬ ಸಭಾಸದನದ ಬಗ್ಗೆ ರೂ. ೫೦೦೦ವನ್ನು ದಾನವಾಗಿ ಕೊಟ್ಟಿರುವರು. ಈ ವರೆಗೆ ಈ ಹೋಲಿಗೆ ವಾಗ್ದಾನ ವಂತಿಗೆಯು ಸುಮಾರು ರೂ. ೫೫,೦೦೦ ಆಗಿದೆ.

ಅಹಮ್ಮದಾಬಾದಿನ ಗಿರಣಿಗಳು:—ಇಲ್ಲಿಯ ಗಿರಣಿಗಳ ಮಾಲಿಕರು ಕೂಲಿಯ ದರವನ್ನು ಕಡಿಮೆಮಾಡಲು ಉದ್ಯುಕ್ತರಾಗಿರುವುದರಿಂದ ಕೂಲಿಗಳು ಈ ತಿಂಗಳ ತಾರೀಕು ೧೧ರಿಂದ ಮುಷ್ಕರವನ್ನು ಹಿಡಿಯಲು ನಿಶ್ಚಯಿಸಿದ್ದರಷ್ಟೆ. ಈ ನಿರ್ಣಯದಂತೆ ಅಹಮ್ಮದಾಬಾದಿನ ೫೫ ಗಿರಣಿಗಳ ಹೊರತು ಎಲ್ಲಾ ಗಿರಣಿಗಳ ಕೂಲಿಗಳು ಮುಷ್ಕರಹೂಡಿರುವರು. ಅದರೆ ಈ ಸಲ ಮುಷ್ಕರಹೂಡಿದ ಕೂಲಿಗಳು ಯಾವ ಗಲಾಟೆಯನ್ನೂ ನಡಿಸದೆ ಶಾಂತರಾಗಿರುವರು. ಈ ಮುಷ್ಕರದ ಇತ್ಯರ್ಥವನ್ನು ಮಾಡಲು ದೀನಬಂಧು ಸಿ. ಎಫ್ ಎಂಡ್ರೂಸ ಮೊದಲಾದವರು ಅಹಮ್ಮದಾಬಾದಿನಲ್ಲಿ ಪ್ರಯತ್ನಿಸುತ್ತಿರುವರು. ದೀನಬಂಧುಗಳು ಗಿರಣಿಯ ಒಡೆಯರ ಕಮಿಟಿಯ ಒಂದು ಮಿಟಿಂಗಿನಲ್ಲಿ ಹಾಜರಿದ್ದು ಆ ಮಿಟಿಂಗಿನ ಕಾರ್ಯಕ್ರಮವು ಮುಗಿದ ಮೇಲೆ ಕೂಲಿಗಳ ಸಂಘದ ಮಿಟಿಂಗಿಗೆ ಬಂದು ಕೂಲಿಗಳು ಶಾಂತರಾಗಿ ನಡಿಯುವುದು ಮಹಾತ್ಮರ ಪರಬೋಧನೆಯ ಮಹಾತ್ಮೆಯೇ ಆಗಿದೆ ಎಂದು ಹೇಳಿ, ಕೂಲಿಗಳು ತಮ್ಮ ಶಾಂತತೆಯನ್ನು ಬಿಟ್ಟು ಅತ್ಯಾಚಾರಗಳನ್ನು ನಡಿಸಿದರೆ ಅದು ಮಹಾತ್ಮಾಗಾಂಧಿ, ಶ್ರೀಮತಿ ಅನಸೂಯಾ ಬಾಯಿ ಮತ್ತು ಶ್ರೀಯುತ ಶಂಕರಲಾಲ ಬೇಂಕರ ಮೊದಲಾದ ಮುಖಂಡರಿಗೆ ಅವಮಾನಕರವಾಗಿದೆಂದು ತಿಳಿಸಿದರು.

ಇಂಚ್‌ಕೇಪ ಕಮಿಟಿ—ಇಂಚ್‌ಕೇಪ ಕಮಿಟಿಯವರ ಸೂಚನೆಯಂತೆ ಹಿಂದೂಸ್ಥಾನ ಸರಕಾರವು ಪಬ್ಲಿಕ್ ಹೆಲ್ತ ಕಮಿಶನರ ಹುದ್ದೆಯನ್ನೂ ಡೈರೆಕ್ಟರ ಒಫ್ ಮೆಡಿಕಲ್ ರಿಸರ್ಚಿ ಹುದ್ದೆಯನ್ನೂ ತೆಗೆದು ಬಿಡಲಿಕ್ಕಿದ್ದಾರೆ.

ಅಲಾಹೀದ್ ಪತ್ರಿಕೆಯ ಸಂಪಾದಕರು:—ಅಲಾಹೀದ್ ಪತ್ರಿಕೆಯ ಸಂಪಾದಕರಾದ ಮಿ| ನಬಿಬುಲ್ಲಾರಿಗೆ ಎರಡು ವರುಷಗಳ ಕಠಿಣ ಶಿಕ್ಷೆಯು ವಿಧಿಸಿದೆ.

ಶೃಂಗೇರಿಯ ಜಗದ್ಗುರುಗಳು:—ಈ ಜಗದ್ಗುರುಗಳ ಆರೋಗ್ಯಸ್ಥಿತಿಯು ಚಿಂತಾಸ್ಪದವಾಗಿದೆ. ಇವರು ಬಹಳ ಕೃಶರಾಗಿರುವರು. ಮೈಸೂರು ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಶ್ರೀಯುತ ರಂಗ ಅಯ್ಯಂಗರರ ಅಧ್ಯಕ್ಷತೆಯಲ್ಲಿ ಸುಮಾರು ೧೦೦ ಜನರ ಒಂದು ಕಮಿಟಿಯು ಸೇರಿ ಈ ವಿಷಯವನ್ನು ಮೈಸೂರು ಮಹಾ ರಾಜರಿಗೆ ನಿವೇದಿಸಿದೆಯಂತೆ.

ಪೀಜಿನ್ಯಾಯ ವಿಧಾಯಕ ಸಭೆ:—ಪೋಲ್‌ಟೆಕ್ಸನ್ನು ಪಾಸು ಮಾಡುವುದಕ್ಕಾಗಿ ಫಿಜಿ ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧಿವೇಶವು ಬರುವ ತಾರೀಕು ೧೦ರಲ್ಲಿ ಸೇರುವುದು.

ಕೌನ್ಸಿಲ್ ಒಫ್ ಸ್ಟೇಟಿನ ಠರಾವು:—ರಾಜಮಹೇಂದ್ರಿಯ ಪ್ರತಾಪ ಸಿಂಹರೆಂಬ ಜಹಗೀರದಾರರು ಯುದ್ಧಕಾಲದಲ್ಲಿ ಹಿಂದೂಸ್ಥಾನದೊಳಗಿನ ಬ್ರಿಟಿಷ ರಾಜ್ಯವನ್ನು ಬುಡಮೇಲುಮಾಡಬೇಕೆಂದು ಜರ್ಮನಿ ರಷ್ಯಿಯಾಗಳಲ್ಲಿ ಪ್ರಯತ್ನನಡಿಸಿದರೆಂದು ಅವರ ಆಸ್ತಿಯನ್ನು ಜಪ್ತಿಮಾಡುವ ಕುರಿತು ಕೌನ್ಸಿಲ್ ಒಫ್ ಸ್ಟೇಟದಲ್ಲಿ ಠರಾವು ಪಾಸಾಗಿದೆ.

ಮಂತ್ರಿಗಳ ಸಂಬಳ:—ಬಂಗಾಳ ಕೌನ್ಸಿಲುಗಳ ಮಂತ್ರಿಗಳು ತಮ್ಮ ಸಂಬಳವು ಐದು ಸಾವಿರಕ್ಕೆ ಕಡಿಮೆಯಾಗಕೂಡದೆಂದು ಠರಾವು ಮಾಡಿಕೊಂಡರು. ಮದರಾಸ, ಮುಂಬಯಿ, ಬಿಹಾರ ಪ್ರಾಂತಗಳ ಮಂತ್ರಿಗಳ ಸಂಬಳವು ೪ ಸಾವಿರ ಇರಬೇಕೆಂದು ಅಲ್ಲಿಯ ಕೌನ್ಸಿಲುಗಳಲ್ಲಿ ಠರಾವು ಆಗಿದೆ.

ಭೂಪೇಂದ್ರನಾಥ ಬಾಸು—ಕಲ್ಕತ್ತ ವಿಶ್ವವಿದ್ಯಾಲಯದ ವ್ಹಾಯ್ಸ್ ಚೇನ್ಸಲರರಾದ ಸರ್. ಅಶುತೋಷ ಮುಕರ್ಜಿಯವರ ಈ ಪದವಿಯ ಅವಧಿಯು ಈಗ ಮುಗಿದಿರುವುದರಿಂದ ಮಿ| ಭೂಪೇಂದ್ರನಾಥ ಬಾಸುರವರು ಈ ಪದವಿಗೆ ನೇಮಕಪಟ್ಟಿರುವರು.

ಮಧ್ಯ ಸಂಸ್ಥಾನಗಳ ಮತ್ತು ಬಿಹಾರ ರಜಪೂತರ ಪರಿಷತ್ತು:—ಈ ಪರಿಷತ್ತು ಮಾರ್ಚಿ ೩೧ರಲ್ಲು ಶ್ರೀಯುತ ರಾಮಲಾಲ ಸಿಂಗ ಗಹರ್‌ವಾರ್ ಇವರ ಅಧ್ಯಕ್ಷತೆಯಲ್ಲಿ ಬಿಲ್ಲಾಪುರದಲ್ಲಿ ಜರಗಿತು. ಖದ್ದರನ್ನು ಸರ್ವತ್ರ ಶುಭಶೋಭನಾದಿಗಳಲ್ಲಿಯೂ ಕೂಡ ಉಪಯೋಗಿಸಬೇಕೆಂತಲೂ ಆಗ್ರಹ. ಶುದ್ಧಿಸಮಾಜದವರು ಮಾಲ್ಕಾನದ ರಜಪೂತರನ್ನು ಹಿಂದೂಧರ್ಮಕ್ಕೆ ತರಲು ಮಾಡಿದ ಪ್ರಯತ್ನಗಳನ್ನು ಶ್ಲಾಘಿಸುವ ಠರಾವನ್ನೂ ಪಾಸುಮಾಡಿದರು. ರೂ. ೫೦೦ನ್ನು ಸಮಾಜದವರಿಗೆ ಉಚಿತಾರ್ಥವಾಗಿ ಕೊಡಬೇಕಾಗಿ ನಿರ್ಣಯಿಸಿದರು. ಪ್ರತಿಯೊಬ್ಬ ರಜಪೂತನು ಹುಡುಗಿಯರನ್ನು ೧೦ ವರ್ಷಗಳ ಪರಿಯಂತರ ಮತ್ತು ಹುಡುಗರನ್ನು ೧೬ ವರ್ಷಗಳ ವರೆಗೂ ವಿದ್ಯಾಭ್ಯಾಸದಲ್ಲಿಡಬೇಕೆಂಬುದು ನಿಶ್ಚಯಿಸಲ್ಪಟ್ಟಿತು.

ಇಂಪೀರಿಯಲ್ ಟೊಬೆಕೋ ಕಂಪೆನಿ:—ಈ ಹೆಸರಿನ ಹೊಗೆಸೊಪ್ಪಿನ ಕಂಪೆನಿಗೆ ಕಳೆದ ಒಕ್ಟೋಬರಕ್ಕೆ ಅಂತ್ಯವಾದ ವರುಷಕ್ಕೆ ೧೦ ಕೋಟಿ ೮೦ ಸಾವಿರ ರೂಪಾಯಿ ಮುನಾಫೆಯಾಯಿತು.

ತಿಲಕ ಸ್ವರಾಜ್ಯ ಫಂಡಿಗೆ ದಾನ:—ಕಲ್ಕತ್ತೆಯ ಶ್ರೀಯುತ ನಿರ್ಮಲ ಚಂದ್ರ ಚಂದ್ರರವರು ತಿಲಕ ಸ್ವರಾಜ್ಯ ಫಂಡಿಗೆ ರೂ. ೨೫,೦೦೦ ವನ್ನು ಅರ್ಪಿಸಿರುತ್ತಾರೆ.

ಶ್ರೀಯುತ ಶ್ರೀನಿವಾಸರಾವ್ ಕೌಜಲಗಿ:—ಇವರ ವಕೀಲಿ ಸನದನ್ನು ಹೈಕೋರ್ಟಿನವರು ರದ್ದುಪಡಿಸಿರುವರೆಂಬ ಸುದ್ದಿ ಇದೆ.

ಡಾಕ್ಟರ ಹರ್ಡೀಕರರ ಕಾರ್ಯಕ್ರಮ:—ಇವರು ಎಪ್ರಿಲ್ ೧೫, ೧೬ ಈ ಎರಡು ದಿನಗಳಲ್ಲಿ ಶಿರ್ಶಿ, ಸಿದ್ದಾಪುರ, ಎಲ್ಲಾಪುರ ಈ ಊರುಗಳನ್ನು ರಾಷ್ಟ್ರಸೇವಕರ ಪಥಕಗಳನ್ನು ಸ್ಥಾಪಿಸಲಿಕ್ಕೆ ಸಂದರ್ಶಿಸುವರು. ಮೇ ತಿಂಗಳ ತಾರೀಕು ೧, ೨, ೩, ೪, ೫ ಈ ಐದು ದಿವಸಗಳಲ್ಲಿ ಭಟ್ಕಳ, ಹೊನ್ನಾವರ, ಕುಮಟಾ, ಗೋಕರ್ಣ, ಅಂಕೋಲಾ ಕಾರವಾರಗಳಲ್ಲಿ ಇದೇ ಕೆಲಸದ ಮೇಲೆ ಪ್ರವಾಸಮಾಡುವರು.

ಬಿಲ್ಲಾಪುರ:—ಬಿಲ್ಲಾಪುರದಲ್ಲಿ ಅಧಿಕಾರಿಗಳ ದಬ್ಬಾಳಿಕೆಯ ಮೂಲಕ ಇಡೀ ಪ್ರಾಂತ್ಯದಲ್ಲಿ ಕೋಲಾಹಲವು ಎದ್ದಿರುತ್ತದೆ. ಬಿಲ್ಲಾಪುರ ಟೌನ್ ಹೋಲಿನಲ್ಲಿ ಮೊನ್ನೆ ನೆರೆದ ಎಪ್ಪತನೆಯ ರಜಪೂತ ಪರಿಷತ್ತಿನ ಮೇಲೆ ಸ್ವರಾಜ್ಯ ಧ್ವಜವನ್ನು ಅಂದವಾಗಿ ಮಹಡಿಯ ಮೇಲೆ ಏರಿಸಿದ್ದರು. ಅಧಿಕಾರಿ ವರ್ಗದವರಿಗೆ ಇದನ್ನು ಸಹಿಸಲು ಆಗಲಿಲ್ಲ. ಉಪಾಯದಿಂದ ಅವುಗಳನ್ನು ಹೇಗಾದರೂ ಕೆಳಗೆ ಇಳಿಸಬೇಕೆಂಬ ಪ್ರಯತ್ನವನ್ನು ಕೈಕೊಂಡರು. ಅದರೆ ಅದು ನಿಷ್ಫಲವಾಯಿತು.

ಹೊಸ ಕರೆನ್ಸಿ ನೋಟುಗಳು:—ಈಗ ಇರುವ ಕರೆನ್ಸಿನೋಟುಗಳಲ್ಲಿ ಆಕಾರ, ಪರಿಮಾಣ, ಬಣ್ಣ, ಮುಂತಾದವುಗಳ ವಿಷಯ ಭೇದವಿಲ್ಲದೆ ಅನೇಕರು ಮೋಸಹೋಗುತ್ತಿರುವರು. ಇದೇ ಬರುವ ಮೇ ತಿಂಗಳ ೧ನೆ ತಾರೀಕಿನಿಂದ ಹೊಸ ಕರೆನ್ಸಿ ನೋಟುಗಳು ಚಲಾವಣೆಗೆ ಬರುವುವು. ಈಗಿರುವ ಕರೆನ್ಸಿ ನೋಟುಗಳೂ ಸಹ ಚಲಾವಣೆಯಲ್ಲಿರುವುವು. ಹೊಸ ನೋಟುಗಳಲ್ಲಿ ಒಂದೊಂದು ಮೌಲ್ಯದ ನೋಟಿಗೆ ಒಂದೊಂದು ಪರಿಮಾಣ, ಒಂದೊಂದಕ್ಕೆ ಒಂದೊಂದು ತರದ ಬಣ್ಣ. ಅಂಕೆಗಳು ಈಗಿನ ನೋಟುಗಳಲ್ಲಿ ಇರುವುದಕ್ಕಿಂತ ಸ್ಪಷ್ಟವಾಗಿರುವುವು. ಈಗ ಒಂದು ರೂಪಾಯಿ ನೋಟಿಗೆ ಮಾತ್ರ ಎರಡೂ ಕಡೆಯಲ್ಲಿ ಬರೆಹವಿದೆ. ಹೊಸನೋಟುಗಳಲ್ಲಿ ಎಲ್ಲವುಗಳಲ್ಲಿಯೂ ಎರಡೂ ಕಡೆಯಲ್ಲಿ ಬರೆಹವಿರುವುದು. ಈಗ [illegible] ನೋಟಿನಲ್ಲಿ ಮಾತ್ರ ಅರಸರ ಛಾಯಾಚಿತ್ರವು ಇದೆ. ಇನ್ನು ಎಲ್ಲಾ ತರದ ನೋಟುಗಳಲ್ಲಿಯೂ ಅರಸರ ಛಾಯಾಚಿತ್ರವು ಇರುವುದು. ಕೃತಕ ನೋಟುಗಳು ಆಗದಹಾಗೆ ಇನ್ನು ಜಾಗ್ರತೆಯನ್ನು ವಹಿಸಿರುತ್ತಾರೆ.

ಅನುಕ್ರಮಣಿಕೆ.

ಅಗ್ರಲೇಖ:—
ಉಪ್ಪಿನ ತೆರಿಗೆಯ ಕಪ್ಪು ,,
ಸ್ಫುಟವಿಚಾರಗಳು.— ೭
೧. ಸರ್ಟಿಫಿಕೇಶನ್ ಅಧಿಕಾರ, ೨. ೩. ಎಂಡೌಮೆಂಟ್ ಬೀಲು, ೪. ಮಲಬಾರ ದಂಗೆಯು ಪೋಲೀಸು ರಾಜ್ಯ, ಅಶುತೋಷ ಮುಖರ್ಜಿಯವರು
ಮಂಗಳೂರು— ೭-೮
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶವರ್ತಮಾನ ೫
ದಕ್ಷಿಣ ಕನ್ನಡ— ಬಂಟವಾಳ, ಕಾಸರಗೋಡು ,,
ಫಿಜಿ ದ್ವೀಪದಲ್ಲಿರುವ ಹಿಂದಿಗಳು ,,
ಜಬಲಪುರದ ಸ್ವರಾಜ್ಯ ನಿಶಾನೆ ,,
ಕಳೆದ ತಾ. ೩ರಲ್ಲಿ ಉಡುಪಿಯಲ್ಲಿ ಸೇರಿದ ಮಹಾಸಭೆ ,,
ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ್ ಕಮ್ಮಿಟಿ ,,
ಪ್ಲೇಗ್ ರೋಗವು ೪
ಲಾಹೋರಿನ ಕೌಮಿ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ 'ಡಿಗ್ರಿಗಳ'ನ್ನು ಕೊಡುವ ಕಾಲದಲ್ಲಿ ದೇಶಬಂಧು ದಾಸರು ಮಾಡಿದ ಭಾಷಣ ,,
ಪತ್ರವ್ಯವಹಾರ ,,

ಸ್ವದೇಶಾಭಿಮಾನಿ.

ಶಕ ೧೮೪೫ ಚೈತ್ರ ಬ ೫ ಯು ಶುಕ್ರವಾರ

ಉಪ್ಪಿನ ತೆರಿಗೆಯ ಕಪ್ಪು.

ಕೊನೆಗೆ ವೈಸರಾಯರು ತಮ್ಮ ಹಟವನ್ನೆ ಸಾಧಿಸಿದರು. ಹಿಂದೂಸ್ಥಾನ ಸುಧಾರಣೆಯ ಎಕ್ಟಿನ ಮೇರೆಗೆ ಅಸ್ತಿತ್ವದಲ್ಲಿ ಬಂದ ಕಾಯಿದೆ ಸಂಸ್ಥೆಗಳು ಪಾರ್ಲಿಮೆಂಟಿನ ನಮೂನೆಯವು, ಅದೇ ವರ್ಗಕ್ಕೆ ಸೇರಿದವುಗಳು, ಎಂದು ಎಂಗ್ಲೊ ಇಂಡಿಯನ್ ಬಂಧುಗಳು ಹೇಳುತ್ತಿರುವರು. ನಮ್ಮೊಳಗಿನ ಶಾಂತಪಕ್ಷದವರಾದರೂ ಅದನ್ನೇ ಅನುಧ್ವನಿಸುವರು. ಈ ಸಂಗತಿಯು ಪರಮಾರ್ಥದ್ದಾಗಲಿ ಅಥವಾ ಪರಮಾರ್ಥದ್ದಲ್ಲದ್ದಿರಲಿ, ಈಗ ಎಲ್ಲರ ಸಂತೋಷಕ್ಕೋಸ್ಕರ ನಾವೂ ಒಂದು ಕ್ಷಣ ಅದನ್ನು ಅಲ್ಲಗಳೆಯದೆ ಇರುವ. ಆಗ ಸ್ವಾಭಾವಿಕವಾಗಿಯೆ ಮುಂದಿನ ಒಂದು ಪ್ರಶ್ನೆಯು ಬರುವುದು ಪಾರ್ಲಿಮೆಂಟಿನ ನಮೂನೆಯ ಯೋಗ್ಯತೆಯನ್ನೂ, ಮಾನ್ಯತೆಯನ್ನೂ ಪಡೆದಿರುವ ಸಂಸ್ಥೆಗಳ ಅವಸ್ಥೆಯು ಹೀಗೆ ಯಾಕೆ? ಪಾರ್ಲಿಮೆಂಟಿನ ಒಂದು ಶಾಖೆಯಾದ ಹೌಸ್ ಒಫ್ ಕೊಮನ್ಸಿನಂತೆ (ಲೋಕ ಸಭೆಯಂತೆ) ಇರುವ ಲೆಜಿಸ್ಲೇಟಿವ್ ಎಸೆಂಬ್ಲಿಯು ಎರಡೆರಡು ಸಾರಿ ಉಪ್ಪಿನ ಇಮ್ಮಡಿಯ ತೆರಿಗೆಯನ್ನು ಏಕಮತದಿಂದ ತಳ್ಳಿಹಾಕಿರುವಾಗಲೂ, ವೈಸರಾಯರು ಆ ಪ್ರಚಂಡ ಲೋಕಮತಕ್ಕೆ ಎಳ್ಳಷ್ಟು ಕೂಡಾ ಮಾನಕೊಡದೆ 'ಸರ್ಟಿಫಿಕೇಶ'ನಿನ ತಮ್ಮ ಅಸಾಧಾರಣವಾದ ಅಧಿಕಾರದ ಬಲದಿಂದ ಅದನ್ನು ಕಾಯಂಮಾಡಿರುವರು. ಈ ಅನಿಷ್ಟ ಪ್ರಸಂಗವನ್ನು ನಮ್ಮಂತೆಯೆ ವಾಚಕರಾದರೂ ಮೊದಲೆ ಊಹಿಸಿರಬಹುದು. ಆದರೂ ರೆಡಿಂಗ್ ಸಾಹೇಬರು ನ್ಯಾಯನೀತಿಯ ಜಪಮಾಲೆಯನ್ನು ಹಿಡಕೊಂಡು ಹಿಂದೂಸ್ಥಾನಕ್ಕೆ ಬಂದವರಾದ ಕಾರಣ ಇಂಥ ಅನ್ಯಾಯದ ತೆರಿಗೆಯನ್ನು—ಬಡಬಗ್ಗರ ಹೊಟ್ಟೆಯನ್ನು ಜಿವಟುವ ಈ ಅನ್ಯಾಯದ ತೆರಿಗೆಯನ್ನು—ಈ ಬಡ ಹಿಂದೂಸ್ಥಾನದ ಮೇಲೆ ಹೊರಿಸಲು ಬಿಡಲಿಕ್ಕಿಲ್ಲವೆಂದು ಒಂದು ಆಸೆಯ ಕಿರಣವಿತ್ತು. ಆದರೆ ಸೂರ್ಯನು ಅಸ್ತಕ್ಕೆ ಹೋದ ಬಳಿಕ ಅವನ ಕಿರಣದರ್ಶನದ ಆಸೆಯು ಹೇಗೆ ನಿರರ್ಥಕವೊ ಹಾಗೆಯೆ ನ್ಯಾಯನೀತಿಯ ಬುದ್ಧಿಯು ಮುಳುಗಿಹೋದ ಬಳಿಕ ಮೇಲಿನ ಆಸೆಯು ಕೂಡ ವ್ಯರ್ಥವೆ ಸರಿ. ರೆಡಿಂಗ್ ಸಾಹೇಬರು ಇಲ್ಲಿ ಬರುವಾಗ ನ್ಯಾಯದ ಜಪಮಾಲೆಯನ್ನು ಹಿಡಕೊಂಡು ಬಂದಿದ್ದರಾದರೂ, ಆರಾರು ತಿಂಗಳಿಗೆ, ವರ್ಷ ವರ್ಷಕ್ಕೆ ಅವರು ಮಾಡುವ ಕೃತ್ಯಗಳನ್ನು ನೋಡುವಾಗ ಜಪಮಾಲೆಯನ್ನು ಧರಿಸಿ ಬರುವ ಪರಶುರಾಮನ ಆ ಮಾಲೆಯ ಮಣಿಗಳು ಅವನ ಕೊಲೆಯ ಸಂಖ್ಯೆಯನ್ನು ಎಣಿಸಲಿಕ್ಕಿಲ್ಲವೆ ಎಂದು ಕಾಳಿದಾಸನು ಬಣ್ಣಿಸಿದಂತೆ ರೆಡಿಂಗ್ ಸಾಹೇಬರ ಜಪಸರವು ಅವರ ಪರಾಕ್ರಮಗಳ ಸಂಖ್ಯಾಗಣನೆಗಾಗಿದೆ ಎಂದು ಹೇಳಬಹುದು. ಅಥವಾ ಮಾರ್ಜಾರಋಷಿಯ ತಪಸ್ಸು ಹೀನೋಪಮೆಯಾಗುವುದಾದರೆ, ರಾಜಕಾರಣ ಕುಶಲರಾದ ರೆಡಿಂಗ್ ಪ್ರಭುಗಳ ನ್ಯಾಯಪ್ರಿಯತೆಗೆ ಅರ್ಜುನನ ತ್ರಿದಂಡಿ ಸನ್ಯಾಸದ ಉಪಮೆಯನ್ನು ಕೊಡಬಹುದು. ಇರಲಿ. ಲೋರ್ಡ ರೆಡಿಂಗರು ಉಪ್ಪಿನಂಥ ಸರ್ವಜನರ ಅತ್ಯಾವಶ್ಯಕ ಪದಾರ್ಥದ ಮೇಲೆ ಮತ್ತು ಆರೋಗ್ಯಕ್ಕೆ ಅಗತ್ಯವಾದ ವಸ್ತುವಿನ ಮೇಲೆ ಮಣ ಒಂದಕ್ಕೆ ರೂ. ೨—೮—೦ ತೆರಿಗೆಯನ್ನು ಹೊರಿಸಿ ಬ್ರಿಟಿಷ್ ಸಾಮ್ರಾಜ್ಯದ ಆಡಳಿತೆಗೆ ಕಪ್ಪನ್ನು ಹಚ್ಚಿದಂತೆ ಮಾಡಿದ್ದಾರೆ. ನಿಜವಾಗಿ ಹೇಳುವುದಾದರೆ ಈ ಸಾಮ್ರಾಜ್ಯದ ಕಾರಭಾರದ, ಅನೇಕ ಅವಯವಗಳು ಕಲಂಕಿತವಾಗಿಯೆ ಇದ್ದಾವೆ. ಚಂದ್ರನಲ್ಲಿ ಒಂದು ಕಲಂಕವಾದರೆ ಈ ಸಾಮ್ರಾಜ್ಯದಲ್ಲಿ ಹಲವು ಬಗೆಯ ಕಲಂಕಗಳಿವೆ. ಪರಂತು, ಸುಂಕದ ತೆರಿಗೆಯ ಅಥವಾ ಕರಭಾರದ ಆಡಳಿತೆಯು ಹೆಚ್ಚು ದೂಷಿತವಾಗಿರಲಿಲ್ಲ. ಅದು ಕೂಡ ರೆಡಿಂಗರ ಆಡಳಿತೆಯಲ್ಲಿ ಕಲಂಕಿತವಾಯಿತು. ಇವರ ಆಡಳಿತೆಯು ಬಡಜನರಿಗೆ ನಿಷ್ಠುರದಾಯಕವಾದ್ದೆಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿಯು ಅಗತ್ಯವಿದೆಯೆ? ಉಪ್ಪಿನಂಥ ಆವಶ್ಯಕ ಮತ್ತು ಆರೋಗ್ಯಕಾರಕ ವಸ್ತುವಿನ ಮೇಲೆ ತೆರಿಗೆಯನ್ನು ಹೊರಿಸಬಾರದೆಂದು ಎಲ್ಲ ಸುಶಿಕ್ಷಿತ ಸರಕಾರಗಳು ಒಪ್ಪಿಕೊಳ್ಳುತ್ತವೆ. ಆದರೆ ರೆಡಿಂಗರು ಇಲ್ಲಿಯ ಕಾರ್ಯಕಾರಿಮಂಡಲದ ಆಟದ ಗೊಂಬೆಗಳಾಗಿ ಅದು ಹೇಳಿದಂತೆ ಯಾವಾಗ ಕುಣಿಯತೊಡಗುವರೊ ಆಗ ಬಡಬಗ್ಗರು ಏನು ಶಪಿಸಿಯಾರು! ಸುಶಿಕ್ಷಿತಜಗತ್ತು ಏನು ಹೇಳೀತು! ಇತ್ಯಾದಿ ಯಾವುದನ್ನೂ ಲಕ್ಷ್ಯಕ್ಕೆತಾರದೆ ಅವರು ದುರಾಗ್ರಹಕ್ಕೆ ಬಲಿಬೀಳುವುದು ಆಶ್ಚರ್ಯವಲ್ಲ. ಪ್ರಜೆಗಳ ದುರವಸ್ಥೆಯಲ್ಲಿ ಇನ್ನಷ್ಟು ಭರತಿಯು ಇದರಿಂದ ಉಂಟಾಗುತ್ತದೆಂದು ಲೋಕಪಕ್ಷವು ಕಂಠಶೋಷವನ್ನು ಮಾಡಿಕೊಳ್ಳುತ್ತಿದ್ದಾದರೂ ರೆಡಿಂಗ ಸಾಹೇಬರು ಅದನ್ನು ನಂಬುವುದಿಲ್ಲ.

ರೆಡಿಂಗ ಸಾಹೇಬರು ಉಪ್ಪಿನ ಇಮ್ಮಡಿ ತೆರಿಗೆಗೆ ತನ್ನ 'ಸರ್ಟಿಫಿಕೇಶ'ನನ್ನು ಕೊಡುವುದು ಆತ್ಮಕರ್ತವ್ಯವೆಂದೇ ತಿಳಕೊಂಡಿರುವರು. ಇದರಿಂದ ಯಾವ ಅನ್ಯಾಯವೂ ಉಂಟಾಗುವುದಿಲ್ಲ. ಇದೊಂದು ಅವಶ್ಯಕರ್ತವ್ಯ ಎಂದು ಮುಂತಾಗಿ ಲೋರ್ಡ ಸಾಹೇಬರು ಅಭಿಪ್ರಾಯಪಡುವರು. ಅವರು ತನ್ನ 'ಸರ್ಟಿಫಿಕೇಶನಿನ' ಅಧಿಕಾರವನ್ನು ಜಾರಿಯಲ್ಲಿ ತರುವಾಗ ಯಾವ ಪ್ರತಿಪಾದನವನ್ನು ಮಾಡಿರುವರೊ ಅದರ ಮೇಲಿಂದ ಅವರ ಈ ಅಭಿಪ್ರಾಯಗಳು ಸ್ಪಷ್ಟವಾಗಿ ತಿಳಿದುಬರುತ್ತವೆ. ಮಾತ್ರವಲ್ಲ, ಸುಧಾರಣೆಗಳ ವಿಕಾಸ ಮತ್ತು ಹಿಂದೂಸ್ಥಾನದ ಪ್ರಗತಿ ಇವುಗಳನ್ನು ತನ್ನ ಈ 'ಸರ್ಟಿಫಿಕೇಶನು' ಮಾಡೀತೆಂದು ಲೋರ್ಡ ಸಾಹೇಬರಿಗೆ ನಂಬಿಕೆ ಇದೆ. ಅವರು ತಮ್ಮ ಅಭಿಪ್ರಾಯ ಪತ್ರಕದಲ್ಲಿ ಬರೆದಿರುವ ಸಂಗತಿಗಳ ಸಾರಾಂಶವೇನೆಂದರೆ:—"ಉಪ್ಪಿನ ಮೇಲೆ ಇಮ್ಮಡಿ ತೆರಿಗೆಯನ್ನು ಹೊರಿಸಲು ಲೆಜಿಸ್ಲೇಟಿವ್ ಎಸೆಂಬ್ಲಿಯು ವಿರುದ್ಧವಿದೆ. ಅದರ ಈ ಅಭಿಪ್ರಾಯದ ಬಗ್ಗೆ ಗೌರವವನ್ನು ವ್ಯಕ್ತಗೊಳಿಸಬೇಕಾದ್ದು ಹೌದಾದರೂ ಬಹು ಸಮಯ ಆಲೋಚನೆ ಮಾಡಿಯೆ ಕೊನೆಗೆ ಈ ಇಮ್ಮಡಿ ತೆರಿಗೆಯನ್ನು ಕಾಯಂ ಮಾಡಬೇಕಾಗಿದೆ. ಈ ರೀತಿಯ ಪೀಠಿಕೆಯನ್ನು ಹಾಕಿಕೊಂಡು ರೆಡಿಂಗ ಸಾಹೇಬರು ಹಿಂದುಸ್ಥಾನದ ೩-೪ ವರ್ಷಗಳ ಆರ್ಥಿಕಸ್ಥಿತಿಯ ಮತ್ತು ತೆರಿಗೆಯ ವಿದ್ಯಮಾನಗಳ ಸ್ಥಿತಿಯನ್ನು ವಿಮರ್ಶಿಸಿ, ಕಳೆದ ವರ್ಷ ಇದೇ ರೀತಿಯಿಂದ ಉಪ್ಪಿನ ತೆರಿಗೆಯನ್ನು ಇಮ್ಮಡಿಮಾಡಬೇಕೆಂದು ಚರ್ಚೆಬಂದಾಗ ಲೆಜಿಸ್ಲೇಟಿವ್ ಎಸೆಂಬ್ಲಿಯು ಅದನ್ನು ಹೇಗೆ ನಿರಾಕರಿಸಿತು. ಆದರೆ ಆಗ ಆಹಾರ ಜೀನಸುಗಳ, ವಿಶೇಷತಃ ಗೋಧಿಯ ಧಾರಣೆಯು ಪ್ರಿಯವಾಗಿದ್ದದರಿಂದ ಆ ಲೆಜಿಸ್ಲೇಟಿವ್ ಎಸೆಂಬ್ಲಿಯ ಅಂಬೋಣಕ್ಕೆನೆ ಮಾನಕೊಟ್ಟ ಹಿಂದೂಸ್ಥಾನ ಸರಕಾರವು ಹೇಗೆ ತನ್ನ ಸರ್ಟಿಫಿಕೇಶನಿನ ಅಸಾಧಾರಣ ಅಧಿಕಾರವನ್ನು ಜಾರಿಗೆ ತರಲಿಲ್ಲ ಎಂಬಿತ್ಯಾದಿ ಹಳೆ ಪುರಾಣವನ್ನು ವಿಸ್ತರಿಸಿ ಬರೆದು ರೆಡಿಂಗ ಸಾಹೇಬರು ಪ್ರಕೃತ ವಿಷಯಕ್ಕೆ ಬರುವಾಗ ಬಹು ಚಮತ್ಕಾರವಾದ ವಿಧಾನವನ್ನು ಮಾಡುತ್ತಾರೆ. ಈ ವರ್ಷ ಲೋರ್ಡ ಇಂಚಕೇಪ್ ಸಾಹೇಬರು ಖರ್ಚಿನಲ್ಲಿ ಬಹು ವಿಧ ರಕಮನ್ನು ಕಡಿಮೆಮಾಡಿದಾಗ್ಯೂ, ಇನ್ನೂ ಉತ್ಪನ್ನವು ಕಡಿಮೆ, ಖರ್ಚು ಹೆಚ್ಚಿನದು. ಇಂಥ ಶೋಚನೀಯ ಸ್ಥಿತಿಯು ನಿಲ್ಲುತ್ತದಾದ ಕಾರಣ ನಾಲ್ಕು ಕೋಟಿಯ ನ್ಯೂನತೆಯನ್ನು ತುಂಬಿತರಲು ಉಪ್ಪಿನ ಮೇಲೆ ಈ ಮೇರೆಗೆ ಇಮ್ಮಡಿ ತೆರಿಗೆಯನ್ನು ಹೊರಿಸಬೇಕಾಗಿದೆ. ವೈಸರಾಯರು ಮತ್ತು ವೈಸರಾಯರ ಸರಕಾರವು ಎಷ್ಟು ಉತ್ಪನ್ನವೊ ಖರ್ಚು ಕೂಡಾ ಅಷ್ಟೆ ಇರಬೇಕೆಂದು ಆದಷ್ಟು ಪ್ರಯತ್ನಿಸಲಾಯಿತು. ಆದರೆ ಅದು ಸಾಧ್ಯವಾಗುವುದಿಲ್ಲ. ಈ ರೀತಿಯಿಂದ ನಿರುಪಾಯವಾದ ಕಾರಣದಿಂದ ಆ ಖರ್ಚಿನ ಬಾಯಿಯನ್ನು ತುಂಬಿಸಲು ಇತ್ತ ಈ ತೆರಿಗೆಯನ್ನು ಹೆಚ್ಚಿಸಬೇಕಾಗಿದೆ. ಮಿಲಿಟರಿ ಇಲಾಖೆ, ಸಿವಿಲ್ ಡಿಪಾರ್ಟಮೆಂಟು ಮುಂತಾದವುಗಳಲ್ಲಿ ಧಾರಾಳವಾಗಿ ಖರ್ಚು ಕಡಿಮೆ ಮಾಡೋಣಾಗಿದೆ. ಆದರೂ ಖರ್ಚಿನ ಹೊಂಡವು ತುಂಬಿಬರಲಿಲ್ಲ. ಮತ್ತು ಈ ಕಾರಣದಿಂದ ಹೊಸ ತೆರಿಗೆಯನ್ನು ಹೊರಿಸಬೇಕಾಯಿತು. ಸಾರಾಂಶ ವ್ಯಾಸರಾಯರು ಸೋಮೇಶ್ವರ ಶತಕದಲ್ಲಿ 'ಹರಹರಾ ಶ್ರೀಚೆನ್ನ ಸೋಮೇಶ್ವರಾ' ಎಂದು ಪ್ರತಿಯೊಂದು ವೃತ್ತದ ಅಂತ್ಯದಲ್ಲಿ ಪದವಿದ್ದಂತೆ ಒಂದೆರಡು ಕ್ಷುದ್ರ ಸಂಗತಿಗಳನ್ನು ಹೇಳಿ ಆ ಕಿರಣದಿಂದ ಉಪ್ಪಿನ ತೆರಿಗೆಯನ್ನು ಸಮರ್ಥಿಸಿದ್ದಾರೆ. ವ್ಯಾಸರಾಯರ ಈ ಉದ್ದ ಉಪಪಾದನೆಯ ಮುಖ್ಯ ಸಾರಾಂಶವನ್ನು ಒಂದೆ ಮಾತಿನಲ್ಲಿ ಬರೆಯಬಹುದು. ಹಿಂದೂಸ್ಥಾನದ ಹಿತವನ್ನು ಸಾಧಿಸುವುದು ಹಿಂದೂ ಸರಕಾರದ ಪ್ರಧಾನ ಕರ್ತವ್ಯವು. ಖರ್ಚಿನ ಮತ್ತು ಉತ್ಪನ್ನದ ಈ ಎರಡು ತಕ್ಕಡಿಗಳನ್ನು ಸಮತೂಕವಾಗಿ ನಿಲ್ಲಿಸುವುದೆ ಹಿಂದೂಸ್ಥಾನದ ಹಿತವು. ಇಂಥಾ ಹಿತವನ್ನು ಸಾಧಿಸುವ ಪ್ರಧಾನ ಕರ್ತವ್ಯವನ್ನು ಮಾಡಲು ಅಸಾಧಾರಣವಾದ ಅಧಿಕಾರಗಳನ್ನು ಕೂಡ ನಡಿಸಬಹುದೆಂದು ಸುಧಾರಣಾ ಕಾಯಿದೆಯಲ್ಲಿ ನಿರ್ದಿಷ್ಟವಾಗಿದೆ. ಆದ್ದರಿಂದ ಉಪ್ಪಿನ ತೆರಿಗೆಗೆ 'ಸರ್ಟಿಫಿಕೇಶನಿನ' ಮೂಲಕವಾಗಿ ಮಂಜೂರಾತನ್ನು ಹಿಂದೂಸ್ಥಾನದ ಹಿತಕ್ಕಾಗಿಯೆ ಕೊಡಬೇಕಾಗಿದೆ!

ಇದು ವ್ಯಾಸರಾಯ ಸಾಹೇಬರ ಸಮರ್ಥನವು. ಈ ಸಮರ್ಥನವನ್ನು ನೋಡಿದ ಬಳಿಕವೂ ಯಾರಿಗೂ ಇದರಿಂದ ಏನೂ ಸಮಾಧಾನವಾಗಲಿಕ್ಕಿಲ್ಲ. ಮಧ್ಯದಲ್ಲಿ ರೆಡಿಂಗ ಸಾಹೇಬರು ಉಪ್ಪಿನ ತೆರಿಗೆಯ ನ್ಯಾಯತೆಯನ್ನು ಕುರಿತು ಮತ್ತು ಪೂರ್ವಾಸ್ತಿತ್ವವನ್ನು ಕುರಿತು ಹಿಂದಿನ ಲಕ್ಷ್ಯಪೂರ್ವಕಗಳನ್ನು ತೋರಿಸುವುದರಲ್ಲಿ ತುಂಬಾ ಪಾಂಡಿತ್ಯವನ್ನು ನಡಿಸಿದ್ದಾರೆ. ತಥಾಪಿ ಹಿಂದಿನಕಾಲದ ಇತರ ಪರಿಸ್ಥಿತಿಗೂ ಈಗಿನ ಕಾಲದ ಪರಿಸ್ಥಿತಿಗೂ ಅಜಗಜಾಂತರವಿರುವುದರಿಂದ ವ್ಯಾಸರಾಯರ ಈ ಧೂಳಿಪ್ರಕ್ಷೇಪವು ನಿರರ್ಥಕವಾಗಿಯೆ ಇದೆ ಎಂದು ಹೇಳಬೇಕಾಗುತ್ತದೆ. ಬೇರೆಯವರು ಹೆಚ್ಚಾಗಿ ಬಡಜನರ ಜೇಬಿಗೆ ಕೈಹಾಕಿ ಹಣವನ್ನು ಎಳೆದ ಬಳಿಕ ಅಥವಾ ಎಳೆಯುವ ಕೆಲಸದಲ್ಲಿ ಎಷ್ಟೊ ಯುಕ್ತಿವಾದವನ್ನು ಮಾಡಿದರೂ, ಎಷ್ಟೊ ಶಾಸ್ತ್ರಾರ್ಥವನ್ನು ಹೇಳಿದಾಗ್ಯೂ, ಎಷ್ಟು ಪ್ರಮಾಣೋಪನ್ಯಾಸವನ್ನು ಮಾಡಿದಾಗ್ಯೂ ಅದು ಎಂದೂ ಸತ್ಕೃತ್ಯವೆನಿಸಲ್ಪಡುವುದಿಲ್ಲ. ನಿರ್ದಯತನದ ಕಾರ್ಯವು ನಿರ್ದಯತನವೆ ಸರಿ. ಅದು ಎಂದೂ ಸದಯ ಕಾರ್ಯವಾಗುವುದಿಲ್ಲ. ಇಂಥ ಸಂಗತಿಗಳನ್ನೆಲ್ಲ ಆಲೋಚಿಸಿ ಒಂದು ನಿಷ್ಕರ್ಷವನ್ನು ಹೇಳುವುದಾದರೆ, ಉಪ್ಪಿನ ತೆರಿಗೆಯು ಬ್ರಿಟಿಷ್ ರಾಜ್ಯಕಾರಭಾರಕ್ಕೆ, ಬ್ರಿಟಿಷ್ ನ್ಯಾಯಬುದ್ಧಿಗೆ, ಬ್ರಿಟಿಷ್ ಸದಯತೆಗೆ, ಬ್ರಿಟಿಷ್ ಸಂಸ್ಕೃತಿಗೆ ಮತ್ತು ಎಲ್ಲಕ್ಕೂ ಮುಖ್ಯವಾಗಿ ಬ್ರಿಟಿಷ್ ಗೌರವಕ್ಕೆ ಒಂದು ದೊಡ್ಡ ಕಲಂಕವೆ ಸರಿ. ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ.

ಸ್ಫುಟವಿಚಾರಗಳು.

೧. ಉಪ್ಪಿನ ತೆರಿಗೆಯ ಜಾರಿಯನ್ನು ಗವರ್ನರ ಜನರಲರವರ ಸರ್ಟಿಫಿಕೇಶನಿನ ಮೂಲಕ ಹಿಂದೂಸ್ಥಾನದ ಸರಕಾರವು ಜಾರಿಗೆತರುತ್ತಿರುವಾಗ ನಮ್ಮ ಪ್ರಾಂತಿಕ ಸರಕಾರದ ಗವರ್ನರರು 'ಸರ್ಟಿಫಿಕೇಶನ್' ಅಸ್ತ್ರದ ಉಪಯೋಗವನ್ನು ಏನೂ ಶಂಕೆಯಿಲ್ಲದೆ ಮಾಡುತ್ತಿದ್ದಾರೆ. ಫೆಕ್ಟರಿ ಮತ್ತು ಲೇಬರ್ ಇಲಾಖೆಯಲ್ಲಿ ಬಜೇಟಿನಲ್ಲಿ ಬೇಕೆಂತ ತೋರಿಸಿದ ೯|| ಲಕ್ಷ ರೂಪಾಯಿಗಳ ವೆಚ್ಚವನ್ನು ನ್ಯಾಯವಿಧಾಯಕ ಸಭೆಯು ಕಡಮೆಮಾಡಿತ್ತು. ಹಾಗೆಯೆ ಏಜನ್ಸಿ ಪ್ರಾಂತ್ಯಗಳಲ್ಲಿ ವೆಚ್ಚಕ್ಕೆಂತ ಎಂಗಡಿಸಲ್ಪಟ್ಟ ರೂ ೩೩-೭೦ ಲಕ್ಷವನ್ನು ನ್ಯಾಯವಿಧಾಯಕಸಭೆಯು ೨೩—೨೪ನೇ ಬಜೇಟನಿಂದ ಕಡಮೆಮಾಡಿತ್ತು. ಆಡಳಿತೆಯ ಜವಾಬ್ದಾರಿಯು ತನ್ನದಾದ್ದರಿಂದ ಬಜೇಟಿನಲ್ಲಿ ತೋರಿಸಿದ ಈ ಐಟಮುಗಳ ಪ್ರಕಾರ ಖರ್ಚಿನ ವಿನಿಯೋಗವು ಆಗಬೇಕಾಗಿಯೇ ಇದೆ ಎಂತ ವಿಲ್ಲಿಂಗ್‌ಡನ್ ಸಾಹೇಬರವರು ತಮ್ಮ ಸರ್ಟಿಫಿಕೇಶನ್ ಅಸ್ತ್ರದಿಂದ ನ್ಯಾಯವಿಧಾಯಕ ಸಭೆಯ ಬಹುಮತದ ಅಭಿಪ್ರಾಯವನ್ನು ಸಹ ಖಂಡಿಸಿರುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಉಪಯೋಗಿಸಬೇಕಾದಂಥಾ ಈ ಅಧಿಕಾರವನ್ನು ನಿತ್ಯ ಕಟ್ಟಳೆಯ ಉಪಯೋಗದಿಂದ ದುರುಪಯೋಗಿಸುವುದನ್ನು ನೋಡಿದರೆ, ರಿಫೋರ್ಮ್ಡ ಆಕ್ಟು ಅಧಿಕಾರಿ ವರ್ಗದವರಿಂದ ಸಹಾ ಯಾವ ರೀತಿ ಮನ್ನಿಸಲ್ಪಡುತ್ತದೆಂಬುದು ಸ್ಪಷ್ಟವಾಗುತ್ತದೆ. ವಿಲ್ಲಿಂಗ್‌ಡನ್ ಸಾಹೇಬರ ಕೆಬ್ಬಿನೆಟ್ ಮೀಟಿಂಗಿನಲ್ಲಿ ಮಿನಿಸ್ಟರುಗಳ ಮತವು ಈ ವಿಷಯದಲ್ಲಿ ಸಾಹೇಬರ ಇಚ್ಛೆಗೆ ಅನುಕೂಲವಾಗಿರಲಿಲ್ಲವೆಂತ ಹೇಳುತ್ತಾರೆ. ಹೀಗಿದ್ದರೂ ವಿಲ್ಲಿಂಗ್‌ಡನ್‌ರು ನಿರಂಕುಶವರ್ತನವನ್ನೆ ಕೈಕೊಂಡರು. ನ್ಯಾಯವಿಧಾಯಕ ಸಭಿಕರ ಅಭಿಪ್ರಾಯ, ಮಿನಿಸ್ಟರುಗಳ ಅಭಿಪ್ರಾಯ ಇವುಗಳ ಬಗ್ಗೆ ಪರೀಕ್ಷಾರ್ಥವಾಗಿ ತೆಗೆದುಹಾಕೋಣಾದ ಈ ಗ್ರಾಂಟುಗಳನ್ನು ಪುನಃ ಬರಮಾಡಿಕೊಳ್ಳದೆ ಒಂದು ವರುಷದ ವರೆಗಾದರೂ ಗವರ್ನರ ಸಾಹೇಬರು ಕಾದುನೋಡಬಹುದಿತ್ತು. ಪ್ರಜಾಸತ್ತೆಯ ವಿಶೇಷ ಅಭಿಮಾನವುಳ್ಳವರೆಂತ ಅನ್ನಿಸಿಕೊಂಡವರು, ಮಾತ್ರವಲ್ಲ, ತೋರಿಸಿಕೊಳ್ಳುತ್ತಿದ್ದ ಗವರ್ನರ ಸಾಹೇಬರು ಸ್ವಲ್ಪ ಸಮಯದನಂತರದಲ್ಲಿ ತಮ್ಮ ಈ ಬೆಕ್ಕನ್ನು ಚೀಲದಿಂದ ಹೊರ ಬಿಡುತ್ತಿದ್ದರೆ ಇವರ ನಟನೆಯು ಇನ್ನೂ ತನ್ನ ನ್ಯಾಯವಿಧಾಯಕ ಸಭೆಯ ಸದಸ್ಯ ಸಹಕಾರಿಗಳ ಮುಂದೆ ಸರಿಯಾಗಿ ಮೆರೆಯುತ್ತಿತ್ತು.

೨. ಹಿಂದೂ ಮತಸ್ಥಾಪನೆಗಳ ಎಂಡೌಮೆಂಟ ಬಿಲ್ಲಿನ ಚರ್ಚೆಯು ಇಷ್ಟರಲ್ಲಿ ಮುಗಿದಿರಬಹುದು. ನಾವು ಇದನ್ನು ಬರೆಯುವಷ್ಟರ ವರೆಗೆ ಮಸೂದೆಯ ೬೫ ಕ್ಲೋಜುಗಳು ಪಾಸಾಗಿವೆ. ಈ ಮಸೂದೆಯು ಕಾನೂನುಸ್ವರೂಪವನ್ನು ಮದ್ರಾಸಿನಲ್ಲಿ ಹೊಂದುತ್ತಿರುವಾಗ ಇದನ್ನು ನಿಷೇಧಿಸುವ ಸಭೆಯು ಉಡ್ಪಿಯಲ್ಲಿ ಶ್ರೀಕೃಷ್ಣನ ಸಾನ್ನಿಧ್ಯದಲ್ಲಿ ನಡಿಯುತ್ತಿತ್ತು. ಮಸೂದೆಯು ಕಾನೂನುರೂಪವನ್ನು ನ್ಯಾಯವಿಧಾಯಕ ಸಭೆಯಲ್ಲಿ ಪಡೆದರೂ ಗವರ್ನರ ಸಾಹೇಬರು ಇದಕ್ಕೆ ತಮ್ಮ ಮಂಜೂರಾತಿಯನ್ನು ಕೊಡುವ ಮೊದಲು ಈ ಸಭಾಪರವಾಗಿ ಒಂದು ಡೆಪ್ಯುಟೇಶನು ಗವರ್ನರರನ್ನು ಕಾಣಬೇಕೆಂದು ಉಡುಪಿಯಲ್ಲಿ ನಿರ್ಣಯಿಸಿದ್ದಾರೆ. ಹೊಳೆತನಕ ಓಟ, ದೊರೆತನಕ ಮೊರೆ. ಸರಿ. ಆದರೆ ಡೆಪ್ಯುಟೇಶನಿನ ಫಲವು ಯಾವ ರೀತಿ ಪ್ರಾಪ್ತವಾಗಬಹುದೆಂಬುದನ್ನು ಎಂಥವನಿಗಾದರೂ ಹೇಳಲು ಸಾಧ್ಯವಿದ್ದರೂ ಅದನ್ನು ಹೇಳಿ ಅಪಶಕುನವನ್ನು ಡೆಪ್ಯುಟೇಶನಿನವರಿಗೆ ತಂದೊಡ್ಡುವುದು ಬೇಡ.

ಕಾನೂನುಮಸೂದೆಯ ಪರವಾಗಿ ಚಳವಳವನ್ನೆಬ್ಬಿಸಿದವರಲ್ಲಿ ನಮ್ಮ ಜಿಲ್ಲೆಯವರೆ ಮೊದಲಿನವರೆಂತ ತಿಳಿಯುತ್ತೇವೆ. ನ್ಯಾಯವಿಧಾಯಕಸಭೆಯ ಹೊರಗಿನಿಂದ ಈ ಮಸೂದೆಯ ನಿಷೇಧಾರ್ಥ ಇಂಥ ಪ್ರಯತ್ನಗಳು ನಡಿಯುತ್ತಿರುವಾಗ ನಮ್ಮ ಜಿಲ್ಲೆಯ ಹಿಂದೂ ಸಭಾಸದರನ್ನು ನ್ಯಾಯವಿಧಾಯಕ ಸಭೆಯು ಈ ಅಧಿವೇಶನದಲ್ಲಿ ಎಷ್ಟು ಹುಡುಕಿದರೂ ಇವರು ನೋಡಲು ಸಿಕ್ಕಲೇ ಇಲ್ಲ. ಒಬ್ಬರು ಈ ಚರ್ಚೆಯು ಸಭೆಯಲ್ಲಿ ಪ್ರಾರಂಭವಾದ ಒಂದೆರಡು ದಿನಗಳಲ್ಲಿಯೆ ಇತ್ತಕಡೆ ಹೊರಟು ಬಂದರು. ಮತ್ತೊಬ್ಬರು ಸಭೆಗೆ ಹೋಗಲೆ ಇಲ್ಲ. ಹೋಗದೆ ಇರಲಿಕ್ಕೆ ಬಲವಾದ ಕಾರಣಗಳು ಇರಬೇಕು. ಹೇಗೂ ನ್ಯಾಯವಿಧಾಯಕ ಸಭೆಯಲ್ಲಿ ಈ ಜಿಲ್ಲೆಯ ಹಿಂದೂ ಸಭಾಸದರಿಬ್ಬರೂ ಈ ಸಂದರ್ಭದಲ್ಲಿರಲಿಲ್ಲ. ಹೇಗೂ ಇರಲಿ. ಎಂಡೌಮೆಂಟ್ ಬೀಲು ಇನ್ನು ಸ್ವಲ್ಪದರಲ್ಲಿಯೇ ಕಾನೂನುಪುಸ್ತಕಗಳನ್ನು ಸೇರುವುದು.

೩. ಮೇಲಿನ ಸ್ಫುಟವಿಚಾರವನ್ನು ಬರೆದು ಮುಗಿಸುವಷ್ಟರಲ್ಲಿ ಮತಸಂಸ್ಥೆಗಳ ಬೀಲು ನ್ಯಾಯವಿಧಾಯಕ ಸಭೆಯಲ್ಲಿ ಸಂಪೂರ್ಣವಾಗಿ ಮಂಜೂರಾಯಿತೆಂತ ನಿನ್ನೆ ದಿನ ಬಂದು ತಲ್ಪಿದ ವೃತ್ತಪತ್ರಗಳ ಮೂಲಕ ತಿಳಿದುಬರುತ್ತದೆ. ಆದ್ದರಿಂದ ಉಡುಪಿಯಲ್ಲಿ ಕೂಡಿದ ಸಭೆಯಲ್ಲಿ ಸೂಚಿಸೋಣಾದಂತೆ ಡೆಪ್ಯುಟೇಶನಿನ ಸಿದ್ಧತೆಯನ್ನು ಕೂಡಲೆ ಅಣಿಗೊಳಿಸುವುದು ಅಗತ್ಯ. ಈ ಕಾನೂನುಮಸೂದೆಯ ಚಳವಳವು ಕೌನ್ಸಿಲಿನ ಒಳಗೂ ಹೊರಗೂ ನಡಿಯುತ್ತಿದ್ದಾಗ ಮತಸಂಸ್ಥೆಗಳ ಈಗಿನ ಅವಸ್ಥೆಯು ಏನು, ಜನರ ಅಭಿಪ್ರಾಯವು ಇವುಗಳ ವಿಷಯ ಹೇಗಿದೆ ಎಂಬುದು ಸ್ಥಾಪನೆಗಳ ಜವಾಬ್ದಾರಿಯನ್ನು ವಹಿಸಿಕೊಂಡಿರುವಂಥವರ ಲಕ್ಷ್ಯಕ್ಕೆ ಬಂದಿರಲು ಸಾಕು. ಸ್ಕೀಮುಗಳು, ಕಾನೂನುಗಳು, ಇವೆಲ್ಲವುಗಳ ಉದ್ದೇಶವು ಮುಖ್ಯವಾಗಿ ಸೊತ್ತುಗಳ ರಕ್ಷಣೆಗಾಗಿರುವುದು. ಜನರಲ್ಲಿರಬೇಕಾದ ದೈವಿಕ ಶ್ರದ್ಧೆ, ಭಕ್ತಿ, ವಿಶ್ವಾಸಗಳು—ಮತಸ್ಥಾಪನೆಗಳ ಸುವ್ಯವಸ್ಥೆಗೆ ಅತ್ಯಗತ್ಯವಾಗಿ ಬೇಕಾದಂಥವುಗಳು—ಸ್ಕೀಮು, ಕಾನೂನುಗಳಿಂದ ಪ್ರೇರಿತವಾಗುವಂಥವುಗಳಲ್ಲ. ಜನರಲ್ಲಿರಬೇಕಾದ ಆಸ್ತಿಕ್ [illegible] ಮಾನದಿಂದ ಇಂಥ ಕಾನೂನುಗಳು ಜನ್ಮಕ್ಕೆ ಬರುತ್ತವೆ. ಈ ವಿಷಯವನ್ನು ನಾವು ಮುಖ್ಯವಾಗಿ ಆಯಾ ಮಠಾಧಿಪತಿಗಳ ಲಕ್ಷ್ಯಕ್ಕೆ ತರಬೇಕೆಂದಿಲ್ಲ. ಇಂಥಾ ಸಂದರ್ಭಗಳಲ್ಲಿ ಮಠಾಧಿಪತಿಗಳಂಥವರು ತಮ್ಮ ಕರ್ತವ್ಯಗಳನ್ನು ಮತ್ತಷ್ಟು ಚೆನ್ನಾಗಿ ತಿಳಿದು ವರ್ತಿಸಿದ್ದಲ್ಲಿ ನ್ಯಾಯವಿಧಾಯಕ ಸಭೆಗಳಲ್ಲಿ ಮಂಜೂರಾಗುವಂಥ ಕೃತ್ರಿಮ ಕಾನೂನುಗಳಿಗೆ ಅಂಜುವ ಸಂದರ್ಭವು ಬಂದೊದಗಲಿಕ್ಕಿಲ್ಲ.

೪. ನ್ಯಾಯವಿಧಾಯಕ ಸಭೆಯ ಈ ಅಧಿವೇಶನವು ಮತಸ್ಥಾಪನೆಗಳ ಬೀಲು ಮಂಜೂರಾದೊಡನೆಯೆ ಮುಗಿಯಿತು. ಅಧಿವೇಶನದ ಅಂತ್ಯದಲ್ಲಿ ಗವರ್ನರ ಸಾಹೇಬರ ಭಾಷಣವಿತ್ತು. ಮುಂದಿನ ಅಗೋಸ್ತು ತಿಂಗಳಲ್ಲಿ ಕೂಡುವ ಸಣ್ಣದೊಂದು ಅಧಿವೇಶನದನಂತರ ಈ ಸರ್ತಿಯ ನ್ಯಾಯವಿಧಾಯಕ ಸಭೆಯ ಅವಧಿಯು ಮುಗಿಯುವುದು. ಮತ್ತು ಒಕ್ಟೋಬರ ತಿಂಗಳಲ್ಲಿ ಹೊಸ ಮೆಂಬರುಗಳನ್ನು ಚುನಾಯಿಸುವ ಬಗ್ಗೆ ಚುನಾವಣೆಯು ನಡಿಯುವುದು. ಆದ್ದರಿಂದ ಗವರ್ನರ ದೊರೆಗಳು ನ್ಯಾಯವಿಧಾಯಕ ಸಭೆಯು ತನ್ನ ಅವಧಿಕಾಲದಲ್ಲಿ ನಡಿಸಿದ ಕಾರ್ಯಚಟುವಟಿಕೆಗಳ ಸಿಂಹಾವಲೋಕನವನ್ನು ಮಾಡಿರುತ್ತಾರೆ. ಈ ದಿನವೆ ಇದರ ಟೀಕೆಯನ್ನು ಮಾಡದೆ ಈ ವಿಷಯವನ್ನು ಮುಂದಕ್ಕೆ ಇಟ್ಟಿರುವೆವು. ಆದರೆ 'ಸರ್ಟಿಫಿಕೇಶನ್' ಅಧಿಕಾರದ ಜಾರಿಯನ್ನು ನಡಿಸಿದ ಬಗ್ಗೆ ಕೆಲವು ವಾದಗಳನ್ನು ವಿಲ್ಲಿಂಗ್‌ಡನ್ನರು ಹೇಳಿರುತ್ತಾರೆ. ಇವರ ವಾದದ ಮುಖ್ಯಾಂಶವು ಏನೆಂದರೆ, ರಿಟ್ರೆಂಚ್‌ಮೆಂಟ ಕಮ್ಮಿಟಿಯವರು ಮಾಡಿದ ಸೂಚನೆಗಳು ಇನ್ನು ಸದ್ಯದಲ್ಲಿಯೆ ಕೌನ್ಸಿಲಿನ ಮುಂದೆ ಬರಲಿಕ್ಕಿರುವುದರಿಂದ ಈ ಸೂಚನೆಗಳ ಪರ್ಯಾಲೋಚನೆಯನಂತರ ಸರ್ಟಿಫಿಕೇಶನ ಮೂಲಕ ಮಂಜೂರು ಮಾಡಿದ ವ್ಯಯವು ಅಗತ್ಯವಲ್ಲವೆಂದು ಕಂಡುಬಂದಲ್ಲಿ ಆಗ್ಗೆ ಈ ಖರ್ಚನ್ನು ಉಳಿಸಬಹುದು. ಈ ವಿದ್ಯಮಾನಗಳಲ್ಲಿ ಇದೆ ವಾದದ ಕಾರಣ ಸರ್ಟಿಫಿಕೇಶನ ಅಧಿಕಾರವನ್ನು ಉಪಯೋಗಿಸದೆ ಅನಂತರ ಈ ಖರ್ಚು ಅಗತ್ಯವೆಂತ ಕಂಡುಬಂದಲ್ಲಿ ಸಪ್ಲಿಮೆಂಟರಿ ಗ್ರೇಂಟುಗಳ ಮೂಲಕ ಅಂಥಾ ಖರ್ಚನ್ನು ಕೌನ್ಸಿಲಿನ ಮುಂದಿಟ್ಟು ಕೌನ್ಸಿಲಿನ ಮಂಜೂರಾತಿಯನ್ನು ಪಡೆಯಬಹುದಿತ್ತು. ಆದರೆ ಈ ಮಾರ್ಗವು ದೊರೆಗಳಿಗೆ ಉಚಿತವಾಗಿ ಕಂಡುಬರಲಿಲ್ಲ.

೫. ಮಲಬಾರದಂಗೆಯ ಕಾಲದಲ್ಲಿ ದಂಗೆಗಾರರು ಖಿಲಾಫತ್ತು ಸ್ವರಾಜ್ಯ ಸ್ಥಾಪನೆ ಧ್ವಜಗಳನ್ನು ನೆಟ್ಟು ಸ್ವರಾಜ್ಯವನ್ನು ಸಾರಿದರೆಂತ ಹೇಳುತ್ತಿದ್ದರು. ಆದರೆ ನಿಜವಾಗಿ ಆ ಕಾಲದಲ್ಲಿ ಪ್ರಾಪ್ತವಾದಂಥಾದ್ದು ಖಿಲಾಫತ್ ಸ್ವರಾಜ್ಯ ಅಲ್ಲ, ಪೋಲೀಸು ರಾಜ್ಯವೆಂದು ಮೊನ್ನೆ ದಿನ ಶ್ರೀಯುತ ಮಂಜೇರಿ ರಾಮಯ್ಯರವರು ಮದ್ರಾಸಿನಲ್ಲಿ ಮಾಡಿದ ಭಾಷಣದಲ್ಲಿ ಸ್ಪಷ್ಟೀಕರಿಸಿದ ಸಂಗತಿಗಳಿಂದ ರುಜುವಾಗುತ್ತದೆ. ಮಲಬಾರಿನ ಆ ಕಾಲದ [illegible]ತಿಯು ವಿಷಯ ಹೊರಬೀಳುತ್ತಿದ್ದ ಸರಕಾರಿ ಪ್ರಕಟಣೆಗಳಲ್ಲಿ [illegible]ದಂಥಾ ಸಮಾಚಾರಗಳು ಸರಿಯಾಗಿಲ್ಲವೆಂತ ಆಕ್ಷೇಪಿ[illegible] ಇಂಥಾ ಆಕ್ಷೇಪಗಳೇನಂತ ವಿಚಾರಿಸುವ ಸಂದ[illegible] ಸಹ ಆಗ ಕೊಡಲ್ಪಡಲಿಲ್ಲ. 'ದಂಗೆ' 'ದಂಗೆ' ಎಂಬುದೊಂದೇ ಬೊಬ್ಬೆಯನ್ನು ಎಬ್ಬಿಸಿ ಈ ಬೊಬ್ಬೆಯ ಹಿಂದುಗಡೆಯಿಂದ ಏನೆಲ್ಲಾ ಅನರ್ಥಗಳು ಸರಕಾರದ ನೌಕರರಾದ ಪೋಲೀಸಿನವರಿಂದ ನಡಿಸೋಣಾದವೆಂಬುದು ಈಗೀಗ ಗೊತ್ತಾಗುತ್ತದೆ. ಇಂಥಾ ಅನರ್ಥಗಳು ನಡೆದಿರುವುದಾದರೂ ಮಂಜೇರಿ ರಾಮಯ್ಯರಂಥವರು ಈ ಅನರ್ಥಗಳನ್ನು ಕೋರ್ಟುಗಳಲ್ಲಿ ನ್ಯಾಯಾಧೀಶರು ಮಾಡಿದ ಟೀಕೆಗಳ ಮೂಲಕ ರುಜುಪಡಿಸಲು ಸಿದ್ಧವಿರುವೆನೆಂತ ಹೇಳುವುದಾದರೂ ಇನ್ನೂ ಇದೆಲ್ಲ ಸುಳ್ಳೆಂತ ತುಚ್ಛೀಕಾರದ ಮಾತುಗಳು ಅಧಿಕಾರಿಗಳಿಂದ ಹೊರಡುವುವೋ ಎಂಬುದನ್ನು ನೋಡಲಿಕ್ಕಿದೆ. ಮಲಬಾರಿನ ಹೊರ ಪ್ರಾಂತ್ಯಗಳ ಜೈಲುಗಳಲ್ಲಿ ಕೈದಿಗಳಾಗಿಡೋಣಾದವರನ್ನು, ದಂಗೆ ನಡೆದ ಪ್ರಾಂತ್ಯಗಳಲ್ಲಿ ದರೋಡೆಗಳನ್ನು ನಡೆಸಿದವರು, ಅಥವಾ ಕೊಲೆಗಳನ್ನು ಮಾಡಿದರೆಂಬ ಆರೋಪಣೆಗೂ ತಪ್ಪಿನ ಶಿಕ್ಷೆಗೂ ಗುರಿಮಾಡಲ್ಪಟ್ಟರು. ಇನ್ನು ಕೆಲವು ಸಂದರ್ಭಗಳಲ್ಲಿ ಕೈದಿನಲ್ಲಿಟ್ಟಿದ್ದ ದಂಗೆಗಾರರಲ್ಲಿ ಕೆಲವರನ್ನು ಸರಕಾರದ ಕಡೆಯ ಸಾಕ್ಷಿಗಳನ್ನಾಗಿ ಮಾಡಿ, ನಿರಾಪರಾಧಿಗಳಾದ ಹಲವರು ದಂಗೆಗೆ ಕೂಡಿದ್ದಾರೆಂಬ ಸುಳ್ಳು ಸಾಧನೆಗಳು ನಡೆದವು. ಪ್ರಾರಂಭದ ತನಖಿಯನ್ನು ಸಹ ನಡಿಸದೆ ಪೋಲೀಸಿನವರು ಬರೆದು ಕಳುಹಿಸಿದ ಟರೆ ರಿಪೋರ್ಟುಗಳನ್ನು ಆದರಿಸಿ ಮರಣದಂಡನೆಯ ಶಿಕ್ಷೆಯ ತಪ್ಪಿತಗಳ ಆರೋಪಣೆಯ ಮೇಲೆ ವ್ಯವಹರಣೆಗಳನ್ನು ನಡಿಸುವರೆ ಸರಕಾರದ ಸಂಕ್ಷನುಗಳು ದೊರೆತವು. ರಾಜಕೀಯ ಚಳವಳಗಾರರ ದ್ವೇಷವೆ ಇನ್ನು ಕೆಲವು ವ್ಯವಹರಣೆಗಳ ಮೂಲಕಾರಣವಾಗಿತ್ತು. ಈ ವಿವರವೆಲ್ಲ ರಾಮಯ್ಯನವರ ಭಾಷಣದಿಂದ ಸ್ಪಷ್ಟವಾಗುತ್ತದೆ. ಈ ಭಾಷಣಕಾಲದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ಪಿ. ಸಿ. ಆರ್. ರಡ್ಡಿಯವರು ಈ ಪೋಲೀಸು ರಾಜ್ಯದ ಶೋಧನೆಯನ್ನು ನಡಿಸುವುದು ಅಗತ್ಯವೆಂತ ಸೂಚಿಸಿರುತ್ತಾರೆ. ಆದರೆ ಮದರಾಸು ಸರಕಾರವು ಇಂಥಾ ಶೋಧನೆಯನ್ನು ನಡಿಸುವುದೋ? ಅಥವಾ "ಮಲಬಾರು ದಂಗೆ"ಯ ಎಕ್ಸ್‌ಪರ್ಟರಾದ ಮಿ| ನೆಪ್ ಸಾಹೇಬರನ್ನು ಕೇಳಿಕೊಂಡು ತೃಪ್ತವಾಗುವುದೋ? ನ್ಯಾಯದ ತಕ್ಕಡಿ ಕೈಯಲ್ಲಿ ಹಿಡಕೊಂಡ ಅಂಧ ದೇವತೆಯೆಂದು ಬ್ರಿಟಿಷ ಚಿತ್ರಕಾರರು ಚಿತ್ರಿಸುವ ಬ್ರಿಟಿಷ ನ್ಯಾಯದೇವತೆಯ ರೂಪಿನಲ್ಲಿ ಇನ್ನು ಮುಂದಕ್ಕೆ ಬ್ರಿಟಿಷನ್ಯಾಯದ ವಕ್ರದೃಷ್ಟಿಯನ್ನು ಬಿಡಿಸಿಟ್ಟರೆ ಅಂಥಾ ಚಿತ್ರವು ಬ್ರಿಟಿಷ ನ್ಯಾಯದ ಯಥಾರ್ಥ ಸ್ವರೂಪವನ್ನು ಕಾಣಿಸುವಂತಿದೆ.

೬. ಕಲ್ಕತ್ತಾ ಯುನಿವರ್ಸಿಟಿಯ ವ್ಯಾಸ್ ಚೆನ್ಸಲರರಾದಂಥಾ ಸರ್. ಅಶುತೋಷ ಮುಖರ್ಜಿಯವರು ತಮ್ಮ ವ್ಯಾಸ್‌ಚೆನ್ಸಲರ ಸ್ಥಾನಕ್ಕೆ ರಾಜಿನಾಮೆಯನ್ನು ಕೊಟ್ಟಂಥಾ ವಿದ್ಯಮಾನಗಳು ಲೋಕಕ್ಕೆಲ್ಲಾ ತಿಳಿಯತಕ್ಕವುಗಳಂಥದ್ದಾಗಿವೆ. ಮುಖರ್ಜಿಯವರು ವ್ಯಾಸ್ ಚೆನ್ಸಲರ ಪದವಿಯನ್ನು ನಿರಾಕರಿಸಿ ಬಂಗಾಳದ ಗವರ್ನರರಾದ ಲಿಟ್ಟನ್ ಪ್ರಭುಗಳಿಗೆ ಬರೆದ ಪತ್ರವು ಮುಖರ್ಜಿಯವರ ಅಖಂಡವಾದ ಸ್ವತಂತ್ರ ಭಾವದಿಂದ ತುಳುಕಾಡುತ್ತಿರುವುದು. ಕಲ್ಕತ್ತಾ ಯುನಿವರ್ಸಿಟಿಯ ನವೀನ ಬೀಲಿನ ವಿಷಯ ಮುಖರ್ಜಿಯವರಿಗೆ ಹಲವು ಆಕ್ಷೇಪಗಳಿದ್ದವು. ಯುನಿವರ್ಸಿಟಿಯ ಸ್ವಾತಂತ್ರವನ್ನು ಬಂಧಿಸುವ ಹಲವು ಸಂಗತಿಗಳು ಯುನಿವರ್ಸಿಟಿಯ ಬೀಲಿನಲ್ಲಿ ಕಾಣಿಸಿಕೊಟ್ಟು ತಮ್ಮ ಈ ವಿಷಯದ ಅಭಿಪ್ರಾಯಗಳನ್ನು ನಿದಾಕ್ಷಿಣ್ಯದಿಂದ ಮುಖರ್ಜಿಯವರು ಸ್ಪಷ್ಟವಾಗಿ ಹೇಳಿದ್ದು ಲೋರ್ಡ ಲಿಟ್ಟನರಿಗೆ ರುಚಿಸಲಿಲ್ಲ. ಲೋರ್ಡ ಲಿಟ್ಟನರು ಮುಖರ್ಜಿಯವರಿಗೆ ಬರೆದ ಪತ್ರದಲ್ಲಿ ಅಂದದ್ದೇನೆಂದರೆ—ಸರಕಾರದವರಿಂದ ತಯಾರಿಸಲ್ಪಟ್ಟ ಯುನಿವರ್ಸಿಟಿ ಬೀಲಿನ ಮಸೂದೆಯನ್ನು ತಾವು ನೋಡಿರುತ್ತೀರಿ. ತಮ್ಮ ಸೂಚನೆಗಳು ನಮಗೆ ಬೇಕಾಗಿವೆ. ಆದರೆ ಅಂಥಾ ಸೂಚನೆಗಳನ್ನು ತನ್ನೊಡನೆ ಕೆಲಸಮಾಡುವವರಿಗೆ ಕೊಡುವ ರೀತಿಯಲ್ಲಿ ಕೊಡಬೇಕಲ್ಲದೆ ಹೊರಗಿನವರಿಗೆ ಕೊಡುವ ರೀತಿಯಲ್ಲಿ ಕೊಡುವಂಥಾದ್ದಲ್ಲ. ಕಳೆದ ಕೆಲವು ತಿಂಗಳುಗಳಿಂದ ನೀವು ಕೈಕೊಂಡ ಮಾರ್ಗದಲ್ಲಿಯೇ ನೀವು ವರ್ತಿಸುವಿರಾದರೆ ನಿಮ್ಮನ್ನು ಪುನಹ ವ್ಯಾಸ್ ಚೆನ್ಸಲರಾಗಿ ನೇಮಿಸಲು ಸಾಧ್ಯವಾಗಲಿಕ್ಕಿಲ್ಲ. ಇಷ್ಟರ ವರೆಗೆ ನಮಗೆ ನೀವು ಯಾವ ಸಹಾಯವನ್ನೂ ಮಾಡಿದ್ದಿಲ್ಲ. ಇದರ ಬದಲಾಗಿ ಪ್ರತಿಯೊಂದು ವಿಧಾನದಲ್ಲಿಯೂ ನಮ್ಮ ವಿರೋಧವನ್ನೇ ಸಾಧಿಸಿದ್ದೀರಿ. ಬೀಲಿನ ಉದ್ದೇಶಗಳು ಮತ್ತು ಇರಾದೆಗಳ ವಿಷಯ ನಿಮ್ಮ ತಿಳುವಳಿಕೆಯು ತಪ್ಪಾಗಿದೆ. ಇದನ್ನು ತಿದ್ದಲು ಸ್ನೇಹಭಾವದಿಂದ ತಾವು ನಮ್ಮ ಬಳಿಗೆ ಬರುವದಕ್ಕೆ ಬದಲಾಗಿ ಬೀಲಿನ ವಿರೋಧವನ್ನು ಸಾಧಿಸುವಂಥ ಲೇಖಗಳು ವರ್ತಮಾನ ಪತ್ರಗಳಲ್ಲಿ ತಮ್ಮ ಪ್ರೇರಣೆಯಿಂದ ಪ್ರಕಟವಾಗಿವೆ—ಇದು ಗವರ್ನರ ಸಾಹೇಬರು, ಕಲ್ಕತ್ತಾ ಯುನಿವರ್ಸಿಟಿಯ ವ್ಯಾಸ್ ಚೆನ್ಸಲರರೂ ಹ್ಯಾ ಕೋರ್ಟ್ ಜಡ್ಜರೂ ಆಗಿರುವ ಸರ್. ಅಶುತೋಷ ಮುಖರ್ಜಿಯವರಿಗೆ ಬರೆದ ಪತ್ರದ ಸ್ವರೂಪ. ಮುಖರ್ಜಿಯವರು ಇದಕ್ಕೆಲ್ಲ ಸಂಯಮದ ಉತ್ತರದಿಂದ ಧೈರ್ಯ[illegible] ಬಡಿಗೆ ಹೊಯ್ದು [illegible] ಕೊಟ್ಟಿರುವರು.—ವ್ಯಾಸ್ ಚೆನ್ಸಲರ ಪದವಿಗೆ ಉಮೇದ್ವಾರನಾಗಿ ನಾನಿರೆನು. ಯುನಿವರ್ಸಿಟಿ ಬೀಲನ್ನು ಇಂಡಿಯಾ ಸರಕಾರದವರು ಕಳುಹಿ[illegible] ಕೊಡುವ ಮೊದಲಿನಿಂದಲೂ ಈ ಬೀಲಿನ ಪರವಾಗಿ ಅಗತ್ಯವಾಗಿರುವ ಸೂಚನೆಗಳನ್ನು ಸೂಚಿಸಿರುವೆನು. ನನ್ನಿಂದಾಗಬೇಕಾದ ಸಹಾಯವನ್ನು ಮಾಡಿರುವೆನು. ಆದರೆ ಇದನ್ನೆಲ್ಲ ಸ್ವೀಕರಿಸುವುದು ನಿಮಗೆ ಯುಕ್ತಕಾಣಲಿಲ್ಲ. ವರ್ತಮಾನ ಪತ್ರಿಕೆಗಳಲ್ಲಿ ನನ್ನ ಪ್ರೇರಣೆಯಿಂದ ಬೀಲಿನ ವಿರೋಧವನ್ನು ಸಾಧಿಸುವ ಲೇಖಗಳು ಪ್ರಕಟಿಸಲ್ಪಟ್ಟಿರುವವೆಂತ ಬರೆಯುತ್ತೀರಿ. ಇಂಥಾ ಏನೂ ಆಧಾರವಿಲ್ಲದ ಈ ಆರೋಪಣೆಗಳನ್ನು ರುಜುಗೊಳಿಸಬೇಕೆಂದು ನನ್ನ ಶಪಥವಿದೆ. ಲೋರ್ಡ ಮಿಂಟೋ, ಲೋರ್ಡ ಹಾರ್ಡಿಂಜ, ಲೋರ್ಡ ರೋನಲ್ಡ್‌ಶೆ ಮುಂತಾದವರು, ವ್ಯಾಸ್ ಚೆನ್ಸಲರ ಸ್ವತಂತ್ರವಾದ ವರ್ತನೆಯನ್ನು ಸಮರ್ಥಿಸಿರುವರು. ಇತ್ತಲಾಗಿ ಎರಡು ವರುಷಗಳಿಂದ ನಾನು ನಿಮ್ಮ ಸರಕಾರದ ಅಭಿಪ್ರಾಯಗಳಿಗೆ ಅನುಕೂಲನಾಗಿರಬೇಕೆಂಬುವ ಈ ಅಭಿಪ್ರಾಯವು ನನ್ನ ಮನಸ್ಸಿನಲ್ಲಿ ಎಂದೂ ಹೊಳೆಯಲಿಲ್ಲ. ಯುನಿವರ್ಸಿಟಿ ಬೀಲಿನ ವಿಷಯ ನನ್ನ ಅಭಿಪ್ರಾಯವೇನೆಂಬುದು ನಿಮಗೆ ಕೆಲವು ಸಮಯದ ಹಿಂದಿನಿಂದಲೇ ಗೊತ್ತಿದೆ. ನಿಮ್ಮ ಮಂತ್ರಿಗಳ ಅಥವಾ ನಿಮ್ಮ ಮೆಚ್ಚುಗೆಗೆ ಪಾತ್ರರಾಗುವಂತೆ ನಾನು ಈ ವರೆಗೆ ವರ್ತಿಸಲಿಲ್ಲ. ಇನ್ನು ವರ್ತಿಸಲಿಕ್ಕೂ ಇಲ್ಲ. ವ್ಯಾಸ್ ಚೆನ್ಸಲರ ಪದವಿಯನ್ನು ವಹಿಸಿಕೊಳ್ಳಬೇಕೆನ್ನುವ ನಿಮ್ಮ ಪತ್ರಕ್ಕೆ ಆ ಪದವಿಯನ್ನು ಧಿಕ್ಕಾರದಿಂದ ನಿರಾಕರಿಸುವುದೇ ನನ್ನ ಉತ್ತರವಾಗಿದೆ. ದೇಶಾಭಿಮಾನಿಗಳೆಲ್ಲರೂ ಮುಖರ್ಜಿಯವರ ವರ್ತನೆಯನ್ನು ತಿಳಿದು ಸಂತೋಷಗೊಳ್ಳದೆ ಇರಲಾರರು. ಸ್ವತಂತ್ರಭಾವದಿಂದ ವಿಚಾರಿಸಬೇಕಾದಂಥಾ ವಿದ್ಯಾವಿಷಯಗಳನ್ನು ಸಹ ರಾಜಕೀಯ ಉದ್ದೇಶಗಳ ಬಗ್ಗೆ ಲೋರ್ಡ ಲಿಟ್ಟನ್‌ರಂಥ ಅಧಿಕಾರಿಗಳು ಹೇಗೆ ತಮ್ಮ ಆಟೋಪದಲ್ಲಿರಿಸಲು ಪ್ರಯತ್ನಿಸುತ್ತಿದ್ದಾರೆಂಬುದು ಇದರಿಂದ ವ್ಯಕ್ತವಾಗುವುದು. ಸರಕಾರದ ಸಹಕಾರಿ ಮೊಡರೇಟರುಗಳಿಗೆ ಈ ರೀತಿ ಮನ್ನಣೆಯು ದೊರೆಯುವಂಥಾದ್ದು ದೇಶದ ಸುದೈವವೆ ಎಂತ ಹೇಳಬೇಕು. ಸರಕಾರದವರ ಈ ಪ್ರತಿಕೂಲಧೋರಣೆಯು ಮತ್ತಷ್ಟು ರಭಸದಿಂದ ಸಾಗಿದರೆ ಪ್ರಕೃತವಿರುವ ರಾಜಕೀಯ ತಂಡಗಳನ್ನು ಒಂದಾಗಿಮಾಡುವ ಕೃತ್ಯವು ನಾವು ನಿರೀಕ್ಷಿಸಿದಕ್ಕಿಂತ ಮೊದಲೇ ಕೈಗೂಡುವುದು.

ಮಂಗಳೂರು.

ಇಲ್ಲಿಯ ಶ್ರೀ ಮಹಾಮ್ಮಾಯಿ ದೇವಸ್ಥಾನದ ಮಾಳಿಗೆ ಮೇಲಿರುವ ವೈದ್ಯ ಬಿ. ಆರ್. ಹರಿದಾಸರ "ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ"ದಲ್ಲಿ ಕೇವಲ ಬಡವರಾದ ರೋಗಿಗಳನ್ನು ದಿನಂಪ್ರತಿ ಅಪರಾಹ್ನ ಮೂರು ಘಂಟೆ ಲಾಗಾಯಿತು ಐದು ಘಂಟೆ ತನಕ ಪರೀಕ್ಷಿಸಿ ಧರ್ಮಾರ್ಥವಾಗಿ ಔಷಧವನ್ನು ಕೊಡಲು ಇಲ್ಲಿಯ ಒಬ್ಬ ಉದಾರ ಗೃಹಸ್ಥರು ಧನಸಹಾಯ ಮಾಡಿರುವುದರಿಂದ ಈ ಪರೋಪಕಾರದ ಕಾರ್ಯವನ್ನು ಶ್ರೀಯುತ ವೈದ್ಯರು ಇದೇ ಕಳೆದ ತಾ. ೩ ರಿಂದ ಪ್ರಾರಂಭಿಸಿರುತ್ತಾರೆ.

ಪುತ್ತೂರಿನಲ್ಲಿರುವ ಸಹಕಾರಿ ಸಂಘಗಳ ಸೆಂಟ್ರಲ್ ಕೋಒಪರೇಟಿವ್ ಬೇಂಕಿನ ಶಾಖೆಯು ಬೇಗನೆ ಮಂಗಳೂರಿನಲ್ಲಿ ತೆರಿಯಲಾಗುವುದು. ಈ ಶಾಖೆಯ ಏಜಂಟರಾಗಿ ನೇಮಕಪಟ್ಟ ಮ. ರಾ. ಎ. ಸುಬ್ರಾಯ ಹೆಗ್ಡೆಯವರು ಪುತ್ತೂರಿನಲ್ಲಿ ತರಬೇತನ್ನು ಹೊಂದಲಿಕ್ಕೆ ಹೋಗಿರುವರು.

ಈ ವಾರದಲ್ಲಿ ಉಪ್ಪಿನಂಗಡಿ ತಾಲೂಕಿನಲ್ಲಿ ಅಜಲಾದಿ ಸಹಕಾರಿ ಸಂಘವು ರಿಜಿಸ್ಟ್ರಿಯಾಯಿತು.

ಕಳೆದ ತಾ. ೨೯ ಮತ್ತು ೩೦ರಲ್ಲಿ ಪುತ್ತೂರು ಸೆಂಟ್ರಲ್ ಬೇಂಕಿನಲ್ಲಿ ಜರುಗಿದ ಮೀಟಿಂಗಿನಲ್ಲಿ ಈಗಿರುವ ಬಡ್ಡಿಯ ದರವನ್ನು ಕಡಿಮೆ ಮಾಡಲು ಸಾಧ್ಯವಿಲ್ಲವೆಂದು ನಿರ್ಧರಿಸಿದೆ.

ಮಂಗಳೂರ ಮುನ್ಸಿಪಲ್ ಮತ್ತು ಲೋಕಲ್ ಬೋರ್ಡು ನೌಕರರ ಬಗ್ಗೆ ರಿಜಿಸ್ಟ್ರಿಯಾದ ಸಹಕಾರಿಸಂಘವು ನಿನ್ನೆ ದಿನ ಡಿಸ್ಟ್ರಿಕ್ಟಬೋರ್ಡ ಆಫೀಸಿನಲ್ಲಿ ತೆರಿಯಲಾಯಿತು. ಡಿಸ್ಟ್ರಿಕ್ಟ ಬೋರ್ಡ ಇಂಜಿನಿಯರ್ ಮ. ರಾ. ಯು. ಸಂಜೀವರಾಯರು ಇದರ ಪ್ರೆಸಿಡೆಂಟರಾಗಿರುವರು.

ಮ. ರಾ. ಮಿ. ಜಿ. ಪ್ರಭುಗಳು ಜಿಲ್ಲೆಯ ಹೆಲ್ತ ಆಫೀಸರರಾಗಿ ನೇಮಕಪಟ್ಟಿರುವರು.

ದಕ್ಷಿಣ ಕನ್ನಡ ಜಿಲ್ಲಾ ಕೆಥೋಲಿಕ ಎಸೋಸಿಯೇಶನಿನ ವಾರ್ಷಿಕ ಮಹಾ ಸಭೆಯು ಬರುವ ಆದಿತ್ಯವಾರ ಸಾಯಂಕಾಲ ಕೆಥೋಲಿಕ ಯೂನಿಯನ್ನ ಕ್ಲಬ್ಬಿನಲ್ಲಿ ಸೇರುವುದು.

ಕಂಕನಾಡಿಯ ಆಟದ ಬಯಲು ಸ್ಥಳದಲ್ಲಿ ಮಂಗಳೂರ ಮುನ್ಸಿಪಾಲಿಟಿಯವರು ಜಟಕಾಗಾಡಿಗಳ ನಿಲ್ದಾಣವನ್ನು ಮಾಡಲಿಕ್ಕಿರುವುದನ್ನು ನಿಷೇಧಿಸುವ ಠರಾವನ್ನು [illegible]ವಾಡಿನ ತರುಣ ಸಂಘದವರು ಕಳೆದ ಫೆಬ್ರವರಿ ತಾ. ೨೦ರಲ್ಲಿ ಪಾಸು ಮಾಡಿ ಮುನ್ಸಿಪಾಲಿಟಿಗೆ ಕಳುಹಿಸಿಕೊಟ್ಟಿದ್ದರಷ್ಟೆ. ಮುನ್ಸಿಪಾಲಿಟಿಯವರು ಈ ಠರಾವನ್ನು ಮಾನ್ಯಮಾಡಿ ಕಂಕನಾಡಿಯಲ್ಲಿ ಈ ನಿಲ್ದಾಣವನ್ನು ಬೇರೆ ಕಡೆಯಲ್ಲಿ ಕಟ್ಟಿಸುತ್ತಿರುವರು.

ಕೊಂಗ್ರೆಸ್ ಕಾರ್ಯಪ್ರಚಾರಕ್ಕಾಗಿ ಮ. ರಾ. ಕಾರ್ನಾಡ ಸದಾಶಿವರಾಯರು ಕಾರ್ಕಳ ತಾಲೂಕಿಗೂ, ಮ. ರಾ. ಮೂ. ಉಮೇಶರಾಯರು ಕಾಸರಗೋಡಿಗೂ ತೆರಳಿರುವರು.

ದಕ್ಷಿಣ ಕನ್ನಡ.

ಬಂಟವಾಳ:— ಇಲ್ಲಿ ಸ್ವೈಲಿಗಳ್ಲಿಯಂದ ೬-೭ ಮರಣಗಳಾದವು. [illegible] ಅಲ್ಲಲ್ಲಿ ಕಂಡಿವೆ. ಗ್ರಾಮದೈವಗಳ ಮುಂಗಾಣ್ಮೆಯಿನ ನೇಮದಲ್ಲಿ ಯಥಾಪ್ರಕಾರ ಬಲಿಕ [illegible] ಈ ವಾರದಲ್ಲಿ ನಡೆಯಿತು. ಈ ದೈವದ ಒಂದು ಗುತ್ತಿಯು ಪಾಳಾಗಿದೆ. ಎದುರುಗಡೆ ಇದ್ದ [illegible] ಭಂಡಿಯು ಕೆಲವು ವರುಷಗಳ ಹಿಂದೆಯೆ ಕಟ್ಟಲ್ಪಟ್ಟಿದೆ. ಪ್ರತಿ ವರುಷದ ನೇಮದ ಸಮಯ ಕೂಡಿದ ಕಾಣಿಕೆಯಿಂದಲೂ ಗ್ರಾಮದವರ ವಂತಿಗೆಯಿಂದಲೂ ಮೇಲೆ ಹೇಳಿದವುಗಳನ್ನು ಹೊಸತಾಗಿ ಮಾಡಿಸಿದರೆ ಅದರ ಗುರಿಕಾರ ಮೊಕ್ತೇಸರರೆಲ್ಲರಿಗೂ ಕೀರ್ತಿ ಬರುತ್ತಿತ್ತು.

ಕಾಸರಗೋಡು:— ಇದೇ ಬರುವ ತಾ. ೨೨ನೇ ಆದಿತ್ಯವಾರ [illegible] ಕಾಸರಗೋಡಿನಲ್ಲಿ ಆ ತಾಲೂಕಿನ ದ್ವಿತೀಯ ರಾಜ್ಯೀಯ ಪರಿಷತ್ತು ಶ್ರೀಯುತ [illegible] ಅಧ್ಯಕ್ಷತೆಯಲ್ಲಿ ಜರಗಲಿಕ್ಕಿರುವುದು. ಈ ಪರಿಷತ್ತಿನಲ್ಲಿ ಕಾಸರಗೋಡು ತಾಲೂಕಿನ ಪಾಲಿಗೆ ಬಿದ್ದ ಗಯಾ ಕೊಂಗ್ರೆಸ್ಸಿನ ಕಾರ್ಯಕ್ರಮವನ್ನು ಪೂರ್ತಿಮಾಡುವ ಮತ್ತು ಸವಿನಯ ಕಾಯಿದೆ ಭಂಗವನ್ನು ಕೈಕೊಳ್ಳಲು ತಾಲೂಕನ್ನು ಹೇಗೆ ಸಿದ್ಧಪಡಿಸಬಹುದೆಂಬುದನ್ನು ನಿಶ್ಚಯಿಸಲಿಕ್ಕಿರುವರು.

ಪರಿಷತ್ತಿನ ಮಂಟಪದಲ್ಲಿ ಸಭೆಯನಂತರ ಕೀರ್ತನಕಾರರಾದ ಚೆಂಡಾವಿನ [illegible] ಮತ್ತು ಸನಾತನ ದಾಸರ ಕೀರ್ತನಗಳು ಇರುವವು.

ಫೀಜಿ ದ್ವೀಪದಲ್ಲಿರುವ ಹಿಂದಿಗಳು.

ಇಲ್ಲಿರುವ ಹಿಂದಿಗಳ ಪರವಾಗಿ ಸುವಾ ಎಂಬಲ್ಲಿ ಕೂಡಿದ ಒಂದು ದೊಡ್ಡ ಸಭೆಯಲ್ಲಿ ಕೆಳಗಿನ ಠರಾವು ಪಾಸಾಗಿದೆ. ಹಿಂದಿಗಳು ಪೋಲ್ ಟೇಕ್ಸನು ವಿಧಿಸಕೂಡದೆಂದು ಬಹಳವಾಗಿ ಕೇಳಿಕೊಂಡರೂ ಫೀಜಿಸರಕಾರವು ಇದನ್ನು ಅಲಕ್ಷಿಸಿ ಈ ತೆರಿಗೆಯನ್ನು ವಿಧಿಸಲಿಕ್ಕಿರುವುದು. ಈ ತೆರಿಗೆಯನ್ನು ವಿಧಿಸಿದ್ದೆ ಆದರೆ ಫೀಜಿಯಲ್ಲಿ ದೀನಸ್ಥಿತಿಯಲ್ಲಿರುವ ಹಿಂದಿಗಳ ಸ್ಥಿತಿಯು ಇನ್ನಷ್ಟು ಹೀನವಾಗುವುದು. ಆದ್ದರಿಂದ ಫೀಜಿಸರಕಾರವು ಈ ಪೋಲ್ ತೆರಿಗೆಯಿಂದ ಎತ್ತಲಿಕ್ಕಿರುವ ಹಣವನ್ನು ಹಿಂದೂಸ್ಥಾನ ಸರಕಾರವು ಕೊಡುವ ಆಲೋಚನೆಮಾಡತಕ್ಕದೆಂದು ಹಿಂದೂಸ್ಥಾನ ಸರಕಾರಕ್ಕೆ ವಿಜ್ಞಾಪಿಸಿಕೊಳ್ಳಬೇಕು. ಈ ಪೋಲ್ ಟೇಕ್ಸನ್ನು ವಿಧಿಸಲ್ಪಡಲ್ಲವೆಂದು ಫೀಜಿಸರಕಾರವು ನಿರ್ಧರಿಸುವ ವರೆಗೆ ಮುಂದಕ್ಕೆ ಹಿಂದಿಗಳು ಅಲ್ಲಿ ದೇಶಾಂತರವಾಸಕ್ಕೆ ಹೋಗುವುದನ್ನು ನಿಲ್ಲಿಸತಕ್ಕದು. ಜನರ ವಿರೋಧವನ್ನು ಲಕ್ಷಿಸದೆ ಒಂದು ವೇಳೆ ಫೀಜಿಸರಕಾರವು ಈ ತೆರಿಗೆಯನ್ನು ವಿಧಿಸಿದ್ದೆ ಆದರೆ ಆಗ ಹಿಂದೂಸ್ಥಾನ ಸರಕಾರವು ಫೀಜಿಯನ್ನು ಬಿಟ್ಟು ಇಲ್ಲಿಗೆ ಬರಲು ಆತುರಪಡುವ ಹಿಂದಿಗಳಿಗೆ ಸೌಕರ್ಯಗಳನ್ನು ಒದಗಿಸಿಕೊಡುವಂತೆ ಆ ಸರಕಾರಕ್ಕೆ ವಿನಂತಿಮಾಡಿಕೊಳ್ಳತಕ್ಕದ್ದು. ಅಲ್ಲದೆ ಭೂಲೋಕದ ಇತರ ಯಾವ ದೇಶಗಳಿಗೂ ಹಿಂದೀ ಜನರನ್ನು ಕಾಯ ಕಷ್ಟದಿಂದ ಜೀವಿಸಲು ಕಳುಹಿಸುವ ವಿಷಯದಲ್ಲಿ ಹಿಂದೂಸ್ಥಾನದವರು ತುಂಬಾ ಆಲೋಚಿಸತಕ್ಕದೆಂದು ಅವರಿಗೆ ಬಹಳ ಒತ್ತಾಯ ಮಾಡತಕ್ಕದ್ದು.

ಜಬಲಪುರದ ಸ್ವರಾಜ್ಯ ನಿಶಾನೆ.

ಕಳೆದ ಮಾರ್ಚಿ ೧೧ನೇ ತಾರೀಕಿನ ದಿನ ಜಬಲಪುರಕ್ಕೆ ಕೊಂಗ್ರೆಸ ಕಾರ್ಯಪ್ರಚಾರಕ್ಕಾಗಿ ಹೋಗಲಿಕ್ಕಿದ್ದ ಓಲ್ ಇಂಡಿಯಾ ಕೊಂಗ್ರೆಸು ಕಮ್ಮಿಟಿಯಿಂದ ನೇಮಕಪಟ್ಟ, ಶ್ರೀಯುತ ರಾಜಗೋಪಾಲಾಚಾರ್ಯ ಮೊದಲಾದವರು ಅಲ್ಲಿ, ದೇಶಬಂಧು ಗಾಂಧಿ ಮುಂತಾದವರಿಂದ ಕೂಡಿದ ಅಖಿಲ ಭಾರತ ಪ್ರತಿನಿಧಿ ಮಂಡಲವು (ಓಲ್-ಇಂಡಿಯಾ ಡೆಪ್ಯುಟೇಶನ್) ಬರುವ ಕಾಲದಲ್ಲಿ ಅವರಿಗೆ ಬಿನ್ನಹಪತ್ರವನ್ನು ಅರ್ಪಿಸಬೇಕೆಂತಲೂ, ಟೌನ್ ಹೋಲಿನ ಮೇಲೆ ಸ್ವರಾಜ್ಯ ಧ್ವಜವನ್ನು ಏರಿಸಬೇಕೆಂತಲೂ ಅಲ್ಲದೆ ೧೮ನೇ ತಾರೀಕಿನ ದಿನ ಗಾಂಧಿಯವರ ಬಂಧನದ ಸ್ಮರಣಾರ್ಥವಾಗಿ ಮುನ್ಸಿಪಲ್ ಶಾಲೆಗಳಿಗೆ ರಜೆಕೊಡಬೇಕೆಂತಲೂ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿರ್ಣಯಿಸಲ್ಪಟ್ಟಿತ್ತು.

ಮರುದಿನ ಸ್ಥಳೀಯ ಡಿಪ್ಯುಟಿ ಕಮಿಶನರು ಮುನ್ಸಿಪಲ್ ಕೌನ್ಸಿಲಿನ [illegible] ಮೆಂಬರರೊಡನೆ ಮುನ್ಸಿಪಲ್ ಕೌನ್ಸಿಲು ಮುಂಚಿನ ದಿನ ಕೂಡಿದ ನಿರ್ಣಯವನ್ನು [illegible] ಅಧಿಕಾರಗಳನ್ನು ಪ್ರಯೋಗಿಸುವುದಾಗಿ ತಿಳಿಸಿದಾಗ, ಆ ಮೆಂಬರರು ಅವರ [illegible] ಒಪ್ಪದ ಕಾರಣ ಮುನ್ಸಿಪಾಲಿಟಿಯ ನಿರ್ಣಯವನ್ನು ಅಮಾನತುಮಾಡುವ ಬಗ್ಗೆ ತಾನು ಮುಂಚೆಯೆ ತಯಾರಿಸಿಕೊಂಡಿದ್ದ ಒಂದು ಹುಕುಮನ್ನು ಅವರಿಗೆ ತೋರಿಸಿದರು. ಮುನ್ಸಿಪಲ್ ಮೆಂಬರರೂ ವೋಟರರೂ ಕಂದಾಯ ಕೆರುವವರೂ ಕೂಡಿ ಡಿಪ್ಯುಟಿ ಕಮಿಶನರ ಈ ವರ್ತನವನ್ನು ಬಹಳವಾಗಿ ನಿಂದಿಸಿ, ಕೊಂಗ್ರೆಸು ಅಧಿಕಾರಿಗಳೊಡನೆ ಕೂಡಿಕೊಂಡು ಧ್ವಜದ ಗೌರವವನ್ನು ಕಾಪಾಡುವ ಒಂದು ಯುಕ್ತಿಯನ್ನು ಆಲೋಚಿಸಿದರು. ವೋಟರರು ಸೇರಿ ದೆಪ್ಯುಟೇಶನಿಗೆ ಅರ್ಪಿಸುವ ಬಗ್ಗೆ ಮಾನಪತ್ರವನ್ನು ತಯಾರಿಸಿ ಮುನ್ಸಿಪಲ್ ಅಧಿಕಾರಿಗಳಿಂದ ಟೌನ್-ಹೋಲಿನ ಉಪಯೋಗಕ್ಕಾಗಿ ಅಪ್ಪಣೆಪಡೆಕೊಂಡರು.

ತಾ. ೧೧ನೇ ಸಾಯಂಕಾಲಕ್ಕೆ ಶ್ರೀಯುತ ರಾಜಗೋಪಾಲಾಚಾರ್ಯ ಮತ್ತು ಇತರರು ಬರುವ ಸಮಯದಲ್ಲಿ, ಮುನ್ಸಿಪಲ್ ಅಧಿಕಾರಿಗಳ ಅಪ್ಪಣೆ ವಿನಹ ಪೋಲೀಸು ಸಿಬ್ಬಂದಿಯು ಟೌನ್ ಹೋಲನ್ನು ಮುತ್ತಿಗೆ ಹಾಕಿತು. ಅದೆ ಸಾಯಂಕಾಲ [illegible] ಟೌನ್ ಹೋಲಿನಲ್ಲಿ ಆರಂಭಿಸಿದ್ದ ವೋಟರರ ಸಭೆಯು ಆ ಸ್ಥಳದಲ್ಲಿ ನೆರಬಾರದೆಂತಲೂ ಧ್ವಜಗಳನ್ನು [illegible] ಟೌನ್ ಹೋಲಿನ ಮಾರ್ಗವಾಗಿ ಯಾವ ಮೆರವಣಿಗೆಯೂ ಹೋಗಬಾರದೆಂತಲೂ ಅಪ್ಪಣೆ ಹೊರಟಿತು. ಅಲ್ಲದೆ, ಇನ್ನು ಮುಂದೆ ಟೌನ್ ಹೋಲಿನಲ್ಲಿ ಯಾವ [illegible] ಹುಕುಂ ಹೊರಟು [illegible] ಮುನ್ಸಿಪಲ್ [illegible] ಕಮಿಶನರ ದೊರೆಗಳು ಅಪ್ಪಣೆಕೊಟ್ಟರು.

ಮುನ್ಸಿಪಲ್ ಕಮ್ಮಿಟಿಯು ನ್ಯಾಯವಾದ [illegible] ಸಿದ ಈ [illegible]ದಿಂದ ಜನಸಾಮಾನ್ಯರಲ್ಲಿ [illegible] ಅಲ್ಲದೆ, ಮುನ್ಸಿಪಲ್ ಮೆಂಬರರಲ್ಲಿ ಕೂಡ [illegible] ಉಂಟಾಯಿತು. ಮನೆಗಳಲ್ಲೆಲ್ಲಿಯೂ [illegible] ಧ್ವಜಗಳು [illegible] ಹಾರತೊಡಗಿದವು. ಕೊಂಗ್ರೆಸು ಅಧಿಕಾರಿಗಳ [illegible] ನಿರ್ಧರಿಸಲ್ಪಟ್ಟಿತು. ಒಡನೆಯೇ ಮುನ್ಸಿಪಲ್ ಕಮ್ಮಿಟಿಯು ತನ್ನ ಅಧಿಕಾರಗಳನ್ನು ಸ್ಥಾನಗಳನ್ನೂ ಬಿಟ್ಟು ದೇಶಾಭಿಮಾನವನ್ನಾಗಿ ತೋರಿಸಬೇಕಾಗಿ ನಿಶ್ಚಯಿಸಲಾಯಿತು.

ಶ್ರೀಯುತ ರಾಜಗೋಪಾಲಾಚಾರ್ಯರು ತಾ. ೧೨ರಲ್ಲು ನೆರದ ಮಹಾ ಸಭೆಯಲ್ಲಿ ಜನರಲ್ಲಿ ಉಂಟಾದ ಅಶಾಂತತೆಯಿಂದ ಅತ್ಯಾಚಾರಗಳುಂಟಾಗದಂತೆ ಅವರಿಗೆ ಸಮಾಧಾನವನ್ನು ಹೇಳಿ ತಕ್ಕ ಸಿದ್ಧತೆಗಳು ಅನುಕೂಲವಾದೊಡನೆಯೆ ಸತ್ಯಾಗ್ರಹವನ್ನು ಆರಂಭಿಸಬೇಕಾಗಿಯೂ ಇದಿ ದೇಶವೆಲ್ಲ [illegible] ತಿಳಿಸಿದರು.

ಅದರಂತೆ ತಾ. ೧೮ನೇ ಗಾಂಧಿದಿನಕ್ಕಾಗಿ ಮಹತ್ತರ ಸಿದ್ಧತೆಗಳು ಪ್ರಾರಂಭವಾದವು. ಅನೇಕ ಜನರು ಸತ್ಯಾಗ್ರಹವ್ರತವನ್ನು ಕೈಕೊಂಡರು.

ಚಿರಸ್ಮರಣೀಯವಾದ ಆ ದಿನ ಅಪರಾಹ್ನ ಹೊತ್ತಿಗೆ ಧ್ವಜ ಸಮೇತ ಮೆರವಣಿಗೆ ಹೊರಟು ಕೆಂಟೋನ್ಮೆಂಟಿನ ಅಭಿಮುಖವಾಗಿ ಹೋಯಿತು. [illegible] ನಾತು ರಾಮ್‌ಮೋದಿ ಮತ್ತು ಸುಂದರ ಲಾಲ ಇವರುಗಳು [illegible] ಸಿವಿಲ್ ಲೈನು ಮತ್ತು ಕೆಂಟೋನ್ಮೆಂಟ್ ಒಳಕೆ [illegible] ವಿನಹ ಪ್ರವೇಶಿಸಬಾರದೆಂತ ಅಸಿಸ್ಟಾಂಟ ಸುಪರಿಂಟೆಂಡೆಂಟರವರು ಹುಕುಂ ಜಾರಿಮಾಡಿದರು. ಲೈಸನ್ಸಿಗಾಗಿ ಅರ್ಜಿಯನ್ನಿತ್ತರು. ಧ್ವಜ ವಿನಹ ಮೆರವಣಿಗೆಯು ಹೋಗಬಹುದೆಂದು ಹುಕುಂ ದೊರೆಯಿತು. ಒಡನೆಯೆ ಕಾಯಿದೆಭಂಗಕ್ಕಾಗಿ ಪಂಗಡಗಳು ಏರ್ಪಡಿಸಲ್ಪಟ್ಟವು. ಶ್ರೀಯುತ ಸುಂದರಲಾಲ ನಾತು ರಾಮ್‌ಮೋದಿ, ಶ್ರೀಮತಿ ಸುಭದ್ರಾ ಕುಮಾರಿ ಮತ್ತು ಇತರ ಏಳು ಮಂದಿ ಸ್ವಯಂಸೇವಕರ ಮಂಡಲವು ಹುಕುಮನ್ನು ಉಲ್ಲಂಘಿಸಿ ಸಿವಿಲ್ ಲೈನ್ ಒಳಗೆ ಪ್ರವೇಶಿಸಿದೊಡನೆಯೆ ಮೇಜಿಸ್ಟ್ರೇಟರು ಅವರೆಲ್ಲರನ್ನು ಕೈದುಮಾಡಿದರು. ಆದರೆ ಅವರು ೧೨ ಘಂಟೆಯ ತರುವಾಯ ಶರ್ತವಿರಹಿತವಾಗಿ ಬಿಡುಗಡೆಮಾಡಲ್ಪಟ್ಟರು. ಕೈದುಮಾಡಿದ್ದು ಮತ್ತು ಕೂಡಲೇ ಬಿಟ್ಟದ್ದು ಜನರನ್ನು ಇನ್ನಷ್ಟು ಜಾಗ್ರತೆಗೊಳಿಸಿತು. ಇಷ್ಟರ ವರೆಗೆ ದೇಶಕಾರ್ಯಗಳಲ್ಲಿ ಮುಂದೆಬಾರದ ಇಪ್ಪತ್ತು ಕ್ರೈಸ್ತ ಮಹಿಳೆಯರು ಕೂಡ ಕೈದುಮಾಡಲ್ಪಡುವುದಕ್ಕೆ ತಮ್ಮ ಹೆಸರುಗಳನ್ನು ಕೊಟ್ಟಿರುವರು.

ತಾ. ೨೦ರಲ್ಲು ನೆರದ ಮುನ್ಸಿಪಲ್ ಕಮ್ಮಿಟಿಯ ಅಧಿವೇಶನದಲ್ಲಿ ಸರಕಾರದ ಅನ್ಯಾಯ ವರ್ತನವನ್ನು ಪೂರ್ಣವಾಗಿ ಖಂಡಿಸಿ ಆರಿಸಲ್ಪಟ್ಟ ಮೆಂಬರರಲ್ಲಿ ಹಾಜರಿದ್ದ ೧೬ ಮಂದಿಗಳು ಅಲ್ಲಿಯೇ ರಾಜಿನಾಮೆಕೊಟ್ಟರು. ಪ್ರೆಸಿಡೆಂಟರಾದ ಮಿ. ಕಂಚೇದಿಲಾಲರು ಕೂಡ ರಾಜೀನಾಮೆಯನ್ನಿತ್ತರು. ಅನಂತರ ಇತರ ರಾಜಿನಾಮೆಗಳು ಕೂಡ ಬಂದಿರುತ್ತವೆ. ಸತ್ಯಾಗ್ರಹಕ್ಕಾಗಿ ಪೂರ್ವ ಸಿದ್ಧತೆಗಳು ನಡಿಯುತ್ತವೆ.

ಮೊನ್ನೆ ತಾ. ೨೭ಕ್ಕೆ ಜಬಲಪುರದಲ್ಲಿ ಮಹಾತ್ಮಾ ಭಗವಾನ ದಾಸರ ಅಧ್ಯಕ್ಷತೆಯಲ್ಲಿ ನೆರದ ಜಿಲ್ಲಾ ಪರಿಷತ್ತಿನಲ್ಲಿ ಧ್ವಜದ ಬಗ್ಗೆ ಹೋರಾಟವನ್ನು ನೆಡಿಸಬೇಕೆಂಬ ಠರಾವು ಪಾಸಾಯಿತು. ಅಲ್ಲದೆ ಮರುದಿನ ಸಾಧಾರಣ ೬,೦೦೦ ಜನರಿಂದ ಮತ್ತು ಸ್ವಯಂಸೇವಕರಿಂದ ಸೇರಿದ ಧ್ವಜಮೆರವಣಿಗೆಯೊಂದು ನಡೆಯಿತು. ಒಡನೆಯೇ ಸಾಧಾರಣ ೧೭೦ ಮಂದಿ ಸ್ವಯಂಸೇವಕರು ದಾಖಲು ಆದರು. ಖಿಲಾಫತ್ ಕಮ್ಮಿಟಿಯವರು ಅದೇ ತರದ ಠರಾವುಗಳನ್ನು ಪಾಸುಮಾಡಿದರು. ಅಲ್ಲದೆ ಈ ವಿಷಯಗಳಲ್ಲಿ ಬಹಳ ಶ್ರದ್ಧೆಯನ್ನು ತೆಗೆದುಕೊಂಡಿರುತ್ತದೆ.

ಕಳೆದ ತಾ. ೩೧ರಲ್ಲಿ ಉಡುಪಿಯಲ್ಲಿ ಸೇರಿದ ಮಹಾಸಭೆ.

ಮದರಾಸ ನ್ಯಾಯವಿಧಾಯಕ ಸಭೆಯಲ್ಲಿ ಈಗ ಚರ್ಚೆಯಾಗುತ್ತಿರುವ ಹಿಂದೂಮಠ, ದೇವಸ್ಥಾನ ಮತ್ತು ಇತರ ಧರ್ಮಸಂಸ್ಥೆಗಳ ಉಂಬಳಿಗಳಿಗೆ ಸಂಬಂಧಪಟ್ಟ ಕಾನೂನುಮಸೂದೆಯನ್ನು ಕುರಿತು ಆಲೋಚಿಸಲು ಹಿಂದೂ ಜನರಾಗು ಹಿಂದೂ ಮತಾಭಿವೃದ್ಧಿಯಲ್ಲಿ ಆಸಕ್ತರಾದವರ ಒಂದು ಸಭೆಯು ಕಳೆದ ತಾರೀಕು ೩೧ರಲ್ಲಿ ಉಡುಪಿಯಲ್ಲಿ ಸೇರಿತು. ಈ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಮಧುರೆಯ ಶ್ರೀಯುತ ಕೆ. ಶೇಷ ಅಯ್ಯಂಗಾರರು ಕಳೆದ ತಾರೀಕು ೩೦ನೇ ಸಾಯಂಕಾಲದ ಮೈಲು ಬಂಡಿಯಲ್ಲಿ ಮಂಗಳೂರಿಗೆ ತಲ್ಪಿ ಅನಂತರ ಮೋಟಾರಬಂಡಿಯಲ್ಲಿ ಉಡುಪಿಗೆ ಬಂದರು. ಅಧ್ಯಕ್ಷರು ಉಡುಪಿ ಪಟ್ಟಣವನ್ನು ಪ್ರವೇಶಿಸುವಾಗ ಇವರನ್ನು ಸಭೆಗಾಗಿ ಉಡುಪಿಗೆ ಬಂದ ಪ್ರತಿನಿಧಿಗಳು ಮತ್ತು ಇತರ ಜನರು ಸಂಗೀತ, ಬೇಂಡುವಾದ್ಯ ಮೊದಲಾದ ವೈಭವದಿಂದ ಸ್ವಾಗತಮಾಡಿ ಕೊರಳಿಗೆ ಪುಷ್ಪ ಮಾಲೆಯನ್ನು ಹಾಕಿ ಪ್ರತಿನಿಧಿಗಳ ಬಗ್ಗೆ ಸಿದ್ಧಪಡಿಸಿದ ಸ್ಥಳಕ್ಕೆ ಮೆರವಣಿಗೆಯಿಂದ ಕರತಂದರು. ಶ್ರೀಕೃಷ್ಣದೇವಸ್ಥಾನದಲ್ಲಿ ಏರ್ಪಡಿಸಿದ ಭವ್ಯವಾದ ಮಂಟಪದಲ್ಲಿ ಈ ಸಭೆಯು ಕೂಡಿತು. ಅನೇಕ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಪ್ರತಿನಿಧಿಗಳ ಸೌಕರ್ಯಕ್ಕಾಗಿ ಸ್ವಾಗತಕಮ್ಮಿಟಿಯವರು ತಕ್ಕ ಏರ್ಪಾಡುಗಳನ್ನು ಮಾಡಿದ್ದರು. ಈ ಸಭೆಯ ಕಾರ್ಯಕ್ರಮಗಳು ಜಯಪ್ರದವಾಗಿ ನಡಿಯಲೆಂದು ತಮ್ಮ ಸಹಾನುಭೂತಿಯನ್ನು ಸೂಚಿಸಿ ಅನೇಕ ಕಡೆಗಳಿಂದ ತಂತಿಗಳೂ ಪತ್ರಗಳೂ ಬಂದಿದ್ದವು. ಕಳೆದ ತಾರೀಕು ೩೧ನೇ ಮಧ್ಯಾಹ್ನ ೩॥ ಗಂಟೆಗೆ ಸಭೆಯು ಸೇರಿತು. ಸ್ವಾಗತಕಮ್ಮಿಟಿಯ ಅಧ್ಯಕ್ಷರೂ ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರರೂ ಆದ ಶ್ರೀಯುತ ಹೊಸಕೊಪ್ಪ ಕೃಷ್ಣರಾಯರು ಸ್ವಾಗತಪರ ಭಾಷಣವನ್ನು ಮಾಡಿದರು. ಇವರ ಭಾಷಣವು [illegible] ಪುಟಗಳಿವೆ. ಇವರು ತಮ್ಮ ಭಾಷಣದಲ್ಲಿ ಹಿಂದೂಧರ್ಮದ ಮೇಲೆ ಈಗ ಬಂದಿರುವ ಆಪತ್ತಿನ ತರವನ್ನು ವಿವರಿಸಿ, ಧರ್ಮಕಾರ್ಯದ ವಿಷಯದಲ್ಲಿ ಎಲ್ಲರೂ ಒಗ್ಗಟ್ಟಾಗಿರುವುದು ಅತೀ ಅಗತ್ಯವೆಂದು ಸೂಚಿಸಿ, ತಮ್ಮ ಮೈಸೂರು ಸಂಸ್ಥಾನದಲ್ಲಿ ದೇಶೀಯ ಅರಸರು ಧರ್ಮಸಂಸ್ಥೆಗಳ ವಿಷಯದಲ್ಲಿ ತೋರಿಸುವ ಅಭಿಮಾನವನ್ನು ವಿವರಿಸಿ, ಮದರಾಸ ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಈಗ ಚರ್ಚೆಯಾಗುತ್ತಿರುವ "ಹಿಂದೂ ರಿಲಿಜಿಯಸ್ ಎನ್‌ಡೌಮೆಂಟ್ಸ ಬಿಲು" ಈ ಸಂಸ್ಥಾನಕ್ಕೆ ಮಾತ್ರ ಬಾಧಕವಾದದ್ದಲ್ಲದೆ ಇದರ ಪರಿಣಾಮವು ಇಡೀ ದೇಶದ ಮೇಲೆ ಹೇಗೆ ಉಂಟಾಗುವುದೆಂದು ವ್ಯಕ್ತಪಡಿಸಿ, ಮುಸಲ್ಮಾನರ ಆಳಿಕೆಯ ಕಾಲದಲ್ಲಿ ಹಿಂದೂಧರ್ಮಕ್ಕೆ ಬಾಧೆಯು ತಟ್ಟಿದಾಗ ಹಿಂದೂಮತರಕ್ಷಣೆಗಾಗಿ ಸನ್ಯಾಸಿಗಳ ಮೇಲ್ವಿಚಾರಣೆಯಲ್ಲಿ ಮಠಸಂಸ್ಥೆಗಳನ್ನು ಸ್ಥಾಪಿಸಿದಕಾರಣ, ಮಠಗಳ ಪೂರ್ವಚರಿತ್ರೆ ಮುಂತಾದವನ್ನು ತಿಳಿಯಪಡಿಸಿ ಮೊಗಲ್ ಚಕ್ರವರ್ತಿಗಳಾದ ಅಕ್ಬರ ಮೊದಲಾದವರು ಹಿಂದೂಧರ್ಮದ ಕಡೆಗೆ ಹೆಚ್ಚಿನ ಅಭಿಮಾನವನ್ನಿಟ್ಟದ್ದರಿಂದ ಆ ಕಾಲದಲ್ಲಿ ಮೊಗಲ್ ಸಾಮ್ರಾಜ್ಯವು [illegible] ಅನಂತರ ಬಂದ ಅರಸರು ಹಿಂದೂಮತದ ಕಡೆಗೆ [illegible] ತೋರಿಸಿದ್ದರಿಂದ ತಮ್ಮ ರಾಜ್ಯವನ್ನು ಕಳಕೊಂಡರೆಂದು [illegible] ವ್ಯಾಖ್ಯಾನವನ್ನು ಹೇಳಿ, [illegible] ಈ ವಿಷಯವನ್ನು [illegible] ಹಿಂದೂಸ್ಥಾನದ ಧರ್ಮದ ಸಂಗತಿಯಲ್ಲಿ [illegible] ವೆಂದು [illegible] ವಿವರಿಸಿದರು. ಈ ತರದ ಬಿಲನ್ನು ಜಾರಿ ಮಾಡಿದರೆ ಮಠಸಂಬಂಧವಾದ ಸಂಗತಿಗಳಲ್ಲಿ ಪ್ರಜೆಗಳು ಕೈಹಾಕಲಿಕ್ಕಿಲ್ಲವೆಂದು [illegible] ಮಹಾರಾಣಿಯವರು [illegible] ಯನ್ನು ಕೆಡಿಸಿದಂತಾಗುವುದೆಂದು ಹೇಳಿ, ಸರಕಾರಕ್ಕೆ ತಕ್ಕ ಎಚ್ಚರವನ್ನು ಉಂಟುಮಾಡಲು ಗುರುಪ್ತಾಳ ಬಿಲು ಹೇಗೆ ಬಂದು ನಿಧನವಾಗಿದ್ದೆಂದು ಸೂಚಿಸಿ, ಈಗ ಜಾರಿಗೆ ತರಲಿಕ್ಕಿರುವ ಬಿಲಿನಿಂದ ಹಿಂದೂಮತ ಸಂಸ್ಥೆಗಳ ಆದಾಯದ [illegible] ಪ್ರಯೋಜನವಾಗದೆ ಸ್ಥಳೀಕ ಸರಕಾರಕ್ಕೆ ತನ್ನ ಆದಾಯವನ್ನು ಹೆಚ್ಚಿಸಲು ಮಾತ್ರ ಅನುಕೂಲವಾಗಿದೆಂದು ಎಲ್ಲ ಜನರಿಗೂ ಮುಂದಿಟ್ಟವರಾಗಿ ಹೇಳಿ, ಈ ಬಿಲನ್ನು ಜಾರಿಗೆ ತರುವುದು ಅನವಶ್ಯವೆಂದು ಅಭಿಪ್ರಾಯಪಟ್ಟರು.

ಅನಂತರ ಇವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಠಗಳ ಸ್ಥಿತಿಯನ್ನೂ ಮೇಲಿನ ಬಿಲಿನ [illegible] ಸಾದ್ಯಂತವಾಗಿ ವಿವರಿಸಿ, ನ್ಯಾಯವಿಧಾಯಕ ಸಭೆಯವರು ಒಂದು ವೇಳೆ ಈ ಬಿಲನ್ನು ಪಾಸುಮಾಡಿದರೂ ಜನರು ತೀವ್ರವಾಗಿ ನಿರೋಧಿಸುವುದರಿಂದ ಇದನ್ನು ಜಾರಿಗೆ ತರುವುದು ಅನುಚಿತವಾದ್ದರಿಂದ ಇದಕ್ಕೆ ಗವರ್ನರ ದೊರೆಗಳು ತಮ್ಮ ಸಮ್ಮತಿಯನ್ನು ಕೊಡಲಿಕ್ಕಿಲ್ಲವೆಂದು ತನ್ನ ನಂಬಿಕೆಯಾಗಿದೆ ಎಂದು ಹೇಳಿ ತಮ್ಮ ಭಾಷಣಾಂತ್ಯದಲ್ಲಿ ಹಿಂದೂ ರಿಲಿಜಿಯಸ್ ಡಿಫೆನ್ಸ್ ಎಸೋಸಿಯೇಶನನ್ನು ಸ್ಥಾಪಿಸುವುದು ಅಗತ್ಯವೆಂದು ಸೂಚಿಸಿದರು. ಅನಂತರ ಈ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀಯುತ ಯಂ. ಕೆ. ಶೇಷಗಿರಿ ಅಯ್ಯಂಗಾರರು ಇಂಗ್ಲಿಷಿನಲ್ಲಿ ಒಂದು ಘಂಟೆಯ ಕಾಲ ಸಾಲೋಚಿತಭಾಷಣವನ್ನು ಮಾಡಿದರು. ಇವರು ತಮ್ಮ ಭಾಷಣದಲ್ಲಿ ಈ ಬಿಲು ಹೇಗೆ ಅನವಶ್ಯಕವಾದ್ದು, ವಿಘಾತಕವಾದ್ದೆಂದು ಮುಂತಾಗಿ ಸೂಚಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ್ ಕಮ್ಮಿಟಿ.

೧೯೨೩ನೇ ಇಸವಿ ಎಪ್ರಿಲ್ ತಾ. ೨ರಲ್ಲು ಜರಗಿದ ಜಿಲ್ಲಾ ಕೊಂಗ್ರೆಸ್ ಕಮ್ಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯ ವರದಿ.

೧. ೯—೩—'೨೩ರ ನಿರ್ಣಯ ೧೪ರಂತೆ ರಾ. ಬಾಯೂರು ಗಂಗಯ್ಯನವರನ್ನು ಪ್ರಾಂತಿಕ ಕಮ್ಮಿಟಿಯವರು ಸಬರಮತಿ ಆಶ್ರಮಕ್ಕೆ ಕಳುಹಿಸದೆ ಇದ್ದುದರಿಂದ ಅವರನ್ನು ದೇಶೀಯರಿಗು ವಸ್ತ್ರದ ಮಾಹಿತಿಯನ್ನು ಪಡೆಯಲಿಕ್ಕೆ ಮಸೂಲಿಪಟ್ಟಣದ ಆಂಧ್ರ ಜಾತೀಯ ಕಲಾಶಾಲೆಗೆ ಕಳುಹಿಸಿದ್ದನ್ನು ಮಂಜೂರುಮಾಡಿ ಅವರಿಗೆ ತಿಂಗಳಿಗೆ ರೂ. ೧೫ರಂತೆ ಆರು ತಿಂಗಳಿಗೆ ಸಹಾಯಮಾಡಬೇಕಾಗಿ ನಿರ್ಣಯಿಸಲಾಯಿತು. ರಾ. ಸೋಮಯಾಜಿಯವರಂತೆಯೇ ಇವರಿಂದಲೂ ಕರಾರುಪತ್ರ ತೆಗೆದುಕೊಳ್ಳತಕ್ಕದ್ದು.

೨. ಶ್ರೀಯುತ ರಂಗನಾಥ ರಾಮಚಂದ್ರದಿವಾಕರರ ಕಾಗದವು ಓದಲಾಯಿತು. ಆ ಪತ್ರದಲ್ಲಿ ವಿವರಿಸಿದಂತೆ ಪದವಿಗಳನ್ನು ಕೊಡುವರೆ ಯೋಗ್ಯರನ್ನು ಚುನಾಯಿಸುವುದಕ್ಕೆ ಆಯಾ ತಾಲೂಕು ಕಾರ್ಯದರ್ಶಿಯವರಿಗೆ ಜಿಲ್ಲಾ ಕಾರ್ಯದರ್ಶಿಯವರು ಪತ್ರಬರೆದು ಬೇಕಾದ ಮಾಹಿತಿಯನ್ನು ತರಿಸಿ ಬರುವ ಕಾರ್ಯಕಾರಿಸಭೆಯ ಮುಂದಿಡತಕ್ಕದ್ದು.

ಅದೇ ತಾರೀಕಿನಲ್ಲಿ ಜರಗಿದ ಜಿಲ್ಲಾ ಕೊಂಗ್ರೆಸ್ ಕಮ್ಮಿಟಿಯ ಮಹಾಸಭೆಯ ವರದಿ:—

೧. ರಾ. ಮಾರ್ಸೆಲ್ ಸೋಜರು ತನ್ನನ್ನು ಪ್ರತ್ಯೇಕ ಮೆಂಬರರಾಗಿ ದಕ್ಷಿಣ ಕನ್ನಡ ಜಿಲ್ಲಾ ಕಮ್ಮಿಟಿಗೆ ಸೇರಿಸಿಕೊಳ್ಳಬೇಕಾಗಿ ಬರೆಕೊಂಡ ಪತ್ರ ಓದಲಾಯಿತು. ಅವರನ್ನು ಹಾಗೆ ಸದಸ್ಯರನ್ನಾಗಿ ತೆಗೆದುಕೊಳ್ಳಬಹುದಾಗಿ ನಿರ್ಣಯಿಸಲಾಯಿತು.

೨. ಅಧ್ಯಕ್ಷ, ಉಪಾಧ್ಯಕ್ಷ, ಮತ್ತು ಕಾರ್ಯದರ್ಶಿಯರಲ್ಲದೆ ಇತರರ ಮಟ್ಟಿಗೆ ಜಿಲ್ಲಾ ಮಹಾಸಭೆಯವರು ತಾ. ೧೨—೩—'೨೩ರಲ್ಲು ಮಾಡಿದ ೩ನೇ ನಿರ್ಣಯವು ಆಗಾವಾಗ ಕಡಿದಾಗಿ ನಿರ್ಣಯಿಸಲಾಯಿತು.

೩. ಒಂದೊಂದು ತಾಲೂಕಿಗೆ ಮೂರು ಪ್ರತಿನಿಧಿಗಳ ಪ್ರಕಾರ ಕಾರ್ಯಕಾರಿ ಮಂಡಳಿಯಲ್ಲಿ ೧೮ ಪ್ರತಿನಿಧಿಗಳನ್ನಾರಿಸಬೇಕಾಗಿಯೂ ಉಳಿದ ೭ ಮಂದಿಯ ಮಟ್ಟಿಗೆ ಇಡೀ ಜಿಲ್ಲೆಯಿಂದ ಚುನಾಯಿಸಬಹುದಾಗಿಯೂ ನಿಶ್ಚಯಿಸಲಾಯಿತು.

೪. ಈ ಕೆಳಗೆ ಹೆಸರು ಕಾಣಿಸಿದ ಗೃಹಸ್ಥರನ್ನು ಜಿಲ್ಲಾ ಕಾರ್ಯಕಾರಿ ಮಂಡಳಿಯ ಸದಸ್ಯರನ್ನಾಗಿ ಚುನಾಯಿಸಲಾಯಿತು. ಶ್ರೀಯುತರುಗಳಾದ ರಾ. ಎಚ್. ನಾರಾಯಣರಾವ್, ೨ ಕೊಚ್ಚಿಕಾರ ಪದ್ಮನಾಭ ಪೈ, ೩ ಪಿ. ಎ. ಪೈ, ೪ ಶೆಟ್ಟಿ ಲಕ್ಷ್ಮಣರಾವ್, ೫ ಬದಿಯಡ್ಕ ನಾಮರಾಯ ತಂತ್ರಿ, ೬ ಪುತ್ತೂರು ಉಮಾನಾಥ ರಾವ್, ೭ ಬಿ. ಮಹಾಬಲ ಹೊಳ್ಳ, ೮ ಬಿ. ಸೂರಪ್ಪಯ್ಯ, ೯ ಕೋಟಿ ಶಿವರಾಮಕಾರಂತ, ೧೦ ಶಾಂತಿಗೋಡು ಸುಬ್ರಾಯ ತೋಳ್ಪಡಿತ್ತಾಯ, ೧೧ ಬಿ. ವೆಂಕಟಪ್ಪ ಪೈ, ೧೨ ಬಿ. ಶಿವರಾಮ ಹೊಳ್ಳ, ೧೩ ಕಾರ್ನಾಡ ಸದಾಶಿವ ರಾವ್, ೧೪ ಅ. ಭೋಜರಾವ್, ೧೫ ಡಿ. ಕೆ. ಭಾರದ್ವಾಜ, ೧೬ ಉಡುಪಿ ಗೋವಿಂದ ರಾವ್, ೧೭ ಉಳ್ಳಾಲ ಸಂಜೀವ ರಾವ್, ೧೮ ಮೂ. ಉಮೇಶರಾವ್, ೧೯ ಮಟ್ಪಾಡಿ ಹಸನ್ ಸಾಹೇಬ್, ೨೦ ಕೆ. ಎಮ್. ಜಾನಪ್ಪ, ೨೧ ಎಚ್. ಮಾಧವ ರಾವ್, ೨೨ ಕೆ. ನಾರಾಯಣ. ಇತರ ತಾಲೂಕಿನ ಮಟ್ಟಿಗೆ ಮೂರು ಜನರನ್ನು ಆ ತಾಲೂಕಿನ ಕಾರ್ಯಕಾರಿ ಮಂಡಳಿಯವರು [illegible] ಇದವರನ್ನು ಈ ಕಮ್ಮಿಟಿಯ ಕಾರ್ಯಕಾರಿ ಮಂಡಳಿಯ ಸಭಾಸದರಾಗಿ ಸೇರಿಸಿಕೊಳ್ಳತಕ್ಕದ್ದು.

೫. ರಾ. ರಾ. ಕಾರ್ನಾಡ ಸದಾಶಿವರಾಯರನ್ನು ಅಧ್ಯಕ್ಷರಾಗಿಯೂ, ರಾ. ಭಾರದ್ವಾಜರನ್ನು ಉಪಾಧ್ಯಕ್ಷರನ್ನಾಗಿಯೂ, ರಾ. ಉಡುಪಿ ಗೋವಿಂದರಾಯರನ್ನು ಕಾರ್ಯದರ್ಶಿಯರಾಗಿಯೂ, ರಾ. ಎಚ್. ಮಾಧವರಾಯರನ್ನು [illegible] ಚುನಾಯಿಸಲಾಯಿತು.

೬. ಇಡೀ ಜಿಲ್ಲೆಯ ಮಟ್ಟಿಗೆ ಮ. ರಾ. ಆರ್. [illegible] ಕಾರರನ್ನೂ, ಕಾರ್ಕಳ, ಪುತ್ತೂರಿನ ಮಟ್ಟಿಗೆ ರಾ. ಉಡುಪಿ ಗೋವಿಂದರಾಯರನ್ನೂ ಮಂಗಳೂರು ಕಾಸರಗೋಡಿನ ಮಟ್ಟಿಗೆ ಮ. ರಾ. ಕೊಚ್ಚಿಕಾರ ಪದ್ಮನಾಭ ಪೈಗಳನ್ನೂ, ಉಡುಪಿ ಕುಂದಾಪುರಕ್ಕೆ ರಾ. ಅ. ಭೋಜರಾಯರನ್ನೂ ಲೆಕ್ಕಪರಿಶೋಧಕರನ್ನಾಗಿ ಚುನಾಯಿಸಲಾಯಿತು. ಮೇಲೆ ಕಾಣಿಸಿದ ನಾಲ್ಕು ಮಂದಿ ಗೃಹಸ್ಥರು ಪರಿಶೋಧಕ ಮಂಡಳಿಯಾಗಿದ್ದು ಲೆಕ್ಕ [illegible] ಮತ್ತು ಲೆಕ್ಕಪರಿಶೋಧನೆ ಮಾಡುವ ಕುರಿತು ಬೇಕಾದ ಸೂಚನೆಗಳನ್ನು [illegible] ಕಾರ್ಯದರ್ಶಿಯವರಿಗೆ [illegible]

[illegible] ಜಿಲ್ಲಾ ಕೊಂಗ್ರೆಸ್ ಕಮ್ಮಿಟಿ, ಮಂಗಳೂರು, ೩—೪—೧೯೨೩.

ಉಡುಪಿ ಗೋವಿಂದರಾವ್,
ಕಾರ್ಯದರ್ಶಿ.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೆ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯವಿಟ್ಟು ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" "ದೇವರೆಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹಾತ್ಮರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು.
ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!
ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಳನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಅನೇಕ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೋ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಬೇಗ ತರಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦. ಟಪ್ಪಾಲು ಹಾಸಲು ೦—೪—೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ಣಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಪಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ಕಡಿಮೆ ಕ್ರಯಕ್ಕೆ ಚಿಲ್ಲರೆ ಲಾಯೂ ದೊರೆಯುತ್ತಿವೆ.

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರ

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0
Reserve and other sinking Funds „ 205,250—0—0

ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಚಳಿ, ಹವಾ, ಕೊಳಕಾದ ನೀರುಗಳಿಂದ ಯಾವ ತೊಂದರೆ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, ಶೀತ, ಶೀತವಾತ, ವೃಕ್ಷಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ತೊಡಕು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷ್ಠಾತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.
ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೭—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ರಜಪೂತ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕ ನೀತಿಬೋಧಕವಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ.

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ	0—12—0	ಸಂಪೂರ್ಣ ರಾಮಾಯಣ ಹೊಸ ಮುದ್ರಣ	5—0—0
ಸಂತಾಪಕ-ಕಾದಂಬರಿ	0—6—0	ಸಂಪೂರ್ಣ ರಾಮಾಯಣದ ಕಥೆ ವಚನ	0—12—0
ಚಂದ್ರಮುಖಿ	0—8—0	S. S. L. C. Kannada Texts	
ರಾಜಪುತ್ರರಮಣಿಯರು	0—8—0	[illegible]	0—5—0
ಕೆಲವು ಸಣ್ಣ ಕಥೆಗಳು	1—0—0	ಸುಶೀಲೆ	0—6—0
ರಾಜಯೋಗ	1—0—0	ಆದರ್ಶ ಹುಡುಗಿ	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ಆರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಿಸ್ ಮಿತ್ರಸ್ ಬುಕ್ ಎಂಡ್ ಟ್ರಕ್ಟ ಡಿಪೋಜಿಟರಿ,
ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಡಬ್ಬಿಯು 32 ಸಾಮಾನುಗಳ ಸಹಿ ಡಬ್ಬಿ 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ. 4—8—0, ದೊಡ್ಡದು 6—0—0 ಪೋಸ್ಟು ಖರ್ಚು ಬೇರೆ. ಮತ್ತು ಚಾಪಿಯಲ್ಲಿ ತಯಾರಾಗುವ ರೇಷ್ಮೆ, ಮಣಿ, ಜರಿ, ಸಾದಾ, ಸೀರೆ, ರವಿಕೆ, ಕಾಶ್ಮೀರ್ ಶಾಲು, ರುಮಾಲು, ಸ್ತ್ರೀಯರ ಸ್ಥಿತಿಯಾದ, ದಿಂಗ, ಧಾವಣಿ ಜಾಗಂಟೆ ಇವುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವುದು. ಕ್ಯಾಟಲಾಗ್ ಉಚಿತ.

ವಿಳಾಸ—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೇಲಂಬಾ, ಕಾಶಿ ಕ್ಷೇತ್ರ.

ಗೋನೋರ್ಹ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೂ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಹುರುಳು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆ ಮುಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—೨ ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ. 1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೋಮಿಯೋಪತಿಕ್ ಪಿಸ್ಪೆನ್ಸರಿ

ಹಂಪನಕಟ್ಟೆ, ಮಂಗಳೂರು.

ಫೋಟೋ ಉಂಗುರಗಳು.

ಈ ತಿಂಗಳಲ್ಲಿ ತರಿಸಿದವರಿಗೆ ರೋಸಾ ಸೆಂಟ್ ಬಾಟಲ್ ಇನಾಂ.

ಈ ಉಂಗುರಗಳನ್ನು ಸೀಮೆಯ ಬಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಶನ್ ವಜ್ರದ ೮ ಕಲ್ಲುಗಳು ಕೆತ್ತಲ್ಪಟ್ಟಿವೆ. ಇದರ ಮಧ್ಯದಲ್ಲಿ ಒಂದು ಭೂತ ಕನ್ನಡಿ ಇರುವುದು. ಅದರಲ್ಲಿ ನೋಡಿದರೆ ರಾಮ, ಕೃಷ್ಣ, ಲಕ್ಷ್ಮಿ, ಗಾಂಧಿ, ತಿಲಕ, ಅರಮನೆ ಮುಂತಾದವು ವಿವರವಾಗಿ ಕಾಣುವವು. ಇದರ ಬಣ್ಣವು ಹೋಗದಂತೆ ಸುವರ್ಣಭಂಗಾರದ ಗಿಲೀಟು ಮಾಡಿಯದೆ. ಇದು ಬೆರಳಿಗೆ ಹಾಕಿಕೊಳ್ಳಲು ಯೋಗ್ಯವಾಗಿರುವುದು. ಕ್ರಯ 1ಕ್ಕೆ ರೂ. 2—0—0

ವಿಲಾಯತಿಯ ರೇಜರು.

ಈ ರೇಜರುಗಳು ವಿಲಾಯತಿಯಲ್ಲಿ ತಯಾರಾದದ್ದು. ಇದರಲ್ಲಿ ಕ್ಷೌರವನ್ನು ಮಾಡಿಕೊಳ್ಳುವುದರಿಂದ ಉರಿಯುವುದಿಲ್ಲ. ನೋವಾಗುವುದಿಲ್ಲ. ಅಂಟುವ್ಯಾಧಿಗಳು ಸೇರುವುದಿಲ್ಲ. ಇದರ ಕತ್ತಿಯು ಬಹು ವೇಲಾದ ಲೋಹದಿಂದ ಮಾಡಿದೆ. ಬಿಳಿ ದಂತದ ಹಿಡಿ ಇರುವುದು.

ಕ್ರಯ 1ಕ್ಕೆ ರೂ. 2—0—0.

ವಿಳಾಸ:— ರಿಪನ್ ವಾಚ್ ಕಂಪೆನಿ,

1/16 ಕಡಪ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶ್ಯವ್ಯಾಪಾರಿ

ರಥಬೀದಿ, ಮಂಗಳೂರು.

1 ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ ರೂ. 3—4—0

ಸೇ. 1 („ 24) „ „ 2—0—0

ಫ್ರೀನ್ಸು ಪೇಕಿಂಗ್ ಚಾರ್ಜು ನಮ್ಮದು

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ

ರಾತ್ಲಿಗೆ ದರ ರೂ. 3-0-0.

ಕ್ಕಿಂತ ಕಡಿಮೆ ತರಿಸುವವರು ಫ್ರೀನ್ಸ್ ಪೇಕಿಂಗ್ ಚಾರ್ಜು ಕೊಡಬೇಕಾಗುವುದು

ನಶ್ಯ ಒಂದೇ ತರದ್ದು.

ಎಲಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಲೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ವಿಕ್ಟೋರಿಯಾ ಅಂಡ್ ಕೊ.

ಪೋಸ್ಟುಬಾಕ್ಸು ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಸಂಚಸಿದ್ಧಿ.

ಇದು ರಾಯಚೂರು ಶ್ರೀಮೂವಧೂತರು,

ಕ್ಷೀಕಾಶಿ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮಹಾತ್ಮರೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ಇನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ಎರಡನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹುಟ್ಟುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ಮೂರನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ನಾಲ್ಕನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಘಾಜಾರಗಳ ಚುಟ್ಕಾ ಸಹ, ಅದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಶಾಸವು ತಿಳಿಸಿರುವರು. ಐದನೇದು ಯಂತ್ರ ಪ್ರಕರಣದಲ್ಲಿ ವಶೀಕರಣ, ಗೃಹಪೀಡಾ ನಿವಾರಣ, ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇವರಲ್ಲಿ ತಿಳಿಸಿರುವರು. ಇವಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅಮೃತ ವಿಷಯಗಳನ್ನು ಬರವರುತರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರು ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲ. ಪ್ರತಿವಟರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೩—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲು 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:

ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನಕರವಾಗುವುದು.

ಚೆಟ್ಟಿನ ಬಾಬಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಬಿ. ವೆಂಕಟೇಶ ರಾಮಚಂದ್ರ ಶರ್ಮಾ

ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ಶೆಣೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯುನಾಮಲ್ಲು ಚೆಟ್ಟು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್, ಬ್ರವನ್ ಪೇಪರ್, ರದ್ದಿ, ಪಾಲಿ ಕವರು ಪಾಂಟಿನ್‌ಪೆನ್, ಶಾಲಾ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಚಿಲ್ಲರೆ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತದೆ.

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವದರಿಂದ ಕಣ್ಣುಗಳು ತಂಪಾಗಿಯೂ, ತಲೆನೋವಿಗೆಯೂ, ಅಡುವುದಲ್ಲದೆ, ಕೂದಲು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವು ಉಪಯೋಗಿಸುವದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು ಶ್ವಾಸ, ಕಫ, ನೆಗಡಿ, ಗಂಟಲುಹೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೂ ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡಬಾರದು. ಎಲ್ಲಾ ವಿಧವಾದ ಕೆಮ್ಮಿಗೂ ರಾಮಬಾಣವಾಗಿಯೂ, ಎಲ್ಲಾ ಬಾಲಕರಿಗೂ ಮೆಚ್ಚುವಂತೆ ರೋಗಗಳು ತೀರುವಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿಹೋಡಿಯನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೂಲವ್ಯಾಧಿಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತದೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಇಥವಾ ಹೊಸದಾಗಿದ್ದರೂ ಸರಿ. ಈ ಔಷಧವು ಕೊಡುವುದು, ಉರಿಯುವುದು ಮುಂತಾದ್ದೆಲ್ಲಾ ನಿಲ್ಲುತ್ತದೆ. [illegible] ಒಂದಾವರ್ತಿ ಸೇವಿಸಿದ ನಂತರ ಮೂಲವ್ಯಾಧಿ ತೀರುವುದು [illegible] ಆಪರೇಷನ್ ಆವಶ್ಯಕವಿಲ್ಲ. ಔಷಧಿಯು [illegible] ರುಚಿಯಾಗಿಯೂ ಇರುತ್ತದೆ.

[illegible] ರೂ. 3—0—0.

ವಿಳಾಸ:—ಆರ್. ಡಿ. ಕಟ್ಲಿ ಮತ್ತು ಕಂಪೆನಿ,

ನಂಬ್ರ ೮, ಫ್ರೀಯರ್ ರೋಡ್,

ರೈಟ್ ಅಂಡ್ ಕೋ ಹತ್ತಿರ, ಫೋರ್ಟ್ ಮುಂಬಯಿ.

R. D. Kately & Co.

No. 8, Frere Road,

Near Wright & Co Fort, Bombay.

Registered No. M. 498.

SWADESHABHIMANI MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.

ಟಪ್ಪಾಲ್ ಹಾಸಲು ಸೇರಿ „ 2—13—0.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ |
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ||೧||

ದೊರೆಯಲನುಪಮರತ್ನಗಳು ತಾ— | ಗರವ ಮಥಿಸಲು ಸುರರಿಗದರಿಂ |
ತರುಷವಾಯಿತೆ! ಮತ್ತೆ ವಿಷವ ಸುಡುತ ಜರುತಿರುಫ |
ಗರಲಕವರಂಜಿದರೆ! ಸುಧೆಯನು | ಮರೆತು ತ್ಪುದ್ರರ ತೆರದಿ ಕುಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ||೧||

ಪುಸ್ತಕ ೧೭. ಮಂಗಳೂರು, ತಾರೀಕು ೧೪ನೇ ಶುಕ್ರವಾರ ಎಪ್ರೀಲ್ ೧೯೩೩. ಸಂಚಿಕೆ ೧೫

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ.	3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ		2,00000—0—0
ಚಂದಾ ಹಾಕಿ ಎತ್ತಿದ ಮೂಲಧನ		1,54,400—0—0
ಮುಟ್ಟಿ ತಕ್ಕ ಮೂಲಧನ		1,04,388—[illegible]—11
ಠೇವಣಿಗಳು		3,49,151-12—6
ಇನ್ವೆಸ್ಟ್‌ಮೆಂಟು (1937ನೇ ಇಸವಿಯ) ಶೇಕಡಾ 6ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದೆ ರೂ. 25,700 ಕೂಡಾ		5,12,162-13—2
ರಿಜರ್ವ ಮತ್ತು ಇತರ ಫಂಡುಗಳು		29,149—4—2

ಕಳೆದ ೩ ವರುಷಗಳಲ್ಲಿ ಪಾಲುದ್ದಾರರಿಗೆ ಸಾಲಿಯಾನ ಸೇಕಡಾ 10ರಂತೆ ಲಾಭಾಂಶ ಹಂಚಿಯದೆ. ಕರ್ಚುಗಳು ಮಾಮೂಲಿಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತರುವ ಕರಾರ ಮೇಲೆ ಶೇಕಡಾ 7ರಂತೆ 7½ ಬಡ್ಡಿಯಲ್ಲಿ ಠೇವಣಾತಿಗಳನ್ನೂ 15 ದಿನಗಳ ನೋಟೀಸು ಮೂಲಕ ಶೇಕಡಾ 6½ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾಪದ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಸೇಕಡಾ 3½ರಂತೆ ಬಡ್ಡಿ ನಡೆಯುವ ಚಾಲ್ತಿ ಠೇವಣಾತಿಗಳನ್ನೂ ಶೇಕಡಾ 4½ ಬಡ್ಡಿ ನಡೆಯುವ ಸೇವಿಂಗ್ಸು ಬ್ಯಾಂಕು ಠೇವಣಾತಿಗಳನ್ನೂ, ತಿಂಗಳುಗಟ್ಟಲೆ ಯಂತ ತರುವ ರೆಂಟು ಠೇವಣಾತಿಗಳನ್ನೂ ಒಪ್ಪಿಕೊಳ್ಳುವುದಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜಾಮೀನು ಮೇಲೆ ಸಾಲವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ಕರಸಕ್ಕೆ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ಕಟ್ಟಬಹುದು.

ಹೆಚ್ಚಿನ ಮಾಹಿತಿ ನಿಶ್ಚಯಿಯವರಿಗೆ ಬರದಲ್ಲಿ ಸಿಕ್ಕುವುದು.

ನಯಂಪಳ್ಳಿ ಆನಂದರಾವ್,

ಸೆಕ್ರೆಟರಿ.

‘ನೈಟ್ರೇಟ್ ಒಫ್ ಸೋಡಾ’

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ಎಲ್ಲಕ್ಕಿಲೆ ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ, ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಎಂಬಾ ಸಾರ ಇದರಲ್ಲಿ 15—16% ಅಂದರೆ ಮೀನು ಗೊಬ್ಬರದಲ್ಲಿರುವುದಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಸೇರಿರುವುದು. ಎಕ್ರೆಗೆ 100—200 ರಾತ್ಲು ಸಾಕಾಗುವುದು.

ಸರಸ್ಪರ ಸಹಾಯಕ ಸಂಘಗಳು ಇದನ್ನು ಕೊಳ್ಳುವವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

“ಕೃಷಿ ಸುಧಾರಣೆ” ಎಂಬ ಸಚಿತ್ರ ಪುಸ್ತಿಕೆಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,

೬, ಮಿಶನ್ ರೋ, ಕಲ್ಕತ್ತಾ.

THE DIRECTOR

CHILEAN NITRATE COMMITTEE,

(INDIAN DELEGATION)

6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾಭಾಸ್ಯಕ್ಕೆ ಅಧಿಕಾರಿಗಳು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತಪರ್ವಕ ಕ್ರಯ ೦—೧೦—೦

ಶೇಕುಂತಲ „ ೦—೧೩—೦

ಸಂಕ್ಷೇಪಗೀತೆ „ ೦—೧೦—೦

ಅಕ್ಷರಗಳಾಯಣ ಪುರೋಹಿತ್ಯಾಯರಿಂದ ರಚಿತವಾದ ಸ್ವರಾಜ್ಯ ಧರ್ಮೋಪದೇಶ ಕ್ರಯಂ —೩—೦

ಕರ್ನಾಟಕ ಕವಿ ಚರಿತ್ರೆ, ಮರಾಠರ ಅವನತಿ, ಶ್ರೀವಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ, ಅಂಗದನ ಭಿರ್ಯಾಗ, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಹೋರುಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಶಬ್ದರತ್ನಾಕರ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳೀಕರಿಗೆ ರೂ ೨-೦-೦. ವಿ. ಪಿ. ಖರ್ಚುಕೂಡಿ ರೂ. ೩-೦-೦ ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮುಖಾಂತರ ಬರೆದುಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಕಚ್ಚಿದ ಪುಸ್ತಕಗಳು, ಹೋಟು ಬುಕ್ಕುಗಳು, ಡ್ರಾಯಿಂಗ್ ಪೌಂಟನ್ ಪೆನ್ನುಗಳು, ಪೆನ್ನುಲು, ನಿಬ್ಸ್, ಡ್ರಾಯಿಂಗ್ ಸಾಮಾನುಗಳು, ಇತರ ವಿಲಾಯತಿ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕೀಲರ ಇತ್ಯಾದಿ ಕೋರ್ಟು ಫೋರ್ಮುಗಳು, ಸರ್ಕಾರು ಫೋರ್ಮು, ಕುಂಪನಿಯ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋಂಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ಟೆಕ್ನು ಔಷಧಿಗಳು—ರೋಗಿಗಳಿಗೂ, ಬಾಲಿಕಾರಿಗೂ ಬೇಕಾಗುವ ಪಾಸ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಗರಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ. ಗಜಕರ್ಣದ ಮುಲಾಮು, ನಮ್ಮ ಔಷಧಿ ಅಂಗಡಿಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮೆನ್ನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BOMBAY
AMRUTANJAN
Best Indian Pain Balm
Amrutanjan Ld
BOMBAY

ದೇನೆ ಮುಂತಾದಾಗ ದೇಹದ ಆರೋಗ್ಯವು ಕೆಡುತ್ತದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ದೇನೆಗಲ್ಲದೆ ಮತ್ತಿನ್ನಾವುದಕ್ಕಿದೆ.

ಅಂಥಾ ದೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಕಠಿಣವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ಹಲತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು—ಹುರುಪು ಸರಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ೩ ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,

ಜೋರ್ಜ್ ಟೌನ್, ಮದ್ರಾಸು.

109 ಫ್ರೀಯರ್ ರೋಡ್,

ಮುಂಬಯಿ.

ಮಂಗಳೂರಲ್ಲಿ— ಉಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಠಕಸಾಯ

J. C. DUTT & Co. CALCUTTA

[illegible]

ಕ್ರಯ ರೂ. 1—4—0. [illegible]

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇದ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ೩೬, (ಜಾಮ್ನಗರ್, ಮದ್ರಾಸ್.

Local Agents: **Raphael & Co,**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಹಲಗೆಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,
Hampankatta, MANGALORE S. K.

ಒಂದು ಸತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್

ಹಂಪನಕಟ್ಟಾ, ಮಂಗಳೂರು ದ. ಕ.

ಈಗಲೇ ಛಾಪಾಗಿದೆ! ಬೇಗನೆ ತರಿಸಿಕೊಳ್ಳಿರಿ!

ಕಾಮಶಾಸ್ತ್ರ (ಎನ್ನುವ ಶರೀರ ಮರ್ಮಶಾಸ್ತ್ರ)

ಈ ಪುಸ್ತಕವು ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಇದ್ದದನ್ನು ಇದ್ದ ಹಾಗೆಯೇ ತಿಳಿಸುವಂತೆ ಚಿತ್ರಪಟಗಳ ಸಹಿತ ಗ್ಲೇಜು ಕಾಗದದಲ್ಲಿ ಮುದ್ರಿಸಿರುತ್ತೇವೆ. ಇದರಲ್ಲಿ ಸ್ತ್ರೀ ಪುರುಷರುಗಳಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ದಂಪತಿಗಳು ಅನ್ಯೋನ್ಯವಾಗಿರುವದಕ್ಕೆ ಮಾಡಬೇಕಾದ ಉಪಾಯಗಳು, ಗುಪ್ತವೈದ್ಯಗಳ ಚಿಕಿತ್ಸೆ, ಶಯನಗೃಹದ ನಿಯಮಗಳು, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ರಹಸ್ಯಗಳು ತುಂಬಿಸಲ್ಪಟ್ಟಿರುವದು. ಕ್ರಯ ಮರ್ಮಶಾಸ್ತ್ರ ರೂ. 1—0—0.

ವಿಳಾಸ:— ಟಿ. ರಾಮಚಂದ್ರರಾವ್ ಕಂಪೆನಿ,
೨೨ ತಿರುಪಳ್ಳಿ ಬೀದಿ,
ಸಾಹುಕಾರಪೇಟೆ, ಮದರಾಸು.

ಪ್ರಕಟಣೆ.

ರುಧಿರೋದ್ಗಾರಿ ಸಂ॥ರದ ಪಂಚಾಂಗ.

ಇದು ಚಿ॥ ಸುಬ್ಬಣ್ಣ ಶಾಸ್ತ್ರಿಗಳಿಂದ ಗುಣಿಸಲ್ಪಟ್ಟು ಮಂಗಳೂರು ಶಾರದಾ ಛಾಪಖಾನೆಯಲ್ಲಿ ಸುಂದರವಾಗಿ ಮುದ್ರಿತವಾಗುತ್ತಿದೆ. ಅಗತ್ಯವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಪಂಚಾಂಗಕರ್ತರಲ್ಲಿಯೂ ದೊರೆಯುವುದು. ಪಂಚಾಂಗ ಪ್ರತಿ ೧ಕ್ಕೆ ಕ್ರಯ ೩ ಆಣೆ, ೫೦ಕ್ಕೆ ರೂ. ೮—೦—೦.

ವಿಳಾಸ:-
ಶಾರದಾ ಛಾಪಖಾನೆ,
ಮಂಗಳೂರು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಅಸ್ಪದಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್ಸ್:—

ಜಿ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs. 150
¼ Page Rs. 80 ½ Page	" 50
2 in. Single Column	" 20
1 in. Single Column	" 15
Name alone in Bold Types	" 5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ಸುಸಂದರ್ಭ! ದರ ಸುಲಭ! ತ್ವರೆಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತ್ರಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯುಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ., ಬಿ. ಎಲ್

'ಕವಿ'ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ತಲ್ 1ರ ರೂ. 2—12—0.
ಸ್ಪೆಶ್ಯಲ್ ರಾತ್ತಲ್ 1ರ ರೂ. 3—0—0.

2. ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸೆಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು.

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾನೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಫಿಡಲ್ 1ಕ್ಕೆ „ 15—0—0

ಬೇಕಾದವರು 5 ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೋಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65, ಮದರಾಸು.

ಶಾಲಿವಾಹನಶಕ ೧೮೪೫ನೆಯ ರುಧಿರೋದ್ಗಾರಿ ಸಂ॥ರದ ಚೈತ್ರ ಬ॥ ೧೩ ಶನಿವಾರದಿಂದ ರುಧಿರೋದ್ಗಾರಿ ಸಂ॥ರದ ವೈಶಾಖ ಶು॥ ೪ ಶುಕ್ರವಾರದ ವರೆಗಿನ

ಪಂಚಾಂಗ

(೧೯೨೩ನೆಯ ಮೇಷ ಪಗ್ಗು)

ತಾರೀಕು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ ದಿ.	ಸೂರ್ಯ ಉ.	ಸೂರ್ಯ ಅಸ್ತ.
14	ಶನಿ	೧೩	೬.೪೦	ಉ. ಭಾ.	೫೬.೧೪	೧	6.21	6.42
15	ರವಿ	೧೪	೧೧.೨೮	ರೇವತೀ	೬೦. ೦	೨	6.20	6.42
16	ಸೋಮ	೩೦	೧೬.೪೦	ರೇವತೀ	೨.೬	೩	6.20	6.42
17	ಕುಜ	೧	೨೧.೨೮	ಅಶ್ವಿನೀ	೯.೧೬	೪	6.19	6.42
18	ಬುಧ	೨	೨೫.೪೮	ಭರಣೀ	೧೫.೧೪	೫	6.18	6.42
19	ಗುರು	೩	೨೯.೪೦	ಕೃತ್ತಿಕಾ	೨೦.೩೨	೬	6.18	6.42
20	ಶುಕ್ರ	೪	೩೨.೦	ರೋಹಿಣೀ	೨೪.೪೬	೭	6.17	6.43

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಎಪ್ರಿಲ್)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಒಟ್ಟು ಮಳೆ.
5	94—3	77—2	—	—
6	93—3	76—7	—	—
7	94—2	76—7	—	—
8	93—4	79—2	—	—
9	93—6	78—9	—	—
10	94—6	80—4	—	—
11	94—2	77—6	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ ಅಕ್ಕಿಮುಡಿ ೧ಕ್ಕೆ	...	7- 8	8— 2
ಹೊಸ ಗುಡ್ಡು,	...	6- 8	7— 4
ಹೊಸ ರಾತಿ		6- 4	6— 8
ಅವ್ವಲ್ ಬೆಳ್ತಿಗೆ „	...	7-14	8—10
ಗುಡ್ಡು ಬೆಳ್ತಿಗೆ „	...	7- 6	7—12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	13-	13— 4
ಗೋದಿ ಗೋಣಿ ೧ಕ್ಕೆ	...	15- 8	18— 0
ಹುರುಳಿ ಗೋಣಿ ೧ಕ್ಕೆ	...	8-12	9—12
ಕಡಲೆ ಗೋಣಿ ೧ಕ್ಕೆ	...	11-12	12— 0
ತೊಗರಿ ಗೋಣಿ ೧ಕ್ಕೆ	...	12- 0	—
ತೊಗರಿಬೇಳೆ ಗೋಣಿ ೧ಕ್ಕೆ	...	14- 0	23— 0
ಉದ್ದು ಗೋಣಿ ೧ಕ್ಕೆ	...	13- 0	—
ಹೆಸರು ಗೋಣಿ ೧ಕ್ಕೆ	...	—	12— 0
ಊರು ಬೆಲ್ಲ ಖಂಡಿ ೧ಕ್ಕೆ	...	40- 0	45— 0
ಉಪ್ಪು ಗೋಣಿ ೧ಕ್ಕೆ	...	7- 4	7— 8
ಕೊಬ್ರಿ ಖಂಡಿ ೧ಕ್ಕೆ	...	100- 0	115— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	40- 0	—
ಎಳ್ಳೆಂಡಿ ಖಂಡಿ ೧ಕ್ಕೆ	...	45- 0	52— 8
ಕೊಬ್ರಿ ಎಣ್ಣೆ ಮಣ ೧ಕ್ಕೆ	...	8- 2	9— 0
ಎಳ್ಳೆಣ್ಣೆ ಮಣ ೧ಕ್ಕೆ	...	6-12	9— 0
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ	...	9- 0	—
ಮಾರಿಷ ಸಕ್ಕರೆ ಮಣ ೧ಕ್ಕೆ	...	7-12	8— 0
ಊರ ಮೆಣಸಿನಕಾಯಿ ಮಣ ೧ಕ್ಕೆ	...	7- 4	7— 6
ಸಾಸಿವೆ ಮುಡಿ ೧ಕ್ಕೆ	...	8- 8	9— 0
ಕೊತ್ತಂಬರಿ ಮುಡಿ ೧ಕ್ಕೆ	...	4- 0	4— 8
ಕಾಫಿ ಖಂಡಿ ೧ಕ್ಕೆ	...	281- 0	292— 0
ಅಡಿಕೆ ... ಖಂಡಿ ೧ಕ್ಕೆ ಹಳ್ಳ	...	200- 0	295— 0
ಅಡಿಕೆ New, ಹೊಸ್ತು	...	180- 0	195— 0
... ಖಂಡಿ ೧ಕ್ಕೆ	...	115- 0	120— 0
ಯಾಲಕ್ಕಿ ಮಣ ೧ಕ್ಕೆ	...	60- 0	70— 0
ಗೇರುಬೀಜ ಮುಡಿ ೧ಕ್ಕೆ	...	1-14	2— 0
ಅಚ್ಚಿನ ಖಂಡಿ ೧ಕ್ಕೆ	...	50- 0	65— 0
ತಾಂಬ್ರ ತಗಡು ಮಣ ೧ಕ್ಕೆ	...	20-12	23— 0
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	...	32- 0	—
ಹಿತ್ತಾಳೆ ... ೧ಕ್ಕೆ	...	22- 8	—
ಸಿಮ್ಮೆಂಟ ... 1ಕ್ಕೆ	...	20- 0	21—

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 3 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು, ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕಟೌನ್ ಮದ್ರಾಸ್

FIRST RAFFLE.

IN AID OF

National Girls' School,

MANGALORE.

Please note:—

Dates of drawing and closing postponed to 15—7—'23 and 31—7—'23 respectively.

(By order of Executive Committee)

Wanted Agents. *Apply to*:—

HON. SECRETARY,
RAFFLE OFFICE,
NATIONAL GIRLS' SCHOOL,
Kodialbail, S. Kanara.

ತ್ವರೆಮಾಡಿರಿ! ತ್ವರೆಮಾಡಿರಿ!!

ಮಾರಾಟಕ್ಕೆ ಸಿದ್ಧವಾಗಿದೆ

ಪಂಡಿತ ಮಂಗಳೂರ ನಾರಾಯಣಾಚಾರ್ಯರಿಂದ ಗಣಿಸಿ ಪರಿಶೋಧಿಸಲ್ಪಟ್ಟ,

ರುಧಿರೋದ್ಗಾರಿ ಸಂವತ್ಸರದ ಪಂಚಾಂಗಗಳು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕಿದೆ.

ಉಡ್ಪಿ, ಮೂಡನಿಡಂಬೂರು ಗ್ರಾಮ, ಸರ್ವೆ ನಂಬ್ರ ೮೩ನೇ, ಸಬ್‌ಡಿವಿಜನ್ $\frac{6}{13}$ನೇ, ಮೂಲಿ ಅಂಶಕ್ಕೆ ವರ್ಷ ೧ರ ರೂಪಾಯಿ ೫ರ ಪ್ರಕಾರ ಮೂಲಗೇಣಿ ತೆತ್ತುಬರುವ, ಮೂಲಗೇಣಿ ವಕೃತದ ಹಕ್ಕಿನ ಆಸ್ತಿ ೩.೭. ಸೆಂಟ್ಸ್ ವಿಸ್ತೀರ್ಣದ್ದು; ಇದರಲ್ಲಿ ಹಂಚು ಛಾವಣಿಯ ತಕ್ಕಪೋತಿಯ ಮನೆ, ಬಾವಿ, ಬಾಗಾಯತು ವ ಇತರ ಮರಮಟ್ಟುಗಳು ಕೂಡಾ ಇರುತ್ತವೆ. ಈ ಸ್ಥಳ ಉಡ್ಪಿ ಮಿಶ್ಶನ್ ಕಂಪೌಂಡಿನ ಪಡುಗೇಟಿನ ಎದುರಿಗೆ ರಾಜರಸ್ತೆ ಬದಿಯಲ್ಲಿರುತ್ತದೆ. ಬೇಕಾದವರು ರಿಕಾರ್ಡು ವ ಕ್ರಯದ ಅಂದಾಜು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ತಿಳಿಸೋಣಾಗುವುದು.

೪ನೇ ಎಪ್ರಿಲ್ ೧೯೨೩ } S. CH. GOJAR, 2 issues
ಮಂಗಳೂರು. } *Mission Street,*
MANGALORE.

ಓಟೋಲಿಲ್ಲಾ ಎಂಬ ಸೆಂಟ್.

ಇದನ್ನು ಒಂದು ಒಳ್ಳೇ ಕರವಸ್ತ್ರಕ್ಕೆ ಸೋಕಿಸಿದರೆ 6-7 ದಿನಗಳ ವರೆಗೂ ಸುವಾಸನೆಯಾಗಿರುತ್ತದೆ. ಇತರ ಸೆಂಟುಗಳ ಹಾಗೆ ಬಟ್ಟೆಗೆ ಕಲೆಯನ್ನು ಉಂಟುಮಾಡುವುದಿಲ್ಲ.

ಬೆಲೆ 1 ಔನ್ಸ್ ಬಾಟ್ಲಿಗೆ ರೂ. 1—4—0.
„ ½ „ „ ರೂ. 0—10—0.
ಓಟೋಲಿಲ್ಲ ಸೆಂಟು ಕಾರ್ಡು ಡಜ 1ಕ್ಕೆ ರೂ. 0—12—0.

ನಮ್ಮಲ್ಲಿ ಸುಲಭ ಕ್ರಯಕ್ಕೆ ಸಿಕ್ಕುವ ಇತರ ಸಾಮಾನುಗಳು:—

ಬ್ರಿಟಿಷ್ ಮೇಡ್‌ರೇಜರ್ 1ಕ್ಕೆ 2—0—0
ರೋಲ್ಡುಗೋಲ್ಡು ರಿಸ್ಟುವಾಚು 1ಕ್ಕೆ 8—8—0
ನಿಕಲ್ ರಿಸ್ಟು ವಾಚು 1ಕ್ಕೆ 6—8—0
ಮಹಾತ್ಮಾ ಗಾಂಧಿಯವರ ಫೋಟೊ ಉಂಗರ 1ಕ್ಕೆ 1—8—0

ವಿಳಾಸ:— ರಿಪನ್ ವಾಚ್ ಕಂಪೆನಿ,
1/16 ಕಡಪ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ಮೊಳ ಅಗಲವಿರುವವು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ಪಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು, ಹೆಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಹಂಚ್ಚಿರಿ.

ಕ್ರಯ ನಂ. 1 ರೂ. 6—8—0
„ 2 „ 7—8—0

ವಿಳಾಸ:—ಎನ್. ಆರ್. ಕೃಷ್ಣ ಎಂಡು ಕೊ,
1, ತಂಬುನಾಯಕನ ಬೀದಿ, ಮದರಾಸು.

NOTICE.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ,
O. P. No. ೩೯

ಪುಟ್ಟುವೆಂಕ್ಟಾ
ಕೂಡಾ 4 ಜನರು } ಅರ್ಜಿದಾರರು.

ಗೋವಿಂದು ಹೆಂಗಸು—ಎದ್ರಿ.

ಮೃತ ಬೆಳ್ಳಿ ಮಂಜನ ವಾರಿಸ್ದಾರ ವ ಕುಟುಂಬದವರಾಗಿ ಮೃತನ ಹೆಸರ ಡಿಕ್ರಿ ಸಾಲ ವಸೂಲಿ ಬಗ್ಗೆ ತಮ್ಮ ಪೈಕಿ ೧ನೆ ವೆಂಕ್ಟನ ಹೆಸರಿಗೆ ಸಕ್ಸೆಶನ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲಿನ ಅರ್ಜಿ ಕೊಟ್ಟಿದ್ದಾರೆ. ಅದಕ್ಕೇನಾದರೂ ಆಕ್ಷೇಪ ಇದ್ದರೆ ತನಗೆ ಇಟ್ಟ ತಾ. 25—4—'23ನೇ ದಿವಸ ಹಗಲು 11 ಗಂಟೆಗೆ ಸ್ವತಃ ಯಾ ವಕೀಲರ ಮುಖಾಂತರ ಕೋರ್ಟಿಗೆ ಹಾಜರುಮಾಡತಕ್ಕದ್ದು.

ಟಿ. ಗಣೇಶರಾವ್,
ವಕೀಲ ಕುಂದಾಪುರ.

ಮದ್ರಾಸು ಕೌನ್ಸಿಲಿನ ಮೆಂಬರಿಕೆಗೆ ಉಮೇದ್ವಾರರಾಗಿರುವ ಮಂಜೇಶ್ವರ ವೈಕುಂಠ ಭಕ್ತರು ದ. ಕನ್ನಡ ಜಿಲ್ಲೆಯ ವೋಟರರಿಗೆ ಬರೆದುಕೊಂಡಿರುವ ವಿಜ್ಞಾಪನೆ.

ಮಹಾಶಯರೇ,

ಮದ್ರಾಸು ನ್ಯಾಯವಿಧಾಯಕ ಸಭೆಗೆ ಮೆಂಬರರನ್ನು ಸದ್ಯದಲ್ಲಿ ಚುನಾಯಿಸುವರಷ್ಟೆ. ಅಂಥ ಚುನಾವಣೆಯಲ್ಲಿ ಮೆಂಬರಿಕೆಗೆ ನಾನೂ ಉಮೇದ್ವಾರನಾಗಿ ನಿಮ್ಮ ವೋಟುಗಳು ನನಗೆ ದೊರೆವಂತಾಗಬೇಕೆಂದು ಕೋರುತ್ತೇನೆ. ನಿಮಗೆ ಪ್ರತಿನಿಧಿಯಾಗಿ, ನನ್ನ ಕೈಲಾಗುವಷ್ಟು ಚೆನ್ನಾಗಿ ಪೂರ್ಣ ವಿಶ್ವಾಸವಿಟ್ಟು, ಈ ಪ್ರಾಂತದ ಸೇವೆಯನ್ನು ಕೌನ್ಸಿಲಿನಲ್ಲಿ ಮಾಡುವುದಕ್ಕೆ ನನಗೆ ಅವಕಾಶದೊರೆಯಬೇಕೆಂದು ನನ್ನಲ್ಲಿ ಆಕಾಂಕ್ಷೆ ಇದೆ.

ನಿಮಗೆ ಪ್ರತಿನಿಧಿಯಾಗಲುಳ್ಳ ಗೃಹಸ್ಥನಲ್ಲಿ ಎಂಥೆಂಥ ಲಕ್ಷಣಗಳಿರಬೇಕೆಂದು ನಿರ್ಧರಿಸಬಹುದೊ, ಅವು ಕೆಳಗಣವೆಂದು ನೀವು ಒಪ್ಪುವಿರೆಂದು ನಂಬುತ್ತೇನೆ:—

೧. ನಿಮ್ಮ ಸಲುವಾಗಿ ಕೌನ್ಸಿಲಿನಲ್ಲಿ ಕೆಲಸಮಾಡಲು ಪೂರ್ಣ ಸಮಯವನ್ನು ವಿನಿಯೋಗಿಸಲು ಅನುಕೂಲವಿರುವುದು.

೨. ನಿಮ್ಮ ಬಳಿಯಲ್ಲೆ ಇರುವವನಾಗಿ, ನಿಮಗೆ ಸದಾಕಾಲವೂ ವಿಚಾರ ವಿಮರ್ಶೆಗೆ ದೊರೆಯುತ್ತಿರುವುದು.

೩. ನಿಮ್ಮ ಹಿತಕ್ಕೆ ಎಳ್ಳಷ್ಟಾದರೂ ವಿರೋಧವಾಗದಂತೆ ನಿಸ್ವಾರ್ಥದಿಂದ ಪೇಚಾಡುತ್ತಿದ್ದು, ಯಾವದೊಂದು ಸ್ವಾರ್ಥದ ಆಸೆಯಿಲ್ಲದಿರುವುದು.

ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸಮಾಡಿದ ತಕ್ಕಷ್ಟು ಅನುಭವವೂ ಆ ಗೃಹಸ್ಥನಲ್ಲಿದೆಯಾದರೆ, ಅದೆಂತೂ ಮತ್ತೂ ಚೆನ್ನಾಯಿತಲ್ಲವೆ?

ಮೇಲಣ ಯೋಗ್ಯತೆಯು ನನ್ನಲ್ಲಿ ಇದೆ ಎಂದು ತೋರಿಸಲು ಕೆಳಗಣ ನಾಲ್ಕು ಮಾತುಗಳನ್ನು ತಿಳಿಸುವೆನು.

ಸ್ವಕೀಯವಾದ ವಿಶೇಷ ಕೆಲಸದ ಅಡಚಣೆಗಳು ನನಗಿಲ್ಲದೆ ಇರುವುದರಿಂದಲೂ, ನಾನು ವರ್ಗದಾರನೇ ಮಾತ್ರನಾಗಿರುವುದರಿಂದಲೂ ನನ್ನ ಸಮಯವೆಲ್ಲವೂ ನನ್ನದಾಗಿಯೆ ಇದ್ದು, ನಿಮ್ಮ ಬಗ್ಗಾಗಿ ಅದನ್ನು ವಿನಿಯೋಗಿಸಲು ನನಗೆ ಅವಕಾಶವಿದೆ ವಿನಾ ಯಾವ ಆತಂಕವೂ ಇರುವುದಿಲ್ಲ.

ನಿಮ್ಮ ನಿವಾಸದ ಹಳ್ಳಿ ಊರುಗಳಿಂದ ನಾನೇನೂ ದೂರವಾದೊಂದು ಊರಲ್ಲಿ ನಿವಾಸಮಾಡಿರತಕ್ಕವನಲ್ಲ. ನನ್ನನ್ನು ನೀವು ಚುನಾವಣೆ ಮಾಡುವಷ್ಟು ಸಂತುಷ್ಟರಾಗುವಿರಾದರೆ, ವರ್ಷದಲ್ಲಿ ಕನಿಷ್ಠಪಕ್ಷಕ್ಕೆ ಒಂದು ಸಾರಿಯಾದರೂ ನಾನು ಈ ಇಡೀ ಜಿಲ್ಲೆಯಲ್ಲಿ ಸಂಚಾರಮಾಡುವೆನೆಂದೂ, ನಿಮ್ಮ ಹಳ್ಳಿಯೂರುಗಳ ಬಳಿಯ ಮಧ್ಯಸ್ಥಳಗಳಿಗೆ ನಾನು ಬಾರದೆ ಇರಲಾರೆನೆಂದೂ, ಆಗ ಕೌನ್ಸಿಲ ಮುಂದೆ ನಿಮ್ಮ ಹಿತಸಾಧನೆಗಾಗಿ ಇಡಬೇಕಾಗಿರುವ ವಿಷಯಗಳನ್ನು ನಿಮ್ಮಿಂದ ತಿಳಿದುಕೊಳ್ಳಲು ಸಾಧಿಸುವೆನೆಂದೂ ನಾನು ಖಂಡಿತವಾಗಿ ಹೇಳುತ್ತೇನೆ. ಇದೂ ಅಲ್ಲದೆ, ನಿಮ್ಮ ಊರುಗಳಿಗೆ ಮಧ್ಯಸ್ಥವಾದ ಸ್ಥಳಗಳಲ್ಲಿ ನನ್ನ ಮುಖಾಲಿಕರನ್ನು ಇರಿಸಿ, ಅವರ ಮೂಲಕವಾಗಿ ನನಗೆ ಕೌನ್ಸಿಲಿನ ಪ್ರಯೋಜನಾರ್ಥವಾಗಿ ಅಗತ್ಯವಾಗಿ ಬೇಕಾಗುವ ತಿಳುವಳಿಕೆಯನ್ನು ಸಂಗ್ರಹಿಸುವೆನೆಂದು ಖಂಡಿತವಾಗಿ ಈ ಮೂಲಕ ತಿಳಿಸುತ್ತೇನೆ.

ನೀವು ನನ್ನನ್ನು ಚುನಾಯಿಸುವಿರಾದರೆ,—ಸರಕಾರದಿಂದ ನಾನು ಯಾವ ತೆರದ ಬಿರುದುಗಳನ್ನಾದರೂ ಪಡೆಯುವುದಕ್ಕೆ ಎಂದೆಂದಿಗೂ ಪೇಚಾಡುವುದಿಲ್ಲವೆಂದೂ, ನನಗಾಗಿಯಾಗಲಿ ನನ್ನ ಯಾವನೊಬ್ಬ ಬಂಧುವಿಗಾಗಿಯಾಗಲಿ ಸರಕಾರದಿಂದ ಯಾವುದೊಂದು ಸಂಬಳದ ಹುದ್ದೆಯನ್ನು ದೊರಕಿಸಿಕೊಡುವುದಕ್ಕೆ ಪೇಚಾಡುವವನಲ್ಲವೆಂದೂ ಅಂಗೀಕರಿಸುವವನಲ್ಲವೆಂದೂ ನನ್ನ ವಾಗ್ದಾನವು.

ಕಳೆದ ಸುಮಾರು ಎರಡು ವರ್ಷಗಳಿಂದ ನಾನು ಕಾಸರಗೋಡು ತಾಲೂಕುಬೋರ್ಡಿಗೆ ಪ್ರೆಸಿಡೆಂಟನಾಗಿ ಚುನಾವಣೆಹೊಂದಿದ್ದು ಆ ತಾಲೂಕಿನ ಎಲ್ಲಾ ಬೋರ್ಡುಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವು ಧರ್ಮಾರ್ಥವಾಗಿ ದೊರೆವ ಹಾಗೆ ಸಾಧಿಸಿರುವೆನು.

ಕೌನ್ಸಿಲು ಎಂಬುದು ಭಾಷಣಗಳ ರಂಗಸ್ಥಳವಲ್ಲವೆಂದೂ ವಾಕ್ಚಾತುರ್ಯಕ್ಕೆ ಅಲ್ಲಿ ಮೌಲ್ಯಕಡಿಮೆಯೆಂದೂ, ಯಥಾರ್ಥವಾಗಿ ತಿಳಿದುಕೊಂಡ ವಾಸ್ತವಿಕವಾದ ಜ್ಞಾನದ ಮೂಲಕ ಉತ್ತಮ ಸೂಚನೆಗಳನ್ನು ಕೊಡುವುದೆ ಅಲ್ಲಿ ಉಪಯೋಗಕ್ಕೆ ಬೀಳುವುದೆಂದೂ ದಯವಿಟ್ಟು ನೆನಪಿನಲ್ಲಿಟ್ಟುಕೊಳ್ಳಿರಿ.

ನನ್ನನ್ನು ನೀವು ಚುನಾಯಿಸಿದರೆ, ನಮ್ಮ ಜಿಲ್ಲೆಗೆ ಚಿರಕಾಲವೂ ಅಭ್ಯುದಯಕರವಾಗುವಂಥ ಕೆಳಗಣ ಸಂಗತಿಗಳನ್ನು ಕುರಿತು ನನ್ನಿಂದಾಗುವಷ್ಟು ಪ್ರಯತ್ನಮಾಡುವುದೇ ನನ್ನ ಪ್ರಾಮುಖ್ಯ ಕರ್ತವ್ಯವು:—

೧. ಉತ್ತಮ ವಿದ್ಯಾಭ್ಯಾಸವು ಧರ್ಮಾರ್ಥವಾಗಿ ಸಿಗುವರೆ ಏರ್ಪಾಡು.

೨. ಆರೋಗ್ಯರಕ್ಷಣೆಯ ಏರ್ಪಾಡು ಮತ್ತು ವೈದ್ಯಕೀಯ ಸಹಾಯದ ಏರ್ಪಾಡು.

೩. ನಮ್ಮ ಜಿಲ್ಲೆಯೊಳಗೆ ಸಂಚಾರಕ್ಕೆ ಅನುಕೂಲವಾದ ರೀತಿಯಲ್ಲಿ ರಸ್ತೆಗಳ ಏರ್ಪಾಡು ಮತ್ತು ಮೈಸೂರಿಗೂ ನಮ್ಮ ಜಿಲ್ಲೆಗೂ ರೈಲ್ವೆ ಹಾಕಿಸುವ ಏರ್ಪಾಡು.

೪. ತೀರ್ವೆಯ ಮತ್ತು ಫೋರೆಸ್ಟ್ ಕಾನೂನುಗಳು ನ್ಯಾಯಪ್ರಕಾರವಾಗಿ ಜ್ಯಾರಿಯಾಗುವ ಏರ್ಪಾಡು.

೫. ಈ ಜಿಲ್ಲೆಯ ವಿದ್ಯಮಾನಗಳಿಗೆ ತಕ್ಕಂಥ ರೀತಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಏರ್ಪಾಡು.

ನಿಮ್ಮ ನಿಮ್ಮ ವೋಟು ನನಗೆ ದೊರೆಯಲೆಂದು ನಾನು ಅಪೇಕ್ಷಿಸಿ ಭರವಸೆಯಿಡಬಹುದೆಂದು ವಿಜ್ಞಾಪಿಸುವ,

ನಿಮ್ಮ ವಿಶ್ವಾಸಾರ್ಹನಾದ,
ಮಂಜೇಶ್ವರ ವೈಕುಂಠ ಭಕ್ತ.

ಧಾರವಾಡ ಕರ್ನಾಟಕ ಮಹಾವಿದ್ಯಾಲಯದ ದ್ವಿತೀಯ ವಾರ್ಷಿಕೋತ್ಸವವು.

ರಾಷ್ಟ್ರೀಯ ಮಹಾವಿದ್ಯಾಲಯದ ಹೊಸ ಏರ್ಪಾಡು.
ಬಡ ವಿದ್ಯಾರ್ಥಿಗಳಿಗೆ ಸುಸಂಧಿ. ಕನ್ನಡ ಬಾಲಪಾಠಶಾಲಾ.

ಕರ್ನಾಟಕದ ಮಹಾವಿದ್ಯಾಲಯದ ದ್ವಿತೀಯ ವಾರ್ಷಿಕೋತ್ಸವವು ಚೈತ್ರ ಹುಣ್ಣಿಮೆಯ ದಿವಸ ಹುಬ್ಬಳ್ಳಿಯ ದೇ. ಭ. ವಿಶ್ವನಾಥ ಜೋಶಿಯವರ ಅಧ್ಯಕ್ಷತೆಯಲ್ಲಿ ಬಹಳ ವೈಭವದಿಂದ ನೆರವೇರಿತು. ಶ್ರೀ. ವಿನಾಯಕರಾವ ಜೋಶಿ, ವಿಠ್ಠಲರಾವ ಜೋಶಿ, ರಂಗರಾವ ದಿವಾಕರ, ರಾಮರಾವ ಹುಕ್ಕೇರಿಕರ, ಗೋವಿಂದಾಚಾರ್ಯ ಗುತ್ತಲ, ಕೃಷ್ಣರಾವ ಮುದವೇಡಕರ, ವಾಮನರಾವ ಜಠಾರ, ಅಣ್ಣಾಚಾರ್ಯ ಹೊಸಕೆರೆ, ಗಳಗನಾಥ ದತ್ತಪ್ಪಾ ದೇಶಪಾಂಡೆ ಮುಂತಾದ ಕರ್ನಾಟಕದ ಮುಂದಾಳುಗಳು ದಯಮಾಡಿಸಿದ್ದರು.

ಮುಂಜಾನೆ ವಿದ್ಯಾರ್ಥಿಗಳು ರಾಷ್ಟ್ರೀಯ ನಿಶಾನೆ ಸಮೇತರಾಗಿ ನಗರಸಂಕೀರ್ತನೆಯನ್ನು ಮಾಡಿಕೊಂಡು ಬಂದರು. ಕಾಮನಕಟ್ಟೆಯಲ್ಲಿ ಶ್ರೀ. ಚಿಕ್ಕೇರೂರ ಕೃಷ್ಣರಾಯರ ಮನೆಯಲ್ಲಿ ಬಾಲಪಾಠಶಾಲೆಯ ಪ್ರಾರಂಭೋತ್ಸವಕ್ಕಾಗಿ ಜನರು ನೆರೆದಿದ್ದರು. ಆರತಿ, ಭಜನೆ, ಪ್ರಾರ್ಥನೆಗಳಾದ ಮೇಲೆ ವೇ. ಶಾ. ನಾಗೇಶ ಶಾಸ್ತ್ರಿ ಉಪ್ಪಿನಬೆಟ್ಟಗೇರಿಯವರ ಪ್ರವಚನವು "ಬ್ರಹ್ಮಚರ್ಯ ಮತ್ತು ಗುರುಕುಲವಾಸ" ವಿಷಯವನ್ನು ಕುರಿತು ಬಲು ಸುರಸವಾಗಿ ಆಯಿತು. ಅವರು ನಿರೂಪಿಸಿದ್ದು. ಯಾವ ಜ್ಞಾನದಿಂದ ಆಸೆಯೂ, ಸ್ವಾರ್ಥವೂ, ವಿಷಯವಾಸನೆಯೂ ಹಿಮ್ಮೆಟ್ಟುವುದೋ ಯಾವ ಜ್ಞಾನದಿಂದ ಸಂಪೂರ್ಣ ಪ್ರಪಂಚದ ಯಥಾರ್ಥ ಜ್ಞಾನವಾಗುವುದೋ ಯಾವ ಜ್ಞಾನದ ಪ್ರಾಪ್ತಿಯಿಂದ ಶಾಶ್ವತವಾದ ಆನಂದವು ದೊರಕುವುದೋ ಅದೇ ನಿಜವಾದ ಜ್ಞಾನವು; ವಿದ್ಯೆಯು. ಆ ನೌಕರಿ, ಈ ನೌಕರಿ, ಅವರ ದಾಸ್ಯತ್ವ, ಇವರ ದಾಸ್ಯತ್ವ, ಅಷ್ಟು ಸಂಬಳ, ಇಷ್ಟು ಸಂಬಳವೆಂದು ಹಂಬಲಿಸಲಿಕ್ಕೆ ಹಚ್ಚುವದು ಅವಿದ್ಯೆಯು; ಮಾಯಾಜಾಲವು. ಬ್ರಹ್ಮಚರ್ಯವು ಬಹಳ ಮಹತ್ವವಾದದ್ದು. ಬ್ರಹ್ಮಚರ್ಯ ಬಲದಿಂದಲೇ ಹನುಮಂತನು ಸಮುದ್ರವನ್ನು ಹಾರಿದನು. ಪರ್ವತವನ್ನು ಎತ್ತಿತಂದನು. ಹುಟ್ಟಿದಾಗಲೆ ಸೂರ್ಯನನ್ನು ಹಿಡಿಯಲಿಕ್ಕೆ ಹಾರಿದನು. ಬ್ರಹ್ಮಚರ್ಯಬಲದಿಂದಲೇ ಭೀಷ್ಮಾಚಾರ್ಯರು ತಮ್ಮ ಸಾವಿಗೆ ತಡೆಹಾಕಿ ಮುಂದಕ್ಕೆ ದೂಡಿಟ್ಟರು. ಬ್ರಹ್ಮಚರ್ಯಬಲದಿಂದ ಈ ಪಿಂಡಾಂಡವಾದ ದೇಹವನ್ನು ಕೈವಶಮಾಡಿಕೊಂಡರೆ ಇಡೀ ಬ್ರಹ್ಮಾಂಡವೇ ಕೈವಶವಾಗುವದು. ಗುರುಕುಲವಾಸದಿಂದ ದೇಹವನ್ನು ಸರಿಸಿ ಆತ್ಮಶುದ್ಧಿಯನ್ನು ಮಾಡಿಕೊಂಡು ಅಧ್ಯಾಪಕರನ್ನು ಅನುಸರಿಸಿ ಜ್ಞಾನಪ್ರಾಪ್ತಿಮಾಡಿಕೊಳ್ಳಿರಿ. ಆ ಮೇಲೆ ಶ್ರೀ. ವಿನಾಯಕರಾಯರು, ಶ್ರೀ. ವಿಶ್ವನಾಥರಾಯರು ಸಣ್ಣ ಹುಡುಗರ ಶಿಕ್ಷಣದ ವಿಷಯಕ್ಕೆ ಭಾಷಣಗಳನ್ನು ಮಾಡಿ ಈ ಕಾರ್ಯದ ಮಹತ್ವವನ್ನು ತಿಳಿಸಿಕೊಟ್ಟರು. ಮಧ್ಯಾಹ್ನದಲ್ಲಿ ಊಟವಾದನಂತರ ಎಲ್ಲ ಮುಂದಾಳುಗಳು ಸಭೆಗೂಡಿ ಕರ್ನಾಟಕದ ರಾಷ್ಟ್ರೀಯ ಶಾಲೆಗಳ ಸದ್ಯಸ್ಥಿತಿಯ ವಿಷಯಕ್ಕೆ ವಿಚಾರಮಾಡಿದರು. ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಉಚ್ಚ ಶಿಕ್ಷಣದ ಸಲುವಾಗಿ ರಾಷ್ಟ್ರೀಯ ಕಾಲೇಜ ಒಂದನ್ನು ಇಡೀ ಕರ್ನಾಟಕದ ಸಲುವಾಗಿಯೇ ಕರ್ನಾಟಕದ ಕೇಂದ್ರಸ್ಥಾನವಾದ ಧಾರವಾಡದಲ್ಲಿ ನಾಳಿನ ಜ್ಯೇಷ್ಠ ಪ್ರತಿಪದೆಗೆ ಪ್ರಾರಂಭಿಸಬೇಕೆಂದು ಪ್ರೊ. ರಂಗರಾವ ದಿವಾಕರ ಎಂ. ಎ. ಎಲ್. ಎಲ್ ಬಿ. ಪ್ರೊ. ರಾಮರಾವ ಹುಕ್ಕೇರಿಕರ ಎಂ. ಎ. ಇವರೀರ್ವರು ಇಂಗ್ಲೀಷ ಭಾಷೆಯನ್ನೂ, ಶ್ರೀ. ಹೊಸಕೆರೆ ಚಿದಂಬರಯ್ಯ ಕರ್ನಾಟಕ ಕವಿರತ್ನ, ಶ್ರೀ ಕೃಷ್ಣರಾವ ಮುದವೇಡಕರ ಇವರೀರ್ವರು ಕನ್ನಡ ವಿಷಯವನ್ನೂ, ವೇ. ಶಾ. ವೇಣಿ ಮಾಧವರಾವ ಶಾಸ್ತ್ರಿ, ಶ್ರೀ ಗೋವಿಂದಾಚಾರ್ಯ ಗುತ್ತಲ ಬಿ. ಎ. ಎಲ್. ಎಲ್. ಬಿ. ಇವರೀರ್ವರು ಸಂಸ್ಕೃತ ಭಾಷೆಯನ್ನೂ, ಸುಪ್ರಸಿದ್ಧ ವೆ. ಶಾ. ನಾಗೇಶ ಶಾಸ್ತ್ರಿಗಳು ಸಂಸ್ಕೃತ ಮತ್ತು ನ್ಯಾಯ ವೇದಾಂತವನ್ನೂ, ಪ್ರೋ. ರಂಗರಾವ ದಿವಾಕರ, ಶ್ರೀ. ಆಲೂರ ವೆಂಕಟರಾವ ಬಿ. ಎ. ಎಲ್. ಎಲ್. ಬಿ. ಸಂಪಾದಕ ಜಯಕರ್ನಾಟಕ ಇವರೀರ್ವರು ಇತಿಹಾಸ, ಅರ್ಥಶಾಸ್ತ್ರ ವಿಷಯಗಳನ್ನೂ ಸುವ್ಯವಸ್ಥಿತವಾಗಿ ಕಲಿಸುತ್ತೇವೆಂದು ಮುಂದೊರೆದು ಬಂದು ಆನಂದದಿಂದ ಒಪ್ಪಿಕೊಂಡರು. ಈ ಕಾಲೇಜಿನ ವೆಚ್ಚಕ್ಕಾಗಿ ಕರ್ನಾಟಕದಲ್ಲೂ ಎಲ್ಲಾ ಕಾಂಗ್ರೆಸ ಕಮಿಟಿಯಿಂದ ಹಣವನ್ನು ಕೇಳಬೇಕೆಂದು ನಿರ್ಣಯವಾಯಿತು. ಆ ಮೇಲೆ ವಿದ್ಯಾರ್ಥಿಗಳ ವಕ್ತೃತ್ವದ ಮೇಲಾಟ, ಹೊಸದಾಗಿ ರಚಿಸಿದ ಕವಿತೆಗಳನ್ನೋದುವದು ಆಗಿ, ಅನಂತರ ಸಭೆಗೆ ಪ್ರಾರಂಭವಾಯಿತು. ದೇಶಭಕ್ತ ವಿಶ್ವನಾಥರಾಯರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ವಿದ್ಯಾರ್ಥಿಗಳಿಗೆ ಇನಾಮು ಕೊಡಲ್ಪಟ್ಟವು. ಶ್ರೀ. ಹಾನೋಳಕರರು ವಾರ್ಷಿಕವೃತ್ತಾಂತವನ್ನು ಓದಿದರು. ಶ್ರೀ. ದೇಸಾಯಿಯವರು ರಾಷ್ಟ್ರೀಯ ಶಿಕ್ಷಣ ಕ್ರಮದಲ್ಲಿ ನೈತಿಕ ಮತ್ತು ಔದ್ಯೋಗಿಕ ಶಿಕ್ಷಣದ ಮಹತ್ವವನ್ನು ತಿಳಿಸಿಕೊಟ್ಟರು. ಶ್ರೀ. ವಿನಾಯಕರಾಯರು, ರಾಷ್ಟ್ರೀಯ ಶಾಲೆಗಳಲ್ಲಿ ಮನುಷ್ಯರನ್ನು ತಯಾರ ಮಾಡುತ್ತಾರೆ, ಸರಕಾರೀ ಶಾಲೆಗಳಲ್ಲಿ ಪಶುಗಳನ್ನು ತಯಾರಮಾಡುತ್ತಾರೆಂಬ ಭೇದವನ್ನು ಬಲ್ಲು ಮನೋಹರವಾಗಿ ನಿರೂಪಿಸಿದರು. ಶ್ರೀ ಮುದವೇಡಕರ ಕೃಷ್ಣರಾಯರು ಅದೇ ವಿಷಯವನ್ನು ತಮ್ಮ ಸಿಂಹನಾದದಿಂದ ಗರ್ಜಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ್ದು—ಚಳವಳಿಯು ಸತ್ತಿಲ್ಲ. ಅಂತರ್ಮುಖವಾಗಿರುತ್ತದೆ. ಇದು ಅಂತಃಕರಣದ ಚಳವಳಿಯು, ಮನೋವೃತ್ತಿಯು ಬದಲಾಗಹತ್ತಿದೆ. ವಿದ್ಯಾರ್ಥಿಗಳು ಕಡಿಮೆಯಿದ್ದರೂ ಇನ್ನು ಹೆಚ್ಚುವದು ನಿಶ್ಚಯ. ಲೋಕಮಾನ್ಯರ ಶಾಲೆಯು ೩ ವಿದ್ಯಾರ್ಥಿಗಳಿಂದ ೫ ಅಧ್ಯಾಪಕರಿಂದ ಪ್ರಾರಂಭವಾಯಿತು. ಎಲ್ಲಾ ಅಸಹಕಾರಿಗಳ ಸ್ವಾರ್ಥತ್ಯಾಗಕ್ಕಿಂತ ಶಾಲಾಧ್ಯಾಪಕರ ಸ್ವಾರ್ಥತ್ಯಾಗವು ಹೆಚ್ಚಿನದು. ಉಳಿದವರಿಗೆ ಮಾನಮರ್ಯಾದೆಗಳು ಸಿಗುತ್ತವೆ. ಹೆಚ್ಚಿಗೆ ಪಗಾರವು ದೊರಕುತ್ತದೆ. ಅಧ್ಯಾಪಕರು ಯಾವ ಲಾಭವೂ ಇಲ್ಲದೆ ಶಾಂತರೀತಿಯಿಂದ ಕಷ್ಟವನ್ನು ಸಹನಮಾಡಿ ರಾಷ್ಟ್ರಸೇವೆಯನ್ನು ಮಾಡುವದು ಆಶ್ಚರ್ಯ. ಆಂಧ್ರದವರೂ ಮಹಾರಾಷ್ಟ್ರದವರೂ, ಗುಜರಾಥದವರೂ ತಮ್ಮ ರಾಷ್ಟ್ರೀಯ ಶಿಕ್ಷಣದ ವ್ಯವಸ್ಥೆಯನ್ನು ಚೆನ್ನಾಗಿ ಮಾಡಿಕೊಂಡಿದ್ದಾರೆ. ನಾವೂ ಇನ್ನು ಜಾಗ್ರತರಾಗಿ ಕಾರ್ಯಕ್ಕೆ ಹತ್ತಬೇಕು. ಈ ಕಾಲೇಜವನ್ನು ಚನ್ನಾಗಿ ನಡಿಸೋಣ. ಚಿಕ್ಕ ಬಾಲಕರ ಶಿಕ್ಷಣವೂ ಅಷ್ಟೇ ಮಹತ್ವದ್ದು. ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲಿಕ್ಕೆ. ಈ ಕಡೆಗೆ ಶ್ರೀ. ಮುದವೇಡಕರರ ಹಾಡುಗಳಾದ ಮೇಲೆ ಕಾರ್ಯವು ಮುಗಿಯಿತು.

ಅಸಹಕಾರದ ಲೋಕೈಷಣೆ.

ಅಸಹಕಾರದ ಲೋಕೈಷಣೆ (Popularity of Non Co-operation) ಈ ವಿಷಯವನ್ನು ಕುರಿತು "ಹೆಮ್‌ದಮ್" ಎಂಬ ಲಾಹೋರಿನ ಉರ್ದು ದಿನಚರಿ ಪತ್ರಿಕೆಯು ಪ್ರಕಟಿಸಿದ ಲೇಖನ ಸಾರಾಂಶ:— ಕೆಲವು ಅನಿವಾರ್ಯ ಕಾರಣಗಳಿಂದ ಅಸಹಕಾರಚಳವಳವು ಹಿಂದೂಸ್ಥಾನದಲ್ಲಿ ಮಹಾತ್ಮಾ ಗಾಂಧಿಯವರು ನಿರೀಕ್ಷಿಸಿದಷ್ಟು ಯಶಸ್ವಿಯಾಗಲಿಲ್ಲ. ಆದರೆ ಅಸಹಕಾರದ ಮೇಲಿನ ಜನರ ಪ್ರೇಮವು ಹಿಂದೂಸ್ಥಾನದ ಹೊರಗಿನ ಜನರಿಗೂ ವಿಶೇಷವಾಗಿ ಆಗುತ್ತಿದೆ. ಈ ಅಸಹಕಾರವನ್ನು ಬೇರೆ ದೇಶಗಳು ಯಶಸ್ವಿಯಾಗಿ ನಡಿಸಬಹುದು. ಫ್ರೆಂಚರು ರೂರ ಪ್ರಾಂತವನ್ನು ಆಕ್ರಮಿಸಿದಂದಿನಿಂದ ಜರ್ಮನರು ಅಸಹಕಾರವ್ರತವನ್ನು ಅಂಗೀಕರಿಸಿಕೊಂಡಿರುವರು. ಮತ್ತು ಈ ಜನಾಂಗದವರು ಹೆಚ್ಚಿನ ವಿದ್ಯಾವಂತರೂ ಒಗ್ಗಟ್ಟುಳ್ಳವರೂ ಆದುದರಿಂದ ಇದನ್ನು ಈವರೆಗೆ ಯಶಸ್ವಿಯಾಗಿಯೆ ನಡಿಸಿರುವರು. ಫ್ರೆಂಚರು ಕೊಡುವ ಯಾತನೆಗಳನ್ನು ಅವರು ಎಷ್ಟರ ವರೆಗೆ ಸಹಿಸುವರೆಂದು ಭವಿಷ್ಯ ಹೇಳುವುದು ಅಸಾಧ್ಯ.

ಇಜಿಪ್ತ ದೇಶದಲ್ಲಿ ರಾಷ್ಟ್ರೀಯ ಪಕ್ಷದ ಒಂದು ಪಂಗಡದವರು ಇಜಿಪ್ತ ದೇಶದ ಸ್ವಾತಂತ್ರ್ಯವನ್ನು ಪಡಿಯಲು ಅಸಹಕಾರವು ಪ್ರಯೋಜನಕಾರಿ ಮತ್ತು ಪರಿಣಾಮಕಾರಿಯಾದ ಮಾರ್ಗವೆಂದು ತಿಳಿದಿರುವರು.

ಇತ್ತೀಚೆಗೆ ಇದೆ ಮಾರ್ಗವನ್ನು ಸಿಲೋನಿನವರೂ ಅನುಕರಿಸಿರುವರು. ಕಳೆದ ಎರಡು ಮೂರು ವರುಷಗಳಿಂದ ಹಿಂದೂಸ್ಥಾನದಲ್ಲಿ ನಡೆಯುವ ಅಸಹಕಾರಚಳವಳದ ಸ್ಥಿತಿಯನ್ನು ಪರಿಶೀಲಿಸಿಕೊಂಡಿದ್ದ ಸಿಲೋನಿನ ರಾಷ್ಟ್ರೀಯ ಪಕ್ಷದವರು ತಮ್ಮ ಉದ್ದೇಶವನ್ನು ಈ ಅಸಹಕಾರದಿಂದ ಸಂಪೂರ್ಣಗೊಳಿಸಬೇಕೆಂದು ನಿಶ್ಚಯಿಸಿರುವರು. ಈ ಇಡೀ ದ್ವೀಪದಲ್ಲಿ ಮುಷ್ಕರದ ಹಾವಳಿಯು ಹಬ್ಬಿದೆ. ಕಳೆದ ಮೂರು ವಾರಗಳಿಂದ ಅದು ಇನ್ನೂ ವೃದ್ಧಿಯನ್ನು ಹೊಂದುತ್ತಲೆ ಇದೆ. ಸಮಕಾಲೀನ ಎಂಗ್ಲೋ ಇಂಡಿಯನ್ ಪತ್ರಿಕೆಯೊಂದು ಹೇಳುವಂತೆ ಈ ಮುಷ್ಕರಗಳೂ ಅಸಹಕಾರದ ಒಂದು ಅಂಗವಾಗಿದೆ.

ಈ ಸಂಗತಿಗಳಿಂದ ಅಸಹಕಾರ ಚಳವಳವು ಎಲ್ಲಾ ನಾಗರೀಕತನ ಹೊಂದಿದ ಹಾಗು ನಾಗರೀಕತನದ ಮೆಟ್ಟಿಲನ್ನು ಹತ್ತಿದ ದೇಶಗಳಲ್ಲಿ ಪ್ರಜಾನುರಾಗವನ್ನು ಹೊಂದುತ್ತಿದೆ ಎಂದು ತೋರುವುದು. ಜರ್ಮನ್ ದೇಶದಲ್ಲಿ ಇದರ ಹೆಚ್ಚಿನ ಪರೀಕ್ಷೆಯು ನಡಿಯುತ್ತಿದೆ. ಮತ್ತು ಇಲ್ಲಿ ಇದು ಜಯಪ್ರದವನ್ನು ಹೊಂದಿದ್ದ ಆದರೆ ಆಗ ಅದು ಈಗ ಕ್ಷೀಣದೆಸೆಯನ್ನು ಹೊಂದಿದ ಸ್ಥಳಗಳಲ್ಲೂ ಸಂವೇಗದಿಂದ ನಡಿಯುವುದು. ರಾಜಕೀಯ ಉದ್ದೇಶಗಳನ್ನು ನೆರವೇರಿಸಲು ಅಸಹಕಾರವು ಹೆಚ್ಚಿನ ಪರಿಣಾಮಕಾರಿಯಾದ್ದೆಂದು ನಿಸ್ಸಂಶಯವಾಗಿ ಅವಗಣಿಸಲ್ಪಟ್ಟಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾ ಇಲಾಖೆ.

ಈ ವರ್ಷದ ಎಪ್ರಿಲ್ ತಿಂಗಳಿಂದ ಈ ಜಿಲ್ಲೆಗೆ ಒಬ್ಬ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಅಫೀಸರರು ಮೊಕ್ರರರಾಗಿರುತ್ತಾರೆ. ಇನ್ನು ಮುಂದೆ ಇನ್ಸಪೆಕ್ಟಿಂಗ ಅಫೀಸರರೆಂಬ ಇಸಮು ಇಲ್ಲ. ಅಸಿಸ್ಟಾಂಟ ಇನ್ಸ್‌ಪೆಕ್ಟರ್, ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರ್, ಸುಪರವೈಜರ್ ಮುಂತಾದ ಹುದ್ದೆಗಳನ್ನು ತೆಗೆದುಹಾಕಿರುತ್ತಾರೆ. ಈ ಹುದ್ದೆಗಳ ಬದಲಾಗಿ ಡಿಪ್ಯುಟಿ ಇನ್ಸಪೆಕ್ಟರರೆಂಬ ಹೊಸ ಹುದ್ದೆಯನ್ನು ಉಂಟುಮಾಡಿರುತ್ತಾರೆ. ಇಷ್ಟರ ವರೆಗೆ ಈ ಜಿಲ್ಲೆಯಲ್ಲಿ ಉಡುಪಿ, ಕುಂದಾಪುರ, ಕಾರ್ಕಳ ತಾಲೂಕುಗಳಿಗೆ ಒಬ್ಬ ಸಬ್ ಅಸಿಸ್ಟಾಂಟ್ ಇನ್ಸಪೆಕ್ಟರಿದ್ದರು. ಮಂಗಳೂರು ತಾಲೂಕಿಗೆ ಒಬ್ಬರು, ಕಾಸರಗೋಡು ಮತ್ತು ಪುತ್ತೂರು ತಾಲೂಕುಗಳಿಗೆ ಒಬ್ಬ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರು ಇದ್ದರು. ಹೊಸ ಏಲೆವಾರಿಯಲ್ಲಿ ಕಾರ್ಕಳ ತಾಲೂಕು ಮತ್ತು ಉಪ್ಪಿನಂಗಡಿ ತಾಲೂಕಿನ ಬೆಳತಂಗಡಿ ಡಿವಿಜನಿಗೆ ಕೂಡಿಸಿ ಒಂದು ರೇಂಜನ್ನು ಮಾಡಿರುತ್ತಾರೆ. ಇವರ ಹೆಡ್ ಕ್ವಾರ್ಟರ್ಸ್ ಕಾರ್ಕಳ. ಈ ಜಿಲ್ಲೆಯಲ್ಲಿ ೬೦೦ ಚಿಲ್ಲರೆ ಎಲಿಮೆಂಟರಿ ಶಾಲೆಗಳಿವೆ. ಅವುಗಳಲ್ಲಿ ಇಷ್ಟರ ವರೆಗೆ ಒಬ್ಬೊಬ್ಬ ಸಬ್ ಅಸಿಸ್ಟಾಂಟರ ಕೈಕೆಳಗೆ ೨೦೦ ಶಾಲೆಗಳಿದ್ದವು. ಹೊಸ ಏಲೆವಾರಿ ಪ್ರಕಾರ ಒಬ್ಬೊಬ್ಬ ಡಿಪ್ಯುಟಿ ಇನ್ಸ್‌ಪೆಕ್ಟರರ ಕೈಕೆಳಗೆ ೧೫೦ ಶಾಲೆಗಳು ಕೊಡಲ್ಪಟ್ಟಿವೆ. ಇನ್ನು ಶಾಲೆಗಳ ಮೇಲ್ವಿಚಾರಣೆಯು ಮುಂಚಿಗಿಂತ ಒಳ್ಳೇ ರೀತಿಯಲ್ಲಿ ನಡಿಯುವುದು.

ಯಾವ ಏಲೆವಾರಿಯಾದರೂ ಪ್ರತಿ ಒಂದು ಕ್ಲಾಸಿಗೆ ಪ್ರತಿ ಒಂದು ಪಾಠದಲ್ಲಿ ಇಂತಿಷ್ಟೆ ಕಲಿಸಬೇಕೆಂಬ ಸಿಲಬಸ್ ಎಂಬ ಪಾಠಪಟ್ಟಿ ಇಲ್ಲದೆ ಏನೊಂದು ಪ್ರಯೋಜನವು ಸಿಕ್ಕಲಾರದು. ಇಷ್ಟು ಸಣ್ಣದಾದ ದಕ್ಷಿಣ ಕನ್ನಡ ಜಿಲ್ಲೆಯ ಒಂದೊಂದು ಶಾಲೆಗೆ ಒಂದೊಂದು ತರದ ಪಾಠಪಟ್ಟಿ ಎಂದರೆ ಆಶ್ಚರ್ಯ. ಒಂದು ಶಾಲೆಯ ಹುಡುಗರು ಇನ್ನೊಂದು ಶಾಲೆಗೆ ಹೋದರೆ ಮೇಲಿ ಕೆಳಗೆ ನೋಡಬೇಕಾಗಿ ಬರುವುದು. ಇನ್ಸ್‌ಪೆಕ್ಟಿಂಗ್ ಅಫೀಸರರಿಗೂ ಇದೇ ಕಷ್ಟ ಒದಗುತ್ತದೆ. "ಮಾಸ್ತರೇ ಏನೇನು ಕಲಿಸಿದ್ದೀರಿ. ನಾಲ್ಕು ಸವಾಲು ಕೇಳಬಹುದೋ" ಎಂದು ಹೇಳಬೇಕಾದ ಅಗತ್ಯ ಬೀಳುತ್ತದೆ. ಆದ್ದರಿಂದ ಪ್ರತಿ ಒಂದು ಪಾಠಕ್ಕೆ ಒಂದು ಟೆಕ್ಸ್ಟ ಬೂಕು ನಿಶ್ಚಯಿಸಬೇಕು. ಪುಸ್ತಕಗಳು ಇಲ್ಲದಿದ್ದರೆ ಬುದ್ಧಿವಂತರಾದ ಪಂಡಿತರುಗಳಿಂದ ಟೆಕ್ಸ್ಟ ಬೂಕುಗಳನ್ನು ಬರಸಬೇಕು. ಯೋಗ್ಯವಾದ ಪುಸ್ತಕಗಳನ್ನು ಯಾರು ಬರೆದರೂ ಅದಕ್ಕೆ ತಕ್ಕ ಮಾನ್ಯ ಕೊಡಬೇಕಲ್ಲದೆ ಅದನ್ನು ಮೂಲೆಗೊತ್ತಿ ಇಂಥದ್ದೇ ಪುಸ್ತಕಗಳಾಗಬೇಕೆಂಬ ಭೇದೋಪಾಯಗಳಿರಬಾರದು.

ಬೋರ್ಡಿನವರೆ ಒಂದು ಸಿಲಬಸ್ ತಯಾರಿಸುತ್ತಾರಂತೆ. ಇದು ಯಾವಾಗ ಹೊರಗೆ ಬರುತ್ತದೊ ಎಂದು ಉಪಾಧ್ಯಾಯರು ಕಾಯುತ್ತಿರುವರು.

ಉಪಾಧ್ಯಾಯ.

ಹುಬ್ಬಳ್ಳಿಯಲ್ಲಿ ಜರಗಿದ ಮಾರ್ಚ ೧೮ನೇ ತಾರೀಕಿನ ಕಾರ್ಯಕ್ರಮವು.

ಕಳೆದ ತಾರೀಕು ೧೮ರಲ್ಲಿ ಮಹಾತ್ಮರ ಬಂಧನದಿನಾಚರಣೆಯು ಆಚರಿಸಲಾಯಿತು. ಈ ದಿನದ ಕಾರ್ಯಕ್ರಮದ ಜೊತೆಯಲ್ಲಿ ಹರ್ಡೀಕರ ಇವರು ಕೊಂಗ್ರೆಸ ವರ್ಕಿಂಗ ಕಮಿಟಿಯ ಠರಾವನ್ನು ಸಭಿಕರ ಮುಂದೆ ಇಡಲಾಗಿ ಅದು ಸರ್ವಾನುಮತದಿಂದ ಪಾಸಾಯಿತು.

೧೯ನೇ ದಿವಸವೇ ಜರಗಿದ ಇತರ ಕಾರ್ಯಕ್ರಮಗಳು. (೧) ಟಿಳಕ ಕನ್ಯಾ ಶಾಲೆಯ ಪ್ರಥಮ ವಾರ್ಷಿಕ ಮಹೋತ್ಸವ ಸಮಾರಂಭವು. (೨) ಲೋಕಮಾನ್ಯ ಬಾಲಸೇನೆಯ ತೃತೀಯ ವಾರ್ಷಿಕೋತ್ಸವವಾಯಿತು. (೩) ಪ್ರಬುದ್ಧ ವಿದ್ಯಾರ್ಥಿಗಳ ವರ್ಗ ಅಂದರೆ, ಹಳ್ಳಿಗಳಲ್ಲಿಯ ಜನರ ಸ್ವಾತಂತ್ರ್ಯಕ್ಕೋಸ್ಕರವಾಗಿ ಪ್ರಾಥಮಿಕ ಉಪಾಯಗಳನ್ನು ಕಲಿಸತಕ್ಕ ಶಿಕ್ಷಣ ವರ್ಗವು ಸ್ಥಾಪಿಸಲ್ಪಟ್ಟಿತು.

ವಿದೇಶ ವರ್ತಮಾನ.

ಹೊಸ ದ್ವೀಪ:— ಪೆಸಿಫಿಕ್ ಸಾಗರದಲ್ಲಿ ಜಲಮಟ್ಟದ ಕೆಳಗೆ ಒಂದು ಅಗ್ನಿಪರ್ವತವು ಕಾಣಿಸಿಕೊಂಡು ನೀರಿನ ಮೇಲೆ ಜ್ವಾಲೆಯು ಕಂಡು ಬರುತ್ತಿದೆಯೆಂದು ಜಪಾನ ಹಡಗಿನ ಅಧಿಕಾರಿಯೊಬ್ಬನು ಮೊದಲು ತಿಳಿಸಿದ್ದನು. ಈಗ ಈತನು ವಿವೇಚಿಸಿದ ಸ್ಥಳದಲ್ಲಿ ಜಲಮಟ್ಟವು ಉಕ್ಕಿ ನೀರಿನ ಮೇಲೆ ಅರ್ಧ ಮೈಲು ಉದ್ದವೂ ೫೦ ಗಜ ಅಗಲವೂ ಉಳ್ಳ ದ್ವೀಪವಾಗಿ ಕಾಣಬರುತ್ತಿರುವಂತೆಯೂ ಇದು ಸಿಂಗಪುರದಿಂದ ಚೀನ, ಜಪಾನ ದೇಶಗಳಿಗೆ ಹಡಗುಗಳು ಹೋಗಿಬರುವ ಮಾರ್ಗದಲ್ಲಿರುವುದಾಗಿಯೂ ವರ್ತಮಾನ ಬಂದಿದೆ. (ಒಕ್ಕಲಿಗರ ಪತ್ರಿಕೆ.)

ಭಾರತೀಯ ಸ್ತ್ರೀಯರು:— ವಿಲಾಯಿತಿಯಲ್ಲಿ ೩೦ ಜನ ಭಾರತೀಯ ಸ್ತ್ರೀಯರು ವ್ಯಾಸಂಗಮಾಡುತ್ತಿದ್ದಾರೆ.

ಹಳೇಯ ಸುಲ್ತಾನರು:— ತುರ್ಕಿಯ ಹಳೇ ಸುಲ್ತಾನರಾದ ಸುಲ್ತಾನ್ ಮಹಮ್ಮದ್ ವಹಿಯುದ್ದೀನರವರು ತಾವು ಖಲೀಫರ ಅಧಿಕಾರವನ್ನಾಗಲೀ ಸುಲ್ತಾನಪದವಿಯನ್ನಾಗಲೀ ಬಿಟ್ಟಿರುವುದಿಲ್ಲವೆಂದು ಮಕ್ಕಾದಿಂದ ಪ್ರಕಟನವನ್ನು ಮಾಡುವವರಿದ್ದಾರಂತೆ.

ಮೋಟಾರ ಅಪಘಾತ:— ಜಪಾನ ಚಕ್ರವರ್ತಿಯವರ ಮನೆತನಕ್ಕೆ ಸೇರಿದ ಕೆಲವು ರಾಜಕುಮಾರರೂ, ಸಂಬಂಧಿಗಳೂ ಯುರೋಪ ಖಂಡದ ರಾಜ್ಯಗಳಲ್ಲಿ ದೇಶಾಟನೆಮಾಡುತ್ತಿದ್ದರು. ಇವರು ಇದೇ ತಾ. ೧ನೇ ಭಾನುವಾರ ಫ್ರಾನ್ಸಿಗೆ ರಾಜಧಾನಿಯಾದ ಪಾರಿಸನಗರದಿಂದ ಶರಬರ್ಗ ನಗರವನ್ನು ಕುರಿತು ಮೋಟಾರಿನಲ್ಲಿ ವೇಗವಾಗಿ ಹೋಗುತ್ತಿರುವಲ್ಲಿ ಮೋಟಾರು ಅಕಸ್ಮಾತ್ತಾಗಿ ದಾಂಬಟ್ಟ ಪೆಂಸ್ ಎಂಬಲ್ಲಿ ಒಂದು ಮರಕ್ಕೆ ಬಡಿದು ಅನಾಹುತ ಸಂಭವಿಸಿತು. ಜಪಾನ್ ಚಕ್ರವರ್ತಿಯ ಭಾವಮೈದುನನೂ ಮೋಟಾರ ನಡಿಸುತ್ತಿದ್ದವನೂ ತತ್‌ಕ್ಷಣವೇ ಮೃತಪಟ್ಟರು. ಒಬ್ಬ ರಾಜಕುಮಾರನೂ, ರಾಜಕುಮಾರಿಯೂ, ಆಕೆಯ ಸೇವಕಳೂ ಗಾಯಪಟ್ಟು ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ಧರ್ಮಗುರುಗಳಿಗೆ ಶಿಕ್ಷೆ:— ಮಾಸ್ಕೋ ಪಟ್ಟಣದಲ್ಲಿ ಸೋವಿಯಟ್ ಸರಕಾರದ ಆಜ್ಞೆಯನ್ನು ವಿರೋಧಿಸಿದಕಾರಣಕ್ಕೆ ಪೆಟ್ರೋಗ್ರೇಡಿನ ಕೆಥೋಲಿಕ ಆರ್ಚ ಬಿಶೋಪರನ್ನೂ ಇನ್ನೊಬ್ಬ ಬಿಶೋಪರನ್ನೂ ದೇಹಾಂತ ಶಿಕ್ಷೆಗೆ ಗುರಿಮಾಡಿರುವರು.

ಪ್ಯಾರಿಸ್ ನಗರದ ಮುನ್ಸಿಪಲ್ ನೌಕರರು:— ಪ್ಯಾರಿಸ್ ನಗರದ ಮುನ್ಸಿಪಲ್ ನೌಕರರ ತಲಬಿನ ವಿಚಾರದಲ್ಲಿ ಅವರಿಗೂ ಕೌನ್ಸಿಲರರಿಗೂ ಮನಸ್ತಾಪ ಬಂದು ನೌಕರರು ಕೌನ್ಸಿಲಿನಲ್ಲಿ ನುಗ್ಗಿ ದೊಂಬಿ ಮಾಡಬೇಕೆಂದು ಪ್ರಯತ್ನಪಟ್ಟರು. ಪೋಲೀಸಿನವರ ಜಾಗರೂಕತೆಯಿಂದ ಈ ತೊಂದರೆ ತಪ್ಪಿತು.

ಜಪಾನ್:— ಜಪಾನ ದೇಶದಲ್ಲಿ ಪ್ರಯಾಣಿಕರ ಸಾಗಣೆಯ ಸಲುವಾಗಿ ವಿಶೇಷವಾಗಿ ರೂಢಿಯಲ್ಲಿರುವ ರಿಕ್ಷಾ ಎಂಬ ಮನುಷ್ಯನು ಎಳೆಯುವ ಗಾಡಿಯನ್ನು ಈಗ ವಿದ್ಯುಚ್ಛಕ್ತಿಯ ಸಹಾಯದಿಂದ ಚಲಿಸುವಂತೆ ಮಾಡಬೇಕೆಂದು ಅಲ್ಲಿನ ಜನರು ಪ್ರಯತ್ನಪಡುವರು.

ಪ್ರಿನ್ಸನ ಜೋರ್ಜರವರು:— ನಮ್ಮ ಚಕ್ರವರ್ತಿಯವರ ದ್ವಿತೀಯ ರಾಜಕುಮಾರರಾದ ಪ್ರಿನ್ಸ್ ಜೋರ್ಜರವರು ಕರ್ಜನ್ ಪ್ರಭುಗಳ ಹಿರಿಯ ಕುಮಾರಿ ಲೇಡಿ ಅಲೆಗ್ಸಾಂಡ್ರ ಕರ್ಜನ್ ಎಂಬ ಯುವತಿಯನ್ನು ವಿವಾಹವಾಗುವರೆಂದು ವದಂತಿ ಇದೆ.

ಅಮೇರಿಕ:— ಅಮೇರಿಕದಲ್ಲಿ ಮದ್ಯಪಾನಸೇವನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಪರದೇಶದಿಂದ ಬರುವ ಹಡಗುಗಳಲ್ಲಿ ಯಾರಾದರೂ ಮದ್ಯಪ್ರಾಶನಗಳನ್ನು ತಂದರೆ ಪ್ರತಿಯೊಂದು ಶೀಸೆಗೂ ೫ ಡಾಲರು (೧೫ ರೂ.) ಗಳಂತೆ ದಂಡ ವಸೂಲುಮಾಡುವುದಾಗಿಯೂ ವಿಶೇಷ ಔಷಧ ನಿಮಿತ್ತ ಒಂದು ಕ್ವಾರ್ಟ ಶೀಸೆಯನ್ನು ಮಾತ್ರ ಸುಂಕವಿಲ್ಲದೆ ತರಬಹುದೆಂತಲೂ ಅಪ್ಪಣೆಮಾಡಿದ್ದಾರೆ.

ಡೋವರ್ ವಸ್ತುಸಂಗ್ರಹಶಾಲೆ:— ಇಂಗ್ಲೆಂಡಿನ ಡೋವರ ತೀರ ಪಟ್ಟಣದಲ್ಲಿರುವ ವಿಚಿತ್ರ ವಸ್ತುಸಂಗ್ರಹಶಾಲೆಯಲ್ಲಿ ಪುರಾತನ ಕಾಲದ ೩ ಪಿಸ್ತೂಲುಗಳನ್ನೂ, ೩೬ ಕತ್ತಿಗಳನ್ನೂ, ೭ [illegible]ಗಳನ್ನೂ ಯಾರೋ ಕಳವುಮಾಡಿಕೊಂಡು ಹೋಗಿರುವರು.

ತೆರಿಗೆದಾರನ ವೆಚ್ಚದಿಂದ ಇಂಗ್ಲೆಂಡಿನ ಸಾರ್ವಭೌಮ ಕುಟುಂಬಕ್ಕೆ ಸಲ್ಲುವ ವರ್ಷಾಸನ:— ಸಾರ್ವಭೌಮನಿಗೆ ೪೭೦,೦೦೦ ಪೌನು, ಅಲೆಗ್ಸಾಂಡ್ರಿಯಾ ಮಹಾರಾಜ್ಞಿಯವರಿಗೆ ೭೦,೦೦೦ ಪವನು, ಪ್ರಿನ್ಸ್ ಆಫ್ ವೇಲ್ಸರಿಗೆ ಪ್ರತ್ಯೇಕ ದೊರೆಯುವುದಿಲ್ಲ, ಆದರೆ ಅವರಿಗೆ ಕೋರ್ನ್‌ವಾಲ್, ಡಚಿಸ್ ಮತ್ತು ಸೌತ್ ಲಂಡನ ಆಸ್ತಿಯ ಉತ್ಪನ್ನದ ಅಂಕವು ದೊರೆಯುತ್ತದೆ. ಅದರಂತೆ ಅವರಿಗೆ ಕಳೆದ ೧೯೨೧ನೇ ಇಸವಿಯಲ್ಲಿ ೩೩,೭೩೭ ಪೌನು ದೊರಕಿದೆ. ಚಕ್ರವರ್ತಿಯವರ ಉಳಿದ ಗಂಡು ಮಕ್ಕಳಿಗೆ ಪ್ರತಿಯೊಬ್ಬರಿಗೆ ೧೦,೦೦೦ ಪೌನು, ಮದುವೆಯಾದ ಬಳಿಕ ಅವರಿಗೆ ೧೫,೦೦೦ ಪೌನು ಹೆಚ್ಚು. ಪ್ರಿನ್ಸೆಸ್ ಮೇರಿಯವರಿಗೆ ೨೧ ವರುಷ ಪ್ರಾಯದನಂತರ ೬,೦೦೦ ಪವನು.

ಸ್ವದೇಶ ವರ್ತಮಾನ.

ಬೇರಾರ ಆಧಿಪತ್ಯದ ಆಳಿಕೆ:— ಬೇರಾರ ಆಧಿಪತ್ಯದ ಆಳ್ವಿಕೆಯನ್ನು ಲೋರ್ಡ ಕರ್ಜನರವರು ಹಿಂದೂಸ್ಥಾನದ ವೈಸರಾಯರಾಗಿದ್ದಾಗ ಹೈದರಾಬಾದ ನೈಜಾಮರವರು ಇಂಡಿಯಾ ಗವರ್ನಮೆಂಟಿಗೆ ವಹಿಸಿಬಿಟ್ಟರು. ಅದರ ಹುಟ್ಟುವಳಿಯಲ್ಲಿ ಕೆಲವು ಭಾಗವನ್ನು ನೈಜಾಮರಿಗೆ ಪಾವತಿಮಾಡುವಂತೆ ಕರಾರಾಗಿತ್ತು. ಈಗ ಆ ಆಧಿಪತ್ಯವನ್ನು ನೈಜಾಮರವರು ಇಂಡಿಯಾ ಗವರ್ನಮೆಂಟಿನಿಂದ ವಾಪಸು ಪಡೆಯಬೇಕೆಂದು ಪ್ರಯತ್ನಮಾಡುತ್ತಿದ್ದಾರೆ. ಇದಕ್ಕಾಗಿ ಅವರು ಸರ್ ಅಲಿ ಇಮಾಮರವರನ್ನು ತಮ್ಮ ಕಡೆಯ ವಕೀಲರಾಗಿ ಮಾಡಿಕೊಂಡು ಅವರಿಗೆ ದಿನಕ್ಕೆ [illegible] ಒಂದು ವರುಷಕ್ಕೆ [illegible] ಕೊಡುವಂತೆ [illegible].

ಹಿಂದೂಸ್ಥಾನದ [illegible]:— ಕಳೆದ [illegible] ತಿಂಗಳಲ್ಲಿ ಹಿಂದೂಸ್ಥಾನದಲ್ಲಿ [illegible] ಜನರು [illegible] ವಿಚಾರಮಾಡಿದರೆಂದು ತಿಳಿದುಬಂದಿದೆ.

ವಿಕ್ಟೋರಿಯಾ ರಾಣಿಯವರ ಸ್ಮಾರಕ:— ಕಲ್ಕತ್ತಾ ಪಟ್ಟಣದಲ್ಲಿ ಮಹಾರಾಜ್ಞಿ ವಿಕ್ಟೋರಿಯಾ ರಾಣಿಯವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಅಮೋಘವಾದ ಸರ್ವವಸ್ತುಪ್ರದರ್ಶನಾಲಯವನ್ನು ಕಟ್ಟಿಸುತ್ತಿದ್ದಾರೆ. ಇಡೀ ಹಿಂದೂಸ್ಥಾನದಲ್ಲಿ ಈ ಕಟ್ಟಡದ ಫಂಡಿಗಾಗಿ [illegible] ರೂಪಾಯಿ [illegible] ಕೇಳಲ್ಪಟ್ಟಿತ್ತು. ಆ ಸ್ಥಳ [illegible] ರೂಪಾಯಿ.

ತುತಿಕೋರಿನಲ್ಲಿ ಡಾಕ್ಟರವರದರಾಜುಲುಗಳ ಭಾಷಣ:— ತಿಲಕ ಸ್ವರಾಜ್ಯ ಫಂಡಿಗೆ ಹಣವನ್ನು [illegible] ರಾವರು ತುತಿಕೋರಿನಿಗೆ ಹೋಗಿ ಭಾಷಣಮಾಡಿದಾಗ ಉಪ್ಪಿನ ತೆರಿಗೆಯನ್ನು ಕುರಿತು ಹೀಗೆಂದಿರುವರು:— ಉಪ್ಪಿನ ಮೇಲಿನ ತೆರವನ್ನು ಹೆಚ್ಚಿಸಿದ್ದಾರೆ. ಕರವನ್ನು ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕು. ಸಮುದ್ರದ ನೀರನ್ನು ಒಳಗೆ ಇಟ್ಟುಕೊಂಡು ಒಣಗಿಸಿ ಉಪ್ಪನ್ನು ತಯಾರುಮಾಡಿಕೊಳ್ಳಬೇಕು. ೭-೫ ತಿಂಗಳುಗಳಲ್ಲಿ ಜೈಲಿಗೆಹೋಗುವ ಚಳವಳಿಯನ್ನು ಪ್ರಾರಂಭಿಸಬೇಕು. ೧೫ ಸಾವಿರ ಜನರು ಯಾವಾಗಲೂ ಜೈಲಿಗೆ ಹೋಗಲಿಕ್ಕೆ ತಯಾರಿರಬೇಕು. ಕೌನ್ಸಿಲುಗಳಿಗೆ ಹೋಗಬಾರದೆಂಬ ಮತಕ್ಕೆ ಸೇರಿದವನಿದ್ದರೂ ಹೋಗುವವರಿಗೆ ಅಡ್ಡಿ ಮಾಡಲಾರೆನೆಂದು ನನ್ನ ಮತವಾಗುತ್ತದೆ.

ಅಲಹಾಬಾದ್:— ಅಲಹಾಬಾದ ಮುನ್ಸಿಪಲ್ ಕೌನ್ಸಿಲಿಗೆ ಪಂಡಿತ ಜವಾಹಿರಲಾಲನೆಹರುರವರು ಚೇರಮೇನರಾಗಿಯೂ, ಜನಾಬ್ ಅಹಮ್ಮದ್‌ರವರು ಸೀನಿಯರ್ ವೈಸ ಚೇಯರ್‌ಮೇನರಾಗಿಯೂ ಮಿ| ಎಸ್. ಪಿ. ಮುಕರ್ಜಿಯವರು ಜೂನಿಯರ್ ವೈಸ ಚೇಯರ್‌ಮೇನರಾಗಿಯೂ ಆರಿಸಲ್ಪಟ್ಟಿರುವರು.

ದಿವಂಗತ ಸರ್. ಫಿರೋಜ್‌ಷ ಮೇಥಾ.— ಮುಂಬಯಿಯ ಸುಪ್ರಸಿದ್ಧ ವರ್ತಕರಲ್ಲೊಬ್ಬರಾಗಿದ್ದ ದಿವಂಗತ ಸರ್ ಫಿರೋಜ್‌ಷ ಮೇಥಾರವರ ಹೆಸರನ್ನು ಜ್ಞಾಪಕಪಡಿಸುವುದಕ್ಕೆ ಅವರ ಒಂದು ಕಂಚಿನ ಪ್ರತಿಮೆಯನ್ನು ಕಳೆದ ತಾ. ೩ನೇ ದಿನ ಮುಂಬಯಿ ಗವರ್ನರರು ಮುಂಬಯಿಯಲ್ಲಿ ಪ್ರತಿಷ್ಠಿಸಿದರು.

ತಂತಿ ವಿಳಾಸ:— ಸಂಕ್ಷಿಪ್ತ ವಿಳಾಸಗಳಲ್ಲಿ ತಂತಿವರ್ತಮಾನದ ವಿಳಾಸಗಳಾಗಿ ರಿಜಿಸ್ಟರುಮಾಡಿಸುವವರು ಈ ತಿಂಗಳ ಒಂದನೇ ತಾರೀಕು ಲಾಗಾಯತು ಪ್ರತಿ ವಿಳಾಸಕ್ಕೆ ರೂ. ೫ರಂತೆಯೂ ಪ್ರತಿ ಬದಲಾವಣೆಗೆ ಒಂದು ರೂಪಾಯಿಯಂತೆಯೂ ಫೀ ಕೊಡಬೇಕೆಂದು ಇಂಡಿಯಾ ಸರಕಾರದವರು ತೀರ್ಮಾನಿಸಿರುತ್ತಾರೆ.

ಅರಳೆಯ ವ್ಯಾಪಾರ:— ಇಂಡಿಯಾದೇಶದ ಅರಳೆಯ ಬೆಳೆಯನ್ನೂ, ವ್ಯಾಪಾರವನ್ನೂ ಅದರ ಕೈಗಾರಿಕೆಯನ್ನೂ ವರ್ಧಿಗೊಳಿಸಬೇಕೆಂಬ ಉದ್ದೇಶದಿಂದ ಇಂಡಿಯದ ಹತ್ತಿಯನ್ನು ಪರದೇಶಕ್ಕೆ ರವಾನಿಸುವುದಾದರೆ ಅದರ ಪವನು ತೂಗುವ ಬೇಲ್ ಗಳಿಗೆ ೪ ಆಣೆಯಂತೆಯೂ ಚಿಲ್ಲರೆಯಾದರೆ ೧೦೦ ಪವನಿಗೆ ಒಂದಾಣೆಯಂತೆಯೂ ತೆರಿಗೆಯನ್ನು ಕಳೆದ ತಿಂಗಳ ೧೬ರ ಲಾಗಾಯತು ಮೂರು ವರುಷಗಳ ಕಾಲ ವಸೂಲುಮಾಡಬೇಕೆಂದು ಕಾನೂನುಮಾಡಿರುವರು.

ಮೈಸೂರು ಯುವರಾಜರು:— ಯೂರೋಪ್ ಖಂಡದಲ್ಲಿ ಸಂಚಾರಮಾಡಿಕೊಂಡು ಬರಬೇಕೆಂದಿದ್ದ ಮೈಸೂರು ಯುವರಾಜರು ಸದ್ಯದಲ್ಲಿ ಪರದೇಶ ಪ್ರಯಾಣವನ್ನು ನಿಲ್ಲಿಸಿರುವರು.

ಮಿ| ರಿಚ್‌ರ್ಡ್ ಹೆಮಿಲ್ಟನ್:— ಮೈಸೂರು ಶ್ರೀಮನ್ ಮಹಾರಾಜರವರಿಗೆ ಅನೇಕ ವರುಷಗಳ ವರೆಗೆ ಪ್ರಾವೇಟ್ ಸೆಕ್ರೆಟರಿಗಳಾಗಿದ್ದ ಮಿ| ರಿಚರ್ಡ ಹ್ಯಾಮಿಲ್‌ಟನ್ ಕೇಂಬಲ್ ಸಿ. ಐ. ಇ ಯವರು ಇಟಲಿಯಲ್ಲಿ ವೃದ್ಧಾಪ್ಯದಿಂದ ಮೃತರಾದರಂತೆ.

ಉಪ್ಪಿನ ತೆರಿಗೆ:— ಮಾನವನಿಗೆ ಉಪ್ಪಿನ ಅವಶ್ಯಕತೆಯೆಷ್ಟೆಂದು ವಿಚಾರಿಸುವ. ಪ್ರತಿಯೊಬ್ಬನಿಗೆ ತೀರಕಡಿಮೆ ಎಂದರೆ, ವರ್ಷಕ್ಕೆ ಸರಾಸರಿ [illegible] ೨೦ ರಾತಲು ಉಪ್ಪು ಬೇಕಾಗುತ್ತದೆಂದು ತಜ್ಞರ ಅನುಭವವಿದೆ. ಪ್ರಯೋಗದಿಂದ ಇದೇ ಪ್ರಮಾಣವು ಸಿದ್ಧವಾಗಿರುವದಲ್ಲ. ಅಮೇರಿಕಾ ಖಂಡದಲ್ಲಿ ವರ್ಷಕ್ಕೆ ತಲೆಗೆ ೪೨ ರಾತಲು, ಜರ್ಮನಿಯಲ್ಲಿ ೨೫ ರಾತಲು. ರಶಿಯಾ ದೇಶದಲ್ಲಿ ೩೩, ಇಟಲಿಯಲ್ಲಿ ೨೫ ಹೀಗೆ ಉಪ್ಪು ಖರ್ಚಾಗುತ್ತಿದೆ. ಆರೋಗ್ಯವೂ ಇದೇ ಪ್ರಮಾಣದಿಂದ ಅಲ್ಲಿ ವೃದ್ಧವಾಗಿದೆ. ಈ ಅಂಕೆಗಳು ಶೀತಪ್ರದೇಶದವು. ಈ ರಾಷ್ಟ್ರಗಳು ವಿಶೇಷವಾಗಿ ಮಾಂಸಾಹಾರಿಗಳು. ಸಿ. ಗೊಡ್‌ಫ್ರೇ ಪೇಲರರ ಮತದಂತೆ ಇಲ್ಲಿಯ ಪ್ರಜೆಗಳಿಗೆ ಉಪ್ಪು ಅಷ್ಟು ಅವಶ್ಯವಿಲ್ಲದಿರುವಾಗ ಆ ದೇಶಗಳಲ್ಲಿ ಉಪ್ಪಿನ ಖರ್ಚಿನ ಮಾನ ಹೀಗಿದೆ. ಹಿಂದುಸ್ಥಾನವು ಉಷ್ಣಪ್ರದೇಶ. ಪ್ರಜೆಗಳು ವಿಶೇಷವಾಗಿ ವನಸ್ಪತ್ಯಾಹಾರಿಗಳು. ಉಪ್ಪು ಇಲ್ಲಿ ಹೆಚ್ಚು ಅವಶ್ಯವಿದೆ. ಆದರೆ, ಇಲ್ಲಿ ಖರ್ಚಾಗುವ ಉಪ್ಪಿನ ಮಾನವು ಬರೇ ೧೨ ರಾತಲು ಬೀಳುತ್ತದೆ. ಅಂದ ಮೇಲೆ, ಭಾರತೀಯರಿಗೆ ಅವಶ್ಯವಿರುವಷ್ಟು ಉಪ್ಪು ಸಹ ಸರಕಾರಿ ಧೋರಣದಿಂದ ಸಿಗುವದಿಲ್ಲೆಂಬುದು ಸ್ಪಷ್ಟವಾಗುತ್ತದೆ. ಇದರಿಂದಲೇ ಸಣ್ಣ ಪಿಡುಗು ಬಂದಕೂಡಲೇ, ನೊಣಗಳಂತೆ ಹಿಂದುಸ್ಥಾನದ ಪ್ರಜೆಗಳು ನಿಧನಹೊಂದುತ್ತಿರುವರು. ಕಳೆದ ಇನ್‌ಫ್ಲುಯೆಂಝಾ ಬೇನೆಯಿಂದ ೧ ಕೋಟಿ ೨೦ ಲಕ್ಷ ಮಂದಿಗಳು ಮಡಿದರೆಂದು ಸರಕಾರೀ ರಿಪೋರ್ಟಿನ ಮೇಲಿಂದ ತಿಳಿಯುತ್ತದೆ. ಈ ಹಾವಳಿಗೆ ಪ್ರಮುಖವಾಗಿ ಕಾರಣವ್ಯಾವದು ಎಂದು ಸಮಾಲೋಚಿಸಿದರೆ, ಸರಕಾರದ ಉಪ್ಪಿನ ತೆರಿಗೆಯೇ ಎಂದು ಉತ್ತರ ಬರದಿರಲಾರದು. ನೌಕರಶಾಹಿಯು ಹಿಂದುಸ್ಥಾನದಲ್ಲಿ ಆಳುತ್ತಿರುವ ಆಕ್ಷಮ್ಯವಾದ ಶಕೆಯಿದು. ರೆಡಿಂಗ ದೊರೆಗಳಂಥ ನ್ಯಾಯದಾನಕ್ಕಾಗಿ [illegible] ಖ್ಯಾತಿಯುಳ್ಳವರಿಂದಲೇ ಇಂಥ ಅನ್ಯಾಯವು ಇಮ್ಮಡಿಯಾದದ್ದು ಸಹಕಾರಿಗಳ ದುರ್ದೈವವಲ್ಲೇನು? (ಕಾನಡಾ ವೃತ್ತ.)

ಜಯಪುರ ಮಹಾರಾಜರ ದಾನ:— ಜಯಪುರದ ಮಹಾರಾಜರು ಕಂಚಿ ದೇವಸ್ಥಾನದ ರಥವನ್ನು ದುರುಸ್ತುಮಾಡುವುದಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

ಅಹಮ್ಮದಾಬಾದ ಕೂಲಿಗಳ ಮುಷ್ಕರ:— ಅಹಮ್ಮದಾಬಾದ ಗಿರಣಿಗಳ ಕೂಲಿಗಳ ಮುಷ್ಕರವು ಶಾಂತರೀತಿಯಲ್ಲಿ ನಡಿಯುತ್ತಿದೆ. ಮುಷ್ಕರಹಿಡಿದ ೪೫,೦೦೦ ಕೂಲಿಗಳಲ್ಲಿ ೧೫,೦೦೦ ಕೂಲಿಗಳು ತಮ್ಮ [illegible] ಹಿಂತಿರುಗಿ ಕರೆಯುವ ವರೆಗೆ ತಾವು ಬರಲೊಲ್ಲೆವೆಂದು ದೃಢಮಾಡಿಕೊಂಡು ತಮ್ಮ ತಮ್ಮ ಹಳ್ಳಿಗಳಿಗೆ ಹೋಗಿರುವರು. ಉಳಿದವರು ಕೈಮಗ್ಗಗಳಲ್ಲಿ ಕೆಲಸಮಾಡುತ್ತಿದ್ದಾರೆ. [illegible] ಗಿರಣಿಗಳ ಬದಿಯಲ್ಲಿ ಪಿಕೆಟಿಂಗ್ ಕಾರ್ಯವನ್ನು ನಡಿಸುತ್ತಿದ್ದಾರೆ. ಶ್ರೀಮತಿ ಅನಸೂಯಾ ಬಾಯಿಯವರು ಕೂಲಿಗಳ ಸ್ಥಿತಿಗತಿಗಳ ಜಾಗ್ರತೆಯನ್ನು ನೋಡುತ್ತಿದ್ದಾರೆ.

ಹಿಂದೂರಿಲಿಜಿಯಸ್ ಎನ್‌ಡೋಮೆಂಟ ಬಿಲ್ಲು:— ಈ ಬಿಲ್ಲಿನ ಸಿಲೆಕ್ಟ ಕಮಿಟಿಯು ೧೫ ಮಂದಿ ಮೆಂಬರರಿಗೆ ಪ್ರಯಾಣ ಭತ್ಯೆಯಾಗಿ ಸುಮಾರು ರೂ. ೫೦೦೦ ಸಂದಿದೆ.

ನಾರಾಯಣಚಂದ್ರ ವಿದ್ಯಾರತ್ನ:— ದಿವಂಗತ ಈಶ್ವರ ಚಂದ್ರ ವಿದ್ಯಾಸಾಗರರ ಪುತ್ರರಾದ ನಾರಾಯಣಚಂದ್ರ ವಿದ್ಯಾರತ್ನರವರು ಕಳೆದ ತಾ. ೩೧ರಲ್ಲಿ ಕಾಲವಾದರು.

ಕುಷ್ಠರೋಗಿಗಳ ಆಸ್ಪತ್ರೆ:— ಮದರಾಸ ಸರಕಾರವು ಚಂಗಲಪೇಟೆಯಲ್ಲಿ ಕುಷ್ಠರೋಗಿಗಳಿಗಾಗಿ ಒಂದು ಆಸ್ಪತ್ರೆಯನ್ನು ಕಟ್ಟಿಸಲಿಕ್ಕೆ ರೂ ೧ ಲಕ್ಷವನ್ನು ತೆಗೆದಿಟ್ಟದೆ ಎಂದು ಪ್ರಕಟವಾಗಿದೆ.

ಮುಂಬಯಿ ಕೋರ್ಪೋರೇಶನ್:— ಕಳೆದಾಚೆಯ ಗುರುವಾರ ಮುಂಬಯಿ ಕೋರ್ಪೋರೇಶನಿನ ಮೀಟಿಂಗು ಸೇರಿತು. ಈ ಕೋರ್ಪೋರೇಶನಿಗೆ ಮೆಂಬರರಾಗಿ ಆರಿಸಲ್ಪಟ್ಟ ನಾಲ್ಕು ಮಂದಿ ಸ್ತ್ರೀಮೆಂಬರರಲ್ಲಿ ಶ್ರೀಮತಿ ಸರೋಜಿನಿ ನಾಯಡೂರವರು ಹೊರತು ಬಾಕಿಯವರು ಹಾಜರಿದ್ದರು. ರಾಷ್ಟ್ರೀಯ ಪಕ್ಷದವರು ಚೆಯರ್‌ಮೇನ್ ಪದವಿಗೆ ಶ್ರೀಯುತ ವಿ. ಜೆ. ಪಟೇಲರ ಹೆಸರನ್ನು ಸೂಚಿಸಿದರು. ರಾಷ್ಟ್ರೀಯ ಪಕ್ಷದ ಎದುರುಪಕ್ಷದವರು ಮಿ| ಯಚ್. ಪಿ. ಮೋದಿಯವರ ಹೆಸರನ್ನು ಸೂಚಿಸಿದರು. ಮಿ| ಯಚ್. ಪಿ. ಮೋದಿಯವರಿಗೆ ವಿ. ಜೆ. ಪಟೇಲರಿಗಿಂತ ೯ ವೋಟುಗಳು ಅಧಿಕವಾಗಿ ದೊರಕಿರುವುದರಿಂದ ಅವರು ಆರಿಸಲ್ಪಟ್ಟಿರುವರು.

ಸೆನಿಟರಿ ಕೋಂಗ್ರೆಸ್:— ಆರೋಗ್ಯ ಸಂಬಂಧದ ಸೆನಿಟರಿ ಕೋಂಗ್ರೆಸ್ಸಿನ ೩೪ನೇ ಅಧಿವೇಶನವು ಬರುವ ಜುಲಾಯಿ ತಾರೀಕು ೩೦ರಲ್ಲಿ ಇಂಗ್ಲೆಂಡಿನ ಹಲ್ ಪಟ್ಟಣದಲ್ಲಿ ಜರಗಲಿಕ್ಕಿರುವುದು. ಈ ಪರಿಷತ್ತಿಗೆ ಸರ್. ಡಿ. ಯಂ. ಪೆಟಿಟ್ ಕೂಡ ಒಟ್ಟು ೪ ಮಂದಿ ಗೃಹಸ್ಥರ ಪ್ರತಿನಿಧಿ ಮಂಡಲವು ಮುಂಬಯಿಯಿಂದ ಹೋಗುವುದು.

ಮದರಾಸಿನ ಗವರ್ನರರು:— ಮದರಾಸು ಸಂಸ್ಥಾನದ ಗವರ್ನರ ದೊರೆಗಳಾದ ಬಹುಮಾನಪಟ್ಟ ಲೋರ್ಡ ವಿಲ್ಲಿಂಗಡನ್ ದೊರೆಗಳವರು ತಮ್ಮ ಪತ್ನಿಗಳ ಸಮೇತ ಕಳೆದ ತಾರೀಕು ೯ಕ್ಕೆ ರಂಗೂನ್ ಪಟ್ಟಣವನ್ನು ಸೇರಿದರು.

ಬೆಂಗಳೂರಿಗೆ ಕೋಂಗ್ರೆಸ ಮುಖಂಡರ ಆಗಮನ:— ಓಲ್ ಇಂಡಿಯಾ ಕೋಂಗ್ರೆಸ್ ಡಿಪ್ಯುಟೇಶನಿನ ಮೆಂಬರರಾದ ಶ್ರೀಯುತ ರಾಜಗೋಪಾಲಾಚಾರ್ಯ, ರಾಜೇಂದ್ರ ಪ್ರಸಾದ, ದೇವದಾಸಗಾಂಧಿ, ಗಂಗಾಧರರಾವ್ ದೇಶಪಾಂಡೆ, ಜನಾಬ್ ಮೌಲಾನಾ ಮೊಹಮದ್ ಅಲಿ ಇವರು ಬರುವ ತಾರೀಕು ೨೧ಕ್ಕೆ ಬೆಂಗಳೂರಿಗೆ ತಲ್ಪುವರೆಂದು ನಿರೀಕ್ಷಿಸಿದೆ.

ಕೋನ್‌ಪೂರ್ ಮಿಲ್ಲಿನ ಮುಷ್ಕರ:— ಕೋನ್‌ಪುರ್ ವಿಕ್ಟೋರಿಯಾ ಮಿಲ್ಲಿನ ೧೫೦೦ ಮಂದಿ ಜನರು ಮುಷ್ಕರಹೂಡಿರುವರು.

ಮುಲ್‌ಟಾನ್ ಜೈಲುಗಳು:— ಮುಲ್‌ಟಾನಿನಲ್ಲಿ ಕೆಂಪ್‌ಬೆಲ್ ಪೂರ್‌ಜೈಲು ಮತ್ತು ಸೆಂಟ್ರಲ್ ಜೈಲು ಎಂಬ ಎರಡು ಜೈಲುಗಳಿರುವವು. ಈ ಜೈಲಿನಲ್ಲಿರುವ ಅಕಾಲಿಕೈದಿಗಳನ್ನು ಅಧಿಕಾರಿಗಳು ಯೋಗ್ಯವಾಗಿ ನಡಿಸುವುದಿಲ್ಲವಂತೆ. ಸೆಂಟ್ರಲ್ ಜೈಲಿನಲ್ಲಿ ಅನೇಕ ಕೈದಿಗಳು ಕಾಯಿಲೆಯಲ್ಲಿ ಬಿದ್ದಿರುವರು. ಒಬ್ಬಿಬ್ಬರು ಮಡಿದರು. ರೋಗಿ ಆಸ್ಪತ್ರೆಯಲ್ಲಿದ್ದು ಬದುಕುವುದು ಅಸಾಧ್ಯವಾದ ಸಂದರ್ಭದಲ್ಲಿ ಮಾತ್ರ ಕೈದಿಗಳನ್ನು ಬಿಡುಗಡೆಮಾಡುವರು. ಬೇಸಿಗೆಯ ಈ ಕಾಲದಲ್ಲೂ ಕೂಡ ಇಡೀ ದಿವಸ ಇವರನ್ನು ಬಿಸಿಲಿಗೆ ನಿಲ್ಲಿಸುವರು. [illegible] ಬೇಡುವಂತೆ ಮಾಡುವುದಕ್ಕಾಗಿ ಸ್ಮೃತಿ ತಪ್ಪುವ ವರೆಗೆ [illegible] ಹೊಡಿಯುವರು ಎಂದು ಮೊದಲಾದ ವರ್ತಮಾನವು ಹೊರಬಿದ್ದದೆ.

ಮೈಸೂರುಮಹಾರಾಜರು:— [illegible] ಹೊರಟ ಮೈಸೂರು ಮಹಾರಾಜರು ಕಳೆದ ತಾರೀಕು [illegible] ತಲ್ಪಿದರು.

ಅಹಮ್ಮದಾಬಾದ ಗಿರಣಿಗಳ ಮುಷ್ಕರ:— ಇನ್ನು ಎರಡು ವಾರದೊಳಗಾಗಿ ಗಿರಣಿ ಕೂಲಿಗಳ [illegible] ಮುಗಿದು ಅವರು ತಮಗೆ [illegible] ಗಿರಣಿಯ ಮ್ಯಾನೇಜರು ನಂಬಿರುವರು. ಆದರೆ ಕೂಲಿಗಳು ತಮ್ಮ ತಮ್ಮ ಊರುಗಳಿಗೆ ಹೋಗುವುದನ್ನು ನಿಲ್ಲಿಸಲಿಲ್ಲ. ಈ ವರೆಗೆ ಕೂಲಿಗಳು ಸ್ಟೇಶನುಗಳಿಂದ ಪಡೆದ ಟಿಕೇಟುಗಳ ಆಧಾರದಿಂದ ಒಟ್ಟು ೨೦,೦೦೦ ಕೂಲಿಗಳು ಅಹಮ್ಮದಾಬಾದನ್ನು ಬಿಟ್ಟುಹೋದರೆಂದು ತಿಳಿದು ಬರುತ್ತದೆ. ಅಹಮ್ಮದಾಬಾದಿನಲ್ಲಿ ಉಳಿದಿರುವ ಕೂಲಿಗಳಿಗೆ ಲೇಬರ್ ಆಫೀಸಿನವರು ಉದ್ಯೋಗವನ್ನು ಕೊಡುತ್ತಿದ್ದಾರೆ.

ರಂಗೂನ್:— ಕಳೆದ ತಾ. ೯ರ ವರೆಗೆ ಎರಡು ದಿನಗಳಲ್ಲಿ ತಿಲಕ ಸ್ವರಾಜ್ಯ ಫಂಡಿಗೆ ರಂಗೂನಿನಲ್ಲಿ ರೂ ೪೯,೦೦೦ ಒಟ್ಟುಗೂಡಿದೆ. ಕಳೆದ ತಾರೀಕು ೮ರಲ್ಲಿ ನೆರೆದ ಒಂದು ಮೀಟಿಂಗಿನಲ್ಲಿ ಶ್ರೀಯುತ ಪಟೇಲ ಮತ್ತು ಶ್ರೀಯುತ ಶೇರವಾನಿಯವರು ಭಾಷಣವನ್ನು ಮಾಡಿದರು. ಪಂಜಾಬಿನ ಪರಿಸ್ಥಿತಿಯನ್ನು ವರ್ಣಿಸಿದ ಬಳಿಕ ಅವರು [illegible] ಸಹಾಯವನ್ನು ನೀಡಬೇಕಾಗಿ ವಿನಂತಿಮಾಡಿಕೊಂಡರು. ಕೂಡಲೇ ರೂ ೩,೫೦೦ ಜಮೆಯಾಯಿತು.

ಡಿಲ್ಲಿಯಲ್ಲಿ ಪ್ಲೇಗ್ ರೋಗ:— ಡಿಲ್ಲಿಯಲ್ಲಿ ಪ್ಲೇಗು ರೋಗವು ಬಹಳ ಉಲ್ಬಣ ಸ್ಥಿತಿಯಲ್ಲಿದೆ. ದಿನಕ್ಕೆ ೬೦ರಿಂದ ೧೦೦ರ ವರೆಗೆ ಜನರು ಸಾಯುತ್ತಿದ್ದಾರೆ. ಈ ಪಟ್ಟಣದ ಎಲ್ಲಾ ಶಾಲಾ ಕಾಲೇಜುಗಳನ್ನು ಮುಚ್ಚಿ ಬಿಡಬೇಕಾಗಿ ಹೆಲ್ತ ಆಫೀಸರರು ಎಚ್ಚರಿಸಿರುವರು. ಬರುವ ತಿಂಗಳ ಮಧ್ಯ ಭಾಗದ ವರೆಗೆ ಈ ರೋಗದ ಹಾವಳಿಯನ್ನು ತಗ್ಗಿಸುವುದು ಕಷ್ಟಸಾಧ್ಯವೆಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುವರು. [illegible] ಕಾರ್ಯವು ನಡಿಯುತ್ತಿದೆ. [illegible] ಎಲ್ಲಾ [illegible] ವಾರಗಳ ವರೆಗೆ ಮುಚ್ಚಿಡುವುದು ಅವಶ್ಯವೆಂದು [illegible]. ದಿನಕ್ಕೆ ಸರಾಸರಿ ೩೦೦ ಮರಣಗಳು ಆಗುವ ವರೆಗೆ [illegible] ಮುಚ್ಚುವುದು ಅಗತ್ಯವಿಲ್ಲವಂತೆ. [illegible]

ಅನುಕ್ರಮಣಿಕೆ.

ಅಗ್ರಲೇಖ:—
ಕೌನ್ಸಿಲಿನ ಪ್ರಸ್ತಾಪಗಳು . . . ,,
ಸ್ಫುಟವಿಚಾರಗಳು.— ೬
೧. ಹಿಂದುಮುಸಲ್ಮಾನರ ಕಲಹ ೭
೨. ಉಪ್ಪಿನ ತೆರಿಗೆ ೩. ಹಿಂದುಸ್ಥಾನದೊಳಗಿನ ಕಾಮಗಾರರ ಮುಷ್ಕರ. ೪. ಸೋಲ್ಜರರ ಲೀಲೆಗಳು ,,
೫. ವಸಾಹತುಗಳಲ್ಲಿ ಹಿಂದಿಗಳ ಸ್ಥಿತಿ ,,
ಮಂಗಳೂರು— ೮
ವರ್ತಮಾನ ಸಂಗ್ರಹಗಳು:—
ಪರದೇಶ ವರ್ತಮಾನ, ಒಳದೇಶ ವರ್ತಮಾನ ೫
ದಕ್ಷಿಣ ಕನ್ನಡ—ಹೊಸಬೆಟ್ಟು, ಪುತ್ತೂರು, ಕಟಪಾಡಿ, ಕಾಸರಗೋಡು ಸುರತ್ಕಲ್ ೮

ಸ್ವದೇಶಾಭಿಮಾನಿ

ಶಕ ೧೮೫೨ ಚೈತ್ರ ಬ। ೧೫ಯು ಶುಕ್ರವಾರ

ಕೌನ್ಸಿಲಿನ ಪ್ರಸ್ತಾಪಗಳು.

ಮದರಾಸ್ ಕೌನ್ಸಿಲಿನ ಸದ್ಯದ ಅಧಿವೇಶನವು ಅಂತ್ಯವಾಗುವಾಗ ಲೋರ್ಡ ಎಲಿಂಗ್ಟನ್ ಸಾಹೇಬರು ಮುಂದಿನಂತೆ ಸೂಚಕವಾದ ಎರಡು ಮಾತುಗಳನ್ನಾಡಿದರು. "ಆಗೋಸ್ತ ತಿಂಗಳಲ್ಲಿ ಈ ಕೌನ್ಸಿಲಿನ ಒಂದು ಚಿಕ್ಕ ಅಧಿವೇಶನವು ಮಾತ್ರ ಇರುವದು. ಆ ಅಧಿವೇಶನದ ತರುವಾಯ ಪ್ರಕೃತದ ಕೌನ್ಸಿಲು ವಿಸರ್ಜಿತವಾಗುವದು. ಅಕ್ಟೋಬರದಲ್ಲಿ ಹೊಸ ಚುನಾವಣೆಗಳು ನಡೆದಾವು. ಈ ಕೌನ್ಸಿಲು ಅದರ ಸಂಪೂರ್ಣ ಮುದತಿನ ವರೆಗೆ ನಡೆಯುವದಕ್ಕಿಂತ ಈಗ ಹೇಳಿದ ಮೇರೆಗೆ ಇದನ್ನು ವಿಸರ್ಜಿಸಿದ್ದಲ್ಲಿ ಅದು ಸಾಮಾನ್ಯ ಆಡಳಿತೆಗೂ ಮತ್ತು ಹೊಸತಾಗಿ ಚುನಾಯಿಸಿ ಬಂದ ಸಭಾಸದರಿಗೂ ಹೆಚ್ಚು ಅನುಕೂಲವಾಗುವದು. ಯಾಕೆಂದರೆ ಬರುವ ವರುಷದ ಜಮಾಖರ್ಚಿನ ಚರ್ಚೆಯಲ್ಲಿ ಸಭಾಸದರಿಗೆ ಅನುಭವವನ್ನು ಪಡೆಕೊಳ್ಳಲು ಮೊದಲಿನ ಸಮಯವು ಸಹಾಯಕವಾಗುವದು." ಗವರ್ನರ ಸಾಹೇಬರ ಈ ಭಾಷಣದ ಮೇಲಿಂದ ಬರುವ ಆಗೋಸ್ತ ತಿಂಗಳ ಅನಂತರ ಈ ಕೌನ್ಸಿಲು ನಿಲ್ಲಲಿಕ್ಕಿಲ್ಲವೆಂದು ಸ್ಪಷ್ಟವಾಗುತ್ತದೆ. ಈಗಿನ ಕೌನ್ಸಿಲಿನ ಆಯುಷ್ಯದಲ್ಲಿ ನಿಯಮಕ್ಕನುಸರಿಸಿ ಹೇಳುವದಾದರೆ, ೫ ತಿಂಗಳು ಕಡಿಮೆ ಬಂದಂತಾಯಿತು. "ಶತಾಯುರ್ವೈ ಪುರುಷಃ" ಎಂದು ಶ್ರುತಿಯಲ್ಲಿ ಹೇಳಿದ್ದಂತೆ ಮನುಷ್ಯನಿಗೆ ನೂರು ವರುಷದ ಆಯುಷ್ಯವು ನಿಯಮಿತವಾಗಿದೆಯಾದರೂ, ಆ ಅವಧಿಯನ್ನು ಪೂರೈಸುವದಕ್ಕಿಂತ ಮುಂಚೆಯೆ ಅನೇಕರು ತಮ್ಮ ಐಹಿಕಯಾತ್ರೆಯನ್ನು ಹೇಗೆ ಮುಗಿಸುವರೊ ಹಾಗೆಯೆ ಈಗಿನ ನಮ್ಮ ಮದರಾಸ್ ಕೌನ್ಸಿಲು ತನ್ನ ೫ ತಿಂಗಳ ಆಯುಷ್ಯವನ್ನು ಕಳೆದುಕೊಂಡು ಅಸ್ತಮಿಸುತ್ತಿದೆ. "ಕಾಕೋಽಪಿ ಜೀವತಿ ಚಿರಾಯ ಬಲಿಂಚ ಭುಂಕ್ತೇ" ಎಂದು ಸುಭಾಷಿತೋಕ್ತಿಯಲ್ಲಿ ಹೇಳಿದ ಹಾಗೆ ಲೋಕೋಪಯುಕ್ತವಾದ ಯಾವ ಕಾರ್ಯವನ್ನೂ ಮಾಡದ ವ್ಯಕ್ತಿಯು ಅಥವಾ ಸಂಸ್ಥೆಯು ಚಿರಕಾಲ ಆಯುಷ್ಯವನ್ನು ಪಡೆಕೊಳ್ಳುವದರಿಂದ ಲೋಕನಿಂದೆಯು ಮಾತ್ರವುಂಟಾಗುವದು. ಇತರ ಯಾವ ಪ್ರಯೋಜನವೂ ಇಲ್ಲ. ಅದೇ ಪೂರ್ವಕ್ಷಿತಿಜದ ಮೇಲೆ ತೇಜಃಪುಂಜವಾಗಿ, ಕ್ಷಣೈಕವೆ ಆಗಲಿ, ಪ್ರಕಾಶಿಸುವ ತೇಜೋಗೋಲವು ಸರ್ವ ದೃಷ್ಟಿಯಿಂದ ಧನ್ಯವಾಗಿರುವದು. ಹಾಗೆಯೇ ಈಗಿನ ನಮ್ಮ ಮದರಾಸು ಕೌನ್ಸಿಲು, ಹಲವು ವಿಧದ ಕಾನೂನುಗಳನ್ನು ಮಾಡಿ ಜಾತಿಜಾತಿಗಳಲ್ಲಿ ವೈಷಮ್ಯವನ್ನು ಬೆಳೆಸುವ ನಮ್ಮ ಮದರಾಸ್ ಕೌನ್ಸಿಲು, ಸರಿಯಾದ ಪ್ರತಿಕಾರವನ್ನು ಮಾಡಲಾಗದೆ ಸರಕಾರದ ಪ್ರತಿಕೂಲ ಕಾನೂನುಗಳನ್ನು ಮತ್ತು ಖರ್ಚಿನ ಹೊರೆಯನ್ನು ತಲೆಯ ಮೇಲಿಟ್ಟುಕೊಳ್ಳುವ ನಮ್ಮ ಮದರಾಸ ಕೌನ್ಸಿಲು ನಿಯಮಿತವಾದ ಅವಧಿಗಿಂತ ೫ ತಿಂಗಳ ಮುಂಚೆಯೆ ತನ್ನ ಅವತಾರವನ್ನು ಮುಗಿಸುತ್ತದಾದರೆ ದೇಶಹಿತದ ದೃಷ್ಟಿಯಿಂದ ಅದು ಶ್ಲಾಘನೀಯವೆ ಸರಿ.

⁂

ಈಗ ಬೇಗನೆ ವಿಸರ್ಜಿಸಲ್ಪಡುವ ಕೌನ್ಸಿಲು, ಮುಂದೆಯಾದರೂ ದೇಶಕಾರ್ಯೋಪಯುಕ್ತವಾಗಿಯೂ, ಶ್ಲಾಘನೀಯವಾಗಿಯೂ ಆಗಬೇಕಾದರೆ ಈಗಿನಿಂದಲೆ ಸ್ವರಾಜ್ಯ ಪಕ್ಷವು ಪ್ರಯತ್ನಿಸಬೇಕು. ಆದರೆ ಈ ತಿಂಗಳ ೩೦ರ ವರೆಗೆ ಕೌನ್ಸಿಲ್ ಪ್ರಸ್ತಾಪವನ್ನೆತ್ತಕೂಡದೆಂದು ಅಲಹಾಬಾದದಲ್ಲಿಯ ಒಪ್ಪಂದದ ಶರ್ತವಿದೆಯಲ್ಲವೆ? ಎಂದು ಹಲವರು ಇಲ್ಲಿ ಆಕ್ಷೇಪಿಸದೆ ಇರರು. ಆದರೆ ಯಾವದಾದರೂ ಒಂದು ಪ್ರಾಂತದಲ್ಲಿ ನಿಯಮಿತ ಮುದತಿಗಿಂತ ಮುಂಚೆಯೆ ಹೊಸ ಚುನಾವಣೆಯು ಬರುವದಾದರೆ ಈ ಏಪ್ರಿಲ್ ೩೦ರ ನಿರ್ಬಂಧವಿಲ್ಲವೆಂದು ಅದೆ ಒಪ್ಪಂದದಲ್ಲಿ ಅಪವಾದ ಶರ್ತವು ಸೇರಿಸಲ್ಪಟ್ಟಿದೆ. ಆದ್ದರಿಂದ ಸ್ವರಾಜ್ಯಪಕ್ಷವು ನ್ಯಾಯವಾಗಿ ಕೌನ್ಸಿಲ್ ಪ್ರಸ್ತಾಪದ ಶರ್ತದಿಂದ ಬಿಡುಗಡೆಯನ್ನು ಹೊಂದಿದೆ. ಇನ್ನೊಂದು ಪಕ್ಷದವರು ಅಲಹಾಬಾದದಲ್ಲಿ ಶರ್ತಗಳನ್ನು ಒಪ್ಪಿಕೊಂಡರೂ ಹಲವು ಕಡೆಗಳಲ್ಲಿ ಅವುಗಳನ್ನು ಉಲ್ಲಂಘಿಸಿದ್ದಾರೆ. ಆದರೂ ಸ್ವರಾಜ್ಯಪಕ್ಷವು ಏಪ್ರಿಲ್ ೩೦ರ ವರೆಗಿನ ಶರ್ತವನ್ನು ಪ್ರಾಮಾಣಿಕತನದಿಂದ ಪಾಲನೆಮಾಡಬೇಕಾದ್ದು ಉಚಿತವೇ ಸರಿ. ನಮ್ಮ ಮದರಾಸಿನ ಮಟ್ಟಿಗೆ ಮೇಲೆ ಸೂಚಿಸಿದಂತೆ ಕೌನ್ಸಿಲ್ ಚುನಾವಣೆಯು ಬೇಗನೆ ಪ್ರಾರಂಭಿಸುವದಿದ್ದರಿಂದ ಅದರ ಪೂರ್ವ ಸಿದ್ಧತೆಗೋಸ್ಕರ ಸ್ವರಾಜ್ಯ ಪಕ್ಷದ ಸಂಘಟನೆ, ಚಳವಳಿ ಮುಂತಾದ್ದು ಅವಶ್ಯಕವು.

⁂

ಪ್ರಕೃತ ಕೌನ್ಸಿಲು ಬೇಗನೆ ಮುರಿದುಹೋಗುವದರಿಂದ ಬೇರೆ ಬೇರೆ ಜಿಲ್ಲೆಗಳ ಪರವಾಗಿ, ಬೇರೆ ಬೇರೆ ಮತದಾರ ಸಂಘಗಳ ಪರವಾಗಿ ಉಮೇದುವಾರರಾಗಿ ನಿಲ್ಲಲು ಬೇರೆಬೇರೆ ಗೃಹಸ್ಥರು ಮುಂದೆಬರುತ್ತಿದ್ದಾರೆ. ಅವರು ತಮ್ಮ ಪ್ರಕಟನಾ ಪತ್ರಗಳಲ್ಲಿ ತಾವು ಮಾಡತಕ್ಕ ಕಾರ್ಯಗಳನ್ನು ಮತದಾರರ ಮುಂದೆ ಸೂಚಿಸುತ್ತಿದ್ದಾರೆ. ಈ ಸಮಯದಲ್ಲಿ ಮತದಾರರ ಮೇಲೆ ತುಂಬಾ ಮಹತ್ವದ ಜವಾಬ್ದಾರಿಯು ಬಂದಿರುವದು. ದೇಶದಲ್ಲಿ ಕೌನ್ಸಿಲ್ ವಿರೋಧಿಗಳು, ಕೌನ್ಸಿಲ್ ವಾದಿಗಳು ಎಂದು ಎರಡು ಪಕ್ಷಗಳಿದ್ದಂತೆ ತೋರಿದರೂ ನಿಜವಾಗಿ ಈ ಎರಡು ಪಕ್ಷಗಳಲ್ಲ. ಕೌನ್ಸಿಲ್ ವಾದಿಗಳಲ್ಲಿ ಶಾಂತಪಕ್ಷದ ಧ್ಯೇಯವು, ಕಾರ್ಯಕ್ರಮವು ಬೇರೆ ಸ್ವರಾಜ್ಯ ಪಕ್ಷದ ಕಾರ್ಯಕ್ರಮವು, ಧ್ಯೇಯವು ಬೇರೆ. ಆದ್ದರಿಂದ ಅವೆರಡು ಒಂದೆ. ಕೌನ್ಸಿಲಿಗೆ ಹೋಗುವವರು ಯಾರಾದರೇನು ಅವರಿಗೆ ನಾವು ಮತವನ್ನು ಕೊಟ್ಟರೆ ಸರಿ ಎಂದು ಮತದಾರರು ಭಾವಿಸಬಾರದು. ಅಥವಾ ಈ ಜಿಲ್ಲೆಯಲ್ಲಿ ಇಂತಿಂಥ ಕೊರತೆಗಳಿವೆ, ಸಂಕಷ್ಟಗಳಿವೆ ಅವುಗಳನ್ನು ಪರಿಹರಿಸಲು ತಾನು ಯತ್ನಿಸುವೆನು ಎಂದು ಒಬ್ಬ ಉಮೇದವಾರನು ಪ್ರಕಟಿಸಿದ ಮಾತ್ರದಿಂದ ಮತದಾರರು ಅವನಿಗೆ ತಮ್ಮ ಮತಗಳನ್ನು ಕೊಡಕೂಡದು. ಒಂದು ಜಿಲ್ಲೆಯ ಸಂಕಷ್ಟಗಳು ಎಷ್ಟೆ ಆದರೂ ಅಲ್ಪವೆ ಸರಿ. ದೇಶದ ಸ್ವರಾಜ್ಯದ ಯಾವ ಮಹಾ ಸಂಕಷ್ಟವಿದೆಯೊ ಅದನ್ನು ಈ ಉಮೇದ್ವಾರನು ಎಷ್ಟರ ಮಟ್ಟಿಗೆ ಅನುಭವಿಸುತ್ತಾನೆ ಎಂಬುದನ್ನು ಮತದಾರರು ಮುಖ್ಯವಾಗಿ ನೋಡಬೇಕಾದ್ದು. ಬೇರೆ ಮಾತುಗಳಿಂದ ಹೇಳುವುದಾದರೆ ನಿಂತ ಉಮೇದ್ವಾರನು ಬರೆ ತನ್ನ ವ್ಯಕ್ತಿಯ ಮತಗಳನ್ನ ಕಟ್ಟಿಕೊಂಡು ನಿಂತಿರುವನೊ ಅಥವಾ ಸ್ವರಾಜ್ಯವೆ ಮುಖ್ಯ ಧ್ಯೇಯ ಮತ್ತು ಕಾಯಿದೆಶೀರಾದ ಸಕ್ರಿಯ ಪ್ರತೀಕಾರವೆ ಮುಖ್ಯ ಮಾರ್ಗವೆಂದಿಟ್ಟುಕೊಂಡ ಸ್ವರಾಜ್ಯ ಪಕ್ಷಕ್ಕೆ ಸೇರಿದವನೊ ಎಂಬುದನ್ನು ಸರಿಯಾಗಿ ಪರಿಶೀಲಿಸಿ ಮತದಾರರು ಸ್ವರಾಜ್ಯ ಪಕ್ಷದವನಿಗೆ ತಮ್ಮ ಮತಗಳನ್ನು ಕೊಡಬೇಕು. ಒಂದೊಂದು ಜಿಲ್ಲೆಗೆ, ಒಂದೊಂದು ಜಾತಿವರ್ಗಕ್ಕೆ ಮತ್ತು ಒಂದೊಂದು ಮತದಾರ ಸಂಘಕ್ಕೆ ಬೇರೆ ಬೇರೆ ಕಷ್ಟಗಳಿವೆ ಎಂಬುದು ನಿಜ. ಆದರೆ ಇವೆಲ್ಲ ಕಷ್ಟಸಂಕಷ್ಟಗಳು ಒಂದಿ ಸ್ವರಾಜ್ಯದ ಒಂದೆ ಪ್ರಶ್ನೆಯಲ್ಲಿ ಮುಳುಗಿಹೋಗುತ್ತವೆ. ಈ ಮುಖ್ಯ ಪ್ರಶ್ನೆಯನ್ನು ಕುರಿತು ಉಮೇದ್ವಾರನು ಯಾವ ಪಕ್ಷದವನೆಂದು ಮತವನ್ನು ಕೊಡುವಾಗ ಮತದಾರರು ಮುಖ್ಯವಾಗಿ ನೋಡಬೇಕು. ಉದಾಹರಣಾರ್ಥವಾಗಿ, ನಮ್ಮ ಜಿಲ್ಲೆಯಲ್ಲಿ ಸರ್ವೇ ಸೆಟ್ಲುಮೆಂಟಿನ ವಿಷಯ, ಫೊರೆಸ್ಟು ನಿಬಂಧನೆ, ಇತ್ಯಾದಿ ಅನೇಕ ಸ್ಥಳಿಕ ಸಂಕಷ್ಟಗಳಿವೆ. ಮತ್ತು ಈ ಸಂಕಷ್ಟಗಳನ್ನು ಪರಿಹರಿಸಲು ಎದೆತಟ್ಟಿಕೊಂಡು ಉಮೇದ್ವಾರರು ಮುಂದೆ ಬರುತ್ತಾರಾದರೂ ಅವನು ಸ್ವರಾಜ್ಯ ಪಕ್ಷದವನೊ ಎಂದರೆ ಅಸಹಕಾರವಾದಿಯೊ ಹೇಗೆ ಎಂಬುದನ್ನು ನೋಡಿ, ಅಸಹಕಾರವಾದಿಯಾದರೆ ಮಾತ್ರ ಅವನಿಗೆ ಮತದಾರರು ತಮ್ಮ ಮತವನ್ನು ಕೊಡಬೇಕು.

⁂

ಅಸಹಕಾರದ ಮುಖ್ಯ ಉದ್ದೇಶವು ಕೌನ್ಸಿಲುಗಳ ನಂಜಿನ ಹಲ್ಲುಗಳನ್ನು ಕೀಳುವುದಾಗಿದೆ. ಮಹಾತ್ಮಾಜಿಯವರು ಇದೇ ಉದ್ದೇಶದಿಂದ ಕೌನ್ಸಿಲ್ ಬಹಿಷ್ಕಾರವನ್ನು ಜಾಹೀರಪಡಿಸಿದ್ದರು. ಸ್ವರಾಜ್ಯ ಪಕ್ಷದವರು ಈಗ ಇದೆ ಉದ್ದಿಷ್ಟ ಹೇತುವನ್ನು ಸಾಧಿಸಲು ಕೌನ್ಸಿಲುಗಳನ್ನು ಆಕ್ರಮಿಸಿ ಅದರ ವಿಷದ ಹಲ್ಲುಗಳನ್ನ ಬೇರುಸಹಿತ ಕೀಳಲು ಕೌನ್ಸಿಲ್ ಪ್ರವೇಶವನ್ನು ತಮ್ಮ ಕಾರ್ಯಕ್ರಮದಲ್ಲಿ ಸೇರಿಸಿಕೊಂಡಿರುವರು. ಚುಟುಕಿನಿಂದ ಹೇಳುವುದಾದರೆ, ತತ್ವತಃ ಮತ್ತು ಕಾರ್ಯತಃ ಅಸಹಕಾರಿಗಳು ಕೈಹಿಡಿಯುವುದೆಲ್ಲ ಪಾಣಿಗ್ರಹಣವಲ್ಲ. ವಿವಾಹದಲ್ಲಿ ವಧೂವರರು ಕೈಹಿಡಿದುಕೊಳ್ಳುವುದು ಪಾಣಿಗ್ರಹಣವಾದರೂ ಯುದ್ಧದಲ್ಲಿ ಒಬ್ಬನ ಕೈಯನ್ನು ಇನ್ನೊಬ್ಬನು ಹಿಡಿಯುವುದು ಪಾಣಿಗ್ರಹಣವಲ್ಲ. ಅಸಹಕಾರವಾದರೂ ಹೀಗೆಯೇ ಸರಿ. ಕ್ಲಬ್ಬುಗಳಲ್ಲಿ ಒಟ್ಟಿಗೆ ಸೇರುವುದು ಸಹಕಾರವಾದರೂ, ಪ್ರತಿರೋಧಿಸಲು ಒಬ್ಬನ ಮನೆಯನ್ನು ಇನ್ನೊಬ್ಬನು ನುಗ್ಗಿದರೆ ಅದು ಸಹಕಾರವಾಗದು. ಅದು ತತ್ವತಃ ಮತ್ತು ಕಾರ್ಯತಃ ಅಸಹಕಾರವೆ ಸರಿ. ಈ ತಾರತಮ್ಯವನ್ನು ಚೆನ್ನಾಗಿ ಮನಸ್ಸಿಗೆ ತಂದು ಮತದಾರರು ಕೌನ್ಸಿಲುಗಳಲ್ಲಿ ಕೂಡ ಉಪರೋಧಿಸಿ ನೋಕರ ಶಾಹಿಯನ್ನು ದಾರಿಗೆ ತರಲು ನಿಶ್ಚಯಿಸಿಕೊಂಡ ಕರ್ಮಯೋಗಿಗಳಾದ ಯಾವ ಕಡು ಅಸಹಕಾರಿಗಳಿರುವರೊ ಅಂಥವರ ಸ್ವರಾಜ್ಯ ಪಕ್ಷದ ಉಮೇದ್ವಾರರನ್ನು ಚುನಾಯಿಸಿಕೊಡುವುದು ಸ್ವರಾಜ್ಯಾಕಾಂಕ್ಷಿಗಳ ಪವಿತ್ರವಾದ ಕರ್ತವ್ಯವಾಗಿದೆ. ಶರೀರದಲ್ಲಿ ಉದ್ಭವಿಸಿದ ವ್ಯಾಧಿಯೊಡನೆ ಅಸಹಕಾರವನ್ನು ಮಾಡಬೇಕಾದರೆ, ಆ ವ್ಯಾಧಿ ಇದ್ದಲ್ಲಿಗೆ ಔಷಧವನ್ನು ಕಳುಹಿಸಲಿಬೇಕು. ಅಂಥ ಸಂದರ್ಭದಲ್ಲಿ ಶರೀರದೊಳಗೆ ಔಷಧವನ್ನು ಸೇರಿಸುವುದು ಸಹಕಾರವಾಗುತ್ತದೆ ಎಂದು ಹೇಳಿ ಔಷಧವನ್ನು ಸೇವಿಸದೆ ಇದ್ದರೆ ವ್ಯಾಧಿಯು ಪ್ರಬಲವಾಗಿ ಇಡೀ ಶರೀರವನ್ನೆ ನಾಶಪಡಿಸುವುದು. ಅದ್ದರಿಂದ ಆ ವ್ಯಾಧಿಯನ್ನು ನಿವಾರಿಸಲು ಗುಣ ಮತ್ತು ಶಕ್ತಿಯುಳ್ಳ ಔಷಧವನ್ನು ವ್ಯಾಧಿಯೊಡನೆ ಜೊತೆಗೊಳಿಸಿದರೆ ಅದು ಎಂದೂ ಸಹಕಾರವಾಗುವುದಿಲ್ಲ. ಆದ್ದರಿಂದಲೆ ಸ್ವರಾಜ್ಯ ಪಕ್ಷದ ಅಸಹಕಾರಿಗಳು ಬರುವ ಚುನಾವಣೆಯ ಎಲ್ಲ ಸ್ಥಾನಗಳನ್ನು ಆಕ್ರಮಿಸಿದ್ದಾದರೆ ನೋಕರಶಾಹಿಯ ನಂಜಿನ ದಾಡೆಗಳನ್ನು ಮುರಿಯುವುದರಲ್ಲಿ ಕೆಲವು ಮಟ್ಟಿಗಾದರೂ ಯಶಸ್ವಿಯಾದಾರು.

⁂

ಕೌನ್ಸಿಲು ಪ್ರಸ್ತಾಪಗಳಲ್ಲಿ ಒಂದು ಮಾತು ಹೇಳಬೇಕಾಗಿದೆ. ಹಿಂದು ರಿಲಿಜಸ್ ಎನ್‌ಡೌಮೆಂಟ ಬೀಲು ಪಾಸಾದ ಬಳಿಕ ಈಗಿನ ಕೆಲವು ಶಾಂತಪಕ್ಷದ ಸಭಾಸದರಿಗೆ ಪ್ರಸೂತಿ ವೈರಾಗ್ಯದಂತೆ ಕೌನ್ಸಿಲು ಅಸಹಕಾರವು ದೃಷ್ಟಿ ಮುಂದೆ ಬರಹತ್ತಿದೆ. "ಬ್ರಾಹ್ಮಣೇತರ ಮಂತ್ರಿಮಂಡಲದ ಪ್ರಾಬಲ್ಯದಿಂದ ರಿಲಿಜಸ್ ಎನ್‌ಡೌಮೆಂಟ್ ಬೀಲು ಪಾಸಾಗಿ ಹೋಯಿತು. ಅಂಥ ಕಡೆಯಲ್ಲಿ ನಾವು ಎಂದರೆ ಬ್ರಾಹ್ಮಣರು ಪುನಃ ಕೌನ್ಸಿಲನ್ನು ಯಾಕೆ ಸೇರಬೇಕು. ಅದನ್ನು ಬಹಿಷ್ಕರಿಸೋಣ!" ಎಂದು ಹಲವು ಬ್ರಾಹ್ಮಣ ಸಭಾಸದರು ನೆನಸಿಕೊಂಡು ಈ ಅರ್ಥದ ಒಂದು ಪ್ರಕಟಣೆಯನ್ನು ಹೊರಡಿಸುವವರಿದ್ದರೆಂದು ತಿಳಿದುಬರುತ್ತದೆ. ಪರಂತು ಮೇಲಿನ ಉದ್ದೇಶದಿಂದ ಕೌನ್ಸಿಲನ್ನು ಬಹಿಷ್ಕರಿಸುವುದರ ಅರ್ಥವು ನಮ್ಮ ದೇಶಬಂಧುಗಳಾದ ಅಬ್ರಾಹ್ಮಣರೊಡನೆ ಅಸಹಕಾರಮಾಡಿದಂತಾಗುತ್ತದೆಯಲ್ಲದೆ ಸರಕಾರದೊಡನೆ ಅಸಹಕಾರವಾಗುವುದಿಲ್ಲ. ಆದರೆ ಅಬ್ರಾಹ್ಮಣರೊಡನೆ ಬ್ರಾಹ್ಮಣರು ಅಸಹಕಾರಮಾಡುವುದು ಕೇವಲ ತಪ್ಪಾಗಿದೆ. ಈ ಹೊತ್ತು ಮಂತ್ರಿಮಂಡಲದಲ್ಲಿ ಅಧಿಕೃತವಾದ ಪಕ್ಷದವರು ಬ್ರಾಹ್ಮಣೇತರ ವರ್ಗದ ನಿಜವಾದ ಪ್ರತಿನಿಧಿಗಳಲ್ಲ. ಎಲ್ಲ ಬ್ರಾಹ್ಮಣೇತರರಿಗೆ ಈಗಿನ ಕೃತಿಗಳು ಮಾನ್ಯವಿವೆ ಎಂದು ತಿಳಿಯಬಾರದು. ಈ ಹೊತ್ತು ಅಸಹಾನುಭೂತಿಯ ಪಕ್ಷವು ಅಧಿಕೃತವಾಗಿದ್ದರೂ ನಾಳೆ ದೇಶಹಿತಚಿಂತಕವಾದ ಸತ್ಯ ಬ್ರಾಹ್ಮಣೇತರ ಪಕ್ಷವು ಮುಂದೆ ಬರಬಹುದು. ಹೀಗಿರುವುದರಿಂದ ಕೌನ್ಸಿಲಿನ ಮುಂದಿನ ಚುನಾವಣೆಯಲ್ಲಿ ಬ್ರಾಹ್ಮಣರ ಅಸಹಕಾರವು ಅದೂರದರ್ಶಿತೆಯದ್ದೂ ವಿವೇಕಹೀನತೆಯದ್ದೂ ಆಗದೆ ಇರಲಿಕ್ಕಿಲ್ಲ. ಮಹಾತ್ಮಾಜಿಯವರ ಮತದಂತೆ ಅಸಹಕಾರವನ್ನು ಸರಕಾರದೊಡನೆ ಆತ್ಮಶುದ್ಧಿಗಾಗಿ ಮಾಡಬೇಕಾದ್ದು. ನಮ್ಮ ಜನರೊಡನೆಯೆ ಅದನ್ನು ಮಾಡುವುದು ಆತ್ಮಶುದ್ಧಿಯಲ್ಲ, ಆತ್ಮಘಾತದ್ದಾಗಿದೆ. ಆದ್ದರಿಂದ ಈ ಆಲೋಚನೆಯನ್ನು ಅವಸರದ ಬ್ರಾಹ್ಮಣಬಂಧುಗಳು ಬಿಟ್ಟುಬಿಡಬೇಕು. ಸಾರಾಂಶ ಹೊಸ ಕೌನ್ಸಿಲಿನ ಚುನಾವಣೆಯು ಬೇಗನೆ ಬರುವುದಾದ ಕಾರಣ, ಪಕ್ಷಪರಪಕ್ಷಗಳ ಗುಣದೋಷಗಳ ವಾರ್ತೆಗೆ ಹೋಗದೆ ಮತದಾರರ ಹಿತಕ್ಕೆ ಬೇಕಾದ ಮಾತುಗಳೆಷ್ಟೊ ಅಷ್ಟನ್ನು ಮಾತ್ರ, ನಾವು ಈ ಹೊತ್ತು ಪ್ರಸ್ತಾಪಿಸಿರುವುದರಿಂದ ಮತದಾರರು ಇದರಿಂದ ಯೋಗ್ಯ ಬೋಧೆಯನ್ನು ಪಡೆಕೊಂಡಾರೆಂದು ನಂಬಿದ್ದೇವೆ.

ಸ್ಫುಟವಿಚಾರಗಳು.

೧. ಉತ್ತರ ಹಿಂದೂಸ್ಥಾನದಲ್ಲಿ, ವಿಶೇಷತಃ ಪಂಜಾಬ ಪ್ರಾಂತದಲ್ಲಿ ಹಿಂದೂಮುಸಲ್ಮಾನರ ಐಕ್ಯಕ್ಕೆ ಭಂಗ ಬರಹತ್ತಿದೆ. ವಸ್ತುತಃ ಪಂಜಾಬದ ರಾಜಕೀಯ ಚರಿತ್ರೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದವನು ಅಲ್ಲಿ ಮೊದಲಿನಿಂದಲೆ ಒಡಕುಂಟೆಂಬುದನ್ನು ತಿಳಿದಾನು. ಲೆಜಿಸ್ಲೇಟಿವ್ ಕೌನ್ಸಿಲುಗಳ ಜಾಗೆ, ಮುನ್ಸಿಪಾಲಿಟಿ ಲೋಕಲ್‌ಬೋರ್ಡುಗಳ ಸ್ಥಾನ, ಸರಕಾರಿನೋಕರಿಗಳು, ಶಾಲಾಕೊಲೇಜುಗಳ ಪ್ರವೇಶ ಮುಂತಾದ ವಿವಿಧ ಹಕ್ಕುಗಳನ್ನೂ, ಪ್ರಯೋಜನಗಳನ್ನೂ, ವಿಂಗಡಿಸುವಾಗ ಮಹಮ್ಮದೀಯರ ಮರ್ಜಿಯನ್ನು ಕಾದು ಅವು ವಿಂಗಡಿಸಲ್ಪಟ್ಟವೆ. ಹಿಂದೂಮುಸಲ್ಮಾನರು ಒಡಕನ್ನು ತಂದುಕೊಳ್ಳುವುದು ಯಾವಾಗಲೂ ಚಂದವಲ್ಲ. ಆದರೆ ಈ ತತ್ವದ ಮರ್ಮವನ್ನರಿಯದೆ ರಾಷ್ಟ್ರೀಯ ಸಭೆಗೆ ಎದುರಾಗಿ ಮುಸ್ಲಿಮ್ ಲೀಗು ಸ್ಥಾಪಿಸಲ್ಪಟ್ಟಿತು. ಬಳಿಕ ಅವರಲ್ಲಿ [illegible] ಹಲವು ವಿಚಾರಶೀಲರು 'ಇದು ಯುಕ್ತವಲ್ಲ'ವೆಂದು ನೆನಸಿ ಲಖನೌದಲ್ಲಿ ಎರಡೂ ಕಡೆಯವರ ಒಪ್ಪಿಗೆಯಿಂದ ಪರಸ್ಪರ ಒಪ್ಪಂದವನ್ನು ಮಾಡಿಕೊಂಡು ಎರಡೂ

ವರ್ಗದವರು ಅನ್ಯೋನ್ಯವಾಗಿ ಐಕ್ಯದಿಂದ ನಡಕೊಳ್ಳಹತ್ತಿದರು. ಪುನಃ ಮಹಾತ್ಮಾಜೀಯವರ ಪ್ರಯತ್ನದಿಂದ ಎರಡೂ ವರ್ಗಗಳಲ್ಲಿ ಐಕ್ಯವು ಇನ್ನಷ್ಟು ದೃಢವಾಯಿತು. ಹಿಂದು ಮುಹಮ್ಮದೀಯ ಐಕ್ಯದ ಈ ಪೂರ್ವಚರಿತ್ರೆಯನ್ನು ನಿರೀಕ್ಷಿಸಿದರೆ ಇವರಲ್ಲಿ ಪುನಃ ಒಡಕು ಹುಟ್ಟಬಾರದಿತ್ತು. ಆದರೆ ರಾಷ್ಟ್ರದ ದುರ್ದೈವದಿಂದ ಒಡಕಿನ ಬೇತಾಳನು ಪೂರ್ವಸ್ಥಾನದಲ್ಲಿ ಬಂದು ನಿಂತಿದ್ದಾನೆ! ಪಂಜಾಬದ ಮಟ್ಟಿಗೆ ಈ ಒಡಕು ಸ್ವಾಭಾವಿಕವಾಗಿ ಮುಂಚಿನಿಂದಲೆ ಇದೆಯಾದರೂ ಆರ್ಯಸಮಾಜದ ಸ್ವಾಮಿ ಶ್ರದ್ಧಾನಂದಜಿಯವರು ಮಾಲಕಾನ ಮುಹಮ್ಮದೀಯರನ್ನು ಹಿಂದೂಧರ್ಮದಲ್ಲಿ ಪರಾವರ್ತಿಸುತ್ತಿದ್ದ ಸಂಗತಿಯು, ಈಗ ಮುಖ್ಯವಾಗಿ ಉದ್ಬೋಧಕ ಕಾರಣವಾಗಿದೆ. ಆರ್ಯಸಮಾಜದ ಪತಿತಪರಾವರ್ತನದ ಈ ಕೃತ್ಯವು ನ್ಯಾಯವಾದ್ದೊ ಹೇಗೆ ಎಂಬ ಪ್ರಶ್ನೆಯು ಬೇರೆ. ತಥಾಪಿ ನಮ್ಮ ಪ್ರಿಯ ಬಂಧುಗಳಾದ ಮುಹಮ್ಮದೀಯರು ಇಷ್ಟು ಚಿಕ್ಕ ಸಂಗತಿಯಿಂದ ಸಂತಪ್ತರಾಗಿ ಹಿಂದುಗಳೊಡನೆ ಇರುವ ಐಕ್ಯವನ್ನು ಒಡೆದುಕೊಳ್ಳಲು ಹೊರಡುವುದರಿಂದ, ಆ ಐಕ್ಯವು ಗಾಜಿನ ಪಾತ್ರೆಯಂತೆ ಅತಿ ಕ್ಷುದ್ರನಿಮಿತ್ತದಿಂದ ಒಡೆದುಹೋಗತಕ್ಕದ್ದೊ ಹೇಗೆ ಎಂದು ಯಾರಿಗೂ ತೋರದೆ ಇರಲಿಕ್ಕಿಲ್ಲ. ಯಾರೂ ಯಾರನ್ನೂ ಒತ್ತಾಯದಿಂದ ಧರ್ಮಭ್ರಷ್ಟರನ್ನಾಗಿ ಮಾಡಬಾರದು. ಮತ್ತು ಒತ್ತಾಯದಿಂದ ಪೂರ್ವಧರ್ಮದಲ್ಲಿ ಕೂಡ ಯಾರನ್ನೂ ತರಬಾರದು. ಇದು ವಿಚಾರಸ್ವಾತಂತ್ರ್ಯದ ಯುಗವು. ಇದರಲ್ಲಿ ಒತ್ತಾಯವು ಅಸಮಂಜಸವು. ಈ ಒಂದು ಸಿದ್ಧಾಂತವನ್ನು ಸರಿಯಾಗಿ ತಿಳಕೊಂಡರೆ ಒಬ್ಬರನ್ನೊಬ್ಬರು ದ್ವೇಷಿಸುವ ಸಂದರ್ಭವು ಎಂದೂ ಬರಲಿಕ್ಕಿಲ್ಲ. ಈ ಎಲ್ಲ ವಿಷಯಗಳನ್ನು ಆಲೋಚನೆಗೆ ತಂದು ಪಂಜಾಬದಲ್ಲಿ ಹಿಂದು ಮತ್ತು ಮುಹಮ್ಮದೀಯರ ಮುಖಂಡರು ಮತ್ತು ಸ್ವರಾಜ್ಯಭಕ್ತ ಚಿತ್ತರಂಜನದಾಸರು, ಪಂಡಿತ ಮೋತಿಲಾಲರು, ಶ್ರೀಮತಿ ಸರೋಜಿನಿಯವರು, ಮೌಲಾನಾ ಅಬ್ದುಲ್ ಕಲಮ್ ಅಝಾದ್, ಡೊ. ಅನಸಾರಿ, ಹಕೀಮ ಅಜಮಲ್‌ಖಾನ ಮುಂತಾದ ಮಾನ್ಯ ಪ್ರಮುಖರು ಸೇರಿ, ಎರಡೂ ಕಡೆಯ ಅಂಭೋಣಗಳನ್ನು ಕೇಳಿ ಒಂದು ಇತ್ಯರ್ಥವನ್ನು ಹೊರಡಿಸುತ್ತಿದ್ದಾರೆ.

೨. ವ್ಯಾಸರಾಯ ರೇಡಿಂಗ ದೊರೆಗಳು ಉಪ್ಪಿನ ತೆರಿಗೆಯನ್ನು ತನ್ನ ಅಧಿಕಾರದಿಂದ ಮಂಜೂರುಮಾಡಿದ ಬಳಿಕ ಹಿಂದುಸ್ಥಾನದ ಲೋಕಮತವು ಕ್ಷುಬ್ಧವಾಗುವುದು ಸಹಜವೆ ಸರಿ. ವಿಲಾಯತಿಯಲ್ಲಿ ಕೂಡ ವ್ಯಾಸರಾಯರ ಈ ಕೃತ್ಯವು ಅನೇಕರಿಂದ ನಿಷೇಧಿಸಲ್ಪಡುತ್ತಿದೆ. ಹಿಂದುಸ್ಥಾನದ ಕಾಯಿದೆಯ ಸಂಸ್ಥೆಗಳಿಗೆ ಆದಾಯ-ಖರ್ಚಿನ ಸಂಪೂರ್ಣವಾದ ಅಧಿಕಾರವು ಸಿಗುವ ವರೆಗೆ ಹಿಂದುಸ್ಥಾನದ ನಿಜವಾದ ಹಿತವು ಸಾಧ್ಯವಾಗಲಿಕ್ಕಿಲ್ಲ. ವ್ಯಾಸರಾಯರು ತಾನು ಮಂಜೂರಾತನ್ನು ಕೊಡುವಾಗ ಆ ಮಂಜೂರಾತಿಗೆ ಹಿಂದುಸ್ಥಾನಹಿತದ ನೆವವನ್ನು ತೋರಿಸಿದಾಗ್ಯೂ, ಇಂಥ ಕೃತ್ಯದಿಂದ ಹಿಂದುಸ್ಥಾನದ ಅಭಿವೃದ್ಧಿಯಾಗುವುದಂತಿರಲಿ, ಸುಧಾರಣೆಗಳ ಕಾರ್ಯವು ಕೂಡ ಸಾಧ್ಯವಾಗದೆ ಕೊನೆಗೆ ಜನತೆಯಲ್ಲಿ ಅಸಂತೋಷವು ಮಾತ್ರ ಉಂಟಾದೀತೆಂದು ವಿಲಾಯತಿಯಲ್ಲಿ ತಿಳಿದ ಜನರು ಆಡಿಕೊಳ್ಳುತ್ತಿರುವರು. 'ಸೆಟರ್‌ಡೇ ರಿವ್ಯೂ' ಎಂಬ ಪತ್ರಿಕೆಯು ವ್ಯಾಸರಾಯರ ಈ ಸರ್ಟಿಫಿಕೇಶನಿನಿಂದ ಸರಿಯಾದ ಲೋಕಸತ್ತೆಯನ್ನು ಬಲಪಡಿಸಿದ್ದಂತೆಯೂ ಆಗಲಿಲ್ಲ; ಅಥವಾ ಏಕತಂತ್ರಿ ಕಾರಭಾರವನ್ನು ಸಂರಕ್ಷಿಸಿದ್ದಂತೆಯೂ ಆಗಲಿಲ್ಲ. ಆದರೆ ಇದರಿಂದ ಕೇವಲ ಅಪ್ರಿಯತೆಯನ್ನು ಮಾತ್ರ ಕಟ್ಟಿಕೊಂಡಂತಾಗಿದೆ ಎಂದು ಬರೆದಿರುವುದು. ಈ ಮೇರೆಗೆ ವಿಲಾಯತಿಯಲ್ಲಿ ಒಂದು ಕಡೆಯ ಲೋಕಮತವು ವ್ಯಕ್ತವಾಗುವಾಗ ಇನ್ನೊಂದು ಕಡೆಯು [illegible] ಸುಮ್ಮಗೆ ಕುಳಿತಿರುವರೆಂದು ತಿಳಿಯಬಾರದು. ಅವರು ಸಹ ಇಲ್ಲಿಯ ನೋಕರಶಾಹಿಯ ನೆಂಟಸ್ತಿಕೆಗೆ ಸೇರಿದವರಾದ ಕಾರಣ ವಿಲಾಯತಿಯಲ್ಲಿ ಇಲ್ಲಿಯ ನೋಕರಶಾಹಿಯ ಗಂಟೆಯನ್ನು ಬಾರಿಸುತ್ತಿದ್ದಾರೆ. ಇಂಥ ಈ ಶಿಷ್ಟಶಿರೋಮಣಿಗಳ ಮತದಿಂದ ಲೆಜಿಸ್ಲೇಟಿವ್ ಎಸೆಂಬ್ಲಿಯು ಉಪ್ಪಿನ ತೆರಿಗೆಯನ್ನು ನಿರಾಕರಿಸಿದ್ದೆ ಬಹು ಉದ್ಧಟತನದ್ದೆಂದು ಹೇಳುವರು. ಆದರೆ ಒಂಟಿಯ ಮೇಲೆ ಕುಳಿತು ಕುರಿಗಳನ್ನು ಕಾಯುವ ಈ ಬುದ್ಧಿಶಾಲಿಗಳಿಗೆ ಸ್ವಾರ್ಥದ ಮುಂದೆ ಅನ್ಯರ ಸುಖದುಃಖಗಳ ಪರಿಜ್ಞಾನವು ಎಳ್ಳಷ್ಟು ಕೂಡ ಆಗದೆ ಇದ್ದ ಪ್ರಯುಕ್ತ ಇಂಥ ಸಾಹಸದ ಮಾತುಗಳನ್ನಾಡಲು ಧೈರ್ಯವು ಬರುವುದು ಸಹಜವಾಗಿದೆ. ವಿಲಾಯತಿಯ ಶಿಷ್ಟರು ಮತಪ್ರತಿಪಾದನದಲ್ಲಿ ಧೈರ್ಯವನ್ನು ತೋರಿಸುವುದಾದರೆ ಇಲ್ಲಿಯು ಅವರ ನೆಂಟರು ಕಾನೂನುಗಳನ್ನು ಜಾರಿಮಾಡುವುದರಲ್ಲಿ ಧೈರ್ಯವನ್ನು ವ್ಯಕ್ತಗೊಳಿಸುವರು! ಆಗ ಇವರ ಧೈರ್ಯವನ್ನು ಹೊಗಳಬೇಕೊ, [illegible] ಎಂಬುದನ್ನು ವಾಚಕರೆ ನಿರ್ಣಯಿಸಲಿ.

೩. ಹಿಂದೂಸ್ಥಾನದಲ್ಲಿ ಕಾಮಗಾರರ (ಕೂಲಿಗಳ) ಅವಸ್ಥೆಯು ಎಷ್ಟರ ಮಟ್ಟಿಗೆ ಶೋಚನೀಯವಾಗಿದೆ ಎಂಬುದನ್ನು [illegible] ಆಗುತ್ತಿದ್ದ ಕೂಲಿಗಳ ಮುಷ್ಕರದ ಮೇಲಿಂದ ಸ್ಪಷ್ಟವಾಗುತ್ತದೆ. ಅಹಮ್ಮದಾಬಾದದಲ್ಲಿ ಕಾಮಗಾರರ ಮುಷ್ಕರದ ಪರಿಸ್ಥಿತಿಯು ಹೇಗಿದೆ ಎಂಬುದು ಇದರ ಹಿಂದೆ ಪ್ರಕಟಿಸಿದ ವಾರ್ತೆಯಿಂದ ಗೊತ್ತಾಗಿರಬಹುದು. ಅಹಮ್ಮದಾಬಾದದಲ್ಲಿ ೪೫ ಸಾವಿರ ಜನರು ಮುಷ್ಕರವನ್ನು ಹಾಕಿದ್ದಾಗ್ಯೂ ಈ ಮುಷ್ಕರಗಾರರು ಬಹು ಶಾಂತರೀತಿಯಿಂದ ವರ್ತಿಸುತ್ತಿದ್ದ ಕಾರಣ ಅವರ ಉದ್ದಿಷ್ಟ ಹೇತುವಿನ ಸಾಧ್ಯತೆಗೆ ಅವರ ಈ ವರ್ತನವು ತುಂಬಾ ಸಾಧಕವಾದೀತೆಂಬುದಕ್ಕೆ ಸಂದೇಹವಿಲ್ಲ. ಅಹಮ್ಮದಾಬಾದದಲ್ಲಿ ಯಾವ ರೀತಿಯಿಂದ ಕಾಮಗಾರರ ಮುಷ್ಕರವು ಬಿದ್ದಿರುವುದೊ ಹಾಗೆಯೆ ಮುಂಬಯಿ ಕಲ್ಕತ್ತಾ ಮುಂತಾದ ಕಡೆಗಳಲ್ಲಿ ಸಹ ಒಂದೆರಡು ಮುಷ್ಕರಗಳು ಬಿದ್ದಿರುವವು. ಶ್ರೀ. ಸ್ವರಾಜ್ಯಭಕ್ತರಾದ ಚಿತ್ತರಂಜನ ದಾಸರು ಕಾಮಗಾರರ ದುಃಸ್ಥಿತಿಯನ್ನು ಕುರಿತು ಯಾವ ವಿಧಾನವನ್ನು ಮಾಡಿರುವರೊ ಅದನ್ನು ನೋಡುವಾಗ ಇಂಥವರ ವ್ಯವಸ್ಥಿತವಾದ ಒಂದು ಸಂಸ್ಥೆಯನ್ನು ಏರ್ಪಡಿಸುವುದು ಅಗತ್ಯವಾಗಿದೆ. ನಾಲ್ಕು ಪ್ರಹರ ಕೈಕಾಲುಗಳನ್ನು ಸವೆದು, ಕೆಲಸಮಾಡಿ ಜೀವಿಸುವ ಬಾಂಧವರ ವಿಷಯವಾಗಿ ಕಾರ್ಖಾನೆಯ ಯಜಮಾನರಿಗೆ ಒಂದಿಷ್ಟು ದಯೆ ಹುಟ್ಟುವದಿಲ್ಲವಾದರೆ, ಅವರ ಶಾರೀರಕ ಪರಿಶ್ರಮದಿಂದ ಜೇಬಿನಲ್ಲಿ ಮತ್ತು ಪೆಟ್ಟಿಗೆಯಲ್ಲಿ ಧನಸಂಪತ್ತನ್ನು ತುಂಬಿಕೊಳ್ಳುವಾಗ ಒಂದಿಷ್ಟು ಸಕ್ರಿಯ ಸಹಾನುಭೂತಿಯನ್ನು ಆಪನ್ನ ಬಂಧುಗಳಿಗೆ ಕಾರ್ಖಾನದಾರರು ತೋರಿಸುವುದಿಲ್ಲವಾದರೆ ಆ ಬಡಜನರ ಗೋಳನ್ನು ಯಾರು ಕೇಳಬೇಕಾಯಿತು? ಆದ್ದರಿಂದ ಸ್ವರಾಜ್ಯದ ಪ್ರಶ್ನೆಯಲ್ಲಿ ಈ ಜನರ ಸಮಾವೇಶವಾಗುವುದು ಅತ್ಯಂತ ಹಿತಾವಹವೆಂಬುದಕ್ಕೆ ಅಡ್ಡಿ ಇಲ್ಲ. ಸ್ವರಾಜ್ಯ ಸಂಸ್ಥಾಪನೆಯ ಕಾರ್ಯದಲ್ಲಿ ಇವರನ್ನು ಉಪೇಕ್ಷಿಸಲಾಗದೆಂಬುದು ಈಗ ದೇಶದೊಳಗಿನ ವಿಚಾರವಂತರ ಆಲೋಚನೆಯಲ್ಲಿ ಬರಹತ್ತಿದೆ. ಇದು ಸುದೈವದ ಸಂಗತಿಯು. ಇಂಥ ಸಂದರ್ಭಗಳಲ್ಲಿ ಅಹಮ್ಮದಾಬಾದ, ಮುಂಬಯಿ, ಕಲ್ಕತ್ತಾ ಮುಂತಾದ ಮುಖ್ಯ ಮುಖ್ಯ ಕಡೆಗಳಲ್ಲಿ ಕಾಮಗಾರರ ಮುಷ್ಕರಗಳು ಬೀಳಹತ್ತಿ, ಅವರ ಕೂಲಿ, ಕೆಲಸದ ತಾಸುಗಳು, ರಜೆಯ ಸಮಯ ಇತ್ಯಾದಿ ಮಹತ್ವದ ಪ್ರಶ್ನೆಗಳ ಒಗಟು ಬಿಡಿಸಲ್ಪಡುತ್ತದೆ. ಅಲ್ಲವಾದರೂ ಅದನ್ನು ಬಿಡಿಸಲು ಇದೊಂದು ಸಹಾಯಕವಾಗುತ್ತದೆನ್ನಬಹುದು. ಕಾಮಗಾರರನ್ನು ಈಗಲೆ ಉಚಿತ ಹಕ್ಕುಗಳಿಂದ ಸ್ವಾಧೀನಪಡಿಸಿಕೊಳ್ಳುವದು ಹಿತಾವಹವು. ಇಲ್ಲವಾದರೆ ವಿಲಾಯತಿಯ ಮತ್ತು ಯುರೋಪಿನ ಕಾಮಗಾರ ಪರಿಸ್ಥಿತಿಯು ಸುಧಾರಿಸಿದ ಆ ವೃತ್ತಿಯನ್ನು ಹಿಂದುಸ್ಥಾನದಲ್ಲಿ ಹೊರಡಿಸಿದ್ದಂತಾದೀತು!

೪. ಯುರೋಪಿಯನ್ ಸೋಲ್ಜರರ ಕೆಲವು ಲೀಲೆಗಳನ್ನು ಪಠಿಸಿ ನಮ್ಮ ವಾಚಕರು ಕೃತಕೃತ್ಯರಾಗಬೇಕೆಂಬುದರಿಂದ ಅದನ್ನು ಮುಂದೆ ಬರೆಯಬೇಕಾಗುತ್ತದೆ. ಮಾರ್ಚ ತಾ. ೨೩ರಲ್ಲಿ ಶಿಕಂದರಬಾದದ ಡೇರೆಯಲ್ಲಿ ನಾಲ್ಕು ಜನ ಬಿಳೇ ಸೋಲ್ಜರರು 'ಮೊಂಟೆಗೊಮೆರಿ' ಎಂಬ ಹೊಟೇಲನ್ನು ನುಗ್ಗಿದರು. ವಿನೋದದಿಂದಲೊ ತಮಾಸೆಯಿಂದಲೊ ಎಂಬಂತೆ ಅವರು ಅಲ್ಲಿಯ ಸಾಮಾನುಗಳನ್ನ ಅವ್ಯವಸ್ಥಿತವಾಗಿ ಅತ್ತಿತ್ತ ಚದರಿ ಹಾಕಿದರು. ಅನಂತರ ಆ ನಾಲ್ಕು ಜನರಲ್ಲಿ ಮೂವರು ಆ ಹೊಟೇಲಿನಿಂದ ಹೊರಬಂದರು. ಮತ್ತು ಹೊರಬಂದ ಕೂಡಲೆ ಅವರಿಗೆ ಯಾವ ಮೊದಲನೆಯ ಮೋಟಾರು ಸಿಕ್ಕಿತೊ ಅದರಲ್ಲಿ ಒಳನುಗ್ಗಿ ಡ್ರೈವರನಿಗೆ ತಮ್ಮ ಡೇರೆಯ ಕಡೆಗೆ ಅದನ್ನು ಕೊಂಡುಹೋಗಲು ಒತ್ತಾಯಪಡಿಸಿದರು. ಈ ತುಂಟರು ಒಮ್ಮೆ ತಮ್ಮ ಡೇರೆಯನ್ನು ಸೇರಿದ ಬಳಿಕ ಅವರಿಂದ ಬಾಡಿಗೆಯ ಹಣವನ್ನು ವಸೂಲುಮಾಡುವುದು ಅಸಾಧ್ಯವೆಂಬದು ಡ್ರೈವರನಿಗೆ ಮುಂಚಿನ ಎಷ್ಟೊ ಸಾರಿಯ ಅನುಭವವಿದ್ದ ಕಾರಣ ಬಾಡಿಗೆಯನ್ನು ಮುಂಚಿನವಾಗಿ ಕೊಟ್ಟ ಹೊರತು ಮೋಟಾರನ್ನು ನಡಿಸಲಾಗುವುದಿಲ್ಲವೆಂದು ಅವನು ಅಲ್ಲಗಳೆದನು. ಪರಂತು ಈ ತುಂಟರು ಬಾಡಿಗೆಯನ್ನೂ ಕೊಡಲೊಲ್ಲರು, ಮೋಟಾರನ್ನೂ ಬಿಡಲೊಲ್ಲರು! ಇಷ್ಟೆ ಅಲ್ಲ, ಇವರು ಆ ಡ್ರೈವರನ್ನೇ ಬೆದರಿಸಹತ್ತಿದರು. ಅಷ್ಟರಲ್ಲಿ "ಫಾದರ್ ಪಗಾನಿ" ಎಂಬ ಒಬ್ಬ ಕೆಥೋಲಿಕ ಪಾದ್ರಿಸಾಹೇಬರು ಅದೆ ದಾರಿಯಾಗಿ ಹೋಗುತ್ತಿದ್ದರು. 'ಇದು ಎಂಥ ಗೊಂದಲ ನಡೆದಿದೆ!' ಎಂಬುದನ್ನು ನೋಡಲು ಆ ಪಾದ್ರಿಸಾಹೇಬರು ಮುಂದೆ ಬಂದು, ಆ ಸೋಲ್ಜರರನ್ನು ಕುರಿತು, "ಇಂಥ ತುಂಟುತನವನ್ನು ಮಾಡಿ ಸೈನ್ಯದ ಹೆಸರನ್ನು ಕೆಡಿಸಲು ನಾಚಿಕೆಯಾಗುವುದಿಲ್ಲವೆ?" ಎಂದು ಕೊಂಚ ಜರಿದುಮಾತಾಡಿದರು. ಕೂಡಲೆ ಅವರಲ್ಲೊಬ್ಬನು ಪಾದ್ರಿಸಾಹೇಬರ ಶ್ರೀಮುಖದ ಮೇಲೆ ಟಪ್ಪೆಂದು ಒಂದು ಏಟನ್ನು ಲಗಾಯಿಸಿದನು! ಅಷ್ಟರೊಳಗೆ ಸುದೈವದಿಂದ ಈ ಗಲಾಟೆಯನ್ನು ಕೇಳಿ ಪೋಲಿಸ್ ಇನ್ಸಪೆಕ್ಟರ್ ಮನರೋ ಎಂಬವರು ಅಲ್ಲಿಗೆ ಬಂದು ಈ ಮೂವರು ಆಸಾಮಿಗಳನ್ನೂ ಕೈದುಮಾಡಿ ಲಷ್ಕರಿ ಪೋಲಿಸರ ಸ್ವಾಧೀನಕ್ಕೆ ಕೊಟ್ಟರು. ಇವರಲ್ಲೊಬ್ಬನಿಗೆ ಮೊದಲೊಮ್ಮೆ ಇಂಥ ತುಂಟುತನಕ್ಕಾಗಿಯೆ ೨ ತಿಂಗಳ ಕಠಿಣ ಸಜೆಯಾಗಿತ್ತು. ಈ ವೃತ್ತಾಂತವನ್ನು ಓದಿ ಯಾರಿಗೆ ಈ ತುಂಟರ ಲೀಲೆಗಳ ಬಗ್ಗೆ ಉದ್ವೇಗವುಂಟಾಗಲಿಕ್ಕಿಲ್ಲ!

೫. ಹಿಂದೂಸ್ಥಾನದಲ್ಲಿ ಹೇಗೆ ನೋಕರಶಾಹಿಯ ಮೂಲಕ ಜನರ ಗೋಳು ಮುಗಿಯದೊ ಹಾಗೆಯೆ ವಸಾಹತುಗಳಲ್ಲಿ ಅಲ್ಲಿಯ ನಿಷ್ಠುರ ಕಾಯಿದೆಗಳ ಮತ್ತು ಸ್ವಾರ್ಥಪರರಾದ ಅಧಿಕಾರಿಗಳ ದೆಸೆಯಿಂದ ಬಡ ಹಿಂದೀಬಾಂಧವರ ಕಷ್ಟಗಳು ಅಂತ್ಯವಾಗವು. ನಮ್ಮ ಈ ವಿಧಾನವು ದಕ್ಷಿಣ ಅಫ್ರೀಕದಿಂದ ಮೊನ್ನೆ ಬಂದಿರುವ ಹೊಸ ವಾರ್ತೆಯಿಂದ ದೃಢವಾಗುತ್ತದೆ. ಮಿ. ಗುಲಾಮರಸೂಲ ಎಂಬವರು ೧೮೮೭ನೆಯ ಇಸವಿಯಲ್ಲಿ ನಾತಾಳದಲ್ಲಿ ಹುಟ್ಟಿದವರು. ಇವರಿಗೆ ನಾತಾಳ, ಕೇಪ ಮತ್ತು ಟ್ರಾನ್ಸವಾಲಿನ ಪ್ರದೇಶಗಳಲ್ಲಿ ಪ್ರವೇಶಿಸಲು ಅಧಿಕಾರಿಗಳು ತೊಂದರೆಯನ್ನು ಮಾಡಿದ್ದಿಲ್ಲ. ಆದರೆ ಮಿ. ಗುಲಾಮರಸೂಲರು ಟ್ರಾನ್ಸವಾಲದಲ್ಲಿ ಜನಿಸಿದ ೩-೪ ವರ್ಷದ ತನ್ನ ಇಬ್ಬರು ಮಕ್ಕಳನ್ನು ನಾತಾಳ ಪ್ರಾಂತಕ್ಕೆ ಯಾವಾಗ ತಂದರೊ ಆಗ, ವಸಾಹತುಅಧಿಕಾರಿಗಳು ಆ ಹುಡುಗರನ್ನು ಒಳಹೊಕ್ಕಲು ಬಿಡಲಿಲ್ಲ. ಮತ್ತು ೧೯೧೪ನೆಯ ಇಸವಿಯಲ್ಲಿ ಸ್ಮಟ್ಸ ಸಾಹೇಬರು ಹೊರಡಿಸಿದ ಒಂದು ಜೀರ್ಣ ನೋಟೀಸನ್ನು ಗೋರಿಯಿಂದ ಪುನರುತ್ಥಾನಪಡಿಸಿ ಅದರ ಆಧಾರದ ಮೇರೆಗೆ ಆ ಮಕ್ಕಳನ್ನು ನಾತಾಳ ಪ್ರದೇಶದಲ್ಲಿ ಒಳಪ್ರವೇಶಿಸದಂತೆ ಬಹಿಷ್ಕರಿಸಿದರು. ಮಿ. ರಸೂಲರು ಈ ನೋಟೀಸಿನ ಪರ್ವಮಾಡದೆ ತನ್ನ ಮೂರು ವರ್ಷದ ಮಗುವನ್ನು ಹಿಡಕೊಂಡು ನಾತಾಳಕ್ಕೆ ಬಂದರು. ಅಧಿಕಾರಿಗಳು ಆ ಮಗುವಿನ ಮೇಲೆ ಪ್ರವೇಶನಿರಾಕರಣದ ನೋಟೀಸನ್ನು ಬಜಾಯಿಸಿ(!) ಮಿ. ರಸೂಲರನ್ನು ಕೈದುಮಾಡಿದರು. ಕೋರ್ಟಿನಲ್ಲಿ ವಿಚಾರವು ನಡೆದು ರಸೂಲರಿಗೆ ಅಧಿಕಾರಿಗಳು ಶಿಕ್ಷೆಕೊಟ್ಟರು. ಈ ವೃತ್ತಾಂತವನ್ನು ನೋಡುವಾಗ ತಂದೆತಾಯಿಗಳಿಗೆ ಹಾಲುಣ್ಣುವ ಚಿಕ್ಕ ಶಿಶುಗಳನ್ನು ಕೂಡ ಇಂಥ ಪ್ರಾಂತಗಳಲ್ಲಿ ಕೊಂಡುಹೋಗುವ ಅಧಿಕಾರವಿಲ್ಲವೆಂದು ಸ್ಪಷ್ಟವಾಗುತ್ತದೆ. ಇಂಥ ನಿರ್ದಯ, ನಿಷ್ಠುರ ಮತ್ತು ನಿಕೃಷ್ಟ ಕಾನೂನುಗಳು ಜಾರಿಯಲ್ಲಿರುವಾಗ ಜನರಲ್ ಸ್ಮಟ್ಸರು ಸಾಮ್ರಾಜ್ಯದೊಳಗಿನ ಸಮತ್ವದ ಯಾವ ಪುರಾಣವನ್ನು ಕೆಲವು ದಿವಸದ ಹಿಂದೆ ಓದುತ್ತಿದ್ದರೊ ಅದು ಕೇವಲ ಬಿಡಾಲವೃತ್ತಿಯ ವಂಚನೆಯಲ್ಲದೆ ಬೇರೆ ಏನೂ ಅಲ್ಲ!!

ಮಂಗಳೂರು.

ಜಿಲ್ಲೆಯ ಕಲೆಕ್ಟರರು ತಾರೀಕು ೧೫ರಲ್ಲಿ ಸರ್ಕಿಟಿಗೆ ಹೊರಟು ಗುರುಪುರ, ಕಾರ್ಕಳ, ಸುರತಕಲ್ಲು ಈ ಊರುಗಳನ್ನು ಸಂದರ್ಶಿಸಿ ತಾರೀಕು ೨೬ಕ್ಕೆ ಮಂಗಳೂರಿಗೆ ಹಿಂತಿರುಗುವರು.

ಇಲ್ಲಿಯ ತಾಲೂಕು ಹೆಡ್ ಎಕೌಂಟೆಂಟರಾದ ಮ. ರಾ. ರಾ. ಬಿ. ರಗುನಾಥಭಂಡಾರಿಗಳು ಒಂದು ತಿಂಗಳ ಪ್ರಿವಿಲೆಜ್ ರಜೆಯನ್ನು ಪಡೆಕೊಂಡಿರುವುದರಿಂದ ಮ. ರಾ. ಕೋಟಿಕಾರ ಸುಬ್ರಾಯರು ಇವರ ಬದಲಿಯನ್ನು ನೋಡುವರು.

ರಾಷ್ಟ್ರೀಯ ಸತ್ಯಾಗ್ರಹವಾರದ ಕಡೇ ದಿನವಾದ ಈ ದಿನ ಸಾಯಂಕಾಲ ೫ ಗಂಟೆಗೆ ಮೈದಾನಿನಲ್ಲಿ ಒಂದು ಸಾರ್ವಜನಿಕ ಸಭೆಕೂಡುವುದು. ಈ ಸಭೆಯಲ್ಲಿ ಶ್ರೀಯುತ ಕಾರ್ನಾಡ ಸದಾಶಿವರಾವ್, ಆ. ಭೋಜರಾವ್ ಮೊದಲಾದವರ ಭಾಷಣಗಳಿರುವವು.

ಮದರಾಸ ನ್ಯಾಯ ವಿಧಾಯಕ ಸಭೆಯ ಮೆಂಬರಿಕೆಗೆ ನಮ್ಮ ಜಿಲ್ಲೆಯ ಪರವಾಗಿ ಈ ವರೆಗೆ ಶ್ರೀಯುತ ಕೆ. ಸುಂದರರಾವ್ ಹೈ ಕೋರ್ಟ ವಕೀಲ, ಡಾಕ್ಟರ ಯು. ರಾಮರಾವ್, ಶ್ರೀಯುತ ಸಾವಕಾರ ಮಂಜೇಶ್ವರ ವೈಕುಂಠ ಭಕ್ತ ಮತ್ತು ರಾವ್ ಬಹದ್ದೂರ್ ಯನ್. ಸುಬ್ಬರಾವ್ ಈ ನಾಲ್ಕು ಮಂದಿ ಗೃಹಸ್ಥರು ಉಮೇದುವಾರರಾಗಿ ಮುಂದೆ ಬಂದಿರುವರು. ಈ ಜಿಲ್ಲೆಯ ವೋಟರರಿಗೆ ಶ್ರೀಯುತ ವೈಕುಂಠ ಭಕ್ತರು ಬರೆದುಕೊಂಡಿರುವ ವಿಜ್ಞಾಪನಾಪತ್ರವನ್ನು ಈ ಸಂಚಿಕೆಯ ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುತ್ತದೆ.

ಲಕ್ಷ್ಮೇಶ್ವರ ಸ್ತ್ರೀ ಬಾಲಿಕಾ ನಾಟಕ ಮಂಡಳಿಯು ಸದ್ಯದಲ್ಲಿ ನಮ್ಮ ಪಟ್ಟಣಕ್ಕೆ ಬರುವುದು.

ಮಿ। ಜಿ. ಪ್ರೀಸ್ಟ್, ಐ. ಸಿ. ಯಸ್‌ರವರು ಈ ಜಿಲ್ಲೆಯ ಸ್ಪೆಶಲ್ ಸೆಟ್ಲಮೆಂಟ ಆಫೀಸರರಾಗಿ ಬಂದಿರುವರು.

ಟೆನ್ನಿಸ್ ಟೂರ್ನಮೆಂಟ ಪಂದ್ಯಾಟವು ಕಳೆದ ತಾರೀಕು ೮ಕ್ಕೆ ಮುಗಿಯಿತು. ಸಿಂಗಲ್ಸ ಆಟದಲ್ಲಿ ಮಿ। ಕೆ. ಉಗ್ಗಪ್ಪ ಶೆಟ್ಟರೂ ಡಬ್ಬಲ್ಸಿನಲ್ಲಿ ಮಿ। ಗಣೇಶ ಸುಂದರರಾವ್ ಮತ್ತು ಮಿ। ಭಾಸ್ಕರ ರಾವ್ ಇವರು ಗೆದ್ದು ಇನಾಮನ್ನು ಹೊಂದಿದರು.

ಈ ದಿನ ಸಾಯಂಕಾಲ ೪ ಗಂಟೆಗೆ ಇಲ್ಲಿಯ ತೊಗವೀರರ ಶ್ರೀ ಜ್ಞಾನೋದಯ ಸಮಾಜದ ಹದಿಮೂರನೇ ವಾರ್ಷಿಕೋತ್ಸವವು ಮ. ರಾ. ವಕೀಲ ಗಂಗೊಳ್ಳಿ ಕೃಷ್ಣರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಲಿಕ್ಕಿದೆ.

ಇದೇ ತಾರೀಕು ೨೬ನೇ ಶನಿವಾರ [illegible] ಕೊಂಗ್ರೆಸ್ ಕಮ್ಮಿಟಿಯ ವರುಷಾವಧಿ ಮಹಾ ಸಭೆಯು ಶ್ರೀಯುತ ಕಾರ್ನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರಗುವುದು.

ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಬಗ್ಗೆ ಏರ್ಪಡಿಸಿದ ಲೊತ್ತಿ ತೆಗೆಯುವ ತಾರೀಕನ್ನು ಜುಲಾಯಿ ತಿಂಗಳ ತಾ. ೩೧ಕ್ಕೆ ಮುಂದರಿಸಿಟ್ಟಿದೆ. ಜುಲಾಯಿ ತಾರೀಕು ೧೫ಕ್ಕೆ ಟಿಕೇಟು ಮಾರಾಟವಾಗುವುದು ಸಮಾಪ್ತಿಯಾಗತಕ್ಕದೆಂದು ಸಹ ಲೊತ್ತಿಯ ಎಗ್ಸಿಕ್ಯುಟಿವ್ ಕಮ್ಮಿಟಿ ಮೆಂಬರರು ನಿಶ್ಚಯಿಸಿರುವರು.

ದಕ್ಷಿಣ ಕನ್ನಡ.

ಹೊಸಬೆಟ್ಟು:—ನಮ್ಮ ಹೊಸಬೆಟ್ಟು ಇಗರ್ಜಿಯಲ್ಲಿ ದಶಾರಂಭ ಹತ್ತುಮಂದಿಗೂ ವಿಶಾಲ ಎದ್ದ ಅನೇಕ ಅನರ್ಥಗಳೂ [illegible] ದಿನೇದಿನೇ ವೃದ್ಧಿಯಾಗುತ್ತಾ, ಇಷ್ಟು ಇದುವರೆಗೆ ವಠಾರದ [illegible] ಕಡಿದ ಆಗದೆ ಬಾಕಿ ಇದ್ದ ಸಂಗತಿ ಜನಜನಿತವಾಗಿದ್ದಷ್ಟೆ. ಇದೇ ಹೊಸ ಫೆಬ್ರವರಿ ತಾ. ೧೭ನೆಯ ಮ. ರಾ. ಗಳಾದ ಕಾರ್ಕಳ ಕಬೆಟ್ಟು ಗುತ್ತಿನ ಶ್ರೀಯುತ ಶಿವಪ್ಪ ಹೆಗ್ಗಡೆಯವರು ಮತ್ತು ಜನಪ್ರಿಯ ಕಂಠವಾದಿ ಅಸ್ಪತ್ರೆಯ ಡೊಕ್ಟರ್ ಪಿ. ಪಿ. ಭಂಡಾರಿಯವರು ಕೂಡಿ ಹೊಸಬೆಟ್ಟು ಇಗರ್ಜಿಗೆ ಬಿತ್ತಿ ಸಭೆಸೇರಿ ಅಪ್ಪಟಿಯ ಕಡೆಯ ಎಲ್ಲಾ ಪಾಲುದಾರರನ್ನು ಕರೆ, ಎರಡು ಪಕ್ಷದವರು ಒಗ್ಗಟ್ಟಾಗಿ ಅನ್ಯೋನ್ಯಭಾವದಿಂದಲೂ ಸುಮನಸಿನಿಂದಲೂ ಈ ಪೂರ್ವದಂತೆ ಇರುವಂತೆ ವಿಧಾಯಕರನ್ನು ನೇಮಿಸಿದರು. ಈ ತೀರ್ಮಾನದಂತೆ ಇದೇ ತಿಂಗಳ ತಾ. ೧೮-೧೯ನೇ ದಿವಸಗಳಲ್ಲಿ ಸದರಿ ಇಗರ್ಜಿಯ ವರುಷಾವಧಿ ಹಬ್ಬವು ಬಹು ವಿಜೃಂಭಣೆಯಿಂದ ನಡೆಸಲ್ಪಡುತ್ತದೆಂದು ಎಲ್ಲರಿಗೂ ತಿಳಿಸೋಣಾಗಿದೆ.

ಮಾನ್ಯ ಡೊಕ್ಟರ್ ಭಂಡಾರಿಯವರಿಗೂ ಮ|| ರಾ|| ರಾ|| ಶಿವಪ್ಪ ಹೆಗ್ಗಡೆಯವರಿಗೂ ಸದರಿ ಇಗರ್ಜಿಯ ಜನರೆಲ್ಲರೂ ಕೃತಜ್ಞತಾಪೂರ್ವಕ ವಂದಿಸುವದು ಯುಕ್ತವಲ್ಲವೇ!

ಪೊಳಲಿ:—ಕಾಲಾವಧಿಪ್ರಕಾರ ನಡಿಯತಕ್ಕ ಪೊಳಲಿ ಚಾತ್ರೆಯು ವಿಜೃಂಭಣೆಯಿಂದ ಇನ್ನೆ ಮುಗಿಯಿತು. ಆ ನೇಮೆ ಆದ ತಾ. ೧೮ನೇ ಬುಧವಾರ ಶ್ರೀ ದೇವೀ ಸನ್ನಿಧಿಯಲ್ಲಿ ಶ್ರೀಯುತ ಬಜಕಟ್ಟೆ ಪರಮೇಶ್ವರಯ್ಯನವರ ಬಾಬ್ತು ರಂಗಪೂಜೆ ಉತ್ಸವವಾಗಿ ಶುಕ್ರವಾರ ದಿನ ರಾತ್ರಿ ಸಪ್ರಿಯವರು ಹೊಸತಾಗಿ ಕಟ್ಟಿಸಿದ ಶಂಕರಭವನದಲ್ಲಿ ನಾಗಮಂಡಲ ಸೇವೆಯು ಜರಗುವುದು. ಮರುದಿನ ತಾ. ೨೧ನೇಯಿಂದ ಶ್ರೀದೇವೀ ಸನ್ನಿಧಿಯಲ್ಲಿ ವೇ. ಪದ್ಮನಾಭ ಭಟ್ಟರ ಬಾಬ್ತು ಶತಚಂಡಿಕಾಯಾಗ ಪ್ರಾರಂಭವಾಗಿ ತ್ರಯೋದಶಿಗೆ ಅಂತ್ಯವಾಗುವುದು. ದಿನಾಲೂ ಉತ್ಸವವು ನಡೆಯುವುದು. ಮಹಾಜನಭಕ್ತರುಗಳು ಬಂದು ಪ್ರಸಾದ ಸ್ವೀಕರಿಸಬೇಕಾಗಿ ಎಲ್ಲರಿಗೂ ಆಮಂತ್ರಣವಿದೆ.

ಕಟಪಾಡಿ:—ಇಲ್ಲಿಯ ಬೋರ್ಡ್ ಎಲಿಮೆಂಟರಿ ಹುಡುಗಿಯರ ಶಾಲೆಯ ವಾರ್ಷಿಕ ವರ್ಧಂತಿಯ ಉತ್ಸವವು ತಾ. ೨೮ನೇ ಸಾಯಂ. ಘಂಟೆ ೪-೩೦ಕ್ಕೆ ಪ್ರಾರಂಭವಾಗುವುದು. ಆ ಸಮಯದಲ್ಲಿ ಶಾಲಾ ಹೆಣ್ಣು ಮಕ್ಕಳು "ಸಂಗೀತ ರಮಾನಂದ" ಎಂಬ ನಾಟಕವನ್ನು ಕರ್ಣಾನಂದವಾಗಿ ಆಡಿತೋರಿಸುವರು. ವಿದ್ಯಾಭಿಮಾನಿಗಳು ದಯಮಾಡಿ ಬರಬೇಕಾಗಿ ಸದರಿ ಶಾಲೆಯ ಹೆಡ್ ಮಾಸ್ತರ ಕೆ. ಬಿ. ರಾಮರಾಯರ ವಿನಂತಿ ಇದೆ.

ಕಾಸರಗೋಡು:—ಕಾಸರಗೋಡು [illegible] ಯೈಡೆಡ್ ಎಲಿಮೆಂಟರಿ ಶಾಲೆಯನ್ನು ಕಳೆದ ವರ್ಷ ರಾ. ಬಳ್ಳಂಬೆಟ್ಟು ಜನಾರ್ದನ ಶ್ರೀಗಳು ಮ|| ಪಾಲೆಕ್ಕಾಡಿಯವರ ಕೈಯಿಂದ ಎಂದರೆ ಸದರಿ ಶಾಲೆಯ ಮೇನೇಜರಿಂದ ಅವರ ಮೇನೇಜ್‌ಮೆಂಟನ್ನು ತೆಕ್ಕೊಂಡರು. ತರುವಾಯ ಅವರು ಸದರಿ ಶಾಲೆಯನ್ನು ಇಲ್ಲಿಂದ ಸದರಿ ಗ್ರಾಮದ ಗಡಿ ಕನ್ನೆಟಿಕ್ಕಾನ ಅಥವಾ ಪೆರ್ಲಕ್ಕೆ ಸಮೀಪ ಹೊಸ ಕಟ್ಟೋಣ ಕಟ್ಟಿಸಿದ್ದರು. ಸದರಿ ಕಟ್ಟಿದವು ತಾ. ೩೦-೩-೧೯೨೩ನೇ ಸಾಯಂಕಾಲ ಗಂಟೆ ೫ಕ್ಕೆ ಎದ್ದ ಬಿರುಗಾಳಿಯಿಂದ [illegible] ಬಿದ್ದು [illegible] ಹುಡುಗರ ಹೆತ್ತ ತಂದೆತಾಯಿಗಳ ಭಾಗ್ಯವೇ ಸರಿ.

ಶ್ರೀಯುತ ಕೆ. ಪಿ. ಸುಕುಮಾರನವರಿಗೆ ಕುಂಬಳೆಯ ಕೆಲವು ಹಿಂದೂ ಮತ್ತು ಮಹಮ್ಮದಿಯ ಮಹನಿಯರು ಕೂಡಿ ಅವರ ಸಂಗೀತ ವಿದ್ಯೆಯ ಬಗ್ಗೆ ಸ್ವರ್ಣದ ಪದಕವನ್ನು ಕೊಟ್ಟಿರುವರು.

ಮಂಗಳೂರಿನ ಮ|| ರಾ|| ರಾ|| ಎನ್. ಎಸ್. ಸುವರ್ಣ, ವಕೀಲ, ಬಿ. ಎ. ಬಿ. ಎಲ್. ಇವರು ತೀಯ ಯೋಗಿ ಬಿಲ್ಲವರ ಸಂಘದ ಅಧ್ಯಕ್ಷಸ್ಥಾನವನ್ನು ವಹಿಸಿ ಕೆಲವು ವರ್ಷಗಳಿಂದ ಪರಸ್ಪರ ವೈಮನಸ್ಯದಿಂದಿದ್ದ ಬಿಲ್ಲವರನ್ನು ಒಟ್ಟುಗೂಡಿಸಿ ನಡೆಯುವ ಹಾಗೆ ಮಾಡಿದಕ್ಕೆ ಬ್ರಹ್ಮಶ್ರೀ ನಾರಾಯಣವಿಜಯ ಮಂದಿರದ ಕಡೆಯಿಂದ ದನ್ಯವಾದಗಳು.

ಮ. ರಾ. ರಾ. ಕೆ. ಅಪ್ಪ ಕಲೇಕಾರನವರ ಬ್ರಹ್ಮಶ್ರೀ ನಾರಾಯಣ ವಿಜಯಮಂದಿರದಲ್ಲಿ ಇದೇ ಬರುವ ತಾ. ೧೫-೪-೨೩ನೇ ಆದಿತ್ಯವಾರ ಶ್ಯಾಮ ಘಂಟೆ ೮-೩೦ಕ್ಕೆ ತೀಯ ವಿದ್ಯಾರ್ಥಿಗಳ ಒಂದು ಸಭೆಯು ಶ್ರೀಯುತ ಕೆ. ಪಿ. ಸುಕುಮಾರನವರ ಅಧ್ಯಕ್ಷತೆಯಲ್ಲಿ ಜರಗಲಿಕ್ಕಿದೆ.

ತಾ. ೨೩ರಲ್ಲು ಕಾಸರಗೋಡು ತಾಲೂಕು ದ್ವಿತೀಯ ಪರಿಷತ್ತು ಶ್ರೀ. ಕಾರ್ನಾಡು ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಕಾಸರಗೋಡಿನಲ್ಲಿ ಸೇರಲಿಕ್ಕಿರುವುದು. ಪರಿಷತ್ತಿನ ತರುವಾಯ ಶ್ರೀಯುತ ಸದಾಶಿವರಾಯರು ತಾ. ೨೪ಕ್ಕೆ ಬದಿಯಡ್ಕ, ತಾ. ೨೫ಕ್ಕೆ ಆದೂರು ತಾ. ೨೬ಕ್ಕೆ ಅಂಗಡಿಮೊಗರು, ತಾ. ೨೭ಕ್ಕೆ ಬಾಯಾರು ಎಂಬ ಈ ಹಳ್ಳಿಗಳನ್ನು ಸಂದರ್ಶಿಸಲಿಕ್ಕಿರುವರು.

ಸುರತಕಲ್ಲು:—ಇಲ್ಲಿಯ "ವಿದ್ಯಾ ವಿದ್ಯಾದಾಯಿನೀ" ಶಾಲೆಯ ೬ನೇ ವಾರ್ಷಿಕ ವರ್ಧಂತಿ ಸಮಾರಂಭವು ಇದೇ ತಾ. ೨೧-೪-೧೯೨೩ನೇ ಶನಿವಾರ ಶ್ಯಾಮ ಘಂಟೆ ೫ಕ್ಕೆ ಅದೇ ಶಾಲೆಯ ಸಭಾಮಂದಿರದಲ್ಲಿ [illegible] ಮ. ರಾ. ರಾ. ಕೆ. ಸದಾಶಿವಭಟ್ಟರವರ ಅಧ್ಯಕ್ಷತೆಯಿಂದ ನಡೆಯಲಿರುವುದು. ಆದಿನ ರಾತ್ರಿ ಶಾಲೆಯ ಉಪಾಧ್ಯಾಯರೂ ವಿದ್ಯಾರ್ಥಿಗಳೂ [illegible] "[illegible] ಸೀತಾಪರಿಣಯ" ಎಂಬ ನಾಟಕವನ್ನು ಅಭಿನಯಿಸಲಿರುವರು. ವಿದ್ಯಾಭಿಮಾನಿಗಳಾದ ಸಮಸ್ತ ಜನರು ಬಂದು ಪ್ರೋತ್ಸಾಹಿಸಬೇಕಾಗಿ "ವಿದ್ಯಾ ವಿದ್ಯಾದಾಯಿನೀ" ಶಾಲೆಯ ಅಧ್ಯಕ್ಷರಾದ ಇ. ಕೃಷ್ಣಯ್ಯನವರ ವಿನಯಪೂರ್ವಕ ಆಮಂತ್ರಣವಿದೆ.

ಕಾಸರಗೋಡು ತಾಲೂಕು ಕೊಂಗ್ರೆಸು ಕಮ್ಮಿಟಿಯ ೧೯೨೨—'೨೩ನೇ ಜಮಾ ಖರ್ಚು.

ಜಮಾ

[illegible]

ಖರ್ಚು

ಜಿಲ್ಲಾ ಸ್ವರಾಜ್ಯ ಫಂಡಿನ ಪೈಕಿ ಜಿಲ್ಲಾ ಕಮ್ಮಿಟಿಗೆ ಕಳುಹಿಸಿದ್ದ ರೂ. ೧೫೫—೫—೦. ಕೊಂಗ್ರೆಸ್ ಪ್ರಚಾರದ ಬಗ್ಗೆ ಪ್ರಯಾಣದ ಖರ್ಚು ರೂ. ೨೩—೧೧—೩. ಸಭೆಗಳನ್ನು ಜರಗಿಸುವುದರ ಖರ್ಚು ರೂ. ೧೩-೧-೦, ಸ್ಟೇಶನರಿ ಮತ್ತು ಬರ್ದೋಲಿ ಚಳ್ಳಿನ ಕ್ರಯ ರೂ ೬-೧೩-೦.

ಖರ್ಚು.

ಹತ್ತಿಗೆ ಕೊಟ್ಟ ಕ್ರಯ ೩೬—೪—೦, ಶಾಲಾ ಹುಡುಗರಿಗೆ ನೂಲು ತೆಗೆದ ಬಗ್ಗೆ ಇನಾಮು ಕೊಡಲು ತೆಗೆದ ಹತ್ತಿ ಮತ್ತು ಬಟ್ಟೆಯ ಕ್ರಯ ರೂ. ೨—೪—೯, ಶಾಲಿ ಪುಸ್ತಕಗಳ ಮತ್ತು ಭಾಷಾ ಖರ್ಚು ರೂ. ೧೪—೧೪—೨, ಅಂಗಡಿಯ ಬಾಡಿಗೆ ರೂ. ೬—೦—೦, ಇತರ ಚಿಲ್ಲರೆ ಖರ್ಚು ರೂ. ೭—೧೪—೧೧, ನೂಲುವ ಕೈಸಗೆ ಕೊಟ್ಟ [illegible] ರೂ. ೪೭—೯—೦. ಚರಕ್ಕಾಲ್ ಕೊಂಪರಿಗೆ ಕೈನೂಲು ಮತ್ತು ಬಟ್ಟೆ ಕ್ರಯ ರೂ. ೭—೬—೦. ಒಟ್ಟು ಖರ್ಚು ರೂ. ೩೧೦—೬—೦.

ತಾ. ೩೧—೧೨—'೨೩ರಲ್ಲು ಉಳಿದ ಶಿಲ್ಕು ರೂ. ೨೦—೩—೬.

ಸಹಿ. ಶೆಡ್ಡೆ ಲಕ್ಷ್ಮೀನಾರಾಯಣ, ಸೆಕ್ರೆಟರಿ.

ಒಂದು ಭವಿಷ್ಯ.

"ಸ್ವರ್ಗೀಯ ಆವಾಜ್" ಎಂಬ ಹೆಸರಿನ ಹೊಸಮಾಸಪತ್ರಿಕೆಯೊಂದು ಮುಂಬಯಿಯಲ್ಲಿ ಹೊರಟಿದೆ. ಅದರಲ್ಲಿ ಮಹಾತ್ಮರ ಬಗ್ಗೆ ಒಂದು ಭವಿಷ್ಯವು ಪ್ರಕಟವಾಗಿದೆ. ಅದೇನೆಂದರೆ:—ಸನ್ ೧೯೨೪ನೇ ಸಪ್ಟಂಬರದ ವರೆಗೆ ಮಹಾತ್ಮರಿಗೆ ಗುರುವಿನ ಪ್ರಾಬಲ್ಯವಿದೆ. ಅಳಿಕ ೨ ವರ್ಷ ೧೦ ತಿಂಗಳುಗಳ ವರೆಗೆ ಶನಿಯ ಪ್ರಾಬಲ್ಯವಿದೆ. ಚಾಲುವರ್ಷದ ಅಷ್ಟಮಿಗೆ ಇರುವ ಗ್ರಹಗಳ ಪರಿಸ್ಥಿತಿಯ ಮೇಲಿಂದ ಮಹಾತ್ಮರು ಬಹಳಮಾಡಿ ಬಿಡುಗಡೆಯಾಗಬೇಕು. ಅಥವಾ, ಸರಕಾರವು ಅಲ್ಲದ ಶರ್ತುಗಳನ್ನು ಮುಂದೊಡ್ಡಿ, ಗಾಂಧೀಜೀಯವರನ್ನು ಬಿಡೋಚಿಸುವದೆಂದು ಹೇಳುವುದು. ಈ ವರ್ಷದ ಅಷ್ಟಮಿಗೆ ಮೂರು ತಿಂಗಳುಗಳು ಮಹಾತ್ಮಾಜೀಯವರ ಬಂಧನ ವಿಮೋಚನೆಗೆ ಅನುಕೂಲವಿದೆ. ಆಗ ಬಿಡುಗಡೆಯಾಗದಿದ್ದರೆ, ಹೆಚ್ಚೆಂದರೆ, ೧೯೨೪ನೇ ಇಸವಿಯ ಅಷ್ಟಮಿಯ ವರೆಗೆ ಮಹಾತ್ಮರು ಸೆರೆಯಲ್ಲಿರಬಹುದು. ಯಾಕೆಂದರೆ, ಮಹಾತ್ಮಾಜೀಯವರು ಸ್ವತಂತ್ರವಾಗಿ ಯಾವುದೊಂದು ಕಾರ್ಯವನ್ನು ಜ್ಯಾರಿಯಿಂದ ಮಾಡುತ್ತಿರಬೇಕಾಗಿ ಗ್ರಹಯೋಗವಿದೆ. ಗುರುವು ಅನುಕೂಲಸ್ಥಾನದಲ್ಲಿರುವುದರಿಂದ ಸನ್ ೧೯೨೫ನೇ ಪ್ರಾರಂಭಕ್ಕೆ ಮಹಾತ್ಮಾಜೀಯವರ "ರಾಜಕೀಯ ರಾಷ್ಟ್ರೀಯ ಕಾರ್ಯಕ್ರಮವು ಹೊರುಪಿಸಿಂದ ನಡೆಯುವದು. ಭರತಖಂಡದ ರಾಜಕೀಯ ಆಕಾಂಕ್ಷೆಗಳು ಬಹುಅಂಶದಿಂದ ಪೂರ್ಣವಾಗುವ ಲಕ್ಷಣಗಳಿವೆ. ಆದರೆ, ಮುಂದಾಳುಗಳ ಇಚ್ಛೆಯಂತೆ ಪೂರ್ಣವಾಗಿ ಅವು ಸಫಲವಾಗಲಾರವು. ೧೯೨೬ನೇ ವರ್ಷದ ಮಧ್ಯಕಾಲದ ವರೆಗೆ ಅಸಂತೋಷಕರವಾಗಲಿಕ್ಕಿಲ್ಲ. ರಾಜಕೀಯ ಹೋರಾಟವು ಚಾಲುಇರುವುದು. ಯಾಕೆಂದರೆ, ಅನಕ್ತವರೆಗೆ ಶನಿಯ ಪ್ರಾಬಲ್ಯವಿದೆ. ಸನ್ ೧೯೨೬ನೇ ಇಸವಿಯು ಮಹಾತ್ಮಾಜೀಯವರಿಗೆ ಸಾಂಸಾರಿಕದೃಷ್ಟಿಯಿಂದ ಸುಖಾವಹವಾಗಲಾರದು. ಶನಿಮಂಗಳರ ಯುತಿಯ ಯೋಗವಿದ್ದವರಿಂದ ಮಹಾತ್ಮರ ಪ್ರಕೃತಿಯು ಸ್ವಲ್ಪ ಕೆಡುವುದು. ಮಾನಸಿಕ ಚಿಂತೆಯೊದಗುವುದು. ಇದೇ ಸಮಯಕ್ಕೆ ಅವರ ಸೌಭಾಗ್ಯವತಿಯವರ ಪ್ರಕೃತಿಯು ನೆಟ್ಟಗೆ ಉಳಿಯಲಿಕ್ಕಿಲ್ಲ. ಆದರೆ, ಸನ್ ೧೯೨೭ನೇ ಇಸವಿಯ ಪ್ರಾರಂಭಕ್ಕೆ ಮಹಾತ್ಮರಿಗೆ ಸುಖವೂ, ಸಮಾಧಾನವೂ ಪ್ರಾಪ್ತವಾಗುವುದು. ಇದೇ ಸಮಯಕ್ಕೆ ಹಿಂದೀರಾಷ್ಟ್ರದ ನ್ಯಾಯಬೇಡಿಕೆಗಳು ಪೂರ್ಣವಾಗುವುವು ಭರತಖಂಡದಲ್ಲೆಲ್ಲ ಸ್ವಾತಂತ್ರ್ಯದ ಜ್ಯೋತಿಯು ರಭಸದಿಂದ ಉರಿಯುತ್ತಿರುವುದು. ಈ ವರ್ಷದಲ್ಲಿ ಭರತಖಂಡಕ್ಕೆ ವಸಾಹತಿನ ಸ್ವರಾಜ್ಯವು ಪ್ರಾಪ್ತವಾಗುವ ಯೋಗವಿದೆ. [ಶಾರದಾ ವೃತ್ತ]

ಶ್ರೀಯುತ ರಾಜಗೋಪಾಲಾಚಾರ್ಯರು 'ಯಂಗ ಇಂಡಿಯ'ದಲ್ಲಿ ಬರೆದ ಲೇಖದ ಭಾಷಾಂತರ.

(ಬರೆದು ಬಂದದ್ದು.)

ಪಂಜಾಬವು ಸುವರ್ಣದ ಗಣಿಯಾಗಿರುತ್ತದೆ. ಈ ಪ್ರಾಂತದಲ್ಲಿ ಬಲವೂ ನಂಬಿಕೆಯೂ ಪ್ರಮಾಣಿಕತನವೂ ತುಂಬಾ ಇರುತ್ತದೆ. ಚರ್ಕವು ಸರ್ವ ದಿಕ್ಕುಗಳಲ್ಲಿಯೂ ಕಾಣತಕ್ಕ ಸ್ಥಳ ಇದೊಂದೆ. ಅಪವಾದಕ್ಕಾಗಿಯೋ ಎಂಬಂತೆ ಅಲ್ಪಸ್ವಲ್ಪ ಪರದೇಶಿವಸ್ತ್ರವು ಇಲ್ಲಿ ಉಪಯೋಗಿಸಲ್ಪಡುತ್ತದೆ. ಲಂಕಶಯರಿಗೆ ಪೆಟ್ಟುಕೊಡದದ್ದು ಪಂಜಾಬವು ಎಂತ ನನ್ನ ತಿಳುವಳಿಕೆಯಾಗಿರುತ್ತದೆ. ಮಹಾತ್ಮಾಜೀಯವರಿಗೆ ಬದ್ಧವಾದ ಅವರ ಮೇಲೆ ಪೂರ್ಣ ಭಕ್ತಿಶ್ರದ್ಧೆ ಇರುವ ದೇಶವು ಪಂಜಾಬವು. ಮಹಾತ್ಮಾಜೀಯವರು ಮಾತ್ರ ಸ್ವಾತಂತ್ರ್ಯ ಪ್ರೀತಿಯನ್ನು ಸಾಂಕೇತಿಕವಾಗಿ ಸದರ್ಶಿಸುವರು. ಮಹಾತ್ಮಾಜೀಯವರ ತ್ಯಾಗವನ್ನು ತನ್ನ ಆತ್ಮದಲ್ಲಿ ಅಡಗಿಸಿಕೊಂಡಿದದ್ದು ಪಂಜಾಬವು. ಅದುಕಾರಣ ನಾನು ಅದನ್ನು ಸ್ವರ್ಣದ ಗಣಿ ಎಂದು ಕರೆಯಲಿಕ್ಕೆ ಕಾರಣವು. ಆದರೆ ಗಣಿಯನ್ನು ಅಗೆದು ಬಂಗಾರವನ್ನು ತೆಗೆಯಬೇಕಾಗಿದೆ. ಬಂಗಾರವು ಸಿಕ್ಕಬೇಕಾದರೆ ಪಂಜಾಬವು ಹೆಚ್ಚು ನೋವನ್ನು ಅನುಭವಿಸಲಿಕ್ಕೆ ಇರುವುದು. ಕೀಳು ಅತ್ಯಾಚಾರಗಳನ್ನು ಇನ್ನು ಹೆಚ್ಚಾಗಿ ಸಹಿಸಲು ಬೇಕು ಎಂದು ನಾನು ಹೇಳಿದೊಡನೆಯೆ ಪಂಜಾಬದ ಜನರು ನನ್ನ ಮೇಲೆ ರೇಗಿಕೊಂಡರು. ಪಂಜಾಬದಿಂದಲೇ ಭರತಖಂಡಕ್ಕೆ ಸ್ವರಾಜ್ಯವು ದೊರೆತ್ತಿರುತ್ತದೆ.

ಪಂಜಾಬಕ್ಕೆಂತಲೂ ಸ್ವರಾಜ್ಯ ವಿಷಯ ಜ್ಞಾನವು ಹಿಂದೂಸ್ಥಾನದ ಇತರ ಭಾಗಕ್ಕೆ ಇರುವುದೆಂತ ನಾನು ನಂಬುವುದಿಲ್ಲ. ಪಂಜಾಬವು ಒಂದು ಬರಿ ಪ್ರಾಂತದ ಹೆಸರು ಮಾತ್ರವಲ್ಲ. ಅದು ನಮ್ಮ ವರ್ತಮಾನಕಾಲದ ಅಪಮಾನದ ಹಾಗೂ ಭವಿಷ್ಯತ್ತಿನ ಸ್ವಾತಂತ್ರ್ಯಸೂರ್ಯನ ಹೆಸರು. ಹಿಂದೀ ಸ್ವರಾಜ್ಯದ [illegible] ಬರೆದಿಟ್ಟಿದ್ದಾದರೆ ಅದರೊಟ್ಟಿಗೆ ಪಂಜಾಬದ ಹೆಸರು ಕೂಡ ಕಂಡೆಬರುವುದು. [illegible] ಪಂಜಾಬದ [illegible] ಹಿಂದೂಸ್ಥಾನದಲ್ಲಿ [illegible]

[illegible]

ಡಾ. ಹರ್ಡೀಕರರ ಕರ್ನಾಟಕ ರಾಷ್ಟ್ರೀಯ ಸೇನಾ ಮಂಡಳದ ಡಿರೆಕ್ಟರ ಇವರ ಪ್ರವಾಸದ ಕಾರ್ಯಕ್ರಮ.

ಎಪ್ರಿಲ ತಾ. ೧೫-೧೬ ಈ ಎರಡು ದಿವಸಗಳಲ್ಲಿ ೧ ಶಿರಸಿ, ೨ ಸಿದ್ಧಾಪುರ, ೩ ಎಲ್ಲಾಪುರ ಇವುಗಳಿಗೆ. ಎಪ್ರಿಲ ೧೭ರಿಂದ ೨೦ರ ವರೆಗೆ ಕರ್ನಾಟಕದಲ್ಲಿ ಕೊಂಗ್ರೆಸದ ಡೆಪುಟೇಶನ್ ಬರುವದಿದ್ದು ಅದರ ಕಾರ್ಯಕ್ರಮವನ್ನು ನೋಡಿಕೊಂಡು ನಮ್ಮ ಕಾರ್ಯಕ್ರಮವು ನಿಶ್ಚಯಿಸಲ್ಪಡುವುದು.

ಎಪ್ರಿಲ ೨೦, ೨೧, ೨೨, ೨೩ ಈ ನಾಲ್ಕು ದಿವಸಗಳಲ್ಲಿ ಮೈಸೂರ ಜಿಲ್ಲೆಯಲ್ಲಿಯ ಕೆಳಗಿನ ಊರುಗಳಿಗೆ ಹೋಗುವುದು. ೧. ದಾವಣಗೇರೆ, ೨. ಬೆಂಗಳೂರ, ೩. ಮೈಸೂರ ಅಲ್ಲಿಂದ ಕೂರ್ಗದೊಳಗಿನ ಮಡಿಕೇರಿಯ ಮೇಲಿಂದ ಹಾಯ್ದು ೨೫ನೇ ತಾರೀಖಿಗೆ ಮಂಗಳೂರಿಗೆ ಹೋಗುವರು. ಮಂಗಳೂರ ಜಿಲ್ಲೆಯೊಳಗಿನ ಕೆಳಗಿನ ಊರುಗಳಿಗೆ ಎಪ್ರಿಲ ೨೫, ೨೬, ೨೭, ೨೮, ೨೯, ೩೦, ೧. ಮಂಗಳೂರ, ೨. ಕಾಸರಗೋಡು, ೩. ಪುತ್ತೂರ, ೪. ಉಡುಪಿ, ೫. ಕುಂದಾಪುರ, ೬. ಬೈಂದೂರ.

ಮೇ ೧, ೨, ೩, ೪, ೫, ಈ ಐದು ದಿವಸಗಳಲ್ಲಿ ಕಾರವಾರ ಜಿಲ್ಲೆಯೊಳಗಿನ ಕೆಳಗಿನ ಊರುಗಳು. ೧. ಭಟಕಳ, ೨. ಹೊನ್ನಾವರ, ೩. ಕುಮಟಾ ೪. ಗೋಕರ್ಣ, ೫. ಅಂಕೋಲಾ ೬. ಕಾರವಾರ. ಅಲ್ಲಿಂದ ಗೋವಾ ಮಾರ್ಗವಾಗಿ ತಿರಿಗಿ ಹುಬ್ಬಳ್ಳಿಗೆ ಬರುವರು. ಈ ಪ್ರಕಾರ ಕಾರ್ಯಕ್ರಮವಿರುತ್ತದೆ. ಅಲ್ಲಲ್ಲಿಯ ಮುಂದಾಳುಗಳಿಗೆ ಈ ಕಾರ್ಯಕ್ರಮದ ಪ್ರತಿಗಳನ್ನು ಈ ಮೊದಲೇ ರವಾನಿಸಿರುತ್ತದೆ.

ಅವರು ನಮಗೆ ಈ ರಾಷ್ಟ್ರಸೇನೆಯ ಕಾರ್ಯದಲ್ಲಿ ಅವಶ್ಯ ಸಹಾಯವನ್ನು ಮಾಡುವರೆಂದು ಪೂರ್ಣ ನಂಬಿದ್ದೇವೆ. ನಾವು ಬರುವ ದಕ್ಕಿಂತ ಪೂರ್ವದಲ್ಲಿ ಆ ಸ್ಥಳದ ಕೊಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕರು ಮತ್ತು ರಾಷ್ಟ್ರಸೇನಾನಾಯಕರು ತಮ್ಮಲ್ಲಿಯ ಕಾರ್ಯಕ್ರಮದ ಎಲ್ಲ ತಯಾರಿಯನ್ನು ಮಾಡಿಡುವರೆಂದು ನಂಬಿಗೆಯಿದೆ. ನಮಗೆ ಕದಾಚಿತ್ ನಮ್ಮ ಈ ಕಾರ್ಯಕ್ರಮದ ಪ್ರಕಾರ ನಡೆಯಲಿಕ್ಕೆ ಆಗದೆ ಇದ್ದ ಪಕ್ಷದಲ್ಲಿ ಅಲ್ಲಲ್ಲಿಯ ಜನರಿಗೆ ತಂತಿಯಿಂದ ನಮ್ಮ ಬರುವಿಕೆಯನ್ನು ತಿಳಿಸುವದರಲ್ಲಿ ಬರುವುದು. ಆದ್ದರಿಂದ ಯಾರೂ ನಾವು ಬಂದ ನಂತರವೇ ವ್ಯವಸ್ಥೆ ಮಾಡುವೆವು ಎಂದೆಂದು ನಮ್ಮ ವೇಳೆಯನ್ನು ವ್ಯರ್ಥ ಕಳೆಯ ಬಾರದೆಂದು ನಮ್ಮ ಆಗ್ರಹದ ಸೂಚನೆ.

ಎನ್. ಎಸ್. ಹರ್ಡೀಕರ,
ಡೈರೆಕ್ಟರ್ ಕರ್ನಾಟಕ,
ಸ್ವಯಂಸೇವಕರ ಮಂಡಳಿ.

ಈವರೆಗೆ ೧೯೨೩ನೇ ವರ್ಷದ ತಿಲಕ ಸ್ವರಾಜ್ಯ ಫಂಡಿಗೆ ಮಂಗಳೂರು ಪಟ್ಟಣದಿಂದ ಜಮೆ ವ ವಾಗ್ದಾನ ಮಾಡಿದ ಹಣ.

ಹಟ್ಟಿಕುದುರ್ ನರಸಿಂಗರಾವ್ ರೂ. ೫೦, ಕೆ. ಶ್ರೀನಿವಾಸರಾವ್ ರೂ. ೨೫, ಯು. ಸಿ. ಕೃಷ್ಣಭಟ್ಟ ರೂ. ೨೫, ಅಮ್ಮಣ್ಣಮ್ಮ ರೂ. ೨೦, ಹಿತಚಿಂತಕ ರೂ. ೧೦, ಪಂಡಿತ ಆನಂದರಾವ್ ರೂ. ೧೦, ಬಿ. ವೆಂಕಟ್ರಮಣಭಟ್ಟ ರೂ. ೧೦, ಹಿತಚಿಂತಕ ರೂ. ೫, ಹಿತಚಿಂತಕ ರೂ. ೫, ಪಿ. ಯಂ. ಕಾಮತ್ ರೂ. ೫, ಶಿವಶಂಕರಶೇಟ್ ರೂ. ೫, ಕಕ್ಕೆ ವೆಂಕಟರಾವ್ ರೂ. ೫, ಹಿತಚಿಂತಕ ರೂ. ೫, ಕೆ. ಯಂ. ದಾಸಪ್ರಭು ೫, ರಾಮದಾಸ ೫, ಎಲ್ಲೂರು ಸಂಜೀವರಾವ್ ೫, ಯಂ. ಯಸ್. ರಂಗನಾಥರಾವ್ ರೂ. ೫, ತಿರುಮಲೇಶ್ವರಭಟ್ಟ ರೂ. ೫, ಅನಂತಶಾಸ್ತ್ರಿ ರೂ. ೫, ಪ್ರಭಾಕರರಾವ್ ರೂ. ೫, ಕುದ್ಮಿ ವೆಂಕಟರಾವ್ ರೂ. ೫, ಉಳ್ಳಾಲ ಪದ್ಮನಾಭಕಿಣಿ ರೂ. ೫, ಸುಜೀರ್ ಮುಕುಂದನಾಯಕ ರೂ. ೫, ನರಸಿಂಹ ಮಲ್ಯ ೫, ನಗರ ವೆಂಕಟರಾವ್ ರೂ. ೫, ಬಿ. ಆರ್. ವೆಂಕಟ್ರಮಯ್ಯರ್ ರೂ. ೫, ಯಂ. ರಾಮರಾವ್ ರೂ. ೫, [illegible] ರೂ. ೫, ಯಸ್. ಗಣಪತಿ ಆಚಾರಿ ೫, ಯಂ. ಲಕ್ಷ್ಮಣ [illegible] ರೂ. ೫, ಕೆ. ಶಾಂತಪ್ಪನಾಯಕ ರೂ. ೫, ಬಿ. [illegible] ರೂ. ೫, ಮು. ತಿಮ್ಮಪ್ಪಯ್ಯ ಸಹೋದರ ರೂ. ೫, ಹಿತಚಿಂತಕ ರೂ. ೫, ಬಿ. ಸೀತಮ್ಮ ರೂ. ೫, ಯಂ. ಕೊಗ್ಗಣ್ಣ ರೂ. ೫, ಯಂ. ವಾಸುದೇವರಾವ್ ರೂ. ೫, ಕೇಶವಭಟ್ಟ ಭಿಡೆ ರೂ. ೫, ಎಲ್ಲೂರು ರಾಮರಾವ್ ರೂ. ೫, ಭಾಮಿ ವೆಂಕಟಸ್ವಾಮಿ [illegible] ರೂ. ೫, ಎ. ತಿಮ್ಮಯ್ಯ ಸಹೋದರರು ರೂ. ೫, ಬಿ. ಭಾಸ್ಕರ ರೂ. ೫, ಬಿ. ಯಸ್. ಪ್ರಭು, ರೂ. ೫, ಹಿತಚಿಂತಕ ರೂ. ೫, ಹಿತಚಿಂತಕ ರೂ. ೫, ಯಸ್. [illegible] ರೂ. ೫, ಇತರ ಜನ ರೂ. [illegible]

ಮುಂಚಿನ ರೂ. [illegible] ಸದಾಶಿವರಾವ್ ರೂ. ೨೦, [illegible] ರೂ. ೧೦, ಬಿ. ಯಂ. [illegible] ೫, [illegible] ೧೦, ಹಿತಚಿಂತಕ ೫, ಬಿ. ಪರಮೇಶ್ವರ ೫, [illegible] ರೂ. ೨೫, ಸೆಲ್ಲಿ [illegible] ವೆಂಕಟಕೃಷ್ಣರಾವ್ ರೂ. ೨೫, [illegible] ರೂ. ೧೦, ಕತ್ರಿ ಕೃಷ್ಣರಾವ್ ರೂ. ೫, [illegible] ರಾವ್ ರೂ. ೫, ಆ. ಭೋಜರಾವ್ ರೂ. ೫, [illegible] ರೂ. ೨೫, [illegible] ರೂ. ೫೦, [illegible] ರೂ. ೨೫, [illegible] ರೂ. ೧೫; [illegible] ರೂ. ೫೦, [illegible] ರೂ. ೧೦, [illegible] ರೂ. ೧೦, [illegible] ರೂ. ೧೧, [illegible] ರೂ. ೧೫೩೫. [illegible]

[illegible]

ಮು. [illegible],
ಕಾರ್ಯದರ್ಶಿ,
[illegible]

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

[illegible]ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇವರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾ ದೀಕ್ಷಿತರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತ" "ಆತ್ಮಗೀತ" "ದೇವರೆಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣ ವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಬಗೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!
ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕರಣವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನೂ, ಸ್ತ್ರೀಯರ ಗೂಢ ರಹಸ್ಯವನ್ನೂ, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನೂ, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುವೆವು. ಬೆಲೆಯಾದರೂ ಶೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ನೋಡಿಯೆ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಿಭೂರಿಕರಾಗಿರಿ.

ಇದರ ಬೆಲೆ ೧—೪—೦. ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ [illegible] ಪ್ರೆಸ್, [illegible]

೬೦ ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದವರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಪಾಡಿಯೂ, ಇನ್ನು ಅನೇಕ ತರದ ವಸ್ತ್ರಗಳೂ ಬಿಡಿಕ ಆಗಿಯೂ ಖಿಲ್ಲರೆ ಆಗಿಯೂ ದೊರೆಯುತ್ತವೆ

ಶ್ರೀನಿವಾಸ ರಂಗಪ್ಪೆ
[illegible], ಮಂಗಳೂರು

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid
up Capital Rs. 300,000—0—0
Reserve and other sinking
Funds „ 205,250—0—0

ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
„ 205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಬಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದರದನ್ನು ಕಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುವುದರಿಂದಲ್ಲಿ ಯಾವ ಕಾಯಿಲೆಗೂ ಗುರಿಯಾಗದ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ಕಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸುಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ಕೇಡೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಸೆಳವು, ಕೆಮ್ಮು, ಶೀತ, ಶೀತವಾತ, ಮೈಕೈನೋವು, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ತೊಡಕು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಅಕ್ಕೋಪಿಲಕ್ಷ್ ಇನ್‌ಫ್ಲುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತ ಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡುವವಕಾಶವಿಲ್ಲದ ವ್ಯಾಪಾರಗಳಿಗೂ ಗೋಷ್ಠಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವ ಸದೃಶವಾದವು. ಪ್ರತಿ ಸೀಸೆಯೊಡನೆಯೆ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ಅಡಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6-ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮-೬-೧೯೨೧)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ರಜಪೂತ ರಾಜಪುತ್ರಿಯ ನಡತೆಯೇ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡತೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ .... ಬಾಲಿಕೆಯರು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಇರು ಪಡಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—[illegible]—೦.

ಸಂಕರರಾಮಾಯಣ ಹೊಸ

ಮುತ್ತಿನ ಹಾರ	0—12—0	ಮುದ್ರಿಕಾ	5—0—0
ಸಂಸಾರಪಥ-ಪಾದಂಬರಿ	0—8—0	ಸಂಕರರಾಮಾಯಣದ	
ಚಂದ್ರಮುಖಿ „	0—8—0	ಕಥೆ ವಚನ	0—12—0
ಶಾಕುಂತಲ ರಾಮಾಯಣ	0—8—0	S. S. L. C. Kannada Texts	
		ಸಂಪುಟ 1.	0—5—0
ಕೆಲವು ಸಣ್ಣ ಕಥೆಗಳು	1—0—0	ಭಾರತ	0—6—0
ರಾಜಯೋಗ	1—0—0	ಭಾಗವತ ಪುರಾಣ	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ಸ್ಥಳ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು ಕೆನರಾ ಮಿಶನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ, ಮಂಗಳೂರು.

ಉತ್ತಮ ತರದ ನೂಲು ಕ್ರಯ ಸುಲಭ

ಮಕ್ಕಳ ಆಟದ ಡಬ್ಬಿಯು 32 ಸಾಮಾನುಗಳ ಸಹಿತ್ತು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ. 4—8—0, ದೊಡ್ಡದು 6—0—0 [illegible] ಮತ್ತು [illegible] ತಯಾರಾಗುವ [illegible] [illegible], [illegible], [illegible], ಪ್ರತಿಮೆಗಳು, ಚಿಂದ, [illegible] [illegible] ವಿ. ಪಿ. [illegible] [illegible]

ವಿಳಾಸ:—

ಎಸ್. ಯು. [illegible] ಮತ್ತು ಕಂಪೆನಿ,
[illegible]

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ತಿಳಿದು ವರ್ಣದ ಕೆಟ್ಟ ಬರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮೂಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಬಂಧವಾದ ಎಲ್ಲಾ ಚುರುಕು-ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಷೆ ಒಂದರ ಕ್ರಯ—ರೂ. 1—4—0.

ಹುಳದ ಮೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ಫೋಟೋ ಉಂಗುರಗಳು.

ಈ ತಿಂಗಳಲ್ಲಿ ತರಿಸಿದವರಿಗೆ ರೋಸಾ ಸೆಂಟ್ ಬಾಟಲ್ ಇನಾಮ.

ಈ ಉಂಗುರಗಳನ್ನು ಸೀಮಿಯ ಬಂಗಾರದಿಂದ ತಯಾರಿಸಿ ಮೇಲುಗಡೆ ಇಮಿಟೇಶನ್ ವಜ್ರದ 5 ಕಲ್ಲುಗಳು ಕೆತ್ತಲ್ಪಟ್ಟಿವೆ. ಇದರ ಮಧ್ಯದಲ್ಲಿ ಒಂದು ಭೂತ ಕನ್ನಡಿ ಇರುವುದು. ಅದರಲ್ಲಿ ನೋಡಿದರೆ ರಾಮ, ಕೃಷ್ಣ, ಲಕ್ಷ್ಮಿ, ಗಾಂಧಿ, ತಿಲಕ, ಅರಮನೆ ಮುಂತಾದವು ವಿವರವಾಗಿ ಕಾಣುವವು. ಇದರ ಬಣ್ಣವು ಹೋಗದಂತೆ ಸುವರ್ಣಭಂಗಾರದ ಗಿಲೀಟು ಮಾಡಿಯದೆ. ಇದು ಬೆರಳಿಗೆ ಹಾಕಿಕೊಳ್ಳಲು ಯೋಗ್ಯವಾಗಿರುವುದು. ಕ್ರಯ 1ಕ್ಕೆ ರೂ. 2—0—0

ವಿಲಾಯತಿಯ ರೇಜರು.

ಈ ರೇಜರುಗಳು ವಿಲಾಯತಿಯಲ್ಲಿ ತಯಾರಾದವು. ಇದರಲ್ಲಿ ಕ್ಷೌರವನ್ನು ಮಾಡಿಕೊಳ್ಳುವುದರಿಂದ ಉರಿಯುವುದಿಲ್ಲ, ನೋವಾಗುವುದಿಲ್ಲ. ಅಂಟುವ್ಯಾಧಿಗಳು ಸೇರುವುದಿಲ್ಲ. ಇದರ ಕತ್ತಿಯು ಬಹು ಮೇಲಾದ ಲೋಹದಿಂದ ಮಾಡಿದೆ. ಬಿಳಿ ದಂತದ ಹಿಡಿ ಇರುವುದು.

ಕ್ರಯ 1ಕ್ಕೆ ರೂ. 2—0—0.

ವಿಳಾಸ:— ರಿಪನ್ ವಾಚ್ ಕಂಪೆನಿ,
1/16 ಕರಪರಂಗಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶಿವ್ಯಾಪಾರಿ
ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ ರೂ. 3—4—0
ಸೇ. 1 („ 24) „ „ 2—0—0

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ
ರಾತ್ಲಿಗೆ ದರ ರೂ. 3-0-0.

ಕೈಂತ ಖರೀಗೆ ತರಿಸುವವರು ಪೋಸ್ಟ್ ಪೇಕಿಂಗ್ ಚಾರ್ಜು ಕೊಡಬೇಕಾಗುವುದು

ನಶ್ಯ ಒಂದೇ ದರವು.

ಎಲೆಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತಿದೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಯೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಂಟೋನಿಯೊ ಅಂಡ್ ಕೊ
ಪೋಸ್ಟುಬಾಕ್ಸು ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಶ್ರೀಮದಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಜಪದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಮಾಡಿಕೊಳ್ಳುವ ವಿವರವು ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವ ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬರು ತರಿಸಿ ನೋಡಬೇಕೆಂದು ಇದರ ಬೆಲೆ ಶೀರ ಕಡಿಮೆಮಾಡಿ ಇರುವವು. ೩—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟಿನ್, ಮಾಧವ ಬಿಲ್ಡಿಂಗ್.

ಮಂಗಳೂರು ಟೈಪ್ ಫೌಂಡ್ರಿ

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇನೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಕಾಗದ ದ್ವಾರಾ ತಿಳಿಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟಿನುಗಳೂ, ಯುನಾಮಲ್ಲ ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಕ್ಷಿ, ಪಾಲಿ ಕವರು ಪೌಂಟನ್‌ಪೆನ್, ಕಾಪಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

ಆರ್. ಮಾರ್ಟಿನ್ನರ.

(ಸಾರಸಾ ಪರಿಲ್ಲಾ)

ಈ ಸಾರಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವುದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖರೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರದ ಕಾಯಿಲೆ ಉಬ್ಬುವುದು, ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕ್ಷ್ಮಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ ಮತ್ತು ಚರ್ಮದ ರೋಗಗಳು, ವಿಷ ಕಡಿತದಿಂದುಂಟಾದ ವ್ಯಾಧಿ, ಸೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು, ಮನುಷ್ಯನನ್ನು ಯಾವಾಗಲೂ ಆರೋಗ್ಯದಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ.

ಬಾಟ್ಲಿ 1ಕ್ಕೆ ಕ್ರಯ ರೂ. 1—12—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಳಿಜ್ವರ, ಸನ್ನಿಪಾತ ಪಚ್ಚೆ ಬಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನು ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳೂ ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣವಾಗುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಗುಣವಾಗಿದೆ.

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಸಂಕಟವಾಗುವದೆ, ಮರ್ಮಸ್ಥಾನದಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುವನು. ಈ ಔಷದದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, [illegible] ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ [illegible]. ಇದು ಒಳ್ಳೆ ಔಷಧಗಳಿಂದ ತಯಾರಿಸಲ್ಪಟ್ಟದ್ದು ಹಚ್ಚುವುದರಿಂದ [illegible] ಕೂಡಲೆ ಶಾಂತವಾಗುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಬಿ. ಫ್ರೆಯರ್ ರೋಡ್,
ರೈಟ್ ಎಂಡ್ ಕೋ ಹತ್ತಿರ, ಫೋರ್ಟ್, ಮುಂಬಯಿ.

R. D. KATELY & CO.,
No. B. Frere Road,
Near Wright & Co. Fort BOMBAY.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

Pinto Esq.

SWADESHABHIMANI
MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಮತ್ತೆ ವಿಷವ ಸೂಸುತ ಬರುತಿರುವ ॥
ಗರಳವವರಂಜಿದರೆ! ಸುಧೆಯನು । ಪಡೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೬. ಮಂಗಳೂರು, ತಾರೀಕು ೨೧ನೇ ಶುಕ್ರವಾರ ಎಪ್ರೀಲ್ ೧೯೩೩. ಸಂಚಿಕೆ ೧೬.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00000—0—0
ಚಂದಾ ಹಾಕಿ ಎತ್ತಿದ ಮೂಲಧನ	1,51,400—0—0
ರಿಜರ್ವ ತೆತ್ತ ಮೂಲಧನ	1,04,383—[illegible]—11
ಠೇವಣಾತಿಗಳು	3,49,151-12—6
ಇನ್ವೆಸ್ಟ್ಮೆಂಟು (1927ನೇ ಇಸವಿಯ) ಶೇಕಡಾ ೮ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	5,12,162-13—2
ರಿಜರ್ವ ಮತ್ತು ಇತರ ಫಂಡುಗಳು	29,149—4—2

ಕಳೆದ 2 ವರುಷಗಳಲ್ಲಿ ಪಾಲುವಸ್ತಾಲಿಕರಿಗೆ ಸಾಲಿಯಾನ್ ಸೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಶರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ಖರಜು ಠೇವಣಾತಿಗಳನ್ನು 15 ದಿನಗಳ ನೋಟೀಸು ಮೂಲಕ ಶೇಕಡಾ 6½ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾಪಾರದ ಠೇವಣಾತಿಗಳನ್ನು ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಸೇಕಡಾ 3½ರಂತೆ ಬಡ್ಡಿ ನಡೆಯುವ ಚಾಲ್ತಿ ಠೇವಣಾತಿಗಳನ್ನು ಶೇಕಡಾ 4½ ಬಡ್ಡಿ ನಡೆಯುವ ಸೇವಿಂಗ್ಸು ಬ್ಯಾಂಕು ಠೇವಣಾತಿಗಳನ್ನು, ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನು ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ್ ಅಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಸೆಂಟ್ರಲ್ ಬ್ಯಾಂಕ್ ಅಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದಲ್ಲಿ ಸಿಕ್ಕುವುದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಿಕೆ, ಮಾವು, ವೀಳ್ಯದೆಲೆ ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ವಿಾನು ಗೊಬ್ಬರದಲ್ಲಿ ಇದ್ದಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ದೊರಕಿರುವದು. ಎಕ್ರೆಗೆ 100—200 ರಾತ್ಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಡಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
6, ಮಿಶ್ಶನ್ ರೋ, ಕಲ್ಕತ್ತಾ.

THE DIRECTOR
CHILEAN NITRATE COMMITTEE,
(INDIAN DELEGATION)
6, Mission Row, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾರಣ್ಯಸ್ವಾಮಿ ಅವರ ಶಾಸ್ತ್ರಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತವಿವೇಕ ಕ್ರಯ	೦—೧೦—೦
ಶೇಷಧರ್ಮ	„ ೦—೧೨—೦
ಸಂಕ್ಷೇಪಗೀತೆ	„ ೦—೧೦—೦

ಲಕ್ಷ್ಮೀನಾರಾಯಣ ಪುಣತಾಂಬೇಕರ ರಚಿತವಾದ ಸ್ವರಾಜ್ಯ ಭಕ್ತಿಯೋಗ ಕ್ರಯ —೩—೦

ಕರ್ನಾಟಕ ಕವಿ ಚಿಂತನೆ, ಮರಾಟರ ಅವನತಿ, ಶ್ರೀವಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮರಾಮಾಯಣ, ಶ್ರೀ ಅನಂತರ ವಿಜಯ ಸತೀ ಸಾಹಸ, ಅಂಗದನ ಪ್ರಿಯಾಗ್ರ, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಹೋರುಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರಸ್ಥರಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಚಿತಕುಮಾರ, ಭೂಗೋಳ, ವನ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳೀಕರಿಗೆ ರೂ ೨-೦-೦. ಪಿ. ಪಿ. ಖರ್ಚು ೩ ರೂ. ೩-೦-೦ ಪ್ರತಿ ಟಿಕೆಟಿನ ದರಗಳ ಬಗ್ಗೆ ಪತ್ರದ ವ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ಗದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ, ತಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಶಾಯಿಗಳು. ಪೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಬು, ಪೆನ್ ಹೋಲ್ಡರುಗಳು, ಇತರ ವಿಲಾಯತಿನ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕೀಲರು ಇತ್ಯಾದಿ ಕೋರ್ಟು ಫೋರ್ಮುಗಳು, ಮರ್ಚೆಂಟು ಫೋರ್ಮು, ಕುಂಭಕೋಣದ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೊಪಥಿಕ್, ಹೊಮಿಯೊಪಥಿಕ್ ಮತ್ತು ಚಿಕ್ಕ ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪಾಶ್ಚಾತ್ಯ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಗೆ ಬೇಕಾಗುವ ಗೊಬ್ಬರಗಳು.

ಪ್ರಾಚ್ಯದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ. ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯು ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ದೇಹದಲ್ಲಿ ನೋವುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ದೋಷ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ವೇದನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ವೇದನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ವೇದನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ವೇದನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0,

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ— ಉಲನ್ ಮಾರ್ಟಿನ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಧಾತ್ರೀಕಷಾಯ

U. B. DUTT & Co. CALICUT

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ [illegible] ಬೇರುಗಳಿಂದ ನಾವು ಅನೇಕ ಶಾಸ್ತ್ರೋಕ್ತ ಔಷಧಗಳನ್ನು [illegible] ಫಲವಾಗಿ, ಅನೇಕರು [illegible] ನಮಗೆ [illegible] "ಆರ್ಡರ್‌ಗಳ" [illegible] ನಮಗೆ ಬಂದಿರುವ [illegible].

ಅಂಥಾ ಶಾಸ್ತ್ರೋಕ್ತ ಔಷಧಗಳಲ್ಲಿ ನಮ್ಮ 'ಧಾತ್ರೀಕಷಾಯ' [illegible]

ಕ್ರಯ ರೂ. 1—4—0. [illegible]

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

—(ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ೧೩ ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ೩೬, (ಬ್ರಾಡ್ವೇ, ಮದ್ರಾಸ್.

Local Agents: **Raphael & Co,**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,
Hampankatta, MANGALORE S. K

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವವು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಬೆಂಡೋಲೆಯು ಸವರನ್ ಬಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಲ್ಪಟ್ಟಿವೆ. ೭ ಬಿಳೀ ಕಲ್ಲಿನ ಬೆಂಡೋಲೆ ಕ್ರಯ ಜೊತೆ ರೂ. ೩. ೭ ಕೆಂಪು ಹರಳಿನ ಬೆಂಡೋಲೆ ಜೊತೆ ರೂ. ೩—೮—೦.

ಮಹಾರಾಟ ಟ್ರೇಡಿಂಗ್ ಕಂಪೆನಿ,
16. ತಿರುಪಳ್ಳಿಬೀದಿ, ಜೀ. ಟಿ. ಮದರಾಸ್.

ಮಾನವ ಜಾತಿಯ ಮರ್ಮಗಳನ್ನು ತಿಳಿಸುವ ಮರ್ಮ ಶಾಸ್ತ್ರ.

ಇದು ಚಿತ್ರಪಟಗಳ ಸಹಿತ ಅಂದವಾದ ಗ್ಲೇಜು ಕಾಗದದಲ್ಲಿ ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿದೆ. ಇದರಲ್ಲಿ ಸ್ತ್ರೀಪುರುಷರುಗಳ ಬೇಕಾದ ಅನೇಕ ರಹಸ್ಯಗಳು ತುಂಬಿರುವವು.

ಕ್ರಯ ಪುಸ್ತಕ ೧ಕ್ಕೆ ೦—೧೨—೦.

ಜನರಲ್ ಮೇಲ್ ಆರ್ಡರ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. 232. ಮದರಾಸ್.

ಓಟೋಲಿಲ್ಲಾ ಎಂಬ ಸೆಂಟ್.

ಇದನ್ನು ಒಂದು ಒಳ್ಳೇ ಅರವಸ್ತ್ರಕ್ಕೆ ಸೋಕಿಸಿದರೆ 6-7 ದಿನಗಳ ವರೆಗೂ ಸುವಾಸನೆಯಾಗಿರುತ್ತದೆ. ಇತರ ಸೆಂಟುಗಳ ಹಾಗೆ ಬಟ್ಟೆಗೆ ಕಲೆಯನ್ನು ಉಂಟುಮಾಡುವುದಿಲ್ಲ.

ಚಿಕ್ಕ 1 ಡಿಸ್ ಬಾಟ್ಲಿಗೆ ರೂ. 1—4—0.
" ½ " " ರೂ. 0—10—0.
ಓಟೋಲಿಲ್ಲಾ ಸೆಂಟು ಆರ್ಡು ದರ್ಜ 1ಕ್ಕೆ ರೂ. 0—12—0

ನಮ್ಮಲ್ಲಿ ಸುಲಭ ಕ್ರಯಕ್ಕೆ ಸಿಕ್ಕುವ ಇತರ ಸಾಮಾನುಗಳು:—

ಬ್ರಿಟಿಷ್ ಮೇಡ್‌ರೇಜರ್	1ಕ್ಕೆ 2—0—0
ರೋಲ್ಡುಗೋಲ್ಡು ರಿಸ್ಟುವಾಚು	1ಕ್ಕೆ 8—8—0
ನಿಕಲ್ ರಿಸ್ಟು ವಾಚು	1ಕ್ಕೆ 6—8—0
ಮಹಾತ್ಮಾ ಗಾಂಧಿಯವರ ಫೋಟೊ ಉಂಗರ	1ಕ್ಕೆ 1—8—0

ವಿಳಾಸ:— **ರಿಪನ್ ವಾಚ್ ಕಂಪೆನಿ,**
1/10ಕಡಪ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅಮನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ದೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬಡುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಹೋಲ್ ಏಜಂಟ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs. 150
¼ Page Rs. 80 ½ Page	" 50
2 in. Single Column	" 20
1 in. Single Column	" 15
Name alone in Bold Types	" 5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ಸುಸಂದರ್ಭ! ದರ ಸುಲಭ! ತ್ವರೆಮಾಡಿರಿ!!

ಭಿಡೆ ಕಂಪೆನಿ, ಮಂಗಳೂರು.

(ಡೊಂಗರಕೇರಿ ಬೀದಿ).

ನಾವು ಮಾರಾಟಮಾಡುವ ನಿತ್ಯೋಪಯೋಗದ ಎಲ್ಲಾ ತರದ ವಸ್ತಗಳನ್ನು ನಮ್ಮ ಕೈಮಗ್ಗಗಳಲ್ಲಿಯೇ ನೇಯಿಸುವುದರಿಂದ ಶುದ್ಧ ಕೈನೂಲಿನ ಖಾದಿ ಬಟ್ಟೆಗಳೂ "ಸ್ವದೇಶಿ ಮಿಲ್ ನೂಲಿನ" ಉತ್ತಮ ವಸ್ತ್ರಗಳೂ ಖಾತ್ರಿಯಿಂದ ನಮ್ಮಲ್ಲಿಯೇ ದೊರೆಯುವವು.

ಅಂಚು, ಬುಟ್ಟೆಗಳನ್ನು ಹೊಡದು ತರತರದ ರಂಗುಗಳಲ್ಲಿ ಶೀರೆಗಳನ್ನು ನಾವು ತಯಾರಿಸುವುದಲ್ಲದೆ ನೂಲಿಗೂ ಬಣ್ಣ ಹೋದ ಬಟ್ಟೆಗಳಿಗೂ ರಂಗು ಹಾಕುತ್ತೇವೆ.

ರಂಗುಗಳು ರಂಗಾಯಿಸುವ ಸಾಮಗ್ರಿಗಳು, ಮತ್ತು ಎಲ್ಲಾ ತರದ ಸ್ವದೇಶಿ ಸಾಮಾನುಗಳು ಮಾರಲ್ಪಡುತ್ತವೆ.

ಶೇಷಭಟ್ ಭಿಡೆ, ಬಿ. ಎ., ಬಿ. ಎಲ್

'ಕವಿ' ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ತು 1ರ ರೂ. 2—12—0.
ಸ್ಪೆಶ್ಯಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶೃತಿ ಪೆಟ್ಟಿಗೆಗಳು



ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಫಿಡಲ್ 1ಕ್ಕೆ " 15—0—0

ಬೇಕಾದವರು 5 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬೊಕ್ಸ್ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೊಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 8—0—0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬೊಕ್ಸ್, ನಂಬ್ರ 65, ಮದರಾಸು.

ಶಾಲಿವಾಹನಶಕ ೧೮೪೫ನೆಯ ರುಧಿರೋದ್ಗಾರಿ ಸಂ|ರದ ವೈಶಾಖ ಶು|೫ ಶನಿವಾರದಿಂದ ರುಧಿರೋದ್ಗಾರಿ ಸಂ|ರದ ವೈಶಾಖ ಶು|೧೧ ಶುಕ್ರವಾರದ ವರೆಗಿನ

ಪಂಚಾಂಗ

(೧೯೨೩ನೆಯ ಮೇಷ ಪಗ್ಗು)

ತಾರೀಕು.	ವಾರ.	ತಿ.	ಘಳಿ.	ನಕ್ಷತ್ರ.	ಘಳಿ.	ಸೌರಮಾನ ದಿ.	ಸೂರ್ಯ ಉ.	ಅಸ್ತ.
21	ಶನಿ	೫	೩೩.೩೧	ಮೃಗಶಿರಾ	೨೬.೪೫	೮	6.16	6.43
22	ರವಿ	೬	೩೩.೨೮	ಆದ್ರಾ	೨೯.೨೦	೯	6.16	6.43
23	ಸೋಮ	೭	೩೨.೩೨	ಪುನರ್ವಸು	೩೦.೨	೧೦	6.15	6.43
24	ಮಂಗಳ	೮	೩೦ ೦	ಪುಷ್ಯಾ	೨೯.೪೫	೧೧	6.15	6.43
25	ಬುಧ	೯	೨೬.೨೮	ಆಶ್ಲೇಷಾ	೨೮. ೦	೧೨	6.14	6.43
26	ಗುರು	೧೦	೨೨.೧೬	ಮಘಾ	೨೫.೩೨	೧೩	6.14	6.43
27.	ಶುಕ್ರ	೧೧	೧೭.೩೧	ಹುಬ್ಬಾ	೨೨.೩೦	೧೪	6.13	6.43

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಎಪ್ರಿಲ್)

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
12	98—1	79—9	—	—
13	93—6	82—3	—	—
14	94—2	80—3	—	—
15	95—3	81—5	—	—
16	94—6	81—2	0—04	—
17	94—7	79—8	—	0—04
18	95—8	81—8	—	—

ಮಂಗಳೂರಿನ ಪೇಟೆ ಧಾರಣೆ

ಜಿನಸು	ಇಂದ ರೂ. ಆ.	ವರೆಗೆ ರೂ. ಆ
ಹೊಸ ಮಸ್ಕತಿ ಅಕ್ಕಿಮುಡಿ ೧ಕ್ಕೆ ...	7- 8	8- 2
ಹೊಸ ಗುಡ್ಡು, ...	6- 8	7- 4
ಹೊಸ ರಾತಿ	6- 4	6- 8
ಅವ್ವಲ್ ಬೆಳ್ತಿಗೆ " ...	7-14	8-10
ಗುಡ್ಡು ಬೆಳ್ತಿಗೆ " ...	7- 6	7-12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	13-	13- 4
ಗೋದಿ ಗೋಣಿ ೧ಕ್ಕೆ ...	15- 8	18- 0
ಹುರುಳಿ ಗೋಣಿ ೧ಕ್ಕೆ ...	8-4	9-12
ಕಡಲೆ ಗೋಣಿ ೧ಕ್ಕೆ ...	11-12	12- 0
ತೊಗರಿ ಗೋಣಿ ೧ಕ್ಕೆ ...	11- 8	—
ತೊಗರಿಬೇಳೆ ಗೋಣಿ ೧ಕ್ಕೆ ...	14- 0	23- 0
ಉದ್ದು ಗೋಣಿ ೧ಕ್ಕೆ ...	13- 0	—
ಹೆಸರು ಗೋಣಿ ೧ಕ್ಕೆ ...	—	12- 0
ಊರು ಬೆಲ್ಲ ಖಂಡಿ ೧ಕ್ಕೆ ...	40- 0	45- 0
ಉಪ್ಪು ಗೋಣಿ ೧ಕ್ಕೆ ...	7- 4	7- 8
ಕೊಬ್ರಿ ಖಂಡಿ ೧ಕ್ಕೆ ...	100- 0	115- 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	40- 0	—
ಎಳ್ಳಿಂಡಿ ಖಂಡಿ ೧ಕ್ಕೆ ...	45- 0	52- 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8- 2	9- 0
ಎಳ್ಳೆಣ್ಣೆ ಮುಡಿ ೧ಕ್ಕೆ ...	6-12	9- 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	9- 0	—
ನಮ್ಮೂರ ಸಕ್ಕರೆ ಮುಡಿ ೧ಕ್ಕೆ ...	7-12	8- 0
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ ...	7- 4	7- 6
ಸಾಸಿವೆ ಮುಡಿ ೧ಕ್ಕೆ ...	[illegible] 8	9- 0
ಕೊತ್ತಂಬರಿ ಮುಡಿ ೧ಕ್ಕೆ ...	4- [illegible]	4- 8
ಅಡಿಕೆ ಖಂಡಿ ೧ಕ್ಕೆ ...	272- 0	282-
[illegible] ...	200- 0	[illegible]5- 0
[illegible] New, [illegible] ...	175- 0	180- [illegible]
[illegible] ಖಂಡಿ ೧ಕ್ಕೆ ...	115- 8	[illegible]0- 0
[illegible] ಮುಡಿ ೧ಕ್ಕೆ ...	80- 0	[illegible]
[illegible] ಮುಡಿ ೧ಕ್ಕೆ ...	1-14	2- 0
[illegible] ಖಂಡಿ ೧ಕ್ಕೆ ...	50- 0	65- 0
[illegible] ಮುಡಿ ೧ಕ್ಕೆ ...	20-12	23-
[illegible] ...	32- 0	—
[illegible] ...	22- 8	—
[illegible] 17 ...	26- 0	21-

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 3 ವರುಷ ಕೊಡುವೆವು.)



ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ಕಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—**ಎಸ್. ಎಸ್. ರಾಮ ಎಂಡ್ ಕೊ,**
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0

ನಮ್ಮ ವಿಳಾಸ—**ಎಸ್. ಪಾಲ್ ಎಂಡ್ ಕೊ.**
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

AMRUTHINE.

An ideal beverage. The best Substitute for Coffee, Tea, and Cocoa.

ಶಕ್ತಿವರ್ಧಕ! **ಅಮೃತೈನ್.** ಆರೋಗ್ಯದಾಯಕ!

ಕಾಫಿ, ಟೀ, ಕೋಕೋಗಳಿಗೆ ಬದಲಾಗಿ ಬಾಲ ವೃದ್ಧರೂ ಸೇವಿಸಬಹುದಾದ "ಅಮೃತೈನ್" ಎಂಬ ಶ್ರೇಷ್ಠ ವರ್ಗದ ಚೂರ್ಣವು.

ಇದು ಪರಿಶುದ್ಧವೂ, ಚೈತನ್ಯವರ್ಧಕವೂ ಆದುದು. ಈ ಚೂರ್ಣವು ರಕ್ತವನ್ನು ಶುದ್ಧಿಮಾಡಿ, ಶಕ್ತಿಯನ್ನೂ ಉತ್ಸಾಹವನ್ನೂ ಹೆಚ್ಚಿಸಿ, ಶರೀರವನ್ನು ಆರೋಗ್ಯ ರೀತಿಯಲ್ಲಿಡುವದಲ್ಲದೆ, ಬಹುಮೂತ್ರ, ಮಲಬದ್ಧತೆ ಮತ್ತು ಮೂಲವ್ಯಾಧಿ ಇವುಗಳನ್ನು ಶೀಘ್ರದಲ್ಲೇ ಗುಣಪಡಿಸುವ ಸಾಧನವಾಗಿದೆ. ಒಂದು ವಾರ ಉಪಯೋಗಿಸುವುದರಲ್ಲಿ ಇದರ ಗುಣಗಳು ವ್ಯಕ್ತವಾಗುವುವು.

6. ಔನ್ಸ್ ಟಿನ್. (120 ಬಟ್ಟಲುಗಳಿಗೆ ಸಾಕಾಗುವಷ್ಟು ಚೂರ್ಣ.) ರೂ. 0-10-6.
2. ಔನ್ಸ್ ಟಿನ್. (40 " ") " 0—4—0.
1. ತೊಲಾ ಪಾಕೆಟು. (8 ಬಟ್ಟಲುಗಳಿಗೆ) " 0—0—9.

ಪ್ಯಾಕಿಂಗ್ ಮತ್ತು ಪಾಸೇಲು ಖರ್ಚು ಪ್ರತ್ಯೇಕ.

ವ್ಯಾಪಾರಿಗಳಿಗೆ ಕಮಿಷನ್ ಕೊಡಲ್ಪಡುತ್ತೆ.

ಬೇಕು! ಪ್ರತಿ ಟೌನುಗಳಲ್ಲೂ ಏಜಂಟರು ಬೇಕು!

ವಿಳಾಸ:— **ಮದ್ರಾಸ್ ಮೈಸೂರು ಟ್ರೇಡಿಂಗ್ ಕಂಪೆನಿ,**
ಮೈಸೂರು.

ಮಂಗಳೂರ ಏಜಂಟರು:—

ದಿ ಇಂಪೀರಿಯಲ್ ಹಾರ್ಮೋನಿಯಮ್ ಮಾರ್ಟ್,
ರಥಬೀದಿ, ಮಂಗಳೂರು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ ಮೊಳ ಅಗಲವಿರುವವು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಉಪಯುಕ್ತವಾದವು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುವು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1	ರೂ. 6—8—0
" 2	" 7—8—0

ವಿಳಾಸ:—**ಎಸ್. ಆರ್. ಕೃಷ್ಣ ಎಂಡು ಕೊ,**
1. ತಂಬುನಾಯಕನ ಬೀದಿ, ಮದರಾಸು.

ನೋಟೀಸು.

ಮಂಗಳೂರು ತಾಲೂಕು ಮರಳಿ ಗ್ರಾಮದಲ್ಲಿರುವ ಮಾಜಿ ಪಟೇಲ ಕೃಷ್ಣಭಟ್ಟರ ಮಗಂದಿರು. 1. ಪುಟ್ಟಣ್ಣ ಭಟ್ಟ, 2. ಪಟೇಲ ಅಪ್ಪಯ್ಯಭಟ್ಟ, ಕೂಡಾ ಈ 2 ಜನರು ಸರ್ವ ಜನರಿಗೆ ತಿಳಿಯಪಡಿಸುವುದೇನಂದರೆ:—

ನಮ್ಮ ಹಿರಿಯ ಕಾಸಾ ಅಣ್ಣ ಕಾಟುಕುಕ್ಕೆ ದೇವಸ್ಥಾನದ ಕ್ಯಾನುಭೋಗಿ ಕೆಲಸನೋಡುವವರು ನಮ್ಮ ಕುಟುಂಬದ ಆಸ್ತಿಯಿಂದ ನಮ್ಮ ತಂದೆ ಜೀವಮಾನ ಕಾಲದಲ್ಲಿ ಅವರೊಳಗೆ ಕಕ್ಷಿ ಇದ್ದೇ ಅವರೊಳಗೆ ಆದ 1915ನೇ ಅಗೋಸ್ತು 8ನೇ ತಾರೀಕಿನಲ್ಲಿ ಆದ ಕರಾರು ಪ್ರಕಾರ ಪ್ರತ್ಯೇಕವಾಗಿದ್ದು, ತಂದೆಯವರು ಕಳೆದ 1921ನೇ ಇಸವಿ ಫೆಬ್ರವರಿ 11ನೇ ತಾರೀಕಿನಲ್ಲು ಕಾಲವಾದನಂತರ ನಮ್ಮ ಕುಟುಂಬದ ಆಸ್ತಿಗೆ ನಮ್ಮ ಮೂರು ಜನರ ದಸ್ಕತು ಹಾಕಿ ಪಡಕೊಂಡ ಸಾಲಗಳಿಗೆ ನಾವು ಬಾಧ್ಯರು ಹೊರತು ನಮಗೆ ನಷ್ಟಕ್ಕೆ ಒಳಪಡಿಸಬೇಕೆಂಬ ಇರಾದೆಯಿಂದ ನಮ್ಮ ಅಣ್ಣ ನಾರಾಯಣ ಭಟ್ಟರು ಮಾಡಿದ ಯಾವತ್ತು ದಿನಾಮೆ ಸಾಲ ವ ನೋಟಿನ ಸಾಲ ವಗೈರೆಗಳಿಗೆ ಅವರ ಹಿಸೆಯು ಮತ್ತು ಅವರ ಸ್ವಂತ ದೇಹ ಜವಾಬ್ದಾರಿ ಆಗಿರತಕ್ಕದ್ದಲ್ಲದೆ ನಮ್ಮ ಹಿಸೆಗಳು ಚರಸೊತ್ತುಗಳು ವ ಸ್ವಂತ ದೇಹ ಜವಾಬ್ದಾರಿ ಆಗಿರತಕ್ಕದ್ದಲ್ಲವೆಂಬುದಾಗಿ ಎಲ್ಲರು ತಿಳಿದಿರತಕ್ಕದ್ದು; ವ ಅವುಗಳನ್ನು ಸಲಾಯಿಸುವರೆ ನಾವು ಬಾಧ್ಯರಲ್ಲವೆಂಬುದಾಗಿ ಚೆನ್ನಾಗಿ ತಿಳಿದಿರತಕ್ಕದ್ದು.

Date 14-4-23.
M. Puttanna Bhatta.
M. Appayya Bhatta.
Potail.

ನೋಟೀಸು.

ಸ್ವಸ್ತಿ! ಶ್ರೀ ಕಾರ್ಕಳ ದಾನಸಾಲೆಮಠದ ಲಲಿತಕೀರ್ತಿ ಭಟ್ಟಾರಕದೇವ ಸ್ವಾಮಿಗಳವರು ಸದರಿ ಮಠಕ್ಕೆ ಸಂಬಂಧಪಟ್ಟ ಸಮಸ್ತ ಶಿಷ್ಯವರ್ಗದವರಿಗೆ ವ ಮಠದ ಆಸ್ತಿಯ ವಕ್ಲುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ನಾವು ಹೆಚ್ಚಿನ ವೃದ್ಧಾಪ್ಯದವರಾಗಿದ್ದು ಸದರಿ ಮಠದ ಆಡಳಿತೆ ನಡಿಸುವುದು ತೀರಾ ಅಶಕ್ಯವಾದ್ದರಿಂದಲೂ, ಈ ವರೆಗಿನ ನಮ್ಮ ಆಡಳಿತೆಯಲ್ಲಿ ನಮ್ಮ ಅಜಾಗ್ರತೆಯ ಕಾರಣ ಸದರಿ ಮಠದ ಬಾಬ್ತು ಹೆಚ್ಚಿನ ಸೊತ್ತುಗಳು ನಷ್ಟವಾಗಿ ಹೋಗಿರುವುದರಿಂದ ಕೂಡಾ ಸದರಿ ಮಠಕ್ಕೆ ಸಂಬಂಧಿಸಿದ ಶಿಷ್ಯವರ್ಗದವರು ಹೆಚ್ಚಿನ ಅಸಂತುಷ್ಟಿಪಟ್ಟ ಕಾರಣ ಸದರಿ ಮಠದ ಅಭಿವೃದ್ಧಿಗಾಗಿ ಆ ಮಠದ ವಿಶಿಷ್ಟ ಸ್ಥಿರಚರಸೊತ್ತುಗಳ ನಮ್ಮ ಆಡಳಿತೆಯನ್ನು ಅವುಗಳ ಮೇಲೆ ನಮಗಿರುವ ಎಲ್ಲಾ ತರದ ಹಕ್ಕು ಸಮೇತ ಕಾರ್ಕಳ ಹೋಬಳಿಯ ಹತ್ತು ಸಮಸ್ತರಿಗೋಸ್ಕರ ಹೋಬಳಿ ಗುರಿಕಾರ ಮುಡಾರು ಗ್ರಾಮದ ರಾಮಿರಗುತ್ತು ಶಂಕರ ಪಡಿವಾಳರಿಗೆ ರಿಲೀಜುಪತ್ರ ಮೂಲಕ ಬಿಟ್ಟುಕೊಟ್ಟಿರುತ್ತೇವೆ. ಆದುದರಿಂದ ಸದರಿ ಮಠಕ್ಕೆ ಸಂಬಂಧಿಸಿದ ಸಮಸ್ತ ಪತ್ರ ವ್ಯವಹಾರಗಳನ್ನಾಗಲಿ ವ ಮಠಕ್ಕೆ ಸಲತಕ್ಕ ವಂತಿಗೆ, ವರಾಡು, ಕಾಣಿಕೆ, ದಾನ ಧರ್ಮ ವಗೈರೆಗಳನ್ನೂ ವ ಮಠದ ಆಸ್ತಿಯ ವಕ್ಲುಗಳಿಂದ ಈ ವರೆಗೆ ಬರತಕ್ಕ ವ ಇನ್ನು ಮುಂದಕ್ಕೆ ಬರುವ ಗೇಣಿಯನ್ನು ಸಹ ಇನ್ನು ಮುಂದೆ ಸದರಿ ಶಂಕರ ಪಡಿವಾಳರ ಬಳಿಗೆ ಕಳುಹಿಸಿಕೊಡಬೇಕಾಗಿ ಈ ಮೂಲಕ ಸರ್ವರಿಗೂ ತಿಳಿಸುತ್ತೇನೆ.

ತಾ. 15-4-1923.

ಲಲಿತಕೀರ್ತಿ ಭಟ್ಟಾರಕರ ಸ್ವಾಮಿಗಳ ರುಜು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

O. P. No. 16/1923.

ಕೆ. ರಾಮಚಂದ್ರರಾವ್ .... ಅರ್ಜಿದಾರ
ಮತ್ತು
ಕೆ. ಶೇಷಗಿರಿರಾವ್ ಕೂಡಾ 2 ಜನರು .... ಎದ್ರಿ.

ಕುಂದಾಪುರ ತಾಲೂಕು ಶಿಬಿರ ಬೆನ್ನೆಂಡ್ ಪೇಟೆ ಕಂಬದಕೋಣೆ ನಾಗಪ್ಪಯ್ಯನವರು ಮೃತಪಟ್ಟಿದ್ದಾರೆ. ಅವರ ಸಾಲ ವಸೂಲಿ ಕುರಿತು ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಮಗ ಕೆ. ರಾಮಚಂದ್ರರಾಯನು ಮೇಲಿನ ಅರ್ಜಿ ಕೊಟ್ಟಿದ್ದಾನೆ. ಅದು ಇದೇ ತಿಂಗಳ ತಾ. 27ಕ್ಕೆ ತನಖಿಗೆ ಇಟ್ಟಿದೆ. ಈ ಕುರಿತು ಆಕ್ಷೇಪ ಏನಾದರೂ ಇದ್ದರೆ ಅದನ್ನು ಸ್ವತಹಾ ಯಾ ವಕೀಲರ ಮುಖಾಂತರ ಇದೇ ತಾ. 27-4-'23 ನೇ 11 ಘಂಟೆ ಒಳಗೆ ಜಾಹೀರುಮಾಡತಕ್ಕದ್ದು.

ತಾ. 16-4-1923. **T. Ganesh Rao,**
Vakil

ಬೇಕಾಗಿದೆ.

ಮುಂಬಯಿಯ ಒಂದು ಮಳಿಗೆಯ ಆಫೀಸು ಮತ್ತು ಡಿಪೋವಿಗೆ ಅನುಕೂಲವಾದ ಒಂದು ಬಾಡಿಗೆಯ ಕಟ್ಟೋಣವು ಪಟ್ಟಣದ ಮಧ್ಯಸ್ಥಳದಲ್ಲಿ ಬೇಕಾಗಿದೆ. ಇಂಥಾ ಕಟ್ಟೋಣವನ್ನು ಬಾಡಿಗೆಗೆ ಕೊಡಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

X C/o ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

ಎಲ್ಲಾ ನಮೂನೆಯ ಕಾಗದಗಳು ಮತ್ತು ಛಾಪಾ ಸಾಹಿತ್ಯಗಳು.

ರಫ್‌ನ್ಯೂಸ್ ಮತ್ತು ಗ್ಲೇಜು ಪ್ರಿಂಟಿಂಗ್ ಕಾಗದ, ಲೆಟರ್ ಪೇಪರುಗಳು, ಕವರ್ ಪೇಪರುಗಳು, ಡ್ರೋಯಿಂಗ್ ಬಿಡಿಸಲು ಮತ್ತು ವರ್ಗ ಊಳಿಗಗಳಿಗೆ ಬೇಕಾದ ಅತ್ಯುತ್ತಮವಾದ ಕಾಗದ, ಬ್ಯಾಂಕ್ ಪೋಸ್ಟ್, ಬ್ರವುನ್‌ಪೇಪರ್, ಬಿಳೇ ಮತ್ತು ಇತರ ಬಣ್ಣಗಳ ಪಲ್ಪಬೋರ್ಡು (ರಟ್ಟು) ಸ್ಟ್ರಾಬೋರ್ಡು ಇತ್ಯಾದಿ, ಇತ್ಯಾದಿ.

ಫೂಲ್ಸಕೇಪ್ ಕಾಗದ.

ಕ್ರೀಮ್ ಲೇಯಿಡ್, ಸಿಂಗಲ್ ಮತ್ತು ಡಬ್ಬಲ್.

ಪ್ರಿಂಟಿಂಗ್ ಶಾಯಿ, ಪ್ರಿಂಟಿಂಗ್ ರೋಲುಗಳನ್ನು ತಯಾರಿಸಲು ಅಗತ್ಯವುಳ್ಳ ಸಾಮಾನು, ಗ್ಲೂ (ವಜ್ರಸರಿಗೆ) ಪ್ರಿಂಟಿಂಗ್ ಅಕ್ಷರಗಳನ್ನು ತಯಾರಿಸುವ ಟ್ಯಾಪ್ ಮೆಟಲು, ಟ್ಯಾಪುಗಳು, ಲೆಡ್ಡುಗಳು, ಹಿತ್ತಾಳೆ ರೂಲುಗಳು, ಬರ್ಗರ ಮತ್ತು ವರ್ತ್ಸರವರ ಸ್ಪೊಕೆಟ್ಟುಗಳು, ಬ್ಯಾಂಡಿಂಗ್ ಇಮಿಟೇಶನ್ ಹಾಗು ತಾಜಾ ವಸ್ತ್ರ, ಪೇಜುಗಳನ್ನು ಕಟ್ಟುವ ನೂಲು ವಗೈರೆ.

ಇವುಗಳೆಲ್ಲಾ ರಖಂ ಆಗಿ ಬಿಕರಿಗೆ ದೊರೆಯುತ್ತವೆ.

ವಿಶೇಷ ಮಾಹಿತಿಯನ್ನು ಕೆಳಗಿನ ವಿಳಾಸದಾರರಿಂದ ತಿಳಕೊಳ್ಳಬಹುದು.

ಮೆಸ್ಸರ್ಸ್ ಎ. ಆರ್. ಕುದ್ಮುಲ್ ಎಂಡ್ ಕೋ.
ಕಂಬಾಲಾ ಹಿಲ್ ಟೆಂಪಲ್ ಸ್ಕ್ವಾ
ಮುಂಬಯಿ. ಮಂಗಳೂರು.

ಕದ್ರಿ ಯುವಕರ ಸಂಘ.

ಕದ್ರಿ ಯುವಕ ಸಂಘ (Kadri young Men's Union)ದ ಎರಡನೆಯ ಸಭೆಯು ಇದೆ ಕಳೆದ ಆದಿತ್ಯವಾರ ಎಪ್ರಿಲ್ ತಾರೀಕು ೧೫ಕ್ಕೆ ಮ। ರಾ। ಜಿ. ಸೋಮಶೇಖರರಾವ್ ಬಿ. ಎ. ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಕದ್ರಿ ರಾಷ್ಟ್ರೀಯ ಶಾಲೆಯಲ್ಲಿ ಅಪರಾಹ್ನ ೫ ಗಂಟೆಗೆ ಸೇರಿತು. ಮತ್ತು ಕಳೆದ ೮ನೆಯ ತಾರೀಕಿಗೆ ಕೂಡಿದ ಸಭೆಯಲ್ಲಿ ನೇಮಕಪಟ್ಟ ಕಮಿಟಿಯವರು ತಯಾರಿಸಿದ ನಿಬಂಧನಾ ಪತ್ರವನ್ನು ಓದಲಾಗಿ ಕೆಲವು ಬದಲಾವಣೆಗಳಿಂದ ಅದು ಮಂಜೂರು ಮಾಡಲ್ಪಟ್ಟಿತು. ನಿಬಂಧನೆಗಳಲ್ಲಿ ಮುಖ್ಯವಾದುವು.—೧೮ ವರ್ಷ ದಾಟಿದ ಓದುಬರಹ ಬಲ್ಲ ಯಾವನೊಬ್ಬನೂ, ಇಲ್ಲವೆ III Form ಮುಂದಾಗಿ ಕಲಿಯುವ ಯಾವ ವಿದ್ಯಾರ್ಥಿಯೂ ೪ ಆಣೆಯ ಪ್ರವೇಶಧನವನ್ನು ಕೊಟ್ಟು ಸಂಘಕ್ಕೆ ಸೇರಬಹುದು. ತಿಂಗಳೊಂದಕ್ಕೆ ವಿದ್ಯಾರ್ಥಿಯರಿಂದ ಕನಿಷ್ಟ ಪಕ್ಷಕ್ಕೆ ೨ ಆಣೆಯಂತೆಯೂ, ಇತರರಿಂದ ೪ ಆಣೆಯಂತೆಯೂ ವಂತಿಗೆ ವಸೂಲಾಗುವುದು. ಸಂಘದ ಕಾರ್ಯಕಾರಿ ಮಂಡಳದಲ್ಲಿ, ಬಹುಮತದಿಂದ ಆರಿಸಲ್ಪಟ್ಟ ಒಬ್ಬ ಅಧ್ಯಕ್ಷನೂ, ಒಬ್ಬ ಕಾರ್ಯದರ್ಶಿಯೂ, ಒಬ್ಬ ಖಜಾನ್‌ಜಿಯೂ ಮತ್ತಿತರ ೪ ಮೆಂಬರರೂ, ಹೀಗೆ ೭ ಜನರಿರುವರು. ಸಂಘಕ್ಕೆ ಒಂದು ವಾಚನಾಲಯ ಮತ್ತು ಒಂದು 'ಡಿಬೇಟಿಂಗ್ ಸೊಸೈಟಿ'ಯೂ ತೆರೆಯಲಾಗುವುದು.

ಅನಂತರ ಸಂಘಕ್ಕೆ ಒಬ್ಬ ತಾತ್ಕಾಲಿಕ ಕಾರ್ಯದರ್ಶಿಯವರನ್ನು ಆರಿಸಿ ಬರುವ ಸಭೆಯು ಇದೆ ತಿಂಗಳ ೨೨ನೆಯ ತಾರೀಕು ಆದಿತ್ಯವಾರ ಕದ್ರಿ ರಾಷ್ಟ್ರೀಯ ಶಾಲೆಯಲ್ಲಿ ಅಪರಾಹ್ನ ೫ ಗಂಟೆಗೆ ಕೂಡಬೇಕಾಗಿ ನಿಶ್ಚಯಿಸಲಾಯಿತು. ಅಂದು ಮೆಂಬರರಾದವರೂ ಮೆಂಬರರಾಗಲು ಅಪೇಕ್ಷೆಯುಳ್ಳವರೂ ತಪ್ಪದೆ ಬರಬೇಕೆಂದು ಪ್ರಾರ್ಥನೆ ಎಂದು ಸಂಘದ ತಾತ್ಕಾಲಿಕ ಕಾರ್ಯದರ್ಶಿಯವರು ತಿಳಿಸುವರು.

ಕೊಂಗ್ರೆಸ್ ಕಾರ್ಯಪ್ರಚಾರ.

ಮಂಗಳೂರು ಪಟ್ಟಣದ ಒಂದು ಭಾಗದಿಂದ ಮಾತ್ರ ಈ ವರೆಗೆ ರೂ. ೧,೫೦೦ ಜಮೆಯಾಗಿರುತ್ತದೆ. ಮುಲ್ಕಿಯಲ್ಲಿ ರೂ. ೨೦೦ ಜಮೆಯಾಗಿದೆ. ಮಂಗಳೂರು ತಾಲೂಕಿನಲ್ಲಿ ಗಯಾ ಕಾರ್ಯಕ್ರಮವನ್ನು ಮುಂದರಿಸುವರೆ ಅ ಭೋಜರಾವ್, ಪ ಶ್ರೀನಿವಾಸರಾವ್, ಪಾ. ಕೃಷ್ಣರಾವ್, ಸನಾತನದಾಸ, ಶ್ರೀಪಾದಶರ್ಮ ಮತ್ತು ಯನ್. ಗಂಗಯ್ಯ ಇವರು ಹೋಗಿರುತ್ತಾರೆ. ಕಾಸರಗೋಡು ತಾಲೂಕಿನ ಒಂದು ಭಾಗಕ್ಕೆ ಉ. ರಾಮರಾವ್, ಕ. ಶಂಕರಭಟ್ಟ ಮತ್ತು ಕ ರಾಮಕೃಷ್ಣ ಭಟ್ಟರೂ, ಪುತ್ತೂರು ತಾಲೂಕಿಗೆ ಉಡುಪಿ ಗೋವಿಂದರಾಯರೂ ಹೋಗುವರು. ದ. ಕೃ. ಭಾರದ್ವಾಜ ಮತ್ತು ಉಳಿದ ಸ್ವಯಂಸೇವಕರು ಪಟ್ಟಣದಲ್ಲಿ ಕೆಲಸಮಾಡುವರು. ಮಂಗಳೂರು ತಾಲೂಕಿನ ಪಾಲಿಗೆ ಬಿದ್ದ ಕೆಲಸವನ್ನು ಪೂರೈಸುವರೆ ಜನರ ಸಹಾಯ ಸಿಗುವುದಾಗಿ ನಂಬಿಗೆ ಇದೆ.

ಖಾದಿ ಮಾರಾಟಮಾಡುವುದೆ ಮೊದಲಾದ ಕೆಲಸಗಳನ್ನು ಮಾಡುವರೆ ೧೦ ವಿದ್ಯಾರ್ಥಿಗಳಿಂದ ಕೂಡಿದ ಒಂದು ಬಾಲಸೇನೆಯು ಏರ್ಪಡಿಸಲ್ಪಟ್ಟಿದೆ. ಇವರು ಪ್ರತಿ ಸಾಯಂಕಾಲ ಖಾದಿ ಮಾರಾಟಮಾಡುವರು.

ಮ ತಾ ಕಾ ಕಮಿಟಿ, ಮೂ. ಉಮೇಶರಾವ್,
ತಾ. ೧೮-೪-೧೯೨೩ ಕಾರ್ಯದರ್ಶಿ.

ಕೆಮ್ಮಿಂಜ ಸಂಸ್ಕೃತ ಪಾಠಶಾಲಾ.

ಇದೆ ರುಧಿರೋದ್ಗಾರಿ ಸಂ।ರದ ಚೈತ್ರ ಬ। ೮ಯು ರವಿವಾರ ದಿವಾ ಘಟಿ ೨೦॥ಗೆ ಸರಿಯಾದ ಶ್ಯಾಮ ಗಂಟೆ ೩ಕ್ಕೆ ಮ. ರಾ. ರಾ. ಹೈಕೋರ್ಟು ವಕೀಲರಾದ ಬೈಂದೂರು ಶಿವರಾಮ ಹೊಳ್ಳ, ಬಿ. ಎ. ಬಿ ಯಸ್. ಸಿ. ಬಿ. ಎಲ್. ಅವರ್ಗಳ್ ಇವರ ಅಧ್ಯಕ್ಷತೆಯಿಂದ ಕೆಮ್ಮಿಂಜ ಶ್ರೀಷಣ್ಮುಖದೇವಾಲಯದಲ್ಲಿ ಬ್ರಹ್ಮಶ್ರೀ ದಂಡುಗ ವಾಸುದೇವ ಭಟ್ಟರಿಂದ ಅಂಕುರಿಸಲ್ಪಟ್ಟ ಸಂಸ್ಕೃತ ಪಾಠಶಾಲೆಯ ಕಾರ್ಯನಿರ್ವಾಹಕ ಸಭೆಯು ಬಹು ವಿಜೃಂಭಣೆಯಿಂದ ಜರಗಿತು. ಸಭಿಕರು ಸುಮಾರು ೫೦ಕ್ಕೆ ಅನ್ಯೂನವಾಗಿ ನೆರೆದಿದ್ದರು. ಸಭಾರಂಭಕಾಲದಲ್ಲಿ ವಿದ್ಯಾರ್ಥಿಗಳ ದೇವತಾ ಪ್ರಾರ್ಥನೆಯಾಗಿ ಅಧ್ಯಕ್ಷರು ಸ್ವಸ್ಥಾನವನ್ನಲಂಕರಿಸಿದರು. ಬ್ರಹ್ಮಶ್ರೀ ಶಿಬರಜೆ ಸುಬ್ರಹ್ಮಣ್ಯಶಾಸ್ತ್ರಿಗಳು ಸಭಿಕರಿಗೆ ಸ್ವಾಗತೋಪಚಾರಗಳನ್ನು ಮಾಡಿದರು. ತದನಂತರದಲ್ಲಿ ಸದರಿ ಶಾಲೆಯಲ್ಲಿ ಅಧ್ಯಾಪಕರಾದ ಬ್ರಹ್ಮಶ್ರೀ ಮಂಕುಡೆ ವೆ। ಶಿವರಾಮ ಬಳ್ಳಕ್ಕುರಾಯರಿಂದ ಶಾಲಾಪ್ರಾರಂಭ ದಿನ ಮೊದಲು ಈ ವರೆಗಿನ ಶಾಲಾಭಿವೃದ್ಧಿಸ್ಥಿತಿಯು ಉಪನ್ಯಾಸ ರೀತ್ಯಾ ವಿವರಿಸಲ್ಪಟ್ಟಿತು. ಪುನಃ ಸದರಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಸಂಸ್ಕೃತ ಭಾಷಾ ವಿಷಯವನ್ನೂ ಮುಖ್ಯೋಪಾಧ್ಯಾಯರಾದ ಬ್ರಹ್ಮಶ್ರೀ ಮರಕಡ ವಿಷ್ಣು ಆಚಾರ್ಯರವರು ಬ್ರಹ್ಮಕರ್ಮ ವಿಷಯವನ್ನೂ ವಿಶದೀಕರಿಸಿದನಂತರ ಸಭಾಧ್ಯಕ್ಷರ ಭಾಷಣಾರಂಭವಾಯಿತು. ಭಾಷೆಗಳಲ್ಲಿ ಸಂಸ್ಕೃತವೆ ಮಾತೃಭಾಷೆ ಎಂತಲೂ ಆ ಭಾಷೆಯ ಹೀನಸ್ಥಿತಿಗೆ ಸ್ವರಾಜ್ಯ ದಾರಿದ್ರ್ಯವೆ ಮುಖ್ಯ ಕಾರಣವೆಂತಲೂ "ವಿದ್ಯಾಧನಂ ಸರ್ವಧನ ಪ್ರಧಾನಂ" ಎಂಬ ವಾಕ್ಯಾರ್ಥವನ್ನು ಅತ್ಯಂತ ವಿಶದವಾಗಿಯೂ ಸಭಿಕರ ಹೃದಯವನ್ನು ಮುದಗೊಳಿಸುವ ರೀತಿಯಲ್ಲಿ ವಿವರಿಸಿದರು. ಮತ್ತು ಪ್ರಸಿದ್ಧ ಋಗ್ಯಜುಸ್ಸಾಮಾಥರ್ವಗಳೆಂಬ ನಾಲ್ಕು ವೇದಗಳಂತೆಯೇ ಆಯುರ್ವೇದವು ಈಗಿನ ಸ್ಥಿತಿಗೆ ಪ್ರಾಮುಖ್ಯವಾದ್ದೆಂದು 'ಶರೀರ ಮಾದ್ಯಂ ಖಲು ಧರ್ಮಸಾಧನಂ' ಎಂಬ ನೀತಿವಾಕ್ಯವನ್ನು ಸಮಂಜಸವಾಗಿ ಸ್ತುತ್ಯಗೊಳಿಸಿದರು. ವರ್ಣಾಶ್ರಮ ಭೇದಗಳು ನಮ್ಮ ಹಿಂದೂಸ್ಥಾನದಲ್ಲಿರುವಂತೆ ಇತರ ದೇಶಗಳಲ್ಲಿಯೂ ಕೂಡ ಲಾರ್ಡ್, ಲೇಬರ್ ಇತ್ಯಾದಿ ಭೇದಗಳಿರುವ ಕಾರಣ ಮತಭೇದವನ್ನವಲಂಬಿಸಿ ಐಕ್ಯಮತ್ಯಕ್ಕೆ ಹಾನಿಯುಂಟಾಗುವುದೆಂಬ ಮಾತು ನಿರರ್ಥಕವಾದ್ದೆಂಬುದನ್ನೂ, ಸರ್ವಥಾ ಲೋಕಹಿತಕರವಾದ ಕೆಲಸಗಳಲ್ಲಿ ಪರಸ್ಪರ ಸಹಾಯವಾಗಿರುವಿಕೆಯೆ ಐಕ್ಯಮತ್ಯವೆಂದೂ ಸ್ಫುಟೀಕರಿಸಿದರು. ಸಭಾಂತ್ಯದಲ್ಲಿ ಬ್ರಹ್ಮಶ್ರೀ ಗಳಾದ ಕೆಮ್ಮಿಂಜ ಗೋಪಾಲ ತಂತ್ರಿಗಳವರು ಸದರಿ ಶಾಲಾ ಮೆನೇಜರರಾಗಿ ಸಭಿಕರಿಂದ ಚುನಾಯಿಸಲ್ಪಟ್ಟರು. ಮತ್ತು ಅಧ್ಯಕ್ಷರೆ ಮೊದಲಾದ ಮಹನೀಯರು ಈ ಶಾಲಾ ಉದ್ದಿಶ್ಯ ೧೫೦॥ ರೂಪಾಯಿಗಳ ಧನಸಹಾಯವನ್ನು ಮಾಡುವವರಾದರು. ಅಧ್ಯಕ್ಷರು ಸಭಿಕರಿಂದ ಪುಷ್ಪಮಾಲಿಕೆ [illegible] ಮೊದಲಾದ ಘನಸತ್ಕಾರದಿಂದ ಸಭೆಯನ್ನು ಶಾಂತೀಕರಿಸಿದರು.

ಮೊಗವೀರ ಶ್ರೀ ಜ್ಞಾನೋದಯ ಸಮಾಜದ ಹದಿಮೂರನೆಯ ವಾರ್ಷಿಕೋತ್ಸವವೂ ಮತ್ಸ್ಯ ವ್ಯವಸಾಯ ಶಾಲಾ ವರ್ಧಂತ್ಯುತ್ಸವವೂ.

ಇದೆ ತಿಂಗಳ ತಾರೀಕು ೧೩ನೆಯ ಶುಕ್ರವಾರ ಮ. ರಾ. ಗಂಗೊಳ್ಳಿ ಕೃಷ್ಣರಾವ್ ಬಿ. ಏ ಎಲ್. ಎಲ್. ಬಿ ಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರುಗಿಸಲಾಯಿತು. ಅಂದು ಸೂರ್ಯೋದಯ ಕಾಲದಲ್ಲಿ ಸಮಾಜದ ಸದಸ್ಯರೆಲ್ಲರೂ ಒಟ್ಟುಗೂಡಿ ಸಮುದ್ರಸ್ನಾನಮಾಡಿ ಪ್ರತಿ ಒಬ್ಬರೂ ಮದ್ಯಪಾನತ್ಯಾಗದ ಶಪಥವನ್ನು ಉಚ್ಚರಿಸಿ ಒಬ್ಬರಿಗೊಬ್ಬರು ಪ್ರಮಾಣದಾರಗಳನ್ನು ಕಟ್ಟಿಕೊಂಡರು. ಅನಂತರ ಶಾಲಾ ವಿದ್ಯಾರ್ಥಿಗಳಿಂದ ವಿವಿಧ ಸಂಘದಾಟಗಳನ್ನು ಮಾಡಿಸಲಾಯಿತು. ಮತ್ತು ಎಲ್ಲರೂ ಒಟ್ಟುಗೂಡಿ ಫಲಹಾರವನ್ನು ಮಾಡಿದರು. ಸಾಯಂಕಾಲ ಐದು ಘಂಟೆಗೆ ತಳಿರುತೋರಣಗಳಿಂದ ಅಲಂಕೃತವಾದ ಜ್ಞಾನೋದಯ ಮಂದಿರದಲ್ಲಿ ಮೊಗವೀರ ಸ್ತ್ರೀಪುರುಷ ಬಾಲಬಾಲಕಿಯರ ಮಹಾಸಭೆಯು ನೆರೆದುಬಂತು.

ಈ ಸಭೆಯು ಪ್ರಥಮತಃ ದೇವತಾಪ್ರಾರ್ಥನೆ ಕೀರ್ತನಾದಿಗಳಿಂದ ಆರಂಭಗೊಳಿಸಲ್ಪಟ್ಟಿತು. ಸಮಾಜದ ವಾರ್ಷಿಕ ವರದಿಯು ರಾ. ಯಜ್. ಸೋಮಯ್ಯ ಮಂದಣ್ಣಯರಿಂದಲೂ, ಶಾಲಾವರದಿಯು ಮುಖ್ಯೋಪಾಧ್ಯಾಯರಾದ ರಾ. ಜಿ. ಎಂ. ಡಿ. ಫೆರ್ನಾಂಡಿಸರಿಂದಲೂ ಓದಲಾಯಿತು. ಮತ್ತು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆಲ್ಲ ಅಧ್ಯಕ್ಷರ ಮುಖಾಂತರ ಪಾರಿತೋಷಕಗಳು ಕೊಡಲಾಯಿತು. ಅನಂತರ ಶಾಲೆಯ ಬಾಲಕರಿಂದ ಮದ್ಯಪಾನದ ಕೇಡು, ಧನಪಿಶಾಚಿತ್ವ, ಭಕ್ತಿಮುಕ್ತಿ, ಇತ್ಯಾದಿ ಪಾಠಗಳನ್ನು ಬೋಧಿಸುವ ಒಂದು ಸಣ್ಣ ನಾಟಕವು ಆಡಲ್ಪಟ್ಟು ಸಭಿಕರನ್ನೆಲ್ಲಾ ಮನೋರಂಜನಗೊಳಿಸಿತು. ತರುವಾಯ ಅಧ್ಯಕ್ಷರು ಒಳ್ಳೇ ಬೋಧಪ್ರದವಾದ ದೃಷ್ಟಾಂತಗಳಿಂದ ಶೋಭಿತ ಭಾಷಣಕೊಟ್ಟರು. ಅನಂತರ ರಾ. ಯಜ್. ಸೋಮಯ್ಯ ಮಂದಣ್ಣ ಯವರು [illegible] ತಮ್ಮ ದಾನಪತ್ರ ಮಂದಣ್ಣಯನ ಸ್ಮರಣಾರ್ಥವಾಗಿ ವರುಷಕ್ಕೆ ಹನ್ನೆರಡು ರೂಪಾಯಿ ಬಡ್ಡಿ ಬರುವಷ್ಟು ಧನದಾನವನ್ನು ಸಮಾಜದ ಹೆಸರಲ್ಲಿ ಬ್ಯಾಂಕಿನಲ್ಲಿ ಇಡುವೆನೆಂದು ವಾಗ್ದಾನಮಾಡಿ ಆ ಬಡ್ಡಿಯ ಹಣದಿಂದ ವರುಷ ವರುಷವೂ ಈ ಶಾಲೆಯ ವಿದ್ಯಾರ್ಥಿಗಳಲ್ಲಿ ವಿದ್ಯಾನಿಪುಣತೆ, ನಿರ್ಮಲತೆ, ಒಳ್ಳೇ ನಡತೆ, ತಪ್ಪದೆ ಶಾಲೆಗೆ ಬರುವಿಕೆ ಈ ಮೂರು ಗುಣಗಳುಳ್ಳ ನಾಲ್ಕು ಮಂದಿಗೆ ಪಾರಿತೋಷಕವಾಗಿ ಕೊಡಲು ವಿನಿಯೋಗಿಸಬೇಕೆಂದು ಹೇಳಿದಲ್ಲದೆ, ಆತನ ಹೆಸರಲ್ಲಿ ಮಕ್ಕಳಿಗೆ ಫಲಾಹಾರ ಕೊಡುವುದಕ್ಕಾಗಿ ಆಗಲೆ ಐದು ರೂಪಾಯಿಗಳನ್ನು ಸಹ ಕೊಟ್ಟರು.

ಈ ಸಭಾಕಾರ್ಯಗಳ ನಡುನಡುವೆ ಸಮಾಜದ ಸಂಗೀತ ಮೇಳದವರು ಮದ್ಯಪಾನತ್ಯಾಗ ಮತ್ತು ಜಲಪಾನಮಹತ್ವದ ಕುರಿತು ತುಳು ಕರ್ನಾಟಕ ಪದಗಳನ್ನು ಹಾಡುತ್ತಿದ್ದರು. ಮತ್ತು ಸಭಾಂತ್ಯದಲ್ಲಿ ಪನ್ನೀರು ಪುಷ್ಪಗಳಿಂದ ಸಭಿಕರನ್ನೆಲ್ಲಾ ಸತ್ಕರಿಸಿದರು. ಪ್ರೇಕ್ಷಕ.

ಗಾಂಧಿ ಭಕ್ತಿ.

ರಾಷ್ಟ್ರೀಯ ಸಭೆಯ ಶಿಷ್ಟಮಂಡಳದ ಸಭಾಸದರಾದ ಶ್ರೀಯುತ ರಾಜಗೋಪಾಲಾಚಾರ್ಯರು ಪೂರ್ವ ಬಂಗಾಲದಲ್ಲಿ ಪ್ರವಾಸಮಾಡಿದಾಗ ಗಾಂಧಿಭಕ್ತಿಯ ಅದ್ಭುತ ಕಥೆಯೊಂದು ಅವರಿಗೆ ತಿಳಿಯಿತು. ಕೊಂಗ್ರೆಸ್ ಶಿಷ್ಟಮಂಡಳದ ದೇಶಸೇವಕರನ್ನು ಸ್ವಾಗತೀಕರಿಸಲು ಬಂಗಾಲ ಪ್ರಾಂತದ ಒಂದು ಊರಲ್ಲಿ ಜನಸ್ತೋಮವು ನೆರೆದಿತ್ತು. ಒಬ್ಬ ಹೆಂಗಸು ಥಕ್ಕನೆ ಮುಂದಾದಳು. ಸ್ತ್ರೀಜಾತಿಗೆ ಯುಕ್ತವಾದ ಲಜ್ಜೆಯನ್ನು ತೊರೆದು, ಪ್ರಶ್ನಿಸಿದ್ದೇನೆಂದರೆ:—'ಮಹಾಶಯ, ಮಹಾತ್ಮರು ಕಾರಾಗೃಹದಲ್ಲಿರುವಾಗ ಪ್ರಜೆಗಳು ಉಣ್ಣುವುದು ವಿಹಿತವೇ ನೀವೆ ಹೇಳಿರಿ. ರಾಜಗೋಪಾಲಾಚಾರ್ಯರು ಅದನ್ನು ಕೇಳಿ ನೆರೆಯಲ್ಲಿದ್ದವರಿಗೆ 'ಇವಳು ಎಷ್ಟು ಕಾಲದಿಂದ ಉಪೋಷಣ ಮಾಡುತ್ತಿರುವಳೆಂ'ದು ಕುತೂಹಲಪೂರ್ವಕ ಕೇಳಿದರು. 'ಕೆಲವು ತಿಂಗಳುಗಳಿಂದ ಅವಳು ಉಣ್ಣುವುದೆ ಇಲ್ಲ'ವೆಂದು ಶ್ರೀಯುತ ರಾಜಗೋಪಾಲಾಚಾರ್ಯರಿಗೆ ಉತ್ತರ ದೊರಕಿತು. ಅದನ್ನು ಕೇಳಿ ಅವರಿಗೆ ಪರಮಾಶ್ಚರ್ಯವು ಉಂಟಾಯಿತು. ಇನ್ನೊಂದೆಡೆಯಲ್ಲಿ ಮುಪ್ಪಾದ ಮುದುಕಿಯೊಬ್ಬಳು ಶಿಷ್ಟಮಂಡಳದ ಮುಂದೆ ಬಂದು, ಮಹಾತ್ಮರ ಪುತ್ರರಾದ ಶ್ರೀಯುತ ದೇವಿದಾಸರ ಮೋರೆಯ ಮೇಲೆ ಕೈಯಾಡಿಸಿ, 'ಆ ಮಹಾತ್ಮರ ಮಗು ಇದೆ ಏನು?' ಎಂದು ಉದ್ಗರಿಸಿ ಅವರ ಕೈಯಲ್ಲಿ ಒಂದು ರೂಪಾಯಿ ೬ ಪೈಗಳನ್ನು ಕಾಣಿಕೆಯನ್ನಿತ್ತು ನಡೆದಳು. ಮುದುಕಿಯು ಉಟ್ಟ ಅರಿವೆಗಳು ಪೂರಾ ಹರಕು. ತೀರ ಬಡವಳು. ಎಷ್ಟು ದಿನಗಳಿಂದ ಈ ಹಣವನ್ನು ಸಂಗ್ರಹಿಸಿಟ್ಟಿದ್ದಳೋ ಏನೊ? ಮಹಾತ್ಮರ ಮೇಲಿನ ಶ್ರದ್ಧೆಯನ್ನು ನೋಡಿರಿ. (ಕಾನಡಾ ವೃತ್ತ.)

ಸತ್ವಪರೀಕ್ಷೆಯ ಕಾಲ.

ಕರ್ನಾಟಕವು ಮುಂದುವರಿಯುವುದೇನು?

(ನಾ. ಸು. ಹರ್ಡೀಕರ.)

ಕರ್ನಾಟಕದಲ್ಲಿಲ್ಲ ಕೂಡಿ ೨೦೦೦ ರಾಷ್ಟ್ರಸೇವಕರನ್ನು ಕೂಡಿಸುವುದಕ್ಕಾಗಿ ಇದೆ ಎಪ್ರಿಲ್ ೩೦ನೆಯ ತಾರೀಕು ಕೊನೆಯ ದಿವಸವಾಗಿದೆ. ಆ ದಿವಸದ ಒಳಗಾಗಿ ನಾವೆಲ್ಲರೂ ಕೂಡಿ ಪ್ರಯತ್ನಮಾಡಿ ನಮ್ಮ ಪಾಲಿಗೆ ಬಂದ ಇಷ್ಟು ರಾಷ್ಟ್ರಸೇವಕರನ್ನು ಲಭಿಸಲೆ ಬೇಕಾಗಿದೆ. ಇದು ನಮ್ಮ ನಿಜವಾದ ಸತ್ವಪರೀಕ್ಷೆಯ ಸಮಯವೆ ಎಂದರೂ ಅತಿಶಯೋಕ್ತಿಯಾಗಲಿಕ್ಕಿಲ್ಲ. ಮಹಾತ್ಮರಲ್ಲಿ ನಮ್ಮ ನಿಜವಾದ ನಿಷ್ಠೆ ಇದ್ದರೆ, ರಾಷ್ಟ್ರೀಯ ಸಭೆಯ ಆಜ್ಞೆಯಲ್ಲಿ ನಮ್ಮ ಶ್ರದ್ಧೆ ಇದ್ದರೆ, ನಮ್ಮ ಕರ್ನಾಟಕದ ವಿಷಯಕ್ಕೆ ನಮ್ಮಲ್ಲಿ ಕಳಕಳಿ ಇದ್ದರೆ ಮತ್ತು ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುವ ನಿಜವಾದ ಅಭಿಲಾಷೆಯು ಇದ್ದರೆ ನಾವು ನಮ್ಮ ಕರ್ತವ್ಯಕರ್ಮವನ್ನು ಮಾಡುವುದರಲ್ಲಿ ಎಂದೂ ಹಿಂದೆಗೆಯಲಿಕ್ಕಿಲ್ಲ. ನಮ್ಮಲ್ಲಿ ಸ್ವರಾಜ್ಯವನ್ನು ಸ್ಥಾಪಿಸುವ ಪಾತ್ರಾಪಾತ್ರತೆಯೂ ನಮ್ಮಲ್ಲಿರುವ ನಿಸ್ಸೀಮ ಸ್ವದೇಶಪ್ರೀತಿಯ ನಿಜಸ್ವರೂಪವೂ ಸರ್ವಸ್ವವೂ ನಮ್ಮ ಸದ್ಯದ ಕರ್ತವ್ಯವನ್ನೆ ಅವಲಂಬಿಸಿರುತ್ತದೆ.

ಮೊನ್ನಿನ ಎಪ್ರಿಲ ೫ನೆಯ ತಾರೀಕಿನ 'ಯಂಗ ಇಂಡಿಯನ' ಪತ್ರದ ಮೇಲಿಂದ ಮಾರ್ಚ ೧೮ನೆಯ ತಾರೀಕಿನ ವರೆಗೆ ಹಿಂದುಸ್ಥಾನದ ಎಲ್ಲ ಪ್ರಾಂತಗಳಲ್ಲಿ ಕೂಡಿದ ರಾಷ್ಟ್ರಸೇವಕರ ಸಂಖ್ಯೆಯನ್ನು ನೋಡಲು ಕರ್ನಾಟಕದು ೧೧ನೆಯ ನಂಬರ ಅದೆ ಎಂದು ಕಂಡುಬರುತ್ತದೆ. ಆದರೆ ರಾಷ್ಟ್ರಸೇನೆಯ ವಿಷಯದಲ್ಲಿ ಕರ್ನಾಟಕಕ್ಕೆ ಅಗ್ರಸ್ಥಾನವನ್ನು ಕೊಡುವುದೆ ನನ್ನ ಮಹತ್ವಾಕಾಂಕ್ಷೆಯಾಗಿದೆ. ಇದೆ ಧ್ಯೇಯವನ್ನಿಟ್ಟುಕೊಂಡೆ ನಾನು ಕಾರ್ಯಕ್ಕೆ ಉದ್ಯುಕ್ತನಾಗಿದ್ದೇನೆ. ಇನ್ನು ಜಯಾಪಜಯವು ಜಗತ್ಪಾಲಕನನ್ನೆ ಕೂಡಿದೆ.

ರಾಷ್ಟ್ರಸೇವಕರ ಸಹಿಯಾಗಿ ಇವತ್ತಿನ ವರೆಗೆ ನನ್ನ ಕಡೆಗೆ ಬಂದ ಪ್ರತಿಜ್ಞಾಪತ್ರಿಕೆಗಳ ಮೇಲಿಂದ ರಾಷ್ಟ್ರಸೇವಕರ ಸಂಖ್ಯೆಯು ೬೨೨ ಇರುತ್ತದೆ. ಇನ್ನು ೧೩೭೮ ರಾಷ್ಟ್ರಸೇವಕರನ್ನು ಕೂಡಿಸಬೇಕಾಗಿದೆ. ಇವುಗಳ ಹೊರತು ಅನೇಕ ಕಡೆಗಳಿಂದ ರಾಷ್ಟ್ರಸೇವಕರು ಕೂಡಿದಂತೆ ಕೇವಲ ಪತ್ರಗಳು ಬಂದಿವೆ. ಫಾರ್ಮುಗಳು ಬಂದಿಲ್ಲವಾದ್ದರಿಂದ ರಿಜಿಸ್ಟರ ಪುಸ್ತಕದಲ್ಲಿ ಬರೆದಿರುವುದಿಲ್ಲ. ಇನ್ನು ೧೮ ದಿವಸಗಳ ಅವಧಿಯು ಮಾತ್ರ ನಮಗೆ ಉಳಿದಿರುತ್ತದೆ. ಅಷ್ಟರೊಳಗೆ ಕರ್ನಾಟಕದೊಳಗಿನ ಎಲ್ಲ ಮುಂದಾಳುಗಳೂ ಕಾರ್ಯಕರ್ತರೂ ತಮ್ಮ ಶಕ್ತಿಯನ್ನೆಲ್ಲ ಈ ಕಾರ್ಯದಲ್ಲಿಯೆ ಕೇಂದ್ರೀಕರಿಸಿದರೆ ಈ ಅಲ್ಪಾವಧಿಯಲ್ಲಿ ಕೂಡ ೨೦೦೦ ರಾಷ್ಟ್ರಸೇವಕರು ದೊರೆಯಬಹುದೆಂದು ನನ್ನ ಬಲವಾದ ನಂಬಿಗೆಯಾಗಿದೆ. ಇಂದಿನ ವರೆಗೆ ಈ ಕಾರ್ಯಕ್ಕಾಗಿ ಕರ್ನಾಟಕದಲ್ಲೆಲ್ಲ ಕೈಕೊಂಡ ಪ್ರವಾಸದಲ್ಲಿ ನನಗೆ ಬಂದ ಅನುಭವದ ಮೇಲಿಂದ ನಮ್ಮ ಕರ್ತವ್ಯಪರಾಙ್ಮುಖತೆಯು ನಮ್ಮ ಮುಂದಣಿಗೆ ಕಾರಣವಲ್ಲದೆ ಮತ್ತೇನೂ ಇಲ್ಲವೆಂಬುದು ನನ್ನ ಪೂರ್ಣ ಮನವರಿಕೆಯಾಗಿದೆ. ಆದ್ದರಿಂದ ಎಲ್ಲ ಕರ್ನಾಟಕ ಬಂಧುಗಳಿಗೆ ನನ್ನ ಆಗ್ರಹದ ಮತ್ತು [illegible] ವಿನಂತಿ ಏನೆಂದರೆ,—ಸ್ವರಾಜ್ಯದೊರೆಸಲುವಾಗಿ ಕೆಲಸ ಮಾಡ[illegible] ಪ್ರತಿಯೊಬ್ಬ ಜವಾಬದಾರನಾದ ಕಾರ್ಯಕರ್ತನು [illegible] ಒಳಗಾಗಿ [illegible] ರಾಷ್ಟ್ರಸೇವಕರನ್ನಾದರೂ ದೊರಕಿಸಲೆ ಬೇಕು. ವಿಶೇಷವಾಗಿ ಎಲ್ಲ [illegible] ರಾಷ್ಟ್ರಸೇನಾನಾಯಕರು ಇದರ ಕಡೆಗೆ ಅವಶ್ಯವಾಗಿ ಲಕ್ಷ್ಯಕೊಡತಕ್ಕದೆಂದು ಅವರಿಗೆ ನನ್ನ ವಿನಂತಿ ಇರುತ್ತದೆ. ಮತ್ತು ರಾಷ್ಟ್ರಸೇವಕರನ್ನು ಕೂಡಿಸಿದ ಕೂಡಲೆ ಅವರು ಫಾರ್ಮುಗಳನ್ನು ಇತ್ತಕಡೆಗೆ ಕಳಿಸಬೇಕು.

ಸದ್ಯಸ್ಥಿತಿಯ ಮಹತ್ವವನ್ನು ರಾಷ್ಟ್ರೀಯ ಸಭೆಯ ಆಜ್ಞೆಯನ್ನು ಲಕ್ಷ್ಯಕ್ಕೆ ತಂದು ತಮ್ಮ ಸ್ವಾರ್ಥವನ್ನು ಬದಿಗೊತ್ತಿ ಈ ಪವಿತ್ರಕಾರ್ಯವನ್ನು [illegible] ಅವಧಿಯು ಒಳಗಾಗಿ ನೆರವೇರಿಸಲಿಕ್ಕೆ ಪ್ರಯತ್ನಮಾಡಬೇಕೆಂದು ಎಲ್ಲ ಕರ್ನಾಟಕಸ್ಥರಲ್ಲಿ ನನ್ನ ವಿನಯಪೂರ್ವಕ ಪ್ರಾರ್ಥನೆ ಇದೆ.

ವಿದೇಶ ವರ್ತಮಾನ.

ಮಾತನಾಡುವ ಮೃಗಗಳು:—ಅಮೇರಿಕಾ ವೃತ್ತಪತ್ರಿಕೆಗಳಲ್ಲಿ ಮಾತನಾಡುವ ನಾಯಿಗಳ ಸಂಬಂಧವಾದ ವಾರ್ತೆಗಳು ಬರುತ್ತವೆ. ಇತ್ತೀಚೆ [illegible] ಬಲವಾಗಿ ಸ್ವರಕೊಟ್ಟು ಮಾತನಾಡುವ ಒಂದು ನಾಯಿಯು ಈಗ ಅಮೇರಿಕದಲ್ಲಿದೆಯಂತೆ. ಡಾಕ್ಟರ್ ಅಲೆಗ್ಸಾಂಡರ್ ಗ್ರಾಹಂಬೇಲ್ ಎಂಬವರು ತಮ್ಮ ನಾಯಿಗೆ ಮಾತನಾಡುವುದನ್ನು ಕಲಿಸಿಕೊಟ್ಟಿದ್ದಂತೆ ಒಂದು ಪತ್ರಿಕೆಗೆ ಬರೆದಿದ್ದಾರೆ. "ನನಗೊಂದು ರೊಟ್ಟಿಯ ಚೂರು ಬೇಕು; ನಾನು ಈಗ ಹೋಗಬೇಕು" ಎಂಬುದೆ ಮೊದಲಾದ ಮಾತುಗಳನ್ನು [illegible]ಯಲ್ಲಿ ಮಾತನಾಡುತ್ತಿರುವ ನಾಯಿಯೊಂದಿದೆಯೆಂದು ಮನುಷ್ಯರು ಬರೆದಿರುವರು. ಅಭ್ಯಾಸದಿಂದ ಯಾವುದು ತಾನೆ ಸಾಧ್ಯವಾಗುವುದಿಲ್ಲ. [ಮೈಸೂರು ಸ್ಟಾರ್.]

ರುಷ್ಯಾ ಸರಕಾರದ ಶಿಕ್ಷೆ:—ರುಷ್ಯಾ ರಾಜ್ಯದ ಬೋಲ್‌ಶೆವಿಕ್ ಸರಕಾರದ ಕಾರಭಾರವನ್ನು ನೋಡಿ ಅಸಮಾಧಾನಪಟ್ಟು ದಂಗೆ ಎದ್ದ ಅಲ್ಲಿನ ರೈತಾಪಿ ಜನರ ಮೇಲೆ ಸರಕಾರಿ ಸೈನ್ಯಗಳು ಗುಂಡುಹೊಡೆದು ದಂಗೆಯನ್ನು ಅಡಗಿಸಿದವರು. ಸೆರೆಸಿಕ್ಕಿದ ಜನರ ಪೈಕಿ ೩೪೦ ರೈತರನ್ನು ಮರಣದಂಡನೆಗೆ ಗುರಿಮಾಡಿದರು.

ಒಂದನೇ ಐಶ್ವರ್ಯವಂತನು:—ಪ್ರಪಂಚದಲ್ಲೆಲ್ಲಾ ರಾಕ್‌ಫೆಲ್ಲರ್ ಎಂಬಾತನೆ ಅತ್ಯಂತ ಧನಿಕನೆಂದು ಹೆಸರು ಪಡೆದಿದ್ದನು. ಈಗ ಆತನ ಎರಡರಷ್ಟು ಐಶ್ವರ್ಯವು ಮಿ। ಹೆನ್ರಿ ಫೋರ್ಡ ಎಂಬವರಿಗೆ ಇರುವುದಾಗಿ ತಿಳಿದುಬರುತ್ತದೆ. ಇವರು ಫೋರ್ಡ ಮೋಟಾರಿನ ಸ್ವಂತ ಕರ್ತರು. ಕಳೆದ ಸಾಲಿನಲ್ಲಿ ಸರಕಾರ ತೆರಿಗೆಕೊಟ್ಟ ಮೇಲೆ ಇವರಿಗೆ ಬಂದ ಲಾಭವು ೨,೪೪,೫೦,೦೦೦ ಸವರನ್ನುಗಳು.

ನಿಗ್ರೋಜನರಿಗೆ ಕೊಡುವ ಶಿಕ್ಷೆ:—ಅಮೇರಿಕಾ ದೇಶದಲ್ಲಿ ಒಂದು ಕಾಡುಪದ್ಧತಿ ಇದೆ. ನಿಗ್ರೋಜನರು ಬಿಳೇ ಸ್ತ್ರೀಯರನ್ನು ನೋಡಿದರೆ, ಅಥವಾ ಬಿಳೇ ಜನರಿಗೆ ಸಿಟ್ಟು ಬರುವಂಥ ಯಾವುದೇ ಕೃತಿಯನ್ನು ಮಾಡುವ ನಿಗ್ರೋಜನರಿಗೆ ಸುಟ್ಟು ಕೊಲ್ಲುತ್ತಾರಂತೆ. ೧೯೨೨ನೆಯ ಇಸವಿಯಲ್ಲಿ ೫೭ ಮಂದಿ ನಿಗ್ರೋನಿವಾಸಿಗಳು ಅಗ್ನಿನಾರಾಯಣನ ಪಾಲಾದರು. ಈ ವರುಷದ ಜನವರಿ ತಿಂಗಳ ಮೊದಲಿನ ವಾರದಲ್ಲಿಯೆ ರೋಸ್‌ವುಡ್ ಎಂಬ ಊರೊಳಗಿನ ನಿಗ್ರೋಜನರೆಲ್ಲ ಸುಡಲ್ಪಟ್ಟರು.

ಒಳದೇಶ ವರ್ತಮಾನ.

ಬರ್ಮಾದಲ್ಲಿ ಕೊಂಗ್ರೆಸ್ ಕಾರ್ಯ ಪ್ರಚಾರ:—ಬರ್ಮಾದಲ್ಲಿ ಮೂರು ದಿವಸಗಳೊಳಗೆ ೧ಲಕ್ಷ ರೂಪಾಯಿ ತಿಲಕ ಸ್ವರಾಜ್ಯ ಫಂಡಿಗೆ ವಂತಿಗೆಯಾಯಿತು. ರಾಜಕೀಯ ಕೈದಿಗಳ ಕುಟುಂಬಗಳ ಸಹಾಯಾರ್ಥವಾಗಿ ರೂ. ೫೦,೦೦೦ವನ್ನು ಬರ್ಮಾ ಕೊಂಗ್ರೆಸ್ ಕಮಿಟಿಯವರು ಓಲ್‌ಇಂಡಿಯಾ ಕೊಂಗ್ರೆಸ್ ಕಮಿಟಿಯವರಿಗೆ ಕೊಡಲು ಒಪ್ಪಿರುವರು.

ಅಕಾಲೀ ಶೀಕರ ಅದ್ಭುತ ಸಾಹಸ:—ಅಕಾಲೀ ಶೀಕರ ಸತ್ಯಾಗ್ರಹವು ನಡೆದ ಕಾಲಕ್ಕೆ ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿಗೆ ಪ್ರತಿದಿನ ೩೦೦೦ ರೂಪಾಯಿಗಳ ಖರ್ಚು ತಗಲುತ್ತಿದ್ದು ಈ ಸತ್ಯಾಗ್ರಹವು ಬಹು ದಿವಸ ನಡೆದರೂ ಕಮಿಟಿಯ ಖಜಾನೆಯಲ್ಲಿ ಇನ್ನೂ ೧೫,೦೦೦ ರೂಪಾಯಿಗಳು ಶಿಲ್ಕು ಇರುವವೆಂದೂ ಸರದಾರ ಮೆಹತಾಬಸಿಂಗರು ಅಂದಿರುವರು. ಒಟ್ಟಿಗೆ ೧೬೫ ಗುರುದ್ವಾರಗಳನ್ನು ಅಕಾಲಿ ಶಿರೋಮಣಿ ಕಮಿಟಿಗೆ ಸೇರಿಸಿಕೊಂಡಿರುವರು.

ಅಂತ್ಯಜರ ಪ್ರತಿಜ್ಞೆ:—ಕುಂಭಕೋಣದಲ್ಲಿ ಶ್ರೀಯುತ ಚಿದಂಬರಯ್ಯ [illegible]ರವರು ಅಂತ್ಯಜಕೇರಿಗೆ ಹೋಗಿ ಸರಾಯಿ ಕುಡಿಯಬೇಡಿರೆಂದು ಉಪದೇಶಿಸಿದರು. ಅದಕ್ಕೆ ಅಂತ್ಯಜರು ಒಪ್ಪಲಿಲ್ಲ. ಆದ್ದರಿಂದ ಚಿದಂಬರಯ್ಯನವರು ೩ ದಿವಸ ಉಪವಾಸ ಬಿದ್ದರು. ಅದನ್ನು ನೋಡಿ ೫೦೦ ಜನ ಅಂತ್ಯಜರು ಸರಾಯಿ ಕುಡಿಯಲಿಕ್ಕಿಲ್ಲವೆಂದು ಪ್ರತಿಜ್ಞೆ ಮಾಡಿದರು.

ಕೊಂಗ್ರೆಸ್ ಮುಂದಾಳುಗಳು:—ಬಾಬು ರಾಜೇಂದ್ರ ಪ್ರಸಾದ, ಜನರಲ್ ಸೆಕ್ರೆಟರಿ ಹಿಂದೀ ರಾಷ್ಟ್ರೀಯ ಸಭಾ, ಶ್ರೀಯುತ ರಾಜಗೋಪಾಲಾಚಾರ್ಯ, ಶ್ರೀಯುತ ದೇವಿದಾಸ ಗಾಂಧಿ, ಮೌಲಾನಾ ಮಹಮ್ಮದ ಅಲ್ಲಿ, ಶ್ರೀಯುತ ಗಂಗಾಧರ ರಾವ ದೇಶಪಾಂಡೆ ಮೊದಲಾದವರು ಈ ವಾರದಲ್ಲಿ ಧಾರವಾಡದಲ್ಲಿ ಪ್ರವಾಸಮಾಡತಕ್ಕವರಿದ್ದಾರೆ. ಅವರ ಕಾರ್ಯಕ್ರಮವನ್ನು ಕೆಳಗೆ ಕೊಟ್ಟಿರುತ್ತದೆ. ತಾ. ೧೮ನೇ ಸಾಯಂಕಾಲ ಬೆಳಗಾಂ, ತಾ. ೧೮ ನೇಯ ರಾತ್ರಿ ಧಾರವಾಡ, ತಾ. ೧೯ನೇ ಮುಂಜಾನೆ ಹುಬ್ಬಳ್ಳಿ, ತಾ. ೧೯ನೇ ಸಂಜೆ ಗದಗ, ತಾ. ೧೯ನೇ ರಾತ್ರಿ ಬಾಗಲಕೋಟೆ, ತಾ. ೨೦ನೇ ಸಾಯಂಕಾಲ ವಿಜಾಪುರ. ಅಲ್ಲಿಂದ ಬಂಗಳೂರಿಗೆ ಹೋಗುವರು.

ಬೆಂಕಿಯ ಮಿಂಡ:—ಪ್ಲ್ಯಾಸ್ಟರ್ ಒಫ್ ಪ್ಯಾರಿಸ್ ಎಂಬುದು ಬೆಂಕಿಯ ಮಿಂಡನು. ಮನೆಯನ್ನು ಕಟ್ಟತಕ್ಕವರು ಸಿಮೆಂಟ ಮತ್ತು ಗಾರೆಗೆ ಬದಲಾಗಿ ಪ್ಲ್ಯಾಸ್ಟರ್ ಒಫ್ ಪ್ಯಾರಿಸ್ಸನ್ನು, ಎಲ್ಲ ಪ್ಯಾಂಡಡ್ ಮೆಟಲ್ಲನ್ನು ಛಾವಣಿ ಮೊದಲಾದವುಗಳಿಗೆಲ್ಲಾ ಉಪಯೋಗಿಸುವರು. ಇದರ ಖರೀದಿಯು ಸಿಮೆಂಟಿನ ಖರ್ಚಿಗಿಂತಲೂ ಹೆಚ್ಚಾಗುವುದಿಲ್ಲ. ಇದನ್ನು ಉಪಯೋಗಿಸಿದರೆ, ಆ ಮನೆಗೆ ಯಾರಾದರೂ ಬೆಂಕಿಹಾಕಿದರೂ ಅದು ಬೆಂಕಿಯಿಂದ ಸುಡುವುದಿಲ್ಲ. (ಸಂ.ದ್ವಿ.)

ಅಹಮದಾಬಾದ ಮುಷ್ಕರ:—ಗಿರಣಿ ಕೂಲಿಗಳ ಮುಷ್ಕರವು [illegible] ಶಾಂತವಾಗುವ ಲಕ್ಷಣಗಳು ತೋರುವುದಿಲ್ಲ. [illegible] ಗಿರಣಿಗಳು ಈಗ ತಮ್ಮ ಯಂತ್ರಗಳನ್ನು ನಿಲ್ಲಿಸುವ ಕಾರ್ಯ [illegible] ಮುಷ್ಕರ [illegible] ಕೆಲಸವನ್ನು [illegible] ಕಾರ್ಯ [illegible] ಇರುವರು. [illegible] ಎಂದು ಹೇಳುತ್ತಿದ್ದಾರೆ. [illegible] ಎಂಬಲ್ಲಿ ೧೯,೦೦೦ ಮಂದಿಗಳಿಗೆ ದಿನಕ್ಕೆ ರೂ. ೧-೦-೦ [illegible] ಕೆಲಸವನ್ನು [illegible] ಯೋಜನೆಯನ್ನು [illegible].

ಅಹಮ್ಮದಾಬಾದ ಮುನ್ಸಿಪಾಲಿಟಿಯ ಕೃತ್ಯ:—ಸರಕಾರದವರು ಇತ್ತೀಚೆ ಅಹಮ್ಮದಾಬಾದ ಮುನ್ಸಿಪಾಲಿಟಿಯ ೧೯ ಮಂದಿ ಮೆಂಬರರ ಮೇಲೆ ಹಿಂದೂಸ್ಥಾನದ ಸೆಕ್ರೆಟರಿ ಆಫ್ ಸ್ಟೇಟಿನ ಮಾಡಿದ ವ್ಯಾಜ್ಯವನ್ನು ಖರ್ಚು ಸಹಿತ ಡಿಸ್‌ಮಿಸ್ ಮಾಡಲಾಗಿದೆ.

ಕರ್ನಾಟಕ ವೃತ್ತದ ಸಂಪಾದಕರು:—ಕರ್ನಾಟಕ ವೃತ್ತ ಪತ್ರಿಕೆಯ ಸಂಪಾದಕರಾದ ಶ್ರೀಯುತ ಹನುಮಂತ ರಾಘವೇಂದ್ರರಾವ್ ಮೋಹರೆಯವರು ಕಳೆದ ಫೆಬ್ರುವರಿ ೨ನೆಯ ಸಂಚಿಕೆಯಲ್ಲಿ ಕರ್ನಾಟಕ ವೀರರು ಎಂದು ಪ್ರಕಟಿಸಿದ ಲೇಖವು ಆಕ್ಷೇಪಕರವಾಗಿದೆ ಎಂದು ಅವರನ್ನು ಸೆಕ್ಷನ್ ೧೨೪ (ಎ) ಮೇರೆಗೆ ಕೈದುಮಾಡಿದೆ.

ಉದಾರ ದಾನ:—ರಾಜೋರಿನ ಹಿಂದೂ ಹುಡುಗಿಯರ ಸಹಾಯಾರ್ಥವಾಗಿ ಒಂದು ಕೈಗಾರಿಕೆ ಶಾಲೆಯನ್ನು ಸ್ಥಾಪಿಸಲು ಸರ್ ಗಂಗಾರಾಮರು ರೂ. ೧ ಲಕ್ಷವನ್ನು ಕೊಟ್ಟಿರುವರು.

ನಡಿಯಾಡ ಮುನ್ಸಿಪಾಲಿಟಿ:—ಇಲ್ಲಿಯ ಜನರು ಟೇಕ್ಸನ್ನು ಕೊಡಲಿಕ್ಕಿಲ್ಲವೆಂದು ನಿರ್ಧರಿಸಿದ ಕಾರ್ಯವು ಜೋರಿನಿಂದ ನಡಿಯುತ್ತದೆ.

ಕೊಂಗ್ರೆಸ್ ಡೆಪ್ಯುಟೇಶನ್:—ಕಳೆದ ತಾರೀಕು ೧೫ಕ್ಕೆ ಓಲ್ ಇಂಡಿಯಾ ಡೆಪ್ಯುಟೇಶನಿನ ಮೆಂಬರರಾದ ಶ್ರೀಯುತ ವಿ. ಜೆ. ಪಟೇಲ ಮತ್ತು [illegible]ಯವರು ಬರ್ಮಾದಿಂದ ಕಲ್ಕತ್ತೆಗೆ ಬಂದು ತಲ್ಪಿದರು.

ನಾಗಪುರ ಧ್ವಜ:—ರಾಷ್ಟ್ರೀಯ ಸಪ್ತಾಹದ ಕಡೇಯ ದಿನವಾದ ಕಳೆದ ತಾರೀಕು ೧೩ರಲ್ಲಿ ಕೊಂಗ್ರೆಸ್ ಕಮಿಟಿಯ ಒಂದು ಮೆರವಣಿಗೆಯು ನಾಗಪುರದಲ್ಲಿ ಹೊರಟಿತು. ಈ ಮೆರವಣಿಗೆಯು ಕೆಲವು ಬೀದಿಗಳನ್ನು ದಾಟು ಸಿವಿಲ್ ಲ್ಯಾನಿನ ಮಾರ್ಗವಾಗಿ ಹೋಗುವಾಗ ಜುಡಿಸಿಯಲ್ ಕೋರ್ಟಿನ ಹತ್ತಿರ ನಿಲ್ಲಿಸಲ್ಪಟ್ಟಿತು. ಈ ಮೆರವಣಿಗೆಯನ್ನು ಹಿಂದಕ್ಕೆ ಕರಕೊಂಡು ಹೋಗಬೇಕೆಂದು ಪೋಲೀಸು ಅಧಿಕಾರಿಯೊಬ್ಬರು ಸ್ವಯಂಸೇವಕರ ದಳಪತಿಯಾದ ಶ್ರೀಯುತ ಬ್ಯಾ ಆವಾರಿಯವರಿಗೆ ತಿಳಿಸಿದರು. ಈ ದಳಪತಿಯು ಅದಕ್ಕೆ ಒಪ್ಪದೆ ಇರುವುದರಿಂದ ಇವರನ್ನೂ ಸ್ವಯಂಸೇವಕರ ಮೊದಲನೆಯ ಪಂಗಡದ ಇಬ್ಬರನ್ನೂ, ನಾಗಪುರ ಡಿಸ್ಟ್ರಿಕ್ಟ ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಯರಾದ ಕಲಿಮಾನ್ ಬೆನರ್ಜಿ ಇವರನ್ನೂ, ವರಿಷ್ಠ ಭಾರತ ಗೋರಕ್ಷಣೆ ಸಭೆಯ ಕಾರ್ಯದರ್ಶಿಯರಾದ ಶ್ರೀಯುತ ಬಾಡಿ ಎಂಬವರನ್ನೂ ಕೈದುಮಾಡಿ ಹತ್ತಿರದ ಪೋಲೀಸು ಸ್ಟೇಶನಿಗೆ ಒಯ್ದರು. ಮೊದಲನೆಯ ಪಂಗಡದ ೬ ಮಂದಿ ಹಾಗು ಎರಡನೆಯ ಪಂಗಡದ ೧೦ ಮಂದಿಗಳು ಶಾಂತರೀತಿಯಿಂದ ಮೆರವಣಿಗೆಯನ್ನು ಮುಂದರಿಯುತ್ತಿರುವಾಗ ಅವರನ್ನು ಬಲಾತ್ಕಾರವಾಗ ಹೊಡೆದು ಒಂದು ಕಡೆಗೆ ನೂಕಿಬಿಟ್ಟರು. ಈ ಹೋರಾಟದಲ್ಲಿ ನಾಗಪುರ ಕೊಂಗ್ರೆಸ್ ಕಮಿಟಿಯ ಸೆಕ್ರೆಟರಿಗಳು, ಶ್ರೀಯುತ ಅಂಬಲಿಕರ್ ಮತ್ತು ಇತರ ಇಬ್ಬರು ಸ್ವಯಂಸೇವಕರು ಹೆಚ್ಚಿನ ಜಖಂ ಹೊಂದಿ ಸ್ಮೃತಿ ತಪ್ಪಿದರು. ಅನಂತರ ಸ್ವಯಂಸೇವಕರ ಎರಡನೇ ಪಂಗಡದ ಮುಖಂಡರಾದ ಶ್ರೀಯುತ ಅಂಬಲಕರ ಮತ್ತು ನಾಗಪುರ ಕೊಂಗ್ರೆಸ್‌ಕಮಿಟಿಯ ಜೋಯಿಂಟ ಸೆಕ್ರೆಟರಿಗಳಾದ ಶ್ರೀಯುತ ತೇಜರಿಯವರನ್ನು ಕೈದುಮಾಡಲಾಯಿತು. ಬಳಿಕ ಉಳಿದ ಸ್ವಯಂಸೇವಕರನ್ನು ರೈಲ್ವೇ ಸಂಕದ ವರೆಗೆ ಬಲಾತ್ಕಾರದಿಂದ ಓಡಿಸಲಾಯಿತು. ಈ ಸಮಯದಲ್ಲಿ ಕೂಡಿದ ಸಾರ್ವಜನಿಕ ಸಭೆಗೆ ಹೋಗಲು ಸ್ವಯಂಸೇವಕರು ನಿಶ್ಚಯಿಸಿದ್ದರಿಂದ ಅವರು ತಮ್ಮ ಸತ್ಯಾಗ್ರಹವನ್ನು ಆ ದಿವಸದ ಮಟ್ಟಿಗೆ ನಿಲ್ಲಿಸಿ ಅಲ್ಲಿಂದ ತೆರಳಿದರು. ಕೈದುಮಾಡಲ್ಪಟ್ಟ ೫ ಮಂದಿ ಮುಖಂಡರ ವಿಚಾರಣೆಯು ನಡೆದು ಪ್ರತಿಯೊಬ್ಬರಿಗೆ ೬೦ ರೂಪಾಯಿಗಳ ಜುರುಮಾನೆ, ಜುರುಮಾನೆ ತೆರದಿದ್ದರೆ ೨ ತಿಂಗಳ ಸಾದಾ ಶಿಕ್ಷೆ ವಿಧಿಸಲಾಯಿತು. ಆದರೆ ಇವರು ಜುರುಮಾನೆ ಕೊಡುವುದಕ್ಕಿಂತ ಕಾರಾಗೃಹವಾಸಕ್ಕೆ ಹೋಗುವುದು ಲೇಸೆಂದು ನಿಶ್ಚಯಿಸಿರುವರು. ನಾಗಪುರದವರು ಸತ್ಯಾಗ್ರಹವನ್ನು ಆಚರಿಸುವ ತವಕದಲ್ಲಿರುವರು. ಆದರೆ ಈಗ ಅವರು ಕಾರ್ಯಕಾರಿ ಕಮಿಟಿಯ ಆಜ್ಞೆಯನ್ನು ನಿರೀಕ್ಷಿಸಿಕೊಂಡಿರುವರೆಂದು ಪ್ರಕಟವಾಗಿದೆ.

ಮುಳಸಿ ಸತ್ಯಾಗ್ರಹ:—ಕಳೆದ ತಾ. ೭ನೆಯ ಪ್ರಾತಃಕಾಲ ಬೆಳಗ್ಗೆ ೬೦ ವರುಷ ಪ್ರಾಯದ ಮುದುಕರಾದ ಶ್ರೀಯುತ ಮುಕಾಶಿ ಎಂಬವರು ೬ ಮಂದಿ ಸತ್ಯಾಗ್ರಹಿಗಳೊಡನೆ ಚಿಂಚವಾಡದಿಂದ ಭೋಂಡ ಎಂಬಲ್ಲಿಗೆ ಬರುವ ರೈಲ್ವೆ ಬಂಡಿಯನ್ನು (ಈ ಬಂಡಿಯಲ್ಲಿ ಮುಳಸಿ ಪೇಟೆಗೆ ಕರಕೊಂಡು ಹೋಗುವ ಅಧಿಕಾರರೂ ಕೆಲಸದವರೂ ಇರುವರೆಂಬ ಗ್ರಹಿಕೆಯಿಂದ) ತಡಿಸಬೇಕೆಂದು ನಿರ್ಧರಿಸಿದರು. ಇವರ ನಿರ್ಧಾರದಂತೆ ಒಂದು ಪಂಗಡದವರು ರೈಲ್ವೆ ಲ್ಯಾನಿನ ಮೇಲೆ ನಿಂತು ಗಂಡಾಂತರಸೂಚಕವಾದ ಕೆಂಪು ಬಾವುಟವನ್ನು ತೋರಿಸಿದರು. ಇತರರು ಮಾರ್ಗದಲ್ಲಿ ಕಲ್ಲು ರಾಶಿಯನ್ನು ಒಡ್ಡಿದರು; ಬಂಡಿಯು ರೈಲ್ವೆ ಗಾಡಿಯು ಬರುತ್ತಲೇ ಶ್ರೀಯುತ ಮುಕಶಿಯವರೂ ಕೆಂಪು ಬಾವುಟವನ್ನು ಹಿಡಕೊಂಡ ಸ್ವಯಂಸೇವಕನೂ ಗಾಡಿಯನ್ನು ಮುಂದಕ್ಕೆ ಹೋಗಗೊಡಬಾರದೆಂದು ಹೇಳಿಕೊಂಡರು. ಆಗ ಗಾಡಿಯು ನಿಲ್ಲಿಸಲ್ಪಟ್ಟಿತು. ರೈಲ್ವೆ ಕೆಲಸದವರು ಬಂಡಿಯಿಂದ ಕೆಳಕ್ಕೆ ಇಳಿದು ಮಾರ್ಗದಲ್ಲಿರುವ ಕಲ್ಲು ರಾಶಿಯನ್ನು ತೆಗೆದುಬಿಟ್ಟರು. ೬ ಮಂದಿ ಸತ್ಯಾಗ್ರಹಿಗಳು ಈಗ ಸೆರೆಮನೆಯಲ್ಲಿಟ್ಟು ಪೋಲೀಸರ ತಾಬೆಯಲ್ಲಿರುವರು. ಶ್ರೀಯುತ ಮುಕಶಿಯವರನ್ನು ಕೈದುಮಾಡಲಿಲ್ಲ. ಅವರು ಕೂಡಲೆ ಸತ್ಯಾಗ್ರಹಿಯಾಗಿ ಕೆಲಸಮಾಡಲು ತಾರರೆಂಬಲ್ಲಿಗೆ ತೆರಳಿದರು.

ಬೆಕ್ಕುಗಳಿಗೆ ಪ್ಲೇಗು:—ಪ್ಲೇಗು ರೋಗವು ಹಿಂದೂಸ್ಥಾನದಲ್ಲಿ ಬಹಳವಾಗಿ ವ್ಯಾಪಿಸಿಕೊಂಡಿದೆ. ಸಂಯುಕ್ತ ಪ್ರಾಂತ್ಯ, ಪಂಜಾಬು ಮತ್ತು ಮಧ್ಯಹಿಂದೂಸ್ಥಾನದಲ್ಲಿ ಈ ರೋಗವು ಇನ್ನೂ ಹರಡುತ್ತಲೆ ಇದೆ. ಕಚ್ಛ ಸಂಸ್ಥಾನದಲ್ಲಿ ಪ್ಲೇಗ್ ರೋಗದಂಥಾ ಒಂದು ಹೊಸ ರೋಗವು ಬೆಕ್ಕುಗಳಿಗೆ ಪ್ರಾರಂಭವಾಗಿ ಈಗಾಗಲೆ ಸುಮಾರು ೨೦೦ ಬೆಕ್ಕುಗಳು ಸತ್ತುಹೋದವು.

ಶ್ರೀಯುತ ಶಂಕರಲಾಲ ಬೇಂಕರರು:—ಕಳೆದ ತಾರೀಕು ೧೭ನೆ ಪ್ರಾತಃಕಾಲ ಇವರನ್ನು ಯರವಾಡ ಜೈಲಿನಿಂದ ಬಿಡುಗಡೆಮಾಡಿರುತ್ತಾರೆ. ಜೈಲಿನ ದ್ವಾರದಲ್ಲಿ ಶ್ರೀಯುತ ಸಿ. ರಾಜಗೋಪಾಲಾಚಾರ್ಯ, ಶ್ರೀಯುತ ಯಸ್. ಯಂ. ಪರಾಂಜಪೆ, ಶ್ರೀಯುತ ರಾಜೇಂದ್ರ ಪ್ರಸಾದ, ಶ್ರೀಯುತ ವಲ್ಲಭಭಾಯಿ ಪಟೇಲ, ಶ್ರೀಯುತ ಜಮುನಾಲಾಲ ಬಜಾಜ್ ಮತ್ತು ಶ್ರೀಯುತ ರಾಮದಾಸ ಗಾಂಧಿ ಇವರೆಲ್ಲ ಇವರನ್ನು ಸ್ವಾಗತ ಮಾಡಿದರು.

ಕರ್ನಾಟಕ ಪ್ರಾಂತಿಕ ಕಮಿಟಿಯ ಕಾರ್ಯಕಾರಿ ಸಭೆ:—ಕಳೆದ ತಾರೀಕು ೮ನೆಯ ಮಧ್ಯಾಹ್ನ ೩ ಘಂಟೆಯಿಂದ ೫॥ ವರೆಗೆ [illegible] ಸಭೆಯು ಗದಗಿನಲ್ಲಿ ಸೇರಿತು. ಈ ಸಭೆಯಲ್ಲಿ ಡಾ. [illegible] ಕೊಂಗ್ರೆಸ್ ಕೆಲಸದ ಮುಂದಾಳು [illegible] ಕೊಡಬೇಕೆಂದು ನಿಶ್ಚಯವಾಯಿತು. ಪ್ರಾಂತಿಕ ಪರಿಷತ್ತು ಬಳ್ಳಾರಿಯಲ್ಲಿ ಆಗುವುದೋ ಇಲ್ಲವೋ ಎಂಬುದನ್ನು ನೋಡಿಕೊಂಡು ಅಲ್ಲಿ ಬರ ಮುಂದಿನ ಅಧಿವೇಶನಗಳ ಮೂಲಕ ಆಗದೆ ಇರುವಂತಿದ್ದರೆ ಕಾರವಾರದಲ್ಲಿ ವ್ಯವಸ್ಥೆಮಾಡಬೇಕೆಂದು ಗೊತ್ತಾಯಿತು. ಭಿನ್ನ ಭಿನ್ನ ಕಾರಣಗಳಿಂದ ಇದುವರೆಗೆ ಈ ಪ್ರಾಂತದಲ್ಲಿ ಕೆಲಸವು ಎಷ್ಟು ಚೆನ್ನಾಗಿ ನಡೆಯಬೇಕೊ ಅಷ್ಟು ಚೆನ್ನಾಗಿ ನಡೆದಿರಲಿಲ್ಲ. ಆದ್ದರಿಂದ ಎಲ್ಲ ಕೆಲಸಗಾರರು ಉತ್ಸಾಹದಿಂದ ಈ ವಾರದಲ್ಲಿಯೂ ೩೦ನೆಯ ಎಪ್ರಿಲದ ವರೆಗೆ ಕೆಲಸಮಾಡಬೇಕೆಂದು ಗೊತ್ತಾಯಿತು.

ಧಾರವಾಡ ಜಿಲ್ಲಾ ಪರಿಷತ್ತು:—ಧಾರವಾಡ ಜಿಲ್ಲಾ ಪರಿಷತ್ತನ್ನು ಬರುವ ಮೇ ತಿಂಗಳಲ್ಲಿ ಕೂಡಿಸಬೇಕೆಂದು ನಿಶ್ಚಯವಾಗಿದೆ.

ಕರ್ನಾಟಕ ರಾಷ್ಟ್ರೀಯ ಕಾಲೇಜು:—ಈ ಕಾಲೇಜು ಬರುವ ಮೇ ತಾರೀಕು ೩೧ರಿಂದ ಪ್ರಾರಂಭವಾಗುವುದು. ಬಡ ವಿದ್ಯಾರ್ಥಿಗಳಿಗೆ ಪುಕ್ಕಟೆ ಶಿಕ್ಷಣ.

ಶಂಕರಲಾಲ ಬೇಂಕರರ ಮೋಟಾರಕಾರ್:—ಕಳೆದ ತಾ. ೧೧ನೆಯ ಸಾಯಂಕಾಲ ಮುಂಬಯಿಯಲ್ಲಿ ಸರಕಾರದವರು ಶ್ರೀಯುತ ಶಂಕರಲಾಲ ಬೇಂಕರರ ಮೋಟಾರಕಾರನ್ನು ಏಲಂ ಮಾಡಿದರು. ಇದನ್ನು ಮಿ। ಚಾರ್ಲ್ಸ ಮಿಕಾಯೇಲ್ ಎಂಬವರು ರೂ. ೨,೮೫೦ಕ್ಕೆ ಪಡೆದರು. ಇದರ ಕ್ರಯ ರೂ. ೧೦,೦೦೦ವಾಗಿತ್ತು.

ಉಪ್ಪಿನ ಸುಂಕ:—ಉಪ್ಪಿನ ಸುಂಕಕ್ಕೆ ಸಂಬಂಧಪಟ್ಟ ಚಟ್ಟವು ಶಾಸನವಾಗುವುದಕ್ಕೆ ಮುಂಚೆ ವೈಸರಾಯರ ಚಟ್ಟೆಯನ್ನು ಕುರಿತು ಕಾಮನ್ಸ್ ಸಭೆಯಲ್ಲಿ ಚರ್ಚಿಸುವುದಕ್ಕೆ ಅವಕಾಶ ಕೊಡಲ್ಪಡುವುದೆ ಎಂದು ಪಾರ್ಲಿಮೆಂಟಿನಲ್ಲಿ ಒಬ್ಬ ಸಭಾಸದರು ಪ್ರಶ್ನೆಮಾಡಲಾಗಿ, ಅದು ಈಗಾಗಲೆ ಶಾಸನವಾಗಿ ವ್ಯವಹಾರಕ್ಕೆ ಬಂದುಹೋಗಿದೆ ಎಂದು ಉಪಮಂತ್ರಿಯವರಾದ ಲಾರ್ಡವಿಂಟರಟನ್ನರು ಉತ್ತರಕೊಟ್ಟರು.

ದಕ್ಷಿಣ ಕನ್ನಡ.

ಕಾಸರಗೋಡು:—ಇದೇ ತಿಂಗಳ ತಾ. ೧೮ನೇ ರವಿವಾರ ಶ್ರೀಯುತ ಶಿಷ್ಟ ಲಕ್ಷ್ಮಣರಾಯರು ಇಲ್ಲಿಯ ಸ್ವಯಂಸೇವಕರೊಂದಿಗೆ ಕಾರಡ್ಕ ಗ್ರಾಮಕ್ಕೆ ಹೋಗಿದ್ದರು. ಅಲ್ಲಿ ಶ್ರೀಯುತರಾದ ನಾರಂತಟ್ಟ ಕಣ್ಣನ್ ನಾಯರ್, ವಕೀಲ ಕೃಷ್ಣನ್ ನಂಬಿಯಾರ್, ಮಾರಂತಟ್ಟ ರಾಮನ್ ನಾಯರ್ ಇವರ ಉತ್ಸಾಹದಿಂದ ಸಭೆಸೇರಿಸಿ, ಸಭೆಯನಂತರ ತಿಲಕಸ್ವರಾಜ್ಯ ನಿಧಿಗೆ ರೂಪಾಯಿ ೪೦ ಕಾಣಿಕೆ ಜಮೆಯಾದವು. ಸಭೆಯಲ್ಲಿ ಹಾಜರಿದ್ದ ಅನೇಕ ಜನರು ಚರಕ ಕೈಮಗ್ಗ ಉಪಯೋಗಿಸಲಿಕ್ಕೆ ಒಪ್ಪಿಕೊಂಡ ತರುವಾಯ ಹತ್ತಿ ಕೃಷಿಯನ್ನು ಮಾಡಲು ಆತುರಪಟ್ಟವರಿಗೆಲ್ಲಾ ಹತ್ತಿ ಬೀಜಗಳನ್ನು ಹಂಚಲಾಯಿತು. ತೆಗೆದುಕೊಂಡು ಹೋದ ಹತ್ತಿ ಬೀಜಗಳು ಸಾಕಾಗದೆ ಇನ್ನೂ ಅನೇಕರಿಗೆ ಬೀಜಗಳನ್ನು ಹಿಂದಿನಿಂದ ಕಳುಹಿಸಲಾಗುವುದೆಂದು ತಿಳಿಸಲಾಯಿತು. ಹಳ್ಳಿಯವರ ಇಂಥ ಉತ್ಸಾಹವನ್ನು ನೋಡುವಾಗ ಹಳ್ಳಿಗಳಲ್ಲಿ ಕೆಲಸ ಮಾಡಲು ಸಾಕಷ್ಟು ಸ್ವಯಂಸೇವಕರು ಇದ್ದರೆ, ಅವರೆ ನಮ್ಮ ಹಳ್ಳಿಯನ್ನು ರಾಷ್ಟ್ರೀಯ ಚಳವಳದಲ್ಲಿ ಮಾದರಿ ಹಳ್ಳಿಯನ್ನಾಗಿ ಮಾಡಬಹುದಿತ್ತೆಂಬುದನ್ನು ದೃಢವಾಗಿ ಹೇಳಬಹುದು. ಕಾಸರಗೋಡು ಪಟ್ಟಣದಲ್ಲಿಯೆ ತಾ. ೧೩-೪-'೨೩ರ ವರೆಗೆ ರೂಪಾಯಿ ೨೦೦ಕ್ಕೆ ಮಿಕ್ಕಿ ತಿಲಕ ಸ್ವರಾಜ್ಯನಿಧಿಯೂ ೧೬ ಸ್ವಯಂಸೇವಕರೂ ಕೂಡಿರುತ್ತೆ.

ಸ್ವೀಕಾರ ಮತ್ತು ಅಭಿಪ್ರಾಯ.

Health. (Edited by Dr. U. Rama Rao, M. L. C. Annual subscription Rs. 1-8-0 Post paid.

ಇದರ ಜನವರಿ, ಫೆಬ್ರುವರಿ, ಮಾರ್ಚ ಈ ಮೂರು ಸಂಚಿಕೆಗಳು ತಲಪಿದವು. ಈ ಮಾಸಿಕ ಪತ್ರಿಕೆಯು ಇಂಗ್ಲೀಷ್ ವೈದ್ಯ ಶಾಸ್ತ್ರವನ್ನು ಸಾರವಾಗಿ ಆರೋಗ್ಯದ ಅನೇಕ ವಿಷಯಗಳನ್ನು ಚರ್ಚಿಸಿ, ಸಂಕ್ಷೇಪವಾಗಿ ವಿವರಿಸುತ್ತದೆ. ಪ್ರತಿಪಾದ್ಯ ವಿಷಯವು ಸುಬೋಧವಾಗುವಂತೆ ಆಯಾ ಯಂತ್ರಗಳ ಮತ್ತು ಸಾಧನಗಳ ಚಿತ್ರಗಳನ್ನು ಕೊಟ್ಟಿರುವ ಕಾರಣ ವಿಶೇಷ ಪರಿಶ್ರಮವನ್ನು ಪಡದೆನೆ ವಿಷಯಗಳನ್ನು ಗ್ರಹಿಸಬಹುದಾಗಿದೆ. ಕಾಫಿ, ಟೀ, ಮುಂತಾದ ಪಾನಗಳ ಗುಣದೋಷಗಳನ್ನು ಶಾಸ್ತ್ರೀಯ ದೃಷ್ಟಿಯಿಂದ ವಿವೇಚಿಸಿರುವ ಕಾರಣ ಮೇಲಿನ ವ್ಯಸನಗಳಲ್ಲಿ ಆಸಕ್ತರಾಗುವ ತರುಣ ವಿದ್ಯಾರ್ಥಿಗಳು ಈ ಮಾಸಿಕವನ್ನು ಅವಶ್ಯವಾಗಿ ಓದಬೇಕು. "Health" ಎಂದ ಮೇಲೆ ಡೊಕ್ಟರುಗಳಿಗೂ ವೈದ್ಯರಿಗೂ ಮಾತ್ರ ಅದು ಉಪಯುಕ್ತವು, ಇತರರಿಗೆ ಏನು ಎಂದು ನೆನಸಬಾರದು. ವೈದ್ಯಶಾಸ್ತ್ರದ ಪಂಡಿತರಲ್ಲದವರೂ ಇದರಿಂದ ಅನೇಕ ಸಂಗತಿಗಳನ್ನು ಕಲೆಯಬಹುದಾಗಿದೆ. ಸಾರಾಂಶ ಎಲ್ಲರಿಗೆ ವಾಚನೀಯವೂ ಉಪಯುಕ್ತವೂ ಆದ ಮಾಸಿಕ ಪತ್ರಿಕೆಯನ್ನು ಹೊರಡಿಸಿ ಡಾ. ಯು. ರಾಮರಾಯರು ಆರೋಗ್ಯದ ಮಟ್ಟಿಗೆ ಜನತೆಯ ಮೇಲೆ ಉಪಕಾರ ಮಾಡಿದ್ದಾರೆ. ಆದ್ದರಿಂದ ಇವರನ್ನು ಅಭಿನಂದಿಸುವೆವು. ಈ ಇಂಗ್ಲೀಷ್ ಮಾಸಪತ್ರಿಕೆಯು ತಮಿಳು, ತೆಲುಗು ಈ ಭಾಷೆಗಳಲ್ಲಿ ತರ್ಜುಮೆಯಾಗಿ ಹೊರಡುತ್ತಿದೆ. ಇದೊಂದು ಇದರ ವಿಶೇಷ ಸಂಗತಿಯು. ಇದಕ್ಕೆ ಯೋಗ್ಯ ಪ್ರೋತ್ಸಾಹವು ಸಿಕ್ಕೀತೆಂದು ನಾವು ಭರವಸೆಪಡುತ್ತೇವೆ. ಪತ್ರಿಕೆಯು ಸಂಪಾದಕರ ಬಳಿಗೆ ಸಿಗುವುದು.

ವಿಠೋಬನಲ್ಲಿ ಮಂಗನ ಭಕ್ತಿ.

ಒಂದು ಕೋತಿಯು ವಿಠ್ಠಲದೇವರ ಗುಡಿಯನ್ನು ಹೊಕ್ಕು ಭಜನೆ ನಡೆದಾಗ ಬಹು ಭಕ್ತಿಯಿಂದ ಮಂತ್ರ ಕೇಳುತ್ತ ಕುಳಿತಿರುತ್ತಿತ್ತು. [illegible] ಜಾಂಗಟೆ ತಾಳಗಳ ಸದ್ದಿನಂತೆ ಬಹು ಸಂತೋಷಪಡುತ್ತಿತ್ತು. ಅದನ್ನು ಕಂಡು ಜನರು [illegible] ನಿಲ್ಲಿಸಿದರು. [illegible] ಅವರು ಕೋತಿಯನ್ನು ಹೊಡೆದರು. [illegible] ಕೋತಿಯು ಆಸ್ಪತ್ರೆಗೆ [illegible]. ವೈದ್ಯರು [illegible] [illegible] ಆ ಮೇಲೆ ಕೋತಿಯು ತನ್ನ ಸ್ಥಳಕ್ಕೆ [illegible].

ಅನುಕ್ರಮಣಿಕೆ.

ಅಗ್ರಲೇಖ:—
ಪಂಜಾಬದ ದುರ್ದೈವ . . . ೬
ಸ್ಫುಟವಿಚಾರಗಳು.— . . . ೬-೭
೧. ಅಕ್ಕಲಕೋಟೆ ಮಹಾರಾಜರ ಮೃತ್ಯು . . . "
೨. ಉಪ್ಪಿನ ತೆರಿಗೆ, ೩. ನಾಗಪುರ ರಾಷ್ಟ್ರೀಯ ಪತಾಕೆಯ ಪ್ರಕರಣ "
೪. ಬೇಕು ಬದಲಾವಣೆಯವರ ಕಾರ್ಯ . . . "
೫. ಆಗಾಖಾನರ ಅಭಿಪ್ರಾಯ . . . "
ಮಂಗಳೂರು— . . . ೮
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ . . . ೫
ದಕ್ಷಿಣ ಕನ್ನಡ—ಬಂಟವಾಳ, ಕಾಸರಗೋಡು, . . . "
ರಾಜಮಹೇಂದ್ರಿಯಲ್ಲಿ ಕಟ್ಟಿಸಿದ ಕರ್ನಾಟಕ ಕಾಗದದ ಕಾರ್ಖಾನೆ "
ಅಮೃತಸರದಲ್ಲಿ ನಡೆದ ಜಟಾಪಟಿ . . . "

ಸ್ವದೇಶಾಭಿಮಾನಿ.

ಶಕ ೧೮೪೫ ವೈಶಾಖ ಶು| ೫ಯು ಶುಕ್ರವಾರ

ಪಂಜಾಬದ ದುರ್ದೈವ!

ಮಿ॥ ಸಿ. ರಾಜಗೋಪಾಲಾಚಾರ್ಯರು ಹೇಳಿದ ಹಾಗೆ ಪಂಜಾಬವು ಸುವರ್ಣಭೂಮಿಯಾಗಿದೆಯಾದರೂ ಅದರ ಅದೃಷ್ಟವು ಗಾಜಿನದಾಗಿದೆ! ಪಂಜಾಬದ ಭೂಮಿಯು ಚಿನ್ನದ್ದೆಂಬುದಕ್ಕೆ ಸಂದೇಹವಿಲ್ಲ. ವೈದಿಕ ವಾಙ್ಮಯದೇವತೆಯು ಪ್ರಥಮತಃ ಈ ಭೂಮಿಯಲ್ಲಿ ಸುಪ್ರಸನ್ನ ಮುಖದಿಂದ ಗಾನಮಾಡಿದಳು. ತಪೋಬಲದ ಮಹರ್ಷಿಗಳು ಮತ್ತು ವಿದ್ಯಾಬಲದ ಗ್ರಂಥಕಾರರು ಈ ಭೂಮಿಯಲ್ಲಿ ಜನಿಸಿದರು. ಮೊನ್ನೆಮೊನ್ನೆ ವರೆಗೆ ದಯಾನಂದ ಪಂಡಿತಜಿ, ದೇಶಭಕ್ತ ಲಾಲಾ ಲಜಪತರಾಯ ಮುಂತಾದ ಮಹನೀಯರು ಇದೇ ಭೂಮಿಯಲ್ಲಿ ಜನ್ಮವನ್ನೆತ್ತಿರುವರು. ಸಾರಾಂಶ ಪಂಜಾಬವು ಸುವರ್ಣಭೂಮಿ ಎಂಬ ಮಾತು ಅಸತ್ಯವಲ್ಲ. ಆದರೆ ಪಂಜಾಬದ ಭೂಮಿಯು ಸುವರ್ಣದ್ದಾದರೂ ಅದರ ಅದೃಷ್ಟವು ಮಾತ್ರ ಗಾಜಿನದು. ಇದೆ ಸಂಗತಿಯು ಶೋಚನೀಯವಾಗಿದೆ. ಹಿಂದೀದೇಶದ ಮುಖ್ಯ ಧ್ಯೇಯವಾಗಿರುವ ಸ್ವರಾಜ್ಯಸಂಪಾದನೆಗೆ ಹಿಂದೂ-ಮುಸಲ್ಮಾನರ ಐಕ್ಯವು ಚಿಕ್ಕ ಶಿಶುವಿಗೆ ತಾಯಿಯ ಹಾಲಿನಷ್ಟು ಅವಶ್ಯಕವೂ, ಹಿತಕಾರಿಯೂ ಆಗಿದೆ. ಈ ಐಕ್ಯವು ಪಂಜಾಬದಲ್ಲಿ ನಾಶವಾಗಹತ್ತಿದೆ. ಇದು ತುಂಬಾ ಶೋಚನೀಯವು. ಸಿಕ್ಖರ ಸುವರ್ಣ ಮಂದಿರದಿಂದ ಅಲಂಕೃತವಾದ ಜಲಿಯನವಾಲಾ ಬಾಗಿನಲ್ಲಿ, ಡಾಯರನ ಮಾನುಷಯಜ್ಞದಿಂದ ಪವಿತ್ರಕ್ಷೇತ್ರಪ್ರಾಯವಾದ ಅಮೃತಸರದಲ್ಲಿ ಹಿಂದೂ ಮುಸಲ್ಮಾನರ ಕಲಹವು ಪ್ರಾರಂಭವಾಗಿ ಒಂದೆರಡು ದಿನ ಅಲ್ಲಿ ಭಯಂಕರ ಪರಿಸ್ಥಿತಿಯುಂಟಾಯಿತು. ಎಪ್ರಿಲ್ ತಾ. ೧೧ರಲ್ಲಿ ಹಲವು ಮಹಮ್ಮದೀಯರು, ದಾರಿಯಿಂದ ಹೋಗುತ್ತಿದ್ದ ಒಬ್ಬ ಹಿಂದೂ ಹುಡುಗಿಯ ಮೇಲೆ ಅತ್ಯಾಚಾರವನ್ನು ನಡಿಸಿದುದರಿಂದ ಹಿಂದೂ-ಮುಸಲ್ಮಾನ ಈ ಎರಡೂ ವರ್ಗದಲ್ಲಿ ಕಚ್ಚಾಟವು ಪ್ರಾರಂಭವಾಗಿ ದಂಗೆಯ ವರೆಗೆ ಅದರ ಪರಿಣಾಮವು ಬಂದು ನಿಂತಿತು. ಪತ್ರಿಕೆಗಳ ಖಾಸಗಿ ಬಾತಮಿದಾರರೂ, ಎಸೋಸಿಯೇಟೆಡ್ ಪ್ರೆಸ್ಸಿನ ಸಂಸ್ಥೆಯ ಬಾತಮಿದಾರರೂ ತಮ್ಮ ಕೊಮೆನಿಕ್ (ಪ್ರಕಟನ)ದಲ್ಲಿ ಸರಕಾರದವರೂ ಈ ದಂಗೆಯ ಮಾಹಿತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪ್ರಕಟಿಸಿದ್ದಾರಾದರೂ, ಅವೆಲ್ಲವುಗಳ ಇತ್ಯರ್ಥದಲ್ಲಿ ವಿಶೇಷ ವ್ಯತ್ಯಾಸವಿಲ್ಲ. ಮೇಲಿನ ಅತ್ಯಾಚಾರದ ಸಂಗತಿಯುಂಟಾದ ಬಳಿಕ "ಲಾಠಿ" (ದೊಣ್ಣೆ)ಗಳನ್ನು ತೆಕ್ಕೊಂಡು ಎರಡೂ ಕಡೆಯವರು ಹೊಡೆಯಲಾರಂಭಿಸಿಕೊಂಡರು. ಈ ವಾರ್ತೆಯು ಊರಿನ ಬೇರೆ ಬೇರೆ ಭಾಗಗಳಲ್ಲಿ ಹಬ್ಬಿತು. ಆಗ ಅಲ್ಲಲ್ಲಿ ಕೂಡ ಹಿಂದೂ-ಮುಸಲ್ಮಾನರ ಜಟಾಪಟಿಯು ನಡೆಯಹತ್ತಿತು. ಅಧಿಕಾರಿಗಳ ಪ್ರಯತ್ನದಿಂದ ಮತ್ತು ಮುಖ್ಯವಾಗಿ ಅಕಾಲಿಜನರ ಪರಮ ಸಹಾಯದಿಂದ ಈ ದಂಗೆಯು ಕೊಂಚ ಶಾಂತವಾಯಿತೆಂದು ತೋರುವಾಗಲೆ ಮರುದಿನ ಬೆಳಗ್ಗೆ ಬೀದಿ ಬೀದಿಗಳಲ್ಲಿ ಮುಂಚಿನ ದಿನದ ಸಂಗತಿಗಳೆ ನಡೆಯಹತ್ತಿದವು! ಇಂಥ ಪರಿಸ್ಥಿತಿಯಲ್ಲಿ ಯಾರಿಗೆ ಅಂಗಡಿಗಳ ಬಾಗಿಲು ತೆರಿಯಲು ಧೈರ್ಯವು ಬರುತ್ತದೆ? ಒಂದು ದಿವಸ ಬಜಾರವು ಮುಚ್ಚಲ್ಪಟ್ಟಿತು. ಅಷ್ಟರೊಳಗೆ ಸರಕಾರದ ದಂಡು ಬಂದು ಪಟ್ಟಣದೊಳಗಿನ ರಾಜಮಾರ್ಗಗಳನ್ನೂ, ಬೀದಿ ಬೀದಿಗಳನ್ನೂ ದಂಡಿನವರು ಕಾಯಹತ್ತಿದ ಕಾರಣ ದಂಗೆಯು ಶಾಂತವಾಗಿದೆಯಂತೆ. ಈ ದಂಗೆಯಲ್ಲಿ ವಿಶೇಷ ಪ್ರಾಣಹಾನಿಯು ಉಂಟಾಗಿಲ್ಲವೆಂದು ಹೇಳಲಾಗುತ್ತದೆ. ಉಭಯ ಪಕ್ಷದಲ್ಲಿ ಪೆಟ್ಟಾಗಿ ಮತ್ತು ಗಾಯವಾಗಿ ಬಿದ್ದವರ ಸಂಖ್ಯೆಯು ೧೦೦ಕ್ಕಿಂತಲೂ ಕಡಿಮೆಯೆ ಸರಿ ಎಂದು ತಿಳಿಸಲಾಗಿದೆ. ಮತ್ತು ಈ ಗಲಾಟೆಯಲ್ಲಿ ಪ್ರಾಣನಾಶವಾಗಲಿಲ್ಲವೆಂದು ಸರಕಾರದ ಪ್ರಕಟನೆಯಲ್ಲಿ ಜಾಹೀರಾಗಿದೆ. ಈ ದಂಗೆಯಲ್ಲಿ ಪ್ರಾಣನಾಶವಾಗದೆ ಇದ್ದದ್ದು ಸಂತೋಷದ ಮಾತೆ ಸರಿ.

ಆದರೆ ಇಂಥ ಸಮಯದಲ್ಲಿ ಮತ್ತು ಅದು ಕೂಡ ಪಂಜಾಬದಲ್ಲಿ ಹಿಂದೂ-ಮುಸಲ್ಮಾನರೊಳಗೆ ದಂಗೆಯುಂಟಾದ್ದು ವಿಷಾದದ ಸಂಗತಿ ಎಂದು ಯಾರೂ ಹೇಳದೆ ಇರಲಿಕ್ಕಿಲ್ಲ. ಯಾವ ಅಮೃತಸರದಲ್ಲಿ ಡಾಯರನು ನಿರಪರಾಧಿಗಳ ಮೇಲೆ ಗುಂಡುಗಳ ಮಳೆಸುರಿದು, ರಕ್ತದ ಪ್ರವಾಹವನ್ನು ಹೊರಡಿಸಿ, ಆ ಹಿಂದೂ-ಮುಸಲ್ಮಾನರ ಸಂಮ್ಮಿಶ್ರವಾದ ರಕ್ತಪ್ರವಾಹವು ಹರಿದುಹೋದ ಭೂಮಿಯಲ್ಲಿ ಹಿಂದೂ-ಮುಸಲ್ಮಾನರ ಐಕ್ಯದ ಬೀಜವನ್ನು ಬಿತ್ತಿದನೊ ಅದೆ ಅಮೃತಸರದಲ್ಲಿ ಹಿಂದೂ-ಮುಸಲ್ಮಾನರು ಪರಸ್ಪರ ಜುಟ್ಟುಗಳನ್ನೂ, ಗಡ್ಡಗಳನ್ನೂ ಸೆಳೆದುಕೊಂಡು ಹಗೆಗಳಾಗಿ ವರ್ತಿಸಿದ್ದು ಎಷ್ಟು ದುರ್ದೈವದ ಮಾತಾಗಿದೆ! 'ರೌಲಟ್ ಎಕ್ಟಿ'ನ ಯಮಪಾಶವನ್ನು ಪ್ರತಿಬಂಧಿಸಲು ಯಾವ ವಾರದಲ್ಲಿ ಹಿಂದೂ-ಮುಸಲ್ಮಾನರು ಸತ್ಯಾಗ್ರಹದ ವ್ರತವನ್ನು ಕೈಕೊಂಡರೊ ಅದೆ ವಾರದಲ್ಲಿ ಹಿಂದೂ-ಮುಸಲ್ಮಾನರು ಕಲಹ ಮದದಿಂದ ತುಂಬಿದವರಾಗಿ ಒಬ್ಬರನ್ನೊಬ್ಬರು ಹೊಡೆದುಕೊಳ್ಳುವುದು ಆತ್ಮಘಾತಕತೆಯ ಲಕ್ಷಣವಲ್ಲವೆ? ಯಾವ ಹಿಂದೂ-ಮುಸಲ್ಮಾನರು ಒಟ್ಟುಗೆಸೇರಿ ನೋಕರಶಾಹಿಯ ಬಲವನ್ನು ಮುರಿಯಲು ಸತ್ಯಾಗ್ರಹವನ್ನು ಕೈಕೊಂಡಿದ್ದರೊ ಅವರೆ ಈಗ ಬೇರೆ ಬೇರೆಯಾಗಿ ತಮ್ಮ ಸ್ವಂತ ಬಲವನ್ನೆ ಮುರಿದುಕೊಳ್ಳಲು ಅಸತ್ಯಾಗ್ರಹವನ್ನು ಮಾಡುತ್ತಿದ್ದಾರೆ! ಇಂಥವರು ಸತ್ಯಾಗ್ರಹ ದಿವಸದ ನೆನಪನ್ನಿಟ್ಟುಕೊಳ್ಳಲು ಮತ್ತು ಜಲಿಯನ್‌ವಾಲಾ ಬಾಗದೊಳಗಿನ ರೋಮಾಂಚಕರವಾದ ಪ್ರಸಂಗದ ದಿನವನ್ನಾಚರಿಸಲು ರಾಷ್ಟ್ರೀಯ ಸಪ್ತಾಹದ ಅನುಷ್ಠಾನವನ್ನು ಎಷ್ಟೆ ಮಾಡಿದರೂ ಅದು ನಿರರ್ಥಕವೆ ಸರಿ. ಏಕಾದಶೀವ್ರತದ ಮುಖ್ಯ ಕರ್ತವ್ಯವಾದ ಉಪವಾಸ ಮತ್ತು ಇಂದ್ರಿಯ ನಿಗ್ರಹ ಇವುಗಳನ್ನು ಆಚರಿಸದೆ ಬರೆ ಹಣೆಯ ಮೇಲಿನ ಅಕ್ಷತೆಯನ್ನು ಲೋಪಿಸುವುದೆ ಹೇಗೆ ಆ ವ್ರತದ ಶಿಷ್ಟಾಚಾರವಾಗಿದೆಯೊ ಹಾಗೆಯೆ ಜನತೆಯೊಳಗೆ ಪರಸ್ಪರ ಐಕ್ಯ ಮತ್ತು ಸ್ವರಾಜ್ಯಸಂಪಾದನ ಈ ಪ್ರಧಾನ ಉದ್ದೇಶಗಳಾಗಿರುವ ರಾಷ್ಟ್ರೀಯ ಸಪ್ತಾಹದಲ್ಲಿ ಪರಸ್ಪರ ಕಲಹ ಮಾಡಿಕೊಂಡು ಆ ಮೂಲಕ ಸ್ವರಾಜ್ಯದ ಪ್ರಯತ್ನಗಳನ್ನು ದೂರಕ್ಕೆ ತಳ್ಳುವಾಗ ಬಾಹ್ಯಾಡಂಬರವನ್ನು ಮಾಡುವುದು ಲೋಕವಂಚನೆಯಾಗಿದೆ. ಇರಲಿ.

ಹಿಂದೂ-ಮುಸಲ್ಮಾನರು ಈರೀತಿಯಿಂದ ಕಾದಾಟವನ್ನು ಮಾಡುವುದು ಈ ಎರಡು ವರ್ಗಗಳಲ್ಲಿ ಯಾವ ವರ್ಗದ ಹಿತಕ್ಕೆ ಕಾರಣವು? ಈ ಪ್ರಶ್ನೆಯನ್ನು ಆಲೋಚಿಸಬೇಕು. ಹಿಂದೂಸ್ಥಾನವು ಈಗ ಹಿಂದುಗಳದು ಹೇಗೊ ಹಾಗೆಯೆ ೯ ಕೋಟಿ ಮಹಮ್ಮದೀಯ ಬಂಧುಗಳ ಜನ್ಮಭೂಮಿಯಾಗಿದೆ. ಇವರ ಧರ್ಮಕ್ಷೇತ್ರಗಳು, ಪುರಾಣಕ್ಷೇತ್ರಗಳು ಹಿಂದೂಸ್ಥಾನದ ಹೊರಗೆ ಇದ್ದಾಗ್ಯಾದರೂ ಈ ೯ ಕೋಟಿ ಜನಸಂಖ್ಯೆಗೆ ಹಿಂದೂಸ್ಥಾನವನ್ನು ಬಿಟ್ಟು ಹೊರಗೆ ಹೋಗಲು ಸಾಧ್ಯವಿಲ್ಲ. ಒಂದುಕಾಲದಲ್ಲಿ ಇವರೂ ಕೂಡ ಈ ಭೂಮಿಯಲ್ಲಿ ಹಿಂದುಗಳಂತೆ ರಾಜ್ಯವೈಭವವನ್ನು ಅನುಭವಿಸಿದ್ದರು. ಎಂದಮೇಲೆ ಈ ೯ ಕೋಟಿ ಮಹಮ್ಮದೀಯರಿಗೆ ಈ ಭೂಮಿಯಮೇಲೆ ಸ್ವತ್ವಬುದ್ಧಿಯುಂಟಾಗುವುದು ಸಹಜವೆ. ಮತ್ತು ಅದು ಹಾಗೆ ಉಂಟಾಗಲೆ ಬೇಕು. ಈ ದೃಷ್ಟಿಯಿಂದ ನೋಡುವಾಗ ಮುಸಲ್ಮಾನರು ೨೦-೨೧ ಕೋಟಿ ಹಿಂದೂಗಳೊಡನೆ ಕಲಹ ಮಾಡುವುದು ಅವರಿಗೆ ಹಿತಾವಹವೆ? ಇಷ್ಟು ದೊಡ್ಡ ಜನಸಂಖ್ಯೆಯನ್ನು ನಾಶಪಡಿಸೋಣವೆಂದರೆ ಯಾರಿಂದಲೂ ಸಾಧ್ಯವಲ್ಲದ ಸಂಗತಿ ಎಂದು ತಿಳಿಯುತ್ತೇವೆ. ಎಂದಮೇಲೆ ಹಿಂದುಗಳ ಹತ್ತಿರ ಜಗಳವಾಡಿ ಮುಸಲ್ಮಾನರ ಯಾವ ಉದ್ದೇಶವು ಸಫಲವಾಗುವುದು? ಮುಸಲ್ಮಾನರೆ ರಾಜ್ಯಕರ್ತರಾಗಿದ್ದದಾದರೆ ಅವರು ಒಂದುವೇಳೆ ಹಿಂದುಗಳನ್ನು ತಗ್ಗಿಸುವುದು, ಅಧಿಕಾರಮದದ ದೃಷ್ಟಿಯಿಂದ ಉಚಿತವಾಗುತಿತ್ತೊ ಏನೊ. ಪರಂತು ಈಗ ಮಹಮ್ಮದೀಯ ಬಂಧುಗಳು ನಮ್ಮ ಹಿಂದುಗಳಂತೆಯೆ ಈ ಹಿಂದೂಸ್ಥಾನದಲ್ಲಿ ರಾಜ್ಯಭ್ರಷ್ಟರಾಗಿದ್ದಾರೆ. ಮುಸಲ್ಮಾನರು ಮತ್ತು ಹಿಂದುಗಳು ಒಂದೆ ಹಡಗದಲ್ಲಿ ಕುಳಿತಿರುವರು! ಆಗ ಒಬ್ಬನು ಇನ್ನೊಬ್ಬನನ್ನು ಮುಳುಗಿಸಲು ಯತ್ನಿಸಿದರೆ ಅವನು ತನ್ನನ್ನು ಕೂಡ ಮುಳುಗಿಸಿಕೊಂಡಂತಾಗುವುದಿಲ್ಲವೆ? ಮುಸಲ್ಮಾನರಿಗೆ ಸ್ವರಾಜ್ಯವು ಎಷ್ಟು ಮಹತ್ವದ್ದೊ ಅಷ್ಟೆ ಖಿಲಾಫತ್ ವಿಷಯವೂ ಕೂಡ ಮಹತ್ವದ್ದಾಗಿದೆ. ಅಂಥ ಖಿಲಾಫತ್ ಪ್ರಕರಣದ ಅನುಕೂಲತೆಗೂ ಅವರಿಗೆ ಹಿಂದುಗಳ ಸಹಾಯವು ಬೇಕು. ಈ ದೃಷ್ಟಿಯಿಂದ ಸಹ ಮುಸಲ್ಮಾನರು ಹಿಂದುಗಳನ್ನು ನೋಯಿಸುವುದು ಅವರಿಗೆ ಹಿತಾವಹವೆ? ಅಲ್ಲ. ಹಾಗಾದ ಮೇಲೆ ಇಂಥ ಆತ್ಮಘಾತಕ ಪ್ರಯತ್ನವು ಯಾಕೆ?

ಮುಸಲ್ಮಾನರನ್ನು ಮಾತ್ರ ಟೀಕಿಸಿದರೆ ನಾವು ಪಕ್ಷಪಾತಿತ್ವದ ದೋಷಕ್ಕೆ ಗುರಿಯಾದೇವು. ಹಿಂದುಗಳು ಕೂಡ ಮಹಮ್ಮದೀಯರೊಡನೆ ಯಾಕೆಂದು ಜಗಳವನ್ನಾಡಬೇಕು? ಪ್ರಬಲ ಶರೀರಸಂಪತ್ತಿನ ಮತ್ತು ಅತ್ಯಂತ ಶೂರರಾದ ೯ ಕೋಟಿ ಮಹಮ್ಮದೀಯ ಬಂಧುಗಳನ್ನು ಬಿಟ್ಟು ನಾವು ಯಾವುದಾದರೂ ರಾಷ್ಟ್ರೀಯಕಾರ್ಯವನ್ನು [illegible] ಸಾಧಿಸಬಹುದೆ? ಹಿಂದೂಸ್ಥಾನದ ಧ್ಯೇಯವಾದ ಸ್ವರಾಜ್ಯದ ಪ್ರಾಪ್ತಿಯಲ್ಲಿ ನಮಗೆ ಮಹಮ್ಮದೀಯ ಬಂಧುಗಳ ಬೆಂಬಲವೂ, ಪ್ರಯತ್ನತತ್ಪರತೆಯೂ ಬೇಕಲ್ಲವೆ? ಅವರನ್ನು ಬಿಟ್ಟರೆ ಹಿಂದುಗಳಿಗೆ ನಿರ್ವಾಹವಿದೆಯೆ? ಹಿಂದೂಸ್ಥಾನದ ಚಳವಳದ ಸೀಮೆಯಲ್ಲಿ ಅಥವಾ ಕಾರ್ಯಕ್ಷೇತ್ರದಲ್ಲಿ ಖಿಲಾಫತ್ ಪ್ರಶ್ನೆಯು ಸಮಾವೇಶವಾದರೂ ಇದೆ ಕಾರಣದಿಂದ ಮಾಡಲ್ಪಟ್ಟಿದೆ. ಹೀಗಿರಲು ಅವರೊಡನೆ ಜಗಳವನ್ನಾಡುವುದು ಹಿಂದುಗಳಿಗೆ ಹಿತಾವಹವೆ? ಧರ್ಮಾಂತರಗೊಳಿಸುವುದು, ಬಲಾತ್ಕರಿಸುವುದು, ಮೈಮೇಲೆ ಬೀಳುವುದು ಮೊದಲಾದ ಹಲವು ದೋಷಗಳು ಕಂಡುಬರುತ್ತದಾದರೂ ಅವುಗಳು ಉಂಟಾಗದ ಹಾಗೆ ಹಿಂದೂ ಸಮಾಜವು ಆತ್ಮರಕ್ಷಣೆಗಾಗಿ ಶಾರೀರಕ ಬಲವನ್ನು ಸಂಪಾದಿಸಿಕೊಂಡಿರಬೇಕು. ತೋಳವು ಕುರಿಮರಿಯ ಮೇಲೆ ಹಾರುವುದರಲ್ಲಿ ತೋಳದ ಕ್ರೌರ್ಯ ಮತ್ತು ಕುರಿಮರಿಯ ದೌರ್ಬಲ್ಯ ಇವೆರಡು ಕಾರಣಗಳಾಗಿವೆ ಎಂಬುದು ಹೌದಾದರೂ ಎರಡನೆಯದೆ ಮುಖ್ಯ ಕಾರಣವು. ಆದ್ದರಿಂದ ಹಿಂದೂ ಸಮಾಜವು ದುರ್ಬಲವಾಗದೆ ದೃಢವಾಗುತ್ತ ಬಂದದ್ದಾದರೆ ಅದರ ಮರ್ಯಾದೆ, ಅದರ ನೀತಿರಕ್ಷಣ, ಅದರ ಸ್ವರಾಜ್ಯ ಇವೆಲ್ಲ ತಾನಾಗಿಯೆ ಬರುವುವು. ಸದ್ಯಕ್ಕೆ ಈ ವಿಚಾರವು ಹೇಗೂ ಇರಲಿ. ಹಿಂದೂ ಮುಸಲ್ಮಾನರು ಪರಸ್ಪರ ಅಣ್ಣತಮ್ಮಂದಿರಾದ ಕಾರಣ ಅನ್ಯೋನ್ಯ ಜಗಳವಾಡಿ ಹತಬಲರಾಗುವುದು ಎಂದೂ ಉಚಿತವಲ್ಲ, ಹಿತಾವಹವಲ್ಲ ಮತ್ತು ಶ್ಲಾಘ್ಯವಲ್ಲ. ಹೀಗಿರಲು ಈ ವರ್ಗದವರು ಯಾರ ಹಿತಕ್ಕಾಗಿ ಪರಸ್ಪರ ಕಲಹವನ್ನು ಮಾಡಿಕೊಳ್ಳುತ್ತಾರೆ ಎಂಬ ಮೇಲಿನ ಪ್ರಶ್ನೆಯು ಇಲ್ಲಿ ಪುನಃ ಬರುವುದು. ಆದರೆ ಮೇಲಿನ ಪ್ರತಿಪಾದನವನ್ನು ಮನಸ್ಸಿಗೆ ತಂದುಕೊಂಡಲ್ಲಿ ಇವರಿಬ್ಬರ ಕಲಹದಿಂದ ಹಿಂದೂಸ್ಥಾನದೊಳಗಿನ ಸ್ವಾರ್ಥಪರವಾದ ನೋಕರಶಾಹಿಯ ಹಿತವು ಸಾಧ್ಯವಾಗುತ್ತಿದೆ ಎಂಬುದನ್ನು ಚಾಣಾಕ್ಷ ವಾಚಕರು ತಿಳಿದುಕೊಂಡಾರಾದ್ದರಿಂದ ಅದನ್ನು ವಿಸ್ತರಿಸುವುದು ಅಗತ್ಯವಿಲ್ಲ.

ಹಿಂದೂ-ಮುಸಲ್ಮಾನರ ಕಲಹದಿಂದ ತಿಳ್ಕೊಳ್ಳಬೇಕಾದ ನಿಜವಾದ ನೀತಿಬೋಧೆಯು ಇದೆ ಸರಿ. ಇದನ್ನು ಲಕ್ಷ್ಯದಲ್ಲಿ ತಂದುಕೊಂಡು ಪಂಜಾಬದ ಮಹಮ್ಮದೀಯರು ಮತ್ತು ಹಿಂದುಗಳು ಪರಸ್ಪರ ಐಕ್ಯವನ್ನು ಸಾಧಿಸಿಕೊಳ್ಳಬೇಕು. ಪಂಜಾಬ ಪ್ರಾಂತವು ಹಲವು ಸಂಗತಿಗಳಲ್ಲಿ ದೇಶಬಂಧುಗಳ ಅಭಿಮಾನಕ್ಕೆ ಆಸ್ಪದವಾಗಿದೆಯಾದರೂ ಇನ್ನೂ ಅನೇಕ ಸಂಗತಿಗಳಲ್ಲಿ ಅದರ ವರ್ತನವನ್ನು ನೋಡಿ ದೇಶವತ್ಸಲನಿಗೆ ತನ್ನ ತಲೆಯನ್ನು ಬಗ್ಗಿಸಬೇಕಾಗುತ್ತದೆ. ಕಪಟಪಟುವಾದ ಅಧಿಕಾರಿವರ್ಗದ ಮೋಹಜಾಲದಲ್ಲಿ ಸಿಲುಕಿಬಿದ್ದು ಮತ್ತು ಭೇದನೀತಿಗೆ ಒಳಗಾಗಿ ಪಂಜಾಬದಲ್ಲಿ ನಮ್ಮ ಜನರೆ ನಮ್ಮ ಜನರ ನಾಶಕ್ಕೆ ಕಾರಣೀಭೂತರಾಗುತ್ತಿದ್ದಾರೆ! ಹೀನವಾದರೂ ನಮ್ಮ ಸದ್ಯದ ಸ್ವರೂಪಕ್ಕೆ ಯಥಾರ್ಥವಾದ ಉಪಮೆಯನ್ನು ಕೊಟ್ಟು ಹೇಳುವುದಾದರೆ ಯಜಮಾನನು "ಛೂ" ಹಾಕಿಕೊಟ್ಟ ಪ್ರಾಣಿಯು ಹೇಗೆ ತನ್ನ ಇತರ ಬಂಧುಗಳ ಮೇಲೆಯೆ ಬೀಳುವುದೊ ಹಾಗೆಯೆ ಒಂದಿಷ್ಟು ಬಕ್ಕರಿಚೂರಿನ ಆಸೆಯಿಂದ ನಾವೆ ನಮ್ಮ ಜನರ ಮೇಲೆ ಬೀಳಹತ್ತಿದ್ದೇವೆ. ಹಿಂದೂ-ಮುಸಲ್ಮಾನರು ಒಂದೆ ದೇಹದ ಎಡಬಲಕೈಗಳು. ಒಂದು ಕೈಯು ಇನ್ನೊಂದು ಕೈಯನ್ನು ತುಂಡುಮಾಡಿದರೆ ದೇಹವೆ ಸಂಕಷ್ಟದಲ್ಲಿ ಬೀಳುವುದು. ಈ ಸಾಮ್ಯವನ್ನು ಯಾವಾಗಲೂ ಕಣ್ಣಮುಂದಿಟ್ಟುಕೊಂಡು, ಬರೆ ಜಡಸ್ವರೂಪವಾದ ಬಾಹ್ಯ ಕಣ್ಣಿನಮುಂದೆ ಅಲ್ಲ, ಒಳಕಣ್ಣಿನ ಮುಂದೆ—ಮನಸ್ಸಿನ ಮುಂದೆ ಇಟ್ಟುಕೊಂಡು ಎರಡೂ ಕಡೆಯವರು ವರ್ತಿಸತಕ್ಕದ್ದು. ಪಂಜಾಬಕ್ಕೆ ಬೇಕಾದ ಔಷಧವು ಈಗ ಇದೆ ಸರಿ. ಪಂಜಾಬದಲ್ಲಿ ಹೊಸ ಸುಧಾರಣೆಯು ಬಂದಂದಿನಿಂದ ಮತ್ತು ಒಡ್ವಾಯರ ಸಾಹೇಬರ ಆಳಿಕೆಯಂದಿನಿಂದ ಹಿಂದೂ-ಮುಸಲ್ಮಾನರಲ್ಲಿ ದ್ವೈಧೀಭಾವವು ಅಂತರಂಗದಲ್ಲಿ ಮತ್ತು ಬಹಿರಂಗದಲ್ಲಿ ಮೆರೆಯುತ್ತಿದೆ. ಈ ದ್ವೈಧೀಭಾವಕ್ಕೆ ಜಲಸಮಾಧಿಯುಂಟಾಗಬೇಕು. ಈ ದ್ವೈಧೀಭಾವದ ಪಿಶಾಚಿಕೆಯನ್ನು ಗೋರಿಯಲ್ಲಿ ಸರಿಯಾಗಿ ಹೂಳಬೇಕು. ಸ್ವರಾಜ್ಯಭಕ್ತರಾದ ಚಿತ್ತರಂಜನದಾಸರು ಮತ್ತು ಇತರ ಮುಖಂಡರು ಈ ಪ್ರಯತ್ನದಲ್ಲಿ ಇದ್ದಾರೆ. ಅವರ ಪ್ರಯತ್ನಕ್ಕೆ ಯಶಸ್ಸುಬಂದರೆ ಪಂಜಾಬದ ಸುದೈವವೆಂದೆ ತಿಳಿಯಬೇಕು. ಇಲ್ಲವಾದರೆ ಪಂಜಾಬದ ಮಾತ್ರವಲ್ಲ, ನಮ್ಮ ಇಡಿ ಹಿಂದೂಸ್ಥಾನದ ದುರ್ದೈವವೆ ಭಯಂಕರವಾಗಿ ನಿಂತಿದೆ ಎಂದು ಹೇಳಬೇಕಾಗುತ್ತದೆ.

ಸ್ಫುಟವಿಚಾರಗಳು.

೧. ಕಳೆದ ವಾರ ಪೂನೆಯ ಸಸೂನ ಆಸ್ಪತ್ರೆಯಲ್ಲಿ ಅಕ್ಕಲಕೋಟೆ ಮಹಾರಾಜರ ಮೃತ್ಯುವು ಸಂಭವಿಸಿತು. ಇದು ತುಂಬಾ ವಿಷಾದನೀಯವಾಗಿದೆ. ಅಕ್ಕಲಕೋಟೆ ಮಹಾರಾಜರಾದ ಶ್ರೀಮಂತ ಫತ್ತೇಸಿಂಗ ಮಹಾರಾಜರವರಿಗೆ ಸಂಭವಿಸಿದ ಮರಣದ ವೃತ್ತಾಂತವನ್ನು ಕೇಳುವಾಗ ಒಂದೆ ಕಾಲಕ್ಕೆ ವ್ಯಸನವೂ ಉದ್ವೇಗವೂ ಉಂಟಾಗದೆ ಇರುವುದಿಲ್ಲ. ಈ ಮರಣವನ್ನು ಕುರಿತು ಮುಂಬಯಿ ಸರಕಾರವು ಒಂದು 'ಪ್ರೆಸ್‌ನೋಟ'ನ್ನು ಪ್ರಕಟಿಸಿ ಕೆಲವು ಸಂಗತಿಗಳನ್ನು ತಿಳಿಸಿದೆ. ಅದರ ಸಾರಾಂಶವೇನೆಂದರೆ, ಮಹಾರಾಜರಿಗೆ [illegible] ಯಲ್ಲಿ ಏನೋ ಒಂದು ಬಗೆಯ ವಿಕಾರವಾಗಿರಬೇಕೆಂದು ತೋರಿದ್ದರಿಂದ (ಎಕ್ಸ್) ಕಿರಣಗಳ ಮುಖಾಂತರ ಶರೀರದೊಳಗಿನ ಅಂತರ್ಭಾಗದ ಪರೀಕ್ಷೆಯನ್ನು ಮಾಡಿಸಿಕೊಳ್ಳಲು ಅವರು ಎಪ್ರಿಲ್ ತಾ. ೩ರಲ್ಲಿ ಸಾಸೂನ ಆಸ್ಪತ್ರೆಗೆ ಬಂದರು. X ಕಿರಣಗಳಿಂದ ಪರೀಕ್ಷಿಸುವುದಕ್ಕಿಂತ ಮುಂಚೆ "ಬೆರಿಯಮ್ ಸಲ್ಫೇಟ" ಎಂಬ ಹೆಸರಿನ ರೇಚಕ ಕ್ಷಾರವನ್ನು ಕೊಡುವುದು ಅಗತ್ಯದ್ದು. ಆದರೆ ಈ ಔಷಧವು ಆಸ್ಪತ್ರೆಯಲ್ಲಿ ಇದ್ದಿಲ್ಲ. ಆದ್ದರಿಂದ ಕೆಂಟೋನಮೆಂಟಿನಲ್ಲಿರುವ ಮೇಸರ್ಸ್ ಟೆನ ಸ್ಟೋರ ಹೌಸಿನಿಂದ ಅದನ್ನು ತರಲು ಆಸ್ಪತ್ರೆಯವರು ಕಳುಹಿಸಿದರು. ಆ ಸ್ಟೋರಿನಲ್ಲಿ ಔಷಧಗಳನ್ನು ಕೊಡುವವನು ಪರಾಮೋಷಿಯಿಂದ "ಬೇರಿಯಮ್ ಸಲ್ಫಾಯಿಡ" ಎಂಬ ಹೆಸರಿನ ಭಯಂಕರ ವಿಷವನ್ನು ಕೊಟ್ಟನು. ಈ ಔಷಧವನ್ನು X ಕಿರಣಗಳಿಂದ ಪರಿಶೋಧನೆಮಾಡಲಿಕ್ಕಿದ್ದ ಅಸಿಸ್ಟಾಂಟ್ ಸರ್ಜನನು ಸರಿಯಾಗಿ ನೋಡದೆ ಆ ವಿಷದ ಔಷಧವನ್ನು ಮಹಾರಾಜರಿಗೆ ಕೊಟ್ಟನು. ಕೂಡಲೆ ಆ ವಿಷದ ಪರಿಣಾಮಗಳು ಶರೀರದ ಮೇಲೆ ಉಂಟಾಗಹತ್ತಿದವು. ಆಗ ಆಸ್ಪತ್ರೆಯೊಳಗಿನ ಸಿವಿಲ್ ಸರ್ಜನನ ಹುಕುಮಿನ ಮೇರೆಗೆ ವಿಷವನ್ನು ತೆಗೆಯುವ ಔಷಧೋಪಚಾರಗಳು ನಡೆಯಹತ್ತಿದವು. ಆದರೆ ಅವುಗಳ ಪ್ರಯೋಜನವು ಉಂಟಾಗದೆ ಕೊನೆಗೆ ಅದೆ ದಿನ ಸಂಜೆಗೆ ಮಹಾರಾಜರ ಅಂತ್ಯವಾಯಿತು! ಸರಕಾರಿ 'ಪ್ರೆಸ್‌ನೋಟ'ನ ಇದು ಸಾರಾಂಶವು. ಈ ದುಃಖಕಾರಕ ವಾರ್ತೆಯಿಂದ ಯಾರಿಗೂ ವ್ಯಸನವಾಗದೆ ಇರದು. ಶ್ರೀಮಂತ ಮಹಾರಾಜರು ಬರೆ ೩೮ ವರ್ಷ ಪ್ರಾಯದವರಾಗಿದ್ದು ಸುಸ್ವಭಾವಿಗಳೂ, ಸತ್ವಶೀಲರೂ, ಪ್ರಜೆಗಳನ್ನು ಪುತ್ರರಂತೆ ಪ್ರೀತಿಸುವವರೂ ಆದ್ದರಿಂದ ಅಕ್ಕಲಕೋಟೆ ಸಂಸ್ಥಾನದ ಪ್ರಜೆಗೆ ಮಹಾರಾಜರ ಈ ಆಕಸ್ಮಿಕ ಮರಣದಿಂದ ಅಪಾರವಾದ ದುಃಖವುಂಟಾಗದೆ ಇರಲಿಕ್ಕಿಲ್ಲ. ಮಹಾರಾಜರು ಮಹಾಯುದ್ಧದ ಸಮಯದಲ್ಲಿ ರಣಭೂಮಿಗೆ ಹೋಗಿ ಸ್ವಪರಾಕ್ರಮವನ್ನು ಮೆರೆಯಿಸಿ ಕೆಪ್ಟನಿನ ಬಹುಮಾನದ ಪದವಿಯನ್ನು ಸಂಪಾದಿಸಿದ್ದರು. ಇಂಥವರ ಮೇಲೆ ಮೇಲಿನಂಥ ಆಕಸ್ಮಿಕ ಅಪಮೃತ್ಯುವಿನ ಪ್ರಸಂಗವು ಬಂದೊದಗುವುದು ಉದ್ವೇಗಕಾರಕವೆ ಸರಿ. ಆದರೆ ಇಂಥ ಪ್ರಸಂಗದ ಅಡಿಯಲ್ಲಿ ಏನಾದರೂ ಕೃತ್ರಿಮತ್ವವು ಇದೆಯೊ ಹೇಗೆ ಎಂಬುದನ್ನು ಸರಿಯಾಗಿ ತನಖಿಮಾಡಿ ದೋಷಗಳನ್ನು ಬೈಲಿಗೆತಂದು ಈ ಸಂಶಯಪರಿಹಾರವನ್ನು ಮಾಡಬೇಕೆಂದು ಅಕ್ಕಲಕೋಟೆದ ಮಹಾರಾಣಿಯವರು ಮುಂಬಯಿಯ ಗವರ್ನರರಿಗೆ ಬರೆದುಕೊಂಡಿದ್ದಾರೆ. ಯಾಕೆಂದರೆ, ಒಂದು ಔಷಧದ ಬದಲಿಗೆ ಇನ್ನೊಂದನ್ನು ಕೊಡೋಣ ಮತ್ತು ಅದನ್ನು ಸರಿಯಾಗಿ ಪರೀಕ್ಷಿಸದೆ ತಜ್ಞರಾದ ಡೊಕ್ಟರರು ಥಕ್ಕನೆ ಹೊಟ್ಟೆಗೆ ಕೊಡೋಣ ಈ ಸಂಗತಿಗಳು ಮೊದಲು ಕೆಲಸಮಯದ ಹಿಂದೆ ಆ ಸಂಸ್ಥಾನದಲ್ಲಿ ಹೊರಟ ಕೆಲವು ನಿರ್ನಾಮಪ್ರಕಟಣೆಗಳಿಂದ ಈ ಶೋಚನೀಯ ಪ್ರಕಾರದ ಅಡಿಯಲ್ಲಿ ಪ್ರಬಲವಾದ ಸಂಶಯವನ್ನುಂಟುಮಾಡುತ್ತದೆ. ಆದ್ದರಿಂದ ಒಬ್ಬ ತರುಣರೂ, ಸಚ್ಛೀಲರೂ, ಪ್ರಜಾಹಿತದಕ್ಷರೂ ಆದ ಹಿಂದಿ ಸಂಸ್ಥಾನಿಕನ ಮೇಲೆ ಬಂದಿರುವ ಈ ಅಪಮೃತ್ಯುವಿನ ಬುಡದಲ್ಲಿ ಯಾವ ಯಮಪಾಶಗಳಿವೆ ಎಂಬುದನ್ನು ಮುಂಬಯಿ ಸರಕಾರವು ಬಯಲಿಗೆ ತಂದು ಸಂಸ್ಥಾನದ ಪ್ರಜೆಗಳ ಮತ್ತು ಇತರ ಪ್ರಜಾವರ್ಗದ ಮನಸ್ಸನ್ನು ಶಾಂತಪಡಿಸಬೇಕೆಂದು ಮುಂಬಯಿ ಇಲಾಖೆಯೊಳಗಿನ ದೇಶೀಯ ಪತ್ರಿಕೆಗಳು ಬರೆಯುತ್ತಿದ್ದಾವೆ.

೨. ಸರಕಾರವು ವೈಸರಾಯರ ಸರ್ಟಿಫಿಕೇಶನಿನ ಬಲದಿಂದ ಉಪ್ಪಿನಮೇಲೆ ಇಮ್ಮಡಿ ತೆರಿಗೆಯನ್ನು ಕಾಯಂ ಮಾಡಿದ ಬಳಿಕ ಕಲ್ಕತ್ತೆಯ ಒಬ್ಬ ಸುಪ್ರಸಿದ್ಧ ಅಸಹಕಾರಿಗಳು "ಈ ಸಂದರ್ಭವು ಸವಿನಯ ಕಾಯಿದೆಭಂಗಕ್ಕೆ ಉತ್ತಮವಾದ ಸಂದರ್ಭವೆಂದು ಹೇಳತೊಡಗಿ ತನ್ನ ಈ ಸಂದರ್ಭವನ್ನು ವಿವರಿಸಿ ಹೇಳುವಾಗ "ಜನರು ಉಪ್ಪನ್ನೆ ತಿನ್ನುವುದು ಬಿಟ್ಟುಬಿಡಬೇಕು. ಅಥವಾ ಅರ್ಧದಷ್ಟು ಉಪ್ಪನ್ನು ಸೇವಿಸಬೇಕು! ಎಂದು ಹೇಳತೊಡಗಿದ್ದಾರೆ! ಶಾಬಾಸ! ಇದೆ ಬುದ್ಧಿವಂತಿಕೆ! ಸರಕಾರವು ಕರವನ್ನು ಹೆಚ್ಚಿಸಿದ ಕೂಡಲೆ ಆ ಪದಾರ್ಥವನ್ನೆ ಬಿಟ್ಟುಬಿಟ್ಟರೆ ಆಯಿತಲ್ಲವೆ? ಆದರೆ ಆಶ್ಚರ್ಯವೇನೆಂದರೆ ಇಂಥವರಿಗೆ ಸ್ವರಾಜ್ಯವಾದರೂ ಯಾಕೆ? ಅನ್ಯವಿಧದಿಂದ ಸರಿಯಾದ ಪ್ರತಿಕಾರವನ್ನು ಮಾಡಲಾಗದಕಾರಣ ಉಪ್ಪನ್ನೆ ಉಪಯೋಗಿಸಬಾರದು, ಉಪಯೋಗಿಸಿದರೂ ಬಹು ಕಡಿಮೆ ಉಪಯೋಗಿಸಬೇಕೆಂದು ಹೇಗೆ ಅದರಮೇಲೆ ಬಹಿಷ್ಕಾರದ ಬ್ರಹ್ಮಾಸ್ತ್ರವನ್ನು ಬಿಡುವರೊ ಹಾಗೆಯೆ ಈ ಮಹಾತ್ಮರು ಸ್ವರಾಜ್ಯದ ಮೇಲೂ ಯಾಕೆ ಬಹಿಷ್ಕಾರವನ್ನು ಹಾಕಬಾರದು? ವಸ್ತುತಃ ಬಾಯಿಯಿಂದ ಹೇಳದೆ ಇದ್ದರೂ ಈ ಜನರು ಸ್ವರಾಜ್ಯದಮೇಲೆ ಯಾವಾಗಲೆ ಕ್ರಿಯಾರೂಪದಿಂದ ಬಹಿಷ್ಕಾರವನ್ನು ಹಾಕಿದ್ದಾರೆ! ಕಡುಅಸಹಕಾರಿಗಳಾದ ಹರದಯಾಳನಾಗರರ ಈ ಉಪಾಯದಲ್ಲಿ ನೇಲಿನ ಅಸ್ವಾರಸ್ಯವನ್ನು ಕಂಡು ಬೆಚ್ಚಿದ ಮೇಲಿನ ಇನ್ನೊಬ್ಬ ಅಸಹಕಾರಿ ಮುಖಂಡರು ಸಮುದ್ರತೀರವಾಸಿಗಳಿಗೆ ಬೇರೊಂದು ವಿಧದ ಸವಿನಯ ಕಾಯಿದೆಭಂಗವನ್ನು ಸೂಚಿಸಿಕೊಡುತ್ತಿದ್ದಾರೆ! ಉಪ್ಪು ಸಮುದ್ರದಿಂದ ಆಗತಕ್ಕದ್ದು. ಆದ್ದರಿಂದ ಸಮುದ್ರ ಪ್ರಾಂತದವರು ಸಮುದ್ರದ ನೀರು ತಂದು ಉಪ್ಪನ್ನು ಮಾಡಹತ್ತಬೇಕು! ಈ ಉಪಾಯ ಸೂಚಕರು ಸುರಕ್ಷಿತವಾಗಿದ್ದರೂ ಉಪಾಯವೇನೊ ಚಲೋದೆ ಸರಿ! ಆದರೆ ಉಪ್ಪಿನಂಥ ಆರೋಗ್ಯಪದಾರ್ಥದ ಮೇಲೆ ಬಹಿಷ್ಕಾರವನ್ನು ಹಾಕುವ ಅಥವಾ ಅದರ ವಿಷಯವಾಗಿ ಸವಿನಯ ಕಾಯಿದೆಭಂಗವನ್ನು ಮಾಡಲು ಸೂಚಿಸುವ ಈ ಜಾಣರು ಪಿಕೆಟಿಂಗಿನಂಥ ನೈತಿಕ ಕಾರ್ಯಕ್ರಮವನ್ನು ನಿಲ್ಲಿಸಲು ಯಾಕೆ ಮೊದಲು ಸಹಾಯ್ಯಮಾಡಿದರು? ಅಥವಾ ಈಗಲಾದರೂ ಯಾಕೆ ಅದನ್ನು ಕೈಕೊಳ್ಳುವುದಿಲ್ಲ? ಆದರೆ ಇದನ್ನು ಕೈಕೊಂಡರೆ "ಪರೋಪದೇಶೇ ಪಾಂಡಿತ್ಯ"ವನ್ನು ಪ್ರದರ್ಶಿಸಲು ಮತ್ತೆಲ್ಲಿ ಅವಕಾಶವು? ಸಾರಾಂಶ:— ಬುದ್ಧಿಯು ಒಮ್ಮೆ ದಿಕ್ಕುತಪ್ಪಿ ವಿಕೃತವಾದ ಬಳಿಕ ಅದು ರಥಿಯನ್ನು ಎಲ್ಲೆಲ್ಲಿ ಕೊಂಡುಹೋಗುವುದೆಂದು ಹೇಳಲು ಸಾಧ್ಯವಿಲ್ಲ.

೩. ನಾಗಪುರದಲ್ಲಿ ರಾಷ್ಟ್ರೀಯ ಪತಾಕೆಗಳ ಪ್ರಕರಣವು ವಿಕೋಪಕ್ಕೆ ಏರಿ ೫ ಜನ ಮುಖಂಡರಿಗೆ ಮೆಜಿಸ್ಟ್ರೇಟರು ಶಿಕ್ಷೆಯನ್ನು ವಿಧಿಸಿದ್ದಾರೆ. ಸ್ಥಳೀಕ ರಾಷ್ಟ್ರೀಯ ಜಿಲ್ಲಾ ಕಮ್ಮಿಟಿಯವರು ಒಂದು ಮೆರವಣಿಗೆಯನ್ನು ಹೊರಡಿಸಿ ಆ ಮೆರವಣಿಗೆಯಲ್ಲಿ ರಾಷ್ಟ್ರೀಯ ಪತಾಕೆಗಳನ್ನು ಒಡಕೊಂಡಿದ್ದರು. ಇದು ಅಲ್ಲಿಯ ಪೋಲೀಸು ಅಧಿಕಾರಿಗಳಿಗೆ ಸಹನವಾಗಲಿಲ್ಲ. ಈ ಪತಾಕೆಗಳನ್ನು ನೋಡುತ್ತಲೆ ಅವರ ಹೊಟ್ಟೆಗೆ ನೋವುಂಟಾಯಿತೊ ಎಂಬಂತೆ ಅವರು ಈ ಮೆರವಣಿಗೆಯನ್ನು ಮಧ್ಯದಲ್ಲಿ ನಿಲ್ಲಿಸಲು ಹುಕುಮನ್ನು ಕೊಟ್ಟರು. ಆದರೆ ಅಲ್ಲಿಯ ಕೊಂಗ್ರೆಸ್ ಕಮ್ಮಿಟಿಯವರು ಇತರ ಪ್ರಾಂತಗಳಲ್ಲಿಯ ಕೊಂಗ್ರೆಸ್ ಕಮ್ಮಿಟಿಗಳಂತೆ ಈ ಹುಕುಮನ್ನು ಮನ್ನಿಸುವ ದೂರದರ್ಶಿತ್ವವನ್ನು ಮಾಡದೆ, ಸರಿಯಾಗಿ ಮುಂದರಿಸಹತ್ತಿದರು. ಪೋಲೀಸರು ೫ ಜನ ಮುಂದಾಳುಗಳನ್ನು ಕೈದುಮಾಡಿ ಮೆಜಿಸ್ಟ್ರೇಟರ ಮುಂದೆ ಅವರನ್ನು ನಿಲ್ಲಿಸಿದರು. ಮೆಜಿಸ್ಟ್ರೇಟರು ತನಖಿಯ ಫಾರ್ಸನ್ನು ಮಾಡಿ, ಆರೋಪಿಗಳಿಗೆ ೬೦೦ ರೂಪಾಯಿ ದಂಡವನ್ನೂ, ಈ ದಂಡವನ್ನು ಕೊಡದಿದ್ದರೆ ೨ ತಿಂಗಳ ಸಾದಾ ಶಿಕ್ಷೆಯನ್ನೂ ವಿಧಿಸಿದರು. ಆರೋಪಿಗಳು ದಂಡವನ್ನು ಕೊಡುವುದರ ಬದಲು ಶಿಕ್ಷೆಯನ್ನೆ ಸಂತೋಷದಿಂದ ಒಪ್ಪಿಕೊಂಡಿದ್ದಾರೆ. ಅಧಿಕಾರಿಗಳು ಈ ರೀತಿಯಿಂದ ಆಹ್ವಾನವನ್ನು ಮಾಡುವುದು ಮತ್ತು ಅದಕ್ಕೆ ಸಮರ್ಪಕವಾದ ರೀತಿಯಲ್ಲಿ ಮೇಲಿನಂತೆ ಓಗೊಡುವುದು ಇದೆ ಸಕ್ರಿಯವಾದ ಚಳವಳವು. ಅದರ ಬದಲು ವಿಧಾಯಕತ್ವದ ಹೆಸರಿಂದ ಸಮಯವನ್ನು ದೂಡುವುದು ಚಳವಳವಲ್ಲ. ಇರಲಿ. ನಾಗಪುರದ ದೇಶಾಭಿಮಾನಿಗಳನ್ನು ಈ ಸಂದರ್ಭದಲ್ಲಿ ಯಾರೂ ಮನಃಪೂರ್ವಕವಾಗಿ ಹೊಗಳಲೆ ಬೇಕು.

೪. ಬೇಕುಬದಲಾವಣೆಯವರ ಹೆಸರಿನಿಂದ ಇನ್ನೊಂದು ಪಕ್ಷದವರು ಬೇಕಷ್ಟು ಕಲ್ಲು ಎಸೆಯುತ್ತ ಕುಳಿತುಕೊಂಡರೂ ಎಲ್ಲ ಬಗೆಯ ಉಪಯುಕ್ತ ಕಾರ್ಯಕ್ರಮವನ್ನು ಅವರೆ ಸಂದರ್ಭಾನುಸಾರವಾಗಿ ಮಾಡುತ್ತಿರುತ್ತಾರೆ. ಇದಕ್ಕೆ ಮುಂಬಯಿ ಕೊರ್ಪರೇಶನಿನ ಇತ್ತಲಾಗಿನ ಒಂದೆರಡು ಠರಾವುಗಳು ಉತ್ತಮ ನಿದರ್ಶನವಾಗಿದೆ. ಗಯಾ ಕೊಂಗ್ರೆಸ್ಸಿನಲ್ಲಿ ಮುನ್ಸಿಪಾಲಿಟಿಗಳನ್ನೂ ಲೋಕಲ್‌ಬೋರ್ಡುಗಳನ್ನೂ ಆಕ್ರಮಿಸುವ ಠರಾವನ್ನು ಬೇಡಬದಲಾವಣೆಯವರು ಪಾಸಿಗೆ ಕೊಟ್ಟರೂ ಮುಂಬಯಿಯ ಕೊರ್ಪರೇಶನಿನ ಚುನಾವಣೆಯಲ್ಲಿ ಶ್ರೀ. ವಿ. ಜೆ. ಪಟೇಲ, ಜಮುನಾದಾಸಮೇಥಾ ಮುಂತಾದ ಬೇಕುಬದಲಾವಣೆಯ ಮುಖಂಡರು ನಿಂತು ಯಶಸ್ವಿಗಳಾಗಿ ಬಂದರಷ್ಟೆ. ಈಗ ಇವರು "ಮುನ್ಸಿಪಾಲಿಟಿಯಲ್ಲಿ ಕೆಲಸಮಾಡುವವರೆಲ್ಲರೂ ಕೈನೂಲಿನ ಮತ್ತು ಕೈಮಗ್ಗದ ಖಾದಿಯನ್ನು ಉಪಯೋಗಿಸಬೇಕೆಂದು ಬೇಗನೆ ಠರಾವನ್ನು ತರುವವರಿದ್ದಾರೆ. ವಿರುದ್ಧಪಕ್ಷವು ದೊಡ್ಡದಿದೆಯಾದರೂ ಇವರ ಪಕ್ಷದಲ್ಲಿ ಸಭಾಸದರು ಕಡಿಮೆ ಇಲ್ಲ. ವಿ. ಜೆ. ಪಟೇಲರ ಪ್ರಮುಖತೆಯ ಕೆಳಗೆ ಈ ರೀತಿಯಿಂದ ಉಪಯುಕ್ತವಾದ ಕೆಲಸಗಳು ಉಂಟಾಗಹತ್ತಿವೆ. ಸ್ಥಳೀಕ ಸ್ವರಾಜ್ಯದ ಸಂಸ್ಥೆಗಳಲ್ಲಿ ಈ ಮೇರೆಗೆ ಖಾದಿಪ್ರಸಾರದಂಥ ಮಹಾತ್ಮಾಜಿಯವರ ಪರಮಪ್ರಿಯ ಕಾರ್ಯವಾಗುವುದಾದರೆ ಅದಕ್ಕೂ ಕೂಡ "ಪಾಪ" ವೆಂದು ಹೇಳಬಹುದೆ? ಕಟ್ಟೈಕ ಪ್ರಾಮಾಣ್ಯೋಪಜೀವಿಗಳು ಹೇಗೂ ತಿಳಕೊಳ್ಳಲಿ; ಆದರೆ ವಿಚಾರವಂತರು, ಇದೆ ಅಸಹಕಾರದ ನಿಜವಾದ ಸ್ವರೂಪವೆಂದು ತಿಳಿಯದೆ ಇರಲಿಕ್ಕಿಲ್ಲ.

೫. ಹಿಂದೂಮುಸಲ್ಮಾನರ ಐಕ್ಯವು ಹಿಂದೂಸ್ಥಾನದ ಏಳಿಗೆಗೆ ಎಂದರೆ, ಸ್ವರಾಜ್ಯಕ್ಕೆ ಮತ್ತು ಮಹಮ್ಮದೀಯರ ಖಿಲಾಫತ್ ಪ್ರಶ್ನೆಗೆ ಅತ್ಯಂತ ಸಾಧಕವಾದ್ದೆಂದು ಈಗ ಎಲ್ಲರೂ ತಿಳಿದಿದ್ದಾರೆ. ಒಂದು ಕಾಲದಲ್ಲಿ ತಾನು ಮತ್ತು ತನ್ನ ನೆರಳು ಇವುಗಳ ಹೊರತು ಬೇರೆ ಯಾವುದನ್ನೂ ಅರಿಯದ ನಾಮದಾರ ಆಗಾಖಾನಸಾಹೇಬರು ಕೂಡ ಈ ತತ್ವವನ್ನು ಬಹು ಪ್ರಾಂಜಲ ರೀತಿಯಿಂದ ಒಪ್ಪಿಕೊಂಡಿದ್ದಾರೆ. ಆಗಾಖಾನಸಾಹೇಬರು ಪುನಃ ಇಂಗ್ಲೆಂಡಿಗೆ ಪ್ರಯಾಣವನ್ನು ಬೆಳಸುವಾಗ ಮುಂಬಯಿಯಲ್ಲಿ ಟೈಮ್ಸ್ ಒಫ್ ಇಂಡಿಯಾ ಪತ್ರದ ಬಾತಮಿದಾರನು ಅವರ ಭೇಟಿಯನ್ನು ಪಡಕೊಂಡು ಅವರಿಗೆ ಹಲವು ಪ್ರಶ್ನೆಗಳನ್ನು ಹಾಕಿದನು. ಆ ಪ್ರಶ್ನೆಗಳನ್ನು ಉತ್ತರಿಸುವಾಗ ನಾಮದಾರ ಆಗಾಖಾನಸಾಹೇಬರು ಮುಸಲಿಮ್ ಲೀಗ್, ಕೆನಿಯಾದಲ್ಲಿ ಹಿಂದಿಗಳ ಪರಿಸ್ಥಿತಿ, ಹಿಂದೂಸ್ಥಾನದಲ್ಲಿ ಹಿಂದೂಮುಸಲ್ಮಾನ-ಮಹಮ್ಮದೀಯರ ಐಕ್ಯ, ಮಹಮ್ಮದೀಯರ ಹಿತದ ದೃಷ್ಟಿಯಿಂದ ಕೌನ್ಸಿಲುಗಳ ಪ್ರವೇಶ, ಉಪ್ಪಿನ ತೆರಿಗೆ ಇತ್ಯಾದಿ ಈಗಿನ ಕಾಲದ ರಾಜಕಾರಣದ ಪ್ರಶ್ನೆಗಳ ಮೇಲೆ ಯೋಗ್ಯ ಮತ್ತು ಹಿತಾವಹವಾದ ಅಭಿಪ್ರಾಯಗಳನ್ನೆ ವ್ಯಕ್ತಗೊಳಿಸಿದ್ದಾರೆ. ಮುಂಚಿನ ಮುಸ್ಲಿಮ್‌ಲೀಗು ಹೋದದ್ದಕ್ಕೆ ವಿಷಾದವನ್ನು ತೋರ್ಪಡಿಸಿ, ಇನ್ನು ಮುಂದೆಯಾದರೂ ಪ್ರಬಲವಾದ ಒಂದು ಲೀಗನ್ನು ಸ್ಥಾಪಿಸಿ ಪೂರ್ವಕಾರ್ಯವನ್ನು ಮುಂದೊತ್ತುವ ಆಸೆಯಲ್ಲಿ ಆಗಾಖಾನರು ಇದ್ದಾರೆಂದು ಅವರ ಉತ್ತರದ ಮೇಲಿಂದ ವ್ಯಕ್ತವಾಗುತ್ತದೆ. ಕೆನಿಯಾದಲ್ಲಿ ಹಿಂದಿಗಳಿಗೆ ಬ್ರಿಟಿಷ್ ಜನಾಂಗದವರಿಗಿರುವಂತೆಯೆ ತುಲ್ಯಾಧಿಕಾರಗಳಿರಬೇಕು. ಇವರಲ್ಲಿ ಪರಸ್ಪರ ವರ್ಣಭೇದ ಮೂಲಕ ನ್ಯೂನಾತಿರಿಕ್ತಗಳಿರಕೂಡದು ಎಂದು ಸ್ಪಷ್ಟವಾಗಿ ಹೇಳಿದರು. ಹಿಂದೂಮುಸಲ್ಮಾನರ ಐಕ್ಯವು ಸ್ಥಿರವಾಗಿ ನಿಲ್ಲಬೇಕಾದರೆ ಅವರಿಬ್ಬರು ಪರಸ್ಪರ ಸಹಾಯ ಮತ್ತು ತಾಳ್ಮೆ ಇವುಗಳನ್ನು ಸಂಪಾದಿಸಬೇಕು. ಎಲ್ಲರೂ ಒಂದು ಸಮಾನ ಧ್ಯೇಯವನ್ನು ಮುಂದಿಟ್ಟುಕೊಂಡು ದೇಶದ ಪ್ರಗತಿಯನ್ನು ಸಾಧಿಸಹತ್ತಿದರೆ ಪರಸ್ಪರ ಕಲಹವುಂಟಾಗಲಿಕ್ಕಿಲ್ಲವೆಂದು ಆಗಾಖಾನಸಾಹೇಬರು ತಮ್ಮ ಅಭಿಪ್ರಾಯವನ್ನು ಕೊಟ್ಟರು. ಕೌನ್ಸಿಲುಗಳಲ್ಲಿ ಸಾಮರ್ಥ್ಯವಂತರನ್ನು ಕಳುಹಿಸುವುದು ಮಹಮ್ಮದೀಯ ಸಮಾಜದ ಹಿತಕ್ಕೆ ಆವಶ್ಯಕವಾದ್ದೆಂದು ಕೂಡ ಅವರು ಒತ್ತಿಹೇಳಿದರು. ಉಪ್ಪಿನ ತೆರಿಗೆಯು ಸ್ಥಾಪಿತವಾದಾಗ್ಯೂ ಕೌನ್ಸಿಲುಗಳನ್ನು ಬಹಿಷ್ಕರಿಸಲಾಗುವುದಿಲ್ಲ. ಉತ್ತಮ ಜನರನ್ನು ಅಲ್ಲಿ ಕಳುಹಿಸಿ ದೇಶಕ್ಕೆ ಬೇಕಾದ ಕಾಯಿದೆಗಳನ್ನು ಮಾಡಿಕೊಳ್ಳಬೇಕು ಎಂದು ಆಗಾಖಾನಸಾಹೇಬರು ಹೇಳಿದರು.

ಮಂಗಳೂರು.

ಸ್ವೀಕಾರ:—ಮೆಸ್ಸರ್ಸ್ ಟಿ. ಯಸ್. ರಾವ್ ಬ್ರದರ್ಸ್ ದಿ ರಾಯಲ್ ಹಾರ್ಮೋನಿಯಮ್ ಮಾರ್ಟ ಇವರಿಂದ ಕಳುಹಿಸಲ್ಪಟ್ಟ ಮದಾಲಸೆಯ ತತ್ವಪರವಾದ ಜೋಗುಳ ಹಾಡು, ಮತ್ತು ಶ್ರೀ ಚಂಡಿಕಾಶತಕ ಅಥವಾ ದೇವೀಸ್ತೋತ್ರ, ಉಡುಪಿ ಗೋವಿಂದರಾಯರಿಂದ ಕಳುಹಿಸಲ್ಪಟ್ಟ ಸ್ವದೇಶೀ ಸಮಾಜ ಎಂಬ ಗದ್ಯಪುಸ್ತಕ ಇವನ್ನು ಆದರ ಪೂರ್ವಕವಾಗಿ ಸ್ವೀಕರಿಸಿದ್ದೇವೆ. ಸ್ಥಳಸಂಕೋಚದಿಂದ ಈ ಸಂಚಿಕೆಯಲ್ಲಿ ವಿಮರ್ಶಿಸಲು ಆಗಲಿಲ್ಲ.

"ನವಯುಗದಲ್ಲಿ ಮಿ. ಅಲ್ಬುಕರ್ಕರವರೂ ಹುಲಿಯ ಬೇಟೆಯೂ" ಎಂಬದೊಂದು ಲೇಖವು ಪ್ರಕಟನೆ ಬಗ್ಗೆ ನಮ್ಮ ಬಳಿಗೆ ಬಂದಿರುವುದು. ಸದರಿ ಲೇಖಕರು ಇದನ್ನು ನವಯುಗಕ್ಕೆನೆ ಕಳುಹಿಸುವುದು ಲೇಸು.

ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ಮೀಟಿಂಗು ಈ ತಿಂಗಳ ತಾರೀಕು ೨೮ರಲ್ಲಿ ಸೇರುವುದು. ಎಲಿಮೆಂಟರಿ ಶಾಲೆಗಳ ಬಗ್ಗೆ ಸಿಲೆಬಸ್ಸುಗಳನ್ನು ತಯಾರಿಸಲು ನೇಮಕಪಟ್ಟ ಸಬ್ ಕಮ್ಮಿಟಿಯ ಮೀಟಿಂಗು ತಾ. ೨೭ರಲ್ಲಿ ಕೂಡುವುದು.

ಜಿಲ್ಲಾ ಕಲೆಕ್ಟರರ ಸರ್ಕೀಟು—ತಾ. ೨೦ ಮತ್ತು ೨೧ ಕಾರ್ಕಳ, ತಾ. ೨೨ ಮತ್ತು ೨೩ ಬೆಳ್ಮಣ್ಣು, ತಾ. ೨೪ ಮತ್ತು ೨೫ ಪಡುಬಿದ್ರೆ ತಾ. ೨೬ ಮತ್ತು ೨೭ ಸುರತಕಲ್ಲು.

ಮಂಗಳೂರು ತಾಲೂಕುಬೋರ್ಡಿಗೆ ಬಂಟವಾಳ ಸರ್ಕಲಿನ ಮೆಂಬರಿಕೆಗೆ ಮ. ರಾ. ಪಣಂಬೂರು ವಾಸುದೇವರಾವ್ ಮ. ರಾ ಬಂಟವಾಳ ಪಟೇಲ ವೆಂಕಟ್ರಾಯಪ್ರಭು ಮತ್ತು ಮ. ರಾ. ಕೋಟೆಕಾರ ಸುಬ್ಬಣ್ಣಯ್ಯ ಇವರು ಉಮೇದುವಾರರಾಗಿರುವರು.

ಮಂಗಳೂರ ಮುನ್ಸಿಪಲ್ ಆಫೀಸಿನಲ್ಲಿ ಇಲಿ ಬಿದ್ದಿರುವುದರಿಂದ ಸದರಿ ಆಫೀಸನ್ನು ಮಿಶ್ಯನ್‌ಶೋಪಿನ ಮಾಳಿಗೆಗೆ ಒಯ್ಯಲ್ಪಟ್ಟಾಗಿತ್ತು. ಕಳೆದ ಸೋಮವಾರದಿಂದ ಮುನ್ಸಿಪಲ್ ಆಫೀಸು ಅದರ ಮುಂಚಿನ ಕಟ್ಟೋಣಕ್ಕೆನೆ ಒಯ್ದಿರುತ್ತದೆ.

ಕಳೆದ ಬುಧವಾರಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ಮಂಗಳೂರ ಪಟ್ಟಣದಲ್ಲಿ ೪ ಪ್ಲೇಗ್ ಮರಣಗಳೂ ೫ ಸನ್ನಿಪಾತ ಜ್ವರದ ಮರಣಗಳೂ ಆಗಿವೆ.

ದಕ್ಷಿಣ ಕನ್ನಡಾ ಜಿಲ್ಲೆಯ ಬ್ರಾಹ್ಮಣೇತರರ ಬಗ್ಗೆ ಪ್ರತ್ಯೇಕಿಸಿಟ್ಟ ನ್ಯಾಯ ವಿಧಾಯಕ ಸಭೆಯ ಒಂದು ಸ್ಥಾನಕ್ಕೆ ಮ. ರಾ. ಬಿ. ಮಹಾಬಲಹೆಗ್ಡೆ ಬಿ. ಎ. ಬಿ. ಎಲ್ ಮತ್ತು ಮ. ರಾ. ಅತ್ತಾವರ ಬಾಲಕೃಷ್ಣಶೆಟ್ಟಿ ಬಿ. ಎ. ಸಂಪಾದಕ ನವಯುಗ ಮಂಗಳೂರು ಈ ಇಬ್ಬರು ಗೃಹಸ್ಥರು ತಾವು ಉಮೇದುವಾರರಾಗಿರುವೆವೆಂದು ತಿಳಿಸಿರುತ್ತಾರೆ.

ದಕ್ಷಿಣ ಕನ್ನಡಾ ಜಿಲ್ಲಾ ಸೆಂಟ್ರಲ್ ಕೋ-ಒಪರೇಟಿವ್ ಬ್ಯಾಂಕಿನ ಒಂದು ಶಾಖೆಯು ಕೊಡಿಯಾಲಬೈಲಿನಲ್ಲಿರುವ ಕೋ-ಒಪರೇಟಿವ್ ಕಟ್ಟೋಣದಲ್ಲಿ ಈ ದಿನ ಮಧ್ಯಾಹ್ನ ೧ ಗಂಟೆಗೆ ತೆರಿಯಲಾಯಿತು.

ಕಳೆದ ತಾರೀಕು ೧೩ರಲ್ಲಿ ಸತ್ಯಾಗ್ರಹ ದಿನಾಚರಣೆಯು ಇಲ್ಲಿ ಆಚರಿಸಲಾಯಿತು.

ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲ್ ಮೆಂಬರರಾದ ಮಿ. ಯಚ್. ಮುಹಮ್ಮದ್ ಸಾಹೇಬ್ ಬಹದ್ದೂರರು ಆ ಹುದ್ದೆಗೆ ರಾಜಿನಾಮೆಯನ್ನು ಕೊಟ್ಟಕಾರಣ ಅವರ ಬದಲಿಗೆ ಮಿ. ಯಚ್. ಮುಹಮ್ಮದ್ ಪುಕ್ಕಾರ ಸಾಹೇಬರನ್ನು ಸರಕಾರದವರು ಆ ಹುದ್ದೆಗೆ ನೇಮಕವಮಾಡಿರುವರಂತೆ.

ದಕ್ಷಿಣ ಕನ್ನಡಾ ಜಿಲ್ಲಾ ಕೆಥೋಲಿಕ್ ಎಸೋಸಿಯೇಶನಿನ ವಾರ್ಷಿಕ ಮಹಾ ಸಭೆಯು ಕಳೆದ ತಾರೀಕು ೮ರಲ್ಲಿ ಬಿಶೋಪಸಾಹೇಬರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಕೆಯ ಸಂಬಂಧ ಬಿಶೋಪಸಾಹೇಬರು ಕಳೆದ ತಾರೀಕು ೧೪ಕ್ಕೆ ಕುದ್ರುರೆಮುಖಕ್ಕೆ ತೆರಳಿರುವರು.

ವಝೀರಸ್ಥಾನದಲ್ಲಿ ಲಷ್ಕರಿ ಕೆಲಸವನ್ನು ಯೋಗ್ಯ ರೀತಿಯಲ್ಲಿ ನಡೆಸಿದ ಬಗ್ಗೆ ಸರಕಾರದವರು "ಆರ್ಡರ ಓಫ್ ದಿ ಬ್ರಿಟಿಷ್ ಎಂಪಾಯರ್" ಎಂಬ ಬಿರುದನ್ನು ಕೊಟ್ಟವರಲ್ಲಿ ಮಂಗಳೂರಿನ ಮಿ| ಜೆ. ಎಸ್. ಪಿಂಟೋರವರು ಒಬ್ಬರಾಗಿರುವರು.

ಇಲ್ಲಿಯ ವೆಟರಿನರಿ ಆಸ್ಪತ್ರೆಯ ವಠಾರದಲ್ಲಿ ಇಲ್ಲಿಯ ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನವರು ಒಂದು ಬೀಜದ ಕೋಣವನ್ನು ಸಹ ಇಟ್ಟಿರುವರು.

ಮಂಗಳೂರ ಮ್ಯಾಲಿನ ಮೇಲೆ ನಡಿಯುತ್ತಿರುವ ವ್ಯಾಜ್ಯವು ರಾಜಿಯಿಂದ ತೀರ್ಮಾನವಾಯಿತೆಂದು ಕೇಳುತ್ತೇವೆ.

ಇಲ್ಲಿಯ ಕೊಡಿಯಾಲಬೈಲು ಪೋಸ್ಟಆಫೀಸಿನಲ್ಲಿ ಇಲಿ ಬಿದ್ದಿರುವುದರಿಂದ ಆ ಪೋಸ್ಟಆಫೀಸನ್ನು ಹಂಪನಕಟ್ಟೆಗೆ ಒಯ್ದಿರುತ್ತದೆ.

ಇಲ್ಲಿಯ ಕ್ರೈಸ್ತರ ಪರವಾಗಿ ಮದರಾಸ ನ್ಯಾಯವಿಧಾಯಕ ಸಭೆಗೆ ಒಬ್ಬ ಮೆಂಬರರನ್ನು ಆರಿಸತಕ್ಕದಿದೆ. ಆ ಸ್ಥಾನಕ್ಕೆ ೭ ಮಂದಿ ಗೃಹಸ್ಥರು ಉಮೇದುವಾರರಾಗಲು ಇಚ್ಛಿಸಿರುವರೆಂದು ವರ್ತಮಾನವಿದೆ.

ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನ ಕಾರ್ಯನಿರ್ವಾಹಕ ಕಮಿಟಿಯ ಮೀಟಿಂಗು ಈ ತಿಂಗಳ ತಾರೀಕು ೨೮ರಲ್ಲಿ ಜರಗುವುದು.

ರಾಜಮಹೇಂದ್ರಿಯಲ್ಲಿ ಕಟ್ಟಿಸಿದ ಕರ್ನಾಟಕ ಕಾಗದದ ಕಾರ್ಖಾನೆ.

ಹಿಂದೂದೇಶದಲ್ಲಿ ಈಗ ಸುಮಾರು ೮೦,೦೦೦ ಟನ್ ಕಾಗದವು ಒಂದು ವರುಷದಲ್ಲಿ ಖರ್ಚಾಗುತ್ತದೆ. ಇದರಲ್ಲಿ ೩೦,೦೦೦ ಟನ್ ಮಾತ್ರವೆ ಈಗ ಇಂಡಿಯದಲ್ಲಿ ತಯಾರಾಗುತ್ತದೆ. ಇಷ್ಟು ಸ್ವಲ್ಪ ಕಾಗದವನ್ನು ತಯಾರಿಸಲಿಕ್ಕೆ ಸಹ ಕಾಗದ ತಯಾರಿಸುವ ಹಿಟ್ಟನ್ನು (Pulp) ಯುರೋಪಖಂಡದ ಸ್ವೀಡನ್ ದೇಶದಿಂದ ತರಿಸಬೇಕಾಗುತ್ತದೆ. ಆದ್ದರಿಂದ ಈ ಹಿಟ್ಟನ್ನು ಸಹ ಇಲ್ಲಿಯೆ ತಯಾರಿಸುವ ಅವಶ್ಯವಿದೆ. ಇಷ್ಟರವರೆಗೆ ದಕ್ಷಿಣ ಹಿಂದೂದೇಶದಲ್ಲಿ ಇದನ್ನು ಸಾಧನೆಮಾಡಿ ತಯಾರಿಸಲಿಕ್ಕೆ ಯಾರೊಬ್ಬರೂ ಮುಂದೆ ಬರಲಿಲ್ಲ. ಕೆಲವು ವರುಷಗಳ ಹಿಂದೆ ಆಲೋಚಿಸಿದ ಪುನ್ನಲೂರ್ ಮಹಾಲಕ್ಷ್ಮೀಮಿಲ್ಸ್ ಎಂಬ ಕಾರ್ಖಾನೆಯು ಸಫಲಕ್ಕೆ ಬರಲಿಲ್ಲ. ೧೯೧೯ನೆಯ ಇಸವಿಯಲ್ಲಿ ದಕ್ಷಿಣ ಹಿಂದೂದೇಶದ ಕೆಲವು ಸಾವುಕಾರರು ೧೦ ಲಕ್ಷ ಬಂಡವಾಳವಿರುವ ಕರ್ನಾಟಿಕ ಪೇಪರ್ ಮಿಲ್ಲ ಎಂಬ ಕಾಗದ ಕಾರ್ಖಾನೆಯನ್ನು ತೆರಿಯಲು ಆಲೋಚಿಸಿದರು. ಅನಂತರ ಈ ಮೂಲ ಧಂದೆವಾಳವು ಸಾಕಾಗದ್ದರಿಂದ ೩೦ ಲಕ್ಷ ಬಂಡವಾಳ ಕೂಡಿಸಿ ಒಂದು ಜೋಯಿಂಟ್ ಸ್ಟೋಕ್ ಕಂಪೇನಿಮಾಡಿದರು. ಈ ೩೦ ಲಕ್ಷ ಹಣವನ್ನು ದಕ್ಷಿಣಹಿಂದೂಸ್ಥಾನದಿಂದಲೆ ಕೂಡಿಸಿರುತ್ತಾರೆ.

ಈ ಕಾರ್ಖಾನೆಯಲ್ಲಿ ಕಾಗದ ತಯಾರಿಸುವ ಹಿಟ್ಟನ್ನು ಪರದೇಶಗಳಿಂದ ತರಿಸದೆ ಈ ದೇಶದಲ್ಲಿಯೆ ಸಿಗುವ ಬಿದಿರಿನಿಂದಲೂ ಬೈಹುಲ್ಲಿನಿಂದಲೂ ಕಂಪೆನಿಯ ಯಂತ್ರಗಳಲ್ಲಿಯೆ ತಯಾರಿಸುತ್ತಾರೆ.

ಈ ಕಾರ್ಖಾನೆಯನ್ನು ರಾಜಮಹೇಂದ್ರಿಯಲ್ಲಿ ಸ್ಥಾಪಿಸಲು ಎರಡು ಕಾರಣಗಳಿವೆ. ೧ ಪಟ್ಟಣವು ಗೋದಾವರಿನದೀತೀರದಲ್ಲಿರುವುದರಿಂದ ಕಾಡಿನಲ್ಲಿ ಬೆಳೆದ ಹೇರಳ ಬಿದಿರನ್ನು ಅಲ್ಲಿಗೆ ಸುಲಭವಾಗಿ ತರಲು ಸಾಧ್ಯವಾಗುತ್ತದೆ. (೨) ಆ ನದಿಯ ಕಾಲುವೆಗಳಲ್ಲಿ ಬೆಳೆದ ಬತ್ತದ ಬೈಹುಲ್ಲನ್ನು ಸುಲಭವಾಗಿ ಆ ಪಟ್ಟಣಕ್ಕೆ ತರಲಿಕ್ಕಾಗುತ್ತದೆ.

ಈ ಕಾರ್ಖಾನೆಯನ್ನು ಕಟ್ಟಲಿಕ್ಕೆ ಆರಿಸಿದ ಸ್ಥಳವು ಗೋದಾವರಿನದಿಯಿಂದ ಒಂದು ಫರ್ಲಾಂಗ್ ದೂರವಾಗಿದ್ದು ಎತ್ತರವಾದ ಸ್ಥಳವಾಗಿದೆ. ಈ ಕಾರ್ಖಾನೆಯನ್ನು ಅಮೇರಿಕಾ ದೇಶದಲ್ಲಿಯೂ ಸ್ವೀಡರ್ಲೆಂಡ್ ದೇಶದಲ್ಲಿಯೂ ಕಾಗದ ಕಾರ್ಖಾನೆಗಳಲ್ಲಿ ಬಹಳ ಅನುಭವ ಪಡೆದ ಇಂಜಿನಿಯರರ ಆಲೋಚನೆಯಿಂದಲೂ ಅನುಭವದಿಂದಲೂ ಕಟ್ಟಲ್ಪಟ್ಟಿದೆ. ೧೯೨೧ನೆಯ ಇಸವಿಯಲ್ಲಿ ಇದರ ಬುನಾದಿಕಲ್ಲನ್ನು ಹಾಕಿದರು. ಈಗ ಇದರ ಕಟ್ಟೋಣದ ಕೆಲಸವು ಕೇವಲಾ ೮೦ರಷ್ಟು ಆಗಿದೆ. ಇನ್ನು ಎರಡು ತಿಂಗಳಲ್ಲಿ ಈ ಕೆಲಸವು ಪೂರ್ಣವಾಗುವುದು. ಈಗ ಚೆನ್ನಾಗಿ ತರಬೇತಾದ ಮತ್ತು ತರಬೇತಾಗದ ೩೦೦ ಮಂದಿ ಕೆಲಸಗಾರರು ಪಟ್ಟಣದ ಮತ್ತು ಯಂತ್ರಗಳನ್ನು ಸ್ಥಾಪಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಹೊಗೆ ಹೋಗುವ ಚಿಮಿಣಿಯು ೧೫೦ ಅಡಿ ಎತ್ತರವಾಗಿದ್ದು ಬಹಳ ದೂರದ ವರೆಗೆ ಕಾಣುತ್ತದೆ. ಮಚಲೀಪಟ್ಟಣದಲ್ಲಿರುವ ಆಂಧ್ರ ಜಾತೀಯ ಕಲಾಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಪಡೆದ ಮಿಸ್ಟರ್ ಜಿ. ಕೃಷ್ಣಮೂರ್ತಿಯವರು ಈ ಕೆಲಸದಲ್ಲಿ ಬಹಳ ಸಾಹಸವನ್ನು ತೋರುತ್ತಿದ್ದಾರೆಂಬುದು ಬಹಳ ವಿಶೇಷವಾದ ಸಂಗತಿಯಾಗಿದೆ.

ಈ ಕಾರ್ಖಾನೆಗೆ ಬೇಕಾದ ಯಂತ್ರ ಸಾಧನಗಳನ್ನು ಅಮೇರಿಕದಿಂದಲೂ, ಜರ್ಮನಿಯಿಂದಲೂ, ಸ್ವೀಡರ್ಲೆಂಡಿನಿಂದಲೂ ತರಿಸಿರುತ್ತಾರೆ. ಹೆಚ್ಚಿನ ಯಂತ್ರಗಳೆಲ್ಲವೂ ರಾಜಮಹೇಂದ್ರಿಗೆ ಬಂದು ತಲ್ಪಿಯವೆ. ಉಳಿದವುಗಳು ಅರ್ಧದಾರಿಯಲ್ಲಿ ಹಡಗಗಳಲ್ಲಿವೆ. ಯಂತ್ರಗಳನ್ನು ಜೋಡಿಸುವ ಕೆಲಸವನ್ನು ಅಮೇರಿಕದ ಮಿಸ್ಟರ್ ಸ್ಟೀವನ್ ಮತ್ತು ಮಿಸ್ಟರ್ [illegible] ನ್ಯಾಯೋರ್ಕ ಪಟ್ಟಣದ [illegible] ಮುಸ್ಕುಕೆಟ್ಸ್‌ದಿಂದ ಕಂಪೆನಿಯ ಕೆಮಿಕಲ್ ಎಂಜಿನಿಯರರಾದ ಮಿಸ್ಟರ್ ಇ. ಸಿ. ವಾಡ್ ಎಂಬವರೂ ಸ್ವೀಡರ್ಲೆಂಡಿನ ಇಸರ್ಡ್ ಲ್ಯಾಂಡಿನ ಥಿಯೋಡೋರ್ಸ್‌ಬರ್ಗ್ ಕಂಪೆನಿಯ ಎಲೆಕ್ಟ್ರಿಕಲ್ ಇಂಜಿನೀಯರರಾದ ಮಿಸ್ಟರ್ ವಿಲ್ಲಿಯಮ್ ಬರ್ಗರವರೂ ಮಾಡುತ್ತಿರುವರು.

ಯಂತ್ರಸಾಧನೆಗಳನ್ನು ನಡಿಸಲಿಕ್ಕೆ ಉಗಿಯನ್ನು, ವಿದ್ಯುಚ್ಛಕ್ತಿಯನ್ನೂ ಉಪಯೋಗಿಸುವರು. ಬಿದಿರು ಮತ್ತು ಹುಲ್ಲಿನಿಂದ ಹಿಟ್ಟು ತಯಾರಿಸುವ ಯಂತ್ರವನ್ನು ಉಗಿಯಿಂದಲೂ, ಹಿಟ್ಟಿನಿಂದ ಕಾಗದ ತಯಾರಿಸುವ ಯಂತ್ರವನ್ನು ಉಗಿಯಿಂದಲೂ, ವಿದ್ಯುಚ್ಛಕ್ತಿಯಿಂದಲೂ ನಡಿಸುವರು. ಯಂತ್ರದ ಕೋಣೆಯ ಕೆಲಸವು ಪೂರ್ಣವಾಗುತ್ತ ಬಂತು. ಇನ್ನು ಸ್ವಲ್ಪ ದಿವಸಗಳಲ್ಲಿಯೆ ಆ ಕೋಣೆಯಲ್ಲಿ ಯಂತ್ರವನ್ನು ಇಡುವರು. ಜುಲಾಯಿ ತಿಂಗಳಲ್ಲಿ ಕಾಗದಕ್ಕೆ ಬೇಕಾದ ಹಿಟ್ಟನ್ನು ತಯಾರಿಸಲು ಆರಂಭವಾಗುವುದು.

ಯಂತ್ರಸಾಧನೆಗೆ ಬೇಕಾದಷ್ಟು ನೀರನ್ನು ಗೋದಾವರಿನದಿಯಿಂದ ತೆಗೆದು ಉಪಯೋಗಿಸಲಿಕ್ಕೆ ಮದರಾಸು ಸರಕಾರದ ಅಪ್ಪಣೆಯು ದೊರಕಿದೆ.

ಇನ್ನು ಈ ಕಾರ್ಖಾನೆಯಲ್ಲಿ ವಿಶೇಷವಾದ ಸಂಗತಿಯೇನೆಂದರೆ, ಬಿಳುಪು ಕೆಮಿಕಲ್ ಬ್ಲೀಚ್ ಕಾಗದಕ್ಕೆ ಬೇಕಾದ ಹಿಟ್ಟನ್ನ ತಯಾರಿಸಲಿಕ್ಕೆ ಬೇಕಾದ ಎಲ್ಲಾ ವಸ್ತುಗಳು ಇದೆ ಕಾರ್ಖಾನೆಯಲ್ಲಿಯೆ ತಯಾರಾಗುವವು. ಬಿದಿರಿನ ಮತ್ತು ಹುಲ್ಲಿನ ಬಣ್ಣವನ್ನು ತೆಗೆದು ಬೆಳ್ಳಗಾಗಿ ಮಾಡುವ ಬ್ಲೀಚಿಂಗ್ ಲಿಕ್ಕರ್, ಕೋಸ್ಟಿಕ್ ಸೋಡಾ ಇತ್ಯಾದಿಯೂ ಈ ಕಾರ್ಖಾನೆಯಲ್ಲಿ ತಯಾರಾಗುವವು. ಹಿಟ್ಟು ತಯಾರಿಸಿ ಉಳಿದ ವಸ್ತುಗಳಿಂದ ಸೋಡಾ ಏಶ್ ಬ್ಲೀಚಿಂಗ್ ಪೌಡರ್ ಮತ್ತು ಸುಣ್ಣ ಇವುಗಳನ್ನು ತಯಾರಿಸುವ ಏರ್ಪಾಡಿಯನ್ನು ಮಾಡಿದೆ. ಹೀಗೆ ಮಾಡುವುದರಿಂದ ಖರ್ಚು ಕಡಿಮೆಯಾಗುವುದು. ಈಗ ಕೋಸ್ಟಿಕ್‌ಸೋಡಾ ಮುಂತಾದ ವಸ್ತುಗಳನ್ನು ಪರದೇಶಗಳಿಂದ ತರಿಸುವಾಗ ಅವುಗಳ ಶಕ್ತಿಯೂ ಕಡಿಮೆಯಾಗುತ್ತದೆ. ಮಾತ್ರವಲ್ಲ ಖರ್ಚೂ ಹೆಚ್ಚಾಗುತ್ತದೆ. ಆದ್ದರಿಂದ ಎಲ್ಲಾ ವಸ್ತುಗಳನ್ನು ತಯಾರಿಸುವ ಕರ್ನಾಟಿಕ ಕಾಗದ ಕಾರ್ಖಾನೆಯಲ್ಲಿ ತಯಾರಾಗುವ ಕಾಗದಕ್ಕೆ ಕ್ರಯವು ಕಡಿಮೆಯಾಗುವುದು.

ಇನ್ನು ಈ ಕಾರ್ಖಾನೆಯಲ್ಲಿ ಬಿದಿರಿನಿಂದ ಹಿಟ್ಟು ತಯಾರಿಸುವ ಛರ್ಬಿ (ಟಲ್ಲೊ) ಮತ್ತು ಗ್ಲಿಸರಿನ್ ತಯಾರಾಗುವವು. ಈಗ ಟಲ್ಲೊವನ್ನು ಒಸ್ಟ್ರೇಲಿಯದಿಂದಲೂ, ಗ್ಲಿಸರೀನನ್ನು ಬೇರೆ ಬೇರೆ ದೇಶಗಳಿಂದಲೂ ತರಿಸುತ್ತಾರೆ. ಹಿಟ್ಟು ತಯಾರಿಸುವ ಯಂತ್ರದಲ್ಲಿ ದಿವಸಕ್ಕೆ ೧೦ ಟನ್ ಹಿಟ್ಟು ತಯಾರಾಗುವುದೆಂದು ಅಂದಾಜುಮಾಡಿದ್ದಾರೆ. ಕಾಗದತಯಾರಿಸುವ ಯಂತ್ರದಲ್ಲಿ ದಿವಸಕ್ಕೆ ೫ ಟನ್ ಕಾಗದವು ಹಿಟ್ಟು ತಯಾರಾದ ಕೂಡಲೆ ತಯಾರಾಗುವದೆಂದೂ ಅಂದಾಜುಮಾಡಿದ್ದಾರೆ. ಎಲ್ಲಾ ಯಂತ್ರಗಳಲ್ಲಿ ಕೆಲಸನಡಿಸುವಾಗ ದಿನ ಒಂದಕ್ಕೆ ೧೫ ಟನ್ ಹಿಟ್ಟು ತಯಾರಾಗುವುದು. ಇದರಲ್ಲಿ ೧೦ ಟನ್ ಕಾಗದ ತಯಾರಿಸಿ ೫ ಟನ್ ಹಿಟ್ಟನ್ನು ಬೇರೆ ಕಾಗದ ಕಾರ್ಖಾನೆಗಳಿಗೆ ಮಾರುವರು.

ಒಟ್ಟಾರೆ ಈ ಕಾಗದ ಕಾರ್ಖಾನೆಯಲ್ಲಿ ಒಂದು ವರುಷಕ್ಕೆ ೫,೦೦೦ ಟನ್ ಕಾಗದವು ತಯಾರಾಗುವುದು.

ಈ ಮಹತ್ವವಾದ ಕೆಲಸವನ್ನು ಸಾಧ್ಯಮಾಡಿದ ಬಿ. ಅಲ್ಲರ್ ಚೆಟ್ಟಿಯಾರ್‌ರಿಗೆ ಹಿಂದೂಸ್ಥಾನದ ಧನ್ಯವಾದಗಳು ಅರ್ಪಿಸಲ್ಪಡುವುವು.

ಹೀಗೆ ಎಲ್ಲಾ ಕಾರ್ಖಾನೆಗಳಲ್ಲಿಯೂ ೩೫,೦೦೦ ಟನ್ ಕಾಗದವು ತಯಾರಾದ ಹಾಗಾಯಿತು. ಇನ್ನು ೪೫,೦೦೦ ಟನ್ ಕಾಗದ ತಯಾರಿಸಲಿಕ್ಕೆ ಇನ್ನು ಹನ್ನೊಂದು ಕಾರ್ಖಾನೆಗಳು ಬೇಕಾಗುವವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೋದಾವರಿ ಜಿಲ್ಲೆಗಿಂತಲೂ ಕಾಗದವನ್ನು ತಯಾರಿಸಲಿಕ್ಕೆ ಹೆಚ್ಚಿನ ಅನುಕೂಲತೆಗಳು ಇವೆ. ಉಪ್ಪಿನಂಗಡಿ ತಾಲೂಕಿನಲ್ಲಿ ಎಲ್ಲಾ ಸಾಹಿತ್ಯಗಳೂ ತಯಾರಿವೆ. ಮಾನ್ಯ ವೈಕುಂಠ ಭಕ್ತರು ತಾವು ಲೆಜಿಸ್ಲೆಟಿವ್ ಕೌನ್ಸಿಲಿಗೆ ಮೆಂಬರರಾದರೆ ಈ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ವೃದ್ಧಿಗೆ ತರುತ್ತೇನೆಂದು ಸ್ವದೇಶಾಭಿಮಾನಿಯಲ್ಲಿ ಪ್ರಸ್ತಾಪಿಸಿದಂತೆ ಒಂದು ಕಾಗದ ಕಾರ್ಖಾನೆಯನ್ನು ಈ ಜಿಲ್ಲೆಯ ಯೋಗ್ಯವಾದ ಸ್ಥಳದಲ್ಲಿ ಇಡುವ ಹಾಗೆ ಮಾಡಿದರೆ, ರಾಜಮಹೇಂದ್ರಿಯ ಅಲ್ಲರ್ ಚೆಟ್ಟಿಯಾರ್‌ರವರ ಹಾಗೆಯೆ ಹಿಂದೀಯರೆಲ್ಲರಿಂದಲೂ ಈ ಜಿಲ್ಲೆಯವರೆಲ್ಲರಿಂದಲೂ ಆ ಚಂದ್ರಾರ್ಕವಾದ ಸ್ತುತಿಗೆ ಪಾತ್ರರಾಗುತ್ತಿದ್ದರು. ಹೊಟ್ಟೆಗಿಲ್ಲದೆ ನರಳುತ್ತಿರುವ ಜನರಿಗೆ ಅನ್ನದಾನವನ್ನು ಕೊಟ್ಟಂತೆ ಆಗುತ್ತಿತು.

— ಅಮೃತಸರದಲ್ಲಿ ನಡೆದ ಜಟಾಪಟಿ. —

ಕೆಲವು ಮುಹಮ್ಮದೀಯರು ಹಿಂದೂ ಹುಡುಗಿಯೊಬ್ಬಳನ್ನು ಹಿಡಿದ್ದರಿಂದ ಕಳೆದ ತಾ. ೧೧ನೆಯ ದಿನ ಅಮೃತಸರದಲ್ಲಿ ಹಿಂದೂ-ಮುಸಲ್ಮಾನರಲ್ಲಿ ಜಗಳ ನಡೆಯಿತು. ಈ ವರ್ತಮಾನವು ಪಟ್ಟಣದ ಎಲ್ಲಾ ಕಡೆಗಳಲ್ಲಿ ಪಸರಿಸಿ ಪಟ್ಟಣದ ಇತರ ಭಾಗಗಳಲ್ಲೂ ಹಿಂದೂ ಮುಸಲ್ಮಾನರೊಳಗೆ ಜಟಾಪಟಿಯು ಆಯಿತು. ಇಕ್ಕಡೆಯವರೂ ಲಾಠಿಗಳನ್ನು ಉಪಯೋಗಿಸಿದ್ದರಿಂದ ಸುಮಾರು ೩೦ ಮಂದಿಗಳಿಗೆ ಗಾಯ ಉಂಟಾಯಿತು. ಕೂಡಲೆ ಡಿಸ್ಟ್ರಿಕ್ಟ ಮಜಿಸ್ಟ್ರೇಟರಾದ ಮಿ| ಡನ್ನೆಟ್ಟ್ ಸಾಹೇಬರೂ ಪೋಲೀಸು ಸುಪರಿಂಟೆಂಡೆಂಟರೂ ಬ್ರಿಟಿಷ ಸೈನ್ಯದ ಮತ್ತು ಪೋಲೀಸರ ಸಹಾಯದಿಂದ ಗಲಾಟೆಯನ್ನು ಶಾಂತಗೊಳಿಸಿದರು. ಆ ದಿನ ರಾತ್ರಿ ಯಾವ ಗಲಾಟೆಯೂ ನಡೆಯಲಿಲ್ಲ. ಆದರೆ ಮರುದಿನ ಬೆಳಿಗ್ಗೆ ಸಿಮಕಮಂಡಿ ಮತ್ತು ಇತರ ಕೆಲವು ಕಡೆಗಳಲ್ಲಿ ಜಟಾಪಟಿಯು ಪ್ರಾರಂಭವಾಗಿ ಕೆಲವರು ಗಾಯ ಹೊಂದಿದ್ದರು. ಸೊತ್ತುಗಳು ನಾಶವಾಗಲಿಲ್ಲ. ಜನರ ಗುಂಪು ಅಂಗಡಿಗಳಿಗೆ ಕಲ್ಲನ್ನು ಎಸೆಯಿತು. ಆದರೆ ಮನೆಗಳ ಮೇಲೆ ಹಲ್ಲೆಯನ್ನು ನಡಿಸಲಿಲ್ಲ. ಆದಿನ ಮಧ್ಯಾಹ್ನ ಅಶ್ವಾರೂಢಸೈನ್ಯದ ಒಂದು ದಳವು ಬಂದು ಪಟ್ಟಣದಲ್ಲಿರುವ ಬೇರೆ ಸೈನಿಕರೊಡನೆ ಮುಖ್ಯ ಮುಖ್ಯ ಬೀದಿಗಳಲ್ಲಿ ಗಸ್ತು ತಿರುಗಿ ಗಲಾಟೆಯು ಏಳದಂತೆ ಜಾಗ್ರತೆಯನ್ನು ನೋಡಿಕೊಂಡರು. ಕ್ಯಾಪ್ಟೇನ್ ವಾಕರ್‌ಟು, ಸಿಮಕಮಂಡಿ ಮೊದಲಾದ ಕಡೆಗಳ ಹೆಚ್ಚಿನ ಅಂಗಡಿಗಳು ಕೂಡಲೆ ಮುಚ್ಚಲ್ಪಟ್ಟವು. ಈ ಗಲಾಟೆಯನ್ನು ಶಾಂತಗೊಳಿಸುವುದರಲ್ಲಿ ಅಕಾಲಿಗಳು ಬಹುಳವಾಗಿ ಪ್ರಯತ್ನಪಡಿಸಿದರಲ್ಲದೆ ಅಧಿಕಾರಿಗಳು ಈ ಗಲಾಟೆಯನ್ನು ಶಾಂತಪಡಿಸಲು ನಡಿಸುವ ಪ್ರಯತ್ನಗಳಲ್ಲಿ ಅವರಿಗೆ ಹೆಚ್ಚಿನ ಸಹಾಯಮಾಡಿದ್ದಾರೆ. ಗುರುಕಾಬಾಗ ಪ್ರಕರಣದ ಸಂಬಂಧ ಕಾರಾಗೃಹವಾಸವನ್ನು ಅನುಭವಿಸಿ ಬಂದ ಶ್ರೀಯುತ ಸರದಾರ ಬಹದೂರ್ ಮೆಹತಾಬ ಸಿಂಗರು ಈ ಗಲಾಟೆಯನ್ನು ಶಾಂತಪಡಿಸಲು ತಾನು ಇತರ ಅಕಾಲಿಗಳೊಡನೆ ಸಹಾಯಮಾಡಲು ಸಿದ್ಧವಿರುವುದಾಗಿ ಡಿಪ್ಯುಟಿ ಕಮಿಶನರರಿಗೆ ತಿಳಿಸಿದರಲ್ಲದೆ ಅಕಾಲಿಗಳ ಒಂದು ತಂಡದೊಡನೆ ಪಟ್ಟಣದಲ್ಲಿ ಗಸ್ತು ತಿರುಗಿದರು. ಎಲ್ಲಾ ಮುಸ್ಲಿಮ್ ಅಧ್ಯಕ್ಷರು [illegible] ಇವರಲ್ಲಿ ಕೆಲವರು ಸ್ವಲ್ಪ ಗಾಯವನ್ನು ಕೂಡ ಹೊಂದಿರುವರು. ಪಟ್ಟಣದಲ್ಲಿ ಜನರು ಅಧೈರ್ಯಪಡಬಾರದೆಂದು ಡಿಪ್ಯುಟಿ ಕಮಿಶನರು ಅಪ್ಪಣೆ ಕೊಟ್ಟರು. ಈ ಅಪ್ಪಣೆಯನ್ನು ಮೀರಿ ನಡೆಯುವವರನ್ನು ಸೆರೆ ಹಿಡಿಯಲಾಗುವುದೆಂದು ಎಚ್ಚರಿಸಿದರು. ಹಿಂದೂ ಮುಸಲ್ಮಾನರೊಳಗೆ ಉಂಟಾದ ವೈಮನಸ್ಸಿನಿಂದ ಉತ್ಪತ್ತಿಸಿದ ಈ ಗಲಾಟೆಯ ಪರಿಸ್ಥಿತಿಯನ್ನು ಪರಿಶೀಲಿಸಿ, ಇದರ ನಿವಾರಣೆಗೆ ಉಪಾಯವನ್ನು ಹುಡುಕಲು ಹಿಂದೂ ಮುಸಲ್ಮಾನ ಖಿಲಾಫತ್ ಮತ್ತು ಕೊಂಗ್ರೆಸ್ ಮುಖಂಡರ ಒಂದು ಸಭೆಯು ಶ್ರೀಯುತ ದಿವಾನ ರಾಮಲಾಲರ ಮನೆಯಲ್ಲಿ ಸೇರಿತು. ದೇಶಬಂಧು ದಾಸರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಈ ಸಭೆಯಲ್ಲಿ ಮೌಲಾನಾ ಅಬ್ದುಲ್ ಕಲಂ ಅಜದ್, ಹಕೀಮ್ ಅಜಮಲ್ ಖಾನ್, ಪಂಡಿತ ಮೋತಿಲಾಲ ನೆಹರು, ಶ್ರೀಮತಿ ಸರೋಜಿನಿ ನ್ಯಾಡೂ ಶ್ರೀಯುತ ರಾಜಾ ನರೇಂದ್ರನಾಥ, ಶ್ರೀಯುತ ಶಾಂತನಮ್ ಮೊದಲಾದ ಮುಖಂಡರು ಹಾಜರಿದ್ದರು. ಈ ಸಭೆಯ ಕಾರ್ಯಕ್ರಮಗಳು ಗೋಪ್ಯವಾಗಿ ನಡೆದವು. ಜಲಿಯನ್‌ವಾಲಾಬಾಗ ದಿನದ ಸ್ಮಾರಕಕ್ಕಾಗಿ ತಾರೀಕು ೧೩ರಲ್ಲಿ ಜರಗಲಿಕ್ಕಿರುವ ಮೀಟಿಂಗನ್ನು ಮುಂದರಿಸಿಟ್ಟಿದೆ.

ಹಿಂದೂ ಮುಸಲ್ಮಾನರಲ್ಲಿ ಐಕ್ಯವನ್ನು ಉಂಟುಮಾಡಲು ಅಕಾಲಿಗಳು ಬಹುಳವಾಗಿ ಪ್ರಯತ್ನಿಸುತ್ತಿದ್ದಾರೆ. ಈಗ ಗಲಾಟೆಯು ಶಾಂತವಾಗಿದೆ. ಒಟ್ಟು ೧೫೦ ಮಂದಿಗಳಿಗೆ ಗಾಯವಾಗಿದೆ ಎಂದು ತಿಳಿದುಬರುತ್ತದೆ. ಯಾರೂ ಹತರಾಗಲಿಲ್ಲ. ಈ ವರೆಗೆ ಒಬ್ಬ ಹಿಂದುವನ್ನೂ ಮತ್ತೊಬ್ಬ ಮುಹಮ್ಮದೀಯನನ್ನೂ ಮಾತ್ರ ಸೆರೆಹಿಡಿದಿರುವರು. ವ್ಯಾಪಾರಿಗಳು ಮೆಲ್ಲಮೆಲ್ಲನೆ ಅಂಗಡಿಗಳನ್ನು ತೆರಿಯುತ್ತಿರುವರು. ಅಕಾಲಿ ಮುಖಂಡರು ಕುದುರೆಗಳನ್ನೇರಿ ಪಟ್ಟಣದ ಮೂಲೆಮೂಲೆಗಳನ್ನು ಸಂದರ್ಶಿಸಿ ಜನರು ಜಟಾಪಟಿಯನ್ನು ಮಾಡದಂತೆ ಅವರಿಗೆ ಬೋಧಿಸುತ್ತಿದ್ದಾರೆ. ಖಲಸಾ ಕೋಲೇಜಿನ ಪ್ರಿನ್ಸಿಪಾಲರು ಕೋಲೇಜಿನ ಸುಮಾರು ೨೦ ಮಂದಿ ವಿದ್ಯಾರ್ಥಿಗಳನ್ನೂ ಕೋಲೇಜಿನ ಉಪಾಧ್ಯಾಯರನ್ನೂ ಸ್ವಯಂಸೇವಕರಾಗಿ ಕೆಲಸಮಾಡಲು ಕಳುಹಿಸಿದರು.

ಗಾಯಹೊಂದಿ ಆಸ್ಪತ್ರೆಯಲ್ಲಿರುವ ೧೪೮ ಮಂದಿಗಳಲ್ಲಿ ೯೪ ಮಂದಿಗಳು ಹಿಂದು; ೪೯ ಮಂದಿ ಮುಹಮ್ಮದೀಯರು; ಒಬ್ಬ ಪಾದ್ರಿಮಲ್ಲ. ಒಟ್ಟು ೧೪೮ ಮಂದಿಗಳಲ್ಲಿ ಒಬ್ಬಳು ಮಾತ್ರ ಮುಹಮ್ಮದೀಯ ಹೆಂಗಸಾಗಿರುವಳು.

ಹಿಂದೂ-ಮುಸಲ್ಮಾನರ ಕಲಹವನ್ನು ಇತ್ಯರ್ಥಪಡಿಸಲು ಒಂದು ಕಮ್ಮಿಟಿಯು ನೇಮಕವಾಗಿದೆ. ಈ ಕಮ್ಮಿಟಿಯ ಮೆಂಬರರ ಹೆಸರು:— ಶ್ರೀಯುತ ಸಿ. ಆರ್. ದಾಸ, ಪಂಡಿತಮೋತಿಲಾಲನೇಹರು, ಶ್ರೀಮತಿ ಸರೋಜಿನಿ ನ್ಯಾಡೂ, ಹಕೀಮ ಅಜಮಲ್‌ಖಾನ್, ಮೌಲ್ವಿ ಅಬ್ದುಲ್ ಕಲಂ ಅಜದ, ಗುಲಾಮ್ ಮೊಹಿದ್ದಿನ್ ಶೇಖ್ ಅಬ್ದುಲ್‌ಕಾದಿರ್ ಗುಲ್‌ಖಾನ್‌ರೈ ದುರ್ಗಾದಾಸ್, ಸರದಾರ್ ಕಾಬೂಲ್‌ಸಿಂಗ್, ಮತ್ತು ಜೋದಸಿಂಗ, ಮಿ| ಶಾಂತನಮ್, ಮಿ. ಅಬ್ದುಲ್ ಕಾದಿರ್, ರಾಜಾನರೇಂದ್ರನಾಥ, ಮಿ| ಮಿಹಾನ್ ಅಬ್ದುಲ್‌ಅಜಿದ್, ಮತ್ತು ಸರದಾರ ಮೆಹತಾಬ್‌ಸಿಂಗ್.

ಪತ್ರವ್ಯವಹಾರ.

ಜಿಲ್ಲಾ ಸೆಕೆಂಡರಿ ಎಜ್ಯುಕೇಶನಲ್ ಕೌನ್ಸಿಲ್.

ಈಗ ಎಲಿಮೆಂಟರಿ ಶಾಲೆಗಳ ಮೇಲ್ವಿಚಾರಣೆಯನ್ನು ನೋಡುವುದಕ್ಕೆ ಡಿಸ್ಟ್ರಿಕ್ಟ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲ್ ಇರುವ ಹಾಗೆಯೆ ಪ್ರತಿ ಒಂದು ಜಿಲ್ಲೆಯಲ್ಲಿರುವ ಸೆಕೆಂಡರಿ ಶಾಲೆಗಳಿಗೂ ಒಂದು ಕೌನ್ಸಿಲ್ ಪ್ರತಿ ಒಂದು ಜಿಲ್ಲೆಯಲ್ಲಿಯೂ ಸ್ಥಾಪಿಸಬೇಕೆಂದು ಒಂದು G. o. 487 ಗವರ್ನಮೆಂಟ ಹುಕ್ಕುಂ ಹೊರಬಿದ್ದಿದೆ. ಇದರ ಪ್ರಕಾರ ಇದೆ ಬರುವ ಮೇ ತಿಂಗಳಲ್ಲಿ ಜಿಲ್ಲಾ ಎಜ್ಯುಕೇಶನಲ್ ಆಫೀಸರರು ಓಟರರ ಒಂದು ಪಟ್ಟಿಯನ್ನು ತಯಾರಿಸುವರು. ಮೆಂಬರರಲ್ಲಿ ಎರಡು ಪಾಲುಗಳಿವೆ. ಒಂದು ಪಾಲು ಬೋರ್ಡ ಮತ್ತು ಮುನ್ಸಿಪಾಲಿಟಿಗಳಿಂದ. ಇದೊಂದು ಪಾಲು ಖಾಸಗಿ ಶಾಲೆಗಳಿಂದ ಟ್ರೈಂಡ್ ಆದ ಸೆಕೆಂಡರಿ ಶಾಲೆಯ ಪ್ರತಿಯೊಬ್ಬ ಉಪಾಧ್ಯಾಯನಿಗೂ, ಪಂಡಿತನಿಗೂ, ಜಿಮ್ನಾಸ್ಟಿಕ್, ಡ್ರೋಯಿಂಗ್ ಇತ್ಯಾದಿ ಇನ್ಸ್ಟ್ರಕ್ಟರರಿಗೂ ಒಂದೊಂದು ವೋಟು ಇದೆ. ಇದಕ್ಕೆ ಒಬ್ಬ ಪ್ರೆಸಿಡೆಂಟರು ಇರುವರು.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಡುವ ಈ ಕೌನ್ಸಿಲ್ ಅಧ್ಯಕ್ಷಸ್ಥಾನಕ್ಕೆ ಹೆಚ್ಚಿನ ಕೆಲಸದ ಗಲಾಟೆಗಳಲ್ಲದ ಪ್ರೆಸಿಡೆಂಟರೂ ಅಥವಾ ಅಧ್ಯಕ್ಷರೂ ಇಂಥವರನ್ನು ಆರಿಸದೆ ಬೇರೆ ಯಾರನ್ನಾದರೂ ಆರಿಸಿದರೆ ಬಹಳ ಉಪಕಾರವಾಗುತ್ತಿತ್ತು. ಯಾಕೆಂದರೆ ಈಗಿನ ಕೆಲವು ಅಧ್ಯಕ್ಷಸ್ಥಾನಗಳೂ ಇತರ ಕೆಲಸಗಳೂ ಇರುವವರು. ಇನ್ನೂ ಇಂಥಾ ಕೆಲಸಗಳನ್ನು ಮಾಡಲು ಶಕ್ತಿಸಾಲದು. ಈ ಜಿಲ್ಲೆಯಲ್ಲಿ ಬೇಕಾದಷ್ಟು ಬಿ. ಎ. ಬಿಯಲುಗಳೂ ಎಂ. ಎ. ಎಲ್. ಟಿಯಲುಗಳೂ ದೊಡ್ಡರುಗಳೂ ದೊಡ್ಡ ದೊಡ್ಡ ಜಮೀನುದಾರರೂ ಇರುವರು. ಇವರು ಕೆಲಸಗಳನ್ನು ನಿರ್ವಹಿಸಲಿಕ್ಕೆ ಅನುಭವ ಕಲಿಯುವುದು ಯಾವಾಗ? ಈಗ ಇರುವ ಕೆಲಸಗಳು ಬಹಳ ಹೆಚ್ಚಾಗಿ ಕೈಯಿಂದ ದಕ್ಕದು ಹಾಕಲಿಕ್ಕೆ ಸಮಯವಿಲ್ಲದ ದಕ್ಷತೆ ನಷ್ಟದಿಂದ ಸ್ಥಾನವನ್ನು ಒಪ್ಪುವ ಅಗತ್ಯ ಬೀಳುತ್ತದೆ. ಓಟುಕೊಡುವಾಗ ಎಲ್ಲಾ ಉಪಾಧ್ಯಾಯರೂ ಜೋಕೆ ಎಲ್ಲಾ ಸಂಗತಿಗಳನ್ನು ಆಲೋಚಿಸಿ ಓಟುಕೊಡುವುದು ಉತ್ತಮವಾಗಿದೆ.

ಉಪಾಧ್ಯಾಯ.

ನೋಟೀಸು

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. No. $\frac{66}{1923}$

1. ಕಾವೇರಿ ಬಿಕ್ಷ್ನಾ ಬಾಯಿ
2. ಜೊಲ್ಪಾಡಿ ಆನಂದ ಯಾನೆ ಸುಬ್ರಾಯ ಕಾಮತ್
3. ಜೊಲ್ಪಾಡಿ ಕೃಷ್ಣಕಾಮತ್ ಮೈನರ ಗಾರ್ಡಿಯಾನ ಅಕ್ಕ 2ನೇ ಅರ್ಜಿದಾರ

} ಅರ್ಜಿದಾರು.

ತಾ. ೧೯-೧-೧೯೨೩ರಲ್ಲಿ ಕಟಪಾಡಿಯಲ್ಲಿ ಮೃತಪಟ್ಟ ಕಾರ್ಕಳ ಕಸಬಾ ನಿವಾಸಿ ಜೋಲ್ಪಾಡಿ ರಾಮದಾಸ ಕಾಮತ್ರ ಸಾಲ ವಸೂಲಿ ಬಗ್ಗೆ ಅರ್ಜಿದಾರರು ಸರ್ಟಿಫಿಕೇಟು ಬಗ್ಗೆ ಅಪೇಕ್ಷಿಸಿದ್ದ ಮೇಲ್ಕಂಡ ಅರ್ಜಿಯು ತಾ. ೧೩-೬-೨೩ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆಕ್ಷೇಪ ಉಳ್ಳವರು ತಮ್ಮ ಆಕ್ಷೇಪಗಳನ್ನು ಹಾಜರುಮಾಡತಕ್ಕದ್ದು.

ಮಂಗಳೂರು. } B. Venkatarao Baliga
ತಾ. 17—4—23 } ಅರ್ಜಿದಾರರ ವಕೀಲ.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ನಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಚರಿತ್ರೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಧಾರ್ಮಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತ" "ಆತ್ಮಗೀತ" "ದೇವರೆಲ್ಲಿ" ಎಂಬ ಅಂಗಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ವಳ್ತಾ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ !!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಕೊಡ[illegible] ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ತಿನಿ, ಸ್ತ್ರೀಯರಂತೆ ಪುರುಷರಲ್ಲಿಯು ಬೇಧ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ [illegible] ಮೇಲನದಿಂದ ಸುಖವಾಗುವದೆಂಬುದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೆ.
ರಥಬೀದಿ, ಮಂಗಳೂರು

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs.	300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಡಲ್ಪಟ್ಟ ಮೂಲಧನವು ರೂ.	300,000—0—0
Reserve and other sinking Funds ,,	205,250—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು ,,	205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS

ಖಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಅಪೇಕ್ಷಿಸಲಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಕ್ಷೇಪಣೀಯವಾದ ವಸ್ತುಗಳಾವವೂ ಸೇರಿಸಿಲ್ಲವಾಗಿ ಹುಟ್ಟಿದ ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕಲಿತವಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮು, ಶೀತ, ಶೀತವಾತ, ವೃಕ್ಕಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ವೊರಿತ, ಜ್ವರ, ಜೀರ್ಣಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅಮೃತಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗುಮಾಸ್ತೆಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೭—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯಸಾರ ಸಚಿತ್ರ ರೂ. ೧—೪—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುಕ್ತಿನ ಸರ . .	0—12—0	ಶಂಕರರಾಮಾಯಣ ಹೊಸ ಮುದ್ರಣ .	5—0—0
ಸಂತಾಪಕ-ಕಾದಂಬರಿ	0—6—0	ಶಂಕರ ರಾಮಾಯಣದ ಕಥೆ ವಚನ .	0-12—0
ಚಂದ್ರಮತಿ ,,	0—8—0	S. S. L. C. Kannada Texts	
ರಾಜಪುತ್ರರಮಣಿಯರು	0—8—0	ಹರಿದಾಸಿ . . .	0—5—0
ಕೆಲವು ಸಣ್ಣ ಕಥೆಗಳು	1—0—0	ಸುಶೀಲೆ . . .	0—6—0
ರಾಜಯೋಗ . .	1—0—0	ಅಡವಿಯ ಹುಡುಗಿ.	0-12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಅತ್ತಾವರ ರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ,
ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಡಬ್ಬಿಯು 3೩ ಸಾಮಾನುಗಳ ಸಹ ಸೆಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ. 4—8—0, ದೊಡ್ಡದು 6—0—0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ ಮಡಿ, ಜರಿ, ಸಾಮಾನು, ಸೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಫಟಿಕ ಸ್ಫಟಿಕಮಣಿ, ರಂಗ, ಛಾತಿ ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಯಿ ಮೂಲಕ ಕಳುಹಿಸಲಾಗುವುದು. ಕ್ಯಾಟಲಾಗ್ ಉಚಿತ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
ಚೌಖಂಬಾ, ಕಾಶಿ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಹುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ. 1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪೆತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ವಿಶ್ವನಾಥ ಹೇರ್ ಆಯಿಲ್.

ಈ ತೈಲವನ್ನು ಆಯುರ್ವೇದ ಸಂಬಂಧವಾದ ಮೂಲಿಕೆಗಳ ಮುಖಾಂತರ ಪ್ರಸಿದ್ಧವಾದ ವೈದ್ಯರಿಂದ ತಯಾರಿಸಲ್ಪಟ್ಟಿದೆ. ಇದನ್ನು ತಲೆಗೆ ಹಚ್ಚಿಕೊಂಡರೆ ಎಂಟು ದಿವಸದ ವರೆಗೂ ಘಮಘಮಿಸುತ್ತಲೇ ಇರುತ್ತದೆ. ಈ ತೈಲವನ್ನು ಉಪಯೋಗಿಸುವುದರಿಂದ ಕೂದಲು ಹೆಚ್ಚಾಗಿಯೂ, ನೀಳವಾಗಿಯೂ ಬೆಳೆಯುತ್ತೆ. ಉದುರಿಹೋಗದ ಹಾಗೆ ಬೇರುಗಳಿಗೆ ಶಕ್ತಿಯನ್ನು ಉಂಟುಮಾಡುತ್ತೆ. ಅದರ ಬಣ್ಣವನ್ನು ಹೆಚ್ಚಿಸುತ್ತದೆ. ಇತರ ತೈಲಗಳ ಹಾಗೆ ಕಣ್ಣುರಿ, ಕೂದಲು ಉದುರಿ ಹೋಗುವುದು ಮುಂತಾದ ದುರ್ಗುಣಗಳಿಲ್ಲದೆ ಮೆದಳಿಗೆ ತಂಪನ್ನೂ, ಮನಸ್ಸಿಗೆ ಉಲ್ಲಾಸವನ್ನೂ ಉಂಟುಮಾಡುತ್ತದೆ.

ಬೆಲೆ ಸೀಸೆ ೧ಕ್ಕೆ ರೂ. ೧—೦—೦.

ಒಟ್ಟಿಗೆ ೩ ಸೀಸೆ ತರಸಿಕೊಂಡರೆ ಅಂಚೆವೆಚ್ಚವಿಲ್ಲದೆ ಕಳುಹಿಸಿಕೊಡುತ್ತೇವೆ.

ವಿಳಾಸ:— ರಿಪನ್ ವಾಚ್ ಕಂಪೆನಿ,
22 ಕೃಷ್ಣಪ್ಪ ಮೊದಲಿ ಬೀದಿ, ಟ್ರಿಪ್ಲಿಕೇನ್, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶಿವ್ಯಾಪಾರಿ
ರಥಬೀದಿ, ಮಂಗಳೂರು.

* * *

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ ರೂ. 3—4—0
ಕೇ. 1 („ 24) „ „ 2—0—0.

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು
5 ರಾತ್ತಲ್ ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ
ರಾತ್ತಲಿಗೆ ದರ ರೂ. 3-0-0.
ಸ್ವಂತ ಖರ್ಚಿಗೆ ತರಿಸುವವರು ಪೋಸ್ಟ್, ಪೇಕಿಂಗ್ ಚಾರ್ಜು ತೆರಬೇಕಾಗುವುದು

ನಶ್ಯ ಒಂದೇ ತರದ್ದು.

ಎಲೆಕ್ಟ್ರಿಕ್ ದೀಪ



ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಯೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಟೋನಿಯಾ ಅಂಡ್ ಕೊ
ಪೋಸ್ಟುಬಾಕ್ಸು ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗ್ರಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯವರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು — — ಟೈಪ್ ಫೌಂಡ್ರಿ

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು, ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯುನಾಮಲ್ಲ ಬಟ್ಟಲ್ ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಬ್ಬಿ, ಚಾಲಿ ಕವರು ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷಿರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

* * *

ಆರ್. ಮಾರ್ಟಿನ್ನರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು-ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಗಳು ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳಿಗೂ ರಾಜೆಯಾಗಿಯೂ, [illegible] ಬಲಕೊಟ್ಟು ನೋವಿನಿಂದ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಕೀವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲಿಸಿ, ಮೂತ್ರವು [illegible] ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್ ಮುಂಬಯಿ.
R. D. Kately & Co.
No. D. Frere Road,
Near Wright & Co. Fort Bombay.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498.

SWADESHABHIMANI MANGALORE.

ಸ್ವದೇಶಾಭಿಮಾನಿ

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥

ದೊರೆಯಲನುಪಮರತ್ನಗಳು ಸಹ । ಗರವ ಮಥಿಸಲು ಸುರರಾಗುವಂ ।
ತರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಪಡೆದು ತೃಪ್ತರ ತೆರದಿ ನಿಂತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥೧॥

ಪುಸ್ತಕ ೧೭. ಮಂಗಳೂರು, ತಾರೀಕು ೨೬ನೇ ಶುಕ್ರವಾರ ಏಪ್ರೀಲ್ ೧೯೨೯. ಸಂಚಿಕೆ ೧೭.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲ್ಪಟ್ಟ [illegible] ಮೂಲಧನ	2,00000—0—0
ಚಂದಾ ಹಾಕಿ ಎತ್ತಿದ ಮೂಲಧನ	1,64,400—0—0
ಮೌಲ್ಯ ತತ್ತ್ವ ಮೂಲಧನ	1,04,388—9—11
ಠೇವಣಾತಿಗಳು	3,49,151—12—8
ಇನ್ವೆಸ್ಟ್‌ಮೆಂಟು (1927ನೇ ಇಸವಿಯ) ಸೇಕಡಾ ೬ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	5,12,162—13—2
ರಿಜರ್ವ ಮತ್ತು ಇತರ ಫಂಡುಗಳು	29,149—4—2

ಕಳೆದ 2 ವರುಷಗಳಲ್ಲಿ ಪಾಲುದ್ಯಾರರಿಗೆ ಸಾಲಿಯಾನ್ ಸೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಳ್ಳು [illegible] ಸೇಕಡಾ 7ರಿಂದ 7½ ಬಡ್ಡಿಯಲ್ಲಿ [illegible] ಠೇವಣಾತಿಗಳನ್ನೂ 15 ದಿನಗಳ ನೋಟೀಸು ಮುಖಾಂತರ ಸೇಕಡಾ [illegible] ವ್ಯಾಪೆ ಠೇವಣಾತಿಗಳನ್ನು ಬೇಕೆಂದಾಗ್ಗೆ ವಾಪಾಸು ತಕ್ಕೊಳ್ಳುವಂಥಾ ಸೇಕಡಾ 3½ರಂತೆ ಬಡ್ಡಿ ನಡೆಯುವ ಚಾಲ್ತಿ ಠೇವಣಾತಿಗಳನ್ನೂ ಸೇಕಡಾ 4½ ಬಡ್ಡಿ ನಡೆಯುವ ಸೇವಿಂಗ್ಸ ಬ್ಯಾಂಕು ಠೇವಣಾತಿಗಳನ್ನೂ, ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನೂ [illegible] ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದಲ್ಲಿ ತಿಳಿಯುವದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ನಿಮ್ಮ ಜಮೀನನ್ನು ಸಾರವತ್ತಾಗಿ ಇರಿಸಿ ಬೆಳೆ ಸಮೃದ್ಧಿಯನ್ನು ಪಡೆಯಬೇಕಾದರೆ ಊರ ಗೊಬ್ಬರಗಳ ಜತೆಯಲ್ಲಿ ಸ್ವಲ್ಪ ನೈಟ್ರೇಟ್ ಒಫ್ ಸೋಡಾ ಗೊಬ್ಬರವನ್ನು ಉಪಯೋಗಿಸಿರಿ. ಈ ಸವುಳುಪ್ಪು ಗೊಬ್ಬರವು ಎಲ್ಲಾ ಧಾನ್ಯ ಮುಂತಾದ ಪೈರುಗಳಿಗೂ ಕಬ್ಬಿನ ಬೆಳೆಗೂ ಮತ್ತು ತೆಂಗು ಮೊದಲಾದ ಫಲವೃಕ್ಷಗಳಿಗೂ ಆಗತ್ಯವಿರುವ ನೈಟ್ರೊಜನ್ ವಾಯುವನ್ನು ಚುರುಕಾಗಿ ಒದಗಿಸುವುದು.

ಪರೀಕ್ಷಾರ್ಥವಾಗಿ ಉಪಯೋಗಿಸಬೇಕೆಂದಿದ್ದವರು 2 ರಾತ್ತಲ ಸವುಳುಪ್ಪಿನ ಸೇಂಪಲ್ ಡಬ್ಬಿಯನ್ನು ೦—೮—೦ ಯಂತೆಯೂ ಬಂಗಾಲಿ ಮಣ ಗಳಿಕ್ಕೆ ರೂ. ೯—೦—೦ಯಂತೆಯೂ ಪಡೆಯಬಹುದು.

ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರಣೆ" ಎಂಬ ಸಚಿತ್ರ ಪಡಿಯನ್ನು ನಮ್ಮಿಂದ ಉಚಿತವಾಗಿ ಪಡೆಯಬಹುದು.

THE DIRECTOR,
CHILEAN NITRATE COMMITTEE,
6, *Mission Row*, CALCUTTA.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾಶಾಖಾಪ್ರತಿ ಅಕ್ಷರವಿದ್ದು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತವಿವೇಕ ಕ್ರಯ	೦—೧೦—೦
ಶೀತಭಂಗ „	೦—೧೩—೦
ಸಂಕ್ಷೇಪಗೀತೆ „	೦—೧೦—೦

ಲಕ್ಷ್ಮೀನಾರಾಯಣ ಪುರಾಣಿಕರಿಂದ ರಚಿತವಾದ ಸ್ವರಾಜ್ಯ ಭಕ್ತೋಪಾಖ್ಯಾನ ಕ್ರಯಂ —೨—೦

ಕರ್ನಾಟಕ ಕವಿ ಚರಿತೆ, ಮಹಾಟಿ ಅವನತಿ, ಶ್ರೀನಿವಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ ಸತಿ ಸಾಹಸ, ಅಂಗದನ [illegible], ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, [illegible], ಭೂಗೋಳ, [illegible] ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳಿಕರಿಗೆ ರೂ ೨-೦-೦. ವಿ. ಪಿ. ಖರ್ಚು ಕೂಡಿ ರೂ. ೩-೦-೦ ಪ್ರಕಟಣೆಗಳ ದರಗಳ ಪಟ್ಟಿ ಪತ್ರದ ವ್ಯವಸ್ಥಾಪಕರಿಗೆ ಬರಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, [illegible], ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, [illegible] ಪುಸ್ತಕಗಳು, ನೋಟು ಬುಕ್ಕುಗಳು, [illegible].

ಫೌಂಟನ್ ಪೆನ್ನುಗಳು, [illegible] ಇತರ ವಿಧವಾದ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕೀಲರು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಲಂಬಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ಲೆಕ್ಕದ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ದೇಶ್ಯ ಔಷಧಿಗಳು—ರೋಗಿಗಳಿಗೂ, ಬಾಲಕರಿಗೂ ಬೇಕಾಗುವ [illegible] ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಗೆಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, [illegible] ಮುಲಾಮು, ನಮ್ಮ ಔಷಧಿ ಇಲಾಖೆಯು ಕಳೆದ [illegible] ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ಹಲತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಚ್ಚುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ— ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಕಕಷಾಯ

U. B. DUTT & Co. CALCUTTA

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ [illegible]

[illegible]

ಕ್ರಯ ರೂ. 4—4—0.

[illegible]

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಈ ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ಡಿ., (ಬ್ರಾಡ್ವೇ, ಮದ್ರಾಸ್.

Local Agents: **Raphael & Co.**

Brito Buildings,

Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ತರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,

Sri Lakshmi Mills, KASARGOD, S. K.

GUN RUST-PROOF OUR SPECIALITY

The

Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ್ ಎಮ್ಯುನಿಶನ್ ಮಾರ್ಟ್

ಹಂಪನಕಟ್ಟಾ, ಮಂಗಳೂರು ದ. ಕ.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವುವು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಬೆಂಡೋಲೆಯು ಚಿನ್ನದ ಬಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು. ೭ ಬಿಳೀ ಕಲ್ಲಿನ ಬೆಂಡೋಲೆ ಕ್ರಯ ಜೊತೆ ರೂ. ೩. ೭ ಕೆಂಪು ಹರಳಿನ ಬೆಂಡೋಲೆ ಜೊತೆ ರೂ. ೩—೮—೦.

ಮಹರಾಟ ಟ್ರೇಡಿಂಗ್ ಕಂಪೆನಿ,

16, ತಿರುಪಳ್ಳಿಬೀದಿ, ಜಿ. ಟಿ. ಮದರಾಸ್.

ಮಾನವ ಜಾತಿಯ ಮರ್ಮಗಳನ್ನು ತಿಳಿಸುವ

ಮರ್ಮ ಶಾಸ್ತ್ರ.

ಇದು ಚಿತ್ರಪಟಗಳ ಸಹಿತ ಅಂದವಾದ ಗ್ಲೇಜು ಕಾಗದದಲ್ಲಿ ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿದೆ. ಇದರಲ್ಲಿ ಸ್ತ್ರೀಪುರುಷರುಗಳಿಗೆ ಬೇಕಾದ ಅನೇಕ ರಹಸ್ಯಗಳು ತುಂಬಿರುವವು.

ಕ್ರಯ ಪುಸ್ತಕ ೧ಕ್ಕೆ ೦—೧೨—೦.

ಜನರಲ್ ಮೇಲ್ ಆರ್ಡರ್ ಕಂಪೆನಿ,

ಪೋಸ್ಟು ಬಾಕ್ಸ್ ನಂ. 232. ಮದರಾಸ್.

ಓಟೋಲಿಲ್ಲಾ ಎಂಬ ಸೆಂಟ್.

ಇದನ್ನು ಒಂದು ಒಳ್ಳೇ ವಸ್ತ್ರಕ್ಕೆ ಸೋಕಿಸಿದರೆ 6-7 ದಿನಗಳ ವರೆಗೂ ಸುವಾಸನೆಯಾಗಿರುತ್ತದೆ. ಇತರ ಸೆಂಟುಗಳ ಹಾಗೆ ಬಟ್ಟೆಗೆ ಕಲೆಯನ್ನು ಉಂಟುಮಾಡುವುದಿಲ್ಲ.

ಬೆಲೆ 1 ಟಿನ್ ಬಾಟ್ಲಿಗೆ	ರೂ.	1—4—0.
„ ½ „	„ ರೂ.	0—10—0.
ಓಟೋಲಿಲ್ಲ ಸೆಂಟು ಕಾರ್ಡು ಡಜ	1ಕ್ಕೆ ರೂ.	0—12—0.

ನಮ್ಮಲ್ಲಿ ಸುಲಭ ಕ್ರಯಕ್ಕೆ ಸಿಕ್ಕುವ ಇತರ ಸಾಮಾನುಗಳು:—

ಕ್ರಿಟಿಷ್ ಮೇಡ್‌ರೇಜರ್	1ಕ್ಕೆ	2—0—0
ರೋಲ್ಡುಗೋಲ್ಡು ರಿಸ್ಟುವಾಚು	1ಕ್ಕೆ	8—8—0
ನಿಕಲ್ ರಿಸ್ಟು ವಾಚು	1ಕ್ಕೆ	6—8—0
ಮಹಾತ್ಮಾ ಗಾಂಧಿಯವರ ಫೋಟೋ ಉಂಗರ	1ಕ್ಕೆ	1—8—0

ವಿಳಾಸ:— ರಿಪನ್ ವಾಚ್ ಕಂಪೆನಿ,

1/16ನೇ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ.

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜೆಂಟರಾಗಬೇಕೆಂದಿರುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜೆಂಟ್:—

ಜಿ. ಎಸ್. ಸೋಜ ಮತ್ತು ಕಂಪೆನಿ,

ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs.	150
¼ Page Rs. 80, ½ Page	„	50
2 in. Single Column	„	20
1 in. Single Column	„	15
Name alone in Bold Types	„	5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.

Telegrams: "KETHAKI" Phone: 540.

FIRST RAFFLE.

IN AID OF

National Girls' School,

MANGALORE.

Please note:—

Dates of drawing and closing postponed to 15—7—'23 and 31—7—'23 respectively.

(By order of Executive Committee)

Wanted Agents'. *Apply to:—*

HON. SECRETARY,

RAFFLE OFFICE,

NATIONAL GIRLS' SCHOOL.

Kodialbail, S. Kanara.

'ಕವಿ'ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1918ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತಲ್ 1ರ ರೂ. 2—12—0.

ಸ್ಪೆಶಲ್ ರಾತ್ತಲ್ 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,

ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0

ಫಿಡಲ್ 1ಕ್ಕೆ „ 15—0—0

ಬೇಕಾದವರು 6 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,

ಪೋಸ್ಟು ಬೋಕ್ಸ್ ನಂಬ್ರ 65,

ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೊಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯವೆಲ್ಲಾ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,

ಪೋಸ್ಟು ಬೋಕ್ಸ್, ನಂಬ್ರ 65, ಮದರಾಸು.

ಶಾಲಿವಾಹನಶಕ ೧೮೪೫ನೆಯ ರುಧಿರೋದ್ಗಾರಿ ಸಂವತ್ಸರದ ವೈಶಾಖ ಶು॥ ೧೩ ಶನಿವಾರದಿಂದ ರುಧಿರೋದ್ಗಾರಿ ಸಂವತ್ಸರದ ವೈಶಾಖ ಬ॥೪ ಶುಕ್ರವಾರದ ವರೆಗಿನ ಪಂಚಾಂಗ

(೧೯೨೩ನೆಯ ಮೇಷ ಪಗ್ಗು)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
28	ಶನಿ	೧೩	೧೩.೦	ಉತ್ತರಾ	೧೮.೪೪	೧೫	6.13	6.43
29	ರವಿ	೧೪	೫.೫೮	ಹಸ್ತಾ	೧೪.೪೬	೧೬	6.13	6.43
30	ಸೋಮ	೧೫	೫೪.೦	ಚಿತ್ರಾ	೧೦.೪೫	೧೭	6.12	6.43
1	ಕುಜ	೧	೪೮.೧೫	ಸ್ವಾತಿ	೬.೪೬	೧೮	6.12	6.44
2	ಬುಧ	೨	೪೨.೫೮	ವಿಶಾಖಾ	೩.೨	೧೯	6.12	6.44
3	ಗುರು	೩	೩೮.೩೨	ಜ್ಯೇಷ್ಠಾ	೫೭.೧೬	೨೦	6.11	6.44
4	ಶುಕ್ರ	೪	೩೪.೩೦	ಮೂಲಾ	೫೫.೧೪	೨೧	6.11	6.44

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಎಪ್ರಿಲ್)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿವಸ ಮಳೆ	ಜುಮಲಾ ಮಳೆ.
19	93—5	79—7	—	—
20	92—3	80—9	—	—
21	93—3	80—2	—	—
22	93—4	82—4	—	—
23	92—5	81—8	—	—
24	94—3	81—2	—	—
25	94—4	81—4	—	—

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಅ.	ವರೆಗೆ ರೂ. ಅ.
ಹೊಸ ಮಸ್ರೂತಿ ಅಕ್ಕಿಮುಡಿ ೧ಕ್ಕೆ	...	7- 8	8— 2
ಹೊಸ ಗುಡ್ಡೆ,	...	6-10	7— 6
ಹೊಸ ರಾಶಿ		6- 4	6— 8
ಅಮ್ಲರ್ ಬೆಳ್ತಿಗೆ „	...	7-14	8—10
ಗುಡ್ಡೆ ಬೆಳ್ತಿಗೆ „	...	7- 6	7—12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	12- 8	13— 0
ಗೋದಿ ಗೋಣಿ ೧ಕ್ಕೆ	...	15- 8	18— 0
ಹುರುಳಿ ಗೋಣಿ ೧ಕ್ಕೆ	...	8-4	9—12
ಕಡಲೆ ಗೋಣಿ ೧ಕ್ಕೆ	...	11-12	12— 0
ತೊಗರಿ ಗೋಣಿ ೧ಕ್ಕೆ	...	11- 8	—
ತೊಗರಿಬೇಳೆ ಗೋಣಿ ೧ಕ್ಕೆ	...	14- 0	23— 0
ಉದ್ದು ಗೋಣಿ ೧ಕ್ಕೆ	...	13- 0	—
ಹೆಸರು ಗೋಣಿ ೧ಕ್ಕೆ	...	—	12— 0
ಊರು ಬೆಲ್ಲ ಖಂಡಿ ೧ಕ್ಕೆ	...	40- 0	45— 0
ಉಪ್ಪು ಗೋಣಿ ೧ಕ್ಕೆ	...	7- 4	7—10
ಕೊಬ್ರಿ ಖಂಡಿ ೧ಕ್ಕೆ	...	105- 0	115— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	39- 0	40— 0
ಎಳ್ಳಿಂಡಿ ಖಂಡಿ ೧ಕ್ಕೆ	...	45- 0	52— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	8- 2	9— 0
ಎಳ್ಳೆಣ್ಣೆ ಮುಡಿ ೧ಕ್ಕೆ	...	6-12	9— 0
ಹರಳೆಣ್ಣೆ ಕಟ್ಟಿಗೆ ೧ಕ್ಕೆ	...	9- 0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	7-12	8— 0
ಊರ ಮುಡಿಸಿದ ಕಾಯಿ ಮುಡಿ ೧ಕ್ಕೆ	...	7- 8	8— 8
ಸಾಸಿವೆ ಮುಡಿ ೧ಕ್ಕೆ	...	8- 8	9— 0
ಕೊತ್ತಂಬರಿ ಮುಡಿ ೧ಕ್ಕೆ	...	4- 0	4— 8
ಕಾಫಿ ಖಂಡಿ ೧ಕ್ಕೆ	...	266- 0	275— 0
ಮೆಣಸು ಅಡಿಕೆ ಖಂಡಿ ೧ಕ್ಕೆ ಹಳ್ಳೆ	...	200- 0	295— 0
ಮೆಣಸು New, ಹೊಸ್ತು	...	165- 0	175— 0
ಅರಸಿನ ಖಂಡಿ ೧ಕ್ಕೆ	...	115- 0	120— 0
ಚಾಕ್ಕೆ ಮುಡಿ ೧ಕ್ಕೆ	...	60- 0	70— 0
ಗೇರುಬೀಜ ಮುಡಿ ೧ಕ್ಕೆ	...	1-14	3— 0
ಕಬ್ಬಿಣ ಖಂಡಿ ೧ಕ್ಕೆ	...	50- 0	65— 0
ಹುಣಸೆ ಹಣ್ಣು ಮುಡಿ ೧ಕ್ಕೆ	...	20-12	23— 0
ತಂಬ್ರ ಪಾತ್ರೆಗಳು ಮುಡಿ ೧ಕ್ಕೆ	...	32- 0	—
ಹಳೆ ಬೆಳ್ಳಿ ಸೇರು ೧ಕ್ಕೆ	...	22- 8	—
ಚಿನ್ನ ಪವನು ೧ಕ್ಕೆ	...	20- 0	21—

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 3 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಟವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನ ಎಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,

ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟ ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಆವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.

ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

AMRUTHINE.

An ideal beverage. The best Substitute for Coffee, Tea, and Cocoa.

ಶಕ್ತಿವರ್ಧಕ! ಅಮೃತೈನ್. ಆರೋಗ್ಯದಾಯಕ!

ಕಾಫಿ, ಟೀ, ಕೊಕೊಗಳಿಗೆ ಬದಲಾಗಿ ಬಾಲವೃದ್ಧರೂ ಸೇವಿಸಬಹುದಾದ "ಅಮೃತೈನ್" ಎಂಬ ಶ್ರೇಷ್ಠ ವರ್ಗದ ಚೂರ್ಣವು.

ಇದು ಪರಿಶುದ್ಧವೂ, ಚೈತನ್ಯವರ್ಧಕವೂ ಆದುದು. ಈ ಚೂರ್ಣವು ರಕ್ತವನ್ನು ಶುದ್ಧಿಮಾಡಿ, ಶಕ್ತಿಯನ್ನೂ ಉತ್ಸಾಹವನ್ನೂ ಹೆಚ್ಚಿಸಿ, ಶರೀರವನ್ನು ಆರೋಗ್ಯ ರೀತಿಯಲ್ಲಿಡುವುದಲ್ಲದೆ, ಬಹುಮೂತ್ರ, ಮಲಬದ್ಧತೆ ಮತ್ತು ಮೂಲವ್ಯಾಧಿ ಇವುಗಳನ್ನು ಶೀಘ್ರದಲ್ಲೇ ಗುಣಪಡಿಸುವ ಪಾನವಾಗಿದೆ. ಒಂದು ವಾರ ಉಪಯೋಗಿಸುವುದರಲ್ಲಿ ಇದರ ಗುಣಗಳು ವ್ಯಕ್ತವಾಗುವುವು.

6. ಔನ್ಸ್ ಟಿನ್. (120 ಬಟ್ಟಲುಗಳಿಗೆ ಸಾಕಾಗುವಷ್ಟು ಚೂರ್ಣ.) ರೂ. 0-10-6.

ಔನ್ಸು ಟಿನ್. (40 „ „) „ 0—4—0.

1. ತೊಲ ಪಾಕೆಟು. (8 ಬಟ್ಟಲುಗಳಿಗೆ) „ 0—0—9.

ಪ್ಯಾಕಿಂಗ್ ಮತ್ತು ಪಾರ್ಸೆಲು ಖರ್ಚು ಪ್ರತ್ಯೇಕ.

ವ್ಯಾಪಾರಿಗಳಿಗೆ ಕಮಿಷನ್ ಕೊಡಲ್ಪಡುತ್ತೆ.

ಬೇಕು! ಪ್ರತಿ ಟೌನುಗಳಲ್ಲೂ ಏಜಂಟರು ಬೇಕು!

ವಿಳಾಸ:— ಮದ್ರಾಸ್ ಮೈಸೂರು ಟ್ರೇಡಿಂಗ್ ಕಂಪೆನಿ, ಮೈಸೂರು.

ಮಂಗಳೂರ ಏಜಂಟರು:—

ದಿ. ರಾಯಲ್ ಜನರಲ್ ಸಪ್ಲಯಿಂಗ್ ಮಾರ್ಟ್.,

ರಥಬೀದಿ, ಮಂಗಳೂರು.

ರೇಶ್ಮೆ ವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹೊಸಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ ಮೊಳ ಅಗಲವಿರುವದು. ಮೇಲೆ ಹೊದೆಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಬಾಯುವಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೬ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1	ರೂ.	6—8—0
„ 2	„	7—8—0

ವಿಳಾಸ:—ಎಸ್. ಆರ್. ಕೃಷ್ಣ ಎಂಡು ಕೊ,

1. ತಂಬುನಾಯಕನ ಬೀದಿ, ಮದರಾಸು.

NOTICE.

The Samyukta Gowda Saraswat Sabha, Madras will grant a number of scholarships to the total value of Rs. 1000 during the academic year 1923-1924.

The scholarships are tenable for 10 months and will be granted to men or women of the community for prosecuting studies in the lower secondary and high schools, in Arts colleges in the Medical & Engineering colleges and in the case of women to undergo training as nurses or teachers.

Applications with testimonials of conduct, poverty and qualification should reach the Hon. Secretary, 25 Harris Road, Mount Road Post, Madras, not later than the 15th June next.

The scholarships are repayable with 4% interest.

25 Harris Road,
Mount Road P. O. Madras,
18th April 1923.

M. Keshava Pai,
Hon. Secretary.

ಎಲ್ಲಾ ನಮೂನೆಯ ಕಾಗದಗಳು ಮತ್ತು ಛಾಪಾ ಸಾಹಿತ್ಯಗಳು.

ರಫ್‌ನ್ಯೂಸ್ ಮತ್ತು ಗ್ಲೇಜು ಪ್ರಿಂಟಿಂಗ್ ಕಾಗದ, ಲೆಟರ್ ಪೇಪರುಗಳು, ಕವರ್ ಪೇಪರುಗಳು, ಡ್ರೋಯಿಂಗ್ ಬಿಡಿಸಲು ಮತ್ತು ವರ್ಗ ಊಳಿಗಗಳಿಗೆ ಬೇಕಾದ ಅತ್ಯುತ್ತಮವಾದ ಕಾಗದ, ಬ್ಯಾಂಕ್ ಪೋಸ್ಟ್, ಬ್ರವುನ್‌ಪೇಪರ್, ಬಿಳೀ ಮತ್ತು ಇತರ ಬಣ್ಣಗಳ ಪಲ್ಪಬೋರ್ಡು (ರಟ್ಟು) ಸ್ಟ್ರೋಬೋರ್ಡು ಇತ್ಯಾದಿ, ಇತ್ಯಾದಿ.

ಫೂಲ್ಸ್‌ಕೇಪ್ ಕಾಗದ.

ಕ್ರೀಮ್ ಲೇಯಿಡ್, ಸಿಂಗಲ್ ಮತ್ತು ಡಬ್ಬಲ್.

ಪ್ರಿಂಟಿಂಗ್ ಶಾಯಿ, ಪ್ರಿಂಟಿಂಗ್ ರೋಲುಗಳನ್ನು ತಯಾರಿಸಲು ಆವಶ್ಯವಿರುವ ಸಾಮಾನು, ಗ್ಲೂ (ವಜ್ರಸರೆ) ಪ್ರಿಂಟಿಂಗ್ ಅಕ್ಷರಗಳನ್ನು ತಯಾರಿಸುವ ಟ್ರಾಪ್ ಮೆಟಲು, ಬ್ರಾಸುಗಳು, ಲೆಡ್ಡುಗಳು, ಹಿತ್ತಾಳೆ ರೂಲುಗಳು, ಬಗೆಬಗೆ ಮತ್ತು ವಕ್ರರವರ ಸ್ಟಿಕ್ಕುಗಳು, ಬೈಂಡಿಂಗ್ ಇಮಿಟೇಶನ್ ಹಾಗು ಶಾಲಾ ವಸ್ತ್ರ, ಮೇಜುಗಳನ್ನು ಕಟ್ಟುವ ನೂಲು ವಗೈರೆ.

ಇವುಗಳೆಲ್ಲಾ ರಖಂ ಆಗಿ ಬೆಲೆಗೆ ದೊರೆಯುತ್ತವೆ.

ವಿಶೇಷ ಮಾಹಿತಿಯನ್ನು ಕೆಳಗಿನ ವಿಳಾಸದಿಂದ ತರಿಸಿಕೊಳ್ಳಬಹುದು.

ಮೆಸ್ಸರ್ಸ್ ಎ. ಆರ್. ಕುದ್ವಾಲ್ ಎಂಡ್ ಕೋ.

ಹೊನಾಕ ಬಿಲ್ಡ್, ಮುಂಬಯಿ. ಬಂದರ್ ಬ್ರಿ, ಮಂಗಳೂರು.

FROM THE ILLUSTRATED TIMES OF INDIA DATED 7TH MARCH 1923.

ಮಂಗಳೂರ ಪಟ್ಟಣದಲ್ಲಿ ಮಿ॥ ಫಿಲಿಕ್ಸ್ ಅಲ್ಬುಕರ್ಕರಿಂದ ಗುಂಡುಹೊಡೆಯಲ್ಪಟ್ಟ ಎರಡನೆಯ ಮತ್ತು ಮೂರನೆಯ ಹುಲಿಗಳು.

ದಾವುದರ ಪೇಟೆಂಟ್ ಅಭ್ರಕದ ಸ್ವದೇಶಿ ಚಿಮಿಣಿ ಬುರುಡೆಗಳು

ಗಾಜು ಬುರುಡೆಗಾಗಿಯೇ ವರುಷಂಪ್ರತಿ ಎಷ್ಟು ಹಣವು ದುರ್ವ್ಯಯವಾಗುತ್ತಿದೆ ಎಂಬುದು ಸರ್ವರಿಗೂ ಅನುಭವವಾಗಿದೆ. ಹೀಗಿರುತ್ತ ಹೆಸರುಮಾತ್ರಕ್ಕೆ ಬುರುಡೆ ಎನ್ನಿಸಿಕೊಳ್ಳುವ ವಸ್ತುವನ್ನು ತಯಾರಿಸುವುದಕ್ಕಿಂತ ಜನರಿಗೆ ಹೆಚ್ಚು ಕಾಲಕ್ಕೆ ಉಪಯೋಗಕ್ಕೆ ಬರುವ ವಸ್ತುವೇ ಅಗತ್ಯದ್ದೆಂದು ಅನೇಕ ಪ್ರಯೋಗಗಳಿಂದ ಕಂಡುಹಿಡಿದಿದ್ದೇವೆ. ಗಾಜು ಬುರುಡೆಗಳು ಪೆಡಸಾಗಿದ್ದು, ದೀಪದ ಪ್ರಕಾಶದ ಉಷ್ಣತೆಯಿಂದ ಒಡೆಯುತ್ತವೆ. ನೀರಿನ ಅಥವಾ ತಂಪು ಗಾಳಿಯ ಸ್ಪರ್ಶವಾಗುತ್ತಲೇ ಪಟಪಟ ತುಂಡು ತುಂಡಾಗುತ್ತವೆ. ಜಪಾನ ಮ್ಯಾಲುಗಳಲ್ಲಿ ಈ ಗುಣವು ಸ್ಪಷ್ಟವಾಗಿ ಕಾಣುತ್ತದೆ. ಒಂದು ದೀಪಕ್ಕೆ ಬೇಕಾಗುವ ಬುರುಡೆಗಾಗಿ ವರುಷಕ್ಕೆ ೫೦-೬೦ ರೂಪಾಯಿ ಕ್ರಯವಾಗುತ್ತದೆ. ಇದಕ್ಕೆ ಪ್ರತಿಯಾಗಿ ಅಭ್ರಕದ (ಬಿಂಗದ) ಬುರುಡೆಗಳು ತಯಾರಾಗಿವೆ. ಬಿಂಗು ಪಾರದರ್ಶಕ ಪದಾರ್ಥವಾಗಿದ್ದುದರಿಂದ ಸೀಮೆಯ ಎಣ್ಣೆಯಿಂದ ಉರಿಸುವ ದೀಪಗಳಿಗೆ ಉಪಯೋಗಿಸಲು ಯೋಗ್ಯವಾಗಿ ಕಂಡುಬಂದಿದೆ. ಇವು ತುಂಡಾಗುವುದಿಲ್ಲ; ನೀರಿನ ಮತ್ತು ತಂಪುಗಾಳಿಯ ಸ್ಪರ್ಶವಾಗಿದೊಡನೆ ಒಡೆಯುವುದಿಲ್ಲ. ಹೆಚ್ಚಿನ ಪ್ರಕಾಶವನ್ನು ಕೊಡುತ್ತವೆ. ಕಣ್ಣಿಗೆ ತಂಪು. ಈ ಬುರುಡೆಗಳನ್ನು ಉಪಯೋಗಿಸುವುದರಿಂದ ವರ್ಷ ಒಂದಕ್ಕೆ ರೂ. ೨ ಮಾತ್ರ ಖರ್ಚು ಆಗುವದು. ಈ ಬುರುಡೆಗಳಿಗೆ ಕೆಳಗೆ ಹೆಸರು ಕಾಣಿಸಿದವರು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಾಮುಖ್ಯ ಏಜಂಟರಾಗಿರುತ್ತಾರೆ.

ಡಿಟ್‌ಮಾರ್ ಲೇಂಪು, ಜಪಾನ್ ಲೇಂಪು, ತೂಗಾಡಿಸುವ ಲೇಂಪು, ಟೇಬಲ್ ಲೇಂಪು, ಗ್ಯಾಸಲೇಂಪು, ಮುಂತಾದ ಎಲ್ಲಾ ತರದ ದೀಪಗಳಿಗೆ ಉಪಯೋಗಿಸಲು ಬೇಕಾದ ಬುರುಡೆಗಳು ನಮ್ಮಲ್ಲಿ ದೊರಕುವುವು. ಅಲ್ಲದೆ ಯಾವುದಾದರೂ ಒಂದು ಹೊಸತರದ ದೀಪಕ್ಕೆ ಬೇಕಾಗುವ ಬುರುಡೆಗಳನ್ನು ಸಹ ಒದಗಿಸಿಕೊಡಬಹುದು.

ಕ್ರಯ ಎಲ್ಲಿ ಕಡಿಮೆ?

ನಮ್ಮ ದರವನ್ನು ಬೇರೆಯವರ ದರದೊಡನೆ ಸರಿಹೋಲಿಸಿ ನೋಡಿದರೆ
ಆಗ ತನ್ನಷ್ಟಕ್ಕೇ ಇದರ ಗುಟ್ಟು ಗೊತ್ತಾಗುವುದು!
ಕೊಡೆಗಳು ಯುದ್ಧಕ್ಕೆ ಮೊದಲಿದ್ದ ದರದಲ್ಲಿಯೇ ನಿಮಗೆ ಇಲ್ಲಿ ದೊರೆಯುವುವು!
ಬಲವಾದ ಬಾಳಿಕೆ ಬರುವ ಹೊಸ ಕೊಡೆಗಳು ಈಗ ತಾನೇ ತಲಪಿವೆ!!
ಸ್ವಿಝರ್ಲೆಂಡಿನಲ್ಲಿ ಸಿದ್ಧವಾದ ಪ್ರಖ್ಯಾತಿಹೊಂದಿದ ಮಿಶನ್ ಕೊಡೆಗಳು
24×8 ರೂ. 6-4-0. 26×8 ರೂ. 6-8-0. 28×8 ರೂ. 6-12-0.
ಈ ಬೆಲೆಯೆಷ್ಟೆಂದು ಗುರುತಿಸಿಕೊಳ್ಳಿ! ನಮ್ಮ ಮಾರಾಟದ ದರ ಹೇಗಿದೆ ಎಂದು ನೀವೇ ಆಲೋಚಿಸಿರಿ!
ಉತ್ತಮ ಯಂತ್ರದಲ್ಲಿ ತಯಾರಾದ ಕೊಡೆಗಳು
26×8 ರೂ. 4-14-0. ಈ ಕೊಡೆಗಳು ಇದರಿಂದಲೂ ಅಗ್ಗವಾಗಿ ನಿಮಗೆ ದೊರೆಯದು. ಇದು ಸಂಪೂರ್ಣವಾಗಿ ನಂಬಿಕೆಗೆ ಅರ್ಹವಾದದ್ದು, ಬಲವಾದದ್ದು; ಬಾಳಿಕೆ ಬರತಕ್ಕದ್ದೂ ಆಗಿದೆ. ಪ್ರತಿಯೊಂದು ಕೊಡೆಗೂ ಗ್ಯಾರಂಟಿ ಇದೆ.
ಕಪ್ಪು ಬಿಳೇ ಬಣ್ಣದ ಶುದ್ಧ ಖಾದಿಯ ನಿರ್ಮಾಣದ ಹಿಂದೀ ಕೊಡೆಗಳು
18ರಿಂದ 26ರ ವರೆಗಿನ ಎಲ್ಲಾ ಅಳತೆಯಲ್ಲಿ ರೂ. 2-4-0ರಿಂದ ರೂ. 4-8-0ರ ವರೆಗೆ
ನಂಬ್ರ 611 ಜಿಂಕೆಯ ಗುರುತಿನ ಕೊಡೆಗಳು
ಇದಕ್ಕೆ ಚಿನ್ನದ ಪದಕಗಳ ಬಹುಮಾನ ದೊರಕಿದೆ.
ಈ ಕೊಡೆಗಳು ಇದೊಂದು ವ್ಯಾಪಾರ ಸಂಘದಲ್ಲಿ ಮಾತ್ರ ದೊರೆಯುತ್ತವೆ.
ಎಮ್. ಸುಲೇಮಾನ್ ನೂರ್ ಮಹಮ್ಮದ್ ಅಂಡ್ ಸನ್ಸ್,
ಕೊರೊನೇಶನ್ ಅಂಬ್ರೆಲ್ಲಾ ಮಾರ್ಟ್, 786, ಮರ್ಕೆಂಟೈಲ್ ಮಿಶನ್ ಶಾಪ್ ಬಳಿ, ಮಂಗಳೂರು.
ಇದರ ಶಾಖೆ:—ಮಂಗಳೂರು ಟೌನ್ ಪೋಲೀಸ್ ಸ್ಟೇಶನಿನ ಎದುರಿನಲ್ಲಿ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. No. 54/1923

ಅಪ್ಪಯ್ಯದಾಸ್—ಅರ್ಜಿದಾರ.

ಮೇಲ್ಕಂಡ ಅರ್ಜಿದಾರನು ಕಾಸರಗೋಡು ತಾಲೂಕಿನ [illegible] ದಾಸರ ದೇವಸ್ಥಾನ ಕಮಿಟಿಗೆ ಕಮಿಟಿ ಮೆಂಬರರನ್ನು ನೇಮಕ ಮಾಡಬೇಕೆಂತ ಈ ಕೋರ್ಟಿನಲ್ಲಿ ಮಾಡಿದ ಮೇಲ್ಕಂಡ ಅರ್ಜಿಯು 1923ನೇ ಜುಲೈ ತಾ. 4ಕ್ಕೆ ತನ್ನಿಗೆ ಸದರಿ ಕೋರ್ಟಿನಲ್ಲಿ ಇಟ್ಟಿರುವುದಾಗಿ ಈ ಮೂಲಕ ಸರ್ವರಿಗೂ ತಿಳಿಯಪಡಿಸಲಾಗುತ್ತದೆ.

ಮಂಗಳೂರು,
ತಾ. 20-4-'23. } P. Sanjiva Rao,
ಅರ್ಜಿದಾರನ ಕಡೆ ವಕೀಲ.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ

O. P. No. 63/1923

ದರ್ಣಮ್ಮ—ಅರ್ಜಿದಾರಳು

ತನ್ನ ಸಹೋದರಿಯ ಮಗ ಮೃತಪಟ್ಟ ನೇಮಿರಾಜ ಅರಿಗನ ಹೆಸರಲ್ಲಿ ನಂಬ್ರ 2803ನೇ ಪುತ್ತೂರು ಟ್ರೇಡರ್ಸ್ ಕೊ-ಓಪರೇಟಿವ್ ಸೊಸೈಟಿಯಲ್ಲಿ ಫಿಕ್ಸೆಡ್ ಡಿಪೋಜಿಟ್ಟಾಗಿರುವ ರೂಪಾಯಿ 2140-0-0ನ್ನು ವಸೂಲುಮಾಡುವರೆ ತನ್ನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ಮಾಡಿದ ಮೇಲ್ಕಂಡ ಅರ್ಜಿಯು ಸದರಿ ಕೋರ್ಟಿನಲ್ಲಿ ತಾ. 12-7-'23ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆಕ್ಷೇಪ ಇದ್ದವರು ಆ ತಾರೀಖಿಗೆ ಕೋರ್ಟಿಗೆ ಹ್ಯಾಜರುಮಾಡಿಕೊಳ್ಳತಕ್ಕದ್ದು.

ಮಂಗಳೂರು,
ತಾ. 20-4-'23. } (sd) B. Narasinga Rao,
ಅರ್ಜಿದಾರಳ ಕಡೆ ವಕೀಲ.

ದಕ್ಷಿಣ ಕನ್ನಡಾ ದ್ರಾವಿಡ ಬ್ರಾಹ್ಮಣರ ಪರಿಷದದ ಕಡೆಯಿಂದ.

ಪ್ರಕಟಣೆ.

ದ್ರಾವಿಡ ಬ್ರಾಹ್ಮಣರ ಬಡವಿದ್ಯಾರ್ಥಿ ನಿಧಿಯಿಂದ ಸಹಾಯಹೊಂದಲು ಅಪೇಕ್ಷಿಸುವ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಪರಿಷತ್ತಿನ ಸ್ಥಾಯಿಕ ಮಂಡಳಿಯವರಿಗೆ ಬರಕೊಂಡು ತಾ. 15-6-'23ರ ಒಳಗೆ ಕೆಳಗಿನ ವಿಳಾಸಕ್ಕೆ ತಲ್ಪುವಂತೆ ಕಳುಹಿಸಿಕೊಡತಕ್ಕದ್ದು.

ಅರ್ಜಿಯಲ್ಲಿ ವಿದ್ಯಾರ್ಥಿಯು ತನ್ನ ಸ್ಥಿತಿಗತಿಯನ್ನೂ ತಾನು ಕಲಿಯುತ್ತಿರುವ ತರಗತಿ ಮತ್ತು ಕಳೆದ ವರುಷದ ಪರೀಕ್ಷೆಯಲ್ಲಿ ಪಡದಿರುವ ಮಾರ್ಕ್ಸ್ ವ ಇತರ ವಿಷಯಗಳನ್ನು ಕೂಡಿದ ಮಟ್ಟಿಗೆ ವಿವರಿಸತಕ್ಕದ್ದು. ಇದಲ್ಲದೆ ಪ್ರತಿ ಅರ್ಜಿಯೂ ಕೊನೇ ಪಕ್ಷಕ್ಕೆ ಎರಡು ಯೋಗ್ಯತಾಪತ್ರಗಳೊಡನೆ (Certificates) ಕೂಡಿರತಕ್ಕದ್ದು.

Kadri Road,
Mangalore, 24-4-'23 } K. R. Achar,
M. A. L. L. B. *Vakil.*

ಇಂಡಿಯಕ್ಕೆ ಪರದೇಶದ ವ್ಯಾಪಾರ.

ಹಿಂದೂಸ್ಥಾನದಲ್ಲಿರುವ ಬ್ರಿಟಿಷ್ ಸೀನಿಯರ್ ಟ್ರೇಡ್ ಕಮಿಶನರಾದ ಮಿಸ್ಟರ್ ಟಿ. ಎಮ್. ಎ. ಇನ್ಸ್‌ಕೋಫ್ ಎಂಬವರು ಓವರ್‌ಸೀಸ್ ಟ್ರೇಡ್ ಇಲಾಖೆಗೆ ಕೆಳಗಿನ ರೀತಿಯಲ್ಲಿ ರಿಪೋರ್ಟು ಬರೆದಿರುತ್ತಾರೆ. ೧೯೨೦ನೆಯ ಇಸವಿಯಲ್ಲಿ ೧೯೭ ಕೋಟಿ ರೂಪಾಯಿಗಳ ವ್ಯಾಪಾರವು ಹಿಂದೂಸ್ಥಾನಕ್ಕೆ ಪರದೇಶಗಳಿಂದ ಬಂದಿತ್ತು. ೧೯೨೨ರಲ್ಲಿ ೧೬೩ ಕೋಟಿ ರೂಪಾಯಿಗಳ ವ್ಯಾಪಾರವು ಮಾತ್ರವೆ ಬಂದಿರುತ್ತದೆ. ಯುನೈಟೆಡ್ ಕಿಂಗ್‌ಡಮ್‌ನಿಂದ ೧೯೨೦ರಲ್ಲಿ ೧೧೧ಕೋಟಿ ರೂಪಾಯಿ ಮೌಲ್ಯದ್ದು ಬಂದಿತ್ತು. ೧೯೨೨ರಲ್ಲಿ ೧೦೬ಕೋಟಿ ರೂಪಾಯಿಗಳದ್ದು ಮಾತ್ರವೆ ಬಂದಿದೆ. ಆದರೆ ಒಟ್ಟಾರೆ ಇಂಗ್ಲೆಂಡಿನಿಂದ ಹಿಂದೂಸ್ಥಾನಕ್ಕೆ ಬಂದ ವ್ಯಾಪಾರವು ಶೇಕಡಾ ೫೭ರಿಂದ ೬೫ಕ್ಕೆ ಹೆಚ್ಚಿದೆ. ಯುನೈಟೆಡ್ ಸ್ಟೇಟ್ಸಿನಿಂದ ಬಂದ ಸಾಮಾನು ಶೇಕಡಾ ೯ರಿಂದ ೬ಕ್ಕೆ ಇಳಿದಿದೆ. ಜರ್ಮನಿಯಿಂದ ಬಂದ ಮಾಲು ಶೇಕಡಾ ೨.೪ರಿಂದ ಶೇಕಡಾ ೫ಕ್ಕೆ ಏರಿದೆ. ಎಂದರೆ ಒಂದಕ್ಕೆ ೨ ಪಾಲು ಮಾಲು ಹೆಚ್ಚು ಬರುತ್ತದೆ.

ವಸ್ತ್ರದ ವಿಷಯ ಅವರು ಹೇಳುವುದೇನೆಂದರೆ:-೧೯೨೦ರಲ್ಲಿ ೮೧೦ ಲಕ್ಷ ರೂಪಾಯಿ ಮೌಲ್ಯದ ಹತ್ತಿಯ ನೂಲು ಹಿಂದೂಸ್ಥಾನಕ್ಕೆ ಬಂದಿತ್ತು. ೧೯೨೨ರಲ್ಲಿ ೬೩೬ ಲಕ್ಷ ರೂಪಾಯಿ ಮೌಲ್ಯದ ನೂಲು ಮಾತ್ರವೆ ಬಂದಿದೆ. ಇಂಗ್ಲೆಂಡಿನಿಂದ ೬೧೧ ಲಕ್ಷ ರೂಪಾಯಿಯ ನೂಲು ೧೯೨೦ರಲ್ಲಿ ಬಂದಿತ್ತು, ೧೯೨೨ರಲ್ಲಿ ೪೯೬ ಲಕ್ಷ ರೂಪಾಯಿಯ ನೂಲು ಮಾತ್ರವೆ ಬಂದಿದೆ. ಜಪಾನಿನಿಂದ ೧೯೨೦ರಲ್ಲಿ ೧೬೪ ಲಕ್ಷ ರೂಪಾಯಿಯ ನೂಲು ಬಂದಿತ್ತು. ೧೯೨೨ರಲ್ಲಿ ೨೧೩ ಲಕ್ಷ ರೂಪಾಯಿಗಳ ನೂಲು ಬಂದಿದೆ. ೧೯೨೦ರಲ್ಲಿ ೧೮.೩೧ಕೋಟಿ ರೂಪಾಯಿ ಮೌಲ್ಯದ ಹತ್ತಿಯ ವಸ್ತ್ರವು ಬಂದಿತ್ತು. ೧೯೨೨ರಲ್ಲಿ ೨೯.೧೩ಕೋಟಿ ರೂಪಾಯಿಯ ವಸ್ತ್ರ ಬಂದಿದೆ. ಹೆಚ್ಚಿಗೆ ಬಂದ ವಸ್ತ್ರವೆಲ್ಲವೂ ಇಂಗ್ಲೆಂಡಿನಿಂದಲೆ ಆಗಿದೆ. ಲಂಕಶಯರಿನಿಂದ ಹಡಗಗಳಲ್ಲಿ ೧೯೨೦ರಲ್ಲಿ ೧೪.೬೫ಕೋಟಿ ರೂಪಾಯಿಯ ಮಾಲು ಬಂದಿತ್ತು. ೧೯೨೨ರಲ್ಲಿ ೨೦.೮೩ಕೋಟಿ ರೂಪಾಯಿಯ ಮಾಲು ಬಂದಿದೆ. ಜಪಾನಿನಿಂದ ೧೯೨೦ರಲ್ಲಿ ೨.೭೯ ೧೯೨೨ರಲ್ಲಿ ೨.೯೬ ಕೋಟಿ ರೂಪಾಯಿಯ ಮಾಲೂ ಅಮೇರಿಕದಿಂದ ೧೯೨೦ರಲ್ಲಿ ೬೮ ಲಕ್ಷ ರೂಪಾಯಿಯ ಸಾಮಾನೂ ಬಂದಿತ್ತು, ೧೯೨೨ರಲ್ಲಿ ೧೯ಲಕ್ಷದ ಸಾಮಾನು ಮಾತ್ರವೆ ಬಂದಿದೆ. ಮಲ್ ಮುಂತಾದ ಮಡಿ ಮಾಡಿದ ವಸ್ತ್ರಗಳು ೧೯೨೦ರಲ್ಲಿ ೯ಕೋಟಿ ರೂಪಾಯಿಯವುಗಳು ಬಂದಿದ್ದವು. ೧೯೨೨ರಲ್ಲಿ ೧೧ಕೋಟಿ ಮೌಲ್ಯದವುಗಳು ಬಂದಿವೆ. ಬಣ್ಣ ಹಾಕಿದ ವಸ್ತ್ರಗಳು ೧೯೨೦ರಲ್ಲಿ ೫೬೧ಲಕ್ಷ ರೂಪಾಯಿಯವುಗಳು ಬಂದಿದ್ದವು. ೧೯೨೨ರಲ್ಲಿ ೪೪೬ ಲಕ್ಷ ರೂಪಾಯಿಯವುಗಳು ಬಂದಿವೆ. ಹೊಲಿಯುವ ನೂಲು ಬ್ರಿಟನ್ನಿನಿಂದ ೫೦ಲಕ್ಷ ರೂಪಾಯಿ ಮೌಲ್ಯದ್ದು ಬಂದಿತ್ತು. ೧೯೨೨ರಲ್ಲಿ ೪೯ಲಕ್ಷದ್ದು ಮಾತ್ರವೆ ಬಂದಿದೆ. ಜರ್ಮನಿಯಿಂದ ೨ಲಕ್ಷ ರೂಪಾಯಿ ಮೌಲ್ಯದ ಹೊಲಿಯುವ ನೂಲು ಬಂದಿದೆ. ಉಣ್ಣೆಯ ವಸ್ತ್ರಗಳು ೧೯೨೦ರಲ್ಲಿ ೬೫ಲಕ್ಷದಿಂದ ೧೯೨೨ರಲ್ಲಿ ೬೦ಲಕ್ಷಕ್ಕೆ ಇಳಿಯಿತು. ಜರ್ಮನಿಯಿಂದ ಒಂದಕ್ಕೆ ಎರಡು ಪಾಲು ಹೆಚ್ಚಿಗೆ ಬಂದಿದೆ. ಜಪಾನಿನಿಂದ ಒಂದಕ್ಕೆ ೪॥ ಪಾಲು ಹೆಚ್ಚಿಗೆ ಬಂದಿದೆ.

ಯಂತ್ರಸಾಧನೆಗಳು.

೧೯೨೦ರಲ್ಲಿ ೨೫.೪೪ಕೋಟಿ ರೂಪಾಯಿ ಮೌಲ್ಯದ ಯಂತ್ರಗಳು ಬಂದಿದ್ದವು. ೧೯೨೨ರಲ್ಲಿ ೧೬.೮೬ಕೋಟಿ ರೂಪಾಯಿಯವುಗಳು ಮಾತ್ರವೇ ಬಂದಿವೆ. ಇಂಗ್ಲೆಂಡಿನಿಂದ ೧೯ಕ್ಕೆ ಮುಕ್ಕಾಲು ಪಾಲೂ ಅಮೇರಿಕದಿಂದ ಒಂದಕ್ಕೆ ಅರ್ಧ ಪಾಲೂ ಜರ್ಮನಿಯಿಂದ ಒಂದಕ್ಕೆ ಒಂದೂಕಾಲು ಪಾಲೂ ಬಂದಿವೆ. ನೂಲು ಮತ್ತು ವಸ್ತ್ರಮಾಡುವ ಯಂತ್ರಗಳು ೧೯೨೦ರಲ್ಲಿ ೪೯೩ ಲಕ್ಷದವುಗಳೂ ೧೯೨೨ರಲ್ಲಿ ೨೦೮ ಲಕ್ಷ ರೂಪಾಯಿಯವುಗಳೂ ಬಂದಿವೆ. ರೈಲ್ವೆಸಾಮಾನು ೧೯೨೦ರಲ್ಲಿ ೧೯॥ಕೋಟಿ ರೂಪಾಯಿ ಮೌಲ್ಯದ್ದು ಬಂದಿತ್ತು. ೧೯೨೨ರಲ್ಲಿ ೯ಕೋಟಿ ರೂಪಾಯಿ ಮೌಲ್ಯದ್ದು ಮಾತ್ರವೆ ಬಂದಿದೆ. ೧೯೨೦ರಲ್ಲಿ ೧೩೨ಲಕ್ಷ ಕ್ರಯದ ೧೯೭೩ ಮೋಟರಕಾರುಗಳು ಇಂಡಿಯಕ್ಕೆ ಬಂದಿದ್ದವು. ೧೯೨೨ರಲ್ಲಿ ೧೦೯ಲಕ್ಷ ಕ್ರಯದ ೩,೩೦೬ ಮೋಟರಕಾರುಗಳು ಬಂದಿವೆ. ಎಂದರೆ ಮೋಟರ್‌ಕಾರುಗಳ ಬೆಲೆ ಕಡಿಮೆಯಾಗಿದೆ. ಇಂಗ್ಲೆಂಡಿನಿಂದ ೧೯೨೦ರಲ್ಲಿ ೫೬೫ ಮೋಟರ್‌ಕಾರುಗಳೂ ೧೯೨೨ರಲ್ಲಿ ೩೩೦ ಕಾರುಗಳೂ ಬಂದಿದ್ದವು. ಫ್ರಾನ್ಸಿನಿಂದ ೧೯೨೦ರಲ್ಲಿ ೧೩೬ ಕಾರುಗಳು ೧೯೨೨ರಲ್ಲಿ ೩೬ ಕಾರುಗಳು ಇಟಲಿಯಿಂದ ೧೯೨೦ರಲ್ಲಿ ೧೫೫ ಕಾರುಗಳು ೧೯೨೨ರಲ್ಲಿ ೯೫ ಕಾರುಗಳೂ. ಯುನೈಟೆಡ್ ಸ್ಟೇಟ್ಸಿನಿಂದ ೧೯೨೦ರಲ್ಲಿ ೫೧೨ ಕಾರುಗಳೂ ೧೯೨೨ರಲ್ಲಿ ೧೩೮೧ ಕಾರುಗಳೂ ಕೆನಡಾದೇಶದಿಂದ ೧೯೨೦ರಲ್ಲಿ ೨೪೯ ಕಾರುಗಳೂ ೧೯೨೨ರಲ್ಲಿ ೧೧೧೬ ಕಾರುಗಳೂ ಬಂದಿದ್ದವು.

ಕೋಲ್‌ಟಾರ್ (ದಾಮರ)ನಿಂದ ತಯಾರಿಸುವ ಬಣ್ಣಗಳು ೧೯೨೦ರಲ್ಲಿ ೨೦೭ಲಕ್ಷ ರೂಪಾಯಿಯವುಗಳೂ, ೧೯೨೨ರಲ್ಲಿ ೧೯೯ಲಕ್ಷ ರೂಪಾಯಿಯವುಗಳೂ ಬಂದಿವೆ. ಇಂಗ್ಲೆಂಡಿನಿಂದ ೫೩ಲಕ್ಷ ರೂಪಾಯಿಯ ಬಣ್ಣ ೧೯೨೦ರಲ್ಲಿ ಬಂದಿತ್ತು, ೧೯೨೨ರಲ್ಲಿ ೧೫ಲಕ್ಷ ರೂಪಾಯಿಯ ಬಣ್ಣ ಮಾತ್ರವೆ ಬಂದಿದೆ. ಅಮೇರಿಕದಿಂದ ೨೦ ಲಕ್ಷ ರೂಪಾಯಿಯ ಬಣ್ಣ ಬಂದಿತ್ತು, ೧೯೨೨ರಲ್ಲಿ ೬ಲಕ್ಷ ರೂಪಾಯಿಯ ಬಣ್ಣ ಮಾತ್ರವೆ ಬಂದಿದೆ. ಜರ್ಮನಿಯಿಂದ ೯ಲಕ್ಷ ರೂಪಾಯಿಯ ಬಣ್ಣ ಬಂದಿತ್ತು, ೧೯೨೨ರಲ್ಲಿ ೧೯೬ ಲಕ್ಷ ರೂಪಾಯಿಯ ಬಣ್ಣ ಬಂದಿದೆ. ಸ್ವಿಜರ್‌ಲೆಂಡ್‌ನಿಂದ ೯ಲಕ್ಷ ರೂಪಾಯಿಯ ಬಣ್ಣ ಬಂದಿತ್ತು, ೧೯೨೨ರಲ್ಲಿ ೫॥ಲಕ್ಷ ರೂಪಾಯಿಯ ಬಣ್ಣ ಬಂದಿದೆ. ಮೆಂಚೆಸ್ಟರ್ ಗಾರ್ಡಿಯನ್.

ವಿದೇಶ ವರ್ತಮಾನ.

ಇಂಗ್ಲೆಂಡಿನ ಪಾರ್ಲಿಮೆಂಟು:—ಪಾರ್ಲಿಮೆಂಟಿನಲ್ಲಿ ಹಿಂದೂಸ್ಥಾನದ ಬಗ್ಗೆ ಸಹಾನುಭೂತಿಯುಳ್ಳ ಮೆಂಬರರು ಒಂದು ಸಂಘವನ್ನು ಮಾಡಿಕೊಂಡಿರುವರು.

ಹೊಸ ನಮೂನೆಯ ಕಲ್ಲಿದ್ದಲು:—ಮ್ಯುನಿಚಿನ ಜರ್ಮನ್ ರಸಾಯನಶಾಸ್ತ್ರಜ್ಞನು ರಾಸಾಯನಿಕ ಕ್ರಿಯೆಯಿಂದ ಕಲ್ಲಿದ್ದಲನ್ನು ಮಾಡುವ ಶೋಧನಮಾಡಿದ್ದಾನೆ. ಈ ಕಲ್ಲಿದ್ದಲು ಗಣಿಗಳಲ್ಲಿ ಸಿಕ್ಕುವ ಕಲ್ಲಿದ್ದಲಿಗಿಂತ ಹೆಚ್ಚು ಉಷ್ಣತೆ ಮಾಡುತ್ತದೆ.

ಜರ್ಮನಿಯ ಸತ್ಯಾಗ್ರಹ:—ಸತ್ಯಾಗ್ರಹದ ಪ್ರಭೆಯು ಜರ್ಮನಿಯಲ್ಲಿ ಬಹಳವಾಗಿದೆ. ಫ್ರೆಂಚರು ವಶಮಾಡಿಕೊಂಡಿರುವ ಪ್ರಾಂತ್ಯದಲ್ಲಿ ತಾವು ಅವರ ಕೈಕೆಳಗೆ ಕೆಲಸಮಾಡಲಿಕ್ಕಿಲ್ಲವೆಂದು ೫ ಲಕ್ಷಕ್ಕಿಂತ ಹೆಚ್ಚು ಕೂಲಿಗಳು ಹಟಹಿಡಿದಿರುವರು. ರ್ಹ್ಯೂರ್ ಪ್ರಾಂತದಲ್ಲಿ ಸಾವಿರಾರು ಜನರನ್ನು ಫ್ರೆಂಚರು ಗಡಿಪಾರುಮಾಡಿರುವರು. ಅನೇಕ ಜರ್ಮನ್ ಮುಖಂಡರು ಸೆರೆಮನೆಯಲ್ಲಿ ಬಿದ್ದು ಕಷ್ಟಗಳನ್ನು ಅನುಭವಿಸುತ್ತಿರುವರು. ಲಕ್ಷಗಟ್ಟಲೆ ಜನರ ಉದರನಿರ್ವಾಹದ ಸಾಧನೆಗಳನ್ನು ಫ್ರೆಂಚರು ಕಸಿದುಕೊಂಡಿರುತ್ತಾರೆ. ಕ್ರುಪ್ ಎಂಬ ಕಾರಖಾನೆಯನ್ನು ಸ್ವಾಧೀನಮಾಡಿಕೊಳ್ಳುವಾಗ ಫ್ರೆಂಚರು ಕೆಲವರನ್ನು ಕೊಂದರು. ಹಲವರಿಗೆ ಗಾಯವಾಗಿದೆ. ಇದಕ್ಕಾಗಿ ಇಡಿ ಜರ್ಮನ್ ದೇಶದಲ್ಲಿ ಸೂತಕವನ್ನು ಬೆಳಸಿದರು. ಮುರ್‌ಹೈಮ್ ಎಂಬ ಕಡೆಯಲ್ಲಿ ನಿರುದ್ಯೋಗಿಗಳ ಉಪಟಳವು ಬಹಳವಾಗಿದೆ.

ಒಳದೇಶ ವರ್ತಮಾನ.

ಮುಳಸಿ ಸತ್ಯಾಗ್ರಹ:—ಮುಳಸಿಪೇಟೆಯ ೨೮ ಸತ್ಯಾಗ್ರಹಿಗಳಿಗೆ ೧೫ ದಿನಗಳಿಂದ ೬ ತಿಂಗಳ ವರೆಗಿನ ಕಠಿಣ ಶಿಕ್ಷೆಯು ವಿಧಿಸಲಾಗಿದೆ.

ಮೈಸೂರು ಮಹಾರಾಜರು:—ಮಹಾರಾಜರು ಸೇಲಮಿನ ಯರಕಾಡದಲ್ಲಿ ತಮ್ಮ ಮೋಟಾರಕಾರನ್ನು ನಡಿಸಿಕೊಂಡು ಹೋಗುತ್ತಿರುವಾಗ ತಾಲೂಕುಬೋರ್ಡ ಪ್ರೆಸಿಡೆಂಟ ಮಿ॥ ಕಂದಸ್ವಾಮಿ ಚೆಟ್ಟಿಯಾರರ ಮೋಟಾರು ಇವರ ಮೋಟಾರಿಗೆ ತಾಗಿ ಮಹಾರಾಜರ ಮೋಟಾರು ಸ್ವಲ್ಪ ಹಾಳಾಗಿದೆ.

ಯಫ್. ಎಲ್. ಮತ್ತು ಬಿ. ಎಲ್. ಪರೀಕ್ಷೆ:—ಮದರಾಸ ವಿಶ್ವವಿದ್ಯಾಲಯದ ಯಫ್. ಎಲ್. ಮತ್ತು ಬಿ. ಎಲ್. ಪರೀಕ್ಷೆಯ ಪ್ರಶ್ನೆಗಳಲ್ಲಿ ಕೆಲವು ಮೊದಲೇ ಪರೀಕ್ಷೆಗೆ ಕೂತುಕೊಳ್ಳುವವರಿಗೆ ತಿಳಿದು ಬಂದುದರಿಂದ ಈ ಪರೀಕ್ಷೆಗಳು ಪುನಃ ಆಗುವ ಆಲೋಚನೆ ನಡೆಯುತ್ತಿದೆ.

ಹನುಮಂತರಾವ್ ಮೊಹರೆ:—ಕರ್ನಾಟಕ ವೈಭವದ ಸಂಪಾದಕರಾದ ಶ್ರೀಯುತ ಹನುಮಂತರಾವ್ ಮೊಹರೆಯವರಿಗೆ ಕಳೆದ ತಾರೀಕು ೧೯ರಲ್ಲಿ ೨ ವರುಷಗಳ ಕಠಿಣಶಿಕ್ಷೆ ಮತ್ತು ರೂ. ೧೦೦೦ದ ಜುರುಮಾನೆ ವಿಧಿಸಿದೆ. ಇವರ ಕೈಗೆ ಬೇಡಿಗಳನ್ನು ಹಾಕಿ ಇವರನ್ನು ಬೀದಿಯಲ್ಲೇ ನಡಿಸಿಕೊಂಡು ಡಿಸ್ಟ್ರಿಕ್ಟ್ ಜೈಲಿಗೆ ತಗೆದುಕೊಂಡು ಹೋದರು. ಮಿ॥ ವೈ. ಯಸ್. ತಿಳುಗಲ್‌ರವರು ಈಗ ವೈಭವದ ಸಂಪಾದಕರಾಗಿರುವರು.

ವಿಗ್ರಹ ಭೇದಕರು:—ಅಜಮೀರ್ ಗೇಟಿನ ಸಮೀಪದ ಒಂದು ಶಿವದೇವಾಲಯದ ಹತ್ತು ವಿಗ್ರಹಗಳನ್ನು ಯಾರೊ ತುಂಡುಮಾಡಿ ಹಾಕಿರುವರೆಂದು 'ತೇಜ್' ಎಂಬ ಪತ್ರಿಕೆಯು ಪ್ರಕಟಿಸುತ್ತದೆ.

ಸರ್ಕಸ್ ಡೇರೆ:—ಬೋಸರ "ರೋಯಲ್" ಇಂಡಿಯನ್ ಸರ್ಕಸ್ ಕಂಪೆನಿಯ ಡೇರೆ ಮತ್ತು ಇತರ ಸಾಮಾನುಗಳಿಗೆ ನಾಗಪುರದಲ್ಲಿ ಬೆಂಕಿ ತಗಲಿ ಒಂದು ಲಕ್ಷ ರೂಪಾಯಿಯ ನಷ್ಟವುಂಟಾಗಿದೆ.

ಜೋರ್ಜ ಜೋಸೆಫರು:—ದಿಂಡಿಗಲ್ಲಿನ ನಿವಾಸಿಗಳು ಕಳೆದ ತಾರೀಕು ೧೭ರಲ್ಲಿ ಅಲ್ಲಿಯ ರೈಲ್ವೆ ನಿಲ್ದಾಣದಲ್ಲಿ ಜೋರ್ಜ ಜೋಸೆಫರಿಗೆ ರೂ ೬೦೦ನ್ನು ಬಹುಮಾನವಾಗಿ ಕೊಟ್ಟರು.

ಪಾಟ್ನಾ ಮುನ್ಸಿಪಾಲಿಟಿ:—ಪಾಟ್ನಾ ಪಟ್ಟಣದ ಮುನ್ಸಿಪಾಲಿಟಿಯ ವಿಸ್ತೀರ್ಣದಲ್ಲಿ ಸೂನಾಗೃಹ (Slaughter House)ಗಳನ್ನು ಇಡಕೂಡದೆಂದು ಅಲ್ಲಿಯ ಮುನ್ಸಿಪಾಲಿಟಿಯವರು ಠರಾವನ್ನು ಮಾಡಿರುವರು.

ಮುಂಬಯಿ ಪ್ರೊವಿನ್ಸಿಯಲ್ ಕೊನ್ಫರೆನ್ಸ್:—ಮೇ ತಿಂಗಳ ತಾರೀಕು ೧೯ ಮತ್ತು ೨೦ರಲ್ಲಿ ಕೂಡುವ ಮುಂಬಯಿ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಮುಂಬಯಿ ನ್ಯಾಯವಿಧಾಯಕ ಸಭೆಯ ಮೆಂಬರರಾದ ಮಿ॥ ಯಂ. ಸಿ. ಗಾಂಧಿಯವರು ಒಪ್ಪಿರುವರು.

ಶ್ರೀಯುತ ಶಂಕರಲಾಲ ಬೇಂಕರರು:—ಇವರನ್ನು ಕಳೆದ ತಾರೀಕು ೧೭ರಲ್ಲಿ ಯರವಾಡ ಜೈಲಿನಿಂದ ಬಿಡುಗಡೆಮಾಡಿದರು. ಇವರು ಜೈಲಿನಿಂದ ಬಿಡುಗಡೆಯಾದ ಸಾಯಂಕಾಲವೆ ಮುಂಬಯಿಗೆ ತಲ್ಪಿದರು.

ಹಿಂದೂ ಸೋಶಿಯಲ್ ಕೊನ್ಫರೆನ್ಸ್:—ಗುಲ್ಬರ್ಗದಲ್ಲಿ ಸೇರುವ ಈ ಕೊನ್ಫರೆನ್ಸಿನ ಐದನೆಯ ಅಧಿವೇಶನದ ಅಧ್ಯಕ್ಷಸ್ಥಾನವನ್ನು ಮುಂಬಯಿಯ ಬ್ಯಾರಿಸ್ಟರರಾದ ಮಿ॥ ಯಂ. ಆರ್. ಜಯಕರರು ವಹಿಸಿಕೊಳ್ಳಲು ಒಪ್ಪಿರುವರು.

ಡಾಕ್ಟರ ವರದರಾಜಲು ನಾಯುಡು:—ಇವರು ಸರಕಾರಕ್ಕೆ ತೆರಿಗೆಯನ್ನು ಕೊಡಲು ನಿರಾಕರಿಸಿದ್ದರಿಂದ ಸರಕಾರದವರು ಈಗ ಸೇಲಮಿನಿಂದ ೧೭ ಮೈಲು ದೂರವಿರುವ ಇವರ ೫ ಎಕ್ರೆ ಸ್ಥಳವನ್ನು ತಮ್ಮ ಸ್ವಾಧೀನಮಾಡಿಕೊಂಡಿರುವರು.

ಮತಾಂತರಗೊಳಿಸುವುದು:—ಹಿಂದೂ ಧರ್ಮದಲ್ಲಿ ತಿರುಗಿ ಬಂದ ಮಲಕರೆಂಬ ರಜಪೂತರನ್ನು ಮತ್ತು ಬಾಟಾಯಿಸಿ ಮುಸಲ್ಮಾನರನ್ನು ಮಾಡುವುದಕ್ಕಾಗಿ ನಿಜಾಮ್ ಕಮ್ಮಿಟಿಯು ಗುಪ್ತರೂಪದಿಂದ ೫೦ ಸಾವಿರ ರೂಪಾಯಿ ಕೂಡಿಸಿರುತ್ತದೆಂದು ತಿಳಿಯುತ್ತದೆ. [ಕ. ವೈಭವ.]

ವಿನೋದಗಳನ್ನು ನೋಡುವ ಜನರಿಗೆ ಟೇಕ್ಸ:—ವಿನೋದಗಳನ್ನು ನೋಡಲು ಹೋಗುವವರು ಟಿಕೇಟಿಗೆ ತಕ್ಕಂತೆ ಸರಕಾರಕ್ಕೆ ತೆರಿಗೆಯನ್ನು ಕೊಡಬೇಕೆಂದು ಮುಂಬಯಿ ಸರಕಾರದಲ್ಲಿ ವಿಧಿಯಿದೆ. ಈ ತೆರಿಗೆಯನ್ನು ಟಿಕೇಟಿನ ರುಸುಂ ಜತೆಯಲ್ಲಿ ವಸೂಲುಮಾಡಲಾಗುವುದು. ಕಂಪೆನಿಯವರು ಇದನ್ನು ಸರಕಾರಕ್ಕೆ ಕೊಡದೆ ಮೋಸಮಾಡಬೇಕೆಂದು ಕಾಂಪ್ಲಿಮೆಂಟರಿ ಟಿಕೇಟುಗಳನ್ನು ನೂರಾರು ಗಟ್ಟಲೆಯಾಗಿ [illegible] ಹೊರಡಿಸುತ್ತ ಬಂದುದರಿಂದ ಸರಕಾರದವರು ಈಗ ಒಬ್ಬ ಅಧಿಕಾರಿಯನ್ನು ಗೊತ್ತುಮಾಡಿ ಎಲ್ಲಾ ಕಂಪೆನಿಯವರೂ ಎಷ್ಟು ಮಂದಿಗೆ ಗೌರವಾರ್ಥವಾದ ಟಿಕೇಟುಗಳನ್ನು ಕೊಟ್ಟಿದ್ದರೆಂಬುದನ್ನು ಅಧಿಕಾರಿಗೆ ತೋರಿಸುವ ಪಟ್ಟಿಯನ್ನು ಇಡಬೇಕೆಂದು ಗೊತ್ತುಮಾಡಿರುವರು.

ನಾಗರಹಾವಿನ ವಿಷ:—ಕಲ್ಲಿಕೋಟೆಯಲ್ಲಿ ಕೆಲವು ದಿನಗಳಿಂದ ಒಬ್ಬ ಮಾಪಿಳ್ಳೆಯವನು ಹಾವುಗಳನ್ನು ಹಿಡಿಯುವುದರಲ್ಲಿ ತುಂಬಾ ಖ್ಯಾತಿಗನೆಂದೂ ಜಾಗೆ ಹಿಡಿದ ಹಾವುಗಳು ಅವನನ್ನು ಕಡಿದರೂ ಏನೂ ಅಪಾಯವಾಗಲಾರದೆಂದೂ ತಿಳಿದುಕೊಂಡು ಕಳೆದ ವಾರ ಒಂದು ದೊಡ್ಡ ನಾಗರಹಾವನ್ನು ಹಿಡಿದುಕೊಂಡು ತನ್ನ ಅಪ್ರತಿಮ ಶಕ್ತಿಯನ್ನು ಜನರಿಗೆಲ್ಲಾ ತೋರಿಸಬೇಕೆಂದು ಆ ಹಾವಿನಿಂದ ತನ್ನ ಕೈ ಮೇಲೆ ಕಚ್ಚಿಸಿಕೊಂಡನು. ಹಾಗೆಯೆ ಸ್ವಲ್ಪ ಹೊತ್ತು ಹಾವಿನ ಜತೆಯಲ್ಲಿ ಆಡುತ್ತಿದ್ದು ಕಾಲವನ್ನು ಕಳೆದು ತನ್ನ ಮನೆಯನ್ನು ಸೇರಿದ ಕೂಡಲೆ ನಾಗರಹಾವಿನ ವಿಷವೇರಿ ಸತ್ತನು.

ವ್ಯಾಸರಾಯರ ಕಾರ್ಯಕಾರೀ ಮಂಡಲ:—ಮಿ॥ ಎ. ಸಿ. ಚಟ್ಟರ್ಜೀಯವರು ಈ ಮಂಡಲದ ಒಬ್ಬ ಸಭಾಸದರಾಗಿ ನೇಮಿಸಲ್ಪಟ್ಟಿರುವರು.

ವಿದೇಶಿಯರನ್ನು ಮುನ್ಸಿಪಾಲಿಟಿಗೆ ನೇಮಿಸಿದ್ದು:—ಹೌರ ಡಿಸ್ಟ್ರಿಕ್ಟಿನ ಬಲ್ಲಿ ಮುನ್ಸಿಪಾಲಿಟಿಗೆ ಮಿಸ್. ಜೋಸೆಫೈನ್ ಮೆಕ್‌ಲಿಯೊಡ್ ಎಂಬ ಅಮೇರಿಕನ್ ಸ್ತ್ರೀಯನ್ನು ಸರಕಾರದವರು ಒಬ್ಬ ಪ್ರತಿನಿಧಿಯಾಗಿ ನೇಮಿಸಿರುತ್ತಾರೆ. ಈಕೆಯು ಬೇಲೂರಿನಲ್ಲಿರುವ ಶ್ರೀರಾಮಕೃಷ್ಣ ಮಿಶನಿಗೆ ಸೇರಿದವಳು.

ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ:—ಛತ್ರಪತಿ ಶಿವಾಜಿ ಮಹಾರಾಜರ ಶ್ವೇತ ಶಿಲೆಯ ಪ್ರತಿಮೆಯು ಪೂನೆಯ ಶಿವಾಜಿ ಮಂದಿರದಲ್ಲಿ ಬಹಳ ಸಂಭ್ರಮದಿಂದ ಸ್ಥಾಪಿಸಲಾಯಿತು.

ಗುಜರಾಥಿನ ಕವಿಗಳು:—ಗುಜರಾಥಿನ ಸುಪ್ರಸಿದ್ಧ ಕವಿವರ್ಯರೂ ನಾಟಕಕಾರರೂ ಆಗಿದ್ದ ಶ್ರೀಯುತ ಕೊರಾಮ ಸುಂದರಜಿ ಶುಕಲ್‌ರೆಂಬವರು ಮೆಟ್ಟಲು ಇಳಿಯುವಾಗ ಜಾರಿಬಿದ್ದು ಮೃತಪಟ್ಟರು.

ಕಳ್ಳತನದಿಂದ ಉಪ್ಪನ್ನು ತಯಾರಿಸುವುದು:—ಬಾರಿಸಲ್ ಪ್ರಾಂತದ ಒಂದು ಗ್ರಾಮದಲ್ಲಿ ಉಪ್ಪನ್ನು ಕಳ್ಳತನದಿಂದ ಮಾಡುತ್ತಿರುವವರನ್ನು ಹಿಡಿಯುವುದಕ್ಕೆ ಹೋಗಿದ್ದ ಎಕ್ಸೈಜ್ ಇನ್ಸ್‌ಪೆಕ್ಟರ ಮತ್ತು ಅವರ ಕಡೆಯವರಿಗೂ ಜಗಳವಾಗಿ ೩ ಮಂದಿಗಳು ಮಡಿದರು. ಇನ್ಸ್‌ಪೆಕ್ಟರರ ಕಡೆಯವರಿಗೆ ಹೆಚ್ಚಿನ ಗಾಯಗಳಾದರೂ ಯಾರೂ ಹತರಾಗಲಿಲ್ಲ.

ಕುದುರೆಯ ಜೂಜು:—ಬರುವ ಜುಲಾಯಿ ತಾ. ೭ಕ್ಕೆ ಪ್ರಾರಂಭವಾಗಿ ೩ ದಿನಗಳ ವರೆಗೆ ಕುದುರೆಯ ಜೂಜು ಬೆಂಗಳೂರಿನಲ್ಲಿ ಆಗುವುದು.

ಮೈಸೂರು ಬಾಯಸ್ಕಾಟು ಫಂಡು:—ಈ ಫಂಡಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡಿನವರು ರೂ. ೫೦೦ನ್ನು ಕೊಡತಕ್ಕದೆಂದು ನಿಶ್ಚಯಿಸಿರುವರು.

ಗಾನವಿಶಾರದ ಮನೋಹರ ಬರ್ವೆ:—ಗಾನವಿಶಾರದ ಬಾಲಕನಾದ ೧೧ ವರುಷ ಪ್ರಾಯದ ಮನೋಹರ ಬರ್ವೆ ಎಂಬ ಬಾಲಕನು ಈಗ ಮದರಾಸಿನಲ್ಲಿ ತನ್ನ ಅಸಾಧಾರಣವಾದ ಸಾಮರ್ಥ್ಯದಿಂದ ಎಲ್ಲರನ್ನೂ ಆಶ್ಚರ್ಯಗೊಳಿಸುವನು. ಈ ಹುಡುಗನು ಮುಂಬಯಿಯಲ್ಲಿರುವ ಬರ್ವೆ ಸಂಗೀತ ಶಾಲೆಯ ಮುಖ್ಯೋಪಾಧ್ಯಾಯರಾದ ಮಿ॥ ಗಣಪತಿ ಗೋಪಾಲರಾವ್ ಬರ್ವೆ ಇವರ ಮಗ.

ಕೊಂಗ್ರೆಸ್ಸಿನ ಕಾರ್ಯಕಾರಿ ಕಮ್ಮಿಟಿ ಮೀಟಿಂಗು:—ಕೊಂಗ್ರೆಸ್ಸಿನ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗು ಕಳೆದ ತಾರೀಕು ೧೭ರಲ್ಲಿ ಪೂನೆಯಲ್ಲಿ ಸೇರಿತು. ಈ ಮೀಟಿಂಗಿಗೆ ಶ್ರೀಯುತರುಗಳಾದ ರಾಜಗೋಪಾಲಾಚಾರ್ಯ, ಜಮುನಲಾಲ ಬಾಜಜ, ದೇಶಪಾಂಡೆ, ವಲ್ಲಭಾಯಿ ಪಟೇಲ ಮತ್ತು ರಾಜೇಂದ್ರ ಪ್ರಸಾದ ಇವರೆಲ್ಲ ಹಾಜರಿದ್ದರು. ಶ್ರೀಯುತ ರಾಜಗೋಪಾಲಾಚಾರ್ಯರಿಗೆ ದೇಹದಲ್ಲಿ ಸೌಖ್ಯವಿಲ್ಲದಿದ್ದರೂ ಪಂಜಾಬದ ಮುಖಂಡರು ಅವರ ಆಗಮನವನ್ನು ಅಲ್ಲಿಗೆ ಬಯಸಿದ್ದರಿಂದ ಅವರು ಪಂಜಾಬಕ್ಕೆ ಹೋಗಿರುವರು.

ಕರೂರಿನಲ್ಲಿ ಪೋಲೀಸರ ಸತ್ತೆ:—ಕರೂರಿನಲ್ಲಿ ಪ್ಲೇಗಿನ ಹಾವಳಿಯು ನಡೆಯುತ್ತಿದ್ದುದರಿಂದ ಅಲ್ಲಿಯ ಹೆಚ್ಚಿನ ನಿವಾಸಿಗಳು ಕಳೆದ ಮೂರು ತಿಂಗಳಿಂದ ಪಟ್ಟಣವನ್ನು ತೊಲಗಿ ದೂರವಿದ್ದರು. ಆದ್ದರಿಂದ ಅಲ್ಲಿ ಕೊಂಗ್ರೆಸ್ ಕಾರ್ಯಪ್ರಚಾರವು ನಡಿಯುತ್ತಿರಲಿಲ್ಲ. ಈಗ ಪ್ಲೇಗು ಸ್ವಲ್ಪ ಶಾಂತವಾಗಿ ಜನರು ಪಟ್ಟಣದಲ್ಲಿ ತುಂಬುತ್ತಿರುವುದರಿಂದ ಅಲ್ಲಿ ಮಹಾತ್ಮಾ ಗಾಂಧಿಯವರ ದಿನಾಚರಣೆಯನ್ನು ಆಚರಿಸಬೇಕಾಗಿ ಆಲೋಚನೆಯಾಯಿತು. ಆದ್ದರಿಂದ ಸುಮಾರು ೧೦ ವರುಷದ ಹುಡುಗನು ಗಾಂಧಿ ದಿನಾಚರಣೆಯ ಸಂಬಂಧ ಮೆರವಣಿಗೆಯೂ ಭಜನೆಯೂ ಇರುವುದೆಂದು ಡಂಗುರದ ಮೂಲಕ ಸಾರುವಾಗ ಪೋಲೀಸ್ ಇನ್ಸ್‌ಪೆಕ್ಟರರು ಈ ಹುಡುಗನ ಕೈಯಲ್ಲಿರುವ ಡೋಲನ್ನು ತೆಗೆದುಕೊಂಡು ಅವನಿಗೆ ಹೊಡೆದರಂತೆ. ಆದರೆ ಮೆರವಣಿಗೆಯೂ ಭಜನೆಯೂ ಸಾಂಗವಾಗಿ ನಡೆಯಿತಂತೆ.

ಅಮೃತಸರದ ಗಲಾಟೆ:—ಅಮೃತಸರದಲ್ಲಿ ನಡೆದ ಗಲಾಟೆಯ ಚೌಕಸಿಯು ನಡೆಯುತ್ತಿದೆ. ಕೃಷ್ಣಕೆಟ್ಲೀಕ್ ಮಾರ್ಕೇಟಿನಲ್ಲಿ ಉಂಟಾದ ಗಲಾಟೆಯ ಸಂಬಂಧ ಮೂರು ಮಂದಿ ಹಿಂದುಗಳನ್ನು ಕೈದುಮಾಡಿದೆ. ಇನ್ನು ಅನೇಕರನ್ನು ಸೆರೆಹಿಡಿಯಲಿಕ್ಕಿರುವರೆಂದು ತಿಳಿದು ಅನೇಕರಿಗೆ ಅಸಮಾಧಾನ ಉಂಟಾಗಿದೆ. ಸರಕಾರದವರು ಈ ಕ್ರಮವನ್ನು ನಿಲ್ಲಿಸತಕ್ಕದೆಂದು ಜನರು ಸಭೆ ಕೂಡಿ ಠರಾವು ಪಾಸುಮಾಡಿರುವರು.

ನೆಲ್ಲೂರು:—ದೇಶ ಬಂಧು ದಾಸರು ನೆಲ್ಲೂರನ್ನು ಸಂದರ್ಶಿಸುವಾಗ ಅವರಿಗೆ ಬಹುಮಾನವಾಗಿ ಒಂದು ಹಣದ ಗಂಟನ್ನು ಕೊಡಬೇಕಾಗಿ ಅಲ್ಲಿಯ ಜನರು ನಿಶ್ಚಯಿಸಿರುವರು.

ಅಕ್ಕಲಕೋಟ ಮಹಾರಾಜರ ಅಪಮೃತ್ಯುವಿನ ಚೌಕಸಿ:—ಪೂನೆಯ ಸೆಸೂನ್ ಆಸ್ಪತ್ರೆಯಲ್ಲಿ ಅಕ್ಕಲಕೋಟ ಮಹಾರಾಜರ ಮೃತ್ಯುವು ಹೇಗೆ ಸಂಭವಿಸಿತೆಂದು ಕಳೆದ ಸಂಚಿಕೆಯ ಸ್ಥಳಸಮಾಚಾರದಲ್ಲಿ ಸೂಚಿಸಿದೆ. ಇವರ ಚಿಕಿತ್ಸೆಯನ್ನು ನಡೆಸಿದ ಅಸಿಸ್ಟೆಂಟ ಸರ್ಜನ್ ರಾವ್ ಸಾಹೇಬ್ ಜಿ. ಕೆ. ನ್ಯಾಡೂ ಮತ್ತು [illegible] ವಿಷದಿಂದ ಕೂಡಿದ ಔಷಧವನ್ನು ಕೊಟ್ಟ ಕೌಂಪೌಂಡರ್ ಮಿ॥ ಜೆ. ಯಂ. ಫೆರ್ನಾಂಡಿಸ್ ಇವರ ವಿಚಾರಣೆಯು ಪೂನೆಯ ಕಲೆಕ್ಟರರ ಮುಂದೆ ಆಗುತ್ತಿದೆ.

ಮುಂಬಯಿ:—ಅಮೇರಿಕದಿಂದ ಹಿಂದೂಸ್ಥಾನದ ಸಂಚಾರಾರ್ಥವಾಗಿ ಬರುವವರ ಸಂಖ್ಯೆಯು ದಿನೆ ದಿನೆ ಹೆಚ್ಚಾಗುತ್ತ ಬರುತ್ತದೆ. ಕಳೆದ ಶುಕ್ರವಾರ ದಿನ ಅಮೇರಿಕದಿಂದ [illegible] ಮಂದಿಗಳು ಬಂದು ಮುಂಬಯಿಯಲ್ಲಿ ಇಳಿದಿರುವರು.

ಕಲ್ಕತ್ತೆ:—ಕಳೆದ ತಾರೀಕು ೧೯ರಲ್ಲಿ ಅಬ್ದುಲ್‌ರಹಿಮಾನ್ ಎಂಬ ತರುಣನೊಬ್ಬನು ಮತ್ತು ೧೯ ಮಂದಿ ಸ್ವಯಂ ಸೇವಕರು, ರಾಷ್ಟ್ರೀಯ ಪತಾಕೆಯನ್ನು ಹಿಡಕೊಂಡು ಮಹಾತ್ಮಾಗಾಂಧಿಕೀ ಜೈ ಎಂಬ ಘೋಷವನ್ನು ಹಾಕುತ್ತಾ ಹೋದ ಬಗ್ಗೆ ಅವರನ್ನು ಹಿಡಿದು ಪ್ರತಿಯೊಬ್ಬರಿಗೆ ಒಂದೊಂದು ರೂಪಾಯಿಯಂತೆ ಜುರುಮಾನೆ, ಜುರುಮಾನೆಯನ್ನು ತೆರದಿದ್ದರೆ ಎರಡು ದಿನಗಳ ಸಾಧಾರಣ ಶಿಕ್ಷೆಯನ್ನು ಅನುಭವಿಸತಕ್ಕದೆಂದು ವಿಧಿಸಲಾಗಿದೆ.

ಅಹಮ್ಮದಾಬಾದ ಗಿರಣಿಗಳ ಮುಷ್ಕರ:—ಅಹಮ್ಮದಾಬಾದ ಗಿರಣಿಗಳ ಮುಷ್ಕರವು ಇನ್ನೂ ನಡಕೊಂಡೆ ಇದೆ. ಇಲ್ಲಿಯ ವರೆಗೂ ಮಣಿಯುವಂತೆ ತೋರುವುದಿಲ್ಲ. ಮುಷ್ಕರಹೂಡಿದ ಸುಮಾರು ಅರ್ಧ ಮಂದಿಗಳು ತಮ್ಮ ತಮ್ಮ ಗ್ರಾಮಗಳಿಗೆ ಹೋಗಿರುವರು. ಉಳಿದವರು ಪಟ್ಟಣವನ್ನು ತಕ್ಷಣಕ್ಕೆ ಬಿಟ್ಟು ಹೋಗಲು ಇಚ್ಛಿಸುವುದಿಲ್ಲ. ಪಟ್ಟಣದಲ್ಲಿ ಉಳಕೊಂಡ ಅನೇಕ ಮಂದಿ ಕೂಲಿಗಳು ನಾನಾ ತರದ ಸಾಮಾನುಗಳನ್ನು ಬೀದಿ ಬೀದಿಗಳಲ್ಲಿ ಹೊತ್ತುಕೊಂಡು ಹೋಗಿ ಮಾರಾಟಮಾಡಿ ಜೀವನಮಾಡುತ್ತಿರುವರು. ಕೂಲಿಗಳು ಗಲಾಟೆಯನ್ನು ನಡಸುವ ಲಕ್ಷಣಗಳು ತೋರುವುದಿಲ್ಲ. ಅವರಿಗೆ ಎರಡು ಮೂರು ತಿಂಗಳ ವರೆಗೆ ಜೀವನ ನಡಸಲು ಸಾಕಾಗುವಷ್ಟು ಹಣವು ಅವರ ಸಂಘದೊಡನಿರುವುದಂತೆ. ಮಹಾತ್ಮಾ ಗಾಂಧಿಯವರೊಡನೆ ಯರವಾಡಾ ಜೈಲಿನಲ್ಲಿರುವ ಶ್ರೀಯುತ ಶಂಕರಲಾಲ ಬೇಂಕರರು ಈಗ ಅಹಮ್ಮದಾಬಾದಿನಲ್ಲಿರುವರು. ಗಿರಣಿಗಳ ಮಾಲಿಕರ ಸಂಘದ ಅಧ್ಯಕ್ಷರಾದ ಶೇಟ್ ಮಂಗಲದಾಸರನ್ನು ಕಂಡು ಈಗ ಅವರು ಎಲ್ಲ ಪರಿಸ್ಥಿತಿಯನ್ನು ತಿಳಕೊಳ್ಳುತ್ತಿದ್ದಾರೆ. ಗಿರಣಿ ಮಾಲಿಕರು ಮತ್ತು ಕೂಲಿಗಳೊಳಗೆ ಇರುವ ವಿವಾದವನ್ನು ರಾಜಿಯಿಂದ ತೀರ್ಮಾನಿಸುವುದು ಇವರ ಉದ್ದೇಶವಾಗಿದೆ.

ಅಕಾಲಿ ಕೈದಿಗಳು:—ಕೆಲವು ಮಂದಿ ಅಕಾಲಿ ಕೈದಿಗಳನ್ನು ಸರಕಾರದವರು ಈಗ ಬಿಡುಗಡೆಮಾಡಿರುವರು. ಅಂಬಾಲಾ ಜೈಲಿನಿಂದ ಬಿಡುಗಡೆ ಹೊಂದಿ ೧೯೬ ಮಂದಿ ಕೈದಿಗಳು ಕಳೆದ ತಾರೀಕು ೨೦ರಲ್ಲಿ ಅಮೃತಸರಕ್ಕೆ ಬಂದುತಲ್ಪಿರುವರು.

ಅಸಹಕಾರಿ ಚೆಯರ್‌ಮೇನರು:—ಬಂಗಾಳದ ಮಿಡ್ನಾಪುರ ಡಿಸ್ಟ್ರಿಕ್ಟ್ ಬೋರ್ಡಿಗೆ ಶ್ರೀಯುತ ಬಿ. ಯನ್. ಶಸ್‌ಮೊಲ್ ಎಂಬ ಅಸಹಕಾರಿ ಪಂಗಡದ ಬ್ಯಾರಿಸ್ಟರರು ಚೆಯರ್‌ಮೇನರಾಗಿ ಆರಿಸಲ್ಪಟ್ಟಿರುವರು.

ದಕ್ಷಿಣ ಕನ್ನಡ.

ಪುತ್ತೂರು:—ಬೇಸಿಗೆಕಾಲವು ಹೋಗಿ ಮಳೆಗಾಲದ ದಿನಗಳು ಸಮೀಪಿಸಿದವು. ಅಕ್ಕಿ ಕ್ರಯ ಈಗಲೆ ಏಣೆಲು ಅಕ್ಕಿ ಮುಡಿ ೧ರ ರೂಪಾಯಿ ೭-೮-೦ ಸುಗ್ಗಿ ಅಕ್ಕಿಗೆ ಮುಡಿ ೧ರ ರೂಪಾಯಿ ೬-೮-೦ ಧಾರಣೆ ನಡಿಯುತ್ತಿದೆ. ದಿನೆ ದಿನೆ ಅಕ್ಕಿ ಕ್ರಯ ಏರುತ್ತದಲ್ಲದೆ ತಗ್ಗುವ ಸಂಭವ ಇಲ್ಲ. ಮಳೆ ಸ್ಥಿತಿ ನೋಡುವಾಗ ಮೊದಲೆ ಮಳೆ ಬಂದು ಬಿಸಿಲು ಬೆಳೆಗೆ ಮೋಸವಾಗುತ್ತದೊ ಎಂಬದೊಂದು ಹೆದರಿಕೆ. ಮಳೆಗಾಲದಲ್ಲಿ ಅಕ್ಕಿ ಕ್ರಯ ಹೇಗೆ ನಿಲ್ಲುವದೊ ಎಂಬ ಹೆದರಿಕೆ. ಅತ್ತ ರಂಗೂನಿನಲ್ಲಿ ದಾಸ್ತಾನು ಇದ್ದ ೪॥ ಲಕ್ಷದ ಅಕ್ಕಿ ರಾಶಿ ಬೂದಿಯಾಯಿತೆಂತ ಪತ್ರಿಕೆಯ ಸಾಕ್ಷಿ. ಕೊನೆಗೆ ಇಲ್ಲಿಯ ಅಕ್ಕಿ ಎಲ್ಲಾ ಹೊರಗೆ ಹೋಗಿ ಬೆಲೆ ಹೆಚ್ಚಾಗಿ ನಮಗೆ ಊಟಕ್ಕೆ ಅಕ್ಕಿಯು ತುಟ್ಟಿಯಾಗುವುದೊ ಎಂಬ ಶಂಕೆ. ನಮ್ಮ ಕನ್ನಡಜಿಲ್ಲೆಯಲ್ಲಿ ಅಲ್ಲಲ್ಲಿ ಸಂಘಗಳು ಇವೆಯಷ್ಟೆ. ಸಂಘದವರಾದರೊ ಸ್ವಲ್ಪ ಅಕ್ಕಿ ಖರೀದಿಮಾಡಿ ದಾಸ್ತಾನುಮಾಡಿಟ್ಟು ಮಳೆಗಾಲದಲ್ಲಿ ಜನರು ಬರಗಾಲದ ಕಷ್ಟಕ್ಕೆ ಸಿಕ್ಕದಂತೆ ಮಾಡುವುದು ಉತ್ತಮವಲ್ಲವೆ?

ಬಂಟವಾಳ:—ಇಲ್ಲಿ ಮೈಲಿಗಜ್ಜ, ಕೋರಾ, ಕೆಟ್ಟು ನಿಂತಿತು. ಸನ್ನಿಪಾತಜ್ವರವು ಊರಿನಲ್ಲೆಲ್ಲಾ ಹಬ್ಬಿಯದೆ. ಆಸ್ಪತ್ರೆಯಲ್ಲಿ ಒಬ್ಬ ಕೌಂಪೌಂಡರರು ಸಾಕಾಗುವದಿಲ್ಲ.

ದೇಶಬಂಧು ದಾಸರು ಲಾಹೋರಿನಲ್ಲಿ ಮಾಡಿದ ಭಾಷಣದ ಸಾರಾಂಶ.

ದೇಶಬಂಧುಗಳು ಪ್ರಥಮದಲ್ಲಿ ಹಿಂದೂ ಮುಸಲ್ಮಾನರು ತಮ್ಮ ತಮ್ಮೊಳಗೆ ಪರಸ್ಪರ ದ್ವೇಷದಿಂದ ನಡಿಸುತ್ತಿರುವ ಕಾರ್ಯಗಳನ್ನು ಖಂಡಿಸಿ, ಕೆಲವು ಹುದ್ದೆಗಳಿಗಾಗಿ ಹಾಗು ಮುನ್ಸಿಪಾಲಿಟಿಗಳಲ್ಲಿ ಮತ್ತು ಕೌನ್ಸಿಲುಗಳಲ್ಲಿ ಸ್ಥಾನಗಳನ್ನು ಹೊಂದುವುದಕ್ಕಾಗಿ ಒಬ್ಬರ ಮೇಲೊಬ್ಬರು ಬೀಳುವಂತೆ ಮಾಡುವುದನ್ನು ನಿಂದಿಸಿದರು. ಸರಕಾರಿ ಹುದ್ದೆ ಮತ್ತು ಚಾಕರಿಯನ್ನು ಹೊಂದುವುದರಿಂದ ತಮ್ಮ ಉದ್ಧಾರನೆಯಾಗುವುದೆಂದು ನಂಬುವ ಹಿಂದೂ ಮುಸಲ್ಮಾನರು ತೀರ ಮರುಳರೆ ಸರಿ. ಶೇಕಡಾ ೪೦ ಅಥವಾ ೫೦ ಸರಕಾರಿ ಸ್ಥಾನಗಳನ್ನು ಪಡೆಯುವುದಕ್ಕಾಗಿ ಅವರು ತಮ್ಮ ಸ್ವಾತಂತ್ರ್ಯದ—ಸ್ವರಾಜ್ಯದ—ಹೇತುವನ್ನೇ ಕಳಕೊಳ್ಳುವರು. ದೇಶದ ಸ್ವಾತಂತ್ರ್ಯಕ್ಕಾಗಿ ಹಿಂದೂ ಮುಸಲ್ಮಾನರ ಸಾವಿರಾರು ಯುವಕರ ತಂಡಗಳು ಹೋರಾಡಲು ಸಿದ್ಧರಾಗಿರುವುದನ್ನು ಕಾಣಬೇಕಾಗಿ ನನ್ನ ಆಸೆಯಾಗಿದೆ. ಈ ದೇಶದಲ್ಲಿ ಸಹೋದರರ ಹಾಗೆ ಇರುವ ಹಿಂದೂ ಮುಸಲ್ಮಾನರಲ್ಲಿ ಉಂಟಾಗಿರುವ [illegible]ಯನ್ನು ಇವರು ನಿವಾರಿಸಲಿಕ್ಕಿಲ್ಲವೆ?

ನೀವು [illegible] ದಿವಸಗಳ ಕಷ್ಟಗಳನ್ನು ಸಾಕಷ್ಟು ಅನುಭವಿಸಿದ್ದೀರಿ. ಈಗ ನೀವು ಅದನ್ನು ಮರೆತುಬಿಟ್ಟಿರಿ. ನಿಮಗೆ ಪುನಃ [illegible] ದಿವಸಗಳನ್ನು ನೋಡಬೇಕಾಗಿ ಬರುವುದು. ಆಗ ನಿಮಗೆ ರಾಷ್ಟ್ರೀಯ ಅಭಿಮಾನದ ಜಾಗೃತಿಯು ಜ್ಞಾನವು ಬೇಗನೆ ಉಂಟಾದೀತು. ಹಿಂದೂ ಮುಸಲ್ಮಾನರೊಳಗಿನ ಕಲಹದ ಬೀಜವನ್ನು ಕಿತ್ತು [illegible] ಸ್ವರಾಜ್ಯವು ಲಭಿಸುವುದು. ನಿಮಗೆ ಸ್ವರಾಜ್ಯವು ಬೇಕಾಗಿದೆಯೆ ಎಂಬ ಪ್ರಶ್ನೆಯನ್ನು ಪುನಃ ಪುನಃ ಕೇಳುವೆನು. ಆಗ ನೀವು [illegible] ಬೇಕು, ಅಥವಾ ಹೇಡಿಗಳಾಗಿ, ಬೇಡವೆಂದು ಹೇಳಬೇಕಾಗುವುದು. ನಿಮಗೆ ಹಿಂದೂ ಸ್ವರಾಜ್ಯ ಅಥವಾ ಮುಸಲ್ಮಾನ ಸ್ವರಾಜ್ಯವು ಬೇಡ, ನಿಮ್ಮಷ್ಟಕ್ಕೆ ಮೋಸವನ್ನು ಹೊಂದಬೇಡಿರಿ. [illegible] ಸ್ವರಾಜ್ಯವು ಬರುವುದೆಂದು ನಾನು ಹೇಳುತ್ತೇನೆ. [illegible]

ಅನುಕ್ರಮಣಿಕೆ.

ಅಗ್ರಲೇಖ:—
ಬುದ್ಧಿ ಮತ್ತು ಭಾವನೆ ೬
ಸ್ಫುಟವಿಚಾರಗಳು.— ೭
೧. ೨. ಉಪ್ಪಿನ ಸುಂಕ. . . . . ,,
೩. ರಿಲಿಜಿಯಸ್ ಎನ್‌ಡೌಮೆಂಟ್ ಬೀಲು. . . . ,,
೪. ಯುನಾನಿ ಮತ್ತು ಆಯುರ್ವೇದ ಔಷಧ . . . ,,
ಮಂಗಳೂರು— . . . . . ,,
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ . . . ೫
ದಕ್ಷಿಣಕನ್ನಡ— ಪುತ್ತೂರು, ಬಂಟವಾಳ . . . ,,
ಮಹಾತ್ಮಾ ಗಾಂಧಿಯವರು ೮
ಶ್ರೀರಾಮ ಹ್ಯಾಯರ್ ಎಲಿಮೆಂಟರಿಶಾಲೆಯ ವರ್ಧಂತಿ . . ,,
ದೇಶಬಂಧು ದಾಸರ ಭಾಷಣ . . . . ,,
ಪಡುಬಿದ್ರೆಯಲ್ಲಿ ಕೋಂಗ್ರೆಸ್ ಕಾರ್ಯಪ್ರಚಾರ . . . ,,
ಇದ್ದ ವಿದ್ಯಾದಾಯಿನೀ ಶಾಲೆಯ ವರ್ಧಂತಿ . . . ,,
ಪಣಂಬೂರು ಬೋರ್ಡು ಶಾಲೆ, ಕದ್ರಿ ಯುವಕರ ಸಂಘ . . ,,

ಸ್ವದೇಶಾಭಿಮಾನಿ.

ಶಕ ೧೮೪೪ ವೈಶಾಖ ಶು| ೧೧ಯು ಶುಕ್ರವಾರ

ಬುದ್ಧಿ ಮತ್ತು ಭಾವನೆ.

"ಬುದ್ಧಿ" ಮತ್ತು "ಭಾವನೆ" ಇವೆರಡು ಲೋಕದಲ್ಲಿ ಪ್ರಚಂಡ ಶಕ್ತಿಗಳು. ಈ ಎರಡು ಶಕ್ತಿಗಳಿಂದ ವಿಶ್ವರಚನೆಯಂಥ ವಿಧಾಯಕ ಕಾರ್ಯಗಳು ಹೇಗೆ ಆಗಬಲ್ಲವೊ ಹಾಗೆಯೆ ಪ್ರಳಯದಂಥ ವಿಘಾತಕ ಕಾರ್ಯಗಳು ಕೂಡ ಆಗಬಲ್ಲವು. ಇವೆ ಎಂದಲ್ಲ, ಲೋಕದಲ್ಲಿ ಯಾವ ಕಾರ್ಯವಾದರೂ ಆಗಬೇಕಾದರೆ, ಬುದ್ಧಿ ಮತ್ತು ಭಾವನೆ ಇವುಗಳ ಸಾಹಾಯ್ಯವು ಅವಶ್ಯವಾಗಿದೆ. ಹಿಂದುಸ್ಥಾನದೊಳಗಿನ ಆಧುನಿಕ ಅಸಹಕಾರ ಚಳವಳಕ್ಕೆ ಬುದ್ಧಿ ಮತ್ತು ಭಾವನೆಗಳ ಸಾಹಾಯ್ಯವು ಎಷ್ಟರಮಟ್ಟಿಗೆ ದೊರಕಿದೆ ಎಂಬುದನ್ನು ಪರೀಕ್ಷಿಸಿ ನೋಡುವ ಕಾಲವು ಪ್ರಾಪ್ತವಾಗಿದೆ. ಅಸಹಕಾರ ಚಳವಳದ ರಥಕ್ಕೆ ಬುದ್ಧಿ ಮತ್ತು ಭಾವನೆಯ ಚಕ್ರಗಳು ಎಷ್ಟರ ಮಟ್ಟಿಗೆ ಎಂದರೆ ಯಾವಯಾವ ಪ್ರಮಾಣದಿಂದ ಬಲಕೊಡುತ್ತಿವೆ ಅಥವಾ ಈಗಿನ ಚಳವಳವು ಮೇಲಿನ ಎರಡೂ ಕಾಲುಗಳ ಮೇಲೆ ಎಷ್ಟರಮಟ್ಟಿಗೆ ಆಧರಿಸಿಕೊಂಡಿದೆ ಎಂಬುದನ್ನು ಪರೀಕ್ಷಿಸುವುದು ಅಪ್ರಾಸಂಗಿಕವಾಗಲಾರದು. ಈ ವಿಷಯವನ್ನು ಪರೀಕ್ಷಿಸುವಾಗಲೆ ಚಳವಳಕ್ಕೆ ಹಿತಕರವಾದ ಮತ್ತು ಪೋಷಕವಾದ ತತ್ವವು ಯಾವುದು ಎಂಬುದನ್ನು ಕೂಡ ದಿಗ್ದರ್ಶಿಸೋಣ.

"ಬುದ್ಧಿ" ಮತ್ತು "ಭಾವನೆ" ಇವುಗಳ ಸರಿಯಾದ ಕಲ್ಪನೆ ಬರಬೇಕಾದರೆ ಮೊದಲು ಅವುಗಳ ಅರ್ಥವನ್ನು ತಿಳಕೊಳ್ಳಬೇಕು. ಭಾವನೆ ಎಂದರೆ ವಿಕಾರವು. ಇದಕ್ಕೆ ಇಂಗ್ಲೀಷಿನಲ್ಲಿ emotion ಎನ್ನುವರು. ಬುದ್ಧಿ ಎಂದರೆ ವಿಚಾರವು. ವಿಚಾರವು reason ಎಂಬ ಮಾತಿನಿಂದ ಇಂಗ್ಲಿಷ ಭಾಷೆಯಲ್ಲಿ ವ್ಯಕ್ತಗೊಳಿಸಲ್ಪಡುತ್ತದೆ. ಶಿರೋಲೇಖದಲ್ಲಿ ಬರೆದಿರುವ ಭಾವನೆ ಮತ್ತು ಬುದ್ಧಿ ಈ ಶಬ್ದಗಳನ್ನಾಗಲಿ ಅಥವಾ ವಿಕಾರ ಮತ್ತು ವಿಚಾರ ಈ ಮಾತುಗಳನ್ನಾಗಲಿ ಪ್ರಯೋಗಿಸಿದರೂ ಈ ಶಬ್ದ ಜೋಡುಗಳ ಅರ್ಥವು ಒಂದೆ ಸರಿ. ಭಾವನೆಯಲ್ಲಿ ಅಥವಾ ವಿಕಾರದಲ್ಲಿ ಜ್ಞಾನದ ಅಂಶವು ಬಹು ಕಡಿಮೆ. ಭಕ್ತಿಮಾರ್ಗದಲ್ಲಿ ದೃಢವಿಶ್ವಾಸವೆ ಹೇಗೆ ಆಧಾರಸ್ತಂಭವೊ ಹಾಗೆಯೆ ಭಾವನೆಯಲ್ಲೂ ಅಂಧ ಶ್ರದ್ಧೆಯೆ ಮೂಲಾಧಾರವು. ಆದರೂ ಒಂದು ಕಾರ್ಯದಲ್ಲಿ ತೀವ್ರವಾದ ಭಾವನೆಯು ಅತ್ಯಂತ ಸಾಧಕವಾದ್ದು. ತೀವ್ರಭಾವನೆ ಇಲ್ಲದೆ ಕಾರ್ಯವು ಬೇರೂರುವುದಿಲ್ಲ. ಭಾವನೆಯ ಅಡಿಗಟ್ಟಿನ ಮೇಲೆ ಕಾರ್ಯಾರಂಭದ ಕಟ್ಟೋಣವು ನಿಲ್ಲಿಸಲ್ಪಡುತ್ತದೆ. ಭಾವನೆ ಎಂದರೆ ಶ್ರದ್ಧೆ. ಇದು ಕಾರ್ಯಗಳಿಗೆ ಮಾತೃಸ್ಥಾನವಾಗಿದೆ ಎಂದು ಶ್ರುತಿಯಲ್ಲಿ ಹೇಳಿದೆ. ಇದರ ಮರ್ಮವಾದರೂ ಕಾರ್ಯಾರಂಭಕ್ಕೆ ಭಾವನೆಯೆ ಪ್ರಧಾನವಾದ್ದು ಎಂದು ಸೂಚಿಸುವುದಾಗಿದೆ. ಒಂದು ಕೆಲಸವನ್ನು ಕೈಕೊಳ್ಳುವಾಗ ಮತ್ತು ಕೈಕೊಂಡ ಮೇಲೆ "ಅದು ಸದೋಷವಾಗಲಿ, ನಿರ್ದೋಷವಾಗಲೀ ಸುಸಾಧ್ಯವಾಗಲಿ, ಅಸಾಧ್ಯವಾಗಲಿ ಅಥವಾ ವ್ಯವಹಾರ್ಯವಾಗಲಿ ಇಲ್ಲವೆ ಅವ್ಯವಹಾರ್ಯವಾಗಲಿ ಅದನ್ನು ತ್ಯಜಿಸದೆ ಪೂರೈಯಿಸಲೇ ಬೇಕು ಎಂದು ದೃಢವಾಗಿ ಸಂಕಲ್ಪಿಸಿ ಆ ಸಂಕಲ್ಪದಂತೆ ಮುಂದಕ್ಕೆ ಪ್ರವರ್ತಿಸುವುದೆ ಭಾವನೆಯು. ಈ ಹೊತ್ತು ಒಂದು ಕಾರ್ಯವನ್ನು ಸಂಕಲ್ಪಿಸೋಣ ಮತ್ತು ನಾಳೆ ಅದನ್ನು ಬಿಟ್ಟುಬಿಡೋಣ ಎಂದರೆ ಭಾವನೆಯು ಇಲ್ಲದ ಪ್ರಯುಕ್ತ ಕಾರ್ಯವಿಳಂಬ ಮಾತ್ರವಲ್ಲ, ಕಾರ್ಯಹಾನಿಯ ಅನಿಷ್ಟ ಮತ್ತು ಅಶುಭಪ್ರಸಂಗವು ಒದಗುವುದು. ಲೌಕಿಕ ದೃಷ್ಟಾಂತದಿಂದ ಹೇಳುವುದಾದರೆ, ಯುದ್ಧದ ಉದ್ಯೋಗವನ್ನು ಪ್ರಾರಂಭಿಸಿ ಪಾಂಡವರು ಅಷ್ಟರಿಂದಲೆ ನಿವೃತ್ತರಾಗಿದ್ದುದಾದರೆ ವ್ಯಾಸ ಮಹರ್ಷಿಗಳಿಗೆ ಮಹಾಭಾರತವನ್ನು ಉದ್ಯೋಗಪರ್ವದಲ್ಲೆ ಮುಗಿಸಬೇಕಾಗುತ್ತಿತ್ತು. ಸಾರಾಂಶ ಸುಂಟರಗಾಳಿಯು ಬೀಸಲು ಪ್ರಾರಂಭಿಸಿದ ಬಳಿಕ ಮುಳ್ಳಿನಮರ, ಬಾಳೆಗಿಡ ಮುಂತಾದ ಒಳ್ಳೇದು ಕೆಟ್ಟದು ಯಾವುದನ್ನೂ ಲಕ್ಷಿಸದೆ ಹೇಗೆ ಒಂದೆ ಸವನೆ ಎಲ್ಲವನ್ನು ಬಗ್ಗಿಸುತ್ತ ಹೋಗುತ್ತದೊ ಅಥವಾ ವರ್ಷಾಕಾಲದ ನದೀಪ್ರವಾಹವು ತೀರದಮೇಲಿನ ಪ್ರತಿಯೊಂದನ್ನು ಹೇಗೆ ತನ್ನ ಆಟೋಪದಲ್ಲಿ ತರುವುದೊ ಹಾಗೆಯೆ ಭಾವನೆಯಾದರೂ ಕಾರ್ಯವನ್ನು ಪ್ರಾರಂಭಿಸಿದ ಬಳಿಕ ಒಳ್ಳೇದು ಕೆಟ್ಟದು, ಯುಕ್ತ ಅಯುಕ್ತ ಇತ್ಯಾದಿ ವಿಚಾರಕ್ಕೆ ಇಳಿಯದೆ ಮುಂದರಿಸುವದು. ಇದೇ ಭಾವನೆಯ ಸ್ವರೂಪವು, ವಿಕಾರದ ವಿಲಾಸವಾದರೂ ಇದೇ ಸರಿ.

ವಿಚಾರದ ಸಾಮರ್ಥ್ಯವು ಎಂದರೆ ಬುದ್ಧಿಯ ಪ್ರಭಾವವು ಭಾವನೆಗಿಂತ ಭಿನ್ನವಾಗಿದೆ. ಒಂದು ಕಾರ್ಯದಲ್ಲಿ ಪೂರ್ವಾಪರ ವಿವೇಚನೆ, ಸಾಧ್ಯಾಸಾಧ್ಯಜ್ಞಾನ ಮುಂತಾದ ವಿಷಯಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಪ್ರವರ್ತಿಸುವುದು ವಿಚಾರದ ಕಾರ್ಯವು. ಚುಟುಕಿನಿಂದ ಹೇಳುವುದಾದರೆ ವಿವೇಕವೆ ಬುದ್ಧಿಯ ಸ್ವರೂಪವು. ಮತ್ತು ಈ ತತ್ವವನ್ನೆ ಅನುಸರಿಸಿ ಭಗವಂತನು ಗೀತೆಯಲ್ಲಿ "ಪ್ರವೃತ್ತಿಂಚ ನಿವೃತ್ತಿಂಚ" ಇತ್ಯಾದಿ ರೂಪದಿಂದ ಸಾತ್ವಿಕಬುದ್ಧಿಯ ಲಕ್ಷಣವನ್ನು ವಿವೇಚಿಸುವಾಗ ವಿವೇಚನೆಯೆ ಬುದ್ಧಿಯ ಲಕ್ಷಣವೆಂದು ಸೂಚಿಸಿದ್ದಾನೆ. ವಿವೇಚಕ ಶಕ್ತಿಯ ಅಭಾವದಲ್ಲಿ ಎಲ್ಲ ಕತ್ತಲೆಯು. ಕತ್ತಲೆಯಲ್ಲಿ ಸಂಚರಿಸಲು ದೀಪವು ಹೇಗೆ ಮಾರ್ಗದರ್ಶಕವೊ ಹಾಗೆಯೆ ಕಾರ್ಯಾಕಾರ್ಯವಿವೇಚನೆಯಾಗದೆ ಸಂಶಯಗ್ರಸ್ತವಾದ ಮನಸ್ಸಿಗೆ ಬುದ್ಧಿಯು ಮಾರ್ಗದರ್ಶಕವಾಗಿದೆ. ಉಪನಿಷದ್ ಭಾಷೆಯಿಂದ ಬುದ್ಧಿಯ ಯೋಗ್ಯತೆಯನ್ನು ಹೇಳುವುದಾದರೆ, ಬುದ್ಧಿಗೆ ಸಾರಥಿಯ ರೂಪಕವನ್ನು ಕೊಟ್ಟಿದ್ದನ್ನು ಉದಾಹರಿಸಬಹುದು. ರಥವು ದಾರಿತಪ್ಪಿ ನಡೆಯದೆ ಸರಿಯಾದ ಕಡೆಯಲ್ಲಿ ಅದನ್ನು ಕೊಂಡುಹೋಗುವುದು ಸಾರಥಿಯ ಕರ್ತವ್ಯವು ಹೇಗೊ ಹಾಗೆ ಸಾಧ್ಯವಾದ ಕಾರ್ಯದಲ್ಲಿ ಪ್ರವೃತ್ತಿಯನ್ನುಂಟುಮಾಡಿ ಅದನ್ನು ಸಾಧಿಸುವುದು ಬುದ್ಧಿಶಕ್ತಿಯ ಕಾರ್ಯವಾಗಿದೆ! ತಾತ್ಪರ್ಯ, ಬುದ್ಧಿ ಎಂದರೆ ವಿಚಾರ, ವಿಚಾರವೆಂದರೆ ವಿವೇಚನೆ. ಈ ವಿವೇಚನೆಯು ಕಾರ್ಯಸಿದ್ಧಿಗೆ ಅತ್ಯಂತ ಅವಶ್ಯಕವು.

ಮೇಲಿನ ಪ್ರತಿಪಾದನದ ಮೇಲಿಂದ ಒಂದು ಕಾರ್ಯವನ್ನು ಸಾಧಿಸಲು ಭಾವನೆಯು ಹೇಗೆ ಬೇಕೊ ಬುದ್ಧಿಯು ಕೂಡ ಹಾಗೆಯೆ ಬೇಕೆಂಬುದನ್ನು ವಾಚಕರು ತಿಳಿಯದೆ ಇರಲಿಕ್ಕಿಲ್ಲ. ನಮ್ಮ ಈ ಕಾರ್ಯದಲ್ಲಿ ಬುದ್ಧಿಯು ಬೇಡ, ನಮಗೆ ಬರೆ ಭಾವನೆಯೊಂದಿದ್ದರೆ ಸಾಕು, ನಾವು ಅದರ ಬಲದಿಂದ ಎಲ್ಲವನ್ನು ಸಾಧಿಸಿಯೇವು ಎಂದು ಹೇಳಿದರೆ ಆ ಮಾತು ಸೃಷ್ಟಿಯ ಸ್ವಭಾವಕ್ಕೆ ಪ್ರತಿಕೂಲವಾಗುವುದು. ಒಂದು ಕಾರ್ಯದಲ್ಲಿ ವಿಕಾರ, ವಿಚಾರ ಈ ಎರಡೂ ಶಕ್ತಿಗಳು ಅವಶ್ಯವೆಂದು ಸೃಷ್ಟಿಯ ನಿಯಮವಿದೆ. ಎರಡು ರೆಕ್ಕೆಗಳಿಲ್ಲದೆ ಹೇಗೆ ಒಂದು ಪಕ್ಷಿಯು ಹಾರತೊಡಗದೊ ಹಾಗೆಯೆ ಭಾವನೆಯಿಂದ ಪ್ರಾರಂಭವಾದ ಕಾರ್ಯಕ್ಕೆ ಬುದ್ಧಿಬಲವಿಲ್ಲದೆ ಹೋದರೆ, ಹುಳಹಿಡಿದ ಮರವು ಪೊಳ್ಳಾಗಿ ಬೀಳುವಂತೆ ಬುದ್ಧಿಶಕ್ತಿಶೂನ್ಯವಾದ ಕಾರ್ಯವು ಕೊನೆಗೆ ವ್ಯರ್ಥವಾಗುವುದು. ಚಿಕ್ಕಮಕ್ಕಳಲ್ಲಿ ವಿಕಾರವೆ ಪ್ರಧಾನವಾಗಿರುವುದು. ಈ ಮನೋವೃತ್ತಿಯ ಪ್ರಾಬಲ್ಯದಿಂದ ಅವರ ಬಾಲ್ಯವು ಹೇಗೆ ಕೆಲವಂಶದಲ್ಲಿ ರಮಣೀಯವಾಗಿ ತೋರುವುದೊ ಹಾಗೆ ಅದೆ ಮನೋವೃತ್ತಿಯು ಅವರಿಗೆ ರಕ್ಷಣೀಯವಾಗುವುದು. ತಥಾಪಿ ಚಿಕ್ಕಂದಿನಲ್ಲಿ ವಿಕಾರದ ಮನೋವೃತ್ತಿಯು ಒಪ್ಪುತ್ತದೆ. ಕೆಲವುಮಟ್ಟಿಗೆ ಪ್ರಯೋಜನಕಾರಿಯಾಗುತ್ತದೆ ಎಂಬುದರಿಂದ ತಾರುಣ್ಯದಲ್ಲೂ ಅಥವಾ ಪ್ರೌಢವಯಸ್ಸಿನಲ್ಲೂ ವಿವೇಕಶೂನ್ಯವಾದ ಭಾವನೆಯೆ ಸಾಧಕವಾದೀತೆಂದು ಒಬ್ಬನು ತಿಳಿಯಹತ್ತಿದರೆ ಅವನು ವಸ್ತುಸ್ಥಿತಿಯ ಅಜ್ಞಾನದಿಂದ ಈ ರೀತಿಯಾಗಿ ಪ್ರತಿಕೂಲ ಅಭಿಪ್ರಾಯಪಡದಿದ್ದಾನೆಂದು ಅವನ ಬಗ್ಗೆ ವಿಚಾರವಂತರು ವ್ಯಸನಪಟ್ಟಾರು. ಭಾವನೆಯಂತೆಯೆ ಬುದ್ಧಿಯೂ ಬೇಕು. ವಿಕಾರದಂತೆಯೆ ವಿಚಾರವೂ ಅವಶ್ಯವಿದೆ. ಮೊದಲನೆಯ ತೆರೆಯು ಭಾವನೆಯದಾದರೆ ಎರಡನೆಯದು ಬುದ್ಧಿಯದಾಗಿದೆ. ಸದಾ ಸರ್ವದಾ ಭಾವನೆಯ ದಾಸರಾಗಿಯೆ ಇರೋಣವೆಂಬುದು ಅಸಮಂಜಸವು. ಹೊಲದಲ್ಲಿ ಬೀಜವನ್ನು ಬಿತ್ತಿದಾಗ ಬತ್ತದ ಪೈರಿನ ಸಂಗಡ ಕೆಲವು ಕಾಡುಸಸಿಗಳು ಅಥವಾ ಹುಲ್ಲು ಬೆಳೆದಿರಬಹುದು. ಮತ್ತು ಆದ್ದರಿಂದಲೆ ವರ್ಷಾಕಾಲದ ಮಧ್ಯಕಾಲದಲ್ಲಿ ಒಕ್ಕಲಿಗರು ವಿಂಗಡಿಸಿ ಬತ್ತದ ಸಸಿಗಳನ್ನಿಟ್ಟು ಹುಲ್ಲು ಮುಂತಾದ್ದನ್ನು ತೆಗೆದುಹಾಕುವರು. "ಗದ್ದೆಯಲ್ಲಿ ಹುಟ್ಟಿದ್ದೆಲ್ಲ ಬೆಳೆಯಲಿ" ಎಂದು ಜಾಣನಾದ ರೈತನು ತಿಳಕೊಳ್ಳುವುದಿಲ್ಲ. ಮಾತ್ರವಲ್ಲ, ಈಗ ಹೇಳಿದಂತೆ ಕೆಟ್ಟದನ್ನು ಬಿಟ್ಟು ಒಳ್ಳೆದನ್ನು ಬೆಳಸುವನು. ಈ ದೃಷ್ಟಾಂತವನ್ನು ಅನ್ವಯಿಸಿ ಹೇಳುವುದಾದರೆ ಬೀಜಬಿತ್ತದ ಕಾಲಕ್ಕೆ ಭಾವನೆಯ ಸಾಮ್ಯವನ್ನು ಕೊಡಬಹುದು. ಮತ್ತು ಪೈರು, ಹುಲ್ಲು ಮುಂತಾದ ರೀತಿಯಲ್ಲಿ ವಿಂಗಡಿಸುವ ಸಮಯಕ್ಕೆ ಬುದ್ಧಿಯ ಸಾಮ್ಯವನ್ನು ತೋರಿಸಬಹುದು. ಬೇರೆ ಮಾತಿನಿಂದ, ಒಬ್ಬ ಒಕ್ಕಲಿಗನಾದರೂ ಬೀಜಬಿತ್ತುವಾಗ ಭಾವನಾಪ್ರಧಾನನೂ, ಕಳೆ (ನೇಜು) ಗೈಯುವಾಗ ವಿಚಾರಪ್ರಧಾನನೂ ಆಗಿರುತ್ತಾನೆ ಎಂಬುದನ್ನು ಮರೆಯಕೂಡದು. ಈ ಸೂಕ್ಷ್ಮಭೇದವನ್ನು ಸರಿಯಾಗಿ ಮನಸ್ಸಿಗೆ ತಂದುಕೊಂಡು ಆಲೋಚಿಸಿದರೆ, ಪ್ರಕೃತದ ಸಂದರ್ಭದಲ್ಲಿ ಯಾರೂ ಯಾರ ಮೇಲೂ ಸಿಟ್ಟಾಗಲು ಕಾರಣವಿಲ್ಲ. ಮುತ್ತು ಸಂಪಾದಿಸಲು ಸಮುದ್ರದಲ್ಲಿ ಮುಳುಗುವವನು ಹಿಂದೆಮುಂದೆ ನೋಡದೆ, ಪೂರ್ವಾಪರ ವಿಚಾರ ಮಾಡದೆ ಕೈಯಲ್ಲಿ ಸಿಕ್ಕಿದ ಮಣ್ಣು ಅಥವಾ ವಸ್ತುಗಳನ್ನು ಬಾಚಿಕೊಂಡು ಬರುತ್ತಾನೆ. ಆದರೆ ಮೇಲೆ ಬಂದ ಬಳಿಕ ಮುತ್ತಿನ ಚಿಪ್ಪು ಯಾವುದು, ಇತರವಸ್ತು ಯಾವುದು ಎಂಬುದನ್ನು ಬುದ್ಧಿಪೂರ್ವಕವಾಗಿ ನೋಡಹತ್ತುತ್ತಾನೆ. ಎಂದರೆ ಈ ಎರಡೂ ಕೃತಿಗಳಲ್ಲಿ ಅನುಕ್ರಮವಾಗಿ ಒಂದು ಭಾವನೆ ಮತ್ತೊಂದು ಬುದ್ಧಿ ಇವುಗಳ ಪರಿಣಾಮವೆಂದಾಗಲಿ ಅಥವಾ ಕಾರ್ಯವೆಂದಾಗಲಿ ಭಾವಿಸತಕ್ಕದ್ದು. ಚಿಕ್ಕ ಮಗುವು ಬುದ್ಧಿಶೂನ್ಯತೆಯಿಂದ ಹಟಮಾರಿಯಾದರೂ ಹೆಚ್ಚಿನ ಉದ್ವೇಗಕ್ಕೆ ಕಾರಣವಾಗುವುದಿಲ್ಲ. ಪರಂತು ವಯಸ್ಸು ಅಧಿಕವಾದ ಬಳಿಕವೂ ತಾನು ಮೊದಲಿನಂತೆಯೆ ಹಟಮಾರಿಯಾಗಿಯೆ ಇದ್ದೇನೆಂದು ಹೇಳಿದರೆ ಆ ವಿಚಾರಶೂನ್ಯನು ಶಿಷ್ಟರ ನಿಷೇಧಕ್ಕೆ ಪಾತ್ರನಾದಾನು. ಚಿಕ್ಕಂದಿನ ಹಟವು ಬೇಕು, ವಿವೇಕಶಿಕ್ಷೆಯ ಉಪಯೋಗವನ್ನು ಸರ್ವಥಾ ಮಾಡಿಕೊಳ್ಳಲಿಕ್ಕಿಲ್ಲವೆಂದು ಹೇಳುವವನು ಚಿಕ್ಕಂದಿನ ಆ ಒಂದುವರೆ ಗೇಣಿನ ಅಂಗಿಯನ್ನ ಈಗಲೂ ಹಾಕಿಕೊಂಡೇನೆಂದು ೨೫-೩೦ ವರ್ಷದ ಪ್ರೌಢಯುವಕನು ಹೇಳತೊಡಗಿದರೆ ಅವನ ಅಸಾಮಂಜಸ್ಯಕ್ಕೆ ಯಾರಿಗೆ ತಾನೆ ವಿಷಾದವಾಗದೆ ಉಳಿದೀತು. ಆದ್ದರಿಂದ ಪ್ರಥಮತಃ ಭಾವನೆ ಅನಂತರ ಬುದ್ಧಿ ಈ ಎರಡು ತತ್ವಗಳು ರಾಷ್ಟ್ರದ ಉತ್ಕ್ರಾಂತಿಗೆ ಅವಶ್ಯಕವು.

ಆದರೆ ದುರ್ದೈವದಿಂದ ಈಗಿನ ಹಿಂದಿ ಅಸಹಯೋಗದ ಚಳವಳದಲ್ಲಿ ಈ ವಿಭಾಗವಿದ್ದದ್ದು ಕಂಡುಬರುವುದಿಲ್ಲ. ಭಾವನೆಯೆ ಪ್ರಧಾನವಾಗಿದ್ದು, ಸಾರಾಸಾರ ವಿಚಾರವು ಬದಿಗೆ ದೂಡಲ್ಪಟ್ಟಿದೆ. 'ಕೊನ್ಸರ್ನ್ಸ' ಎಂಬ ಹೆಸರಿನಿಂದ ಮೂರ್ಖತ್ವ, ಸತ್ಯಾಗ್ರಹದ ಹೆಸರಿನಿಂದ ದುರಾಗ್ರಹ ಮತ್ತು ಭಾವನೆಯ ಹೆಸರಿನಿಂದ ಕುರುಡು ನಂಬಿಕೆ ಇವುಗಳ ಸಾಮ್ರಾಜ್ಯವು ಈಗ ಪಸರಿಸಿಕೊಂಡಿರುವುದರಿಂದ ವಿಚಾರ ಮತ್ತು ಕಾರ್ಯಸಾಧನ ಇವು ದೂರವಾಗಿರುವುವು. ಸಾಂಪ್ರದಾಯಿಕರಲ್ಲಿ ಶುಷ್ಕವಾದ ಬಾಹ್ಯಾಚಾರಗಳಿಗೆ ಹೇಗೆ ಪರಬ್ರಹ್ಮಸ್ವರೂಪವು ಬಂದು ಹೋ[illegible]ತ್ತದೊ, ನಿಜವಾದ ಪರಬ್ರಹ್ಮವು ಹೇಗೆ ಅಲಕ್ಷ್ಯವಾಗುತ್ತದೊ ಹಾಗೆಯೆ ಈ ಕರ್ಮಠರಲ್ಲಿ ಶಬ್ದಗಳಿಗೆ ಮತ್ತು ಮತಗಳಿಗೆ ಪ್ರಾಧಾನ್ಯವು ಬಂದು ಸ್ವರಾಜ್ಯದ ಸಾಕ್ಷಾತ್ ಸಾಧನಗಳು ದುರ್ಲಕ್ಷ್ಯದ ಕೋಟೆಗೆ ಸೇರಿದವು. ಮುದ್ರೆಗಳನ್ನು ಒತ್ತಿಕೊಂಡು, ಕಿವಿಯಲ್ಲಿ ತುಲಸಿದಲವನ್ನು ಧರಿಸುವುದರಿಂದ ಮಾತ್ರ ಹೇಗೆ ಸದ್ವೈಷ್ಣವನಾಗನೊ ಅಥವಾ ತ್ರಿಪುಂಡ್ರಭಸ್ಮಧಾರಣ, ರುದ್ರಾಕ್ಷಮಾಲೆ ಮುಂತಾದುವುಗಳಿಂದ ಹೇಗೆ ಶಿವಭಾಗವತನಾಗನೊ ಹಾಗೆಯೆ ಕೆಲವು ಬಾಹ್ಯವೇಷಗಳಿಂದ ನಟನೆಮಾಡುವವನು ಅಸಹಯೋಗಿಯಾಗನು ಅಥವಾ ಸ್ವರಾಜ್ಯಭಕ್ತನಾಗನು. ಕಾರ್ಯಸಾಧಕವಾದ ಕೃತಿಗಳ ಬೇಕು. ಯಾವ ಕೃತಿಗಳು ಕಾರ್ಯಸಾಧಕ ಮತ್ತು ಯಾವವು ಸಾಧಕವಲ್ಲ ಎಂಬುದನ್ನು ನಿರ್ಧರಿಸುವ ಕಾರ್ಯವು ಬುದ್ಧಿಯದು, ಮತ್ತು ಹಿಂದಿನ ಅನುಭವದ್ದು. ಆದರೆ ಆ ಬುದ್ಧಿ ಮತ್ತು ಆ ಅನುಭವ ಇವುಗಳನ್ನೆ ಬಹಿಷ್ಕರಿಸುವ ಈ ಯುಗದಲ್ಲಿ, ಹೇಗೆ ತಾನೆ ಉದ್ದಿಷ್ಟಹೇತುವು ಸಿದ್ಧವಾಗುವುದು? ಈ ಮಾರ್ಗವನ್ನು ಪರಿಶೀಲಿಸಿ ಹೇಳುವುದಾದರೆ ಒಂದು ಚಳವಳದಲ್ಲಿ ಭಾವನೆಯೂ ಬೇಕು ಮತ್ತು ಬುದ್ಧಿಯೂ ಬೇಕು. ಅಸಹಕಾರವು ಪ್ರಾರಂಭವಾದಂದಿನಿಂದ ಇದುವರೆಗೆ ಭಾವನೆಯ ಕಾರ್ಯವಾಗಿ ದೇಶದಲ್ಲಿ ತೀವ್ರಭಾವನೆಯು ಉತ್ಪನ್ನವಾಗಿ ಅದರಿಂದ ಇದುವರೆಗೆ ಉತ್ತಮವಾದ ಕೆಲಸವುಂಟಾಗಿದೆ. ಇನ್ನುಮುಂದೆ ಮಾತ್ರ ಬುದ್ಧಿಯ ಕಾರ್ಯವಾಗಬೇಕು. ಭಾವನೆಯಿಂದ ಬೀಜ ಬಿತ್ತಲ್ಪಟ್ಟ ಚಳವಳದ ಗಿಡವು ಬುದ್ಧಿಯ ಗೊಬ್ಬರದಿಂದ ಮತ್ತು ನೀರಿನಿಂದ ಸಂವರ್ಧಿಸಲ್ಪಟ್ಟರೆ ಆ ಮರವು ಪುಷ್ಪಿತವಾಗಿ ಕೊನೆಗೆ ಸ್ವರಾಜ್ಯದಿಂದ ಫಲಿತವಾಗುವುದು. ಇದೆ ಬುದ್ಧಿ ಮತ್ತು ಭಾವನೆ. ಈ ಎರಡು ಮನೋವೃತ್ತಿಗಳ ಸಹಚರ್ಯದ ರಹಸ್ಯವು. ರಹಸ್ಯವೆಂದು ಹೇಳುವುದಕ್ಕಿಂತ ಫಲವೆಂದು ಹೇಳುವುದು ಇನ್ನೂ ಅನುರೂಪವಾಗಿದೆ. ಕೊನೆಗೆ ಚಳವಳದ ಸೂತ್ರಧಾರರು ಬುದ್ಧಿಯ ದ್ವೇಷವನ್ನು ಸಾಧಿಸದೆ ಅದರ ಬಲದಿಂದ ತಮ್ಮ ಚಳವಳವನ್ನು ಯಶಸ್ವಿಯನ್ನಾಗಿ ಮಾಡಿಯಾರೆಂದು ಸಂಪೂರ್ಣ ನಂಬಿದ್ದೇವೆ.

ಸ್ಫುಟವಿಚಾರಗಳು.

೧. ಸರ್ಟಿಫಿಕೇಶನ್ ಮೂಲಕ ಲೋರ್ಡ ರೆಡಿಂಗರವರು ವಿಧಿಸಿದ ಉಪ್ಪಿನ ಮೇಲಿನ ಸುಂಕದ ವಿಷಯ ಮದ್ರಾಸಿನ ಶ್ರೀಯುತ ಟಿ. ವಿ. ಶೇಷಗಿರಿ ಅಯ್ಯರವರು ಪಾರ್ಲಿಮೆಂಟ ಸಭೆಯ ಮೆಂಬರರಿಗೆ ಕಳುಹಿಸಿಕೊಟ್ಟ ಎರಡು ಸೂಚೀಪತ್ರಗಳು ಪ್ರಕಟವಾಗಿವೆ. ಇದರೊಂದಿಗೆ ಎಡ್ವೊಕೇಟ್ ಜನರಲರಾಗಿದ್ದ ಶ್ರೀಯುತ ಎಸ್. ಶ್ರೀನಿವಾಸ ಅಯ್ಯಂಗಾರ್ ಮತ್ತು ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಇವರಿಬ್ಬರ ಅಭಿಪ್ರಾಯಗಳೂ ಹೊರಬಿದ್ದಿರುವವು. ಶೇಷಗಿರಿ ಅಯ್ಯರವರು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ತಾನು ನಡೆಸಿದ ವಾದಗಳೆಲ್ಲವನ್ನು ವಿವರವಾಗಿ ಈ ಸೂಚೀಪತ್ರದಲ್ಲಿ ತೋರಿಸಿರುವರಲ್ಲದೆ ಹಿಂದೂದೇಶದಲ್ಲಿನ ಉಪ್ಪಿನ ಸುಂಕದ ಇತಿಹಾಸವನ್ನು ಆದ್ಯಂತವಾಗಿ ಹೇಳಿರುತ್ತಾರೆ. ಹಿಂದೀ ರಾಜರ ಆಳುವಿಕೆಯಲ್ಲಿಯೂ ಮೊಗಲರ ಆಧಿಪತ್ಯದ ಕಾಲದಲ್ಲಿಯೂ ಉಪ್ಪಿನ ಮೇಲೆ ಅಲ್ಪ ಸ್ವಲ್ಪ ಸುಂಕವು ವಿಧಿಸಲಾಗುತ್ತಿತ್ತು. ಆದರೆ ಈ ಸುಂಕದ ಭಾರವು ಬಡವರನ್ನು ತಟ್ಟದಂತೆ ಸಮುದ್ರದ ನೀರಿನಿಂದ ತಯ್ಯಾರಾಗುತ್ತಿದ್ದ ಉಪ್ಪಿನ ಸುಂಕದ ದರದಲ್ಲಿಯೂ ಹಳ್ಳಿಗಳಲ್ಲಿಯೇ ಇತರ ವಿಧಾನಗಳಲ್ಲಿ ತಯ್ಯಾರಾಗುತ್ತಿದ್ದ ಉಪ್ಪಿನ ಸುಂಕದ ದರದಲ್ಲಿಯೂ ಬಹಳ ವ್ಯತ್ಯಾಸವಿಡುವದಿತ್ತು. ಅಲ್ಪ ಸುಂಕದ ಉಪ್ಪನ್ನು ಬಡವರು ಉಪಯೋಗಿಸಿಕೊಳ್ಳಲು ಸಾಧ್ಯವಿದ್ದಾಗ ಹೆಚ್ಚಿನ ದರದ ಸುಂಕದ ಉಪ್ಪನ್ನು ಐಶ್ವರ್ಯವಂತರು ಉಪಯೋಗಿಸುತ್ತಿದ್ದರು. ಈ ರೀತಿ ಪ್ರಾಚೀನಕಾಲದಲ್ಲಿ ಉಪ್ಪಿನ ಸುಂಕವು ಕೆಲವು ಸಮಯಗಳಲ್ಲಿದ್ದರೂ ಅದರಿಂದ ಬಡ ಪ್ರಜಾವರ್ಗಕ್ಕೆ ಬಾಧೆಯೇನೂ ಉಂಟಾಗುತ್ತಿದ್ದಿಲ್ಲ. ಈಗಿನ ತೆರಿಗೆಯ ವಿಧಾನಗಳಲ್ಲಿ ಇಂಥ ರಿಯಾಯತಿಗಳಿಗೆ ಆಸ್ಪದವೆ ಇಲ್ಲದ್ದರಿಂದ ಬಡವರ ಉಪ್ಪನ್ನಕ್ಕೇನೆ ಅತಿರೇಕ ಭಂಗವು ಉಂಟಾಗಿದೆ. ಉಪ್ಪಿನ ಮೇಲೆ ಕರವನ್ನು ಹಾಕುವ ಬದಲಿಗೆ ಬಜೆಟಿನ ಭರ್ತಿಗಾಗಿ ಈ ದೇಶದಿಂದ ಪರದೇಶಕ್ಕೆ ಹೋಗುವ ಪೆಟ್ರೋಲ ಇತ್ಯಾದಿಗಳ ಮೇಲೆ ಸುಂಕವನ್ನು ವಿಧಿಸಿ ಖರ್ಚಿಗೆ ಬೇಕಾದ ಉತ್ಪನ್ನವನ್ನು ಭರಾಯಿಸಿಕೊಳ್ಳುವ ಹಲವು ಇತರ ವಿಧಾನಗಳು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಸೂಚಿಸಲ್ಪಟ್ಟವಾದರೂ ಅವುಗಳೊಂದೂ ಸರಕಾರದ ಕಡೆಯಿಂದ ಸ್ವೀಕೃತವಾಗಲಿಲ್ಲ. ಯಾವ ದೇಶದಲ್ಲಿಯಾದರೂ ಫೌಜಿನ ಖರ್ಚು ಒಟ್ಟು ಉತ್ಪನ್ನದ ಸೇಕಡಾ ೨೦ರಷ್ಟು ಇರಗೊಡಿಸಬೇಕೆಂಬ ಸೂತ್ರವಿರುತ್ತಾ ಹಿಂದೀದೇಶದಲ್ಲಿ ಇದರ ದಾಮಾಷಾಯಿಯು ಸೇಕಡಾ ೬೫ರಂತಿದೆ. ೧೩೦ಕೋಟಿ ಉತ್ಪನ್ನದಲ್ಲಿ ಮಿಲಿಟರಿ ಇಲಾಖೆಯ ಖರ್ಚು ೬೦ಕೋಟಿಗಳಿಗಿಂತ ಹೆಚ್ಚಾಗ ಕೂಡದೆಂಬ ಇಂಚಕೇಪ ಕಮ್ಮಿಟಿಯವರ ಸೂಚನೆಯು ಇದ್ದರೂ ಇಂಥಾ ಸೂಚನೆಯನ್ನು ಮನ್ನಿಸುವಂಥಾದ್ದು ಇಂಡಿಯಾ ಸರಕಾರಕ್ಕೆ ಯುಕ್ತಕಾಣಲಿಲ್ಲ. ಸಂಪನ್ನವಾದ ಅಂಗ್ಲಾಳಿಕ್ಕೆ ಬೇಕಾದ ಸೇನೆಯನ್ನು ಇಲ್ಲಿ ತಯ್ಯಾರಿಸಿ ಭರ್ತಿಮಾಡಿಕೊಂಡು ಸಂದರ್ಭಾನುಸಾರ ಇತರ ಕಡೆಗಳಲ್ಲಿ ಇದು ಉಪಯೋಗಕ್ಕೆ ಬೇಕಾದ್ದರಿಂದ ಬಡದೇಶವಾದ ಹಿಂದೂಸ್ಥಾನದ ಉತ್ಪನ್ನವನ್ನು ಈ ಬಗ್ಗೆ ವಿನಿಯೋಗಿಸಬೇಕಾಗಿ ಬಂದಿದೆ. ಈ ರೀತಿ ಉತ್ಪನ್ನದಲ್ಲಿ ಸೇಕಡಾ ೬೫ರಷ್ಟು ಮಿಲಿಟರಿ ಇಲಾಖೆಗೆ ಕೊಡಬೇಕಾದ್ದರಿಂದ ಉಪ್ಪಿನ ಮೇಲಣ ಸುಂಕವನ್ನು ಎಲ್ಲಾ ನ್ಯಾಯಕ್ಕೂ ಕಣ್ಣು ಮುಚ್ಚಿ ಏರಿಸಿರುತ್ತಾರೆ. ಶೇಷಗಿರಿ ಅಯ್ಯರವರು ಬ್ರಿಟಿಷ ಪಾರ್ಲಿಮೆಂಟ ಸಭಾಸದರಿಗೆ ಬರಕೊಂಡ ಸೂಚೀಪತ್ರದಲ್ಲಿ ಇಷ್ಟು ಮಾತ್ರವನ್ನು ವಿವರಿಸಿದ್ದಲ್ಲ. ತೆರಿಗೆಯು ಏರಿದಂತೆ ಬಡಜನರ ದೇಹರಕ್ಷಣೆಗೆ ಬೇಕಾದ ಉಪ್ಪಿನ ಉಪಯೋಗವು ಹೇಗೆ ಕಡಿಮೆಯಾಗುತ್ತಾ ಬಂದಿದೆ ಎಂಬುದಕ್ಕೂ ಲೆಕ್ಕ ದಾಖಲೆಗಳನ್ನು ಕೊಟ್ಟಿರುವರು. ಮತ್ತು ಈ ಸೂಚೀಪತ್ರದ ಕೊನೆಯ ಭಾಗದಲ್ಲಿ ಸರ್ಟಿಫಿಕೇಶನ್ ಅಧಿಕಾರದ ಪ್ರಕಾರ ಫಿನೆನ್ಸ್ ಮಸೂದೆಯಲ್ಲಿ ತೋರಿಸಿದ ಉಪ್ಪಿನ ಸುಂಕದ ಸಂಗತಿಯೊಂದನ್ನು ಬಹುಮತಕ್ಕೆ ಪ್ರತಿಕೂಲವಾಗಿ ಜಾರಿಗೆತಂದ್ದದ್ದು ಕಾಯಿದೆ ಪ್ರಕಾರವೂ ಸಿಂಧುವಲ್ಲವೆಂತ ಅಂದಿದ್ದಾರೆ. ಪ್ರಖ್ಯಾತ ವಕೀಲರೂ ಮುಂಚೊಮ್ಮೆ ಸರಕಾರದ ಎಡ್ವೊಕೇಟ ಜನರಲರೂ ಆದ ಶ್ರೀಯುತ ಎಸ್. ಶ್ರೀನಿವಾಸ ಅಯ್ಯಂಗಾರರ ಹಾಗು ಹೈಕೋರ್ಟ ವಕೀಲರಾದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರವರ ಅಭಿಪ್ರಾಯವೂ ಇದೇ ಪ್ರಕಾರ ಇರುವುದು. ನ್ಯಾಯವು ಹೇಗಿದ್ದರೂ ಸರಕಾರಕ್ಕೆ ಹಣವು ಬೇಕೇ ಬೇಕು! ಹಿಂದೂಸ್ಥಾನವು ಅದನ್ನು ತೆರಲೇ ಬೇಕು; ಇದು ನ್ಯಾಯಮೂರ್ತಿಗಳಾದ ಲೋರ್ಡ ರೆಡಿಂಗರ ನ್ಯಾಯ ತೀರ್ಮಾನ! ಇನ್ನು ಬ್ರಿಟಿಷ್ ಪಾರ್ಲಿಮೆಂಟ ಸಭೆಯ ನ್ಯಾಯರೀತಿಗಳನ್ನು ಈ ವಿಷಯದಲ್ಲಿ ತಿಳಕೊಳ್ಳುವದು ಮಾತ್ರ ಬಾಕಿ ಇರುವದು.

೨. ಉಪ್ಪಿನ ಸುಂಕವನ್ನು ವಿರೋಧಿಸಿ ಶ್ರೀಯುತ ಶೇಷಗಿರಿ ಅಯ್ಯರವರ ಸೂಚೀಪತ್ರಗಳೆ ಕೇವಲ ಮಾತ್ರವಲ್ಲ. ಸರ್ ಮೊಂಟೇಗ್‌ವೆಬ್ಬರವರು ಈ ಸುಂಕವನ್ನು ವಜಾಮಾಡಬೇಕೆಂದು ಬರೆದ ಪತ್ರವು ಅಂಗ್ಲಾಳದ ಮೆಂಚೆಸ್ಟರ್ ಗಾರ್ಡಿಯನ್ ವೃತ್ತಪತ್ರಿಕೆಯಲ್ಲಿ ಪ್ರಕಟವಾಗಿದೆ. ಸರ್ ಮೊಂಟೇಗ್ ವೆಬ್ಬರವರು ಕರಾಚಿಯಲ್ಲಿ ತನ್ನ ಅನುಯಾಯಿಗಳ ದೊಡ್ಡ ಸಭೆಯೊಂದನ್ನು ಕೂಡಿಸಿ ಅಲ್ಲಿಯೂ ಸಹ ಸುಂಕದ ವಿಷಯ ತಮ್ಮ ನಿಷೇಧವನ್ನು ಸೂಚಿಸಿರುವರು. ಬರೆ ಒಂದು ವರುಷಕ್ಕೆ ಬೇಕಾದ ಮೂರುವರೆ ಕೋಟಿ ರೂಪಾಯಿಗಳ ಭರ್ತಿ ಬಗ್ಗೆ ಲೋರ್ಡ ರೆಡಿಂಗರು ಸರ್ಟಿಫಿಕೇಶನ್ ಮೂಲಕ ಉಪ್ಪಿನ ಸುಂಕವನ್ನು ಶೇಕಡಾ ೧೦೦ರಂತೆ ಹೆಚ್ಚಿಸಿದ್ದು ದೊಡ್ಡ ಅನ್ಯಾಯವಾಗಿದೆ. ರೇಡಿಂಗರಿಗೆ ಈ ಅನುಚಿತ ಕಾರ್ಯಕ್ಕೆ ಬೇಕಾದ ಪ್ರೇರಣೆಯು ಇಂಡಿಯಾ ಆಫೀಸು ಅಲ್ಲದೆ ಬೇರೆ ಯಾವ ಕಡೆಗಳಿಂದಲೂ ದೊರಕದು. ರಿಟ್ರೆಂಚ್‌ಮೆಂಟ್ ಹಂಚಿಕೆಯ ಪ್ರಕಾರ ಸರಕಾರದ ಖರ್ಚು ಕಡಿಮೆಯಾಗುವದಿದೆ. ದವಸಧಾನ್ಯಗಳ ಬೆಳೆಯು ಸಮೃದ್ಧಿ ಸ್ಥಿತಿಯನ್ನು ಹೊಂದುತ್ತಿದೆ. ಈ ಎರಡು ವಿದ್ಯಮಾನಗಳಿಂದ ಉತ್ಪನ್ನವು ನಿರೀಕ್ಷಿಸಿದಕ್ಕಿಂತಲೂ ಅಧಿಕವಾಗುವ ಸಂಭವವು ನಿಶ್ಚಯವಾಗಿರುತ್ತಾ ಬಜೆಟು ಭರ್ತಿ ಬಗ್ಗೆ ಉಪ್ಪಿನ ಸುಂಕವನ್ನು ಏರಿಸಿದ್ದು ಎಂದೂ ಜಾಣತನದ ಕಾರ್ಯವಲ್ಲ. ಹಿಂದೂಸ್ಥಾನದ ಈಗಿನ ಸ್ಥಿತಿಯು ಇಂಡಿಯಾ ಆಫೀಸಿಗೆ ಗೊತ್ತಿಲ್ಲದೆ ಹೋದ್ದರಿಂದ ಉಪ್ಪಿನ ಸುಂಕದ ಈ ದುರವಸ್ಥೆಯನ್ನು ಸರಕಾರದವರು ಬರಮಾಡಿಕೊಂಡಿದ್ದಾರೆ. ಸರ್ ಮೊಂಟೇಗ್ ವೆಬ್ಬರವರು ತಮ್ಮ ಯುರೋಪಿಯನ್ ಕನ್ಸಿಟಿಟುಯೆನ್ಸಿಯಲ್ಲಿ ಈ ರೀತಿ ಚಳವಳವನ್ನೆಬ್ಬಿಸುತ್ತಿರುವಾಗ ರಾಷ್ಟ್ರಭಕ್ತರಾದ ದೇಶ ಮುಖಂಡರು ಪಕ್ಷಭೇದಗಳನ್ನೆಲ್ಲ ಬದಿಗಿಟ್ಟುಕೊಂಡು ಈ ಸುಂಕವನ್ನು ವಜಾಮಾಡುವ ಸಾಧನೆಯನ್ನು ಕೈಕೊಳ್ಳುವ ತಯ್ಯಾರಿಯಲ್ಲಿರುವರು. ಈ ಬಗ್ಗೆ ಶ್ರೀಯುತರುಗಳಾದ ಟಿ. ರಂಗಾಚಾರ್ಯರ್, ಸಿ. ಅಬ್ದುಲ್ ಹಕೀಮ್ ಸಾಹೇಬ, ಸಿ. ಗೋಪಾಲ ಮೇನನ್ ಮತ್ತು ಎಸ್. ಸತ್ಯಮೂರ್ತಿಗಳವರು ಈ ದೇಶದಲ್ಲಿ ಈ ಬಗ್ಗೆ ನಡಿಸಬೇಕಾದ ಸಾಧನೆಯ ಕುರಿತು ವೃತ್ತಪತ್ರಗಳಿಗೆ ಬರೆದಿರುವರು. ರಾಜಕೀಯ ಪಕ್ಷಭೇದಗಳನ್ನು ಗಣನೆಗೆ ತಾರದೆ ಮದರಾಸಿನಲ್ಲಿ ಬರುವ ತಿಂಗಳ ತಾ. ೩ನೇ ಗುರುವಾರ ಸಾಯಂಕಾಲದಲ್ಲಿ ಕೂಡುವ ಮಹಾಸಭೆಗೆ ಎಲ್ಲರೂ ಬರಬೇಕಾಗಿ ವಿಜ್ಞಾಪಿಸಿಕೊಂಡಿರುತ್ತಾರೆ.

೩. ಉಡುಪಿಯಲ್ಲಿ ಕೂಡಿದ ಪರಿಷತ್ತಿನಲ್ಲಿ ನಿಶ್ಚಯಿಸಲ್ಪಟ್ಟ ಪ್ರಕಾರ ಹಿಂದೂ ಎನ್‌ಡೌಮೆಂಟ್ ಬೀಲಿಗೆ ಗವರ್ನರ ದೊರೆಗಳು ತಮ್ಮ ಸಮ್ಮತಿಯನ್ನು ಕೊಡಕೂಡದೆಂಬ ಪರಿಷತ್ತಿನ ಅಭಿಪ್ರಾಯವನ್ನು ಗವರ್ನರರ ಮುಂದೆ ಇಡಲಿಕ್ಕೆ ನೇಮಿಸಲ್ಪಟ್ಟ ಡೆಪ್ಯುಟೇಶನು ಮದ್ರಾಸಿಗೆ ಹೋಗಿ ತಲ್ಪಿರುವುದು. ರಾಜಸಭಾಭೂಷಣ ವಿದ್ಯಾವಿನೋದಿ ಕರ್ಪುರ ಶ್ರೀನಿವಾಸ ರಾವ್‌ರವರ ಸಂಪೂರ್ಣ ಸಹಾನುಭೂತಿಯು ಈ ಡೆಪ್ಯುಟೇಶನಿಗೆ ದೊರಕಿರುತ್ತದೆ. ಮದ್ರಾಸಿನಲ್ಲಿ ಡೆಪ್ಯುಟೇಶನಿನವರು ಹಲವು ಮುಖಂಡರನ್ನು ಕಾಣುತ್ತಿದ್ದಾರೆ. ಶ್ರೀರಂಗದಲ್ಲಿ ಬರುವ ತಿಂಗಳ ತಾ. ೫ಕ್ಕೆ ಕೂಡಲಿಕ್ಕಿರುವ ಹಿಂದೂ ಪರಿಷತ್ತಿನಲ್ಲಿ ಎನ್‌ಡೌಮೆಂಟ್ ಬೀಲು ಪರಿಷತ್ತಿನ ಮುಂದೆ ಬರಲಿಕ್ಕಿರುವುದು.

೪. ಯುನಾನಿ ಮತ್ತು ಆಯುರ್ವೇದಿಕ್— ದೇಶೀಯ ಔಷಧಿಗಳ ಉಪಯೋಗದ ಕುರಿತು ಶೋಧನೆಯಿಂದ ರಿಪೋರ್ಟು ಬರಕೊಳ್ಳುವರೆ ಮದ್ರಾಸು ಸರಕಾರದವರು ಕೆಲವು ಸಮಯದ ಹಿಂದೆ ಒಂದು ಕಮ್ಮಿಟಿಯನ್ನು ನೇಮಿಸಿದ್ದರು. ಈ ಕಮ್ಮಿಟಿಯವರ ರಿಪೋರ್ಟು ಇತ್ತಲಾಗಿ ಪ್ರಕಟಿಸಲ್ಪಟ್ಟಿರುವುದು. ದೇಶೀಯ ಔಷಧಿಗಳ ವಿಧಾನಗಳು ಪಾಶ್ಚಾತ್ಯ ಔಷಧಿಗಳ ವಿಧಾನಗಳಂತೆ ಶಾಸ್ತ್ರಸಮ್ಮತವಾದವುಗಳು. ದೇಶೀಯ ವೈದ್ಯ ಶಾಸ್ತ್ರದ ಶಸ್ತ್ರಚಿಕಿತ್ಸೆಯ ವಿಧಾನಗಳು ಈಗಿನ ಪಾಶ್ಚಾತ್ಯ ವಿಧಾನಗಳಲ್ಲಿ ಪಕ್ವವಾದವುಗಳಲ್ಲವಾದರೂ ಔಷಧಿಗಳ ವಿಧಾನಗಳು ಸಮರ್ಥವಾದವುಗಳಾದ್ದರಿಂದಲೂ ಮತ್ತು ಕಡಿಮೆ ಖರ್ಚು ತಗಲುವಂಥವುಗಳಾದ್ದರಿಂದಲೂ ಅವುಗಳ ಉಪಯೋಗವನ್ನು ಕೂಡಲೆ ಅವಲಂಬಿಸಬಹುದು. ಸುಮಾರು [illegible] ಜನಸಂಖ್ಯೆ ಇರುವ ಈ ಸಂಸ್ಥಾನದಲ್ಲಿ ಪಾಶ್ಚಾತ್ಯ ವಿಧಾನಗಳಲ್ಲಿ ಚಿಕಿತ್ಸೆ ನಡಿಸುವವರ ಸಂಖ್ಯೆಯು ಬರೆ ೮೦೦೦ವಿರುವಾಗ ದೇಶೀಯ ವೈದ್ಯರ ಸಂಖ್ಯೆಯು ೫೧,೦೦೦ವಿದೆ. ಪ್ರಜಾ ಜನರಿಗೆ ಔಷಧಿಗಳ ಉಪಚಾರವು ಸಮಗ್ರವಾಗಿ ದೊರೆಯಬೇಕಾದರೆ ಕಡಿಮೆ ಖರ್ಚು ತಗಲುವ ದೇಶೀಯ ವಿಧಾನಗಳಿಂದಲೆ ಆಗಬೇಕಲ್ಲದೆ ಪಾಶ್ಚಾತ್ಯ ವಿಧಾನಗಳಿಂದಲ್ಲ. ದೇಶೀಯ ಔಷಧಿ ವಿಧಾನಗಳಲ್ಲಿ ಪಂಡಿತರನ್ನು ತಯಾರಿಸುವ ಬಗ್ಗೆ ಅಲ್ಲಲ್ಲಿ ವೈದ್ಯಶಾಲಾ ಕೊಲೇಜುಗಳನ್ನು ಸ್ಥಾಪಿಸುವುದು ಅಗತ್ಯವೆಂತ ಈ ಕಮ್ಮಿಟಿಯವರು ಸೂಚಿಸಿರುತ್ತಾರೆ ಮತ್ತು ಸರಕಾರದವರು ಮುಂದಿನ ವರುಷದ ಬಜೇಟಿನಲ್ಲಿ ಈ ಬಗ್ಗೆ ಐದು ಲಕ್ಷ ರೂಪಾಯಿಗಳನ್ನಾದರೂ ವಿಂಗಡಿಸಬೇಕಾಗಿ ವಿಜ್ಞಾಪಿಸಿಕೊಂಡಿರುತ್ತಾರೆ.

ಮಂಗಳೂರು.

ಸೆಕೆಕಾಲದ ರಜೆಯ ಸಂಬಂಧ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿಗೆ ಇದೇ ತಾ. ೩೦ರಿಂದ ಜೂನ್ ತಾ. ೧೧ನೇ ಆದಿತ್ಯವಾರದ ವರೆಗೆ, ಸಬ್‌ಜಡ್ಜರ ಕೋರ್ಟಿಗೆ ಇದೇ ತಾ. ೩೦ರಿಂದ ಜುಲಾಯಿ ತಾ. ೧ನೇ ಆದಿತ್ಯವಾರದ ವರೆಗೂ, ಡಿಸ್ಟ್ರಿಕ್ಟ್‌ಜಡ್ಜರ ಕೋರ್ಟಿಗೆ ಮೇ ತಾ. ೭ರಿಂದ ಜುಲಾಯಿ ತಾ. ೮ನೇ ಆದಿತ್ಯವಾರದ ವರೆಗೂ ರಜೆ ಇರುವುದು.

ಮಂಗಳೂರು ತಾಲೂಕುಬೋರ್ಡು ಮೆಂಬರಿಕೆಗೆ ಬಂಟವಾಳ ಸರ್ಕಲಿನಿಂದ ಮ. ರಾ. ಪಣಂಬೂರು ವಾಸುದೇವ ರಾಯರು ಮತ್ತು ಬಂಟವಾಳ ಪಟೇಲ ವೆಂಕಟರಾಯ ಪ್ರಭುಗಳು ಮಾತ್ರ ಉಮೇದ್ವಾರರಾಗಿರುವರು. ಚುನಾವಣೆಯು ತಾ. ೩ರಲ್ಲಿ ನಡಿಯುವುದು.

ಮುಂಬಯಿ ಸ್ಟೀಮ ನೇವಿಗೇಶನ್ ಕಂಪೆನಿಯ ಈ ಮೊಸೂಮಿನ ಕಡೇ ಸ್ಟೀಮರು ಬರುವ ತಾ. ೧೪ಕ್ಕೆ ಮುಂಬಯಿಯಿಂದ ಬಿಡಲ್ಪಡುವುದು.

ನಿನ್ನೆ ದಿನ ಸ್ಟೀಮರಿಗೆ ತಮ್ಮ ಕಡೆಯ ಜನರನ್ನು ಬಿಡಲು ದೋಣಿಯಲ್ಲಿ ಕೂತುಕೊಂಡು ಹೋಗುತ್ತಿದ್ದ ೫ ಜನರು ಥಕ್ಕನೆ ನದಿಯಲ್ಲಿ ಬಿದ್ದರು. ಇವರಲ್ಲಿ ಒಬ್ಬನು ಅರಬ್ಬಿಯವನೂ ೪ ಮಂದಿ ಮೊಗೇರರೂ ಆಗಿದ್ದರಂತೆ. ಎಲ್ಲರನ್ನು ಕೂಡಲೇ ಮೇಲಕ್ಕೆತ್ತಿಹಾಕಿದ್ದರಿಂದ ಪ್ರಾಣಹಾನಿಯು ಉಂಟಾಗಲಿಲ್ಲ.

ಸದ್ಯದಲ್ಲಿ ಚುನಾವಣೆಯಾಗಲಿಕ್ಕಿರುವ ಮದರಾಸ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರಿಕೆಗೆ ಮಹಮ್ಮದೀಯ ರೂರಲ್ ಕೊನ್ಸಟಿಟ್ಯೂಯನ್ಸಿನ ಬಗ್ಗೆ ಖಾನ್‌ಬಹದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ ಬಹದೂರರು ಒಬ್ಬ ಉಮೇದ್ವಾರರಾಗಿರುವರು.

ಸುಲ್ತಾನ್‌ಮೊಹಿದಿನ್ ಸಾಹೇಬರ ರಜೆಯು ಮುಗಿದಿರುವುದರಿಂದ ಇವರು ತಾ. ೩೦ಕ್ಕೆ ಕಾಸರಗೋಡು ತಹಸೀಲ್‌ದಾರಿಕೆಯ ಚಾರ್ಜನ್ನು ವಹಿಸಿಕೊಳ್ಳುವರು. ಆದ್ದರಿಂದ ಕಾಸರಗೋಡು ತಹಸೀಲ್‌ದಾರ ಹುದ್ದೆಯನ್ನು ನೋಡಿಕೊಂಡಿದ್ದ ಮ. ರಾ. ಎ. ತಿಮ್ಮಪ್ಪಪೂಂಜರು ಪುನಃ ಹಜೂರ್ ಕಚೇರಿಯ ಇಂಗ್ಲಿಷ ಹೆಡ್‌ಕ್ಲಾರ್ಕರಾಗುವರು.

ಸಹಕಾರಿ ಸಂಘಗಳ ಕಾರ್ಯಕಾರಿ ಮೀಟಿಂಗಿನ ನಿರ್ಧಾರದಂತೆ ಸಹಕಾರಿ ಸಂಘಗಳ ಒನರೆರಿ ರಿಜಿಸ್ಟ್ರಾರರು, ಚೀಫ್ ಇನ್ಸಪೆಕ್ಟರರು ಮತ್ತು ಇತರ ಸಹಕಾರಿಗಳು ಜಿಲ್ಲೆಯ ಆಯಾ ಯೂನಿಯನ್ ಮತ್ತು ಸಂಘಗಳನ್ನು ಸಂದರ್ಶಿಸುವರು. ಇವರ ಸರ್ಕೀಟು ಕ್ರಮಪಟ್ಟಿಯು ಈ ಪ್ರಕಾರವಿದೆ. ತಾ. ೨ರಲ್ಲಿ ಪುತ್ತೂರಿನಿಂದ ಸುಳ್ಯ, ಅಲ್ಲಿ ಆ ದಿನ ಮಧ್ಯಾಹ್ನ ಯೂನಿಯನ್ನ ಮೀಟಿಂಗು, ತಾ. ೩ಕ್ಕೆ ಪುತ್ತೂರಿಗೆ ಹಿಂತಿರುಗಿ ಯೂನಿಯನ್ನ ಮೀಟಿಂಗು, ತಾ ೪ಕ್ಕೆ ಉಪ್ಪಿನಂಗಡಿ, ಅಲ್ಲಿಯೂ ಯೂನಿಯನ್ನ ಮೀಟಿಂಗು, ತಾ. ೫ಕ್ಕೆ ವಿಟ್ಲ, ಅದಿನ ಮಧ್ಯಾಹ್ನ ಬಾಗಾಯಿತು ಕೃಷಿಕರ ಸಂಘದ ಡೈರೆಕ್ಟರರ ಮೀಟಿಂಗು, ತಾ. ೬ಕ್ಕೆ ಕಾಸರಗೋಡು, ಆ ದಿನ ಮಧ್ಯಾಹ್ನ ೩ ಗಂಟೆಗೆ ಅಲ್ಲಿಯ ಯೂನಿಯನ್ನ ಮೀಟಿಂಗು, ಸಾಯಂಕಾಲ ಹೊಸದುರ್ಗಕ್ಕೆ ಪ್ರಯಾಣ, ತಾ. ೭ರಲ್ಲಿ ಹೊಸದುರ್ಗ ಯೂನಿಯನ್ನ ಮೀಟಿಂಗು, ಅದೇ ದಿನ ಪಳ್ಳಿಕೆರೆಯನ್ನು ಸಂದರ್ಶಿಸಿ, ಸಾಯಂಕಾಲ ಕುಂಬಳೆಗೆ ಪ್ರಯಾಣ, ತಾ. ೮ ಕುಂಬಳೆ, ತಾ. ೯ ಮಂಗಳೂರು, ತಾ. ೧೦ ಗುರುಪುರ, ಕಿನ್ನಿಕಂಬಳದಲ್ಲಿ ಗುರುಪುರ ಯೂನಿಯನ್ನ ಮೀಟಿಂಗು, ಅನಂತರ ಬಂಟವಾಳಕ್ಕೆ ಹೋಗುವುದು, ತಾ. ೧೧ರಲ್ಲಿ ಅಲ್ಲಿಯ ಯೂನಿಯನ್ನ ಮೀಟಿಂಗು, ಬಳಿಕ ಗುರುವಾಯನಕೆರೆಗೆ ಹೊರಟು ಹೋಗಿ, ತಾ. ೧೨ ಗುರುವಾಯನಕೆರೆ ಮತ್ತು ಬೆಳ್ತಂಗಡಿ ಸೊಸೈಟಿಗಳ ಸಂದರ್ಶನವನ್ನು ಮುಗಿಸಿ ಯೂನಿಯನ್ನ ಮೀಟಿಂಗನ್ನು ಜರಗಿಸಿ ಕಾರ್ಕಳಕ್ಕೆ ಪ್ರಯಾಣ, ತಾ. ೧೩ರಲ್ಲಿ ಕಾರ್ಕಳ ಯೂನಿಯನ್ನ ಮೀಟಿಂಗು, ತಾ ೧೪ರಲ್ಲಿ ಮುಲ್ಕಿಗೆ ಪ್ರಯಾಣ, ಅಲ್ಲಿಯ ಯೂನಿಯನ್ನ ಮೀಟಿಂಗು ಆಗಿ, ತಾ. ೧೫ರಲ್ಲಿ ಉಡುಪಿ, ತಾ. ೧೬ ಮಲ್ಪೆ, ಆ ದಿನ ಅಲ್ಲಿಯ ಯೂನಿಯನ್ನ ಮೀಟಿಂಗು ಜರುಗಿಸಿ, ತಾ. ೧೭ ಕುಂದಾಪುರ, ಅಂದು ಅಲ್ಲಿಯ ಯೂನಿಯನ್ನ ಮೀಟಿಂಗು, ತಾ. ೧೮ ಗಂಗೊಳ್ಳಿ, ತಾ. ೧೯ ಕಂಭದಕೋಣೆ, ತಾ. ೨೦ ಕುಂದಾಪುರದಿಂದ ಬ್ರಹ್ಮಾವರ, ತಾ. ೨೧ ಬೆಡೂರರು, ತಾ. ೨೨ ಕಾಪು, ತಾ. ೨೩ ಸುರತಕಲ್ಲು, ತಾ. ೨೪ ಮಂಗಳೂರು.

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಮೀಟಿಂಗು ಬರುವ ತಾರೀಕು ೬ರಲ್ಲಿ ಸೇರುವುದು.

ನಮ್ಮ ಜಿಲ್ಲೆಯ ಕಾಫಿ ಸಾವುಕಾರರಾದ ಮಿ. ಹೆನ್ರಿ ಮೊರ್ಗನರು ಕಳೆದ ತಾರೀಕು ೧೫ರಲ್ಲಿ ಕೂನೂರಿನಲ್ಲಿ ಕಾಲವಾದರು.

ಮಂಗಳೂರ ಮುನ್ಸಿಪಲ್ ಇಲೆಕ್ಟರಲ್ ರೋಲು ಬರುವ ತಾ. ೩೦ರೊಳಗಾಗಿ ತಯಾರಾಗುವುದು.

'ದಿ ಕೇರಳ ಸೋಫ್ ಇನ್ಸ್ಟಿಟ್ಯೂಟ್ ಕಲ್ಲಿಕೋಟೆ ಈ ಕಂಪೆನಿಯ ಜಾಹೀರಾತಿನ ಪುರವಣಿಯನ್ನು ಈ ಸಂಚಿಕೆಯೊಡನೆ ಇಟ್ಟಿದ್ದೇವೆ.

ಬೋಳಾರ ಹಳೇಕೋಟೆ ಶ್ರೀ ಮಾರಿಯಮ್ಮ ದೇವಸ್ಥಾನದಲ್ಲಿ ಇದೇ ವೈಶಾಖ ಬಹುಳ ಪಾಡ್ಯವು ಮೊದಲುಗೊಂಡು [illegible] ವರೆಗೆ (ಎಂದರೆ ತಾ. ೧೧-೫-'೨೨ರಿಂದ ತಾ. ೧೯-೫-'೨೨ರ ವರೆಗೆ) ಪ್ರತಿ ದಿನ ಸಾಯಂಕಾಲ ಘಂಟೆ ೬ರಿಂದ ೯ರ ವರೆಗೆ ಅಲಂಕಾರ ಪೂಜೆ ಮತ್ತು ಉತ್ಸವ [illegible] ದೇವಸ್ಥಾನದ ಪ್ರತಿಷ್ಠಾಪಟ್ಟ ದರ್ಶನ [illegible] ಮುಂತಾದ ಮಹೋತ್ಸವಗಳು ನಡೆಯಬೇಕಾಗಿ ಸಂಕಲ್ಪಿಸಿರುವುದರಿಂದ ಸಕಲ ದೇವಿಯ ಭಕ್ತರೆಲ್ಲರೂ ಬಂದು ತಮ್ಮ ಹರಿಕೆಕಾಣಿಕೆಗಳನ್ನು ಒಪ್ಪಿಸಿ ಶ್ರೀದೇವಿಯ ಪ್ರಸಾದವನ್ನು ಸ್ವೀಕರಿಸುವರೆ ಅನುಕೂಲವಾದ ಸಂದರ್ಭವಿರುತ್ತದೆಂಬುದಾಗಿ ಈ ಮೂಲಕ ಸರ್ವರಿಗೂ ತಿಳಿಸುತ್ತೇವೆ.

ಬೋಳಾರ, } [illegible] ಸುಬ್ಬರಾವ್,
ತಾ. ೨೦-೪-೧೯೨೨ } [illegible] ನಾರಾಯಣ,
ಮೊಕ್ತೇಸರರು ವ, ಆಡಳ್ತೆದಾರರು.

ಮಹಾತ್ಮಾ ಗಾಂಧಿಯವರು.

ಮಹಾತ್ಮಾ ಗಾಂಧಿಯವರೊಡನೆ ಯೆರವಾಡಾ ಜೈಲಿನಲ್ಲಿದ್ದ ಶ್ರೀಯುತ ಶಂಕರಲಾಲ ಬೇಂಕರರು ಮಹಾತ್ಮರ ಜೈಲುವಾಸದ ಸ್ಥಿತಿಯನ್ನು ಕುರಿತು ಕೆಳಗಿನ ಸಂಗತಿಯನ್ನು ತಿಳಿಸಿರುವರು. ತಮ್ಮಿಬ್ಬರನ್ನೂ ಜೈಲಿನ ಅಧಿಕಾರಿಗಳು ಯೋಗ್ಯ ರೀತಿಯಲ್ಲಿ ನಡಿಸಿದ್ದರು. ಹಾಲು ಕೇಳಿದ ಆಹಾರವನ್ನು ಕೊಡುತ್ತಿದ್ದರು. ಜೈಲಿನ ಕೋಣೆಯ ಬಾಗಿಲುಗಳು ತೆರದೆ ಇರುತ್ತಿದ್ದವು. ಬೇಕಾದಷ್ಟು ಪುಸ್ತಕಗಳನ್ನು ಹೊರಗಿನಿಂದ ತರಿಸಲು ಅಡ್ಡಿ ಇರಲಿಲ್ಲ. ಕೆಲಕಾಲದನಂತರ ತಮ್ಮಿಬ್ಬರಿಗೂ ರಾತ್ರಿ ಕಾಲದಲ್ಲಿ ದೀಪಗಳನ್ನು ಇಡಲು ಹಾಗು ಹಾಸಿಗೆಗಳನ್ನು ಉಪಯೋಗಿಸಲು ಬಿಡುತ್ತಿದ್ದರು. ಸೊಳ್ಳೆಗಳ ಬಾಧೆಯುಂಟಾಗದಂತೆ ಮಹಾತ್ಮರಿಗೆ ಇತ್ತಲಿಗಿ ತೆರೆಪಟಗಳ (curtain)ನ್ನು ಉಪಯೋಗಿಸಲು ಅನುಮತಿಯು ಇತ್ತು. ಅಲ್ಲದೆ ತಮ್ಮಿಬ್ಬರಿಗೂ ಬೇಕಾದ ವಸ್ತು ಮುಂತಾದನ್ನು ದೊರಕಿಸಿಕೊಳ್ಳಲು ಅಡ್ಡಿ ಇರಲಿಲ್ಲ. ಬೇಕಾದಾಗ ತಮ್ಮ ಸ್ವಂತ ಚರಕಗಳ ಮೇಲೆ ನೂಲನ್ನು ಮಾಡಲು ಬಿಡುತ್ತಿದ್ದರು ಎಂದು ಜೈಲಿನಲ್ಲಿ ತಮ್ಮನ್ನು ಯೋಗ್ಯವಾಗಿ ನಡಸುವ ಸಂಗತಿಯನ್ನು ತಿಳಿಸಿ ಅನಂತರ ಜೈಲಿನಲ್ಲಿರುವ ತೊಂದರೆಗಳನ್ನು ವಿವರಿಸಿದರು. ಜಪದೇಹಸ್ಥಿತಿಗೆ ಹಾನಿಯನ್ನುಂಟುಮಾಡದ ಎಲ್ಲ ಸೌಕರ್ಯಕ್ಕೆ ಅಡ್ಡಿ ಇರಲಿಲ್ಲವಾದರೂ ಮಹಾತ್ಮರಿಗೆ ರಾಜಕೀಯ ವಿಷಯಗಳನ್ನು ಪ್ರಕಟಿಸುವ ಪತ್ರಗಳನ್ನು ಓದಲು ನಿರ್ಬಂಧವಿದೆ. ಮಹಾತ್ಮರಿಗೆ ಒಂಟಿಯಾಗಿ ಇರಗೊಡಿಸಿದ್ದು ಇನ್ನೊಂದು ಅಸಂತೋಷದ ಕಾರ್ಯ. ಮಹಾತ್ಮರಿಗೆ ಎಲ್ಲ ವಿಷಯಗಳನ್ನು ಸ್ಪಷ್ಟವಾಗಿ ಬರೆದು ಕಾಗದಗಳನ್ನು ಕಳುಹಿಸಲು ಅಸ್ಪದವಿಲ್ಲ. ಇಷ್ಟಮಿತ್ರರ ಭೇಟಿಯನ್ನು ಸಕಾಲದಲ್ಲಿ ಪಡಿಯಲು ತೊಂದರೆಗೀರುವವು. ತನಗಿರುವ ತೊಂದರೆಗಳ ವಿಷಯಗಳಲ್ಲಿ ಏನಾದರೂ ರಿಯಾಯತಿ ಸಿಗಲು ಯಾವುದಾದರೊಂದು ರೀತಿಯ ಚಳವಳವನ್ನು ನಡಿಸಬೇಕೆಂದು ಮಹಾತ್ಮರು ಇಚ್ಛಿಸುವುದಿಲ್ಲ.

ರಾಜಕೀಯ ವಿಷಯಗಳಲ್ಲಿ ಮಹಾತ್ಮರ ಅಭಿಪ್ರಾಯ ಹೇಗಿರುವುದೆಂದು ತಿಳಕೊಳ್ಳಲು ಜನರು ಆತುರಗೊಂಡಿರುವುದು ಸಹಜ. ಮಹಾತ್ಮರು ಪ್ರಥಮದಲ್ಲಿ ಜನರಿಗೆ ಸಂದೇಶವನ್ನು ಕಳುಹಿಸಲು ನಿಶ್ಚಯಿಸಿದರೂ ಅನಂತರ ಈ ಯೋಚನೆಯನ್ನು ಬಿಟ್ಟುಬಿಟ್ಟರು. ಆದ್ದರಿಂದ ಅವರ ಯಾವ ಸಂದೇಶವನ್ನೂ ನಿಮಗೆ ತಿಳಿಸಲು ನನ್ನ ಕೂಡೆ ಇಲ್ಲ. ಯಾವ ವಿಷಯದಲ್ಲೂ ಅವರ ಅಭಿಪ್ರಾಯವು ಬದಲಾವಣೆಯನ್ನು ಹೊಂದಲಿಲ್ಲ. ಅಹಿಂಸಾತ್ಮಕ ಅಸಹಕಾರ; ಚರಕ, ಹಿಂದೂ ಮುಸಲ್ಮಾನರ ಐಕ್ಯ, ಅಸ್ಪೃಶ್ಯತೆಯನ್ನು ನಿರ್ಮೂಲಿಸುವುದು ಇದೆ ಅವರಿಗೆ ಮುಖ್ಯವಾಗಿ ಬೇಕಾದ್ದು ಮತ್ತು ಇದರಲ್ಲಿ ಅವರಿಗೆ ದೃಢವಿಶ್ವಾಸವಿದೆ. ತಮ್ಮ ಕಣ್ಣು ಯಾವ ತಡೆಯನ್ನೂ ಉಂಟುಮಾಡದೆ ಇದ್ದರೆ ಅವರು ಪ್ರತಿದಿನ ನಾಲ್ಕು ತಾಸು ನೂಲನ್ನು ಮಾಡುವರು. ಅವರು ಹೆಚ್ಚಾಗಿ ಧಾರ್ಮಿಕ ಪುಸ್ತಕಗಳನ್ನೆ ಓದುತ್ತಿದ್ದಾರೆ. ವಿಶೇಷವಾಗಿ ಗೀತೆ ಮತ್ತು ಉಪನಿಷತ್ತುಗಳನ್ನು ಓದುವರು. ಅವರು ಖುರಾನನ್ನು ಓದಿರುವರು. ಈಗ ಬೈಬಲನ್ನು ಓದಲು ಪ್ರಾರಂಭಿಸಿರುವರು. ಎಲ್ಲಾ ವೇದಗಳನ್ನೂ ಪುರಾಣಗಳನ್ನೂ ಅವುಗಳ ಭಾಷಾಂತರಗಳನ್ನೂ ಕಳುಹಿಸಲು ನನ್ನ ಕೂಡೆ ಹೇಳಿರುವರು. ಪ್ರತಿದಿನ ಒಂದು ತಾಸನ್ನು ಉರ್ದು ಭಾಷೆಗಾಗಿ ವಿನಿಯೋಗಿಸುವರು. ಪ್ರಾತಃಕಾಲ ೪ ಘಂಟೆಗೆ ಏಳುವರು. ಮತ್ತು ತಮ್ಮ ಆಶ್ರಮದ ಪ್ರಾರ್ಥನೆಯನ್ನು ಮಾಡುವರು. ಸಾಯಂಕಾಲದಲ್ಲೂ ಹಾಗೆಯೆ ಪ್ರಾರ್ಥನೆಯನ್ನು ಮಾಡುವರು. ಚರಕ ಪ್ರಚಾರವು ಸರ್ವತ್ರ ಹಬ್ಬಿ ಜನರು ಕೈಯಿಂದ ನೂಲನ್ನು ಮಾಡಿ ತಮ್ಮ ಬಡತನವನ್ನು ಹೋಗಲಾಡಿಸಿದ ವಿನಹಾ ಹಿಂದೂಸ್ಥಾನವು ತನ್ನ ಉದ್ಧರಣೆಯನ್ನು ಹೊಂದುವುದು ಅಸಾಧ್ಯವೆಂದು ಅವರ ದೃಢ ನಂಬಿಕೆ.

ಫರಂಗಿಪೇಟೆ ಶ್ರೀರಾಮಾ ಹ್ಯಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ.

ಇದೇ ತಾರೀಕು ೮ನೆಯ ರವಿವಾರ ಫರಂಗಿಪೇಟೆ ವಿದ್ಯಾವರ್ಧಕ ಸಂಘದವರು ನಡೆಸಿ ಬರುವ ಶ್ರೀರಾಮಾ ಹ್ಯಾಯರ್ ಎಲಿಮೆಂಟರಿ ಶಾಲಾ ವರ್ಧಂತಿಯ ಸಮಾರಂಭವು ವಿಜೃಂಭಣೆಯಿಂದ ಜರಗಿತು. ಇದುವರೆಗೆ ಇಷ್ಟು ಉತ್ಸಾಹದಿಂದ ಈ ಶಾಲಾ ವರ್ಧಂತಿಯು ಆಚರಿಸಲ್ಪಟ್ಟದ್ದಿಲ್ಲ. ವರ್ಧಂತಿಗಾಗಿ ಮಂಗಳೂರಿನಿಂದ ರಾಜೇಶ್ರೀಗಳಾದ ಸೊನ್ಸೆ ಮಂಗೇಶರಾಯರೂ, ಕೆ. ಗೋಪಾಲರಾಯರೂ, ಯು. ಮಂಗೇಶರಾಯರೂ, ಹೈಕೋರ್ಟು ವಕೀಲ ಕೆ. ರಾಮಚಂದ್ರಾಚಾರ್ಯರೂ, ಶಾಲೆಯ ಹಳೇ ವಿದ್ಯಾರ್ಥಿಗಳೂ ಮ॥ ಎಸ್. ಎನ್. ಕಾಮತ್ ಮೊದಲಾಗಿ ಹಲವು ಉಪಾಧ್ಯಾಯರೂ ಹಲಕೆಲವು ಸಾವುಕಾರರೂ ನೆರೆದುಬಂದಿದ್ದರು. ಮುಂಚಿನ ದಿನ ಮಹಿಳೆಯರು ಮತ್ತು ವಿದ್ಯಾರ್ಥಿಗಳು ಇವರಿಗೋಸ್ಕರ "ಮೌರ್ಯ ಸಿಂಹಾಸನ" ಎಂಬ ಐತಿಹಾಸಿಕ ನಾಟಕವು ನಟಿಸಲ್ಪಟ್ಟಿತು. ಬೆಳಗ್ಗೆ ಶಾಲಾ ಮಕ್ಕಳಿಗೂ ಇತರ ಗೃಹಸ್ಥರುಗಳಿಗೂ ಫಲಹಾರವಾದ ಬಳಿಕ ಸದರಿ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದು ಕಳೆದ ವರ್ಷ ಅಕಾಲ ಮರಣವನ್ನು ಪಡೆದ ಎ. ಕೋಟಿಯಪ್ಪನವರದೊಂದು ಭಾವಚಿತ್ರವನ್ನು ಮ. ರಾ. ಎಮ್. ರಾಮಚಂದ್ರ ಪೈ ಬಿ. ಎ. ಎಲ್. ಟಿ. ಯವರು ಯಥೋಚಿತವಾದ ಭಾಷಣದಿಂದ ಶಾಲಾ ಮಂದಿರದಲ್ಲಿ ಸ್ಥಾಪನೆಗೊಳಿಸಿದರು. ಅನಂತರ ಮಧ್ಯಾಹ್ನದಲ್ಲಿ ಎಲ್ಲರೂ ಫಲಹಾರ ಮುಗಿಸಿದ ಬಳಿಕ ಶಾಲಾ ವರ್ಧಂತಿಗೆ ಗೃಹಸ್ಥರುಗಳು ವಾದ್ಯದೊಂದಿಗೆ ಮೆರವಣಿಗೆಯಾಗಿ ಶಾಲಾ ಗೃಹಕ್ಕೆ ಬರಲು ಸಭಾಕಾರ್ಯಕ್ಕೆ ಪ್ರಾರಂಭವಾಯಿತು. ಶಾಲಾ ಹೆಡ್ ಮಾಸ್ಟರರು ಶಾಲಾ ಕಾರ್ಯದ ವೃತ್ತಾಂತವನ್ನು ಓದಿದರು. ಅದರಲ್ಲಿ ಈ ಶಾಲಾ ವಿದ್ಯಾವರ್ಧಕ ಸಂಘದವರು ನಡೆಸಿದ ಕಷ್ಟಸಾಧ್ಯವಾದ ಕೆಲಸವೆಲ್ಲಾ ವರ್ಣಿಸಲ್ಪಟ್ಟು ಶಾಲೆಯ ಸದ್ಯಸ್ಥಿತಿಯು ಬಲು ಚೆನ್ನಾಗಿದೆ ಎಂದೂ, ಊರ ಪರವೂರ ಗೃಹಸ್ಥರು ಈ ಶಾಲೆಗೆ ಸಹಾನುಭೂತಿಯನ್ನು ಪ್ರದರ್ಶಿಸುತ್ತ ಇರುವರೆಂದೂ ತಿಳಿದುಬಂತು. ಈಗ ಈ ಶಾಲೆಯು ಹ್ಯಾಯರ್ ಎಲಿಮೆಂಟರಿ ಶಾಲೆಯಾಗಿ ೧೧ ಮಂದಿ ಮಕ್ಕಳಿವೆ. ಕಳೆದ ವರ್ಷದ ಆಡೀಟಕ್ಕೆ ಸುಮಾರು ೩೦೦ ರೂಪಾಯಿಗಳು ಹೆಚ್ಚಿಗೆ ಖರ್ಚಾಗಿವೆ. ಇನ್ನೂ ೩ ತರಗತಿಗಳನ್ನು ಕೂಡಿಸುವ ಆಲೋಚನೆಯಾಗಿದೆ. ಶಾಲೆಗಾಗಿ ಪಕ್ಕದ ತೋಟ್ಟಿಯಿಂದ ಒಂದು ಸಾವಿರ ರೂಪಾಯಿ ಖರ್ಚಾಗಿದೆ. ತೋಟ್ಟಿಯಲ್ಲಿ ಗೆದ್ದ ಹಣವನ್ನು ರಾ॥ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರೂ, ರಾ॥ ಶಿರಾಲಿ ಮಂಜುನಾಥ ಕೃಷ್ಣಾಚಾರ್ಯರೂ, ರಾ॥ ಹಂಪನಕಟ್ಟೆ ವಿಟ್ಠಪ್ಪ ಶ್ಯಾನಭಾಗರೂ ಶಾಲೆಗೆ ದಾನವಾಗಿ ಕೊಟ್ಟಿರುತ್ತಾರೆ. ರಾ॥ ಕಸ್ತೂರಿ ನಾಗೇಶ ಪೈ ಮತ್ತು ಸಹೋದರರು ಹಲವು ಬೆಲೆಯುಳ್ಳ ಪುಸ್ತಕಗಳನ್ನು ಶಾಲಾ ಪುಸ್ತಕ ಸಂಗ್ರಹಕ್ಕೆ ದಾನವಾಗಿ ಕೊಟ್ಟಿರುತ್ತಾರೆ. ಇತ್ಯಾದಿ ವಿಷಯಗಳನ್ನು ತಿಳಿಸಿದ ಬಳಿಕ ಶಾಲಾ ಮಕ್ಕಳಲ್ಲಿ ಪ್ರವೀಣರಾದವರಿಗೆ ಇನಾಮುಗಳು ಹಂಚಲಾದವು. ರಾ॥ ಕೆ. ಗೋಪಾಲರಾಯರು ಶಿಕ್ಷಣದಲ್ಲಿ ಹೆತ್ತವರ ಜವಾಬ್ದಾರಿಯನ್ನು ಕುರಿತೂ, ರಾ॥ ಯು. ಮಂಗೇಶರಾಯರು ಸಹಕಾರವು ವಿದ್ಯಾಭ್ಯಾಸ ಪ್ರಚಾರಕ್ಕೆ ಹೇಗೆ ಸಹಾಯಕವಾಗಿದೆಂಬುದನ್ನೂ ಕುರಿತು ಭಾಷಣಮಾಡಿದರು. ಅನಂತರ ಅಧ್ಯಕ್ಷರು ಶಾಲೆಯ ರಿಪೋರ್ಟನ್ನು ಅನುಕೂಲಾಗ್ರವಾಗಿ ವಿಮರ್ಶಿಸಿ ಇನ್ನಷ್ಟು ಅಭ್ಯುದಯವನ್ನು ಸಾಧಿಸುವ ಬಗೆಯನ್ನು ಸೂಚಿಸಿ ಸಂಬಂಧಪಟ್ಟವರೆಲ್ಲರೂ ಐಕ್ಯಮತ್ಯದಿಂದ ಧಾರಾಳವಾದ ಪ್ರಯೋಜನಪಟ್ಟು ಇನ್ನಷ್ಟು ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕೆಂದೂ ಅಪ್ಪಣೆಕೊಡಿಸಿದರು. ಅನಂತರ ವಿದ್ಯಾರ್ಥಿಗಳ ವಿದ್ಯಾವರ್ಧಕ ಸಂಘದವರ ಹಾಗೂ ಉಪಾಧ್ಯಾಯರ ಮತ್ತು ಅತಿಥಿಗಳ ಭಾವಚಿತ್ರವನ್ನು ತೆಗಿಯಲಾಯಿತು. ಬಳಿಕ ಮ॥ ರಾ॥ ಎಸ್. ಎನ್. ಕಾಮತರವರು ರಚಿಸಿದ "ಮೌರ್ಯ ಸಿಂಹಾಸನ" ಎಂಬ ನಾಟಕವನ್ನು ಶಾಲಾ ಮಕ್ಕಳೂ ಊರ ಯುವಕರೂ ಅತ್ಯುತ್ತಮ ರೀತಿಯಲ್ಲಿ ಅಭಿನಯಿಸಿದರು. ನಾಟಕ ಕಾಲದಲ್ಲಿ ಸುಮಾರು ೩೦ ರೂಪಾಯಿಗಳ ಬಹುಮಾನವು ನಟರಿಗೆ ದೊರೆತು ಅದರಲ್ಲಿ ಅರೆವಾಸಿ ಹಣ "ಇನಾಮು ಹಂಚೋಣದ" ಫಂಡಿಗೂ ಉಳಿದ ಹಣ ಬಡ ವಿದ್ಯಾರ್ಥಿಗಳ ಫಂಡಿಗೂ ಜಮಾವಾದಲಾಯಿತು. ಆ ವೇಳೆ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಮ॥ ರಾ॥ ಸಿ. ವಿ. ನಾಯ್ಕರು ನೆರೆದವರಿಗೆ ಯಥೋಚಿತವಾದ ಧನ್ಯವಾದಗಳನ್ನು ಅರ್ಪಿಸಿದ ಬಳಿಕ ರಾಜಗೀತದಿಂದ ಸಭೆಯೂ ವರ್ಧಂತಿಯೂ ಮುಕ್ತಾಯಗೊಂಡಿತು.

ಪ್ರತ್ಯಕ್ಷದರ್ಶಿ.

ಪಡುಬಿದ್ರೆಯಲ್ಲಿ ಕೊಂಗ್ರೆಸ್ ಕಾರ್ಯಪ್ರಚಾರ.

ಇದೇ ಕಳೆದ ತಾ. ೨೧ಲ್ಲು ಪಡುಬಿದ್ರೆಯಲ್ಲಿ ಶ್ರೀಯುತ ಕಾರ್ನಾಡ ಸದಾಶಿವರಾಯರು ಉಡುಪಿ ಸಾಂತ್ಯಾರ ಅನಂತ ಪದ್ಮನಾಭಭಟ್ಟರು ಸಹ ಇಲ್ಲಿಗೆ ಬಂದಾಗ ಇಲ್ಲಿ ಒಂದು ರಾಷ್ಟ್ರೀಯ ಶಾಲೆಯನ್ನು ಬರುವ ಮೇ ತಿಂಗಳ ತಾ. ೧೫ರೊಳಗೆ ತೆರಿಯುವ ಬಗ್ಗೆ ತಿಲಕಸ್ವರಾಜ್ಯ ನಿಧಿಗೆ ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ವಾಗ್ದಾನಮಾಡಿದ ರೂಪಾಯಿಗಳ ತಪಸೀಲು—

ಮ. ರಾ. ರಾ. ಗಳಾದ ಪದ್ಮನಾಭ ಶ್ರೀನಿವಾಸ ಶ್ಯಾನಭಾಗರು, ರಾಮಕೃಷ್ಣ ಶ್ಯಾನಭಾಗರು, ನಾಗಪ್ಪ ಹೆಗ್ಗಡೆಯರು, ಧರ್ಮಸಹಾಯ, ಕೆ. ಕರಿಯಣ್ಣ ಶೆಟ್ಟಿ ರೂ. ೨೫ರ ಪ್ರಕಾರ, ಲಕ್ಷ್ಮಣನಾಯ್ಕರು ರೂ ೧೫, ಕೊಲಕಾಡಿ ಮುಕುಂದ ರವಳಪ್ಪ ಕಾಮತ್, ಕಟ್ಪಾಡಿಕಾರ್ ಬ್ರದರ್ಸ್ಸರು, ಸಾಂತೂರ ಕಾಳಪೂಜಾರಿ ರೂ. ೧೦ರ ಪ್ರಕಾರ, ಶ್ರೀನಿವಾಸ ಮಂಜುನಾಥ ಶ್ಯಾನಭಾಗರು, ಮಟ್ಟಿ ಪಾಂಡುರಂಗಪ್ರಭುರು, ಗೋವಿಂದ ಕಮ್ತಿರು, ಹೆಜಮಾಡಿ ಸುಬ್ಬಮರಕಾಲ ಧರ್ಮಸಹಾಯ ರೂ. ೫ರ ಪ್ರಕಾರ, ಮುಕ್ತಾನಂದ ಸ್ವಾಮಿಗಳು(ರೂ. ೫ ವಸೂಲು,) ಪೆರ್ಡ್ಯಮ ಹರಿಶ್ಯಾನಭಾಗರು, ಸಾಂತಯ್ಯ ಶ್ಯಾನಭಾಗರು, ದೊಡ್ಡ ಯಾನೆ ವೆಂಕಣ್ಣಶೆಟ್ಟಿ, ಪಾದೆಬೆಟ್ಟು ಮಾಗಂದಡಿ ಅಚ್ಚಣ್ಣಶೆಟ್ಟಿ, ಬೊಳಂಜಗುತ್ತು ಶೀನಶೆಟ್ಟಿ ರೂ. ೨ರ ಪ್ರಕಾರ, ಸರ್ವೋತ್ತಮ ಮಾಣಿಕಭಟ್ಟ, ಮಟ್ಟಿ ಅಚ್ಯುತಪ್ರಭುರು, ರಂಗಪ್ಪಕುದ್ವರು, ಉಪ್ಪೂರ ನರಸಿಂಹಕಮ್ತಿರು, ತೋಪನಕಟ್ಟೆ ಅನಂತಶ್ಯಾನಭಾಗರು, ಶಿವಪ್ಪ ಶ್ರೀನಿವಾಸಯ್ಯನವರು, ಹಿತ್ಲು, ಮಟ್ಟಿ ಅನಂತಪ್ರಭುರು, ಆಲಂಗಾರ ದೊಡ್ಡಶೆಟ್ಟಿ, ಪಾದೆಬೆಟ್ಟು ಹೊಸಮನೆ ಕಾಂತಪ್ಪಶೆಟ್ಟಿ, ಪಾದೆಬೆಟ್ಟು ಅಗ್ರಮೇಲ ಚಂದುಶೆಟ್ಟಿ, ಪಾದೆಬೆಟ್ಟು ಗುಡಶೆಟ್ಟಿ ಮನೆ ಕಾಂತಪ್ಪಶೆಟ್ಟಿ, ಪಾದೆಬೆಟ್ಟು ಸುಬ್ರಾಯರ ಮಗ ಶೀನಪ್ಪಯ್ಯನವರು, ಪಾದೆಬೆಟ್ಟು ಆನೆ ಪುಟ್ಟಣ್ಣಯ್ಯ, ಪಾದೆಬೆಟ್ಟು ಆನೆರಂಗಪ್ಪಯ್ಯ, ಪೆರ್ಗೊಟ್ಟು ಬಾಬರಾಯಾಚಾರಿ, ರೂ. ೧ರ ಪ್ರಕಾರ, ಹೊಸಮನೆ ನಾಗಪ್ಪಶೆಟ್ಟಿ, ನಾರಾಯಣಶೆಣೆಯರು ರೂ. ೧ರ ಪ್ರಕಾರ ವಸೂಲು, ಪಾದೆಬೆಟ್ಟು ಮರಿಯಪ್ಪಶ್ಯಾನಭಾಗರ ಮಗ ಪದ್ಮಣ್ಣಯ್ಯನವರು ರೂ. ೧ ವಿನಹಾ ಪ್ರತಿ ತಿಂಗಳಿಗೆ ರೂ. ೧ರ ಪ್ರಕಾರ ಜುಮ್ಲಾ ವಾಗ್ದತ್ತ ವಸೂಲಾದ್ದು ಕೂಡಾ ರೂ. ೨೪೯.

ಪಡುಬಿದ್ರೆ ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿ.

ಇಡ್ಯ ವಿದ್ಯಾದಾಯಿನೀ ಶಾಲೆಯ ವರ್ಧಂತಿ.

ಇದೇ ಕಳೆದ ಶನಿವಾರ ತಾ. ೨೧-೪-'೨೩ರಲ್ಲಿ ಪಡುಬಿದ್ರೆಯಲ್ಲಿ ಇಲ್ಲಿಯ 'ಇಡ್ಯ ವಿದ್ಯಾದಾಯಿನೀ ಶಾಲೆ'ಯ ಆರನೆಯ ವಾರ್ಷಿಕ ವರ್ಧಂತಿ ಸಮಾರಂಭವು ಮ. ರಾ. ರಾ. ಕೆ. ಸದಾಶಿವಭಟ್ ಅವರ್ಗಳ್, ಬಿ. ಎ., ಬಿ. ಎಲ್., ಎಮ್. ಎಲ್. ಸಿ.ಯವರ ಅಧ್ಯಕ್ಷತೆಯಲ್ಲಿ ಶ್ಯಾಮ ಘಂಟೆ ೩ಕ್ಕೆ ಸರಿಯಾಗಿ ಜರಗಿತು. ಸಭೆಗೆ ಊರ ಪರವೂರ ಮಾನ್ಯಗೃಹಸ್ಥರನೇಕರು ಮುಂದಾಗಿ ಬಂದು ನೆರೆದಿದ್ದರು. ಭಗವತ್ಪ್ರಾರ್ಥನಾನಂತರ ಸಭಾಧ್ಯಕ್ಷರು ಅಗ್ರಾಸನವನ್ನು ಸ್ವೀಕರಿಸಿಕೊಂಡರು. ಶಾಲಾ ಹಳೇ ವಿದ್ಯಾರ್ಥಿ, ಮ. ರಾ. ರಾ. ಕೆ. ವೆಂಕಟ್ರಾವ್ ಎಂಬವರು ಶುಭಾಭಿನಂದನವನ್ನು ಮಾಡಿದರು. ಆ ಮೇಲೆ ಶಾಲಾವಿದ್ಯಾರ್ಥಿಗಳು ಶ್ರೀಮಹಾಭಾರತದೊಳಗಣ ಅಭಿಮನ್ಯು ಕಾಳಗದ ಕೆಲವು ಪದ್ಯಗಳನ್ನು ಯಕ್ಷಗಾನರೂಪವಾಗಿ ಹಾಡಿ ಸಭಿಕರನ್ನು ಆನಂದಪಡಿಸಿದರು. ತರುವಾಯ ಶಾಲಾ ಚಿಕ್ಕಮಕ್ಕಳು (ಒಂದನೇ ಮತ್ತು ಎರಡನೇ ತರಗತಿಯವರು) ಶ್ರೀಮಹಾಭಾರತದೊಳಗಣ ಹಿಡಿಂಬೀತನಯ-ಘಟೋತ್ಕಚನ ವಿಷಯದ ಒಂದು ಚಿಕ್ಕ ಕಥೆಯನ್ನು ನಾಟಕರೂಪವಾಗಿ ಆಡಿತೋರಿಸಲು ಸಭಿಕರು ಆನಂದಭರಿತರಾದರು. ಆ ಮೇಲೆ ಮುಖ್ಯ ಉಪಾಧ್ಯಾಯರಿಂದ ಶಾಲಾವರದಿಯು ಓದಲ್ಪಟ್ಟು, ವಿದ್ಯಾರ್ಥಿಗಳಿಗೆ ಅಧ್ಯಕ್ಷರಿಂದ ಇನಾಮು ಹಂಚಲ್ಪಟ್ಟಿತು. ತದನಂತರ ಸಭಿಕರಲ್ಲಿ ಕೆಲವು ವಿದ್ಯಾಭಿಮಾನಿಗಳು ತಮ್ಮ ಹಿತಸೂಚನೆಗಳನ್ನು ಭಾಷಣರೂಪವಾಗಿ ತಿಳಿಸಲು ಸಭಾಧ್ಯಕ್ಷರು, ಶಾಲೆಯ ಆಡಳಿತೆಯವರೂ, ಶಾಲಾ ಅಧ್ಯಾಪಕ ವರ್ಗವೂ ಈ ಶಾಲೆಯ ಉನ್ನತಿಯ ಬಗ್ಗೆ ಪಡುತ್ತಿರುವ ಶ್ರಮದ ಸಲುವಾಗಿ ಕೊಂಡಾಡಿ, ಹೀಗೆಯೆ ವರುಷದಿಂದ ವರುಷಕ್ಕೆ ಅವರ ಉತ್ತೇಜನವು ವೃದ್ಧಿ ಪಡೆಂದೂ ಆ ಶಾಲಾಮಕ್ಕಳು ದಿನೆ ದಿನೆ ವಿದ್ಯಾಭಿವೃದ್ಧಿಯನ್ನು ಹೊಂದಿ ಮುಂದಿನ ಯೋಗ್ಯ ಪ್ರಜಾಂಗವಾಗಲೆಂದೂ ಹರಸಿ ತನ್ನ ಭಾಷಣವನ್ನು ಮುಗಿಸಿದರು. ಬಳಿಕ ಸಭಾಧ್ಯಕ್ಷರಿಗೂ, ಸಭಿಕರಿಗೂ ಧನ್ಯವಾದಗಳು ಅರ್ಪಿಸಲ್ಪಟ್ಟು ಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಿ ಮಂಗಳಗೀತದೊಡನೆ ಸಭಾಕಾರ್ಯವು ಕೊನೆಗಂಡಿತು.

ಅದೇ ದಿನ ರಾತ್ರಿ ಶಾಲಾ ಅಧ್ಯಾಪಕರೂ, ವಿದ್ಯಾರ್ಥಿಗಳೂ ಕೂಡಿ 'ರಾವಣ ದಿಗ್ವಿಜಯ—ಸೀತಾಪಹರಣ' ಎಂಬ ನಾಟಕವನ್ನು ಆಡಿತೋರಿಸಿದರು. ಶಾಲಾಮಂದಿರವು ಜನಸಮುದಾಯದಿಂದ ತುಂಬಿದ್ದಿತು. ನಾಟಕವು ಕರ್ಣಾನಂದಕವಾಗಿಯೂ, ಮನೋರಂಜಕವಾಗಿಯೂ, ನಯನಾನಂದಕರವಾಗಿಯೂ, ಹರ್ಷಜನಕವಾಗಿಯೂ ಅಭಿನಯಿಸಲ್ಪಟ್ಟಿತು. ಅಶೋಕದಲ್ಲಿ ಪುಷ್ಪಕ ವಿಮಾನದಲ್ಲಿ ಕುಳಿತ ರಾವಣೇಶ್ವರನ ಪ್ರಯಾಣ, ವೇದವತಿಯು ತಪಾಗ್ನಿಯಿಂದ ಭಸ್ಮೀಕೃತಳಾಗುವಿಕೆ, ದಶವದನರಾವಣ, ಕ್ಷೀರಸಾಗರದ ಮೇಲೆ ಗರುಡವಾಹನನಾದ ವಿಷ್ಣುವಿನ ಪ್ರತ್ಯಕ್ಷ, ಅಗ್ನಿವೃಷ್ಟಿ, ಆಕಾಶ ಮಾರ್ಗವಾಗಿ ಮಾರೀಚನ ಓಟ, ಅಹಲ್ಯಾ ಶಾಪವಿಮೋಚನೆ ಇವೇ ಮೊದಲಾದ ಟ್ರಾನ್ಸ್ಫರ್ ಸೀನುಗಳು ಆಶ್ಚರ್ಯಕರವಾಗಿ ತೋರಿಸಲ್ಪಟ್ಟವು. ನಾಟಕವು ರಾತ್ರಿ ೧೦ ಘಂಟೆಗೆ ಪ್ರಾರಂಭಿಸಲ್ಪಟ್ಟು ಘಂಟೆ ೨ಕ್ಕೆ ಮುಕ್ತಾಯವಾಯಿತು. ನಾಟಕದಿಂದ ಟಿಕೇಟು ರೂಪವಾಗಿ ರೂ. ೧೬೫-೩-೦ ಶೇಖರಿಸಲ್ಪಟ್ಟಿತು.

ಈ ವರುಷ ಈ ಶಾಲಾ ಪ್ರೈಜ್ ಫಂಡಿಗೆ ಸಹಾಯಮಾಡಿದ ಮಹನೀಯರುಗಳು:— ಮ. ರಾ. ಗಳಾದ ಪಾಂಗಾಳ ರಾಮಚಂದ್ರಯ್ಯ ರಿಟಾಯರ್ಡ್ ಶಿರಸ್ತೇದಾರ್ ರೂ. ೧, ಮೋಹನಪ್ಪ ತಿಂಗಳಾಯ ರೂ. ೧, ಪಾಂಗಾಳ ಸುಬ್ಬರಾವ್ ಬಿ. ಎ., ಬಿ. ಎಲ್. ರೂ. ೨, ಪಿ. ರಾಮಕೃಷ್ಣಯ್ಯ ಬಿ. ಎ. ರಿಟಾಯರ್ಡ್ ಡಿ. ರಿಜಿಸ್ಟ್ರಾರ ರೂ. ೫, ಕೆ. ವೆಂಕಟ್ರಾವ್ ಬಿ. ಎ., ಎಲ್. ಎಲ್. ಬಿ. ರೂ. ೨, ಎಮ್. ವಿ. ರಾಜು ೨, ಎಚ್. ಡಿ. ರಾವ್ ರೂ. ೨, ಡಾಕ್ಟರ್ ಪಿ. ನರಸಪ್ಪಯ್ಯ ರೂ. ೪, ಕಂಬಳ ಲಕ್ಷ್ಮೀನಾರಾಯಣ ರಾವ್ ರೂ. ೧, ಎಚ್. ಎನ್. ರಾವ್ ರೂ. ೨, ಪಣಂಬೂರು ಶ್ಯಾಮರಾವ್ ರೂ. ೯, ಪಿ. ಅನಂತ ಪದ್ಮನಾಭಯ್ಯ ರೂ. ೧, ಡಾಕ್ಟರ್ ಪಿ. ವೆಂಕಟರಾವ್ 'ಸೌಭಾಗ್ಯ ತಿಲಕ' ಎಂಬ ಪುಸ್ತಕ, ಇಡ್ಯ ಪದ್ಮನಾಭಯ್ಯ ಸುಮಾರು ೧೫ ರೂಪಾಯಿ ಕ್ರಯಬಾಳುವ ಪುಸ್ತಕಗಳು, ಶೇಷಭಟ್ ಭಿಡೆ ಬಿ. ಎ., ಬಿ. ಎಲ್. ಸ್ವದೇಶಿ ಪೆನ್ಸಿಲ್ ಡಜನ್ ೨ ಮತ್ತು ಸ್ವದೇಶಿ ಮೊನೆ ಗ್ರೋಸ್ ೧.

ಈ ಶಾಲೆಯ ಅಭಿವೃದ್ಧಿಯನ್ನೆ ತಮ್ಮ ಉದ್ದೇಶವಾಗಿಟ್ಟುಕೊಂಡು ತನುಮನಧನಗಳಿಂದ ಸಹಾಯಮಾಡಿದ ಮಹನೀಯರೆಲ್ಲರಿಗೂ ಈ ಶಾಲಾ ಆಡಳಿತೆಯವರು ತಮ್ಮ ನಿರಂತರ ಧನ್ಯವಾದಗಳನ್ನು ಅರ್ಪಿಸುವರು.

ಪಣಂಬೂರು ಬೋರ್ಡು ಶಾಲೆ.

ಪಣಂಬೂರಿನಲ್ಲಿರುವ ಬೋರ್ಡು ಹೈಯರ್ ಎಲಿಮೆಂಟರಿ ಶಾಲೆಗೆ ಸುಮಾರು 1½ ಫರ್ಲಾಂಗ್ ದೂರದಲ್ಲಿ ೧೯೨೨ನೆಯ ಇಸವಿಯಲ್ಲಿ ಹೊಸತಾಗಿ ತೆರೆದಿರುವ ಮಾಪಿಳ್ಳ ಬೋರ್ಡುಶಾಲೆಯಲ್ಲಿ ಈಗ ಸುಮಾರು ೧೪೦ಕ್ಕೆ ಮಿಕ್ಕಿ ಹುಡುಗರಿರುತ್ತಾರೆ. ಈ ಶಾಲೆಯ ಸುತ್ತಮುತ್ತಲೂ ೧ ಮೈಲಿಯೊಳಗಾಗಿ ೩-೪ ಶಾಲೆಗಳಿರುತ್ತ ಇದರಲ್ಲಿರುವ ಹುಡುಗರ ಸಂಖ್ಯೆಯನ್ನು ನೋಡಿದರೆ ಇಡಿ ದಕ್ಷಿಣ ಕನ್ನಡ ಜಿಲ್ಲೆಯ ಮಾಪಿಳ್ಳಾ ಶಾಲೆಗಳಲ್ಲಿ ಇದು ಒಂದನೆಯ ಶಾಲೆ ಎಂದು ಹೇಳುವುದಕ್ಕೆ ಸಂದೇಹವಿಲ್ಲ— ಇಂಥಾ ಶಾಲೆಯಲ್ಲಿ ೪ ಜನ ಉಪಾಧ್ಯಾಯರು ಕೆಲಸ ಮಾಡುವದೆಂದರೆ ಬಹು ಸಂಕಷ್ಟಕರವಾದ ಕೆಲಸ ಎಂಬುದು ಇಲಾಖಾ ಮೇಲು ಉದ್ಯೋಗಸ್ಥರಿಗೆ ಚೆನ್ನಾಗಿ ಅನುಭವವಿರಬೇಕಾದ ಸಂಗತಿ ಎಂಬುದನ್ನು ಹೇಳಬೇಕಾದುದಿಲ್ಲ. ಅಲ್ಲದೆ ಈ ಶಾಲೆಯನ್ನು ಇಷ್ಟು ಉರ್ಜಿತ ಸ್ಥಿತಿಗೆ ತಂದಿರುವ ಸದರಿ ಶಾಲೆಯ ಹೆಡ್ ಮಾಸ್ಟರರು ತನಗೆ ಇಂಕ್ರಿಮೆಂಟು ಕೊಡಿಸಬೇಕಾಗಿ ಬರಕೊಂಡಲ್ಲಿ ಇಲಾಖೆಯ ಮೇಲು ಉದ್ಯೋಗಸ್ಥರೂ ಪ್ರೆಸಿಡೆಂಟರೂ ತೃಪ್ತಿಕರವಾಗಿ ಇಂಕ್ರಿಮೆಂಟು ಕೊಟ್ಟಂತೆ ಕಾಣುವುದಿಲ್ಲ.

ಅದಕಾರಣ ಇಷ್ಟು ಅಭಿವೃದ್ಧಿಗೆ ಬಂದಿರುವ ಈ ಶಾಲೆಯ ಸ್ಥಿತಿಯು ಇನ್ನು ಮುಂದೆ ಕ್ಷೀಣಸ್ಥಿತಿಯನ್ನು ಹೊಂದದಂತೆ ಇಲಾಖಾ ಮೇಲು ಉದ್ಯೋಗಸ್ಥರೂ ಪ್ರೆಸಿಡೆಂಟರವರೂ ಶಾಲೆಯ ವ ಶಾಲೆಯಲ್ಲಿಯ ಬಡವಿದ್ಯಾರ್ಥಿಗಳ ಮೇಲೆ ಕೃಪಾದೃಷ್ಟಿಯನ್ನಿಟ್ಟು ಪ್ರಯತ್ನಪಟ್ಟು ಕೆಲಸ ಮಾಡಿದ ಸದರಿ ಶಾಲಾ ಉಪಾಧ್ಯಾಯರಿಗೆ ತಕ್ಕ ಇಂಕ್ರಿಮೆಂಟು ಕೊಡಿಸಿ ಶಾಲೆಗೆ ಬೇಕಾಗುವಷ್ಟು ಉಪಾಧ್ಯಾಯರನ್ನು ಕೊಡಿಸಿ ಸಹಾಯಮಾಡಿಸಿಯಾರಾಗಿ ನಂಬುತ್ತೇನೆ.

ಗ್ರಾಮದ ನಿವಾಸಿಕರಲ್ಲೊಬ್ಬ.

ಕದ್ರಿ ಯುವಕರ ಸಂಘ.

ಇದೇ ತಿಂಗಳ ಶುರುವಿಗೆ ಸ್ಥಾಪಿಸೋಣಾದ ಕದ್ರಿ ಯುವಕರ ಸಂಘದ ಮೂರನೆಯ ಸಭೆಯು ಕಳೆದ ಆದಿತ್ಯವಾರ ತಾ. ೨೨ರಲ್ಲಿ ಅಪರಾಹ್ನ ೫ ಘಂಟೆಗೆ ಕದ್ರಿ ರಾಷ್ಟ್ರೀಯ ಶಾಲಾ ಕಟ್ಟೋಣದಲ್ಲಿ ಸೇರಿ ವಕೀಲ ಮ. ರಾ. ರಾ. ಗೊಲ್ಲರಕೇರಿ ಸೋಮಶೇಖರ ರಾಯರು ಅಧ್ಯಕ್ಷರಾಗಿಯೂ, ಮ. ರಾ. ರಾ. ಬಿ. ಕೃಷ್ಣರಾಯರು ಕಾರ್ಯದರ್ಶಿಗಳಾಗಿಯೂ ಇರುವ ಒಂದು ತಾತ್ಕಾಲಿಕ ಕಾರ್ಯಕಾರಿ ಮಂಡಲಿಯು ನೇಮಿಸೋಣಾಯಿತು. ಖಾಯಂ ಕಾರ್ಯಕಾರಿ ಮಂಡಳಿಯನ್ನು ಜುಲಾಯಿ ಆಖೈರು ಒಳಗೆ ಚುನಾಯಿಸಲ್ಪಡುವುದು. ಈ ಸಂಘದ ವಾಚನಾಮಂದಿರವು ಸದ್ಯಕ್ಕೆ ಕದ್ರಿ ಶಾಲೆಯಲ್ಲಿಯೆ ಬರುವ ಮೇ ೧ರಿಂದ ನಡೆಸಲ್ಪಡುವುದು. ಈ ಸಂಘವು ವಕೀಲು ಜಮೀನುದಾರ ಮುಂತಾದ ಶ್ರೀಮಂತ ಮಹನೀಯರುಗಳಿಂದ ಪ್ರೋತ್ಸಾಹಿಸಲ್ಪಟ್ಟಿರುವುದಲ್ಲದೆ ಇಷ್ಟರಲ್ಲಿ ೭೭ ಜನರು ಸದಸ್ಯರಾಗಲು ಅನುಮತಿಕೊಟ್ಟಿರುವರು. ವಿದ್ಯಾರ್ಥಿಗಳು ತಿಂಗಳು ಒಂದಕ್ಕೆ ೨ ಆಣೆಯಂತೆಯೂ, ವಿದ್ಯಾರ್ಥಿಗಳಲ್ಲದವರು ೪ ಆಣೆಯಂತೆಯೂ ತೆರಲಿಕ್ಕಿರುವುದು. ವಾಚನಾಮಂದಿರದೊಡನೆ ಈ ಸಂಘದ ಆಶ್ರಯದಲ್ಲಿ ಭಾಷಣಗಳೂ, ತರ್ಕವ್ಯವಹಾರಗಳೂ (Debates) ನಡೆಯುವಂತೆ ಏರ್ಪಾಡು ಮಾಡೋಣಾಗುವುದು.

ಇದೇ ಬರುವ ಆದಿತ್ಯವಾರ ತಾ. ೨೯ರಲ್ಲು ಮೊನ್ನ ದೇವೇಂದ್ರನಾಥ ಮಿತ್ರ ಎಂಬವರು ಕದ್ರಿ ರಾಷ್ಟ್ರೀಯ ಶಾಲಾ ಕಟ್ಟೋಣದಲ್ಲಿ ಮಾನವ ಜನ್ಮದ ಮಹತ್ತ್ವ (Greatness of Life) ದ ವಿಷಯವಾಗಿ ಭಾಷಣವನ್ನು ಕೊಡುವರು. ಈ ಭಾಷಣಕ್ಕೆ ಎಲ್ಲರಿಗೂ ಸುಸ್ವಾಗತವಿರುವುದು.

ನೋಟಿಸು.

ಕಾಸರಗೋಡು ತಾಲೂಕು ಉಬ್ರಂಗಳ ಗ್ರಾಮದಲ್ಲಿರುವ ಪಂಜಿರಕವೆ ವಿಷ್ಣುಭಟ್ಟರ ಮಗ ನಾರಾಯಣಭಟ್ಟನು ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನಂದರೆ—:

ಕಾಸರಗೋಡು ತಾಲೂಕು ಪೆರ್ಲ ಗ್ರಾಮದ ಬೀರ್ಕೋಡ್ಲ ನಾರಾಯಣಭಟ್ಟರ ಮನೆಯಲ್ಲಿರುವ ಸಿದ್ಧಳ್ಳಿ ಗ್ರಾಮದ ವಾಲ್ತಾಜೆ ಕೃಷ್ಣಭಟ್ಟರ ಮಗ ಸೀತಾರಾಮಭಟ್ಟರು ನನ್ನಿಂದ ಇದೇ ತಿಂಗಳ ತಾರೀಕು ೧೯ರಲ್ಲು ರೂ. ೧೦೦೦ಕ್ಕೆ ವಿಟ್ಲದ ಸಬ್‌ರಿಜಿಸ್ಟ್ರಿ ಆಫೀಸಿನಲ್ಲಿ ರಿಜಿಸ್ಟ್ರಿಮಾಡಿ ಒಂದು ಡಿಮಾಂಡ ಪ್ರೊಮಿಸರಿ ನೋಟು ಬರಸಿಕೊಂಡಿರುತ್ತಾರೆ. ಸದರಿ ನೋಟು ರಿಜಿಸ್ಟ್ರಿ ಸಮಯ ತೋರುವಾಗ ರೂ. ೧೦೦೦ನ್ನು ಕೊಟ್ಟು ಹೊರಗೆ ಬಂದ ಕೂಡಲೇ ಸದರಿ ಹಣವನ್ನು ತಾನು ಮುಖ್ಯದ್ದೇಶಾಗಿ ತಂದದೆಂತಲೂ ಮೂರುದಿನದಲ್ಲಿ ವಾಪಾಸು ನನಗೆ ಕೊಡುವದಾಗಿ ನನ್ನನ್ನು ನಂಬಿಸಿ, ಸದರಿ ರೂ. ೧೦೦೦ವನ್ನು ಸದರಿ ಸೀತಾರಾಮಭಟ್ಟರು ನನ್ನಿಂದ ವಾಪಾಸು ಪಡಕೊಂಡಿರುತ್ತಾರೆ. ಆ ಪ್ರಕಾರ ಸದರಿ ಐವೇಜು ಈ ವರೆಗೂ ನನಗೆ ಕೊಡಲಿಲ್ಲ. ಈ ಕುರಿತು ಸದರಿಯವರಿಗೆ ನಾನು ಪ್ರತ್ಯೇಕ ರಿಜಿಸ್ಟರ್ಡ್ ನೋಟೀಸು ಕೂಡಾ ಕೊಟ್ಟಿರುತ್ತೇನೆ. ಆದ್ದರಿಂದ ವಿಷ್ಣ್ವಾದರೂ ಪ್ರತಿಫಲವಿಲ್ಲದ ಸದರಿ ನೋಟು ಸಿಂಧು ಯಾ ಮಂಜೂರು ಆಗತಕ್ಕದ್ದಲ್ಲ. ಮತ್ತು ಅದನ್ನು ಈ ಮೂಲಕ ರದ್ದುಪಡಿಸಿದ್ದೇನೆ. ಆದ್ದರಿಂದ ಪ್ರತಿಫಲವಿಲ್ಲದ ಸದರಿ ನೋಟನ್ನು ಯಾರೂ ಟ್ರಾನ್ಸ್‌ಫರ್ ಪಡೆಯಬಾರದೆಂತು ನಂಗತಿ ಈ ಮೂಲಕ ಸರ್ವರೂ ತಿಳಿದಿರತಕ್ಕದ್ದು.

ಉಬ್ರಂಗಳ ತಾ. ೨೪-೪-೧೯೨೩. ನಾರಾಯಣಭಟ್ಟನ ರುಜು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ನಾಟಕ ಪ್ರಕಟನಾಲಯ, ಬಸವನಗುಡಿ ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾ ಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ

ಅಥವಾ

ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" "ದೇವರೆಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ್, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತಿ ಪ್ರತಿಜ್ಞಾ ಸಂಚಿಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಹಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಲ್ಲಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,

ಕರ್ಣಾಟಕ ಪ್ರಕಟನಾಲಯ

ಶಂಕರಪುರ, ಬಸವನಗುಡಿ ಪೋಸ್ಟು,

ಬೆಂಗಳೂರು ಸಿಟಿ.

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧ ಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯು ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನು, ಜನನೇಂದ್ರಿಯಾದಿಗಳ ವರ್ಣನೆಯನ್ನು ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನು, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನು, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುವೆವು. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಓದ್ದು ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,

ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

---

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗಧಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ

ಶ್ರೀನಿವಾಸ ರಂಗಪ್ಪೆ

ರಥಬೀದಿ, ಮಂಗಳೂರ

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs.	300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ.	300,000—0—0
Reserve and other sinking Funds ,,	205,250—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು ,,	205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS

ಖಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,

Mangalore, 12th Feb. 1923.

K. Venkat Rao,

Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,

ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲಿ ಹಾಗೆಯೇ ಅಗಿದು ಉಪಯೋಗಿಸುತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ಕಾಣಿದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, ಶೀತ, ಶೀತಪಾತ, ವ್ಯಕ್ಕಸಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ತೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯೆನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷ್ಠೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ತೊಂದುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ಕೊಡುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಫ್ರೀಪೋಸ್ಟೇಜ್. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್

ಮಂಗಳೂರು ಟವನಿಗೆ ಮಾತ್ರ.

ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೨೧) ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕವಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯ್ಯಸಾರ ಸಚಿತ್ರ ರೂ. ೧—೮—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ	0—12—0	ಶಂಕರರಾಮಾಯಣ ಹೊಸ ಮುದ್ರಣ	5—0—0
ಸಂತಾಪಕ-ಕಾದಂಬರಿ	0—6—0	ಶಂಕರರಾಮಾಯಣದ ಕಥೆ ಮನನ	0—12—0
ಚಂದ್ರಮುಖಿ ,,	0—8—0		
ರಾಜಪುತ್ರರಮಣಿಯರು	0—8—0	S. S. L. C. Kannada Texts	
		ಹರಿದಾಸಿ	0—5—0
ಕೆಲವು ಸಣ್ಣ ಕಥೆಗಳು	1—0—0	ಸುಶೀಲೆ	0—6—0
ರಾಜಯೋಗ	1—0—0	ಅಡವಿಯ ಹುಡುಗಿ	0—12—0

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ

ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪೆ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೨ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ಸ್ಥಳ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ,

ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ

ಮಕ್ಕಳ ಆಟದ ಹಿತ್ತಾಳೆಯ 32 ಸಾಮಾನುಗಳ ಸೆಟ್ಟು 1ಕ್ಕೆ ರೂ. 1—14—0 ದೊಡ್ಡದು 3—0—0, ಉತ್ತಮ ರೂ. 4—8—0, ದೊಡ್ಡದು 5—0—0 ಟಪ್ಪಾಲು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ, ಮಣಿ, ಜರಿ, [illegible], ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಫಟಿಕ ಸ್ಫಟಿಕಮಣಿ, ಗಂಗೆ, [illegible] ಜಾಗಂಟೆ ಇವುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವುದು. ಪ್ಯಾಕಿಂಗ್ ಉಚಿತ.

ವಿಳಾಸ:—

ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,

ಬೆಂಗಾಲಿ, ಕಾಶಿ ಕ್ಷೇತ್ರ.

ಗೊನೊರ್ಹ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೂ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಣಿ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಹುರುಳು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮು—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ.1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ವಿಶ್ವನಾಥ ಹೆರ್ ಆಯಿಲ್.

ಈ ತೈಲವನ್ನು ಆಯುರ್ವೇದ ಸಂಬಂಧವಾದ ಮೂಲಿಕೆಗಳ ಮುಖಾಂತರ ಪ್ರಸಿದ್ಧವಾದ ವೈದ್ಯರಿಂದ ತಯಾರಿಸಲ್ಪಟ್ಟಿದೆ. ಇದನ್ನು ತಲೆಗೆ ಹಚ್ಚಿಕೊಂಡರೆ ಎಂಟು ದಿವಸದ ವರೆಗೂ ಘಮಘಮಿಸುತ್ತಲೇ ಇರುತ್ತದೆ. ಈ ತೈಲವನ್ನು ಉಪಯೋಗಿಸುವುದರಿಂದ ಕೂದಲು ಹೆಚ್ಚಾಗಿಯೂ, ನೀಳವಾಗಿಯೂ ಬೆಳೆಯುತ್ತೆ. ಉದುರಿಹೋಗದ ಹಾಗೆ ಬೇರುಗಳಿಗೆ ಶಕ್ತಿಯನ್ನು ಉಂಟುಮಾಡುತ್ತೆ. ಅದರ ಬಣ್ಣವನ್ನು ಹೆಚ್ಚಿಸುತ್ತದೆ. ಇತರ ತೈಲಗಳ ಹಾಗೆ ಕಜ್ಜಿ, ಕೂದಲು ಉದುರಿ ಹೋಗುವುದು ಮುಂತಾದ ದುರ್ಗುಣಗಳಿಲ್ಲದೆ ಮಿದುಳಿಗೆ ತಂಪನ್ನು ಮನಸ್ಸಿಗೆ ಉತ್ಸಾಹವನ್ನೂ ಉಂಟುಮಾಡುತ್ತದೆ.

ಬೆಲೆ ಸೀಸೆ ೧ಕ್ಕೆ ರೂ. ೧—೦—೦.

ಒಟ್ಟಿಗೆ ೩ ಸೀಸೆ ತರಿಸಿಕೊಂಡರೆ ಅಂಚೆವೆಚ್ಚವಿಲ್ಲದೆ ಕಳುಹಿಸಿಕೊಡುತ್ತೇವೆ.

ವಿಳಾಸ:— ರಿಪನ್ ವಾಚ್ ಕಂಪೆನಿ,
22 ಕೃಷ್ಣಪ್ಪ ಮೊದಲಿ ಬೀದಿ, ಟ್ರಿಪ್ಲಿಕೇನ್, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶಿವ್ಯಾಪಾರಿ

ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ ರೂ. 3—4—0
ಶೇ. 1 („ 24) „ „ 2—0—0

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 3-0-0.

ಸ್ವಂತ ಖರ್ಚಿಗೆ ತರಿಸುವವರು ಪೋಸ್ಟ್ ಪೇಕಿಂಗ್ ಚಾರ್ಜು ಕೊಡಬೇಕಾಗುತ್ತದೆ

ನಶ್ಯ ಒಂದೇ ತರದ್ದು.

ಎಲಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವದ್ದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಯೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಂಟೋನಿಯೊ ಅಂಡ್ ಕೊ.
ಪೋಸ್ಟುಬಾಕ್ಸು ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಶ್ರೀಮಾನವಧೂತರು, ಕ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾಥಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅದನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಧಾವಾಜಗಳ ಟುಪ್ಪಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರೆದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವೂ ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ ಪಿಶಾಚಿ, ಬ್ರಹ್ಮರಾಕ್ಷಸ, ವಗೈರೆ ನಿವಾರಣೆಯಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿ ಒಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೦—೬ ಆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲು 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮೋಟರ್ಸ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಟಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷು ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯಿನಾಮಲ್ಲು ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಖಾಲಿ ಕವರು ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲೇರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ [illegible] ವಾಗಲೂ ದೊರೆಯುತ್ತವೆ.

ಆರ್. ಮಾರ್ಟಿನ್ನರ.

(ಸಾರಸಾ ಪರಿಲ್ಲಾ)

ಈ ಸಾರಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವುದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ, ಎಲ್ಲಾ ತರದ ಬಾಯಿಲೆ ಉಬ್ಬುವುದು, ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕೃತ್ಸಾರ, ಕೆಮ್ಮು, ಫರಂಗಿಹುಣ್ಣು, ಹಜ್ಜಿ ಮತ್ತು ಚರ್ಮದ ರೋಗಗಳು, ವಿಷ ಕಡಿತದಿಂದುಂಟಾದ ವ್ಯಾಧಿ, ಸಿಫಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು, ಮನುಷ್ಯನನ್ನು ಯಾವಾಗಲೂ ಆರೋಗ್ಯದಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ.

ಬಾಟ್ಲಿ 1ಕ್ಕೆ ಕ್ರಯ ರೂ. 1—12—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಳಿಜ್ವರ, ಸನ್ನಿಪಾತ ಪಟ್ಟಿ ವಾಯುವಿನಿಂದುಂಟಾದ ರೋಗ, ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನು ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳೂ ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯರಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಕಂಕೆಯಾಗುವಿಕೆ, ಮಾರ್ಗದಲ್ಲಿ ರಕ್ತ ಬೀಳುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾರೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ಹಳಹಳ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ನಾಶವಾಗುತ್ತದೆ. ಇದು ಶುದ್ಧ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಬಹಳ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0.

ವಿಳಾಸ:—ಆರ್. ಡಿ. ಕೆಟ್ಲಿ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೊ. ಹತ್ತಿರ, ಫೋರ್ಟ್, ಮುಂಬಯಿ.

R. D. KATELY & CO.,
No. B. Frere Road,
Near Wright & Co. fort BOMBAY.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 408.

SWADESHABHIMANI. MANGALORE.

ಸ್ವದೇಶಾಭಿಮಾನಿ.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ.

ಪುಸ್ತಕ ೧೭. ಮಂಗಳೂರು, ತಾರೀಕು ೫ನೇ ಶುಕ್ರವಾರ ಮೇ ೧೯೩೩. ಸಂಚಿಕೆ ೧೮

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ ‖
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖

ದೊರೆಯಲು ಮಣಿರತ್ನಗಳು, ಸ್ವ- | ರರವ ಮಥಿಸಲು ಸುರರಿಗೆದರಿಂ |
ತರುಷವಾಯಿತೆ! ಮತ್ತೆ ವಿಷವ ಕುಡುಕ ಬರುತಿರುವ ‖
ಗರಲಕವರಂಜಿದರೆ! ಸುಧೆಯನು | ಮರೆತು ತುಷ್ಟರ ತೆರದಿ ಕುಳಿತರೆ |
ಕೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00000—0—0
ಚಂದಾ ಹಾಕಿ ಎತ್ತಿದ ಮೂಲಧನ	1,54,400—0—0
ಮೌಲ್ಯ ತೆತ್ತ ಮೂಲಧನ	1,04,383—0—11
ಠೇವಣಾತಿಗಳು	3,49,151-12—6
ಇನ್ವೆಸ್ಟ್ಮೆಂಟು (1927ನೇ ಇಸವಿಯ) ಸೇಕಡಾ 6ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	5,12,162-13—2
ರಿಜರ್ವ ಮತ್ತು ಇತರ ಫಂಡುಗಳು	29,149—4—2

ಕಳೆದ 2 ವರುಷಗಳಲ್ಲಿ ಪಾಲುದಾರರಿಗೆ ಸಾಲಿಯಾನ್ ಸೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಶರ್ತದ ಮೇಲೆ ಸೇಕಡಾ 7ರಿಂದ 7½ ಬಡ್ಡಿಯಲ್ಲಿ ಠರಾವು ಠೇವಣಾತಿಗಳನ್ನು, 15 ದಿನಗಳ ನೋಟೀಸು ಮೂಲಕ ಸೇಕಡಾ 6½ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾದೆ ಠೇವಣಾತಿಗಳನ್ನು ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಸೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನು ಸೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸು ಬ್ಯಾಂಕು ಠೇವಣಾತಿಗಳನ್ನು, ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನು ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ನೆಕ್ರೆಟರಿಯವರಿಗೆ ಬರೆದಲ್ಲಿ ಸಿಕ್ಕುವುದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ನಿಮ್ಮ ಜಮೀನನ್ನು ಸಾರವತ್ತಾಗಿ ಇರಿಸಿ ಬೆಳೆ ಸಮೃದ್ಧಿಯನ್ನು ಪಡೆಯಬೇಕಾದರೆ ಕೊಟ ಗೊಬ್ಬರಗಳ ಜತೆಯಲ್ಲಿ ಸ್ವಲ್ಪ ನೈಟ್ರೇಟ ಒಫ್ ಸೋಡಾ ಗೊಬ್ಬರವನ್ನು ಉಪಯೋಗಿಸಿರಿ. ಈ ಸವುಳುಪ್ಪು ಗೊಬ್ಬರವು ಎಲ್ಲಾ ಧಾನ್ಯ ಮುಂತಾದ ಪೈರುಗಳಿಗೂ ಕಬ್ಬಿನ ಬೆಳೆಗೂ ಮತ್ತು ತೆಂಗು ಮೊದಲಾದ ಫಲವೃಕ್ಷಗಳಿಗೂ ಅಗತ್ಯವಿರುವ ನೈಟ್ರೊಜನ್ ವಾಯುವನ್ನು ಚುರುಕಾಗಿ ಒದಗಿಸುವುದು.

ಪರೀಕ್ಷಾರ್ಥವಾಗಿ ಉಪಯೋಗಿಸಬೇಕೆಂದಿದ್ದವರು 2 ರಾತ್ಲು ಸವುಳುಪ್ಪಿನ ಸೆಂಪಲ್ ಡಬ್ಬಿಯನ್ನು ೦—೬—೦ ಯಂತೆಯೂ ಬಂಗಾಲಿ ಮಣ ೧ಕ್ಕೆ ರೂ. ೯—೦—೦ಯಂತೆಯೂ ಪಡೆಯಬಹುದು.

ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರಣೆ" ಎಂಬ ಸಚಿತ್ರ ಪತ್ರಿಕೆಯನ್ನು ನಮ್ಮಿಂದ ಉಚಿತವಾಗಿ ಪಡೆಯಬಹುದು.

THE DIRECTOR,
CHILEAN NITRATE COMMITTEE,
6, *Mission Row*, CALCUTTA.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲಿ ದೊರೆಯುವ —

ಪುಸ್ತಕಗಳು.

ವಿದ್ಯಾಶಾಖಾಪ್ರತಿ ಅಧಿಕಾರರು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತಪವೇಶ ಕ್ರಯ	೦—೧೦—೦
ಕೇಶಮುಂಡನ	„ ೦—೧೨—೦
ಸಂಕ್ಷೇಪಗೀತ	„ ೦—೧೦—೦

ಅಚ್ಚಿಕಾರಾಯಣ ಪುರೋಹಿತರಿಂದ ರಚಿತವಾದ ಸ್ವರಾಜ್ಯ ಛಲೀಕ್ರೋಲ್ಲಾಸ ಕ್ರಯ ೦—೩—೦

ಕರ್ನಾಟಕ ಕವಿ ಚರಿತ, ಮರಾಟರ ಅವನತಿ, ಶ್ರೀದಾಸ ಬೋಧೆ, ದಾಸರಪದ್ಯ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ, ಅಂಗದನ ಕ್ರಿಯಾಗಾರು, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಚ್ಚ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨—೧೩—೦ ಸ್ಥಳೀಕರಿಗೆ ರೂ ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦ ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುತ್ತದೆ.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಪೈಲುಗಳು, ಫೌಂಟನ್ ಪೆನ್ನುಗಳು, ಪೆನ್ಸಿಲು, ಶಾಯಿ, ಫೋಟೋ ಫ್ರೇಮುಗಳು, ಇತರ ಶಿರಸ್ತೆದಾರ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಭಕೊಂಡದ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೊಪತಿಕ್, ಹೋಮಿಯೊಪತಿಕ್ ಮತ್ತು ಟೆಕ್ಕು ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಬಾಹ್ಯಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿತರಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಿಸ್ ಒಯಿಲ್ ಅಥವಾ ನೀಲಗಿರಿ ತೈಲ. ಗಜಕರ್ಣದ ಮುಲಾಮು, ನಮ್ಮ ಔಷಧಿ ಇರುವಾಗಿಯೂ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಿ ಇಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTANJ
Best Indian Pain Balm
Amrutanjan D
BOMBAY

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಹೋಪವಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ದೇನೆಗಲ್ಲದೆ ಮತ್ತಿನ್ನಿಂದಕ್ಕಿರದು.

ಅಂಥಾ ದೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ಹಲತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 3 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ— ಉಲನ್ ಮೋಟರ್ಸ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾತಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ಬೇರುಬೇರುಗಳಿಂದ ನಾವು ಅನೇಕ ಅತ್ಯುತ್ತಮ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಅದರ ಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರಶಂಸಾಪತ್ರ "ಅರ್ಹರಾಗಿ" ಬರುತ್ತಲಿವೆ. ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಪತ್ರಗಳು ಯೋಗ್ಯಪತ್ರಗಳೂ ಬೇರೆಯಾಗಿವೆ.

ಅಂಥಾ ಅತ್ಯುತ್ತಮ ಔಷಧಿಗಳಲ್ಲಿ ನಮ್ಮ 'ಪಾತಕಷಾಯವು' ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. [illegible] ಇರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂದು, ಅವಯವ, ಅಂತಃಕೋಶ ಮೊದಲಾದುವು ಕೆಂಪಾಗಿ ನೋವುಂಟಾಗುವುದು, ನಡೆಯಲು ಆಗದೆ ಇರುವುದು, [illegible] ಮುಖದಲ್ಲಿ ದೊಡ್ಡದಾಗುವುದು, [illegible] ಹಾಗಿನ ಶಾಸ್ತ್ರರೀತ್ಯಾ ತೆಗೆದುಕೊಳ್ಳಲು ಪ್ರಾರಂಭ ಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. [illegible] ವಾತ, ಕಫ, ಅಜೀರ್ಣ, ಕೊಬ್ಬು, ಕಾಮಾಲೆ, ಅಪಸ್ಮಾರ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, [illegible] ಮುಂತಾದವುಗಳಿಗೂ ನಿತ್ಯ ಔಷಧಗಳಿವೆ. 'ಕ್ಯಾಟಲಾಗ್'ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ, ಕಲ್ಲಿಕೋಟೆ [illegible]

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇದ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಈ ಔಷಧಗಳನ್ನು ಅಂತೆಯೆ ಅಸಲು ನಿರೀಕ್ಷಿಸದೆ ಜನಾವಲಾಗಿ ಕಳುಹಿಸುವೆವು.

ತಮಗೆ ಏನು ಬೇಕಾಗಿರುವದು

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ಜಾಮ್ ನಗರ, (ಬ್ರಾಂಚ್, ಮದ್ರಾಸ್.

Local Agents: **Raphael & Co.**

Brito Buildings,

Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಬಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕಾಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,

Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಚ್ಚೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್

ಹಂಪನಕಟ್ಟಾ, ಮಂಗಳೂರು ದ. ಕ.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇವನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವದು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವವು. ಅಪ್ಪ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಬೆಂಡೋಲೆಯು ಸವರನ್ ಬಂಗಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು. ೭ ಬಿಳೀ ಕಲ್ಲಿನ ಬೆಂಡೋಲೆ ಕ್ರಯ ಜೊತೆ ರೂ. ೩. ೭ ಕೆಂಪು ಹಸಿರ ಬೆಂಡೋಲೆ ಜೊತೆ ರೂ. ೩—೮—೦.

ಮಹಾರಾಷ್ಟ್ರ ಟ್ರೇಡಿಂಗ್ ಕಂಪೆನಿ,

16, ತಿರುವಳ್ಳಿಬೀದಿ, ಜಿ. ಟಿ. ಮದರಾಸ್.

ಮಾನವ ಜಾತಿಯ ಮರ್ಮಗಳನ್ನು ತಿಳಿಸುವ ಮರ್ಮ ಶಾಸ್ತ್ರ.

ಇದು ಚಿತ್ರಪಟಗಳ ಸಹಿತ ಅಂದವಾದ ಗ್ಲೇಜು ಕಾಗದದಲ್ಲಿ ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿದೆ. ಇದರಲ್ಲಿ ಸ್ತ್ರೀಪುರುಷರುಗಳಿಗೆ ಬೇಕಾದ ಅನೇಕ ರಹಸ್ಯಗಳು ಕಾಣಬರುವವು.

ಕ್ರಯ ಪುಸ್ತಕ 1ಕ್ಕೆ ೦—೧೨—೦.

ಜನರಲ್ ಮೇಲ್ ಆರ್ಡರ್ ಕಂಪೆನಿ,

ಪೋಸ್ಟು ಬಾಕ್ಸ್ ನಂ. 232. ಮದರಾಸ್.

ಓಟೋಲಿಲ್ಲಾ ಎಂಬ ಸೆಂಟ್.

ಇದನ್ನು ಒಂದು ಬಟ್ಟೆಗೆ ಹಚ್ಚಿದರೆ, ಸೋಪಿನಿಂದ 6-7 ದಿನಗಳ ವರೆಗೂ ಸುವಾಸನೆಯಾಗಿರುತ್ತದೆ. ಇತರ ಸೆಂಟುಗಳ ಹಾಗೆ ಬಟ್ಟೆಗೆ ಕಲೆಯನ್ನು ಉಂಟುಮಾಡುವುದಿಲ್ಲ.

ಬೆಲೆ 1 ಔನ್ಸ್ ಬಾಟ್ಲಿಗೆ	ರೂ.	1—4—0.
„ ½ „ „	ರೂ.	0—10—0.
ಓಟೋಲಿಲ್ಲಾ ಸೆಂಟು ಕಾರ್ಡು ದರ್ಜ	1ಕ್ಕೆ ರೂ.	0—12—0

ನಮ್ಮಲ್ಲಿ ಸುಲಭ ಕ್ರಯಕ್ಕೆ ಸಿಕ್ಕುವ ಇತರ ಸಾಮಾನುಗಳು:—

ಬ್ರಿಟಿಷ್ ಮೇಡ್ ರೇಜರ್	1ಕ್ಕೆ	3—0—0
ರೋಲ್ಡುಗೋಲ್ಡು ರಿಸ್ಟವಾಚು	1ಕ್ಕೆ	8—8—0
ನಿಕಲ್ ರಿಸ್ಟ ವಾಚು	1ಕ್ಕೆ	6—8—0
ಮಹಾತ್ಮಾ ಗಾಂಧಿಯವರ ಫೋಟೋ ಉಂಗರ	1ಕ್ಕೆ	1—8—0

ವಿಳಾಸ:— **ರಿಪನ್ ವಾಚ್ ಕಂಪೆನಿ,**

1/10ಕರದ ರಂಗೈಯ್ಯ ಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ 'ವಿಲ್ಲಿಯಮ್ಸ್ ಡೆಂಟೋನ್' ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ದೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಖುದಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರಊರುಗಳಲ್ಲಿ ಏಜಂಟರಾಗಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಸೋಲ್ ಏಜಂಟ್ಸ್:—

ಜಿ. ಎಸ್. ಸೋಜ ಮತ್ತು ಕಂಪೆನಿ,

ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs.	150
¾ Page Rs. 80. ½ Page	„	50
2 in. Single Column	„	20
1 in. Single Column	„	15
Name alone in Bold Types	„	5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.

Telegrams: "KETHAKI" Phone: 540.

FIRST RAFFLE.

IN AID OF

National Girls' School,

MANGALORE.

Please note:—

Dates of drawing and closing postponed to 15—7—'23 and 31—7—'23 respectively.

(By order of Executive Committee)

Wanted Agents. *Apply to:*—

HON. SECRETARY,

RAFFLE OFFICE,

NATIONAL GIRLS' SCHOOL,

Kodialbail, S. Kanara.

'ಕವಿ'ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ಲ 1ರ ರೂ. 2—12—0.

ಸ್ಪೆಶಲ್ ರಾತ್ಲ 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದಲ್ಲಿ ಸೆಂಪಲು ಕಳುಹಿಸಲ್ಪಡುವದು.

ಕವಿ ಎಂಡ್ ಸನ್ಸ್,

ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0

ಫಿಡಲ್ 1ಕ್ಕೆ „ 15—0—0

ಬೇಕಾದವರು 5 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,

ಪೋಸ್ಟು ಬಾಕ್ಸ್ ನಂಬ್ರ 65,

ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೋಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,

ಪೋಸ್ಟು ಬಾಕ್ಸ್ ನಂಬ್ರ 65, ಮದರಾಸು.

ಶಾಲಿವಾಹನಶಕೆ ೧೮೪೫ನೆಯ ರುಧಿರೋದ್ಗಾರಿ ಸಂವತ್ಸರದ ವೈಶಾಖ ಬಹುಳ ಶನಿವಾರದಿಂದ ರುಧಿರೋದ್ಗಾರಿ ಸಂವತ್ಸರದ ವೈಶಾಖ ಬಹುಳ ಶುಕ್ರವಾರದ ವರೆಗಿನ

ಪಂಚಾಂಗ

(೧೯೨೩ನೆಯ ಮೇಷ ಪಕ್ಷ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
5	ಶನಿ	೮	೩೧.೩೧	ಪೂ. ಆ.	೫೪.೪೬	೨೨	6.11	6 44
6	ರವಿ	೬	೨೯.೪೬	ಉ. ಆ.	೫೫. ೦	೨೩	6.10	6.44
7	ಸೋಮ	೭	೨೯. ೧	ಶ್ರವಣ	೫೬.೪೬	೨೪	6 10	6.45
8	ಕುಜ	೮	೨೯ ೨೦	ಧನಿಷ್ಠಾ	೫೯.೩೩	೨೫	6.10	6.45
9	ಬುಧ	೯	೩೧.೩೨	ಶತಭಿಷಾ	೬೦. ೦	೨೬	6. 9	6.45
10	ಗುರು	೧೦	೩೪.೪೬	ಶತಭಿಷಾ	೩.೪೬	೨೭	6. 9	6.45
11	ಶುಕ್ರ	೧೧	೩೮.೪೫	ಪೂ. ಭಾ	೯. ೨	೨೮	6. 9	6.45

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಎಪ್ರಿಲ್)

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆ	ದಿನದ ಮಳೆ	ಜುಮಲಾ ಮಳೆ.
26	93—5	81—2	—	—
27	93—6	81—2	—	—
28	93—3	79—5	—	—
29	93—3	79—7	—	—
30	94—2	82—8	—	—
1	94—2	76—1	—	—
2	94—0	81—5	—	0—04

ಮಂಗಳೂರಿನ ಪೇಟೆ ಧಾರಣೆ

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ ಅಕ್ಕಿಮುಡಿ ೧ಕ್ಕೆ	...	7- 8	8- 3
ಹೊಸ ಗುಡ್ಡು	...	6-10	7- 6
ಹೊಸ ರಾಶಿ	...	6- 4	6- 8
ಅವ್ವಲ್ ಬೆಳ್ತಿಗೆ „	...	7-14	8-10
ಗುಡ್ಡು ಬೆಳ್ತಿಗೆ „	...	7- 6	7-12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	12- 8	13- 0
ಗೋಧಿ ಗೋಣಿ ೧ಕ್ಕೆ	...	15- 8	18- 0
ಹುರುಳಿ ಗೋಣಿ ೧ಕ್ಕೆ	...	8- 4	10 0
ಅಲಸಂದೆ ಗೋಣಿ ೧ಕ್ಕೆ	...	11-14	12- 0
ಕಡಲೆ ಗೋಣಿ ೧ಕ್ಕೆ	...	11- 8	—
ಕೊಂಕಣೀಕಡಲೆ ಗೋಣಿ ೧ಕ್ಕೆ	...	14- 0	23- 0
ಉದ್ದು ಗೋಣಿ ೧ಕ್ಕೆ	...	13- 0	—
ಹೆಸರು ಗೋಣಿ ೧ಕ್ಕೆ	...	—	12- 0
ಊರು ಬೆಲ್ಲ ಖಂಡಿ ೧ಕ್ಕೆ	...	40- 0	45- 0
ಉಪ್ಪು ಗೋಣಿ ೧ಕ್ಕೆ	...	7- 4	7-10
ಕೊಬ್ಬರಿ ಖಂಡಿ ೧ಕ್ಕೆ	...	105- 0	115- 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	...	39- 0	40- 0
ಎಳ್ಳಿನ ಹಿಂಡಿ ೧ಕ್ಕೆ	...	45- 0	52- 8
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ	...	8- 2	9- 0
ಎಳ್ಳೆಣ್ಣೆ ಮುಡಿ ೧ಕ್ಕೆ	...	6-12	9- 0
ಅಭಿಷೇಕ ಸಕ್ಕರೆ ೧ಕ್ಕೆ	...	9- 0	—
ಹೋಪಿನ ಸಕ್ಕರೆ ಮುಡಿ ೧ಕ್ಕೆ	...	7-12	8- 0
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	7- 8	8- 8
ಕಾಸಿನ ಮೆಣಸು ೧ಕ್ಕೆ	...	8- 8	9- 0
ಕೊತ್ತಂಬರಿ ಮುಡಿ ೧ಕ್ಕೆ	...	4- 0	4- 8
ಕಾಫಿ ಖಂಡಿ ೧ಕ್ಕೆ	...	280- 0	287- 0
ಬೀಗೋಟು ಅಡಿಕೆ ಖಂಡಿ ೧ಕ್ಕೆ ಹಳ್ಳು	...	200- 0	295- 0
ಬೀಗೋಟು New, ಹೊಸ್ಸು	...	165- 0	175- 0
ಕಾಳುಮೆಣಸು ಖಂಡಿ ೧ಕ್ಕೆ	...	115- 0	120- 0
ಮೆಂತ್ಯ ಮುಡಿ ೧ಕ್ಕೆ	...	60- 6	70- 0
ಗೇರುಬೀಜ ಮುಡಿ ೧ಕ್ಕೆ	...	1-14	2- 0
ಹುಣಸೆ ಖಂಡಿ ೧ಕ್ಕೆ	...	50- 0	65- 0
ಅರಿಸ್ಸಿ ಸಣ್ಣ ಮುಡಿ ೧ಕ್ಕೆ	...	20-12	23- 0
[illegible]	...	32- 0	—
[illegible]	...	22- 8	—
[illegible] 1ಕ್ಕೆ	...	20- 0	21

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 8 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆದರೆ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,

ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು, ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.

ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

AMRUTHINE.

An ideal beverage. The best Substitute for Coffee, Tea, and Cocoa.

ಶಕ್ತಿವರ್ಧಕ! **ಅಮೃತೈನ್**. ಆರೋಗ್ಯದಾಯಕ!

ಕಾಫಿ, ಟೀ, ಕೊಕ್ಕೋಗಳಿಗೆ ಬದಲಾಗಿ ಬಾಲ ವೃದ್ಧರೂ ಸೇವಿಸಬಹುದಾದ "ಅಮೃತೈನ್" ಎಂಬ ಶ್ರೇಷ್ಠ ವರ್ಗದ ಚೂರ್ಣವು.

ಇದು ಪರಿಶುದ್ಧವೂ, ಚೈತನ್ಯವರ್ಧಕವೂ ಆದುದು. ಈ ಚೂರ್ಣವು ರಕ್ತವನ್ನು ಶುದ್ಧಿಮಾಡಿ, ಶಕ್ತಿಯನ್ನೂ ಉತ್ಸಾಹವನ್ನೂ ಹೆಚ್ಚಿಸಿ, ಶರೀರವನ್ನು ಆರೋಗ್ಯ ರೀತಿಯಲ್ಲಿಡುವುದಲ್ಲದೆ, ಬಹುಮೂತ್ರ, ಮಲಬದ್ಧತೆ ಮತ್ತು ಮೂಲವ್ಯಾಧಿ ಇವುಗಳನ್ನು ಶೀಘ್ರದಲ್ಲೇ ಗುಣಪಡಿಸುವ ಪಾನವಾಗಿದೆ. ಒಂದು ವಾರ ಉಪಯೋಗಿಸುವುದರಲ್ಲಿ ಇದರ ಗುಣಗಳು ವ್ಯಕ್ತವಾಗುವುವು.

6. ಔನ್ಸ್ ಟಿನ್. (120 ಬಟ್ಟಲುಗಳಿಗೆ ಸಾಕಾಗುವಷ್ಟು ಚೂರ್ಣ.) ರೂ. 0-10-6.

2. ಔನ್ಸು ಟಿನ್. (40 „ „) „ 0—4—0.

1. ಕಾಗದ ಪಾಕೆಟು. (8 ಬಟ್ಟಲುಗಳಿಗೆ) „ 0—0—9.

ಪ್ಯಾಕಿಂಗ್ ಮತ್ತು ಪಾರ್ಸೆಲು ಖರ್ಚು ಪ್ರತ್ಯೇಕ.

ವ್ಯಾಪಾರಿಗಳಿಗೆ ಕಮಿಷನ್ ಕೊಡಲ್ಪಡುತ್ತೆ.

ಬೇಕು! ಪ್ರತಿ ಟೌನುಗಳಲ್ಲೂ ಏಜಂಟರು ಬೇಕು!

ವಿಳಾಸ:— **ಮದ್ರಾಸ್ ಮೈಸೂರು ಟ್ರೇಡಿಂಗ್ ಕಂಪೆನಿ,**

ಮೈಸೂರು.

ಮಂಗಳೂರ ಏಜಂಟರು:—

ದಿ. ರಾಯಲ್ ಹಾರ್ಮೋನಿಯಮ್ ಮಾರ್ಟ್,

ರಥಬೀದಿ, ಮಂಗಳೂರು.

NOTICE.

The Samyukta Gowda Saraswat Sabha, Madras will grant a number of scholarships to the total value of Rs. 1000 during the academic year 1923-1924.

The scholarships are tenable for 10 months and will be granted to men or women of the community for prosecuting studies in the lower secondary and high schools, in Arts colleges in the Medical & Engineering colleges and in the case of women to under go training as nurses or teachers.

Applications with testimonials of conduct, poverty and qualification should reach the Hon. Secretary, 25 Harris Road, Mount Road Post, Madras, not later than the 15th June next.

The scholarships are repayable with 4% interest.

25 Harris Road,
Mount Road P. O. Madras,
18th April 1923.

M. Keshava Pai,
Hon. Secretary.

ವಿಶ್ವನಾಥ ಹೇರ್ ಆಯಿಲ್.

ಈ ತೈಲವನ್ನು ಆಯುರ್ವೇದ ಸಂಬಂಧವಾದ ಮೂಲಿಕೆಗಳ ಮುಖಾಂತರ ಪ್ರಸಿದ್ಧವಾದ ವೈದ್ಯರಿಂದ ತಯಾರಿಸಲ್ಪಟ್ಟಿದೆ. ಇದನ್ನು ತಲೆಗೆ ಹಚ್ಚಿಕೊಂಡರೆ ಎಂಟು ದಿವಸದ ವರೆಗೂ ಘಮಘಮಿಸುತ್ತಲೇ ಇರುತ್ತದೆ. ಈ ತೈಲವನ್ನು ಉಪಯೋಗಿಸುವುದರಿಂದ ಕೂದಲು ಹೆಚ್ಚಾಗಿಯೂ, ನೀಳವಾಗಿಯೂ ಬೆಳೆಯುತ್ತೆ. ಉದುರಹೋಗದ ಹಾಗೆ ಬೇರುಗಳಿಗೆ ಶಕ್ತಿಯನ್ನು ಉಂಟುಮಾಡುತ್ತೆ. ಅದರ ಬಣ್ಣವನ್ನು ಹೆಚ್ಚಿಸುತ್ತದೆ. ಇತರ ತೈಲಗಳ ಹಾಗೆ ಕಮ್ಮರಿ, ಕೂದಲು ಉದುರಿ ಹೋಗುವುದು ಮುಂತಾದ ದುರ್ಗುಣಗಳಿಲ್ಲದೆ ಮೆದುಳಿಗೆ ತಂಪನ್ನೂ ಮನಸ್ಸಿಗೆ ಉಲ್ಲಾಸವನ್ನೂ ಉಂಟುಮಾಡುತ್ತದೆ.

ಬೆಲೆ ಸೀಸೆ ೧ಕ್ಕೆ ರೂ. ೧—೦—೦.

ಒಟ್ಟಿಗೆ ೪ ಸೀಸೆ ತರಿಸಿಕೊಂಡರೆ ಅಂಚೆವೆಚ್ಚವಿಲ್ಲದೆ ಕಳುಹಿಸಿಕೊಡುತ್ತೇವೆ.

ವಿಳಾಸ:— **ರಿಪನ್ ವಾಚ್ ಕಂಪೆನಿ,**

22 ಕೃಷ್ಣಪ್ಪ ಮೊದಲೀ ಬೀದಿ, ಟ್ರಿಪ್ಲಿಕೇನ್, ಮದರಾಸು.

ಹೊಸ ಟೆಕ್ಸ್ಟ ಬುಕ್ ಕಮಿಟಿ.

ಈ ವರೆಗೆ ಮದರಾಸ ಸಂಸ್ಥಾನಕ್ಕೆ ಇದ್ದ ಟೆಕ್ಸ್ಟ ಬುಕ್ ಕಮ್ಮಿಟಿ ಮೆಂಬರರನ್ನೆಲ್ಲಾ ಡೈರೆಕ್ಟರವರೆ ಚುನಾಯಿಸುತ್ತಿದ್ದರು. ಈಗ ಹಳೆ ಕ್ರಮಗಳನ್ನೆಲ್ಲಾ ರದ್ದುಪಡಿಸಿ ಹೊಸ ಕ್ರಮಗಳನ್ನು ಏರ್ಪಡಿಸಿದ ನಂಬ್ರ $\frac{548}{11\text{-}4\text{-}23}$ (Law Education) G. O. ಹೊರಟಿದೆ. ಇದರ ಪ್ರಕಾರ ಇನ್ನು ಮುಂದೆ ಬೇಗನೇ ಆಗುವ ಕಮಿಟಿಯಲ್ಲಿ ೪೦ ಮಂದಿ ಮೆಂಬರರು ಇರುವರು. ಇವರಲ್ಲಿ ೧೮ ಮಂದಿ ಮೆಂಬರರನ್ನು ಡಿಸ್ಟ್ರಿಕ್ಟ ಸೆಕೆಂಡರಿ ಎಜ್ಯುಕೇಶನಲ್ ಕೌನ್ಸಿಲಿನವರು ಆರಿಸಬೇಕಾಗಿದೆ. ಉಳಿದ ೨೨ ಮಂದಿಯನ್ನು ಡೈರೆಕ್ಟರರು ಚುನಾಯಿಸಬೇಕಾಗಿದೆ. ಗಂಜಾಂ, ವಿಶಾಖಪಟ್ಟಣ, ಗೋದಾವರಿ, ಕೃಷ್ಣಾ, ದಕ್ಷಿಣ ಆರ್ಕಾಡು, ತಿರುಚಿನಾಪಳ್ಳಿ, ತಂಜಾವೂರು, ಮಧುರೆ, ರಾಮನಾಡು, ತಿನ್ನವಳ್ಳಿ, ಸೇಲಂ, ಕೊಯಂಮುತ್ತೂರು, ಮಲಬಾರು, ದಕ್ಷಿಣ ಕನ್ನಡ ಜಿಲ್ಲೆಗಳ ಡಿಸ್ಟ್ರಿಕ್ಟಿನ ಸೆಕೆಂಡರಿ ಎಜ್ಯುಕೇಶನಲ್ ಕೌನ್ಸಿಲಿನವರ ಒಬ್ಬೊಬ್ಬ ಮೆಂಬರರನ್ನೂ, ಗುಂಟೂರು ಮತ್ತು ನೆಲ್ಲೂರು, ಕಡಪಾ ಮತ್ತು ಕರ್ನೂಲು, ಬಳ್ಳಾರಿ, ಮತ್ತು ಅನಂತಪುರ, ಉತ್ತರ ಆರ್ಕಾಡು ಮತ್ತು ಚಿತ್ತೂರು ಜಿಲ್ಲೆಗಳಿಂದ ಒಬ್ಬೊಬ್ಬರನ್ನು ಆರಿಸಬೇಕಾಗಿದೆ. ಈ ನಾಲ್ವತ್ತು ಮೆಂಬರರ ಕಮಿಟಿಗೆ ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರು ಅಧ್ಯಕ್ಷರೂ, ಗವರ್ನಮೆಂಟ ಪರೀಕ್ಷೆಗಳ ಕಮಿಶನರು, ಸೆಕ್ರೆಟರಿಗಳೂ ಆಗಿರುವರು. ಮೆಂಬರರ ಕೆಲಸದ ಅವಧಿಯು ಮೂರು ವರುಷ. ಮಧ್ಯದಲ್ಲಿ ಖಾಲಿಯಾದರೆ ಕೂಡಲೆ ಭರ್ತಿಮಾಡಬೇಕಾಗಿದೆ. ಮೆಂಬರರು ಭತ್ತೆಯನ್ನು ತೆಗೆದುಕೊಳ್ಳಬೇಕೆಂದಿದ್ದರೆ ಉತ್ತಮವೆಂದೂ ಅನುಕೂಲವಿಲ್ಲದವರು ಭತ್ತೆಯನ್ನು ದಬ್ಬಲ್ ಸೆಕೆಂಡ ಕ್ಲಾಸನ್ನು ಪಡೆಯಬಹುದೆಂದು ಇದೆ.

ಮಾರಾಟಕ್ಕಿದೆ.

ಉಡ್ಪಿ ಮೂಡನಿಡಂಬೂರು ಗ್ರಾಮ, ಸರ್ವೇ ನಂಬ್ರ ೮೫ನೇ, ಸಬ್‌ಡಿವಿಜನ್ $\frac{6}{18}$ನೇ, ಮೂಲಿ ಅಂಶಕ್ಕೆ ವರ್ಷ ೧೮ ರೂಪಾಯಿ ೫ರ ಪ್ರಕಾರ ಮೂಲಗೇಣಿ ತೆತ್ತುಬರುವ, ಮೂಲಗೇಣಿ ವ ಕೃತದ ಹಕ್ಕಿನ ಆಸ್ತಿ ಸ್ಟೇಟ್ಸ್ ಎಸ್ಟೇಟಾದ್ದು; ಇದರಲ್ಲಿ ಹಂಚು ಛಾವಣಿಯ ತಕ್ತಪೋಷಿಯ ಮನೆ, ಬಾವಿ, ಬಾಗಾಯತು ವ ಇತರ ಮರಮಟ್ಟುಗಳು ಕೂಡಾ ಇರುತ್ತವೆ. ಈ ಸ್ಥಳ ಉಡ್ಪಿ ಮಿಶನ್ ಕಂಪೌಂಡಿನ ಪಡುಗೋಡೆಯ ಎದುರಿಗೆ ರಾಜರಸ್ತೆ ಬದಿಯಲ್ಲಿರುತ್ತದೆ. ಬೇಕಾದವರು ವಿಕ್ರಯ ವ ಕ್ರಯದ ಅಂದಾಜು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಂಡಲ್ಲಿ ತಿಳಿಸೋಣಾಗುವುದು.

೨ನೇ ಎಪ್ರೀಲ್ ೧೯೨೩
ಮಂಗಳೂರು.

S. CH. GOJAR,
Mission Street,
MANGALORE.

ಭೂಕಂಪಗಳೂ ಜ್ವಾಲಾಮುಖಿಗಳೂ.

ಸಜೀವವಾಗಿರುವ ಪರ್ವತಗಳು, ಅಪಾಯಕರ ಭೂಕಂಪಗಳಾಗಲು ಕಾರಣವೆಂದು ಸೆನ್‌ಫೋರ್ಡ್ ಯುನಿವರ್ಸಿಟಿಯ ಪ್ರೊಫೆಸರರಾದ ವೈಲಿವಿಲ್ಲಿಸ್ ಎಂಬವರು ಬರೆಯುತ್ತಾರೆ. ಯುನೈಟೆಡ್ ಸ್ಟೇಟ್ಸಿನ ಅಟ್ಲಾಂಟಿಕ್ ಸಾಗರದ ತೀರದಲ್ಲಿ ಜ್ವಾಲಾಮುಖಿಗಳು ತಮ್ಮ ಕೆಲಸವನ್ನು ನಿಲ್ಲಿಸಿಯವೆ. ಆದರೆ ಯುನೈಟೆಡ್ ಸ್ಟೇಟ್ಸ ಪೆಸಿಫಿಕ್ ಸಾಗರದ ತೀರದಲ್ಲಿಯೂ ಏಸಿಯಾ ಖಂಡದಲ್ಲಿಯೂ ಮೆಡಿಟರೆನಿಯನ್ ತೀರದಲ್ಲಿಯೂ ಇರುವ ಜ್ವಾಲಾಮುಖಿಗಳು ಸಜೀವವಾಗಿದ್ದು ಇನ್ನೂ ಬೆಳೆಯುತ್ತಿವೆ. ಯಾಕೆಂದರೆ ಈ ಪ್ರದೇಶಗಳಲ್ಲಿ ನೆಲವು ಮುದುಡಿಕೊಳ್ಳುವುದರಿಂದ ಒತ್ತಾಟವು ಸುರುವಾಗುತ್ತದೆ. ಭೂಕಂಪಗಳು ಈ ಕಾರಣದಿಂದ ಆಗುವವೆಂದು ಈಗಿನ ಶಾಸ್ತ್ರಜ್ಞರು ತಿಳಿದುಕೊಂಡಿದ್ದಾರೆ. ೧೯೦೬ನೆಯ ಇಸವಿಯಲ್ಲಿ ಉಂಟಾದ ಜ್ವಾಲಾಮುಖಿಯ ಬೆಂಕಿಯಿಂದ ಸೇನ್‌ಫ್ರಾನ್ಸಿಸ್ಕೊ ಪಟ್ಟಣವು ನಾಶವಾಯಿತು. ಇನ್ನೂ ಇದರನಂತರ ಬೇರೆ ಬೇರೆ ಕಡೆಗಳಲ್ಲಿ ಸಣ್ಣ ಸಣ್ಣ ಭೂಕಂಪಗಳು ಉಂಟಾಗಿಯುವೆ. ಸಾಧಾರಣವಾಗಿ ಭೂಕಂಪವೆಂದರೆ, ಭೂಮಿಯ ಮೇಲ್ಭಾಗವು ಒಡೆದು ಹೋಗುವುದೆಂದು ಭಾವಿಸುತ್ತೇವೆ. ಆದರೆ ಇದರ ನಿಜಸ್ಥಿತಿಯು ಹೀಗಲ್ಲ. ನಿಜಸ್ಥಿತಿಯು ಹೇಗೆಂದರೆ, ಭೂಮಿಯ ಅಡಿಯಲ್ಲಿರುವ ಬೇರೆ ಬೇರೆ ದೊಡ್ಡ ದೊಡ್ಡ ಪದರುಗಳು ಅನೇಕ ವರುಷಗಳಿಂದ ಒಟ್ಟೈಕೊಡದೆ ಇರುತ್ತವೆ. ಇವು ಒಂದರ ಮೇಲೊಂದು ಜಾರಿಹೋಗುತ್ತಾ ಇವೆ. ಇಂಥಾ ಪದರುಗಳು ಭೂಭಾಗದ ಮೇಲ್ಭಾಗಕ್ಕೆ ಬಂದರೆ ಮೇಲೊಂದು ಜಾರಿ ಅಚೆಅಚೆ ಹೋಗುವ ಈ ಅವಸ್ಥೆಯಿಂದ ಭೂಕಂಪವು ಉಂಟಾಗುತ್ತದೆ. ಈ ತರದ ಅವಸ್ಥೆಯು ಯುನೈಟೆಡ್ ಸ್ಟೇಟ್ಸಿನ ಕೆಲಿಫೋರ್ನಿಯ ಪರ್ವತಶ್ರೇಣಿಯಲ್ಲಿ ಸುಮಾರು ೬೦೦ ಮೈಲುಗಳ ವರೆಗೆ ಹರಡಿಕೊಂಡಿದೆ. ಇದು ಸೇನ್‌ಫ್ರಾನ್ಸಿಸ್ಕೋ ಪಟ್ಟಣದ ಪಶ್ಚಿಮದಿಂದ ಚಾಚಿಕೊಂಡು, ಲೊಸ್‌ಎಂಗಲ್ಸಿನ ಪೂರ್ವದಿಕ್ಕಿನ ವರೆಗೆ ಚಾಚಿ, ಕೆಲಿಫೋರ್ನಿಯಾ ಕೊಲ್ಲಿಯಲ್ಲಿ ಕಾಣದೆಹೋಗುತ್ತದೆ. ಸೆನ್ ಎಂಡ್ರಿಸ್ ತಗ್ಗು ಪ್ರದೇಶದಲ್ಲಿ ಆಗಾಗ್ಗೆ ಜ್ವಾಲಾಮುಖಿಗಳು ಉಂಟಾಗಿವೆ. ೧೯೦೬ರಲ್ಲಿ ಸೇನ್‌ಫ್ರಾನ್ಸಿಸ್ಕೊ ಉತ್ತರಕ್ಕೂ ದಕ್ಷಿಣಕ್ಕೂ ಸುಮಾರು ೧೫೦ ಮೈಲುಗಳ ವರೆಗೆ ಭೂಕಂಪಗಳು ಉಂಟಾದವು. ಇವರ ದಕ್ಷಿಣಕ್ಕೆ ಸುಮಾರು ೩೦೦ ಮೈಲುಗಳ ವರೆಗೆ ೧೮೫೭ನೆಯ ಇಸವಿಯಿಂದ ಭೂಕಂಪಗಳು ಇರಲಿಲ್ಲ. ಇದಕ್ಕಿಂತಲೂ ದಕ್ಷಿಣಕ್ಕೆ ಇತ್ತಲಾಗಿ ಅನೇಕ ಭೂಕಂಪಗಳು ಉಂಟಾಗಿವೆ.

ಮೇಲೆ ಕಾಣಿಸಿದ ಸಜೀವ ಜ್ವಾಲಾಮುಖಿಗಳ ಸಾಲುಗಳ ಹಾಗೆಯೇ ಸಜೀವ ಭೂಕಂಪದ ತಗ್ಗು ಪ್ರದೇಶಗಳಿವೆ. ಕೆಲವು ಬಹಳ ಅಪಾಯಕರವಾದ ಇಂಥಾ ಪ್ರದೇಶಗಳು ಇವೆ. ಇವುಗಳ ಮೇಲೆ ಅಣೆಕಟ್ಟುಗಳನ್ನಾಗಲಿ, ಶಾಲೆಗಳನ್ನಾಗಲಿ, ಕಾರಖಾನೆಗಳನ್ನಾಗಲಿ ಕಟ್ಟಬಾರದು. ಇವುಗಳಿದ್ದಲ್ಲಿ ರೈಲುಮಾರ್ಗಗಳನ್ನಾಗಲಿ, ಸೇತುವೆಗಳನ್ನಾಗಲಿ, ನೀರಾವರಿಯ ಕೆಲಸಗಳನ್ನಾಗಲಿ ಅಥವಾ ಸಾರ್ವಜನಿಕ ಪ್ರಯೋಜನಕರವಾದ ಇತರ ಯಾವ ಸಂಸ್ಥೆಗಳನ್ನಾಗಲಿ ಮಾಡಬಾರದು. ಆದರೆ ತಿಳಿಯದೆ ಇಂಥಾ ಕೆಲಸಗಳನ್ನು ಅನೇಕ ಕಡೆಗಳಲ್ಲಿ ಮಾಡಿರುತ್ತಾರೆ. ಯಾಕೆಂದರೆ ಈ ಸಜೀವ ಭೂಕಂಪದ ಸಾಲನ್ನು ಪಠಗಳಲ್ಲಿ ನಿಶ್ಚಯಿಸಿ ಗೆರೆಎಳೆಯುವುದು ಅಸಾಧ್ಯವಾಗಿದೆ. ಕಾರ್ನಿಜ ವಿದ್ಯಾಸಂಸ್ಥೆಯವರೂ, ಅಮೇರಿಕದ ಸಿಸ್ಮೊಗ್ರಿಫಿಕ್ ಸಂಘದವರೂ ಕೆಲಿಫೋರ್ನಿಯದ ಇಂಥಾದ್ದೊಂದು ಭೂಪಠವನ್ನು ತಯಾರಿಸಿರುತ್ತಾರೆ. ಈ ಸಂಗತಿಗಳನ್ನು ತನಖಿಮಾಡಿ ಏನು ಪ್ರಯೋಜನವೆಂದು ಕೆಲವರು ಊಹಿಸಬಹುದು. ಇದು ನಾವು ತಿಳುಕೊಳ್ಳಬೇಕಾದ ಒಂದು ಸಂಗತಿಯಾಗಿದೆ. ನಾವು ವಾಸವಾಗಿರುವ ಭೂಮಿಯ ಪರಿಸ್ಥಿತಿಗಳನ್ನು ತಿಳಕೊಳ್ಳುವುದು ಅವಶ್ಯವಾಗಿದೆ. ಹೀಗೆ ನಾವು ಅಭ್ಯಾಸಮಾಡಿದರೆ ಬರುವ ಕಷ್ಟಗಳನ್ನು ತಪ್ಪಿಸಬಹುದು. ಸೇನ್‌ಫ್ರಾನ್ಸಿಸ್ಕೊ ಪಟ್ಟಣದ ನೀರುಸರಬರಾಯಿಯ ನಳಿಗೆಗಳು ಈ ಸಜೀವ ಭೂಕಂಪದ ದಾರಿಯಲ್ಲಿದ್ದುದೆ ಆ ಪಟ್ಟಣದ ನಾಶಕ್ಕೆ ಕಾರಣವಾಯಿತು. ಈಗ ಅದನ್ನು ತಿಳಿದು ಪರ್ವತಶ್ರೇಣಿಯ ಬದಿಯಿಂದ ನಳಿಗೆಗಳನ್ನು ತಂದಿರುತ್ತಾರೆ. ಆದ್ದರಿಂದ ಇನ್ನು ಕೇಡು ಬರಲಿಕ್ಕಿಲ್ಲ.

ಗುಜರಾಥಿನಲ್ಲಿ ಕಾನೂನು ಭಂಗ.

ಗಯಾ ಕೊಂಗ್ರೆಸ್ಸಿನ ಠರಾವಿನಂತೆ ಈ ತಿಂಗಳಲ್ಲಿ ಗುಜರಾಥಿನಲ್ಲಿ ಕಾನೂನುಭಂಗವನ್ನು ಜಾರಿಗೆ ತರುವ ವಿಷಯದಲ್ಲಿ ಮತಭೇದಗಳುಂಟಾಗಿವೆ. ಈಗಿನ ವ್ಯವಮಾನಗಳಲ್ಲಿ ಕಾನೂನುಭಂಗವನ್ನು ಜಾರಿಗೆತರುವುದರಿಂದ ಯಾವ ಯೋಗ್ಯ ಪರಿಣಾಮವೂ ಉಂಟಾಗಲಿಕ್ಕಿಲ್ಲವೆಂದು ಶ್ರೀಯುತ ವಲ್ಲಭ್ಭಾ ಪಟೇಲ ಮೊದಲಾದವರ ಅಭಿಪ್ರಾಯ. ಶ್ರೀಯುತ ವಲ್ಲಭ್ಭಾ ಪಟೇಲರು ನವಜೀವನದಲ್ಲಿ ಕೆಳಗಿನ ವಿಷಯವನ್ನು ತಿಳಿಸಿರುವರು. ಕಾನೂನು ಭಂಗವನ್ನು ಜಾರಿಗೆತರತಕ್ಕದೆಂಬ ಠರಾವನ್ನು ಗಯಾ ಕೊಂಗ್ರೆಸ್ಸಿನಲ್ಲಿ ಬಹಳವಾಗಿ ಪುಷ್ಟೀಕರಿಸಿದ ಆ ಪಂಜಾಬ ಪ್ರಾಂತದಲ್ಲಿ ಈಗ ಎಲ್ಲಾ ಕೊಂಗ್ರೆಸ್ ಸಂಸ್ಥೆಗಳು ಸುಪ್ತಾವಸ್ಥೆಯಲ್ಲಿವೆ. ಸಂಯುಕ್ತ ಸಂಸ್ಥಾನದಲ್ಲೂ ಈ ಠರಾವಿನ ಕಡೆಗೆ ಕೊಂಚವೆ ಲಕ್ಷ್ಯಕೊಟ್ಟಿದೆ. ಡಿಲ್ಲಿಯಲ್ಲೂ ಈ ಠರಾವನ್ನು ಜಾರಿಗೆತರುವ ಲಕ್ಷಣಗಳು ತೋರುವುದಿಲ್ಲ. ಮುಂಬಯಿಯಲ್ಲಿ ಯಾರೂ ಇದನ್ನು ಗಣನೆಗೆ ತರುವುದಿಲ್ಲ. ಉತ್ತರ ಹಿಂದೂಸ್ಥಾನದೊಳಗಿನ ವಾತಾವರಣವೆಲ್ಲವೂ ಹಿಂದೂ-ಮುಸಲ್ಮಾನರಲ್ಲಿ ಉಂಟಾದ ಒಡಕಿನಿಂದ ಗತಿಗೆಟ್ಟು ಹೋಗಿದೆ. ಎರಡು ಕಡೆಯ ಪತ್ರಿಕೆಗಳೂ ಈ ಒಡಕೆಂಬ ಬೆಂಕಿಗೆ ತುಪ್ಪವನ್ನು ಹೊಯ್ಯುವರು. ಹಾಗು ಇಕ್ಕಡೆಯ ಐಶ್ವರ್ಯವಂತರೂ ತಮ್ಮ ಧನಸಹಾಯದಿಂದ ಈ ಒಡಕಿಗೆ ಪುಷ್ಟೀಕರಣವನ್ನು ಕೊಡುವರು. ಇಂಥಾ ಸಂದರ್ಭಗಳಲ್ಲಿ ಕಾನೂನುಭಂಗಕ್ಕೆ ಕೆಲವು ಮಟ್ಟಿನ ಸಿದ್ಧತೆಗಳನ್ನು ಮಾಡಿಕೊಂಡಿದ್ದ ಆ ಸಂಸ್ಥಾನಗಳಿಗೆ ಕಾನೂನುಭಂಗ ಜಾರಿಗೆ ತರುವುದು ಯುಕ್ತವಾದದ್ದಲ್ಲ. ಆದರೆ ಮಿ। ಮಹಾದೇವದೇಸಾಯಿ, ಪ್ರೊಫೆಸರ್ ಗಿಡ್ವಾನಿ, ಮಿ। ಅಬ್ಬಾಸ್ ತಯಬ್ಜಿ ಮೊದಲಾದವರು ದೇಶದಲ್ಲಿ ಜಾಗೃತಿಯನ್ನು ಉಂಟುಮಾಡಲು ಕಾನೂನುಭಂಗವನ್ನು ಜಾರಿಗೆತರುವುದು ಅಗತ್ಯವೆಂದು ಅಭಿಪ್ರಾಯಪಟ್ಟಿರುವರು. ಪರಿಸ್ಥಿತಿಯು ಹೀಗಿರುವುದರಿಂದ ಈ ಭಿನ್ನಾಭಿಪ್ರಾಯಗಳನ್ನು ಬ್ರೊಚ್ ಎಂಬಲ್ಲಿ ಕೂಡುವ ಗುಜರಾಥ ಪ್ರಾಂತಿಕ ಪರಿಷತ್ತಿನ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗಿನಲ್ಲಿ ಪರ್ಯಾಲೋಚಿಸಿ ಅಗತ್ಯಕಂಡ ನಿರ್ಧಾರಗಳು ಮಾಡಲಾಗುವುವು.

ಸಬ್‌ಅಸಿಸ್ಟಾಂಟ ಸರ್ಜನರ ಮನೆ ಬಾಡಿಗೆ

ಎಲೊವೆನ್ಸ:— ಮಾರ್ಚ ತಾ. ೩೧ರ ವರೆಗೆ ಎಲ್ಲಾ ಸಬ್‌ಅಸಿಸ್ಟಾಂಟ ಸರ್ಜನರಿಗೂ ಸಂಬಳ ಅಲ್ಲದೆ ಮನೆ ಬಾಡಿಗೆ ಎಂಬ ಎಲೊವೆನ್ಸನ್ನು ಕೊಡುತ್ತಿದ್ದರು. ಯಾಕೆಂದರೆ, ಇವರಿಗೆ ಸಂಬಳವು ಬಹಳ ಕಡಿಮೆಯಾಗಿತ್ತು. ತಿಂಗಳಿಗೆ ರೂ ೨೫, ರೂ ೩೫ ಇತ್ತು. ಅನಂತರ ರೂ ೭೫ ಆಯಿತು. ಈಗ ಇವರಿಗೆ ಹೊಸ ಸ್ಕೇಲು ಪ್ರಕಾರ ರೂ. ೭೫ರಿಂದ ೧೫೦ರ ವರೆಗೂ, ಬುದ್ಧಿವಂತರಾದವರಿಗೆ ರೂ. ೨೦೦ರ ವರೆಗೂ ಸಿಕ್ಕುತ್ತದೆ. ಆದ್ದರಿಂದ ಇದೇ ಎಪ್ರಿಲ್ ೧ನೆಯ ತಾರೀಕಿನಿಂದ ಮನೆ ಬಾಡಿಗೆ ಎಂಬ ಎಲೊವೆನ್ಸನ್ನು ತೆಗೆದುಹಾಕಿರುತ್ತಾರೆಂದು ನಂಬ್ರ 861 H. P. / April 10, '23 ನೆಯ G. O. ಫೋರ್ಟ್ ಸೈಂಟ ಜೋರ್ಜ ಗಜೆಟಿನಲ್ಲಿ ಪ್ರಕಟವಾಗಿದೆ.

— ಮಹಾತ್ಮರ ಖುಲಾಸೆ. —

ಕಳೆದ ತಿಂಗಳು ತಾ ೧೮ರಲ್ಲಿ ಮೈಸೂರಿನಲ್ಲಿ ಕೂಡಿದ ಮಹಾಜನಸಭೆಯಲ್ಲಿ ಬ್ರಿಟಿಷ್ ರಾಜ್ಯವು ಆಚಂದ್ರಾರ್ಕಸ್ಥಾಯಿಯಾಗಿರಬೇಕಾದರೆ ಬ್ರಿಟಿಷ್ ಜನಗಳು ತಮ್ಮ ಕ್ಷೇಮಕ್ಕೆ ಭಾರತೀಯರ ಕ್ಷೇಮವೆ ಆಸ್ತಿಭಾರವೆಂದು ತಿಳುಕೊಳ್ಳಬೇಕು. ಭಾರತೀಯರು ತಮ್ಮ ಕ್ಷೇಮವು ಅಪ್ರತಿಹತವಾಗಿರಬೇಕಾದರೆ, ಭಾರತೀಯರ ಸಾಮ್ರಾಜ್ಯವು ಅಪ್ರತಿಹತವಾಗಿರಬೇಕು. ಈ ಭಾವನೆಯು ಬ್ರಿಟಿಷ್ ಜನಗಳಿಗೂ, ಭಾರತೀಯರಿಗೂ, ಉಭಯತ್ರರಿಗೂ ಇರಬೇಕು. ಇಂಥಾ ಭಾವನೆಯುಂಟಾಗಬೇಕಾದರೆ, ಬ್ರಿಟಿಷ್ ಗವರ್ನಮೆಂಟಿನವರು ಮಹಾತ್ಮರೆ ಮೊದಲಾದ ಎಲ್ಲಾ ದೇಶಬಾಂಧವರನ್ನೂ ಖುಲಾಸೆ ಮಾಡಿ, ಮುಂದೆ ಬ್ರಿಟಿಷ್ ಧರ್ಮಗಳಿಗೆ ಅನುಸಾರವಾಗಿ ಎಲ್ಲರೂ ನಡೆಯೋಣ, ಇದು ವರೆಗೂ ನಡೆದ ನ್ಯೂನಾತಿರಿಕ್ತಗಳನ್ನು ಮರೆಯೋಣ, ಇನ್ನು ಮೇಲೆ ಭಾರತೀಯರೂ ಬ್ರಿಟಿಷ್ ಜನಗಳೂ, ಮಿತ್ರಭಾವದಿಂದ ಬದುಕೋಣ ಎಂದು ನಿಶ್ಚಯಮಾಡುವುದು ಅವಶ್ಯಕ. ಈ ರೀತಿಯಲ್ಲಿ ಸಲಹೆಯನ್ನು ಕೊಟ್ಟು ಗಾಂಧಿಯವರೆ ಮೊದಲಾದ ದೇಶಬಂಧುಗಳನ್ನು ಖುಲಾಸೆಮಾಡಿಸಿ, ಬ್ರಿಟಿಷ್ ಸಾಮ್ರಾಜ್ಯವು ಆಚಂದ್ರಾರ್ಕಸ್ಥಾಯಿಯಾಗಿರುವಂತೆ ಮಾಡಬೇಕು, ಎಂದು ಠರಾವನ್ನು ಮಾಡಿ, ಸದರಿ ಸಭೆಯಲ್ಲಿ ಅಧ್ಯಕ್ಷರಾಗಿದ್ದ ಮ॥ ರಾ॥ ಎಂ. ವೆಂಕಟಕೃಷ್ಣಯ್ಯನವರ ಮೂಲಕ ವೈಸರಾಯರವರಿಗೆ ಕಳುಹಿಸಿದ್ದರು. ಈ ಠರಾವು ತಲುಪಿತೆಂಬದಾಗಿ, ವೈಸರಾಯರವರ ಪ್ರೈವೆಟ್ ಸೆಕ್ರೆಟರಿಯವರು ಪ್ರತ್ಯುತ್ತರವನ್ನು ಕೊಟ್ಟಿರುವರು. ಮೈಸೂರು ಮಹಾಜನಗಳ ಸಲಹೆಯು ಬ್ರಿಟಿಷ್ ಮಹಾಜನಗಳಿಂದ ಸಾವಧಾನವಾಗಿ ಪರ್ಯಾಲೋಚಿಸಲ್ಪಟ್ಟು ಜಾರಿಗೆ ತರಲ್ಪಡುವಂತೆ ದೇವರು ಅನುಗ್ರಹಿಸಲೆಂದು ನಾವು ಕೋರುತ್ತೇವೆ. ಸಾಧ್ವೀ

ಇರಾಕ್‌ದೇಶ (ಮೆಸಪೊಟಾಮಿಯದ ವ್ಯಾಪಾರವು.)

ವ್ಯಾಪಾರವು ಸಮಾಧಾನದಿಂದ ನಡೆಯುತ್ತದೆ. ಸೈನ್ಯವು ಮೊಸೂಲ್ ಪಟ್ಟಣದಲ್ಲಿರುವುದರಿಂದ ಈ ಪಟ್ಟಣದಲ್ಲಿ ವ್ಯಾಪಾರಕ್ಕೆ ಒಳ್ಳೇ ಗಿರಾಕಿ ಇದೆ. ಪರ್ಷಿಯಾ ದೇಶದ ವ್ಯಾಪಾರವು ಮಂದಸ್ಥಿತಿಯಲ್ಲಿದೆ. ಜರ್ಮನ್ ಸಾವಕಾರರು ವ್ಯಾಪಾರವೆಲ್ಲವೂ ತಮ್ಮ ಕೈಗೆ ಸಿಕ್ಕಬೇಕೆಂದು ಬಹಳ ಪ್ರಯತ್ನಿಸುತ್ತಾರೆ. ಜರ್ಮನ್ ಬೀರಿನ ಅಂಗಡಿಗಳು ಎಲ್ಲಾ ಕಡೆಗಳಲ್ಲಿಯೂ ಇವೆ. ಈ ದೇಶದಿಂದ ಪರ್ಷಿಯಾದೇಶಕ್ಕೆ ಒಸ್ಟ್ರಿಯಾ ದೇಶದಲ್ಲಿ ತಯಾರಾದ ಅನೇಕ ಮೋಟರ್ ಕಾರುಗಳನ್ನು ಕಳುಹಿಸಿರುತ್ತಾರೆ. ಇರಾಕ್ ದೇಶದಲ್ಲಿ ಎಲ್ಲಿ ನೋಡಿದರೂ ಜರ್ಮನ್ ಎಡ್ವರ್‌ಟೈಜುಮೆಂಟುಗಳು ಕಾಣುತ್ತವೆ. ಈಗ ಪರ್ಷಿಯಾ ದೇಶದ ರಾಜಧಾನಿಯಾದ ತೆಹರಾನ್‌ನಲ್ಲಿ ಒಬ್ಬ ಜರ್ಮನ್ ಮಂತ್ರಿಯು ಇದ್ದಾನೆ. ಅಮೇರಿಕದ ಫ್ಯಾನೆನ್ಸ ಮಿಶನ್ ತೆಹರಾನಿನಲ್ಲಿ ಕೆಲಸಮಾಡುತ್ತಿದೆ. ತೆಹರಾನಿನಲ್ಲಿ ವ್ಯಾಪಾರ ವಿದ್ಯೆಯನ್ನು ಕಲಿಸುವ ಒಂದು ಕೊಲೇಜನ್ನು ಇಡುವ ಆಲೋಚನೆಯಲ್ಲಿದ್ದಾರೆ. ಚಿಮಿಣಿ ಎಣ್ಣೆಯ ಹೊಸ ಬಾವಿಗಳನ್ನು ರಿಶಟ್‌ನಲ್ಲಿ ಕಂಡುಕೊಂಡಿದ್ದಾರೆ. ಹೊಸ ರೈಲುಮಾರ್ಗಗಳನ್ನು ಹಾಕಿಸುವ ವಿಲೆವಾರಿಯು ನಡೆಯುತ್ತದೆ.

ಗ್ಲೊಸೆಸ್ಟರ್ ರೈಲ್ವೆ ಕಂಪೆನಿಯವರು ಇರಾಕ್ ರೈಲ್ವೇಗಳಿಗಾಗಿ ಕಟ್ಟಿಸಿದ ಹೊಸ ರೈಲುಗಾಡಿಗಳನ್ನು ಬಸ್ರಾ ಬಗ್ದಾದ್ ರೈಲ್ವೇಯಲ್ಲಿ ಉಪಯೋಗಿಸುತ್ತಾರೆ. ಈ ರೈಲ್ವೇ ಲ್ಯಾನನ್ನು ಮಿಟರ್‌ಗೇಜಿನಲ್ಲಿ ಕಟ್ಟಿಸಿದರೂ ಗಾಡಿಗಳು ಅಗಲವಾಗಿವೆ. ಫಸ್ಟ ಮತ್ತು ಸೆಕೆಂಡ ಕ್ಲಾಸಿನಲ್ಲಿ ಮಲಗುವ ಅನುಕೂಲತೆಗಳು ಇವೆ. ಹೊಗೆಯು ಚಾರಿ ಒಳಗೆ ಬಾರದ ಹಾಗೆ ಅನುಕೂಲ ಮಾಡಿಯದೆ. ರೈಲುಗಳು ಇಲ್ಲದ್ದಲ್ಲಿಗೆ ಮೋಟರ್ ಸರ್ವಿಸುಗಳು ಇವೆ. ಬಗ್ದಾದಿನಿಂದ ಅಲ್ಲೆಪ್ಪೊ ಪಟ್ಟಣಕ್ಕೆ ಮೋಟರ್‌ಸರ್ವಿಸ್ ಇದೆ. ತುರ್ಕಿಯವರ ಗಡಿ ನಿಶ್ಚಯವಾಗದೆ ಇದ್ದುದರಿಂದ, ವ್ಯಾಪಾರದ ಚಲಾವಣೆಯು ಮುಂಚಿನಷ್ಟು ಇಳುವುದಿಲ್ಲ.

ಬೀ ಅಮ್ಮನವರ ಭಾಷಣ.

ಅಲಿ ಸಹೋದರರ ಮಾತೆಯಾದ ಬೀ ಅಮ್ಮನವರು ಮದರಾಸಿನಲ್ಲಿ ಕಳೆದ ತಾರೀಕು ೩ನೆಯ ಸಾಯಂಕಾಲ ಉರ್ದುಭಾಷೆಯಲ್ಲಿ ಒಂದು ಭಾಷಣವನ್ನು ಮಾಡಿದರು. ಮಿ। ಶಫಿ ಮಹಮ್ಮದರು ಇವರ ಭಾಷಣವನ್ನು ತಮಿಳಿನಲ್ಲಿ ತರ್ಜುಮೆಮಾಡಿ ಹೇಳಿದರು. ಇವರ ಭಾಷಣದ ಸಾರಾಂಶವನ್ನು ಕೆಳಗೆ ಕೊಟ್ಟಿದೆ. ಇಲ್ಲಿ ಕೂಡಿದವರೆಲ್ಲರೂ, ಎಂದರೆ, ಪೋಲೀಸರು ಮತ್ತು ಇತರ ಸರಕಾರಿ ಹುದ್ದೆದಾರರು ಕೂಡ ತನ್ನ ಗೆಳೆಯರೆ ಆಗಿರುವರೆಂದು ತನ್ನ ಭಾವನೆ, ಅವರು ಸಹ ಒಬ್ಬರನ್ನು ಇನ್ನೊಬ್ಬರು ಗೆಳೆಯರೆಂತ ಭಾವಿಸಲು ಕಲಿಯಬೇಕು, ಅವರ ಅಭಿಪ್ರಾಯಗಳು ಹೇಗೂ ಇರಲಿ, ಪರಂತು ತಮ್ಮ ಮಾತೃ ಭೂಮಿಯು ಸ್ವಾತಂತ್ರ್ಯವನ್ನು ಹೊಂದತಕ್ಕದೆಂದು ಎಲ್ಲರ ಇಚ್ಛೆಯಾಗಿದೆ, ಕಳೆದ ೧೫೦ ವರುಷಗಳಿಂದ ಅವರೆಲ್ಲರೂ ಸ್ವಾತಂತ್ರ್ಯಹೀನರಾಗಿರುವರು, ಆದರೆ ಈಗ ಅವರು ಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳಬೇಕೆಂದು ದೃಢ ಸಂಕಲ್ಪವನ್ನು ಮಾಡಿಕೊಂಡಿರುವರು ಎಂದು ಹೇಳಿ ದೇಶವು ಸ್ವಾತಂತ್ರ್ಯವನ್ನು ಹೊಂದುವುದು ಅಗತ್ಯವಿಲ್ಲವೆಂಬ ಅಭಿಪ್ರಾಯಪಡುವ ಒಂದೆ ಒಂದು ವ್ಯಕ್ತಿಯಾದರೂ ನೆರೆದ ಸಭೆಯಲ್ಲಿರುವುದೋಎಂದು ಕೇಳಿದರು. ದೇಶವು ಇನ್ನೂ ಅವನತಿಯ ಸ್ಥಿತಿಯಲ್ಲೆ ಇರಬೇಕೆಂಬುದು ಯಾರದಾದರೂ ಅಭಿಪ್ರಾಯವಾಗಿದೆಯೊ ಎಂದು ಪ್ರಶ್ನಿಸಿದರು. ಬಳಿಕ ತಾನು ಇಷ್ಟರವರೆಗೆ ತಿಳಕೊಂಡ ಮಾಹಿತಿಯಿಂದ ಮದರಾಸಿನಲ್ಲಿ ಉತ್ಸಾಹ ಕಡಿಮೆಯಾಗುತ್ತದೆಂದು ತನ್ನ ತಿಳುವಳಿಕೆಯಾಗಿದೆಂದು ತಿಳಿಸಿದರು. ತಮ್ಮ ದೇಶವು ಬಂಧನಕ್ಕೊಳಪಟ್ಟಿದನ್ನು ಗ್ರಹಿಸಿ ಅವರು ಎಚ್ಚೆತ್ತದೆ ಇದ್ದುದು ದುರ್ದೈವವೆ ಆಗಿದೆ ಎಂದು ಹೇಳಿದರು. ಅನೇಕರು ವಿದೇಶಿ ವಸ್ತ್ರವನ್ನೆ ಧರಿಸಿಕೊಂಡು ಇರುವ ನೋಟವು ತನಗೆ ದುಃಖಕರವಾಗಿದೆಂದು ನುಡಿದರು. ಅಲ್ಲದೆ ದೇಶದ ಸ್ವಾತಂತ್ರ್ಯವು ಅತೀ ಅಗತ್ಯವಾಗಿದೆ ಎಂದು ಅವರ ಅಪೇಕ್ಷೆಯಾಗಿದೆಯಾದರೆ ಅವರು ಕೂಡಲೆ ವಿದೇಶಿ ವಸ್ತ್ರವನ್ನು ತ್ಯಜಿಸಿ ಸ್ವದೇಶಿಯನ್ನು ಸ್ವೀಕರಿಸತಕ್ಕದೆಂದು ಸೂಚಿಸಿದರು. ದೇಶವನ್ನು ಬಂಧನದಿಂದ ಬಿಡುಗಡೆಮಾಡಬೇಕಾದರೆ ಎಲ್ಲರೂ ಮುಂದೆ ಬರತಕ್ಕದೆಂದು ಉಪದೇಶಿಸಿದರು. ತಾನು ಎಲ್ಲರನ್ನೂ ತನ್ನ ಮಕ್ಕಳ ಹಾಗೆಯೆ ಭಾವಿಸಿರುವುದರಿಂದ ಎಲ್ಲರೂ ಒಗ್ಗಟ್ಟಾಗಿ ದೇಶಕಾರ್ಯದಲ್ಲಿ ಸಹಾಯಕರಾಗಬೇಕಾಗಿ ತನ್ನ ಅರಿಕೆ ಎಂದರು. ನಾವು ವಿದೇಶಿ ವಸ್ತ್ರಕ್ಕಾಗಿ ವಿನಿಯೋಗಿಸುವ ಹಣವು ನಮ್ಮನ್ನು ದಬ್ಬಾಳಿಕೆಯಿಂದ ಆಳುವ ರಾಷ್ಟ್ರಕ್ಕೆನೆ ದೊರಕುವುದರಿಂದ ಎಲ್ಲರೂ ವಿದೇಶಿ ವಸ್ತ್ರವನ್ನು ತ್ಯಜಿಸುವುದು ಅಗತ್ಯವೆಂದು ಪುನಃ ಹೇಳಿ, ಮುಂದಕ್ಕೆ ಸ್ವದೇಶಿ ವಸ್ತ್ರವನ್ನು ಉಪಯೋಗಿಸಿ ವಸ್ತ್ರಕ್ಕಾಗಿ ವೆಚ್ಚಮಾಡುವ ಹಣವು ಸ್ವದೇಶದ ಜನರಲ್ಲೆ ಉಳಿಯುವಂತೆ ಮಾಡಬೇಕಾಗಿ ವಿನಂತಿಮಾಡಿಕೊಂಡರು. ಹಿಂದೂ-ಮುಸಲ್ಮಾನರ ಐಕ್ಯವು ಪವಿತ್ರಕಾರ್ಯವಾಗಿದೆಂದು ತಿಳಿದು ಈ ಐಕ್ಯವನ್ನು ಸಾಧಿಸಿ, ಸ್ವರಾಜ್ಯಕಾರ್ಯವನ್ನು ಮುಂದರಿಸಬೇಕಾಗಿದೆಂದು ಹೇಳಿ ಕೊನೆಗೆ ವಂತಿಗೆಯನ್ನು ಕೊಡಲು ಅರಿಕೆಮಾಡಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ದಾವುದರ ಪೇಟೆಂಟ್ ಅಭ್ರಕದ ಸ್ವದೇಶಿ ಚಿಮಿಣಿ ಬುರುಡೆಗಳು

ಗಾಜು ಬುರುಡೆಗಾಗಿಯೇ ವರುಷಂಪ್ರತಿ ಎಷ್ಟು ಹಣವು ದುರ್ವ್ಯಯವಾಗುತ್ತಿದೆ ಎಂಬುದು ಸರ್ವರಿಗೂ ಅನುಭವವಾಗಿದೆ. ಹೀಗಿರುತ್ತ ಹೆಸರುಮಾತ್ರಕ್ಕೆ ಬುರುಡೆ ಎನ್ನಿಸಿಕೊಳ್ಳುವ ವಸ್ತುವನ್ನು ತಯಾರಿಸುವುದಕ್ಕಿಂತ ಜನರಿಗೆ ಹೆಚ್ಚು ಕಾಲಕ್ಕೆ ಉಪಯೋಗಕ್ಕೆ ಬರುವ ವಸ್ತುವೇ ಅಗತ್ಯವೆಂದು ಅನೇಕ ಪ್ರಯೋಗಗಳಿಂದ ಕಂಡುಹಿಡಿದಿದ್ದೇವೆ. ಗಾಜು ಬುರುಡೆಗಳು ಪೆಡಸಾಗಿದ್ದು, ದೀಪದ ಪ್ರಕಾಶದ ಉಷ್ಣತೆಯಿಂದ ಒಡೆಯುತ್ತವೆ. ನೀರಿನ ಅಥವಾ ತಂಪು ಗಾಳಿಯ ಸ್ಪರ್ಶವಾಗುತ್ತಲೇ ಪಟಪಟ ತುಂಡು ತುಂಡಾಗುತ್ತವೆ. ಜಪಾನ ವ್ಹಾಲುಗಳಲ್ಲಿ ಈ ಗುಣವು ಸ್ಪಷ್ಟವಾಗಿ ಕಾಣುತ್ತದೆ. ಒಂದು ದೀಪಕ್ಕೆ ಬೇಕಾಗುವ ಬುರುಡೆಗಾಗಿ ವರುಷಕ್ಕೆ ೫೦-೬೦ ರೂಪಾಯಿ ಕ್ರಯವಾಗುತ್ತದೆ. ಇದಕ್ಕೆ ಪ್ರತಿಯಾಗಿ ಅಭ್ರಕದ (ಬಿಂಗದ) ಬುರುಡೆಗಳು ತಯಾರಾಗಿವೆ. ಬಿಂಗು ಪಾರದರ್ಶಕ ಪದಾರ್ಥವಾಗಿದ್ದದರಿಂದ ಸೀಮೆಯ ಎಣ್ಣೆಯಿಂದ ಉರಿಸುವ ದೀಪಗಳಿಗೆ ಉಪಯೋಗಿಸಲು ಯೋಗ್ಯವಾಗಿ ಕಂಡುಬಂದಿದೆ. ಇವು ತುಂಡಾಗುವುದಿಲ್ಲ; ನೀರಿನ ಮತ್ತು ತುಪುಗಾಳಿಯ ಸ್ಪರ್ಶವಾಗಿದೊಡನೆ ಒಡೆಯುವುದಿಲ್ಲ. ಹೆಚ್ಚಿನ ಪ್ರಕಾಶವನ್ನು ಕೊಡುತ್ತವೆ. ಕಣ್ಣಿಗೆ ತಂಪು. ಈ ಬುರುಡೆಗಳನ್ನು ಉಪಯೋಗಿಸುವುದರಿಂದ ವರ್ಷ ಒಂದಕ್ಕೆ ರೂ. ೨ ಮಾತ್ರ ಖರ್ಚು ಆಗುವದು. ಈ ಬುರುಡೆಗಳಿಗೆ ಕೆಳಗೆ ಹೆಸರು ಕಾಣಿಸಿದವರು ದಕ್ಷಿಣ ಕನ್ನಡ ಜಿಲ್ಲೆಗೆ ಸ್ವಾಮುಖ್ಯ ಏಜಂಟರಾಗಿರುತ್ತಾರೆ.

ಡಿಟ್‌ಮಾರ್ ಲೇಂಪು, ಜಪಾನ್ ಲೇಂಪು, ತೂಗಾಡಿಸುವ ಲೇಂಪು, ಟೇಬಲ್ ಲೇಂಪು, ಗ್ಯಾಸಲೇಂಪು, ಮುಂತಾದ ಎಲ್ಲಾ ತರದ ದೀಪಗಳಿಗೆ ಉಪಯೋಗಿಸಲು ಬೇಕಾದ ಬುರುಡೆಗಳು ನಮ್ಮಲ್ಲಿ ದೊರಕುವುವು. ಅಲ್ಲದೆ ಯಾವುದಾದರೂ ಒಂದು ಹೊಸತರದ ದೀಪಕ್ಕೆ ಬೇಕಾಗುವ ಬುರುಡೆಗಳನ್ನು ಸಹ ಒದಗಿಸಿಕೊಡಬಹುದು.

ಕ್ರಯ ಎಲ್ಲಿ ಕಡಿಮೆ?

ನಮ್ಮ ದರವನ್ನು ಬೇರೆಯವರ ಧರದೊಡನೆ ಸರಿಹೋಲಿಸಿ ನೋಡಿದರೆ
ಆಗ ತನ್ನಷ್ಟಕ್ಕೇ ಇದರ ಗುಟ್ಟು ಗೊತ್ತಾಗುವುದು!
ಕೊಡೆಗಳು ಯುದ್ಧಕ್ಕೆ ಮೊದಲಿದ್ದ ದರದಲ್ಲಿಯೇ ನಿಮಗೆ ಇಲ್ಲಿ ದೊರೆಯುವುವು!
ಬಲವಾದ ಬಾಳಿಕೆ ಬರುವ ಹೊಸ ಕೊಡೆಗಳು ಈಗ ತಾನೇ ತಲಪಿವೆ!!
ಸ್ವಿಝರ್ಲೆಂಡಿನಲ್ಲಿ ಸಿದ್ಧವಾದ ಪ್ರಖ್ಯಾತಿಹೊಂದಿದ ಮಿಶನ್ ಕೊಡೆಗಳು
24×8 ರೂ. 6–4–0. 26×8 ರೂ. 6–8–0. 28×8 ರೂ. 6–12–0.
ಈ ಬೆಲೆಯೆಷ್ಟೆಂದು ಗುರುತಿಸಿಕೊಳ್ಳಿ! ನಮ್ಮ ಮಾರಾಟದ ದರ ಹೇಗಿದೆ ಎಂದು ನೀವೇ ಆಲೋಚಿಸಿರಿ!
ಉತ್ತಮ ಯಂತ್ರದಲ್ಲಿ ತಯಾರಾದ ಕೊಡೆಗಳು
26×8 ರೂ. 4–14–0. ಈ ಕೊಡೆಗಳು ಇದರಿಂದಲೂ ಅಗ್ಗವಾಗಿ ನಿಮಗೆ ದೊರೆಯದು. ಇದು ಸಂಪೂರ್ಣವಾಗಿ ನಂಬಿಕೆಗೆ ಅರ್ಹವಾದದ್ದೂ, ಬಲವಾದದ್ದೂ, ಬಾಳಿಕೆ ಬರತಕ್ಕದ್ದೂ ಆಗಿದೆ. ಪ್ರತಿಯೊಂದು ಕೊಡೆಗೂ ಗ್ಯಾರಂಟಿ ಇದೆ.
ಕಪ್ಪು ಬಿಳೀ ಬಣ್ಣದ ಶುದ್ಧ ಖಾದಿಯ ನಿರ್ಮಾಣದ ಹಿಂದೀ ಕೊಡೆಗಳು
18ರಿಂದ 26ರ ವರೆಗಿನ ಎಲ್ಲಾ ಅಳತೆಯಲ್ಲಿ ರೂ. 2–4–0ರಿಂದ ರೂ. 4–8–0ರ ವರೆಗೆ.
ನಂಬ್ರ 611 ಜಿಂಕೆಯ ಗುರುತಿನ ಕೊಡೆಗಳು
ಇದಕ್ಕೆ ಚಿನ್ನದ ಪದಕಗಳ ಬಹುಮಾನ ದೊರಕಿದೆ.
ಈ ಕೊಡೆಗಳು ಇದೊಂದು ವ್ಯಾಪಾರ ಸಂಘದಲ್ಲಿ ಮಾತ್ರ ದೊರೆಯುತ್ತವೆ.
ಎಮ್. ಸುಲೇಮಾನ್ ನೂರ್ ಮಹಮ್ಮದ್ ಅಂಡ್ ಸನ್ಸ್,
ಕೊರೊನೇಶನ್ ಅಂಬ್ರೆಲ್ಲಾ ಮಾರ್ಟ, 786, ಮರ್ಕೆಂಟೈಲ್ ಮಿಶನ್ ಶಾಪ್ ಬಳಿ, ಮಂಗಳೂರು.
ಇತರ ಶಾಖೆ:—ಮಂಗಳೂರು ಟೌನ್ ಪೋಲೀಸ್ ಸ್ಟೇಶನ ಎದುರಿನಲ್ಲಿ.

ವಿದೇಶ ವರ್ತಮಾನ.

ಕೊರಿಯಾ ತೀರ ಪ್ರದೇಶ:—ಕಳೆದ ತಾರೀಕು ೧೫ರಲ್ಲಿ ಕೊರಿಯಾ ತೀರ ಪ್ರದೇಶದ ಮೇಲೆ ಸಾಗರವು ಉಕ್ಕಿ ಉರುಳಲು ೮೦೦ ಜನರು ಸಮುದ್ರದ ಪಾಲಾದರೆಂದು ವರ್ತಮಾನ ಬಂದಿದೆ.

ಡ್ಯೂಕ ಒಫ್ ಯೋರ್ಕ ರಾಜಪುತ್ರರು:—ವಿವಾಹ ಆದ ಮೇಲೆ ಇವರನ್ನು ಬ್ರಿಟಿಷ ಚಕ್ರಾಧಿಪತ್ಯಕ್ಕೆ ಸೇರಿದ ರಾಜ್ಯಗಳೊಂದಕ್ಕೆ ಗವರ್ನರ ಜನರಲ್ಲರನ್ನಾಗಿ ಚಕ್ರವರ್ತಿಯವರು ನೇಮಿಸುವರೆಂದು ಡೆಯ್ಲಿ ಮೇಯ್ಲ್ ಎಂಬ ಪತ್ರಿಕಾಕರ್ತರು ಬರೆಯುತ್ತಾರೆ.

ಬ್ರಿಟಿಷ ಗವರ್ನಮೆಂಟಿನ ಬಜೆಟು:—ಬ್ರಿಟಿಷ ಗವರ್ನಮೆಂಟಿನ ಬಜೆಟಿನಲ್ಲಿ ಖರ್ಚು ಕಳೆದು ೩೬೦ ಲಕ್ಷ ಪವನ್ನುಗಳ ಉಳಿತಾಯವು ತೋರಿಸಲ್ಪಟ್ಟಿದೆ. ಇದಲ್ಲದೆ ಆದಾಯತೆರಿಗೆಯಲ್ಲಿ ಪವನ್ನಿಗೆ ಆರು ಪೆನ್ನಿನಂತೆಯೂ, ಒಂದು ಪೈಂಟ ಬೀರ ಎಂಬ ಮದ್ಯಪ್ರಮಾಣಕ್ಕೆ ಒಂದು ಪೆನ್ನಿನಂತೆಯೂ ತೆರಿಗೆಯನ್ನು ಕಡಿಮೆ ಮಾಡಿರುವರು.

ಅಂಡಮಾನ ಕೈದಿಗಳು:—ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಸ್ತ್ರೀ ಪುರುಷರನ್ನು ಅಂಡಮಾನ ದ್ವೀಪದಲ್ಲಿ ಪ್ರತ್ಯೇಕವಾಗಿಟ್ಟಿರುವರು. ಗಂಡಸರಲ್ಲಿ ಯಾವನು ಭಯಭಕ್ತಿಯಿಂದ ನಡಕೊಂಡು ಅಧಿಕಾರಿಗಳ ಮೆಚ್ಚುಗೆಯನ್ನು ಪಡೆಯುವನೊ ಆತನು ಸಂಸಾರಿಯಾಗಿ ಬಾಳಲು ಇಷ್ಟಪಟ್ಟು ಅವನು ಮೆಚ್ಚುವ ಸ್ತ್ರೀಯೂ ಒಪ್ಪಿದರೆ ಒಟ್ಟಿಗೆ ಸಂಸಾರಮಾಡಿಕೊಂಡಿರಲು ಅಲ್ಲಿ ಸರಕಾರದವರು ಅವಕಾಶಕೊಡುವರು.

ವಸಾಹತುಗಳಲ್ಲಿ ಹಿಂದಿಗಳ ಸ್ಥಿತಿ:—ಆಸ್ಟ್ರೇಲಿಯಾ ಮೊದಲಾದ ಕೆಲವು ಬ್ರಿಟಿಷ ವಸಾಹತುಗಳಲ್ಲಿ ಭಾರತೀಯರು ಜೀವನಾರ್ಥವಾಗಿ ಹೋಗಿರುವರು. ಅವರ ಸಂಖ್ಯೆಯು ಆಸ್ಟ್ರೇಲಿಯದಲ್ಲಿ ಸುಮಾರು ೨೦೦೦ ಜನಗಳು ಆಗಬಹುದು. ಚೀನಾ ದೇಶೀಯರು ಚೀನೊ ಹಾಗೆ ಈ ಭಾರತೀಯರೂ ಕೂಡ ಬ್ರಿಟಿಷ ಜನಗಳಿಗಿಂತಲೂ ಚೆನ್ನಾಗಿ ಕೆಲಸಮಾಡಿ ಅವರಿಗೂ ಕಡಿಮೆಯಾದ ಕೂಲಿಯನ್ನು ಹೊಂದುವರು. ಬಿಳೇ ಜನಗಳು ತಮ್ಮ ಜೀವನಕ್ಕೆ ಇದರಿಂದ ವಿಘ್ನವಾಗುತ್ತದೆಂದು ತಿಳಿದುಕೊಂಡು ಇವರನ್ನು ದ್ವೇಷಿಸುವರು.

ಬ್ರಿಟನಿನ ಮುಖ್ಯ ಮಂತ್ರಿಗಳು:—ಮುಖ್ಯ ಮಂತ್ರಿಗಳಾದ ಮಿ। ಬೊನರಲೋರವರು ದೇಹಾಲಸ್ಯದ ಸಂಬಂಧ ಸ್ವಲ್ಪ ಕಾಲದ ರಜೆಯನ್ನು ಹೊಂದಿ ಸಮುದ್ರ ಪ್ರಯಾಣಕ್ಕೆ ಹೊರಡುವರೆಂದು ವದಂತಿ ಇದೆ.

ಚೈನಾದಲ್ಲಿ ಅಸಹಕಾರ:—ಚೈನಾದ ಹೂಪಿ ಟ್ರೇಡ್ ಎಸೋಸಿಯೇಶನಿನವರು ಜಪಾನಿ ಸಾಮಾನುಗಳನ್ನು ಬಹಿಷ್ಕರಿಸತಕ್ಕದ್ದೆಂದು ನಿರ್ಧರಿಸಿರುವರು.

ಹಿಂದೂಸ್ಥಾನದ ಡೆಪ್ಯುಟೇಶನ್:—ಕೆನೆಯಾದಲ್ಲಿರುವ ಹಿಂದಿಗಳ ಸ್ಥಿತಿಯನ್ನು ಕುರಿತು ಮೊರೆಯಿಡುವುದಕ್ಕಾಗಿ [illegible] ಶ್ರೀನಿವಾಸಶಾಸ್ತ್ರಿಗಳು ಮುಖಂಡರಾಗಿ ಹೋದ ಡೆಪ್ಯುಟೇಶನು ಇಂಗ್ಲೆಂಡಿಗೆ ತಲ್ಪಿರುವುದು.

ಒಳದೇಶ ವರ್ತಮಾನ.

ಅಕಾಲಿ ಕೈದಿಗಳು:— ಅಮೃತಸರದಲ್ಲಿ ಹಿಂದೂ ಮುಸಲ್ಮಾನರಲ್ಲಿ ಇತ್ತಲಾಗಿ ಉಂಟಾದ ಚಟಾಪಟಿ ಕಾಲದಲ್ಲಿ ಈ ಗಲಾಟೆಯನ್ನು ಶಾಂತಗೊಳಿಸಲು ಅಕಾಲಿಗಳು ಸರಕಾರದವರಿಗೆ ಬಹಳವಾಗಿ ಸಹಾಯಮಾಡಿದುದರಿಂದ ಗುರುಕಾಬಾಗ ಪ್ರಕರಣದ ಸಂಬಂಧ ಕೈದಿನಲ್ಲಿಟ್ಟ ಎಲ್ಲ ಕೈದಿಗಳನ್ನು ಬಿಟ್ಟುಬಿಡಬೇಕೆಂದು ಪಂಜಾಬದ ಗವರ್ನರರು ನಿರ್ಧರಿಸಿರುವರು. ಜೈಲಿನಲ್ಲಿರುವಾಗ ಜೈಲಿನ ನಿಬಂಧನೆಗಳಿಗೆ ವಿರೋಧವಾಗಿ ವರ್ತಿಸಿದವರ ವಿಷಯದಲ್ಲಿ ಮಾತ್ರ ಇದು ಲಗಾವಾಗುವುದಿಲ್ಲ. ಸರಕಾರದ ಅಪ್ಪಣೆಯಂತೆ ಈಗ ೧೮೦೦ ಮಂದಿ ಅಕಾಲಿಗಳನ್ನು ಲಾಹೋರ್ ಮತ್ತು ಮುಲ್‌ಟಾನ್ ಜೈಲಿನಿಂದ ಬಿಡುಗಡೆಮಾಡಿದೆ. ಅವರೆಲ್ಲರೂ ಅಮೃತಸರಕ್ಕೆ ಬಂದು ತಲ್ಪಿರುವರು.

ಹುಗ್ಲಿ ಜೈಲಿನಲ್ಲಿ ಉಪವಾಸದ ಮುಷ್ಕರ:—ಹುಗ್ಲಿ ಜೈಲಿನಲ್ಲಿರುವ ರಾಜಕೀಯ ಕೈದಿಗಳಲ್ಲಿ ಕೆಲವರು ತಮಗೆ ಒದಗಿಸುತ್ತಿರುವ ಆಹಾರವು ಅಯೋಗ್ಯಕರವಾಗಿರುವುದರಿಂದ ತಾವು ಆಹಾರವನ್ನೆ ತೆಗೆದುಕೊಳ್ಳಲಿಕ್ಕಿಲ್ಲವೆಂದು ಮುಷ್ಕರಹಿಡಿದಿರುವರು. ಹೀಗೆ ಮುಷ್ಕರಹಿಡಿದವರಲ್ಲಿ ಧುಮಕೇತು ಎಂಬ ಪತ್ರಿಕೆಯ ಸಂಪಾದಕರೊಬ್ಬರಾಗಿರುವರು.

ಶ್ರೀಯುತ ಶಂಕರಲಾಲ ಬೇಂಕರ್:—ಇವರು ಇಂದ್ಲಾಲ ಯಗನಿಕರನ್ನು ಜೈಲಿನಲ್ಲಿ ಭೇಟಿಯಾದರು. ಮತ್ತು ಶ್ರೀಯುತ ಯಗನಿಕರು ಈಗ ಸೌಖ್ಯದಲ್ಲಿರುತ್ತಾರೆ. ಇವರಿಗೆ ರಾಜಕೀಯವಲ್ಲದ ಪುಸ್ತಕಗಳನ್ನು ಓದಲಿಕ್ಕೆ ಕೊಡುತ್ತಾರೆಂದು ತಿಳಕೊಂಡರು.

ಹಿಂದೂ ಮುಸಲ್ಮಾನರ ಕಲಹ:—ಕಳೆದ ತಾರೀಕು ೨೫ರಲ್ಲಿ ಮುಲ್ತಾನಿನಲ್ಲಿ ಹಿಂದೂ ಮುಸಲ್ಮಾನರೊಳಗೆ ಜಗಳವು ನಡೆಯಿತು. ಯಾವುದೊ ಒಂದು ಖಾಸಗಿ ದ್ವೇಷದ ಸಂಬಂಧ ಬೋರಾ ಗೇಟಿನಲ್ಲಿ ಈ ಜಗಳವು ನಡೆಯಿತು. ಒಬ್ಬ ಹಿಂದುವು ಹತನಾದನೆಂದು ವಾರ್ತೆ ಬಂದಿದೆ. ಅಲ್ಲದೆ ಇಕ್ಕಡೆಯಲ್ಲಿಯೂ ಸುಮಾರು ಹತ್ತು ಹದಿನೆರಡು ಮಂದಿಗಳಿಗೆ ಗಾಯವಾಗಿದೆಯಂತೆ. ಸರಕಾರದ ಪ್ರಯತ್ನದಿಂದ ಈಗ ಎಲ್ಲವೂ ಶಾಂತವಾಗಿದೆ.

ಹಿಂದೂ ಮುಸಲ್ಮಾನರ ಕಲಹ:—ಶ್ರೀಮತಿ ಸರೋಜಿನಿಯವರು ಪಂಜಾಬದಿಂದ ಹಿಂತಿರುಗಿದಾಗ ಕೆಳಗಿನ ಸಂಗತಿಯನ್ನು ತಿಳಿಸಿರುವರು. ಪಂಜಾಬಿನಲ್ಲಿನ ಹಿಂದೂ ಮುಸಲ್ಮಾನರೊಳಗಿನ ವಿವಾದ ತೀರ್ಮಾನವಾಗಲು ಇನ್ನೂ ಹೆಚ್ಚಿನ ಸಮಯ ಹಿಡಿಯುವುದು. ಇಕ್ಕಡೆಯವರ ಮನಸ್ತಾಪವು ನಿವಾರಣೆಯಾಗುವ ಹಾಗೆ ಕಾಣುವುದಿಲ್ಲ. ಶುದ್ಧಿ ಚಳವಳವಲ್ಲದೆ ಜಾತಿಜಾತಿಯ ಪ್ರಾತಿನಿಧ್ಯದ ವಿಷಯದ ತೊಂದರೆಯೂ ಹಿಂದೂ ಮುಸಲ್ಮಾನರೊಳಗಿನ ವಿವಾದವನ್ನು ತೀರ್ಮಾನಿಸಲು ಅಡ್ಡಿಂತರವಾಗಿ ನಿಂತಿದೆ.

ಮಲಬಾರದಲ್ಲಿ ಸಾಂಕ್ರಾಮಿಕ ರೋಗ:—ಮಲಬಾರ ಜಿಲ್ಲೆಯ ಅನೇಕ ಪಟ್ಟಣಗಳಲ್ಲಿ ಸಿಡುಬು ರೋಗವು ತಲೆ ಎತ್ತಿದೆ.

ಹಿಂದೂ ರಿಲಿಜಿಯಸ್ ಎನ್‌ಡೋಮೆಂಟ ಬಿಲ್ಲು:—ಬಿಲ್ಲುಗಳನ್ನು ಆಲೋಚಿಸಲಿಗೆ ಬಾಕಿ ಇರುವ ನಿಬಂಧನೆಗಳನ್ನು ಅನುಸರಿಸಿ ಈ ಬಿಲನ್ನು ಮುಂದಿನ ಆಲೋಚನೆ ಬಗ್ಗೆ ಹಿಂದೂಸ್ಥಾನ ಸರಕಾರವು ಬಾಕಿ ಇಡುವುದೆಂದು ವೈಸರಾಯರ ಪ್ರೈವೇಟ ಸೆಕ್ರೆಟರಿಗಳವರು ಉಡುಪಿಯಲ್ಲಿ ಜರುಗಿದ ಹಿಂದೂ ಪರಿಷತ್ತಿನವರು ನೇಮಿಸಿದ ಪ್ರತಿನಿಧಿ ಮಂಡಳದ ಸೆಕ್ರೆಟರಿಗಳಾದ ಶ್ರೀಯುತ ಹೊಸಕೊಪ್ಪ ಕೃಷ್ಣರಾಯರಿಗೆ ತಂತಿ ಮೂಲಕ ತಿಳಿಸಿರುವರು.

ಶಿಯಾ ಮತ್ತು ಸುನ್ನಿಪಂಗಡಗಳೊಳಗೆ ಚಟಾಪಟಿ:—ಅಲಹಾಬಾದ ಜಿಲ್ಲೆಯಲ್ಲಿಯ ಶಿಯಾ ಮತ್ತು ಸುನ್ನಿ ಪಂಗಡಗಳೊಳಗೆ ಚಟಾಪಟಿಯು ನಡೆದ, ಮೂರು ಮಂದಿಗಳು ಹತರಾದರು. ೧೬ ಮಂದಿಗಳಿಗೆ ಜಖಂ ಆಗಿದೆ. ಒಟ್ಟು ೨೫೦ ಮಂದಿಗಳು ಸೇರಿದ್ದರೆಂದು ತಿಳಿದುಬರುತ್ತದೆ.

ಅಕ್ಕಲಕೋಟೆ ಮಹಾರಾಜರ ಅಪಮೃತ್ಯು:—ಪೂನೆಯ ಸೆಸೂನ್ ಆಸ್ಪತ್ರೆಯಲ್ಲಿ ಅಕ್ಕಲಕೋಟೆ ಮಹಾರಾಜರ ಮರಣವು ಸಂಭವಿಸಿದ ಖಟ್ಲೆಯ ವಿಚಾರಣೆಯು ಕಳೆದ ವಾರ ಮುಗಿದು ಈಗ ತೀರ್ಪು ಬರುವ ವಾರದಲ್ಲಿ ಕೊಡಲಾಗುವುದೆಂದು ಪ್ರಕಟವಾಗಿದೆ.

ಕೊಂಗ್ರೆಸ್ ಮುಖಂಡರು:—ಕೊಂಗ್ರೆಸ್ ಡೆಪ್ಯುಟೇಶನಿನ ಮೆಂಬರರಾದ ಶ್ರೀಯುತ ಸಿ. ರಾಜಗೋಪಾಲಾಚಾರ್ಯ, ಶ್ರೀಯುತ ದೇವಿದಾಸ ಗಾಂಧಿ, ಡಾಕ್ಟರ ಸೈಯದ್ ಮಹಮ್ಮದ್ ಮತ್ತು ಅಲಿ ಸಹೋದರರ ಮಾತೆಯಾದ ಬೀ ಅಮ್ಮನವರು ತಾರೀಕು ೩ರಲ್ಲಿ ಮದರಾಸಿಗೆ ಬಂದು ತಲ್ಪಿದರು. ಅನೇಕ ಮಂದಿ ಹಿಂದೂ-ಮುಸಲ್ಮಾನರು ಇವರನ್ನು ರೈಲ್ವೆ ಸ್ಟೇಶನಿನಲ್ಲಿ ಸ್ವಾಗತಮಾಡಿದರು. ಬೀ ಅಮ್ಮನವರು ಕೆಳಗಿನ ಸಂದೇಶವನ್ನು ತಿಳಿಸಿರುವರು. "ನಾನು ಈ ಪ್ರಾಂತವನ್ನು ಸಂದರ್ಶಿಸುವುದು ಇದೆ ಮೊದಲನೆಯ ಬಾರಿಯಾಗಿದೆ. ನನ್ನ ಪ್ರಿಯ ಪುತ್ರರನ್ನು ಬಂಧಿಸಿದ ತರುವಾಯ ಕಳೆದ ೧೯೨೧ರಲ್ಲಿ ನಾನು ಈ ಪ್ರಾಂತಕ್ಕೆ ಬರಲು ಒಪ್ಪಿದರೂ ಈ ವರೆಗೆ ನನಗೆ ಬರಲು ಆಗಲಿಲ್ಲ. ಖಿಲಾಫತ್ ಫಂಡಿಗೆ ಹಣವನ್ನು ಕೊಡಿಸುವುದಕ್ಕಾಗಿಯೆ ನಾನು ಈಗ ಬಂದುದಾಗಿದೆ, ನನ್ನ ಈ ಅರಿಕೆಯನ್ನು ಮದರಾಸಿನವರು ಪೂರೈಸುವರಾಗಿ ನಾನು ಭರವಸೆಪಡುತ್ತೇನೆ."

ಕರ್ನಾಟಕ ಪ್ರಾಂತಕ್ಕೆ ದೇಶ ಮುಖಂಡರ ಸಂದರ್ಶನ:—ಮಲಬಾರ ಖಿಲಾಫತ್ ಕೊನ್ಫರೆನ್ಸಿನ ಕಾರ್ಯವನ್ನು ಮುಗಿಸಿದ ತರುವಾಯ ಬೀ ಅಮ್ಮನವರೊಡನೆ ಡೊಕ್ಟರ ಸೈಯದ್ ಮಹಮ್ಮದರವರೂ ಬೆಂಗಳೂರಿಗೆ ಚಿತ್ತೈಸಬೇಕಾಗಿ ಅವರಿಗೆ ವಿನಂತಿಮಾಡಿದೆ. ಈ ವಿನಂತಿಯಂತೆ ಅವರು ಈ ತಿಂಗಳ ಮೊದಲನೆಯ ವಾರದಲ್ಲಿ ಬೆಂಗಳೂರಿಗೆ ಬರಲಿಕ್ಕಿದ್ದಾರೆ.

ಅಹಮ್ಮದಾಬಾದ ಮಿಲ್ಲಿನ ಗಿರಣಿಗಳ ಕೂಲಿಗಳು:—ಈ ಕೂಲಿಗಳ ಮುಷ್ಕರವು ಪ್ರಾರಂಭವಾಗಿ ಈಗ ಸಾಧಾರಣ ಒಂದು ತಿಂಗಳಾದರೂ ಇದು ಇನ್ನೂ ನಿಲ್ಲುವ ಸಂಭವ ಕಾಣುವುದಿಲ್ಲ. ಗಿರಣಿ ಮಾಲಿಕರ ಸಂಘದ ಅಧ್ಯಕ್ಷರಾದ ಶೇಟ್ ಮಂಗಲದಾಸರೂ ಶ್ರೀಯುತ ಶಂಕರಲಾಲ ಬೇಂಕರರೂ ಆಲೋಚನೆಯನ್ನು ನಡಿಸುತ್ತಿರುವರಾದರೂ ಯಾವ ಫಲಿತಾಂಶದ ವಿಲೆವಾರಿಯೂ ಆಗುವಂತೆ ಕಾಣುವದಿಲ್ಲ.

ಸ್ವರಾಜ್ಯ ಧ್ವಜ:—ಜಬಲಪುರದಲ್ಲಿ ಸ್ವರಾಜ್ಯ ಧ್ವಜದ ಸಂಬಂಧ ಸತ್ಯಾಗ್ರಹವನ್ನು ಆಚರಿಸಲು ಸಿದ್ಧತೆಗಳು ನಡಿಯುತ್ತಿವೆ.

ಗಲಾಟೆ:—ಕಳವಿನ ಚಾರ್ಜಿನ ಮೇಲೆ ಒಬ್ಬ ಮುಹಮ್ಮದೀಯನನ್ನು ಸೆರೆಹಿಡಿದರೆಂದು ಬಾಕರ ಗಂಜ್ ಎಂಬಲ್ಲಿ ದೊಡ್ಡ ಗಲಾಟೆ ಎದ್ದು ೫ ಮಂದಿ ಸತ್ತರು. ಇಬ್ಬರು ಗಾಯಗೊಂಡಿರುವರು.

ದೇಶೀಯ ಭಾಷೆಗಳಿಗೆ ಪ್ರೋತ್ಸಾಹ:—ಗುಜರಾಥಿ, ಹಿಂದೀ, ಮರಾಠಿ ಮೊದಲಾದ ದೇಶೀಯ ಭಾಷೆಗಳನ್ನು ಮುನ್ಸಿಪಲ್ ಮೆಂಬರರು ಉಪಯೋಗಿಸಬಹುದೆಂದು ಮುಂಬಯಿ ಕೊರ್ಪೊರೇಶನಿನಲ್ಲಿ ಠರಾವು ಪಾಸಾಗಿದೆ.

ಮೇಜರ್ ಎಲ್ಲಿಸರ ಕುಮಾರಿ:—ಈ ಕುಮಾರಿಯನ್ನು ಕಾಡುಜನರ ಕೈಗಳಿಂದ ರಕ್ಷಿಸಲು ಸಹಾಯಮಾಡಿದ ಸ್ಟಾರ ದೊರೆಸಾನಿಯವರ ಧೈರ್ಯಕ್ಕೂ ಸಾಹಸಕ್ಕೂ ಮೆಚ್ಚಿ ನಮ್ಮ ಚಕ್ರವರ್ತಿಯವರು ಆಕೆಗೆ ಬಂಗಾರದ ಮೆಡಲನ್ನು ದಯಪಾಲಿಸಿದ್ದಾರೆ.

ಬಾಯ್ಸ ಸ್ಕ್ಯಾಟುಗಳ ಮಹೋತ್ಸವ:—ಮೈಸೂರಿನ ಚೆನ್ನಪಟ್ಟಣದಲ್ಲಿ ಶ್ರೀ ಕೃಷ್ಣರಾಜ ಓಲ್-ಇಂಡಿಯಾ ಬಾಯ್ಸ್‌ಸ್ಕ್ಯಾಟುಗಳ ಫಸ್ಟ ಏಡ್ ಟ್ರೋಫಿ ಎಂಬ ಮಹೋತ್ಸವವು ಈ ತಿಂಗಳ ತಾರೀಕು ೧೮, ೧೯ ಮತ್ತು ೨೦ರಲ್ಲಿ ನಡೆಯುವುದು. ಶ್ರೀಮನ್ ಯುವರಾಜರವರು ೨೦ನೆಯ ತಾರೀಕಿನ ಸಭೆಯಲ್ಲಿ ಅಗ್ರಾಸನವನ್ನು ವಹಿಸಿ ಇನಾಮುಗಳನ್ನು ಹಂಚುವರು. ಇಂದೂರು ಮತ್ತು ಕೊಲಂಬೋ ಪಟ್ಟಣಗಳಿಂದಲೂ ಮದರಾಸು, ಚಿತ್ತೂರು, ಕನ್ನಾನೂರು ಅಲಹಾಬಾದು ಮತ್ತು ತ್ರಿಚೂರು ಪ್ರಾಂತಗಳಿಂದಲೂ ಅಲ್ಲಿನ ಸ್ಕ್ಯಾಟುಗಳು ಬರುವರು.

ಕರ್ನಾಟಕ ದಿನಚರಿ ಪತ್ರಿಕೆ:—ಬೆಂಗಳೂರಿನ ಕರ್ನಾಟಕ ನ್ಯೂಸ್ ಪೇಪರ ಸಿಂಡಿಕೇಟಿನವರು ಬರುವ ತಾರೀಕು ೧೫ರಿಂದ ಕರ್ನಾಟಕ ಡೈಲಿ ನ್ಯೂಸ್ ಮತ್ತು 'ಕರ್ನಾಟಕ ವರ್ತಮಾನ' ಎಂಬ ಇಂಗ್ಲಿಷ್ ಮತ್ತು ಕರ್ನಾಟಕ ಎರಡು ದಿನಚರಿ ಪತ್ರಿಕೆಗಳನ್ನು ಪ್ರಕಟಿಸುವರು.

ಲಕ್ನೊ ಮುನ್ಸಿಪಾಲಿಟಿ:—ಸ್ವದೇಶದ ಕೈಗಾರಿಕೆಯನ್ನು ಉದ್ಧರಿಸುವ ಉದ್ದೇಶದಿಂದ ಲಕ್ನೊ ಮುನ್ಸಿಪಾಲಿಟಿಯು ತನ್ನ ಮುನ್ಸಿಪಾಲಿಟಿಯ ನೌಕರರಿಗೆಲ್ಲಾ ಇನ್ನು ಮುಂದೆ ಮುಂಡಾಸು ಹೊರತು ಇತರ ಪೋಷಾಕನ್ನು ಖಾದಿ ವಸ್ತ್ರದ್ದೇ ಒದಗಿಸಿಕೊಡತಕ್ಕದ್ದೆಂದು ಠರಾವು ಪಾಸುಮಾಡಿದೆ.

ಮೈಸೂರು ಮಹಾರಾಜರು:—ಮೈಸೂರು ಮಹಾರಾಜರು ಕಳೆದ ತಾರೀಕು ೨೬ನೇ ಸಾಯಂಕಾಲ ಯರಕಾಂಡದಿಂದ ಸೇಲಮಿಗೆ ಬಂದು ತಲ್ಪಿದರು. ಅಲ್ಲಿಯ ಮುನ್ಸಿಪಲ್ ಕೌನ್ಸಿಲರರು ಇವರನ್ನು ಸತ್ಕರಿಸಿ ಇವರಿಗೆ ಪಾನಸುಪಾರಿಯಿಂದ ತುಂಬಿದ ಒಂದು ಬೆಳ್ಳಿಯ ಹರಿವಾಣವನ್ನು ಉಚಿತವಾಗಿ ಕೊಟ್ಟರು.

ನದಿಯಾಡ ಮುನ್ಸಿಪಾಲಿಟಿ:—ಇಲ್ಲಿಯ ನಿವಾಸಿಕರು ಮುನ್ಸಿಪಲ್ ತೆರಿಗೆಯನ್ನು ಕೊಡದೆ ಇರುವುದರಿಂದ ಈಗ ಜನರ ಸೊತ್ತುಗಳ ಜಪ್ತಿಗೆ ಪ್ರಾರಂಭವಾಗಿದೆ.

ಮುಂಬಯಿ ಪೋರ್ಟಟ್ರಸ್ಟ:—ಮುಂಬಯಿಯ ಪೋರ್ಟಟ್ರಸ್ಟಿನವರು ಹಮಾಲದಾರರ ದಿನಕೂಲಿಯ ದರವನ್ನು ರೂ. ೧–೮–೦ರಿಂದ ರೂ. ೧–೬–೦ಕ್ಕೆ ತಗ್ಗಿಸುವ ಆಲೋಚನೆ ಮಾಡಿ ಕಳೆದ ತಾರೀಕು ೨೪ರಲ್ಲಿ ಆಣೆ ಎರಡರಂತೆ ಕಡಿಮೆ ಮಾಡಿ ಎಂದರೆ ರೂ. ೧–೬–೦ರಂತೆ ಕೂಲಿಯನ್ನು ಹಂಚಿದರು. ಕೂಡಲೆ ೫೦೦೦ ಕೂಲಿಗಳು ಮುಷ್ಕರ ಹಿಡಿದರು. ಆಗ ಅಧಿಕಾರಿಗಳು ಪುನರಾಲೋಚಿಸಿ ಪೂರ್ವದಂತೆಯೆ ಕೂಲಿಯನ್ನು ಕೊಡಲು ಒಪ್ಪಿದರು. ಆದರೆ ಕೂಲಿಗಳು ಇದನ್ನು ಸ್ವಲ್ಪ ಅಲಕ್ಷ್ಯಮಾಡಿ ಈಗ ತಮ್ಮ ಕೆಲಸಗಳ ಕೆಲವು ಬಾಬೆಗಳಲ್ಲಿ ತಮ್ಮ ಕೂಲಿಯ ದರವನ್ನು ಏರಿಸಬೇಕೆಂದು ವಿನಂತಿ ಮಾಡಿಕೊಂಡಿರುವರು. ಮುಷ್ಕರವು ನಡಕೊಂಡೆ ಉಂಟು.

ತಂಜಾವೂರ ಸ್ತ್ರೀಯರ ಸಹಕಾರಿ ಸಂಘ:—ಕಳೆದ ತಾರೀಕು ೨೧ರಲ್ಲಿ ತಂಜಾವೂರಿನ ಸ್ತ್ರೀಯರಲ್ಲಿ ಕೆಲವರು ಸಭೆಕೂಡಿ ಒಂದು ಸ್ತ್ರೀಯರ ಸಹಕಾರಿ ಸಂಘವನ್ನು ಸ್ಥಾಪಿಸಬೇಕಾಗಿ ನಿರ್ಧರಿಸಿದರು. ಈ ಸಭೆಯಲ್ಲಿ ಸುಮಾರು ೧೦೦ ಮಂದಿ ಸ್ತ್ರೀಯರು ಹಾಜರಿದ್ದರು. ಈ ಸಹಕಾರಿ ಸಂಘಕ್ಕೆ ಅಲ್ಲಿಯ ಡಿಸ್ಟ್ರಿಕ್ಟ ಪೋಲೀಸ ಸುಪರಿಂಟೆಂಡೆಂಟರ ಪತ್ನಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಮುಂಬಯಿ ಕ್ರೊನಿಕಲ್ ಪತ್ರಿಕೆ:—ಈ ಪತ್ರಿಕೆಯ ಸುಪ್ರಸಿದ್ಧ ಸಂಪಾದಕರಾದ ಮಿ. ಬಿ. ಜಿ. ಹೋರ್ನಿಮನ್ನರನ್ನು ಹಿಂದೂಸ್ಥಾನದಿಂದ ಗಡಿಪಾರುಮಾಡಿದ ದಿನಾಚರಣೆಯನ್ನು ಮಾಡುವುದಕ್ಕಾಗಿ ಕಳೆದ ತಾ. ೨೬ರಲ್ಲಿ ಮುಂಬಯಿಯಲ್ಲಿ ಅಸಹಕಾರಿಗಳ ಒಂದು ಸಭೆಯು ಸೇರಿತು. ಇವರು ಹಿಂದೂಸ್ಥಾನಕ್ಕೆ ಮರಳಿಬರಬಾರದೆಂದು ಇರುವ ಸರಕಾರದ ಉದ್ದೇಶವನ್ನು ಖಂಡಿಸುವ ಭಾಷಣಗಳು ಈ ಮೀಟಿಂಗಿನಲ್ಲಿ ಆದವು. ಅನಂತರ ಇತರ ವಕ್ತೃಗಳು ಮಿ. ಬಿ. ಜಿ. ಹೋರ್ನಿಮನ್ನರು ಮಾಡಿದ ಹಿಂದೂಸ್ಥಾನದ ಸೇವೆಯನ್ನು ಕೊಂಡಾಡಿ ಭಾಷಣ ಮಾಡಿದರು.

ಪಬ್ಲಿಕ್ ಸರ್ವಿಸ್ ಕಮ್ಮಿಶನ್:—ಈ ಕಮ್ಮಿಶನಿನ ಅಧ್ಯಕ್ಷರಾಗಲು ಮಿ. ಆಸ್ಟಿನ್ ಚೇಂಬರಲೇನರು ಒಪ್ಪಿರುವುದಿಲ್ಲವೆಂದು ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯು ತಿಳಿಸುತ್ತದೆ.

ಸುರತ್ ನಿವಾಸಿಕನೊಬ್ಬನ ಅಪೀಲು:—ತನ್ನ ಮಗಳನ್ನು ಶಾಲೆಗಳಲ್ಲಿ ಸೇರಿಸಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡಲಿಲ್ಲವೆಂಬ ಅಪರಾಧವನ್ನು ಸುರತ್ತಿನ ಒಬ್ಬ ನಿವಾಸಿಕನ ಮೇಲೆ ಹೊರಿಸಿ ಅವನಿಗೆ ಜುರುಮಾನೆ ಹೊರಿಸಲಾಯಿತು. ಅವನು ಈಗ ಅಪೀಲನ್ನು ದಾಖಲುಮಾಡಿದ್ದಾನೆ. ಈ ಅಪೀಲಿನಲ್ಲಿ ಅವನು ತನ್ನ ಹುಡುಗಿಯು ಒಂದು ರಾಷ್ಟ್ರೀಯ ಶಾಲೆಯಲ್ಲಿ ಕಲಿಯುತ್ತಿದ್ದಳು. ಮತ್ತು ಅಧಿಕಾರಿಗಳು ಈ ಹುಡುಗಿಯ ವಿದ್ಯಾಭ್ಯಾಸದ ಹಿತಚಿಂತನೆಯ ಕಡೆಗೆ ಲಕ್ಷ್ಯವಿಟ್ಟು ತನ್ನ ಮೇಲೆ ಮೇಲಿನ ತಪ್ಪನ್ನು ಹೊರಿಸಿದ್ದಲ್ಲ. ಪರಂತು ಖಾಸಗಿ ಶಿಕ್ಷಣ ಸಂಸ್ಥೆಗಳ ಉತ್ಸಾಹವನ್ನು ವಿಶೇಷವಾಗಿ ರಾಷ್ಟ್ರೀಯ ಶಾಲೆಗಳ ಉತ್ಸಾಹವನ್ನು (ಸುರತ್ತಿನಲ್ಲಿರುವ ೫೦ ರಾಷ್ಟ್ರೀಯ ಶಾಲೆಗಳಿವೆ) ತಗ್ಗಿಸಲು ಮಾಡಿದ ಪ್ರಯತ್ನವಾಗಿದೆ. ಸುರತ್ತಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಜಾರಿಯಲ್ಲಿಡತಕ್ಕದೆಂಬ ನಿರ್ಬಂಧವನ್ನು ಕಳೆದ ೧೯೨೨ನೇ ಇಸವಿಯ ಜನವರಿ ತಾರೀಕು ೧೨ರಲ್ಲು ಸುರತ್ ಮುನ್ಸಿಪಾಲಿಟಿಯು ತೆಗೆದುಹಾಕಿದ್ದರಿಂದ ಈ ತಪ್ಪನ್ನು ಇನ್ನೂ ತನ್ನ ಮೇಲೆ ಹೊರಿಸುವುದು ನ್ಯಾಯವಲ್ಲವೆಂದು ತಿಳಿಸಿರುವರು.

ಮುಂಬಯಿ ಕೊರ್ಪೊರೇಶನ್:— ಕಳೆದ ತಾರೀಕು ೨೬ರಲ್ಲಿ ಮುಂಬಯಿ ಕೊರ್ಪೊರೇಶನಿನ ಮೀಟಿಂಗು ಜರಗಿತು. ಮುಂಬಯಿ ಮುನ್ಸಿಪಾಲಿಟಿಯ ನೌಕರರೆಲ್ಲರಿಗೂ ಕೈಯಿಂದಲೆ ತಯಾರಿಸಿದ ವಸ್ತ್ರವನ್ನು ಒದಗಿಸತಕ್ಕದೆಂಬ ಠರಾವನ್ನು ಮಿ. ಜಮುನಾದಾಸ ಮೇಥಾರವರು ಈ ಮೀಟಿಂಗಿನ ಮುಂದಿಟ್ಟರು. ಮುನ್ಸಿಪಾಲಿಟಿಯ ಖರ್ಚನ್ನು ಕಡಿಮೆಮಾಡುವ ದೃಷ್ಟಿಯಿಂದಲೆ ಮಿ. ಮೇಥಾರವರು ಈ ಠರಾವನ್ನು ಕೌನ್ಸಿಲಿನ ಮುಂದೆ ತಂದಿದ್ದರು. ಯಾಕೆಂದರೆ ಖಾದಿಯ ಕ್ರಯವು ಕಡಿಮೆ, ಅದು ಹೆಚ್ಚು ಸಮಯ ಬಾಳುತ್ತದೆ. ಅದಲ್ಲದೆ ಖಾದಿಯ ಮೇಲೆ ಮುಂಬಯಿ ನಿವಾಸಿಕರಿಗೂ ಪ್ರೇಮವಿದೆ. ಈ ಕೊರ್ಪೊರೇಶನಿನ ಸ್ತ್ರೀ ಸಭಾಸದರಾದ ಮಿಸೆಸ್ ಗೋಖಲೆಯವರು ಈ ಠರಾವನ್ನು ಅನುಮೋದಿಸಿದರು. ಮಿ. ಸೆಟಾನಾ ಇವರು ಇದನ್ನು ವಿರೋಧಿಸಿದರು. ಕೊನೆಗೆ ಬಹುಮತದ ಬೆಂಬಲವಿಲ್ಲದೆ ಈ ಠರಾವು ಬಿದ್ದುಹೋಯಿತು.

ಶ್ರೀಯುತ ಜಯರಾಮಾಚಾರ್ಯರಿಗೆ ಜೈಲು ಬಂಧನ:—ಕೀರ್ತನಕೇಸರಿ ಜಯರಾಮಾಚಾರ್ಯರವರ ಮೇಲೆ ರಾಜದ್ರೋಹಪರ ಭಾಷಣಮಾಡಿದರೆಂದು ಕ್ರಿಮಿನಲ್ ಪ್ರಕರಣವು ಧಾರವಾಡದ ಮೆಜಿಸ್ಟ್ರೇಟ ಮಿ. ಪಂಡಿತರವರ ಮುಂದೆ ನಡೆದು ಒಂದು ವರುಷದ ಸಾದಾ ಶಿಕ್ಷೆಯಾಯಿತು. ಕೀರ್ತನ-ಕೇಸರಿಯವರು ಕಳೆದ ತಾರೀಕು ೨೩ನೆಯ ಕಾರಾಗೃಹವನ್ನು ಸೇರಿದರು. ಮೆಜಿಸ್ಟ್ರೇಟ ಮಿ. ಪಂಡಿತರು ತಮ್ಮ ತೀರ್ಪಿನಲ್ಲಿ ಅಸಹಯೋಗದ ಮೇಲೆ ಹೊಟ್ಟೆಕುಂಬಾ ವಿಧ್ವಂಸಕ ಟೀಕೆಯನ್ನು ಮಾಡಿರುವರು. ಸಹಜವು. [ಕರ್ನಾಟಕ ವೃತ್ತ.]

ಡೊಕ್ಟರ ಕಿಚಲೂರವರ ಸಂದೇಶ.

ದುಳ್ಯ ಜೈಲಿನಿಂದ ಬಿಡುಗಡೆ ಹೊಂದಿದ ರಾಜಕೀಯ ಕೈದಿಗಳಾದ ಮಿ. ಬಾಗಚಂದ ಹಿರಾನಂದರೊಡನೆ ಡಾಕ್ಟರ ಕಿಚಲೂರವರು ಕೆಳಗಿನ ಸಂದೇಶವನ್ನು ಕಳುಹಿಸಿಕೊಟ್ಟಿರುವರು.

"ನನಗೆ ಮಹಾತ್ಮಾಗಾಂಧಿಯವರಲ್ಲೂ ಅವರ ಕಾರ್ಯದಲ್ಲೂ ವಿಶ್ವಾಸವಿದೆ, ಮಹಾತ್ಮಾ ಗಾಂಧಿಯವರು ತೋರಿಸಿಕೊಟ್ಟ ದಾರಿಯಿಂದಲೆ ಹಿಂದೂಸ್ಥಾನದ ಸ್ವಾತಂತ್ರ್ಯವು ಲಭಿಸುವುದು. ಲೋಕದ ಯಾವತ್ತೂ ಮನುಜರಲ್ಲಿ ಇವರೊಬ್ಬರೆ ಈ ದೇಶವನ್ನು ಜಯಪ್ರದವಾದ ಮಾರ್ಗದಲ್ಲಿ ನಡಿಸಲು ಶಕ್ತರಾದವರಾಗಿರುವರು. ಹಿಂದುಗಳು, ಮುಹಮ್ಮದೀಯರು, ಸಿಕ್ಕರು, ಪಾರ್ಸಿಗಳು, ಯಹೂದಿಯರು, ಮತ್ತು ಕ್ರೈಸ್ತರು ಈ ಪ್ರತಿಯೊಂದು ಜಾತಿಯವರು ಇವರನ್ನು ನಿಜವಾದ ಮುಖಂಡರೆಂದು ಒಪ್ಪಬಹುದು. ಸತ್ಯಾಗ್ರಹವೊಂದೆ ಸ್ವರಾಜ್ಯವನ್ನು ಹೊಂದುವುದಕ್ಕೆ ಪರಿಣಾಮಕಾರಿಯಾದ ಅಸ್ತ್ರವೆಂದು ನನ್ನ ನಂಬಿಕೆಯಾಗಿದೆ, ನಾನು ಜೈಲಿನಿಂದ ಹೊರಗೆ ಇದ್ದುದೆ ಆದರೆ ಮಹಾತ್ಮರ ಆಶಯದಂತೆ ಖಾದಿಯ ಪ್ರಚಾರವೆ ಮುಖ್ಯವಾಗಿಟ್ಟುಕೊಂಡು ಕೊಂಗ್ರೆಸ್ ಪ್ರಚಾರಕಾರ್ಯವನ್ನು ಮುಂದೊತ್ತುತ್ತಿದ್ದೆ. ನನ್ನ ಸಂಪೂರ್ಣ ಸಮಯವನ್ನು ಜನರನ್ನು ಸತ್ಯಾಗ್ರಹಕ್ಕೆ ಸಿದ್ಧಮಾಡಲು ವಿನಿಯೋಗಿಸುತ್ತಿದ್ದೆ. ಅಕಾಲಿಗಳು ಮಾಡಿದ ಸ್ವಾರ್ಥತ್ಯಾಗವನ್ನು ನೆನಸುವಾಗ ನನ್ನ ನಾಡಿನಾಡಿಗಳಲ್ಲಿಯೂ ಸಂತೋಷವು ಉಕ್ಕಿಬರುತ್ತದೆ. ಪಶುಶಕ್ತಿಯು ಬಲಪ್ರಯೋಗದ ಹೋರಾಟವು ಆತ್ಮ ಸಾತ್ವಿಕ ಯುದ್ಧವನ್ನು ಅಪಜಯಪಡಿಸಲು ಆಗದು. ನಾನು ಮೊದಲು ಕೊನೆಗೂ ಹೇಳುವುದೇನೆಂದರೆ 'ನೀವು ಮಹಾತ್ಮಾ ಗಾಂಧಿಯವರನ್ನು ಬಂಧನದಿಂದ ಬಿಡಿಸುವುದಾದರೆ ಅವರು ತೋರಿಸುವ ಮಾರ್ಗವನ್ನೆ ಅವಲಂಬಿಸಿ ನಡೆದು ಅವರನ್ನು ಬಿಡುಗಡೆಮಾಡಬೇಕಾಗಿದೆ'".

ಅನುಕ್ರಮಣಿಕೆ.

ಅಗ್ರಲೇಖ:—
ಸರ್ ಪೋರ್ಟರ ಸಾಹೇಬರ ಮುಂಜಾಗ್ರತಿ ... ೬
ಸ್ಫುಟವಿಚಾರಗಳು.— ... ೭
೧. ಉಪ್ಪಿನ ಸುಂಕ ... "
೨. ಯುನಾನಿ ಮತ್ತು ಆಯುರ್ವೇದ ಔಷಧ ... "
ಮಂಗಳೂರು— ... "
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ... ೫
ಡೊಕ್ಟರ ಕಿಚಲೂರವರ ಸಂದೇಶ ... "
ದಕ್ಷಿಣಕನ್ನಡ—ಬಂಟವಾಳ, ಕಳ್ಳಿಗೆ, ಪೆರ್ಡಾಲ, ಮಂಜೇಶ್ವರ ಸಂಪಾಜೆ, ಪೊಳಲಿ ... ೮
ದೇರೆಬೈಲು ಗ್ರಾಮಸ್ಥರ ಕಷ್ಟಪರಿಹಾರ. ... "
ಭೂಕಂಪಗಳೂ ಜ್ವಾಲಾಮುಖಿಗಳೂ ... ೯
ಗುಜರಾಥಿನಲ್ಲಿ ಕಾನೂನುಭಂಗ. ... "
ಮಹಾತ್ಮರ ಖುಲಾಸೆ ... "
ಬೀ ಅಮ್ಮನವರ ಭಾಷಣ ... "

ಸ್ವದೇಶಾಭಿಮಾನಿ.

ಶಕ ೧೮೪೪ ವೈಶಾಖ ಬ॥ ೪ಯು ಶುಕ್ರವಾರ

ಸರ್ ಪೋರ್ಟರ ಸಾಹೇಬರ ಮುಂಜಾಗ್ರತಿ.

ಸರ್ ಲುಡ್‌ವಿಕ್ ಪೋರ್ಟರರ ಹೆಸರಿನ ಪರಿಚಯವನ್ನು ವಾಚಕರಿಗೆ ಹೊಸತಾಗಿ ಮಾಡಿಕೊಡಬೇಕಾಗಿದೆ. ಇವರು 'ಲಂಡನ್ ಟೈಮ್ಸ್' ಪತ್ರಿಕೆಯಲ್ಲಿ ಈಗಿನ ಹಿಂದೀರಾಜಕಾರಣವನ್ನು ಕುರಿತು ಒಂದು ಲೇಖವನ್ನು ಬರೆದಿರುವರು. ಇವರು ತಮ್ಮ ಲೇಖದಲ್ಲಿ ನೋಕರಶಾಹಿಗೆ ಯಾವ ಮುಂಜಾಗ್ರತಿಯನ್ನು ಕೊಟ್ಟಿರುವರೊ ಅದನ್ನು ವೇದ್ಯಪಡಿಸುವುದಕ್ಕಿಂತ ಮುಂಚೆ ಅಂಥ ಪ್ರಸಂಗವು ಸಾಹೇಬರ ಮೇಲೆ ಯಾಕೆ ಬಂದಿದೆ ಎಂಬುದನ್ನು ಕೆಲವು ಮಟ್ಟಿಗೆ ಪರಿಶೀಲಿಸುವುದು ಅಪ್ರಾಸಂಗಿಕವಾಗಲಾರದು.

ದೇಶದ ಪ್ರಕೃತ ಪರಿಸ್ಥಿತಿಯು ದೇಶವತ್ಸಲರ ಯೋಚನೆಗೆ ಆಸ್ಪದವನ್ನುಂಟುಮಾಡುತ್ತಿದೆ. ವೈಸರಾಯರು ಉಪ್ಪಿನ ಇಮ್ಮಡಿಕರವನ್ನು ತಮ್ಮ ಸರ್ಟಿಫಿಕೇಶನಿನ ಬಲದಿಂದ ಭದ್ರಪಡಿಸಿದ ಬಳಿಕ ಅಸಹಕಾರವಾದಿಗಳಿಗೆ ಮಾತ್ರವಲ್ಲ, ಅತಿರಾಜಭಕ್ತರೆಂದೆನ್ನಿಸಿಕೊಳ್ಳುವ ಬಿಝುಂಟ್ ಪಕ್ಷದವರಿಗೂ ಕೂಡ ನೋಕರಶಾಹಿಯ ಮೊಸಳೆಯ ದಾಡೆಯಲ್ಲಿ ಸೇರಿಹೋದ ಸ್ವರಾಜ್ಯದ ಹಕ್ಕುಗಳನ್ನು ಸಂಪಾದಿಸುವುದು ಅಸಾಧ್ಯವೆಂದೆ ತೋರಹತ್ತಿದೆ. ಮತ್ತು ಈ ರೀತಿಯಿಂದ ಈ ಜನಗಳಿಗೆ ಅನುಭವವು ಬಂದಿರುವುದರಿಂದ ಅವರು ಇತ್ತೀಚೆಗೆ ತಮ್ಮ ರಾಜಕೀಯ ವ್ಯವಹಾರದಲ್ಲಿ ಅಸಹಕಾರಿತೆಯ ಭಾಷೆಯನ್ನು ಉಪಯೋಗಿಸ ತೊಡಗಿದ್ದಾರೆ. ಇದೊಂದು ಸುದೈವವೆ ಸರಿ. ವೈಸರಾಯರು ಹೊರಿಸಿದ ಈ ಕರವನ್ನು ನಿಷೇಧಿಸಲು ಮುಂಬಯಿಯಲ್ಲಿ ಶಾಂತಪಕ್ಷದವರ 'ಕೂಟವು' ಜರಗಿದಾಗ ಸಭಾಧ್ಯಕ್ಷರಾದ ನಾಮದಾರ ಸೇಟನಾ ಇವರು ಇದುವರೆಗಿನ ತಮ್ಮ ಸಹಕಾರದ ಅನುಭವವನ್ನು ಸಭೆಯ ಮುಂದಿಟ್ಟು, ಇನ್ನು ಮುಂದೆ ಜನತೆಯು ಮತ್ತು ಜನತೆಯ ಸಭಾಸದರು ಮಾಡಬೇಕಾದ ಕರ್ತವ್ಯವನ್ನು ಸೂಚಿಸಿದರು. "ವೈಸರಾಯರು ಸರ್ಟಿಫಿಕೇಶನಿನಿಂದ ಇಮ್ಮಡಿ ಸುಂಕವನ್ನು ಹೊರಿಸಿದ್ದು ಬರೆ ತನ್ನೊಬ್ಬರ ಬಲದಿಂದ ಅಲ್ಲ, ಅವರಿಗೆ ವಿಲಾಯತಿಯ ಪಾರ್ಲಿಮೆಂಟಿನ ಬಲವು ಹಿಂದಿನಿಂದ ಇದೆ. ಆದ್ದರಿಂದ ವಿಲಾಯತಿಯ ಪಾರ್ಲಿಮೆಂಟಿನಿಂದಲಾದರೂ ಈ ವಿಷಯದಲ್ಲಿ ಹಿಂದಿಗಳಿಗೆ ನ್ಯಾಯವು ದೊರಕೀತೆಂದು ಆಶಿಸುವುದು ವ್ಯರ್ಥವಾಗಿದೆ" ಎಂದು ಹೇಳಿ ಸೇಟನಾ ಇವರು 'ಇನ್ನು ಮುಂದೆ ಹಿಂದೀ ಸಭಾಸದರು ಕೌನ್ಸಿಲುಗಳಲ್ಲಿ ಮತ್ತು ಎಸೆಂಬ್ಲಿಯಲ್ಲಿ ಏಕಮತ್ಯದಿಂದ ಇಂಥ ಎಲ್ಲ ಕರಗಳನ್ನು ನಿರ್ದಾಕ್ಷಿಣ್ಯದಿಂದ ವಿರೋಧಿಸಬೇಕು, ಮತ್ತು ನೋಕರಶಾಹಿಯನ್ನು ಬಗ್ಗಿಸಬೇಕು" ಎಂದು ಹೇಳಿದರು. "ವೈಸರಾಯರು ಜನತೆಯ ವಿರೋಧವಿರುವಾಗಲೂ ಪ್ರತಿಯೊಂದನ್ನು ಸರ್ಟಿಫಿಕೇಶನಿನಿಂದ ಮಂಜೂರುಮಾಡುತ್ತಾರಾದರೆ ಮಾಡಲಿ. ಪರಂತು ದಿನೇ ದಿನೇ ಉದಯೋನ್ಮುಖವಾಗುತ್ತಿದ್ದ ಲೋಕಸತ್ತೆಯ ಪ್ರಾಬಲ್ಯದ ಮುಂದೆ ಸಾಮ್ರಾಜ್ಯ ಸರಕಾರಕ್ಕೂ ಇಂಡಿಯಾ ಆಫೀಸಿಗೂ ಕೊನೆಗೆ ತನ್ನ ತಲೆಯನ್ನು ಬಗ್ಗಿಸಬೇಕಾಗಿ ಬಂದೀತು" ಎಂದು ಸೇಟನಾ ಇವರು ಮುಂಬಯಿಯ ಸಭೆಯಲ್ಲಿ ಉದ್ಗಾರ ಹೊರಡಿಸಿದರು. ಈ ಮೇರೆಗೆ ವೈಸರಾಯರ ಸರ್ಟಿಫಿಕೇಶನಿನ ಅಧಿಕಾರವು ಚಲಾವಣೆಯಲ್ಲಿ ಬಂದಂದಿನಿಂದ ಶಾಂತಪಕ್ಷದವರು ಮತ್ತು ಪೂರ್ಣ ರಾಜಭಕ್ತರು ತಮ್ಮ ಕಣ್ಣು ತೆರೆದಿದ್ದಾರೆ. ನಾಮದಾರ ಸೇಟನಾ ಸಾಹೇಬರು ಊಹಿಸಿದ ಮೇರೆಗೆ ವೈಸರಾಯರ ಕೃತ್ಯಕ್ಕೆ ಪಾರ್ಲಿಮೆಂಟಿನ ಸಮ್ಮತಿಯು ಮೊದಲಿನಿಂದಲೆ ಇರಲಿಕ್ಕೆ ಸಾಕು ಎಂಬುದಕ್ಕೆ ಇನ್ನೊಂದು ದೃಷ್ಟಾಂತವನ್ನು ನಾವು ವಾಚಕರ ಮುಂದಿಡಬಹುದು. ವೈಸರಾಯರು ತಮ್ಮ ಸರ್ಟಿಫಿಕೇಶನಿನ ಅಧಿಕಾರದಿಂದ ಸ್ಥಾಪಿಸಲು ಹೊರಡತಕ್ಕ ಒಂದು ಕಾನೂನಿಗೆ ಅಥವಾ ಕರಕ್ಕೆ ಬಾದಶಹರ ಮತ್ತು ಪಾರ್ಲಿಮೆಂಟಿನ ಮಂಜೂರಾತಿ ಬೇಕಾಗಿರುತ್ತದೆ. ಇದು ಕಾಯಿದೆಯ ಮಾರ್ಗವು ಆದ್ದರಿಂದ ಪಾರ್ಲಿಮೆಂಟಿನಲ್ಲಿ ಅಂಡರ ಸೆಕ್ರೆಟರಿಗಳಿಗೆ 'ಉಪ್ಪಿನ ಸುಂಕದ ಕಾಯಿದೆಯು ಜಾರಿಯಲ್ಲಿ ಬರುವುದಕ್ಕಿಂತ ಮುಂಚೆ ಪಾರ್ಲಿಮೆಂಟಿನಲ್ಲಿ ಅದನ್ನು ಚರ್ಚೆಗಾಗಿ ಇಡಬಹುದೆ?" ಎಂದು ಒಂದು ಪ್ರಶ್ನೆಯು ಕೇಳಲ್ಪಟ್ಟಿತು. ಇದಕ್ಕೆ "ಅದು ಯಾವಾಗಲೆ ಜಾರಿಯಲ್ಲಿ ಬಂದಿದೆ" ಎಂದು ಉತ್ತರವು ಸಿಕ್ಕಿತು! ಅಂಡರ್ ಸೆಕ್ರೆಟರಿಗಳ ಬಾಯಿಯಿಂದ ಹೊರಬಿದ್ದ ಈ ಉತ್ತರವು ಬಹು ಚಿಕ್ಕದಾಗಿ ತೋರಿದರೂ ನೋಕರಶಾಹಿಯ ಕಾರ್ಯವು ಇದರಿಂದ ಎಷ್ಟರ ಮಟ್ಟಿಗೆ ಸಾಧ್ಯವಾಯಿತೆಂಬುದು ಕಪಟಪಟುವಾದ ನೋಕರಶಾಹಿಗೆ ತಿಳಿದುಬಂದಷ್ಟು ಅನ್ಯರಿಗೆ ತಿಳಿದುಬರಲಿಕ್ಕಿಲ್ಲ. "ಉಪ್ಪಿನ ಕರವು Law of the Land ಎಂದರೆ ಕಾಯಂ ಆಗಿ ಸ್ಥಾಪಿತವಾಯಿತು. ಅದಕ್ಕೆ ಪಾರ್ಲಿಮೆಂಟಿನ ಸಮ್ಮತಿಯು ಅಗತ್ಯವಿಲ್ಲ"ವೆಂದು ಇದರಿಂದ ಜಾಹೀರಪಡಿಸಿದಂತಾಗಲಿಲ್ಲವೆ? ಆದರೂ ಇಂಗ್ಲಿಷ ಸರಕಾರದವರ ಕೈಕೆಳಗೆ ಕಾಯಿದೆ ಕಾನೂನುಗಳನ್ನು ಅಭ್ಯಾಸಮಾಡಿದ ಜನರಿಗೆ ಇನ್ನೂ ಹಲವು ಆಶಂಕೆಗಳು ಬರುತ್ತಲೆ ಇವೆ. ವೈಸರಾಯರಿಗೆ ಇರುವ ಈ ಅಧಿಕಾರವು ಅಸಾಮಾನ್ಯವಾದ್ದು. ಎಂದರೆ ಅಪವಾದಾತ್ಮಕವಾದ್ದು. ಅಂಥ ಇಕ್ಕಟ್ಟಿನ ಪ್ರಸಂಗವು ಇದ್ದರೆ ಮಾತ್ರ ವೈಸರಾಯರು ತಮ್ಮ ಅಧಿಕಾರವನ್ನು ಉಪಯೋಗಿಸಬೇಕು. ಹೊರತು ನಿತ್ಯ ಇಂಥ ಅಧಿಕಾರವನ್ನು ಉಪಯೋಗಿಸಬಾರದು ಎಂದು ಮುಂತಾದ ಶಾಸ್ತ್ರಾರ್ಥವನ್ನು ಕಾಯಿದೆಪಂಡಿತರಾದ ಇಂಗ್ಲಿಷ ವಿದ್ವಾಂಸರು ಹಿಂದಿಗಳಿಗೆ ಕಲಿಸಿಕೊಟ್ಟಿರುವುದರಿಂದ ಅದೆ ಅಂಡರ ಸೆಕ್ರೆಟರಿಗಳಿಗೆ "ವೈಸರಾಯರ ಈ ಕೃತ್ಯವು ಅಪವಾದಾತ್ಮಕವೆಂದು ನೆನಸಬೇಕೊ ಹೇಗೆ?" ಎಂದು ಕೇಳೋಣಾಯಿತು. ಆದರೆ ಅಂಡರ ಸೆಕ್ರೆಟರಿಗಳಾದ ವಿಂಟರಟನ್ ಸಾಹೇಬರು ಬಹು ನಿಪುಣರು. ಅವರು ಈ ಪ್ರಶ್ನೆಗೆ "ಸುಧಾರಣಾ ಕಾನೂನಿನಲ್ಲಿ ಇಂಥ ಸಂದರ್ಭವು ಇಡಲ್ಪಟ್ಟಿದೆ" ಎಂದು ಸಾಮಾನ್ಯವಾದ ಉತ್ತರವನ್ನು ಕೊಟ್ಟು ಪ್ರಸ್ತಾಪವನ್ನು ಮುಗಿಸಿದರು! ಈ ಉತ್ತರದ ತಾತ್ಪರ್ಯವಾದರೂ ವೈಸರಾಯರು ಸರ್ವತಂತ್ರ ಸ್ವತಂತ್ರರೆಂಬುದಾಗಿದೆ. ಸಾರಾಂಶ ಹಿಂದೂಸ್ಥಾನದ ನೋಕರಶಾಹಿಯೆ ಇಲ್ಲಿಯ ಸಮಸ್ತ ರಾಜ್ಯಕಾರಭಾರದ ಮೂಲಾಧಾರವು. ಅದರ ಮನಸ್ಸನ್ನು ಮತ್ತು ಅದರ ಕೃತ್ಯವನ್ನು ತಡಿಸುವ ಸಾಮರ್ಥ್ಯವು ಪಾರ್ಲಿಮೆಂಟಿನ ಕೈಯಲ್ಲಿ ಕೂಡ ಇಲ್ಲ, ಎಂಬೀ ಸಂಗತಿಗಳು ಉಪ್ಪಿನ ಕರದ ವಿಷಯವಾಗಿ ನಡೆದ ಪ್ರಸ್ತಾಪಗಳಿಂದ ಎಲ್ಲ ವಿಚಾರವಂತರ ಲಕ್ಷ್ಯದಲ್ಲಿ ಬಂದಾವು.

ಇಂಥ ಪರಿಸ್ಥಿತಿಯಲ್ಲಿ ಹಿಂದೂಸ್ಥಾನದ ಒಂದು ತುದಿಯಿಂದ ಇನ್ನೊಂದು ತುದಿಯ ವರೆಗಿನ ವಿಸ್ತೃತವಾದ ಜನತಾಸಮುದ್ರದಲ್ಲಿ ಅಸಂತೋಷದ ಭಯಂಕರವಾದ ಕ್ಷೋಭವುಂಟಾದರೆ ಅದರಲ್ಲಿ ಆಶ್ಚರ್ಯವಿಲ್ಲ. ಮತ್ತು ಈ ಸಂಗತಿಯ ಪ್ರತೀತಿಯು ಮಿಸೆಸ್ ಎನಿಬಿಝುಂಟ್, ನಾಮದಾರ ಸೇಟನಾ ಇತ್ಯಾದಿ ರಾಜನಿಷ್ಠರ ಬಾಯಿಯಲ್ಲಿ ಆಗಾಗ್ಗೆ ಬರುತ್ತಿರುವ ಅಸಹಕಾರೋಕ್ತಿಗಳಿಂದಲೂ, ಯುಕ್ತಿಪ್ರಯುಕ್ತಿಯಿಂದ ಅಧಿಕಾರಿಗಳ ಕೃತ್ಯಗಳನ್ನು ಉಪರೋಧಿಸಬೇಕೆಂಬ ಪ್ರಬಲವಾದದಿಂದಲೂ ಸ್ಪಷ್ಟವಾಗುತ್ತದೆ. ಅಧಿಕಾರಿಗಳ ಒತ್ತಾಟದಿಂದ ಜನತೆಯು ಅಂತರ್ಮುಖವಾಗಿದೆ. ಅಸಂತುಷ್ಟವಾಗಿದೆ. ಹೃದಯದಲ್ಲಿ ಉದ್ಭವಿಸಿದ ಅಸಂತೋಷವನ್ನು ಬರೆ ಮನಸ್ಸಿನಲ್ಲಿಟ್ಟುಕೊಳ್ಳದೆ ಅದನ್ನು ಬಹಿರಂಗಪಡಿಸಿ, ಯೋಗ್ಯರೀತಿಯಿಂದ ಸಕ್ರಿಯವಾದ ಪ್ರತೀಕಾರವನ್ನು ಮಾಡಬೇಕೆಂದು ಅದು ನಿಶ್ಚಯಿಸಿಯದೆ. ಕೊಂಗ್ರೆಸ್ಸಿನೊಳಗಿನ ಸ್ವರಾಜ್ಯಪಕ್ಷವು ಉದಯೋನ್ಮುಖವಾಗಿ ತನ್ನ ಸುತ್ತುಮುತ್ತಲಿನ ಅಡ್ಡಿಗಳನ್ನೆಲ್ಲ ದೂರಕ್ಕೆ ಸಾರಿ ಸ್ವರಾಜ್ಯದ ಕಾದಾಟದಲ್ಲಿ ತನ್ನ ನಿಜವಾದ ಪ್ರತಿಸ್ಪರ್ಧಿಯಾದ ಯಾವ ನೋಕರಶಾಹಿ ಇದೆಯೊ ಅದನ್ನು ಹೊರಗೂ ಒಳಗೂ ಒಂದೆ ಸಮನೆ ಉಪರೋಧಿಸಬೇಕೆಂದು ಪ್ರಯತ್ನಿಸಹತ್ತಿದೆ. ಈ ಪ್ರಯತ್ನದಲ್ಲಿ ಕೆಲವು ಮಟ್ಟಿಗೆ ಪಕ್ಷಭೇದಗಳುಂಟಾದ ಕಾರಣ ಒಡಕು ಬಂದಿದೆಯಾದರೂ ಮುಂದಿನ ಕಾರ್ಯದ ದೃಷ್ಟಿಯಿಂದ ಅದು ಯೋಗ್ಯವೆಂದೆ ಹೇಳಬೇಕು. ಇಂಜಿನಿನ ಶಿಥಿಲವಾದ ಅವಯವಗಳನ್ನು ಪ್ರಥಮತಃ ಬಿಚ್ಚಿಹಾಕಿ ಬೇರೆ ಬೇರೆ ಮಾಡಿದಾಗ ಅದು ನಿಷ್ಪ್ರಯೋಜನವೆಂದು ಸಾಮಾನ್ಯ ಪ್ರೇಕ್ಷಕನ ದೃಷ್ಟಿಗೆ ಗೋಚರವಾದರೂ ಕುಶಲನಾದ ಇಂಜಿನಿಯರನು ಅವುಗಳನ್ನು ಪುನಃ ಒಟ್ಟಿಗೆ ವ್ಯವಸ್ಥಿತ ರೀತಿಯಿಂದ ಸೇರಿಸಿ ಕೊನೆಗೆ ಆ ಇಂಜಿನನ್ನು ಹೇಗೆ ಕಾರ್ಯಕ್ಷಮವನ್ನಾಗಿ ಮಾಡುವನೊ ಹಾಗೆಯೆ ಈ ಹೊತ್ತು ವಿಂಗಡವಿಂಗಡವಾದ ಪಕ್ಷಗಳು ತಮ್ಮ ತಮ್ಮೊಳಗೆ ಬಲಹೀನವಾದಂತೆ ತೋರಿದರೂ ನಾಳೆ ಅನುಭವದ ಮೇಲಿಂದ ಒಟ್ಟಿಗೆ ಸೇರಿದ ಬಳಿಕ ಅವೆ ಪಕ್ಷಗಳು ಏಕಜೀವನಾಗಿ ಸ್ವರಾಜ್ಯದ ಮಾರ್ಗವನ್ನು ನಿಷ್ಕಂಟಕವಾಗಿ ಆಕ್ರಮಿಸುವವು. ಬೇರೆ ಮಾತುಗಳಿಂದ ಹೇಳುವುದಾದರೆ, ಜೀರ್ಣವಾದ ಯಂತ್ರವನ್ನು ಸರಿಪಡಿಸುವುದಾದರೆ ಹೇಗೆ ಮೊದಲು ಅವಯವಶಃ ಪ್ರತ್ಯೇಕಿಸಬೇಕಾಗುವುದೊ ಹಾಗೆಯೆ ಈ ಹೊತ್ತು ರಾಷ್ಟ್ರೀಯ ಸಭೆಯಲ್ಲಿ ಯಥಾರ್ಥವಾದ ಅಸಹಕಾರದ ನವಜೀವನವನ್ನು ತರಲು ಪಕ್ಷಭೇದಗಳನ್ನು ಮಾಡಿಕೊಳ್ಳಬೇಕಾಗಿದೆ. ಈ ಕ್ಷಣಿಕ ಪಕ್ಷಭೇದವು ಅಂಶತಃ ಬೇಸರಕ್ಕೆ ಕಾರಣವಾದರೂ, ಸ್ವರಾಜ್ಯ ಸಂಪಾದನೆಯ ಪೂರ್ವಸಿದ್ಧತೆಯಾಗಿದೆ.

ಈ ವಿಷಯವು ಪಕ್ಷಾಭಿಮಾನದಿಂದಲಿಪ್ತರಾದ ಹಿಂದಿಗಳಿಗೆ ಪಕ್ಕನೆ ತಿಳಿಯಲಿಕ್ಕಿಲ್ಲ. ಆದರೂ ದೂರದಲ್ಲಿ ನಿಂತು ಇಲ್ಲಿಯ ಸ್ಥಿತಿಯನ್ನು ನಮಗಿಂತಲೂ ಬಹು ಸೂಕ್ಷ್ಮ ರೀತಿಯಿಂದ ಪರಿಶೀಲಿಸುತ್ತಿರುವ ವಿಲಾಯತಿ ಗೃಹಸ್ಥರ ಧ್ಯಾನದಲ್ಲಿ ಅದು ಬಹುಬೇಗನೆ ಬರುತ್ತದೆ. ಇದಕ್ಕೆ ನಾವು ಈ ಲೇಖದ ಆರಂಭದಲ್ಲಿ ಪ್ರಸ್ತಾಪಿಸಿದ ಸರ್ ಲುಡ್‌ವಿಕ್ ಪೋರ್ಟರ ಇವರ ಲೇಖನವೆ ಆದರ್ಶವಾಗಿದೆ. ಈ ಮಹಾನುಭಾವರು 'ಲಂಡನ್ ಟೈಮ್ಸ್' ಪತ್ರಿಕೆಯಲ್ಲಿ ಹಿಂದೀ ಅಸಹಕಾರಿಗಳನ್ನು ಕುರಿತು ಒಂದು ದೊಡ್ಡ ಲೇಖನವನ್ನು ಬರೆದು ಅದರಲ್ಲಿ ಅಸಹಕಾರಿಗಳು ಬರುವ ಚುನಾವಣೆಯಲ್ಲಿ ಕೌನ್ಸಿಲುಗಳನ್ನು ಆಕ್ರಮಿಸುವವರಿದ್ದಾರೆಂದು ಪೂರ್ವಸೂಚನೆಯನ್ನು ಕೊಟ್ಟಿರುವರು. ಕೌನ್ಸಿಲ್ ಚುನಾವಣೆಯ ಸಮಯವು ಹೇಗೆ ಹೇಗೆ ಸಮೀಪಿಸುವುದೊ ಹಾಗೆ ಹಾಗೆ ನೋಕರಶಾಹಿಯ ಮತ್ತು ಅದರ ಕಡೆಯವರ ಎದೆಯು ನಡುಗಹತ್ತಿದೆ. ಸರ್ ಲುಡ್‌ವಿಕ್ ಪೋರ್ಟರ ಸಾಹೇಬರು ಬರೆಯುತ್ತಾರೆ:— "ಸಂಯುಕ್ತ ಪ್ರಾಂತದಲ್ಲಿ ಸದ್ಯಃ ಚುನಾವಣೆಗಳು ನಡೆದವು. ಈ ಚುನಾವಣೆಗಳನ್ನೆಲ್ಲ ರಾಷ್ಟ್ರೀಯ ಪಕ್ಷದವರು ಆಕ್ರಮಿಸಿರುವರು. ಮತ್ತು ಲಖನೌ ಅಲ್ಲಹಾಬಾದ, ಬನಾರಸ ಮುಂತಾದ ಕಡೆಗಳಲ್ಲಿಯ ಮುನ್ಸಿಪಾಲಿಟಿಗಳ ಅಧ್ಯಕ್ಷಸ್ಥಾನದ ಮೇಲೆ ಸೆರೆಮನೆಗಳಿಂದ ಬಂಧಮುಕ್ತರಾಗಿ ಬಂದ ಉಗ್ರಪಕ್ಷದ ಜನರು ಇದ್ದಾರೆ. ಇನ್ನು ಮುಂದೆ ಈ ಜನರು ಡಿಸ್ಟ್ರಿಕ್ಟಬೋರ್ಡುಗಳ ಸ್ಥಾನಗಳನ್ನು ಕೈವಶಮಾಡುವವರಿದ್ದಾರೆ. ಈ ಕಾರ್ಯದಲ್ಲಿ ಅವರಿಗೆ ಜಯವು ಬಂದದ್ದಾದರೆ ಅವರು, ಮೂರನೆದಾಗಿ ಕಾಯಿದೆ ಕೌನ್ಸಿಲುಗಳನ್ನು ವ್ಯಾಪಿಸದೆ ಎಂದೂ ಬಿಡರು" ಎಂದು ಬರೆದು ಮಿ. ಲುಡ್‌ವಿಕ್ ಪೋರ್ಟರರು ಈ ವಿಷಯದಲ್ಲಿ ಮುಂದಿನಂತೆ ಕಾರಣವನ್ನು ಬರೆದಿರುವರು. "ಅಸಹಕಾರವಾದಿಗಳ ಕೌನ್ಸಿಲಿನೊಳಗಿನ ಕಾರ್ಯಕ್ರಮವು ಎಲ್ಲ ಮತದಾರಸಂಘಕ್ಕೆ ಸಮ್ಮತವಾಗದೆ ಇರಲಿಕ್ಕಿಲ್ಲ." ಪೋರ್ಟರ ಸಾಹೇಬರ ಈ ಅನುಮಾನವು ಸಕಾರಣವಾಗಿದೆ. ಮುನ್ಸಿಪಾಲಿಟಿ, ಲೋಕಲ್‌ಬೋರ್ಡುಗಳಂಥ ಸ್ಥಳಿಕ ಸಂಸ್ಥೆಗಳಲ್ಲಾಗಲಿ, ಕಾಯಿದೆಕೌನ್ಸಿಲುಗಳಂಥ ಪ್ರಾಂತಿಕ ಸಂಸ್ಥೆಗಳಲ್ಲಾಗಲಿ, ಇಲ್ಲವೆ ವರಿಷ್ಠ ಕಾಯಿದೆ ಸಂಸ್ಥೆಗಳಲ್ಲಾಗಲಿ ರಾಷ್ಟ್ರೀಯ ಪಕ್ಷದವರು ಯಾವ ಯಾವ ಕಾರ್ಯಗಳನ್ನು ಸಾಧಿಸಬೇಕೆಂದು ಆಯಿದುಕೊಂಡಿರುವರೊ ಅವು ಲೋಕಹಿತದ ದೃಷ್ಟಿಯಿಂದ ಅವಶ್ಯಕವಾಗಿವೆ. ಕೌನ್ಸಿಲುಗಳಲ್ಲಿ ಹೆಜ್ಜೆಯನ್ನಿಟ್ಟ ಕೂಡಲೆ ಅಸಹಕಾರದ ಪ್ರತಿಜ್ಞೆಗೆ ಭಂಗ ಬರುತ್ತದೆ ಎಂದು ತಿಳಿದು ಕೆಲವರು ವ್ಯರ್ಥವಾಗಿ ಏನು ಒದ್ದಾಡುತ್ತಿದ್ದಾರೊ ಅದು ಎಷ್ಟು ಅಸಮಂಜಸ ಮತ್ತು ಆತ್ಮಘಾತಕವಾದ್ದೆಂಬುದು ಪೋರ್ಟರ ಸಾಹೇಬರ ಬರವಣಿಗೆಯ ಮೇಲಿಂದ ಚಾಣಾಕ್ಷ ವಾಚಕರು ಊಹಿಸದೆ ಇರಲಿಕ್ಕಿಲ್ಲ. ಕಾಯಿದೆ ಕೌನ್ಸಿಲುಗಳು ಸ್ವರಾಜ್ಯದ ಸ್ವರ್ಗದ್ವಾರಗಳೆಂದು ಪ್ರಕೃತ ಯಾರೂ ತಿಳಕೊಳ್ಳುವುದಿಲ್ಲ. ಪರಂತು ಅವುಗಳಿಗೆ ನರಕದ್ವಾರವೆಂದು ಹೆಸರುಕೊಟ್ಟರೆ ಅದು ಮಾತ್ರ ಅತಿಶಯೋಕ್ತಿಯಾಗದೆ ಇರಲಿಕ್ಕಿಲ್ಲ. ಎರಡೂ ತುದಿಗಳಿಗೆ ಈ ರೀತಿಯಿಂದ ಹೋಗದೆ ಮಧ್ಯದಲ್ಲಿ ನಿಂತು ಕಾಯಿದೆ ಕೌನ್ಸಿಲುಗಳ ಯಥಾವತ್ ಸ್ವರೂಪವನ್ನು ಹೇಳುವುದಾದರೆ, ಅವು ಅಧಿಕಾರಿವರ್ಗದ ಅಪಕೃತ್ಯಗಳನ್ನು ನಿಷೇಧಿಸಿ, ಅದರ ಕೈಯನ್ನು ತಡಿಸುವ ಮುಖ್ಯಸ್ಥಾನಗಳು. ಯುದ್ಧದಲ್ಲಿ ಶತ್ರುಗಳ ಮೇಲೆ ಪ್ರಹಾರಮಾಡಲು ಕೋಟೆಗಳಲ್ಲಿ ಹೇಗೆ ಬೇರೆ ಬೇರೆ ಬುರುಜುಗಳನ್ನು ಕಟ್ಟಿರುವರೊ ಮತ್ತು ಆ ಬುರುಜುಗಳ ಮೇಲೆ ನಿಂತು ಗುಂಡುಗಳನ್ನೆಸೆಯುವುದು ಹೇಗೆ ಕರ್ತವ್ಯವೊ ಹಾಗೆಯೆ ಕಾಯಿದೆ ಕೌನ್ಸಿಲುಗಳು ಬುರುಜುಗಳಾದ ಕಾರಣ ಸ್ವರಾಜ್ಯವಾದಿಯಾದ ಜನತೆಯು ಪ್ರತಿಪಕ್ಷಿಗಳನ್ನು ಹತೋಟಿಯಲ್ಲಿ ತರಲು ಆ ಬುರುಜುಗಳನ್ನು ಆಕ್ರಮಿಸುವುದು ಅತ್ಯಂತ ಅವಶ್ಯವಾಗಿದೆ. ಇಲ್ಲಿಯ ಅಸಹಕಾರವಾದಿಗಳ ಈ ಹೃದ್ಗತವನ್ನು ತಿಳಕೊಂಡು ಪೋರ್ಟರ ಸಾಹೇಬರಂಥವರು ನೋಕರಶಾಹಿಯನ್ನು ಎಚ್ಚರಿಸಲು ಮತ್ತು ಮುಂದಿನ ಸಿದ್ಧತೆಯನ್ನು ಮಾಡಲು ವಿವಿಧ ರೂಪದಿಂದ ಮುಂಜಾಗ್ರತಿಯನ್ನು ಕೊಡುತ್ತಿರುತ್ತಾರೆ.

ಯಾಕೆಂದರೆ, ಅದೆ ಪೋರ್ಟರ ಸಾಹೇಬರು ತಮ್ಮ ಪತ್ರದ ಅಂತ್ಯದಲ್ಲಿ ಮಹತ್ವದ ಒಂದು ಮಾತನ್ನು ಬರೆದಿರುವರು. "ಅಸಹಕಾರವಾದಿಗಳಾದ ರಾಷ್ಟ್ರೀಯರು ಕೌನ್ಸಿಲುಗಳನ್ನು ಆಕ್ರಮಿಸಿ ಅವುಗಳಲ್ಲಿ ತಮ್ಮ ಬಹು ಮತವನ್ನು ಸಾಧಿಸಿದ್ದಾದರೆ ಅಧಿಕಾರಿವರ್ಗದ ಮೇಲೆ ಕಠಿಣ ಪ್ರಸಂಗವು ಒದಗದೆ

ಇರಲಿಕ್ಕಿಲ್ಲ." ಸರ್ ಲುಡ್‌ವಿಕ್ ಪೋರ್ಟರ ಸಾಹೇಬರ ಈ ವಿಧಾನದ ಮೇಲೆ ಹೆಚ್ಚಿನ ಟೀಕೆಯನ್ನು ಮಾಡುವ ಅವಶ್ಯಕತೆ ಇಲ್ಲ. ಆದರೆ ಉಪ್ಪಿನ ಸುಂಕದ ಪ್ರಕರಣದಲ್ಲಿ ಉಪಯೋಗಿಸಿದ ಸರ್ಟಿಫಿಕೇಶನಿನ ಅಮೋಘವಾದ ಯಾವ ಅಸ್ತ್ರವು ನೋಕರಶಾಹಿಯ ಕೈಯಲ್ಲಿದೆಯೊ ಅದನ್ನು ಉಪಯೋಗಿಸ ಹತ್ತಿದರೆ ಸ್ವಕಾರ್ಯವಾಯಿತೆಂದು ನೋಕರಶಾಹಿಯು ತಿಳಕೊಂಡು ಇರಬಹುದು. ಮತ್ತು ಈ ತಿಳಿವಿನಿಂದಲೆ ವರಿಷ್ಠ ಅಧಿಕಾರಿಗಳು ಮತ್ತು ಪ್ರಾಂತಿಕ ಅಧಿಕಾರಿಗಳು ಪರಮ ಪ್ರಿಯವಾದ ಈ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವ ವಾಡಿಕೆಯನ್ನು ಹಾಕಿಕೊಡುತ್ತಿದ್ದಾರೆಂದು ತೋರುತ್ತದೆ. ತಥಾಪಿ ನೋಕರಶಾಹಿಯ ಈ ಮನೋರಥವು ಸಿದ್ಧವಾಗುವಂತಿಲ್ಲ. ನಿತ್ಯದಲ್ಲಿ ಸೇವಿಸುವ ಅನ್ನವನ್ನಾಗಲಿ ಅಥವಾ ಅವಶ್ಯಕತೆ ಇರುವಾಗ ಸೇವಿಸುವ ಔಷಧವನ್ನಾಗಲಿ ಪ್ರಮಾಣವನ್ನು ಮಿಕ್ಕಿ ತೆಕ್ಕೊಂಡಿದ್ದಾದರೆ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ಯಾರಿಗೂ ಹೇಳಬೇಕಾದ ಅಗತ್ಯವಿಲ್ಲ. ಚಿಕ್ಕಮಕ್ಕಳು ಕೂಡ ಈ ಸಂಗತಿಯನ್ನು ತಿಳಕೊಂಡಿರುವರು. ಅದರಂತೆಯೇ ಸರ್ಟಿಫಿಕೇಶನಿನ ಅಧಿಕಾರವು ಬಹು ದಿವ್ಯವಾದ್ದು, ನೋಕರಶಾಹಿಯ ಮನೋರಥವನ್ನು ಕೈಗೂಡಿಸಿಕೊಡುವಂಥಾದ್ದು. ಈ ಎಲ್ಲ ಮಾತುಗಳು ನಿಜ. ಆದರೆ ಅದನ್ನು ಹೆಜ್ಜೆ ಹೆಜ್ಜೆಗೆ ಉಪಯೋಗಿಸ ತೊಡಗಿದರೆ ಅದರಿಂದ ನೋಕರಶಾಹಿಯ ಮನೋಭಂಗವುಂಟಾಗುವ ಬರೆ ಸಂಭವವಲ್ಲ, ಭರವಸೆಯು ಕಂಡುಬರುತ್ತದೆ. ಆದ್ದರಿಂದ ಸರ್ ಪೋರ್ಟರರು ಅಥವಾ ಅದೆ ವರ್ಗಕ್ಕೆ ಸೇರಿದ ಇತರರು ರಾಷ್ಟ್ರೀಯರ ಕೌನ್ಸಿಲ್ ಪ್ರವೇಶದ ಕಾರ್ಯಕ್ರಮದಿಂದ ಎಷ್ಟೆ ಮುಂಜಾಗ್ರತಿಯನ್ನು ತೆಕ್ಕೊಂಡರೂ ಅದು ನಿಷ್ಫಲವೆ ಸರಿ. ಸ್ವಸಂರಕ್ಷಣಕ್ಕಾಗಿ ಒದ್ದಾಡುವುದು, ಕೈಕಾಲು ಬಡೆಯುವುದು ಸ್ವಾಭಾವಿಕವಾದರೂ, ಎಲ್ಲ ಕಾಲದಲ್ಲಿ ಮತ್ತು ಎಲ್ಲ ಪರಿಸ್ಥಿತಿಯಲ್ಲಿ ಅದು ಫಲಕಾರಿಯಾಗುವುದಿಲ್ಲವೆಂಬುದನ್ನು ಯಾರೂ ಮರೆಯಬಾರದು.

ಸ್ಫುಟವಿಚಾರಗಳು.

೧. ವ್ಯಾಸರಾಯರಾದ ಲೋರ್ಡ ರೆಡಿಂಗ ಸಾಹೇಬರು ತಮ್ಮ 'ಸರ್ಟಿಫಿಕೇಶನ್' ಅಧಿಕಾರದಿಂದ ಉಪ್ಪಿನ ತೆರಿಗೆಯನ್ನು ಇಮ್ಮಡಿ ಮಾಡಿದುದರಿಂದ ಜನಸಾಮಾನ್ಯರಲ್ಲಿ, ಮಾತ್ರವಲ್ಲ, ದೇಶದ ಆಯಾ ರಾಜಕೀಯ ಪಂಗಡದವರಲ್ಲೂ, ಕೆಲವು ಮಂದಿ ಯುರೋಪಿಯನರಲ್ಲೂ ತುಂಬಾ ಅಸಮಾಧಾನವಾಗಿದೆಯಷ್ಟೆ! ಈಗ ಈ ಕರವನ್ನು ಕಡಿಮೆಮಾಡಬೇಕೆಂಬ ಪ್ರಯತ್ನಗಳು ಜೋರಿನಿಂದ ನಡೆಯುತ್ತಿವೆ. ಈ ವಿಷಯದಲ್ಲಿ ಈಗ ಎರಡೆ ವಿಧಾನಗಳು ಜನರ ಮುಂದಿರುವುವು. ವ್ಯಾಸರಾಯರ ಈ ಕೃತ್ಯವನ್ನು ಆಕ್ಷೇಪಿಸಿ ಪಾರ್ಲಿಮೆಂಟ ಸಭೆಯೊಡನೆ ಮೊರೆಯಿಡುವುದು ಒಂದನೇದು, ಇದು ಮೊದಲಿನಿಂದ ನಡೆದು ಬಂದ ವಿಧಾನ. ಅಸಹಕಾರವು ಎರಡನೆಯ ಉಪಾಯ. ಈ ತೆರಿಗೆಯನ್ನು ನಿಷೇಧಿಸಿ ಹೆಚ್ಚಿನ ಚಳವಳವನ್ನು ಮಾಡಿದ ಲೆಜಿಸ್ಲೇಟಿವ್ ಎಸೆಂಬ್ಲಿಯ ಸಭಾಸದರಾದ ಸರ್ ಮೊಂಟೆಗ್ಯೂ ವೆಬ್ಬರವರು ಈ ತೆರಿಗೆಯನ್ನು ಕಡಿಮೆಮಾಡುವುದಕ್ಕಾಗಿ ಮೇಲೆ ಕಾಣಿಸಿದ ಮೊದಲನೆಯ ಉಪಾಯವನ್ನು ಅನುಸರಿಸಿ ಪಾರ್ಲಿಮೆಂಟಿನೊಡನೆ ಮೊರೆಯಿಡಲು ಹಡಗು ಹತ್ತಿ ಇಂಗ್ಲೆಂಡಿಗೆ ಹೊರಟು ಹೋಗಿರುವರು. ಇಂಗ್ಲೆಂಡಿಗೆ ಹೋದ ಬಳಿಕ ಇವರು ಅಲ್ಲಿ ಕೆನ್ಯಿಯಾದಲ್ಲಿರುವ ಹಿಂದಿಗಳ ಸ್ಥಿತಿಯನ್ನು ಉದ್ಧಾರಗೊಳಿಸಲು ಸಹಾಯಮಾಡಬೇಕಾಗಿ ಪಾರ್ಲಿಮೆಂಟಿನೊಡನೆ ದಿನ್ನವಿಸಿಕೊಳ್ಳಲು ಹೋದ ನಾಮದಾರ ಶ್ರೀನಿವಾಸಶಾಸ್ತ್ರಿ, ಮಿ. ಕಾಮತ, ಶ್ರೀಯುತ ಜಮುನಾದಾಸ ದ್ವಾರಕಾದಾಸ ಇವರ ಬೆಂಬಲವನ್ನು ಪಡಕೊಳ್ಳಲಿಕ್ಕಿದ್ದಾರೆ. ಆದರೆ ಈ ರೀತಿಯ ಯಾಚಕ ವೃತ್ತಿಯ ಯತ್ನವು ಸಫಲವಾಗಲಿಕ್ಕಿಲ್ಲವೆಂದು ಹಿಂದಿನ ಅನುಭವದಿಂದ ಚೆನ್ನಾಗಿ ತಿಳಿದಿದೆ. ಅಲ್ಲದೆ, ನ್ಯೂ ಟ್ಯಾಮ್ಸ ಪತ್ರಿಕೆಯು ಸೂಚಿಸುವಂತೆ ಈಗ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ 'ಟೋರಿಪಾರ್ಟಿಯೇ' ಬಲವನ್ನು ಹೊಂದಿಕೊಂಡಿದೆ. ಮತ್ತು ಆ ಪಾರ್ಟಿಯು ವ್ಯಾಸರಾಯರ ಇಂಥಾ ಕಾರ್ಯದಲ್ಲಿ ಅವರ ಬೆಂಬಲಕ್ಕನೆ ಇದೆ. ಹೀಗಿರುತ್ತ ಅವರು ಈ ಕಾಲದಲ್ಲಿ ವೈಸರಾಯರನ್ನು ಬಿಟ್ಟುಹಾಕುವರೇನು? ಇನ್ನೊಂದು ಉಪಾಯವು ಅಸಹಕಾರವು. ಈ ಉಪಾಯವನ್ನು ಅನುಸರಿಸಿದರೆ ಜನರಿಗೆ ಸರಕಾರವನ್ನು ಬಗ್ಗಿಸಲು ಸುಲಭ ಸಾಧ್ಯವಾಗುವುದೆಂದು ಅಸಹಕಾರಿಗಳಿಗೂ ಇತರರಿಗೂ ಭರವಸೆ ಹುಟ್ಟಿದ್ದರಿಂದ ಈ ಮಾರ್ಗವನ್ನು ಸಹ ಜನರು ಕೈಕೊಳ್ಳಲು ಪ್ರಾರಂಭಿಸಿರುವರು. ಇದಕ್ಕೆ ಕರಾಚಿಯಲ್ಲಿ ನಡೆದ ಮೀಟಿಂಗಿನ ನಿದರ್ಶನವೇ ಸಾಕಾಗಿದೆ. ಈ ಮೀಟಿಂಗಿನ ವೃತ್ತಾಂತವನ್ನು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ. ಅಸಹಕಾರ ಪ್ರಯತ್ನದ ಮೊದಲನೆಯ ಸಾಧನದಂತೆ ಮಿ| ಹರಿಚಂದ್ರರೈ ವಿಶನ್‌ದಾಸ ಹಾಗು ಮಿ| ಕಹಾನಿಯವರು ಲೆಜಿಸ್ಲೇಟಿವ್ ಎಸೆಂಬ್ಲಿಯ ತಮ್ಮ ಸಭಾಸದತ್ವಕ್ಕೆ ರಾಜಿನಾಮೆಯನ್ನು ಕೊಟ್ಟದ್ದು ಮನನೀಯವೆ ಆಗಿದೆ. ಇವರ ರಾಜಿನಾಮೆಯಲ್ಲದೆ ಮಿ| ಜೆ. ಚೌಧುರಿಯವರು ಸಹ ರಾಜಿನಾಮೆಯನ್ನು ಕೊಡಲಿಕ್ಕಿರುವರೆಂದು ವದಂತಿ ಇದೆ. ಈ ರೀತಿ ಒಬ್ಬೊಬ್ಬರು ಸಭಾಸದರು ತಮ್ಮ ಸ್ಥಾನಕ್ಕೆ ರಾಜಿನಾಮೆಯನ್ನು ಕೊಟ್ಟ ಮಾತ್ರದಿಂದ ಅಧಿಕಾರಿಗಳು ತಮ್ಮ ಧೋರಣವನ್ನು ಬದಲಾಯಿಸಲೊಲ್ಲರು. ಅವರ ಕಣ್ಣಿಗೆ ಸರಿಯಾದ ಕಾಡಿಗೆಯನ್ನು ಹಚ್ಚಬೇಕಾದರೆ ಇತರ ಸಭಾಸದರೂ ತಮ್ಮ ಸ್ಥಾನಗಳಿಗೆ ಶರಣು ಹೊಡೆಯುವುದು ಅಗತ್ಯವಲ್ಲವೆ?

೨. ಆಯುರ್ವೇದ ಮತ್ತು ಯುನಾನಿ ಔಷಧಿಗಳ ಕುರಿತು ಶೋಧನಮಾಡಿ ರಿಪೋರ್ಟು ಬರಕೊಳ್ಳಲು ನೇಮಕಪಟ್ಟ ಕಮ್ಮಿಟಿಯು ಈ ದೇಶದ ಜನರಿಗೆ ಔಷಧಿಗಳ ಉಪಚಾರವು ಸಮಗ್ರವಾಗಿ ದೊರೆಯಬೇಕಾದರೆ ಕಡಿಮೆ ಖರ್ಚು ತಗಲುವುದು. ದೇಶೀಯ ವಿಧಾನಗಳಿಂದಲ್ಲದೆ ಪಾಶ್ಚಾತ್ಯ ವಿಧಾನಗಳಿಂದಲ್ಲವೆಂದು ತಿಳಿಸಿರುವುದನ್ನು ಕಳೆದ ಸಂಚಿಕೆಯಲ್ಲಿ ತಿಳಿಸಿರುವೆವು. ಈಗ ನಮ್ಮ ಜಿಲ್ಲೆಯ ಕಾಸರಗೋಡು ತಾಲೂಕು ಬೋರ್ಡಿನವರು ಬರುವ ಜೂನ್ ತಿಂಗಳಿನಿಂದ ಪೆರ್ಡಾಲಿನಲ್ಲಿ ಪರೀಕ್ಷಾರ್ಥವಾಗಿ ಒಂದು ಆಯುರ್ವೇದಿಕ್ ಔಷಧಾಲಯವನ್ನು ತೆರೆಯಲಿಕ್ಕಿದ್ದಾರೆಂದು ತಿಳಿದು ಸಂತೋಷಪಡುತ್ತೇವೆ. ಇದು ನಮ್ಮ ಜಿಲ್ಲೆಯಮಟ್ಟಿಗೆ ಹೊಸತಾಗಿದ್ದರೂ ಇತರ ಜಿಲ್ಲೆಗಳಲ್ಲಿ ಈ ವಿಧಾನವು ಈ ಮೊದಲೇ ಅನುಷ್ಠಾನಕ್ಕೆ ಬಂದಿದೆ. ಎಲ್ಲಾ ಇಲಾಖೆಯ ಖರ್ಚು ಕಡಿಮೆ ಮಾಡಬೇಕಾಗಿ ಬಂದಿರುವ ಈ ಕಾಲದಲ್ಲಿ ಜನರಿಗೆ ಉಪಯುಕ್ತವಾಗಿ ಪರಿಣಮಿಸುವ ಈ ಕ್ರಮವನ್ನು ಜಾರಿಗೆತರುವುದು ಅಗತ್ಯ ಮತ್ತು ಯುಕ್ತವೆ ಆಗಿದೆ ಎಂದು ಎಲ್ಲರಿಗೂ ತೋರದೆ ಇರದು.

ಮಂಗಳೂರು.

ದಕ್ಷಿಣಕನ್ನಡ ಸಾಹಿತ್ಯ ಸಮ್ಮೇಲನದ ಅಧಿವೇಶನವನ್ನು ಇದೇ ತಿಂಗಳ ೧೯ನೆಯ ತಾರೀಕಿಗೆ ಜರಗಿಸುವ ಬದಲಾಗಿ ಮಂಗಳೂರು ಶಹರಿನ ಹವಾ ಈಗ ಸ್ವಲ್ಪ ಕೆಟ್ಟದ್ದು ಇರುವ ದೆಸೆಯಿಂದಲೂ ಪ್ಲೇಗ್ ಮುಂತಾದ ಅಂಟುರೋಗಗಳು ಅಲ್ಲಲ್ಲಿ ಇನ್ನೂ ಕಾಣಿಸಿಕೊಳ್ಳುವ ದೆಸೆಯಿಂದಲೂ ಬರುವ ಸೆಪ್ಟಂಬರ್ ಅಖೈರಿಗೆ ಜರಗಿಸುವರೆ ಕಾರ್ಯನಿರ್ವಾಹಕ ಕಮ್ಮಿಟಿಯವರು ನಿಶ್ಚಯಿಸುವರೆಂದು ತಿಳಿಯುತ್ತೇವೆ.

ಮಂಗಳೂರು ಮುನ್ಸಿಪಾಲಿಟಿಯ ಇಲೆಕ್ಟರಲ್ ರೋಲು ಪ್ರಕಟವಾಗಿದೆ.

ಕಲೆಕ್ಟರರ ಆಫೀಸಿನ ಇಂಗ್ಲೀಷ್ ಹೆಡ್ ಕ್ಲಾರ್ಕ ಮ. ರಾ. ಎ. ತಿಮ್ಮಪ್ಪ ಪೂಂಜರು ಎರಡು ತಿಂಗಳ ರಜೆಯನ್ನು ಪಡೆದಿರುವರು.

ಮಂಗಳೂರು ಮುನ್ಸಿಪಲ್ ಕೌನ್ಸಿಲರರ ಈ ತಿಂಗಳ ಸಭೆಯು ಬರುವ ತಾ. ೭ನೆಯ ಸೋಮವಾರ ಜರಗುವುದು.

ಮಂಗಳೂರು ಪಟ್ಟಣದಲ್ಲಿ 'ಇಲೆಕ್ಟ್ರಿಕ್ ಲ್ಯಾಟ'ನ್ನು ಒದಗಿಸುವ ಒಂದು ಕಂಪೆನಿಯನ್ನು ಸ್ಥಾಪಿಸಿ ಪಟ್ಟಣದಲ್ಲಿ ಇಲೆಕ್ಟ್ರಿಕ್ ಲ್ಯಾಟನ್ನು ಒದಗಿಸಲು ಮುನ್ಸಿಪಲ್ ಕೌನ್ಸಿಲರರ ಅಪ್ಪಣೆಯನ್ನು ಮೆಸ್ಸರ್ಸ್ ಕಲೆಕಾರ ಬ್ರದರ್ಸರವರು ಕೇಳಿರುವರು.

ಇಲ್ಲಿಯ ಟ್ರೈನಿಂಗ್ ಶಾಲೆಯ ಮಿ| ಪಿ. ಕೊರೆಯಾ ಎಂಬ ಉಪಾಧ್ಯಾಯರು ಟೀಚರ್ಸ್ ಕೊಲೇಜಿನ ಅಸಿಸ್ಟಾಂಟ ಮೆನ್ಯುಯಲ್ ಇನ್ಸ್‌ಟ್ರಕ್ಟರರಾಗಿ ನೇಮಕಪಟ್ಟಿರುವರು.

ಜರ್ಮನರನ್ನು ಮಲಬಾರಿಗೆ ಬರಲು ಬಿಡಬೇಕಾಗಿ ಮಲಬಾರ ಪ್ರೊಟೆಸ್ಟಾಂಟ ಕ್ರೈಸ್ತರು ಸರಕಾರಕ್ಕೆ ಮನವಿಮಾಡಿಕೊಂಡಿರುವರೆಂದು ಕೇಳುತ್ತೇವೆ.

ಸಹಕಾರಿ ಸಂಘಗಳ ಕಾರ್ಯಕಾರಿ ಮೀಟಿಂಗಿನ ನಿರ್ಧಾರದಂತೆ ಸಹಕಾರಿ ಸಂಘಗಳ ಒನರೆರಿ ರಿಜಿಸ್ತ್ರಾರರು, ಯೂನಿಯನ್ನ ಪ್ರತಿನಿಧಿಗಳು, ಸೆಂಟ್ರಲ್ ಬೇಂಕಿನ ಪ್ರತಿನಿಧಿಗಳು ಮೊದಲಾದ ಸಹಕಾರಿಗಳು ಜಿಲ್ಲೆಯ ಆಯಾ ಯೂನಿಯನ್ನ ಮತ್ತು ಇತರ ಸಂಘಗಳನ್ನು ಸಂದರ್ಶಿಸಲು ನಿಶ್ಚಯಿಸಿದ್ದರಷ್ಟೆ. ಆದರೆ ಒನರೆರಿ ಅಸಿಸ್ಟಾಂಟ ರಿಜಿಸ್ತ್ರಾರರನ್ನು ಸರಕಾರಿ ಖರ್ಚಿನಿಂದ ಈ ಸಂದರ್ಶನ ಕಾರ್ಯಕ್ಕೆ ಕಳುಹಿಸಲು ಅನುಕೂಲವಿಲ್ಲವೆಂದು ಅಸಿಸ್ಟಾಂಟ ರಿಜಿಸ್ತ್ರಾರರ ಹುಕುಂ ಬಂದಿರುವುದರಿಂದ ಸಂಘಗಳ ಸಂದರ್ಶನೆಯ ಪರ್ಯಟನ ಕಾರ್ಯವನ್ನು ನಿಲ್ಲಿಸಿಬಿಟ್ಟಿದೆ ಎಂದು ತಿಳಿಯುತ್ತೇವೆ.

ಈ ವರುಷದ ದಶಂಬರ ತಿಂಗಳಲ್ಲಿ ಮಂಗಳೂರ ಪಟ್ಟಣದಲ್ಲಿ ವಸ್ತು ಪ್ರದರ್ಶನವನ್ನು ನಡಿಸಬೇಕಾಗಿ ಡಿಸ್ಟ್ರಿಕ್ಟ್ ಎಡ್ವಾನ್ಸಮೆಂಟ್ ಎಸೋಸಿಯೇಶನಿನವರು ನಿಶ್ಚಯಿಸಿರುವರು.

ಮಂಗಳೂರು ತಾಲೂಕಿನಲ್ಲಿರುವ ಮತ್ತು ಇತರ ಕಡೆಗಳಲ್ಲಿನ ಪಂಚಮರ ಶಾಲೆಗಳ ಕರೆಸ್ಪೊಂಡೆಂಟರಾಗಿ ಮಿ| ಎಮ್. ಎಸ್. ಏಕಾಂಬರರಾಯರು ನೇಮಕಪಟ್ಟಿರುವರು.

ಇದೇ ಬರುವ ಜೂನ್ ತಾರೀಕು ೧ರಿಂದ ಬೋಳಾರ ಸಬ್ ಪೋಸ್ಟಾಫೀಸನ್ನು ಎಕ್ಸಟ್ರಾ ಡಿಪಾರ್ಟಮೆಂಟಲ್ ಬ್ರೇಂಚ್ ಆಫೀಸಾಗಿ ಮಾಡಲಾಗುವುದೆಂದು ಟಪ್ಪಾಲ್ ಇಲಾಖೆಯವರು ತಿಳಿಸಿರುವರು.

ನಮ್ಮ ಜಿಲ್ಲೆಯಲ್ಲಿ ತಿಲಕ ಸ್ವರಾಜ್ಯ ಫಂಡಿಗೆ ಮಂಗಳೂರ ತಾಲೂಕು ರೂ. ೨,೬೫೪, ಉಡುಪಿ ತಾಲೂಕು ರೂ. ೧,೫೦೦, ಕಾರ್ಕಳ ತಾಲೂಕು ರೂ. ೯೦೦, ಕುಂದಾಪುರ ತಾಲೂಕು ರೂ. ೧,೦೦೦, ಕಾಸರಗೋಡು ತಾಲೂಕು ರೂ. ೮೦೦ ಪುತ್ತೂರು ರೂ. ೧,೦೦೦ ವಂತಿಗೆಯಾಗಿದೆ. ಸ್ವಯಂಸೇವಕರು ಮಂಗಳೂರು ತಾಲೂಕು ೮೪, ಉಡುಪಿ ತಾಲೂಕು ೩೦, ಕಾರ್ಕಳ ತಾಲೂಕು ೩೫, ಕುಂದಾಪುರ ತಾಲೂಕು ೧೫, ಕಾಸರಗೋಡು ತಾಲೂಕು ೩೨, ಪುತ್ತೂರು ೯.

ಕದ್ರಿ ಯುವಕರ ಸಂಘದ ವಾಚನಮಂದಿರವು ಇದೇ ತಿಂಗಳ ೧ನೇ ತಾರೀಕಿನಿಂದ ಸದ್ಯಕ್ಕೆ ಕದ್ರಿ ಕಾಲಾಕಟ್ಟೋಣದಲ್ಲಿ ತೆರೆಯೋಣಾಗಿಯದೆ. ಮೂರು ದಿನಚರಿ, ಐದು ಸಾಪ್ತಾಹಿಕ ವರ್ತಮಾನ ಪತ್ರಗಳೂ ಎರಡು ಮಾಸಿಕ ಪತ್ರಗಳೂ ಈಗಲೇ ಓದಲಿಕ್ಕೆ ದೊರಕುತ್ತವೆ. ಸಂಘಕ್ಕೆ ಸದಸ್ಯರಾಗಲು ಅನುಮತಿಕೊಟ್ಟವರು ೧೦೦ಕ್ಕೆ ಮಿಕ್ಕಿರುವರು.

ಸ್ಕೂಲ್‌ಫೈನಲ್ ಪರೀಕ್ಷೆ ಕೊಟ್ಟ ಕದ್ರಿ ಯುವಕರಾದ ಜೋನ್ ಎ. ಎಲ್. ಡಿ'ಸೋಜ ಮತ್ತು ಜೋನ್ ಆರ್. ಸಿಲ್ವ ಎಂಬ ಇಬ್ಬರು ಯುವಕರು ನಿನ್ನೆಯಿಂದ ಕದ್ರಿಯಲ್ಲಿ ರಾತ್ರಿಶಾಲೆಯನ್ನು ಪ್ರಾರಂಭಿಸಿರುವರು. ಕನ್ನಡ ಅರಿಯದವರಿಗೆ ಕನ್ನಡವನ್ನೂ ಇಂಗ್ಲಿಷ್ ತಿಳಿಯದವರಿಗೆ ಇಂಗ್ಲೀಷು ಭಾಷೆಯನ್ನೂ ಕಲಿಸುವರು. ಕ್ಲಾಸುಗಳು ಕದ್ರಿಶಾಲೆಯಲ್ಲಿ ಸಾಯಂಕಾಲ ೬-೩೦ ಘಂಟೆಯಿಂದ ೮ ಘಂಟೆ ವರೆಗೆ ನಡಿಸಲ್ಪಡುವುವು. ಸಂಬಳ ತಿಂಗಳು ೧ಕ್ಕೆ ರೂ. ೦—೮—೦ ಮಾತ್ರ.

ಮದರಾಸು ಪಟ್ಟಣವನ್ನು ಸಂದರ್ಶಿಸಿ ಮಲಬಾರ ಖಿಲಾಫತ್ ಕೊನ್ಫರೆನ್ಸಿಗೆ ದಯಮಾಡಿಸಿದ್ದ ಅಲಿಸಹೋದರರ ಮಾತೆಯಾದ ಬೀ ಅಮ್ಮಾಸಾಹೇಬಾ, ಅವರ ಮೊಮ್ಮಗ ಸಿದ್ದಿಕ್ ಅಲಿ, ಮಿ| ಮುರ್ತುಜಾಸಾಹೇಬ ಮಿ| ಪುಲ್ತಾರಿ ಇವರೆಲ್ಲ ತಲಚೇರಿಯಿಂದ ನಿನ್ನೆ ದಿನ ಸಾಯಂಕಾಲದ ೬ ಗಂಟೆಯ ಮೈಲುಬಂಡಿಯಲ್ಲಿ ನಮ್ಮ ಮಂಗಳೂರು ಪಟ್ಟಣಕ್ಕೆ ಚಿತ್ತಯಿಸಿದರು. ಈ ದಿನವೇ ಇಲ್ಲಿಯ ಕೊಂಗ್ರೆಸ್ ಮತ್ತು ಖಿಲಾಫತ್ ಕಮ್ಮಿಟಿಯವರು ಈ ದೇಶಭಕ್ತರು ಇಲ್ಲಿಗೆ ಬರುವರೆಂಬುದನ್ನು ನೋಟೀಸು ಮೂಲಕ ತಿಳಿಸಿದ್ದರಲ್ಲದೆ ಇವರ ಬರುವಿಕೆಯ ಬೇರೆ ಯಾವ ಪೂರ್ವಸೂಚನೆಯೂ ಇಲ್ಲದೆ ಇದ್ದರೂ ಅನೇಕ ಮಂದಿ ಹಿಂದೂಮುಸಲ್ಮಾನರು ರೈಲ್ವೆಸ್ಟೇಶನಿನಲ್ಲಿ ನೆರೆದಿದ್ದರು. ದೇಶಭಕ್ತರನ್ನೆಲ್ಲಾ ಸ್ವಾಗತಮಾಡಿ ಕರತಂದ ಮೇಲೆ ಇವರನ್ನೆಲ್ಲಾ ಮಿ| ದೋಳಾರ ಶಾಬುಸಾಹೇಬರಲ್ಲಿಗೆ ಕರಕೊಂಡು ಹೋದರು. ಈ ದಿನ ಬೆಳಿಗ್ಗೆ ೮-೩೦ ಗಂಟೆಗೆ ಲೈನುಮೈದಾನಿನಲ್ಲಿ ಸಭೆಸೇರಿ ದೇಶಭಕ್ತರ ಭಾಷಣಗಳಾಗುವುದೆಂದು ಸ್ವಯಂಸೇವಕರು ಡಂಗುರಮೂಲಕ ಸಾರಿದರು. ಅನಂತರ ಸಭೆಯನ್ನು ಮಧ್ಯಾಹ್ನ ಮೂರು ಗಂಟೆಗೆ ಭಾರತಸಂಗೀತ ನಾಟಕಮಂಡಲಿಯ ಥಿಯೇಟರಿನಲ್ಲಿ ಕೂಡಿಸಲಾಗುವುದೆಂದು ತಿಳಿಸಿದ್ದರಿಂದ ಲೈನುಮೈದಾನಿನಲ್ಲಿ ಸೇರಿದ ಜನರು ಚದರಿದರು. ಈ ದಿನ ಮಧ್ಯಾಹ್ನ ಇಲ್ಲಿಯ ಮಸಜೀದಿಯಲ್ಲಿ ಬೀ ಅಮ್ಮನವರು ಇಸ್ಲಾಂ ಧರ್ಮದ ಕುರಿತು ಭಾಷಣ ಮಾಡಿದರು.

ಸಾಯಂಕಾಲ ೪ ಗಂಟೆಗೆ ಭಾರತ ಸಂಗೀತ ನಾಟಕ ಮಂಡಳಿಯ ಥಿಯೇಟರಿನಲ್ಲಿ ಸಭೆ ಸೇರಿತು. ತುಂಬಾ ಜನರು ನೆರೆದಿದ್ದರು. ಪ್ರಥಮದಲ್ಲಿ ಮಿ| ಯಸ್. ಅಲಿಯವರು ಐಕ್ಯತೆ ಮತ್ತು ಅಹಿಂಸೆಯ ಕುರಿತು ಭಾಷಣಮಾಡಿ, ಈ ವಿಷಯದಲ್ಲಿ ಅಕಾಲಿಗಳ ನಿದರ್ಶನವನ್ನು ಕೊಟ್ಟರು. ಅನಂತರ ಮಿ| ಪುಲ್ತಾರಿಯವರು ಲೋಕದ ಇತರ ಜನರು ಹಿಂದೂಸ್ಥಾನದ ಅಹಿಂಸಾತ್ಮಕ ಅಸಹಕಾರ ಚಳವಳದ ಪರಿಣಾಮವನ್ನು ಹೇಗೆ ಕಾದುನೋಡುತ್ತ ಇರುವರೆಂಬುದನ್ನು ತಿಳಿಸಿದರು. ಬಳಿಕ ಮುರ್ತುಜಾ ಹಸನ್ ಸಾಹೇಬರು ಜನರು ಮಹಾತ್ಮಾ ಗಾಂಧಿಯವರು ಮತ್ತು ಅಲಿ ಸಹೋದರರು ನಮಗೆ ತೋರಿಸಿಕೊಟ್ಟ ದಾರಿಯಲ್ಲಿ ನಾವು ನಡೆದರೆ ನಮಗೆ ಸ್ವರಾಜ್ಯವು ಬೇಗನೆ ಲಭಿಸುವುದರಲ್ಲಿ ಸಂದೇಹವಿಲ್ಲವೆಂದು ತಿಳಿಸಿದರು. ಕೊನೆಗೆ ಬೀ ಅಮ್ಮನವರು ಹಿಂದೂ-ಮುಸಲ್ಮಾನರು ಒಂದೇ ತಾಯಿಯ ಮಕ್ಕಳಂತೆ ಹೆಚ್ಚಿನ ಪ್ರೀತಿಯಿಂದಿರಬೇಕು ಎಂದು ಹೇಳಿ, ತಾನು ತನ್ನ ಮಕ್ಕಳನ್ನು ಸಂತೋಷದಿಂದ ತುರಂಗವಾಸಕ್ಕೆ ಕಳುಹಿಸಿದ ಸಂಗತಿಯನ್ನು ತಿಳಿಸಿ, ಅಸಹಕಾರವು ತೋರಿಕೆ ಮಟ್ಟಿಗೆ ಕುಂದಿದಂತೆ ಕಂಡರೂ ನಿಜವಾಗಿ ಅದು ಹಾಗಾಗಲಿಲ್ಲವಾದ್ದರಿಂದ ಜನರು ಭಗ್ನಮನೋರಥರಾಗಲು ಕಾರಣವಿಲ್ಲ, ಒಂದು ವೇಳೆ ಅಂಥ ಅಪಶಕುನದ ಕುರುಹುಗಳು ತೋರಿದರೂ ನಾವು ಇಂಥಾ ಅಶುಭ ಲಕ್ಷಣಗಳನ್ನು ಗಣಿಸದೆ ದೃಢಚಿತ್ತರಾಗಿ ಸ್ವರಾಜ್ಯ ಸಂಪಾದನಾಕಾರ್ಯವನ್ನು ಎಡೆಬಿಡದೆ ಸಾಧಿಸಬೇಕಾಗಿ ನಿವೇದಿಸಿಕೊಂಡರು. ಕೊನೆಗೆ ಖಿಲಾಫತ್ ಮತ್ತು ತಿಲಕ ಸ್ವರಾಜ್ಯ ಫಂಡಿಗೆ ಹಣವನ್ನು ಆದಷ್ಟು ಹೆಚ್ಚು ಕೂಡಿಸಿಕೊಡಬೇಕಾಗಿಯೂ ಸ್ವಯಂಸೇವಕರ ದಳಕ್ಕೆ ಹೆಚ್ಚಿನ ಮಂದಿಗಳು ಸೇರಬೇಕಾಗಿಯೂ ವಿನಂತಿಮಾಡಿಕೊಂಡು ತಮ್ಮ ಭಾಷಣವನ್ನು ಮುಗಿಸಿದರು. ಅನಂತರ ಇವರೆಲ್ಲರೂ ರೈಲುಬಂಡಿಯನ್ನು ಹತ್ತಿ ಇಲ್ಲಿಂದ ತೆರಳಿದರು.

ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಲಿಯವರು ಪುತ್ತೂರಿನಲ್ಲಿ ಒಂದು ನಾಟಕವನ್ನಾಡಿ ರೂ ೫೦ನ್ನು ತಿಲಕ ಸ್ವರಾಜ್ಯ ಫಂಡಿಗೆ ದಾನವಾಗಿ ಕೊಟ್ಟಿರುವರು.

ಪೋಲೀಸ ಸಬ್‌ಇನ್ಸ್‌ಪೆಕ್ಟರ ಮಿ| ಅಮೃತರಾಯರ ಮೇಲಿನ ಮೊಕದ್ದಮೆಯ ತೀರ್ಪು ನಾಳೆ ಕೊಡಲಾಗುವದೆಂದು ಕೇಳುತ್ತೇವೆ.

ದಕ್ಷಿಣ ಕನ್ನಡ.

ಬಂಟವಾಳ:— ತಿಲಕ ಸ್ವರಾಜ್ಯ ಫಂಡಿಗೆ ಹಣವನ್ನು ಕೊಡಿಸುವುದಕ್ಕಾಗಿಯೂ, ಸ್ವಯಂಸೇವಕರನ್ನು ಕೂಡಿಸುವುದಕ್ಕಾಗಿಯೂ ಶ್ರೀಯುತ ಕಾರ್ನಾಡ ಸದಾಶಿವರಾಯರೂ ಶ್ರೀಯುತ ಉಮೇಶರಾಯರೂ ಇಲ್ಲಿಗೆ ಬಂದು ಮನೆ ಮನೆ ಅಂಗಡಿ ಭಂಡಸಾಲೆಗಳಿಗೆ ಹೋಗಿ ತಾ. ೨೭ನೆಯ ಶನಿವಾರ ೪ ಘಂಟೆಯಿಂದ ೬ ಘಂಟೆಯ ಒಳಗೆ ತಿಲಕ ಸ್ವರಾಜ್ಯ ಫಂಡಿಗೆ ರೂ ೨೧೦ನ್ನು ಕೊಡಿಸಿದರು. ಇದರಲ್ಲಿ ವಸೂಲಿ ಬಾಕಿ ಇಲ್ಲ. ದೊಡ್ಡ ದೊಡ್ಡ ಸಾವಕಾರರೂ ಇತರರೂ ಕೂಡಿ ೧೧ ಮಂದಿ ಸ್ವಯಂಸೇವಕರಾದರು. ಡೊಕ್ಟರ್ ಹರ್ಡೀಕರರು ಬಂದ ಸಮಯದಲ್ಲಿ ಕೂಡಿಸಿದ ಮೂರು ಮಂದಿ ಕೂಡಿ ೧೪ ಮಂದಿ ಸ್ವಯಂಸೇವಕರಾದರು. ಇಲ್ಲಿ ಪುನರುಜ್ಜೀವಿಸಲ್ಪಟ್ಟ ಯೂನಿಯನ್ ಕ್ಲಬ್ಬಿನ ವಠಾರದಲ್ಲಿ ಅದೇ ದಿನ ರಾತ್ರೆ ೯ ಘಂಟೆಯಿಂದ ೧೨ ಘಂಟೆ ವರೆಗೆ ಮೇಲಿನ ಇಬ್ಬರು ಮಹಾಶಯರು ಮತ್ತು ಶ್ರೀಯುತ ಪತ್ತುಮುಡಿ ವಾಸುದೇವರಾಯರ ಭಾಷಣಗಳಾದವು. ಸಾಂಪತ್ತಿಕ, ಧಾರ್ಮಿಕ ಮತ್ತು ರಾಜಕೀಯ ಸಂಗತಿಗಳನ್ನು ಹಿಂದೂಸ್ಥಾನದಲ್ಲಿ ಹುಟ್ಟಿದ ಪ್ರತಿ ಒಬ್ಬನೂ ಚೆನ್ನಾಗಿ ವಿಚಾರಿಸಿ ತಿಳುಕೊಳ್ಳಬೇಕೆಂತಲೂ ಭಾಷಣಗಳ ಅಭಿಪ್ರಾಯವಾಗಿತ್ತು. ಇಲ್ಲಿಯ ಸಾವಕಾರ ವಿ. ಎಚ್. ನಾರಾಯಣ ಪೈಗಳವರು ಅಧ್ಯಕ್ಷರಾಗಿದ್ದರು. ಒಬ್ಬ ಹೆಡ್ ಕೊನ್ಸ್ಟೇಬಲರೂ ಇಬ್ಬರು ಕೊನ್ಸ್ಟೇಬಲರೂ ಹಾಜರಿದ್ದರು.

ಬಂಟ್ವಾಳ— ಇಲ್ಲಿಯ ಅಸಿಸ್ಟಾಂಟ್ ಸರ್ಜನರಾದ ಕೆಪ್ಟನ್ ಅನಂತನ್ I. M. S. T. C. ಯವರಿಗೆ ಮದರಾಸು [illegible] ಆಸ್ಪತ್ರೆಗೂ ಅಲ್ಲಿ ಈಗ ಇರುವ ಡಾಕ್ಟರ ಭವಾನಿಶಂಕರರಾಯರಿಗೆ ಇಲ್ಲಿಗೂ ವರ್ಗವಾಗಿಯದೆ. ಆಸ್ಪತ್ರೆಯಲ್ಲಿ ಬೇಕಾದ ನಮೂನೆಯ ಒಳ್ಳೇಯ ಮದ್ದುಗಳು ಕಡಿಮೆಯಾಗಿ ಬಹಳ ಬೇಸರಕ್ಕೆ ಕಾರಣವಾಗಿದೆ. ಕೆಮಿಸ್ಟ ಶೋಪಿನಿಂದ ತೆಗೆದುಕೊಳ್ಳುವ ಎಂದರೆ ಇಲ್ಲಿ ಒಂದಾದರೂ ಕೆಮಿಸ್ಟ ಶೋಪಿಲ್ಲ. ಬಾಳಂತಿ ಮುಂತಾದವರಿಗೆ ಕೊಡಲಿಕ್ಕೆ ಬ್ರಾಂಡಿಯೂ ಸಿಕ್ಕುವದಿಲ್ಲ. ಮಂಗಳೂರಿನಿಂದ ತರಿಸಿದರೆ ಬಂದಲ್ಲಿ ಒಂದುವರೆ ಪಾಲು ಕ್ರಯ ಬೀಳುತ್ತದೆ. ಆದ್ದರಿಂದ ಮಂಗಳೂರಿನ ದೊಡ್ಡ ದೊಡ್ಡ ಕೆಮ್ಮಿಸ್ಟ ಮತ್ತು ಬ್ರಾಂಡಿ ಶೋಪಿನವರು ಇಲ್ಲಿ ಒಂದೊಂದು ಬ್ರೇಂಚನ್ನು ತೆರೆದರೆ ಇಲ್ಲಿಯ ನಿವಾಸಿಗಳಿಗೆ ಪ್ರಯೋಜನವಾಗುತ್ತಿತ್ತು.

ಕಲ್ಲಿಗೆ:— ಇಲ್ಲಿ ಕಳೆದ ತಾರೀಕು ೨೮ನೆ ಶನಿವಾರ ಬೆಳ್ಗೆ ಘಂಟೆ ೧೧ಕ್ಕೆ ಶ್ರೀಯುತ ಕಾರ್ನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ೧೯೨೩ನೆಯ ವರುಷದ ಸಾಧಾರಣ ೫೦೦ ಜನರಿಂದ ಕೂಡಿದ ಮಹಾಸಭೆಯು ಪ್ರಾರ್ಥನೆಯಾಗಿ ಪ್ರಾರಂಭಿಸಲ್ಪಟ್ಟಿತು. ಸಭೆಯವರ ಪೈಕಿ ಯೋಗ್ಯ ೯ ಜನರಿಂದ ಕೂಡಿದ ಹೊಸವರುಷದ ಕಾರ್ಯನಿರ್ವಾಹಕ ಮಂಡಲಿಯು ಸರ್ವಸಮ್ಮತದಿಂದ ಸ್ಥಾಪಿಸಲಾಯಿತು. ಕೂಡಿದ ಮಹನೀಯರಲ್ಲಿ ೭ ಜನರು ಸ್ವಯಂಸೇವಕರಾಗಿ ಸೇರಿದರು. ತಾ. ೩೦ರ ವರೆಗೆ ೮೧ ಜನರು ರಾಷ್ಟ್ರೀಯ ಸಭಾಸದರಾಗಿ ಸೇರಿದರು. ಈ ಕೆಳಗೆ ಹೆಸರು ಕೊಟ್ಟವರು ತಿಲಕ ಸ್ವರಾಜ್ಯನಿಧಿಗೆ ವಾಗ್ದಾನಮಾಡಿರುವರು. ೧. ಶ್ರೀಯುತ ನೆತ್ರಕೆರೆ ಪರಮೇಶ್ವರಹೊಳ್ಳರು ರೂ. ೧೫, ೨. ಕನಪಾಡಿ ರಾಮಪ್ಪಯ್ಯನವರು ರೂ. ೧೦, ೩. ತುಗುರು ಸುಬ್ರಾಯರು ರೂ. ೧೦, ೪. ಪತ್ತುಮುಡಿ ವಾಸುದೇವಯ್ಯ ರೂ ೫, ೫ ನೆತ್ರಕೆರೆ ನರಸಿಂಹಹೊಳ್ಳರು ರೂ ೫, ೬. ಉಳವೂರ್ರು ಅಬ್ದುಲ್ ಖಾದ್ರಿಮುಸ್ರಿಬ್ಯಾರಿ ರೂ ೧, ೭. ಸುಣ್ಣಕಲ್ಲು ಹಮ್ಮದಬ್ಯಾರಿ ರೂ ೧, ೮. ಶ್ರೀಯುತ ತುಂಬೆ ತ್ಯಾಂಪಣ್ಣಶೆಟ್ಟಿ ರೂ ೫, ೯. ನೆತ್ರಕೆರೆ ವೆಂಕಪ್ಪಯ್ಯಹೊಳ್ಳ ರೂ ೧೧, ೧೦. ಮೂ. ಮುಂಡಪ್ಪಮೂಲ್ಯ ರೂ ೧, ೧೧. ರಾಮಯ ಭಂಡಾರಿ ರೂ ೧, ೧೨. ಮುಂಡಚೆ ದೂಮಣ್ಣಶೆಟ್ಟಿ ರೂ ೧. ಒಟ್ಟು ಹಣ ರೂಪಾಯಿ ೬೫॥ ಸಭೆಯು ಫಲಾಹಾರ ಮಂಗಳಗೀತದೊಂದಿಗೆ ವಿಸರ್ಜಿತವಾಯಿತು.

ಪೆರ್ಡಾಲ:— ಕಳೆದ ಮಾರ್ಚಿ ತಿಂಗಳಲ್ಲಿ ಜರುಗಿದ ಕಾಸರಗೋಡು ತಾಲೂಕು ಬೋರ್ಡು ಮೀಟಿಂಗಿನಲ್ಲಿ ಇಲ್ಲಿ ಪರೀಕ್ಷಾರ್ಥವಾಗಿ ಒಂದು ಆಯುರ್ವೇದಿಕ್ ಆಸ್ಪತ್ರೆಯನ್ನು ಇದೆ ಬರುವ ಜೂನ್ ೧ನೆಯ ತಾರೀಕಿನಿಂದ ತೆರೆಯುವರೆ ಹಣ ಸೆಂಕ್ಷನ್ ಮಾಡಿರುತ್ತಾರೆ. ಬೇರೆ ತಾಲೂಕು ಬೋರ್ಡಿನವರು ಆಲೋಚಿಸುತ್ತಾ ಇರುವಾಗ ಕಾಸರಗೋಡು ತಾಲೂಕು ಬೋರ್ಡು ಇದನ್ನು ಜಾರಿಮಾಡಲು ನಿರ್ಧರಿಸಿತು.

ಮಂಜೇಶ್ವರ:— ಪೆರ್ಡಾಲಿನಲ್ಲಿ ಆಯುರ್ವೇದಿಕ್ ಆಸ್ಪತ್ರೆ ತೆರದ ಹಾಗೆಯೆ ಮಂಜೇಶ್ವರ ಹೊಳೆಗೆ ಒಂದು ಸಂಕ ಮಾಡಿಸಿದರೆ ಪ್ರೆಸಿಡೆಂಟರ ಹೆಸರು ಆಚಂದ್ರಾರ್ಕವಾಗಿ ಉಳಿಯುತ್ತಿತ್ತು.

ಸಂಪಾಜೆ:— ಇಲ್ಲಿನ ಪೋಸ್ಟು ಆಫೀಸು ಕೊಯನಾಡಿಗೆ ಒಯ್ಯಲ್ಪಟ್ಟದ್ದರಿಂದ ಈ ಪ್ರಾಂತದವರಿಗಿದ್ದ ಕಷ್ಟನಷ್ಟಗಳನ್ನು ಪತ್ರಗಳ ಮೂಲಕ ಬರೆಕೊಂಡಿದ್ದೆವು! ಇತ್ತೀಚೆಗೆ ಸಂಪಾಜೆಗೆ ಬರುವುದಾಗಿ ಹುಕುಂ ಹೊರಬಿದ್ದಂತ ವರ್ತಮಾನವಿತ್ತು. ವದಂತಿ ಹೊರಟು ೨ ತಿಂಗಳಾದರೂ ಆಫೀಸು ಬಾರದಿರುವುದು ಶೋಚನೀಯವೆ ಸರಿ. ಆದುದರಿಂದ ಕೂಡಲೆ ಸಂಪಾಜೆಗೆ ಬರುವಂತೆ ಇಲಾಖೆಯವರು ಗಮನಕ್ಕೆ ತೆಕ್ಕೊಳ್ಳುವರಾಗಿ ನಂಬುವ,

ಗ್ರಾಮವಾಸಿ.

ಪೊಳಲಿ:— ಕಳದ ತಾ ೧೯-೪-೧೯೨೩ರಲ್ಲಿ ಶ್ರೀಯುತ ಬಡಕಬೈಲ್ ಪರಮೇಶ್ವರಯ್ಯನವರು ಹೊಸತಾಗಿ ಕಟ್ಟಿಸಿದ "ಶಂಕರಭವನ" ಎಂಬ ಮನೆಯಲ್ಲಿ ಪ್ರವೇಶವಾಗಿ ಮರುದಿನ ಹೋಮ, [illegible] ನಡೆಸಿ ರಾತ್ರೆ ಬಹು ವಿಜೃಂಭಣೆ ಉತ್ಸಾಹದಿಂದ "ನಾಗಮಂಡಲ" ಸೇವೆಯನ್ನು ಭಕ್ತಿಪೂರ್ವಕದಿಂದ ನೆರವೇರಿಸಿದರು. ಬೇರೆ ಬೇರೆ ಕಡೆಯಿಂದ ಸಾವಿರಾರು ಮಂದಿ ಸೇರಿದ್ದರು. ಎಲ್ಲಾ ಕೆಲಸಗಳಿಗೂ ಶ್ರೀಯುತ ಪರಮೇಶ್ವರಯ್ಯನವರು ಸಾಧಾರಣ ಐನೂರು ರೂಪಾಯಿ ಬೆಲೆಯ ಖಾದಿ ಬಟ್ಟೆಯನ್ನೇ ಉಪಯೋಗಿಸಿದರಲ್ಲದೆ ಒಂದು ಚೂರು ಸಕ್ಕರೆಯನ್ನು ಸಹ ತರಿಸಲಿಲ್ಲ. ಎಲ್ಲದಕ್ಕೂ ಬೆಲ್ಲದ ಉಪಯೋಗ. [illegible] ನಿಜವಾದ ದೇಶೋದ್ಧಾರಕರು ಎಲ್ಲರೂ ಇವರಂತೆಯೇ ನಡೆದರೆ ದೇಶದ ಅಭ್ಯುದಯಕ್ಕೆ ತುಂಬಾ ಸಹಾಯವಾದೀತು.

— ಉಪ್ಪಿನ ತೆರಿಗೆ. —

ವೈಸರಾಯರಾದ ರೆಡಿಂಗ ದೊರೆಗಳು ತಮ್ಮ ಸರ್ಟಿಫಿಕೇಶನ ಅಧಿಕಾರ ಬಲದಿಂದ ಉಪ್ಪಿನ ತೆರಿಗೆಯನ್ನು ಇಮ್ಮಡಿ ಮಾಡಿದುದರಿಂದ ಪ್ರಜೆಗಳಲ್ಲಿ ಅತೃಪ್ತಿ ಉಂಟಾಗಿದೆಯಷ್ಟೆ. ಈಗ ಲೆಜಿಸ್ಲೇಟಿವ್ [illegible] ಮೆಂಬರರು ವೈಸರಾಯರ ಈ ಕೃತ್ಯವನ್ನು ನಿಷೇಧಿಸಿ ತಮ್ಮ ಪದವಿಗಳಿಗೆ ರಾಜಿನಾಮೆಯನ್ನು ಕೊಡಲು ಉಪಕ್ರಮಿಸಿರುವರು. ಕಳೆದ ತಾ. ೨೬ನೇ ಗುರುವಾರ ಸಾಯಂಕಾಲ ೬ ಗಂಟೆಗೆ ಕರಾಚಿಯಲ್ಲಿ ಉಪ್ಪಿನ ತೆರಿಗೆಯನ್ನು ನಿಷೇಧಿಸುವುದಕ್ಕಾಗಿ ಒಂದು ದೊಡ್ಡ ಮಹಾಸಭೆಯು ಕರಾಚಿ ಮುನ್ಸಿಪಾಲಿಟಿಯ ಅಧ್ಯಕ್ಷರಾದ ಮಿ| ಜಮ್‌ಶೆಡ್ ಮೆಹ್ತಾರವರ ಅಧ್ಯಕ್ಷತೆಯಲ್ಲಿ ಜರಗಿತು. ಲೆಜಿಸ್ಲೇಟಿವ್ ಎಸೆಂಬ್ಲಿಯ ಸಭಾಸದರೂ ದೇಶದ ಜನರೂ ಉಪ್ಪಿನ ತೆರಿಗೆಯನ್ನು ಹೆಚ್ಚಿಸುವುದು ಬೇಡವೆಂದು ಸ್ಪಷ್ಟವಾಗಿ ತಿಳಿಸಿದರೂ ವೈಸರಾಯರು ಅನಿವಾರ್ಯಕಾಲಗಳಲ್ಲಿ ಉಪಯೋಗಿಸಬೇಕಾದ ತಮ್ಮ ಅಧಿಕಾರವನ್ನು ಈ ತೆರಿಗೆಯನ್ನು ಹೆಚ್ಚಿಸುವುದರಲ್ಲಿ ಉಪಯೋಗಿಸಿ ಉಪ್ಪಿನ ತೆರಿಗೆಯನ್ನು ಇಮ್ಮಡಿ ಮಾಡಿದನ್ನು ಕರಾಚಿಯ ಜನರು ನಿಷೇಧಿಸುತ್ತಾರೆ ಎಂಬ ಠರಾವೂ ಈ ಠರಾವನ್ನು ಪಾರ್ಲಿಮೆಂಟಿಗೆ ಕಳುಹಿಸಬೇಕೆಂಬ ಸೂಚನೆಯೂ ಮೀಟಿಂಗಿನಲ್ಲಿ ಚರ್ಚೆಯಾದ ಬಳಿಕ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾದ ಮಿ| ಶಹಾನಿ ಮತ್ತು ಹರಚಂದ್ರರೈರವರು ತಮ್ಮ ಸಭಾಸದತ್ವಕ್ಕೆ ರಾಜಿನಾಮೆಯನ್ನು ಕೊಡುವರಾಗಿ ತಿಳಿಸಿದರು. ಸಭೆಯಲ್ಲಿದ್ದ ಬಹುಸಂಖ್ಯಾಕ ಅಸಹಕಾರಿಗಳು ಉಪ್ಪಿನ ತೆರಿಗೆಯನ್ನು ಬ್ಯುರೋಕ್ರಸಿ ಸರಕಾರವು ಇಮ್ಮಡಿಯಾಗಿ ವಿಧಿಸಿದ್ದನ್ನು ಅಹಿಂಸಾತ್ಮಕ ಸಾಧನಗಳಿಂದ ವಿರೋಧಿಸತಕ್ಕದ್ದು ಮತ್ತು ಎಲ್ಲಾ ಲೆಜಿಸ್ಲೇಟಿವ್ ಮೆಂಬರರಿಗೆ ತಮ್ಮ ಪದವಿಗೆ ರಾಜಿನಾಮೆಯನ್ನು ಕೊಡುವಂತೆ ಅರಿಕೆಮಾಡಿಕೊಳ್ಳತಕ್ಕದ್ದು ಎಂಬ ಠರಾವನ್ನು ಪಾಸುಮಾಡಿಸಿಕೊಂಡರು. ಈ ಮೀಟಿಂಗಿನಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾದ ಸರ್ ಮೊಂಟೆಗ್ಯು ವೆಬ್, ಮಿ| ಹರ್‌ಚಂದ್ರೈ ವಿಶಿನ್ ದಾಸ ಮಿ| ಶಹಾನಿ ಮೊದಲಾದ ಕರಾಚಿಯ ನಿವಾಸಿಕರಿಂದ ಆಮಂತ್ರಿಸಿದ್ದಾಗಿತ್ತು. ಉಪ್ಪಿನ ತೆರಿಗೆಯ ವಿಷಯವನ್ನು ಕುರಿತು ಲೆಜಿಸ್ಲೇಟಿವ್ ಎಸೆಂಬ್ಲಿಯ ಮನೋಗತವನ್ನು ಇಂಗ್ಲೆಂಡಿನ ಪಾರ್ಲಿಮೆಂಟಿನ ಮುಂದಿಡಲು ಸರ್ ಮೊಂಟೆಗ್ಯೂರವರು ಇಂಗ್ಲೆಂಡಿಗೆ ಹೊರಟುಹೋಗಿರುವರು. ಈ ತೆರಿಗೆ ಏರಿಸಿದನ್ನು ನಿಷೇಧಿಸಿ ಮಿ| ಜೆ. ಚೌಧುರಿಯವರು ಸಹ ಲೆಜಿಸ್ಲೇಟಿವ್ ಎಸೆಂಬ್ಲಿಯ ಸಭಾಸದತ್ವಕ್ಕೆ ರಾಜಿನಾಮೆಯನ್ನು ಕೊಡಲು ನಿಶ್ಚಯಿಸಿರುವರು. ಅಲ್ಲದೆ ಅವರು ಮುಂದಿನ ಚುನಾವಣೆಯಲ್ಲಿ ಉಮೇದುವಾರರಾಗಲು ಇಚ್ಛಿಸುವುದಿಲ್ಲವೆಂದು ವದಂತಿ ಇದೆ.

ಗೌಡ ವಿದ್ಯಾವರ್ಧಕ ಸಂಘ.

ಮಹನೀಯರೇ,

ಬೆಳ್ಳಾರೆ ಮಾಗಣೆ ಕೈಯ್ಯಾರು ಗ್ರಾಮದ ಮಾಡಾವು ಸಂಪಾಜೆ ಮ. ರಾ. ಸುಬ್ಬಪ್ಪ ಗೌಡರಲ್ಲಿ ಮತ್ತು ಸುಳ್ಯ ಕಸಬಾ ಗ್ರಾಮದ ಕ್ಯೊಂಗೋಡಿ ಅಮ್ಮುಗೌಡರಲ್ಲಿ ಕೂಡ ಆದ ಲಗ್ನಗಳಲ್ಲಿ ಗೌಡ ವಿದ್ಯಾ ಸಂಘಕ್ಕೆ ಮೆಂಬರರನ್ನು ಸೇರಿಸುವ ಬಗ್ಗೆ ಒಂದೊಂದು ಸಭೆ ನಡಿಸಿತ್ತು. ಫಲಿತಾಂಶವಾಗಿ ಎರಡು ಲಗ್ನಗಳಲ್ಲಿ ೧೭ ಜನ ಮೆಂಬರರಿಂದ ೫೦೦ ರೂಪಾಯಿ ವಾಗ್ದಾನದ ಮನವಿ ಪತ್ರಗಳು ಬಂದದ್ದಲ್ಲದೆ ವಧೂವರರಿಂದ ವಸೂಲು ಮಾಡುವರೆ ನಿರ್ಧರಿಸಿದ ರೂ. ೨ ಕೂಡ ಸಂಘಕ್ಕೆ ವಸೂಲು ಸಿಕ್ಕಿದ್ದು ಶ್ಲಾಘನೀಯವೆ ಸರಿ. ಈ ಬಗ್ಗೆ ರಾ. ಪೆರ್ಲಂಪಾಡಿ ಸುಬ್ರಾಯ ಗೌಡರ ಪ್ರಯತ್ನ ಸಾರ್ಥಕವಾಯಿತು. ಸ್ವಜಾತಿಯಾಭಿಮಾನಿಗಳೂ ಆಯಾ ಪ್ರಾಂತದಲ್ಲಿ ಆಗುವ ಲಗ್ನಗಳಲ್ಲಿ ಹೋಗಿ ಪ್ರಯತ್ನಿಸಿದರೆ ಎಷ್ಟೊ ಮೆಂಬರರು ಸೇರಿ ನಮ್ಮ ಈ ಸಂಘವು ಬೇಗನೆ ಅಭಿವೃದ್ಧಿ ಹೊಂದುವುದರಿಂದ ಈ ಮೇಲಿನ ಸಂಗತಿಯನ್ನನುಸರಿಸಬೇಕಾಗಿ ಕೋರುತ್ತೇನೆ.

ಸಂಘದ ಅಭಿಮಾನಿ.

ದೇರೆಬೈಲು ಗ್ರಾಮಸ್ಥರ ಕಷ್ಟಗಳ ಪರಿಹಾರ.

ದೇರೆಬೈಲಿನಲ್ಲಿ ಮಲವನ್ನು ಹೂಳಿಡುವ ಸ್ಥಳದಲ್ಲಿ ಇಲ್ಲಿಯ ನಿರಾಶ್ರಿತ ಜನಸಹಾಯಕ ಸಂಘದವರು ನೆಲೆಗೊಳಿಸಿದ ಕೊರಗರಲ್ಲಿ ಎರಡುಮಂದಿ ಜನರು ಸಿಡುಬುರೋಗದಿಂದ ಬಳಲುತ್ತಾರೆ. ಮಂಗಳೂರು ಟೌನಿನಲ್ಲಿ ದಿನೆ ದಿನೆ ಹೆಚ್ಚುತ್ತಾ ಬರುವ ಪ್ಲೇಗುರೋಗದ ಸೋಂಕು ದೇರೆಬೈಲು ಗ್ರಾಮಕ್ಕೆ ಒಯ್ಯೋಣಾಗುವ ಪಟ್ಟಣಿಗರ ಮಲದ ಮೂಲಕ ತಮಗೆ ತಗಲಿ ತಾವೂ ಅದರಿಂದ ಸಂಕಷ್ಟಗಳನ್ನು ಅನುಭವಿಸಬೇಕಾದ ಸಂದರ್ಭವು ಬರಬಹುದೆಂದು ಚಿಂತಿಸಿ ದೇರೆಬೈಲಿನ ನಿವಾಸಿಕರು ತಮ್ಮ ನೆರೆಕರೆಯಲ್ಲಿ ಮಲವನ್ನು ಹೂಳಿಡುವುದನ್ನು ನಿಲ್ಲಿಸಬೇಕಾಗಿ ಗೋಳಾಡುತ್ತಿರುವಾಗ್ಗೆ ಈ ಸಿಡುಬುರೋಗದ ಮಾರಿಯು ಬಂದುದನ್ನು ನೋಡಿ ಅಲ್ಲಿಯ ನಿವಾಸಿಕರಲ್ಲಿ ವಿಶೇಷ ಕಳವಳ ಉಂಟಾಗಿದೆ. ಇದು ವರೆಗೆ ಮಲವನ್ನು ಬಹಳ ಅಸಡ್ಡೆಯಿಂದ ಹೂಣಿಡುವ ಕಾರಣ ದೇರೆಬೈಲು ಗ್ರಾಮಸ್ಥರಿಗೆ ಉಂಟಾಗುತ್ತಿದ್ದ ಕಠಿಣ ದುರ್ವಾಸನೆ ಸೊಳ್ಳೆಬಾಧೆಯು ಸುಮಾರು ಎರಡು ಹಪ್ತೆಗಳ ಮೊದಲು ನಮ್ಮ ತಹಸೀಲ್‌ದಾರರು ಸ್ಥಳತನಿಖೆಗೆ ಹೋದಾಗ್ಗೆ ಕಣ್ಣಾರೆ ಕಂಡು ತಕ್ಕ ರಿಪೋರ್ಟು ಮಾಡಿದ್ದರಿಂದ ಸದರಿ ಮಲಹೂಣಿಡುವ ಕೆಲಸವು ಕ್ರಮಪ್ರಕಾರ ನಡೆಯುವುದರಿಂದ ಮೇಲಿನ ಕಷ್ಟ ಬಹಳ ಮಟ್ಟಿಗೆ ಕಡಿಮೆಯಾಗಿದೆ.

ದೇರೆಬೈಲು ಗ್ರಾಮದ ಸರ್ವೇನಂಬ್ರ ೩೫ನೆಯ ಸ್ಥಳದಲ್ಲಿ ಈಗ ಮಲಮೂತ್ರ ಹೂಳಿಡುವುದನ್ನು ಬೇರೆ ದಿಕ್ಕಿಗೆ ಒಯ್ಯಲಿಕ್ಕೆ ಯೋಗ್ಯವಾದ ಸ್ಥಳವು ಎಲ್ಲಿಯೂ ತಮಗೆ ಕಾಣುವುದಿಲ್ಲವೆಂದು ಮಂಗಳೂರು ಮುನ್ಸಿಪಾಲಿಟಿಯು ಮಾಡಿದ ನಿರ್ಣಯಕ್ಕೆ ಪ್ರತ್ಯುತ್ತರವಾಗಿ ದೇರೆಬೈಲು ಗ್ರಾಮಸ್ಥರ ಕಾರ್ಯಕಾರಿ ಮಂಡಳಿಯು ಸದರಿ ಕೆಲಸಕ್ಕೆ ಯೋಗ್ಯವಾದ ಸ್ಥಳವನ್ನು ದೇರೆಬೈಲು ಗ್ರಾಮಕ್ಕೆ ಸೇರಿದ ಸರ್ವೇನಂಬ್ರ ೩೫ನೆಯ ಸ್ಥಳದಲ್ಲಿ ತಾವು ತೋರಿಸಿಕೊಡುತ್ತೇವೆಂದು ಮಾಡಿದ ಅರ್ಜಿಯ ತನಿಖೆ ಬಗ್ಗೆ ತಹಸೀಲ್‌ದಾರರು ಕಳೆದ ಆದಿತ್ಯವಾರ ದಿವಸ ದೇರೆಬೈಲು ಗ್ರಾಮಕ್ಕೆ ಬಂದು ತನಿಖೆನಡಿಸಿ ಸಮಾಧಾನಪಟ್ಟು ಇದೆ ಬುಧವಾರ ತಾ. ೨೫ನೆಯ ದಿವಸ ಬೆಳ್ಗೆ ತಹಸೀಲುದಾರರು ಕಲೆಕ್ಟರರನ್ನು ದೇರೆಬೈಲು ಗ್ರಾಮಕ್ಕೆ ಕರೆತಂದಿದ್ದರು. ಸರ್ವೇನಂಬ್ರ ೩೫ನೆಯ ಸರಕಾರಿ ಪರಂಬೋಕು ಸ್ಥಳದ ಸುಮಾರು ೬೦ ಎಕ್ರೆಗಳಲ್ಲಿ ಸಮನೆಲವಾಗಿರುವ ಉತ್ತರ ಪಾರ್ಶ್ವದ ಎಂಟು ಎಕ್ರೆ ಸ್ಥಳವು ಯೋಗ್ಯವಾದುದೆಂತಲೂ, ಇನ್ನು ಮುಂದೆ ಹೆಚ್ಚಿಸಲಿಕ್ಕೆ ಆಸ್ಪದವಾಗಿ ಸದರಿ ಸ್ಥಳಕ್ಕೆ ಉತ್ತರದಿಕ್ಕಿಗೆ ಅದಕ್ಕೆ ಅಗ್ರಿಯಾಗಿ ಸರ್ವೇನಂಬ್ರ ೧೨ನೆಯ ಸ್ಥಳದ ೩೫ ಎಕ್ರೆ ಸಮನೆಲವಾಗಿರುವ ಸರಕಾರಿ ಸ್ಥಳವಿದೆ ಎಂತಲೂ ರುಜುಪಡಿಸಲಾಯಿತು.

ಪ್ರಕೃತಕ್ಕೆ ಮಲವನ್ನು ಹೂಳಿಡುವ ಸ್ಥಳದ ರಾಜಮಾರ್ಗದಿಂದ ಹೊಸತಾಗಿ ಚುನಾಯಿಸಿದ ಸರ್ವೇ ನಂಬ್ರ ೩೫ನೆಯ ಸ್ಥಳವನ್ನು ದಾಟಿ ಹೋಗುವ ಈಗ [illegible], ಕಲ್ಲು [illegible] ತುಂಬಿದ ಗಾಡಿಗಳು ಹೋಗುವ ಗಾಡಿರಸ್ತೆಯನ್ನೆ ಸ್ವಲ್ಪ ದುರುಸ್ತಿ ಮಾಡಿದರೆ ಸಾಕೆಂತಲೂ, ಮಲಒಯ್ಯೋಣದ ಬಗ್ಗೆ ಬೇಕಾಗಿರುವ ಅರ್ಧ ಫರ್ಲಾಂಗು ರಸ್ತೆಯನ್ನು ಹೊಸತಾಗಿ ಕಡಿಯುವ ಅವಶ್ಯವಿಲ್ಲವೆಂತಲೂ ಈಗ ಇರುವ ಗಾಡಿ ರಸ್ತೆಯು ಸಣ್ಣ [illegible] ಮಲ ಒಯ್ಯುವ ಲಾರಿಗಳಿಗೆ [illegible] ಕಾರಣವಾದರೆ ಮದರಾಸು, ಕಲ್ಲಿಕೋಟೆ, ಪಟ್ಟಣಗಳಲ್ಲಿ ನಡೆಯುವ ಪದ್ಧತಿ ಪ್ರಕಾರ ಮಂಗಳೂರು ಮುನ್ಸಿಪಾಲಿಟಿಯು ಕೂಡ ಎತ್ತಿನ ಗಾಡಿಗಳನ್ನು ಇಡಬಹುದೆಂತಲೂ ತಹಸೀಲುದಾರರು ಪಟ್ಟ ಅಭಿಪ್ರಾಯವನ್ನು ಕಲೆಕ್ಟರ ದೊರೆಗಳ ಮುಂದೆ ಇಡಲಾಯಿತು.

ಪಟ್ಟಣದ ಮಲವನ್ನು ಹೂಳಿಡುವ ಸ್ಥಳದ ಸಮೀಪದ ಉಳಕೊಳ್ಳುವುದು ಅನಾರೋಗ್ಯಕರವೂ ಅಪಾಯಕರವೂ ಎಂದು ನಿರ್ಣಯಿಸಲ್ಪಟ್ಟು ಇದೇ ದೇರೆಬೈಲು ಗ್ರಾಮಕ್ಕೆ ಸೇರಿದ ಸರ್ವೇನಂಬ್ರ ೩೫ನೆಯ ಸ್ಥಳವನ್ನು [illegible] ಪಕ್ಷಕ್ಕೆ ದಾಖಲುಮಾಡಿ ಅದರ ದಕ್ಷಿಣ ಪಾರ್ಶ್ವದ ನಾಲ್ಕು ಎಕ್ರೆ ಸ್ಥಳವನ್ನು ತಹಸೀಲುದಾರರು ಪ್ರತ್ಯೇಕಪಡಿಸಿ ಕೊರಗರ ಬಗ್ಗೆ ನಿರಾಶ್ರಿತ ಜನಸಹಾಯಕ ಸಂಘದವರಿಗೆ ಕಲೆಕ್ಟರು ದೊರೆಗಳವರಿಂದ ಕೊಡಿಸಿದರು. ಸದರಿ ಸಂಘದ ಕಾರ್ಯದರ್ಶಿಯವರಾದ ಶ್ರೀಯುತ ಏಕಾಂಬರಾಯರು ಕೂಡಲೆ ಇದರಲ್ಲಿ ಕೆಲಸ ತೊಡಗಿಸಿ ಈ ಬಡ ಕೊರಗರ ಕುಟುಂಬಗಳನ್ನು ಕೂಡಲೆ ಅಲ್ಲಿ ವಾಸಿಸುವಂತೆ ಮಾಡಬೇಕಾಗಿ ಸಹ ಹುಕುಂ ಕೊಡೋಣಾಯಿತು.

ಗ್ರಾಮಸ್ಥ.

ದೇಶಬಂಧು ದಾಸರು ಬಂದು ಪತ್ರಿಕೆಯ ಪ್ರತಿನಿಧಿಗೆ ಭೇಟಿಯಾದಾಗ ಹೇಳಿದ ವಿಷಯಗಳ ಸಾರಾಂಶ.

"ನಾನು ಪಂಜಾಬಿಗೆ ಮೊದಲನೆಯ ಬಾರಿ 'ಕೊನ್‌ಫೆರೇಶನ್' ಮತ್ತು 'ಟ್ರೇಡ್ ಯೂನಿಯನ್' ಕೊಂಗ್ರೆಸು ಸಮಾರಂಭಗಳ ವೇಳೆಯಲ್ಲಿ ಅವುಗಳ ಅಧ್ಯಕ್ಷತೆಯನ್ನು ವಹಿಸಿಕೊಂಡು ಅಲ್ಲಿಗೆ ಹೋದಾಗ ಅಲ್ಲಿ ಹಿಂದೂ-ಮುಸಲ್ಮಾನರೊಳಗೆ ಇಷ್ಟು ತೀವ್ರವಾದ ದ್ವೇಷವು ಇರಬಹುದೆಂದು ಎಂದೂ ಯೋಚಿಸಲಿಲ್ಲ. ಆದರೆ ಅಲ್ಲಿಯ ಪರಿಸ್ಥಿತಿಯನ್ನು ಸಮಾಧಾನಗೊಳಿಸುವ ಬಗ್ಗೆ ನನಗೆ ಅಲ್ಲಿ ನಿಲ್ಲಬೇಕಾಯಿತು. ಹಿಂದೂ-ಮುಸಲ್ಮಾನರಲ್ಲಿ ರತಕ್ಕ ವಿದ್ಯಾವಂತರೆ ಪ್ರತಿಯೊಂದು ಸಂಗತಿಯನ್ನು ತಮ್ಮತಮ್ಮ ಜಾತಿಯ ದೃಷ್ಟಿಯಿಂದಲೆ ನೋಡಿಕೊಳ್ಳುತ್ತಾರೆಂಬ ಸಂಗತಿಯನ್ನು ಈ ಸಂದರ್ಭದಲ್ಲಿ ತಿಳಕೊಂಡೆನು. ಲೆಜಿಸ್ಲೇಟಿವ್ ಕೌನ್ಸಿಲ್, ಮುನ್ಸಿಪಾಲಿಟಿ, ಡಿಸ್ಟ್ರಿಕ್ಟ ಬೋರ್ಡು, ಯುನಿವರ್ಸಿಟಿ ಮತ್ತು ಇತರ ಸರಕಾರಿ ಹುದ್ದೆಗಳಲ್ಲಿ ಸೇಕಡಾ ೫೦ರ ಮೇರೆಗೆ ಸೀಟುಗಳು ತಮಗೆ ಸಿಕ್ಕಬೇಕೆಂದು ಮುಸಲ್ಮಾನರು ಹಕ್ಕು ಕೇಳುವರು. ಆದರೆ ಲಕ್ನೌ ಪಂಚಾಯ್ತಿಯ ಆಧಾರದ ಮೇಲೆ ಮುಸಲ್ಮಾನರು ಸೇಕಡಾ ೫೦ರಂತೆ ಹುದ್ದೆಗಳನ್ನು ಹೊಂದಲು ಭಾಗಿಗಳಾಗಿದ್ದಾಗ್ಲೂ ಈಗ ಸಿಕ್ಖ ಜನರು ಸಾಧಾರಣ ಸೇಕಡಾ ೪೦ರಂತೆ ಹಕ್ಕನ್ನು ಕೇಳುವಾಗ ಹಿಂದುಗಳ ಅಂಬೋಣವೇನೆಂದರೆ, ಮುಸಲ್ಮಾನರ ಭಾಗವನ್ನು ಇನ್ನಷ್ಟು ಕಡಿಮೆ ಮಾಡಬೇಕು, ಇಲೆಕ್ಟರೇಟುಗಳನ್ನು ಬೇರೆ ವಿಂಗಡಿಸಬಾರದು ಹಾಗು ಸರಕಾರಿ ಹುದ್ದೆಗಳನ್ನು ಸಹಾ ಜಾತಿವಾರು ಮೇರೆಗೆ ವಿಂಗಡಿಸಬಾರದೆಂದಾಗಿದೆ.

ಆದರೆ, ಈ ವಿಚಾರಗಳಲ್ಲಿ ಹೆಚ್ಚಿನ ಮಹತ್ವ ತೋರಿಸಿಕೊಳ್ಳುತ್ತಿದ್ದ ಜನರ ಸಂಖ್ಯೆಯು ಅಲ್ಪವಾಗಿರುತ್ತದೆ. ಈ ವಿದ್ಯಾವಂತರೆನ್ನಿಸಿಕೊಳ್ಳುತ್ತಿರುವವರಿಂದ ಜನಸಾಮಾನ್ಯವು ಮೋಸಹೋಗುತ್ತಿದೆ, ಮತ್ತು ಬ್ಯುರೋಕ್ರಸಿಯು ಈಗಿನ ವಿದ್ಯಮಾನಗಳಿಂದ ಬಹಳ ಪ್ರಯೋಜನಗಳನ್ನು ಸಂಪಾದಿಸಿಕೊಳ್ಳುತ್ತಿದೆ.

"ಇದಕ್ಕೆಲ್ಲಾ ವರ್ತಮಾನ ಪತ್ರಿಕೆಗಳೆ ಕಾರಣವಾಗಿವೆ. ಇತ್ತಂಡದ ಪತ್ರಿಕೆಗಳು ಇಲಿಯನ್ನು ಹುಲಿಯಂತೆ ಬರೆದು, ಸಾಮಾನ್ಯರ ಮನಸ್ಸನ್ನು ವಿಕೋಪಕ್ಕೆ ಏಳುವಂತೆ ಮಾಡುತ್ತಿದ್ದವು. ಮಲಬಾರ ಮತ್ತು ಮುಲ್ತಾನದಲ್ಲಿ ನಡೆದ ಸಂಗತಿಗಳನ್ನು ಅತಿಶಯೋಕ್ತಿಯಲ್ಲಿ ಬರೆದು ಹಿಂದೂ ಜನಸಾಮಾನ್ಯದ ಮನಸ್ಸನ್ನು ವಿಕಾರಗೊಳಿಸುವುದು ನಡೆಯುತ್ತಿತ್ತು. ಮುಸಲ್ಮಾನರನ್ನು ಹಿಂದೂ ಮತಕ್ಕೆ ಮತಾಂತರಗೊಳಿಸುವುದು ನ್ಯಾಯವೆಂದೂ ಅಲ್ಲದೆ ಸಂಗಠಂ ಎಂಬ ಚಳವಳ ಹೂಡಿಕೊಂಡು ತಮ್ಮ ಮತವನ್ನು ಭದ್ರಗೊಳಿಸುವುದು ನ್ಯಾಯವೆಂದೂ ಹಿಂದೂಗಳು ಪ್ರತಿಪಾದಿಸುವರು.

ಮಲಬಾರ ಮತ್ತು ಮುಲ್ತಾನದ ವಿಷಯ ಹಿಂದೂಗಳು ಆಡುವ ಅಲ್ಲಸಲ್ಲದ ಮಾತುಗಳಿಂದ ಮುಸಲ್ಮಾನರು ಕೂಡ ರೇಗುತ್ತಿದ್ದರು. ಮುಸಲ್ಮಾನರನ್ನು ಮತಾಂತರಗೊಳಿಸುವುದಕ್ಕೆ ಶುದ್ಧಿ ಸಂಸ್ಕಾರವು ಒಂದು ನ್ಯಾಯ ಸಮ್ಮತವಲ್ಲದ ಉಪಾಯವೆಂದು ಮಹಮ್ಮದೀಯರು [illegible] ಕೊಳ್ಳುವರು. ಸಂಗಠಂವೆಂಬುದು ಇಸ್ಲಾಮು ಮತವನ್ನು ಕೆಡಿಸುವುದಕ್ಕೆ ಹೊರಟ ಒಂದು ಚಳವಳವು ಎಂದು ತಿಳಕೊಳ್ಳುತ್ತಿದ್ದರು. ಇದರ ಪರಿಣಾಮಾರ್ಥವಾಗಿ ಮುಸಲ್ಮಾನರು ಕೂಡ ತಮ್ಮೊಳಗೆ ಕಟ್ಟುಗಳನ್ನು ರಚಿಸಿದರು ಮತ್ತು ಅವರ ಮತಪ್ರಸಾರಣೆಯ ಉತ್ಸಾಹವು ದಿನೇ ದಿನೇ ಪ್ರವರ್ಧಮಾನವಾಯಿತು. ಪತ್ರಿಕಾಕರ್ತರ ಮನೋಭ್ರಮೆಗಳ ಉಪಟಳವನ್ನು ನಾಶಗೊಳಿಸುವುದಕ್ಕಾಗಿ ನಾವು ಪತ್ರಿಕಾಕರ್ತರ ಒಂದು ಸಂಘವನ್ನು ಸ್ಥಾಪಿಸಿದೆವು. ಸಂಪಾದಕರೂ ಮನೇಜರರೂ ನಮ್ಮ ಈ ಕೆಲಸಕ್ಕೆ [illegible] ಕೊಟ್ಟು ಸಹಾಯಮಾಡಿದ್ದಕ್ಕಾಗಿ ನಾನು ಅವರನ್ನು ಬಹಳ ಅಭಿನಂದಿಸುತ್ತೇನೆ. ಮುಂದಕ್ಕೆ ಪತ್ರಿಕೆಗಳು ಕಲಹಕ್ಕೆ ಕಾರಣಭೂತರಾಗಲಿಕ್ಕಿಲ್ಲವೆಂತ ನನ್ನ ನಂಬಿಕೆಯಾಗಿರುತ್ತದೆ.

ನನ್ನ ಸೂಚನೆಗೆ ಅನುಸಾರವಾಗಿ, ಹಿಂದುಗಳು ಮತ್ತು ಮುಸಲ್ಮಾನರು ಎರಡು ಸಣ್ಣ ಕಮ್ಮಿಟಿಗಳನ್ನು ಸ್ಥಾಪಿಸಿ, ನನ್ನ ಅಧ್ಯಕ್ಷತೆಯಲ್ಲಿ ಅವುಗಳು ಕೂಡಿದವು. ನನ್ನ ಆಪ್ತರಾದ, ಮೋತಿಲಾಲ ನೇಹರು, ಅಬ್ದುಲ ಕಲಾಂ ಆಜಾದ್ ಅಜಮಲ್ ಖಾನ್ ಮತ್ತು [illegible] ಕೂಡ ಕೊಂಗ್ರೆಸು ಪರವಾಗಿ ಹಾಜರಿದ್ದರು. ಈ ಕಮ್ಮಿಟಿಗಳು ಕೆಲವು ದಿವಸ ಸೇರಿದರೂ ಯಾವ ಇತ್ಯರ್ಥಗಳೂ ನಿಶ್ಚಯವಾಗಲಿಲ್ಲ.

ಯಾವ ಇತ್ಯರ್ಥಗಳೂ ಇದುವರೆಗೆ ಆಗದೆ ಇದ್ದರೂ, ನನ್ನ ಸಮಯವು ವ್ಯರ್ಥವಾಗಿ ಕಳೆದುಹೋಯಿತೆಂದು ನಾನು ತಿಳಿಯುವುದಿಲ್ಲ. ಎರಡೂ ಮತಾನುಯಾಯಿಗಳ ದ್ವೇಷದ ತೀವ್ರತೆಯನ್ನು ನಾವು ಕಡಿಮೆಮಾಡಿರುತ್ತೇವೆಂತಲೂ ಅಲ್ಲದೆ ಒಂದು ತಾತ್ಕಾಲಿಕ [illegible] ಬೇಗನೆ ಆಗಬಹುದೆಂತಲೂ ನನ್ನ ನಂಬಿಕೆಯಾಗಿರುತ್ತದೆ. ತಾತ್ಕಾಲಿಕವೆಂದು ನಾನು ಅನ್ನುತ್ತೇನೆ, ಏಕೆಂದರೆ [illegible] ವಿಷಯವನ್ನು ಸ್ವಲ್ಪ ಮಟ್ಟಿಗೆ ತಿದ್ದುಪಡಿಮಾಡಲು ಕೊಂಗ್ರೆಸಿಗೆ ವಿನಂತಿಮಾಡಿಕೊಳ್ಳಬೇಕೆಂಬ ಉದ್ದೇಶದ ಕಾರಣದಿಂದ ನಾನು ತಾತ್ಕಾಲಿಕವೆಂದು ಹೇಳುತ್ತೇನೆ. ಈ ಕೆಲಸವನ್ನು ಮಾಡಿದ್ದಲ್ಲದೆ ನಾವು ಹಲವು ಮಹಾ ಸಭೆಗಳಲ್ಲಿ ಭಾಷಣವನ್ನಿತ್ತೆವು. ಈಗ ಪಂಜಾಬಿನ ವಾತಾವರಣವು ಮುಂಚೆಗಿಂತ ಶಾಂತತರವಾಗಿರುತ್ತದೆ ಎಂತ ನಾನು ಯೋಚಿಸುತ್ತೇನೆ.

ಪತ್ರಿಕೆಯ ಪ್ರತಿನಿಧಿಯು ಕೊಂಗ್ರೆಸು ಬಹುಪಕ್ಷ ಮತ್ತು ಅಲ್ಪಪಕ್ಷದವರೊಳಗಾಗಿರುವ ಒಪ್ಪಂದದ ವಿಷಯ ತಿಳಕೊಳ್ಳಲು ಕುತೂಹಲಪಡಲು ದಾಸರು ಹೀಗೆಂದರು. "ನಾವೆ ನಮ್ಮ ನೂತನ [illegible] ಬರುವ ತಿಂಗಳಿನಿಂದ ಪ್ರಾರಂಭಿಸುವೆವು. ಅಲ್ಲದೆ ಸ್ವರಾಜ್ಯ ಪಾರ್ಟಿಯ [illegible] ತಮ್ಮ ಉಮೇದುವಾರರನ್ನು ಬೇಗನೆ ನಿಶ್ಚಯಿಸುವುದು."

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ನಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ಪ್ರಶಂಸೆಗೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ; ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆ ಆದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ಕವನಗಳ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತ" "ಆತ್ಮಗೀತ" "ದೇವರೆಲ್ಲಿ" ಎಂಬ ಅಂಗಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯಳಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರೀಕ್ಷಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧-೮-೦, ಟಪ್ಪಾಲು ಹಾಸಲು ೦-೪-೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವಪೂರ್ಣ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ.

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರು

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid
up Capital Rs. 300,000—0—0
Reserve and other sinking
Funds „ 205,250—0—0

ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
„ 205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು, ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದರದನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಚಳಿ, ಹವಾ, ಕೆಟ್ಟದಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, [illegible], ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ [illegible], ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅತ್ಯಂತ ಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮-೬-೧೯೨೧) ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯರು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ	0—12—0	ಕಂಪರಾಮಾಯಣ ಹೊಸ ಮುದ್ರಣ	5—0—0
ಸಂತಾಪಕ-ಕಾದಂಬರಿ	0—6—0	ಕಂಪರಾಮಾಯಣದ	
ಚಂದ್ರಮುಖಿ	0—8—0	ಕಥೆ [illegible]	0—12—0
ರಾಜಪುತ್ರರಮಣಿಯರು	0—8—0	S. S. L. C. Kannada Texts	
		ಹರಿದಾಸಿ	0—5—0
[illegible] ಸಣ್ಣ ಕಥೆಗಳು	1—0—0	ಸುಶೀಲೆ	0—6—0
ರಾಜಯೋಗ	1—0—0	ಆದರ್ಶ ಹುಡುಗಿ	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾ ಮಿಶನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,
ಮಂಗಳೂರು.

ಉತ್ತಮ ತರದ ಮಾಲು ಕ್ರಯ ಸುಲಭ

[illegible] 32 ಸಾಮಾನುಗಳ ಸಟ್ಟು 1ಕ್ಕೆ ರೂ. 1—14—0 ಮಧ್ಯಮ 3—0—0, ಉತ್ತಮ ರೂ. 4—8—0, ದೊಡ್ಡದು 5—0—0 ಪೋಸ್ಟು ಖರ್ಚು ಬೇರೆ. ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಮಣಿ, ಬಟ್ಟೆ, ಸಾಲು, ಸೀರೆ, ಶಾಲು, ಕಾಶ್ಮೀರ್ ಶಾಲು, ರುದ್ರಾಕ್ಷಿ, ಸ್ಫಟಿಕಮಣಿ, [illegible] ಮುಂತಾದ ಪದಾರ್ಥಗಳನ್ನು ಬೇಕಾದವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವುದು. ಕ್ಯಾಟಲಾಗ್ ಉಚಿತ.

ವಿಳಾಸ:—
ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪೆನಿ,
[illegible]

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಟಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ. 1—4—0.

ಹುಳದ ವ್ರೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪೆತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ ಮೊಳ ಅಗಲವಿರುವವು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದವು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುವು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 ರೂ. 6—8—0
„ 2 „ 7—8—0

ವಿಳಾಸ:—ಎನ್. ಆರ್. ಕೃಷ್ಣ ಎಂಡು ಕೊ,
1, ತಂಬುನಾಯುಕನ ಬೀದಿ, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶಿವ್ಯಾಪಾರಿ
ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ ರೂ. 3—4—0
ಶೇ. 1 („ 24) „ „ 2—0—0

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು

5 ರಾತ್ತು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ತಿಗೆ ದರ ರೂ. 3-0-0.

ಸ್ವಂತ ಖರ್ಚಿಗೆ ತರಿಸುವವರು ಪೋಸ್ಟ್, ಪೇಕಿಂಗ್ ಚಾರ್ಜು ಕೊಡಬೇಕಾಗುವುದು

ನಶ್ಯ ಒಂದೇ ತರದ್ದು.

ಎಲಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಲೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ವಿಟೋನಿಯಾ ಅಂಡ್ ಕೊ
ಪೋಸ್ಟುಬಾಕ್ಸು ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯ ನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅಮೃತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬರು ತರಿಸಿ ನೋಡಬೇಕೆಂದು ಇದರ ಬೆಲೆ ಕೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು — — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯಿನಾಮಲ್ಲ ಬಟ್ಲೊ ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟೆ, ಖಾಲಿ ಕವರು ಫೌಂಟೆನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಚಿಲ್ಲರೆ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

ಆರ್. ಮಾರ್ಟಿನ್ಸರ ಲಪ್ಪಾ ಎಣ್ಣೆ

ಇದರ ಸುವಾಸನೆಯು, (ಪಂಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷದಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂಡ ರೋಗಗಳು ತಲೆಯುಳ್ಳದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ಸರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಕೀವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ [illegible] ಮೂತ್ರವು ತಿಳಿಯಾಗಿ [illegible]. [illegible] ಔಷಧಿಯು [illegible] ರುಚಿಯಾಗಿಯೂ, [illegible] ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ವಿಳಾಸ:—ಆರ್. ಡಿ. ಕಟೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್ ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

Edited, Printed & Published by V. S. Kamath at the M. T. A. Sharada Press, Mangalore.

Registered No. M. 638.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

SWADESHABHIMANI
MANGALORE.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥

ದೊರೆಯಲನುಪಮರತ್ನಗಳು ಸುರ । ಗರವ ಮಥಿಸಲು ಸುರಂಗಡರಂ ।
ಹರುಷವಾಯಿತೆ! ಮತ್ತೆ ವಿಷವ ಸುಧುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥೧॥

ಪುಸ್ತಕ ೧೭. ಮಂಗಳೂರು, ತಾರೀಕು ೧೧ನೇ ಶುಕ್ರವಾರ ಮೇ ೧೯೨೮. ಸಂಚಿಕೆ ೧೯

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲಿಕ್ಕೆ ಒಪ್ಪಿಸಿದ ಮೂಲಧನ	2,00,000—0—0
ಚಂದಾ ಹಾಕಿ ಎತ್ತಿದ ಮೂಲಧನ	1,54,400—0—0
ಮೌಲ್ಯ ತೆತ್ತ ಮೂಲಧನ	1,94,388—9—11
ಠೇವಣಾತಿಗಳು	3,49,151—12—6
ಇನ್ವೆಸ್ಟ್‌ಮೆಂಟು (1927ನೇ ಇಸವಿಯ) ಸೇಕಡಾ ೮ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	5,12,162—13—2
ರಿಜರ್ವ ಮತ್ತು ಇತರ ಫಂಡುಗಳು	29,149—4—2

ಕಳೆದ 2 ವರುಷಗಳಲ್ಲಿ ಪಾಲುದ್ವಾರರಿಗೆ ಸಾಲಿಯಾನ್ ಸೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತರುವ ಶರ್ತದ ಮೇಲೆ ಸೇಕಡಾ 7ರಿಂದ 7½ ಬಡ್ಡಿಯಲ್ಲಿ ವಿರುವ ಠೇವಣಾತಿಗಳನ್ನು 15 ದಿವಸಗಳ ನೋಟೀಸು ಮೂಲಕ ಸೇಕಡಾ ೬ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾದೆ ಠೇವಣಾತಿಗಳನ್ನು ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಸೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನು ಸೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸ ಬ್ಯಾಂಕು ಠೇವಣಾತಿಗಳನ್ನು, ತಿಂಗಳುಗಟ್ಟಿಯಿಂದ ತರುವ ಕಂತು ಠೇವಣಾತಿಗಳನ್ನು, ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ಕಳಿಸತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತರಬಹುದು.

ಹೆಚ್ಚಿನ ಮಾಹಿತಿ ಸೆಕ್ರಿಟರಿಯವರಿಗೆ ಬರದಲ್ಲಿ ಸಿಕ್ಕುವದು.

ನಡುಂಪಳ್ಳಿ ಆನಂದರಾವ್,
ಸೆಕ್ರಿಟರಿ.

'ನೈಟ್ರೇಟ್ ಒಫ್ ಸೋಡಾ'

ನಿಮ್ಮ ಜಾಮೀನನ್ನು ಸಾರವತ್ತಾಗಿ ಇರಿಸಿ ಬೆಳೆ ಸಮೃದ್ಧಿಯನ್ನು ಪಡೆಯಬೇಕಾದರೆ ಊರ ಗೊಬ್ಬರಗಳ ಜತೆಯಲ್ಲಿ ಸ್ವಲ್ಪ ನೈಟ್ರೇಟ್ ಒಫ್ ಸೋಡಾ ಗೊಬ್ಬರವನ್ನು ಉಪಯೋಗಿಸಿರಿ. ಈ ಸವುಳುಪ್ಪು ಗೊಬ್ಬರವು ಎಲ್ಲಾ ಧಾನ್ಯ ಮುಂತಾದ ಪೈರುಗಳಿಗೂ ಕಬ್ಬಿನ ಬೆಳೆಗೂ ಮತ್ತು ತೆಂಗು ಮೊದಲಾದ ಫಲವೃಕ್ಷಗಳಿಗೂ ಅಗತ್ಯವಿರುವ ನೈಟ್ರೋಜನ್ ವಾಯುವನ್ನು ಚುರುಕಾಗಿ ಒದಗಿಸುವುದು.

ಪರೀಕ್ಷಾರ್ಥವಾಗಿ ಉಪಯೋಗಿಸಬೇಕೆಂದಿದ್ದವರು 2 ರಾತ್ತಲ ಸವುಳುಪ್ಪಿನ ಸೆಂಪಲ್ ಡಬ್ಬಿಯನ್ನು ೦—೮—೦ಯಂತೆಯೂ ಬಂಗಾಲಿ ಮಣ ಒಕ್ಕೆ ರೂ. ೯—೦—೦ಯಂತೆಯೂ ಪಡೆಯಬಹುದು.

ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರಣೆ" ಎಂಬ ಸಚಿತ್ರ ಪಹಿಯನ್ನು ನಮ್ಮಿಂದ ಉಚಿತವಾಗಿ ಪಡೆಯಬಹುದು.

THE DIRECTOR
CHILEAN NITRATE COMMITTEE,
6, Mission Row, CALCUTTA.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಳ್ವಾರು ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಆಂದ್ರ ವ್ರತವಿವೇಕ ಕ್ರಯ ೦—೧೦—೦
ಶೇಕುಫಂಗ „ ೦—೧೨—೦
ಸಂಕ್ಷೇಪಗೀತೆ „ ೦—೧೦—೦

ಲಕ್ಷ್ಮೀನಾರಾಯಣ ಪುರಂತಿತ್ತಾಯರಿಂದ ರಚಿತವಾದ ಸ್ವರಾಜ್ಯ [illegible] ಕ್ರಯಂ —೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ, ಅಂಗದನ [illegible], ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ [illegible] ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ಪದ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೪-೦ ಸ್ಥಳಿಕರಿಗೆ ರೂ ೨-೦-೦. ವಿ. ಪಿ. ಖರ್ಚು ಕೂಡಿ ರೂ. ೩-೦-೦ ಪ್ರಕಟಣೆಗಳ ದರಗಳ ಬಗ್ಗೆ ಪತ್ರದ ವ್ಯವಸ್ಥಾಪಕರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ದೃಂಗಳು. ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫ್ಲೂಟರ ರೂಲುಗಳು, ಇತರ ವಿದ್ಯಾರ್ಥಿಗಳ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫ್ರೋಮುಗಳು, ಪರ್ಮಿಟು ಫ್ರೋಮು, ಕುಂಭಂದಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋಂಡ ಫ್ರೋಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೊಪೆಥಿಕ್, ಹೋಮಿಯೊಪೆಥಿಕ್ ಮತ್ತು ಬಿಕ್ಕು ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪಾಸ್ಟಿಕ್ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಕರಿಗೆ ಬೇಕಾಗುವ ಗೊಬ್ಬರಗಳು.

ಪ್ರಾಶ್ಯಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರ ತೈಲ. ಗಜಕರ್ಣದ ಮುಲಾಮು. ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTAN
Best Indian Pain Balm
Amrutanjan
BOMBAY.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶ್ರಾಪವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ರತಾಪಕಷಾಯ

U. B. DUTT & Co.
CALCUTTA.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳು" ಬರುತ್ತಲಿವೆ. [illegible]

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ 'ಪ್ರತಾಪಕಷಾಯ' ಎಲ್ಲಾ ವಿಧದ [illegible] ಗುಣಪಡಿಸುತ್ತದೆ. [illegible]

ಕ್ರಯ ರೂ. 1—4—0. ಯು. ಬಿ. ದತ್ತ ಕಂಪೆನಿ, ಕಲ್ಕತ್ತಾ [illegible]

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

(ಸ್ಥಾಪಿತವಾದ್ದು 1881)

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಪಡಿಸಲು ಅನುಕೂಲಿಸುವ ಒದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಬಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ೨೬, (ಪತ್ರಿಸ್ಟೇ, ಮದ್ರಾಸ್.

Local Agents: **Raphael & Co,**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಬಣಾಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವವಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರಕೊಳ್ಳಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವವು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಅವುಗಳಿಗೆ ಬದಲಾಗಿ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಬೆಂಡೋಲೆಯು ಸರಕಾರ ಬಳ್ಳಾರಕ್ಕೆ ಸರಿಯಾದ ಒಂದು ವಿಧವಾದ ಲೋಹದಿಂದ ಕಟ್ಟಿರತಕ್ಕದ್ದು. ೭ ಬಿಳೀ ಕಲ್ಲಿನ ಬೆಂಡೋಲೆ ಕ್ರಯ ಜೊತೆ ರೂ. ೩. ೭ ಕೆಂಪು ಹರಳಿನ ಬೆಂಡೋಲೆ ಜೊತೆ ರೂ. ೩-೮-೦.

ಮಹಾರಾಷ್ಟ ಟ್ರೇಡಿಂಗ್ ಕಂಪೆನಿ,
16, ತಿರುಪಳ್ಳಿಬೀದಿ, ಜಿ. ಟಿ. ಮದರಾಸ್.

ಮಾನವ ಜಾತಿಯ ಮರ್ಮಗಳನ್ನು ತಿಳಿಸುವ ಮರ್ಮ ಶಾಸ್ತ್ರ.

ಇದು ಚಿತ್ರಪಟಗಳ ಸಹಿತ ಅಂದವಾದ ಗ್ಲೇಜು ಕಾಗದದಲ್ಲಿ ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿದೆ. ಇದರಲ್ಲಿ ಸ್ತ್ರೀಪುರುಷರುಗಳಿಗೆ ಬೇಕಾದ ಅನೇಕ ರಹಸ್ಯಗಳು ಬಂದಿರುವುವು.

ಕ್ರಯ ಪುಸ್ತಕ ಒಂದಕ್ಕೆ ೦-೧೨-೦.

ಜನರಲ್ ಮೇಲ್ ಆರ್ಡರ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. 282. ಮದರಾಸ್.

ಓಟೊಲಿಲ್ಲಾ ಎಂಬ ಸೆಂಟ್.

ಇದನ್ನು ಒಂದು ಬಟ್ಟೆಗೆ ಹಚ್ಚಿದರೆ ಸೋಗಸಿನ 6-7 ದಿವಸ ವರೆಗೂ ಸುವಾಸನೆಯಾಗಿರುತ್ತದೆ. ಇತರ ಸೆಂಟುಗಳ ಹಾಗೆ ಬಟ್ಟೆಗೆ ಕಲೆಯನ್ನು ಉಂಟುಮಾಡುವುದಿಲ್ಲ.

ಚಿಕ್ಕ 1 ಡಿಸ್ಪ ಬಾಟ್ಲಿಗೆ ರೂ. 1-4-0.
" ½ " " ರೂ. 0-10-0.
ಓಟೊಲಿಲ್ಲ ಸೆಂಟು ಕಾರ್ಡು ದರ್ಜ 1ಕ್ಕೆ ರೂ. 0-12-0.

ನಮ್ಮಲ್ಲಿ ಸುಲಭ ಕ್ರಯಕ್ಕೆ ಸಿಕ್ಕುವ ಇತರ ಸಾಮಾನುಗಳು:—

ಬ್ರಿಟಿಷ್ ಪೋರ್ಟ್ರೇಟ್	1ಕ್ಕೆ	2-0-0
ರೋಲ್ಡು ಗೋಲ್ಡು ರಿಸ್ಟವಾಚು	1ಕ್ಕೆ	8-8-0
ನಿಕಲ್ ರಿಸ್ಟ ವಾಚು	1ಕ್ಕೆ	6-8-0
ಮಹಾತ್ಮಾ ಗಾಂಧಿಯವರ ಫೋಟೋ ಉಂಗರ	1ಕ್ಕೆ	1-8-0

ವಿಳಾಸ:— ರಿಪನ್ ವಾಚ್ ಕಂಪೆನಿ,
1/16ನೇ ನಂಬ್ರ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಸೋರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವದು ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರಸ್ಥಳಗಳಲ್ಲಿ ಏಜಂಟರಾಗಲಿಚ್ಛೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್ಸ್:—

ಜಿ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities, Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs.	150
½ Page Rs. 80. ¼ Page	"	50
2 in. Single Column	"	20
1 in. Single Column	"	15
Name alone in Bold Types	"	5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ಮಾರಾಟಕ್ಕಿದೆ.

ಉಡುಪಿ ಮೂಡನಿಡಂಬೂರು ಗ್ರಾಮ, ಸರ್ವೇ ನಂಬ್ರ [illegible], ಸಬ್‌ಡಿವಿಜನ್ [illegible]ನೇ, ಮತ್ತು [illegible] ವರ್ಷ ಗುರೂಪಾಯಿ [illegible] ಪ್ರಕಾರ ಮೂಲಗೇಣಿ [illegible] ಗೇಣಿ ವ [illegible] ಹಕ್ಕಿನ ಆಸ್ತಿ [illegible] ಸೆಂಟ್ಸ್ [illegible]. ಇದರಲ್ಲಿ ಹಂಚು ಛಾವಣಿಯ ಕಲ್ಲುಪೋಡಿಯ ಮನೆ, ಬಾಗಾಯಿತು ವ ಇತರ ಮರಮಟ್ಟುಗಳು ಕೂಡಾ ಇವೆ. ಈ ಸ್ಥಳ ಉಡುಪಿ ಮಿಶ್ಯನ್ ಕಂಪೌಂಡಿನ ಪಡು[illegible] ರಾಜಬೀದಿಗೆ ಬದಿಯಲ್ಲಿರುತ್ತದೆ. ಬೇಕಾದವರು ರಿಕಾರ್ಡು ವ ಕ್ರಯದ ಅಂದಾಜು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ತಿಳಿಸೋಣಾಗುವುದು.

[illegible] ಎಪ್ರಿಲ್ ೧೯೨೩
ಮಂಗಳೂರು.

S. CH. GOJAR,
Mission Street,
MANGALORE

'ಕವಿ' ಯವರ

ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1918ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತಲ್ 1ರ ರೂ. 2-12-0.
ಸ್ಪೆಶ್ಯಲ್ ರಾತ್ತಲ್ 1ರ ರೂ. 3-0-0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸೆಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶೃತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12-0-0
ಫಿಡಲ್ 1ಕ್ಕೆ " 15-0-0

ಬೇಕಾದವರು 5 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬಾಕ್ಸ್ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೋಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತವೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3-0-0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬಾಕ್ಸ್ ನಂಬ್ರ 65, ಮದರಾಸು.

ಶಾಲಿವಾಹನಶಕೆ ೧೮೪೫ನೆಯ ರುಧಿರೋದ್ಗಾರಿ ಸಂವತ್ಸರದ ಚೈತ್ರ ಬಹುಳ ಶನಿವಾರದಿಂದ ರುಧಿರೋದ್ಗಾರಿ ಸಂವತ್ಸರದ ಅಧಿಕ ಜ್ಯೇಷ್ಠ ಶು[illegible] ಶುಕ್ರವಾರದ ವರೆಗಿನ

ಪಂಚಾಂಗ

(೧೯೨೩ನೆಯ ಮೇ[illegible])

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ.
12	ಶನಿ	[illegible]	[illegible]	ಉ. ಭಾ.	[illegible]	[illegible]	6. 9	6.46
13	ರವಿ	[illegible]	[illegible]	ರೇವತಿ	[illegible]	[illegible]	6. 8	6.46
14	ಸೋಮ	[illegible]	[illegible]	ಅಶ್ವಿನಿ	[illegible]	[illegible]	6. 8	6.46
15	ಕುಜ	●	[illegible]	ಭರಣಿ	[illegible]	೧	6. 8	6.46
16	ಬುಧ	೧	[illegible]	ಕೃತ್ತಿಕಾ	[illegible]	[illegible]	6. 8	6.47
17	ಗುರು	೧	[illegible]	ರೋಹಿಣೀ	[illegible]	[illegible]	6. 7	6.47
18	ಶುಕ್ರ	೨	[illegible]	ಮೃಗಶಿರಾ	[illegible]	[illegible]	6. 7	6.47

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಎಪ್ರಿಲ್)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ [illegible] ಮಳೆ	ಜುಮಲಾ ಮಳೆ.
3	93-3	81-8	—	—
4	94-1	78-6	—	—
5	92-6	77-2	—	—
6	92-8	75-8	—	—
7	92-2	74-1	—	—
8	92-0	74-7	—	0-08
9	91-5	74-1	—	0-07

ಮಂಗಳೂರಿನ ಪೇಟೆ ಧಾರಣೆ

ಜಿನಸು		ಇಂದ	ವರೆಗೆ
		ರೂ. ಅ.	ರೂ. ಅ.
ಹೊಸ ದುಪ್ಪತಿ ಅಕ್ಕಿಮುಡಿ ಒಂದಕ್ಕೆ	...	7- 8	8- 2
ಹೊಸ ಗುಡ್ಡು,	...	6-10	7- 6
ಹೊಸ ರಾಶಿ	...	6- 6	6-10
ಅನ್ವಲ್ ಬೆಳ್ತಿಗೆ "	...	7-14	8-10
ಗುಡ್ಡು ಬೆಳ್ತಿಗೆ "	...	7- 6	7-12
ರಂಗೂನ ಬೆಳ್ತಿಗೆ ಗೋಣಿ ಒಂದಕ್ಕೆ	...	12- 0	13- 0
ಗೋಧಿ ಗೋಣಿ ಒಂದಕ್ಕೆ	...	18- 0	20- 0
ಹುರುಳಿ ಗೋಣಿ ಒಂದಕ್ಕೆ	...	8-4	10- 0
ಕಡಲೆ ಗೋಣಿ ಒಂದಕ್ಕೆ	...	11- 4	12- 0
ತೊಗರಿ ಗೋಣಿ ಒಂದಕ್ಕೆ	...	11- 8	—
ತೊಗರಿಬೇಳೆ ಗೋಣಿ ಒಂದಕ್ಕೆ	...	14- 0	23- 0
ಉದ್ದು ಗೋಣಿ ಒಂದಕ್ಕೆ	...	13- 0	—
ಹೆಸರು ಗೋಣಿ ಒಂದಕ್ಕೆ	...	—	12- 8
ಊರು ಬೆಲ್ಲ ಖಂಡಿ ಒಂದಕ್ಕೆ	...	40- 0	45- 0
ಉಪ್ಪು ಗೋಣಿ ಒಂದಕ್ಕೆ	...	7-10	7-12
[illegible] ಖಂಡಿ ಒಂದಕ್ಕೆ	...	105- 0	115- 0
[illegible] ಖಂಡಿ ಒಂದಕ್ಕೆ	...	39- 0	40- 0
ಎಳ್ಳು ಖಂಡಿ [illegible]	...	45- 0	52- 8
[illegible] ಮುಡಿ ಒಂದಕ್ಕೆ	...	8- 4	9- 0
ಎಳ್ಳು [illegible] ಒಂದಕ್ಕೆ	...	6-12	9- 0
[illegible] ಪೆಟ್ಟಿಗೆ ಒಂದಕ್ಕೆ	...	[illegible]- 0	—
[illegible] ಮುಡಿ ಒಂದಕ್ಕೆ	...	—	8- 0
[illegible] ಮುಡಿ ಒಂದಕ್ಕೆ	...	7- 8	8-12
[illegible] ಒಂದಕ್ಕೆ	...	8- 8	9- 0
[illegible] ಮುಡಿ ಒಂದಕ್ಕೆ	...	4- 8	5- 0
[illegible] ಖಂಡಿ	...	280- 0	287- 0
[illegible] ಖಂಡಿ ಒಂದಕ್ಕೆ, [illegible]	...	175- 0	180- 0
[illegible]	...	160- 0	170- 0
[illegible] ಖಂಡಿ ಒಂದಕ್ಕೆ	...	115- 0	120- 0
[illegible] ಒಂದಕ್ಕೆ	...	67- 0	70- 0
[illegible] ಒಂದಕ್ಕೆ	...	1-14	2- 0
[illegible] ಖಂಡಿ	...	50- 0	65- 0
[illegible] ಒಂದಕ್ಕೆ	...	20-12	23- 0
[illegible] ಮುಡಿ ಒಂದಕ್ಕೆ	...	32- 0	—
[illegible]	...	22- 8	—
[illegible] 1ಕ್ಕೆ	...	20- 0	21-

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 8 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9-0-0

ನಿಮ್ಮ ವಿಳಾಸವನ್ನು ಸರಿಯಾಗಿ ಬರೆದರೆ [illegible] ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಬೇರೆ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4-0-0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ,
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

AMRUTHINE.

An ideal beverage. The best Substitute for Coffee, Tea, and Cocoa.

ಶಕ್ತಿವರ್ಧಕ! **ಅಮೃತೈನ್.** ಆರೋಗ್ಯದಾಯಕ!

ಕಾಫಿ, ಟೀ, ಕೊಕ್ಕೋಗಳಿಗೆ ಬದಲಾಗಿ ಬಾಲವೃದ್ಧರೂ ಸೇವಿಸಬಹುದಾದ "ಅಮೃತೈನ್" ಎಂಬ ಶ್ರೇಷ್ಠ ವರ್ಗದ ಚೂರ್ಣ.

ಇದು ಪರಿಶುದ್ಧವೂ, ಚೈತನ್ಯವರ್ಧಕವೂ ಆಗಿದೆ. ಈ ಚೂರ್ಣವು ರಕ್ತವನ್ನು ಶುದ್ಧಮಾಡಿ, ಶಕ್ತಿಯನ್ನು ಉತ್ಸಾಹವನ್ನು ಹೆಚ್ಚಿಸಿ, ಶರೀರವನ್ನು ಆರೋಗ್ಯ ಸ್ಥಿತಿಯಲ್ಲಿಡುವುದಲ್ಲದೆ, ಅಜೀರ್ಣ, ಮಲಬದ್ಧತೆ ಮತ್ತು ಮಹಾವ್ಯಾಧಿ ಇತ್ಯಾದಿಗಳನ್ನು ನಿವಾರಿಸುತ್ತದೆ. [illegible] ಪಾನವಾಗಿದೆ. ಒಂದು ವಾರ ಉಪಯೋಗಿಸುವುದರಲ್ಲಿ ಇದರ ಗುಣಗಳು ಗೊತ್ತಾಗುವುದು.

6, ಔನ್ಸ್ ಟಿನ್. (120 ಬಟ್ಟಲುಗಳಿಗೆ ಸಾಕಾಗುವಷ್ಟು ಚೂರ್ಣ.) ರೂ. 0-10-6.
2, ಔನ್ಸ್ ಟಿನ್. (40 " ") " 0-4-0.
1, ತೊಲ ಪಾಕೆಟು. (8 ಬಟ್ಟಲುಗಳಿಗೆ) " 0-0-9.

ಪ್ಯಾಕಿಂಗ್ ಮತ್ತು ಪಾರ್ಸೆಲು ಖರ್ಚು ಪ್ರತ್ಯೇಕ.

ವ್ಯಾಪಾರಿಗಳಿಗೆ ಕಮಿಶನ್ ಕೊಡಲ್ಪಡುತ್ತದೆ.

ಬೇಗ! ಪ್ರತಿ ಊರುಗಳಲ್ಲೂ ಏಜಂಟರು ಬೇಕು!

ವಿಳಾಸ:— ಮದ್ರಾಸ್ ಮೈಸೂರು ಟ್ರೇಡಿಂಗ್ ಕಂಪೆನಿ,
ಮೈಸೂರು.

ಮಂಗಳೂರಿನ ಏಜಂಟರು:—

ದಿ. ರಾಯಲ್ ಹಾರ್ಮೋನಿಯಮ್ ಮಾರ್ಟ್,
ರಥಬೀದಿ, ಮಂಗಳೂರು.

NOTICE.

The Samyukta Gowda Saraswat Sabha, Madras will grant a number of scholarships to the total value of Rs. 1000 during the academic year 1923-1924.

The scholarships are tenable for 10 months and will be granted to men or women of the community for prosecuting studies in the lower secondary and high schools, in Arts colleges in the Medical & Engineering colleges and in the case of women to under go training as nurses or teachers.

Applications with testimonials of conduct, poverty and qualification should reach the Hon. Secretary, 25 Harris Road, Mount Road Post, Madras, not later than the 15th June next.

The scholarships are repayable with 4% interest.

25 Harris Road,
Mount Road P. O. Madras.
18th April

M. Keshava Pai,
Hon. Secretary.

ವಿಶ್ವನಾಥ ಹೇರ್ ಆಯಿಲ್.

ಈ ತೈಲವನ್ನು ಆಯುರ್ವೇದ ಸಂಬಂಧವಾದ ಮೂಲಿಕೆಗಳ ಮುಖಾಂತರ ಪ್ರಸಿದ್ಧರಾದ ವೈದ್ಯರಿಂದ ತಯಾರಿಸಲ್ಪಟ್ಟಿದೆ. ಇದನ್ನು ತಲೆಗೆ ಹಚ್ಚಿಕೊಂಡರೆ ಎಂಟು ದಿವಸದ ವರೆಗೂ ಘಮಘಮಿಸುತ್ತಿರುತ್ತದೆ. ಈ ತೈಲವನ್ನು ಉಪಯೋಗಿಸುವುದರಿಂದ ಕೂದಲು ಹೆಚ್ಚಾಗಿಯೂ, ನೀಳವಾಗಿಯೂ ಬೆಳೆಯುತ್ತ, ಉದುರುತ್ತಿರುವ ಕೂದಲುಗಳಿಗೆ ಶಕ್ತಿಯನ್ನು ಉಂಟುಮಾಡುತ್ತ. ಅದರ ಬಣ್ಣವನ್ನು ಹೆಚ್ಚಿಸುತ್ತದೆ. ಇತರ ತೈಲಗಳ ಹಾಗೆ [illegible], ಕೂದಲು ಉದುರಿ ಹೋಗುವುದು ಮುಂತಾದ ದುರ್ಗುಣಗಳಿಲ್ಲದೆ ತಲೆಗೆ ತಂಪನ್ನು, ಮನಸ್ಸಿಗೆ ಉಲ್ಲಾಸವನ್ನು ಉಂಟುಮಾಡುತ್ತದೆ.

ಚಿಕ್ಕ ಸೀಸೆ ಒಂದಕ್ಕೆ ರೂ. ೧-೦-೦.

ಒಟ್ಟಿಗೆ ೩ ಸೀಸೆ ತರಿಸಿಕೊಂಡರೆ ಅಂಚೆವೆಚ್ಚವಿಲ್ಲದೆ ಕಳುಹಿಸಿಕೊಡುತ್ತೇವೆ.

ವಿಳಾಸ:— ರಿಪನ್ ವಾಚ್ ಕಂಪೆನಿ,
22 ಕೃಷ್ಣಪ್ಪ ನಾಯಕರ ಬೀದಿ, ಟ್ರಿಪ್ಲಿಕೇನ್, ಮದರಾಸು.

೧೦-೧೧ ವರ್ಷ ಪ್ರಾಯದ ಕೀರ್ತನ ಕುಮಾರಿಯು.

ಪೂನೆಯಲ್ಲಿ ಈ ವರ್ಷ ಶ್ರೀ ಶಿವಾಜಿ ಮಹಾರಾಜರವರ ಜಯಂತ್ಯುತ್ಸವವು ವಿಶೇಷ ವಿಜೃಂಭಣೆಯಿಂದ ಸಾದರವಾಯಿತು. ಈ ವರುಷ ಅಲ್ಲಿಯ ಶಿವಾಜಿ ಮಂದಿರದಲ್ಲಿ ಮಹಾರಾಜರ ಪ್ರತಿಮೆಯನ್ನು ಸ್ಥಾಪಿಸಿದರು. ಪ್ರತಿಮೆಯು ಪೂರ್ಣ ಸಂಗಮರವರೀ ಕಲ್ಲಿನ ಮೇಲೆ ಕೊರೆದಿದ್ದು, ಉತ್ಕೃಷ್ಟವಾಗಿದೆಂದು ತಿಳಿದುಬರುತ್ತದೆ. ಇದು ಮುಂಬಯಿಯ ಪ್ರಸಿದ್ಧ ಚಿತ್ರಕಾರ ಫಡಕೆಯವರಿಂದ ತಯಾರಿಸಲ್ಪಟ್ಟಿದೆ. ಈ ಉತ್ಸವದಲ್ಲಿ ತಾ. ೩೦-೪-'೨೩ನೆಯ ಶುಕ್ರವಾರ ಸಾಯಂಕಾಲಕ್ಕೆ ಕುಮಾರಿ ಶಾಂತಾಬಾಯಿ ಓಂಕಾರರವರು ಕೀರ್ತನವನ್ನು ಮಾಡಿದರು. ಕೀರ್ತನವು ಸಾಯಂಕಾಲ ೬ ಗಂಟೆಗೆ ಪ್ರಾರಂಭವಾಗಿ ಸಾಧಾರಣವಾಗಿ ೭½ ಗಂಟೆಯ ವರೆಗೆ ನಡೆಯಿತು. ಶ್ರೋತೃವೃಂದವು ಅಸಂಖ್ಯ ನೆರೆದಿತ್ತು. ಕುಮಾರಿ ಶಾಂತಾಬಾಯಿಯವರ ವಯಸ್ಸು ೧೦-೧೧ ವರುಷಗಳಿರಬಹುದು. ಕೃತಿಯು ವಿಶೇಷ ಗಟ್ಟಿ ಇಲ್ಲದಿದ್ದರೂ, ಕೀರ್ತನವು ಮನೋಹರ ಆಗಿದ್ದ ಕಾರಣ ಶ್ರೋತೃಗಳಿಗೆ ತಟ ಕೇಳಬರುತ್ತಿತ್ತು. ಶಾಂತಾಬಾಯಿಯವರ ವರ್ಣನವನ್ನು, ಕೀರ್ತನ ಪದ್ಧತಿಯನ್ನು, ಶೈಲಿ, ನಮನಾದಿಗಳು ಚರಗಾಯಿತು. ಇಷ್ಟು ಸಣ್ಣ ಪ್ರಾಯದಲ್ಲಿ ನಿರ್ಭಯದಿಂದ, ಸ್ಪಷ್ಟವಾಗಿ ಕೀರ್ತನವನ್ನು ವಿಶೇಷ ನಡೆಸುವುದನ್ನು, ಅಭ್ಯಾಸವನ್ನು ಸಮಯೋಚಿತ ವರ್ಣನೆಗಳಿಂದ ಬಿಂಬಿಸುವುದನ್ನು ನೋಡಿ, ಜನರೆಲ್ಲರು ಶ್ಲೈ ಶ್ಲೈ ಎಂದರು.

(ಇಂದುಪ್ರಕಾಶ.)

ತ್ವರೆಮಾಡಿರಿ! ತ್ವರೆಮಾಡಿರಿ!

ಮಾರಾಟಕ್ಕೆ ಸಿದ್ಧವಾಗಿದೆ

ಪಂಡಿತ ಮಂಗಳೂರ ನಾರಾಯಣಾಚಾರ್ಯ
ರಿಂದ ಗಣಿಸಿ ಪರಿಶೋಧಿಸಲ್ಪಟ್ಟ
ರುಧಿರೋದ್ಗಾರಿ ಸಂವತ್ಸರದ

ಪಂಚಾಂಗಗಳು.

ಕಾರಬಾರಿ, ಭಾರತ ಪ್ರೆಸ್ಸ್,
[illegible], ಮಂಗಳೂರು.

— ಜೈಲಿನಿಂದ ಬಿಡುಗಡೆಯಾದ ಅಕಾಲಿಗಳು. —

ಇತ್ತಲಾಗಿ ಬಿಡುಗಡೆಯಾದ ಅಕಾಲಿ ಕೈದಿಗಳಿಗೆ ಒದಗಿದ ಕಷ್ಟಗಳ ಕುರಿತು ಶಿರೋಮಣಿ ಗುರುದ್ವಾರ ಪ್ರಬಂಧಕ ಕಮ್ಮಿಟಿಯವರು ಜಾಹೀರ ಪಡಿಸಿದ ಸಂಗತಿಯ ಸಾರಾಂಶ.

ಕಳೆದ ತಾ. ೨೯ರಲ್ಲಿ ಕೆಂಬೆಲ್‌ಪೂರ್ ಜೈಲಿನಿಂದ ೪೬೨ ಮಂದಿ ಅಕಾಲಿಗಳು ಬಿಡುಗಡೆಯಾದರು. ಸ್ಥಳೀಕ ಸಿಖ್ಖರು ಇವರನ್ನು ಸ್ವಾಗತ ಮಾಡಿ ಅಲ್ಲಿಂದ ಬೀಳ್ಕೊಟ್ಟರು. ಅಮೃತಸರಕ್ಕೆ ಹೋಗುವ ದಾರಿಯಲ್ಲಿ ಇವರು ಪಂಜಾಸಾಹೇಬ್ ಎಂಬಲ್ಲಿ ಅಲ್ಲಿಯ ದೇವಸ್ಥಾನಕ್ಕೆ ಹೋಗಿ ತಮ್ಮ ವಂದನೆಗಳನ್ನು ಅರ್ಪಿಸುವುದಕ್ಕಾಗಿ ಇಳಿದರು. ಈ ಮೊದಲು ಜೈಲಿನಿಂದ ಬಿಡುಗಡೆಯಾದವರು ಸಹ ಇದೇ ರೀತಿಯಾಗಿ ವರ್ತಿಸಿದ್ದರು. ಸೀದಾ ಅಮೃತಸರಕ್ಕೆ ಟಿಕೇಟು ಪಡೆದುದರಿಂದ ೧೦೦ ಮೈಲುಗಳ ಪ್ರಯಾಣವನ್ನು ಮುಗಿಸುವ ಮೊದಲು ರೈಲ್ವೆ ಗಾಡಿಯಿಂದ ಕೆಳಗೆ ಇಳಿಯಬಾರದೆಂದು ಅವರಿಗೆ ಗೊತ್ತಿರಲಿಲ್ಲ. ಮತ್ತು ಹಾಗೆ ವರ್ತಿಸಕೂಡದೆಂದು ಸಹ ಪಂಜಾಸಾಹೇಬದಲ್ಲಿನ ರೈಲ್ವೆ ಅಧಿಕಾರಿಗಳು ಇವರಿಗೆ ತಿಳಿಸಲಿಲ್ಲ. ತಾವು ಕೆಳಗೆ ಇಳಿದ ರಾತ್ರಿಯನ್ನು ಅಲ್ಲಿ ಕಳೆದು ಮರುದಿನ ಸಾಯಂಕಾಲ ಇವರು ಅಮೃತಸರಕ್ಕೆ ಹೋಗುವ ರೈಲ್ವೆ ಬಂಡಿಯನ್ನು ಹತ್ತಲು ಬಂದರು. ಮುಂಚಿನ ದಿನದ ಟಿಕೇಟಿನ ಮೂಲಕವೆ ಪ್ರಯಾಣಮಾಡಲು ಬಿಡಲು ರೈಲ್ವೆ ಇಲಾಖೆಯವರು ಒಪ್ಪಲಿಲ್ಲ. ಆಗ ಪಂಜಾಸಾಹೇಬದ ಮೆನೇಜರರು ಹೊಸ ಟಿಕೇಟುಗಳನ್ನು ಪಡೆದು ಅವರಿಗೆ ಕೊಟ್ಟು ರಾವಲ್ ಪಿಂಡಿಯ ಗುರುದ್ವಾರ ಕಮ್ಮಿಟಿಗೆ ತಂತಿ ಕೊಟ್ಟರು. ಇದರ ಚೌಕಸಿಯ ಬಗ್ಗೆ ಕಮ್ಮಿಟಿಯ ಇಬ್ಬರು ಮೆಂಬರರು ಕಳುಹಿಸಲ್ಪಟ್ಟರು. ಈ ಇಬ್ಬರು ಮೆಂಬರರು ತಂಗಜಾ ಎಂಬಲ್ಲಿ ಇವರನ್ನು ಕಂಡು ಇವರೊಡನೆಯೆ ಹೊರಟರು.

ಈ ಟ್ರೈನು ಬಂಡಿಯು ತಾ. ೩ನೆಯ ಸಾಯಂಕಾಲ ೭-೧೫ ಗಂಟೆಗೆ ರಾವಲಪಿಂಡಿಗೆ ತಲ್ಪಿತು. ರೈಲ್ವೆ ಅಧೀಸರರೂ ಪೋಲೀಸು ಫೌಜೂ ರೈಲ್ವೆ ನಿಲ್ದಾಣದ ಮೇಲೆ ಬಂದು ನಿಂತಿ[illegible] ಎಹೆ ಗಳನ್ನು [illegible] ಯಸ್. ಅಧೀಸರರು ಕೆಲವು ಅಕಾಲಿಗಳ ಟಿಕೇಟುಗಳನ್ನು [illegible] ಆ ಟಿಕೇಟುಗಳನ್ನು ತಮ್ಮ ಸ್ವಾಧೀನವೆ ಇಟ್ಟುಕೊಂಡು ಇವರನ್ನು ಪೋಲೀಸರಿಗೆ ಒಪ್ಪಿಸಿದರು. ಇದನ್ನು ಕಂಡು ಅಕಾಲಿ ಜಠಾದಾರರು ಉಳಿದವರಿಗೆ ರೈಲುಗಾಡಿಯಿಂದ ಕೆಳಕ್ಕೆ ಇಳಿಯಲು ಹೇಳಿದರು. ಅದರಂತೆ ಇವರು ಕೆಳಗೆ ಇಳಿದು ರೈಲ್ವೆ ನಿಲ್ದಾಣದ ಮೇಲೆ ಕುಳಿತು ಹಾಡಲು ಪ್ರಾರಂಭಿಸಿದರು. ಆಗ ರಾವಲ್ ಪಿಂಡಿಯ ಕೆಲವು ಮಂದಿ ಸಿಖ್ಖಗೃಹಸ್ಥರು ಬಂದು ರೈಲ್ವೆ ಅಧಿಕಾರಿಗಳಿಗೆ ಎಲ್ಲ ವಿಷಯವನ್ನು ಸಮಗ್ರವಾಗಿ ತಿಳಿಸಿ, ಈ ಮೊದಲು ಬಿಡುಗಡೆಯಾಗಿ ಬಂದ ಅಕಾಲಿಗಳು ಪಂಜಾಸಾಹೇಬದಲ್ಲಿ ಇಳಿದಾಗ ಅವರನ್ನು ಯಾರೂ ತಡೆಯಲಿಲ್ಲ. ಅಲ್ಲದೆ ಕಳೆದ ಸಾಯಂಕಾಲ ಇವರು ಪಂಜಾಸಾಹೇಬದಲ್ಲಿ ಇಳಿದಾಗ ಮಧ್ಯದಲ್ಲಿ ಇಳಿಯುವುದು ರೈಲ್ವೆ ನಿಬಂಧನೆಗಳಿಗೆ ವಿರೋಧವಾದ ಸಂಗತಿಯೆಂದು ಇವರಿಗೆ ತಿಳಿಸಲಿಲ್ಲ. ಈ ಕಾರಣದಿಂದ ರೈಲ್ವೆ ಅಧಿಕಾರಿಗಳು ಇವರನ್ನು ಈಗ ತಡೆಸುವುದಕ್ಕಿಂತ ಅವರನ್ನು ಅವರವರ ಠಾಣ್ಯಗಳಿಗೆ ಹೋಗಲು ಬಿಡುವುದು ಯುಕ್ತವೆಂದು ತಿಳಿಸಿದರು.

ಅನಂತರ ರಾವಲ್‌ಪಿಂಡಿಯ ಸಿಂಗಸಭೆಯವರು ತಯಾರಿಸಿದ ಊಟವು ಇವರಿಗೆ ರೈಲ್ವೆ ನಿಲ್ದಾಣದಲ್ಲಿ ಒದಗಿಸಿ ಕೊಡಲಾಯಿತು.

ಆ ದಿನ ರಾತ್ರಿ ೧೧ ಗಂಟೆಗೆ ಪೋಲೀಸ ಅಧೀಸರರೂ ರೈಲ್ವೆ ಅಧೀಸರರೂ ಪೋಲೀಸ ಫೌಜಿನೊಡನೆ ಅಲ್ಲಿಗೆ ಬಂದು ಮುಟ್ಟಿದರು. ಆಗ ಅವರು ರೈಲ್ವೆ ನಿಲ್ದಾಣದಲ್ಲಿ ಈ ಅಕಾಲಿಗಳನ್ನು ನೋಡಲು ಬಂದು ಕೂಡಿದ ಜನರಿಂದ ಪ್ಲೇಟ್ ಫೋರ್ಮ್ ಟಿಕೇಟುಗಳನ್ನು ಹಿಂದಕ್ಕೆ ಪಡೆದು ಅವರೆಲ್ಲರನ್ನು ಅಲ್ಲಿಂದ ಹೊರಗೆ ಬಿಟ್ಟರು. ಈ ಕಾಲದಲ್ಲಿ ಪೋಲೀಸರು ಲತ್ತೆಯನ್ನು ಸಹ ಉಪಯೋಗಿಸಿದ್ದರಿಂದ ಕೆಲವರಿಗೆ ಗಾಯವಾಯಿತು. ಅನಂತರ ಈ ಪೋಲೀಸ ಫೌಜು ಅಕಾಲಿಗಳನ್ನು ಜಡಿತಮಾಡಿ ಎಲ್ಲರನ್ನೂ ಬಲಾತ್ಕಾರದಿಂದ ಸ್ಟೇಶನಿನ ಹೊರಗೆ ದೂಡಿಬಿಟ್ಟಿತು. ಅನಂತರ ಎಲ್ಲ ಅಕಾಲಿಗಳು ಟಾಂಗಾ ಗಾಡಿಗಳ ನಿಲ್ದಾಣದಲ್ಲಿ ಕುಳಿತು ಹಾಡತೊಡಗಿದರು.

ಬಳಿಕ ಪೋಲೀಸರೂ ಆಯುಧಪಾಣಿಗಳಾದ ಫೌಜೂ ಬಂದು ತಲ್ಪಿತು. ಇವರು ಈ ಅಕಾಲಿವೀರರನ್ನು ವಿವರಿಸಲಸದಳವಾದ ರೀತಿಯಲ್ಲಿ ಹೊಡೆದ್ದರಿಂದ ಅನೇಕರು ಸ್ಮೃತಿತಪ್ಪಿ ಬಿದ್ದರು. ಅಕಾಲಿಗಳನ್ನು ಹೊಡೆಯಲು ಪ್ರಾರಂಭಿಸುವ ಮೊದಲು ಈ ಸ್ಥಳದಲ್ಲಿ ಮಿ. ಸ್ಮಿತ್ ದೊರೆಗಳೂ ಪೋಲೀಸ ಸುಪರಿಂಟೆಂಡೆಂಟರಾದ ಮಿ. ಬ್ರೌನಿಂಗರೂ ಹಾಜರಿದ್ದರು. ಈ ಸಮಯದಲ್ಲಿ ಅಲ್ಲಿ ಹಾಜರಿದ್ದ ಕೆಲವು ಮಂದಿ ಸಿಖ್ಖಗೃಹಸ್ಥರು ತಾವು ಅಕಾಲಿಗಳಿಗೆ ಅಲ್ಲಿಂದ ತೆರಳಬೇಕಾಗಿ ಬುದ್ಧಿಹೇಳುವೆವಾಗಿ ಮೇಲಿನ ಅಧಿಕಾರಿಗಳೊಡನೆ ತಿಳಿಸಿದರು. ಮತ್ತು ಅಧಿಕಾರಿಗಳು ಪೋಲೀಸ ಹಾಗು ಮಿಲಿಟರಿ ಫೌಜನ್ನು ಅಲ್ಲಿಂದ ಹೋಗಬಿಟ್ಟರೆ ಅಕಾಲಿಗಳು ತಮ್ಮ ಸೂಚನೆಯನ್ನು ಮನ್ನಿಸುವರೆಂದು ಹೇಳಿದರು. ಆದರೆ ಅಧಿಕಾರಿಗಳು ಇದಕ್ಕೆ ಲಕ್ಷ್ಯವನ್ನೆ ಕೊಡಲಿಲ್ಲ. ಗಾಯವನ್ನು ಹೊಂದಿದ ಅಕಾಲಿಗಳನ್ನು ರಾತ್ರಿ ೧೨ ಗಂಟೆಗೆ ಕೆಂಟೋನ್‌ಮೆಂಟ ಗುರುದ್ವಾರಕ್ಕೆ ಒಯ್ಯಲಾಯಿತು. ಈ ಕೆಲಸವನ್ನು ನಡಿಸಲು ಬಂದ ಕೆಲವು ಮಂದಿಗಳನ್ನು ಸಹ ಹೊಡೆದಿರುವನು. ಒಬ್ಬ ಮಹಮ್ಮದೀಯ ಗೃಹಸ್ಥನಿಗೆ ಹೆಚ್ಚಿನ ಗಾಯ ಉಂಟಾಗಿದೆ. ಗಾಯಗೊಂಡ ಇಬ್ಬರು ಅಕಾಲಿಗಳು ಬಹಳ ಕಷ್ಟಸ್ಥಿತಿಯಲ್ಲಿರುವರು. ಉಳಿದವರು ಗುರುಗಳ ದಯೆಯಿಂದ ಸೌಖ್ಯದಲ್ಲಿದ್ದಾರೆ.

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕ ಫಂಡು.

ಸದರಿ ಸಹಾಯಕ ಫಂಡಿಗೆ ಕಳೆದ ಎಪ್ರಿಲ್ ತಿಂಗಳಲ್ಲಿ ಧನ ವಾಗ್ದಾನ ಮಾಡಿದ [illegible] ಕೊಟ್ಟು ಸೇರಿದ ಮಹನೀಯರ ಹೆಸರುಗಳು.

ಮ. ರಾ. ಮುತ್ತಯ ಹೆಗಡೇಯರು ರೂ. ೧೫, ಅಚ್ಚಿನಡ್ಕ ವೆಂಕಟರಾಯರು, ಕಾರಾಡಿ ಶಂಕರನಾರ್ಣಪ್ಪಯ್ಯನವರು, ಬೋಳದೆ ಸೀತಾರಾಮ ಭಟ್ಟರು, ನಾರಂಗಿ ಕೊರಗು ಹೆಗಡೇರು, (ರೂ) ೧೦ರ[illegible], ಕೃಷ್ಣಮಯ್ಯರು, ಪಾಚಪ್ಪಸೆಟ್ಟರವರು, ದೇವುಸೆಟ್ಟರವರು, ಆದಿರಾಜ ಇಂದ್ರರು, ವೇಣೂರು ಶಾಂತಿರಾಜ ಸೆಟ್ಟರವರು, ನಾಯ ಸೂರಪ್ಪಯ್ಯರವರು, ಬೊಂಡಂತಿಲ ವಾಸುದೇವಯ್ಯನವರು, ಪಡ್ಯಾರ ರಾಮರಾವ್ ರೂಪಾಯಿ ೫ರಂತೆಯೂ ಕೂಡಾ ರೂ. ೯೫ ಆಗಿರುತ್ತದೆ. ಕಳೆದ ಎಪ್ರಿಲ್ ತಿಂಗಳಲ್ಲಿ ವಸೂಲು ರೂ. ೨೧೫—೯—೦ ಆಗಿರುತ್ತದೆ.

ಕಂಪನಿ ಆಕ್ಟ್ ಪ್ರಕಾರ ರಿಜಿಸ್ತ್ರಿಯಾದ ಮೇಲಿನ ಸಹಾಯಕ ಫಂಡಿನ ರೂಲ್ಸು ಪ್ರಕಾರ ವರ್ಷಂಪ್ರತಿ ನಡೆಯತಕ್ಕ ೫ನೆಯ ವರ್ಷದ ಮಹಾಸಭೆಯು ವರ್ಷಂತಿ ಮಹೋತ್ಸವವು ಇದೇ ಮೇ ತಾ. ೧೭ನೆಯ ಆದಿತ್ಯವಾರ ೧ ಗಂಟೆ ೧೧ರ ಸಮಯ ಸದರಿ ಮೂಡಬಿದ್ರೆ ಸಹಾಯಕ ಫಂಡಿನ ಆಫೀಸಿನಲ್ಲಿ ಮದ್ರಾಸಿನಲ್ಲಿರುವ ರಾವ್‌ಸಾಹೇಬ್ ಡಾಕ್ಟರ್ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗುವ ಸಮಾರಂಭಗಳಿಗೆ ಸದರಿ ಸಂಘದ ಎಲ್ಲಾ ಡೈರೆಕ್ಟರರೂ ಸಂಘದ ಸದಸ್ಯರೂ ಇತರ ಮಹನೀಯರೂ ವಿದ್ಯಾಭಿಮಾನಿಗಳೂ ಕೂಡಾ ಸರ್ವರೂ ತಮ್ಮ ಇಷ್ಟಮಿತ್ರರೊಡಗೂಡಿ ದಯಮಾಡಿ ಬಂದು ಸದರಿ ಧರ್ಮಕಾರ್ಯದ ಮಹೋತ್ಸವವನ್ನು ನೆರವೇರಿಸಿಕೊಡಬೇಕಾಗಿ ಅಪೇಕ್ಷಿಸುವ,

ವೇಣೂರು ಕೃಷ್ಣಯ್ಯ,
ಸಂಘದ ಕಾರ್ಯದರ್ಶಿ.

ಇನ್ನಾದರೂ ಎಚ್ಚರವಾಗಿರಿ,
ಮತ್ತು
ಕಾರ್ಯಕ್ಕೆ ಉದ್ಯುಕ್ತರಾಗಿರಿ.

(ಡಾ. ನಾ. ಸು. ಹರ್ಡೀಕರ.)

ಗಯಾ ಕಾಂಗ್ರೆಸಿನಲ್ಲಿ ಠರಾಯಿಸಿದ ಪ್ರಕಾರ ಇಡಿ ರಾಷ್ಟ್ರದಲ್ಲಿ ೨೫,೦೦,೦೦೦ ರೂಪಾಯಿಗಳೂ ೫೦,೦೦೦ ಸ್ವಯಂಸೇವಕರೂ ೩೦ನೆಯ ಎಪ್ರೀಲದೊಳಗಾಗಿ ಕೂಡಿಸಿ ಕಾಯಿದೆಭಂಗದ ಸಿದ್ಧತೆಯನ್ನು ಕೊನೆಗಾಣಿಸುವದಿತ್ತು. ಆದರೆ ಈ ಕೆಲಸವು ಎಷ್ಟು ಜೋರಿನಿಂದ, ಉತ್ಸಾಹದಿಂದ, ಮತ್ತು ಪ್ರೇಮದಿಂದ ಆಗತಕ್ಕದ್ದಿತ್ತೊ ಅಷ್ಟು ಅದು ಆಗಲಿಲ್ಲವೆಂದೆನ್ನಲಿಕ್ಕೆ ಈಗ ಏನೂ ಬಾಧೆಯಿಲ್ಲ. ಮಹಾತ್ಮಾ ಗಾಂಧಿಯವರು ೧೯೨೧ನೆಯ ಇಸವಿಯ ಮಾರ್ಚಿ ತಿಂಗಳಲ್ಲಿ ಬೆಝ್ವಾಡ ಶಹರದೊಳಗೆ ಕೂಡಿದ ಓಲ್ ಇಂಡಿಯಾ ಕಾಂಗ್ರೆಸ್ ಕಮ್ಮಿಟಿಯ ಮುಖಾಂತರ, ಇಡಿ ಹಿಂದೂಸ್ಥಾನದಲ್ಲಿ ಮೂರು ತಿಂಗಳಲ್ಲಿ ಒಂದುಕೋಟಿ ರೂಪಾಯಿಗಳನ್ನೂ, ಒಂದುಕೋಟಿ ಸಭಾಸದರನ್ನೂ, ಕೂಡಿಸುವುದೆಂದು ಠರಾವು ಮಾಡಿ ಆ ಕೆಲಸವನ್ನು ಮುಗಿಸಿ, ಇಡಿ ಜಗತ್ತಿಗೆ ತಮ್ಮ ಅದ್ಭುತಶಕ್ತಿಯನ್ನು ತೋರಿಸಿಕೊಟ್ಟರು. ಅವರು ಹಾಕಿಕೊಟ್ಟ ಪಾಠವನ್ನು ತಿಳಿದ ಹಿಂದೀರಾಷ್ಟ್ರವು ಈಗಾದರೂ ಠರಾಯಿಸಿದ ಅವಧಿಯಲ್ಲಿ ತನ್ನ ಕೆಲಸವನ್ನು ಉತ್ಸಾಹದಿಂದ ಮಾಡೀತೆಂದು ನಮ್ಮೆಲ್ಲರ ಮನವರಿಕೆಯಾಗಿತ್ತು. ಆದರೆ ದುರ್ದೈವದಿಂದ ಆ ಸತ್ಪುರುಷನು ಉಂಟುಮಾಡಿದ ಎಲ್ಲಾ ಉತ್ಸಾಹವು ಜನರಲ್ಲಿ ಇಲ್ಲದ ಕಾಗಾಗಿ ಠರಾಯಿಸಿದ ಕೆಲಸವು ಕೊನೆಗಾಣಲಿಲ್ಲ. ಇದರ ಮೇಲಿಂದ ತಿಳಿದುಬರುವುದೇನೆಂದರೆ, ರಾಷ್ಟ್ರದಲ್ಲಿ ಎಲ್ಲ ಜನರನ್ನು ತಮ್ಮ ಅದ್ಭುತ ಮತ್ತು ವಿದ್ಯುಚ್ಛಕ್ತಿಯಿಂದ ಕೂಡಿಸಿಕೊಂಡು ಅವರ ಕಡೆಯಿಂದ ಕೆಲಸಮಾಡಿಸಿಕೊಳ್ಳುವಂಥ ಅದ್ವಿತೀಯ ವ್ಯಕ್ತಿಯು ಈಗ ನಮ್ಮ ದೇಶದಲ್ಲಿ ಇನ್ನೊಂದಿಲ್ಲ. ಅಂತೆಯೆ ನಮ್ಮ ಕೆಲಸವು ಕೊನೆಗಾಣಲಿಲ್ಲೆಂದು ನಾವು ಅನ್ನಬೇಕಾಗಿದೆ. "ಮಹಾತ್ಮಾ ಗಾಂಧಿ"ಯವರು ತುರಂಗದ ಹೊರಗೆ ಬರುವ ವರೆಗಾಗಲಿ ಅಥವಾ ಅಷ್ಟೆ ಯೋಗ್ಯತೆಯುಳ್ಳ ಮತ್ತೊಂದು ವ್ಯಕ್ತಿಯು ಹಿಂದೂಸ್ಥಾನದ ರಾಜಕೀಯ ರಂಗಭೂಮಿಯ ಮೇಲೆ ಬರುವ ವರೆಗಾಗಲಿ ೧೯೨೩ನೆಯ ಇಸವಿಯಲ್ಲಿ ಎಷ್ಟು ಜೋರಿನಿಂದ ಮತ್ತು ಉತ್ಸಾಹದಿಂದ ಕೆಲಸವು ನಡೆಯುವದೊ ಆ ಪ್ರಕಾರ ಕಾರ್ಯವು ಘನ ನಡೆಯಲಿಕ್ಕಿಲ್ಲೆಂದು ನಮ್ಮ ಮನಸ್ಸಿ[illegible].

ನಮ್ಮ ಪ್ರಾಂತದ ಪಾಲಿಗೆ ಒಂದು ಲಕ್ಷ ರೂಪಾಯಿ[illegible] ಎರಡು ಸಾವಿರ ಸ್ವಯಂಸೇವಕರನ್ನೂ ಕೂಡಿಸುವುದು ಬಂದಿತ್ತು. ಈಗಿನ ತನಕ ಠರಾಯಿಸಿದ ಅವಧಿಯಲ್ಲಿ ಕರ್ನಾಟಕದಲ್ಲೆಲ್ಲ ಎಷ್ಟು ರೂಪಾಯಿಗಳು ಕೂಡಿದವು ಎಂಬದು ನಮಗೆ ಗೊತ್ತಿಲ್ಲ. ಆದರೆ ನಾವು ಸ್ವತಃ ಕೈಕೊಂಡ ಕೆಲಸದ ಬಗ್ಗೆ ಮಾತ್ರ ನಮಗೆ ಪೂರ್ತಿ ಮಾಹಿತಿಯು ಇರುತ್ತದೆ. ಈಗಿನ ವರೆಗೆ ಎಂದರೆ ಮೇ ೧ನೆಯ ತಾರೀಕಿನ ತನಕ ಸತತ ಮೂರು ತಿಂಗಳ ವರೆಗೆ ಇಡಿ ಪ್ರಾಂತದಲ್ಲಿ ತಿರುಗಿ ಕೆಲಸ ಮಾಡಿದಾಗ್ಯೂ ಬೇಕಾದ ೨,೦೦೦ ರಾಷ್ಟ್ರಸೇವಕರ ಪೈಕಿ ಕೇವಲ ೭೩೩ ಸ್ವಯಂಸೇವಕರು ದೊರೆತಿರುತ್ತಾರೆ; ಎಂದರೆ ಇನ್ನೂ ೧,೨೬೭ ರಾಷ್ಟ್ರಸೇವಕರನ್ನು ದೊರಕಿಸಬೇಕಾಗಿದೆ. ಇದರ ಮೇಲಿಂದ ನೋಡುತ್ತಿರಲಾಗಿ ಜನರಲ್ಲಿ ರಾಷ್ಟ್ರಸೇವೆಯನ್ನು ಮಾಡುವ ತಯಾರಿಯೂ ಇನ್ನೂ ತೀರ ಕಡಿಮೆ ಇರುತ್ತದೆಂದು ಕಂಡುಬರುತ್ತದೆ. "ಖಾನೇಕು ಹಂ, ಖಾರಲಢನೇಕು ಮೇರಾಬಡಾಭಾಯಿ." (ಉಂಬೋಕೆ ಉಣೋಕೆ ಅಣ್ಣಪ್ಪ; ಕೆಲಸಕ್ಕೆ ಮಾತ್ರ ದೊಡ್ಡಪ್ಪ) ಈ ಉಕ್ತಿಯಂತೆ ಎರಡನೆಯವರಿಗೆ ಹೊಡಿಸಿಕೊಳ್ಳಲಿಕ್ಕೂ ತುರಂಗಕ್ಕೆ ಅಟ್ಟಲಿಕ್ಕೂ ಪ್ರಾಣಕೊಡಲಿಕ್ಕೂ ಪ್ರೋತ್ಸಾಹನ ಕೊಡುತ್ತಾರೆ. ಹೊರತು ತಮ್ಮ ಮೇಲೆ ಯಾವ ಜವಾಬದಾರಿಯನ್ನು ತಕ್ಕೊಳ್ಳದೆ ತಾವು ಮಾತ್ರ ಸುಖೋಪಭೋಗದಲ್ಲಿ ಕಾಲವನ್ನು ಕಳೆಯುತ್ತಾರೆ. ಇದು ನಾವು ಕಣ್ಣಾರೆ ಕಂಡು ಕಿವಿಯಾರೆ ಕೇಳಿರುತ್ತೇವೆ.

ರಾಷ್ಟ್ರೀಯ ಸೇನೆಯ ಸಂಬಂಧದಲ್ಲಿ ಜನರ ಉತ್ಸಾಹವನ್ನು ನೋಡುತ್ತಿರಲಿಕ್ಕೆ ನಮ್ಮ ಪ್ರಾಂತವು ಕಿಂಬಹುನಾ ಇಡಿ ನಮ್ಮ ದೇಶವು ಸ್ವರಾಜ್ಯದ ಸಲುವಾಗಿ ತನ್ನ ಎಲ್ಲ ಬಲವನ್ನು ಒಟ್ಟುಗೂಡಿಸಿ ಹೋರಾಡಲಿಕ್ಕೆ ಇನ್ನೂ ಸಿದ್ಧವಾಗಿಲ್ಲೆಂದು ನಮಗೆ ಅನಿಸುತ್ತದೆ. ಕೆಲಸಕ್ಕೆ ಸಿದ್ಧವಾಗಬೇಕಾದರೆ ನಮಗೆ ಇನ್ನೂ ಎಷ್ಟೊ (learn) ಕಲಿಯಬೇಕಾದೀತು. ಮತ್ತು ಸರಕಾರಿ ಶಿಕ್ಷಣದಿಂದ ಕಲಿತದ್ದು ಎಷ್ಟೊ ಮರೆಯ (unlearn) ಬೇಕಾದೀತು. ನಮಗೆ ಅನಿಸುವುದೇನೆಂದರೆ, ಲೋಕಮಾನ್ಯ ಟಿಳಕರು ಹಿಂದೂಸ್ಥಾನಕ್ಕೆ ಉಪದೇಶಮಾಡಿದ ಪ್ರಕಾರ ನಾವು ಉತ್ಕೃಷ್ಟ ರೀತಿಯಿಂದ ಚಳವಳಿಯನ್ನು (agitate) ನಡಿಸುವುದನ್ನೂ, ಜನರಿಗೆ ರಾಷ್ಟ್ರೀಯ ಪದ್ಧತಿಯ ಶಿಕ್ಷಣವನ್ನು ಕೊಟ್ಟು ಅವರಲ್ಲಿ ಉತ್ಸಾಹವನ್ನುಂಟುಮಾಡುವುದನ್ನೂ (educate) ಮತ್ತು ದೇಶದಲ್ಲೆಲ್ಲ ಸಂಘಶಕ್ತಿಯನ್ನು ಬೆಳೆಸುವುದನ್ನೂ (organize) ಕೈಕೊಳ್ಳಬೇಕಾದೀತು. ಇದು ಸಾಧ್ಯವಾಗಬೇಕಾದರೆ ಉತ್ಸಾಹಿ ತರುಣರನ್ನು ಒತ್ತಟ್ಟಿಗೆ ತಂದು ಅವರಿಗೆ ಈ ಕೆಲಸದ ಬಗ್ಗೆ ಶಾಸ್ತ್ರೀಯ ಜ್ಞಾನವನ್ನು ಕೊಡಬೇಕಾದೀತು. ಈ ವರೆಗೆ ನೋಂದಿಸಲ್ಪಟ್ಟ ಎಲ್ಲ ಸಿದ್ಧ ಸ್ವಯಂಸೇವಕರು ಇಂಥ ರಾಷ್ಟ್ರೀಯ ಶಿಕ್ಷಣವನ್ನು ಕೊಡುವ ವರ್ಗಗಳಲ್ಲಾಗಲಿ, ಶಾಲೆಗಳಲ್ಲಾಗಲಿ ಸೇರಿ ತಮ್ಮ ದೇಶದ ಸಲುವಾಗಿ ಪ್ರಾಣವನ್ನು ಕೊಡಲಿಕ್ಕೆ ಸಿದ್ಧರಾದ ಹೊರತು ನಮಗೆ ಗತ್ಯಂತರವಿಲ್ಲ; ಇದು ಯಾರೂ ಮರೆಯಕೂಡದು. ವಾಚಕರು ಇತ್ತಕಡೆಗೆ ಲಕ್ಷ್ಯಕೊಡುವರೋ?

ದಾವುದರ ಪೇಟೆಂಟ್ ಅಭ್ರಕದ ಸ್ವದೇಶಿ ಚಿಮಿಣಿ ಬುರುಡೆಗಳು

ಗಾಜು ಬುರುಡೆಗಾಗಿಯೇ ವರುಷಂಪ್ರತಿ ಎಷ್ಟು ಹಣವು ದುರ್ವಯವಾಗುತ್ತಿದೆ ಎಂಬುದು ಸರ್ವರಿಗೂ ಅನುಭವವಾಗಿದೆ. ಹೀಗಿರುತ್ತ ಹೆಸರುಮಾತ್ರಕ್ಕೆ ಬುರುಡೆ ಎನ್ನಿಸಿಕೊಳ್ಳುವ ವಸ್ತುವನ್ನು ತಯಾರಿಸುವುದಕ್ಕಿಂತ ಜನರಿಗೆ ಹೆಚ್ಚು ಕಾಲಕ್ಕೆ ಉಪಯೋಗಕ್ಕೆ ಬರುವ ವಸ್ತುವೇ ಅಗತ್ಯದ್ದೆಂದು ಅನೇಕ ಪ್ರಯೋಗಗಳಿಂದ ಕಂಡುಹಿಡಿದಿದ್ದೇವೆ. ಗಾಜು ಬುರುಡೆಗಳು ಪೆಡಸಾಗಿದ್ದು, ದೀಪದ ಪ್ರಕಾಶದ ಉಷ್ಣತೆಯಿಂದ ಒಡೆಯುತ್ತವೆ. ನೀರಿನ ಅಥವಾ ತಂಪು ಗಾಳಿಯ ಸ್ಪರ್ಶವಾಗುತ್ತಲೇ ಪಟಪಟ ತುಂಡು ತುಂಡಾಗುತ್ತವೆ. ಜಪಾನ ವ್ಹಾಲುಗಳಲ್ಲಿ ಈ ಗುಣವು ಸ್ಪಷ್ಟವಾಗಿ ಕಾಣುತ್ತದೆ. ಒಂದು ದೀಪಕ್ಕೆ ಬೇಕಾಗುವ ಬುರುಡೆಗಾಗಿ ವರುಷಕ್ಕೆ ೫೦-೬೦ ರೂಪಾಯಿ ಕ್ರಯವಾಗುತ್ತದೆ. ಇದಕ್ಕೆ ಪ್ರತಿಯಾಗಿ ಅಭ್ರಕದ (ಬಿಂಗದ) ಬುರುಡೆಗಳು ತಯಾರಾಗಿವೆ. ಬಿಂಗು ಪಾರದರ್ಶಕ ಪದಾರ್ಥವಾಗಿದ್ದುದರಿಂದ ಸೀಮೆಯ ಎಣ್ಣೆಯಿಂದ ಉರಿಸುವ ದೀಪಗಳಿಗೆ ಉಪಯೋಗಿಸಲು ಯೋಗ್ಯವಾಗಿ ಕಂಡುಬಂದಿದೆ. ಇವು ತುಂಡಾಗುವುದಿಲ್ಲ; ನೀರಿನ ಮತ್ತು ತಂಪುಗಾಳಿಯ ತ್ಯಾವತಾಗಿದೊಡನೆ ಒಡೆಯುವುದಿಲ್ಲ. ಹೆಚ್ಚಿನ ಪ್ರಕಾಶವನ್ನು ಕೊಡುತ್ತವೆ. ಕಣ್ಣಿಗೆ ತಂಪು. ಈ ಬುರುಡೆಗಳನ್ನು ಉಪಯೋಗಿಸುವುದರಿಂದ ವರ್ಷ ಒಂದಕ್ಕೆ ರೂ. ೨ ಮಾತ್ರ ಖರ್ಚು ಆಗುವದು. ಈ ಬುರುಡೆಗಳಿಗೆ ಕೆಳಗೆ ಹೆಸರು ಕಾಣಿಸಿದವರು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಾಮುಖ್ಯ ಏಜಂಟರಾಗಿರುತ್ತಾರೆ.

ಡಿಟ್‌ಮಾರ್ ಲೇಂಪು, ಜಪಾನ್ ಲೇಂಪು, ತೂಗಾಡಿಸುವ ಲೇಂಪು, ಟೇಬಲ್ ಲೇಂಪು, ಗ್ಯಾಸಲೇಂಪು, ಮುಂತಾದ ಎಲ್ಲಾ ತರದ ದೀಪಗಳಿಗೆ ಉಪಯೋಗಿಸಲು ಬೇಕಾದ ಬುರುಡೆಗಳು ನಮ್ಮಲ್ಲಿ ದೊರಕುವವು. ಅಲ್ಲದೆ ಯಾವುದಾದರೂ ಒಂದು ಹೊಸತರದ ದೀಪಕ್ಕೆ ಬೇಕಾಗುವ ಬುರುಡೆಗಳನ್ನು ಸಹ ಒದಗಿಸಿಕೊಡಬಹುದು.

ಕ್ರಯ ಎಲ್ಲಿ ಕಡಿಮೆ?

ನಮ್ಮ ದರವನ್ನು ಬೇರೆಯವರ ದರದೊಡನೆ ಸರಿಹೋಲಿಸಿ ನೋಡಿದರೆ
ಆಗ ತನ್ನಷ್ಟಕ್ಕೇ ಇದರ ಗುಟ್ಟು ಗೊತ್ತಾಗುವುದು!
ಕೊಡೆಗಳು ಯುದ್ಧಕ್ಕೆ ಮೊದಲಿದ್ದ ದರದಲ್ಲಿಯೇ ನಿಮಗೆ ಇಲ್ಲಿ ದೊರೆಯುವುವು!
ಬಲವಾದ ಬಾಳಿಕೆ ಬರುವ ಹೊಸ ಕೊಡೆಗಳು ಈಗ ತಾನೇ ತಲಪಿವೆ!!
ಸ್ಕಾಟ್ಲೇಂಡಿನಲ್ಲಿ ಸಿದ್ಧವಾದ ಪ್ರಖ್ಯಾತಿಹೊಂದಿದ ಮಿಶನ್ ಕೊಡೆಗಳು
24×8 ರೂ. 6—4—0. 26×8 ರೂ. 6—8—0. 28×8 ರೂ. 6—12—0.
ಈ ಬೆಲೆಯೆಷ್ಟೆಂದು ಗುರುತಿಸಿಕೊಳ್ಳಿ! ನಮ್ಮ ಪುಕರಾಟದ ದರ ಹೇಗಿದೆ ಎಂದು ನೀವೇ ಆಲೋಚಿಸಿರಿ!
ಉತ್ತಮ ಯಂತ್ರದಲ್ಲಿ ತಯಾರಾದ ಕೊಡೆಗಳು
26×8 ರೂ. 4—14—0. ಈ ಕೊಡೆಗಳು ಇದರಂದಲೂ ಅಗ್ಗವಾಗಿ ನಿಮಗೆ ದೊರೆಯದು. ಇದು ಸಂಪೂರ್ಣವಾಗಿ ನಂಬಿಕೆಗೆ ಅರ್ಹವಾದದ್ದೂ, ಬಲವಾದದ್ದೂ, ಬಾಳಿಕೆ ಬರತಕ್ಕದ್ದೂ ಆಗಿದೆ. ಪ್ರತಿಯೊಂದು ಕೊಡೆಗೂ ಗ್ಯಾರಂಟಿ ಇದೆ.
ಕಪ್ಪು ಬಿಳೇ ಬಣ್ಣದ ಶುದ್ಧ ಖಾದಿಯ ನಿರ್ಮಾಣದ ಹಿಂದೀ ಕೊಡೆಗಳು
18ರಿಂದ 26ರ ವರೆಗಿನ ಎಲ್ಲಾ ಅಳತೆಯಲ್ಲಿ ರೂ. 2—4—0ರಿಂದ ರೂ. 4—8—0ರ ವರೆಗೆ!
ನಂಬ್ರ 611 ಜಿಂಕೆಯ ಗುರುತಿನ ಕೊಡೆಗಳು
ಇದಕ್ಕೆ ಚಿನ್ನದ ಪದಕಗಳ ಬಹುಮಾನ ದೊರಕಿದೆ.
ಈ ಕೊಡೆಗಳು ಇದೊಂದು ವ್ಯಾಪಾರ ಸಂಘದಲ್ಲಿ ಮಾತ್ರ ದೊರೆಯುತ್ತವೆ.
ಎಮ್. ಸುಲೇಮಾನ್ ನೂರ್ ಮುಹಮ್ಮದ್ ಆಂಡ್ ಸನ್ಸ್,
ಕೊರೊನೇಶನ್ ಅಂಬ್ರೆಲ್ಲಾ ಮಾರ್ಟ್, 786, ಮುಕೆಂಜಿಯರ್ ಮಿಶನ್ ಶಾಪ್ ಬಳಿ, ಮಂಗಳೂರು.
ಇದರ ಶಾಖೆ:—ಮಂಗಳೂರು ಟೌನ್ ಪೋಲೀಸ್ ಸ್ಟೇಶನ ಎದುರಿನಲ್ಲಿ.

ವಿದೇಶ ವರ್ತಮಾನ.

ಡ್ಯೂಕ್ ಒಫ್ ಯೋರ್ಕರವರ ವಿವಾಹ—ಸಮ್ರಾಟರವರ ದ್ವಿತೀಯ ಕುಮಾರರಾದ ಡ್ಯೂಕ್ ಒಫ್ ಯೋರ್ಕ ರಾಜ[illegible] ಸ್ಕೋಟ್‌ಲೆಂಡ್ ದೇಶದ ಅರ್ಲ್ ಒಫ್ ಸ್ಟ್ರ್ಯಾತ್ ಮೋರ್ ಎಂಬ[illegible]ವರ ಮಗಳನ್ನು ಕಳೆದ ತಾ. ೨೬ರಲ್ಲಿ ವಿವಾಹವಾದರು. ಈ ವಿವಾ[illegible] ಲಂಡನ್ ಪಟ್ಟಣದ ಅತ್ಯಂತ ಪುರಾತನ ದೇವಾಲಯವಾದ ವೆಸ್ಟ[illegible] ಅಬೇದೇವಾಲಯದಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. [illegible]ಲದ ಮಹಾರಾಜರು ಈ ವಿವಾಹಕ್ಕೆ ಆಮಂತ್ರಿಸಲ್ಪಟ್ಟಿದ್ದರು. ಇವರು [illegible] ಸಂಸ್ಥಾನದ ಕೆಲಸಗಾರರಿಂದ ತಯಾರುಮಾಡಲ್ಪಟ್ಟ ಬಂಗಾರದ [illegible]ವನ್ನು ಬಹುಮಾನವಾಗಿ ಕೊಟ್ಟರು.

ಒಳದೇಶ ವರ್ತಮಾನ.

ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿ ಮೀಟಿಂಗು:—[illegible] ತಿಂಗಳ ತಾರೀಕು ೨೫ರಲ್ಲಿ ಮುಂಬಯಿಯಲ್ಲಿ ಓಲ್ ಇಂಡಿಯಾ [illegible]ಂಗ್ರೆಸ್ ಕಮ್ಮಿಟಿಯ ಮೀಟಿಂಗು ಸೇರುವುದು. ಈ ಸಭೆಯಲ್ಲಿ ಪ್ರಚಲಿತ [illegible]ಜಕೀಯ ವಿಷಯಗಳನ್ನು ಕುರಿತು ಆಲೋಚಿಸಲಾಗುವುದು, ಮತ್ತು [illegible]ಂದಕ್ಕೆ ಕೊಂಗ್ರೆಸ್ ಕಾರ್ಯವನ್ನು ಹೇಗೆ ನಿರ್ವಹಿಸತಕ್ಕದೆಂದು [illegible]ರ್ಣಯಿಸಲಾಗುವುದು. ಅಲ್ಲದೆ ದೇಶಬಂಧು ದಾಸರು ಓಲ್ ಇಂಡಿಯಾ [illegible]ಂಗ್ರೆಸ್ ಕಮ್ಮಿಟಿಯ ಅಧ್ಯಕ್ಷ ಪದವಿಗೆ ರಾಜಿನಾಮೆಯನ್ನು ಕೊಟ್ಟಿದುದನ್ನು [illegible]ರ್ಯಾಲೋಚಿಸಲಾಗುವುದು. ಮತ್ತು ಕೊಂಗ್ರೆಸ್ ಕಾರ್ಯಕಾರಿ [illegible]ಮ್ಮಿಟಿಯಲ್ಲಿ ಖಾಲಿ ಬಿದ್ದ ಸ್ಥಾನಗಳನ್ನು ಭರ್ತಿಮಾಡಲಾಗುವುದು.

ನಾಗಪುರದಲ್ಲಿ ಕಾನೂನು ಭಂಗ:—ಸ್ವರಾಜ್ಯ ಧ್ವಜದ [illegible]ಬಂಧ ನಾಗಪುರದಲ್ಲಿ ಕಾನೂನುಭಂಗವು ಪ್ರಾರಂಭವಾಗಿದೆ. ಕಳೆದ ತಾರೀಕು ೩ರಲ್ಲಿ ಸೆರೆಹಿಡಿಯಲ್ಪಟ್ಟ ೧೧ ಮಂದಿ ಸ್ವಯಂಸೇವಕರಲ್ಲಿ ಇಬ್ಬರು ಕ್ಷಮಾಪಣೆಯನ್ನು ಕೇಳಿದ್ದರಿಂದ ಅವರನ್ನು ಬಿಡುಗಡೆಮಾಡಲಾಯಿತು. ಉಳಿದ ಪ್ರತಿಯೊಬ್ಬರಿಗೆ ೩ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಉಪ್ಪಿನ ತೆರಿಗೆ:—ಕಲ್ಕತ್ತಾ ಪಟ್ಟಣದಲ್ಲೂ ಒಂದು ಮೀಟಿಂಗು [illegible] ಉಪ್ಪಿನ ತೆರಿಗೆಯನ್ನು ನಿಷೇಧಿಸಲಾಯಿತು. ಈ ತೆರಿಗೆಯನ್ನು ನಿಷೇಧಿಸುವುದಕ್ಕಾಗಿ ಇದೇ ತಾರೀಕು ೧೧ರಲ್ಲಿ ಮದರಾಸಿನಲ್ಲಿ ಒಂದು ಮೀಟಿಂಗು ಸೇರುವುದು. ದಿವಾನ್ ಬಹದೂರ್ ಪಿ. ಕೇಶವ ಪಿಳ್ಳೆಯವರು ಈ ಮೀಟಿಂಗಿನ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಿಕ್ಕಿದ್ದಾರೆ.

ಸಂಗೀತ ವಿದ್ಯೆಯಲ್ಲಿ ಪ್ರವೀಣನಾದ ಬಾಲಕನು:—ಸಂಗೀತದಲ್ಲಿ ಹೆಸರುಗೊಂಡ ಮಾಸ್ಟರ್ ಮನೋಹರ ಬರ್ವೆ ಎಂಬ ಬಾಲಕನು ಮೈಸೂರು ಸಂಸ್ಥಾನ, ಮದರಾಸ ಪಟ್ಟಣದಲ್ಲೆಲ್ಲಾ ತನ್ನ ಅಸಾಧಾರಣ ಪ್ರವೀಣತೆಯಿಂದ ಜನರನ್ನು ಸಂತೋಷಗೊಳಿಸಿ ಕಳೆದ ತಾರೀಕು ೮ರಲ್ಲಿ ರಂಗೂನಿಗೆ ಹೊರಟು ಹೋಗಿರುವನು. ಈ ಹುಡುಗನು ಅಲ್ಲಿಂದ ಯುರೋಪ ಮತ್ತು ಅಮೇರಿಕಾ ಖಂಡಕ್ಕೆ ತೆರಳಬೇಕೆಂದು ಸಂಕಲ್ಪಮಾಡಿಕೊಂಡಿರುವನು.

ದೇಶಬಂಧು ದಾಸರು:—ಇವರು ಈ ವಾರದಲ್ಲಿ ಮದರಾಸನ್ನು ಸಂದರ್ಶಿಸಲಿಕ್ಕಿದ್ದರು. ಆದರೆ ಅವರಿಗೆ ಅತೀ ಅಗತ್ಯದ ಕೆಲಸದ ನಿಮಿತ್ತ ಬಂಗಾಲದಲ್ಲಿ ಇರಬೇಕಾಗಿ ಬಂದಿರುವುದರಿಂದ ಅವರು ಈ ತಿಂಗಳ ತಾರೀಕು ೨೬ಕ್ಕೆ ಮದರಾಸಿಗೆ ಬರುವರು.

ಹಿಂದೂ ಮುಸಲ್ಮಾನ ಕಲಹ:—ಕಳೆದ ತಾರೀಕು ೬ನೆಯ ರಾತ್ರಿ ಚೋಕ್‌ಫುಲ್ಲನ್ ವಾಲಾ ಎಂಬಲ್ಲಿ ಹಿಂದೂ-ಮುಸಲ್ಮಾನರೊಳಗೆ ಜಟಾಪಟಿಯು ನಡೆದ. ಒಬ್ಬ ಹಿಂದುವೂ ಇಬ್ಬರು ಮಹಮ್ಮದೀಯರೂ ಗಾಯಗೊಂಡರು.

ಶ್ರೀಯುತ ರಾಜಗೋಪಾಲಾಚಾರ್ಯರು:—ಇದೇ ಬರುವ ೨೫ನೆಯ ತಾರೀಕಿನ ವರೆಗೆ ತಿಲಕ ಸ್ವರಾಜ್ಯ ಫಂಡನ್ನು ಸಂಗ್ರಹಿಸತಕ್ಕದೆಂದೂ ಸ್ವಯಂಸೇವಕರನ್ನು ಕೂಡಿಸತಕ್ಕದೆಂದೂ ತಿಳಿಸಿರುವರು.

ನಾಗಪುರ ಸ್ವರಾಜ್ಯಧ್ವಜ:—ನಾಗಪುರದಲ್ಲಿ ಸ್ವರಾಜ್ಯಧ್ವಜದ ಸಂಬಂಧ ಪ್ರಾರಂಭಿಸಿದ ಸತ್ಯಾಗ್ರಹ ಹೋರಾಟವು ಜೋರಿನಿಂದ ನಡೆಯುತ್ತಿದೆ. ಕಳೆದ ತಾರೀಕು ೮ಕ್ಕೆ ಸತ್ಯಾಗ್ರಹವನ್ನು ನಡಿಸುವುದಕ್ಕಾಗಿ ವರಾಡ ಜಿಲ್ಲೆಯ ಹಿಂಗನ್ ಘಾಟಿನಿಂದ ೧೦ ಮಂದಿಗಳ ಒಂದು ಪಂಗಡವು ಬಂದಿದೆ. ಈ ಪಂಗಡದ ಮುಖಂಡರು ಒಬ್ಬ ವೃದ್ಧ ಮರಾಠರಾಗಿರುವರು. ಇವರ ಸಹಧರ್ಮಿಣಿ ಪಾರ್ವತಿಬಾಯಿ ಎಂಬವರು ಸಹ ಈ ಪಂಗಡದಲ್ಲಿ ಸೇರಿರುವರು. ಈ ಮಹಿಳೆಯು ಮೊದಲೊಮ್ಮೆ ದೇಶಸೇವೆಗಾಗಿ ತುರಂಗವಾಸವನ್ನು ಅನುಭವಿಸಿ ಬಂದಿರುವಳು. ಮಹಿಳೆಯರ ಸ್ವಯಂಸೇವಕಿಯರ ಪಂಗಡವು ಈ ಕಾರ್ಯಕ್ಕೆ ಮುಂದೆ ಬರುವ ವರೆಗೆ ಈ ಅಬಲೆಯು ತನ್ನ ಸತ್ಯಾಗ್ರಹವನ್ನು ನಿಲ್ಲಿಸಬೇಕಾಗಿ ಶ್ರೀಯುತ ಜಮುನಾಲಾಲ ಬಾಜಾಜರು ವಿನಂತಿಮಾಡಿಕೊಂಡರು. ಆದರೆ ಆಕೆಯು ತನ್ನ ಪತಿಯ ಸಂಗಡವೆ ಇರಲು ಆಸೆಯುಳ್ಳವಳಾಗಿರುವಳು.

ಚೌರಿಚೂರಾ ಖಟ್ಲೆಯ ಅಪೀಲು:—ಫಾಶಿ ಶಿಕ್ಷೆ ವಿಧಿಸಲ್ಪಟ್ಟ ೧೭೦ ಮಂದಿಗಳಲ್ಲಿ ಅಪೀಲಿನ ತೀರ್ಮಾನದಂತೆ ೧೯ ಮಂದಿ ಮುಖಂಡರಿಗೆ ಮರಣ ದಂಡನೆ, ಮೂವರಿಗೆ ಬರಿಯ ೨ ವರುಷಗಳ ಕಠಿಣ ಶಿಕ್ಷೆ, ವಿಧಿಸಿ [illegible] ಮಂದಿಯನ್ನು ಬಿಟ್ಟು ಬಿಟ್ಟರು. ಉಳಿದ ೧೧೦ ಮಂದಿಗಳಿಗೆ [illegible] ವರುಷಗಳಂತೆ ಶಿಕ್ಷೆ ವಿಧಿಸಿದರು.

ಎಲಾಯನ್ಸ ಬೇಂಕು:—ಯೂರೋಪಿಯನರಿಂದ ಸ್ಥಾಪಿಸಲ್ಪಟ್ಟ ಈ ಬೇಂಕು ಕಳೆದ ತಾ. ೨೭ಕ್ಕೆ ದಿವಾಳಿ ತೆಗೆಯಿತು. ಈ ಬೇಂಕಿನ ೪೦ ಶಾಖೆಗಳು ನಮ್ಮ ದೇಶದ ಆಯಾ ಕಡೆಗಳಲ್ಲಿದ್ದವು. ಈ ಬೇಂಕಿನ ದಿವಾಳಿಯಿಂದ ಉತ್ತರ ಹಿಂದೂಸ್ಥಾನದಲ್ಲಿ ಅನೇಕರಿಗೆ ಹೆಚ್ಚಿನ ನಷ್ಟವು ಸಂಭವಿಸಿದೆ.

ಹಿಂದೂ ಮುಸಲ್ಮಾನರೊಳಗಿನ ಜಟಾಪಟಿ—[illegible] ಎಂಬಲ್ಲಿ ಹಿಂದೂ ಮುಸಲ್ಮಾನರೊಳಗೆ ಜಟಾಪಟಿಯು ನಡೆಯಿತು. ಆದರೆ ಯಾರೂ ಮಡಿಯಲಿಲ್ಲ.

ಕೊಂಗ್ರೆಸ್ ಮುಖಂಡರು—ಡಾಕ್ಟರ ಸಯ್ಯದ್ ಮಹಮ್ಮದ್ ಮಿ. [illegible] ಕಲ್ಲಿಕೋಟೆಯ ಮಿ. [illegible] ಮತ್ತು [illegible] ಮಲಬಾರಿನ [illegible] ಸಂದರ್ಶಿಸಲಿದ್ದರು. ಈ ಪ್ರಾಂತಕ್ಕೆ ಅವರು [illegible] ಮಲಬಾರ [illegible] ರಿಜಿಸ್ಟ್ರೇಟರು ಇವರ ಆಗಮನದಿಂದ ಶಾಂತತಾಭಂಗ ಉಂಟಾಗಬಹುದು ಎಂಬ ಕಾರಣವನ್ನು ಸೂಚಿಸಿ ಕಲ್ಲಿಕೋಟೆಯ ಪೋಲೀಸ ಇನ್ಸ್‌ಪೆಕ್ಟರರ ಮೂಲಕ ಇವರಿಗೆ ಅಲ್ಲಿ ಹೋಗದಂತೆ ಪ್ರತಿಬಂಧದ ಹುಕುಮನ್ನು ಕೊಟ್ಟಿದ್ದರು.

ಸೆಂಟ್ರಲ್ ಖಿಲಾಫತ್ ಕಮ್ಮಿಟಿ—ಬರುವ ತಾರೀಕು ೨೩ಕ್ಕೆ ಮುಂಬಯಿಯಲ್ಲಿ ಖಿಲಾಫತ್ ಕಮ್ಮಿಟಿಯ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗು ಸೇರುವುದು. ಮತ್ತು ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ಮೀಟಿಂಗು ತಾ. ೨೪ ಮತ್ತು ೨೫ರಲ್ಲಿ ಸೇರುವುದು.

ಶ್ರೀಯುತ ಸಿ. ರಾಜಗೋಪಾಲಾಚಾರ್ಯರು—ಕೌನ್ಸಿಲ್ ಬಹಿಷ್ಕಾರಕ್ಕೆ ಅನುಕೂಲರಾಗಿದ್ದ ಶ್ರೀಯುತ ಸಿ. ರಾಜಗೋಪಾಲಾಚಾರ್ಯ ಮತ್ತು ಇತರ ಕೆಲವು ಮಂದಿ ಮುಖಂಡರು ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಬರುವ ಮೀಟಿಂಗಿನಲ್ಲಿ ವೈಯಕ್ತಿಕ ಕಾನೂನು ಭಂಗವನ್ನು ಜಾರಿಗೆತರಬೇಕೆಂದು ನಿರ್ಧರಿಸಬೇಕೆಂದಿರುವರು.

ದಕ್ಷಿಣ ಕನ್ನಡ.

ಮುಲ್ಕಿ:—ನಮ್ಮ ಊರಿನವರಾದ ಡಾಕ್ಟರ್ ಎ. ಪಿ. ಕಾಮತ್ ಯಲ್. ಯಮ್. ಯಸ್. ಇವರ ಪುತ್ರಿಯನ್ನು ಮಂಜೇಶ್ವರದ ಜಮೀನುದಾರರಾದ ಮ. ರಾ. ರಾ. ನರಸಯ್ಯ ಶ್ಯಾನುಭಾಗರವರ ಮುದ್ದು ಕುವರ ಶ್ರೀಯುತ ರಾಮಚಂದ್ರ ಶ್ಯಾನುಭಾಗರಿಗೆ ಧಾರಾದತ್ತವಾಗಿ ಕೊಟ್ಟು ನೆರವೇರಿಸಿದ ವಿವಾಹ ಮಹೋತ್ಸವದ ಸಂತೋಷಾರ್ಥವಾಗಿ ಇಲ್ಲಿಯ ಯೂನಿಯನ್ ಕ್ಲಬ್ಬಿನ ಮೆಂಬರರಿಗೂ, ಇತರ ಸದ್ಗೃಹಸ್ಥರಿಗೂ, ತಾ. ೪ನೇ ಶ್ಯಾಮ ೫ ಘಂಟೆಗೆ ಕ್ಲಬ್ಬಿನ ಮಂದಿರದಲ್ಲಿ ಒಂದು ಫಲಹಾರವು ಕೊಡಲ್ಪಟ್ಟಿತು. ಆ ಸಂದರ್ಭದಲ್ಲಿ ಈ ಕುರಿತು ಮ. ರಾ. ರಾ. ಯಂ. ಭವಾನಿರಾಯರು ಕ್ಲಬ್ಬಿನ ಮೆಂಬರರ ಪರವಾಗಿ ಶ್ರೀಯುತ ಡಾಕ್ಟರರ ಉಪಕಾರ ಸ್ಮರಿಸಿದುದು ಮಾತ್ರವಲ್ಲದೆ ವಧೂವರರಿಗೆ ದೀರ್ಘಾಯುಷ್ಯವನ್ನೂ, ಸುಪುತ್ರಸಂಪತ್ತನ್ನೂ, ಶ್ರೇಯೋಭಿವೃದ್ಧಿಯನ್ನೂ ಅನುಗ್ರಹಿಸಬೇಕೆಂದು ಶ್ರೀದೇವರನ್ನು ಪ್ರಾರ್ಥಿಸಿ, ಹೃತ್ಪೂರ್ವಕವಾಗಿ ಆಶೀರ್ವದಿಸಿದರು. ತನ್ಮಧ್ಯ ಸದರಿ ಸಂತೋಷಕೂಟಕ್ಕೆ ದಯಮಾಡಿಸಿದ್ದ ಸನ್ಮಾನ್ಯ ನರಸಯ್ಯ ಶ್ಯಾನುಭಾಗರು ರೂ. ೫೦ನ್ನು ಪೋಷಕ ದ್ರವ್ಯವಾಗಿ ಕ್ಲಬ್ಬಿಗೆ ಒಪ್ಪಿಸಿದುದಕ್ಕಾಗಿ ಸಂಸ್ಥೆಯು ಸದರಿ ಮಹನೀಯರ ಚಿರ ಉಪಕಾರ ಸ್ಮರಿಸುತ್ತದೆ. ಮಾತ್ರವಲ್ಲದೆ ಅವರನ್ನು ಕ್ಲಬ್ಬಿನ ಚಿರ ಪೋಷಕರಾಗಿ ವಿನಯಪೂರ್ವಕ ಕೈಕೊಂಡಿರುತ್ತದೆ. ಇದೇ ವಿವಾಹದ ಸಂತೋಷಾರ್ಥವಾಗಿ ಲಗ್ನದ ಎರಡನೆಯ ದಿನ ಬಡಬಗ್ಗರಿಗೆ ಸೇರು ಮತ್ತು ಅರ್ಧಸೇರಿನ ಪ್ರಮಾಣದಿಂದ ಅಕ್ಕಿಯು ಹಂಚಲಾಯಿತು. ಪೇಟೆಯಲ್ಲಿರುವ ಗೌಡ ಸಾರಸ್ವತ ಬ್ರಾಹ್ಮಣರ ಎಲ್ಲಾ ಮನೆಗಳಿಗೂ ಸಂಪನ್ನರು ಮತ್ತು ಬಡವರೆಂಬ ಭೇದವನ್ನು ಲೆಕ್ಕಿಸದೆ ಖಜ್ಜಾಯಗಳು ಹಂಚಲಾದವು. ಎಲ್ಲಾ ಜಾತಿಯ ಬ್ರಾಹ್ಮಣ ದೇವಸ್ಥಾನಗಳಲ್ಲಿ ಸಂತರ್ಪಣೆ ಪೂಜಾದಿಗಳನ್ನು ನಡಿಸಿದರು. ಮುಲ್ಕಿ ಗೌಡಸಾರಸ್ವತ ಬ್ರಾಹ್ಮಣರ ಬಡ ವಿದ್ಯಾರ್ಥಿ ಸಂಘದ ಸಹಾಯಾರ್ಥವಾಗಿ ರೂ. ೫೦ ಮತ್ತು ಉಡುಪಿಯ ರಾಷ್ಟ್ರೀಯ ಶಾಲೆಗೆ ರೂ. ೨೦೦ ರಾಜಶ್ರೀ ಶ್ಯಾನುಭಾಗರಿಂದ ಕೊಡೋಣಾಗಿದೆ. ಇನ್ನು ಮುಂದಕ್ಕೂ ಇದೇ ರೀತಿಯ ಪ್ರೋತ್ಸಾಹವು ದೊರೆಯುವಂತೆಯೂ ಸದರಿ ರಾಜಶ್ರೀ ಶ್ಯಾನುಭಾಗರು ಲೋಕದ ಜನರಿಗೆ ಇನ್ನಷ್ಟು ಕೊಡುಗೈಯವರಾಗಿ ಇರುವಂತೆಯೂ, ಶ್ರೀ ಪರಮಾತ್ಮನು ಅವರಿಗೆ ಚಿರಾಯುರಾರೋಗ್ಯವನ್ನೂ, ಅಷ್ಟೈಶ್ವರ್ಯವನ್ನೂ ದಯಪಾಲಿಸಿ, ಅವರಿಗೆ ಉತ್ತರೋತ್ತರವನ್ನುಂಟುಮಾಡಲಿ, ಎಂದು ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ಶ್ರೀ ಸನ್ನಿಧಿಯಲ್ಲಿ ಊರಿನವರು ಮಾಡಿದ ಪ್ರಾರ್ಥನೆಯಲ್ಲಿ ಮುಲ್ಕಿಯ ಯುನಿಯನ್ ಕ್ಲಬ್ಬಿನ ಮೆಂಬರರೂ ಸಹಭಾಗಿಗಳಾಗಿರುವರೆಂದು ಕ್ಲಬ್ಬಿನ ಗೌರವಾರ್ಥ ಕಾರ್ಯದರ್ಶಿ ರಾ| ಬಿ. ಭೋಜರಾಯರು ತಿಳಿಸುತ್ತಾರೆ.

ಕಾಸರಗೋಡು:—ಈ ಮುಂಚೆ ಕೆಲವು ಸಮಯದ ಹಿಂದೆ ಟೌನಿನ ಮಾರ್ಗಗಳಲ್ಲಿ ದನಕರುಗಳ ಕಾಟವು ಸ್ವಲ್ಪ ಕಡಿಮೆಯಾಗಿತ್ತು. ಈಗ ಯಥಾಪ್ರಕಾರ ಪುನಃ ಮುಂಚಿಗಿಂತ, ಎರಡರಷ್ಟು ದನಕರುಗಳು ಎಲ್ಲೆಲ್ಲಿ ನೋಡಿದರೂ ಮಾರ್ಗದಲ್ಲಿ ಅಲೆದಾಡುತ್ತಿವೆ. ದನಗಳ ಮ್ಹಾಲಿಕರು ತಕ್ಕ ನಿಗಾ ತೆಕ್ಕೊಳ್ಳದಿರುವುದೆ ಇದಕ್ಕೆ ಕಾರಣವಾಗಿರುತ್ತದೆ. ಪೇಟೆಯಲ್ಲಿ ಈ ನಮೂನೆಯಲ್ಲಿ ದನಕರುಗಳನ್ನು ಅಲೆದಾಡಲು ಬಿಡುವುದರಿಂದ, ಅನೇಕ ಅಪಾಯಗಳು ದನಕರುಗಳಿಗೂ ಇತರರಿಗೂ ಸಂಭವಿಸಬಹುದು.

ಇಲ್ಲಿ ಕೆಲವು ದಿನಗಳ ಹಿಂದೆ ಬಂದ, ಶ್ರೀ ಗದಗ ದತ್ತಾತ್ರೇಯ ನಾಟಕ ಮಂಡಳಿಯವರು, ಪೇಟೆಯ ನಡುಮಧ್ಯಸ್ಥಳದಲ್ಲಿರುವ ತಮ್ಮ ಭವ್ಯವಾದ ಥಿಯೇಟರಿನಲ್ಲಿ ಚಲೋ ನಾಟಕಗಳನ್ನು ಆಡಿತೋರಿಸುತ್ತಿದ್ದಾರೆ. ಇವರ ಸೀನ್ಸ, ಡ್ರೆಸ್ ಮತ್ತು ಮನೋಹ್ಲಾದಕರವಾದ ಸಂಗೀತ ಜ್ಞಾನವು ಕೂಡ ಶ್ಲಾಘನೀಯವಾದುದು.

ಇಲ್ಲಿ ಸೆಕೆಯು ಬಹಳ ಹೆಚ್ಚಾಗಿರುತ್ತದೆ. ಕೆಲವು ಕಡೆಗಳಲ್ಲಿ ಬಾವಿಗಳಲ್ಲಿಯ ನೀರು ಪೂರ್ಣವಾಗಿ ಆರಿಹೋಗುವರೆ ಪ್ರಾರಂಭವಾಗಿರುತ್ತದೆ.

ಬಂಟವಾಳ:—ಈ ದಿವಸದಲ್ಲಿ ಕೋಂಬ್ರಬೈಲ ಕೃಷ್ಣರಾಯರು ತನ್ನ ತಾಲೂಕು ಬೋರ್ಡು ಮೆಂಬರಿಕೆಗೆ ರಾಜಿನಾಮೆ ಕೊಟ್ಟದ್ದರಿಂದ ಆ ಮೆಂಬರಿಕೆಗೆ ಉಮೇದುವಾರರಾಗಿ ನಿಂತ ಪಣಂಬೂರು ವಾಸುದೇವರಾವ್ ಮತ್ತು ಬಿ. ವೆಂಕಟ್ರಾಯ ಪ್ರಭು ಇವರಲ್ಲಿ, ಬಿ. ವೆಂಕಟ್ರಾಯ ಪ್ರಭುಗಳಿಗೆ ಹೆಚ್ಚಿಗೆ ಓಟು ಸಿಕ್ಕಿದ್ದರಿಂದ ಅವರು ತಾಲೂಕು ಬೋರ್ಡು ಮೆಂಬರರಾಗಿ ಚುನಾಯಿಸಲ್ಪಟ್ಟರು. ಇನ್ನು ಈ ಹೊಸ ಮೆಂಬರರು ಬಂಟವಾಳ ಡಿವಿಜನ್ ಮತ್ತು ಬಂಟವಾಳ ಪೇಟೆಯ ಹಿತಕ್ಕಾಗಿ ಏನೇನುಮಾಡಲಿಕ್ಕಿದ್ದಾರೊ ಇನ್ನು ನೋಡಬೇಕಾಗಿದೆ. ಈ ಮೆಂಬರಿಕೆಗೆ 1½ವರ್ಷದ ಅವಧಿಯು ಇದೆ. ಈ ಅವಧಿಯೊಳಗೆ ಇವರು ಸಾರ್ವಜನಿಕ ಕೆಲಸಗಳನ್ನು, ಇವರ ಮುಂಚೆ ಮೆಂಬರರಾಗಿದ್ದ ರಾ. ಕೋಂಬ್ರಬೈಲ ಕೃಷ್ಣರಾಯರ ಹಾಗೆಯೆ ಮಾರ್ಗಗಳನ್ನೂ, ಶಾಲೆಗಳನ್ನೂ, ದೀಪಸ್ತಂಭಗಳನ್ನೂ, ಭಾವಿಗಳನ್ನೂ, ಆರೋಗ್ಯ ಸಂಸ್ಥೆಗಳನ್ನೂ ಮಾಡುವ ಹಾಗೆ ಮಾಡಿದರೆ ಈ ಅವಧಿಯು ಕಳೆದ ಮೇಲೆ ಈ ಮೆಂಬರಿಕೆಯು ಇವರಿಗೆನೆ ಆಗುವುದರಲ್ಲಿ ಏನೊಂದು ಸಂದೇಹವಿರಲಿಕ್ಕಿಲ್ಲ. ಇವರು ಮೊದಲು ತಮ್ಮ ಮನಸ್ಸನ್ನು ಗುರುಪುರ ಮಾರ್ಗದ ಕಡೆಗೆ ತಿರುಗಿಸಿ ಬಂಟವಾಳದಿಂದ ಗುರುಪುರ ಮಾರ್ಗಕ್ಕೆ ಒಂದು ಮಾರ್ಗವನ್ನು ಕೂಡಿಸುವ ಹಾಗೆ ಮಾಡಿದರೆ ಒಳ್ಳೇದಾಗುತ್ತಿತ್ತು.

ಇಲ್ಲಿಯ ಪಟ್ಟಣದ ಮಾರ್ಗಗಳಿಗೆ ನೀರು ಹಾಕಲಿಕ್ಕೆ ತರಿಸಬೇಕೆಂದಿದ್ದ ಯಂತ್ರವನ್ನು ತರಿಸಲಿಕ್ಕೆ ಅನಾನುಕೂಲವಾದ್ದರಿಂದ ಎಲ್ಲಿಯೂ ದಂಡಿಗೆ ಕೊಟ್ಟ ಹಣವನ್ನು ಹಿಂತಿರುಗಿ ಕೊಡಲ್ಪಟ್ಟಿರುತ್ತದೆ.

ಅಲಹಾಬಾದಿನಿಂದ ತಾ. ೧೯ರಲ್ಲಿ ಪಂಡಿತ ಮೋತಿಲಾಲ ನೇಹರುಗಳವರು ಓಲ್ ಇಂಡಿಯಾ ಕೊಂಗ್ರೆಸ್ ಮತ್ತು ಪ್ರಾಂತಿಕ ಕೊಂಗ್ರೆಸ್ ಕಮ್ಮಿಟಿಗಳ ಸದಸ್ಯರುಗಳನ್ನು ಸಂಬೋಧಿಸಿ ಬರೆದ ಲೇಖದ ಸಾರಾಂಶ.

ಫೆಬ್ರವರಿ ತಾ. ೨೮ಕ್ಕೆ ಜಾರಿಗೆ ಬಂದ ಒಪ್ಪಂದದ ಆಯುಷ್ಯವು ಈ ದಿನ ಕೊನೆಗೊಂಡಿತು. ಬೇಡ ಬದಲಾವಣೆಯ ಮುಖಂಡರುಗಳು ಗಯಾ ಕಾರ್ಯಕ್ರಮದ ಸಾಧನೆಗಾಗಿ ಮಾಡಿದ ಪ್ರಯತ್ನಗಳು ಅತ್ಯಂತ ಸ್ತುತ್ಯಾರ್ಹವಾದರೂ ಅವರು ಈ ನಿಷ್ಫಲಕಾರ್ಯಕ್ರಮಕ್ಕಾಗಿ ಅನಾವಶ್ಯಕ ಪ್ರಯತ್ನ ಪಡುವುದರ ಬದಲಾಗಿ ತಮ್ಮ ಶಕ್ತಿ ಸಮಯ, ಹಣ ಇವನ್ನು ಕೌನ್ಸಿಲುಗಳನ್ನು ಸ್ವಾಧೀನಪಡೆಯುವುದಕ್ಕಾಗಿ ಪ್ರಯೋಗಿಸುತ್ತಿದ್ದರೆ ಅದು ಎಷ್ಟೋ ಉಪಯುಕ್ತವಾಗುತ್ತಿತ್ತು. ಸಂಯುಕ್ತ ಸಂಸ್ಥಾನದಲ್ಲಿ ಮುನಿಸಿಪಲ್ ಕೌನ್ಸಿಲಿನ ವಿಚಾರವಾಗಿ ಇತ್ತಂಡದವರ [illegible] ಪ್ರಯತ್ನದ ಫಲಿತಾಂಶವಾದರೂ ಇವರಿಗೆ ಬೋಧೆಯಾಗಲಾರದೆ? ರಾಷ್ಟ್ರೀಯಪಕ್ಷದವರಿಂದ ಕೌನ್ಸಿಲುಗಳು ಸ್ವಾಧೀನಮಾಡಿಕೊಂಡ ಬಳಿಕ ಇವು ಕೊಂಗ್ರೆಸ್ಸಿನ ಇಚ್ಛಾನುಸಾರಿಗೆ ಉಪಯೋಗಿಸತಕ್ಕ ಸಂಸ್ಥೆಗಳಾಗಿ ಹೋದರೆ ಇವುಗಳಿಂದ ಎಷ್ಟೋ ಉಪಯುಕ್ತ ಕಾರ್ಯಗಳಾಗಲಿಕ್ಕಿಲ್ಲವೆ? ಈ ಒಪ್ಪಂದದ ಕಾಲದಲ್ಲಿಯಾದರೂ ಸ್ವರಾಜ್ಯಪಾರ್ಟಿಯವರು ತಮ್ಮ ಅಮೂಲ್ಯ ಸಮಯವನ್ನು ಕೊಂಗ್ರೆಸ್ಸಿನ ಕಾರ್ಯಕ್ಕಾಗಿ ಉಪಯೋಗಿಸಿದ್ದರು. "ಒಪ್ಪಂದವಾಗುವುದು" "ಒಪ್ಪಂದವಾಗುವುದು" ಎಂಬ ಶಬ್ದಗಳಿಂದ ಜನರು ತಮಗೆ ಯಾವ ಅದರ ಜವಾಬ್ದಾರಿ ಅವಶ್ಯವಿಲ್ಲವೆಂದು ತಿಳಕೊಂಡು ನಿರುದ್ಯೋಗಿಗಳಾಗಿ ಒಬ್ಬರ ತಲೆಯನ್ನು ಇನ್ನೊಬ್ಬರು ಹೊಡೆಯುವ ಆಲೋಚನೆಯಲ್ಲಿದ್ದಾರೆ.

ಮುಂಬಯಿಯಲ್ಲಿ ತಾ. ೨೫ಕ್ಕೆ ನೆರೆಯಲಿಕ್ಕಿರುವ ಓಲ್ ಇಂಡಿಯಾ ಕೊಂಗ್ರೆಸು ಕಮಿಟಿಯ ಅಧಿವೇಶನಕಾಲದಲ್ಲಿ ಒಪ್ಪಂದವು ಆಗಬಹುದೆಂಬ ಆಸೆಯು ಇನ್ನೂ ಅನೇಕರನ್ನು ಬಿಟ್ಟಿಲ್ಲ. ಆದರೆ ಈ ಕನಸಿನ ಗಂಟನ್ನು ನಂಬಿಕೊಂಡು ಇರಬಾರದಾಗಿ ಸರ್ವರಿಗೂ ನನ್ನ ಅರಿಕೆಯಾಗಿರುತ್ತದೆ. ಮುಂದಕ್ಕೆ ಏನಾದರೂ ರಾಜಿ ಆಗಬೇಕಾದರೆ "ಕೌನ್ಸಿಲು ಬಹಿಷ್ಕಾರ"ವನ್ನು ಹಿಂದೆಳೆಯಬೇಕು, ಅಥವಾ ಅದನ್ನು ತತ್ಕಾಲಕ್ಕೆ ತಡಕಟ್ಟಿ ಇಡಬೇಕು. ಸ್ವರಾಜ್ಯಪಾರ್ಟಿಯವರಿಗೆ ಈ ವಿನಹ ಬೇರೆ ಯಾವ ವಿಲೇವಾರಿಯೂ ಯೋಗ್ಯವಾಗಿ ಕಾಣುವುದಿಲ್ಲ. ಹೇಗಿದ್ದರೂ ಈ ಪಾರ್ಟಿಯು ಮುಂದಕ್ಕೆ ಬರತಕ್ಕ ಚುನಾವಣೆಕಾಲದಲ್ಲಿ ಹೆಣಗಾಡುವುದೇನೋ ನಿರ್ವಿವಾದ. ಬ್ಯುರೋಕ್ರೆಸಿಯವರು ಮತ್ತು ಶಾಂತಪಕ್ಷದವರು ಇನ್ನೂ ಮೂರು ವರ್ಷಗಳ ವರೆಗೆ ಈಗಿರುವ ವಿಕಟ ಪಾರ್ಲಿಮೆಂಟಿನ ಆಳುವಿಕೆಯನ್ನು ಮುಂದರಿಸಬೇಕೆಂದಿರುವ ವೇಳೆ ಸುಮ್ಮನೆ ನಿಂತುಕೊಂಡು ನೋಡುವುದು ಅದು ಕೊಂಗ್ರೆಸ್ಸಿನ ಅಭಿಮಾನಿಯ ಕರ್ತವ್ಯವೊ ಎಂದು ನಾನು ಕೇಳುವೆನು. ಪಂಜಾಬದಲ್ಲಿ ನಾನು ಸಂಗ್ರಹಿಸಿದ ವರ್ತಮಾನವನ್ನು ನೀವು ತಿಳಿದರೆ ಪಂಜಾಬ ಕೌನ್ಸಿಲುಗಳೇ ಮತಭೇದವನ್ನು ಸೃಷ್ಟಿಗೊಳಿಸಲಿಕ್ಕೆ ಕಾರಣವು. ಇಂಥಾ ಕೌನ್ಸಿಲರರ ಆಳಿಕೆಯ ಒಳಗೆ, ಇನ್ನೊಂದು ಅವಧಿಯ ವರೆಗೆ ಜನರನ್ನು ಇರಗೊಳಿಸಿದರೆ ಇದೇ ನಮೂನೆಯ ಗೃಹಜ್ವಾಲೆಯು ಇತರ ಪ್ರಾಂತಗಳಲ್ಲೂ ಉಂಟಾಗಲಾರದು ಎಂಬ ಧೈರ್ಯವಸಿಯಾದರೂ ಹೇಗೆ? ಓಲ್ ಇಂಡಿಯಾ ಮತ್ತು ಪ್ರಾಂತಿಕ ಕಮಿಟಿಯ ಸದಸ್ಯರುಗಳನ್ನು ನಾನು ಕೆಳಗಿನಂತೆ ವಿಭಾಗಿಸುವೆನು.

೧. ಸ್ವರಾಜ್ಯಪಾರ್ಟಿಯವರಿಗೆ ಇಷ್ಟರೊಳಗೆ ಸೇರಿದ್ದವರು.

೨. ಈ ಪಾರ್ಟಿಗೆ ಸೇರಲಿಕ್ಕಿದ್ದವರು, ಆದರೆ ಒಪ್ಪಂದದ ಕಾರಣದಿಂದ ಹಿಂದೆ ಸರಿದವರು.

೩. ಗಯಾ ಕಾರ್ಯಕ್ರಮಕ್ಕೆ ಸಮ್ಮತಪಡದೆ ಇದ್ದಾಗ್ಯೂ, ಅದನ್ನು ಪರೀಕ್ಷೆಮಾಡಬೇಕೆಂಬ ಇಚ್ಛೆಪಟ್ಟವರು.

೪. ಕೊಂಗ್ರೆಸ್ಸಿನ ಠರಾವುಗಳು ತಮ್ಮ ಮತಗಳಿಗೆ ವಿರುದ್ಧವಾದವುಗಳಾದಾಗ್ಯೂ ಕೊಂಗ್ರೆಸ್ಸಿನಲ್ಲಿ ಒಡಕು ತರಲಿಕ್ಕೆ ಮನಸ್ಸಿಲ್ಲದವರು.

೫. ಗಯಾ ಕಾರ್ಯಕ್ರಮದಲ್ಲಿ ಹಿಂದೆ ನಂಬಿಗೆಯಿಟ್ಟು ಈಗ ಅದರ ಅನಿಷ್ಟವನ್ನು ನೋಡಿ ನಿಜತ್ವ ತಿಳಕೊಂಡವರು.

೬. ಚಂಚಲರು.

೭. ದೇಶೀಯರಿಗೆ ಸಂಪೂರ್ಣ ವಿರೋಧವಾದರೂ ಅಸಹಕಾರದಲ್ಲಿ ಬದಲಾವಣೆ ಮಾಡಲಿಕ್ಕೆ ಕಟ್ಟುಲು ವಾದಿಸದವರು.

ಈ ಪೈಕಿ ಕಡೆಯ ಪಂಗಡದವರನ್ನು ಬಿಟ್ಟು ಬಾಕಿಯವರನ್ನು ಕುರಿತು 'ಕರ್ತವ್ಯಶೂನ್ಯರಾಗಲಿಕ್ಕೆ ಇನ್ನೂ ಸಮಯವಾಗಲಿಲ್ಲವೇ' ಎಂದು ಪ್ರಶ್ನಿಸುವೆನು. ೬ನೇ ಪಂಗಡದವರನ್ನು ಉದ್ದೇಶಿಸಿ, 'ಕಾಯಿದೆ ಭಂಗವಾದದ್ದೇ ಹೇಗೆ?' ಎಂಬ ಸವಾಲನ್ನು ಹಾಕುವೆನು. ಜಬಲಪುರದ ಮತ್ತು ನಾಗಪುರದ ಕಾಯಿದೆ ಭಂಗದಲ್ಲಾದರೂ ನನಗೆ ಪ್ರೀತಿಯಿಲ್ಲ. ದಕ್ಷಿಣದಲ್ಲಿನ ಕೆಲ ಸ್ನೇಹಿತರ ಉಪ್ಪಿನ ಕಾಯಿದೆಯನ್ನು ಮುರಿಯಬೇಕೆಂದು ಮಾಡಿದ ಠರಾವು ನನ್ನನ್ನು ಸಮಾಧಾನಗೊಳಿಸುವುದಿಲ್ಲ. ಇವರಿಗೆ ಪ್ರಾಮಾಣಿಕತನದ ವಿಷಯ ಪ್ರಶ್ನಿಸಿದ್ದಲ್ಲಿ ನನಗೆ ಕುಟಿಲ ಉತ್ತರಗಳೇ ದೊರಕಿದವು.

೪ ಮತ್ತು ೫ನೇ ಪಂಗಡದವರ ಹಾದಿಯ ಸ್ಥಿತಿಯು ನನಗೆ ಒಗಟಾಗಿರುತ್ತದೆ. ಕೊಂಗ್ರೆಸಿನಲ್ಲಿ ಒಡಕಿನಿಂದ, ಕೊಂಗ್ರೆಸಿಗೆ ಕೇಡಾಗುವುದು ಎಂದು ಅವರು ಭಾವಿಸುವುದಾದರೆ ಕೊಂಗ್ರೆಸಿನ ಒಡಕು ಮೊದಲೇ ಆಗಿರುವುದು. [illegible] ಕೊಂಗ್ರೆಸ ಪರವಾಗಿ ಸ್ವರಾಜ್ಯ ಪಾರ್ಟಿಯ [illegible] ಚುನಾವಣೆ [illegible] ಸಂದೇಹಪಡುವವರಿಗೆ ನಾನು [illegible] ಕೇಳುವೆನು. [illegible] ಕೌನ್ಸಿಲುಗಳನ್ನು [illegible] ಕೊಂಗ್ರೆಸ್ಸನ್ನು [illegible] ಕಾಲದಲ್ಲಿಯಾದರೂ [illegible] ಮುಂಬಯಿಯ ಓಲ್ ಇಂಡಿಯಾ ಕೊಂಗ್ರೆಸ್ಸು ಕಮಿಟಿಯ ಅಧಿವೇಶನ ಕಾಲದಲ್ಲಿ ಒಪ್ಪಂದವಾಗುವುದೆಂದು [illegible] ಶ್ರೀಯುತ [illegible] ಮತ್ತು ನಾನು ಆ ಅಧಿವೇಶನಕ್ಕೆ ಹೋಗುವದಿಲ್ಲ. [illegible]

ಅನುಕ್ರಮಣಿಕೆ.

ಸ್ಫುಟವಿಚಾರಗಳು— ೬
೧, ೨, ೩, ೪. ಸ್ವರಾಜ್ಯಪಾರ್ಟಿಯವರ ಕಾರ್ಯಕ್ರಮ ,,
೫, ೬. ಇಂಡಸ್ಟ್ರಿಯಲ್ ಇಲಾಖೆಯ ಕಾರ್ಯ ,,
೭ ಉಪ್ಪಿನ ಸುಂಕ ,,
೮ ಪಟ್ಟಣದಲ್ಲಿ ನಡೆಯುವ ಕಳ್ಳತನ ೭
ಮಂಗಳೂರು— ,,
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ದಕ್ಷಿಣಕನ್ನಡ— ಮುಲ್ಕಿ, ಕಾಸರಗೋಡು ಬಂಟವಾಳ, ,,
ಮೋತಿಲಾಲನೇಹರುಗಳವರ ಸಂದೇಶ ,,
ಬೆಂಕಿಪೆಟ್ಟಿಗೆಯ ಕೈಗಾರಿಕೆ ೮
ಹಿಂದೂ ರಿಲಿಜಿಯಸ್ ಎನ್‌ಡೌಮೆಂಟ ಬೀಲು ,,
ಅಕ್ಕಲಕೋಟ ಮಹಾರಾಜರ ಮರಣದ ಖಟ್ಲೆ ,,
ಜೈಲಿನಿಂದ ಬಿಡುಗಡೆಯಾದ ಅಕಾಲಿಗಳು, ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕಫಂಡು.೪ ೪
ಇನ್ನಾದರೂ ಎಚ್ಚರವಾಗಿರಿ ಮತ್ತು ಕಾರ್ಯಕ್ಕೆ ಉದ್ಯುಕ್ತರಾಗಿರಿ ,,

ಸ್ವದೇಶಾಭಿಮಾನಿ

ಶಕ ೧೮೪೫ ವೈಶಾಖ ಬ| ೧೧ಯು ಶುಕ್ರವಾರ

ಸ್ಫುಟವಿಚಾರಗಳು.

೧. ಸ್ವರಾಜ್ಯ ಪಾರ್ಟಿಯವರ ಕಾರ್ಯಕ್ರಮವು ಬಹಳ ರಭಸದಿಂದ ಪ್ರಾರಂಭವಾಗಿರುವುದು. ಈ ತಂಡದ ಪ್ರಮುಖ ಮುಂದಾಳುಗಳಾದ ದೇಶಬಂಧು ಚಿತ್ತರಂಜನದಾಸ, ಪಂಡಿತ ಮೋತಿಲಾಲ್‌ನೇಹರು, ಹಕೀಮ ಅಜ್ಮಲ್‌ಖಾನ್, ಬ್ಯಾರಿಷ್ಟರರಾದ ಜಯಕರ್, ಶ್ರೀಯುತ ವಿ. ಜೆ. ಪಟೇಲ ಮೊದಲಾದವರು ದೇಶದ ಆಯಾ ಕಡೆಗಳಲ್ಲಿ ತಮ್ಮ ಪಕ್ಷದವರ ಸಾಧನ ಕ್ರಮಗಳನ್ನು ಸಾರುತ್ತಿದ್ದಾರೆ. ಸ್ವರಾಜ್ಯ ಸ್ಥಾಪನೆಯ ಬಗ್ಗೆ ಈ ತಂಡದ ಕಾರ್ಯಕ್ರಮವು ಹೇಗೆ ಅನುಕೂಲವಾಗಿರುವದೆಂಬುದು ಮೋತಿಲಾಲನೇಹರು ಮೊದಲಾದ ದೇಶಭಕ್ತರು ಪ್ರಕಟಗೊಳಿಸಿದ ಸಂದೇಶಗಳಿಂದ ವ್ಯಕ್ತವಾಗುವುದು. ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯವರ ಮೆಂಬರರಿಗೂ ಮತ್ತು ಆಯಾ ಸಂಸ್ಥಾನದ ಪ್ರಾಂತಿಕ ಕಮ್ಮಿಟಿಯ ಮೆಂಬರರಿಗೂ ಮೋತಿಲಾಲನೇಹರುಗಳವರು ಬರೆದು ಕಳುಹಿಸಿದ ಸಂದೇಶದಲ್ಲಿ ಕಳೆದ ಫೆಬ್ರವರಿ ತಿಂಗಳ ತಾ. ೨೮ರಲ್ಲಿ ಕೊಂಗ್ರೆಸ್ ಪಾರ್ಟಿಗಳು ತಮ್ಮೊಳಗೆ ಮಾಡಿಕೊಂಡ ಒಪ್ಪಂದದಿಂದ ಉಭಯ ತಂಡದವರಿಗೂ ಯಾವ ಪ್ರಯೋಜನವೂ ಉಂಟಾಗದೆ ಸ್ವರಾಜ್ಯ ಪಾರ್ಟಿಯವರಿಗೆ ಮಾತ್ರ ಯಾವ್ಯಾವ ಅನನುಕೂಲತೆಗಳು ಉಂಟಾದವು ಎಂಬದು ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಕಳೆದ ಎಪ್ರಿಲ್ ೩೦ರೊಳಗೆ ಆಯಾ ಸಂಸ್ಥಾನಗಳ ಮುಖ್ಯ ಪಟ್ಟಣಗಳಲ್ಲಿ ಸ್ವರಾಜ್ಯಪಾರ್ಟಿಯ ಕಮ್ಮಿಟಿಗಳನ್ನು ಸ್ಥಾಪಿಸುವ ಕೆಲಸವನ್ನು ಸಂಪೂರ್ಣಗೊಳಿಸಬೇಕೆಂದು ಸ್ವರಾಜ್ಯ ಪಕ್ಷದವರ ಉದ್ದೇಶವಿತ್ತು. ರಾಜಿಪ್ರಸ್ತಾಪದಿಂದ ಈ ಕಾರ್ಯವು ಉದ್ದೇಶಿಸಿದಂತೆ ನೆರವೇರಲಿಲ್ಲ. ರಾಜಿಪ್ರಸ್ತಾಪವು ಏನೂ ಫಲವಿಲ್ಲದೆ ಬಿದ್ದುಹೋದರೂ ಇನ್ನೂ ಇದರಿಂದ ಪ್ರಯೋಜನ ಉಂಟಾಗಬಹುದೆಂಬ ಕೋರಿಕೆಯು ಹಲವರಲ್ಲಿರಬಹುದು. ರಾಜಿಯ ಸಾಧನೆಗೆ ಒಂದೆ ಮಾರ್ಗವಿರುವುದು. ಇದು ಕೌನ್ಸಿಲಪ್ರವೇಶ. ಈ ಮಾರ್ಗಕ್ಕೆ ಸಮ್ಮತಿಯಿಲ್ಲದೆ ಹೋದರೆ ಒಪ್ಪಂದವೆಂಬುದೇ ಅಸಾಧ್ಯ. ಹೇಗೂ ಸ್ವರಾಜ್ಯಪಕ್ಷದವರು ಕೌನ್ಸಿಲಪ್ರವೇಶವನ್ನು ಸಾಧಿಸಿಯೇ ಬಿಡುವರು. ಕೊಂಗ್ರೆಸ್ಸಿನ ಸ್ವರಾಜ್ಯಪಕ್ಷದವರು ಕೌನ್ಸಿಲುಗಳಲ್ಲಿ ಇಲ್ಲದೆ ಕೊಂಗ್ರೆಸ್ಸಿನ ಧ್ಯೇಯಕ್ಕೆ ಉಂಟಾಗುವ ತೊಡಕುಗಳ ಉದಾಹರಣಾರ್ಥವಾಗಿ ಪಂಜಾಬಿನ ನಿದರ್ಶನವನ್ನು ಪಂಡಿತರು ತೋರಿಸಿಕೊಟ್ಟಿರುವರು. ಪಂಜಾಬಿನ ಕೌನ್ಸಿಲಿನಲ್ಲಿ ನಡೆದ ವಾದವಿವಾದಗಳನ್ನೂ ಕಾರ್ಯ ವಿವರವನ್ನೂ ಸರಿಯಾಗಿ ಪರಿಶೀಲಿಸಿ ನೋಡಿದ್ದಲ್ಲಿ ಹಿಂದೂ-ಮುಸಲ್ಮಾನರಲ್ಲಿ ಈ ಕೌನ್ಸಿಲು ಮೂಲಕ ಐಕ್ಯವು ಉಂಟಾಗುವ ಬದಲಿಗೆ ನಿರಂತರವಾದ ಮನಃಕ್ಲೇಶಕ್ಕೆ ಈ ಕೌನ್ಸಿಲು ಆಸ್ಪದಕೊಡುತ್ತಿದೆ ಎಂಬುದು ಖಚಿತವಾಗುವುದು. ಕೊಂಗ್ರೆಸ್ಸಿನ ಪ್ರತಿನಿಧಿಗಳು ಇಂಥಾ ಕೌನ್ಸಿಲಿನಲ್ಲಿ ಇಲ್ಲದಿರುವದೇ ಈ ಅನರ್ಥಕ್ಕೆ ಕಾರಣ. ಕೊಂಗ್ರೆಸ್ಸು ಪಕ್ಷದವರು ಕೌನ್ಸಿಲಿನಲ್ಲಿರುವುದು ಉಚಿತವೋ ಅಗತ್ಯವೋ ಹೇಗೆಂಬುದನ್ನು ಈ ಪತ್ರದಲ್ಲಿ ಪದೇ ಪದೇ ಸಂದರ್ಭಾನುಸಾರ ತೋರಿಸಿಕೊಟ್ಟಿರುವೆವು. ಪಂಡಿತ ಮೋತಿಲಾಲನೇಹರುಗಳವರ ಸಂದೇಶವು ಈ ಮತಕ್ಕೆ ಮತ್ತಷ್ಟು ಪುಷ್ಟಿಯನ್ನೂ ಕಾರ್ಯಜಾಗ್ರತಿಯನ್ನೂ ಕೊಡುವುದು.

೨. ಗಯಾಕೊಂಗ್ರೆಸ್ಸಿನ ನಿರ್ಣಯದಲ್ಲಿ ವಿಶ್ವಾಸವಿದ್ದವರಿಗೆ ಈ ನಿರ್ಣಯವು ಕಾರ್ಯತಃ ಸಾಧ್ಯವಲ್ಲವೆಂಬುದು ದಿನೇ ದಿನೇ ರುಜುವಾಗುತ್ತ ಬರುತ್ತದೆ. ಸ್ವಯಂಸೇವಕರ ಮತ್ತು ಸಂಗ್ರಹಿಸಬೇಕೆಂದು ನಿಶ್ಚಿತವಾದ ಮೊಬಲಗಿನ ಸಂಗತಿ ಹಾಗಿರಲಿ. ಸಿವಿಲ್ ಡಿಸ್‌ಒಬ್ಬಿಡಿಯನ್ಸನ್ನು ಬೇಡ ಪಕ್ಷದವರು ಹೇಗೂ ಜಾರಿಗೆತರಬೇಕೆಂದು ನಿಶ್ಚಯಿಸಿರುವರು. ಯಾವ ವಿಧಾನಗಳಿಂದ ಎಂಬದು ಯಾರಿಂದಲೂ ಹೇಳಲಾಗುವುದಿಲ್ಲ. ಜಬಲಪುರದಲ್ಲಿ ನಡೆದ ಸ್ವರಾಜ್ಯಧ್ವಜದ ವಿಧಾನವನ್ನು ನಾಗಪುರದಲ್ಲಿಯೂ ಸಾಧಿಸುವಂತೆ ತೋರುತ್ತದೆ. ದಕ್ಷಿಣ ಹಿಂದೂಸ್ಥಾನದ ಕೆಲವು ಪ್ರಾಂತ್ಯಗಳಲ್ಲಿ ಉಪ್ಪಿನ ಸುಂಕವನ್ನು ನಿರಾಕರಿಸಿ ಆ ರೀತಿ ಸಿವಿಲ್ ಡಿಸ್‌ಒಬ್ಬಿಡಿಯನ್ಸನ್ನು ಜಾರಿಗೆತರಬೇಕೆಂದು ಯೋಚಿಸಿದ್ದಾರೆಂತ ತಿಳಿದುಬರುತ್ತದೆ. ಇಂಥಾ ವಿಧಾನಗಳಿಂದ ಕೊಂಗ್ರೆಸ್ಸು ಕಾರ್ಯಕ್ರಮವನ್ನರಿತ ಕೆಲವರನ್ನು ತುರಂಗವಾಸಕ್ಕೆ ಕಳುಹಿಸಿಕೊಡುವ ಫಲಪ್ರಾಪ್ತಿಯನ್ನು ಬರಮಾಡಿಕೊಳ್ಳುವರಲ್ಲದೆ ಸಿವಿಲ್ ಡಿಸ್‌ಒಬ್ಬಿಡಿಯನ್ಸಿನ ಇಂಥಾ ವಿಧಾನವು ಹೇಗೆ ಯಶಸ್ವಿಯಾದೀತೆಂಬುದು ಗೊತ್ತಾಗುವುದಿಲ್ಲ. ಇಂಥಾ ಸಂದರ್ಭದಲ್ಲಿ—ಗಯಾಕೊಂಗ್ರೆಸ್ಸಿನ ನಿರ್ಣಯದ ಫಲವು ಈ ರೀತಿ ತೋರಿಬರುವಾಗ ಸ್ವರಾಜ್ಯ ತಂಡದವರು, ಈ ತಂಡವನ್ನು ಸೇರಬೇಕೆಂತ ನಿಶ್ಚಯಿಸಿ ಉಭಯ ತಂಡದವರಲ್ಲಿ ಒಪ್ಪಂದವು ಹೇಗೆ ಪರಿಣಮಿಸುವುದೆಂದು ಕಾದುನಿಂತವರು, ಮತ್ತು ಗಯಾ ಕೊಂಗ್ರೆಸ್ಸಿನ ಬಹುಮತದ ಪರೀಕ್ಷಾರ್ಥ ಸಾಧನೆಯನ್ನು ನೋಡುವ ಎಂತ ಬೇಡಪಕ್ಷದವರನ್ನು ಆದರಿಸಿದಂಥವರು,—ಇವರೆಲ್ಲರು ಇನ್ನೂ ತಟಸ್ಥಭಾವದಲ್ಲಿರದೆ ಕೂಡಲೆ ಕಾರ್ಯಸನ್ನದ್ಧರಾಗಬೇಕೆಂದು ಪಂಡಿತ ನೇಹರುಗಳು ತಮ್ಮ ಸಂದೇಶದಲ್ಲಿ ವಿಜ್ಞಾಪಿಸಿಕೊಂಡಿರುತ್ತಾರೆ.

೩. ಪಂಡಿತ ಮೋತಿಲಾಲನೇಹರುಗಳ ಸಂದೇಶವು ಈ ರೀತಿ ಅಲ್ಲಹಾಬಾದಿನಿಂದ ಕೇಳಿಸುತ್ತಿರುವಾಗ ಮುಂಬಯಿಯಲ್ಲಿ ಈ ಸಂದೇಶದಲ್ಲಿ ನಿರೂಪಿಸಿದ ಪ್ರಕಾರ ಕಾರ್ಯಪ್ರಾರಂಭವು ಆಗಿರುವುದು. ಸ್ವರಾಜ್ಯಪಾರ್ಟಿಯ ಶಾಖೆಯು ಶ್ರೀಯುತ ನಟರಾಜನ್‌ರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟು ಇದಕ್ಕೆ ಬೇಕಾದ ಅಧಿಕಾರಿಗಳು ಸಹ ನೇಮಿಸಲ್ಪಟ್ಟಿರುವರು. ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿಯೂ ಕೌನ್ಸಿಲುಗಳಲ್ಲಿಯೂ ಸ್ವರಾಜ್ಯ ತಂಡದವರಿಗೆ ಸ್ಥಳಗಳು ಸಿಕ್ಕುವಂತೆ ಯುಕ್ತವಿರುವ ಚಳವಳವನ್ನು ಕೂಡಲೇ ಕೈಕೊಳ್ಳುವುದು ಅಗತ್ಯವಿರುವುದು. ಸರಕಾರದ ಸದುದ್ದೇಶಗಳನ್ನೇ ಆದರಿಸಿಕೊಂಡಿರುವದು ಯುಕ್ತವಲ್ಲ. ಏಕೆಂದರೆ ಸರಕಾರದ ಉದ್ದೇಶಗಳು ಪ್ರಜಾಭಿಪ್ರಾಯಬಲದಿಂದ ಪ್ರೇರೇಪಿಸಲ್ಪಡಬೇಕಲ್ಲದೆ ಸರಕಾರಕ್ಕೆನೇ ಕೆಟ್ಟದಾದ ಅಥವಾ ಒಳ್ಳೇದಾದ ಉದ್ದೇಶಗಳು ತನ್ನಂತೆಯೇ ಇರುವುದು ಸಾಧ್ಯವಲ್ಲ. ಆದ್ದರಿಂದ ತಕ್ಕದಾದ ಶಿಕ್ಷಣದಿಂದ ಪ್ರಜಾಭಿಪ್ರಾಯವನ್ನು ವ್ಯವಸ್ಥೆಗೊಳಿಸಿ ಇಂಥಾ ಅಭಿಪ್ರಾಯದ ಪ್ರಕಾರ ಸರಕಾರದ ಉದ್ದೇಶಗಳನ್ನು ಮಾರ್ಪಡಿಸಿ ಸ್ವರಾಜ್ಯ ಸಾಧನೆಯನ್ನು ಸಾಧಿಸುವುದು ಸ್ವರಾಜ್ಯತಂಡದವರ ಮುಖ್ಯ ತಂತ್ರವಾಗಿದೆ. ಸ್ವರಾಜ್ಯಪಾರ್ಟಿಯ ಶಾಖೆಯು ಮುಂಬಯಿಯಲ್ಲಿ ಸ್ಥಾಪಿಸಲ್ಪಡುವ ಕಾಲದಲ್ಲಿ ಶ್ರೀಯುತ ಜಯಕರರು ಮಾಡಿದ ಭಾಷಣದಲ್ಲಿ ಇವರು ತಮ್ಮ ಪಾರ್ಟಿಯವರ ಕಾರ್ಯಸಾಧನೆಯನ್ನು ವಿವರಿಸಿದರು. ಸುರತಿನಲ್ಲಿ ಸ್ವರಾಜ್ಯ ಪಾರ್ಟಿಯ ಮಾಹಿತಿಯು ಜನರಿಗೆ ದೊರಕಿ ಈ ಪಾರ್ಟಿಯ ಪರವಾಗಿ ಸಹಾನುಭೂತಿಯು ಉಂಟಾಗುವಂತೆ ಶ್ರೀಯುತ ವಿ. ಜೆ. ಪಟೇಲರವರು ಅಲ್ಲಲ್ಲಿ ಸಭೆಗಳನ್ನು ಕೂಡಿಸಿ ಭಾಷಣಗಳನ್ನು ಕೊಡುತ್ತಿದ್ದಾರೆ. ಶಾಂತಪಕ್ಷದವರು ಪ್ರಕೃತ ಕೌನ್ಸಿಲುಗಳನ್ನು ಆಕ್ರಮಿಸಿರುವುದರಿಂದ ಅಸಹಕಾರದ ಚಳವಳಕ್ಕೆ ವಿಶೇಷ ಹಾನಿಯುಂಟಾಗಿರುವುದು. ರೆಡಿಂಗ್ ದೊರೆಗಳು ವ್ಯಾಸರಾಯರಾಗಿ ಬಂದ ಕೂಡಲೆ ಅಸಹಕಾರ ಚಳವಳದ ತೀಕ್ಷ್ಣತೆಯನ್ನು ನೋಡಿಕೊಂಡು ಮಹಾತ್ಮಾಗಾಂಧಿಗಳ ಅಪೇಕ್ಷೆಯನ್ನು ಕೈಗೂಡಿಸುವುದರಲ್ಲಿದ್ದರು. ಆದರೆ ಕೌನ್ಸಿಲುಗಳಲ್ಲಿದ್ದ ಅವರ ಸುತ್ತಮುತ್ತಲಿರುವ ಮೊಡರೇಟ ಪಕ್ಷದವರ ಧೋರಣವನ್ನು ನೋಡಿಕೊಂಡು ವ್ಯಾಸರಾಯರ ಅಭಿಮತವು ಬದಲಾಯಿತು. ಆದ್ದರಿಂದ ಅನಂತರ ಕೂಡಿದ ರೌಂಡ್ ಟೇಬಲ ಕೊನ್ಫರೆನ್ಸ್ ನಿಷ್ಫಲವಾಗಿ ಹೋಯಿತು. ಈ ಕಾರಣ ಬಿರೋಕ್ರಸಿಯೂ ಮೊಡರೇಟರೂ ಒಟ್ಟುಕೂಡುವದು ದೇಶಹಿತ ದೃಷ್ಟಿಯಲ್ಲಿ ಅಪಾಯಕರವಾಗಿದೆ. ಇವರು ಒಟ್ಟು ಸೇರುವಂಥಾ ಸ್ಥಳಗಳು ಲೋಕಲ್ ಬೋರ್ಡುಗಳು, ಕೌನ್ಸಿಲುಗಳು ಮೊದಲಾದವು. ಇವುಗಳಲ್ಲಿ ಮೊಡರೇಟರಿಗೆ ಸ್ಥಳ ದೊರಕದಂತೆ ಮಾಡಿದ ಪಕ್ಷದಲ್ಲಿ ಸ್ವರಾಜ್ಯ ಸಾಧನೆಯ ಮಾರ್ಗವು ಬಹಳ ಮಟ್ಟಿಗೆ ಸುಲಭವಾಗುವುದು. ಸಿವಿಲ್ ಡಿಸ್‌ಒಬಿಡಿಯನ್ಸ್ ಮತ್ತು ಬಹು ಪಕ್ಷವಾಗಿ ತೆರಿಗೆಯ ನಿರಾಕರಣೆಯನ್ನು ಸಾಧಿಸುವಂಥಾದ್ದು ಪ್ರಕೃತಕ್ಕೆ ಸಾಧ್ಯವಲ್ಲ. ಕೊಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮವನ್ನು ಪೂರೈಸುವ ಬಗ್ಗೆ ಜನರಲ್ಲಿ ಬೇಕಾದ ಜಾಗ್ರತಿಯನ್ನು ಹುಟ್ಟಿಸುವ ಉದ್ದೇಶದಿಂದ ಒಬ್ಬೊಬ್ಬ ವ್ಯಕ್ತಿಯು ಯಾತನೆಗೆ ಗುರಿಯಾಗುವ ವಿಧಾನಗಳನ್ನು ಕೈಕೊಳ್ಳುವುದರಿಂದ ಫಲವಿಲ್ಲ. ಇಂಥಾ ವಿಧಾನಗಳಿಂದ ಕೊಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮವೇ ಕೆಟ್ಟುಹೋಗುವುದು. ಏಕೆಂದರೆ ಇಂಥಾ ಕಾರ್ಯಕ್ರಮದ ಸಾಧನೆಯನ್ನು ಸಾಗಿಸುವಂಥ ವ್ಯಕ್ತಿಗಳು ಒಬ್ಬೊಬ್ಬರೇ ಜೈಲಿಗೆ ಹೋಗುವದರಿಂದ ವಿಧಾಯಕ ಕಾರ್ಯಕ್ರಮವೇ ನಿಂತುಹೋಗುವುದು. ಇಷ್ಟು ಶ್ರೀಯುತ ವಿ. ಜೆ. ಪಟೇಲರ ಅಂಬೋಣ.

೪. ಸ್ವರಾಜ್ಯ ಪಾರ್ಟಿಯವರ ಸಾಧನಾ ಮಾರ್ಗವು ಹೇಗೆ ಏಕರೂಪತೆಯನ್ನು ಹೊಂದಿದೆಂಬುದನ್ನು ಈ ಪಾರ್ಟಿಯ ಮುಖಂಡರ ಮೇಲೆ ಪ್ರಸ್ತಾಪಿಸಿದ ಅಂಬೋಣಗಳಿಂದ ಸ್ಪಷ್ಟವಾಗುವುದು. ಕೌನ್ಸಿಲುಗಳನ್ನು ಪ್ರವೇಶಿಸುವುದು ಏ[illegible] ಅವುಗಳನ್ನು ಪ್ರವೇಶಿಸಿದನಂತರ ಕಾರ್ಯಸಾಧನೆ ಹೇಗೆ ಎಂ[illegible] ಸಂಶಯಚಿತ್ತರಾಗಿರುವಂಥವರಿಗೆ ಮುಖಂಡರ ಮೇಲಣ ಸ್ಪಷ್ಟೋಕ್ತಿಗಳಿಂದ ಇಂಥಾ ಸಂಶಯದ ನಿವಾರಣೆಯಾಗುವದು. ಸ್ವರಾಜ್ಯ ಪಾರ್ಟಿಯವರ ಸಾಧನಾಮಾರ್ಗವನ್ನು ಮತ್ತಷ್ಟು ಸ್ಪಷ್ಟವಾಗಿ ತಿಳಿಯಬೇಕಾದರೆ ಇದೇ ತಿಂಗಳ ತಾ. ೮ರ ಬುಲ್ಡಾನಾದಲ್ಲಿ ಜರುಗಿದ ಮಧ್ಯ ಮತ್ತು ಬೆರಾರ ಪ್ರಾಂತಿಕ ಕೊನ್ಫರೆನ್ಸಿನ ಅಧ್ಯಕ್ಷರಾದ ದೇಶಬಂಧು ಶ್ರೀಯುತ ಚಿತ್ತರಂಜನದಾಸರವರು ಕೊಟ್ಟ ಭಾಷಣದಲ್ಲಿ ಅಪ್ಪಣೆಕೊಡಿಸಿದ ಅಭಿಪ್ರಾಯವನ್ನು ಪರಿಶೀಲಿಸುವುದು ಆಗತ್ಯ. ಗಯಾ ಕೊಂಗ್ರೆಸ್ಸಿನಲ್ಲಿ ನಿರ್ಣಯಿಸಲ್ಪಟ್ಟ ಕಾರ್ಯಕ್ರಮದಿಂದ ಕೊಂಗ್ರೆಸ್ಸಿನ ಸ್ವರಾಜ್ಯಧ್ಯೇಯದ ಉದ್ದೇಶವು ಶೀಘ್ರದಲ್ಲಿ ನೆರವೇರದು. ಬದಲಾವಣೆಯು ಅಗತ್ಯ. ಆ ಕಾರಣ ಸ್ವರಾಜ್ಯ ಪಾರ್ಟಿಯು ನೂತನವಾಗಿ ಸ್ಥಾಪಿಸಲ್ಪಟ್ಟಿತು. ಕೊಂಗ್ರೆಸ್ಸನ್ನು ಬಿಟ್ಟುಹೋಗುವುದು ಎಂದೂ ತನ್ನ ಪಾರ್ಟಿಯ ಅಭಿಮತವಲ್ಲ. ಕೈಲಾಸವಾಸಿ ಲೋಕಮಾನ್ಯತಿಲಕರವರಿಂದ ಉದ್ದೇಶಿಸಲ್ಪಟ್ಟಂಥ ರಿಸ್ಪೊನ್ಸೀವ್ ಕೊಒಪರೇಶನಿನ ತತ್ವವನ್ನಾಧರಿಸಿ ಅಸಹಕಾರವನ್ನು ಸಾಧಿಸುವುದೇ ಸ್ವರಾಜ್ಯಪಾರ್ಟಿಯವರ ಮುಖ್ಯ ಧ್ಯೇಯ. ಎಂದರೆ ಅಸಹಕಾರಯೋಗದ ಭಾವನಾಮಾರ್ಗದಿಂದ ವಿಂಗಡಿಸಲ್ಪಟ್ಟ ಕಾರ್ಯಸಾಧನೆಯ ವಿಚಾರಮಾರ್ಗವು. ಇದು ನೂತನವಾದದ್ದಲ್ಲ. ಇದರ ಅವಲಂಬನೆಯನ್ನು ಸಾರಿಕೊಂಡು ದೇಶಬಂಧುಗಳವರು ಮದರಾಸಿಗೆ ಸದ್ಯಕ್ಕೆ ಬರುವರು. ಅಲ್ಲಿಂದ ಈ ಸಂಸ್ಥಾನದ ಮುಖ್ಯ ಪಟ್ಟಣಗಳನ್ನು ಸಂದರ್ಶಿಸಲಿಕ್ಕಿರುವರು. ಈ ಸಂದರ್ಭದಲ್ಲಿ ಸ್ವರಾಜ್ಯ ಪಾರ್ಟಿಯ ಕಮ್ಮಿಟಿಗಳನ್ನು ಅಲ್ಲಲ್ಲಿ ಸ್ಥಾಪಿಸಬೇಕೆಂಬುವ ಸೂಚನೆಯಿದೆ. ನಮ್ಮ ಪ್ರಾಂತದಲ್ಲಿಯೂ ಈ ಪಾರ್ಟಿಯವರ ಕಮ್ಮಿಟಿಯು ಸ್ಥಾಪಿಸಲ್ಪಡುವುದಾಗಿ ಕೋರುತ್ತೇವೆ.

೫. ಮಿ. ಎಮ್. ಇ. ಕೋಚ್‌ಮೆನ್ ಸಾಹೇಬರವರು ಅಧ್ಯಕ್ಷರಾಗಿ ೧೯೨೨ನೇ ಎಪ್ರಿಲ್ ತಿಂಗಳಲ್ಲಿ ಈ ಸಂಸ್ಥಾನದಲ್ಲಿ ಕೈಗಾರಿಕೆಯ ಶಿಕ್ಷಣದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ರಿಪೋರ್ಟು ಮಾಡಬೇಕೆಂದು ನೇಮಿಸಲ್ಪಟ್ಟ ಕಮ್ಮಿಟಿಯವರ ರಿಪೋರ್ಟು ಪ್ರಕಟಿಸಲ್ಪಟ್ಟಿರುವುದು. ಸಂಸ್ಥಾನದ ಇಂಡಸ್ಟ್ರಿಯಲ್ ಶಾಲೆಗಳನ್ನು ವಿದ್ಯಾಖಾತೆಯ ಮೇಲ್ವಿಚಾರದಲ್ಲಿರಿಸದೆ ಡಿರೆಕ್ಟರ್ ಒಫ್ ಇಂಡಸ್ಟ್ರಿಸ್ ಇವರ ಮೇಲ್ವಿಚಾರದಲ್ಲಿಯೇ ಇರಿಸಬೇಕೆಂದು ಕಮ್ಮಿಟಿಯಲ್ಲಿ ಸರ್ವಸಮ್ಮತವಾದ ಅಭಿಪ್ರಾಯವಾಗಿರುವುದು. ಸರಕಾರದವರು ಇಂಡಸ್ಟ್ರಿಯಲ್ ಮೊಡೆಲ್ ಶಾಲೆಗಳನ್ನು ಈ ಸಂಸ್ಥಾನದ ಆಯಾ ಕಡೆಗಳಲ್ಲಿ ಸ್ಥಾಪಿಸುವುದು ಆಗತ್ಯವೆಂದು ಕಮ್ಮಿಟಿಯವರು ಸೂಚಿಸಿರುವರು. ತತ್ಕಾಲದಲ್ಲಿ ಸಿಡೆಡ್ ಡಿಸ್ಟ್ರಿಕ್ಟುಗಳಲ್ಲಿ ಒಂದು, ನೊರ್ಥನ್ ಸರಕಾರಗಳಲ್ಲಿ ಒಂದು, ಪಶ್ಚಿಮ ಕರಾವಳಿಯಲ್ಲಿ ಒಂದು ಈ ರೀತಿ ಮೂರು ಶಾಲೆಗಳು ಬೇಗನೆ ಸ್ಥಾಪಿಸಲ್ಪಡುವವು. ಲೋವರ್ ಎಲಿಮೆಂಟರಿ ಶಾಲೆಗಳಲ್ಲಿ ಪಾಸಾದವರಿಗೆ ಸಹ ಈ ಶಾಲೆಗಳಲ್ಲಿ ಪ್ರವೇಶವು ಸಾಧಾರಣವಾಗಿ ದೊರಕುವುದು. ಮದ್ರಾಸಿನಲ್ಲಿ ಇನ್ನೊಂದು ಟ್ರೇಡ್ ಸ್ಕೂಲನ್ನು ಸ್ಥಾಪಿಸುವ ಹಂಚಿಕೆಯನ್ನು ಕಮ್ಮಿಟಿಯವರು ಶಿಫಾರಸು ಮಾಡಿರುತ್ತಾರೆ. ಕಾರ್ಖಾನೆಗಳಿಗೆ ಮತ್ತು ಮಿಲ್ಲುಗಳಿಗೆ ಬೇಕಾಗುವ ಉಮೇದ್ವಾರರನ್ನು ತಯಾರಿಸುವುದು ಈ ಶಾಲೆಯ ಉದ್ದೇಶವಾಗಿರುವುದು. ಪ್ರೈಮರಿ ಅಥವಾ ಮಿಡ್ಲ ಸ್ಕೂಲ್ ಪರೀಕ್ಷೆ ಪಾಸಾದವರನ್ನು ಈ ಶಾಲೆಯಲ್ಲಿ ತಕ್ಕೊಂಡು ಅವರಿಗೆ ಅಲ್ಲಿ ಕೊಡೋಣಾಗುವ ಸಾಮಾನ್ಯ ಶಿಕ್ಷಣದೊಂದಿಗೆ ಕಾರ್ಖಾನೆಗಳಲ್ಲಿಯ ಕಲಾಕೌಶಲ್ಯವನ್ನು ಬೇಗನೆ ತಿಳಿದುಕೊಳ್ಳುವ ರೀತಿಯ ಕೈಗಾರಿಕೆಯ ಶಿಕ್ಷಣವನ್ನು ಇಂಥಾ ಶಾಲೆಯಲ್ಲಿ ಕೊಡಬೇಕೆಂದು ಸೂಚಿಸಿರುತ್ತಾರೆ. ಮದ್ರಾಸಿನ ಪಿ. ಒರ್ ಎಂಡ ಸನ್ಸ್, ಎಡಿಸನ್ ಎಂಡ್ ಕೊ. ಮತ್ತು ಇಲ್ಲಿಯ ಕೊಮನ್‌ವೆಲ್ತ ಇಂಜಿನಿಯರಿಂಗ್ ವರ್ಕ್ಸ ಈ ಮೂರು ಕಡೆಗಳಲ್ಲಿ ತಮ್ಮ ಕಾರ್ಖಾನೆಗಳೊಟ್ಟಿಗೆ ಶಾಲೆಗಳನ್ನು ತೆರೆದಿರುತ್ತಾರೆ. ಇಂಥಾ ಶಾಲೆಗಳು ಹೆಚ್ಚಿನದಾಗಿ ಕಾರ್ಖಾನೆದಾರರಿಂದ ಸ್ಥಾಪಿಸಲ್ಪಡುವಂತೆ ಸರಕಾರದವರು ತಕ್ಕ ಪ್ರೋತ್ಸಾಹವನ್ನು ಕೊಡಬಹುದೆಂಬುದಾಗಿ ಸಹ ಸೂಚಿಸಿರುವರು. ಲೋಕಲ್ ಬೋರ್ಡುಗಳಿಂದ ಇಂಥಾ ಶಾಲೆಗಳನ್ನು ಏರ್ಪಡಿಸುವುದಕ್ಕಿಂತ ವಿದ್ಯಾರ್ಥಿ ವೇತನಗಳನ್ನು ಲೋಕಲ್‌ಬೋರ್ಡುಗಳಿಂದ ಈ ಶಾಲೆಗಳಲ್ಲಿ ಕಲಿಯುವಂಥವರಿಗೆ ಕೊಡೋಣಾದರೆ ಸಾಕೆಂತ ಕಮ್ಮಿಟಿಯವರ ಅಭಿಪ್ರಾಯ. ಸಾಮಾನ್ಯ ಶಾಲೆಗಳಲ್ಲಿ ಕೈಗಾರಿಕೆ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಬೇಕೆಂತ ಕೆಲವರ ಅಭಿಪ್ರಾಯವಿದ್ದರೂ ಕಮ್ಮಿಟಿಯಲ್ಲಿ ಬಹುಮತದವರು ಇಷ್ಟು ಐಚ್ಛಿಕ ಶಿಕ್ಷಣವಾಗಿದ್ದರೆ ಸಾಕೆಂತ ಅಭಿಪ್ರಾಯ ಪಟ್ಟಿರುತ್ತಾರೆ. ಡೈರೆಕ್ಟರ್ ಒಫ್ ಇಂಡಸ್ಟ್ರಿಸ್ ಇವರ ಅಭಿಪ್ರಾಯವೂ ಈ ವಿಷಯದಲ್ಲಿ ಸಹ ಪ್ರತಿಕೂಲವೇ ಆಗಿರುವುದು. ಗಿಂಡಿಯಲ್ಲಿರುವ ಇಂಜಿನಿಯರಿಂಗ್ ಕೊಲೇಜನ್ನು ಟೆಕ್ನಾಲೊಜಿಕಲ್ ಇನ್ಸ್‌ಟಿಟ್ಯೂಟಾಗಿ ಏರ್ಪಡಿಸಬಹುದೆಂತ ಕಮ್ಮಿಟಿಯವರ ಸೂಚನೆ ಇರುವುದಲ್ಲದೆ ಬೆಂಗಳೂರಿನಲ್ಲಿರುವ ರಿಸರ್ಚ ಇನ್ಸ್‌ಟಿಟ್ಯೂಟಿನಲ್ಲಿ ಈ ಸಂಸ್ಥಾನದಿಂದ ವಿದ್ಯಾರ್ಥಿಗಳಿಗೆ ಆಸ್ಪದ ದೊರಕುವಂತೆ ರೂ. ೫೦,೦೦೦ದ ವರ್ಷಾಸನವನ್ನು ಬೆಂಗಳೂರು ರಿಸರ್ಚ ಇನ್ಸ್‌ಟಿಟ್ಯೂಟಿಗೆ ಕೊಡಬಹುದೆಂದು ಶಿಫಾರಸು ಮಾಡಿರುವರು.

೬. ಮೇಲೆ ಪ್ರಸ್ತಾಪಿಸಲ್ಪಟ್ಟ ಕೋಚ್‌ಮೆನ್ ಕಮ್ಮಿಟಿಯವರು ಇದೇ ಶಿಕ್ಷಣದ ಪರಿಸ್ಥಿತಿಯನ್ನು ಸ್ತ್ರೀ ಶಿಕ್ಷಣದಲ್ಲಿ ಸೇರುವಮಾಡಿಕೊಂಡು ಅದರ ಅಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಸೂಚಿಸುವರೆ ಮೂರು ಜನ ಸ್ತ್ರೀಯರ ಉಪಕಮ್ಮಿಟಿಯನ್ನು ನೇಮಿಸಿದ್ದರು. ಈ ಉಪಕಮ್ಮಿಟಿಯವರು ಮಾಡಿದ ಶೋಧನೆಯ ಅನುಭವದಿಂದ ಸ್ತ್ರೀ ಶಿಕ್ಷಣದ ಈ ಖಾತೆಯನ್ನು ಇಂಡಸ್ಟ್ರಿಯಲ್ ಇಲಾಖೆಯ ಮೇಲ್ವಿಚಾರದಲ್ಲಿ ಇರಿಸುವುದು ಉಚಿತವೆಂದು ಕಮ್ಮಿಟಿಯವರು ಅಭಿಪ್ರಾಯ ಪಟ್ಟಿದ್ದಾರೆ. ವಾಸ್ತವ್ಯದ ಮನೆಗಳಲ್ಲಿಯೇ ಅವಲಂಬಿಸಬಹುದಾದ ಕೈಗಾರಿಕೆಗಳ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನವು ಕೊಡೋಣಾಗಬೇಕೆಂದು ಕಮ್ಮಿಟಿಯವರ ಅಂಬೋಣ. ನೂಲುವದು, ವಸ್ತ್ರ ನೇಯುವುದು, ಜರಿಕೆಲಸ, ಚಾಪೆಗಳನ್ನು ನೇಯುವುದು ಮೊದಲಾದವುಗಳಲ್ಲಿ ತರಬೇತಿಯನ್ನು ಕೊಡಬೇಕೆಂದು ಸೂಚಿಸಿದ್ದಾರೆ. ಕಾರ್ಖಾನೆ ಮಾದರಿಯಲ್ಲಿ ಪ್ರಕೃತ ಇರುವ ಶಿಕ್ಷಣ ಸಂಸ್ಥೆಗಳು ಈ ಉದ್ದೇಶಕ್ಕೆ ಸಾಕಾಗಿವೆ ಎಂತಲೂ ಶಿಕ್ಷಕರು ಸ್ತ್ರೀಯರೇ ಆಗಬೇಕೆಂತಲೂ ನಿರ್ಧರಿಸಿರುತ್ತಾರೆ. ಈ ಇಲಾಖೆಯ ಶಾಲೆಗಳ ಇನ್ಸ್‌ಪೆಕ್ಷನ್ ಇತ್ಯಾದಿಗಳನ್ನು ನಡಿಸುವರೆ ಈ ಬಗ್ಗೆ ಪ್ರತ್ಯೇಕವಾಗಿ ಒಬ್ಬ ಇನ್ಸ್‌ಪೆಕ್ಟ್ರೆಸ್ಸಳನ್ನು ನೇಮಿಸಬೇಕೆಂಬ ಶಿಫಾರಸನ್ನು ಕಮ್ಮಿಟಿಯವರು ಮಾಡಿರುವರು.

೭ ಉಪ್ಪಿನ ಸುಂಕವನ್ನು ಇಮ್ಮಡಿಯಾಗಿ ಏರಿಸಿದ ಬಗ್ಗೆ ಪ್ರಜಾಜನರ ವಿರೋಧವನ್ನು ಸೂಚಿಸುವ ಮಹಾಸಭೆಯು ಮದ್ರಾಸಿನಲ್ಲಿ ಈ ದಿನ ಗೋಖಲೆ ಸಭಾಮಂದಿರದಲ್ಲಿ ಕೂಡುವುದು. ಮದ್ರಾಸು ಮಹಾಜನಸಭೆ, ದಕ್ಷಿಣ ಹಿಂದೂಸ್ಥಾನದ ಚೇಂಬರ್ ಒಫ್ ಕಮರ್ಸ್, ಸರ್ವೆಂಟ್ ಒಫ್ ಇಂಡಿಯಾ ಸೊಸೈಟಿ, ಮದ್ರಾಸಿನ ರೈತವಾರಿ ವರ್ಗದಾರರ ಸಭೆ, ದಕ್ಷಿಣ ಹಿಂದೂಸ್ಥಾನದ ಚರ್ಮದ ವ್ಯಾಪಾರ ಸಂಘ, ನೆಶನಲ, ಹೋಮ್‌ರೂಲ್ ಲೀಗು, ಆಂಧ್ರ ಕೊಂಗ್ರೆಸ್ಸ್ ಸ್ವರಾಜ್ಯಪಾರ್ಟಿ, ತಮಿಳುನಾಡು ಕೊಂಗ್ರೆಸ್ಸ್ ಸ್ವರಾಜ್ಯಪಾರ್ಟಿ ಈ ಎಲ್ಲಾ ಸಂಸ್ಥೆಗಳು ಈ ಸುಂಕದ ನಿಷೇಧಾರ್ಥವಾಗಿ ಒಟ್ಟು ಕೂಡಿ ಮಹಾಜನರ ಸಭೆಯನ್ನು ಆಮಂತ್ರಿಸಿರುವರು. ದಿವಾನ್ ಬಹದ್ದೂರ್ ಕೇಶವಪಿಳ್ಳೆ ಎಮ್. ಎಲ್. ಸಿ. ಯವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು. ಹೀಗೆಂದ ಬಳಿಕ ಉಪ್ಪಿನ ಸುಂಕದ ನಿಷೇಧಾರ್ಥವಾಗಿ ಎಲ್ಲ ಬಗೆಯ ಪ್ರಜಾಭಿಪ್ರಾಯವು ಏನೂ ಆತಂಕವಿಲ್ಲದೆ ಹೇಗೆ ಒಂದಾಗಿ ಪುಷ್ಟಿಗೊಂಡಿದೆ ಎಂಬುದು ಸರ್ವರಿಗೂ ವ್ಯಕ್ತವಾಗುವುದು. ವಸ್ತುಸ್ಥಿತಿಯು ಹೀಗಿದ್ದರೂ ಬ್ಯುರೋಕ್ರಸಿಗೆ ಮಾತ್ರ ಇದೊಂದೂ ತಿಳಿಯದು. ಶ್ರೀಯುತ ಟಿ. ವಿ. ಶೇಷಗಿರಿ ಅಯ್ಯರ್ ಎಮ್. ಎಲ್. ಎ. ಯವರು ಲೆಜಿಸ್ಲೇಟಿವ್ ಎಸೆಂಬ್ಲಿಯ ವಿಶೇಷ ಅಧಿವೇಶನವನ್ನು ಆಮಂತ್ರಿಸಬೇಕೆಂದೂ ಈ ಅಧಿವೇಶನದಲ್ಲಿ ಉಪ್ಪಿನ ಸುಂಕವನ್ನು ಸರ್ಟಿಫಿಕೇಶನ್ ಮೂಲಕ ಇಮ್ಮಡಿ ಮಾಡಿದ ಫಿನೆನ್ಸ್ ಬೀಲಿನ ಅಂಶವನ್ನು ಚಕ್ರವರ್ತಿಗಳು ವಜಾ ಮಾಡಬೇಕೆಂದು ಸೂಚಿಸುವ ನಿರ್ಣಯವು ಸಭೆಯ ಮುಂದಿಡೋಣಾಗುವುದೆಂದೂ ರೆಡಿಂಗ ಪ್ರಭುಗಳಿಗೆ ಬರಕೊಂಡಿದ್ದರು. ರೆಡಿಂಗ್ ದೊರೆಗಳವರಿಗೆ ಇಂಥದೊಂದು ಅಧಿವೇಶನವನ್ನು ಆಮಂತ್ರಿಸುವುದು ಯುಕ್ತಕಾಣಲಿಲ್ಲ. ಆದ್ದರಿಂದ ಶೇಷಗಿರಿ ಅಯ್ಯರರ ಅಪೇಕ್ಷೆಯನ್ನು ನಿರಾಕರಿಸಿದ್ದಾರೆ. ನಿರಾಕರಣೆಗೆ ಕೊಟ್ಟ ಕಾರಣಗಳನ್ನು ಇಲ್ಲಿ ವಿವರವಾಗಿ ಪ್ರಸ್ತಾಪಿಸುವುದು ಅವಶ್ಯವಿಲ್ಲವಾದರೂ ಬ್ಯುರೋಕ್ರಸಿಯು ತಮ್ಮ ಮತವನ್ನು ಆಧರಿಸಲು ಎಂಥೆಂಥಾ ನಿಕೃಷ್ಟ ವಿಧಾನಗಳನ್ನು ಮುಂದೆ ತರುತ್ತದೆಂಬುದಕ್ಕೆ ನಿರಾಕರಣೆ ಒಂದೆರಡು ಕಾರಣಗಳನ್ನು ಇಲ್ಲಿ ಹೇಳುವೆವು. ರಿಫೋರ್ಮ್ಸ ಆಕ್ಟಿನ ಪ್ರಕಾರ ಚಕ್ರವರ್ತಿಗಳು ಇಡೀ ಫಿನೆನ್ಸ್ ಬೀಲನ್ನೆ ವಜಾಮಾಡಬಹುದಲ್ಲದೆ ಅಂಶತಃ ಇದನ್ನು ವಜಾಮಾಡಕೂಡದು. ಈ ಕಾರಣವನ್ನು ತೋರಿಸಿಕೊಡುವಾಗ ಸರ್ಟಿಫಿಕೇಶನಿಗೂ ಸಹ ಇದ್ದ ಇದೇ ಆಕ್ಷೇಪವು ಇವರ ಕಣ್ಣಿಗೆ ಹೊಳೆಯದೆ ಇದ್ದದ್ದು ಪರಮಾಶ್ಚರ್ಯ. ವಿಧಾಯಿಸಲ್ಪಟ್ಟ ಕಾನೂನು ಪ್ರಜೆಗಳ ಆಚರಣೆಗೆ ಅಲ್ಲದೆ ಅದು ಸರಕಾರದವರನ್ನು ಬಾಧಿಸತಕ್ಕದ್ದಲ್ಲವೆಂಬ ವಿಶೇಷ ಸೂಚನೆಯನ್ನು ಪ್ರತಿ ಆಕ್ಟಿಗೂ ಕೂಡಿಸುತ್ತಿದ್ದರೆ ಬ್ಯುರೋಕ್ರಸಿಯವರ ಇಂಥಾ ಅತ್ಯಾಚಾರದಲ್ಲಿ ಯಾರಿಗೂ ಆಶ್ಚರ್ಯವುಂಟಾಗುತ್ತಿದ್ದಿಲ್ಲ. ಎಸೆಂಬ್ಲಿಯ ವಿಶೇಷ ಅಧಿವೇಶನವನ್ನು ಕರೆಯಲು ನಿರಾಕರಿಸಿದ್ದಕ್ಕೆ ಬ್ಯುರೋಕ್ರಸಿಯು ಕೊಟ್ಟ ಇನ್ನೊಂದು ಕಾರಣವು ಮತ್ತಷ್ಟು ಹಾಸ್ಯಾಸ್ಪದವಾಗಿದೆ. ಸರ್ಟಿಫಿಕೇಶನಿಗೆ ಚಕ್ರವರ್ತಿ ಸರಕಾರದವರ ಆದರಣೆಯು ದೊರಕಿದೆ, ಆದ್ದರಿಂದ ಇದನ್ನು ವಜಾಮಾಡುವ ವಿಷಯ ಇದನ್ನು ಪುನಃ ಕೇಳಿಕೊಳ್ಳುವುದು ಯುಕ್ತವಲ್ಲ. ವೈಸರಾಯರುಗಳ ಈ ಮಾತಿನ ಟೀಕೆಯನ್ನು ನಾವು ಮಾಡುವುದಕ್ಕಿಂತಲೂ ಶೇಷಗಿರಿ ಅಯ್ಯರರವರು ಮಾಡಿದ ಟೀಕೆಯನ್ನು ಇಲ್ಲಿ ಹೇಳಿದರೆ ಸಾಕಾಗುವುದು. ಎಸೆಂಬ್ಲಿಗೂ ಕಾರ್ಯನಿರ್ವಾಹಕ ಸರಕಾರಕ್ಕೂ ವಿವಾದವು ಬಂದಾಗ ಚಕ್ರವರ್ತಿಗಳ ಮಂತ್ರಿಮಂಡಲವು ಇಂಥಾ ವಿವಾದಗಳನ್ನು ನಿಷ್ಪಕ್ಷಪಾತದಿಂದ ತೀರ್ಮಾನಿಸಬೇಕಾಗಿದೆ. ಇವರ ಈ ಮಧ್ಯಸ್ಥಿಕೆಯ ಪದವಿಯನ್ನು ಬಿಟ್ಟು ವಿವಾದದ ಒಂದು ಪಕ್ಷವನ್ನು ಇವರು ಸೇರುವುದಾದರೆ ಪಾರ್ಲಿಮೆಂಟಿನಲ್ಲಾಗುವ ಚರ್ಚೆಯು ನಿರರ್ಥಕವೆಂತಲೂ ಕಾಯಿದೆ ಮತ್ತು ಸನದುಶೀರ ಚಳವಳಕ್ಕೆ ತಿಲೋದಕವನ್ನು ಇಂಡಿಯಾ ಮತ್ತು ಚಕ್ರವರ್ತಿ ಸರಕಾರದವರು ಕೊಟ್ಟಂತಾಯಿತೆಂತಲೂ ಶೇಷಗಿರಿ ಅಯ್ಯರರವರು ಹೇಳಿದ ಮಾತು ಅಕ್ಷರಶಃ ನಿಜವಾಗಿರುವುದು.

೮ ಇತ್ತಲಾಗಿ ನಮ್ಮ ಮಂಗಳೂರು ಪಟ್ಟಣದಲ್ಲಿ ರಾತ್ರಿಕಾಲದಲ್ಲಿ ಕನ್ನಕಳವುಗಳು ಆಗಾಗ್ಗೆ ಆಗುತ್ತಲೇ ಇವೆ. ಆದರೆ ಇವುಗಳ ಪತ್ತೆಯು ಅನೇಕ ಸಲ ದೊರಕುವುದಿಲ್ಲ. ಕನ್ನಕಳವುಗಳು ವಿಶೇಷವಾಗಿ ಜನಸಂಚಾರವು ಕಡಿಮೆಯಾದ ನಂತರವೇ ಆಗುವವು. ಎಂದರೆ, ಈ ಕಳವುಗಳು ಮಧ್ಯರಾತ್ರೆಯು ದಾಟಿದನಂತರ ಪುನಃ ಜನಸಂಚಾರಕ್ಕೆ ಪ್ರಾರಂಭವಾಗುವ ವರೆಗೆ ನಡೆಯಲು ಹೆಚ್ಚಿನ ಆಸ್ಪದವಿದೆ. ಮತ್ತು ಈಗ ಆಗುವ ಕಳವುಗಳು ವಿಶೇಷವಾಗಿ ಇದೇ ಸಮಯದಲ್ಲೇ ಆಗುವುವೆಂದು ತಿಳಿದುಬರುತ್ತದೆ. ರಾತ್ರಿಕಾಲದಲ್ಲಿ ಜನರಿಗೆ ಕಳ್ಳಕಾಕರ ಬಾಧೆಯು ತಪ್ಪದಂತೆ ಪೋಲೀಸ ಇಲಾಖೆಯು ಇದೆ. ಈ ಇಲಾಖೆಯ ಪೋಲೀಸಿನವರು ರಾತ್ರಿಕಾಲದಲ್ಲಿ ಗಸ್ತಿತಿರುಗುವರು. ಕೆಲವು ಕಾಲದ ಹಿಂದಿನ ವಿಲೆವಾರಿಯಂತೆ ರಾತ್ರಿಕಾಲದಲ್ಲಿ ೩ ಗಂಟೆ ವರೆಗೆ ಇಬ್ಬರು ಪೋಲೀಸಿನವರು ಪ್ರತಿಯೊಂದು ಬೀಟಿನಲ್ಲಿ ತಿರುಗುತ್ತಿದ್ದರು. ಪರಂತು ಹೊಸ ವಿಲೆವಾರಿಯಂತೆ ಒಂದೊಂದು ಬೀಟಿನಲ್ಲಿ ಒಬ್ಬೊಬ್ಬರೇ ಗಸ್ತಿತಿರುಗುತ್ತಿದ್ದಾರೆ. ಹೀಗೆ ಮಧ್ಯರಾತ್ರಿಯು ದಾಟಿದನಂತರ ಗಸ್ತಿತಿರುಗುವ ಒಬ್ಬನೇ ಪೋಲೀಸನಿಗೆ ಕೆಲವು ಸಲ ನಿದ್ರೆಹತ್ತುವುದೂ ಉಂಟು. ಆಗ ಅವನ ಬೀಟಿನ ಜಾಗ್ರತೆ ನೋಡಲಿಕ್ಕೆ ಇನ್ನೊಬ್ಬನಿಲ್ಲ. ಅಲ್ಲದೆ ಕೆಲವು ರಸ್ತೆಗಳು ಸೇರಿರುವ ಒಂದು ಬೀಟಿನಲ್ಲಿ ಒಬ್ಬನೇ ಇರುವುದರಿಂದ ಅವನಿಗೆ ಎಲ್ಲಾ ಕೇರಿಗಳಲ್ಲಿ ಸುತ್ತಾಡುವುದು ತೀರ ಅಸಾಧ್ಯವೇ. ದೂರದಲ್ಲಿ ಯಾವುದಾದರೂ ಒಂದು ಸಂಶಯದ ಸಪ್ಪಳವನ್ನು ಕೇಳಿ ಇವನು ಇನ್ನೊಬ್ಬ ಪೋಲೀಸಿನ ಸಹಾಯವನ್ನು ಅಪೇಕ್ಷಿಸಿ ದಿಗಿಲನ್ನು ಹೊಡೆದರೂ ದೂರದಲ್ಲಿ ಒಬ್ಬಂಟಿಗನಾಗಿಯೇ ಇದ್ದ ಇನ್ನೊಬ್ಬ ಪೋಲೀಸಿನ ಸಹಾಯವೂ ಸಿಗುವುದು ದುರ್ಲಭ. ಆದ್ದರಿಂದ ಒಂದು ಬೀಟಿನಲ್ಲಿರುವ ಪೋಲೀಸನು ಕಳವಿನ ಸಂಶಯವನ್ನು ರಾತ್ರಿಕಾಲದಲ್ಲಿ ಕಂಡರೂ ಸಂಪೂರ್ಣ ಧೈರ್ಯದಿಂದ ಅದರ ಶೋಧನೆಯನ್ನು ಮಾಡಲು ಹೋಗುವುದಕ್ಕೆ ಸ್ವಲ್ಪ ಹಿಂಜರಿಯದೆ ಇರನು. ಇದರಿಂದ ಕಳ್ಳರಿಗೆ ತಮ್ಮ ಕಳ್ಳಾಟಿಕೆಯನ್ನು ನಡಿಸಲು ಹೆದರಿಕೆಯು ಕಡಿಮೆಯಾಗುವುದು. ಸೆಕೆಕಾಲವು ಕಳೆದು ಮಳೆಗಾಲವು ಸಮೀಪಿಸುವುದು. ಮಳೆಗಾಲದಲ್ಲಿ ಚೋರರ ಬಾಧೆ ಯಾವಾಗಲೂ ಅತಿಶಯವಾಗಿರುವುದರಿಂದ ಜನಸಂಚಾರವು ಕಡಿಮೆಯಾಗಿರುವ ಕಾಲದಲ್ಲಿ ಪೋಲೀಸರ ಗಸ್ತಿಯು ಸರಿಯಾಗಿ ನಡೆಯುವಂತೆ ಪೋಲೀಸ ಇಲಾಖೆಯವರು ಹೆಚ್ಚಿನ ಜಾಗ್ರತೆಯನ್ನಿಡುವುದು ಅಗತ್ಯವಿದೆ.

ಮಂಗಳೂರು.

ಕಳೆದ ತಿಂಗಳಲ್ಲಿ ಮಂಗಳೂರು ಪಟ್ಟಣದ ವಿಸ್ತೀರ್ಣದಲ್ಲಿ ೧೪೭ ಜನನಗಳೂ ೭೪ ಮರಣಗಳೂ ಉಂಟಾದವು. ಇದರಲ್ಲಿ ೮ ಪ್ಲೇಗು ಮತ್ತು ೨ ಸಿಡುಬಿನ ಮರಣಗಳು.

ಮಾರ್ಗದ ಬದಿಯಲ್ಲಿಟ್ಟ ಇಲ್ಲಿಯ ಟೌನ್ ಸಾರ್ಜಂಟರ ಸ್ಯಾಕಲನ್ನು ಬೋಳಾರ ಶಾಲೆಯ ಮಿ| ರಾಮಯ್ಯ ಸೆಟ್ಟಿ ಎಂಬ ಉಪಾಧ್ಯಾಯನು ಕದ್ದೊಯ್ದನೆಂದು ಇಲ್ಲಿಯ ಸ್ಟೇಶನರಿ ಮೆಜಿಸ್ಟ್ರೇಟರಲ್ಲಿ ಫಿರ್ಯಾದು ದಾಖಲಾಗಿದೆ.

ಕಳೆದ ತಾರೀಕು ೭ರಲ್ಲಿ ಜರಗಿದ ಇಲ್ಲಿಯ ಮುನ್ಸಿಪಲ್ ಕೌನ್ಸಿಲಿನ ಮೀಟಿಂಗಿನಲ್ಲಿ ಪಟ್ಟಣದಲ್ಲಿನ ಹೌಸ್ ಟೇಕ್ಸನ್ನು ರಿವಿಜನ್ ಮಾಡುವುದಕ್ಕಾಗಿ ೧೫೫ ರೂಪಾಯಿಯ ಒಬ್ಬ ಆಫೀಸರನ್ನೂ ರೂ ೩೦ರ ತಲದಿನ ಇಬ್ಬರು ಗುಮಾಸ್ತರನ್ನೂ ರೂ ೧೨ರ ಒಬ್ಬ ಪೇದೆಯನ್ನೂ ನೊಕ್ರಿರುಮಾಡಬೇಕಾಗಿ ನಿರ್ಧರಿಸಿದೆ. ಮತ್ತು ಬರುವ ವರುಷದಲ್ಲಿ ರಸ್ತೆ ದುರುಸ್ತಿ ಬಗ್ಗೆ ರೂ. ೨೩,೦೦೦ ಸೆಂಕ್ಷನ್ ಸಹ ಮಾಡಿದೆ.

ಡಿಸ್ಟ್ರಿಕ್ಟ ಬೋರ್ಡಿನ ಮೆಂಬರರ ಮೀಟಿಂಗು ಈ ತಿಂಗಳ ತಾರೀಕು ೨೫ರಲ್ಲಿ ಮಧ್ಯಾಹ್ನ ೨-೩೦ ಘಂಟೆಗೆ ಕಲೆಕ್ಟರ ದೊರೆಗಳವರ ಆಫೀಸಿನಲ್ಲಿ ಸೇರುವುದು.

ಬಂಟವಾಳ ಸರ್ಕಲಿನಿಂದ ಮಂಗಳೂರ ತಾಲೂಕು ಬೋರ್ಡಿಗೆ ಮೆಂಬರರಾದ ಶ್ರೀಯುತ ಕೊಂಬ್ರಬೈಲ್ ಕೃಷ್ಣರಾಯರು ರಾಜೀನಾಮೆಯನ್ನು ಕೊಟ್ಟದ್ದರಿಂದ ಖಾಲಿಯಾದ ಮೆಂಬರಿಕೆಗೆ ಶ್ರೀಯುತ ಪಣಂಬೂರು ವಾಸುದೇವರಾಯರೂ ಶ್ರೀಯುತ ಬಂಟವಾಳ ಪಟೇಲ ವೆಂಕಟರಾಯ ಪ್ರಭುಗಳೂ ಉಮೇದುವಾರರಾಗಿದ್ದರಷ್ಟೆ. ಚುನಾವಣೆ ಕಾರ್ಯವು ಮುಗಿದು ಶ್ರೀಯುತ ವಾಸುದೇವ ರಾಯರಿಗೆ ೫೭ ಓಟುಗಳೂ ಶ್ರೀಯುತ ವೆಂಕಟರಾಯ ಪ್ರಭುಗಳಿಗೆ ೮೧ ಓಟುಗಳೂ ದೊರಕಿರುವುದರಿಂದ ಶ್ರೀಯುತ ಪ್ರಭುಗಳೇ ಈ ಸ್ಥಾನಕ್ಕೆ ಮೆಂಬರರಾಗುವರು.

ಇಲ್ಲಿಯ ಮುನ್ಸಿಪಲ್ ಕೌನ್ಸಿಲಿಗೆ ಕೊಡಿಯಾಲಬೈಲು ವೆಸ್ಟ ವಾರ್ಡಿನಿಂದ ಮೆಂಬರರಾದ ವಕೀಲ ಮಿ| ಇಮಾಮುದ್ದೀನ್ ಸಾಹೇಬರು ಕಾಲವಾದ್ದರಿಂದ ಈ ವಾರ್ಡಿನ ಒಂದು ಮೆಂಬರಿಕೆಯು ಖಾಲಿಯಾಗಿದೆ. ಈ ಸ್ಥಾನಕ್ಕೆ ಹೊಸ ಚುನಾವಣೆಯು ಈ ತಿಂಗಳ ತಾರೀಕು ೨೯ರಲ್ಲಿ ನಡೆಯುವುದು. ಉಮೇದುವಾರರು ತಮ್ಮ ಉಮೇದುವಾರಿಕೆಯ ಮನವಿಗಳನ್ನು ಬರುವ ತಾರೀಕು ೧೮ರೊಳಗೆ ಮುನ್ಸಿಪಲ್ ಆಫೀಸಿನಲ್ಲಿ ದಾಖಲುಮಾಡಿಕೊಳ್ಳಬೇಕಾಗಿದೆ.

ಸಬ್‌ಇನ್ಸ್‌ಪೆಕ್ಟರ ಮಿ| ಶಿಬಾಡ ಅಮೃತರಾವ್ ವಗೈರೆಯವರ ಮೇಲೆ ನಡೆದ ಮೊಕದ್ದಮೆಯ ತೀರ್ಪು ಕಳೆದ ಸೋಮವಾರ ಕೊಡಲಾಯಿತು. ಮಿ| ಅಮೃತರಾಯರ ಮೇಲೆ ಆರೋಪವು ರುಜುವಾಗುವುದಿಲ್ಲವೆಂದು ಅವರನ್ನು ಜಡ್ಜರು ಅಪರಾಧಮುಕ್ತರನ್ನಾಗಿ ಮಾಡಿರುವರು. ಮತ್ತು ಹೆಡ್‌ಕೊನ್ಸ್‌ಟೇಬಲ್ ಮಿ| ನರಸಿಂಗರಾಯರಿಗೂ ಮಡಿಕೇರಿಯ ಒಬ್ಬ ಕೊನ್ಸ್‌ಟೇಬಲರಿಗೂ ಪ್ರತಿಯೊಬ್ಬರಿಗೆ 8½ವರುಷ ಕಠಿಣ ಸಜೆ ಮತ್ತು ರೂ ೩೦೦ ಜುರುಮಾನೆ, ಜುರುಮಾನೆ ತೆರದಿದ್ದರೆ ೬ ತಿಂಗಳ ಹೆಚ್ಚಿನ ಶಿಕ್ಷೆ ವಿಧಿಸಿರುವರು.

ಕಳೆದ ಆದಿತ್ಯವಾರ ರಾತ್ರೆ ಸುಮಾರು ೮ ಘಂಟೆಗೆ ಡೊಂಗರಕೇರಿ ವೆಂಕಟೇಶ ಭಟ್ಟರ ಮಠದಲ್ಲಿ ಅವರ ಮಗಳ ವಿವಾಹಕ್ಕಾಗಿ ಸಿದ್ಧಪಡಿಸಿದ್ದ ಅಂದವಾದ ಚಪ್ಪರಕ್ಕೆ ವಧುವಿನ ಕಡೆಯವರೆಲ್ಲರೂ ವಧುವರರನ್ನು ಅದೇ ರಾತ್ರೆ ೯-೩೦ ಘಂಟೆಗೆ ನಡೆಯತಕ್ಕ ಲಗ್ನಕ್ಕೆ ಕರಕೊಂಡು ಬರಲು ಹೋದಾಗ ಚಪ್ಪರದಲ್ಲಿ ತೂಗಾಡಿಸಿದ್ದ ದೀಪದ ಮೇಣದ ಬತ್ತಿಯು ಥಕ್ಕನೆ ಚಪ್ಪರಕ್ಕೆ ಹತ್ತಿ ಬೆಂಕಿ ಹಿಡಿಯಿತು. ಕೂಡಲೇ ಸುತ್ತುಮುತ್ತಲಿನ ಜನರು ಕೂಡಿ ಚಪ್ಪರವನ್ನು ಕೆಳಕ್ಕೆ ಇಳಿಸಿ ಬಿಟ್ಟದ್ದರಿಂದ ಚಪ್ಪರ ಮಾತ್ರ ಪೂರಾ ಸುಟ್ಟುಹೋಯಿತಲ್ಲದೆ ಬೇರೆ ಯಾವ ಹಾವಳಿಯು ಉಂಟಾಗಲಿಲ್ಲ. ಲಗ್ನವು ಮಠದಲ್ಲಿಯೇ ನಿಶ್ಚಯಿಸಿದ ಮುಹೂರ್ತದಲ್ಲಿ ನಡೆಯಿತು.

ನಿನ್ನೆ ದಿನ ಕೊಸ್ಮೊಪೊಲೀಟನ್ ಕ್ಲಬ್ಬಿನಲ್ಲಿ ಒಂದು ಮೀಟಿಂಗು ಸೇರಿ ವ್ಯಾಸರಾಯರು ತಮ್ಮ ಸರ್ಟಿಫಿಕೇಶನ್ ಅಧಿಕಾರದಿಂದ ಪಾಸುಮಾಡಿದ ಉಪ್ಪಿನ ತೆರಿಗೆಯನ್ನು ನಿಷೇಧಿಸುವ ಠರಾವನ್ನು ಪಾಸುಮಾಡಿ ಈ ದಿನ ಮದರಾಸಿನಲ್ಲಿ ಉಪ್ಪಿನ ಸುಂಕವನ್ನು ನಿಷೇಧಿಸುವ ಬಗ್ಗೆ ಕೂಡುವ ಸಭೆಗೆ ಈ ಠರಾವು ಕಳುಹಿಸಿ ಕೊಡೋಣಾಯಿತು.

ನಿನ್ನೆ ಸ್ವಯಂಸೇವಕರ ಸಭೆಯು ಕೂಡಿ ಈ ಕೆಳಗಿನ ವಿಷಯಗಳಲ್ಲಿ ಅವರು ಕೆಲಸವನ್ನು ಮುಂದರಿಸಬೇಕಾಗಿ ನಿಶ್ಚಯಿಸಲಾಯಿತು. ಶ್ರೀಮತಿ ಸರೋಜಿನಿಯವರು ಬಂದಾಗ ಸಭೆವ ನಾಟಕಗಳಿಗೆ ಸಂಬಂಧಪಟ್ಟ ಕೆಲಸವನ್ನು ಹಂಚಿಕೊಳ್ಳುವುದು, ನಾಟಕದ ಟಿಕೇಟುಗಳನ್ನು ಮಾರುವುದು, ಇದೇ ತಾ. ೨೫ರ ವರೆಗೆ ಗಯಾಕಾರ್ಯಕ್ರಮವನ್ನು ಮುಂದರಿಸುವುದು. ಬರುವ ಅಮಾವಾಸ್ಯೆಗೆ ಕೊರಗರನ್ನು ಕೂಡಿಸಿ ಖಾದಿಯನ್ನು ಹಂಚುವುದು. ಇತರ ವಿಷಯಗಳನ್ನು ನಿಶ್ಚಯಿಸುವರೆ ತಾ. ೧೪ನೇ ಸೋಮವಾರ ಬೆಳಿಗ್ಗೆ ೧೧ ಘಂಟೆಗೆ ಸಭೆಯು ಮುಂದರಿಸಿಡಲಾಯಿತು.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್ ಈ ಸಂಸ್ಥೆಯ ೧೯೨೨-೨೩ನೇ ವರುಷದ ವರದಿಯು ನಮ್ಮ ಬಳಿಗೆ ಬಂದಿರುವುದು. ಈ ಬೇಂಕಿನ ಎಲ್ಲಾ ಹಿಸೆದಾರರ ಸಭೆಯು ಇದೇ ಬರುವ ತಾರೀಕು ೨೦ನೆಯ ಆದಿತ್ಯವಾರ ಮಧ್ಯಾಹ್ನ ೩ ಘಂಟೆಗೆ ಸದರಿ ಬೇಂಕಿನ ಆಫೀಸಿನಲ್ಲಿ ಕೂಡಬೇಕಾಗಿ ನಿಶ್ಚಯಿಸಿದೆ.

ಇದೇ ತಾರೀಕು ೧೯ನೇ ಶನಿವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಕಣ್ಣಾನೂರಿನಿಂದ ಶ್ರೀಮತಿ ಸರೋಜಿನಿ ದೇವಿಯವರು ಮಂಗಳೂರಿಗೆ ಬರುವರು. ಬಂದೊಡನೆಯೇ ರೈಲ್ವೆ ಸ್ಟೇಶನಿನಿಂದ ಮ. ರಾ. ಪುರುಷೋತ್ತಮ ನಾನಜೀ ಶೇಟರ ವರ್ತಕ ವಿಲಾಸಕ್ಕೆ ಹೋಗುವರು. ಅಲ್ಲಿ ಪಟ್ಟಣದ ಮುಖಂಡರಿಗೂ ಸ್ತ್ರೀಯರಿಗೂ ಆಮಂತ್ರಣ ಕೊಡಲ್ಪಟ್ಟು ಈಗಿನ ಪರಿಸ್ಥಿತಿಯ ಕುರಿತು ಶ್ರೀಮತಿಯವರ ಭಾಷಣವಾಗುವುದು. ಪ್ರಶ್ನೋತ್ತರಗಳು ಕೂಡಾ ನಡೆಯುವವು. ಅದೇ ಸಾಯಂಕಾಲ ಘಂಟೆ ೫ಕ್ಕೆ ಲೈನು ಮೈದಾನಿನಲ್ಲಿ ಮಹಾ ಸಭೆಯು ಸೇರುವುದು. ಕೂತುಕೊಳ್ಳುವರೆ ಸ್ತ್ರೀಯರಿಗೋಸ್ಕರ ಪ್ರತ್ಯೇಕ ಸ್ಥಳದ ಏರ್ಪಾಡಿಯು ಮಾಡಲ್ಪಡುವುದು.

೨೦ನೇ ತಾರೀಕಿನ ಬೆಳಿಗ್ಗೆ ಇವರು ಇಲ್ಲಿಂದ ಉಡುಪಿಗೆ ಹೋಗುವರು. ಅಲ್ಲಿ ಪಟ್ಟಣಿಗರ ಮಹಾ ಸಭೆಯಾಗುವುದು. ಮಧ್ಯಾಹ್ನ ಉಡುಪಿಯಿಂದ ಕಾರ್ಕಳಕ್ಕೆ ಹೋಗಿ ಅಲ್ಲಿ ಕೂಡ ಮಹಾ ಸಭೆಯು ಕೂಡಿ ಶ್ರೀಮತಿಯವರ ಭಾಷಣವಾದ ನಂತರ ಮೂಡಬಿದರೆ ಹಾದಿಯಿಂದ ಮಂಗಳೂರಿಗೆ ಸಾಯಂಕಾಲ ಬಂದು ತಲಪುವರು. ಬಂದೊಡನೆಯೇ ಶ್ರೀಯುತ ಅಬ್ದುಲ್ ರಹಿಮಾನ್ ಅಫ್ಘಾನಿ ಸಾಹೇಬರು ಸ್ವರಾಜ್ಯಫಂಡಿನ ಸಹಾಯಕ್ಕೋಸ್ಕರ ಕೊಡುವ ನಾಟಕಕ್ಕೆ ಸಾಯಂಕಾಲ ಘಂಟೆ ೬ಕ್ಕೆ ಹೋಗುವರು. ತಾ. ೨೧ನೇ ಸೋಮವಾರ ಬೆಳಿಗ್ಗೆ ಮೈಲುಗಾಡಿಯಲ್ಲಿ ಕೊಯಮುತ್ತೂರಿಗೆ ತೆರಳುವರು.

ಸರ್ವರು ಬಂದು ಪ್ರೋತ್ಸಾಹಿಸಿ ಸಹಾನುಭೂತಿಯನ್ನು ತೋರಿಸಬೇಕಾಗಿ ಸವಿನಯ ಪ್ರಾರ್ಥನೆ.

[illegible]

ಬೆಂಕಿಪೆಟ್ಟಿಗೆಯ ಕೈಗಾರಿಕೆ.

ನಮಗೆ ಪ್ರತಿ ದಿವಸದ ಖರ್ಚಿಗೆ ಬೇಕಾದ ವಸ್ತುಗಳಲ್ಲಿ ಬೆಂಕಿಪೆಟ್ಟಿಗೆಯು ಅತಿ ಅಗತ್ಯವಿರುವ ಒಂದು ವಸ್ತುವಾಗಿದೆ. ಪ್ರತಿ ದಿವಸ ನಮಗೆ ಬೇಕಾದ ಆಹಾರ ಮುಂತಾದ ವಸ್ತುಗಳನ್ನು ತಯಾರಿಸಲಿಕ್ಕೆ ಬೆಂಕಿಪೆಟ್ಟಿಗೆ ಇಲ್ಲದೆ ಬೇರೇನೂ ಉಪಾಯವಿಲ್ಲ. ಪುರಾತನಕಾಲದಲ್ಲಿ ಮನೆಗಳಲ್ಲಿರುವ ಒಲೆಯಲ್ಲಿ ಬೆಂಕಿಯು ಯಾವಾಗಲೂ ಇರುವ ಹಾಗೆ ಸೆಗಣಿ ಮುದ್ದೆಯನ್ನು ಒಲೆಯಲ್ಲಿರುವ ಹೊಂಡದಲ್ಲಿ ಇಟ್ಟು ಅದರ ಮೇಲೆ ಬೆಂಕಿಮಾಡುತ್ತಿದ್ದರು. ಪ್ರತಿನಿತ್ಯವೂ ಅಥವಾ ಎರಡು ದಿವಸಕ್ಕೊಮ್ಮೆ ಅದನ್ನು ತೆಗೆದರೆ ಅದರಲ್ಲಿ ಬೆಂಕಿಯು ಉಳಿಯುತ್ತಿತ್ತು. ಬೆಂಕಿಪೆಟ್ಟಿಗೆಯು ಅವಶ್ಯವಿದ್ದಿಲ್ಲ. ಈ ಉಂಡೆಯ ಮಸಿಯು ಹಲ್ಲನ್ನು ತಿಕ್ಕಲಿಕ್ಕೆ ಒಳ್ಳೇ "ಟೂತ್ ಪೌಡರ್" ಆಗುತ್ತಿತ್ತು. ಬೆಂಕಿಪೆಟ್ಟಿಗೆಗೆ ಕೊಡುವ ಹಣವು ಉಳಿಯುತ್ತಿತ್ತು. ಬೀಡಿ, ಸಿಗರೇಟು, ಚುಟ್ಟಾ ವಗೈರೆ ಎಳೆಯುವ ದುರಾಭ್ಯಾಸಗಳು ಈ ದೇಶದಲ್ಲಿ ಇದ್ದಿಲ್ಲ. ಈಗ ಅಡಿಗೆ ಮುಂತಾದ್ದು ಮಾಡಲಿಕ್ಕೆ ಉಪಯೋಗಿಸುವ ಬೆಂಕಿಪೆಟ್ಟಿಗೆಗಳಿಗಿಂತ ಬೀಡಿ, ಸಿಗರೇಟ್, ಚುಟ್ಟಾ ಮುಂತಾದ್ದನ್ನು ಸೇದಲಿಕ್ಕೆ ಹೆಚ್ಚಿಗೆ ಬೆಂಕಿಪೆಟ್ಟಿಗೆಗಳು ಬೇಕಾಗಿವೆ.

ಇಷ್ಟು ಬೆಂಕಿಪೆಟ್ಟಿಗೆಗಳಿಗೂ ನಾವು ಪರದೇಶಗಳ ಮೇಲೆ ಆಧರಿಸಿಕೊಂಡಿರುತ್ತೇವೆ. ಈಗ ನಮಗೆ ಬೇಕಾದ ಬೆಂಕಿಪೆಟ್ಟಿಗೆಗಳು ಸ್ವೀಡನ್, ಜಪಾನ್ ಮುಂತಾದ ದೇಶಗಳಿಂದ ಬರುತ್ತವೆ. ಆ ದೇಶಗಳಲ್ಲಿ ಇವುಗಳ ಬೆಲೆಯು ಬಹಳ ಕಡಿಮೆಯಾದರೂ ಆ ದೇಶಗಳಿಂದ ನಮ್ಮ ದೇಶಕ್ಕೆ ಬರುವಾಗ ಪೆಟ್ಟಿರಿಯವರ ಲಾಭ, ರೈಲ್ವೆ ಬಾಡಿಗೆ, ಬಂದರದ ಸುಂಕ, ಹಡಗದ ಬಾಡಿಗೆ, ನಮ್ಮ ದೇಶಕ್ಕೆ ಬಂದ ಮೇಲೆ ಇಲ್ಲಿ ಕರಾಚಿ, ಮುಂಬಯಿ ಕಲ್ಕತ್ತಾ, ಮದರಾಸು ಮುಂತಾದ ಬಂದರಗಳಿಗೆ ಬಂದು ಇಳಿಯಬೇಕಾದರೆ ಕೊಡಬೇಕಾದ ಸುಂಕ, ರೈಲು ಬಾಡಿಗೆ ಮಧ್ಯಸ್ಥ ಸಾವಕಾರರ ಲಾಭ ಇವೆಲ್ಲವೂ ಕೂಡಿ ಪೆಟ್ಟಿಗೆಗಳ ಕ್ರಯವು ಬಹಳ ಹೆಚ್ಚಾಗುತ್ತದೆ. ಒಂದು ಗ್ರೋಸಿಗೆ ಜಪಾನ್ ಕಾರ್ಖಾನೆಯಲ್ಲಿ ೧೪ ಆಣೆ ಕ್ರಯವಾದರೆ ನಮಗೆ ಸಿಕ್ಕುವಾಗ ಒಂದು ಗ್ರೋಸಿಗೆ (ಗುರುಸಿಗೆ) ರೂ. ೨—೧೨—೦ ಅಥವಾ ರೂ. ೩—೦—೦ ಬೀಳುತ್ತದೆ. ಇದರಲ್ಲಿ ನಮ್ಮ ಸರಕಾರಕ್ಕೆ ಕೊಡುವ ಸುಂಕ ಒಂದು ಗ್ರೋಸಿಗೆ ರೂ. ೧—೮—೦ ಕೂಡಿ ಇದೆ. ಎಂದರೆ ನಮ್ಮ ಊರಿನಲ್ಲಿ ಸಿಕ್ಕುವ ಬೆಂಕಿಪೆಟ್ಟಿಗೆಗೆ ನಾವು ಸಾಧಾರಣ ೩|| ಪಾಲಿನಷ್ಟು ಹೆಚ್ಚು ಕ್ರಯ ಕೊಟ್ಟಂತಾಗುತ್ತದೆ.

ಕಳೆದ ವರುಷ ಇಂಡಿಯಕ್ಕೆ ಜಪಾನ್ ಮುಂತಾದ ಎಲ್ಲಾ ದೇಶಗಳಿಂದ ೨೦೮ ಲಕ್ಷ ಚಿಲ್ಲರೆ ರೂಪಾಯಿ ಮೌಲ್ಯದ ಬೆಂಕಿಪೆಟ್ಟಿಗೆ ಬಂದಿತ್ತು. ೧೯೨೩ನೆ ಮಾರ್ಚಿ ತಿಂಗಳಿಗೆ ಅಂತ್ಯವಾಗುವ ವರ್ಷಕ್ಕೆ ೨|| ಕೋಟಿ ರೂಪಾಯಿ ಮೌಲ್ಯದ ಬೆಂಕಿಪೆಟ್ಟಿಗೆಗಳು ಇಂಡಿಯಕ್ಕೆ ಬಂದಿವೆ.

ಇಂಡಿಯಾ ದೇಶದಲ್ಲಿ ಬೆಂಕಿಪೆಟ್ಟಿಗೆಗಳನ್ನು ತಯಾರಿಸಲು ಎಲ್ಲಾ ತರದ ಅನುಕೂಲತೆಗಳು ಇದ್ದಾಗ್ಯೂ ಇಲ್ಲಿಯ ಜನರಿಗೆ ಈ ಕೈಗಾರಿಕೆಯನ್ನು ವೃದ್ಧಿಗೆ ತರಲು ಧೈರ್ಯವೆ ಸಾಕಾಗುವುದಿಲ್ಲ. ಸ್ವೀಡನ್ ದೇಶದಲ್ಲಿ ಈ ಕೈಗಾರಿಕೆಯನ್ನು ದೊಡ್ಡ ಜ್ಯೊಂಟ ಸ್ಟೋಕ್ ಕಂಪೆನಿಗಳಾಗಿ ಮಾಡಿ ಬೆಂಕಿಪೆಟ್ಟಿಗೆಗಳನ್ನು ತಯಾರಿಸುತ್ತಾರೆ. ಅದರ ಜಪಾನ ದೇಶದಲ್ಲಿ ಬೆಂಕಿಪೆಟ್ಟಿಗೆ ತಯಾರಿಸುವ ಕೈಗಾರಿಕೆಯನ್ನು ಮನೆಯ ಕಸಬಾಗಿ ಮಾಡಿ ತಯಾರಿಸುತ್ತಾರೆ. ಬಹಳ ಕಡಿಮೆ ಕ್ರಯದ ಯಂತ್ರಗಳನ್ನು ತಯಾರಿಸಿ ಬಡವರು ಸಹ ಈ ಕೈಗಾರಿಕೆಯನ್ನು ಮಾಡಿ ಐಶ್ವರ್ಯವಂತರಾದರು. ಅಲ್ಲಿಯ ಸರಕಾರವು ಈ ಕೈಗಾರಿಕೆಗೂ ಒಳ್ಳೇ ಸಹಾಯ ಮಾಡುತ್ತದೆ. ಇಲ್ಲಿಯೂ ನಮ್ಮ ಮದರಾಸು ಸಂಸ್ಥಾನದಲ್ಲಿ ಮನೆ ಕೈಗಾರಿಕೆಗಳಿಗೆ ಸಹಾಯಮಾಡಲಿಕ್ಕೆ ಕಾನೂನು ಮಾಡಿರುತ್ತಾರೆ. ಅನುಭವ ಕೊಡಲಿಕ್ಕೆ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್, ಇನ್ಸ್‌ಪೆಕ್ಟರ್ ಆಫ್ ಇಂಡಸ್ಟ್ರೀಸ್, ಸುಪರ್‌ವೈಸರ್ ಆಫ್ ಇಂಡಸ್ಟ್ರೀಸ್ ಎಂಬ ಹುದ್ದೆದಾರರನ್ನು ನೇಮಿಸಿ ಒಂದು ಹೊಸ ಇಲಾಖೆಯನ್ನೆ ಮಾಡಿರುತ್ತಾರೆ.

ಈಗ ಈ ಕೈಗಾರಿಕೆಯನ್ನು ಮುಂದರಿಸಬೇಕಾದರೆ ಮುಖ್ಯವಾಗಿ ಬೇಕಾದ ಸಂಗತಿಗಳು (೧) ಈ ಕೈಗಾರಿಕೆಯನ್ನು ನಮ್ಮ ದೇಶದಲ್ಲಿಯೆ ಮಾಡುವೆನು ಎಂಬ ದೃಢ ಮನಸ್ಸು, (೨) ಇದಕ್ಕೆ ಬೇಕಾದ ಹಣ. (೩) ಯಂತ್ರಸಾಧನೆಗಳು, (೪) ತಯಾರಿಸುವ ಅನುಭವ, (೫) ಮಾಡಲಿಕ್ಕೆ ಬೇಕಾದ ಮರ, (೬) ಬೇಕಾದ ಮದ್ದುಗಳು (೭) ಮಾರಲಿಕ್ಕೆ ಮಾರ್ಗಗಳು, (೮) ದೇಶದ ಬೆಂಕಿಪೆಟ್ಟಿಗೆಗಳನ್ನು ಉಪಯೋಗಿಸಬೇಕೆಂಬ ದೇಶಾಭಿಮಾನ.

[illegible]

ಮಂದಿ ಐಶ್ವರ್ಯವಂತರು ಈ ಕೈಗಾರಿಕೆಗೆ ಸ್ವಲ್ಪ ಹಣವನ್ನು ಹೆಚ್ಚಮಾಡಿದರೆ ಒಳ್ಳೇದಾಗುತ್ತಿತ್ತು. ಜ್ಯೊಂಟ್ ಸ್ಟೋಕ್ ಕಂಪೆನಿಗಳನ್ನು ಮಾಡಬಹುದು. ಮನೆಯ ಕೈಗಾರಿಕೆಯಾಗಿಯೂ ಮಾಡಬಹುದು. ಬೇರೆ ಎಲ್ಲಾ ಕೆಲಸಗಳಿಗೆ ಇಂಡಿಯದಲ್ಲಿ ಹಣವಿರುವಾಗ ಈ ಬೆಂಕಿಪೆಟ್ಟಿಗೆಯ ಕೈಗಾರಿಕೆಗೆ ಹಣ ಒದಗದೆ ಇದ್ದೀತೇ?

ಯಂತ್ರ ಸಾಧನೆಗಳು ಈಗ ಜರ್ಮನಿಯಿಂದಲೂ, ಜಪಾನಿನಿಂದಲೂ, ಇಂಡಿಯಕ್ಕೆ ಬರುತ್ತಿವೆ. ಬಹಳ ಕಡಿಮೆ ಕ್ರಯದಲ್ಲಿ ಸಿಕ್ಕುತ್ತವೆ. ಜರ್ಮನಿ ಯಂತ್ರಗಳು ಗಟ್ಟಿಯಾಗಿವೆ. ಹೆಚ್ಚು ಸಮಯ ಕೆಲಸಕ್ಕೆ ಬರುತ್ತವೆ. ಕ್ರಯ ಸ್ವಲ್ಪ ಹೆಚ್ಚು. ಜಪಾನ ಯಂತ್ರಗಳು ನೋಡಲಿಕ್ಕೆ ನಾಜೂಕಾಗಿವೆ. ಹೆಚ್ಚು ಸಮಯ ಬಾಳುವುದಿಲ್ಲ. ಅದಲ್ಲದೆ ಈಗ ಕಲ್ಕತ್ತಾ, ಪಟ್ನಾ ಜಿಲ್ಲೆಯೂ ಲಕ್ನೋ [illegible] ಈ ಯಂತ್ರಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಇಟ್ಟಿರುತ್ತಾರೆ. ಅವುಗಳಲ್ಲಿ ತಯಾರಾಗುವ ಯಂತ್ರಗಳಿಗೆ ಕ್ರಯವು ಕಡಿಮೆ. ಯಂತ್ರಗಳು ಒಳ್ಳೇದಿವೆ. ಇವುಗಳನ್ನು ತಯಾರಿಸುವುದಕ್ಕಾಗಿ ಜರ್ಮನಿಯಿಂದ ಅನುಭವಸ್ಥ ಇಂಜಿನಿಯರರನ್ನು ತಂದು ನಿಲ್ಲಿಸಿ ಅವರ ಕೈಕೆಳಗೆ ಈ ಯಂತ್ರಗಳು ತಯಾರಾಗುತ್ತವೆ. ಕೆಲವು ಸಾಹಿತ್ಯಗಳನ್ನು ನಮೂನೆಗೆ ಒಂದೊಂದು ತರಿಸಿದರೆ ಮತ್ತೆ ಅವುಗಳನ್ನು ಇಲ್ಲಿಯೆ ತಯಾರಿಸಬಹುದು. ಅದ್ದರಿಂದ ಯಂತ್ರಸಾಧನೆಗಳಿಂದ ಅಡ್ಡಿಯಾಗಲಿಕ್ಕಿಲ್ಲ.

ತಯಾರಿಸುವ ಅನುಭವವನ್ನು ಯಂತ್ರಸಾಧನೆಗಳನ್ನು ತರಲಿಕ್ಕೆ ಹೋದಾಗ ಸುಮಾರು ಒಂದು ತಿಂಗಳು ಕಲ್ಕತ್ತದಲ್ಲಿ ನಿಂತರೆ ಆ ಯಂತ್ರಸಾಧನೆ ಒದಗಿಸುವ ಕಾರ್ಖಾನೆಯವರೆ ಅನುಭವವನ್ನು ಧರ್ಮಾರ್ಥವಾಗಿಯೆ ಕೊಡುತ್ತಾರೆ. ಇಂಗ್ಲೀಷು ತಿಳಿದವರು ಹೆಚ್ಚು ಕ್ರಯವಾಗುವ ಪುಸ್ತಕಗಳನ್ನು ತರಿಸಿ ಅನುಭವ ತಿಳಕೊಳ್ಳಬಹುದು. ಇಂಗ್ಲೀಷು ತಿಳಿಯದ ಕನ್ನಡಿಗರು ಮಂಗಳೂರಿನಲ್ಲಿರುವ ಶಾರದಾ ಛಾಪಖಾನೆಯಲ್ಲಿ ದೊರೆಯುವ ಬಹಳ ಸುಲಭ ತರದಲ್ಲಿ ಬೆಂಕಿಪೆಟ್ಟಿಗೆ ತಯಾರಿಸುವ ಎಂದರೆ, ಪೆಟ್ಟಿಗೆ, ಕಡ್ಡಿ, ಕಡ್ಡಿಗೆ ಹಾಗಿಸುವ ಮದ್ದು, ಪೆಟ್ಟಿಗೆಯ ಬದಿಗೆ ಹಾಗಿಸುವ ಮದ್ದು ಮುಂತಾದ ಎಲ್ಲಾ ತರದ ಅನುಭವವನ್ನು ಕೊಡುವ "ಬೆಂಕಿಪೆಟ್ಟಿಗೆ ತಯಾರಿಸುವ ವಿಧಾನ" ಎಂಬ ಪುಸ್ತಕವನ್ನು ಓದಿ ತಿಳಕೊಳ್ಳಬಹುದು.

ಪೆಟ್ಟಿಗೆ, ಕಡ್ಡಿ ಮಾಡಲಿಕ್ಕೆ ಬೇಕಾದ ಮರಗಳ ವಿಷಯ ಆಲೋಚಿಸಿದರೆ ಈ ಜಿಲ್ಲೆಯಲ್ಲಿ ಅಮಟೆಕಾಯಿ ಮರ, ಹಾಲೇ ಮರ (ಬೊಳ್ಪಾಲೆ) ಬೂರುಗದ, ಹತ್ತೀಮರ (ಅಡ್ಡಗೆಲ್ಲು ಹೋಗುವ ಮರ) ಪೈನ ಮರ, ಸ್ಪ್ರೂಸ್ ಇನ್ನೂ ಅನೇಕ ಮೆತ್ತಗೆ ಇರುವ ಮರಗಳೂ ಇವೆ. ಪೆಟ್ಟಿಗೆಗಳನ್ನು ಸ್ಟ್ರಾಹಾಳಿ ಅಥವಾ ಕಾಳೆಯ ಓಲೆ ಮುಂತಾದವುಗಳಿಂದ ತಯಾರಿಸಬಹುದು. ಕಡ್ಡಿಗಳನ್ನು ಓಟೆಗಳಿಂದ ತಯಾರಿಸಬಹುದು. ಮದ್ದುಗಳನ್ನು ಸದ್ಯಕ್ಕೆ ಪರದೇಶಗಳಿಂದ ತರಿಸಬೇಕಾಗಿದೆ. ಆದರೆ ಅವುಗಳನ್ನು ಪರಪ್ರದೇಶಗಳಿಂದ ತರಿಸಿದರೂ ಬಹಳ ಕಡಿಮೆ ಕ್ರಯವಿದೆ. ಅನಂತರ ಈಗ ಯಂತ್ರ ತಯಾರಿಸುವ ಕಾರ್ಖಾನೆ ಇಟ್ಟ ಹಾಗೆಯೆ ಕೆಮಿಕಲ್ ಲೆಬೋರೇಟರಿಗಳನ್ನು ಇಟ್ಟ ಮೇಲೆ ಇಲ್ಲಿಯೆ ತಯಾರಿಸಬಹುದು.

ಬೆಂಕಿಪೆಟ್ಟಿಗೆಗಳನ್ನು ಒಳ್ಳೇ ರೀತಿಯಲ್ಲಿ ತಯಾರಿಸಿದರೆ ಗಿರಾಕಿಗಳು ಬೇಕಾದವಷ್ಟು ಸಿಕ್ಕುವರು. ದೇಶವಾತ್ಸಲ್ಯವು ತನ್ನಷ್ಟಕ್ಕೆ ಹುಟ್ಟುತ್ತದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬೆಂಕಿಪೆಟ್ಟಿಗೆಯ ಕಾರ್ಖಾನೆಗಳನ್ನು ಇಡಲಿಕ್ಕೆ ಅನುಕೂಲತೆಯು ಚೆನ್ನಾಗಿದೆ. ಮರಗಳೂ ಸಿಕ್ಕುತ್ತವೆ. ಮುಂಬಯಿ ಬಂದರವು ಹತ್ತಿರವಿದೆ. ಮದ್ದುಗಳನ್ನು ಹನ್ನೆರಡು ತಿಂಗಳಲ್ಲಿಯೂ ಯೂರೋಪ ಖಂಡದಿಂದಲೂ ಜಪಾನಿನಿಂದಲೂ ತರಿಸಬಹುದು. ಅದ್ದರಿಂದ ಮೋಟಾರು ಕಂಪೆನಿಗಳನ್ನೂ, ಬಾಯಿಸ್ಕೋಪು ಕಂಪೆನಿಗಳನ್ನೂ, ಪ್ರಿಂಟಿಂಗ್ ಕಾರ್ಖಾನೆಗಳನ್ನೂ ಸ್ಥಾಪಿಸಿದ ಹಾಗೆಯೆ ಬೆಂಕಿಪೆಟ್ಟಿಗೆಯ ದೊಡ್ಡದೊಡ್ಡ ಕಾರ್ಖಾನೆಗಳನ್ನೂ ಅಥವಾ ಮನೆಕಸಬಾಗಿ ಸಣ್ಣ ಕಾರ್ಖಾನೆಗಳನ್ನೂ ಇಟ್ಟರೆ ಈಗ ದೇಶದಲ್ಲಿರುವ ಒಂದು ಕೊರತೆಯನ್ನು ಹೋಗಲಾಡಿಸಿದಂತಾಗಿ ಕೆಲಸವಿಲ್ಲದ ಅನೇಕರಿಗೆ ಕೆಲಸ ಸಿಕ್ಕಿದಂತಾಗುವುದು. ಹಣಾ ಹುಡುಗರಿಗೆ ಇದೊಂದು ಒಳ್ಳೇ ವೃತ್ತಿಯಾಗುವುದು. ಸಾವಕಾರರು ಇನ್ನೂ ಐಶ್ವರ್ಯವಂತರಾಗಬಹುದು. ಬಡವರು ಸುಖಿಯಾಗಿ ಜೀವಿಸಬಹುದು.

ಹಿಂದೂ ರಿಲಿಜಿಯಸ್ ಎನ್‌ಡೌಮೆಂಟ್ ಬಿಲ್ಲು.

[illegible]

ಶ್ರೀಯುತ ಅನಂತಕೃಷ್ಣಾಚಾರ್ಯ, [illegible] ಆಚಾರ್ಯ, ಮತ್ತು ಬೆಂಗಳೂರಿನ ಶ್ರೀಯುತ ಬಿ. ಎಸ್. [illegible] ಇವರೆಲ್ಲ ಸೇರಿದ್ದರು. ಗವರ್ನರ ದೊರೆಗಳವರ ಸಮಕ್ಷಮ ೨|| ಗಂಟೆಗಳವರೆಗೆ ಚರ್ಚೆಯು ನಡೆಯಿತು. ಈ ಬಿಲ್ಲಿನಿಂದ ಹಿಂದೂ ದೇವಸ್ಥಾನಗಳಿಗೂ ಮಠ ಸಂಬಂಧದ ಸಂಸ್ಥೆಗಳಿಗೂ ಹೊಡೆತಗಳು ಸಂಭವಿಸುವುದೆಂದು ಸ್ಪಷ್ಟವಾಗಿ ತಿಳಿಸಲಾಯಿತು. ದೇವಸ್ಥಾನಗಳ ಹಣದ ದುರುಪಯೋಗವಾಗದಂತೆ ಮಾಡಬೇಕಾದ್ದು ಈ ಬಿಲ್ಲಿನ ಉದ್ದೇಶವೆಂದು ಅಲ್ಲಿ ಹಾಜರಿದ್ದ ಮದರಾಸ ಸಂಸ್ಥಾನದ ಮುಖ್ಯ ಮಂತ್ರಿಗಳಾದ ಪನಗಲ್ ರಾಜರು ತಿಳಿಸಿದರು. ಈಗ ಊರ್ಜಿತದಲ್ಲಿರುವ ಕಾನೂನುಗಳು ಸಾಕಾಗಿದೆ ಮತ್ತು ಈಗಿನ ಬಿಲ್ಲು ಅನವಶ್ಯವಾಗಿದೆ ಎಂದು ಡೆಪ್ಯುಟೇಶನು ಇದಕ್ಕೆ ಉತ್ತರಕೊಟ್ಟು, ಮಠಗಳನ್ನೂ, ದೇವಸ್ಥಾನಗಳನ್ನೂ ಸೆಂಟ್ರಲ್‌ಬೋರ್ಡಿನ ಮೇಲ್ವಿಚಾರಣೆಯಿಂದ ರದ್ದು ಮಾಡತಕ್ಕದ್ದು, ಮತ್ತು ಈಗಿರುವ [illegible] ಸ್ಥಿತಿಯನ್ನು ಸುಧಾರಿಸಬಹುದೆಂದು ವಿನಂತಿಮಾಡಿಕೊಂಡಿತು.

ನ್ಯಾಯವಿಧಾಯಕ ಸಭೆಯ ಬಹುಮತದಿಂದ ಈ ಬಿಲ್ಲು ಪಾಸ ಮಾಡಿದೆ ಎಂದು ವಾದಿಸಿದಕ್ಕೆ, ಈಗಿನ ನ್ಯಾಯವಿಧಾಯಕ ಸಭೆಯು ಎಲ್ಲ ತರದ ಪ್ರತಿನಿಧಿಗಳಿಂದ ಕೂಡಿದ ಸ್ವಭಾವದಲ್ಲ, ಮತ್ತು ದೇವಸ್ಥಾನ, ಮಠಸಂಸ್ಥೆ ಹಾಗು ಮಠ ಇವುಗಳ ಪ್ರತಿನಿಧಿಗಳು ಇಲ್ಲದೆ [illegible] ಈ ತರದ ಮಹತ್ವಾದ ಬಿಲ್ಲನ್ನು ಮಂಜೂರುಮಾಡುವುದು ಯೋಗ್ಯವಲ್ಲ. ಅಲ್ಲದೆ ಸರಕಾರಿ ಪಕ್ಷದ ಅಧಿಕಾರಿಗಳು, ಕ್ರೈಸ್ತರು, ಮಹಮ್ಮದೀಯರು ಮತ್ತು ಹಿಂದುಗಳಲ್ಲದವರೂ ಇವರ ಸಹಾಯದಿಂದ ಈ ಬಿಲ್ಲನ್ನು ಮಂಜೂರುಮಾಡುವುದು ನ್ಯಾಯಸಮ್ಮತವಲ್ಲವೆಂದು, ಜನರು, ಮೊದಲೆ ತಮ್ಮ ವಿರೋಧವನ್ನು ತಿಳಿಸಿದ್ದಾರೆ. ಇವೆ ಮೊದಲಾದ ಸಂಗತಿಗಳನ್ನು ತಿಳಿಸಿ ವಾಸ್ತವಿಕವಾದ ಕಾರಣಗಳಿಂದಲೆ ಈ ಬಿಲ್ಲನ್ನು ಡೆಪ್ಯುಟೇಶನು ಆಕ್ಷೇಪಿಸಿತು. ಗವರ್ನರ ದೊರೆಗಳವರು ಡೆಪ್ಯುಟೇಶನ ಸೂಚನೆಗಳನ್ನು ಸಾವಧಾನದಿಂದಲೂ ಆದರೋಪಚಾರಗಳಿಂದಲೂ ಅವಧರಿಸಿ, ಇದರ [illegible] ಕೇಳಲು ತನಗೆ ಬಹಳಾ ಕುತೂಹಲವಿತ್ತು. ಡೆಪ್ಯುಟೇಶನು ಈ ಬಿಲ್ಲಿಗೆ ವಿರೋಧವಾಗಿದೆ. ಬಿಲ್ಲನ್ನು ತೆಗೆದುಹಾಕಬೇಕೆಂದು ಅವರ ಮನೋಗತವಾಗಿದೆ. ಸೆಂಟ್ರಲ್ ಬೋರ್ಡನ್ನು ಸ್ಥಾಪಿಸಿ ಮಠಗಳ ಮೇಲ್ವಿಚಾರಣೆಯನ್ನು ಅದಕ್ಕೆ ಒಪ್ಪಿಸುವುದು ಸಮ್ಮತವಿಲ್ಲ. ಇವೆ ಮೊದಲಾದ ಸಂಗತಿಗಳು ಡೆಪ್ಯುಟೇಶನು ತನಗೆ ಸೂಚಿಸಿದುದು ಮುಂದಟ್ಟಾಯಿತು. ಈ ವಿಷಯದಲ್ಲಿ ತಾನು ಸಾಧ್ಯವಿದ್ದಷ್ಟು ಆಲೋಚನೆ ಮಾಡುವೆನೆಂದು ಭರವಸೆ ಹೇಳಿದರು.

ಅಕ್ಕಲಕೋಟೆ ಮಹಾರಾಜರ ಮರಣದ ಖಟ್ಲೆ.

ಪೂನೆಯ ಸೆಸೂನ ಆಸ್ಪತ್ರೆಯಲ್ಲಿ ಅಕ್ಕಲಕೋಟೆ ಮಹಾರಾಜರಾದ ಶ್ರೀಮಂತ ಫತ್ತೇಸಿಂಗ ಮಹಾರಾಜರಿಗೆ ಸಂಭವಿಸಿದ ಮರಣಾವಸ್ಥೆಯನ್ನೂ ಅನಂತರದ ಖಟ್ಲೆಯ ಸಮಾಚಾರವನ್ನೂ ಕಳೆದ ಸಂಚಿಕೆಗಳಲ್ಲಿ ಪ್ರಕಟಿಸಿದ್ದೇವೆ. ಕಳೆದ ತಾ. ೩ನೆಯ ದಿನ ಪೂನೆಯ ಅಸಿಸ್ಟಂಟ ಕಲೆಕ್ಟರರೂ ಸಬ್ ಡಿವಿಜನಲ್ ಮೆಜಿಸ್ಟ್ರೇಟರೂ ಆದ ಮಿ. ಸಿ. ಯಚ್. ಬ್ರಿಸ್ಟೊ ಐ. ಸಿ. ಯಸ್. ಇವರು ಈ ಅಪಮೃತ್ಯುವಿಗೆ ಕಾರಣರೆಂದು ಅಪರಾಧ ಹೊರಿಸಲ್ಪಟ್ಟ ಇಬ್ಬರಿಗೂ ಶಿಕ್ಷೆಯನ್ನು ವಿಧಿಸುವ ತೀರ್ಪು ಕೊಟ್ಟಿರುವರು. ಪೂನಾ ಡ್ರಗಿಸ್ಟೋರಿನ ಚೆಫ್ ಕಂಪೌಂಡರರಾದ ಮಿ. ಯಚ್. ಯಂ. ಫೆರ್ನಾಂಡಿಸರ ವಿಷಯದ ತೀರ್ಪಿನಲ್ಲಿ ಮೆಜಿಸ್ಟ್ರೇಟರು ಬರೆಯುತ್ತಾರೆ "ತನ್ನ ಎಲ್ಲಾ ಕಾರ್ಯದಲ್ಲೂ ಈ ಆರೋಪಿಯು ಯಾವ ಕೆಟ್ಟ ಉದ್ದೇಶದಿಂದಲೂ ವರ್ತಿಸದೆ ಸಂಪೂರ್ಣ ಪ್ರಾಂಜಲತನದಿಂದ ನಡೆದಿರುವನು. ಅವನು ಒಂದು ತಪ್ಪನ್ನು-ಕಠಿನ ತಪ್ಪನ್ನು ಮಾಡಿರುವನು. ಆದರೆ ಇತರರನ್ನು ವಂಚಿಸಬೇಕು ಅಥವಾ ಕೆಡುಕನ್ನು ಉಂಟುಮಾಡಬೇಕೆಂದು ಈ ತಪ್ಪನ್ನು ಮಾಡಿದುದಲ್ಲ. ತನ್ನ ಕಾರ್ಯಗಳ ಎಲ್ಲ ವಿವರವನ್ನು ಅವನು ಪೋಲೀಸರಿಗೆ ತಿಳಿಸಿರುವನು. ಮತ್ತು ಇವುಗಳನ್ನು ತನ್ನ ವಾಗ್ಮೂಲದಲ್ಲೂ ಒಪ್ಪಿರುವನು. [illegible]

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಅವರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರುಗಳೂ [illegible] ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, [illegible] ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ [illegible] ಅವರ [illegible] ಕೃತಿಗಳೂ, ಅವರ ರಾಜಕೀಯ [illegible] ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಕರ್ಣಾಟಕ ಸಾಹಿತ್ಯ ಪರಿಷತ್ತಿನ [illegible] ಉಪನ್ಯಾಸ ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಅತ್ಯುತ್ತಮ ತರದ ಐತಿಹಾಸಿಕ ನಾಟಕ. [illegible] ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿರುವುದರ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳಿಸಬೇಕು.

ವಸಂತ ಕುಸುಮಾಂಜಲಿ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ [illegible] ಈ ಗ್ರಂಥದಲ್ಲಿ "ಜೀವನಗೀತ" "ಅಶ್ವಗೀತ" [illegible] ಎಂಬ [illegible] ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. [illegible] ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಬಳಿಯಲ್ಲಿಯೂ ಇರಬೇಕಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ವಟ್ಟಾ ದೊರೆಯುವುದು.

ವಿಳಾಸ—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

[illegible] ವಾಚಕ ಮಹಾಶಯರೇ,

[illegible]

೬೦ ವರ್ಷದ ಅನುಭವವುಳ್ಳ [illegible] ಮಳಿಗೆ

[illegible]

ಶ್ರೀನಿವಾಸ ರಂಗಪ್ಪ
[illegible] ಮಂಗಳೂರು

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs.	300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ.	300,000—0—0
Reserve and other sinking Funds "	205,250—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು "	205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಬಾರದು ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ಕಾಲಕಾಲಕ್ಕೆ ಹಾಗೆಯೇ ಆಗಲಿ [illegible] ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಶ್ಲೇಷಯುಕ್ತವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸುವ ಪಚನಶಕ್ತಿಯನ್ನು ಸುಸ್ಥಿತಿಯಲ್ಲಿರಿಸುತ್ತವೆ. ಚಳಿ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಹೊಟ್ಟೆ, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ಬೇನೆ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಅನೇಕ ಇನ್ಫ್ಲುಯೆನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅಮೃತಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷ್ಯಾಯರಿಗೂ ಈ ಮಾತ್ರೆಗಳು ಸಂಜೀವನ ಪ್ರಾಯವಾದವು. ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿ. 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೇ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

[illegible] ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— ([illegible])

[illegible]

ಸಂಗೀತ [illegible] ರೂ. ೦—೮—೦.

[illegible] ಪ್ರತಿ ರೂ. ೩—೧೨—೦.

[illegible]

[illegible]	0—12—0	[illegible]	5—0—0
[illegible]	0—6—0	[illegible]	
[illegible]	0—8—0	[illegible]	0—12—0
[illegible]	0—8—0	S. L. C. Kannada Term	
		[illegible]	0—5—0
[illegible]	1—0—0	[illegible]	0—6—0
[illegible]	1—0—0	[illegible]	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

[illegible]

ಮುದ್ದಾದ ಖಾದರ್ ಶಿಕ್ಷೆ [illegible]

[illegible]

ವಿಳಾಸ—

[illegible]

ಗೊನೊಕ್ಯೂರಾ

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕೆಟ್ಟ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಹುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆ ಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶಿಲೆ ಒಂದರ ಕ್ರಯ:—ರೂ. 1—4—0.

ಹುಳದ ಪೌಡರ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ ಮೊಳ ಅಗಲವಿರುವದು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಕಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು, ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪಂಕ್ತಿಸಿರಿ.

ಕ್ರಯ ನಂ. 1	ರೂ.	6—8—0
„ 2	„	7—8—0

ವಿಳಾಸ:—ಎನ್. ಆರ್. ಕೃಷ್ಣ ಎಂಡು ಕೊ,
1. ತಂಬುನಾಯಕನ ಬೀದಿ, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್.

ನಶಿವ್ಯಾಪಾರಿ.
ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ	ರೂ.	3—4—0
ಸೇ. 1 („ 24) „	„	2—0—0

ಪ್ಯಾಕ್ಸು ಪೇಕಿಂಗ್ ಚಾರ್ಜು ನಮ್ಮದು

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 3-0-0.

ಸ್ಯಾಂಪಲ್ ತರಿಸುವವರು ಪ್ಯಾಕ್ಸು, ಪೇಕಿಂಗ್ ಚಾರ್ಜು ಕೊಡಬೇಕಾಗುವುದು

ನಶ್ಯ ಒಂದೇ ತರದು.

ಎಲಕ್ಟ್ರಿಕ್ ದೀಪ



ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಯೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಟಿಸೋನಿಯಾ ಅಂಡ್ ಕೊ
ಪೋಸ್ಟುಬಾಕ್ಸ ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶಿ, ಗಯಾ, ಪ್ರಯಾಗ, ಹರಿದ್ವಾರ ಬದರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಬಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೆಂದು ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾ[illegible] ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿ ವಟರು ತರಿಸಿ ನೋಡಬೇಕೆಂದು ಇದರ ಬೆಲೆ ಕಡಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ನೂತನ ಬಿಲ್ಡಿಂಗ್ಸ್.

ಮಂಗಳೂರು — ಟೈಪ್ ಫೌಂಡ್ರಿ

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು, ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯುನಾಮಲ್ಲ ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಖಾಲಿ ಕವರು ಫೌಂಟನ್ ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತವೆ.

~~~~~

ಆರ್. ಮಾರ್ಟಿನ್ನರ.

(ಸಾರಸಾಪರಿಲ್ಲಾ)

ಈ ಸಾರಸಾಪರಿಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲಾ ತರದ ಕಾಯಿಲೆ ಉಬ್ಬುವುದು, ನರಗಳಲಿರುವ ನೋವು, ವಾತ, ಸಂಧಿವಾತ, ಯಕ್ಷ್ಮಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ ಮತ್ತು ಚರ್ಮದ ರೋಗಗಳು, ವಿಷ ಕಡಿತದಿಂದುಂಟಾದ ವ್ಯಾಧಿ, ಶಿಫಿಲಿಸ್, ಇವೇ ಮೊದಲಾದುವನ್ನು ನಾಶ ಮಾಡಿ, ರಕ್ತದಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು, ಮನುಷ್ಯನನ್ನು ಯಾವಾಗಲೂ ಆರೋಗ್ಯದಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ.

ಬಾಟ್ಲಿ 1ಕ್ಕೆ ಕ್ರಯ ರೂ. 1—12—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಳಿಜ್ವರ, ಸನ್ನಿಪಾತ ಪಟ್ಟು ಬಾಯಿಯಿಂದುಂಟಾದ ರೋಗ ಇವೇ ಮೊದಲಾದ ಎಲಾ ತರದ ಜ್ವರಗಳನ್ನು ಕೂಡಲೇ ನಾಶಮಾಡುತ್ತದೆ. ಎಲುಬುಗಳಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳೂ ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮಲವಿಸರ್ಜನೆಯಾಗುವಲ್ಲಿ, ಮರ್ಮಸ್ಥಾನದಲಿ ಉರಿಯುವುದು, ನವೆ, ತುರಿಕೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಮೊದಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವನಿಗೆ ಏನೊಂದೂ ನೋವನ್ನೂ ಕೊಡದೆ ತಂಪಾಗಿ ಮಾಡುತ್ತದೆ.

ಬಾಟಿ 1ಕ್ಕೆ ರೂ. 1—8—0.

ವಿಳಾಸ:—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಬಿ. ಫ್ರೀಯರ್ ರೋಡ್,
ರೈಟ್ ಎಂಡ್ ಕೋ ಹತ್ತಿರ, ಫೋರ್ಟ, ಮುಂಬಯಿ.

R. D. KATELY & CO.,
No. B. Frere Road,
Near Wright & Co. Fort BOMBAY.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 408.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ಸ್ವದೇಶಾಭಿಮಾನಿ

SWADESHABHIMANI. MANGALORE.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ.

ರಕ್ಷ್ಯೈರ್ಮಹಾರ್ಘೈಸ್ತುತುಷುರ್ನ ದೇವಾ
ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ ।
ಹರುಷವಾಯಿತೆ! ಮತ್ತೆ ವಿಷ್ಯವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಸ್ವಾರ್ಥರ ತೆರದಿ ಕುಳಿತರೆ ।
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೭. ಮಂಗಳೂರು, ತಾರೀಕು ೧೮ನೇ ಶುಕ್ರವಾರ ಮೇ ೧೯೩೪. ಸಂಚಿಕೆ ೨೦

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00000—0—0
ಚಂದಾ ಹಾಕಿ ಎತ್ತಿದ ಮೂಲಧನ	1,61,400—0—0
ಮೌಲ್ಯ ಕೆತ್ತ ಮೂಲಧನ	1,04,388—8—11
ಠೇವಣಾತಿಗಳು	3,49,151—12—6
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ ೭ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,709 ಕೂಡಾ	6,12,162—13—2
ರಿಜರ್ವ ಮತ್ತು ಇತರ ಫಂಡುಗಳು	29,149—4—2

ಕಳೆದ 2 ವರುಷಗಳಲ್ಲಿ ಪಾಲುದ್ಮಾರರಿಗೆ ಸಾಲಿಯಾನ್ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಶರ್ತದ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ನಿರಖು ಠೇವಣಾತಿಗಳನ್ನೂ 15 ದಿನಗಳ ನೋಟೀಸು ಮೂಲಕ ಶೇಕಡಾ ೬ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾದ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ ಶೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸು ಬ್ಯಾಂಕು ಠೇವಣಾತಿಗಳನ್ನೂ, ತಿಂಗಳುಗಟ್ಟಿಯಿಂದ ತೆರುವ ಕಂತು ಠೇವಣಾತಿಗಳನ್ನೂ ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರದಲ್ಲಿ ಸಿಕ್ಕುವುದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ನಿಮ್ಮ ಜಮೀನನ್ನು ಸಾರವತ್ತಾಗಿ ಇರಿಸಿ ಬೆಳೆ ಸಮೃದ್ಧಿಯನ್ನು ಪಡೆಯಬೇಕಾದರೆ ಊರ ಗೊಬ್ಬರಗಳ ಜತೆಯಲ್ಲಿ ಸ್ವಲ್ಪ ನೈಟ್ರೇಟ ಒಫ್ ಸೋಡಾ ಗೊಬ್ಬರವನ್ನು ಉಪಯೋಗಿಸಿರಿ. ಈ ಸವುಳುಪ್ಪು ಗೊಬ್ಬರವು ಎಲ್ಲಾ ಧಾನ್ಯ ಮುಂತಾದ ಪೈರುಗಳಿಗೂ ಕಬ್ಬಿನ ಬೆಳೆಗೂ ಮತ್ತು ತೆಂಗು ಮೊದಲಾದ ಫಲವೃಕ್ಷಗಳಿಗೂ ಅಗತ್ಯವಿರುವ ನೈಟ್ರೋಜನ್ ವಾಯುವನ್ನು ಚುರುಕಾಗಿ ಒದಗಿಸುವುದು.

ಪರೀಕ್ಷಾರ್ಥವಾಗಿ ಉಪಯೋಗಿಸಬೇಕೆಂದಿದ್ದವರು 2 ರಾತ್ಲು ಸವುಳುಪ್ಪಿನ ಸೆಂಪಲ್ ಡಬ್ಬಿಯನ್ನು ೦—೨—೦ ಯಂತೆಯೂ ಬಂಗಾಳಿ ಮಣ ೧ಕ್ಕೆ ರೂ. ೯—೦—೦ಯಂತೆಯೂ ಪಡೆಯಬಹುದು.

ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರಣೆ" ಎಂಬ ಸಚಿತ್ರ ಪಹಿಯನ್ನು ನಮ್ಮಿಂದ ಉಚಿತವಾಗಿ ಪಡೆಯಬಹುದು.

THE DIRECTOR
CHILEAN NITRATE COMMITTEE,
6, *Mission Row*, CALCUTTA.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಅಶ್ವತ್ಥರಾಮ ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ವ್ರತಪರ್ವೋತ್ಸವ	ಕ್ರಯ	೦—೧೦—೦
ಶೇಕುಭಂಗ	„	೦—೧೨—೦
ಸಂಕ್ಷೇಪಗೀತೆ	„	೦—೧೦—೦

ಅಶ್ವತ್ಥನಾರಾಯಣ ಪುರಾಣಿಕರಿಂದ ರಚಿತವಾದ ಸ್ವರಾಜ್ಯ ಭಕೆಲೋಲ್ಲಾಸ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ, ಅಂಗದನ ಧೀರ್ಯೋದ್ಯಮ, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ದಸ್ತಾವೇಜಿನ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨—೧೩—೦ ಸ್ಥಳಿಕರಿಗೆ ರೂ. ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦ ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಸ್ಲೇಟುಗಳು. ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಹೋಲ್ಡರುಗಳು, ಇತರ ವಿಲಾಯತಿನ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ವಕಾಲತು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಟಂಫಂಡಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪಥಿಕ್, ಹೋಮಿಯೋಪಥಿಕ್ ಮತ್ತು ಬಿಕ್ಸ್ ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪಾಷ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಕರಿಗೆಬೇಕಾಗುವ ಗೊಬ್ಬರಗಳು.

ಶಾಸ್ತ್ರೀಯವಾದ ಯುಕಲಿಪ್ಟಿಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ. ಇವರಲ್ಲಿಯೂ ದೊರಕುವುದು.

ಪ್ರತಾಪಕಷಾಯ

U. B. DUTT & Co.
CALICUT

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಶ್ರಮದಿಂದ ಮಾತ್ರವೇ ಸಿಕ್ಕುವ ಬೇರುಗಳಿಂದ ನಾವು ಅನೇಕ ಆಶ್ಚರ್ಯ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿಷ್ಠಿತವೂ "ಅರ್ಹತೆಗಳೂ" ಲಭಿಸಿವೆ. [illegible] ಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ತೋರಿಸುತ್ತಿವೆ.

ಅಂಥಾ ಆಶ್ಚರ್ಯ ಔಷಧಗಳಲ್ಲಿ ನಮ್ಮ 'ಪ್ರತಾಪಕಷಾಯ' ಎಲ್ಲಾ ವಿಧದ [illegible]

ಕ್ರಯ ರೂ. 4—4—0.

[illegible]
~~~~~

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇದ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ೩೬, (ಬ್ರಾಡ್ವೇ, ಮದ್ರಾಸ್.

Local Agents: **Raphael & Co,**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ತರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ನೋವು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಪ್ಯಾರಿಸ್ ದೇಶದಲ್ಲಿ ಕಂಡುಹಿಡಿಯಲ್ಪಟ್ಟ ರಬ್ಬರಿನ ರಹಸ್ಯ. (ಎಂಬ ಮರ್ಮದ ಚೀಲ.)

ಇದು ಮೃದುವಾದ ರಬ್ಬರಿನಲ್ಲಿ ಬಹು ಚಮತ್ಕಾರವಾಗಿ ತಯಾರು ಮಾಡಲ್ಪಟ್ಟು ಈಗಲೇ ಬಂದಿರುವದು. ಇದರ ಮರ್ಮದ ವಿಷಯ ಇಲ್ಲಿ ವಿವರವಾಗಿ ಬರೆದುತಿಳಿಸಲು ಆಗದು. ಇದನ್ನು ಉಪಯೋಗಿಸುವದರಿಂದ ಸ್ತ್ರೀ ಸಂಬಂಧವಾದ ಯಾವ ರೋಗವು ತಗಲದೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಇದರ ಉಪಯೋಗದಿಂದ ಆಗುವ ಸುಖವೂ ಸಂತೋಷವೂ ಅವರವರಿಗೆ ಗೊತ್ತಾಗುವದು. ಇದನ್ನು ಪ್ಯಾರಿಸ್ ದೇಶದಲ್ಲಿ ಬಹಳ ಉಪಯೋಗಿಸುತ್ತಾರೆ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ.

ಕ್ರಯ ರಬ್ಬರಿನ ಮರ್ಮದ ಚೀಲ ರೂ. ೧—೮—೦.

ಮನೋಲಿಯ ಏಜೆನ್ಸಿ,
ಪೋಸ್ಟು ಬೋಕ್ಸ್ ನಂಬ್ರ 232. ಮದರಾಸ್.

ಓಟೋಲಿಲ್ಲಾ ಎಂಬ ಸೆಂಟ್.

ಇದನ್ನು ಒಂದು ಒಳ್ಳೇ ಅರವಸ್ತ್ರಕ್ಕೆ ಸೋಕಿಸಿದರೆ 6-7 ದಿನಗಳವರೆಗೂ ಸುವಾಸನೆಯಾಗಿರುತ್ತದೆ. ಇತರ ಸೆಂಟುಗಳ ಹಾಗೆ ಬಟ್ಟೆಗೆ ಕಲೆಯನ್ನು ಉಂಟುಮಾಡುವುದಿಲ್ಲ.

ಬೆಲೆ 1 ಡಿಸ್ ಬಾಟ್ಲಿಗೆ ರೂ. 1—4—0.
„ ½ „ „ ರೂ. 0—10—0.
ಓಟೊಲಿಲ್ಲ ಸೆಂಟು ಕಾರ್ಡು ದರ್ಜ 1ಕ್ಕೆ ರೂ. 0—12—0.

ನಮ್ಮಲ್ಲಿ ಸುಲಭ ಕ್ರಯಕ್ಕೆ ಸಿಕ್ಕುವ ಇತರ ಸಾಮಾನುಗಳು:—

ಬ್ರಿಟಿಶ್ ಮೇಡ್‌ರೇಜರ್	1ಕ್ಕೆ 2—0—0
ರೋಲ್ಡ್‌ಗೋಲ್ಡು ರಿಸ್ಟುವಾಚು	1ಕ್ಕೆ 8—8—0
ನಿಕಲ್ ರಿಸ್ಟು ವಾಚು	1ಕೆ 6—8—0
ಮಹಾತ್ಮಾ ಗಾಂಧಿಯವರ ಫೋಟೊ ಉಂಗರ	1ಕ್ಕೆ 1—8—0

ವಿಳಾಸ:— ರಿಪನ್ ವಾಚ್ ಕಂಪೆನಿ,
1/16ನೆಂಬರ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್‌ಟೌನ್, ಮದರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY
OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs.	150
½ Page Rs. 80. ¼ Page	„	50
2 in. Single Column	„	20
1 in. Single Column	„	15
Name alone in Bold Types	„	5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ಮಾರಾಟಕ್ಕಿದೆ.

ಉಡ್ಪಿ ಮೂಡನಿಡಂಬೂರು ಗ್ರಾಮ, ಸರ್ವೇ ನಂಬ್ರ ೮೩ನೇ, ಸಬ್‌ಡಿವಿಜನ್ $\frac{6}{15}$ನೇ, ಮೂಲಿ ಅಂಕಕ್ಕೆ ವರ್ಷ ೧೮ ರೂಪಾಯಿ ೫೮ ಪ್ರಕಾರ ಮೂಲಗೇಣಿ ತೆತ್ತುಬರುವ, ಮೂಲಗೇಣಿ ವ ಕೃತದ ಪಕ್ಕಿನ ಆಸ್ತಿ ೩೭ ಸೆಂಟ್ಸ್ ವಿಸ್ತೀರ್ಣದ್ದು; ಇದರಲ್ಲಿ ಹಂಚು ಛಾವಣಿಯ ತಕ್ಕಪೋಷಿಯ ಮನೆ, ಬಾವಿ, ಬಾಗಾಯತು ವ ಇತರ ಮರಮಟ್ಟುಗಳು ಕೂಡಾ ಇರುತ್ತವೆ. ಈ ಸ್ಥಳ ಉಡ್ಪಿ ಮಿಶನ್ ಕಂಪೌಂಡಿನ ಪಡುಗೇಟಿನ ಎದುರಿಗೆ ರಾಜರಸ್ತೆ ಬದಿಯಲ್ಲಿರುತ್ತದೆ. ಬೇಕಾದವರು ರಿಕಾರ್ಡು ವ ಕ್ರಯದ ಅಂದಾಜು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ತಿಳಿಸೋಣಾಗುವುದು.

೪ನೇ ಎಪ್ರೀಲ್ ೧೯೨೩
ಮಂಗಳೂರು.

S. CH. GOJAR,
Mission Street,
MANGALORE

'ಕವಿ'ಯವರ
ತಾಜಾ
ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ಲು 1ರ ರೂ. 2—12—0.
ಸ್ಪೆಶ್ಯಲ್ ರಾತ್ಲು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಫಿಡಲ್ 1ಕ್ಕೆ „ 15—0—0

ಬೇಕಾದವರು 5 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೋಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ನೋಡುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65, ಮದರಾಸು.

ಶಾಲಿವಾಹನಶಕ ೧೮೪೫ನೆಯ ರುಧಿರೋದ್ಗಾರಿ ಸಂವತ್ಸರದ ಅಧಿಕ ಜ್ಯೇ. ಶು ೩ ಶನಿವಾರದಿಂದ ರುಧಿರೋದ್ಗಾರಿ ಸಂವತ್ಸರದ ಅಧಿಕ ಜ್ಯೇಷ್ಠ ಶು೧೦ ಶುಕ್ರವಾರದ ವರೆಗಿನ ಪಂಚಾಂಗ
(೧೯೨೩ನೆಯ ಮೇ ಪಜ್ಞ)

ತಾರೀಕು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ ದಿ.	ಸೂರ್ಯ ಉ.	ಅಸ್ತ.
19	ಶನಿ	೩	೫.೧೬	ಆರ್ದ್ರಾ	೪೯.೨	೫	6. 7	6.48
20	ರವಿ	೪	೫.೧೪	ಪುನರ್ವಸು	೫೦.೧	೬	6. 7	6.48
21	ಸೋಮ	೫	೪.೨	ಪುಷ್ಯ	೪೯.೪೬	೭	6. 6	6.48
22	ಮಂಗಳ	೬	೧.೩೫	ಆಶ್ಲೇಷಾ	೪೮.೧೬	೮	6. 6	6.49
23	ಬುಧ	೮	೫೩.೪೬	ಮಘಾ	೪೬.೨	೯	6. 6	6.49
24	ಗುರು	೯	೪೮.೪೪	ಹುಬ್ಬಾ	೪೩.೧	೧೦	6. 6	6.49
25	ಶುಕ್ರ	೧೦	೪೩.೦	ಉತ್ತರಾ	೩೯.೩೮	೧೧	6. 6	6.50

ಮಂಗಳೂರಿನ ವಾಯುಸ್ಥಿತಿ.
(೧೯೨೩ನೆಯ ಎಪ್ರಿಲ್)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಮೆ	Rainfall. ಮಳೆ ದಿವಸ ಮಳೆ	ಜುಮಲಾ ಮಳೆ.
11	93—3	74—7	—	—
12	91—9	78—8	—	—
13	94—0	80—6	—	—
14	98—3	77—2	—	0—10
15	92—0	78—7	—	—
16	90—6	76—6	—	—
17	93—0	78—9	—	0—17

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ
ಹೊಸ ಮಸೂರಿ ಅಕ್ಕಿಮುಡಿ ೧ಕ್ಕೆ	...	7- 8	8— 2
ಹೊಸ ಗುಡ್ಡು,	...	6-10	7— 6
ಹೊಸ ರಾಶಿ		6- 6	6—10
ಅವ್ವಲ್ ಬೆಳ್ತಿಗೆ „	...	7-14	8—10
ಗುಡ್ಡು ಬೆಳ್ತಿಗೆ „	...	7- 6	7—12
ಘಂಟೂಡ ಬೆಳ್ತಿಗೆ ಗೋಣಿ ೧ಕ್ಕೆ	...	12- 0	13— 0
ಗೋಧಿ ಗೋಣಿ ೧ಕ್ಕೆ	...	18- 0	20 — 0
ಹುರುಳಿ ಗೋಣಿ ೧ಕ್ಕೆ	...	8-4	10—0
ಕಡಲೆ ಗೋಣಿ ೧ಕ್ಕೆ	...	11- 0	12— 0
ತೊಗರಿ ಗೋಣಿ ೧ಕ್ಕೆ	...	11- 8	—
ತೊಗರಿಬೇಳೆ ಗೋಣಿ ೧ಕ್ಕೆ	...	14- 0	23— 0
ಉದ್ದು ಗೋಣಿ ೧ಕ್ಕೆ	...	13- 0	—
ಹೆಸರು ಗೋಣಿ ೧ಕ್ಕೆ	...	—	12— 8
ಊರು ಬೆಲ್ಲ ಖಂಡಿ ೧ಕ್ಕೆ	...	40- 0	45 — 0
ಉಪ್ಪು ಗೋಣಿ ೧ಕ್ಕೆ	...	7- 6	7—12
ಕೊಪ್ರ ಖಂಡಿ ೧ಕ್ಕೆ	...	105- 0	115 — 0
ಕೊಪ್ರ ಹಿಂಡಿ ಖಂಡಿ ೧ಕ್ಕೆ	...	38- 0	39— 0
ಎಳ್ಳಿಂಡಿ ಖಂಡಿ ೧ಕ್ಕೆ	...	45- 0	53— 8
ಕೊಪ್ರ ಎಣ್ಣೆ ಮುಡಿ ೧ಕ್ಕೆ	...	8- 0	9— 0
ಎಳ್ಳೆಣ್ಣೆ ಮುಡಿ ೧ಕ್ಕೆ	...	6-12	9— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	8-11	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	—	8— 0
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	7- 8	8—12
ಸಾಸಿವೆ ಮುಡಿ ೧ಕ್ಕೆ	...	8- 8	9— 0
ಕೊತ್ತಂಬರಿ ಮುಡಿ ೧ಕ್ಕೆ	...	4- 8	5— 0
ಕಾಫಿ ಖಂಡಿ ೧ಕ್ಕೆ	...	274- 0	284— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳ್ಳು	...	175- 0	185— 0
ಬೆಳಗೋಟು New, ಹೊಸ್ತು	...	170- 0	180— 0
ಕಾಳುಮೆಣಸು ಖಂಡಿ ೧ಕ್ಕೆ	...	115- 0	120— 0
ಹುಣಸೆ ಮುಡಿ ೧ಕ್ಕೆ	...	60- 0	70— 0
ಗೇರುಬೀಜ ಮುಡಿ ೧ಕ್ಕೆ	...	1-14	2— 0
ಅಕ್ಕಿಂಡಿ ಖಂಡಿ ೧ಕ್ಕೆ	...	50- 0	65— 0
ತಾಂಬ್ರ ತಗಡು ಮಣ ೧ಕ್ಕೆ	...	20-12	23— 0
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	32- 0	—
ಜೀನ ಬೆಳ್ಳಿ ತೋಲ ೧ಕ್ಕೆ	...	22- 8	—
ಹಿತ್ತಾಳೆ ತಗಡುಮಣ 1ಕ್ಕೆ	...	20- 0	21—

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 8 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves: (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

AMRUTHINE.

An ideal beverage. The best Substitute for Coffee, Tea, and Cocoa.

ಶಕ್ತಿವರ್ಧಕ! **ಅಮೃತೈನ್.** ಆರೋಗ್ಯದಾಯಕ!

ಕಾಫಿ, ಟೀ, ಕೊಕೊವ್ಯಗಳಿಗೆ ಬದಲಾಗಿ ಬಾಲ ವೃದ್ಧರೂ ಸೇವಿಸಬಹುದಾದ "ಅಮೃತೈನ್" ಎಂಬ ಶ್ರೇಷ್ಠ ವರ್ಗದ ಚೋರ್ಣವು.

ಇದು ಪರಿಶುದ್ಧವೂ, ಚೈತನ್ಯವರ್ಧಕವೂ ಆದುದು. ಈ ಚೂರ್ಣವು ರಕ್ತವನ್ನು ಶುದ್ಧಿಮಾಡಿ, ಶಕ್ತಿಯನ್ನೂ ಉತ್ಸಾಹವನ್ನೂ ಹೆಚ್ಚಿಸಿ, ಶರೀರವನ್ನು ಆರೋಗ್ಯ ರೀತಿಯಲ್ಲಿಡುವುದಲ್ಲದೆ, ಬಹುಮೂತ್ರ, ಮಲಬದ್ಧತೆ ಮತ್ತು ಶೂಲವ್ಯಾಧಿ ಇವುಗಳನ್ನು ಶೀಘ್ರದಲ್ಲೇ ಗುಣಪಡಿಸುವ ಪಾನವಾಗಿದೆ. ಒಂದು ವಾರ ಉಪಯೋಗಿಸುವುದರಲ್ಲಿ ಇದರ ಗುಣಗಳು ವ್ಯಕ್ತವಾಗುವುವು.

6. ಔನ್ಸ್ ಟಿನ್. (120 ಬಟ್ಟಲುಗಳಿಗೆ ಸಾಕಾಗುವಷ್ಟು ಚೂರ್ಣ.) ರೂ. 0-10-6.
2. ಔನ್ಸು ಟಿನ್. (40 „ „) „ 0—4—0.
1. ತೊಲಾ ಪಾಕೆಟು. (8 ಬಟ್ಟಲುಗಳಿಗೆ) „ 0—0—9.

ಪ್ಯಾಕಿಂಗ್ ಮತ್ತು ಪಾರ್ಸೆಲು ಖರ್ಚು ಪ್ರತ್ಯೇಕ.
ವ್ಯಾಪಾರಿಗಳಿಗೆ ಕಮಿಷನ್ ಕೊಡಲ್ಪಡುತ್ತೆ.
ಬೇಕು! ಪ್ರತಿ ಟೌನುಗಳಲ್ಲೂ ಏಜಂಟರು ಬೇಕು!

ವಿಳಾಸ:— ಮದ್ರಾಸ್ ಮೈಸೂರು ಟ್ರೇಡಿಂಗ್ ಕಂಪೆನಿ,
ಮೈಸೂರು.

ಮಂಗಳೂರು ಏಜಂಟರು:—
ದಿ ರಾಯಲ್ ಹಾರ್ಮೋನಿಯಮ್ ಮಾರ್ಟ್,
ರಥಬೀದಿ, ಮಂಗಳೂರು.

NOTICE.

The Samyukta Gowda Saraswat Sabha, Madras will grant a number of scholarships to the total value of Rs. 1000 during the academic year 1923-1924.

The scholarships are tenable for 10 months and will be granted to men or women of the community for prosecuting studies in the lower secondary and high schools, in Arts colleges in the Medical & Engineering colleges and in the case of women to undergo training as nurses or teachers.

Applications with testimonials of conduct, poverty and qualification should reach the Hon. Secretary, 25 Harris Road, Mount Road Post, Madras, not later than the 15th June next.

The scholarships are repayable with 4% interest.

25 Harris Road,
Mount Road P. O. Madras,
18th April 1923.

M. Keshava Pai,
Hon. Secretary.

ಗಣಪತಿ ರಾಷ್ಟ್ರೀಯ ಶಾಲೆ.

ನಮ್ಮ ಪಡುಬಿದ್ರೆ ಗ್ರಾಮದಲ್ಲಿ ಇದೇ ತಿಂಗಳ ತಾರೀಕು ೧೮ನೆಯ ಶುಕ್ರವಾರ ದಿವಸ ಗಣಪತಿ ರಾಷ್ಟ್ರೀಯ ಶಾಲೆಯನ್ನು ತೆರೆಯಲಿಕ್ಕಿದ್ದೇವೆ. ಸದರಿ ಸಭೆಯ ಅರಂಭೋತ್ಸವಕ್ಕೆ ಶ್ರೀಯುತ ಕಾರ್ನಾಡ ಸದಾಶಿವರಾಯರನ್ನೂ, ಶ್ರೀಯುತರಾದ ಶ್ರೀಪಾದಶರ್ಮರನ್ನೂ, ಹಿರಿಯಡ್ಕ ನಾರಾಯಣರಾಯರನ್ನೂ, ಅನಂತಪದ್ಮನಾಭ ಭಟ್ಟರನ್ನೂ ಆಮಂತ್ರಿಸಿದ್ದೇವೆ. ಇದೇ ತಿಂಗಳ ೧೦ನೆಯ ತಾರೀಕಿಗೆ ಸದರಿ ಶಾಲೆಯ ಆಡಳಿತೆ ಸಭೆಯನ್ನು ನಡಿಸುವ ಬಗ್ಗೆ ಕೂಡಿದ ಮಹಾಸಭೆಯಲ್ಲಿ ಶಾಲೆಯನ್ನು ಉತ್ತಮ ರೀತಿಯಲ್ಲಿ ನಡಿಸುವ ಕೆಲವು ನಿಯಮಗಳನ್ನು ಮಾಡಿದ್ದಲ್ಲದೆ, ಶ್ರೀ. ರಂಗಪ್ಪ ಶೆಟ್ಟರೂ ರಾಮಕೃಷ್ಣ ಶ್ಯಾನುಭಾಗರೂ, ಪ. ಕೃಷ್ಣರಾಯರೂ ,ಕೊ. ಮುಕುಂದರಾಮ ಕಮ್ತಿಗಳೂ, ಕರಿಯಣ್ಣಶೆಟ್ಟರೂ, ಸುಬ್ಬಮರಕಾಲರೂ, ಪದ್ಮನಾಭ ಶ್ಯಾನುಭಾಗರೂ, ಹರಿಯಪ್ಪ ಶ್ಯಾನುಭಾಗರೂ, ಗೋಪಾಲ ಶ್ಯಾನುಭಾಗರೂ, ಮದ್ವರಾಯ ಭಾಗವತರೂ, ಮುಕುಂದ ಪಾಯ್ಯರೂ ಕಮ್ಮಿಟಿಯ ಮೆಂಬರರಾಗಿ ನಿಯಮಿಸಲ್ಪಟ್ಟರು.

ಪಡುಬಿದ್ರೆ,
ತಾ. ೧೧-೫-'೨೩.

ಪ. ಕೃಷ್ಣರಾವ್,
ಕಾರ್ಯದರ್ಶಿ.
ಗಣಪತಿ ರಾಷ್ಟ್ರೀಯ ವಿದ್ಯಾಶಾಲೆ

— ಸೂಚನೆ. —

ಕಾಸರಗೋಡು ತಾಲೂಕು ಚೆಂಗಳ ಗ್ರಾಮದ ಬೇವಿಂಜೆ ಪಳ್ಳಿಯಲ್ಲಿ ಸ್ಥಾಪಿಸಿರುವ ಮದರಸು ಯೂನಿ ಅರಬಿ ಶಾಲೆಯಲ್ಲಿ ಕಲಿಯುವ ಮುಸಲ್ಮಾನ್ ವಿದ್ಯಾರ್ಥಿಗಳಿಗೆ ದಿವಸಕ್ಕೆ ೨ ಊಟ ಮಾತ್ರ ಭಂಡಾರದಿಂದ ಕೊಡಲಾಗುವುದು. ಈಗ ಈ ದರಸಿನಲ್ಲಿ ವಿದ್ಯಾರ್ಥಿಗಳು ಕಮ್ಮಿ ಇರುವುದರಿಂದ ಯಾರಾದರೂ ಈ ಶಾಲೆಯಲ್ಲಿ ಕಲಿಯಲಿಕ್ಕೆ ಅಪೇಕ್ಷಿಸುವವರು ಬರುವ ಶಾಬಾನ್ ತಿಂಗಳ ೧೦ರ ಒಳಗೆ ಈ ಶಾಲೆಯನ್ನು ಈಗ ನಡಿಸಿ ಬರುವ ಕಾಸರಗೋಡು ತಾಲೂಕು ಚೆಮ್ನಾಡು ಗ್ರಾಮದಲ್ಲಿರುವ ಶೈಖಬಿಯವರಿಗೆ (ಸರ್ಕಲ್ ಇನ್ಸ್‌ಪೆಕ್ಟರ್ ಮಹ ಮದೂಷರ ತಾಯಿ) ತಮ್ಮನ್ನು ದಾಖಲು ಮಾಡುವುದಕ್ಕೋಸ್ಕರ ಒಂದು ಅರ್ಜಿಯನ್ನು ಕಳುಹಿಸಿ ಕೊಟ್ಟರೆ ಸಾಧ್ಯವಿದ್ದಷ್ಟು ಜನರನ್ನು ದಾಖಲುಮಾಡಿ ಈ ಕುರಿತು ಅವರಿಗೆ ಉತ್ತರ ಕಳುಹಿಸಿಕೊಡಲಾದೀತು. ಮತ್ತು ಉತ್ತರ ಸಿಕ್ಕಿದವರು ಶವ್ವಾಲ್ ತಿಂಗಳ ಅಖೈರಿ ಒಳಗೆ ಮದರಾಸಿಗೆ ಹಾಜರಾಗಬೇಕಾಗುವುದು.

ತ್ವರೆಮಾಡಿರಿ! ತ್ವರೆಮಾಡಿರಿ!

ಮಾರಾಟಕ್ಕೆ ಸಿದ್ಧವಾಗಿದೆ

ಪಂಡಿತ ಮಂಗಳೂರ ನಾರಾಯಣಾಚಾರ್ಯ
ರಿಂದ ಗಣಿಸಿ ಪರಿಶೋಧಿಸಲ್ಪಟ್ಟ,

ರುಧಿರೋದ್ಗಾರಿ ಸಂವತ್ಸರದ
ಪಂಚಾಂಗಗಳು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ಸರ್ ನಾರಾಯಣ ಗಣೇಶ ಚಂದಾವರಕರರ ನಿಧನ.

ಮುಂಬಯಿ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾದ ಸರ್ ನಾರಾಯಣ ಗಣೇಶ ಚಂದಾವರಕರರು ಇದೇ ಕಳೆದ ತಾ. ೧೪ನೆಯ ಸೋಮವಾರ ದಿನ ಪೂರ್ವಾಹ್ನ ೧೦ ಗಂಟೆಗೆ ಬೆಂಗಳೂರಿನಲ್ಲಿ ತಮ್ಮ ಅಳಿಯರಾದ ಮಿ॥ ಡಿ. ಯಸ್. ಶಿರೂರ್ ಇವರ ಗೃಹದಲ್ಲಿ ಹೃದಯದೌರ್ಬಲ್ಯ ರೋಗದಿಂದ ಪೀಡಿತರಾಗಿ ನಿಧನಹೊಂದಿದರು. ಸೆಕೆಕಾಲದ ಕೆಲವು ದಿನಗಳ ರಜೆಯನ್ನು ಹೊಂದಿ ಇವರು ಬೆಂಗಳೂರಿಗೆ ಹೋಗಿದ್ದರು. ಇಲ್ಲಿ ಇವರಿಗೆ ಥಕ್ಕನೆ ಹೃದಯ ದೌರ್ಬಲ್ಯ ರೋಗವು ತಗಲಿ ಇದರಿಂದ ಎಂಟೇ ದಿನಗಳಲ್ಲಿ ಕಾಲವಾದರು. ಸರ್ ನಾರಾಯಣ ಚಂದಾವರಕರರ ಶವಸಂಸ್ಕಾರವು ತಾ. ೧೫ನೆಯ ಬೆಳಿಗ್ಗೆ ಮಂಗಳವಾರ ನಡೆಯಿತು. ಈ ಕಾಲದಲ್ಲಿ ಮೈಸೂರಿನ ಎಲ್ಲ ಅಧಿಕಾರಿಗಳೂ ಸ್ವರ್ಗಸ್ಥರ ಇತರ ಸ್ನೇಹಿತರೂ ಹಾಜರಿದ್ದರು. ಮುಂಬಯಿಯ ಗವರ್ನರರು, ಮೈಸೂರು ಮಹಾರಾಜರು, ಮಿರಾಜಿನ ಚೀಫರು ಮೊದಲಾದ ಮಹನೀಯರಿಂದ ಸಂತಾಪಸೂಚಕ ತಂತಿಗಳು ಸ್ವರ್ಗಸ್ಥರ ಕುಟುಂಬದವರಿಗೆ ತಲ್ಪಿದವು. ವಿದ್ಯಾವಂತರೂ, ವಿದ್ಯಾಭಿಮಾನಿಗಳೂ, ಸಾಮಾಜಿಕ ಸುಧಾರಕರೂ, ರಾಜಕಾರಣ ಧುರಂಧರರೂ ಆದ ಈ ಗೃಹಸ್ಥರ ನಿಧನದಿಂದ ಇಡೀ ಹಿಂದೂಸ್ಥಾನಕ್ಕೆ ವಿಶೇಷವಾಗಿ ಮುಂಬಯಿ ಸಂಸ್ಥಾನಕ್ಕೆ ಆದ ಅಪಾರವಾದ ನಷ್ಟವನ್ನು ಸೂಚಿಸಿ ಹೆಚ್ಚಿನ ದುಃಖದಿಂದ ಸರ್ ಯಂ. ವಿಶ್ವೇಶ್ವರಯ್ಯನವರು ಸ್ಮಶಾನದಲ್ಲಿ ಒಂದು ಭಾಷಣವನ್ನು ಮಾಡಿದರು. ಕಳೆದ ೧೮೫೫ನೆಯ ಇಸವಿಯಲ್ಲಿ ಇವರು ಉತ್ತರ ಕಾನಡಾ ಜಿಲ್ಲೆಯ ಹೊನ್ನಾವರ ಪಟ್ಟಣದಲ್ಲಿ ಜನಿಸಿದರು. ಮುಂಬಯಿಯ ಎಲಿಫಿನ್‌ಸ್ಟನ್ ಕಾಲೇಜಿನಲ್ಲಿ ಯೋಗ್ಯ ವಿದ್ಯಾಭ್ಯಾಸವನ್ನು ಪಡೆದು ೧೮೭೭ನೆಯ ಇಸವಿಯಲ್ಲಿ ಬಿ. ಏ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು. ಇವರು ವಿಚಕ್ಷಣಶಾಲಿಗಳು. ವೃತ್ತ ಪತ್ರಿಕೆಗಳನ್ನು ನಡಿಸುವ ವೃತ್ತಿಯಲ್ಲಿ ೧೧ ವರುಷಗಳನ್ನು ಕಳೆದಿದ್ದರು. ಕಳೆದ ೧೮೮೧ನೆಯ ಇಸವಿಯಲ್ಲಿ ಈ ಗೃಹಸ್ಥರು ಯಲ್. ಯಲ್. ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಬ್ರಿಟಿಶ ಡಿಮೋಕ್ರಸಿಯಲ್ಲಿ ಹಿಂದೂಸ್ಥಾನದ ಕುರಿತು ಜಾಗ್ರತಿಯನ್ನು ಹುಟ್ಟಿಸಲು ಕಳೆದ ೧೮೮೫ನೆಯ ಇಸವಿಯಲ್ಲಿ ಇಂಗ್ಲೆಂಡಿಗೆ ಹೋದ ಪ್ರತಿನಿಧಿಮಂಡಲದ ಮೆಂಬರರಲ್ಲಿ ಡಾಕ್ಟರ ಚಂದಾವರಕರರು ಒಬ್ಬರಾಗಿದ್ದರು. ಇವರು ಒಬ್ಬ ಪ್ರಸಿದ್ಧ ವಕ್ತೃಗಳಾಗಿ ಹೆಸರುಗೊಂಡವರು. ವಿದ್ಯಾಪ್ರಸಾರಣೆಯಲ್ಲಿ ಹೆಚ್ಚಿನ ಅಭಿಮಾನವುಳ್ಳವರು. ಸಮಾಜಸುಧಾರಣೆಯಲ್ಲೂ ಆಸಕ್ತರಾದವರಾಗಿ ಜಾತಿಜಾತಿಗಳಲ್ಲಿರುವ ವೈಷಮ್ಯಗಳನ್ನು ಹೋಗಲಾಡಿಸಲು ಹೆಚ್ಚಿನ ಪ್ರಯತ್ನಗಳನ್ನು ನಡಿಸಿದ್ದರು. ಅಸ್ಪೃಶ್ಯರನ್ನು ಉದ್ಧರಿಸುವ ವಿಷಯದಲ್ಲಿ ಇವರು ಬಹಳ ಶ್ರದ್ಧೆಯನ್ನು ವಹಿಸಿಕೊಂಡಿದ್ದರು. ಸಾರ್ವಜನಿಕ ಪ್ರಯೋಜನದ ಕಾರ್ಯಗಳನ್ನು ಮಾಡುವವರಲ್ಲಿ ಒಬ್ಬ ಮುಂದಾಳಾಗಿದ್ದರು. ಕಳೆದ ೧೮೯೭ನೆಯ ಇಸವಿಯಲ್ಲಿ ಈ ಗೃಹಸ್ಥರು ಮುಂಬಯಿ ಯುನಿವರ್ಸಿಟಿಯ ಕಡೆಯಿಂದ ಮುಂಬಯಿ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟರು. ಹಿಂದೂಸ್ಥಾನದ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನದ ಬಹುಮಾನವು ಸ್ವರ್ಗಸ್ಥರಿಗೆ ೧೯೦೦ನೆಯ ಇಸವಿಯಲ್ಲಿ ದೊರೆಯಿತು. ಕಳೆದ ೧೯೦೧ನೆಯ ಇಸವಿಯಲ್ಲಿ ಮಿ॥ ಜಸ್ಟಿಸ್ ರಾನಡೆಯವರು ರಜೆಯ ಮೇಲಿರುವ ಕಾಲದಲ್ಲಿ ಡಾಕ್ಟರ ಚಂದಾವರಕರರು ಮುಂಬಯಿ ಹೈಕೋರ್ಟು ಜಡ್ಜ ಪದವಿಯ ಚಾರ್ಜಿನ ಬದಲಿಯನ್ನು ನೋಡಿ ಮೇಲಿನ ಗೃಹಸ್ಥರು ಕಾಲವಾಗುತ್ತಲೆ ಮುಂಬಯಿಯ ಹೈಕೋರ್ಟ ಜಡ್ಜರ ಕಾಯಂ ಹುದ್ದೆಗೆ ನೇಮಿಸಲ್ಪಟ್ಟರು. ೧೯೦೩ನೆಯ ಇಸವಿಯಲ್ಲಿ ಲೋರ್ಡ ಕರ್ಝನರು ಇವರನ್ನು ಎಜ್ಯುಕೇಶನಲ್ ಕಮ್ಮಿಶನಿನ ಒಬ್ಬ ಮೆಂಬರರಾಗಿ ನೇಮಿಸಿದರು. ಮತ್ತು ಕಳೆದ ೧೯೦೭ನೆಯ ಇಸವಿಯಲ್ಲಿ ಈ ಮಹನೀಯರು ಮುಂಬಯಿ ಯುನಿವರ್ಸಿಟಿಯ ವ್ಯಾಸ ಚೆನ್ಸಲರಾಗಿ ನೇಮಕಪಟ್ಟರು. ಇವರು ಕೆಲಕಾಲ ಮುಂಬಯಿ ಹೈಕೋರ್ಟಿನ ಚೀಫ್ ಜಸ್ಟಿಸರು ಕೂಡ ಆಗಿದ್ದರು. ಕಳೆದ ೧೯೧೩ನೆಯ ಇಸವಿಯಲ್ಲಿ ಚಂದಾವರಕರರು ಇಂದೋರ್ ಸಂಸ್ಥಾನದ ದಿವಾನ ಪದವಿಯನ್ನು ಅಂಗೀಕರಿಸಿಕೊಂಡರು. ಆದರೆ ಒಂದು ವರುಷಕ್ಕಿಂತ ಹೆಚ್ಚುಕಾಲ ಈ ಪದವಿಯ ಚಾರ್ಜನ್ನು ನೋಡಲಾರದೆ ಇವರು ಕೂಡಲೇ ಈ ಹುದ್ದೆಗೆ ರಾಜಿನಾಮೆಯನ್ನು ಕೊಟ್ಟರು. ಸ್ತ್ರೀ ವಿದ್ಯಾಭ್ಯಾಸ, ಚಿಕ್ಕಪ್ರಾಯದ ವಿಧವೆಯರ ಪುನರ್ವಿವಾಹ, ಪತಿತರ-ಅಸ್ಪೃಶ್ಯರ ಉದ್ಧರಣೆ ಈ ವಿಷಯದಲ್ಲಿ ಇವರು ಹೆಚ್ಚಿನ ಕೆಲಸವನ್ನು ಮಾಡಿರುವರು. ಪ್ರಕೃತಕ್ಕೆ ಇವರು ಮುಂಬಯಿಯ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾಗಿದ್ದರು.

ಕಾಸರಗೋಡು ತಾಲೂಕಿನಿಂದ ತಿಲಕ ಸ್ವರಾಜ್ಯ ನಿಧಿಯ ಬಾಬತು ವಸೂಲಾದ ವ ವಾಗ್ದಾನ ಮಾಡಿದ ಹಣದ ವಿವರ.

ಶ್ರೀಯುತರಾದ ಮಂಜೇಶ್ವರ ನರಸಯ್ಯ ಶ್ಯಾನುಭಾಗರು ರೂ. ೧೨೫, ಮಂಜೇಶ್ವರ ಭವಾನಿ ಶಂಕರರಾವ್ ರೂ. ೩೫, ಕಿ. ಮಂಜುನಾಥ ಕಾಮತ್ ರೂ. ೨೫, ಬಂಬ್ರಾಣ ವೆಂಕಪ್ಪ ಪೂಂಜ ರೂ. ೨೫, ಖಂಡಿಗೆ ಕೃಷ್ಣಭಟ್ಟರು ರೂ. ೨೦, ಬದಿಯಡ್ಕ ರಾಮರಾಯ ಶೆಣೈ ರೂ. ೧೫, ಬಳ್ಳಂಬೆಟ್ಟು ಮಾಧವ ಪೈ ರೂ. ೧೫, ಶಿರಿಬಾಗಿಲು ರಾಮಯ್ಯ ಆಳ್ವ ರೂ. ೧೫, ಕೆ. ಶ್ಯಾಮ ಶೆಟ್ಟಿ ರೂ. ೧೦, ಶೆಡ್ಡೆ ಸುಂದರರಾಮರಾವ್ ರೂ. ೧೦, ಬಗಡೆ ಅಮೃತರಾವ್ ರೂ. ೧೦, ದೇವಪ್ಪಮಾಮನ ಶೆಣೈ ರೂ. ೧೦, ಮಹಮ್ಮದ್ ಶಿರೂರ್ ರೂ. ೧೦, ನಾರಂಪಟ್ಟಿ ಕಣ್ಣನ್ ನಾಯರ್ ರೂ. ೧೦, ಮಂಜುನಾಥ ಹೆಗಡೆ ರೂ. ೧೦, ಕೆ. ನಾರಾಯಣ ಪೈ ಮಂಜಪ್ಪ ಮತ್ತು ಮಕ್ಕಳು ರೂ. ೬, ಕೂಡ್ಲು ಸುಬ್ರಾಯ ಶ್ಯಾನುಭಾಗ ರೂ. ೫, ಎಚ್. ನರಸಿಂಹ ಶ್ಯಾನುಭಾಗರು ರೂ. ೫, ಹಿಪ್ಪಿಸಿ (ಕಾಸರಗೋಡು) ರೂ. ೫, ಮಂಜೇಶ್ವರ ಪಾಂಡುರಂಗ ಕಾಮತ್ ರೂ. ೫, ಶೆಡ್ಡೆ ಲಕ್ಷ್ಮಣರಾವ್ ರೂ. ೫, ದೇವದಾಸ ಶೆಣೈ ರೂ. ೫, ಕೆ. ಪಿ. ಪದ್ಮನಾಭಯ್ಯ ರೂ. ೫, ಪುರಮೇಶ್ವರ ಪದಕಣ್ಣಾಯ ರೂ. ೫, ಪುರುಷೋತ್ತಮ ರೂ. ೫, ಎಚ್. ಪಾಂಡುರಂಗ ಪೈ ರೂ. ೫, ಚಂದಾವರ ನರಸಿಂಗರಾವ್ ರೂ. ೫, ಸಿ. ಎಚ್. ರಾಮಯ್ಯ ಬಲ್ಲಾಳ ರೂ. ೫, ಕೆ. ಕೃಷ್ಣಭಟ್ಟ ರೂ. ೫, ಕುಂಬಳೆ ಲಕ್ಷ್ಮಣನಾಯ್ಕ ಸಹೋದರರು ರೂ. ೫, ಎಸ್. ವೆಂಕಟರಾಮರಾವ್ ರೂ. ೫, ಪಡಕೋಣೆ ಆನಂದರಾವ್ ರೂ. ೫, ಕೆ. ಪಿ. ಕೇಶವರಾವ್ ರೂ. ೫, ಎಚ್. ಶ್ರೀನಿವಾಸಕಾಮತ್ ರೂ. ೫, ಪುಂಡಲೀಕ ಶೆಟ್ಟಿ ಮತ್ತು ಹುಸೈ ಮುಹಮ್ಮದ್ ರೂ. ೫, ಕೆ. ಗೋಪಾಲ ಕೃಷ್ಣಭಟ್ಟ ರೂ. ೫, ಮುಕುಂದ ಸುಬ್ರಾಯಶೆಟ್ಟಿ ಮತ್ತು ಕಂಪನಿ ರೂ. ೫, ಕೊಡೋತ್ ಕುಂಞ್ ಕಣ್ಣನ್ ನಾಯರ್ ರೂ. ೫, ಸುಬ್ರಾಯಕ್ಕ ಪಾಡಿಕ್ಕ ರೂ. ೫, ಕೊಡೋತ್ ರಾಮನ್ ನಾಯರ್ ರೂ. ೫, ನಾರಂಪಟ್ಟಿ ರಾಮನ್ ನಾಯರ್ ರೂ. ೫, ನಾರಂಪಟ್ಟಿ ಕಣ್ಣನ್ ನಾಯರ್ (ಸೀನಿಯರ್) ರೂ. ೫, ಕೆ. ಅನಂತ ಸುಬ್ರಾಯಶೆಟ್ಟಿ ಮತ್ತು ಮಕ್ಕಳು ರೂ. ೫, ಮಂಜೇಶ್ವರ ಮರ್ತು ಶೆಟ್ಟಿ ರೂ. ೫, ಎಮ್. ಸುಬ್ರಾಯ ಭಟ್ಟ ರೂ. ೫, ಎಮ್. ಪಟ್ಟಿಕಣಿ ರೂ. ೫, ಹಿತಚಿಂತಕ, ಮಂಜೇಶ್ವರ ರೂ. ೫, ಬದಿಯಡ್ಕ ಶ್ರೀನಿವಾಸ ಕೃಷ್ಣನಾಯ್ಕ ರೂ. ೫, ಶ್ರೀಮತಿ ಶೆಡ್ಡೆ ವರದಾಬಾಯಿ ರೂ. ೫, ಕಣ್ಣೂರ್ ಕೃಷ್ಣಾಬಾಯಿ ರೂ. ೫, ಕೆ. ಶಾಂತಾಬಾಯಿ ರೂ. ೫, ಮೂಡಬಿದ್ರೆ ವರದಾಬಾಯಿ ರೂ. ೫, ಟಿ. ಲಕ್ಷ್ಮೀದೇವೀ ಬಾಯಿ ರೂ. ೫, ಕೆ. ಕಾವೇರಿ ಅಮ್ಮಾಳ್ ರೂ. ೪, ಕುಂಬಳೆ ಗೋಪಾಲ ಕೃಷ್ಣಭಟ್ಟ ರೂ. ೪, ಕೃಷ್ಣನಾವಡ ರೂ. ೪, ಇತರ ಮಹನೀಯರು ರೂ. ೧೦೪-೧೩-೪; ಕಾಸರಗೋಡು ಪೈಕಿ, ಹೊಸದುರ್ಗ, ಮಧೂರು ಮತ್ತು ಬಾಯಾರ್ ಜಾತ್ರೆಗಳ ಸಮಯದಲ್ಲಿ ಜಮೆ ರೂ. ೨೮-೧-೧೦. ಶಾಲಾ ವಿದ್ಯಾರ್ಥಿಗಳು ರೂ. ೨೧-೩-೬. ಬಾಯಾರು ಮತ್ತು ನೆರೆ ಗ್ರಾಮಗಳಲ್ಲಿ ಜಮೆ ರೂ. ೧೨೫-೧೦-೦. ಜುಮ್ಲಾ ರೂ. ೭೨೮-೩-೮.

ಕಾಸರಗೋಡು ತಾಲೂಕು ಕೊಂಗ್ರೆಸ್ ಕಮ್ಮಿಟಿ, ತಾ. ೧೩-೫-೧೯೨೩. } ಶೆಡ್ಡೆ ಲಕ್ಷ್ಮಣರಾವ್.
ಕಾರ್ಯದರ್ಶಿ

ಕಟಪಾಡಿ ಬೋರ್ಡು ಹುಡುಗಿಯರ ಶಾಲೆಯ ವಾರ್ಷಿಕ ವರ್ಧಂತಿ ಸಮಾರಂಭ.

ಕಳೆದ ತಾ. ೨೮—೪—೧೯೨೩ನೆಯ ಶನಿವಾರ ದಿವಸ ಅಪರಾಹ್ನ ಗಂಟೆ ೪ಗೆ ಉಡುಪಿ ಸ್ಟೇಶನರಿ ಸಬ್ ಮಜಿಸ್ಟ್ರೇಟರಾದ ಮ. ರಾ. ರಾ. ಜಿ. ದತ್ತಾತ್ರೇಯರಾವ್, ಅವರ್ಗಳರವರ ಅಧ್ಯಕ್ಷತೆಯಲ್ಲಿ ಈ ಸಮಾರಂಭವು ಶಾಲೆಯ ಎದುರಿನ ಚಪ್ಪರದಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಈ ಸಭೆಗೆ ಉಡುಪಿ ತಾಲೂಕುಬೋರ್ಡ ಮೆಂಬರರಾದ ಮ. ರಾ. ಯಮ್. ಕೆ. ಸೋಮನವರೂ, ಅಬ್ಕಾರಿ ಇಲಾಖೆಯ ಇನ್ಸ್‌ಪೆಕ್ಟರರೂ, ಇನ್ನೂ ಹಲವು ಮಂದಿ ಸರಕಾರಿ ಉದ್ಯೋಗಸ್ಥರೂ, ಅನೇಕ ಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯರೂ ಊರ ಪರವೂರ ಸ್ತ್ರೀ ಪುರುಷರಾದಿ ಆಬಾಲವೃದ್ಧರೂ ನೆರೆದುಬಂದಿರುವ ಜನಸಂದಣೆಯು ಸುಮಾರು ೧೦೦೦ಕ್ಕೆ ಮಿಕ್ಕಿತ್ತು. ಸಭಾರಂಭದಲ್ಲಿ ಅಧ್ಯಕ್ಷ ಮಹಾಶಯರನ್ನು ಪುಷ್ಪಮಾಲಿಕೆ ಮೊದಲಾದವುಗಳಿಂದ ಸತ್ಕರಿಸಿದ ತರುವಾಯ ಈ ಶಾಲೆಯ ಮುಖ್ಯೋಪಾಧ್ಯಾಯರಾದ ರಾ. ಕೆ. ಬಿಳ್ಳಯ್ಯ ಕಮ್ತಿಯವರು ಈ ಶಾಲೆಯು ಸ್ಥಾಪನೆಯಾದಂದಿನಿಂದ, ಅದು ಹೊಂದಿದ ಅಭಿವೃದ್ಧಿಯನ್ನೂ, ಮೇಲಾಧಿಕಾರರಿಂದ ಮನ್ನಿಸಲ್ಪಟ್ಟ ಅದರ ಯೋಗ್ಯತೆಯನ್ನೂ ತನ್ನ ಶಾಲೆಯ ವರದಿಯಲ್ಲಿ ಸಭಿಕರಿಗೆ ವಿಷದೀಕರಿಸಿ ತನ್ನ ಭಾಷಣವನ್ನು ಮುಕ್ತಾಯಗೊಳಿಸಿದರು.

ತರುವಾಯ ಗಂಟೆ ೫ಕ್ಕೆ ಮುಖ್ಯೋಪಾಧ್ಯಾಯರ ಸ್ವಕಪೋಲ ಕಲ್ಪಿತವಾದ "ರಮಾನಂದ ನಾಟಕವು" ಶಾಲೆಯ ಚಿಕ್ಕ ಬಾಲಕೀಯರಿಂದ ಪ್ರಾರಂಭವಾಯಿತು. ಚಿಕ್ಕ ಬಾಲಕಿಯರು ನಾಟಕ ಪಾತ್ರಗಳನ್ನು ವಹಿಸಿಕೊಂಡು ಸ್ತ್ರೀಯೋಚಿತ ವೇಷಗಳನ್ನು ಧರಿಸಿಕೊಂಡು ಅದಕ್ಕೆ ತಕ್ಕಂತೆ ದುಃಖ, ಹಾಸ್ಯ, ವೀರ, ರೌದ್ರ, ಇತ್ಯಾದಿ ನವರಸಗಳಿಂದ ಅಂಥಾ ಜನಸ್ತೋಮದಲ್ಲಿ ಮಾಡಿದ್ದು, ತಮ್ಮ ಎಳೇ ಪ್ರಾಯದ ಅಸಾಧಾರಣ ಯೋಗ್ಯತೆಯನ್ನು ಪ್ರದರ್ಶಿಸಿದರೆಂದರೆ ಯಾರಿಗೆ ತಾನೆ ಅತ್ಯಾನಂದಾಶ್ಚರ್ಯವಾಗದೆ ಇದ್ದೀತು?

ಈ ನಾಟಕದಿಂದ ಹರುಷಗೊಂಡ ಮಹನೀಯರ ಪೈಕಿ ಉಡುಪಿ ತಾಲೂಕುಬೋರ್ಡ ವೈಸ್ ಪ್ರೆಸಿಡೆಂಟ ಮ. ರಾ. ಅರೂರ್ ಲಕ್ಷ್ಮೀನಾರಾಯಣರಾವ್, ರಾ. ಪಾಂಗಾಳ ಶ್ರೀನಿವಾಸನಾಯ್ಕರು, ರಾ. ಗೋಪಾಳ ನಾಯ್ಕರು, ರಾ. ದಾಮೋದರ ಶ್ಯಾನುಭಾಗರು, ರಾ. ವೆಂಕಪ್ಪಯ್ಯ ಹೆಗ್ಡೆರು, ರಾ. ಅನಂತ ಹೆಗ್ಡೆರು, ರಾ. ತಿಮ್ಮಪ್ಪ ಹೆಗ್ಡೆರು, ರಾ. ಎನ್. ಗುಂಡನವರು, ರಾ. ವೆಂಕಟ್ರಮಣ ಕಿಣ್ಣರು, ರಾ. ಯಮ್. ಕೆ. ಶ್ಯಾನಭಾಗರು, ರಾ. ಸಿ. ಅಚ್ಚುತನವರು, ಉಪಾಧ್ಯಾಯರ ಪೈಕಿ ಬಿ. ಪಾಪಣ್ಣಯ್ಯನವರು, ಕೆ. ಗಣಪಯ್ಯ ಸೆಟ್ಟಿ, ಯಮ್. ಗೋವಿಂದರಾಯರು ಕೆ. ರಾಮಚಂದ್ರ ಶೇಣೈರವರು, ಬಿ. ರಾಮರಾಯರು, ಕೋರ್ಡಿಕಲ್ ಶ್ರೀನಿವಾಸರಾಯರು, ಇತ್ಯಾದಿ ವಿದ್ಯಾಭಿಮಾನಿಗಳು, ನಾಟಕದಲ್ಲಿ ಪಾತ್ರಗಳನ್ನು ವಹಿಸಿಕೊಂಡ ಬಾಲಕೀಯರಿಂಗೆ ಅಧ್ಯಕ್ಷರ ಮುಖಾಂತರ ತನ್ನ ಇನಾಂ ವಸ್ತ್ರಕ, ಮತ್ತು ಸಾಮಗ್ರಿಗಳನ್ನು ಕೊಡಿಸಿ ಪ್ರೋತ್ಸಾಹಿಸಿದುದು ತುಂಬಾ ಸಂತೋಷ ಪ್ರದವಾದ ಸಂಗತಿಯಾಗಿದೆ.

ಅನಂತರ ಮಹನೀಯ ಅಧ್ಯಕ್ಷ ಮಹಾಶಯರು ಎಳೆ ಬಾಲಕಿಯರನ್ನು ನಾಟಕದಲ್ಲಿ ಅಭ್ಯಾಸಗೊಳಿಸಿದ, ಹೆಡ್ಮಾಸ್ಟರ್ ರಾ. ಕೆ. ಬಿಳ್ಳಯ್ಯ ಕಮ್ತಿಯವರನ್ನೂ ಮತ್ತು ಅವರ ಶಾಲೆಯ ಅಭಿವೃದ್ಧಿಯನ್ನೂ ಶ್ಲಾಘಿಸಿ ಹುಡುಗಿಯರ ಶಾಲೆಯಲ್ಲಿಯೂ ಇಂಥಾ ವರ್ಧಂತಿಯು ಆಚರಿಸುವುದರ ಪ್ರಯೋಜನವನ್ನು ವಿವರಿಸಿ, ಅರ್ಥಗರ್ಭಿತವಾಗಿದ್ದ ಸುರಸವಾದ ಭಾಷಣವನ್ನಿತ್ತರು. ಬಳಿಕ ಶಾಲಾ ಮುಖ್ಯೋಪಾಧ್ಯಾಯರು ಮಾನ್ಯ ಅಧ್ಯಕ್ಷ ಮಹಾಶಯರಿಗೂ ಬಾಲಕಿಯರಿಗೆ ಇನಾಮುಗಳನ್ನು ಕೊಟ್ಟು ಪ್ರೋತ್ಸಾಹಿಸಿದ ವಿದ್ಯಾಭಿಮಾನಿಗಳಿಗೂ ಇತರ ಸಭಿಕರಿಗೂ ತನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಿಸಿ ರಾಜಗೀತವನ್ನು ಹಾಡಿ ಸಭಿಕರಿಗೆ ಪನ್ನೀರು ತಾಂಬೂಲಗಳಿಂದ ಉಪಚರಿಸಿ ರಾತ್ರಿ ಗಂಟೆ ೮ಕ್ಕೆ ಸಭೆಯು ವಿಸರ್ಜನೆಯಾಯಿತು.

ಕುರುಕಾಲು,
ತಾ. 10—5—1923. } ಪ್ರತ್ಯಕ್ಷದರ್ಶಿ.

WANTED
NATIONAL GIRLS' SCHOOL
MANGALORE.

Two Lady Teachers of S. S. L. C. Standard Trained candidates preferred. Pay according to qualifications. Applications should reach the Principal before 31st May.

ದಾವುದರ ಪೇಟೆಂಟ್ ಅಭ್ರಕದ ಸ್ವದೇಶಿ ಚಿಮಿಣಿ ಬುರುಡೆಗಳು

ಗಾಜು ಬುರುಡೆಗಾಗಿಯೇ ವರುಷಂಪ್ರತಿ ಎಷ್ಟು ಹಣವು ದುರ್ವ್ಯಯವಾಗುತ್ತಿದೆ ಎಂಬುದು ಸರ್ವರಿಗೂ ಅನುಭವವಾಗಿದೆ. ಹೀಗಿರುತ್ತ ಹೆಸರುಮಾತ್ರಕ್ಕೆ ಬುರುಡೆ ಎನ್ನಿಸಿಕೊಳ್ಳುವ ವಸ್ತುವನ್ನು ತಯಾರಿಸುವುದಕ್ಕಿಂತ ಜನರಿಗೆ ಹೆಚ್ಚು ಕಾಲಕ್ಕೆ ಉಪಯೋಗಕ್ಕೆ ಬರುವ ವಸ್ತುವೇ ಅಗತ್ಯವೆಂದು ಅನೇಕ ಪ್ರಯೋಗಗಳಿಂದ ಕಂಡುಹಿಡಿದಿದ್ದೇವೆ. ಗಾಜು ಬುರುಡೆಗಳು ಪೆಡಸಾಗಿದ್ದು, ದೀಪದ ಪ್ರಕಾಶದ ಉಷ್ಣತೆಯಿಂದ ಒಡೆಯುತ್ತವೆ. ನೀರಿನ ಅಥವಾ ತಂಪು ಗಾಳಿಯ ಸ್ಪರ್ಶವಾಗುತ್ತಲೇ ಪಟಪಟ ತುಂಡು ತುಂಡಾಗುತ್ತವೆ. ಜಪಾನ ವ್ಹಾಲುಗಳಲ್ಲಿ ಈ ಗುಣವು ಸ್ಪಷ್ಟವಾಗಿ ಕಾಣುತ್ತದೆ. ಒಂದು ದೀಪಕ್ಕೆ ಬೇಕಾಗುವ ಬುರುಡೆಗಾಗಿ ವರುಷಕ್ಕೆ ೫೦-೬೦ ರೂಪಾಯಿ ಕ್ರಯವಾಗುತ್ತದೆ. ಇದಕ್ಕೆ ಪ್ರತಿಯಾಗಿ ಅಭ್ರಕದ (ಬಿಂಗದ) ಬುರುಡೆಗಳು ತಯಾರಾಗಿವೆ. ಬಿಂಗು ಪಾರದರ್ಶಕ ಪದಾರ್ಥವಾಗಿದ್ದುದರಿಂದ ಸೀಮೆಯ ಎಣ್ಣೆಯಿಂದ ಉರಿಸುವ ದೀಪಗಳಿಗೆ ಉಪಯೋಗಿಸಲು ಯೋಗ್ಯವಾಗಿ ಕಂಡುಬಂದಿದೆ. ಇವು ತುಂಡಾಗುವುದಿಲ್ಲ; ನೀರಿನ ಮತ್ತು ತಂಪುಗಾಳಿಯು ತಾಗಿದೊಡನೆ ಒಡೆಯುವುದಿಲ್ಲ. ಹೆಚ್ಚಿನ ಪ್ರಕಾಶವನ್ನು ಕೊಡುತ್ತವೆ. ಕಣ್ಣಿಗೆ ತಂಪು. ಈ ಬುರುಡೆಗಳನ್ನು ಉಪಯೋಗಿಸುವುದರಿಂದ ವರ್ಷ ಒಂದಕ್ಕೆ ರೂ. ೨ ಮಾತ್ರ ಖರ್ಚು ಆಗುವದು. ಈ ಬುರುಡೆಗಳಿಗೆ ಕೆಳಗೆ ಹೆಸರು ಕಾಣಿಸಿದವರು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಾಮುಖ್ಯ ಏಜಂಟರಾಗಿರುತ್ತಾರೆ.

ಡಿಟ್‌ಮಾರ್ ಲೇಂಪು, ಜಪಾನ್ ಲೇಂಪು, ತೂಗಾಡಿಸುವ ಲೇಂಪು, ಟೇಬಲ್ ಲೇಂಪು, ಗ್ಯಾಸಲೇಂಪು, ಮುಂತಾದ ಎಲ್ಲಾ ತರದ ದೀಪಗಳಿಗೆ ಉಪಯೋಗಿಸಲು ಬೇಕಾದ ಬುರುಡೆಗಳು ನಮ್ಮಲ್ಲಿ ದೊರಕುವುವು. ಅಲ್ಲದೆ ಯಾವುದಾದರೂ ಒಂದು ಹೊಸತರದ ದೀಪಕ್ಕೆ ಬೇಕಾಗುವ ಬುರುಡೆಗಳನ್ನು ಸಹ ಒದಗಿಸಿಕೊಡಬಹುದು.

ಕ್ರಯ ಎಲ್ಲಿ ಕಡಿಮೆ?
ನಮ್ಮ ದರವನ್ನು ಬೇರೆಯವರ ದರದೊಡನೆ ಸರಿಹೋಲಿಸಿ ನೋಡಿದರೆ
ಆಗ ತನ್ನಷ್ಟಕ್ಕೇ ಇದರ ಗುಟ್ಟು ಗೊತ್ತಾಗುವುದು!
ಕೊಡೆಗಳು ಯುದ್ಧಕ್ಕೆ ಮೊದಲಿದ್ದ ದರದಲ್ಲಿಯೇ ನಿಮಗೆ ಇಲ್ಲಿ ದೊರೆಯುವುವು!
ಬಲವಾದ ಬಾಳಿಕೆ ಬರುವ ಹೊಸ ಕೊಡೆಗಳು ಈಗ ತಾನೇ ತಲಪಿವೆ!!
ಸ್ಕೊಟ್ಲೇಂಡಿನಲ್ಲಿ ಸಿದ್ಧವಾದ ಪ್ರಖ್ಯಾತಿಹೊಂದಿದ ಮಿಶನ್ ಕೊಡೆಗಳು
24×8 ರೂ. 6-4-0. 26×8 ರೂ. 6-8-0. 28×8 ರೂ. 6-12-0.
ಈ ಬೆಲೆಯಷ್ಟೆಂದು ಗುರುತಿಸಿಕೊಳ್ಳಿ! ನಮ್ಮ ಮಾರಾಟದ ದರ ಹೇಗಿದೆ ಎಂದು ನೀವೇ ಆಲೋಚಿಸಿರಿ!
ಉತ್ತಮ ಯಂತ್ರದಲ್ಲಿ ತಯಾರಾದ ಕೊಡೆಗಳು
26×8 ರೂ. 4-14-0. ಈ ಕೊಡೆಗಳು ಇದರಿಂದಲೂ ಅಗ್ಗವಾಗಿ ನಿಮಗೆ ದೊರೆಯದು. ಇದು ಸಂಪೂರ್ಣವಾಗಿ ನಂಬಿಕೆಗೆ ಅರ್ಹವಾದದ್ದೂ, ಬಲವಾದದ್ದೂ, ಬಾಳಿಕೆ ಬರತಕ್ಕದ್ದೂ ಆಗಿದೆ. ಪ್ರತಿಯೊಂದು ಕೊಡೆಗೂ ಗ್ಯಾರಂಟಿ ಇದೆ.
ಕಪ್ಪು ಬಿಳೇ ಬಣ್ಣದ ಶುದ್ಧ ಖಾದಿಯ ನಿರ್ಮಾಣದ ಹಿಂದೀ ಕೊಡೆಗಳು
18ರಿಂದ 24ರ ವರೆಗಿನ ಎಲ್ಲಾ ಅಳತೆಯಲ್ಲಿ ರೂ. 2-4-0ರಿಂದ ರೂ. 4-8-0ರ ವರೆಗೆ!
ನಂಬ್ರ 611 ಬೆಂಕೆಯ ಗುರುತಿನ ಕೊಡೆಗಳು
ಇದಕ್ಕೆ ಚಿನ್ನದ ಪದಕಗಳ ಬಹುಮಾನ ದೊರಕಿದೆ.
ಈ ಕೊಡೆಗಳು ಇದೊಂದು ವ್ಯಾಪಾರ ಸಂಸ್ಥೆಯಲ್ಲಿ ಮಾತ್ರ ದೊರೆಯುತ್ತವೆ.
ಎಸ್. ಸುಲೇಮಾನ್ ನೂರ್ ಮಹಮ್ಮದ್ ಆಂಡ್ ಸನ್ಸ್,
ಕೊರೊನೇಶನ್ ಅಂಬ್ರೆಲ್ಲಾ ಮಾರ್ಟ್, 786, ಮರ್ಕೆಂಟೈಲ್ ಮಿಶನ್ ಶಾಪ್ ಬಳಿ, ಮಂಗಳೂರು.
ಬ್ರಾಂಚ ಶಾಪ್:—ಮಂಗಳೂರು ಟೌನ್ ಪೋಲೀಸ್ ಸ್ಟೇಶನ ಎದುರಿನಲ್ಲಿ.

ವಿದೇಶ ವರ್ತಮಾನ.

ಹೊಸ ನಮೂನೆಯ ಪೆಟ್ರೋಲ್:—ಪೆಟ್ರೋಲಿನ ಕ್ರಯವು ದಿನೆ ದಿನೆ ವಿಪರೀತವಾಗಿ ಏರುತ್ತಿರುವುದರಿಂದ ದಕ್ಷಿಣ ಆಫ್ರಿಕದ ಆರೆಂಜ್ ಫ್ರಿಸ್ಟೇಟಿನಲ್ಲಿರುವ ರಸಾಯನ ಶಾಸ್ತ್ರಜ್ಞನೊಬ್ಬನು ಅಲ್ಲಿ ಬೆಳೆಯುವ ಒಂದು ತರದ ಪಾಪಸುಕಳ್ಳಿಯಿಂದ ಇದ ಶಕ್ತಿಯುಳ್ಳ ದ್ರಾವಕವನ್ನು ತಯಾರು ಮಾಡುವ ವಿಧಿಯನ್ನು ಕಂಡುಹಿಡಿದಿರುವನು.

ತುರ್ಕಿಯ ಸೈನ್ಯ:—ತುರ್ಕಿಯ ಸರಕಾರದವರು ಸಿರಿಯಾ ದೇಶದ ಎಲ್ಲೆಕಟ್ಟಿನಲ್ಲಿ ತಮ್ಮ ಸೈನ್ಯವನ್ನು ಜಮಾಯಿಸುತ್ತಿರುವುದು ಅನುಚಿತವೆಂದೂ ಇದನ್ನು ಕೂಡಲೆ ನಿಲ್ಲಿಸದಿದ್ದರೆ ಫ್ರೆಂಚರು ತಾವೂ ಯುದ್ಧ ಸನ್ನದ್ಧರಾಗಬೇಕಾದೀತೆಂದು ಕೊನ್ಸ್ಟಂಟಿನೋಪಲಿನಲ್ಲಿರುವ ಫ್ರೆಂಚರಾಯಭಾರಿಯು ಅಲ್ಲಿರುವ ತುರ್ಕಿ ಗವರ್ನರರಿಗೆ ತಿಳಿಸಿರುವರು.

ಇಟಲಿ ದೇಶದ ಮಂತ್ರಿಗಳು:—ಇಟಲಿ ದೇಶದಲ್ಲಿ ಮನಸ್ತಾಪಗಳು ಹೆಚ್ಚಿ ಅನೇಕ ಮಂತ್ರಿಗಳು, ಸೆಕ್ರೆಟರಿಗಳು ತಮ್ಮ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟಿರುವರು.

ನಿಷಾದ್ರವ್ಯಗಳು:—ಸಮುದ್ರದ ಮೇಲೆ ಪ್ರಯಾಣಮಾಡುವ ಬ್ರಿಟಿಷ ಮತ್ತು ಅಮೇರಿಕಾ ಖಂಡದ ಹಡಗುಗಳಲ್ಲಿ ಸರಾಯಿ ಮೊದಲಾದ ನಿಷಾದ್ರವ್ಯಗಳನ್ನು ತಗದುಕೊಂಡು ಹೋಗಕೂಡದೆಂದು ವಿಧಿಯು ಇತ್ತು. ಈಗ ಇದನ್ನು ರದ್ದುಮಾಡಿರುವರು.

ಜರ್ಮನಿಯ ಪರಿಸ್ಥಿತಿ:—ಫ್ರೆಂಚರು ರೂರ್ ಪ್ರಾಂತವನ್ನು ಸ್ವಾಧೀನಪಡಿಕೊಂಡದ್ದರಿಂದ ಜರ್ಮನರು ಕಷ್ಟಗಳನ್ನು ಅನುಭವಿಸಿ ಬೇಸತ್ತು ಮಿತ್ರಮಂಡಲಿಯವರ ಸೂಚನೆಯಂತೆ ರಾಜಿಯ ಶರ್ತಗಳನ್ನು ಇತ್ತಲಾಗಿ ಸೂಚಿಸಿದ್ದರು. ಈ ಶರ್ತಗಳನ್ನು ಫ್ರೆಂಚರು ಅಂಗೀಕರಿಸಬಹುದೆಂದು ಲೋರ್ಡ ಕರ್ಝನ್ ಮೊದಲಾದವರು ತಿಳಕೊಂಡಿದ್ದರು. ಆದರೆ ಇವರ ಆಸೆಯು ಭಗ್ನವಾಯಿತು. ಬೆಲ್ಜಿಯಮ್ಮಿನ ಬೆಂಬಲವಿದ್ದ ಫ್ರಾನ್ಸು ಈ ರಾಜಿಯ ಶರ್ತಗಳನ್ನು ಧಿಕ್ಕರಿಸಿ ಬಿಟ್ಟಿದೆ. ಇದರಿಂದ ಬ್ರಿಟಿಷರಿಗೂ ಇಟಲಿಯವರಿಗೂ ತುಂಬಾ ಅಸಮಾಧಾನವು ಉಂಟಾಗಿದೆ. ಜರ್ಮನಿಯ ಅಧಿಕಾರಿಗಳನ್ನು ಶಿಕ್ಷಿಸುವ ಕಾರ್ಯವು ಯಥಾಪ್ರಕಾರ ನಡಕೊಂಡ ಇದೆ.

ಇಂಗ್ಲೆಂಡಿನಲ್ಲಿ ಸೀಮೆ ಎಣ್ಣೆಯ ಗನಿಗಳು—ಇಂಗ್ಲೆಂಡಿನಲ್ಲಿ ಸೀಮೆ ಎಣ್ಣೆ ಸಿಗುವುದೆ ಎಂದು ಹನ್ನೊಂದು ಕಡೆಗಳಲ್ಲಿ ಪರೀಕ್ಷೆಮಾಡಿದ್ದಲ್ಲಿ ಎರಡುಕಡೆ ಮಾತ್ರ ತಕ್ಕಮಟ್ಟಿಗೆ ಎಣ್ಣೆಯು ದೊರೆಯುವುದಾಗಿ ಗಣಿಗಳ ಇಲಾಖಾ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ.

ಬ್ರಿಟನ್ನ ಚಕ್ರವರ್ತಿಯವರು:—ಸಾರ್ವಭೌಮ ಜೋರ್ಜ ಚಕ್ರವರ್ತಿಯವರೂ ಅವರ ಪತ್ನಿ ಮೇರಿ ಮಹಾರಾಣಿಯವರೂ ಇಟಲಿ ದೇಶದ ರಾಜಧಾನಿಯಾದ ರೋಮ ನಗರಕ್ಕೆ ತಲ್ಪಿರುವರು.

ಒಳದೇಶ ವರ್ತಮಾನ.

ಅಕಾಲಿಗಳಿಗೆ ಹಿಂದೂ ಮುಸಲ್ಮಾನರ ಸಹಾಯ:—ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ಅಕಾಲಿಗಳನ್ನು ರಾವಲ್‌ಪಿಂಡಿಯ ರೈಲ್ವೆ ಸ್ಟೇಶನಿನ ಹೊರಗೆ ಪೋಲೀಸಿನವರೂ ಮಿಲಿಟರಿಯವರೂ ಬಹಳವಾಗಿ ಹೊಡೆದು ಪೀಡಿಸಿದ್ದರಿಂದ ಅನೇಕರು ಗಾಯಗೊಂಡಾಗ ಹೆಚ್ಚಿನ ಮಂದಿ ಮುಸಲ್ಮಾನರು ವಿಶೇಷವಾಗಿ ಸ್ಥಳೀಕ ಖಿಲಾಫತ್ ಕಮ್ಮಿಟಿ ಮತ್ತು ನಿಮಾಜ್ ಕಮ್ಮಿಟಿಯ ಸ್ವಯಂಸೇವಕರು ಬಂದು ಇವರಿಗೆ ಬಹಳ ಸಹಾಯವನ್ನು ಮಾಡಿದರು. ಗಾಯಗೊಂಡ ಅಕಾಲಿಗಳನ್ನು ಬೇರೆ ಕಡೆಗೆ ಒಯ್ಯುವಾಗ ಅನೇಕ ಮಂದಿ ಸ್ವಯಂಸೇವಕರು ಸಹ ಗಾಯಹೊಂದಿರುವರು.

ನಾಗಪುರದಲ್ಲಿನ ಸತ್ಯಾಗ್ರಹ:—ಸ್ವರಾಜ್ಯ ಧ್ವಜದ ಸಂಬಂಧ ನಾಗಪುರದಲ್ಲಿ ಸತ್ಯಾಗ್ರಹವನ್ನು ನಡಿಸಲು ಹಿಂಗನಘಾಟಿನಿಂದ ಬಂದಿರುವ ಸಂಗಡವು ಸಹ ಸರಕಾರ ಆಜ್ಞೆಯನ್ನು ಉಲ್ಲಂಘಿಸಿ ಸತ್ಯಾಗ್ರಹವನ್ನು ನಡಿಸಿದ್ದರಿಂದ ಕೈದುಮಾಡಲ್ಪಟ್ಟಿದೆ. ಈ ಸಂಗಡದಲ್ಲಿ ಸೇರಿದ್ದ ವೃದ್ಧ ಮನುಷ್ಯನನ್ನೂ ಅವನ ಸಹಧರ್ಮಿಣಿ ಪಾರ್ವತಿ ಎಂಬವರನ್ನೂ ಇವರ ೭ ತಿಂಗಳ ಚಿಕ್ಕ ಮಗುವನ್ನೂ ಕಂಡು ಅನೇಕರಿಗೆ ಅತಿಶಯವಾದ ಆಶ್ಚರ್ಯವಾಗಿದೆ. ಹಿಂದೂಸ್ಥಾನದ ಚಿಕ್ಕ ಪುಟ್ಟ ಗೃಹಕಲಹದಿಂದ ಸಮಯವನ್ನು ಕಳೆಯುವಾಗ ಮಧ್ಯಪ್ರಾಂತದ ಜನರು ಮಹತ್ತಾದ ಈ ಸತ್ಯಾಗ್ರಹ ಹೋರಾಟವನ್ನು ಪ್ರಾರಂಭಿಸಿದುದು ಸ್ತುತ್ಯಾರ್ಹವಾಗಿದೆ. ಈ ವಿಷಯದಲ್ಲಿ ತಮ್ಮ ಸಹಾನುಭೂತಿಯನ್ನು ಸೂಚಿಸುವ ತಂತಿಯನ್ನು ಅಲಿಸಹೋದರರ ಮಾತೆಯಾದ ಬೀಅಮ್ಮನವರು ನಾಗಪುರಕ್ಕೆ ಬಿಟ್ಟಿರುವುದಲ್ಲದೆ ಆಗತ್ಯವಿದ್ದರೆ ಈ ಕಾರ್ಯವನ್ನು ನಡಿಸುವುದಕ್ಕೆ ತಾನು ಕೂಡ ಬರಲು ಸಿದ್ಧವಾಗಿರುವ ಸಂಗತಿಯನ್ನು ತಿಳಿಸಿರುವರು. ಕೊನೆಗೆ ಶ್ರೀಮತಿ ಪಾರ್ವತಿಯವರನ್ನು ಬಿಟ್ಟುಬಿಟ್ಟಿರುವರು.

ನೇಶನಲ್ ಮುಸ್ಲಿಂ ಯುನಿವರ್ಸಿಟಿ:—ಪಂಡಿತ ಹಬೀಬರ್ ರಾಮನ್ ಎಂಬವರು ಅಲಿಘರ ಮುಸ್ಲಿಂ ಯುನಿವರ್ಸಿಟಿಯ ಅಧಿಕಾರಿಗಳಾದ ಹಕೀಮ ಅಜಮಲ್‌ಖಾನ್ ದೇಶಬಂಧುದಾಸ ಮೊದಲಾದವರ ಮೇಲೆ ರೂ. ೧೮೬೦ರ ನಷ್ಟದ ಬಗ್ಗೆ ವ್ಯಾಜ್ಯ ತಂದಿರುತ್ತಾರೆ. ತನ್ನನ್ನು ಮೇಲಿನ ಯುನಿವರ್ಸಿಟಿಯು ಸಂಸ್ಕೃತ ಪಂಡಿತರಾಗಿ ನೇಮಿಸಿದ್ದು ತಾನು ಬಂದು ಕೆಲಸಕ್ಕೆ ಹಾಜರಾಗುವಷ್ಟರೊಳಗೆ ಬೇರೊಬ್ಬರನ್ನು ಈ ಕೆಲಸಕ್ಕೆ ನೇಮಿಸಿದ್ದುದರಿಂದ ತನಗೆ ಉಂಟಾದ ನಷ್ಟವನ್ನು ಕೊಡಬೇಕೆಂದು ಈ ಪಂಡಿತರ ವ್ಯಾಜ್ಯ. ಈ ವ್ಯಾಜ್ಯದಲ್ಲಿ ವಾದಿಯಾದ ಈ ಪಂಡಿತರು ತಕ್ಕ ಸಮಯದಲ್ಲಿ ಕೆಲಸಕ್ಕೆ ಹಾಜರಾಗಲಿಲ್ಲವಾದ್ದರಿಂದ ಬೇರೊಬ್ಬರನ್ನು ನೇಮಿಸಲು ಕಾರಣವಾಯಿತೆಂದು ಪ್ರತಿವಾದಿಗಳ ಹೇಳಿಕೆ. ಯಾವ ಸಮಯದಲ್ಲಿ ಕೆಲಸಕ್ಕೆ ಹಾಜರಾಗಬೇಕೆಂದು ತನಗೆ ತಿಳಿಸಲಿಲ್ಲವಾದ್ದರಿಂದ ಈ ತಪ್ಪು ತನ್ನ ಮೇಲೆ ಸಿಂಧು ಆಗುವುದಿಲ್ಲವೆಂದು ವಾದಿಯ ವಾದ.

ಅಮೃತಸರ ಗಲಾಟೆ:—ಒಟ್ಟು ೧೭೦ ಮಂದಿಗಳನ್ನು ಕೈದು ಮಾಡಿರುವರು. ಇವರಲ್ಲಿ ಸುಮಾರು ೧೦೦ ಮಂದಿಗಳು ಇತ್ತಲಾಗಿನ ಗಲಾಟೆಯ ಸಂಬಂಧ ಕೈದುಮಾಡಲ್ಪಟ್ಟವರಾಗಿರುವರು. ಬಾಕಿಯವರು ಮುಂಚಿನ ಗಲಾಟೆಯ ನಿಮಿತ್ತ ಸೆರೆಹಿಡಿಯಲ್ಪಟ್ಟವರಾಗಿರುವರು. ಇನ್ನು ಮೂರು ತಿಂಗಳ ವರೆಗೆ ಹೆಚ್ಚಿನ ಪೋಲೀಸ್ ಫೌಜನ್ನು ಇಡಬೇಕಾಗಿ ಇಲ್ಲಿಯ ಮುನ್ಸಿಪಾಲಿಟಿಯವರು ರೂ. ೧೫,೦೦೦ವನ್ನು ಸಾಂಕ್ಷನ್ ಮಾಡಿರುತ್ತಾರೆ.

ಕೊಂಗ್ರೆಸ್ಸಿನ ಖಾಸಾ ಅಧಿವೇಶನದ ಆವಶ್ಯಕತೆ:—ಕೌನ್ಸಿಲುಗಳನ್ನು ಸೇರುವುದು ಅಗತ್ಯವಿದೆ ಎಂದು ಮೊದಲಾದ ಆವಜಗಳನ್ನು ಸೂಚಿಸಿ ಪಂಡಿತ ನೇಹರುಗಳು ಒಂದು 'ಮೆನ್ಯುಫೆಸ್ಟೊವನ್ನು' ಪ್ರಕಟಿಸಿರುವರು. ಅಲ್ಲದೆ ಸ್ವರಾಜ್ಯ ಪಾರ್ಟಿಯವರು ತಮ್ಮ ಕಾರ್ಯಕ್ರಮಗಳನ್ನು ಮುಂದೊತ್ತುವದಕ್ಕಾಗಿ ಹಣ ಸಂಗ್ರಹಮಾಡುತ್ತಿದ್ದಾರೆ. ಮತ್ತು ಅಲ್ಲಲ್ಲಿ ಕಮ್ಮಿಟಿಗಳನ್ನು ಸ್ಥಾಪಿಸಲು ಪ್ರಾರಂಭಿಸಿದ್ದಾರೆ. ಇನ್ನೊಂದು ಕಡೆಯಲ್ಲಿ ಕೊಂಗ್ರೆಸ್ ಪಾರ್ಟಿಯವರೂ ಹಣವನ್ನು ಸಂಗ್ರಹಿಸುತ್ತಾ ತಮ್ಮ ಕಾರ್ಯವನ್ನು ಸಾಗಿಸುತ್ತಿದ್ದಾರೆ. ಕೊಂಗ್ರೆಸ್ಸಿನ ಅಧಿವೇಶನದಲ್ಲಿ ಕೌನ್ಸಿಲು ಬಹಿಷ್ಕಾರದ ಠರಾವು ಪಾಸಾಗಿದೆ. ಅಲ್ಲದೆ ಈ ಠರಾವು ಈಗಲೂ ಜಾರಿಯಲ್ಲಿದೆ. ಈಗ ಏನಾದರೂ ಬದಲಾವಣೆಗಳನ್ನು ಮಾಡಬೇಕಾದರೆ ಅದು ಕೊಂಗ್ರೆಸ್ ಅಧಿವೇಶನದಲ್ಲೆ ಆಗಬೇಕಾಗಿದೆ. ಆದ್ದರಿಂದ ಈ ಬಗ್ಗೆ ಕೊಂಗ್ರೆಸ್ಸಿನ ಒಂದು ಖಾಸಾ ಅಧಿವೇಶನವನ್ನು ಸೇರಿಸುವುದು ಪ್ರಶಸ್ತವಾಗಿದೆ ಎಂದು ಕೇರಳ ಪ್ರೊವಿನ್ಸಿಯಲ್ ಕೊಂಗ್ರೆಸ್ ಕಮ್ಮಿಟಿಯ ಸೆಕ್ರೆಟರಿಗಳೂ ಮಾತೃಭೂಮಿ ಎಂಬ ಪತ್ರಿಕೆಯ ಸಂಪಾದಕರೂ ಆದ ಶ್ರೀಯುತ ಕೆ. ಪಿ. ಕೇಶವ ಮೇನನರು ತಮ್ಮ ಪತ್ರಿಕೆಯಲ್ಲಿ ಬರೆದಿರುವರು.

ಹಿಂದೂಸ್ಥಾನದಲ್ಲಿ ಬೊಲ್‌ಶೇವಿಕ್ ಏಜಂಟ:—ಬೊಲಶೇವಿಕರ ಏಜಂಟನಾಗಿ ಕೆಲಸಮಾಡುವ ಆರೋಪದ ಮೇಲೆ ಶೌಕತ್ ಉಸ್ಮಾನಿ ಎಂಬ ತರುಣನನ್ನು ಕೊನ್‌ಪುರ್ ನೇಶನಲ್ ಮುಸ್ಲಿಂ ಶಾಲೆಯಲ್ಲಿ ಕೈದುಮಾಡಿರುವರು.

ಮೈಸೂರು ಸ್ಟಾರ್ ಪತ್ರಿಕೆ:—ಸ್ಟಾರ್ ಪತ್ರಿಕೆಯ ಸಂಪಾದಕರಾಗಿದ್ದ ವೇ. ಎಸ್. ಆರ್. ಕಲಬಸವಶಾಸ್ತ್ರಿಗಳವರು ಕಳೆದ ತಾ. ೯ನೆಯ ಬುಧವಾರ ತಮ್ಮ ೫೦ನೆಯ ವರುಷ ಪ್ರಾಯದಲ್ಲಿ ಮೂತ್ರವ್ಯಾಧಿ ಪೀಡನೆಯಿಂದ ಕಾಲವಾದರು. ಇವರ ನಿಧನದ ದುಃಖ ಪ್ರದರ್ಶನಾರ್ಥವಾಗಿ ಸ್ಟಾರ್ ಪತ್ರಿಕೆಯ ಬರುವ ತಾ. ೨೦ರ ಸಂಚಿಕೆಯು ನಿಲ್ಲಿಸಲ್ಪಟ್ಟಿರುವುದು.

ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರು:—ಮಿ॥ ಹರಚಂದ್ರ ರೈ, ಮಿ॥ ಶಹಾನಿ ಮತ್ತು ಜೆ. ಚೌಧುರಿಯವರ ರಾಜಿನಾಮೆಯನ್ನು ವೈಸರಾಯರು ಅಂಗೀಕರಿಸಿರುತ್ತಾರೆ.

ಇಂಡಿಯನ್ ಸಿವಿಲ್ ಸರ್ವಿಸ್:—ಕಳೆದ ಜನವರಿ ತಾರೀಕು ೮ರಲ್ಲಿ ಅಲಹಾಬಾದಿನಲ್ಲಿ ಜರುಗಿದ ಐ. ಸಿ. ಯಸ್ ಪರೀಕ್ಷೆಯಲ್ಲಿ ೯ ಮಂದಿಗಳು ಪಾಸಾಗಿರುವರು.

ದೇಶಬಂಧು ದಾಸರು:—ಇವರು ಬರುವ ತಾರೀಕು ೨೨ಕ್ಕೆ ಮದರಾಸಿಗೆ ತಲ್ಪುವರು. ಇಲ್ಲಿ ಬಂದ ತರುವಾಯ ಇವರು ೮ ದಿನಗಳ ಪರಿಯಂತ ತಮಿಳುನಾಡು ಮತ್ತು ಮಲಬಾರಿನಲ್ಲಿ ಸಂಚರಿಸುವರು. ಅನಂತರ ಆಂಧ್ರ ದೇಶದಲ್ಲಿ ಸಂಚರಿಸುವರು.

ಬೆಂಕಿಯ ಹಾವಳಿ:—ಕಲ್ಕತ್ತಾ ಪಟ್ಟಣದ ಸಮೀಪದ ಬಂಕೂರಾ ಜಿಲ್ಲೆಯ ದುಬರಾಜುರ್ ಎಂಬ ಹಳ್ಳಿಯಲ್ಲಿ ಅಗ್ನಿಯಿಂದ ಹೆಚ್ಚಿನ ಹಾವಳಿಯು ಉಂಟಾಯಿತು. ಈ ಚಿಕ್ಕ ಹಳ್ಳಿಯಲ್ಲಿ ೩೦೦ಕ್ಕಿಂತ ಹೆಚ್ಚು ಮನೆಗಳಿವೆಯಂತೆ. ಮುಂಚಿನ ದಿನ ಹಿಡಿದ ಬೆಂಕಿಯು ಮರುದಿನ ಬೆಳಿಗ್ಗೆವರೆಗೆ ಆರಿಸಲು ಆಗಲಿಲ್ಲ. ಸುಮಾರು ೧೫,೦೦೦ ಜನರಿಗೆ ಮನೆ ಇಲ್ಲದೆ ಅಲೆದಾಡುವ ಸ್ಥಿತಿಯು ಪ್ರಾಪ್ತವಾಗಿದೆ. ಒಟ್ಟು ನಷ್ಟ ಸುಮಾರು ರೂ. ೭೫,೦೦೦ ಹಿಡಿದಿದೆ.

ಉಪ್ಪಿನ ತೆರಿಗೆ:—ನೇಶನಲ್ ಹೋಮ್ ರೂಲಿನ ಆಶ್ರಯದಲ್ಲಿ ಕಳೆದ ತಾ. ೧೩ರಲ್ಲಿ ಉಪ್ಪಿನ ತೆರಿಗೆಯನ್ನು ನಿಷೇಧಿಸುವುದಕ್ಕಾಗಿ ಅಹಮ್ಮದಾಬಾದಿನಲ್ಲಿ ಒಂದು ಸಭೆಯು ಸೇರಿತು. ಉಪ್ಪಿನ ತೆರಿಗೆಯನ್ನು ಹೆಚ್ಚಿಸಿದುದನ್ನು ವಜಾಮಾಡದೆ ಇದ್ದರೆ ಲೆಜಿಸ್ಲೇಟಿವ್ ಎಸೆಂಬ್ಲಿಯ ಜುಲಾಯಿ ಅಧಿವೇಶನದಲ್ಲಿ ಸಪ್ಲಿಮೆಂಟರಿ ಗ್ರೇಂಟನ್ನು ಶಿಫಾರಸು ಮಾಡುವುದನ್ನು ನಿರಾಕರಿಸಬೇಕೆಂಬ ಠರಾವು ಸಭೆಯ ಮುಂದೆ ಚರ್ಚೆಗೆ ಬಂತು. ರಾಜಿನಾಮೆಯನ್ನು ಕೊಡಿರಿ! ರಾಜಿನಾಮೆಯನ್ನು ಕೊಡಿರಿ ಎಂಬ ಗದ್ದಲವು ಸಭೆಯಲ್ಲಿ ಎದ್ದಿತು. ಕೊನೆಗೆ ಈ ಠರಾವು ಪಾಸಾಗಲಿಲ್ಲವೆಂದು ನಿರ್ಧರಿಸಿ ಕೂಡಿದ ಜನರು ಚೆದರಿದರು.

ಮಲಬಾರ ಕೆಥೋಲಿಕ ಕೊನ್ಫರೆನ್ಸು:—ಮಲಬಾರ ಕೆಥೋಲಿಕ ಕೊಂಗ್ರೆಸ್ಸಿನ ಮೊದಲನೆಯ ಅಧಿವೇಶನವು ಕಳೆದಾಜೆಯ ಗುರುವಾರ ಅಲಪ್ಪೆಯಲ್ಲಿ ಪ್ರಾರಂಭವಾಯಿತು.

ಅಕಾಲಿಗಳು ಅನುಭವಿಸುವ ತೊಂದರೆ:—ಶಿರೋಮಣಿ ಗುರುದ್ವಾರ ಪ್ರಬಂಧಕ ಕಮ್ಮಿಟಿಯ ಸೆಕ್ರೆಟರಿಗಳು ಅಕಾಲಿಗಳ ಕಷ್ಟವು ಇನ್ನೂ ಕಡಿಮೆಯಾಗಲಿಲ್ಲವೆಂದು ತಿಳಿಸಲು ಕೆಳಗಿನ ಸಮಾಚಾರವನ್ನು ಅಮೃತಸರದಿಂದ ಪ್ರಕಟಿಸಿರುವರು. ಸರಕಾರದ ಜಾಹೀರನಾಮೆಯಂತೆ ಹೆಚ್ಚಿನ ಅಕಾಲಿಗಳ ಬಿಡುಗಡೆಯಾದನಂತರ ಜೈಲಿನಲ್ಲಿ ಅಧಿಕಾರಿಗಳ ದಬ್ಬಾಳಿಕೆಯು ನಿಲ್ಲಬಹುದೆಂದು ನಿರೀಕ್ಷಿಸಿತ್ತು. ಆದರೆ ಮುಲ್ತಾನ್ ಜೈಲಿನಿಂದ ಬರುವ ವಾರ್ತೆಯ ಪ್ರಕಾರ ಅಕಾಲಿ ಕೈದಿಗಳನ್ನು ಮುಂಚಿಗಿಂತ ಯೋಗ್ಯವಾಗಿ ನಡಿಸುವುದಿಲ್ಲವೆಂದು ತಿಳಿದುಬರುತ್ತದೆ. ಕಳೆದ ತಾರೀಕು ೩೦ರಲ್ಲಿ ಜೈಲರರು ತನ್ನ ಗುಮಾಸ್ತನನ್ನು ಕೂಡಿಕೊಂಡು ಸಾಧಾರಣ ಶಿಕ್ಷೆ ವಿಧಿಸಲ್ಪಟ್ಟ ಕೈದಿಗಳಿರುವ ಕೇಂಪಿಗೆ ಬಂದು, ಉತ್ತಮಸಿಂಗರೆಂಬ ಅಕಾಲಿ ಕೈದಿಯು ಸ್ನಾನಮಾಡುತ್ತಿರುವುದನ್ನು ಕಂಡು ಯಥೇಚ್ಛ ಬೈಯ್ಯತೊಡಗಿದರು. ಮತ್ತು ಈ ಕೈದಿಗೆ ಒದ್ದೆ ಬಟ್ಟೆಯಲ್ಲೆ ತನ್ನ ದೇರೆಯಲ್ಲಿ ಕೂತುಕೊಳ್ಳುವಂತೆ ಮಾಡಿದರು. ಅನಂತರ ಬಾಕಿ ಅನೇಕ ಕೈದಿಗಳ ಬ್ಲೇಂಕೇಟುಗಳನ್ನು ಸಹ ತಗೆದುಕೊಂಡರು. ಯಾರನ್ನಾದರೂ ಕೈದುಮಾಡಿದ ಸಮಯದಲ್ಲಿ ಅವನೊಡನಿರುವ ವಸ್ತುಗಳನ್ನು ಸರಕಾರದವರು ತಮ್ಮ ವಶ ಇಟ್ಟುಕೊಂಡಿದ್ದರೂ ಆ ಕೈದಿಯನ್ನು ಬಿಡುಗಡೆಮಾಡುವಾಗ ಆ ವಸ್ತುಗಳನ್ನು ಹಿಂದಕ್ಕೆ ಕೊಡುವ ವಾಡಿಕೆ ಇದೆ. ಆದರೆ ಕೆಲವು ಅಕಾಲಿಗಳ ವಿಷಯದಲ್ಲಿ ಹಾಗೆ ವರ್ತಿಸಲಿಲ್ಲ.

ಹಿಂದೂ-ಮುಸಲ್ಮಾನರ ಚಟಾಪಟಿ:—ಕಳೆದ ತಾರೀಕು ೧೫ರ ಎಸೋಸಿಯೇಟೆಡ್ ಪ್ರೆಸ್ಸಿನ ವರದಿಯಂತೆ ಕಲ್ಲಿಕೋಟೆಯಲ್ಲಿ ಕಳೆದ ಮೂರು ದಿನಗಳಲ್ಲಿ ಮೂರು ಚಟಾಪಟಿಗಳು ಹಿಂದೂ-ಮುಸಲ್ಮಾನರಲ್ಲಿ ಆದವು. ಒಂದು ಸ್ಥಳದ ಸ್ವಾಧೀನತೆಯ ಸಂಬಂಧ ಕಲ್ಲಿಕೋಟೆಯ ಸಮೀಪದ ಮಯನಾಡ ಎಂಬಲ್ಲಿ ಮಾಪಿಳ್ಳೆಯರೊಳಗೂ ನಾಯರರೊಳಗೂ ಕಲಹವು ಹಡೆದು ಒಬ್ಬ ನಾಯರನು ಕೂಡಲೇ ಕೊಲ್ಲಲ್ಪಟ್ಟನು. ಮೂರು ಮಂದಿಗಳು ಹೆಚ್ಚಿನ ಗಾಯವನ್ನು ಹೊಂದಿರುವರು. ಗಾಯಗೊಂಡವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ. ಇನ್ನೊಂದು ಜಗಳವು ಪುಟ್ಟಿಯಾಪಾಲಂದಲ್ಲಿ ಕಳೆದ ತಾರೀಕು ೧೫ನೆಯ ಸಾಯಂಕಾಲ ಆಯಿತು. ಈ ಕಲಹವು ಮಾಪಿಳ್ಳೆಯರಿಗೂ ತೀಯರರಿಗೂ ಉಂಟಾಗಿ ೪ ಮಂದಿ ಮಾಪಿಳ್ಳೆಯರು ಮಡಿದರು. ಕಳೆದ ತಾರೀಕು ೧೩ರಲ್ಲಿ ತೀಯರರ ಒಂದು ಮದುವೆಯ ಮೆರವಣಿಗೆಯು ಸ್ಥಳೀಕ ಮಸೀದಿಯ ಮುಂದುಗಡೆಯಿಂದ ವಾದ್ಯ ಮೊದಲಾದವುಗಳನ್ನು ಬಾರಿಸುತ್ತ ಹೋದುದರಿಂದ ಅಲ್ಲಿ ಹಾಜರಿದ್ದ ಮಾಪಿಳ್ಳೆಯರು ಈ ವಾದ್ಯವನ್ನು ನಿಲ್ಲಿಸಲು ಪ್ರಯತ್ನಿಸಿದರು. ಆದರೆ ಇವರು ಅಲ್ಪ ಸಂಖ್ಯಾಕರಾದ್ದರಿಂದ ಇವರ ಯತ್ನವು ಸಾಗಲಿಲ್ಲ. ಅನಂತರ ಅನೇಕ ಮಂದಿ ಮಾಪಿಳ್ಳೆಯರು ಕೂಡಿ ಮೆರವಣಿಗೆಯು ಹಿಂತಿರುಗಿ ಬರುವಾಗ ಮಾಪಿಳ್ಳೆಯರು ಕೆಲವು ಮಂದಿ ತೀಯರರನ್ನು ಉದ್ರೇಕಿಸಿದರು. ಮುಯ್ಯಿಗೆ ಮುಯ್ಯನ್ನು ತೀರಿಸುವುದಕ್ಕಾಗಿ ಕಳೆದ ತಾ. ೧೪ರಲ್ಲಿ ತೀಯರರು ಈ ಕಲಹವನ್ನೆಬ್ಬಿಸಿದರು.

ಗಾಂಧಿ ದಿನ:—ತಾ. ೧೮ನೆಯ ದಿನ ಗಾಂಧಿ ದಿನಾಚರಣೆಯ ಸಂಬಂಧ ಕೂನೂರಿನಲ್ಲಿ ಒಂದು ಸಭೆ ಕೂಡಿ ಶ್ರೀಮತಿ ಸರೋಜಿನಿ ದೇವಿಯವರ ಭಾಷಣವಾಗುವುದು.

ಡಾಕ್ಟರ ವರದರಾಜಲು ನ್ಯಾಡು:—ಸರಕಾರದವರು ತಮ್ಮ ಸ್ವಾಧೀನಪಡಕೊಂಡಿರುವ ಡೊಕ್ಟರ ವರದರಾಜಲು ನ್ಯಾಡುರವರ ಆಸ್ತಿಯನ್ನು ಸದರಿಯವರು ತಮ್ಮ ತೆರಿಗೆ ಹಣವನ್ನು ಇದೇ ಜೂನ್ ತಾರೀಕು ೧೯ರೊಳಗೆ ಪಾವತಿ ಮಾಡದ್ದರೆ ಮಾರಲಾಗುವುದೆಂದು ತಿಳಿಸಿದೆ.

ಮದರಾಸ ಯೂನಿವರ್ಸಿಟಿಯ ವ್ಯಾಸ ಚೆನ್ಸಲರರು:—ರೆವರೆಂಡ್ ಡೊಕ್ಟರ್ ಇ. ಯಂ. ಮೆಕ್‌ಫೆಯಲ್‌ರವರು ಮದರಾಸ ಯೂನಿವರ್ಸಿಟಿಯ ವ್ಯಾಸ ಚೆನ್ಸಲರರಾಗಿ ನೇಮಕ ಪಟ್ಟಿರುವರು. ಇವರು ಈಗ ಮದರಾಸ ಕ್ರಿಶ್ಚನ್ ಕೊಲೇಜಿನ ಪ್ರಿನ್ಸಿಪಲರಾಗಿರುವರು. ಈ ಹುದ್ದೆಗೆ ರಾಜಿನಾಮೆಯನ್ನು ಕೊಟ್ಟು ಇವರು ಇದೇ ಬರುವ ತಾರೀಕು ೨೦ರಲ್ಲಿ ವ್ಯಾಸ ಚೆನ್ಸಲರ್ ಹುದ್ದೆಯ ಚಾರ್ಜನ್ನು ವಹಿಸಿಕೊಳ್ಳುವರು.

ಬಂಗಾಳ ಪ್ರೊವಿನ್ಸಿಯಲ್ ಕೊಂಗ್ರೆಸ್ ಕಮ್ಮಿಟಿಯ ಮಿಟಿಂಗು:—ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯು ಸಮ್ಮತಿಸುವುದಾದರೆ ಮಿರ್ಜಾಪುಲ ಎಂಬಲ್ಲಿ ಕಾನೂನುಭಂಗವನ್ನು ಜಾರಿಗೆತರ ತಕ್ಕದೆಂದು ಬಂಗಾಳ ಪ್ರೊವಿನ್ಸಿಯಲ್ ಕೊಂಗ್ರೆಸ್ ಕಮ್ಮಿಟಿಯ ಮಿಟಿಂಗಿನಲ್ಲಿ ನಿರ್ಧರಿಸಿದೆ.

ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಿಕೆಗೆ ರಾಜಿನಾಮೆ:—ಉಪ್ಪಿನ ತೆರಿಗೆಯನ್ನು ನಿಷೇಧಿಸಿ ಲೆಜಿಸ್ಲೇಟಿವ್ ಎಸೆಂಬ್ಲಿಯ ಇನ್ನೊಬ್ಬ ಮೆಂಬರರಾದ ಶ್ರೀಯುತ ರ‍್ಯಾ ಬಹದೂರ್ ಗಿರೀಶ್ ಚಂದ್ರನಾಗರವರ್ ತಮ್ಮ ಮೆಂಬರಿಕೆಗೆ ರಾಜಿನಾಮೆಯನ್ನು ಕೊಟ್ಟಿರುವರು.

ಪಂಜಾಬ ಯೂನಿವರ್ಸಿಟಿ:—ಪಂಜಾಬ ಯೂನಿವರ್ಸಿಟಿಗೆ, ಅಲ್ಲಿನ ಲೋರ್ಡ ಬಿಶೋಫರು ವ್ಯಾಸ್ ಚಾನ್ಸಲರಾಗಿ ನಿಯಮಿಸಲ್ಪಟ್ಟಿರುವರು.

ಬೆಂಕಿ ಆರಿಸುವ ಯಂತ್ರ:—ಮುಂಬಯಿಯಲ್ಲಿ ಬೆಂಕಿ ಆರಿಸುವುದಕ್ಕೆ ಒಂದು ಬಲವಾದ ಯಂತ್ರವನ್ನು ಇಡುವರು. ಇದಕ್ಕೆ ೪ ಲಕ್ಷ ೬೦ ಸಾವಿರ ರೂಪಾಯಿಗಳ ಅಂದಾಜಾಗಿರುವುದು.

ಹಿಂದೂಸ್ಥಾನದಲ್ಲಿ ಪ್ಲೇಗು:—ಕಳೆದ ತಾರೀಕು ೨೧ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲಿ ೬,೩೨೧ ಮಂದಿಗಳಿಗೆ ಪ್ಲೇಗು ಸೋಂಕು ತಗಲಿ ೪೭೩೬ ಮಂದಿಗಳು ಈ ರೋಗದಿಂದ ಹತರಾದರು. ಇದರಲ್ಲಿ ೧೯೫, ಮುಂಬಯಿ ೫೨೬, ಮದರಾಸು ೧೭೬, ಬಂಗಾಳ ೯. ಬೀಹಾರ ಮತ್ತು ಒರಿಸ್ಸಾ ೪೮೫, ಯುನೈಟೆಡ್ ಪ್ರೊವಿನ್ಸ ೧೪೬೯. ಪಂಜಾಬ ೧೩೫೩, ಬರ್ಮಾ ೭೮, ಸೆಂಟ್ರಲ್ ಪ್ರೊವಿನ್ಸಸ್ ೨೯೧; ನೊರ್ತ ವೆಸ್ಟ ಫ್ರಂಟಿಯರ್ ಪ್ರೊವಿನ್ಸ್ ೪೧, ಸೆಂಟ್ರಲ್ ಇಂಡಿಯಾ ಸ್ಟೇಟ್ ೨, ಮೈಸೂರು ೫೫, ಕಾಶ್ಮೀರ್ ೫೩.

ಸಂಸ್ಕೃತ ಸಾಹಿತ್ಯ ಸಮ್ಮೇಲನ:— ಶ್ರೀ ಕಾಶೀಕ್ಷೇತ್ರದಲ್ಲಿ ಕಳೆದ ತಾರೀಕು ೨೫ರಿಂದ ೩೦ರ ವರೆಗೆ ನಡೆಯಲು ಗೊತ್ತಾಗಿದ್ದ ಸಂಸ್ಕೃತ ಸಾಹಿತ್ಯ ಸಮ್ಮೇಲನವೂ ಹಿಂದೂಮತ ಮಹಾಸಭೆಯೂ ಅಲ್ಲಿ ಪ್ಲೇಗು ರೋಗವು ಉಲ್ಬಣವಾಗಿರುವುದರಿಂದ ನಿಲ್ಲಿಸಲ್ಪಟ್ಟಿರುತ್ತದೆ.

ಆನೆಯ ಮದ:—ಕಲ್ಲಿಕೋಟೆಯ ಜಾಮೋರಿನ್‌ಗಳಿಗೆ ಸೇರಿದ ಒಂದು ದೇವಸ್ಥಾನದ ರಥೋತ್ಸವವು ನಡೆಯುತ್ತಿರುವಾಗ ಅಲ್ಲಿನ ನಂಬೂದರಿಗಳಿಗೆ ಸೇರಿದ್ದ ಒಂದು ದೊಡ್ಡ ಆನೆಯು ಮಾವಟಿಗನ ಹತೋಟಿಯನ್ನು ಮೀರಿ ದೇವಸ್ಥಾನದ ಅಧಿಕಾರಿಯಾದ ಮಿ॥ ಅರನಹರ ನಂಬೂದರಿ ಎಂಬವರನ್ನು ಸೊಂಡಿಲಿನಿಂದ ಹಿಡಿದು ಕೊಂದು ಹಾಕಿ ಬಿಟ್ಟಿತು.

ಗುಜರಾಥ ಪ್ರೊವಿನ್ಸಿಯಲ್ ಕೊನ್ಫರೆನ್ಸು:—ಗುಜರಾಥ ಪ್ರೊವಿನ್ಸಿಯಲ್ ಕೊನ್ಫರೆನ್ಸಿನವರು ಕಳೆದ ತಾರೀಕು ೧೩ರ ವರೆಗೆ ೬೨,೦೦೦ ಕೊಂಗ್ರೆಸ್ ಮೆಂಬರರನ್ನು ಸೇರಿಸಿರುವರು. ೮೦೦ ಮಂದಿ ಸ್ವಯಂಸೇವಕರನ್ನು ಕೂಡಿಸಿರುವರು. ಮತ್ತು ತಿಲಕ ಸ್ವರಾಜ್ಯಫಂಡಿಗೆ 3½ಲಕ್ಷ ರೂಪಾಯಿಯನ್ನು ವಂತಿಗೆಮಾಡಿರುವರು.

ಬೆಂಕಿಯ ಹಾವಳಿ:— ಮುಂಬಯಿಯಲ್ಲಿ ಕಳೆದ ತಾರೀಕು ೩ರಲ್ಲಿ ಪರಶುರಾಮ ಎಣ್ಣೆ ಮತ್ತು ಹಿಟ್ಟಿನ ಯಂತ್ರಾಲಯಕ್ಕೆ ಅಗ್ನಿ ಪ್ರವೇಶವಾಗಿ ೪ ಲಕ್ಷದ ೬೦ ಸಾವಿರ ರೂಪಾಯಿಯ ನಷ್ಟವಾಗಿದೆ.

ದಕ್ಷಿಣ ಕನ್ನಡ.

ಪಾಲ್ತಾಡು:—ಈ ಗ್ರಾಮದ ಪಾಲ್ತಾಡು ರಾ. ಚೆನ್ನಪ್ಪ ಗೌಡರ ಭವನದಲ್ಲಾದ ಲಗ್ನದಲ್ಲಿ ಗೌಡವಿದ್ಯಾ ಸಂಘಕ್ಕೆ ಮೆಂಬರರನ್ನು ಸೇರಿಸುವ ಬಗ್ಗೆ ಒಂದು ಚಿಕ್ಕ ಸಭೆಯನ್ನು ಮಾಡಿ ಕೆಲವು ಹೊಸ ಮೆಂಬರರನ್ನು ಸೇರಿಸಿದುದಲ್ಲದೆ ವಧೂವರರಿಂದ ವಸೂಲು ಆಗುವರೆ ಈ ಮೊದಲು ನಿರ್ಣಯವಾದಂತೆ ರೂ. ೪ ವಸೂಲು ಆದುದಲ್ಲದೆ ಸಭಿಕರ ಮುಂದೆ ಪ್ರತ್ಯೇಕ ಈ ಸಂಘಕ್ಕೆ ಸಹಾಯಮಾಡುವಂತೆ "ಸರಸ್ವತಿ ಭಂಡಾರ" ಎಂಬ ಒಂದು ಹರಿವಾಣವನ್ನು ಸಭಿಕರ ಮುಂದೆ ಇಟ್ಟುದರಲ್ಲಿ ರೂ. ೫—೧೦—೦ ದೊರಕಿದ್ದು ಸ್ತೋತ್ರಾರ್ಹವಾಗಿರುವುದು. ಈ ವಿಷಯದಲ್ಲಿ ಮ. ರಾ. ಅಷ್ಟಾರು ಬೋಳಿ ಅಪ್ಪುಗೌಡರ ಪ್ರಯತ್ನ ಸಾಫಲ್ಯವಾಗಿರುವುದು. ಈ ಮೇಲ್ಪಂಗ್ತಿಯನ್ನು ಅನೇಕ ಕಡೆಗಳಲ್ಲಾಗುವ ಲಗ್ನಗಳಲ್ಲಿ ವರ್ತಿಸಿದರೆ ಹೆಚ್ಚಿನ ಪ್ರಯೋಜನವಾದೀತೆಂಬುದರಲ್ಲಿ ಅನುಮಾನವಿಲ್ಲ. ಆದುದರಿಂದ ಸ್ವಜಾತಿ ಅಭಿಮಾನಿಗಳಾದ ಮಹನೀಯರು ಈ ಮೇಲಿನ ಎಲ್ಲಾ ವಿಷಯದಲ್ಲಿಯೂ ಮನಸ್ಸು ತಗೆದುಕೊಂಡು ಮೆಂಬರರನ್ನು ಸೇರಿಸುವುದರಲ್ಲಿಯೂ ವಧೂವರರಿಂದ ವಸೂಲಿ, ಮತ್ತು ಸರಸ್ವತಿ ಭಂಡಾರವೇ ಮೊದಲಾದ ದ್ರವ್ಯ ವಸೂಲಿ ಮಾಡುವ ವಿಷಯದಲ್ಲಿ ತಕ್ಕ ಪ್ರಯತ್ನ ಮಾಡಿ ಈ ಸಂಘವು ವೃದ್ಧಿ ಹೊಂದುವಂತೆ ಮಾಡುವಿರಾಗಿ ನಂಬಿದ ತಮ್ಮೆಲ್ಲರ ವಿಧೇಯ,

ಎನ್. ಪಣ್ಣಯ್ಯಗೌಡ.

ಅನುಕ್ರಮಣಿಕೆ.

ಅಗ್ರಲೇಖ:—
ಇನ್ನು ಸಮಯವನ್ನು ಹಾಳುಮಾಡುವುದು ಬೇಡ ೬
ಸ್ಫುಟವಿಚಾರಗಳು.—
ಸರ್ ನಾರಾಯಣ ಗಣೇಶ ಚಂದಾವರಕಾರರ ನಿಧನ ೭
ಹಿಂದೂ ರಿಲಿಜಿಯಸ್ ಎನ್‌ಡೌಮೆಂಟ ಬೀಲು ೭
ಮಂಗಳೂರು— "
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೮
ದಕ್ಷಿಣಕನ್ನಡ—ಬಾಲ್ಕಾಡ, ಕಾಸರಗೋಡು, ಪುತ್ತೂರು, ಶಿರಂಗಿಪೇಟೆ, ಉಡ್ಪಿ ೮
ಉಡ್ಪಿಗೆ ಶ್ರೀಮತಿ ಸರೋಜಿನಿ ದೇವಿಯವರ ಆಗಮನ
ಡಾಕ್ಟರ್ ಸರ್ ನಾರಾಯಣ ಗಣೇಶ ಚಂದಾವರಕರರು ೮

ಸ್ವದೇಶಾಭಿಮಾನಿ.

ಶಕ ೧೮೪೫ ಅಧಿಕ ಜ್ಯೇಷ್ಠ ಶು|| ೩ಯು ಶುಕ್ರವಾರ

ಇನ್ನು ಸಮಯವನ್ನು ಹಾಳು ಮಾಡುವುದು ಬೇಡ.

ಎರಡುವರೆ ತಿಂಗಳ ಮುಂಚೆ ವಿಧಾಯಕ ಕಾರ್ಯಕ್ರಮದ ಘೋಷಣೆ ಮತ್ತು ಒಪ್ಪಂದದ ಪರಿಣಾಮ ಇವು ಭವಿಷ್ಯದ್ರೂಪದಲ್ಲಿ ಇದ್ದವು. ಈಗ ಅವು ಭೂತರೂಪವನ್ನು ಹೊಂದಿವೆ. ಅಲಹಾಬಾದದಲ್ಲಿ ರಾಷ್ಟ್ರೀಯ ಸಭೆಯ ಎರಡೂ ಪಕ್ಷದವರು ಸೇರಿ ಎಪ್ರಿಲ್ ೩೦ರ ವರೆಗೆ ಕೌನ್ಸಿಲ್-ಬಹಿಷ್ಕಾರ-ಪ್ರವೇಶ ವಾದ ವಿವಾದವನ್ನು ಎತ್ತಬಾರದು, ವಿಧಾಯಕ ಕಾರ್ಯಕ್ರಮವನ್ನು ನಡಿಸುವುದರ ಹೊರತು ಆಯಾ ಪಕ್ಷದವರ ಸಂಘಟನಾತ್ಮಕ ಕಾರ್ಯಗಳನ್ನು ನಡಿಸಬಹುದು ಎಂಬಿತ್ಯಾದಿ ಶರ್ತಗಳ ಮೇಲೆ ಎರಡೂ ಪಕ್ಷದಲ್ಲಿ ಯಾವ ಒಪ್ಪಂದವಾಗಿತ್ತೊ ಆ ಒಪ್ಪಂದದಂತೆ ಹಿಂದುಸ್ಥಾನದಲ್ಲಿ ಈ ೧೯೨೩ನೆಯ ಇಸವಿಯ ಎಪ್ರಿಲ್ ತಿಂಗಳ ೩೦ನೆ ತಾರೀಕಿನ ರಾತ್ರಿಯು ದಾಟಿತು. ಮೇ ತಿಂಗಳ ೧ನೆಯ ತಾರೀಕಿನ ದಿವಸವು ಯಾವಾಗಲೆ ಮೂಡಿತು. ಆದರೆ ಸ್ವರಾಜ್ಯಪ್ರಾಪ್ತಿಗೋಸ್ಕರ ಕಾಯಿದೆ ಭಂಗದ ಯಾವ ಚೇನು ತಪ್ಪದ ಹೆನ್ನ ಇರುವುದೊ ಅದರ ಆಸೆಯಿಂದ ಕೂಡಿಸಲುಪಕ್ರಮಿಸಿದ ೨೫ ಲಕ್ಷದ ದ್ರವ್ಯನಿಧಿ ಮತ್ತು ೫೦ ಸಾವಿರ ಸ್ವಯಂಸೇವಕರ ದಳ ಇದರ ಈ ಕಾರ್ಯಕ್ರಮವು ಮಾತ್ರ ಸರ್ವಥಾ ಪೂರ್ತಿಯಾಗಲಿಲ್ಲ! ಒಪ್ಪಂದದ ಪತ್ರಕದ ಮೇಲೆ ಸಹಿಗಳನ್ನು ಹಾಕುವರೆ ಭವಿಷ್ಯದ್ ದೃಷ್ಟಿಯ ಮುಖಂಡರು ರಾಷ್ಟ್ರೀಯ ಸಭೆಯ ಗಯಾ ಠರಾವಿನ ಕಾರ್ಯಕ್ರಮವು ನಿಯಮಿತ ಸಮಯದಲ್ಲಿ ಪೂರ್ತಿಯಾಗಲಿಕ್ಕಿಲ್ಲ, ರಾಷ್ಟ್ರೀಯ ಸಭೆಯ ಆಯುಷ್ಯದಲ್ಲಿ ಇತರ ದಿವಸಗಳು ಹೋದಂತೆ ಎಪ್ರಿಲ್ ತಾ. ೩೦ನೆಯ ದಿವಸವು ಕೂಡ ಯಾವ ಪ್ರಯೋಜನವನ್ನೂ ತಂದುಕೊಡದೆ ಯಾವ ಆಶಾಂಕುರವನ್ನೂ ಹುಟ್ಟಿಸದೆ ಹೋದೀತೆಂದು ಮೊದಲೆ ಅನೇಕರು ತಿಳುಕೊಂಡಿದ್ದರು. ಮತ್ತು ಕೊನೆಗೆ ಅದೆ ತಿಳಿವು ಸತ್ಯವಾಯಿತು. ಉದಾತ್ತ ವಿಚಾರದ ಠರಾವುಗಳ ಮೇಲೆ ಠರಾವುಗಳನ್ನು ಪಾಸು ಮಾಡಿ ಕೊನೆಗೆ ಫಲದೃಷ್ಟಿಯಿಂದ ಕುಂಬಳಕಾಯಿಯನ್ನು ದೊಡ್ಡ ಸೊನ್ನೆಯನ್ನು ನೋಡುವ ದುರ್ದೈವವು ರಾಷ್ಟ್ರೀಯ ಸಭೆಯ ಪಾಲಿಗೆ ಬಂದದ್ದು ಇದು ಮೊದಲನೆಯದಲ್ಲ. ಕಲಕತ್ತಾ ಸ್ಪೆಶಲ್ ಕೊಂಗ್ರೆಸ್ಸು ಆದಂದಿನಿಂದ ಠರಾವುಗಳ ನಿಷ್ಫಲತ್ವದ ಎಷ್ಟೊ ಆವೃತ್ತಿಗಳು ಆಗಿಹೋಗಿವೆ. ಒಂದು ಕಾರ್ಯದಲ್ಲಿ ಪ್ರಥಮತಃ ಅಪಯಶಸ್ಸು ಬರುವರೆ ಕಾರ್ಯಕರ್ತನಿಗೆ ಧಕ್ಕೆ ಸ್ವಾಭಾವಿಕ ಆಗುತ್ತದೆ. ಆದರೆ ಆಗಾಗ್ಗೆ ಅದರ ಆವೃತ್ತಿಗಳು ಸಂಭವಿಸತೊಡಗಿದರೆ ಕ್ರಮೇಣ ಅದರ ಪರ್ವವಿರುವುದಿಲ್ಲ. ಈ ಲೋಕಾನುಭವದಂತೆ ಹೇಳುವುದಾದರೆ ರಾಷ್ಟ್ರೀಯಸಭೆಗೆ ೨೫ ಲಕ್ಷ ದ್ರವ್ಯನಿಧಿಯ ಮತ್ತು ೫೦ ಸಾವಿರ ಸ್ವಯಂಸೇವಕದಳದ ಠರಾವಿನ ವಿಫಲತೆಯಿಂದ ಯಾವ ಅಪಯಶಸ್ಸು ಬಂದಿರುವುದೊ ಅದರ ಬಗ್ಗೆ ಒಂದಿಷ್ಟು ಕ್ಷತಿಯುಂಟಾಗಲಿಕ್ಕಿಲ್ಲ. ರಾಷ್ಟ್ರೀಯ ಸಭೆಯ ಠರಾವನ್ನು ಜನತೆಯು ಮನ್ನಿಸುವುದಿಲ್ಲವೆಂದು ಇದರ ಅರ್ಥವಲ್ಲ. ರಾಷ್ಟ್ರೀಯ ಸಭೆಯು ಜನತೆಯದು. ಅದರ ಮೇಲೆ ಜನತೆಯ ಸಂಪೂರ್ಣ ಪ್ರೇಮವಿದೆ, ಅಭಿಮಾನವಿದೆ, ಆದರವೂ ಇದೆ. ಆದರೆ ಅಂಧಶ್ರದ್ಧೆಯ ಜನರ ಬಹುಮತದಿಂದ ಇಂಥ ಆ ರಾಷ್ಟ್ರೀಯ ಸಭೆಯು ಧ್ಯೇಯಪ್ರಧಾನವಾದ ಠರಾವುಗಳ ಶೀಲಗಳನ್ನು ಜನತೆಯು ಗೋಚಿಸಿಕೊಳ್ಳಲೆ ಹೊರಿಸಹತ್ತಿದರೆ ಅದು ಹೇಗೆ ತಾನೆ ಹೊತ್ತುಕೊಂಡೀತು? ಹೊರಲು ಭಾರವಾದ ಮತ್ತು ಶಕ್ತಿಗೆ ಮಿಕ್ಕಿರುವ ಹೊರೆಯನ್ನು ಹೊರಲಾರದೆ ಬಿಸಾಡಿದ್ದಾದರೆ, ಆಕೆಯನ್ನು ಆಕು ಸ್ವಾಮಿನಿಷ್ಠನಲ್ಲ, ಸ್ವಾಮಿ ದ್ರೋಹಿಯು ಎಂದು ಹೇಗೆ ಹೇಳಲಾಗುವುದಿಲ್ಲವೊ ಹಾಗೆಯೆ ವೃತ್ತಿಚ್ಛೇದದ ಮತ್ತು ವಿಚಾರ ರಹಿತವಾದ ಕಾರ್ಯಕ್ರಮಗಳನ್ನು ಜನತೆಯು ಅನುಸರಿಸದೆ ಇದ್ದರೆ ಅದು ರಾಷ್ಟ್ರೀಯ ಸಭೆಯ ವಿರೋಧಿ ಎಂದು ಯಾರಿಂದಲೂ ಸಾಧಿಸಲಾಗಲಿಕ್ಕಿಲ್ಲ. ಸಾರಾಂಶ ಒಂದೆ ಮಾತಿನಿಂದ ಮುಗಿಸುವುದಾದರೆ, ಅವ್ಯವಹಾರ್ಯವಾದ ಕಾರ್ಯಕ್ರಮವನ್ನು--ಮತ್ತು ಅದು ರಾಷ್ಟ್ರೀಯಸಭೆಯದಿರಲಿ, ಅಥವಾ ಯಾವುದರದೆ ಬೇಕಾದರೆ ಇರಲಿ, ಅದನ್ನು—ಅನುಸರಿಸದೆ ಇರುವುದು ಸಹಜವು. ಈ ದೃಷ್ಟಿಯಿಂದ ನೋಡುವಾಗ ಇದುವರೆಗೆ ರಾಷ್ಟ್ರೀಯ ಸಭೆಯು ಕೆಲವು ವಿವಕ್ಷಿತ ಧಾರ್ಮಿಕ ಸಂಪ್ರದಾಯವಾದಿಗಳ ಬಹುಮತದ ಬಲದಿಂದ ಹೇಗೆ ಅವ್ಯವಹಾರ್ಯ ಠರಾವುಗಳನ್ನು ಮಂಡಪದಲ್ಲಿ ಸಾರಿ ಸಾರಿ ಪಾಸು ಮಾಡಿ ಹೊರಗೆ ಕಟ್ಟಕಡೆಗೆ ಅಪಯಶಸ್ಸನ್ನೆ ಪಡೆದಿದೆಯೊ ಹಾಗೆಯೆ ಈ ಎಪ್ರಿಲ್ ೩೦ನೆ ತಾರೀಕಿನ ಅವಧಿಯ ಕಾರ್ಯಕ್ರಮದ ಅವಸ್ಥೆಯಾದರೂ ಶೋಚನೀಯವಾಯಿತು. ಇದು ಆಶ್ಚರ್ಯವಲ್ಲ.

ಬರದಾನೊಂದು ಸಂಗತಿಯ ಅನುಭವವು ಒಂದು ಸಾರಿ, ಎರಡು ಸಾರಿ ಮೂರು ಸಾರಿ ಬಂದ ಬಳಿಕ ಮನುಷ್ಯನು ಅದರಿಂದ ಒಂದು ಸಾಮಾನ್ಯ ನಿಯಮವನ್ನು ಅಥವಾ ಸಿದ್ಧಾಂತವನ್ನು ಹೊರಡಿಸುತ್ತಾನೆ. ಪ್ರಯೋಜನಕರವಾದರೆ ಅದನ್ನು ಅಂಗೀಕರಿಸುತ್ತಾನೆ. ಅಪ್ರಯೋಜಕವಾದರೆ ಅದನ್ನು ಬಿಟ್ಟುಬಿಡುತ್ತಾನೆ. ಬುದ್ಧಿಯ ಲಕ್ಷಣವೆಂದರೆ ಇದೆ ಸರಿ. ಆದರೆ ರಾಷ್ಟ್ರೀಯ ಸಭೆಯ ನಾಯಕರು ಇಂಥ ಬುದ್ಧಿಯುತ್ತ್ರೆಯ ಲಕ್ಷಣವನ್ನು ಸಂಪೂರ್ಣವಾಗಿ ಬಿಟ್ಟಿದ್ದಾರೆಂದು ಅವರ ಈಗಿನ ನಡತೆಯ ಮೇಲಿಂದಲೂ ಸಿದ್ಧವಾಗುತ್ತದೆ. ಎಪ್ರಿಲ್ ೩೦ರೊಳಗೆ ಮೊದಲು ಸಂಕಲ್ಪಿಸಿಕೊಂಡಂತೆ ಯಾವ ಕಾರ್ಯವೂ ಸಾಧ್ಯವಾಗದೆ ಇದ್ದ ಮೇಲೆ ಜಾಣರಾದವರು ತಮ್ಮ ಮುಂಚಿನ ದುರಾಗ್ರಹವನ್ನು ಬಿಟ್ಟು ಅನ್ಯ ವಿಧದಿಂದ ರಾಷ್ಟ್ರಹಿತವನ್ನು ಸಾಧಿಸಹತ್ತುತ್ತಿದ್ದರು. ಪರಂತು ಶ್ರೀಯುತ ರಾಜಗೋಪಾಲಾಚಾರ್ಯರು ಯುಕ್ತಾಯುಕ್ತತೆಯ ವಿವೇಕವನ್ನು ಸಂಪೂರ್ಣ ತ್ಯಜಿಸಿ ಹಿಂದಿನ ಕಾರ್ಯಕ್ರಮವನ್ನೆ ಮುಂದರಿಸಬೇಕೆಂದು ಆಜ್ಞೆಯನ್ನು ವಿಧಿಸಿರುವರು. ೩೦ನೆಯ ಎಪ್ರಿಲ್ ದಾಟಿದರೂ ಚಿಂತೆ ಇಲ್ಲ; ದ್ರವ್ಯನಿಧಿಯನ್ನೂ ಸ್ವಯಂಸೇವಕರನ್ನೂ ಸಂಗ್ರಹಿಸುವ ಉದ್ಯೋಗವನ್ನು ಬಿಡಬಾರದು ಎಂದು ರಾಜಗೋಪಾಲಾಚಾರ್ಯರ ಅಂಬೋಣವಿದೆ. ಈ ಆಚಾರ್ಯರು ತಮ್ಮ ಅಂಬೋಣದಮೇಲೆ ಜನತೆಗೆ ಪುನಃ ಪ್ರೀತಿಯಾಗುವಂತೆ ಕಾಯಿದೆಭಂಗದ ಸಕ್ಕರೆಯನ್ನು ಬೀರಹತ್ತಿದ್ದಾರೆ. ಮೇ ತಾ. ೨೫ಕ್ಕೆ ಮುಂಬಯಿಯಲ್ಲಿ ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಜರಗುವದಿದೆ. ಅದರಲ್ಲಿ ಸಾರ್ವತ್ರಿಕ ಕಾಯಿದೆ ಭಂಗದ ಹಾದಿಯು ನಿಶ್ಚಿತವಾಗುವ ವರೆಗೆ ವ್ಯಕ್ತಿಶಃ ಕಾಯಿದೆಭಂಗವನ್ನು ಮಾಡಲು ಪ್ರತಿಬಂಧವಿಲ್ಲದಕಾರಣ ಅವರವರು ಸ್ವೇಚ್ಛೆಯಿಂದ ಇಂಥ ಕಾಯಿದೆಭಂಗವನ್ನು ಮಾಡಬಹುದು. ರಾಜಗೋಪಾಲಾಚಾರ್ಯರ ಈ ಉಪಾಯವು ಇತರರಿಗೆ ಸಮಾಧಾನಕರವಾಗುವುದಿರಲಿ, ಸ್ವಯಂ ಅವರ ಅನುಯಾಯಿಗಳಿಗಾದರೂ ಎಷ್ಟರಮಟ್ಟಿಗೆ ಮಾನ್ಯವಾದೀತೆಂದು ಹೇಳಲಾಗುವುದಿಲ್ಲ. ಯಾಕೆಂದರೆ ಮುಂಬಯಿಯ 'ಕ್ರೊನಿಕಲ್' ಪತ್ರಿಕೆಯು ಮಹಾತ್ಮಾಗಾಂಧಿಗಳ ಕಡು ಅನುಯಾಯಿಯೆಂದು ಖ್ಯಾತಿಗೊಂಡಿತ್ತು. ರಾಜಗೋಪಾಲಾಚಾರ್ಯರನ್ನು ಈಗ ಒಂದು ವರುಷದಿಂದ ಎತ್ತಿ ಹಿಡಿದು ಗಯಾ ಕೊಂಗ್ರೆಸನ್ನು ಮತ್ತು ಆ ಕಾರ್ಯಕ್ರಮವನ್ನು ಬಹು ವಿಧದಿಂದ ಮತ್ತು ತತ್ಪರತೆಯಿಂದ ಸಮರ್ಥಿಸುತ್ತಿತ್ತು. ಅದೆ ಪತ್ರಿಕೆಯು ಈಗ ರಾಜಗೋಪಾಲಾಚಾರ್ಯರ ಮೇಲಿನ ಅಂಬೋಣವನ್ನು ಕೇಳಿ ಅವರಿಗೆ "ಛೀ ಛೀ" ಎಂದು ಹೇಳಲುಪಕ್ರಮಿಸಿದೆ. "ದೇಶಕ್ಕೋಸ್ಕರ ಎಲ್ಲರೂ ಒಟ್ಟಿಗೆ ಕೂಡಿ ಯಾವ ಸಂಕಷ್ಟಗಳನ್ನು ಪಡಿಸಬೇಕಿತ್ತೊ ಅದರ ಬದಲಿಗೆ ಒಬ್ಬಿಬ್ಬರು ಕಾಯಿದೆಭಂಗದ ದೆಸೆಯಿಂದ ಆಪತ್ತುಗಳನ್ನು ಅನುಭವಿಸುತ್ತಿರಬೇಕೆಂದು ರಾಜಗೋಪಾಲಾಚಾರ್ಯರು ಹೇಳುವ ಉಪದೇಶದಲ್ಲಿ ಬುದ್ಧಿವಂತಿಕೆಯಾಗಲಿ, ಸ್ಫೂರ್ತಿಯಾಗಲಿ ಅಥವಾ ಉತ್ಸಾಹವಾಗಲಿ ಯಾವದೂ ಇಲ್ಲ. ಬೇಡಬದಲಾವಣೆಯ ಪಕ್ಷವು ಸ್ವತಃ ಕುತ್ತಿಗೆಗೆ ಹಗ್ಗಹಾಕಿಕೊಂಡು ಪ್ರಾಣತ್ಯಾಗ ಮಾಡಬೇಕೆಂದಿದ್ದರೆ ಮಾತ್ರ ಅಂಥವರು ಈ ಹೇಡಿತನದ ಉಪದೇಶವನ್ನು ಶ್ರವಣಮಾಡಬಹುದು. ಮುಖಂಡತನದ ಶ್ರೀಗಣೇಶವಾದರೂ ಗೊತ್ತಿದ್ದವನು ಇಂಥ ಯಾವನಾದರೂ ಮೇಲಿನ ನಮೂನೆಯ ಉದ್ಗಾರಗಳನ್ನು ತನ್ನ ಬಾಯಿಂದ ಹೊರಡಿಸನು. ಈ ಉದ್ಗಾರಗಳನ್ನು ಕೇಳಿದ್ದಲ್ಲಿ ರಾಜಗೋಪಾಲರ ತಲೆಯಲ್ಲಿ ಅನಿಶ್ಚಿತತನದ ಚಟಾಪಟಿಗಳೇ ತುಂಬಿವೆ ಎಂದು ಹೇಳಬೇಕಾಗುತ್ತದೆ. ಇಂಥವರನ್ನು ಮೆಲ್ಲನೆ ಕೈಹಿಡಿದು, ಬದಿಗೆ ಕೊಂಡುಹೋಗಿ ಏಕಾಂತಸ್ಥಳದಲ್ಲಿ ಬಿಡುವುದೆ ರಾಷ್ಟ್ರಹಿತದ ದೃಷ್ಟಿಯಿಂದ ಲೇಸೆಂದು ಹೇಳಬೇಕಾಗುತ್ತದೆ. ಆದರಿಂದ, ಹಿಂದೂಸ್ಥಾನದಲ್ಲಿ ಹಬ್ಬುತ್ತಿರುವ ಸ್ವರಾಜ್ಯದ ಆಲೋಚನೆಗಳ ಬಾಧೆಯು ಮನಸಿಸಲಿಕ್ಕಿಲ್ಲ." ಈ ರೀತಿಯಿಂದ ಕ್ರೊನಿಕಲ್ ಪತ್ರಿಕೆಯು ರಾಜಗೋಪಾಲಾಚಾರ್ಯರ ಉಪದೇಶಕ್ಕೆ ಯೋಗ್ಯ ಗುರುದಕ್ಷಿಣೆಯನ್ನು ಸಮರ್ಪಿಸಿದ್ದಲ್ಲದೆ "ಇಂಥ [illegible] ರಾಜಕಾರಣಾನಭಿಜ್ಞರನ್ನೂ, ರಾಜಕಾರಣದ ಕ್ಷೇತ್ರದಲ್ಲಿ ಇರಗೊಟ್ಟರೆ ಹಿಂದುಸ್ಥಾನವು ಸ್ವರಾಜ್ಯದಿಂದ ದೂರದೂರಕ್ಕೆ ಹೋದೀತು ಇವರು ರಾಜಕಾರಣಕ್ಕೆ ರಜೆಕೊಟ್ಟು ದೇವಸ್ಮರಣ ಮಾಡುತ್ತ ನಿವೃತ್ತರಾದರೆ ಅದರಿಂದ ದೇಶದ ಕಲ್ಯಾಣವು ಅಧಿಕವುಂಟಾದೀತೆ"ಂದು ಸಹ ಬರೆದಿರುವರು. ಮುಂಬಯಿಯ ಕ್ರೊನಿಕಲ್ ಪತ್ರಿಕೆಯ ಈ ಬರವಣಿಗೆಯ ಮೇಲಿಂದ ಬೇಡಬದಲಾವಣೆಯವರಲ್ಲಿ ಪೌರುಷಹೀನವಾದ ಪ್ರಕೃತ ರಾಜಕಾರಣವನ್ನು ಕುರಿತು ಯಾವ ನಮೂನೆಯ ವಿಚಾರದ ಗಾಳಿಯು ಬೀಸುತ್ತಿದೆ ಎಂಬುದು ಸುಜ್ಞರಾದ ವಾಚಕರಿಗೆ ತಿಳಿಯದೆ ಇರಲಿಕ್ಕಿಲ್ಲ.

ಮಧ್ಯದಲ್ಲಿ ಪುನಃ ಈ ರಾಜಗೋಪಾಲಾಚಾರ್ಯರು ಮತ್ತು ಹಕೀಮಸಾಹೇಬರು ದಿಲ್ಲಿಯಲ್ಲಿ ಒಟ್ಟಿಗೆ ಸೇರಿ "ಸ್ವರಾಜ್ಯಪಕ್ಷದ ಸಂಸ್ಥಾಪನೆಯನ್ನು ದೃಢಪಡಿಸಕೂಡದು, ಸಾರ್ವತ್ರಿಕ ಕಾಯಿದೆಭಂಗವನ್ನು ಎಲ್ಲರೂ ಮಾಡುವಂತೆ ಯಾವುದಾದರೂ ಒಂದು ನಿಶ್ಚಿತ ಯೋಜನೆಯನ್ನು ತಯಾರಿಸಬೇಕೆ"ಂದು ಕಳೆದ ತಿಂಗಳ ಅಂತ್ಯಭಾಗದಲ್ಲಿ ಆಲೋಚಿಸಿದ್ದರು. ತಥಾಪಿ ವಲ್ಲಭಭಾಯಿ ಪಟೇಲ, ಜಮುನಾಲಾಲ ಬಜಾಜ ಮುಂತಾದವರು ಇದನ್ನು ಸಮ್ಮತಿಸಲಿಲ್ಲ. ಈ ರೀತಿಯಿಂದ ರಾಜಗೋಪಾಲಾಚಾರ್ಯರ ಈ ಪ್ರಯತ್ನವು ಅವರ ತಂಡದೊಳಗಿನವರ ಅಭಿಪ್ರಾಯದಿಂದಲೆ ನಿಷ್ಫಲವಾಯಿತು. ಇತ್ತ ಆಂಧ್ರದಲ್ಲಿ ಹಲವರು ಪುನಃ ಇನ್ನೊಂದು ಸ್ಪೆಶಲ್ ಕೊಂಗ್ರೆಸ್ಸನ್ನು ಸೇರಿಸಿ ಕೌನ್ಸಿಲ್ ವಾದದ ಪ್ರಶ್ನೆಯನ್ನು ಚರ್ಚಿಸಬೇಕು ಎಂದು ಸೂಚಿಸುತ್ತಿದ್ದಾರೆ. ಈ ಸೂಚನೆಯನ್ನು ಕೇಳುವಾಗ "ತುತ್ತು ತುತ್ತಿಗೆ ಬ್ರಹ್ಮಾರ್ಪಣ" ಎಂಬ ಗಾದೆಯು ನೆನಪಿಗೆ ಬಾರದೆ ಇರದು. ರಾಷ್ಟ್ರದೊಳಗಿನ ಮುಖಂಡರ ಮತ್ತು ಅನುಯಾಯಿಗಳ ಬುದ್ಧಿ ಮತ್ತು ಕಾರ್ಯ ಸಾಮರ್ಥ್ಯ ಇವೆಲ್ಲ ಪುನಃ ಪುನಃ ಅದೆ ಅದೆ ವಿಷಯವನ್ನು ಕುರಿತು ಖರ್ಚಾಗೋಣವೆಂದರೆ ದೇಶದ ದುರ್ದೈವವೆಂದೆ ಹೇಳಬೇಕು. ಸ್ಪೆಶಲ್ ಕೊಂಗ್ರೆಸ್ಸನ್ನು ಪುನಃ ಕೂಡಿಸಿ ಇನ್ನು ಮಾಡತಕ್ಕದ್ದಾಗಲಿ ಅಥವಾ ವಿಧಿಸತಕ್ಕದ್ದಾಗಲಿ ಯಾವುದಿದೆ? ಕೌನ್ಸಿಲು ಪ್ರವೇಶವು ಬೇಡವೆಂದು ಹೇಳುವುದಷ್ಟೆ ಅಲ್ಲವೆ? ಅದು ಕಲ್ಕತ್ತೆಯ ಸ್ಪೆಶಲ್, ನಾಗಪುರ, ಅಹಮದಾಬಾದ ಮತ್ತು ಗಯಾ ಕೊಂಗ್ರೆಸ್ಸುಗಳ ವಾರ್ಷಿಕ ಅಧಿವೇಶನಗಳಿಂದ ಈ ಮೊದಲೆ ಅನೇಕಾವರ್ತಿ ಕೊಂಗ್ರೆಸ್ ಮಂಡಪದಲ್ಲಿ ಸಿದ್ಧವಾಗಿದೆ ಹೀಗಿರಲು ಪುನಃ ಸಿದ್ಧಸಾಧನೆಯು ಯಾಕೆ? ಈಗಿನ ರಾಷ್ಟ್ರೀಯ ಸಭೆಗೆ ಕೌನ್ಸಿಲುಗಳು ಬೇಡ. ಅದ್ದರಿಂದಲೆ ಪಕ್ಷಭೇದಗಳು ಉದ್ಭವಿಸಿರುವುವು. ಇಂಥ ಪರಿಸ್ಥಿತಿಯಲ್ಲಿ ಬುದ್ಧಿಶಾಲಿಗಳಾದವರು, ಪಕ್ಷಭೇದದ ರಣಗಳನ್ನು ಬೆಳಸಲು ಕಾರಣವಾಗಿರುವ ಕೊಂಗ್ರೆಸ್ಸಿನ ಈ ಅಧಿವೇಶನಗಳನ್ನು ಆದಷ್ಟು ಕಡಿಮೆಮಾಡುವುದೆ ಚಂದ ಮತ್ತು ಹಿತಕರವೆಂದು ಅಭಿಪ್ರಾಯಪಟ್ಟಾರು. ಪಕ್ಷಭೇದಗಳ ಜ್ವಾಲೆಯು ಉರಿಯುತ್ತಿರುವಾಗ ಅದೆ ವಿಷಯವನ್ನು ತೆಕ್ಕೊಂಡು ತಿರುತಿರುಗಿ ಘರ್ಷಣಮಾಡುತ್ತಿರುವುದು ಐಕ್ಯಕ್ಕಾಗಲಿ, ಕಾರ್ಯಸ್ಪಾರಂಭಕ್ಕಾಗಲಿ ಸಾಧಕವಾಗುವುದಿಲ್ಲ. ಈ ಮಾತನ್ನು ಯಾರೂ ಮರೆಯಕೂಡದು. ತಮ್ಮತಮ್ಮ ಧ್ಯೇಯಕ್ಕನುಸಾರವಾಗಿ ಕಾರ್ಯಗಳನ್ನು ಸಾಧಿಸಿ, ಆ ರೂಪದಿಂದಲೆ ಸ್ವಕಾರ್ಯದ ಉಪಯುಕ್ತತೆ, ಉದ್ದೇಶಸಾಧಕತೆ ಇವುಗಳನ್ನು ಜನಗಳ ಮನಸ್ಸಿಗೆ ತಂದು ಕೊಡಬೇಕಲ್ಲದೆ ಅಧಿವೇಶನಗಳ ಮೇಲೆ ಅಧಿವೇಶನಗಳನ್ನು ಕರೆಯಿಸಿ ಮತ್ತು ಸೇರಿಸಿ ವಾಚಾಟವನ್ನು ಮಾಡುವುದರಿಂದ ಅಲ್ಲ.

ಇರಲಿ. ಕಡು ಅಸಹಕಾರವಾದಿಗಳು ತಮ್ಮ ಹಳೆ ಕಾರ್ಯಕ್ರಮವನ್ನೆ ಮುಂದರಿಸುತ್ತ ಬೇಕಾದರೆ ಇರಲಿ, ಅಥವಾ ಇನ್ನು ಕೆಲವರು ಸ್ಪೆಶಲ್ ಕೊಂಗ್ರೆಸ್ಸನ್ನು ಸೇರಿಸುವುದರಲ್ಲಿ ತಮ್ಮ ತಲೆಯನ್ನು ಖರ್ಚುಮಾಡಲಿ, ಆದರೆ ಸ್ವರಾಜ್ಯಪಕ್ಷದವರು ಈ ಐಕ್ಯದ ಭ್ರಮೆಯಿಂದ ಸ್ವಪಕ್ಷದ ಕಾರ್ಯವನ್ನು ಮಾಡಲುದ್ಯುಕ್ತರಾಗದೆ ಸಮಯ ಹಾಳುಮಾಡುವುದು ಉಚಿತವಾಗಲಾರದು. ಗಯಾದಲ್ಲಿ ಯಾವಾಗ ಪಕ್ಷಭೇದವುಂಟಾಯಿತೊ ಆಗಲೆ ಅಥವಾ ಅಂದಿನಿಂದಲೆ ಸ್ವರಾಜ್ಯಪಕ್ಷದವರು ತಮ್ಮ ಕಾರ್ಯಗಳನ್ನು ಛಂದದಿಂದ ಮುಂದರಿಸಬೇಕಿತ್ತು. ಈ ಒಪ್ಪಂದದ ಗಲಾಟೆಗೆ ಸೇರಬಾರದಿತ್ತು. ಯಾಕೆಂದರೆ, ಇಂಥ ಅಪ್ರಯೋಜಕ ಮತ್ತು ದುರಾಗ್ರಹಪ್ರವಣವಾದ ಕಾರ್ಯಕ್ರಮದಿಂದ ಯಾವ ಅಭಿಮತಾರ್ಥವೂ ಸಾಧ್ಯವಾಗಲಿಕ್ಕಿಲ್ಲವೆಂದು ಮೊದಲೆ ನೆನಸಬೇಕಾದ ಸಂಗತಿಯು. ಆದರೂ ಅಂಥ ಒಪ್ಪಂದವನ್ನು ಕೂಡ ಮಾನ್ಯಮಾಡಿ ಆ ಅವಧಿಯನ್ನು ಕಳೆದದ್ದಾಯಿತು. ಬೇಡಬದಲಾವಣೆಯವರ ಕಾರ್ಯದ ನಿರುಪಯುಕ್ತತೆಯು ರಾಷ್ಟ್ರಕ್ಕೆ ಖಚಿತವಾಯಿತು. ಇನ್ನು ಯಾವ ನಿರರ್ಥಕ ಉಪಚಾರಕ್ಕೂ ಒಗ್ಗಾಗದೆ ಸ್ವರಾಜ್ಯಪಕ್ಷದವರು ತಾವು ರಚಿಸಿಕೊಂಡ ಕಾರ್ಯಗಳನ್ನು ಮುಂದರಿಸಬೇಕು. ಅದಲ್ಲದೆ, ನಾವು ಹಿಂದೊಮ್ಮೆ ಸೂಚಿಸಿದ್ದಂತೆ ನಮ್ಮ ಮದ್ರಾಸ ಸಂಸ್ಥಾನದಲ್ಲಿ ಮತ್ತು ಇತರ ಕಡೆಗಳಲ್ಲಿ ಈಗಿನ ಹಳೆ ಕೌನ್ಸಿಲುಗಳ ಅವಧಿಯು ಅಂತ್ಯವಾಗಿ ಹೊಸ ಚುನಾವಣೆಗೆ ಸಂದರ್ಭವನ್ನು ಕೊಟ್ಟಿದೆ. ಮತ್ತು ಈ ಕಾರಣದಿಂದ ಉಮೇದುವಾರರು ಸಹ ಕೌನ್ಸಿಲಿಗೆ ನಿಂತಿರುವರು. ಇಂಥ ಪರಿಸ್ಥಿತಿಯಲ್ಲಿ ಪುನಃ ಒಪ್ಪಂದ, ಐಕ್ಯ, ಸ್ಪೆಶಲ್ ಕೊಂಗ್ರೆಸ್ಸು ಇತ್ಯಾದಿ ನೆವದಿಂದ

ಸಮಯವನ್ನು ಹಾಳುಮಾಡುವುದು ಅಯುಕ್ತವಾಗಲಾರದೆ? ಸ್ವರಾಜ್ಯಪಾರ್ಟಿಯ ವಿರುದ್ಧವಾದಿಗಳಿಗೆ ಅದರ ಕಾರ್ಯಶೈಥಿಲ್ಯವು ಬೇಕಾಗಿದೆ. ಆದ್ದರಿಂದ ಹಲವು ವಿಧದ ನೆವಗಳನ್ನು ಮುಂದೊತ್ತಲು ಅವರು ಬದ್ಧಪರಿಕರರಾಗಿರುತ್ತಾರೆ. ಈ ಮರ್ಮವನ್ನು ತಿಳಕೊಳ್ಳಬೇಕಾದ್ದು. ಕೌನ್ಸಿಲ್‌ಪ್ರವೇಶದ ಸಂದರ್ಭವು ಮುಂದೆ ಬಂದಿರುವಾಗ ಐಕ್ಯಭಂಗದ ಉದಾತ್ತ ಹೇತುವನ್ನು ಮುಂದೆ ತಂದುಕೊಂಡು ಸುಮ್ಮನೆ ಕುಳಿತರೆ ಅದರಿಂದ ಆತ್ಮಘಾತವೆ ಉಂಟಾದೀತು. ಇಷ್ಟೆ ಅಲ್ಲ, ಇನ್ನೊಂದು ಕಡೆಯವರು, ಉದಾಹರಣಾರ್ಥವಾಗಿ ರಾಜಗೋಪಾಲಾಚಾರ್ಯರು, ಕೌನ್ಸಿಲ್ ಬಹಿಷ್ಕಾರದ ಶಂಖವನ್ನು ಈಗಿನ್ನಿಂದಲೆ ಊದಹತ್ತಿದ್ದಾರೆ. ಸ್ವರಾಜ್ಯಪಕ್ಷದವರು ಕೂಡ ಕೌನ್ಸಿಲ್ ಪ್ರವೇಶದ ಧ್ವಜವನ್ನು ತೆಕ್ಕೊಂಡು ಹೊರಡಬೇಕು.

ಇಂಥ ಸಮಯದಲ್ಲಿ ಕಾಲಹರಣವನ್ನು ಮಾಡಿದ್ದಾದ್ದರೆ ಮತದಾರರ ವಂಚನೆಯಾದೀತು. ಕೌನ್ಸಿಲುಗಳು ಈಗ ಎಷ್ಟೊ ಸಮಯದಿಂದ ಇದ್ದಾವೆ. ಆದರೆ ಅವುಗಳ ಪ್ರತಿನಿಧಿಗಳ ಮನಃಸ್ಥಿತಿಯಾಗಲಿ, ಕಾರ್ಯಪ್ರವೃತ್ತಿಯಾಗಲಿ ವಿವಕ್ಷಿತ ಧೋರಣದ್ದಿರಲಿಲ್ಲ. ಅದು ಕಾರಣ, ನೋಕರಶಾಹಿಯ ಲೀಲೆಯು ಅಕುಂಠಿತವಾಗಿ ನಡೆಯುತ್ತಿತ್ತು. ಈಗ ಸುಸಂಘಟಿತವಾದ ಸ್ವರಾಜ್ಯಪಕ್ಷದ ಕಾರ್ಯಕ್ರಮವು ಸಿದ್ಧವಿರುವುದರಿಂದ ಆ ಪಕ್ಷವನ್ನು ಅವಲಂಬಿಸಿದ ಪ್ರತಿನಿಧಿಗಳು ಕೌನ್ಸಿಲುಗಳನ್ನು ಆಕ್ರಮಿಸಿದ್ದಾದರೆ ಮಹಾತ್ಮಾಜಿಯವರ ಕೌನ್ಸಿಲ್ ಬಹಿಷ್ಕಾರದ ಉದ್ದೇಶವು ಸಫಲವಾದೀತು. ಈ ವಿಷಯವನ್ನು ನಾವು ಹಿಂದೆ ಅನೇಕ ಸಾರಿ ಯುಕ್ತಿಪುರಸ್ಸರವಾಗಿಯೂ, ಪ್ರಮಾಣಪೂರ್ವಕವಾಗಿಯೂ ಉಪಪಾದಿಸಿ ತೋರಿಸಿರುವುದರಿಂದ ಪುನಃ ಇಲ್ಲಿ ವಿಸ್ತರಿಸುವುದು ಅವಶ್ಯವಿಲ್ಲ. ನಮ್ಮ ಬರವಣಿಗೆಯ ಮುಖ್ಯ ತಾತ್ಪರ್ಯವೇನೆಂದರೆ, ನಿರರ್ಥಕವಾದ ನೆವಗಳಿಗೆ ಪುನಃ ಕಿವಿ ಕೊಡಬಾರದು, ಪಂಡಿತ ಮೋತಿಲಾಲ ನೆಹರುಗಳಾದರೂ ಇದೆ ಅಭಿಪ್ರಾಯವನ್ನು ಒತ್ತಿಒತ್ತಿ ಹೇಳಿದ್ದಾರೆ. "ಇಂಥ ಒಪ್ಪಂದದಿಂದ ಯಾವ ಉಪಯುಕ್ತ ಅಂಶವೂ ನಿಷ್ಪನ್ನವಾಗಲಿಕ್ಕಿಲ್ಲವೆಂದು ಮೊದಲೆ ತಿಳಿದಿದ್ದಾದರೂ ಪ್ರತಿಪಕ್ಷಿಗಳಿಗೆ ಒಂದು ಸಂದರ್ಭವನ್ನು ಕೊಡಲು ಇಷ್ಟು ದಿವಸ ಪ್ರತೀಕ್ಷಿಸಿ ಆಯಿತು. ಇನ್ನು ಮುಂದೆ ಸುಮ್ಮನಿರದೆ, ಸಮಯವನ್ನು ಹಾಳುಮಾಡದೆ ಕಾರ್ಯೋದ್ಯುಕ್ತರಾಗಬೇಕು". ಪಂಡಿತಜಿಯವರ ಈ ಅನುಭವವು ರಾಷ್ಟ್ರದ ಮುಂದೆ ಇದೆ. ರಾಷ್ಟ್ರವು ಅದರ ಸದುಪಯೋಗವನ್ನು ಪಡಕೊಂಡೀತೆಂದು ನಾವು ಭಾವಿಸಿದ್ದೇವೆ.

ಸ್ಫುಟವಿಚಾರಗಳು.

೧. ಡಾಕ್ಟರ್ ಸರ್ ನಾರಾಯಣ ಗಣೇಶ ಚಂದಾವರಕಾರರವರು ಇದೇ ಕಳೆದ ತಾ. ೧೪ನೆಯ ಸೋಮವಾರ ಬೆಂಗಳೂರಿನಲ್ಲಿ ಪೂರ್ವಾಹ್ನ ಗಂಟೆ ೧೦ಕ್ಕೆ ಸ್ವರ್ಗಸ್ಥರಾದರೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜನ್ಮವೆತ್ತಿದವರಾದರೂ ನಮ್ಮ ಜಿಲ್ಲೆಗೆ ಇವರಿಗಿರುವ ಸಂಬಂಧವನ್ನು ವಿವರಿಸಿ ತಾನು ಈ ಜಿಲ್ಲೆಯ ಅಭಿಮಾನಿಯಾಗಿರುವೆನೆಂದು ಇವರು ಮಂಗಳೂರಿಗೆ ಬಂದ ಬಂದ ಸಂದರ್ಭದಲ್ಲಿ ಅನ್ನುವದಿತ್ತು. ಈ ಜಿಲ್ಲೆಯ ಪ್ರಮುಖರಾದ ಸಾರಸ್ವತ ಬ್ರಾಹ್ಮಣರಲ್ಲಿ ಜನಿಸಿದವರಾದ್ದರಿಂದ ಇವರ ಮೃತ್ಯುವಿನಿಂದ ಉಂಟಾದ ವಿಷಾದವು ನಮ್ಮೀ ಜಿಲ್ಲೆಗೆ ಮತ್ತಷ್ಟು ವಿಷಾದಕರವಾಗಿದೆ. ಇವರ ನಿಧನ ವೃತ್ತಾಂತವನ್ನೂ ಸಂಕ್ಷೇಪ ಚರಿತ್ರವನ್ನೂ ಈ ಸಂಚಿಕೆಯ ಮತ್ತೊಂದು ಕಡೆಯಲ್ಲಿ ಪ್ರಕಟಿಸಿರುವೆವು.

ಹಿಂದೂ ರಿಲಿಜಿಯಸ್ ಎನ್‌ಡೌಮೆಂಟ ಬೀಲು.

ಹಿಂದೂ ಮತಸಂಬಂಧವಾದ ಉಂಬಳಿಗಳ ಬೀಲಿನ ಕುರಿತು ವೈಸರಾಯರಿಗೆ ಮನವಿಮಾಡಿಕೊಳ್ಳುವ ವಿಷಯದಲ್ಲಿ ಹಿಂದೂ ಪ್ರತಿನಿಧಿ ಮಂಡಲದ ಕಾರ್ಯದರ್ಶಿಯವರಾದ ಶ್ರೀಯುತ ಹೊಸಕೊಪ್ಪ ಕೃಷ್ಣರಾಯರು ಕಳುಹಿಸಿದ ತಂತಿ ಸಮಾಚಾರವು ಹೀಗಿದೆ.

ಉಡುಪಿ ಹಿಂದೂ ಪರಿಷತ್ತಿನ ಪ್ರತಿನಿಧಿಮಂಡಲದ ಪರವಾಗಿ ಸನಾತನವಾದ ಹಿಂದೂ ಧರ್ಮಾಚರಣೆಯ ಮೇಲೆ ವಾತ್ಸಲ್ಯವುಳ್ಳ ಮತ್ತು ನಿನ್ನೆ ತಾನೆ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಪಾಸಾಗಿ ಈಗ 'ಬಿಲ್ಸ್ ರೂಲ್ಸ್' ಮೇರೆಗೆ ವೈಸರಾಯರ ಅನುಮತಿಯನ್ನು ಕಾದುಕೊಂಡಿರುವ ಈ ಬೀಲನ್ನು ವಿರೋಧಿಸುವ ಸರ್ವ ಹಿಂದೂ ಮತಸ್ಥರಿಂದಲೂ ಕೂಡಿದ ಮಹಾ ಸಭೆಯೊಂದು ಮಂಗಳೂರ ಸನ್ಯಾಸಿಗುಡ್ಡೆಯಲ್ಲಿ ಶ್ರೀಯುತ ಯು. ಸಿ. ಕೃಷ್ಣಭಟ್ಟರ ಮನೆಯಲ್ಲಿ ವೈಸರಾಯರ ಪ್ರೈವೆಟ್ಟು ಸೆಕ್ರೆಟರಿಗಳು ಕಳೆದ ತಿಂಗಳ ೨೬ನೇ ತಾರೀಕಿನ ದಿನ ಈ ಪ್ರತಿನಿಧಿ ಮಂಡಲದ ಕಾರ್ಯದರ್ಶಿಯವರಿಗೆ ಕಳುಹಿಸಿದ ತಂತಿ ವರ್ತಮಾನಕ್ಕನುಗುಣವಾಗಿ ವೈಸರಾಯರಿಗೆ ಕಳುಹಿಸುವ ಬಗ್ಗೆ ಒಂದು ಆಕ್ಷೇಪಣಾಪತ್ರವನ್ನು ತಯಾರಿಸುವುದಕ್ಕೆ ಇದೇ ತಾ. ೨೬ಕ್ಕೆ ಜರಗಲಿಕ್ಕಿರುವುದು. ಈ ಭಯಂಕರವಾದ ಬೀಲಿನ ಹಾವಳಿಯಿಂದ ನಮ್ಮ ಧರ್ಮ ಮತ್ತು ಗುರುಪೀಠಗಳನ್ನು ತಪ್ಪಿಸಬೇಕೆಂದು ಇಚ್ಛಿಸುವ ಪ್ರತಿಯೊಬ್ಬ ಹಿಂದುವು ಈ ಸಭೆಗೆ ಬಂದು ತಮ್ಮ ಅಮೂಲ್ಯ ಆಲೋಚನೆಗಳನ್ನು ಕೊಡಬೇಕಾಗಿ ಪ್ರಾರ್ಥನೆ.

ಈ ಆಕ್ಷೇಪಣಾಪತ್ರದ ನಕಲೊಂದನ್ನು ಸಭೆಯು ಮುಂದಿಡಬೇಕಾದ ಕಾರಣ ಸರ್ವರೂ ತಮ್ಮ ಅಭಿಪ್ರಾಯಗಳನ್ನೂ, ಆಕ್ಷೇಪಣೆಗಳನ್ನೂ ತಾ. ೨೦ರ ಒಳಗಾಗಿ ಹಿಂದೂ ಕೋನ್ಫರೆನ್ಸ್ ಡೆಪ್ಯುಟೇಶನ್, ಉಡುಪಿ ಇದರ ಸೆಕ್ರೆಟರಿಯವರಿಗೆ ತಿಳಿಸಬೇಕು. ಈ ಬೀಲನ್ನು ವಿರೋಧಿಸುವ ಚಳವಳವನ್ನು ಹೂಡುವ ಬಗ್ಗೆ ಪ್ರಚಾರ ಕೆಲಸವನ್ನು ಕೈಕೊಳ್ಳುವ ಉಪಾಯಗಳು ಕೂಡ ಆಲೋಚಿಸಲಾಗುವುದು. ಪ್ರಸಂಗವು ಮಹತ್ವದ್ದಾಗಿ ಸಮಯವು ಸಂಕೋಚವಾಗಿರುತ್ತದೆ. ಅದುಕಾರಣ ಪ್ರತಿಯೊಬ್ಬನಿಗೂ ಆಮಂತ್ರಣ ಕಳುಹಿಸಲು ಕಷ್ಟಸಾಧ್ಯವಾದುದರಿಂದ ಸರ್ವರಿಗೂ ಪತ್ರಿಕೆಯ ಮೂಲಕ ತಿಳಿಸಬೇಕಾಯಿತು. ಸರ್ವರೂ ಈ ಸಭೆಗೆ ಚಿತ್ತೈಸಬೇಕಾಗಿ ನಾನು ಪ್ರಾರ್ಥಿಸುತ್ತೇನೆ. ವೈಸರಾಯರ ಪ್ರೈವೇಟು ಸೆಕ್ರಿಟರಿಯವರಿಗೆ ಈ ರೀತಿಯಾಗಿ ವರ್ತಮಾನವು ಕಳುಹಿಸಲ್ಪಟ್ಟಿದೆ.

ಆಕ್ಷೇಪಣಾಪತ್ರ ಒಂದನ್ನು ತಯಾರಿಸುವ ಬಗ್ಗಾಗಿ ತಾ. ೨೬ಕ್ಕೆ ಸಭೆಯು ಮಂಗಳೂರಲ್ಲಿ ಜರಗುವುದು. ಕಾರ್ಯಭಾರದ ದೆಸೆಯಿಂದ ಕಾಲವಿಳಂಬವಾಗಲು ಕಾರಣವಾಯಿತು. ಅಲ್ಲದೆ ದೇಶದಲ್ಲಿ ಅನಾಹುತವನ್ನು ಉಂಟುಮಾಡಲಿಕ್ಕಿರುವ ಬೀಲನ್ನು ವೀಟೋಮಾಡುವ ಆವಶ್ಯಕತೆಯಲ್ಲಿ ನಾವು ಸ್ವತಹ ಮನವಿಮಾಡಿಕೊಳ್ಳುವ ಮುಂದಾಗಿ, ದೀರ್ಘಕಾಲ ಗವರ್ನರೊಡನೆ ಭೇಟಿಮಾಡಿದ ನಮ್ಮ ಡೆಪ್ಯುಟೇಶನಿಗೆ ಉತ್ತರವಾಗಿ ಕೊಡಲಿಕ್ಕಿರುವ ಸ್ಟೇಟಮೆಂಟಿನ ವಿಷಯದಲ್ಲಿ ವೈಸರಾಯರು ಮುಂದರಿಯಬಾರದಾಗಿ ಅಂಕೆಮಾಡೋಣಾಗಿದೆ

ಹಿಂದೂ ಕೋನ್ಫರೆನ್ಸ್,
ಡೆಪ್ಯುಟೇಶನ್ ಉಡುಪಿ.
ಹೊಸಕೊಪ್ಪ ಕೃಷ್ಣರಾವ್,
ಕಾರ್ಯದರ್ಶಿ.

ಮಂಗಳೂರು.

ದಕ್ಷಿಣ ಕನ್ನಡಾ ಜಿಲ್ಲೆಯ ಮತದಾರರ ಸಮ್ಮುಖದಲ್ಲಿ ಒಂದು ವಿನಂತಿ, ಎಂದು ಒಬ್ಬ ವೋಟರರು ಬರೆದ ಬಾತಮಿಯು ನಮಗೆ ತಲ್ಪಿದೆ. ಆದರೆ ಸ್ಥಳ ಸಂಕೋಚದಿಂದ ಇದನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲು ಆಗಲಿಲ್ಲ. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಉಡ್ಪಿಯ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನಿನ ಶಾಖೆಯು ಈ ದಿನ ಘಂಟೆ ೧೧ಕ್ಕೆ ಕುಂದಾಪುರದಲ್ಲಿ ತೆರಿಯಲ್ಪಡುವುದು. ಈ ಬ್ಯಾಂಕಿಂಗ್ ಸಂಸ್ಥೆಯ ಅಭಿವೃದ್ಧಿ ಸ್ಥಿತಿಯನ್ನು ಸೂಚಿಸಿ ಪ್ರಕಟಿಸಿದ ಇದರ ವಾರ್ಷಿಕ ವರದಿಯನ್ನು ಮುಂದಿನ ಸಂಚಿಕೆಯಲ್ಲಿ ಪರಿಶೀಲಿಸಬೇಕೆಂದಿದ್ದೇವೆ. ತನ್ನಲ್ಲಿ ಜಾತಿಭೇದಗಳ ತಾರತಮ್ಯವನ್ನು ಲೆಕ್ಕಿಸದೆ ಎಲ್ಲಾ ಜಾತಿಮತಸ್ಥರಿಗೂ ತನ್ನ ಹಿಸೆದಾರರ ಪಟ್ಟಿಯಲ್ಲಿ ಪ್ರವೇಶವನ್ನು ಕೊಡುವ ಈ ಸಂಸ್ಥೆಯ ಶಾಖೆಯೊಂದು ಕುಂದಾಪುರದಲ್ಲಿ ಸ್ಥಾಪಿತವಾದದರಿಂದ ಆ ಪ್ರಾಂತ್ಯದ ಕೇವಲಾತಿದಾರರಿಗೂ ವ್ಯಾಪಾರಸ್ಥರಿಗೂ ತಮ್ಮ ವಹಿವಾಟುಗಳಿಗೆ ಹೆಚ್ಚಿನ ಅನ್ನದವು ದೊರೆಯುವುದರ ಮೂಲಕ ಬ್ಯಾಂಕಿನ ಸ್ಥಿತಿಯು ಮತ್ತಷ್ಟು ಅಭಿವೃದ್ಧಿಯಾಗುವದೆಂದು ನಂಬುತ್ತೇವೆ.

ಡಿಸ್ಟ್ರಿಕ್ಟ ಬೋರ್ಡ ಮೀಟಿಂಗು ಬರುವ ತಾರೀಕು ೨೫ರಲ್ಲಿ ಸೇರುವ ಬದಲಾಗಿ ತಾರೀಕು ೨೯ನೇ ಮಂಗಳವಾರ ಪ್ರಾತಃಕಾಲ ೮-೩೦ ಘಂಟೆಗೆ ಜರಗುವುದು.

ಇಲ್ಲಿಯ ಗವರ್ನಮೆಂಟ ಸೆಕೆಂಡರಿ ಟ್ರೈನಿಂಗ ಶಾಲೆಯಲ್ಲಿ ಬರುವ ಜೂನ್ ತಿಂಗಳಿನಿಂದ I, II ಮತ್ತು III ಫೋರ್ಮುಗಳನ್ನು ತೆರಿಯುವರು.

ಮುಹಮ್ಮದ ಶಮ್ನಾಡ ಸಾಹೇಬ ಬಹದೂರರು ತಾವು ವೆಸ್ಟ್‌ಕೋಸ್ಟು ಮತ್ತು ನೀಲಗಿರಿಯ ಮುಹಮ್ಮದೀಯರ ಪ್ರತಿನಿಧಿಯಾಗಿ ಲೆಜಿಸ್ಲೇಟಿವ ಎಸೆಂಬ್ಲಿಯಲ್ಲಿ ಪುನಃ ಮೆಂಬರರಾಗಲು ಮುಂದೆ ಬರುವ ಚುನಾವಣೆಯಲ್ಲಿ ಒಬ್ಬ ಉಮೇದ್ವಾರರಾಗಲಿಕ್ಕೆ ನಿಶ್ಚಯಿಸಿರುವುದಾಗಿ ತಿಳಿಸಿರುತ್ತಾರೆ.

ಮದರಾಸ ಸಂಸ್ಥಾನದ ಚೀಫ ಮಿನಿಸ್ಟರರಾದ ಪಿನಗಲ್ ರಾಜರು ಇದೇ ತಾರೀಕು ೨೫ಕ್ಕೆ ಇಲ್ಲಿಗೆ ಬರಲಿಕ್ಕಿದ್ದಾರೆ.

ಲೇಬರ್ ಕಮ್ಮಿಶನರಾದ ಮಿ|| ಜಿ. ಯಫ್. ಪೆಡ್ಲಿಸನರು ಕಳೆದ ಬುಧವಾರ ಇಲ್ಲಿಗೆ ಬಂದಿರುವರು.

ಉಪ್ಪಿನಂಗಡಿ ತಹಸೀಲದಾರರಾದ ಮ. ರಾ. ಯುಸ್. ಬಾಬುರಾಯರಿಗೆ ೩ ತಿಂಗಳ ರಜೆಯು ಸೆಂಕ್ಷನ್ ಮಾಡಲಾಗಿದೆಯಂತೆ.

ಕೆಥೊಲಿಕ ಎಸೋಸಿಯೇಶನಿನಿಂದ ಏರ್ಪಡಿಸಲ್ಪಟ್ಟ ಪೋಟಿಯಲ್ಲಿ ಪ್ರಥಮದ ಇನಾಮ ರೂ. ೩೦೦ ಮಿ|| ಪಿಯಾದ್ ರಾಸ್‌ಕುಂಞ ಎಂಬವರಿಗೂ ಎರಡನೆಯ ಬಹುಮಾನ ರೂ. ೧೫೦ ಮಿಶನ್‌ಸ್ಕೂಲಿನ ಶಾಸ್ತ್ರಕರ ಮಿ|| ಜೇಮ್ಸ್ ಗ್ಲೋಜರ್ ಎಂಬವರಿಗೂ ಮೂರನೆಯ ಬಹುಮಾನವು ಕಾರ್ಕಳದ ಮಿ|| ರುಕ್ಕು ಎಂಬವರಿಗೂ ದೊರಕಿರುವುದು.

ಬರುವ ತಾರೀಕು ೨೯ನೇ ಮಂಗಳವಾರ ಅಪರಾಹ್ನ ೩ ಗಂಟೆಗೆ ಮಂಗಳೂರು ತಾಲೂಕುಬೋರ್ಡು ಆಫೀಸಿನಲ್ಲಿ ಮಂಗಳೂರು ತಾಲೂಕು ಬೋರ್ಡು ಮೀಟಿಂಗು ಜರಗುವುದು.

ದಕ್ಷಿಣಕನ್ನಡ ಮಲಬಾರ ಮತ್ತು ನೀಲಗಿರಿ ಜಿಲ್ಲೆಗಳ ರೂರಲ್ ಕೊನ್ಸ್‌ಟಿಟ್ಯೂಯನ್ಸಿನ ಪರವಾಗಿ ಲೆಫ್ಟನೆಂಟ್ ಕವಲ್ಪಾರಾ ಮೂಪಿಲ್ ನಾಯರರು ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾಗಲು ಉಮೇದುವಾರರಾಗಿರುವರು.

ಕಳೆದ ವರುಷ ಇಲ್ಲಿ ಜರುಗಿದ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷ ಶ್ರೀಮತಿ ಸರೋಜಿನಿಯವರ ದರುಶನ ಲಾಭವು ಇಲ್ಲಿಯವರಿಗೆ ಈ ವಾರದಲ್ಲಿ ಪುನಃ ಆಯಿತು. ಇವರು ತಾ. ೧೫ನೇ ಬೆಳಿಗ್ಗೆ ೯-೪೫ ಗಂಟೆಯ ರೈಲುಬಂಡಿಯಲ್ಲಿ ಕಣ್ಣಾನೂರಿನಿಂದ ಇಲ್ಲಿಗೆ ತಲ್ಪಿದರು. ಕೂಡಲೇ ಇವರ ಸ್ವಾಗತವು ನಡೆದು ಇವರನ್ನು ವರ್ತಕವಿಲಾಸಕ್ಕೆ ಕರೆದುಕೊಂಡು ಹೋದರು. ಅಲ್ಲಿ ಕೆಲವು ಮುಖಂಡರ ಸಭೆಯು ಕೂಡಿ ಶ್ರೀಮತಿಯವರೊಡನೆ ಪ್ರಶ್ನೋತ್ತರ ಸಂಭಾಷಣೆಗಳು ನಡೆದವು. ಈ ಸಂದರ್ಭದಲ್ಲಿ ಅವರು ಉತ್ತರಹಿಂದೂಸ್ಥಾನದಲ್ಲಿನ ಹಿಂದೂಮುಸಲ್ಮಾನರ ಕಲಹ ಮೊದಲಾದ ದೇಶದ ಈಗಿನ ಪರಿಸ್ಥಿತಿಯ ವಿಷಯವನ್ನು ವಿವರಿಸಿದರು. ಕೌನ್ಸಿಲು ಬಹಿಷ್ಕಾರದ ವಿಷಯದಲ್ಲಿ ತಾನು ತನ್ನ ಪೂರ್ವದ ಮತವನ್ನು ಬಿಟ್ಟಿಲ್ಲವಾದರೂ ತಾನು ಕೌನ್ಸಿಲು ಪ್ರವೇಶಕ್ಕೆ ವಿರೋಧಿಯಲ್ಲವೆಂದು ತಿಳಿಸಿ ಸ್ವರಾಜ್ಯವು ದೊರೆಯಬೇಕಾದರೆ ಕೊಂಗ್ರೆಸ್ ಕಾರ್ಯಪ್ರಚಾರದ ಸುವ್ಯವಸ್ಥೆಯು ಅಗತ್ಯವಿದೆ ಮೊದಲಾದ ಸೂಚನೆಗಳನ್ನು ಸೂಚಿಸಿದರು. ಅಲ್ಲಿಂದ ಇವರು ಶ್ರೀಯುತ ಕಾರ್ನಾಡ ಸದಾಶಿವರಾಯರ ಮನೆಗೆ ತೆರಳಿದರು. ಅದೇ ದಿನ ಸಾಯಂಕಾಲ ಮೈದಾನಿನಲ್ಲಿ ಇವರ ಭಾಷಣವನ್ನು ಕೇಳಲು ಸಾರ್ವಜನಿಕ ಸಭೆಯು ಸೇರಿತ್ತು. ಈ ಸಭೆಯಲ್ಲಿ ಸುಮಾರು ೩೦೦೦ ಜನರು ಹಾಜರಿದ್ದರು. ಇವರು ಕೊಟ್ಟ ಭಾಷಣದ ಸಾರಾಂಶವನ್ನು ಇನ್ನೊಂದು ಕಡೆಯಲ್ಲಿ ಕೊಟ್ಟಿರುವೆವು. ಮರುದಿನ ಬೆಳಿಗ್ಗೆ ಇವರು ಉಡ್ಪಿ, ಮೂಡಬಿದ್ರೆ, ಕಾರ್ಕಳ ಈ ಕಡೆಗಳಲ್ಲಿ ಸಂಚರಿಸಿ ತಾವು ಹೋದ ಕಡೆಗಳಲ್ಲೆಲ್ಲಾ ಕೊಂಗ್ರೆಸ್ಸಿನ ಕುರಿತು ಜಾಗ್ರತಿಯನ್ನು ಹುಟ್ಟಿಸುವ ಭಾಷಣವನ್ನು ಮಾಡಿ, ಹಿಂದೂ-ಮುಸಲ್ಮಾನರ ಐಕ್ಯ, ಮತ್ತು ಖಾದಿ ಪ್ರಚಾರದ ಆವಶ್ಯಕತೆಯ ಸಂದೇಶವನ್ನು ಕೊಟ್ಟು ಅದೇ ದಿನ ಸಾಯಂಕಾಲ ಮಂಗಳೂರಿಗೆ ಹಿಂತಿರುಗಿದರು. ಈ ದಿನ ರಾತ್ರೆ ಸ್ವರಾಜ್ಯಫಂಡಿನ ಸಹಾಯಾರ್ಥವಾಗಿ ಇಲ್ಲಿಯ ಭಾರತಸಂಗೀತ ನಾಟಕ ಮಂಡಲಿಯವರಿಂದ ಅಭಿನಯಿಸಲ್ಪಟ್ಟ ನಾಟಕಕ್ಕೂ ದಯಮಾಡಿ ಅಲ್ಲೂ ಒಂದು ಚಿಕ್ಕ ಭಾಷಣವನ್ನು ಮಾಡಿ ಮರುದಿನ ಬೆಳಿಗ್ಗಿನ ರೈಲುಬಂಡಿಯಲ್ಲಿ ಕೊಯಮುತ್ತೂರಿಗೆ ತೆರಳಿದರು.

ದೇರೆಬೈಲು ಗ್ರಾಮದ ಸರ್ವೆ ನಂಬ್ರ ೨೫ನೇ ಸ್ಥಳದಲ್ಲಿ ಪಟ್ಟಣಿಗರ ಮಲಮೂತ್ರವನ್ನು ಹೂಳಿಡುವುದನ್ನು ನಿಲ್ಲಿಸಿ ಸರ್ವೆ ನಂಬ್ರ ೨೨ನೇ ಸ್ಥಳವು ಇದಕ್ಕೆ ಹೆಚ್ಚು ಯೋಗ್ಯವೆಂದು ಜಿಲ್ಲಾ ಕಲೆಕ್ಟರ ದೊರೆಗಳು ಅಭಿಪ್ರಾಯಪಟ್ಟು ಸದರಿ ಸ್ಥಳದಲ್ಲಿ ಹೂಳಿಡುವ ಏಲಿವಾರಿ ಕೂಡಲೆ ನಡಿಸುವ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿ ಮಂಗಳೂರು ಮುನ್ಸಿಪಾಲಿಟಿಯವರಿಗೆ ಬರೆದಿದ್ದಾರಾಗಿ ಕೇಳುತ್ತೇವೆ.

ಕಳೆದ ಆದಿತ್ಯವಾರ ಇಲ್ಲಿಯ ಚೀಫ್ ಸೆನಿಟರಿ ಇನ್ಸ್‌ಪೆಕ್ಟರ ಮ. ರಾ. ಸೀತಾರಾಮರಾಯರು ದೇರೆಬೈಲಿಗೆ ಬಂದು ಸ್ಥಳದ ಮಾಹಿತಿ ಪಡೆದು ಕಳೆದ ಮಂಗಳವಾರ ಬೆಳಿಗ್ಗೆ ಜಿಲ್ಲಾ ಮೆಡಿಕಲ್ ಎಂಡ್ ಸೆನಿಟರಿ ಆಫೀಸರರನ್ನೂ ಮುನ್ಸಿಪಾಲಿಟಿಯ ಚೆಯರ್‌ಮೇನರನ್ನೂ ಸ್ಥಳ ತನಿಖೆ ಬಗ್ಗೆ ಕರೆದು ತಂದಿದ್ದರು. ಮಲ ಕೇವಲಾತಿಯ ಹೊಸ ಸ್ಥಳದ ವಿಷಯ ಜಿಲ್ಲಾ ಕಲೆಕ್ಟರ್ ದೊರೆಗಳು ಪಟ್ಟ ಅಭಿಪ್ರಾಯವನ್ನು ಅಂಗೀಕರಿಸಿದರು. ಆದರೆ ಈ ಸ್ಥಳಕ್ಕೆ ಮಲಬಂಡ್ಯೋಣದ ಬಗ್ಗೆ ಮನುಷ್ಯ ಕಾಮಗಾರಿಯಾಗಲಿ, ಎತ್ತಿನ ಗಾಡಿಯ ಏಲಿವಾರಿಯಾಗಲಿ ಶಕ್ಯಸಾಧ್ಯವಾದದು. ಸದರಿ ಮಲಬಂಡ್ಯೋಣದ ಬಗ್ಗೆ ಮದ್ರಾಸಿನಲ್ಲಿ ನಡಿಯುವ ಕ್ರಮದ ಪ್ರಕಾರ ಮೋಟರ್ ಟ್ರಕ್ಸ್‌ಗಳನ್ನು ಎಂದರೆ, ರೈಲ್ವೆ ಸಾಮಾನು ಗಾಡಿಗಳ ಮಾದರಿಯಲ್ಲಿ ಗಾಡಿ ಇರುವ ಮೋಟರ್‌ಗಳನ್ನು ರೂಢಿಗೆ ತರಬೇಕೆಂತಲೂ ಗುಡ್ಡೆಯ ಮೇಲಿಂದ ಹಾದುಹೋಗುವ ಸುಮಾರು೩ ಮೈಲು ಗ್ರಾಮಸ್ಥರ ಗಾಡಿ ಮಾರ್ಗಕ್ಕಿಂತ ತಗ್ಗು ಸಮ ನೆಲದ ಮೇಲಿಂದ ಹೋಗುವ ಸುಮಾರು ೩ಮೈಲು ಮಾತ್ರವೇ ಇರುವ ಗ್ರಾಮಸ್ಥರ ಹಾಳುಬಿದ್ದ ಹಳೆ ಗಾಡಿ ಮಾರ್ಗವನ್ನೇ ದುರುಸ್ತಿ ಪಡಿಸಬೇಕೆಂತಲೂ ಅಭಿಪ್ರಾಯಪಟ್ಟರು. ಸದರಿ ಮಾರ್ಗ ಕಡಿಯುವುದಕ್ಕೂ ಮೋಟರ್ ಟ್ರಕ್ಸ್ ತೆಕೊಳ್ಳುವ ಬಗ್ಗೆಯೂ ಯಾರ್ಯಾರು ಹಣವ್ಯಯಮಾಡಬೇಕಾಗಿ ಚರ್ಚೆ ನಡೆಯುತ್ತದೆ ಎಂದು ಒಬ್ಬ ಬಾತಮಿದಾರರು ತಿಳಿಸಿರುವರು.

ಕರ್ನಾಟಕ ಪ್ರಾವಿನ್ಸಿಯಲ್ ಕಾಂಗ್ರೆಸ್ ಕಮಿಟಿಯ ಮೀಟಿಂಗು ಈ ತಿಂಗಳ ತಾರೀಕು ೩೦ರಲ್ಲಿ ಬೆಳಗಾಂವಿನಲ್ಲಿ ಸೇರುವುದು. ಈ ಮೀಟಿಂಗಿಗೆ ಇಲ್ಲಿಂದ ಮ. ರಾ. ಅರೆಬೈಲು ಭೋಜರಾಯರು ಹೋಗಿರುವರು.

ಇದೇ ತಿಂಗಳ ತಾರೀಕು ೨೫ರಲ್ಲಿ ಮುಂಬಯಿಯಲ್ಲಿ ಕೂಡಲಿಕ್ಕಿರುವ ಓಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಮೀಟಿಂಗಿಗೆ ಇಲ್ಲಿಂದ ಶ್ರೀಯುತ ಕಾರ್ನಾಡ ಸದಾಶಿವರಾಯರು ಹೋಗಲಿಕ್ಕಿದ್ದಾರೆ.

ಇದೇ ತಾರೀಕು ೨೭ನೇ ಬೆಳಿಗ್ಗೆ ೮ ಗಂಟೆಗೆ ಇಲ್ಲಿಯ ತಿಲಕ ವಿದ್ಯಾಲಯದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಭೆಯು ಸೇರುವುದು.

ಕಳೆದ ಆದಿತ್ಯವಾರ ಇಲ್ಲಿಯ ಭಾರತ ಸಂಗೀತ ನಾಟಕ ಮಂಡಲಿಯವರು ಸ್ವರಾಜ್ಯಫಂಡಿನ ಸಲುವಾಗಿ ಅಭಿನಯಿಸಿದ ನಾಟಕಕ್ಕೆ ಸುಮಾರು ರೂ. ೭೫೦ ಜಮೆಯಾಗಿ ಖರ್ಚು ಕಳೆದು ಸುಮಾರು ರೂ. ೫೦೦ ತಿಲಕ ಸ್ವರಾಜ್ಯ ಫಂಡಿಗೆ ದೊರಕಿದೆ ಎಂದು ತಿಳಿದುಬರುತ್ತದೆ.

ಜಯಪುರದ ಪ್ರಸಿದ್ಧ ಗಾಯಕ ವಿದ್ವಾಂಸರಾದ ಫೀದಾ ಹುಸೇನ್ ಮತ್ತು ಫಯದ್ ಹುಸೇನ್‌ರೆಂಬವರು ಮಂಗಳೂರಿಗೆ ಬಂದಿರುವರು. ಇವರು ಕೆಲವು ದಿನ ಇಲ್ಲಿರುವರು.

ಕಾಸರಗೋಡು:— ೧೯೨೩ನೆಯ ಇಸವಿ ಮೇ ತಿಂಗಳ ತಾ. ೧೯ನೆಯ ಶನಿವಾರ ಘಂಟೆ ೯-೩೦ಕ್ಕೆ ದಕ್ಷಿಣ ಕನ್ನಡಾ ಜಿಲ್ಲಾ ಕಾಸರಗೋಡು ತಾಲೂಕು ಬೋರ್ಡು ಮೆಂಬರರ ಸಭೆಯು ಮಂಜೇಶ್ವರದಲ್ಲಿಯ ಲೋಕಲ್ ಫಂಡ ಬಂಗ್ಲೆಯಲ್ಲಿ ಕೂಡುವುದು.

ಪುತ್ತೂರು:— ಉಪ್ಪಿನಂಗಡಿ ತಾಲೂಕು ಬೋರ್ಡು ಮೆಂಬರರ ಸಭೆಯು ಇದೇ ತಾ. ೨೩ನೆಯ ಬುಧವಾರ ಅಪರಾಹ್ನ ೩ ಗಂಟೆಗೆ ಪುತ್ತೂರಿನಲ್ಲಿ ಸೇರಲಿಕ್ಕಿದೆ.

ಪುತ್ತೂರಿನಲ್ಲಿ ಕಲಿಯುವ ದ್ರಾವಿಡ, ಬ್ರಾಹ್ಮಣ ಹುಡುಗರ ಉಪಯೋಗಾರ್ಥವಾಗಿ ಒಂದು 'ವಿದ್ಯಾರ್ಥಿ ಭವನ'ವನ್ನು ಏರ್ಪಡಿಸುವುದಕ್ಕೋಸ್ಕರ ಪುತ್ತೂರು ಶ್ರೀಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬರುವ ಜೂನ್ ತಾ. ೩ನೆಯ ಭಾನುವಾರ ಸಾಯಂಕಾಲ ೪ ಗಂಟೆಗೆ ದ್ರಾವಿಡ ಬ್ರಾಹ್ಮಣರ ಸಭೆ ಸೇರುವುದೆಂತ ನಿಶ್ಚಯಿಸಿರುತ್ತದೆ. ಎಲ್ಲಾ ದ್ರಾವಿಡ ಬ್ರಾಹ್ಮಣರು ಒಮ್ಮನಸ್ಸಿನಿಂದ ಸೇರಿ ಈ ಸತ್ಕಾರ್ಯವನ್ನು ಶೀಘ್ರದಿಂದ ನೆರವೇರಿಸುವರೆಂದು ನಂಬುತ್ತೇವೆ.

ಫರಂಗಿಪೇಟೆ:— ಇಲ್ಲಿಯ ಶ್ರೀರಾಮ ಹೈಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳೂ ಊರ ಯುವಕರೂ ಸೇರಿ ಸದರಿ ಶಾಲೆಯ ಬಡ ವಿದ್ಯಾರ್ಥಿಗಳ ಫಂಡಿನ ಸಹಾಯಾರ್ಥವಾಗಿ ತಾ. ೯ನೆಯ ದಿನ 'ಚಂದ್ರಗುಪ್ತ ವಿಜಯಾಭ್ಯುದಯ' ಎಂಬ ನಾಟಕವನ್ನು ಆಡಿದರು. ವಿವಿಧ ಹಾಸ್ಯಗಳು, ಟ್ರಾನ್ಸ್‌ಫರ್ ಸೀನುಗಳು ಇವುಗಳಿಂದ ಕೂಡಿದ ಈ ನಾಟಕವು ಸಭಿಕರಿಂದ ಬಹಳವಾಗಿ ಅನುಮೋದಿಸಲ್ಪಟ್ಟಿತು. ಭಾರತಮಾತೆ, ರಾಧಾಕೃಷ್ಣ ಇತ್ಯಾದಿ ದೃಶ್ಯಗಳು ಜನರ ಮನಸ್ಸನ್ನು ಆತ್ಯಾನಂದಗೊಳಿಸಿದವು. ನಾಟಕದಿಂದ ಹುಟ್ಟಿ ಬಂದ ರೂ. ೧೦೫—೦—೦ರಲ್ಲಿ ಖರ್ಚು ಕಳೆದು ಬಾಕಿ ಉಳಿದ ರೂಪಾಯಿ ಮತ್ತು ಮುರಾದೇವಿಯ ಪಾರ್ಟು ಮಾಡಿದ ಚಿ ರಾಘವೇಂದ್ರ ಹೆಗ್ಡೆಗೆ ದೊರಕಿದ ಇನಾಮು ರೂಪಾಯಿ ಸಹಾ ಬಡ ವಿದ್ಯಾರ್ಥಿಗಳ ಫಂಡಿಗೆ ಕೊಡಲಾಗಿದೆ.

ಇದೇ ರೀತಿಯಲ್ಲಿ ಊರ ಗೃಹಸ್ಥರು ವಿದ್ಯಾಭ್ಯಾಸದ ಕಡೆಗೆ ಲಕ್ಷ್ಯಕೊಟ್ಟು ಶಾಲಾಭಿವೃದ್ಧಿಯ ವಿಷಯದಲ್ಲಿ ತಮ್ಮ ಉದಾರಹಸ್ತದಿಂದ ಸಹಾಯಮಾಡುವರಾಗಿ ನಂಬಲಾಗಿದೆ.

ಉಡ್ಪಿ:— ಉಡ್ಪಿಯ ಶ್ರೀಮತ್ಪರಮಹಂಸ ವಿದ್ಯಾಮಂದಿರದ ವಿದ್ಯಾರ್ಥಿಗಳಾದ ಪುತ್ತಿಗೆಮಠದ ಬಾಲಯತಿ ಶ್ರೀಮತ್ಸುಜ್ಞಾನೇಂದ್ರತೀರ್ಥ ಶ್ರೀಪಾದಂಗಳವರು ಕಳೆದ ವಸಂತ ಶುದ್ಧ ದ್ವಾದಶೀ ದಿನದಲ್ಲಿ ವಸಂತೋತ್ಸವಕ್ಕೆ ನೆರೆದಿದ್ದ ಮಹಾಜನ ಸಭೆಯ ಮುಂದೆ ಮಧ್ಯಾಹ್ನ ಹನ್ನೆರಡು ಘಂಟೆಯಿಂದ ಎರಡು ಘಂಟೆಯ ವರೆಗೆ ಶ್ರೀಮದನಂತೇಶ್ವರ ದೇವಾಲಯದಲ್ಲಿ ಧರ್ಮದ ವಿಷಯದಲ್ಲಿ ಸರಸೋಪನ್ಯಾಸವನ್ನು ಮಾಡಿದರು. ತತ್ತ್ವಾರ್ಥಗರ್ಭಿತವಾಗಿದ್ದರೂ ಮೃದುಪದವಿನ್ಯಾಸವಾಗಿದ್ದ ಈ ಮಹಾನುಭಾವರ ಬಾಲಭಾವದ ಈ ಉಪನ್ಯಾಸವು ಪಂಡಿತ ಪಾಮರ ಸಾಧಾರಣ ಸಕಲ ಜನರ ಹೃದಯದಲ್ಲೂ ಪರಮಾಹ್ಲಾದದೊಂದಿಗೆ ಅನೇಕ ಧರ್ಮಗಳ ಮರ್ಮವನ್ನು ನಲಿಗೊಳಿಸಿದೆ.

ಧರ್ಮಬೋಧನೆಯನ್ನೇ ಮುಖೋದ್ದೇಶವನ್ನಾಗಿ ಇಟ್ಟುಕೊಂಡು ಸಂನ್ಯಾಸಾಶ್ರಮವನ್ನು ಕೈಗೊಳ್ಳುವ ಗುರುಪೀಠಗಳವರೆಲ್ಲರೂ ಹೀಗೆಯೇ ಸ್ವಕರ್ತವ್ಯದಲ್ಲಿ ಜಾಗರೂಕರಾಗಿ ಶಿಷ್ಯವರ್ಗದ ಶಾಸನೆಮಾಡುತ್ತಾ ಬಂದರೆ ಧರ್ಮವೂ ನಿದ್ರಾವಸ್ಥೆಯನ್ನು ತೊಲಗಿ ತನ್ನ ಪ್ರಭೆಯನ್ನು ಪ್ರಸರಿಸದಿರಲಾರದೆಂದು ನಂಬುತ್ತೇವೆ.

ಉಡ್ಪಿಗೆ ಶ್ರೀಮತಿ ಸರೋಜಿನಿ ದೇವಿಯವರ ಆಗಮನ.

ಅಖಿಲ ಭಾರತ ಮುಖಂಡರಲ್ಲಿ ಒಬ್ಬರಾದ ಸರೋಜಿನಿ ದೇವಿಯವರು ಶ್ರೀಯುತ ಕಾರ್ನಾಡ ಸದಾಶಿವರಾಯರೊಡನೆ ನೊನ್ನೆ ತಾ. ೧೩ನೆಯ ಆದಿತ್ಯವಾರ ೧೦ ಘಂಟೆಗೆ ಇಲ್ಲಿಗೆ ಚಿತ್ತೈಸಿದರು. ಅವರು ಬಂದೊಡನೆ ಶ್ರೀಯುತ ಸಾಹುಕಾರ ಹರಿಯಪ್ಪ ಶ್ಯಾನುಭಾಗರಲ್ಲಿ ಫಲಾಹಾರ ಮುಂತಾದ ಸತ್ಕಾರಗಳು ಅವರಿಗೆ ನಡೆದವು. ಅನಂತರ ಮೆರವಣಿಗೆಯು ಸ್ವಯಂಸೇವಕರೂ ಮತ್ತು ಅನೇಕ ಪುರ ಜನರೂ, ಭಜನೆಮಾಡುತ್ತಾ, ರಾಷ್ಟ್ರೀಯ ಧ್ವಜದೊಡನೆ ಮುಂದರಿದು ತೆಂಕಪೇಟೆಗೆ ಬರುತ್ತಲೇ, ಶ್ರೀಯುತ ಕುಂಬಳೆ ರಾಘವೇಂದ್ರರಾಯರು ಹೊಸತಾಗಿ ಸ್ಥಾಪಿಸಿದ "ದಿ ಉಡುಪಿ ಸ್ಟೋರ್ಸ್" ಎಂಬ ಶುದ್ಧ ಖಾದಿ ಮುಂತಾದವುಗಳನ್ನು ಮಾರುವ ಹೊಸ ಅಂಗಡಿಗೆ ಮುಹೂರ್ತವನ್ನು ಮಾಡಿದರು.

ಅಂಗಡಿಯನ್ನು ತೆರೆಯುತ ದೇವಿಯವರು, ಮಹಾತ್ಮಜಿಯವರು ದೇಶದ ಏಳಿಗೆಗೆ ಮುಖ್ಯ ಸಾಧನವು ಖಾದಿಯೇ ಆದುದು ಎಂತ ಹೇಳಿರುತ್ತಾರೆಂತಲೂ, ಅಂಗಡಿಯ ಮಾಲಿಕರು, ನಿಜಾಮರಾಜ್ಯದ ದಬ್ಬಾಳಿಕೆಯ ದೆಸೆಯಿಂದ ಅಲ್ಲಿಂದ ಹೊರಗೆ ಕಳುಹಿಸಲ್ಪಟ್ಟರೂ, ಅವರು ಎದೆಗುಂದದೆ ರಾಷ್ಟ್ರೀಯ ಚಳವಳದಲ್ಲಿ ತಮ್ಮಿಂದಾಗುವ ಸಹಾಯವನ್ನು ಮಾಡುತ್ತಾರಾಗಿಯೂ, ಈ ಸ್ಟೋರ್ಸ್ ಜನತೆಯ ಅಭಿರುಚಿಗೆ ತಕ್ಕುದಾದ ಎಲ್ಲಾ ತರದ ಖಾದಿಯನ್ನು ಒದಗಿಸಿ ಕೊಡುವುದೆಂದು ತಾನು ನಂಬಿದ್ದೇನೆಂದೂ ಅಲ್ಲದೆ ಸ್ಟೋರ್ಸಿನ ಯಜಮಾನರು ತನ್ನ ಪತಿಯ ಶಿಷ್ಯರಲ್ಲಿ ಒಬ್ಬರಾಗಿದ್ದುದರಿಂದ ತನಗೆ ಈ ಭಂಡಾರವನ್ನು ತೆರೆಯುವುದರಲ್ಲಿ ತುಂಬಾ ಸಂತೋಷವಾಗುತ್ತದೆಂದೂ ಮತ್ತು ಇಂಥಾ ಸಂಸ್ಥೆಯು ಚಿರಕಾಲ ಜನರ ಪ್ರೀತಿಗೆ ಪಾತ್ರವಾಗಿ ಬಾಳಲೆಂದೂ ಹೇಳಿ ಹರಸಿ ಅವರ ಸರಳವಾದ ಭಾಷಣವನ್ನು ಸಮಾಪ್ತಿಗೊಳಿಸಿದರು.

ಅನಂತರ ಮೆರವಣಿಗೆಯು ಪಟ್ಟಣವನ್ನು ಸುತ್ತಿ, ರಾಷ್ಟ್ರೀಯ ವಿದ್ಯಾಮಂದಿರಕ್ಕೆ ಬಂದು ಸೇರಲು ಅಲ್ಲಿ ಶ್ರೀಮತಿ ದೇವಿಯವರು ಮುಕ್ಕಾಲು ತಾಸಿನ ವರೆಗೆ ಒಂದು ವ್ಯಾಖ್ಯಾನವನ್ನು ಮಾಡಿದರು. ಅವರ ಭಾಷಣದಲ್ಲಿ ಖಾದಿಯು ಹಿಂದುಸ್ಥಾನದ ಬಡತನವನ್ನು ನಿವಾರಿಸಲು ಒಂದು ಮಹತ್ವವಾದ ಸಾಧನವೆಂದೂ, ರಾಷ್ಟ್ರೀಯ ಶಿಕ್ಷಣದ ಅವಶ್ಯಕತೆಯನ್ನೂ, ಹಿಂದೂ ಮುಸಲ್ಮಾನರ ಐಕ್ಯದ ಮಹತ್ವವನ್ನೂ ಮತ್ತು ಪಾಪಕರವಾದ ಅಸ್ಪೃಶ್ಯತೆಯ ನಿವಾರಣೆಯನ್ನು ಏಕೆ ಹೋಗಲಾಡಿಸಬೇಕೆಂದೂ ವಿವರಿಸಿ ಹೇಳಿದರು.

ಆ ಮೇಲೆ ಅವರು ಊಟವನ್ನು ತೀರಿಸಿ ಶ್ರೀಯುತ ಕಾರ್ನಾಡ ಸದಾಶಿವರಾಯರೊಡನೆ ಮೋಟರ್‌ಕಾರಿನಲ್ಲಿ ಕಾರ್ಕಳಕ್ಕೆ ತೆರಳಿದರು.

ಶ್ರೀಮತಿ ಸರೋಜಿನಿ ದೇವಿಯರ ಭಾಷಣ.

ಸ್ನೇಹಿತರೆ,

ಅಧ್ಯಕ್ಷರೇ, ಸ್ನೇಹಿತರೇ ಎಂದು ನಾನು ಸಂಬೋಧಿಸಬೇಕಾಗಿತ್ತು. ಆದರೆ ಅಧ್ಯಕ್ಷರ ಅಭಾವದಿಂದ ಹೀಗೆಂದು ನನಗೆ ಅನ್ನಲಾಗುವುದಿಲ್ಲ. ಅಗ್ರಾಸನಾಧಿಪತ್ಯವನ್ನು ವಹಿಸಿಕೊಳ್ಳಲು ಅರ್ಹತೆಯನ್ನು ಹೊಂದಿದವರು ಇಲ್ಲದ ಕಾರಣದಿಂದಲೋ ಅಥವಾ ಇಲ್ಲಿ ನೆರೆದಿದ್ದವರ ಪೈಕಿ ಚಿಕ್ಕವರಿಂದ ಮೊದಲುಗೊಂಡು, ಸರ್ವರೂ ಸಮಾನಶ್ರೇಷ್ಠರಾಗಿ ಅವರಲ್ಲಿ ಮುಖ್ಯ ಶ್ರೇಷ್ಠರನ್ನು ಕಂಡು ಹಿಡಿಯುವುದಕ್ಕೆ ಕಷ್ಟಸಾಧ್ಯವಾದ ಕಾರಣದಿಂದಲೋ ಅಥವಾ ಇತರ ಯಾವ ಕಾರಣದಿಂದ ಅಧ್ಯಕ್ಷರನ್ನು ಚುನಾಯಿಸಲಿಲ್ಲ- ಎಂದು ನನಗೆ ಅನ್ನಿಸುವುದಿಲ್ಲ.

ನಾನು ನನ್ನ ಪರಿಚಯವನ್ನು ಹೊಸತಾಗಿ ಮಾಡಿಕೊಡತಕ್ಕ ಅಗತ್ಯವಿರುವುದಿಲ್ಲ. ಇದೇ ಸ್ಥಳದಲ್ಲಿ ನಿಂತುಕೊಂಡು ಒಂದು ವರ್ಷದ ಹಿಂದೆ ನಿಮ್ಮೊಡನೆ ಮಾತಾಡಿದ ನೆನಪು ನನಗೆ ಈಗ ಬರುತ್ತದೆ. ಇಂಥಾ ಒಂದು ಸಂವತ್ಸರ ಕಾಲದೊಳಗಾಗಿ ಅನೇಕ ಅನಾಹುತಗಳು ದೇಶದಲ್ಲಿ ಮೊಳೆತುಗೊಂಡಿರುವುವು. ನಾನು ಈ ಸ್ಥಳವನ್ನು ಬಿಟ್ಟುಹೋದ ಒಡನೆಯೇ ಮಹಾತ್ಮಾಗಾಂಧಿಯವರು ಕೈದುಮಾಡಲ್ಪಟ್ಟು, ಬಂಧಿಸಲ್ಪಟ್ಟರು. ಇದು ಆರು ವರ್ಷ ಕಾಲದ ಪರಿಯಂತರವಂತೆ.

ಈ ಶಾಂತಮೂರ್ತಿಯನ್ನು ಕಾರಾಗೃಹವಾಸಕ್ಕೆ ಗುರಿಮಾಡಲ್ಪಟ್ಟನಂತರ ದೇಶವಲ್ಲೆಲ್ಲಾ ವಿಪತ್ತಿ ಭಾವವೇ ನಲಿಗೊಂಡಿತು. ಇದೂ ಸಾಲದಕ್ಕೆ ಅನೈಕ್ಯತೆಯು ಹಬ್ಬಲು ಪ್ರಾರಂಭವಾಯಿತು. ಆದರೆ ಮಹಾತ್ಮರಿಂದ ಹಚ್ಚಲ್ಪಟ್ಟ ಜ್ಯೋತಿಯು ಎಷ್ಟು ಒಬ್ಬ ಪ್ರವರ್ತಕನಾದರೂ ಜೀವದಿಂದ ಇರುವವರೆಗೆ ದೇಶದಲ್ಲಿ ಎಂದೂ ನಂದಿಹೋಗಲಾರದು. ಮಹಾತ್ಮರು ಸೆರೆಹಿಡಿಯಲ್ಪಟ್ಟನಂತರ ನಾನು ದೇಶದಲ್ಲಿ ಅತ್ತ ಇತ್ತ ಹೋದ ವೇಳೆ ಜನರು ಹೀಗನ್ನುತಿದ್ದರು. "ಬಾರದೋಲಿಯು ನಮ್ಮನ್ನು ಕೊಂದಿತು" ಅದಕ್ಕೆ ನಾನು "ಈ ಒಂದು ಬಾರದೋಲಿಯಲ್ಲ ಸಾವಿರ ಬಾರದೋಲಿಗಳು ಕೂಡ ನಮ್ಮನ್ನು ಹತಗೈಯ್ಯಲಾರವು" ಎಂದು ಪ್ರತ್ಯುತ್ತರವನ್ನು ಕೊಟ್ಟೆನು. ಜನರು ಬಾರದೋಲಿಯ ವಿಧಾಯಕ ಕ್ರಮದ ರಹಸ್ಯವನ್ನು ತಿಳಿಯದೇ ಇದ್ದದ್ದೇ ಇಂಥಾ ಪ್ರಶ್ನೆಗಳಿಗೆ ಕಾರಣವೆನ್ನಬೇಕು. ಈ ಚತುರ್ಧಾರೆಯಿಂದ ಕೂಡಿದ ಖಡ್ಗವು ಚತುರ್ಮುಖವುಳ್ಳ ಗುಲಾಮಗಿರಿಗೆ ಸರಿಯಾದ ಆಯುಧವಾಗಿರುವುದು. ಸಂಯುಕ್ತ ಸಂಸ್ಥಾನದಲ್ಲಿ ಒಂದು ತಂಡದ ಜನರು ವಿಧಾಯಕಕಾರ್ಯಕ್ರಮದಿಂದ ಸ್ವರಾಜ್ಯ ಪ್ರಾಪ್ತಿಯಾಗುವುದು ಪೂರ್ಣ ಅಸಂಭವನೀಯವೆಂದು ಹೇಳುತ್ತಿದ್ದಾರೆ. ಆದರೆ ನಾನು ಸ್ವತಃ ಆ ಸಂಸ್ಥಾನಕ್ಕೆ ಹೋಗಿದ್ದ ವೇಳೆಯಲ್ಲಿ ಅಲ್ಲಿ ಒಬ್ಬ ಚಿಕ್ಕ ಹುಡುಗನು ನಾನು ಕೇಳಿದಾಗ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತುವವರಲ್ಲಿ ಅವನಿಗಿದ್ದ ವಿಶ್ವಾಸವು ನನಗೆ ಇವರ ಮಾತನ್ನು ಅಲ್ಲಗಳೆಯುವುದಕ್ಕೆ ಪ್ರೇರೇಪಿಸುವುದು. ವಿಧಾಯಕ ಕಾರ್ಯಕ್ರಮವು ನಮ್ಮ ಸಾಮಾಜಿಕ ರಾಜಕೀಯ ಹಾಗೂ ಮೋಧಶಕ್ತಿಗಳ ಪುನರುಜ್ಜೀವನಾರ್ಥವಾಗಿಯೇ ಏರ್ಪಡಿಸಲ್ಪಟ್ಟಿರುತ್ತದೆ ಎಂತ ನನ್ನ ನಂಬಿಕೆ ಆಗಿರುತ್ತದೆ. ಅದು ವಿಚಿತ್ರವಾಗಿ ಸುಲಭವೂ ಕಷ್ಟವೂ ಆಗಿರುವುದು.

ಈ ಹೋರಾಟದಲ್ಲಿ ನಾವು ಪರಾಜಿತರಾದರೆ ತಪ್ಪು ಎಂದಿಗೂ ಈ ತತ್ವದ ಮೇಲೆ ಇರಲಾರದು. ಆದರೆ ಇದಕ್ಕೆ ಜನರು ಹಚ್ಚಿದ ಅನರ್ಥದ ದೋಷದಿಂದಲೇ ಅನ್ನಬೇಕಾಗುವುದು. ಇಂಥಾ ಅರ್ಥಭೇದಗಳು ಬೇರೆ ಬೇರೆ ತತ್ವಗಳ ವಿರೋಧಭಾವಕ್ಕೆ ಕಾರಣವು. ಈಗ ದೇಶದಲ್ಲಿ ಇಂಥಾ ಅರ್ಥ ಭೇದದಿಂದ ಉಂಟಾಗತಕ್ಕ ಅನಾಹುತಗಳಿಗೂ ಅನೈಕ್ಯತೆಗೂ ತನ್ನ ಉಚ್ಚತತ್ವಾರ್ಥಗಳನ್ನು ತಾನೇ ಆಚರಿಸಿತೋರಿಸತಕ್ಕ ಆ ಪ್ರಚಂಡ ಮೂರ್ತಿಯ ಅಭಾವವೇ ಕಾರಣವು. ನಾವು ಈ ರೀತಿಯಾಗಿ ದೇವದತ್ತನಾದ ಈ ಗುರುವಿನ ತತ್ವಗಳಿಗೆ ಅರ್ಥಕಟ್ಟಬಹುದೇ?

ಕಾಂಗ್ರೆಸು ಎಂಬುದು, ಪಕ್ಷಭೇದದಿಂದ ಕೂಡಿರಲಿ, ಹಿಂದೂ ಮುಸಲಮಾನ ಎಂಬ ಈ ಎರಡು ಭಿನ್ನ ಮತಗಳಿಂದ ಕೂಡಿದ್ದಾಗಿರಲಿ, ಅದು ಒಂದೇ ಅಂಗವಿಹೀನವಾದ ಸಂಸ್ಥೆಯೆಂದು ನಾನು ತಿಳಿಯುತ್ತೇನೆ. ಈಗ ಪ್ರಮುಖ ಸೇನಾನಿಗಳೊಳಗೆ ಉಂಟಾದ ಭಿನ್ನವು ಶೋಚನೀಯವಾದರೂ ಅವುಗಳನ್ನು ಬೇಗನೇ ದುರುಸ್ತಿಗೊಳಿಸಬಹುದು.

ನಾನು ಪಂಜಾಬಿನಲ್ಲಿ ಎರಡು ತಿಂಗಳ ಕಾಲವನ್ನು ಕಳೆದೆನು. ಪಂಜಾಬಿನ ಪ್ರಕೃತ ಪ್ರಾಬಲ್ಯವನ್ನು ಉಂಟುಮಾಡುತ್ತಿರುವ ಪರಿಸ್ಥಿತಿಯನ್ನು ಪರೀಕ್ಷಿಸಿದರೆ, ಇದರ ಮೂಲಕಾರಣವು ಮಲಬಾರದಲ್ಲಿ ಮೊಳೆತಿರುವುದು ಎಂತ ನನಗೆ ಹೊಳೆಯುವುದು. ಕಲ್ಪವೃಕ್ಷಕ್ಕೆ ಪ್ರಸಿದ್ಧತೆಯನ್ನು ಹೊಂದಿದ ಪಶ್ಚಿಮ ಕರಾವಳಿಯಲ್ಲಿ ಈ ಕಲಹದ ಬೀಜವು ಬಿತ್ತಲ್ಪಟ್ಟು ಇದರ ಫಲವು ಮರದ ತುದಿಯಾದ ಪಂಜಾಬು ಪ್ರಾಂತ್ಯಗಳಲ್ಲಿ ಕಾಣಿಸಿಕೊಳ್ಳುವುದು ಆಶ್ಚರ್ಯಕರವಲ್ಲ.

ಇಂಥಾ ಅತ್ಯಾಚಾರವು ನಿಮ್ಮ ಮನೆ ಬಾಗಿಲಲ್ಲಿಯೇ ನಡೆಯುತ್ತಿರುವ ಕಾಲದಲ್ಲಿ ಅದರ ಜವಾಬ್ದಾರಿಕೆಯನ್ನು ನೀವು ಸುಲಭದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಇಡೀ ಭರತಖಂಡಕ್ಕೆ ಸಂಗೀತ ವಿದ್ಯೆಯನ್ನು ಕಲಿಸಿಕೊಟ್ಟ ನಾವು ಕರ್ನಾಟಕಸ್ಥರು ಮಲಬಾರದ ಮುಸಲಮಾನರ ನಿಜಭ್ರಾತೃಗಳಾಗಿದ್ದ ಅಲ್ಲಿಯ ಹಾವಳಿಯನ್ನು ಕೊನೆಗಾಣಿಸುವುದಕ್ಕೆ ನಮ್ಮ ಮೇಲೆ ಇರತಕ್ಕ ಜವಾಬ್ದಾರಿಯನ್ನು ನಾವು ಎಂದೂ ತಪ್ಪಿಸಿಕೊಳ್ಳಲಾಗುವುದಿಲ್ಲ. ಈ ಎರಡು ಮತಗಳ ಐಕ್ಯ ವಿನಹ ಸ್ವರಾಜ್ಯವಾದರೋ ಕನಸ್ಸಿನ ಗಂಟು. ವ್ಯರ್ಥವೇ ಈ ಜಗಳಕ್ಕೆ ಕಾರಣವು. ನಿಮ್ಮ ಪೂರ್ವಿಕರಿಂದ ಆತಿಥ್ಯವನ್ನು ಹೊಂದಿ ಇಲ್ಲಿಗೆ ಬಂದು ನೆಲೆಗೊಳಿಸಿದ ನಿಮ್ಮ ಈ ಬಂಧುಗಳನ್ನಾದರೂ ಈಗ ಆತಿಥ್ಯದಿಂದ ನೋಡಲಾರಿರಾ? ಇಸ್ಲಾಮ್ ಹಿಂದೂ ದೇಶಕ್ಕೆ ಪ್ರಜಾಧಿಪತ್ಯ ಕಲಾಕೌಶಲ್ಯ ಮುಂತಾದ ಅಮೂಲ್ಯ ಪದಾರ್ಥಗಳನ್ನು ಒದಗಿಸಿದುದು ಮರೆತುಹೋಯಿತೆ? ನಿಮ್ಮ ಪೂರ್ವಜರಾದರೋ ಅವರ ಧರ್ಮದ ರಹಸ್ಯವನ್ನು ಕಂಡು ಹಿಡಿದು ಅವರನ್ನು ಭ್ರಾತೃಭಾವದಿಂದ ನೋಡತೊಡಗಿದರು.

ದಾಕ್ಷಿಣಾತ್ಯ ಭಾರತೀಯರೇ ನಿಮ್ಮ ಮನಸ್ಸಿನ ಕಳಂಕ ಬುದ್ಧಿಯನ್ನೂ, ವಕ್ರ ಸ್ವಭಾವವನ್ನೂ ಮತಸಮ್ಮತವಲ್ಲದ ಆಚಾರಕ್ಕಾಗಿ ಹೋರಾಡುವುದನ್ನೂ ಒಮ್ಮೆಯೇ ದೂರಮಾಡಿ ನಿಮ್ಮ ಧರ್ಮದ ನಿಜತ್ವವನ್ನು ಅರಿತು ಔದಾರ್ಯವನ್ನು ಮನದೊಳಗೆ ಉದಯಿಸಿಕೊಂಡು ದೇಶದ ಅಭ್ಯುದಯವನ್ನು ಹಾಳುಮಾಡುತ್ತಿರುವ ಈ ಅನೈಕ್ಯತೆಯನ್ನು ದೂರೀಕರಿಸಿರಿ. ನೀವು ಯಾವ ಪಕ್ಷದವರೇ ಆಗಿ ಮೊಡರೇಟರಾಗಲಿ, ಅಸಹಕಾರಿಗಳಾಗಲಿ, ಅಥವಾ ರಾಷ್ಟ್ರೀಯರಾಗಲಿ ನಾನು ಅದನ್ನು ಲಕ್ಷಿಸೆನು. ಭಿನ್ನತ್ವಕ್ಕೆ ನಾನು ಮರ್ಯಾದೆ ಕೊಡುವವಳಲ್ಲ. ನಾವು ಸರ್ವಪಕ್ಷದವರೂ ಹಿಂದುಸ್ಥಾನ ಸ್ವಾತಂತ್ರ್ಯದೇವಿಯ ಹಲವು ಅಂಗಗಳಾಗಿರುತ್ತೇವೆ. ಪಂಗಡಗಳೆಲ್ಲವೂ ಹಿಂದಿ ಸ್ವಾತಂತ್ರ್ಯದ ಕೇಂದ್ರಸ್ಥಾನದ ಕಡೆಗೆ ದಿಟ್ಟಿಸಿಕೊಂಡಿರುವ ವೇಳೆ ನಾವು ಭಿನ್ನಸಂಕುಲದವರು ಎಂದು ಹೇಳಿದರೆ ನಾನು ಆ ಮಾತಿಗೆ ಒಪ್ಪಲಾರೆನು.

ಪಂಜಾಬಿನಲ್ಲಿ ಮತ್ತು ಮುಲ್ತಾನದಲ್ಲಿ "ಹಿಂದೂಮುಸಲ್ಮಾನ ಐಕ್ಯ ಎಂದು ಹೇಳುತ್ತಿರಲ್ಲವೇ? ಅದಕ್ಕಾಗಿ ನಾವು ಇಷ್ಟು ಪೇಚಾಟ ಪಟ್ಟದ್ದು ಸಾಲದೇ ಇನ್ನೂ ನಾವು ಹೆಚ್ಚಿಗೆ ಕಷ್ಟಪಡಬೇಕೆ?" ಎಂದು ನನ್ನನ್ನು ಪ್ರಶ್ನಿಸಿದರು. ನನ್ನ ಉತ್ತರವಾದರೂ ಅದಕ್ಕೆ ಹಿಂದೂಗಳು ತಮ್ಮ ಜೀವವನ್ನು ಹಿಂದಿಮಾತೆಯ ಅರ್ಪಣೆಗಾಗಿ ಸರ್ವದಾ ಇಟ್ಟಿರಬೇಕು. ಬಲವಂತನೂ, ಹಿರಿಯವನೂ ಆದವನು ಅಲ್ಪ ಸಂಖ್ಯಾತರಾದವರನ್ನು ಧೀರರಿಗೆ ಭೂಷಣವಾದ ದಯಾಬುದ್ಧಿಯಿಂದ ರಕ್ಷಿಸುವುದರಲ್ಲಿ ಪ್ರವೃತ್ತಿಸಬೇಕು. ಈಗ ಮುಸಲ್ಮಾನರಿಗೆ ನನ್ನ ಸಂದೇಶವನ್ನು ಹೇಳತೊಡಗುವೆನು. ಮುಸಲ್ಮಾನರನ್ನು ನಾನು ಹೊಗಳುವಷ್ಟೇ ನಿಂದಿಸಿಯೂ ಕೂಡ ಮಾತಾಡುವೆನು. ಈಗ ನಿಮ್ಮ ರಮಜಾನ ತಿಂಗಳು ನಡೆಯುತ್ತಿರುವುದು. ನೀವು ಪರಮಾತ್ಮನ ಧ್ಯಾನದಲ್ಲಿ ಲೀನರಾದ ಕಾಲದಲ್ಲಿ ನಿಮ್ಮ ಧರ್ಮಸ್ಥಾಪಕನ ಉಚ್ಚ ಉದ್ದೇಶಗಳನ್ನು ಮನಸ್ಸಿಗೆ ತಂದುಕೊಳ್ಳಿರಿ. ತಮ್ಮ ಖರ್ಜೂರದ ಸೋಗೆಗಳನ್ನು ತೆಂಗಿನ ಸೋಗೆಗಳ ಬದಲಿಗೆ ಕೊಂಡುಕೊಳ್ಳುವುದಕ್ಕಾಗಿ ಬಂದ ಆ ಅರಬೀಯವರ ಉದ್ದೇಶ ಅಥವಾ ಜವಾಬ್ದಾರಿಕೆಯಾದರೋ ಏನಿರಬಹುದು. "ಲಾ ಇಲಾಹ ಇಲ್ ಅಲ್ಲಾಹ" ಎಂಬ ಇಸ್ಲಾಮ ಮಂತ್ರಗಳನ್ನು ಇಲ್ಲಿಯ ವೈದಿಕ ಮಂತ್ರದೊಡನೆ ಕೂಡಿಸಿ ಅದರಿಂದ ಐಕ್ಯತೆಯನ್ನೂ ಪ್ರಜಾಧಿಪತ್ಯದ ಮೂಲಸೂತ್ರಗಳನ್ನೂ ಬಿತ್ತಬೇಕೆಂಬ ಉದ್ದೇಶವಲ್ಲದೆ ಬೇರೇನಲ್ಲವೆಂದು ನಿಮ್ಮ ಜಾಗ್ರತೆಯಲ್ಲಿರಲಿ.

"ಶಕ್ತಿಯಿಂದಲ್ಲ, ಅನುರಾಗದಿಂದ ಜಯಿಸು" ಎಂಬ ಉಚ್ಚ ಉಕ್ತಿಯನ್ನು ನೀವು ಮರೆತು ಬಿಟ್ಟಿರಾ, ಪ್ರಜಾನುರಾಗ, ದಯಾಬುದ್ಧಿ ಮುಂತಾದವುಗಳನ್ನು ಸಾರಿ ಹೇಳುತ್ತಿರುವ ನಿಮ್ಮ ಇಸ್ಲಾಮ ಮತಧರ್ಮವನ್ನು ಸರಿಯಾಗಿ ಸರ್ವರಿಗೂ ಬೋಧಿಸದೆ ಇಸ್ಲಾಮದ ಹೆಸರಿನಿಂದ ಅದು ಪೂರ್ಣವಾಗಿ ನಿಂದಿಸುವ ಜಗಳ ಮುಂತಾದವನ್ನು ಹೂಡಿ ಇಸ್ಲಾಮದ ಪವಿತ್ರಧರ್ಮವನ್ನಾದರೋ ನೀವು ಯಾತಕ್ಕೆ ಸೂರೆಗೈಯ್ಯುವಿರಿ. ಆ ಧರ್ಮವನ್ನು ಈ ರೀತಿಯಾಗಿ ದಂಡ್ಯ ಪಡಿಸುವುದಕ್ಕಾದರೋ ನಿಮಗೇನು ಅಧಿಕಾರವಿರುವುದು? ನಿಮ್ಮ ಈ ವರ್ತನದಿಂದ ಘೋರಿಯಲ್ಲಿಟ್ಟಿರುವ ನಿಮ್ಮ ಮತಸ್ಥಾಪಕನ ಎಲುಬುಗಳಾದರೋ ಶಾಂತಿಯಲ್ಲಿರುವುದು ಎಂದು ನಂಬುವಿರಾ! ಮುಸ್ತಾಫ ಕೆಮಾಲಪಾಶರಿಂದಲೋ ಅನೈಕ್ಯತೆಗೆ ಒಳಗಾದ ಹಿಂದೂಸ್ಥಾನದಿಂದ ಸಹಾಯವನ್ನೂ ತೆಗೆದುಕೊಳ್ಳಲು ಉಪೇಕ್ಷೆಮಾಡಲಾರರೇ! ೨೨ಕೋಟಿ ಹಿಂದೂ ಜನಗಳು ನಿಮ್ಮ ಖಿಲಾಫತ್ತಿನ ಸ್ವಾತಂತ್ರ್ಯಕ್ಕಾಗಿ ಸೊಂಟಕಟ್ಟಿದ್ದಾದರೂ ನಿಮ್ಮನ್ನು ನಾಚಿಕೆಗೊಳಿಸುವುದಿಲ್ಲವೇ? ನಿಮ್ಮ ಈ ವರ್ತನದಿಂದ ನಮ್ಮ ನಿಮ್ಮ ತಾಯಿಯ ಮೇಲೆ ಬಗಿಸಲ್ಪಟ್ಟ ಸರಿ ಸಂಕೋಲೆಗಳನ್ನು ಇನ್ನಷ್ಟು ಭದ್ರಪಡಿಸಿದಂತಾಗುವುದಿಲ್ಲವೇ? ಇನ್ನು ನಾಲ್ಕು ದಿನಗಳಲ್ಲೇ ಅಮಾವಾಸ್ಯೆಯೂ ಬರುವುದು. ನಮ್ಮನ್ನು ನೋಡಿ ನಗಾಡುತ್ತಿರುವ ಲೋಕದ ಜನರಿಗೆ ಮಹಾತ್ಮಾಜೀಯವರ ಕಾರ್ಯಕ್ರಮವನ್ನು ಕೈಕೊಂಡು ಆ ಕಾರ್ಯಕ್ರಮದ ಸಾಧ್ಯತೆಯನ್ನು ಕಾರ್ಯತಃ ಮಾಡಿ ತೋರಿಸಿರಿ. ಇದ್‌ಉಲ್‌ಫಿತ್ರ್ ಹಬ್ಬದ ದಿನ ಕೈಯಿಂದಲೇ ನೂಲಲ್ಪಟ್ಟ ಕೈಯಿಂದಲೇ ನೇಯಲ್ಪಟ್ಟ ಖಾದಿ ಬಟ್ಟೆಯನ್ನೇ ಧರಿಸಿ ನಿಮ್ಮ ಭಗಿನಿ, ತಾಯಿ, ಹೆಂಡಂದಿರಿಗೆ ಪವಿತ್ರವಾದ ಖಾದಿಯನ್ನೇ ಉಡಿಸಿ, ದೇಶದಲ್ಲಿ ಅನ್ನಕಾಣದೆ ಸಾಯುತ್ತಿರುವ ದರಿದ್ರರಿಗೆ ಅನ್ನದಾನ ಮಾಡಿದ ಪುಣ್ಯಫಲವನ್ನಾದರೂ ಗಳಿಸಿರಿ. ನಿಮ್ಮ ಮತಸ್ಥಾಪಕನ ಮಗಳಿಗೆ ಆದ ಖಾದಿ ಬಟ್ಟೆಯು ನಿಮಗೂ ನಿಮ್ಮ ಮಹಿಳೆಯರಿಗೂ ಆಗಲಾರದೇ? ಐಕ್ಯಮತವೆಂಬ ಪಂಚಪಾತ್ರೆಯಿಂದ ಹಿಂದೀ ಸ್ವಾತಂತ್ರ್ಯವೆಂಬ ಅಮೃತವನ್ನು ಎರಡು ಮತದವರು ಬಂಧುಭಾವದಿಂದ ಸೇವಿಸಿ ಇದರ ಫಲರೂಪವಾಗಿ ದೇಶಾನುರಾಗ ಐಕ್ಯತೆ ಮತ್ತು ಶಾಂತಿ ಇವುಗಳು ನಿಮ್ಮ ಹೃದಯದಲ್ಲಿ ಸದಾ ನೆಲಸಲೆಂದು ನನ್ನ ಪ್ರಾರ್ಥನೆಯಾಗಿರುತ್ತದೆ.

NOTICE.

Candidates for Scholarships from the "Ammembal Subraya Pai Memorial Fund" are requested to send their applications so as to reach the undersigned by the 28th May 1923.

M. Madhava Rau. B. A. B. L.
Secretary,
A. SUBRAYA PAI, MEMORIAL FUND,
Mangalore.
14—5—'23.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ನಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ಯಾವಂತರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥವಲ್ಲಿ "ಜೀವಗೀತ" "ಆತ್ಮಗೀತ" "ದೇವರೆಲ್ಲಿ" ಎಂಬ ಆಂಗ್ಲಕವಿತೆಗಳ ಭಾಷಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾಸಂಚಿಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಸ್ತೂರಿ ದೊರೆಯುವುದು.

ವಿಳಾಸ—ಮ್ಯಾನೇಜರ್,
ಕರ್ನಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!
ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,
ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇವರಂತೆ ಪುರುಷರಲ್ಲಿಯೂ ಬೇಧ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ, ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಖರೀದಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಭೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ
ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಅನ್ಯ ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ.
ಶ್ರೀನಿವಾಸ ರಂಗಪೈ
ರಥಬೀದಿ, ಮಂಗಳೂರ

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0
Reserve and other sinking Funds „ 205,250—0—0
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 205,250—0—0
THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.
Canara Bank Ltd.,
Mangalore, 12th Feb. 1923.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ! ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತಾ ಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಚಳಿ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ಕಡಿನೋವು, ಕರುಳಿನ ಬೇನೆ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲ್ಯುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಏಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅತ್ಯಂತ ಶಕ್ತಿಯುಳ್ಳವು.

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಿಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾಗಿವೆ. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರುತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.
ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೭—೧೯೨೧) ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನ್ನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ.

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0—12—0	ಶಂಕರರಾಮಾಯಣ ಹೊಸ ಮುದ್ರಣ .	5—0—0
ಸಂತಾಪಕ-ಕಾದಂಬರಿ	0—6—0		
ಚಂದ್ರಮತಿ ,,	0—8—0	ಶಂಕರರಾಮಾಯಣದ ಕಥೆ ವಚನ .	0—12—0
ರಾಜಪುತ್ರರಮಣಿಯರು	0—8—0	S. S. L. C. Kannada Texts	
		ಹರಿದಾಸಿ . .	0—5—0
ಕೆಲವು ಸತ್ಯ ಕಥೆಗಳು	1—0—0	ಸುಶೀಲೆ . .	0—6—0
ರಾಜಯೋಗ . .	1—0—0	ಅಡವಿಯ ಹುಡುಗಿ .	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ. ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಜಿಟರಿ,
ಮಂಗಳೂರು.

ಶುದ್ಧವಾದ ಖಾದರ್ ರೇಶ್ಮೆ ಮಡಿಗಳು.
ಸುಲಭ ಕ್ರಯಕ್ಕೆ ಪಾತ್ರಿಯಾದ ಎಲ್ಲಾ ರಂಗಿನಲ್ಲಿ ದೊರಿಯುವ ಮಡಿ ಯಾವುದು ? ಖಾದರ್ ರೇಶ್ಮೆ ಮಡಿ.

18 ಮೊಳ ಉದ್ದ 2½ ಮೊಳ ಅಗಲ ರೂ. 20ರಿಂದ 35, 16 ಮೊಳ—2½—ರೂ. 19ರಿಂದ 35, 8 ಮೊಳ ಉದ್ದ 2½ ಮೊಳ ಅಗಲ ರೂ. 9ರಿಂದ 15 ವರೆಗೆ, 6 ಮೊಳ ಉದ್ದ 2½ ಮೊಳ ಅಗಲ ರೂ. 7ರಿಂದ 11. ಅಂಗಿ ಬಟ್ಟೆಗಳು 14 ಮೊಳ ಉದ್ದ 2 ಮೊಳ ಅಗಲ 18ರಿಂದ 36 ಉತ್ತಮ ತರ 14 ಮೊಳ ಉದ್ದ 2ಅಗಲ—28ರಿಂದ 36 ಷರ್ಟ್ ಬಟ್ಟೆ 18ಮೊಳ ಉದ್ದ 2 ಮೊಳ ಅಗಲ 15ರಿಂದ 37, ಪೇಟ 11 ಮೊಳ ಉದ್ದ 1½ ಮೊಳ ಅಗಲ ರೂ. 9ರಿಂದ 15, ಇದು ವಿನಹ ಬೇರೆ ಸಾಮಾನುಗಳ ಕೇಟಲಾಗು ಇದೆ.

ವಿಳಾಸ—
ಶಿರೋಮಣಿ ಉಡ್ಪಿ, ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible]. ಕಾಶಿ ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಹುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶಿಲೆ ಒಂದರ ಕ್ರಯಃ—ರೂ. 1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸಃ— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪೆತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ ಮೊಳ ಅಗಲವಿರುವವು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ದಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1	ರೂ. 6—8—0
„ 2	„ 7—8—0

ವಿಳಾಸಃ—ಎಸ್. ಆರ್. ಕೃಷ್ಣ ಎಂಡು ಕೊ,
1, ತಂಬುನಾಯಕನ ಬೀದಿ, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶಿವ್ಯಾಪಾರಿ
ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ	ರೂ. 3—4—0
ಕೆ. 1 („ 24) „	„ 2—0—0

ಫೋಸ್ಟು ಪೇಕಿಂಗ್ ಚಾರ್ಜು ಸಮ್ಮೆತು

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 3-0-0.

ಸ್ವಂತ ಖರ್ಚಿಗೆ ತರಿಸುವವರು ಫೋಸ್ಟ್ ಪೇಕಿಂಗ್ ಚಾರ್ಜು ಕೊಡಬೇಕಾಗುವುದು.

ನಶ್ಯ ಒಂದೇ ತರದ್ದು.

ಎಲಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಬೇಕಾಗಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಯೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಟೋನಿಯೊ ಅಂಡ್ ಕೊ
ಫೋಸ್ಟುಬಾಕ್ಸು ನಂಬ್ರ 85 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು,

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮಹಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿಒಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷನಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನಪಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿಒಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಂತಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯವರು ತರಿಸಿ ನೋಡಬೇಕೆಂದು ಇದರ ಬೆಲೆ ಕೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರುಃ
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು —
— ಟೈಪ್ ಫೌಂಡ್ರಿ

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ್, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟಿನುಗಳೂ, ಯಿನಾಮಲ್ಲು ಬಟ್ಟಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಪ್ಪ, ಖಾಲಿ ಕವರು ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

ಆರ್. ಮಾರ್ಟಿನ್ಸರ ಲಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆ ಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ಸರ ಗಿಟೋಡೆಯಿನ್.

ನಾಗಪುರ ಸತ್ಯಾಗ್ರಹ ಹೋರಾಟ:—ಈ ಹೋರಾಟವು ಈಗ ಬಹಳ ರಭಸದಿಂದ ನಡೆ[illegible]ದೆ. ಸ್ವಯಂಸೇವಕರ ಸಹಾಯವು ಆಯಾ ಕಡೆಗಳಿಂದ ಬಂದು ಸೇರುತ್ತಿದೆ. ಚಾಲಾಹಾಸ ಎಂಬಲ್ಲಿಂದ ೭೩ ಮಂದಿ ಸ್ವಯಂಸೇವಕರು ಮಿ| ಫೇದರ [illegible] ರಾಯಿ ಸಾಹೇಬರನ್ನು ಕೂಡಿಕೊಂಡು [illegible]ಲ್ ಸತಾರ ಮತ್ತು ಮಿ| ಅಬ್ದು[illegible] ಘಾಟ ಎಂಬಲ್ಲಿ ೬೦೦ ಮಂದಿ ಸ್ವಯಂ[illegible] ನಾಗಪುರಕ್ಕೆ ತಲ್ಪಿರುತ್ತದೆ. ಬಾಲಾ[illegible] ಕೂಡಲೇ ಹೊರಟುಹೋಗಲು ಸಿದ್ಧರಾಗಿ[illegible] ಕೂಡಿ ನಾಗಪುರಕ್ಕೆ [illegible]ಟಿಯ ಸೆಕ್ರೆಟರಿಯವರು ಇವರನ್ನು ಸ್ವಲ್ಪ ಕಾಲವು [illegible] ಕೋಂಗ್ರೆಸ ಕಮಿ[illegible]ರಾಗುವುದೆಂದು ತಿಳಿಸಿದರೂ ಇವರಲ್ಲಿ ಅನೇಕರು [illegible] ಬಳಿಕ ಕಳುಹಿ[illegible] ಹೊರಟಿರುವರು. ಸ್ವಯಂಸೇವಕರನ್ನು ಜನರು ಸಂತೋಷದಿ[illegible] ಹೋಗಲು ಸಮರಕ್ಕೆ ಕಳುಹಿಸುತ್ತಿದ್ದಾರೆ. ಮಹಿಳೆಯರು ಕೂಡ ಸತ್ಯಾಗ್ರಹ ಸೇವಕರ ದಳದಲ್ಲಿ ಸೇರಲು ಇಚ್ಛಿಸುವರು. ಫೇದರ ಅಬ್ದುಲ್ [illegible] ತಾಯಿಯು ತನ್ನ ಮಗನನ್ನು ಕಳುಹಿಸಿಕೊಡುವಾಗ ಹೀಗೆಂದರು "ಮಗು, ನೀನು ಮುಂದೆ ಹೋಗು, ನಿನ್ನನ್ನು ಕೈದುಮಾಡುತ್ತಲೇ ನಾನು ಸ್ವಯಂಸೇವಕಿಯರನ್ನು ಕೂಡಿಕೊಂಡು ನಿನ್ನ ಹಿಂದಕ್ಕೆ ಬರುವೆನು" ಸ್ವಯಂಸೇವಕರು ರೈಲುಗಾಡಿಗಳಲ್ಲಿ ಪ್ರಯಾಣಮಾಡಿ ನಾಗಪುರಕ್ಕೆ ಹೋಗುವಾಗ ಅಲ್ಲಲ್ಲಿನ ಸ್ಟೇಶನುಗಳಲ್ಲಿ ಜನರು ಗುಂಪು ಕೂಡಿ ಇವರನ್ನು ಜಯಜಯಕಾರದಿಂದ ಬೀಳ್ಕೊಡುವರು. ಶೇಟ್ ಚೀರಂಜಿ [illegible] ಎಂಬ ಹೆಸರಿನ ಒಬ್ಬ ಸುಪ್ರಸಿದ್ಧ ಶ್ರೀಮಂತ ಜೈನಗೃಹಸ್ಥರು ೧೨ ಮಂದಿ ಸ್ವಯಂಸೇವಕರನ್ನು ಕೂಡಿಕೊಂಡು ನಾಗಪುರಕ್ಕೆ ತಲ್ಪಿರುವರು. ಜಮುನಾಲಾಲ ಬಾಜಜ್ ಮತ್ತು ಮಹಾತ್ಮಾ ಭಗವಾನದಾಸರು ಈ ಸತ್ಯಾಗ್ರಹವನ್ನು ಯಶಸ್ವಿಯಾಗಿ ನಡಿಸಲು ಬಹಳವಾಗಿ ಪ್ರಯತ್ನಿಸುವರು. ಶ್ರೀಯುತ ಜಮುನಾಲಾಲ ಬಾಜಜರು ಈಗ ಮುಂಬಯಿಯಲ್ಲಿ ತಾ. ೨೫ರಲ್ಲಿ ಜರಗುವ ಮೀಟಿಂಗಿಗೆ ಹೊರಟುಹೋಗಿರುವರು.

ಮುಂಬಯಿ:—ಮುಂಬಯಿಯಲ್ಲಿರುವ ಮೊಗವೀರ ವ್ಯವಸ್ಥಾಪಕ ಮಂಡಳಿ ಮತ್ತು ಮೊಗವೀರ ಕ್ಲಾರ್ಕ್ ಯೂನಿಯನ್ ಸಂಘದ ವಾರ್ಷಿಕ ಮಹಾಸಭೆಯು ಇದೇ ಬರುವ ಜೂನ್ ತಿಂಗಳ ತಾರೀಕು ೩ನೇ ಆದಿತ್ಯವಾರ ದಿವಸ ಅಪರಾಹ್ನ ಗಂಟೆ ಒಂದಕ್ಕೆ ಶ್ರೀಯುತ ಬಿ. ವಾಮನರಾಯರ ಅಧ್ಯಕ್ಷತೆಯಲ್ಲಿ, ದರಾಲ್ ರಸ್ತೆಯ ಬಳಿಯಲ್ಲಿರುವ ಹಳೇ ಕಬಾರ್ ಬಜಾರಿನ ಕಟ್ಟಡದಲ್ಲಿ ಜರಗಿಸಲ್ಪಡುವುದು.

ಮುಂಬಯಿ:—ಸ್ವರಾಜ್ಯ ಪಾರ್ಟಿಯ ಜನರಲ್ ಕೌನ್ಸಿಲಿನ ಒಂದು ಮೀಟಿಂಗು ಬರುವ ತಾರೀಕು ೨೭ರಲ್ಲಿ ಮುಂಬಯಿಯಲ್ಲಿ ಸೇರುವುದು.

ಅಹಮದಾಬಾದ ಗಿರಣಿಯ ಕೆಲಸಗಾರರ ಮುಷ್ಕರ:—ಮುಷ್ಕರಗಾರರ ಬೋನಸ್ಸಿನ ಕುರಿತಾದ ವಿವಾದವನ್ನು ಮುಷ್ಕರಗಾರರು ತಮ್ಮ ಮುಷ್ಕರವನ್ನು ನಿಲ್ಲಿಸುವ ವರೆಗೆ ಇತ್ಯರ್ಥಪಡಿಸುವುದು ಅಸಾಧ್ಯವೆಂದು ಶೇಟ್ ಮಂಗಲದಾಸರು ಗಿರಣಿಗಳ ಮ್ಯಾಲಿಕರ ಎಸೋಸಿಯೇಶನಿನ ಒಂದು ಮೀಟಿಂಗಿನಲ್ಲಿ ಹೇಳಿರುವರು.

ಸರ್. ನಾರಾಯಣಗಣೇಶ ಚಂದಾವರಕರ:—ಇವರ ಮಕ್ಕಳು ಬೆಂಗಳೂರಿನಿಂದ ಮುಂಬಯಿಗೆ ಇವರ ಅಸ್ಥಿ ಮತ್ತು ಭಸ್ಮವನ್ನು ತರುವಾಗ ಅನೇಕ ಜನ ಯುರೋಪಿಯನರೂ ದೇಶೀಯರೂ ಹಾಜರಿದ್ದರು. ಇವರ ಅಸ್ಥಿ ಮತ್ತು ಭಸ್ಮವನ್ನು ತುಂಬಿದ ಕುಳ್ಳೆಯನ್ನು ಶೃಂಗರಿಸಿದ ಒಂದು ಮೋಟಾರಗಾಡಿಯಲ್ಲಿಟ್ಟು ಮುಂಬಯಿಯ ಪ್ರಾರ್ಥನಾ ಸಮಾಜಮಂದಿರಕ್ಕೆ ತಂದರು. ಸ್ವರ್ಗಸ್ಥರಾದ ಚಂದಾವರಕರರು ಹಲವು ವರುಷ ಈ ಮಂದಿರದ ಅಧ್ಯಕ್ಷರಾಗಿದ್ದರು. ಧಾರ್ಮಿಕ ಆಚಾರ ವಿಧಿಗಳು ಮುಗಿದ ಬಳಿಕ ಹಲವರು ಸ್ವರ್ಗಸ್ಥರ ಗುಣಕಥನವನ್ನು ಮಾಡಿ ಭಾಷಣಮಾಡಿದರು.

ಓಲ್ ಇಂಡಿಯಾ ಕೋಂಗ್ರೆಸ್ ಕಮಿಟಿಯ ಮೀಟಿಂಗ್:—ದೇಶಬಂಧು ದಾಸರು ತಾರೀಕು ೨೩ಕ್ಕೆ ಕಲ್ಕತ್ತದಿಂದ ಮುಂಬಯಿಗೆ ಹೊರಟು ಹೋಗುವರು. ತಾರೀಕು ೨೫ಕ್ಕೆ ಮುಂಬಯಿಯಲ್ಲಿ ಜರಗುವ ಮೀಟಿಂಗಿಗೆ ಹಾಜರಿದ್ದು ತಾರೀಕು ೩೦ಕ್ಕೆ ಮದರಾಸಿಗೆ ತಲ್ಪುತ್ತಿದ್ದಾರೆ. ತಿಂಗಳ ಕಡೇ ವಾರದಲ್ಲಿ ಬಂಗಾಳಕ್ಕೆ ಹೋಗುವರು.

ಮಹಾತ್ಮರ ಆರೋಗ್ಯ:—ಮಹಾತ್ಮರು ಈಗ ಸ್ವಲ್ಪ ಆರೋಗ್ಯದಲ್ಲಿರುವರೆಂದು ಶ್ರೀಯುತ ವಲ್ಲಭಭಾ ಪಟೇಲು ಮತ್ತು ಶ್ರೀಯುತ ಯನ್. ಸಿ. ಕೇಳಕರ ಮತ್ತು ಶ್ರೀಯುತ ರಾಮದಾಸಗಾಂಧಿ ಇವರಿಗೆ ಬಂದ ತಂತಿ ವರ್ತಮಾನದಿಂದ ತಿಳಿಯುತ್ತದೆ.

ಸಂಯುಕ್ತ ಸಂಸ್ಥಾನದ ಮಂತ್ರಿಗಳು:—ಕೆಲವು ದಿನಗಳ ಹಿಂದೆ ತಮ್ಮ ಹುದ್ದೆಗೆ ರಾಜೀನಾಮೆಯನ್ನು ಕೊಟ್ಟ ಇಬ್ಬರು ಮಂತ್ರಿಗಳ ಸ್ಥಳಕ್ಕೆ ರಾಜಾ ಜಗದಾನಂದ ಮತ್ತು ನವಾಬ ಅಹಮ್ಮದಖಾನ್ ಎಂಬವರನ್ನು ಅಲ್ಲಿಯ ಗವರ್ನರರು ನೇಮಿಸಿರುವರು.

— ಕೆಲಸದ ರಾಶಿಯು. —

(ಡಾ. ಶಾ. ಸು. [illegible])

ಹಿಂದೂಸ್ಥಾನದಲ್ಲಿಯೂ ಪರ್ವತಕ್ಕಿಂತ ಹೆಚ್ಚು ಎತ್ತರವಾದ ಕೆಲಸದ ರಾಶಿಯು ಹಿಂದೂಜನರೆದುರಿಗೆ ಬಿದ್ದಿರಲಿಕ್ಕೆ "ಕೆಲಸವೇ ಇಲ್ಲ, ಕೆಲಸವೇ ಇಲ್ಲ, ನಾವೇನು ಮಾಡೋಣ? ಕೆಲಸವನ್ನು ಕೊಡಿರಿ" ಎಂದರೆ, ಅದನ್ನು ನಾವು ಮಾಡಿ ತೋರಿಸುತ್ತೇವೆ ಎಂದು ಎಷ್ಟೋ ತರುಣರು ಅನೇಕ ಸಾರೆ ನಮಗೆ [illegible]. ಇದಲ್ಲದೆ ಅವರು ಮುಂದಾಳುಗಳಿಗೆ ದೋಷವನ್ನು ಕೊಡಲಿಕ್ಕೆ ಹಿಂದೆ ಮುಂದೆ ನೋಡದೆ ತಮ್ಮ ಮನಸ್ಸಿನ ಕೀಳುತನವನ್ನು ಸಹ ವ್ಯಕ್ತಪಡಿಸಿದರು. ಇದೆಲ್ಲವೂ ನಮಗೆ ವಿಲಕ್ಷಣವೆ ಅನಿಸಿದ್ದರಿಂದ ಹೀಗೆನ್ನುವ ತರುಣರ ಪರೀಕ್ಷೆಯನ್ನಾದರೂ ಮಾಡಬೇಕೆಂಬ ವಿಚಾರವು ಮನಸ್ಸಿನಲ್ಲಿ ಬಂದು, ಅವರಿಗೆ ಶ್ರೇಯಸ್ಕರವಾದಂಥ ಮತ್ತು ಅವರ ಕೈಯಿಂದ ಸಾಗುವಂಥ ಕಾರ್ಯವನ್ನೆ ಕೊಟ್ಟು ಅವರನ್ನು ದೇಶಸೇವೆಗಾಗಿ [illegible] ಅವರು ಆ ಕೆಲಸದ ಕಡೆಗೆ [illegible] ಅದನ್ನು ಎಂದಿಗೂ ಪೂರ್ಣತೆಗೊಯ್ಯಲಿಲ್ಲ. ಇದರಿಂದ ನಾವು ಅವರಿಗೆ ದೋಷಕೊಡುತ್ತೇವೆಂತಲ್ಲ. ಆದರೆ ಅವರಿಗೆ ಯಾವ ತರದ ಶಿಕ್ಷಣವು ಸಿಗಬೇಕಾಗಿತ್ತೋ ಅಂಥ ಶಿಕ್ಷಣವು ಸಿಗದೆ ಇದ್ದ ಕಾರಣ ಅವರ ಕಡೆಯಿಂದ ಆ ಕಾರ್ಯವು ಆಗಲಿಲ್ಲವೆಂದು ಅನ್ನುತ್ತೇವೆ. ಗೃಹಗಳಲ್ಲಾಗಲಿ, ಶಾಲಾ ಕಾಲೇಜುಗಳಲ್ಲಾಗಲಿ, ಜನಸಮೂಹದಲ್ಲಾಗಲಿ, ಎತ್ತನೋಡಿದತ್ತ [illegible] ಬಿದ್ದ ಪರ್ವತ [illegible] ವಿಪರೀತ ಪರಿಣಾಮವೇ ಆನಿರುವುದು [illegible] ಕೆಲಸವು ಕಾಣಸದ ಹಾಗೆ ಮಾಡಿರುತ್ತದೆ. [illegible] ಕಾಣಿಸಿದರೂ ಅದರಂತೆ ಕಾರ್ಯಪ್ರವೃತ್ತರಾಗಲು ಅವರ [illegible] ಇಚ್ಛೆಯಾಗುವದಿಲ್ಲ. ಅಂದಮೇಲೆ ಅವರಿಗೆ ಆ ಕೆಲಸದ ರಾಶಿಯ [illegible] ಗೊತ್ತಾಗುವ ಬಗೆಹೇಗೆ! ಅದರ ಮಹತ್ವವಾದರೂ ಅವರಿಗೆ ತಿಳಿಯು[illegible]. ಇಂಥ ಮಹತ್ವದ [illegible] ಯದ ಮನುಷ್ಯನೇ ದೋಷ್ಯಕನೆಷ್ಟು [illegible] ಮುಂದಾಳುಗಳಿಗೆ ದೋಷ ಕೊಟ್ಟು [illegible] ಸಹಾಯಕನಾಗು [illegible] ಎಂದು ಅನ್ನಲಿಕ್ಕೆ ಏನು [illegible]. "ಕೆಲಸವೇ ಇಲ್ಲ, ಕೆಲಸವೇ ಇಲ್ಲ" ಈ ಮಹಾ ಮ[illegible]ವೇ ನಮ್ಮ ದುರ್ಭಾಗ್ಯಕ್ಕೆ ಕಾರಣವಾಗಿದೆ. ಪ್ರತಿಯೊಬ್ಬ ಸುಶಿಕ್ಷಿತ[illegible] ಮನುಷ್ಯನು ತನ್ನ ಮುಂದಿದ್ದ ಕೆಲಸದ ರಾಶಿಯೊಳಗಿಂದ [illegible] ಕೆಲಸವನ್ನು ಹಂಚಿಕೊಂಡು ಅದನ್ನು ಪೂರ್ಣತೆಗೊಯ್ಯಲಿಕ್ಕೆ [illegible] ಯತ್ನಮಾಡಿದರೆ ನಮ್ಮ ಧ್ಯೇಯವಾದ ಸ್ವಾತಂತ್ರ್ಯವು ಸಿಗುವದಕ್ಕೆ [illegible] ತಡವಾಗಲಿಕ್ಕಿಲ್ಲ. [illegible] ದೇವರು ನಮಗೆ ಕೊಟ್ಟ [illegible] ಉಪಯೋಗವನ್ನು ನಾವು ಚೆನ್ನಾಗಿ ಮಾಡಿಕೊಳ್ಳಬೇಕು "[illegible] ಮಾಡೇನು, ಹೊರತು ಎರಡನೇದನ್ನೇನೂ ನಾನು ಮಾಡಲಿಕ್ಕಿಲ್ಲ" [illegible] ಅಂಧರಂತೆ ವರ್ತಿಸಿದರೆ ನಡೆಯಲಿಕ್ಕಿಲ್ಲ. ಬುದ್ಧಿವಂತರಾದ ಮುಂದಾಳುಗಳು ಹೇಳಿದ್ದು ಮಾಡಲೇಬೇಕಾಗುತ್ತದೆ. ಇದರಲ್ಲಿ ಏನೂ ಸಂದೇಹವಿಲ್ಲ. ಆದರೆ ಅವರು ಹೇಳಿದ ಕೆಲಸವನ್ನು ಮಾಡುವಾಗ ಎಷ್ಟೋ ಹೆಚ್ಚು ಇತರ ಸ್ಥಲವಾಗಿ ಮುಂತಾದ ಪ್ರಶ್ನೆಗಳು ಪ್ರತಿಯೊಬ್ಬರ ಎದುರಿಗೆ ಬರಲೇಬೇಕು. ಈ ಪ್ರಶ್ನೆಗಳಿಗೆ ಸಮಾಧಾನಕಾರಕ ರೀತಿಯಲ್ಲಿ ಅವರಿಗೆ ಉತ್ತರ ದೊರೆಯದೆ ಇದ್ದ ಪಕ್ಷಕ್ಕೆ ಕೆಲಸ ಮಾಡುವವರಿಗೆ ಕಾರ್ಯದ ಪೂರ್ಣ ಮಾಹಿತಿಯೂ ಆಗುವುದಿಲ್ಲ. ಅಂತೇ ಅವರು ಬೇಸರಪಟ್ಟು ಆ ಕೆಲಸವನ್ನೇ ಬಿಟ್ಟುಕೊಡುತ್ತಾರೆ. ಹೀಗಾಗಿಯೆ ಕೆಲಸವು ಎಂದೂ ಕೊನೆಗಾಣುವುದಿಲ್ಲ. ಇದು ನಮ್ಮ ಪ್ರತ್ಯಕ್ಷ ಅನುಭವಕ್ಕೆ ಬಂದಸಂಗತಿಯಾಗಿರುತ್ತದೆ.

ಈ ಅನುಭವದ ಮೇಲಿಂದ [illegible] ಅನೇಕ [illegible] ಆಗುತ್ತದೆ. [illegible]

[illegible]

The Madras Legislative Council Forthcoming Election.

DR. U. RAMA RAU'S CANDIDATURE.

To

THE ELECTOR OF SOUTH KANARA DISTRICT.

ಮದರಾಸ ನ್ಯಾಯವಿಧಾಯಕ ಸಭೆಯ ಮುಂದಿನ ಚುನಾವಣೆ.

ಡಾಕ್ಟರ ಯು. ರಾಮರಾಯರ ಉಮೇದುವಾರಿಕೆ.

ದಕ್ಷಿಣ ಕನ್ನಡಾ ಜಿಲ್ಲೆಯ ವೋಟರರಿಗೆ ವಿನಂತಿ.

Sirs,

You must have known by this time that I am standing for the Madras Legislative Council as a candidate for South Kanara.

South Kanara has two seats in the Legislative Council and every one of you has two votes. I crave your, as well as, your friends support for one of them. As for my capacity to represent you, you all know very well, what public services I have rendered these 30 years and more in various capacities and spheres in the city of Madras as a Medical practitioner, Member of the Madras Corporation, Health Propogandist, Ambulance Organiser, Editor of the "HEALTH" AND "ANTISEPTIC", Member, Madras Medical Council and as a representative of Madras City in the Madras Legislative Council. My work in the Legislative Council for the last 3 years will speak for itself.

My claim to represent you is in my being a native of South Kanara and owing large landed properties and other interests in the district.

If I am elected I need hardly mention that I shall do my very best to further your interests.

I beg to remain.

Your most obedient servant,

U. RAMA RAU.

ಅಯ್ಯಾ,

ಮದರಾಸು ನ್ಯಾಯವಿಧಾಯಕ ಸಭೆಗೆ ದಕ್ಷಿಣ ಕನ್ನಡಾ ಜಿಲ್ಲೆಯ ಪರವಾಗಿ ನಾನೂ ಒಬ್ಬ ಉಮೇದುವಾರನಾಗಿರುವೆನೆಂದು ನಿಮಗೆಲ್ಲರಿಗೂ ಇಷ್ಟರಲ್ಲಿ ತಿಳಿದಿರಬಹುದು.

ಮದರಾಸು ನ್ಯಾಯವಿಧಾಯಕ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಎರಡು ಸ್ಥಾನಗಳು ಇಡಲ್ಪಟ್ಟಿವೆ. ಮತ್ತು ನಿಮಗೆ ಪ್ರತಿಯೊಬ್ಬರಿಗೆ ಎರಡು ವೋಟು (ಮತ)ಗಳನ್ನು ಕೊಡುವ ಹಕ್ಕು ಇದೆ. ಆ ಎರಡರ ಪೈಕಿ ಒಂದು ಸ್ಥಾನವನ್ನು ನಾನು ಹೊಂದಲು ನೀವೂ ನಿಮ್ಮ ಸ್ನೇಹಿತರೂ ನನಗೆ ಸಹಾಯಕರಾಗಬೇಕಾಗಿ ಬೇಡುತ್ತೇನೆ. ನಿಮ್ಮ ಪ್ರತಿನಿಧಿಯಾಗಿ ಕೆಲಸಮಾಡಲು ನನ್ನಲ್ಲಿ ಯಾವ ಯೋಗ್ಯತೆಯಿರುವುದೆಂದು ನಾನು ಕಳೆದ ಮೂವತ್ತು ವರುಷಕ್ಕಿಂತ ಹೆಚ್ಚು ಕಾಲ ಸಾರ್ವಜನಿಕ ಕಾರ್ಯರಂಗದಲ್ಲಿ ಮಾಡಿದ ಕೆಲಸಗಳಿಂದ ನಿಮಗೆ ವೇದ್ಯವಾಗುವುದು. ನಾನು ಮದರಾಸಿನಲ್ಲಿ ಮೆಡಿಕಲ್ ಪ್ರಾಕ್ಟಿಶನರ (ವೈದ್ಯ)ನಾಗಿಯೂ, ಮದರಾಸ ಕೊರ್ಪೊರೇಶನಿನ ಮೆಂಬರನಾಗಿಯೂ, ಆರೋಗ್ಯ ಪ್ರಚಾರಕನಾಗಿಯೂ, ಎಂಬುಲೆನ್ಸಿನ ಕಾರ್ಯರಚನಾಕಾರ (Ambulance organiser)ನಾಗಿಯೂ, ಹೆಲ್ತ ಎಂಡ್ ಎಂಟಿಸೆಪ್ಟಿಕ್ ಎಂಬುದರ ಸಂಪಾದಕನಾಗಿಯೂ, ಮದರಾಸ ಮೆಡಿಕಲ್ ಕೌನ್ಸಿಲಿನ ಮೆಂಬರನಾಗಿಯೂ ಮದರಾಸ ನ್ಯಾಯವಿಧಾಯಕ ಸಭೆಯಲ್ಲಿ ಮದರಾಸ ಪಟ್ಟಣದ ಪ್ರತಿನಿಧಿಯಾಗಿಯೂ ಕೆಲಸ ಮಾಡಿರುವೆನು. ಕಳೆದ ಮೂರು ವರುಷಗಳಲ್ಲಿ ನಾನು ಮದರಾಸ ನ್ಯಾಯವಿಧಾಯಕ ಸಭೆಯಲ್ಲಿ ಮಾಡಿದ ಕಾರ್ಯಗಳೇ ನನ್ನ ಯೋಗ್ಯತೆಯನ್ನು ವ್ಯಕ್ತಪಡಿಸುವುವು.

ನಾನು ದಕ್ಷಿಣ ಕನ್ನಡದ ನಿವಾಸಿಯೂ, ಇಲ್ಲಿ ಹೆಚ್ಚಿನ ಆಸ್ತಿಯುಳ್ಳವನೂ ಇತರ ವಿಷಯದಲ್ಲಿ ಜಿಲ್ಲೆಗೆ ಸಂಬಂಧವುಳ್ಳವನೂ ಆಗಿರುವುದರಿಂದ ಈ ಜಿಲ್ಲೆಯಿಂದ ಒಬ್ಬ ಉಮೇದ್ವಾರನಾಗಿ ಮುಂದೆ ಬಂದಿರುವೆನು.

ನನ್ನನ್ನು ನೀವು ಆರಿಸಿದ್ದೆ ಆದರೆ ನಿಮ್ಮ ಒಳ್ಳೆಗಾಗಿ ಬಹಳವಾಗಿ ಸಾಧಿಸುವೆನೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ನಿಮ್ಮವ,

ಯು. ರಾಮರಾವ್.

ಯೂನಿವರ್ಸಲ್.

ಈ ದಿವ್ಯ ಔಷಧವು, ಭಯಂಕರವಾದ ಸಿಡುಬು ರೋಗವನ್ನು ದೂರಪಡಿಸುವದಲ್ಲದೆ, ಈ ರೋಗದಿಂದ ಮೈಮೇಲೆ ಉಂಟಾಗುವ ಕಲೆಗಳನ್ನು ಹೋಗಲಾಡಿಸುತ್ತದೆ.

ಈಗ ಅನೇಕ ಕಡೆಗಳಲ್ಲಿ ವ್ಯಾಪಿಸಿಕೊಂಡಿರುವ ಭಯಂಕರವಾದ ಸಿಡುಬುರೋಗವು ಯಾರಿಗೆತಗಲುತ್ತದೋ, ಅಂಥವರ ಸುಂದರವಾದ ಮುಖಕಮಲವನ್ನು ಅದು ಅರೂಪಪಡಿಸುವುದು. ಹೀಗಿರುತ್ತ ಈ ರೋಗ ನಿವಾರಣೆಗೆ ಅನುಕೂಲವಾದ ಮೇಲಿನ ದಿವ್ಯವಾದ ಔಷಧದ ಒಂದು ಬಾಟ್ಲಿಯನ್ನು ಈ ಹೊತ್ತೆ ತರಿಸಿ ಹತ್ತಿರವಿಡುವದಿಲ್ಲವೇಕೆ? ಬಾಟ್ಲಿ ಒಂದರ ಕ್ರಯ ವಾದರೋ ಬರೇ ಆಣೆ 8!. ಇಷ್ಟು ಅಲ್ಪ ಮೊಬಲಗನ್ನು ಖರ್ಚು ಮಾಡಲಿಕ್ಕಾಗದೆ? ಈ ಔಷಧಿಗೆ ಸಿಡುಬುರೋಗವನ್ನು ದೂರಪಡಿಸಿ ಅದನ್ನು ಗುಣಪಡಿಸುವ ಸಾಮರ್ಥ್ಯವಿರುವುದಲ್ಲದೆ, ಇತರ ಕೆಲವು ರೋಗಗಳನ್ನು ನಿವಾರಣೆಮಾಡುವ ಶಕ್ತಿಯೂ ಇದೆ. ಇದು ಉರಿಗಜ್ಜಿ, ತುರಿಗಜ್ಜಿ ಮತ್ತು ಇತರ ಹುಣ್ಣುಗಳನ್ನು ಗುಣಪಡಿಸುವುದು. ಆದ ವರುಷ ಮದರಾಸ ಮತ್ತು ಮಲಬಾರ ಪ್ರಾಂತದಲ್ಲಿ ಸಿಡುಬುರೋಗದ ಹಾವಳಿಯು ಹಬ್ಬಿದಾಗ ಈ ಔಷಧ ಪ್ರಯೋಗದಿಂದ ಅನೇಕರಿಗೆ ಗುಣದೊರಕಿರುವುದರಿಂದ ಹೆಸರುಗೊಂಡ ಸಾವಿರಾರು ಮಂದಿ ಡಾಕ್ಟರರು ಇದಕ್ಕೆ ಶಿಫಾರಸ ಪತ್ರವನ್ನು ಕೊಟ್ಟಿರುವರು. ಯೂನಿವರ್ಸಲ್ ಎಂಬ ಈ ಔಷಧವು ಅಂಟುರೋಗದ ವಿಷವನ್ನು ನಿವಾರಣೆಮಾಡುವ ಅತ್ಯುತ್ತಮ ಮದ್ದು. ಈ ಔಷಧವು ಸಿಡುಬುರೋಗದ ಹುಣ್ಣಿನ ವಿಷವನ್ನು ಅಪಹರಿಸಿ ಬಿಡುವುದರಿಂದ ಈ ರೋಗ ತಗಲಿದ ರೋಗಿಗೆ ಕುರುಹುಗಳು, ವ್ರಣಗಳು, ಅತಿಸಾರ, ರಕ್ತಾತಿಸಾರ, ಪುಪ್ಪುಸಬೇನೆ ಮೊದಲಾದ ತಾಕುಕೊಡಕುಗಳು ಹತ್ತಿರ ಬಾರದಂತೆ ಮಾಡುವುದು. ನಾನಾ ತರದ ಉರಿಯನ್ನು ಹುಟ್ಟಿಸುವ ಹುಣ್ಣುಗಳನ್ನೂ, ಬೊಕ್ಕೆಗಳನ್ನೂ ದೀರ್ಘಕಾಲದ ಹುಣ್ಣುಗಳನ್ನೂ ಇತರ ವ್ರಣಗಳನ್ನೂ ಸಹ ಈ ಮದ್ದು ಗುಣಪಡಿಸುತ್ತದೆ.

ಈ ಔಷಧಕ್ಕೆ ಸುವಾಸನೆಯು ಇರುವುದರಿಂದ ಇದನ್ನು ಹಚ್ಚಿಕೊಂಡ ರೋಗಿಗಳ ಸಮೀಪಕ್ಕೆ ಗುಂಗಾಡಗಳೂ ಇತರ ನುಸಿಗಳೂ ಬರುವುದಿಲ್ಲ. ನುಸಿಗಳು ರೋಗಿಗಳ ಹತ್ತಿರಕ್ಕೆ ಬಾರದೆ ಇರುವುದರಿಂದ ರೋಗವು ಒಂದು ಕಡೆಯಿಂದ ಇನ್ನೊಂದು ಕಡೆಗೆ ಪಸರಿಸದಂತೆ ಆಗುವುದು. ರಾತ್ರಿಕಾಲದಲ್ಲಿ ಮಕ್ಕಳಿಗೆ ಗುಂಗಾಡುಗಳ ಕಾಟವನ್ನು ತಪ್ಪಿಸಲು ಮಕ್ಕಳನ್ನು ಮಲಗಿಸುವ ಮೊದಲು ಅವುಗಳ ಕೈಕಾಲುಗಳಿಗೆ ಇದನ್ನು ಹಚ್ಚಬಹುದು.

ಈ ಔಷಧದಲ್ಲಿ ರೋಗ ಗುಣಕಾರಿಯಾದ ಅನೇಕ ಉಪಯುಕ್ತ ಔಷಧಗಳಿರುವುವಲ್ಲದೆ ಬಹುತರವಾದ ರೋಗಗಳಿಗೆ ದಿನನಿತ್ಯ ಅನೇಕರು ಉಪಯೋಗಿಸುವ ನೀಲಗಿರಿ ಎಣ್ಣೆಯೂ, ಕರ್ಪೂರವೂ ಕೂಡಿದೆ. ರೋಗ ಜಂತುಗಳನ್ನು ನಾಶ ಮಾಡುವ ಸಾಮರ್ಥ್ಯವುಳ್ಳದ್ದಾದರೂ ವಿಷದಿಂದ ಕೂಡಿದುದಲ್ಲ. ಆದುದರಿಂದ ದೇಹದ ಯಾವ ಭಾಗದಲ್ಲೂ ಇದನ್ನು ಉಪಯೋಗಿಸಬಹುದು. ಥಟ್ಟನೆ ಮಕ್ಕಳು ನೆಕ್ಕಿದರೂ ಏನೂ ಅಪಾಯ ಸಂಭವಿಸದು.

ಇದನ್ನು ಉಪಯೋಗಿಸುವ ಕ್ರಮ:—ಸಿಡುಬುರೋಗ ತಗಲಿದ ರೋಗಿಗಳಿಗೆ ದಿವಸಕ್ಕೆ ಎರಡು ಸಲ ಇಡೀ ದೇಹಕ್ಕೂ, ಮೂರು ಸಲ ಮುಖಕ್ಕೂ ಹಚ್ಚತಕ್ಕದ್ದು. ದೇಹಕ್ಕೆ ಈ ಮದ್ದನ್ನು ಒಂದೆಯ ಕೋಳಿಯ ಗರಿಯಿಂದ ಅಥವಾ ಯಾವುದಾದರೂ ಒಂದು ಗರಿಯಿಂದ ಹಾಗಿಸ ತಕ್ಕದ್ದು.

ಉರಿಯಿಂದ ಕೂಡಿದ ಹುಣ್ಣುಗಳಿಗೂ ಬೊಕ್ಕೆಗಳಿಗೂ ಈ ಮದ್ದನ್ನು ಹಚ್ಚುವಾಗ ಒಂದು ನಯವಾದ ವಸ್ತ್ರದ ತುಂಡಿಗೆ (Lint) ಇದನ್ನು ಹಾಗಿಸಿ ಆ ವಸ್ತ್ರದ ತುಂಡನ್ನು ಹುಣ್ಣುಗಳ ಮೇಲಿಟ್ಟು ಹತ್ತಿಯಿಂದ ಜಾಗ್ರತೆಯಾಗಿ ಅದನ್ನು ಕಟ್ಟಬೇಕು. ಹುಣ್ಣುಗಳನ್ನು ತೊಳೆಯುವಾಗ ಸಾಬೂನನ್ನು ಉಪಯೋಗಿಸಬಾರದು. ಈ ಮದ್ದನ್ನೇ ತೊಳೆಯಲು ಸಹ ಉಪಯೋಗಿಸತಕ್ಕದ್ದು.

ಎಚ್ಚರಿಕೆ:—ಈ ಔಷಧವು ದೇಹಕ್ಕೆ ತಂಪನ್ನು ಉಂಟುಮಾಡುವ ವಸ್ತುಗಳಿಂದ ತಯಾರಾಗಿರುವುದರಿಂದ [illegible] ದೇಹಕ್ಕೆ ಇದನ್ನು [illegible] ದೇಹದಲ್ಲಿ ಒಂದು ತರದ [illegible] ಬರಬಹುದು. [illegible] ಇದನ್ನು ಒಂದೇ ಸಲ ಇಡೀ [illegible] ದೇಹದ ಒಂದೊಂದೆ ಭಾಗಕ್ಕೆ [illegible] ಬರಬೇಕು. ಕ್ರಯ ಆಣೆ 0—8—0. ಇದನ್ನು ಕೆಳಗಿನ ವಿಳಾಸಕ್ಕೆ ಬರೆದು ತರಿಸಬಹುದು.

ದಿ ಓರಿಯಂಟಲ್ ಸ್ಪೆಸಿಫಿಕ್ ಡಿಪ್ಪೋ.

107, [illegible], ಮದರಾಸು.

ವಿದೇಶ ವರ್ತಮಾನ.

ಫ್ರೆಂಚರ ಶಾಸನ:—[illegible] ಫ್ರೆಂಚ ಸರಕಾರದವರು [illegible].

ಬ್ರಿಟನ್ನಿನ ಮುಖ್ಯ ಮಂತ್ರಿಗಳ ರಾಜಿನಾಮೆ:—ಬ್ರಿಟನ್ನಿನ ಮುಖ್ಯ ಅಮಾತ್ಯರಾದ ಮಿ. ಬೊನರಲೋ ಅವರು ಅಸೌಖ್ಯದ ಸಂಬಂಧ ತಮ್ಮ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟಿರುವರು. ಜೋರ್ಜ ಚಕ್ರವರ್ತಿಯವರು ಇವರ ರಾಜಿನಾಮೆಯನ್ನು ಅಂಗೀಕರಿಸಿರುತ್ತಾರೆ. ಈಗ ಮಿ|| ಸ್ಟಾನ್ಲೇ ಬಾಲ್ಡವಿನ್ನರು ಮುಖ್ಯಮಂತ್ರಿ ಪದವಿಗೆ ಬಂದಿರುವರು.

ಮೆಂಚಸ್ಟರಿನ ಹೊಟೇಲು:—ಇಂಗ್ಲೆಂಡಿನ ಮೆಂಚಸ್ಟರ ನಗರದಲ್ಲಿ ೧೬೫ ಅಡಿ ಎತ್ತರವುಳ್ಳ, ೨೦ ಅಂತಸ್ತುಗಳ ದೊಡ್ಡ ಹೊಟೇಲನ್ನು ಕಟ್ಟುವ ಏರ್ಪಾಡಾಗಿದೆ. ಇಷ್ಟು ಎತ್ತರವಾದ ಉಪ್ಪರಿಗೆಯ ಮನೆಯು ಇಂಗ್ಲೆಂಡಿನಲ್ಲಿ ಇನ್ನೊಂದಿಲ್ಲ.

ಎಫೆಲ್ ಟವರ್:—ಲಂಡನ್ ಪಟ್ಟಣದಲ್ಲಿ ಎಫೆಲ್ ಟವರ್ ಎಂಬ ೬೦೦ ಅಡಿ ಎತ್ತರವಿರುವ ಕಟ್ಟಡವನ್ನು ಕಟ್ಟುವವರಿದ್ದಾರೆ. ಇದರ ಮೇಲೆ ಒಂದು ಸರ್ಚ ಲೈಟನ್ನು ಇಟ್ಟರೆ ಫ್ರಾನ್ಸ್ ದೇಶದ ತೀರಕ್ಕೆ ಅದೀಪವು ಗೋಚರವಾಗುವುದು.

ಬ್ರಿಟನ್ನಿನ ಚಕ್ರವರ್ತಿಯವರು:—ಸಾರ್ವಭೌಮ ಜೋರ್ಜ ಚಕ್ರವರ್ತಿಯವರೂ ಅವರ ಪತ್ನಿ ಮೇರಿ ರಾಣಿಯವರೂ ಇಟಲಿಯ ರಾಜಧಾನಿಯಾದ ರೋಮ ನಗರವನ್ನು ಸಂದರ್ಶಿಸಿ ಅಲ್ಲಿ ಆತಿಥ್ಯಸತ್ಕಾರಗಳನ್ನು ಪಡೆದು ಪೋಪ್ ಸಾಹೇಬರ ಭೇಟಿಯನ್ನು ಹೊಂದಿ ತಾ. ೧೫ಕ್ಕೆ ತಮ್ಮ ಅರಮನೆಗೆ ತಲಪಿದರು.

ಫ್ರೆಂಚರು:—ರ್ಹೂರ್ ಪ್ರಾಂತದಲ್ಲಿ ಫ್ರೆಂಚರು ಇನ್ನೂ ಸೈನ್ಯವನ್ನು ಒಟ್ಟುಗೂಡಿಸುತ್ತಿದ್ದಾರೆ.

ಫ್ರಾನ್ಸ್ ದೇಶದ ರಾಜಧಾನಿ:—ಮೈಸೂರಿನ ಸರ್. ಎಂ. ಕಾಂತರಾಜ ಅರಸಿನವರು ಕಳೆದ ತಾರೀಖು ೧೬ಕ್ಕೆ ಪ್ಯಾರಿಸ್ ನಗರಕ್ಕೆ ತಲ್ಪಿದರು.

ಜರ್ಮನಿ:—ಯುದ್ಧ ನಷ್ಟಕ್ಕಾಗಿ ಜರ್ಮನರು ತಾವು ಕೊಡುತ್ತೇವೆಂದು ಹೇಳಿದ ಹಣವು ಅಲ್ಪವೆಂದೂ ಇನ್ನೂ ಹೆಚ್ಚಾಗಿ ಕೊಡಬೇಕೆಂದೂ ಈಗ ಕೊಡುವುದಾಗಿ ಹೇಳಿದ ಅಲ್ಪ ಹಣವನ್ನು ಸ್ವೀಕರಿಸುವುದಿಲ್ಲವೆಂದೂ ಫ್ರೆಂಚರು ಹೇಳಿರುವರು.

ಅಮೂಲ್ಯವಾದ ಚಿತ್ರಪಟ:—ಇಂಗ್ಲೆಂಡ ದೇಶದಲ್ಲಿರುವ ಕ್ರಿಸ್ಟಿ ಎಂಬ ಪ್ರಸಿದ್ಧ ಚಿತ್ರಪ್ರದರ್ಶನ ಶಾಲೆಯಲ್ಲಿ ವಾಂಡಿಕ್ ಎಂಬ ಚಿತ್ರಗಾರನಿಂದ ಬರೆಯಲ್ಪಟ್ಟಿದ್ದ ಎರಡು ಚಿತ್ರಪಟಗಳಲ್ಲಿ ಒಂದಕ್ಕೆ ೪೧,೦೦೦ ಪವನುಗಳನ್ನೂ ಮತ್ತೊಂದಕ್ಕೆ ೧೯,೩೭೫ ಪವನುಗಳನ್ನೂ ಕೊಟ್ಟು ದೇವಿನ್ ಕಂಪೆನಿಯವರು ಪಡೆದಿರುತ್ತಾರೆ.

ರಷ್ಯಿಯನ್ ವಕೀಲರ ಕೊಲೆ:—ಲಾಸೇನ ಪರಿಷತ್ತಿಗೆ ಹೋದಂಥ ರಷ್ಯಿಯದ ವಕೀಲರನ್ನು ಯಾರೋ ಸಿಸಿಲಿಯ ಪಾನಾವಳಿಯೊಳಗೆ ಗುಂಡು ಹಾಕಿ ಕೊಂದಿರುವರು.

ಒಳದೇಶ ವರ್ತಮಾನ.

ಮದ್ಯಪಾನ ಮಾರಾಟಕ್ಕೆ ಬಹಿಷ್ಕಾರ:—ಕುಂಭಕೋಣದ ತಾಲೂಕು ಬೋರ್ಡಿನವರು ಕಳೆದ ವಾರ ಸಭೆಸೇರಿ ಏಳವಾಸ್ಕತೆಯಿಂದ ಮದ್ಯಪಾನ ಪದಾರ್ಥಗಳ ಮಾರಾಟವನ್ನು ಆ ತಾಲೂಕಿನಲ್ಲಿ ತಪ್ಪಿಸಬೇಕೆಂದು ನಿರ್ಧಾರಮಾಡಿ ಸರಕಾರಕ್ಕೆ ತಿಳಿಸಿರುತ್ತಾರೆ.

ಅಮೃತಸರ ನೇಶನಲ್ ಬೇಂಕು:—ಎಲಾಯನ್ಸ್ ಬೇಂಕು ದಿವಾಳಿಯಾದುದರಿಂದ ಜನರಿಗೆ ಬೇಂಕುಗಳಲ್ಲಿ ಠೇವಣಾತಿಯಾಗಿ ಹಣವಿಡಲು ಅಪನಂಬಿಕೆಯುಂಟಾಗಿದೆ. ಅಮೃತಸರ ನೇಶನಲ್ ಬೇಂಕಿನಲ್ಲಿ ಹಣವನ್ನು ಠೇವಣಾತಿಯಾಗಿ ಇಟ್ಟವರಲ್ಲಿ ಅನೇಕರು ತಮ್ಮ ಹಣವನ್ನು ಹಿಂದಕ್ಕೆ ಪಡೆದಿರುವುದರಿಂದ ಈ ಬೇಂಕಿಗೆ ತಮ್ಮ ವಹಿವಾಟನ್ನು ನಡಿಸಲು ಅಸಾಧ್ಯವಾಗಿ ಈ ಬೇಂಕು ಈಗ ಸದ್ಯಕ್ಕೆ ಮುಚ್ಚಲ್ಪಟ್ಟಿರುತ್ತದೆ.

ಲೋರೆನ್ಸ್ ಪ್ರತಿಮೆ:—ಕಳೆದ ತಾರೀಖು ೧೫ನೆಯ ನಡುಮಧ್ಯಾಹ್ನ ಹನ್ನೆರಡು ಗಂಟೆಗೆ ಗುಜರನ್‌ವಾಲಾ ಜಿಲ್ಲೆಯ ಸರದಾರ ಅಮೃತಸಿಂಗನೆಂಬವನು ಉಳಿ ಮತ್ತು ಸುತ್ತಿಗೆಯಿಂದ ಲಾಹೋರಿನಲ್ಲಿರುವ ಲೋರೆನ್ಸ್ ಪ್ರತಿಮೆಯನ್ನು ತೆಗೆಯಲು ಪ್ರಯತ್ನಿಸುವಾಗ ಅವನನ್ನು ಸೆರೆಹಿಡಿದರು. ತನ್ನನ್ನು ಸೆರೆಹಿಡಿಯಲು ಬಂದವರನ್ನು ಇದಿರಾಡಲು ಅವನು ಪ್ರಯತ್ನಿಸಿದನು. ಆದರೆ ಅನೇಕ ಮಂದಿ ಪೋಲೀಸರು ಕೂಡಿದ್ದರಿಂದ ಆ ಯತ್ನವು ಸಾಗಲಿಲ್ಲ. ಈಗ ಈ ಪ್ರತಿಮೆಯನ್ನು ಪೋಲೀಸರೂ ಮಿಲಿಟರಿಯವರೂ ಕಾಯುತ್ತಿದ್ದಾರೆ.

ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಮೀಟಿಂಗು:—ಕೊಂಗ್ರೆಸ್ಸಿನಲ್ಲಿ ಈಗ ಉಂಟಾಗಿರುವ ಎರಡು ಪಂಗಡಗಳಲ್ಲಿ ಈಗಿರುವ ಭಿನ್ನಾಭಿಪ್ರಾಯಗಳ ವಾದವನ್ನು ತೀರ್ಮಾನಿಸಬೇಕೆಂಬ ಆಸೆಯು ದೇಶದ ಜನರಲ್ಲಿ ಇರುವುದರಿಂದ ಈ ದಿನ ಮುಂಬಯಿಯಲ್ಲಿ ಜರಗುವ ಕೊಂಗ್ರೆಸ್ ಕಮಿಟಿ ಮೀಟಿಂಗಿಗೆ ಹೋಗಲು ತಾನು ನಿರ್ಧರಿಸಿರುವುದಾಗಿಯೂ ಅಲ್ಲದೆ ತನ್ನ ಪಾರ್ಟಿಯ ಇತರ ಮೆಂಬರರೂ ಈ ಮೀಟಿಂಗಿಗೆ ಹಾಜರಾಗಬೇಕಾಗಿ ತಾನು ಅವರಿಗೆ ವಿನಂತಿಮಾಡಿಕೊಂಡಿರುವುದಾಗಿಯೂ ದೇಶಬಂಧು ದಾಸರು ಪ್ರಕಟಿಸಿರುವರು.

[illegible] ಮುನ್ಸಿಪಾಲಿಟಿಯ ಠರಾವು:—ಈ ಮುನ್ಸಿಪಾಲಿಟಿಯು [illegible] ಗೋವಧೆ ನಡೆಯನ್ನು ಮಾಡಬಾರದೆಂಬ ಠರಾವನ್ನು [illegible].

ಮಹಾತ್ಮರ ಆರೋಗ್ಯ ಸ್ಥಿತಿ:—ಮಹಾತ್ಮಾ ಗಾಂಧಿಯವರ [illegible].

[illegible] ಈಗ ಸಂಬಳದ ಶಸ್ತ್ರವೈದ್ಯರು ಪ್ರತಿ [illegible] ಕಡಿಮೆಯಾಗಿ [illegible] ಜಾಗ್ರತೆಯಿಂದ ಪ್ರತ್ಯೇಕವು ಪರೀಕ್ಷೆಮಾಡಲು ಸರಕಾರದವರು ಪೂನೆಯ ಸಿವಿಲ್ ಸರ್ಜನರಿಗೆ ಹೇಳಿದರು. ಸಿವಿಲ್ ಸರ್ಜನರು ಇವರ ಪರೀಕ್ಷೆಯನ್ನು ಮಾಡಿ ಇವರು ಈಗ ಸಾಧಾರಣ ನಮೂನೆಯ ಅಮಶಂಕೆಯ ರೋಗ ಪೀಡಿತರಾಗಿರುವರೆಂದು ಅಭಿಪ್ರಾಯಪಟ್ಟರು. ಕಳೆದ ಮೂರು ವರುಷಗಳ ಹಿಂದೆ ತನಗೆ ಅಮಶಂಕೆಯ ಪೀಡೆಯು ಪ್ರಾರಂಭವಾಗಿ ಅದರಿಂದ ಪ್ರಾಣಾಂತಿಕ ಸಂಕಷ್ಟವಾದ ವಿಷಯವನ್ನು ಮಹಾತ್ಮರು ಆ ಸರ್ಜನರಿಗೆ ತಿಳಿಸಿ, ತನಗೆ 'ಎಮಿಟಿನ್ ಇನ್‌ಜಿಕ್ಶನ್' ಚಿಕಿತ್ಸೆಮಾಡಲು ಹಲವು ಮಂದಿ ಸ್ನೇಹಿತರು ಸೂಚಿಸಿದರೂ ಅದರಲ್ಲಿ ಗುಣಮಾಡಿಕೊಳ್ಳ ಔಷಧವೇ ಇರುವುದೆಂದು ತನಗೆ ಗೊತ್ತಿಲ್ಲದ್ದರಿಂದ ತಾನು ಆ ಚಿಕಿತ್ಸೆಯನ್ನು ಮಾಡಲು ಬಿಡಲಿಲ್ಲವೆಂದು ಹೇಳಿದರು. ಆದರೆ ಆ ತರು ಚಿಕಿತ್ಸೆಯನ್ನು ನಡಿಸಲು ಒಪ್ಪಿರುವರೆಂದೂ ಮತ್ತು ಕಳೆದ ತಾ. ೧೫ರ ಸಿವಿಲ್ ಸರ್ಜನರ ರಿಪೋರ್ಟಿನಿಂದ ಇವರು ಈಗ ಆರೋಗ್ಯವನ್ನು ಹೊಂದಿ [illegible] ಮೊದಲು ತೆಗೆದುಕೊಳ್ಳಲು ಆಗದೇ ಇರುವ ಆಹಾರವನ್ನು ಸಹ ತೆಗೆದುಕೊಳ್ಳುತ್ತಿದ್ದಾರೆ, ಭಾರದಲ್ಲಿ ಸಹ ಹೆಚ್ಚುತ್ತಿದ್ದಾರೆ. ಇವರಿಗೆ ಹಲ್ಲಿನಲ್ಲಿ ಕೀವು ಬರುವ [illegible] (Pyorrhoea) ವು ಶುರುವಾಗುವ ಚಿಹ್ನೆಗಳು ಕಂಡುಬಂದುದರಿಂದ ದಂತ ಚಿಕಿತ್ಸೆಯು ನಡಿಯುತ್ತಿದೆ ಎಂದು ಪ್ರಕಟಿಸಿದೆ. ಮಹಾತ್ಮಾ ಗಾಂಧಿಯವರ ಆರೋಗ್ಯವು ಹೇಗಿರುವುದೆಂದು ಕೂಡಲೇ ತಿಳಿಸಬೇಕಾಗಿ ಅವರ ಪುತ್ರ ಶ್ರೀಯುತ ದೇವಿದಾಸ ಗಾಂಧಿಯವರು ಯರವಾಡಾ ಜೈಲಿನ ಸುಪರಿಂಟೆಂಡೆಂಟರಿಗೆ ಎರಡು ತಂತಿಗಳನ್ನು ಕಳುಹಿಸಿರುವರು. ಅವರ ಪತ್ನಿಯವರು ತನ್ನ ಪತಿಯ ದರುಶನವನ್ನು ಪಡೆಯಲು ಅಹಮ್ಮದಾಬಾದಿಗೆ ಹೊರಟುಹೋಗಿರುವರು.

೩ ಲಕ್ಷ ರೂಪಾಯಿಗಳ ಕೆಂಪು:—ಬರ್ಮಾ ದೇಶದಲ್ಲಿ ಒಂದು ಕೆಂಪು ಸಿಕ್ಕಿದೆ. ಇದರ ಮೌಲ್ಯ ಸುಮಾರು ೩ ಲಕ್ಷವಾಗಬಹುದೆಂದು ಹೇಳುತ್ತಾರೆ.

ನಿಜಾಮ ರಾಜ್ಯದ ಸ್ತ್ರೀಯರು:—ನಿಜಾಮ ಸರಕಾರವು ಸ್ತ್ರೀಯರಿಗೆ ವಕೀಲ ಪರೀಕ್ಷೆಗೆ ಕೂತುಕೊಳ್ಳಲು ಪರವಾನಗಿಯನ್ನು ದಯಪಾಲಿಸಿದೆ.

ಕಾನೂನುಭಂಗವನ್ನು ಜಾರಿಗೆ ತರುವ ವಿಷಯದಲ್ಲಿ ಮಿ| ಹರದಯಾಲನಾಗರ ಅಭಿಮತ:—ಬಂಗಾಳ ಪ್ರೊವಿನ್ಶಿಯಲ್ ಕೊಂಗ್ರೆಸ ಕಮ್ಮಿಟಿಯ ಅಧ್ಯಕ್ಷರಾಗಿದ್ದ ಮಿ| ಹರದಯಾಲನಾಗರು ಕಾನೂನು ಭಂಗದ ಕುರಿತು ಕೆಳಗಿನ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. "ವೃಷರಾಯರು 'ಸರ್ಟಿಫಿಕೇಶನ್' ಅಧಿಕಾರದಿಂದ ಉಪ್ಪಿನ ಸುಂಕವನ್ನು ಇಮ್ಮಡಿ ಮಾಡಿದುದರಿಂದ ಅಸಹಕಾರ ಯುದ್ಧವನ್ನು ಹೂಡಬೇಕಾಗಿದೆ. ಅನಾದಿ ಕಾಲದಿಂದಲೂ ಬಂಗಾಲ ಜಿಲ್ಲೆಯ ದುರ್ಬಲ ಕುಲದ ಜನರು ತಮ್ಮ ಸ್ವಂತ ಪ್ರಯೋಜನಕ್ಕಾಗಿ ಉಪ್ಪನ್ನು ತಯಾರಿಸುತ್ತ ಅವರನ್ನು ಗುಂಡಿನಿಂದ ಹೊಡೆದುದು ಇದು ಮೊದಲನೆಯ ಸಲವಾಗಿದೆ. ಈಗ ಉಪ್ಪಿನ ತೆರಿಗೆಯನ್ನು ಸಿವಿಲ್ ಡಿಸ್‌ಒಬಿಡಿಯನ್ಸಿನ ಮೂಲಕ ವಿರೋಧಿಸುವುದು ಅಗತ್ಯವಿದೆ. ನಾವು ಕಾನೂನು ಭಂಗವನ್ನು ಜಾರಿಗೆ ತರುವುದನ್ನು ನಾಳೆ ನಾಳೆ ಎಂದು ಮುಂದರಿಸಿಟ್ಟರೆ ನಾಳೆ ಎಂಬುದು ಗಣಪತಿ ಮದುವೆಯೇ ಆಗುವುದು. ಆದುದರಿಂದ ಹೋರಾಡಲು ಇಚ್ಛೆಯುಳ್ಳ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೆಂಬರರು ಒಟ್ಟುಗೂಡಿ ಇದರ ವಿಷಯದಲ್ಲಿ ತಕ್ಕ ಆಲೋಚನೆಯನ್ನು ಮಾಡಬೇಕಾಗಿ ಸೂಚಿಸಿರುವರು.

ಜಬಲಪುರ ಸತ್ಯಾಗ್ರಹ:—ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯವರಿಂದ ನೇಮಿಸಲ್ಪಟ್ಟ ಸೆಂಟ್ರಲ್ ಪ್ರೊವಿನ್ಸಿನ ಪ್ರಾಂತಿಕ ಕೊಂಗ್ರೆಸ್ ಕಮ್ಮಿಟಿಯ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗು ಕಳೆದ ತಾರೀಖು ೧೩ರಲ್ಲಿ ಜಬಲಪುರದಲ್ಲಿ ಸೇರಿತು. ಇದರಲ್ಲಿ ಕೆಳಗಿನ ಠರಾವು ಪಾಸಾಗಿದೆ. "ಈಗ ನಾಗಪುರದಲ್ಲಿ ನಡೆಯುವ ಸ್ವರಾಜ್ಯ ಧ್ವಜದ ಸತ್ಯಾಗ್ರಹ ಯುದ್ಧವೂ ಜಬಲಪುರದವರು ಹೂಡಬೇಕೆಂದಿರುವ ಹೋರಾಟವೂ ಒಂದೇ ತರದ್ದು ಮತ್ತು ಒಂದೇ ಸರಕಾರದೊಡನೆ ಆಗಿರುವುದರಿಂದಲೂ ನಾಗಪುರದ ಹೋರಾಟವು ರಭಸದಿಂದ ನಡೆಯುವುದರಿಂದಲೂ ಜಬಲಪುರದವರು ಒಂದು ಪ್ರತ್ಯೇಕ ಹೋರಾಟವನ್ನು ಪ್ರಾರಂಭಿಸುವುದಕ್ಕಿಂತ ನಾಗಪುರದ ಹೋರಾಟಕ್ಕೆನೆ ತಕ್ಕಷ್ಟು ಪ್ರೋತ್ಸಾಹವನ್ನು ಕೊಡತಕ್ಕದ್ದು."

ಲೋರೆನ್ಸ್ ಪ್ರತಿಮೆ:—ಈಗಿರುವ ಸ್ಥಳದಿಂದ ಈ ಪ್ರತಿಮೆಯನ್ನು ತೆಗೆದುಬಿಡಲು ಪ್ರಯತ್ನಿಸುತ್ತಿದ್ದ ಜಹಾಂಗಿರಖಾನ ಎಂಬ ಇನ್ನೊಬ್ಬ ಮನುಷ್ಯನನ್ನು ಕಳೆದ ತಾರೀಖು ೧೫ರಲ್ಲಿ ಪೋಲೀಸಿನವರು ಕೈದುಮಾಡಿರುತ್ತಾರೆ. ಈಗ ಕೆಲವು ಜನರೂ ಹಲವು ಮಂದಿ ಕೊಂಗ್ರೆಸ್ ಸ್ವಯಂಸೇವಕರೂ ಕೊಂಗ್ರೆಸ್ ಕಾರ್ಯಪ್ರಚಾರಕರೂ ಕೂಡಿ ಈ ಪ್ರತಿಮೆಯನ್ನು ಈಗ ಇರುವ ಸ್ಥಳದಿಂದ ತೆಗೆದುಬಿಡುವ ಪ್ರಯತ್ನದಲ್ಲಿರುವರು. ಆದರೆ ಪಂಜಾಬಿನ ಕೊಂಗ್ರೆಸ್ ಕಾರ್ಯಕಾರಿ ಕಮ್ಮಿಟಿಯು ಇದಕ್ಕೆ ಸಮ್ಮತಿಯನ್ನು ಕೊಡಲಿಲ್ಲ. ಇದನ್ನು ಹಲವು ವ್ಯಕ್ತಿಗಳು ತಮ್ಮ ಸ್ವೇಚ್ಛೆಯಿಂದ ಮಾಡುತ್ತಿರುವರು. ಪ್ರಥಮ ಸಲ ಈ ಪ್ರತಿಮೆಯನ್ನು ತೆಗೆದುಬಿಡಲು ಪ್ರಯತ್ನಿಸಿದ ಸರದಾರ ಅಮೃತಸಿಂಗನ ವಿಚಾರಣೆಯು ಈ ತಿಂಗಳ ತಾರೀಖು ೨೫ಕ್ಕೆ ಇಟ್ಟಿದೆ. ಈ ಮನುಷ್ಯನನ್ನು ಬುದ್ಧಿಸ್ವಾಧೀನವಿಲ್ಲವೆಂಬ ಕಾರಣದಿಂದ ಹುಚ್ಚರ ಆಸ್ಪತ್ರೆಗೆ ಕಳುಹಿಸಿದೆ. ಸರದಾರ ಅಮೃತಸಿಂಗನನ್ನು ಅನುಸರಿಸಿ ತಾನ್ನು ಈ ಲೋರೆನ್ಸ್ ಗೊಂಬೆಯನ್ನು ತೆಗೆದುಬಿಡುವುದಾಗಿ ಹೇಳಿದ ಮುಖರಾಜ ಎಂಬವನನ್ನು ಕೈದುಮಾಡಿ ೬ ತಿಂಗಳ ಶಿಕ್ಷೆ ವಿಧಿಸಿದೆ. ಖಾದಿಯ ಉಡುಪನ್ನು ಧರಿಸಿಕೊಂಡು ಲೋರೆನ್ಸ್ ಪ್ರತಿಮೆಯನ್ನು ಕಿತ್ತುತೆಗೆಯಲು ಹೋಗುವ ರತನಚಂದ ಎಂಬೊಬ್ಬನನ್ನು ಕಳೆದ ತಾರೀಖು ೧೯ರಲ್ಲಿ ಸೆರೆಹಿಡಿದಿರುವರು. ಹೀಗೆ ಎರಡು-ಮೂರು ಮಂದಿಗಳನ್ನು ಕೈದುಮಾಡಿರುವುದನ್ನು ನೋಡಿ ಮುನ್ಸಿಪಾಲಿಟಿಯು ಕೌನ್ಸಿಲಿನ ಒಂದು ಮೀಟಿಂಗು ಸೇರಿತು. ಈಗ ಇರುವ ಲೋರೆನ್ಸ್ ಪ್ರತಿಮೆಯನ್ನು ಅಲ್ಲಿಂದ ತೆಗೆದು ಮುನ್ಸಿಪಾಲಿಟಿಯು ಮತ್ತು ಸರಕಾರದ ಖರ್ಚಿನಿಂದ ಈ ಸ್ಥಳದಲ್ಲಿ ಇನ್ನೊಂದು ಪ್ರತಿಮೆಯನ್ನು ಅದರ ಅಡಿಯಲ್ಲಿ ಜನರ ಮನಸ್ಸನ್ನು ನೋಯಿಸುವ ತರದ ಅಕ್ಷರಗಳಿಲ್ಲದೆ ಮಾಡಿ ಸ್ಥಾಪಿಸತಕ್ಕದ್ದೆಂದು ಆಲೋಚನೆಯಾಗುತ್ತಿದೆ.

ಶ್ರೀಯುತ ರಾಜಗೋಪಾಲಾಚಾರ್ಯರು:—ಶ್ರೀಯುತ ರಾಜಗೋಪಾಲಾಚಾರ್ಯರು ಮತ್ತು ದೇವದಾಸ ಗಾಂಧಿಯವರು ತಾ. ೧೩ಕ್ಕೆ ಸೇಲಮಿನಿಂದ ಮುಂಬಯಿಗೆ ಹೊರಟು ಹೋಗಿರುವರು.

[illegible]:—ಈ ಪಟ್ಟಣದಲ್ಲಿ [illegible].

ಕಲ್ಕತ್ತಾ:—[illegible] ಕಳೆದ [illegible] ಮಾಡಿರುವ ಸುಮಾರು [illegible] ಹಾಗದ ಪತ್ರಗಳನ್ನು ಸ್ವಾಧೀನಪಡಿಸಿಕೊಂಡಿರುವರು.

ಯಫ್. ಯಲ್. ಮತ್ತು ಬಿ. ಎಲ್. ಪರೀಕ್ಷೆ:—ಮದರಾಸ ಯೂನಿವರ್ಸಿಟಿ ಸಿನೇಟಿನ ಮೀಟಿಂಗು ಕಳೆದ ತಾರೀಖು ೧೬ರಲ್ಲಿ ಸೇರಿ ಬರುವ ಜುಲಾಯಿ ತಿಂಗಳಲ್ಲಿ ಯಫ್. ಎಲ್. ಮತ್ತು ಬಿ. ಎಲ್. ಪರೀಕ್ಷೆಯನ್ನು ನಡಿಸುವುದು ಅಗತ್ಯವಿಲ್ಲವೆಂದು ಬಹುಮತದಿಂದ ತೀರ್ಮಾನಿಸಿದೆ.

ಯುರೋಪಿಯನ್ ಕಳ್ಳನು:—ಸ್ಕೊಟ್ಲೆಂಡಿನಲ್ಲಿ ಹುಟ್ಟಿದ ಒಬ್ಬ ಯುರೋಪಿಯನ್ನನು [illegible] ಇಂಡಿಯಕ್ಕೆ ಬಂದು ಅವನ ೧೩ನೆಯ ವಯಸ್ಸಿನಿಂದ ದರೋಡೆ ಕಳ್ಳತನ ಮುಂತಾದ ಕೆಲಸಗಳಲ್ಲಿ ಪ್ರವರ್ತನಾದನು. ಇವನಿಗೆ ಈಗ ೫೫ ವರ್ಷ ವಯಸ್ಸು. ಮದರಾಸು, ಮುಂಬಯಿ, ಬೆಂಗಳೂರ ಮುಂತಾದ ಕಡೆಗಳಲ್ಲಿ ಇವನು ಕಳ್ಳತನವನ್ನು ಮಾಡಿರುವನು. ಇವನಿಗೆ ಈಗ ೩ ವರುಷ ೫ ತಿಂಗಳುಗಳ ಸಜೆಯಾಗಿರುವುದು.

ಶಿಯಾಲಿ:—ಇಲ್ಲಿಯ ಒಬ್ಬ ದೇಶಸೇವಕರಾದ ಶ್ರೀಮಾನ್ ಸ್ವಾಮಿನಾಥರೆಂಬವರಿಗೆ ಸರಕಾರದ ವಾರಂಟು ಇರುವುದಾಗಿ ತಿಳಿದು ಬಂದು ಇವರು ತಾವಾಗಿಯೇ ಪೋಲೀಸ ಇನ್ಸ್‌ಪೆಕ್ಟರ ಬಳಿಗೆ ಹೋಗಿ ತನ್ನನ್ನು [illegible] ಮಾಡಬಹುದೆಂದು ತಿಳಿಸಿದರು. ಇವರು ಪೋಲೀಸರ ವಶವಾದರು. ಇವರ ಸ್ನೇಹಿತರು ಬಂದು ಜಾಮೀನನ್ನು ಕೊಟ್ಟು ಇವರನ್ನು [illegible]. ಇವರ ಮೇಲಿನ ಖಟ್ಲೆಯ ತನಿಖೆ ತಾ. ೨೫ಕ್ಕೆ ನಡೆಯುವ[illegible] ಈ ಮೊದಲು [illegible] ಮೆಜಿಸ್ಟ್ರೇಟರ ಮುಂದೆ ನಡೆಯುವುದು. ಇವರು [illegible] ವಾಸವನ್ನು ಅನುಭವಿಸಿ ಬಂದವರಾಗಿರುವರು.

ನಾಗಪುರ [illegible]ಗ್ರಹ ಹೋರಾಟ:—ಈ ಹೋರಾಟವು ಈಗ ಬಹಳ ರಭಸದಿಂದ ನಡೆ[illegible]ದೆ. ಸ್ವಯಂಸೇವಕರ ಸಹಾಯವು ಆಯಾ ಕಡೆಗಳಿಂದ ಬಂದು ಸೇರುತ್ತಿ[illegible]. ಸ್ವಯಂಸೇವಕರು ಮಿ| ಭೇದರ [illegible] ಎಂಬಲ್ಲಿಂದ ೭೩ ಮಂದಿ ಸ್ವಯಂಸೇವಕರು [illegible] ರಾಯಿ ಸಾಹೇಬರನ್ನು ಕೂಡಿಕೊಂಡು [illegible] ಮತ್ತು ಮಿ| ಅಬ್ದುಲ್ ಘಾಟಿ ಎಂಬಲ್ಲಿ ೬೦೦ ಮಂದಿ ಸ್ವಯಂ[illegible] ತಲ್ಪಿರುತ್ತದೆ. ಬಹಳ ಕೂಡಲೇ ಹೊರಟುಹೋಗಲು ಸಿದ್ಧರಾಗಿ[illegible] ಕೂಡಿ ನಾಗಪುರಕ್ಕೆ [illegible]ಟಿಯ ಸೆಕ್ರೆಟರಿಯವರು ಇವರನ್ನು ಸ್ವಲ್ಪ ಕಾಲವು [illegible] ಕೊಂಗ್ರೆಸ ಕಮ್ಮಿಟಿ [illegible]ವಾಗುವುದೆಂದು ತಿಳಿಸಿದರೂ ಇವರಲ್ಲಿ ಅನೇಕರು [illegible] ಹೊರಟಿರುವರು. ಸ್ವಯಂಸೇವಕರನ್ನು ಜನರು ಸಂತೋಷದಿಂದ [illegible] ಕಳುಹಿಸುತ್ತಿದ್ದಾರೆ. ಮಹಿಳೆಯರು [illegible] ಸೇವಕರ ದಳದಲ್ಲಿ ಸೇರಲು ಇಚ್ಛಿಸುವರು. ಘೇದರ ಅಬ್ದುಲ್ [illegible] ತಾಯಿಯು ತನ್ನ ಮಗನನ್ನು ಕಳುಹಿಸಿಕೊಡುವಾಗ ಹೀಗೆಂದರು "ಮಗನೆ ನೀನು ಮುಂದೆ ಹೋಗು, ನಿನ್ನನ್ನು ಕೈದುಮಾಡುತ್ತಲೇ ನಾನು ಸ್ವಯಂಸೇವಿಕೆಯದನ್ನು ಕೂಡಿಕೊಂಡು ನಿನ್ನ ಹಿಂದಕ್ಕೆ ಬರುವೆನು" ಸ್ವಯಂಸೇವಕರು ರೈಲುಗಾಡಿಗಳಲ್ಲಿ ಪ್ರಯಾಣಮಾಡಿ ನಾಗಪುರಕ್ಕೆ ಹೋಗುವಾಗ ಅಲ್ಲಲ್ಲಿನ ಸ್ಟೇಶನುಗಳಲ್ಲಿ ಜನರು ಗುಂಪು ಕೂಡಿ ಇವರನ್ನು ಜಯಜಯಕಾರದಿಂದ ಬೀಳ್ಕೊಡುವರು. ಶೇಟ್ ಚಿರಂಜಿ ಲಾಲ್ ಮಿ ಸೈಟ ಎಂಬ ಹೆಸರಿನ ಒಬ್ಬ ಸುಪ್ರಸಿದ್ಧ ಶ್ರೀಮಂತ ಜೈನವ್ಯಾಪಾರಸ್ಥರು ೧೨ ಮಂದಿ ಸ್ವಯಂಸೇವಕರನ್ನು ಕೂಡಿಕೊಂಡು ನಾಗಪುರಕ್ಕೆ ತಲ್ಪಿರುವರು. ಜಮುನಾಲಾಲ ಬಾಜಜ್ ಮತ್ತು ಮಹಾತ್ಮಾ ಭಗವಾನದಾಸರು ಈ ಸತ್ಯಾಗ್ರಹವನ್ನು ಯಶಸ್ವಿಯಾಗಿ ನಡಿಸಲು ಬಹಳವಾಗಿ ಪ್ರಯತ್ನಿಸುವರು. ಶ್ರೀಯುತ ಜಮುನಾಲಾಲ ಬಾಜಜರು ಈಗ ಮುಂಬಯಿಯಲ್ಲಿ ತಾ. ೨೫ರಲ್ಲಿ ಜರಗುವ ಮೀಟಿಂಗಿಗೆ ಹೊರಟುಹೋಗಿರುವರು.

ಮುಂಬಯಿ:—ಮುಂಬಯಿಯಲ್ಲಿರುವ ನೊಗವೀರ ವ್ಯವಸ್ಥಾಪಕ ಮಂಡಳಿ ಮತ್ತು ನೊಗವೀರ ಕ್ಲಾರ್ಕ್ಸ್ ಯೂನಿಯನ್ ಸಂಘದ ವಾರ್ಷಿಕ ಮಹಾಸಭೆಯು ಇದೇ ಬರುವ ಜೂನ್ ತಿಂಗಳ ತಾರೀಖು ೩ನೇ ಆದಿತ್ಯವಾರ ದಿವಸ ಅಪರಾಹ್ನ ೪ ಗಂಟೆ ಒಂದಕ್ಕೆ ಶ್ರೀಯುತ ಬಿ. ವಾಮನರಾಯರ ಅಧ್ಯಕ್ಷತೆಯಲ್ಲಿ, ದರ್ಬಾಲ್ ರಸ್ತೆಯ ಬಳಿಯಲ್ಲಿರುವ ಹಳೇ ಶಾರ್ ಬಜಾರಿನ ಕಟ್ಟಡದಲ್ಲಿ ಜರಗಿಸಲ್ಪಡುವುದು.

ಮುಂಬಯಿ:—ಸ್ವರಾಜ್ಯ ಪಾರ್ಟಿಯ ಜನರಲ್ ಕೌನ್ಸಿಲಿನ ಒಂದು ಮೀಟಿಂಗು ಬರುವ ತಾರೀಖು ೩೦ರಲ್ಲಿ ಮುಂಬಯಿಯಲ್ಲಿ ಸೇರುವುದು.

ಅಹಮುದಾಬಾದ ಗಿರಣಿಯ ಕೆಲಸಗಾರರ ಮುಷ್ಕರ:—ಮುಷ್ಕರಗಾರರ ಜೋನ್ಸಿನ ಕುರಿತಾದ ವಿವಾದವನ್ನು ಮುಷ್ಕರಗಾರರು ತಮ್ಮ ಮುಷ್ಕರವನ್ನು ನಿಲ್ಲಿಸುವ ವರೆಗೆ ಇತ್ಯರ್ಥಪಡಿಸುವುದು ಅಸಾಧ್ಯವೆಂದು ಶೇಟ್ ಮಂಗಲದಾಸರು ಗಿರಣಿಗಳ ಮ್ಯಾನೇಜರ ಎಸೋಸಿಯೇಶನಿನ ಒಂದು ಮೀಟಿಂಗಿನಲ್ಲಿ ಹೇಳಿರುವರು.

ಸರ್. ನಾರಾಯಣಗಣೇಶ ಚಂದಾವರಕರ:—ಇವರ ಮಕ್ಕಳು ಬೆಂಗಳೂರಿನಿಂದ ಮುಂಬಯಿಗೆ ಇವರ ಅಸ್ಥಿ ಮತ್ತು ಭಸ್ಮವನ್ನು ತರುವಾಗ ಅನೇಕ ಜನ ಯುರೋಪಿಯನರೂ ದೇಶೀಯರೂ ಹಾಜರಿದ್ದರು. ಇವರ ಅಸ್ಥಿ ಮತ್ತು ಭಸ್ಮವನ್ನು ಕುಂಭದ ಕುಕ್ಕೆಯನ್ನು ಶೃಂಗರಿಸಿದ ಒಂದು ಮೋಟಾರಗಾಡಿಯಲ್ಲಿಟ್ಟು ಮುಂಬಯಿಯ ಪ್ರಾರ್ಥನಾ ಸಮಾಜಮಂದಿರಕ್ಕೆ ತಂದರು. ಸ್ವರ್ಗಸ್ಥರಾದ ಚಂದಾವರಕರರು ಹಲವು ವರುಷ ಈ ಮಂದಿರದ ಅಧ್ಯಕ್ಷರಾಗಿದ್ದರು. ಧಾರ್ಮಿಕ ಆಚಾರ ವಿಧಿಗಳು ಮುಗಿದ ಬಳಿಕ ಹಲವರು ಸ್ವರ್ಗಸ್ಥರ ಸುಶೀಲತನವನ್ನು ಮಾಡಿ ಭಾಷಣಮಾಡಿದರು.

ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು:—ದೇಶಬಂಧು ದಾಸರು ತಾರೀಖು ೨೩ಕ್ಕೆ ಕಲ್ಕತ್ತದಿಂದ ಮುಂಬಯಿಗೆ ಹೊರಟು ಹೋಗುವರು. ತಾರೀಖು ೨೫ಕ್ಕೆ ಮುಂಬಯಿಯಲ್ಲಿ ಜರಗುವ ಮೀಟಿಂಗಿಗೆ ಹಾಜರಾಗಿ ತಾರೀಖು ೩೧ಕ್ಕೆ ಮದರಾಸಿಗೆ ತಲ್ಪುತ್ತಾರೆ. ತಿಂಗಳ ಕಡೇ ವಾರದಲ್ಲಿ ಬಂಗಾಳಕ್ಕೆ ಹೋಗುವರು.

ಮಹಾತ್ಮರ ಆರೋಗ್ಯ:—ಮಹಾತ್ಮರು ಈಗ ಸ್ವಲ್ಪ ಆರೋಗ್ಯದಲ್ಲಿ [illegible] ಶ್ರೀಯುತ [illegible] ಕೇಳಕರ ಮತ್ತು ಶ್ರೀಯುತ [illegible] ಮಾಡಿರುವರು.

ಸಂಯುಕ್ತ ಸಂಸ್ಥಾನದ [illegible]:—[illegible].

ಅನುಕ್ರಮಣಿಕೆ.

ಅಗ್ರಲೇಖ:—
 ಹಿಂದೂ ಧರ್ಮಪರಿಷತ್ತಿನ ವರದಿ ೬
ಸ್ಫುಟವಿಚಾರಗಳು.— ೭
 ೧. ಮಹಾತ್ಮಾ ಗಾಂಧಿಯವರ ಆರೋಗ್ಯ ಸ್ಥಿತಿ
 ಉಡುಪಿ ಕೋರ್ಪರೇಶನ್ ಬೇಂಕಿನ ವರದಿ
ಮಂಗಳೂರು— ,,
ದಕ್ಷಿಣಕನ್ನಡ— ಕಾಸರಗೋಡು. ಮುಳಸಿಪೇಟೆಯ ಸತ್ಯಾಗ್ರಹ ,,
ವರ್ತಮಾನ ಸಂಗ್ರಹಗಳು:—
 ವಿದೇಶ ವರ್ತಮಾನ, ಒಳದೇಶ ವರ್ತಮಾನ [illegible]
 ದಕ್ಷಿಣಕನ್ನಡಾ ಜಿಲ್ಲೆಯ ಮತದಾರರ ಓಟರ್ಸ್ ಸಮ್ಮುಖದಲ್ಲಿ. ೮
 ಗಣಪತಿ ರಾಷ್ಟ್ರೀಯ ಶಾಲೆ ,,
 ಹುಬ್ಬಳ್ಳಿ ,,
 ಕೆಲಸದ ರಾಶಿಯು [illegible]

ಸ್ವದೇಶಾಭಿಮಾನಿ.

ಶಕ ೧೮೪೪ ಅಧಿಕ ಜ್ಯೇಷ್ಠ ೧೦ಯು ಶುಕ್ರವಾರ

ಹಿಂದೂ ಧರ್ಮಪರಿಷತ್ತಿನ ವರದಿ.

ಶ್ರೀಮಜ್ಜಗದ್ಗುರು ಶಂಕರಾಚಾರ್ಯರಾದ ಡಾ. ಕುರ್ತಕೋಟಿ ಇವರ ಅಧ್ಯಕ್ಷತೆಯಲ್ಲಿ ನಾಗಪುರದಲ್ಲಿ ಜರಗಿದ ಹಿಂದೂಧರ್ಮಪರಿಷತ್ತಿನ ವರದಿಯು ಪ್ರಕಟವಾಗಿದೆ. ಈ ವರದಿಯಲ್ಲಿ ನಿರ್ದಿಷ್ಟವಾಗಿರುವ ಮಹತ್ವದ ಒಂದೆರಡು ಸಂಗತಿಗಳನ್ನು ವಾಚಕರ ಅವಗಾಹನಕ್ಕೆ ತಂದುಕೊಡಲು ಈ ಹೊತ್ತು ಆಲೋಚಿಸಿದ್ದೇನೆ.

ಈ ಹೊತ್ತು ನಮ್ಮ ದೇಶದ ರಾಜಕೀಯ ಪರಿಸ್ಥಿತಿಯು ಪರಪ್ರತ್ಯಯ ನೇಯ ಬುದ್ಧಿಯವರ ಛತ್ರದ ನೆರಳಲ್ಲಿ ಕೊಳೆತು ಹೋಗಲು ಪ್ರಾರಂಭವಾಗಿದೆ. ಅಹಿಂಸಾತತ್ವದ ಅತಿವ್ಯಾಪ್ತಿಮಯವಾದ ಭ್ರಾಂತವ್ಯಾಖ್ಯಾನವನ್ನು ಕಲ್ಪಿಸಿಕೊಂಡು, ದೇಶದೊಳಗಿನ ಯಾವ ಚಳವಳಿವೆ ಇರಲಿ, ಅದರ ಡಿಗ್ರಿಯನ್ನು ಕಾಲ್ಪನಿಕವಾದ ಈ ಅಹಿಂಸಾತತ್ವದ ಉಷ್ಣತಾಮಾಪಕ ಯಂತ್ರದಿಂದ ನೋಡುವ ದುಷ್ಪ್ರವೃತ್ತಿಯು ಬಿದ್ದಿದೆ. ಈ ಕ್ರಮವೇ ಹಲವು ಸಮಯ ಮುಂದರಿಸಿದ್ದಾದರೆ, ನಮ್ಮ ದೇಶದ ಧಾರ್ಮಿಕ ವೈಶಿಷ್ಟ್ಯದ ಅಸ್ತಿತ್ವಕ್ಕೆ ಎಷ್ಟೊ ಬಾಧೆಯು ಬಾರದೆ ಇರಲಿಕ್ಕಿಲ್ಲ. ಉದಾಹರಣಾರ್ಥವಾಗಿ, ಪತಿತಪರಾವರ್ತನದ ಸಂಗತಿಯನ್ನಿಟ್ಟುಕೊಳ್ಳೋಣ. ಹಿಂದೂ-ಮುಸಲ್ಮಾನರಲ್ಲಿ ಐಕ್ಯವಿರಬೇಕು, ಪರಸ್ಪರ ಒಡಕಿರಬಾರದು ಎಂಬುದು ನಿರ್ವಿವಾದ ಸಂಗತಿಯು. ಈ ದೇಶದಲ್ಲಿ ಹಿಂದುಗಳು ಮಹಮ್ಮದೀಯರಿಗಿಂತಲೂ ಮೂರುಪಾಲು ಹೆಚ್ಚು ಇರುವಾಗ ಸಂಖ್ಯಾಬಲದ ದೃಷ್ಟಿಯಿಂದ ಹಿಂದುಗಳು ಸಹಜವಾಗಿಯೆ ಆತ್ಮಸಂರಕ್ಷಣೆಯನ್ನು ಮಾಡಿಕೊಳ್ಳಬಹುದು. ಆದರೆ ಮಲಬಾರ, ಮುಲತಾನ, ಅಮೃತಸರ ಮುಂತಾದ ಕಡೆಗಳಲ್ಲಿ ಉದ್ಭವಿಸಿದ ದಂಗೆಯ ಅನುಭವದ ಮೇಲಿಂದ ಹೇಳುವುದಾದರೆ ಹಿಂದುಗಳಿಗೆ ಆತ್ಮಸಂರಕ್ಷಣದ ಕಾರ್ಯವು ಬಹು ಪ್ರಯಾಸದ್ದಾಗಿ ಕಂಡುಬರುತ್ತದೆ. ಮಹಮ್ಮದೀಯರಿಗೆ ಹಿಂದುಗಳ ಮೈಮೇಲೆ ಬೀಳುವಾಗ ಐಕ್ಯವಿಘಾತದ ಶಂಕೆಯು ಬರುವುದಿಲ್ಲ. ಅದೆ ಪತಿತಪರಾವರ್ತನ ಚಳವಳವು ಪ್ರಾರಂಭವಾದರೆ, ಈ ಐಕ್ಯವನ್ನು ಯಾಕೆ ಇಟ್ಟುಕೊಳ್ಳಬೇಕು ಎಂದು ಅವರ ಕಡೆಯಿಂದ ಹೇಳೋಣಾಗುತ್ತದೆ. ಇದರ ಅರ್ಥವೇನು? ಐಕ್ಯರಕ್ಷಣವು ಹಿಂದುಗಳಿಗೆ ಮಾತ್ರಬೇಕು, ಇತರರಿಗೆ ಬೇಡವೆ? ಇಡಿ ಹಿಂದುಸ್ಥಾನಕ್ಕೆನೆ ಐಕ್ಯದ ಅವಶ್ಯಕತೆಯು ಇದ್ದ ಬಳಿಕ ಹಿಂದುಗಳನ್ನೆ ದೂಷಿಸುವುದಾಗಲಿ, ಜರಿಯುವುದಾಗಲಿ ಯಾಕೆ? ಅದು ಸಮರ್ಪಕವಲ್ಲ. ಹಿಂದುಗಳು ಯೋಗ್ಯವಾದ ರೀತಿಯಿಂದ ಆತ್ಮಸಂರಕ್ಷಣವನ್ನು ಮಾಡಬೇಕು, ಅಹಿಂಸಾತತ್ವದ ಸ್ತೋಮವನ್ನು ಅಕಾರಣವಾಗಿ ಬೆಳಸಿ ದೇಶನಾಶವನ್ನು ಮಾಡಬಾರದು ಎಂಬಿತ್ಯಾದಿ ವಿಷಯಗಳು ವರದಿಯಲ್ಲಿ ಬಹು ಉತ್ಕೃಷ್ಟ ರೀತಿಯಿಂದ ವಿವರಿಸಲ್ಪಟ್ಟಿವೆ.

ಸ್ವಾಗತಾಧ್ಯಕ್ಷರು ಹಿಂದುಗಳ ಆತ್ಮರಕ್ಷಣೆಯನ್ನು ಕುರಿತು ಮಾಡಿರುವ ಭಾಷಣದಲ್ಲಿ ಒಂದು ಮನನೀಯವಾದ ವಿಷಯವು ಇದೆ. "ಮಲಬಾರದಲ್ಲಿ ದಂಗೆಯಾಯಿತು. ಮತ್ತು ಪ್ರಿನ್ಸ್ ಒಫ್ ವೇಲ್ಸರು ಬಂದಾಗ ಮುಂಬಯಿಯಲ್ಲಿ ದಂಗೆಯಾಯಿತು. ಮಲಬಾರದಲ್ಲಿ ಹಿಂದುಗಳ ದುರವಸ್ಥೆಯನ್ನು ವರ್ಣಿಸಲಾಗದಷ್ಟು ಶೋಚನೀಯವಾಯಿತು. ಮುಂಬಯಿಯ ದಂಗೆಯು ಮುಗಿದ ಬಳಿಕ "ಮುಸಲ್ಮಾನರು ಹಿಂದುಗಳ ಬಾಂಧವರಾದ ಕಾರಣ ಇಂಥ ಸಂದರ್ಭಗಳಲ್ಲಿ ಅವರೆ ಹಿಂದುಗಳನ್ನು ಸಂರಕ್ಷಿಸಬೇಕು" ಎಂದು ಅಯೋಗ್ಯತರದ ವಿಜ್ಞಾಪನೆಯು [illegible] ಹೊರಟಿತ್ತು. ಹಿಂದುಗಳು ತಮ್ಮ ಬಾಹುಬಲದಿಂದ ಅಥವಾ ಕ್ಷತ್ರಿಯರ ಸಹಾಯದಿಂದ ಆತ್ಮರಕ್ಷಣವನ್ನು ಮಾಡಿಕೊಳ್ಳಬೇಕು. ಹಿಂದು ಮುಸಲ್ಮಾನರಲ್ಲಿ ಸದ್ಯಃ ಯಾವ ಐಕ್ಯವುಂಟಾದದ್ದು ಕಂಡುಬರುತ್ತದೊ ಅದು ಸಮಾನ ವ್ಯಸನ ಮೂಲಕವಾದ್ದು. ಯಾಕೆಂದರೆ, "ಸಮಾನಶೀಲ ವ್ಯಸನೇಷು ಸಖ್ಯಂ" ಎಂದು ಸದ್ಯುಕ್ತಿಯು ಇದೆ. ಹಿಂದುಗಳೂ, ಪರತಂತ್ರರು; ಮುಸಲ್ಮಾನರೂ, ಪರತಂತ್ರರು; ಒಬ್ಬರಿಗೆ ಖಿಲಾಫತ್ತಿನ ವ್ಯಸನವು; ಇನ್ನೊಬ್ಬರಿಗೆ ಪಂಜಾಬದ ಮತ್ತು ಮುಖ್ಯತಃ ಸ್ವರಾಜ್ಯಾಭಾವದ ವ್ಯಸನವು. ಈ ರೀತಿಯಿಂದ ಈ ಎರಡು ವರ್ಗಗಳು ಸಮಾನವ್ಯಸನಿಗಳಾದ ಕಾರಣ ಪರಸ್ಪರ ಐಕ್ಯವುಂಟಾಗಿದೆ. ಆದರೆ ಅವರಿಬ್ಬರು ಸಮಾನಶೀಲರಾಗದೆ ಆ ಐಕ್ಯವು ಸ್ಥಿರವಾಗಿ ನಿಲ್ಲಲಿಕ್ಕಿಲ್ಲ. ಮಾತ್ರವಲ್ಲ, ಸಖ್ಯಕ್ಕೆ ಸಮಾನ ಬಲವನ್ನು ಸಹ ಅಪೇಕ್ಷಿಸುವುದು. ದುರ್ಬಲ ಮತ್ತು ಪ್ರಬಲ ಇವರ ಸ್ನೇಹವು ಸ್ಥಿರಸ್ಥಾಯಿಯಾಗದು. ಈಗ ಸಮಾನ ವ್ಯಸನದಿಂದ ಇಬ್ಬರಲ್ಲಿ ಉಂಟಾದ ಸ್ನೇಹವು ಸ್ಥಿರವಾಗಬೇಕಾದರೆ, ದುರ್ಬಲರಾಗಿರುವವರು ಪ್ರಬಲರಾಗಬೇಕು. ಮಹಮ್ಮದೀಯರೊಡನೆ ಸಮಾನಶೀಲರೂ ಆಗಬೇಕು. ಇದರ ಸ್ಪಷ್ಟೀಕರಣವೇನೆಂದರೆ, ಧರ್ಮದ ಸಂಗತಿಯಲ್ಲಿ ಮುಸಲ್ಮಾನರು ಹೇಗೆ ಕೂಡಲೆ ಬಲವನ್ನು ಉಪಯೋಗಿಸುವರೊ ಹಾಗೆಯೆ ಹಿಂದುಗಳಾದರೂ ಧರ್ಮದ ಸಂಗತಿಯಲ್ಲಿ "ಗುದ್ದಿಗೆ ಗುದ್ದು" ಅಥವಾ "ದೊಣ್ಣೆಗೆ ದೊಣ್ಣೆ" ಎಂಬಂತೆ ಸಮಾನ ಪ್ರತಿಕಾರದ "ಶಠಂ ಪ್ರತಿಶಾಠ್ಯಂ" ಈ ತತ್ವದ ಪ್ರಯೋಗವನ್ನಾರಂಭಿಸಬೇಕು. ಎಂದರೆ ಮಾತ್ರ ಹಿಂದು-ಮಹಮ್ಮದೀಯರ ಈಗಿನ ಸಖ್ಯವು ಕೊನೆತನಕ ನಿಲ್ಲುವುದು. ಧರ್ಮದ ಮೇಲೆ ಸಂಕಟವು ಯಾವಾಗ ಬರುವುದೊ ಆಗ ಪ್ರತಿಕಾರಕ್ಕಾಗಿ ಪ್ರತಿಯೊಬ್ಬನು ಬರೆ ಕ್ಷತ್ರಿಯನೆ ಅಲ್ಲ—ಶಸ್ತ್ರಧರಿಸಿ ಧರ್ಮರಕ್ಷಣಕ್ಕಾಗಿ ಯತ್ನಿಸಬೇಕೆಂದು ಧರ್ಮಶಾಸ್ತ್ರದಲ್ಲಿ ಆಜ್ಞಾಪಿಸೋಣಾಗಿದೆ. "ಶಸ್ತ್ರಂ ದ್ವಿಜಾತಿಭಿರ್ಗ್ರಾಹ್ಯಂ ಧರ್ಮೋಯತ್ರೋಪರುಧ್ಯತೇ॥" ಎಂದು ಮನುವಚನವಿದೆ. ಅಹಿಂಸೆ, ಸತ್ಯ, ಅಸ್ತೇಯ ಇತ್ಯಾದಿ ಹತ್ತು ಧಾರ್ಮಿಕ ತತ್ವಗಳನ್ನು ಉಪದೇಶಿಸಿದ ಮನುಮಹರ್ಷಿಯೆ ಅಹಿಂಸಾತತ್ವಕ್ಕೆ ಮೇಲೆ ಉಲ್ಲೇಖಿಸಿದ ಮೇರೆಗೆ ಅಪವಾದವಾದವನ್ನು ವಿಧಿಸಿರುವನು. ವಸಿಷ್ಠನಾದರೊ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಧರ್ಮಸಂಕಟದಂತೆ ಆತ್ಮರಕ್ಷಣದ ಪ್ರಸಂಗದಲ್ಲಿ ಸಹ ಶಸ್ತ್ರಧಾರಣದ ಅಪವಾದವನ್ನು ಕಥನಮಾಡಿರುವನು. ಎಂದ ಮೇಲೆ ವರ್ಣಸಂಕರದ ಸಂದರ್ಭದಲ್ಲಿ ಮತ್ತು ಆತ್ಮತ್ರಾಣದ ಸಮಯದಲ್ಲಿ ಬ್ರಾಹ್ಮಣ ವೈಶ್ಯರು ಕೂಡ ಶಸ್ತ್ರಪಾಣಿಗಳಾಗಬೇಕು, ಆಗ ಕ್ಷತ್ರಿಯರ ವಿಷಯವನ್ನು ಹೇಳಬೇಕಾದ್ದಿದೆಯೆ?" ಈ ರೀತಿಯಿಂದ ಸ್ವಾಗತಾಧ್ಯಕ್ಷರು ವರದಿಯಲ್ಲಿ ಎಷ್ಟೊ ಮಹತ್ವದ ವಾಕ್ಯಗಳನ್ನು ಸೂಚಿಸಿರುವರು. ಧರ್ಮಶಾಸ್ತ್ರದಲ್ಲಿ ಹೇಳಿರುವ ಈ ಪ್ರತಿಕಾರ ತತ್ವವನ್ನೆ "ಸೆಲ್ಫಡಿಫೆನ್ಸ" ಈ ಹೆಸರಿನಿಂದ ಆಧುನಿಕ ಕಾಯಿದೆ ಪುಸ್ತಕದಲ್ಲಿ ಬರೆದಿರುತ್ತದೆ. ಈ ಸೆಲ್ಫಡಿಫೆನ್ಸಿಗೆ ಸರಕಾರದ ವಿರುದ್ಧ ಅವಕಾಶವಿಲ್ಲವೆಂದು ಇಂಡಿಯನ್ ಪಿನಲ್ ಕೋಡು ಹೇಳುತ್ತದಾದರೂ ಸರಕಾರದ ಕೃತ್ಯಕ್ಕೂ ಕೂಡ ಒಂದು ಸೀಮೆ ಇದೆ, ಇದನ್ನು ಯಾರೂ ಮರೆಯಕೂಡದು. ಸಾರಾಂಶ, ಯಾವ ದೃಷ್ಟಿಯಿಂದ ನೋಡಿದರೂ ತಮ್ಮ ತಮ್ಮ ಹೆಂಗಸರು ಮಕ್ಕಳನ್ನು, ಅಹಿಂಸಾತತ್ವವನ್ನು ಮೂಲೆಗೊತ್ತಿಯಾದರೂ ಸಂರಕ್ಷಿಸುವ ಜವಾಬದಾರಿಯು ಕಾಯಿದೆಯಿಂದ ಮತ್ತು ಧರ್ಮಶಾಸ್ತ್ರದಿಂದ ಪ್ರತಿಯೊಬ್ಬನ ಮೇಲೆ ಇದೆ ಎಂಬೀ ತತ್ವವನ್ನು ಎಲ್ಲ ಹಿಂದುಗಳು ಲಕ್ಷ್ಯದಲ್ಲಿಡಬೇಕು. ಈ ರೀತಿಯಿಂದ ಸ್ವಸಂರಕ್ಷಣವನ್ನು ಮಾಡದೆನೆ ತಮ್ಮ ದೌರ್ಬಲ್ಯದ ಪಾಪವನ್ನು ಧರ್ಮದ ತಲೆಯಮೇಲಿಡಲು ಯಾರಾದರೂ ಯತ್ನಿಸಿದರೆ ಅದು ಅವರ ಅಕ್ಷಮ್ಯವಾದ ಪ್ರಮಾದವಾಗದೆ ಇರಲಿಕ್ಕಿಲ್ಲ.

ವರದಿಯಲ್ಲಿ ನಾಗಪುರದ ಸಭಾಧ್ಯಕ್ಷರಾದ ಡಾ. ಕುರ್ತಕೋಟಿಯವರ ಭಾಷಣದ ಸಾರಾಂಶವು ಕೊಡಲ್ಪಟ್ಟಿದೆ. ರಾಜನ ಮತ್ತು ಧರ್ಮಗುರುವಿನ ಅಧಿಕಾರಗಳು ಬೇರೆ ಬೇರೆಯಾಗಿರಬೇಕು. ಮತ್ತು ಧರ್ಮದ ನಿಶ್ಚಯವನ್ನೂ ಪ್ರಚಾರವನ್ನೂ ಮಾಡುವ ಸತ್ತೆಯೂ ಕೂಡ ವಿಭಿನ್ನವಾಗಿಯೆ ಇರಬೇಕೆಂಬೀ ಸಂಗತಿಯು ನಮ್ಮ ಧರ್ಮದಲ್ಲಿ ಪ್ರಾಚೀನ ಕಾಲದಲ್ಲೆ ವಿಧಿಸಲ್ಪಟ್ಟದ್ದೆಂದು ಅವರು ತೋರಿಸಿಕೊಟ್ಟರು. ಈ ಎರಡೂ ಸತ್ತೆಗಳೂ ಲೋಕಪಕ್ಷವನ್ನು ಅವಲಂಬಿಸುವವುಗಳಾಗಿಯೆ ಇರಬೇಕು. ಈಗಿನ ಬ್ರಿಟಿಷ ರಾಜ್ಯದಲ್ಲಿ ಕಾಯಿದೆಗಳನ್ನು ಮಾಡುವ ಮತ್ತು ಜಾರಿಯಲ್ಲಿ ತರುವ ಸತ್ತೆಯು ಒಂದೆ ವ್ಯಕ್ತಿಯ ಕೈಯಲ್ಲಿರುವುದರಿಂದ ಹೇಗೆ ಅನ್ಯಾಯವಾಗುತ್ತದೆ ಅಥವಾ ಬಲಾತ್ಕಾರವಾಗುತ್ತದೆ ಮತ್ತು ಈ ಮೂಲಕದಿಂದ ಪ್ರಜೆಗಳ ಹಿತದ ಕಡೆಗೆ ಮತ್ತು ಇಚ್ಛೆಯ ಕಡೆಗೆ ಹೇಗೆ ದುರ್ಲಕ್ಷ್ಯವು ಉಂಟಾಗುತ್ತದೆ ಈ ವಿಷಯಗಳನ್ನೆಲ್ಲ ಕರವೀರ ಪೀಠಾಧಿಪತಿಗಳಾದ ಡಾ. ಕುರ್ತಕೋಟಿಯವರು ಚಂದವಾಗಿ ವಿವರಿಸಿರುವರು. ಅವರು ವಿವರಿಸಿರುವ ಈ ಭಾಗದ ವಿವರಣದಲ್ಲಿ ಉಪನ್ಯಾಸಕರ್ತರ ಪ್ರಚಂಡ ವಿದ್ವತ್ತೆಯು ಅಲ್ಲಲ್ಲಿ ಪ್ರಕಾಶಿತವಾಗುತ್ತದೆ.

ಹಿಂದೂಧರ್ಮ ಪರಿಷತ್ತು ಈ ಮೂರು ವರ್ಷದಿಂದ ಸೇರುತ್ತಿದೆ. ಇದು ಉತ್ತರ ದೇಶದಲ್ಲಿ ಪ್ರಾರಂಭವಾಗಿರುವುದರಿಂದ ಇನ್ನೂ ನಮ್ಮ ಭಾಗದಲ್ಲಿ ಈ ಚಳವಳದ ಪ್ರಚಾರ [illegible] ಕತೆಯು ಈಗಿನ ದಿವಸಗಳಲ್ಲಿ ಹೆಚ್ಚು ಕಂಡುಬರುತ್ತದೆಂಬುದನ್ನು ಎಲ್ಲರೂ ಲಕ್ಷ್ಯದಲ್ಲಿಡಬೇಕು. ಬ್ರಾಹ್ಮಣ, ಬ್ರಾಹ್ಮಣೇತರ ಈ ಪ್ರಶ್ನೆಯು ಉಪಸ್ಥಿತವಾಗಿ ಹಿಂದುಗಳಲ್ಲಿಯೆ ವೈತುಷ್ಯ, ವಿರೋಧ, ದ್ವೇಷ ಮುಂತಾದ ಐಕ್ಯವಿಘಾತಕವಾದ ಮನೋವ್ಯಾಪಾರಗಳು ಉದ್ಭವಿಸಿವೆ. ಮಾತ್ರವಲ್ಲ, ಅವು ಅನೇಕ ಕಡೆಗಳಲ್ಲಿ ಮತ್ತು ಸಂದರ್ಭಗಳಲ್ಲಿ ಕಾರ್ಯರೂಪವನ್ನು ಹೊಂದಿವೆ. ಈ ಮೇರೆಗೆ ಒಂದೆ ಹಿಂದೂಸಮಾಜದಲ್ಲಿ ವಿಘಾತಕದುರ್ಮನೋವೃತ್ತಿಗಳು ಮೂರ್ತಸ್ವರೂಪವನ್ನು ಹೊಂದಿದ ಬಳಿಕ ಅದು ಬೇಗನೇ ಬಲಹೀನತೆಯ ಕಣಿವೆಯಲ್ಲಿ ದುಮುಕುವುದೆಂಬುದಕ್ಕೆ ಸಂದೇಹವಿಲ್ಲ. ಇದೆ ಹಿಂದೂಧರ್ಮಕ್ಕೆ ತಗಲಿದ ಅಂತಃ ಶತ್ರುವು. ಈ ಅಂತಃಶತ್ರುವಿನಿಂದ ಹಿಂದುಧರ್ಮ ಶರೀರ ಮೆಲ್ಲ ಮೆಲ್ಲನೇ ಕೊರೆಯಲ್ಪಟ್ಟು ಒಂದು ಕಡೆಯಲ್ಲಿ ಟೊಳ್ಳಾಗುತ್ತ ಬಂದಾಗ ಅಥವಾ ಬರುವಾಗ ಇನ್ನೊಂದು ಕಡೆಯಲ್ಲಿ ಎಂದರೆ, ಹೊರಗಿನಿಂದ ಅನ್ಯಧರ್ಮೀಯರ ಧರ್ಮಾಂತರದ ದಾಳಿಯು ಅದರ ಮೇಲೆ ಬೀಳುತ್ತಿದೆ. ಎರಡೂ ಕಡೆಗಳಿಂದ ಈ ಪ್ರಕಾರ ಆಘಾತಗಳು ಬರುವುದಾದರೆ ಅದರ ಅಸ್ತಿತ್ವವನ್ನು ಹೆಚ್ಚು ಸಮಯ ನೆನಸಲು ಸಾಧ್ಯವಾಗದು. ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಹಿಂದೂಧರ್ಮದ ಮೇಲಿನ ಈ ಉಭಯ ವಿಧದ ವಿಪತ್ತುಗಳನ್ನು ಪರಿಹರಿಸಿಕೊಳ್ಳಬೇಕಾದರೆ ಧರ್ಮಾಭಿಮಾನಿಗಳು ಹಿಂದೂಧರ್ಮ ಪರಿಷತ್ತಿನಂಥ ಉದಾರಧೋರಣದ ಸಂಸ್ಥೆಯನ್ನೇರ್ಪಡಿಸಿಕೊಂಡು ಅದರ ಚಳವಳವನ್ನು ಎಲ್ಲ ಕಡೆಯಲ್ಲಿ ಮಾಡಬೇಕು. ಒಂದೆ ಧರ್ಮದ ಛತ್ರದಲ್ಲಿ ನಿಲ್ಲುವವರೆಲ್ಲರೂ ಬಂಧುಭಾವನೆಯಿಂದ ನಿಗಡಿತರಾಗಿ ಪ್ರೀತಿಯಿಂದ, ಒಬ್ಬರನ್ನೊಬ್ಬರು ಅಪ್ಪಿಕೊಂಡಿರಬೇಕು. ಪರಸ್ಪರ ದ್ವೇಷದಿಂದ ಕೆಲವು ಮಟ್ಟಿಗೆ ತತ್ಕಾಲಕ್ಕೆ ಒಂದು ಪಕ್ಷವು ಪ್ರಯೋಜನವನ್ನು ಹೊಂದುವುದು ಕಂಡುಬರುತ್ತದೆಯಾದರೂ ಒಟ್ಟಿನ ಮೇಲೆ ಅದರಿಂದ ದೇಶಕ್ಕೆ ವಿಪತ್ತೆ ಒದಗುತ್ತದೆ ಎಂಬುದನ್ನು ಮಾತ್ರ ಯಾರೂ ಮರೆಯಕೂಡದು. ಚಿಕ್ಕಮಕ್ಕಳ ಕಥೆಯಲ್ಲಿ ಬೋಧಪ್ರದವಾದ ಒಂದು ಕಥೆಯು ಬರೆದಿರುತ್ತದೆ. ಎರಡು ಬಾಯಿಯ ಪಕ್ಷಿಗೆ ಒಂದು ದಿನ ಅಮೃತದ ಫಲವು ಸಿಕ್ಕಿತು. ಅದನ್ನು ಒಂದು ಬಾಯಿ ಮಾತ್ರ ತಿಂದಿತು. ಇನ್ನೊಂದಕ್ಕೆ ಕೊಡಲಿಲ್ಲ. ಆಗ ಇನ್ನೊಂದು ದಿನ ವಿಷದ ಫಲವು ಆ ಪಕ್ಷಿಗೆ ಸಿಕ್ಕಿತು. ಆಗ ಅಮೃತ ಫಲವನ್ನೂಟದೆ ಇದ್ದ ಇನ್ನೊಂದು ಬಾಯಿ, ಬೇಡ ಬೇಡವೆಂದು ಎಷ್ಟು ಹೇಳಿದರೂ ಕೇಳದೆ ಆ ಫಲವನ್ನು ತಿಂದಿತು. ಹೇಗೊ ತಾನೊಬ್ಬನೆ ತಿಂದಿತು! ಮತ್ತು ಮುಯ್ಯಿಗೆ ಮುಯ್ಯಿ ತೀರಿಸಿದೆನೆಂದು ಸಂತೋಷದಿಂದ ತುಂಬಿ ಹೋಯಿತು. ಪರಂತು ಅದು ಈ ಸಂತೋಷವನ್ನು ಹೆಚ್ಚು ಸಮಯದತನಕ ಅನುಭವಿಸಲಿಲ್ಲ. ಎರಡೂ ಮುಖಗಳ ದೇಹವು ಒಂದೆಯಾಗಿರುವುದರಿಂದ ಒಂದು ಬಾಯಿಯಿಂದ ಸ್ವೀಕರಿಸಿದ ವಿಷವು ಇಡೀ ದೇಹವನ್ನು ವ್ಯಾಪಿಸಿ ಪಕ್ಷಿಯ ಪ್ರಾಣವನ್ನ ಅಪಹರಿಸಿತು! ಈ ಕಥೆಯಲ್ಲಿ ಯಾವ ನೀತಿಪಾಠವಿದೆಯೊ ಅದನ್ನು ಒಂದು ವರ್ಗದ ಶತ್ರುತ್ವವನ್ನು ಸಾಧಿಸಲು ಅಹಿತಕಾರ್ಯವನ್ನು ಮಾಡುವ ಇನ್ನೊಂದು ವರ್ಗವು ಶಾಂತರೀತಿಯಿಂದ ಮನನಮಾಡಿ ಆಲೋಚಿಸಬೇಕು. ಅಂತಃಕಲಹದಿಂದ ಸಮಾಜದ ಐಕ್ಯವು ಒಡೆದುಹೋಗುವುದು. ಅರ್ಥಾತ್, ಅದು ಬಲಹೀನವಾಗುವುದು. ಬಲಹೀನವಾದ ಸಮಾಜವು ಯಾವ ಮಹತ್ಕಾರ್ಯವನ್ನಾಗಲಿ ಅಥವಾ ಪುರುಷಾರ್ಥವನ್ನಾಗಲಿ ಸಾಧಿಸಬಲ್ಲದು? ಯಾವದೂ ಇಲ್ಲ. ಪ್ರಾಚೀನ ಕಾಲದ ಚರಿತ್ರೆಗಳು ಮತ್ತು ವರ್ತಮಾನ ಕಾಲದ ಸಂಗತಿಗಳು ಈ ಮಾತನ್ನು ಬಗೆ ಬಗೆಯ ಪ್ರಮಾಣಗಳ ಆಧಾರದಿಂದ ಸಿದ್ಧಮಾಡಿಕೊಡುತ್ತವೆ. ಲೋಕಾನುಭವಸಿದ್ಧವಾದ ಅಂತಃಕಲಹದ ಈ ದುಷ್ಪ್ರವೃತ್ತಿಯನ್ನು ಬಿಡಲು ಹಿಂದೂಧರ್ಮ ಪರಿಷತ್ತು ಸ್ಪಷ್ಟವಾಗಿಯೂ, ಅಂತಃಕರಣಪೂರ್ವಕವಾಗಿಯೂ ಉಪದೇಶಿಸುತ್ತದೆ. ಇದು ಶ್ಲಾಘ್ಯವಾದ ಮಾತೆ ಸರಿ.

ಹಿಂದೂಧರ್ಮ ಪರಿಷತ್ತಿನ ವೃತ್ತಾಂತವು ಈ ರೀತಿಯಿಂದ ಅಂತಃಕಲಹದ ಸ್ವರೂಪವನ್ನು ಉದ್‌ಘಾಟಿಸಿ, ನಿಷೇಧಿಸಿದ ಬಳಿಕ, ಅನ್ಯಧರ್ಮೀಯರಿಂದ ಮಾಡಲ್ಪಡುವ ಧರ್ಮಾಂತರದ ವಿಪತ್ತನ್ನು ನಿಲ್ಲಿಸಲು ಸಮರ್ಪಕವೂ, ಸಮಯೋಚಿತವೂ, ಆದ ಉಪಾಯವನ್ನು ಸೂಚಿಸಿದೆ. ಸ್ವಲ್ಪ ಮಾತಿನಿಂದ ಹೇಳಬೇಕಾದರೆ, ಬಾಹ್ಯಶತ್ರುವನ್ನು ಪ್ರತಿಕಾರಮಾಡಲು ಪತಿತಪರಾವರ್ತನದ [illegible] ಶ್ರೇಯ ಸಾಧನವನ್ನು ಪರಿಷತ್ತಿನ ವೃತ್ತಾಂತವು ದೇಶಬಂಧುಗಳ ಮುಂದೆ ಇಟ್ಟಿದೆ. ಇದು ತುಂಬಾ ಸಮಾಧಾನದ ಮಾತಾಗಿದೆ. ಸಾವಿರಾರು ವರುಷಗಳಿಂದ ಸ್ವಧರ್ಮದಲ್ಲಿ ನಿಂತು ಜನ್ಮಸಾರ್ಥಕವನ್ನು ಮಾಡಿಕೊಳ್ಳುವ ಜನಗಳಿಗೆ ಒತ್ತಾಯ, ಬಲಾತ್ಕಾರ, ಭಯ ಮುಂತಾದ ಭಯಂಕರ ಅತ್ಯಾಚಾರದ ಸಾಧನಗಳಿಂದ ಅಥವಾ ದ್ರವ್ಯ, ಅನ್ನ, ವಿದ್ಯೆ ಇತ್ಯಾದಿ ಆಮಿಷಗಳನ್ನು ತೋರಿಸುವ ಮಿಥ್ಯಾಚಾರಗಳಿಂದ ಧರ್ಮಾಂತರದ ದುರ್ಯೋಗವನ್ನು ಕೊಡುವ ಚಾಳಿಕೆಯು ಈ ಸ್ವಾರ್ಥಪ್ರಧಾನವಾದ ಜಗತ್ತಿನಲ್ಲಿ ಎಂದಿನಿಂದಲೆ ಇದೆಯಷ್ಟೆ. ಹಿಂದೂಧರ್ಮದ ಮೇಲೆ ಈ ಎರಡೂ ಪ್ರಕಾರಗಳ ಆಘಾತದ ಪರಿಣಾಮವುಂಟಾಗಿದೆ. ಇದನ್ನು ನಿಷ್ಫಲಗೊಳಿಸಲು ಪತಿತ [illegible] ವಾಮಮಾರ್ಗದ ಉಪಾಯಗಳನ್ನು ಕೈಕೊಂಡು ಸಾವಿರಾರು ವರುಷದಿಂದ ಹಿಂದುಗಳಾಗಿರುವವರನ್ನು ಬಟಾಯಿಸಿಕೊಂಡು ಹೋಗಬಹುದು; ಆದರೆ ಈ ರೀತಿಯಿಂದ ಇತ್ತಲಾಗಿ ಹಟದಿಂದ ಅಥವಾ ಕಪಟದಿಂದ ಕೊಂಡುಹೋದವರನ್ನು ಮಾತ್ರ ಪುನಃ ಸ್ವಧರ್ಮದಲ್ಲಿ ತರಬಾರದು ಎಂದು ಹೇಳಿದರೆ ಈ ಸ್ವಾರ್ಥಪರವಾದ ಮಾತಿಗೆ ನಿಷ್ಪಕ್ಷಪಾತಿಗಳಾದವರು ಯಾರು ಬೆಲೆ ಕೊಟ್ಟಾರು? ಅರ್ಥಾತ್, ಹಿಂದೂಧರ್ಮ ಪರಿಷತ್ತು, ಹಿಂದೂ ಧರ್ಮದ ಮೇಲಿನ ಈ ಬಾಹ್ಯ ಅರಿಷ್ಟವನ್ನು ದೂರೀಕರಿಸಲು ಪತಿತಪರಾವರ್ತನದ ಶಾಸ್ತ್ರೀಯ ಉಪಾಯವನ್ನು ಜನಗಳ ಗೋಚರಕ್ಕೆ ತಂದುಕೊಟ್ಟಿದೆ. ಪತಿತಪರಾವರ್ತನದ ಈ ಉಪಾಯವು ಶಾಸ್ತ್ರೀಯವಾದದ್ದೆಂದು ಹೇಳಲು ಕಾರಣವೇನೆಂದರೆ, ದೇವಲ ಸ್ಮೃತಿಯಲ್ಲಿ ಈ ಉಪಾಯವು ಸ್ಪಷ್ಟವಾಗಿ ಉಕ್ತವಾಗಿದೆ. ದೇವಲಸ್ಮೃತಿಯು ಸಾಮಾನ್ಯವಲ್ಲ, ಮುಖ್ಯವೆಂದು ಪರಿಗಣಿತವಾದ ಯಾವ ಸ್ಮೃತಿಗಳಿವೆಯೊ ಅವುಗಳಲ್ಲಿ ದೇವಲ ಸ್ಮೃತಿಯು ಅಂತರ್ಭೂತವಾಗುತ್ತದೆ. ಎಂದರೆ ಅದು ಮಹತ್ವದ ಮುಖ್ಯ ಸ್ಮೃತಿಯೆಂದು ತಿಳಿಸಿ ಆ ಸ್ಮೃತಿಯೊಳಗಿನ ಪತಿತಪರಾವರ್ತನ ಪ್ರತಿಪಾದಕವಾದ ವಚನವನ್ನು ಈ ಕೆಳಗೆ ಕೊಡುತ್ತೇನೆ.

"ಗೃಹೀತೋ ಯೋ ಬಲಾನ್ ಮ್ಲೇಚ್ಛೈಃ ಪಂಚಷಡ್‌ಸಪ್ತ ವಾಸವಾ॥
ದಶಾದಿವಿಂಶತಿ ಯಾವತ್ ತಸ್ಯ ಶುದ್ಧಿ ರ್ವಿಧೀಯತೇ" ॥ ೧ ॥

ಈ ವಚನದಲ್ಲಿ ಹೇಳಿರುವ (೫, ೬, ೭, ೧೦, ೨೦) ವರ್ಷಸಂಖ್ಯೆಯ ಮೇಲಿಂಗ ಎಷ್ಟೊ ವರುಷಗಳ ವರೆಗೆ ಧರ್ಮಾಂತರದಲ್ಲಿದ್ದವರನ್ನು ಶುದ್ಧ ಮಾಡಬಹುದೆಂದು ಹೇಳಿದಂತಾಗುತ್ತದೆ. ಈ ವಚನವನ್ನು ಪರ್ಯಾಲೋಚಿಸುವಾಗ ಪತಿತಪರಾವರ್ತನದ ಕಲ್ಪನೆಯು ಆಧುನಿಕವಲ್ಲ, ಪ್ರಾಚೀನದ್ದೆಂದು ಗೊತ್ತಾಗುತ್ತದೆ. ಮೇಲಿನ ಎರಡು ಉಪಾಯಗಳನ್ನು ಮಾಡಿ ಧರ್ಮಸಂಕಟಗಳನ್ನು ಪರಿಹರಿಸಬೇಕೆಂದು ಹಿಂದೂಧರ್ಮ ಪರಿಷತ್ತಿನ ವರದಿಯು ಸೂಚಿಸಿದೆ.

ಸ್ಫುಟವಿಚಾರಗಳು.

೧. ಮಹಾತ್ಮಾ ಗಾಂಧಿಯವರಿಗೆ ಯರವಾಡ ಜೈಲಿನಲ್ಲಿ ೧೦೫ ಡಿಗ್ರಿ ವರೆಗೆ ಜ್ವರವು ಪ್ರಾರಂಭವಾಗಿದೆಂದು ಪೂನೆಯ ಲೋಕಸಂಗ್ರಹ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅನಂತರ ಸರಕಾರದವರು ಮಹಾತ್ಮರ ಆರೋಗ್ಯ ಸ್ಥಿತಿಯನ್ನು ಕುರಿತು ಒಂದು ಪ್ರಕಟನೆಯನ್ನು ಹೊರಡಿಸಿದರು. ಈ ಪ್ರಕಟನೆಯ ಸಾರಾಂಶವನ್ನು ಈ ಸಂಚಿಕೆಯ ಇನ್ನೊಂದು ಕಡೆಯಲ್ಲಿ ಕೊಟ್ಟಿರುತ್ತೇವೆ. ಮಹಾತ್ಮರಿಗೆ ಅಸೌಖ್ಯವುಂಟಾಗಿದೆ ಎಂಬ ವಾರ್ತೆಯು ಕೇಳುತ್ತಲೇ ಎಲ್ಲ ಕಡೆಯಲ್ಲೂ ಗಾಬರಿಯುಂಟಾಗಿ ಅನೇಕ ಕಡೆಗಳಿಂದ ಯರವಾಡ ಜೈಲಿನ ಸುಪರಿಂಟೆಂಡೆಂಟರಿಗೆ ಮಹಾತ್ಮರ ಆರೋಗ್ಯ ಸ್ಥಿತಿಯನ್ನು ತಿಳಿಸಬೇಕಾಗಿ ತಂತಿಗಳು ಕಳುಹಿಸಲ್ಪಟ್ಟವು. ಮಹಾತ್ಮರ ಪ್ರತ್ಯಕ್ಷ ದರುಶನವನ್ನು ಪಡಿಯಲು ಅವರ ಪತ್ನಿಯವರು ಯರವಾಡಾ ಜೈಲಿಗೆ ಹೊರಟು ಹೋಗಿರುವರೆಂದು ಸುದ್ದಿ ಇದೆ. ಅವರು ಅಲ್ಲಿಗೆ ತಲ್ಪಿ ಅವರ ಭೇಟಿಯನ್ನು ಪಡೆದ ವರ್ತಮಾನವು ಈ ವರೆಗೆ ಕೇಳುವುದಿಲ್ಲ. ಶ್ರೀಮತಿ ಕಸ್ತುರಿಬಾಯಿಯವರು ಮಹಾತ್ಮರ ದರುಶನವನ್ನು ಪಡೆದು ಹಿಂತಿರುಗಿ ಬರುತ್ತಲೇ ಮಹಾತ್ಮರ ಯೋಗಕ್ಷೇಮದ ಸರಿಯಾದ ವರ್ತಮಾನವನ್ನು ತರುವರಾಗಿ ನಂಬಿದ್ದೇವೆ. ಮಹಾತ್ಮರ ಪುತ್ರ ದೇವಿದಾಸ ಗಾಂಧಿಯವರು ಮತ್ತು ಇತರರು ಬಿಟ್ಟ ತಂತಿಗೆ ಬಂದ ಉತ್ತರದ ಮೇರೆಗೆ "ಅವರಿಗೆ ಈಗ ಸ್ವಲ್ಪ ರಕ್ತಾತಿಸಾರದ ಬೇನೆ ಇದ್ದುದರಿಂದ ದೇಹಾಲಸ್ಯವಿದೆ" ಎಂದು ತಿಳಿದು ಬರುತ್ತದೆ.

ಮಂಗಳೂರು.

ಮದರಾಸ ಸರಕಾರದ ಚೀಫ್ ಮಿನಿಸ್ಟರರಾದ ಪನಗಲ್ ರಾಜಾರವರು ಬರುವ ತಾ. 30ರಲ್ಲಿ ಇಲ್ಲಿಗೆ ಬಂದು ಆ ದಿನ ಗುರುಪುರ ಸಂಕವನ್ನು ತೆರಿಯಲಿಕ್ಕಿದ್ದಾರೆ. ಈ ಸಮಾರಂಭವು ಮುಗಿದ ಬಳಿಕ ಈ ಸಂಕವನ್ನು ಕಂಟ್ರಾಕ್ಟಿಗೆ ವಹಿಸಿಕೊಂಡ ಮಿ| ಗೋವಿಂದ ಮೊದಲಿಯಾರರ ಟೀಪಾರ್ಟಿಯ ಸತ್ಕಾರವು ನಡಿಯುವುದು.

ಕಳೆದವಾರ ಬೆಂಗಳೂರಿನಲ್ಲಿ ವಿಧಿವಶರಾದ ಸರ್. ನಾರಾಯಣ ಚಂದಾವರಕರರ ಸಂತಾಪ ಸೂಚನಾರ್ಥವಾಗಿ ಕಳೆದ ತಾರೀಕು ೨೦ರಲ್ಲಿ ಒಂದು ಸಭೆ ಸೇರಿತ್ತು. ಈ ಸಭೆಯಲ್ಲಿ ರಾವ್‌ಬಹದ್ದೂರ್ ಸುಬೀರ ರಘುನಾಥರಾವ್, ಬೆರಿಸ್ಟರ ಆರ್. ಯಂ. ರೈ ಮೊದಲಾದವರು ಸ್ವರ್ಗಸ್ಥರ ಗುಣಕಥನವನ್ನು ಮಾಡಿ ಭಾಷಣಮಾಡಿದರು.

ದಕ್ಷಿಣ ಕನ್ನಡ, ನೀಲಗಿರಿ ಮತ್ತು ಮಲಬಾರು ಜಿಲ್ಲೆಗಳ ಕ್ರೈಸ್ತರ ಪರವಾಗಿ ಮದರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರಿಗೆ [illegible] ಜೆ. ಗೊನ್ಸಾಲ್ವಿಸರು [illegible] ಉಮೇದ್ವಾರರಾಗಿರುವರು.

ಇದೇ ಬರುವ [illegible] ಮೆಂಬರಿಕೆಗೆ ಮ. ರಾ. ಕಲ್ಲೆಸುಂದರರಾವ್, ಮ. ರಾ. ಬಿ. ಸುಬ್ಬಯ್ಯ ಗುತ್ತೆದಾರ ಮತ್ತು ಮಿ| ಡಿ. ಪಿ. ಸಿ. ಬ್ರಿಟೋರವರು ಉಮೇದ್ವಾರರಾಗಿರುವರು.

ಹಿಂದೂಮತ ಸಂಬಂಧವಾದ ಎನ್‌ಡೌಮೆಂಟ ಬೀಲನ್ನು ಕುರಿತು ಆಲೋಚಿಸುವ ಒಂದು ಸಭೆಯು ಮ. ರಾ. ವಕೀಲ ಯು. ಸಿ. ಕೃಷ್ಣಭಟ್ಟರ ಮನೆಯಲ್ಲಿ ನಾಳೆ ಸೇರುವುದು.

ಕಾಸರಗೋಡು ತಾಲೂಕಿನಲ್ಲಿ ಈ ವರೆಗೆ ತಿಲಕ ಸ್ವರಾಜ್ಯ ಫಂಡಿಗೆ ರೂ. ೮೫೦ ವಂತಿಗೆ ಆಗಿರುವುದು. ಮತ್ತು ೩೨ ಮಂದಿ ಸ್ವಯಂ ಸೇವಕರು ಸೇರಿರುವರು.

ಕುಂದಾಪುರದ ಕಡೆಗೆ ಸರ್ಕೀಟಿಗೆ ಹೋದ ಜಿಲ್ಲಾ ಕಲೆಕ್ಟರರು ಈ ತಿಂಗಳ ತಾರೀಕು ೧೮ಕ್ಕೆ ಮಂಗಳೂರಿಗ ತಲ್ಪುವರು.

ಕಂಕನಾಡಿ ಸಂಕದ ಬಳಿ ಒಂದು ಎಳೆ ಕೂಸಿನ ಶವವು ಸಿಕ್ಕಿದೆ.

ಮದರಾಸಿನ ಹ್ಯಾಕೋರ್ಟ ವಕೀಲ ಮ. ರಾ. ಕೆ. ರಮಾನಾಥ ಶೆಣ್ಯಾ ಇವರ ಸಹೋದರ ಕೆ. ಕೃಷ್ಣ ಶೆಣೈರೆಂಬವರೂ ಡಾ. ರಬೈಲ್ಲೋ ಎಂಬವರೂ ಡಿ. ಸಿ. ಯಚ್. ಪರೀಕ್ಷೆಯಲ್ಲಿ ಪಾಸಾಗಿರುವರು.

ಉಡಿಪಿಯಲ್ಲಿ ಗಾಂಧಿದಿನದ ವಂತಿಗೆಯಾಗಿ ಕಳೆದ ಎಪ್ರಿಲ್ ೧೮ಕ್ಕೆ ರೂ. ೫೩ ಮತ್ತು ಮೇ ೧೮ಕ್ಕೆ ರೂ. ೩೩—೧೫—೬ ವಸೂಲಾಗಿದೆ.

ಉಡ್ಪಿಯ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಈ ಬೇಂಕಿನ ಪಾಲುಮಾಲಿಕರ ಸಭೆಯು ಇದೇ ತಾ. ೨೭ರಲ್ಲಿ ಕೂಡುವುದು. ಈ ಸಭೆಯಲ್ಲಿ ಬೇಂಕಿನ ವರುಷಾವಧಿ ಲೆಕ್ಕಪಟ್ಟಿಗಳು ಮತ್ತು ಸಂಸ್ಥೆಯ ವಿಷಯ ಡ್ಯಾರೆಕ್ಟರರ ರಿಪೋರ್ಟು ಸಹ ಪರ್ಯಾಲೋಚಿಸಲ್ಪಡುವುದು. ಬೇಂಕಿನ ಅಭಿವೃದ್ಧಿಯನ್ನು ಸೂಚಿಸಿ ಆಯಾ ವರುಷಗಳ ಭಂಡವಾಳ, ಠೇವಣಾತಿ ಇತ್ಯಾದಿಗಳ ಲೆಕ್ಕಗಳನ್ನು ತೋರಿಸಿ ಒಂದು ಪಟ್ಟಿಯನ್ನು ಡ್ಯಾರೆಕ್ಟರರು ತಮ್ಮ ವರದಿಯಲ್ಲಿ ಪ್ರಕಟಿಸಿರುವರು. ಈ ಪಟ್ಟಿಯ ಪ್ರಕಾರ ೧೯೧೬-೧೭ನೇ ವರುಷದಲ್ಲಿ ಮೌಲ್ಯ ತೆರೋಣಾದ ರೂ. ೧೮೪೦೦ರ ಭಂಡವಾಳವು ೧೯೨೧-೨೨ರಲ್ಲಿ ರೂ. ೧,೦೪,೮೫೦ಕ್ಕೆ ಏರಿದೆ. ಪಾಲು ಭಂಡವಾಳವು ಈ ರೀತಿ ಆರು ವರುಷಗಳಲ್ಲಿ ಆರರಷ್ಟು ಏರಿದೆಂಬುದು ಸ್ಪಷ್ಟವಾಗುವುದು. ನಿರಖು ಮತ್ತು ಇತರ ಠೇವಣಾತಿಗಳ ೧೯೧೬-೧೭ರಲ್ಲಿ ಒಟ್ಟು ಮೊಬಲಗು ೧೮೪೫೫ ಆಗಿತ್ತು. ಈ ಮೊಬಲಗು ಕಳೆದ ಮಾರ್ಚಿ ತಿಂಗಳ ಅಂತ್ಯಕ್ಕೆ ೩,೪೭,೮೩೫ಕ್ಕೆ ಏರಿದೆ. ಇದಕ್ಕೆ ಸರಿಯಾಗಿ ಬೇಂಕಿನ ಕ್ಷೇಮನಿಧಿ ಮತ್ತು ಪಾಲುಮಾಲಿಕರಿಗೆ ದೊರಿಯಬೇಕಾದ ಮುನಾಫೆಯ ದರವೂ ಹೆಚ್ಚಿರುವುದು. ಬೇಂಕು ಜನರ ವಿಶ್ವಾಸಕ್ಕೆ ಹೇಗೆ ಪಾತ್ರವಾಗಿದೆ ಎಂಬುದಕ್ಕೆ ಡ್ಯಾರೆಕ್ಟರರು ತಮ್ಮ ವರದಿಯಲ್ಲಿ ತಕ್ಕ ನಿದರ್ಶನವನ್ನು ಕೊಟ್ಟಿರುವರು. ಅದೇನಂದರೆ, ಪಾಲು ಒಂದಕ್ಕೆ ರೂ. ೫೦ರಂತೆ ಬೆಲೆ ಏರಿಸಿ ೫೦ ರೂಪಾಯಿ ಮೌಲ್ಯದ ೨೦೦೦ ಪಾಲುಗಳನ್ನು ತಾ. ೧—೩—'೨೨ರಲ್ಲು ಅದು ವರೆಗೆ ಬೇಂಕಿನ ಪಾಲುಮಾಲಿಕರಲ್ಲದವರಿಗೆ ವಿಕ್ರಿತಕ್ಕೆ ಅರ್ಪಿಸಲಾಗಿ, ಅದೇ ತಿಂಗಳ ಅಂತ್ಯದೊಳಗೆ 1088 ಪಾಲುಗಳು ವಿಕ್ರಿತವಾಗಿ ವಿಂಗಡಿಸಿ ಕೊಡಲ್ಪಟ್ಟದ್ದಲ್ಲದೆ ಬಾಕಿ ಉಳಿದವುಗಳ ಪೈಕಿ ಹೆಚ್ಚಿನ ಪಾಲುಗಳಿಗೆ ಅರ್ಜಿಗಳು ಬಂದು ವಿಂಗಡಿಸಿಕೊಡಲಿಕ್ಕೆ ಬಾಕಿಯಲ್ಲಿದೆ. ಕುಂದಾಪುರದಲ್ಲಿ ಈ ಬೇಂಕಿನ ಶಾಖೆಯನ್ನು ಸ್ಥಾಪಿಸಿರುವುದರಿಂದ ಬೇಂಕಿನ ಪಾಲುಗಳಿಗೆ ಇನ್ನಷ್ಟು ಗಿರಾಕಿಯು ಉಂಟಾಗಬಹುದು. ಮತ್ತು ಬೇಂಕಿನ ಪಾಲುಮಾಲಿಕರಾಗಿ ಯಾವ ಜಾತಿಮತಸ್ಥರೂ ಕೂಡಬಹುದಾಗಿದ್ದರಿಂದ ಪಾಲುಗಳ ವಹಿವಾಟಕ್ಕೆ ಈ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ಇತರ ಯಾವ ಬ್ಯಾಂಕಿಗಳಿಗಿಂತಲೂ ಈ ಬೇಂಕಿನಲ್ಲಿ ವಿಶೇಷವಾದ ಅನುಕೂಲತೆಗಳಿರುವವು. ಈ ಕಾರಣದಿಂದ ಮುನಾಫೆ ದರ ಮತ್ತು ಕ್ಷೇಮನಿಧಿ ಇವು ಹೇಗೆ ಏರುತ್ತವೊ ಅದೇರೀತಿ ಪಾಲುಗಳ ಕ್ರಯವೂ ಏರುತ್ತ ಹೋಗುವುದು. ಆಯವ್ಯಯಗಳ ತಖ್ತೆಯ ಪರಿಶೀಲನೆಯಿಂದ ಬೇಂಕಿನಲ್ಲಿ ಒಟ್ಟಿನ ವಹಿವಾಟವು ವರದಿಯ ವರುಷದಲ್ಲಿ ರೂ. 2258193—4—5 ಇತ್ತೆಂತ ಕಂಡು ಬರುತ್ತದೆ. ಇಷ್ಟು ದೊಡ್ಡ ವಹಿವಾಟಿನ ಈ ಬೇಂಕಿನಲ್ಲಿ ಶಿಬಂದಿ ತಲಬು ರೂ. 1605 ಮಾತ್ರ ಇರುವುದು. ಈ ತಲಬಿನ ದರವನ್ನು ಸ್ಥಿರಗೊಳಿಸುವುದಾದರೆ ಸಿಬಂದಿಗೆ ದೀರ್ಘಕಾಲ ಉತ್ಸಾಹದಿಂದ ಕೆಲಸ ಮಾಡಲು ಮನಸ್ಸು ಬಾರದು. ಈ ಸಂಗತಿಯನ್ನು ಪಾಲುಮಾಲಿಕರು ಲಕ್ಷ್ಯಕ್ಕೆ ತಂದುಕೊಳ್ಳಬೇಕಾಗಿದೆ. ಈ ವರುಷದಲ್ಲಿ ಲಾಭಾಂಶ ಕೂಡ ಸೇಕಡಾ 11ರ ದರದ ಮುನಾಫೆಯನ್ನು ಕೊಡಲು ಡ್ಯಾರೆಕ್ಟರರು ಸಿಫಾರಸು ಮಾಡಿರುತ್ತಾರೆ. ಇತರ ಬೇಂಕುಗಳಲ್ಲಿ ಸಿಕ್ಕುವ ಮುನಾಫೆಯ ದರವು ಈಗಲೀಗ ಹೆಚ್ಚುತ್ತಲಿರುವುದರಿಂದ ತಮ್ಮ ಬೇಂಕಿನ ಪಾಲುಗಾರರಿಗೂ ಸೇಕಡಾ 11ರ ದರದ ಮುನಾಫೆಯನ್ನು ಡ್ಯಾರೆಕ್ಟರರು ಸಿಫಾರಸು ಮಾಡಿರಬಹುದು. ಆದರೆ ಇನ್ನು ಸದ್ಯಕ್ಕೆ ಪ್ರತಿವರುಷದಲ್ಲಿಯೂ ಇದೇ ರೀತಿ ಮುನಾಫೆ ದರವನ್ನು ಏರಿಸುತ್ತ ಹೋಗುವುದು ಯುಕ್ತ ಕಾಣುವುದಿಲ್ಲ. ಕ್ಷೇಮನಿಧಿಯನ್ನು [illegible] ದಲ್ಲಿ ಹೆಚ್ಚಿನ ಮುನಾಫೆಯನ್ನು ವಿನಿಯೋಗಿಸುವುದು ಬೇಂಕಿನ ಈಗಿನ ವಹಿವಾಟದ ದೃಷ್ಟಿಯಿಂದ ಅತ್ಯಗತ್ಯವಾಗಿದೆ. ಬೇಂಕುಗಳ ಸ್ಥಾಪನೆಯು ಇಲ್ಲದಂಥಾ ಕುಂದಾಪುರದಲ್ಲಿ ಶಾಖೆಯನ್ನು ಇಟ್ಟದ್ದು ಲೇಸಾಯಿತು. ಆದರೆ ಜಿಲ್ಲೆಯ ಇತರ ತಾಲೂಕು ಪ್ರಾಂತ್ಯಗಳಲ್ಲಿ ಇನ್ನು ಶಾಖೆಗಳನ್ನು ಸ್ಥಾಪಿಸುವ ಮೊದಲು ಶಾಖೆಗಳ ವಹಿವಾಟಗಳೆಲ್ಲವುಗಳಿಗೆ ಅಗತ್ಯವೂ ಉಪಯುಕ್ತವೂ ಆಗುವಂತೆ ಜಿಲ್ಲೆಯ ಪ್ರಧಾನಪಟ್ಟಣವಾದ ಮಂಗಳೂರಿನಲ್ಲಿ ಪ್ರಥಮತಾ ಒಂದು ಶಾಖೆಯನ್ನು ತೆರಿಯುವುದು ಅವಶ್ಯಕವಾಗಿದೆ. ಶ್ಲಾಘ್ಯನೆಗೆ ಯೋಗ್ಯವಾದ ಉತ್ಸಾಹದಿಂದ ಬೇಂಕಿನ ಕಾರ್ಯನಿರ್ವಾಹವನ್ನೂ ಅದರ ಅಭಿವೃದ್ಧಿಯನ್ನೂ ಸಾಧಿಸುತ್ತಿರುವ ಅಧಿಕಾರಿಗಳಿಗೆ ಮಂಗಳೂರು ಶಾಖೆಯ ಸ್ಥಾಪನೆಯನ್ನು ಶೀಘ್ರದಲ್ಲಿ ಕೈಗೂಡಿಸುವುದು ಅಸಾಧ್ಯವಲ್ಲವೆಂಬದಾಗಿ ಕೋರುತ್ತೇವೆ.

ದಕ್ಷಿಣ ಕನ್ನಡ.

ಕಾಸರಗೋಡು:—ಇದೇ ತಾರೀಕು ೧೭ನೇ ಬುಧವಾರ ರಾತ್ರಿ ಸುಮಾರು ೮ ಘಂಟೆ ಸಮಯಕ್ಕೆ ಮಾಪಿಳ್ಳೆ ಜಾತಿ ಯುವಕನೊಬ್ಬನು ಅದೇ ದಿನ, ಮೈಲ್‌ಬಂಡಿಗೆ ಸಿಂಗಪುರದಿಂದ ಬಂದವನು ತನ್ನ ಊರು ಮನೆಯಾದ ಮುಟ್ಟತ್ತೋಡಿಗೆ ಹೋಗುವಾಗ ಕತ್ತಲೆಯಲ್ಲಿ ಹಿಂದಿನಿಂದ, ೪, ೫ ಜನ ಮಾಪಿಳ್ಳೆ ಜವಾನರು ಆತನನ್ನು ಹಿಂಬಾಲಿಸಿಕೊಂಡು ಬಂದು ಅವನ ಮೇಲೆ ಬಿದ್ದು, ಕುತ್ತಿಗೆಯನ್ನು ಬಿಗಿಹಿಡಿದು ಅವನ ಹೆಗಲ ಮೇಲಿರುವ ಮರದ ಪೆಟ್ಟಿಗೆಯೊಂದನ್ನು ಕಸಕೊಂಡು ಓಡಿಹೋದರು. ಯುವಕನು ಮೃತಪ್ರಾಯನಾಗಿ ಮಾರ್ಗದಲ್ಲಿಯೇ ಬಿದ್ದು ಬಿಟ್ಟನು. ಕಡೆಗೆ ಯಾರೋ ದಾರಿಗರು ಸ್ಮರಣೆಯಿಲ್ಲದೆ ಬಿದ್ದ ಆತನನ್ನು ಎತ್ತಿ ಒಂದು ಅಂಗಡಿ ಜಗಲಿಯ ಮೇಲೆ ಮಲಗಿಸಿ ಶೈತ್ಯೋಪಚಾರಗಳನ್ನು ಮಾಡಿದರು. ಮತ್ತು ಮರುದಿನ ಬೆಳಗ್ಗೆ ಆತನನ್ನು ಬಂಡಿಯಲ್ಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಅಲ್ಲಿ ಆತನು ಚಿಕಿತ್ಸೆ ಹೊಂದುತ್ತಿರುತ್ತಾನೆ. ಇವನನ್ನು ಆಸ್ಪತ್ರೆಗೆ ಒಯ್ದ ದಿವಸವೇ ಬೆಳಗ್ಗೆ ಸುಮಾರು ೧೦ ಘಂಟೆಯ ಸಮಯಕ್ಕೆ ಇಲ್ಲಿಯ ರಜೆಯ ಮೇಲೆ ಇರುವ ಪುತ್ತೂರು ಪೋಲೀಸು ಸರ್ಕಲ್ ಇನ್‌ಸ್ಪೆಕ್ಟರರಾದ ಚಮ್ನಾಡ ಸಾಹೇಬರು, ಚಮ್ನಾಡು ಗ್ರಾಮದಲ್ಲಿರುವ ತಮ್ಮ ಮನೆಯ ಕಡೆಗೆ ಹೋಗುತ್ತಿರುವಾಗ, ಒಬ್ಬ ಮಾಪಿಳ್ಳೆಯು ಒಬ್ಬ ಹುಡುಗನ ಹೆಗಲ ಮೇಲೆ ಒಂದು ಪೆಟ್ಟಿಗೆಯನ್ನು ಹೊರಿಸಿಕೊಂಡು ಹೋಗುವಾಗ, ಗುಮಾನಿನ ಮೇಲೆ ಆ ಪೆಟ್ಟಿಗೆಯನ್ನು ಪರಿಶೋಧಿಸಲಾಗಿ ಅದು ಹಿಂದಿನ ದಿನ ಕಳವಾದ ಪೆಟ್ಟಿಗೆಯೆಂದು ತಿಳಿಯಬಂತು. ಈ ಆರೋಪದ ಮೇಲೆ ೩ ಮಂದಿ ಮಾಪಿಳ್ಳೆಯವರನ್ನು ರಿಮಾಂಡಿನಲ್ಲಿ ಇಟ್ಟಿರುವರು. ಕಳವಾದ ಸಾಮಾನು ವಗೈರೆ ಸಿಕ್ಕಿದಷ್ಟು ಪೋಲೀಸ ಸ್ಟೇಶನಿನಲ್ಲಿ ಅಮಾನತು ಇಟ್ಟಿರುತ್ತದಾಗಿ ಸಹ ಕೇಳುತ್ತೇವೆ.

ಲೇಬರ್ ಕಮಿಷನರಾದ ಜೆ. ಎಫ್. ಪ್ಯಾಡಿಸನ್ನರವರು ಇದೇ ತಾ. ೧೮ಕ್ಕೆ ಲೋಕಲ್ ಬಂಡಿಗೆ ಇಲ್ಲಿಗೆ ಬಂದು ಮರುದಿನ ಇಲ್ಲಿಂದ ಮಧುರು, ಕೊಡ್ಲು, ಮುಟ್ಟತ್ತೋಡಿ ಗ್ರಾಮಗಳಿಗೆ ಹೋಗಿ, ಕೀಳು ಜಾತಿಯವರ ಸ್ಥಿತಿಗತಿಯನ್ನು ಪರಿಶೋಧಿಸಿ, ಮುಟ್ಟತ್ತೋಡಿನಲ್ಲಿ [illegible]ಯರ ಬಗ್ಗೆ ಒಂದು ಬಾವಿಯನ್ನು ತೋಡಿಸುವ ಏಲಿವಾರಿ ಮಾಡಿಸುವುದಾಗಿ, ಅಭಯವನ್ನಿತ್ತು, ತಾ. ೧೯ಕ್ಕೆ ಇಲ್ಲಿಂದ ಮಂಜೇಶ್ವರಕ್ಕೆ ಹೋಗಿ, ಅಲ್ಲಿಂದ ಅದೇ ದಿನ ಮಂಗಳೂರಿಗೆ ಹೊರಟುಹೋಗಿರುತ್ತಾರೆ.

ಈ ಊರಿನ ಲೋಕಲ್ ಫಂಡು ಲಾಟಾನುಗಳು ಸರಿಯಾಗಿ ಉರಿಯುವುದಿಲ್ಲವಾಗಿ ಈ ಮೊದಲೇ ಪತ್ರಿಕೆಗಳ ಮೂಲಕ ಅರಿಕೆ ಮಾಡಿಕೊಂಡದ್ದಾಯಿತು. ಆದರೆ ಈಗ ಅದಕ್ಕಿಂತಲೂ ಹೀನ ಸ್ಥಿತಿಯಿಂದ ಲಾಟಾನುಗಳು ಉರಿಯುತ್ತಿರುವವು. ಅಲ್ಲದೆ, ಈ ಊರಿಗೆ ಪ್ರಕೃತವಿರುವ ಲಾಟಾನುಗಳು ಬಹು ಕೊಂಚವಾಗಿಯೂ ದೂರ ದೂರವಾಗಿಯೂ ಇರುತ್ತವೆ. ಜನಜಾನುವಾರುಗಳೂ, ವ್ಯಾಪಾರ ವ್ಯವಹಾರಗಳೂ ವೃದ್ಧಿಯಾಗುತ್ತಿರುವ ಈ ಊರಲ್ಲಿ ರಾತ್ರಿಕಾಲದಲ್ಲಿ ಉಪಯುಕ್ತವಾಗತಕ್ಕ ಲಾಂದರುಗಳೂ ವೃದ್ಧಿಯಾಗುವಂತೆ ಮಾಡುವುದು ಇನ್ನಾದರೂ ಉಚಿತವಲ್ಲವೇ?

ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಳಿಯವರು ಇಲ್ಲಿಯೇ ಇದ್ದು ಕರ್ಣಾನಂದಕರವಾದ ಗಾನದಿಂದಲೂ ನೇತ್ರಾನಂದಕರವಾದ ಸೀನ್ಸ್‌ನರಿ ವಗೈರೆಗಳಿಂದಲೂ ಕೂಡಿದ ಚಲೋ ನಾಟಕಗಳನ್ನು ಆಡಿ ತೋರಿಸಿ ಜನರನ್ನೂ ಹರ್ಷಗೊಳಿಸುತ್ತಾರೆ.

ಸೆಕೆಯು ಮಿತಿಮೀರಿರುತ್ತದೆ. ಎಲ್ಲೆಲ್ಲಿಯೂ ಇನ್‌ಫ್ಲುಯೆಂಜಾ ವಗೈರೆ ಜ್ವರವು ತಲೆದೋರುತ್ತದೆ. ಮಳೆಯು ಇಲ್ಲ. ಊರಲ್ಲಿ ನೀರು ಕಡಿಮೆಯಾಗುತ್ತಾ ಬಂದಿದೆ. ದವಸಧಾನ್ಯಗಳಿಗೆ ಬೆಲೆ ಕಡಿಮೆಯಾಗಿಲ್ಲ.

ಮುಳಸಿಪೇಟೆಯ ಕೈದಿಗಳ ಸತ್ಯಾಗ್ರಹ.

'ಮುಂಬಯಿ ಕ್ರೋನಿಕಲ್' ಪತ್ರಿಕೆಯ ಒಬ್ಬ ಬಾತಮೀದಾರರು ಹೈದರಾಬಾದಿನ ಹಿಂದೂ ಪತ್ರಿಕೆಯಲ್ಲಿ ಕೆಳಗಿನ ಸಮಾಚಾರವು ಪ್ರಕಟವಾಗಿದೆ ಎಂದು ಬರೆದಿರುವರು. ಪೂನೆಯ ಮುಳಸಿಪೇಟೆಯ ಸತ್ಯಾಗ್ರಹಿಗಳು, ಯರವಾಡಾ ಜೈಲಿನಲ್ಲಿ ಆಹಾರವನ್ನು ತೆಗೆದುಕೊಳ್ಳದೆ ಮುಷ್ಕರವನ್ನು ಹಿಡಿದಾಗ, ಈ ಮುಷ್ಕರವನ್ನು ನಿಲ್ಲಿಸಲೇಕಾಗಿ ಮಹಾತ್ಮರು ಜಯರಾಮದಾಸ ಎಂಬ ಕೈದಿಗಳ ಮೂಲಕ ಮುಷ್ಕರವನ್ನು ನಿಲ್ಲಿಸಬೇಕಾಗಿ ಮುಷ್ಕರ ಹಿಡಿದವರಿಗೆ ತಮ್ಮ ಸಂದೇಶವನ್ನು ಕಳುಹಿಸಿದರು. ಕೂಡಲೇ ಮುಷ್ಕರವು ಕೊನೆಗಂಡಿತು. ಮತ್ತು ಜಯರಾಮರು ಈ ಮುಷ್ಕರವು ಶಾಂತವಾದ ಸಮಾಚಾರವನ್ನೂ, ಕಾರಣವನ್ನೂ, ಜೈಲಿನ ಸುಪರಿಂಟೆಂಡೆಂಟರಿಗೆ ತಿಳಿಸಿದರು. ಆಗ ಜೈಲಿನ ಸುಪರಿಂಟೆಂಡೆಂಟರು, ಜಯರಾಮದಾಸರು ತಮ್ಮ ಆಜ್ಞೆಯನ್ನು ಹೊಂದದೆ ಕೋಣೆಯನ್ನು ಬಿಟ್ಟ ಬಗ್ಗೆ ಅವರಿಗೆ ಒಂದು [illegible] ಏಕಾಂತ ವಾಸದ ಶಿಕ್ಷೆಯನ್ನು ವಿಧಿಸಿದರು. ಮಹಾತ್ಮರಿಗೆ ಈ ಸಂಗತಿಯು ತಿಳಿದ ಕೂಡಲೇ ಅವರು ಜಯರಾಮರು ತನ್ನ ಆಜ್ಞೆಯನ್ನು ಅನುಸರಿಸಿ ನಡೆದುದರಿಂದ ತನ್ನನ್ನೂ ಶಿಕ್ಷಿಸಬೇಕಾಗಿ ಜೈಲಿನ ಸುಪರಿಂಟೆಂಡೆಂಟರಿಗೆ ಹೇಳಿದರು. ಜೈಲಿನ ಸುಪರಿಂಟೆಂಡೆಂಟರು [illegible] ಮಹಾತ್ಮರು ತಮ್ಮ ಕೋಣೆಯ ಬಾಗಿಲನ್ನು [illegible] ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ.

ದಕ್ಷಿಣಕನ್ನಡಾ ಜಿಲ್ಲೆಯ ಮತದಾರರ (Voter's) ಸಮ್ಮುಖದಲ್ಲಿ.

ಮಹನೀಯರೇ,

ಮದರಾಸು ನ್ಯಾಯವಿಧಾಯಕ ಸಭೆ (Legislative Council)ಗೆ ನಮ್ಮ ಜಿಲ್ಲೆಯಿಂದ ಚುನಾಯಿಸಲ್ಪಡತಕ್ಕ ಇಬ್ಬರು ಮೆಂಬರರ ಚುನಾವಣೆಯು ತ್ವರೆಯ ಜರಗತಕ್ಕದ್ದಿದೆ ಎಂಬುದು ಸರ್ವವಿದಿತವಾದ ಸಂಗತಿಯಷ್ಟೆ. ಈ ಸಲುವಾಗಿ ನಮ್ಮ ಜಿಲ್ಲೆಯ ಖಾಯಂ ನಿವಾಸಿಕರಾದ ಮ. ರಾ. ರಾವ್‌ಬಹದ್ದೂರ್ ಎಸ್. ಸುಬ್ಬರಾಯರು, ಮ. ರಾ. ಮಂಜೇಶ್ವರ ವೈಕುಂಠ ಭಕ್ತರು, ಮ. ರಾ. ಮಹಾಬಲ ಹೆಗ್ಗಡೆಯವರು, ಮ. ರಾ. ಅ. ಬಾಲಕೃಷ್ಣ ಸೆಟ್ಟರು, ಮ. ರಾ. ಉಳ್ಳಾಲ ಸಾಂತಯ್ಯ ಶಿಣೆಯವರು ಉಮೇದ್ವಾರರಾಗಿ ಮುಂದುವರಿದು ಬಂದಿರುವರಲ್ಲದೆ, ನಮ್ಮ ಜಿಲ್ಲೆಯವರಾಗಿ ಮದರಾಸಿನಲ್ಲಿ ವಾಸವಾಗಿರುವ ಮ. ರಾ. ರಾ. ಕೆ. ಸುಂದರರಾಯರೂ, ಮ. ರಾ. ರಾ. ರಾವ್‌ಸಾಹೇಬ್ ಡಾಕ್ಟರ್ ಯು. ರಾಮರಾಯರೂ ಮುಂದುವರಿದು ಬಂದಿರುತ್ತಾರೆ.

ಪ್ರತಿಯೊಬ್ಬ ಉಮೇದ್ವಾರರು ತಮ್ಮ ತಮ್ಮ ಉದ್ದೇಶವು ಸಫಲವಾಗಬೇಕೆಂಬ ಆಕಾಂಕ್ಷೆಯಿಂದ ಸಾಧ್ಯಮತವಾದ ಪ್ರಯತ್ನಗಳಿಂದ ಓಟುಗಳನ್ನು ಸಂಗ್ರಹಿಸಲು ಪ್ರಾರಂಭಿಸಿರುತ್ತಾರೆ. ಈ ಸಂದರ್ಭದಲ್ಲಿ ಮತದಾರರಾದ ನಾವು ಅನೇಕ ಸಂಗತಿಗಳನ್ನು ಆಲೋಚಿಸುವುದು ಅತೀವ ಅಗತ್ಯವಾಗಿದೆ.

ಕೌನ್ಸಿಲಿನಲ್ಲಿ ನಮ್ಮ ಜಿಲ್ಲೆಯವರಿಗೆ ಇರುವ ಸ್ಥಾನಗಳೆಂದರೆ, ಕೇವಲ ಎರಡು. ಅವುಗಳಲ್ಲಿ ಒಂದು ಬ್ರಾಹ್ಮಣೇತರರ ಭಾಗಕ್ಕೆ ಮೀಸಲಾಗಿಟ್ಟುದಾಗಿದೆ. ಇನ್ನುಳಿದುದೊಂದು ಬ್ರಾಹ್ಮಣ ಬ್ರಾಹ್ಮಣೇತರಾದಿ ಸಮಸ್ತ ಹಿಂದುಗಳ ಸಲುವಾಗಿ ಕಾದಿಟ್ಟುದು. ಈಗಲೀಗ ಸ್ಪರ್ಧಿಸಲು ಮುಂದೆ ಬಂದ ಏಳು ಮಂದಿಗಳೊಳಗೆ ಮ. ರಾ. ಮಹಾಬಲ ಹೆಗ್ಗಡೆಯವರೂ, ಮ. ರಾ. ಅ. ಬಾಲಕೃಷ್ಣ ಸೆಟ್ಟರೂ ತಾವು ಬ್ರಾಹ್ಮಣೇತರರ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಪ್ರಕಟಿಸಿರುತ್ತಾರೆ. ಮಿಕ್ಕುಳಿದ ಒಂದು ಸ್ಥಾನವೇ ಉಳಿದ ಐವರು ಮಹಾಶಯರ ಸ್ಪರ್ಧೆಗೆ ಅರ್ಹವಾದುದು.

ನಾನು ಇಲ್ಲಿ ಕೇವಲ ಬ್ರಾಹ್ಮಣ ಇಲ್ಲವೆ ಬ್ರಾಹ್ಮಣೇತರರ ಪಕ್ಷದವನಾಗಿ ಈ ಮುಂದಿನ ಮಾತುಗಳನ್ನು ಹೇಳಹೊರಟುದಿಲ್ಲ. ಅಂತಹ ಪಕ್ಷಪಾತವು ಅನುಚಿತವಾದುದು. ಏಕೆಂದರೆ ಬ್ರಾಹ್ಮಣರಾಗಲಿ, ಬ್ರಾಹ್ಮಣೇತರರಾಗಲೀ, ಅವರೆಲ್ಲರೂ ನಮ್ಮ ಜಿಲ್ಲೆಯವರೇ, ಮಾತ್ರವಲ್ಲ, ಅವರು ಕೌನ್ಸಿಲನ್ನು ಪ್ರವೇಶಿಸಿ ನಮ್ಮ ಪ್ರತಿನಿಧಿಗಳಾಗಿ ನಮ್ಮ ಜಿಲ್ಲೆಯ ಅಭ್ಯುದಯಕ್ಕೆ ಅಗತ್ಯವಿರುವ ಸರ್ವಸಂಗತಿಗಳಲ್ಲಿ ಸಾಧ್ಯವಿದ್ದಷ್ಟು ಹೋರಾಡತಕ್ಕವರು. ಜಿಲ್ಲೆಯ ಹಾನಿವೃದ್ಧಿಯು ಇವರ ಕೈಯಲ್ಲಿದೆ.

ನಮ್ಮ ಪ್ರತಿನಿಧಿಗಳನ್ನು ಚುನಾಯಿಸುವುದೆಂದರೆ, ಅದು ನಾವು ಇದುವರೆಗೆ ವರ್ತಿಸುತ್ತಾ ಬಂದಂತೆ ಅನ್ಯರ ದಾಕ್ಷಿಣ್ಯಕ್ಕೋ ಹಣದಾಶೆಗೋ ಬಲಿಬಿದ್ದು ಅವಿಚಾರತೆಯಿಂದ ಓಟುಗಳನ್ನು ವ್ಯರ್ಥಗೊಳಿಸುವುದಲ್ಲ. ನಮ್ಮ ಓಟುಗಳು ಅತ್ಯಂತ ಅಮೂಲ್ಯವಾದುದೆಂಬುದನ್ನು ಸರ್ವಥಾ ಮರೆಯಲಾಗದು. ಏಕೆಂದರೆ:—ನಾವು ಯಾವನಿಗೆ ನಮ್ಮ ಮತವನ್ನು ಕೊಟ್ಟು ತನ್ಮೂಲಕ ಮೆಂಬರನನ್ನಾಗಿ ಮಾಡಿದೆವೋ, ಆ ಮೆಂಬರನು ನಮ್ಮ ಜನಾಂಗಕ್ಕೆ ಮಾಡಿದ ಒಳಿತು ಹಾನಿಗಳ, ಪಾಪ ಪುಣ್ಯಗಳ ಪಾಲಿಗೆ ನಾವೂ ಪಾತ್ರರಾಗಬೇಕಾಗುವುದು. ಹೀಗೆಂದ ಬಳಿಕ ನಮ್ಮ ಮತವನ್ನು ಕೊಡುವಲ್ಲಿಯಾಗಲಿ, ಇಲ್ಲವೆ ಆ ಬಗ್ಗೆ ವಾಗ್ದಾನಮಾಡುವಲ್ಲಿಯಾಗಲೀ ಅದೆ ದೀರ್ಘಾಲೋಚನೆಯೂ ಸಿಂಹಾವಲೋಕನವೂ ಅಗತ್ಯವೆಂಬುದನ್ನು ವಿಚಾರಿಗಳಾದ ಮತದಾರರು ಸ್ವಲ್ಪ ಯೋಚಿಸಿದರೆ ಮನಗಾಣಬಹುದು.

ಇನ್ನು ಪ್ರಕೃತ ವಿಚಾರಣೀಯವಾದ ವಿಷಯಗಳನೇಕವಿವೆ. ಅವುಗಳಲ್ಲಿ ಕೌನ್ಸಿಲಿನ ಮೆಂಬರನಾಗಲು ಉಮೇದ್ವಾರನಾಗಿರುವವನಿಗೆ ಯಾವ ಲಕ್ಷಣಗಳಿರಬೇಕು. ಈಗ ಉಮೇದ್ವಾರರಾಗಿ ಮುಂದರಿದವರಲ್ಲಿ ಆ ಲಕ್ಷಣಗಳಿಂದ ಯುಕ್ತರಾದವರಾರು? ಈಗ ಉಮೇದುವಾರರಾದವರಲ್ಲಿ ನಾವು ಯಾವ ಇಬ್ಬರನ್ನು ಚುನಾಯಿಸುವುದಗತ್ಯ? ಓಟುಗಳನ್ನು ಕೊಡತಕ್ಕ ರೀತಿನೀತಿಗಳೇನು? ಇವೇ ಮೊದಲಾದ ವಿಷಯಗಳ ವಿಮರ್ಶಾಪೂರ್ವಕವಾದ ನಿರ್ಧಾರವಗತ್ಯವಾಗಬೇಕಾಗಿದೆ. ಅಷ್ಟಲ್ಲದೆ ನನ್ನೀ ಅಭಿಪ್ರಾಯವನ್ನೂ ನೀವೂ ಸಮ್ಮತಿಸುವಂತಿದ್ದರೆ ನಾವು ವಿವೇಕದೃಷ್ಟಿಯಿಂದ ಯೋಗ್ಯರೆಂದು ನಿಶ್ಚಯಿಸುವ ಎರಡು ಜನರನ್ನಲ್ಲದೆ ಉಳಿದ ಮಹಾಶಯರನ್ನು ಪ್ರಾರ್ಥಿಸಿ ಅವರು ತಮ್ಮ ಉಮೇದ್ವಾರಿಕೆಯನ್ನು ಹಿಂದೆಗೆಯುವಂತೆ ಮಾಡುವುದು ಮಾತ್ರವಲ್ಲದೆ ಹಾಗೆ ನಾವು ಚುನಾಯಿಸುವವರು ಈ ಚುನಾವಣೆ ಕುರಿತು ಏನೊಂದೂ ಖರ್ಚು ಮಾಡದಂತೆಸಗಿ ನಮ್ಮ ಜಿಲ್ಲೆಯವರ ಕಷ್ಟಾರ್ಜಿತ ಧನವು ಈ ಸಂದರ್ಭದಲ್ಲಿ ಅಪವ್ಯಯವಾಗದಂತೆ ಮಾಡುವುದೂ ನಮ್ಮ ಪ್ರಾಮುಖ್ಯ ಕರ್ತವ್ಯವಾಗಿದೆ.

ಈಗ ಕೌನ್ಸಿಲು ಮೆಂಬರನಾಗಲುಳ್ಳವನಲ್ಲಿರಬೇಕಾದ ಯೋಗ್ಯತೆಗಳೇನೆಂಬುದನ್ನು ಸ್ವಲ್ಪ ಯೋಚಿಸುವ.

(೧) ನಮ್ಮ ಪ್ರತಿನಿಧಿಯಾಗತಕ್ಕವನು ಯಾವಾಗಲೂ ನಮ್ಮ ಬಳಿಯಲ್ಲೇ ಇರತಕ್ಕವನಾಗಿ ನಮಗೆ ಅಗತ್ಯವಿರುವ ಎಲ್ಲಾ ಸಂದರ್ಭಗಳಲ್ಲಿ ಸಮಯೋಚಿತ ಸೂಚನೆಗಳಿಗೆ ದೊರೆಯತಕ್ಕವನಾಗಿರಬೇಕು.

(೨) ತನಗೆ ಇತರ ಕಾರ್ಯಭಾರಗಳ ತೊಡಕು ಇರದೆ ಈ ಮೆಂಬರಿಕೆಯ ಸ್ಥಾನದಲ್ಲಿ ನಿಂತು ಮಾಡತಕ್ಕ ಯಾವತ್ತೂ ಕಾರ್ಯಕ್ರಮಗಳನ್ನು ನಿರ್ವಹಿಸಲು ಸಂಪೂರ್ಣ ಸಮಯಾವಕಾಶವಿರುವವನಿರಬೇಕು.

(೩) ತಾನು ನಮ್ಮ ಜಿಲ್ಲೆಯ ಉನ್ನತ್ಯವನತಿಗೆ ಕಾರಣಗಳಾದ ಸಂಗತಿಗಳನ್ನು ಸೂಕ್ಷ್ಮವಿಚಾರದಿಂದ ತಿಳಿದುಕೊಂಡು, ಅದರ ಏಳಿಗೆಯ ಕುರಿತು ಅವ್ಯಾಹತವಾಗಿ ಪರಿಶ್ರಮಪಡುತ್ತಿರುವವನಾಗಬೇಕು.

(೪) ಹಣದ ಇಲ್ಲವೆ ಬಿರುದು ಬಾವಲಿಗಳ ಅಥವಾ ಗೌರವದ ಆಸೆಗಾಗಿ ಹಾತೊರೆಯದೆ ಕೇವಲ ನಿಸ್ವಾರ್ಥಬುದ್ಧಿಯಿಂದ ಕೈಕೊಂಡುದುದನ್ನು ಕ್ರಮವಾಗಿ ಕೊನೆಗಾಣಿಸುವವನಾಗಲಿಕ್ಕೆ ಬೇಕು.

(೫) ಇದು ಮೊದಲು ಸಾರ್ವಜನಿಕ ಸಂಸ್ಥೆಗಳಲ್ಲಿ ಸೇರಿ ಇದ್ದು ಸಮಾಧಾನಕರವಾದ ರೀತಿಯಲ್ಲಿ ಕೆಲಸಮಾಡಿ ಹೆಚ್ಚಿನ ಅನುಭವವನ್ನುಳ್ಳವನೂ ಆಗಿರಬೇಕು.

ಇನ್ನೀ ಯೋಗ್ಯತೆಗಳನ್ನು ಒಂದರ ಹಿಂದೆ ಮತ್ತೊಂದನ್ನು ಆಲೋಚಿಸಿ ಈಗ ಮುಂದೆ ಬಂದಿರುವ ಉಮೇದ್ವಾರರಲ್ಲಿ ಯಾರನ್ನು ಚುನಾಯಿಸುವುದು ಯುಕ್ತವೆಂಬುದನ್ನು ಯೋಚಿಸಬೇಕಾಗಿದೆ. ಅದುದರಿಂದ ಪ್ರತಿಯೊಬ್ಬರಲ್ಲಿರುವ ಲಕ್ಷಣಗಳನ್ನು ಇಲ್ಲಿ ಸೂಚಿಸುತ್ತೇನೆ. ನಾನು ಹೇಳುವುದರಲ್ಲಿ ನ್ಯೂನಾಧಿಕ ದೋಷಗಳಿದ್ದರೆ ಕ್ಷಮಾಶೀಲರಾದ ಮಾನ್ಯಮತದಾರರೂ ಮಾನ್ಯ ಉಮೇದ್ವಾರರೂ ದೋಷರಾಶಿಗಳಿಗೆ ಕ್ಷಮಿಸಿ, ಗುಣಕಣಗಳಿಗೆ ಹರ್ಷಿಸಿ, ಸಮಾದರಿಸಬೇಕೆಂದು ಸಂಪ್ರಾರ್ಥಿಸುತ್ತೇನೆ.

(೧) ರಾವ್‌ಬಹದ್ದೂರ್ ಎಸ್. ಸುಬ್ಬರಾಯರೆಂದರೆ:—ಜಿಲ್ಲೆಯ ಒಬ್ಬ ಜಮೀನುದಾರರು, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು, ಜಿಲ್ಲಾ ವಿದ್ಯಾಸಭೆಯ ಅಧ್ಯಕ್ಷರು.

(೨) ಎಮ್. ವೈಕುಂಠಭಕ್ತರು. ನಮ್ಮ ಜಿಲ್ಲೆಯ ಪ್ರಮುಖ ವರ್ಗದಾರರು. ಕಾಸರಗೋಡು ತಾಲೂಕು ಬೋರ್ಡಿನ ಪ್ರೆಸಿಡೆಂಟರು. ಈ ನೆಲೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರರೂ, ಜಿಲ್ಲಾ ವಿದ್ಯಾಸಭೆಯ ಮೆಂಬರರೂ ಆಗಿರುವರು.

(೩) ಮಹಾಬಲ ಹೆಗ್ಗಡೆಯವರು. ಜಮೀನುದಾರರೂ, ಹೈಕೋರ್ಟು ವಕೀಲರೂ, ಒಫೀಶಿಯಲ್ ಅಫೀಸರರೂ, ಮುನ್ಸಿಪಲ್ ಕೌನ್ಸಿಲರರೂ ಆಗಿರುತ್ತಾರೆ.

(೪) ಬಾಲಕೃಷ್ಣಸೆಟ್ಟರು. ಜಮೀನುದಾರರೂ, ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೂ, ನವಯುಗದ ಸಂಪಾದಕರೂ ಆಗಿರುವರು.

(೫) ಸಾಂತಯ್ಯಶಿಣೆಯವರು. ಮಂಗಳೂರು ಬಂದರದ ಪ್ರಮುಖ ವರ್ತಕರಲ್ಲೊಬ್ಬರೂ, ಜಮೀನುದಾರರೂ, ಮುನ್ಸಿಪಲ್ ಕೌನ್ಸಿಲರರೂ ಆಗಿರುತ್ತಾರೆ.

(೬) ಕೆ. ಸುಂದರರಾಯರು. ನಮ್ಮ ಜಿಲ್ಲೆಯಲ್ಲಿ ಆಸ್ತಿಯುಳ್ಳ ವರ್ಗದಾರರಾಗಿದ್ದು ಮದ್ರಾಸು ಹೈಕೋರ್ಟಿನಲ್ಲಿ ವ್ಯವಹರಿಸುತ್ತಿರುವ ವಕೀಲರಾಗಿರುವರು.

(೭) ಡಾಕ್ಟರ್ ಯು. ರಾಮರಾಯರೆಂದರೆ, ಸುಂದರರಾಯರಂತೆ ಜಮೀನುದಾರರಾಗಿ ವೈದ್ಯವೃತ್ತಿಯನ್ನು ನಡೆಯಿಸುವ ಮದ್ರಾಸಿನ ಸ್ಥಿರ ವಾಸ್ತವಿಕರಾಗಿರುತ್ತಾರೆ. ಅಲ್ಲದೆ ಪ್ರತ್ಯೇಕವಾಗಿ ಇದು ಮೊದಲೇ ಮದ್ರಾಸಿನಿಂದ ಆರಿಸಲ್ಪಟ್ಟ ಈ ನ್ಯಾಯವಿಧಾಯಕ ಸಭೆಯ ಮೆಂಬರರೂ ಆಗಿರುವರು.

ಈಗ ಮೇಲೆ ಹೇಳಿದ ಗೃಹಸ್ಥರಲ್ಲಿ ಮೊದಲಿನ ಐವರು ನಮ್ಮ ಜಿಲ್ಲಾ ನಿವಾಸಿಗಳೇ ಆಗಿರುವುದರಿಂದ ನಮಗೆ ಅಗತ್ಯ ಬೀಳುವ ಸಂದರ್ಭಗಳಲ್ಲಿ ಕೊಂಚ ಖರ್ಚಿನಿಂದಲೇ ವಿಮರ್ಶೆಗೆ ದೊರೆಯುತಕ್ಕವರು. ಇವರೈವರಿಗೂ ಮೇಲೆ ಹೇಳಿದ ಲಕ್ಷಣಗಳಲ್ಲಿ ಒಂದನೇದು ಸ್ವಭಾವ ಸಹಜವೇ ಆಗಿರುವುದು. ಕೊನೆಯ ಇಬ್ಬರು ನಮ್ಮ ಜಿಲ್ಲೆಯ ನಿವಾಸಿಕರಲ್ಲವಾದುದರಿಂದ ಜಿಲ್ಲೆಯ ಸಂದುಗೊಂದಿಗಳ ಸಂಗತಿಗಳನ್ನು ತಿಳಿದುಕೊಳ್ಳಲು ಹೆಚ್ಚು ವೆಚ್ಚ ಮಾಡಬೇಕಾಗಿ ಬರುವುದು. ೩–೪ ಮತ್ತು ೫ನೇ ಯೋಗ್ಯತೆಗಳು ತಾರತಮ್ಯಾನುಸಾರ ಇವರೆಲ್ಲರಲ್ಲಿಯೂ ಇರುವುದನ್ನು ಯಾರೂ ಅಲ್ಲಗಳೆಯರು.

ಇನ್ನು ಎರಡನೇ ಲಕ್ಷಣದ ಕುರಿತು ಓಟರರಾದ ನಾವು ಎಷ್ಟು ಮಟ್ಟಿಗೆ ಆಲೋಚಿಸತಕ್ಕದ್ದಿದೆಯೋ ಅದಕ್ಕಿಮ್ಮಡಿಯಾಗಿ ಉಮೇದ್ವಾರರೂ ಯೋಚಿಸತಕ್ಕದಿದೆ. ಪ್ರಕೃತ ಸಂದರ್ಭದಲ್ಲಿ ಉಮೇದ್ವಾರ ಮಹಾಶಯರೊಂದಿಗೆ ನನ್ನದೊಂದು ನಿವೇದನ.

ಮಹಾಶಯ! ತಮ್ಮ ಯೋಗ್ಯತೆಗಳನ್ನು ಸಂಪೂರ್ಣ ವಿವರಿಸಲು ಅಲ್ಪಜ್ಞನಾದ ನಾನು ಅಶಕ್ತನಾದರೂ ನನ್ನ ಕ್ಷುದ್ರಮತಿಗೆ ತೋರಿದ ಕೆಲವು ಸಂಗತಿಗಳನ್ನು ಸೂಚಿಸಿರುವೆನು. ಇವುಗಳಲ್ಲಿರುವ ಕುಂದುಗಳಿಗೆ ಉದಾರಿಗಳಾದ ತಾವು ಕ್ಷಮಿಸುವಿರೆಂದು ನಂಬಿರುವೆನು. ಮಹನೀಯರೇ! ಯಾವನೇ ಆಗಲಿ ತಾನು ಕೈಕೊಂಡ ಕಾರ್ಯವನ್ನು ಸರ್ವಸಮ್ಮತವಾಗಿ ಸಾಗಿಸಲು ಸಮರ್ಥನಾಗಬೇಕಾದರೆ, ಆತನು ಅನ್ಯ ಕಾರ್ಯಾವಸರಗಳಲ್ಲಿ ಅಮರಿಕೊಂಡಿರಬಾರದು. ಅದುಕಾರಣ ಉಮೇದ್ವಾರನಾಗಲುಳ್ಳವನಿಗೆ ಇತರ ಕೆಲಸಗಳ ತೊಂದರೆ ಇಲ್ಲದೆ ತನ್ನ ಸಂಪೂರ್ಣ ಸುಸಮಯವನ್ನು ಅದಕ್ಕೇ ವಿನಿಯೋಗಿಸಲು ಅನುಕೂಲವಿರಬೇಕೆಂಬುದನ್ನು ತಾವೂ ಒಪ್ಪುವಿರಷ್ಟೆ! ಹಾಗಾದರೆ, ಈಗ ತಾವು ತಮ್ಮ ಜಮೀನುದಾರಿಕೆಯೊಂದನ್ನುಳಿದು ಉಳಿದ ತಮಗಿರುವ ಮಾನಿಕ ಉದ್ಯೋಗಿಕ ಸಂಬಂಧಗಳಿಗೆ ಈ ಮೆಂಬರಿಕೆಯ ಸಲುವಾಗಿ ತಿಲಾಂಜಲಿಯನ್ನು ಕೊಡಲು ಸಿದ್ಧರಿರುವಿರಾ, ಎಂಬುದೊಂದು ತಮ್ಮಿಂದಲೇ ತಿಳಿಯುವುದಕ್ಕಿದೆ. ಇದು ಮೊದಲನೆಯದು—ಹಾಗೆ ತಿಲಾಂಜಲಿಯನ್ನೀಯಲು ಸಮ್ಮತಿಸುವಿರಾದರೆ ತಮ್ಮ ಮನೋಭಿಪ್ರಾಯವನ್ನು ಸಮಸ್ತಮತದಾರರ ತಿಳುವಳಿಕೆಗೆ ತರುವಷ್ಟು ಉದಾರಬುದ್ಧಿಯವರಾಗುವುದು ಎರಡನೆಯದು. ಮಾನ್ಯ ಮಹಾಶಯರೇ! ಈ ಎರಡು ಪ್ರಶ್ನೆಗಳ ಸಮಾಧಾನವನ್ನು ತಾವು ತಮ್ಮ ಮತದಾರರಿಗೆ ಕೊಡಬೇಕೆಂದು ನನ್ನ ನಮ್ರ ಬೇಡಿಕೆ.

ಮಾನ್ಯ ಮತದಾರರೇ! ನನ್ನ ಸಾಮಾನ್ಯ ಬುದ್ಧಿಗೆ ಗೋಚರವಾದುದನ್ನು ತಮ್ಮ ಮುಂದೆ ಇಟ್ಟಿರುವೆನು. ಇದರ ನ್ಯಾಯಾನ್ಯಾಯವನ್ನು ವಿಚಾರಿಸಿ ತಾವು ಮಾಡಬೇಕಾದ ಕಾರ್ಯಕ್ರಮವನ್ನು ನಿರ್ಧರಿಸುವ ಭಾರವು ಸಮರ್ಥರಾದ ತಮಗೇ ಸೇರಿದುದಾಗಿದೆ. ಇರಲಿ.

ಉಮೇದ್ವಾರರೆಲ್ಲರೂ ಮೇಲೆ ಹೇಳಿದಂತೆ ತಮ್ಮ ಗೌರವಾರ್ಥಕ ಹುದ್ದೆಗಳನ್ನು ತ್ಯಾಗಮಾಡಲು ಸಮ್ಮತಿಸುವರಾದರೆ, ಆಗ ನಾವು ಯಾರಿಬ್ಬರನ್ನು ಚುನಾಯಿಸಬೇಕು; ಎಂಬುದೊಂದು ಶಂಕೆಯು ವಸ್ತುತಃ ಬರುವುದು. ನಾನು ಹೇಳುವುದಾದರೆ ನಮ್ಮ ಜಿಲ್ಲೆಯ ಆರು ತಾಲೂಕುಗಳ ಹೆಡ್‌ಕ್ವಾರ್ಟರ್ಸ್‌ಗಳಿಂದ ಈಗ ನಿಂತ ಉಮೇದ್ವಾರರ ಕೂಟದಿಂದ ಪ್ರತಿ ತಾಲೂಕಿನ ಒಬ್ಬೊಬ್ಬ ಪ್ರತಿನಿಧಿಯಂತೆ ಆರಿಸಿ ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಲ್ಲಿ ಸಭೆ ಸೇರಿ ಇವರ ಸಮಕ್ಷಮ ಸೋಡ್ತಿ ತೆಗೆದು ಗೆದ್ದ ಉಮೇದ್ವಾರರನ್ನು ಚುನಾಯಿಸಬಹುದು.

ಈಗ ನಿಂತ ಉಮೇದ್ವಾರರೆಲ್ಲರೂ ವಿವೇಕಿಗಳೂ ವಿದ್ಯಾವಂತರೂ ಆದುದರಿಂದ ನನ್ನೀ ಬರವಣಿಗೆಯಿಂದ ರೇಗಲಾರರೆಂದು ನನಗೆ ಸಂಪೂರ್ಣ ಭರವಸೆ ಇದೆ. ಮೇಲೆ ವಿವರಿಸಿದ ರೀತಿಯೂ ಉಮೇದ್ವಾರರಿಗೂ ಮತದಾರರಿಗೂ ಮಾನ್ಯವೆಂದು ತೋರಿ ಆ ಮೇರೆಗೆ ವರ್ತಿಸಿದರೆ ಇಕ್ಕಡೆಗೂ ಅನಾವಶ್ಯಕ ವೆಚ್ಚವಾಗದೆ ಕಷ್ಟಪಟ್ಟು ಸಂಪಾದಿಸಿದ ಧನವು ನಮ್ಮಲ್ಲೇ ಉಳಿದಂತಾಗುವುದು. ಮಾತ್ರವಲ್ಲದೆ ಕಾರ್ಯನಿರ್ವಾಹ ಸಮರ್ಥರಾದ ವಿವೇಕಿಗಳೇ ನಮ್ಮ ಪ್ರತಿನಿಧಿಗಳಾಗಿ ನಮ್ಮ ಜಿಲ್ಲೆಯ ಏಳಿಗೆಯನ್ನು ತಾಳಲು ಅನುಕೂಲವಾಗುವುದು.

ಓಟರರಾದ ತಮ್ಮೆಲ್ಲರಿಗೂ ನನ್ನೀ ಸೂಚನೆಗಳು ಯುಕ್ತವೆಂದು ಕಂಡುಬಂದಲ್ಲಿ ಉಮೇದ್ವಾರರು ನಮ್ಮ ಸೂಚನೆಗಳನ್ನು ಮನ್ನಿಸದಿದ್ದರೆ ಅಂತವರನ್ನು ಅವರಷ್ಟಕ್ಕೆ ಬಿಟ್ಟುಬಿಡುವುದೂ, ಇವನ್ನು ಅಂಗೀಕರಿಸುವ ಯೋಗ್ಯ ಉಮೇದ್ವಾರರಿಗೆ ಸಹಾಯ ಸಹಾನುಭೂತಿಗಳನ್ನು ತೋರಿಸಿ, ಅವರನ್ನು ನಮ್ಮ ಪ್ರತಿನಿಧಿಗಳನ್ನಾಗಿ ಏರ್ಪಡಿಸುವುದೂ ನಮ್ಮ ಪ್ರಾಮುಖ್ಯ ಕರ್ತವ್ಯವಾಗಿದೆ.

ಮಾನ್ಯ ಉಮೇದ್ವಾರರೇ! ಮತದಾರ ಗೃಹಸ್ಥರೇ! ಸೂಚನೆಗಳನ್ನು ಸಂಪೂರ್ಣ ಸಮಾಲೋಚನಾ ಸೂಕ್ತರೀತಿಯಲ್ಲಿ ನಡೆಸಿ ಜಿಲ್ಲೆಯ ಅಭ್ಯುದಯದ ಪುಣ್ಯಕೀರ್ತಿಗಳಲ್ಲಿ ಭಾಗಿಗಳಾಗಬೇಕೆಂದು ಸವಿನಯ ಸಂಪ್ರಾರ್ಥಿಸುವ,

ಸುರತ್ಕಲ್,
ತಾ 16-5-1923. } ನಿಷ್ಪಕ್ಷಪಾತಿಯೊಡೊಬ್ಬ ಮತದಾರ.

ಗಣಪತಿ ರಾಷ್ಟ್ರೀಯ ಶಾಲೆ.

ಇದೇ ತಿಂಗಳ ತಾ. ೧೫ರಲ್ಲು ಪಡುಬಿದ್ರೆ ಗ್ರಾಮದಲ್ಲಿ ಶ್ರೀಯುತ ಅನಂತಪದ್ಮನಾಭಭಟ್ಟರ ಅಧ್ಯಕ್ಷತೆಯಲ್ಲಿ ಪಡುಬಿದ್ರೆ ಕೆಳಗಿನ ಪೇಟೆ ಲಕ್ಷ್ಮಣನಾಯ್ಕರ ಅಂಗಡಿಮಾಳಿಗೆಯಲ್ಲಿ ಬೆಳಗ್ಗೆ ೧೦ ಗಂಟೆಗೆ ರಾಷ್ಟ್ರೀಯ ಶಾಲೆಯು ತೆರೆಯಲ್ಪಟ್ಟಿತು. ಈ ಸಮಾರಂಭಕ್ಕೆ ಉಡುಪಿಯಿಂದ ಶ್ರೀಯುತ ಹಿರಿಯಡಕ ನಾರಾಯಣರಾಯರೂ, ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರೂ, ಮಂಗಳೂರಿನಿಂದ ಶ್ರೀಯುತ ಶ್ರೀಪಾದಕಮ್ಮರೂ [illegible] ಸಾಯಂಕಾಲ ವಿದ್ಯಾರ್ಥಿಗಳೂ ಗ್ರಾಮಸ್ಥರೂ ಒಟ್ಟಿಗೆ ಸೇರಿ [illegible] ಮೆರವಣಿಗೆಯಿಂದ ಸಂತೆಕಟ್ಟೆಗೆ ಹೋಗಿ ಮಹಾಸಭೆ ಸೇರಿತ್ತು.

ಶಾಲಾರಂಭ ದಿವಸವೇ ೩೦ ವಿದ್ಯಾರ್ಥಿಗಳು ಹಾಜರಿದ್ದರು. ಉಪಾಧ್ಯಾಯರು ಮೂವರು ಇದ್ದಾರೆ.

ಶಾಲಾಮೂಲಧನಕ್ಕೆ ಸಹಾಯಮಾಡಿದ ಮಹನೀಯರುಗಳ ಹೆಸರುಗಳು.

ಈ ಮೊದಲೇ ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದ ರೂ. ೨೦೦, ಅಲ್ಲದೆ ಅನಂತರ ಪದ್ಮನಾಭವಿಠ್ಠಲಪ್ರಭುಗಳು, ಉಳ್ಳೂರು ನಾರಾಯಣಐತಾಳರು, ರೂ. ೫೦ರಂತೆಯೂ, ಅಗುಂಬೆತೀರ್ಥಹಳ್ಳಿ ರಾಮರಾಯರು ರೂ. ೨೫ರಂತೆಯೂ ಹಿರಿಯಡಕ ನಾರಾಯಣರಾಯರೂ ಪಣಿಯಾಡಿ ಸಹೋದರರೂ, ರಾಘವೇಂದ್ರಪ್ರಭುಗಳೂ ಪಾದೆಬೆಟ್ಟು ಮಹಾಲಕ್ಷ್ಮಿ ಅಮ್ಮನವರೂ ರೂ. ೧೦ರಂತೆಯೂ ಕೊಟ್ಟಿರುವರು. ಇಷ್ಟಲ್ಲದೆ ವರುಷಕ್ಕೆ ರೂ. ೫೦ರಂತೆ ಕರಿಯಣ್ಣಶೆಟ್ರು ಕೊಡಲು ಒಪ್ಪಿರುವರು.

ತಿಂಗಳು ಗಟ್ಟಲೆಯಲ್ಲಿ ವಂತಿಗೆ ಕೊಡಲೊಪ್ಪಿದವರು. ರಾಜಶ್ರೀಗಳಾದ ಪಾದೆಬೆಟ್ಟು ಗುರುರಾಜಾಚಾರ್ಯರು ರೂಪಾಯಿ ೫ರಂತೆಯೂ, ಪಾದೆಬೆಟ್ಟು ಪದ್ಮನಾಭಯ್ಯನವರೂ, ಪಾದೆಬೆಟ್ಟು ಮಹಾಲಕ್ಷ್ಮಿ ಅಮ್ಮನವರೂ, ಪಡುಬಿದ್ರೆ ರಾಮಕೃಷ್ಣಶ್ಯಾನಭೋಗರೂ, ಪ. ಪದ್ಮನಾಭ ಶ್ರೀನಿವಾಸಶ್ಯಾನಭೋಗರೂ, ಹೆಜ್ಮಾಡಿ ಸುಬ್ಬಮರಕಾಲನವರೂ, ಕಂಚಿನಡ್ಕ ಲಿಂಗಪ್ಪಾಚಾರ್ಯರೂ, ಯಚ್. ಶ್ರೀಧರರಾಯರೂ, ಪಿ. ಕೃಷ್ಣರಾಯರೂ ರೂ. ೧ರಂತೆಯೂ ಇತರ ಕೆಲವು ಮಂದಿಗಳು ಆಣೆ ೮ರಂತೆಯೂ ಆಣೆ ೪ರಂತೆಯೂ ಕೊಡಲು ಒಪ್ಪಿರುವರು.

ನಮಗೆ ಶಾಲೆಯನ್ನು ನಡಿಸುವುದಕ್ಕೆ ತಿಂಗಳಿಗೆ ೫೦ ರೂಪಾಯಿ ಆದರೂ ಬೇಕಾಗಿರುವುದು. ಗ್ರಾಮಸ್ಥರೂ ರಾಷ್ಟ್ರೀಯ ವಿದ್ಯಾಭಿಮಾನಿಗಳೆಲ್ಲರೂ ನಮ್ಮ ಶಾಲೆಯನ್ನು ಸರಿಯಾಗಿ ನಡಿಸಿಕೊಂಡು ಹೋಗುವಂತೆ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುವ,

ಪ. ಕೃಷ್ಣರಾವ್, ಕಾರ್ಯದರ್ಶಿ,
ಪಡುಬಿದ್ರೆ ಗಣಪತಿ ರಾಷ್ಟ್ರೀಯ ವಿದ್ಯಾಶಾಲೆ.

ಹುಬ್ಬಳ್ಳಿಯ ವೃತ್ತ.

೧೮ನೇ ತಾರೀಕು.

ಈ ದಿವಸ ರಮಜಾನ ಹಬ್ಬವು ಇದ್ದುದರಿಂದ ರಾಷ್ಟ್ರೀಯ ಮುಸಲ್ಮಾನರೆಲ್ಲರೂ, ಖಿಲಾಫತ್ ಕಮಿಟಿಯ ಅಧ್ಯಕ್ಷರಾದ ಅಬ್ದುಲರಹಿಮಾನ ಮುನಸೀಸಾಹೇಬರ ಪ್ರಯತ್ನದಿಂದ ಕರ್ನಾಟಕ ಪ್ರೆಸ್ಸಿನಲ್ಲಿ ಪ್ರಾರ್ಥನೆಗಾಗಿ ಕೂಡಿದ್ದರು. ಜನಸ್ತೋಮವು ಸಾವಿರದ ವರೆಗೆ ಕೂಡಿತ್ತು.

ಖಿಲಾಫತ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಅಬ್ದುಲರಹಿಮಾನ ಸಾಹೇಬರ ಮೇಲೆ ೧೦೭ನೆಯ (ಅ.) ಮತ್ತು ೧೪೪ನೆಯ ಕಲಮಿನನ್ವಯ ನೋಟೀಸು ಹುಟ್ಟಿರುವದಾಗಿ ದಟ್ಟವಾರ್ತೆ! ಈ ನೋಟೀಸು ಹುಬ್ಬಳ್ಳಿಯಲ್ಲಿ ಶ್ರೀ. ಮೊಹಮದ ಅಲ್ಲಿಯವರು ಬಂದ ಸಮಯದಲ್ಲಿ ಶ್ರೀ. ಮುನಸೀ ಸಾಹೇಬರು ಮಾಡಿದ ಭಾಷಣದ ಸಲುವಾಗಿ ಲಾಗು ಆಗಿರುತ್ತದೆಂದು ತಿಳಿಯುತ್ತದೆ.

ಅದೇ ದಿವಸವೇ ಗಾಂಧಿಯ ದಿನದ ನಿಮಿತ್ತವಾಗಿ ಸಂಜೆ ೬ ಗಂಟೆಗೆ ಕರ್ನಾಟಕ ಪ್ರೆಸ್ಸಿನಲ್ಲಿ ಜಾಹೀರ ಸಭೆಯಾಯಿತು. ಕರ್ನಾಟಕ ಪ್ರಾಂತದ ಅಧ್ಯಕ್ಷರಾದ ಶ್ರೀ. ಗಂಗಾಧರರಾವ ದೇಶಪಾಂಡೆಯವರು ತಮ್ಮ ಅಸ್ಖಲಿತವಾಣಿಯಿಂದ ೧॥ ತಾಸುಗಳ ವರೆಗೆ ಸ್ವರಾಜ್ಯಪಕ್ಷದವರ ಹಾಗು ಕಾಂಗ್ರೆಸ್ ಪಕ್ಷದವರ ಮತಗಳನ್ನು ಸರಸವಾಗಿ ಮಂಡಿಸಿದರು. ಸದ್ಯದ ಪರಿಸ್ಥಿತಿಯಲ್ಲಿ ಕಾನೂನು ಮಂಡಲಗಳಲ್ಲಿ ಸೇರುವದು ನಿರರ್ಥಕವಾದದ್ದೆಂದು ತಮ್ಮ ಮತವಾಗಿರುವದೆಂದು ಹೇಳಿದರು. ಜನಸ್ತೋಮವು ಈ ಸಮೂಹದಲ್ಲಿ ಅಸ್ಪೃಶ್ಯರಾದರೂ ಮಿಲಿತರಾಗಿದ್ದರು. ಶ್ರೀ. ಗಂಗಾಧರರಾಯರು ತಮ್ಮ ಮರಾಠೀ ಭಾಷಣವು ಮುಗಿದ ಮೇಲೆ ಈ ಅಸ್ಪೃಶ್ಯಬಾಂಧವರ ಸಲುವಾಗಿಯೆಂದೇ ಕನ್ನಡದಲ್ಲಿ ಸದ್ಯದ ಚಳವಳಿಯ ಜನಕರಾದ 'ಮಹಾತ್ಮಾಗಾಂಧಿ'ಯವರಿಗೆ ಅಸ್ಪೃಶ್ಯ ಸಮಾಜದವರ ವಿಷಯಕ್ಕೆ ಇರುವ ಪ್ರೇಮವನ್ನು ತಿಳಿಸಿ ಹೇಳಿದರು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಇಲ್ಲಿಯ ಮುಖಂಡರುಗಳಾದ ಶ್ರೀ. ವಿಶ್ವನಾಥರಾವ ಜೋಶಿಯವರೇ ವಹಿಸಿದ್ದರು.

ಇದೇ ದಿವಸ ಗಾಂಧಿಯ ದಿನದ ಸಲುವಾಗಿ ಕಿಲ್ಲೆಯೊಳಗಿನ ಈಶ್ವರ ದೇವರ ಗುಡಿಯಲ್ಲಿ ನೂಲಿನ ಮೇಲಾಟವು ಬಲು ವಿಜೃಂಭಣೆಯಿಂದ ನೆರವೇರಿತು. ಈ ಮೇಲಾಟದಲ್ಲಿ ೬೦ ಜನರು ಭಾಗ ತೆಗೆದುಕೊಂಡಿದ್ದರು.

೧೯ನೇ ತಾರೀಕು.

ಈ ದಿವಸ ಸಂಜೆ ೬ ಗಂಟೆಗೆ ಹುಬ್ಬಳ್ಳಿಯ ಪ್ರಮುಖ ನಾಗರೀಕರ ಖಾಸಗೀ ಸಭೆಯೊಂದು ಕರ್ನಾಟಕ ಪ್ರೆಸ್ಸಿನಲ್ಲಿ ಕೂಡಿತ್ತು. ಈ ಸಭೆಯಲ್ಲಿ ಕೌನ್ಸಿಲ ಪ್ರವೇಶದ ಬಗ್ಗೆ ಚರ್ಚೆಯಾಗಿ ಕೊನೆಗೆ ಬಹುಮತದಿಂದ ಕಾನೂನು ಮಂಡಲಗಳಲ್ಲಿ ಸೇರಕೂಡದೆಂದಾಶಯದ ಠರಾವು ಪಾಸಾಗಿ ಬೆಳಗಾಂವಿಯಲ್ಲಿ ಕೂಡುವ ಕರ್ನಾಟಕ ಪ್ರಾಂತಿಕ ಸಮಿತಿಯ ಕೌನ್ಸಿಲದವರಿಗೆ ಕಳುಹಿಸುವದರಲ್ಲಿ ಬಂದಿತು.

ಇದೇ ಸಭೆಯಲ್ಲಿಯೇ ಹುಬ್ಬಳ್ಳಿಯಲ್ಲಿಯ ವಿಧಾಯಕ ಕಾರ್ಯಕ್ರಮವನ್ನು ಹೇಗೆ ನಡೆಯಿಸಬೇಕೆಂಬುದರ ಸಲುವಾಗಿ ಚರ್ಚೆಯಾಯಿತು. ಅದರಲ್ಲಿ ಇಲ್ಲಿಯ ಗುರ್ಜರ ಬಂಧುಗಳಲ್ಲಿ ಕೂಡಿ ೧೦೦ ಮಣದ ವರೆಗೆ ಅರಳೆಯನ್ನು ಖಾದೀ [illegible] ಸಲುವಾಗಿ ಧರ್ಮಾರ್ಥವನ್ನು ಕೊಡಿಸತಕ್ಕದ್ದೆಂದೂ, ಅವರು ಕೊಟ್ಟಷ್ಟು ಅರಳೆಯು [illegible] ಯೋಗ್ಯ ಮಾರ್ಗದಿಂದ ಶ್ರೀ. ವಿಶ್ವನಾಥರಾಯರು ಕಾಂಗ್ರೆಸ ಕಮಿಟಿಯವರಿಂದ [illegible] ನಿರ್ಣಯವಾಯಿತು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.

ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠ ದೀಕ್ಷಿತರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ಪ್ರಶಂಸೆಗೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ

ಅಥವಾ

ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

[illegible] ವಸಂತ ಕುಸುಮಾಂಜಲಿ

"ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತ" "ಆತ್ಮಗೀತ" "ದೇವರೆಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಸಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಬೇಕಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ವಟ್ಟಾವು ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿಂ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ [illegible] ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ [illegible] ಮೇಲನದಿಂದ ಸುಖವಾಗುವದೆಂಬದನ್ನೂ ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ, ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು, ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಅದ್ದರಿಂದ ಈ ಗ್ರಂಥವನ್ನು ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಳ್ಳುವದು [illegible]ತರಾಗಿರಿ.

ಇದರ ಬೆಲೆ ೧—೪—೦, ಟಪ್ಪಾಲು ಹಾಸಲು ೦—೪—೦.

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

---

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಪಾದಿಯೂ, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತಿವೆ

ಶ್ರೀನಿವಾಸ ರಂಗಪ್ಪೆ
ರಥಬೀದಿ, ಮಂಗಳೂರ

The Canara Bank, Limited, Ma

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರ

ESTABLISHED JULY 1 6.
Authorised and fully paid up Capital Rs. 300 0—0—0
Reserve and other sinking Funds „ 205,250-0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು,
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 205,250—0—0

THE BANK RECEIVES FIXED, CURR T ACCOUNT, & SAVINGS BANK DEPOSITS
ಖಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂ ಂಗ್ ಠೇವಣಾತಿಗಳ, ವಹಿಸಿಕೊಳ್ಳಲಾಗುತ್ತವೆ.
For further particulars ap o the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿ ಬರೆಕೊಳ್ಳುವದು.

Canara Bank Ltd.,
Mangalore, 12th Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂ ತ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿಂ!

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯ ಎಂದರೆ, ಅಪೇಕ್ಷಿಸಲಾರಿರಿ ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದರವನ್ನು ಕಾಂಟಿಬಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸಿದರೆ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನ ಹೇಳಿರುವಂತೆ ಸೇವಿಸಿದರೆ ಒಡನೆಯೇ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಅಫೀಮಿನಂಥ ಅಪಾಯಕರವಾದ ವಸ್ತುಗಳಾವುವೂ ಇಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂಥ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಶೀತ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ತೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷಾಂತರ ಇನ್‌ಫ್ಲ್ಯುಯನ್ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ. ಮಕ್ಕಳ ಏಳು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜು ಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರಿಯುತ್ತವೆ

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ಸೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜನಿಗೂ ಇರತಕ್ಕದಾದ ಭಕ್ತಿ ಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.

ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0—12—0	ಸಂಪರಾಮಾಯಣ ಹೊಸ ಮುದ್ರಣ .	5—0—0
ಸಂತಾಪಕ-ಕಾದಂಬರಿ	0—6—0	ಸಂಪರಾಮಾಯಣದ	
ಚಂದ್ರಮುಖಿ ,,	0—8—0	ಕಥೆ ವಚನ .	0-12—0
ರಾಜಪುತ್ರರಮಣಿಯರು	0—8—0	S. S. L. C. Kannada Texts	
		ಹರಿದಾಸಿ . . .	0—5—0
ಕೆಲವು ಸಣ್ಣ ಕಥೆಗಳು	1—0—0	ಸುಶೀಲೆ . . .	0—6—0
ರಾಜಯೋಗ . .	1—0—0	ಅಭಿನಯ ಹುಡುಗಿ.	0-12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಅದೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾಸ್ ಮಿಶ್ಯನ್ ಬುಕ್ ಎಂಡ್ ಟ್ರ್ಯಾಕ್ಟ್ ಡಿಪೋಜಿಟರಿ,
ಮಂಗಳೂರು.

ಶುದ್ಧವಾದ ಖಾದರ್ ರೇಷ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಪಾತ್ರಿಯಾದ ಎಲ್ಲಾ ರಂಗಿನಲ್ಲಿ ದೊರಿಯುವ ಮಡಿ ಯಾವುದು? ಖಾದರ್ ರೇಷ್ಮೆ ಮಡಿ.

18 ಮೊಳ ಉದ್ದ 2½ ಮೊಳ ಅಗಲ ರೂ. 20ರಿಂದ 35, 16 ಮೊಳ—2¼—ರೂ. 19ರಿಂದ 35, 8 ಮೊಳ ಉದ್ದ 2½ ಮೊಳ ಅಗಲ ರೂ. 9ರಿಂದ 15 ವರೆಗೆ, 6 ಮೊಳ ಉದ್ದ 2½ ಮೊಳ ಅಗಲ ರೂ. 7ರಿಂದ 11. ಅಂಗಿ ಬಟ್ಟೆಗಳು 14 ಮೊಳ ಉದ್ದ 2 ಮೊಳ ಅಗಲ 18ರಿಂದ 36 ಉತ್ತಮ ತರ 14 ಮೊಳ ಉದ್ದ 2 ಅಗಲ—28ರಿಂದ 38 ಶರ್ಟ್ ಬಟ್ಟೆ 18 ಮೊಳ ಉದ್ದ 2 ಮೊಳ ಅಗಲ 15ರಿಂದ 30, ಶಾಟಿ 11 ಮೊಳ ಉದ್ದ 1½ ಮೊಳ ಅಗಲ ರೂ. 9ರಿಂದ 15, ಇದು ವಿನಹ ಬೇರೆ ಸಾಮಾನುಗಳ [illegible].

ವಿಳಾಸ:—

ತಿರೋಮಣಿ ಉಡ್ಪಿ [illegible]
[illegible]

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮುಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ. 1—4—0.

ಹುಳದ ಪ್ರೇಮ (ಜಮುಕ್ರಿಕ್ಕೆ ಅತ್ಯು[illegible]

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ [illegible] ಕ್ರಮವಾದ ಔಷಧಿ. [illegible]—8—0.

ಕ್ರಯ ಒಂದು ಟಿನ್ನಿಗೆ [illegible] ಫೆರ್ನಾಂಡಿಸ್,
ನಮ್ಮ ವಿಳಾಸ:— [illegible] ಹೋಮಿಯೊಪೆತಿಕ್ ಡಿಸ್ಪೆನ್ಸರಿ
ಇಲೆ ಹಂಪನಕಟ್ಟೆ, ಮಂಗಳೂರು.

ರೇಶ್ಮೆ ವ[illegible] ಹಸನಾದ ರೇಶ್ಮೆ [illegible] ಈ ರೇಶ್ಮೆ [illegible] 5 ಮೊಳ ಉದ್ದ ಯಿಂದ [illegible]ರುವವು. ಮೇಲೆ ಹೊದಿ 2½ [illegible]ಗಳು ಬಹು ಚೆನ್ನಾಗಿರುವವು. [illegible]ಗಳಲ್ಲಿ ಇರುವವು. ಶ್ರೀಮಂತ[illegible] ಗರೀಬರಿಗೂ ಲಾಯಖಾದವು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ವಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುವು. ಬಹಳ ಹೋಗದು, ೧೬ ಮೊಳ ಉದ್ದ ಇದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1	ರೂ. 6—8—0
„ 2	„ 7—8—0

ವಿಳಾಸ:—ಎಸ್. ಆರ್. ಕೃಷ್ಣ ಎಂಡು ಕೊ,
1, ತಂಬುನಾಯಕನ ಬೀದಿ, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶ್ಯವ್ಯಾಪಾರಿ
ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. I (ತೊಲೆ 40) ದರ	ರೂ. 3—4—0
ರಾ. I („ 24) „	„ 2—0—0

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 3-0-0.

ಕಿಂತ ಕಡಿಮೆ ತರಿಸುವವರು ಪೋಸ್ಟ್, ಪೇಕಿಂಗ್ ಚಾರ್ಜು ಕೊಡಬೇಕಾಗುವುದು

ನಶ್ಯ ಒಂದೇ ತರದು.

ಎಲೆಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ ಯಾವುದೂ ಆವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು; ನೋಡುವವರಿಗೆ ಆಶ್ಚರ್ಯವಾಗಿರುವುದು; ಈ ದೀಪ ಒಂದು ತರಿಸಿಕೊಂಡರೆ ಯಾವಾಗಲೂ ಬೆಂಕಿಕಡ್ಡಿ ಆವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಟೋನಿಯಾ ಆಂಡ್ ಕೊ.
ಪೋಸ್ಟು ಬಾಕ್ಸು ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಶ್ರೀ[illegible]ವಧೂತರು, ಕ್ರಿಕಾಶಿ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮುನಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ [illegible] ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. [illegible]ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠನದಿಂದಲೂ, ಮಂತ್ರ [illegible] ಯೋಗದಿಂದಲೂ, ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷರಾಗುವ, [illegible] ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ [illegible] ದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರ[illegible], ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯ[illegible] ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. [illegible]ಸ್ಸು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇವರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣವಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇವಲ್ಲದ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷರೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೨—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲು 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್.

ಮಂಗಳೂರು — ಟೈಪ್ ಫೌಂಡ್ರಿ

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ [illegible] ಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು. [illegible]

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯಿನಾಮಲ್ಲ ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಪಾಠಿ ಕವರು ಫೌಂಟೆನ್ ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಹಲ್ಲಿರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಸಾಡುಪು ಕೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತವೆ.

ಆರ್. ಮಾರ್ಟಿನ್ನರ.

(ಸಾರಸಾ ಪರಿಲ್ಲಾ)

ಈ ಸಾರಸಾಪರಿಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವುದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಮಾಡುತ್ತದೆ. ಸುಖರೋಗ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರದ ಕಾಯಿಲೆ ಉಬ್ಬುವುದು, ನರಗಳಲಿರುವ ನೋವು, ವಾತ, ಸಂಧಿವಾತ, ಯಕೃತ್ ಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ ಮತ್ತು ಚರ್ಮದ ರೋಗಗಳು, ವಿಷ ಕಡಿತದಿಂದುಂಟಾದ ವ್ಯಾಧಿ, ಸೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು, ಮನುಷ್ಯನನ್ನು ಯಾವಾಗಲೂ ಆರೋಗ್ಯದಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ.

ಬಾಟ್ಲಿ 1ಕ್ಕೆ ಕ್ರಯ ರೂ. 1—12—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಳಿಜ್ವರ, ಸನ್ನಿಪಾತ ಪಟ್ಟಿ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳೂ ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ [illegible] ಡಿಪ್ಲೊಮಾ ವೈದ್ಯರಿಂದ ಗುಣವಾಗದಿದ್ದ ಜ್ವರವನ್ನು [illegible] ಎರಡು ಬಾಟಿಗಳ ಸೇವನೆಯಿಂದ ಗುಣವಾಗಿದೆ.

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯರಿಗೆ ಮೂಲವ್ಯಾಧಿ ಆದಾಗ, ಬಹಳ ಮೂತ್ರಶಂಕೆಯಾಗುವಿಕೆ, ಮೈರ್ನ್ಯಾವಲಿ ಉರಿಯುವುದು, ಮುಂತಾದ್ದು ಇದೇ ಮುಂತಾದ್ದರಿಂದ ವ್ಯಥೆಕರವುಂಟಾಗುತ್ತದೆ. ಈ ಔಷಧ ಒಂದೇ ಒಂದು ಬಾಟಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಊತಹಿಡಿದು ನೋಯುವ ಮೂಲವ್ಯಾಧಿ ಮತ್ತು ಎಂಥ ತರದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಬಹಳ ಉಪಯುಕ್ತವಾದ ವಿಶೇಷವಾಗಿ ಶಾಂತಿ ಮಾಡುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0.

ವಿಳಾಸ:—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ. ಹತ್ತಿರ, ಪೋರ್ಟ್, ಮುಂಬಯಿ.
R. D. KATELY & CO.
No. B. Frere Road,
Near Wright & Co. Fort BOMBAY.

Edited, Printed & Published by V. S. Kamath at the M. T. A. Sharada Press, Mangalore.

Registered No. M. 498.

SWADESHABHIMANI
MANGALORE.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ರಕ್ತೈರ್ಮಹಾರ್ಹೈಸ್ತುತುಷುರ್ನ ದೇವಾ ।
ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ।
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಮಲನುಸಮು ಹರುಷವಾಯಿತೆ! ಷ್ಟ ಸಾ- । ಗರವ ಮಥಿಸಲು ಸುರರಿಗದರಿಂ ।
ಗರಲಕವರಂಜಿದರೆ! ಸುಧೆಯನ ಸುಡುತ ಬರುತಿರುವ ॥
ತೆರಳಬಲ್ಲರೆ! ತೊರೆದು ಧೀಮರೆತು ಕ್ಷುದ್ರರ ತೆರದಿ ಕುಳಿತರೆ ।
ಕಾರ್ಯವನು ॥ ೧ ॥

ಪುಸ್ತಕ ೧೭. ಮಂಗಳೂರು, ತಾರೀಕು ೧ನೇ ಶುಕ್ರವಾರ ಜೂನು ೧೯೩೪. ಸಂಚಿಕೆ ೨೨

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ.	3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00000—0—0
ಚಂದಾ ಹಾಕಿ ಎತ್ತಿದ ಮೂಲಧನ	1,54,400—0—0
ಮೌಲ್ಯ ಕಟ್ಟ ಮೂಲಧನ	1,04,383—2—11
ಠೇವಣಾತಿಗಳು	3,49,151—12—6
ಇನ್ವೆಸ್ಟ್‌ಮೆಂಟು (1927ನೇ ಇಸವಿಯ) ಶೇಕಡಾ ೪ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	5,12,162—13—2
ರಿಜರ್ವ್ ಮತ್ತು ಇತರ ಫಂಡುಗಳು	29,149—4—2

ಕಳೆದ 2 ವರುಷಗಳಲ್ಲಿ ಪಾಲುದಾರರಿಗೆ ಸಾಲಿಯಾನ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳೊಮ್ಮೆ ಬಡ್ಡಿ ತರುವ ಕರಾರಿನ ಮೇಲೆ ಶೇಕಡಾ 7ರಂತೆ 7½ ಬಡ್ಡಿಯಲ್ಲಿ ಠೇವಣಾತಿಗಳನ್ನು 15 ದಿನಗಳ ನೋಟೀಸು ಮೂಲಕ ಶೇಕಡಾ ೬½ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾದೆ ಠೇವಣಾತಿಗಳನ್ನು ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ಸಿಗುವ ಚಾಲ್ತಿ ಠೇವಣಾತಿಗಳನ್ನು ಶೇಕಡಾ 4½ ಬಡ್ಡಿ ನಡೆಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನು, ತಿಂಗಳುಗಟ್ಟಲೆಯಂತೆ ತೆರುವ ಕಂತು ಠೇವಣಾತಿಗಳನ್ನು ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಂತೆ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಪುರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದಲ್ಲಿ ಸಿಕ್ಕುವುದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

ನೈಟ್ರೇಟ್ ಒಫ್ ಸೋಡಾ

ನಿಮ್ಮ ಜಾಮೀನನ್ನು ಸಾರವತ್ತಾಗಿ ಇರಿಸಿ ಬೆಳೆ ಸಮೃದ್ಧಿಯನ್ನು ಪಡೆಯಬೇಕಾದರೆ ಊರ ಗೊಬ್ಬರಗಳ ಜತೆಯಲ್ಲಿ ಸ್ವಲ್ಪ ನೈಟ್ರೇಟ ಒಫ್ ಸೋಡಾ ಗೊಬ್ಬರವನ್ನು ಉಪಯೋಗಿಸಿರಿ. ಈ ಸವುಳುಪ್ಪು ಗೊಬ್ಬರ[illegible] ಧಾನ್ಯ ಮುಂತಾದ ಪೈರುಗಳಿಗೂ ಕಬ್ಬಿನ ಬೆಳೆಗೂ ಮತ್ತು ತೆಂಗು ಮೊದಲಾದ ಫಲವೃಕ್ಷಗಳಿಗೂ ಅಗತ್ಯವಿರುವ ನೈಟ್ರೋಜನ್ ವಾಯುವನ್ನು ಜುರುಕಾಗಿ ಒದಗಿಸುವುದು.

ಪರೀಕ್ಷಾರ್ಥವಾಗಿ ಉಪಯೋಗಿಸಬೇಕೆಂದಿದ್ದವರು 2 ರಾತ್ಲು ಸವುಳುಪ್ಪಿನ ಸೆಂಪಲ್ ಡಬ್ಬಿಯನ್ನು ೦—೮—೦ ಯಂತೆಯೂ ಬಂಗಾಳಿ ಮಣ ಒಕ್ಕೆ ರೂ. ೯—೦—೦ಯಂತೆಯೂ ಪಡೆಯಬಹುದು.

ಹೆಚ್ಚಿನ ಮಾಹಿತಿ ಮತ್ತು [illegible] ಸಚಿತ್ರ ಪಟ್ಟಿಯನ್ನು ನಮ್ಮಿಂದ ಉಚಿತವಾಗಿ ಪಡೆಯಬಹುದು.

THE DIRECTOR
CHILEAN NITRATE COMMITTEE,
[illegible] Mission Row, CALCUTTA.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾಧಿಕಾರಿ ಅಧಿಕಾರಿಗಳು ಶಾಸ್ತ್ರಗಳಿಂದ ಆರಿಸಲ್ಪಟ್ಟ

ಹಿಂದೂ ಧರ್ಮಪ್ರವೇಶ ಕ್ರಯ	೦—೧೦—೦
ಕೇಕುಭಂಗ	„ ೦—೧೨—೦
ಸಂಕ್ಷೇಪಗೀತೆ	„ ೦—೧೦—೦

ಅಷ್ಟೇಕಾರಾಯಣ ಪುರೋಹಿತ್ಯಾಯರಿಂದ ರಚಿತವಾದ ಸ್ವರಾಜ್ಯ ಭಕ್ತಿಮೋಲ್ಲಾಸ ಕ್ರಯಂ —೩—೦

ಕರ್ನಾಟಕ ಕವಿ ಚರಿತೆ, ಮರಾಠರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ, ಅಂಗದನ ಸಿಂಧ್ಯೂರಾಯ, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಚೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ,ಮುಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ದನ್ಯಾತಶ್ಮಿಯ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳಿಕರಿಗೆ ರೂ ೨-೦-೦. ವಿ. ಪಿ. ಖರ್ಚು ಕೂಡಿ ರೂ ೩-೦-೦ ಪ್ರಕಟನೆಗಳ ದರಗಳ ಬಗ್ಗೆ ಪತ್ರದ ವ್ಯವಸ್ಥೆಗಾಗಿ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ಗದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಪೆನ್ಸಿಲುಗಳು. ಫೌಂಟನ್ ಪೆನ್ನುಗಳು, ಸ್ಲೇಟುಗಳು, ನಿಬ್ಬು, ಪೋರ್ಟ್‌ಫೋಲಿಯೊಗಳು, ಇತರ ವಿಲಾಯತಿ ಸಾಮುಗ್ರಿಗಳು.

ಇತರ ಸಾಮುಗ್ರಿ.

ವಕಾಲತು ಇತ್ಯಾದಿ ಕೋರ್ಟು ಗಳು, ಪರ್ಮಿಟು ಫೋರ್ಮು, ಕುಂ ದಾಚಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೇಂಕಿಂಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೋಮಿಯೋಪೆಥಿಕ್ ಮತ್ತು ಬಯೊ ಔಷಧಗಳು—ರೋಗಿಗಳಿಗೂ, ಆಸ್ಪತ್ರೆಗಳಿಗೂ ಬೇಕಾಗುವ ವಾಶ್ಚಾತ್ಯ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಕರಿಗೆಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ. ಗಜಕರ್ಣದ [illegible] ರಾಮು, ನಮ್ಮ ಔಷಧಿ ಇವಾಹೆಯು ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ನೋವುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ದಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಹರ್ ರೋಡ್,
ಮುಂಬಯಿ.

ಮಂಗಳೂರಲ್ಲಿ— ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪಾಚಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿ ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ಬೇರುಗಳಿಂದ ನಾವು ಅನೇಕ ಅತ್ಯುತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಿವೆ. ಈ ಭಾಗದಲ್ಲಿ [illegible] ಹೊಂದಿದವರಂತೆ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ದೊರಕಿವೆ.

ಅಂಥಾ ಅತ್ಯುತ್ಕೃಷ್ಟ ಔಷಧಿಗಳಲ್ಲಿ ನಮ್ಮ 'ಪಾಚಕಷಾಯ' ಎಲ್ಲಾ ತರದ ರೋಗಗಳನ್ನು ಗುಣಪಡಿಸುತ್ತದೆ. [illegible]

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ೩೬, (ಬ್ರಾಡ್ವೇ, ಮದ್ರಾಸ್.

Local Agents: **Raphael & Co.**
Brito Buildings
Hampankatta, MANGALO

SRI LAKSHMI MILLS.

Kasargod, ಜಿಲ್ಲೆ, ದ. ಕನ್ನಡ

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡಲ್ಲಿ ತೆರೆದ ಈ ಕಾರ್ಖಾನೆ ಇತ್ತಲಾಗೆ ಕಾಸರಗೋಡಿನ ಎಣ್ಣೆ, ಹಿಂಡಿ ತಯಾರುಯಲ್ಲಿ ಉತ್ತಮ ತರದ ತೆಂಗಿನ ಚಿಲ್ಲರೆಯಾಗಿಯೂ ರಖಂ ರಾಗುತ್ತಾ ಇದೆ. ಕ್ರಯ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೂ ಅಗ್ಗ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುರಿಗೆ ಸುಲಭ ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವವುದರ ಕ್ಕೆ ತರಿಸಿ ನಾನಾ ವಿಧದ ಮೋಪು ಸಿಗಿದುಯುಂಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಹಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಒಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದಗೊಳಿಸಿ ಕೊಡುವ ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಪ್ಯಾರಿಸ್ ದೇಶದಲ್ಲಿ ಕಂಡುಹಿಡಿಯಲ್ಪಟ್ಟ ರಬ್ಬರಿನ ರಹಸ್ಯ. (ಎಂಬ ಮರ್ಮದ ಚೀಲ.)

ಇದು ಮೃದುವಾದ ರಬ್ಬರಿನಲ್ಲಿ ಬಹು ಚಮತ್ಕಾರವಾಗಿ ತಯಾರು ಮಾಡಲ್ಪಟ್ಟು ಈಗಲೇ ಬಂದಿರುವದು. ಇದರ ಮರ್ಮದ ವಿಷಯ ಇಲ್ಲಿ ವಿವರವಾಗಿ ಬರೆದುತಿಳಿಸಲು ಆಗದು. ಇದನ್ನು ಉಪಯೋಗಿಸುವದರಿಂದ ಸ್ತ್ರೀ ಸಂಬಂಧವಾದ ಯಾವ ರೋಗವು ತಗಲದೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಇದರ ಉಪಯೋಗದಿಂದ ಆಗುವ ಸುಖವೂ ಸಂತೋಷವೂ ಅನವರಿಗೆ ಗೊತ್ತಾಗುವದು. ಇದನ್ನು ಪ್ಯಾರಿಸ್ ದೇಶದಲ್ಲಿ ಬಹಳ ಉಪಯೋಗಿಸುತ್ತಾರೆ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ.

ಕ್ರಯ ರಬ್ಬರಿನ ಮರ್ಮದ ಚೀಲ ರೂ. ೧—೮—೦.

ಮನೋಲಿಯ ಎಜೆನ್ಸಿ,
ಪೋಸ್ಟು ಬೋಕ್ಸ್ ನಂಬ್ರ 232. ಮದರಾಸ್.

ಓಟೋಲಿಲ್ಲಾ ಎಂಬ ಸೆಂಟ್

ಇದನ್ನು ಒಂದು ಒಳ್ಳೇ ಅರವಸ್ತ್ರಕ್ಕೆ ಸ್ಪ್ರೇ ಮಾಡಿದರೆ 6-7 ದಿನಗಳ ವರೆಗೂ ಸುವಾಸನೆಯಾಗಿರುತ್ತದೆ. ಇತರ ಸೆಂಟುಗಳ ಹಾಗೆ ಬಟ್ಟೆಗೆ ಕಲೆಯನ್ನು ಉಂಟುಮಾಡುವುದಿಲ್ಲ.

ಬೆಲೆ 1 ಔನ್ಸ್ ಬುಡ್ಡಿಗೆ ರೂ. 1—4—0.
„ ½ „ ರೂ. 0—10—0.
ಓಟೋಲಿಲ್ಲ ಸೆಂಟು ಕಾರ್ಡು 1ಕ್ಕೆ ರೂ. 0—12—0

ಇದಲ್ಲದೆ ಸಿಕ್ಕುವ ಇತರ ಸಾಮಾನುಗಳು:—
ನಮ್ಮಲ್ಲಿ ಸುಲಭ ಬ್ರಿಟಿಷ್ ಮೇಡ್ ರೇಜರ್ 1ಕ್ಕೆ 2—0—0
ರೋಲ್ಡುಗೋಲ್ಡು ರಿಸ್ಟವಾಚು 1ಕ್ಕೆ 8—8—0
ನಿಕಲ್ ರಿಸ್ಟ ವಾಚು 1ಕ್ಕೆ 6—8—0
ಮಹಾತ್ಮಾ ಗಾಂಧಿಯವರ ಫೋಟೋ ಉಂಗರ 1ಕ್ಕೆ 1—8—0

ವಿಳಾಸ:— ರಿವನ್ ವಾಚ್ ಕಂಪೆನಿ,
1/1೦ಕಡಪ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಪುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಲಿಚ್ಛೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್:—
ಜಿ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs. 150
¼ Page Rs. 80. ½ Page	„ 50
2 in. Single Column	„ 20
1 in. Single Column	„ 15
Name alone in Bold Types	„ 5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ತ್ವರೆಮಾಡಿರಿ! ತ್ವರೆಮಾಡಿರಿ!

ಮಾರಾಟಕ್ಕೆ ಸಿದ್ಧವಾಗಿದೆ

ಪಂಡಿತ ಮಂಗಳೂರ ನಾರಾಯಣಾಚಾರ್ಯರಿಂದ ಗಣಿಸಿ ಪರಿಶೋಧಿಸಲ್ಪಟ್ಟ,

ರುಧಿರೋದ್ಗಾರಿ ಸಂವತ್ಸರದ ಪಂಚಾಂಗಗಳು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತು 1ರ ರೂ. 2—12—0.
ಸ್ಪೆಶ್ಯಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಫಿಡಲ್ 1ಕ್ಕೆ „ 15—0—0

ಬೇಕಾದವರು 5 ರೂಪಾಯ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65,
ಮದರಾಸ್.

ಪ್ಯಾರೀಸ್ ದೇಶದ ಲೋವಿಂಗ್ ಫೋಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಅದು ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—
ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65, ಮದರಾಸು.

ಶಾಲಿವಾಹನಶಕ ೧೮೪೫ನೆಯ ರುಧಿರೋದ್ಗಾರಿ ಸಂವತ್ಸರದ ಅಧಿಕ ಜ್ಯೇ. ಬ. ೨ ಶನಿವಾರದಿಂದ ರುಧಿರೋದ್ಗಾರಿ ಸಂವತ್ಸರದ ಅಧಿಕ ಜ್ಯೇಷ್ಠ ಬ. ೯ ಶುಕ್ರವಾರದ ವರೆಗಿನ

ಪಂಚಾಂಗ

(೧೯೨೩ನೆಯ ಮೇಷ ಪಗ್ಗು)

ತಾರೀಖು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಮೇಷಾದಿ.	ಸೂರ್ಯ ಉ.	ಸೂರ್ಯ ಅಸ್ತ
2	ಶನಿ	೩	೧.೫೮	ಪೂ. ಷಾ.	೧೪.೪೭	೧೯	6. 5	6 52
3	ರವಿ	೪	೦.೧೭	ಉ. ಷಾ.	೧೫. ೦	೨೦	6. 5	6 53
4	ಸೋಮ	೫	೫೯.೪೩	ಶ್ರವಣಾ	೧೭.೧೭	೨೧	6. 5	6.53
5	ಕುಜ	೬	೬೦ ೦	ಧನಿಷ್ಠಾ	೧೫.೪೪	೨೨	6. 5	6.53
6	ಬುಧ	೭	೧.೪೪	ಶತಭಿಷಾ	೨೨.೪೭	೨೩	6. 5	6.53
7	ಗುರು	೮	೪.೪೭	ಪೂ. ಭಾ	೨೬.೪೭	೨೪	6. 5	6.54
8	ಶುಕ್ರ	೯	೮.೧೭	ಉ. ಭಾ	೩೩.೩೨	೨೫	6. 5	6.54

ಮಂಗಳೂರಿನ ವಾಯುಸ್ಥಿತಿ.

(೧೯೨೩ನೆಯ ಎಪ್ರಿಲ್)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜುಮಲಾ ಮಳೆ.
25	92—1	81—8	—	—
26	95—3	71—8	2—32	—
27	90—6	80—3	—	—
28	93—4	76—4	—	—
29	91—2	79—8	—	—
30	93—6	72—6	0—03	—
31	93—2	80—7	—	3—22

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ	...	7— 8	8— 6
ಗುಡ್ಡು,	...	7— 4	7— 6
ರಾಶಿ		6— 8	6—12
ಸುಗ್ಗಿ		7—0	7—4
ಅವ್ವಲ್ ಬೆಳ್ತಿಗೆ „	...	7—14	8—10
ಗುಡ್ಡು ಬೆಳ್ತಿಗೆ „	...	7— 6	7—12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	12— 0	13— 0
ಗೋದಿ ಗೋಣಿ ೧ಕ್ಕೆ	...	18— 0	22— 0
ಹುರುಳಿ ಗೋಣಿ ೧ಕ್ಕೆ	...	8—4	10—8
ಕಡಲೆ ಗೋಣಿ ೧ಕ್ಕೆ	...	11— 0	12— 8
ತೊಗರಿ ಗೋಣಿ ೧ಕ್ಕೆ	...	12— 0	—
ಅಲಸಂಡೆ ಗೋಣಿ ೧ಕ್ಕೆ	...	14— 0	16— 0
ಉದ್ದು ಗೋಣಿ ೧ಕ್ಕೆ	...	13— 0	—
ಹೆಸರು ಗೋಣಿ ೧ಕ್ಕೆ	...	—	12— 8
ಊರು ಬೆಲ್ಲ ಖಂಡಿ ೧ಕ್ಕೆ	...	40— 0	45— 0
ಉಪ್ಪು ಗೋಣಿ ೧ಕ್ಕೆ	...	7— 6	8— 9
ಕೊಬ್ರಿ ಖಂಡಿ ೧ಕ್ಕೆ	...	105— 0	115— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	38— 0	39— 0
ಎಳ್ಳಿಂಡಿ ಖಂಡಿ ೧ಕ್ಕೆ	...	45— 0	52— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	8— 0	9— 0
ಎಳ್ಳೆಣ್ಣೆ ಮುಡಿ ೧ಕ್ಕೆ	...	6—12	9— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	8—12—6	—
ಮೋರಿಶ ಸಕ್ಕರೆ ಮುಡಿ ೧ಕ್ಕೆ	...	—	8— 4
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	7— 8	9— 8
ಸಾಸಿವೆ ಮುಡಿ ೧ಕ್ಕೆ	...	8— 8	9— 0
ಕೊತ್ತಂಬರಿ ಮುಡಿ ೧ಕ್ಕೆ	...	4— 8	4—12
ಕಾಫಿ ಖಂಡಿ ೧ಕ್ಕೆ	...	269— 0	280— 0
ಬೀಗೆಕೋಟು ಅಡಿಕೆ ಖಂಡಿ ೧ಕ್ಕೆ ಹಳ್ಳು	...	150— 0	160— 0
ಬೀಗೆಕೋಟು New, ಹೊಸ್ತು	...	160— 0	170— 0
ಚಾಲುಕುಶಾಲು ಖಂಡಿ ೧ಕ್ಕೆ	...	115— 0	120— 0
ಹುಣಸೆ ಮುಡಿ ೧ಕ್ಕೆ	...	60— 0	70— 0
ಗೇರುಬೀಜ ಮುಡಿ ೧ಕ್ಕೆ	...	1—14	2— 0
ಕಲ್ಲುಪ್ಪು ಖಂಡಿ ೧ಕ್ಕೆ	...	50— 0	65— 0
ಕಾಂಟ್ರು ಕಡಕು ಮುಡಿ ೧ಕ್ಕೆ	...	20—12	23— 0
ಕಾಂಟ್ರು ಬಾಕ್ರಿಗಳು ಮುಡಿ ೧ಕ್ಕೆ	...	32— 0	—
ಮೆಣಸು ಕುತ್ಯೆ ಸೇರು ೧ಕ್ಕೆ	...	22— 8	—
ಹುಲ್ಲಿನ ಕಸಬುಮಡ 1ಕ್ಕೆ	...	20— 0	21 —

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 3 ವರುಷ ಕೊಡುವೆವು.)



ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

NOTICE.

The Samyukta Gowda Saraswat Sabha, Madras will grant a number of scholarships to the total value of Rs. 1000 during the academic year 1923-1924.

The scholarships are tenable for 10 months and will be granted to men or women of the community for prosecuting studies in the lower secondary and high schools, in Arts colleges in the Medical & Engineering colleges and in the case of women to under go training as nurses or teachers.

Applications with testimonials of conduct, poverty and qualification should reach the Hon. Secretary, 25 Harris Road, Mount Road Post, Madras, not later than the 15th June next.

The scholarships are repayable with 4% interest.

25 Harris Road,
Mount Road P. O. Madras,
18th April 1923.

M. Keshava Pai,
Hon. Secretary.

ದಾವುದರ ಪೇಟೆಂಟ್ ಅಭ್ರಕದ ಸ್ವದೇಶಿ ಚಿಮಿಣಿ ಬುರುಡೆಗಳು

ಗಾಜು ಬುರುಡೆಗಾಗಿಯೇ ವರುಷಂಪ್ರತಿ ಎಷ್ಟು ಹಣವು ದುರ್ವಯವಾಗುತ್ತಿದೆ ಎಂಬುದು ಸರ್ವರಿಗೂ ಅನುಭವವಾಗಿದೆ. ಹೀಗಿರುತ್ತ ಹೆಸರುಮಾತ್ರಕ್ಕೆ ಬುರುಡೆ ಎನ್ನಿಸಿಕೊಳ್ಳುವ ವಸ್ತುವನ್ನು ತಯಾರಿಸುವುದಕ್ಕಿಂತ ಜನರಿಗೆ ಹೆಚ್ಚು ಕಾಲಕ್ಕೆ ಉಪಯೋಗಕ್ಕೆ ಬರುವ ವಸ್ತುವೇ ಅಗತ್ಯವೆಂದು ಅನೇಕ ಪ್ರಯೋಗಗಳಿಂದ ಕಂಡುಹಿಡಿದಿದ್ದೇವೆ. ಗಾಜು ಬುರುಡೆಗಳು ಪೆಡಸಾಗಿದ್ದು, ದೀಪದ ಪ್ರಕಾಶದ ಉಷ್ಣತೆಯಿಂದ ಒಡೆಯುತ್ತವೆ. ನೀರಿನ ಅಥವಾ ತಂಪು ಗಾಳಿಯ ಸ್ಪರ್ಶವಾಗುತ್ತಲೇ ಪಟಪಟ ತುಂಡು ತುಂಡಾಗುತ್ತವೆ. ಜಪಾನ ಮ್ಹಾಲುಗಳಲ್ಲಿ ಈ ಗುಣವು ಸ್ಪಷ್ಟವಾಗಿ ಕಾಣುತ್ತದೆ. ಒಂದು ದೀಪಕ್ಕೆ ಬೇಕಾಗುವ ಬುರುಡೆಗಾಗಿ ವರುಷಕ್ಕೆ ೫೦-೬೦ ರೂಪಾಯಿ ಕ್ರಯವಾಗುತ್ತದೆ. ಇದಕ್ಕೆ ಪ್ರತಿಯಾಗಿ ಅಭ್ರಕದ (ಬಿಂಗದ) ಬುರುಡೆಗಳು ತಯಾರಾಗಿವೆ. ಬಿಂಗು ಪಾರದರ್ಶಕ ಪದಾರ್ಥವಾಗಿದ್ದುದರಿಂದ ಸೀಮೆಯ ಎಣ್ಣೆಯಿಂದ ಉರಿಸುವ ದೀಪಗಳಿಗೆ ಉಪಯೋಗಿಸಲು ಯೋಗ್ಯವಾಗಿ ಕಂಡುಬಂದಿದೆ. ಇವು ತುಂಡಾಗುವುದಿಲ್ಲ; ನೀರಿನ ಮತ್ತು ತಂಪುಗಾಳಿಯ ಸ್ಪರ್ಶವಾಗಿದೊಡನೆ ಒಡೆಯುವುದಿಲ್ಲ. ಹೆಚ್ಚಿನ ಪ್ರಕಾಶವನ್ನು ಕೊಡುತ್ತವೆ. ಕಣ್ಣಿಗೆ ತಂಪು. ಈ ಬುರುಡೆಗಳನ್ನು ಉಪಯೋಗಿಸುವುದರಿಂದ ವರ್ಷ ಒಂದಕ್ಕೆ ರೂ. ೨ ಮಾತ್ರ ಖರ್ಚು ಆಗುವದು. ಈ ಬುರುಡೆಗಳಿಗೆ ಕೆಳಗೆ ಹೆಸರು ಕಾಣಿಸಿದವರು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಮುಖ್ಯ ಏಜಂಟರಾಗಿರುತ್ತಾರೆ.

ಡಿಟ್‌ಮಾರ್ ಲೇಂಪು, ಜಪಾನ್ ಲೇಂಪು, ತೂಗಾಡಿಸುವ ಲೇಂಪು, ಟೇಬಲ್ ಲೇಂಪು, ಗ್ಯಾಸಲೇಂಪು, ಮುಂತಾದ ಎಲ್ಲಾ ತರದ ದೀಪಗಳಿಗೆ ಉಪಯೋಗಿಸಲು ಬೇಕಾದ ಬುರುಡೆಗಳು ನಮ್ಮಲ್ಲಿ ದೊರಕುವುವು. ಅಲ್ಲದೆ ಯಾವುದಾದರೂ ಒಂದು ಹೊಸತರದ ದೀಪಕ್ಕೆ ಬೇಕಾಗುವ ಬುರುಡೆಗಳನ್ನು ಸಹ ಒದಗಿಸಿಕೊಡಬಹುದು.

ಕ್ರಯ ಎಲ್ಲಿ ಕಡಿಮೆ?

ನಮ್ಮ ದರವನ್ನು ಬೇರೆಯವರ ದರದೊಡನೆ ಸರಿಹೋಲಿಸಿ ನೋಡಿದರೆ
ಆಗ ತನ್ನಷ್ಟಕ್ಕೇ ಇದರ ಗುಟ್ಟು ಗೊತ್ತಾಗುವುದು!

ಕೊಡೆಗಳು ಯುದ್ಧಕ್ಕೆ ಮೊದಲಿದ್ದ ದರದಲ್ಲಿಯೇ ನಿಮಗೆ ಇಲ್ಲಿ ದೊರೆಯುವುವು!
ಬಲವಾದ ಬಾಳಿಕೆ ಬರುವ ಹೊಸ ಕೊಡೆಗಳು ಈಗ ತಾನೇ ತಲಪಿವೆ!!

ಸ್ವಿಟ್ಜರ್ಲೆಂಡಿನಲ್ಲಿ ಸಿದ್ಧವಾದ ಪ್ರಖ್ಯಾತಿಹೊಂದಿದ ಮಿಶನ್ ಕೊಡೆಗಳು

24×8 ರೂ. 6—4—0. 26×8 ರೂ. 6—8—0. 28×8 ರೂ. 6—12—0.

ಈ ಬೆಲೆಯೆಷ್ಟೆಂದು ಗುರುತಿಸಿಕೊಳ್ಳಿ! ನಮ್ಮ ಮಾರಾಟದ ದರ ಹೇಗಿದೆ ಎಂದು ನೀವೇ ಆಲೋಚಿಸಿರಿ!

ಉತ್ತಮ ಯಂತ್ರದಲ್ಲಿ ತಯಾರಾದ ಕೊಡೆಗಳು

26×8 ರೂ. 4—14—0. ಈ ಕೊಡೆಗಳು ಇದಕ್ಕಿಂತಲೂ ಅಗ್ಗವಾಗಿ ನಿಮಗೆ ದೊರೆಯದು. ಇದು ಸಂಪೂರ್ಣವಾಗಿ ನಂಬಿಕೆಗೆ ಅರ್ಹವಾದದ್ದೂ, ಬಲವಾದದ್ದೂ, ಬಾಳಿಕೆ ಬರತಕ್ಕದ್ದೂ ಆಗಿದೆ. ಪ್ರತಿಯೊಂದು ಕೊಡೆಗೂ ಗ್ಯಾರಂಟಿ ಇದೆ.

ಕಪ್ಪು ಬಿಳೀ ಬಣ್ಣದ ಶುದ್ಧ ಖಾದಿಯ ನಿರ್ಮಾಣದ ಹಿಂದೀ ಕೊಡೆಗಳು

18ರಿಂದ 26ರ ವರೆಗಿನ ಎಲ್ಲಾ ಅಳತೆಯಲ್ಲಿ ರೂ. 2—4—0ರಿಂದ ರೂ. 4—8—0ರ ವರೆಗೆ.

ನಂಬ್ರ 611 ಬೆಂಕಿಯ ಗುರುತಿನ ಕೊಡೆಗಳು

ಇದಕ್ಕೆ ಚಿನ್ನದ ಪದಕಗಳ ಬಹುಮಾನ ದೊರಕಿದೆ.

ಈ ಕೊಡೆಗಳು ಇದರಿಂದು ವ್ಯಾಪಾರ ಸಂಘದಲ್ಲಿ ಮಾತ್ರ ದೊರೆಯುತ್ತವೆ.

ಎಮ್. ಸುಲೇಮಾನ್ ನೂರ್ ಮಹಮ್ಮದ್ ಅಂಡ್ ಸನ್ಸ್,

ಕೊರೊನೇಶನ್ [illegible] 786 [illegible]

[illegible] ಮಂಗಳೂರು [illegible]

ಶ್ರೀಯುತ ಹರ್ಡೀಕರ ಮಂಜಪ್ಪನವರೂ

ಅವರ

ಸತ್ಯಾಗ್ರಹ ಆಶ್ರಮವೂ.

(ವಾರ್ತಾ ಪ್ರಸಾರಕ ಸಂಘ, ಹುಬ್ಬಳ್ಳಿ ಇವರಿಂದ)

ಶ್ರೀಯುತ ಮಂಜಪ್ಪನವರು ಕಾರವಾರ ಜಿಲ್ಲೆಯ ಶಿರ್ಸಿ ತಾಲೂಕಿನಲ್ಲಿ ಒಂದು ಪ್ರಸಿದ್ಧವಾದ ವ್ಯಾಪಾರಸ್ಥರ ಮನೆತನದಲ್ಲಿ ಜನಿಸಿದರು. ಇವರು ಶ್ರೀಮಾನ್ ವೀರಶೈವ ಮತದವರು. ಇವರ ತಂದೆಯವರು ಪ್ರಸಿದ್ಧ ವ್ಯಾಪಾರಸ್ಥರೂ ಸುಶೀಲರೂ ಆಗಿದ್ದರು. ಅವರು ಮಂಜಪ್ಪನವರ ಬಾಲ್ಯಾವಸ್ಥೆಯಲ್ಲಿಯೇ ತೀರಿಕೊಂಡಿದ್ದರಿಂದ ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಶಿರ್ಸಿಯಲ್ಲಿಯೇ ಮುಗಿಸಿಕೊಂಡು, ಮುಂದಿನ ಶಿಕ್ಷಣದ ಸಲುವಾಗಿ ಅಣ್ಣಂದಿರೊಡನೆ ದಾವಣಗೆರೆಗೆ ಬಂದು, ಇಂಗ್ಲೀಷ, ಮರಾಠಿ, ಸಂಸ್ಕೃತ ಮುಂತಾದ ಭಾಷೆಗಳನ್ನು ಕಲಿತರು. ಮೊದಲಿನಿಂದಲೂ ಇವರಿಗೆ ಲೇಖನ ವ್ಯವಸಾಯದಲ್ಲಿ ಅಭಿರುಚಿಯು ಬಹಳ. ಇವರು ಯಾವಾಗಲೂ ಭಗವದ್ಭಕ್ತರ ಮತ್ತು ತತ್ವಜ್ಞಾನಿಗಳ ಚರಿತ್ರೆಗಳನ್ನು ಓದಿ, ಮನನಮಾಡಿಕೊಂಡು ತಮ್ಮ ಸ್ವಂತ ಪ್ರಯತ್ನದಿಂದ ಸುಲಭವಾದ ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಬರೆಯುತ್ತಿದ್ದರು. ಇವರು ತಮ್ಮ ಸ್ನೇಹಿತರ ಸಹಾಯದಿಂದ ದಾವಣಗೆರೆಯಲ್ಲಿ, "ಭಕ್ತಬಂಧು ಮಂಡಲ" ವೆಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮುಖಾಂತರವಾಗಿ 'ಭಕ್ತಬಂಧು' ಎಂಬ ಒಂದು ಮಾಸಿಕ ಪುಸ್ತಕವನ್ನು ಹೊರಡಿಸಿದರು.

ಇವರು ಸದ್ಯದ ರಾಷ್ಟ್ರದ ಜ್ಯೋತಿಗಳಾದ ಮಹಾತ್ಮಾ ಗಾಂಧಿಯವರ ಗ್ರಂಥಗಳನ್ನು ಅವಲೋಕಿಸಿ, ಅವರ ಸತ್ಯಾಗ್ರಹ, ಅಹಿಂಸಾ ಮುಂತಾದ ತತ್ವಗಳಲ್ಲಿ ವಿಶ್ವಾಸವುಳ್ಳವರಾದರು. ಮಹಾತ್ಮಾಜೀಯವರ ತತ್ವಗಳು ಇವರ ಮನಸ್ಸಿನಲ್ಲಿ ಬಿಂಬಿಸಿ, ದೇಶಸೇವೆಗೋಸುಗ ಇವರ ಮನಸ್ಸು ಹರಿಯಿತು. ಮಾತೃಭೂಮಿಯ ಸೇವೆಗಾಗಿ ಬ್ರಹ್ಮಚರ್ಯದಿಂದಲೆ ಇದ್ದು, ತಮ್ಮ ಆಯುಷ್ಯವನ್ನು ಕಳೆಯಬೇಕೆಂಬ ಅವಲವಿಕೆಯು ಇವರಲ್ಲಿ ಉಂಟಾಯಿತು.

ಮಹಾತ್ಮಾಜಿಯವರ ೫೪ನೆಯ ವರುಷದ ವರ್ಧಂತಿಯ ದಿವಸವೆಂದರೆ ಶಾಲಿವಾಹನ ಶಕ ೧೮೪೪ನೆಯ ಭಾದ್ರಪದ ಬಹುಳ ೧೨ ಸೋಮವಾರ ತಾರೀಖು ೧೮-೯-'೨೨ನೆಯ ಇಸವಿ ದಿವಸ ಹುಬ್ಬಳ್ಳಿ ಶಹರದಲ್ಲಿ "ಸತ್ಯಾಗ್ರಹ ಸಮಾಜವೆಂಬ" ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ವತಿಯಿಂದ ಸತ್ಯಾಗ್ರಹಧರ್ಮಪ್ರಸಾರಕ್ಕಾಗಿ ಕರ್ನಾಟಕದಲ್ಲೆಲ್ಲ ಸಂಚಾರಮಾಡಿದರು. ಯಾವುದಾದರೂ ನದೀತೀರದಲ್ಲಿ, ಸತ್ಯಾಗ್ರಹ ಸಮಾಜದ ವತಿಯಿಂದ ಒಂದು ಆಶ್ರಮವನ್ನು ಸ್ಥಾಪಿಸಿ, ತಮ್ಮ ಮುಂದಿನ ಧ್ಯೇಯದ ಸಲುವಾಗಿ ಕಾರ್ಯತತ್ಪರರಾಗಬೇಕೆಂದು, ಇವರ ಮನಸ್ಸಿನಲ್ಲಿ ದೃಢತರವಾದ ಆಕಾಂಕ್ಷೆಯು ಮೊದಲಿನಿಂದಲೂ ಇತ್ತು. ಇಂಥ ಸತ್ಕಾರ್ಯಕ್ಕಾಗಿ ದಾವಣಗೆರೆಯ ಇವರ ಸ್ನೇಹಿತರೊಬ್ಬರು ಒಂದು ಕ್ಷೇತ್ರವನ್ನು ದಾನವಾಗಿ ಕೊಟ್ಟರು. ಅಲ್ಲಿಯೇ ಇವರು ತಮ್ಮ ಆಶ್ರಮವನ್ನು ಸ್ಥಾಪಿಸಿದರು.

ಸತ್ಯಾಗ್ರಹ ಆಶ್ರಮವು.

ಶ್ರೀಯುತ ಹರ್ಡೀಕರ ಇವರಿಗೆ ದಾನವಾಗಿ ಕೊಟ್ಟ ಭೂಮಿಯು ಮೈಸೂರ ಸಂಸ್ಥಾನದಲ್ಲಿ ಪ್ರಸಿದ್ಧಿಯನ್ನು ಪಡೆದ ಹರಿಹರ ಕ್ಷೇತ್ರದ ನೆರೆಯಲ್ಲಿ ತುಂಗಭದ್ರಾ ನದೀತೀರದಲ್ಲಿರುತ್ತದೆ. ಇದು ಹರಿಹರದಿಂದ ಹರಪನಹಳ್ಳಿಗೆ ಹೋಗುವ ಮಾರ್ಗದ ೩ನೇ ಮೈಲುಗಲ್ಲಿನಿಂದ ಪಶ್ಚಿಮಕ್ಕೆ ಒಂದು ಫರ್ಲಾಂಗ ದೂರದಲ್ಲಿರುತ್ತದೆ. ಆಶ್ರಮಸ್ಥಳವು ಎತ್ತರವಾದ ಬೈಲು ಪ್ರದೇಶದಲ್ಲಿ ನೆಲೆಸಿದ್ದು ಆದರ ಸುತ್ತಲಿನ ನೋಟವು ಅಂದವಾದದ್ದು, ಹವೆಯು ಆರೋಗ್ಯಕರವಾದದ್ದು ಇರುತ್ತದೆ.

ಸದ್ಯಕ್ಕೆ ಆಶ್ರಮದಲ್ಲಿ ವಾಸಮಾಡಲಿಕ್ಕೆ ೨-೩ ಎಕ್ರೆ ಭೂಮಿಯನ್ನು ತೆಗೆದುಕೊಂಡು ಸಮನೆಲವಾಗಿ ಮಾಡಿಸಿ ಪೌರ್ವಾತ್ಯ ಪದ್ಧತಿಗನುಸರಿಸಿ ಎರಡು ಆಲಯಗಳನ್ನು ಕಟ್ಟಿಸಿದ್ದಾರೆ. ಈ ಆಲಯಗಳು ಇಟ್ಟಿಗೆ, ಗಚ್ಚು, ಕಲ್ಲುಗಳಿಂದ ಭದ್ರವಾಗಿ ಕಟ್ಟಲ್ಪಟ್ಟಿರುತ್ತವೆ. ಪ್ರತಿಯೊಂದು ಆಲಯದ ಕಟ್ಟಡದ ಖರ್ಚು ಸುಮಾರು ರೂ. ೨೫೦, ಆಗಿದ್ದು, ಈ ಖರ್ಚನ್ನು ಹಿರೆಕೆರೂರು ಮತ್ತು ಶಿರ್ಸಿ ಊರುಗಳ ವ್ಯಾಪಾರಸ್ಥರು ಕೊಟ್ಟಿದ್ದಾರೆ. ಒಂದು ಆಲಯವು ಇವರ ವಾಸಸ್ಥಾನವು. ಇನ್ನೊಂದಾಲಯವು ಇವರ ಖಾಸಗಿ ವಾಚನಾಲಯವಾಗಿರುತ್ತದೆ. ಜಗತ್ತಿನೊಳಗಿನ ಎಷ್ಟೋ ತತ್ವಜ್ಞಾನಿಗಳ ಗ್ರಂಥಗಳು ಇವರಲ್ಲಿ ಸಂಗ್ರಹಿಸಲ್ಪಟ್ಟಿರುತ್ತವೆ. ಇವರ ಲೇಖನ ವ್ಯವಸಾಯವು ವಾಚನಾಲಯದಲ್ಲಿ ನಡೆಯುತ್ತದೆ. ಇವರು ಪ್ರತಿ ಸೋಮವಾರಕ್ಕೊಮ್ಮೆ ಸುತ್ತಲಿನ ಗ್ರಾಮಗಳಿಗೆ ಹೋಗಿ ಅಲ್ಲಿಯ ಜನರಲ್ಲಿ ತಮ್ಮ ತತ್ವಪ್ರಸಾರ ಮಾಡುತ್ತಾರೆ. ಈ ಆಶ್ರಮವು ರುಧಿರೋದ್ಗಾರಿ ನಾಮ ಸಂ॥ರದ ಚೈತ್ರ ಶುದ್ಧ ೯ನೆಯ ದಿವಸ ಸ್ಥಾಪನೆಯಾಗಿದ್ದು, ಈಗ ಅಲ್ಲಿ ಇಬ್ಬರು ವಿದ್ಯಾರ್ಥಿಗಳು ಇರುತ್ತಾರೆ. ಒಬ್ಬ ವಿದ್ಯಾರ್ಥಿಯು ಹರಿಹರದ ಪ್ರಸಿದ್ಧ ನಾಯಕರ ಮನೆತನದವನು. ಇವನು ನೂಲುವುದರಲ್ಲಿ ಬಹು ಚತುರನಿದ್ದಾನೆ. ಭಾರತ ಮಾತೆಯ ಉದ್ಧಾರಾರ್ಥವಾಗಿ ಇಂಥ ಆಶ್ರಮಗಳು ಅವಶ್ಯವಾಗಿ ಬೇಕು.

ಕುಂಬಳೆ ನಿವಾಸಿಕರ ಮೀಟಿಂಗು.

೧೯೨೩ನೆಯ ಇಸವಿ ಮೇ ತಾ. ೨೧ನೆಯ ಸೋಮವಾರ ಅಪರಾಹ್ನ ಗಂಟೆ ೪ರ ಸಮಯ ಕುಂಬಳೆ ಪರಸ್ಪರ ಸಹಾಯಕ ಸಂಘದ ಆಫೀಸಿನಲ್ಲಿ ಮ. ರಾ. ರಾ. ರಾಯಪ್ಪ ರಾಮಚಂದ್ರ ನ್ಯಾಕರವರ ಅಧ್ಯಕ್ಷತೆಯಿಂದ ಕೂಡಿದ ಕೊಯಪಾಡಿ ಗ್ರಾಮಸ್ಥರ ಸಭೆಯ ಪ್ರೊಸಿಡಿಂಗ್ಸ.

ಕುಂಬಳೆ ಬಿ. ಇ. ಮಿಶ್ಯನ್ ಎಲಿಮೆಂಟರಿ ಶಾಲೆಯಲ್ಲಿ ಹಿಂದು ಮಕ್ಕಳಿಗೆ ಆಕ್ಷೇಪಕರವಾದ ಬೈಬಲನ್ನು ಒತ್ತಾಯದಿಂದ ಕಲಿಸುವುದರಿಂದ ಮತ್ತು ಶಾಲಾ ವಿದ್ಯಾರ್ಥಿಗಳಿಂದ ಫೀಸನ್ನು ಪಡೆಯುವ ವಗೈರೆ ನಮ್ಮ ಆಕ್ಷೇಪಗಳನ್ನು ವಿವರಿಸಿ ನಾವು ಕುಂಬಳೆಯಲ್ಲಿ ಬೋರ್ಡ ಎಲಿಮೆಂಟರಿ ಶಾಲೆಯನ್ನು ಇಡಿಸಿ ಕೊಡಬೇಕಾಗುವಂತೆ ಈ ಮೊದಲು ದಕ್ಷಿಣ ಕನ್ನಡ ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲ ಪ್ರೆಸಿಡೆಂಟರವರಿಗೆ ಅರ್ಜಿ ಬರೆದಿದ್ದಲ್ಲದೆ ಅದರ ಯುಕ್ತ ನಕಲನ್ನು ಕಾಸರಗೋಡು ತಾಲೂಕು ಬೋರ್ಡ ಪ್ರೆಸಿಡೆಂಟರವರಿಗೂ ರವಾನಿಸಿದ್ದೆವು. ಸದರಿ ಮನವಿಗೆ ಈ ತನಕ ಏನೊಂದು ಜವಾಬು ಕೊಡದಿರುವುದರಿಂದ ನಾವು ಹೆಚ್ಚಿನ ಪಶ್ಚಾತ್ತಾಪ ಮೂಲಕ ಈ ಕೆಳಗೆ ಕಾಣಿಸಿದ ನಿರ್ಣಯಗಳನ್ನು ಮಾಡಿರುತ್ತೇವೆ.

(೧) ಕುಂಬಳೆಯಲ್ಲಿ ಬೋರ್ಡ ಎಲಿಮೆಂಟರಿ ಶಾಲೆಯನ್ನು ಸ್ಥಾಪಿಸುವ ತನಕ ನಾವು ಹೆಚ್ಚಿನ ಕಷ್ಟಗಳನ್ನು ತಾಳಿದಾಗ್ಯೂ ನಮ್ಮ ಮಕ್ಕಳನ್ನು ಸದರಿ ಮಿಶ್ಯನ್ ಶಾಲೆಗೆ ಖಂಡಿತವಾಗಿ ಕಳುಹಿಸುವುದಿಲ್ಲವಾಗಿ ಈ ಮೂಲಕ ನಿರ್ಧರಿಸಿರುತ್ತೇವೆ.

(೨) ಈ ಸಂಬಂಧವಾಗಿ ನಮಗುಂಟಾಗುವ ಕಷ್ಟ ನಷ್ಟಗಳಿಗೆ ಮೇಲಿನ ಸಂಸ್ಥೆಗಳೇ ಜವಾಬ್ದಾರಿಯಾಗಿರತಕ್ಕದ್ದೆಂತ ತೀರ್ಮಾನಿಸಿದ್ದೇವೆ.

(೩) ಈ ಸಭಾವೃತ್ತಾಂತವನ್ನು ದಯಮಾಡಿ ಪ್ರಕಟಿಸುವಂತೆ ಸ್ಥಳೀಕ ಪತ್ರಿಕೆಯಾದ ಸ್ವದೇಶಾಭಿಮಾನಿಗೆ ಯಥಾ ನಕಲನ್ನು ಕಳುಯಿಸುವುದೆಂತಲೂ, ಮತ್ತು ಅದರ ಛಾಪಾಪ್ರತಿಯನ್ನು ಕಾಸರಗೋಡು ತಾಲೂಕು ಬೋರ್ಡು ಪ್ರೆಸಿಡೆಂಟರವರಿಗೆ ರವಾನಿಸುವುದಾಗಿಯೂ ನಿರ್ಣಯಿಸಲಾಯಿತು.

ಕೊಯಪಾಡಿ ಬೋರ್ಡು ಎಲಿಮೆಂಟರಿ ಶಾಲೆ.

ಈ ಶಾಲೆಯು ಕುಂಬಳೆಯಿಂದ ಮೂರು ಮೈಲು ಪೂರ್ವದಲ್ಲಿ ಎಡನಾಡು, ಕೊಯಪಾಡಿ, ಕಣ್ಣೂರು, ಇಚಲಂಪಾಡಿ, ಗ್ರಾಮಗಳ ಮಧ್ಯ ನಾಯ್ಕಾಪ ಎಂಬ ಸ್ಥಳದಲ್ಲಿದ್ದು, ನಾಲ್ಕು ಗ್ರಾಮಗಳ ವಿದ್ಯಾರ್ಥಿಗಳಿಗೆ ಬಂದು ಕಲಿಯಲು ಅನುಕೂಲವಾದದ್ದಾಗಿದೆ. ಮತ್ತು ಎಡನಾಡು, ಕಣ್ಣೂರು, ಇಚಲಂಪಾಡಿ ಗ್ರಾಮಗಳಲ್ಲಿ ಬೇರೆ ಶಾಲೆಗಳಿಲ್ಲದೆ ಇರುವುದರಿಂದ ಹುಡುಗರಿಗೆ ಇಲ್ಲಿಯೇ ಕಲಿಯಬೇಕಾಗಿದೆ. ಆದರೆ ಈ ಶಾಲೆಯನ್ನು ಸದ್ಯದಲ್ಲಿಯೆ ಕುಂಬಳೆಗೆ ಒಯ್ಯುವರೆಂಬ ವರ್ತಮಾನವನ್ನು ಕೇಳಿ ಬಹಳ ವ್ಯಸನಪಡುತ್ತೇವೆ. ಈ ವರ್ತಮಾನವು ನಿಜವಾದದ್ದಾದರೆ ಬಡವಿದ್ಯಾರ್ಥಿಗಳಿಗೆ ಬಹಳ ಕಷ್ಟವೆ ಸರಿ. ಮಾತ್ರವಲ್ಲ. ಕುಂಬಳೆಯಲ್ಲಿ ಮಿಶ್ಯನ್ ಶಾಲೆ, ಬೋರ್ಡು ಹೈಯರ್ ಎಲಿಮೆಂಟರಿ ಶಾಲೆ, ಬಾಲಿಕಾ ಶಾಲೆ, ಹೀಗೆ ಮೂರು ಶಾಲೆಗಳಿರುತ್ತ ಈ ಶಾಲೆಯನ್ನು ಅಲ್ಲಿಗೆನೆ ಒಯ್ಯುವುದೆಂದರೆ, ಬಡಗ್ರಾಮಸ್ಥರ ದುರ್ದೈವವೆಂದೆ ಹೇಳಬೇಕಾಗಿದೆ. ಕುಂಬಳೆಗೆ ಹುಡುಗರನ್ನು ಕಳುಹಿಸೋಣವೆಂದರೆ, ಮೇಲೆ ಹೇಳಿದ ಗ್ರಾಮಗಳಿಂದ ನಾಲ್ಕೈದು ಮೈಲು ದೂರ ಹೋಗಬೇಕಾಗುವುದು. ಮತ್ತು ಊಟ ಮೊದಲಾದವುಗಳಿಗೂ ಅನಾನುಕೂಲ. ಚಿಕ್ಕಪುಟ್ಟ ಬಾಲಕರನ್ನು ಇಷ್ಟು ದೂರ ಬಿಸಿಲಿಗೂ, ಮಳೆಗೂ ಕಳುಹಿಸಲು ಯಾರೂ ಒಡಂಬಡರು. ಹೀಗಿರುತ್ತ ಬಡವರಿಗೆ ಉಪಕಾರಿಯಾಗಿದ್ದ ಈ ಶಾಲೆಯನ್ನು ನಿಷ್ಕಾರಣವಾಗಿ ಥಟ್ಟನೆ ಕುಂಬಳೆಗೆ ಒಯ್ಯುವುದು ಮಾನ್ಯ ಬೋರ್ಡಿನವರ ನಿರ್ದಯತೆಯನ್ನು ತೋರಿಸುವುದಾಗುತ್ತದೆ. ಆದುದರಿಂದ ಈ ಶಾಲೆಯನ್ನು ಕುಂಬಳೆಗೆ ಒಯ್ಯುವುದರ ಬದಲಾಗಿ ಸಮರ್ಥರಾದ ಉಪಾಧ್ಯಾಯರನ್ನು ನೇಮಿಸಿ ಇನ್ನಷ್ಟು ಉತ್ಕೃಷ್ಟ ಸ್ಥಿತಿಗೆ ತರುವರೆಂದು ಭರವಸೆಪಡುತ್ತೇವೆ.

ಇತಿ ಗ್ರಾಮಸ್ಥ.

ದಕ್ಷಿಣ ಕನ್ನಡ ಜಿಲ್ಲೆಯ ಜಾನುವಾರುಗಳ ಮತ್ತು ಬೇಸಾಯದ ಸ್ಥಿತಿ.

ದಕ್ಷಿಣಕನ್ನಡ ಜಿಲ್ಲೆಯ ನನ್ನ ಇತ್ತಲಾಗಿನ ಪರ್ಯಟನ ಕಾಲದಲ್ಲಿ ನನ್ನ ಲಕ್ಷ್ಯಕ್ಕೆ ಮುಖ್ಯವಾಗಿ ಬಂದ ಸಂಗತಿಯೆಂದರೆ, ಜಿಲ್ಲೆಯಲ್ಲಿ ಜಾನುವಾರುಗಳು ಕಡಿಮೆಯಾಗಿರುವಿಕೆ, ಮತ್ತು ರೈತರಿಗೆ ತಮ್ಮ ಬೇಸಾಯ ಕಾರ್ಯವನ್ನು ಸರಿಯಾಗಿ ನಡಿಸಲು ಇರುವ ಅನಾನುಕೂಲತೆಗಳು. ಭೂಮಿಯ ಪ್ರಕೃತಿಯು ಜಿಲ್ಲೆಯ ಜನರಿಗೆ ಈ ವಿಷಯಗಳಲ್ಲಿ ಹೊರತು ಇತರ ಎಲ್ಲಾ ಸಂಗತಿಗಳಲ್ಲಿ ಅನುಕೂಲವಾಗಿಯೇ ಇದೆ. ಹಳ್ಳಿಯಲ್ಲಿ ಜನರಿಗೆ ಮೌಲ್ಯಕ್ಕೆ ಅಥವಾ ಉಪಕಾರಾರ್ಥವಾಗಿ ಹಾಲು ದೊರಕುವುದು ಅಸಾಧ್ಯ. ಚಿಕ್ಕಮಕ್ಕಳು ಪ್ರಾಯಪೂರಿತರಾಗುವ ವರೆಗೆ ದಿನದ ಹಾಲು ಅವಶ್ಯವಾಗಿರುತ್ತ ಹಾಲಿನ ಅಭಾವವು ವಿಶೇಷವಾಗಿರುವ ಹಳ್ಳಿಗಳಲ್ಲಿ ಮಕ್ಕಳ ಆರೋಗ್ಯಸ್ಥಿತಿಯು ಯಾವ ಪ್ರಕಾರ ನಿಲ್ಲುವುದೆಂಬುದನ್ನು ಆಲೋಚಿಸಿರಿ. ಗದ್ದೆಗಳನ್ನು ಉಳುವುದು ಮೊದಲಾದ ಕೆಲಸಗಳಿಗೆ ಬೇಕಾಗಿರುವ ಎತ್ತುಗಳನ್ನು ಅಲ್ಲಿಯ ನಿವಾಸಿಕರು ಸುಬ್ರಹ್ಮಣ್ಯ ಸಂತೆಯ ಕಾಲದಲ್ಲಿ ಕೊಂಡುಕೊಳ್ಳುವರು. ಈ ಸಂತೆಗೆ ವಿಶೇಷವಾಗಿ ಮೈಸೂರು ಸಂಸ್ಥಾನದಿಂದಲೇ ಜಾನುವಾರುಗಳು ಮಾರಾಟಕ್ಕೆ ಬರುವವು. ಈ ಎತ್ತುಗಳು ಈ ಜಿಲ್ಲೆಯಲ್ಲಿ ಹೆಚ್ಚು ಕಾಲ ಬಾಳುವುದಿಲ್ಲ. ಈ ಜಿಲ್ಲೆಯಲ್ಲಿ ನಾನು ನೋಡಿದಂತಾಗಿ ನೋಡಿದ ಜಾನುವಾರುಗಳು ತಮ್ಮ ಅಲ್ಪ ತರದ ಪೋಷಣ ಮತ್ತು ಶಕ್ತಿಮೀರಿ ಮಾಡಬೇಕಾದ ಕೆಲಸ ತೊಂದರೆಯನ್ನು ವ್ಯಕ್ತಪಡಿಸುವವು. ಜಾನುವಾರುಗಳ ಚರಾವಿಗೆ ಸಾಕಷ್ಟು ಸ್ಥಳವು ಹಳ್ಳಿಗಳಲ್ಲಿ ಇಲ್ಲದಿರುವುದು ಈ ಹಾನಿಗೆ ಕಾರಣವೆಂದು ತಿಳಿದಿರುವೆನು. ಜಾನುವಾರುಗಳ ಚರಾವಿಗೆ ಸಾಕಷ್ಟು ಸ್ಥಳವನ್ನು ಇಡದೆ ಹೆಚ್ಚಿನ ಪರಂಬೋಕು ಸ್ಥಳವನ್ನು ಪಟ್ಟಾಸ್ಥಳಗಳಾಗಿ ಮಾರ್ಪಡಿಸಿದೆ. ಉದಾಹರಣಾರ್ಥವಾಗಿ ಹೇಳುವುದಾದರೆ, ದ. ಕನ್ನಡ ಜಿಲ್ಲೆಯಲ್ಲಿ ಕಳೆದ ೧೩೩೧ನೆ ಪಸಲಿ ವರ್ಷ ೧೯೨೧-೨೨ ವರುಷದ ಬೋರ್ಡು ಆಫ್ ರೆವೆನ್ಯು ಮತ್ತು ಸೆಟ್ಲಮೆಂಟ ಆಫ್ ಲೆಂಡ್ ರೆವಿನ್ಯು ರಿಪೋರ್ಟಿನ ಮೇರೆಗೆ ರೈತವಾರಿ ಜಮೀನಿಗೆ ಸೇರಿರುವ ಸ್ಥಳವು ಸದರಿ ವರುಷ ೧೬೫೬೮ ಎಕ್ರೆಗಳಿಗೆ ಮೀರಿದೆ. ಪರಂಬೋಕು ಸ್ಥಳವನ್ನು ದರಖಾಸ್ತಿಗೆ ಕೊಟ್ಟುದುದೇ ಈ ರೀತಿ ರೈತವಾರಿ ಜಮೀನು ಹೆಚ್ಚಲು ಕಾರಣವಾಗಿದೆ. ಕಾಡುಗಳನ್ನು ಫೋರೆಸ್ಟ ರೂಲುಗಳಿಗೆ ಬಳಪಡಿಸಿ ಸುರಕ್ಷಿತ ಪಡಿಸಿದ್ದರಿಂದ ಅವುಗಳ ಗೋಜಿಗೆ ಹೋಗಲು ಸಾಧ್ಯವೇ ಇಲ್ಲ. ಹೀಗಿರುತ್ತ ಜಾನುವಾರುಗಳು ಚರಾವಿನ ಬಗ್ಗೆ ಎಲ್ಲಿಗೆ ಹೋಗಬೇಕಾಯಿತು. ಅವುಗಳಿಗೆ ಅಲೆದಾಡಲು ಮತ್ತು ಚರಾವಿನ ಮೇವನ್ನು ಹೊಂದಲು ಸ್ಥಳವಿಲ್ಲವಾದರೆ ಅವು ಸಶಕ್ತರಾಗಿ ಕಾಲ ಕಳೆಯುವ ಬಗೆ ಹೇಗೆ? ಅದ್ದರಿಂದ ಸರಕಾರದವರು ಪ್ರತಿಯೊಂದು ಹಳ್ಳಿಯಲ್ಲಿ ಕೆಲವು ಎಕ್ರೆ ಸ್ಥಳವನ್ನು ಗೋಚರಾವಿನ ಬಗ್ಗೆ ಕಾಪಾಡಿ ಇಡುವುದು ಅತೀ ಅಗತ್ಯ. ಇದು ಸರಕಾರದ ಹಾಗು ರೈತರ ಏಳ್ಗೆಗೆ ಅವಶ್ಯವಾದ್ದು. ಸಾಧ್ಯವಾದಷ್ಟು ಬೇಗ ಸರಕಾರದವರು ಗೋಸಂರಕ್ಷಣದ ಕೆಲವು ಶಾಲೆ (Cattle Breeding Centers)ಗಳನ್ನು ಸ್ಥಾಪಿಸಿ ಗೋವುಗಳನ್ನು ಸರಿಯಾಗಿ ಸಂರಕ್ಷಣ ಮಾಡುವ ವಿಧಾನಗಳನ್ನು ರೈತರಿಗೆ ಬೋಧಿಸಬೇಕು. ಇಂಥಾ ವಿಧಾನದಿಂದ ಜಿಲ್ಲೆಯ ಉತ್ಪತ್ತಿಯೂ ಅಭಿವೃದ್ಧಿಯೂ ಆಗುವುದೆಂದು ನಾನು ನಂಬಿದ್ದೇನೆ.

ಯು. ರಾಮರಾವ್.
(ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರ,

UN VERSOL

Prevents and cures pitting in SMALL-POX.

All fair faces are made ugly by this horrible disease, small-pox, is now staring you in the face.

WHY NOT ORDER FOR A BOTTLE TO-DAY? ITS PRICE IS ONLY RS. 0-8-0.

Is it too much to spend this amount. Besides curing & preventing pitting in small-pox this remedy could be used successfully for burns, Eczema and all other Ulcers.

Thousands of testimonials from Eminent doctors in Madras and Malabar where this remedy has been used during the Small-pox Epidemic last year.

UNVERSOL

Is a splendid disinfectant and emollient and is very effective in preventing pitting in Small-pox. It destroys the small-pox poison in the sore and is thus very useful in checking all such complications as Boils, Itch, Diarrhœa, Dysentery, Throat affections, Pneumonia and many other ailments caused by small-pox.

This balm has also been found to be very effective in curing Burns, Scalds & chronic Ulcers such as those of Eczema.

Having a sweet odour it drives away mosquitoes and flies which are the most dangerous disease carrying agencies. It can be used on hands and feet especially of children during sleep to prevent the mosquito-bits.

It contains amongst other things Camphor and Eucalyptus the curative effect of which is well known in every house-hold. Though a powerful germ-destroyer in itself, it is non-poisonous and can be safely used on any part of body and there is absolutely no danger even if a child licks this stuff.

DIRECTIONS FOR USE:—

In Small-pox apply twice a day on the body and thrice a day on the face. A camel hair brush or any feather can be used for annointing this balm on the surface of the body.

In Burns, Scalds and such Ulcers, the balm should be spread on a piece of lint and this should be put over the ulcers and lightly bandaged along with cotton. Soap should not be used in cleaning these sores the balm itself, should be used for cleaning them.

CAUTION:—The balm being a cool stuff may give rise to certain amount of shivering if applied to the whole body at one stretch. This will be the case especially in children. In these cases it is desirable that the balm is used on small surfaces at a time head, face, legs and so forth.

PRICE AS. 0-8-0.

Can be had from—

THE ORIENTAL SPECIFIC DEPOT,
107 Purasawakam High Road, Vepery, MADRAS.

ವಿದೇಶ ವರ್ತಮಾನ.

ಕ್ಷಯರೋಗಕ್ಕೆ ಮದ್ದು:—ಸ್ವಿಜರ್ಲೆಂಡಿನ ರಸಾಯನ ಶಾಸ್ತ್ರಜ್ಞನೊಬ್ಬನು ಕ್ಷಯರೋಗ ನಿವಾರಣೆಗಾಗಿ ಒಂದು ರಸವನ್ನು ೧೯೨೧ರಲ್ಲಿ ಕಂಡುಹಿಡಿದು ಅದರ ಪ್ರಯೋಗದಿಂದ ಎಂತಹ ಪ್ರಬಲವಾದ ರೋಗವನ್ನಾದರೂ ಗುಣಪಡಿಸಬಹುದೆಂದೂ ಮನುಷ್ಯನ ಆಯುಷ್ಯವನ್ನು ೧೫೦ ವರುಷಗಳ ವರೆಗೆ ಹೆಚ್ಚಿಸಬಹುದೆಂದೂ ಹೇಳುತ್ತಾನೆ. ಈ ಔಷಧ ನಿರ್ಮಾಣ ಮತ್ತು ಪ್ರಯೋಗ ವಿಧಾನಗಳನ್ನು ಕಲಿತುಕೊಂಡು ಬರಲು ಬ್ರಿಟಿಷ, ಅಮೇರಿಕಾ ಮೊದಲಾದ ಸರಕಾರದವರು ತಮ್ಮ ಕಡೆಯ ಶಾಸ್ತ್ರಜ್ಞರನ್ನು ಸ್ವಿಜರಲೆಂಡಿಗೆ ಕಳುಹಿಸಿರುತ್ತಾರೆ.

ಕೆನಯಾ ಡೆಪ್ಯೂಟೇಶನ್:—ಕೆನಯಾದಲ್ಲಿರುವ ಹಿಂದಿಗಳ ಸ್ಥಿತಿಯನ್ನು ಉದ್ಧರಿಸಬೇಕೆಂಬ ಹೇತುವಿನಿಂದ ಇಂಗ್ಲೆಂಡಿಗೆ ತೆರಳಿದ ಡೆಪ್ಯುಟೇಶನು ಈ ವಿಷಯದಲ್ಲಿ ಹೆಚ್ಚಿನ ಯಾವ ಕಾರ್ಯವನ್ನು ಮಾಡಿದ್ದು ಕಂಡು ಬರುವುದಿಲ್ಲ. ಕೆನಯಾದಲ್ಲಿರುವ ಹಿಂದಿಗಳ ಹಕ್ಕನ್ನು ಕುರಿತು ಬ್ರಿಟಿಷ ಜನಗಳಿಗೆ ಎಲ್ಲ ಸಂಗತಿಗಳನ್ನು ವಿವರಿಸಲು ನಾಮದಾರ ಶಾಸ್ತ್ರಿಗಳೂ ದೀನಬಂಧು ಎಂಡ್ರ್ಯೂಸರೂ ಪ್ರಾರಂಭಿಸಿರುವರು. ಎಡಿಂಬರೋ ಮೊದಲಾದ ಕಡೆಗಳಲ್ಲಿ ಇವರು ಅನೇಕ ಭಾಷಣಗಳನ್ನು ಮಾಡಲಿಕ್ಕಿದ್ದಾರೆ.

ಕೈರೋ:—ಈ ಪಟ್ಟಣದಲ್ಲಿ ಪ್ಲೇಗು ರೋಗವು ತಲೆದೋರಿರುವುದು.

ಮೋಟಾರು ಮಾರ್ಗ:—ಲಂಡನ ನಗರದಿಂದ ಬರ್ಮಿಂಗ ಹೇಮ್ ಮೆಂಚೆಸ್ಟರ ಮೊದಲಾದ ಕಡೆಗಳಿಗೆ ಬೇಗನೆ ಹೋಗಲು ಸಾಧ್ಯವಾಗುವಂತೆ ೨೩೬ ಮೈಲು ಉದ್ದದ ಮಾರ್ಗವನ್ನು ತೆರಿಯುವ ಆಲೋಚನೆಯನ್ನು ಇಂಗ್ಲೆಂಡಿನಲ್ಲಿ ಕೆಲವು ಮಂದಿ ಗೃಹಸ್ಥರು ಮಾಡುತ್ತಿದ್ದಾರೆ.

ಜೋನ್ ಕೆಂಬೆಲ್ ಆರ್ಬನಾಟ:—ಅಸ್ಸಾಮ್ ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೆಸಿಡೆಂಟರಾದ ಮಿ। ಜೋನ್ ಕೆಂಬೆಲ್ ಆರ್ಬನಾಟರು ಕಾಲವಶರಾದರು.

ಫ್ರಾನ್ಸ್:—ಮಿ। ಯಂ ಪೊಯಿಂಕೇರ್ ಮತ್ತು ಮಂತ್ರಿಮಂಡಲದವರು ತಮ್ಮ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟಿರುವರು. ಆದರೆ ಮಿ. ಮಿಲ್ಲರೆಂಡರು ಇವರ ರಾಜಿನಾಮೆಯನ್ನು ಅಂಗೀಕರಿಸಲಿಲ್ಲ.

ಒಳದೇಶ ವರ್ತಮಾನ.

ಸರ್ ನಾರಾಯಣ ಗಣೇಶ ಚಂದಾವರಕರರು:—ಇವರ ನಿಧನದ ದುಃಖ ಸೂಚಕ ಠರಾವನ್ನು ಮುಂಬಯಿ ಸರಕಾರವು ಪಾಸು ಮಾಡಿದೆ.

ಡಾಕ್ಟರ ವರದ ರಾಜುಲು ನ್ಯಾಡುರವರ ಆಸ್ತಿ:—ಇವರು ಸರಕಾರ ತೀರ್ವೆಯನ್ನು ಈ ವರೆಗೆ ಕೊಡಲಿಲ್ಲವಾದ್ದರಿಂದ ಇದನ್ನು ಬರಮಾಡಿಕೊಳ್ಳುವುದಕ್ಕಾಗಿ ಸರಕಾರದವರು ಇವರ ಆಸ್ತಿಯ ಸ್ವಲ್ಪ ಅಂಶವನ್ನು ಜೂನ್ ತಾ. ೨ರಲ್ಲಿ ಏಲಂಮಾಡಲಿಕ್ಕಿರುವರು.

ಬೆಣ್ಣೆ:—ಹಾಲಿನಿಂದ ಬೆಣ್ಣೆ ತಯಾರಾಗುವುದು. ಈಗ ಕೆಲವು ಕಾಲದಿಂದ ತೆಂಗಿನ ಕಾಯಿಯ ರಸದಿಂದಲೂ ಬೆಣ್ಣೆಯನ್ನು ಮಾಡುತ್ತಾರೆ. ಮೀನಿನ ಎಣ್ಣೆಯಿಂದಲೂ ಬೆಣ್ಣೆಯನ್ನು ಮಾಡಲು ಸಾಧ್ಯವಿದೆ ಎಂದು ತಿಳಿದು ಬರುತ್ತದೆ.

ಸರ್ ಜೇಮ್ಸ ಡಿವಾರ:—ಈ ವಿಜ್ಞಾನಶಾಸ್ತ್ರಜ್ಞರು ತಮ್ಮ ವಿಲ ನಾಮೆಯಲ್ಲಿ ಕೆಳಗಿನ ಸಂಗತಿಯನ್ನು ಬರೆದಿರುವರು. ತನ್ನ ದೇಹವನ್ನು ದಹನ ಮಾಡುತ್ತಿರುವಾಗ ಯಾವ ಧಾರ್ಮಿಕ ಸಂಸ್ಕಾರವನ್ನು ಮಾಡಕೂಡದು, ತನ್ನ ಹೆಸರಲ್ಲಿ ವಿದ್ಯಾರ್ಥಿವೇತನವನ್ನು ಕೊಡಕೂಡದು, ತನ್ನ ಹೆಸರಿನ ಜ್ಞಾಪಕಕ್ಕಾಗಿ ಪ್ರತಿ ವರುಷ ಕೂಡಿ ಭಾಷಣಗಳನ್ನು ಮಾಡಬಾರದು, ಅಥವಾ ತನ್ನ ಹೆಸರಲ್ಲಿ ಇತರ ಯಾವ ಸ್ಮಾರಕವನ್ನೂ ಇರಗೊಡಿಸಬಾರದು. ತನ್ನ ಜೀವನ ಚರಿತ್ರೆಯ ಒಂದು ಪ್ರತ್ಯೇಕ ಗ್ರಂಥವನ್ನು ಬರೆಯಕೂಡದು.

ಪಂಡಿತ ಮೋತಿಲಾಲರ ಪತ್ನಿಯವರು:—ಮೋತೀಲಾಲರ ಪತ್ನಿ ಶ್ರೀಮತಿ ಸರೂಪರಾಣಿ ನೇಹರುರವರು ಹಿಂದೂಸ್ಥಾನಕ್ಕೆ ಸ್ವರಾಜ್ಯ ಪ್ರಾಪ್ತಿಯಾಗುವ ವರೆಗೆ ಆಭರಣಗಳನ್ನು ಧರಿಸಲಿಕ್ಕಿಲ್ಲವೆಂದು ನಿಶ್ಚಯಿಸಿರುವರು.

ಮುಳಸಿ ಪೇಟೆಯ ಸತ್ಯಾಗ್ರಹ:—ಕಳೆದ ತಾರೀಖು ೧೯ನೇ ಪ್ರಾತಃಕಾಲ ೯ ಮಂದಿ ಸತ್ಯಾಗ್ರಹಿಗಳು ಪವನ ಎಂಬಲ್ಲಿ ಟಾಟಾ ಕಂಪೆನಿಯ ಜನರಿಂದ ಕೂಡಿದ ರೈಲ್ವೆ ಬಂಡಿಯನ್ನು ರೈಲ್ವೆ ಮಾರ್ಗದಲ್ಲಿ ಕಲ್ಲು ಮಣ್ಣನ್ನು ಹಾಕಿ ತಡಿಸಿಬಿಟ್ಟರು. ಇವರನ್ನು ಕೈದುಮಾಡಿ ಇವರೆಲ್ಲರಿಗೆ ಶಿಕ್ಷೆ ವಿಧಿಸಿದೆ.

ಲೊರೆನ್ಸ್ ಪ್ರತಿಮೆ:—ಲಾಹೋರಿನಲ್ಲಿ ಈಗ ಇರುವ ಲೊರೆನ್ಸ್ ಪ್ರತಿಮೆಯನ್ನು ಆ ಸ್ಥಳದಿಂದ ತೆಗೆದು ಅಲ್ಲಿ ಲೊರೆನ್ಸರ ಯೋಗ್ಯತೆಗೆ ಅನುಸಾರವಾದ ಹೊಸ ಪ್ರತಿಮೆಯನ್ನು ಏರ್ಪಡಿಸಬೇಕೆಂದು ಲಾಹೋರ ಮುನ್ಸಿಪಾಲಿಟಿಯವರು ನಿರ್ಧರಿಸಿರುವರು. ಲೊರೆನ್ಸರ ಹೊಸ ಮೂರ್ತಿಯನ್ನು ಸ್ಥಾಪಿಸಬೇಕೆಂಬ ಠರಾವನ್ನು ಮುನ್ಸಿಪಲ್ ಕೌನ್ಸಿಲಿನ ಮುಂದೆ ಒಬ್ಬ ಮಹಮ್ಮದೀಯ ಕೌನ್ಸಿಲರರು ತಂದಿದ್ದರು. ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾದ ಮಿ। ಮಹಮ್ಮದ [illegible] ಎಂಬವರು, ಮುಸಲ್ಮಾನರು ಯಾವುದಾದರೂ ಪ್ರತಿಮೆಯನ್ನು ಸ್ಥಾಪಿಸಲು ಸಹಾಯಕರಾಗುವುದು ಮತಸಮ್ಮತವಾದ್ದಲ್ಲ. ಅದ್ದರಿಂದ ಮುನ್ಸಿಪಾಲಿಟಿಯ ಮಹಮ್ಮದೀಯ ಸಭಾಸದರಿಗೆ ಮುನ್ಸಿಪಾಲಿಟಿಯ ಭಂಡಾರದಿಂದ ಮೂರ್ತಿಗಳನ್ನು ಸ್ಥಾಪಿಸಲು ಹಣವನ್ನು ವಿನಿಯೋಗಿಸಬೇಕೆಂದು ಹೇಳಲು ಧಾರ್ಮಿಕ ದೃಷ್ಟಿಯಿಂದ ಯಾವ ಅವಕಾಶವೂ ಇಲ್ಲ, ಹಿಂದುಗಳು ಇದಕ್ಕೆ ಸಹಾಯಕರಾಗಲು ತನ್ನ ಆಕ್ಷೇಪವಿಲ್ಲವೆಂದು ತಿಳಿಸಿರುತ್ತಾರೆ.

ಮೋಟಾರುಗಳು:—೧೯೨೨ನೇ ವರುಷದ ಅಪ್ರೈಲಿಯಲ್ಲಿ ಕಲ್ಕತ್ತೆಯೊಳಗೆ ೨೨,೫೪೮, ಮುಂಬಯಿಯಲ್ಲಿ ೨೪,೬೫೧, ಮದರಾಸಿನಲ್ಲಿ ೧೯,೩೩೨ ಮೋಟಾರುಗಳನ್ನು ಪ್ರಜೆಗಳು ಇಟ್ಟುಕೊಂಡಿದ್ದರೆಂದೂ ಕಲ್ಕತ್ತೆಯಲ್ಲಿ ೧೪೩೭ ಅಪಘಾತಗಳೂ, ಮುಂಬಯಿಯಲ್ಲಿ ೧೯೩೪ ಅಪಘಾತಗಳೂ ಆಗಿ ೧೯೧ ಮಂದಿಗಳು ಮೃತರಾದರೆಂದು ತಿಳಿದುಬರುತ್ತದೆ.

ಉಪ್ಪಿನ ಕ್ರಯ:—ಉಪ್ಪಿನ ಮೇಲಿನ ಕರವನ್ನು ಹೆಚ್ಚಿಸಿದುದರಿಂದ ಮದರಾಸಿನಲ್ಲಿ ಶೇಕಡಾ [illegible]ರಂತೆಯೂ, ಮಧ್ಯಪ್ರಾಂತ್ಯದಲ್ಲಿ ಶೇಕಡಾ [illegible]ರಂತೆಯೂ, ಬಂಗಾಳದಲ್ಲಿ ಶೇಕಡಾ [illegible]ರಂತೆಯೂ, ಬರ್ಮಾ ಮತ್ತು ಮಧ್ಯ ಪ್ರಾಂತ್ಯಗಳಲ್ಲಿ ಶೇಕಡಾ [illegible]ರಂತೆಯೂ ಪಂಜಾಬಿನಲ್ಲಿ ಶೇಕಡಾ [illegible]ರಂತೆಯೂ, ಮುಂಬಯಿಯಲ್ಲಿ ಶೇಕಡಾ [illegible]ರಂತೆಯೂ, ಬಿಹಾರ ಮತ್ತು ಓರಿಸ್ಸಾದಲ್ಲಿ ಶೇಕಡಾ [illegible]ರಂತೆಯೂ, ಮತ್ತು ಆಸ್ಸಾಮಿನಲ್ಲಿ ಶೇಕಡಾ [illegible]ರಂತೆಯೂ ಉಪ್ಪಿನ ಬೆಲೆಯು ಚಿಲ್ಲರೆ ವ್ಯಾಪಾರಸ್ಥರಿಂದ ಹೆಚ್ಚಿಸಲ್ಪಟ್ಟಿರುವುದು.

ಸೇಲಂ:—ಯಾವ ಶಾಲೆಗಳು ತಮ್ಮ ಶಾಲೆಗಳಲ್ಲಿ ಚರಕಗಳನಿಟ್ಟು ನೂಲ ನೂಲಲು ಕಲಿಸಬೇಕೆಂದು ಅಪೇಕ್ಷಿಸುವವೋ ಆ ಶಾಲೆಗಳಲ್ಲಿ ನೂಲುಮಾಡುವುದನ್ನು ಕಲಿಸಬಹುದೆಂದು ಸೇಲಂ ಮುನ್ಸಿಪಲ್ ಕೌನ್ಸಿಲಿನವರು ನಿರ್ಧಾರಮಾಡಿರುವರು.

ಅಮೃತಸರ:—ಇಲ್ಲಿಯ ಮುನ್ಸಿಪಾಲಿಟಿಯು ಅರಿಕೆಯಂತೆ ೨೦೦ ಮಂದಿ ಪೋಲೀಸರು ಮತ್ತು ೨೦೦ ಮಂದಿ ಘೂರ್ಕರ ಸಿಪಾಯಿ ದಳವು ಬಂದು ಸೇರಿದೆ.

ಪೂನಾ:—ಇಲ್ಲಿ ಗುಡುಗು ಮಿಂಚಿನಿಂದ ಕೂಡಿದ ಬಿರುಗಾಳಿಯು ಬೀಸಿ ಸ್ವಲ್ಪ ಹಾವಳಿಯು ಉಂಟಾಗಿದೆ.

ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರು:—ಡೆಕ್ಕಾ ಡಿವಿಜನಿನ ಪ್ರತಿನಿಧಿ ಮಿ। ಕೆ. ಸಿ. ನಿಯೋಗಿ ಎಂಬವರು ವೈಸರಾಯರು ತಮ್ಮ ಸರ್ಟಿಫಿಕೇಶನ್ ಅಧಿಕಾರದಿಂದ ಉಪ್ಪಿನ ತೆರಿಗೆಯನ್ನು ಇಮ್ಮಡಿ ಮಾಡಿದುದನ್ನು ನಿಷೇಧಿಸುದಕ್ಕಾಗಿ ತಮ್ಮ ಮೆಂಬರಿಕೆಗೆ ರಾಜಿನಾಮೆಯನ್ನು ಕೊಟ್ಟಿರುತ್ತಾರೆ.

ಲೋರ್ಡ ರೆಡಿಂಗರು:—ಇಂಗ್ಲೆಂಡಿನ ಮಂತ್ರಿ ಪದವಿಯಲ್ಲಿ ಬದಲಾವಣೆಯುಂಟಾದ್ದರಿಂದ ಹಿಂದುಸ್ಥಾನದ ವೈಸರಾಯರು ತಮ್ಮ ಪದವಿಗೆ ರಾಜಿನಾಮೆಯನ್ನು ಕೊಡುವರು ಎಂಬ ವರ್ತಮಾನವು ನಿರಾಧಾರವಾದ್ದೆಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಮೈಸೂರು ಮಹಾರಾಜರು:—ಸೇಲಮಿನ ಮುನ್ಸಿಪಾಲಿಟಿಗೆ ಮೈಸೂರು ಮಹಾರಾಜರು ರೂ. ೨೫೦೦ರ ಒಂದು ಚೆಕ್ಕನ್ನು ಕಳುಹಿಸಿರುವರು ಮತ್ತು ಈ ಹಣವನ್ನು ಮುನ್ಸಿಪಾಲಿಟಿಯವರು ತಮಗೆ ಯುಕ್ತಕಂಡ ಯಾವ ಕೆಲಸಕ್ಕೂ ವಿನಿಯೋಗಿಸಬಹುದೆಂದು ಸೂಚಿಸಿರುವರು.

ಯುನೈಟೆಡ್ ಪ್ರೊವಿನ್ಸಿನ ಮಂತ್ರಿಗಳು:—ಯುನೈಟೆಡ್ ಪ್ರೊವಿನ್ಸಿನ ಹೊಸ ಮಂತ್ರಿಗಳು ತಮ್ಮ ಸಂಬಳವನ್ನು ೧೦೦೦ ರೂಪಾಯಿಗೆ ಕಡಿಮೆಮಾಡಲು ಒಪ್ಪಿರುವರು.

ನಾಗಪುರ ಸತ್ಯಾಗ್ರಹ:—ಈ ಸತ್ಯಾಗ್ರಹವು ಎಂದಿನಂತೆ ನಡಕೊಂಡೆ ಇದೆ. ಗುಜರಾಥ ಪ್ರಾಂತದ ಆಯಾ ಕಡೆಗಳಿಂದ ನಾಗಪುರಕ್ಕೆ ಸ್ವಯಂ ಸೇವಕರನ್ನು ಕಳುಹಿಸಲಿಕ್ಕಿದ್ದಾರೆ.

ಲೊರೆನ್ಸ್ ಪ್ರತಿಮೆ:—ಲಾಹೋರಿನಲ್ಲಿರುವ ಈ ಪ್ರತಿಮೆಯನ್ನು ಉಳಿ ಮತ್ತು ಸುತ್ತಿಗೆಯಿಂದ ತೆಗಿಯಲು ಪ್ರಯತ್ನಿಸುತ್ತಿದ್ದ ಸರದಾರ ಅಮರ ಸಿಂಗ ಎಂಬವನನ್ನು ಕೈದುಮಾಡಿ ಹುಚ್ಚರ ಆಸ್ಪತ್ರೆಗೆ ಕಳುಹಿಸಿತ್ತಷ್ಟೆ. ಈಗ ಈ ಮನುಷ್ಯನು ಲಾಹೋರಿನ ಒಂದನೇ ಕ್ಲಾಸ್ ಮೆಜಿಸ್ಟ್ರೇಟರು ವಿಧಿಸಿದ ೨೦೦ ರೂಪಾಯಿಯ ಜುಲ್ಮಾನೆಯನ್ನು ಕೊಡಲು ಒಪ್ಪದ್ದರಿಂದ ಒಂದು ವರುಷದ ಸಾದಾ ಶಿಕ್ಷೆಯನ್ನು ಅನುಭವಿಸಬೇಕಾಗಿದೆ.

ಹೊಸ ರೆವೆನ್ಯು ಮೆಂಬರ್:—ನಮ್ಮ ಸಂಸ್ಥಾನದ ರೆವೆನ್ಯು ಮೆಂಬರರಾಗಿದ್ದ ಸರ್ ಹಬಿಬುಲ್ಲಾ ಇವರು ಸರ್ವಿಸ್ ಕಮ್ಮಿಶನ ಕೆಲಸವನ್ನು ನೋಡಲು ಹೋಗುವುದರಿಂದ ಇವರ ಬದಲಿಯನ್ನು ಕಲಂ ಗೋಡಿನ ರಾಜರು ನೋಡುವರು.

ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿ ಮೀಟಿಂಗು.

ದೇಶಬಂಧು ದಾಸರ ಅಧ್ಯಕ್ಷತೆಯಲ್ಲಿ ಓಲ್-ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು ಕಳೆದ ತಾರೀಖು ೨೫ರಲ್ಲಿ ಮುಂಬಯಿಯಲ್ಲಿ ಸೇರಿತು. ಈ ಮೀಟಿಂಗಿಗೆ ದೇಶದ ಆಯಾ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಅಲ್ಲದೆ [illegible] ಪ್ರತಿನಿಧಿಗಳು ಕೂಡ ಹಾಜರಿದ್ದರು. ದೇಶಕ್ಕೆ ಒಗ್ಗಟ್ಟಿನ ಆವಶ್ಯಕತೆಯು ಅತೀ ಅಗತ್ಯವಾಗಿರುವ ಈ ಕಾಲದಲ್ಲಿ ಮಹತ್ವವಾದ ಈ ಮೀಟಿಂಗು ಸೇರಿದ [illegible] ಸೇರಿದವರೆಲ್ಲರೂ ತಮ್ಮ ಮುಖ್ಯ ಉದ್ದೇಶವು ಯಾವುದೆಂದು ಗ್ರಹಿಸಿಕೊಂಡು ಉದಾರ ಭಾವದಿಂದಲೇ ವರ್ತಿಸಬೇಕಾಗಿದೆ, ತನ್ನ ಪಾರ್ಟಿಯು ಕೊಂಗ್ರೆಸ್ಸನ್ನು ಅವಮಾನ್ಯ ಮಾಡುವುದಿಲ್ಲ, ಯೋಗ್ಯವಾದ ರಾಜಿಯಾಗುವುದೆಂಬ ಭರವಸೆಯಿಂದಲೇ ತನ್ನ ಕಡೆಯವರು ಈ ಮೀಟಿಂಗಿಗೆ ಬಂದಿರುವರು, ದೇಶವು ಒಗ್ಗಟ್ಟಾದ ವಿನಹ ಯಾವ ಕೆಲಸವನ್ನೂ ಸಾಧ್ಯಗೊಳಿಸುವುದು ಅಸಾಧ್ಯ, ರಾಜಿಗೆ ಯೋಗ್ಯವಾದ ಠರಾವುಗಳೇ ಸಭೆಯ ಮುಂದೆ ಚರ್ಚೆಗೆ ಬರುವವೆಂದು ತನ್ನ ಭರವಸೆ, ಎಂದು ಹೇಳಿ ಸಮಾಧಾನಕರವಾದ ರಾಜಿಯು ಆಗುವುದಾದರೆ ತಾನು ತನ್ನ ಅಧ್ಯಕ್ಷಪದವಿಗೆ ಕೊಟ್ಟ ರಾಜಿನಾಮೆಯನ್ನು ಹಿಂದಕ್ಕೆ ಪಡೆಯುವುದಾಗಿ ಅಧ್ಯಕ್ಷರು ತಿಳಿಸಿದರು. ಕೊಂಗ್ರೆಸ್ಸಿನ ಜಾದಾ ಅಧಿವೇಶನದ ಕುರಿತು ಅಧ್ಯಕ್ಷರು, ಕೌನ್ಸಿಲಿನ ಚುನಾವಣೆಯು ಸಮೀಪಿಸುವುದರಿಂದ ಕೊಂಗ್ರೆಸ್ಸಿನ ಜಾದಾ ಅಧಿವೇಶನವನ್ನು ಕೂಡಿಸಿ ಕೌನ್ಸಿಲು ಪ್ರವೇಶದ ಕುರಿತು ಒಂದು ನಿರ್ಧಾರಮಾಡುವುದಕ್ಕೆ ಸೂಚಿಸುವುದು ಸ್ವರಾಜ್ಯಪಾರ್ಟಿಯವರಿಗೆ ತಮ್ಮ ಕೌನ್ಸಿಲು ಪ್ರವೇಶದ ಕಾರ್ಯವನ್ನು ನಿಲ್ಲಿಸಲಿಕ್ಕೆ ಸೇರುವುದಷ್ಟೆ ಸರಿಯಾಗಿದೆ. ಅಸಂಖ್ಯಾಕ ಪಕ್ಷದವರು ಕೌನ್ಸಿಲುಗಳನ್ನು ಸೇರಿ ಅಲ್ಲಿ ಸರಕಾರದೊಡನೆ ಅಸಹಕಾರವನ್ನು ಪ್ರಾರಂಭಿಸಬೇಕೆಂದಿದ್ದಾರೆ ಎಂದು ಹೇಳಿದರು. ಮುಂದಿನ ಕೌನ್ಸಿಲು ಚುನಾವಣೆಯಲ್ಲಿ ಕೊಂಗ್ರೆಸ ಭಕ್ತರು ಕೌನ್ಸಿಲುಗಳನ್ನು ಸೇರುವಂತೆ ಪ್ರಯತ್ನಿಸತಕ್ಕದೆಂದು ಕೊಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಸೇರಿಸತಕ್ಕದೆಂಬ ಠರಾವನ್ನು ಮಿ। ಅಭ್ಯಂಕರರು ಮೀಟಿಂಗಿನ ಮುಂದೆ ತಂದರು. ಮಿ। ಗಿಡ್ವಾನಿಯವರು ಇದನ್ನು ಉಪರೋಧಿಸುವ ಠರಾವನ್ನು ಮುಂದೆ ತಂದರು. ಪಂಡಿತ ಜವ್ಹೇರಿಲಾಲ ನೇಹರುಗಳವರೂ ಮಿ। ಟೆಂಡೊನವರೂ ಮಿ। ಅಭ್ಯಂಕರವರರ ಠರಾವನ್ನು ಅನುಮೋದಿಸಿಯೇ ಮಾತನಾಡಿದರು. ಓಲ್-ಇಂಡಿಯಾ ಕೊಂಗ್ರೆಸು ನಿರ್ಧರಿಸಿದ ಸಂಗತಿಗಳಲ್ಲಿ ಬದಲಾವಣೆಗಳನ್ನು ಮಾಡಲು ಕೊಂಗ್ರೆಸ್ ಕಮ್ಮಿಟಿಯು ಆಲೋಚಿಸುವುದು ಸರಿಯಲ್ಲವೆಂದು ಕೆಲವರು ಆಕ್ಷೇಪವೆತ್ತಿದರು. ದೇಶದ ಪರಿಸ್ಥಿತಿಯಲ್ಲಿ ಬದಲಾವಣೆಗಳು ಉಂಟಾದರೆ ಆಗ ಕೊಂಗ್ರೆಸ್ ಕಮ್ಮಿಟಿಯು ಮೇಲಿನಂಥಾ ಸಂಗತಿಗಳನ್ನು ಆಲೋಚಿಸಿ ಆ ಬಗ್ಗೆ ತಕ್ಕ ವ್ಯವಸ್ಥೆ ಮಾಡುವುದು ತಪ್ಪಲ್ಲವೆಂದು ಅಧ್ಯಕ್ಷರು ವ್ಯಕ್ತಪಡಿಸಿದರು. ಬರುವ ಜೂನ್ ತಿಂಗಳ ೩೦ರೊಳಗಾಗಿಯೇ ಕೊಂಗ್ರೆಸ್ಸಿನ ಒಂದು ಅಧಿವೇಶನವನ್ನು ಸೇರಿಸತಕ್ಕದೆಂದು ಆಂಧ್ರ ದೇಶದ ಪ್ರತಿನಿಧಿಗಳು ಬಹಳ ಹಟ ಹಿಡಿದರು. ಕೊನೆಗೆ ಮೀಟಿಂಗಿನ ಅಧಿವೇಶನವನ್ನು ಮರುದಿನಕ್ಕೆ ಮುಂದರಿಸಲಾಯಿತು.

ಈಗ ಉಂಟಾಗಿರುವ ಎರಡು ಪಂಗಡಗಳಲ್ಲಿ ರಾಜಿಯನ್ನು ಮಾಡುವ ವಿಷಯದಲ್ಲಿ ಮರುದಿನ ಬಹಳ ಚರ್ಚೆಯು ನಡೆದು ಕೊನೆಗೆ ಮಿ। ಪುರುಷೋತ್ತಮದಾಸ ಟೆಂಡೋನರು ಸೂಚಿಸಿದಂತೆ ಕೊಂಗ್ರೆಸ್ ಜನರೆಲ್ಲರೂ ಒಗ್ಗಟ್ಟಾಗಬೇಕು, ಮತ್ತು ಕೊಂಗ್ರೆಸ್ ಪಾರ್ಟಿಯವರು ಗಯಾ ನಿರ್ಧಾರವನ್ನು ಅನುಸರಿಸಿ ಕೌನ್ಸಿಲು ಬಹಿಷ್ಕಾರದ ಕುರಿತು ನಡಿಸುವ ಚಳವಳವನ್ನು ಈಗ ನಿಲ್ಲಿಸಿಬಿಡಬೇಕು ಎಂಬ ಠರಾವು ಪಾಸಾಯಿತು. ಮೇಲಿನ ಠರಾವನ್ನು ಪಾಸುಮಾಡಿದ ಮೇಲೆ ಕೂಡಿದ ಸಭೆಯಲ್ಲಿ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಕಾರ್ಯಕಾರಿ ಮಂಡಲದಲ್ಲಿ ಒಬ್ಬರು ಹೊರತು ಇತರರೆಲ್ಲರೂ ತಮ್ಮ ಮೆಂಬರಿಕೆಗೆ ರಾಜಿನಾಮೆಯನ್ನು ಕೊಟ್ಟರು. ಗಯಾ ಕೊಂಗ್ರೆಸ್ಸಿನ ನಿರ್ಧಾರದ ಮೇರೆಗೆ ಕೌನ್ಸಿಲು ಬಹಿಷ್ಕಾರದ ಚಳವಳವನ್ನು ನಿಲ್ಲಿಸತಕ್ಕದೆಂದು ಪಾಸುಮಾಡಿದ ಠರಾವಿಗೆ ಶ್ರೀಯುತ ಜಮುನಾಲಾಲ ಬಜಾಜ, ಶ್ರೀಯುತ ದೇಶಪಾಂಡೆ, ಶ್ರೀಯುತ ವಲ್ಲಭ್ಯಾ ಪಟೇಲ ಮತ್ತು ಶ್ರೀಯುತ ಬ್ರಿಜಕಿಶೋರ ಇವರಿಗೆ ಸಮ್ಮತಿ ಇಲ್ಲದೆ ಇರುವುದರಿಂದ ಇವರೆಲ್ಲಾ ತಮ್ಮ ಮೆಂಬರಿಕೆಗೆ ರಾಜಿನಾಮೆಯನ್ನು ಕೊಟ್ಟರು. ಅನಂತರ ಶ್ರೀಮತಿ ಸರೋಜಿನಿನ್ಯಾಡೂ, ಶ್ರೀಯುತ ಟಿ. ಪ್ರಕಾಶಂ, ಡಾಕ್ಟರ ಅನ್ಸಾರಿ ಮೊದಲಾದವರು ಮೇಲಿನ ಠರಾವನ್ನು ಅನುಮೋದಿಸಿದ್ದರೂ ತತ್ಕ್ಷಣವೇ ಕೊಂಗ್ರೆಸ್ಸಿನ ಕಾರ್ಯಕಾರಿ ಕಮ್ಮಿಟಿಯ ಮೆಂಬರರಾಗಿದ್ದ ಮೇಲಿನ ಗೃಹಸ್ಥರು ತಾವು ರಾಜಿನಾಮೆಯನ್ನು ಕೊಡುವ ವಿಷಯವನ್ನು ಉಳಿದ ಮೆಂಬರರ ತಿಳುವಳಿಕೆಗೆ ತಾರದೇ ಥಟ್ಟನೆ ರಾಜಿನಾಮೆಯನ್ನು ಕೊಟ್ಟದ್ದರಿಂದ ತಾವೂ ತಮ್ಮ ಮೆಂಬರಿಕೆಗೆ ರಾಜಿನಾಮೆಯನ್ನು ಕೊಡುವುದು ಉಚಿತವೆಂದು ಗ್ರಹಿಸಿ ಕೂಡಲೇ ರಾಜಿನಾಮೆಯನ್ನು ಕೊಟ್ಟರು. ಇವರು ಕೊಟ್ಟ ರಾಜಿನಾಮೆಯನ್ನು ಅಂಗೀಕರಿಸದೆ ಇವರೆ ಈ ಸ್ಥಾನಗಳಲ್ಲಿ ಇರುವಂತೆ ಮಾಡತಕ್ಕದೆಂಬ ಠರಾವನ್ನು ಶ್ರೀಯುತ ಜವ್ಹೇರಿಲಾಲ ನೇಹರುಗಳವರು ಸಭೆಯ ಮುಂದಿಟ್ಟರು. ಈ ಠರಾವು ಬಹುಮತದಿಂದ ಪಾಸಾಯಿತು. ಈ ರೀತಿಯ ಠರಾವು ಪಾಸಾದರೂ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಈಗಿನ ಸೆಕ್ರೆಟರಿಗಳಾದ ಶ್ರೀಯುತ ರಾಜಗೋಪಾಲಚಾರ್ಯ, ಶ್ರೀಯುತ ರಾಜೇಂದ್ರ ಪ್ರಸಾದ, ಕೋಶಾಧೀಶರಾದ ಶ್ರೀಯುತ ಜಮುನಾಲಾಲಬಾಜಜ, ಶ್ರೀಯುತ ವಲ್ಲಭ್ಯಾಪಟೇಲ, ಶ್ರೀಯುತ ಬ್ರಿಜ್ಕಿಶೋರ್, ಮಿ। ಮೊಝುಮ್ಅಲಂ ಮತ್ತು ಶ್ರೀಯುತ ದೇಶಪಾಂಡೆಯವರು ತಮ್ಮ ಪದವಿಗಳನ್ನು ಬಿಟ್ಟುಬಿಟ್ಟರು. ಅಧ್ಯಕ್ಷರು ಇವರ ರಾಜಿನಾಮೆಯನ್ನು ಸ್ವೀಕರಿಸಿರುವರು. ಅನಂತರ ಅಧ್ಯಕ್ಷರಾದ ದೇಶಬಂಧುಗಳು, ಕೊಂಗ್ರೆಸ್ ಕಾರ್ಯಕಾರಿ ಕಮ್ಮಿಟಿಯ ಗೃಹಸ್ಥರು ರಾಜಿಕೊಟ್ಟಿರುವುದರಿಂದ ಈಗ ಕೊಂಗ್ರೆಸ್ ಪಕ್ಷದ ಅಥವಾ ಸ್ವರಾಜ್ಯ ಪಾರ್ಟಿಯವರಿಂದ ಕೂಡಿದವರನ್ನು ಕೊಂಗ್ರೆಸ್ಸಿನ ಕಾರ್ಯಕಾರಿ ಕಮ್ಮಿಟಿಯ ಮೆಂಬರರಾಗಿ ಚುನಾಯಿಸುವುದಕ್ಕಿಂತ ರಾಜಿಯ ಠರಾವನ್ನು ಪಾಸುಮಾಡಿದ ಮಧ್ಯಸ್ಥಪಾರ್ಟಿ (central party)ಯ ಮೆಂಬರರನ್ನು ಚುನಾಯಿಸುವುದು ಪ್ರಶಸ್ತವಾದದ್ದು ಎಂದು ಸೂಚಿಸಿ, ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ತಮ್ಮ ಅಧ್ಯಕ್ಷಪದವಿಗೂ ರಾಜಿನಾಮೆಯನ್ನು ಕೊಟ್ಟರು. ಮತ್ತು ಈಗ ಸೆಂಟ್ರಲ್ ಪಾರ್ಟಿಯ ಮೆಂಬರರು ಕೊಂಗ್ರೆಸ್ಸಿನ ಕಾರ್ಯಕಾರಿ ಕಮ್ಮಿಟಿಯ ಸಭಾಸದರಾಗಿ ನೇಮಿಸಲ್ಪಟ್ಟಿರುವರು. ಇದರಂತೆ ಡಾಕ್ಟರ ಅನ್ಸಾರಿಯವರು, ಅಧ್ಯಕ್ಷರು ಶ್ರೀಯುತ ಜವ್ಹೇರಿಲಾಲನೇಹರು ಮತ್ತು ಶ್ರೀಯುತ ಟಿ. ಪ್ರಕಾಶಂ, ಡಾಕ್ಟರ್ ಮಹಮ್ಮದ್ ಇವರು ಕಾರ್ಯದರ್ಶಿಗಳು, ಶ್ರೀಮತಿ ಸರೋಜಿನಿನ್ಯಾಡೋ, ಸರದಾರ್ ತೇಜ್‌ಸಿಂಗ್, ಮೌಲಾನಾಅಬ್ದುಲ್‌ಕಲಂ ಅಜದ್, ಶ್ರೀಯುತ ಪುರುಷೋತ್ತಮದಾಸ ಟೆಂಡೋನ್, ಪಂಡಿತ ಶಾಂತನಂ ಶ್ರೀಯುತ ಅನುಗರ ನಾರಾಯಣಸಿಂಗ, ಡಾಕ್ಟರ ವರದರಾಜಲುನ್ಯಾಡು, ಮತ್ತು ಹಾಜಿ ಅಬ್ದುಲ್ ಮಜದರು ಕೊಂಗ್ರೆಸ್ಸಿನ ಕಾರ್ಯಕಾರಿ ಕಮ್ಮಿಟಿಯ ಇತರ ಮೆಂಬರರಾಗಿರುವರು.

ಕೊಂಗ್ರೆಸ್ಸಿನ ಜಾದಾ ಅಧಿವೇಶನವನ್ನು ಕೂಡಿಸಬೇಕೆಂಬ ಠರಾವು ಕೊಂಗ್ರೆಸ ಕಮ್ಮಿಟಿಯ ಮೀಟಿಂಗಿನಲ್ಲಿ ಪಾಸಾಗಲಿಲ್ಲ.

ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು ಕಳೆದ ತಾರೀಕು ೨೭ರಲ್ಲಿ ಕೊನೆಗಂಡಿತು. ಈ ದಿನ ತಿಲಕ ಸ್ವರಾಜ್ಯ ಫಂಡನ್ನು ಕೂಡಿಸಲು ಹಾಗು ಸ್ವಯಂಸೇವಕರನ್ನು ಸೇರಿಸಿಕೊಳ್ಳಲು ಹೊಸತಾಗಿ ನೇಮಿಸಲ್ಪಟ್ಟ ಕೊಂಗ್ರೆಸ್ ಕಮ್ಮಿಟಿಯು ನಿರ್ಣಯಿಸಿದ ಅವಧಿಯನ್ನು ಮಂಜೂರು ಮಾಡಲಾಯಿತು. ತಿಲಕ ಸ್ವರಾಜ್ಯ ಫಂಡಿಗೆ ಕಳೆದ ಎಪ್ರಿಲ್ ತಾ. ೩೦ರ ವರೆಗೆ ವಂತಿಗೆಯಾದ ಹಣದ ವಿಲೇವಾರಿಯನ್ನು ಶ್ರೀಯುತಬಾಬು ರಾಜೇಂದ್ರ ಪ್ರಸಾದರು ತಿಳಿಸಿದರು. ವಾಗ್ದಾನ ಮಾಡಿದ ರೂ. ೧॥ ಲಕ್ಷ ಕೂಡಿ ಈ ವರೆಗೆ ರೂ. ೧೩ಲಕ್ಷ ವಂತಿಗೆಯಾಗಿದೆಯಾಗಿ ತಿಳಿದುಬರುತ್ತದೆ. ಎಪ್ರಿಲ್ ತಾ. ೩೦ರ ವರೆಗೆ ೧೧,೦೦೦ ಮಂದಿ ಸ್ವಯಂಸೇವಕರು ದಾಖಲಾಗಿರುವರು. ಬರ್ಮಾ ಮತ್ತು ಗುಜರಾಥ ಪ್ರಾಂತಗಳು ತಾವು ಕೂಡಿಸಬೇಕಾಗಿದ್ದ ಹಣಕ್ಕಿಂತ ಹೆಚ್ಚು ಮೊಬಲಗನ್ನು ಕೂಡಿಸಿರುವುವು. ಬಂಗಾಳ ದೇಶವು ೧॥ ಲಕ್ಷ ರೂಪಾಯಿಯನ್ನು ಕೂಡಿಸಿದೆ. ಮತ್ತು ಗುಜರಾಥವು ೩॥ ಲಕ್ಷವನ್ನು ಒಟ್ಟುಮಾಡಿದೆ. ಉಪ್ಪಿನ ತೆರಿಗೆಯ ಕುರಿತು ಕಾನೂನು ಭಂಗವನ್ನು ಜಾರಿಗೆ ತರಬೇಕೆಂದು ಶ್ರೀಯುತ ಬಾಬು ಹರದಯಾಲನಾಗರು ತಂದ ಠರಾವು ತಿರಸ್ಕರಿಸಲಾಯಿತು.

ದೇಶಬಂಧು ದಾಸರ ಆಗಮನ.

ದೇಶಬಂಧು ದಾಸರು ಶ್ರೀಯುತ ಟಿ. ಆರ್. ಫೂಕಾನ್‌ರವರನ್ನು ಕೂಡಿಕೊಂಡು ಕಳೆದ ತಾ. ೩೦ನೆಯ ಪ್ರಾತಃಕಾಲ ಮುಂಬಯಿಯಿಂದ ಮದರಾಸಿಗೆ ಬಂದು ತಲ್ಪಿದರು. ಇವರ ಪಾರ್ಟಿಯವರೂ ಇತರರೂ ಇವರನ್ನು ಸ್ವಾಗತಮಾಡಿ ವಾದ್ಯ ಮೊದಲಾದವುಗಳಿಂದ ಕೂಡಿ ತಿಲಕ ಭವನಕ್ಕೆ ಮೆರವಣಿಗೆಯಿಂದ ಕರೆತಂದರು. ಮೆರವಣಿಗೆಯ ಕಾಲದಲ್ಲಿ ಅಲ್ಲಲ್ಲಿ ಜನರು ಗುಂಪುಕೂಡಿಕೊಂಡು ಇವರಿಗೆ ವಂದನೆಗಳನ್ನು ಅರ್ಪಿಸಿದರು. ಈ ದಿನ ಮಧ್ಯಾಹ್ನ ಸ್ವರಾಜ್ಯ ಪಾರ್ಟಿಯವರ ಕಾರ್ಯಕಾರಿ ಕಮ್ಮಿಟಿಯ ಮೀಟಿಂಗು ಸೇರಿದನಂತರ ಸ್ವರಾಜ್ಯಪಾರ್ಟಿಯ ಮಹಾಸಭೆ ಸಹ ಸೇರಿತು.

ಭಾರತ
ಸಂಗೀತ ನಾಟಕ ಮಂಡಳಿ,
ಮಂಗಳೂರು, ದಕ್ಷಿಣ ಕನ್ನಡ.

ಇದೇ ೧೯೨೩ನೇ ಜೂನ್ ತಿಂಗಳಿನಿಂದ ನಾವು ನಮ್ಮ ನಾಟಕಾಭಿನಯಗಳನ್ನು ಮಹಾಜನರ ಅಪೇಕ್ಷೆಯ ಮೇರೆಗೆ ಅವರ ಅನುಕೂಲಕ್ಕಾಗಿ ಮಧ್ಯಾಹ್ನ ಗಂಟೆ ೪ರಿಂದ ಪ್ರಾರಂಭಿಸುವುದಾಗಿ ನಿಶ್ಚಯಿಸಿರುತ್ತೇವೆ. ಇದಕ್ಕಾಗಿ ಮಹಾಜನರ ಪ್ರೋತ್ಸಾಹವನ್ನು ಅಪೇಕ್ಷಿಸುವೆವು.

ಮಂಗಳೂರು,
ತಾ. 29-5-'23

J. A. Row Kavi.
ಮೆನೇಜರ್.

ಅನುಕ್ರಮಣಿಕೆ.

ಅಗ್ರಲೇಖ—
ಸ್ಫುಟವಿಚಾರಗಳು.— ೬-೭
೧. ಸರ್. ಒಡ್ವಾಯರರೂ ಸೈನ್ಯದ ಖಾತೆಯೂ "
೨. ಕರ್ನಲ್ ಸಾಹೇಬರ ತನ್ನ ನೋಕರರ ಮೇಲಿನ ಪಕ್ಷಪಾತ "
೩. ಗ್ರೀಕ ಮತ್ತು ತುರ್ಕಿಯವರ ಒಪ್ಪಂದ "
೪. ದೇಶಬಂಧು ದಾಸರು "
೫. ಪ್ರಾಥಮಿಕ ಶಿಕ್ಷಣದ ಉಟಿಯ ಪರಿಷತ್ತು. "
ಮಂಗಳೂರು— "
ದಕ್ಷಿಣಕನ್ನಡ— ಕಾಸರಗೋಡು. "
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೮
ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಮೀಟಿಂಗು. "
ದೇಶಬಂಧು ದಾಸರ ಆಗಮನ. ೮

ಸ್ವದೇಶಾಭಿಮಾನಿ.

ಶಕ ೧೮೪೫ ಅಧಿಕ ಜ್ಯೇಷ್ಠ ಬ। ೨ಯು ಶುಕ್ರವಾರ

ಈಗಲಾದರೂ ಸಮಾಧಾನವುಂಟೆ?

ಪಾಪವನ್ನು ಮಾಡಿದವನಿಗೆ ಪ್ರಾಯಶ್ಚಿತ್ತವನ್ನು ತೆಕ್ಕೊಳ್ಳುವ ಅಪೇಕ್ಷೆ—ಪ್ರಬಲ ಇಚ್ಛೆಯುಂಟಾಗುವುದು ಯೋಗ್ಯವಾದರೂ ಎಲ್ಲ ಕಡೆಯಲ್ಲಿ ಮತ್ತು ಸರ್ವ ಲಕ್ಷ್ಯಗಳಲ್ಲಿ ಈ ಸಂಗತಿಯು ಒದಗಿಬರುವುದಿಲ್ಲ. ತಾನು ಪಾಪವನ್ನು ಮಾಡಿಲ್ಲ, ತಾನು ಪಾಪಿಯೂ ಅಲ್ಲ ಎಂದು ತಿಳಕೊಳ್ಳುವ ರೂಢಿಯೇ ಹೆಚ್ಚಾಗಿ ಬಿದ್ದಿದೆ. ಆದರೆ, "ಪಾಪೋಽಹಂ ಪಾಪಕರ್ಮಾಽಹಂ" ಎಂದು ತನ್ನ ಪಾಪಗಳನ್ನು ಸ್ಮರಿಸಿಕೊಂಡು, ಮತ್ತು ತಾನು ಪಾಪಿಯೆಂದು ಒಪ್ಪಿಕೊಂಡು ತಕ್ಕ ಪ್ರಾಯಶ್ಚಿತ್ತವನ್ನು ತೆಕ್ಕೊಳ್ಳುವುದು ಸರಳವೂ, ಸಮಂಜಸವೂ ಆದ ಮಾರ್ಗವು. ಪರಂತು ಕೊಂಗ್ರೆಸ್ ಸರ್ಕಲಿನಲ್ಲಿ ಈ ಸರಳ ದಾರಿಗೆ ಇತ್ತಲಾಗಿ ತುಂಬಾ ಅಪವಾದಗಳು ಎದುರಾಗಹತ್ತಿವೆ. ಉದಾಹರಣಾರ್ಥವಾಗಿ, ರಾಷ್ಟ್ರೀಯ ಸಭಾವಾಲರಲ್ಲಿ ಎಷ್ಟೊ ಸಮಯದಿಂದ ಇದ್ದ ಐಕ್ಯವು ಇತ್ತಲಾಗಿ ಗ್ರೀಷ್ಮಋತುವಿನೊಳಗೆ ಬಾವಿಗಳಲ್ಲಿ ನೀರು ಒಣಗುವಂತೆ ಮಾಯವಾಗಿ ಹೋಗಿದೆ. ಈ ಐಕ್ಯಜಲವು ಆರಿಹೋಗಲು ಯಾವ ಪ್ರಚಂಡ ದುರಾಗ್ರಹ ಸೂರ್ಯನ ಹಟದ ತಾಪವು ಕಾರಣವಾಯಿತು? ಅವನಿಗೆ ಈ ವಿಷಯವಾಗಿ ಪ್ರಾಯಶ್ಚಿತ್ತವನ್ನು ತೆಕ್ಕೊಳ್ಳುವ ಅಭಿಲಾಷೆಯುಂಟಾಯಿತೆ? ಇಲ್ಲ. ಸೂರ್ಯನು ತನ್ನ ಉಗ್ರಕಿರಣಗಳ ತಾಪದಿಂದ ಇನ್ನೂ ಇನ್ನೂ ಅಡಿಯಲ್ಲಿರುವ ನೀರನ್ನು ಹೇಗೆ ಆಕರ್ಷಿಸಿ ಒಣಗಿಸಿಬಿಡುವನೊ ಹಾಗೆಯೆ ತೀವ್ರ ದುರಾಗ್ರಹದ ಕಿರಣಗಳಿಂದ ಕೆಲವು ಪುಣ್ಯಾತ್ಮರು ಐಕ್ಯದ ನೀರನ್ನೆಲ್ಲ ಶೋಷಿಸಿಬಿಡುವರು. ಮಾತ್ರವಲ್ಲದೆ, ಇದು ತಮ್ಮ ಪ್ರಮಾದವು, ಇನ್ನು ಮುಂದೆಯಾದರೂ ಐಕ್ಯವನ್ನು ಕಾಪಾಡಲು ದುರಾಗ್ರಹ ದೇವತೆಯ ಬಾಹುಪಾಶದಿಂದ ಮುಕ್ತರಾಗೋಣ ಎಂಬೀ ಸುವಿಚಾರವು ಐಕ್ಯ ವಿಘಟಕರಾದ ಮುಖಂಡರ ತಲೆಯಲ್ಲಿ ಬರುವುದುಂಟೆ? ಇಲ್ಲ. ಸೂರ್ಯನು ನೀರನ್ನು ಶೋಷಿಸುವ ಬಹು ಭಯಂಕರವಾದ ಕೃತ್ಯವನ್ನು ಒಂದು ಕಡೆಯಲ್ಲಿ ಮಾಡುತ್ತಿರುತ್ತಾನಾದರೂ, ಇನ್ನೊಂದು ಕಡೆಯಲ್ಲಿ ಮೇಘಮಾಲೆಯು ಈ ಲೋಕಸಂತಾಪವನ್ನು ನೋಡಲಾರದೆ ತನ್ನ ಅಮೃತಮಯವಾದ ಜಲದ ಸುವೃಷ್ಟಿಯಿಂದ ಸರ್ವತ್ರ ಆರ್ದ್ರತೆಯನ್ನುಂಟುಮಾಡುವದು. ರಾಷ್ಟ್ರೀಯ ಸಭೆಯ ಐಕ್ಯದ ಪ್ರಸ್ತಾಪದಲ್ಲಿ ಈ ದೃಷ್ಟಾಂತವು ಸರ್ವಾಂಗದಿಂದ ಅನ್ವಿತವಾಗುತ್ತದೆಂದು ಹೇಳಲು ಅಡ್ಡಿ ಇಲ್ಲ. ಸಿ. ಡಿ. ಕಮಿಟಿಯು ತನ್ನ ಸಭಾಸದರ ಏಕಮತ್ಯದಿಂದ ಕೋರ್ಟು ಕೊಲೇಜುಗಳ ಬಹಿಷ್ಕಾರಕ್ಕೆ ಸವಾಧಿಯನ್ನು ಕೊಡಬೇಕೆಂದು ಶಿಫಾರಸು ಮಾಡಿರುತ್ತ, ಆ ಶಿಫಾರಸಿನ ಕೆಳಗೆ ಸ್ವಸಮ್ಮತಿ ನಿದರ್ಶಕವಾದ ತಮ್ಮ ದಸ್ತಕತನ್ನು ಕೊಟ್ಟವರು ಪುನಃ ಗಯಾ ಕೊಂಗ್ರೆಸ್ಸಿನಲ್ಲಿ ಅದಕ್ಕೆ ವಿರುದ್ಧವಾದ ಠರಾವನ್ನು ತಂದು ಖಂಡಿಸುವರು. ಇದು ವಿಚಿತ್ರವಲ್ಲವೆ? ಮಹಾತ್ಮಜಿಯವರು ಸಡಿಲುಬಿಟ್ಟಿರುವ ಈ ಎರಡು ಬಗೆಯ ಬಹಿಷ್ಕಾರದ ವಿಷಯವಾಗಿ ಈ ಮೇರೆಗೆ ಆಗ್ರಹಪರವಶರಾದ ಬಳಿಕ ಕೌನ್ಸಿಲ್ ಪ್ರವೇಶದ ಹೆಸರು ಬಂದ ಕೂಡಲೆ ಹಟವು ಉಕ್ಕಿಬರುವುದು ಆಶ್ಚರ್ಯದ ಸಂಗತಿಯೆ? ಅದ್ದರಿಂದ ಈ ಮೂರು ಬಹಿಷ್ಕಾರಗಳನ್ನು ವಜ್ರಲೇಪವಾಗಿ ಮಾಡಿ ಕೊಂಗ್ರೆಸ್ಸಿನಲ್ಲಿ ಐಕ್ಯಭಂಗವನ್ನುಂಟುಮಾಡುವ ಮಹತ್ಕೃತ್ಯವನ್ನು ಹಲವು ಮಹನೀಯರು ಸಾಧಿಸಿದರಷ್ಟೆ. ಪಂಗಡಗಳು ಎರಡಾದವು. ಅವರವರ ಕಾರ್ಯಕ್ರಮವು ಬೇರೆ ಬೇರೆಯಾಯಿತು. ಕಾರ್ಯಪದ್ಧತಿಯು ಎಷ್ಟೆ ಉತ್ತಮವಿರಲಿ, ಹತ್ತು ಜನರು ಒಟ್ಟಿಗೆ ಕೂಡಿ ಮಾಡಿದರೆ ಅದು ಹೇಗೆ ಮತ್ತು ಮೂರುನಾಲ್ಕು ಜನರು ಮಾಡತೊಡಗಿದರೆ ಅದು ಹೇಗೆ? ಅದ್ದರಿಂದ ಅನಂತರದ ಬಹು ಸಂಖ್ಯಾಕರೆಂದೆನ್ನಿಸಿಕೊಳ್ಳುವವರ ಕಾರ್ಯಕ್ರಮವು ಐಕ್ಯವಿಲ್ಲದ ಕಾರಣ ಸಾಧ್ಯವಾಗದೆ ಹೋಯಿತು! ಸಂಕಲ್ಪಿಸಿಕೊಂಡ ರೂಪಾಯಿ ಸೇರಲಿಲ್ಲ, ಸ್ವಯಂಸೇವಕರೂ ಸೇರಲಿಲ್ಲ. ಯಾವ ಕಾರ್ಯವೂ ಆಗಲಿಲ್ಲ. ಯಾಕೆ? ದುರಾಗ್ರಹದಿಂದ ಐಕ್ಯವನ್ನು ಒಡೆದು ಹೊಂಡದಕ್ಕೆ! ದುರಾಗ್ರಹದ ಮಹಿಮೆಯು ಈ ಮೇರೆಗೆ ಐಕ್ಯದ ನೀರನ್ನು ಶೋಷಿಸುತ್ತಿರುವಾಗ ಅಬ್ದುಲ್ ಕಲಮ್ ಅಜದ ಮುಂತಾದ ಮಧ್ಯಸ್ಥರೂ ಎರಡೂ ಪಕ್ಷಗಳಲ್ಲಿ ಐಕ್ಯವನ್ನು ಸಾಧಿಸಲು ತಮ್ಮ ಸುವಿಚಾರಗಳ ಮಳೆಯನ್ನು ಸುರಿಸಹತ್ತಿದರು. ಅವರ ಈ ಪ್ರಯತ್ನವು ಕೌನ್ಸಿಲ್‌ಪ್ರವೇಶದ ಮಟ್ಟಿಗೆ ಸಫಲವಾಯಿತೆನ್ನಲು ಅಡ್ಡಿ ಇಲ್ಲ. ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಅಧಿವೇಶನವು ಮುಂಬಯಿಯಲ್ಲಿ ಸೇರಿ ಚರ್ಚೆನಡೆದು ಕೌನ್ಸಿಲ್‌ಪ್ರವೇಶದ ದ್ವಾರವು ಮುಕ್ತವಾಯಿತು.

ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯಲ್ಲಿ ನಡೆದ ವೃತ್ತಾಂತವನ್ನು ಬೇರೆ ಕಡೆಯಲ್ಲಿ ಕೊಟ್ಟದ್ದೇವೆ. ಅದನ್ನು ವಾಚಕರು ಅವಗಾಹನಕ್ಕೆ ತಂದುಕೊಳ್ಳಲಿ. ಕೌನ್ಸಿಲ್ ಪ್ರವೇಶದ ಚರ್ಚೆಯು ಇದು ವರೆಗೆ ಅನುಕೂಲ ಮತ್ತು ಪ್ರತಿಕೂಲ ರೂಪದಿಂದ ಧಾರಾಳವಾಗಿ ನಡೆದಿರುವ ಕಾರಣ ಪುನಃ ಅದನ್ನೆ ವಿವರಿಸಬೇಕಾದ ಅಗತ್ಯವಿಲ್ಲ. ತಥಾಪಿ ಒಂದು ಸಂಗತಿಯನ್ನು ವಾಚಕರ ತಿಳುವಳಿಕೆಗೆ ತಂದುಕೊಡುವುದು ಅವಶ್ಯಕವಾಗಿದೆ. ಅಸಹಕಾರದ ತತ್ವವು ಕಲಕತ್ತೆಯ ಸ್ಪೆಶಲ್ ಕೊಂಗ್ರೆಸ್ಸಿನ ಮುಂದೆ ಬಂದು ಅದನ್ನು ಅಂಗೀಕರಿಸಿದ ಬಳಿಕ ಆ ತತ್ವದ ಕಾರ್ಯಕ್ರಮದಲ್ಲಿ ಮೆಲ್ಲ ಮೆಲ್ಲನೆ ಹೇಗೆ ಪರಿವರ್ತನಗಳಾಗುತ್ತ ಹೋದವು ಎಂಬೀ ವಿಷಯವು ಕೊಂಗ್ರೆಸ್ ಚರಿತ್ರೆಯ ಸೂಕ್ಷ್ಮ ಅಧ್ಯಯನವನ್ನು ಮಾಡಿದವರಿಗೆ ಗೊತ್ತಿದೆಯಾದರೂ ಕೌನ್ಸಿಲ್ ಬಹಿಷ್ಕಾರದ ಕೀಲು ಇದು ವರೆಗೆ ಅಭೇದ್ಯವಾಗಿಯೆ ಇತ್ತು. ಬೇರೆ ಯಾವ ಬದಲಾವಣೆಯಾದರೂ ಚಿಂತೆ ಇಲ್ಲ. ಕೌನ್ಸಿಲ್ ಬಹಿಷ್ಕಾರದಲ್ಲಿ ತಿಲಮಾತ್ರವೂ ಬದಲಾವಣೆಯು ಶಕ್ಯವಿಲ್ಲವೆಂದು ಬೇಡಬದಲಾವಣೆಯವರ ಅಂಬೋಣ ಮತ್ತು ಸಾಧನವಿದ್ದವು. ಇಷ್ಟು ಆಗ್ರಹವಿರುವಾಗ ಈ ಎರಡು ತಂಡಗಳಲ್ಲಿ ಪುನಃ ಐಕ್ಯವುಂಟಾಗುವ ವಿಧಾನವು ಹೇಗೆ ಎಂದು ತೋರುವುದು ಸಹಜವೆ. ಕೆಲವರು ಸ್ಪೆಶ್ಯಲ್ ಕೊಂಗ್ರೆಸ್ಸನ್ನು ಸೇರಿಸಿ ಅದರಲ್ಲಿ ನಿರ್ಣಯವಾದದ್ದನ್ನು ಎರಡೂ ಪಕ್ಷದವರು—ವಿಶೇಷತಃ ಸ್ವರಾಜ್ಯ ಪಾರ್ಟಿಯವರು ತಾವು ಅಂಗೀಕರಿಸುತ್ತೇವೆಂದು ಲೇಖಮೂಲಕವಾಗಿ ಬರೆದುಕೊಡಬೇಕೆಂದು ವಾದಿಸುತ್ತಿದ್ದರು. ಅರ್ಥಾತ್ ಈ ಪ್ರಶ್ನೆಯು ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯಲ್ಲಿ ಬಂದಾಗ ದೇಶಬಂಧುಗಳಾದ ಚಿತ್ತರಂಜನದಾಸರು ಅದನ್ನು ಬದಿಗೊತ್ತಿದ್ದು ಸಮರ್ಪಕವೆ ಎಂದೆನ್ನಬೇಕು. ಕಾರಣ, ಕೌನ್ಸಿಲ್ ಚುನಾವಣೆಯು ಅತಿ ಸಮೀಪಿಸಿರುವಾಗ ಸ್ಪೆಶ್ಯಲ್ ಕೊಂಗ್ರೆಸ್ಸಿನ ಆಟವನ್ನು ಹೂಡಿ ಕೊನೆಗೆ ಅದರಲ್ಲಿ ಪ್ರತಿಕೂಲವಾಗಲಿ, ಅಥವಾ ಅನುಕೂಲವೆ ಆಗಲಿ ತೀರ್ಮಾನವಾದರೆ ಅದರಿಂದ ದೇಶಕ್ಕೆ ಯಾವ ಪ್ರಯೋಜನವೂ ಉಂಟಾಗಲಿಕ್ಕಿಲ್ಲ. ಮಳೆಯು ತಲೆದೋರಿದ ಬಳಿಕ ಮನೆಗೆ ಪಂಚಾಂಗವನ್ನು ಕಟ್ಟಿಸುವ ಆಲೋಚನೆಯು ಯಾವ ದಕ್ಷತೆಯದು? ಸ್ಪೆಶ್ಯಲ್ ಕೊಂಗ್ರೆಸ್ಸನ್ನು ಸೇರಿಸಲು ಯಾವ ಸಾಮರ್ಥ್ಯ, ಸಮಯ ಮತ್ತು ಸಂಪತ್ತು ಇವುಗಳನ್ನು ಖರ್ಚುಮಾಡುವದಿದೆಯೊ ಮತ್ತು ಹಾಗೆ ಮಾಡಿ ಕೊನೆಗೆ ಅನಿಶ್ಚಿತ ನಿರ್ಣಯವನ್ನು ಸೆರಗಿನಲ್ಲಿ ಕಟ್ಟಿಕೊಳ್ಳುವುದಿದೆಯೊ ಅದನ್ನೆಲ್ಲ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯಲ್ಲಿ ತೀರಿಸಿಬಿಟ್ಟರೆ ರಾಷ್ಟ್ರದ ಮೇಲೆ ಮಹದುಪಕಾರವನ್ನೆ ಮಾಡಿದಂತಾಗುತ್ತದಲ್ಲವೆ? ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯು ಅನಧಿಕಾರಿಗಳ ಸಂಸ್ಥೆಯಲ್ಲ. ಗಯಾ ಕೊಂಗ್ರೆಸ್ಸಿನ ಸಂಧಿಯಲ್ಲಿ, ಎಂದರೆ, ಕೊಂಗ್ರೆಸ್ಸಿನ ಸೂತ್ರಗಳು ಬೇಡಬದಲಾವಣೆಯವರ ಕೈಯಲ್ಲಿ ಸಂಪೂರ್ಣವಾಗಿ ಇದ್ದ ಸಮಯದಲ್ಲಿ ಕೊಂಗ್ರೆಸ್ ಮೆಂಬರರಿಂದ ಚುನಾಯಿಸಿ ಬಂದ ಗೃಹಸ್ಥರು ಸಂಪೂರ್ಣ ಅಸಹಕಾರಿಗಳೆ ಸರಿ. ಇಂಥವರ ನಿರ್ಣಯವು ಬೇಡಬದಲಾವಣೆಯವರಿಗೆ ಅಮಾನ್ಯವಾಗಲು ಕಾರಣವಿಲ್ಲ. ಕೊಂಗ್ರೆಸ್ಸಿನ ಅಸಹಕಾರಿ ಮೆಂಬರರಿಂದ ಚುನಾಯಿಸಲ್ಪಟ್ಟ ಸಭಾಸದರ ನಿರ್ಣಯವು ಮಾನ್ಯವಾಗುವುದಿಲ್ಲವಾದರೆ, ಅಥವಾ ಬಂಧಕವಾಗುವುದಿಲ್ಲವಾದರೆ ಆ ಸಭಾಸದರಿಗೆ ಪ್ರತಿನಿಧಿಗಳೆಂದು ಹೆಸರನ್ನಾದರೂ ಯಾಕೆ ಕೊಡಬೇಕು? ಸಾರಾಂಶ ಸ್ಪೆಶ್ಯಲ್ ಕೊಂಗ್ರೆಸ್ಸಿನ ಹಟವು ಬರೆ ಮುಂದಿನ ಕಾರ್ಯದಲ್ಲಿ ವಿಘ್ನವನ್ನು ತಂದೊಡ್ಡಲು ಮಾತ್ರ ಕಾರಣವಲ್ಲದೆ ತತ್ವದೃಷ್ಟಿಯಿಂದಾಗಲಿ ವ್ಯವಹಾರದೃಷ್ಟಿಯಿಂದಾಗಲಿ ಅಥವಾ ಯುಕ್ತಿದೃಷ್ಟಿಯಿಂದಾಗಲಿ ನಿರುಪಯುಕ್ತವೆ ಸರಿ. ಈ ವಿಚಾರಸರಣಿಯನ್ನನುಸರಿಸಿ ದೇಶಬಂಧು ದಾಸರು ಸ್ಪೆಶ್ಯಲ್ ಕೊಂಗ್ರೆಸ್ಸಿನ ಸೂಚನೆಗೆ ಅರ್ಧಚಂದ್ರವನ್ನು ಕೊಟ್ಟದ್ದು ಮತ್ತು ಈ ಮಹತ್ವದ ಪ್ರಶ್ನೆಯನ್ನು ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯಲ್ಲಿ ನಿರ್ಣಯಿಸಿಕೊಳ್ಳಲು ನಿಶ್ಚಯಿಸಿದ್ದು ಬಹು ಯುಕ್ತವೆಂದೆ ಹೇಳಬೇಕು. ಬೇಡಬದಲಾವಣೆಯವರು ಭಯಪಟ್ಟ ಮೇರೆಗೆ ಅಥವಾ ಕಡಿಮೆ ಪಕ್ಷದಲ್ಲಿ ಸಂಶಯಪಟ್ಟ ಮೇರೆಗೆ, ಇಲ್ಲವೆ ದಾಸರವರು ವಿಶ್ವಾಸಪಟ್ಟ ಮೇರೆಗೆ ಎಂದು ಬೇಕಾದರೆ ಅನ್ನೋಣ, ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯು ಗಯಾ ಅಧಿವೇಶನದ ಕೌನ್ಸಿಲ್ ಬಹಿಷ್ಕಾರದ ಠರಾವನ್ನು ರದ್ದುಪಡಿಸಿ ಕೌನ್ಸಿಲು ಪ್ರವೇಶೇಚ್ಛುಗಳಿಗೆ ಅವರ ಕಾರ್ಯಕ್ರಮಕ್ಕೆ ಅವಕಾಶವನ್ನು ಕೊಟ್ಟದೆ ಇದು ತುಂಬಾ ಸಂತೋಷದ ಮಾತು.

ಇನ್ನು ಮುಂದೆ ಕೌನ್ಸಿಲ್ ಪ್ರವೇಶವು ಬರೆ ದಾಸರ ಪಾರ್ಟಿಯ ಕಾರ್ಯಕ್ರಮವೆಂದು ಮನೋದೇವತೆ ಇದ್ದವರಿಗೆ ಹೇಳಲು ಸಾಧ್ಯವಿಲ್ಲ. ಕಾರಣ, ಈ ಕಾರ್ಯಕ್ರಮವು ಕೊಂಗ್ರೆಸ್ಸಿನ ಅಧಿಕೃತ ಸಂಸ್ಥೆಯಾದ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯಲ್ಲಿ ಬಹು ದೊಡ್ಡ ಬಹುಮತದಿಂದ ಸಮ್ಮತಿಸಲ್ಪಟ್ಟದೆ, ಎಂದ ಮೇಲೆ ಇನ್ನು ಮೇಲಾದರೂ ಎದುರುಪಾರ್ಟಿಯವರು ಸಮಾಧಾನಪಡಬಹುದು. ದೇಶದಲ್ಲಿ ಯಾವ ಮತಗಳ ನಿಜವಾದ ಗಾಳಿಯು ಬೀಸುತ್ತಿದೆ ಎಂಬುದನ್ನು ಅಂಥವರು ತಿಳಕೊಳ್ಳಬಹುದು. ಸ್ವರಾಜ್ಯವು ಮತ್ತು ಅದರ ಚಳವಳವು ಲೋಕಮತಾನುವರ್ತಿಯಾಗಿರಬೇಕೆಂದಿದ್ದರೆ ಮುಂಬಯಿಯ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ನಿರ್ಣಯಕ್ಕೆ ಅಡ್ಡಬರುವುದು ಯೋಗ್ಯವಲ್ಲವೆಂದು ಅವರು ತಿಳಕೊಳ್ಳಬಹುದು. ಗಾಡಿಯನ್ನು ನಡಿಸಲಾಗದೆ ಇದ್ದರೆ ಸುಮ್ಮನೆ ಕುಳಿತುಕೊಳ್ಳುವುದು ಯೋಗ್ಯವು. ಹೊರತು ಅದರ ಚಕ್ರಗಳಿಗೆ ಕೀಲು ಹಾಕಿ ಅದನ್ನು ನಿಲ್ಲಿಸುವ ಘಾತಕ ಯತ್ನವನ್ನು ಮಾಡುವುದರಲ್ಲಿ ಪುಣ್ಯವಾಗಲಿ, ಪೌರುಷವಾಗಲಿ ಇಲ್ಲ. ಸಾರಾಂಶ, ಮುಂಬಯಿಯ ನಿರ್ಣಯದಿಂದ ಬೇಡಬದಲಾವಣೆಯವರು ಯೋಗ್ಯ ಬೋಧವನ್ನು ತೆಕ್ಕೊಂಡು ಇನ್ನಾದರೂ ಸಮಾಧಾನಪಡಬಹುದೆ?

ಆದರೆ ನಮ್ಮ ಈ ಆಸೆಯು ಮೃಗಜಲದ ಹಿಂದೆ ಓಡುವ ಮೃಗದ ಪ್ರಯತ್ನದಂತೆ ನಿಷ್ಫಲವಾಗದೆ ಎಂದು ಬಹು ಕಷ್ಟದಿಂದ ಹೇಳಬೇಕಾಗುತ್ತದೆ. ಬೇಡಬದಲಾವಣೆಯವರು ತಮ್ಮ ದುರಾಗ್ರಹದ ಕವಚವನ್ನು ಇನ್ನಷ್ಟು ಬಿಗಿದುಕೊಳ್ಳಹತ್ತಿದ್ದಾರೆಂದು ತೋರುತ್ತದೆ. ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯು ಮೇಲಿನಂತೆ ಕೌನ್ಸಿಲು ಬಹಿಷ್ಕಾರದ ಅಗಲವನ್ನು ತುಂಡುಮಾಡಿದ ಕೂಡಲೆ ವರ್ಕಿಂಗ ಕಮ್ಮಿಟಿಯ ರಾಜಗೋಪಾಲಾಚಾರ್ಯ ಮುಂತಾದ ಪ್ರಮುಖರು ತಮ್ಮ ಜಾಗೆಗೆ ರಾಜಿಯನ್ನು ಕೊಟ್ಟರು. ಮಾತ್ರವಲ್ಲ, ಇನ್ನು ಮುಂದೆ ಈ ನಿರ್ಣಯಕ್ಕೆ ಎದುರಾಗಿ ತಾವು ಚಳವಳವನ್ನು ಮಾಡಿಯೇವೆಂದು ಭಯವನ್ನು ಸಹ ಹಾಕುತ್ತಿದ್ದಾರೆ. ಆದರೆ ಅವರು ಈ ತರದಿಂದ ತಮ್ಮ ಹಡಗವನ್ನು ನಡಿಸುವುದು ಅವರ ಮಟ್ಟಿಗೆ ಯೋಗ್ಯವಿದ್ದರೂ ಸ್ವರಾಜ್ಯ ಪಕ್ಷದವರು, ಯಾಕೆ ಈಗ ಕೊಂಗ್ರೆಸ್ ಪಕ್ಷದವರೆನ್ನಬಹುದು—ತಮ್ಮ ಕಾರ್ಯವನ್ನು ಇನ್ನೂ ಉತ್ಸಾಹದಿಂದ ನಡಸದೆ ಇರಲಿಕ್ಕಿಲ್ಲ. ಕೊಂಗ್ರೆಸ್ಸಿನ ಬಹುಮತವಿಲ್ಲದೆ ಇರುವಾಗಲೆ ಯಾವ ಕಾರ್ಯವನ್ನು ಮಾಡಲು ಸ್ವರಾಜ್ಯಪಕ್ಷವು ಧೈರ್ಯದಿಂದ ಮುಂದರಿಸಿತ್ತೊ, ಮತ್ತು ರಾಜಗೋಪಾಲಾಚಾರ್ಯರ ಹಾಗು ಬಹುಮತದ ಹೆಸರಿನ ತೀವ್ರ ಪ್ರತಿರೋಧವಿರುವಾಗಲೆ ಯಾವ ಸ್ವರಾಜ್ಯ ಪಕ್ಷವು ತನ್ನ ಸಂಕಲ್ಪಿತ ಕಾರ್ಯವನ್ನು ಮುಂದರಿಸಲು ಸಿದ್ಧವಾಗಿತ್ತೊ ಅದು ಈಗ ಯಾವ ಭಯಕ್ಕೂ ಅಂಜಲಿಕ್ಕಿಲ್ಲ. ಯಾವ ವಿಘ್ನಕ್ಕೂ ಹಿಂತೆಗೆಯಲಿಕ್ಕಿಲ್ಲ. ಯಾವ ಪ್ರತಿಬಂಧಕಕ್ಕೂ ಕುಗ್ಗಲಿಕ್ಕಿಲ್ಲ. ಇದನ್ನು ಎಲ್ಲರೂ ಲಕ್ಷ್ಯದಲ್ಲಿಡಬೇಕು.

ಸ್ಫುಟ ವಿಚಾರಗಳು.

೧. ಹಿಂದೂಸ್ಥಾನದಲ್ಲಿಯ ಪ್ರಮುಖ ಖಾತೆಗಳು ನವಸುಧಾರಣೆಯ ಪ್ರಕಾರ ಹಿಂದಿಗಳ ವಶದಲ್ಲಿಯೆ ಕೊಡಬೇಕೆಂದು ನಿಶ್ಚಯಿಸಿದ್ದು ವಾಚಕರ ನೆನಪಿನಲ್ಲಿರಬಹುದು. ಅದರಂತೆ ಹಿಂದಿಗಳ ಕೈವಶವಾದ ಖಾತೆಗಳಲ್ಲಿ ಸೈನ್ಯದ ವರ್ಗವು ಮುಖ್ಯವಾಗಿದೆ. ಈ ಮಿಲಿಟರಿ ಖಾತೆಯನ್ನು ಸಂಪೂರ್ಣವಾಗಿ ಹಿಂದಿಗಳಿಗೆ ಕೊಡದೆ ರೂಪಾಯಿಯಲ್ಲಿ ಒಂದು ಆಣೆಯ ಪ್ರಮಾಣವನ್ನು ಮಾತ್ರ ಸದ್ಯಕ್ಕೆ ಹಿಂದಿ ಜನರ ವಶಮಾಡಬೇಕೆಂಬ ಠರಾವು ಮೊದಲೆ ಪಾಸಾಗಿತ್ತು. ಇಂಥ ಎಷ್ಟೊ ಠರಾವುಗಳು ಪಾಸಾದರೂ ಕಾರ್ಯದಲ್ಲಿ ಬರುವುದು ಬಹು ಅಪರೂಪವೆ ಸರಿ. ನೋಕರಶಾಹಿಯ ಸ್ವಾರ್ಥದಿಂದಲೂ, ಕೆಲವು ಯುರೋಪಿಯನರ ಅಹಂಕಾರದಿಂದಲೂ ಹಿಂದಿಗಳಿಗೆ ಉಚ್ಚತರಗತಿಯ ಸ್ಥಾನವು ಸಿಗುವುದಿಲ್ಲ. ಠರಾವು ಪಾಸಾಗಿ ಹಲವು ಸಮಯವಾಯಿತು. ಅದ್ದರಿಂದ ಈ ಅವಧಿಯಲ್ಲಿ ಹಿಂದಿಗಳಿಗೆ ಯಾವ ಯಾವ ಸ್ಥಾನವನ್ನು ಸೈನ್ಯದಲ್ಲಿ ಕೊಟ್ಟಿರುವರು ಎಂಬದಾಗಿ ಕೆಲವರು ಪ್ರಶ್ನೆ ಮಾಡಿದ್ದರು. ಸರಕಾರದ ಉತ್ತರವನ್ನು ನೋಡಿದರೆ ಯಾರಿಗೂ ಆಶ್ಚರ್ಯವಾಗದೆ ಇರಲಿಕ್ಕಿಲ್ಲ. ೧೮ ಜನ ಹಿಂದಿಗಳಿಗೆ ದೊಡ್ಡ ಕೆಲಸವನ್ನು ಕೊಡಬೇಕೆಂದು ನಿರ್ಧರಿಸಿದ್ದರೂ ಎರಡುಮೂರು ಜನರು ಮಾತ್ರ ಕೆಲಸಕ್ಕೆ ಒಪ್ಪಿಕೊಂಡಿರುವರು. ಉಳಿದವರು ಆ ಕೆಲಸಗಳನ್ನು ಸ್ವೀಕರಿಸದೆ ತಮ್ಮ ಪೂರ್ವಸ್ಥಾನದಲ್ಲಿಯೆ ಇರುವರು! ಯಾರಾದರೂ ಉತ್ತಮ ತರಗತಿಯ ಕೆಲಸವನ್ನು ಕೊಡುವಾಗ ಬೇಡವೆಂದು ಹೇಳಿಯಾರೆ? ಹಿಂದಿಗಳಿಗೆ ಮೇಲಿನ ಅಧಿಕಾರ ಕೊಡುವಾಗ ಅವರು ಹಿಂಜರಿದರೆಂಬ ವರ್ತಮಾನವು ಇಂಗ್ಲೆಂಡಿಗೆ ಹೋದಮೇಲೆ ಸರ್ ಮಾಯಕಲ್ ಒಡ್ವಾಯರರ ಸಂತೋಷಕ್ಕೆ ಮಿತಿಯೆ ಇಲ್ಲವಾಗಿದೆ. ಹಿಂದಿಗಳಿಗೆ ಸೈನ್ಯವನ್ನು ವಶಮಾಡಿಕೊಳ್ಳುವುದು ಬೇಡವಾಗಿದೆಂದು ಅವರು ಹೇಳಹತ್ತಿದ್ದಾರೆ! ಇದು ನಿಜವೆ? ಉಚ್ಚ ತರಗತಿಯ ಕೆಲಸವನ್ನು ಮಾಡಲು ಯಾರಿಗೆ ಬೇಡವಾಗಿದೆ? ನಿಜವಾಗಿ ಹೇಳುವುದಾದರೆ ಇವರು ಕೆಲಸವನ್ನು ಸ್ವೀಕರಿಸದಿರಲು ಇತರ ಕಾರಣವಿರಬಹುದೆಂದು ತೋರುತ್ತದೆ. ಹೊರತು ಅವರು ತಾವು ಅಯೋಗ್ಯರೊ ಎಂಬ ಸಂಶಯದಿಂದ ಬಿಟ್ಟಿಲ್ಲ. ಹೇಗಿದ್ದರೂ, ನೋಕರಶಾಹಿಯ ಕುಟಿಲ ವಿದ್ಯೆಯು ಇದರಲ್ಲಿರುವುದೆಂಬುದರಲ್ಲಿ ಸಂಶಯವಿಲ್ಲ. ಉತ್ತಮವಾದ ಠರಾವುಗಳನ್ನು ಪಾಸುಮಾಡುವುದು ಮತ್ತು ಕಾರ್ಯದಲ್ಲಿ ಮಾತ್ರ ಅದನ್ನು ತರದಿರುವುದು ಎಷ್ಟು ಹಾಸ್ಯಾಸ್ಪದವು?

೨. ಒಂದು ವಿಚಿತ್ರವಾದ ವಾದವು 'ಪಾಯೊನಿಯರ್' ಎಂಬ ಪತ್ರಿಕೆಯಲ್ಲಿ ಉಪಸ್ಥಿತವಾಗಿದೆ. ಒಂದು ದಿವಸ ಫೆರ್ ಬ್ರದರ್ ಎಂಬ ಕರ್ನಲ್‌ಸಾಹೇಬರು ತನ್ನ ಇಬ್ಬರು ಸೇವಕರನ್ನು ಕೈದಿಗಳನ್ನಾಗಿ ಮಾಡಿದ್ದನ್ನು ನೋಡಿದರು. ಆಶ್ಚರ್ಯದಿಂದ ಅದರ ಕಾರಣವನ್ನು ಕೇಳಲಾಗಿ ಆಫಿಸರರಾದ ಮಿ. ಒಪನ್‌ಹೇಮರು ಅವರನ್ನು ಕಳವಿನ ಅಪರಾಧಕ್ಕೋಸ್ಕರ ಕೈದುಮಾಡಿಯದೆ ಎಂದು ಸ್ಪಷ್ಟವಾಗಿ ತಿಳಿಸಿದರು. ಸಾಹೇಬ ಮಹಾಶಯರಿಗೆ ಅದು ನಿಜವಾಗಿ ತೋರಲಿಲ್ಲ. ತನ್ನ ಸೇವಕರನ್ನು ಕೈದುಮಾಡಿದ್ದು ತನ್ನ ಅಪಮಾನಕ್ಕೆ ಕಾರಣವೆಂದು ಪಾಯೊನಿಯರದಲ್ಲಿ ಪೋಲಿಸ ಆಫಿಸರರ ಕೃತ್ಯವನ್ನು ತೀವ್ರವಾಗಿ ನಿವೇದಿಸಿದರು. ಆದರೆ ಪೋಲೀಸ ಇನ್ಸ್‌ಪೆಕ್ಟರರು ಏನೂ ಲಕ್ಷ್ಯಕೊಡದೆ ಹೇಳಿದರೇನೆಂದರೆ "ನಿಮ್ಮ ಈ ಸೇವಕರು ಯಾವಾಗಲೂ ನಿಂದ್ಯಜನರೊಟ್ಟಿಗೆ ತಿರುಗುತ್ತಿರುವರು, ಅದಲ್ಲದೆ ಇವರು ಮೊದಲು ಎಷ್ಟೊ ಮನೆಗಳನ್ನು ಪ್ರವೇಶಿಸಿ ಕಳವನ್ನು ಮಾಡಿದ್ದಾಗಿ ಕೇಳಿಬಂದಿದೆ." ಈ ಉತ್ತರವು ನಮ್ಮ ಕರ್ನಲ್ ಸಾಹೇಬರ ಚಿತ್ತವನ್ನು ಶಾಂತಮಾಡದ್ದಾಯಿತು. "ನಮ್ಮ ಸೇವಕರ ವರ್ತನವನ್ನು ತಿಳಿಯಬೇಕಾದರೆ ಸಾಹೇಬರು ಹೇಳಹತ್ತಿದರು, "ನಮ್ಮನ್ನು ಮೊದಲು ವಿಚಾರಿಸಬೇಕಿತ್ತಲ್ಲದೆ, ಹೊರತು ಒಂದೆ ಕಡೆಯ ವಿಚಾರಣೆಯಿಂದ ಕೈದುಮಾಡುವುದು ನ್ಯಾಯಕ್ಕೆ ಸರಿಯಾಗಿಲ್ಲ. ಅಂಥ ಅಸಂಭವನೀಯವಾದ ಕೃತ್ಯಕ್ಕೆ ಕೈದುಮಾಡಿದ್ದರಿಂದ ಸೇವಕರು ಅಳಹತ್ತಿದ್ದಾರೆ. ಅದಲ್ಲದೆ ಅವರ ಕೈಗೆ ಕೋಳವನ್ನು ಹಾಕುವುದು ಅಗತ್ಯವಿದ್ದಿಲ್ಲ. ಅವರಿಗೆ ತಿಳಿಸಿ ಹೇಳಹತ್ತಿದರೆ ತಾವಾಗಿಯೆ ಅವರು ಸ್ಟೇಶನಿಗೆ ಬರುತ್ತಿದ್ದರು." ಈ ಪ್ರಕಾರ ಸಾಹೇಬ ಮಹಾಶಯರು ಸೇವಕರ ತರ್ಫೆನಿಂದ ವಾದಉಪಸ್ಥಿತಮಾಡಿದರು. ಕೈಗೆ ಕೋಳವನ್ನು ಹಾಕದೆ ಸ್ಟೇಶನಿನಲ್ಲಿ ಹಾಜರಾಗಿರೆಂದು ಹೇಳಲು ಇವರೇನು ಉಚ್ಚಕುಲದಲ್ಲಿ ಹುಟ್ಟಿದವರೆ? ಅಥವಾ ಇವರಲ್ಲಿ ಅಷ್ಟು ಸತ್ಯಾಂಶವಿದೆಯೋ? ಸತ್ಯಾಂಶವಿದೆಂದು ಹೇಳುವುದಾದರೆ ಅವರು ಅಂಥಾ ಕೆಟ್ಟ ಕೃತ್ಯಗಳನ್ನು ಮಾಡುತ್ತಿರಲಿಲ್ಲ. ಅದ್ದರಿಂದ ಸಾಹೇಬರು ಹೇಳಿದ ಮಾತು ತನ್ನ ಗೌರವವನ್ನು ಕೊಚ್ಚಿಕೊಳ್ಳಲಿಕ್ಕೆಯೆ ಸರಿ. ಈ ಸಂಗತಿಯು ಇಷ್ಟರಲ್ಲಿಯೆ ಮುಗಿಯಲಿಲ್ಲ. ಅವರ ವಿಚಾರಣೆಯಾಗಿ ದೈವವಶಾತ್ ಅವರು ನಿರಪರಾಧಿಗಳು ಎಂದು ನಿರ್ಧರಿಸಲ್ಪಟ್ಟಿತು. ಸಾಹೇಬರ ಸಂತೋಷಕ್ಕೆ ಪಾರವೆ ಇಲ್ಲದ್ದಾಯಿತು. ಅವರು ತನ್ನ ಸೇವಕರ ಹೆಸರನ್ನು ಪೋಲಿಸ ರಿಜಿಸ್ಟರದಿಂದ ತೆಗೆದು ಅವರಿಗೆ ಎಲ್ಲಿಯಾದರೂ ನೋಕರಿಯನ್ನು ಕೊಡಬೇಕೆಂದು ಹೇಳಹತ್ತಿದ್ದಾರೆ. ಸಾಹೇಬರಿಗೆ ಸೇವಕರ ಮೇಲೆ ಇಷ್ಟು ಪ್ರೀತಿ ಇದೆಯಲ್ಲವೆ? ಆಗಲಿ. ಅವರ ಪ್ರೀತಿಗೆ ಯೋಗ್ಯವಾದ ಸೇವಕರೆ ಅವರಿಗೆ ಸಿಕ್ಕಿರುವರು. ಬೇರೆ ಇತರ ನೋಕರಿಯು ಅವರಿಗೆ ಯಾಕೆ ಬೇಕಾಗಿದೆ.

೩. ಗ್ರೀಕ ಮತ್ತು ತುರ್ಕಿಯವರಿಗೆ ನಡೆಯುತ್ತಿರುವ ಯುದ್ಧವು ಅಂತ್ಯವಾದರೂ ಒಪ್ಪಂದವು ಇಷ್ಟರ ವರೆಗೂ ಸಂಪೂರ್ಣವಾಗಿಲ್ಲ. ಪ್ರಕೃತದಲ್ಲಿ ವಿವಾದ ಸಂಗತಿ ಯಾವುದೆಂದರೆ, ಗ್ರೀಕರು ತುರ್ಕಿಯ ನಷ್ಟವನ್ನು ಯಾವ ರೀತಿಯಿಂದ ಭರತಿಮಾಡಬೇಕು ಎಂಬ ಪ್ರಶ್ನೆಯೆ ಮುಖ್ಯವಾಗಿ ನಿಂತಿದೆ. ತುರ್ಕಿಯೊಳಗಿನ ಪ್ರಮುಖ ಗೃಹಸ್ಥರು ತಮ್ಮ ನಷ್ಟವನ್ನು ದ್ರವ್ಯ ಮುಖಾಂತರವೆ ಗ್ರೀಕರು ತುಂಬಿಕೊಡಬೇಕಾಗಿ ಹೇಳುತ್ತಿರುವರು. ಆದರೆ ಇಸ್ಮತ್‌ಪಾಶಾ ಇವರು ಎಲ್ಲರನ್ನು ಸಮಾಧಾನದಿಂದ ಗ್ರೀಕರ ಈಗಿನ ದ್ರವ್ಯದ ಅನನುಕೂಲತೆಯನ್ನು ತಿಳಿಸಿ ತಾವು ಸದ್ಯದಲ್ಲಿ ಗ್ರೀಕರು ಕಾದುತ್ತಿರುವ ಊರುಗಳಿಂದಲೆ ತೃಪ್ತರಾಗಬೇಕೆಂದು ಹೇಳಹತ್ತಿದ್ದಾರೆ. ಈ ರೀತಿಯಾಗಿ ಒಪ್ಪಂದದ ಸಂಗತಿ ಇದ್ದರೂ ಅಂಗೋರಾದವರಿಗೆ ಪೂರ್ಣ ಸಮಾಧಾನವಾದಂತೆ ತೋರುವುದಿಲ್ಲ. ಅದ್ದರಿಂದ ಈ ಒಪ್ಪಂದದ ಸಂಗತಿಯು ಪ್ರಾಯಶಃ ಬರುವ ನೇಶನಲ್ ಎಸೆಂಬ್ಲಿಯಲ್ಲಿ ಛಿದ್ರಹೋದೀತು ಎಂಬ ಹೆದರಿಕೆಯು ಬರಹತ್ತಿದೆ. ಮಿತ್ರಮಂಡಲಿಯವರು ಒಪ್ಪಂದದ ಸಂಬಂಧ ಇಷ್ಟು ಪ್ರಯಾಸಪಟ್ಟರು. ಅವರು ಯೋಗ್ಯ ರೀತಿಯಿಂದ ಅದನ್ನು ನೆರವೇರಿಸಿದರೆಂದು ಹೇಳಲಾಗುವುದಿಲ್ಲ. ಜರ್ಮನಿಯು ಕಳೆದ ಯುದ್ಧದಲ್ಲಿ ಎಷ್ಟೊ ಸಾಲವನ್ನು ಕೊಡಬೇಕಿತ್ತಿಲ್ಲವೆ? ಆ ಸಮಯದಲ್ಲಿ ಅದರ ನಿರ್ಧನತ್ವವನ್ನು ಮನಗಂಡು ಅದಕ್ಕೆ ಎಷ್ಟು ಸವಲತ್ತುಗಳನ್ನು ಕೊಟ್ಟಿದ್ದರು. ಈಗ ಗ್ರೀಕರು ಅದೆ ಅವಸ್ಥೆಯಲ್ಲಿರುವರು. ಅದ್ದರಿಂದ ಅವರನ್ನು ಕಷ್ಟದಲ್ಲಿ ಹಾಕುವುದು ಯೋಗ್ಯವಲ್ಲ. ಈ ಸಂಗತಿಯನ್ನು ಎಲ್ಲರೂ ಲಕ್ಷ್ಯದಲ್ಲಿಡತಕ್ಕದಿದೆ. ಅದ್ದರಿಂದ ಇನ್ನು ಮುಂದೆ ಕೂಡುವ ನೇಶನಲ್ ಎಸೆಂಬ್ಲಿಯಾದರೂ ಸಹ ಯೋಗ್ಯ ರೀತಿಯಿಂದ ಆಲೋಚಿಸಿ ಎಲ್ಲರಿಗೂ ಹಿತವಾಗುವಂತೆ ಒಪ್ಪಂದವನ್ನು ಮಾಡೀತೆಂದು ನಾವು ನಂಬಿದ್ದೇವೆ. ಈ ಕಾರ್ಯದಲ್ಲಿ ಇಸ್ಮತ್‌ಪಾಶಾ ಮತ್ತು ವೆನೆಜೊಲೊಸ ಇವರು ತಮ್ಮ ಜನರನ್ನು ಸಮಾಧಾನಪಡಿಸಲು ಬಹು ಕಷ್ಟವನ್ನು ಪಟ್ಟಿರುವರು. ಅದ್ದರಿಂದ ಬರುವ ಸಭೆಯು ಅವರ ಹೇಳಿಕೆಯನ್ನು ಸ್ವೀಕರಿಸಿದದ್ದಾದರೆ ಅವರ ಶ್ರಮದ ಸಾರ್ಥಕವಾದೀತು.

೪. ಸ್ವರಾಜ್ಯ ಭಕ್ತರಾದ ದೇಶಬಂಧು ದಾಸರು ಮದರಾಸಿಗೆ ದಯಮಾಡಿಸಿರುವರು. ಅವರಿಗೆ ಮದ್ರಾಸಕರರು ಮತ್ತು ದಾರಿಯಲ್ಲಿ ಆಯಾ ಸ್ಥಳಿಕರು ಉತ್ತಮವಾದ ಸ್ವಾಗತವನ್ನು ಕೊಟ್ಟಿದ್ದಾರೆ. ಇದು ಸಮಾಧಾನದ ಮಾತು. ರಾಜಕಾರಣದಲ್ಲಿ ಈಗ ಮತ ಭೇದಗಳುಂಟಾಗಿವೆಯಾದರೂ ದೇಶಬಂಧು ದಾಸರು ಮಾಡಿರುವ ಸ್ವಾರ್ಥತ್ಯಾಗವು ಅಸಾಮಾನ್ಯವಾದದ್ದೆಂದು ಯಾರೂ ಒಪ್ಪತಕ್ಕದ್ದಾಗಿದೆ. ದೇಶಬಂಧು ದಾಸರು ನಮ್ಮ ಮದ್ರಾಸ ಸಂಸ್ಥಾನದಲ್ಲಿ ಸಂಚರಿಸುವವರಿದ್ದಾರೆ. ಮಲಬಾರ ಪ್ರಾಂತದ ವರೆಗೆ ಅವರು ಬರುವವರಿದ್ದಾರೆಂದು ತಿಳಿದುಬರುತ್ತದೆ. ನಮ್ಮ ಜಿಲ್ಲೆಯು ಮಲಬಾರಕ್ಕೆ ಹೊಂದಿಕೊಂಡಿರುವುದರಿಂದ ಅವರು ಅಲ್ಲಿ ಬಂದಾಗಲೆ ಒಂದು ದಿವಸದ ಮಾತಿಗೆ ಅವರನ್ನು ಇಲ್ಲಿಯ ಮುಖಂಡರು ಕರತರಿಸಿದರೆ ಇಲ್ಲಿ ಉಂಟಾಗಿರುವ ಕಾರ್ಯಮಾಂದ್ಯವು ಹೋಗುತ್ತಿತ್ತು. ಅಭಿಪ್ರಾಯ ಭೇದಗಳು ಎಷ್ಟು ಇದ್ದಾಗ್ಯೂ ದಾಸರಂಥ ಒಂದನೆಯ ತರಗತಿಯ ಮುಖಂಡರನ್ನು ಸತ್ಕರಿಸುವ ವಿಷಯದಲ್ಲಾಗಲಿ, ಅವರ ಉಪದೇಶವನ್ನು ಕೇಳುವ ವಿಷಯದಲ್ಲಾಗಲಿ ಎಷ್ಟೆ ವಿರೋಧಿಗಳಿದ್ದರೂ ಪ್ರತಿಕೂಲರಾಗಲಿಕ್ಕಿಲ್ಲವೆಂದು ಬರವಸೆ ಪಡುತ್ತೇವೆ. ಮತ್ತು ಅಂಥ ಅನುದಾರತೆಯನ್ನು ಕಟ್ಟಿಕೊಳ್ಳದೆ ಇಲ್ಲಿಯ ರಾಜಕೀಯ ಚಳವಳಗಾರರು ದೇಶಬಂಧುಗಳನ್ನು ಇಲ್ಲಿಗೆ ಆಮಂತ್ರಿಸಿ ಅವರಲ್ಲಿಯ ತಮ್ಮ ಭಕ್ತಿಯನ್ನು ವ್ಯಕ್ತಗೊಳಿಸಿಯಾರೆಂದು ನಂಬಿದ್ದೇವೆ.

೫. ಇಲ್ಲಿಯ ವಿದ್ಯಾಖಾತೆಯ ಮಂತ್ರಿಗಳಾದ ಮಿ। ಪತ್ರೊ ಇವರು ಉಟಕಮಂಡದಲ್ಲಿ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಈ ಮದ್ರಾಸ ಇಲಾಖೆಯಲ್ಲಿ ನಡಿಸುತ್ತಿರುವ ಪ್ರಮುಖ ಮಂಡಳಿಯ ಒಂದು ಸಭೆಯನ್ನು ನೆರವೇರಿಸಿದ್ದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಪ್ರಾಥಮಿಕ ಶಿಕ್ಷಣವನ್ನು ಆದಷ್ಟು ಬೆಳಸುವುದೆ ಇದರ ಉದ್ದೇಶವಾಗಿತ್ತು. ಎಷ್ಟೊ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಸಹ ಇಲ್ಲವಾಗಿವೆ. ಅದ್ದರಿಂದ ಅಂಥ ಹಳ್ಳಿಗಳಲ್ಲಿ ಶಾಲೆಗಳನ್ನು ಸ್ಥಾಪಿಸಿ ಅವುಗಳ ಆಡಳಿತೆಯನ್ನು ನೋಡಲು ಒಬ್ಬ ಡಿಪ್ಯುಟಿ ಇನ್ಸ್‌ಪೆಕ್ಟರನನ್ನು ಇಡಬೇಕೆಂದು ಠರಾಯಿಸಿದ್ದಾರೆ. ಯಾವ ಹಳ್ಳಿಗಳಲ್ಲಿ ೫೦೦ ಅಥವಾ ಅದಕ್ಕಿಂತ ಹೆಚ್ಚು ಜನರ ವಸತಿಯು ಇರುವುದೊ ಅಲ್ಲಿ ಅಗತ್ಯವಾಗಿ ಶಾಲೆಯನ್ನು ಸ್ಥಾಪಿಸಬೇಕು ಮತ್ತು ಅದಕ್ಕಿಂತ ಕಡಿಮೆ ಇದ್ದಲ್ಲಿ ಡಿಪ್ಯುಟಿ ಇನ್ಸ್‌ಪೆಕ್ಟರನು ಪ್ರಯತ್ನಪಟ್ಟು ಶಾಲೆಯನ್ನು ಸ್ಥಾಪಿಸಬೇಕು. ಈ ಹೊಸ ಕಾಯದೆಯು ಬೇಗನೆ ಜಾರಿಗೆಬರುವಂತೆ ಸರಕಾರವು ತಾಲೂಕು ಬೋರ್ಡುಗಳ ಮುಖಾಂತರ ಬೇಕಾಗಿರುವ ಮಾಹಿತಿಯನ್ನು ತರಿಸಿ ಗ್ರೇಂಟು ತೆಕೊಳ್ಳುವ ಶಾಲೆಗಳ ಮುಖಾಂತರವೆ ಪ್ರಾಥಮಿಕ ಶಿಕ್ಷಣವನ್ನು ಬೆಳಸಬೇಕೆಂಬ ಇನ್ನೊಂದು ಠರಾವು ಪಾಸಾಗಿದೆ. ಅಥವಾ ಅಲ್ಲಲ್ಲಿ ಸಂಘಗಳನ್ನು ಸ್ಥಾಪಿಸಬೇಕು ಇಲ್ಲವೆ ಸರಕಾರವು ಸ್ವತಃ ತಾನಾಗಿಯೆ ಶಾಲೆಗಳನ್ನು ನಡಿಸಬೇಕೆಂದು ಮಿ। ಪತ್ರೊರವರ ಹೇಳಿಕೆಯಿದೆ. ನಮ್ಮ ಮಂತ್ರಿಗಳು ಯುನಿವರ್ಸಿಟಿ ಬಿಲನ್ನು ಪಾಸುಮಾಡಿ ಸದ್ಯದಲ್ಲಿಯೆ ಮುಂದೆ ಬಂದಿರುವರು. ಅದರೊಡನೆ ಈ ಹೊಸ ಪದ್ಧತಿಯನ್ನು ಜಾರಿಗೆತರುವ ಆಲೋಚನೆ ಇರುವುದರಿಂದ ಇವರ ಸದಿಚ್ಛೆಯು ವ್ಯಕ್ತವಾಗುತ್ತದೆ. ದುರ್ದೈವದ ಸಂಗತಿಯೇನೆಂದರೆ ಈ ಪ್ರಾಥಮಿಕ ಶಿಕ್ಷಣದ ಪದ್ಧತಿಯು ಸುಸೂತ್ರವಾಗಿ ನಡಿಯಲಿಕ್ಕೆ ಎಷ್ಟೊ ತೊಂದರೆಗಳು ಬರುವುವು. ಮುಖ್ಯವಾಗಿ ಗ್ರೇಂಟಿನ ಅಗತ್ಯವಿರುವುದು. ಸರಕಾರವು ಗ್ರೇಂಟನ್ನು ಎಷ್ಟರ ಮಟ್ಟಿಗೆ ಕೊಟ್ಟೀತೆಂಬುದೆ ಸಂಶಯವು! ಸಭೆಯಲ್ಲಿ ಪಾಸಾದ ಠರಾವುಗಳ ಪೈಕಿ ಇನ್ನೊಂದು ಮುಖ್ಯವಾದ್ದು, ಯಾವುದೆಂದರೆ ಇಂಥ ಪ್ರಾಥಮಿಕ ಶಾಲೆಗಳಲ್ಲಿ ಬೇಕಾಗುವ ಮಾಸ್ತರುಗಳ ಸಂಖ್ಯೆಯನ್ನು ಯಾವ ರೀತಿಯಿಂದ ಪುರವಣಿ ಮಾಡಬೇಕು. ಸದ್ಯದಲ್ಲಿ ಇರುವ ಮಾಸ್ತರುಗಳ ಸಂಖ್ಯೆಯು ಕಡಿಮೆ ಇದ್ದು ಇನ್ನು ಸಾಧಾರಣ ೨೦ ಸಾವಿರ ಟ್ರೈಂಡ್ ಮಾಸ್ತರುಗಳ ಅಗತ್ಯವಿದೆ. ಅದ್ದರಿಂದ ಈಗಿನ ಮೊಡೆಲ್ ಶಾಲೆಗಳ ಪದ್ಧತಿಯನ್ನು ತೆಗೆದು ಗ್ರೇಂಟನ್ನು ಪಡೆಯುತ್ತಿರುವ ಶಾಲೆಗಳಲ್ಲಿಯೆ ಟ್ರೈನಿಂಗ ಪದ್ಧತಿಯನ್ನು ಇಡಬೇಕು. ಈ ಕ್ಲಾಸನ್ನು ಇತರ ಕ್ಲಾಸುಗಳೊಡನೆ ಇಟ್ಟು ಒಂದು ವರುಷದೊಳಗಾಗಿ ಟ್ರೈನಿಂಗನ್ನು ಹೊಂದಬಹುದು. ಈ ರೀತಿಯಾಗಿ ಮಾಡಿದ ಪಕ್ಷದಲ್ಲಿ ಟ್ರೈನಿಂಗಪಡಿಯಲು ಈಗ ಯಾವ ರೀತಿಯಿಂದ ಬೇರೆ ಸಮಯವು ಅಗತ್ಯವಿದೆಯೊ ಅದು ಬೇಕಾಗಲಿಕ್ಕಿಲ್ಲ. ಇನ್ನು ಶಾಲೆಗಳನ್ನು ಯಾವ ರೀತಿಯಿಂದ ಹೆಚ್ಚಿಸಬೇಕೆಂಬ ಪ್ರಶ್ನೆಯು ಬರುವುದು. ಮದರಾಸ ಇಲಾಖೆಯೊಳಗಿನ ಮುನ್ಸಿಪಲ್ ಶಾಲಾ ವರದಿಗಳನ್ನು ನೋಡಿದರೆ ಎಷ್ಟೊ ಶಾಲೆಗಳಲ್ಲಿ ನೇಕಡಾ ಇಪ್ಪತ್ತರಂತೆ ಇನ್ನೂ ಹುಡುಗರನ್ನು ಹೆಚ್ಚಿಸಬಹುದೆಂದು ತಿಳಿದುಬರುತ್ತದೆ. ಅದ್ದರಿಂದ ಬೋರ್ಡು ಶಾಲೆಗಳಲ್ಲಿಯಾಗಲಿ ಗ್ರೇಂಟನ್ನು ಪಡಿಯುತ್ತಿರುವ ಸ್ಕೂಲುಗಳಲ್ಲಿಯಾಗಲಿ ಕಡಿಮೆಪಕ್ಷಕ್ಕೆ ನೇಕಡಾ ೧೫ರಂತೆಯಾದರೂ ಹುಡುಗರನ್ನು ಹೆಚ್ಚಿಸಬಹುದು. ಇಷ್ಟೊ ಶಾಲಾ ಸಂಖ್ಯೆಗಳು ಕಡಿಮೆ ಇದ್ದ ಪಕ್ಷದಲ್ಲಿ ಇತರ ಶಾಲೆಗಳನ್ನು ಸ್ಥಾಪಿಸಬಹುದು. ಇದೇ ಈಗಿನ ಕೌನ್ಸಿಲಿನ ಆಯುಷ್ಯವು ತುಂಬಿ ಬಂತು. ಪತ್ರೊ ಮಹಾಶಯರು ತಮ್ಮ ಸ್ಥಾನವನ್ನು ಸಹ ಬಿಡುವ ಪ್ರಸಂಗ ಬಂದಿದೆ. ಆದರೂ ಇವರು ತಮ್ಮ ಕೈಯಲ್ಲಿರುವ ಅಧಿಕಾರದ ಉಪಯೋಗವನ್ನು ಈ ರೀತಿಯಿಂದಾದರೂ ಉಪಯೋಗಿಸಿ ತಮ್ಮ ಹೆಸರನ್ನು ಕೌನ್ಸಿಲಿನ ಇತಿಹಾಸದಲ್ಲಿ ಇಡಬೇಕೆಂದು ಆಲೋಚಿಸಿರುವರು. ಆದರೆ ಇವರ ಈ ಹೊಸ ಪದ್ಧತಿಯು ಎಷ್ಟರ ಮಟ್ಟಿಗೆ ಯಶಸ್ವಿಯಾದೀತೆಂದು ಮಾತ್ರ ನೋಡಬೇಕಾಗಿದೆ.

ಮಂಗಳೂರು.

ಗುರುಪುರ ಸಂಕವನ್ನು ತೆರಿಯುವ ಕಾರ್ಯಕ್ಕಾಗಿ ಮದರಾಸ ಸರಕಾರದ ಮಿನಿಸ್ಟರ ಮಿ। ಪೆನಗಲ್ ರಾಜಾರವರು ಕಳೆದ ಬುಧವಾರದ ಲೋಕಲ್ ಟ್ರೈನು ಬಂಡಿಯಲ್ಲಿ ಮಂಗಳೂರಿಗೆ ತಲಪಿ ಅನಂತರ ಗುರುಪುರಕ್ಕೆ ತೆರಳಿದರು. ಅಲ್ಲಿ ಅವರ ಸ್ವಾಗತವು ಯೋಗ್ಯರೀತಿಯಲ್ಲಿ ಆದ ಬಳಿಕ ಸಂಕ ತೆರಿಯುವ ಸಮಾರಂಭವು ಜರಗಿತು. ಅದರ ನಂತರ ಸಂಕವನ್ನು ಕಂಟ್ರೆಕ್ಟಿಗೆ ವಹಿಸಿಕೊಂಡ ಮ। ರಾ। ಗೋವಿಂದರಾಜ ಮುದಲಿಯಾರರು ನೆರೆದವರಿಗೆ ಟೀಪಾರ್ಟಿಯ ಸತ್ಕಾರದಿಂದ ಉಪಚರಿಸಿದರು. ಈ ಸಂಕಕ್ಕೆ ಸುಮಾರು ೫ ಲಕ್ಷ ೩೦ ಸಾವಿರ ರೂಪಾಯಿ ಖರ್ಚಾಗಿದೆಯಂತೆ.

ಬರುವ ತಾರೀಕು ೫ರಲ್ಲಿ ವ್ಯಾ. ಯಂ. ಸಿ. ಎ ಯವರು ಗವರ್ನಮೆಂಟ ಕೊಲೇಜಿನಲ್ಲಿ ಒಂದು ಸಂಗೀತ ಕಛೇರಿಯನ್ನು ನಡಿಸುವರು.

ಜಿಲ್ಲಾ ಸೆಕೆಂಡರಿ ವಿದ್ಯಾಭ್ಯಾಸದ ಬೋರ್ಡಿಗೆ ಸೆಕೆಂಡರಿ ಶಾಲಾ ಮೆನೇಜರುಗಳಲ್ಲಿ ಒಬ್ಬ ಮೆಂಬರರೂ ಸೆಕೆಂಡರಿ ಶಾಲಾ ಉಪಾಧ್ಯಾಯರಲ್ಲಿ ಒಬ್ಬ ಮೆಂಬರರೂ ಆರಿಸಲ್ಪಡುವರು. ಈ ಮೆಂಬರಿಕೆಗಳಲ್ಲಿ ಮೆನೇಜರುಗಳೊಳಗೆ ಮ। ರಾ। ಅ. ಶ್ರೀನಿವಾಸ ಪೈ ಮತ್ತು ರೆವರೆಂಡ್ ಪೊಸರ್ಪಿಯೋ, ಉಪಾಧ್ಯಾಯರೊಳಗೆ ಮಿ। ಎಸ್. ಪುರ್ತಾದೊ ಮತ್ತು ರೆವರೆಂಡ ಸಾಲ್ಡಾ ಇರು ಉಮೇದುವಾರರಾಗಿ ಮುಂದೆ ಬಂದಿರುವರು. ವೋಟುಗಳು ಜೂನ್ ತಾರೀಕು ೧೮ರೊಳಗೆ ಜಿಲ್ಲಾ ಎಜ್ಯುಕೇಶನಲ್ ಆಫೀಸರರಿಗೆ ತಲಪಬೇಕಾಗಿದೆ.

ಮಂಗಳೂರಿನ ಒಬ್ಬ ವ್ಯಾಪಾರಸ್ಥರೂ, ವರ್ಗದಾರರೂ, ಮುನ್ಸಿಪಲ್ ಕೌನ್ಸಿಲರರೂ, ಡಿಸ್ಟ್ರಿಕ್ಟ ಎಜ್ಯುಕೇಶನಲ್ ಕೌನ್ಸಿಲಿನ ಮೆಂಬರರೂ ಆದ ಮಿ। ಯಚ್. ಮಹಮ್ಮದ್ ಪುತ್ತೂರು ಸಾಹೇಬರು ದಕ್ಷಿಣ ಕನ್ನಡ ಮಲಬಾರು ಮತ್ತು ನೀಲಗಿರಿ ಜಿಲ್ಲೆಗಳ ಮಹಮ್ಮದಿ ಕೊನ್‌ಸ್ಟಿಟ್ಯೂಯನ್ಸಿನ ಪರವಾಗಿ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರಿಕೆಗೆ ಒಬ್ಬ ಉಮೇದ್ವಾರರಾಗಿ ನಿಂತಿರುವರು.

ಇದೇ ಕಳೆದ ತಾರೀಕು ೨೫ರಲ್ಲಿ ಜರಗಿದ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಿನಲ್ಲಿ ಹಾಜಿ ಅಬ್ದುಲ್ಲಾ ಹಾಜಿ ಖಾಸಿಂ ಸಾಹೇಬ ಬಹದ್ದೂರರನ್ನು ಡಿಸ್ಟ್ರಿಕ್ಟ ಬೋರ್ಡಿನಿಂದ ಜಿಲ್ಲಾ ಸೆಕೆಂಡರಿ ಎಜ್ಯುಕೇಶನಲ್ ಕೌನ್ಸಿಲಿಗೆ ಡಿಸ್ಟ್ರಿಕ್ಟ ಬೋರ್ಡಿನ ಪ್ರತಿನಿಧಿಯಾಗಿ ಚುನಾಯಿಸಿದೆ.

ಕಳೆದ ತಾರೀಕು ೨೮ರಲ್ಲಿ ಮಂಗಳೂರು ಮುನ್ಸಿಪಲ್ ಆಫೀಸಿನಲ್ಲಿ ಮುನ್ಸಿಪಲ್ ಕೌನ್ಸಿಲರರು, ಹಂಚು ಕಾರ್ಖಾನೆಯ ಮ್ಯಾಲಿಕರು ಮತ್ತು ಇತರ ಕೆಲವು ಗೃಹಸ್ಥರಿಂದ ಕೂಡಿದ ಒಂದು ಸಭೆಯು ಪಟ್ಟಣಕ್ಕೆ ಇಲೆಕ್ಟ್ರಿಕ್ ಪವರ ಮತ್ತು ದೀಪಗಳನ್ನು ಒದಗಿಸಲು ಒಂದು ಕಂಪೆನಿಯನ್ನು ಸ್ಥಾಪಿಸುವುದನ್ನು ಕುರಿತು ಆಲೋಚಿಸುವುದಕ್ಕೆ ಒಂದು ಸಭೆ ಸೇರಿತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ದಿವಾನ್ ಬಹದ್ದೂರ್ ಯಂ. ಮುಂಡಪ್ಪ ಬಂಗೇರರು ವಹಿಸಿಕೊಂಡಿದ್ದರು. ಸಭೆಯಲ್ಲಿ ಮ। ರಾ। ತೋನ್ಸೆ ಮಂಗೇಶರಾಯರು ಇಲೆಕ್ಟ್ರಿಕ್ ಶಕ್ತಿಯಿಂದ ಚಿಕ್ಕಪುಟ್ಟ ಕಾರ್ಖಾನೆಗಳ ಕೆಲಸವನ್ನು ನಡಿಸಲು ಹೇಗೆ ಸಾಧ್ಯವಿದೆಯೆಂದು ತಿಳಿಸಿದರು. ಅನಂತರ ಇಲೆಕ್ಟ್ರಿಕ್ ಇಂಜಿನಿಯರ್ ಮ। ರಾ। ಗೋವಿಂದರಾಯರು ಈ ಪಟ್ಟಣಕ್ಕೆ ಇಲೆಕ್ಟ್ರಿಕ್ ಪವರನ್ನು ಒದಗಿಸಲು ಮೊದಲೊಮ್ಮೆ ನಡಿಸಿದ ಆಲೋಚನೆಯನ್ನು ತಿಳಿಸಿ ಈ ಕಾರ್ಯವನ್ನು ಪ್ರಾರಂಭಿಸಬೇಕಾದರೆ ೩॥ ಲಕ್ಷ ಮೂಲಧನವಾದರೂ ಬೇಕಾಗುವುದೆಂದೂ ಇದರಿಂದ ಸಾಕಷ್ಟು ಲಾಭವು ದೊರಕುವುದೆಂದೂ ತಿಳಿಸಿದರು. ಕೊನೆಗೆ ಇಲೆಕ್ಟ್ರಿಕ್ ಪವರನ್ನು ಒದಗಿಸುವ ಒಂದು ಕಂಪೆನಿಯನ್ನು ಸ್ಥಾಪಿಸುವುದು ಉಚಿತವೆಂದು ನಿರ್ಧರಿಸಿ ಆ ಬಗ್ಗೆ ಎಕ್ಸಪರ್ಟರನ್ನು ವಿಚಾರಿಸಿ ಒಂದು ರಿಪೋರ್ಟನ್ನು ತಯಾರಿಸಲು ಒಂದು ಕಮ್ಮಿಟಿಯನ್ನು ನೇಮಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಹಲವು ಮಂದಿ ಜೈನರ ಒಂದು ಸಭೆಯು ಕಳೆದ ತಾರೀಕು ೨೦ನೆಯ ದಿನ ಜೈನ ಬೋರ್ಡಿಂಗ್ ಹೌಸಿನಲ್ಲಿ ಡಿಸ್ಟ್ರಿಕ್ಟ ಬೋರ್ಡ ಮೆಂಬರಾದ ಶ್ರೀಯುತ ಕಟ್ಟೆಮಾರ ರಘುಚಂದ್ರಬಲ್ಲಾಳರ ಅಧ್ಯಕ್ಷತೆಯಲ್ಲಿ ಸೇರಿ ಹಿಂದೂ ರಿಲಿಜಿಯಸ್ ಎನ್‌ಡೌಮೆಂಟ ಬೀಲಿನಲ್ಲಿರುವ ಕೆಲವು ಆಕ್ಷೇಪಾರ್ಹವಾದ ವಿಷಯಗಳನ್ನು ಚರ್ಚಿಸಿ, ದಕ್ಷಿಣ ಕನ್ನಡದಲ್ಲಿರುವ ಜೈನರ ಮೇಲ್ವಿಚಾರಣೆಗೊಳಪಟ್ಟ ದೇವಸ್ಥಾನಗಳನ್ನು ಈ ಬೀಲಿನಲ್ಲಿ ಸೇರಿಸಬಾರದೆಂಬ ಠರಾವನ್ನು ಪಾಸು ಮಾಡಿ, ಈ ವಿಷಯದಲ್ಲಿ ಜೈನರ ಹಾಲಹವಾಲಿಗಳನ್ನು ವೈಸರಾಯರಿಗೆ ತಿಳಿಸುವುದಕ್ಕಾಗಿ ಒಂದು ಮನವಿಯು ತಯಾರಾಗಿದೆ. ಸರಕಾರದೊಡನೆ ಈ ಸಂಬಂಧ ಅಗತ್ಯವಿರುವ ಪತ್ರವ್ಯವಹಾರವನ್ನು ನಡೆಸಲು ಶ್ರೀಯುತ ಆದಿರಾಜ ಕಿನ್ನಿಕ ಬಲ್ಲಾಳರನ್ನು ನಿಯೋಜಿಸಲಾಗಿದೆ. ಈ ಸಭೆಯಲ್ಲಿ ಶ್ರೀಯುತ ಯುವರಾಜ ಕುಮಾರಯ್ಯ ಅರಸು ಮಾರಮ್ಮಹೆಗ್ಗಡೆರು, ಶ್ರೀಯುತ ಪಡುಬಿದ್ರೆ ಆದಿರಾಜ ಅರಸು ಕಿನ್ನಿಕ ಬಲ್ಲಾಳ, ಶ್ರೀಯುತ ಧರ್ಮಸ್ಥಳ ಮಂಜಯ್ಯಹೆಗ್ಗಡೆ, ಶ್ರೀಯುತ ಕೊಳೂರು ದೇವರಾಜ ಬಲ್ಲಾಳ ಮೊದಲಾದ ಸುಪ್ರಸಿದ್ಧ ಜೈನಗೃಹಸ್ಥರು ಹಾಜರಿದ್ದರು.

ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ಹಿಂದೂ ರಿಲಿಜಿಯಸ್ ಎನ್‌ಡೌಮೆಂಟ ಬೀಲನ್ನು ಕುರಿತು ಆಲೋಚಿಸುವುದಕ್ಕೆ ಒಂದು ಮಹಾಸಭೆಯು ಮ॥ ರಾ॥ ವಕೀಲ ಯು. ಸಿ. ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಸೇರಿತು. ಈ ಸಭೆಯಲ್ಲಿ ಉಡುಪಿಯಲ್ಲಿ ಸೇರಿದ ಹಿಂದೂ ಕೊನ್ಫರೆನ್ಸಿನಲ್ಲಿ ಪಾಸಾದ ಠರಾವುಗಳನ್ನು ಮಂಜೂರುಮಾಡಲಾಯಿತು. ಉಡುಪಿಯ ಹಿಂದೂ ಕೊನ್ಫರೆನ್ಸಿನವರು ನೇಮಿಸಿದ ಡೆಪ್ಯುಟೇಶನಿಗೆ ಗವರ್ನರರು ಭೇಟಿಯನ್ನು ಕೊಟ್ಟ ಬಗ್ಗೆ ಅವರನ್ನು ಅಭಿನಂದಿಸಲಾಯಿತು. ಈ ಬೀಲನ್ನು ಮುಂದಿನ ಆಲೋಚನೆ ಬಗ್ಗೆ ಬಾಕಿ ಇಡಲು ವೈಸರಾಯರು ಒಪ್ಪಿದ ಬಗ್ಗೆ ಅವರನ್ನೂ ವಂದಿಸಲಾಯಿತು. ವೈಸರಾಯರ ಭೇಟಿಗೆ ಒಂದು ಡೆಪ್ಯುಟೇಶನು ಹೋಗಬೇಕೆಂತ ನಿಶ್ಚಯಿಸಲಾಯಿತಂತೆ.

ಹಂಪನಕಟ್ಟೆಗೆ ಒಯ್ದಿರುವ ಟಪ್ಪಾಲ ಕಟ್ಟೆಯನ್ನು ಪುನಃ ಕೊಡಿಯಾಲಬೈಲಿಗೆ ಒಯ್ದಿರುತ್ತದೆ.

ಇಂಟರಮಿಡಿಯೇಟ್ ಪರೀಕ್ಷೆಯ ಫಲಿತಾಂಶ—ಸೆಂಟ ಅಲ್ಲೋಸಿಯುಸ್ ಕೊಲೇಜ್ ೭೭ರಲ್ಲಿ ೩೮ ಮಂದಿ, ೬ ಮಂದಿ ೧ನೇ ಕ್ಲಾಸ್; ಸೆಂಟ ಎನ್ಸ್ ಕೊಲೇಜ್ ೧೦ರಲ್ಲಿ ೪ ಮಂದಿ; ಗವರ್ನಮೆಂಟ ಕೊಲೇಜ್ ೪೪ರಲ್ಲಿ ೨೧, ೬ಮಂದಿ ೧ನೇ ಕ್ಲಾಸ್ ಪಾಸಾಗಿರುವರು.

ಸೆಂಟಅಲ್ಲೋಸಿಯಸ್ ಕೊಲೇಜಿನ ಬಿ. ಎ. ಪರೀಕ್ಷೆಯ ಫಲಿತಾಂಶ—ಮೆಥಮೆಟಿಕ್ಸ್ ೨೦ರಲ್ಲಿ ೧೩, ಹಿಸ್ಟ್ರಿ ೬೦ರಲ್ಲಿ ೪೪, ಇಂಗ್ಲೀಷ ೮೪ರಲ್ಲಿ ೭೩ ಮಂದಿಗಳು ಪಾಸಾಗಿರುವರು.

ಇದೇ ಕಳೆದ ತಾರೀಕು ೨೩ನೆಯ ಸಾಯಂಕಾಲ ೫-೩೦ ಗಂಟೆಗೆ ಮಂಗಳೂರು ಆಯರ್ನ ವರ್ಕ್ಸ ಎಂಬ ಕಬ್ಬಿಣ ಕಾರ್ಖಾನೆಯ ಪ್ರವೇಶೋತ್ಸವವು ಕೆಥೋಲಿಕರ ಇಲ್ಲಿಯ ಬಿಶೋಪ್ ರೈಟರೆವರೆಂಡ ಪೌಲಪೆರನಿಯವರಿಂದ ಬಹಳ ಸಂಭ್ರಮದಿಂದ ಮಾಡಲಾಯಿತು. ಅನೇಕ ಮಂದಿ ಗೃಹಸ್ಥರು ಈ ಸಮಾರಂಭಕ್ಕೆ ನೆರೆದಿದ್ದರು. ಇದನ್ನು ತೆರೆಯುವ ಕಾಲದಲ್ಲಿ ಬಿಶೋಪ ಸಾಹೇಬರು ಈ ಕಾರ್ಖಾನೆಯ ಮ್ಹಾಲಿಕರಾದ ಮೆಸರ್ಸ್ ಪಿಲಿಕ್ಸ್ ಅಲ್ಬುಕರ್ಕ ಮತ್ತು ಟಿಟಸ್‌ಕೊಯಿಲೋ ಈ ತರುಣರನ್ನು, ಕೈಗಾರಿಕೆಯ ಕಾರ್ಯವನ್ನು ಬಹಳವಾಗಿ ನಡಿಸುವುದು ಅಗತ್ಯವಾಗಿರುವ ಈ ಕಾಲದಲ್ಲಿ ಇವರು ಇಂಥಾ ಕಾರ್ಯವನ್ನು ಪ್ರಾರಂಭಿಸಿದುದು ಸ್ತುತ್ಯಾರ್ಹವಾಗಿದೆಂದು ಕೊಂಡಾಡಿದರು. ಅನಂತರ ಮಿ॥ ಟಿಟಸ್‌ಕೊಯಿಲೋರವರು ಬಿಶೋಪಸಾಹೇಬರನ್ನೂ ನೆರೆದ ಇತರ ಗೃಹಸ್ಥರನ್ನೂ ವಂದಿಸಿ, ತಮಗೆ ತಮ್ಮ ಎಲ್ಲಾ ಸ್ನೇಹಿತರ ಬೆಂಬಲವು ಅಗತ್ಯವಾಗಿ ಬೇಕಾಗಿದೆಂದು ಬಿನ್ನವಿಸಿಕೊಂಡರು. ಅನಂತರ ಉಪಹಾರ ಸತ್ಕಾರವು ನಡೆದ ಬಳಿಕ ರಾಜಗೀತವನ್ನು ಹಾಡಿ ಆದ ಮೇಲೆ ಈ ಸಮಾರಂಭವು ಕೊನೆಗಂಡಿತು.

ದಕ್ಷಿಣ ಕನ್ನಡ.

ಕಾಸರಗೋಡು:—ಈ ತಾಲೂಕು ಬೋರ್ಡಿಗೆ ಪಳ್ಳಿಕೆರೆ ಸರ್ಕಲಿನಿಂದ ಮೆಂಬರರಾಗಿದ್ದ ಪಳ್ಳಿ ಕೈನಬ್ಬಿನ ಬ್ಯಾರಿ ಸಾಹೇಬ ಬಹದ್ದೂರರ ಕಾಲಿಯಾದ ಮೆಂಬರಿಕೆಯ ಸ್ಥಾನಕ್ಕೆ ಬೇರೊಬ್ಬ ಮೆಂಬರರನ್ನು ಚುನಾಯಿಸುವ ಚುನಾವಣೆಯು ಬರುವ ಜುಲಾಯಿ ತಾ. ೬ರಲ್ಲಿ ಜರಗಲಿಕ್ಕಿದೆ. ಈ ಸ್ಥಾನಕ್ಕೆ ಮೆಂಬರರಾಗಲು ಅಪೇಕ್ಷಿಸುವವರು ತಮ್ಮ ನೋಮಿನೇಶನ್ ಪತ್ರಗಳನ್ನು ಇದೇ ಜೂನ್ ತಾ. ೧೮ರಲ್ಲಿ ಕಾಸರಗೋಡು ತಾಲೂಕು ಬೋರ್ಡ ಆಫೀಸಿನಲ್ಲಿ ತಾಲೂಕು ಬೋರ್ಡ ಪ್ರೆಸಿಡೆಂಟರ ಮುಂದೆ ಹಾಜರುಮಾಡತಕ್ಕದ್ದು.

ದಕ್ಷಿಣ ಕನ್ನಡ ಜಿಲ್ಲಾ ಕಾಸರಗೋಡು ತಾಲೂಕು ಬೋರ್ಡಿನ ಈ ತಿಂಗಳ ಅಧಿವೇಶನವು ಬರುವ ತಾ. ೬ರಲ್ಲಿ [illegible]ದಲ್ಲಿರುವ ಟ್ರೆವಲರ್ಸ್ ಬಂಗ್ಲೆಯಲ್ಲಿ ಸೇರುವುದು.

ಮಹಾತ್ಮಾ ಗಾಂಧಿಯವರ ಆರೋಗ್ಯ.

ಮಹಾತ್ಮಾ ಗಾಂಧಿಯವರ ದರುಶನವನ್ನು ಅವರ ಪತ್ನಿಯವರು ಪಡೆದು ಬಂದನಂತರ ಅವರ ಆರೋಗ್ಯದ ಸರಿಯಾದ ಸ್ಥಿತಿಯು ತಿಳಿಯಬರುವದೆಂದು ನಾವು ಕಳೆದ ಸಂಚಿಕೆಯಲ್ಲಿ ಬರೆದಿದ್ದೆವು. ಈಗ "ಯಂಗಇಂಡಿಯಾ" ಪತ್ರಿಕೆಯಲ್ಲಿ ಕೆಳಗಿನ ಸಂಗತಿಯು ಪ್ರಕಟವಾಗಿದೆ. ಮಹಾತ್ಮಾ ಗಾಂಧಿಯವರ ಪತ್ನಿಯವರು ಸಬರಮತಿ ಆಶ್ರಮದ ಲಕ್ಷ್ಮೀ ಮತ್ತು ಇತರ ಕೆಲವು ಮಂದಿ ಹುಡುಗಿಯರನ್ನು ಕೂಡಿಕೊಂಡು ಕಳೆದ ತಾರೀಕು ೧೮ಕ್ಕೆ ಯರವಾಡಾ ಜೈಲಿಗೆ ಹೋಗಿ, ಅಲ್ಲಿ ಮಹಾತ್ಮರ ಮುಖಭೇಟಿಯನ್ನು ಪಡೆದರು. ಎಂದಿನಂತೆ ಮಹಾತ್ಮರನ್ನು ಜೈಲಿನ ಸುಪರಿಂಟೆಂಡೆಂಟರ ಆಫೀಸಿಗೆ ಕರೆತಂದರು. ಮಹಾತ್ಮರಿಗೆ ಅವರ ಆರೋಗ್ಯದ ಕುರಿತು ಪ್ರಶ್ನಿಸಿದಾಗ, ತನಗೆ ಈ ತಿಂಗಳ ಪ್ರಾರಂಭದಲ್ಲಿ ಹೊಟ್ಟೆಯ ಕರುಳುಗಳಲ್ಲಿ ಪೀಡನೆಯ ಸ್ವಲ್ಪ ಬಾಧೆಯುಂಟಾದುದರಿಂದ ಸ್ವಲ್ಪ ಹರಳೆಣ್ಣೆಯನ್ನು ತೆಗೆದುಕೊಳ್ಳಬೇಕಾಗಿ ಬಂತು. ಆದರೆ ಇದರಿಂದ ಪೀಡನೆಯು ಶಾಂತವಾಗದೆ ರಾತ್ರಿಯಲ್ಲಿ ಕಠಿಣ ಹೊಟ್ಟೆನೋವು ಶುರುವಾಯಿತು. ಮತ್ತು ಈ ನೋವು ಮೂರು ದಿನಗಳ ವರೆಗೆ ಇತ್ತು. ಡಾಕ್ಟರರು ಇದು ಆಮಶಂಕೆಯ ಚಿನ್ನೆಯಾಗಿರಬೇಕೆಂದು ಆರು ಇನ್‌ಜಕ್ಷನುಗಳನ್ನು ಮಾಡಿದರು. ಹೊಟ್ಟೆಯಲ್ಲಿ ನೋವು ಇರುವುದರಿಂದ ಸ್ವಲ್ಪ ಜ್ವರವೂ ಇತ್ತು. ಈ ಜ್ವರವು ೧೦೧ ಡಿಗ್ರಿಗಿಂತ ಹೆಚ್ಚಾಗಿರಲಿಲ್ಲ. ಮತ್ತು ಅದು ೪೮ ಗಂಟೆಗಳ ವರೆಗೆ ಮಾತ್ರ ಇತ್ತು ಎಂದು ತಿಳಿಸಿರುವರು. ಮಹಾತ್ಮರು ಡಾಕ್ಟರರ ಸೂಚನೆಯನ್ನು ಅನುಸರಿಸಿ ನೂಲನ್ನು ಮಾಡುವುದು ಮೊದಲಾದ ಕಾರ್ಯಗಳನ್ನು ಪೂರ್ಣ ನಿಲ್ಲಿಸಿ ವಿರಾಮ ಹೊಂದುತ್ತಿದ್ದಾರೆ. ಅವರಿಗೆ ವೈದ್ಯಕೀಯ ಸಹಾಯ ಮತ್ತು ಇತರ ಎಲ್ಲಾ ತರದ ಸಹಾಯವು ಕೊಡೋಣಾಗುತ್ತದೆ. ಅವರಿಗೆ ಬೇಕಾಗಿರುವ ಎಲ್ಲಾ ತರದ ಆಹಾರವು ಒದಗಿಸೋಣಾಗುತ್ತದೆ. ಅವರನ್ನು ಈಗ 'ಸಿವಿಲ್ ಬೆರಕ್ಸಿಗೆ' ಒಯ್ದಿರುವರು. ಅಲ್ಲಿ ಅವರಿಗೆ ವ್ಯಾಯಾಮ ಹೊಂದಲು ಅನುಕೂಲವಾಗುವಂತೆ ದೊಡ್ಡ ಸ್ಥಳವು ಇದೆ. ಕಳೆದ ತಾರೀಕು ೧೮ರ ವರೆಗೆ ಅವರು ಹಾಲನ್ನು ಮತ್ತು ಫಲಗಳನ್ನು ಮಾತ್ರ ತಮ್ಮ ಆಹಾರವಾಗಿ ತೆಗೆದುಕೊಳ್ಳುತ್ತಿದ್ದರು. ಬೇರೆ ಆಹಾರವನ್ನು ತೆಗೆದುಕೊಳ್ಳುವದಿಲ್ಲ. ಇವರು ಭಾರದಲ್ಲಿ ಸ್ವಲ್ಪ ಹೆಚ್ಚಿರುವರು. ಆದರೆ ಮುಂಚಿಗಿಂತ ೯ ರಾತಲು ಕಡಿಮೆಯಾಗಿರುವರು. ಇವರು ಹಸನ್ಮುಖರಾಗಿಯೂ ಪ್ರಕಾಶಮಾನರಾಗಿಯೂ ತೋರಿದರು. ಇಂದುಲಾಲ ಯಜ್ಞಿಕ ಇವರನ್ನು ಮಹಾತ್ಮರೊಡನೆ ಇರಗೊಟ್ಟಿದ್ದಾರೆ.

ಹಿಂದೂ ರಿಲಿಜಿಯಸ್ ಎನ್‌ಡೌಮೆಂಟ ಬಿಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಜೈನರೂ.

ಮದರಾಸ ಲೆಜಿಸ್ಲೇಟಿವ್ ಕೌನ್ಸಿಲಿಗೆ ನಮ್ಮ ಜಿಲ್ಲೆಯಿಂದ ಒಬ್ಬ ಉಮೇದುವಾರರಾಗಿ ಮುಂದೆಬಂದ ಡಾಕ್ಟರ ಯು. ರಾಮರಾಯರು ಬರೆದ ಪತ್ರದ ಸಾರಾಂಶ.

ಮದರಾಸ ನ್ಯಾಯವಿಧಾಯಕ ಸಭೆಗೆ ಒಬ್ಬ ಮೆಂಬರನಾಗಿ ಸ್ಪರ್ಧಿಸುವ ಕಾರ್ಯಕ್ಕಾಗಿ ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಥಮ ಸಲ ಹೋದವನು ಈಗ ತಾನೇ ಬಂದಿರುತ್ತೇನೆ. ಈಗಿನ ಅಸಾಧಾರಣ ರಾಜಕೀಯ ವಿಷಯದಲ್ಲಿ ಅಲ್ಲಿಯ ವೋಟುದಾರರಲ್ಲಿ ತೋರುತ್ತಿರುವ ಸಹಜವಾದ ಅಭಿಪ್ರಾಯಗಳು ನನ್ನಲ್ಲಿ ಚೆನ್ನಾಗಿ ನಾಟಿಕೊಂಡಿವೆ. ಜಿಲ್ಲೆಯ ಯಾವ ಪಟ್ಟಣದ ಭಾಗದಲ್ಲೂ ಹಳ್ಳಿಗಾಡಿನಲ್ಲೂ ಹೋದರೂ "ಉಪ್ಪಿನ ತೆರಿಗೆ" "ಹಿಂದೂ ಮತಸಂಬಂಧವಾದ ಉಂಬಳಿಗಳ ಬೀಲು" ಎಂಬ ಧ್ವನಿಯೇ ನನಗೆ ಕೇಳಿಸಿತು. ಜನರು ವಿರೋಧಿಸಿದರೂ ಅವಿವೇಕತನದ ಮೇಲಿನ ಎರಡನ್ನೂ ಸರಕಾರದವರು ಕಾನೂನುರೂಪವಾಗಿ ಜಾರಿಗೆತರಲಿಕ್ಕಿರುವರೆಂದು ತಿಳಿದು ವೋಟುದಾರರಲ್ಲಿ ಬಹುಸಂಖ್ಯಾಕರಾದ ಮಧ್ಯಮ ತರಗತಿಯವರೂ ರೈತರೂ ಅಸಮಾಧಾನಗೊಂಡಿರುವರು. ಉಪ್ಪಿನ ತೆರಿಗೆಯ ಕುರಿತು ನಿಮ್ಮ ಹೇಳಿಕೆ ಏನು? ಮದರಾಸು ಕೌನ್ಸಿಲಿನಲ್ಲಿ ಹಿಂದೂ ಮತಸಂಬಂಧವಾದ ಉಂಬಳಿಗಳ ಬೀಲಿನ ಕುರಿತು ನೀವು ಏನು ಪ್ರಯತ್ನಮಾಡಿದ್ದೀರಿ? ಎಂಬ ಈ ಎರಡು ಪ್ರಾಮುಖ್ಯ ಪ್ರಶ್ನೆಗಳನ್ನು ನಾನು ಹೋದಲ್ಲೆಲ್ಲಾ ನನಗೆ ಪ್ರತಿಯೊಬ್ಬರೂ ಕೇಳಿದ್ದರು. ಮುಂದಿನ ಚುನಾವಣೆ ಸಂಗತಿಯಲ್ಲಿ ಈಗ ಅಗತ್ಯವಾಗಿ ಲಕ್ಷ್ಯಕೊಡತಕ್ಕ ಸಂಗತಿಗಳನ್ನೆ ಇವರೂ ಕೂಡ ತಿಳಿದಿರುವುದನ್ನು ಕಂಡು ನನಗೆ ಆನಂದವಾಗುತ್ತದೆ.

ಹಿಂದೂ ಮತಸಂಬಂಧದ ಉಂಬಳಿಗಳ ಬೀಲಿನ ಕುರಿತು ಹಿಂದೂ ಸಮಾಜದ ಎಲ್ಲಾ ಜಾತಿಯವರಲ್ಲೂ ಅತಿಶಯವಾದ ಅಸಮಾಧಾನವು ಉಂಟಾಗಿದೆ. ಈ ಬೀಲನ್ನು ಮದರಾಸು ಕೌನ್ಸಿಲಿನಲ್ಲಿ ಉಪರೋಧಿಸಿದವರ ಮತವನ್ನು ಇವರು ಪುಷ್ಟೀಕರಿಸುವರು. ಮತ್ತು ಇದು ಅವಸರದ್ದೂ ಹಾಗು ಅಚಾತುರ್ಯದೆಂದು ಇದನ್ನು ನಿಷೇಧಿಸಿ, ಇದರಿಂದ ಅನೇಕ ಅನರ್ಥಗಳಿಗೂ ಮತಸಂಬಂಧವಾದ ಜಗಳಗಳಿಗೂ ತುಂಬಾ ಆಸ್ಪದವಿದೆ ಎಂದು ತಿಳಿದಿರುವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬೀಲು ಹಿಂದುಗಳಿಗೆ ಮಾತ್ರ ಸಂಬಂಧಿಸುವುದಲ್ಲದೆ, ಅನಾದಿಕಾಲದಿಂದ ಅನೇಕ ಹಿಂದೂ ದೇವಸ್ಥಾನಗಳ ಮೇಲ್ವಿಚಾರವನ್ನು ನೋಡಿಕೊಂಡಿರುವ ಜೈನರಿಗೂ ಸಂಬಂಧವುಳ್ಳದ್ದಾಗಿದೆ. ಜೈನರು ಈ ಜಿಲ್ಲೆಯ ಅನೇಕ ದೇವಸ್ಥಾನಗಳಿಗೆ ಉಂಬಳಿಗಳನ್ನು ಬಿಟ್ಟಿದ್ದರಿಂದ ಅಂಥಾ ದೇವಸ್ಥಾನಗಳ ಮೇಲ್ವಿಚಾರಕರಾಗಿರುವರು. ಆದರೆ ಈಗಿನ ಹೊಸ ಬೀಲು ಜೈನರು ಹಿಂದುಗಳಲ್ಲವೆಂಬ ಕಾರಣವನ್ನು ಮುಂದೆ ತಂದು ಅವರನ್ನು ಹಿಂದೂ ದೇವಸ್ಥಾನಗಳ ಮೇಲ್ವಿಚಾರಣೆಯ ಅಧಿಕಾರದಿಂದ ಹೊರಪಡಿಸುತ್ತದೆ. ಅಲ್ಲದೆ ಅವರಿಗೆ ಓಟು ಕೊಡುವ ಹಕ್ಕು ಸಹ ಇಟ್ಟಿಲ್ಲ. ವಿಶೇಷವಾಗಿ ಇವೆರಡು ಪಂಗಡಗಳಲ್ಲಿ ಈ ತರದ ಐಕಮತ್ಯವು ಇರುವಾಗ ಅವರನ್ನು ಈ ರೀತಿಯಾಗಿ ನಡೆಯಿಸುವುದು ಅನುದಾರತನವೇ ಆಗಿದೆ.

ಹಿಂದೂ ಸಮಾಜದ ಬೆಂಬಲವೂ ಅನುಮತಿಯೂ ಇಲ್ಲದೆ ಈ ಬೀಲು ಮದರಾಸ ಕೌನ್ಸಿಲಿನಲ್ಲಿ ಅವಸರದಿಂದ ಪಾಸಾದ ಕಾರಣ, ಇದನ್ನು ಕಾನೂನುರೂಪವಾಗಿ ಜಾರಿಗೆತರುವ ಮೊದಲು, ಇದರಲ್ಲಿ ಯಾವ ಯಾವ ಬದಲಾವಣೆಗಳು ಅವಶ್ಯಕವಾಗಿವೆ ಎಂಬುದನ್ನು ನಿರ್ಧರಿಸಲು ಮುಂದಕ್ಕೆ ಚುನಾವಣೆಯಾಗುವ ಕೌನ್ಸಿಲಿಗೂ, ಮಂತ್ರಿಮಂಡಲಕ್ಕೂ ಬಿಡುವುದು ಯೋಗ್ಯ.... ಮತ್ತು ವೈಸರಾಯರೂ ಮದರಾಸ ಗವರ್ನರರೂ ಸದ್ಯಕ್ಕೆ ಇದಕ್ಕೆ ತಮ್ಮ ಸಮ್ಮತಿಯನ್ನು ಕೊಡದೆ ಇದನ್ನು ತಡೆದು ಇಳ್ಳಿಸತಕ್ಕದ್ದು. ಜನತೆಯ 'ಪೋಲಿಸಿ' ಸರಿಯಾಗಿ ವರ್ತಿಸುವುದಾದರೆ ಈ ರೀತಿ ಮಾಡುವುದು ಅಗತ್ಯ. ಹೀಗಿರುತ್ತ, ಮುಂದಿನ ಪರಿಣಾಮಗಳಿಗೆ ತಕ್ಕ ಗಮನ ಕೊಡದಿದ್ದರೆ ಎಲ್ಲವೂ ದೈವಚಿತ್ತ ಇದ್ದಂತೆ ಆಗುವುದು. ಪರಮಾತ್ಮನ ಇಚ್ಛೆಯು ಯಾವ ಪ್ರಕಾರವಿರುವುದೆಂದು ಹೇಗೆ ತಿಳಿಯುವುದು? ಈಗಲಾದರೂ ಸರಕಾರಕ್ಕೆ ಹಿಂದೂ ಮತಗಳ ಕುರಿತು ಕೊಟ್ಟ ತನ್ನ ಭಾಷೆಯಂತೆ ನಡೆಯುವುದಕ್ಕೆ ಕಾಲವಿಂಬುಹೋದ ಕಾರ್ಯವಲ್ಲವಾದ್ದರಿಂದ ಅದು ತಾನು ಈ ವಿಷಯದಲ್ಲಿ ಹೇಗೆ ನಡಕೊಳ್ಳಬೇಕೆಂದು ತನ್ನಷ್ಟಕ್ಕೆ ತಿಳಕೊಳ್ಳಲಿ.

॥ ಶ್ರೀ ॥

"ಅನುಭವವಲ್ಲರಿ"

॥ ವೀರಚೌಪದಿ ॥

ಅನ್ಯರನುಭವದಿಂದ ಕಂಡು ಕಲಿಯಲು ಬೇಕು ।
ತನ್ನ ಸಂಸಾರ ಪಾಠವನು ದಿನದಿನಕೇ ॥
ಕುನ್ನಿಯಂದದಿ ನೂರು ವರುಷ ಬದುಕಿದರೇನು? ।
ತನ್ನ ಜೀವನಯಶವಳಿಸಿ ಕೊಳದಿರಲೂ? ॥ ೧ ॥

ಕೈಯ್ಯೊಳಗೆ ಹಣವಿರಲು ಮೈಯೊಳಗೆ ತ್ರಾಣವಿರೆ ।
ಬೈಯ್ಯಲೆಳಸುವರು ಹಿತವರನು ಬಡವರನೂ ॥
ಕೈಯ್ಯ ಹಣಹೋಗಿ ಮೈತ್ರಾಣಕುಂದಲು ಮುಂದೆ ।
'ಅಯ್ಯಯ್ಯೊ ಗತಿಕಷ್ಟ!' ಯೆಂದಳುವರವರೂ ॥ ೨ ॥

ಮಾಡಿದನ್ಯಾಯವನು ಮರೆಮಾಜಿ [illegible]ರಲು ।
ನೋಡುವವನೊಬ್ಬನಿರುತಿಹನು ಪರಮಾತ್ಮಾ ॥
ಕೇಡೊಳ್ಳಿತೆಂದು ಹೆಬ್ಬುಲಿ ಬಾಯಿ ಹೊಗುವಂತೆ ।
ಮಾಡಿದರೆ, ಪಾಪದಾ ಫಲ ಬೆನ್ನುಬಿಡದೂ ॥ ೩ ॥

ಅನ್ಯಾಯದಿಂದ ಕೆಲವರು ಪರರ ತಲೆ ಬಡಿದು ।
ಹೊನ್ನುರನ್ನಾದಿಗಳನಪಹರಿಸಿ ತಂದೂ ॥
ಉನ್ನತಿಯ ಪಡೆಯಲೆಂದೊಣಭ್ರಮೆಯೊಳೆಸೆದರು, ।
ನಿರ್ನಾಮವಾಗಿಯಳಿವರು ಕೊನೆಯೊಳವರೂ ॥ ೪ ॥

ಬಡವರಿಗೆ ಕಷ್ಟಬಂದಾಗ ಪರಿಹಾಸ್ಯವನು ।
ತೊಡಗುವರು ಮತ್ತೆ ಬಡವರಿಗೆ ಸಂಪದವೂ ॥
ಬಿಡದೆ ದೊರೆತರೆ ಕೆಲರು ಕರಕರೆಯ ಮಾಡುವರು. ।
ಬಡವರೆಂದೆನಿಸುವುದು ಲೋಕದಲಿ ಕಷ್ಟಾ ॥ ೫ ॥

ತನ್ನ ಹಣೆಬರಹ ಕೆಟ್ಟರೆ ತಾನು ಬೇರೆಯವ- ।
ರನ್ನು ದೂರಿದರೇನು ಪುರುಷಾರ್ಥವಿಹುದೋ? ॥
ಮೊನ್ನೆ ಸಂಕಟ ಬಂದಿತೆಂದು ನಾಡದು ಹರಕೆ- ।
ಯನ್ನು ಸಲಿಸುವರೆ ದೇವರು ಕೂಲಿಯಾಳೋ? ॥ ೬ ॥

ಒಂದೆ ಮನೆಯೊಳು ಹುಟ್ಟಿಯೊಂದು ಮನೆಯೊಳಗನ್ನ ।
ತಿಂದ ಬಂಧುಗಳೊಡನೆ ಕಚ್ಚಾಟ ಬೆಳೆಸೀ ॥
ತಿಂದ ಮನೆ ತುಂಡಾಗಿ ಬಂದ ಮನೆ ಹಾಳಾಗೆ, ।
ಬಂದ ಕಷ್ಟಕೆ ಮಂಡೆ ಹೊಡೆದುಕೊಳ್ಳುವರೂ ॥ ೭ ॥

ಸೃಷ್ಟಿಯಲಿ ಜನಿಸಿದರೆ ಸಿರಿಯಮದದಲಿ ಸೊಕ್ಕಿ ।
ದುಷ್ಟ ವರ್ತನೆಯ ಕೈಕೊಂಡು, ಕಡೆಕಡೆಗೇ ॥
ಕಷ್ಟ[illegible]ಲು ಬರುತಿರಲು ದೇವರಿಗೆ ದಯ- ।
ವಿಲ್ಲವೆಂದು ದೂರುವರು ವ್ಯಸನದಲೀ ॥ ೮ ॥

ಇದ್ದಾಗ ತಿಂಬುವರೆ ನಿಂದಿಪರು ಸಿಟ್ಟಿನಲಿ ।
ಎದ್ದದ್ದು ಬೆನ್ನಟ್ಟಿ ಯಮನಂತೆ ಬಹರೂ ॥
ಇದ್ದದ್ದು ಕರ್ಮವಶದಿಂದ ಪರರಿಗೆ ಸೇರೆ ।
ಗುದ್ದಿಕೊಳ್ಳುವರು ಗುಂಡಿನಲಿ ಮಂಡೆಯನೂ ॥ ೯ ॥

ಕೆಲಸವಾಗುವ ತನಕ "ದಮ್ಮಯ್ಯ" ಹೇಳುವರು ।
ಕೆಲಸವಾದರೆ ಮತ್ತೆ ಮೋರೆಗುಗುಳುವರೂ ॥
ಕುಲಗೇಡಿಗಳ ಹುಟ್ಟು ಕೆಲಸವಿದು ಬರೆದಷ್ಟು ।
ಕಲಿಯುಗದ ಮಹಿಮೆ ಬಲದಿಂದ ಬೆಳೆಯುತಿದೆ ॥ ೧೦ ॥

ಹೆಚ್ಚು ತಿಂದರೆ ಹೊಟ್ಟೆ ಮಡಕೆಯೆಂದೆನ್ನುವರು ।
ಮೆಚ್ಚಿ ತಿಂದರೆ ಇವನಿಗಾಸೆಯೆನ್ನುವರೂ ॥
ಬಿಚ್ಚಿ ಹೇಳಿದವನು ಹುಚ್ಚನೆಂದೆನ್ನುವರು ।
ಬಚ್ಚಿಟ್ಟಿರುವನೆ ಬಲು ತಕ್ಕನೆನ್ನುವರೂ ॥ ೧೧ ॥

ಒಟ್ಟಾರೆ ನೋಡಿದರೆ ದೇವರೊಳು ನಂಬಿಕೆಯ ।
ನಿಟ್ಟಿರಲ್ಲದೆ ಬೇರೆ ಗತಿಯಿಲ್ಲ ನರಗೇ ॥
ಹುಟ್ಟಿದರೆ ಮೋಕ್ಷವೊಂದಷ್ಟು ದೊರೆತರೆ ಸಾಕು ।
ಹುಟ್ಟಬಾರದು ಹೀಗೆ ಕಷ್ಟಕೊಳಗಾಗೀ ॥ ೧೨ ॥

ಯಾರಿಲ್ಲ ನೋಡಿದರೆ, ಪರಮಾತ್ಮನೊಬ್ಬನೇ ।
ದಾರಿ ತೋರಿಸುವಂಥ ದೊಡ್ಡ ಕರುಣಾಳೂ ॥
ಘೋರವಹ ಗಾಢಾಂಧಕಾರದಲ್ಲಾ ದೋಣಿ- ।
ಕಾರನೇ ನಮ್ಮನಾದಡಕೆ ಮುಟ್ಟಿಸಲೀ ॥ ೧೩ ॥

ಇಂತಾಶಿಸುವ,
ಕಾವೇರಿಕಾನ ವಿ. ಕೃಷ್ಣಭಟ, ಕವಿ.

ನೋಟೀಸು.

ಕೆಳಗೆ ದಸ್ಕತು ಮಾಡಿದವರ ಚಾಬಕು ಮಂಗಳೂರು ಜೈಲ್ ಸ್ಟ್ರೀಟಿನ ಗೋವು ಆಸ್ಪತ್ರೆ ಬಳಿ ನಾಜೂಕು ಇರುವ ಮಾಳಿಗೆ ಮನೆ ೧, ಮತ್ತು ಸಾಧಾರಣ ತರದ ನಾಜೂಕು ಇರುವ ಮನೆ ೧ ಕೂಡಾ ೨ ಮನೆಗಳು ಬಾಡಿಗೆಗೆ ಕೊಡಲ್ಪಡುವುದು. ಹಾಯಿಶಿ ಉಳ್ಳವರು ಈ ಕೆಳಗೆ ದಸ್ಕತುಮಾಡಿದವರ ಕೂಡೆ ಮೊಕ್ತಾ ಮಾತಾಡಿದಲ್ಲಿ ಬಾಡಿಗೆಗೆ ದೊರೆಯುವುದು.

K. KRISHNA SHETTY,
Clerk Codialbialy.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ಣಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇವರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಚರಿತ್ರೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ [illegible] ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತ" "ಆತ್ಮಗೀತ" "ದೇವರೆಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶಚಂದ್ರ ಬೋಸ್-ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕವಾಗಿವೆ. ಪ್ರಶಂಸಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಲರ್ಹವಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಹಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕ ಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಹೆಚ್ಚಿನ ವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನಷ್ಟೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ರೇಜಿ ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ. ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನೂ, ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾಧಾನದ ವ್ಯಾಖ್ಯೆಯನ್ನೂ, ಇಚ್ಛಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ ನಪುಂಸಕತ್ವ, ವಂಧ್ಯಾ ದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ಮಾಡತಕ್ಕ ಉಪಾಯಗಳನ್ನು, ಇಂಥ ಎಷ್ಟೋ ವಿಧವಾದ ವಿಷಯಗಳನ್ನೂ ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ತೀರ ಕಡಿಮೆ. ಆದ್ದರಿಂದ ಈ ಗ್ರಂಥವನ್ನೂ ಒಮ್ಮೆ ಪರಿಶೀಲಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಹಾಸಲು ೦—೪—೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರು ನೂಲುಗಳೂ, ಮಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಪಾಡಿ ಮುಂಡು, ಇನ್ನು ಅನೇಕ ತರದ ವಸ್ತ್ರಗಳೂ ರಖಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ.

ಶ್ರೀನಿವಾಸ ರಂಗಪ್ಪ
ರಥಬೀದಿ, ಮಂಗಳೂರ

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid
up Capital Rs. 300,000—0—0
Reserve and other sinking
Funds „ 205,250—0—0

ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು
„ 205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ? ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುತ್ತಬಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂತಹ ಕಠಿಣವಾದ ಆಹಾರವನ್ನಾದರೂ ಜೀರ್ಣಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಚಳಿ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ತೇಗು, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆನೋವು, ಕರುಳಿನ ತೊರೆತ, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.

ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲ್ಯುಯೆನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.

ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು

ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವುಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.

ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜುಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚೆನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು — (೨೮—೬—೧೯೨೨)

ಇವರ ಅಭಿಪ್ರಾಯ. ಅಂದವಾದ ಮುದ್ರಣ. ನೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಕ್ರಮಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಬಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯರು ಕಲಿಯತಕ್ಕದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಅಡಕಪಡಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ.

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಮುತ್ತಿನ ಸರ . .	0—12—0	ಶಂಕರರಾಮಾಯಣ ಹೊಸ [illegible] .	5—0—0
ಸಂತಾಪಕ-ಕಾದಂಬರಿ	0—6—0	ಶಂಕರರಾಮಾಯಣದ ಕಥೆ ವಚನ .	0—12—0
ಚಂದ್ರಮತಿ ,,	0—8—0	S. S. L. C. Kannada Texts	
ರಾಜಪುತ್ರರಮಣಿಯರು	0—8—0	ಹರಿದಾಸ . .	0—5—0
ಕೆಲವು ಸಣ್ಣ ಕಥೆಗಳು	1—0—0	ಸುಶೀಲೆ . .	0—6—0
ರಾಜಯೋಗ . .	1—0—0	ಅನಾಥಿಯ ಹುಡುಗಿ .	0—12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ

"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦. ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರೆಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು, ಮತ್ತು
ಕೆನರಿಸ್ ಮಿಶ್ಯನ್ ಬುಕ್ ಎಂಡ್ ಟ್ರಾಕ್ಟ ಡಿಪೋಜಿಟರಿ,
ಮಂಗಳೂರು.

ಶುದ್ಧವಾದ ಖಾದರ್ ರೇಶ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಪಾತ್ರವಾದ ಎಲ್ಲಾ ರಂಗಿನಲ್ಲಿ ದೊರೆಯುವ ಮಡಿ ಯಾವುದು? ಖಾದರ್ ರೇಶ್ಮೆ ಮಡಿ.

18 ಮೊಳ ಉದ್ದ 2½ ಮೊಳ ಅಗಲ ರೂ. 20ರಿಂದ 35, 16 ಮೊಳ—2½—ರೂ. 19ರಿಂದ 35, 8 ಮೊಳ ಉದ್ದ 2½ ಮೊಳ ಅಗಲ ರೂ. 9ರಿಂದ 15 ವರೆಗೆ. 6 ಮೊಳ ಉದ್ದ 2½ ಮೊಳ ಅಗಲ ರೂ. 7ರಿಂದ 11. ಅಂಗಿ ಬಟ್ಟೆಗಳು 14 ಮೊಳ ಉದ್ದ 2 ಮೊಳ ಅಗಲ 18ರಿಂದ 36 [illegible] 14 ಮೊಳ ಉದ್ದ 2 ಅಗಲ—28ರಿಂದ 36 ಷರ್ಟ ಬಟ್ಟೆ 18ಮೊಳ ಉದ್ದ 2 ಮೊಳ ಅಗಲ 15ರಿಂದ 30, ಶಾಟಿ 11 ಮೊಳ ಉದ್ದ 1½ ಮೊಳ ಅಗಲ ರೂ. 9ರಿಂದ 15, ಇದು ವಿನಹ ಬೇರೆ ಸಾಮಾನುಗಳ ಕೆಟಲಾಗು [illegible].

ವಿಳಾಸ—
ಶಿರೋಮಣಿ [illegible], [illegible]
[illegible], [illegible] ಕ್ಷೇತ್ರ.

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಣಿ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಹುರುಕು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮು—2 ಘಂಟೆಗೆ ಒಂದಾವರ್ತಿ 5 ದಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಶೆ ಒಂದರ ಕ್ರಯ:—ರೂ. 1—4—0.

ಹುಳದ ವೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಟಿನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪೆತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2¼ ಮೊಳ ಅಗಲವಿರುವವು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಕಾದವು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ವಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಜೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1	ರೂ.	6—8—0
„ 2	„	7—8—0

ವಿಳಾಸ:—ಎನ್. ಆರ್. ಕೃಷ್ಣ ಎಂಡು ಕೊ,
1. ತಂಬುನಾಯಕನ ಬೀದಿ, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶೆವ್ಯಾಪಾರಿ
ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ	ರೂ.	8—4—0
ಶೇ. 1 („ 24) „	„	2—0—0

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 8-0-0.

ಸ್ವಂತ ಖರ್ಚಿಗೆ ತರಿಸುವವರು ಪೋಸ್ಟ್, ಪೇಕಿಂಗ್ ಚಾರ್ಜು ಕೊಡಬೇಕಾಗುವುದು

ನಶ್ಯ ಒಂದೇ ತರದ್ದು.

ಎಲೆಕ್ಟ್ರಿಕ್ ದೀಪ.



ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ಮುಚ್ಚಳವನ್ನು ತೆರೆದುಕೊಂಡು ಉರಿಯುವುದು. ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಲೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಟೋನಿಯೊ ಅಂಡ್ ಕೊ
ಪೋಸ್ಟುಪೆಟ್ಟಿಗೆ ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು, ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸ್ವಾಮಿ, ಗೋಸಾಯಿ ಋಷಿಗಳೊಡನೆ ಭೇಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವು ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ, ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅವನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದು, ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತ ಭಾವಾಜಿಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇವಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬರು ತರಿಸಿ ನೋಡಬೇಕೆಂದು ಇದರ ಬೆಲೆ ಕೀರ ಕಡಿಮೆಮಾಡಿ ಇರುವವು. ೩—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲು 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್.

ಮಂಗಳೂರು — ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಿಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪ್ಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯಿನಾಮಲ್ಲ ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್, ಬ್ರವುನ್ ಪೇಪರ್, ರದ್ದಿ, ಖಾಲಿ ಕವರು ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಚ್ಚೇರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಉಡುಪು ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

ಆರ್. ಮಾರ್ಟಿನ್ನರ ಅಪ್ತಾ ಎಣ್ಣೆ

ಇದರ ಸುವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನ ವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮಿದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ ರೂ. 1-4-0.

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಬೇರೆ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ದಾನೆಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂಡ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.

60 ಮಾತ್ರೆಗಳ ಸೀಸೆ 1ಕ್ಕೆ ರೂ. 1—4—0.

ಆರ್ ಮಾರ್ಟಿನ್ನರ ಗಿಟೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವವರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ಇಳಿಸಿ, ಮೂತ್ರವು ಥಳುವಾಗಿ ನಿರ್ಮಲವಾಗುವುದಲ್ಲದೆ ರೋಗದ ಬಿಕ್ಕಟ್ಟೇ ಅಡಗಿಸಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ.

ಬೆಲೆ ಸೀಸೆ 1ಕ್ಕೆ ರೂ. 2—0—0.

ವಿಳಾಸ:—ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ವೈಟ್ ಎಂಡ್ ಕೋ ಹತ್ತರ, ಫೋರ್ಟ್ ಮುಂಬಯಿ.
R. D. Kately & Co.
No. D. Frere Road,
Near Wright & Co. Fort Bombay.

Edited, Printed & Published by V. S. Kamath at the M. T. A. Sharada Press, Mangalore.

Registered No. M. 498.

SWADESHABHIMANI MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ 2—13—0.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ

ರತ್ನೈರ್ಮಹಾರ್ಘೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ |
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ||೧||

ದೊರೆಯಲನುಪಮರತ್ನಗಳು ಸಾ- | ಗರವ ಮಥಿಸಲು ಸುರರಿಗದರಿಂ |
ತೆರುಷವಾಯಿತೆ! ಮತ್ತೆ ವಿಷವ ಸುದುಕ ಬರುತಿರುವ ||
ಗರಲಕವರಂಜಿದರೆ! ಸುಧೆಯನು | ಪಡೆದು ಕ್ಷುದ್ರರ ತೆರದಿ ಕುಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ||೧||

ಪುಸ್ತಕ ೧೭ ಮಂಗಳೂರು, ತಾರೀಕು ೮ನೇ ಶುಕ್ರವಾರ ಜೂನು ೧೯೨೩. ಸಂಚಿಕೆ ೨೩.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,50,000—0—0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00000—0—0
ಚಂದಾ ಹಾಕಿ ಎತ್ತಿದ ಮೂಲಧನ	1,54,400—0—0
ಮೌಲ್ಯ ಕೆತ್ತ ಮೂಲಧನ	1,04,388—2—11
ಠೇವಣಾತಿಗಳು	3,49,151-12—6
ಇನ್ವೆಸ್ಟುಮೆಂಟು (1927ನೇ ಇಸವಿಯ) ಶೇಕಡಾ 6ರ ಗವರ್ನಮೆಂಟು ವೇಜಿರಿನ ಮೇಲೆ ಹಾಕಿದ ರೂ. 25,700 ಕೂಡಾ	5,12,162-13—2
ರಿಜರ್ವ ಮತ್ತು ಇತರ ಫಂಡುಗಳು	29,149—4—2

ಕಳೆದ 2 ವರುಷಗಳಲ್ಲಿ ಪಾಲುದ್ದಾರರಿಗೆ ಸಾಲಿಯಾನ ಶೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ ಕರಾರ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ಇರುವ ಠೇವಣಾತಿಗಳನ್ನು 15 ದಿನಗಳ ನೋಟೀಸು ಮೂಲಕ ಶೇಕಡಾ 6½ರ ಬಡ್ಡಿ ಸಮೇತ ವಾಪಾಸು ಪಡಿಯುವ ಚಿಕ್ಕ ವ್ಯಾದ ಠೇವಣಾತಿಗಳನ್ನು ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಶೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನು, ಶೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ, ತಿಂಗಳುಗಟ್ಟಲೆಯಿಂದ ತೆರುವ ಕಂತು ಠೇವಣಾತಿಗಳನ್ನೂ, ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ತೆರತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪಿರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ಡಿನಲ್ಲಿಯೂ ಮುಂಬಯಿಯಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ಡಿನಲ್ಲಿಯೂ ಸ್ವೀಕರಿಸಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದಲ್ಲಿ ಸಿಕ್ಕುವುದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ನಿಮ್ಮ ಜಾಮೀನನ್ನು ಸಾರವತ್ತಾಗಿ ಇರಿಸಿ ಬೆಳೆ ಸಮೃದ್ಧಿಯನ್ನು ಪಡೆಯಬೇಕಾದರೆ ಊರ ಗೊಬ್ಬರಗಳ ಜತೆಯಲ್ಲಿ ಸ್ವಲ್ಪ ನೈಟ್ರೇಟ ಒಫ್ ಸೋಡಾ ಗೊಬ್ಬರವನ್ನು ಉಪಯೋಗಿಸಿರಿ. ಈ ಸವುಳುಪ್ಪು ಗೊಬ್ಬರವು ಎಲ್ಲಾ ಧಾನ್ಯ ಮುಂತಾದ ಪೈರುಗಳಿಗೂ ಕಬ್ಬಿನ ಬೆಳೆಗೂ ಮತ್ತು ತೆಂಗು ಮೊದಲಾದ ಫಲವೃಕ್ಷಗಳಿಗೂ ಅಗತ್ಯವಿರುವ ನೈಟ್ರೋಜನ್ ವಾಯುವನ್ನು ಜುರುಕಾಗಿ ಒದಗಿಸುವುದು.

ಪರೀಕ್ಷಾರ್ಥವಾಗಿ ಉಪಯೋಗಿಸಬೇಕೆಂದಿದ್ದವರು 2 ರಾತ್ಲು ಸವುಳುಪ್ಪಿನ ಸೆಂಪಲ್ ಡಬ್ಬಿಯನ್ನು ೦—೬—೦ಯಂತೆಯೂ ಬಂಗಾಲಿ ಮಣ ಒಕ್ಕೆ ರೂ. ೯—೦—೦ಯಂತೆಯೂ ಪಡೆಯಬಹುದು.

ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರಣೆ" ಎಂಬ ಸಚಿತ್ರ ಪಹಿಯನ್ನು ನಮ್ಮಿಂದ ಉಚಿತವಾಗಿ ಪಡೆಯಬಹುದು.

THE DIRECTOR
CHILEAN NITRATE COMMITTEE,
6, *Mission Row*, CALCUTTA.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾಧಿಕಾರಿ [illegible] ಗಳಿಂದ ಒಪ್ಪಲ್ಪಟ್ಟ

ಹಿಂದೂ ವ್ರತವೇದ	ಕ್ರಯ	೦—೧೦—೦
ಕೇತುಪ್ರಂಗ	„	೦—೧೨—೦
ಸಂಕ್ಷೇಪಗೀತೆ	„	೦—೧೦—೦

ಲಕ್ಷ್ಮೀನಾರಾಯಣ ಪುರೋಹಿತರಿಂದ ರಚಿತವಾದ ಸ್ವರಾಜ್ಯ ಛತ್ರೋಲ್ಲಾಸ ಕ್ರಯಂ —೩—೦

ಕರ್ನಾಟಕ ಕವಿ ಚರಿತೆ, ಮರಾಟರ ಅವನತಿ, ಶ್ರೀದಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ, ಅಂಗದನ [illegible], ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಜೋಗುಳಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಕ್ಷರ ಕಥೆಗಳು, ಹೊಸ ಕನ್ನಡ ಮೊದಲನೆಯ ಪುಸ್ತಕ, ಮಗ್ಗಿ ಪುಸ್ತಕಗಳು, ಅಜಿತಕುಮಾರ, ಭೂಗೋಳ, ದನ್ಯರತ್ನಾವಳಿ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೧೩-೦ ಸ್ಥಳಿಕರಿಗೆ ರೂ. ೨-೦-೦. ವಿ. ಪಿ. ಖರ್ಚು ಕೂಡಿ ರೂ. ೩-೦-೦ ಪ್ರಕಟನೆಗಳ ದರಗಳ ಬಗ್ಗೆ ಪತ್ರದ ಮ್ಯಾನೇಜರಿಗೆ ಬರೆಯಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು, ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ, ತಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯತಿಯು ಇರುವುದು.

ಸ್ಟೇಶನರಿ ಸಾಮಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಡೈರಿಗಳು, ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಬು, ಫೂಟ್ ರೂಲುಗಳು, ಇತರ ಬರವಣಿಗೆಯ ಸಾಮಗ್ರಿಗಳು.

ಇತರ ಸಾಮಗ್ರಿಗಳು.

ವಕೀಲರು ಇತ್ಯಾದಿ ಕೋರ್ಟು ಫೋರ್ಮುಗಳು, ಪರ್ಮಿಟು ಫೋರ್ಮು, ಕುಂಭೋದಿ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫೋರ್ಮುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪೆಥಿಕ್, ಹೊಮಿಯೊಪೆಥಿಕ್ ಮತ್ತು ಚಿಕ್ಕ ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪಾಕ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಗೆ ಬೇಕಾಗುವ ಗೊಬ್ಬರಗಳು.

ಶ್ರೇಷ್ಠವಾದ ಯುಕಲಿಪ್ಟಿಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇಲಾಖೆಯ ಕಳೆದ ೩೦ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.



ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ— ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಜಾತಿಕಷಾಯ

U. B. DUTT & Co. CALICUT

ಮಲೆಯಾಳ ದೇಶವು ಔಷಧಗಳಿಗೆ ಹೆಸರು ಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ [illegible] ಬೇರುಗಳಿಂದ ನಾವು ಅನೇಕ ಆಶ್ಚರ್ಯಕರ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. [illegible] ಫಲವಾಗಿ, ಅನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರಶಂಸಾಪತ್ರ "[illegible]" ಬರುತ್ತಲಿವೆ. [illegible] ಹೊಂದಿದವರಿಂದ ನಮಗೆ ಬಂದಿರುವ ಕಾಗದಗಳ, ಯೋಗ್ಯತಾಪತ್ರಗಳ ಹೇರಳವಾಗಿವೆ.

ಅಂಥಾ ಆಶ್ಚರ್ಯ ಔಷಧಗಳಲ್ಲಿ ನಮ್ಮ '[illegible]' ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. [illegible]

ಕ್ರಯ [illegible] ರೂ. 4—4—0.

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೩೬, (ಬ್ರಾಡ್ವೇ, ಮದ್ರಾಸ್.
Local Agents: Raphael & Co.
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ಥರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಹಲಗೆಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೊಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್,
ಹಂಪನಕಟ್ಟಾ, ಮಂಗಳೂರು ದ. ಕ.

ಪ್ಯಾರಿಸ್ ದೇಶದಲ್ಲಿ ಕಂಡುಹಿಡಿಯಲ್ಪಟ್ಟ ರಬ್ಬರಿನ ರಹಸ್ಯ. (ಎಂಬ ಮರ್ಮದ ಚೀಲ.)

ಇದು ಮೃದುವಾದ ರಬ್ಬರಿನಲ್ಲಿ ಬಹು ಚಮತ್ಕಾರವಾಗಿ ತಯಾರು ಮಾಡಲ್ಪಟ್ಟು ಈಗಲೇ ಬಂದಿರುವದು. ಇದರ ಮರ್ಮದ ವಿಷಯ ಇಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಉಪಯೋಗಿಸುವದರಿಂದ ಸ್ತ್ರೀ ಸಂಬಂಧವಾದ ಯಾವ ರೋಗವು ತಗಲದೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಇದರ ಉಪಯೋಗದಿಂದ ಆಗುವ ಸುಖವೂ ಸಂತೋಷವೂ ಅವರವರಿಗೆ ಗೊತ್ತಾಗುವದು. ಇದನ್ನು ಪ್ಯಾರಿಸ್ ದೇಶದಲ್ಲಿ ಬಹಳ ಉಪಯೋಗಿಸುತ್ತಾರೆ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ.

ಕ್ರಯ ರಬ್ಬರಿನ ಮರ್ಮದ ಚೀಲ ರೂ. ೧—೮—೦.

ಮನೋಲಿಯ ಏಜೆನ್ಸಿ,
ಪೋಸ್ಟು ಬೋಕ್ಸ್ ನಂಬ್ರ 232. ಮದರಾಸ್.

ಓಟೋಲಿಲ್ಲಾ ಎಂಬ ಸೆಂಟ್.

ಇದನ್ನು ಒಂದು ಬಟ್ಟೆ ಕರವಸ್ತ್ರಕ್ಕೆ ಸೋಕಿಸಿದರೆ 6-7 ದಿನಗಳ ವರೆಗೂ ಸುವಾಸನೆಯಾಗಿರುತ್ತದೆ. ಇತರ ಸೆಂಟುಗಳ ಹಾಗೆ ಬಟ್ಟೆಗೆ ಕಲೆಯನ್ನು ಉಂಟುಮಾಡುವುದಿಲ್ಲ.

ಬೆಲೆ 1 ಔನ್ಸ್ ಬಾಟ್ಲಿಗೆ ರೂ. 1—4—0.
„ ½ „ „ ರೂ. 0—10—0.
ಓಟೋಲಿಲ್ಲ ಸೆಂಟು ಕಾರ್ಡು ಡಜ 1ಕ್ಕೆ ರೂ. 0—12—0.

ನಮ್ಮಲ್ಲಿ ಸುಲಭ ಕ್ರಯಕ್ಕೆ ಸಿಕ್ಕುವ ಇತರ ಸಾಮಾನುಗಳು:—

ಬ್ರಿಟಿಷ್ ಮೇಡ್‌ರೇಜರ್	1ಕ್ಕೆ	2—0—0
ರೋಲ್ಡುಗೋಲ್ಡು ರಿಸ್ಟುವಾಚು	1ಕ್ಕೆ	8—8—0
ನಿಕಲ್ ರಿಸ್ಟು ವಾಚು	1ಕ್ಕೆ	6—8—0
ಮಹಾತ್ಮಾ ಗಾಂಧಿಯವರ ಫೋಟೋ ಉಂಗರ	1ಕ್ಕೆ	1—8—0

ವಿಳಾಸ:— ರಿವನ್ ವಾಚ್ ಕಂಪೆನಿ,
1/16ನೇ ನಂಬ್ರ ರಂಗೈಯ್ಯಚೆಟ್ಟಿ ಬೀದಿ, ಪಾರ್ಕ್ ಟೌನ್, ಮದರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದನ್ನು ಅಘನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಅನ್ವಪಡಲುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್ಸ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

Published for the mutual Benefit of the Foreign & Indian Business Houses.

THE BUSINESS DIRECTORY

OF INDIA, BURMA & CEYLON.

A Comprehensive Directory of the various Businessmen, Exporters, Importers, Firms, Factories, Merchants, Manufacturers, Mills & Industries of the principal 200 Cities Ports & Towns of India, Burma and Ceylon.

Published Annually in the Month of March.

RATES FOR ADVERTISEMENT IN

THE BUSINESS DIRECTORY

Full Page (a copy free)	Rs. 150
¾ Page Rs. 80. ½ Page	„ 50
2 in. Single Column	„ 20
1 in. Single Column	„ 15
Name alone in Bold Types	„ 5

PRICE PER COPY Rs. 15.

Rates for Special Positions and wrappers quoted on application to:

Designers, Printers & Publishers:

The Kanara Press, Madras.
Telegrams: "KETHAKI" Phone: 540.

ತ್ವರೆಮಾಡಿರಿ! ತ್ವರೆಮಾಡಿರಿ!

ಮಾರಾಟಕ್ಕೆ ಸಿದ್ಧವಾಗಿದೆ

ಪಂಡಿತ ಮಂಗಳೂರ ನಾರಾಯಣಾಚಾರ್ಯ
ರಿಂದ ಗಣಿಸಿ ಪರಿಶೋಧಿಸಲ್ಪಟ್ಟ,
ರುಧಿರೋದ್ಗಾರಿ ಸಂವತ್ಸರದ

ಪಂಚಾಂಗಗಳು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

'ಕವಿ'ಯವರ
ತಾಜಾ

ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟಿದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡೆದಿರುತ್ತದೆ.

ರಾತ್ತು 1ರ ರೂ. 2—12—0.
ಸ್ಪೆಶ್ಯಲ್ ರಾತ್ತು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಾಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಪಿಡಲ್ 1ಕ್ಕೆ „ 15—0—0

ಬೇಕಾದವರು ೩ ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೋಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65, ಮದರಾಸು.

ಶಾಲಿವಾಹನಶಕ ೧೮೪೫ನೆಯ ರುಧಿರೋದ್ಗಾರಿ ಸಂವತ್ಸರದ ಅಧಿಕ ಜ್ಯೇ. ಬ. ೧೦ ಶನಿವಾರದಿಂದ ರುಧಿರೋದ್ಗಾರಿ ಸಂವತ್ಸರದ ನಿಜ ಜ್ಯೇಷ್ಠ ಶು. ೧ ಶುಕ್ರವಾರದ ವರೆಗಿನ

ಪಂಚಾಂಗ
(೧೯೨೩ನೆಯ ಮೇಷ ಪಗ್ಗು)

ತಾರೀಖು	ವಾರ	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಯೋಗ	ಸೂರ್ಯ ಉ.	ಸೂರ್ಯ ಅಸ್ತ.
9	ಶನಿ	೧೦	೧೩.೧೮	ರೇವತೀ	೪೯.೩೦	೨೬	6. 5	6.54
10	ರವಿ	೧೧	೧೫. ೦	ಅಶ್ವಿನೀ	೪೫.೫೮	೨೭	6. 5	6 54
11	ಸೋಮ	೧೨	೨೩. ೦	ಭರಣೀ	೫೨.೧೮	೨೮	6. 5	6.55
12	ಕುಜ	೧೩	೨೭.೧೬	ಕೃತ್ತಿಕಾ	೫೮. ೨	೨೯	6. 5	6.55
13	ಬುಧ	೧೪	೩೦.೪೬	ರೋಹಿಣೀ	೬೦. ೦	೩೦	6. 6	6.55
14	ಗುರು	●	೩೩.೧೬	ರೋಹಿಣೀ	೨.೪೬	೩೧	6. 6	6.55
15	ಶುಕ್ರ	೧	೩೪.೪೬	ಮೃಗಶಿರಾ	೬.೧೪	೧	6. 6	6.56

ಮಂಗಳೂರಿನ ವಾಯುಸ್ಥಿತಿ.
(೧೯೨೩ನೆಯ ಎಪ್ರಿಲ್)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿವಸದ ಮಳೆ	ಜುಮಲಾ ಮಳೆ.
1	94—4	82—6	—	—
2	94—7	82—7	—	—
3	94—6	80—7	0—06	—
4	93—0	81—2	—	—
5	95—4	74—3	0—95	—
6	86—6	78—6	—	—
7	91—2	79—7	0—27	4—50

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಸೂರಿ ಅಕ್ಕಿಮುಡಿ ೧ಕ್ಕೆ	...	7- 8	8— 6
ಗುಡ್ಡು,	...	7- 4	7— 6
ರಾಶಿ		6- 8	6—12
ಸುಗ್ಗಿ		7—0	7—4
ಅಮೃತ್ ಬೆಳ್ತಿಗೆ „	...	7-14	8—10
ಗುಡ್ಡು ಬೆಳ್ತಿಗೆ „	...	7- 6	7—12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	12- 0	13— 0
ಗೋಧಿ ಗೋಣಿ ೧ಕ್ಕೆ	...	18- 0	20— 0
ಹುರುಳಿ ಗೋಣಿ ೧ಕ್ಕೆ	...	8-4	10—8
ಕಡಲೆ ಗೋಣಿ ೧ಕ್ಕೆ	...	11- 0	12— 8
ತೊಗರಿ ಗೋಣಿ ೧ಕ್ಕೆ	...	12- 0	—
ತೊಗರಿಬೇಳೆ ಗೋಣಿ ೧ಕ್ಕೆ	...	14- 0	23— 0
ಉದ್ದು ಗೋಣಿ ೧ಕ್ಕೆ	...	13- 0	—
ಹೆಸರು ಗೋಣಿ ೧ಕ್ಕೆ	...	—	12— 8
ಊರು ಬೆಲ್ಲ ಖಂಡಿ ೧ಕ್ಕೆ	...	40- 0	45— 0
ಉಪ್ಪು ಗೋಣಿ ೧ಕ್ಕೆ	...	7- 6	8— 4
ಕೊಪ್ರ ಖಂಡಿ ೧ಕ್ಕೆ	...	105- 0	115 — 0
ಕೊಪ್ರ ಹಿಂಡಿ ಖಂಡಿ ೧ಕ್ಕೆ	...	38- 0	
ಎಳ್ಳಿಂಡಿ ಖಂಡಿ ೧ಕ್ಕೆ	...	45- 0	52— 8
ಕೊಪ್ರ ಎಣ್ಣೆ ಮುಡಿ ೧ಕ್ಕೆ	...	8- 0	9— 0
ಎಳ್ಳೆಣ್ಣೆ ಮುಡಿ ೧ಕ್ಕೆ	...	6-12	9— 0
ಚಿಮುಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	8-12-6	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	—	8— 4
[illegible] ಮುಡಿ ೧ಕ್ಕೆ	...	7- 8	9—8
[illegible] ಮುಡಿ ೧ಕ್ಕೆ	...	8- 8	—
ಕೊತ್ತುಂಬರಿ ಮುಡಿ ೧ಕ್ಕೆ	...	4- 8	4—12
ಕಾಫಿ ಖಂಡಿ ೧ಕ್ಕೆ	...	260- 0	280— 0
[illegible] ಖಂಡಿ ೧ಕ್ಕೆ ಹಳ್ಳೆ	...	150- 0	160— 0
[illegible] New, [illegible]	...	160- 0	170— 0
[illegible] ಖಂಡಿ ೧ಕ್ಕೆ	...	115- 0	120— 0
[illegible] ಮುಡಿ ೧ಕ್ಕೆ	...	60- 0	70— 0
[illegible] ಮುಡಿ ೧ಕ್ಕೆ	...	1-14	2— 0
[illegible] ಖಂಡಿ ೧ಕ್ಕೆ	...	50- 0	65— 0
[illegible] ಮುಡಿ ೧ಕ್ಕೆ	...	20-12	23— 0
[illegible] ಮುಡಿ ೧ಕ್ಕೆ	...	32- 0	—
[illegible] ೧ಕ್ಕೆ	...	23- 8	—
[illegible] 1ಕ್ಕೆ	...	20- 0	21—
ಪವನು	...	15-15	16—0

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 3 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನ ಎಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ಕಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು

ನಮ್ಮ ವಿಳಾಸ—ಎಸ್. ಎಸ್. ರಾಮು ಎಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟ ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಆವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—ಎಸ್. ಪಾಲ್ ಎಂಡ್ ಕೊ.
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

NOTICE.

The Samyukta Gowda Saraswat Sabha, Madras will grant a number of scholarships to the total value of Rs. 1000 during the academic year 1923-1924.

The scholarships are tenable for 10 months and will be granted to men or women of the community for prosecuting studies in the lower secondary and high schools, in Arts colleges in the Medical & Engineering colleges and in the case of women to under go training as nurses or teachers.

Applications with testimonials of conduct, poverty and qualification should reach the Hon. Secretary, 25 Harris Road, Mount Road Post, Madras, not later than the 15th June next.

The scholarships are repayable with 4% interest.

25 Harris Road,
Mount Road P. O. Madras,
18th April 1923.

M. Keshava Pai,
Hon. Secretary.

ದಾವುದರ ಪೇಟೆಂಟ್ ಅಭ್ರಕದ ಸ್ವದೇಶಿ ಚಿಮಿಣಿ ಬುರುಡೆಗಳು

ಗಾಜು ಬುರುಡೆಗಾಗಿಯೇ ವರುಷಂಪ್ರತಿ ಎಷ್ಟು ಹಣವು ದುರ್ವ್ಯಯವಾಗುತ್ತಿದೆ ಎಂಬುದು ಸರ್ವರಿಗೂ ಅನುಭವವಾಗಿದೆ. ಹೀಗಿರುತ್ತ ಹೆಸರುಮಾತ್ರಕ್ಕೆ ಬುರುಡೆ ಎನ್ನಿಸಿಕೊಳ್ಳುವ ವಸ್ತುವನ್ನು ತಯಾರಿಸುವುದಕ್ಕಿಂತ ಜನರಿಗೆ ಹೆಚ್ಚು ಕಾಲಕ್ಕೆ ಉಪಯೋಗಕ್ಕೆ ಬರುವ ವಸ್ತುವೇ ಅಗತ್ಯವೆಂದು ಅನೇಕ ಪ್ರಯೋಗಗಳಿಂದ ಕಂಡುಹಿಡಿದಿದ್ದೇವೆ. ಗಾಜು ಬುರುಡೆಗಳು ಪೆಡಸಾಗಿದ್ದು, ದೀಪದ ಪ್ರಕಾಶದ ಉಷ್ಣತೆಯಿಂದ ಒಡೆಯುತ್ತವೆ. ನೀರಿನ ಅಥವಾ ತಂಪು ಗಾಳಿಯ ಸ್ಪರ್ಶವಾಗುತ್ತಲೇ ಪಟಪಟ ತುಂಡು ತುಂಡಾಗುತ್ತವೆ. ಜಪಾನ ವ್ಯಾಲುಗಳಲ್ಲಿ ಈ ಗುಣವು ಸ್ಪಷ್ಟವಾಗಿ ಕಾಣುತ್ತದೆ. ಒಂದು ದೀಪಕ್ಕೆ ಬೇಕಾಗುವ ಬುರುಡೆಗಾಗಿ ವರುಷಕ್ಕೆ ೫೦-೬೦ ರೂಪಾಯಿ ಕ್ರಯವಾಗುತ್ತದೆ. ಇದಕ್ಕೆ ಪ್ರತಿಯಾಗಿ ಅಭ್ರಕದ (ಬಿಂಗದ) ಬುರುಡೆಗಳು ತಯಾರಾಗಿವೆ. ಬಿಂಗು ಪಾರದರ್ಶಕ ಪದಾರ್ಥವಾಗಿದ್ದುದರಿಂದ ಸೀಮೆಯ ಎಣ್ಣೆಯಿಂದ ಉರಿಸುವ ದೀಪಗಳಿಗೆ ಉಪಯೋಗಿಸಲು ಯೋಗ್ಯವಾಗಿ ಕಂಡುಬಂದಿದೆ. ಇವು ತುಂಡಾಗುವುದಿಲ್ಲ; ನೀರಿನ ಮತ್ತು ತಂಪುಗಾಳಿಯ ಸ್ಪರ್ಶವಾದೊಡನೆ ಒಡೆಯುವುದಿಲ್ಲ. ಹೆಚ್ಚಿನ ಪ್ರಕಾಶವನ್ನು ಕೊಡುತ್ತವೆ. ಕಣ್ಣಿಗೆ ತಂಪು. ಈ ಬುರುಡೆಗಳನ್ನು ಉಪಯೋಗಿಸುವುದರಿಂದ ವರ್ಷ ಒಂದಕ್ಕೆ ರೂ. ೨ ಮಾತ್ರ ಖರ್ಚು ಆಗುವದು. ಈ ಬುರುಡೆಗಳಿಗೆ ಕೆಳಗೆ ಹೆಸರು ಕಾಣಿಸಿದವರು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಾಮುಖ್ಯ ಏಜಂಟರಾಗಿರುತ್ತಾರೆ.

ಡಿಟ್ಮಾರ್ ಲೇಂಪು, ಜಪಾನ್ ಲೇಂಪು, ತೂಗಾಡಿಸುವ ಲೇಂಪು, ಟೇಬಲ್ ಲೇಂಪು, ಗ್ಯಾಸಲೇಂಪು, ಮುಂತಾದ ಎಲ್ಲಾ ತರದ ದೀಪಗಳಿಗೆ ಉಪಯೋಗಿಸಲು ಬೇಕಾದ ಬುರುಡೆಗಳು ನಮ್ಮಲ್ಲಿ ದೊರಕುವುವು. ಅಲ್ಲದೆ ಯಾವುದಾದರೂ ಒಂದು ಹೊಸತರದ ದೀಪಕ್ಕೆ ಬೇಕಾಗುವ ಬುರುಡೆಗಳನ್ನು ಸಹ ಒದಗಿಸಿಕೊಡಬಹುದು.

ಕ್ರಯ ಎಲ್ಲಿ ಕಡಿಮೆ?

ನಮ್ಮ ದರವನ್ನು ಬೇರೆಯವರ ದರದೊಡನೆ ಸರಿಹೋಲಿಸಿ ನೋಡಿದರೆ
ಆಗ ತನ್ನಷ್ಟಕ್ಕೇ ಇದರ ಗುಟ್ಟು ಗೊತ್ತಾಗುವುದು!

ಕೊಡೆಗಳು ಯುದ್ಧಕ್ಕೆ ಮೊದಲಿದ್ದ ದರದಲ್ಲಿಯೇ ನಿಮಗೆ ಇಲ್ಲಿ ದೊರೆಯುವುವು!
ಬಲವಾದ ಬಾಳಿಕೆ ಬರುವ ಹೊಸ ಕೊಡೆಗಳು ಈಗ ತಾನೇ ತಲಪಿವೆ!!

ಸ್ವಿಝರ್ಲೆಂಡಿನಲ್ಲಿ ಸಿದ್ಧವಾದ ಪ್ರಖ್ಯಾತಿಹೊಂದಿದ ಮಿಶನ್ ಕೊಡೆಗಳು

24×8 ರೂ. 6—4—0. 26×8 ರೂ. 6—8—0. 28×8 ರೂ. 6—12—0.

ಈ ಬೆಲೆಯೆಷ್ಟೆಂದು ಗುರುತಿಸಿಕೊಳ್ಳಿ! ನಮ್ಮ ಮಾರಾಟದ ದರ ಹೇಗಿದೆ ಎಂದು ನೀವೇ ಆಲೋಚಿಸಿರಿ!

ಉತ್ತಮ ಯಂತ್ರದಲ್ಲಿ ತಯಾರಾದ ಕೊಡೆಗಳು

26×8 ರೂ. 4—14—0. ಈ ಕೊಡೆಗಳು ಇವರಿಂದಲೂ ಅಗ್ಗವಾಗಿ ನಿಮಗೆ ದೊರೆಯದು. ಇದು ಸಂಪೂರ್ಣವಾಗಿ ನಂಬಿಕೆಗೆ ಅರ್ಹವಾದದ್ದೂ, ಬಲವಾದದ್ದೂ, ಬಾಳಿಕೆ ಬರತಕ್ಕದ್ದೂ ಆಗಿದೆ. ಪ್ರತಿಯೊಂದು ಕೊಡೆಗೂ ಗ್ಯಾರಂಟಿ ಇದೆ.

ಕಪ್ಪು ಬಿಳೇ ಬಣ್ಣದ ಶುದ್ಧ ಖಾದಿಯ ನಿರ್ಮಾಣದ ಹಿಂದೀ ಕೊಡೆಗಳು

18ರಿಂದ 26ರ ವರೆಗಿನ ಎಲ್ಲಾ ಅಳತೆಯಲ್ಲಿ ರೂ. 2—4—0ರಿಂದ ರೂ. 4—8—0ರ ವರೆಗೆ

ನಂಬ್ರ 611 ಜಿಂಕೆಯ ಗುರುತಿನ ಕೊಡೆಗಳು

ಇದಕ್ಕೆ ಚಿನ್ನದ ಪದಕಗಳ ಬಹುಮಾನ ದೊರಕಿದೆ.

ಈ ಕೊಡೆಗಳು ಇದೊಂದು ವ್ಯಾಪಾರ ಸಂಸ್ಥೆಯಲ್ಲಿ ಮಾತ್ರ ದೊರೆಯುತ್ತವೆ.

ಎಮ್. ಸುಲೇಮಾನ್ ನೂರ್ ಮುಹಮ್ಮದ್ ಅಂಡ್ ಸನ್ಸ್,
ಕೊರೊನೇಶನ್ ಅಂಬ್ರೆಲ್ಲ ಮಾರ್ಟ್, 786, ಮರ್ಕೆಂಟೈಲ್ [illegible] ಬಳಿ, ಮಂಗಳೂರು
ಶಾಖೆ—ಮಂಗಳೂರು [illegible] ಎದುರಲ್ಲಿ.

ಹೊಗೆಸೊಪ್ಪು ಸೇದುವುದರಿಂದ ಉಂಟಾದ ದೋಷಗಳು.

[ಮುದ್ರಾಸ್ ಕಾಲೇಜಿನ ಮೆಂಬರರಾದ ರಾವ ಸಾಹೇಬ ಡಾಕ್ಟರ್. ಯು. ರಾಮರಾಯರು ಪ್ರಕಟಿಸುತ್ತಿರುವ 'ಹೆಲ್ತ್' ಎಂಬ ಮಾಸಿಕ ಪತ್ರದಲ್ಲಿ ಮೇಲಿನ ಶಿರೋಲೇಖವನ್ನು ಧರಿಸಿದ ಕೆಳಗಿನ ಲೇಖವು ಪ್ರಕಟವಾಗಿದೆ. ಈಗಿನ ಸುಶಿಕ್ಷಿತ ಮತ್ತು ಅಶಿಕ್ಷಿತ ಜನರು ಹೊಗೆಸೊಪ್ಪನ್ನು ಅದರ ದೋಷಗಳನ್ನು ಅರಿಯದೆ ಉಪಯೋಗಿಸುವದರಿಂದ, ಅವರ ಉಪಯೋಗಕ್ಕಾಗಿ ಈ ಲೇಖವನ್ನು ಕೊಟ್ಟಿರುತ್ತೇವೆ. ಸಂ ಸ್ವ.]

ಹೊಗೆಸೊಪ್ಪನ್ನು ಬಳಿಯುವುದರಿಂದ ಉಂಟಾಗುವ ಹಾನಿಯು:—

"(೧) ರಕ್ತಸಂಚಾರದಲ್ಲಿ ವಿಷಮತೆಯು ಮತ್ತು ಪರಿಶುದ್ಧವಾದ ರಕ್ತದಲ್ಲಿರುವ ಕೆಂಪು ಪರಮಾಣುಗಳಲ್ಲಿ ಬದಲಾವಣೆಯು ಉಂಟಾಗುತ್ತದೆ. (೨) ಹೊಟ್ಟೆಯಲ್ಲಿ ಮಾಂದ್ಯ, ಅಶಕ್ತತೆ ಮತ್ತು ಅನಾರೋಗ್ಯತೆಗಳು ಉಂಟಾಗುತ್ತವೆ. (೩) ರಕ್ತಕೋಶದಲ್ಲಿ ಅಶಕ್ತತೆಯು ಉಂಟಾಗಿ, ಅಕಾಲ ವ್ಯವಹಾರವು ಪ್ರಾರಂಭವಾಗುತ್ತದೆ. (೪) ಜ್ಞಾನೇಂದ್ರಿಯಗಳಲ್ಲಿ ದುಃಖಕರವಾದ ದೋಷಗಳು ಉದ್ಭವಿಸುತ್ತವೆ. ದೃಷ್ಟಿಗಳು ಮಂದವಾಗಿ ವಸ್ತುವಿನ ಸ್ಪಷ್ಟಜ್ಞಾನವು ಅಶಕ್ಯವಾಗಿ, ಬೇರೆ ಬೇರೆ ಬಣ್ಣಗಳನ್ನು ವಿಂಗಡಿಸುವ ಶಕ್ತಿಯು ನಷ್ಟವಾಗುತ್ತದೆ. ವಸ್ತುಗಳನ್ನು ಪ್ರತಿಬಿಂಬಿಸುವ ಪರದೆಯಲ್ಲಿ ಉಂಟಾಗುವ ಪ್ರತಿಬಿಂಬಗಳು, ವಸ್ತುಗಳ ಅಭಾವದಲ್ಲಿಯೂ ಕೂಡ, ದೃಗ್ಗೋಚರವಾಗುವವು. ' ಶಬ್ದಗಳ ಸ್ಪಷ್ಟ ಮತ್ತು ಸರಿಯಾದ ಜ್ಞಾನವು ಕಿವಿಗಳಿಗೆ ಆಗದೆ, ಕಿವಿಗಳಲ್ಲಿ ಯಾವಾಗಲೂ ತೀಕ್ಷ್ಣವಾದ ಸಪ್ಪಳವು ಆಗುತ್ತಿರುವದು. (೫) ಮಿದುಳಿನ ನಿರುಪಯೋಗವಾದ ಪದಾರ್ಥವು ಹೊರಹೋಗದೆ ಅದನ್ನು ಪೋಷಿಸಿದ್ದಾಗ್ಯೂ ಅದರ ಬೆಳವಣಿಗೆಯು ಚೆನ್ನಾಗಿ ಆಗುವುದಿಲ್ಲ. (೬) ಕ್ರಿಯಾಪ್ರೇರಕ ಮತ್ತು ಮನೋವಿಕಾರಪ್ರೇರಕ ನರಗಳಲ್ಲಿ ಶಕ್ತಿಯು ಕುಂಠಿತವಾಗಿ, ಆಯಾ ನರಗಳ ಕ್ರಿಯೆಗಳು ಸರಿಯಾಗಿ ಆಗುವುದಿಲ್ಲ. (೭) ಮುಖದ ಅಂತರ್ಚರ್ಮವು (ಉದಾ: ತುಟಿಯ ಚರ್ಮವು) ಪ್ರಮಾಣದ ಹೊರಗೆ ದೊಡ್ಡದಾಗುತ್ತದೆ. ಹೊಗೆಸೊಪ್ಪು ಸೇದುವವರ ಗಂಟಲು ಬಾತು, ಕೆಂಪಾಗುತ್ತದೆ ಅಲ್ಲದೆ ಒಣಗುತ್ತದೆ. (೮) ಶ್ವಾಸಕೋಶಗಳ ನಳಿಗೆಗಳ ಮೇಲ್ಭಾಗದಲ್ಲಿ ಉರಿಕೆಯು ಉಂಟಾಗಿ, ಕಾಸವು (ಕಫವು) ಹೆಚ್ಚಾಗುತ್ತದೆ"

ಈ ಪ್ರಕಾರ, ಹೊಗೆಸೊಪ್ಪು ಸೇದುವುದರಿಂದ ಉಂಟಾದ ದೋಷಗಳನ್ನು, ಇಂಥ ದುರ್ವ್ಯಸನಾಸಕ್ತ ಮನುಷ್ಯನೇ ಕೇವಲ ತನ್ನ ಅನುಭವದಿಂದ ಉದ್ಘಾಟಿಸಿರುವನು. ಹೊಗೆಸೊಪ್ಪು ವಿಷವು, ಮತ್ತು ಅದನ್ನು ಪ್ರಮಾಣದ ಹೊರಗೆ ಉಪಯೋಗಿಸಿದರೆ ಘಾತಕ ಪರಿಣಾಮಗಳನ್ನು ಉಂಟುಮಾಡುತ್ತದೆ. ಅಲ್ಲದೆ, ಇದು ಪಚನಕ್ರಿಯೆಯನ್ನು ಕ್ರಮೇಣ ನಷ್ಟಮಾಡಿ, ರುಚಿಭೇದ, ವಾಸನೆಯಲ್ಲಿ ವ್ಯತ್ಯಾಸ ಮತ್ತು ರಕ್ತದೋಷಗಳನ್ನುಂಟುಮಾಡುತ್ತದೆ. ಈ ಪ್ರಕಾರ ಆಯುಷ್ಯದ ಪ್ರಗತಿಯು ಕುಂಠಿತವಾಗಿ, ವ್ಯಸನಾಸಕ್ತ ಮನುಷ್ಯನು ಅಕಾಲ ಮೃತ್ಯುವಿಗೆ ತುತ್ತಾಗುತ್ತಾನೆ. ಮಿ! ಕೊಲ್ಡೆ ಎಫ್. ಆರ್. ಎಸ್. ಇವರು ಈ ವಿಷಯದಲ್ಲಿ ತಮ್ಮ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಮಾಡಿರುತ್ತಾರೆ. "ಬಾಡಿದ ಮುಖವು, ಶರೀರದ ಅಪೂರ್ಣ ಬೆಳವಣಿಗೆಯು ಮತ್ತು ಸ್ನಾಯುಗಳ ಅಶಕ್ತತೆಯು ಮಲೆರಿಯಾ ಹವೆಯಿಂದ ದೂಷಿತವಾದ ಅನಾರೋಗ್ಯ ಪ್ರದೇಶದಲ್ಲಿ ವಾಸಿಸುವ ಜನರ ಲಕ್ಷಣಗಳು. ಇವೇ ಚಿಹ್ನಗಳು ಹೊಗೆಸೊಪ್ಪು ಉಪಯೋಗಿಸುವ ಜನರಲ್ಲಿ ಕಂಡುಬರುತ್ತವೆ."

NOTICE.

In the Court of the District Judge
South Malabar, CALICUT.

O. P. NO. 37 OF 1923.

Panjirikkai Narayan Bhutt and another of Peratal amsom Upprangala Grama Kasaragod Taluk. — *Petitioners.*

Panjirikkai Venkatiswara Bhutt and another. — *Respondents.*

Take Notice that the above petition praying that a Succession Certificate may be issued to the Ist petitioner authorising him to collect the debts of Panjirikkai Venkatiswara Bhutt who died at Veeramangalam Amsom, Mangote Desom, Walluvanad Taluk, is posted for 28-6-1923 for trial.

Any person objecting must put in his objection in the above Court.

K. GOPAL MENON
Vakil for Petitioner.

ಭಾರತ
ಸಂಗೀತ ನಾಟಕ ಮಂಡಳಿ,
ಮಂಗಳೂರು, ದಕ್ಷಿಣ ಕನ್ನಡ.

ಇದೇ ೧೯೨೩ನೇ ಜೂನ್ ತಿಂಗಳಿನಿಂದ ನಾವು ನಮ್ಮ ನಾಟಕಾಭಿನಯಗಳನ್ನು ಮಹಾಜನರ ಅಪೇಕ್ಷೆಯ ಮೇರೆಗೆ ಅವರ ಅನುಕೂಲಕ್ಕಾಗಿ ಮಧ್ಯಾಹ್ನ ಗಂಟೆಗಳಿಂದ ಪ್ರಾರಂಭಿಸುವುದಾಗಿ ನಿಶ್ಚಯಿಸಿರುತ್ತೇವೆ. ಇದಕ್ಕಾಗಿ ಮಹಾಜನರ ಪ್ರೋತ್ಸಾಹವನ್ನು ಅಪೇಕ್ಷಿಸುವೆವು.

ಮಂಗಳೂರು,
ತಾ. 29-5-'23

J. A. Row Kavi.
ಮೆನೇಜರ್.

॥ ಶ್ರೀ ॥

"ಪರಮಾತ್ಮ ಚರಣನಿಕ್ಷೇಪ"

([illegible] ಎಂಬಂತೆ.)

ಪರಮಾತ್ಮಚರಣನಿಕ್ಷೇಪಕೆ ಮನಸು । ಸರಿಯಲಿಲ್ಲಾ ॥ ಆತ್ಮನ ।
ಸರಿಯಲಿಲ್ಲಾ ॥ ಪ ॥

ಹೊಟ್ಟೆಪಾಡಿನ ಬಹುಧನ ಬೇಟೆ ।
ಹುಟ್ಟಿನ ನಾಗರಿಕತೆಯ ಗಲಾಟೆ ।
ಬಿಟ್ಟಿಸಿ ನೋಡಲು ಮನಸಿನ ಹರಟೆ । ಹರಿಯಲಿಲ್ಲಾ ॥ ಗರ್ವವು ।
ಮುರಿಯಲಿಲ್ಲಾ ॥ ೧ ॥

ಕೊಳಲಿನ ಪರಿಯಾ ಬೆಳೆದಿಹಕಾಯಾ ।
ಒಳಗಿದೆ ಮಾಯಾರಾಗದ ಛಾಯಾ ।
ಕೊಳೆಯ ಮಲಿನತೆಯ, ಭಕ್ತಿಯ ಗುಣವ । ಬರಿಸಲಿಲ್ಲಾ ॥ ಶುದ್ಧಿ ।
ಕರಿಸಲಿಲ್ಲಾ ॥ ೨ ॥

ಕಾಡಿನೊಳಿರಿಸೀ ನಾಡಿನೊಳಿರಿಸೀ ।
ಓಡಿಸಿ ದಣಿಸುತ ದೇಹವಸವೆಸೀ ।
ಬೇಡಿದ ಧನವೆಂಬುನ್ನತ ಹಂಬಲಾ । ಬರಿಸಲಿಲ್ಲಾ ॥ ಪಾಪವ ।
ಮರೆಸಲಿಲ್ಲಾ ॥ ೩ ॥

ಯಂತ್ರದೊಳಿರಲೋ ತಂತ್ರದೊಳಿರಲೋ ।
ತಂತ್ರದೊಳೋಡುವ 'ಬಂಡ'ದೊಳಿರಲೋ ।
ಸಿಂತಿಲ್ಲಿಯೇ ಪರಮಾತ್ಮನ ಕೃಪೆಯಾ । ಪಡೆಯಲಿಲ್ಲಾ ॥ ಕುಟಿಲವು ।
ನಡೆಯಲಿಲ್ಲಾ ॥ ೪ ॥

ಇಬ್ಬರು ಮೂವರೊಳೊಬ್ಬೊಬ್ಬರೊಳೂ ।
ಉಬ್ಬಿಸಿ ಬೊಬ್ಬೆಯ ಹಬ್ಬಿಪ ಮರುಳೂ ।
ಒಬ್ಬರೊಳಾದರು ಭಕ್ತಿಯ ಭಾರವ । ಹೊರಿಸಲಿಲ್ಲಾ ॥ ಕೀರ್ತಿಯ ।
ಮೆರೆಸಲಿಲ್ಲಾ ॥ ೫ ॥

ಪಂಚೇಂದ್ರಿಯದಾ ಮಿಂಚಿದ ಮದದಾ ।
ಸಂಚಿಗೆ ಸೋತಿಹ ಕುಟಿಲ ಶರೀರಾ ।
ವಂಚನೆಯಿದೆಯಲಿ 'ಕೃಷ್ಣ'ನ ದರುಶನ । ದೊರೆಯಲಿಲ್ಲಾ ॥ ಆತನು ।
ಕರೆಯಲಿಲ್ಲಾ ॥ ೬ ॥

ಕಾವೇರಿಕಾನ ವಿ. ಕೃಷ್ಣಭಟ್ಟ, ಕವಿ.

ಬಹಳ ಕಡಿಮೆ ದರ

ಶಾಲಾ ವಿದ್ಯಾರ್ಥಿಗಳಿಗೆ ಒಳ್ಳೇ ಸಂದರ್ಭ

ಜೂನ್ ತಾರೀಕು 2ರಿಂದ ಜೂನ್ ತಾರೀಕು 18ರ ವರೆಗೆ ಮಾತ್ರ.

ನಮ್ಮಲ್ಲಿ ಒಂಧು ಸರ್ತಿ ಒಂದು ರೂಪಾಯಿ ಯಾ ಹೆಚ್ಚಿನ ಶಾಲಾ ಪುಸ್ತಕಗಳು ಮತ್ತು ಸ್ಟೇಶನೆರಿ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ರೂಪಾಯಿಯಲ್ಲಿ ಒಂದಾಣೆ ಡಿಸ್ಕೌಂಟು ಕೊಡುವೆವು.

ಈ ಅಪರೂಪ ಸಂದರ್ಭ ಕಳಕೊಳ್ಳಬೇಡಿರಿ.
ಮಂಗಳೂರು ಶಹರಿನಲ್ಲಿ ಹೆಚ್ಚಿನ ಡಿಸ್ಕೌಂಟು ಸಿಕ್ಕುವ ಸ್ಥಳವಿದು.
ಕೆನರಿಸ್ ಮಿಶ್ಯನ್ ಪ್ರೆಸ್ ಎಂಡ್ ಬುಕ್ ಡಿಪ್ಪೊ,
ಮಂಗಳೂರು.

UN VERSOL

Prevents and cures pitting in SMALL-POX.

All fair faces are made ugly by this horrible disease, small-pox, is now staring you in the face.

WHY NOT ORDER FOR A BOTTLE TO-DAY? ITS PRICE IS ONLY RS. 0-8-0.

Is it too much to spend this amount. Besides curing & preventing pitting in small-pox this remedy could be used successfully for burns, Eczema and all other Ulcers.

Thousands of testimonials from Eminent doctors in Madras and Malabar where this remedy has been used during the Small-pox Epidemic last year.

UNVERSOL

Is a splendid disinfectant and emollient and is very effective in preventing pitting in Small-pox. It destroys the small-pox poison in the sore and is thus very useful in checking all such complications as Boils, Itch, Diarrhœa, Dysentery, Throat affections, Pneumonia and many other ailments caused by small-pox.

This balm has also been found to be very effective in curing Burns, Scalds & chronic Ulcers such as those of Eczema.

Having a sweet odour it drives away mosquitoes and flies which are the most dangerous disease carrying agencies. It can be used on hands and feet especially of children during sleep to prevent the mosquito-bits.

It contains amongst other things Camphor and Eucalyptus the curative effect of which is well known in every house-hold. Though a powerful germ-destroyer in itself, it is non-poisonous and can be safely used on any part of body and there is absolutely no danger even if a child licks this stuff.

DIRECTIONS FOR USE:—

In Small-pox apply twice a day on the body and thrice a day on the face. A camel hair brush or any feather can be used for annointing this balm on the surface of the body.

In Burns, Scalds and such Ulcers, the balm should be spread on a piece of lint and this should be put over the ulcers and lightly bandaged along with cotton. Soap should not be used in cleaning these sores the balm itself, should be used for cleaning them.

CAUTION:—The balm being a cool stuff may give rise to certain amount of shivering if applied to the whole body at one stretch. This will be the case especially in children. In these cases it is desirable that the balm is used on small surfaces at a time head, face, legs and so forth.

PRICE AS. 0-8-0.

Can be had from— THE ORIENTAL SPECIFIC DEPOT,
107 Purasawakam High Road, Vepery, MADRAS.

ವಿದೇಶ ವರ್ತಮಾನ.

ಬೆಂಕಿಯ ಅನಾಹುತ:—ಕ್ಲೀವ್‌ಲೆಂಡ ಎಂಬಲ್ಲಿ ಒಂದು ಪಾಠಶಾಲೆಯ ಮಕ್ಕಳು ಒಂದು ಸೀಮೆ ಎಣ್ಣೆಯ ದೀಪವನ್ನು ಬೀಳಿಸಿದ್ದರಿಂದ ಪಾಠಶಾಲೆಯಲ್ಲಿ ಅದು ಹೊತ್ತಿಕೊಂಡು ಶಾಲೆಯು ನಾಶವಾದ್ದಲ್ಲದೆ, ಮಕ್ಕಳೂ ದೊಡ್ಡವರೂ ಭಯಾಕ್ರಾಂತರಾಗಿ ಮಹಡಿಯ ಮೇಲಿನಿಂದ ಇಳಿಯಬಾರದ ಮನೆ ಕುಸಿದು ಬಿದ್ದು ೩೩ ಜನರು ಮೃತರಾದರು.

ಜರ್ಮನಿಯ ಸಾಲ:—ಫ್ರೆಂಚರು ಆಕ್ರಮಿಸಿಕೊಂಡಿರುವ ಕೋಲೋನ್ ಎಂಬ ಜರ್ಮನ ನಗರದಲ್ಲಿರುವ ರೈಸ್‌ಬೇಂಕನ್ನು ಫ್ರೆಂಚರು ಶೋಧಿಸುವಾಗ ಭೂಮಿಯಲ್ಲಿ ಕಾನ್‌ಕ್ರೀಟ್ ತಳಪದಿಯಲ್ಲಿ ಬಚ್ಚಿಟ್ಟದ್ದ ೭೦೦ ಕೋಟಿ ಬಂಗಾರದ ಮಾರ್ಕುಗಳು ಸಿಕ್ಕಿದೆಯಂತೆ.

ಕಳ್ಳನ ದ್ರವ್ಯ:—ಅಲಿಬಾಬಾ ಎಂಬ ದರೋಡೆ ಕಳ್ಳನು ಸುಮಾರು ೧೦೦ ವರುಷಗಳ ಹಿಂದೆ ಅಲ್ಜೀರಿಯನ್ ಪರ್ವತಗಳಲ್ಲಿ ವಾಸಮಾಡುತ್ತಿದ್ದನು. ಈತನು ಆಗ ಸಂಪಾದನೆ ಮಾಡಿದ ೧೫ ಕೋಟಿ ಸವರನ್ ಬಾಳುವ ನಗನಾಣ್ಯಗಳನ್ನು ಎನೀನ ಎಂಬ ಸ್ಥಳದಲ್ಲಿ ಭೂಸ್ಥಾಪನೆ ಮಾಡಿದ್ದುದು ಈಗ ಪತ್ತೆಯಾಗಿದೆ. ಭೂಮಿಯಲ್ಲಿ ೧೫ ಗಜ ಆಳದ ಕೆಳಗೆ ೧೧೦೦ ಗಜ ಉದ್ದವಿರುವ ಒಂದು ಸುರಂಗಮಾರ್ಗವನ್ನು ಮಾಡಿ ಅಲ್ಲಿ ಅಪಾರವಾದ ಧನವನ್ನು ೧೬ ಪೆಟ್ಟಿಗೆಗಳಲ್ಲಿ ಹೂಳಿದ್ದನು. ಇದೆಲ್ಲಾ ಈಗ ಸರಕಾರದ ವಶವಾಗಿದೆ.

ಕೊಂದ ಪಾಪ ತಪ್ಪದು:—ಜಿನೇವಾದಲ್ಲಿ ಒಬ್ಬ ಮನುಷ್ಯನು ತನ್ನ ಹೆಂಡತಿಯನ್ನು ಅವಳ ಜೀವವಿಮೆಯ ಹಣದ ಆಸೆಗಾಗಿ ಕೊಂದ ಅಪರಾಧದ ಮೇಲೆ ನ್ಯಾಯಸ್ಥಾನದಲ್ಲಿ ವಿಚಾರಿಸಲ್ಪಡುವಾಗ್ಗೆ "ನಾನು ಅಪರಾಧ ಮಾಡಿದ್ದಲ್ಲಿ ದೇವರು ನನ್ನನ್ನು ನಾಶಪಡಿಸಲಿ" ಎಂದು ಕೈಜೋಡಿಸಿ ಹೇಳಿದ ಕೂಡಲೇ ಕೆಳಗೆ ಬಿದ್ದು ಪ್ರಾಣವನ್ನು ಬಿಟ್ಟನು. ನ್ಯಾಯಾಧೀಶನು ಅದನ್ನು ನೋಡಿ "ಅಪರಾಧಿಯು ಸರ್ವಶ್ರೇಷ್ಠವಾದ ನ್ಯಾಯಾಧೀಶನ ವಿಚಾರಣೆಗೊಳಗಾದನು" ಎಂದು ಹೇಳಿದನು.

ಅಗಾಧವಾದ ಮಕ್ಕಳ ಸಂತಾನ:—ಇಂಗ್ಲೆಂಡಿಗೆ ಸೇರಿದ ಉಡ್‌ಗ್ರೀನ್ ಎಂಬಲ್ಲಿ ೭೩ ವರುಷ ವಯಸ್ಸಿನ ವೃದ್ಧೆಯೊಬ್ಬಳಿರುವಳು. ಇವಳು ತನ್ನ ಬಳಿ ೬೮ ಮಕ್ಕಳನ್ನಿಟ್ಟುಕೊಂಡು ಪೋಷಿಸುತ್ತಿರುವಳು. ಇವುಗಳಲ್ಲಿ ೩೪ ಮಕ್ಕಳು ತನ್ನ ಹೊಟ್ಟೆಯಲ್ಲಿ ಹುಟ್ಟಿದುವುವು. ೧೭ ತನ್ನ ಎರಡನೆಯ ಗಂಡನಿಗೆ ಅವನ ಮೊದಲನೆಯ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದುವುವು. ಮತ್ತು ೧೭ ಸಾಕಲ್ಪಟ್ಟವುವು. ಇವಳ ಹೆಣ್ಣುಮಕ್ಕಳಲ್ಲೊಬ್ಬಳಿಗೆ ೧೫ ಮಕ್ಕಳು, ಇನ್ನಿಬ್ಬರಿಗೆ ೧೪-೧೪ ಮಕ್ಕಳು, ಮತ್ತಿಬ್ಬರಿಗೆ ೧೩-೧೩ ಮಕ್ಕಳು ಈ ಪ್ರಕಾರವಾಗಿರುವರು. ಈ ವೃದ್ಧೆಯೇ ತನ್ನ ತಾಯಿಗಿದ್ದ ೧೯ ಮಕ್ಕಳಲ್ಲೊಬ್ಬಳು ಮತ್ತು ಅವಳ ತಾಯಿಯಾದರೂ ಅವಳ ತಾಯಿಗಿದ್ದ ೧೩ ಮಕ್ಕಳಲ್ಲೊಬ್ಬಳಾಗಿದ್ದಳು. ಇದು ಎಂಥ ಅಗಾಧವಾದ ಮಕ್ಕಳಸಂತಾನ!

ವಿಷದ ನೊಣಗಳು:—ಡ್ಯಾನುಬ್ [illegible] ಒಂದು ವಿಧವಾದ ವಿಷದ ನೊಣಗಳು ಹಿಂಡುಹಿಂಡಾಗಿ ಹಾರಾಡುತ್ತಿರುವುವು. ಇವುಗಳ ಕಡಿತದಿಂದ ಆಗಲೇ ೧೫,೦೦೦ ದನಗಳೂ ಅನೇಕ ಮನುಷ್ಯರೂ ಮೃತರಾದರು.

ರಶಿಯದವರ ಯುದ್ಧದ ಸಿದ್ಧತೆ:—ಟೈಮ್ಸದ ಸುದ್ದಿಗಾರನು ತಿಳಿಸುವುದೇನೆಂದರೆ ಮೊಸ್ಕೋದಿಂದ ಬರುವ ಸುದ್ದಿಯ ಮೇಲಿಂದ ನೋಡಿದರೆ, ಸೋವ್ಯಿಯಟ ಸರಕಾರದವರು ಯುದ್ಧದ ಸಿದ್ಧತೆಯನ್ನು ಬಲವಾಗಿ ನಡಿಸಿರುವರು; ಮುಖ್ಯ ಸೇನಾಧಿಪತಿಗಳ ಸಭೆಯು ಆಗಾಗ್ಗೆ ಕೂಡುತ್ತಿದ್ದು [illegible] ಒಪ್ಪಿರುವರು. ಅನ್ನ ಸಾಮಗ್ರಿಗಳನ್ನು ಕೂಡಿಸಬೇಕೆಂದು ಸಾರಿರುವರು. ಕಪ್ಪು ಸಮುದ್ರದ ಹಾಗು ಬಾಲ್ಟಿಕ್ ಸಮುದ್ರದ ದಂಡೆಗಳನ್ನು ರಕ್ಷಿಸಬೇಕೆಂಬ ಬಗ್ಗೆ ವಿಶೇಷ ಎಚ್ಚರಿಕೆ ಕೊಟ್ಟಿರುತ್ತಾರೆ.

ಒಳದೇಶ ವರ್ತಮಾನ.

ಬಿರುಗಾಳಿಯ ಹಾವಳಿ:—ಕಲ್ಕತ್ತೆಯ ಸಮೀಪ ಚಿಟ್ಟಾಗೊಂಗ್ ಜಿಲ್ಲೆಯಲ್ಲಿ ಬಿರುಗಾಳಿಯು ಬೀಸಿ ಸುಮಾರು ೩೦೦ ಚದರ ಮೈಲುಗಳವರೆಗೆ ವ್ಯಾಪಿಸಿ, ೩೫,೦೦೦ ಜನರಿಗೆ ವಾಸಿಸಲು ನೆಲೆ ಇಲ್ಲದಂತೆ ಮಾಡಿದೆ. ೪೦೦೦ ಜಾನುವಾರುಗಳೂ ಮೂರು ಮಂದಿ ಮನುಷ್ಯರೂ ಪ್ರಾಣವನ್ನು ಕಳಕೊಂಡಿರುವರು. ದವಸಧಾನ್ಯಗಳು ಮತ್ತು ಉಳಿದ ಸಾಮಗ್ರಿಗಳು ಬಿರುಗಾಳಿಯ ಪಾಲಾಯಿತು.

ಹತ್ತು ವರುಷ ಪ್ರಾಯದ ಹುಡುಗಿಯ ಮರಣ:—ನೆಲ್ಲೂರು ಪೋಲೀಸ್ ಸಬ್ ಇನ್ಸ್‌ಪೆಕ್ಟರ ಮಿ. ಕೆ. ಶ್ರೀಹರಿರಾವ್ ಇವರಲ್ಲಿ ಹತ್ತು ವರುಷ ಪ್ರಾಯದ ಹುಡುಗಿಯೊಬ್ಬಳ ಅಪಮೃತ್ಯುವು ಸಂಭವಿಸಿತು. ಕಳೆದ ತಾರೀಕು ೧೧ನೆಯ ದಿನ ಪ್ರಾತಃಕಾಲ ೯ ಗಂಟೆಗೆ ನೆಲ್ಲೂರಿನ ಮುನ್ಸಿಪಲ್ ಕೌನ್ಸಿಲರ್ ಮಿ. ಅದಿನಾರಾಯಣಯ್ಯರೆಂಬವರ ಸಹೋದರಿಯಾದ ಹತ್ತು ವರುಷದ ಹುಡುಗಿಯು ತಮ್ಮ ಮನೆಯ ಎದುರಿನ ಮನೆಗೆ ಎಂದಿನಂತೆ ಹೋದಳು. ಈ ಮನೆಯಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ ಮಿ. ಶ್ರೀಹರಿರಾವ್ ಎಂಬವರು ವಾಸಿಸಿಕೊಂಡಿದ್ದರು. ಈ ಸಬ್ ಇನ್ಸ್‌ಪೆಕ್ಟರರ ಮಕ್ಕಳೊಡನೆ ಆಡುವುದು ಈ ಹುಡುಗಿಯ ಉದ್ದೇಶವಾಗಿತ್ತು. ಸಬ್ ಇನ್ಸ್‌ಪೆಕ್ಟರ ಮಿ. ಶ್ರೀಹರಿರಾಯರು ತಮ್ಮ ರಿವೋಲ್ವರನ್ನು ಒಂದು ಕೋಣೆಯಲ್ಲಿಟ್ಟು ಬೀಗಹಾಕಿದ್ದರು. ಆದರೆ ಇವರ ಹೆಂಡತಿಯು ಆ ಕೋಣೆಯ ಬೀಗದ ಕೈಯನ್ನು ತನ್ನ ಹತ್ತು ವರುಷದ ಮಗನೊಡನೆ ಕೊಟ್ಟುಬಿಟ್ಟಿದ್ದಳು. ಈ ಹುಡುಗನು ಆಡುತ್ತ ಆಡುತ್ತ ಕೋಣೆಯ ಬೀಗವನ್ನು ತೆಗೆದು ಬಾಗಿಲನ್ನು ತೆರೆದನು. ಇವನೊಡನೆ ಆಡುತ್ತಿದ್ದ ನೆರೆಮನೆಯ ಹುಡುಗಿಯೂ ಆ ಕೋಣೆಯನ್ನು ಪ್ರವೇಶಿಸಿ ಅಲ್ಲಿದ್ದ ರಿವೋಲ್ವರನ್ನು ತೆಗೆದು ಅದನ್ನು ಅಜಾಗ್ರತೆಯಿಂದ ಹಿಡಿದು ಆಡಿದಳು. ಇದರಿಂದ ಆಕೆಗೆ ಕಠಿಣ ತರದ ಗಾಯವಾಗಿ ಪ್ರಾಣವನ್ನು ಕಳಕೊಂಡಳು.

ಅಶ್ವತ್ಥಮರದ ಪ್ರಕರಣ:—ಕಲ್ಕತ್ತೆಯಲ್ಲಿ ಒಂದು ವಿಚಿತ್ರ ಅಶ್ವತ್ಥಮರದ ಪ್ರಕರಣವು ಸಂಭವಿಸಿತು. ಕಾರ್ಪೋರೇಷನ್ ಸ್ಟ್ರೀಟಿನಲ್ಲಿ ಒಂದು ಅಶ್ವತ್ಥವೃಕ್ಷವಿತ್ತು. ಅಲ್ಲಿ ಅಮರದಾಸ ಬಾದೇಸಿ [illegible] ಸಾಧುಗಳು ಕಳೆದ ೩೦ ವರುಷಗಳಿಂದ ನಿತ್ಯವೂ ಆ ವೃಕ್ಷಪೂಜೆಯನ್ನು ಮಾಡಿ ಧ್ಯಾನಿಸುತ್ತಿದ್ದರು. ಆ ಭೂಮಿಯ ಒಡೆಯರಾದ ಈ [illegible] ಎಂಬವರು ಸದರ ವೃಕ್ಷವನ್ನು ಕಡಿದು, ಅಲ್ಲಿ ಮತ್ತೊಂದು ಕಟ್ಟಡವನ್ನು ಕಟ್ಟಿಸಬೇಕೆಂದು ಆಲೋಚಿಸಿ, ಸಾಧು ಬಾದೇಸಿರವರಿಗೆ ಸ್ಥಳವನ್ನು ಬಿಟ್ಟು ಕೊಡಲು ಹೇಳಿದರು. ಸಾಧುಗಳು ಒಪ್ಪಲಿಲ್ಲ. [illegible] ಫಿರ್ಯಾದು ಮಾಡಿದರು. ಬಾದೇಸಿರವರು ೩೦ ವರುಷಗಳಿಂದ ತಾವು ಅಲ್ಲಿ ವೃಕ್ಷಕ್ಕೆ ಪೂಜೆಮಾಡಿ ವೃಕ್ಷಾಶ್ರಯದಲ್ಲಿ ಕಾಲಕ್ಷೇಪ ಮಾಡುತ್ತಿದ್ದೇವೆಂದು ಪ್ರತಿಪಾದಿಸಿದರು. ಮೆಜಿಸ್ಟ್ರೇಟರು ೫ ಪೂಟ ಜಾಗವನ್ನು ಸಾಧು ಬಾದೇಸಿರವರಿಗೆ ಬಿಟ್ಟುಕೊಡಬೇಕೆಂದು ತೀರ್ಮಾನಿಸಿದರು. ವಿರುದ್ಧ [illegible] ಇದೆಯೆಂದು [illegible].

[illegible]

ಪಂಡಿತ ಮದನಮೋಹನ ಮಾಲವೀಯರ ಪುತ್ರಿ:—ಕೆಲಕಾಲದಿಂದ ಅಸ್ವಸ್ಥರಾಗಿದ್ದ ಪಂಡಿತ ಮದನಮೋಹನ ಮಾಲವೀಯರ ಪುತ್ರಿಯವರು ಕಳೆದ ತಾರೀಕು ೩ರಲ್ಲಿ ವಿಧಿವಶರಾದರು.

ಖಿಲಾಫತ್ ಕಮ್ಮಿಟಿಯ ಅಧ್ಯಕ್ಷರು:—ಮಿ. ಶೇಟ ಛೋಟಾನಿಯವರು ತಮ್ಮ ಅಸ್ವಸ್ಥತೆಯ ಮೂಲಕ ಖಿಲಾಫತ್ ಕಮ್ಮಿಟಿಯ ಅಧ್ಯಕ್ಷಪದವಿಯನ್ನು ಬಿಟ್ಟು ಬಿಟ್ಟಿರುವರು. ಛೋಟಾನಿಯವರು ಖಿಲಾಫತ್ ಫಂಡಿಗೆ ೧೬॥ ಲಕ್ಷ ರೂಪಾಯಿಯನ್ನು ಕೊಡಬೇಕಾಗಿದೆ. ಈ ಋಣವನ್ನು ತುಂಬಿಸಲು ಇವರು ಮರಗಳನ್ನು ಸಿಗಿಯುವ ತಮ್ಮ ಎರಡು ಯಂತ್ರಗಳನ್ನು ವಿಕ್ರಯಿಸಲು ಒಪ್ಪಿರುವರು.

ಉಪ್ಪಿನ ತೆರಿಗೆ:—ವ್ಯಾಸರಾಯರು ಸರ್ಟಿಫಿಕೇಶನ್ ಅಧಿಕಾರಬಲದಿಂದ ಇಮ್ಮಡಿ ಮಾಡಿದ ಉಪ್ಪಿನ ತೆರಿಗೆಯನ್ನು ನಿಷೇಧಿಸಿ ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರರೂ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರೂ ಮಾಡಿದ ಮನವಿಯನ್ನು ಸರ್. ಥೋಮಸ್ ಬೆನ್ನೆಟ್ಟರವರು ಹೌಸ್ ಆಫ್ ಕೋಮನ್ಸ್‌ನ ಮುಂದಿಟ್ಟಿರುವರು.

ಮುಂಬಯಿ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರು:—ಸ್ವರ್ಗಸ್ಥರಾದ ಸರ್ ನಾರಾಯಣ ಚಂದಾವರಕರರ ಈ ಪದವಿಯಲ್ಲಿ ಸರ್ ಇಬ್ರಾಹಿಮ್ ರಹಿಮತ್ತುಲ್ಲಾ ಇವರನ್ನು ನೇಮಿಸಿದುದು ಈಗ ಮಂಜೂರಾಗಿದೆ.

ಮಿ! ಚಿಂತಾಮಣಿಯವರು:—ಬನಾರಸ್ ಮತ್ತು ಗೋರಖಪುರ ಡಿವಿಜನಿನಿಂದ ಮಿ! ಚಿಂತಾಮಣಿಯವರು ಲೆಜಿಸ್ಲೇಟಿವ್ ಎಸೆಂಬ್ಲಿಗೆ ಒಬ್ಬ ಉಮೇದುವಾರರಾಗಿರುವರು.

ಮುಸಾಮತ್ ಸುಮತಿ ಬಾಯಿ:—ಸ್ವರ್ಗಸ್ಥ ಮಥುರಾಪ್ರಸಾದ ಎಂಬವರ ವಿಧವೆ ಮುಸಾಮತ್ ಸುಮತಿ ಎಂಬ ಮಹಿಳೆಯು ಕನಕುಬ್ಜ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದರೂ ಆಕೆಯನ್ನು ಎಳೆ ಪ್ರಾಯದಲ್ಲೇ ಕ್ರೈಸ್ತ ಮತಕ್ಕೆ ಮತಾಂತರಗೊಳಿಸಿದ್ದರು. ಈ ಸ್ತ್ರೀಗೆ ಈಗ ೪೦ ವರುಷ ಪ್ರಾಯ. ಈ ಮಹಿಳೆಯು ಕಳೆದ ತಾರೀಕು ೨೭ರಲ್ಲಿ ತನ್ನ ಮಗಳಾದ ಮನೋರಮಾ ಎಂಬವಳ ಸಹಿತ ಆರ್ಯ ಸಮಾಜದವರಿಂದ ಶುದ್ಧಿ ಸಂಸ್ಕಾರವನ್ನು ಹೊಂದಿ ಹಿಂದೂ ಮತಕ್ಕೆ ಹಿಂತಿರುಗಿದಳು.

ಉಪ್ಪಿನ ತೆರಿಗೆ:—ವ್ಯಾಸರಾಯರು ಸರ್ಟಿಫಿಕೇಶನ ಅಧಿಕಾರದಿಂದ ಉಪ್ಪಿನ ತೆರಿಗೆಯನ್ನು ಇಮ್ಮಡಿ ಮಾಡಿದುದನ್ನು ನಿಷೇಧಿಸಿ, ಮಿ! ಹರಚಂದ್ರರೈ ವಿಶನ್‌ದಾಸ ಮತ್ತು ಮಿ! ಯಸ್.ಸಿ.ಯ ಶಹಾನಿಯವರು ಲೆಜಿಸ್ಲೇಟಿವ್ ಎಸೆಂಬ್ಲಿಯ ಸಭಾಸದತ್ವಕ್ಕೆ ರಾಜಿನಾಮೆಯನ್ನು ಕೊಟ್ಟಿದ್ದಷ್ಟೆ. ಇವರ ರಾಜಿನಾಮೆಯಿಂದ ಖಾಲಿಯಾದ ಸ್ಥಾನಗಳಿಗೆ ಇವರಿಬ್ಬರಲ್ಲದೆ ಬೇರೆ ಉಮೇದುವಾರರು ಮುಂದೆ ಬರಲಿಲ್ಲವಾದ್ದರಿಂದ ಇವರೇ ಪುನಃ ಆರಿಸಲ್ಪಡುವರು.

ದರಗಳನ್ನು ಕಡಿಮೆಮಾಡಿದುದರ ಪರಿಣಾಮ:—ಹೆಚ್ಚಿಸಿದ ಕರದಿಂದ ಹೆಚ್ಚಿನ ಮುನಾಫೆಯು ದೊರೆಯಬಹುದೆಂಬ ಆಲೋಚನೆಯಲ್ಲಿ ಇಂಡಿಯಾ ಸರಕಾರವು [illegible], ಪೋಸ್ಟ್ ಮತ್ತು ರೈಲ್ವೆ ಇಲಾಖೆಗಳ ದರಗಳನ್ನು ಅಸಾಧ್ಯ ಧಾರಣೆಗಳ ಮೇಲೆ ಇಟ್ಟಿರುವ ಕಾಲದಲ್ಲಿ ಬ್ರಿಟಿಷ ಸರಕಾರವು ಕ್ರಮೇಣ ಮತ್ತು ಕಾಲೋಚಿತವಾಗಿ ದರಗಳನ್ನು ಕಮ್ಮಿ ಕಮ್ಮಿ ಮಾಡಿಕೊಂಡು ಬರುತ್ತಾರೆ. ಇದೊಂದು ಇಲ್ಲಿಯ ಸರಕಾರಕ್ಕೆ ಅರ್ಥ ಶಾಸ್ತ್ರದ ಪಾಠವಲ್ಲವೇ? ಈ ಧಾರಣೆಗಳನ್ನು ಕಮ್ಮಿ ಮಾಡುವುದರಿಂದ, ಇಂಡಿಯಾ ಸರಕಾರವು ಹೆದರುವಂತೆ, ಕಂಪೆನಿಯ ಪಾಲುಗಾರರ ಮುನಾಫೆಯು ಕಡಿಮೆಯಾಗದೆ, ಒಂದು ಒಳ್ಳೇಯ ಸಂಖ್ಯೆಯ ರೂಪದಲ್ಲೇ ಬಂದು ನಿಂತಿರುವುದು.

(ಮುಂಬಯಿ ಕ್ರೊನಿಕಲ್.)

ದೀರ್ಘಕಾಲ ಬಾಳುವುದು ಹೇಗೆ:—ಸನ್ ೧೮೬೯ರಿಂದ ೧೯೦೯ರ ವರೆಗೆ ಹರ್ವಾರ್ಡ್ ಯೂನಿವರ್ಸಿಟಿಯ ಅಧ್ಯಕ್ಷರಾಗಿದ್ದ ಡಾ. ಚಾರ್ಲ್ಸ್ ಡಬ್ಲ್ಯು ಇಲಿಯಟ್ ಇವರು ಈಗ ತಾನೇ ೯೦ನೇ ವರುಷವನ್ನು ಪ್ರವೇಶಿಸಿರುವರು. ತನಗೆ ಅರ್ಪಿಸಿದ ಸನ್ಮಾನಗಳಿಗುತ್ತರವಾಗಿ ಅವರು ಹೀಗೆಂದು ತನ್ನಂತೆ ನಡಿಯತಕ್ಕವರಿಗೆ ಹೇಳಿರುವರು. "ಮಿತವಾಗಿ ಉಣ್ಣು, ಗಾವಕ್ಷಗಳನ್ನು ತೆರೆದಿಟ್ಟುಕೊಂಡು ಕನಿಷ್ಠಪಕ್ಷಕ್ಕೆ ರಾತ್ರಿ ಎಂಟು ಗಂಟೆಯಾದರೂ ನಿದ್ರೆಮಾಡು. ವಿಶಾಲವಾದ ವಾತಾವರಣದಲ್ಲಿ (open air) ತಂಪಾದ ವ್ಯಾಯಾಮಗಳನ್ನು ಮಾಡು. ಅಮಲು ಪದಾರ್ಥಗಳನ್ನು ತಿರಸ್ಕರಿಸು, ಸ್ವಾಭಾವಿಕವಾದ ಎಲ್ಲಾ ಸೊಬಗುಗಳಲ್ಲಿ ತಮ್ಮ ಮಿರದಂತೆ ಸುಖಿಸು. ಮತ್ತು ನಿನ್ನ ಪ್ರಕೃತಿಗೆ ಸಾಧ್ಯವಿರುವಷ್ಟು ಯಾವಾಗಲೂ ಮನೋಭಾವದಲ್ಲಿರು." (ಕ್ರಿಶ್ಚಿಯನ್ ವರ್ಲ್ಡ್)

ಅಹಮ್ಮದಾಬಾದ್:—ಗಿರಣಿಗಳ ಕೂಲಿಗಳ ಮುಷ್ಕರವು ಶಾಂತವಾಗಿದೆ.

ಪ್ರಿನ್ಸಿಪಲ್ ಕವಾಜಾ:—ಅಲಿಘರ ನೇಶನಲ್ ಮುಸ್ಲಿಂ ಯೂನಿವರ್ಸಿಟಿಯ ಅಧ್ಯಕ್ಷರಾದ ಮಿ. ಕವಾಜರವರು ಓಲ್ ಇಂಡಿಯಾ ಕೊಂಗ್ರೆಸ್ಸಿನ ಕಾರ್ಯಕಾರಿ ಕಮ್ಮಿಟಿಯ ಸಭಾಸದರಾಗಲು ತಮಗೆ ಸಮ್ಮತಿ ಇಲ್ಲವೆಂದು ತಿಳಿಸಿರುವರು.

ಚಕ್ರವರ್ತಿಯವರ ಜನ್ಮದಿನದ ಬಹುಮಾನ:—[illegible] ಮಿ. ಶಫಿಯವರು ತಮ್ಮ ಖಾನ್‌ಸಾಹೇಬ್ ಬಿರುದನ್ನು ನಿರಾಕರಿಸಿರುವರೆಂದು ರಂಗೂನ್ ಡೈಲಿ ನ್ಯೂಸ್ ಪ್ರಕಟಿಸಿರುತ್ತದೆ.

ನಾಗಪುರ ಸತ್ಯಾಗ್ರಹ:—ಕಳೆದ ತಾರೀಕು ೩ರಲ್ಲಿ ಸುಭದ್ರಾ ಕುಮಾರಿ [illegible] ಮಂದಿಗಳು ಕೈದು ಮಾಡಲ್ಪಟ್ಟರು. [illegible] ಅನಂತರ ಬಿಟ್ಟು ಬಿಟ್ಟಿರುವರು. ಕಳೆದ ತಾರೀಕು ೪ರ ವರೆಗೆ [illegible] ಮಂದಿಗಳು ಕೈದುಮಾಡಲ್ಪಟ್ಟರು.

ಕರ್ನಾಟಕ ವೈಭವ:—[illegible] ಹಣವನ್ನು ತೆಗೆದುಕೊಳ್ಳಬೇಕೆಂದು ಅವರ ಆಸ್ತಿಯನ್ನು ಸರಕಾರದವರು ಜಪ್ತಿಮಾಡುವರಂತೆ.

ಪಂಡಿತ ಜವಾಹಿರಲಾಲ ನೇಹರೂಗಳವರು:—ಇವರು ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಕಾರ್ಯದರ್ಶಿಗಳಾಗಲು ಒಪ್ಪಿರುವುದರಿಂದ ಅಲಹಾಬಾದ ಮುನ್ಸಿಪಾಲಿಟಿಯ ಅಧ್ಯಕ್ಷಸ್ಥಾನ ಪದವಿಗೆ ರಾಜಿನಾಮೆಯನ್ನು ಕೊಡುವರೆಂಬ ವಾರ್ತೆಯಿದೆ.

ದೇಶಬಂಧು ದಾಸರು:—ಇವರು ಕಳೆದ ತಾ. ೩ಕ್ಕೆ ನೆಲ್ಲೂರಿಗೆ ತಲುಪಿದರು. ಗಾಂಧಿ ಮೈದಾನಿನಲ್ಲಿ ಇವರ ಒಂದು ಭಾಷಣವು ನಡೆಯಿತು.

ಮುಂಬಯಿ:—[illegible] ಮಿಲ್ಲಿನ ಕೂಲಿಕೆಲಸದ ೨೦೦೦ ಜನರು ಮುಷ್ಕರವನ್ನು ಹಿಡಿದಿರುತ್ತಾರೆ.

ನಾಗಪುರ ಸತ್ಯಾಗ್ರಹ:—ಕಳೆದ ತಾ. ೩ರಲ್ಲಿ ನಾಗಪುರದಲ್ಲಿ ಸ್ವಯಂಸೇವಕರು ಸತ್ಯಾಗ್ರಹವನ್ನು ನಡಿಸುತ್ತಿರುವಾಗ [illegible] ಅಜದ ಸೋಬಾನಿ ಮತ್ತು ಶ್ರೀಮತಿ ಸರೋಜಿನಿ ನಾಯುಡುರವರು ಹಾಜರಿದ್ದರು. ಸ್ವಯಂಸೇವಕರನ್ನು ಕೈದುಮಾಡಿದಾಗ ಮೌಲಾನಾ ಅಜದ ಸೋಬಾನಿಯವರು ಒಂದು ಭಾಷಣವನ್ನು ಮಾಡಿದರು. ಈ ಭಾಷಣದಲ್ಲಿ ಅವರು ಕಾನೂನು ಭಂಗವನ್ನು ಜಾರಿಗೆ ತರುವುದು ಅಸಾಧ್ಯವೆಂದು ಇಡೀ ದೇಶದಲ್ಲಿ ಅನೇಕರು ನಿಶ್ಚಯಿಸಿದಾಗ ನಾಗಪುರದಲ್ಲಿ ಹೆಚ್ಚಿನ ಧೈರ್ಯದಿಂದ ಈ ಸತ್ಯಾಗ್ರಹವನ್ನು ಜಾರಿಗೆ ತಂದದ್ದು ಸ್ತುತ್ಯಾರ್ಹವಾಗಿದೆ ಎಂದು ನಾಗಪುರದ ಜನರನ್ನೂ ಈ ಹೋರಾಟದ ಮುಖ್ಯ ಚಾಲಕರಾದ ಶೇಟ್ ಜಮುನಾಲಾಲ ಬಾಜಜರನ್ನೂ ಕೊಂಡಾಡಿದರು. ಶ್ರೀಮತಿ ಸರೋಜಿನಿಯವರು, ಇದು ಕಾನೂನುಭಂಗವಲ್ಲ, ಪರಂತು ಸ್ವಾತಂತ್ರ್ಯದ ಹಕ್ಕಿಗಾಗಿ ನಡಿಸುವ ಸತ್ಯಾಗ್ರಹದ ಹೋರಾಟ. ಇದನ್ನು ಸಂಪೂರ್ಣ ಸ್ವಾರ್ಥತ್ಯಾಗದಿಂದ ಮುಂದರಿಸಬೇಕಾಗಿದೆ. ಅಗತ್ಯವಿದ್ದರೆ ಇಡೀ ಹಿಂದೂಸ್ಥಾನವು ಈ ಹೋರಾಟವನ್ನು ಮುಂದರಿಸಲು ಸಹಾಯಕವಾಗುವುದೆಂದು ಹೇಳಿದರು.

ದೇಶಭಕ್ತ ಲಾಲಾ ಲಜಪತರಾಯ:—ಲಾಹೋರ ಜೈಲಿನಲ್ಲಿ ಲಾಲಾ ಲಜಪತರಾಯರಿಗೆ ಈಗ ಜ್ವರದ ಪೀಡನೆಯು ಪ್ರಾರಂಭವಾಗಿದೆಂದು ಅಲ್ಲಿಯ ಪತ್ರಿಕೆಗಳು ಪ್ರಕಟಿಸುತ್ತವೆ.

ದೇಶಬಂಧು ದಾಸರು:—ದೇಶಬಂಧು ದಾಸರು ಇದೇ ಬರುವ ತಾರೀಕು ೧೬ರಕ್ಕೆ ಸೇಲಮಿಗೆ ತಲುಪಿ, [illegible] ಎಂಬಲ್ಲಿಗೆ ಹೋಗಿ ಅಲ್ಲಿ ಭಾರತಮಾತಾ ದೇವಸ್ಥಾನದ ಬುನಾದಿಕಲ್ಲನ್ನು ಹಾಕುವ ಕಾರ್ಯವನ್ನು ನೆರವೇರಿಸುವರು.

೧೩ ಮಂದಿ ಯಾತ್ರಸ್ಥರ ಮರಣ:—ಕಳೆದವಾರದ ಬುಧವಾರ ದಕೋರ್ ಎಂಬಲ್ಲಿ ೩೦ ಮಂದಿ ಯಾತ್ರಸ್ಥರು ಒಂದು ದೋಣಿಯಲ್ಲಿ ಕೂತು ಗೋಮತಿ ಎಂಬ ಕೆರೆಯನ್ನು ದಾಟಿ, ಒಂದು ದೇವಸ್ಥಾನದಿಂದ ಇನ್ನೊಂದು ದೇವಸ್ಥಾನಕ್ಕೆ ಹೋಗುತ್ತಿರುವಾಗ ದೋಣಿಯ ಭಾರವು ಹೆಚ್ಚಾಗಿ ದೋಣಿಯು ಮುಳುಗಿತು. ಹೀಗೆ ಬಿದ್ದ ಜನರು ಎಷ್ಟು ಕೂಗಿದರೂ ೫ ಮಿನಿಟುಗಳ ವರೆಗೆ ಇವರಿಗೆ ಸಹಾಯವು ಒದಗಲೇ ಇಲ್ಲ. ನಾಲ್ಕು ಮಂದಿಗಳು ಈಜಿಕೊಂಡು ದಡವನ್ನು ಸೇರಿದರು. ೮ ಮಂದಿಗಳನ್ನು ಬೇರೆ ದೋಣಿಯ ಮೂಲಕ ಬದುಕಿಸಲಾಯಿತು. ಹೇಗೂ ಒಟ್ಟಾರೆ ೧೭ ಮಂದಿಗಳ ಪ್ರಾಣವು ಉಳಿಸಲಾಯಿತು. ೧೩ ಮಂದಿಗಳು ಪ್ರಾಣವನ್ನು ಕಳಕೊಂಡರು. ಭಾರವು ಮಿತಿಮೀರುವ ವರೆಗೆ ದೋಣಿಯಲ್ಲಿಯೂ ಇತರ ಯಾನಗಳಲ್ಲಿಯೂ ಕೂತುಕೊಂಡು ನೀರಿನಲ್ಲಿ ಪ್ರಯಾಣಮಾಡುವವರಿಗೆ ಇದೊಂದು ಎಚ್ಚರಿಕೆ.

ದೇಶಬಂಧು ದಾಸರು:—ಕಳೆದ ಶನಿವಾರ ಮದ್ರಾಸಿನಲ್ಲಿ ದೇಶಬಂಧು ದಾಸರು ಮಜೂರರ ಸಭೆಯಲ್ಲಿ ಒಂದು ಭಾಷಣವನ್ನು ಸಾಯಂಕಾಲ ೪-೩೦ ಗಂಟೆಗೆ ಮಾಡುವರೆಂದು ಪ್ರಕಟಿಸಿತ್ತು. ಅದರಂತೆ ಬಕಿಂಗ್ ಹೇಮ್ ಮತ್ತು ಕರ್ನಾಟಿಕ್ ಮಿಲ್ಲ ಮೊದಲಾದ ಕಾರ್ಖಾನೆಗಳ ಮಜೂರರು ಸಭೆಕೂಡಿದರು. ಆದರೆ ದೇಶಬಂಧುಗಳಿಗೆ ಥಕ್ಕನೆ ದೇಹಾಲಸ್ಯ ಉಂಟಾದ್ದರಿಂದ ಈ ಸಭೆಗೆ ಹಾಜರಾಗಿ ಭಾಷಣಕೊಡಲು ಆಗಲಿಲ್ಲ. ಕೊನೆಗೆ ಇವರ ಬದಲಿಗೆ ಇವರೊಡನೆ ಬಂದಿರುವ ಮಿ! ಫೂಕನ್‌ರವರು ಬಂದು "ರಾಜಕೀಯ ವಿಚಾರದಲ್ಲಿ ಮಜೂರರ ಕರ್ತವ್ಯವೇನು? ಎಂಬುದನ್ನು ಕುರಿತು ಭಾಷಣಮಾಡಿದರು. ಈ ಸಭೆಗೆ ಹಾಜರಾಗಿ ಭಾಷಣಮಾಡಲು ಉಂಟಾದ ಅನಾನುಕೂಲತೆಯ ಬಗ್ಗೆ ದೇಶಬಂಧುಗಳು ಕ್ಷಮಾಪಣೆಯನ್ನು ಕೇಳಿರುತ್ತಾರೆ.

ಪಾರ್ಸಿಗಳ ಸ್ಮಶಾನ:—ಪಾರ್ಸಿಗಳ ಬಗ್ಗೆ ಒಂದು [illegible] ಸ್ಮಶಾನವನ್ನು ತಯಾರಿಸಲು ಮುಂಬಯಿ ಮುನ್ಸಿಪಾಲಿಟಿಯವರು ಒಂದು ಎಕ್ರೆ ಸ್ಥಳವನ್ನು ಕೊಡಬಹುದೆಂದು ಕಮ್ಮಿಶನರು ಶಿಫಾರಸು ಮಾಡಿರುವರು.

ಅತಿ ಸುಲಭ ದರ! ಅತ್ಯುತ್ತಮ ಮಾಲು!

ವಿದ್ಯಾರ್ಥಿಗಳಿಗೆ ಅಪೂರ್ವ ಸಂದರ್ಭ!

ನಮ್ಮಲ್ಲಿ ಯಾವಾಗಲೂ ಶಾಲಾ ವಿದ್ಯಾರ್ಥಿಗಳಿಗೆ ಬೇಕಾದ ಎಕ್ಸರ್‌ಸೈಜ್ ಪುಸ್ತಕಗಳು, ಮೇಪ್ ಡ್ರೋಯಿಂಗ್, ಡ್ರೋಯಿಂಗ್ ಪುಸ್ತಕಗಳು, ಗ್ರೇಸ್ ಪುಸ್ತಕಗಳು, ನೋಟು ಬುಕ್ಕುಗಳು, ಕೊಂಪಾಸ್ ಬೋಕ್ಸ್, ಬಣ್ಣದ ಪೆನ್ಸಿಲು, ಫೂಟ್ ರೋಲ್ಸ್, ಶಾಯಿ ಗುಳಿಗೆ, ಇತ್ಯಾದಿ ಎಲ್ಲಾ ಸ್ಟೇಶನರಿ ಸಾಮಾಗ್ರಿಗಳು ಬಹಳ ಕಡಿಮೆ ದರದಲ್ಲಿ ಮಾರಲ್ಪಡುವುದು. ಶಾಲಾ ಹುಡುಗರಿಗೆ ಬೇಕಾದ ಎಲ್ಲಾ ನಮೂನೆಯ ಪಾಠ ಪುಸ್ತಕಗಳು ಸಹ ದೊರಕುವವು. ಇದಲ್ಲದೆ ಶಾಲಾ ಪುಸ್ತಕಗಳ ಮೇಲೆ ರೂಪಾಯಿಯ ಮೇಲೆ ಒಂದು ಆಣೆಯಂತೆ ಡಿಸ್ಕೌಂಟು ದೊರಕುವುದು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ—
ಸ್ಪೆಶಲ್ ಕೊಂಗ್ರೆಸಿನ ಶುಷ್ಕವಾದ ೬
ಸ್ಫುಟವಿಚಾರಗಳು.— ೬-೭
೧. ಬ್ರಿಟಿಷ ಸಾಮ್ರಾಜ್ಯದ ಮುಖ್ಯ ಮಂತ್ರಿಗಳು. "
೨. ಸ್ವರಾಜ್ಯವೇ ಹಿಂದೂಸ್ಥಾನದ ಅಂತಿಮ ಧ್ಯೇಯ. "
೩. ಬೇಸಾಯ ಅಭಿವೃದ್ಧಿಯ ಸೂಚನೆ. "
೪. ಮಲಕಾನಾ ರಜಪೂತರು. "
೫. ಮಲಬಾರದಲ್ಲಿ ಅಖಿಲ ಹಿಂದು ಸಭೆ "
೬. ಕೆನಿಯದ ಮೂಲ ನಿವಾಸಿಗಳು. "
೭. ಅರ್ಲ ವಿಂಟರ್ ಟರ್ ಸಾಹೇಬರು. "
ಮಂಗಳೂರು— ೮
ದಕ್ಷಿಣಕನ್ನಡ—ಸುರತಕಲ್ಲು, ಬಂಟವಾಳ, ಮಂಜೇಶ್ವರ "
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೫
ಪತ್ರ ವ್ಯವಹಾರ "
ಹೊಗೆಸೊಪ್ಪು ಸೇದುವುದರಿಂದ ಉಂಟಾದ ದೋಷಗಳು. ೪

ಸ್ವದೇಶಾಭಿಮಾನಿ.

ಶಕ ೧೮೪೫ ಅಧಿಕ ಜ್ಯೇಷ್ಠ ಬ|| ೧೧ಯು ಶುಕ್ರವಾರ

ಸ್ಪೆಶಲ್ ಕೊಂಗ್ರೆಸಿನ ಶುಷ್ಕವಾದ.

ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಮುಂಬಯಿಯ ಅಧಿವೇಶನದಲ್ಲಿ ಕೌನ್ಸಿಲ್ ಬಹಿಷ್ಕಾರದ ತಾತ್ಕಾಲಿಕ ನಿವೃತ್ತಿಯ ಠರಾವು ಬಹುಮತದಿಂದ ಪಾಸಾದ ಬಳಿಕ ಯಾವ ಅಲ್ಪಮತದವರಿಗೆ ಇದು ಅಮಾನ್ಯವಾಗಿರುವುದೊ ಅವರು ಈಗ ಹುಳಿಮೋರೆ ಮಾಡಿಕೊಂಡು ಮುಂದಿನ ದೇಶಕಾರ್ಯದಲ್ಲಿ, ಅಥವಾ ಕಡಿಮೆ ಪಕ್ಷದಲ್ಲಿ, ಈಗಿನ ಐಕ್ಯದಲ್ಲಿ ವಿಘ್ನವನ್ನು ತರಲು ಕೃತಸಂಕಲ್ಪರಾಗಿದ್ದಾರೆಂದು ತಿಳಿಸಲು ನಮಗೆ ವಿಷಾದವಾಗುವುದು. ಈ ಅಲ್ಪಮತದ ಜನರಲ್ಲಿ ಆಚಾರ್ಯ ಪದಸ್ಥರಾದ ರಾಜಗೋಪಾಲರು ಧುರೀಣರಾಗಿರುವರು. ಗಯಾ ಕೊಂಗ್ರೆಸಿನಲ್ಲಿ ನಿರ್ಣೀತವಾದ ಠರಾವನ್ನು ರದ್ದುಪಡಿಸಲು ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಗೆ ಅಧಿಕಾರವಿಲ್ಲವೆಂದು ಇವರ ಅಂಬೋಣವು. ಆಚಾರ್ಯ ಮಹಾಶಯರ ಈ ಶಾಸ್ತ್ರಾರ್ಥವು ಎಷ್ಟರ ಮಟ್ಟಿಗೆ ಸಾಧಾರವಾಗಿದೆ ಎಂಬುದನ್ನು ಈ ಹೊತ್ತು ಪರೀಕ್ಷಿಸುವುದು ಅವಶ್ಯಕವಾಗಿದೆ. ವಸ್ತುತಃ ರಾಜಗೋಪಾಲರ ಈ ಮತವು, ಮೂರು ನಾಲ್ಕು ಜನ ಪ್ರಾಂತಿಕ ಮುಖಂಡರನ್ನು ಬಿಟ್ಟರೆ ಬೇರೆ, ಯಾರಿಗೂ ಮಾನ್ಯವಲ್ಲ. ಬೇಡಬದಲಾವಣೆಯ ಪಕ್ಷದಲ್ಲಿ ಅಗ್ರಸ್ಥಾನವನ್ನು ವಹಿಸಿದ 'ಸ್ವರಾಜ್ಯ' ಪತ್ರಿಕೆ ಮತ್ತು (ಅದರ ಸಂಪಾದಕರಾದ ಟಿ. ಪ್ರಕಾಶಂ ಇವರು), 'ಹಿಂದು' ಪತ್ರಿಕೆ, ಮುಂಬಯಿಯ 'ಕ್ರೊನಿಕಲ್' ಪತ್ರಿಕೆ ಇವು ಮುಂಬಯಿಯ ಐಕ್ಯವನ್ನು ಪ್ರಶಂಸಿಸಿ, ಆ ಐಕ್ಯದ ಹಾಲಿನಲ್ಲಿ ವಿರುದ್ಧ ಚಳವಳದ ಉಪ್ಪಿನ ಹರಳನ್ನು ಹಾಕುವುದು ತುಂಟುತನದ ಕೆಲಸವಾಗಿದೆಯೆಂದು ಅಭಿಪ್ರಾಯ ಪಡುತ್ತಿದ್ದಾವೆ. ಟ್ರಿಬ್ಯೂನ್, ಅಮೃತಬಝಾರ ಮುಂತಾದ ಪತ್ರಗಳು ಮೂಲತಃ ರಾಷ್ಟ್ರೀಯ ಪಕ್ಷದವುಗಳು. ಅವು ಮುಂಬಯಿಯ ನಿರ್ಣಯವನ್ನು ಅನುಮೋದಿಸಿದ್ದು ಆಶ್ಚರ್ಯವಲ್ಲ. ಪರಂತು 'ಸ್ವರಾಜ್ಯ' ಅಥವಾ 'ಹಿಂದು' ಇವು ಇದುವರೆಗೆ ಬೇಡಬದಲಾವಣೆಯನ್ನು ಸಮರ್ಥಿಸುತ್ತಿದ್ದವುಗಳು. ಈ ಹೊತ್ತು ಮುಂಬಯಿಯ ಬದಲಾವಣೆಯನ್ನು ಒಪ್ಪಿಕೊಳ್ಳುತ್ತಿದ್ದದ್ದು ಆಶ್ಚರ್ಯವಲ್ಲವೆ ಎಂದು ಹಲವರು ನೆನಸಿಯಾರು. ಹಾಗು ಈ ಪತ್ರಿಕೆಗಳ ಮೇಲೂ ಮತ್ತು ಶ್ರೀಮತೀ ಸರೋಜಿನೀ ಮುಂತಾದವರ ಮೇಲೂ ವೈಷಾಂಗತ್ಯದ ದೋಷವನ್ನು ಕೂಡ ಹಾಕಿಯಾರು. ಪರಂತು ಈ ಪತ್ರಿಕೆಗಳಾಗಲಿ ಅಥವಾ ವ್ಯಕ್ತಿಗಳಾಗಲಿ ಮುಂಬಯಿಯ ಠರಾವನ್ನು ಸಮ್ಮತಿಸುತ್ತವೆ ಎಂದು ಅರ್ಥವಲ್ಲ, ಆದರೆ ಯಾವ ವಿಧದಿಂದಲಾದರೂ ಕೊಂಗ್ರೆಸಿನಲ್ಲಿ ಭೇದವು ಬೇಡ, ಐಕ್ಯವಿರಬೇಕೆಂಬ ಭಾವನೆಯಿಂದ ಸರೋಜಿನಿಯವರಾಗಲಿ ಅಥವಾ ಪ್ರಕಾಶಂರಾಗಲಿ ಮುಂಬಯಿಯ ಬದಲಾವಣೆಗೆ ತಮ್ಮ ಬೆಂಬಲವನ್ನು ಕೊಡುತ್ತಿದ್ದಾರೆ. ಸಾರಾಂಶ, ಯಾವ ದೃಷ್ಟಿಯಿಂದಲೆ ಆಗಲಿ, ಮುಂಬಯಿಯ ಠರಾವನ್ನು ಉನ್ಮೂಲಿಸಲು ರಾಜಗೋಪಾಲಾಚಾರ್ಯರು, ಅವರ ಇಬ್ಬರು ಮೂವರು ಸ್ನೇಹಿತರು, ಅವರ ಅವಯವವಾದ 'ಯಂಗ್ ಇಂಡಿಯಾ ಪತ್ರಿಕೆ' ಇಷ್ಟನ್ನು ಬಹಿಷ್ಕರಿಸಿದರೆ ಮಿಕ್ಕವರು ಯಾವ ಮನಸ್ಸು ಮಾಡುವುದಿಲ್ಲ. ಆದರೆ ಇದಕ್ಕೊಂದು ನಮ್ಮ ಕರ್ನಾಟಕದ ಅಪವಾದವಿದೆ. ನಮ್ಮ ಕರ್ನಾಟಕದಲ್ಲಿ ಕೊಂಗ್ರೆಸಿನ ಕಾರ್ಯ ಕ್ಷೇತ್ರದಲ್ಲಿ ಓಡ್ಯಾಡುತ್ತಿದ್ದ ಸಾಮಾನ್ಯ ಎಲ್ಲ ವ್ಯಕ್ತಿಗಳು ಮತ್ತು ಅವರ ಹಲವು ಪತ್ರಿಕೆಗಳು ರಾಜಗೋಪಾಲಾಚಾರ್ಯರ ಹಾಡಿಗೆ ಹಿಂದಿನಿಂದ ಶ್ರುತಿ ಕೊಡುತ್ತಿದ್ದಾವೆ. ಆದ್ದರಿಂದ ಈ ಸ್ಪೆಶಲ್ ಕೊಂಗ್ರೆಸ್ಸಿನ ಶುಷ್ಕವಾದವು ಎಷ್ಟರ ಮಟ್ಟಿಗೆ ಅಪ್ರಯೋಜಕವೆಂಬುದನ್ನು ಈ ಹೊತ್ತು ವಾಚಕರ ಮುಂದಿಡಬೇಕಾಗಿದೆ.

ಗಯಾ ಕೊಂಗ್ರೆಸಿನ ಮಹಾ ಸಭೆಯಲ್ಲಿ ನಿರ್ಣಯಿಸಲ್ಪಟ್ಟ ಅಂಶವನ್ನು ಓಲ್ ಇಂಡಿಯಾ ಕೊಂಗ್ರೆಸಿನ ಚಿಕ್ಕ ಸಭೆಯಲ್ಲಿ ತಿದ್ದುವುದು ಅಥವಾ ಖಂಡಿಸುವುದು ಯೋಗ್ಯವಲ್ಲ, ನ್ಯಾಯವಲ್ಲ, ಸನದುಶೀರಲ್ಲ, ಎಂದು ಅಲ್ಪಮತದವರ ಮುಖ್ಯ ಆಕ್ಷೇಪವು. ಇದರ ಉತ್ತರವು ಎಷ್ಟು ಸುಲಭವಿದೆ ಎಂದರೆ, ಮೇ ತಾ. ೧೫ರಲ್ಲಿ ತ್ರಿಚ್ಚಿಯಲ್ಲಿದ್ದ ರಾಜಗೋಪಾಲಾಚಾರ್ಯರು "ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಗೆ ಇಂಥ ಅಧಿಕಾರವಿದೆ, ಅದಕ್ಕಾಗಿ ಸ್ಪೆಶಲ್ ಕೊಂಗ್ರೆಸ್ಸು ಅಗತ್ಯವಿಲ್ಲ" ಎಂದು ಹೇಳಿ, ಈಗಿನ ರಾಜಗೋಪಾಲಾಚಾರ್ಯರಿಗೆ ನಿರುತ್ತರನ್ನಾಗಿ ಮಾಡಿದ್ದಾರೆ!! ಬೇರೆ ಮಾತಿನಿಂದ ಮೇ ೧೫ರಲ್ಲಿ ರಾಜಗೋಪಾಲಾಚಾರ್ಯರು ಯಾವ ಮತವನ್ನು ಮತ್ತು ಯಾವ ಶಾಸ್ತ್ರಾರ್ಥವನ್ನು ಪ್ರತಿಪಾದಿಸುತ್ತಿದ್ದರೊ ಅದಕ್ಕೆ ಎದುರಾಗಿಯೆ ಈಗ ಅವರು ಭಾಷಣ ಮಾಡುತ್ತ ತಿರುಗುತ್ತಿದ್ದಾರೆ. ಅಂದು ಅವರು ತ್ರಿಚ್ಚಿಯ ಸಭೆಯಲ್ಲಿ ಸ್ಪಷ್ಟವಾಗಿ ಕೌನ್ಸಿಲ್ ಪ್ರವೇಶದ ನಿರ್ಣಯವನ್ನು ಮಾಡಲು ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯೆ ಸಾಕು, ಜಾದಾ ರಾಷ್ಟ್ರೀಯ ಸಭೆಯ ಪ್ರಯಾಸವು ಬೇಡ ಎಂದು ಹೇಳಿ ಈ ಮುಂಬಯಿಯ ಅಧಿವೇಶನಕ್ಕೆ ಎಲ್ಲ ಪ್ರತಿನಿಧಿಗಳಿಗೆ ತಪ್ಪದೆ ಬರಲು ಅತ್ಯಾಗ್ರಹದಿಂದ ಆಮಂತ್ರಿಸಿದ್ದರು. ಅವರೆ ಈ ಹೊತ್ತು ಸ್ವಮತ ವಿರೋಧವನ್ನು ಮಾಡುವುದು ಆಶ್ಚರ್ಯವಲ್ಲವೆ? ಅಥವಾ ಇದು ರಾಜಗೋಪಾಲಾಚಾರ್ಯರ ಪಾಲಿಗೆ ಆಶ್ಚರ್ಯದ ಸಂಗತಿಯಲ್ಲ. ಯಾಕೆಂದರೆ, ಸಿವಿಲ್‌ಡಿಸ್ ಒಬ್ಬೀಡಿಯನ್ಸ್ ಕಮಿಟಿಯಲ್ಲಿ ಅವರು ತನ್ನ ಸ್ವಂತ ಸಹಿಯಿಂದ ಯಾವ ಬಹಿಷ್ಕಾರಗಳನ್ನು ವಿಸರ್ಜಿಸಿದ್ದರೊ ಅವುಗಳನ್ನೆ ಪುನಃ ಗಯಾದಲ್ಲಿ ಮಂಡಿಸಿ ಸ್ವಮತ ವಿರೋಧವನ್ನು ಸ್ಥಾಪಿಸಿದ್ದಾರೆ. ಈ ರೀತಿಯಿಂದ ಅವರಿಗೆ ತಾನೆ ತನ್ನನ್ನು ಎದುರಿಸಿಕೊಳ್ಳುವ ಅಭ್ಯಾಸವು ಮುಂಚಿನಿಂದಲೆ ಇರುವುದರಿಂದ ಈಗಲೂ ಅದನ್ನೆ ಮಾಡುವುದು ಆಶ್ಚರ್ಯಕರವಲ್ಲ. ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ನಿರ್ಣಯದ ದ್ರಾಕ್ಷೆಯು ಸ್ವಮತಕ್ಕೆ ಅನುಕೂಲವಾಗದೆ ಇದ್ದ ಕಾರಣ ಈಗ ರಾಜಗೋಪಾಲರಿಗೆ ಹುಳಿಯಾಗಿ ತೋರಿದರೂ, ಮುಂಚೆ ಅವರ ದೃಷ್ಟಿಯಿಂದಲೆ ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಗೆ ಇಂಥ ಅಧಿಕಾರವು ನಿರಪವಾದವಾಗಿ ಇತ್ತು. ಇದಕ್ಕೆ ಅವರ ಪರಾತ್ಪರ ಗುರುಗಳಾದ ಮಹಾತ್ಮಾಜೀಯವರ ಬಾರಡೋಲಿಯ ದೃಷ್ಟಾಂತವನ್ನು ಎತ್ತಿ ಹೇಳಬಹುದು. ಅಹಮದಾಬಾದ ಕೊಂಗ್ರೆಸಿನಲ್ಲಿ ಸಿವಿಲ್ ಡಿಸ್ ಒಬ್ಬೀಡಿಯನ್ಸಿನ ಮುಖ್ಯ ಠರಾವನ್ನು ತಂದು ಸ್ವತಃ ಮಹಾತ್ಮಾಜೀಯವರೆ ಸಮರ್ಥಿಸಿ ಪಾಸುಮಾಡಿಸಿದ್ದು ಎಲ್ಲರಿಗೂ ನೆನಪಿನಲ್ಲಿರಬಹುದು. ಈ ಠರಾವಿನ ಆಶಯಕ್ಕನುಸಾರವಾಗಿ ಗುಜರಾಥ ಪ್ರಾಂತದ ಬಾರಡೋಲಿ ಮತ್ತು ಆನಂದ ಎಂಬ ಕಡೆಗಳಲ್ಲಿ ಸಾರ್ವತ್ರಿಕ ಕಾಯಿದೆ ಭಂಗವೂ ಮತ್ತು ಇತರ ಪ್ರಾಂತಗಳಲ್ಲಿ ವೈಯಕ್ತಿಕ ಕಾಯಿದೆ ಭಂಗವೂ ಆಗುವವಿದ್ದವು. ಈ ಅಹಮದಾಬಾದಿನ ಕೊಂಗ್ರೆಸಿಗಿಂತ ಮುಂಚೆ ಡಿಲ್ಲಿಯಲ್ಲಿ ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಅಧಿವೇಶನದಲ್ಲಿ ವರ್ಕಿಂಗ್ ಕಮಿಟಿಯ ಸೂಚನಾನುರೋಧದಿಂದ ಮೇಲಿನ ಠರಾವು ಪಾಸಾಗಿತ್ತು. ಅನಂತರ ಅಹಮದಾಬಾದದ ಮಹಾ ಸಭೆಯಲ್ಲಿ ಎರಡನೆಯ ಸಾರಿ ಅದೆ ಪಾಸಾಯಿತು. ಈ ಮೇರೆಗೆ ಕಾರ್ಯಕಾರಿ ಸಂಸ್ಥೆ ಮತ್ತು ಮಹಾ ಸಭೆ ಇವುಗಳಲ್ಲಿ ತೀರ್ಗಡೆ ಹೊಂದಿ ದ್ವಿಗುಣಿತವಾಗಿ ದೃಢವಾದ ಸಾರ್ವತ್ರಿಕ ಕಾಯಿದೆ ಭಂಗದ ಠರಾವು, ಕೇವಲ ಉಪಕ್ರಮದ ಮುಹೂರ್ತದಲ್ಲಿ ಹೇಗೆ ತಾನೆ ನಿಲ್ಲಿಸಲ್ಪಟ್ಟಿತು? ಅಲ್ಲಿ ಯಾವ ಸ್ಪೆಶಲ್ ಮಹಾ ಸಭೆಯಾಯಿತು? ಯಾವ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯು ಸೇರಿತು? ಈಗ ಕೊನ್ಸ್ಟಿಟ್ಯೂಶನಲ್ ರೂಲುಗಳನ್ನು ಮಗಚಿ ಮಗಚಿ "ಅದಕ್ಕೆ ಅಧಿಕಾರವಿಲ್ಲ, ಇದಕ್ಕೆ ಅಧಿಕಾರವಿಲ್ಲ" ಎಂದು ಮುಂತಾದ ಪಾಂಡಿತ್ಯವನ್ನು ಪ್ರಕಟಿಸುವ ಈ ಶಾಂತಭಾವಾದಿಗಳು ಮೇಲಿನ ಬಾರಡೋಲಿಯ ದೃಷ್ಟಾಂತಕ್ಕೆ ಯಾವ ಸಮರ್ಪಕ ಸಮಾಧಾನವನ್ನು ಕೊಡಬಲ್ಲರು? ಮಹಾತ್ಮಾಜೀಯವರು ಮಾಡಿದ್ದರಿಂದ ಅದು ನಿರ್ದೋಷವೆಂದು ಯಾರಾದರೂ ಹೇಳುವ ಪಕ್ಷದಲ್ಲಿ, ಆ ಮಾತಿಗೆ ಒಂದೆ ಸರಳವಾದ ಉತ್ತರವು. ಮಹಾತ್ಮಾಜಿಯವರು ಲೋಕೋತ್ತರ ಪುರುಷರೆಂಬುದಕ್ಕೆ ಅಡ್ಡಿ ಇಲ್ಲ. ತಥಾಪಿ ಲೋಕಸತ್ತೆಯೆಂಬ ವಿಶ್ವವಂದ್ಯವಾದ ತತ್ವದ ದೃಷ್ಟಿಯಿಂದ ರಾಜಕಾರಣದಲ್ಲಿ ಎಲ್ಲರೂ ಸಮಾನ ಅಧಿಕೃತರೆಂದು ತಿಳಿಯಬೇಕು. ಇಂಥ ಸಂದರ್ಭಗಳಲ್ಲಿ ವ್ಯಕ್ತಿ ಮಹಿಮೆಗೆ ಆಸ್ಪದವಿಲ್ಲ, ಇರಲಿ. ತಾತ್ಪರ್ಯವೇನೆಂದರೆ, ಅಹಮದಾಬಾದ ಕೊಂಗ್ರೆಸಿನ ನಿರ್ಣಯವನ್ನು, ಸ್ಪೆಶಲ್ ಕೊಂಗ್ರೆಸಿನ ಅವಶ್ಯಕತೆ ಇಲ್ಲದೆನೆ ಬಾರಡೋಲಿಯ ವರ್ಕಿಂಗ್ ಕಮಿಟಿಯು ಸ್ವಯಂ ತಾನೆ ನಿಲ್ಲಿಸಬಹುದಾದರೆ, ಗಯಾ ಕೊಂಗ್ರೆಸಿನ ನಿರ್ಣಯವನ್ನು ಮುಂಬಯಿಯ ಓಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಯಾವ ಪ್ರತ್ಯವಾಯವಿಲ್ಲದೆನೆ ನಿಲ್ಲಿಸಬಹುದು. ಇದಕ್ಕೆ ಇನ್ನೊಂದು ಮಾತನ್ನು ಕೂಡಿಸಿ ಹೇಳಬೇಕಾದರೆ, ಹಿಂದು ಪತ್ರಕಾರರು ತೋರಿಸಿದಂತೆ, ಇದೆ ಗಯಾ ಕೊಂಗ್ರೆಸಿನ ಕೌನ್ಸಿಲ್ ಬಹಿಷ್ಕಾರದ ಠರಾವನ್ನು ಅಲಹಾಬಾದದಲಿ ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯು ಸ್ವಲ್ಪ ಸಮಯ ತಟಸ್ಥ ಮಾಡಲಿಲ್ಲವೆ? ಆಗ ಸ್ಪೆಶಲ್ ಕೊಂಗ್ರೆಸ್ ಜರಗಿತ್ತೆ? ಇಂಥ ಒಂದು, ಎರಡು, ಮೂರು ಸಾಕಷ್ಟು ಉದಾಹರಣೆಗಳಿರುವಾಗ, ಮಾತ್ರವಲ್ಲ, ಒಂದು ತಿಂಗಳ ಮುಂಚೆ ಸ್ವತಃ ರಾಜಗೋಪಾಲರೆ ಸ್ಪೆಶಲ್ ಕೊಂಗ್ರೆಸಿನ ಅವಶ್ಯಕತೆಯನ್ನು ನಿರಾಕರಿಸಿ, ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಅಧಿಕಾರವನ್ನು ಸ್ಥಾಪಿಸಿರುವಾಗ ಈಗ ಮಾತ್ರ ಅವರು ಅದರ ನಿರ್ಣಯವನ್ನು ಉನ್ಮೂಲಿಸಲು ಸೊಂಟಕಟ್ಟುವುದು ತುಂಟತನದ್ದಾಗಿದೆ! ಮಹಾತ್ಮಾಜೀಯವರ ನಿಜವಾದ ಅನುಯಾಯಿಗಳೆನ್ನಿಸಿಕೊಳ್ಳುವವರಿಗೆ ಇದು ಎಂದೂ ಒಪ್ಪುವುದಿಲ್ಲ.

ಈ ಸ್ಪೆಶಲ್ ಕೊಂಗ್ರೆಸಿನ ಬಣಹರಟೆಯನ್ನು ಹೊಡೆಯುವಾಗಲೆ ಮೇಲಿನ ಅಲ್ಪ ಸಂಖ್ಯಾಕರು ತಾವು ಕೊಂಗ್ರೆಸಿನ ಠರಾವನ್ನು ಎದುರಿಸುವೆವೆಂದು ಭಯವನ್ನು ಹಾಕಿದ್ದಾರೆ. ಆದರೆ ಈ ಮಾತಿಗೆ ನಾವು ಕಳೆದ ಸಂಚಿಕೆಯಲ್ಲೆ ಯಥೋಚಿತವಾದ ಉತ್ತರವನ್ನು ಕೊಟ್ಟಿದ್ದೇವಷ್ಟೆ. ಮದ್ರಾಸಿನಲ್ಲಿ ದೇಶಬಂಧು ದಾಸರಿಗೆ ಇದೆ ಪ್ರಶ್ನೆಯನ್ನು ಕೇಳಿದಾಗ, "ಯಾರು ಎಷ್ಟೆ ಉಪರೋಧಿಸಲಿ, ಸ್ವರಾಜ್ಯಪಕ್ಷವು ಅದನ್ನು ಈಷದಪಿ ಗಣನೆಮಾಡದೆ ಕೌನ್ಸಿಲ್ ಪ್ರವೇಶದ ಕಾರ್ಯಕ್ರಮವನ್ನು ಕೈಕೊಂಡೀತೆ"ಂದು ಉತ್ತರವನ್ನು ಕೊಟ್ಟಿರುವರು. ವಸ್ತುತಃ ನೋಡಿದರೆ ಕೌನ್ಸಿಲ್ ಚಳವಳವನ್ನು ಎದುರಿಸಿ, ಆ ಮೂಲಕ ಐಕ್ಯವಿಘಾತವನ್ನು ಮಾಡುವುದರಿಂದ ದೇಶದಲ್ಲಿ ಯಾವ ಶುಭ ಫಲವೂ ಬರಲಿಕ್ಕಿಲ್ಲ. ಕೌನ್ಸಿಲ್ ಪ್ರವೇಶದ ನಿರ್ಣಯವು ನಿಮಗೆ, ಕೆಲವರಿಗೆ ಅಮಾನ್ಯವಾದ ಬಳಿಕ ಅದು ಓಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯಲ್ಲಿ ಪಾಸಾದರೇನು? ಅಥವಾ ಸ್ಪೆಶಲ್ ಕೊಂಗ್ರೆಸಿನಲ್ಲಿ ಪಾಸಾದರೇನು? ನಿಮ್ಮ ದೃಷ್ಟಿಯಿಂದ ಅದಕ್ಕೆ ಒಂದೆ ಬೆಲೆ ಇರುವುದಲ್ಲವೆ? ಸ್ಪೆಶಲ್ ಕೊಂಗ್ರೆಸ್ಸಿನಲ್ಲಿ ಪಾಸಾದ ಮಾತ್ರದಿಂದಲೆ ನಿರ್ಣಯದ ಯೋಗ್ಯತೆಯು ಹೆಚ್ಚಾಗುವುದಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ರಾಷ್ಟ್ರೀಯಸಭಾ ದೇವತೆಗಿಂತ ವ್ಯಕ್ತಿ ಭಕ್ತಿಯನ್ನೆ ಕೈಕೊಂಡ ಕೌನ್ಸಿಲ್ ಪ್ರವೇಶದ ಎದುರು ವಾದಿಗಳು ತಮ್ಮ ಶೀಲಕ್ಕೆ ಅತ್ಯಂತ ಪ್ರಿಯವಾಗಿರುವ ವಿಧಾಯಕ ಕಾರ್ಯಕ್ರಮವನ್ನು ಮಾಡಿ ದೇಶಹಿತವನ್ನು ಸಾಧಿಸಬಹುದಲ್ಲದೆ ಇತರರ ಮಾರ್ಗದಲ್ಲಿ ಕಲ್ಲು ಮುಳ್ಳುಗಳನ್ನು ಪಸರಿಸುವುದರಿಂದ ಯಾವ ಪುರುಷಾರ್ಥವೂ ಸಾಧ್ಯವಾಗದು. ನಿಮ್ಮ ಕಾರ್ಯಕ್ರಮಕ್ಕೆ ಮೂರು ವರ್ಷ ಅವಕಾಶ ಕೊಟ್ಟಾಯಿತು. ಅದರ ಫಲಿತಾಂಶವು ಲೋಕಕ್ಕೆಲ್ಲ ತಿಳಿದ ಹೋಗಿದೆ. ಈಗ ಇನ್ನೊಂದು ಪಂಗಡಕ್ಕೆ ಅವಕಾಶವನ್ನು ಕೊಡುವುದು ನಿಮ್ಮ ಕರ್ತವ್ಯವಾಗಿದೆ. ದೇಶವು ಯಾರೊಬ್ಬನಿಗೆನೆ ಮಾರಿಹೋಗಿಲ್ಲ. ಅವರವರು ಇನ್ನೊಬ್ಬರ ತಳ್ಳಿಗೆ ಹೋಗದೆ ಸ್ವಕರ್ತವ್ಯವನ್ನು ಮಾಡಬೇಕು. ಇದು ಸತ್ಯಧರ್ಮವು. ಅದನ್ನು ಬಿಟ್ಟು ಗಲಾಟೆ ಎಬ್ಬಿಸುವುದರಿಂದ ಅಥವಾ ತುಂಟತನ ಮಾಡುವುದರಿಂದ ಲಾಭದ ಬದಲು ಹಾನಿಯೆ ಒದಗುವುದು. ನಾಳೆ ಜನರು ನಿಮ್ಮ ನಿಮ್ಮ ಕೃತ್ಯಗಳನ್ನು ಅವುಗಳ ಪರಿಣಾಮದ ಮೇಲಿಂದ ನಿರ್ಣಯಿಸುವರಲ್ಲದೆ ನಿಮ್ಮ ತಾತ್ವಿಕವಿತ್ಯಾಸದ ಮೇಲಿಂದ ನಿರ್ಣಯಿಸಲಿಕ್ಕಿಲ್ಲ. ಕೌನ್ಸಿಲ್ ಪ್ರವೇಶೇಚ್ಛುಗಳ ಕಾಲು ಮುರಿಯುವುದರಿಂದ ಖಾದಿ ಪ್ರಚಾರದ ಕಾರ್ಯವಾಗಲಿ, ಸ್ವರಾಜ್ಯ ಫಂಡಿನ ಎತ್ತೋಣವಾಗಲಿ, ಸ್ವಯಂಸೇವಕರ ಸಂಗ್ರಹವಾಗಲಿ ಎಂದರೆ ಯಾವ ವಿಧಾಯಕ ಕಾರ್ಯದ ಪುಣ್ಯವಾಗಲಿ ಸಂಪಾದಿಸಲ್ಪಟ್ಟಂತಾಗಲಿಕ್ಕಿಲ್ಲ. ಇದರಿಂದ ಪರಾಗತಿಯೆ ಉಂಟಾದೀತು. ತಾನೂ ಮಾಡಲಾರೆ, ಬೇರೆಯವರನ್ನು ಮಾಡಲೂ ಬಿಡಲಾರೆ. ಈ ಘಾತುಕ ನೀತಿಯನ್ನು ದೇಶವು ಇನ್ನುಮುಂದೆ ಸಹಿಸಲಿಕ್ಕಿಲ್ಲ. ಮದ್ರಾಸಿನ 'ಹಿಂದು' ಪತ್ರದ ಸಂಪಾದಕರು ಜೂನ್ ತಾ. ೫ನೆಯ ಸಂಚಿಕೆಯ ಅಗ್ರಲೇಖದಲ್ಲಿ ಇದೆ ಅಭಿಪ್ರಾಯವನ್ನು ಮುಂದಿನಂತೆ ಬರೆದಿರುವರು.

"We wish that, in their own interests as much as in the interests of the Congress, these friends would betimes realise that their duty lies not in carrying on a futile counter-propaganda and waste valuble time and energy over it, but in getting the best out of themselves as well as out of those Congresmen who disagree with them in the matter of Council entry . . . . . They would in the circumstances do well to remember that by engaging themselves in futile combates with the Dasites and thus flouting public opinion in the country they could not only not produce a yard more of khaddar or add a pie more to T. S. Fund or secure one single recruit more to the Volunteer corps, but would also find their progress retarded in every direction. The country will not, it cannot afford to tolerate any longer a policy which it finds is in the result a dog-in-the manger policy."

ಸ್ಫುಟವಿಚಾರಗಳು.

೧. ಮಾಜಿ ಮುಖ್ಯ ಮಂತ್ರಿಗಳಾದ ಮಿ| ಬೊನರಲೊ ಇವರು ಶರೀರದ ಅನಾರೋಗ್ಯದ ದೆಸೆಯಿಂದ ತಮ್ಮ ಮಂತ್ರಿಸ್ಥಾನದಿಂದ ನಿವೃತ್ತರಾಗಿ, ಮಿ. ಬೊಲ್ಡವಿನರೆಂಬವರು ಮಂತ್ರಿಸ್ಥಾನವನ್ನಂಗೀಕರಿಸಿದ ವರ್ತಮಾನವನ್ನು ನಾವು ಈ ಮೊದಲೆ ಪ್ರಕಟಿಸಿದ್ದೇವೆ. ಈ ಹೊಸ ಮಂತ್ರಿಗಳ ಗುಣದೋಷಗಳ ವಿಮರ್ಶೆಯನ್ನು ಅವರ ಹಿಂದಿನ ಕೃತ್ಯಗಳ ಮೇಲಿಂದ ಮಾಡುವುದಕ್ಕಿಂತ, ಅವರು ಮಂತ್ರಿತ್ವದ ವಸ್ತ್ರಗಳನ್ನು ಧರಿಸಿದ ಬಳಿಕ ಹಿಂದೂಸ್ಥಾನದ ವಿಷಯವಾಗಿ ಪ್ರಶ್ನೋತ್ತರ ರೂಪದಿಂದ ಯಾವ ಧೋರಣವನ್ನು ವ್ಯಕ್ತಗೊಳಿಸಿದ್ದಾರೊ ಅದನ್ನೆ ಸದ್ಯಕ್ಕೆ ವಾಚಕರ ಮುಂದಿಡುವುದು ಲೇಸು. ಉಪ್ಪಿನ ಮೇಲೆ ಇಮ್ಮಡಿ ಕರವನ್ನು ಹೆಚ್ಚಿಸಿ ತಯಾರಿಸಿದ ಮತ್ತು ವ್ಯಾಸರಾಯರ ಸರ್ಟಿಫಿಕೇಶನಿನ ಆಧಾರಸ್ತಂಭದ ಮೇಲೆ ನಿಲ್ಲಿಸಿದ "ಹಿಂದೂಸ್ಥಾನದ ಜಮಾಖರ್ಚಿನ ಎಸ್ಟಿ" ಪಾರ್ಲಿಮೆಂಟಿನ ಸಮ್ಮತಿಯ ಬಗ್ಗೆ ಹೋದಾಗ ಬಾದಶಹರ ಅನುಮತಿಯು ಅದಕ್ಕೆ ಅವಶ್ಯಕವಿರುತ್ತದೆ. ಈ ಅನುಮತಿಯು ವಸ್ತುತಃ ಬರೆ ಔಪಚಾರಿಕವಾದರೂ ಬಾದಶಹರ ಮುಂದೆ ಇದು ಹೋಗುವುದಕ್ಕಿಂತ ಮುಂಚೆ ಅದರ ಚರ್ಚೆಯ ಬಗ್ಗೆ ೮ ದಿವಸದ ಪುರಸತ್ತುಬೇಕೆಂದು ಮುಖ್ಯ ಪ್ರಧಾನರ ಬಳಿಗೆ ಒಬ್ಬ ಸಭಾಸದರು ಪ್ರಶ್ನೆಮಾಡಿದರು. ಈ ಎಸ್ಟಿ ಇಲ್ಲಿಯ ಲೋಕಮತಕ್ಕೆ ವಿರುದ್ಧವಾಗಿರುವುದರಿಂದ ಅದನ್ನು ರದ್ದುಮಾಡುವ ಉದ್ದೇಶದಿಂದಲೆ ಪಾರ್ಲಿಮೆಂಟಿನಲ್ಲಿ ಅದರ ಚರ್ಚೆಯಾಗಬೇಕೆಂದು ಈ ಪ್ರಾಶ್ನಿಕರ ಅಭಿಪ್ರಾಯವಿತ್ತು. ಆದರೆ ಬೊಲ್ಡವಿನ ಸಾಹೇಬರು, "ಈ ರೀತಿಯಿಂದ ಸಮಯವನ್ನು ಕೊಡಲಾಗುವುದಿಲ್ಲ"ಎಂದು ತಟ್ಟನೆ ಉತ್ತರಕೊಟ್ಟರು! ಆಗ ಕರ್ನಲ ವೆಜ್‌ವುಡರು, "ಸಂಸ್ಥಾನಿಕರ ಸಂರಕ್ಷಣದ ಬಿಲು ವ್ಯಾಸರಾಯರ ಸರ್ಟಿಫಿಕೇಶನಿನಿಂದಲೆ ಪಾಸಾದಾಗ ಆಗ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಆಸ್ಪದವು ಕೊಡಲ್ಪಟ್ಟಿತು; ಈಗ ಮಾತ್ರ ಈ ರೀತಿಯಿಂದ ವ್ಯತ್ಯಾಸವು ಯಾಕೆ ಮಾಡಲ್ಪಡುತ್ತದೆ" ಎಂದು ಸಮರ್ಪಕವಾದ ಸಹಾಯಕ ಪ್ರಶ್ನೆಯನ್ನು ಕೇಳಿದರು. ಪರಂತು ಅದಕ್ಕೆ "ಇಂಥ ಅಪರಿಹಾರ್ಯ ಅನುಕೂಲತೆಗಳನ್ನು ಒದಗಿಸಿಕೊಳ್ಳುವ ಅಧಿಕಾರವಿದೆ" ಎಂದು ಬರೆ ಗೋಲಾಕಾರವಾದ ಅಸಮರ್ಪಕ ಉತ್ತರವನ್ನು ಕೊಟ್ಟು, ಈ ಹೊಸ ಮಂತ್ರಿಗಳು ಹಿಂದೂಸ್ಥಾನದ ಬಗ್ಗೆ ತನಗಿರುವ ಸಂಪೂರ್ಣ ಅಸಹಾನುಭೂತಿಯನ್ನು ಪ್ರಕಟಿಸಿದರು. ಹಿಂದೂಸ್ಥಾನಕ್ಕೆ ಯಾವ ವರೆಗೆ ಸ್ವರಾಜ್ಯವು ದೊರಕಲಿಲ್ಲವೊ ಅದು ವರೆಗೆ ಲೊಯ್ಡ ಜೋರ್ಜರು ಬರಲಿ, ಬೊನರಲೊ ಇವರು ಬರಲಿ ಅಥವಾ ಬೊಲ್ಡವಿನರು ಬರಲಿ ಇಲ್ಲವೆ ಎಸ್‌ಕ್ವಿಥ ಸಾಹೇಬರೆ ಬರಲಿ, ಯಾರೂ ಮಂತ್ರಿಪದಕ್ಕೆ ಬಂದರೂ ಹಿಂದೂಸ್ಥಾನಕ್ಕೆ ಅವರಿಂದ ತಾದೃಶ ಪ್ರಯೋಜನವಿಲ್ಲವೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾದ ಸಂಗತಿಯು.

೨. ಹಿಂದೂಸ್ಥಾನಕ್ಕೆ ಸ್ವರಾಜ್ಯವು ಅವಶ್ಯಕವೆಂಬ ಸಂಗತಿಯನ್ನು ಎಲ್ಲ ಹಿಂದಿಗಳು ಏಕಕಂಠದಿಂದ ಒಪ್ಪಿಕೊಳ್ಳುತ್ತಾರೆ. ಅವರಲ್ಲಿ ಮತಭೇದ, ಪಕ್ಷಭೇದ, ಸಾಧನಭೇದ ಮುಂತಾದ ಎಷ್ಟೊ ಭೇದಗಳಿದ್ದರೂ ಹಿಂದೂಸ್ಥಾನದ ಸ್ವರಾಜ್ಯವು ಎಲ್ಲರ ಅಚ್ಯುತವಾದ ಧ್ಯೇಯವಾಗಿದೆ. ಮಿ. ಜಿ. ಎಸ್. ಅರುಂಡೇಲರಂಥವರು—ಆಗಾಗ್ಗೆ ತಮ್ಮ ಕಾರ್ಯಕ್ರಮಗಳನ್ನು ಬದಲಾಯಿಸಿಕೊಳ್ಳುವಂಥವರು ಕೂಡ—ಸ್ವರಾಜ್ಯವೆ ಹಿಂದೂಸ್ಥಾನದ ಅಂತಿಮ ಸಾಧ್ಯವೆಂದು ಹೇಳುತ್ತಿದ್ದಾರೆ. ಇಂಥ ಪರದೇಶೀಯ ಗೃಹಸ್ಥರೆ ಹಿಂದೂಸ್ಥಾನದ ಸ್ವಾಭಾವಿಕ ಹಕ್ಕನ್ನು, ತೊಂದರೆಯ ಮಾತುಗಳನ್ನಾದರೆ ವಿಶದಪಡಿಸುವಾಗ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಅವರು ಎಷ್ಟೊ ಮೊಡರೇಟರಾಗಿರಲಿ,—ಹಿಂದೀ ಸ್ವರಾಜ್ಯ ಸೂರ್ಯನ ಉದಯವನ್ನು ನಿರೀಕ್ಷಿಸಿ, ಅದರ ಸುಪ್ರಭಾತದಲ್ಲಿ ಆತ್ಮೋನ್ನತಿಯ ಉದಯರಾಗವನ್ನು ಹಾಡದೆ ಇದ್ದಾರೆಯೆ? ಹಿಂದೂಸ್ಥಾನಕ್ಕೆ ವಸಾಹತುಗಳಂತೆ ಸ್ವಾಯುತ್ತವಾದ ಅಧಿಕಾರವು ಇರಬೇಕೆಂಬೀ ವಿಷಯದಲ್ಲಿ ಮೊನ್ನೆ ಲಂಡನಿನಲ್ಲಿ ಒಂದು ಪರಿಷತ್ತು ಸೇರಿತು. ಈ ಪರಿಷತ್ತಿನಲ್ಲಿ ನಾಮದಾರ ಶಾಸ್ತ್ರಿಗಳು, ಮಿ. ಜಿನರಾಜದಾಸರು ಮತ್ತು ಶ್ರೀಯುತ ಬಿ. ಎಸ್. ಕಾಮತ ಇವರು ಸ್ತುತ್ಯವಾದ ಭಾಗಗಳನ್ನೆತ್ತಿದರು. ಇವರಲ್ಲಿ ಜಿನರಾಜದಾಸರು ಸುವಿಚಾರ ಪರಿಪ್ಲುತವಾದ ಭಾಷಣವನ್ನು ಕೊಟ್ಟರು. "ಹಿಂದೂಸ್ಥಾನದ ಜನತೆಗೆ ವಿದೇಶೀಯ ರಾಜ್ಯಭಾರವು ಬೇಡವಾಗಿದೆ ಎಂಬುದು ಹೌದಾದರೂ ಹಿಂದೂಸ್ಥಾನವು ಬ್ರಿಟಿಷ್ ಸಾಮ್ರಾಜ್ಯದ ಒಂದು ಘಟಕವಾಗಿರಬೇಕೆಂಬ ಅಪೇಕ್ಷೆಯು ಮತ್ತು ತೃಪ್ತಿಯು ಆ ಜನತೆಯಲ್ಲಿ ಇವೆ. ಸನದುಶೀರವಾದ ಮಾರ್ಗದಿಂದ ಹಿಂದೂಸ್ಥಾನಕ್ಕೆ ಈ ಪರಿಸ್ಥಿತಿಯು ಬರಬೇಕಾದ್ದು. ನೆಲದಂಡಿನ ವಿಷಯವಾಗಿಯಾಗಲಿ ಅಥವಾ ಕಡಲುದಂಡಿನ ವಿಷಯವಾಗಿಯಾಗಲಿ ಅದಕ್ಕೆ ಸ್ವತಂತ್ರವಾಗಿ ನಡೆಯಲು ಅಸಾಧ್ಯವೆಂಬುದು ಸರ್ವಥಾ ನಿಜವಾದರೂ ಮಿಕ್ಕ ವಿದ್ಯಮಾನಗಳಲ್ಲಿ ಸಾಮ್ರಾಜ್ಯಾಂತರ್ಗತ ವಸಾಹತುಗಳಿಗೆ ಹೇಗೆ ಸ್ವಾತಂತ್ರ್ಯವಿದೆಯೊ ಅದಕ್ಕೂ ಹಾಗೆಯೆ ಇರುವುದು ಅವಶ್ಯವಾಗಿದೆ." ಜಿನರಾಜದಾಸರ ಈ ಮಾತುಗಳನ್ನೆ ಅನುಮೋದಿಸಿ ಶಾಸ್ತ್ರಿಗಳಾದರೂ ತಮ್ಮ ಅಲಂಕಾರಿಕ ಭಾಷೆಯಲ್ಲಿ ವಸಾಹತುಗಳ ಸಮತೆಯ ಆವಶ್ಯಕತೆಯನ್ನು ದೃಢಪಡಿಸಿದರು. "ಯುದ್ಧಕಾಲದಲ್ಲಿ ಹಿಂದೂಸ್ಥಾನಕ್ಕೆ ಕೊಟ್ಟ ಅಭಿವಚನಗಳು ಈಗ ಟೊಳ್ಳಾಗಿವೆ. ತಥಾಪಿ, ವ್ಯಾಪಾರ, ವಾಙ್ಮಯ, ಶಾಸ್ತ್ರ ಇತ್ಯಾದಿ ವಿಷಯಗಳ ಅಭಿವೃದ್ಧಿಗಾಗಿಯೂ ಮತ್ತು ಮಾನವಜಾತಿಯ ಶ್ರೇಯಸ್ಸಿಗಾಗಿಯೂ ಹಿಂದೂಸ್ಥಾನವೂ, ಇಂಗ್ಲೆಂಡೂ ಒಟ್ಟಿಗೆ ಸೇರಬೇಕೆಂದು ಪರಮೇಶ್ವರನ ಸಂಕೇತವೆ ಇದ್ದಂತೆ ತೋರುತ್ತದೆ" ಎಂದು ಶಾಸ್ತ್ರಿಗಳು ನುಡಿದರು. ಮೇಲಿನ ಈ ಎಲ್ಲ ಮಾತುಗಳಲ್ಲಿ ಬುದ್ಧಿವಂತಿಕೆ, ವಿದ್ವತ್ತೆ, ಸದಿಚ್ಛೆ, ಮುತ್ಸದಿತನ ಮುಂತಾದ ಅನೇಕ ಸಂಗತಿಗಳಿವೆಯಾದರೂ, ನಮ್ಮ ಅಸಹಾನುಭೂತಿಯ ನೋಕರಶಾಹಿಯ ಮುಂದೆ ಅವೆಲ್ಲ ಗಾಳಿಪಟವಾಗಿ ಹಾರಿಹೋಗುತ್ತಿವೆ, ಇದೆ ವಿಷಾದದ ಮಾತಾಗಿದೆ.

೩. ಹಿಂದುಸ್ಥಾನದ ಬೇಸಾಯಖಾತೆಯೊಳಗೆ ಎಷ್ಟೊ ಸುಧಾರಣೆಗಳಾಗಬೇಕೆಂಬ ಸದಿಚ್ಛೆಯಿಂದ ಪ್ರೊಫೆಸರ್ ಜೆವನ್ಸರು ಸದ್ಯದಲ್ಲಿಯೆ ಒಂದು ಲೇಖವನ್ನು 'ಲೀಡರ್' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಬೇಸಾಯ ಪದ್ಧತಿಯನ್ನು ಆದಷ್ಟು ಸುಧಾರಿಸಿ ಅದಕ್ಕೆ ಬೇಕಾಗುವ ಉತ್ತಮ ಸಾಮಾನುಗಳನ್ನು ಪಡಕೊಂಡು ಸಾಗುವಳಿಯನ್ನು ಹೆಚ್ಚಿಸಿದರೆ ನಮ್ಮಲ್ಲಿರುವ ಕೊರತೆಯು ಕಡಿಮೆಯಾದೀತೆಂದು ಇವರು ಅಭಿಪ್ರಾಯಪಡುತ್ತಾರೆ. ಅವರ ಲೇಖದ ಸಾರಾಂಶವೇನೆಂದರೆ—ಉತ್ತಮ ತರದ ಸಾಗುವಳಿಯನ್ನು ಮಾಡಬೇಕಾದರೆ, ಬಲಿಷ್ಠವಾದ ಎತ್ತುಗಳ ಪುರವಣಿಯನ್ನು ಮಾಡಿಸಿಕೊಳ್ಳಬೇಕು. ಅದಲ್ಲದೆ ಬೇಸಾಯಕ್ಕೆ ಅಗತ್ಯವಿರುವ ಇತರ ಸಾಮಾನುಗಳನ್ನು ಸಹ ಸುಧಾರಿಸಿದವುಗಳನ್ನೆ ಉಪಯೋಗಿಸಬೇಕು. ಸಹಕಾರಿ ಸಂಘಗಳು ತಮ್ಮ ಉದ್ದೇಶವನ್ನು ಹೆಚ್ಚಿಸಿ ಬೇಸಾಯಿಗಾರರಿಗೆ ಉತ್ತಮತರದ ಧಾನ್ಯಬೀಜಗಳನ್ನು ಒದಗಿಸಿಕೊಡಬೇಕು. ಅದಲ್ಲದೆ ಈ ಸಂಘಗಳು ಬಲಿಷ್ಠವಾದ ಎತ್ತುಗಳನ್ನು ಪುರವಣಿ ಮಾಡುವುದರಲ್ಲೂ ಮತ್ತು ಇತರ ಸಾಮಾನುಗಳನ್ನು ಒದಗಿಸಿಕೊಡುವುದರಲ್ಲೂ ಪ್ರಯತ್ನನಡಿಸಿದರೆ ಹಿಂದುಸ್ಥಾನದ ಎಗ್ರಿಕಲ್ಚರಲ್ ಖಾತೆಯು ಬೆಳೆದೀತೆಂಬುದರಲ್ಲಿ ಸಂಶಯವಿಲ್ಲ. ಹಳ್ಳಿಗಳಲ್ಲಿಯ ಬೇಸಾಯಿಗಾರರಿಗೆ ಸುಧಾರಿಸಿದ ರೀತಿಯಿಂದ ಸಾಗುವಳಿಮಾಡುವ ರೀತಿಯನ್ನು ತಿಳಿಸಲು ಒಂದು ಸಂಘವನ್ನು ಸ್ಥಾಪಿಸಿ, ಈ ಸಂಘದವರು ಹಳ್ಳಿಗಳಲ್ಲೆಲ್ಲ ತಿರುಗಿ ಹೊಸ ಪದ್ಧತಿಯನ್ನು ಕಲಿಸಬೇಕು ಮತ್ತು ದೊಡ್ಡ ದೊಡ್ಡ ಜಮೀನದಾರರು ತಾವಾಗಿಯೆ ಉದಾಹರಣೆಯನ್ನು ಹಾಕಿಕೊಡಬೇಕು. ಇವೆಲ್ಲಕ್ಕೂ ಮುಖ್ಯವಾಗಿರುವ ಧನಸಹಾಯ್ಯವು ಧನಿಕರ ಮುಖಾಂತರ ಪಡೆಯಬಹುದು. ಸರಕಾರವು ಸಹ ಈ ಕಾರ್ಯದಲ್ಲಿ ಆದಷ್ಟು ಶ್ರಮಪಡೆಯಬೇಕು. ಪ್ರೈಮೆರಿ ಶಾಲೆಗಳಲ್ಲೆಲ್ಲ ಬೇಸಾಯದ ಪದ್ಧತಿಯನ್ನು ಕಲಿಸಬೇಕು. ಅಗತ್ಯವಿದ್ದಲ್ಲಿ ಬೇಸಾಯದ ಶಾಲೆಗಳನ್ನೆ ತೆರೆಯಬೇಕು". ಈ ಪ್ರಕಾರ ಪ್ರೊಫೆಸರರ ಹೇಳಿಕೆಯಿದೆ. ಇವರ ಆಲೋಚನೆಯು ಯೋಗ್ಯವಿದ್ದರೂ ಇವರ ಮಾಹಿತಿಯು ಸಂಪೂರ್ಣ ನಿಜವೆಂದು ಹೇಳಲಾಗದು. ಈಗಿನ ನೇಗಿಲಿನ ಪದ್ಧತಿಯನ್ನು ತೆಗೆದು ಪಾಶ್ಚಾತ್ಯ ಯಂತ್ರಗಳ ಉಪಯೋಗ ಮಾಡಬೇಕೆಂದು ಇವರ ಹೇಳಿಕೆ ಇರಬಹುದು. ಆದರೆ ನಮ್ಮ ಪದ್ಧತಿಯಿಂದಲೆ ಮಿತವಾಗಿ ಸಾಗುವಳಿಯನ್ನು ಮಾಡಬಹುದೆಂದು ಎಷ್ಟೊ ಜನರ ಹೇಳಿಕೆ ಮಾತ್ರವಿದೆಯಲ್ಲ, ಕೃತಿಯಲ್ಲಿಯೂ ತೋರಿಸಿಯದೆ. ಆದ್ದರಿಂದ ಇವರ ನೇಗಿಲಿನ ವಿಷಯದ ಮಾತು ಅಗ್ರಾಹ್ಯವೆ ಸರಿ. ಇವರ ಇತರ ಹೇಳಿಕೆಯು ಮಾತ್ರ ಮನನೀಯವು ಮತ್ತು ಅವನ್ನು ಯೋಗ್ಯ ರೀತಿಯಿಂದ ಸರಕಾರದವರು ಚಲಾವಣೆಗೆ ತಂದಾರೆಂದು ನಾವು ನಂಬಿದ್ದೇವೆ.

೪. ಸಂಯುಕ್ತಪ್ರಾಂತದಲ್ಲಿ ಮಲಕಾನಾ ರಜಪೂತರನ್ನು (ಮೊದಲು ಮುಸಲ್ಮಾನರಾಗಿದ್ದವರನ್ನು) ಶುದ್ಧಪಡಿಸಿ ಪುನಃ ಹಿಂದುಧರ್ಮದಲ್ಲಿ ತೆಕ್ಕೊಳ್ಳುವ ಯಾವ ಚಳವಳವುಂಟೊ ಅದು ಧಾರ್ಮಿಕ ಅಥವಾ ಸಾಮಾಜಿಕವಲ್ಲದೆ, ಅದರಲ್ಲಿ ರಾಜಕೀಯ ಗುಪ್ತಹೇತುವಿರಬೇಕೆಂದು ಸದರಿ ಚಳವಳದ ಮೇಲೆ ಮುಸಲ್ಮಾನರು ಆರೋಪಣೆಯನ್ನಿಡುತ್ತಿದ್ದರು. ಈ ಚಳವಳವನ್ನು ಮುಂದರಿಸುವುದರಿಂದ ಹಿಂದು-ಮುಸಲ್ಮಾನರಲ್ಲಿ ಅಪ್ರೀತಿಯುಂಟಾಗುತ್ತದಾದ್ದರಿಂದ ಅದನ್ನು ನಿಲ್ಲಿಸಬೇಕೆಂದು ಮುಸಲ್ಮಾನರ ಪ್ರತಿಪಾದನವಿತ್ತು. ನಮ್ಮೊಳಗಿನ ಕೆಲವು ಕಡು ಅಸಹಕಾರಿ ಲಬ್ಧಪ್ರತಿಷ್ಠಿತರೂ ಕೂಡ ಇದನ್ನೆ ಅನುವಾದಿಸುತ್ತಿದ್ದರು. ಆದರೆ ಸಂಯುಕ್ತಪ್ರಾಂತದಲ್ಲಿಯ ಮುಖಂಡರಾದ ಪುರುಷೋತ್ತಮದಾಸ ಟಂಡನ್ ಮತ್ತು ಅಝುದ್ದ ಸೋಬಾನಿ ಈ ಇಬ್ಬರು ಹಿಂದುಮುಸಲ್ಮಾನ ಗೃಹಸ್ಥರು ಸ್ವತಃ ತಿರುಗಾಡಿ ಮಾಹಿತಿಯನ್ನು ಸಂಗ್ರಹಿಸಿ ಅದರ ರಿಪೋರ್ಟನ್ನು ಪ್ರಕಟಿಸಿದ್ದಾರೆ. ಅದನ್ನು ನೋಡುವಾಗ ಆರ್ಯಸಮಾಜದ ಕೃತ್ಯದ ಮೇಲೆ ಮೇಲಿನ ಆರೋಪವು ಎಷ್ಟು ಏಕದೇಶೀಯವಾಗಿಯೂ, ಅಜ್ಞಾನಮೂಲಕವಾಗಿಯೂ ಮತ್ತು ಅಪ್ರಯೋಜಕವಾಗಿಯೂ ಇದೆ ಎಂಬುದು ಗೊತ್ತಾಗುತ್ತದೆ. ಈ ಶುದ್ಧಿಚಳವಳದಲ್ಲಿ ರಾಜಕೀಯ ಹೇತುವು ಸ್ವಲ್ಪಮಾತ್ರವೂ ಇಲ್ಲವೆಂದು ಸ್ಪಷ್ಟವಾಗಿ ಉಲ್ಲಖಿತವಾಗಿದೆ. ಈ ವಾದವು ಯಾವ ಮಲಕಾನಾ ಜನರನ್ನು ಶುದ್ಧಪಡಿಸಿದ್ದರಿಂದ ಉಪಸ್ಥಿತವಾಯಿತೊ ಆ ಮಲಕಾನಾ ಜನರ ಆಚಾರವಿಚಾರಗಳು ಮತ್ತು ನಡೆನುಡಿಗಳು ಮುಸಲ್ಮಾನರಿಗಿಂತ ರಜಪೂತರ ಆಚಾರವಿಚಾರಗಳಿಗೆನೆ ಅತ್ಯಂತ ಸಮೀಪವಾಗಿವೆ ಎಂದು ರಿಪೋರ್ಟು ಹೇಳುತ್ತದೆ. ಇದರ ಮೇಲಿಂದ ಹಿಂದುಧರ್ಮದ ಮೇಲಿನ ಅವರ ಪ್ರೇಮವು ಸ್ಪಷ್ಟವಾಗುತ್ತದೆ. ಅಂಥ ಜನರನ್ನು ಒತ್ತಾಯವಿಲ್ಲದೆ ಅವರ ಇಚ್ಛೆಯ ಮೇರೆಗೆ ಪುನಃ ಹಿಂದುಧರ್ಮದಲ್ಲಿ ಸೇರಿಸಿದ್ದಾದರೆ ಅದು ಸೆಲ್ಫ ಡಿಟರ್ಮಿನೇಶನಿನ ಈ ಯುಗದಲ್ಲಿ ಅನ್ಯಾಯವಾದೀತೆ? ಇಲ್ಲ. ಅಂಥವರನ್ನು ಸೇರಿಸದೆ ಇದ್ದರೆನೆ ಆ ಸ್ವಯಂ ನಿರ್ಣಯದ ತತ್ವವನ್ನು ಉಲ್ಲಂಘಿಸಿದ್ದಂತಾದೀತು.

೫. ಉತ್ತರ ಹಿಂದುಸ್ಥಾನದಲ್ಲಿ ಮಲಕಾನಾ ರಜಪೂತರ ಪ್ರಶ್ನೆಯು ಹೇಗೆ ಆಕರ್ಷಕ ಮತ್ತು ವಿಚಾರಣೀಯವಾಗಿದೆಯೊ ಹಾಗೆಯೆ ದಕ್ಷಿಣ ಹಿಂದುಸ್ಥಾನದಲ್ಲಿ ಮಲಬಾರ ಹಿಂದುಗಳನ್ನು ಬಲಾತ್ಕಾರದಿಂದ ದಂಗೆಯ ಸಮಯದಲ್ಲಿ ಮುಸಲ್ಮಾನರನ್ನಾಗಿ ಮಾಡಿದ ಕಾರಣ ಅವರ ಶುದ್ಧೀಕರಣದ ಪ್ರಶ್ನೆಯು ಸಹ ಧಾರ್ಮಿಕ ದೃಷ್ಟಿಯಿಂದ ಬಹು ಮಹತ್ವದ್ದಾಗಿ ಕುಳಿತಿದೆ. ಇತ್ತಲಾಗಿ ದಂಗೆಯ ವೇಳೆಯಲ್ಲಿ ಧರ್ಮಾಂತರಗೊಳಿಸಿದ ಈ ದುರ್ದೈವಿ ಹಿಂದುಬಾಂಧವರ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಸಂದರ್ಶಿಸಿ ಅವರನ್ನು ಪುನಃ ಸ್ವಧರ್ಮದಲ್ಲಿ ತರಲು ಯಾವ ಯಾವ ತೊಂದರೆಗಳಿವೆ ಎಂಬದನ್ನು ನೋಡಲು ಸುಪ್ರಸಿದ್ಧ ಮುಖಂಡರಾದ ನಾಗಪುರದ ಡೊ. ಬಾಲಕೃಷ್ಣಪಂತ ಮುಂಜೆಯವರು ಮಲಬಾರಕ್ಕೆ ಬಂದಿರುವರು. ಅವರು ಅಲ್ಲಲ್ಲಿ ತಿರುಗಾಡಿ ವಿವಿಧ ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾರೆ. ಬಲಾತ್ಕಾರದಿಂದ ಧರ್ಮಾಂತರಗೊಳಿಸಿದವರನ್ನು ಪುನಃ ಹಿಂದುಧರ್ಮದಲ್ಲಿ ಸ್ವೀಕರಿಸಲು ಧರ್ಮಶಾಸ್ತ್ರದ ದೃಷ್ಟಿಯಿಂದ ಯಾವ ಪ್ರತ್ಯವಾಯವೂ ಇಲ್ಲ, ಈ ವಿಷಯವಾಗಿ ಎಲ್ಲ ಹಿಂದು ಸಮಾಜವು ಬೆಂಬಲಕ್ಕಿದೆ, ಎಂದೀ ಸಂಗತಿಗಳನ್ನು ಸುಸ್ಪಷ್ಟವಾಗಿ ಮಲಬಾರದವರ ನಿದರ್ಶನಕ್ಕೆ ತಂದುಕೊಡಲು ಡೊ. ಮುಂಜೆಯವರು ಕಲ್ಲಿಕೋಟೆಯಲ್ಲಿ ಅಖಿಲಭಾರತೀಯ ಹಿಂದು ಸಭೆಯ ಅಧಿವೇಶನವನ್ನು ಜರಗಿಸುವ ಆಲೋಚನೆಯಲ್ಲಿದ್ದಾರೆಂದು ತಿಳಿದುಬರುತ್ತದೆ. ಇದು ಸ್ತುತ್ಯವಾದ ಆಲೋಚನೆಯು. ಡೊ. ಮುಂಜೆಯವರ ಈ ಸ್ತುತ್ಯ ಯತ್ನವು ಸಫಲವಾಗಲೆಂದು ನಾವು ಬಯಸುವೆವು.

೬. ಕೆನಿಯಾದಲ್ಲಿ ಹಿಂದಿಗಳಿಗೆ ಬಿಳಿ ವಸಾಹತಿನವರು ಯಾವ ಯಾವ ವಿಧದಿಂದ ಪೀಡಿಸುತ್ತಿದ್ದರೆಂಬುದರ ಕಥೆಯು ವಾಚಕರಿಗೆ ಗೊತ್ತೆ ಇದೆ. "ಹಿಂದಿಗಳಿಗೆ ಅಧಿಕಾರಗಳು ಮತ್ತು ಹಕ್ಕುಗಳು ಸಿಕ್ಕಿದರೆ ತಮಗೆ ಒಂದು ವೇಳೆ ಅಡ್ಡಿ ಇಲ್ಲ. ಆದರೆ ಅಲ್ಲಿಯ ಮೂಲನಿವಾಸಿಗಳ ಹಿತದ ದೃಷ್ಟಿಯಿಂದ ತಾವು ಈ ಪ್ರಯತ್ನವನ್ನು (ಹಿಂದಿಗಳ ಹಕ್ಕುಗಳನ್ನು ಅಪಹರಿಸುವ ವಿಘ್ನವನ್ನು) ಮಾಡುವುದಾಗಿದೆ" ಎಂದು ಇದುವರೆಗೆ ಅಲ್ಲಿಯ ಬಿಳಿ ಜನರು ವಾದಿಸುತ್ತಿದ್ದರು. ಆದರೆ ಅವರ ಈ ಪರೋಪಕಾರದ ಬೊಬ್ಬೆಯನ್ನು ತೆಗೆದು ಹಾಕಿ, ಅವರ ನಿಜಸ್ವರೂಪವನ್ನು ತೋರಿಸುವುದಕ್ಕೊ ಎಂಬಂತೆ ಕೆನಿಯಾದ ಮೂಲನಿವಾಸಿಗಳು ವಿಲಾಯತಿಗೆ ತಂತಿ ಮೂಲಕವಾಗಿ ತಿಳಿಸಿದ್ದಾರೇನೆಂದರೆ—"ನಮ್ಮ ಕಡೆಯ ಪ್ರತಿನಿಧಿ ಮಂಡಲವು ಬರುತ್ತಿದೆ. ಅದು ಒಂದು [illegible]

ವನ್ನು ತಿಳಿಸುವ ವರೆಗೆ ಶಾಸನೀಯವಾದ ರಾಜ್ಯಶಾಸನದ ಈಗಿನ ಪದ್ಧತಿಯಲ್ಲಿ ಬದಲಾವಣೆ ಮಾಡಕೂಡದು. ಬಿಳಿ ವಸಾಹತುವಾಲರು ಹೇಳುವ ಸಂಗತಿಯು ನಮಗೆ ಸಮ್ಮತವಿಲ್ಲದ ಕಾರಣ, ಅವರು ನಮ್ಮ ಪ್ರತಿನಿಧಿಗಳಲ್ಲ." ಮೂಲ ನಿವಾಸಿಗಳ ಈ ವಾದಿನ ಮೇಲಿಂದ ಬಿಳೆ ವಸಾಹತಿನವರು ಹಿಂದಿಗಳನ್ನು ಮೂಲನಿವಾಸಿಗಳ ಹಿತದ ನೆವವನ್ನು ಮುಂದೆ ಮಾಡಿ ಕಾಡಿದ್ದು ಕೇವಲ ಅನುಚಿತವೂ ಅನಧಿಕಾರದ್ದೂ ಎಂದು ಯಾರೂ ಹೇಳದೆ ಇರಲಿಕ್ಕಿಲ್ಲ. ಈಗಲಾದರೂ ಈ ವಸಾಹತುಗಳ ಸಭ್ಯಾಸಿಯ ಕಪಟಸ್ವರೂಪವು ಹೊರಬಿತ್ತಲ್ಲವೇ! ಇದು ಸಂತೋಷದ ಮಾತು.

ಹಿಂದುಸ್ಥಾನಕ್ಕೂ ಇಂಗ್ಲೆಂಡಿಗೂ ವಸ್ತ್ರದ ವಿಷಯ ತಂಟೆ ನಡೆಯುತ್ತಿರುವುದು ಎಲ್ಲರಿಗೂ ಗೊತ್ತಿದ್ದ ಸಂಗತಿಯು. ಈ ವಾರದಲ್ಲಿ ಅರ್ಲ ವಿಂಟರ್ಟನ್ ಸಾಹೇಬರಿಗೆ ಮಂಚಸ್ಟರದ ಹತ್ತಿ ಬೆಳಸುವ ಸಂಘದಿಂದ ಒಂದು ಔತಣವು ಕೊಡಲ್ಪಟ್ಟಿತು. ಆ ಸುಸಂದರ್ಭದಲ್ಲಿ ಅರ್ಲ ಸಾಹೇಬರು ಹಿಂದೂಸ್ಥಾನದ ಹತ್ತಿ ಪುರವಠೆಯ ವಿಷಯವಾಗಿ ತಮ್ಮ ಸಮಾಧಾನವನ್ನು ವ್ಯಕ್ತಮಾಡಿದ್ದಾರೆ. ಸೆಕ್ರೆಟರಿಗಳಾದ ಲೋರ್ಡ ಪೀಲರು ಮಾಡಿದ ಹೊಸ ಸ್ಕೀಮಿನಿಂದ ಸಿಂಧು ಪ್ರಾಂತದಲ್ಲಿ ಹೆಚ್ಚು ಹತ್ತಿ ಬೆಳೆದೀತು ಮತ್ತು ಈ ಹತ್ತಿಯು ಲೆಂಕೆಶಾಯರ್ ಮಿಲ್ಲುಗಳಿಗೆ ಬಂದೀತೆಂಬ ಆಶ್ವಾಸನವನ್ನೂ ಸಹ ನಮ್ಮ ಅಂಡರ್ ಸೆಕ್ರೆಟರಿಗಳು ಕೊಟ್ಟರು. ಇದೆಲ್ಲ, ಹಿಂದೀ ಹತ್ತಿ ಕೈಗಾರಿಕೆಯಲ್ಲಿ ಆದ ಹೊಸ ಸುಧಾರಣೆಗೆ ಇಂಡಿಯನ್ ಕೊಟನ್ ಕಮಿಟಿಯೆ ಕಾರಣವೆಂದು ಹೇಳಿದರು. ಇವರ ಮುಂದಿನ ಭಾಷಣವು ಈ ಪ್ರಕಾರವಿತ್ತು. "ಹಿಂದಿಗಳಿಗೆ ಬ್ರಿಟಿಷರು ತಮಗೆ ಮೋಸ ಮಾಡುತ್ತಾರೋ ಎಂಬ ಹೆದರಿಕೆಯು ಹುಟ್ಟಿದೆ. ಇತ್ತಲಾಗಿ ಅದು ದೂರ ಸರಿಯುತ್ತದೆಂದು ಹೇಳಲು ನಮಗೆ ಸಂತೋಷವಾಗುತ್ತದೆ. ಲೆಂಕಶಯರ ಇದು ನಮ್ಮ ಇಂಗ್ಲೆಂಡಿನ ಮುಖ್ಯ ಸ್ಥಳವು. ಇದರಿಂದ ನಮ್ಮ ಬ್ರಿಟಿಷರಿಗೆ ಎಷ್ಟೋ ಲಾಭವಾಗುತ್ತದೆ. ಆದ್ದರಿಂದ ಇದಕ್ಕೆ ನಷ್ಟವಾಗುವ ಯಾವ ಕುಂದು ಬಂದರೂ ಅದನ್ನು ತೆಗೆಯಲು ನಾವು ಸಿದ್ಧರಿದ್ದೇವೆ. ಆದ್ದರಿಂದಲೆ ನಾನು ಮತ್ತು ಲೋರ್ಡ ಪೀಲರು ಒಟ್ಟುಗೂಡಿ ಹಿಂದೂಸ್ಥಾನಕ್ಕೂ ಇಂಗ್ಲೆಂಡಿಗೂ ಹತ್ತಿ ವಿಷಯವಾಗಿ ಮಿತ್ರತ್ವವನ್ನು ಬೆಳಸಿ ಮೊದಲಿನಂತೆ ವ್ಯಾಪಾರ ನಡಿಸಲು ಪ್ರಯತ್ನಪಟ್ಟಿದ್ದೇವೆ. ಮತ್ತು ಈ ಪ್ರಯತ್ನವು ಕೊನೆಗೊಂಡು ಬಂದಿದೆಂದು ತೋರುತ್ತದೆ. ಹಿಂದೂಸ್ಥಾನದ ಕೈಗಾರಿಕೆಯನ್ನು ಬೆಳಸಲು ನಾನು ಪಾರ್ಲಿಮೆಂಟಿನಿಂದ ಹಣವನ್ನು ಕೇಳಲಿಕ್ಕಿದ್ದೇನೆ. ಆ ಮೇಲೆ ಹಿಂದೂಸ್ಥಾನದ ಕೈಗಾರಿಕೆಯನ್ನು ವೃದ್ಧಿಗೊಳಿಸಿ ಇಂಗ್ಲೆಂಡಿಗೂ ಹಿಂದೂಸ್ಥಾನಕ್ಕೂ ಮಿತ್ರತ್ವವನ್ನು ಬೆಳೆಸುವೆವು. ಆಗಲಾದರೂ ನಾವು ಹಿಂದಿಗಳ ಬಗ್ಗೆ ಯಾವ ಭಾಷೆಯನ್ನು ಕೊಟ್ಟಿದ್ದೇವೋ ಅದನ್ನು ಸಂಪೂರ್ಣಗೊಳಿಸಿದಂತಾದೀತು. ಅಂಡರ ಸೆಕ್ರೆಟರಿಗಳ ಹಿಂದೂಸ್ಥಾನದ ಮೇಲಿರುವ ಅಕುಲಪ್ರೇಮವು ಇವರ ಈ ಭಾಷಣದಿಂದಲೆ ವ್ಯಕ್ತವಾಗುತ್ತದೆ. ನಮ್ಮಲ್ಲಿ ಹತ್ತಿಯನ್ನು ಬೆಳಸಿ ಲೆಂಕಶಯರ ಮಿಲ್ಸುಗಳಿಗೆ ಕಳುಹಿಸೋಣ ಮತ್ತು ಅದರಿಂದ ಇಂಗ್ಲೆಂಡಿಗೂ ಹಿಂದೂಸ್ಥಾನಕ್ಕೂ ಮಿತ್ರತ್ವವನ್ನು ಬೆಳಸೋಣ ಈ ಕುಟಿಲ ತಂತ್ರಕ್ಕೆ ಹಿಂದೂಸ್ಥಾನವು ಎಂದೂ ಸಿಗಲಾರದು, ಇದನ್ನು ಎಂಟರಿಟನ್ ಸಾಹೇಬರು ಲಕ್ಷ್ಯದಲ್ಲಿಡಲಿ.

ಮಂಗಳೂರು.

ಅತ್ತಾವರ ಗ್ರಾಮದಲ್ಲಿರುವ ಶ್ರೀ ಚಕ್ರಪಾಣಿ ಗೋಪಿನಾಥ ವೇಣುಗೋಪಾಲ ಸ್ವಾಮಿ ಸ್ಥಾಪನೆಯು ಸುಮಾರು ೭೦೦ ವರುಷಗಳ ಹಿಂದೆ ಗೋರಕ್ಷನಾಥರೆಂಬ ಮಹಾ ಯೋಗೀಶ್ವರರಿಂದ ಪ್ರತಿಷ್ಠಿಸಲ್ಪಟ್ಟಿರುತ್ತದೆ. ಈ ದೇವಸ್ಥಾನಕ್ಕೆ ಸರಕಾರದಿಂದ ವರುಷಕ್ಕೆ ಬರೆ ರೂ. [illegible] ಮಾತ್ರ ತಸದೀಕು ದೊರೆಯುವುದಲ್ಲದೆ ಬೇರೆ ಜಿರಸ್ತೊತ್ತು ಕೂಡಾ ಇಲ್ಲ. ಈ ದೇವರ ಗರ್ಭಗೃಹವು ಬಹು ಜೀರ್ಣವಾಗಿ ತಂತು ಮಾತ್ರ ಇದೆ. ಇದರ ಎದುರುಗಡೆ ಇದ್ದ ದೇವಸ್ಥಾನದ ಕೆರೆಯು ಪೂರಾ ಜರದುಹೋಗಿದೆ. ಈ ಕೆರೆಯು ಸ್ಥಳವನ್ನು ಸರಕಾರದವರು ಏಲಂ ಮಾಡಲಿಕ್ಕಿದ್ದರು. ಸದರಿ ಸ್ಥಳವನ್ನು ಏಲಂ ಮಾಡದೆ ಇರಮಾಡಿಸಬೇಕಾಗಿ ಈ ದೇವಸ್ಥಾನದ ಮೊಕ್ತೇಸರರು ರೆವೆನ್ಯು ಬೋರ್ಡಿನವರಿಗೆ ಅರ್ಜಿ ಮಾಡಿದ್ದಲ್ಲಿ ಸದರಿ ಸ್ಥಳ ಏಲಂ ಮಾಡಕೂಡದಾಗಿ ಬೋರ್ಡಿನ ಹುಕುಂ ಬಂದಿರುವುದು. ಸದರಿ ಕೆರೆಯು ಮತ್ತು ದೇವಸ್ಥಾನದ ಜೀರ್ಣೋದ್ಧಾರ ಅಗತ್ಯವಿದೆ. ಇದಕ್ಕೆ ರೂ. ೫೦೦೦ ಬೇಕಾದೀತು. ಈ ಸತ್ಕಾರ್ಯಕ್ಕೆ ಎಲ್ಲರೂ ಸಹಾಯಮಾಡಬೇಕಾಗಿ ಸದರಿ ದೇವಸ್ಥಾನದ ಮೊಕ್ತೇಸರ ವಿ. ಮಾಧವಭಟ್ಟರು ಈ ಮೂಲಕ ವಿನಂತಿಮಾಡಿಕೊಳ್ಳುತ್ತಿರುವರು.

ಕಳೆದ ತಾರೀಕು ೩ಕ್ಕೆ ಕದ್ರಿ ಯುವಕರ ಸಂಘದ ಪರವಾಗಿ ಮ. ರಾ. ಉ. ಕಣ್ಣಪ್ಪ ಎಮ್ ಎ. ಎಲ್. ಟಿ. ಯವರು "ನಾವು ಯಾಕೆ ಜೀವಿಸಬೇಕು" ಎಂಬ ವಿಷಯವನ್ನು ಕುರಿತು ಭಾಷಣವನ್ನು ಕೊಟ್ಟರು. ಇವರ ಭಾಷಣದ ಸಾರಾಂಶವು ಪ್ರಕಟಣೆ ಬಗ್ಗೆ ಬಂದಿದೆ. ಆದರೆ ಸ್ಥಳ ಸಂಕೋಚದಿಂದ ಇದನ್ನು ಪ್ರಕಟಿಸಲಿಲ್ಲ.

ಪುತ್ತೂರು ತಾಲೂಕು ಹೆಡ್ ಎಕೌಂಟೆಂಟರಾದ ಮ. ರಾ. ಮಂಕಿ ಸದಾಶಿವರಾಯರಿಗೆ ಒಂದು ತಿಂಗಳ ಪ್ರಿವಿಲೆಜ್ ರಜೆ ಕೊಟ್ಟಿರುವುದರಿಂದ ಮ. ರಾ. ಮೂಡಕಟ್ಟೆ ಶ್ರೀನಿವಾಸರಾಯರು ಪುತ್ತೂರು ತಾಲೂಕು ಹೆಡ್ ಎಕೌಂಟೆಂಟರಾಗಿ ನೇಮಕವಾಗಿದೆ.

ಮಹಾಲಿಂಗ ಎಂಬ ಹುಡುಗನಿಗೆ ಪಡುಬಿದ್ರೆಯಲ್ಲಿರುವ ಅಹಮ್ಮದಬ್ಯಾರಿ ಎಂಬ ಮಾಪಿಳ್ಳೆಯು ಕತ್ತಿಯಿಂದ ತಿವಿದು ಗಾಯಪಡಿಸಿದ ಒಂದು ಪಿರ್ಯಾದು ಇಲ್ಲಿಯ ಸ್ಪೇಶಲ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಖಲಾಗಿದೆ.

ಕಳೆದ ಶುಕ್ರವಾರ ರಾತ್ರೆ ಗಣಪತಿ ದೇವಸ್ಥಾನದ ಸಮೀಪ ಮ|| ರಾ|| ವಕೀಲ ಮೂಡಬಿದ್ರೆ ಶಂಕರನಾರಾಯಣರಾಯರ ಹಿತ್ತಲಲ್ಲಿರುವ ಮನೆಗೆ ಬೆಂಕಿ ಬಿದ್ದು ಉರಿದು ಹೋಯಿತು. ಈ ಅನಾಹುತವು ಹೇಗೆ ಸಂಭವಿಸಿತೆಂದು ತಿಳಿದುಬರುವದಿಲ್ಲ.

ಪಂಚಮರು ವಾಸಿಸಿಕೊಂಡಿರುವ ದೇರೆಬೈಲಿನಲ್ಲಿ ಗವರ್ನಮೆಂಟ ಗ್ರೇಂಟಿನ ಸಹಾಯದಿಂದ ಕಟ್ಟಿಸಲ್ಪಟ್ಟ ಪಂಚಮರ ಶಾಲೆಯ ಪ್ರಾರಂಭೋತ್ಸವವು ಕಳೆದ ತಾರೀಕು ೩ನೇ ಶನಿವಾರ ದಿನ ಇಂಪೀರಿಯಲ್ ಬೇಂಕಿನ ಈಗಿನ ಏಜಂಟರಾಗಿರುವ ಮ|| ರಾ. ಆನಂದರಾಯರಿಂದ ನೆರವೇರಿಸಲ್ಪಟ್ಟಿತು. ಪಂಚಮರ ಉದ್ಧರಣೆಯ ಕಾರ್ಯಕ್ಕೆ ಶ್ರೀಯುತ ರಂಗರಾಯರಿಗೆ ಬಹಳ ಉತ್ಸಾಹವನ್ನು ಕೊಟ್ಟ ಇಂಪೀರಿಯಲ್ ಬೇಂಕಿನ ಹಿಂದಣ ಏಜಂಟರಲ್ಲೊಬ್ಬರಾಗಿದ್ದ ಮಿ|| ಜಸ್ಟಿಸ್ ಬೊಯ್ಸರವರ ಹೆಸರಿನಿಂದ ಈ ಶಾಲೆಯು ಕರೆಯಲ್ಪಡುವುದು.

ಕಳೆದ ತಾರೀಕು ೫ರಲ್ಲಿ ಗವರ್ನಮೆಂಟ ಕೊಲೇಜಿನಲ್ಲಿ ವ್ಯಾ. ಯಂ. ಸಿ. ಎ. ಯು ವಿನೋದ ಸಂಗೀತ ಕೂಟವು ನಡೆದು ಸುಮಾರು ರೂ. ೫೦೦ ಜಮೆಯಾಗಿರುವುದು.

ದೇಶಬಂಧು ದಾಸರು ಮಂಗಳೂರಿಗೂ ಬರಲಿಕ್ಕಿರುವರೆಂದು ವದಂತಿ ಇದೆ.

ಮಂಗಳೂರು ರೆವೆನ್ಯು ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕರಾದ ಮ|| ರಾ|| ಯಂ. ರಾಮಪ್ಪನವರು ಮುನ್ಸಿಪಲ್ ಟೇಕ್ಸುಗಳನ್ನು ಹೆಚ್ಚಿಸುವ ಬಗ್ಗೆ ಸ್ಪೆಶಲ್ ರಿವಿಜನ್ ಆಫೀಸರರಾಗಿ ನೇಮಕಪಟ್ಟಿರುವರು.

ಕೊಡಿಯಾಲಬೈಲು ಪಶ್ಚಿಮ ವಾರ್ಡಿನಿಂದ ಮಂಗಳೂರು ಮುನ್ಸಿಪಲ್ ಕೌನ್ಸಿಲಿಗೆ ಉಮೇದುವಾರರಾಗಿ ನಿಂತ ಮ|| ರಾ|| ಕಲ್ಲೆ ಸುಂದರರಾವ್, ಮಿ|| ಡಿ. ವಿ. ಸಿ. ಬ್ರಿಟೋ, ಮ|| ರಾ|| ಸುಬ್ಬಯ್ಯ ಗುತ್ತೆದಾರ ಇವರಲ್ಲಿ ಮ|| ರಾ|| ಸುಬ್ಬಯ್ಯ ಗುತ್ತೆದಾರರು ಆರಿಸಲ್ಪಟ್ಟಿರುವರು.

ಇದೇ ತಾರೀಕು ೧೧ರಿಂದ ೧೮ರ ವರೆಗೆ ಕಲೆಕ್ಟರರ ಆಫೀಸಿನಲ್ಲಿ ಸರಕಾರಿ ನೌಕರರಿಗೆ ಸ್ಪೆಶ್ಯಲ್ ಟೆಸ್ಟ ಪರೀಕ್ಷೆಯು ನಡೆಯುವುದು.

ದಕ್ಷಿಣ ಕನ್ನಡ.

ಸುರತಕಲ್ಲು:— ಇಲ್ಲಿಯ "ಇದ್ಯ ವಿದ್ಯಾದಾಯಿನೀ ಶಾಲೆಯಲ್ಲಿ ಇದೇ ಜೂನ್ ತಾ. ೧ರಿಂದ ನೇಯಿಗೆಯಲ್ಲಿ ತರಬೇತಾದ ಉಪಾಧ್ಯಾಯರು IVನೇ ದರ್ಜೆಯಿಂದ VIIIನೇ ದರ್ಜೆಯ ವರೆಗಿನ ವಿದ್ಯಾರ್ಥಿಗಳಿಗೆ ನೇಯುವುದನ್ನು ಕೈಗಾರಿಕೆ ಪಾಠವಾಗಿ ಕಲಿಸುವಂತೆ ಏರ್ಪಾಡು ಮಾಡಿರುತ್ತಾರೆ. ದೇಶಾಭಿವೃದ್ಧಿಗೂ ಜನಾಂಗದ ಜೀವನೋಪಾಯಕ್ಕೂ ಮುಖ್ಯ ಸಾಧನವಾದ ಈ ಶಿಕ್ಷಣಪ್ರಚಾರಕ್ಕೆ ಶಾಲೆಯ ಸುತ್ತುಮುತ್ತಲಿನ ಪಾಲಕರ ಹೆತ್ತವರು ಉತ್ತೇಜನ ಕೊಡುವುದು ಅತ್ಯವಶ್ಯ. ದೂರದಿಂದ ಬರುವ ಮಕ್ಕಳಿಗೆ ಇಲ್ಲಿ ಉಳಿದುಕೊಳ್ಳುವದಕ್ಕೆ ತಕ್ಕುದಾದ ವ್ಯವಸ್ಥೆಯನ್ನು ಶಾಲೆಯವರು ಮಾಡಿರುವುದರಿಂದ ಶಾಲೆಗೆ ದೂರವಾದ ಪ್ರಾಂತ್ಯಗಳ ಮಕ್ಕಳಿಗೂ ತುಂಬಾ ಅನುಕೂಲವೇ ಸರಿ.

ಬಂಟವಾಳ:— ಇಲ್ಲಿಯ ಲೋಕಲ್ ಫಂಡ್ ಮಿಡ್‌ವೈಫ್ ೩ ತಿಂಗಳ ರಜೆಯ ಮೇಲೆ ಹೋಗಿರುವುದರಿಂದ ಇಲ್ಲಿಗೆ ಒಬ್ಬ ಮಿಡ್‌ವೈಫನ್ನು ಬೇಗನೆ ಕಳುಹಿಸುವುದು ಅಗತ್ಯ.

ಇಲ್ಲಿ ಚಳಿಜ್ವರ ಮತ್ತು ವಿಷಮಜ್ವರ ಬಹಳ ಪ್ರಬಲವಾಗಿದೆ. ದಿನಕ್ಕೆ ಸುಮಾರು ೩೦೦ ಹೊರ ರೋಗಿಗಳು ಬರುತ್ತಲಿದ್ದಾರೆ. ಒಬ್ಬ ಕೌಂಪೌಂಡರಿಗೆ ಮದ್ದು ಕೊಟ್ಟು ಸುಧಾರಿಸಲು ಅಸಾಧ್ಯವಾಗುತ್ತದೆ. ಜನರು ಬಹಳ ಹೊತ್ತು ಕಾದುನಿಲ್ಲಬೇಕಾಗುತ್ತದೆ. ಆದ್ದರಿಂದ ಸ್ವಲ್ಪ ಸಮಯಕ್ಕೆ ಇನ್ನೊಬ್ಬ ಕೌಂಪೌಂಡರನ್ನು ಕಳುಹಿಸಿದರೆ ಜನರಿಗೆ ಬಹಳ ಪ್ರಯೋಜನವಾಗುತಿತ್ತು.

ಮಂಜೇಶ್ವರ:— ಈ ಊರಿನಲ್ಲಿ ಗುಡ್ಡೆಕೇರಿ ಎಂಬಲ್ಲಿ ನೀರಿಲ್ಲದೆ ಜನರು ಬಹಳ ಪೇಚಾಡುತ್ತಾರೆ. ಇಲ್ಲಿ ವಾಸಿಸುವ ಜನರು ಬಹಳ ಬಡವರಾಗಿದ್ದರಿಂದ ಸ್ವತಃ ಬಾವಿಯನ್ನು ತೋಡಿಸಲು ಅವರಿಗೆ ಸಾಮರ್ಥ್ಯವಿಲ್ಲ. ಆದ್ದರಿಂದ, ಎಲ್ಲಾ ಸಂಗತಿಗಳನ್ನು ಸ್ವತಃ ನೋಡಿ ಅನುಭವವಿರುವ ಮಾನ್ಯ ತಾಲೂಕುಬೋರ್ಡ ಪ್ರೆಸಿಡೆಂಟರು ಗುಡ್ಡೆಕೇರಿಯಲ್ಲಿ ಒಂದೆರಡು ಬಾವಿಗಳನ್ನು ತೋಡಿಸಲಿಕ್ಕೆ ಹಣ ಸೇಂಕ್ಷನ್‌ಮಾಡುತ್ತಿದ್ದರೆ ಜನರ ಕಷ್ಟವು ನಿವಾರಣೆಯಾಗುತ್ತಿತ್ತು.

ಇಲ್ಲಿಯೂ [illegible]ಕ್ಷೇತ್ರದಲ್ಲಿಯೂ ಮೈಲಿಗೆ ರೋಗವು ಬಹಳ ಹರಡಿಕೊಂಡಿದೆ. ಅನೇಕ ಮರಣಗಳಾದವು. ಸೆನಿಟರಿ ಇನ್ಸ್ಪೆಕ್ಟರು ಬಂದು ಎಲ್ಲರೂ ದಾಕುಹಾಕಿಸಬೇಕೆಂದು ಡಂಗುರ ಮೂಲಕ ಸಾರುತ್ತಿರುತ್ತಾರೆ.

ಈಗ ರೈಲ್ವೇ ಸ್ಟೇಶನಿನ ಹತ್ತಿರವಿರುವ ಲೋಕಲ್‌ಫಂಡ್ [illegible] ಮಾರ್ಕೆಟನ್ನು ತೆಗೆದು ಪಟ್ಟಣದ ಹತ್ತಿರ ಎಲ್ಲಾ ಜನರಿಗೆ ಅನುಕೂಲವಾದ ಸ್ಥಳದಲ್ಲಿ ಕಟ್ಟಿಸಿದರೆ ತಾಲೂಕುಬೋರ್ಡಿಗೆ ಆದಾಯವೂ ಜನರಿಗೆ ಒಳ್ಳೇ ಅನುಕೂಲತೆಯೂ ಆಗುತ್ತಿತ್ತು. ಅನುಕೂಲತೆಗಳನ್ನು ಒದಗಿಸದೆ ಜನರು ಬರುವಲ್ಲಿ ಮೀನು ಮಾರುವ ಬಡ ಮೊಗೇರರ ಹೆಂಗಸರ ಮೇಲೆ ನ್ಯೂಸೆನ್ಸ್ ಚಾರ್ಜ ಮಾಡುವುದರಿಂದ ಪ್ರಯೋಜನವೇನೂ ಕಂಡು ಬರುವುದಿಲ್ಲ.

ಪತ್ರವ್ಯವಹಾರ.

ಮಂಜೇಶ್ವರ ಹೊಳೆಗೆ ಸೇತುವೆ ಆಗತ್ಯವಿದೆ.

ಡಿಸ್ಟ್ರಿಕ್ಟ ಬೋರ್ಡಿನವರು ೩ ಲಕ್ಷ ರೂಪಾಯಿ ಸೇಂಕ್ಷನ್ ಮಾಡಿ ಕೆಲವು ವರುಷಗಳ ಹಿಂದೆ ಕಟ್ಟಿಸಲಿಕ್ಕೆ ಪ್ರಾರಂಭಿಸಿದ ಗುರುಪುರ ಸಂಕವು ಸುಮಾರು ೫ ಲಕ್ಷ ೩೩ ಸಾವಿರ ರೂಪಾಯಿ ಖರ್ಚಿನಿಂದ ಮುಗಿಸಲ್ಪಟ್ಟಿತು. ಇಷ್ಟರ ವರೆಗೆ ಮಂಜೇಶ್ವರ ಹೊಳೆಗೆ ಸೇತುವೆಯನ್ನು ಕಟ್ಟಿಸಲಿಕ್ಕೆ ಗುರುಪುರ ಸಂಕವಾಗಲಿಲ್ಲವೆಂಬ ನೆವನವಿತ್ತು. ಈಗ ಸದ್ಯಕ್ಕೆ ಇನ್ನು ಬೇರೆ ಸಂಕಗಳನ್ನು ಡಿಸ್ಟ್ರಿಕ್ಟ ಬೋರ್ಡಿನವರು ಕಟ್ಟಿಸುವುದರಲ್ಲಿಲ್ಲ. ಆದ್ದರಿಂದ ಮಂಜೇಶ್ವರ ಸಂಕವನ್ನು ಸೇಂಕ್ಷನ್‌ಮಾಡಿದರಾದರೂ ಆಗುತಿತ್ತು. ಇದಕ್ಕೆ ಗುರುಪುರ ಸಂಕದ ಹಾಗೆ ಲಕ್ಷಾಂತರ ರೂಪಾಯಿಗಳು ಬೇಕಾಗಿಲ್ಲ. ಸುಮಾರು ೧೦ ಸಾವಿರ ರೂಪಾಯಿಯೊಳಗೆ ಕಟ್ಟಿಸಬಹುದು. ಈ ಸಂಕದ ವಿಷಯ ಆಲೋಚನೆಗಳು ಸುಮಾರು ೪೦ ವರುಷಗಳಿಂದ ನಡಿಯುತ್ತದೆ. ಬಹಳ ಆಗತ್ಯವಿರುವ ಈ ಸೇತುವೆಯ ವಿಷಯ ಡಿಸ್ಟ್ರಿಕ್ಟ ಬೋರ್ಡಿನವರು ಆಲೋಚಿಸದೆ ಇರುವುದು ಬಹಳ ಶೋಚನೀಯವಾದ ಸಂಗತಿಯಾಗಿದೆ. ಇನ್ನಾದರೂ ಆಲೋಚಿಸುವರೇ?

ಅಯ್ಯಾ,

ತಮ್ಮ ಇದೇ ಕಳೆದ ಸಂಚಿಕೆಯಲ್ಲಿ "ಕೊಯಪಾಡಿ ಬೋರ್ಡು ಎಲಿಮೆಂಟರಿ ಶಾಲೆ" ಎಂಬ ಶಿರೋನಾಮೆಯುಳ್ಳ ಲೇಖನವನ್ನು "ಗ್ರಾಮಸ್ಥ"ರೆಂಬವರು ಬರೆದ ಬಾತಮಿಯಲ್ಲಿ ಸದರಿ ಬಾತಮಿದಾರರಿಗೆ ಈ ಶಾಲೆಗೆ ಅತೀ ಲಗ್ತ ಇರುವ ನಾರಾಯಣ ಮಂಗಲ ಸಂಸ್ಕೃತ ಶಾಲೆ ಕಾಣಿಸದಿರುವುದು ತುಂಬಾ ಆಶ್ಚರ್ಯ. ಈ ಶಾಲಾ ಕಮಿಟಿಯವರು ಏನೊಂದು ಪ್ರತಿಫಲವಿಲ್ಲದೆ ಸಂಸ್ಕೃತ, ಇಂಗ್ಲೀಷ್, ಕನ್ನಡ, ಮಲೆಯಾಳ ಕಲಿಸುವುದರಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಖಾಸಗಿ ಶಾಲೆಗಳಿದ್ದಾಗ್ಯೂ ಇದೇ ಶಾಲೆಗೆ ಸೇರಿ ವಿದ್ಯಾದಾನ ಪಡೆಯುತ್ತಿರುವರು. ಮಾತ್ರವಲ್ಲ ನಮ್ಮ ಕೊಯಪಾಡಿ (ನ್ಯಾಕಾವ) ಬೋರ್ಡು ಶಾಲೆಯಿಂದ ಸಹಾ ಈಚೆಗೆ ಸದರಿ ಸಂಸ್ಕೃತ ಶಾಲೆಗೆ ಗ್ರಾಮಸ್ಥರಾದ ನಾವು ನಮ್ಮ ಬಾಲಕರನ್ನು ಸೇರಿಸಿದ ಸಂಗತಿ "ಗ್ರಾಮಸ್ಥ"ರು ಯಾಕೆ ತಿಳಿಸುವುದಿಲ್ಲ? ಸದರಿ ನಾರಾಯಣ ಮಂಗಲ ಸಂಸ್ಕೃತ ಶಾಲೆಯು ಸಂಬಂಧ ಕ್ಷೀಣಗತಿಗೆ ಬಂದು ಕೈಬೆರಳುಗಳಿಂದ ಎಣಿಸುವಷ್ಟರ ಮಟ್ಟಿನ ವಿದ್ಯಾರ್ಥಿಗಳು ಬೋರ್ಡು ಶಾಲೆಯಲ್ಲಿ ಇರದಿರುವುದರಿಂದ ವೃಥಾ ನಷ್ಟಪಡುತ್ತಿರುವ ಬೋರ್ಡಿನವರು ಸದರಿ ಬೋರ್ಡು ಶಾಲೆಯನ್ನು ನಮ್ಮ ಗ್ರಾಮವೇ ಆಗಿದ್ದು ತುಂಬಾ ಜನಸಂಖ್ಯೆಯುಳ್ಳ ಕುಂಬಳೆಗೆ ಒಯ್ಯೋಣವಾದರೆ ನಾವು ಸಂತೋಷಪಡಬೇಕು ಹೊರತು ಬೋರ್ಡಿನವರ ನಿರ್ದಯತೆ ಅಥವಾ ಸಮರ್ಥ ಉಪಾಧ್ಯಾಯರು ಬೇಕೆಂತ ವಗೈರೆ ನಿಷ್ಕಾರಣವಾದ ಉದ್ದುದ್ದ ಲೇಖ ಬರೆದು ಪ್ರಯೋಜನವಿಲ್ಲ. ಅದೇ ಗ್ರಾಮಸ್ಥ.

ಅನಾವೃತ (open). ಪತ್ರ

ಮ|| ರಾ|| ರಾ|| ವಕೀಲ ಬಿ. ಮಹಾಬಲ ಹೆಗ್ಗಡೆರಿಗೆ.

ನೀವು ಮದ್ರಾಸು ಲೆಜಿಸ್ಲೇಟಿವ್ ಕೌನ್ಸಲಿನ ಮೆಂಬರಿಕೆಗೆ ಉಮೇದ್ವಾರರಾಗಿ ನಿಂತಿರುವಿರಷ್ಟೆ. ಹಲವು ವೋಟರರು ಈ ಕೆಳಗಣ ವಿಷಯಗಳನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಯಲು ಅಪೇಕ್ಷಿಸುವುದರಿಂದ ನಿಮ್ಮ ಉತ್ತರವನ್ನು ಈ ಪತ್ರಿಕೆ ಮೂಲಕ ಪ್ರಕಟಗೊಳಿಸುವರಾಗಿ ನಂಬುತ್ತೇನೆ.

೧. ಕೌನ್ಸಿಲಿನ ಕಳೆದ ಚುನಾವಣೆ ಸಂದರ್ಭದಲ್ಲಿ ನೀವು ಸಹ ಉಮೇದ್ವಾರರಾಗಿದ್ದು ನಮ್ಮ ಜಿಲ್ಲೆಯ ಹಿಂದುಗಳಿಗೆ ಇರುವ ಎರಡು ಮೆಂಬರಿಕೆಗಳಿಗೂ ಬ್ರಾಹ್ಮಣೇತರರನ್ನೇ ಚುನಾಯಿಸಬೇಕೆಂದು ನಮ್ಮ ಜನರಿಗೆಲ್ಲಾ ನೀವು ಸಾರಿಕೊಂಡು ಹೋದಸಂಗತಿ ನಿಮ್ಮ ಜ್ಞಾಪಕದಲ್ಲಿರಬಹುದು. ಈ ಸಲವೂ ನಿಮ್ಮ ಮತವು ಅದೇ ರೀತಿಯಲ್ಲಿರುವುದೋ?

೨. ಅಳಿಯ ಸಂತಾನದ ಕಟ್ಟಿನ ಕ್ರಮಗಳಲ್ಲಿ ಏನಾದರೂ ಸುಧಾರಣೆಗಳನ್ನು ನೀವು ಮಾಡಲಿಕ್ಕಿರುವಿರೋ? ಆಸ್ತಿಗಳನ್ನು ವಿಭಾಗಮಾಡುವ ಕಾನೂನು ಅಗತ್ಯವಿದೆಯೋ? ಯಾವ ರೀತಿಯಲ್ಲಿ ಆಗಬೇಕು? ಯಜಮಾನರು ಆಡಳಿತೆ ಅಥವಾ ಲೆಕ್ಕ ಪತ್ರಗಳನ್ನು ಸರಿಯಾಗಿ ಇಡುವಂತೆ ಏನಾದರೂ ಕಾನೂನು ಅಗತ್ಯವಿದೆಯೋ? ಅದು ಹೇಗೆ ಆಗಬೇಕು?

ನಮ್ಮೊಳಗಿನ ಮದುವೆಯ ಕಾನೂನು ಪ್ರಕಾರ ಸಿಂಧುವಾದ ಸ್ವಾರ್ಜಿತ ಆಸ್ತಿಗೆ ಹೆಂಡತಿ ಮಕ್ಕಳು ಹಕ್ಕುದಾರರಾಗುವಂತೆ ಮಾಡುವುದರಲ್ಲಿ ನಿಮ್ಮ ಅಭಿಪ್ರಾಯವೇನು?

೩. ಹಿಂದು ಮತತಾಸನಗಳ ಕಾನೂನು ಈಚೆಗೆ ಮದ್ರಾಸು ಕೌನ್ಸಿಲಿನಲ್ಲಿ ಬ್ರಾಹ್ಮಣೇತರಪಕ್ಷದ ಬಹುಮತದಿಂದ ಪಾಸಾಗಿರುವುದೂ ಇದಕ್ಕೆ ಬ್ರಾಹ್ಮಣರಲ್ಲಿ ಅನೇಕರು ವಿರೋಧವಿದ್ದು ಇದನ್ನು ರದ್ದುಮಾಡುವಂತೆ ಗವರ್ನರ ದೊರೆಗಳನ್ನೂ ವೈಸರಾಯಿ ಪ್ರಭುಗಳನ್ನೂ ಕೇಳಿಕೊಂಡಿರುವುದೂ ನೀವು ತಿಳಿದಿರುವಿರಷ್ಟೆ. ಈ ವಿಷಯ ನಿಮ್ಮ ಅಭಿಪ್ರಾಯವೇನು?

ಬ್ರಾಹ್ಮಣೇತರ ವೋಟರರಲ್ಲೊಬ್ಬ.

ಸೂಚನೆ:— ವಾರ್ತಾಪ್ರಸಾರಕ ಸಂಘವು ಲೋಕಶಿಕ್ಷಣ ಮಾಲೆಯ ೫ ಲೇಖನಗಳನ್ನು ಪ್ರಕಟನೆಯ ಬಗ್ಗೆ ಕಳುಹಿಸಿಕೊಟ್ಟಿದೆ. ಇತರ ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಉದ್ದುದ್ದ ಲೇಖಗಳನ್ನು ಪುನಃ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುವ ಸಂಪ್ರದಾಯವು ನಮ್ಮಲ್ಲಿ ಇಲ್ಲ. ಆದರೂ ಕರ್ನಾಟಕ ಮಹನೀಯರ ಅಪೂರ್ವವಾದ ವಿಚಾರಗಳನ್ನೂ, ನವೀನವಾದ ಮಾಹಿತಿಯನ್ನೂ ಬರೆದು ಕಳುಹಿಸಿದರೆ ನಾವು ಅವುಗಳನ್ನು ಅವಶ್ಯವಾಗಿ ಪ್ರಕಟಿಸುವೆವು. ಅಲ್ಲದೆ ಕರ್ನಾಟಕದೊಳಗಿನ ವಿಶೇಷ ವಾರ್ತೆಗಳಿಗೆ ನಮ್ಮ ಪತ್ರದಲ್ಲಿ ಅತ್ಯಾದರದಿಂದ ಸ್ಥಳವು ದೊರಕುವುದು.

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ನಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾ ಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ ಮತ್ತು ದೇಶಾಭಿಮಾನಿಗಳ ವಿಶ್ವಾಸಕ್ಕೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.
ಬೆಲೆ: ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ-ಭಾಗ್ಯೋದಯ

ಉತ್ತಮ ತರದ ಐತಿಹಾಸಿಕ ನಾಟಕ. ಸರಸಗಳಾದ ಗದ್ಯ ಪದ್ಯಗಳಿಂದ ಕೂಡಿ ಮನೋಹರವಾಗಿದೆ. ಅಂದವಾದ ರೀತಿಯಲ್ಲಿ ಅಚ್ಚಾಗುತ್ತಿದೆ. ಕೆಲವು ಪ್ರತಿಗಳು ಮಾತ್ರವೇ ತಯಾರಾಗುತ್ತಿವೆಯಾದ ಕಾರಣ ಬೇಕಾದವರು ದಯಮಾಡಿ ಬೇಗನೆ ಬರೆದು ತಿಳುಹಿಸಬೇಕು.

ವಸಂತ ಕುಸುಮಾಂಜಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅತ್ಯುತ್ತಮ ತರಗತಿಯ ಬಹುಮಾನವನ್ನು ಪಡೆದಿರುವ ಈ ಗ್ರಂಥದಲ್ಲಿ "ಜೀವಗೀತೆ" "ಆತ್ಮಗೀತೆ" "ದೇವರಲ್ಲಿ" ಎಂಬ ಆಂಗ್ಲಕವಿತೆಗಳ ಭಾವಾನುವಾದವೂ, ಶ್ರೀರಾಮಕೃಷ್ಣ ಪರಮಹಂಸ, ರಾಮಮೋಹನ ರಾಯ್, ವಿವೇಕಾನಂದ, ಬಾಲಗಂಗಾಧರ ತಿಲಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜಗದೀಶ ಚಂದ್ರ ಬೋಸ್—ಇವರೇ ಮೊದಲಾದ ಭಾರತೀಯ ಮಹನೀಯರ ಗುಣವರ್ಣನಾತ್ಮಕವಾದ ಕೃತಿಗಳು "ವಂದೇ ಮಾತರಂ", ದೇಶಭಕ್ತ ಪ್ರತಿಜ್ಞಾ ಪಂಚಕ ಮೊದಲಾದ ಪದ್ಯಗಳೂ ಇವೆ. ಇವು ಓದಿ ಮನನ ಮಾಡಲಿಕ್ಕೂ ಸಭೆಗಳಲ್ಲಿ ಗಾನದೊಡನೆ ಓದಲಿಕ್ಕೂ ತಕ್ಕುವಾಗಿವೆ. ಪ್ರತಿಂಶಿತರಾದ ಪ್ರಖ್ಯಾತಭಾರತೀಯರ ಚಿತ್ರಪಟಗಳೂ ಇವೆ. ಕಾಗದವೂ ಮುದ್ರಣವೂ ಅಂದವಾಗಿ ಪುಸ್ತಕವು ಬಹು ಸುಂದರವಾಗಿದೆ. ಪ್ರತಿಯೊಬ್ಬ ಕನ್ನಡಿಗನ ಜೇಬಿನಲ್ಲಿಯೂ ಇರಬೇಕಾದ ಪುಸ್ತಕವಿದು. ಇದರ ವಿಷಯದಲ್ಲಿ ಅನೇಕ ಮಂದಿ ವಿದ್ವಾಂಸರು ತಮ್ಮ ಸಂತೋಷವನ್ನು ತಿಳಿಸಿರುವರು. ಬೆಲೆ: ೮ ಆಣೆ. ನಮ್ಮಲ್ಲಿ ಇನ್ನೂ ಅನೇಕ ಒಳ್ಳೆಯ ಗ್ರಂಥಗಳಿವೆ. ವರ್ತಕರಿಗೆ ಧಾರಾಳವಾದ ದಳ್ಳಾಳಿ ದೊರೆಯುವುದು.

ವಿಳಾಸ:—ಮ್ಯಾನೇಜರ್,
ಕರ್ಣಾಟಕ ಪ್ರಕಟನಾಲಯ
ಶಂಕರಪುರ, ಬಸವನಗುಡಿ ಪೋಸ್ಟು,
ಬೆಂಗಳೂರು ಸಿಟಿ

ಹೊಸಗ್ರಂಥಗಳು!! ಬೇಗನೇ ತರಿಸಿಕೊಳ್ಳಿರಿ!!!

ಕೋಕಶಾಸ್ತ್ರವು.

ರಸಿಕ ವಾಚಕ ಮಹಾಶಯರೇ,

ಈ ಗ್ರಂಥವು ಬಹುಕಾಲದಿಂದ ಗುಪ್ತವಾಗಿದ್ದ ಗ್ರಂಥವು. ನಾವು ಇದನ್ನು ಅತಿ ಪ್ರಯಾಸದಿಂದಲೂ ಧನವ್ಯಯದಿಂದಲೂ, ಸಂಪಾದಿಸಿ, ಅದರಲ್ಲಿ ವ್ಯವಹಾರಕ್ಕೆ ಉಪಯೋಗವಾಗಿರುವ ವಿಷಯಗಳನ್ನೇ ಶೋಧಮಾಡಿ ಸಂಗ್ರಹಿಸಿ ಮತ್ತು ಕೆಲಕೆಲವು ಇಂಗ್ಲೀಷು ಗ್ರಂಥಗಳ ಮತಾನುಸಾರವಾಗಿ ಮುದ್ರಿಸಿರುವೆವು. ಇದರಲ್ಲಿ ಪದ್ಮಿನಿ, ಚಿತ್ರಿಣಿ, ಸ್ತ್ರೀಯರ ಇದರಂತೆ ಪುರುಷರಲ್ಲಿಯ ಭೇದ ಯಾವಜಾತಿ ಸ್ತ್ರೀಯರಿಗೆ ಯಾವಜಾತಿ ಪುರುಷನ ಮೇಲನದಿಂದ ಸುಖವಾಗುವದೆಂಬದನ್ನು ಜನನೇಂದ್ರಿಯಾದಿಗಳ ವರ್ಣನೆಯನ್ನೂ ರಜೋಧರ್ಮ, ಗರ್ಭಾದಾನದ ವ್ಯಾಖ್ಯೆಯನ್ನೂ, ಇಷ್ಟಾನುಸಾರವಾಗಿ ಸಂತಾನೋತ್ಪತ್ತಿಯ ಪ್ರಕಾರವನ್ನೂ, ನಪುಂಸಕತ್ವ ವಂಧ್ಯಾದೋಷಗಳ ಚಿಕಿತ್ಸೆಯನ್ನು, ಸ್ತ್ರೀಯರ ಗೂಢ ರಹಸ್ಯವನ್ನು ದಂಪತಿಗಳು ಅನ್ಯೋನ್ಯವಾಗಿ ಪ್ರೀತಿಯಿಂದ ಇರುವದಕ್ಕೆ ವಶೀಕರಣ ಉಪಾಯಗಳನ್ನು ಇಂಥ ಎಷ್ಟೋ ವಿಧವಾದ ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿರುತ್ತೇವೆ. ಬೆಲೆಯಾದರೂ ಸ್ವಲ್ಪ ಕಡಿಮೆ. ಆದ್ದರಿಂದ ಈ ಗ್ರಂಥವನ್ನು ಒಮ್ಮೆ ಪರೀಕ್ಷಿಸಿ ಸಂಗ್ರಹದಲ್ಲಿ ಇಟ್ಟುಕೊಂಡು ಸುಖಪೂರಿತರಾಗಿರಿ.

ಇದರ ಬೆಲೆ ೧—೮—೦, ಟಪ್ಪಾಲು ಖರ್ಚು ೦—೪—೦.
ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ.

60 ವರ್ಷದ ಅನುಭವವುಳ್ಳ ನೂಲಿನ ಮಳಿಗೆ

ಮಗ್ಗದಾರರಿಗೆ ಬೇಕಾಗುವ ತರೇವಾರಿ ನೂಲುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿಯೂ, ಇನ್ನೂ ಅನೇಕ ತರದ ವಸ್ತ್ರಗಳೂ ಖಾಯಂ ಆಗಿಯೂ ಚಿಲ್ಲರೆ ಆಗಿಯೂ ದೊರೆಯುತ್ತವೆ.

ಶ್ರೀನಿವಾಸ ರಂಗಪ್ಪ
ರಥಬೀದಿ, ಮಂಗಳೂರ

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0
Reserve and other sinking Funds „ 205,250—0—0

ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 205,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಖಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 12th Feb. 1923.
K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ! ಏಕೆಂದರೆ,

ಲೋಕಾಮಯಹರ ಕಸ್ತೂರಿ ಮಾತ್ರೆಗಳ ಒಂದೇ ಒಂದು ಸೀಸೆಯು ನಿಮ್ಮಲ್ಲಿದ್ದರೆ ವೈದ್ಯರ ಸಹಾಯವನ್ನು ಎಂದಿಗೂ ಅಪೇಕ್ಷಿಸಲಾರಿರಿ ಅದು ಹೇಗೆಂದರೆ ಈ ಮಾತ್ರೆಗಳಲ್ಲಿ ಒಂದೆರಡನ್ನು ತಾಂಬೂಲದಲ್ಲಾಗಲೀ ಹಾಗೆಯೇ ಆಗಲೀ ಉಪಯೋಗಿಸುವುದರಿಂದಲ್ಲಿ ಯಾವ ಕಾಹಿಲೆಗೂ ಗುರಿಯಾಗದೆ ಆರೋಗ್ಯಶಾಲಿಗಳಾಗುವಿರಿ. ಅಥವಾ ಜ್ವರಾದಿಗಳು ತಲೆದೋರಿದಾಗ ಅನುಪಾನಪತ್ರದಲ್ಲಿ ಹೇಳಿರುವಂತೆ ಸೇವಿಸಿದರೆ ಒಡನೆಯೆ ಆರೋಗ್ಯವನ್ನು ಹೊಂದುವಿರಿ. ಈ ಮಾತ್ರೆಗಳಲ್ಲಿ ಆಕ್ಷೇಪಣೀಯವಾದ ವಸ್ತುಗಳಾವುವೂ ಸೇರಿಸಿಲ್ಲವಾಗಿ ತೊಟ್ಟಿಲು ಕೂಸುಗಳು ಮೊದಲುಗೊಂಡು ಮುದುಕರ ವರೆಗೆ ಪ್ರತಿಯೊಬ್ಬರೂ ಸೇವಿಸಬಹುದು. ಈ ಮಾತ್ರೆಗಳು ಎಂಥ ಕಠಿಣವಾದ ಆಹಾರವನ್ನಾದರೂ ಜೀರ್ಣಗೊಳಿಸಿ ಪಚನಶಕ್ತಿಯನ್ನು ಸಮಸ್ಥಿತಿಯಲ್ಲಿರಿಸುತ್ತವೆ. ಚಳಿ, ಹವಾ, ಕೊಳಕಾದ ನೀರುಗಳಿಂದ ಯಾವ ಕೆಡಕೂ ಉಂಟಾಗದಂತೆ ರಕ್ಷಿಸುತ್ತವೆ.

ಮಂದ, ಕೆಮ್ಮು, ಕೆಮ್ಮಲು, ಶೀತ, ಶೀತವಾತ, ಮೈಕೈಭಾರ, ಆಹಾರವು ಜೀರ್ಣವಾಗದೆ ಬರುವ ತಲೆ ನೋವು, ಕರುಳಿನ ನೋವು, ಜ್ವರ, ಚಳಿಜ್ವರ ಇವುಗಳನ್ನು ಗುಣಪಡಿಸುತ್ತವೆ.
ಈ ಮಾತ್ರೆಗಳನ್ನು ಸೇವಿಸಿ ಲಕ್ಷೋಪಲಕ್ಷ ಇನ್‌ಫ್ಲುಯನ್‌ಜಾ ರೋಗಿಗಳು ಆರೋಗ್ಯಶಾಲಿಗಳಾಗಿರುತ್ತಾರೆ.
ಮಕ್ಕಳ ಎಳವು, (ಮಾಂದ್ಯ) ವಾಯು, ಜ್ವರ, ಕೆಮ್ಮಲುಗಳನ್ನು ಈ ಮಾತ್ರೆಗಳು ಗುಣಪಡಿಸಲು ಅದ್ಭುತಶಕ್ತಿಯುಳ್ಳವು
ವ್ಯಾಯಾಮವನ್ನು ಮಾಡಲವಕಾಶವಿಲ್ಲದ ವ್ಯಾಪಾರಗಳಿಗೂ ಗೋಷಾಸ್ತ್ರೀಯರಿಗೂ ಈ ಮಾತ್ರೆಗಳು ಸಂಜೀವನಪ್ರಾಯವಾದವು. ಪ್ರತಿ ಸೀಸೆಯೊಡನೆಯೂ ಅನುಪಾನಪತ್ರವು ಇದ್ದೇ ಇರುತ್ತದೆ.
ಪ್ರತಿ ಸೀಸೆಯ ಮೇಲೂ ಇರುವ ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಇರುವ ಸೀಸೆಯನ್ನು ಮಾತ್ರವೇ ಕೊಂಡುಕೊಳ್ಳಿರಿ 250ರಿಂದ 300 ಮಾತ್ರೆಗಳ ವರೆಗಿರುವ ಸೀಸೆ 1ಕ್ಕೆ 4 ಆಣೆ ಮಾತ್ರವೆ.

ಒಟ್ಟಿಗೆ 6 ಸೀಸೆಗಳನ್ನು ತೆಗೆದುಕೊಂಡರೆ 1—4—0, 12 ಸೀಸೆಗಳಿಗೆ 2—7—0, 25 ಸೀಸೆಗಳಿಗೆ 4—10—0 ಪೋಸ್ಟೇಜುಬೇರೆ. ಎಲ್ಲಾ ಅಂಗಡಿಗಳಲ್ಲಿಯೂ ದೊರಿಯುತ್ತದೆ.

ಏಜಂಟ್
ಮಂಗಳೂರು ಟವನಿಗೆ ಮಾತ್ರ.
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪನ್ನಾಮತಿ (ಅಥವಾ) ಪ್ರಣಯಲೀಲೆ.

ಹೊಸ ಕಾದಂಬರಿ. ಬೆಲೆ, 1 ರೂ. 6 ಆ.

ಇದು ಐತಿಹಾಸಿಕ ಕಾದಂಬರಿ. ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದುದು. ಕಥೆಯು ಬಹಳ ಚನ್ನಾಗಿದೆ.

ವೃತ್ತಾಂತ ಪತ್ರಿಕೆ, ಮೈಸೂರು— (೨೮—೬—೧೯೨೩) ಇವರ ಅಭಿಪ್ರಾಯ. ಅಂದವಾದ ಮುದ್ರಣ. ನೊಗಸಾದ ಕಾಗದ. ಒಬ್ಬ ಪಠಾಣ ರಾಜಪುತ್ರಿಯ ನಡವಳಿಕೆಯ ವಿಷಯವಾದ ಈ ಕಥೆಯನು ಯಾರೇ ಆದರೂ ಓದಲು ಪ್ರಾರಂಭಿಸಿದರೆ ಮುಗಿಸುವ ಪರ್ಯಂತರವೂ ಪುಸ್ತಕವನ್ನು ಬಿಡಲು ಮನಸಾರದು. ಸ್ತ್ರೀ ಸಾಹಸ, ಕಷ್ಟಸಹಿಷ್ಣುತೆ, ಪತಿವ್ರತೆಯರ ನಡವಳಿಕೆ, ಪಿತೃಭಕ್ತಿ, ಕಾರ್ಯನಿರ್ವಾಹಕತೆ, ರಾಜನೀತಿ, ಪ್ರಜೆಗಳಿಗೂ ರಾಜರಿಗೂ ಇರತಕ್ಕುದಾದ ಭಕ್ತಿಪ್ರೀತಿ ಮುಂತಾದುವು ಈ ಕಥೆಯಲ್ಲಿ ನಿರೂಪಿಸಲ್ಪಟ್ಟಿರುತ್ತವೆ. .... ಬಾಲಿಕೆಯು ಕಲಿಯತಕ್ಕುದಾದ ಅನೇಕ ಸಂಗತಿಗಳು ಇದರಲ್ಲಿ ಕಥೆಯ ರೂಪವಾಗಿ ಉದಾಹರಿಸಲ್ಪಟ್ಟಿರುವದರಿಂದ ಬಾಲಿಕೆಯರು ಅಗತ್ಯವಾಗಿ ಓದಲು ಅರ್ಹವಾಗಿದೆ

ಸಂಗೀತ ಸಮಯಸಾರ ಸಚಿತ್ರ ರೂ. ೧—೮—೦.
ಭಕ್ತ ವಿಜಯ ಮೈಸೂರು ಪ್ರತಿ ರೂ. ೩—೧೨—೦.

ಪಂಚರಾಮಾಯಣ ಹೊಸ

ಮುಕ್ತಿನ ಸರ . .	0—12—0	ಮುದ್ರಣ .	5—0—0
ಸಂತಾಪಕ-ಕಾದಂಬರಿ	0—6—0	ಪಂಚರಾಮಾಯಣದ	
ಚಂದ್ರಮುಖಿ ,,	0—8—0	ಕಥೆ ವಚನ .	0-12—0
ರಾಜಪುತ್ರರಮಣಿಯರು	0—8—0	S. S. L. C. Kannada Texts ಜಗದಾಸಿ .	0—5—0
ಕೆಲವು ಸಣ್ಣ ಕಥೆಗಳು	1—0—0	ಸುಶೀಲೆ .	0—6—0
ರಾಜಯೋಗ . .	1—0—0	ಆದರ್ಶಯು ಹುಡುಗಿ.	0-12—0

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ವಿದ್ಯಾವಾಚಸ್ಪತಿ
ಆತ್ಮಾರಾಮಶಾಸ್ತ್ರಿಗಳಿಂದ ತಯಾರಿಸಲ್ಪಟ್ಟ
"ಸಂಕ್ಷೇಪಗೀತೆ"

ಪತ್ರಿಕಾಕರ್ತರ ಮತ್ತು ವಿದ್ವಾಂಸರ ಉತ್ತಮ ಅಭಿಪ್ರಾಯವುಳ್ಳ ಈ ಗ್ರಂಥವು ಕನ್ನಡದಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದೆ ಈ ಪುಸ್ತಕವನ್ನು ತರಿಸಿಕೊಳ್ಳುವವರು ವಿ. ಪಿ. ಯಾಗಿ ಕಳುಹಿಸಲಿಕ್ಕೆ ಬರೆಯುವುದಕ್ಕಿಂತ ಪುಸ್ತಕದ ಮೌಲ್ಯ ಆಣೆ ೧೦, ಟಪ್ಪಾಲು ಖರ್ಚು ಕೂಡಿ ಆಣೆ ೧೧ನ್ನು ಮನಿಯಾರ್ಡರ ಮೂಲಕ ಕಳುಹಿಸುವುದು ಒಳ್ಳೇದು. ವಿ. ಪಿ. ಯಾಗಿ ಕಳುಹಿಸಿಕೊಡುವಾಗ ಆಣೆ ೩ರಕ್ಕಿಂತ ಜಾಸ್ತಿ ಖರ್ಚು ತಗಲುವುದು. ರಖಂ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು.

ಪುಸ್ತಕ ದೊರಿಯುವ ವಿಳಾಸ:—
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು. ಮತ್ತು
ಕೆನರಾ ಮಿಷನ್ ಬುಕ್ ಎಂಡ್ ಟ್ರೆಕ್ಟ ಡಿಪೊಸಿಟರಿ,
ಮಂಗಳೂರು.

ಶುದ್ಧವಾದ ಖಾದರ್ ರೇಷ್ಮೆ ಮಡಿಗಳು.

ಶುಭ ಕಾರ್ಯಕ್ಕೆ ಪಾತ್ರವಾದ ಎಲ್ಲಾ ರಂಗಿನಲ್ಲಿ ದೊರಿಯುವ ಮಡಿ ಯಾವುದು? ಖಾದರ್ ರೇಷ್ಮೆ ಮಡಿ.

18 ಮೊಳ ಉದ್ದ 2½ ಮೊಳ ಅಗಲ ರೂ. 20ರಿಂದ 35, 16 ಮೊಳ—2½—ರೂ. 19ರಿಂದ 35, 8 ಮೊಳ ಉದ್ದ 2½ ಮೊಳ ಅಗಲ ರೂ. 9ರಿಂದ 15 ವರೆಗೆ. 6 ಮೊಳ ಉದ್ದ 2½ ಮೊಳ ಅಗಲ ರೂ. 7ರಿಂದ 11. [illegible] 14 ಮೊಳ ಉದ್ದ 2 ಮೊಳ ಅಗಲ 18ರಿಂದ 36 ಉತ್ತಮ ತರ 14 ಮೊಳ ಉದ್ದ 2 ಅಗಲ—28ರಿಂದ 36 [illegible] 18ಮೊಳ ಉದ್ದ 2 ಮೊಳ ಅಗಲ 15ರಿಂದ 30, [illegible] 11 ಮೊಳ ಉದ್ದ 1½ ಮೊಳ ಅಗಲ ರೂ. 9ರಿಂದ 15. ಇದು ಅಲ್ಲದೆ ಬೇರೆ [illegible] ದೊರೆಯುವುದು.

ವಿಳಾಸ:—
[illegible]
ಮತ್ತು ಕಂಪೆನಿ, [illegible]

ಗೊನೊಕ್ಯೂರಾ.

(ಮೇಹ ರೋಗಕ್ಕೆ ಪರಮ ಔಷಧವು).

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವುದಕ್ಕೆ, ಮೂತ್ರದ್ವಾರದಲ್ಲಿಯೆ ಉರಿ, ಹಳದಿ ವರ್ಣದ ಅಥವಾ ಹಸುರು ವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವುದಕ್ಕೆ, ಮೂತ್ರ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಬಂಧವಾದ ಎಲ್ಲಾ ಹುರುಳು ರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣ ಹೊಂದುವವು.

ಔಷದ ಸೇವಿಸುವ ಕ್ರಮ—2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವುದು. ವಿಶೇಷ ಪಥ್ಯ ಇಲ್ಲ.

ಶೀಸೆ ಒಂದರ ಕ್ರಯ:—ರೂ. 1—4—0.

ಹುಳದ ಪೋಮ (ಜರ್ಮನ್)

ಮಕ್ಕಳಿಗೂ, ಪ್ರಾಯಸ್ಥರಿಗೂ ಹುಳದ ಉಪದ್ರಕ್ಕೆ ಅತ್ಯುತ್ತಮವಾದ ಔಷಧಿ.

ಕ್ರಯ ಒಂದು ಬೆನ್ನಿಗೆ ರೂ. 0—8—0.

ನಮ್ಮ ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪೆತಿಕ್ ಡಿಸ್ಪೆನ್ಸರಿ
ಹಂಪನಕಟ್ಟೆ, ಮಂಗಳೂರು.

ರೇಶ್ಮೆವಸ್ತ್ರಗಳು.

ಈ ರೇಶ್ಮೆವಸ್ತ್ರಗಳನ್ನು ಹಸನಾದ ರೇಶ್ಮೆಯಿಂದ ತಯಾರಿಸಿದೆ. 5 ಮೊಳ ಉದ್ದ 2½ಮೊಳ ಅಗಲವಿರುವದು. ಮೇಲೆ ಹೊದಿಯಲು ಇವುಗಳು ಬಹು ಚೆನ್ನಾಗಿರುವವು. ಎಲ್ಲಾ ಬಣ್ಣಗಳಲ್ಲಿ ಇರುವವು. ಶ್ರೀಮಂತರಿಗೂ ಗರೀಬರಿಗೂ ಲಾಯಖಾದವು. ಶಿವರಾತ್ರಿ ಮತ್ತು ಯುಗಾದಿ ಹಬ್ಬಗಳು ಬರುವವು. ಈ ವಸ್ತ್ರಗಳು ಕೆಲವು ಮಾತ್ರ ಇರುವವು. ಬೇಕಾದವರು ಬೇಗನೇ ಬರೆಯಿರಿ.

ಕ್ರಯ 1ಕ್ಕೆ 4—8—0.

ಕೊರ್ನಾಡ, ಕಂಚಿ ಸೀರೆಗಳು.

ಈ ವಾರದಿಂದ ತಯಾರಿಸಿದೆ. ಉಡುವುದಕ್ಕೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದವಿದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 ರೂ. 6—8—0
„ 2 „ 7—8—0

ವಿಳಾಸ:—ಎನ್. ಆರ್. ಕೃಷ್ಣ ಎಂಡು ಕೊ,
1. ತಂಬುನಾಯಕನ ಬೀದಿ, ಮದರಾಸು.

ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದ

ಎಚ್. ರಾಮರಾವ್,

ನಶೆವ್ಯಾಪಾರಿ
ರಥಬೀದಿ, ಮಂಗಳೂರು.

I ಕ್ಲಾಸ್ ಮಂಗಳೂರು ನಶ್ಯ!

ವ್ಯಾಪಾರಿಗಳಿಗೆ

ರಾ. 1 (ತೊಲೆ 40) ದರ ರೂ. 3—4—0
ಶೇ. 1 („ 24) „ „ 2—0—0

ಪೋಸ್ಟು ಪೇಕಿಂಗ್ ಚಾರ್ಜು ನಮ್ಮದು

5 ರಾತ್ಲು ಅಥವಾ ಅದಕ್ಕಿಂತ ಹೆಚ್ಚು ತರಿಸುವವರಿಗೆ ರಾತ್ಲಿಗೆ ದರ ರೂ. 3-0-0.

ಸ್ವಂತ ಖರ್ಚಿಗೆ ತರಿಸುವವರು ಪೋಸ್ಟ್, ಪೇಕಿಂಗ್ ಚಾರ್ಜು ಕೊಡಬೇಕಾಗುವುದು.

ನಶ್ಯ ಒಂದೇ ತರದ್ದು.

ಎಲಕ್ಟ್ರಿಕ್ ದೀಪ

ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಯವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ ಯಾವುದೂ ಅವಶ್ಯವಿಲ್ಲ. ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ 'ಮುಚ್ಚಳ'ವನ್ನು ತೆರೆದುಕೊಂಡು ಉರಿಯುವುದು, ನೋಡುವವರಿಗೆ ಆಶ್ಚರ್ಯವಾಗಿರುವುದು. ಈ ದೀಪ ಒಂದು ತರಿಸಿಕೊಂಡರೆ ಯಾವಾಗ್ಯೂ ಬೆಂಕಿಕಡ್ಡಿ ಅವಶ್ಯವಿಲ್ಲ.

ಕ್ರಯ 1ಕ್ಕೆ ರೂ. 1—8—0

ಎಬೋನಿಯಾ ಅಂಡ್ ಕೊ
ಪೋಸ್ಟುಬಾಕ್ಸು ನಂಬ್ರ 65 ಮದರಾಸು.

ಪ್ರತ್ಯಕ್ಷಫಲ ಪಂಚಸಿದ್ಧಿ.

ಇದು ರಾಯಚೂರು ಭೀಮಾವಧೂತರು, ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ ಬದ್ರಿನಾರಾಯಣ ದ್ವಾರಕಾ ಅಯೋಧ್ಯಾ ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದಅನುಭವ ತೆಗೆದು ಪ್ರತಿವಂದು ಸಿದ್ಧಮಾಡಿಕೊಂಡು ಬರೆದಿರುವರು. ೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಪ್ರಯೋಗದಿಂದಲೂ ಎಲ್ಲಾ ದೇವಾನು ದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಮಾಡಿಕೊಳ್ಳುವ ಕ್ರಮವೂ ಇದೆ. ೨ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಚಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ. ೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ, ಅವನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು. ೪ನೇದು ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಚಗಳ ಚುಟ್ಕಾ ಸಹ, ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತೂ ರೋಗಗಳಿಗೂ ಸುಲಭವಾಗಿ ಔಷದ ಮಾಡುವ ಕ್ರಮವನ್ನು ಚೆನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು. ೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ ಗೃಹಪೀಡಾ ನಿವಾರಣ ಭೂತಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು, ಇವಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳು ದ್ರವ್ಯಗಳೂ ವೈದ್ಯರೂ ಜೋತಿಷ್ಯರು, ಮಾಂತ್ರಿಕರು ತಾಂತ್ರಿಕರೂ ಮನೆಯೊಳಗೆ ಇದ್ದಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆಮಾಡಿ ಇರುವವು. ೩—೮—೦ ಟಪ್ಪಾಲು ಖರ್ಚು ೬ ಆಣೆ ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ ನಾಟಕ ಕಾವ್ಯ, ಕಥೆಗಳು, ಯಕ್ಷಗಾನ, ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

ನಮ್ಮ ವಿಳಾಸ

ಎಸ್. ಕೆ. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್,
ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಮಂಗಳೂರು —

— ಟೈಪ್ ಫೌಂಡ್ರಿ.

ಡೊಂಗರಕೇರಿ, ಮಂಗಳೂರು.

ಇಲ್ಲಿ ಸುಪ್ರಸಿದ್ಧವಾದ ಎಲ್ಲಾ ತರಹದ ಮಂಗಳೂರು, ಕನ್ನಡ ಟೈಪುಗಳು ಸುಲಭವಾದ ದರಕ್ಕೆ ತಯಾರಿಸಿಕೊಡುತ್ತೇವೆ. ಪರೀಕ್ಷಾರ್ಥವಾಗಿ ಒಮ್ಮೆ ತರಿಸಿಕೊಂಡರೆ ಸಮಾಧಾನವಾಗುವುದು.

ಹೆಚ್ಚಿನ ವಿಚಾರವನ್ನು ಪತ್ರದ್ವಾರಾ ತಿಳಕೊಳ್ಳಬಹುದು.

ಪಿ. ವೆಂಕಟೇಶ ರಾಮಚಂದ್ರ ಶರ್ಮಾ
ಪ್ರೊಪ್ರೈಟರ್.

☞ ಇಂಗ್ಲಿಷ್, ಸಂಸ್ಕೃತ, ಇತ್ಯಾದಿ ಟೈಪುಗಳು ಬೇಕಾಗಿದ್ದರೂ ನಾವು ತಯಾರಿಸಿಕೊಡುತ್ತೇವೆ.

ರಾಘವೇಂದ್ರ ರಂಗಪೈ

ರಥಬೀದಿ ಮಂಗಳೂರು.

ಎಲ್ಲಾ ಬಗೆಯ ಜರ್ಮನ್ ಲ್ಯಾಂಪುಗಳೂ, ಲಾಟೀನುಗಳೂ, ಯುನಾಮಲ್ಲು ಬಟ್ಲು ವಗೈರೆ ಸಾಮಾನುಗಳೂ, ಪ್ರಿಂಟಿಂಗ್ ಪೇಪರ್ ಬ್ರವುನ್ ಪೇಪರ್, ರಟ್ಟು, ಖಾಲಿ ಕವರು ಫೌಂಟನ್‌ಪೆನ್, ಶಾಯಿ ವಗೈರೆ ಸ್ಟೇಶನರಿ ಸಾಹಿತ್ಯಗಳೂ, ಜರ್ಮನ್ ಕ್ಷೌರದ ಸಾಹಿತ್ಯಗಳೂ, ಅದಲ್ಲದೆ ಇತರ ಕಟ್ಲೆರಿ ಸಾಮಾನುಗಳೂ, ಪುರುಷರಿಗೆ ಬೇಕಾಗುವ ಅಂಗಿ ತೊಡುಪುಗಳೂ, ಮಿಲ್ಲಿನ ನೂಲಿನಿಂದ ಕೈಮಗ್ಗದಲ್ಲಿ ತಯಾರಾದ ಖಾದಿ ಯಾ ಸ್ವದೇಶಿ, ವಸ್ತ್ರಗಳೂ, ಸಾಬೂನುಗಳೂ, ಸಿಗರೇಟುಗಳೂ, ವಗೈರೆ ಮಹಾಲು ಸುಲಭ ಕ್ರಯಕ್ಕೆ ಯಾವಾಗಲೂ ದೊರೆಯುತ್ತಿವೆ.

~~~

ಆರ್. ಮಾರ್ಟಿನ್ನರ.

(ಸಾರಸಾ ಪರಿಲ್ಲಾ)

ಈ ಸಾರಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವುದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರದ ಕ್ಯಾನ್ಸಲೆ, ಉಬ್ಬುವದು, ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕ್ಷಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ ಮತ್ತು ಚರ್ಮದ ರೋಗಗಳು, ವಿಷ ಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಗಿದರೆ, ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು, ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ.

ಬಾಟ್ಲಿ 1ಕ್ಕೆ ಕ್ರಯ ರೂ. 1—12—0.

ಆರ್. ಮಾರ್ಟಿನ್ನರ ಎಗ್ಯೂಮಿಕ್ಸ್ಚರ್.

ಇದು ಜ್ವರ, ಸೀತಜ್ವರ ಮಲೇರಿಯಾ, ಚಾರಿಜ್ವರ, ಸನ್ನಿಪಾತ ಪಟ್ಟೆ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ [illegible] ಗುಳ್ಳೆಗಳಲ್ಲಿ ಹರಡಿಕೊಂಡಿರುವ ಜ್ವರವನ್ನೂ ಸಹ ನಾಶಮಾಡುವುದಲ್ಲದೆ, ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವುದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ.

ಬಾಟ್ಲಿ 1ಕ್ಕೆ ರೂ. 0—13—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಮೂತ್ರಶಂಕೆಯಾಗುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕರುಳಲ್ಲಿ ಹೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0.

ವಿಳಾಸ:—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಬಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್ ಮುಂಬಯಿ.

R. D. Kately & Co.
No. B. Frere Road,
Near Wright & Co. Fort, Bombay.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಸ್ವದೇಶಾಭಿಮಾನಿ.

SWADESHABHIMANI
MANGALORE.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ

ವಾರಪತ್ರಿಕೆ.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0.
ಟಪ್ಪಾಲ್ ಹಾಸಲು ಸೇರಿ „ — 2—13—0.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ |
ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ |
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- | ಗರವ ಮಥಿಸಲು ಸುರರಿಗದರಿಂ |
ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು | ಮರೆತು ಶ್ರಮದಿಂದ ತೆರದಿ ಕುಳಿತರೆ |
ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೭. ಮಂಗಳೂರು, ತಾರೀಕು ೧೫ನೇ ಶುಕ್ರವಾರ ಜೂನು ೧೯೨೩. ಸಂಚಿಕೆ ೨೪

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,00,000—0— 0
ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	2,00000—0— 0
ಚಂದಾ ಹಾಕಿ ಎತ್ತಿದ ಮೂಲಧನ	1,64,400—0— 0
ಮೌಲ್ಯ ಕೊಟ್ಟ ಮೂಲಧನ	1,04,383—8—11
ಠೇವಣಾತಿಗಳು	3,19,161-12— 6
ಇತ್ತೀಚ್ಚಿನಮಟ್ಟು (1927ನೇ ಇಸವಿಯ) ಶೇಕಡಾ 6ರ ಗವರ್ನಮೆಂಟು ಪೇಪರಿನ ಮೇಲೆ ಹಾಕಿದ ರೂ. 25,700 ಕೂಡಾ	5,12,162-13— 2
ರಿಜರ್ವ್ ಮತ್ತು ಇತರ ಫಂಡುಗಳು	29,149—4— 2

ಕಳೆದ 2 ವರುಷಗಳಲ್ಲಿ ಪಾಲುವನ್ತರಿಗೆ ಸಾಲಿಯಾನ್ ಸೇಕಡಾ 10ರಂತೆ ಲಾಭಾಂಶ ಹಂಚಿಯದೆ. ಶೇರ್ಸುಗಳು ಮಾರಾಟಕ್ಕೆ ಇವೆ.

3 ತಿಂಗಳಿಗೊಮ್ಮೆ ಬಡ್ಡಿ ತೆರುವ, ಕರಾರಿನ ಮೇಲೆ ಶೇಕಡಾ 7ರಿಂದ 7½ ಬಡ್ಡಿಯಲ್ಲಿ ಕರಾರು ಠೇವಣಾತಿಗಳನ್ನು 15 ದಿನಗಳ ನೋಟೀಸು ಮೂಲಕ ಶೇಕಡಾ 6¼ರ ಬಡ್ಡಿ ಸಮೇತ ವಾಪಾಸು ಪಡೆಯುವ ಚಿಕ್ಕ ವ್ಯಾದೆ ಠೇವಣಾತಿಗಳನ್ನೂ ಬೇಕೆಂದಾಗ್ಗೆ ವಾಪಾಸು ಸಿಕ್ಕುವಂಥಾ ಸೇಕಡಾ 3½ರಂತೆ ಬಡ್ಡಿ ನಡಿಯುವ ಚಾಲ್ತಿ ಠೇವಣಾತಿಗಳನ್ನೂ, ಶೇಕಡಾ 4½ ಬಡ್ಡಿ ನಡಿಯುವ ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳನ್ನೂ, ತಿಂಗಳುಗಟ್ಟಲೆಯಿಂದ ತೆಮವ ಕಂತು ಠೇವಣಾತಿಗಳನ್ನೂ ಡಿಪೋಜಿಟ್ಟಾಗಿ ಪಡೆಯುವುದಲ್ಲದೆ ಬ್ಯಾಂಕಿಗೆ ಸಮ್ಮತವಾದ ಜವಾಬ್ದಾರಿಯಿಂದ ಹಣವನ್ನು ಸಾಲವಾಗಿಯೂ ಕೊಡಲಾಗುವುದು.

ಈ ಬ್ಯಾಂಕಿಗೆ ಸಲ್ಲತಕ್ಕ ಹಣವನ್ನು ಈ ಬ್ಯಾಂಕಿನ ಲೆಕ್ಕಕ್ಕೆ ಮಂಗಳೂರಲ್ಲಿರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಯಾ ಕೆನರಾ ಬ್ಯಾಂಕ್ ಲಿಮಿಟೆಡ್ನಲ್ಲಿಯೂ ಮುಂಬಯಿಯಲ್ಲಿ ಮರ್ಕಂಟೈಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ನಲ್ಲಿಯೂ ತೆರಬಹುದು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಗೆ ಬರೆದರೆ ಸಿಕ್ಕುವುದು.

ನಯಂಪಳ್ಳಿ ಆನಂದರಾವ್,
ಸೆಕ್ರೆಟರಿ.

'ನೈಟ್ರೇಟ್ ಒಫ್ ಸೋಡಾ'

ನಮ್ಮ ಜಾಮೀನನ್ನು ಸಾರವತ್ತಾಗಿ ಮಾಡಿ ಬೆಳೆ ಸಮೃದ್ಧಿಯನ್ನು ಪಡೆಯಬೇಕಾದರೆ ಗೂಡೆ ಗೊಬ್ಬರಗಳ ಜತೆಯಲ್ಲಿ ಸ್ವಲ್ಪ ನೈಟ್ರೇಟ್ ಒಫ್ ಸೋಡಾ ಗೊಬ್ಬರವನ್ನು ಉಪಯೋಗಿಸಿರಿ. ಈ ಸತ್ವಶಾಲಿ ಗೊಬ್ಬರವು ಎಲ್ಲಾ ಧಾನ್ಯ ಮುಂತಾದ ಪೈರುಗಳಿಗೂ ಕಬ್ಬಿನ ಬೆಳೆಗೂ ಮತ್ತು ತೆಂಗು ಮೊದಲಾದ ಫಲವೃಕ್ಷಗಳಿಗೂ ಅಗತ್ಯವಿರುವ ನೈಟ್ರೋಜನ್ ವಾಯುವನ್ನು ಶೀಘ್ರವಾಗಿ ಒದಗಿಸುವುದು.

ಪರೀಕ್ಷಾರ್ಥವಾಗಿ ಉಪಯೋಗಿಸಬೇಕೆಂದಿದ್ದವರು 2 ರಾತ್ಲ ಸಪ್ಪಳಪ್ಪಿನ ಸೆಂಪಲ್ ಡಪ್ಪಿಯನ್ನು ೦—೨—೦ಯಂತೆಯೂ ಬಂಗಾಲಿ ಮಣ ಒಂದಕ್ಕೆ ರೂ. ೯—೦—೦ಯಂತೆಯೂ ಪಡೆಯಬಹುದು.

ಹೆಚ್ಚಿನ ಮಾಹಿತಿ ಮತ್ತು "ಕೃಷಿಯುಪಕಾರಿ" ಎಂಬ ಪುಸ್ತಕವನ್ನು ನಮ್ಮಿಂದ ಉಚಿತವಾಗಿ ಪಡೆಯಬಹುದು.

The Director
CHILEAN NITRATE COMMITTEE,
6, *Mission Row*, CALCUTTA

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

— ಇದರಲ್ಲಿ ದೊರೆಯುವ —

ಪುಸ್ತಕಗಳು.

ವಿದ್ಯಾವಾಚಸ್ಪತಿ ಆತ್ಮಾರಾಮ ಶಾಸ್ತ್ರಿಗಳಿಂದ ಬರೆಯಲ್ಪಟ್ಟ

ಹಿಂದೂ ಸ್ವರಾಜ್ಯ ಕ್ರಯ ೦—೧೦—೦
ಶೇಷಾದ್ರಿ „ ೦—೧೩—೦
ಸಂಕ್ಷೇಪಗೀತೆ „ ೦—೧೦—೦

ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರಿಂದ ರಚಿತವಾದ ಸ್ವರಾಜ್ಯ ಭಗವದ್ಗೀತೆ ಕ್ರಯ ೦—೨—೦

ಕರ್ನಾಟಕ ಕವಿ ಚರಿತೆ, ಮುದ್ರಾರಾಕ್ಷಸ ಅವನತಿ, ಶ್ರೀವಾಸ ಬೋಧೆ, ಪಾಕಶಾಸ್ತ್ರ ೧ನೇ ಮತ್ತು ೨ನೇ ಭಾಗಗಳು, ಪ್ರಗತಿ ಅಥವಾ ದಾಸ್ಯವಿಮೋಚನೆ, ಶ್ರೀ ಅಧ್ಯಾತ್ಮ ರಾಮಾಯಣ, ಶ್ರೀ ಚಿದಂಬರ ವಿಜಯ ಸತೀ ಸಾಹಸ, ಅಂಗದನ ಸಿಯಾರಾಯ, ಮನೋರಮಾ, ಭ್ರಾಂತಿವಿಲಾಸ, ಕ್ಷಾತ್ರತೇಜ, ಮಾಧವ ಕರುಣಾವಿಲಾಸ, ಅಸಹಕಾರದ ಹಾಡುಗಳು ಇತ್ಯಾದಿ ಇತ್ಯಾದಿ.

ಶಾಲಾ ಪುಸ್ತಕಗಳು—ಕನ್ನಡ ಪದ್ಯಗಳು, ಅಜ್ಜಿ ಕಥೆಗಳು, ಹೊಸ ಕನ್ನಡ ವಾಚಮಾಲೆಯ ಪುಸ್ತಕ, ಮುಗ್ಧಿ ಪುಸ್ತಕಗಳು, ಅಚ್ಚುತಸುಮಾರ, ಭೂಗೋಳ, ವನ್ಯರತ್ನ ಇತ್ಯಾದಿ.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂಪಾಯಿ ೨—೧೩—೦ ಸ್ಥಳೀಕರಿಗೆ ರೂ ೨—೦—೦. ವಿ. ಪಿ. ಖರ್ಚು ಕೂಡಿ ರೂ. ೩—೦—೦ ಪ್ರಕಟಣೆಗಳ ದರಗಳ ಬಗ್ಗೆ ಪತ್ರದ ವ್ಯವಸ್ಥಾಪಕರಿಗೆ ಬರೆಕೊಳ್ಳಬಹುದು.

ಗ್ರಂಥಕರ್ತರು, ವ್ಯಾಪಾರಸ್ಥರು, ವರ್ತಕದಾರರು, ವಕೀಲರುಗಳು, ಶಾಲಾ ಸಂಸ್ಥೆಗಳು, ವ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಮುದ್ರಣ ಕೆಲಸಗಳನ್ನು, ನಮ್ಮ ದೀರ್ಘಕಾಲದ ಅನುಭವದಿಂದ ಅಂದವಾಗಿ ತಯ್ಯಾರಿಸಿಕೊಡುತ್ತೇವೆ.

ಗ್ರಂಥಕರ್ತರಿಗೆ ದರಗಳಲ್ಲಿ ಹೆಚ್ಚಿನ ರಿಯಾಯಿತಿಯು ಇರುವುದು.

ಸ್ಟೇಶನರಿ ಸಾಮುಗ್ರಿಗಳು.

ಕವರು, ನೋಟ್‌ಪೇಪರ್, ಲೆಕ್ಕದ ಪುಸ್ತಕಗಳು, ನೋಟು ಬುಕ್ಕುಗಳು, ಪೈಂಗಳು. ಫೌಂಟನ್ ಪೆನ್ನುಗಳು, ಪೆನ್ಸಿಲು, ನಿಬ್ಸ್, ಫೂಟ್‌ರೂಲುಗಳು, ಇತರ ಬರೆಯುವ ಸಾಮುಗ್ರಿಗಳು.

ಇತರ ಸಾಮುಗ್ರಿಗಳು.

ತಕರಾರು ಇತ್ಯಾದಿ ಕೋರ್ಟು ಫೋರಮ್ಸುಗಳು, ಸರ್ಕಾರು ಫೋರಮ್ಸು, ಬೇರಕಿಂದಿನ ರಶೀದಿ ವ ಇತರ ರಶೀದಿ ಪುಸ್ತಕಗಳು.

ಸಹಕಾರಿ ಸಂಘಗಳಿಗೆ ಬೇಕಾಗುವ ರಶೀದಿ ಪುಸ್ತಕಗಳು, ಬೋರ್ಡ ಫೋರಮ್ಸುಗಳು ವ ಇತರ ಲೆಕ್ಕ ಬರೆಯುವ ಪುಸ್ತಕಗಳು.

ಎಲೋಪಥಿಕ್, ಹೋಮಿಯೋಪಥಿಕ್ ಮತ್ತು ದೇಶ್ಯ ಔಷಧಿಗಳು—ರೋಗಿಗಳಿಗೂ, ಬಲಹೀನರಿಗೂ ಬೇಕಾಗುವ ಪೌಷ್ಟಿಕ ಔಷಧಿಗಳು.

ನೈಟ್ರೇಟ್ ಒಫ್ ಸೋಡಾ ಇತ್ಯಾದಿ ಕೃಷಿಗೆ ಬೇಕಾಗುವ ಗೊಬ್ಬರಗಳು.

ಖ್ಯಾತಿಯಾದ ಯುಕಲಿಪ್ಟಸ್ ಒಯಿಲ್ ಅಥವಾ ನೀಲಗಿರಿ ತೈಲ, ಗಜಕರ್ಣದ ಮುಲಾಮು, ನಮ್ಮ ಔಷಧಿ ಇರಾಜೆಯ ಕಳೆದ ೨೫ ವರುಷಗಳ ಅನುಭವದಿಂದ ತಯಾರಿಸಲ್ಪಟ್ಟ ಇತರ ಔಷಧಿಗಳು.

ವಿಳಾಸ— ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

AMRUTANJAN BO
AMRUTANJAN
Best Indian Pain Balm
Amrutanjan
BOMBAY

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

— ಅಮೃತಾಂಜನ —

ಹೊರತು ಮತ್ತೊಂದಿಲ್ಲವೆಂಬುದು ಮಾತ್ರ.

ಇದನ್ನು ಉಪಯೋಗಿಸುತ್ತಲಿಂತ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿಲವಾದ್ದಾದರೂ ನೋವಾದ್ದಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ 2 ಆಣೆ.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫೋರ್ಟ್ ರೋಡ್,
ಮುಂಬಯಿ.

ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಹಿತಕಾರಿ

U. K. DUTT & Co. CAL

[illegible]

ಕ್ರಯ ರೂ. 4—4—0.

ಯು. ಕೆ. ದತ್ ಕಂಪೆನಿ, ಕಲ್ಕತ್ತಾ [illegible]
~~~

ಹಿಂದೂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಈ

ಆಯುರ್ವೇಧ ಔಷಧಾಲಯವು.

— (ಸ್ಥಾಪಿತವಾದ್ದು 1881) —

ಆತಂಕನಿಗ್ರಹ ಔಷಧಾಲಯವು

ಆಯುರಾರೋಗ್ಯವನ್ನು ಅಭಿವೃದ್ಧಿಸಲು ಅನುಕೂಲಿಸುವ ಒಂದು ಪುಸ್ತಕವನ್ನು ಅಂಚೆಯ ಅಸಲು ನಿರೀಕ್ಷಿಸದೆ ಇನಾಮಾಗಿ ಕಳುಹಿಸುವೆವು.

ತಮಗೆ ಒಂದು ಬೇಕಾಗಿರುವಲ್ಲಿ,

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, ೫೬, (ಬ್ರಾಡ್ವೇ, ಮದ್ರಾಸ್.

Local Agents: **Raphael & Co.**
Brito Buildings,
Hampankatta, MANGALORE.

SRI LAKSHMI MILLS.

Kasargod, S. K.

ಶ್ರೀ ಲಕ್ಷ್ಮೀ ಮಿಲ್ಸ್-ಕಾಸರಗೋಡು, ದ. ಕನ್ನಡ

ಇತ್ತಲಾಗೆ ಕಾಸರಗೋಡಿನಲ್ಲಿ ತೆರೆದ ಈ ಕಾರ್ಖಾನೆಯಲ್ಲಿ ಉತ್ತಮ ತರದ ತೆಂಗಿನ, ಎಳ್ಳಿನ ಎಣ್ಣೆ, ಹಿಂಡಿ ತಯಾರಾಗುತ್ತಾ ಇದೆ. ಗ್ರಾಹಕರಿಗೆ ಚಿಲ್ಲರೆಯಾಗಿಯೂ ರಖಂ ಆಗಿಯೂ ಅಗ್ಗ ಕ್ರಯಕ್ಕೆ ಮಾರಲ್ಪಡುತ್ತದೆ. ವ್ಯಾಪಾರಸ್ತರಿಗೆ ಸುಲಭ ದರದಲ್ಲಿ ಸಿಕ್ಕುತ್ತದೆ. ಎಣ್ಣೆಗಳನ್ನು ತಯ್ಯಾರಿಸುವುದರ ಹೊರತು ನಮ್ಮ ಕಾರಖಾನೆಯಲ್ಲಿ ಮರ ಸಿಗಿಯುವ ಯಂತ್ರಗಳನ್ನು ತರಿಸಿ ನಾನಾ ವಿಧದ ಮೋಪು ಸಿಗಿದು ತಯ್ಯಾರಾಗುತ್ತಿರುವುದು. ಹಂಚಿನ ಕಾರ್ಖಾನೆಗಳಲ್ಲಿ ಹಂಚು ಒಣಗಿಸಲಿಕ್ಕೆ ಬೇಕಾದ ಮರದ ಚೌಕಗಳನ್ನು ವಿಶೇಷವಾಗಿ ಮಾಡಿಸುವದಲ್ಲದೆ ಶಾಲಾ ಕೋಲೇಜುಗಳಿಗೂ, ಆಫೀಸುಗಳಿಗೂ ಮತ್ತು ಗೃಹಕೃತ್ಯಕ್ಕೂ ಬೇಕಾದ ಕುರ್ಚಿ, ಮೇಜು ಇತ್ಯಾದಿ ಎಲ್ಲಾ ವಿಧದ ಫರ್ನಿಚರ್‌ನ್ನು ಸಿದ್ಧಗೊಳಿಸಿ ಕೊಡುವೆವು. ಈ ಬಗ್ಗೆ ಕಂಟ್ರಾಕ್ಟುಗಳನ್ನು ಸಹ ವಹಿಸಿಕೊಳ್ಳುವೆವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager,
Sri Lakshmi Mills, KASARGOD, S. K.

GUN RUST-PROOF OUR SPECIALITY

The
Canara Arms & Ammunition Mart,

Hampankatta, MANGALORE S. K.

ಒಂದು ಸರ್ತಿ ಪರೀಕ್ಷಿಸಿರಿ!

ನಮ್ಮಲ್ಲಿ ತೋಟೆಯ ಮತ್ತು ಕೇಪಿನ ಕೋವಿಗಳೂ, ತೋಟೆ, ಕೋವಿಮದ್ದು, ಕೇಪು, ಚರಾ, ಸೆಂಟ್ಸ್, ಸಾಬೂನು, ಶಾಲಾ ವಿದ್ಯಾರ್ಥಿಗಳ ಬಗ್ಗೆ ಕಟ್ಲೇರಿ, ಸ್ಟೇಶನರಿ ವಗೈರೆ ಎಲ್ಲಾ ತರದ ಸಾಮಾನುಗಳು ಅತೀ ಕಮ್ಮಿ ಕ್ರಯದಲ್ಲಿ ಸಿಕ್ಕುತ್ತವೆ.

ಕೆಟಲಾಗಿನ ಬಗ್ಗೆ ಕೂಡಲೇ ಬರೆಯಿರಿ.

ದಿ ಕೆನರಾ ಆರ್ಮ್ಸ್ ಎಂಡ ಎಮ್ಯುನಿಶನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು ದ. ಕ.

ಪ್ಯಾರಿಸ್ ದೇಶದಲ್ಲಿ ಕಂಡುಹಿಡಿಯಲ್ಪಟ್ಟ ರಬ್ಬರಿನ ರಹಸ್ಯ. (ಎಂಬ ಮರ್ಮದ ಚೀಲ.)

ಇದು ಮೃದುವಾದ ರಬ್ಬರಿನಲ್ಲಿ ಬಹು ಚಮತ್ಕಾರವಾಗಿ ತಯಾರು ಮಾಡಲ್ಪಟ್ಟು ಈಗಲೇ ಬಂದಿರುವದು. ಇದರ ಮರ್ಮದ ವಿಷಯ ಇಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಉಪಯೋಗಿಸುವದರಿಂದ ಸ್ತ್ರೀ ಸಂಬಂಧವಾದ ಯಾವ ರೋಗವು ತಗಲದೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು. ಇದರ ಉಪಯೋಗದಿಂದ ಆಗುವ ಸುಖವೂ ಸಂತೋಷವೂ ಅವರವರಿಗೆ ಗೊತ್ತಾಗುವದು. ಇದನ್ನು ಪ್ಯಾರಿಸ್ ದೇಶದಲ್ಲಿ ಬಹಳ ಉಪಯೋಗಿಸುತ್ತಾರೆ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ.

ಕ್ರಯ ರಬ್ಬರಿನ ಮರ್ಮದ ಚೀಲ ರೂ. ೧—೮—೦.

ಮನೋಲಿಯ ಏಜೆನ್ಸಿ,
ಪೋಸ್ಟು ಬೋಕ್ಸ್ ನಂಬ್ರ 232. ಮದರಾಸ್.

೧೪ ಕ್ಯಾರೆಟ್ ಗೋಲ್ಡ್ ಪ್ಲೇಟ್ ರೇಡಿಯಂ ರಿಸ್ಟ್ ವಾಚ್‌ಗಳು.

ಈ ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಸ್ವಿಜರ್‌ಲ್ಯಾಂಡ್ ದೇಶದಲ್ಲಿ ತಯಾರು ಮಾಡಿ ಬಂದಿವೆ. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲೂ ಗಂಟೆ ನೋಡಬೇಕಾದರೆ ಬೆಳಕು ಅವಶ್ಯವಿಲ್ಲ. ಎಷ್ಟು ಕತ್ತಲೆಯಾಗಿರುವುದೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು. ಈ ಗಡಿಯಾರಗಳು ನಮ್ಮಲ್ಲಿ ಸ್ವಲ್ಪ ಮಾತ್ರವೇ ಇರುವುದರಿಂದ ಬೇಕಾದವರು ಜಾಗ್ರತೆಯಾಗಿ ತರಿಸಿಕೊಳ್ಳಿರಿ.

ಕ್ರಯ 1ಕ್ಕೆ ರೂ. 8—8—0.

ಸುಖಾನಂದ (ಮರ್ಮದ ಚೀಲ).

ಸಾಧಾರಣವಾಗಿ ಈ ಪ್ರಪಂಚದಲ್ಲಿ! ಕಾಮುಕ್ಕೆ ಸಹಿಸಲಾರದ ಕೆಟ್ಟ ಸಹವಾಸಕ್ಕೆ ಸಿಕ್ಕಿ, ಟಾಕಿ, ‡ ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಬರಮಾಡಿಕೊಂಡು ನಿರಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಗಳನ್ನು ಅಂಟಿಸಿ ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು.

ಆದ್ದರಿಂದ ಇಂಥಾ ವ್ಯಾಧಿಗಳು ಸೇರದಂತೆ ಇಂಗ್ಲೀಷು ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಉಪಯೋಗಿಸುವದರಿಂದ ಮೇಲೆ ಬರೆದಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವವು.

ವಿಳಾಸ:— **ಪೀಟರ್ ವಾಚ್ ಕಂಪೆನಿ,**
ಪೋ ಬಾಕ್ಸ್ ನಂ. 27
ಮದರಾಸು.

ಸೀತೆ, ರಾಮ ಮತ್ತು ರಾವಣ.



ಈ ವಿಗ್ರಹಗಳ ವಿಷಯವೇನೆಂದರೆ, ಈ ಚಿತ್ರದಲ್ಲಿ ಕಾಣುತ್ತಿರುವ ಪೆಟ್ಟಿಗೆಯಲ್ಲಿ ಒಂದು ಕಡೆ ಪಂಚವರ್ಣಗಳಿಂದ ತಯಾರಿಸಿದ ರಾಮನ ಪಠವೂ, ಮತ್ತೊಂದು ಕಡೆ ಪಂಚವರ್ಣಗಳಿಂದ ತಯಾರಿಸಿದ ರಾವಣನ ಪಠವೂ ಇರುವದು. ಈ ಎರಡು ಪಠಗಳಿಗೂ ಹಿತ್ತಾಳೆಯ ಚೌಕಟ್ಟು ಮತ್ತು ಕನ್ನಡಿಯು ಹಾಕಿರುವುದು. ಸೀತೆಯ ವಿಗ್ರಹವು ಹಿತ್ತಾಳೆಯ ಪೆಟ್ಟಿಗೆಯಲ್ಲಿ ಇರುವುದು. ಇದರ ಮುಚ್ಚಳವನ್ನು ತೆರೆದು ಸೀತೆಯ ಎದುರಿಗೆ ರಾವಣನ ಪಠವನ್ನು ಇಟ್ಟರೆ ಸೀತೆಯು ರಾವಣನಿಗೆ ಮುಖವನ್ನು ತೋರಿಸದೆ ವಿದ್ಯುಚ್ಛಕ್ತಿಯ ದೆಸೆಯಿಂದ ಹಿಂಭಾಗಕ್ಕೆ ತಿರುಗಿಕೊಳ್ಳುವುದು. ರಾಮನ ಪಠವನ್ನು ಸೀತೆಯ ಎದುರಿಗೆ ಇಟ್ಟರೆ ಸೀತೆಯು ಎರಡು ಕೈಯಿಂದಲೂ ನಮಸ್ಕಾರಮಾಡುತ್ತಾ, ರಾಮನ ಎದುರಿಗೆ ನಿತ್ತುಕೊಳ್ಳುವುದು. ಇದು ನಮ್ಮ ಹಿಂದೂಜನರಲ್ಲಿ ಪ್ರತಿಒಂದು ಮನೆಯಲ್ಲಿಯೂ ಇರಬೇಕಾದದ್ದು. ನೋಡಲು ಬಹು ಆಶ್ಚರ್ಯವಾಗಿ ಕಾಣುವುದು.

ಕ್ರಯ 1ಕ್ಕೆ ರೂ. 2—8—0

ಹಾಲೋ ಗ್ರೌಂಡ್ ರೇಜರುಗಳ ಸೆಟ್.



ಈ ಕತ್ತಿಗಳು ವಿಲಾಯತಿಯಲ್ಲಿ ತಯಾರಾದವು. ಬಹು ಮೇಲಾದದ್ದು. ಇಂಗ್ಲೀಷ್ ಮೇಡ್ ಬೆಳಿಯ ಮತ್ತು ಕರಿಯ ದಂತದ ಹಿಡಿ ಹಾಕಿರುವದು. ಇದರ ಕತ್ತಿಯು ಬಹು ಹರಿತವಾದದ್ದು. ಈ ಕತ್ತಿಯ ಜೊತೆಯಲ್ಲಿ 1 ಶೇವಿಂಗ್ ಬ್ರಶ್, 1 ಕನ್ನಡಿ, 1 ಶೇವಿಂಗ್ ಸ್ಟಿಕ್, ಕತ್ತಿಯನ್ನು ಮಸೆಯುವವಕಲ್ಲು, 1 ಕತ್ತಿಯನ್ನು ಮಸೆಯುವ ಚರ್ಮದ ಪಟ್ಟಿ, 1 ಸೀರಿನ ಬಟ್ಟಲು, 1 ಬೊಟ್ಲಿ ಓಯಿಲ್, 1 ಕತ್ತರಿ, ಮತ್ತು ಇವುಗಳೆಲ್ಲವನ್ನು ಇಡಲು ಒಂದು ಪೆಟ್ಟಿಗೆ ಸಹಿತ ಇರುವುದು.

ಸೆಟ್ಟು 1ಕ್ಕೆ ರೂ. 6—0—0

ವಿಳಾಸ:— **ವಿ. ಎಸ್. ವಾಚ್ ಕಂಪೆನಿ,**
ಪೋ ಬಾ ನಂ. 105
ಮದರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ. ಇದಕ್ಕೆ ಅನುಸರಿಸ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತದೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಅನ್ಪದವುಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಹುಡಿ ಹೆಚ್ಚು!! ಕ್ರಯ ಕಮ್ಮಿ!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್:—

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

'ಕವಿ'ಯವರ

ತಾಜಾ
ಮಂಗಳೂರು ನಶ್ಯ.

ಉತ್ತಮವಾದ ಹೊಗೆಸೊಪ್ಪಿನಿಂದ ಮತ್ತು ಬಹಳ ಅನುಭವದಾರರಿಂದ ತಯಾರಿಸಲ್ಪಡುವ

— ಈ ನಶ್ಯವು —

1913ನೇ ಇಸವಿಯ ಮೈಸೂರು ದಸರಾ ಪ್ರದರ್ಶನದಲ್ಲಿ ನಶ್ಯಕ್ಕೋಸ್ಕರ ಇಟ್ಟದ್ದ ಅತ್ಯಧಿಕ ಬಹುಮಾನದ ಬೆಳ್ಳಿಯ ಪದಕವನ್ನೂ ಹೊಗೆಸೊಪ್ಪಿಗಾಗಿ ಬಹುಮಾನ ಪತ್ರವನ್ನೂ ಪಡದಿರುತ್ತದೆ.

ರಾತ್ಲು 1ರ ರೂ. 2—12—0.
ಸ್ಪೆಶ್ಯಲ್ ರಾತ್ಲು 1ರ ರೂ. 3—0—0.

2 ಆಣೆ ಸ್ಟಾಂಪು ಕಳುಹಿಸಿದ್ದಲ್ಲಿ ಸಂಪಲು ಕಳುಹಿಸಲ್ಪಡುವುದು.

ಕವಿ ಎಂಡ್ ಸನ್ಸ್,
ಮಂಗಳೂರು ದ. ಕ.

ಹಾರ್ಮೋನಿಯಂ ಶ್ರುತಿ ಪೆಟ್ಟಿಗೆಗಳು

ಈ ಹಾರ್ಮೋನಿಯಂಗಳು ಬಹು ಮೇಲಾದದ್ದು. ಇದರಲ್ಲಿ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರೆ, ದೊಡ್ಡ ದೊಡ್ಡ ಹಾರ್ಮೋನಿಯಂಗಳಲ್ಲಿ ಇತರರ ಸಹಾಯವಿಲ್ಲದೆ ತಾವೇ ಬಾರಿಸಬಹುದು. ನಾವು ಹೊಸದಾಗಿ ಕಂಪೆನಿಯನ್ನು ತೆರೆದಿರುವುದರಿಂದ ಬಹು ಕಡಮೆ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೇ ಬರೆಯಿರಿ.

ಕ್ರಯ ಹಾರ್ಮೋನಿಯಂ 1ಕ್ಕೆ ರೂ. 12—0—0
ಫಿಡಲ್ 1ಕ್ಕೆ „ 15—0—0

ಬೇಕಾದವರು 5 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ರೂಪಾಯಿಗೆ ವಿ. ಪಿ. ಮಾಡುತ್ತೇವೆ.

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್ ನಂಬ್ರ 65,
ಮದರಾಸು.

ಪ್ಯಾರೀಸ್ ದೇಶದ ಲೋವಿಂಗ್ ಫೋಟೋಗಳು

ಈ ಚಿತ್ರಪಟಗಳು ಮೊದಲು ಪ್ಯಾರೀಸ್ ದೇಶದಲ್ಲಿ ತಯಾರಿಸಿದರು. ಇದನ್ನು ನಮ್ಮ ದೇಶಕ್ಕೆ ತರಿಸಬೇಕೆಂದು ಬಹು ಜನರು ಪ್ರಯಾಸಪಟ್ಟರು. ಆದರೆ ಯಾರಿಂದಲೂ ಆಗಲಿಲ್ಲ. ಈಗ ನಾವು ಪ್ರಯಾಸಪಟ್ಟು ಈ ಚಿತ್ರಪಟಗಳನ್ನು ತರಿಸಿರುವೆವು. ಈ ಚಿತ್ರಪಟಗಳಲ್ಲಿ ಸ್ತ್ರೀ ಪುರುಷರ ರಹಸ್ಯವಿಷಯಗಳು ವಿವರವಾಗಿ ಕಾಣುತ್ತೆ. ಇವನ್ನು ಒಂದಾವರ್ತಿ ನೋಡಿದರೆ ಯಾವಾಗಲೂ ನೋಡುತ್ತಲೇ ಇರಬೇಕೆನ್ನಿಸುವುದು. ಮತ್ತು ಯಾರಿಗೂ ಸಿಕ್ಕದಂತೆ ಜೇಬಿನಲ್ಲಿಯೇ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಕಾರ್ಡು ಸೈಜಿನಲ್ಲಿದೆ. ಈ ಪಟಗಳ ವಿಷಯದಲ್ಲಿ ವಿವರವಾಗಿ ಬರೆದು ತಿಳಿಸಲು ಆಗದು. ಇದನ್ನು ಓದುವುದರಿಂದಲೇ ಈ ಪಟಗಳ ವಿಷಯವನ್ನು ವಿವರವಾಗಿ ತಿಳಿದುಕೊಳ್ಳಬಹುದು.

ಕ್ರಯ 12 ಪಟಗಳುಳ್ಳ ಸೆಟ್ 1ಕ್ಕೆ ರೂ. 3—0—0

ವಿಳಾಸ:—

ಎಟೋನಿಯಾ ಅಂಡ್ ಕೊ,
ಪೋಸ್ಟು ಬೋಕ್ಸ್, ನಂಬ್ರ 65, ಮದರಾಸು.

ಶಾಲಿವಾಹನಶಕ ೧೮೩೫ನೆಯ ರುಧಿರೋದ್ಗಾರಿ ಸಂವರದ ನಿಜ ಜ್ಯೇಷ್ಠ ಶು। ೨ ಶನಿವಾರದಿಂದ ರುಧಿರೋದ್ಗಾರಿ ಸಂವರದ ನಿಜ ಜ್ಯೇಷ್ಠ ಶು।೮ ಶುಕ್ರವಾರದ ವರೆಗಿನ

ಪಂಚಾಂಗ

(೧೯೧೩ನೆಯ ಮಿಥುನ ಕಾರ್ತೆಲ್)

ತಾರೀಕು	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಚಂದ್ರಮಾನ.	ಸೂರ್ಯ ಉ.	ಅಸ್ತ.
ಜೂನ್ 16	ಶನಿ	೨	೩೪.೪೪	ಆದ್ರಾ	೮.೩೨	೨	6. 6	6 56
17	ರವಿ	೩	೩೩.೩೨	ಪುನರ್ವಸು	೯.೪೬	೩	6. 6	6 56
18	ಸೋಮ	೪	೩೧.೧೪	ಪುಷ್ಯಾ	೯.೪೪	೪	6. 6	6.56
19	ಮಂಗಳ	೫	೨೭.೪೬	ಆಶ್ಲೇಷಾ	೮.೨೮	೫	6. 7	6.57
20	ಬುಧ	೬	೨೩.೩೨	ಮಘಾ	೬.೧೪	೬	6. 7	6.57
21	ಗುರು	೭	೧೮.೩೦	ಪುಬ್ಬಾ	೩.೩೨	೭	6. 7	6.57
22	ಶುಕ್ರ	೮	೧೨.೪೪	ಹಸ್ತಾ	೫೭.೧೬	೮	6 7	6.57

ಮಂಗಳೂರಿನ ವಾಯುಸ್ಥಿತಿ.

(೧೯೧೩ನೆಯ ಎಪ್ರಿಲ್)

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಮೆ	ದಿನದ ಮಳೆ	ಒಟ್ಟು ಮಳೆ.
8	91—2	80—8	—	—
9	93—5	82—4	—	—
10	93—5	79—6	—	—
11	90—2	77—3	0—44	—
12	85—7	74—4	2—70	—
13	82—7	73—2	3—25	—
14	79—4	71—8	4—61	15—50

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಸೂರಿ ಅಕ್ಕಿಮುಡಿ ೧ಕ್ಕೆ	...	7- 8	8— 6
ಗುಚ್ಚು,	...	7- 4	7— 6
ರಾಶಿ		6- 8	6—12
ಸಣ್ಣ		7—0	7—4
ಅವ್ವಲ್ ಬೆಳ್ತಿಗೆ ,,	...	7-14	8—10
ಗುಚ್ಚು ಬೆಳ್ತಿಗೆ ,,	...	7- 6	7—12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	12- 0	13— 0
ಗೋಧಿ ಗೋಣಿ ೧ಕ್ಕೆ	...	18- 0	20— 0
ಹುರುಳಿ ಗೋಣಿ ೧ಕ್ಕೆ	...	8-10	10—8
ಕಡಲೆ ಗೋಣಿ ೧ಕ್ಕೆ	...	11- 8	12— 8
ತೊಗರಿ ಗೋಣಿ ೧ಕ್ಕೆ	...	12- 0	—
ತೊಗರಿಬೇಳೆ ಗೋಣಿ ೧ಕ್ಕೆ	...	14- 0	23— 0
ಉದ್ದು ಗೋಣಿ ೧ಕ್ಕೆ	...	13- 0	—
ಹೆಸರು ಗೋಣಿ ೧ಕ್ಕೆ	...	—	12— 8
ಊರು ಬೆಲ್ಲ ಖಂಡಿ ೧ಕ್ಕೆ	...	40- 0	45— 0
ಉಪ್ಪು ಗೋಣಿ ೧ಕ್ಕೆ	...	8- 0	8— 8
ಕೊಬ್ರಿ ಖಂಡಿ ೧ಕ್ಕೆ	...	105- 0	115— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	36- 0	
ಎಳ್ಳಿಂಡಿ ಖಂಡಿ ೧ಕ್ಕೆ	...	45- 0	50— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	8- 0	9— 0
ಎಳ್ಳೆಣ್ಣೆ ಮುಡಿ ೧ಕ್ಕೆ	...	6-12	9— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	8-12-6	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	—	8— 4
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	7- 8	9—8
ಸಾಸಿವೆ ಮುಡಿ ೧ಕ್ಕೆ	...	8- 0	8—4
ಕೊತ್ತುಂಬರಿ ಮುಡಿ ೧ಕ್ಕೆ	...	4- 8	4—12
ಕಾಫಿ ಖಂಡಿ ೧ಕ್ಕೆ	...	260- 0	270-- 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	150- 0	160-- 0
ಬೆಳಗೋಟು New, ಹೊಸತು	...	160- 0	170-- 0
ಕಾಳುಮೆಣಸು ಖಂಡಿ ೧ಕ್ಕೆ	...	115- 0	120— 0
ಯಾಲಕ್ಕಿ ಮುಡಿ ೧ಕ್ಕೆ	...	60- 0	70— 0
ಗೇರುಬೀಜ ಮುಡಿ ೧ಕ್ಕೆ	...	1-14	2— 0
ಕಬ್ಬಿಣ ಖಂಡಿ ೧ಕ್ಕೆ	...	50- 0	65— 0
ತಾಂಬ್ರ ತಗಡು ಮುಣ ೧ಕ್ಕೆ	...	20-12	23— 0
ತಾಂಬ್ರ ಪಾತ್ರಗಳು ಮುಣ ೧ಕ್ಕೆ	...	32- 0	—
ಚೀನಿ ಬೆಳ್ಳಿ ಸೇರು ೧ಕ್ಕೆ	...	22- 8	—
ಹಿತ್ತಾಳೆ ತಗಡುಮುಣ 1ಕ್ಕೆ	...	20- 0	21—
ಪವನು	...	15-15	16— 0

ಈಗಲೇ ತರಿಸಿರುತ್ತೇವೆ! ಬೇಗನೆ ತರಿಸಿಕೊಳ್ಳಿರಿ!

ರೋಲ್ಡ್ ಗೋಲ್ಡ್ ಬ್ರಾಸ್‌ಲೆಟ್ ಗಡಿಯಾರ.

(ಗ್ಯಾರಂಟಿ 3 ವರುಷ ಕೊಡುವೆವು.)

ಈ ಗಡಿಯಾರಗಳು ನಮ್ಮ ಸ್ವಂತ ಆರ್ಡರಿನಿಂದ ಸೀಮೆಯಲ್ಲಿ ಪ್ರಖ್ಯಾತಿಪಟ್ಟ ಕಂಪೆನಿಯವರಿಂದ ತಯಾರಾಗಿ ಬಂದಿರುತ್ತವೆ. ಇದು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ತಯಾರಾದದ್ದು. ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಲು ಬಹು ಅಂದವಾಗಿರುವದು. ನೋಡುವವರು ಭಂಗಾರದ ಗಡಿಯಾರವೆಂದೇ ಹೇಳುವರು. ಇದನ್ನು ಕೈಯಲ್ಲಿ ಧರಿಸಿದರೆ ಒಂದು ಆಭರಣದ ಹಾಗೆ ಇರುವದು. ಬಹಳ ವರ್ಣಿಸುವುದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ಕ್ರಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 9—0—0

ನಿಮ್ಮ ವಿಳಾಸವನ್ನು ತಿಳಿಸಿದರೆ ಕ್ಯಾಟಲಾಗನ್ನು ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ—**ಎಸ್. ಎಸ್. ರಾಮು ಎಂಡ್ ಕೊ,**
ಪೋಸ್ಟ್ ಬಾಕ್ಸ್ ನಂ. 1244 ಮದರಾಸ್

Theroy Stoves. (Made in U. S. A.)

ಹೊಸದಾಗಿ ಕಂಡುಹಿಡಿಯಲ್ಪಟ್ಟು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವ

ಎಲೆಕ್ಟ್ರಿಕ್ ಸ್ಟವ್ (ಎಂಬ ಅಡಿಗೆಮಾಡುವ ಯಂತ್ರ)

ಈ ಸ್ಟವ್ (Stove)ಗಳನ್ನು ಅಮೇರಿಕಾ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಹಿತ್ತಾಳೆಯಿಂದ ತಯಾರಾಗಿ ಬಂದಿರುತ್ತೆ. ನೋಡಲಿಕ್ಕೆ ಬಹು ಆಶ್ಚರ್ಯವಾಗಿರುವದು. ಈ ಒಲೆಯನ್ನು ಉರಿಸುವದಕ್ಕೆ ಎಣ್ಣೆ, ಸೌದೆ, ಇದ್ದಲು ಯಾವದೂ ಅವಶ್ಯವಿಲ್ಲ. ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಉರಿಯುವದು. ಬಹು ಸುಲಭವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರಯಾಣಿಕರಿಗೂ, ವಿದ್ಯಾರ್ಥಿಗಳಿಗೂ ಬಹು ಸಹಕಾರಿಯಾಗಿರುವದು. 5 ನಿಮಿಷದಲ್ಲಿ ಕಾಫಿ, ಟೀ, ಫಲಾಹಾರಗಳನ್ನು ಮಾಡಿಕೊಳ್ಳಬಹುದು. ಇದು ಒಂದು ಇದ್ದರೆ ಇನ್ನೊಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಿಕೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದದ್ದು ಅವಶ್ಯಕವು. ಬೆಲೆಯಾದರೂ ಬಹಳ ಕಡಿಮೆ.

ಕ್ರಯ ಸ್ಟವ್ (Stove) 1ಕ್ಕೆ ರೂ. 4—0—0.

ನಮ್ಮ ವಿಳಾಸ—**ಎಸ್. ಪಾಲ್ ಎಂಡ್ ಕೊ.**
ಪೋಸ್ಟು ಬಾಕ್ಸ್ ನಂ. 542, ಪಾರ್ಕ್‌ಟೌನ್ ಮದ್ರಾಸ್

ವಿದ್ಯಾರ್ಥಿಗಳಿಗ ಅಪೂರ್ವ ಸಂದರ್ಭ!

ನಮ್ಮಲ್ಲಿ ಯಾವಾಗಲೂ ಶಾಲಾ ವಿದ್ಯಾರ್ಥಿಗಳಿಗೆ ಬೇಕಾದ ಎಕ್ಸರ್‌ಸೈಜ್ ಪುಸ್ತಕಗಳು, ಮೇಪ್ ಡ್ರೋಯಿಂಗ್, ಡ್ರೋಯಿಂಗ್ ಪುಸ್ತಕಗಳು, ಗ್ರೇಫ್ ಪುಸ್ತಕಗಳು, ನೋಟು ಬುಕ್ಕುಗಳು, ಕೆಂಪಾಸ್ ಬೋಕ್ಸ್, ಬಣ್ಣದ ಪೆನ್ಸಿಲು, ಫ್ಲುಟ್ ರೋಲ್, ಶಾಯಿ ಗುಳಿಗೆ ಇತ್ಯಾದಿ ಎಲ್ಲಾ ಸ್ಟೇಶನರಿ ಸಾಮಾಗ್ರಿಗಳು ಬಹಳ ಕಡಿಮೆ ದರದಲ್ಲಿ ಮಾರಲ್ಪಡುವುದು. ಶಾಲಾ ಹುಡುಗರಿಗೆ ಬೇಕಾದ ಎಲ್ಲಾ ನಮೂನೆಯ ಪಾಠ ಪುಸ್ತಕಗಳು ಸಹ ದೊರಕುವವು. ಇದಲ್ಲದೆ ಶಾಲಾ ಪುಸ್ತಕಗಳಿಗೆ ರೂಪಾಯಿಯ ಮೇಲೆ ಒಂದು ಆಣೆಯಂತೆ ಡಿಸ್‌ಕೌಂಟು ದೊರಕುವುದು.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ

ಪಂಡಿತ ಮಂಗಳೂರ ನಾರಾಯಣಾಚಾರ್ಯರಿಂದ ಗಣಿಸಿ ಪರಿಶೋಧಿಸಲ್ಪಟ್ಟ,

ರುಧಿರೋದ್ಗಾರಿ ಸಂವತ್ಸರದ

ಪಂಚಾಂಗಗಳು.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

ದಾವುದರ ಪೇಟೆಂಟ್ ಅಭ್ರಕದ ಸ್ವದೇಶಿ ಚಿಮಿಣಿ ಬುರುಡೆಗಳು

ಗಾಜು ಬುರುಡೆಗಾಗಿಯೇ ವರುಷಂಪ್ರತಿ ಎಷ್ಟು ಹಣವು ದುರ್ವ್ಯಯವಾಗುತ್ತಿದೆ ಎಂಬುದು ಸರ್ವರಿಗೂ ಅನುಭವವಾಗಿದೆ. ಹೀಗಿರುತ್ತ ಹೆಸರುಮಾತ್ರಕ್ಕೆ ಬುರುಡೆ ಎನ್ನಿಸಿಕೊಳ್ಳುವ ವಸ್ತುವನ್ನು ತಯಾರಿಸುವುದಕ್ಕಿಂತ ಜನರಿಗೆ ಹೆಚ್ಚು ಕಾಲಕ್ಕೆ ಉಪಯೋಗಕ್ಕೆ ಬರುವ ವಸ್ತುವೇ ಅಗತ್ಯವೆಂದು ಅನೇಕ ಪ್ರಯೋಗಗಳಿಂದ ಕಂಡುಹಿಡಿದಿದ್ದೇವೆ. ಗಾಜು ಬುರುಡೆಗಳು ಪೆಡಸಾಗಿದ್ದು, ದೀಪದ ಪ್ರಕಾಶದ ಉಷ್ಣತೆಯಿಂದ ಒಡೆಯುತ್ತವೆ. ನೀರಿನ ಅಥವಾ ತಂಪು ಗಾಳಿಯ ಸ್ಪರ್ಶವಾಗುತ್ತಲೇ ಪಟಪಟ ತುಂಡು ತುಂಡಾಗುತ್ತವೆ. ಜಪಾನ ಮ್ಯಾಲುಗಳಲ್ಲಿ ಈ ಗುಣವು ಸ್ಪಷ್ಟವಾಗಿ ಕಾಣುತ್ತದೆ. ಒಂದು ದೀಪಕ್ಕೆ ಬೇಕಾಗುವ ಬುರುಡೆಗಾಗಿ ವರುಷಕ್ಕೆ ೫೦-೬೦ ರೂಪಾಯಿ ಕ್ರಯವಾಗುತ್ತದೆ. ಇದಕ್ಕೆ ಪ್ರತಿಯಾಗಿ ಅಭ್ರಕದ (ಬಿಂಗದ) ಬುರುಡೆಗಳು ತಯಾರಾಗಿವೆ. ಬಿಂಗು ಪಾರದರ್ಶಕ ಪದಾರ್ಥವಾಗಿದ್ದುದರಿಂದ ಸೀಮೆಯ ಎಣ್ಣೆಯಿಂದ ಉರಿಸುವ ದೀಪಗಳಿಗೆ ಉಪಯೋಗಿಸಲು ಯೋಗ್ಯವಾಗಿ ಕಂಡುಬಂದಿದೆ. ಇವು ತುಂಡಾಗುವುದಿಲ್ಲ; ನೀರಿನ ಮತ್ತು ತಂಪುಗಾಳಿಯ ಸ್ಪರ್ಶವಾಗಿದೊಡನೆ ಒಡೆಯುವುದಿಲ್ಲ. ಹೆಚ್ಚಿನ ಪ್ರಕಾಶವನ್ನು ಕೊಡುತ್ತವೆ. ಕಣ್ಣಿಗೆ ತಂಪು. ಈ ಬುರುಡೆಗಳನ್ನು ಉಪಯೋಗಿಸುವುದರಿಂದ ವರ್ಷ ಒಂದಕ್ಕೆ ರೂ. ೨ ಮಾತ್ರ ಖರ್ಚು ಆಗುವದು. ಈ ಬುರುಡೆಗಳಿಗೆ ಕೆಳಗೆ ಹೆಸರು ಕಾಣಿಸಿದವರು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಾಮುಖ್ಯ ಏಜಂಟರಾಗಿರುತ್ತಾರೆ.

ಡಿಟ್‌ಮಾರ್ ಲೇಂಪು, ಜಪಾನ್ ಲೇಂಪು, ತೂಗಾಡಿಸುವ ಲೇಂಪು, ಟೇಬಲ್ ಲೇಂಪು, ಗ್ಯಾಸಲೇಂಪು, ಮುಂತಾದ ಎಲ್ಲಾ ತರದ ದೀಪಗಳಿಗೆ ಉಪಯೋಗಿಸಲು ಬೇಕಾದ ಬುರುಡೆಗಳು ನಮ್ಮಲ್ಲಿ ದೊರಕುವುವು. ಅಲ್ಲದೆ ಯಾವುದಾದರೂ ಒಂದು ಹೊಸತರದ ದೀಪಕ್ಕೆ ಬೇಕಾಗುವ ಬುರುಡೆಗಳನ್ನು ಸಹ ಒದಗಿಸಿಕೊಡಬಹುದು.

ಕ್ರಯ ಎಲ್ಲಿ ಕಡಿಮೆ?

ನಮ್ಮ ದರವನ್ನು ಬೇರೆಯವರ ದರದೊಡನೆ ಸರಿಹೋಲಿಸಿ ನೋಡಿದರೆ ಆಗ ತನ್ನಷ್ಟಕ್ಕೇ ಇದರ ಗುಟ್ಟು ಗೊತ್ತಾಗುವುದು!

ಕೊಡೆಗಳು ಯುದ್ಧಕ್ಕೆ ಮೊದಲಿದ್ದ ದರದಲ್ಲಿಯೇ ನಿಮಗೆ ಇಲ್ಲಿ ದೊರೆಯುವುವು!

ಬಲವಾದ ಬಾಳಿಕೆ ಬರುವ ಹೊಸ ಕೊಡೆಗಳು ಈಗ ತಾನೇ ತಲಪಿವೆ!!

ಸ್ವಿಜರ್‌ಲೇಂಡಿನಲ್ಲಿ ಸಿದ್ಧವಾದ ಪ್ರಖ್ಯಾತಿಹೊಂದಿದ ಮಿಶನ್ ಕೊಡೆಗಳು

24×8 ರೂ. 6—4—0. 26×8 ರೂ. 6—8—0. 28×8 ರೂ. 6—12—0.

ಈ ಬೆಲೆಯನ್ನೊಂದು ಗುರುತಿಸಿಕೊಳ್ಳಿ! ನಮ್ಮ ಮಾರಾಟದ ದರ ಹೇಗಿದೆ ಎಂದು ನೀವೇ ಆಲೋಚಿಸಿರಿ!

ಉತ್ತಮ ಯಂತ್ರದಲ್ಲಿ ತಯಾರಾದ ಕೊಡೆಗಳು.

26×8 ರೂ. 4—14—0. ಈ ಕೊಡೆಗಳು ಇದರಿಂದಲೂ ಅಗ್ಗವಾಗಿ ನಿಮಗೆ ದೊರೆಯದು. ಇದು ಸಂಪೂರ್ಣವಾಗಿ ನಂಬಿಕೆಗೆ ಅರ್ಹವಾದದ್ದು, ಬಲವಾದದ್ದು, ಬಾಳಿಕೆ ಬರತಕ್ಕದ್ದೂ ಆಗಿದೆ. ಪ್ರತಿಯೊಂದು ಕೊಡೆಗೂ ಗ್ಯಾರಂಟಿ ಇದೆ.

ಕಪ್ಪು ಬಿಳೀ ಬಣ್ಣದ ಶುದ್ಧ ಖಾದಿಯ ನಿರ್ಮಾಣದ ಹಿಂದೀ ಕೊಡೆಗಳು

18ರಿಂದ 28ರ ವರೆಗಿನ ಎಲ್ಲಾ ಅಳತೆಯಲ್ಲಿ ರೂ. 2—4—0ರಿಂದ ರೂ. 4—8—0ರ ವರೆಗೆ.

ನಂಬ್ರ 611 ಚೇಳಿಯ ಗುರುತಿನ ಕೊಡೆಗಳು

ಇದಕ್ಕೆ ಚಿನ್ನದ ಪದಕಗಳೇ ಬಹುಮಾನ ದೊರಕಿದೆ.

ಈ ಕೊಡೆಗಳು ಇದೊಂದು ವ್ಯಾಪಾರ ಸಂಸ್ಥೆಯಲ್ಲಿ ಮಾತ್ರ ದೊರೆಯುತ್ತವೆ.

ಎಮ್. ಸುಲೇಮಾನ್ ನೂರ್ ಮಹಮ್ಮದ್ ಅಂಡ್ ಸನ್ಸ್,
ಕೊರೊನೇಶನ್ ಅಂಬ್ರೆಲ್ಲಾ ಮಾರ್ಟ್, 786, ಮರ್ಕೆಂಟೈಲ್ ಬೇಂಕ್ ಹತ್ತಿರ, ಮಂಗಳೂರು
ಅವರ ಶಾಖೆ—ಮಂಗಳೂರು ಟೌನ್ ಪೋಲೀಸ್ ಸ್ಟೇಶನಿನ ಎದುರಲ್ಲಿ.

ದೇಶಭಕ್ತರ ಆಗಮನ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಜಾದಾ ಸಭೆಯು.

(ವಾರ್ತಾ ಪ್ರಸಾರಕ ಸಂಘ, ಹುಬ್ಬಳ್ಳಿ.)

ಧಾ ರ ವಾ ಡ.

ರವಿವಾರ ತಾ. ೩ನೇ ಜೂನ ದಿವಸ, ಮೊದಲೇ ಪ್ರಸಿದ್ಧಪಡಿಸಿದಂತೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಜಾದಾ ಸಭೆಯು ಧಾರವಾಡದಲ್ಲಿ ಕೂಡಿತ್ತು. ಇದೇ ದಿವಸ ದೇಶಭಕ್ತ ಶ್ರೀಯುತ ರಾಜಗೋಪಾಲಾಚಾರ್ಯ, ಮತ್ತು ದೇ. ಭ. ಶ್ರೀಯುತ ದೇವಿದಾಸ ಗಾಂಧಿ ಇವರ ಆಗಮನದಿಂದ ಈ ಸಭೆಗೆ ವಿಶೇಷ ಮಹತ್ವ ಉಂಟಾಗಿತ್ತು. ಮಧ್ಯಾಹ್ನ ೩ ಘಂಟೆಗೆ ದೇಶಭಕ್ತ ಗಂಗಾಧರರಾಯರ ಅಧ್ಯಕ್ಷತೆಯ ಕೆಳಗೆ, ಕಮಿಟಿಯ ಸಭೆಯು ನೆರೆಯಿತು. ಆದರೆ ಆ ದಿವಸ ಕಮಿಟಿಯ ಕೆಲಸವೇನೂ ಜರಗದೆ, ದೇಶಭಕ್ತರ ಕಡೆ ಬಾಹೀ ವಾದವಿವಾದದಲ್ಲಿಯೇ ಅಂದಿನ ಕಾಲವು ಹೋಯಿತು. ರಾತ್ರಿ ೯ ಘಂಟೆಗೆ ಅಲ್ಲಿಯ ರಾಷ್ಟ್ರೀಯ ಶಾಲೆಯ ಪಟಾಂಗಣದಲ್ಲಿ ದೇಶಭಕ್ತರ ಜಾಹೀರ ವ್ಯಾಖ್ಯಾನಗಳಾದವು.

ಮರುದಿವಸ ಪ್ರಾತಃಕಾಲಕ್ಕೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕ್ಕೆ ಪ್ರಾರಂಭವಾಗಿ ಬಹುಕಾಲ ವಾದವಿವಾದದನಂತರ ಮೂರು ಮುಖ್ಯ ಠರಾವುಗಳು ಪಾಸಾದವು.

(೧) ಪ್ರಸಂಗ ಒದಗಿದರೆ ಕೌನ್ಸಿಲಿನ ವಿರುದ್ಧ ಚಳವಳಿಯನ್ನು ಕರ್ನಾಟಕದಲ್ಲಿ ಮಾಡುವುದು. (೨) ಕರ್ನಾಟಕದಲ್ಲಿಯೇ ಯಾವುದಾದರೊಂದು ಭಾಗದಲ್ಲಿ ಕಾಯಿದೇಭಂಗವನ್ನು ಪ್ರಾರಂಭಿಸಲಿಕ್ಕೆ ಯತ್ನಿಸುವುದು. (೩) ನಾಗಪುರಕ್ಕೆ ಕಾಯಿದೇಭಂಗದ ಕಾರ್ಯಕ್ಕಾಗಿ ೫೦ ಸ್ವಯಂಸೇವಕರನ್ನು ಕರ್ನಾಟಕದಿಂದ ಕಳುಹಿಸುವುದು.

ಹು ಬ್ಬ ಳ್ಳಿ.

ಈ ಸಭೆಯ ಕಾರ್ಯವು ಮುಗಿದನಂತರ ಮಧ್ಯಾಹ್ನ ೨ ಘಂಟೆಯ ಸುಮಾರಿಗೆ ದೇಶಭಕ್ತರು ಮೋಟಾರಿನ ಮಾರ್ಗವಾಗಿ ಹುಬ್ಬಳ್ಳಿಗೆ ಬಂದರು. ಕೇವಲ ಗುರ್ಜರ ಬಂಧುಗಳಿಗಾಗಿ ಮತ್ತು ಕೇವಲ ಭಗಿನಿಯರಿಗಾಗಿ ಮತ್ತು ಜಾಹೀರವಾಗಿ ಹೀಗೆ ಮೂರು ಕಡೆಗೆ ಅವರ ವ್ಯಾಖ್ಯಾನಗಳು ಏರ್ಪಡಿಸಲ್ಪಟ್ಟಿದ್ದವು. ಮೊದಲಿನ ಎರಡು ಸಭೆಗಳಲ್ಲಿ ಭಾಷಣಮಾಡಿ ಸಂಜೆ ೭ ಘಂಟೆಗೆ ಜಾಹೀರ ಸಭೆಯಲ್ಲಿ ವ್ಯಾಖ್ಯಾನಕೊಡಲಿಕ್ಕೆ ದೇಶಭಕ್ತರು ಕರ್ನಾಟಕ ಪ್ರೆಸ್ಸಿಗೆ ಬಂದರು. ಅಲ್ಲಿ ಪ್ರಚಂಡ ಜನಸಮುದಾಯವು ಕೂಡಿತ್ತು. ಮಳೆಯಿಂದ ಮಾರ್ಗಗಳೆಲ್ಲ ಕೆಸರಾಗಿ, ಗುಡುಗುಮಿಂಚುಗಳು ಧಾರಾಳವಾಗಿ ನಡೆದಿದ್ದರೂ ಜನಸಮುದಾಯವು ನೆರೆಯಲಿಕ್ಕೆ ಆತಂಕವೇನೂ ಬರಲಿಲ್ಲ. ಯಾಕೆಂದರೆ, ಮಹಾತ್ಮರ ಪ್ರತಿನಿಧಿಗಳಾದ ಪರಮಪೂಜ್ಯ ರಾಜಗೋಪಾಲಾಚಾರ್ಯರನ್ನೂ ಮಹಾತ್ಮರ ಪುತ್ರರಾದ ದೇವಿದಾಸ ಗಾಂಧಿಯವರನ್ನೂ ಕಣ್ಣುತುಂಬ ನೋಡಿ ಅವರ ಉಪದೇಶಗಳನ್ನು ಕೇಳಿ ದೇಹಸಾಫಲ್ಯ ಮಾಡಿಕೊಳ್ಳಬೇಕೆಂಬ ಕುತೂಹಲವೇ ಜನರಲ್ಲಿ ಹೆಚ್ಚಾಗಿತ್ತು.

ಶ್ರೀ ದೇವಿದಾಸ ಗಾಂಧಿ.

ಏಳೂವರೆ ಘಂಟೆಯ ಸುಮಾರಕ್ಕೆ ಸಭೆಯ ಕೆಲಸವು ಪ್ರಾರಂಭವಾಯಿತು. ಶ್ರೀಯುತ ದೇವಿದಾಸ ಗಾಂಧಿಯವರು ಹಿಂದೀಭಾಷೆಯಲ್ಲಿ ಅರ್ಧತಾಸಿನ ವರೆಗೆ ಅಸ್ಖಲಿತವಾಗಿ ಮಾತನಾಡಿದರು. ತಮ್ಮ ತಂದೆಯ ತತ್ವಗಳನ್ನು ಅಕ್ಷರಶಃ ಅರಿತವರೆಂದರೆ, ಶ್ರೀಯುತ ರಾಜಗೋಪಾಲಾಚಾರ್ಯರೇ ಎಂದು ಅವರು ಖಂಡಿತವಾಗಿ ಹೇಳಿದರು. ದೇಶದ ತುಂಬೆಲ್ಲ ಮಾಡಿದ ತಮ್ಮ ದೀರ್ಘಪ್ರವಾಸದಿಂದ ಸದ್ಯದ ಚಳವಳದ ಸತ್ವವು ನಿರ್ವೀರ್ಯವಾಗಿರದೆ ಶಾಂತರೀತಿಯಿಂದ ಪ್ರಗತಿಯನ್ನು ಹೊಂದುತ್ತಿರುವದೆಂದೇ ಅವರ ಮತವಾಗಿತ್ತು. ಜನತೆಯಲ್ಲಿರುವ ಸತ್ವದ ಯೋಗ್ಯಲಾಭವನ್ನು ತೆಗೆದುಕೊಳ್ಳುವ ತಕ್ಕ ಪುಢಾರಿಯ ಅಭಾವವೇ ಸದ್ಯಕ್ಕೆ ತಾತ್ಪೂರ್ತಿಕವಾಗಿ ಭಾಸವಾಗುವ ನಿರುತ್ಸಾಹದ ಕಾರಣವೆಂದು ಅವರ ಅಭಿಪ್ರಾಯ. ಈ ನಿರುತ್ಸಾಹ ಕಡೆತನಕ ನಿಲ್ಲುವುದಿಲ್ಲವೆಂದೂ ಶೌರ್ಯಧೈರ್ಯಗಳ ಮೂರ್ತಿಮಂತರಾದ ಅಲ್ಲೀ ಬಂಧುಗಳ ಬಿಡುಗಡೆಯಿಂದ ದೇಶದಲ್ಲಿ ಮತ್ತೆ ಹೊಸ ಶಕ್ತಿಯು ನಿಶ್ಚಯವಾಗಿ ಪ್ರಜ್ವಲಿಸುವದೆಂದೂ ಆಶ್ವಾಸನವನ್ನಿತ್ತರು. ಮತ್ತು ಹಿಂದೂ-ಮುಸಲ್ಮಾನರ ಐಕ್ಯತೆಯ ಮಹತ್ವದ ಬಗ್ಗೆ ಉಪದೇಶಿಸಿ ಆ ಚಿಕ್ಕ ಮಹಾತ್ಮರು ತಮ್ಮ ಭಾಷಣವನ್ನು ಮುಗಿಸಿದರು.

ದೇ. ಭ. ರಾಜಗೋಪಾಲಾಚಾರ್ಯ.

ಶ್ರೀಯುತ ರಾಜಗೋಪಾಲಾಚಾರ್ಯರ ಭಾಷಣವು ಸುಮಾರು ಒಂದೂವರೆ ತಾಸುಗಳ ವರೆಗೆ ಆಯಿತು. ಅವರು ಸರಸ ಮತ್ತು ಅಲಂಕೃತವಾದ ಆಂಗ್ಲ ಭಾಷೆಯಲ್ಲಿಯೇ ಮಾತನಾಡಿದರು. ಕನ್ನಡ ಭಾಷಾಕೋವಿದರಾದ ಶ್ರೀಯುತ ಮುದವೇಡಕರ ಕೃಷ್ಣರಾಯರು ಆಚಾರ್ಯರ ಭಾಷಣದ ಸರಸತ್ವವನ್ನೂ ಅಲಂಕಾರವನ್ನೂ ಎಳ್ಳಷ್ಟು ಕಳೆಯಗೊಡದೆ ಅಷ್ಟೇ ಸಾರಸ್ಯವಾಗುವಂತೆ ಅದನ್ನು ಕನ್ನಡಿಸಿ ಹೇಳಿದರು. "ಈಗ ಕೆಲವು ವರ್ಷಗಳ ಪೂರ್ವದಲ್ಲಿ, ಮುಸಲ್ಮಾನ ಬಾಂಧವರು ಸರಕಾರಕ್ಕೆ ಪ್ರಿಯರಾಗಿದ್ದಂತೆ ಈಗ ಕರ್ನಾಟಕದಲ್ಲಿ ನಮ್ಮ ಲಿಂಗವಂತ ಬಂಧುಗಳು ಸರಕಾರಕ್ಕೆ ಪ್ರಿಯರಾಗಿರುತ್ತಾರೆ. ಆದರೆ ಇದೆಲ್ಲ ನಮ್ಮ ಸರಕಾರದ ಕುಟಿಲ ಕೃತ್ಯವಿದ್ದುದರಿಂದ ಸದ್ಯಕ್ಕೆ ಮುಸಲ್ಮಾನರು ಸರಕಾರಕ್ಕೆ ಅಪ್ರಿಯರಾದಂತೆ ಇನ್ನು ಮುಂದೆ ಲಿಂಗವಂತ ಬಂಧುಗಳಾದರೂ ಸರಕಾರಕ್ಕೆ ನಿಶ್ಚಯವಾಗಿ ಅಪ್ರಿಯರಾಗುತ್ತಾರೆ. ಈಗ ಸದ್ಯಕ್ಕೆ ಲಿಂಗವಂತ ಬಂಧುಗಳು ರಾಷ್ಟ್ರೀಯ ಸಭೆಗೆ ಬಾರದಿದ್ದರೂ, ಅವರು ಇನ್ನು ಮುಂದೆ ಅದನ್ನು ಸೇರುವಂಥ ಒಂದು ಪ್ರಸಂಗವು ಖಂಡಿತವಾಗಿ ಬರುವುದು. ಆಗ್ಗೆ ಅವರು ಅಲ್ಲಿ ಬಂದು ಜಾತಿವಾರ ಪ್ರತಿನಿಧಿತ್ವವನ್ನು ಬೇಡಬೇಕಾದೀತು. ಸ್ವಾರ್ಥತ್ಯಾಗ ಮತ್ತು ಆತ್ಮಯಜ್ಞಗಳನ್ನು ಮಾಡುವ ಪ್ರಸಂಗಗಳಲ್ಲಿ ಅವರು ಸುಮ್ಮನಿದ್ದು ಅವುಗಳ ಫಲಗಳನ್ನು ಅನುಭವಿಸುವ ಕಾಲಕ್ಕೆ ಮಾತ್ರ ಅವರು ಸಿದ್ಧರಾದರೆಂಬ ಅಪಕೀರ್ತಿಗೆ ಗುರಿಯಾಗಬಾರದೆಂದು ಲಿಂಗವಂತ ಬಂಧುಗಳಿಗೆ ನನ್ನ ವಿನಂತಿಯು ಇದೆ. ಸ್ಥಳೀಕ ಸ್ವರಾಜ್ಯಕ್ಕಾಗಿಯೂ ಕಾನೂನು ಮಂಡಲಗಳಿಗಾಗಿಯೂ ಅವರು ಬ್ರಾಹ್ಮಣರೊಡನೆ ಬಡಿದಾಡುವಂತೆ ರಾಷ್ಟ್ರೀಯ ಸಭೆಯಲ್ಲಾದರೂ ತಮ್ಮ ಸದಸ್ಯತ್ವಕ್ಕಾಗಿಯೂ ಅಲ್ಲಿ ತಮ್ಮ ಬಹುಮತವನ್ನು ಸ್ಥಾಪಿಸುವುದಕ್ಕಾಗಿಯೂ ಅವರು ಬಡಿದಾಡತಕ್ಕದ್ದೆಂದು ನನ್ನ ಇಚ್ಛೆಯದೆ."

ಆ ಮೇಲೆ ಆಚಾರ್ಯರು ಹಿಂದೂಸ್ಥಾನದ ಹಿಂದಿನ ವೈಭವವನ್ನೂ ಬ್ರಾಹ್ಮಣ, ಮುಸಲ್ಮಾನ, ಮರಾಠಾ ಮುಂತಾದ ಜಾತಿಯ ಅನೇಕ ಅರಸರಾಗಿ ಹೋದರೂ, ಹಿಂದೂಸ್ಥಾನಕ್ಕೆ ಈಗಿನಂತೆ ದುಸ್ಥಿತಿಯು ಹೇಗೆ ಪ್ರಾಪ್ತವಾಗಿದ್ದಿಲ್ಲವೆಂಬುದನ್ನೂ ಹೇಳಿದರು. ಸುಖದುಃಖಗಳು ಚಕ್ರನೇಮಿಕ್ರಮದಿಂದ ತಿರುಗುತ್ತಿರುವುದರಿಂದ ಸೃಷ್ಟಿನಿಯಮಕ್ಕನುಸಾರವಾಗಿಯೇ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕಾಲವು ಬಂದೇ ತೀರುವುದೆಂದು ಅವರ ಅಭಿಪ್ರಾಯವಾಗಿತ್ತು.

ಆ ಮೇಲೆ ಸ್ವರಾಜ್ಯ ಪಕ್ಷದ ಧ್ಯೇಯ, ಕಾರ್ಯಕ್ರಮ ಮುಂತಾದವುಗಳ ಬಗ್ಗೆ ಮಾತನಾಡಿ, ಅವರನ್ನು ಅನುಸರಿಸುವುದು ಅಸಹಕಾರತತ್ವಕ್ಕೆ ವಿರುದ್ಧವಾದದ್ದು, ರಾಷ್ಟ್ರೀಯ ಸಭೆಯ ದ್ರೋಹವಾದದ್ದು ಮತ್ತು ದೇಶಹಿತದೃಷ್ಟಿಯಿಂದ ಘಾತುಕವಾದದ್ದು ಹೇಗೆ ಇರುತ್ತದೆಂಬುದನ್ನು ವಿಸ್ತರಿಸಿದರು.

ಕಡೆಗೆ ದೇಶಭಕ್ತ ಗಂಗಾಧರರಾಯರಂಥ ಯೋಗ್ಯ ಮುಂದಾಳುವು ಸಿಕ್ಕಿದ್ದರಿಂದ ಕರ್ನಾಟಕಸ್ಥರನ್ನು ಆ ಬಗ್ಗೆ ಅಭಿನಂದಿಸಿ ಅವರ ಕೃತಿಯ ಅನುಕರಣವನ್ನು ಅಕ್ಷರಶಃ ಮಾಡುವುದಕ್ಕೆ ಎಲ್ಲರಿಗೂ ವಿನಂತಿಯನ್ನು ಮಾಡಿಕೊಂಡು ಆಚಾರ್ಯರು ತಮ್ಮ ಭಾಷಣವನ್ನು ಮುಗಿಸಿದರು.

ಇವರೀರ್ವರ ಭಾಷಣದನಂತರ ನಮ್ಮ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ದೇ. ಭ. ಗಂಗಾಧರರಾಯರು ಸ್ವಲ್ಪಹೊತ್ತು ಸಿಂಹಗರ್ಜನೆಯನ್ನು ಮಾಡಿ ಅದ್ವಿತೀಯ ಅತಿಥಿಗಳಾದ ಆಚಾರ್ಯರ ಮತ್ತು ಗಾಂಧಿಯವರ ಆಭಾರವನ್ನು ಮನ್ನಿಸಿ, ಇಂಥ ಅಪೂರ್ವ ಸುಯೋಗವು ಒದಗಿದ್ದು ಹುಬ್ಬಳ್ಳಿಯ ನಾಗರೀಕರ ಸುದೈವವೆಂದೇ ಹೇಳಿ ಸಭೆಯ ಕಾರ್ಯವನ್ನು ಮುಗಿಸಿದರು.

ದೇಶಭಕ್ತ ಆಚಾರ್ಯರು, ಮತ್ತು ಶ್ರೀಯುತ ದೇವಿದಾಸಗಾಂಧಿಯವರು ಅಂದೇ ರಾತ್ರಿ ೧೦॥ ಗಂಟೆಯ ಗಾಡಿಯಲ್ಲಿ ಬೆಂಗಳೂರಿಗೆ ತೆರಳಿದರು.

NOTICE

IN THE COURT OF THE DISTRICT JUDGE OF SOUTH KANARA.

ORIGINAL PETITION NO. 72 OF 1923.

Juliana Brito . . . . *Petitioner.*

Notice is hereby given that an application has been made to the above Court for a grant of Probate of the will, dated 10—5—1922 of Camillo Severin Saldanha, late of Falneer, Mangalore Town, who died on 21—5—1922 to the Petitioner, the executrix named in the said will, and that 20—7—1923, has been fixed for the hearing of the said application.

Mangalore,
11—5—1923.

A. C. Gonsalves, B.A., B.L.
Vakil for Petitioner.

ಬಹಳ ಕಡಿಮೆ ದರ

ಶಾಲಾ ವಿದ್ಯಾರ್ಥಿಗಳಿಗೆ ಒಳ್ಳೇ ಸಂದರ್ಭ

ಜೂನ್ ತಾರೀಕು 2ರಿಂದ ಜೂನ್ ತಾರೀಕು 18ರ ವರೆಗೆ ಮಾತ್ರ.

ನಮ್ಮಲ್ಲಿ ಒಂದು ಸರ್ತಿ ಒಂದು ರೂಪಾಯಿ ಯಾ ಹೆಚ್ಚಿನ ಶಾಲಾ ಪುಸ್ತಕಗಳು ಮತ್ತು ಸ್ಟೇಶನೆರಿ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ರೂಪಾಯಿಯಲ್ಲಿ ಒಂದಾಣೆ ಡಿಸ್ಕೌಂಟು ಕೊಡುವೆವು.

ಈ ಅಪರೂಪ ಸಂದರ್ಭ ಕಳಕೊಳ್ಳಬೇಡಿರಿ.

ಮಂಗಳೂರು ಶಹರಿನಲ್ಲಿ ಹೆಚ್ಚಿನ ಡಿಸ್ಕೌಂಟು ಸಿಕ್ಕುವ ಸ್ಥಳವಿದು.

ಕೆನರಿಸ್ ಮಿಶ್ಯನ್ ಪ್ರೆಸ್ ಎಂಡ್ ಬುಕ್ ಡಿಪೊ,
ಮಂಗಳೂರು.

ಯೂನಿವರ್ಸೋಲ್.

ಈ ದಿವ್ಯ ಔಷಧವು, ಭಯಂಕರವಾದ ಸಿಡುಬು ರೋಗವನ್ನು ದೂರಪಡಿಸುವದಲ್ಲದೆ, ಈ ರೋಗದಿಂದ ಮೈಮೇಲೆ ಉಂಟಾಗುವ ಕಲೆಗಳನ್ನು ಹೋಗಲಾಡಿಸುತ್ತದೆ.

ಈಗ ಅನೇಕ ಕಡೆಗಳಲ್ಲಿ ವ್ಯಾಪಿಸಿಕೊಂಡಿರುವ ಭಯಂಕರವಾದ ಸಿಡುಬುರೋಗವು ಯಾರಿಗೆ ತಗಲುತ್ತದೋ, ಅಂಥವರ ಸುಂದರವಾದ ಮುಖಕಮಲವನ್ನು ಅದು ಅರೂಪಪಡಿಸುವುದು. ಹೀಗಿರುತ್ತ ಈ ರೋಗ ನಿವಾರಣೆಗೆ ಅನುಕೂಲವಾದ ಮೇಲಿನ ದಿವ್ಯವಾದ ಔಷಧದ ಒಂದು ಬಾಟ್ಲಿಯನ್ನು ಈ ಹೊತ್ತೆ ತರಿಸಿ ಹತ್ತಿರವಿಡುವದಿಲ್ಲವೇಕೆ? ಬಾಟ್ಲಿ ಒಂದರ ಕ್ರಯವಾದರೋ ಬರೇ ಆಣೆ 8/. ಇಷ್ಟು ಅಲ್ಪ ಮೊಬಲಗನ್ನು ಖರ್ಚು ಮಾಡಲಿಕ್ಕಾಗದೆ? ಈ ಔಷಧಿಗೆ ಸಿಡುಬುರೋಗವನ್ನು ದೂರಪಡಿಸಿ ಅದನ್ನು ಗುಣಪಡಿಸುವ ಸಾಮರ್ಥ್ಯವಿರುವುದಲ್ಲದೆ, ಇತರ ಕೆಲವು ರೋಗಗಳನ್ನು ನಿವಾರಣೆಮಾಡುವ ಶಕ್ತಿಯೂ ಇದೆ. ಇದು ಉರಿಗಜ್ಜಿ, ತುರಿಗಜ್ಜಿ ಮತ್ತು ಇತರ ಹುಣ್ಣುಗಳನ್ನು ಗುಣಪಡಿಸುವುದು. ಕಳೆದ ವರುಷ ಮದರಾಸ ಮತ್ತು ಮಲಬಾರ ಪ್ರಾಂತದಲ್ಲಿ ಸಿಡುಬುರೋಗದ ಹಾವಳಿಯು ಹಬ್ಬಿದಾಗ ಈ ಔಷಧ ಪ್ರಯೋಗದಿಂದ ಅನೇಕರಿಗೆ ಗುಣದೊರಕಿರುವುದರಿಂದ ಹೆಸರುಗೊಂಡ ಸಾವಿರಾರು ಮಂದಿ ಡಾಕ್ಟರರು ಇದಕ್ಕೆ ಸಿಫಾರಸು ಪತ್ರವನ್ನು ಕೊಟ್ಟಿರುವರು. 'ಯುನಿವರ್ಸೋಲ್' ಎಂಬ ಈ ಔಷಧವು ಅಂಟುರೋಗದ ವಿಷವನ್ನು ನಿವಾರಣೆಮಾಡುವ ಅತ್ಯುತ್ತಮ ಮದ್ದು. ಈ ಔಷಧವು ಸಿಡುಬುರೋಗದ ಹುಣ್ಣಿನ ವಿಷವನ್ನು ಅಪಹರಿಸಿ ಬಿಡುವುದರಿಂದ ಈ ರೋಗ ತಗಲಿದ ರೋಗಿಗೆ ಕುರುಹುಗಳು, ವ್ರಣಗಳು, ಅತಿಸಾರ, ರಕ್ತಾತಿಸಾರ, ಪುಪ್ಪಸದೇನೆ ಮೊದಲಾದ ತಾಕುಕೊಡಕುಗಳು ಹತ್ತಿರ ಬಾರದಂತೆ ಮಾಡುವುದು. ನಾನಾ ತರದ ಉರಿಯನ್ನು ಹುಟ್ಟಿಸುವ ಹುಣ್ಣುಗಳನ್ನೂ, ಬೊಕ್ಕೆಗಳನ್ನೂ ದೀರ್ಘಕಾಲದ ಹುಣ್ಣುಗಳನ್ನೂ ಇತರ ವ್ರಣಗಳನ್ನೂ ಸಹ ಈ ಮದ್ದು ಗುಣಪಡಿಸುತ್ತದೆ.

ಈ ಔಷಧಕ್ಕೆ ಸುವಾಸನೆಯು ಇರುವುದರಿಂದ ಇದನ್ನು ಹಚ್ಚಿಕೊಂಡ ರೋಗಿಗಳ ಸಮೀಪಕ್ಕೆ ಗುಂಗಾಡುಗಳೂ ಇತರ ನುಸಿಗಳೂ ಬರುವುದಿಲ್ಲ. ನುಸಿಗಳು ರೋಗಿಗಳ ಹತ್ತಿರಕ್ಕೆ ಬಾರದೆ ಇರುವುದರಿಂದ ರೋಗವು ಒಂದು ಕಡೆಯಿಂದ ಇನ್ನೊಂದು ಕಡೆಗೆ ಪಸರಿಸದಂತೆ ಆಗುವುದು. ರಾತ್ರಿಕಾಲದಲ್ಲಿ ಮಕ್ಕಳಿಗೆ ಗುಂಗಾಡುಗಳ ಕಾಟವನ್ನು ತಪ್ಪಿಸಲು ಮಕ್ಕಳನ್ನು ಮಲಗಿಸುವ ಮೊದಲು ಅವುಗಳ ಕೈಕಾಲುಗಳಿಗೆ ಇದನ್ನು ಹಚ್ಚಬಹುದು.

ಈ ಔಷಧದಲ್ಲಿ ರೋಗ ಗುಣಕಾರಿಯಾದ ಅನೇಕ ಉಪಯುಕ್ತ ಔಷಧಗಳಿರುವುವಲ್ಲದೆ ಬಹುತರವಾದ ರೋಗಗಳಿಗೆ ದಿನನಿತ್ಯ ಅನೇಕರು ಉಪಯೋಗಿಸುವ ನೀಲಗಿರಿ ಎಣ್ಣೆಯೂ, ಕರ್ಪುರವೂ ಕೂಡಿದೆ. ರೋಗ ಜಂತುಗಳನ್ನು ನಾಶಮಾಡುವ ಸಾಮರ್ಥ್ಯವುಳ್ಳದ್ದಾದರೂ ವಿಷದಿಂದ ಕೂಡಿದುದಲ್ಲ. ಆದುದರಿಂದ ದೇಹದ ಯಾವ ಭಾಗದಲ್ಲೂ ಇದನ್ನು ಉಪಯೋಗಿಸಬಹುದು. ಥಕ್ಕನೆ ಮಕ್ಕಳು ನೆಕ್ಕಿದರೂ ಏನೂ ಅಪಾಯ ಸಂಭವಿಸದು.

ಇದನ್ನು ಉಪಯೋಗಿಸುವ ಕ್ರಮ:—ಸಿಡುಬುರೋಗ ತಗಲಿದ ರೋಗಿಗಳಿಗೆ ದಿವಸಕ್ಕೆ ಎರಡು ಸಲ ಇಡೀ ದೇಹಕ್ಕೂ, ಮೂರು ಸಲ ಮುಖಕ್ಕೂ ಹಚ್ಚತಕ್ಕದ್ದು. ದೇಹಕ್ಕೆ ಈ ಮದ್ದನ್ನು ಒಂಟೆಯ ಕೂದಲಿನ ಬ್ರಶ್ಶಿನಿಂದ ಅಥವಾ ಯಾವುದಾದರೂ ಒಂದು ಗರಿಯಿಂದ ತಾಗಿಸತಕ್ಕದ್ದು.

ಉರಿಯಿಂದ ಕೂಡಿದ ಹುಣ್ಣುಗಳಿಗೂ ಬೊಕ್ಕೆಗಳಿಗೂ ಈ ಮದ್ದನ್ನು ಹಚ್ಚಿಸುವಾಗ ಒಂದು ನಯವಾದ ವಸ್ತ್ರದ ತುಂಡಿಗೆ (Lint) ಇದನ್ನು ತಾಗಿಸಿ ಆ ವಸ್ತ್ರದ ತುಂಡನ್ನು ಹುಣ್ಣುಗಳ ಮೇಲಿಟ್ಟು ಹತ್ತಿಯಿಂದ ಜಾಗ್ರತೆಯಾಗಿ ಅದನ್ನು ಕಟ್ಟಬೇಕು. ಹುಣ್ಣುಗಳನ್ನು ತೊಳೆಯುವಾಗ ಸಾಬೂನನ್ನು ಉಪಯೋಗಿಸಬಾರದು. ಈ ಮದ್ದನ್ನೇ ತೊಳೆಯಲು ಸಹ ಉಪಯೋಗಿಸತಕ್ಕದ್ದು.

ಎಚ್ಚರಿಕೆ:—ಈ ಔಷಧವು ದೇಹಕ್ಕೆ ತಂಪನ್ನು ಉಂಟುಮಾಡುವ ವಸ್ತುಗಳಿಂದ ಕೂಡಿದ್ದಾಗಿರುವುದರಿಂದ ಒಂದೇ ಸಾರೆ ಇಡೀ ದೇಹಕ್ಕೆ ಇದನ್ನು ಲೇಪಿಸಿದರೆ ಥಕ್ಕನೆ ಇಡೀ ದೇಹದಲ್ಲಿ ಒಂದು ತರದ ನಡುಗುವಿಕೆಯು ಪ್ರಾರಂಭಿಸಬಹುದು. ವಿಶೇಷವಾಗಿ ಮಕ್ಕಳ ಸಂಗತಿಯಲ್ಲಿ ಹೀಗಾಗಬಹುದು. ಇಂಥಾ ಸಂಗತಿಗಳಲ್ಲಿ ಇದನ್ನು ಒಂದೇ ಸಲ ಇಡೀ ಮೈಗೆ ತಾಗಿಸದೆ ಸರ್ತಿಯಿಂದ ದೇಹದ ಒಂದೊಂದೇ ಭಾಗಕ್ಕೆ ಲೇಪಿಸುತ್ತಾ ಬರಬೇಕು. ಕ್ರಯ ಆಣೆ 0—8—0.

ಇದನ್ನು ಕೆಳಗಿನ ವಿಳಾಸಕ್ಕೆ ಬರೆದು ತರಿಸಬಹುದು.

ದಿ ಒರಿಯಂಟಲ್ ಸ್ಪೆಸಿಫಿಕ್ ಡಿಪೋ,
107, ಪುರುಸುವಾಕಂ, ವೆಪೆರಿ, ಮದರಾಸು.

ವಿದೇಶ ವರ್ತಮಾನ.

ವಿಚಿತ್ರ ಮಗು:—ಫ್ರಾನ್ಸಿನಲ್ಲಿ ಒಂದು ಮಗುವು ಎಲ್ಲಾ ಹಲ್ಲುಗಳ ಸಹಿತ ಹುಟ್ಟಿದೆ.

ಬೊಲಶೇವಿಕರು:—ಬೋಲ್ಷವಿಸ್ಟುಗಳ ಆಜ್ಞೆಯಿಂದ ಕೆಪಿಲೋನ್ ಎಂಬಲ್ಲಿ ೧೯,೦೦೦ ಮುಸ್ಲಿಮ್ ಕೂಲಿಯವರು ಮುಷ್ಕರ ಹಿಡಿದಿರುವರು.

ಅತ್ಯಂತ ಗಾತ್ರವಾದ ಹೂವು:—ಪ್ರಪಂಚದಲ್ಲೆಲ್ಲಾ ಅತ್ಯಂತ ಗಾತ್ರವಾದ ಹೂವು ಸುಮಾತ್ರಾ ದ್ವೀಪದಲ್ಲಿ ಬೆಳೆಯುವುದು. ಒಂದು ಗಜದಷ್ಟು ಅಗಲವೂ ತೂಕದಲ್ಲಿ ಅರ್ಧ ಮಣಕ್ಕಿಂತ ಹೆಚ್ಚಾಗಿಯೂ ಇರುವುದು.

ವಿಚಿತ್ರ ಮರ:—ರಾಯಲ್ ಬೆರೂರ್ ಎಂಬ ಊರಿನಲ್ಲಿ ಒಂದು ಪನೆಮರವು ಮಧ್ಯಾಹ್ನ ಹೊತ್ತಿಗೆ ಕ್ರಮ ಕ್ರಮವಾಗಿ ಭೂಮಿಯ ಮೇಲೆ ಮಲಗುತ್ತಲೂ ಸಾಯಂಕಾಲವಾಗುತ್ತ ಇದ್ದ ಸ್ಥಿತಿಗೆ ಬರುತ್ತಲಿದೆ ಎಂದೂ ಇದನ್ನು ನೋಡಲು ಅನೇಕ ಜನರು ಪ್ರತಿ ದಿನವೂ ಯಾತ್ರಾರ್ಥಿಗಳಾಗಿ ಬಂದು ಹೋಗುತ್ತಿದ್ದಾರೆಂದೂ ತಿಳಿದುಬರುತ್ತದೆ. [ಸಾಧ್ವೀ]

ಮೋಟಾರುಕಾರುಗಳು:—ಇಂಗ್ಲೆಂಡಿನಲ್ಲಿ ಕಳೆದ ಮಾರ್ಚಿ ೧ನೇ ತಾರೀಕಿನಲ್ಲಿ ೭,೯೯,೦೦೦ ಮೋಟಾರ್ ವಾಹನಗಳು ಲೈಸನ್ಸು ಪಡೆದವೆಂದೂ ೧೩ ಕೋಟಿ ೨೩ ಲಕ್ಷ ರೂಪಾಯಿ ಸರಕಾರಕ್ಕೆ ಲೈಸನ್ಸು ಫೀಸಾಗಿ ವಸೂಲಾಯಿತೆಂದೂ ಪ್ರಕಟವಾಗಿದೆ.

ಮಳೆಯ ಅಭಾವ:—ಅಮೇರಿಕಕ್ಕೆ ಸೇರಿದ ನ್ಯೂಜರ್ಸಿ ಡಿಸ್ಟ್ರಿಕ್ಟಿನಲ್ಲಿ ಮಳೆಗಳಿಲ್ಲದೆ ಕಾಡುಮೇಡುಗಳೆಲ್ಲಾ ತರಗಾಗಿದ್ದು ರೈಲುಗಾಡಿಯ ಇಂಜನು ಕಿಡಿಯು ಹಾರಿ ಹತ್ತಿಕೊಂಡು ಗಾಳಿಯಿಂದ ಹರಡಿ ಸುಮಾರು ೩೦,೦೦೦ ಎಕ್ರೆಯಲ್ಲಿ ಬೆಳೆದಿದ್ದ ಬಹಳ ಬೆಲೆಯುಳ್ಳ ಮರಗಳು ಉರಿದು ಹೋದವು.

ಉಪ್ಪಿನ ತೆರಿಗೆ:—ವೈಸರಾಯರು ತಮ್ಮ 'ಸರ್ಟಿಫಿಕೇಶನ್' ಅಧಿಕಾರದಿಂದ ಉಪ್ಪಿನ ತೆರಿಗೆಯನ್ನು ಇಮ್ಮಡಿಮಾಡಿದುದರ ಚರ್ಚೆಯು ಪಾರ್ಲಿಮೆಂಟಿನಲ್ಲಿ ಈ ವಾರದಲ್ಲಿ ಆಗಲಿಕ್ಕಿದೆ.

ರುಷ್ಯದ ಸೋವಿಯಟ್ ಸರಕಾರ:—ಈ ಸರಕಾರವು ಬ್ರಿಟಿಷರಿಗೆ ಅಪಮಾನವನ್ನು ಮಾಡಬೇಕೆಂಬುದ್ದೇಶದಿಂದ ಕರ್ಝನರ ದೊಡ್ಡ ಪ್ರತಿಮೆಯನ್ನು ಮಾಡಿ ಅದಕ್ಕೆ ರೇಶ್ಮೆಯ ಟೊಪ್ಪಿಗೆಯನ್ನಿಟ್ಟು ಸಾಯಂಕಾಲದಲ್ಲಿ ಉಪಯೋಗಿಸುವ ಉಡುಪನ್ನು ಧರಿಸಿ ಪೂರ್ವದೇಶದ ಜನರ ಕೊರಳಿಗೆ ದಾರವನ್ನು ಕಟ್ಟಿ ಅದನ್ನು ಕರ್ಝನರು ಕೈಯಲ್ಲಿ ಹಿಡಿದುಕೊಂಡು ಒಂದು ಚಾಟಿಯಿಂದ ಅವರುಗಳನ್ನು ಹೊಡಿಯುವಂತೆ ಮಾಡಿ ದೊಡ್ಡ ಮೋಟಾರ ಲಾರಿಯಲ್ಲಿಟ್ಟುಕೊಂಡು ಮೊಸ್ಕೊ ಪಟ್ಟಣದಲ್ಲೆಲ್ಲಾ ಮೆರೆಯಿಸಿ ದೊಡ್ಡ ಚೌಕಕ್ಕೆ ತಂದು ನಿಲ್ಲಿಸಿ, ಲಕ್ಷಾಂತರ ಜನಗಳು ಅದರ ಸುತ್ತಲೂ ಮುತ್ತಿಕೊಂಡು ಕರ್ಝನನನ್ನು ನಾಶಮಾಡಿ ಎಂದು ಕೂಗಿಕೊಂಡರು. ಮತ್ತು ಅಪಮಾನಕರವಾದ ಬರವಣಿಗೆಯಿಂದ ಕೂಡಿದ ಹಸ್ತ ಪತ್ರಿಕೆಗಳು ಲಕ್ಷೋಪಲಕ್ಷವಾಗಿ ಹಂಚಲ್ಪಟ್ಟವು. [ಮೈಸೂರು ಸ್ಟಾರ್.]

೨೪೦ ವರುಷದ ಮುದುಕ:—ಟಿಬೆಟ್ಟಿಗೆ ಶೋಧನೆಗಾಗಿ ಹೋಗಿದ್ದ ಮೇಜರ್‌ಕ್ರಾಸ್ ಎಂಬವರು "೨೪೦ ವಯಸ್ಸಿನ ಒಬ್ಬ ಮಹಾ ವೃದ್ಧ ಪುರುಷನು ನನಗೆ ತೋರಿಸಲ್ಪಟ್ಟನು. ಆತನು ಮಹಾ ಬಲಶಾಲಿಯಾಗಿದ್ದನಲ್ಲದೆ ಡಾಕ್ಟರ ಎನಿಬೆಸೆಂಟಮ್ಮನವರ ಪರಮ ಗುರುವಾದ ಮ್ಯಾಡಾಂಬ್ಲಾವೆಟ್‌ಸ್ಕಿಯವರಿಗೆ ತತ್ವ ಬೋಧಕನಾಗಿದ್ದನೆಂದು ತಿಳಿಯಬಂದಿತು" ಎಂದು ಗೋವಕ್ಕೆ ಸೇರಿದ ಪಂಜಿಂ ಎಂಬಲ್ಲಿ ನಡೆದ ಒಂದು ಬಹಿರಂಗ ಸಭೆಯಲ್ಲಿ ತಿಳಿಸಿದರು. [ಮೈಸೂರುಸ್ಟಾರ್.]

ಸ್ತ್ರೀ ಪೋಲೀಸರು:—ಲಂಡನಿನಲ್ಲಿ ೨೦ ಮಂದಿ ಹೆಂಗಸರನ್ನು ಪೋಲೀಸಖಾತೆಯಲ್ಲಿ ಸೇರಿಸಿರುವರು. ಇವರಿಗೆ ಮದುವೆಯಾಗಲಿಲ್ಲ.

ಒಳದೇಶ ವರ್ತಮಾನ.

ಮಹಾತ್ಮರ ಬಂಧವಿಮೋಚನೆಯ ಠರಾವು:—ಮಹಾತ್ಮರನ್ನೂ ಅಲ್ಲೀ ಬಂಧುಗಳನ್ನೂ ವಿಮೋಚಿಸಬೇಕೆಂದು ವರಿಷ್ಠಕಾಯದೆ ಕೌನ್ಸಿಲಿನ ಮಹಮ್ಮದೀಯ ಸಭಾಸದರೊಬ್ಬರು ಕೌನ್ಸಿಲಿನ ಜುಲೈಯ ಅಧಿವೇಶನದಲ್ಲಿ ಠರಾವು ತರುವವರಿದ್ದಾರೆ.

ಚಿಕ್ಕಮಕ್ಕಳ ಸತ್ಯಾಗ್ರಹ:—ಜಬಲಪುರದಲ್ಲಿ ೧೦ ವರುಷ ಪ್ರಾಯದೊಳಗಿನ ಹುಡುಗರು ಒಂದು ಕೂಟಕೂಡಿ ಸತ್ಯಾಗ್ರಹವನ್ನು ಮಾಡಬೇಕೆಂದಿರುವರು.

ಚಿತ್ರಪಟ ಪ್ರದರ್ಶನ:—ಕಲ್ಕತ್ತದ 'ಫೋಟೋಪ್ಲೇ ಸಿಂಡಿಕೇಟ್ ಒಫ್ ಇಂಡಿಯಾ' ಕಂಪೆನಿಯವರು ಗುಲಾಮನ ಆತ್ಮ (The soul of a slave) ಎಂಬ ನಾಟಕವನ್ನು ಅಭಿನಯಿಸಿ ತಯಾರಿಸಿದ ಚಿತ್ರಪಟವನ್ನು ಯುರೋಪ ಮತ್ತು ಅಮೇರಿಕಕ್ಕೆ ಕಳುಹಿಸಿರುತ್ತಾರೆ. ಹಿಂದೂಸ್ಥಾನದಲ್ಲಿ ತಯಾರಾದ ನಾಟಕದ ಚಿತ್ರಪಟವನ್ನು ಪರದೇಶಕ್ಕೆ ಕಳುಹಿಸಿದುದು ಇದು ಮೊದಲನೆಯದ್ದಾಗಿದೆ.

ಕೊಂಗ್ರೆಸ್ ಹಣದ ಕಳವು:—ಪಟೋಬಾಬಾದ ಕೊಂಗ್ರೆಸ್ ಆಫೀಸಿನಲ್ಲಿ ಅಲ್ಲಿಯ ಕೊಂಗ್ರೆಸ್ ಕಮಿಟಿಯ ಸೆಕ್ರಿಟರಿಗಳು ಇಟ್ಟ ರೂ. ೧,೧೩,೧೧೦ ಕಳವಾಗಿ ಹೋದ್ದರಿಂದ ಆ ಸೆಕ್ರಿಟರಿಗಳು ಈ ಹಣವನ್ನು ಇತರರಿಂದ ಸಾಲವಾಗಿ ಪಡೆದು ಕೊಂಗ್ರೆಸ ಕಮಿಟಿಗೆ ಒಪ್ಪಿಸಿದರು.

ಹುಡುಗಿಯರ ಇಂಗ್ಲೀಷ ಶಾಲೆ:—ಕಳೆದ ತಾರೀಕು ೨೭ರಲ್ಲಿ ಬೆಳಗಾಂವಿನಲ್ಲಿ ಹುಡುಗಿಯರ ಬಗ್ಗೆ ಒಂದು ಇಂಗ್ಲೀಷ ಶಾಲೆಯು ಸ್ಥಾಪನೆಯಾಗಿದೆ.

ವಾಲೆಂಟಿಯರ್ ಸೈನಿಕರು:—ಮದರಾಸ ಪಟ್ಟಣದ ಕಾಲೇಜುಗಳಲ್ಲಿ ಓದುವ [illegible] ವಿದ್ಯಾರ್ಥಿಗಳನ್ನು ವೊಲೆಂಟಿಯರ್ ಸೈನಿಕರಾಗಿ ಸೇರಿಸಿಕೊಂಡು ತರಬೇತು ಮಾಡುತ್ತಿದ್ದಾರೆ.

ಗೋವಧೆಯನ್ನು ನಿಲ್ಲಿಸುವುದು:—ಬಕ್ರೀದ್ ಹಬ್ಬದ ಕಾಲದಲ್ಲಿ ಗೋವಧೆಯನ್ನು ನಿಲ್ಲಿಸಲು ಯಾವ ಏರ್ಪಾಡನ್ನು ಮಾಡಬಹುದೆಂದು ಆಲೋಚಿಸಲು, ಡಾಕ್ಟರ್ ಅನ್ಸಾರಿ ಮತ್ತು ಶ್ರೀಮತಿ ಸರೋಜಿನಿ ನಾಯ್ಡುರವರು ಅಲಹಾಬಾದಿನಲ್ಲಿ ಇದೇ ತಾರೀಕು ೨೪ಕ್ಕೆ ಒಂದು ಕೊನ್ಫರೆನ್ಸನ್ನು ಸೇರಿಸಲಿಕ್ಕಿದ್ದಾರೆ.

ಲೆಜಿಸ್ಲೇಟಿವ್ ಎಸೆಂಬ್ಲಿ:—ಅಲಹಾಬಾದ ಮತ್ತು ಝಾನ್ಸಿಯ ಜಿಲ್ಲೆಗಳಿಂದ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಪಂಡಿತ ಮದನಮೋಹನಮಾಳವೀಯರು ಅಪೇಕ್ಷಕರಾಗಿ ನಿಲ್ಲಲಿಕ್ಕೆ [illegible] ವರ್ತಮಾನ ಇದೆ.

ನವಯುಗ:—[illegible] 'ನವಯುಗ' ಎಂಬ ಪತ್ರಿಕೆಯ ಸಂಪಾದಕರನ್ನು ರಾಜದ್ರೋಹದ ಆರೋಪದ ಮೇಲೆ ಕೈದುಮಾಡಿರುವರು.

ಎಲಾಯನ್ಸ್ ಬೇಂಕ್ ಒಫ್ ಇಂಡಿಯಾ:—ದಿವಾಳೆಯಾದ ಈ ಬೇಂಕಿನಿಂದ ಹಣ ಬರಬೇಕಾಗಿರುವವರಿಗೆ ಸೇಕಡಾ ೫೦ರಂತೆ ಹಣವನ್ನು ಇಂಪೀರಿಯಲ್ ಬೇಂಕು ಕೊಡುವದೆಂದು ಪ್ರಕಟವಾಗಿದೆ.

ನಾಗಪುರ ಸತ್ಯಾಗ್ರಹ:—ಬರುವ ತಾರೀಕು ೧೮ನೆಯ ದಿನ ನಾಗಪುರದಲ್ಲಿ ಇಡಿ ದಿನ ಸ್ವಯಂಸೇವಕರ ಸತ್ಯಾಗ್ರಹವು ನಡೆಯಲಿಕ್ಕಿರುವುದು. ಅಂದು ಹಿಂದೂಸ್ಥಾನದ ಎಲ್ಲಾ ಕಡೆಗಳಿಂದ ಸ್ವಯಂಸೇವಕರನ್ನು ಆಮಂತ್ರಿಸಿದೆ.

ಮದರಾಸಿನ ಗವರ್ನರರು:—ಈ ತಿಂಗಳ ಅಂತ್ಯದಲ್ಲಿ ಮದರಾಸಿನ ಗವರ್ನರರು ಮೈಸೂರಿಗೆ ಹೋಗಿ ಕೆಲವು ದಿನ ಅಲ್ಲಿಯ ಮಹಾರಾಜರ ಅತಿಥಿಗಳಾಗಿದ್ದು ಅನಂತರ ಅಲ್ಲಿಂದ ಕೋಯಮುತ್ತೂರಿಗೆ ಹೋಗಿ ಅಲ್ಲಿಯ ಫೋರೆಸ್ಟ ಕೋಲೇಜನ್ನು ಸಂದರ್ಶಿಸಿ ಊಟಕಮಂಡಕ್ಕೆ ಹೋಗಲಿಕ್ಕಿದ್ದಾರೆ.

ಮತಾಂತರ ಹೊಂದಿದವರನ್ನು ಹಿಂದೂಮತಕ್ಕೆ ಸೇರಿಸುವುದು:—ಪಂಜಾಬಿನ ಒಬ್ಬ ಸುಪ್ರಸಿದ್ಧ ವಕೀಲರಾದ ಶ್ರೀಯುತ ಮೋಹನಜೈಮಿನಿ ಎಂಬವರು ಅಪ್ಪರ ಬರ್ಮಾದ ಚಿನ್ನಮಯನಿ ಎಂಬಲ್ಲಿಗೆ ಹೋಗಿ ಕೆಲವು ಭಾಷಣಗಳನ್ನು ಕೊಟ್ಟರು. ಇವರ ಭಾಷಣವನ್ನು [illegible] ಗುಲಾಬಖಾನ ಎಂಬ ಪಾಲಿಯಾಧಿಪತಿಯು ಕೇಳಿ ತನ್ನನ್ನು ಪುನಃ ಹಿಂದೂಮತಕ್ಕೆ ಸೇರಿಸಿಕೊಳ್ಳಬೇಕಾಗಿ ವಿನಂತಿಮಾಡಿಕೊಂಡು ಮನವಿಯನ್ನು ಮಾಡಿದರು. ಈ ಗೃಹಸ್ಥನ ಪೂರ್ವಜರು ೩೦೦ ವರುಷಗಳ ಹಿಂದೆ ಮಹಮ್ಮದೀಯ ಮತಕ್ಕೆ ಮತಾಂತರಗೊಳಿಸಲ್ಪಟ್ಟಿದ್ದರು. ಆದಿಯಲ್ಲಿ ಇವರು ಜಮ್ಮು ಸಂಸ್ಥಾನದ ಪ್ರತಾಪಪುರದ ಮೂಲ ನಿವಾಸಿಗಳು. ರಜಪೂತ ಪಂಗಡಕ್ಕೆ ಸೇರಿದ್ದರು. ಇವರು ಮನವಿಮಾಡಿದ ಸ್ವಲ್ಪ ಸಮಯದ ತರುವಾಯ ೩೦ ವರುಷಗಳ ಹಿಂದೆ ಕ್ರೈಸ್ತಮತಕ್ಕೆ ಸೇರಿದ್ದ ಅಲ್ಲಿಯ ಪೋಸ್ಟಮಾಸ್ತರ ಜೋರ್ಜ ನ್ಯಾದುರವರು ಸಹ ತನ್ನನ್ನೂ ಹಿಂದೂಮತಕ್ಕೆ ಸೇರಿಸಿಕೊಳ್ಳಬೇಕಾಗಿ ವಿನಂತಿ ಮಾಡಿಕೊಂಡರು. ಕಳೆದ ಮೇ ತಿಂಗಳ ತಾರೀಕು ೨೦ರಲ್ಲಿ ಇವರನ್ನು ಹಿಂದೂಮತಕ್ಕೆ ಸೇರಿಸಿಕೊಳ್ಳುವ ಸಂಸ್ಕಾರವು ಶ್ರೀಯುತ ಮೋಹನಜೈಮಿನಿ ಎಂಬವರಿಂದ ಮಾಡಲಾಯಿತು. ಸುಮಾರು ೭೦ ಮಂದಿ ಬ್ರಾಹ್ಮಣರೂ, ಮದ್ರಾಸಿಗಳೂ, ಮಾರ್ವಾಡಿಗಳೂ ಪಂಜಾಬಿಗಳೂ ಮೊದಲಾದವರು ಕೂಡಿ ಒಟ್ಟಿಗೆ ಸುಮಾರು ೫೦೦ ಮಂದಿ ಗೃಹಸ್ಥರು ಹಾಜರಿದ್ದರು. ಮೊದಲನೆಯವರಿಗೆ ಈ ಠಾಕರ ಗುಲಾಬಸಿಂಗ, ಎರಡನೆಯವರಿಗೆ ಸುಬ್ರಮಣ್ಯನ್ನಾಡು ಎಂಬ ಹೆಸರು ಕೊಟ್ಟಿದೆ. ಠಾಕರ ಗುಲಾಬಸಿಂಗರು ೧೧೦೦ ರೂಪಾಯಿಯನ್ನು ಗುರುಕುಲಕ್ಕೂ, ರೂ. ೧೩೫ನ್ನು ಶುದ್ಧಿಚಳವಳಿಕ್ಕೂ ದಾನವಾಗಿ ಕೊಟ್ಟಿರುವರು. ಮತ್ತು ಬ್ರಾಹ್ಮಣರಿಗೆ ರೂ. ೧ರಂತೆ ೭೦ ರೂಪಾಯಿ ದಕ್ಷಿಣೆ ಕೊಟ್ಟಿರುವರು.

ಕಲ್ಕತ್ತಾ:—ಕಲ್ಕತ್ತೆಯ ಕತ್ತಲೆಯ ಕೋಣೆಯ "ಬ್ಲೇಕ್ ಹೋಲ್ ಒಫ್ ಕಲ್ಕತ್ತ" ಇದರ ಸ್ಮಾರಕವಾಗಿಟ್ಟ ಸ್ತಂಭವನ್ನು ಕಿತ್ತು ತೆಗೆಯಲು ಪ್ರಯತ್ನಿಸುವ ಇಬ್ಬರು ಸ್ವಯಂಸೇವಕರನ್ನು ಕೈದುಮಾಡಿದೆ.

ಮಹಾತ್ಮರ ಆರೋಗ್ಯ:—ಮಹಾತ್ಮರಿಗೆ ಅಶಕ್ತಿಯು ಕಡಿಮೆಯಾಗಿರುವುದೆಂದೂ, ಅವರು ಭಾರದಲ್ಲಿ ಸ್ವಲ್ಪ ಹೆಚ್ಚಿ, ಚೈತನ್ಯ ಉಳ್ಳವರಾಗಿರುವರೆಂದು ಪ್ರಕಟವಾಗಿದೆ. ಪ್ರತಿ ದಿನ ೩-೪ ತಾಸು ಚಕ್ರದಲ್ಲಿ ನೂಲುವರೆಂದು ತಿಳಿದುಬರುತ್ತದೆ.

ದಕ್ಷಿಣ ಕನ್ನಡ.

ಕುಂಬಳೆ:—ಈ ಗ್ರಾಮಸ್ಥರ ಮನವಿ ಮತ್ತು ಸಭೆಯ ನಿರ್ಣಯ ಸಹಾ ಮನ್ನಿಸಿ ಇದೇ ತಾ. ೧೧ರಿಂದ ಕುಂಬಳೆ ಶಹರಿನಲ್ಲಿ ಎಲಿಮೆಂಟರಿ ಶಾಲೆಯನ್ನು ಸ್ಥಾಪಿಸಿದ ಬೋರ್ಡಿನವರಿಗೆ ಗ್ರಾಮಸ್ಥರು ತುಂಬಾ ಕೃತಜ್ಞರಾಗಿರುವರು. ಶಾಲೆಯು ತೆರೆಯಲಾದ ದಿನವೆ ಅನೇಕ ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಈ ಶಾಲೆಯು ಇದೇ ಕೊಯಿಪಾಡಿ ಗ್ರಾಮದ [illegible] ಎಂಬಲ್ಲಿದ್ದು ಈಚೆಗೆ ಕ್ಷೀಣ ತರಗತಿಗೆ ಬಂದಿದ್ದ ಕಾರಣ ಕುಂಬಳೆಗೆ ಒಯ್ಯಲಾಗಿದೆ.

ಕಳೆದ ವರುಷದ ಜೂನ್ ತಿಂಗಳ ಲಾಗಾಯತು ಹಪ್ತೆಗೆರಡು ದಿನಗಳಂತೆ ಈತನಕ ನಡೆಯುವ ಇಲ್ಲಿಯ ಹಂಗಾಮಿ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆಯು ಹೆಚ್ಚಾಗುತ್ತಾ, ಹಪ್ತೆಯ ಇತರ ೫ ದಿನಗಳಲ್ಲಿ ರೋಗಿಗಳು ನಿರಾಶರಾಗಿ ತುಂಬಾ ಕಷ್ಟ ನಷ್ಟವನ್ನು ಅನುಭವಿಸುವುದರಿಂದ ಇದೇ ಬರುವ ಜುಲಾಯಿ ತಾ. ೧ರ ಲಾಗಾಯತು ಇಲ್ಲಿ ಖಾಯಂ ಆಸ್ಪತ್ರೆ ಇಡುವುದಾಗಿ ಕೇಳಿ ಈ ಪ್ರಾಂತದವರು ಬೋರ್ಡಿನವರ ಈ ಮಹದುಪಕಾರವನ್ನು ಸ್ಮರಿಸುತ್ತಾರೆ.

ಇಲ್ಲಿಯ ಬೋರ್ಡ ಬಾಲಿಕಾ ಪಾಠಶಾಲೆಗೆ ಅಗತ್ಯವಿರುವ ಸಹಾಯಕ ಉಪಾಧ್ಯಾಯಿನಿಯನ್ನು ತ್ವರ್ಯ ಕಳುಹಿಸಿಕೊಡಬೇಕಾಗಿದೆ.

ಉತ್ತರ ಕನ್ನಡದೊಳಗಿನ ಸಂಚಾರ.

(ಲೇಖಕ, 'ಪ್ರವಾಸಿ')

ಉತ್ತರ ಕನ್ನಡಾ ಜಿಲ್ಲೆಯು ನಮಗೆ ಅತಿ ಸಮೀಪದಲ್ಲಿದ್ದರೂ ಎಷ್ಟೋ ಜನರಿಗೆ ಅಪರಿಚಿತವೆ ಆಗಿದೆ. ಒಂದು ಕಾಲದಲ್ಲಿ ಇದು ಈ ಜಿಲ್ಲೆಗೆ ಸೇರಿಸಲ್ಪಟ್ಟು 'ಕಾನಡಾ ಜಿಲ್ಲೆ' ಎಂಬ ಹೆಸರಿನಿಂದಲೆ ಆ ಸಂಯುಕ್ತ ದೇಶವು ಕರೆಯಲ್ಪಡುತ್ತಿತ್ತು. ಆದರೆ ಇತ್ತೀಚೆಗೆ ಕುಂದಾಪುರದ ಉತ್ತರ ಭಾಗವನ್ನು ಬೇರೆ ವಿಂಗಡಿಸಿ ಮುಂಬಯಿ ಸಂಸ್ಥಾನಕ್ಕೆ ಸೇರಿಸಿಯದೆ. ಅಷ್ಟರ ವರೆಗೆ 'ಕಾನಡಾ' ಜಿಲ್ಲೆಯೊಳಗಿನ ಮುಖ್ಯ ಕೋರ್ಟು ಮಂಗಳೂರಲ್ಲಿ ಇತ್ತೆಂದು ಕೇಳಬಲ್ಲೆವು. ಕೋರ್ಟಿನ ವ್ಯವಹಾರಕ್ಕೋಸ್ಕರ ಕಾರವಾರ, ಕುಮಟಾ ಮುಂತಾದ ಪಟ್ಟಣಗಳಿಂದ ಇಲ್ಲಿಗೆ ಜನರು ಬರುತ್ತಿದ್ದರು. ಯಾವಾಗ ಇನ್ನೊಂದು ಕೋರ್ಟನ್ನು ಕಾರವಾರದಲ್ಲಿ ಸ್ಥಾಪಿಸಿ, ಆ ಪ್ರಾಂತವನ್ನು ಈ ಪ್ರಾಂತದಿಂದ ಕಳಚಿಬಿಟ್ಟರೊ, ಅಂದಿನಿಂದ ಈ ಎರಡು ಜಿಲ್ಲೆಗಳಲ್ಲಿ ನಡೆಯುತ್ತಿರುವ ವ್ಯವಹಾರವು ಕಡಿಮೆಯಾಯಿತು. ಇಲ್ಲವಾಯಿತೆಂದು ಹೇಳಲೂ ಅಡ್ಡಿ ಇಲ್ಲ. ಇದರಿಂದ ಅಕ್ಕತಂಗಿಯರಂತಿರುವ ಈ ಜಿಲ್ಲೆಗಳಲ್ಲಿ ಅನ್ಯೋನ್ಯ ಪ್ರೀತಿ ಇಲ್ಲವಾಗಿದೆ. ಆದರೆ ರಾಷ್ಟ್ರೀಯ ಸಭೆಯು ಹೊಸ ಕಾರ್ಯಕ್ರಮವನ್ನು ಕೈಕೊಂಡಂದಿನಿಂದ ಈ ಎರಡು ಜಿಲ್ಲೆಗಳು ಮಾತ್ರವಲ್ಲ, ಕರ್ನಾಟಕ ಪ್ರಾಂತವೆಲ್ಲ ಒಟ್ಟಿಗೆ ಸೇರಿಸಿಯದೆ. ಈಗಲಾದರೂ ಕರ್ನಾಟಕರು ತಮ್ಮ ಪ್ರಾಂತದೊಳಗಿನ ಇತರ ಜಿಲ್ಲೆಗಳೊಡನೆ ವ್ಯವಹಾರವನ್ನು ಬೆಳಸಿ ತಮ್ಮಲ್ಲಿರುವ ಕುಂದನ್ನು ಹೋಗಲಾಡಿಸಿಯಾರೆಂದು [illegible]

ಉತ್ತರ ಕನ್ನಡಾ ಜಿಲ್ಲೆಯು ಈ ಜಿಲ್ಲೆಗಿಂತ ವಿಸ್ತಾರವಾಗಿಯದೆ. ಅಲ್ಲಿಯ ಮುಖ್ಯಪಟ್ಟಣವಾದ ಕಾರವಾರದಲ್ಲಿ ಮುಖ್ಯ ಆಫೀಸುಗಳಿದ್ದು ಅದು ಪ್ರಮುಖ ಸ್ಥಳವಾಗಿದೆ. ಈ ಜಿಲ್ಲೆಯ ಕರಾವಳಿಯಲ್ಲಿರುವ ಮುಖ್ಯ ಪಟ್ಟಣಗಳು ಹೇಗೆ ಹಡಗಿನ ಬಂದರವಾಗಿರುವುದರಿಂದ ಇತರ ಊರುಗಳೊಡನೆ ಹೆಚ್ಚು ವ್ಯಾಪಾರವು ನಡೆಯುತ್ತಿದೆ. ಆದರೆ ದುರ್ದೈವದ ಸಂಗತಿಯೇನೆಂದರೆ, ಅಲ್ಲಿ ರೈಲ್ವೆ ಅಥವಾ ಮೋಟಾರ ಕಮ್ಯುನಿಕೇಶನುಗಳು ಇಲ್ಲ. ಅದ್ದರಿಂದ ಆ ಜಿಲ್ಲೆಯೊಳಗೆ ಪ್ರವಾಸ ಮಾಡುವುದು ಪ್ರಯಾಸವೆ. ಹಳ್ಳಗಳು ಬಹಳ ಹರಿಯುವುದರಿಂದ ರೈಲ್ವೆ ಮಾರ್ಗವಿಡಲು ಅಸಾಧ್ಯ. ಅಲ್ಲಿಯ ಜನರು ಉದಾಸೀನರು. ದೇಶವು ಫಲವತ್ತಾಗಿರುವುದರಿಂದಲೊ ಏನೊ ಅವರಲ್ಲಿ ಈ ದೋಷವಿರಬಹುದು. ಯಾವ ಚಳವಳದಲ್ಲಾಗಲಿ, ಪ್ರಮುಖ ಕಾರ್ಯಗಳಲ್ಲಾಗಲಿ, ಮನಸ್ಸು ಹಾಕಲೊಲ್ಲರು. ಉತ್ತರ ಕನ್ನಡವು ನಮ್ಮ ಜಿಲ್ಲೆಗಿಂತ ದೊಡ್ಡದಾಗಿದ್ದರೂ ಒಂದು ಕೋಲೇಜು ಸಹ ಅಲ್ಲಿ ಇರಬಾರದೆ? ಮ್ಯಾಟ್ರಿಕ್ಯುಲೇಶನ ವಿದ್ಯಾಭ್ಯಾಸವಾದ ಮೇಲೆ ವಿದ್ಯಾರ್ಥಿಗಳು ಇತರ ಜಿಲ್ಲೆಗಳ ಮುಖವನ್ನು ನೋಡುವ ಪ್ರಸಂಗ ಬರುತ್ತದೆ. ಅದ್ದರಿಂದಲೆ ಅಲ್ಲಿ ಹೆಚ್ಚು ವಿದ್ಯಾವಂತರಿಲ್ಲ! ಹೆಚ್ಚೇಕೆ ಮೆಟ್ರಿಕ್ಯುಲೇಶನ್ ಪರೀಕ್ಷೆ ಕೊಡಬೇಕಾದರೆ, ಮುಂಬಯಿ, ಧಾರವಾಡ ಮುಂತಾದ ಪಟ್ಟಣಗಳಿಗೆ ಹೋಗಬೇಕಾಗುತ್ತದೆ! ಇಂಥ ಶೋಚನೀಯ ಅವಸ್ಥೆಯು ಬಂದರೂ ಅಲ್ಲಿಯ ಜನರು ತಮ್ಮಲ್ಲಿ ಕೋಲೇಜನ್ನು ಸ್ಥಾಪಿಸಲು ಪ್ರಯತ್ನಪಡರು.

ಹವೆಯ ಮಟ್ಟಿಗೆ ಉತ್ತರ ಕನ್ನಡಾ ಜಿಲ್ಲೆಯು ತಕ್ಕಮಟ್ಟಿಗೆ ಹಿತಕರವೆಂದೆ ಹೇಳಬಹುದು. ಕಾರವಾರ ಮತ್ತು ಕರಾವಳಿಯಲ್ಲಿರುವ ಬೇಟಿಕೇರಿ, ಅಂಕೋಲಾ ಮುಂತಾದವುಗಳ ಹವೆಯು ಉತ್ತಮವಾಗಿದ್ದು ಬೇರೆ ಊರುಗಳಿಂದ ಸಹ ಬೇಸಿಗೆಕಾಲದಲ್ಲಿ ಎಷ್ಟೊ ಜನರು ಇಲ್ಲಿ ಬಂದು ಉಳಕೊಳ್ಳುತ್ತಾರೆ. ಗಟ್ಟದ ಮೇಲಿರುವ ಪಟ್ಟಣಗಳು—ಹಳಿಯಾಳ, ಸಿರ್ಸಿ, ಯಲ್ಲಾಪುರ, ಮತ್ತು ಸಿದ್ದಾಪುರ,—ಮಲೇರಿಯಾ, ಪ್ಲೇಗ ಮುಂತಾದ ಹಲವು ಬಗೆಯ ರೋಗಗಳಿಂದ ಆಗಾಗ್ಗೆ ಜನರನ್ನು ಪೀಡಿಸುತ್ತವೆ.

ರಾಷ್ಟ್ರೀಯ ಕಾರ್ಯಕ್ರಮಗಳು ಯಾವ ರೀತಿಯಿಂದ ನಡಿಯುತ್ತಿವೆ ಎಂಬ ಪ್ರಶ್ನೆಯನ್ನು ವಾಚಕರು ಕೇಳಬಹುದು. ವಿಷಾದಕರವಾದ ಸಂಗತಿಯೇನೆಂದರೆ, ದಕ್ಷಿಣ ಕನ್ನಡದಲ್ಲಿರುವ ಅಸಹಕಾರಿತೆಯ ಚಳವಳವು ಅಲ್ಲಿಲ್ಲ! ಇದನ್ನು ಕೇಳಿ ನಮ್ಮ ಜಿಲ್ಲೆಯವರು ಒಂದು ವೇಳೆ ಸಂತೋಷಪಟ್ಟಾರು. ಆದರೆ ಇತರ ಜಿಲ್ಲೆಗಳೊಡನೆ ನಮ್ಮ ಜಿಲ್ಲೆಯನ್ನು ತುಲನೆ ಮಾಡಿದರೆ ದಕ್ಷಿಣ ಕನ್ನಡವು ತಿಲಮಾತ್ರವೂ ಸರಿಹೋಲದು. ಎಷ್ಟೊ ಕೊಂಗ್ರೆಸ್ 'ಕೋಣೆ'ಗಳು ಅಲ್ಲಿವೆ. ಆ ಕೋಣೆಗಳ ಹೊರಗೆ ಯಾವ ಯಶಸ್ವಿ ಕಾರ್ಯವೂ ಇನ್ನೂ ಆಗಿಲ್ಲ! ಕೊಂಗ್ರೆಸ ಕೋಣೆಯ ಮೇಜಿನ ಮೇಲೆ 'ಕೇಸರಿ', ಕ್ರಾನಿಕಲ ಪತ್ರಗಳನ್ನು ಬಿಚ್ಚಿ, ಆಲೇಖಗಳ ಮರ್ಮವನ್ನು ತಿಳಿಯುವುದರಲ್ಲೆ ಅಲ್ಲಿಯವರು ಸಮಯ ಕಳೆದಾರುಹೊರತು ತಾವು ಯಾವ ಕಾರ್ಯವನ್ನೂ ಮಾಡರು. ಗಯಾದಲ್ಲಿ ನೆರೆದ ರಾಷ್ಟ್ರೀಯ ಸಭೆಯು ಹೇಳಿದ್ದಂತೆ ಇವರು ಸ್ವಯಂಸೇವಕರ ಸೈನ್ಯವನ್ನು ಕೂಡಿಸಿದ್ದಾರೆಯೆ? ಆದರೆ ಇವರ ಒಂದೊಂದು 'ಸೈನ್ಯ'ವೆಂದರೆ, ೫-೬ ಜನ ಯೋಧರು! ಅವರಿಕ್ಕೊಬ್ಬ ಕೆಪ್ಟನ್! ಇವರಲ್ಲವೆ ನಾಳೆ 'ಸಿವಿಲ್ ಡಿಸ್‌ಒಬ್ಬೀಡಿಯನ್ಸ' ಮಾಡುವವರು? ಇದನ್ನು ಕಡು ಅಸಹಕಾರಿಗಳೆ ಉತ್ತರಿಸಲಿ! ಸದ್ಯದಲ್ಲಿ ಮಂಗಳೂರಿಗೆ ಬರುವಾಗ ಹೊನ್ನಾವರದಲ್ಲಿ ಆರೇಳು ಜನ ಸ್ವಯಂಸೇವಕರು ಖಾದಿಯ ಹೊರೆಯನ್ನು ಹೆಗಲ ಮೇಲೆ ಹಾಕಿಕೊಂಡು ನಿರ್ಜನವಾದ ಪ್ರದೇಶದಲ್ಲಿ ಮಾರಲು ತಿರುಗುತ್ತಿದ್ದರು. ಒಬ್ಬ ಸ್ವಯಂಸೇವಕನನ್ನು ಕರೆದು "ಏನು, ನೀವು ಸ್ವಯಂಸೇವಕರೋ?" ಎಂದು ಮರಾಠಿಯಿಂದ ಕೇಳಿದೆವು. ಅವನು ಕೂಡ ಅದೇ ಭಾಷೆಯಿಂದ ಹೌದೆಂದನು. "ಇಲ್ಲಿ ಎಷ್ಟು ಜನ ಸ್ವಯಂಸೇವಕರಿರುವರು?" ಎಂದು ತಿರುಗಿ ಪ್ರಶ್ನಿಸಲಾಗಿ ಅವನು ಖೇದಮುದ್ರೆಯಿಂದ ಸುಮ್ಮನಾಗಿ ತಮ್ಮವರನ್ನೆ ನೋಡುತ್ತ ನಿಂತನು. ಇದರ ಅರ್ಥವು ನಮಗಾಯಿತು. ಓಹೋ, ನಿಮ್ಮಲ್ಲಿರುವ ಸ್ವಯಂಸೇವಕರು ಇಷ್ಟೆಯೊ? ಶ್ರೀಯುತ ಹಾರ್ಡಿಕರರಂಥ ಮುಖಂಡರು ಎಷ್ಟೊ ದೂರದಿಂದ ಬಂದರೂ ಈ ಊರು ೫-೬ ಯೋಧರನ್ನು ಕೊಟ್ಟಿದೆಯೆ? ಇದಲ್ಲವೆ ಅವರ ಪ್ರಯತ್ನದ ಫಲವು" ಎಂದು ಆಶ್ಚರ್ಯದಿಂದ ನಾವು ಹೇಳಿದೆವು. ಅದಕ್ಕೆ ಆ ಯುವಕನು—ಹಾಗೆಯೆ ಎಂದು ಹೇಳಬಹುದು." ಎಂದನು. ಆ ಮೇಲೆ ನಾವು ನಿಲ್ಲಲಿಲ್ಲ. ಇವರಿಂದಲಾದರೂ ರಾಷ್ಟ್ರೀಯ ಸಭೆಯಲ್ಲಿ ಪಾಸಾಗುವ ಠರಾವುಗಳು ಕಾರ್ಯದಲ್ಲಿ ಎಷ್ಟು ಬರುತ್ತವೆಂದು ನಿರ್ಮಲ ದೃಷ್ಟಿಯಿಂದ ವಾಚಕರು ತರ್ಕಿಸಲಿ!

ಉತ್ತರ ಕನ್ನಡದೊಳಗಿನ ಪುಢಾರಿಗಳಾದರೂ ಪ್ರತಿಯೋಗಿಅಸಹಕಾರಿಗಳೆ! ಅವರು ತಮ್ಮ ಜಿಲ್ಲೆಯ ಪರವಾಗಿ ರಾಷ್ಟ್ರಭಕ್ತರನ್ನು ಬರುವ ಕೌನ್ಸಿಲಿಗೆ ಕಳುಹಿಸಲಿಕ್ಕಿದ್ದಾರೆಂದು ನಾವು ಕೇಳಿದೆವು. ಒಂದು ತಾಲೂಕು ಕೊಂಗ್ರೆಸ ಕಮಿಟಿಯ ಸೆಕ್ರೆಟರಿಯೊಡನೆ ಗಯಾ ಕೊಂಗ್ರೆಸ್ಸಿನ ವಿಷಯವಾಗಿ ಅಭಿಪ್ರಾಯ ಕೇಳಿದಾಗ ಖೇದದಿಂದ ಅವನು "ದೇಶಬಂಧು ದಾಸರನ್ನು ಈ ಸಮಯದಲ್ಲಿ ನಮ್ಮ ಮುಂದಾಳುಗಳನ್ನಾಗಿ ಮಾಡಬೇಕಿತ್ತು. ಆದರೆ ಅದು (Congress) ಮದ್ರಾಸಿಗಳ ಕಂಕುಳದಲ್ಲಿದೆ. ನೋಡೋಣ ಮದ್ರಾಸಿಗಳ ಆಟ" ಹೀಗೆಂದನು. ಈ ಮಾತುಗಳು ಒಂದು ವೇಳೆ ಉದ್ವೇಗದಿಂದ ಹೊರಬಿದ್ದಿರಬಹುದು. ಆದರೂ ಅವನು ಹೇಳಿದ ಮಾತು ಸ್ವಲ್ಪ ಮಟ್ಟಿಗಾದರೂ ಯಥಾರ್ಥವೆಂದೆ ಕಂಡೀತು.

ದ. ಕನ್ನಡಾ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರ ಹುದ್ದೆ.

(ರಾವ್ ಸಾಹೇಬ ಡೊಕ್ಟರ ಯು. ರಾಮರಾಯರು ಬರೆದ ಪತ್ರದ ಭಾಷಾಂತರ.)

ಸರಕಾರದವರಿಂದ ನೇಮಿಸಲ್ಪಟ್ಟ ದಕ್ಷಿಣ ಕನ್ನಡಾ ಜಿಲ್ಲೆಯ ಈಗಿನ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರ ಈ ಹುದ್ದೆಯ ಅವಧಿಯು ಸಮೀಪಿಸಿತು. ಮುಂದಿನ ಪ್ರೆಸಿಡೆಂಟರು ಯಾರಾಗುವರೆಂಬ ಯೋಚನೆಯಲ್ಲಿ [illegible] ವರು. ಪ್ರೆಸಿಡೆಂಟರನ್ನು ಚುನಾಯಿಸುವ ಅಧಿಕಾರವು ದಕ್ಷಿಣ ಕನ್ನಡಾ ಜಿಲ್ಲೆಗೆ ಈ ವರೆಗೆ ಇಲ್ಲ. ಪ್ರೆಸಿಡೆಂಟರನ್ನು ಚುನಾಯಿಸುವಷ್ಟು ಯೋಗ್ಯತೆಯಲ್ಲಿ ಈ ಜಿಲ್ಲೆಯವರು ಮುಂದುವರಿದಿರುವರು. ಹೀಗಿರುತ್ತ ಪ್ರಜಾಧಿಪತ್ಯದ ಸೂತ್ರ (Democratic Principles) ಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂದಿರುವ ಸ್ಥಳೀಕ ಸರಕಾರದ ಮಂತ್ರಿಗಳು ಈ ಜಿಲ್ಲೆಯ ಜನರಿಗೂ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರನ್ನು ಚುನಾಯಿಸುವ ಅಧಿಕಾರವನ್ನು ಕೊಡುವರೆಂದು ನಂಬಿದೆ. ಹೀಗೆ ಅಧಿಕಾರವನ್ನು ಕೊಡದೆ ಹೋದರೆ ಅದಕ್ಕೆ ಬಲವಾದ ಕಾರಣಗಳಿರಬೇಕು. ಸ್ಥಳೀಕ ಸ್ವರಾಜ್ಯ ಸಂಸ್ಥೆಯ ಅಧಿಕಾರಿಯ ಮಂಡಲದಲ್ಲಿ ಸರಕಾರದವರು ಒಂದು ವ್ಯಕ್ತಿಯನ್ನು ನೇಮಿಸುವುದು ಪ್ರಾತಿನಿಧ್ಯದ ತತ್ವಕ್ಕೆ ಸಂಪೂರ್ಣ ಬಾಧಕವಾಗಿದೆ ಎಂಬುದು ನಮಗೆಲ್ಲರಿಗೂ ಅನುಭವಕ್ಕೆ ಬಂದ ಸಂಗತಿ. ಆದಷ್ಟು ಬೇಗ ಸ್ವರಾಜ್ಯದ [illegible] ವನ್ನು ಹೊಂದುವುದಕ್ಕೆ ನಾವು ಪ್ರಯತ್ನಿಸುವ ಈ ಕಾಲದಲ್ಲಿ ಸ್ಥಳೀಕ ಸ್ವರಾಜ್ಯ ಸಂಸ್ಥೆಗಳ ಪೂರ್ಣ ಅಧಿಕಾರವನ್ನು ನಮಗೆ ಒಪ್ಪಿಸುವುದು [illegible] ಸಮಾಧಾನವನ್ನು [illegible]. ಮುಂದಿನ ಸಂಗತಿಗಳನ್ನು ಪ್ರತೀಕ್ಷಿಸೋಣ.

ಅನುಕ್ರಮಣಿಕೆ.

ಅಗ್ರಲೇಖ—
ಜನರ ಕರ್ತವ್ಯ ೬
ಸ್ಫುಟವಿಚಾರಗಳು.— ೬-೭
೧ ಅಹಮ್ಮದಾಬಾದ ಗಿರಣಿ ಕೆಲಸದವರ ಮುಷ್ಕರ ೬
೨. ೩. ವ್ಯಾಕೌಂಟ ಪೀಲಸಾಹೇಬರು ,,
೪. ನಮ್ಮ ಡಿಸ್ಟ್ರಿಕ್ಟ್‌ಬೋರ್ಡಿನ ಪ್ರೆಸಿಡೆಂಟ ಹುದ್ದೆಯ ಅವಧಿ ,,
೫. ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ನಿರ್ಧಾರ ,,
೬. ಸ್ಟೈಪೆಂಡನ್ನು ರದ್ದುಮಾಡುವ ಆಲೋಚನೆ ,,
ಮಂಗಳೂರು— ,,
ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ, ಒಳದೇಶ ವರ್ತಮಾನ ೭
ಉತ್ತರ ಕನ್ನಡದೊಳಗಿನ ಸಂಚಾರ.
ದಕ್ಷಿಣಕನ್ನಡ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರ ಹುದ್ದೆ,
ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಚಾರಗಳು, ೮
ಸ್ವರಾಜ್ಯ ಪಾರ್ಟಿ, ,,
ನಾಗಪುರಕ್ಕೆ ಕರ್ನಾಟಕದ ಸ್ವಯಂಸೇವಕರ ಅವಶ್ಯಕತೆ, ,,
ದಕ್ಷಿಣಕನ್ನಡ— ಕುಂಬಳೆ, ,,
ಪತ್ರ ವ್ಯವಹಾರ ೯

ಸ್ವದೇಶಾಭಿಮಾನಿ.

ಶಕ ೧೮೪೫ ನಿಜ ಜೇಷ್ಠ ಶು॥ ೧ವು ಶುಕ್ರವಾರ

ಜನರ ಕರ್ತವ್ಯ.

ಮುಂಬಯಿಯಲ್ಲಿ ಜರುಗಿದ ಸ್ವರಾಜ್ಯಪಕ್ಷದ ಸಭೆಯ ಮುಖ್ಯ ಮುಖ್ಯ ನಿರ್ಣಯಗಳನ್ನು ಈ ಹೊತ್ತು ಇನ್ನೊಂದು ಪುಟದಲ್ಲಿ ಪ್ರಕಟಿಸಿದ್ದೇವೆ. ಈ ನಿರ್ಣಯಗಳ ಮಹತ್ವವನ್ನು ವಿವರಿಸುವುದಕ್ಕಿಂತ ಮುಂಚೆ ಒಂದೆರಡು ಮಾತುಗಳನ್ನು ಬರೆಯಬೇಕಾಗಿದೆ. ಒಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಕೌನ್ಸಿಲ್ ಬಹಿಷ್ಕಾರ ಸ್ತಬ್ಧತೆಯ ಠರಾವು ಪಾಸಾದಂದಿನಿಂದ ದೇಶದೊಳಗಿನ ಮುಖ್ಯ ಮುಖ್ಯ ಮುಖಂಡರು ಮತ್ತು ಪ್ರಮುಖ ಪತ್ರಕಾರರು ತಮ್ಮ ಅನುಕೂಲ ಅಭಿಪ್ರಾಯವನ್ನು ಪ್ರಕಟಿಸಿ ಅದಕ್ಕೆ ತಮ್ಮ ಬಲವನ್ನು ಕೊಡುತ್ತಿದ್ದಾರಾದರೂ, ಹಿಂದಿನ ಸಂಚಿಕೆಯಲ್ಲಿ ಸೂಚಿಸಿದಂತೆ, ಒಂದೆರಡು ಪ್ರಾಂತಗಳಲ್ಲಿ ನಮ್ಮ ಕರ್ನಾಟಕದಲ್ಲಿ ಕೂಡ—ಮುಂಬಯಿ-ನಿರ್ಣಯದ ನಿಂದೆ ಮತ್ತು ನಿಷೇಧ ಇವು ನಡೆದಿವೆ. ಒಂದು ನಿರ್ಣಯವು ಒಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯಲ್ಲಿ ಬಹುಮತದಿಂದ ಪಾಸಾದ ಬಳಿಕ, ಅದನ್ನು ಮನ್ನಿಸುವುದು ವಸ್ತುತಃ ಪ್ರಾಂತಿಕ ಕಮಿಟಿಗಳ ಕೆಲಸವಾಗಿದೆ. ಇಂಥ ಸಂದರ್ಭದಲ್ಲಿ ಆ ನಿರ್ಣಯವು ಮಾನ್ಯವಿಲ್ಲದ ಕಾರ್ಯಕಾರಿ ಸಂಸ್ಥೆಯವರು ತಮ್ಮ ಜಾಗೆಗಳನ್ನು ಬಿಟ್ಟುಕೊಟ್ಟು, ಮುಂಚಿನ ವರ್ಕಿಂಗ್ ಕಮ್ಮಿಟಿಯಂತೆ ಬದಿಗೆಬರುವುದು ಸರಳವಾದ ಮಾರ್ಗವು. ಗಯಾ ಕೊಂಗ್ರೆಸಿನ ನಂತರ ರಾಷ್ಟ್ರೀಯಪಕ್ಷದವರಾದರೂ ಇದೆ ಸರಳಮಾರ್ಗವನ್ನು ಅವಲಂಬಿಸಿದ್ದಾರೆ. ಪರಂತು ಮುಂಬಯಿ-ನಿರ್ಣಯವನ್ನು ಮನ್ನಿಸುವುದಾಗಲಿ, ಅದು ಅಮಾನ್ಯವಿದ್ದರೆ ತಮ್ಮ ಕಾರ್ಯಕಾರಿ ಜಾಗೆಗಳನ್ನು ಬಿಟ್ಟುಕೊಡುವುದಾಗಲಿ ಯಾವ ಸಮಂಜಸವಾದ ಹಾದಿ ಇದೆಯೊ ಅದನ್ನು ಅವಲಂಬಿಸದೆ "ಕೊಂಗ್ರೆಸಿನ ನಿರ್ಣಯವನ್ನು ಬದಲಾಯಿಸಲು ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಗೆ ಯಾವ ಅಧಿಕಾರವು?" ಎಂದು ಮೊದಲಾದ ಆಕ್ಷೇಪಗಳನ್ನೆತ್ತಿ ನಿಂದೆ ಮತ್ತು ನಿಷೇಧಗಳನ್ನು ಮಾಡುವುದು ಯೋಗ್ಯವಾದ ದಾರಿಯೆಂದೆ ಅದರ ಅಂಕಿತ ಸಂಸ್ಥೆಗಳಾದ ಪ್ರಾಂತಿಕ ಕಮಿಟಿಗಳಿಗೆ ಈಗಿನ ಕಾಲದಲ್ಲಿ ತೋರುತ್ತಿದೆ! ಇದು ಅವರ ಅರ್ಥದಂತೆ ಒಂದು ಆತ್ಮಿಕ ತಪೋಬಲವೆ ಸರಿ!! ಇರಲಿ. ಮುಂಬಯಿ-ನಿರ್ಣಯವು ಹಲವರಿಗೆ ರುಚಿಸದೆ ಇರಬಹುದು; ತಥಾಪಿ ಅದು ಕೊಂಗ್ರೆಸ್ ಸಂಸ್ಥೆಯ ಬಹುಮತದ ನಿರ್ಣಯವಲ್ಲ ಎಂದು ಮಾತ್ರ ಯಾರಿಂದಲೂ ಪ್ರತಿಪಾದಿಸಲು ಸಾಧ್ಯವಿಲ್ಲ. ಅದನ್ನು ಮನ್ನಿಸಕೂಡದೆಂದಿದ್ದರೆ, ಅಂಥವರು ಅದನ್ನು ಬಿಟ್ಟುಬಿಡಬಹುದು. ಒಂದುವೇಳೆ ನಾಳೆ ಕೊಂಗ್ರೆಸ್ ಸಭೆಯು ಬಹುಮತದಿಂದ ಇಂಥ ನಿರ್ಣಯಕ್ಕೆ ಅವಕಾಶವನ್ನು ಕೊಟ್ಟೀತೆನ್ನೋಣ. ಅದನ್ನಾದರೂ ವಿರುದ್ಧ ಪಕ್ಷದವರು ಮನ್ನಿಸಲೆ ಬೇಕೆಂದುಂಟೆ? ಸಾರಾಂಶ, ಸಮಂಜಸತನವನ್ನು ಬಹಿಷ್ಕರಿಸಿದ ಬಳಿಕ ಅವರನ್ನು ಆಟೋಪದಲ್ಲಿ ತರುವುದು ಸಾಧ್ಯವಿಲ್ಲ.

ಈಗ ಇನ್ನೊಂದು ಪಕ್ಷದಲ್ಲಿ ನಾವು ಹೇಳುವುದೇನೆಂದರೆ, ಹೌದು, ಒಲ್ ಇಂಡಿಯಾ ಕೊಂಗ್ರೆಸ್‌ಕಮಿಟಿಯು ಮಾಡಿದ್ದು ತಪ್ಪು. ಅಂಥ ನಿರ್ಣಯಕ್ಕೆ ಕೊಂಗ್ರೆಸ್‌ವಾಲರ ಬಹುಮತವಿಲ್ಲ. ಪ್ರಾಂತಿಕ ಕಮಿಟಿಗಳೂ ಅದನ್ನು ಮನ್ನಿಸುವುದಿಲ್ಲ. ಬರೆ ಇಷ್ಟೆ ಅಲ್ಲ, ಡಿಸ್ಟ್ರಿಕ್ಟ ಕಮಿಟಿಗಳು ಕೂಡ ಕೌನ್ಸಿಲ್-ಬಹಿಷ್ಕಾರ-ಸ್ತಬ್ಧತೆಯ ಠರಾವನ್ನು ಗಾಳಿಪಟದಂತೆ ಹಾರಿಸಿಬಿಸಾಡುತ್ತಾರೆ. ಎಂದು ಮುಂತಾಗಿ ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಠರಾವಿನ ಗೌರವವನ್ನು ಅಪಹರಿಸಲು ಯಾವ ರೀತಿಯು ಬೇಕೊ ಅದನ್ನೆಲ್ಲ ಇಟ್ಟುಕೊಳ್ಳೋಣ ಮತ್ತು ಬೇಕಾದರೆ, ಬೇಡಬಲಾಮಣೆಯವರ ಸಂತೋಷಕ್ಕೋಸ್ಕರ ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಬಹುಮತವು ಸಹ ಕೌನ್ಸಿಲ್ ಪ್ರವೇಶದ ಚಳವಳಕ್ಕೆ ಸರ್ವಥಾ ಇಲ್ಲವೆ ಇಲ್ಲ, ಈ "ಕುಯುಕ್ತಿ"ಗಳೆಲ್ಲ "ದಂಗೆಖೋರ"ರಾದ ದಾಸಪಕ್ಷದವರದೆ. ಈ ಠರಾವಿಗೆ ರಾಷ್ಟ್ರೀಯಸಭೆಯ ಪುಷ್ಟಿ ಇಲ್ಲ, ಬೆಂಬಲ ಇಲ್ಲ, ಕೊನೆಗೆ ಸಹಾನುಭೂತಿಯೂ ಸಹ ಇಲ್ಲ. ಇತ್ಯಾದಿ ಯಾವ ಯಾವ ದೂಷಣೆಗಳಿವೆಯೊ ಅವುಗಳೆಲ್ಲ ಸತ್ಯ, ನಿಜ, ಮತ್ತು ಯಥಾರ್ಥವಾದವುಗಳೆಂದು ಗ್ರಹಿಸೋಣ. ಪರಂತು ಇದರಿಂದ ಕೌನ್ಸಿಲ್ ಪ್ರವೇಶದ ಚಳವಳಕ್ಕೆ ಹಾನಿ ಯಾವುದು? ಎರಡುವರೆ ವರುಷದ ಹಿಂದೆ ಕೌನ್ಸಿಲುಗಳನ್ನು ನಿಲ್ಲಿಸುವ ಉದ್ದೇಶದಿಂದ ರಾಷ್ಟ್ರೀಯ ಸಭೆಯು, ಬಹುಮತದಿಂದಲೆ ಅಲ್ಲ, ಏಕಮತದಿಂದ ಇದೆ ಕೌನ್ಸಿಲ್ ಬಹಿಷ್ಕಾರದ ಠರಾವನ್ನು ಪಾಸುಮಾಡಿರಲಿಲ್ಲವೆ? ಕೌನ್ಸಿಲುಗಳನ್ನು ನಿಲ್ಲಿಸುವ ಉದ್ದೇಶದಿಂದ ಮತದಾರರ ಮನೆಗೆ ಹೋಗಿ "ಮತಕೊಡಬಾರದೆಂದು" ಉಪದೇಶಿಸಲು ರಾಷ್ಟ್ರೀಯ ಸಭೆಯು ಠರಾವನ್ನು ಪಾಸುಮಾಡಿರಲಿಲ್ಲವೆ? ಮತ್ತು ಆ ಠರಾವಿನಂತೆಯೆ ರಾಷ್ಟ್ರೀಯ ಸಭೆಯ ಅನುಯಾಯಿಗಳು ಕೌನ್ಸಿಲುಗಳನ್ನು ನಿಲ್ಲಿಸಲು, ಮತದಾರರನ್ನು ಕಂಡು "ನೀವು ಮತವನ್ನು ಕೊಡಬೇಡಿರಿ" ಎಂದು ಹೇಳಿರಲಿಲ್ಲವೆ? ಕೌನ್ಸಿಲ್ ಇಲೆಕ್ಶನು ಆದ ಬಳಿಕ ಪುನಃ ಕೌನ್ಸಿಲುಗಳನ್ನು ನಿಲ್ಲಿಸುವ ಉದ್ದೇಶದಿಂದ ಕೌನ್ಸಿಲ್ ಸಭಾಸದರಿಗೆ ರಾಜಿಯನ್ನು ಕೊಡಲು ರಾಷ್ಟ್ರೀಯ ಸಭೆಯು ಇನ್ನೊಮ್ಮೆ ಠರಾವನ್ನು ಪಾಸುಮಾಡಿರಲಿಲ್ಲವೆ? ಆ ಠರಾವಿನ ಮೇರೆಗೆ ಕೌನ್ಸಿಲುಗಳನ್ನು ನಿಲ್ಲಿಸಲು ಕೌನ್ಸಿಲ್ ಸಭಾಸದರಿಗೆ ಸಭಾಸದತ್ವವನ್ನು ಬಿಟ್ಟು ಬಿಡಲು ಹೇಳೋಣಾಗಿರಲಿಲ್ಲವೆ? ಈ ಎಲ್ಲ ಠರಾವುಗಳು ಮತ್ತು ಈ ಎಲ್ಲ ಪ್ರಯತ್ನಗಳು, ಕೌನ್ಸಿಲುಗಳನ್ನು ನಿಲ್ಲಿಸುವ ಉದ್ದೇಶದಿಂದ ಬರೆ ಬಹುಮತದಿಂದಲೆ ಅಲ್ಲ, ಏಕಮತದಿಂದ ನಡೆದಿರಲಿಲ್ಲವೆ? ಆದರೆ ಕೌನ್ಸಿಲುಗಳು ನಿಂತವೆ? ಮತದಾರರು ಮತಗಳನ್ನು ಕೊಡಲಿಲ್ಲವೆ? ಸಭಾಸದರು ಚುನಾಯಿಸಿ ಬರಲಿಲ್ಲವೆ? ಅವರು ತಮ್ಮ ಜಾಗೆಗಳನ್ನು ಬಿಟ್ಟು ಕೊಟ್ಟರೆ? ಪುನಃ ಮಹತ್ವದ ಪ್ರಶ್ನೆ ಏನೆಂದರೆ, ಆ ಕೌನ್ಸಿಲುಗಳು ಮತ್ತು ಆ ಕೌನ್ಸಿಲುಗಳ ಆ ಪ್ರತಿನಿಧಿಗಳು ರಾಷ್ಟ್ರೀಯ ಸಭೆಯ ಸಮ್ಮತಿಗೆ ಒಳಪಟ್ಟವುಗಳಲ್ಲ, ರಾಷ್ಟ್ರೀಯ ಸಭೆಯ ಆಜ್ಞೆಯನ್ನು ಉಲ್ಲಂಘಿಸಿದ್ದರಿಂದ ಅವರು ದೇಶದ ಪ್ರತಿನಿಧಿಗಳಲ್ಲ, ಎಂಬ ತತ್ವಜ್ಞಾನದ ಪಾಠವನ್ನು ಕಲಿತಿರುವ ರಾಷ್ಟ್ರೀಯ ಸಭೆಯು ಮತ್ತು ಅದರ ಅನುಯಾಯಿಗಳು, ಅವರ ದೃಷ್ಟಿಯಿಂದ ಅನಧಿಕೃತವಾದ ಈ ಕೌನ್ಸಿಲುಗಳ ಕಾನೂನುಗಳನ್ನಾದರೂ ಮುರಿದರೆ? ಇಲ್ಲ. ಒಂದೂ ಇಲ್ಲ! ಸರ್ವ ದಿಕ್ಕಿನಿಂದ ಮಹಾ ಪ್ರಯತ್ನವು ನಡೆದು ಬಹಿಷ್ಕಾರದ ಚಕ್ರವು ತಿರುಗುತ್ತಿರುವಾಗಲೆ ಕೌನ್ಸಿಲುಗಳೂ ನಡೆಯುತ್ತಿದ್ದಾವೆ! ಪ್ರತಿನಿಧಿಗಳೂ ರಾಜಿ ಕೊಡುವುದಿಲ್ಲ! ಸ್ವಶಕ್ತ್ಯನುಸಾರವಾಗಿ ರಾಷ್ಟ್ರದ ಹಿತಾಹಿತವನ್ನು ಮಾಡುತ್ತಿದ್ದಾರೆ. ಕಾನೂನುಗಳೂ ಪಾಸಾಗುತ್ತವೆ, ಮತ್ತು ಎಲ್ಲಕ್ಕೂ ಆಶ್ಚರ್ಯದ ಮಾತೇನೆಂದರೆ, ರಾಷ್ಟ್ರೀಯ ಸಭೆಯು ಆ ಕಾನೂನುಗಳನ್ನು ತಲೆಬಗ್ಗಿಸಿ ಅನುವರ್ತಿಸುತ್ತ ಇದೆ ಎಂದ ಮೇಲೆ ಆ ಠರಾವುಗಳೆಲ್ಲ ಬರೆ ಶಬ್ದಬ್ರಹ್ಮವೆಂದು ತಿಳಿಯಬಹುದು! ಪ್ರಯತ್ನ ಬಾಹುಳ್ಯದ ಸಮಯದಲ್ಲಿಯ ಕೌನ್ಸಿಲ್ ಮುರಿಯೋಣದರ ಚರಿತ್ರೆಯು ಈ ಪರಿಯಾಗಿರುವಾಗ ಈಗ—ಕೌನ್ಸಿಲ್ ಪ್ರವೇಶದ ತತ್ವವು ಜನಗಳಿಗೆ ಮಾನ್ಯವಾಗಿರುವ ಈ ಯುಗದಲ್ಲಿ—ಯಾವ ಬೆಕ್ಕೆ ಅಡ್ಡ ಬರಲಿ, ಅದರಿಂದ ಏನಾಗುವುದಿದೆ!

ಯಾಕೆಂದರೆ, ಜನತೆಗೆ ಮತ್ತು ಮತದಾರರಿಗೆ, ಕೌನ್ಸಿಲುಗಳು, ಟೊಳ್ಳೆಂದು ತೋರಿದಾಗ್ಗೂ ಕಾದಾಡುವ ಸ್ಥಾನವಾಗಿರುವುದರಿಂದ ನಮ್ಮಲ್ಲಿಯ ಸತ್ವವಂತರನ್ನು ಅಲ್ಲಿಗೆ ಕಳುಹಿಸುವುದು ಯೋಗ್ಯವು. ಮಾತ್ರವಲ್ಲ, ಅಗತ್ಯದ ಕರ್ತವ್ಯವೆಂದು ತಿಳಿದುಬಂದಿದೆ. ಆದ್ದರಿಂದ ಕೌನ್ಸಿಲ್ ವಾದಿಗಳು ರಾಷ್ಟ್ರೀಯ ಸಭೆಯ ಮತ್ತು ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಅಧಿಕಾರಚರ್ಚೆಯಲ್ಲಿ ಕಾಲಯಾಪನವನ್ನು ಮಾಡದೆ ಇನ್ನು ಮುಂದೆ ಜನರಿಗೆ—ಮತದಾರರಿಗೆ—೬೦ ಲಕ್ಷ ಮತದಾರರಿಗೆ ಅವರ ಕರ್ತವ್ಯವನ್ನು ತಿಳಿಸಿಕೊಡುವ ಉದ್ಯೋಗವನ್ನು ಕೈಕೊಳ್ಳಬೇಕು. ಸಾಮಾನ್ಯ ಜನರೆ ಸ್ವರಾಜ್ಯವನ್ನು ಸಂಪಾದಿಸಬೇಕಲ್ಲದೆ, ಒಬ್ಬರಿಬ್ಬರು ಮುಖಂಡರಲ್ಲ. ಜನರು ಈಗಿನ ಕಾಲದಲ್ಲಿ ಯಾವ ಮಾರ್ಗವು ಹಿತಾವಹವಾದದ್ದು ಎಂಬುದನ್ನು ಸರಿಯಾಗಿ ತಿಳಕೊಳ್ಳಬೇಕು. ಸುಮ್ಮಗೆ ಭಾವನಾಪ್ರಧಾನವಾದ ವೇದಾಂತಕ್ಕೆ ಮರುಳಾಗಿ ಕರ್ತವ್ಯಚ್ಯುತರಾಗಬಾರದು. ಕೌನ್ಸಿಲುಗಳು ಟೊಳ್ಳೆಂಬುದು ಸತ್ಯವಾದರೂ ಸ್ವರಾಜ್ಯಪಕ್ಷವು ಕೌನ್ಸಿಲಿನಲ್ಲಿ ಪ್ರವೇಶಿಸುವಾಗ ಅಥವಾ ಪ್ರವೇಶಿಸಿದ ಬಳಿಕ ಸ್ವತಃ ಪ್ರಯೋಜನವನ್ನು ಪಡಕೊಳ್ಳಲಿಕ್ಕಿಲ್ಲ. ಸ್ವಾರ್ಥವನ್ನು ಸಾಧಿಸಿಕೊಳ್ಳಲಿಕ್ಕಿಲ್ಲ. ಇಲ್ಲವೆ ಯಾವ ಮಾನಮಾನ್ಯತೆಯನ್ನು ಹೊಂದಲಿಕ್ಕಿಲ್ಲ. ಸ್ವರಾಜ್ಯಪಕ್ಷವೆಂದು ಹೇಳುವುದಕ್ಕಿಂತ ಆ ಪಕ್ಷದ ವ್ಯಕ್ತಿಗಳೆಂದು ತಿಳಿದರೆ ಅದು ಇನ್ನಷ್ಟು ಅನ್ವಿತವಾಗುವುದು. ಸ್ವರಾಜ್ಯ ಪಕ್ಷದವರು ಕೌನ್ಸಿಲುಗಳನ್ನು ಯಾವ ಉದ್ದೇಶದಿಂದ ಪ್ರವೇಶಿಸುವವರಿದ್ದಾರೆಂಬೀ ಸಂಗತಿಯು ದೇಶದ ಮತದಾರರ ಮುಂದೆ ಈ ಮೊದಲೆ ಬಂದಿದೆಯಾದರೂ ಕೌನ್ಸಿಲು ಪ್ರವೇಶೇಚ್ಛುಗಳ ಅಂತರ್ಬಾಹ್ಯ ವರ್ತನವು ಹೇಗಿರಬೇಕು, ಅವರ ಕರ್ತವ್ಯವು ಯಾವುದು, ಅವರು ಪಾಲಿಸತಕ್ಕ ನಿಯಮಗಳು ಯಾವವು ಇತ್ಯಾದಿ ಶಂಕೆಗಳನ್ನು ಹೋಗಲಾಡಿಸುವಂತೆ ಮುಂಬಯಿಯಲ್ಲಿ ನೆರೆದ ಸ್ವರಾಜ್ಯ ಪಾರ್ಟಿಯು ತನ್ನ ನಿರ್ಣಯ-ಮಾಲಿಕೆಯನ್ನು ಮತದಾರರ ಅವಗಾಹನಕ್ಕೆ ಇಟ್ಟಿದೆ. ಉಕ್ತನಿರ್ಣಯ ಪತ್ರಕದಲ್ಲಿ ನಿರ್ದಿಷ್ಟವಾಗಿರುವ ಮೂರು ನಾಲ್ಕು ನಿಯಮಗಳು ಬಹು ಮಹತ್ವದ್ದಾಗಿವೆ. "ಸ್ವರಾಜ್ಯ ಪಾರ್ಟಿಯ ಯಾವನು ಮೆಂಬರನಲ್ಲವೊ, ಮೆಂಬರನಾಗಿದ್ದರೂ ಯಾವನ ಉಮೇದುವಾರತನವು ಸ್ವರಾಜ್ಯ ಪಾರ್ಟಿಯ ವಿವಕ್ಷಿತ ನಿಯಮಗಳಿಗನುಸಾರವಾಗಿ ಮಾನ್ಯವಾಗಿರಲಿಲ್ಲವೊ ಅಂಥವನು ಸ್ವರಾಜ್ಯಪಕ್ಷದ ಉಮೇದುವಾರನೆಂದು ತಿಳಿಯಕೂಡದು. ಒಂದು ಮತದಾರ ಸಂಘದ (Constituency) ಪರವಾಗಿ ಹಿಂದೆ ಸ್ವರಾಜ್ಯ ಪಾರ್ಟಿಯ ಇಬ್ಬರು ಅಥವಾ ಹೆಚ್ಚು ಉಮೇದುವಾರರು ಪ್ರತಿಸ್ಪರ್ಧಿಗಳಾಗಿ ನಿಲ್ಲಕೂಡದು. ಸ್ವರಾಜ್ಯ ಪಕ್ಷದ ಉಮೇದುವಾರನಾಗಿ ತನ್ನ ಉಮೇದುವಾರತನವನ್ನು ವ್ಯಕ್ತಗೊಳಿಸಲು ಸ್ವತಂತ್ರವಾದ ವಿಜ್ಞಾಪನಾ ಪತ್ರಕಗಳನ್ನಾಗಲಿ, ಹಸ್ತ ಪತ್ರಕಗಳನ್ನಾಗಲಿ ಹೊರಡಿಸಕೂಡದು." ಈ ಮೂರು ನಿರ್ಣಯಗಳನ್ನು ಸ್ವರಾಜ್ಯಪಕ್ಷದ ಪರವಾಗಿ ನಿಲ್ಲುವ ಉಮೇದುವಾರರು ಲಕ್ಷ್ಯದಲ್ಲಿಡಬೇಕು. ಮತ್ತು ಅವರು ಈ ರೀತಿಯಿಂದ ಅವುಗಳನ್ನು ಲಕ್ಷ್ಯದಲ್ಲಿಟ್ಟಿದ್ದಾರೊ ಇಲ್ಲವೊ ಎಂಬುದನ್ನು ಜನರು ನೋಡುತ್ತಿರಬೇಕು. ಯಾವನು ಸ್ವರಾಜ್ಯ ಪಕ್ಷದವನಲ್ಲವೊ ಅವನು ಯಾವನೆ ಇರಲಿ, 'ತಾನು ಹಾಗೆ ಮಾಡಿಯೇನು, ಹೀಗೆ ಮಾಡಿಯೇನು' ಎಂದು ಮುಂತಾದ ರೀತಿಯಲ್ಲಿ ಸ್ವಪರಾಕ್ರಮಶತಕವನ್ನು ಬೇಕಷ್ಟು ಹಾಡುತ್ತಿರಲಿ, ಮತದಾರರಾದ ಜನರು ಅವನನ್ನು ದುರ್ಲಕ್ಷ್ಯ ಮಾಡುವುದೆ ವಿಹಿತವು. ಸ್ವರಾಜ್ಯಪಾರ್ಟಿಗೆ ಸೇರುವ ಧೈರ್ಯವು ಯಾವನಲ್ಲಿ ಇಲ್ಲವೊ ಅವನು ಎಷ್ಟು ಪಟಾಕಿಗಳನ್ನು ಹೊಡೆದಾಗ್ಗೂ ನಾಳೆ ಕೌನ್ಸಿಲಿಗೆ ಹೋದ ತರುವಾಯ ಏನು ಮಾಡ್ಯಾನೆಂಬುದು ಈಗಲೆ ವ್ಯಕ್ತವಾಗುತ್ತದೆ. ತನ್ನ ಕಠಿಣ ಕರ್ತವ್ಯದ ಬಗ್ಗೆ ದೃಢ ನಂಬಿಕೆ ಇರುವವನಿಗೆ, ಅಧಿಕಾರಿಗಳ ಕೃಪಾಛತ್ರದ ನೆರಳಿನಲ್ಲಿ ತನ್ನ ಮಾನ್ಯತೆಯ ಬಳ್ಳಿಯನ್ನು ಬೆಳಸಬೇಕೆಂಬ ಅಭಿಪ್ರಾಯವಿಲ್ಲದವನಿಗೆ, ಹಿಂದಿ ಸ್ವರಾಜ್ಯವೆ ತನ್ನ ಮತ್ತು ದೇಶದ ಗುರಿ. ಈ ಗುರಿಯನ್ನು ಕಷ್ಟ ಸಹನದಿಂದಲಾದರೂ ಸಾಧಿಸಿಯೇನೆಂದು ತಿಳಿಯುವವನಿಗೆ ಸ್ವರಾಜ್ಯ ಪಾರ್ಟಿಯಲ್ಲಿ ಸೇರಲು ಯಾವ ಪ್ರತ್ಯವಾಯವು? ಅಂಥವನು ಅದರ ಮೆಂಬರನಾಗಿ ಸಾಂಘಿಕ ಶಕ್ತಿಯಿಂದ ಕೌನ್ಸಿಲ್ ಪ್ರವೇಶವನ್ನು ಯಾಕೆ ಮಾಡಕೂಡದು? ಬರೆ ಒಬ್ಬಂಟಿಗನಾಗಿ, ಹಿಂದೆಮುಂದೆ ತನಗೆ ಯಾರೂ ಕೇಳುವವರಿಲ್ಲದಂಥ ದಾರಿಯನ್ನು ಮಾಡಿಕೊಂಡು ಕೌನ್ಸಿಲಿಗೆ ನಿಲ್ಲುವುದು ಯಾಕೆ? ಇಂಥ ಗೃಹಸ್ಥರು ನಿಂತರೆ, ಅವರು ಸ್ವರಾಜ್ಯ ಪಾರ್ಟಿಗೆ ಸೇರದ ಪಕ್ಷದಲ್ಲಿ, ಮತದಾರರು ಅವರನ್ನು ಬದಿಗೆ ತಳ್ಳಬೇಕು. ಮತದಾರರು ಇತರರನ್ನು ಚುನಾಯಿಸಿ ಕೊಡದೆ ಸ್ವರಾಜ್ಯ ಪಕ್ಷದ ಉಮೇದುವಾರನನ್ನೆ ಚುನಾಯಿಸಿ ಕೊಡಬೇಕೆಂದು ನಾವು ಏನು ಬರೆಯುತ್ತಿದ್ದೇವೊ ಅದರ ಮುಖ್ಯ ಮರ್ಮವೇನೆಂದರೆ, ಸ್ವರಾಜ್ಯ ಪಕ್ಷದ ಉಮೇದುವಾರನು "ತಾನು ಆ ಪಕ್ಷದ ಕಡು ಅನುಯಾಯಿಯು, ಅದರ ಯಾವ ಯಾವ ನಮೂನೆಯ ಆಜ್ಞೆಗಳು ಯಾವ ಯಾವ ಸಮಯದಲ್ಲಿ ಹೊರಡುವುವೊ ಆ ಎಲ್ಲ ಆಜ್ಞೆಗಳನ್ನು ಆಯಾ ಸಮಯದಲ್ಲಿ ತಪ್ಪದೆ ವಿಶ್ವಾಸದಿಂದ ಪಾಲಿಸುವೆನು. ಯಾವ ಮೋಹಕ್ಕೂ ಒಳಗಾಗೆನು" ಎಂದು ಮುಂತಾದ ಪ್ರತಿಜ್ಞಾಪತ್ರಕವನ್ನು ಬರೆದುಕೊಡಬೇಕಾಗುತ್ತದೆ. ಅರ್ಥಾತ್, ಈ ಪಕ್ಷದವನಾಗಿ ಕೌನ್ಸಿಲಿಗೆ ಸೇರ್ಪುವುದು ಸಾಮಾನ್ಯ ಕೆಲಸವಲ್ಲ. ಬರೆ ಕನ್ನಪ್ಪಕ್ಕೆ ತಾನು ಕೈಬೀಸುತ್ತಿದ್ದು ಬಾಯಿಯಿಂದ ಮಾತ್ರ ಭಾವಿಕರ್ತವ್ಯದ ಪ್ರತಿಪಾದಗಳನ್ನು ಮಾಡುವ ಉಮೇದುವಾರರು ಮತದಾರರಿಂದ ತ್ಯಜಿಸಲ್ಪಡಬೇಕೆಂಬುದಕ್ಕೆ ಸಂದೇಹವಿಲ್ಲ.

ಈ ಎಲ್ಲ ಸಂಗತಿಗಳನ್ನು ಆಲೋಚಿಸಿ ಉಮೇದುವಾರರಾಗಿ ನಿಲ್ಲಬಿಚ್ಛಿಸುವವರು ಸ್ವರಾಜ್ಯ ಪಕ್ಷಕ್ಕೆ ಸೇರುವುದು ಉತ್ತಮವು. ಹಾಗೆ ಸೇರಿದವರಿಗೆ ಮತಕೊಡುವುದು ಜನರ ಕರ್ತವ್ಯವಾಗಿದೆ. ಇಂಥವರನ್ನು ಚುನಾಯಿಸಿ ಕೊಡುವುದು ಮತದಾರರ ಪವಿತ್ರ ಕರ್ತವ್ಯವಾಗಿದೆ. ನಮ್ಮ ಕರ್ನಾಟಕದಲ್ಲಿ ಶ್ರೀ ದತ್ತಾತ್ರೇಯ ವೆಂಕಟೇಶ ಬೆಳವಿಯವರು ಸ್ವರಾಜ್ಯ ಪಕ್ಷದ ಕಾರ್ಯಕರ್ತರು. ಅವರು ಬೇಗನೆ ಈ ಕಾರ್ಯವನ್ನು ಎಂದರೆ ಆಯಾ ಜಿಲ್ಲೆಗಳಿಂದ ಇಂತಿಂಥವರು ಉಮೇದುವಾರರಾಗಿ ನಿಲ್ಲಬೇಕೆಂಬೀ ವಿಷಯದ ಕಾರ್ಯವನ್ನು ಪ್ರಾರಂಭಿಸುವವರಿದ್ದಾರೆಂಬ ಸುವಾರ್ತೆಯು ನಮ್ಮ ಕೈಗೆ ಬಂದು ಸೇರಿದೆ. ನಮ್ಮ ಮದ್ರಾಸ ಸಂಸ್ಥಾನದ ಕನ್ನಡ ಜಿಲ್ಲೆಗಳ ಮಟ್ಟಿಗೆ ಅಧಿಕೃತರಾದವರು ಇಲ್ಲಿ ಸಹ ಬೇಗನೆ ಉಪಕ್ರಮವನ್ನು ಮಾಡುವುದು ಲೇಸೆಂದು ಸೂಚಿಸಿ, ಜನರು ಸ್ವರಾಜ್ಯಪಾರ್ಟಿಯ ಉಮೇದುವಾರರನ್ನೆ ಸರ್ವಥಾ ಚುನಾಯಿಸಿಕೊಡಬೇಕೆಂದು ಪುನಃ ಎಚ್ಚರಿಸಿ ಈ ಹೊತ್ತಿನ ವಿಷಯವನ್ನು ಮುಗಿಸುವೆವು.

ಸ್ಫುಟವಿಚಾರಗಳು.

೧. ಅಹಮುದಾಬಾದದಲ್ಲಿ ಎರಡು ತಿಂಗಳ ಹಿಂದೆ ಗಿರಣೀಕಾಮಗಾರರು ಮುಷ್ಕರವನ್ನು ಹಾಕಿದ ಸಂಗತಿಯು ವಾಚಕರ ನೆನಪಿನಲ್ಲಿರಬಹುದು. ಗಿರಣಿಯ ಮಾಲಿಕರು ಕಾಮಗಾರರ ಸಂಬಳವನ್ನು ಸೇಕಡಾ ೨೦ರಂತೆ ತಗ್ಗಿಸುವವರಿದ್ದರು. ಇದರ ಪರಿಣಾಮವೇನಾಯಿತೆಂದರೆ, ಅಲ್ಲಿಯ ಎಲ್ಲಾ ಕಾಮಗಾರರು ಎಪ್ರಿಲ್ ತಾ. ೧ರಿಂದ ಮುಷ್ಕರವನ್ನು ಹಾಕಿದರು. ಅಹಮುದಾಬಾದದಲ್ಲಿ ಈ ಮೇರೆಗೆ ಪ್ರಚಂಡವಾದ ಮುಷ್ಕರವು ಈಗ ೨ ತಿಂಗಳಿಂದ ಬಿದ್ದಿತ್ತಾದರೂ, ಬೇರೆ ಕಡೆಗಳಲ್ಲಾಗುವಂತೆ ಯಾವ ತರದ ಗಲಾಟೆಯೂ ಆಗಿದ್ದಿಲ್ಲ. ಕಾಮಗಾರರೆಲ್ಲರೂ ಬಹು ಶಾಂತರೀತಿಯಿಂದ ವರ್ತಿಸುತ್ತಿದ್ದರು. ಇದರ ಶ್ರೇಯಸ್ಸನ್ನು ಲೇಬರ ಯೂನಿಯನ್ನಿನಿಗೆ ಕೊಡಬೇಕಾದದ್ದು. ಲೇಬರ ಯೂನಿಯನ್ನಿನವರು ಗಿರಣಿಗಳನ್ನು ಬಿಟ್ಟಿರುವ ಜನರಿಗೆ, ಎಂದರೆ, ಮುಷ್ಕರಗಾರರಿಗೆ ಬೇರೆಬೇರೆ ಕೆಲಸಗಳನ್ನು ಕೊಟ್ಟು ಒಂದು ಬಗೆಯ ವ್ಯವಸ್ಥೆಯನ್ನು ಮಾಡಿದ್ದರು. ಹಲವು ಕಾಮಗಾರರು ಅಹಮುದಾಬಾದನ್ನು ಬಿಟ್ಟು ತಮ್ಮ ಸ್ವಂತ ಊರುಗಳಿಗೆ ಹೋಗಿ ಬೇರೆಬೇರೆ ಉದ್ಯೋಗಗಳನ್ನು ಕೈಕೊಂಡಿದ್ದರು. ಈ ಎಲ್ಲಾ ಕಾರಣಗಳಿಂದ ಗಿರಣಿ ಕಾಮಗಾರರ ಯಾವ ಉಪಸರ್ಗವೂ ಉಂಟಾಗಿರಲಿಲ್ಲ. ಬೇರೆ ಮಾತಿನಿಂದ ಹೇಳುವುದಾದರೆ, ಈ ಮುಷ್ಕರವು ಸರಿಯಾಗಿ ನಡೆಯುತ್ತಿತ್ತು. ಈ ರೀತಿಯಿಂದ ನಡೆಯುತ್ತಿದ್ದದರಿಂದಲೆ ಅದು ಮೊನ್ನೆ ಚಲೊ ರೀತಿಯಿಂದ ಅಂತ್ಯವಾಯಿತೆನ್ನಬಹುದು. ಗಿರಣಿಯ ಮಾಲಿಕರ "ಮಿಲ್ ಓನರ್ಸ ಎಸೋಸಿಯೇಶನಿ"ನೊಡನೆ ಲೇಬರ ಯೂನಿಯನು, ಮುಷ್ಕರಗಾರರ ಅಂದೋಲನವನ್ನು ಹೇಳಿ ಸೇಕಡಾ ೨೦ರಷ್ಟು ಸಂಬಳವನ್ನು ಕಡಿಯುವುದು ಈಗಿನ ದಿವಸಗಳಲ್ಲಿ ಕಠೋರತನದ್ದಾಗಿದೆ ಎಂಬುದನ್ನು ಅವರ ಲಕ್ಷ್ಯಕ್ಕೆ ತಂದುಕೊಟ್ಟರು. ಕೊನೆಗೆ ಸೇಕಡಾ ೧೫ರಂತೆ ಕಡಿಮೆಮಾಡಬಹುದೆಂದು ಉಭಯಪಕ್ಷದವರ ಅನುಮತಿಯಿಂದ ಒಪ್ಪಂದವಾಗಿ ಮುಷ್ಕರವು ಅಂತ್ಯವಾಯಿತು. ಇನ್ನೂ ಹಲವು ಗಿರಣೀಕಾಮಗಾರರು ಕೆಲಸವನ್ನು ಮೊದಲಿನಂತೆ ಕೈಕೊಳ್ಳಲಿಲ್ಲವಾದರೂ ಮೂರುಮುಕ್ಕಾಲುವಾಸಿ ಕಾಮಗಾರರು ಪುನಃ ಸೇರಿದ ಕಾರಣ ೨ ತಿಂಗಳಿಂದ ನಿಂತಿದ್ದ ಅಹಮುದಾಬಾದೆ ಗಿರಣಿಗಳು ಪೂರ್ವವತ್ ಕೆಲಸಮಾಡಹತ್ತಿವೆ. ಉಳಿದ ಜನರು ಈ ಹೊತ್ತಿಲ್ಲವಾದರೂ, ಬೇಗನೆ ಬಂದು ಸೇರಿಯಾರೆಂದು ಪ್ರತೀಕ್ಷೆ ಇದೆ. ಈ ಅಸಂತುಷ್ಟ ಜನರ ಸಂಗತಿಯನ್ನು ಬಿಟ್ಟುಬಿಟ್ಟರೂ ಉಳಿದ ಹೆಚ್ಚಿನ ಕಾಮಗಾರರು ಮತ್ತು ಗಿರಣಿಯ ಮಾಲಿಕರು ತಮ್ಮತಮ್ಮ ಆಗ್ರಹವನ್ನು ಬಿಟ್ಟು ಒಪ್ಪಂದಮಾಡಿಕೊಂಡದ್ದು ಅಭಿನಂದನೀಯವೆ ಸರಿ. ಮತಭೇದದ ಅಲ್ಪಸ್ವಲ್ಪ ಅಂಶಗಳನ್ನು ಬಿಟ್ಟು ಸಮೀಪಿಸುವುದೆ ಒಪ್ಪಂದದ ಮುಖ್ಯ ಲಕ್ಷಣವಾಗಿದೆ.

೨. ಲಂಡನಿನಲ್ಲಿ ಆದ ಒಂದು ಔತಣದ ಸಂದರ್ಭದಲ್ಲಿ ವ್ಯಾಕೌಂಟ ಪೀಲಸಾಹೇಬರು ಹಿಂದೂಸ್ಥಾನದ ವಿಷಯವಾಗಿ ಕೆಲವು ಅಪ್ರಶಸ್ತವಾದ ವಿಧಾನಗಳನ್ನಾಡಿ ತೋರಿಸಿದರು. ಕಪ್ಪುಜನರ ಮತ್ತು ಬಿಳಿ ಜನರ ಸರ್ವಸಾಮಾನ್ಯ ಮತ್ತು ವಿಶೇಷ ತರದ ಹಕ್ಕುಗಳ ತಾರತಮ್ಯಭಾವವನ್ನು ನಿರ್ಣಯಿಸಲು ಒಂದು ಕಮಿಟಿಯು ನೇಮಕಪಟ್ಟು, ಆ ಕಮಿಟಿಯು ತನ್ನ ವರದಿಯನ್ನು ಸಾದರಪಡಿಸಿದ ಬಳಿಕ ಅದಕ್ಕನುಸಾರವಾಗಿ ಯಾವ ಎಕ್ಟು ಪಾಸಾಯಿತೊ ಆ ವಿಷಯವನ್ನು, ನಮ್ಮ ಸ್ವಂತ ವಿಚಾರಗಳೊಂದಿಗೆ ವಾಚಕರ ಮುಂದೆ ಈ ಮೊದಲೆ ಇಟ್ಟಿದ್ದೇವೆ. ಈ ಎಕ್ಟಿನಲ್ಲಿ ಎರಡೂ ವರ್ಗದವರ ಸಾಧಾರಣ ಸಾಮ್ಯವನ್ನು ಕಲ್ಪಿಸುವಂತೆ ಮಾಡಿಟ್ಟ ಏರ್ಪಾಡುಗಳನ್ನು ಔತಣದ ಭಾಷಣದಲ್ಲಿ, ಇನ್ನೊಬ್ಬ ವಕ್ತಾರೊಟ್ಟಿಗೆ ಪೀಲಸಾಹೇಬರು ಸಹ ಅಭಿನಂದಿಸಿದರು. ಇವರ ಭಾಷಣದೊಳಗಿನ ಈ ಭಾಗಗಳು ವಿಶೇಷ ಟೀಕಾಸ್ಪದವಾದವುಗಳಲ್ಲವಾದರೂ, ಹಾವಿಗೆ ಹಲ್ಲಿನಲ್ಲಾದರೆ, ಚೇಳಿಗೆ ಬಾಲದಲ್ಲಿ ವಿಷವಿರುವಂತೆ ಇವರ ಭಾಷಣದ ಅಂತ್ಯಭಾಗದಲ್ಲಿ ಖಂಡನೀಯವಾದ ಅಂಶವು ತುಂಬಿಕೊಂಡಿರುವುದು. "ಹಿಂದಿಗಳಿಗೂ ಬ್ರಿಟಿಷರಿಗೂ ಹೃತ್ಪೂರ್ವಕವಾದ ಸಹಕಾರವಿರುವುದರಲ್ಲೆ ಹಿಂದೂಸ್ಥಾನದ ನಿಜವಾದ ಪ್ರಗತಿಯು ಇದೆ ಎಂಬುದನ್ನು ಎಲ್ಲರೂ ತಿಳಿಯಬೇಕು. ಹಿಂದೀಜನರು ಈ ತತ್ವವನ್ನು ಮರೆತು, ಅಸಹಕಾರವನ್ನು ಮಾಡುವುದರಲ್ಲಿ ತಮ್ಮ ಯಾವ ಶಕ್ತಿಸರ್ವಸ್ವವನ್ನು ಈ ಎರಡು ವರುಷಗಳಿಂದ ಕಳೆದರೊ ಅದರ ಬದಲು ಅವರು ಸಹಕಾರದಲ್ಲಿ ಅದನ್ನು ವೆಚ್ಚಮಾಡಿದ್ದಾದರೆ ಹಿಂದೂಸ್ಥಾನದ ಪ್ರಗತಿಯು ಮತ್ತು ವಿಕಾಸವು ಹೆಚ್ಚು ಸಾಧ್ಯವಾಗುತ್ತಿದ್ದವು." ಪೀಲಸಾಹೇಬರ ಈ ಅರ್ಥದ ಭಾಷಣವನ್ನು ನೋಡುವಾಗ ಅವರು ಹಿಂದೂಸ್ಥಾನದ ಹಿಂದಿನ ಚರಿತ್ರೆಯನ್ನು ತಿಳಿದಿರಲಿಲ್ಲವೆಂದು ಹೇಳಬೇಕಾಗುತ್ತದೆ. ಅಥವಾ ಅದು ಅವರಿಗೆ ಗೊತ್ತಿದ್ದದಾದರೆ ಬೇಕೆಂದು ಅದರ ವಿಪರ್ಯಾಸವನ್ನು ಅವರು ಮಾಡಹತ್ತಿದ್ದಾರೆಂದು ಹೇಳಬೇಕಾಗುತ್ತದೆ. ಸಹಕಾರದ ಫಲವನ್ನು ಪೀಲರು ಈಗ ಯಾಕೆ ವೃಥಾ ಓದುತ್ತಿದ್ದಾರೆ? ಬ್ರಿಟಿಷ ಸರಕಾರದ ರಾಜ್ಯವು ಇಲ್ಲಿ ಸ್ಥಿರಸ್ಥಾವರವಾಗಿ ಈಗ ೧೫೦ ವರುಷಗಳಿಗಿಂತ ಹೆಚ್ಚಾಗುತ್ತಾ ಬಂತು. ಈ ದೀರ್ಘ ಅವಧಿಯಲ್ಲಿ ಹಿಂದೂಸ್ಥಾನವು ತನ್ನ ಧಾರಾಳ ದ್ರವ್ಯವನ್ನೂ, ಉತ್ತಮ ಉತ್ತಮ ಜನರನ್ನೂ, ಅಮೂಲ್ಯವಾದ ಸಮಯವನ್ನೂ ಬ್ರಿಟಿಷರ ಸಹಕಾರದಲ್ಲಿ ಅಲ್ಲ, ನಿಜವಾಗಿ ಹೇಳುವುದಾದರೆ, ಬ್ರಿಟಿಷರ ಆರಾಧನೆಯಲ್ಲಿ ವೆಚ್ಚ ಮಾಡಲಿಲ್ಲವೆ? ಅಂಥ ಸಹಕಾರದ ಅತ್ಯುತ್ಕಟದ ಆ ಕಾಲದಲ್ಲಿ ಹಿಂದೂಸ್ಥಾನಕ್ಕೆ ಈ ಮಹಾಉದಾರ ರಾಜ್ಯಕರ್ತರಿಂದ ಸಿಕ್ಕಿದ ಇನಾಮು ಯಾವುದು? ಪೀಲಸಾಹೇಬರೆ, ಈ ಪ್ರಶ್ನೆಗೆ ಸರಳವಾದ ಉತ್ತರವನ್ನು ಕೊಡುವುದು ನಿಮ್ಮ ಕರ್ತವ್ಯವಾಗಿದೆ. ನೀವು ಬಾಯಿಯಿಂದ ಜನತೆಯ ಸಹಕಾರವನ್ನು ಅಪೇಕ್ಷಿಸುತ್ತೀರಿಯಾದರೂ ಕೃತಿಯಿಂದ ಜನರು ಅಸಹಕಾರದ ದಾರಿಗೆ ಹೋಗಿ ತಲಪುವಂತೆ ಮಾಡುತ್ತಿದ್ದೀರಿ! ಆದ್ದರಿಂದ ಕೃತಿಯಲ್ಲಿ ಔದಾರ್ಯ, ಸಮತೆ ಮತ್ತು ಸತ್ಯ ಇವುಗಳನ್ನು ತೋರಿಸಿದ ಹೊರತು ಜನತೆಯು ಸಹಕಾರವನ್ನು ಅಪೇಕ್ಷಿಸುವುದು ಸ್ವಾಭಾವಿಕವಾಗಲಾರದು. ಗೀತೆಯಲ್ಲಾದರೂ "ಯೇ ಯಥಾಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್" ಎಂದು ಹೇಳಿದೆ.

೩. ಇದೆ ಸಂದರ್ಭದಲ್ಲಿ ವ್ಯಾಕೌಂಟ ಪೀಲರು ವೈಸರಾಯರ ಸರ್ಟಿಫಿಕೇಶನಿನ ಕೃತ್ಯವನ್ನು ಸಮರ್ಥಿಸಲು ಮರೆಯಲಿಲ್ಲ. ಬೇರೆಬೇರೆ ಪದಾರ್ಥಗಳಿಂದ ಔತಣಕ್ಕೆ ರುಚಿತರುವಂತೆ ಪೀಲರು ಬೇರೆಬೇರೆ ಮಾತುಗಳಿಂದ ತಮ್ಮ ಭಾಷಣವನ್ನು ಆಕರ್ಷಕವನ್ನಾಗಿ ಮಾಡಲು ಯತ್ನಿಸಿರುವರು. ವೈಸರಾಯರು ಉಪ್ಪಿನ ತೆರಿಗೆಯನ್ನು ಸರ್ಟಿಫಿಕೇಶನಿನ ಅಸಾಮಾನ್ಯ ಅಧಿಕಾರದಿಂದ ಸ್ಥಾಪಿಸಿದ್ದು ನ್ಯಾಯವಾದ್ದೆ ಸರಿ. ತನ್ನ ಪ್ರಗತಿಗೆ ಅವಶ್ಯಕವಿರುವ ಹಂಗುಗಳನ್ನು ಪೂರೈಸಿಕೊಳ್ಳಲು ಒಂದು ಜನಾಂಗವು ಸಿದ್ಧವಾಗಿರಬೇಕು. ಮತ್ತು ಬೇಕಾದ ತೆರಿಗೆಗಳನ್ನು ಹೆಚ್ಚಿಸಿಕೊಳ್ಳುವುದು ಅವಶ್ಯಕವಾಗಿದೆ, ಮಾತ್ರವಲ್ಲ, ಅದರ ಸನದುಶೀರಾದ ಪ್ರಗತಿಗೆ ಅದು ಅತ್ಯಗತ್ಯವಾಗಿದೆ. ಇದೆ ಪೀಲರ ಅಭಿಪ್ರಾಯವು. ಒಬ್ಬ ದೊಡ್ಡ ಐಶ್ವರ್ಯವಂತ ಯಜಮಾನನು ತನ್ನ ಬೇಕುಬೇಕಾದ ಶೋಕುಗಳನ್ನು ಪೂರೈಸಿಕೊಳ್ಳಲು ಮನೆಯೊಳಗಿನ ಜನರಿಗೆ ಅರ್ಧ ಹೊಟ್ಟೆಯಿಂದ ಕಾಲಕಳೆಯಲು ಉಪದೇಶವನ್ನು ಮಾಡಿದರೆ ಅದು ಎಷ್ಟರ ಮಟ್ಟಿಗೆ ಸಮರ್ಪಕವೊ, ದಯಾರ್ದ್ರತೆಯದೂ ಆದೀತೊ ಅಷ್ಟೆ ನಮ್ಮ ಪೀಲಸಾಹೇಬರ ಪ್ರತಿಪಾದನವು ದಯಾರ್ದ್ರವಾಗಿದೆ. ಹೊರಗಟ್ಟಲೆ ಸಂಬಳದ ವಿಲಾಯತಿಯ ಅಧಿಕಾರಿಗಳ ಹಿಂಡನ್ನು ತಂದು ಹಾಕಿ, ಅವರ ದೆಸೆಯಿಂದ ರಾಜ್ಯಭಾರವು ಬಹು ಖರ್ಚಿನದಾಗಿ ಮಾಡಿ, ಆ ಖರ್ಚನ್ನು ಬಗೆಹರಿಸಲು ಉಪ್ಪಿನ ಸುಂಕವನ್ನು ಏರಿಸಿ ಬಡಹಿಂದಿಗಳ ಜೇಬುಗಳನ್ನು ಬಲಿಕೊಡುವುದು ಯಾವ ನ್ಯಾಯದ ಕಾರ್ಯವು? ಬೇಕೆಂದು ರಾಜ್ಯಕಾರಭಾರದಲ್ಲಿ ಖರ್ಚಿನ ಪದ್ಧತಿಯನ್ನು ಸೇರಿಸಿ, ಅದರ ನಿರ್ವಾಹವು ಆ ದೇಶದ ಜನರಿಂದಲೆ ಆಗಬೇಕೆಂಬ ಯುಕ್ತಿವಾದವನ್ನು ಹೊಡಿದರೆ ಅದರಿಂದ ಯಾರೂ ಮರುಳಾಗುವ ಹಾಗಿಲ್ಲ. ಇದು ಯುಕ್ತವಾದವಲ್ಲ, ಶಠವಾದವು. ಪೀಲಸಾಹೇಬರು ಎಲ್ಲ ನೋಕರಶಾಹಿಯ ಮೂರ್ಧಾಭಿಷಿಕ್ತರಾಗಿ ಇಂಥ ಅಸಹಾನುಭೂತಿಯ ಮಾತನ್ನು ಆಡಿ ವೈಸರಾಯರ ಅನ್ಯಾಯದ ಕೃತ್ಯವನ್ನು ಸಮರ್ಥಿಸಲು ಹೊರಡುವುದು ಅತ್ಯಂತ ವಿಷಾದಾಸ್ಪದವಾಗಿದೆ.

೪. ಮದ್ರಾಸ್ ಕೌನ್ಸಿಲ್ ಮೆಂಬರರಾದ ಡೊ. ಯು. ರಾಮರಾಯರು ನಮ್ಮ ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನ ಅಧ್ಯಕ್ಷಸ್ಥಾನವನ್ನು ಕುರಿತು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಅದನ್ನು ನಾವು ಇನ್ನೊಂದು ಕಡೆಯಲ್ಲಿ ಮುದ್ರಿಸಿದ್ದೇವೆ. ಮೊಂಟೆಗ್ಯು ಜೇಮ್ಸ್‌ಫರ್ಡ ಸುಧಾರಣೆಗಳು ಬಂದಂದಿನಿಂದ ಡಿಸ್ಟ್ರಿಕ್ಟ ಬೋರ್ಡಿನ ಅಧ್ಯಕ್ಷರು ಚುನಾಯಿಸಲ್ಪಡಬೇಕು, ಹೊರತು ನೇಮಕದ ಪದ್ಧತಿಯು ಪ್ರಶಸ್ತವಲ್ಲವೆಂಬ ತಿಳಿವು ಎಲ್ಲರಲ್ಲಿ ಉಂಟಾಗಿದೆ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಕಾಯಿದೆ ಕೌನ್ಸಿಲಿನ ಮಂತ್ರಿಗಳ ವಶದಲ್ಲಿ ಕೊಡಲ್ಪಟ್ಟ ಬಳಿಕ, ಆ ಮಂತ್ರಿಗಳು ಇದೆ ಕ್ರಮವನ್ನನುಸರಿಸಿ ಜಿಲ್ಲಾ ಬೋರ್ಡುಗಳ ಚುನಾವಣೆಯು ಜನತೆಗೆ ಬಿಟ್ಟುಕೊಡುವುದೆ ಸರಳವಾದ ಮಾರ್ಗವು. ಸರಕಾರದ ಕೈಯಲ್ಲಿ ಕೇಂದ್ರೀಭೂತವಾದ ಅಧಿಕಾರವು ಮಂತ್ರಿಗಳ ಕೈಗೆ ಬರುವುದರ ಅರ್ಥವು, ಅದು ಪ್ರಾತಿನಿಧಿಕವಾಗಬೇಕೆಂಬುದಾಗಿಯೆ ಇದೆಯೆಂದು ಯಾರೂ ಒಪ್ಪಿಯಾರು. ಈ ರೀತಿಯಿಂದ ಸದುದ್ದೇಶದಿಂದ ಹೊರಟ ಪ್ರವೃತ್ತಿಯನ್ನು ಕುಂಠಿಸಿ ಮಂತ್ರಿಗಳು ತನ್ನ ಇಚ್ಛೆಗನುಸಾರವಾಗಿ ನೇಮಕದ ಹಳೆ ಪದ್ಧತಿಯನ್ನೆ ಮುಂದರಿಸಹತ್ತಿದರೆ ಮೂಲಉದ್ದೇಶಕ್ಕೆ ಭಂಗಬರುತ್ತದಲ್ಲದೆ, ಪ್ರಾತಿನಿಧ್ಯದ ಶಿಕ್ಷಣವು ಕೂಡ ಆ ಮಟ್ಟಿಗೆ ನಮ್ಮ ಜನಗಳಿಗೆ ತಪ್ಪಿಹೋದೀತು. ಮುಂಬಯಿ ಸಂಸ್ಥಾನದಲ್ಲಿ ಚುನಾವಣೆಯ ಪದ್ಧತಿಯು ಸರಾಗವಾಗಿ ನಡಕೊಂಡಿದೆ. ನಮ್ಮ ಸಂಸ್ಥಾನದಲ್ಲಿ ಸಹ ಹಲವು ಕಡೆಗಳಲ್ಲಿ ಈ ಕ್ರಮವು ಜಾರಿಗೆ ಬಂದಿದೆ. ನಮ್ಮ ಜಿಲ್ಲೆಯು ಮಾತ್ರ ಈ ಕ್ರಮಕ್ಕೆ ಯಾಕೆ ಅಪವಾದವಾಗಬೇಕು?

೫. ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಕಮಿಟಿಯು ಧಾರವಾಡದಲ್ಲಿ ಸೇರಿ ಯಾವ ನಿರ್ಣಯವನ್ನು ಮಾಡಿದೆ ಎಂಬುದು ಈ ಹೊತ್ತಿನ ನಮ್ಮ ವರ್ತಮಾನ ಸಂಗ್ರಹದಿಂದ ವಾಚಕರಿಗೆ ತಿಳಿದೀತು. ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಕೌನ್ಸಿಲ್ ಬಹಿಷ್ಕಾರದ ಪ್ರಸ್ತಾವಗಳನ್ನು ತಕ್ಷಣ ಬಿಡಬೇಕೆಂದು ಠರಾಯಿಸಿದ ಬಳಿಕ ಅದರ ಕೈಕೆಳಗಿನ ಪ್ರಾಂತಿಕ ಸಂಸ್ಥೆಯು ಆ ಠರಾವನ್ನು ಎದುರಿಸುವುದು ಈಗಿನ ವಿಪರೀತಕಾಲಕ್ಕೆ ಮಾತ್ರ ಉಚಿತವೆಂದು ಹೇಳಬಹುದಲ್ಲದೆ, ಸಾರ್ವಹಿಂದೂಸ್ಥಾನ ಮತ್ತು ಪ್ರಾಂತಿಕ ಸಂಸ್ಥೆಗಳಲ್ಲಿರುವ ವರಿಷ್ಠ ಕನಿಷ್ಠಭಾವವನ್ನು ನೆನಸಿಹೇಳುವದಾದರೆ ಧಾರವಾಡದ ಈ ಕೃತ್ಯವು ಎಂದೂ ಶಿಷ್ಟಸಮ್ಮತವಾಗಲಾರದು. ಆದರೆ ಮತಸ್ವಾತಂತ್ರ್ಯದ ಈ ಯುಗದಲ್ಲಿ ಮನಃಸಾಕ್ಷಿ, ಮನೋದೇವತೆ ಈ ಭವ್ಯವಾದ ನಾಮಧೇಯದ ಕೆಳಗೆ ಧಾರವಾಡದ ಪ್ರಾಂತಿಕ ಕಮಿಟಿಯೆ ಅಲ್ಲ, ಇತರ ಯಾವ ಕಮಿಟಿಯೂ ಕೂಡ ತನಗೆ ಬೇಕಾದ ಠರಾವುಗಳನ್ನು ಪಾಸುಮಾಡಿಕೊಳ್ಳಬಹುದು. ಅದರಂತೆ ಅವು ಮಾಡಿಕೊಳ್ಳಲಿ. ಇದು ಅಧಿಕಾರದ್ದು ಪ್ರಶ್ನೆಯಲ್ಲ. ಅಥವಾ ಸಂಪ್ರದಾಯದ್ದೂ ಅಲ್ಲ. ಆದರೆ ಯುಕ್ತಾಯುಕ್ತತೆಯ ಪ್ರಶ್ನೆಯಾಗಿದೆ. ಆದ್ದರಿಂದ ಈ ಹೊತ್ತಿನ ಅಗ್ರಲೇಖದಲ್ಲಿ ಸೂಚಿಸಿದಂತೆ ಕರ್ನಾಟಕದೊಳಗಿನ ಎಲ್ಲ ಭಾಗದ ಮತದಾರರು—ಮುಂಬಯಿ ಕರ್ನಾಟಕ ಮತ್ತು ಮದ್ರಾಸ ಕರ್ನಾಟಕದ ಎಲ್ಲ ಮತದಾರರು—ಸ್ವರಾಜ್ಯ ಪಾರ್ಟಿಯ ಉಮೇದುವಾರರನ್ನೆ ಚುನಾಯಿಸಿಕೊಡುವ ತಮ್ಮ ಪವಿತ್ರಕಾರ್ಯವನ್ನು ಮಾಡಬೇಕಾಗಿ ನಮ್ಮ ಸೂಚನೆ. ಪ್ರಾಂತಿಕ ಕೊಂಗ್ರೆಸ ಕಮಿಟಿಯಾಗಲಿ ಅಥವಾ ಡಿಸ್ಟ್ರಿಕ್ಟ ಕೊಂಗ್ರೆಸ ಕಮಿಟಿಯಾಗಲಿ ಬೇಕಾದ ಠರಾವುಗಳನ್ನು ಮಾಡುತ್ತ ಕುಳಿತುಕೊಳ್ಳಲಿ! ಅದರ ಗೋಜು ನಮಗೇಕೆ?

೬. ಪ್ರಾಥಮಿಕ ಶಾಲಾ ಉಪಾಧ್ಯಾಯರ ತರಬೇತಿನ ವಿಷಯವಾಗಿ ವಿದ್ಯಾ ಇಲಾಖೆಯು ಯಾವ ಧೋರಣವನ್ನು ಅಂಗಿಂಕರಿಸಿದೆ ಎಂಬುದನ್ನು ಹೇಳಲು ಕೊಂಚ ಅಸಾಧ್ಯವಾಗಿದೆ. ಕಾರಣ, ಈ ವರುಷ ಮುಂಚಿನಷ್ಟು ಉಪಾಧ್ಯಾಯ ಉಮೇದುವಾರರಿಗೆ, ಹಣದ ನ್ಯೂನತೆಯ ಕಾರಣವನ್ನು ತೋರಿಸಿ, 'ಸ್ಟ್ಯಪೆಂಡ'ನ್ನು ಕೊಡಲಾಗುವುದಿಲ್ಲ ಎಂದು ಡಿ. ಇನ್ಸಪೆಕ್ಟರುಗಳಿಗೆ ಡಿರೆಕ್ಟರರಿಂದ ತಿಳಿಸೋಣಾಗಿದೆಂದು ನಾವು ಕೇಳುತ್ತೇವೆ. ಮೇಲಿನಿಂದಲೆ ಹಣವು ಬರುವ ಸಂಭವವು ತೋರದ ಬಳಿಕ ಡಿ. ಇನ್ಸಪೆಕ್ಟರುಗಳು ಅರ್ಜಿಹಾಕಿದ ಉಮೇದುವಾರರಿಗೆ "ನೀವೆ ನಿಮ್ಮ ಖರ್ಚನ್ನು ಸಹಿಸಿ ತರಬೇತನ್ನು ಹೊಂದಲು ಸಿದ್ಧರಿರುವಿರೊ" ಎಂದು ಕೇಳುವುದು ಸಹಜವಾಗಿದೆ. ಈ ಸಂದರ್ಭದಲ್ಲಿ ಸೂಚನೆಯ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಿದರೆ ಅದು ಅಸ್ಥಾನದಲ್ಲಾಗಲಿಕ್ಕಿಲ್ಲ. ಹೈಸ್ಕೂಲುಗಳಿಗೆ ಮತ್ತು ಹೈಯರ್ ಎಲಿಮೆಂಟರಿ ಶಾಲೆಗಳಿಗೆ ಹೊಂದಿ ಯಾವಾಗ ತರಬೇತಿನ ವರ್ಗಗಳು ತೆರೆಯಲ್ಪಟ್ಟವೊ ಆಗ ಈಗಿನ ಕ್ರಮವನ್ನು ನಿಲ್ಲಿಸಬಹುದಲ್ಲದೆ, ಮೇಲಿನ ಈ ಯೋಜನೆಯು ಗರ್ಭಾವಸ್ಥೆಯಲ್ಲಿರುವಾಗಲೆ ಉಪಾಧ್ಯಾಯರ ತರಬೇತಿಯನ್ನು ಸಂಕೋಚಿಸಹತ್ತಿದರೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪರ್ಯಾಯದಿಂದ ಕುಗ್ಗಿಸಿದಂತಾದೀತು. ಆದ್ದರಿಂದ ಸದ್ಯಕ್ಕೆ ಮುಂಚಿನಂತೆ ಬಡ ಉಮೇದುವಾರರ ನಿರ್ವಾಹವನ್ನು ಮಾಡುವುದು ಲೇಸು. ಮೊದಲಿನಷ್ಟು ಹಣವನ್ನು ವೆಚ್ಚೆಮಾಡುವುದು ಕೇವಲ ಅಸಾಧ್ಯವೆಂದೆ ತೋರಿದರೆ 'ಸ್ಟೈಪೆಂಡಿ'ನ ರಕಮನ್ನು ತತ್ಕಾಲದ ಮಟ್ಟಿಗೆ ಸ್ವಲ್ಪ ತಗ್ಗಿಸಿ ಧಾರಾಳ ಉಮೇದುವಾರರನ್ನು ತರಬೇತು ಮಾಡುವುದಾದರೂ 'ಕೊನೆಗೆ ಒಳ್ಳೆಯದು' ಹೊರತು ಒಂದೆ ಸಾರಿ ೫೦ ಇದ್ದದ್ದು ೧೦ ಮಾಡುವುದು ಹಿತಾವಹವಲ್ಲ.

ಮಂಗಳೂರು.

ಮಹಮ್ಮದ ಚಮ್ಮಡಸಾಹೇಬ ಬಹದ್ದೂರ್ ಎಂ. ಎಲ್. ಎ.ಯವರು ದಕ್ಷಿಣಕನ್ನಡಾ ಜಿಲ್ಲೆಯ ಮಹಮ್ಮದೀಯ ರೂರಲ್ ಕೊನ್ಸ್ಟಿಟ್ಯುಯನ್ಸ್ನಿಯ ಪರವಾಗಿ ಮದರಾಸ ಲೆಜಿಸ್ಲೇಟಿವ್ ಕೌನ್ಸಿಲಿಗೆ ಒಬ್ಬ ಉಮೇದುವಾರರಾಗಿರುವರೆಂದು ತಿಳಿಯುತ್ತೇವೆ.

ಮೆಂಚಸ್ಟರಿನಲ್ಲಿ ಕಲಿಯುವ ಮ. ರಾ. ಬಂಬ್ರಾಣ ನಾರಾಯಣಪೂಂಜರು 'putting the weight' ಎಂಬ ಕಬ್ಬಿಣದ ಗುಂಡನ್ನು ದೂರ ಬಿಸಾಡುವ ಪಂದ್ಯಾಟದಲ್ಲಿ ಬಹುಮಾನ ಪದಕವನ್ನು ಹೊಂದಿರುವರೆಂದು ಕೇಳುತ್ತೇವೆ.

ಮಂಗಳೂರು ಗವರ್ನಮೆಂಟ್ ಸೆಕೆಂಡರಿ ಟ್ರೈನಿಂಗ್ ಶಾಲೆಯಿಂದ ಟಿ. ಯಸ್. ಯಲ್. ಸಿ. ಪರೀಕ್ಷೆಗೆ ಕುಳಿತ ಆರು ಮಂದಿ ತರಬೇತಿ ಉಪಾಧ್ಯಾಯರು (pupil teachers)ಗಳ ಪೈಕಿ ಮಿ. ನೊರ್ಬರ್ಟ್ ಡಿ'ಸೋಜ, ಮಿ. ಅಲೆಕ್ಸಾಂಡರ್ ರೆಬೆಲ್ಲೊ, ರಾ. ಬೀಜೂರು ಲಕ್ಷ್ಮಣರಾವ್, ತಲ್ಪಾಡಿ ಲಕ್ಷ್ಮೀನಾರಾಯಣ ರಾವ್ ಇವರು ತೇರ್ಗಡೆ ಹೊಂದಿರುವರಾಗಿವಾರ್ತೆ ಇದೆ.

ಈ ವರುಷ ಎಲಿಮೆಂಟರಿ ಟ್ರೈನಿಂಗಿಗೆ ಅರ್ಜಿಹಾಕಿದ ಉಪಾಧ್ಯಾಯರಿಗೆ ಸ್ಟೈಪೆಂಡ್ ಶಿವಾಯಿ ಟ್ರೈನಿಂಗಿಗೆ ಸೇರುವರೆ ಮನಸ್ಸಿದೆಯೊ ಹೇಗೆ ಎಂದು ಇಲಾಖೆಯವರು ಕೇಳಿರುವುದಂತೆ.

ನಾಗಪುರದಲ್ಲಿ ರಾಷ್ಟ್ರೀಯ ಪತಾಕೆಯ ನಿಮಿತ್ತವಾಗಿ ನಡೆಯುತ್ತಿರುವ ಸತ್ಯಾಗ್ರಹಕ್ಕೆ ಇದೇ ತಿಂಗಳಲ್ಲಿ ಗಾಂಧಿ ದಿನವಾದ ೧೮ನೇ ತಾರೀಕಿಗೆ ಪ್ರತಿಯೊಂದು ಪ್ರಾಂತ್ಯದಿಂದಲೂ ಸ್ವಯಂಸೇವಕರ ಸಂಗಡವು ನಾಗಪುರಕ್ಕೆ ಹೋಗಿ ಸತ್ಯಾಗ್ರಹವನ್ನಾಚರಿಸಬೇಕಾಗಿ ನಿಶ್ಚಯಿಸಿದ ಮೇರೆಗೆ ನಮ್ಮ ಪ್ರಾಂತ್ಯದಿಂದಲೂ ಒಂದು ಸಂಗಡವು ಹೋಗುವುದು. ನಮ್ಮ ಜಿಲ್ಲೆಯಿಂದ ಶ್ರೀಯುತ ತಲಪಾಡಿ ಮಾರಪ್ಪನವರನ್ನು ಕಳುಹಿಸಿಕೊಟ್ಟಿರುವರು.

ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಚಾರಗಳು.

ಈ ವರ್ಷ ಬಿಜಾಪುರದಲ್ಲಿ ಸೇರಬೇಕಾಗಿದ್ದ ಸಾಹಿತ್ಯಸಮ್ಮೇಳನವು ಇನ್ನೂ ಸೇರದೆ ಮುಂದಬಿದ್ದಿರುವುದರ ವಿಚಾರವಾಗಿ ಅನೇಕ ಲೇಖನಗಳು ಅನೇಕ ಪತ್ರಿಕೆಗಳಲ್ಲಿ ಬಂದಿವೆ; ಇನ್ನೂ ಬರುತ್ತಾ ಇವೆ. ಈ ಸಮ್ಮೇಳನವು ಸೇರದೆ ಹೋದದ್ದಕ್ಕೆ ಕಾರಣಗಳನ್ನು ಊಹಿಸುವುದರ ಮೂಲಕ ಅತ್ಯಾಧಾರದಿಂದಲೂ ನಿರಾಧಾರದಿಂದಲೂ, ಸಾಹಿತ್ಯಪರಿಷತ್ತನ್ನೂ ಅದರ ಅಧಿಕಾರಿಗಳನ್ನೂ ಕುರಿತು ಕೆಲವು ಪತ್ರಿಕಾಕರ್ತರೂ— ಮುಖ್ಯವಾಗಿ ಧಾರವಾಡದ "ಕರ್ಮವೀರ" ಮಂಗಳೂರಿನ "ಕಂಠೀರವ" ಗಳ ಕರ್ತರು— ಕಟುತರವಾದ ಲೇಖನಗಳನ್ನು ಬರೆಯುತ್ತಿರುವರು. ಎರಡು ವರುಷಗಳ ಹಿಂದೆ ಚಿಕ್ಕಮಗಳೂರಿನಲ್ಲಿ ನಡೆದ ಏಳನೆಯ ಸಮ್ಮೇಳನವನ್ನು ಅವಲೋಕನಮಾಡಿ ಪರಿಷತ್ತಿನ ವಿಚಾರವಾಗಿ [illegible] 'ಕಂಠೀರವ' ಪತ್ರಿಕಾಕರ್ತರು [illegible]

[illegible]

ವಾಚನಾಲಯಕ್ಕಾಗಿ [illegible] ,, ೧೯೯೦.

ಒಟ್ಟು ರೂಪಾಯಿಗಳು ೧೫೨೦

ಪರಿಷತ್ತಿಗಾಗಿ ಇಷ್ಟುಮಟ್ಟಿಗೆ ಹಣವನ್ನು ವೆಚ್ಚಮಾಡಿರುವ ಬಾಂಡೆಗೆ ಪರಿಷತ್ತಿನ ಸಂಬಂಧವು ಹೆಚ್ಚಾಗಿರಬೇಕೋ ಇರಬಾರದೋ ನ್ಯಾಯಪರರಾದವರು ಹೇಳಲಿ.

ಇನ್ನೊಂದು ವಿಚಾರವನ್ನು ನೋಡೋಣ. ಕಾರ್ಯಭಾರವನ್ನು ನಿರ್ವಹಿಸುತ್ತಿರುವ ಅಧಿಕಾರಿಗಳೂ, ಕಾರ್ಯನಿರ್ವಾಹಕ ಮಂಡಲಿಯವರೂ ಯಾರಿರುತ್ತಿರೆ? ಕಾರ್ಯನಿರ್ವಾಹಕ ಮಂಡಲಿಗೆ ಎಲ್ಲ ಪ್ರಾಂತದ ಸದಸ್ಯರಿದ್ದರೂ ಆ ಸದಸ್ಯರ ಸಂಖ್ಯೆಯು ೩೦ರ ವರೆಗಿದ್ದರೂ ವರ್ಷಕ್ಕೆಲ್ಲ [illegible]

[illegible]

ವನ್ನು ಜನರಲ್ ಸೆಕ್ರೆಟರಿಗಳಿಗೆ ಕಳುಹಿಸತಕ್ಕದ್ದು. (೫) ೧೧ನೆ ನೇಮದಂತೆ ಸ್ವಂತ ಇಚ್ಛೆಯಿಂದ ಅಥವಾ ಎರಡನೆ ನಿಬಂಧನೆಯಂತೆ ಸ್ವರಾಜ್ಯ ಪಾರ್ಟಿಯ ವಿನಂತಿಯನ್ನು ಮನ್ನಿಸಿ ಕೌನ್ಸಿಲಿಗೆ ಅಥವಾ ಎಸೆಂಬ್ಲಿಗೆ ಉಮೇದುವಾರರಾಗಿ ನಿಂತವರ ಹೆಸರು ವಿಳಾಸಗಳನ್ನು ತಮ್ಮ ಶಿಫಾರಸು ಪತ್ರದೊಡನೆ ಪ್ರಾವಿನ್ಶಿಯಲ್ ಕಮಿಟಿಯ ಸೆಕ್ರೆಟರಿಗಳು ಜನರಲ್ ಸೆಕ್ರೆಟರಿಗಳಿಗೆ ಕಳುಹಿಸತಕ್ಕದ್ದು. (೬) ಜನರಲ್ ಕೌನ್ಸಿಲು ಅಥವಾ ಈ ಕೌನ್ಸಿಲಿನಿಂದ ನೇಮಕ ವಟ್ಟ ಸಬ್ ಕಮಿಟಿಯು ಸ್ವರಾಜ್ಯಪಾರ್ಟಿಯ ಕಡೆಯಿಂದ ಕೌನ್ಸಿಲಿಗೆ ಅಥವಾ ಎಸೆಂಬ್ಲಿಗೆ ಉಮೇದ್ವಾರರಾಗಿ ಸ್ಪರ್ಧಿಸುವ ಗೃಹಸ್ಥರನ್ನು ಚುನಾಯಿಸುವುದು. (೭) ಸ್ವರಾಜ್ಯಪಾರ್ಟಿಯ ಮೆಂಬರರಲ್ಲದವರನ್ನು ಅಥವಾ ಈ ಪಾರ್ಟಿಯ ನಿಬಂಧನೆ ಮೇರೆಗೆ ಮಂಜೂರಾತಿಯನ್ನು ಹೊಂದದೆ ಇರುವ ಉಮೇದುವಾರನು ಈ ಪಾರ್ಟಿಯ ಉಮೇದುವಾರನಲ್ಲವೆಂದು ಈ ಪಾರ್ಟಿಯು ತಿಳಿಯುವುದು. (೮) ಈ ಪಾರ್ಟಿಯು ತನ್ನ ಉಮೇದುವಾರನನ್ನು ಚುನಾಯಿಸಿದ ಮೇಲೆ [illegible] ಉಮೇದುವಾರನಿಗೆ ವಿರೋಧವಾಗಿ ಈ ಪಾರ್ಟಿಯ ಇತರ ಉಮೇದ್ವಾರರು ಸ್ಪರ್ಧಿಸಲು ಈ ಪಾರ್ಟಿಯು ಒಪ್ಪುವುದಿಲ್ಲ. ಮತ್ತು ಒಬ್ಬ ಮೆಂಬರನು ಇದಕ್ಕೆ ವಿರೋಧವಾಗಿ ನಡೆದರೆ ಅವನು ಸ್ವರಾಜ್ಯಪಾರ್ಟಿಗೆ ಸೇರಿದವನಲ್ಲವೆಂದು ಪರಿಗಣಿಸಲಾಗುವುದು. (೯) ಸ್ವರಾಜ್ಯಪಾರ್ಟಿಯಿಂದ ಉಮೇದುವಾರನಾಗಿ ಚುನಾಯಿಸಲ್ಪಟ್ಟ ಗೃಹಸ್ಥನು ತನ್ನ ಉಮೇದುವಾರಿಕೆಯ ಕುರಿತು ವಿನಂತಿಪತ್ರಗಳನ್ನು ಪ್ರಕಟಿಸುವುದು, ಪತ್ರಪತ್ರಗಳನ್ನು ಹಂಚುವುದು ಮುಂತಾದುವನ್ನು ಮಾಡಬಹುದು.

ಉಮೇದುವಾರರು ಬರೆದುಕೊಡತಕ್ಕ ಕರಾರಿನ ನಮೂನೆ—

[illegible]

ನಾಗಪುರದಲ್ಲಿ ಕರ್ನಾಟಕದ ಸ್ವಯಂಸೇವಕರ ಆವಶ್ಯಕತೆ.

ಪ್ರಿಯ ಸಹೋದರರೇ,

[illegible] (District organizers) [illegible] (Training) [illegible]

(೧) [illegible]

(೨) [illegible]

(೩) [illegible]

(೪) [illegible]

(೫) [illegible] (Discipline) [illegible]

N. S. Hardiker
Director, H. S. V. Board

ಭಾರತ ಸಂಗೀತ ನಾಟಕ ಮಂಡಳಿ,
ಮಂಗಳೂರು, ದಕ್ಷಿಣ ಕನ್ನಡ.

[illegible]

J. A. Row Kavi.

ಸ್ವರಾಜ್ಯ ಪಾರ್ಟಿ —

[illegible]

ಎಲ್ಲರೂ ಓದಬೇಕಾದ ಕನ್ನಡ ಪುಸ್ತಕಗಳು.
ಕರ್ನಾಟಕ ಪ್ರಕಟನಾಲಯ, ಬಸವನಗುಡಿ
ಪೋಸ್ಟು, ಬೆಂಗಳೂರು.

ಜೀವನ ಚರಿತ್ರೆಗಳು.

ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರೆ.

ಇದರಲ್ಲಿ ವಿಜಯನಗರ ರಾಜ್ಯಸ್ಥಾಪಕರೂ, ಶೃಂಗೇರಿಯ ಜಗದ್ಗುರು ಪೀಠಾಧೀಶ್ವರರೂ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ, ವೇದಭಾಷ್ಯಾದಿ ಬಹು ಗ್ರಂಥ ನಿರ್ಮಾಪಕರೂ ಆಗಿದ್ದ ಮಹಾಪುರುಷರ ಜೀವಿತಕಥೆಯೂ, ಅವರ ಕಾಲದ ಸ್ಥಿತಿಗತಿಗಳೂ, ಅವರ ರಾಜಕೀಯ ಸಾಮಾಜಿಕ ತತ್ವಗಳೂ ಸಂಗ್ರಹವಾಗಿ ಸಪ್ರಮಾಣವಾಗಿ ವರ್ಣಿಸಲ್ಪಟ್ಟಿವೆ. ಇದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಆದರಣೆಗೂ, ಬಹುಮಂದಿ ವಿದ್ವಾಂಸರ [illegible] ಮತ್ತು ದೇಶಾಭಿಮಾನಿಗಳ ಪ್ರಶಂಸೆಗೂ ಪಾತ್ರವಾಗಿರುವ ಉಪನ್ಯಾಸ. ಸ್ವದೇಶ ಪ್ರೀತಿಯುಳ್ಳವರು ಇದನ್ನು ಅವಶ್ಯ ಓದಬೇಕು.

ಬೆಲೆ ೮ ಆಣೆ.

ಶ್ರೀ ವಿದ್ಯಾರಣ್ಯ ವಿಜಯ
ಅಥವಾ
ಕರ್ಣಾಟಕ ಭಾಗ್ಯೋದಯ

[illegible]

ವಸಂತ ಕುಸುಮಾಂಜಲಿ

[illegible]

ವಿಳಾಸ—ಮ್ಯಾನೇಜರು,
ಕರ್ನಾಟಕ ಪ್ರಕಟನಾಲಯ,
ಬೆಂಗಳೂರುಸಿಟಿ, ಬಸವನಗುಡಿ ಪೋಸ್ಟು.

[illegible]

ಕಾಕ ಶಾಸ್ತ್ರ

[illegible]

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. ೩೦೦,೦೦೦—೦—೦	ಅಧಿಕಾರಹೊಂದಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ ೩೦೫,೨೫೦—೦—೦	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 305,250—0—0

THE BANK RECEIVES FIXED, CURRENT ACCOUNT, & SAVINGS BANK DEPOSITS
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡೆಯಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರೆಯಿರಿ.

Canara Bank Ltd.,
Mangalore, 12th Feb. 1923.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳಲ್ಲಿ ಒಂದಾದ,
ಲೋಕಾಮಯಹರ ಕಸ್ತೂರಿ ಮಾತ್ರೆಯನ್ನು ಇಂದೇ ತಾವು ತರಿಸಿಕೊಳ್ಳಿರಿ!

[illegible]

ವಿಳಾಸ— ಪಾಳ್ಯದ ವೆಂಕಟಾಚಲ ಪಂಡಿತ,
[illegible]

ಸನಾತನ ಧರ್ಮ ಗ್ರಂಥಮಾಲೆ.

[illegible]

"ಸಂಕ್ಷೇಪ ಗೀತೆ"

[illegible]

[illegible]